ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ

ಲಲಿತಕಲೆಗಳ ಸಂಪುಟ

ಸಂಪಾದಕರು

ಡಾ. ಪಿ. ಕೆ. ಖಂಡೋಬಾ ಡಾ. ಎಸ್. ಸಿ. ಪಾಟೀಲ



ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ

ಲಲಿತಕಲೆಗಳ ಸಂಪುಟ

HYDERABAD KARNATAKA SAMKSRITIKA VISHAYA KOSHA: LALITAKALA VOLUME
An cultural subject Encyclopedia of Hyderabad Karnataka on Folklore in Kannada, Edited by Dr. P.K. Khandoba, Professor of Kannada, Published by the Institute of Kannada Studies, Gulbarga University, Gulbarga and Funded by Govt. of Karnataka.

Editor - in - Chief: **Dr. P.K. Khandoba**

ISBN: 978-81-921036-9-3
First Impression : 2012
Total Pages: XX+657+64=741
Paper used: 80 GSM Maplitho
Volume price: 1200/-

Cover design by: Artists Gurunath Chavan & Mahesh Shrigani

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ: ಲಲಿತಕಲಾ ಸಂಪುಟ

ಪ್ರಧಾನ ಸಂಪಾದಕರು ಹಾಗೂ ಸಂಪಾದಕರು:

ಡಾ. ಪಿ.ಕೆ. ಖಂಡೋಬಾ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಸಂಪಾದಕರು:

ಡಾ. ಎಸ್.ಸಿ. ಪಾಟೀಲ ಮುಖ್ಯಸ್ಥರು,
ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಥಮ ಮುದ್ರಣ: 2012

ಬಳಸಿರುವ ಕಾಗದ: ಮ್ಯಾಪಲಿಥೊ 80 GSM

ಮುಖಬೆಲೆ: **ರೂ. 1200/-**

ಪ್ರತಿಗಳು ದೊರೆಯುವ ಸ್ಥಳ: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಮುದ್ರಕರು:
ಪ್ರಿಂಟ್ ಪಾರ್ಕ್
ಕ್ವಾಲಿಟಿ ಅಫ್‌ಸೆಟ್ ಪ್ರಿಂಟರ್ಸ್
1496/4, 3ನೇ ಕ್ರಾಸ್, ಮರಿಯಪ್ಪನ ಪಾಳ್ಯ
ಶ್ರೀರಾಮಪುರಂ ಅಂಚೆ, ಬೆಂಗಳೂರು-560021
ದೂರವಾಣಿ: 080-23422838

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ: ಲಲಿತಕಲಾ ಸಂಪುಟ

ಪ್ರಧಾನ ಸಂಪಾದಕರು:
ಡಾ. ಪಿ.ಕೆ. ಖಂಡೋಬಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಅನುಷ್ಠಾನ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸದಸ್ಯರು

ಡಾ. ಡಿ.ಬಿ. ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ್‌ಪಾಟೀಲ
ಡಾ. ಎಸ್.ಎಂ. ಹಿರೇಮಠ
ಡಾ. ವ್ಹಿ.ಜಿ. ಪ್ರಚಾರ
ಡಾ. ವಿ.ಎಸ್. ದಂಡೆ
ಡಾ. ಎಚ್.ಟಿ. ಪೋತೆ
ಡಾ. ಜಯಶ್ರೀ ದಂಡೆ

ಸಂಚಾಲಕರು
ಡಾ. ನಾಗಾಬಾಯಿ ಬುಳ್ಳಾ

ಸಲಹಾ ಸಮಿತಿ ಸದಸ್ಯರು
ಡಾ. ಮ.ಗು. ಬಿರಾದಾರ
ಡಾ. ವೀರಣ್ಣ ರಾಜೂರ
ಡಾ. ವಸಂತ ಕುಷ್ಟಗಿ

ಜಗದೀಶ್ ಶೆಟ್ಟರ್
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ವಿಧಾನಸೌಧ
ಬೆಂಗಳೂರು-560 001

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂದಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲ್ಯಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಲಲಿತಕಲಾ ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಸಂಪಾದಕರನ್ನು ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಸಹಿ/-
(ಜಗದೀಶ್ ಶೆಟ್ಟರ್)

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು-560 001

ಶುಭ ಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಸಂಪುಟಗಳ ಪ್ರಕಟಣಾ ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹೈದ್ರಾಬಾದ ಕರ್ನಾಟಕದ ಸಾಂಸ್ಕೃತಿಕ ವಿಷಯ ಕೋಶ: **ಲಲಿತಕಲೆ** ಎಂಬ ಬೃಹತ್ ಸಂಪುಟವು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈಗಿನ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

(ಗೋವಿಂದ. ಎಂ. ಕಾರಜೋಳ)

ಬಸವರಾಜು
ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು–560 001
ಕರ್ನಾಟಕ, ಭಾರತ
✆: 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.in

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ. 450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು** ಹಮ್ಮಿಕೊಂಡು ಅದರಡಿಯಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ: **ಲಲಿತಕಲಾ ಸಂಪುಟ**ವನ್ನು ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು ಮತ್ತು ಯೋಜನೆಯ ಸಂಪಾದಕರು ಮತ್ತು ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರನ್ನು, ಜೊತೆ ಸಂಪಾದಕರಾದ ಡಾ. ಎಸ್.ಸಿ. ಪಾಟೀಲ ಅವರನ್ನು ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ. ಎಸ್.ಎಲ್. ಹಿರೇಮಠ ಅವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರನ್ನು ನಾನು ಕರ್ನಾಟಕ ಸರಕಾರದ ಪರವಾಗಿ ಅಭಿನಂದಿಸುತ್ತೇನೆ.

(ಬಸವರಾಜು)

ಕೆ. ಆರ್. ರಾಮಕೃಷ್ಣ ಕ.ಆ.ಸೇ
ಆಯುಕ್ತರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು-560 001

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳೆವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಇದೀಗ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಲಲಿತಕಲೆಗಳು ಎಂಬ ಬೃಹತ್ ಸಂಪುಟವನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ, ಹಾಗೂ ಇಂದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಈ ಯೋಜನೆಯ ಸಂಪಾದಕರು ಮತ್ತು ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರಿಗೆ, ಹಾಗೂ ಸಹ ಸಂಪಾದಕರು ಡಾ. ಎಸ್.ಸಿ ಪಾಟೀಲ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕೆ. ಆರ್. ರಾಮಕೃಷ್ಣ
ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 20.01.2012

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಕೋಶ ಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಜಾನಪದ ಮತ್ತು ಲಲಿತಕಲೆಗಳ ಎರಡು ಬೃಹತ್ ಸಂಪುಟಗಳು ಪ್ರಕಟನೆಗೊಂಡು ಹೊರಬರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಲಲಿತಕಲೆಗಳ ಸಂಪುಟವನ್ನು ನಮ್ಮ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ಪಿ.ಕೆ. ಖಂಡೋಬಾ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ಎಸ್.ಸಿ. ಪಾಟೀಲ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರುವರು. ಇಲ್ಲಿನ ವಿಷಯಗಳು ತುಂಬ ಮೌಲಿಕವಾಗಿವೆ, ಈ ಭಾಗದ ಜಾನಪದ ಸಾಂಸ್ಕೃತಿಕ ಲೋಕದ ವಿಶಿಷ್ಟತೆಗಳು ಇಲ್ಲಿವೆ. ಈ ವಿಷಯಕೋಶದ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಯೋಜನೆಯ ಸಂಪಾದಕರು ಹಾಗೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರಿಗೂ, ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ, ಹಾಗೂ ಇಂದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

(ಈ.ಟಿ. ಪುಟ್ಟಯ್ಯ)

ಪ್ರಾಸ್ತಾವಿಕ

ಕರ್ನಾಟಕ ಸರಕಾರವು ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ ನೀಡಿದ ಒಂದು ಕೋಟಿ ರೂಪಾಯಿ ಅನುದಾನದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ವಿವಿಧ ಎಂಟು ಪ್ರಮುಖ ಯೋಜನೆಗಳನ್ನು ರೂಪಿಸಿ ಪ್ರಸ್ತಾವನೆಯನ್ನು ಸಲ್ಲಿಸಿತು. ಅಧ್ಯಯನ ಸಂಸ್ಥೆಯ ಶಿಕ್ಷಕರು ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಈ ಯೋಜನೆಗಳನ್ನು ರೂಪಿಸಿಕೊಟ್ಟರು, ಆರಂಭದಲ್ಲಿ ಒಂದೊಂದು ಯೋಜನೆಯ ಕಾರ್ಯಭಾರವನ್ನು ತಲಾ ಇಬ್ಬಿಬ್ಬರು ಶಿಕ್ಷಕರಿಗೆ ನಿರ್ವಹಿಸಿ ಕೊಡಲಾಯಿತು. ಆದರೆ ಇಬ್ಬಿಬ್ಬರ ಸಹಭಾಗಿತ್ವದಲ್ಲಿ ಯೋಜನೆಯ ಕಾರ್ಯಗತಿಯು ತುಂಬಾ ಮಂದವಾಗಿ ಕುಂಠಿತವಾಯಿತು. ಹೀಗಾಗಿ ವೈಯಕ್ತಿಕವಾಗಿ ನಿರ್ದಿಷ್ಟ ಜವಾಬ್ದಾರಿಯನ್ನು ನೀಡದೆ ಹೋದರೆ ಯೋಜನೆಗಳು ತ್ವರಿತವಾಗಿ ಪೂರ್ಣಗೊಳ್ಳಲಾರವೆಂಬ ಕಾರಣದಿಂದ ಆಯಾ ಯೋಜನೆಗಳ ಸಂಪುಟಗಳ ರಚನೆಯ ಜವಾಬ್ದಾರಿಯನ್ನು ಒಬ್ಬೊಬ್ಬ ಶಿಕ್ಷಕರಿಗೆ ನಿಗದಿಗೊಳಿಸಿ, ಒಪ್ಪಿಸಿಕೊಡಲಾಯಿತು.

ಕನ್ನಡ ಅಧ್ಯಯನ ಸಂಸ್ಥೆಯ ಈ ಎಂಟು ಪ್ರಮುಖ ಯೋಜನೆಗಳಲ್ಲಿ 'ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ'ವು ಒಂದು. ಈ ಯೋಜನೆ ಅಡಿಯಲ್ಲಿ ಕೆಳಕಂಡ ಒಟ್ಟು ನಾಲ್ಕು ಸಂಪುಟಗಳನ್ನು ಸಿದ್ಧಪಡಿಸಿಕೊಡುವಂತೆ ರೂಪುರೇಷೆಗಳನ್ನು ಹಾಕಿಕೊಳ್ಳಲಾಯಿತು :

1. ಜಾನಪದ ಸಂಪುಟ
2. ಲಲಿತಕಲೆಗಳ ಸಂಪುಟ
3. ಕನ್ನಡ ಸಾಹಿತ್ಯ ಸಂಪುಟ ಮತ್ತು
4. ಸಂಕೀರ್ಣ ಸಂಪುಟ

ಈ ನಾಲ್ಕು ಸಂಪುಟಗಳಲ್ಲಿ ಜಾನಪದ ಮತ್ತು ಲಲಿತಕಲೆಗಳ ಸಂಪುಟಗಳ ಸಂಪಾದನಾ ಕಾರ್ಯವನ್ನು ಪ್ರೊ.ಪಿ.ಕೆ.ಖಂಡೋಬಾ ಅವರಿಗೂ, ಕನ್ನಡ ಸಾಹಿತ್ಯ ಮತ್ತು ಸಂಕೀರ್ಣ ಸಂಪುಟಗಳ ಸಂಪಾದನಾ ಕಾರ್ಯವನ್ನು ಡಾ. ಎಂ.ಎಸ್.ಪಾಟೀಲ್ ಅವರಿಗೂ ನಿರ್ವಹಿಸಿಕೊಡಲಾಯಿತು. ಈ ಹಿನ್ನೆಲೆಯಲ್ಲಿ ಡಾ. ಪಿ.ಕೆ. ಖಂಡೋಬಾ ಅವರು ಈಗಾಗಲೇ ಜಾನಪದ ಸಂಪುಟವನ್ನು ಸಿದ್ಧಪಡಿಸಿ, ಸಂಪಾದಿಸಿ ಹೊರತಂದಿದ್ದಾರೆ. ಇದೀಗ ಲಲಿತ ಕಲೆಗಳ ಸಂಪುಟವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಮುಖ್ಯಸ್ಥ ಡಾ. ಎಸ್.ಸಿ ಪಾಟೀಲ ಅವರೊಂದಿಗೆ ಸಿದ್ಧಪಡಿಸಿ, ಸಂಪಾದಿಸಿ ತಮ್ಮ ಕೈಗೆ ಕೊಡಲಾಗುತ್ತಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶ ಕುರಿತು ಒಂದೆರಡು ಮಾತುಗಳನ್ನು ಸ್ಥೂಲವಾಗಿ ಹೇಳುವುದು ಇಲ್ಲಿ ಅಗತ್ಯ ಎಂದು ಭಾವಿಸುತ್ತೇವೆ. ಹೈದ್ರಾಬಾದ ಕರ್ನಾಟಕ ಎಂಬುದು ಇಂದಿನ ಕರ್ನಾಟಕ ರಾಜ್ಯದ ಬೀದರ್, ಕಲಬುರ್ಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಿಂದ ಕೂಡಿದ ಪ್ರದೇಶ. ಇದು 1721 ರಿಂದ ಭಾರತ ಸರಕಾರದ ಒಕ್ಕೂಟದಲ್ಲಿ ಸೇರುವವರೆಗೆ ನಿಜಾಮರ ಆಡಳಿತದಲ್ಲಿದ್ದ ಭಾಗವಾಗಿತ್ತು. ಈ ಪ್ರದೇಶವು ಕೆಲವು ವಿಶಿಷ್ಟ ಮತ್ತು ವೈವಿಧ್ಯಮಯವಾದ ಸಂಪತ್ತುಗಳಿಂದ ಕೂಡಿದ ಭಾಗವಾಗಿದೆ. ಇದು ಆರ್ಥಿಕವಾಗಿ ಹಿಂದುಳಿದ ಪ್ರದೇಶವಾದರೂ ಕರ್ನಾಟಕದ ಇನ್ನುಳಿದ ಪ್ರದೇಶಗಳಿಗೆ ಹೋಲಿಸಿದರೆ ಇದು ತನ್ನದೇ ಆದ ಉಜ್ವಲ ಪರಂಪರೆ, ಇತಿಹಾಸ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಕೆಲವು ಮೂಲಭೂತ ಸೌಕರ್ಯಗಳಿಲ್ಲದೆ ಇದು ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಅಂಟಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಇದರ ಸರ್ವಾಂಗೀಣ ಅಭಿವೃದ್ಧಿಗಾಗಿ ಕರ್ನಾಟಕ ಸರಕಾರ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಿದೆ. ಈ ಪ್ರದೇಶವು ಬಹು ಮುಖ್ಯವಾಗಿ ರಾಜ್ಯದ 'ತೊಗರಿ ಕಣಜ' ಹಾಗೂ 'ಸಿಮೆಂಟಿನ ಅಕ್ಷಯ ಪಾತ್ರೆ' ಯಾಗಿದೆ. ಈ ಭಾಗದ ಶಹಬಾದ ಪರಸಿಕಲ್ಲುಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ, ತೊಗರಿ, ಸಿಮೆಂಟು ಮತ್ತು ಪರಸಿಕಲ್ಲುಗಳ ಉದ್ಯಮಗಳಿಂದಾಗಿ ಈ ಪ್ರದೇಶ ದಕ್ಷಿಣ ಭಾರತದ ಪ್ರಮುಖ ಸಾರಿಗೆ ಕೇಂದ್ರವಾಗಿ ಪರಿಣಮಿಸಿದೆ. ಈ ಪ್ರದೇಶವು ಹಲವು ಸುಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದ್ದು, ಕೆಲವು ಮತೀಯ ಸಾಮರಸ್ಯಕ್ಕೆ ಹಾಗೂ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ

ವಿಶ್ವಕೋಶಗಳ ಪ್ರಕಟಣೆಯಾಗಬೇಕು. ಇದರಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗುವುದು ಮತ್ತು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವವರಿಗೆ, ಸಂಶೋಧಕರಿಗೆ ಒಂದು ಆಕರ ಗ್ರಂಥ ಲಭ್ಯವಾಗಬಹುದೆಂದು ಮನಗಂಡು ಕನ್ನಡದಲ್ಲಿ ವಿಶ್ವಕೋಶ ಪ್ರಕಟಣೆ ಯೋಜನೆ ಹಮ್ಮಿಕೊಳ್ಳುವಂತೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು. ಈ ಸಲಹೆಯನ್ನು ಮಾನ್ಯ ಮಾಡಿದ ವಿಶ್ವವಿದ್ಯಾಲಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯ ಯೋಜನೆಯ ಬಗ್ಗೆ ಸವಿವರವಾದ ವರದಿ ಸಿದ್ಧಪಡಿಸಿದ್ದರು. ಈ ಯೋಜನೆಯನ್ನು ಮೊದಲಿಗೆ ಸರ್ಕಾರದ ಶಿಕ್ಷಣ ಇಲಾಖೆಗೆ ಸಲ್ಲಿಸಲಾಯಿತು. ಅನಂತರ ಈ ಯೋಜನೆಗೆ ಮರು ಚಾಲನೆ ನೀಡಿತು. ಪ್ರೊ. ದೇ. ಜವರೇಗೌಡರು ಈ ಯೋಜನೆಯನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ತರುವಲ್ಲಿ ಯಶಸ್ವಿಯಾದರು. 1969ರಲ್ಲಿ ಕನ್ನಡ ವಿಶ್ವಕೋಶದ ಮೊದಲ ಸಂಪುಟ ಪ್ರಕಟವಾಯಿತು. 14 ಸಂಪುಟಗಳ ಈ ಯೋಜನೆ ಪೂರ್ಣವಾಗಲು ಸುಮಾರು 35 ವರ್ಷಗಳು ಹಿಡಿದವು. ವಿಶ್ವಕೋಶ ಯೋಜನೆಗಳೊಂದಿಗೆ 30 ಸಂಪುಟಗಳ ಕನ್ನಡ ವಿಷಯ ವಿಶ್ವಕೋಶ ಯೋಜನೆಯನ್ನು ಸರ್ಕಾರ ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿತು. ಆದರೆ ಈ ಯೋಜನೆಯಲ್ಲಿ ಕನ್ನಡ ವಿಶ್ವಕೋಶ ಕರ್ನಾಟಕ ಜಾನಪದ, ಪುರಾತತ್ವ ಮತ್ತು ಇತಿಹಾಸ, ಪ್ರಾಣಿ ವಿಜ್ಞಾನ, ಭೂಗೋಳ ಶಾಸ್ತ್ರಗಳು ಪ್ರಕಟವಾಗಿವೆ. ಕರ್ನಾಟಕ ಸಹಕಾರಿ ಪ್ರಕಟನಾಮಂದಿರದ ಹೆಸರಾಂತ ಲೇಖಕ ನಿರಂಜನರ ಪ್ರಧಾನ ಸಂಪಾದಕತ್ವದಲ್ಲಿ ಜ್ಞಾನ ಗಂಗೋತ್ರಿಯು ಏಳು ಸಂಪುಟಗಳಲ್ಲಿ ಪ್ರಕಟವಾಯಿತು.

1973ರಲ್ಲಿ ನಿರಂಜನ್‌ರವರ ಪ್ರಧಾನ ಸಂಪಾದನೆಯಲ್ಲಿ ಸಂಪುಟ 5 ಕಲೆ, ಸಾಹಿತ್ಯ ಈ ಸಂಪುಟವು ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರದಿಂದ ಪ್ರಕಟಗೊಂಡಿದ್ದು, ವಿಶೇಷವಾಗಿ ಸಾಹಿತ್ಯದೊಂದಿಗೆ ನೃತ್ಯ, ಸಂಗೀತ, ನಾಟಕ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಮುಂತಾದ ಲಲಿತಕಲೆಗಳ ಕುರಿತು ಬಂದ ಮಹತ್ವದ ವಿಶ್ವಕೋಶವಾಗಿದೆ. ವಿಶ್ವದ ಕಲೆಯೊಂದಿಗೆ ಕರ್ನಾಟಕದ ಪ್ರಾತಿನಿಧಿಕವಾದ ಲಲಿತಕಲೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

1982ರಲ್ಲಿ ಗದಗಿನ ಶಿಹಾಮಿ ಪಬ್ಲಿಕೇಶನ್ ಮೂಲಕ ಸ.ಮ. ಶಿರಹಟ್ಟಿ ಅವರು 'ಚಿತ್ರಕಲಾ ಕೈದೀಪ' ಎಂಬ ಕಿರು ವಿಶ್ವಕೋಶ ಮಾದರಿಯ ಕೃತಿಯನ್ನು ಹೊರತಂದಿದ್ದಾರೆ. ಬೆಂಗಳೂರಿನ ಸಿ.ಎಂ.ಎನ್. ಪ್ರಕಾಶನದ ಮೂಲಕ ಎನ್. ಮರಿಶಾಮಾಚಾರ್ ಮತ್ತು ಎನ್. ವಿಶ್ವರೂಪಾಚಾರ್ ಅವರು 1985ರಲ್ಲಿ 'ಕಲಾಕೋಶ' ಎಂಬ ಗ್ರಂಥವನ್ನು ಹೊರತಂದಿದ್ದಾರೆ. ಇವೆರಡು ವಿಶ್ವಕೋಶದ ಮಾದರಿಯನ್ನು ಅನುಸರಿಸಿದ ಮತ್ತು ಅತ್ಯಂತ ಸ್ಥೂಲವಾದ ಮಿತಿಯನ್ನು ಹೊಂದಿದ ಕೃತಿಗಳಾಗಿವೆ.

1994ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಪಿ.ಆರ್. ತಿಪ್ಪೇಸ್ವಾಮಿಯವರ ಪ್ರಧಾನ ಸಂಪಾದನೆಯಲ್ಲಿ ಕಲಾಕೋಶ ಎಂಬ 390 ಪುಟಗಳ ಈ ಸಂಪುಟವು ವರ್ಣರಂಜಿತ ಮತ್ತು ಕಪ್ಪುಬಿಳುಪು ಛಾಯಾಚಿತ್ರಗಳೊಂದಿಗೆ ವಿಶ್ವದ ಮತ್ತು ಕರ್ನಾಟಕದ ದೃಶ್ಯಕಲೆಗಳನ್ನು ಈ ವಿಶ್ವಕೋಶ ಪರಿಚಯಿಸುತ್ತದೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶ ಯೋಜನೆಯ ಮಾದರಿಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕೆಲವು ವಿಶ್ವಕೋಶಗಳನ್ನು ಪ್ರಕಟಿಸಿದೆ. ಅವುಗಳಲ್ಲಿ 2000ರಲ್ಲಿ ಡಾ. ಕರೀಗೌಡ ಬೀಚನಹಳ್ಳಿಯವರ ಸಂಪಾದನೆಯಲ್ಲಿ ಹೊರಬಂದ 'ಕರಕುಶಲ ಕಲೆಗಳು' ಕರ್ನಾಟಕದ ಮಹತ್ವದ ಕರಕುಶಲಕಲೆಗಳನ್ನೊಳಗೊಂಡ ವಿಶ್ವಕೋಶ ಇದಾಗಿದೆ. ಸುಮಾರು 394 ಪುಟಗಳ ಈ ವಿಶ್ವಕೋಶದಲ್ಲಿ ಸಂದರ್ಭೋಚಿತವಾಗಿ ರೇಖಾಚಿತ್ರ ಮತ್ತು ಕಪ್ಪುಬಿಳುಪು ಛಾಯಾಚಿತ್ರಗಳನ್ನು ಅಲ್ಲಲ್ಲಿ ಬಳಸಿಕೊಂಡು ವಿಶ್ವಕೋಶವನ್ನು ಸಿದ್ಧಪಡಿಸಲಾಗಿದೆ. ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಡಾ. ಚಂದ್ರಶೇಖರ ಕಂಬಾರ ಅವರ ಸಂಪಾದಕತ್ವದಲ್ಲಿ ಕನ್ನಡ ಜಾನಪದ ವಿಶ್ವಕೋಶಗಳ ಎರಡು ಸಂಪುಟಗಳನ್ನು ಪ್ರಕಟಿಸಿದೆ. ಹೀಗೆ ವಿಶ್ವಕೋಶಗಳ ಪ್ರಕಟಣೆ ನಿರಂತರವಾಗಿ ಸಾಗುತ್ತಿದೆ.

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಲಲಿತಕಲಾಕೋಶದ ಇತಿಮಿತಿ ಕುರಿತು ಕೆಲವು ವಿಚಾರಗಳನ್ನು ಹೇಳುವದು ಇಲ್ಲಿ ಸೂಕ್ತವೆಂದು ಭಾವಿಸಿದ್ದೇವೆ. ಈ ಕೋಶವನ್ನು ಸಾಮಾನ್ಯ ಓದುಗರಿಗಷ್ಟೇ ಅಲ್ಲ, ಸಂಶೋಧಕರು, ಕಲಾವಿದರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಈ ಭಾಗದ ಇತಿಹಾಸ, ಸಂಸ್ಕೃತಿ ಹಾಗೆಯೇ ಲಲಿತಕಲೆಗಳಲ್ಲಿ ಆಸಕ್ತಿಯುಳ್ಳವರನ್ನು ಪ್ರಮುಖವಾಗಿ ಗಮನದಲ್ಲಿರಿಸಿಕೊಂಡು ಈ ಸಂಪುಟವನ್ನು ಸಿದ್ಧಪಡಿಸಲಾಗಿದೆ. ಈ ಸಂಪುಟದಲ್ಲಿ ಪ್ರಮುಖವಾಗಿ ಸಾಹಿತ್ಯವನ್ನು ಹೊರತುಪಡಿಸಿದ ಲಲಿತಕಲೆಗಳಾದ ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆ (ರೇಖಾಚಿತ್ರ ಮತ್ತು ವರ್ಣಚಿತ್ರ), ಸಂಗೀತ, ನೃತ್ಯ, ನಾಟಕ ಈ ಕ್ಷೇತ್ರಗಳಿಗೆ ವಿಶೇಷವಾದ ಆದ್ಯತೆಯನ್ನು ನೀಡಿ ಈ ವಿಷಯ ಕೋಶವನ್ನು ಸಿದ್ಧಪಡಿಸಲಾಗಿದೆ. ಹೈದ್ರಾಬಾದ್ ಕರ್ನಾಟಕದ ವಿವಿಧ ಪ್ರಕಾರದ ಲಲಿತಕಲೆಗಳು ಮತ್ತು ಕಲಾವಿದರು ಅವರ ಜೀವನ ಮತ್ತು ಸಾಧನೆಗಳು, ಕಲಾಶಿಕ್ಷಣ, ಕಲಾಸಾಹಿತ್ಯ, ಕಲಾಗ್ಯಾಲರಿಗಳು, ರಂಗಭೂಮಿ ಮತ್ತು ನೃತ್ಯ, ಸಂಗೀತ ಕಚೇರಿಗಳು ಮುಂತಾದ ಶಿಷ್ಟ ಮತ್ತು ಜಾನಪದ ಈ ಎರಡು ಸಂಪ್ರದಾಯದ ಲಲಿತಕಲಾ ಪ್ರಕಾರಗಳನ್ನು ವಿಶೇಷವಾಗಿ ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಬಳಸಿರುವ ಭಾಷೆ ಸರಳವಾದುದು, ಲೇಖನಗಳು ಸುಲಭ ಗ್ರಾಹ್ಯವಾಗುವಂತದ್ದಾಗಿದೆ. ಇಲ್ಲಿನ ಲೇಖನಗಳಿಗೆ ಒದಗಿಸಿರುವ ಮಾಹಿತಿ ನಿಖರವಾಗಿಯೂ, ನಿರ್ದಿಷ್ಟವಾಗಿರುವಂತೆಯೂ ಎಚ್ಚರಿಕೆ ವಹಿಸಲಾಗಿದೆ. ಇಲ್ಲಿ ಲೇಖನಗಳ ವಿಮರ್ಶೆ, ವಿಶ್ಲೇಷಣೆಗೆ ಎಡೆಮಾಡಿಕೊಡದೆ ವಿಷಯದಲ್ಲಿ ಅದರ ಸ್ವರೂಪ, ಕಲೆಯ ಅಭಿವ್ಯಕ್ತಿಯಾಗುವ ಸ್ಥಳ, ಸಂದರ್ಭ, ಪ್ರದರ್ಶನ ಮುಂತಾದ ಪ್ರಾದೇಶಿಕ ವೈಶಿಷ್ಟ್ಯತೆಗಳು, ವೇಷ ಭೂಷಣಗಳು, ಹಬ್ಬ, ಹುಣ್ಣಿಮೆ, ಉತ್ಸವ, ಜಾತ್ರೆ, ಮದುವೆ ಮುಂತಾದ ಸಂದರ್ಭದಲ್ಲಿನ ಆಚರಣೆಗಳ ಕಲೆಗಳ ಸ್ಥೂಲವಾದ ವಿವರಗಳಿವೆ. ಹೀಗೆ ಹಲವಾರು ವೈವಿಧ್ಯಮಯವಾದ ಲಲಿತಕಲೆಗಳನ್ನು ಈ ವಿಷಯ ಕೋಶ ಹೊಂದಿದೆ ಮತ್ತು ಇಲ್ಲಿ ಪ್ರಕಟವಾದ ಲೇಖನಗಳ ವಸ್ತುನಿಷ್ಠವೂ, ವ್ಯಾಪಕವೂ, ನಿಷ್ಪಕ್ಷಪಾತವಾಗಿಯೂ ಇರುವಂತೆ ಎಚ್ಚರಿಕೆ ವಹಿಸಲಾಗಿದೆ. ಸಾಮಾನ್ಯ ಓದುಗರಿಗೆ ಕೂಡಾ ಸುಲಭವಾಗಿ ಅರ್ಥವಾಗುವಂತೆ ಇಲ್ಲಿ ನಿರೂಪಿಸಲಾಗಿದೆ.

ಈ ಯೋಜನೆಯ ಪ್ರಾರಂಭಿಕ ಹಂತದಲ್ಲಿ ಶೀರ್ಷಿಕೆಗಳನ್ನು ಆಕಾರಾದಿಯಾಗಿ ಪಟ್ಟಿ ಮಾಡಲಾಯಿತು. ಈ ಪಟ್ಟಿಯನ್ನು ಸಮಗ್ರ ಪರಿಶೀಲನೆ ಮತ್ತು ಪರಿಷ್ಕರಣೆಗಾಗಿ ನಾಡಿನ ಖ್ಯಾತ ಕಲಾವಿದರಾದ ನಾಡೋಜ ಡಾ. ಜೆ.ಎಸ್. ಖಂಡೇರಾವ್, ಡಾ. ವ್ಹಿ.ಜಿ. ಅಂದಾನಿ, ಶ್ರೀ ಎ.ಎಸ್. ಪಾಟೀಲ, ನಾಡೋಜ ಡಾ. ವ್ಹಿ.ಟಿ. ಕಾಳೆ, ರಂಗಕಲಾವಿದರಾದ ಶ್ರೀ ಶಂಕರಯ್ಯ ಘಂಟಿ, ಗವೀಶ್ ಹಿರೇಮಠ, ಪ್ರೊ. ಪ್ರಭಾಕರ ಸಾತಖೇಡ, ಹೇಮಂತ ಕೊಲ್ಲಾಪುರೆ, ಹಾಗೂ ಸಂಗೀತ ಕಲಾವಿದರಾದ ಪ್ರೊ. ಸಿದ್ಧರಾಮಯ್ಯ ಮಠಪತಿ, ಡಾ. ಗುರುರಾಜ ದಂಡಾಪುರ್, ಶ್ರೀ ಮಹೇಶ ಬಡಿಗೇರ, ರಾಘವೇಂದ್ರ ಕುಲಕರ್ಣಿ ಮೊದಲಾದವರನ್ನು ವಿನಂತಿಸಿಕೊಳ್ಳಲಾಯಿತು. ಈ ಕಲಾ ವಿದ್ವಾಂಸರಿಂದ ಬಂದ ಸಲಹೆ ಸೂಚನೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲಾಯಿತು. ಈ ಪಟ್ಟಿಯನ್ನು ಸಿದ್ದಪಡಿಸುವ ಮುನ್ನ ನಾಡಿನ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಅಲ್ಲಿನ ಕಲಾವಿದರನ್ನು ಕಲಾ ವಿಮರ್ಶಕರನ್ನು ಸಂಪರ್ಕಿಸಿ ಅವರ ಸಲಹೆ–ಸೂಚನೆಗಳನ್ನು ಪಡೆಯಲು ಅಲ್ಲಲ್ಲಿ ಸಮಾಲೋಚನಾ ಸಭೆಗಳನ್ನು ಕರೆದು, ಚರ್ಚಿಸಿ ಪಟ್ಟಿಯನ್ನು ಅಂತಿಮವಾಗಿ, ಒಂದು ಸಮಗ್ರತೆಯ ದೃಷ್ಟಿಯಿಂದ ರೂಪಿಸಲಾಯಿತು. ಪ್ರತಿಯೊಂದು ಶೀರ್ಷಿಕೆಗೂ ನೀಡಬೇಕಾದ ಸ್ಥಳವನ್ನು ನಿರ್ಧರಿಸಲಾಯಿತು. ಕರ್ನಾಟಕದ ನಾನಾ ಭಾಗದ ಹಿರಿ–ಕಿರಿಯ ಕಲಾ ವಿದ್ವಾಂಸರ ಪಟ್ಟಿಯನ್ನು ಸಿದ್ದಪಡಿಸಿ ಲೇಖನ ಕಳುಹಿಸುವಂತೆ ಅವರನ್ನು ಕೋರಲಾಯಿತು. ಇದು ಪ್ರಾದೇಶಿಕ ಕೋಶವಾದ್ದರಿಂದ ವಿಶೇಷವಾಗಿ ಹೈದ್ರಾಬಾದ ಕರ್ನಾಟಕದ ವಿದ್ವಾಂಸರಿಗೆ ಆದ್ಯತೆ ನೀಡಲಾಗಿದೆ. ಲೇಖಕರಿಗೆ ಬರೆಯಲು ಕೊಟ್ಟಿದ್ದ ಕೆಲವು ಶೀರ್ಷಿಕೆಗಳು ಕೊನೆಯ ಘಳಿಗೆಯವರೆಗೂ ಎಷ್ಟು ಪ್ರಯತ್ನಿಸಿದರೂ ನಮ್ಮ ಕೈ ಸೇರಲಿಲ್ಲ. ನಮ್ಮ ಪ್ರಾಮಾಣಿಕ ಪ್ರಯತ್ನದ ನಡುವೆಯೂ ಕೆಲವು ಲೇಖನಗಳನ್ನು ಪಡೆಯಲು ಸಾಧ್ಯವಾಗಲೇ ಇಲ್ಲ. ಇದು ಕಾಲಮಿತಿ ಯೋಜನೆಯಾದ್ದರಿಂದ ಅನಿವಾರ್ಯವಾಗಿ ಅವುಗಳನ್ನು ಕೈಬಿಟ್ಟು ಈ ಕೋಶವನ್ನು ಅಂತಿಮಗೊಳಿಸಲಾಯಿತು. ಕೈಬಿಟ್ಟಿರುವ ಈ ಲೇಖನಗಳನ್ನು ಅವರಿಂದ ಪುನಃ ಪಡೆದು ಮುಂದಿನ ಪರಿಷ್ಕೃತ ಆವೃತ್ತಿಯ ಸಂದರ್ಭದಲ್ಲಿ ಸೇರಿಸಿಕೊಳ್ಳಲಾಗುವದು.

ಇಲ್ಲಿ ಪ್ರಕಟವಾದ ಕೆಲವು ಲೇಖನಗಳನ್ನು ಕಲಾ ವಿದ್ವಾಂಸರ ಕೆಲವು ಕೃತಿಗಳಿಂದ ಹಾಗೂ ಪತ್ರಿಕೆಗಳಿಂದ ಪಡೆಯಲಾಗಿದೆ. ಸಂಯುಕ್ತ ಕರ್ನಾಟಕ ದೈನಿಕ ಗುಲಬರ್ಗಾ ಆವೃತ್ತಿಯ ಹೈದ್ರಾಬಾದ–ಕರ್ನಾಟಕದ (ಕಲ್ಯಾಣ ಕರ್ನಾಟಕ) ವಿಶೇಷ ಪುರವಣಿಯನ್ನು ಕಳೆದ ಒಂದು ದಶಕಗಳಿಂದಲೂ ನಿರಂತರವಾಗಿ ಪ್ರಕಟಿಸುತ್ತಿದೆ. ಈ ಪುರವಣಿಗಳಲ್ಲಿ ಪ್ರಕಟವಾದ ಹಲವು ಲೇಖನಗಳನ್ನು ಸಂಪಾದಿಸಿ ಈ ಕೋಶಕ್ಕಾಗಿ ಬಳಸಿಕೊಳ್ಳಲಾಗಿದೆ. ಇದನ್ನು ಬಳಸಿಕೊಳ್ಳಲು ಅನುಮತಿಸಿದ ಸಂಯುಕ್ತ–ಕರ್ನಾಟಕ ಗುಲಬರ್ಗಾ ಆವೃತ್ತಿಯ ಸ್ಥಾನಿಕ ಸಂಪಾದಕರಾದ ಎಸ್.ಮಣ್ಣೂರ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಹಾಗೆಯೇ ಪ್ರಜಾವಾಣಿ ದೈನಿಕ ಗುಲಬರ್ಗಾ ಅವೃತ್ತಿಯಲ್ಲಿ ಆಗಾಗ ಬಂದ ಲೇಖಗಳನ್ನು ಪರಿಷ್ಕರಿಸಿ ಬಳಸಿಕೊಳ್ಳಲಾಗಿದೆ. ಅವರಿಗೂ ಅನಂತ ಕೃತಜ್ಞತೆಗಳು.

ಈ ಸಂಪುಟದ ಕಾರ್ಯ ಪ್ರಾರಂಭವಾದ ಒಂದೂವರೆ ವರ್ಷದೊಳಗಾಗಿ ಪ್ರಕಟಗೊಳ್ಳುತ್ತಿರುವುದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಹಲವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈ ಸಂಪುಟ ಪ್ರಕಟಣೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿದವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ವಿಶ್ರಾಂತ ಮಾನವಿಕ ಸಂಪಾದಕರಾದ ಶ್ರೀ ಜಿ.ಎಸ್. ಭಟ್ ಅವರು. ವಿಶ್ವಕೋಶದ ರಚನೆಯಲ್ಲಿ ಅಪಾರ ಅನುಭವಗಳಿಸಿದ ಅವರ ಅಮೂಲ್ಯ ಸಲಹೆ–ಸೂಚನೆಗಳು ನಮಗೆ ದೊರೆತಿವೆ. ಸಂಪುಟದ ಕಾರ್ಯದಲ್ಲಿ ಅವರು ನಮ್ಮೊಂದಿಗೆ ಸಹಕರಿಸಿದ್ದಾರೆ. ಅವರ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ.

ಈ ಕೋಶದ ರೂಪುರೇಷೆ, ವಿಷಯ, ಪಟ್ಟಿ ಪರಿಶೀಲನೆ, ಹಾಗೂ ಪರಿಷ್ಕರಣೆಯಿಂದ ಹಿಡಿದು ಕೊನೆಯವರೆಗೂ ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶವನ್ನು ನೀಡಿದ ನಾಡಿನ ಖ್ಯಾತ ಸಂಶೋಧಕರಾದ ಡಾ.ಎಂ.ಎಂ. ಕಲಬುರ್ಗಿ, ಡಾ.ಮ.ಗು.ಬಿರಾದಾರ, ಡಾ.ವಸಂತ ಕುಷ್ಟಿಗಿ, ಡಾ.ಡಿ.ಕೆ. ರಾಜೇಂದ್ರ, ಡಾ.ವೀರಣ್ಣ ರಾಜೂರ, ಈ ಮೊದಲಾದ ವಿದ್ವಾಂಸರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿ ಸ್ನೇಹಿತರು ಈ ಸಂಪುಟ ರಚನೆಯಲ್ಲಿ ಹಲವು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ವಿಶೇಷವಾಗಿ ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ಡಾ. ಬಸವರಾಜ ಸಬರದ ಮತ್ತು ಅಧ್ಯಕ್ಷರಾದ ಡಾ. ವೀರಣ್ಣ ದಂಡೆ ಹಾಗೂ ಇಚಿದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರು ಹೆಚ್ಚಿನ ಆಸಕ್ತಿ ತೋರಿದ್ದಾರೆ. ಇಂತಹದ್ದೊಂದು ಮಹತ್ಕಾರ್ಯದಲ್ಲಿ ನಮಗೆ ಸಂಸ್ಥೆಯ ಎಲ್ಲಾ ಅಧ್ಯಾಪಕರ ಸಹಾಯ ಸಹಕಾರ ಹೆಚ್ಚಿನ ಸ್ಫೂರ್ತಿಯನ್ನು ನೀಡಿದೆ. ಹೀಗಾಗಿ ಸಂಸ್ಥೆಯ ಎಲ್ಲ ಸ್ನೇಹಿತರಿಗೆ ಅನಂತ ಕೃತಜ್ಞತೆಗಳು ಸಲ್ಲುತ್ತವೆ.

ಕರ್ನಾಟಕ ಸರಕಾರದ ಕನ್ನಡ ಭಾಷಾಭಿವೃದ್ಧಿ ಯೋಜನೆಯನ್ನು ಹಿಂದಿನ ಕುಲಪತಿ ಡಾ.ಬಿ.ಜಿ. ಮೂಲೀಮನಿ, ಮತ್ತು ಕುಲಸಚಿವ ಡಾ.ಪಿ.ಕೆ. ತಿವಾರಿಯವರು ಅನುಷ್ಠಾನಗೊಳಿಸಿ ಚಾಲನೆಯನ್ನು ನೀಡಿದ್ದರು. ಈಗಿನ ಕುಲಪತಿ ಡಾ.ಈ.ಟಿ. ಪುಟ್ಟಯ್ಯ, ಮತ್ತು ಕುಲಸಚಿವ ಡಾ.ಎಸ್.ಎಲ್. ಹಿರೇಮಠ ಅವರು, ಈ ಯೋಜನೆಗೆ ಮರುಜೀವ ತುಂಬಿದ್ದಾರೆ. ಆಡಳಿತಾತ್ಮಕವಾಗಿ ಎಲ್ಲ ಬಗೆಯ ನೆರವು ನೀಡಿದ ಈ ಮಹನೀಯರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ. ವಿಶ್ವವಿದ್ಯಾಲಯದ ಮಾನ್ಯ ಸಿಂಡಿಕೇಟ ಸದಸ್ಯರಿಗೂ ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಇಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ.

ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕನ್ನಡ ನಾಡು, ನುಡಿಗಳ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದಾರೆ. ಹಣಕಾಸು ಸಚಿವರೂ ಆಗಿದ್ದ ಅವರು ಕನ್ನಡ ಭಾಷಾ ಅಭಿವೃದ್ಧಿಗಾಗಿ ಕರ್ನಾಟಕದ ಪ್ರತಿಯೊಂದು

ಸಾಕ್ಷಿಯಾಗಿವೆ. ಕಲಬುರ್ಗಿ ಜಿಲ್ಲೆಯ ಸನ್ನತಿ, ನಾಗಾಯಿ, ಮಳಖೇಡ, ಬೀದರಿನ ಗವಾನ ಮದರಸಾ ವಿಶ್ವವಿದ್ಯಾಲಯ ಇತ್ಯಾದಿಗಳು ಪ್ರಾಚೀನ ವಿದ್ಯಾಕೇಂದ್ರಗಳಾಗಿವೆ. ಎಲ್ಲಕ್ಕೂ ಮಿಗಿಲಾಗಿ ಈ ಪ್ರದೇಶದ ಜನಪದ ಸಂಸ್ಕೃತಿ ಮತ್ತು ಭಾಷೆಯ ಮೇಲೆ ನೆರೆಯ ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳ ಬಲವಾದ ಪ್ರಭಾವದ ನಡುವೆಯೂ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಈ ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿ ತುಂಬಾ ಭೀಕರವಾಗಿದೆ. ಮೊಗಲರ ದಾಳಿಯಿಂದ ಆದಿಲ್ ಶಾಹಿಗಳು ಪತನವಾದ ಮೇಲೆ ಈ ಪ್ರಾಂತ್ಯ ತುಂಬಾ ದುಸ್ಥಿತಿಗೊಳಗಾಯಿತು. ಜನಸಮುದಾಯದ ಬದುಕು ಹೀನಾಯ ಸ್ಥಿತಿಗೆ ತಲುಪಿ ಎಲ್ಲ ಬಗೆಯ ಕ್ರೌರ್ಯಗಳನ್ನು ಅನುಭವಿಸಿದೆ. ದಾಸ್ಯತ್ವ, ಮತಾಂತರ ಹಾಗೂ ಒಳಮತಾಂತರಗಳು ಈ ಭಾಗದ ಜನಸಮುದಾಯವನ್ನು ತಲ್ಲಣಗೊಳಿಸಿವೆ. ಈ ಪ್ರಾಂತ್ಯದಲ್ಲಿ ಸೂಫಿಗಳು, ಸಂತರು, ನಾಥರು, ಸಿದ್ಧರು, ಆರೂಢರು, ದರ್ವೇಶಿಗಳು, ದೀನ್‌ದಾರರು ಮೊದಲಾದ ಹತ್ತಾರು ಧಾರ್ಮಿಕ ಪಂಥಗಳು ಕಾಣಿಸಿಕೊಂಡವು. ಇಲ್ಲಿನ ಜನಸಮುದಾಯಗಳು ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಘರ್ಷಗಳಿಗೊಳಗಾಗಿ ತತ್ತರಿಸಿ ಹೋಗಿವೆ.

ಈ ಹಿನ್ನೆಲೆಯಲ್ಲಿ ಹೈದ್ರಾಬಾದ ಕರ್ನಾಟಕವು ಸಾಹಿತ್ಯ, ಸಂಸ್ಕೃತಿ, ಜಾನಪದ, ಲಲಿತ ಕಲೆ ಇವುಗಳಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಇಲ್ಲಿಯ ಕಲೆ, ಜಾನಪದ, ಇತಿಹಾಸ, ಪುರಾತತ್ವ, ಇವೆಲ್ಲಾ ಅಧ್ಯಯನ ಯೋಗ್ಯವಾಗಿವೆ. ಇಲ್ಲಿಯ ಸಂಸ್ಕೃತಿ ವಿಶಿಷ್ಟವಾದದ್ದು, ಹೈದ್ರಾಬಾದ ಕರ್ನಾಟಕದ ಜನರ ಬದುಕು ಹೋರಾಟಮಯವಾದುದು ಅಷ್ಟೇ ಅಲ್ಲ, ವರ್ಣ ರಂಜಿತವಾದುದು ಕೂಡ. ನಾಡಿನ ಸಾಹಿತ್ಯ, ಸಂಸ್ಕೃತಿ, ಜನಪದ ಮತ್ತು ಲಲಿತಕಲೆಗಳು ಇವುಗಳಿಗೆಲ್ಲಾ ಇಲ್ಲಿಯ ಜನ ನೀಡಿರುವ ಕೊಡುಗೆ ಅಪೂರ್ವವಾದುದು. ಈ ಭಾಗದಲ್ಲಿ ನೂರಾರು ಜನ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ, ನಾಟಕ, ತತ್ವಪದಕಾರರು, ಲಾವಣಿಕಾರರು, ಶಾಹಿರರು, ಸಣ್ಣಾಟ, ದೊಡ್ಡಾಟ, ಕವಿ–ಕಲಾವಿದರು ಈ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ಭಾಗದ ಕೆಲವು ಸಾಂಸ್ಕೃತಿಕ ಸಂಗತಿಗಳು ಅತ್ಯಂತ ಕುತೂಹಲಕಾರಿಯಾಗಿವೆ. ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ವಿಭಿನ್ನ ಜನ ಸಂಸ್ಕೃತಿಗಳಿರುವುದನ್ನು ನಾವು ಗುರುತಿಸುತ್ತೇವೆ. ಭಾಷೆ ಒಂದಾದರೂ ಅದರಲ್ಲಿ ವೈವಿಧ್ಯತೆಗಳು ಇರುವುದನ್ನು ಗಮನಿಸಬಹುದು. ಹೈದ್ರಾಬಾದ ಕರ್ನಾಟಕದ ಕನ್ನಡ ಬಹು ಶಕ್ತಿಶಾಲಿಯಾದ ಗಂಡು ಭಾಷೆ. ಬೇರೆ ಬೇರೆ ಭಾಷೆಗಳ ಪದಗಳನ್ನು ಸ್ವೀಕರಿಸಿದ್ದಷ್ಟೇ ಅಲ್ಲ, ಕನ್ನಡದ ಪದಗಳನ್ನು ಕೂಡಾ ಅದು ಅನ್ಯ ರಾಜ್ಯದವರಿಗೆ ನೀಡಿದೆ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟರೂ ಕೂಡಾ ಇಂದಿನವರೆಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವ ಇಲ್ಲಿಯ ಜನ, ಅವರ ಸಂಸ್ಕೃತಿ, ಕಲೆ ಇವೆಲ್ಲಾ ದಾಖಲಾಗುವುದು ಅಗತ್ಯ. ಅನೇಕ ಕಲೆಗಳು ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಅವುಗಳನ್ನೆಲ್ಲಾ ದಾಖಲಿಸಿ ಕರ್ನಾಟಕದ ಸಮಸ್ತ ಜನತೆಯ ಮುಂದೆ ಇಡುವುದು ನಮ್ಮ ಉದ್ದೇಶವಾಗಿತ್ತು. ಆ ನಿಟ್ಟಿನಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಲಲಿತಕಲಾ ಕೋಶ ಒಂದು ಅಪೂರ್ವ ದಾಖಲೆಯಾಗಿದೆ. ಈ ನಿಟ್ಟಿನಲ್ಲಿ ಇದು ಕೇವಲ ಮಾಹಿತಿಕೋಶವಾಗಿರದೆ, ಸಾಂಸ್ಕೃತಿಕ ಹುಡುಕಾಟದ ವಿಷಯ ವಿವರಗಳನ್ನು ಒಳಗೊಂಡ ಕೋಶವಾಗಿದೆ.

ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನಗಳು ಸಾಕಷ್ಟು ನಡೆದಿಲ್ಲ. ಕೆಲವು ವಿದ್ವಾಂಸರು ವೈಯಕ್ತಿಕ ನೆಲೆಯಲ್ಲಿ ಕೃತಿಗಳನ್ನು ರಚಿಸಿದ್ದುಂಟು. ಆದರೆ ಸಮಗ್ರವಾಗಿ ಮತ್ತು ಸಮರ್ಪಕವಾಗಿ ಈ ನಿಟ್ಟಿನಲ್ಲಿ ಅಧ್ಯಯನ ಸಂಶೋಧನೆಗಳು ನಡೆದು, ಅವು ದಾಖಲಾಗುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ದಿಟ್ಟ ಹೆಜ್ಜೆಯನ್ನಿಟ್ಟು ಸಾಂಸ್ಕೃತಿಕ ಕೋಶಗಳನ್ನು ಪ್ರಕಟಿಸಿ ಸಮಗ್ರ ಕನ್ನಡಿಗರ ಮುಂದಿಟ್ಟಿದೆ.

ಕನ್ನಡ ಭಾಷೆಯಲ್ಲಿ ವಿಶ್ವಕೋಶಗಳನ್ನು ಸಿದ್ಧಪಡಿಸುವ ಪರಿಕಲ್ಪನೆ ಹೊಸದೇನಲ್ಲ. ಜ್ಞಾನದ ವಿವಿಧ ಶಾಖೆಗಳ ವಿವೇಚನೆಯುಳ್ಳ ವಿಶ್ವಕೋಶಗಳ ರಚನೆ ಕರ್ನಾಟಕದಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ಮಾನಸೋಲ್ಲಾಸ 12ನೇ ಶತಮಾನದ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರನಿಂದ ರಚನೆಯಾದ ಕೃತಿ. ಇದೊಂದು ಪ್ರಾಚೀನ ಕರ್ನಾಟಕದ ಸುಪ್ರಸಿದ್ಧ ವಿಶ್ವಕೋಶವೆಂದು ಪರಿಗಣಿತವಾಗಿದೆ. ಸಂಸ್ಕೃತ ಭಾಷೆಯಲ್ಲಿ ಬಂದ ಈ ಗ್ರಂಥ ಆರೂವರೆ ಸಾವಿರ ಶ್ಲೋಕಗಳಲ್ಲಿ ಆಗಿನ ಕರ್ನಾಟಕದ ವಾಸ್ತು, ಶಿಲ್ಪ, ಚಿತ್ರ, ನೃತ್ಯ, ಗೀತವಾದ್ಯ, ಕ್ರೀಡೆ, ಜ್ಯೋತಿಷ್ಯ, ವಿಗ್ರಹ ಹೀಗೆ ಹಲವಾರು ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುವ ಮಹತ್ವದ ಕೋಶವಾಗಿದೆ. (ಸಂಸ್ಕೃತದ ಈ ಕೃತಿಯು ಎರಡು ಸಂಪುಟಗಳಲ್ಲಿ 1998ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಪ್ರಕಟಗೊಂಡಿದೆ). 'ವಿಷ್ಣುಧರ್ಮೋತ್ತರ ಪುರಾಣ', 'ಸಮರಾಂಗಣ ಸೂತ್ರದಾರ', 'ಚಿತ್ರಸೂತ್ರ', 'ಶಿವತತ್ವ ರತ್ನಾಕರ' ಮುಂತಾದ ಕೃತಿಗಳಲ್ಲಿ ಚಿತ್ರಕಲೆ, ಶಿಲ್ಪಕಲೆ ಮುಂತಾದ ಕಲೆಗಳ ಕುರಿತು ವಿಶ್ವಕೋಶದಂತಹ ಪ್ರತ್ಯೇಕ ಅಧ್ಯಾಯಗಳೇ ರಚನೆಗೊಂಡಿವೆ. ಅನೇಕ ಪಾರಿಭಾಷಿಕ ಶಬ್ದಗಳೊಂದಿಗೆ ಲಲಿತಕಲೆಗಳು ಇಲ್ಲಿ ವಿವರಣೆಗೊಂಡಿವೆ.

ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ' ಪ್ರಾಚೀನ ಅರ್ಥದಲ್ಲಿ ಒಂದು ವಿಶ್ವಕೋಶವಾಗಿರಬಹುದು. ಕಡಲ ತೀರದ ಭಾರ್ಗವ ಡಾ. ಶಿವರಾಮ ಕಾರಂತರು ವಿಶ್ವಕೋಶ ಯೋಜನೆಗಳನ್ನು ಮಾಡಿ 1936ರಲ್ಲಿ ಮಕ್ಕಳಿಗಾಗಿ ಬಾಲ ಪ್ರಪಂಚ ಪ್ರಕಟಿಸಿದ್ದರು. ಇದು ವಿಶ್ವಕೋಶ ರಚನೆಯಲ್ಲಿ ಇಟ್ಟ ಪ್ರಪ್ರಥಮ ಹೆಜ್ಜೆಯೆಂದು ಭಾವಿಸಬಹುದು. ಆನಂತರ ವಿಷಯ ವಿಶ್ವಕೋಶವೆಂದು ಪರಿಗಣಿಸಬಹುದಾದ 'ವಿಜ್ಞಾನ ಪ್ರಪಂಚ'ವನ್ನು ಅವರು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದ್ದು ಉಲ್ಲೇಖನೀಯ. ಅದರೆ ಇದು ವೈಯಕ್ತಿಕ ನೆಲೆಯಲ್ಲಿ ವಿಶ್ವಕೋಶ ರಚಿಸಲು ಕಾರಂತರು ನಡೆಸಿದ ಒಂದು ಸಾಹಸಗಾಥೆ. ಕನ್ನಡದಲ್ಲಿ ವಿಶ್ವಕೋಶಗಳ ಪ್ರಕಟಣೆಯ ಬಗ್ಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಕನ್ನಡದ ಹಲವು ಹಿರಿಯ ಲೇಖಕರು ಪ್ರಸ್ತಾಪಿಸಿದ್ದುಂಟು, ರಾಷ್ಟ್ರಕವಿ ಕುವೆಂಪುರವರು ಕನ್ನಡದಲ್ಲಿ

ವಿಶ್ವವಿದ್ಯಾಲಯಕ್ಕೆ ಎರಡು ಕೋಟಿ ರೂಪಾಯಿಗಳ ಆರ್ಥಿಕ ನೆರವು ನೀಡುವುದರ ಮೂಲಕ ತಮ್ಮ ಭಾಷಾ ಪ್ರೇಮವನ್ನು ಮೆರೆದಿದ್ದಾರೆ. ಶ್ರೀಯುತರಿಗೆ ಸಮಸ್ತ ಕನ್ನಡಿಗರ ಪರವಾಗಿ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ಅವರಷ್ಟೇ ಸಮರ್ಥರಾಗಿರುವ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಜಗದೀಶ್ ಶೆಟ್ಟರ್ ಅವರಿಗೂ ಅತ್ಯಂತ ಗೌರವಪೂರ್ವಕವಾಗಿ ವಂದಿಸುತ್ತೇವೆ. ಈ ಯೋಜನೆಯನ್ನು ಕೈಗೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಕಾರಜೋಳ ಅವರು ಎಲ್ಲ ಬಗೆಯ ಸಹಾಯ ಸಹಕಾರವನ್ನು ನೀಡಿದ್ದಾರೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಕಾರ್ಯದರ್ಶಿ ಶ್ರೀ ಜಯರಾಮರಾಜೇಅರಸ ಹಾಗೂ ಇಂದಿನ ಕಾರ್ಯದರ್ಶಿ ಶ್ರೀ ಬಸವರಾಜು ಅವರಿಗೂ ಮತ್ತು ಇಲಾಖೆಯ ಹಿಂದಿನ ಆಯುಕ್ತರಾದ ಶ್ರೀ ಮನು ಬಳಿಗಾರ ಹಾಗೂ ಇಂದಿನ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೂ ಹೃತ್ಪೂರ್ವಕ ವಂದನೆಗಳು.

ಈ ಕೋಶದಲ್ಲಿ ಹಲವು ಅರೆಕೊರೆಗಳು ಇರಬಹುದಾದರೂ, ಅವುಗಳನ್ನು ಪರಿಷ್ಕರಣ ಸಂದರ್ಭದಲ್ಲಿ ಸರಿಪಡಿಸಬಹುದಾಗಿದೆ. ಈ ನಿಟ್ಟಿನಲ್ಲಿ ರಚನಾತ್ಮಕ ಸಲಹೆ-ಸೂಚನೆಗಳನ್ನು ನೀಡಬೇಕೆಂದು ಕೋರುತ್ತೇವೆ. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಲಲಿತಕಲಾಕೋಶ ಒಂದು ಪ್ರದೇಶದ ಜನ ಜೀವನ ಮತ್ತು ಸಂಸ್ಕೃತಿಯನ್ನು ನಾಡಿನ ಜನರಿಗೆ ನಿರೂಪಿಸುವ ಒಂದು ಪ್ರಯತ್ನ. ಲಲಿತಕಲಾ ಕ್ಷೇತ್ರದಲ್ಲಿ ಈ ಕೋಶ ಒಂದು ವಿಶಿಷ್ಟ ದಾಖಲೆಯಾಗಲಿದೆ ಎಂದರೆ ಅತಿಶಯೋಕ್ತಿವಾಗಲಾರದು. ಈ ಪ್ರಯತ್ನದಲ್ಲಿ ನಾವು ಒಂದಿಷ್ಟು ಯಶಸ್ವಿಯಾಗಿದ್ದೇವೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಬೆಂಗಳೂರಿನ ಪ್ರಿಂಟ್ ಪಾರ್ಕ್ ಮುದ್ರಣಾಲಯದವರು ಈ ಕೋಶವನ್ನು ತುಂಬಾ ಸುಂದರವಾಗಿ ಮುದ್ರಿಸಿಕೊಟ್ಟಿದ್ದಾರೆ. ಮುದ್ರಣಾಲಯದ ಒಡೆಯರಾದ ಶ್ರೀ ಜಿ.ಬಿ. ಪಾಟೀಲ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕೊನೆಯದಾಗಿ, ಈ ಕೋಶದ ಸಂಪುಟವು ನಿರೀಕ್ಷಿತ ಮಟ್ಟಕ್ಕೇರಲು ವಾಚಕರ ಮತ್ತು ಕಲಾವಿದ್ವಾಂಸರ ರಚನಾತ್ಮಕ ಸಲಹೆಗಳಿಗೆ ಸದಾ ಸ್ವಾಗತವಿದೆ. ಪ್ರಾದೇಶಿಕ ಮಟ್ಟದ ಈ ಕೋಶವು ಒಂದು ವಿಶಿಷ್ಟ ದಾಖಲೆಯಾಗಿದ್ದು, ಇದನ್ನು ಈ ಭಾಗದವರಷ್ಟೇ ಅಲ್ಲದೇ ಕರ್ನಾಟಕದ ಇನ್ನುಳಿದ ಪ್ರದೇಶಗಳ ಜನರೂ ಕೂಡ ಇದರ ಸದುಪಯೋಗ ಪಡೆಯುವರೆಂದು ಆಶಿಸುತ್ತೇವೆ. ಈ ಸಂಪುಟಕ್ಕೆ ನೆರವಾದ ಬರಹಗಾರರನ್ನು ಮತ್ತು ಎಲ್ಲ ತಾಂತ್ರಿಕ ಸಿಬ್ಬಂದಿಗಳನ್ನು ಪ್ರೀತಿಯಿಂದ ಸ್ಮರಿಸಿಕೊಳ್ಳುತ್ತೇವೆ.

ಡಾ. ಪಿ.ಕೆ. ಖಂಡೋಬಾ

ಡಾ. ಎಸ್.ಸಿ. ಪಾಟೀಲ

ಸಂಪಾದಕರು

ಈ ಕೋಶದಲ್ಲಿ ದಾಖಲಾಗಿರುವ ಮಾಹಿತಿಗಳಾಗಲಿ, ಸ್ವರೂಪವಾಗಲಿ ಇದೇ ಅಂತಿಮವೆಂದು ಯಾರೂ ಭಾವಿಸಬೇಕಾಗಿಲ್ಲ. ಇಲ್ಲಿ ಹೈದ್ರಾಬಾದ ಕರ್ನಾಟಕದ ಪ್ರತಿ ಹಳ್ಳಿ ಹಳ್ಳಿಗೂ ಒಳಹೊಕ್ಕು ನೋಡುವುದು ಅಸಾಧ್ಯವಾದ ಸಂಗತಿ. ಇಲ್ಲಿ ಈ ಪ್ರದೇಶದ ಪ್ರಾತಿನಿಧಿಕವಾದ ಮಾಹಿತಿಯನ್ನು ಮಾತ್ರ ದಾಖಲಿಸಲಾಗಿದೆ. ಹೀಗಾಗಿ ಇಲ್ಲಿ ನೀಡಿರುವ ವಿವರಗಳು ಒಂದು ಜಿಲ್ಲೆಗೂ ಇನ್ನೊಂದು ಜಿಲ್ಲೆಗೂ ಹೋಲಿಸಿ ನೋಡಿದಾಗ ಒಂದಿಷ್ಟು ಭಿನ್ನತೆಗಳು ಕಾಣಿಸಬಹುದು ಒಂದು ಇನ್ನೊಂದಕ್ಕಿಂತ ತೀರ ಭಿನ್ನವಾಗಿ, ವಿಶಿಷ್ಟವಾಗಿ, ಸ್ವಾರಸ್ಯಕರವಾಗಿ ಹಾಗೂ ವೈವಿಧ್ಯಮಯವಾಗಿ ಕಾಣಿಸ ಬಹುದು. ಅಂತಹ ಕಡೆಗಳಲ್ಲಿ ವಿಪರ್ಯಾಸಗಳಿದ್ದರೆ ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಪರಿಷ್ಕರಿಸಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ನಮಗೆ ತಿಳಿಸುವ ಕೃಪೆಮಾಡಬೇಕೆಂದು ಕೋರುತ್ತೇವೆ.

ಕೋಶದ ಕಾರ್ಯಕ್ಕೆ ಕೊನೆಯೆಂಬುದೇ ಇಲ್ಲ. ಅದು ಎಂದಿಗೂ ಮುಗಿಯದ ಕೆಲಸ. ವಾಸ್ತವವಾಗಿ ಯಾವ ವಿಶ್ವಕೋಶವೂ ಅಂತಿಮವಲ್ಲ. ನಮ್ಮ ಸಾಂಸ್ಕೃತಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಅದು ಆಗಿಂದಾಗ್ಗೆ ಪರಿಷ್ಕರಣಗೊಳ್ಳುತ್ತಲೇ ಹೋಗುತ್ತದೆ. ಮೇಲಾಗಿ ಇದು ಪ್ರಾದೇಶಿಕ ಮಟ್ಟದಲ್ಲಿ ಕನ್ನಡದಲ್ಲಿ ರಚನೆಯಾಗಿರುವ ಪ್ರಪ್ರಥಮ ಕೋಶವಾದ್ದರಿಂದ ಇಲ್ಲಿ ಹಲವು ಅರೆಕೊರೆಗಳು ಇರುವದು ಸಹಜ. ಹೈದ್ರಾಬಾದ ಕರ್ನಾಟಕ ಭಾಗದ ಲಲಿತಕಲೆಗಳ ಸಾಂಸ್ಕೃತಿಕ ವಿಷಯ ಸಂಗತಿಗಳನ್ನು ದಾಖಲಿಸುವುದು ಈ ಕೋಶದ ಪ್ರಮುಖ ಉದ್ದೇಶ. ಈ ಪ್ರದೇಶದ ಕಲೆ, ಕಲಾವಿದರ ಶ್ರೀಮಂತಿಕೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹೇಳುವ ನಿಟ್ಟಿನಲ್ಲಿ ಈ ಕೋಶ ತಕ್ಕ ಮಟ್ಟಿನ ಯಶಸ್ಸನ್ನು ಸಾಧಿಸಿದೆ ಎಂದು ಭಾವಿಸುತ್ತೇವೆ.

ಒಂದು ಕೋಶದ ಸಂಪಾದನಾ ಕೆಲಸವೆಂದರೆ ಅದು ಸುಲಭದ ಕೆಲಸವಲ್ಲ. ಅದು ಒಬ್ಬ ವ್ಯಕ್ತಿಯಿಂದ ಮಾಡಲು ಅಸಾಧ್ಯವಾದ ಕೆಲಸವೆಂದೇ ಹೇಳಬೇಕು. ಸಾಮಾನ್ಯವಾಗಿ ಯಾವುದೇ ಕೋಶದ ಕಾರ್ಯಕ್ಕೆ ಹತ್ತಾರು ಜನ ತಾಂತ್ರಿಕ ಸಿಬ್ಬಂದಿಗಳು ಸಂಪಾದಕರು, ಸಹಾಯಕ ಸಂಪಾದಕರು, ಉಪ ಸಂಪಾದಕರು, ಪ್ರಧಾನ ಸಂಪಾದಕರು, ಗೌರವ ಸಂಪಾದಕರು, ಲೇಖನ ಪರಿಶೀಲಕರು, ಪರಿಷ್ಕರಿಸುವವರು, ಕರಡು ಸಿದ್ಧಪಡಿಸುವವರು ಹೀಗೆ ಸುಮಾರು 50 ಕ್ಕೂ ಹೆಚ್ಚು ಜನ ತಾಂತ್ರಿಕ ಸಿಬ್ಬಂದಿಗಳು ನಿರಂತರವಾಗಿ ಪರಿಶ್ರಮಿಸಿದಾಗ ಕೋಶಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬರಲು ಸಾಧ್ಯವಾಗುತ್ತದೆ. ಆದರೆ ಪ್ರಸ್ತುತ ಈ ವಿಷಯ ಕೋಶಕ್ಕೆ ಕೇವಲ ಎರಡು ಮೂರು ಜನ ತಾಂತ್ರಿಕ ಸಿಬ್ಬಂದಿಗಳ ನೆರವಿನಿಂದ ಮಾತ್ರ ಸಂಪಾದಿತವಾದ ಕೋಶವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ.

ಈ ಕೋಶ ರಚನೆಯಲ್ಲಿ ನೂರಾರುಜನ ಲೇಖಕರಿಗೆ ನಿರ್ದಿಷ್ಟ ವಿಷಯಗಳನ್ನು ನೀಡಿ ಟಿಪ್ಪಣೆ/ಲೇಖನಗಳನ್ನು ಬರೆದು ಕೊಡಲು ಕೇಳಿಕೊಳ್ಳಲಾಗಿತ್ತು. ಜೊತೆಗೆ ಕೆಲವು ವಿಷಯಗಳನ್ನು ಪತ್ರಿಕೆ, ನಿಯತಕಾಲಿಕೆಗಳಿಂದ, ಕೃತಿಗಳಿಂದ, ಬರಹ, ಲೇಖನ ಸಾಮಗ್ರಿಗಳಿಂದ, ಅಪೂರ್ವ ದಾಖಲೆಗಳಿಂದ, ಆಕರ ಸಾಮಗ್ರಿಗಳನ್ನು ಗುರುತಿಸಿ, ಸಂಗ್ರಹಿಸಿ ಅವುಗಳಿಗೆ ನಿರ್ದಿಷ್ಟ ರೂಪ ಕೊಟ್ಟು ಈ ಕೋಶಕ್ಕೆ ಬಳಸಿಕೊಳ್ಳಲಾಗಿದೆ. ಈ ಕೋಶ ಒಂದು ಪ್ರದೇಶದ ವಿಶಿಷ್ಟ ಸಂಸ್ಕೃತಿ ಮತ್ತು ಭಾಷೆಯನ್ನು ಅಭಿವ್ಯಕ್ತಿಸುವುದರಿಂದ ಸಾಧ್ಯವಾದಷ್ಟು ಮೂಲ ರೂಪದಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಇಲ್ಲಿನ ಪ್ರತಿಯೊಂದು ಸಂಗತಿಗಳು ಈ ಪ್ರದೇಶದ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಆರಾಧನೆ, ನಂಬಿಕೆ, ಕಲೆ, ಐತಿಹ್ಯ, ಪುರಾಣ, ಕಥೆ, ಸಾಹಿತ್ಯ, ಸಂಸ್ಕಾರ, ಮಾಟ, ಮಂತ್ರ, ತಂತ್ರ, ಮದುವೆ, ಮುಂಜಿವೆ, ಜಾತ್ರೆ, ಉತ್ಸವ, ಕಲಾವಿದರು ಹಾಗೂ ವಿವಿಧ ರೀತಿಯ ವೈವಿಧ್ಯಮಯವಾದ ಕಲೆಗಳು ಮತ್ತು ವಿವಿಧ ಜನಾಂಗಗಳ ಕುಲ ಕಸಬು, ವೃತ್ತಿಮೂಲವಾದ ಕಲೆಗಳು ಇತ್ಯಾದಿ ಸಾಂಸ್ಕೃತಿಕ ಅಂಶಗಳ ಮಹತ್ವವನ್ನು ತಿಳಿಸುತ್ತವೆ. ಇವೆಲ್ಲವುಗಳು ಸಾಂಸ್ಕೃತಿಕ ಪರಿಧಿಯೊಂದರ ತಾತ್ವಿಕ ಅಂಶಗಳನ್ನು ಒಳಗೊಂಡಿದ್ದು, ಯಾವುದೇ ಸಿದ್ಧಾಂತಕ್ಕೆ ಒಳಗಾಗಿಲ್ಲ ಎಂಬುದನ್ನು ಗಮನಿಸಬೇಕು.

'ಹೈದ್ರಾಬಾದ ಕರ್ನಾಟಕ ವಿಷಯಕೋಶ ಲಲಿತಕಲೆಗಳ' ಈ ಸಂಪುಟದ ಸ್ವರೂಪ ಲಕ್ಷಣಗಳ ಬಗೆಗೆ ಇಲ್ಲಿ ಒಂದೆರೆಡು ಮಾತುಗಳನ್ನು ಪ್ರಸ್ತಾಪಿಸಬಹುದಾಗಿದೆ. ಇದುವರೆಗಿನ ಕನ್ನಡ ವಿಷಯ ವಿಶ್ವಕೋಶಗಳಿಗಿಂತ ಈ ವಿಷಯ ಕೋಶ ಹಲವು ವಿಷಯಗಳಲ್ಲಿ ತೀರಾ ಭಿನ್ನವಾಗಿದೆ. ಪ್ರಮುಖವಾಗಿ ಇದು ಒಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ರಚಿತವಾಗಿರುವ ಕೋಶ. ಒಂದು ಪ್ರದೇಶದ ಕಲಾಸಂಬಂಧಿ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಪುಟವನ್ನು ಸಿದ್ಧಗೊಳಿಸಲಾಗಿದೆ. ಸಂಪುಟಕ್ಕೆ ಪುಟಮಿತಿ ಮತ್ತು ಕಾಲಮಿತಿ ಎರಡೂ ಇದ್ದುದ್ದರಿಂದ ವಿಷಯವನ್ನು ಆದ್ಯತೆಯ ಮೇರೆಗೆ ನಿರ್ಬಂಧನೆಯನ್ನು ಹಾಕಿಕೊಳ್ಳಲಾಗಿದೆ. ಒಂದೇ ವಿಷಯ ಬೇರೆ ಬೇರೆ ಕಡೆಗಳಲ್ಲಿ ಪುನರುಕ್ತಿಯಾಗದಂತೆ ಆದಷ್ಟು ಎಚ್ಚರಿಕೆವಹಿಸಲಾಗಿದೆ. ಲೇಖನಗಳನ್ನು ಸಂಪಾದಿಸುವಾಗ ಆಯಾ ಲೇಖಕರ ಲೇಖನಗಳನ್ನು ಸಾಧ್ಯವಿದ್ದಷ್ಟು ಮೂಲ ಸ್ವರೂಪದಲ್ಲೇ ಉಳಿಸಿಕೊಂಡು ಕೋಶದ ಏಕರೂಪತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಹಾಗೂ ಅನಿವಾರ್ಯವಿದ್ದ ಕಡೆಗಳಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಲಾಗಿದೆ. ಇಲ್ಲಿ ಕೆಲವು ವಿವರಗಳು ಕೈಬಿಟ್ಟು ಹೋಗಿರಬಹುದು ಆದರೆ ಯಾವುದೇ ದುರುದ್ದೇಶದಿಂದ ಕೈಬಿಡಲಾಗಿರುವುದಿಲ್ಲ. ಇದು ಪ್ರಾದೇಶಿಕ ಕಲಾಸಂಬಂಧಿ ವಿಷಯ ಕೋಶವಾಗಿರುವುದರಿಂದ ವಿಷಯದ ಗ್ರಹಿಕೆಗೆ ಪೂರಕವಾಗಿ ಅಗತ್ಯವಿದ್ದಷ್ಟು ವರ್ಣರಂಜಿತ ಭಾವಚಿತ್ರ ಹಾಗೂ ರೇಖಾ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರಿಗೂ ಈ ಪ್ರದೇಶದ ವಿಶಿಷ್ಟ ಮಾಹಿತಿಯನ್ನು ಒದಗಿಸುವ ಆಕರ ಗ್ರಂಥವಾಗುವಂತೆ ಈ ಕೋಶವನ್ನು ಸಿದ್ಧಪಡಿಸಲಾಗಿದೆ. ಇಲ್ಲಿನ ಟಿಪ್ಪಣಿ ರೂಪದ ಲೇಖನಗಳು ಅತ್ಯಂತ ಸರಳ, ಸಂಕ್ಷಿಪ್ತ ಹಾಗೂ ಸ್ಪುಟವಾದ ಮಾಹಿತಿಗಳನ್ನು ಒಳಗೊಂಡಿವೆ. ಈ ಕೋಶದ ಮುಖ್ಯ ಲಕ್ಷಣಗಳು ಹೀಗಿವೆ. ಗ್ರಂಥದ ಆಕಾರ, ಡೆಮ್ಮಿ ಚತುರ್ಥ ಆಕಾರ. ಕನ್ನಡ ವರ್ಣಮಾಲೆಯ 'ಅ' ಕಾರದಿಂದ ಆರಂಭಿಸಿ 'ಳ' ಕಾರದವರೆಗೆ ವಿವಿಧ ವಿಷಯಗಳನ್ನು ಕುರಿತ ಲೇಖನಗಳಿವೆ. ಇಲ್ಲಿ 256 ಕಲಾ ವಿದ್ವಾಂಸರ ವಿವಿಧ ಲೇಖನಗಳಿದ್ದು, 589 ಕ್ಕೂ ಹೆಚ್ಚು ಶೀರ್ಷಿಕೆ ಹಾಗೂ ಉಪಶೀರ್ಷಿಕೆಗಳಿದ್ದು, ಪುಟವ್ಯಾಪ್ತಿಯನ್ನು ಈ ಕೋಶ ಹೊಂದಿದೆ.

ಗುಲಬರ್ಗಾ ವಿಶ್ವವಿದ್ಯಾಲಯ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ

ಲಲಿತಕಲೆಗಳ ಸಂಪುಟ

ಅ

ಅಂದಾನಿ ವ್ಹಿ. ಜಿ.: ಅಂದಾನಿಯವರ ಪೂರ್ಣ ಹೆಸರು ವೀರಣ್ಣ ಗುರಪ್ಪ ಅಂದಾನಿ. ತಾಯಿ ನೀಲಗಂಗಮ್ಮ ಹನ್ನೊಂದು ಜನ ಸಹೋದರರಲ್ಲಿ ವೀರಣ್ಣ ಕೊನೆಯವರು. ಒಬ್ಬಳು ಸಹೋದರಿ. ಶ್ರೀಮಂತ ಸುಸಂಸ್ಕೃತ ಕೃಷಿಕ ಮನೆತನ.



ಗುಲಬರ್ಗಾ ಜಿಲ್ಲೆಯ ಹೊನ್ನ ಕಿರಣಗಿ ಅಂದಾನಿಯವರು ಹುಟ್ಟಿದ ಊರು. ಬಾಲ್ಯ ಕಳೆದದ್ದು, ಅಕ್ಷರ ಕಲಿತದ್ದು ಅಲ್ಲಿಯೇ. ಅನಂತರ ಮೆಟ್ರಿಕ್ಯುಲೇಷನ್ ಓದಿದ್ದು ಗುಲಬರ್ಗಾದಲ್ಲಿ. ಈ ಕಿರಿಯ ಮಗ ವೈದ್ಯನಾಗ ಬೇಕೆಂಬುದು ತಂದೆ ಗುರಪ್ಪ ಅವರ ಇಚ್ಛೆಯಾಗಿತ್ತು. ಅದಕ್ಕೆ ಸಹೋದರರಾದ ಭಗವಂತ ರಾಯ, ಭೀಮರಾಯ ಮತ್ತು ಶಾಣಪ್ಪ ಅವರುಗಳ ಒತ್ತು ಬಿದ್ದಿತ್ತು. ಹಾಗಾಗಿ ಹತ್ತನೇ ವರ್ಗ ಪಾಸಾದ ಮೇಲೆ ಹುಬ್ಬಳ್ಳಿಯಲ್ಲಿ ಪಿ.ಸಿ. ಜಾಬಿನ್ ಕಾಲೇಜು ಸೇರಿದರು. ವಿಜ್ಞಾನ ಕಲಿಯಲೆಂದು ಅಲ್ಲಿಯೂ ಕಲೆ ಮತ್ತು ಕಲಾವಿದರೊಡನೆಯೇ ಇವರ ಒಡನಾಟ ಬೆಳೆಯಿತು. ವಿಜ್ಞಾನದ ವಿಷಯಗಳು ತಲೆಗೆ ಹೋಗಲೇ ಇಲ್ಲ. ಮತ್ತೆ ಗುಲಬರ್ಗಾಕ್ಕೆ ಮರಳಿದರು. ಕಲಾವಿದ ಪ್ರೊ. ಜೆ.ಎಸ್. ಖಂಡೇರಾವ್ ಅವರು ಆಗ ತಾನೇ ಆರಂಭಿಸಿದ್ದ (1965) ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಗೆ ಮೊದಲ ತಂಡದ ವಿದ್ಯಾರ್ಥಿಯಾಗಿ ಸೇರಿ ಐದು ವರ್ಷದ ಪೇಂಟಿಂಗ್ ಡಿಪ್ಲೋಮಾವನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದರು. ಜೊತೆಗೆ ಶ್ರೀ ಶರಣ ಬಸವೇಶ್ವರ ಮಹಾವಿದ್ಯಾಲಯದಿಂದ ಬಿ.ಎ. ಪದವಿಯನ್ನು ಹೊಂದಿದರು.


ಅಂದಾನಿಯವರ ತಂದೆ ಕೃಷಿಕರು. ಆದರೂ ಕಲೆಯಲ್ಲಿ ಅಭಿರುಚಿಯುಳ್ಳವರು. ಅವರು ಮನೆ ಹಾಗೂ ದನದ ಕೊಟ್ಟಿಗೆಯ ಗೋಡೆಗಳ ಮೇಲೆ ಚಿತ್ರಗಳನ್ನು ರೇಖಿಸುತ್ತಿದ್ದರು. ಬಾಲಕ ಅಂದಾನಿಯವರ ಮನಸ್ಸಿನ ಮೇಲೆ ಅದು ಅಚ್ಚಳಿಯದ ಪ್ರಭಾವ ಬೀರಿತು. ಎಂಟು ವರ್ಷದ ಎಳೆ ವಯಸ್ಸಿನಲ್ಲೇ ತಂದೆ ಅಗಲಿ ಹೋದರು. ಆದರೆ ಅವರು ಹಚ್ಚಿದ ಗೀಳು ಮಾತ್ರ ಇವರನ್ನು ಬಿಟ್ಟು ಹೋಗಲಿಲ್ಲ. ಮುಗ್ಧ ಮನಸ್ಸು ಗೋಡೆ, ನೆಲ,

ಪಾಠಿಗಳ ಮೇಲೆ ಗೀಚಿತು-ಅಗಲಿದ ತಂದೆಯ ಕಾಡುವ ನೆನಪುಗಳಲ್ಲೇ ಇವರ ಕಲೆ ಅರಳಿತು.

ಬಾಲ್ಯದಲ್ಲಿ ಮಗು ಯಾವ ವಿಷಯದಲ್ಲಿ ತೀವ್ರತರವಾದ ತಲ್ಲೀನತೆ ಹೊಂದಿರುತ್ತಾನೋ ಅದೇ ವಿಷಯದಲ್ಲಿ ಮುಂದೆ ತನ್ನ ಬದುಕಿನಲ್ಲಿ ಅದ್ವಿತೀಯ ಸಾಧನೆ ಮಾಡುತ್ತಾನಂತೆ. ಈ ಮಾತು ಅಂದಾನಿಯವರ ಬುದಕಿನಲ್ಲಿ ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಅವರ ಮನೆಯ ಎದುರಿಗಿದ್ದ ಕುಂಬಾರರ ಮನೆಯಲ್ಲಿ ತಿಗರಿಯ ಮೇಲೆ ಕೆಸರು ತಿರುಗುತ್ತಲೇ ಸುಂದರ ಆಕಾರ ಪಡೆಯುತ್ತಿರುವ ಪರಿಯನ್ನು ನೋಡುತ್ತ ತಲ್ಲೀನರಾಗಿರುತ್ತಿದ್ದರು. ಬಾಲ್ಯದ ಆ ಮನಸ್ಸು ಪಡೆದುಕೊಂಡ ತಲ್ಲೀನತೆ ಮುಂದೆ ಒಬ್ಬ ಕಲಾವಿದನಾಗಿ ಬೆಳೆಯಲು ಕಾರಣವಾಯಿತಲ್ಲದೆ ಒಂದು ನಾಡನ್ನೇ ಸಾಂಸ್ಕೃತಿಕವಾಗಿ ಕಟ್ಟುವಲ್ಲಿ ತಲ್ಲೀನತೆ ಪಡೆದುಕೊಂಡದ್ದು ಆಶ್ಚರ್ಯವೆನಿಸುತ್ತದೆ.

ಅಂದಾನಿಯವರಲ್ಲಿ ತೀವ್ರತರವಾದ ಕಲಾಸಕ್ತಿ ಹಾಗೂ ಪ್ರಬಲವಾದ ದೃಶ್ಯ ಗ್ರಹಣಶಕ್ತಿಗಳೆರಡೂ ಮೇಳೈಸಿವೆ. ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಪಾಠಿಯ ಮೇಲೆ ರೇಖಾಚಿತ್ರಗಳನ್ನು ಬರೆದು ಆನಂದಪಡುತ್ತಿದ್ದರು.

ಸರಸ್ವತಿ ಪೂಜೆಯಲ್ಲಿ ಪ್ರತಿವರ್ಷ ಇವರ ಚಿತ್ರಕ್ಕೆ ಪ್ರಥಮ ಬಹುಮಾನ ದೊರಕುತ್ತಿತ್ತು. ಚಿತ್ರ ಬಿಡಿಸುವ ಈ ಗೀಳು ಮಾಧ್ಯಮಿಕ ಶಾಲೆಯಲ್ಲಿ ಇನ್ನಷ್ಟು ಪ್ರಬಲವಾಯಿತು. ಗುಲಬರ್ಗಾ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಬಿಡುವಿನ ವೇಳೆಯಲ್ಲಿ ಓದುವ ಬದಲಾಗಿ ರಾಷ್ಟ್ರನಾಯಕರು, ಸಾಧಕರು, ಮಹಾಪುರುಷರ ಭಾವ ಚಿತ್ರಗಳನ್ನು ನೋಡಿ ಚಿತ್ರಿಸುವುದು, ನಾಣ್ಯ ಹಾಗೂ ಅಂಚೆ ಚೀಟಿಗಳನ್ನು ಸಂಗ್ರಹಿಸುವುದು ಇವರ ಕಲಾಸಕ್ತಿಯನ್ನು ಗಮನಿಸಿದ್ದ ಶ್ರೀ ವಿ.ಎಸ್. ಭಂಕೂರ ಅವರ ಪ್ರೋತ್ಸಾಹದಿಂದ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ಕಟ್ಟಿ ಪಾಸಾದರು. ಒಂಭತ್ತನೆಯ ತರಗತಿಯಲ್ಲಿದ್ದಾಗ ಇಲ್ಲಸ್ಟ್ರೇಟೆಡ್ ವೀಕ್ಲಿಯವರು ಏರ್ಪಡಿಸಿದ್ದ ಅಖಿಲ ಭಾರತ ಮಟ್ಟದ ಕಲಾಸ್ಪರ್ಧೆಯಲ್ಲಿ ಇವರ ಚಿತ್ರ ಪ್ರಥಮ ಬಹುಮಾನ ತಂದುಕೊಟ್ಟಿತು. ಆಗ ಇವರಿಗಾದ ಆನಂದ ಅಪರಿಮಿತ. ಈ ಬಹುಮಾನ ಚಿಗುರುತ್ತಿರುವ ಕಲಾಪ್ರತಿಭೆಗೆ ಕಳೆಕಟ್ಟಿತು. ಕಲಾಸಕ್ತಿ ದಟ್ಟವಾಗಿ ನೆಲೆಯೂರು ವಂತೆ ಮಾಡಿತು. ವಿಜ್ಞಾನ ಓದುವುದನ್ನು ಬಿಟ್ಟುಕೊಟ್ಟು ಕಲಾಧ್ಯಯನಕ್ಕೆ ತೊಡಗಿದ ಮೇಲೆ ವೈದ್ಯರನ್ನಾಗಿಸಬೇಕೆಂಬ ಮನೆಯವರ ಆಸೆಗೆ ಮಣ್ಣು ಬಿದ್ದಿತು. ತೀವ್ರವಾದ ಕಲಾಸಕ್ತಿಯೇ ಮೇಲುಗೈ ಪಡೆದಿತ್ತು. ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ ವಾತಾವರಣದಲ್ಲಿ ಅಂದಾನಿಯವರ ಕಲೆ ಚಿಗುರೊಡೆದು ಪಲ್ಲವಿಸಿತು. ಗುರುಗಳಾದ ಖಂಡೇರಾವರ ಮಾರ್ಗದರ್ಶನದಲ್ಲಿ ಸಂಯೋಜನೆ, ಸ್ಥಿರಚಿತ್ರಗಳ ರಚನೆಯೊಂದಿಗೆ ವಿಚಾರ ಮಂಥನವೂ ಸೇರಿತ್ತು. ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಮೂಲಪಾಠಗಳನ್ನು ಕಲಿತ ಅಂದಾನಿಯವರ ಆಸಕ್ತಿ ಗುರುಗಳೊಟ್ಟಿಗೇ ಕ್ರಮೇಣ ಅಕಾಡೆಮಿಕ್ ಶೈಲಿಯಿಂದ ಆಧುನಿಕ, ಸೃಜನಶೀಲ ಶೈಲಿಯಡೆಗೆ



ಅಕ್ರೇಲಿಕ್ ಮಾಧ್ಯಮ

ವಾಲಿತು. ಅಂದಿನಿಂದ ಇಂದಿನವರೆಗೂ ಅವರ ಕಲಾರಚನೆ ಓತಪ್ರೋತವಾಗಿ ಪ್ರವಹಿಸುತ್ತಲೇ ಇದೆ.

ಒಬ್ಬ ವ್ಯಕ್ತಿ ತಾನು ಗೈದ ಮಹತ್ತರ ಸಾಧನೆಯಿಂದಾಗಿ ಒಂದು ಚೈತನ್ಯ ಶಕ್ತಿಯಾಗಿ ಗುರುತಿಸಲ್ಪಡುತ್ತಾನೆ. ತೀವ್ರತರವಾದ ಆಸಕ್ತಿಯಿಂದ ತಾನು ಅಪ್ಪಿಕೊಂಡ ಪ್ರೋತ್ಸಾಹವೊಂದರಲ್ಲಿ ಮತ್ತು ಸಮಷ್ಠಿಗತವಾದ ಸಾಧನೆ ಕಷ್ಟಸಾಧ್ಯ. ಅಂದಾನಿಯವರು ಈ ಎರಡೂ ನೆಲೆಗಳಲ್ಲಿ ಸಾಧನೆ ಮಾಡಿದವರು. ಅವರ ಈ ಸಾಧನೆ ಅದ್ವಿತೀಯ, ಅಮೋಘ, ವ್ಯಕ್ತಿಗತವಾಗಿ ಅವರು ರಾಷ್ಟ್ರಮಟ್ಟದ ಒಬ್ಬ ಶ್ರೇಷ್ಠ ಕಲಾವಿದರಾಗಿ ಬೆಳೆದಿದ್ದಾರೆ. ಅಲ್ಲದೆ ಜರ್ಮನ್, ರಷ್ಯಾ, ಲಂಡನ್, ಪ್ಯಾರಿಸ್ ಮುಂತಾದ ವಿದೇಶಗಳನ್ನು ಸುತ್ತಾಡಿ ಆ ದೇಶಗಳ ಕಲಾಕೇಂದ್ರಗಳಿಗೂ ಪರಿಚಯವಾಗುವುದರೊಂದಿಗೆ ಅಲ್ಲಿನ ಕಲೆಯನ್ನು ಕಂಡು ಬಂದಿದ್ದಾರೆ. ಮತ್ತು ತಮ್ಮ ಸಂಸ್ಥೆಯನ್ನು ತನ್ಮೂಲಕ ವಿದ್ಯಾರ್ಥಿಗಳನ್ನು ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಿದ್ದಾರೆ.

ಅಂದಾನಿಯವರು ಪ್ರಯೋಗಶೀಲರು. ಅವರ ಅಭಿವ್ಯಕ್ತಿ ತೀವ್ರತೆ ಹಲವು ಬಗೆಯದು. ಚಿತ್ರಗಳ ವಸ್ತುವೇ ಆಗಲಿ, ರಚನೆಗೆ ಬಳಸುವ ಮಾಧ್ಯಮವೇ ಆಗಲಿ ಅಲ್ಲಿ ಹೊಸತನವೇ ಅವರ ವಿಶೇಷತೆ. ಇದ್ದಿಲು, ಇಂಕ್, ಪೇಸ್ಟಲ್ ಮೊದಲ್ಗೊಂಡು ಜಲ ವರ್ಣ, ತೈಲವರ್ಣ, ಪೇಸ್ಟಲ್ ವರ್ಣ, ಆಕ್ರಲಿಕ್ ವರ್ಣ ಯಾವುದಾದರೂ ಸರಿ ಕಲಾಸೃಷ್ಟಿಗೆ ದುಡಿಸಿಕೊಳ್ಳುವ ಆಗಾಧ ಪ್ರತಿಭೆ, ಕುಶಲತೆ ಅವರದು. ಚಿತ್ರಿಸಲು ವಸ್ತು-ವಿಷಯಗಳಿಗಾಗಿ ಇಂಥದೇ ಸಮಯ, ಸಂದರ್ಭಗಳೆಂಬ ನಿರ್ಭಂಧ ಇಲ್ಲ. ಅವರು ಒಬ್ಬರೇ ಇರಲಿ, ಗುಂಪಿನಲ್ಲೇ ಇರಲಿ, ಮಾಧ್ಯಮ ಯಾವುದೇ ಆಗಿರಲಿ ಸೂಕ್ತ ಸಂದರ್ಭವೊಂದಿದ್ದರೆ ಸಾಕು ಚಿತ್ರಿಸುತ್ತಾರೆ.

ಅಂದಾನಿಯವರು ಹುಟ್ಟಿ ಬೆಳೆದುದು ಗ್ರಾಮೀಣ ಪರಿಸರದಲ್ಲಿ ಸಹಜವಾಗಿಯೇ ಬಾಲ್ಯದ ಆ ದಿನಗಳಲ್ಲಿ ಆಡಿದ ಆಟ-ಪಾಠಗಳು ಕಂಡು, ಕೇಳಿ ಅನುಭವಿಸಿದ ಹಲವು ಸಂದರ್ಭ, ಆಚರಣೆಗಳೆಲ್ಲ ಅವರ ಸ್ಮೃತಿಪಟಲದಲ್ಲಿ ಅಚ್ಚೊತ್ತಿ ನಿಂತು ಹರಳುಗೊಂಡ ಅನುಭವಗಳೆಲ್ಲ ಅಭಿವ್ಯಕ್ತಿ ತೀವ್ರತೆಯಿಂದ ಚಿತ್ರಗಳಾಗಿ ಮೂಡಿಬಂದಿವೆ.

ಇತ್ತೀಚೆಗೆ ಹಂಸಗಳೊಂದಿಗೆ 'ಯುವತಿ' ಎಂಬ ವರ್ಣ ಚಿತ್ರಗಳಿಂದ ಪ್ರಸಿದ್ಧಿಯಲ್ಲಿರುವ ಇವರು ತೀರ ಇತ್ತೀಚೆಗೆ 'ಬಿಸಿಲಿನ ನೆರಳಿನಡಿಯ ಚರ್ಚೆ' ಎಂಬ ಸರಣಿ ಚಿತ್ರಗಳಿಂದ ಸುದ್ದಿಯಲ್ಲಿದ್ದಾರೆ. ಗುಲಬರ್ಗಾ ನಾಡಿನ ರಾತ್ರಿಗಳು ಮತ್ತು ಮುಂಜಾವುಗಳು ಬಹು ಸೊಗಸಾಗಿರುತ್ತವೆ ಎಂಬ ಉರ್ದು ಕವಿಯೋರ್ವನ ಮಾತುಗಳನ್ನು ನೆನಪಿಸಿಕೊಳ್ಳುವ ಅಂದಾನಿಯವರು ತಮ್ಮ ಚಿತ್ರಗಳಲ್ಲೂ ಇವುಗಳ ಸೊಗಸುತನವನ್ನು ದಾಖಲಿಸುವುದರೊಂದಿಗೆ ಇಲ್ಲಿನ ಬಿರುಬಿಸಿಲನ್ನು ಅದರ ಪ್ರಖರತೆಯನ್ನು ಬಣ್ಣದೊಂದಿಗೆ ಕ್ಯಾನ್‌ವಾಸ್‌ಗೆ ಇಳಿಸಿದ್ದಾರೆ. ಇಲ್ಲಿನ ಬಿಸಿಲು ಮತ್ತು ಬದುಕು ಒಂದನ್ನು ಬಿಟ್ಟು ಒಂದು ಇಲ್ಲ. ಇಲ್ಲಿರುವ ಕಲ್ಲು, ಮಣ್ಣು, ಮನೆ, ಹೊಲ ಎಲ್ಲವೂ ಬಿಸಿಲುಂಡವುಗಳೇ. ಇಲ್ಲಿ ಬದುಕುವುದೆಂದರೆ, ಬದುಕಬೇಕೆಂದರೆ ಮೈಮನಗಳೆರಡೂ ಬಿಸಿಲುಣ್ಣಬೇಕು. ಬಿರು ಬಿಸಿಲಿಗೆ ಬಸವಳಿದರೂ ಈ ಭಾಗದ ಬದುಕು ಹೆಚ್ಚೆಚ್ಚು ಸತ್ವಯುತಗೊಂಡು ಬದುಕಿದೆ. ಬಿಸಿಲಿನ ನೆರಳಿನಲ್ಲಿ ಬದುಕಿನ ಬಿಸಿಯ ಏರಿಳಿತಗಳನ್ನು ಚರ್ಚಿಸುತ್ತ, ಬದುಕುವ ಯೋಚನೆಯಲ್ಲಿ ಬದುಕನ್ನು ಸವೆಸುತ್ತ ಬದುಕಿದೆ.

ಸೃಜನಶೀಲರೂ, ಪ್ರತಿಭಾ ಸಂಪನ್ನರೂ ಆಗಿರುವ ಕಲಾವಿದ ಅಂದಾನಿಯವರದು ಬಹುಮುಖೀಯವಾದ ಸಾಧನೆ. ಇವರು ಇದುವರೆಗೆ ರಚಿಸಿರುವ ಕಲಾಕೃತಿಗಳನ್ನು ದೇಶದ ಪ್ರಮುಖ ನಗರಗಳಲ್ಲಿ ಪ್ರದರ್ಶಿಸಿದ್ದಾರೆ. ಅನೇಕ ಕೃತಿ ಸರಣಿಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಕಲಾವಿದರಿಂದ ಕಲಾ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟಿವೆ. ದೇಶ ವಿದೇಶಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಅಲ್ಲದೆ ತಮ್ಮೊಟ್ಟಿಗೇ ಯುವ ಕಲಾವಿದರನ್ನು ಬೆಳೆಸುವ ನಿಟ್ಟಿನಲ್ಲಿ ಅನೇಕ ಕಲಾವಿದರನ್ನು ಸಂಘಟಿಸಿದ್ದಾರೆ. ಗುಲಬರ್ಗಾದಲ್ಲಿ ಏರ್ಪಡಿಸಿದ್ದ ಎರಡು ಅಂತರಾಷ್ಟ್ರೀಯ ಮಟ್ಟದ ಚಿತ್ರ-ಶಿಲ್ಪ ಶಿಬಿರಗಳನ್ನು ಹಾಗೂ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕಲಾಶಿಬಿರದ ರೂವಾರಿಯಾಗಿ ಕೆಲಸ ಮಾಡಿದ್ದದನ್ನು ಮತ್ತು ಕೇಂದ್ರ ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ಇವೆಲ್ಲವನ್ನು ಗಮನಿಸಿದರೆ ಇವರಷ್ಟು ಬಹುಮುಖಿಯ ಸಾಮರ್ಥ್ಯಗಳನ್ನು ಹೊಂದಿರುವ ಕಲಾವಿದ ಸಂಘಟಕ ಕರ್ನಾಟಕದಲ್ಲಿ ಮತ್ತೊಬ್ಬರು ಸಿಗಲಾರರು ಎಂದರೆ ಅತಿಶಯೋಕ್ತಿಯಲ್ಲ. ಪಾದರಸದಂತೆ ಸದಾ ಚಟುವಟಿಕೆಯಿಂದಿದ್ದು ಸರ್ವಮುಖ ದಿಂದಲೂ ಕಲೆಗಾಗಿಯೇ ಅರ್ಪಿಸಿಕೊಂಡಿದ್ದಾರೆ. ನೂರಾರು ಕಲಾವಿದರನ್ನು, ಕಲಾಕೃತಿಗಳನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ ಶ್ರೇಯಸ್ಸು ಇವರದು. ರಾಜ್ಯ ಕೇಂದ್ರ ಲಲಿತಕಲಾ ಅಕಾಡೆಮಿಗಳನ್ನು ಒಳಗೊಂಡು ಅನೇಕ ಸಂಘ ಸಂಸ್ಥೆಗಳು ಇವರ ಕಲಾಕೃತಿಗಳಿಗೆ ಸಂಸ್ಥೆಯ ಸಾಧನೆಗೆ ಮತ್ತು ಕಲಾಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗೆ ತಲೆದೂಗಿ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಇವರ ಕಲೆಯ ಅನ್ವೇಷಣಾ ಪ್ರವೃತ್ತಿಗೆ ದಾರಿ ಸಾಕಷ್ಟು ವಿಶಾಲವಾಗಿ, ಉಜ್ವಲವಾಗಿ ತೆರೆದುಕೊಂಡೇ ಬಿದ್ದಿದೆ.

(ಎಸ್‌ಎಚ್‌ಬಿ)



ಅಂಬಯ್ಯ ನುಲಿ: ಗಾಯಕರು. ರಾಯಚೂರು ಜಿಲ್ಲೆ ಮಾನವಿ ಪಟ್ಟಣದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ. ಇವರು ಹಾಡಲು ಕುಳಿತರೆ, ಸಭಿಕರನ್ನು ಹಿಡಿದಿಡುವ ಮಾಂತ್ರಿಕ ಶಕ್ತಿ ಇವರ ಕಂಠಸಿರಿಗಿದೆ. ಇವರ ತಂದೆ ಮಹಾದೇವಪ್ಪ ನುಲಿ ತಾಯಿ ಶರಣಮ್ಮ. ಮಾನವಿ ತಾಲ್ಲೂಕಿನ ಹೊಸೂರು ಗ್ರಾಮದ ರಂಗಭೂಮಿಯ ಸಂಗೀತ ನಿರ್ದೇಶಕರು. ಈ ಭಾಗದಲ್ಲಿ ದೊಡ್ಡ ಹೆಸರು. ಕರ್ನಾಟಕದ ಮನೆಮಾತಾಗಿರುವ, ಖ್ಯಾತ ಗುಬ್ಬಿ ಕಂಪನಿಯಲ್ಲಿ ಮಹಾದೇವಪ್ಪ ನುಲಿ ನಟ ಹಾಗೂ ಸಂಗೀತ ನಿರ್ದೇಶಕರಾಗಿ ಇದೀಗ ನಿವೃತ್ತರಾಗಿದ್ದಾರೆ. ಇಂಥ ಸಂಗೀತ ಮನೆತನದಿಂದ ಅಂಬಯ್ಯ ನುಲಿ ಬಂದಿದ್ದಾರೆ.

ಹೊಸೂರಿನಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿ, ಮುಂದೆ ಶಿಕ್ಷಣದ ಜೊತೆಗೆ ಸಂಗೀತವನ್ನೂ ಕಲಿತರು. ಮಾನವಿ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅಂಬಯ್ಯ ನುಲಿ, ಸಂಗೀತದ ಅನುಭವ ಕಲಬುರ್ಗಿ ಆಕಾಶವಾಣಿ ಕೇಂದ್ರದ ಮೂಲಕ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದು, ಇವರನ್ನು ಸುಗಮ ಸಂಗೀತ 'ಬಿ' ಹೈಗ್ರೇಡ್ ಕಲಾವಿದರೆಂದು ಆಕಾಶವಾಣಿ ಪರಿಗಣಿಸಿದೆ.

ಹಲವಾರು ವರ್ಷ ಸಂಗೀತ ಸೇವೆ ಸಲ್ಲಿಸಿ, ನಾಡಿನ ಸುಗಮ ಸಂಗೀತದ ಖ್ಯಾತ ಗಾಯಕರಾದ ಸಿ. ಅಶ್ವತ್ಥ, ಪುತ್ತೂರು ನರಸಿಂಹನಾಯಕ, ಚಂದ್ರಿಕಾಗುರುರಾಜ, ರತ್ನಮಾಲಾ ಪ್ರಕಾಶ, ಬಿ.ಆರ್. ಛಾಯಾ ಇವರೊಂದಿಗೆ ಅನೇಕ ಧ್ವನಿ ಸುರುಳಿಗಳಲ್ಲಿ ಭಕ್ತಿ ಪ್ರಧಾನ ಮತ್ತು ಭಾವ ಗೀತೆಗಳನ್ನು ಹಾಡಿ, ಜನಮನದಲ್ಲಿ ಉಳಿಯುವಂಥ ಸಂಗೀತಗಾರ ಎನಿಸಿ ಕೊಂಡಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಸಂಗೀತದ ಗೀಳನ್ನು ಹಚ್ಚಿಕೊಂಡ ಇವರ ಮನೆತನವೇ ಸಂಗೀತದ ಶಾಲೆ ಎಂದರೂ ತಪ್ಪಾಗದು. ಮನೆತನದ ಸಂಗೀತ ಪರಂಪರೆಯನ್ನು ಉಳಿಸಿ, ಮುಂದುವರೆಸಿಕೊಂಡು ಬಂದು ಎಲ್ಲರಿಂದ ಸೈ ಅನಿಸಿಕೊಂಡು ಮೆಚ್ಚುಗೆಗೆ ಪಾತ್ರರಾದವರು. ಈವರೆಗೂ ಇವರು ಅನೇಕ ಕಾರ್ಯಕ್ರಮ ನೀಡಿ, ಚಿಕ್ಕ

ವಯಸ್ಸಿನಲ್ಲೇ ಸಂಗೀತ ಕ್ಷೇತ್ರದಲ್ಲಿ ಮುಂದಡಿಯಿಟ್ಟು ಹೆಸರು ಮಾಡಿದ್ದಾರೆ.


ಸಂಗೀತದಲ್ಲಿ ಜ್ಯೂನಿಯರ್, ಸೀನಿಯರ್ ವಿದ್ವತ್‌ನಲ್ಲಿ ಉತ್ತೀರ್ಣರಾಗಿ ಸಂಗೀತವನ್ನು ಶಾಸ್ತ್ರೀಯವಾಗಿಯೂ ಅಧ್ಯಯನ, ಅಭ್ಯಾಸ ಮಾಡಿರುವ ನುಲಿಯವರು, ಸಂಗೀತದ ವಿವಿಧ ಆಯಾಮಗಳ ಮೂಲಕ ಪ್ರೇಕ್ಷಕರ ಮನಮುಟ್ಟುವಂತೆ ಹಾಡುವ ಕಲೆಯನ್ನೂ ಕರಗತ ಮಾಡಿಕೊಂಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಇವರ ಹಲವಾರು ಧ್ವನಿ ಸುರುಳಿಗಳು ಹೊರಬಂದಿದೆ. ಹಾಗೂ ಅನೇಕ ಧಾರಾವಾಹಿ ಗಳಿಗೂ ಕೂಡ ಇವರು ತಮ್ಮ ಹಿನ್ನೆಲೆ ಹಾಡು ಹಾಗೂ ಶೀರ್ಷಿಕೆ ಹಾಡುಗಳನ್ನು ಹಾಡಿದ್ದಾರೆ.

ಇವರ ಸಂಗೀತಗಾರಿಕೆಯ ಜನಪ್ರಿಯತೆಯಿಂದ ಧಾರವಾಡ, ಕಲಬುರ್ಗಿ, ಮಂತ್ರಾಲಯ, ಕೊಪ್ಪಳ, ರಾಯಚೂರು, ಚಿತ್ರದುರ್ಗದ ಬೃಹನ್ಮಠ, ಗಂಗಾವತಿ, ಬಳ್ಳಾರಿ ಹೀಗೆ ರಾಜ್ಯದ ಅನೇಕ ನಗರ, ಪಟ್ಟಣಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಕೀರ್ತಿ ಅಂಬಯ್ಯ ನುಲಿ ಅವರದು. ಕರ್ನಾಟಕ ಮಾತ್ರವಲ್ಲದೆ ಆಂಧ್ರಪ್ರದೇಶ, ಕೇರಳ, ಗೋವಾ ರಾಜ್ಯಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಸಂಗೀತ ಕಲೆಯ ಬೆಂಬತ್ತಿರುವ ಇವರು, ತಮ್ಮ ಮೂಲ ವೃತ್ತಿ ಶಿಕ್ಷಕರಾಗಿ, ವಿದ್ಯಾರ್ಥಿಗಳಿಗೆ ಹಾಗೂ ಪಾಲಕರ ಮೆಚ್ಚಿನವ ರಾಗಿ ಶೈಕ್ಷಣಿಕ ರಂಗದಲ್ಲೂ ಉತ್ತಮ ಶಿಕ್ಷಕರೆಂಬ ಹೆಸರು ಪಡೆದಿದ್ದಾರೆ. (ಸಿಬಿ)

ಅಂಬಾರಾಯ ಚಿನಮಳ್ಳಿ: ಸಮಕಾಲೀನ ದೃಶ್ಯಕಲೆಯ ದಾರಿಯಲ್ಲಿ ತನ್ನ ಸ್ವಂತದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತ ಅದರೊಂದಿಗೆ ತಮ್ಮ ಸ್ವಂತದ ಮನೆ ಅಂಗಳ (ಇಂಟಿರಿಯರ್) ಹಾಗೂ ತಮ್ಮ ಸುತ್ತ ಮುತ್ತಲಿನ ನಿಸರ್ಗ ಹಾಗೂ ಸಾಮಾಜಿಕ ಬದುಕನ್ನು ತನ್ನ ಅಭಿವ್ಯಕ್ತಿ ವಿಷಯವನ್ನಾಗಿಸಿಕೊಂಡು ಸತತ ಚಿತ್ರ ರಚನೆಯಲ್ಲಿ ತೊಡಗಿಸಿಕೊಂಡು ಸಮಕಾಲೀನ ಕಲಾ ವಲಯದಲ್ಲಿ ಸದ್ದು ಗದ್ದಲವಿಲ್ಲದೆ ನಿರಂತರ ಚಿತ್ರರಚನೆ ಕಲಾ ಪ್ರದರ್ಶನವನ್ನು ಮಾಡುತ್ತಿರುವ ಕಲಬುರ್ಗಿಯ ಕಲಾವಿದರು.

1968 ಜುಲೈ 15ರಂದು ಗುಲಬರ್ಗಾದಲ್ಲಿ ಜನಿಸಿದರು. ನಗರದ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಿಂದ ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಪಡೆದು ಕೊಂಡು ಈ ಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ಕಲಾಚಟುವಟಿಕೆ ಹಾಗೂ ಪ್ರತಿಷ್ಠಿತ ಕಲಾವಿದರಿಂದ ಪ್ರಾತ್ಯಕ್ಷಿಕೆ, ಹಾಗೂ ವಿಚಾರ ಸಂಕಿರಣಗಳಿಂದ ಪ್ರಭಾವಿತ ರಾಗಿ ಸಮಕಾಲೀನ ವಿಷಯ ವಸ್ತು ಹಾಗೂ ಅಭಿವ್ಯಕ್ತಿ ಪಡೆಸುವ ಶೈಲಿಯನ್ನು ಹುಡುಕುತ್ತ ಹೋಗುವ ತಮ್ಮ ಸುತ್ತಮುತ್ತ ನಡೆಯುವ (ಇಂಟಿರಿಯರ್) ಮನೆಯ ಅಂಗಳದಲ್ಲಿರುವ ವಿಷಯಗಳನ್ನು ತಮ್ಮ ವಿಷಯವಸ್ತುಗಳಾಗಿಸಿ



ಕೊಂಡು ಚಿತ್ರ ರಚನೆಯನ್ನು ಪ್ರಾರಂಭಿಸಿದ ಪೋಸ್ಟರ್ ವರ್ಣಗಳೊಂದಿಗೆ ಸಂಯೋಜನಾ ಚಿತ್ರಗಳನ್ನು ರಚಿಸಿದ್ದರು. ಆ ಚಿತ್ರಗಳು ಹಿರಿಯ ಕಲಾವಿದ ರಿಂದ ಪ್ರಶಂಸೆಗೊಳಪಡಿಸಿದ್ದರಿಂದ ಈ ಕಲಾ ಶೈಲಿಯಲ್ಲಿಯೇ ತಮ್ಮನ್ನು ಗುರುತಿಸಿ ಕೊಂಡಿದ್ದಾರೆ. ಇವರು ಒಬ್ಬ ಕಲಾವಿದನಾಗಿರದೇ ಕಲಾ ಶಿಕ್ಷಕರಾಗಿ ಕಲಾಕ್ಷೇತ್ರದಲ್ಲಿ ಕಲಾ ಸಂಘಟಕರಾಗಿಯು ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಮಕ್ಕಳಲ್ಲಿ ಕಲಾ ಅಭಿವ್ಯಕ್ತಿಗೆ ಪ್ರೋತ್ಸಹ ನೀಡುವ ಉದ್ದೇಶದಿಂದ ಬೇಸಿಗೆ ಶಿಬಿರಗಳನ್ನು ಉಚಿತ ವಾಗಿ ಆಯೋಜಿಸಿ ಮಕ್ಕಳಿಗೆ ಚಿತ್ರಕಲೆಯನ್ನು ಹೇಳಿಕೊಡುವಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಂತಸ ಪಡುತ್ತಾರೆ. ಒಟ್ಟಿನಲ್ಲಿ ಇವರು ಸೂಕ್ಷ್ಮ ಸಂವೇದನೆಯ ಮನಸುಳ್ಳ ಕಲಾವಿದರು.

ನಿರಂತರ ಕಲಾಕೃತಿ ರಚನೆ ಹಾಗೂ ಸಮಕಾಲೀನ ಕಲಾ ಪರಿಸರವನ್ನು ಸೂಕ್ಷ್ಮವಾಗಿ ಗ್ರಹಿಸಿ ಕಲಾಕ್ಷೇತ್ರದಲ್ಲಿ ತಮ್ಮ ಕಲಾಕೃತಿಗಳ ಮುಖಾಂತರ ಗುರುತಿಸಿಕೊಂಡರು. ಇವರ ಕಲಾಕೃತಿಗೆ ಸಂದ ಪ್ರಶಸ್ತಿಗಳಲ್ಲಿ 1994ರಲ್ಲಿ ಕಲಬುರ್ಗಿ ಕಲಾ ಮಹೋತ್ಸವ ಪ್ರಶಸ್ತಿ, 1996 (ಎಸ್‌ಸಿಝಡ್‌ಸಿಸಿ) ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರ ನಾಗಪೂರ ಮೆರಿಟ್ ಪ್ರಶಸ್ತಿ, 1997ರಲ್ಲಿ 'ಅವಂತಿಕಾ' ನವದೆಹಲಿ ಪ್ರಶಸ್ತಿ, 1998, 2005ರ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ, 2002ರಲ್ಲಿ ಮುಂಬಯಿ ಆರ್ಟ್ ಸೊಸೈಟಿ ಪ್ರಶಸ್ತಿ, 2007ರಲ್ಲಿ 36ನೇ ವಾರ್ಷಿಕ ಕಲಾಪ್ರದರ್ಶನ ವಿಶಾಖಪಟ್ಟಣ, 67ನೇ ಅಖಿಲ ಭಾರತೀಯ ಕಲಾಪ್ರದರ್ಶನ ಹೈದ್ರಾಬಾದ ಕರ್ನಾಟಕ ಉರ್ದು ಅಕಾಡೆಮಿ ಬೆಂಗಳೂರು ಹೀಗೆ ಅನೇಕ ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡ ಇವರಿಗೆ ರಾಷ್ಟ್ರ ಮಟ್ಟದ ಪ್ರತಿಷ್ಠಿತ ಶಿಷ್ಯವೇತನವು ಪಡೆದುಕೊಂಡ ಕಲಾವಿದರು.

ಅವುಗಳಲ್ಲಿ ಪ್ರಮುಖವಾದದ್ದು 1996ರಲ್ಲಿ ಎಚ್.ಆರ್.ಡಿ. ನವದೆಹಲಿ ವತಿಯಿಂದ ರಾಷ್ಟ್ರ ಮಟ್ಟದ ಶಿಷ್ಯವೇತನ ಹಾಗೂ 1997ರಲ್ಲಿ ಮುಂಬಯಿ, ಬೇಂದ್ರೆ ಹುಸೇನ್ ಶಿಷ್ಯವೇತನ ಹೀಗೆ ಪ್ರಶಸ್ತಿ ಹಾಗೂ ಶಿಷ್ಯವೇತನ ಪಡೆದ ಇವರು ರಾಜ್ಯದ ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳು ರಾಜ್ಯ ಹಾಗೂ ರಾಷ್ಟ್ರದ ಅನೇಕ ಕಲಾಕೇಂದ್ರಗಳಲ್ಲಿ ಪ್ರದರ್ಶನಗೊಂಡಿವೆ. ಇವರು ಉಪನ್ಯಾಸಕರಾಗಿ ಮದರ್ ಥೇರೆಸಾ ಡಿ.ಎಡ್. ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



'ಕಾಂಪೋಜಿಶನ್–2' ಅಕ್ರೇಲಿಕ್ ಮಾಧ್ಯಮ

ವಿಭಾಗದ ಕಲಾ ಸಂಸ್ಕೃತಿ ಹಾಗೂ ಕಲಾಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿದ ಡೆಕ್ಕನ್ ಆರ್ಟ್ ಸೊಸೈಟಿಯ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಲಾವಿದರು ಪೋಸ್ಟರ್ ಕಲರ್, ಹಾಗೂ ಆಕ್ರಲಿಕ ವರ್ಣಗಳಲ್ಲಿ ಕಲಾಕೃತಿಗಳನ್ನು ಚಿತ್ರಿಸುತ್ತ ಕಲಾಕ್ಷೇತ್ರಕ್ಕೆ ತನ್ನದೇಯಾದ ಕೊಡುಗೆ ನೀಡುತ್ತ ಸಮಕಾಲೀನ ಕಲಾಬೆಳೆವಣಿಗೆಯೊಂದಿಗೆ ಬೆಳೆಯುತ್ತಿದ್ದಾರೆ. (ಎಸ್‌ಪಿಡಬ್ಲ್ಯೂ)

ಅಂಬುಬಾಯಿ ರುದ್ರಪ್ಪ ಬಡಿಗೇರ: ದೊಡ್ಡಾಟದ ಹಿಮ್ಮೇಳ ಕಲಾವಿದೆ. ತಂದೆ ರಾಚಪ್ಪ ದೊಡ್ಡಾಟದ ಹಿಮ್ಮೇಳದ ಕಲಾವಿದ. ತಾಯಿ ಸಾವಿತ್ರಮ್ಮ ಕೂಡಾ ಕಲಾವಿದೆ. ಸಂಗೀತ ಪ್ರೇಮಿ. ಇಂಥ ಕಲಾವಿದರ ಮನೆತನದಲ್ಲಿ ಹುಟ್ಟು ಕಲಾವಿದೆಯಾಗಿ ಇವರು ಜನಿಸಿದ್ದು 29.05.1944ರಲ್ಲಿ ಗುಲಬರ್ಗಾದಲ್ಲಿ. ಪ್ರಖ್ಯಾತ ದೊಡ್ಡಾಟದ ಪುರವಂತಿಕೆ ಕಲಾವಿದರಾದ ಮೋನಪ್ಪ ಸುತಾರ ಅವರ ಸಂಬಂಧಿ ಅಲ್ಲದೆ ಅವರ ಒಡನಾಟದಲ್ಲಿ ಬೆಳೆದವರು. ಅವರ ಮಾರ್ಗದರ್ಶನದಲ್ಲಿ ಕಲೆಯನ್ನು ಬೆಳೆಸಿದರು. ಬಸಯ್ಯಸ್ವಾಮಿ ಹಾಗೂ ಮೋನಪ್ಪನವರ ಪ್ರೇರಣೆ ಹಾಗೂ ಆಶೀರ್ವಾದದಿಂದ ಬೆಳೆಯಲು ಕಾರಣವಾಯಿತು. ತಂದೆ ರಾಚಪ್ಪ ವೃತ್ತಿಯಲ್ಲಿ ಅಕ್ಕಸಾಲಿಗರು. ಪ್ರವೃತ್ತಿ ಜನಪದಕಲೆ ಜನಪದಸಂಗೀತ ಸೇವಾ ಮನೋಭಾವನೆಯುಳ್ಳವರು. ಗುಲಬರ್ಗಾದ ಎಂ.ಎಸ್.ಕೆ. ಮಿಲ್‌ನಲ್ಲಿ ದುಡಿಯುವ ಕಾರ್ಮಿಕ ಜನರಿಗೆ ತಮ್ಮ ಸಂಗೀತ ಸೇವೆಯಿಂದ ಮನ ತಣಿಸುತ್ತಿದ್ದರು. ಮಿಲ್ಲಿನಲ್ಲೂ ಪ್ರತಿದಿನ ಎರಡು ಹೊತ್ತು ಸಂಗೀತ ಕಛೇರಿ ನಡೆಸುತ್ತಿದ್ದರು. ತಂದೆ ತಬಲಾ; ಬಸಯ್ಯಸ್ವಾಮಿಯವರು, ಹಾರ್ಮೋನಿಯಂ ಅಂಬುಬಾಯಿ ತಮ್ಮ ಮಧುರ ಕಂಠದಿಂದ ಹಾಡಿ ಕಾರ್ಮಿಕರ ದಣಿವಾರಿಸಿ ಪ್ರೀತಿಗೆ ಪಾತ್ರರಾಗುತ್ತಿದ್ದರು. ಗಣೇಶ ಉತ್ಸವ, ದಸರಾ ಉತ್ಸವ, ದೀಪಾವಳಿ, ಸ್ವಾತಂತ್ರ್ಯ ದಿನ, ಮಕ್ಕಳ ದಿನ, ರಾಜ್ಯೋತ್ಸವಗಳಂದು ಹತ್ತು ಹಲವು ಉತ್ಸವಗಳಲ್ಲಿ ಇವರ ಹಾಡುಗಾರಿಕೆ ಇದ್ದೇ ಇರುತ್ತಿತ್ತು.

ಚಿಕ್ಕಂದಿನಲ್ಲೆ ಕಲೆ ಬೆಳೆಸಿಕೊಂಡ ಅಂಬುಬಾಯಿ ಓದಿನಲ್ಲೂ ಅಷ್ಟೇ ಚುರುಕು. 10ನೆಯ ತರಗತಿವರೆಗೆ ಓದಿದ ಇವರಿಗೆ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುವ ಅವಕಾಶ ಲಭಿಸಿತು. ಗುಲಬರ್ಗಾ ದೊಡ್ಡಪ್ಪ ಅಪ್ಪ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಪೆಂಟರಿ ಇನಸ್ಟ್ರಕ್ಟರ್ (ಸಹಬೋಧಕ)ರಾಗಿ ಕೆಲಸ ಮಾಡುತ್ತಿದ್ದ ಕುಸನೂರಿನ ರುದ್ರಪ್ಪ ಬಡಿಗೇರ ಅವರನ್ನು ಮದುವೆಯಾಗಿ ಗುಲಬರ್ಗಾದಲ್ಲೆ ಉಳಿದರು. ರುದ್ರಪ್ಪನವರು ಕಾಲೇಜಿನಲ್ಲಿ ಕೆಲಸ ಮಾಡುವುದಲ್ಲದೆ ತಮ್ಮ ವಂಶ ಪರಂಪರೆಯಾದ ಬಡಿಗತನ ಕಟ್ಟಿಗೆಯಲ್ಲಿ ಕರಕುಶಲತೆ ಉಳಿಸಲು ಸ್ವಂತ ಉದ್ಯೋಗವನ್ನು ಮಾಡುತ್ತಿದ್ದರು. ಅಂಬುಬಾಯಿಯವರಿಗೆ ಪ್ರೋತ್ಸಾಹ ನೀಡಿದರು. (ಜಿಕೆ)

ಅರ್ಜುನಾಚಾರ್ಯ ತೆಂಗಳಿಕರ್: ಕಲಬುರ್ಗಿಯ ಚಿತ್ರಕಲಾ ಕ್ಷೇತ್ರದ ಚರಿತ್ರೆಯ ಪುಟಗಳಲ್ಲಿ ಚಿತ್ರಕಲೆ ಬಗೆಗಿನ ತಮ್ಮ ಆಸಕ್ತಿ, ಸಮರ್ಪಣೆ, ಪ್ರತಿಭೆ ಅದರೊಳಗಿನ ತುಡಿತಗಳಿಂದಾಗಿ ತಮ್ಮನ್ನು ದಾಖಲಿಸಿಕೊಂಡ ಅಪರೂಪದ ಕಲಾವಿದರಲ್ಲಿ ಅರ್ಜುನಾಚಾರ್ಯ ತೆಂಗಳಿಕರ್ (1953–1988) ಒಬ್ಬರು. ಇವರು ಮೂಲತಃ ಕಲಬುರ್ಗಿಯ ತೆಂಗಳಿ ಗ್ರಾಮದವರು. ಇವರು ಬಾಲ್ಯದಲ್ಲಿಯೇ ಚಿತ್ರಕಲೆ, ಸಾಹಿತ್ಯ, ಸಂಗೀತಗಳಲ್ಲಿ ಆಸಕ್ತಿ ಬೆಳೆಸಿಕೊಂಡರು. ಜ್ಯೋತಿಷ್ಯ ಪಂಡಿತರೂ, ಕುಶಲಕರ್ಮಿಗಳೂ ಸಂಗೀತ, ಖಗೋಳಶಾಸ್ತ್ರದ ಅಧ್ಯಯನ ಹೀಗೆ ಹಲವು ಕ್ಷೇತ್ರಗಳಲ್ಲಿ ಒಲವು ಬೆಳೆಸಿಕೊಂಡು ಅವುಗಳ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶಿಲಾಶಾಸನಗಳ ಅಧ್ಯಯನಕ್ಕಾಗಿ ತಮ್ಮ ಧರ್ಮಪತ್ನಿಯೊಂದಿಗೆ ರಾತ್ರಿ–ಹಗಲೂ ಹಳ್ಳಿಯಿಂದ ಹಳ್ಳಿಗೆ ಸಂಚಾರ.



ಅರ್ಜುನಾಚಾರ್ಯರಿಗೆ 1978 ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ನಾರಾಯಣ್‌ಪುರ ಶಾಖೆಯಲ್ಲಿ ಉದ್ಯೋಗ ದೊರಕಿತು. ಪ್ರವೃತ್ತಿಯಾಗಿ ಸಾಹಿತ್ಯ, ಚಿತ್ರಕಲೆ, ಸಂಗೀತ, ಸಂಶೋಧನೆ ಮುಂದುವರೆದವು. ನಂತರ ಹುಣಸಗಿಗೆ ವರ್ಗಾವಣೆ. ಚಿತ್ರಕಲಾ ಸಾಧನೆಗೆ ಸುರಪುರದ ವಿರೇಶ ಪತ್ತಾರರ ಪ್ರೋತ್ಸಾಹ ಲಭಿಸಿತು. ಅನೇಕ ಕೃತಿಗಳ ರಚನೆ. ಆ

ವೇಳೆಗೆ ಕಲಬುರ್ಗಿಯ ಎಸ್. ಎಂ. ಪಂಡಿತರು ಜಗದ್ವಿಖ್ಯಾತ ಕಲಾವಿದರಾಗಿ ಕೀರ್ತಿಗಳಿಸಿದರು. ಮುಂಬೈ ಅವರ ಕಾರ್ಯ ಕ್ಷೇತ್ರವಾಗಿತ್ತು. ಪಂಡಿತರು ಕಲಬುರ್ಗಿಗೆ ಆಗಮಿಸಿದ್ದಾರೆ ಎಂದು ಗೊತ್ತಾದ ಕೂಡಲೇ ಅರ್ಜುನಾಚಾರ್ಯರು ಪಂಡಿತರ ಭೇಟಿ ಗಾಗಿ ಕಲಬುರ್ಗಿಗೆ ಧಾವಿಸುತ್ತಿದ್ದರು. ಚಿತ್ರಕಲೆಯ ಬಗೆಗಿನ ಉತ್ಕಟ ಪ್ರೀತಿ ಅವರಿಬ್ಬರನ್ನೂ ಆತ್ಮೀಯ ಒಡನಾಡಿ ಗಳನ್ನಾಗಿಸಿತು. ಒಂದು ರೀತಿ ಅವರಿಬ್ಬರದೂ ಗುರುಶಿಷ್ಯರಂತಹ ಅವಿನಾಭಾವ ಸಂಬಂಧ. ಪಂಡಿತರ ಚಿತ್ರಗಳ ರಚನೆಗಳಿಂದ ತುಂಬಾ ಪ್ರಭಾವಿತರಾಗಿದ್ದ ಅರ್ಜುನಾಚಾರ್ಯರು ಚಿತ್ರಕಲೆ ಯನ್ನು ಗಂಭೀರವಾಗಿ ಸ್ವೀಕರಿಸಿದರು.



'ಕುಮಾರ ಸಂಭವ' ಪೌರಾಣಿಕ ದೃಶ್ಯ-ತೈಲವರ್ಣ

ಬ್ಯಾಂಕಿನಿಂದ ಬಂದ ಕೂಡಲೇ ಅರ್ಜುನಾಚಾರ್ಯರು ಚಿತ್ರಕಲೆಗೆ ತೊಡಗುತ್ತಿದ್ದರು. ಇವರು ಬರುವ ಮುನ್ನವೇ ಅವರ ಪತ್ನಿ ಕ್ಯಾನ್ವಾಸ್, ಬ್ರಷ್‌ಗಳು, ಬಣ್ಣಗಳು ಎಲ್ಲವನ್ನೂಅಚ್ಚುಕಟ್ಟಾಗಿ ಸಿದ್ಧಪಡಿಸಿರುತ್ತಿದ್ದರು. ಸಮಯದ ಪರಿವೇ ಇಲ್ಲದೇ ಅವರು ಪೇಂಟಿಂಗ್ ಮಾಡುತ್ತಿದ್ದರು. ಪೌರಾಣಿ 'ರವೀಂದ್ರನಾಥ ಟಾಗೋರ', 'ಕುಮಾರ ಸಂಭವನ ಪಾರ್ವತಿಯ ಶಿವನಿಗಾಗಿ ಪರಿತಾಪ' 'ವಿಶ್ವಮಿತ್ರ ಮೇನಕೆ', 'ದುಷ್ಯಂತ ಶಾಕುಂತಲಾ', 'ಅಭಿಸಾರಿಕೆ' ಮುಂತಾದ ಮಹೋನ್ನತ ಕೃತಿಗಳು ಇವರಿಂದ ರಚಿಸಲ್ಪಟ್ಟಿವೆ. ತೈಲವರ್ಣದ ಅವರ ಚಿತ್ರಗಳಲ್ಲಿ ವಿಶೇಷ ಸಂಯೋಜನೆ, ರೇಖೆಗಳ ವಿನ್ಯಾಸ, ವರ್ಣಗಳ ಸೊಗಡು, ಕುಂಚದ ಬೀಸು, ಪ್ರಕೃತಿಯ ಸುಂದರ ಹಿನ್ನೆಲೆಯ ಚಿತ್ರಣ ಮುಂತಾದವುಗಳು ಗಮನ ಸೆಳೆಯುತ್ತವೆ. ಸುಂದರವಾದ ಲ್ಯಾಂಡ್‌ಸ್ಕೇಪ್ ಚಿತ್ರಗಳನ್ನು ಇವರು ರಚಿಸಿರುವರು.

ಇವರ ಚಿತ್ರಕೃತಿಗಳ ಪ್ರದರ್ಶನಗಳೂ ಜರುಗಿವೆ. 1984ರಲ್ಲಿ ಯು.ಕೆ.ಪಿ. ಕ್ಯಾಂಪ್‌ನಲ್ಲಿ, 1985ರಲ್ಲಿ ಸುರಪುರನಲ್ಲಿ, 1989ರಲ್ಲಿ ಕಲಬುರ್ಗಿಯಲ್ಲಿ ಜರುಗಿದ ಇವರಚಿತ್ರಕೃತಿಗಳ ಪ್ರದರ್ಶನಗಳು ಪ್ರಮುಖವಾಗಿವೆ. ಚಿತ್ರಕಲೆಯ ಜೊತೆಗೆ ಇವರು ಸಂಗೀತ, ಸಾಹಿತ್ಯ, ಸಂಶೋಧನೆ ಕ್ಷೇತ್ರದಲ್ಲೂ ತಮ್ಮ ಪ್ರತಿಭೆ ತೋರಿದ್ದಾರೆ. ಇವರ ಸಾಧನೆ ಮೆಚ್ಚಿ ಜಗತ್ ಕಲ್ಯಾಣ ಪತ್ರಿಕೆಯಿಂದ ಹರಿಹರ ದಲ್ಲಿ ನಡೆದ ಯಜ್ಞ ಸಮಾರಂಭದಲ್ಲಿ 'ಮಹೋಪಾದ್ಯಯ' ಬಿರುದು ಪ್ರಧಾನ. ಇಷ್ಟೆಲ್ಲಾ ಸಾಧನೆಗಳಿಗೆ ಅವರ ಪರಿವಾರದ ಪೂರ್ಣ ಪ್ರೋತ್ಸಾಹವಿತ್ತು.

ಸಾಹಿತ್ಯ, ಚಿತ್ರಕಲೆ, ಸಂಶೋಧನೆ, ಸಂಗೀತ ಕಲೆಗಳಲ್ಲಿ ಇನ್ನು ಹೆಚ್ಚಿನ ಸಾಧನೆ ಮಾಡುವ ತುಡಿತ ಅವರಲ್ಲಿತ್ತಾದರೂ ಅನಾ ರೋಗ್ಯದಿಂದ ಅವರು 1988ರಲ್ಲಿ ನಿಧನರಾದರು.

(ಎಂಎಸ್)

ಅಕ್ಕಿ ವಿ.ಎನ್.: ರಾಯಚೂರು ಜಿಲ್ಲೆಯ ಸಾಂಸ್ಕೃತಿಕ ಜಗತ್ತಿನಲ್ಲೇ ವಿ.ಎನ್. ಅಕ್ಕಿಯವರು ವಿಶೇಷ ಸ್ಥಾನ-ಮಾನ ಗಳಿಸಿದವರು, ಆಡು ಮುಟ್ಟದ ಗಿಡವಿಲ್ಲ ಎನ್ನು ವಂತೆ, ರಂಗಭೂಮಿಯ ವಿವಿಧ ಪ್ರಕಾರಗಳೆಲ್ಲದರಲ್ಲೂ ಅಕ್ಕಿಯವರು ಪರಿಣಿತಿ ಪಡೆದವರು. 63 ವರ್ಷದ ಹರೆಯದ ಅಕ್ಕಿ 45 ವರ್ಷಗಳಿಂದ ಹವ್ಯಾಸಿ ರಂಗ ಭೂಮಿಯಲ್ಲಿ ತಮ್ಮನ್ನು ತಾವೇ ತೇಯ್ದು ರಂಗಭೂಮಿಗೆ ಶ್ರಮದ ಗಂಧ ಹಂಚಿದ್ದಾರೆ.

ಶಾಸ್ತ್ರೀಯ ಸಂಗೀತದ ಹಿನ್ನೆಲೆವುಳ್ಳ ಇವರು ಸುಗಮ ಸಂಗೀತ, ಜನಪದ,ಹಾಗೂ ಭಾವಗೀತೆಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಹಿನ್ನೆಲೆಯಲ್ಲಿ ಯಾರಾದರೂ ತಾಳ ಲಯಕ್ಕೆ ಧಕ್ಕೆ ತಂದರೆ, ತಕ್ಷಣ ವ್ಯಗ್ರವಾಗುವ ಅಕ್ಕಿ ರಂಗಭೂಮಿಯ ಬಹು ಮುಖ ಪ್ರತಿಭೆಯ ಅದ್ಭುತ ನಟ. 45 ವರ್ಷಗಳಿಂದ ಇಲ್ಲಿವರೆಗೆ 32 ಹವ್ಯಾಸಿ ನಾಟಕಗಳಲ್ಲಿ 12 ವೃತ್ತಿ ರಂಗಭೂಮಿಯ ನಾಟಕ ಗಳಲ್ಲಿ, 28 ಬೀದಿ ನಾಟಕಗಳಲ್ಲಿ 12 ಕಲಾ ಜಾಥಾಗಳಲ್ಲಿ ಮಾಡಿದ ಅಕ್ಕಿಯವರು 40 ನಾಟಕಗಳಿಗೆ ರಂಗಸಜ್ಜಿಕೆ, 32 ನಾಟಕಗಳ ವಸ್ತ್ರಾಲಂಕಾರ, 80 ನಾಟಕಗಳ ಕಲಾವಿದರಿಗೆ ಪ್ರಸಾಧನ ಮಾಡಿದವರು ದಣಿವಿಲ್ಲದೆ ದುಡಿದಿದ್ದಾರೆ, ದುಡಿಯು ತ್ತಿದ್ದಾರೆ.

ಸೃಜನಶೀಲ ಮನಸ್ಸಿನ ಸದಾ ಎಚ್ಚರದ ಕಲಾವಿದರಾದ ಅಕ್ಕಿಯವರು ಗುಲಬರ್ಗಾ, ಹೈದ್ರಾಬಾದ ದೂರದರ್ಶನದ 5 ನಾಟಕಗಳಲ್ಲಿ ಮುಖ್ಯ ಪಾತ್ರ ಮಾಡಿ ಸೈ ಎನಿಸಿಕೊಂಡಿದ್ದಾರೆ. ಇವರ ನಾಟಕಗಳೆಂದರೆ, 'ಕತ್ತಲೆ ದಾರಿ ದೂರ', 'ಕುರಿ', ಚಿಕ್ಕದೇವ ಭೂಪ', 'ಸಂಕ್ರಾಂತಿ', ಅಲಾಮನ ಅದ್ಭುತ ಜಯ', ಕೆರೆಗೆಹಾರ, ಜೋಗತಿ, ಚಾರ್ವಾಕ, ಗೋದಾನ, ಪೋಸ್ಟರ ಹೀಗೆ ನಾಟಕಗಳಲ್ಲಿ ನಟಿಸಿದ ಯಾದಿ ಬೆಳೆ ಯುತ್ತಲೇ ಹೋಗುತ್ತದೆ.



ನಿರ್ದೇಶಿಸಿದ ನಾಟಕಗಳು ಸಮುದಾಯ ರಂಗ ಪ್ರದರ್ಶನಗಳಾದ ಕೆರೆಗೆ ಹಾರ, ಮೂಕನ ಮಕ್ಕಳು, ಶಕುಂತಲಾ, ಭೋಲಾರಾಮನ ಜೀವ, ಜೋಗತಿ, ಸಾಕ್ಷಿಕಲ್ಲು, ಮಕ್ಕಳ ನಾಟಕಗಳಾದ ಅಲಿಬಾಬಾ ಮತ್ತು 40 ಕಳ್ಳರು, 'ನೀಲಿ ಕುದುರೆ', 'ಪಂಜರ ಶಾಲೆ', ಗಿಡ್ಡು ಟೇಲರ್, ಗುಮ್ಮನೆಲ್ಲಿಹ ತೋರಮ್ಮ' ಮುಂತಾದವು.

ರಂಗಭೂಮಿಯಲ್ಲಿ ದಣಿವಿಲ್ಲದ ಕೆಲಸವಾಡುವ ಅಕ್ಕಿಯವರು, ರಾಯಚೂರು ಜಿಲ್ಲಾ ಸಂಪೂರ್ಣ ಸಾಕ್ಷರತಾ ಸಮಿತಿಯ ಮುಖ್ಯ ರೂವಾರಿ, ಸರ್ಕಾರಿ ಅಂಗ ಸಂಸ್ಥೆ ಅಬ್ದುಲ್ ನಜೀರ್‌ಸಾಬ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ನಡೆಸಿದ ಗ್ರಾಮ ಪಂಚಾಯತ, ಬೀದಿನಾಟಕ ಶಿಬಿರ, ಜಲನಿರ್ಮಲ ಯೋಜನೆಯ ಬೀದಿನಾಟಕ ಶಿಬಿರ ಮೈಸೂರು, ನಾಟಕ ಅಕಾಡೆಮಿಯ ಕಾರ್ಯಾಗಾರ, ಸಮುದಾಯದ ಮಕ್ಕಳ ಬೇಟಿಗೆ ಶಿಬಿರಗಳಲ್ಲಿ ಸಂಘಟಕರಾಗಿ ಸಂಪನ್ಮೂಲವ್ಯಕ್ತಿಯಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಶಸ್ತಿಗಳು ಇವರ ರಂಗಕಲಾ ಸೇವೆಯನ್ನು ಗುರುತಿಸಿ 1994ರಲ್ಲಿ ರಾಯಚೂರು ಜಿಲ್ಲಾ ಆಡಳಿತವು ಸನ್ಮಾನಿಸಿ ಗೌರವಿಸಿದೆ, 2002ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. 2002–03ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಪ್ರಶಸ್ತಿ ನೀಡಿ ಗೌರವಿಸಿದೆ. 2005–08ರ ಅವಧಿಗೆ ಶ್ರೀಯುತರು ಕರ್ನಾಟಕ ನಾಟಕ ಅಕಾಡೆಮಿ ಪರವಾಗಿ ರಾಯಚೂರು ಜಿಲ್ಲಾ ಸಂಚಾಲಕರಾಗಿ ಸೇವೆಸಲ್ಲಿಸಿದ್ದಾರೆ. ಸ್ಥಳೀಯ ಸಂಘ–ಸಂಸ್ಥೆಗಳಿಂದ ಗೌರವ ಸನ್ಮಾನ 20ಕ್ಕೂ ಹೆಚ್ಚು.

(ಎಸ್‌ಆರ್‌ಜಿ)

ಅಕ್ಕಿ ದೇವೇಂದ್ರಪ್ಪ ನಾಭಿರಾಜ: ಚಿತ್ರಕಲಾ ಶಿಕ್ಷಕ, ಲೇಖಕ. ಯಾದಗಿರ ಜಿಲ್ಲೆಯ 'ಗೋಗಿ' ಊರಿನ ಹುಲ್ಲೂರು ಗ್ರಾಮದಲ್ಲಿ 03.10.1948 ರಂದು ಜನಿಸಿದರು. ಇವರದು ಮೂಲತಹ ವ್ಯಾಪಾರಸ್ಥ ಮತ್ತು ವ್ಯವಸಾಯಗಾರರ ಮನೆತನ. ಇವರ ಅಜ್ಜಿ ಸುಂದರಾಬಾಯಿ ಬೆಳಗು ಮುಂಜಾನೆ ಜೋಳ ಬೀಸುತ್ತಿರುವ ವಾಡಿಕೆಯಿತ್ತು. ಇದರ ಜೊತೆ ಜೊತೆಗೆ ಜೈನ ಜನಪದಗಳನ್ನು ಹಾಡುವುದನ್ನು ರೂಢಿಸಿಕೊಂಡಿದ್ದರು.

ಐಡಿಯಲ್ ಫೈನ್‌ಆರ್ಟ್ ಕಾಲೇಜಿನಲ್ಲಿ ಆರ್ಟ್ ಮಾಸ್ಟರ್ ಮತ್ತು ಡಿಪ್ಲೊಮಾ ಪದವಿ ಸಂಪಾದಿಸಿ (1971) ಚಿತ್ರಕಲಾ ಶಿಕ್ಷಕನಾಗಿ ಸರಕಾರಿ ಸೇವೆ ಸೇರಿದರು. ಇವರ ಆದರ್ಶ, ಗುಣಗಳಿಗೆ ಕರ್ನಾಟಕ ಸರಕಾರವು ಆದರ್ಶ ಶಿಕ್ಷಕರೆಂದು ಪ್ರಶಸ್ತಿ ನೀಡಿ, ಗೌರವಿಸಿದೆ (1996). ಅದೇರೀತಿಯಲ್ಲಿ ಇವರ ಅತ್ಯುತ್ತಮ ಸೇವೆಯನ್ನು ಗುರುತಿಸಿ ಕೇಂದ್ರ ಸರಕಾರ ಆಗಿನ ರಾಷ್ಟ್ರಪತಿಗಳಾದ ಕೆ.ಆರ್. ನಾರಾಯಣ ಇವರಿಂದ 1997ರಲ್ಲಿ ಆದರ್ಶ ಶಿಕ್ಷಕರೆಂದು ನವದೆಹಲಿಯಲ್ಲಿ ಪ್ರಶಸ್ತಿ ನೀಡಿ ಗೌರಿವಿಸಿದ್ದಾರೆ.



2007 ಜೂನ್ 30ರಂದು ಸರಕಾರಿ ಚಿತ್ರಕಲಾ ಶಿಕ್ಷಕ ವೃತ್ತಿಯಿಂದ ನಿವೃತ್ತಿಯಾದರು. ಶ್ರವಣಬೆಳಗೊಳದ ಜೈನ ಅಧ್ಯಯನ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯ. 2002ರಲ್ಲಿ ಜರುಗಿದ ಭಗವಾನ್ ಮಹಾವೀರರ 2600ನೆಯ ಜನ್ಮ ಕಲ್ಯಾಣ ಮಹೋತ್ಸವದ ಕಲಬುರ್ಗಿ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಲಬುರ್ಗಿ ಜಿಲ್ಲಾ ಕನ್ನಡ ಜಾಗ್ರತ ಸಮಿತಿ ಹಿಂದಿನ ಸದಸ್ಯರು. ಕರ್ನಾಟಕ ಸರಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ 2006 ಸುವರ್ಣ ಕರ್ನಾಟಕ ನಿಮಿತ್ಯ ಪ್ರಕಟಿಸಿದ 'ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರು' ಉಪ ಸಂಪಾದಕರಾಗಿದ್ದರು. ಕೇಂದ್ರ ಸರಕಾರದ ಸಂಸ್ಕೃತಿ ಇಲಾಖೆಯ ರಾಷ್ಟ್ರೀಯ ಹಸ್ತಪ್ರತಿ ಅಭಿಯಾನ ಕರ್ನಾಟಕ ರಾಜ್ಯ ಹಸ್ತಪ್ರತಿಗಳ ಸರ್ವೇಕ್ಷಣಾ ಯೋಜನೆಯ ಕಲಬುರ್ಗಿ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಶಹಾಪೂರ ತಾಲ್ಲೂಕು ದರ್ಶನ (1985). 'ಮುಂಬೆಳಕು ಮಹಾವೀರ' ಕವನ ಸಂಕಲನ, (1987). 'ಚಿಗುರು–ಚಿಂತನ' ಮೂವರು ಗೆಳೆಯರೊಂದಿಗೆ ತಂದ ಕವನ ಸಂಕಲನ, (1987). 'ಸಗರ ನಾಡಸಿರಿ' ಸಂಶೋಧನಾ ಲೇಖನಗಳ ಸಂಗ್ರಹ: (1996). 'ಹಡೆದವ್ವ ಹಾಡ್ಯಾಳ' (ಜನಪದ ಹಾಡುಗಳ ಸಂಪಾದನಾ ಗ್ರಂಥ) (2000). 'ಜೈನ ವಿಗ್ರಹಗಳು' (ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಸ್ತಿ ಶ್ರೀ ದೇವೇಂದ್ರ ಕೀರ್ತಿ ದತ್ತಿ ಪ್ರಶಸ್ತಿ ಪಡೆದ ಗ್ರಂಥ, (2000). 'ವರ್ಧಮಾನ ಮಹಾವೀರ' ಬಾನುಲಿ ನಾಟಕ, ಗೋಗಿ, (2002). 'ಜೈನ ಜನಪದ ಹಾಡುಗಳು' (ಶ್ರೀಕಾಂತಮ್ಮ ಅಕ್ಕಿಯವರ ಜೈನ ಜನಪದ ಹಾಡುಗಳ ಸಂಪಾದನಾ ಗ್ರಂಥ). 'ಬಾನರಂಗ–ರೇಡಿಯೋ' ನಾಟಕಗಳು. ಎಂ.ಟಿ. ಭೋಪಲೆ (ಜೀವನ ಚರಿತ್ರೆ). ಮಾಯೆ ಮದ್ದಲೆ ಕವನ ಸಂಕಲನ, (2008). 'ಯಕ್ಷ ಪ್ರಶ್ನೆ' ನಾಟಕ, (2008). ಶಿಕ್ಷಕನ ಮನದಾಳದಿಂದ– ಅಂಕಣಬರಹ ಸಂಕಲನ (2008). 'ಜಿನದನಿ'– ಜೈನ ಸಂಶೋಧನಾ ಲೇಖನಗಳ ಸಂಗ್ರಹ, (2010). ವ್ಯಂಗ್ಯ ಚಿತ್ರಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ರಂಗೋಲಿ ಕಲಾವಿದ. ಗುಲಬರ್ಗಾ ಆಕಾಶವಾಣಿ (ಚಿಂತನ, ನಾಟಕ, ರೂಪಕ). ಪ್ರಾಗೈತಿಹಾಸಿಕ ನೆಲೆಗಳ ಶೋಧ, ಪ್ರಾಗೈತಿಹಾಸಿಕ, ಐತಿಹಾಸಿಕದ ಅನೇಕ ವಸ್ತುಗಳು, ಶಾತವಾಹನ ಕಾಲದ 2000 ವರ್ಷಗಳ ಹಿಂದಿನ ಸೀಸನಾಣ್ಯಗಳ ಶೋಧನೆ ಮತ್ತು ಅವುಗಳ ಸಂಗ್ರಹ ಮಾಡಿದ್ದಾರೆ.



'ಡಾ. ಸರ್ವಪಲ್ಲಿ ರಾಧಾಕೃಷ್ಣನ್' ತೈಲವರ್ಣ

ಮಲ್ಲಿಕಾರ್ಜುನ ಬಡಿಗೇರ ಇವರಿಗೆ ಹಲವು ಪ್ರಶಸ್ತಿ ಗೌರವಗಳು ಸಂದಿವೆ. ಆದರ್ಶ ಶಿಕ್ಷಕ: ಕರ್ನಾಟಕ ಸರಕಾರದ ರಾಜ್ಯ ಪ್ರಶಸ್ತಿ (1996). ಆದರ್ಶ ಶಿಕ್ಷಕ: 1997ನೆಯ ಸಾಲಿನ ಕೇಂದ್ರ ಸರಕಾರದಿಂದ ರಾಷ್ಟ್ರ ಪ್ರಶಸ್ತಿ 'ಶ್ರೀ ಗೋಮಟೇಶ್ವರ ವಿದ್ಯಾಪೀಠ ಪ್ರಶಸ್ತಿ' ಶ್ರೀ ಕ್ಷೇತ್ರ ಶ್ರವಣಬೆಳಗೊಳ (2000). ಸ್ವಸ್ತಿ ಶ್ರೀ ದೇವೇಂದ್ರ ಕೀರ್ತಿ ದತ್ತಿ ಪ್ರಶಸ್ತಿ. 'ಜೈನ ರಾಷ್ಟ್ರ ಗೌರವ' ಅಖಿಲ ಭಾರತ ದಿಗಂಬರ ಜೈನ ಪ್ರತಿಭಾ ಸನ್ಮಾನ ಸಮಾರೋಪ ಸಮಿತಿ ಕೊಲ್ಕತ್ತಾ ಇವರು ಕೊಲ್ಕತ್ತಾದಲ್ಲಿ ನೀಡಿದ ಪ್ರಶಸ್ತಿ. 'ಜೈನ ಸಂಸ್ಕೃತಿ ಸಂರಕ್ಷಕ' (2004) ಬೆಳಗಾವಿಯಲ್ಲಿ ಜರುಗಿದ ಭಾರತ ವರ್ಷೀಯ ದಿಗಂಬರ ಜೈನ ತೀರ್ಥಕ್ಷೇತ್ರ ಸಂರಕ್ಷಣಾ ಸಮಿತಿ (ನವದೆಹಲಿ ಹಾಗೂ ಲಖ್ನೋ) ಯವರ ರಾಜ್ಯ ಸಮ್ಮೇಳನದಲ್ಲಿ ನೀಡಿದ್ದು. 'ಆಚಾರ್ಯ ಬಾಹುಬಲಿ ಕನ್ನಡ ಸಾಹಿತ್ಯ ಪುರಸ್ಕಾರ' ಭಾರತ ಜೈನ ಸಭಾ ಸಾಂಗ್ಲಿ (ಮಹಾರಾಷ್ಟ್ರ) (2006). ಶಹಾಪೂರದ ಫಕೀರದಂಡಗಿ ಮಠದ 'ಸಾಹಿತ್ಯ ಸಿರಿ' ಪ್ರಶಸ್ತಿ. 'ಸಗರ ನಾಡ ಸಿರಿ' ಪ್ರಶಸ್ತಿ-ಶ್ರೀ ಶರಣಬಸವೇಶ್ವರ ಸಂಗೀತ ಸೇವಾ ಹಾಗೂ ಸಂಗೀತ ಶಿಕ್ಷಣ ಸಮಿತಿ, ಶಹಾಪೂರ. ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ-ವಾರದ ಸ್ಫೋಟ 'ಕನ್ನಡ ಸಾಪ್ತಾಹಿಕ ಬಸವನಗುಡಿ, ಬೆಂಗಳೂರು (2006). ಡಿ. ಎನ್. ಅಕ್ಕಿಯವರ ಬದುಕು-ಬರಹ-ಎಂ.ಫಿಲ್ ಪದವಿಗಾಗಿ ಲಘು ಸಂಶೋಧನಾ ಪ್ರಬಂಧ. ಸೃಜನಾತ್ಮಕ ಕಲಾವಿದ-ಸಾಹಿತಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಡಿ.ಎನ್. ಅಕ್ಕಿ ಲಘು ಸಂಶೋಧನಾ ಪ್ರಬಂಧ (2006-07), ಕಾಯಕ ಸನ್ಮಾನ ಪ್ರಶಸ್ತಿ ಉದಯೋನ್ಮುಖ ಯುವ ಬರಹಗಾರರ ಬಳಗ ಗುಲಬರ್ಗಾ(2008).

(ಎಂಎಸ್‌ಜಿ)

ಅಗ್ನಿ: ಅಮೂಲ್ಯ ಶಿಲ್ಪಕಲೆಯ ಅಲಕ್ಷಿತ ತಾಣ. ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಪುಟ್ಟ ಹಳ್ಳಿ. ಸುರಪುರದಿಂದ ಪಶ್ಚಿಮಕ್ಕೆ 30ಕಿ.ಮೀ. ಅಂತರದಲ್ಲಿ ಮಲ್ಲಾ-ಹುಣಸಗಿಯ ಮುಖ್ಯರಸ್ತೆಯಿಂದ ಪಶ್ಚಿಮಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಈ ಊರ ಉತ್ತರಕ್ಕೆ ಅನತಿ ದೂರದಲ್ಲೆ ದೇವರ ದಾಸಿಮಯ್ಯನ ಮುದನೂರು ಇದೆ. ಈ ಅಗ್ನಿ ಗ್ರಾಮದಲ್ಲಿ ಅನೇಕ ಐತಿಹಾಸಿಕ ಸ್ಮಾರಕಗಳು ಅಲ್ಲಲ್ಲಿ ಚದುರಿ ಬಿದ್ದಿವೆ. ಕ್ರಿ.ಶ. 10ನೇ ಶತಮಾನದ ರಾಷ್ಟ್ರಕೂಟರ ಕೊನೆ ಅಥವಾ ಕಲ್ಯಾಣ ಚಾಲುಕ್ಯರ ಆರಂಭದ ಹಂತದಲ್ಲಾದ ಸುಂದರ ಜೈನ ಮಂದಿರವೊಂದು ಹಾಳು ಹುಡೆಯ ಹಿಂಭಾಗದಲ್ಲಿದೆ. ದಕ್ಷಿಣೋತ್ತರ 60 ಅಡಿ. ಪೂರ್ವ ಪಶ್ಚಿಮ 25 ಅಡಿ ಅಳತೆಯ ಈ ಏಕಕೂಟ ಜಿನಾಲಯ ಉತ್ತರಾಭಿಮುಖವಾಗಿದೆ. ಗರ್ಭಗೃಹ ಅಂತರಾಳ, ನವರಂಗ, ಸಭಾಮಂಟಪವುಳ್ಳ ಈ ಬಸದಿಯ ನವರಂಗದ ನಾಲ್ಕು ಕಂಬಗಳು ತುಂಬಾ ಕಲಾತ್ಮಕವಾಗಿವೆ. ಬುಡದಿಂದ ಚೌಕದ ಮೇಲೆ ಅಷ್ಟಕೋನದ ಪಟ್ಟಿಕೆಗಳಿಗೆ ಹೊಂದಿಕೊಂಡಂತೆ ಮೇಲ್ಭಾಗದಲ್ಲಿ ಆಯತರಸ ಅದರ ಮೇಲೆ ಬೋದಿಗೆಗಳು ದೊಡ್ಡ ಚೌಕದ ವರ್ತುಲಕ್ಕೆ ಹೊಂದಿಕೊಂಡಿವೆ. ಪಂಚ ಶಾಖೆಗಳುಳ್ಳ ಗರ್ಭಗೃಹದ ದ್ವಾರಬಂಧದಲ್ಲಿ ವಜ್ರಾಕೃತಿ, ವಿವಿಧ ಭಂಗಿಯ ಮಾನವಾಕೃತಿಗಳು, ಒಂದರ ಮೇಲೊಂದರಂತೆ ಲಂಘಿಸಿ ನಿಂತ ಸಿಂಹಗಳು, ಕಿರುಗಂಬ, ಸುರುಳಿಯಾಕಾರದ ಬಳಕುವ ಲತಾ ಪಟ್ಟಿಕೆಗಳು. ಸೂಕ್ಷ್ಮತೆ ಸುಂದರತೆಯಿಂದ ಮೈ ತುಂಬಿಕೊಂಡು ನಿಂತಿವೆ. ಈ ಗರ್ಭಗೃಹದ್ವಾರದ ಲಲಾಟ ಬಿಂಬವು ಧ್ಯಾನಾಸಕ್ತ ಜಿನನದಾಗಿದೆ. ಈ ದ್ವಾರಬಂಧದ ಕೆಳಭಾಗದಲ್ಲಿ ಅಕ್ಕಪಕ್ಕ ಗೋಪುರಾಕಾರದ ಕಿರೀಟಗಳ ಮೇಲೆ ಹೆಡೆದೆರೆದ ಸರ್ಪಗಳನ್ನು ಹೊಂದಿರುವ ಪುಷ್ಪ, ಪಾಶ, ಅಭಯಹಸ್ತ ಮತ್ತು ಗದಾಧಾರಿಗಳಾದ ಚತುರ್ಭುಜಗಳುಳ್ಳ ದ್ವಾರಪಾಲಕರಿದ್ದಾರೆ. ಈ ದ್ವಾರಪಾಲಕರಿಗೆ ಹೊಂದಿಕೊಂಡಂತೆ ಸುಂದರ ಚಾಮರ ಧಾರಣಿಯರನ್ನು ಕೆತ್ತಿದ್ದಾರೆ. ಈ ಬಸದಿಯ ಪ್ರವೇಶ (ಮಹಾ) ದ್ವಾರದ ಲಲಾಟದಲ್ಲೂ ಮಧ್ಯೆ ಕುಳಿತ ಜಿನಬಿಂಬವಿದೆ. ಗರ್ಭಗೃಹದೊಳಗೆ ಐದು ಸಿಂಹಗಳುಳ್ಳ ಸಿಂಹಪೀಠದ ಮಧ್ಯ ಕಮಲದ ಮೇಲೆ ಪದ್ಮಾಸನದಲ್ಲಿರುವ ಜಿನಬಿಂಬ ಕಣ್ಮನ ಸೆಳೆಯುತ್ತದೆ. ಈ ಪ್ರತಿಮೆಯ ತಲೆಯ ಹಿಂದೆ ನಯಗೊಳಿಸಿದ ಪ್ರಭಾಮಂಡಲವಿದೆ. ತಲೆಯ ಮೇಲೆ ತ್ರಿಲೋಕ ಸ್ವಾಮಿತ್ವದ ಲಾಂಛನವಾದ ಮುತ್ತು ಮಣಿಗಳಿಂದ ಅಲಂಕರಿಸಿದ ಮುಕ್ಕೊಡೆಯಿದೆ. ಬೆನ್ನಿಗೆ ಕಲಾತ್ಮಕ ಒರಗುದಿಂಬಿಗೆ ಕಟ್ಟಿದ ರೇಸಿಮಿಯ ಕಸಿಗಳು ತನ್ನ ನೈಜತೆಯಿಂದ ನೋಡುಗರನ್ನು ಬೆರಗುಗೊಳಿಸುವುದು.

ಈ ಪ್ರತಿಮೆಯ ಅಕ್ಕಪಕ್ಕ ಚಾಮರ ಸೇವಕರಾದ ಅಜಿತರಾಜರ ಪ್ರತಿಮೆಗಳಲ್ಲಿ ಶಿಲ್ಪಿಯ ಕಲಾ ಕೈಚಳಕ ಎದ್ದು ಕಾಣುತ್ತದೆ. ಸೊಂಟದ ಮೇಲ್ಭಾಗದಿಂದ ಕೆತ್ತಿರುವ ಈ ಚಾಮರ ಧಾರಿಗಳು ಗೋಪುರಾಕಾರದ ಕಿರೀಟ, ಕರ್ಣಕುಂಡಲ, ಭುಜ ದಾಭರಣ, ಕೊರಳಹಾರ, ತೋಳುಬಂದಿ, ಕಡಗ, ಉರಬಂಧ, ಯಜ್ಞೋಪವೀತ, ಉಪವೀತ, ಮಣಿಗಳಿಂದಲಂಕೃತವಾದ ನಡಪಟ್ಟಿಗಳಿಂದ ಶೋಭಿತರಾಗಿದ್ದಾರೆ. ಒಂದು ಕೈಯಲ್ಲಿ ಚಾಮರ, ಮತ್ತೊಂದರಲ್ಲಿ ಬೀಜಪೂರ ಫಲ ವನ್ನು ಹಿಡಿದಿರುವ ಈ ಪ್ರತಿಮೆಗಳ ಮುಖದಲ್ಲಿ ಮಿನುಗುವ ಮೃದು ಮಂದಹಾಸ ಸೇವಾ ಧನ್ಯತೆಯನ್ನು ಬಿಂಬಿಸುತ್ತದೆ. ಈ ಚಾಮರಧಾರಿಗಳ ಕೆಳಗೆ ಅರೆಗಂಬ ಕೊರೆದಿದ್ದಾರೆ. ಅದರ ಮೇಲೆ ಬಾಯ್ತೆರೆದ ಮಕರವಿದೆ. ಇದರ ಪಕ್ಕಕ್ಕೆ ಆನೆಯ ತಲೆಯ ಮೇಲೆ ಲಂಘಿಸಿ ನಿಂತ ಸಿಂಹವಿದೆ.

ಕ್ರಿ.ಶ. 9–10ನೆಯ ಶತಮಾನದ್ದಾಗಿರಬಹುದಾದ ಈ ತೀರ್ಥಂಕರ ಮೂರ್ತಿಯ ಸುರುಳಿಯಾಕಾರದ ತಲೆಗೂದಲು ಎರಡೂ ಭುಜಗಳ ಮೇಲೆ ಜಡೆಗಳೋಪಾದಿಯಲ್ಲಿವೆ. ಸಾಮಾನ್ಯವಾಗಿ ಈ ಭಾಗದಲ್ಲಿ ದೊರಕಿರುವ ಪುರಾತನ ಪ್ರತಿಮೆಗಳಿಗಿರುವ ಭುಜಗಳ ಮೇಲಿರುವ ಜಡೆ, ಈ ಪ್ರತಿಮೆಗೆ ಬಿಡಿಸಿದ್ದು ಮಾತ್ರ ತುಂಬಾ ವಿಶೇಷವಾಗಿದೆ.

ಗರ್ಭಗೃಹದ ಮುಂದಿರಿಸಲಾದ ಮಾತಂಗ ಯಕ್ಷ ದ್ವಿಭುಜ ನಿದ್ದು ಒಂದು ಕೈಯಲ್ಲಿ ಪುಷ್ಪ, ಇನ್ನೊಂದರಲ್ಲಿ ಬೀಜಪೂರ ಫಲವಿದೆ. ಕುಬ್ಜಾಕಾರದ ಈ ಯಕ್ಷ ಪ್ರತಿಮೆ ಕಿರೀಟ, ಎದೆಪಟ್ಟಿಕೆ, ಕೊರಳಹಾರ, ಯಜ್ಞೋಪವೀತ ಭುಜದಾಭರಣ ತೋಳುಬಂದಿ, ಕಡಗ, ಕಂಕಣಗಳಿಂದ ಅಲಂಕೃತವಾಗಿದ್ದಾನೆ. ಸಿದ್ಧಾಯನಿ ಯಕ್ಷಿ ಚತುರ್ಭುಜೆ ಪಾಶ ಅಂಕುಶ, ವರದ ಮುದ್ರೆ ಹೊಂದಿರುವ ಈ ಪ್ರತಿಮೆಯ ಎಡಕೆಳಗೈ ಮುಕ್ಕಾಗಿದೆ. ಭದ್ರಾಸನದಲ್ಲಿರುವ ಈ ಯಕ್ಷಿ ಪ್ರತಿಮೆ ತುಂಬಾ ಕಲಾತ್ಮಕವಾಗಿದೆ. ಅಗಸಿಯಲ್ಲಿ ಭಗ್ನ ಸೂರ್ಯ ಪ್ರತಿಮೆ ಇದೆ. ಊರ ಹೊರಗೆ (ಪೂರ್ವಕ್ಕೆ) ಸಿದ್ಧಲಿಂಗೇಶ್ವರರ ಪುರಾತನ ಶೈವ ದೇವಾಲಯವಿದೆ.

(ಡಿಎನ್‌ಎ)

ಅಡಿವೆಪ್ಪ ಪರಪ್ಪ ಅಂಗ: ಶಿಲ್ಪ ಕಲಾವಿದ. ಇವರು ಮೂಲತಃ ಕೊಪ್ಪಳ ಜಿಲ್ಲೆ ಮುನಿರಾಬಾದನವರಾಗಿದ್ದು, 1964 ಜೂನ್ 1ರಂದು ಜನಿಸಿದರು. ಹುಟ್ಟಿನಿಂದಲೂ ಶಿಲ್ಪಕಲೆ ಇವರಿಗೆ ಚಿರಪರಿಚಿತವಾಗಿದೆ. ಬಿ.ಎ., ಬಿ.ಎಡ್, ಓದಿದ್ದರೂ ಕೂಡ ಶಿಲ್ಪ ಕೆತ್ತುವ ವೃತ್ತಿ ಬಿಡದೇ, ದಿನನಿತ್ಯದ ಕಾರ್ಯದಂತೆ, ಬಾರ್‌ಸೋಪಿನಲ್ಲಿ ಉಬ್ಬು ಶಿಲ್ಪಗಳು ನೈಜವಾದ ರೂಪದಲ್ಲಿ 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು ಅಲ್ಲದೇ ಕಡಲೇಕಾಳು ಹಾಗೂ ಸಾಸಿವೆ ಕಾಳಿನಿಂದ ಅನೇಕ ಗಣಪತಿಯ ಶಿಲ್ಪಗಳನ್ನು ಮಾಡಿದ್ದಾರೆ.


ಇವರು ರಟ್ಟಿನಿಂದ ಮತ್ತು ಥರ್ಮೋಕೋಲ್‌ನಿಂದ ವಿವಿಧ ಬಗೆಯ ಮಾದರಿಗಳನ್ನು ಒಳಗೊಂಡಂತೆ ಅನೇಕ ಶಿಲ್ಪಕೃತಿಗಳನ್ನು ಮಾಡಿದ್ದಾರೆ. ಮುಧೋಳ, ಹಾಸನ, ಗಂಗಾವತಿ, ಮೈಸೂರು ದಸರಾ, ಆನೆಗೊಂದಿ ಉತ್ಸವ, ಬಾಗಲಕೋಟೆ ಮುಂತಾದ ಕಡೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಅಲ್ಲದೇ ದೂರದರ್ಶನದ ಅವಲೋಕನದಲ್ಲಿ ಪ್ರಸಾರವಾಗಿದೆ. ಎ.ಪಿ. ಅಂಗ ಇವರು ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು, ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. 1994ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಧೋಳದಲ್ಲಿ ಮತ್ತು 1996ರಲ್ಲಿ ಹಾಸನ, 2000ರಲ್ಲಿ ಬಾಗಲಕೋಟೆಯ ಸಮ್ಮೇಳನದಲ್ಲಿ ಹಾಗೂ ಆನೆಗೊಂದಿ ಉತ್ಸವದಲ್ಲಿ ಅಲ್ಲದೇ ಗಂಗಾವತಿಯ ಸ್ನೇಹ ವೃಂದದಿಂದ, 1998ರಲ್ಲಿ ಕರಕುಶಲ ಭಾಸ್ಕರ ಬಿರುದು, ಕೊಟ್ಟು ಸನ್ಮಾನಿಸಿದ್ದಾರೆ.

(ಬಿಕೆಎಲ್)

ಅಡ್ಡಣಿಗೆ: ಗ್ರಾಮೀಣ ಜನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅಡುಗೆ ಮನೆಯ ಪರಿಕರಗಳಲ್ಲಿ ಒಂದು. ಇದು ಊಟದ ತಟ್ಟೆ, ಆರತಿ, ಕಳಶ, ಮುಂತಾದ ಸಾಮಗ್ರಿಗಳನ್ನು ನೆಲದಿಂದ ಎತ್ತರದ ಸ್ಥಳದಲ್ಲಿ ಇಡಲು ಉಪಯೋಗಿಸುವ ಪೀಠ, ಇದಕ್ಕೆ ಮುಕ್ಕಾಲು, ಅಡ್ಡುಣಗೆ ಎಂದು ಕರೆಯುವುದುಂಟು. ಗ್ರಾಮೀಣರು ತಮ್ಮ ಮನೆಯಲ್ಲಿ ನಡೆಯುವ ಶುಭಕಾರ್ಯಗಳು, ಉತ್ಸವ, ಮುಂತಾದ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ಆರತಿ ಒಟ್ಟವುಗಳನ್ನು ಕಳಸನ್ನು ಅಡ್ಡುಣಿಗೆಯ ಮೇಲೆ ಇಡುತ್ತಿದ್ದರು. ಇದರಿಂದ ಆರತಿ ಒಟ್ಟವನ್ನು ಬೇಗನೆ ಎತ್ತಿಕೊಳ್ಳಲು, ಇಡಲು ಅನುಕೂಲವಾಗುತ್ತದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಹಿಂದಿನಿಂದ ಹಿರಿಯರಿಂದ ಬಂದ ಸಂಪ್ರದಾಯದಂತೆ ಅಡ್ಡಣಿಗೆಯ ಮೇಲೆ ಊಟದ ತಟ್ಟೆ ನೀರಿನ ತಂಬಿಗೆಯನ್ನು ಇಟ್ಟು ಊಟ ಮಾಡುತ್ತಿದ್ದರು. ಇದರಿಂದ ಊಟ ಮಾಡುವಾಗ ಹೆಚ್ಚು ಬಾಗದೆ, ನೇರವಾಗಿ ಕುಳಿತು ಊಟ ಮಾಡಲು ಅನುಕೂಲವಾಗುತ್ತಿತ್ತು. ಇದರಿಂದ ಕಾಲಿನ ಧೂಳು. ಹುಳ–ಹುಪ್ಪಡಿಗಳು ತಟ್ಟೆಯಲ್ಲಿ ಹಾರಿ ಬೀಳದಿರಲಿ ಎನ್ನುವ ಉದ್ದೇಶವು ಇತ್ತು.

ಜಾನಪದರ 'ಅಡ್ಡಣಿಗೆ' ಇಂದು ಆಧುನಿಕ ಶೈಲಿಯಲ್ಲಿ ಖುರ್ಚಿ, ಊಟದ ಮೇಜು, ರೂಪ ಪಡೆದಿವೆ ಎನ್ನಬಹುದು. ಮೂರು ಮತ್ತು ನಾಲ್ಕು ಕಾಲು ಇರುವ ಅಡ್ಡಣಿಗೆಯನ್ನು ಕಟ್ಟಿಗೆ, ಕಬ್ಬಿಣ, ಬೆಳ್ಳಿ, ಹಿತ್ತಾಳೆ, ಮುಂತಾದ ಲೋಹಗಳಲ್ಲಿ ರಚಿಸಲಾಗುತ್ತಿತ್ತು. ಅಡ್ಡಣಿಗೆಯ ಕಾಲುಗಳನ್ನು ನೇರವಾಗಿ ಇಲ್ಲವೇ ಬಾಗಿದ ಆಕಾರದಲ್ಲಿ ಅಲಂಕಾರಿಕವಾಗಿ ಆನೆ ಸೊಂಡಿಲು ಗಿಣಿಯ ಆಕಾರ, ಮುಂತಾದ ಆಕಾರಗಳಲ್ಲಿ ಕಲಾತ್ಮಕವಾಗಿ ರಚಿಸುತ್ತಿದ್ದರು.

ಕಟ್ಟಿಗೆಯಲ್ಲಿ ಹಲಸು, ಹೊನ್ನೆ, ಸಾಗವಾನಿ, ತೇಗ, ಮುಂತಾದ ಮರಗಳನ್ನು ಉಪಯೋಗಿಸಿ ಬಡಿಗರು ಅಡ್ಡಣಿಗೆಯನ್ನು ತಯಾರಿಸುತ್ತಿದ್ದರು. ಊಟಕ್ಕಾಗಿ ಉಪಯೋಗಿಸುವ ಅಡ್ಡಣಿಗೆ ಒಂದು ಅಡಿ ವ್ಯಾಸ, ಒಂದರಿಂದ ಒಂದುವರೆ ಅಡಿ ಎತ್ತರದಲ್ಲಿ ತಯಾರಿಸುತ್ತಿದ್ದರು. ಗಡಿಗೆ ಹೂಜಿಗಳನ್ನು ಇಡಲು ಒಂದರಿಂದ ಎರಡು ಅಡಿಗಳವರೆಗೆ ಕುಡಿಯುವ ನೀರಿನ



ಅಡ್ಡಣಿಗೆ

ಚಾವಿಗಳನ್ನು ಇಡಲು ಎರಡರಿಂದ ಎರಡುವರೆ ಅಡಿ ಎತ್ತರದ ವರೆಗೆ, ಒಂದರಿಂದ ಒಂದುವರೆ ಅಡಿ ವ್ಯಾಸದಲ್ಲಿ ಕಬ್ಬಿಣದಿಂದ ತಯಾರಿಸುತ್ತಿದ್ದರು. ಈ ಕಬ್ಬಿಣದ ಅಡ್ಡಣಿಗೆಯನ್ನು ಕಂಬಾರರು ರಚಿಸಿಕೊಡುತ್ತಿದ್ದರು.


ಬೆಳ್ಳಿ ಹಾಗೂ ಹಿತ್ತಾಳೆಯಲ್ಲಿ ಅಲಂಕಾರಿಕವಾಗಿ ನಕ್ಷೆಗಳಿಂದ ಕೂಡಿದ ಕಲಾತ್ಮಕ ಅಡ್ಡಣಿಗೆಯನ್ನು ವಿಶ್ವಕರ್ಮ ಪತ್ತಾರರು ತಯಾರಿಸಿ ಕೊಡುತ್ತಿದ್ದರು. ನೋಡಲು ಸಾಮಾನ್ಯ ವಸ್ತುವಾಗಿ ಕಂಡರೂ ತಮ್ಮ ಅನುಕೂಲಕ್ಕೆ ತಕ್ಕಂತೆ, ಅನೇಕ ರೀತಿಯ ಉಪಯೋಗಕ್ಕಾಗಿ ನಮ್ಮ ಜನಪದರು ಅಡ್ಡಣಿಗೆಯನ್ನು ಬಳಸಿಕೊಳ್ಳುತ್ತಿದ್ದರು. ಸೃಜನಶೀಲ ದೃಷ್ಟಿಯಿಂದ ನೋಡಿದಾಗಲೂ ಇದೊಂದು ಕಲಾತ್ಮಕ ಕಲಾಕೃತಿಯಾಗಿ ಕಾಣುತ್ತದೆ.

(ಪಿಬಿಜಿ)


ಅಣ್ಣರಾಯ ಹಂಗರಗಿ: ಕಲಾವಿದನಲ್ಲಿ ವೈಚಾರಿಕ ದೃಷ್ಟಿ ಎಷ್ಟು ಬೆಳೆಯುತ್ತದೆಯೊ ಅಷ್ಟು ಗಾಢವಾದ (ಉತ್ತಮವಾದ) ಕಲಾಕೃತಿಗಳನ್ನು ರಚಿಸುತ್ತಾನೆ. ಸಮಕಾಲಿನ ಕಲಾವಿದ ಯಾವ ಸಮಾಜದಲ್ಲಿ ಬದುಕುತ್ತಾನೊ ಆ ಸಮಾಜದ ವೈಚಾರಿಕ ಹಿನ್ನಲೆಯಲ್ಲಿ ಕಲಾಕೃತಿಗಳನ್ನು ರಚಿಸುತ್ತಾನೆ. ಹೀಗಾಗಿ ಕಲಾಕೃತಿಗಳು ಸಮಕಾಲಿನ ಪರಿಸರದ ಜೀವನವನ್ನು ಹೆಚ್ಚಾಗಿ ತಮ್ಮ ಕಲಾಕೃತಿಗಳಿಗೆ ಆಯ್ದುಕೊಳ್ಳುವ ಕಲಾವಿದ ಇವರು. ಸುತ್ತಲಿನ ಜನ ಸಾಮಾನ್ಯರ ಆಗುಹೋಗುಗಳನ್ನು, ಜೀವನ ಚೈತನ್ಯವನ್ನು ಜನಪದ ಸಂಸ್ಕೃತಿಯನ್ನು, ಸಾಮಾಜಿಕ ಕ್ರಿಯೆಯಲ್ಲಿ ನೈಜ ರೂಪದಲ್ಲಿ ಇಟ್ಟಿದ್ದಾರೆ. ಹೊರನೋಟದಲ್ಲಿ ವಾಸ್ತವಾದ ಚಿತ್ರಗಳೆನಿಸಿದರೂ ಆಂತರಿಕವಾಗಿ ಚಿಂತನೆ ಪಡೆದ ಕಲಾಕೃತಿಗಳಾಗಿವೆ.

ಇವರು ಮೂಲತಃ ಗುಲಬರ್ಗಾ ಜಿಲ್ಲೆಯ ಹೊರವಲಯದಲ್ಲಿರುವ ರಾಜಾಪೂರ ಬಡಾವಣೆಯಲ್ಲಿ 1977 ಸೆಪ್ಟೆಂಬರ್ 03ರಂದು ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರು. ತಂದೆ ಶಾಂತಮಲ್ಲಪ್ಪ ಹಂಗರಗಿಯವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ರಾಜಾಪೂರ ಬಡಾವಣೆಯಲ್ಲಿ ಬೆಳೆದ ಕಲಾವಿದ. ಇವರ ಮನೆಯ ಪಕ್ಕದಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ದಲ್ಲಿರುವ ಭಿತ್ತಿಚಿತ್ರಗಳು ಅವರನ್ನು ಆಕರ್ಷಿಸಿ ಪ್ರೌಢ ಶಿಕ್ಷಣದಲ್ಲಿ ದೊರೆತ ಚಿತ್ರಕಲಾ ಶಿಕ್ಷಣದ ಪರಿಣಾಮವಾಗಿ ಇವರು ತಮಗೆ ತಿಂಡಿಗೆ ಕೊಟ್ಟ ದುಡ್ಡಿನಲ್ಲಿ ಕಾಗದ, ಪೆನ್ಸಿಲ್ ಇತ್ಯಾದಿ ಸಾಮಗ್ರಿಗಳನ್ನು ಕೊಳ್ಳುತ್ತಿದ್ದರು. ಅವುಗಳನ್ನು ಬಳಸಿಕೊಂಡು ದೇವಸ್ಥಾನದಲ್ಲಿರುವ ಭಿತ್ತಿಚಿತ್ರಗಳನ್ನು ರಚಿಸುತ್ತಿದ್ದರು. ಹೀಗಾಗಿ ಚಿಕ್ಕಂದಿನಲ್ಲಿಯೇ ಸುಂದರವಾದ ರೇಖಾಚಿತ್ರಗಳು ಜೀವತಳೆದವು. ಮುಂದೆ ಪ್ರೌಢ ಶಿಕ್ಷಣ ಮುಗಿದ ಮೇಲೆ ಗುಲಬರ್ಗಾ ಶ್ರೀ ಶರಣಬಸವೇಶ್ವರ ಸಂಸ್ಥಾನದಲ್ಲಿ ವಾಣಿಜ್ಯ ಕಲೆಯಲ್ಲಿ ಪ್ರವೇಶ ಪಡೆದು, ಎರಡು ವರ್ಷ ವಾಣಿಜ್ಯ ಕಲೆಯಲ್ಲಿ ಅಭ್ಯಾಸ ಮುಗಿಸಿ ಇವರು ಲಲಿತಕಲೆಯಲ್ಲಿ ಇನ್ನೂ ಹೆಚ್ಚಿನ ಅಭ್ಯಾಸ ಮಾಡಲು ಗುಲಬರ್ಗಾದಲ್ಲಿರುವ ಎಂ. ಎಂ.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್‌ನಲ್ಲಿ ಬಿ.ಎಫ್.ಎ ಪೇಂಟಿಂಗ್ ವಿಷಯವನ್ನು ತೆಗೆದುಕೊಂಡು ಪ್ರವೇಶ ಪಡೆದರು.

ವಿದ್ಯಾರ್ಥಿ ದಿಸೆಯಲ್ಲಿಯೇ ಅನೇಕ ಕಲಾಕೃತಿಗಳ ರಚನೆ ಹಾಗೂ ಕಲಾ ಚಟುವಟಿಕೆಗಳಲ್ಲಿ ತೊಡಗಿ ಮುಂದೆ ಹೆಚ್ಚಿನ ವಿದ್ಯಾಭ್ಯಾಸದ ಸಲುವಾಗಿ ವಿಶ್ವಕವಿ ರವೀಂದ್ರನಾಥ ಟ್ಯಾಗೋರರವರು ಸ್ಥಾಪಿಸಿದ ದೇಶದ ಪ್ರಥಮ ಲಲಿತಕಲಾ ವಿಶ್ವಭಾರತಿ ವಿಶ್ವವಿದ್ಯಾಲಯ (ಶಾಂತಿನಿಕೇತನದಲ್ಲಿ) ಸ್ನಾತಕೋತ್ತರ ಪದವಿಗಾಗಿ ಗ್ರಾಫಿಕ್ ವಿಷಯವನ್ನು ತೆಗೆದುಕೊಂಡು ಪ್ರವೇಶ ಪಡೆದರು. ಅಲ್ಲಿರುವ ಅನೇಕ ಅಂತರಾಷ್ಟ್ರೀಯ ಮಟ್ಟದ ಕಲಾವಿದರ ನಡುವೆ ಬೆಳೆದ ಇವರು ಖ್ಯಾತ ಕಲಾವಿದ ಕೆ.ಜಿ. ಸುಬ್ರಮಣ್ಯಂ, ಜೋಗೇನ ಚೌದರಿ ಹೀಗೆ ಅನೇಕ ಖ್ಯಾತ ಕಲಾವಿದರ ಗರಡಿಯಲ್ಲಿ ದೃಶ್ಯಕಲೆಗಳ ಅನೇಕ ಸಮಕಾಲೀನ ವೈವಿಧ್ಯತೆಗಳು ಹತ್ತು ಹಲವು ತಂತ್ರಗಾರಿಕೆಗಳನ್ನು ಕಲಿತರು. ಕಲೆಯ ಅನೇಕ ತಂತ್ರಗಾರಿಕೆಗಳನ್ನು ಅಳವಡಿಸಿಕೊಂಡು ಕಲಾಕೃತಿಗಳನ್ನು ರಚಿಸಿ, ದೇಶದ ಹತ್ತು ಹಲವು ಕಡೆಗಳಲ್ಲಿ ಪ್ರದರ್ಶಿಸಿದರು. ಇವರ ಮೊಟ್ಟ ಮೊದಲನೆಯ ಪ್ರದರ್ಶನ ರಾಷ್ಟ್ರೀಯ ಕಲಾಮೇಳ ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿಯಲ್ಲಿ ಪ್ರದರ್ಶನಗೊಂಡಿತ್ತು.



1997 ನಂತರ ಅದೇ ಕೇಂದ್ರ ಲಲಿತಕಲಾ ಅಕಾಡೆಮಿಯ ಸಹಯೋಗದೊಂದಿಗೆ ದೆಹಲಿಯಲ್ಲಿ ಪ್ರದರ್ಶನ ನೀಡಿದರು. 1998ರಲ್ಲಿ 2000ರಲ್ಲಿ ಶಾಂತಿನಿಕೇತನದ ನಂದನ ಗ್ಯಾಲರಿ ಯಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಗೊಂಡವು. 2001ರಲ್ಲಿ



'ಮೇಡ್ ಫಾರ್ ಇಚ್ ಅದರ್' ಅಕ್ರೇಲಿಕ್ ಮಾಧ್ಯಮ

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಅಹಮ್ಮದಾಬಾದ, ಹೈದ್ರಾಬಾದ, ಬೆಂಗಳೂರು, ಚೆನ್ನೈ, ಪಾಂಡಿಚೇರಿ, ಚಂಡೀಗಡ್ ನಲ್ಲಿ ಹೀಗೆ ದೇಶದ ಅನೇಕ ಕಡೆಗಳಲ್ಲಿ ಪ್ರದರ್ಶನ ಮಾಡಿರುವುದರ ಜೊತೆಗೆ ಅಂತರಾಷ್ಟ್ರ ಮಟ್ಟದಲ್ಲಿಯೂ ಇವರ ಕಲಾಕೃತಿಗಳು ಪ್ರದರ್ಶನ ಕಂಡಿವೆ. Raveling Exhibition in comberwell Art college ನಿಂದ ಲಂಡನ್, ಆಸ್ಟ್ರೇಲಿಯಾ, ಜಪಾನ ಮತ್ತು ಭಾರತದಂತಹ ದೇಶದ ಜೊತೆಗೆ ಅನೇಕ ರಾಷ್ಟ್ರಗಳಲ್ಲಿ 2002ರಿಂದ ಪ್ರದರ್ಶನ ನೀಡಿದ್ದಾರೆ. ಹಾಗೂ ಅನೇಕ ಕಲಾ ಶಿಬಿರಗಳಲ್ಲಿಯೂ ಭಾಗವಹಿಸಿದ್ದಾರೆ. ಭಾರತೀಯ ಸಮಕಾಲೀನ ಕಲೆಯ ಪಂಕ್ತಿಗೆ ಸೇರಿಕೊಂಡ ಕಲಾವಿದರು ಕಲಾ ತಂತ್ರಗಾರಿಕೆಗಳನ್ನು ರಚನಾತ್ಮಕ ಗುಣಗಳನ್ನು ಅರಿತು ಕಲಾಕೃತಿಗಳ ರಚನೆಯಲ್ಲಿ ತೊಡಗುತ್ತಿರುವ ಇವರ ಕಲಾಕೃತಿಗಳು ಸಮಕಾಲೀನ ವಿಚಾರಗಳನ್ನೇ ಬಿಂಬಿಸುವ ಕಲಾಕೃತಿಗಳಾಗಿವೆ. ಹೀಗಾಗಿ ಇವರ ಸಮಕಾಲೀನ ವಿಚಾರದ ಕೃತಿಗಳಿಗೆ ಅನೇಕ ಪ್ರಶಸ್ತಿಗಳನ್ನು ಸಂದಿವೆ.

2010ರಲ್ಲಿ All India Fine Art and Craft Society ಪ್ರಶಸ್ತಿ, Annual Art Exhibition ಪ್ರಶಸ್ತಿ, ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಪಶ್ಚಿಮಬಂಗಾಳ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ರಾಜ್ಯೋತ್ಸವ ಪ್ರಶಸ್ತಿಗಳ ಜೊತೆಗೆ ಕೆ.ಕೆ. ಹೆಬ್ಬಾರ ಪ್ರಶಸ್ತಿ ಹೀಗೆ ಅನೇಕ ಹತ್ತು ಹಲವು ಪ್ರಶಸ್ತಿ ಪಡೆದಿರುವ ಕಲಾವಿದ. ತಮ್ಮ ಕಲಾ ಜೀವನವನ್ನು ಗುಲಬರ್ಗಾದಿಂದ ಪ್ರಾರಂಭಿಸಿ ಜೀವನದ ಪಯಣವನ್ನು ಮಾಡುವುದರ ಜೊತೆಗೆ ದೇಶದ ಮೂಲೆ ಮೂಲೆಗೂ ತಮ್ಮ ಕಲಾಕೃತಿಗಳ ಪ್ರದರ್ಶನ ಮಾಡುವುದರ ಜೊತೆಗೆ ಸದಾ ಸೃಜನಶೀಲತೆ, ಕ್ರಿಯಾಶೀಲತೆಯೇ ನನ್ನ ಉಸಿರು ಎನ್ನುವರು.

ಗುಲಬರ್ಗಾದ ಅನೇಕ ಕಲಾವಿದರು ಗುಲಬರ್ಗಾದಲ್ಲಿ ಶಿಕ್ಷಣ ಪಡೆದು ರಾಜ್ಯ ಮತ್ತು ರಾಷ್ಟ್ರ, ಅಂತರಾಷ್ಟ್ರ ಮಟ್ಟದಲ್ಲಿ ವಿವಿಧ ಮೂಲೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಅಂತಹವರ ಸಾಲಿಗೆ ಸೇರುವ ಕಲಾವಿದ. ಅಣ್ಣರಾಯರವರು ಪ್ರಸ್ತುತ ಸಂದರ್ಭದಲ್ಲಿ ಮುಂಬಯಿಯಲ್ಲಿ Freelance ಕಲಾವಿದರಾಗಿ ಜೀವನ ನಡೆಸುತ್ತಿರುವುದು ನಮ್ಮಗೆಲ್ಲ ಹೆಮ್ಮೆಯ ವಿಷಯ. (ಕೆಡಿ)

ಅಣ್ಣಪ್ಪ ಇ. ಚಿತ್ರಗಾರ: ಶಿಲ್ಪ ಕಲಾವಿದ. ಕೊಪ್ಪಳ ಜಿಲ್ಲೆ ಕಿನ್ನಾಳ ಇವರ ಮೂಲ ನೆಲೆ. ಫೆಬ್ರುವರಿ 15ರಂದು ಜನಿಸಿದರು. ಇವರ ವಿದ್ಯಾರ್ಹತೆ ಎ.ಎಂ.ಜೆ.ಡಿ (ಆರ್ಟ್ಸ್). ತಂದೆಯವರ ಪ್ರೇರಣೆಯೇ ಶಿಲ್ಪಕಲೆಗೆ ಸ್ಫೂರ್ತಿಯಾಯಿತು. ಕಿನ್ನಾಳ ಶೈಲಿಯಲ್ಲಿ ಮತ್ತು ಮಿಶ್ರ ಮಾಧ್ಯಮದಲ್ಲಿ ದಶಾವತಾರೆ, ದುರ್ಗಾ, ಮುರಗಿ, ಕಿನ್ನಾಳದ ಚಾಕಿ ಪ್ರಭಾವಳಿ, ಮತ್ತು ಹಂಪಿ ಪ್ರದೇಶದ ಬಹಳಷ್ಟು ನಿಸರ್ಗ ಚಿತ್ರಗಳು ಜೊತೆಗೆ ಜೋಗಮ್ಮ–ಲಕ್ಷ್ಮಿ–ವಿಷ್ಣು ಇತ್ಯಾದಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಇವರು ಹಲವಾರು ಕಡೆ ಕಲಾಪ್ರದರ್ಶನ ಮಾಡಿದ್ದಾರೆ. 2002ರಲ್ಲಿ ಅಖಿಲ ಭಾರತ 69ನೆಯ ಸಾಹಿತ್ಯ ಸಮ್ಮೇಳನ ತುಮಕೂರು, 2003ರಲ್ಲಿ ಚಿತ್ರಸಂತೆ ಮತ್ತು ವಿಜಯ ಕಲಾ ಮಂದಿರ ಗದಗ, 2004ರಲ್ಲಿ ರೋಟರಿ ಕ್ಲಬ್ ಹೊಸಪೇಟೆ, 2005ರಲ್ಲಿ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಸವ ಕಲ್ಯಾಣ, 2005ರಲ್ಲಿ ಚಿತ್ರಕಲಾ ಪರಿಷತ್, 2006ರಲ್ಲಿ ಹಂಪಿ ಉತ್ಸವದಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಗೊಂಡಿವೆ.

ಇದಲ್ಲದೇ ಬೆಂಗಳೂರು, ಹಂಪಿ, ಮೈಸೂರು, ಇನ್ನಿತರ ಅನೇಕಕಡೆಗಳಲ್ಲಿ ಈ ಕಲಾವಿದ ಚಿತ್ರಗಾರಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. 2006–07ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ದೊರೆತಿದೆ. 2005ರಲ್ಲಿ ಲಲಿತ ನಾಟ್ಯಸಂಘ ಕಿನ್ನಾಳ ಇವರಿಂದ ಸನ್ಮಾನಿತರಾಗಿದ್ದಾರೆ.

(ಬಿಕೆಎಲ್)

ಅಣ್ಣಪ್ಪ ಮಲ್ಲಿಕಾಜಪ್ಪ ಹಡಲಗಿ: ದೊಡ್ಡಾಟದ ಕಲಾವಿದ. ದೈತ್ಯ ಇವರ ಅಟ್ಟವನ್ನು ಪ್ರವೇಶಿಸುವ ಸನ್ನಿವೇಶ ಪ್ರೇಕ್ಷಕರಲ್ಲಿ ಮೈ ನವರೇಳಿಸುವಂತಿರುತ್ತದೆ. ದೊಡ್ಡಾಟದ ಕುಣಿತದ ಹೆಜ್ಜೆಗಳಾದ ಕತ್ತರಿಕುಣಿತ, ಅಟ್ಟಹೆಜ್ಜೆಯಕುಣಿತ, ಹಿಮ್ಮಡಕುಣಿತ, ಕತ್ತು ಕುಣಿತ ಹೀಗೆ ದೊಡ್ಡಾಟ ಕುಣಿತಗಳ ಹೆಸರನ್ನು ಹೇಳುತ್ತ ಒಂದೊಂದು ಕುಣಿತಗಳನ್ನುಮಾಡಬಲ್ಲರು.

ಇವರು ಗುಲಬರ್ಗಾ ಜಿಲ್ಲೆ ಅಫಜಲಪುರ ತಾಲ್ಲೂಕಿನ ಮಾಶ್ಯಾಳ ಗ್ರಾಮದವರು. ಈ ಗ್ರಾಮದ ಕರ್ನಾಟಕದ ದೊಡ್ಡಾಟ ಸಂಘದ ಸದಸ್ಯರಾಗಿ ಶಿವಲಿಂಗಯ್ಯನವರ ನೇತೃತ್ವದಲ್ಲಿ ರಾಜ್ಯದಾದ್ಯಂತ ನೂರಾರು ಕಾರ್ಯಕ್ರಮ ನೀಡಿದ ಪ್ರಖ್ಯಾತರು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ದೊಡ್ಡಾಟಕ್ಕೆ ಕಾಲಿರಿಸಿದವರು ಹಿಮ್ಮೇಳ, ಮುಮ್ಮೇಳ, ತಾಳ–ಮದ್ದಳೆ ಗತ್ತಿಗೆ ಅನುಗುಣವಾಗಿ ಕುಣಿಯುವ ಗತ್ತು ಇವರ ಅನುಭವ ಮತ್ತು ಪರಿಣತಿಗಳು ಹಾಗೂ ಕಲೆಯ ಸಮೃದ್ಧತೆಯನ್ನು ಎತ್ತಿ ತೋರಿಸುತ್ತವೆ.

ದೈತ್ಯ ಪಾತ್ರವಲ್ಲದೆ ಸ್ತ್ರೀ ವೇಷ ಮಾಡಿದ್ದು ಉಂಟು. ಸ್ತ್ರೀ ವೇಷದ ಪೋಷಾಕು ಹಾಕಿಕೊಂಡು ಕಾಲ ಗೆಜ್ಜೆಯ ನಾದ ನುಡಿಸುತ್ತ ಲಯಬದ್ಧವಾಗಿ ಸೊಂಟದ ಮೇಲೆ ಕೈಯಿರಿಸಿ ಕುಣಿಯಲಾರಂಭಿಸಿದರೆ ಇವರನ್ನು ಗುರುತಿಸಲಾಗುವುದಿಲ್ಲ. ದೊಡ್ಡಾಟ ಕಲೆಯನ್ನು ಬೆಳೆಸಿ ಉಳಿಸುವ ಹಂಬಲದಿಂದ ಊರೂರು ತಿರುಗಿ ಹಳ್ಳಿ ಹಳ್ಳಿಗಳಲ್ಲಿ ಸಂಘಟಿಸಿ ದೊಡ್ಡಾಟದ ಪ್ರದರ್ಶನವನ್ನು ಕಳೆದ 25 ವರ್ಷಗಳಿಂದ ನಡೆಸಿದ್ದಾರೆ. ಶ್ರೀಕೃಷ್ಣ ಗಾರುಡಿ, ಕರ್ಣಪರ್ವ, ಕುರುಕ್ಷೇತ್ರ, ಐರಾವಣ–ಮೈರಾವಣ ಮೊದಲಾದ ದೊಡ್ಡಾಟ ಪ್ರಸಂಗಗಳು ಇವರಿಗೆ ಜನಪ್ರಿಯತೆ ತಂದು ಕೊಟ್ಟಿವೆ.

ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದಮೇಳ, ಜಾನಪದಜಾತ್ರೆ, ಸೊಲ್ಲಾಪುರದ ಗಡಿನಾಡು ಕನ್ನಡ ಜಾಗೃತಿ ಸಮಾವೇಶಗಳಲ್ಲಿ ಪಾಲ್ಗೊಂಡಿದ್ದಾರೆ. ಮಹಾರಾಷ್ಟ್ರದ ಬಹುಭಾಗಗಳಲ್ಲಿ ಕಾರ್ಯಕ್ರಮ ನೀಡಿ ಪ್ರಖ್ಯಾತರಾಗಿದ್ದಾರೆ. ಯುವಜನಮೇಳ, ಸಾಹಿತ್ಯ ಸಮ್ಮೇಳಗಳಲ್ಲಿ ಅಹ್ವಾನಿತ ಕಲಾವಿದರಾಗಿ ದೊಡ್ಡಾಟದ ಪ್ರದರ್ಶಿಸಿದ್ದಾರೆ. (ಜಿಕೆ)

ಅಣ್ಣಪ್ಪ ಮಾಸ್ತರ ಕಲಶೆಟ್ಟಿ:



ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಚಿಂಚೋಳಿಯಲ್ಲಿ 1940 ಜುಲೈ 31ರಂದು ಜನಿಸಿದರು. ತಂದೆ ಶಿವಪ್ಪ. ತಾಯಿ ಶಿವಲಿಂಗಮ್ಮ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಭಜನೆ, ಕೀರ್ತನೆ, ಧಾರ್ಮಿಕ ಸಭೆ ಇತ್ಯಾದಿ ಶೈಲಿಯಲ್ಲಿ ಪರಿಣಿತರು. ಉತ್ತರ ಭಾರತದ ಮಥುರಾದ ವಿದ್ವಾನ ಶಂಕರರಾವ ಭರ್ವೆ, ಹತ್ತಿರ ತಬಲಾವಾದನ, ಶಿವಯೋಗಿ ವಿರುಪಾಕ್ಷಯ್ಯ ತಾತನವರು ಐನೋಲಿಯವರಲ್ಲಿ ಹಾರ್ಮೋನಿಯಂ ಹಾಗೂ ವೀರಣ್ಣಾ ಕುಂಬಾರ ಅವರಲ್ಲಿ ನಾಟಕ ನಿರ್ದೇಶನದ ತಂತ್ರಗಳನ್ನು ಕುರಿತು ಅಭ್ಯಾಸ ಮಾಡಿದವರಾಗಿದ್ದಾರೆ.

ಇವರು ತಾಲ್ಲೂಕಿನಲ್ಲಿ ನಡೆಯುವ ದೊಡ್ಡಾಟ, ಭಜನೆ, ನಾಟಕ, ಮೊದಲಾದ ಕಾರ್ಯಕ್ರಮಗಳಲ್ಲಿ ಹಾರ್ಮೋನಿಯಂ, ತಬಲಾ ಬಾರಿಸುತ್ತಾ ನಿರ್ದೇಶನ ಮಾಡಿದ ಕೀರ್ತಿ ಅವರಿಗಿದೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಹಲವು ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ರಾಮಯ್ಯಸ್ವಾಮಿಯವರ ಅಧ್ಯಕ್ಷತೆಯಲ್ಲಿ 'ಶ್ರೀ ಗಾನಯೋಗಿ ಪಂಚಾಕ್ಷರಿ ತಾಲ್ಲೂಕ ಸಂಗೀತ ಕಲಾ ಸಂಘವನ್ನು ಸ್ಥಾಪಿಸಿ ಉಪಾಧ್ಯಕ್ಷರಾಗಿಯೂ ಹಾರಕೂಡ ಮಠದ, ಮಹಾಂತೇಶ್ವರ ಮಠ, ಕಮರಿಮಠಗಳಲ್ಲಿ ಭಜನ ಮತ್ತು ಸಂಗೀತಕ್ಕೆ ಚಾಲನೆ ನೀಡಿದ ಕೀರ್ತಿ ಅವರಿಗಿದೆ. ಹೀಗೆ ಸಂಗೀತ ಕ್ಷೇತ್ರಕ್ಕೆ ನೀಡಿದ ಸಾಧನೆಯನ್ನು ಪರಿಗಣಿಸಿದ ರಾಜ್ಯದ ಹಲವು ಸಂಘ–ಸಂಸ್ಥೆಗಳು ಪ್ರಶಸ್ತಿ–ಪುರಸ್ಕಾರಗಳು ನೀಡಿ ಗೌರವಿಸಿವೆ.

(ಆಯ್‌ಕೆ)

ಅನಂತ ಚಿಂಚನಸೂರ:



ಚಿತ್ರಕಲೆ–ಪೇಂಟಿಂಗ್, ನೃತ್ಯ, ಕೈತೋಟ ಅಲಂಕರಣ, ಪುಷ್ಪಾಲಂಕಾರ, ರಂಗೋಲಿ, ಕರಕುಶಲ ತಯಾರಿಕೆ ಇವೆಲ್ಲವುಗಳಲ್ಲಿ ಪರಿಣಿತರಾಗಿರುವ ಕಲಾವಿದ.

ಈ ಯುವ ಕಲಾವಿದ ಓದಿದ್ದು ಬಿ.ಕಾಂ. ಮತ್ತು ಕಾನೂನು ಪದವಿ. ಕಲಬುರ್ಗಿಯ ಜಲಸಂಪನ್ಮೂಲ ಇಲಾಖೆಯ ಯೋಜನಾ ವಲಯದಲ್ಲಿ ವೃತ್ತಿ. ತಾಯಿ ನರ್ಮದಾ ಮತ್ತು ಅವರ ಅಜ್ಜನವರಿಂದ ಚಿತ್ರಕಲೆ–ರಂಗೋಲಿ ಕಲಿಕೆಗೆ ಪ್ರೋತ್ಸಾಹ. ವೈವಿಧ್ಯ ಹೊಸ ಮಾದರಿಯ ರಂಗೋಲಿ ಕಲೆಯನ್ನು ತಾಯಿಯಿಂದ ಕಲಿತು ಕರಗತ ಮಾಡಿಕೊಂಡಿದ್ದರು, ಕೈತೋಟ ಬೆಳೆಸುವಲ್ಲಿ ಅನುಭವ ಪಡೆದಿರುವ ಇವರು, ತೋಟಗಾರಿಕೆ ಇಲಾಖೆ ಏರ್ಪಡಿಸುವ ಫಲ–ಪುಷ್ಪ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಕಾಲಿಗೆ ಗೆಜ್ಜೆಕಟ್ಟಿ ಕುಣಿವ ನೃತ್ಯವನ್ನು ಕಲಬುರ್ಗಿ ಭಾಗದಲ್ಲಿ ಗಂಡಸರು ಅಥವಾ ಹೆಂಗಸರು ನೃತ್ಯ ಮಾಡುವ ಪದ್ಧತಿಯೇ ಇರಲಿಲ್ಲ. ಇಂಥ ಸಂದರ್ಭದಲ್ಲಿ ಅನಂತ ಅವರಿಗೆ ಶಾಸ್ತ್ರೀಯವಾಗಿ ನೃತ್ಯ ಕಲಿಸುವ ಶಾಲೆಯಾಗಲಿ, ಗುರುವಾಗಲಿ ಇಲ್ಲಿ ಯಾರೂ ದೊರೆಯಲಿಲ್ಲ. ಇವರು ನೃತ್ಯ ಕಲಿಯುವ ಏಕ ಮಾತ್ರ ಉದ್ದೇಶದಿಂದ ತಮ್ಮ ಸೇವೆಯನ್ನು, ದೂರದ ಬೆಂಗಳೂರಿಗೆ ವರ್ಗ ಮಾಡಿಸಿಕೊಂಡು, ಗುರುವನ್ನು ಅರಸಿ ಹೋದರು. 2002ರಲ್ಲಿ ಶಾಂತಲಾ ಪ್ರಶಸ್ತಿ ವಿಜೇತೆ ಹಾಗೂ ಕರ್ನಾಟಕ ಕಲಾತಿಲಕ ಬಿರುದಾಂಕಿತೆ ನರ್ಮದಾ ಅವರಲ್ಲಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ, ಶಿಷ್ಯತ್ವ ಪಡೆದರು. ಅನಂತರ ಅವರಲ್ಲಿ ತಂಜಾವೂರ ಶೈಲಿಯ ನೃತ್ಯ ಶಿಷ್ಯರಾಗಿ 5 ವರ್ಷಗಳ ಕಾಲ ಸತತ ನೃತ್ಯಾಭ್ಯಾಸ ಮಾಡಿ, ಸೀನಿಯರ್ ಮತ್ತು ಜೂನಿಯರ ನೃತ್ಯಕಲೆ ಹಾಗೂ ವಿದ್ವತ್ ವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಕಥಕ್ ಶೈಲಿ ನೃತ್ಯವನ್ನು ಬೆಂಗಳೂರಿನ ಖ್ಯಾತ ಕಲಾವಿದೆ ಮಾಯಾರಾವ ಮತ್ತು ಚಿತ್ರಾ ವೇಣುಗೋಪಾಲ ಅವರಲ್ಲಿ ಪಡೆದರು. ಇಷ್ಟಕ್ಕೆ ತೃಪ್ತರಾಗದ ಇವರು ಹೈದ್ರಾಬಾದಿನ ಹೆಸರಾಂತ ಗುರು ಗೋಪಾಲ ಅವರಲ್ಲಿಯೂ ನೃತ್ಯಾಭ್ಯಾಸ ಮಾಡಿದರು. ಅನಂತರ ಇವರು ಅನೇಕ ಕಡೆ ತಮ್ಮ ಕಾರ್ಯಕ್ರಮಗಳನ್ನು ನೀಡಿ, ಮೆಚ್ಚುಗೆ ಗಳಿಸಿದರು. ಇವರ ಕಲೆಗಾರಿಕೆಯನ್ನು ಗೌರವಿಸಿದ ಅನೇಕ ಸಂಘ–ಸಂಸ್ಥೆಗಳಿವೆ. 1. ಆಲ್ ಇಂಡಿಯಾ ಸಿವಿಲ್ ಸರ್ವೀಸ್ ದೆಹಲಿ ಮ್ಯುಜಿಕಲ್ ಮತ್ತು ಡ್ಯಾನ್ಸ್ ಸ್ಪರ್ಧೆಯಲ್ಲಿ ಭರತ ನಾಟ್ಯದಲ್ಲಿ ಪ್ರಥಮ ಹಾಗೂ ಕಥಕ್ ಶೈಲಿಯಲ್ಲಿ ದ್ವಿತೀಯ ಸ್ಥಾನ ಗಳಿಸಿದರು. 2. ಅಖಿಲ ಭಾರತ ಸಂಗೀತ ಮತ್ತು ನೃತ್ಯ ಸ್ಪರ್ಧೆ ಭೂಪಾಲದಲ್ಲಿ ಭರತ ನಾಟ್ಯದಲ್ಲಿ ಕಥಕನಲ್ಲಿ ದ್ವಿತೀಯ ಸ್ಥಾನ. 3. ಕರ್ನಾಟಕ ರಾಜ್ಯದ ಸರ್ಕಾರಿ ನೌಕರರಿಗಾಗಿ ಈ 2002ರ ಹಾಸನದಲ್ಲಿ ಆಯೋಜಿಸಿದ ಸ್ಪರ್ಧೆಯಲ್ಲಿ ವಿವಿಧ ನೃತ್ಯ ಶೈಲಿಯಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ.

ಇವರು ತಮ್ಮಲ್ಲಿರುವ ಈ ಅನರ್ಘ್ಯ ಕಲೆಯನ್ನು ಉಳಿಸಿ ಬೆಳೆಸಲು 'ವರ್ಣಸಿಂಧು' ನಾಟ್ಯ ಶಾಲೆಯನ್ನು ಹುಟ್ಟು ಹಾಕಿದ್ದಾರೆ (1995). ಈ ಶಾಲೆಯಲ್ಲಿ ಅನೇಕ ಶಿಷ್ಯರು ಆಸೆಯಿಂದ ಕಲಿಯುತ್ತಿದ್ದಾರೆ. ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ನೃತ್ಯ ಕಲೆಯಲ್ಲಿ ಶಾಸ್ತ್ರೀಯವಾಗಿ ನೃತ್ಯ ಕಲೆಗಾರಿಕೆಯ ಸ್ಥಾನವನ್ನು ಗುರುತಿಸಿಕೊಳ್ಳುವಾಸೆ ಇವರದು. ಈ ಭಾಗದ ಅನೇಕರು ಇವರಲ್ಲಿ ನೃತ್ಯಾಭ್ಯಾಸ ಮಾಡಿ ಕೀರ್ತಿಶಿಖರ ತಲಪಿದ್ದಾರೆ.

ನಮ್ಮ 'ವರ್ಣಸಿಂಧು'ವಿನಲ್ಲಿ 1. ಜಯ ಜಯ ಕೃಷ್ಣ 2. ದಶಾವತಾರ 3. ಋತುಗಾನ, 4. ಪಂಚಭೂತಗಳು 5. ದಶದಿಕ್ಪಾಲಕ ಸ್ತುತಿ, 6. ನೃತ್ಯೋಪಹಾರ, 7. ದೇವಾಲಯ ನೃತ್ಯ ಇವು ತಮ್ಮ ನಾಟ್ಯಾಲಯದಿಂದ ರೂಪಕಗಳನ್ನು ಸಂಯೋಜಿಸಿ, ಪ್ರದರ್ಶಿಸಿ ಜನ ಮೆಚ್ಚುಗೆ ಗಳಿಸಿದ್ದಾರೆ. (ಎಂಎನ್‌ಜಿ)

ಅನಂತ ಹರಸೂರ: ಸಂಗೀತಕಾರ, ನಾಟಕಕಾರ, ನಿರ್ದೇಶಕ, ಇವರ ಮೂಲ ವೃತ್ತಿ ಕರ ಸಲಹೆಗಾರರು. ಇವರು ಓದಿದ್ದು ಬೆಳೆದಿದ್ದು ಹೈದ್ರಾಬಾದಿನಲ್ಲಿ. ಚಿಕ್ಕವರಾಗಿದ್ದಾಗಿನಿಂದಲೇ ಇವರ ತಂದೆಯವರು ಹಾಡುವಾಗ, ಅವರೊಂದಿಗೆ ಹಾಡುತ್ತಿದ್ದರಂತೆ. ಅದರಿಂದಾಗಿ ಇವರು ಒಳ್ಳೇ ರಾಗ ಸಂಯೋಜಕರಾಗಿ ಹೊರಹೊಮ್ಮಿದ್ದಾರೆ. ಹಾಡುಗಳನ್ನು ಹಾಡುತ್ತಾರೆ. ಹಿರಿಕಿರಿಯ ಗೆಳೆಯರನ್ನು ಸೇರಿಸಿ, ಅವರಿಂದ ಹಾಡಿಸುತ್ತಾರೆ. ಎಂಥಾ ಕವನ ಗಳಿದ್ದರೂ ಅದಕ್ಕೆ ಭಾವ ತುಂಬಿ ಅರ್ಥವತ್ತಾಗಿ ರಾಗ ಸಂಯೋಜಿಸುತ್ತಾರೆ.

ಬಾಲಕರಾಗಿದ್ದಾಗಿನಿಂದ ಆಕಾಶವಾಣಿಯ ಸುಗಮ ಸಂಗೀತ ಕಾರ್ಯಕ್ರಮಗಳಲ್ಲಿ ಭಾವಗೀತೆಗಳನ್ನು ಹಾಡುತ್ತ ಬಂದಿದ್ದಾರೆ. ಅನೇಕ ಹೊಸ ಕಲಾವಿದರನ್ನು ಸಂಗೀತ ಹಾಗೂ ನಾಟಕ ಕ್ಷೇತ್ರಕ್ಕೆ ಪರಿಚಯಿಸಿದ ಕೀರ್ತಿ ಇವರದು. ಇವರ ಸಂಗೀತ ಸಂಯೋಜನೆಯನ್ನು ಮೆಚ್ಚಿ ನಾಡಿನ ಹೆಸರಾಂತ ಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ ಇವರನ್ನು ಪ್ರಶಂಸಿದ್ದಾರೆ.



ಇವರ ನೇತೃತ್ವದಲ್ಲಿ 'ಅನಂತರಂಗ' ಸಮೂಹವು ಮೈಸೂರ ದಸರಾ ಸಮ್ಮೇಳನದಲ್ಲಿ ಕನ್ನಡ ಕವ್ವಾಲಿ ಕಾರ್ಯಕ್ರಮ ನೀಡಿ, ಜನರ ಗಮನ ಸೆಳೆಯಿತು. ಕಲಬುರ್ಗಿಯ ರಂಗಮಾಧ್ಯಮದ ಹಿರಿಯ ಸದಸ್ಯರಾದ ಇವರು ಅನೇಕ ನಾಟಕಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಇವರ ರಂಗಭಾರತಿ ತಂಡದವರು ರಂಗದ ಮೇಲೆ ತಂದಿದ್ದ ಶೆಟವಿ ಹಾಗೂ ತಾಯಿ ನಾಟಕಕ್ಕೆ ನೀಡಿದ ರಾಗ ಸಂಯೋಜನೆಯನ್ನು ಅನೇಕರು ಮರೆತಿಲ್ಲ. ಅದಲ್ಲದೆ ರಂಗಮಾಧ್ಯಮದವರು ಪ್ರದರ್ಶಿಸಿರುವ ಸಮುದ್ರ ಮಂಥನ, ಪೋಸ್ಟ್ ಆಫೀಸ್ ಮತ್ತು ನೆಳಲಿಪ್ರಸಂಗ ಎಂಬ ನಾಟಕಗಳಿಗೆ ಸಂಗೀತ ಸಂಯೋಜಿಸಿ ಅವುಗಳಲ್ಲಿ ಪಾತ್ರವನ್ನೂ ನಿರ್ವಹಿಸಿದರು.

ಬಸವರಾಜ ಸಬರದ ಅವರ ಹುಲಿಗೆಮ್ಮನ ಮಹಿಮೆ ಮತ್ತು ರಂಗಭಾರತಿಯ ಓಕುಳಿ ಎಂಬ ರೇಡಿಯೋ ನಾಟಕಗಳಲ್ಲಿ ಪಾತ್ರ ಹಾಗೂ ಸಂಗೀತವನ್ನೂ ನೀಡಿದರು. ದೂರದರ್ಶನದ ಭಾವೈಕ್ಯ ಗೀತೆಗಳು ಮತ್ತು ಗೀತಚಿತ್ರಗಳು ಎಂಬ ಕಾರ್ಯಕ್ರಮಕ್ಕೆ ಇವರೇ ಸಂಗೀತ ಸಂಯೋಜಿಸಿ ಸಂಗೀತ ಪ್ರೇಮಿಗಳ ಗಮನ ಸೆಳೆದರು. ಇವರ ಸಂಗೀತ ನಿರ್ದೇಶನದಲ್ಲಿ ಅನೇಕ ನಾಟಕಗಳು, ಆಕಾಶವಾಣಿ ಹಾಗೂ ದೂರದರ್ಶನದಂತಹ ಮಾಧ್ಯಮಗಳಲ್ಲಿ ಪ್ರಸಾರಗೊಂಡಿವೆ. ಇವರು ಸಂಗಮೇಶ್ವರ ಮಹಿಳಾ ಮಂಡಳಿಯವರು ಆಡಿದ ಕಾಡುಕುದುರೆ ನಾಟಕಕ್ಕೆ ಸಂಗೀತ ನೀಡಿದರು. ಆ ನಾಟಕ ಅನೇಕ ಪ್ರಯೋಗಗಳನ್ನು ಕಂಡಿದ್ದಲ್ಲದೆ, ರಾಜ್ಯದ ಒಳಗೆ ಹಾಗೂ ಹೊರ ರಾಜ್ಯಗಳ ಪ್ರದರ್ಶನ ಕಂಡಿದೆ. ಸಂಗೀತದ ಕಡೆ ಒಲವು ಅಪಾರ ಇದ್ದರೂ ನಟರಾಗಿ ಮರೆದಿದ್ದಾರೆ. ಕಿರುಪರದೆಯ (ದೂರದರ್ಶನ) ಮೇಲೂ ಮಿಂಚಿದ್ದಾರೆ.

ಖ್ಯಾತ ನಿರ್ದೇಶಕ ಶಂಕರನಾಗ್ ಅವರ ನಿರ್ದೇಶನದಲ್ಲಿ ಮೂಡಿಬಂದ ಆರ್.ಕೆ. ನಾರಾಯಣರವರ 'ಮಾಲ್ಗುಡಿ ಡೇಸ್' ನಲ್ಲಿ ಇವರು ಅತ್ಯಂತ ಪ್ರಮುಖ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿ ಸೈ ಎನಿಸಿಕೊಂಡರು. ಇವರನ್ನು ಅನೇಕರು ಆ ಪಾತ್ರದಿಂದಲೇ ಗುರುತಿಸುತ್ತಾರೆ. ಒಳ್ಳೆಯ ನಟರಾದ ಇವರು, ನಾಗಾಭರಣರ ತೆನಾಲಿ ರಾಮಕೃಷ್ಣದಲ್ಲೂ ಅಭಿನಯಿಸಿ, ಉತ್ತಮ ನಟರೆಂದು ಖ್ಯಾತಿ ಪಡೆದು ಕನಿಷ್ಠ 17ರಿಂದ 20 ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಮೂಲತಃ ರಂಗಭೂಮಿ ಕಲಾವಿದರಾದ

ಇವರು, ಸಿನಿಮಾದಲ್ಲೂ ಪಾತ್ರವಹಿಸಿ ಅಲ್ಲಿಯೂ ಸೈ ಎನಿಸಿಕೊಂಡರು. 4 ಚಲನಚಿತ್ರಗಳಲ್ಲಿ ಪಾತ್ರವಹಿಸಿ, ಇನ್ನೂ ಅನೇಕ ಸಂದರ್ಭಗಳಲ್ಲಿ ವೃತ್ತಿಯ ಕೆಲಸದ ಒತ್ತಡದಿಂದಾಗಿ, ನಟಿಸಲು ಬೇಡಿಕೆ ಬಂದರೂ ನಿರಾಕರಿಸುವಂತಾಯಿತು.

ಸಂಗೀತ ಹಾಗೂ ನಾಟಕಗಳೇ ಅಲ್ಲದೆ ಹಾಸ್ಯ ಲೇಖಕರು ಆಗಿದ್ದಾರೆ. ಇವರ ಅನೇಕ ಹಾಸ್ಯ ಲೇಖನಗಳು ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅನೇಕ ರೇಡಿಯೋ ನಾಟಕಗಳನ್ನು ಏಕಾಂತ ನಾಟಕಗಳನ್ನು ರಚಿಸಿದ್ದಾರೆ.

ಕೆಲ ವರ್ಷಗಳ ಹಿಂದೆ ಕಲಬುರ್ಗಿ ಸೈನ್ಸ್ ಸೆಂಟರ್‌ನಲ್ಲಿ ಹ್ಯೂಮರ ಕ್ಲಬ್‌ನ್ನು ನಡೆಸುತ್ತಾ ಇದ್ದರು. ಹರಸೂರವರು ಹಾಸ್ಯ ಚಟಾಕಿಗಳನ್ನು ಸ್ವಾರಸ್ಯವಾಗಿ ಹಾರಿಸುವುದರಲ್ಲಿ ಪ್ರವೀಣರು.


(ಜಿಕೆ)

ಅನಿರುದ್ಧ ಕೆ. ಜೋಶಿ: ಚಿತ್ರಕಲಾವಿದ. ಮೂಲತಃ ಬೀದರ ಜಿಲ್ಲೆಯ ಹುಮನಾಬಾದನವರು. ಸಹೋದರರೆಲ್ಲ ಉನ್ನತ ವ್ಯಾಸಂಗಕ್ಕೆ ತೆರಳಿದರೆ, ಇವರ ಮನದಲ್ಲಿ ಕಲಾವಿದರಾಗುವ ಬಯಕೆ ಬೃಹದಾಕಾರವಾಗಿ ಬೆಳೆದು ನಿಂತಿತು. ಅಂತಹ ಸಂದರ್ಭದಲ್ಲಿ ಅವರಿಗೆ ಗೋಚರಿಸಿದ್ದೇ ಕಲಬುರ್ಗಿ ಕಲಾ ದೇಗುಲ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆ. ತಮ್ಮ ಸೃಜನಶೀಲ ವಿಚಾರಗಳಿಗೆ ಚಾಲನೆ ನೀಡಿದ ಇವರು ನಿರಂತರ ಕೃತಿಗಳನ್ನು ರಚಿಸುತ್ತ ಕಲಾಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



ಮೈಸೂರು ದಸರಾ ಪ್ರದರ್ಶನ, ಅಖಿಲ ಭಾರತ ಡ್ರಾಯಿಂಗ್ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಪ್ರದರ್ಶನ, ಹಂಪಿ ಉತ್ಸವ ಪ್ರದರ್ಶನ, ಗಡಿನಾಡ ಉತ್ಸವ ಪ್ರದರ್ಶನ ಬೀದರ, ಇಂತಹ ಅನೇಕ ಪ್ರದರ್ಶನಗಳಲ್ಲಿ ಜೋಶಿಯವರು ಪಾಲ್ಗೊಂಡಿದ್ದಾರೆ.

1983ರಲ್ಲಿ ಕಲಬುರ್ಗಿಯಲ್ಲಿ ನಡೆದ ಗ್ರಾಫಿಕ್ ಕ್ಯಾಂಪ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿದ್ದ ಕಲಾಶಿಬಿರ, 1998ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರನಲ್ಲಿ ಹಮ್ಮಿಕೊಂಡ ಶಿಬಿರ, 1998ರ 50ನೆಯ ಭಾರತ ಸ್ವತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಕಲಬುರ್ಗಿಯಲ್ಲಿ ಹಮ್ಮಿಕೊಂಡ



'ಶೀರ್ಷಿಕೆ ರಹಿತ' ತೈಲವರ್ಣ

ಕಲಾಶಿಬಿರ, 2005ರ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರಿನಲ್ಲಿ ಹಮ್ಮಿಕೊಂಡ ಕಲಾಶಿಬಿರ, ಸಾಹಿತ್ಯ ಸಮ್ಮೇಳನ ಬೀದರ ಕಲಾಶಿಬಿರ, ಕರ್ನಾಟಕ ಲಲಿತಕಲಾ ಅಕಾಡೆಮಿ ಉಡುಪಿಯಲ್ಲಿ ಹಮ್ಮಿಕೊಂಡ ಕಲಾಶಿಬಿರ ಹೀಗೆ ಅನೇಕ ಕಲಾ ಶಿಬಿರಗಳಲ್ಲಿ ಇವರು ಭಾಗ ವಹಿಸಿದ್ದಾರೆ. 1983ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ನೀಡುವ ವಿದ್ಯಾರ್ಥಿ ಪ್ರಶಸ್ತಿ, ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆ ಪ್ರಶಸ್ತಿ, 1985ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯ ನೀಡುವ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿವೆ. ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಹುಡಗಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಯನ್ನು ಮಾಡುತ್ತಿದ್ದಾರೆ.

ಕಲಬುರ್ಗಿಯ ಸ್ಥಳೀಯ ರಂಗ ಕಲಾವಿದರ ಜೊತೆ ಸೇರಿ ಅನೇಕ ನಾಟಕಗಳನ್ನು ಅಭಿನಯಿಸಿದ್ದಲ್ಲದೇ, ಆಕಾಶವಾಣಿಯ ಅನೇಕ ನಾಟಕಗಳಲ್ಲೂ ಅನಿರುದ್ಧ ಜೋಶಿ ಅವರು ಭಾಗ ವಹಿಸುವ ಮೂಲಕ ತಮ್ಮ ಬಹುಮುಖ ಪ್ರತಿಭೆಯನ್ನು ಮೆರೆದಿದ್ದಾರೆ.


(ಹೆಚ್‌ವಿಎಂ)

ಅಪ್ಪಾರಾವ ಶಿವಶಂಕರ ಪಾಟೀಲ: ಚಿತ್ರಕಲಾವಿದ. ಜನಿಸಿದ್ದು ಗುಲಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಭಂಕೂರ ಗ್ರಾಮದಲ್ಲಿ, ತಂದೆ ಶ್ರೀಮಂತ ಕೃಷಿಕ ಶಿವಶಂಕರಪ್ಪ ತಾಯಿ ತಾರಾದೇವಿ. 07.06. 1942ರಂದು ಜನಿಸಿದರು. ಶಹಾಬಾದಿನ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಹಾಗೂ ಗುಲಬರ್ಗಾದಲ್ಲಿ ಪ್ರೌಢ ಶಿಕ್ಷಣವನ್ನು ಪಡೆದರು. ಚಿತ್ರಕಲಾ ಶಿಕ್ಷಕ ವಿ.ಎಸ್. ಭಂಕೂರರ ಮಾರ್ಗದರ್ಶನದಲ್ಲಿ ಚಿತ್ರಕಲೆಯನ್ನು

ಅಭ್ಯಸಿಸಿದರು. ಸೋಲಾಪುರ ಕೇಂದ್ರದಿಂದ ಮಹಾರಾಷ್ಟ್ರದ ಎರಡೂ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ಪಾಸು ಮಾಡಿದರು. ಎಸ್.ಎಸ್.ಸಿ. ಅನಂತರ ತಂದೆ ಒತ್ತಾಯಕ್ಕೆ ಮಣಿದು ಒಲ್ಲದ ಮನಸ್ಸಿನಿಂದ ಇಂಜನಿಯರಿಂಗ್ ಕಾಲೇಜಿನಲ್ಲಿ ಒಂದು ವರ್ಷ ಕಲಿತು ಕೊನೆಗೆ ತಮ್ಮ ಅಭಿರುಚಿಯ ಚಿತ್ರಕಲಾ ವ್ಯಾಸಂಗಕ್ಕಾಗಿ ಮುಂಬೈಗೆ ತೆರಳಿದರು (1960). ವಿಶ್ವದ ಬಹು ಪ್ರತಿಷ್ಠಿತ ಸರ್ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಅಭ್ಯಸಿಸಿ ಜಿ.ಡಿ. ಫೈನ್ ಆರ್ಟ್ (1966) ಪದವಿ ಪಡೆದರು. ಕರ್ನಾಟಕದ ಆರ್ಟ್ ಮಾಸ್ಟರ್ ದ್ವಿತೀಯ ರ್‍ಯಾಂಕ್(1975) ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ. ಫೈನ್ಆರ್ಟ್ ದ್ವಿತೀಯ ರ್‍ಯಾಂಕ್(1987) ಪಡೆದು ಉನ್ನತ ಪದವಿಧರರಾದರು. ಮುಂಬೈ ಕಲಾಶಾಲೆಯಲ್ಲಿ ಇವರಿಗಿಂತ ಎರಡು ವರ್ಷ ಹಿರಿಯರಾದ ಗುಲಬರ್ಗಾದ ಜೆ.ಎಸ್. ಖಂಡೇರಾವ, ಉಡುಪಿಯ ಲಕ್ಷ್ಮಣ ಭಟ್, ಜಿ.ಎಸ್. ಶೆಣೈ, ಜಮಖಂಡಿಯ ವಿಜಯ ಸಿಂಧೂರ, ಕಾಸರಗೂಡಿನ ಪುಂಚಿತಾಯ ಇವರ ಒಡನಾಡಿಗಳು. ಎಲ್ಲರೂ ಸಿದ್ಧ ಪ್ರಸಿದ್ಧರು. ಕಲಾಗುರು ದಂಡಾವತಿಮಠ, ಸುಖಡವಾಲಾ, ಪಲಸಿಕರ, ಸೋಲಾಪುರಕರ, ಸಡವಿಲೆಕರ, ಕದಮ್‌ರಂಥವರು ಇವರಿಗೆ ಗುರುಗಳಾಗಿದ್ದರು.



ಇವರು ಪ್ರತಿಭೆಯನ್ನು, ಪಾಂಡಿತ್ಯವನ್ನು ಶಿಕ್ಷಣರಂಗಕ್ಕೆ ಮೀಸಲಾಗಿಡುವ ಸಂಕಲ್ಪದೊಂದಿಗೆ ಜೆ.ಎಸ್. ಖಂಡೇರಾವ ಅವರ ನೇತೃತ್ವದಲ್ಲಿ ದಿ ಐಡಿಯಲ್ ಫೈನ್ಆರ್ಟ್ ಸಂಸ್ಥೆಯನ್ನು ಗುಲಬರ್ಗಾದಲ್ಲಿ ಸ್ಥಾಪಿಸಿ ಅಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿದರು (1966–69). ಗುಲಬರ್ಗಾದ ಎಂ.ಆರ್. ಮೆಡಿಕಲ್ ಕಾಲೇಜಿನಲ್ಲಿ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸಿದರು (1969–77). ಶರಣಬಸಪ್ಪ ಅಪ್ಪಾ ಅವರ ಅಪೇಕ್ಷೆಯಂತೆ ಹೊಸದಾಗಿ ಸ್ಥಾಪಿಸಲಾದ ಗೋದುತಾಯಿ ಮಹಿಳಾ ಮಹಾವಿದ್ಯಾಲಯದಲ್ಲಿ 1977 ರಿಂದ 2000ದ ವರೆಗೆ ಚಿತ್ರಕಲಾ ಪ್ರಾಧ್ಯಾಪಕರಾಗಿ ಹಾಗೂ ಶರಣಬಸವೇಶ್ವರ ಮಹಾ ವಿದ್ಯಾಲಯದ ಸ್ನಾತಕೋತ್ತರ ಚಿತ್ರಕಲಾ ವಿಭಾಗದಲ್ಲಿ 1987 ರಿಂದ 95ರವರೆಗೆ ಗೌರವ ಪ್ರಾಧ್ಯಾಪಕರಾಗಿ ಜೆ.ಎಸ್. ಖಂಡೇರಾವ ಅವರ ಜೊತೆಗೂಡಿ ಸೇವೆಗೈದು ಗುಲಬರ್ಗಾದಲ್ಲಿ ಚಿತ್ರಕಲೆಗೆ ಭದ್ರಬುನಾದಿಯನ್ನು ಹಾಕಿದ್ದಾರೆ. ಅಧ್ಯಾಪಕ ವೃತ್ತಿಯಲ್ಲೇ ಅಹರ್ನಿಷಿ ದುಡಿದು ತಮ್ಮ ಬಹುಪಾಲು ಸಮಯವನ್ನು ವಿದ್ಯಾರ್ಥಿಗಳ ಜೊತೆಗೆ ವಿನಿಯೋಗಿಸಿದ್ದಾರೆ. ಬಿಡುವು ದೊರೆತಾಗಲೆಲ್ಲ ವರ್ಣಚಿತ್ರಗಳನ್ನು ರಚಿಸುತ್ತಾ ಸಂತಸ ಪಟ್ಟಿದ್ದಾರೆ.



ಅದಿತಿ (ಬಿಳಿ ಕಮಲ) ತೈಲವರ್ಣ

ಪಾಟೀಲರು ಮೂಲತಃ ಭಾವಚಿತ್ರ, ನಿಸರ್ಗಚಿತ್ರಗಳಲ್ಲಿ ಆಸಕ್ತಿಯುಳ್ಳವರು. ಅಂದಿನ ಹೆಚ್ಚಿನ ನಿಸರ್ಗಚಿತ್ರಗಳು ಜಲ ವರ್ಣಗಳಲ್ಲಿ ರಚಿತವಾಗಿದ್ದು ವಸ್ತುನಿಷ್ಠ ವಿವರಗಳಿಗೆ ಆದ್ಯತೆಯ ಬದಲಾಗಿ ಭವ್ಯತೆ, ರಮ್ಯತೆ, ತನ್ಮಯತೆ, ಭಾವ ತೀವ್ರತೆಗೆ ಹೆಚ್ಚಿನ ಗಮನ ಕೊಟ್ಟು ಚಿತ್ರಿತ ಭೂದೃಶ್ಯಗಳಿವು. ಮೆಡಿಕಲ್ ಕಾಲೇಜಿನಲ್ಲಿ ಕಲಾವಿದರಾಗಿ ಸೇವೆಯಲ್ಲಿದ್ದಾಗ ರಚನೆಗೊಂಡ 25 ವಿಜ್ಞಾನಿಗಳ ಭಾವಚಿತ್ರಗಳು ಎಲ್ಲವೂ ತೈಲವರ್ಣಗಳಲ್ಲಿ ಚಿತ್ರಿತವಾಗಿವೆ. ವಯೋಮಾನಕ್ಕನುಗುಣವಾಗಿ ಬಲವಾದ ಬೀಸುಗಳ ಶಕ್ತಿಯುತ ಮೈವಳಿಕೆಯ ದಟ್ಟ ವರ್ಣಗಳಲ್ಲಿ ಚಿತ್ರಿತ ಕಲಾಕೃತಿಗಳಿವೆ. ಈಗಲೂ ಇವು ಪ್ರದರ್ಶನಕ್ಕಿವೆ.

ಇಂದಿನ ಆಧುನಿಕ ಯುಗದ ಅಲ್ಟ್ರಾಮಾಡರ್ನ, ಸಮಕಾಲೀನ, ಅಮೂರ್ತ ಮುಂತಾದ ಪ್ರಯೋಗಾತ್ಮಕ ನವ್ಯಶೈಲಿಗಳಿಗೆ ಒಳಗಾಗದೆ ಇವರು ತಮ್ಮ Realistic ನೈಜ ಶೈಲಿಯ ಕಲಾಕೃತಿಗಳಲ್ಲೇ ತೃಪ್ತಿಕಂಡವರು. ಸ್ಪಷ್ಟ ಆಕೃತಿಗಳು, ಮನಮೋಹಕ ಮೃದುವರ್ಣಗಳ ವೈವಿಧ್ಯತೆ, ಹಿತಮಿತವಾದ ನೆಳಲು–ಬೆಳಕಿನಸಂಯೋಜನೆ, ವಯೋಮಾನಕ್ಕನುಗುಣವಾಗಿ ಮಾಗಿದ ದೃಷ್ಟಿಕೋನ, ಪರಿಪಕ್ವ ವಿಚಾರಧಾರೆ ಎಲ್ಲವೂ ಮೇಳೈಸಿ 'ಪುಷ್ಪ'ಗಳ ರೂಪದಲ್ಲಿ ಆಧ್ಯಾತ್ಮಿಕತೆಯ ಲೇಪನದೊಂದಿಗೆ ಅರಳಿ ನಿಂತಿವೆ. ಇದು ಇವರ ವೈಶಿಷ್ಟ್ಯವೆಂದು ಸಾರಿ ಹೇಳುತ್ತಿವೆ. ಎಲ್ಲ ಕಲಾಕೃತಿಗಳು ಶಾಂತಿ–ಸಮಾಧಾನ, ವಿನಯ, ಉತ್ಕಟ ಭಕ್ತಿ

ಭಾವದ ಪ್ರತಿಬಿಂಬಗಳಾಗಿ ನೋಡುಗನ ಹೃದಯದಾಳಕ್ಕಿಳಿದು ಸಂತೃಪ್ತಿಯನ್ನುಂಟು ಮಾಡುತ್ತವೆ. ಜೆ.ಜೆ. ಕಲಾಶಾಲೆಯ ಪರಿಪೂರ್ಣ ಶಿಕ್ಷಣದ ಪರಿಣಾಮ, ಅರವಿಂದಾಶ್ರಮದ ಆಧ್ಯಾತ್ಮಿಕ ವಿಚಾರಧಾರೆಯ ಪ್ರಭಾವ ಇವೆರಡೂ ಹಾಲು ಜೇನಿನಂತೆ ಮೇಳವಿಸಿ ಮನಸ್ಸಿಗೆ ಮುದ ನೀಡುತ್ತವೆ. ಯಾವ ವಿಕಾರಗಳಿಗೂ ಒಳಗಾಗದೆ ನೋಡುಗ ಕಲಾಕೃತಿಗಳಿಂದ ಹೊರಹೊಮ್ಮುವ ಉನ್ನತ ಭಾವದಲ್ಲಿಯೇ ತನ್ಮಯನಾಗುತ್ತಾನೆ.

ಇವರು ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ–(1991), ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಶಸ್ತಿ–(1992), ಶ್ರೀಮಠದ ಚಿನ್ನದ ಪದಕ ಸಹಿತ 'ದಾಸೋಹರತ್ನ' ಶಿಕ್ಷಕ ಪ್ರಶಸ್ತಿ–(1994) ಹೀಗೆ ಹಲವಾರು ಪ್ರಶಸ್ತಿಗಳಿಂದ ಸನ್ಮಾನಿತರಾಗಿದ್ದಾರೆ. 'ಕಲಾಪ್ರಗತಿ' ಎಂಬ ಕಲಾವಿದರ ಸಂಘಟನೆಯ ಅಧ್ಯಕ್ಷರಾಗಿ, 'ಚೇತನ ಯುಥ್ ಫೋರಂ'ನ ಕಲಾವಿಭಾಗದ ಮುಖ್ಯಸ್ಥರಾಗಿ, ಶ್ರೀ ಅರಬಿಂದೋ ಸೊಸಾಯಿಟಿ, ಗುಲಬರ್ಗಾ ಶಾಖೆಯ ಕಾರ್ಯದರ್ಶಿಯಾಗಿ ಹಾಗೂ ಇತಿಹಾಸ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು, ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಮುಂತಾದವುಗಳ ಅಜೀವ ಸದಸ್ಯರಾಗಿದ್ದಾರೆ. ನಾಡಿನ ಪ್ರಮುಖ ಕಲಾಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಇಂದಿಗೂ ಉಲ್ಲಾಸದಿಂದ ಕಾರ್ಯನಿರ್ವಹಿಸುತ್ತಾರೆ. ಪಾಟೀಲರು ಗುಲಬರ್ಗಾದ 'ಚೈತನ್ಯಮಯಿ' ಆರ್ಟ್‌ಗ್ಯಾಲರಿಯನ್ನು (ನೋಡಿ) ನಿರ್ಮಿಸಿ ಯುವಕಲಾವಿದರಿಗಾಗಿ ಚಿತ್ರಕಲಾ ಸ್ಪರ್ಧೆ, ಕಲಾಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಚರ್ಚೆ, ಸಂವಾದದಂಥ ನಾನಾ ಪ್ರಕಾರದ ಕಲಾಚಟುವಟಿಕೆಗಳನ್ನು ಹಮ್ಮಿಕೊಂಡು ಕಲ್ಯಾಣನಾಡಿನ ಯುವ ಕಲಾವಿದರಲ್ಲಿ ಸುಪ್ತವಾಗಿರುವ ಕಲಾಪ್ರತಿಭೆಯನ್ನು ಗುರುತಿಸಿ ಅವರನ್ನು ಬೆಳಕಿಗೆ ತರಲು ಅಂದಿನಿಂದ ಇಂದಿನವರೆಗೆ ಅಹರ್ನಿಷ ಪರಿಶ್ರಮ ಪಡುತ್ತಿದ್ದಾರೆ. (ಎಂಕೆ)

ಅಬ್ದುಲ್ ಖಾಜಿ: ಸುಮಧುರ ಬಾನ್ಸುರಿ (ಕೊಳಲು) ವಾದಕ. ಇವರು ತಮ್ಮ ಕ್ಷೇತ್ರದಲ್ಲಿ ಜನಪ್ರಿಯತೆ ಪಡೆದು ಅನೇಕ ಶಿಷ್ಯಂದಿರರನ್ನು ನೀಡಿದ್ದಾರೆ.

ತಂದೆ ಶೇಖಮಿರಾನ್. ಕುಲಸುಂಬಿ ಶೇಖಮಿರಾನ್ ತಾಯಿ. ರಾಯಚೂರು ಜಿಲ್ಲೆ ಸಿಂಧನೂರ ತಾಲ್ಲೂಕಿನ ಕಡರಗಿ ಗ್ರಾಮದವರು. ತಂದೆ ಸಿಂಧನೂರಿನಲ್ಲಿ ಶಿಕ್ಷಕರು. ಅಭ್ಯಾಸದಲ್ಲಿ ಚುರುಕಾಗಿದ್ದ ಇವರು ಸಿಂಧನೂರು ಸರಕಾರಿ ಪದವಿ ಕಾಲೇಜಿನಿಂದ ಬಿ.ಎ. ಪದವೀಧರರಾಗಿ, ಮೇಜರ ಕನ್ನಡ ವಿಷಯದಲ್ಲಿ ಸ್ನಾತಕ ಪದವಿಯನ್ನು ಉತ್ತಮ ಅಂಕಗಳೊಂದಿಗೆ ಪಡೆದರು.

ಇವರಿಗೆ ಬಾನ್ಸುರಿ ವಾದನದ ಆಸಕ್ತಿ ಮೂಡಿದ್ದು ಬಿ.ಎ. ಅಂತಿಮ ತರಗತಿಯಲ್ಲಿರುವಾಗ ಪಂ. ವಿ.ಎನ್. ಬದಿ ಎಂಬ ಬಾನ್ಸುರಿ ವಿದ್ವಾಂಸರ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಸಂಗೀತ ಕೇಳಲು ಆಗಮಿಸಿದ್ದ ಖಾಜಿಯವರ ಮೇಲೆ ಬದಿಯವರ ಕೊಳಲಿನ ರಾಗಾಲಾಪನೆಯು ಎಷ್ಟು ಮೋಡಿ ಮಾಡಿತ್ತೆಂದರೆ, ಮರುದಿನವೇ ಪಂ. ಬದಿಯವರ ಮನೆಗೆ ಹೋಗಿ ಸಂಗೀತ ಕಲಿಯುವ ತಮ್ಮ ಆಕಾಂಕ್ಷೆಯನ್ನು ವ್ಯಕ್ತಪಡಿಸಿದರು.

ಗುರುಗಳೂ ಕೂಡ ಮಾರ್ಗದರ್ಶನಕ್ಕೆ ಒಪ್ಪಿಕೊಂಡು, 1973–74ರಲ್ಲಿ ತಮ್ಮ ಬಾನ್ಸುರಿ ಶಿಕ್ಷಣ ಪ್ರಾರಂಭಿಸಿದರು. ತಂದೆ–ತಾಯಿಯವರಿಗೂ ಸಂಗೀತದ ಬಗ್ಗೆ ಅಪಾರ ಒಲವು ಇದ್ದುದ್ದರಿಂದ ಇವರ ಅಭ್ಯಾಸಕ್ಕೆ ಉತ್ತಮ ವಾತಾವರಣ ಲಭಿಸಿತು. ಪಂ. ವಿ.ಎನ್.ಬದಿಯವರು, ಖಾಜಿಯವರಿಗೆ ಕಿರಾಣಿ ಘರಾನೆಯ ಗಾಯನ ಅಂಗದ ಬಾನ್ಸುರಿ ವಿದ್ಯೆಯನ್ನು ಧಾರೆ ಎರೆಯಲು ಪ್ರಾರಂಭಿಸಿದರು.

ರಾಗ ಯಮನದಿಂದ ಪ್ರಾರಂಭವಾದ ಇವರ ವಿದ್ಯೆ, ಹಂಸಧ್ವನಿ, ಮಾಲಕಂಸ, ಪುರಿಯಾ, ಮುಲ್ತಾನಿ, ರಾಗೇಶ್ರೀ, ಪೂರವಿ, ಸೊಹನಿ, ಲಲತ, ಅಭೋಗಿ, ತೋಡಿ ಇನ್ನು ಅನೇಕ ರಾಗಗಳ ಜೊತೆಗೆ ಪಿಲು, ಕಾಫಿ, ಖಮಾಜ, ಭೈರವಿ ರಾಗಗಳಲ್ಲಿ ಧುನ್ ನುಡಿಸುವ ಚಾಣಾಕ್ಷತೆ ಕಲಿಸಿಕೊಟ್ಟರು. ಸುಮಾರು 10 ವರ್ಷಗಳ ಕಾಲ ಬದಿಯವರು ಖಾಜಿಯವರಿಗೆ ಬಾನ್ಸುರಿ ವಾದನ ವಿದ್ಯೆಯನ್ನು ಧಾರೆ ಎರೆದರು.

ಗುರುಗಳ ಸಮ್ಮುಖದಲ್ಲಿ ಇವರ ತಾಲೀಮು ರಾತ್ರಿ 10 ಗಂಟೆಯಿಂದ ಅಭ್ಯಾಸ ಪ್ರಾರಂಭಿಸಿದರೆ, ಬೆಳಗಿನ 2–3 ಗಂಟೆಗಳವರೆಗೂ ನೀಡುತ್ತಿದ್ದರು. ಸತತ ಅಭ್ಯಾಸದ ಫಲವಾಗಿ ಇಂದು ಉನ್ನತ ಮಟ್ಟದ ಕಲಾವಿದನಾಗಿ ರೂಪಗೊಳ್ಳಲು ಇವರಿಗೆ ಸಾಧ್ಯವಾಯಿತು.

ತಂದೆ–ತಾಯಿ ಕಳೆದುಕೊಂಡ ಬಳಿಕ ಇವರು ಕುಂದಗೋಳಕ್ಕೆ ಬಂದು ವಾಸ ಮಾಡಿದರು (1978). ಈ ಸಂದರ್ಭದಲ್ಲಿ ಕರ್ನಾಟಕದ ಖ್ಯಾತ ಸಂಗೀತ ವಿದೂಷಿ ಗಂಗೂಬಾಯಿ ಹಾನಗಲ್ ಅವರು, ಇವರಿಗೆ ಸಮಾಧಾನ ಹೇಳಿ ಸಂಗೀತದ ಅಭ್ಯಾಸವನ್ನು ಮುಂದುವರಿಸಲು ನೆರವಾದರು.

1978–79ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದಿಂದ ಶಾಸ್ತ್ರೀಯ ವಾದ್ಯಗಳ ಆಡಿಷನ್‌ದಲ್ಲಿ 'ಬಿ' ಗ್ರೇಡ್ ಪದವಿ

ಪಡೆದು, 10–15 ವರ್ಷಗಳ ಕಾಲ ಆಕಾಶವಾಣಿ ಕಲಾವಿದರಾಗಿ ಹಲವಾರು ಕಾರ್ಯಕ್ರಮಗಳನ್ನು ನೀಡಿದರು. ಕಲಬುರ್ಗಿ ಆಕಾಶವಾಣಿಗೆ ಬಾನ್ಸುರಿ ಕಲಾವಿದರೆಂದು ನೇಮಕವಾದರು (1991). ಅನಂತರ ಆಕಾಶವಾಣಿಯ 'ಬಿ' ಗ್ರೇಡ್ ಆಡಿಷನ್ ನಲ್ಲಿಯೂ ಉತ್ತೀರ್ಣರಾದರು.

ಬಾನ್ಸುರಿಯನ್ನು ಅತ್ಯಂತ ಸ್ಫುಟವಾಗಿ ಮತ್ತು ಸೂಕ್ಷ್ಮವಾಗಿ ರಾಗವಿಸ್ತಾರ ಮಾಡುವುದು, ಲಯದ ಜೊತೆಗೆ ವಿಶ್ಲೇಷಣೆ, ತಮ್ಮ ಕಲೆ ಮನೋರಂಜನೆಗಿಂತಲೂ ರಾಗಗಳ ಉಪಾಸನೆ ರೂಪದಲ್ಲಿ ನಾದ ಸಾಗರದಲ್ಲಿ ತಲ್ಲೀನರಾಗಿ, ತನ್ಮಯತೆಯಿಂದ ನುಡಿಸು ವಂತಹ ಪಾಂಡಿತ್ಯ ಹೊಂದಿರುತ್ತಾರೆ.

ಗಮಕ ಮತ್ತು ಸರಳ ತಾನ್‌ಗಳಿಗೆ ಹೆಚ್ಚಿನ ಪ್ರಾಮುಖ್ಯತೆ, ಲಯದ ಜೊತೆಗೆ ಚಮತ್ಕಾರಪೂರಿತ ತಿಹಾಯಿಗಳನ್ನು ಮಾಡಿ ಶ್ರೋತೃವರ್ಗ, 'ಆಹಾ! ವ್ಹಾ ಕ್ಯಾ ಬಾತ್ ಹೈ, ಬಹುತ್ ಅಚ್ಚೆ' ಎಂಬ ಉದ್ಗಾರ ಹೊರ ಹೊಮ್ಮುವಂತೆ ನುಡಿಸುವ ಚಾಣಾಕ್ಷತೆ ಹೊಂದಿದ್ದಾರೆ.

ಇವರ ಈ ಪಾಂಡಿತ್ಯಪೂರ್ಣ ವಾದನವನ್ನು ಕೇಳಿ ಸಂಗೀತ ಅಭಿಮಾನಿಗಳು ಇಡೀ ದೇಶದಾದ್ಯಂತ ಇವರ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ. ಅವುಗಳಲ್ಲಿ ಮುಖ್ಯ ವಾಗಿ ಭೋಪಾಲ ಸಂಗೀತೋತ್ಸವ, ಬಿಜಾಪುರದ ನವರಸಪುರ ಉತ್ಸವ, ಹಂಪಿ ಉತ್ಸವ, ಪಟ್ಟದಕಲ್ ಉತ್ಸವ, ಹೈದ್ರಾಬಾದ ವರಂಗಲ್ ಸಂಗೀತ ಸಮಾರೋಹ, ಬೆಂಗಳೂರಿನಲ್ಲಿ ಪಂಡಿತ ರಾಜಗುರುಗಳ ಸ್ಮೃತಿ ಸಂಗೀತ ಸಮ್ಮೇಳನ, ಔರಂಗಾಬಾದ, ನೀಲಂಗಾ, ಅವಸಾ ಹಾಗೂ ಕುಂದಗೋಳದಲ್ಲಿ ದಿ. ಸವಾಯಿ ಗಂಧರ್ವ ಸಂಗೀತ ಸಮ್ಮೇಳನ ಹಾಗೂ ಇನ್ನೂ ಅನೇಕ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿ ಯಶಸ್ವಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಆಕಾಶವಾಣಿ, ದೂರದರ್ಶನ ಕೇಂದ್ರಗಳಿಂದಲೂ ಇವರ ಅನೇಕ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಇವರಿಗೆ ಉತ್ತಮ ತಬಲಾ ಸಾಥಿದಾರರಾಗಿ ಪಂ. ಬಿ.ಎಸ್. ಬೆಂಡಿಗೇರಿ, ಪಂ. ರಘುನಾಥ ನಾಕೋಡ, ಪಂ. ರವೀಂದ್ರ ಯಾವಗಲ್, ಉಸ್ತಾದ ಮಮ್ಮುಲಾಲ್, ರಾಜೇಂದ್ರ, ವಿಶ್ವನಾಥ ನಾಕೋಡ, ಮುಖೇಶ ಯಾದವ, ಕಲಬುರಗಿಯ ಆಕಾಶವಾಣಿಯ ನಿಲಯದ 'ಎ' ಶ್ರೇಣಿಯ ಕಲಾವಿದರಾದ ಶಾಂತಲಿಂಗ ದೇಸಾಯಿ ಕಲ್ಲೂರ ರಂತಹ ಸಾಥಿದಾರರು ಸಾಥಿ ನೀಡಿರುವುದರಿಂದ ತಮ್ಮ ಬಾನ್ಸುರಿ ವಾದನಕ್ಕೆ ತಿಲಕವಿಟ್ಟಂತಾಗಿದೆ ಎಂಬುದು ಇವರ ಅಭಿಪ್ರಾಯ.

ನಮ್ಮ ಕಲಾ ಪರಂಪರೆ ಮುಂದುವರೆಯಬೇಕು. ಅಂದಾಗ ಮಾತ್ರ ಒಬ್ಬ ಕಲಾವಿದನ ಜೀವನ ಸಾರ್ಥಕವೆಂಬ ಸಿದ್ಧಾಂತ ಹೊಂದಿರುವ ಖಾಜಿಯವರು, ತಮ್ಮ ಗರಡಿಯಲ್ಲಿ ಅನೇಕ ಶಿಷ್ಯರನ್ನು ಬಾನ್ಸುರಿವಾದನ ಕ್ಷೇತ್ರಕ್ಕೆ ಉಡುಗೊರೆಯಾಗಿ ನೀಡಿದ್ದಾರೆ. ಜೊತೆಗೆ ಇಡಿ ಹೈದ್ರಾಬಾದ ಕರ್ನಾಟಕ ಜನತೆ, ಆಕಾಶವಾಣಿ ಕೇಂದ್ರದ ಕಲಾವಿದರ ಬಳಗದವರಿಗೂ ನೆಚ್ಚಿನ ಖಾಜಿ ಎಂಬ ಹೆಸರಿನಿಂದ ಗುರುತಿಸುತ್ತಿದ್ದಾರೆ. (ಎಂಬಿ)



ಅಮೃತ ಸಾಹು: ಚಿತ್ರ ಕಲಾವಿದ. 2010 ಕಳೆದ ಅಕ್ಟೋಬರ್ 21 ರಿಂದ 23 ರ ವರೆಗೆ ಕಲಬುರ್ಗಿಯ ಐಡಿಯಲ್ ಫೈನ್‌ಆರ್ಟ್, ಆರ್ಟ್‌ಗ್ಯಾಲರಿಯಲ್ಲಿ ಇವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ದಲ್ಲಿ ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಅನಾವರಣ ಗೊಳಿಸಿದ್ದರು. ಇವರು ಹುಟ್ಟಿದ್ದು ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಭೂಸನೂರ ಗ್ರಾಮದ ಪರಿಸರ ದಲ್ಲಿ, ಹೀಗಾಗಿ ಇವರ ಮೇಲೆ ಪರಿಸರ ಪ್ರಭಾವ ಗಾಢವಾಗಿ ಆಗಿರುವುದು ಇವರ ಕಲಾಕೃತಿ ಗಳಲ್ಲಿ ಕಂಡು ಬರುತ್ತದೆ. ತಂದೆ ಸಂಗೀತಗಾರರು, ಅಜ್ಜ ರಂಗಭೂಮಿ ಕಲಾವಿದ.

ಇವರ ಮನೆತನವೇ ಕಲಾವಿದರಾಗಿದ್ದುದರಿಂದ ಇವರಿಗೆ ಮಾರ್ಗದರ್ಶನ ಹಾಗೂ ಚಿತ್ರಕಲೆ ಆಸಕ್ತಿ ಮೂಡಲು, ಚಿತ್ರಕಲೆ ಯಲ್ಲಿ ಆಳವಾಗಿ ಅಧ್ಯಯನ, ಏಕಾಗ್ರತೆ ಎಲ್ಲವೂ ದೊರಕಿದವು. ವಿದ್ಯಾರ್ಥಿ ಜೀವನದಲ್ಲಿ ಸತತ ಪ್ರಯತ್ನವಾದಿಯಾಗಿ ಮುನ್ನು ಗ್ಗುವ ಛಲ ಹಾಗೂ ಗುರಿ ಹೊಂದಿದವರು. ಪರಿಶ್ರಮದಿಂದ ಎಂ.ಎಫ್.ಎ. ಪೇಂಟಿಂಗ್‌ನಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಯಾಗಿ ಚಿನ್ನದ ಪದಕ ಪಡೆದರು. ಸಾಹು ಅವರದು ಮಾತು ಕಡಿಮೆ, ಕಾಯಕವೇ ಹೆಚ್ಚು ಎಂಬ ಸರಳ ಸ್ವಭಾವದ ಜೀವಿ.

ಭೂಮಿ ಸುರಕ್ಷಿತ ಸ್ಥಾನ, ವಿಶ್ವವಿಖ್ಯಾತರು, ಯಾರೂ ಏನಿದ್ದಾರೆ, ಸಾಂಪ್ರದಾಯಿಕ ಸ್ನಾನ, ಸಭ್ಯತೆ, ವಂಚನೆ, ವಸಂತ ಋತು, ಅಂಧಶ್ರದ್ಧೆ ತಡೆಗಟ್ಟುವುದು, ಪಾತರಗಿತ್ತಿ, ಉದ್ಯಾನವನ, ಪರಂಪರೆ, ತಾಯಿಯ ಸ್ವಪ್ನ, ಕಮಲ ಉದ್ಯಾನವನ, ತಾಯಿ–ಮಗು, ಸಂಸ್ಕೃತಿ, ಜೀವನ ಶೈಲಿ ಮುಂತದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ತೈಲವರ್ಣ ಹಾಗೂ ಅಕರ್ಲಿಕ್ ಮಾಧ್ಯಮದಲ್ಲಿ ಚಿತ್ರಿಸಿದ್ದಾರೆ. ಹಳ್ಳಿಯಲ್ಲಿ ತಾಯಿ ಶಿಶುವಿಗೆ ಪಾರಂಪರಿಕ ಸ್ನಾನ ಮಾಡಿಸುವ ಚಿತ್ರ ನೋಡುವರಿಗೆ ತಾಯಿ–ಶಿಶುವಿನ ಮಮತೆ ಚಿತ್ರದಲ್ಲಿ ಮೂಡಿಸಿದ್ದಾರೆ. ತಾಯಿಯ ಮುಖವ ನೋಡಿದಾಗ, ಮಗುವಿಗೆ ಸ್ನಾನ ಮಾಡಿಸುವಲ್ಲಿ ತನ್ಮಯಳಾಗಿ ತನ್ನ ಶೃಂಗಾರ. ತ್ಯಾಗ ಮಾಡಿ ಸರಳ ಶೈಲಿಯಲ್ಲಿ ಕುಳಿತಿರುವ ಭಂಗಿ (ಹೆಣ್ಣಿಗೆ ಹಣೆಯಲ್ಲಿ ಕುಂಕುಮ ಇದ್ದರೆ ಅಂದ) ಇದಾವುದರ ಬಗ್ಗೆ ಪರಿವೆಯಿಲ್ಲದೇ ಮಗುವಿನ ಮಮತೆ ಯಲ್ಲಿರುವುದು ಚಿತ್ರದ ವೈಶಿಷ್ಟ್ಯವಾಗಿದೆ. ದೇಶಭಕ್ತರು ಹಾಗೂ ಬುದ್ಧಿಜೀವಿಗಳ ದೇಶವಾಗಿರುವ ಭಾರತದಲ್ಲಿ ಅವರ ನೆನಪು ಮಾಸುತ್ತಿರುವ ಬಗ್ಗೆ ಸಾಹು ಅವರ ಕಲಾಕೃತಿ ಅರ್ಥಪೂರ್ಣ ವಾಗಿದೆ. ಸ್ವಾತಂತ್ರ್ಯ ಯೋಧರ ಆದರ್ಶ ಜೀವನ, ಜನ್ಮದಿನ ಮುಂತಾದ ವಿಷಯಗಳ ಹಿಂದಿನ ಕಾಲದಲ್ಲಿ ವರ್ಣಚಿತ್ರ

ಗಳಿರಲಿಲ್ಲ. ಆದ್ದರಿಂದ ಅವುಗಳನ್ನು ಕಪ್ಪು ಬಿಳುಪಿನಲ್ಲಿ ಚಿತ್ರಿಸುವ ಮೂಲಕ ಹಿಂದಿನ ಕಾಲಕ್ಕೆ ಕರೆದುಕೊಂಡು ಹೋದ ಅನುಭವ ಮೂಡಿಸುವುದು ತಮ್ಮ ಉದ್ದೇಶವೆಂದು ನುಡಿಯುತ್ತಾರೆ ಸಾಹು. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಯೋಜನೆಯಿದ್ದರೂ, ಮಕ್ಕಳು ಈ ಸುಳಿಯಿಂದ ಹೊರಗೆ ಬರದಂತೆ ಸಿಲುಕಿರುವ ಚಿತ್ರ ಮಾರ್ಮಿಕ ವಾಗಿದೆ. 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಬಡತನ, ಅನಕ್ಷರತೆ, ನಿರುದ್ಯೋಗ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿರುವ ಈ ಕಲಾಕೃತಿಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ.



'ಹೂ ಇಜ್ ಹೂ ?' ಅಕ್ರೇಲಿಕ್ ಮಾಧ್ಯಮ

ಚಿತ್ರಕಲಾ ಪ್ರದರ್ಶನಗಳು: ಯಂಗ್ ಸ್ಟ್ರೋಕ್ ಲಕ್ಷಣನ ಆರ್ಟ್‌ಗ್ಯಾಲರಿ ಬೆಂಗಳೂರು, ಆರ್ಟ್ ಫೌಂಡೇಷನ್ (2005), ಗ್ಯಾಲರಿ ಸ್ಪೈಸ್ ಹೈದ್ರಾಬಾದ್ (2003), ಮುಂಬೈನ ಜಹಾಂಗೀರ ಆರ್ಟ್‌ಗ್ಯಾಲರಿ (1997, 1998, 2003, 2007), ಯಂಗ್ ಸ್ಟ್ರೋಕ್ಸ್ ದಿ ಯಂಗ್ ಟ್ಯಾಲೆಂಟೆಡ್ ಆರ್ಟಿಸ್ಟ್ ಕರ್ನಾಟಕ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು(2003), ರಾಷ್ಟ್ರೀಯ ಲಲಿತಕಲಾ ಕೇಂದ್ರ ಭುವನೇಶ್ವರ (ಓರಿಸ್ಸಾ) (1994), ಯಂಗ್ ಡಿಸೈನಿಂಗ್ ಆರ್ಟ್‌ಗ್ಯಾಲರಿ ಬೆಂಗಳೂರು (1993), ವೆಂಕಟಪ್ಪ ಆರ್ಟ್‌ಗ್ಯಾಲರಿ ಬೆಂಗಳೂರು (1990, 1992, 1993), ಆಲ್ ಇಂಡಿಯಾ ಪೇಂಟಿಂಗ್ ಪ್ರದರ್ಶನ ಕಲಬುರ್ಗಿ ಆರ್ಟ್ ಗ್ಯಾಲರಿ 2004ರಲ್ಲಿ ಮುಂತಾದ ಕಡೆ ಪ್ರದರ್ಶನ ಮಾಡಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

72ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಬೀದರ (2006), 76ನೆಯ ವಾರ್ಷಿಕ ಅಖಿಲ ಭಾರತ ಫೈನ್ ಆರ್ಟ್ ಮತ್ತು ಕ್ರಾಫ್ಟ್ ಸೋಸೈಟಿ ಬೆಂಗಳೂರು (2003), 5ನೆಯ ಸೌಥ್ ರೀಜನ್ ಆರ್ಟ್ ಪ್ರದರ್ಶನ ಕ್ಯಾಮಲಿನ ಫೌಂಡೇಷನ್ (2003), ಲೋಕಮಾನ್ಯ ಪ್ರಶಸ್ತಿ (2002), ಲೋಕಮಾನ್ಯ ತಿಲಕ ಮತ್ತು ಬ್ಯಾರಿಸ್ಟರ್ ವಿವಿಜೊಕ್ ಸಮಿತಿ, 3ನೆಯ ಆಲ್ ಇಂಡಿಯಾ ಆರ್ಟ್ ಪ್ರದರ್ಶನ, 14ನೆಯ ಅಖಿಲ ಭಾರತ ಸ್ಪರ್ಧೆ ಪ್ರದರ್ಶನ ಸೌಥ್ ಸೆಂಟ್ರಲ್ ಜೋನ್ ನಾಗಪುರ (2000), 15ನೆಯ ಆಲ್ ಇಂಡಿಯಾ ಫೈನ್‌ಆರ್ಟ್ ಪ್ರದರ್ಶನ, ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು (1993), ಕಲಬುರ್ಗಿ ವಿಶ್ವವಿದ್ಯಾಲಯ ಪ್ರಸಾರಾಂಗ (1993), 22ನೆಯ ವಾರ್ಷಿಕ ಚಿತ್ರಕಲಾ ಪ್ರದರ್ಶನ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು (1992), ಫೈನ್ ಆರ್ಟ್ ಮತ್ತು ಕ್ರಾಫ್ಟ್ ಮೈಸೂರು ದಸರಾ (1991), ರಾಜ್ಯ ಪ್ರಶಸ್ತಿ ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆ (1986) ಹೀಗೆ ಹಲವಾರು ಪ್ರಶಸ್ತಿಗಳು ಇವರಿಗೆ ಬಂದಿವೆ.

ಚಿತ್ರಕಲಾ ಶಿಬಿರ: ಪೇಂಟಿಂಗ್ ಶಿಬಿರ ಕರ್ತಕುಂದಾ ರಾಯಚೂರು (1996), ಪೇಂಟಿಂಗ್ ಗ್ರಾಫಿಕ್ ಶಿಲ್ಪಕಲೆ ಶಿಬಿರ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಿ ಐಡಿಯಲ್ ಸೊಸೈಟಿ 1998, ಲಲಿತಕಲಾ ಅಕಾಡೆಮಿ ಬೆಂಗಳೂರು ಮತ್ತು ಸೌಥ್ ಝೋನ್ ಬಳ್ಳಾಪುರ 1996, ದಿ ಐಡಿಯಲ್ ಫೈನ್ ಆರ್ಟ್ ಸೊಸೈಟಿ ಕಲಬುರ್ಗಿ 2002, ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಚಿತ್ರಕಲಾಕೃತಿಗಳ ಸಂಗ್ರಹಗಳು: ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಹೊಸದೆಹಲಿ 1990, ಸ್ಕೂಲ್ ಆಫ್ ಆರ್ಟ್ ದಾವಣಗೆರೆ 1992, ಕಲಬುರ್ಗಿ ವಿಶ್ವವಿದ್ಯಾಲಯ 1993, ಸೌಥ ಸೆಂಟ್ರಲ್ ಝೋನ್ ಕೇಂದ್ರ ನಾಗಪುರ 2002, ಆಲ್ ಇಂಡಿಯಾ ಫೈನ್ ಆರ್ಟ್ ಸೊಸೈಟಿ ನವದೆಹಲಿ 2003, ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು 2004 ಮುಂತಾದ ಕಡೆ ಅಮೃತ ಸಾಹು ಅವರ ಕಲಾಕೃತಿಗಳು ಸಂಗ್ರಹದಲ್ಲಿವೆ. ಅಮೃತ ಸಾಹು ಅವರು ಕಲಬುರ್ಗಿಯ ಪೂಜ್ಯ ದೊಡ್ಡಪ್ಪ ಅಪ್ಪಾ ಇಂಜಿನಿಯ ರಿಂಗ್ ಕಾಲೇಜ್ ವಾಸ್ತುಶಿಲ್ಪ ವಿಭಾಗದಲ್ಲಿ ಉಪನ್ಯಾಸಕರಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎನ್‌ಎಂಜೆ)

ಅಮೃತೇಶ ಕಲಶೆಟ್ಟಿ: 'ಹಾಸ್ಯ ಚಕ್ರವರ್ತಿ', 'ಆಶುಕವಿ' ಎಂಬ ಬಿರುದುಗಳನ್ನು ಪಡೆದ ಜಾನಪದ ಕಲಾವಿದ. ಜನರನ್ನು ನಗಿಸಿ, ಅವರ ಆರೋಗ್ಯ ಹೆಚ್ಚಿಸುವಲ್ಲಿ ತಮ್ಮ ಕಲಾಸೇವೆಯಲ್ಲಿ ಖ್ಯಾತಿ ಪಡೆದವರು. ನೀತಿ ಪದಗಳು, ಹಾಸ್ಯ ಪದಗಳು, ತತ್ವಪದಗಳು, ಹಂತಿ ಪದಗಳನ್ನು ಆಶು ಕವಿತ್ವದಿಂದ ರಚಿಸಿ ಹಾಡಿ ಜನರನ್ನು ರಂಜಿಸುವುದು, ದುಶ್ಚಟಗಳ ಪರಿಣಾಮದ ಮೇಲೆ ಹಾಡುಗಳನ್ನು ಹಾಡಿ ಸರಕಾರದ ಹಲವಾರು ಯೋಜನೆಗಳನ್ನು ಪ್ರಚಾರಿಸುವಲ್ಲಿ ಯಶಸ್ವಿಯಾದವರು.

ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಇಲಾಖೆ, ಕೇಂದ್ರ ಸರಕಾರದ ಸಂಗೀತ ಮತ್ತು ನಾಟಕ ವಿಭಾಗ ವತಿಯಿಂದ ಸುಮಾರು 33 ವರ್ಷಗಳ ಕಾಲ ಸತತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕಲ್ಬುರ್ಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಪೇಠಶಿರೂರ ಎಂಬ ಗ್ರಾಮದಲ್ಲಿ 1937ರಲ್ಲಿ ರೇವಪ್ಪ ಮತ್ತು ಪಾರ್ವತಮ್ಮರ

ಸಂಸ್ಥಾನಿಕ ಮನೆತನದಲ್ಲಿ ಚೊಚ್ಚಿಲ ಮಗನಾಗಿ ಜನಿಸಿದರು. ಶಿಕ್ಷಣದಲ್ಲಿ ಅಷ್ಟೊಂದು ಆಸಕ್ತಿ ಹೊಂದದ ಇವರು ಚಿಕ್ಕಂದಿನಲ್ಲೇ ಕೊಳಲು, ಡೋಲಕ, ಪೇಟಿ, (ಹಾರ್ಮೋನಿಯಂ) ಬುಲ್‌ಬುಲ್ ತರಂಗ ಬಾರಿಸುವುದು ಹವ್ಯಾಸಗಳಿದ್ದವು. ಪೇಠಶಿರೂರಿನ ಶ್ರೀ ಸಿದ್ಧಲಿಂಗೇಶ್ವರ ಮಠದ ಶ್ರೀಮನ್‌ನಿರಂಜನ ಪ್ರಣವ ಸ್ವರೂಪಿ ಪಂಚಾಕ್ಷರಿ ಮಹಾಸ್ವಾಮಿಗಳ ಕೃಪಾಕಟಾಕ್ಷದಿಂದ ಸಾಹಿತ್ಯ ಹಾಗೂ ಜಾನಪದ ಸಂಗೀತ ಕ್ಷೇತ್ರದಲ್ಲಿ ಧುಮುಕಲು ಪ್ರೇರಣೆ ದೊರೆಯಿತು.

ಖ್ಯಾತ ಸಂಗೀತ ವಿದ್ವಾಂಸರಾದ ಅಮೀರಖಾನ್ ಮತ್ತು ಗುರುಬಸಪ್ಪ ಹೆಬ್ಬಾಳ ಪೇಠಶಿರೂರ ಇವರ ಆಶೀರ್ವಾದ ಹೊತ್ತು ಗುಲಬರ್ಗಾಕ್ಕೆ ಬಂದ ಮೇಲೆ ಶರಣಬಸವಪ್ಪ ಅಪ್ಪಾ ಶ್ರೀ ಶರಣಬಸವೇಶ್ವರ ಸಂಸ್ಥಾನ ಮತ್ತು ಗದ್ದುಗೆಮಠ ಮಕ್ತಂಪೂರ ಇವರ ಆಶಿರ್ವಾದ ದೊರೆತು ಕಲಾಸೇವೆ ಮುಂದುವರೆದು ಗದ್ದುಗೆ ಮಠದ ಶ್ರೀಗಳು ಇವರ 50 ಜಾನಪದ ಗೀತೆಗಳ ಪುಸ್ತಕವನ್ನು ಪ್ರಕಟಿಸಿದರು. **(ಜಿಕೆ)**

ಅಯ್ಯಣ್ಣ ವಿಶ್ವಕರ್ಮ: ಶಿಲ್ಪಕರ್ಮಿ. ಕಲಬುರ್ಗಿ ತಾಲ್ಲೂಕಿನ ಕೊಳ್ಳೂರು ಗ್ರಾಮಕ್ಕೆ ಹೋಗುವ ಜಿಲ್ಲಾ ಹೆದ್ದಾರಿ ಸಂಚರಿಸುವಾಗ, ರಸ್ತೆ ಪಕ್ಕದಲ್ಲೊಂದು ತಾತ್ಕಾಲಿಕ ಶೆಡ್ಡು, ಅದರಲ್ಲಿ ಶಿಲೆಗಳನ್ನು ಕಲಾತ್ಮಕವಾಗಿ ಕೆತ್ತುವ ಕಾರ್ಯ ಹಗಲೂ–ರಾತ್ರಿ ನಿರಂತರವಾಗಿ ನಡೆಯುತ್ತಿರುತ್ತದೆ. ಈ ರಸ್ತೆಯ ಮೂಲಕ ಹಾದು ಹೋಗುವವರ್ಯಾರೂ ಈ ಕಡೆ ಗಮನ ಹರಿಸುವುದಿಲ್ಲ. ಒಳಗೆ ಕೆಲಸ ಮಾಡುವವರೂ ರಸ್ತೆಯಲ್ಲೇನು ನಡೆಯುತ್ತದೆಂಬ ಬಗ್ಗೆ ಗಮನವಿಲ್ಲದೇ ತಮ್ಮ ಕೆಲಸದಲ್ಲಿ ತನ್ಮಯರಾಗಿರುತ್ತಾರೆ.

ಕಾಳಿಕಾದೇವಿ ಶಿಲ್ಪಕಲಾ ಕೇಂದ್ರವೆಂಬ ಹೆಸರಿನ ಈ ಶೆಡ್ಡಿನಲ್ಲಿ ಮೂರ್ತಿಗಳನ್ನು ಕೆತ್ತುವ ಕಾಯಕ ಹಲವು ವರ್ಷಗಳಿಂದಲೂ ನಡೆಯುತ್ತಿದೆ. ಈ ಶಿಲ್ಪಕಲಾ ಕೇಂದ್ರದ ರೂವಾರಿ ಹಾಗೂ ಶಿಲ್ಪಕರ್ಮಿ ಅಯ್ಯಣ್ಣ ವಿಶ್ವಕರ್ಮ ಮತ್ತು ಕಾಶಿಪತಿ ಮೇಳಕುಂದಾ ಮೊದಲು ಕಲಬುರ್ಗಿಯ ಸಮೀಪದ ನಂದೂರ ಗ್ರಾಮದಲ್ಲಿ ಈ ಕೆತ್ತನೆಯ ಕೆಲಸ ಆರಂಭಿಸಿದ. ಈ ಜೋಡಿ, ಕಳೆದ 10 ವರ್ಷಗಳಿಂದಲೂ ಕೊಳ್ಳೂರ ಗ್ರಾಮದ ರಸ್ತೆಯ ಬದಿ ಶಿಲ್ಪಕಲಾ ಕೇಂದ್ರವೊಂದನ್ನು ಆರಂಭಿಸಿ, ನಿತ್ಯ ಶಿಲೆಯಲ್ಲಿ ಕಲೆಯನ್ನು ಅರಳಿಸುವ ಈ ಕಾಯಕದಲ್ಲಿ ನಿರತರಾಗಿದ್ದಾರೆ.

ಸಾಮಾನ್ಯವಾಗಿ ಕಲೆಗೆ ಬೆಲೆ ಕಟ್ಟಲಾಗುವುದಿಲ್ಲ. ಕಾಲಾವಕಾಶವೂ ನೀಡಲಾಗುವುದಿಲ್ಲ. ನಮ್ಮ ವೈಚಾರಿಕಧಾರೆ, ತನ್ಮಯತೆಗಳ ಆಧಾರದ ಮೇಲೆ ಮೂರ್ತಿಗಳು ಸಿದ್ಧಗೊಳ್ಳುತ್ತವೆ. ಇಂತಿಷ್ಟೇ ದಿನಗಳಲ್ಲಿ ಎಂದು ಹೇಳಲಾಗುವುದಿಲ್ಲ. ಕೆಲವೊಂದು ಸಲ ಹಗಲೂ ರಾತ್ರಿ ಕೆಲಸ ಮಾಡಬೇಕಾಗುತ್ತದೆ. ಮತ್ತೆ ಕೆಲವು ಸಲ ಮೂಡ್ ಇಲ್ಲದೇ ಕೆಲಸವಾಗುವುದೇ ಇಲ್ಲ. ಕೆಲವೊಮ್ಮೆ ನಮ್ಮ ನಿರೀಕ್ಷೆಗೂ ಕಡಿಮೆ ಅವಧಿಯಲ್ಲಿ ನಿರ್ಮಾಣವಾಗುತ್ತವೆ. ನಮ್ಮ ಶ್ರಮಕ್ಕೆ ದೊರೆತ ಫಲದಲ್ಲಿ ನಾವು ಸಂತುಷ್ಟರಾಗುತ್ತೇವೆ. ನಮ್ಮ ಕಲೆಯನ್ನು ಮೆಚ್ಚಿಕೊಂಡಾಗ ಆಗುವ ತೃಪ್ತಿಯೇ ತಮಗೆ ಸಿಕ್ಕುವ ನಿಜವಾದ ಬೆಲೆಯಾಗಿದೆ ಎನ್ನುತ್ತಾರೆ ಅಯ್ಯಣ್ಣ.

ಬಾಗಲಕೋಟೆಯ ಶೆಲ್ಲಿಕೆರೆಯಿಂದ ಲಾರಿಗಳಲ್ಲಿ ಶಿಲೆಗಳನ್ನು ತರುತ್ತಿದ್ದು, 10 ಟನ್ ಕಲ್ಲಿಗೆ 20 ಸಾವಿರ ರೂ.ಗಳ ವೆಚ್ಚ ತಗಲುತ್ತದೆ. ಲಾರಿ ಬಾಡಿಗೆ ಕೊಡುವುದು ಸುಲಭ. ಆದರೆ, ಕೆಲವು ಬಾರಿ ಬಿರುಸಾದ ಕಲ್ಲುಗಳಿದ್ದರೆ, ರೂಪ ಕೊಡುವುದು ತುಂಬಕಷ್ಟ. ಅನೇಕ ಬಾರಿ ಮೂರ್ತಿ ಕೆತ್ತುವಾಗಲೇ ಹಾನಿಯಾಗುವ ಉದಾಹರಣೆಗಳೂ ಅನೇಕ ಎಂದು ತಮ್ಮ ಅನುಭವ ಹೇಳಿಕೊಳ್ಳುತ್ತಾರೆ.

ಒಂದು ಮೂರ್ತಿ ಕೆತ್ತಲು ಸುಮಾರು 30 ದಿನಗಳ ಕಾಲಾವಕಾಶಬೇಕು. ಇದುವರೆಗೂ ತಾವು ಅಂಬಾ ಭವಾನಿ, ಕಾಳಿಕಾದೇವಿ, ಗಣೇಶ, ಶಿವಪಾರ್ವತಿ, ನಂದಿ, ಶಿವಲಿಂಗ, ಹನುಮಾನ್, ಅಂಬಿಗರ ಚೌಡಯ್ಯ ಮುಂತಾದ ಮೂರ್ತಿಗಳನ್ನು ಕೆತ್ತಿರುವುದಾಗಿ ಅಯ್ಯಣ್ಣ ಅವರು ತಾವು ಕೆತ್ತಿರುವ ಮೂರ್ತಿಗಳ ಬಗ್ಗೆ ಮೆಲುಕು ಹಾಕುತ್ತಾರೆ. **(ಡಿಡಿಜಿ)**

ಅಯ್ಯಣ್ಣಸ್ವಾಮಿ ಬಿಳ್ವಾರ: ಶ್ರೀಯುತ ಅಯ್ಯಣ್ಣಸ್ವಾಮಿ ಹಿರೇಮಠ ಬಿಳ್ವಾರ ಅವರು ಕಲಾವಿದರಾಗಿ, ಮ್ಯಾನೇಜರಾಗಿ, ಮಾಲಿಕರಾಗಿ ರಂಗಭೂಮಿಯ ವಿವಿಧ ಮುಖಗಳಲ್ಲಿ ಸೇವೆ ಸಲ್ಲಿಸುತ್ತ 'ಶ್ರಮ ಏವ ಜಯತೆ' ಎನ್ನುವ ಮಾತಿನಲ್ಲಿ ವಿಶ್ವಾಸವಿಟ್ಟುಕೊಂಡು ಪ್ರಾಮಾಣಿಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತ ಬಂದಿದ್ದಾರೆ. ಜೇವರಗಿಯ ಶ್ರೀ ಷಣ್ಮುಖ ಶಿವಯೋಗಿ ಮಠದ 'ಸ್ವಯಂ ಜ್ಯೋತಿ ನಾಟ್ಯ ಸಂಘ'ದಲ್ಲಿ ಪ್ರಮುಖ ಕಲಾವಿದರಾಗಿ ಸೇವೆ ಸಲ್ಲಿಸಿದ ಇವರು ನಿಷ್ಠೆಗಿಂತ ಬಲವಾದುದು, ಬದುಕಿನಲ್ಲಿ ಬೇರಾವುದೂ ಇಲ್ಲವೆಂದು ತಿಳಿದು ಸಾಗಿದ್ದಾರೆ.

ಗುಲಬರ್ಗಾಕ್ಕೆ ಬಂದ ಅಯ್ಯಣ್ಣನವರಿಗೆ ಬದುಕುವ ದಾರಿ ತಿಳಿಯದಾಯಿತು. 'ಅಮರೇಶ್ವರ ನಾಟ್ಯ ಸಂಘ' ಚಿಕ್ಕಪ್ಪ ಅವರ ಕಂಪನಿಯಲ್ಲಿ 'ರತ್ನಮಾಂಗಲ್ಯ' ನಾಟಕದ ದಿಲೀಪನ ಪಾತ್ರದಿಂದ ಬಣ್ಣ ಹಚ್ಚಿದರು. ಅಂದಿನಿಂದ ಇಂದಿನವರೆಗೂ ಸುಮಾರು ಹತ್ತು ವರ್ಷಗಳ ಬಣ್ಣದ ಬದುಕಿನ ಅವಧಿಯಲ್ಲಿ ನೂರಾರು ನಾಟಕಗಳಲ್ಲಿ, ಐದಾರು ಕಂಪನಿಗಳಲ್ಲಿ ಅಭಿನಯಿಸಿರಬೇಕು, ಅವರ ಸೇವೆಯ ಕೆಲವು ಕಂಪನಿಗಳೆಂದರೆ, 'ಶ್ರೀ ಬ್ರಹ್ಮಾನಂದ ನಾಟ್ಯ ಸಂಘ' ಶಿರವಾರ, 'ಅಮರೇಶ್ವರ ನಾಟ್ಯ ಸಂಘ' ಚಿಕ್ಕೊಪ್ಪ, 'ಶ್ರೀ ಗುರುಪ್ರಸಾದ ನಾಟ್ಯ ಸಂಘ' ಕಡಪಟ್ಟಿ, 'ಶ್ರೀ ಸಿದ್ದೇಶ್ವರ ನಾಟ್ಯ ಸಂಘ' ಕಾರವಾರ, 'ಅಮರೇಶ್ವರ ನಾಟ್ಯ ಸಂಘ' ಹರ್ಲಾಪುರ, 'ಶ್ರೀ ಅಖಂಡೇಶ್ವರ ಕೃಪಾಪೋಷಿತ ನಾಟ್ಯ ಸಂಘ' ಜೇವರ್ಗಿ. ಅವರ ಪ್ರಮುಖ ಪಾತ್ರಗಳೆಂದರೆ 'ಕಾಳಿಂಗ ಸರ್ಪ'ದಲ್ಲಿಯ ಜಯವೀರ, 'ಧರ್ಮದೇವತೆ'ಯಲ್ಲಿ ನಾಗರಾಜ, 'ಬಸ್ ಹಮಾಲ' ನಾಟಕದಲ್ಲಿ ನಾಗರಾಜ ಮ್ಯಾನೇಜರ, 'ಶ್ರೀ ಷಣ್ಮುಖ ಶಿವಯೋಗಿ' ನಾಟಕದಲ್ಲಿ ಗುರು ಅಖಂಡೇಶ್ವರರು, 'ಗುರು ವಿಶ್ವಾರಾಧ್ಯರು' ನಾಟಕದಲ್ಲಿ ವಿಶ್ವಾರಾಧ್ಯರ ಪಾತ್ರಗಳು. ಅಯ್ಯಣ್ಣನವರು ಎಲ್ಲಾ ಬಗೆಯ ಪಾತ್ರಗಳಲ್ಲಿ ಅಭಿನಯಿಸಿದ್ದರೂ ಖಳನಾಯಕರಾಗೇ ಜನರೆದುರು ಉಳಿಯುವರು. ಶರಣರ ನಾಟಕದಲ್ಲಿಯೂ ಜನಮನ ಸೆಳೆಯುತ್ತಾರೆ. 'ಶ್ರೀ ಷಣ್ಮುಖ ಶಿವಯೋಗಿ' ನಾಟಕದಲ್ಲಿ ಅಖಂಡೇಶ್ವರರ ಪಾತ್ರ ಆಕರ್ಷಕ.

ಷಣ್ಮುಖ ಶಿವಯೋಗಿಗಳಿಗೆ ದೀಕ್ಷೆ ಕೊಟ್ಟು ಉಪದೇಶಿಸುವಾಗಿನ ಸಂದರ್ಭ ಪ್ರೇಕ್ಷಕರ ಕಣ್ಣು ಕಟ್ಟುತ್ತದೆ. ಲೋಕವನ್ನೇ ತೂಗಿ ನೋಡುವ ವಿಶಾಲದೃಷ್ಟಿ, ನೀತಿ, ನ್ಯಾಯ, ಧರ್ಮಗಳ ತಳಹದಿಯ ಮೇಲೆ ನಿಂತು ಹೇಳುವ ಒಂದೊಂದು ಮಾತು, ಮಾತಿನ ವೈಖರಿ ಮೆಚ್ಚುವಂಥವು. 'ಕಾಳಿಂಗಸರ್ಪ' ನಾಟಕದಲ್ಲಿಯ ಜಯವೀರನ ಪಾತ್ರದಲ್ಲಿಯ ಅವರ ಸಿಟ್ಟು, ರೋಷ ಕುರಿತು ಅದ್ಭುತವೆನಿಸುತ್ತದೆ. ಗವೀಶ ಹಿರೇಮಠರ 'ಬದುಕು ಚದುರಂಗದಾಟ' ನಾಟಕದಲ್ಲಿ ತಂದೆಯ ಪಾತ್ರದಲ್ಲಿ ಅಷ್ಟೇ ಸೌಮ್ಯ, ಶಾಂತಿ, ವಿನಯ, ಸೌಜನ್ಯ ಕಂಡಾಗ ಅಯ್ಯಣ್ಣನವರು ಇಂಥ ಸೌಮ್ಯ ಪಾತ್ರಗಳನ್ನು ಮಾಡಬಹುದೇ? ಎಂದು ಆಶ್ಚರ್ಯವಾಗುತ್ತದೆ. ಅವರ ಪ್ರತಿಭೆ, ಅವರ ಉತ್ತಮ ಅಭಿನಯ ಕಂಡು ಸಂಘ ಸಂಸ್ಥೆಗಳು ಸನ್ಮಾನಿಸಿ, ಗೌರವಿಸಿವೆ.

ಅಯ್ಯಣ್ಣನವರು ಜನ್ಮ ಪಡೆದುದು ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಬಿಳ್ವಾರ ಗ್ರಾಮದಲ್ಲಿ. ಸುಸಂಸ್ಕೃತ ಮನೆತನದ ಶ್ರೀಯುತ ವೀರಯ್ಯಸ್ವಾಮಿ ಹಿರೇಮಠ, ಶ್ರೀಮತಿ ರುದ್ರಮ್ಮ ದಂಪತಿಗಳ ಉದರದಿಂದ 11 ಜನೆವರಿ 1956ರಲ್ಲಿ, ಇಬ್ಬರು ಸಹೋದರಯರನ್ನು ನಾಲ್ಕು ಜನ ಸಹೋರರನ್ನು ಪಡೆದು ಬೆಳೆದಿದ್ದಾರೆ. ಪ್ರಾಥಮಿಕ ಓದು ಅಲ್ಲಿಯೇ ಮುಗಿಸಿ ಹೈಸ್ಕೂಲ ಹಾಗೂ ಕಾಲೇಜು ಅಭ್ಯಾಸ ಗುಲಬರ್ಗಾದ ಶರಣ ಬಸವೇಶ್ವರ ಸಂಸ್ಥೆಯಲ್ಲಿ ಪಡೆದಿದ್ದಾರೆ. (ಜಿಎಚ್)

ಅರ್ಕಸಾಲಿ ಕೆ.ಎನ್.: ಹಿಂದೂಸ್ಥಾನಿ ಗಾಯಕ. ಕನ್ನಡ ಕಾವ್ಯ ಹಿಂದೂಸ್ಥಾನಿ ಪದ್ಧತಿಯಲ್ಲಿ ಹಾಡಿ ಜನಮನವನ್ನು ಸೂರೆಗೊಂಡಿದ್ದಾರೆ. ಹೈದ್ರಾಬಾದ ಕರ್ನಾಟಕದ ಸಂಗೀತಗಾರರಲ್ಲೊಬ್ಬರು. 1914ರಲ್ಲಿ ಸಂಗೀತಗಾರರ ಕುಟುಂಬದಲ್ಲಿ ಜನಿಸಿದವರು.

ಪಂಡಿತ ಸಿದ್ಧರಾಮ ಜಂಬಲದಿನ್ನಿಯವರಲ್ಲಿ ಸುಮಾರು ಹದಿನೈದು ವರ್ಷಗಳ ಕಾಲ ಶಿಷ್ಯ ವೃತ್ತಿ ಮಾಡಿ, ಸಂಗೀತವನ್ನೇ ಉಸಿರಾಗಿಸಿಕೊಂಡವರು. ತಮ್ಮ ಸಂಗೀತ ಕಛೇರಿಗಳಲ್ಲಿ ಪ್ರಭುಲಿಂಗಲೀಲೆ ಮತ್ತು ರಾಘವಾಂಕ ಕವಿಗಳ ಕಾವ್ಯಗಳನ್ನು ಭಾವಪೂರ್ಣವಾಗಿ ಹಾಡಿ, ಸಂಗೀತ ವಲಯದಲ್ಲಿ ಈ ಕಾವ್ಯಗಳನ್ನು ಹೆಚ್ಚು ಜನಪ್ರಿಯಗೊಳಿಸುವಲ್ಲಿ ಇವರ ಸಾಧನೆ ಉಲ್ಲೇಖನೀಯ.

ನಾಡಿನ ತುಂಬೆಲ್ಲ ತಮ್ಮ ಪ್ರಬುದ್ಧ ಗಾಯನದಿಂದ ಚಿರಪರಿಚಿತರಾಗಿರುವ ಇವರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 1999–2000ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

(ಎಸ್‌ಎಂಜಿ)



ಅವ್ವಣ್ಣಪ್ಪ ಭದ್ರಪ್ಪ ಪತ್ತಾರ: ಹೆಸರಾಂತ ರಜತ ಕಲಾವಿದ. ಗುಲಬರ್ಗಾ ಜಿಲ್ಲೆ ಕೊಡೇಕಲ್ಲಿನಲ್ಲಿ 11.01.1932ರಲ್ಲಿ ಜನಿಸಿದರು. ತಂದೆ ಭದ್ರಪ್ಪ ತಾಯಿ ನೀಲಮ್ಮ. ಇವರು ಕಡು ಬಡತನದ ಕುಟುಂಬದಲ್ಲಿ ಜನಿಸಿ ಕೇವಲ ನಾಲ್ಕನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಮಾರ್ಗದರ್ಶನದಲ್ಲಿ ಕುಸುರಿ ಕೆಲಸದಲ್ಲಿ ತೊಡಗಿಸಿ ಕೊಂಡು ನೈಪುಣ್ಯವನ್ನು ಪಡೆದರು. ಅಲ್ಲದೆ ಸಂಸಾರದ ಭಾರ ಹೊತ್ತು ಜೀವನದಲ್ಲಿ ಅನೇಕ ಕಷ್ಟ ನಷ್ಟಗಳ ಅನುಭವ ಪಡೆದರು.

ಇವರ ಕಲಾಕೃತಿಗಳು ಗುಲಬರ್ಗಾ, ರಾಯಚೂರು, ವಿಜಾಪುರ, ಮುಂಬಯಿ ಮುಂತಾದ ಕಡೆಗಳಲ್ಲಿವೆ. ಇವರು ಲೋಹ ಕಲೆಯಲ್ಲಿ ತಮ್ಮ ಕಲಾ ನೈಪುಣ್ಯತೆಯನ್ನು ತೋರಿಸಿದ್ದು, ಇವುಗಳಲ್ಲಿ ತ್ರಿವಿಕ್ರಮಾ ನಂದಾಶ್ರಮಕ್ಕೆ ಬೆಳ್ಳಿ ತೊಟ್ಟಿಲು, ತಿಂಥಣಿ ಮೌನೇಶ್ವರ ದೇವಸ್ಥಾನದ ಗರ್ಭಗುಡಿಯ ಚೌಕಟ್ಟು, ಬಸವೇಶ್ವರ ದೇವಸ್ಥಾನದ ಗುಡಿಯ ಚೌಕಟ್ಟು, ಸಾವಳಗಿ ಸಿದ್ದಲಿಂಗೇಶ್ವರ ಮಠ, ನಂದಿಮಠ ತಡವಡಿಗಿ ಸ್ವಾಮೀಜಿಯವರಿಗೆ ನಿರ್ಮಿಸಿ ಕೊಟ್ಟ ಮೂರ್ತಿ ಕಿರೀಟ ಹಾಗೂ ಅನೇಕ ಬೆಳ್ಳಿಯ ದೇವಿ ಮೂರ್ತಿಗಳನ್ನು ರಚಿಸಿದ್ದಾರೆ.

ಗ್ರಾಮದೇವತೆಗಳ ಮೂರ್ತಿಗಳು, ಪಲ್ಲಕ್ಕಿ–ತೊಟ್ಟಿಲು, ಚೌರಿ ಗಡ್ಡಿಗಳು, ಬೆಳ್ಳಿಬೆತ್ತ, ಪಂಚಕಲಶ, ದೇವಸ್ಥಾನದ ಗರ್ಭಗುಡಿಯ ಬಾಗಿಲು, ಇವುಗಳಲ್ಲಿ ವಿವಿಧ ವಿನ್ಯಾಸದ ನಕ್ಷೆಗಳನ್ನು ಬಳಸಿ, ಇದುವರೆಗೂ ಒಂದು ಸಾವಿರಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಇವರು ಶಿಲ್ಪಕಲಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ 1989ರಲ್ಲಿ ಗುಲಬರ್ಗಾದ ವಿಶ್ವಕರ್ಮ ಸಮಾಜ, 1996ರಲ್ಲಿ ಸುರಪುರ, 1997ರಲ್ಲಿ ಬಸವನಬಾಗೇವಾಡಿಯಲ್ಲಿ ಸಾರ್ವಜನಿಕರಿಂದ ಸನ್ಮಾನಿತರಾಗಿದ್ದಾರೆ. ಇವರ ಈ ಕಲಾಸೇವೆಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ 2001ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ. (ಪಿಕೆಕೆ)

ಅಶೋಕ ಎಸ್. ಶಟಕಾರ: ರಂಗಭೂಮಿ ಮತ್ತು ಚಿತ್ರ ಕಲಾವಿದರು. 1972 ಜೂನ್ ರಂದು ಬೀದರ ಜಿಲ್ಲೆಯ, ಔರಾದ ತಾಲ್ಲೂಕಿನ ಬಳಕೋಣಿ (ಚೌದ್ರಿ) ಎಂಬ ಊರಿನಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಅನಂತರ ಚಿತ್ರಕಲೆಯಲ್ಲಿ ಡಿಪ್ಲೋಮಾ ಆರ್ಟ್ ಮಾಸ್ಟರ್ ಕೋರ್ಸ್‌ನ್ನು ದಿ



ಐಡಿಯಲ್ ಫೈನ್‌ಆರ್ಟ್ ಇನ್ಸಿಟ್ಯೂಟ್ ಗುಲಬರ್ಗಾದಲ್ಲಿ ಪೂರ್ಣಗೊಳಿಸಿದ್ದಾರೆ. ನಂತರ ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂಲ್ ಆರ್ಟ್ ಗುಲಬರ್ಗಾದಿಂದ ಪಡೆದುಕೊಂಡಿದ್ದಾರೆ.

ಈಗ ಇವರು ದಿ ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕ ರಾಗಿ ಸೇವೆ ಸಲ್ಲಿಸುತ್ತಿರುವ ಇವರು ಸುಮಾರು ಇಪ್ಪತ್ತು ವರ್ಷಗಳ ಕಾಲ ದೃಶ್ಯಕಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡು, ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾ ಪ್ರದರ್ಶನಗಳಲ್ಲಿ, ಸ್ಪರ್ಧೆಗಳಲ್ಲಿ ಹಾಗೂ ಕಲಾಶಿಬಿರಗಳಲ್ಲಿ ಭಾಗವಹಿಸಿರುತ್ತಾರೆ. ಇವರು ಸಮೂಹ ಕಲಾಪ್ರದರ್ಶನವನ್ನು ರಾಷ್ಟ್ರೀಯ ಕಲಾಮೇಳ, ಮದ್ರಾಸ, ದೆಹಲಿ, ಬೆಂಗಳೂರು, ಕೊಲ್ಕತ್ತಾದಲ್ಲಿಯೂ ಮಾಡಿದ್ದಾರೆ.

ಇವರು ಚಿತ್ರಕಲಾಕೃತಿಗಳನ್ನು ರಚಿಸುವುದರೊಂದಿಗೆ ರಂಗ ಭೂಮಿಯಲ್ಲಿಯೂ ಸುಮಾರು 10 ವರ್ಷಗಳಿಂದ ತಮ್ಮನ್ನು ತೊಡಗಿಸಿಕೊಂಡು, ಗುಲಬರ್ಗಾ ಸಮುದಾಯದ ಅನೇಕ ಮಹತ್ವದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅನೇಕ ನಾಟಕ ಗಳನ್ನು ಸಹ ನಿರ್ದೇಶಿಸಿದ್ದಾರೆ. ಆಕಾಶವಾಣಿ–ದೂರದರ್ಶನ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಯ ಬೇರೆ ಬೇರೆ ಆಯಾಮಗಳಾದ ಪ್ರಸಾಧನ, ರಂಗ ಪರಿಕರ, ಹಿನ್ನೆಲೆ ಸಂಗೀತ, ರಂಗಗೀತೆ ಹೀಗೆ ಹಲವಾರು ಪ್ರಕಾರಗಳಲ್ಲಿಯೂ ಇವರು ಸಿದ್ಧಹಸ್ತರು. ಚಿತ್ರಕಲೆ, ಸಂಗೀತ, ನಾಟಕ, ಸಂಘಟನೆ ಹೀಗೆ ಎಲ್ಲಾ ಪ್ರಕಾರಗಳಲ್ಲೂ ಅತೀ ಉತ್ಸಾಹದಿಂದ ಭಾಗವಹಿಸಿ ಸಂತಸ ಪಡುವ ಅಶೋಕ ಶಟಗಾರ ಬಹುಮುಖ ಪ್ರತಿಭೆ ಯೆಂದು ಹೇಳಬಹುದು.



'ಅನ್‌ಟೈಟಲ್' ತೈಲವರ್ಣ

ಇವರ ಕಲಾಕೃತಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಇ.ಎಮ್. ಎಸ್.ಎ. ದಾವಣಗೆರೆ. ಅನೇಕ ಕಲಾಗ್ಯಾಲರಿ ಹಾಗೂ ಕರ್ನಾಟಕದ ಬೇರೆ ಬೇರೆ ಕಲಾ ಕಾಲೇಜುಗಳಲ್ಲಿ ಸಂಗ್ರಹ ಗೊಂಡಿವೆ. ನವದೆಹಲಿಯ ಅವಂತಿಕಾ ಸಂಸ್ಥೆ ಏರ್ಪಡಿಸಿದ ರಾಷ್ಟ್ರಮಟ್ಟದ ಕಲಾ ಸ್ಪರ್ಧೆಯಲ್ಲಿ ಸಮಾಧಾನಕರ ಪ್ರಶಸ್ತಿ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ನೀಡುವ ರಾಜ್ಯೋತ್ಸವ ಪ್ರಶಸ್ತಿ ಯನ್ನು ಪಡೆದುಕೊಂಡಿದ್ದಾರೆ. (ಪಿಪಿ)

ಅಶೋಕ ಗಿರಡ್ಡಿ: ಶಿಕ್ಷಕ ಹಾಗೂ ಸಂಘಟಕ ನಟ. ಯಲಬುರ್ಗಿ ತಾಲ್ಲೂಕಿನ ಹಿರೇಹಂಚಿನಾಳ ಗ್ರಾಮದಲ್ಲಿ ಜನಿಸಿದರು. ಯಲಬುರ್ಗಾ ತಾಲ್ಲೂಕಿನ ಹಿರೇಹಂಚಿನಾಳ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿರುವ ಇವರು ವಿದ್ಯಾರ್ಥಿ ದಿಸೆ ಯಿಂದಲೇ ಕಲೆಯ ಬಗ್ಗೆ ಆಸಕ್ತಿ, ಶ್ರದ್ಧೆಯಿಂದ ದೊಡ್ಡಾಟ ನಾಟಕದ ಮೂಲಕ ಗ್ರಾಮೀಣ ಭಾಗದಲ್ಲಿ ಹೊಸ ಅಲೆಯನ್ನೇ ಪ್ರಾರಂಭಿಸಿದ್ದಾರೆ. ಗಿರೀಶ ಕಾರ್ನಾಡರ ಹಿಟ್ಟಿನಹುಂಜ, ತುಘಲಕ್, ಪ್ರಭುಶಂಕರವರ ಅಂಗೂಲಿಮಾಲಾ ಮುಂತಾದ ಏಕಾಂಕ ನಾಟಕಗಳಲ್ಲಿ ತಮ್ಮ ಅದ್ಭುತ ಅಭಿನಯವನ್ನು ಮೆರೆ ದಿದ್ದಾರೆ.

ಚಲನಚಿತ್ರರಂಗದಲ್ಲೂ ಅಭಿನಯದ ಗೀಳು ಹಚ್ಚಿಕೊಂಡಿ ರುವ ಇವರು ಶಂಕರ ಲಿಂಗಸುಗ್ನಳ್ಳಿ ನಿರ್ದೇಶನದ 'ಏಳುಕೋಟಿ ಮಾರ್ತಾಂಡ ಭೈರವ' ಚಿತ್ರದಲ್ಲಿ ಕಪಿಲಮುನಿ ಋಷಿಯ ಪಾತ್ರ ಹಾಗೂ 'ಈಶ್ವರ ಅಲ್ಲಾ ನೀನೇ ಎಲ್ಲಾ' ಧಾರವಾಹಿಯಲ್ಲಿ ಗ್ರಾಮದ ಚೇರಮನ್ನರಾಗಿ ಪಾತ್ರನಿರ್ವಹಿಸಿದ್ದಾರೆ.

1998ರಲ್ಲಿ ಬೆದವಟ್ಟಿಯಲ್ಲಿ ಜರುಗಿದ ಅಡ್ಡಪಲ್ಲಕ್ಕಿ ಉತ್ಸವ ದಲ್ಲಿ ಭಾಗವಹಿಸಿ ಉತ್ತಮ ಸಮಾಜಸೇವಕ ಮತ್ತು ವಿದ್ಯಾ ಭೂಷಣ ಎಂದು ಪ್ರಶಸ್ತಿಗೂ ಪಾತ್ರರಾಗಿದ್ದಾರೆ. ಇವರು ಶಿರಿಗೇರಿ, ದೊಡ್ಡಬಳ್ಳಾಪುರ, ಬೆಂಗಳೂರ ಮುಂತಾದ ಸ್ಥಳಗಳಲ್ಲಿ ನಾಟಕ ಪ್ರದರ್ಶನ ನೀಡಿದ್ದಾರೆ.

ಸಾಹುಕಾರ ಸಾಕಿದ ಸರ್ಪ, ತಾರನಾಳ ವಿರಚಿತ ಜಾಣ ಜಾರಿಬಿದ್ದ, ಗರತಿ ಹೆಣ್ಣಿಗೆ ಗರ್ವದ ಗಂಡ, ಬೆಟಗೇರಿ ಕೃಷ್ಣಶರ್ಮಾ ವಿರಚಿತ ತ್ಯಾಗಿ ಹೊಸ ಅಲೆ ಮುಂತಾದ ಸಾಮಾಜಿಕ ನಾಟಕ ಗಳಲ್ಲಿ ಕಥಾನಾಯಕ ಪಾತ್ರದಲ್ಲಿ ಅಭಿನಯಿಸಿ ಕಲಾಭಿಮಾನಿಗಳ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇವರ ಕಲಾಪ್ರಾವೀಣ್ಯದಿಂದ ವಿದ್ಯಾರ್ಥಿಗಳಿಗೆ, ರಂಗಾಸಕ್ತರಿಗೆ ಪ್ರಿಯರಾಗಿದ್ದಾರೆ. ಸರಳತೆ ಮತ್ತು ಸುಂದರ ಭಾಷಣಕಾರರಾದ ಇವರು ಕೃಷಿಕರೇ ಹೆಚ್ಚಿರುವ ಹಿರೇಹಂಚಿನಾಳ ಗ್ರಾಮದಲ್ಲಿ ಸಾಹಿತ್ಯದ ಸದಭಿರುಚಿ ಮೂಡಿಸುವ ದೃಷ್ಟಿಯಿಂದ ಬಸವ ಸಾಹಿತ್ಯ ವೇದಿಕೆಯೊಂದನ್ನು ಪ್ರಾರಂಭಿಸಿದ್ದಾರೆ. (ಬಿ)



ಅಶೋಕ ತೋಟ್ನಳ್ಳಿ: ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮದವರಾದ ಅಶೋಕ ವೀರಯ್ಯ ತೋಟ್ನಳ್ಳಿ ಅವರು ಬಹುಮುಖ ಪ್ರತಿಭೆಯ ರಂಗ ಶಿಕ್ಷಕರು. ಸೇಡಂ ತಾಲ್ಲೂಕಿನ ಗಡಿನಾಡು ಗ್ರಾಮ ಜಾಕನಪಲ್ಲಿಯಲ್ಲಿ ಸರ್ಕಾರಿ ಪ್ರೌಢ ಶಾಲಾ ನಾಟಕ ಶಿಕ್ಷಕರಾಗಿ 2008 ರಿಂದ ಸೇವೆ ಸಲ್ಲಿಸುತ್ತಿದ್ದಾರೆ. 2007ರಲ್ಲಿ ನಿನಾಸಂ ರಂಗ ಶಿಕ್ಷಣ ಕೇಂದ್ರದಿಂದ ಡಿಪ್ಲೋಮಾ ಇನ್ ಡ್ರಾಮಾ ವ್ಯಾಸಂಗ ಮಾಡಿದ ಇವರು ಚಿತ್ರಕಲಾ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದಾರೆ. ಪೋಟೋಗ್ರಾಫಿ ಇವರ ಮುಖ್ಯ ಹವ್ಯಾಸ. 1998 ರಿಂದ ಬೀದಿ ನಾಟಕಗಳು, ಕಾಲೇಜು ಯುವ ಜನೋತ್ಸವದ ನಾಟಕ ಸ್ಪರ್ಧೆ ಅಂತರ ರಾಜ್ಯಗಳ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಫಲಕಗಳನ್ನು ಗಳಿಸಿದ್ದಾರೆ. ಜಾಕನಪಲ್ಲಿಯ ಶಾಲಾ ವಿದ್ಯಾರ್ಥಿಗಳಲ್ಲದೆ ಊರಿನ ಯುವಕರನ್ನು ಸಂಘಟಿಸಿ 'ನಾನು ನಮ್ಮೂರು' ಎನ್ನುವ ಬ್ಯಾನರಿನಡಿಯಲ್ಲಿ ಪ್ರತಿ ತಿಂಗಳು 'ತಿಂಗಳ ಸಂಜೆ'ಯಲ್ಲಿ ಒಂದಲ್ಲ ಒಂದು ರಂಗ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ರೈತರೊಂದಿಗೆ ವಿದ್ಯಾರ್ಥಿಗಳನ್ನು ಸಂಘಟಿಸಿ, ಜನಪದದ ಹಂತಿಹಾಡು, ಕವಿತಾ ವಾಚನ, ಗುಂಪು ಚರ್ಚೆಯಲ್ಲಿ ನಡೆಸುವ 'ರಸ ನಿಮಿಷದ ರಸ ಪ್ರಶ್ನೆ' ಒಂದು ವಿಶೇಷ ಕಾರ್ಯಕ್ರಮ 2008ರಿಂದ ಪ್ರತಿವರ್ಷ ತಪ್ಪದೇ 'ವಿಶ್ವ ರಂಗ' (World Theatric) ದಿನಾಚರಣೆಯನ್ನು ಗ್ರಾಮೀಣ ಜನರೊಂದಿಗೆ ಹಮ್ಮಿಕೊಂಡು ನಾಟಕ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುತ್ತಾರೆ.

ವಿಗಡ ವಿಕ್ರಮರಾಯ, ಯಾರೂ ಅಂದರು, 'ಎರಡು ಅಂತ್ಯ ಎರಡು ಅಭಿಷೇಕ', 'ಚಂದ್ರಾಬಲ ತಾರಾಬಲ', 'ಸ್ವಯಂವರ ಲೋಕ', 'ಹುಲಿಯ ನೆರಳು' ಮುಂತಾದ ನಾಟಕಗಳಲ್ಲಿ ಮುಖ್ಯ ನಟರಾಗಿ ಭಾಗವಹಿಸಿದ ಇವರು ನಿರ್ದೇಶಕರೂ ಹೌದು. 'ಮಣ್ಣಾದ ಮಣ್ಣಿನ ಮಕ್ಕಳು', 'ಮಾನ್ಯಖೇಟದ ಮುಕುಟ', 'ಕಾಸಿಗೊಂದು ಸೇರು', 'ಮಕ್ಕಳ ರಾಮಾಯಣ', 'ಮಕ್ಕಳ ಸ್ಕೂಲ್ ಮನೇಲಿ', 'ಪರಿವರ್ತನೆ', 'ಕೊಲ್ಲೂರು ಗ್ರಾಮ' 'ಬುದ್ಧ ನೆಡೆಗೆ', ಅಹಮದ್ ಮೂಚಿ', 'ಬಸಯ್ಯ ಜೇನುಗೂಡು', 'ಕೆರೆಗೆ ಹಾರ', 'ಸತ್ತು ಬದುಕಿದೆವು', 'ಬೆರಳುಗಳು', 'ಒಂದು ರಾತ್ರಿ' 'ಕಕೇಶಿಯನ್', 'ಚೌಕ್ ಸರ್ಕಲ್' ಮುಂತಾದವು. ಇವರು ವಿಶೇಷ ಬೆಳಕಿನ ವಿನ್ಯಾಸಗಾರರೂ ಹೌದು. ಸುಮಾರು 20ಕ್ಕೂ ಹೆಚ್ಚು ನಾಟಕಗಳಿಗೆ ಬೆಳಕು ವಿನ್ಯಾಸಗಾರರಾಗಿ ಸೇವೆ ಸಲ್ಲಿಸಿದ್ದಾರೆ. 2010ರಲ್ಲಿ ಗುಲಬರ್ಗಾದಲ್ಲಿ ನಡೆದ ರಂಗಾಯಣ, ಧಾರವಾಡ, ಇವರು ಗುಲಬರ್ಗಾದ ಡಾ. ಎಸ್.ಎಂ. ಪಂಡಿತ ರಂಗ ಮಂದಿರದಲ್ಲಿ ನವರಾತ್ರಿಯ 9 ದಿನಗಳ ನಾಟಕೋತ್ಸವಕ್ಕೆ ಬೆಳಕಿನ ವಿನ್ಯಾಸಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಇನ್ನೂ ವಿಶೇಷವೆಂದರೆ ಹೈದ್ರಾಬಾದ ಕರ್ನಾಟಕದ ಗುಲಬರ್ಗಾದಲ್ಲಿ ಸ್ಪಾಟ್ ಲೈಟ್, ಪಾರ್‌ಲೈಟ್, ನ್ಯಾರೋಲೈಟ್ ನಂತಹ ಅಪರೂಪದ ಉಪಕರಣಗಳನ್ನು ಹೊಂದಿದ್ದು, ಗುಲಬರ್ಗಾ, ರಾಯಚೂರು, ಬೀದರ್ ಜಿಲ್ಲೆಗಳಿಗೆ ರಂಗಕ್ಕೆ ಬೆಳಕಿನ ವ್ಯವಸ್ಥೆ ಸಿಗುವಂತಾಗಿದೆ. ಇಲ್ಲದಿದ್ದರೆ ನಾಟಕ ಕಲಾವಿದರು ಬೆಳಕಿನ ವ್ಯವಸ್ಥೆಗೆ ಬೆಂಗಳೂರು, ಹೈದ್ರಾಬಾದ್‌ಗೆ ಹೋಗಬೇಕಿತ್ತು. ರಘುನಂದನ, ಅಕ್ಷರ, ಚನ್ನಕೇಶವ, ಮಂಜು ಕೊಡುಗು, ಮಲ್ಲೇಶ ಬಡಿಗೇರ ಮುಂತಾದವರ ಸಹವಾಸದಲ್ಲಿರುವ ಇವರು ಸದಾ ರಂಗಕ್ಕಾಗಿ ಓಡಾಡುವ ರಂಗ ಜಂಗಮ. (ಎಸ್‌ಆರ್‌ಜಿ)

ಅಶೋಕ ಪಾಟೀಲ್: ಕವಿ, ಕಲಾವಿದ, ಛಾಯಾಗ್ರಾಹಕ. ಯಾದಗೀರ್ ಜಿಲ್ಲೆ ಸುರಪುರ ತಾಲೂಕಿನ ಕೊಡೇಕಲ್ ಗ್ರಾಮದವರು. ಗ್ರಾಮೀಣ ಪ್ರದೇಶದ ಅಪರೂಪದ ಬಹುಮುಖ ಪ್ರತಿಭೆಯ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಹುಟ್ಟೂರಾದ ಕೊಡೇಕಲ್‌ದಲ್ಲಿ ಮುಗಿಸಿ, ನೆರೆಯ ಸಿಂಧಗಿಯ ಆರ್.ಡಿ. ಪಾಟೀಲ್ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ. ಪಾಸಾಗಿ, ಧಾರವಾಡದ ಅಂಜುಮನ್ ಜೂನಿಯರ್ ಕಾಲೇಜ್‌ನಲ್ಲಿ ಪಿ.ಯು.ಸಿ. ಮುಂದೆ ಜೆ.ಎಸ್.ಎಸ್. ಕಾಲೇಜ್‌ನಲ್ಲಿ ಪ್ರವೇಶ ಪಡೆದು, ಆರ್ಥಿಕ ಅಡಚಣೆಯಿಂದ ಒಂದೇ ವರ್ಷಕ್ಕೆ ಬಿಟ್ಟು ಪದವಿ ಪಡೆಯದೇ ಹೊರಬಂದರು.

ಗುರು ಹಿರಿಯರು ನುಡಿದಂತೆ ಬದುಕಿನಲ್ಲಿ ನಡೆದಷ್ಟು ದಾರಿಯಿದೆ, ಪಡೆದಷ್ಟು ಭಾಗ್ಯವಿದೆ ಎಂಬಂತೆ ಇವರು ಕಷ್ಟದ ಬದುಕನ್ನು ಎದುರಿಸಿ ಹುಬ್ಬಳ್ಳಿಯ ಶ್ರೀ ವಿಜಯ ಮಹಾಂತೇಶ ಚಿತ್ರಕಲಾ ಮಹಾವಿದ್ಯಾಲಯದಲ್ಲಿ 'ಡಿಪ್ಲೊಮಾ ಇನ್ ಫೈನ್ ಆರ್ಟ್ಸ್' ಪದವಿ ಪಡೆದರು.

ಆಧ್ಯಾತ್ಮ ಚಿಂತನೆ, ಶಾಸ್ತ್ರೀಯ ಸಂಗೀತ ಕೇಳುವುದು, ಧಾರ್ಮಿಕ ಕ್ಷೇತ್ರಗಳಿಗೆ ಹಾಗೂ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಡುವುದು ಇವರ ಹವ್ಯಾಸ. ಇವರು 'ರಾಜ್ಯ ಮಟ್ಟದ ಚಿತ್ರಕಲೆ ಹಾಗೂ ಛಾಯಾಗ್ರಹಣ ಸ್ಪರ್ಧೆ'ಗಳಲ್ಲಿ ಭಾಗವಹಿಸಿ ಪ್ರಶಂಸೆ ಪಡೆದಿದ್ದಾರೆ. ಸ್ಥಳೀಯ ಶ್ರೀ ದುರದುಂಡೇಶ್ವರ ವಿರಕ್ತಮಠದಲ್ಲಿ ಶ್ರೀ ನಿಜಗುಣ ಶಿವಯೋಗಿ ಸ್ವಾಮಿಗಳ ತೈಲವರ್ಣದ ಚಿತ್ರಕ್ಕಾಗಿ ಶ್ರೀ ಶಿವಕುಮಾರ ದೇವರಿಂದ ಸನ್ಮಾನ ಪಡೆದುಕೊಂಡಿದ್ದಾರೆ.


(ಎಸ್‌ವೈಕೆ)

ಅಶೋಕ ಕುಮಾರ ಹಿರೇಮಠ: ಚಿತ್ರಕಲಾವಿದ. ಇವರ ಕಲೆಗಳಲ್ಲಿ ನಿರಾಶ್ರಿತರು, ಭಿಕ್ಷುಕ, ನಿಸರ್ಗ, ವೇಶ್ಯಾವೃತ್ತಿ, ಮಾದಕ ವಸ್ತುಗಳ ಸೇವನೆಯಿಂದ ಆಗುವ ಪರಿಣಾಮಗಳು ಹೀಗೆ ಹತ್ತು ಹಲವು ವಿಷಯಗಳು ಬಟ್ಟ ಬಯಲಾಗಿ ಆಸಕ್ತರ ಕುತೂಹಲಗಳನ್ನು ದಟ್ಟವಾಗಿ ಸುತ್ತವೆ. ನಿಸರ್ಗಚಿತ್ರ–ಸಂಯೋಜನೆ, ಭಾವಚಿತ್ರ, ಪೆನ್ಸಿಲ್ ಸ್ಕೆಚಸ್, ರಿಯಲಿಸ್ಟಿಕ್ ಭಾವಚಿತ್ರ ಕಲಾಮಾಧ್ಯಮದಲ್ಲಿ ಇವರಿಗಿರುವ ಆಸಕ್ತಿಯ ಜೀವಂತ ರೂಪಕಗಳಾಗಿ ಮೂಡಿ ಬರುತ್ತವೆ.



ಕರ್ನಾಟಕ ಲಲಿತಕಲಾ ಅಕಾಡೆಮಿ ಧನಸಹಾಯದಿಂದ ಇವರು ವಿಜಾಪುರದ ಆರ್ಟ್‌ಗ್ಯಾಲರಿಯಲ್ಲಿ ಇತ್ತೀಚಿಗೆ ನಾಲ್ಕು ದಿನಗಳ ಕಾಲ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದರು. ಒಟ್ಟು 48 ಕೃತಿಗಳು ಈ ಕಾಲಕ್ಕೆ ಪ್ರದರ್ಶಿತವಾದವು. ಜಲವರ್ಣ, ತೈಲವರ್ಣ, ಇಂಡಿಯನ್ ಇಂಕ್, ಪೇಸ್ಟಲ್ ಮಾಧ್ಯಮದಿಂದ ರಚಿಸಿದ ಪ್ರಸಕ್ತದ ಕೃತಿಗಳು ಈ ಯುವಕ ಭರವಸೆ ಹುಟ್ಟಿಸುವ ಕಲಾವಿದ ಎಂಬುದನ್ನು ನೆನಪಿಸಿಕೊಟ್ಟವು.

ಬೀದರ್ ಜಿಲ್ಲೆಯ ಹುಮ್ನಾಬಾದಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಚಿತ್ರಕಲಾ ಶಿಕ್ಷಕರಾಗಿರುವ ಅಶೋಕ ಕುಮಾರ್ ಅವರು ಜನಿಸಿದ್ದು, ಅಧ್ಯಯನ ಮಾಡಿದ್ದು ಕಲ್ಬುರ್ಗಿಯಲ್ಲಿ. ಇವರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು 1985ರಲ್ಲಿ ಭಾಲ್ಕಿಯ ಸತ್ಯನಿಕೇತನ ಕಾಲೇಜಿನಲ್ಲಿ, 1993ರಲ್ಲಿ ಹುಮ್ನಾಬಾದಿನ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದರು. 1983ರಲ್ಲಿ ಬೆಂಗಳೂರಿನ ವೆಂಕಟಪ್ಪ ಆರ್ಟ್‌ಗ್ಯಾಲರಿಯಲ್ಲಿ, ಧಾರವಾಡದ ರೈನ್‌ಬೋ ಆರ್ಟ್ಸ್ ಕೌನ್ಸಿಲ್‌ನಲ್ಲಿ, 1984ರಲ್ಲಿ ಕಲ್ಬುರ್ಗಿಯ ರಾಜಧಾನಿ ವಸತಿಗೃಹದಲ್ಲಿ, 1982ರಿಂದ 84ರ ವರೆಗೆ ಹೈದರಾಬಾದ್, ಮೈಸೂರು ರಾಯಚೂರುಗಳಲ್ಲಿ ಇವರು ಸಮೂಹ ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. 1983 ರಲ್ಲಿ ಬದಾಮಿಯಲ್ಲಿ, 1992ರಲ್ಲಿ ಬೆಂಗಳೂರಿನಲ್ಲಿ, 1993 ರಲ್ಲಿ ನವದೆಹಲಿಯಲ್ಲಿ, 1994ರಲ್ಲಿ ಮಂಗಳೂರಿನಲ್ಲಿ ಇವರು ಕಲಾವಿದರ ಶಿಬಿರದಲ್ಲಿ ಭಾಗವಹಿಸಿದ್ದರು. (ಪಿಪಿ)



'ಕನಸು' ತೈಲವರ್ಣ

ಅಶ್ವಿನಿ ಜಿ.ಕೆ.: ಕಲಾವಿದೆ ಅಶ್ವಿನಿ ಜಿ.ಕೆ ಇವರು ಮೂಲತಃ ಗುಲಬರ್ಗಾ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಆಳಂದದವರು. 1979 ಸೆಪ್ಟೆಂಬರ್ 24ರಂದು ಜನಸಿದರು. ತಾಯಿ ಮನೋರಮಾ. ತಂದೆ ಸದಾಶಿವರಾವ್, ಇವರ ಪ್ರೋತ್ಸಾಹದಿಂದ ಡಿಪ್ಲೋಮಾ ಇನ್ ಪೇಂಟಿಂಗ್ ಪದವಿಯನ್ನು ಪಡೆದರು.

ಇವರ ಕಲಾಕೃತಿಗಳ ಹೆಚ್ಚಾಗಿ ಸೃಜನಶೀಲ ಶೈಲಿಯನ್ನು ಹೊಂದಿದ್ದು, ಹಗಲು ಕನಸು, ಇನ್ ಜನರಲ್ ಥೀಮ್‌ನಲ್ಲಿ ರಚಿಸಿದ್ದು, ಇನ್ನೂ ಕೆಲವು ಮನಸ್ಸಿನ ರಮ್ಯ ಲೋಕದ ಭಾವನೆಗಳ ಬಗ್ಗೆ ಮತ್ತು 'ಪ್ರಾಂಕ್' ಚಿಂತನೆಗೆ ಒಳಗಾಗಿ ಸೆಕ್ಸ್‌ನಲ್ಲಿ ಸೇಬುಹಣ್ಣು ಇಟ್ಟುಕೊಂಡು ಹೆಣ್ಣಿನ ಭಾವನೆಗಳ ಹೆಚ್ಚಾಗಿ ತೋರಿಸಿದ್ದಾರೆ. ಅಲ್ಲದೇ 2001ರಲ್ಲಿ ಕರ್ನಾಟಕ ಹಿಂದಿ ಪರಿಷತ್ ಸಭಾ, ಗುಲಬರ್ಗಾ. 2005ರಲ್ಲಿ ತ್ರಿವೇಣಿ ಕನ್‌ಟೆಂಪ್ರವರಿ ಆರ್ಟ್‌ಸ್ಟ್ ಫ್ರೀನ್‌ಜಾ ಹೈದ್ರಾಬಾದ, 2006ರಲ್ಲಿ ಹುಮನಾಬಾದನಲ್ಲಿ ಮತ್ತು 2008ರಲ್ಲಿ ಲಲಿತಕಲಾ ಅಕಾಡೆಮಿ ಬೆಂಗಳೂರು, 2009ರಲ್ಲಿ 1 ರಿಂದ 8 ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು, 2011 ಡಿಸೆಂಬರ್ 20ರಂದು ವೈಬ್ರನ್ಸ್ ವಿಕ್ಟೋಸಸ್ ಆರ್ಟ್ಸ್‌ಗ್ಯಾಲರಿ ಜಯನಗರ ಬೆಂಗಳೂರು ಈ ಮೇಲಿನ ಸ್ಥಳಗಳಲ್ಲಿ ಸಂಘಟಿತವಾದ ಗುಂಪು ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ.

ಇವರು 1998, 99, 2000ರಲ್ಲಿ ವಾರ್ಷಿಕ ಕಲಾಪ್ರದರ್ಶನ ಎಂ.ಎಂ.ಕೆ. ಕಾಲೇಜ್, ಗುಲಬರ್ಗಾ, 1999–2000ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 2000ರಲ್ಲಿ 'ಪ್ರತಿಭ ಹುಡುಕಾಟ' ಕಲಾ ಪ್ರದರ್ಶನ ಗುಲಬರ್ಗಾ. 2000ರಲ್ಲಿ ಭಾರತೀಯ ಕಲಾ ಪ್ರದರ್ಶನ ಎಸ್‌ಸಿಝೆಡ್‌ಸಿಸಿ, ನಾಗಪುರ. 2001ರಲ್ಲಿ ಎಬಿವಿಪಿ, ಬೆಂಗಳೂರನಲ್ಲಿ ಮತ್ತು 2000ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಅಲ್ಲದೇ 2001 ರಲ್ಲಿ ಲೋಕಮಾನ್ಯ ತಿಲಕ, ಪುಣೆ-- ಹೀಗೆ ಹಲವು ಕಡೆಗಳಲ್ಲಿ ಭಾಗವಹಿಸಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

1996ರಲ್ಲಿ ಉತ್ತಮ ವಸ್ತುಚಿತ್ರಣ (ಬೆಸ್ಟ್ ಸ್ಟಿಲ್‌ಲೈಫ್ ಆವಾರ್ಡ್)ಗೆ ಪ್ರಶಸ್ತಿ ದೊರೆಕಿದ್ದು, 2000ರಲ್ಲಿ 'ಪ್ರತಿಭೆ

ಹುಡುಕಾಟ' ಗುಲಬರ್ಗಾದಲ್ಲಿ ಭಾಗವಹಿಸಿ ಮತ್ತು ವಾರ್ಷಿಕ ಕಲಾ ಪ್ರದರ್ಶನ ದಿ. ಐಡಿಯಲ್ ಫೈನ್‌ಆರ್ಟ್ಸ್ ಗುಲಬರ್ಗಾ ಇವರಿಂದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಚಿತ್ರಕಲಾ ಕ್ಷೇತ್ರದಲ್ಲಿ ಇವರ ಕೊಡುಗೆ ಅಪಾರವಾದದ್ದು, ಅಶ್ವಿನಿಯವರು ಖಾಸಗಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಾ, ಪತಿಗೆ ತಕ್ಕ ಸತಿಯಾಗಿ ಗಂಡನ ಕಲಾ ಪ್ರತಿಭೆಗೆ ಬೆನ್ನೆಲುಬಾಗಿ ನಿಂತು ಸಹಕರಿಸಿದ್ದಾರೆ. ಅಲ್ಲದೇ ತಮ್ಮ ಕಲೆಯ ಹೆಜ್ಜೆ, ಹೆಜ್ಜೆಗೂ ದಾರಿದೀಪವಾಗಿ ಕಲಾಜಗತ್ತಿನಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವಲ್ಲಿ ಇವರ ಗಂಡನಾದ ಕೆ. ಗೋವರ್ಧನ್ ಅವರ ಪಾತ್ರ ಮಹಾತ್ವದಾಗಿದೆ. ಗಂಡ–ಹೆಂಡತಿ ಇಬ್ಬರೂ ಕಲಾವಿದರಾಗಿ ಕಲಾಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ವಾದ ಸ್ಥಾನವನ್ನು ಗುರುತಿಸಿಕೊಂಡಿದ್ದು ಅದರಲ್ಲೂ ಮಹಿಳಾ ಕಲಾವಿದೆ ಅಶ್ವಿನಿಯವರು ಕಲಾಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. (ಬಿಕೆಎಲ್)

ಅಳತೆ ಮಾಪನಗಳು: ಮನುಷ್ಯ ಸಾಂಸ್ಕೃತಿಕವಾಗಿ ಬೆಳೆದಂತೆ ಅವನ ಅಗತ್ಯಗಳು ಹೆಚ್ಚುತ್ತಾ ಹೋದವು. ಅವನ ಅಗತ್ಯಕ್ಕೆ ತಕ್ಕಂತೆ ಅನೇಕ ವಸ್ತುಗಳು ನಿರ್ಮಾಣವಾಗುತ್ತಾ ಹೋದವು. ಅಂತೆಯೇ ಅಳತೆ ಮಾಪನಗಳು ಸಹ ಮನುಷ್ಯನ ಸಾಂಸ್ಕೃತಿಕ ಬದುಕಿನ ಅಗತ್ಯಗಳಾಗಿಯೇ ನಿರ್ಮಾಣವಾದವುಗಳು, ಮನುಷ್ಯ ಯಾವಾಗ ಉತ್ಪಾದಿಸಿದ ವಸ್ತುಗಳನ್ನು ವಿನಿಮಯ ಮಾಡಿ ಕೊಳ್ಳಲು ಮಾರಾಟ ಮಾಡಲು ಆತನಿಗೆ ನಿರ್ದಿಷ್ಟ ಮಾಪನಗಳ ಆವಶ್ಯಕತೆ ಉಂಟಾಯಿತು. ಹೀಗಾಗಿ ಅಳತೆ ಮಾಪನಗಳು ಹುಟ್ಟಿಕೊಂಡವು.

ಅಳತೆ ಮಾಪನಗಳಲ್ಲಿ ಅನೇಕ ಪ್ರಕಾರಗಳಿವೆ. ದವಸಧಾನ್ಯ ಗಳು, ದ್ರವ ವಸ್ತುಗಳು, ಬಟ್ಟೆ, ಭೂಮಿ ಹೀಗೆ ವಸ್ತುವನ್ನು ಅವಲಂಬಿಸಿ ಅಳತೆ ಮಾಪನಗಳಲ್ಲಿ ಭಿನ್ನತೆಗಳಿವೆ. ಹಾಗೆಯೇ ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಅಳತೆ ಮಾಪನ ಗಳು ಭಿನ್ನತೆಯನ್ನು ಪಡೆಯುತ್ತವೆ.

ಪ್ರಾಚೀನ ಕಾಲದಲ್ಲಿ ದವಸ ಧಾನ್ಯಗಳನ್ನು ಸೇರಿನಿಂದ ಅಳೆಯುವ ಪದ್ಧತಿ ಜಾರಿಯಲ್ಲಿತ್ತು. ಸೇರು, ಅಚ್ಚೇರು (ಅರ್ಧಸೇರು), ಕೊಳಿ (ಗಿರ್ಧಸೇರು ಅಥವಾ ಪಾವು), ಅದ್ದನಿ (ಅರ್ಧಸೇರು), ಗಿದ್ದನಿ (ಗಿರ್ಧಸೇರು), ಇದ್ದನಿ (2ಸೇರು), ಪಂಚೇರು (5ಸೇರು) ಇವು ಆಗಿನ ಅಳತೆ ಮಾಪನಗಳಾಗಿದ್ದವು. ಈಗ ದವಸ ಧಾನ್ಯಗಳನ್ನು ಸ್ಟೆರಿಗೆ ಬದಲಾಗಿ ಕಿ.ಗ್ರಾಂ ಗಳಲ್ಲಿ ತೂಕ ಮಾಡಲಾಗುತ್ತದೆ. ಕಿ.ಗ್ರಾಂ. ಅರ್ಧ ಕಿ.ಗ್ರಾಂ, ಪಾವಕಿ ಗ್ರಾಂ, ಪಾವು, ನೋಟಾಕ ತೊಲಿ ಮೂಲಕ ದವಸಧಾನ್ಯಗಳನ್ನು ಅಳೆಯಲಾಗುತ್ತದೆ.

ಹಿಂದಿನ ಕಾಲದಲ್ಲಿ ಧಾನ್ಯಗಳನ್ನು ಅಳೆಯುವ ಮಾಪನ ಗಳನ್ನು ಕಟ್ಟಿಗೆಯಿಂದ ತಯಾರಿಸುತ್ತಿದ್ದರು. ಹಾಲು ಬರುವ ಹೊಂಗೆ, ಹಲಸು ಮುಂತಾದ ಮರಗಳಿಂದ ಇವನ್ನು ತಯಾರಿಸ ಬೇಕೆಂಬ ನಂಬಿಕೆ ಇತ್ತು. ಹಾಲು ಸಮೃದ್ಧಿಯ ಸಂಕೇತವಾಗಿದ್ದು



ಅಳತೆ ಮಾಪನಗಳು

ಇಂತಹ ಮರಗಳಿಂದ ತಯಾರಿಸಿದ ಮಾಪನಗಳಿಂದ ಅಳೆಯುವುದರಿಂದ ದವಸ ಧಾನ್ಯಗಳು ಹೆಚ್ಚುತ್ತವೆ ಎಂಬ ನಂಬಿಕೆಯೇ ಇದಕ್ಕೆ ಕಾರಣ. ಅಳತೆ ಮಾಪನದ ಅಳತೆಗೆ ತಕ್ಕಂತೆ ಮರದ ತುಂಡನ್ನು ಒಳಭಾಗದಲ್ಲಿ ಕೊರೆದು ಉರುಟುರುಟಾಗಿ ಮಾಡುತ್ತಿದ್ದರು. ಹೊರಭಾಗವನ್ನು ನುಣುಪುಗೊಳಿಸಿ, ಮೇಲ್ಭಾಗ ದಲ್ಲಿ ಕಲಾತ್ಮಕ ರಚನೆಯನ್ನು ಮಾಡುತ್ತಿದ್ದರು. ಅದಕ್ಕಾಗಿ ನುಣುಪಾದ ಮರಗಳನ್ನು ಇದಕ್ಕೆ ಬಳಸುತ್ತಿದ್ದರು. ವ್ಯವಸಾಯಕ್ಕೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುವ ಬಡಿಗರು ಇವನ್ನು ತಯಾರಿಸುತ್ತಿದ್ದರು. ಅನಂತರ ಕಬ್ಬಿಣದಿಂದ ತಯಾರಿಸಲು ಪ್ರಾರಂಭಿಸಿದರು. ಕಬ್ಬಿಣದಿಂದ ಕೊಳವೆ ಆಕಾರ ಮಾಡಿ ಕೆಳಗೆ ಅನಸು ಹಾಕಿ ಕಮ್ಮಾರರು ಇವನ್ನು ತಯಾರಿಸುತ್ತಿದ್ದರು.

ಹಾಲು, ಎಣ್ಣೆ, ತುಪ್ಪಗಳನ್ನು ಸೇರು, ಕೊಂಡೆ ಮುಂತಾದ ಮಾಪನಗಳಿಂದ ಅಳೆಯುತ್ತಿದ್ದರು. ತೆಂಗಿನ ಗರಟೆಯಿಂದ ಕೊಂಡೆಯನ್ನು ಕತ್ತರಿಸಿಕೊಂಡು ಅದಕ್ಕೆ ಹಿಡಿಮಾಡಿ ಬಳಸು ತ್ತಿದ್ದರು. ಈಗ ಈ ದ್ರವ ಪದಾರ್ಥಗಳನ್ನು ಲೀಟರಗಳಲ್ಲಿ ಅಳೆದು ಅಥವಾ ಕಿ.ಗ್ರಾಂ.ಗಳಲ್ಲಿ ತೂಗಿಕೊಡಲಾಗುತ್ತದೆ.

ಬಟ್ಟೆಯನ್ನು ಗೇಣು, ಚೋಟು ಎಂದು ಕೈಯಿಂದ ಅಳೆ ಯುವ ಪದ್ಧತಿ ಇತ್ತು. ಆದರೆ ಈಗ ಬಟ್ಟೆಯನ್ನು ಕಟ್ಟಿಗೆ, ಕಬ್ಬಿಣದ ಮೀಟರ ಪಟ್ಟಿಯಿಂದ ಅಳೆಯುತ್ತಾರೆ. ಹಾಗೆಯೇ ದಾರಿಯ ಮಾರ್ಗವನ್ನು ಮೈಲು, ಹರದಾರಿ, ಎಂದು ಮಾಪನ ಮಾಡು ತ್ತಿದ್ದರು ಇಂದು ಅವುಗಳ ಬದಲಾಗಿ ಕಿ.ಮೀ. ಪ್ರವೇಶಿಸಿದೆ.

ಭೂಮಿಯನ್ನು ಗುಂಟಿ, ಎಕರೆ, ಕುರಗಿ ಮಾಪನಗಳಲ್ಲಿ ಅಳೆಯುವುದು ಈಗಲೂ ಅದೇ ಮಾಪನಗಳು ಚಾಲ್ತಿಯಲ್ಲಿವೆ. ಮನುಷ್ಯನ ಅವಶ್ಯಕತೆಗಾಗಿ ಹುಟ್ಟಿಕೊಂಡ ಈ ಅಳತೆ ಮಾಪನ ಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಪಡೆದಿದ್ದರು ಮನುಷ್ಯನ ಜೀವನದಲ್ಲಿ ಇವತ್ತಿಗೂ ಅವಶ್ಯಕತೆ ಗಳಾಗಿಯೇ ಉಳಿದುಕೊಂಡಿವೆ.

(ಆರ್‌ಎಸ್)

ಆ

ಆಗಯ್ಯ ಬಸವಯ್ಯ ಆಚಾರ್ಯ: ಸಂಗೀತ ಮತ್ತು ನಾಟಕ ಕಲಾವಿದ. ಆಂಧ್ರದ ಗಡಿಗೆ ಹೊಂದಿಕೊಂಡಿರುವ ತಾಲ್ಲೂಕಿನ ಚಿಂತಾಕಿ ಗ್ರಾಮದವರು. ಇವರು ತಮ್ಮ ಜೀವನದ ತುಂಬೆಲ್ಲ ನಾಟಕ ಮತ್ತು ಸಂಗೀತ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುವುದರಲ್ಲಿ ಎಲೆಮರೆಕಾಯಿಯಂತೆ ಕೆಲಸ ಮಾಡುತ್ತಿದ್ದಾರೆ.

ಮರಾಠಿ ಲಿಪಿ ಬಳಸಿ ಕನ್ನಡ ಭಾಷೆಯಲ್ಲಿ ಹಲವು ನಾಟಕಗಳನ್ನು ಬರೆದಿದ್ದಾರೆ. ಈಗಲೂ ಇವರ ಬಳಿ ಕೈಬರಹದ ಹಲವು ನಾಟಕಗಳ ಪುಸ್ತಕಗಳಿವೆ. ಅವರು ಬರೆದು ನಿರ್ದೇಶನ ಮಾಡಿದ ಅನೇಕ ನಾಟಕಗಳು ನೆರೆಯ ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿಯೂ ಪ್ರದರ್ಶನಗೊಂಡಿವೆ. ಹೀಗಾಗಿ ಅಲ್ಲಿಯ ಕಲಾಪ್ರೇಮಿಗಳು ಇಂದಿಗೂ ಅವರನ್ನು ನೆನಪಿಸಿಕೊಂಡು ಭೇಟಿ ಮಾಡಲು ಬರುತ್ತಾರೆ.

ಭೀಷ್ಮ ಪ್ರತಿಜ್ಞೆ, ಸಿರಯಾಳ ಚಾಂಗುಣ, ಅರ್ಜುನ ವಿಜಯ, ರಾವಣವಧೆ, ಸಂಪೂರ್ಣರಾಮಾಯಣ, ದ್ರೌಪದಿ ವಸ್ತ್ರಾಪಹರಣ, ಸಂತಸಕ್ಕೂಬಾಯಿ, ರತಿಕಲ್ಯಾಣ, ಸೇವಾಲಾಲ್, ಮಹಾಭಾರತ, ಚಂದ್ರಹಾಸ ನಾಟಕಗಳು ಬರೆದು ಆಡಿಸಿದ್ದಾರೆ. ದೊಡ್ಡಾಟ ಪ್ರವೀಣರು ಆದ ಆಗಯ್ಯ ಹಲವೆಡೆ ದೊಡ್ಡಾಟ ಕಲೆ ಪ್ರದರ್ಶಿಸಿದ್ದಾರೆ. ನಾಟಕದ ಜೊತೆಗೆ ಸಂಗೀತ ಕಲಾವಿದರಾದ ಅವರು ಇಂಥ ಇಳಿ ವಯಸ್ಸಿನಲ್ಲೂ ಬಹಳ ಚೆನ್ನಾಗಿ ಹಾಡುತ್ತಾರೆ.

ಬೀದರ್‌ನ ಕೆಲ ಸಂಘಟನೆಗಳು ಇವರನ್ನು ಕರೆಸಿ ಸನ್ಮಾನಿಸಿದ್ದಾರೆ. ಈಚೆಗೆ ನವೆಂಬರ್ 1 ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತಾಲ್ಲೂಕು ಆಡಳಿತ ಅವರನ್ನು ಉತ್ತಮ ಕಲಾವಿದರೆಂದು ಗುರುತಿಸಿ 'ಅಮರವಾಡಿ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಅವರಿಗೆ ತುಂಬ ಖುಷಿ ತಂದು ಕೊಟ್ಟಿದೆ. (ಎಂಎಸ್ಎ)

ಆಕಾಶವಾಣಿ-ದೂರದರ್ಶನ: ಹೈದ್ರಾಬಾದ ಕರ್ನಾಟಕ ಭಾಗದ ವಿದ್ಯುನ್ಮಾನ ಪ್ರಸಾರ ಪರಂಪರೆಯಲ್ಲಿ ಆಕಾಶವಾಣಿ ಹಾಗೂ ದೂರದರ್ಶನ ಗುಬಲರ್ಗಾ ಕೇಂದ್ರಗಳು ಜಾನಪದ ಮಾಧ್ಯಮಗಳಾಗಿ ಅಸ್ತಿತ್ವ ಉಳಿಸಿಕೊಂಡು ಬೆಳೆದ ಪ್ರಭಾವಿ ಸಾರ್ವಜನಿಕ ಸಂಸ್ಥೆಗಳು. ಈ ಭಾಗದ ಪ್ರಾದೇಶಿಕ ವಿದ್ಯುನ್ಮಾನ ಪ್ರಸಾರ ಇತಿಹಾಸದ ಮೊದಲ ಹೆಜ್ಜೆಗಳನ್ನಿಟ್ಟಿದ್ದು ಆಕಾಶವಾಣಿ ಗುಲಬರ್ಗಾ ಕೇಂದ್ರ. ಈ ಹಿಂದೆ ಧಾರವಾಡ ಬಾನುಲಿ ಕೇಂದ್ರದ ಉಪಕೇಂದ್ರವಾಗಿದ್ದ ಗುಲಬರ್ಗಾ ಕೇಂದ್ರ ದಿನಾಂಕ 11.11.1966 ರಂದು ನಗರದ ಖಾಸಗಿ ಕಟ್ಟಡದಲ್ಲಿ ಸ್ಥಳೀಯ ಕಾರ್ಯಕ್ರಮ ನಿರ್ಮಾಣ ವ್ಯವಸ್ಥೆಯೊಂದಿಗೆ ಪ್ರಾರಂಭವಾಯಿತು. ನಿರಕ್ಷರಿಗಳನ್ನು ನೇರವಾಗಿ ಮುಟ್ಟುವ ಶ್ರವ್ಯ ಮತ್ತು ದೃಶ್ಯ ಸಾಮರ್ಥ್ಯ ಹೊಂದಿರುವ ಈ ಮಾಧ್ಯಮಗಳು ಸಹಜವಾಗಿಯೇ ಜನಮನ್ನಣೆ ಪಡೆದವುಗಳು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಜನ ಹಿತಾಯ ಬಹುಜನ ಸುಖಾಯ ಎಂಬ ಧ್ಯೇಯೋದ್ದೇಶದೊಂದಿಗೆ ಆಕಾಶವಾಣಿ ಕಾರ್ಯಾರಂಭ ಮಾಡಿದ್ದಾರೆ. ಸತ್ಯಂ ಶಿವಂ ಸುಂದರಂ ಎಂಬುದು ದೂರದರ್ಶನದ ದಿಕ್ಸೂಚಿ.

ಅತಿ ಕಡಿಮೆ ವೆಚ್ಚದಲ್ಲಿ ಅಪಾರ ವ್ಯಾಪ್ತಿಯ ಜನ ಸಮುದಾಯವನ್ನು ಕ್ಷಣಾರ್ಧದಲ್ಲಿ ತಲುಪುವ ತಾಂತ್ರಿಕ ಸಾಮರ್ಥ್ಯ ಆಕಾಶವಾಣಿಯ ಹೆಗ್ಗಳಿಕೆ. ಸರಳತೆ ಆತ್ಮೀಯತೆ, ಸ್ಥಳೀಯ ಪ್ರಶಂಸೆಯಿಂದ ಕೂಡಿದ ವೈವಿಧ್ಯಮಯ ಕಾರ್ಯಕ್ರಮಗಳು ಹಾಗೂ ಅವುಗಳಲ್ಲಿ ಭಾಗವಹಿಸುವ ಸುಲಭ ಅವಕಾಶಗಳು ಈ ವೈಶಿಷ್ಟ್ಯಗಳೊಂದಿಗೆ ಈ ಎರಡೂ ಮಾಧ್ಯಮಗಳು ಜನಸಾಮಾನ್ಯರ ಬದುಕಲ್ಲಿ ವಿಶೇಷ ಸ್ಥಾನ ಪಡೆದಿವೆ.

ಭಾರತದ ವೈವಿಧ್ಯಮಯ ಸಂಸ್ಕೃತಿಯ ಫೆಡರಲ್ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪ್ರಜ್ಞೆಯನ್ನು ಉಳಿಸಿ ಬೆಳೆಸುವಲ್ಲಿ ಈ ಮಾಧ್ಯಮಗಳ ಪಾತ್ರ ಮಹತ್ವದ್ದು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಪರಂಪರೆಯನ್ನು ಹೊಂದಿದ್ದ ಈ ಪ್ರದೇಶದ ಜನಸಾಮಾನ್ಯರಿಗೆ, ಅರವತ್ತರ ದಶಕಗಳಲ್ಲಿ ರೇಡಿಯೋ ಸಿಲೋನ ಸಂಸ್ಕೃತಿಗೆ ಒಗ್ಗಿಕೊಂಡ ಕಾರಣ ಸಂಗೀತವೆಂದರೆ ಬರೀ ಚಿತ್ರಗೀತೆಗಳು ಮಾತ್ರ ಎಂಬುದಾಗಿತ್ತು. ಆಕಾಶವಾಣಿಯಿಂದಾಗಿ ಇಂದು ಸುಮಾರು 500ಕ್ಕೂ ಮೇಲ್ಪಟ್ಟ ಸಂಗೀತ ಕಲಾವಿದರು ವಿವಿಧ ಸಂಗೀತ ಪ್ರಕಾರಗಳಲ್ಲಿ ಶ್ರೇಣೀಕೃತಗೊಂಡಿದ್ದು ಆಕಾಶವಾಣಿ ಗುಲಬರ್ಗಾ ಕೇಂದ್ರದ ಹೆಗ್ಗಳಿಕೆ. ಅನೇಕ ಸಂಗೀತಗಾರರು ತಮ್ಮ ಹೆಸರಿನ ಮುಂದೆ ಆಕಾಶವಾಣಿ ದೂರದರ್ಶನ ಕಲಾವಿದರು ಎಂಬ ಉಪಮೆಯನ್ನು ಇಂದಿಗೂ ಬಳಸುತ್ತಾರೆ. ಅದರಲ್ಲೂ ಗ್ರಾಮೀಣ ಜನಪದರಿಗೆ ಧ್ವನಿಯಾದದ್ದು ಈ ಮಾಧ್ಯಮಗಳ ವಿಶೇಷತೆ. ಪ್ರಾರಂಭದ ದಿನಗಳಲ್ಲಿ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಉಳಿಸಿ ಬೆಳೆಸುವ ಉದ್ದೇಶ ಆಕಾಶಗಳೊಂದಿಗೆ ಆಕಾಶವಾಣಿಗಳಲ್ಲಿ ಸಹಜವಾಗಿಯೇ ಎಂಬತ್ತು ಪ್ರತಿಶತ ಸಂಗೀತವೇ ಪ್ರಮುಖ ಪ್ರಸಾರ ವಸ್ತು ಈ ಹಿನ್ನಲೆಯಲ್ಲಿ ಒಂದು ಹೊಸ ಸಂಗೀತ ಪರಂಪರೆಗೆ ನಾಂದಿ ಹಾಡಿದ್ದು ಆಕಾಶವಾಣಿ. ಕಲಾವಿದರನ್ನು ಹುಡುಕಿ ತೆಗೆಯುವದರ ಜೊತೆಗೆ ಅವರನ್ನು ಶಿಸ್ತುಬದ್ಧ ವ್ಯವಸ್ಥೆಗೆ ಒಳಪಡಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ವೇದಿಕೆ ಒದಗಿಸಿದ್ದು ಆಕಾಶವಾಣಿ. ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಡಿಯಲ್ಲಿ ಈ ಭಾಗದಲ್ಲಿ ಖ್ಯಾತ ಸಂಗೀತಗಾರರ ಕಚೇರಿಗಳು ನಡೆದಿವೆ.

ಎಪ್ಪತ್ತರ ದಶಕದ ರೇಡಿಯೋ, ನಾಟಕಗಳು ಈ ಭಾಗದಲ್ಲಿ ಹೊಸ ಅಭಿರುಚಿಯನ್ನು ಹುಟ್ಟಿಹಾಕಿದ್ದು ಗಮನಾರ್ಹ. ಹೊಸ ನಾಟಕಕಾರರು, ಕಲಾವಿದರು, ಜೊತೆಗೆ ಒಂದು ದೊಡ್ಡ ಶ್ರೋತೃ ವರ್ಗ ನಿರ್ಮಾಣಗೊಂಡಿದ್ದು ಈ ಸಮಯದಲ್ಲಿ ಈ ಕೇಂದ್ರದಲ್ಲಿ ನಿರ್ಮಾಣಗೊಂಡ ಅನೇಕ ನಾಟಕ, ರೂಪಕಗಳು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಬಾಚಿದ್ದು ಈ ಭಾಗದ ಸಾಂಸ್ಕೃತಿಕ ನೆಲೆಗಟ್ಟಿಗೆ ಅಸ್ತಿತ್ವ ಒದಗಿಸಿದವು. ಬುದ್ಧಿಜೀವಿ ಬರಹಗಾರರಿಗೆ ವೈಚಾರಿಕ ಮತ್ತು ಆಧ್ಯಾತ್ಮಿಕ ವೇದಿಕೆ ಒದಗಿಸಿದ



ಗುಲಬರ್ಗಾ ಆಕಾಶವಾಣಿ ಕೇಂದ್ರ

ಬೆಳಗಿನ ಚಿಂತನ ಕಾರ್ಯಕ್ರಮಗಳು ಹೊಸ ವೈಚಾರಿಕತೆಗೆ ತುಡಿಯುವಂತೆ ಮಾಡಿದವು. ಎಲ್ಲವರ್ಗದ ಹಾಗೂ ವಯೋ ಮಾನದ ಕೇಳುಗರ ಆಶೋತ್ತರಗಳಿಗೆ ಸ್ಪಂದಿಸಿದ ಕೃಷಿರಂಗ, ಯುವವಾಣಿ, ಮಹಿಳೆ ಮತ್ತು ಮಕ್ಕಳ ಕಾರ್ಯಕ್ರಮಗಳು ಇಂದಿಗೂ ತಮ್ಮ ವಿಶೇಷತೆಯನ್ನು ಉಳಿಸಿಕೊಂಡು ಬಂದಿವೆ. ಕಥೆ, ಕವನ, ಪುಸ್ತಕ ವಿಮರ್ಶೆಗಳು ಸಾಹಿತ್ಯಾಸಕ್ತರ ಪ್ರತಿಭೆಗಳಿಗೆ ಪ್ರೇರಣೆ ನೀಡಿದರೆ ಭಾಷಣ, ಚರ್ಚೆ, ಸಂದರ್ಶನ, ರೂಪಕಗಳು ಹಿಂದುಳಿದ ಹಣೆಪಟ್ಟಿ ಹೊತ್ತ ಜನರ ನೋವಿಗೆ ಧ್ವನಿಯಾದದ್ದು ಎಲ್ಲರೂ ಗುರುತಿಸುವಂಥ ವಿಷಯ.

ಅಭಿವೃದ್ಧಿ ಸಂವಹನ ಕ್ರಿಯೆಯಲ್ಲಿ ಈ ಕೇಂದ್ರ ತನ್ನನ್ನು ತಾನು ಹೊಸ ಪ್ರಯೋಗಗಳ ಮೂಲಕ ತೊಡಗಿಸಿಕೊಂಡಿದ್ದು, ಆರೋಗ್ಯ, ಸಾಕ್ಷರತೆ, ಶಿಕ್ಷಣದಂತಹ ಕಾರ್ಯಕ್ರಮಗಳಿಂದ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಬಾನ್ದನಿ, ಕೇಳಿ ಕಲಿಯಂತಹ ಸರಣಿಗಳು ವಿದ್ಯಾರ್ಥಿ ವೃಂದದಲ್ಲಿ ಹೆಸರು ಮಾಡಿದವು. ರಾಜ್ಯ ಸರಕಾರದ ಶಿಕ್ಷಣ ವಿಭಾಗದ ನೆರವಿನೊಂದಿಗೆ ಆಯಾ ಕಾಲಕ್ಕೆ ತಕ್ಕ ಕಾರ್ಯಕ್ರಮಗಳು ರೂಪಗೊಂಡವು. ಪಠ್ಯ ವಿಷಯಾ ಧಾರಿತ ಸರಣಿಗಳ ಜೊತೆಗೆ ನಿಗದಿತ ಸಮಯದಲ್ಲಿ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ವಿಸ್ತರಣೆಯಲ್ಲಿ ಇವು ಮಹತ್ವದ ಪಾತ್ರ ನಿರ್ವಹಿಸಿದವು. ಮಕ್ಕಳಿಗೆ ಮನೋರಂಜನೆಯ ಜೊತೆಗೆ ಕಲಿಕೆಯನ್ನು ನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರವಾದವು.

2005ರಲ್ಲಿ ಆಕಾಶವಾಣಿ ಗುಲಬರ್ಗಾ ಈಓ ಕೇಂದ್ರವನ್ನು ಆರಂಭಿಸಿ, ಇನ್ನಷ್ಟು ಬಲಪಡೆಯಿತು. ಗುಲಬರ್ಗಾ ಆಕಾಶವಾಣಿ ಕೇಂದ್ರವು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ತನ್ನ ವಿಜಯದ ಪತಾಕೆಯನ್ನು ಹಾರಿಸಿ ಎಲ್ಲರ ಗೌರವಕ್ಕೆ ಪಾತ್ರ ವಾಗಿದೆ. 2007ರಲ್ಲಿ ತಾಂತ್ರಿಕ ವಿಭಾಗಕ್ಕೆ ರಾಷ್ಟ್ರ ಮಟ್ಟದ ವಾರ್ಷಿಕ ಸ್ಪರ್ಧೆಯಲ್ಲಿ ಎಂ.ಸಿ. ಮಚಂದ ಪ್ರಶಸ್ತಿಯನ್ನು ಬಾಚಿಕೊಂಡಿತು. 2009ರಲ್ಲಿ 'ಖರೇವಂದ್ರ ತಪ್ಪು' ನಾಟಕಕ್ಕೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಥಮ ಪ್ರಶಸ್ತಿ ಲಭಿಸಿದೆ. 2010ರಲ್ಲಿ ಮೇಘ ಸಂದೇಶ ಎನ್ನುವ ಸರಣಿಗೆ ಕಾರ್ಯಕ್ರಮಕ್ಕೆ ರಾಜ್ಯ ಮಟ್ಟದ ಪ್ರಥಮ ಪ್ರಶಸ್ತಿ ಹಾಗೂ ಯುವವಾಣಿ ವಿಭಾಗದಲ್ಲಿ ರಾಜ್ಯ ಮಟ್ಟದ ರಸ ಪ್ರಶ್ನೆ ಕಾರ್ಯಕ್ರಮಕ್ಕೆ ಪ್ರಥಮ ಪ್ರಶಸ್ತಿ ಗೆದ್ದುಕೊಂಡು ಎಲ್ಲರಿಂದ ಸೈ ಎನಿಸಿಕೊಂಡಿತ್ತು. ಅದೇ ರೀತಿ 2011ರಲ್ಲಿ 'ಖುಲಜಾ ಸಿಮ್ ಸಿಮ್' ಎನ್ನುವ ಸರಣಿಗೆ ರಾಜ್ಯಮಟ್ಟದಲ್ಲಿ ಪ್ರಥಮ ಹಾಗೂ ಹ್ಯಾಮ್ಲೆಟ್ ನಾಟಕಕ್ಕೆ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕುರಿತಾದ ಜಿಂಗಲ್‌ಗೆ ದ್ವಿತೀಯ ಪ್ರಶಸ್ತಿ ಲಭಿಸಿದೆ.

ಅಭಿವೃದ್ಧಿ ಸಂವಹನ ಕ್ರಿಯೆಯಲ್ಲಿ ಉಪಗ್ರಹಗಳನ್ನು ಸಮರ್ಥವಾಗಿ ಬಳಸಿ ಪ್ರಗತಿಗೆ ಹೊಸ ನಾಂದಿ ಹಾಡಿ ದವರು ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ. ವಿಕ್ರಂ ಸಾರಾ ಭಾಯಿ ಅವರ ಪರಿಕಲ್ಪನೆಯ ಉಪಗ್ರಹ ಬೋಧನಾ ದೂರದರ್ಶನ ಪ್ರಯೋಗದ (ಎಸ್‌ಆಯ್‌ಟಿಇ) ಯಶಸ್ವಿ ನಿಂದ ಹಿಂದುಳಿದ ಭಾಗವಾದ ಗುಲಬರ್ಗಾ ದೂರದರ್ಶನ 1977ರ ಸೆಪ್ಟೆಂಬರ್ 3 ರಂದು ಪ್ರಾರಂಭವಾಯಿತು.

ಈ ಭಾಗದಲ್ಲಿ ಚಿತ್ರೀಕರಣಗೊಂಡು ಹೈದ್ರಾಬಾದಿನ ಸ್ಟುಡಿಯೋದಲ್ಲಿ ತಯಾರಿಸಲಾದ ಕಾರ್ಯಕ್ರಮಗಳನ್ನು ಗುಲಬರ್ಗಾ ಕೇಂದ್ರದ ಟ್ರಾನ್ಸಮೀಟರನಿಂದ ಪ್ರಸಾರ ಮಾಡ ಲಾಗುತ್ತಿತ್ತು. ಕರ್ನಾಟಕದ ಪ್ರಥಮ ದೂರದರ್ಶನ ಕೇಂದ್ರ ಎಂಬ ಹೆಗ್ಗಳಿಕೆ ಈ ಕೇಂದ್ರದ್ದು. ಮುಂದೆ ಸೆಪ್ಟೆಂಬರ್ 24 1995ರಲ್ಲಿ ಆಗಿನ ಪ್ರಸಾರ ಖಾತೆಯ ಮಂತ್ರಿ ಶ್ರೀ ಪಿ.ಎ. ಸಂಗ್ಮಾರವರು ಗುಲಬರ್ಗಾ ಕೇಂದ್ರದ ಸ್ವತಂತ್ರ ಸ್ಟುಡಿಯೋ ಉದ್ಘಾಟಿಸಿದರು. ಪ್ರಾರಂಭದಲ್ಲಿ ಪ್ರತಿ ಶುಕ್ರವಾರ 30 ನಿಮಿಷದ ಸ್ಥಳೀಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಈಗಾಗಲೇ ಸ್ಥಳೀಯ ಆಕಾಶವಾಣಿ ಪ್ರಸಾರ ಪರಂಪರೆ ಹೊಂದಿದ್ದರಿಂದಾಗಿ ಸಹಜ



ಗುಲಬರ್ಗಾ ದೂರದರ್ಶನ ಕೇಂದ್ರ

ವಾಗಿಯೇ ದೂರದರ್ಶನದ ಕಾರ್ಯಕ್ರಮಗಳಲ್ಲಿ ಕಲಾವಿದರ ಭಾಗವಹಿಸುವಿಕೆ ಹಾಗೂ ಹೊಸ ಹೊಸ ಪ್ರತಿಭೆಗಳ ಹುಡುಕಾಟ ದಿಂದಾಗಿ ಕಾರ್ಯಕ್ರಮದ ಹರಿವು ಮತ್ತೆ ವಿಸ್ತಾರಗೊಂಡಿತು. ಹಾಗಾಗಿ 1999 ಮಾರ್ಚ್ 26 ರಿಂದ ಪ್ರಸಾರ ಅವಧಿ ಪ್ರತಿ ಸೋಮವಾರ, ಶುಕ್ರವಾರ 60 ನಿಮಿಷಕ್ಕೆ ವಿಸ್ತರಣೆಗೊಂಡಿತು. ಅದೇ ವರ್ಷ ಈ ಕೇಂದ್ರದ 10 ಕಿ.ವ್ಯಾಟ್ ಶಕ್ತಿಯ ಟ್ರಾನ್ಸಮೀಟರ ನೊಂದಿಗೆ 25 ಕಿಲೋ ಮೀಟರ ಇದ್ದ ಪ್ರಸಾರ ವ್ಯಾಪ್ತಿ 75 ಕಿಲೋ ಮೀಟರಿಗೆ ವಿಸ್ತರಣೆಗೊಂಡಿತು. ಈ ವ್ಯಾಪ್ತಿಯಿಂದಾಗಿ 2004ರಲ್ಲಿ ಶುಕ್ರವಾರ ಮತ್ತು ಶನಿವಾರ ಹೊರತುಪಡಿಸಿ ಪ್ರತಿದಿನ ಒಂದು ಗಂಟೆಯ ಸ್ಥಳೀಯ ಕಾರ್ಯಕ್ರಮಗಳ ಪ್ರಸಾರ ಪ್ರಾರಂಭವಾಯಿತು.

ಅಭಿವೃದ್ಧಿಯ ಮೂಲ ಮಂತ್ರದೊಂದಿಗೆ ಪ್ರಾರಂಭವಾದ ಈ ಕೇಂದ್ರದ ಬಹುಪಾಲು ಪ್ರಸಾರ ಕೃಷಿ ಕುರಿತಾದದ್ದು. ಹೊರಾಂಗಣದಲ್ಲಿ ಚಿತ್ರೀಕರಣಗೊಂಡ ಕೃಷಿ ಕಾರ್ಯಕ್ರಮಗಳು ಸಹಜವಾದ ದೃಶ್ಯ ಪ್ರಭಾವದಿಂದ ರೈತರ ಗಮನ ಸೆಳೆದವು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಪ್ರಗತಿಪರ ರೈತರು ನಿರಂತರ ಸಂವಾದ, ಸಂದರ್ಶನ, ಚರ್ಚೆ, ಪ್ರಾತ್ಯಕ್ಷಿಕೆಗಳ ಮೂಲಕ ಕೃಷಿ ಕ್ಷೇತ್ರದಲ್ಲಿಯ ಕಾರ್ಯಕ್ರಮಗಳು ಮಹತ್ತರ ಯಶಸ್ಸು ಕಂಡವು. 70ರ ದಶಕದ ಹಸಿರುಕ್ರಾಂತಿ ಮತ್ತು ಕ್ಷೀರಕ್ರಾಂತಿಗಳಿಗೆ ಆಕಾಶ ವಾಣಿ ಮತ್ತು ದೂರದರ್ಶನಗಳು ಯಶಸ್ವಿಯಾಗಿ ಸ್ಪಂದಿಸಿದವು. ಬಹುಶಃ ಈ ಸಮಯದಲ್ಲಿ ಕೃಷಿಯಲ್ಲಾದ ಸಮಗ್ರ ಪ್ರಗತಿ ಮತ್ತು ಬದಲಾವಣೆಗಳನ್ನು ದಾಖಲಿಸುವುದು ಇಂದಿಗೂ ಮಹತ್ವದ ಕೆಲಸ.

ಪ್ರಾರಂಭದಲ್ಲಿ ಈ ಎರಡು ಮಾಧ್ಯಮಗಳು ರಾಸಾಯನಿಕ ಕೃಷಿಗೆ ಮಹತ್ವ ನೀಡಿದ್ದು ಅನಂತರ ಸಾವಯವ. ಶೂನ್ಯ ಬಂಡವಾಳ ಕೃಷಿ ಕುರಿತು ಒತ್ತಾಸೆ ನೀಡಿದ್ದು ಕೃಷಿಕರಲ್ಲಿ ಸಹಜ ವಾಗಿ ಗೊಂದಲ ನಿರ್ಮಾಣವಾಗಿ ಮಾಧ್ಯಮದ ಬದ್ಧತೆಗೆ ಸವಾಲಾದದ್ದು ಕಾಲದ ವೈಶಿಷ್ಟ್ಯ. ಕೃಷಿಯಲ್ಲಿನ ಪ್ರಾದೇಶಿಕತೆ ಯನ್ನು ಪರಿಗಣಿಸಿ ದೂರದರ್ಶನ ಗುಲಬರ್ಗಾ ಕೇಂದ್ರ 2005 ರಿಂದ ಗುಲಬರ್ಗಾ, ಬಸವಕಲ್ಯಾಣ, ಬೀದರ, ರಾಯಚೂರ, ಇಂಡಿ ಹಾಗೂ ಧಾರವಾಡ ಪ್ರದೇಶಗಳಿಗಾಗಿ ವಿಶೇಷ ಕಾರ್ಯ ಕ್ರಮಗಳನ್ನು ನಿರ್ಮಿಸಿ ಆಯಾ ಅಲ್ಪಶಕ್ತಿ ಟ್ರಾನ್ಸಮೀಟರಗಳಿಂದ ಪ್ರಸಾರ ಮಾಡುತ್ತಿದೆ. ಈ ಭಾಗದ ಶರಣರು, ದಾಸರು, ತತ್ವಪದಕಾರರು, ಸೂಫಿಗಳಂಥ ದಾರ್ಶನಿಕರ ಸಮೃದ್ಧಿ ಐಕ್ಯತಾ ಪರಂಪರೆಯ ಸಾಕ್ಷ್ಯಚಿತ್ರ ಹಾಗೂ ರೂಪಕಗಳು ಸಹಜ ವಾಗಿಯೇ ಆಕಾಶವಾಣಿ ಹಾಗೂ ದೂರದರ್ಶನದ ಕಾರ್ಯ ಕ್ರಮಗಳಲ್ಲಿ ಪ್ರತಿಫಲನಗೊಂಡವು.

ಸರಕಾರಿ ನಿಯಂತ್ರಣದೊಂದಿಗೆ ಸಾಮಾಜಿಕ ಬದ್ಧತೆಯ ನಿರ್ವಹಣೆ ಬಹುಶಃ ಈ ಎರಡು ಮಾಧ್ಯಮಗಳಿಗೆ ಸವಾ ಲಾದರೂ ತಮ್ಮ ಇತಿಮಿತಿಯಲ್ಲೇ ಆರೋಗ್ಯಕರ ಸಂವಹನ ಕ್ರಿಯೆಯಲ್ಲಿ ತೊಡಗಿಸಿಕೊಂಡದ್ದು ಇವುಗಳ ವಿಶೇಷತೆ. ಆಯಾ ಕಾಲದ ಸರಕಾರಗಳ ಯೋಜನೆ, ಧೋರಣೆಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಈ ಕೇಂದ್ರಗಳು ಮಹತ್ವದ ಜನಜಾಗೃತಿ ಕಾರ್ಯಕ್ಕೆ ನಾಂದಿ ಹಾಡಿವೆ. ಮುಖಾ ಮುಖಿ ಹಾಗೂ ನೇರ ಫೋನ ಇನ್ ಕಾರ್ಯಕ್ರಮಗಳ ಹೊಸ ಅಲೆ ಇದಕ್ಕೊಂದು ನಿದರ್ಶನ.

ಆಕಾಶವಾಣಿ ಹಾಗೂ ದೂರದರ್ಶನ ಕೇಂದ್ರಗಳು ಆಯಾ ಸಂದರ್ಭಕ್ಕೆ ತಕ್ಕ ವಿಶೇಷ ತಯ್ಯಾರಿಗಳೊಂದಿಗೆ ಆಹ್ವಾನಿತ ಶ್ರೋತೃಗಳ ಮತ್ತು ವೀಕ್ಷಕರ ಸಮ್ಮುಖದಲ್ಲಿ ನಡೆಸುವ ಕಾರ್ಯ ಕ್ರಮಗಳು ಈ ಭಾಗದ ಜನತೆಗೆ ಸಂಗೀತ, ಸಾಹಿತ್ಯ, ಮನೋ ರಂಜನೆಯ ರಸದೌತಣ ನೀಡಿವೆ. ಜೊತೆಗೆ ಒಂದು ಹೊಸ ಸಾಂಸ್ಕೃತಿಕ ಪರಂಪರೆಯನ್ನು ನಿರೂಪಿಸಿವೆ. ಆಕಾಶವಾಣಿಯ ರಾಷ್ಟ್ರೀಯ ಕವಿಗೋಷ್ಠಿಗಳಲ್ಲಿ ಈ ಭಾಗದ ಅನೇಕ ಸಾಹಿತಿಗಳು ಭಾಗವಹಿಸಿದ್ದು ಗಮನಾರ್ಹ.

ಭಾರತೀಯ ಪ್ರಸಾರ ಇತಿಹಾಸದಲ್ಲಿ ಪ್ರಾರಂಭದಿಂದಲೂ ಏಕಸ್ವಾಮ್ಯತೆ ಮೆರೆದ ಈ ಮಾಧ್ಯಮಗಳು ಜಾಗತೀಕರಣದ ಬಹುಮಾಧ್ಯಮ ಸಂದರ್ಶದಲ್ಲಿ ಹೊಸ ಸವಾಲು, ಸ್ಪರ್ಧೆಗಳನ್ನು ಎದುರಿಸುವುದು ಅನಿವಾರ್ಯವಾಯಿತು. ಶ್ರೇಣಿಕೃತ ಕೇಳುಗ ಮತ್ತು ವೀಕ್ಷಕರ ಮೂಲದ ಕಾರ್ಯಕ್ರಮಗಳಿಂದ ಬಂಡವಾಳ ಶಾಹಿ ಮಾರುಕಟ್ಟೆ ಆಧಾರಿತ ಸ್ಥಿತಿಗೆ ತಮ್ಮನ್ನು ತಾವು ಒಗ್ಗಿಸಿ ಕೊಳ್ಳುವುದು ಅನಿವಾರ್ಯವಾಯಿತು. ತಮ್ಮ ಇತಿಮಿತಿಯಲ್ಲಿ ಈ ಎರಡೂ ಕೇಂದ್ರಗಳು ಪರಿಸ್ಥಿತಿಯನ್ನು ನಿಭಾಯಿಸುತ್ತಿವೆ. ಗುಲಬರ್ಗಾ ಆಕಾಶವಾಣಿ ಈ ನಿಟ್ಟಿನಲ್ಲಿ ಹೆಚ್ಚಿನ ಯಶಸ್ಸು ಸಾಧಿಸಿದೆ.

ವಾಹಿನಿಗಳ ಸಂಖ್ಯೆ ಹೆಚ್ಚಾದಂತೆ ಅವುಗಳ ಬದ್ಧತೆಯ ಪ್ರಶ್ನೆ ಎದುರಾಗುತ್ತದೆ. ಇಂದು ಮಾಧ್ಯಮಗಳ ಸ್ವಯಂ ನಿಯಂತ್ರಣ ಚರ್ಚೆಗೆ ಗ್ರಾಸವಾಗಿದೆ. ಈ ಸಂದರ್ಭದಲ್ಲಿ ಆಕಾಶವಾಣಿ ಹಾಗೂ ದೂರದರ್ಶನಗಳು ಜನಪರ ಅಸ್ತಿತ್ವ ಉಳಿಸಿಕೊಂಡಿವೆ. ಬಹುಶಃ ಈ ಅಸ್ತಿತ್ವವೇ ಮುಂದಿನ ದಿನಗಳಲ್ಲಿ ಅವುಗಳ ಶಕ್ತಿಯಾಗಲಿದೆ.

(ಎಂಬಿಪಿಎ)

ಆನಂದೇಶ್ವರ ದೇವಾಲಯ: ಜನ ಸಂಪರ್ಕದಿಂದ ದೂರ ಉಳಿದಿರುವ ದೇವಾಲಯಗಳಲ್ಲಿ ರಾಯಚೂರಿನ ಆನಂದೇಶ್ವರ ದೇವಾಲಯವೂ ಒಂದು. ಇದು ರಾಯಚೂರು ಜಿಲ್ಲೆಯಲ್ಲೇ ಶೇ. 70ರಷ್ಟು ಜನತೆಗೆ ಗೊತ್ತಿಲ್ಲದೆ ಅಂಧಕಾರದಲ್ಲಿದೆ. ಆದರೆ, ನಗರದ ನಡುಮಧ್ಯದಲ್ಲಿ ಜವಾಹರ ನಗರ, ಅಂಬೇಡ್ಕರ ನಗರ, ತಿಮ್ಮಪೂರಪೇಟೆ ಹಾಗೂ ನೇತಾಜಿ ನಗರಗಳ ನಡು ಮಧ್ಯ ನಗರೇಶ್ವರ ಮಂದಿರಕ್ಕೆ ಹತ್ತಿರ ಕಾಂಕ್ರಿಟ ಕಾಡಿನಲ್ಲಿ ಮರೆ ಯಾಗಿರುವ ಈ ಆನಂದೇಶ್ವರ ದೇವಾಲಯದ ಸುತ್ತ ಮುತ್ತಲಿನ ವರ ಹೇಳಿಕೆ ಪ್ರಕಾರ, ಸುಮಾರು ಒಂದು ಶತಕ ಕಳೆದು, 4 ರಿಂದ 5 ದಶಕಗಳ ಆಯುಷ್ಯ ಹೊಂದಿದೆ. ಕ್ರಿ. ಶ. 1850 ಸುಮಾರಿಗೆ ಬದುಕಿ ಬಾಳಿದ ಕ್ಷತ್ರಿಯ, ಮರಾಠ ಕುಟುಂಬಕ್ಕೆ ಸೇರಿದ ಒಬ್ಬ ಚಂದನದ ವ್ಯಾಪಾರಿ ಆನಂದರಾವ ಜಗತಾಪ್ ಎಂಬವರು ಈ ದೇವಾಲಯ, ತಮ್ಮ ವ್ಯಾಪರವು ಸಮೃದ್ಧವಾಗಿ ಸಾಗುತ್ತಿರುವುದ

ಕ್ಕಾಗಿ ಈ ದೇವಾಲಯದ ನಿರ್ಮಾಣ ಕಾರ್ಯಕೈಗೊಂಡನೆಂದು ಹೇಳಲಾಗುತ್ತದೆ. ವಾಸ್ತು ಬದ್ಧವಾಗಿರುವ ಈ ಆನಂದೇಶ್ವರ ದೇವಾಲಯವು ಸುಂದರವಾದ ಗಾರೆಯಿಂದ ಗೋಪುರ ಹಾಗೂ ಗೋಪುರದಲ್ಲಿ ಸುಂದರವಾದ ಮೂರ್ತಿಗಳಿಂದ ಅಲಂಕರಿಸಲಾಗಿದೆ. ಇದನ್ನು ನೋಡಿದಾಕ್ಷಣ, ಪುರಾತನ ಕಾಲದ ದೇವಾಲಯವೆಂದು ಸಾರ್ವಜನಿಕರ ಮನಸೆಳೆಯುತ್ತದೆ. ಈ ಮಂದಿರ ನಿರ್ಮಾಣದಲ್ಲಿ ಕಲಾವಿದನ ಕುಶಲವಿದ್ಯೆ ಸಂಪೂರ್ಣ ವಿನಿಯೋಗವಾಗಿದ್ದು, ಪರಿಪೂರ್ಣ ಕಲಾತ್ಮಕತೆ ಈ ದೇವಸ್ಥಾನದ ನಿರ್ಮಾಣದಲ್ಲಿ ಕಾಣುವಷ್ಟು ವೈಭವ ಪೂರ್ಣತೆಯಿಂದ ನಿರ್ಮಿಸಲಾಗಿದೆ.

ಸುಮಾರು ಕ್ರಿ.ಶ. 1850ರ ಕಾಲದಲ್ಲಿ ದೇವಾಲಯದ ನಿರ್ಮಾಣ ಕಾರ್ಯ ಭರದಿಂದ ಸಾಗಿ, ಕಳಸಾರೋಹಣದ ವೇಳೆ ಸನ್ನಿಹಿತಕವಾಗುತ್ತಿರುವಾಗ ಆನಂದರಾವ್ ಜಗತಾಪ್ ಅವರ ಅಕಾಲಿಕವಾಗಿ ಶಿವಾಧೀನರಾದ ಕಾರಣ ಆನಂದೇಶ್ವರ ದೇವಾಲಯಕ್ಕೆ ಕಳಸಾರೋಹಣ ಸ್ಥಗಿತಗೊಂಡಿದ್ದು, ಮುಂದೆ ಅದನ್ನು ಯಾರೂ ಮಾಡದೇ ಇರುವುದರಿಂದ ಇಂದಿಗೂ ಈ ದೇವಾಲಯ ಕಳಸವಿಲ್ಲದ ದೇವಾಲಯ ಎಂದೇ ಹೆಸರಾಗಿದೆ. (ಕೆಎಂ)

ಆನೆಗೊಂದಿ: ಐತಿಹಾಸಿಕ ಸ್ಥಳ. ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿಗೆ ಸೇರಿದೆ. ಊರೊಳಗೆ ಚಾಳುಕ್ಯ, ಹೊಯ್ಸಳ ಹಾಗೂ



ಹುಚ್ಚಪ್ಪಯ್ಯನ ಮಂಟಪ, ಆನೆಗೊಂದಿ

ವಿಜಯನಗರ ಕಾಲಕ್ಕೆ ಸೇರಿದ ಅನೇಕ ವಾಸ್ತುಶಿಲ್ಪ, ಶಿಲ್ಪಗಳಿವೆ. ನದಿಯ ಬಳಿಯಿರುವ ಹಳೆಯ ಹುಚಪ್ಪಮಠ ಈಗ ಪಾಳು ಬಿದ್ದಿದೆ. ಇಲ್ಲಿಯ ಹೊಯ್ಸಳರ ಆದಿಕಾಲದ ಕಂಬಗಳನ್ನು ಬೇರೆಲ್ಲಿಂದಲೋ ತಂದು ಜೋಡಿಸಿದಂತಿದೆ. ಇವಕ್ಕೆ ಹೊಂದಿಕೊಂಡ ಮಂಟಪದ ಮೇಲ್ಛಾವಣಿಯಲ್ಲಿ ಚಿತ್ರಕಲೆ ಇದ್ದ ಗುರುತಿದೆ. ಮೆರವಣಿಗೆಯ ದೃಶ್ಯ, ನವನಾರಿ ಕುಂಜರ ಇತ್ಯಾದಿ ಚಿತ್ರಗಳಿದ್ದುದಾಗಿ ಹೇಳಿಕೆಯಿದೆ ಈಗ ನವನಾರಿ ಕುಂಜರದ ಸೊಂಡಲಿನ ಭಾಗದ ಇಬ್ಬರು ಸ್ತ್ರೀಯರ ಚಿತ್ರ ಮಾತ್ರ ಉಳಿದಿವೆ. ಆದರೂ ಇವು ರೇಖೆ ಮತ್ತು ಬಣ್ಣಗಾರಿಕೆಯಲ್ಲಿ ವಿಜಯನಗರ ಕಾಲದ ಮಾದರಿಗಳಾಗಿವೆ. (ಎಎಲ್ಎನ್)

ಆಭರಣಗಳು: ತನ್ನ ಸೌಂದರ್ಯವರ್ಧನೆಗೆ ಮಾನವ ಧರಿಸುವ ಲೋಹ, ಮತ್ತು ರತ್ನಗಳ ಅಲಂಕರಣ. ಪ್ರತಿಯೊಂದು ನಾಡಿನ ಸಂಸ್ಕೃತಿಯ ಒಳತಿರುಳನ್ನು ಮತ್ತು ಆ ನಾಡಿನ ಜನರ ಬದುಕಿನ ಸಂಕೀರ್ಣತೆಯನ್ನು ತಿಳಿಯಲು ಆಭರಣಗಳು ಪ್ರಮುಖವಾಗಿವೆ. ಇವು ಬಳಕೆಯಿಂದ ಆಯಾ ಪ್ರದೇಶದ ಜನಸಮುದಾಯ, ಅದರ ಕಾಲ, ಸ್ಥಳಗಳನ್ನು ಸುಲಭವಾಗಿ ಗುರುತಿಸಬಹುದು. ಅಲ್ಲದೆ ಲಿಂಗಭೇದ ತಿಳಿಯಲು ಸಹ ಈ ಆಭರಣಗಳು ಮಹತ್ವದ್ದಾಗಿವೆ.


ಆಭರಣಗಳು ಎಂದೊಡನೆ ಮನ ಅರಳುವುದು, ಕೆಲವರ ಕಿವಿಗಳು ನಿಮಿರುವವು. ಯಾವುದೇ ಮಾರ್ಗದಿಂದಾದರೂ ಅವುಗಳನ್ನು ಪಡೆಯಬೇಕೆಂಬ ಹಂಬಲ ಉಂಟಾಗುತ್ತದೆ. ಸ್ತ್ರೀಯರಿಗಿರುವ ಆಭರಣಗಳ ವ್ಯಾಮೋಹವಂತೂ ವಿವರಿಸಲೇಬೇಕಾಗಿಲ್ಲ. ಅಘಾತಕ್ಕೆ ಸಿಲುಕಿದಾಗ ಮುಖ ಹೇಗೆ ಶೋಭಿಸುವುದಿಲ್ಲವೊ ಹಾಗೆ ಸ್ತ್ರೀಯು ಆಭರಣಗಳಿಲ್ಲದೆ ಶೋಭಿಸುವುದಿಲ್ಲ. ಆದ್ದರಿಂದ ಸ್ತ್ರೀಗೆ ಹೆಚ್ಚಿನ ವ್ಯಾಮೋಹವಿರಬೇಕು. ಇವರಿಗೆ ಸ್ಪರ್ಧಿ ಎನ್ನುವಂತೆ ಪುರುಷನು ವಿವಾಹವನ್ನು ಆಭರಣ ಕೇಳುವ ಕ್ರೀಡಾಂಗಣವನ್ನಾಗಿ ಮಾಡಿಕೊಂಡಿದ್ದಾನೆ. ಅಲ್ಲದೆ ಅನೇಕರ ಮನಸ್ಸುಗಳು ಇವುಗಳಿಂದಾಗಿ ಕಲುಷಿತಗೊಂಡಿವೆ.

ಒಡವೆ, ದಾಗೀನು ಮುಂತಾದ ಹೆಸರುಗಳು ಆಭರಣಗಳಿಗಿವೆ. ಆಭರಣಗಳ ಮೂಲ ಮತ್ತು ಆದಿ ಮಾನವನ ಸೌಂದರ್ಯಾಭಿರುಚಿಯ ಮೂಲವೂ ಒಂದೇ ಆಗಿದೆ. ಮಾನವನಲ್ಲಿ ಅಂತರ್ಗತವಾದ ಸೌಂದರ್ಯ ಪ್ರಜ್ಞೆಯ ಬೆಳವಣಿಗೆಯು ನಿಸರ್ಗದ ಪ್ರಭಾವವಷ್ಟೇ ಕಾರಣವಲ್ಲ. ಕಾಲ ಕ್ರಮೇಣ ಗಂಡು ಮತ್ತು ಹೆಣ್ಣಿನ ಪರಸ್ಪರ ಆಕರ್ಷಣೆಯ ಮನೋಭಾವವೂ ಕಾರಣವಾಗಿದೆ. ಇಂದಿನ ಆಧುನಿಕ ಯುಗದಲ್ಲಿಯೂ ಆಭರಣಗಳಲ್ಲಿ ಮಾಂತ್ರಿಕ ಶಕ್ತಿಯಿದೆ ಎಂದು ನಂಬುವರು. ಆದ್ದರಿಂದ ಈ ಭಾವನೆಯು ಪುರಾತನ ಕಾಲದಿಂದಲೂ ಪ್ರಬಲವಾಗಿ ಕೆಲಸ ಮಾಡಿದೆ. ಆಭರಣಗಳನ್ನು ತಯಾರಿಸುವ ಪ್ರಯೋಗಾಲಯಕ್ಕೆ 'ಅಕ್ಷರ ಶಾಲೆ' ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಲಾಗಿದೆ. ಆಭರಣಗಳನ್ನು ತಯಾರಿಸಲು ಒಂದು ವರ್ಗದ ಜನರಿದ್ದಾರೆ. ಅವರನ್ನು ವಿಶ್ವಕರ್ಮ ಬ್ರಾಹ್ಮಣರು ಅಥವಾ ಅಕ್ಕಸಾಲಿಗರು ಎಂದು ಕರೆಯಲಾಗುತ್ತದೆ.

ಆದಿ ಮಾನವನ ಪ್ರವಾಹ, ಸಿಡಿಲು ಮುಂತಾದ ಪ್ರಕೃತಿಯ ವಿಕೋಪಗಳಿಗೆ ಹೆದರಿದ. ಇವುಗಳಿಂದ ರಕ್ಷಣೆ ಪಡೆಯುವುದಕ್ಕಾಗಿಯೇ ತಾಯತ, ಕವಡೆ, ರುಂಡಮಾಲೆ, ಹಾರಗಳನ್ನು ಬಳಸತೊಡಗಿದ. ಮೊದಲು ಒರಟು ಸ್ವರೂಪದಲ್ಲಿದ್ದ ಆಭರಣಗಳು ಕ್ರಮೇಣ ಸೂಕ್ಷ್ಮತೆಯೆಡೆಗೆ ಜಾರಿದುವು. ಶಿಲಾಯುಗ, ಲೋಹಯುಗ ಮತ್ತು ಆಧುನಿಕ ಯುಗವೆಂದು ಆಭರಣಗಳ ವಿನ್ಯಾಸ ಮತ್ತು ಪ್ರಾಚೀನತೆಯ ದೃಷ್ಟಿಯಿಂದ ವಿಂಗಡಿಸಬಹುದು. ಶಿಲಾಯುಗದಲ್ಲಿ ಪ್ರಾಣಿಗಳ ಮೈದೊಗಲು, ಉಗುರುಗಳು, ಕೂದಲು ಮುಂತಾದುವು ಧರಿಸುವ ಸಾಧನಗಳಾಗಿದ್ದುವು. ಹರಪ್ಪ, ಮಹೆಂಜೋದಾರೊ, ಮೆಸಪೊಟಮಿಯ ಸಂಸ್ಕೃತಿಗಳಲ್ಲಿ ಸತ್ತ ವ್ಯಕ್ತಿಗಳನ್ನು ಹೂಳುವಾಗ ಆತನಿಗೆ ಪ್ರಿಯವಾದ ಕೆಲವು

ಸಾಮಗ್ರಿಗಳನ್ನು ಹೂಳುತ್ತಿದ್ದುದುಂಟು. ಆ ಸಾಮಗ್ರಿಗಳಲ್ಲಿ ಆಭರಣಗಳೂ ಸೇರಿವೆ ಎಂಬುದು ವಿದ್ವಾಂಸರ ಅಭಿಪ್ರಾಯ.

ಜಾಗತೀಕರಣ, ಆಧುನೀಕರಣ, ನಗರೀಕರಣ, ಕೈಗಾರೀಕರಣ ಮುಂತಾದುವುಗಳ ಪ್ರಭಾವದ ಫಲವಾಗಿ ಪರಕೀಯ ಸಂಸ್ಕೃತಿ ಮಿಶ್ರಣಗೊಂಡಿದೆ. ವಿಶ್ವಧರ್ಮದ ಸಂಕೇತಗಳಾದ 'ಕ್ರಾಸ್' ಮತ್ತು 'ಓಂ' ಎಂಬ ಆಭರಣಗಳನ್ನು ಕಾಣಬಹುದು. ಹಿಂದೆ ಕರಿಮಣಿಗಳನ್ನು ಬಹಳ ಪ್ರೀತಿಯಿಂದ ತಾಳಿಯಲ್ಲಿ ಧರಿಸುತ್ತಿದ್ದರು. ಆದರೆ ಇಂದು ಮೇಲ್ವರ್ಗಗಳಲ್ಲಿ ಮಣಿಗಳಿಗೆ ಬದಲಾಗಿ ಬಂಗಾರದ ಗುಂಡು ಧರಿಸುವುದನ್ನು ಕಾಣಬಹುದು. ಹೀಗೆ ಕರಣಗಳ ಪ್ರಭಾವದಿಂದ ಆಭರಣಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಶೈಶಾವಾಸ್ಥೆಯಿಂದಲೇ ಆಭರಣಗಳ ಧಾರಣೆ ಆರಂಭವಾಗುತ್ತದೆ. ತಂದೆಯು ಮೊದಲ ಸಲ ಮಗನ ಮುಖ ನೋಡಬೇಕಾದರೆ, ಬಂಗಾರದ ಮುರುವು ಹಾಕುವುದು ರೂಢಿಯಲ್ಲಿದೆ. ಮಗು ಹುಟ್ಟಿದ ನಕ್ಷತ್ರ ಅಥವಾ ವೇಳೆ ಸರಿಯಿಲ್ಲದಿದ್ದರೆ ಪೂಜಾರಿಗೆ ಅಥವಾ ಐನಾರರಿಗೆ ಬಂಗಾರದ ಚೂರು, ನವಧಾನ್ಯ ಕೊಡುವುದನ್ನು ಗಮನಿಸಬಹುದು. ಸ್ತ್ರೀಯರು ಗಂಡ ತೀರಿದ ಬಳಿಕ ತಾಳಿ, ಬಳೆ ಇನ್ನಿತರ ಒಡವೆಗಳನ್ನು ತೆಗೆಯವರು. ಹೀಗೆ ಹುಟ್ಟಿನಿಂದ ಅಂತ್ಯದವರೆಗೂ ಆಭರಣಗಳು ನಮ್ಮ ಬದುಕಿನಲ್ಲಿ ಮಹತ್ವದ ಪಾತ್ರವಹಿಸಿವೆ.



ಆಭರಣಗಳು

ಪ್ರಮುಖವಾದ ಆಭರಣಗಳೆಂದರೆ ತಾಳಿ, ಉಂಗುರ, ಮೂಗುತಿ, ಬುಲಾಕು, ಬುಗುಡಿ, ಓಲೆ, ನತ್ತು, ನ್ಯಾಕ್ಲೇಸ್, ಡಾಬ, ವಂಕಿ, ಬಳೆ, ಕಡಗ, ಕೈ ಚೈನ, ಬೋರುಮಳಸರ, ಟೀಕಿಮಣಿ, ಕಂಟಿಹಾರ, ಕಂಠಾಭರಣ, ಒಡ್ಯಾಣ, ತೋಳಬಂದಿ, ಗುಂಡು, ಬೆಂಡೋಲೆ ಮುಂತಾದುವು. ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ ಮತ್ತು ತವರು ಎಂಬ ಪಂಚಲೋಹದ ಉಂಗುರ ತಯಾರಿಸುವುದನ್ನು ಗಮನಿಸಬಹುದು. ಎಂಥ ಉನ್ನತ ಸ್ಥಾನದಲ್ಲಿದ್ದವರೂ ಕಾಲಿಗೆ ಬಂಗಾರದ ಉಂಗುರ ಧರಿಸುವುದಿಲ್ಲ. ರಾಜಮಹಾರಾಜರು ಶುಭ ಸುದ್ದಿ ತಂದ ದಾಸ-ದಾಸಿಯರಿಗೆ ಉಡುಗೊರೆಯಾಗಿ ಆಭರಣಗಳನ್ನು ನೀಡಿದ ನಿದರ್ಶನಗಳಿವೆ. ರಾಜರು ಧರಿಸುತ್ತಿದ್ದ ಕಿರೀಟ, ಹಾರ ಇನ್ನಿತರ ಆಭರಣಗಳಿಂದ ಇವರ ಆರ್ಥಿಕ ಸ್ಥಿತಿ ಗತಿಯು ನಮಗೆ ತಿಳಿಯುತ್ತದೆ. ಹೀಗೆ ಆಭರಣಗಳು ಇತಿಹಾಸದ ಸಂಕೇತಗಳಾಗಿವೆ.

ಆಭರಣಗಳ ವೈಶಿಷ್ಟ್ಯತೆ ಸಂಪೂರ್ಣವಾಗಿ ತಿಳಿಯಬೇಕಾದರೆ ಬುಡಕಟ್ಟು ಸಮುದಾಯದ ಆಭರಣಗಳ ಬಗ್ಗೆ ತಿಳಿಯುವುದು ಅವಶ್ಯವಾಗಿದೆ. ಮೂಲ ಸಂಸ್ಕೃತಿಯ ಅನೇಕ ಅಂಶಗಳನ್ನು ಈ ಸಮುದಾಯಗಳು ಉಳಿಸಿಕೊಂಡು ಬಂದಿವೆ. ಇವರಲ್ಲಿ ಆಭರಣಗಳ ವಿನ್ಯಾಸ ಅಥವಾ ರಚನೆಯಲ್ಲಿ ವಿಶಿಷ್ಟವಾದ ಬದಲಾವಣೆಗಳನ್ನು ಗಮನಿಸಬಹುದು. ನಿಸರ್ಗದತ್ತವಾಗಿ ದೊರೆಯುವ ಸಮುದ್ರದ ಮುತ್ತು, ಹವಳ, ಕವಡೆ, ಶಂಖ, ಮಣಿಗಳನ್ನು ಉಪಯೋಗಿಸುತ್ತಾರೆ. ಲಂಬಾಣಿ, ಹಕ್ಕಿಪಿಕ್ಕಿ, ಡೊಂಬರಲ್ಲಿ ಸ್ತ್ರೀಯರು ಹಾಗೂ ಪೂಜಾರಿಗಳು ಹೆಚ್ಚಾಗಿ ಬಳಸುವುದು ಕವಡೆಗಳನ್ನು ಇವರಿಗೆ ಮಣಿಹಾರ ಎಂದರೆ ಪಂಚಪ್ರಾಣ. ಬೆರಳುಂಗರ, ಕಾಲುಂಗರ, ಕೈಬಳೆ, ಕಾಲ್ಬಳೆ, ಕಾಲ್ಕಡಗ, ಟೊಂಕಪಟ್ಟಿ, ಕನ್ನಡಿ, ಮುರುವು ಮುಂತಾದ ಆಭರಣಗಳು ವೃತ್ತಾಕಾರದಲ್ಲಿದ್ದು ವಿಭಿನ್ನ ಶೈಲಿ ಹೊಂದಿರುತ್ತವೆ. ಸುಡುಗಾಡುಸಿದ್ದರು, ಕಚ್ಚೆಗೌಳಿಗ, ಅಡವಿಚೆಂಚು, ಹಕ್ಕಿಪಿಕ್ಕಿ ಮುಂತಾದ ಸಮುದಾಯಗಳ ಗಂಡಸರು ಕೊರಳಿಗೆ ಮಣಿಹಾರ ಗಳನ್ನು ಧರಿಸುತ್ತಾರೆ. ಹಾಲಕ್ಕಿ, ಗೊಂಡ, ಎರವ, ಹಕ್ಕಿಪಿಕ್ಕಿ, ಮುಕ್ರಿ ಮುಂತಾದ ಸಮುದಾಯಗಳಲ್ಲಿ ಮಹಿಳೆಯರು ಕಾಲ್ಕಡಗಗಳನ್ನು ತೊಡುವರು. ಹೀಗೆ ಬುಡಕಟ್ಟು ಸಮುದಾಯಗಳಲ್ಲಿ ಅನೇಕ ಆಭರಣಗಳು ಬಳಕೆಯಲ್ಲಿವೆ. ಸಾಮಾನ್ಯವಾಗಿ ಋತುಮತಿಯಾದಾಗ, ಮನೆಯಲ್ಲಿ ಸಾವು ಸಂಭವಿಸಿದಾಗ, ಬಾಣಂತನ, ಮತ್ತಿತರ ಮೈಲಿಗೆಯ ಸಮಯದಲ್ಲಿ ಕೆಲವರು ಬಂಗಾರ, ಬೆಳ್ಳಿಯ ಆಭರಣಗಳನ್ನು ತೆಗೆದಿಡುತ್ತಾರೆ. ಈ ಸಂದರ್ಭದಲ್ಲಿ ಗಾಜಿನ, ಪ್ಲಾಸ್ಟಿಕ್ ಅಥವಾ ಹಿತ್ತಾಳೆಯ ಆಭರಣಗಳನ್ನು ಧರಿಸುವರು. ವಿವಾಹದ ಸಂದರ್ಭದಲ್ಲಿ ಅಕ್ಷತೆಯ ಅನಂತರ ಮೂಗುತಿಯ ಆಟವೆಂದು ಪುರೋಹಿತರು ಆಡಿಸುತ್ತಾರೆ. ಭಾರತೀಯ ಮಹಿಳೆಯರ ಜೀವನದಲ್ಲಿ ಈ ಮೂಗುತಿ ನತ್ತು ಮಹತ್ವದ್ದಾಗಿದೆ.

ಕ್ರಿಶ್ಚಿಯನ್ನರು ಬೆರಳುಗಳಿಗೆ ಉಂಗುರ ಇಡುವುದರ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಡುವರು. ಹಿಂದೂಗಳು ಕೊರಳಿಗೆ ತಾಳಿ ಕಟ್ಟುವುದರ ಮೂಲಕ ಗೃಹಸ್ಥಾಶ್ರಮ ಪ್ರವೇಶಿ ಸುವರು. ಮಗ ಹುಟ್ಟಿದಾಗ ಮುಖನೋಡುವ ಸಮಯದಲ್ಲಿ ಉಂಗುರವನ್ನು ಮಗನಿಗೆ ಧರಿಸುವರು. ನಿಶ್ಚಿತಾರ್ಥ ಸಂದರ್ಭದಲ್ಲಿ ಉಂಗುರ ಬದಲಾಯಿಸುವರು. ಅನಿಷ್ಟ ನಿವಾರಣೆಗಾಗಿ ಸ್ವಾಮಿಗಳಿಗೆ ಬಂಗಾರದ ಚೂರು ಕೊಡುವುದು, ಮುಟ್ಟು-ಮೈಲಿಗೆಯಿಂದ ಮಗುವನ್ನು ರಕ್ಷಿಸಲು ಮುರುವು

ಚುಚ್ಚುವುದು, ಬುಡಕಟ್ಟು ಸಮುದಾಯಗಳು ಸಾಗರದ ಆಭರಣಗಳನ್ನು ಉಪ ಯೋಗಿಸುವುದು ಈ ಎಲ್ಲ ಅಂಶಗಳು ಸಂಸ್ಕೃತಿಯನ್ನು ಬಿಂಬಿ ಸುವ ಮುಖಗಳಾಗಿವೆ. ಅಲ್ಲದೆ ಶೃಂಗಾರ ಪ್ರಜ್ಞೆ, ಕಲಾತ್ಮಕತೆ, ಚಕಿತಗೊಳಿಸುವ ರಚನೆಯ ವಿನ್ಯಾಸ ಆಯಾ ನಾಡಿನ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಿದೆ. ಆದ್ದರಿಂದ ಆಭರಣಗಳು ಸಂಸ್ಕೃತಿಯ ಪ್ರತಿನಿಧಿಗಳಾಗಿವೆ.

(ಎಲ್‌ಜಿ)

ಆಯಾಜ ಆರ್ಟ್‌ಗ್ಯಾಲರಿ: ಕಲಾಗ್ಯಾಲರಿಗಳೆಂದರೆ ಕೇವಲ ಚಿತ್ರಕಲೆಗಳ ಪ್ರದರ್ಶನಕ್ಕೆ ಮಾತ್ರ ಸೀಮಿತವಲ್ಲ. ಕಲೆಗೆ ಸಂಬಂಧಿಸಿದ ಎಲ್ಲ ಪ್ರದರ್ಶನಗಳೂ ಇಲ್ಲಿ ನಡೆಯಬೇಕು. ಹಲವು ಹವ್ಯಾಸಿ ಸಂಗ್ರಹಗಳ ಪ್ರದರ್ಶನಗಳೂ ನಡೆದು, ನೋಡುಗರ ಮನಸ್ಸನ್ನು ತಣಿಸಬೇಕು. ಅದು ಆರ್ಟ್ ಗ್ಯಾಲರಿಯ ಉದ್ದೇಶವಾದರೆ ಮಾತ್ರ ಸಾರ್ಥಕವಾಗುತ್ತದೆ.



ಆಯಾಜ್ ಆರ್ಟ್‌ಗ್ಯಾಲರಿ, ಗುಲಬರ್ಗಾ

ಈ ಎಲ್ಲ ಮಹತ್ತರ ಉದ್ದೇಶಗಳನ್ನು ಹೊಂದಿರುವ ಹಾಗೂ ಸ್ವತಃ ಕಲಾವಿದರೂ ಆಗಿರುವ ಮಹ್ಮದ ಆಯಾಜೊದ್ದಿನ ಪಟೇಲರು, ಗ್ರಾಮೀಣ ಪ್ರದೇಶದಿಂದ ಬಂದು, ಚಿತ್ರಕಲೆ, ಛಾಯಾಗ್ರಹಣ, ಹವ್ಯಾಸಿ ನಾಣ್ಯ ಸಂಗ್ರಹಕಾರರಾಗಿ, ಅಪೂರ್ವ ಐತಿಹಾಸಿಕ ಸ್ಮಾರಕಗಳು ಅಳಿದು ಹೋಗುವ ಮೊದಲೇ ತಮ್ಮ ಛಾಯಾಗ್ರಹಣದ ಮೂಲಕ ಚಿತ್ರಗಳನ್ನು ಸೆರೆಹಿಡಿದು ಸಂಗ್ರಹಿಸಿ, ಕಲೆಯ ವೈವಿಧ್ಯತೆಯನ್ನು ಆಸಕ್ತರಿಗೆ ತೆರೆದಿಟ್ಟಿದ್ದಾರೆ. ತಮ್ಮ ಸ್ವಂತ ಖರ್ಚಿನಿಂದ ಆರಂಭಿಸಿರುವ 'ಆಯಾಜ್ ಆರ್ಟ್‌ಗ್ಯಾಲರಿ' ಈ ಎಲ್ಲ ಆವಶ್ಯಕತೆಗಳನ್ನು ಪೂರೈಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಗುಲಬರ್ಗಾ ನಗರದ ಹೃದಯ ಭಾಗದಲ್ಲಿರುವ ಸೂಫಿ ಸಂತ ಹಜರತ್ ಖಾಜಾ ಬಂದೇನವಾಜ ದರ್ಗಾದ ಸಮೀಪ ದಲ್ಲಿರುವ ಆಯಾಜ ಆರ್ಟ್‌ಗ್ಯಾಲರಿ ಅಪೂರ್ವವಾದುದು.

ಈ ಗ್ಯಾಲರಿ 2006ರಲ್ಲಿ ಸ್ಥಾಪನೆಯಾಗಿದೆ. ತಮ್ಮ ಸ್ವ-ಆಸಕ್ತಿಯಿಂದ ಆರಂಭಿಸುವುದೆಂದರೆ, ಅದಕ್ಕೆ ತಗಲುವ ವೆಚ್ಚವೂ ಕೂಡ ಲೆಕ್ಕಕ್ಕೆ ಬರುವುದಿಲ್ಲ. ಅದೂ ಆಸಕ್ತಿಯ ಮೇಲೆ ಹೋಗು ತ್ತದೆ. ಯಾವುದೇ ಫಲಾಪೇಕ್ಷೆಯಿಲ್ಲದೇ, ಕಳೆದ ಆರು ವರ್ಷ ಗಳಲ್ಲಿ ಸ್ಥಿರ ಛಾಯಾಚಿತ್ರಗಳ ನೂರಾರು ಚಿತ್ರಕಲಾಕೃತಿಗಳ ಸಂಗ್ರಹ ಇಲ್ಲಿ ಕಾಣಬಹುದು. ಗ್ರಾಮೀಣ-ನಗರ ಸಂಸ್ಕೃತಿಯ ಚಿತ್ರಗಳು ಈ ಭಾಗದ ಜೀವನ ಶೈಲಿಯನ್ನು ಬಿಂಬಿಸುತ್ತವೆ. ಇವುಗಳೊಂದಿಗೆ ಆಯಾಜ ಅವರಿಗೆ ಐತಿಹಾಸಿಕ ಸ್ಮಾರಕಗಳ ಛಾಯಾಚಿತ್ರಗಳನ್ನು ಸೆರೆಹಿಡಿಯುವುದು ಅತ್ಯಂತ ಪ್ರಿಯ ವಾದುದು. ಆದ್ದರಿಂದ ಹಿಂದೆ ಈ ಪ್ರದೇಶವನ್ನು ಆಳಿದ ಬಹಮನಿ ಸುಲ್ತಾನರ ಅನೇಕ ಅಪರೂಪದ ಐತಿಹಾಸಿಕ ಸ್ಮಾರಕ ಗಳನ್ನು ವಿಶಿಷ್ಟ ಶೈಲಿಯಲ್ಲಿ ಸೆರೆಹಿಡಿದ ಛಾಯಾಚಿತ್ರಗಳು ಈ ಗ್ಯಾಲರಿಯಲ್ಲಿ ಕಣ್ಮನ ಸೆಳೆಯುತ್ತವೆ.

ಸೂಫಿ ಸಂತ ಖಾಜಾ ಬಂದೇನವಾಜ್ ದರ್ಗಾಕ್ಕೆ ಭೇಟಿ ನೀಡುವ ದೇಶ-ವಿದೇಶೀ ಪ್ರವಾಸಿಗರು, ಆಯಾಜ ಆರ್ಟ್‌ಗ್ಯಾಲರಿಗೆ ಭೇಟಿ ನೀಡುತ್ತಾರೆ. ಈ ಗ್ಯಾಲರಿಯಲ್ಲಿ ಗುಲಬರ್ಗಾದ ಐತಿಹಾಸಿಕ, ಧಾರ್ಮಿಕ ಮತ್ತು ಜೀವನ ಶೈಲಿಯ ವೈವಿಧ್ಯತೆಯ ಸಮಗ್ರ ಚಿತ್ರಣದ ಛಾಯಾಚಿತ್ರ ಗಳ ದರ್ಶನವಾಗುತ್ತದೆ.

ಚಿತ್ರಗಳು ಸತ್ಯದ ಪ್ರತಿಬಿಂಬ. ಈ ಭಾಗದಲ್ಲಿರುವ ಎರಡು ವಿಶ್ವವಿದ್ಯಾಲಯಗಳು ಸಂಶೋಧಕರಿಗೆ ಅಧ್ಯಯನ ಕೇಂದ್ರವಾಗಿವೆ. ಸಂಶೋಧನೆಗೆ ಅಪಾರ ಅವಕಾಶ ನೀಡುತ್ತವೆ. ಅದಕ್ಕೆ ಪೂರಕವಾಗಿ ಆಯಾಜ ಆರ್ಟ್‌ಗ್ಯಾಲರಿಯು ಪೂರಕವಾಗಿದೆ.


ಆಯಾಜ ಆರ್ಟ್‌ಗ್ಯಾಲರಿಯ ಸಂಯೋಜಕ, ನಿರ್ದೇಶಕ ಮಹ್ಮದ ಅಯಾಜೊದ್ದಿನ ಪಟೇಲ್ ಹವ್ಯಾಸಿ ಸಂಗ್ರಹಕಾರರೂ ಆಗಿದ್ದಾರೆ, ಹಳೆಯ ಹಾಗೂ ವಿವಿಧ ದೇಶಗಳ ನೋಟುಗಳು, ನಾಣ್ಯಗಳನ್ನು ಸಂಗ್ರಹಿಸಿ ದ್ದಾರೆ. ಅವರ ಗ್ಯಾಲರಿಯಲ್ಲಿ 250ಕ್ಕೂ ಹೆಚ್ಚು ದೇಶ-ವಿದೇಶಿ ನೋಟುಗಳು ಮತ್ತು ನಾಣ್ಯಗಳ ಸಂಗ್ರಹವಿದೆ. ಅಂಡೋರಾ, ಅರೂಬಾ, ಛತ್ತಮ, ಐಸಲ್ಯಾಂಡ್, ಮಕವು, ಕಿನಿಯಾ, ಇರಾನ್, ಇರಾಕ್ ದೇಶಗಳ ಈಗಿನ ಮತ್ತು ಹಿಂದಿನ ರಾಜರುಗಳ ಪ್ರಾಚೀನ ನಾಣ್ಯಗಳು ಇವರ ಸಂಗ್ರಹದಲ್ಲಿವೆ.

ಶಾತವಾಹನ, ಹೊಯ್ಸಳ, ಚಾಲುಕ್ಯ, ಬಹುಮನಿ, ಮೊಘಲ್ ಹಾಗೂ ನಿಜಾಂ ರಾಜರ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು, 2ನೆಯ ಶತಮಾನದಿಂದ ಇಲ್ಲಿಯವರೆಗಿನ ಭಾರತೀಯ ನೋಟುಗಳು, ನಾಣ್ಯಗಳ ಸಂಗ್ರಹ ಅಚ್ಚರಿಗೊಳಿ ಸುತ್ತವೆ. ಈ ಗ್ಯಾಲರಿಯಲ್ಲಿ ಸಂಗ್ರಹಗೊಂಡಿರುವ ಅತ್ಯಂತ ಹಳೆಯ ಸ್ಟ್ಯಾಂಪ್ ಪೇಪರ್‌ಗಳನ್ನು ವೀಕ್ಷಿಸುವುದೇ ಒಂದು ಅದ್ಭುತ ಅನುಭವ ನೀಡುತ್ತದೆ. ಇವೆಲ್ಲವುಗಳಿಂದಲೂ ಹಲವು ವೈಶಿಷ್ಟ್ಯ ಹೊಂದಿದರುವ ಆಯಾಜ ಆರ್ಟ್‌ಗ್ಯಾಲರಿಗೆ ಸರಾಸರಿ ನೂರಾರು ದೇಶ-ವಿದೇಶಿ ಪ್ರವಾಸಿಗರು ಭೇಟಿ ನೀಡುವ ಗ್ಯಾಲರಿ ಇದಾಗಿದ್ದು, ಈ ಭಾಗದ ಒಂದು ಹೆಮ್ಮೆಯ ಗ್ಯಾಲರಿ ಇದಾಗಿದೆ.

(ಎಸ್‌ಆರ್‌ಎಂ)

ಆಯುಧಗಳು: ಆಯುಧಗಳ ಹಿನ್ನೆಲೆ ತಿಳಿಯಲು ಎರಡು ಮಾರ್ಗವುಂಟು. ಲಿಖಿತ ದಾಖಲೆಗಳು ದೊರಕಲು ಆರಂಭಿಸಿದ ಅನಂತರದವು (ಐತಿಹಾಸಿಕ). ಲಿಖಿತ ದಾಖಲೆಗಳಿಲ್ಲದೆ ವಸ್ತುಗಳ ಅವಶೇಷಗಳ ಆಧಾರದಿಂದ ಊಹಿಸಿ ತಿಳಿಯುವುದು (ಪ್ರಾಗೈತಿಹಾಸಿಕ). ಈ ದಿಸೆಯಲ್ಲಿ ಒಂದಿಷ್ಟು ಪ್ರಾಚೀನಕ್ಕೆ ಸರಿದಾಗ ಕ್ರಿಸ್ತ ಪೂರ್ವದ ಸು. ಐದು ಲಕ್ಷ ವರ್ಷದಿಂದ ಮೂರುಸಾವಿರ ವರ್ಷಗಳವರೆಗೆ ಶಿಲಾಯುಗ, ಮಧ್ಯ ಶಿಲಾಯುಗವೆಂಬ ವಿಂಗಡಣೆ ಮೂಲಕ ಅಂದು ಬಳಸುತ್ತಿದ್ದ ಕಲ್ಲಿನ ಆಯುಧಗಳು ಗಮನ ಸೆಳೆಯುತ್ತವೆ. ಅನಂತರದ ತಾಮ್ರ ಶಿಲಾಯುಗ ಕ್ರಿ.ಪೂ. 2500–800, ತದನಂತರದ್ದು ಕಬ್ಬಿಣದ ಯುಗ ಕ್ರಿ.ಪೂ. 1000–300 ಇವುಗಳಲ್ಲಿ ಆ ಕಾಲಕ್ಕೆ ದೊರಕುತ್ತಿದ್ದವುಗಳಿಂದ ಆಯುಧಗಳನ್ನು ಮಾಡಿ ಬಳಸುತ್ತಿದ್ದುದು ತಿಳಿದುಬರುತ್ತದೆ.

ಭಾರತೀಯ ಪುರಾಣಗಳಲ್ಲಿ ಸಹ ಆಯುಧಗಳ ಉಲ್ಲೇಖ ವಿಪುಲವಾಗಿ ದೊರಕುತ್ತವೆ. ನಮ್ಮ ಕಲ್ಪಿತವಾದ ಎಲ್ಲಾ ದೇವತೆಗಳಲ್ಲಿ ಒಂದಲ್ಲಾ ಒಂದು ವಿಧವಾದ ಆಯುಧ ಇದ್ದೇ ಇರುತ್ತದೆ. ಅದು ಸೌಮ್ಯವಾಗಿರಬಹುದು ಇಲ್ಲವೆ ಮಾರಕಾಸ್ತ್ರವಾಗಿರಬಹುದು. ಪ್ರಮುಖ ದೇವತೆಗಳಾದ ಬ್ರಹ್ಮ, ವಿಷ್ಣು, ಮಹೇಶ್ವರ, ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣರಾದವರೆಂದು ನಮ್ಮಲ್ಲಿ ಪೂರ್ಣ ನಂಬಿಕೆಯಿದ್ದು. ವಿಷ್ಣು ಮತ್ತು ಮಹೇಶ್ವರ ಇವರುಗಳ ಅವತಾರಗಳನ್ನು ಹೇಳುವಾಗ ಪ್ರತಿ ಅವತಾರದಲ್ಲೂ ಬೇರೆ ಬೇರೆ ರೀತಿಯ ಆಯುಧಗಳಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ದುಷ್ಟ ನಿಗ್ರಹಕ್ಕಾಗಿಯೇ ಬಳಸುವ ಆಯುಧಗಳಾದ ಚಕ್ರ, ತ್ರಿಶೂಲ, ಭರ್ಚಿ, ದಂಡ ವಜ್ರ, ಗದೆ, ಪಂಶ, ಅಂಶುರ್, ಬಿಲ್ಲು ಬಾಣ, ಪರಶು, ಖಟ್ವಾಂಗ, ಶತ್ರಿ, ಖಡ್ಗ, ಗುರಾಣಿ, ಈಟಿ, ಗರಗಸ, ನೇಗಿಲು, ಕುಂತ, ಮೂಸಲ ಇವುಗಳನ್ನು ಕಾಣಬಹುದು. ಶಬರಶಂಕರ ವಿಳಾಸ ಪುರಾಣದಲ್ಲಿ ಹೇಳಿರುವಂತೆ ಉಗ್ರ ನರಸಿಂಹನ ಉಗ್ರತೆ ಶಮನಗೊಳಿಸಲು ಪರಮೇಶ್ವರ ಶರಭನಾಗಿ ಅವತಾರವೆತ್ತಿದಾಗ ಪಕ್ಷಿಯದೇಹ ಎರಡಕ್ಕೆ ಸಿಂಹದ ರೀತಿಯ ಎಂಟು ಕಾಲುಗಳು ಸೊಂಟದ ಮೇಲಿನದು ಮನುಷ್ಯರೂಪ ಸಿಂಹಕ್ಕೆ ಇರುವಂತೆ ಬಾಲ, ಕಣ್ಣುಗಳೆರಡಾದರೂ ಸಿಂಹದ ತಲೆ, ಕೋರೆ ಹಲ್ಲೇ ಒಂದು ಬಗೆಯ ಆಯುಧವಿದ್ದಂತೆ ಇದ್ದು. ದುಷ್ಟ ಸಂಹಾರ ಕಾಲದಲ್ಲಿ ಪ್ರಯೋಗ ಮಾಡಬಹುದಾದ ಈ ಶರಭನಿಗೆ 32 ಕೈಗಳು. ಅವುಗಳ ಎಲ್ಲಾ ಆಯುಧಗಳೇ ಇರವುದನ್ನು ಶಾಸ್ತ್ರ ಗ್ರಂಥ ವಿವರಿಸುತ್ತದೆ.



ವಿವಿಧ ಮಾದರಿಯ ಆಯುಧ ಸಲಕರಣೆಗಳು

ಶೂಲ ಎಂಬ ಆಯುಧ ಒಂದು ಅಥವಾ ಮೂರು ಅಡಿ ಇರುತ್ತದೆ. ಇದನ್ನೇ ತ್ರಿಶೂಲವೆನ್ನುತ್ತಾರೆ. ಇದು ಬ್ರಹ್ಮ ಮಹೇಶ್ವರರ ಸಂಕೇವೆಂದು, ಮತ್ತೊಂದು ರೀತಿಯಲ್ಲಿ ಸತ್ವ–ರಜಸ್ಸು–ತಮೋಗುಣಗಳ ಸಂಕೇತವೆಂದು ವ್ಯಾಖ್ಯಾನಿಸಲಾಗುತ್ತದೆ. ಇದರ ಲಕ್ಷಣ ಮದ್ಯದ ಶೂಲ ಎತ್ತರವಾಗಿದ್ದು ಉಳಿದೆರಡು ಕೊಂಚ ಎತ್ತರದಲ್ಲಿ ಕಡಿಮೆ ಇದ್ದು ಒಂದೇ ಅಳತೆಯಲ್ಲಿರುತ್ತವೆ. 'ಭರ್ಚಿ' ವೀರರು ಆತ್ಮರಕ್ಷಣೆಗಾಗಿ ಬಳಸುವ ಆಯುಧ 'ವಜ್ರ' ತ್ರಿಶೂಲದ ಆಕಾರ ಎರಡೂ ಕಡೆಗಳಲ್ಲಿದ್ದು ಮಧ್ಯ ಭಾಗದಲ್ಲಿ ಹಿಡಿದುಕೊಳ್ಳುವುದಕ್ಕೆ ಅನುಕೂಲವಾಗುವಂತಿರುತ್ತದೆ. 'ಪಾಶ' ಮೂರು ಹಗ್ಗಗಳನ್ನು ಜೋಡಿಸಿಬಿಗ್ಗಿಸಿ ಹಿಡಿದಂತಿರುತ್ತದೆ. ಬಿಡಿಸಲಾರದಂತೆ ಪಾಶದಿಂದ ಬಂದಿಸುವುದು ಇದರ ಗುಣ. 'ಅಂಕುಶ'ವಂತೂ ಕೋಲಿನ ಕೊನೆಯಲ್ಲಿ ಕೊಕ್ಕೆ ಮಾದರಿ ಇರುವಂತಹದ್ದು. ಸಾಮಾನ್ಯವಾಗಿ ಆನೆಗಳನ್ನು ಪಳಗಿಸಲು ಮಾವುತ ಇದನ್ನು ಬಳಸುತ್ತಾನೆ. 'ಖಟ್ವಾಂಗ' ಉಳಿದ ಆಯುಧಗಳಿಗಿಂತ ಭಿನ್ನ. ಕಾಲು ಅಥವಾ ತೊಡೆಯ ಎಲುಬನ್ನು ದಂಡವಾಗಿರಿಸಿ ಅದರ ಒಂದು ಕೊನೆಯಲ್ಲಿ ತಲೆಬುರುಡೆ ಸಿಕ್ಕಿಸಿದಂತಿರುವುದು. ಇಂತಹ ದಂಡಕ್ಕೆ ಸರ್ಪಸುತ್ತಿದಂತೆ ಮಾಡುವುದು, ಬಲಗಣ್ಣಿನ ರಂಧ್ರದ ಮೂಲಕ ಹೊರಕ್ಕೆ ಹೆಡೆಯನ್ನು ಚಾಚಿ ಕೊಂಡಿರುವಂತಹುದ್ದು, ಒಂದು ವೇಳೆ ತೊಡೆಯ ಎಲುಬು ಇಲ್ಲದಿದ್ದಲ್ಲಿ ಮರದ ದಂಡ ಸಹ ಬಳಸಬಹುದಾಗಿದ್ದು. ಇಂತಹ ಆಯುಧವನ್ನು ಕಾಪಾಲಿಕ ಶೈವರು, ಸಿದ್ಧರು ಶಿವನ ಆಯುಧವೆಂಧು ಬಳಸುತ್ತಾರೆ. 'ಗುರಾಣಿ' ಶತ್ರುವಿನ ಪ್ರಹಾರಗಳನ್ನು ತಡೆಯಲು ಬಳಸುತ್ತಾರೆ. 'ಗರಗಸ' ಹೆಸರೇ ಸೂಚಿಸುವಂತೆ ಕತ್ತರಿಸುವಂತಹ ಹಲ್ಲುಗಳಿರುವಂತಹದ್ದು, ಹೀಗೆ ಪುರಾಣ ಪ್ರಸಂಗಗಳನ್ನೇ ಅವಲೋಕಿಸುತ್ತಾ ಹೋದಂತೆ 'ದುಷ್ಟ ಸಂಹಾರ ಶಿಷ್ಟ್ಯ ರಕ್ಷಣೆ' ಎಂಬ ಧ್ಯೇಯ ವಾಕ್ಯದಂತೆ ಸಂಹಾರಕ್ಕಾಗಿಯೇ ಹಲವು ತೆರನ ಆಯುಧಗಳು ಬಳಕೆಯಾದುದನ್ನು ಕಾಣುತ್ತೇವೆ.

ಆಯುಧಗಳಲ್ಲಿ ಲಿಂಗಭೇದ: ವಜ್ರಾಯುಧ, ದಂಡ, ಕತ್ತಿ, ಅಂಕುಶ್, ಶೂಲ, ಚಕ್ರ, ಬಾಣ, ಗರಗಸ ಇವುಗಳು ನೇರವಾಗಿ ಆಘಾತ ಮಾಡುವ ಶಕ್ತಿಯುಳ್ಳದ್ದಾದರಿಂದ ಪುರುಷವೆಂದು, ಶಕ್ತಿ, ಗದೆ, ಬಿಲ್ಲು, ಶಂಬ ಇವುಗಳನ್ನು ಸ್ತ್ರೀ ಎಂತಲೂ ಪಾಶ, ಪದ್ಮ ಮತ್ತು ಧ್ವಜ ಇವನ್ನು ನಪುಂಸಕ ಎಂತಲೂ ಶಿಲ್ಪಶಾಸ್ತ್ರ ಗ್ರಂಥಗಳು ಉಲ್ಲೇಖಿಸುತ್ತವೆ.

ಕನ್ನಡ ಶಾಸನಗಳಲ್ಲಿ, ಕಾವ್ಯಗಳಲ್ಲಿ ಹಲವಾರು ಅಯುಧಗಳ ವರ್ಣನೆ ಬರುತ್ತದೆ. ರಾಮಾಯಣ, ಮಹಾಭಾರತ ಯುದ್ಧಗಳದ್ದೇ ಮುಖ್ಯಾಂಶವಾಗಿರುವುದರಿಂದ ಆಯುಧಗಳ ಬಳಕೆ ಅತ್ಯಧಿಕ. ಬಿಲ್ಲು ಬಾಣಗಳದ್ದೇ ಮೇಲುಗೈ. ಬಿಲ್ಲು ಒಂದೇ ಬಗೆಯದಾದರೇ ಬಾಣಗಳ ವೈವಿಧ್ಯತೆ ಹಲವು. ಬಿಳಿಯಂಬು, ಕೋಲುಂಬು, ಸುಂಗು ಲಂಬು (ಶಾಸನಗಳಲ್ಲಿ), ಪಾರೆಯಂಬು, ಕೆಲ್ಲಂಬು, ಕೆತ್ತಂಬು, ನಲ್ಲಂಬು, ಮಸೆಯಂಬು, ಕೆಂಗೆರಿ ಮೊನೆಯಂಬು, ಒಟ್ಟಿನಂಬು(ಪಂಪನ ಕಾವ್ಯದಲ್ಲಿ), ಕವಲಂಬು (ರನ್ನ), ಅಚ್ಚಲಗಂಬು (ಜನ್ನ), ಬೋಳೆಯಂಬು (ಹರಿಹರ) ತಮ್ಮ ತಮ್ಮ ಕಾವ್ಯಗಳಲ್ಲಿ ಬಳಸಿದ್ದಾರೆ(ಅಂಬು ಅಂದರೆ ಬಾಣ). ಬಿಲ್ಲನ್ನು ಮಾತ್ರ ಏಕತ್ರವಾಗಿ ಹೇಳಿದ್ದು ತಾಳವೃಕ್ಷ ಅಥವಾ ಬೊಂಬಿನಿಂದ ಮಾಡಿರುವುದನ್ನು ಬಾಣವನ್ನು ಕಬ್ಬಿಣದಿಂದ ಮಾಡಿರುವುದಾಗಿಯೂ ತಿಳಿದು ಬರುತ್ತದೆ. ಇದಲ್ಲದೆ ಕರವಾಳ, ತೋಳಬಾಳ ಎಂಬ ಪದಪ್ರಯೋಗ ಖಡ್ಗಕ್ಕೆ ಪರ್ಯಾಯವಾಗಿ ಬಳಸುತ್ತಾರೆ. ಕರ್ಕಡೆ, ಕರ್ಪಣ (ಕೈಯಿಂದ ಎಸೆಯಬಹುದಾದ ಆಯುಧ) ಮುಸಲ (ಮೊನಚಾದ ದಂಡ) ತೀರಿಕೆ, ಜಟ್ಟಿಗೆ ಭಿಂಡವಾಳ(ದಪ್ಪ ತುದಿಯ ಕಬ್ಬಿಣದ ದಂಡ), ಮುದ್ಗರ, ಒಕ್ಕಣ, ಉದ್ದುವಾರೆ, ಅಡಾಯುಧ (ಉದ್ದನೆಯ ಬಿದಿರು ಬಡಿಗೆ)– ಹೀಗೆ ತನಗಾಗದವನನ್ನು ಬಗ್ಗುಬಡಿಯಲು ಬಳಸುತ್ತಿದ್ದ ಆಯುಧಗಳನ್ನು ಕುರಿತು ಹಿಂದಿನ ಕಾವ್ಯಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದಾಗಿದೆ.

ಗೃಹೋಪಯೋಗಿ ಆಯುಧಗಳೆಂದು ತಿಳಿಯಬಹುದಾದ ಸಣ್ಣ ಪ್ರಮಾಣದ ಚಾಕು, ಕತ್ತರಿ, ಬ್ಲೇಡುಗಳಂತಹುಗಳಲ್ಲದೇ ರೈತನ ಆಯುಧಗಳಾದ ನೇಗಿಲು, ಗುದ್ದಲಿ, ಹಾರೆ, ಪಿಕಾಸೆ, ಒನಕೆ, ಬಡಗಿಯ ಆಯುಧವಾದ ಬಾಚಿ, ಉಳಿ, ಸುತ್ತಿಗೆ, ಕಟ್ಟಿಂಗ್ ಪ್ಲೈರ್, ಜನಜೀವನದ ಅವಿಭಾಜ್ಯ ಅಂಗವಾದ ದ್ವಿಚಕ್ರ, ತ್ರಿಚಕ್ರ (ಆಟೋ ಮುಂತಾದವು) ಮತ್ತು ನಾಲ್ಕು ಚಕ್ರಗಳ ವಾಹನಗಳು, ಆಕಾಶದಲ್ಲಿ ಹಾರಾಡುವ ವಿಮಾನ, ಜಲಯಾನದ ಹಡಗು, ವೃತ್ತಿ ಆಧಾರಿತ ಕಮ್ಮಾರಿಕೆ, ಚಮ್ಮಾರಿಕೆ, ಗುಡಿಕೈಗಾರಿಕೆ, ಕಾರ್ಖಾನೆ ಯಂತ್ರಗಳು, ಇತ್ತೀಚೆಗೆಗೆ ನವ ನಾಗರಿಕತೆ ಬಾಂಬ್‌ಗಳು, ಪಿಸ್ತೂಲ್‌ಗಳು, ರಾಡಾರ್‌ಗಳು, ಪೋಲಿಸ್, ಮಿಲಿಟರಿ ಬಳಸುವ ಗನ್‌ಗಳು, ಫಿರಂಗಿ ಗುಂಡುಗಳು ಇವೆಲ್ಲವೂ ಒಂದು ಬಗೆಯ ಆಯುಧಗಳೇ. ಇವುಗಳನ್ನೇ ಬಳಸುವ ವಿಧಾನ, ಪಡೆದುಕೊಳ್ಳುವ ಪ್ರಯೋಜನ ಅವರವರ ಅಗತ್ಯತೆಗೆ ತಕ್ಕಂತೆ ಇರುತ್ತದೆ. (ಎಲ್ಎಸ್)

ಆರತಿ ಕುಲಕರ್ಣಿ: ಕಲಾವಿದೆ. ಕಲಬುರ್ಗಿ ಕಲಾಕ್ಷೇತ್ರ ಕಂಡ ಅಪರೂಪದ ಕಲಾವಿದೆ. ಸದಾ ಹೊಸತನವನ್ನು ಕೃತಿಗಳಲ್ಲಿ ತುಂಬಿಸುವ ಇವರ ಕೃತಿಗಳಲ್ಲಿ ಭಾರತೀಯ ಸಾಂಪ್ರದಾಯಿಕ ಶೈಲಿಯ ದೇಶೀಯ ಸೊಗಡನ್ನು ಬೆರೆಸಿ ರೂಪುಗೊಂಡಿದ್ದನ್ನು ಕಾಣಬಹುದು.ಸಾಂಪ್ರದಾಯಿಕ ಶೈಲಿಯ ಚಿತ್ರಗಳಲ್ಲಿ ಗಿಡ, ಮರ, ಪಕ್ಷಿ, ಪ್ರಾಣಿಗಳು ಹೂ ಮೌಲ್ಯವಾದ ಪಾತ್ರವನ್ನು ವಹಿಸುತ್ತಿವೆ. ರಜಪೂತ ಕಲೆಯ ಕೃಷ್ಣ–ರಾಧೆಯರಿರಬಹುದು. ಮೊಘಲ್ ಶೈಲಿಯ ಯುದ್ಧದ ಸನ್ನಿವೇಶ ಇರಬಹುದು. ಇವೆಲ್ಲದರಲ್ಲಿಯೂ ಪ್ರಕೃತಿಗೆ ವಿಶೇಷವಾದ ಸ್ಥಾನಮಾನವನ್ನು ನೀಡಿದ್ದಾರೆ. ಅದಿಲ್ಲದೇ ಅಂದಿನ ಚಿತ್ರಗಳು ಅಪೂರ್ಣತೆಯನ್ನು ಅನುಭವಿಸುತ್ತಿದ್ದುವು. ಅದೇ ಆಶಯದೊಂದಿಗೆ ಪ್ರಕೃತಿಗೆ ವಿಶೇಷವಾದ ಸ್ಥಾನಮಾನವನ್ನು ನೀಡುತ್ತ ಇವರು ಕೃತಿಗಳನ್ನು ರಚಿಸುತ್ತಿದ್ದಾರೆ. ಆದರೆ, ಅವರಲ್ಲಿಯ ಆ ಕೃತಿಗಳು ಮಾತ್ರ ಭಿನ್ನವಾಗಿದೆ. ಅಲ್ಲದೇ ಅವುಗಳು ಧರಿಸಿದ ವಸ್ತುಗಳು ಈ ಭಾಗದ ವೇಷಭೂಷಣಗಳಂತೆ ತೋರುತ್ತವೆ. ಕೆಲವೊಂದು ಕಲಾಕೃತಿಗಳಲ್ಲಿ ಈ ಭಾಗದಲ್ಲಿ ಬಹುವಾಗಿ ಕಂಡುಬರುವ ಇಳಕಲ್ ಸೀರೆಗಳನ್ನು ಬಳಸಿದ್ದು ಕಲಾವಿದರಲ್ಲಿಯ ದೇಶೀಯತೆ ಬಗ್ಗೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಇದಲ್ಲದೇ ಅವರು ಕೃತಿಗಳಲ್ಲಿ ಬಳಸಿದ ಪಕ್ಷಿಗಳು ಹಾಗೂ ಮತ್ಸ್ಯ ಸಮೂಹ ಕಲಾಕೃತಿಗಳಿಗೆ ವಿಶೇಷ ಆಕರ್ಷಣೆಯನ್ನು ನೀಡುತ್ತವೆ. ಸರಳರೇಖೆಗಳು, ಬಣ್ಣಗಳ ಬಳಸುವಿಕೆ ಆರತಿಯವರ ಸ್ವಂತಿಕೆಯನ್ನು ಎತ್ತಿ ತೋರಿಸುತ್ತದೆ.

ಇವರು ಕಲಬುರ್ಗಿಯ ಎಂ.ಎಂ.ಕೆ. ಕಾಲೇಜಿನಲ್ಲಿ ಎಂ.ವಿ.ಎ. ತರಗತಿಯಲ್ಲಿ ವಿ.ಜಿ. ಅಂದಾನಿಯವರ ಮಾರ್ಗದರ್ಶನದಲ್ಲಿ ವಿಶೇಷ ಶೈಲಿಯನ್ನು ಕರಗತ ಮಾಡಿಕೊಂಡಿರುವ ಕಲಾವಿದೆ. ಕಲಬುರ್ಗಿ ವಿಶ್ವವಿದ್ಯಾಲಯದ ಬಿ.ಎಫ್.ಎ. ಪರೀಕ್ಷೆಯಲ್ಲಿ ಚಿನ್ನದಪದಕ ಪಡೆಯುವ ಮೂಲಕ ಗಮನ ಸೆಳೆದಿದ್ದಾರೆ. ತನ್ನ ವಿದ್ಯಾರ್ಥಿ ಜೀವನದಲ್ಲಿ ಕಲಬುರ್ಗಿಯಲ್ಲಿ ನಡೆದ ಟೆರ್ರಾಕೋಟಾ ಕ್ಯಾಂಪ್, ಪೇಪರ್ ಪಲ್ಪ್ ಮಾಸ್ಕ್ ಕ್ಯಾಂಪ್ ಹಂಪಿಯಲ್ಲಿ ಲ್ಯಾಂಡ್‌ಸ್ಕೇಪ್ ಕ್ಯಾಂಪ್, ಪ್ಲೆಟ್ ಲಿಥೋ ವರ್ಕ್‌ಶಾಪ್, ಕೇರಳ ಸಂಪ್ರದಾಯಿಕ ಕಾರ್ಯಾಗಾರಗಳಂಹ ಅನಕೇ ಕಾರ್ಯಾಗಾರಗಳಲ್ಲಿ ಇವರು ಭಾಗವಹಿಸಿದ್ದಾರೆ. ಅಲ್ಲದೇ ಪೈಂಟಿಂಗ್ ಕಲರ್ಸ್ ಎಂಬ ಶೀರ್ಷಿಕೆ ಅಡಿ ಕಲಾಪ್ರದರ್ಶನ, ವಾರ್ಷಿಕ ಪ್ರದರ್ಶನ, ಗ್ರುಪ್ ಆಫ್ ಪೇಂಟಿಂಗ್ ಅಂಡ್ ಡ್ರಾಯಿಂಗ್ ಪ್ರದರ್ಶನ, ರಾಜ್ಯ ಮಟ್ಟದ ಕಲಾಪ್ರದರ್ಶನ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹೀಗೆ ಅನೇಕ ಗುಂಪು ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಇವರ ಪ್ರತಿಭೆಗೆ ಇನ್ನರ್‌ವ್ಹೀಲ್ ಕ್ಲಬ್ ಆಫ್ ಕಲಬುರ್ಗಿ, ರಾಜ್ಯ ಮಟ್ಟದ ಕಲಾಪ್ರದರ್ಶನ, ಬೀದರ್‌ನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಂತಹ ಪ್ರಶಸ್ತಿಗಳು ಸಂದಿವೆ.

(ಎಚ್‌ವಿಎಂ)

ಆಲ್ದಾಳ ಎಲ್.ಬಿ.ಕೆ: ನಟ, ನಾಟಕಕಾರ, ರಂಗಭೂಮಿಯ ನಿರ್ದೇಶಕ, ಕವಿ, ತತ್ವಪದಕಾರ ಇವರ ಪೂರ್ಣ ಹೆಸರು ಲಾಲ ಮಹ್ಮದ ಖಲೀಫ್ ಬಂದೇನವಾಜ್ ಆಲ್ದಾಳ. ಆಲ್ದಾಳ ಮಾಸ್ತರ ಎಂದೇ ಜನಪ್ರಿಯರಾಗಿದ್ದಾರೆ. ಇವರು 1938ರಲ್ಲಿ ಸಿಂದಗಿ ತಾಲ್ಲೂಕಿನ ಬನಹಟ್ಟಿಯಲ್ಲಿ ಜನಿಸಿದರು. ಮುಸ್ಲಿಮರಾದರೂ ಶರಣ ಸಂಪ್ರದಾಯ ರೂಢಿಸಿಕೊಂಡು, ಹಳ್ಳಿಹಳ್ಳಿಗಳಿಗೆ ಹೋಗಿ ಬಯಲಾಟ ಕಲಿಸುತ್ತಿದ್ದರು. ಇವರ ಮಾವಂದಿರರಾದ ಹುಸೇನ



ಪಟೇಲ್, ಸುಲ್ತಾನ್ ಪಟೇಲ್, ಲಾಡ್ಲೇಪಟೇಲ್ ಅವರು ಕಲಿಸುತ್ತಿದ್ದ ಬಯಲಾಟಗಳ ಪ್ರಭಾವದಿಂದ, ಎಲ್.ಬಿ.ಕೆ. ಆಲ್ದಾಳ ಅವರೂ ಆ ಆಟ ಗಳಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನು ಮಾಡುತ್ತಿದ್ದರು.

ಏಳನೆಯ ತರಗತಿಯ ವರೆಗೆ ಶಾಲೆ ಕಲಿತಿರುವ ಇವರು ಬದುಕಿನ ಶಾಲೆಯಲ್ಲಿ ಕಲಿತಿದ್ದೇ ಅಪಾರ. ಕಲಬುರ್ಗಿ ಜಿಲ್ಲೆ ಸುರಪುರ ತಾಲ್ಲೂಕಿನ ಆಲ್ದಾಳ ಗ್ರಾಮದಲ್ಲಿ ಕನಕಾಂಗಿ ನಾಟಕದಲ್ಲಿ ಶ್ರೀಕೃಷ್ಣನ ಪಾತ್ರ ಮಾಡಿ ಎಲ್ಲರಿಂದಲೂ ಭೇಷ್ ಎನಿಸಿಕೊಂಡರು. ಸಗರ ಕೃಷ್ಣಾಚಾರ್ಯರ ಜೀನನ ಸಂಸಾರ ನಾಟಕದಲ್ಲಿ ಇವರು ಮಾಡಿದ ಹೆಂಡತಿಯ ಪಾತ್ರ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿಯಾಗುವಂತೆ ಮಾಡಿದರು. ಗಂಡನ ಪಾತ್ರಧಾರಿಯಾಗಿ ಮೋಹನಚಂದ ಕಿರಣಗಿ ಹಾಗೂ ಹೆಂಡತಿಯ ಪಾತ್ರ ಮಾಡಿರುವ ಇವರು ರಂಗದ ಮೇಲೆ ಬಂದರೆ ಪ್ರೇಕ್ಷಕರು ಬಿದ್ದು ಬಿದ್ದು ನಗುತ್ತಿದ್ದರು. ಅಂತಹ ಪಾತ್ರಗಳು ಅವು. ಜೇವರ್ಗಿಯ ಷಣ್ಮುಖ ಶಿವಯೋಗಿ ನಾಟಕ ದಲ್ಲಿ ತಂದೆ ಪಾತ್ರ ಮತ್ತು ತುಮಕೂರು ವಿಶ್ವಾರಾಧ್ಯ ನಾಟಕ ದಲ್ಲಿನ ಇವರ ಗುರುವಿನ ಪಾತ್ರ ಮೆಚ್ಚತಕ್ಕಂಥವುಗಳು.

ಆಲ್ದಾಳರು 14 ನಾಟಕ ಕೃತಿಗಳನ್ನು, 9 ಚರಿತ್ರೆಗಳನ್ನು, 3 ತತ್ವಗೀತೆ ಕೃತಿಗಳನ್ನು, 3 ನಾಮಾವಳಿ ಕೃತಿಗಳನ್ನು ಹೀಗೆ ಒಟ್ಟು 29 ಕೃತಿಗಳನ್ನು ರಚಿಸಿ, ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಹೊರತಂದಿದ್ದಾರೆ. 13 ಭಕ್ತಿಗೀತೆಗಳ ಧ್ವನಿಸುರುಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಪತಿ ಭಕ್ತಿ ಕಲಿಯುಗದ ಕನ್ಯೆ, ಬಾಳಿನ ಗೀತೆಗಳ ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಪತಿ



ಶ್ರೀರಂಗರ ಸಮಗ್ರ ಮಂಥನ ನಾಟಕದ ದೃಶ್ಯ, ನಿರ್ದೇಶನ: ಗಿರಡ್ಡಿ ಗೋವಿಂದರಾಜ

ಭಕ್ತಿ, ಕಲಿಯುಗದ ಕನ್ಯೆ, ಬಾಳಿಗೊಂದು ಬೆಳಕು, ನಮಸ್ಕಾರ, ನನ್ನ ದೇವರು, ಕಣ್ಣಿಟ್ಟಿ ಕೈಕೊಟ್ಟ, ವಂಚಕ ಸಾಮಾಜಿಕ ನಾಟಕಗಳಾದರೆ, ಕಡಕೋಳ ಮಡಿವಾಳೇಶ್ವರರು, ವಿಶ್ವಾರಾಧ್ಯ ಮಹಾತ್ಮೆ, ಗರತಿ ವಿಶ್ವದ ಜ್ಯೋತಿ, ಮೂರು ಮುತ್ತುಗಳು, ಮಹಾತ್ಮ ಚರಬಸವೇಶ್ವರ, ಜೇವರ್ಗಿ ಜ್ಯೋತಿ ಷಣ್ಮುಖ ಶಿವಯೋಗಿ, ವಚನ ವಾಹಿನಿ ಇವೆಲ್ಲ ಶರಣರ ಚರಿತ್ರೆಯ ನಾಟಕ ಗಳಾಗಿವೆ.

ವಿಶ್ವಾರಾಧ್ಯ, ಹಯಾಳ ಲಿಂಗೇಶ್ವರ, ಪರಮಾನಂದ, ಕಡಕೋಳ ಕಿರಣ, ಅಳ್ಳಳ್ಳಿ ಅಯ್ಯಪ್ಪ ಸ್ವಾಮಿ ಹೀಗೆ ಹಲವಾರು ಧ್ವನಿಸುರುಳಿಗಳ ಸಾಹಿತ್ಯ ರಚಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ, ಕಲಬುರ್ಗಿ ಆಕಾಶವಾಣಿ ಧ್ವನಿ ಪರೀಕ್ಷೆ ಸದಸ್ಯರಾಗಿ, ಜೇವರ್ಗಿ ಸಂಗೀತ ಕಲಾವಿದರ ಸಂಘದ ಗೌರವಾಧ್ಯಕ್ಷರಾಗಿ ದುಡಿದಿದ್ದಾರೆ.

1962ರಲ್ಲಿ ಪತಿ ಭಕ್ತಿ ನಾಟಕದಿಂದ ಪ್ರಾರಂಭವಾದ ಇವರ ಬರವಣಿಗೆ ಇಲ್ಲಿಯವರೆಗೆ ನಿರಂತರ ಪ್ರಾವಾಹವಾಗಿ ಹರಿ ಯುತ್ತಲೇ ಇರುವುದು ಇವರ ಆಗಾಧವಾದ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಸುಮಾರು 11 ನಾಟಕ ಕಂಪನಿಗಳಲ್ಲಿ ನಿರ್ದೇಶನ ಮಾಡಿ ಸೈ ಎನಿಸಿಕೊಂಡಿರುವ ಇವರು ಚಿಕ್ಕೊಪ್ಪ, ಬೆನಕಟ್ಟಿ, ಸಿರಸಿ, ಸುಳ್ಯ, ಯಂಕಂಚಿ, ಚಿತ್ರದುರ್ಗ, ಶಹಾಪುರ ಇತರ ಹಲವಾರು ಕಂಪನಿಗಳಲ್ಲಿ ನಿರ್ದೇಶನದ ಜೊತೆ ತಾವೂ ಪಾತ್ರಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾರೆ.


ಇವರ ಸಾಧನೆಗೆ ಅನೇಕ ಗೌರವ ಪ್ರಶಸ್ತಿಗಳು ಸಂದಿವೆ. ರಾಜ್ಯ ಪ್ರಶಸ್ತಿ ಪುರಸ್ಕಾರ, ನಾಟಕ ಅಕಾಡೆಮಿ ಪುರಸ್ಕಾರಗಳೂ ಅರಸಿಕೊಂಡು ಬಂದಿವೆ. ಜೊತೆಗೆ ಜಿಲ್ಲೆಯದ್ಯಾಂತ ಮಠಮಾನ್ಯ ಗಳು, ನಾಟಕ ರತ್ನ, ಸರಸ್ವತಿ ವರಪುತ್ರ, ಶರಣ ಸಾಹಿತಿ, ಶಿಕ್ಷಕ ಬಂಧು, ಸಗರ ಸಾಹಿತ್ಯರತ್ನ ಸಗರಸಿರಿ ಹೀಗೆ ಹಲವಾರು ಸಂಘ ಸಂಸ್ಥೆಗಳು ಬಿರುದುಗಳನ್ನು ನೀಡಿವೆ. ರಾಂಪುರದಲ್ಲಿ ನಡೆದ ತತ್ವಪದಕಾರ ಸಮ್ಮೇಳನಾಧ್ಯಕ್ಷರಾಗಿ, ಈ ನಾಡಿಗೆ ಹೆಮ್ಮೆ ಯನ್ನುಂಟು ಮಾಡಿದ್ದಾರೆ. ಇವರಿಗೆ ಬರಹವೆ ಆಸ್ತಿ. ಅದೇ ಆಧಾರ. ಅದು ಎಷ್ಟರ ಮಟ್ಟಿಗೆ ಇವರನ್ನು ಬದುಕಿಸುತ್ತದೆಯೋ ಆ ದೇವರೇ ಬಲ್ಲ. ಕಡಕೋಳ ಮಡಿವಾಳೇಶ್ವರ ಶರಬ ಲಿಂಗೇಶ್ವರ, ವಿಶ್ವರಾಧ್ಯ ನಾಟಕಗಳು ನನ್ನ ಮನ ತುಂಬಿದ ಬಾಳಿಗೆ ದಾರಿಯಾದ ನಾಟಕಗಳು ಎಂದು ಹೃದಯತುಂಬಿ ಹೇಳುವ ಇವರು, ತಮ್ಮ ಎಪ್ಪತ್ತನೇ (70) ವಯಸ್ಸಿನಲ್ಲೂ ಹೆಗಲಿಗೆ ಚೀಲ ಹಾಕಿಕೊಂಡು, ದೊಡ್ಡ ಹೆಜ್ಜೆಗಳನ್ನಿಡುತ್ತ ಹೋಗುವುದು ನೋಡಿದರೆ, ಓ ಆಲ್ದಾಳ ಮಾಸ್ತರ ಬಂದ್ರು ಅನ್ನುವ ಜನರ ಮಾತು, ಇವರು ಜನರ ಮನದಲ್ಲಿ ಮನೆ ಮಾಡಿರುವ ಒಬ್ಬ ಅಪರೂಪದ ನಾಟಕದ ಮಾಸ್ತರ. ಇಂಥವರು ನಮ್ಮ ನಡುವೆ ಇರುವುದೇ ಒಂದು ಸುದೈವ.

(ಎಸ್ಆಯ್ಎಸ್)

ಇ

ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆ್ಯಂಡ್ ಕಲ್ಚರ್: ಕಲೆ ಇಲ್ಲಿಯವರೆಗೂ ಜೀವಂತ ವಾಗಿರುತ್ತದೆಯೋ, ಅಲ್ಲಿಯವರೆಗೆ ಕಲಾವಿದರಿಗೆ ಯಾವುದೇ ಭಯವಿಲ್ಲ. ಏಕೆಂದರೆ ನಾಡಿನಲ್ಲಿ ಕಲಾವಿದರ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಗೌರವಿಸುವ ಸಂಸ್ಥೆಗಳು ಇರುವುದರಿಂದ ಕಲಾವಿದ ನಿತ್ಯ ಜೀವಂತ, ಅಂತಹ ಕಲಾವಿದರ ಕಲೆಯನ್ನು ಗುರುತಿಸಿ ಗೌರವಿಸುತ್ತಾ ಬರುತ್ತಿರುವ ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆ್ಯಂಡ್ ಕಲ್ಚರ್. ಇದು ದಕ್ಷಿಣ ಭಾರತದಲ್ಲೇ ಹೆಸರು ಮಾಡಿದ ಅಕಾಡೆಮಿಯಾಗಿದೆ. ಅಕಾಡೆಮಿಯು ಕರ್ನಾಟಕ ಸೊಸೈಟಿ ರಜೇಸ್ಟ್ರೇಶನ್ ಕಾಯ್ದೆ–1960 ಅಡಿಯಲ್ಲಿ 2004ರಲ್ಲಿ ನೋಂದಣಿಯಾಗಿದ್ದು ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಶಹಾಬಾದ ನಗರದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕಲೆ ಜನಮನದಲ್ಲಿ ಉಳಿಯುವುದರ ಜೊತೆಗೆ ಅವು ಹೆಚ್ಚು ಪ್ರಚಾರ ಪಡೆಯುವುದಕ್ಕೆ ಕಾರಣಗಳು ಹಲವಾರು ಇದ್ದರೂ ಸಹ ಇದರಲ್ಲಿ ಕಲಾ ಸಂಸ್ಥೆಗಳ ಪಾತ್ರ ಪ್ರಾಮುಖ್ಯವಾಗಿದೆ. ಇಂಡಿಯನ್ ರಾಯಲ್ ಅಕಾಡೆಮಿ ಜನಮನವನ್ನು ಸೂರೆ ಗೊಳ್ಳುವುದರ ಜೊತೆಗೆ ತಮ್ಮ ಕಾರ್ಯ ಚಟುವಟಿಕೆಗಳ ಮೂಲಕ ಕಲೆಯನ್ನು ಆರಾಧಿಸಿ ಕಲಾವಿದರನ್ನು ಗೌರವಿ ಸುತ್ತಿದೆ. ಸುಮಾರು ಏಳು ವರ್ಷಗಳಿಂದ ರಾಷ್ಟ್ರೀಯ ಮಟ್ಟದ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಾ ಅದನ್ನು ಕಾರ್ಯರೂಪದ ಮೂಲಕ ಸಾಕಾರಗೊಳಿಸುತ್ತಿದೆ. ಅಕಾಡೆಮಿ ವಿಭಿನ್ನವಾಗಿ ಪ್ರತಿ ವರ್ಷ ಕಲಾಪ್ರಕಾರದ ಹಲವಾರು ಚಟುವಟಿಕೆಗಳನ್ನು ನಡೆಸುತ್ತಾ ಸದಾ ಕ್ರಿಯಾತ್ಮಕವಾಗಿರುವುದು ನಾವು ಕಾಣಬಹುದು. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಏಕವ್ಯಕ್ತಿ ಹಾಗೂ ಗುಂಪು ಕಲಾ ಪ್ರದರ್ಶನಗಳು ಆಯೋಜಿಸುವುದರ ಮುಖಾಂತರ ಕಲಾವಿದರಿಗೆ ಪರಿಚಯಿಸುವುದರ ಜೊತೆಗೆ ಹಿರಿಯ ಕಲಾವಿದರಿಗೆ ಗೌರವ ಪ್ರಶಸ್ತಿ ನೀಡುವುದು ಅಕಾಡೆಮಿಯ ವಾರ್ಷಿಕೋತ್ಸವದಂಗವಾಗಿ ಪ್ರತಿವರ್ಷ ರಾಯಲ್ ಗೋಲ್ಡ್, ರಾಯಲ್ ಸಿಲ್ವರ್ ಹಾಗೂ ರಾಯಲ್ ಮೆರಿಟ್ ಜೊತೆಗೆ ಕಲೆಯಲ್ಲಿ ಅಂತರಾಷ್ಟ್ರೀಯ ಹೆಸರು ಮಾಡಿ ಐತಿಹಾಸಿಕ ದಾಖಲೆ ಮಾಡಿರುವ ಖ್ಯಾತ ಕಲಾವಿದ ದಿ. ಎಂ.ಎಫ್. ಹುಸೇನ್ ಅವರ ಹೆಸರಿನಲ್ಲಿ 'ರಾಯಲ್ ಹುಸೇನ್' (ಜೀವಮಾನ ಸಾಧನೆ) ಪ್ರಶಸ್ತಿಯನ್ನು ಕಲೆಯಲ್ಲಿ ಸಾಧನೆಯನ್ನು ಮಾಡಿದ ಕಲಾವಿದರನ್ನು ಗುರುತಿಸಿ ಒಬ್ಬ ಕಲಾವಿದರಿಗೆ ಗೌರವಿ ಸುವ ಜೊತೆಗೆ ಒಬ್ಬ ಖ್ಯಾತ ಚಿತ್ರಕಲಾವಿದನಿಗೆ ಅಕಾಡೆಮಿ ಅಭಿನಂದನಾ ಗೌರವ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ.



ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆ್ಯಂಡ್ ಕಲ್ಚರ್ ಏರ್ಪಡಿಸಿದ ಕಲಾಪ್ರದರ್ಶನ

ಇಲ್ಲಿಯವರೆಗೆ ಸಾವಿರಾರು ಶಾಲಾ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಹಾಗೂ ನೂರಾರು ಹಿರಿಯ, ಕಿರಿಯಕಲಾವಿದರಿಗೆ ಅವರ ಕಲಾಕೃತಿಗಳನ್ನು ಮೆಚ್ಚಿ ಅವರಿಗೆ ರಾಷ್ಟ್ರಮಟ್ಟದಲ್ಲಿ ಗುರುತಿಸುವ ಕಾರ್ಯ ಅಕಾಡೆಮಿ ಮಾಡಿದೆ. ಅಲ್ಲದೇ ಮಹತ್ವದ ಯೋಜನೆಯಾದ ದೃಶ್ಯಕಲಾ ಮಾಧ್ಯಮದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 'ರಾಯಲ್ ಸ್ಕಾಲರ್ ಶಿಫ್' ನೀಡುತ್ತಾ ಬರುತ್ತಿದೆ.

ಅಕಾಡೆಮಿಯ ಮೂಲಕ ಅಭಿವೃದ್ಧಿ ಯೋಜನೆ, ಗ್ರಾಮೀಣ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತು ವಿಚಾರ ಗೋಷ್ಠಿ, ಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಚಿತ್ರಕಲಾ ಶಿಕ್ಷಕರಿಗೆ ಸನ್ಮಾನ ಸೇರಿದಂತೆ ಅನೇಕ ವಿಶೇಷ ಕಾರ್ಯಕ್ರಮ ಗಳನ್ನು ರೂಪಿಸುತ್ತಾ ಬರುತ್ತಿರುವ ಅಕಾಡೆಮಿ ನಿಂತ ನೀರಾಗದೆ ನಿರಂತರವಾಗಿ ಹರಿಯುವ ನದಿಯಾಗಿದೆ.

ಅಕಾಡೆಮಿಯನ್ನು ಹುಟ್ಟು ಹಾಕಿದ ಡಾ. ರೆಹಮಾನ್ ಪಟೇಲ್ ಅವರು ಸ್ವತಃ ಕಲಾವಿದರು ಎಂಬುದನ್ನು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ತಮ್ಮ ಕಲೆಯನ್ನು ಬೇರೆ ಯವರು ಗುರುತಿಸುವುದು ಬೇರೆ ಮಾತು ಆದರೆ ಇನ್ನೋರ್ವ ಕಲಾವಿದರಲ್ಲಿರುವ ಕಲೆಯನ್ನು ಗುರುತಿಸಿ ಅವರನ್ನು ಸನ್ಮಾನಿಸು ವುದು ನನ್ನ ಜೀವನದ ಮುಖ್ಯ ಧ್ಯೇಯವಾಗಿದೆ ಎಂದು ಹೇಳುವ ಡಾ. ಪಟೇಲ್ ಅವರ ಸಹೃದಯತೆಯನ್ನು ನಾವು ಕಾಣುತ್ತೇವೆ. ಜೀವನದಲ್ಲಿ ಎಲ್ಲವೂ ಸಿಕ್ಕಿದೆ, ಆದರೆ ಕಲಾ ಸಮುದ್ರದಲ್ಲಿ ಎಷ್ಟೂ ಈಜಿದರೂ ಕಡಿಮೆಯೇ, ಕಲೆ ನಿರಂತರವಾಗಿ ಸಾಗುವ ಒಂದು ಕ್ರಿಯಾತ್ಮಕವಾದ ಕ್ರಿಯೆಯಾಗಿದೆ. ಇದನ್ನು ಒಂದು ಸ್ಥಳದಲ್ಲಿ ತಟಸ್ಥಗೊಳಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕಲೆಗೋಸ್ಕರ ಅಕಾಡೆಮಿಯನ್ನು ಹುಟ್ಟು ಹಾಕಬೇಕಾಯಿತು ಎನ್ನುತ್ತಾರೆ.

(ಸಿಎಸ್ಆರ್)

ಇಂದಿರಾ ವಸಂತರಾವ ಮಾನ್ವಿಕರ: 1975ರಲ್ಲಿ ಚಿಂಚೋಳಿಯಲ್ಲಿ ಮಹಿಳಾ ಮಂಡಳದ ಸಂಸ್ಥಾಪಕ ಅಧ್ಯಕ್ಷರಾಗಿ, 1976ರಲ್ಲಿ ಕಲಬುರಗಿಯಲ್ಲಿ ಸಂಗಮೇಶ್ವರ ಮಹಿಳಾ ಮಂಡಳಿ ಸಂಸ್ಥಾಪಕ ಅಧ್ಯಕ್ಷರಾಗಿ ಸಾಮಾಜಿಕ ಸೇವೆ, ಮಹಿಳಾ ಸಂಘಟನೆ, ಮಹಿಳೆಯರ ಸಮಸ್ಯೆಗಳ ಪರಿಹಾರ, ಮಾರ್ಗದರ್ಶನ ಕಾರ್ಯದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿರುವ ಇಂದಿರಾ ವಸಂತರಾವ ಮಾನ್ವಿಕರ್, ರಂಗಕ್ಷೇತ್ರದಲ್ಲೂ ತಮ್ಮ ಕೊಡುಗೆ ನೀಡಿದ್ದಾರೆ.

1980ರ ಅವಧಿಯಲ್ಲಿ ಕಲಬುರಗಿಯಲ್ಲಿ ಮಹಿಳೆಯರು ನಾಟಕದಲ್ಲಿ ಅಭಿನಯಿಸುವುದೇ ದುಸ್ತರವಾಗಿದ್ದಾಗ ತಮ್ಮ ಪುತ್ರಿಯರಾದ ಸಂಗೀತಾ ಮತ್ತು ವನಿತಾ ಮಾನ್ವಿಕರ್ ಅವರಿಗೆ ರಂಗ ನಾಟಕಗಳಲ್ಲಿ ನಟಿಸುವ ಅವಕಾಶದೊಂದಿಗೆ ಮಹಿಳಾ ಕಾಲಾವಿದರ ಕೊರತೆ ನೀಗಿ ಸುತ್ತ ಇತರರಿಗೆ ಪ್ರೇರಕರಾದರು. ರಂಗಮಾಧ್ಯಮ, ರಂಗಭಾರತಿ, ಕನ್ನಡ ಸಾಹಿತ್ಯ ಸಂಘ, ಮಹಿಳಾ ಮಂಡಳಿಯ ಮೂಲಕ ರಂಗಕ್ಷೇತ್ರದ ವಿಕಾಸಕ್ಕೆ ತುಂಬಾ ಸಹಕಾರ ನೀಡಿದರು.



1993ರಲ್ಲಿ ತಮ್ಮ 60ನೆಯ ವಯಸ್ಸಿನಲ್ಲಿ ಡಾ.ಕಂಬಾರರ 'ಕಾಡು ಕುದುರೆ' ನಾಟಕದಲ್ಲಿ ಗೌಡಶಾನಿಯ ಪಾತ್ರಕ್ಕೆ ತಮ್ಮ ನೈಜ ಅಭಿನಯದ ಮುಖಾಂತರ ಜೀವ ತುಂಬಿದವರು. ಈ 'ಕಾಡು ಕುದುರೆ'ಯಲ್ಲಿ ಎಲ್ಲಾ ಪಾತ್ರಗಳನ್ನು ಮಹಿಳೆಯರೇ ನಿರ್ವಹಿಸಿದ್ದು ವಿಶೇಷ. ಗುಲಬರ್ಗಾ, ಬೆಳಗಾಂವ, ಹೈದ್ರಾಬಾದಗಳಲ್ಲಿ ಈ ನಾಟಕ ಪ್ರದರ್ಶನಗೊಂಡು ನಾಟಕಾಸಕ್ತರ ಮೆಚ್ಚುಗೆ ಪಡೆಯಿತು. ಸ್ವತಃ ನೃತ್ಯ ಕಲಾವಿದರಾಗಿರುವ ಇಂದಿರಾ ಮಾನ್ವಿಕರ್ ಅವರು ಉತ್ತಮ ಸಂಘಟಕರು, ಕಲಬುರಗಿ ರಂಗಕ್ಷೇತ್ರಕ್ಕೆ ಬಲ, ಬೆಂಬಲ ಕೊಡುವ ರಂಗ ಅಭಿಮಾನಿ. (ಎಸ್‌ಕೆ)

ಇಟಗಿ ಮಹದೇವ ದೇವಾಲಯ: ಭಾರತೀಯ ಶಿಲ್ಪ ಕಲೆಯ ವೈಭವ ಪ್ರತಿಬಿಂಬಿಸುವ ಪ್ರಸಿದ್ಧ ದೇವಾಲಯ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲಗಳಲ್ಲಿ ನಿರ್ಮಿತಗೊಂಡ ದೇವಾಲಯಗಳಲ್ಲಿ ಆಕರ್ಷಕ ಶಿಲ್ಪಕಲೆ ನಮ್ಮ ಸಂಸ್ಕೃತಿಯಾಗಿ ಹರಿದು ಬಂದಿದೆ. ಶಾತವಾಹನರ ಮತ್ತು ಕದಂಬರ ಕಾಲದಲ್ಲಿ ಪ್ರಾರಂಭವಾದ ಶಿಲ್ಪಕಲೆ ಮತ್ತು ಕಲೆ, ಬದಾಮಿ ಚಾಲುಕ್ಯರ ಕಾಲದಲ್ಲಿ ವಿವಿಧ ಶೈಲಿಗಳಲ್ಲಿ ಅರಳಿ, ರಾಷ್ಟ್ರಕೂಟರ ಕಾಲದಲ್ಲಿ ಹಬ್ಬಿ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಲಿನಲಿದು ನಭಕ್ಕೇರಿ, ಚಲ್ಲಿಡಿದು ಶಿಲ್ಪಕಲೆಯ ಸುಧೆಯೇ ಸುರಿದಿದೆ. ಕಲ್ಯಾಣ ಚಾಲುಕ್ಯರ ಪರಂಪರೆಯಲ್ಲಿ, 6ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಮೈಲುಗಲ್ಲು ಅರಸು, ಸಚಿವರು, ಸಾಮಂತರು, ಮಾಂಡಲೀಕರು, ದಂಡನಾಯಕರು, ಧರ್ಮಾಭಿಮಾನಿಗಳು ಮತ್ತು ದಾನಿಗಳು ತನು, ಮನ, ಧನವಿತ್ತು ದೇವಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು.

6ನೆಯ ವಿಕ್ರಮಾದಿತ್ಯನ ದಂಡನಾಯಕ ಸಚಿವ ಕನ್ನಡ ಸಂಧಿ ವಿಗ್ರಹ ಮಹಾದೇವನ ತನ್ನೂರು ಇಟ್ಟಿಗೆಯೊಳು ಜಗದಂಥ 'ದೇವಾಲಯ ಚಕ್ರವರ್ತಿ'ಯೆನಿಸಿದ ಮಹಾದೇವ ದೇವಾಲಯ ಕ್ರಿ.ಶ. 1112ರಲ್ಲಿ ಕಟ್ಟಿಸಿದರು. ಇದರಲ್ಲಿರುವ ಮಧುರ–ಮಕರ ಮುಖದಿಂದ ಹೊರಟು ಮೇಲೇರಿದ ಲತಾ ಸುರಳಿಗಳು ವಿವಿಧ ವಿನ್ಯಾಸಗಳ ಭುವನೇಶ್ವರಿಗಳಲ್ಲಿರುವ ಶಿಲ್ಪಗಳು, ಕಂಬಗಳಲ್ಲಿ ಇತರೆಡೆಗಳಲ್ಲಿ ಕೆತ್ತಿದ ಶಿಲ್ಪಗಳು ಸಂದರ್ಶಕರ ಮನವನ್ನು ತಟ್ಟಿ ಭಾವನೆಗಳನ್ನು ಬಡಿದೆಬ್ಬಿಸುತ್ತವೆ. ಹಸಿದ ಹೃದಯಕ್ಕೆ ಸೌಂದರ್ಯದ ಸ್ಪರ್ಶವನ್ನು ನೀಡಿ ತಣಿಸುತ್ತಿವೆ. ಈ ಮೂರ್ತಿ ಶಿಲ್ಪಿಗಳಲ್ಲಿ ಶಿಲಾಬಾಲಿಕೆಯರ ಸೊಬಗು, ಭಾವಭಂಗಿಗಳಂತೂ ಅಪ್ರತಿಮ.

ಇದರ ಗರ್ಭಗೃಹದ ಹೊರಮೈ ಗೋಡೆಯಲ್ಲಿ ಹದಿನಾಲ್ಕು, ಅಳಿದುಳಿದ ಶಿಖರದಲ್ಲಿ ಶಿಲಾಬಾಲಿಕೆಯರ ಶಿಲ್ಪಗಳಿವೆ. ಇವರಲ್ಲಿಬ್ಬರು ದರ್ಪಣದಲ್ಲಿ ತಮ್ಮ ಸೌಂದರ್ಯವನ್ನು ಅವಲೋಕಿಸುತ್ತಿರುವವರು, ಮದನಿಕೆ, ಮೋಹಿನಿ, ಫಲಪುಷ್ಪ ಹಿಡಿದ ಸುಂದರಿ, ದರ್ಪಣ ಸುಂದರಿ, ಈ ಶಿಲಾಬಾಲಿಕೆಯರ ಭಾವಭಂಗಿ ಒಂದರಿಂದ ಇನ್ನೊಂದು ವಿಭಿನ್ನವಾಗಿವೆ. ಈ ದರ್ಪಣ ಸುಂದರಿಯರ ಎಡಬಲಗಳಲ್ಲಿ ನಿಂತಿರುವ ಕೋಮಲ ಸಖಿಯರು, ತಮ್ಮ ಗೆಳತಿಯರ ಬೆಡಗು, ಚಿನ್ನಾಭರಣಗಳನ್ನು ಬಿಡುಗಣ್ಣಿನಿಂದ ನೋಡಿ ಸಂತಸ ಪಡುತ್ತಿರುವ ಭಂಗಿಗಳು ಗಮನ ಸೆಳೆಯುತ್ತವೆ.

ತಲೆಗೂದಲನ್ನು ಹಿಂದಕ್ಕೆ ಸರಿಸಿ, ಗೋಲಾಕಾರದಲ್ಲಿ ಕಟ್ಟಿದ ಕೇಶ ಗುಚ್ಛ, ಅದನ್ನು ಶೃಂಗರಿಸಿದ ಮಣಿಹಾರ, ವಿಶಾಲ ಹಣೆ, ಕಾಮನ ಬಿಲ್ಲಿನಂತಿರುವ ಹುಬ್ಬುಗಳು, ಕಮಲದ ಹೂವಿನ ಪಕಳೆಗಳಂತಿರುವ ಕಣ್ಣುಗಳು, ಸಂಪಿಗೆಯಂತಿರುವ ನೀಳನಾಸಿಕ, ರಸಮಯ ಕಪೋಲಗಳು, ಮುಗುಳು ನಗೆ ಬೀರುವ ತುಟಿಗಳು, ಕೊಂಕಿದ ಕೊರಳು, ಉಬ್ಬಿದ ಎದೆ. ಓರೆಯಾದ ಚೆಲುವನ್ನು ಚಿಮ್ಮುವ ತೆಳುವಾದ ನಡು, ನಟನೆಗೆ ಸಿದ್ಧವಿರುವ ಪಾದಗಳ ಬೆಡಗು, ಮಿಂಚುವ ನಖಗಳಿಂದ ಕೂಡಿದ ಬೆರಳುಗಳು, ಪ್ರತಿರೂಪ ತೋರುವ ದರ್ಪಣ ಇವೆಲ್ಲವುಗಳು ಈ ಶಿಲೆಯಲ್ಲಿ ಪ್ರಮಾಣಬದ್ಧವಾಗಿ ಮೂಡಿಸಿರುವುದು, ಶಿಲ್ಪಿಗಳ ಕಲಾ ನೈಪುಣ್ಯ ಹಾಗೂ ಸೌಂದರ್ಯ ಪ್ರಜ್ಞೆಯನ್ನು ಬಿಂಬಿಸುತ್ತವೆ.

ಕರಕುಶಲ ವೈಭವದ ಕೊರಳ ತೋರಿ, ಮುತ್ತಿನಹಾರ, ಕಿವಿಯೋಲೆ ಅಲುಗಾಡುತ್ತಿದೆ. ತೋಳಬಂದಿ ತುಂಬಿದ ತೋಳಿಗೆ ಒರಗಿಕೊಂಡಿದೆ. ಅಂದದ ಮುಂಗೈಗೆ ಸುಂದರ ಕಂಕಣ. ಕೊಂಕಿದ ಬಡ ನಡುವಿನ ಒಡ್ಯಾಣ ಅದರಿಂದ ತೊಡೆಯವರೆಗೂ ಇಳಿಬಿದ್ದ ಮುತ್ತಿನಸರಗಳು, ಅಂಗಕ್ಕೆ ಅಂದವನ್ನು ನೀಡಿವೆ. ಓರೆಯಾದ ಕಾಲೊಳು ಧರಿಸಿದ ಕಾಲ್ಗಡಗ ನೂಪುರ, ಸರಸದ ಪಾದಗಳಿಗೆ ಮೆರಗು ನೀಡಿವೆ. ಸಹಜ ಸೌಂದರ್ಯದ



ಮಹದೇವ ದೇವಾಲಯದ ಒಳನೋಟ

ಸಿರಿವಂತಿಕೆಯನ್ನು ಹೊತ್ತ ಶಿಲಾಬಾಲಿಕೆಯರ ಸೌಂದರ್ಯ ಇನ್ನೂ ಹೆಚ್ಚಿಸಿವೆ. ದರ್ಪಣದಲ್ಲಿ ತುಂಬಿ ಸೂಸುವ ಸೊಗಸು, ನಗು ಮೊಗದ ಸೊಬಗು, ಬಳಕಿನ ಥಳುಕು, ನಟನೆಗೆ ಸಿದ್ಧ ವಾಗಿರುವ ಪಾದಗಳ ಅಂದ, ಇವೆಲ್ಲವುಗಳು ವಸಂತೋತ್ಸವನ್ನು ಚಿಮ್ಮುತ್ತಿವೆ. ಕಲಾನೈಪುಣ್ಯಗಳ ಶಿಲಾಬಾಲಿಕೆಯನ್ನು ನೋಡಿ ದಷ್ಟೂ ಸೌಂದರ್ಯವನ್ನು ಸವಿಯಬೇಕೆನ್ನಿಸುತ್ತದೆ.


ದೋರ ಸಮುದ್ರದ ಹೊಯ್ಸಳ ಅರಸರು, ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು. ಕಾರಣ ಕಲ್ಯಾಣ ಚಾಲುಕ್ಯರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಜೀವನ ಬಲ್ಲವರಾಗಿದ್ದರು. ಅವರ ಕಾಲದಲ್ಲಿ ಕಟ್ಟಿದ ದೇವಾಲಯಗಳ ವಾಸ್ತುಕಲೆ, ಶಿಲ್ಪಕಲೆ ಅರಿತರಾಗಿದ್ದರು. ಹೊಯ್ಸಳ ಅರಸರು ಕಟ್ಟಿಸಿದ ದೇವಾಲಯಗಳಲ್ಲಿ ಕಲ್ಯಾಣ ಚಾಲುಕ್ಯರ ವಾಸ್ತುಕಲೆ, ಶಿಲ್ಪಕಲೆ, ಅಲ್ಪ ಬದಲಾವಣೆಗಳೊಂದಿಗೆ ಮುಂದುವರೆದಿರುವದೇ ಅದಕ್ಕೆ ಕಾರಣ.

ಕಲ್ಯಾಣ ಚಾಲುಕ್ಯ 6ನೆಯ ವಿಕ್ರಮಾದಿತ್ಯನ ಸಾಮಂತ ಹೊಯ್ಸಳ ಅರಸು ವಿಷ್ಣುವರ್ಧನ ಇಟಗಿ ಮಹಾದೇವ ದೇವಾಲಯವನ್ನು ಕಟ್ಟಿಸಿದ ನಾಲ್ಕು ವರ್ಷಗಳ ನಂತರ ಅಂದರೆ, ಕ್ರಿ.ಪೂ. 1116ರಲ್ಲಿ ಬೇಲೂರಿನ ಚನ್ನಕೇಶವ ದೇವಾಲಯ ಕಟ್ಟಿಸಿದ. ಅದರ ರಚನೆ ಇಟಗಿಯ ಮಹಾದೇವಾಲಯಕ್ಕಿಂತ ಕೊಂಚ ಭಿನ್ನವಾಗಿದೆ. ಚನ್ನಕೇಶವ ದೇವಾಲಯಗಳ ಶಿಲಾ ಬಾಲಿಕೆಯರ ಶಿಲ್ಪಗಳು, ದೇವಾಲಯಗಳ ಚಕ್ರವರ್ತಿ ಮಹಾದೇವ ದೇವಾಲಯದ ಶಿಲಾಬಾಲಿಕೆಯರ ಪ್ರತಿರೂಪಗಳು, ದರ್ಪಣ ಕೈಯಲ್ಲಿ ಹಿಡಿದು ತನ್ನ ಸೌಂದರ್ಯವನ್ನು ಅವಲೋಕಿಸುತ್ತಿರುವ ಶಿಲಾಬಾಲಿಕೆಯರ ಶಿಲ್ಪಕಲೆಗಳೇ ಇದಕ್ಕೆ ನಿದರ್ಶನ. ಇಲ್ಲಿದ್ದಂತೆ ಚನ್ನಕೇಶವ ದೇವಾಲಯದಲ್ಲಿರುವ ದರ್ಪಣ ಸುಂದರಿ ಶಿಲಾಬಾಲಿಕೆಯರ ಸುತ್ತಲೂ ಕಲಾಸುರಳಿಗಳಿವೆ. ಈ ಮಹಾದೇವ ಮಂದಿರದಲ್ಲಿ ಶಿಲ್ಪಕಲೆಯೇ ಮೈವೆತ್ತು ನಿಂತು, ಕಲಾರಾಧಕರಿಗೆ ಇದೊಂದು ಅಪೂರ್ವ ಅನುಭವ ವನ್ನಂಟು ಮಾಡುತ್ತದೆ.

(ಬಿಸಿಪಿ)

ಇಸ್ಲಾಮಿಕ್ ಕಲೆ: (ಗುಲಬರ್ಗಾ–ಬೀದರ್) ಪ್ರವಾದಿ ಮೊಹಮ್ಮದರ ಮರಣದ ನಂತರ ಸುಮಾರು ಐದು ನೂರು ವರ್ಷಗಳ ಮೇಲೆ ಅಂದರೆ ಕ್ರಿ.ಶ. 632ರ ಇಸ್ಲಾಂ ಧರ್ಮವು ತನ್ನ ಮೂಲಸ್ಥಾನವಾದ ಅರೇಬಿಯದಿಂದ ದೂರದೂರದ ಪ್ರದೇಶಗಳಿಗೆ ಪಸರಿಸಿತು. ಮಧ್ಯಪೂರ್ವದ ಇನ್ನಿತರ ಭಾಗಗಳು. ಉತ್ತರ ಆಫ್ರಿಕಾ ಸ್ಪೇನ್, ಮಧ್ಯ ಏಷಿಯಾ ಮತ್ತು ಭಾರತದ ಉತ್ತರ ಮತ್ತು ಮಧ್ಯ ಭಾಗಗಳನ್ನು ಮೊಹಮ್ಮದರ ಅನುಯಾಯಿಗಳಾದ ಮುಸಲ್ಮಾನರು ಜಯಿಸಿದರು. ಇಸ್ಲಾಂ ಧರ್ಮದ ಪ್ರಚಾರದೊಂದಿಗೆ ಮುಸ್ಲಿಂ ಕಲೆಯು ವಿಶಿಷ್ಟವಾದ ಶೈಲಿಯು ಕ್ರಮೇಣ ವಿಕಾಸ ಹೊಂದಿತು. ಅದು ಪ್ರಮುಖವಾಗಿ ಧಾರ್ಮಿಕ ವಾಸ್ತುಶಿಲ್ಪ, ಪುಸ್ತಕಗಳಲ್ಲಿ ಚಿತ್ರರೂಪದ ನಿದರ್ಶನಗಳು, ಮಡಕೆಗಳ ಅಲಂಕರಣ, ಧಾತುಪಾತ್ರೆ ಮತ್ತು ಇನ್ನಿತರ ನಿತ್ಯೋಪಯೋಗಿಯಾದ ವಸ್ತುಗಳಲ್ಲಿ ಬಳಕೆಗೊಂಡಿತು. ಮುಸ್ಲಿಂ ಕಲೆಯ ಮೇಲೆ ರೋಮನ್, ಬೈಝಂಟಾಯಿನ್ ಮತ್ತು ಪರ್ಶಿಯನ್ ಕಲೆಗಳು ಪ್ರಭಾವ ಬೀರಿದ್ದವು.

ಮುಸ್ಲಿಂ ಕಲೆಯ ಬೆಳವಣಿಗೆಯ ಮೇಲೆ ಎರಡು ಧಾರ್ಮಿಕ ನಿಬಂಧನೆಗಳು ಕೂಡ ಪ್ರಭಾವ ಬೀರಿವೆ. ಜೀವಂತವಾಗಿರುವ ಪ್ರಾಣಿಗಳ ಪ್ರತಿಮೆ ಅಥವಾ ಪ್ರತಿಕೃತಿಯನ್ನು ನಿರ್ಮಿಸುವುದು. ಜೀವಿಗಳನ್ನೆಲ್ಲ ಸೃಷ್ಟಿಸಿದ ಎಲ್ಲಾ ಹೂವಿನ ಅನುಕರಣೆಯೆನಿಸುವುದರಿಂದ ಅದನ್ನು ಮಾಡಬಾರದೆಂದು ಮಹಮ್ಮದರು ಕಲಾವಿದರಿಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಹಾಗಾಗಿ ಹೆಚ್ಚಿನ ಧಾರ್ಮಿಕ ಕಲೆಯಲ್ಲಿ ಮನುಷ್ಯ ಅಥವಾ ಪ್ರಾಣಿಗಳ ಚಿತ್ರಣವಿಲ್ಲದ ಇತರ ಆಲಂಕಾರಿಕ ವಿನ್ಯಾಸಗಳು ತುಂಬಿಕೊಂಡಿವೆ. ಎರಡನೆಯ ನಿಬಂಧನೆಯು ಕಲಾಕೃತಿಗಳ ನಿರ್ಮಾಣಕ್ಕೆ ಬೆಲೆ ಬಾಳುವ ವಸ್ತುಗಳ ಬಳಕೆಗೆ ಉತ್ತೇಜನವಿಲ್ಲ. ಹಾಗಾಗಿ ಮುಸ್ಲಿಂ ಕಲಾವಿದರು ಬಹುಮಟ್ಟಿಗೆ ಹಿತ್ತಾಳೆ, ಮಣ್ಣು ಮತ್ತು ಕಟ್ಟಿಗೆಯಂಥ ಅಗ್ಗದ ವಸ್ತುಗಳನ್ನು ಅಲಂಕರಿಸುವ ಕೌಶಲ್ಯವನ್ನು ಕರಗತ ಗೊಳಿಸಿ



ಅಹಮ್ಮದ ಶಾಹ ಬಹಮನಿ ಗುಂಬಜ

ಕೊಂಡು, ಅವು ಬೆಲೆಬಾಳುವ ಬೆಳ್ಳಿ ಬಂಗಾರದ ವಸ್ತುಗಳಂತೆ ಸುಂದರವಾಗಿ ಕಾಣುವಂತೆ ಮಾಡಿದನು.

ಪ್ರತಿಮೆ ಅಥವಾ ಪ್ರತಿಕೃತಿಗಳನ್ನು ನಿರ್ಮಿಸಬಾರದೆಂಬ ನಿಬಂಧನೆಯ ಕಾರಣದಿಂದ ಮುಸ್ಲಿಂ ಕಲೆಯಲ್ಲಿ ಎದ್ದು ಕಾಣುವ ಗುಣಲಕ್ಷಣವೊಂದು ಬೆಳೆದು ಬಂದಿತು. ಕಲಾವಿದರು ಜೀವಿಗಳನ್ನು ಹೋಲುವ ಆಕೃತಿಗಳನ್ನು ಚಿತ್ರಿಸುವುದನ್ನು ತ್ಯಜಿಸಿದರು. ಬದಲಿಗೆ ಅರೇಬಸ್ಕ ಎಂದು ಕರೆಯಲಾಗುವ ಅತ್ಯಂತ ಸಂಕೀರ್ಣವಾದ, ವಿಶಿಷ್ಟವಾದ ಅಲಂಕರಣ ಪ್ರಕಾರವನ್ನು ಬೆಳೆಸಿದರು. ಅಲ್ಲಲ್ಲಿ ತಿರುವುಗಳನ್ನು ಪಡೆದುಕೊಳ್ಳುವ ಬಳ್ಳಿ, ಎಲೆ ಮತ್ತು ಹೂವುಗಳನ್ನು ಚಿತ್ರಿಸಬಹುದು. ಹಾಗೆಯೇ ಅಲ್ಲಿ ಜ್ಯಾಮಿತಿಯ ಆಕೃತಿಗಳಿರ ಬಹುದು; ನೇರವಾದ ರೇಖೆಗಳ ರಚನೆಯಿರಬಹುದು; ಅಥವಾ ಪರಸ್ಪರ ಬೆಸೆದುಕೊಂಡಿರುವ ರೇಖಾವಿನ್ಯಾಸಗಳನ್ನು ಕೊರೆಯಬಹುದಾಗಿದೆ. ಕೆಲವೊಮ್ಮೆ ಪ್ರಾಣಿಗಳ ಆಕಾರಗಳನ್ನು ರಚಿಸಬಹುದಾದರೂ ಅವು ತುಂಬಾ ಶೈಲೀಕೃತವಾಗಿದ್ದು ಜೀವಿಗಳ ಹೋಲಿಕೆಯನ್ನು ಹೊಂದಿರುವುದಿಲ್ಲ.

ಧಾತುಕರ್ಮಿಗಳು ತುಂಬಾ ಸುಂದವಾದ ಕೆತ್ತನೆಯುಳ್ಳ ಹಿತ್ತಾಳೆ ಮತ್ತು ಕಂಚಿನ ವಸ್ತುಗಳನ್ನು ಬಳಸಿದರು. ಕೆಲವೊಮ್ಮೆ ಅವರು ಕುಂಭ, ಪೆಟ್ಟಿಗೆ ಮತ್ತು ತಾಟು ಮುಂತಾದ ವಸ್ತುಗಳ ಮೇಲೆ ಬೆಳ್ಳಿ ಅಥವಾ ಬಂಗಾರದ ಕುಸುರಿ ಕೆಲಸಗಳನ್ನು ಇನ್‌ಲೇ ಮಾಡಿದರು. ಅನಂತರ ಅತ್ಯಂತ ಕೌಶಲ್ಯದಿಂದ ವಸ್ತು ಅಥವಾ ಧಾತುವಿನೊಂದಿಗೆ ಸೇರಿಕೊಂಡವು.

ಸುಮಾರು ಐದನೂರು ವರ್ಷಗಳವರೆಗೆ ಕರ್ನಾಟಕವನ್ನಾಳಿದ ಮುಸ್ಲಿಮ್ ಅರಸರು ಕಲೆ, ಸಾಹಿತ್ಯ, ಸಂಗೀತ, ಚಿತ್ರಕಲೆಗಳನ್ನು ಸಾಕಷ್ಟು ಬೆಳಸಿ ಪ್ರೋತ್ಸಾಹಿಸಿ ಹೊಸರೂಪವನ್ನು ಕೊಟ್ಟಿದ್ದಾರೆ. ಈ ಅರಸರ ಕಾಲದ ಚಿತ್ರಕಲೆಯ ವಸ್ತುವಿಷಯ ಶೈಲಿ, ಕಾಲದಿಂದ ಕಾಲಕ್ಕೆ ಬದಲಾದ ರೀತಿ, ಅವುಗಳ ಮೇಲಾದ ಪ್ರಭಾವ ಪ್ರೇರಣೆ ಮುಂತಾದ ಮಹತ್ವದ ರಚನೆಗಳು ಮತ್ತು ಚಿತ್ರ ರಚನೆಯ ಸಂದರ್ಭದಲ್ಲಿ ಅನುಸರಿಸಬಹುದಾದ ತಾಂತ್ರಿಕತೆಯ ವಿಚಾರಗಳು ಗಮನಾರ್ಹವಾಗಿವೆ.

ಈ ಅರಸರ ಕಾಲದಲ್ಲಿ ರಚಿತವಾದ ಚಿತ್ರಕಲಾ ಹಸ್ತಪ್ರತಿಗಳಾದ 'ನಜುಮ್-ಅಲ್-ಉಲ್ಮ', 'ಕಿತಾಬ್-ಇ-ನವರಸ', ಗುಲ್ಶನ್-ಎ-ಅಸ್ಕ-ಅಲ್-ನಾವಾ', 'ತಾರೀಫ-ಇ-ಹುಸೇನಷಹ ಬಾದಷಹ ಖಾನ್', 'ಜವಹೀರ-ಅಲ್-ಮುಶಿಕತ್-ಇ-ಮುಹಮ್ಮದಿ' ಮುಂತಾದ ಹಸ್ತಪ್ರತಿಗಳು ವಿದೇಶದ ಗ್ರಂಥಾಲಯಗಳಲ್ಲಿ ಇಂದಿಗೂ ಲಭ್ಯವಿರುತ್ತವೆ. ಈ ಹಸ್ತಪ್ರತಿ ಚಿತ್ರಕಲೆಯ ಬಗ್ಗೆ ವಿಶೇಷ ಅಧ್ಯಯನ ನಡೆದದ್ದು ಕಂಡುಬರುವುದಿಲ್ಲ. ಕರ್ನಾಟಕದ ಸಮಗ್ರ ಚಿತ್ರಕಲೆಯ ಅಭ್ಯಾಸವಾಗಬೇಕಾದರೆ ಕರ್ನಾಟಕವನ್ನಾಳಿದ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆಯನ್ನು ಅವಶ್ಯವಾಗಿ ಪರಿಗಣಿಸಬೇಕಾಗುತ್ತದೆ.

ಕರ್ನಾಟಕವನ್ನಾಳಿದ ದಖ್ಖನ್‌ಸುಲ್ತಾನರು ಬೇರೆ ಬೇರೆ ದೇಶಗಳಿಂದ ಬಂದ ಅನ್ಯ ಸಂಸ್ಕೃತಿಯುಳ್ಳವರಾಗಿದ್ದರೂ ಇಲ್ಲಿಯ ಸಂಪತ್ತನ್ನು ಇಲ್ಲಿಯ ನಾಡಿನ ಪ್ರಗತಿ ಗಾಗಿಯೇ ವಿನಿಯೋಗಿಸಿದ್ದಾರೆ. ಇಸ್ಲಾಮ್ ಧರ್ಮದ ಸುನ್ನಿ-ಶಿಯಾ ಪಂಗಡಗಳು ಒಂದಾಗಲು ಸೂಫಿಪಂಥವು ಸಹ ಕರಿಸಿತು. ಈ ಅರಸರೆಲ್ಲರೂ ಸೂಫಿ ಪಂಥವು ತೀವ್ರವಾಗಿ ಬೆಳೆಯುವಂತೆ ಪ್ರೋತ್ಸಾಹಿಸಿದರು. ಸೂಫಿಗಳು ಮುಸ್ಲಿಮ್-ಮುಸ್ಲಿಮ್‌ರನ್ನು ಒಂದುಗೂಡಿಸಿದಂತೆ ಹಿಂದು ಮತ್ತು ಮುಸ್ಲಿಮ್ ಧರ್ಮದವರನ್ನು ಒಂದುಗೂಡಿಸಿ ಐಕ್ಯ ಸಾಧಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಹಸನ ಬಹಮನ್‌ಷಹಾ, ಫಿರೋಜಷಹಾ, ಮಹಮ್ಮದ್ ಆದಿಲಷಹಾ, ಎರಡನೆಯ ಇಬ್ರಾಹಿಮ್, ಹೈದರಲಿ, ಟಿಪ್ಪು ಸುಲ್ತಾನ, ಸವಣೂರಿನ ನವಾಬರಂತಹ ಅರಸರು ಈ ಎರಡೂ ಸಂಸ್ಕೃತಿಯನ್ನು ಬೆಸೆಯುವಲ್ಲಿ ಉದಾರವಾದ ಆಡಳಿತ ನೀತಿಯನ್ನು ಅನುಸರಿಸಿದುದು ಕಂಡುಬರುತ್ತದೆ. ಈ ಅರಸರ ಆಡಳಿತ ಮುಗಿದನಂತರ ಅವರು ಬೆಳೆಸಿದ ಜಗತ್‌ಪ್ರಸಿದ್ಧವಾದ ವಸ್ತುಶಿಲ್ಪ, ಸಂಗೀತ, ಚಿತ್ರಕಲೆಗಳು ನಶಿಸ ತೊಡಗಿದವು. ಈ ಅರಸರಿಂದ ಆಶ್ರಿತರಾದ ಚಿತ್ರಗಾರರು, ಕಲಾಕಾರರು ನಾಡನ್ನು ಬಿಟ್ಟು ಬೇರೆಡೆ ವಲಸೆ ಹೋಗತೊಡಗಿದರು. ಇವರ ಕಲಾಶೈಲಿಯು ನಶಿಸುತ್ತಿರುವ ಸಮಯ ಭಾರತವನ್ನು ಪ್ರವೇಶಿಸಿದ ಇಂಗ್ಲೀಷರು, ಡಚ್ಚರು, ಪೋರ್ಚಗೀಜರು, ತಾವು ಕಂಡ ದಖ್ಖನಿ, ಚಿಕಣಿ ಚಿತ್ರಗಳ ಅತ್ಯುತ್ತಮ ಕಲಾಕೃತಿಗಳನ್ನು ಹಸ್ತಪ್ರತಿಗಳನ್ನು ತಮ್ಮ ದೇಶಗಳಿಗೆ ತೆಗೆದುಕೊಂಡುಹೋಗಿ ಸಾರ್ವಜನಿಕ ವೀಕ್ಷಣಾಲಯಗಳಲ್ಲಿ ಇಟ್ಟು ಅವುಗಳನ್ನು ರಕ್ಷಿಸಿದ್ದಾರೆ.

ಗುಲಬರ್ಗಾವು ಕ್ರಿ.ಶ. 1347ರಿಂದ 1424ರ ವರೆಗೆ ಬಹಮನಿ ಸಲ್ತಾನರ ರಾಜಧಾನಿಯಾಗಿ ಮೆರೆದ ಪ್ರದೇಶ 1424ರ ನಂತರ ಬಹಮನಿ ಸುಲ್ತಾನರು ತಮ್ಮ ರಾಜಧಾನಿಯನ್ನು ಬೀದರಿಗೆ ವರ್ಗಾಯಿಸುವ ಪೂರ್ವದಲ್ಲಿ ಕ್ರಿ.ಶ. 1358 ರಿಂದ 1424ರ ವರೆಗೆ ಬಿರುಸಾದ ಚಟುವಟಿಕೆಗಳನ್ನು ಕಂಡ ಪ್ರದೇಶವಾಗಿದೆ.

ಈ ಅವಧಿಯಲ್ಲಿ ಗುಲಬರ್ಗಾದಲ್ಲಿ ಅನೇಕ ಗಮನಾರ್ಹ ಕಟ್ಟಡಗಳು ರಚನೆಯಾಗಿವೆ. ಅವುಗಳಲ್ಲಿ ಶೇಖ ಶಿರಾಜುದ್ದೀನ ಜುನೈದಿಯ ದರ್ಗಾ ಶಹಾಬಜಾರ್ ಮಸೀದಿ, ಸಪ್ತಗುಂಬಜ್‌ಗಳು, ಹಜರತ್ ಗೇಸುದರಾಜನ್ ದರ್ಗಾ, ಶಹಕಮಾಲ್ ದರ್ಗಾಗಳನ್ನು ಹೆಸರಿಸಬಹುದು. ಇವುಗಳಲ್ಲಿ ಸಪ್ತಗುಂಬಜ್‌ಗಳ ಸಾಲಿನಲ್ಲಿರುವ ತಾಜುದ್ದೀನ್ ಫಿರೋಜನ ಸಮಾಧಿ ಮತ್ತು ಸಂತ ಗೇಸುದರಾಜನ ದರ್ಗಾಗಳಲ್ಲಿ ವರ್ಣ ಭಿತ್ತಿಚಿತ್ರಗಳು ಕಂಡು ಬರುತ್ತವೆ.

ತಾಜುದ್ದೀನ್ ಫಿರೋಜನ ಸಮಾಧಿ: ಇದು ಗುಲಬರ್ಗಾದಲ್ಲಿ ಸಪ್ತಗುಂಬಜಗಳ ಸಾಲಿನಲ್ಲಿದೆ. ಈ ಸಪ್ತ ಗುಂಬಜಗಳು ಸಾಲಾಗಿರುವ ಸಮಾಧಿ ಕಟ್ಟಡಗಳಾಗಿವೆ. ಇಲ್ಲಿ ಅಲ್ಲಾವುದ್ದೀನ್ ಮುಜಾಹಿದ್ (ಮರಣ.1378) ಒಂದನೆಯ ದಾವುದ್ (ಮರಣ. 1378) ತಾಜೂದ್ದೀನ್ ಫಿರೋಜ್ (ಮರಣ. 1422) ಮುಂತಾದ ಸುಲ್ತಾನರನ್ನು ಸಮಾಧಿ ಮಾಡಲಾಗಿದೆ. ಇಲ್ಲಿರುವ ಏಳು ಸಮಾಧಿ ಭವನಗಳಲ್ಲಿ ತಾಜುದ್ದೀನ ಫಿರೋಜನ ಸಮಾಧಿಯೇ ಉಳಿದವುಗಳಿಗಿಂತ ಸುಂದರವಾಗಿದೆ. ಅದೊಂದರಲ್ಲಿ ಮಾತ್ರ

ವರ್ಣದಿಂದ ರಚಿಸಿದ ಹೂಬಳ್ಳಿಯ ನಕ್ಷೆಗಳು 168 ಇದ್ದುದಾಗಿ ತಿಳಿದು ಬರುತ್ತದೆ. ಆದರೆ ಅಲ್ಲಿ ಇಂದು ಯಾವ ಚಿತ್ರಗಳೂ ಉಳಿದಿರದೇ ಗುಮ್ಮಟಗಳ ಮೇಲೆ ಮಾಡಿದ್ದ ವರ್ಣಾಲಂಕಾರದ ಕುರುಹುಗಳು ಮಾತ್ರ ಕಂಡುಬರುತ್ತವೆ. ಈ ಸಾಮಾಧಿ ಕಟ್ಟಡದಲ್ಲಿ ವರ್ಣದಿಂದ ರಚಿಸಿದ ನಕ್ಷೆಗಳಲ್ಲದೇ ಗಾರೆಯಿಂದ ಮತ್ತು ಬಣ್ಣದ ಕಲ್ಲುಗಳಿಂದ ಮಾಡಲಾದ ಹೂಬಳ್ಳಿಯ ನಕ್ಷೆ, ಜ್ಯಾಮಿತಿಗಳ ಆಕಾರದ ರೂಪ–ವಿನ್ಯಾಸಗಳು ಕಂಡುಬರುತ್ತವೆ.

ಬಂದೇನವಾಜ ದರ್ಗಾ: ಗುಲಬರ್ಗಾ ಭಾಗದ ಪ್ರಖ್ಯಾತವಾದ ಇಸ್ಲಾಮ್ ಧಾರ್ಮಿಕ ಸ್ಥಳವಾದ ಇಲ್ಲಿ ಮೂರು ಕಟ್ಟಡಗಳಲ್ಲಿ ವರ್ಣದಿಂದ ರಚಿಸಿದ ಹೂಬಳ್ಳಿಯ ನಕ್ಷಾ–ವಿನ್ಯಾಸಗಳು ಕಂಡುಬರುತ್ತವೆ. ಇಲ್ಲಿನ ಚಿತ್ರಗಳು ಎರಡು ವಿಧದಲ್ಲಿ ಕಂಡು ಬರುತ್ತವೆ.

1. ಹಜರತ್–ಗೇಸುದ್ ರಾಜನ ದರ್ಗಾದ ವಿನ್ಯಾಸಗಳು
2. ಗೇಸುದ್‌ರಾಜನ ಶಿಷ್ಯರ ಸಮಾಧಿಗಳ ಚಿತ್ರ ವಿನ್ಯಾಸಗಳು.

ಹಜರತ್–ಗೇಸುದ್ ರಾಜನ ದರ್ಗಾ: (ಬಂದೇ ನವಾಜ ದರ್ಗಾ). ಹಜರತ್–ಗೇಸುದ್ ರಾಜ ಅಪಾರ ಗೌರವವನ್ನು ಪಡೆದ ಒಬ್ಬ ಸೂಫಿಸಂತ. ಈತನು ಕ್ರಿ.ಶ. 1401ರಲ್ಲಿ ಗುಲಬರ್ಗಾಕ್ಕೆ ಬಂದನು. ನಂತರ ನಗರದಿಂದ ಸ್ವಲ್ಪ ದೂರದಲ್ಲಿ ಆತನು ದರ್ಗಾವೊಂದನ್ನು ಹದಿನೈದನೆಯ ಶತಮಾನದಲ್ಲಿ ನಿರ್ಮಿಸಿಕೊಂಡನು. ಅದು ಕಾಲ ಕಾಲಕ್ಕೆ ಬೆಳವಣಿಗೆಯನ್ನು ಕಾಣುತ್ತ ವಿಸ್ತಾರವಾಗುತ್ತ ನಡೆಯಿತು. ಇಂದು ಅಲ್ಲಿ ಅನೇಕ ಸಮಾಧಿಗಳು, ಮಸೀದೆಗಳು, ಮದರಸಾಗಳು ವಿಶ್ರಾಂತಿಗೃಹ ಗಳು ಅಂಗಳಗಳು ಮತ್ತು ದ್ವಾರಗಳು ಕಂಡು ಬರುತ್ತವೆ. ಈ ದರ್ಗಾದ ಮುಖ್ಯ ಕಟ್ಟಡ ಹಜರತ್ ಗೇಸುದ್ ರಾಜನ ಸಮಾಧಿ ಭವನ, ಇದು ಈತನ ಕಾಲವಾದ ಕ್ರಿ.ಶ. 1422ರಲ್ಲಿ ನಿರ್ಮಿಸಿದೆ.

ಈ ದರ್ಗಾದ ವಿಸ್ತರಣಾ ಕಾರ್ಯವನ್ನು ಹದಿನೇಳನೆಯ ಶತಮಾನದವರೆಗೂ ಮುಂದುವರಿಯಿತು. ಕ್ರಿ.ಶ. 16 ಮತ್ತು 17ನೆಯ ಶತಮಾನಗಳು ವಿಜಾಪುರ ಆದಿಲಶಾಹಿಗಳ ಕಾಲದ ರಚನೆಗಳು ಇಲ್ಲಿವೆ. ಈ ದರ್ಗಾದ ಮುಖ್ಯ ಕಟ್ಟಡವಾದ ಹಜರತ್ ಗೇಸುದ್ ರಾಜನು ಸಮಾಧಿ ಭವನವು ಉಳಿದವುಗಳಿಗಿಂತ ಸುಂದರವಾಗಿದ್ದು, ಒಳಭಾಗವು ವರ್ಣಾಲಂಕಾರದಿಂದ ಕೂಡಿದೆ. ಸೂಡು ಬಿಲ್ಲಿಗಳ ಬಣ್ಣ–ಬಣ್ಣದ ರಚನೆಗಳು, ಗಾಜಿನಲ್ಲಿ ನಕ್ಷೆಗಳು, ಮುತ್ತುಗಳಿಂದ ಅಲಂಕರಿಸಿದ ವಿನ್ಯಾಸಗಳು ಇಲ್ಲಿ ಕಂಡುಬರುತ್ತವೆ. ಹಳೇ ಕಾಲದ ವರ್ಣದಿಂದ ರಚಿಸಿದ ನಕ್ಷಾ ವಿನ್ಯಾಸ ಮೇಲೆ ಮತ್ತೆ ಹೊಸದಾಗಿ ಬಣ್ಣ ಬಳಿದು, ಕನ್ನಡಿ ಜೋಡಿಸಿ ನವೀಕರಿಸಲಾಗಿದೆ.



ಖ್ವಾಜಾ ಬಂದೇ ನವಾಜ್ ದರ್ಗಾ, ಗುಲಬರ್ಗಾ

ಗೇಸುದ್ ರಾಜನ ಶಿಷ್ಯರ ಸಮಾಧಿಗಳ ಚಿತ್ರ ವಿನ್ಯಾಸಗಳು: ಗೇಸುದ ರಾಜನ ಇಬ್ಬರು ಶಿಷ್ಯರ ಸಮಾಧಿ ಭವನಗಳಲ್ಲಿ ವರ್ಣ ವಿನ್ಯಾಸಗಳು ಕಂಡು ಬಂದಿದ್ದು ಅವುಗಳನ್ನು ಹೀಗೆ ವಿವರಿಸ ಬಹುದು.

1. ಹಜರತ್ ಗೇಸುದ ರಾಜನ ದರ್ಗಾದ ಎದುರಿಗಿರುವ ಸಮಾಧಿ.
2. ಹಜರತ್ ಗೇಸುದ ರಾಜನ ದರ್ಗಾದ ಎಡಭಾಗದಲ್ಲಿರುವ ಸಮಾಧಿ.

ಹಜರಾತ್ ಗೇಸುದಾರಾಜನ ದರ್ಗಾದ ಎದುರಿಗಿರುವ ಸಮಾಧಿ: (ಗುಲಬರ್ಗಾ) ಗೇಸುದ ರಾಜನ ದರ್ಗಾದ ಎದುರಿಗೆ ಇರುವ ಆತನ ಶಿಷ್ಯನೊಬ್ಬನ ಸಮಾಧಿಯು ಭವ್ಯವಾಗಿದ್ದು, ಒಳಗೋಡೆಯ ನಾಲ್ಕು ಬದಿಯ ಗೋಡೆಗಳು, ಗುಮ್ಮಟದ ಒಳ ಭಾಗ, ಹೂಬಳ್ಳಿಯ ನಕ್ಷಾ–ವಿನ್ಯಾಸಗಳಿಂದ ತುಂಬಿದೆ. ಹೂ ಬಳ್ಳಿಯ ನೈಜರೂಪಗಳಲ್ಲದೇ ಅಲ್ಲಲ್ಲಿ ಜ್ಯಾಮಿತಿ ಆಕಾರದ ನಕ್ಷೆಗಳು ರಚಿಸಿದೆ. ತೆಳು ಕೆಂಪುವರ್ಣದ ಹಿನ್ನೆಲೆಯಲ್ಲಿ ವೈವಿಧ್ಯ ಪೂರ್ಣ ವಿನ್ಯಾಸ ಇಲ್ಲಿ ರಚನೆಯಾಗಿದೆ. ಬೀದರ ರಂಗೀನ್ ಮಹಲ್ ಕಟ್ಟಡದಂತೆ ಇಲ್ಲಿನ ನಕ್ಷೆಗಳು ಪರ್ಷಿಯನ್ ಪ್ರಭಾವ ದಿಂದ ಕೂಡಿರದೇ ಸ್ಥಳೀಯ ಶೈಲಿಯನ್ನು ಪ್ರತಿಬಿಂಬಿಸುತ್ತವೆ.

ಹಜರತ್ ಗೇಸುದ ರಾಜನ ದರ್ಗಾದ ಎಡಭಾಗದಲ್ಲಿರುವ ಸಮಾಧಿ: (ಗುಲಬರ್ಗಾ) ಗೇಸುದರಾಜನ ಇನ್ನೊಬ್ಬ ಶಿಷ್ಯನ ಸಮಾಧಿಯು ಎಡಭಾಗದಲ್ಲಿ ನಿರ್ಮಿಸಿದೆ. ಈ ಸಮಾಧಿ ಭವನದಲ್ಲೂ ವರ್ಣವಿನ್ಯಾಸಗಳು ಕಂಡುಬರುತ್ತವೆ. ಇಲ್ಲಿ ಒಳಗೋಡೆಗಳು ಮತ್ತು ಮೇಲ್ಛಾವಣಿ ಸಂಪೂರ್ಣ ವರ್ಣ ಚಿತ್ತಾರಗಳಿಂದ ತುಂಬಿಸಲಾಗಿದೆ. ಹೂಬಳ್ಳಿಯ ನೈಜರೂಪಗಳು, ಜ್ಯಾಮಿತಿ ರೂಪದ ನಕ್ಷೆಗಳಲ್ಲದೇ, ಇಲ್ಲಿ ಕಟ್ಟಡಗಳ ವಾಸ್ತು ಸ್ವರೂಪವನ್ನು ಬಾಹ್ಯರೇಖೆಯಲ್ಲಿ ತೋರಿಸುವಂತಹ ವಿನ್ಯಾಸದ ನಕ್ಷೆ ಗಳು ಮತ್ತು ಕಮಾನುಗಳನ್ನು ರಚಿಸಲಾಗಿದೆ. ಹಳದಿ ವರ್ಣದ ಹಿನ್ನಲೆಯಲ್ಲಿ ಇಲ್ಲಿ ಚಿತ್ರವಿನ್ಯಾಸಗಳು ರಚನೆ ಗೊಂಡಿವೆ.

ಶಹಾಕಮಾಲ್ ಮುಜರ್ರಾದನ ದರ್ಗಾ: (ಗುಲಬರ್ಗಾ) ಶಹಾಕಮಾಲ್ ಮುಜರ್ರಾದ ಸಂತನ ದರ್ಗಾವು ಹಜರತ್ ಗೇಸುದರಾಜನ ದರ್ಗಾದ ಆಗ್ನೇಯ ದಿಕ್ಕಿನಲ್ಲಿ ನಿರ್ಮಿಸಿದೆ. ಈ ದರ್ಗಾ ಕ್ರಿ.ಶ. 15ನೇ

ಶತಮಾನದಲ್ಲಿ ನಿರ್ಮಿಸಿದ್ದು, ದರ್ಗಾ ಸಮೀಪವೇ ಒಂದು ಮಸೀದೆಯನ್ನು ಎರಡು ಇನ್ನಿತರ ರಚನೆಗಳನ್ನು ಕಾಣಬಹುದು. ಮಸೀದೆಯ ಗುಮ್ಮಟದ ಒಳಭಾಗದಲ್ಲಿ ವರ್ಣದಿಂದ ಚಿತ್ರಿಸ ಲಾದ ಹೂಬಳ್ಳಿಯ ನಕ್ಷತ್ರಗಳು ಕಂಡುಬರುತ್ತವೆ. 170 ವರ್ಣ ವಿನ್ಯಾಸಗಳಲ್ಲಿ ಹೂಬಳ್ಳಿಯ ನೈಜರೂಪಗಳು, ಜ್ಯಾಮಿತಿ ಆಕಾರದ ನಕ್ಷೆಗಳು ಕಂಡುಬರುತ್ತವೆ.

ಅಸ್ಟೂರಿನ ಬಹುಮನಿ ಸಮಾಧಿಗಳು: (ಬೀದರ ಜಿಲ್ಲೆ) ಬೀದರಿನ ಪೂರ್ವಕ್ಕೆ ಸುಮಾರು 10 ಕಿ.ಮೀ. ದೂರದಲ್ಲಿರುವ ಅಸ್ಟೂರಿನಲ್ಲಿ ಬೀದರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಬಹಮನಿ ಸುಲ್ತಾನರ ಗೋರಿ (ಸಮಾಧಿ ಭವನ)ಗಳಿವೆ. ಅಸ್ಟೂರು ಕ್ರಿ.ಶ. 14ನೇ ಶತಮಾನದಲ್ಲಿ ಮಹಮ್ಮದ್‌ಷಾನ್ ಕಾಲಕ್ಕೆ ನಿರ್ಮಾಣವಾದ ಊರಾಗಿದೆ. ಅಹಮ್ಮದ್‌ಷಾ ಮತ್ತು ಅವನ ವಂಶಜರ ಹತ್ತು ಗೋರಿಗಳು ಇಲ್ಲಿ ನಿರ್ಮಿಸಿವೆ. ಈ ಸಮಾಧಿಗಳಿಗೆ ಹೋಗಬೇಕಾದರೆ ಮೊದಲು ದುಲಹನ್ ದರವಾಜಾ ಎಂದು ಕರೆಯಲಾಗುವ ಬಾಗಿಲಿನ ಮೂಲಕ ಪ್ರವೇಶಿಸಬೇಕು. ಇಲ್ಲಿರುವ ಮೂರು ಸಮಾಧಿ ಭವನಗಳಲ್ಲಿರುವ ವರ್ಣವಿನ್ಯಾಸಗಳು, ಹೂಬಳ್ಳಿಯ ನಕ್ಷೆಗಳು ಮತ್ತು ಜ್ಯಾಮಿತಿ ನಕ್ಷಾ ರೂಪಗಳಾಗಿವೆ. ಆ ಸಮಾಧಿಗಳು ಈ ಕೆಳಗಿನಂತಿವೆ.

1. ಅಹಮ್ಮದ್ ಅಲಿ–ವಲಿ–ಬಹಮನಿ ಸಮಾಧಿ
2. ಮಹಮ್ಮದ್ ಷಹನ ಸಮಾಧಿ.
3. ಎರಡನೇ ಅಲ್ಲಾವುದ್ದೀನ್ ಷಾನ ಸಮಾಧಿ

ಅಹಮ್ಮದ್ ಅಲಿ–ವಲಿ–ಬಹಮನಿ ಸಮಾಧಿ: (ಅಹಮ್ಮದ್ ಶಹಾ ಬಹಮನಿ ಸಮಾಧಿ) ಅಹಮ್ಮದನು ಬಹಮನಿ ಸಾಮ್ರಾಟ ನಲ್ಲಿ ಒಂಬತ್ತನೆಯ ಸುಲ್ತಾನವಾಗಿದ್ದನು. ಈತನು ಕ್ರಿ.ಶ. 1422–1436ರ ವರೆಗೆ 13 ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಈತನು ಗುಲಬರ್ಗಾದ ಬಂದೇನವಾಜ ದರ್ಗಾಕ್ಕೆ ಹೆಚ್ಚಿನ ಸಹಾಯ ಕಲ್ಪಿಸಿಕೊಟ್ಟನು. ಈತನ ಸಮಾಧಿ ಭವನದಲ್ಲಿ ವರ್ಣ ಚಿತ್ರಗಳನ್ನು ರಚಿಸಲಾಗಿದೆ. ಈ ಸಮಾಧಿಯು ಚೌಕಾ ಕಾರದ ತಳಪಾಯದ ಮೇಲೆ ಕಟ್ಟಲಾದ ಕಟ್ಟಡವಾಗಿದ್ದು ವಿಶಾಲ ಮತ್ತು ಎತ್ತರವಾಗಿದೆ. ಗೋಡೆಯು ಹೆಚ್ಚಿನ ದಪ್ಪಳತೆಯಿಂದ ಕೂಡಿದೆ. ಈ ಸಮಾಧಿ ಭವನವು ಮೂರು ಪ್ರವೇಶದ್ವಾರಗಳನ್ನು ಹೊಂದಿದ್ದು ಅವು ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿವೆ. ಈ ಸಮಾಧಿ ಭವನದ ಒಳಭಾಗದ ಗುಮ್ಮಟ ಮತ್ತು ಗೋಡೆಗಳನ್ನು ವರ್ಣ ಚಿತ್ರಗಳಿಂದ ಅಲಂಕರಿಸಲಾಗಿದೆ. ಗುಮ್ಮಟದ ಒಳಭಾಗದ ಛಾವಣಿ ಗೋಡೆಗಳಲ್ಲಿ ಮಾತ್ರವಲ್ಲದೇ ಬಾಗಿಲಪಟ್ಟಿಕೆಗಳೂ ಸಹಿತ ಹೂಬಳ್ಳಿ ನಕ್ಷೆಗಳಿಂದ ಕೂಡಿವೆ. ಇಲ್ಲಿ ಗಮನಾರ್ಹ ವೆಂದರೆ ದಕ್ಷಿಣ ಗೋಡೆಯಲ್ಲಿ ಸ್ವಸ್ತಿಕ ಚಿಹ್ನೆಯನ್ನು ಬರೆಯ ಲಾಗಿದೆ.

ಈ ಸಮಾಧಿ ಭವನದ ಗುಂಬಜವು ದೆಹಲಿಯ ಲೋದಿ ಸಮಾಧಿಗಳ ಗುಂಬಜವನ್ನು ಹೋಲುತ್ತದೆ. ಇಲ್ಲಿನ ಗುಂಬಜ ಮತ್ತು ಒಳಗೋಡೆಗಳಲ್ಲಿನ ಎಲ್ಲ ಚಿತ್ರಗಳೂ ಜ್ಯಾಮಿತಿ ರೂಪದ ನಕ್ಷೆಗಳು ಮತ್ತು ಹೂಬಳ್ಳಿಯ ನೈಜರೂಪಗಳಾಗಿವೆ. ಇಲ್ಲಿ ಚಿತ್ರಗಳಲ್ಲಿ ಬಂಗಾರ ವರ್ಣವನ್ನು ಬಳಸಲಾಗಿದೆ. ನೀಲಿ, ಹಸಿರು, ನಸುಗೆಂಪು, ಬೂದುವರ್ಣಗಳು ಇಲ್ಲಿ ಸುಂದರವಾಗಿ ಸಮ್ಮಿಳಿತ ಗೊಂಡಿವೆ. ಇಲ್ಲಿನ ಚಿತ್ರಗಳಲ್ಲಿ ವರ್ಣಗಳ ವಿವಿಧ ರೀತಿಯ ಛಾಯೆಗಳನ್ನು ತೋರಿ ಅವುಗಳಲ್ಲಿ ನೆರಳು–ಬೆಳಕು ಉಂಟು ಮಾಡಲು ಪ್ರಯತ್ನಿಸದೇ ವರ್ಣಗಳ ವಿವಿಧ ಛಾಯೆಗಳನ್ನೇ ಚಪ್ಪಟ್ಟೆಯಾಗಿ ಲೇಪಿಸಿ ವರ್ಣ ಹೊಂದಾಣಿಕೆ ಮಾಡಲಾಗಿದೆ.

ದಕ್ಷಿಣ ದಿಕ್ಕಿನ ಮೇಲ್ಛಾವಣಿಯಲ್ಲಿರುವ ಚಿತ್ರಗಳಲ್ಲಿ ಹೂಬಳ್ಳಿ ಚಿತ್ರಗಳಿಗೆ ಬಂಗಾರ ವರ್ಣವನ್ನು ಬಳಸಿದ್ದು, ಅದು ಕಾಣುವಂತೆ ಪೂರಕವಾಗಿ ಹಿನ್ನಲೆಯಲ್ಲಿ ದಟ್ಟವಾದ ಬಣ್ಣ ಲೇಪಿಸಲಾಗಿದೆ. ಮಧ್ಯದಲ್ಲಿರುವ ಚಿತ್ರದಲ್ಲಿ ಇಂತಹುದೇ ಚಿತ್ರವಿದ್ದರೂ ಹಿನ್ನಲೆ ಯಾಗಿ ದಟ್ಟ ಕಂದುವರ್ಣ ಬಳಸಿ ಹೂಬಳ್ಳಿಯ ನಕ್ಷಾ ಚಿತ್ರಗಳಿಗೆ ಬಂಗಾರವರ್ಣ ಮತ್ತು ತಿಳಿಕೆಂಪು ಬಳಸಲಾಗಿದೆ. ಮತ್ತೊಂದು ಕಡೆ ಮೇಲ್ಛಾವಣಿಯಲ್ಲಿ ಹೊರಚಾಚಿದಂತಿರುವ ಛತ್ತಿನ ಭಾಗ ದಲ್ಲಿ ಕೆಲವು ಜ್ಯಾಮಿತಿ ಆಕೃತಿಗಳಲ್ಲಿ ನಕ್ಷೆಗಳನ್ನು ರಚಿಸಲಾಗಿದೆ. ಅಲ್ಲದೇ ಪೂರಕವಾಗಿ ಹೂಬಳ್ಳಿಯ ನಕ್ಷೆಗಳನ್ನು ಇಲ್ಲಿ ರಚಿಸಿದೆ. ಜ್ಯಾಮಿತಿ ರೂಪದ ನಕ್ಷೆಗಳು ಆಯತ ಮತ್ತು ಚೌಕಾಕಾರದ ಅಲಂಕಾರಿಕ ರೂಪದಲ್ಲಿವೆ. ಆಯತ ಮತ್ತು ಚೌಕಾಕಾರದ ಮಧ್ಯಭಾಗದಲ್ಲಿ ಜ್ಯಾಮಿತಿಕ ಆಕೃತಿಯ ನಕ್ಷೆಗಳಿದ್ದರೆ, ಹೊರ ಭಾಗದ ಅಂಚುಗಳಲ್ಲಿ ಹೂಬಳ್ಳಿಯ ನೈಜ ಶೈಲಿಯ ವಿನ್ಯಾಸ ಗಳಿಗೆ ಚಿತ್ರಗಳನ್ನು 'ತುಗ್ರಾ' (Tughra) ಶೈಲಿಯಲ್ಲಿ ರಚಿಸಿದ್ದೇನೆ ಎಂದು ಕಲಾವಿದನು 'ಖುಫಿಕ್' ಭಾಷೆಯಲ್ಲಿ ಬರೆದಿದ್ದಾನೆ ಎಂಬುದನ್ನು 'ಯಜದಾನಿ' ಅವರು ಗುರುತಿಸಿದ್ದಾರೆ. ಮಧ್ಯ ಭಾಗದ ಈ ಚಿತ್ರಗಳಿಗೆ ತಿಳಿಯಾದ ನೀಲಿ ಹಿನ್ನಲೆವರ್ಣ ಕೊಡಲಾಗಿದೆ. ಅದರ ಮೇಲೆ ತೆಳುಕೆಂಪು, ಬಿಳಿ, ಬಂಗಾರವರ್ಣ ಮುಂತಾದವುಗಳಿಂದ ಹೂಬಳ್ಳಿಯ ನಕ್ಷೆ ರಚಿಸಲಾಗಿದೆ.

ಕೆಲವು ಕಡೆ ಚಿತ್ರಗಳಿಗೆ ಬಿಳಿವರ್ಣದಲ್ಲಿ ಹೊರರೇಖೆ ಎಳೆಯಲಾಗಿದ್ದು ಒಂದು ಕಡೆಗೆ 'ಅಲಿ' ಎಂದು 'ಕುಫಿಕ್' ಭಾಷೆ ಯಲ್ಲಿ ಮೂರು ಸಲ ಬರೆಯಲಾಗಿದೆ.

ಮಹಮ್ಮದ ಷಾನ ಸಮಾಧಿ: ಅಹಮ್ಮದ್ ಷಾನ ಮಗನಾದ ಮಹಮ್ಮದ್‌ಷಹಾನ ಸಮಾಧಿಯು ಕ್ರಿಸ್ತಶಕ 1482–1418ರ ಅವಧಿಯಲ್ಲಿ ರಚನೆಯಾಗಿ ಮಹಮ್ಮದ್‌ಷಹಾನ ಸಮಾಧಿಯು ಆತನ ತಂದೆಯ ಸಮಾಧಿಯನ್ನೇ ಹೋಲುವುದು. ಈ ಸಮಾಧಿ ಭವನದ ಒಳಭಾಗದಲ್ಲೂ ವರ್ಣಚಿತ್ರಗಳಿಂದ ಅಲಂಕರಿಸ ಲಾಗಿದೆ. ವರ್ಣಚಿತ್ರಗಳಲ್ಲದೇ ಬಣ್ಣ ಬಣ್ಣದ ಸೂಡು ಬಿಲ್ಲೆಗಳಿಂದ ಗೋಡೆಗಳಲ್ಲಿ ನಕ್ಷೆಗಳನ್ನು ರೂಪಿಸಲಾಗಿದೆ. ಇಲ್ಲಿಯ ವರ್ಣ ಚಿತ್ರಗಳೂ ಸಹಿತ ಹೂಬಳ್ಳಿಯ ನಕ್ಷೆಗಳು, ಜ್ಯಾಮಿತಿ ನಕ್ಷೆಗಳಿಂದ ಕೂಡಿದೆ. ಅಲ್ಲಲ್ಲಿ ವರ್ಣಗಳಿಂದ ಧಾರ್ಮಿಕ ವಾಕ್ಯಗಳನ್ನು ಬರೆಯಲಾಗಿದೆ. ಈ ಚಿತ್ರಗಳೂ ಆತನ ತಂದೆಯ ಸಮಾಧಿ ಚಿತ್ರಗಳನ್ನು ಹೋಲುತ್ತವೆ.

ಎರಡನೆಯ ಅಲ್ಲಾವುದ್ದೀನ ಷಹಾನ ಸಮಾಧಿ: ಈ ಸಮಾಧಿಯು ಆತನಿಂದಲೇ ತಾನು ಸಾಯುವ ಮೊದಲೇ

ಕಟ್ಟಲ್ಪಟ್ಟಿತು. (1436-1458) ಈ ಸಮಾಧಿಗೆ ಮೂರು ಪ್ರವೇಶದ್ವಾರಗಳಿದ್ದು ಅವು ಪೂರ್ವ, ಉತ್ತರ, ದಕ್ಷಿಣದಲ್ಲಿವೆ. ಈ ಸಮಾಧಿ ಭವನದ ಒಳಗೋಡೆ, ಮೇಲ್ಛಾವಣಿಗಳಲ್ಲಿ ವರ್ಣ ಚಿತ್ರಗಳಿವೆ. ಇವು ಕೂಡಾ ಹೂಬಳ್ಳಿಯ ನಕ್ಷೆಗಳಾಗಿವೆ. ಇಲ್ಲಿ ನೀಲಿ, ಹಸಿರು, ಹಳದಿವರ್ಣಗಳು ಪ್ರಮುಖವಾಗಿ ಬಳಕೆ ಗೊಂಡಿವೆ. ಗೋಡೆಗಳಲ್ಲಿ ಪಟ್ಟಿಕೆಗಳನ್ನು ಮಾಡಿ ಚಿತ್ರಿಸಿದಂತೆ ಗುಮ್ಮಟದ ಒಳಭಾಗದ ಮೇಲ್ಛಾವಣಿಯ ತುಂಬಾ ವರ್ಣಚಿತ್ರ ಬಿಡಿಸಲಾಗಿದೆ. ಅಸ್ತೂರಿನಲ್ಲಿಯ ಚಿತ್ರಗಳು (ನಕ್ಷಾರೂಪಗಳು) ಇಂಡೋ-ಪರ್ಷಿಯನ್ ಶೈಲಿಯಲ್ಲಿ ರಚಿತಗೊಂಡಿವೆ. ಚಿತ್ರಗಳು ಸಾಮಾನ್ಯವಾಗಿ ಒಂದು ಸೆಂಟಿಮೀಟರ ದಪ್ಪವಾದ ಭಿತ್ತಿಯ ಮೇಲೆ ಸುಣ್ಣದ ಲೇಪ ಬಳಿದು ಚಿತ್ರಿಸಲಾಗಿದೆ. ಮೇಲೆ ಹೇಳ ಲಾದ ಗುಲಬರ್ಗಾ, ಬೀದರ ಮತ್ತು ಅಸ್ತೂರಿನ ನಕ್ಷಾರೂಪದ ಭಿತ್ತಿಚಿತ್ರಗಳಲ್ಲಿ ಗುಲಬರ್ಗಾದಲ್ಲಿ ಮುಸ್ಲಿಮರ ಪ್ರಾರಂಭಿಕ ಕಾಲದ ಚಿತ್ರರಚನೆ ಸಪ್ತ ಗುಂಬಜಗಳ ಸಾಲಿನಲ್ಲಿ ತಾಜುದ್ದೀನ್ ಫೀರೋಜ್‌ನ ಸಮಾಧಿಯಲ್ಲಿ ಮಾತ್ರ ಅಲ್ಪಸ್ವಲ್ಪ ಕಂಡು ಬರುವುದು.

ಆದರೆ ನಂತರದಲ್ಲಿ ಇಲ್ಲಿಯ ಪ್ರಭಾವದಿಂದ ಮುಸ್ಲಿಮ್‌ರೂ ತಮ್ಮ ಕಟ್ಟಡಗಳನ್ನು ವರ್ಣಚಿತ್ರಗಳಿಂದ ಅಲಂಕರಿಸ ತೊಡಗಿಸಿದರು. ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಗೆ ವರ್ಗಾಯಿಸಿದ ನಂತರ ಈ ಹವ್ಯಾಸ ಹೆಚ್ಚಾಯಿತು. ಬೀದರದಲ್ಲಿನ ರಂಗೀನ ಮಹಲ್ ಕಟ್ಟಡದಲ್ಲಿರುವ ನಕ್ಷಾರೂಪಗಳು ಬಹಮನಿ ಸಾಮ್ರಾಟರ ಪ್ರಾರಂಭಿಕ ಹೆಜ್ಜೆಯನ್ನು ತೋರಿಸಿದರೆ ಸಮೀಪದ ಅಷ್ಟೂರಿನಲ್ಲಿಯ ಸಮಾಧಿ ಭವನಗಳಲ್ಲಿನ ವೈವಿಧ್ಯ ನಕ್ಷೆಗಳು ಪರ್ಷಿಯನ್ ಪ್ರಭಾವದಿಂದ ಪ್ರೇರಿತವಾಗಿವೆ. ರಂಗೀನ ಮಹಲ್‌ನಲ್ಲಿ ಬಾಗಿಲಿನ ಅಂಚುಗಳಿಗೆ, ಮೇಲ್ಛಾವಣಿಗಳಿಗೆ, ಕಮಾನುಗಳಿಗೆ ನಕ್ಷಾರೂಪಗಳನ್ನು ಚಿತ್ರಿಸಲಾಗಿದೆ.

ಅಸ್ತೂರಿನಲ್ಲಿಯ ನಕ್ಷಾರೂಪಗಳು: ಬೀದರ ರಂಗೀನ್ ಮಹಲ್ ನಕ್ಷೆಗಳಿಗಿಂತ ಪ್ರಭುದ್ಧವಾಗಿವೆಯಲ್ಲದೇ ವರ್ಣವಿನ್ಯಾಸ, ಸಂಯೋಜನಾರೀತಿ, ರಚನಾ ಶೈಲಿಗಳಲ್ಲೂ ಉತ್ತಮವಾಗಿವೆ. ವರ್ಣಛಾಯೆಗಳಲ್ಲಿ ಇವು ಬೇರೆಯಾಗಿರುವುದರಿಂದ ಸ್ಥಳೀಯ ವಲ್ಲದ ಬಣ್ಣಗಳಿಂದ ಅಂದರೆ ಬಹುಶಃ ಪರ್ಷಿಯಾದಿಂದ ಆಮವಾದ ಬಣ್ಣಗಳಿಂದ ರಚನೆಯಾಗಿರಬೇಕು. ಬೀದರಿನ ರಂಗೀನ್ ಮಹಲ್‌ದಲ್ಲಿ ಹೆಚ್ಚಾಗಿ ಜ್ಯಾಮಿತಿ ರೂಪಗಳಿದ್ದರೆ ಅಸ್ತೂರಿನಲ್ಲಿಯ ಸಮಾಧಿಗಳಲ್ಲಿ ಜ್ಯಾಮಿತಿ ರೂಪದ ಜೊತೆಗೆ ನೈಜರೂಪವನ್ನು ಹೋಲುವ ಹೂಬಳ್ಳಿಯ ನಕ್ಷೆಗಳೂ ಕಂಡುಬರುತ್ತವೆ. ಗುಲಬರ್ಗಾದ ಬಂದೇ ನವಾಜ್ ದರ್ಗಾದಲ್ಲಿನ ಚಿತ್ರಗಳಲ್ಲಿ ಹೆಚ್ಚಿನವು ಬಿಜಾಪೂರದ ಆದಿಲಷಾಹಿ ಸುಲ್ತಾನರ ಕಾಲದಲ್ಲಿ ರಚನೆಯಾಗಿದ್ದು, ಅವುಗಳಲ್ಲಿ ಹಿಂದೂ ಪ್ರಭಾವ ಕಾಣಿಸುತ್ತದೆ. ಮಸೀದೆ ಮತ್ತು ಸಮಾಧಿ ಭವನಗಳಲ್ಲಿನ ಭಿತ್ತಿಚಿತ್ರ ಕಲೆಯು ಮುಸ್ಲಿಮ್ ಧಾರ್ಮಿಕ ರೀತಿ ನೀತಿಗಳನ್ನು ಅನುಸರಿಸಿ ರಚನೆಯಾಗಿರುವುದರಿಂದ ಹೆಚ್ಚಿನ ವೈವಿಧ್ಯತೆ ಕಂಡು ಬರುವುದಿಲ್ಲ. ಮುಸ್ಲಿಂ ಧರ್ಮವು ಮೂರ್ತಿ ಪೂಜೆಯನ್ನು ನಿರಾಕರಿಸಿದಂತೆ ವ್ಯಕ್ತಿಚಿತ್ರ ರಚನೆಯನ್ನು ನಿಷೇಧಿಸಿದೆ. ಹೀಗಾಗಿ ಮುಸ್ಲಿಂ ಧಾರ್ಮಿಕ ಕಟ್ಟಡಗಳು, ಸಮಾಧಿಗಳಲ್ಲಿ ಅಲಂಕರಣ ಕ್ಕಾಗಿ ಕೇವಲ ಹೂಬಳ್ಳಿಯ ನಕ್ಷೆ ಮತ್ತು ಜ್ಯಾಮಿತಿ ರೂಪವಿನ್ಯಾಸಗಳನ್ನು ರಚಿಸುತ್ತಾರೆ.

ಬೀದರನ ವಾಸ್ತುಶಿಲ್ಪ: ಬಹಮನಿ ಮತ್ತು ಬರೀದ್‌ಶಾಹಿ ಸುಲ್ತಾನರ ಸಾಹಿತ್ಯ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಪೋಷಕ ರಾದದ್ದು ಅವರು ಪರ್ಶಿಯಾದ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಿದ್ದವರಾಗಿದ್ದುದರಿಂದ ಪರ್ಶಿಯದ ಕುಶಲಕರ್ಮಿಗಳು, ಲೇಖಕರು, ಕವಿಗಳು ಮತ್ತು ಇತರ ವೃತ್ತಿಪರರು ಬೀದರಿನ ಆಸ್ಥಾನಕ್ಕೆ ಆಗಮಿಸಿದರು. ಅವರಲ್ಲಿ ಅತ್ಯಂತ ಪ್ರಮುಖರೆಂದರೆ ಶಹಾ ನೇಮತ್ತುಲ್ಲಾನ ಮಗ ಮತ್ತು ಮೊಮ್ಮಗ ಗಿಲಾನಿನವನಾಗಿದ್ದು ಮುಂದೆ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ ಮಹಮೂದ್ ಗವಾನ ಅವನು ಮೂರನೆಯ ಅಹಮ್ಮದ್ ಶಹಾನ ಸೇನಾನಿಯಾಗಿಯೂ ಸೇವೆ ಮಾಡಿದನು. ಇದರ ಪರಿಣಾಮವಾಗಿ ಬೀದರಿನ ವಾಸ್ತುಶಿಲ್ಪವು ಶಕ್ತಿಶಾಲಿಯಾದ ಪರ್ಶಿಯನ್ ಹಾಗೂ ಮಧ್ಯ ಏಶಿಯಾದ ಪ್ರಭಾವಕ್ಕೊಳಗಾಯಿತು. ಅದರಿಂದ ರೂಪರೇಷೆಗಳಿಂದ ಸೌಂದರ್ಯ ಹೆಚ್ಚಿತು. ವಿವರಗಳಲ್ಲಿ ಲಾವಣ್ಯ ನೆಲೆಗೊಂಡಿತ್ತು. ಕ್ರಿ.ಶ. 1429ರ ಹೊತ್ತಿಗೆ ತುಘಲಕ್ ವಾಸ್ತುಶಿಲ್ಪದ ಗಾಂಭಿರ್ಯ ಮತ್ತು ಭವ್ಯತೆಗಳನ್ನು ತೋರಿದ್ದು ನವೀನವಾದ ಇಂಡೋ ಪರ್ಶಿಯನ್ ಶೈಲಿ ನೆಲೆಗೊಂಡಿತ್ತು. ಬಹುಸಂಖ್ಯೆಯ ವಾಸ್ತುನಿರ್ಮಾಣಗಳಲ್ಲಿ ಕೋಟೆ, ರಂಗೀನ ಮಹಲ್, ತಃಖ್ತ ಮಹಲ್, ಸೋಲಾ ಖಂಬಾ ಮಸ್ಜೀದ್, ದಿವಾನೆ ಆಮ್, ಮಹಮೂದ್ ಗವಾನ ಮದರಸಾ, ಅಷ್ಟೂರನಲ್ಲಿರುವ ಬಹಮನಿ ಹಾಗೂ ಬರೀದ್ ಶಾಹಿ ಗುಂಬಜಗಳು ಸೂಫಿ ಗುಂಬಜಗಳು ಪ್ರಮುಖವಾದ ಆಕರ್ಷಣೆಗಳಾಗಿವೆ.

ಕೋಟೆ: ಬೀದರಿನ ಕೋಟೆಯನ್ನು ಅಹಮ್ಮದ ಶಹಾ ಬಹಮನಿಯು ಕ್ರಿ.ಶ. 1429ರಲ್ಲಿ ಕಟ್ಟಿಸಲು ಆರಂಭಿದರೆನ್ನಲಾಗಿದೆ. ಇದು ಸ್ವಲ್ಪ ಹೆಚ್ಚು ಕಡಿಮೆ ಚೌಕಾಕೃತಿಯನ್ನು ಹೊಂದಿದ್ದು, ಬೆಟ್ಟದ ತಪ್ಪಲಿನ ತುದಿಯಲ್ಲಿದೆ. ಉತ್ತರ ಮತ್ತು ಪೂರ್ವಗಳಲ್ಲಿ ಕಡಿದಾದ ಇಳಿಜಾರು ಪ್ರದೇಶವಿದ್ದು ಇತರ ಕಡೆಗಳಲ್ಲಿ ಕಂದಕಗಳಿವೆ. ತುರ್ಕಿಸ್ಥಾನದ ಕೂಲಿಗಳು ಈ ಕೋಟೆಯನ್ನು ಕಟ್ಟುವಲ್ಲಿ ಶ್ರಮಿಸಿದ್ದಾರೆ. ಇದು ಸುಮಾರು ನಾಲ್ಕು ಕಿಲೋಮೀಟರ್ ಸುತ್ತಳತೆಯನ್ನು ಹೊಂದಿದ್ದು 37 ಬುರುಜು



ಬೀದರ ಕೋಟೆ

ಗಳಿವೆ. ಇವು ಅಷ್ಟ ಕೋನಾಕೃತಿ ವರ್ತುಲಾಕಾರದ್ದು ಮತ್ತು ಚೌಕಾಕೃತಿಯು ಆಗಿವೆ. ಎಂಟು ಮಹಾದ್ವಾರಗಳಿವೆ. ಮಧ್ಯ ಯುಗದ ಯುರೋಪಿಯನ್ ಕೋಟೆಗಳನ್ನು ಹೋಲುತ್ತವೆ. ಅದರ ಕಂದಕವು 115 ಅಡಿ ಅಗಲ, 30 ಅಡಿ ಆಳವಾಗಿದ್ದು ಕಲ್ಲಿನಿಂದ ಕಟ್ಟಲ್ಪಟ್ಟದ್ದಾಗಿದೆ. ಕೋಟೆಯಲ್ಲಿ ಅನೇಕ ರಹಸ್ಯ ಮಾರ್ಗಗಳು, ಸುರಕ್ಷಿತ ದಾರಿಗಳು ಇವೆ.

ಗೋಪುರ (ಚೌಬಾರ): ಬೀದರಿನ ಕೂಡು ರಸ್ತೆಯ ಸಮೀಪವಿರುವ ಗೋಪುರವು 71 ಅಡಿ ಎತ್ತರವಿದೆ. ಸುತ್ತಲಿನ ಪ್ರದೇಶವನ್ನು ವೀಕ್ಷಿಸಲು ಅನುವಾಗುವಂತೆ ನಿರ್ಮಿಸಿದ ಈ ವಾಸ್ತುಶಿಲ್ಪವು ಸಿಲಂಡರಿನ ವಿನ್ಯಾಸವನ್ನು ಹೊಂದಿದ್ದು ನಿಜಾಮರ ಆಳ್ವಿಕೆಯಲ್ಲಿ ನಿರ್ಮಿಸಲ್ಪಟ್ಟಿದೆ. ಕೆಳಭಾಗದಲ್ಲಿ ಸುತ್ತ ಇಸ್ಲಾಮಿಕ್ ಶೈಲಿಯ ಸಣ್ಣ ಕಮಾನುಗಳಿವೆ.



ಗೋಪುರ (ಚೌಬಾರ)

ಮದರಸಾ: ಬೀದರಿನ ಪ್ರಮುಖ ಆಕರ್ಷಕ ಕಟ್ಟಡ ವೆಂದರೆ ಮದರಸಾ. ಕ್ರಿ.ಶ.1472ರಲ್ಲಿ ಮಹಮ್ಮುದ ಗವಾನನು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಕಟ್ಟಲ್ಪಟ್ಟಿದ್ದು. ಆಗಿನ ಸಂದರ್ಭ ದಲ್ಲಿಯೇ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸಿದ ಈ ಕಟ್ಟಡದಲ್ಲಿ ಅರೇಬಿಕ್ ಶಿಕ್ಷಣವನ್ನು ನೀಡಲಾಗುತ್ತಿತ್ತು. ಜೊತೆಗೆ ಪರ್ಶಿಯನ್, ತತ್ವಶಾಸ್ತ್ರ ಮತ್ತು ಗಣಿತ ಶಾಸ್ತ್ರಗಳನ್ನು ಅಧ್ಯಯನ, ಅಧ್ಯಾಪನಗಳು ಇಲ್ಲಿ ನಿರಂತರವಾಗಿ ನಡೆಯುತ್ತಿದ್ದವೆಂದೂ, ಪ್ರಸಿದ್ಧರೆನಿಸಿದ ಸುಮಾರು 100 ಜನ ವಿದ್ವಾಂಸರು ಇಲ್ಲಿ ವಾಸವಾಗಿದ್ದರೆಂದೂ, ಅವರಿಗೆ ಸಕಲ ಸೌಲಭ್ಯಗಳನ್ನು ನೀಡ ಲಾಗಿತ್ತು. ಈ ಕಟ್ಟಡದಲ್ಲಿ ಮಸೀದಿ, ಪ್ರಯೋಗಶಾಲೆ, ಉಪನ್ಯಾಸ ಮಂದಿರ, ವಿದ್ವಾಂಸರ ವಸತಿಗೃಹಗಳು ಹಾಗೂ ವಿದ್ಯಾರ್ಥಿಗಳ ವಸತಿಗೃಹವೂ ಸಹ ಇಲ್ಲಿವೆ. ಗ್ರಂಥಾಲಯದಲ್ಲಿ ಅರೇಬಿಕ್, ಪರ್ಶಿಯನ್ ಇನ್ನೂ ಮುಂತಾದ ವಿಷಯಗಳಿಗೆ ಸಂಬಂಧ ಪಟ್ಟಂತೆ 300ಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳು ಇವೆ.

ಈ ಕಟ್ಟಡದ ಗೋಡೆಗಳ ಮೇಲೆ ಮೋಸಾಯಿಕ್ ಮಾಧ್ಯಮದ ಪರ್ಶಿಯನ್ ಶೈಲಿಯ ಅಲಂಕಾರಿಕ ವಿನ್ಯಾಸಗಳು ಮತ್ತು ಕುರಾನಿನ ಉದ್ಘೋಷಗಳು ಭಿತ್ತಿಯನ್ನು ಅಲಂಕರಿಸಿವೆ. 90 ಅಡಿ ಎತ್ತರದ ಮಿನಾರ ಮದರಸಾದ ವೈಭವವನ್ನು ಹೆಚ್ಚಿಸಿದೆ. ಈ ಮದರಸಾವು 1696ರಲ್ಲಿ ಸಿಡಿಲಿನ ಹೊಡೆತಕ್ಕೆ ಹಾನಿಗೆ ಒಳಗಾದರೂ, ಬಹುಭಾಗವು ಭದ್ರವಾಗಿದ್ದು ಈಗಲೂ ಕೂಡ ಮುಸ್ಲಿಂ ವಾಸ್ತುಶಿಲ್ಪ ಸೌಂದರ್ಯಕ್ಕೆ ಈ ಸ್ಮಾರಕ ಒಂದು ಉತ್ತಮ ಉದಾಹರಣೆ.

ರಂಗೀನ ಮಹಲ್: ಗುಂಬಜ ದರವಾಜದ ಎಡಭಾಗದಲ್ಲಿ ಸಂರಕ್ಷಿಸಲ್ಪಟ್ಟ ರಂಗೀನ ಮಹಲ್ ಇದೆ. ಇದನ್ನು ಅಲೀ ಬಾರೀದನು (1542-1580) ಕಟ್ಟಿಸಿದನು. ಈ ಅರಮನೆಯು ಸುಂದರವಾದ ಕುಸುರಿಯನ್ನು ಕಾಷ್ಠದಲ್ಲಿ ರೂಪಿಸಿದ್ದು, ಆಕರ್ಷಕ ವಿನ್ಯಾಸಗಳಿಂದ ಕೂಡಿದ ಮೋಸಾಯಿಕ್ ನೆಲ ಹಾಸನ್ನು ಹೊಂದಿದ್ದು, ಪರ್ಶಿಯನ್ ವಾಸ್ತುಶಿಲ್ಪ ವಿನ್ಯಾಸದಿಂದ ಅವು ಸ್ಫೂರ್ತಿ ಪಡೆದಿವೆ. ಎರಡು ಅಂತಸ್ತುಗಳುಳ್ಳ ಈ ಭವನಕ್ಕೆ ಭವ್ಯವಾದ ಅಲಂಕಾರದಿಂದ ಜಗುಲಿ ಇದೆ. ಅದರ ಮೇಲ್ಛಾವಣಿ ಯನ್ನು ಆಧಾರವಾಗಿರುವ ಕಟ್ಟಿಗೆಯ ಕಂಬಗಳಲ್ಲಿ ಹಿಂದೂ ಮತ್ತು ಮುಸ್ಲಿಂವಿನ್ಯಾಸಗಳ ಕೆತ್ತನೆ ಬಹುಸುಂದರವಾಗಿ ಮೂಡಿದೆ.



ಆಕರ್ಷಕ ವಿನ್ಯಾಸದ ರಂಗೀನ್ ಮಹಲ್

ಶಾಹಿ ಹಮಾಮ (ರಾಜರ ಸ್ನಾನ ಗೃಹ): ವಿಶಿಷ್ಟ ಪರ್ಶಿಯನ್ ವಾಸ್ತು ವಿನ್ಯಾಸದಿಂದ ಕೂಡಿದ ಈ ಕಟ್ಟಡವು ಒಂದು ಕಾಲದಲ್ಲಿ


ರಾಜ ಮಹಾರಾಜರುಗಳ ಸ್ನಾನ ಗೃಹವಾಗಿತ್ತೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಇದು ಈಗ ವಸ್ತುಸಂಗ್ರಹಾಲಯವಾಗಿದ್ದು ಎರಡ್ಮೂರು ಶತಮಾನಗಳಷ್ಟು ಹಳೆಯದಾದ ಮಡಕೆಗಳು, ಪರ್ಶಿಯನ್ ಪಾತ್ರೆಗಳು, ಚೀನಾ ಪಾತ್ರೆಗಳು, ಆಯುಧಗಳು, ಕೋಟೆಯ ಬಾಗಿಲಿಗೆ ಹಾಕುವ ದೊಡ್ಡದಾದ ಬೀಗಗಳು, ದೇವಾನುದೇವತೆಗಳ ವಿಗ್ರಹಗಳನ್ನು ಇಲ್ಲಿ ಸಂಗ್ರಹಿಸಿ ಇಡಲಾಗಿದೆ.



ಶಾಹಿ ಹಮಾಮ (ರಾಜರ ಸ್ನಾನ ಗೃಹ)

ತಾರ್ಕಾಶ ಮಹಲ: ವಸ್ತು ಸಂಗ್ರಹಾಲಯದ ಕೂಗಳತೆಯಲ್ಲಿ ತಾರ್ಕಾಶ ಮಹಲಿದೆ. ಅದರ ಮೇಲುಪ್ಪರಿಗೆಯು ಅಂತಃಪುರವಾಗಿದ್ದು, ಕೆಳಗಿನ ಅಂತಸ್ತಿನಲ್ಲಿ ಉಗ್ರಾಣ ಮತ್ತು ಕಾವಲುಗಾರರಿರುತ್ತಿದ್ದರು. ಬರೀದ ಶಾಹಿ ರಾಜರು ಬೇರೆ ಬೇರೆ ರಾಷ್ಟ್ರಗಳ ಸ್ತ್ರೀಯರನ್ನು ಕರೆತಂದು ತಮ್ಮ ಅಂತಃಪುರದಲ್ಲಿ ವಿವಿಧ ಕಾರ್ಯಗಳಿಗೆ ನಿಯಮಿಸಿಕೊಂಡಿದ್ದನೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಕಟ್ಟಡದ ವಾಸ್ತುವಿನ ಭಾಗವಾಗಿ ನೀರಿನ ಸರಬರಾಜು ವ್ಯವಸ್ಥೆ ಗಮನಾರ್ಹವಾಗಿದ್ದು, ನೀರಿನ ಬುಗ್ಗೆಗಳು ಇಲ್ಲಿ ಇರುವುದರ ಕುರುಹುಗಳು ಕಂಡುಬರುತ್ತವೆ.

ಸೋಲಾಕಂಬ ಮಸೀದಿ: ವಸ್ತು ಸಂಗ್ರಹಾಲಯದ ಕೂಗಳತೆಯಲ್ಲಿರುವ ಮತ್ತೊಂದು ಸ್ಮಾರಕವೆಂದರೆ ಸೋಲಾಕಂಬ



ಸೋಲಾಕಂಬ ಮಸೀದಿ

ಮಸೀದಿ. 16 ಕಂಬಗಳನ್ನು ಒಳಾವರಣದಲ್ಲಿರುವುದರಿಂದ ಈ ಮಸೀದಿಗೆ ಸೋಲಾಕಂಬ ಮಸೀದಿ ಎಂದು ಸ್ಥಳೀಯರು ಕರೆಯುತ್ತಾರೆ. ಕ್ರಿ.ಶ. 1423ರಲ್ಲಿ ಕುಬ್ಲಿ ಸುಲ್ತಾನನಿಂದ ನಿರ್ಮಿತವಾದ ಈ ಮಸೀದಿಯು ಭಾರತದಲ್ಲಿ ಅತಿದೊಡ್ಡ ಮಸೀದಿಯಾಗಿದೆ. ಪರ್ಶಿಯನ್ ವಾಸ್ತುಶಿಲ್ಪಕಲೆಯಿಂದ ಪ್ರಭಾವಗೊಂಡ ಈ ಮಸೀದಿಯಲ್ಲಿ ಪ್ರಸಿದ್ಧ ಮಹಾರಾಜನಾಗಿದ್ದ ಔರಂಗಜೇಬನು ಬೀದರನ್ನು ಗೆದ್ದುಕೊಂಡು ಬಂದು ಅಲ್ಲಾನನ್ನು ಕುರಿತು ನಮಾಜ ಮಾಡಿದ್ದರ ಬಗ್ಗೆ ಚರಿತ್ರೆಯಲ್ಲಿ ಉಲ್ಲೇಖಗಳಿವೆ.

ದಿವಾನ ಎ ಆಮ: ಈ ಸಭಾಗೃಹವು ಬಹುಮನಿ ರಾಜರ ಆಸ್ಥಾನವಾಗಿತ್ತು. ಬಹುಮನಿ ಅರಸರು ತಮ್ಮ ವಿದೇಶಿ ಅತಿಥಿಗಳನ್ನು ಕರೆತಂದು ಈ ಸಭಾಗೃಹದ ಕೋಣೆಗಳಲ್ಲಿ ಉಪಚರಿಸುತ್ತಿದ್ದರು. ಬಹಮನಿ ಅರಸರ ಪಟ್ಟಾಭಿಷೇಕ ನಡೆಯುತ್ತಿದ್ದ ಸ್ಥಳವೂ ಇದಾಗಿದ್ದರಿಂದ ವಾಸ್ತುಶಿಲ್ಪ ವೈಭವದ ವಿನ್ಯಾಸಗಳು ಮುಸ್ಲಿಂ ಶೈಲಿಯಲ್ಲಿ ಒಡಮೂಡಿವೆ. ಗ್ರಾನೈಟ್ ನೆಲಹಾಸನ್ನು ಹೊಂದಿರುವ ಕಟ್ಟೆಗೆಯ ಕಂಬಗಳನ್ನು ಹೊಂದಿರುವ ಈ ಕಟ್ಟಡ ಹಿಂದಿನ ಕಾಲದ ರಾಜರುಗಳ ವೈಭವೋಪೇತ ಬದುಕನ್ನು ಕಣ್ಮುಂದೆ ಕಟ್ಟಿಕೊಡುತ್ತದೆ.

ತಖ್ತಿ ಮಹಲ: ದಿವಾನ ಎ ಆಮ ಸ್ಮಾರಕದ ಕೂಗಳತೆಯಲ್ಲಿರುವುದೇ ತಖ್ತಿ ಮಹಲ. ರಾಜಮಹಾರಾಜರುಗಳ ವಾಸ್ತವ್ಯಕ್ಕಾಗಿ ಕಟ್ಟಿರುವ ವೈಭವಯುಕ್ತ ಅರಮನೆ. ಈ ಅರಮನೆಯ ವಿಶೇಷತೆ ಹಲವು. ಬಿಸಿ ನೀರಿನ ಕೊಳ ಗ್ರಾನೈಟ್ ಕಲ್ಲಿನಿಂದ ನಿರ್ಮಾಣವಾಗಿದ್ದು, ಅದರ ಮೇಲೆ ಅಲಂಕಾರಿಕ ವಿನ್ಯಾಸಗಳನ್ನು ಮುಸ್ಲಿಂ ಶೈಲಿಯಲ್ಲಿ ಹಾಗೂ ಹೂಬಳ್ಳಿಗಳ ವಿನ್ಯಾಸಗಳು ಹಿಂದೂ ಶೈಲಿಯಲ್ಲಿ ಕೆತ್ತಲ್ಪಟ್ಟಿವೆ.

ಹಜಾರ ಕೊಠಡಿ ಅಥವಾ ಸಾವಿರ ಕೊಠಡಿಗಳು ನೆಲಮಾಳಿಗೆಯಲ್ಲಿವೆ. ಸೌಬತ್ ಖಾನವು ಕೂಡ ಅಲ್ಲಿಯೇ ಇದ್ದು ಅದು ಕೋಟೆಯ ಕಾವಲು ಪಡೆಯ ಮುಖ್ಯಸ್ಥನ ವಸತಿ ಗೃಹವಾಗಿದ್ದಿತು. ಅರಮನೆಯ ಸುತ್ತಲಿರುವ ಬೃಹತ್ ಕೋಟೆಯ ಮೇಲೆ ದೊಡ್ಡದಾದ (14.9–1.7ಅಡಿ) ಫಿರಂಗಿಯೂ ಈಗಲೂ ಇದ್ದು ನೋಡಲು ಆಕರ್ಷಕವಾಗಿದೆ. ಅದರ ತಳದಲ್ಲಿ ಮದ್ದು ಗುಂಡುಗಳ ಸಂಗ್ರಹಕ್ಕೆ ವ್ಯವಸ್ಥೆಯಿದೆ.


ಅಷ್ಟೂರ: ಬೀದರಿನ ಕೆಳಭಾಗದಲ್ಲಿ ಅಷ್ಟೂರ ಇದ್ದು ಅವು ಸಮಾಧಿಗಳ ಪ್ರದೇಶವಾಗಿದೆ. ಅಹಮ್ಮದ ಶಾಹ ವಲಿ ಬಹಮನಿಯ ಸಮಾಧಿಯು ಚಾಕಾಕಾರದಲ್ಲಿ ನಿರ್ಮಿಸಲ್ಪಟ್ಟಿದ್ದು ಭವ್ಯತೆಯ ಪ್ರತೀಕವಾಗಿದೆ. ಹೊರಭಾಗದಲ್ಲಿ ಶ್ವೇತಮಯವಾಗಿ ಕಾಣುವ ಇದರ ಒಳಾವರಣದಲ್ಲಿ ಸುಂದರ ವರ್ಣಚಿತ್ರಗಳಿವೆ. ಸ್ವಸ್ತಿಕ ಚಿನ್ಹೆಯನ್ನು ಅಲಂಕಾರಕ್ಕಾಗಿ ಬಳಸಿಕೊಳ್ಳಲಾಗಿದೆ. ಇನ್ನೊಂದು ಸಮಾಧಿಯಾದ ಅಲಿ ಬರೀದನ ಸಮಾಧಿಯು 1580ರಲ್ಲಿ ನಿರ್ಮಿಸಲ್ಪಟ್ಟಿದ್ದು ಅದು ಸಹ ಅಲಂಕಾರಿಕ ವಿನ್ಯಾಸಗಳಿಂದ ರಚಿತಗೊಂಡಿದೆ. ಅಹಮ್ಮದ ಶಾಹನ ನೆನಪಿನಲ್ಲಿ ಉರುಸ್ ನಡೆಯುತ್ತದೆ. ಇದೇ ಆವರಣದಲ್ಲಿ ತನ್ನ ಮಗನಾದ ಅಲ್ಲಾವುದ್ದೀನ ಸಮಾಧಿ ಕೂಡ ಇದೆ.

ಇದೇ ಅವರಣದಲ್ಲಿರುವ ಹುಮಾಯೂನನ ಸಮಾಧಿಯೂ ಸಹ ಪ್ರಮುಖವಾದುದು. ಇದರ ವಿಶೇಷತೆ ಏನೆಂದರೆ ಗುಮ್ಮಟದ ಭಾರವನ್ನು ಕಡಿಮೆ ಗೊಳಿಸುವುದಕ್ಕಾಗಿ ನೀರಿನಲ್ಲಿ ತೇಲಬಹುದಾದ ಇಟ್ಟಿಗೆಗಳನ್ನು ವಿಶೇಷವಾಗಿ ತಯಾರಿಸಿ ಕಟ್ಟಲ್ಪಟ್ಟ ಗುಮ್ಮಟವು ಅಂದಿನ ವಾಸ್ತುಶಿಲ್ಪಿಗಳ ಪ್ರಬುದ್ಧತೆಗೆ ಹಿಡಿದ ಕನ್ನಡಿ. ಕೆಲವು ದಶಕಗಳ ಹಿಂದೆ ಸಿಡಿಲಿನ ಹೊಡೆತಕ್ಕೆ ಸಮಾಧಿಯ ಕೆಲ ಭಾಗ ಹಾನಿಯಾಗಿದ್ದರೂ ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಹುಮಾಯೂನನ ಸಮಾಧಿಯ ಹತ್ತಿರ ಇನ್ನೂ ಹಲವು ಸಮಾಧಿಗಳಿವೆ. ಸುಲ್ತಾನ ಹುಮಾಯೂನನ ಪತ್ನಿಯಾದ ಮಲಿಕ-ಎ-ಜಹಾನ. ಎರಡು ವರ್ಷ ರಾಜ್ಯವಾಳಿ ತನ್ನ 10ನೆಯ ವಯಸ್ಸಿನಲ್ಲಿಯೇ ಮೃತನಾದ ನಿಜಾಮ ಶಾಹನ ಸಮಾಧಿ ಮತ್ತು ಅವನ ಸಹೋದರನಾಗಿದ್ದ ಸುಲ್ತಾನ ಮಹಮ್ಮದ ಶಾಹನ ಸಮಾಧಿಯು ಅಪೂರ್ಣವಾಗಿದೆ. ಜೊತೆಗೆ 36 ವರ್ಷ ರಾಜ್ಯವಾಳಿದ ಮಹಮ್ಮದ ಶಾಹನ ಸಮಾಧಿಯೂ ಅಲ್ಲಿದೆ. ಇವೆಲ್ಲವೂ ಕಲ್ಲು, ಗಾರೆ ಮಾಧ್ಯಮಗಳಿಂದ ಮುಸ್ಲಿಂ ಶೈಲಿಯಲ್ಲಿ ನಿರ್ಮಾಣವಾದ ಸಮಾಧಿಗಳಾಗಿವೆ.

ಚೌಖಂಡಿ ಸಮಾಧಿಯು ಚಕೋನಾಕೃತಿಯಲ್ಲಿದೆ. ಅದನ್ನು ಹಜರತ್ ಖಲಿಲ್ಲುನ ನೆನಪಿನಲ್ಲಿ ನಿರ್ಮಿಸಲಾಗಿದೆ. ಅವನು ಸುಲ್ತಾನ ಅಹಮ್ಮದ ಶಾಹನ ಗುರುವಾಗಿದ್ದವನು. ಚೌಖಂಡಿಯೆಂಬ ಹೆಸರಿದ್ದರೂ ಅದು ಎರಡು ಅಂತಸ್ತಿನ ಕಟ್ಟಡ. ಗೋಡೆಯ ಮೇಲಿನ ಸುಂದರವಾದ ಚಿತ್ತಾರಗಳು ಹಾಗೂ ಸುಂದರವಾದ ಕೆತ್ತನೆಯ ಕೆಲಸವುಳ್ಳ ಗ್ರಾನೈಟ್ ಕಂಬಗಳು ಇದರ ವೈಭವವನ್ನು ಹೆಚ್ಚಿಸಿವೆ.

ಸೂಫಿ ದರ್ಗಾಗಳು: ಕಿರ್ಮಾನಿನ ಸೂಫಿ ಶಾಹ ನೇಮತುಲ್ಲಾ ವಲಿಯವರ ಪುತ್ರನಾದ ಶಾಹ ಖಲೀಲ್ಲಿಲ್ಲಾ ಭುತ್ ಶೀಕಾನ ಅವರು ಸುಲ್ತಾನ ಅಹಮ್ಮದ ಶಾಹ ಅವರ ಆಮಂತ್ರಣ ದನ್ವಯ ಬೀದರಿಗೆ ಬಂದರು. ಇವರ ದರ್ಗಾದ ಮೇಲ್ಭಾಗದ ಗುಂಬಜ ನೇರವಾಗಿ ಕಾಣಿಸುವುದಿಲ್ಲ. ಅದರ ಗುಂಬಕ ಕಟ್ಟಡದ ಅರ್ಧ ಭಾಗದಲ್ಲಿದೆ. ಖಲೀಲ್ಲಾ ಅವರ ಮರಣದ ನಂತರ ಅವರ ಪರಿವಾರ ಗುಲಬರ್ಗಾದ ಸೇಡಂ ತಾಲೂಕ ವಾಸಿಯಾದರು. ಕೆಲವು ಅನಮೋಲ ಪಾತ್ರೆಗಳು ಶಾಹ ವಲಿ ಉಲ್ಲಾರವರ ಹತ್ತಿರ ಇವೆ. ಅದರಲ್ಲಿ ಕಾಬಾ ಕೀ ಅಪರೂಪದ್ದು. ಇದು ಪಂಚಲೋಹ



ಕಾಬಾ ಕೀ (ಪಂಚಲೋಹ 400 ಗ್ರಾಂ)

ದಲ್ಲಿ ನಿರ್ಮಿಸಿದ್ದು 400 ಗ್ರಾಂ ಇದೆ. ಇದರ ಮೇಲೆ ಕುರಾನಿನ ಸಂದೇಶಗಳು ಆಯತಾಕಾರದ ಆವರಣದಲ್ಲಿ ರಚನೆಗೊಂಡಿವೆ. ಅದೇ ರೀತಿ ಇದೊಂದು ಸೂಫಿ ಹಜರತ್ ಖಾಜಾ ಅಬ್ದುಲ್ಲ ಫೈಜ ಸಾದತ್ ಜೈದುಸ್ಸೇನಿರವರ ದರ್ಗಾ ಕೂಡ ಜಹೀರಾಬಾದದಿಂದ ನಗರ ಪ್ರವೇಶಿಸುವಾಗ ಕಂಡು ಬರುವ ಅಪರೂಪದ ಗುಂಬಜ ಕೂಡ ಆಗಿದೆ. (ಆರ್‌ಪಿ)

ಇನ್‌ಸ್ಟಾಲೇಷನ್ ಕಲಾಕೃತಿಗಳು: ಕರ್ನಾಟಕದ ಸಮಕಾಲೀನ ಕಲಾಕ್ಷೇತ್ರದಲ್ಲಿ ಕಲಬುರ್ಗಿಯ ದೃಶ್ಯಕಲೆಗೆ ವಿಶಿಷ್ಟವಾದ ಸ್ಥಾನವಿದೆ. ಕಲಬುರ್ಗಿಯ ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ ಭಾರತದ ಕಲಾಪರಂಪರೆಯಲ್ಲಿ ತನ್ನ ಕಲಾಚಟುವಟಿಕೆಗಳಿಂದ ಚಿರಪರಿಚಿತವಾಗಿದೆ. ಈ ಸಂಸ್ಥೆ ತನ್ನ ವಾರ್ಷಿಕ ಕಲಾಪ್ರದರ್ಶನವನ್ನು 1976ರಿಂದ ನಿರಂತರವಾಗಿ ನಡೆಸಿಕೊಂಡು ಬಂದಿರುವುದು ವಿಶೇಷ. ಈ ಕಲಾಮಹೋತ್ಸಗಳಲ್ಲಿ ಚಿತ್ರ-ಶಿಲ್ಪ ಪ್ರಿಂಟ್‌ಗಳೊಂದಿಗೆ ಹೆಚ್ಚು ಹೆಚ್ಚು ಇನ್‌ಸ್ಟಾಲೇಷನ್ ಕಲಾಕೃತಿಗಳು ರೂಪು ಗೊಳ್ಳುತ್ತಿವೆ.

ಒಂದು ಕಲಾಕೃತಿ ಕಣ್ಣಿಗೆ ಗೋಚರಿಸಿ ಆ ಕ್ಷಣಕ್ಕೆ ಖುಷಿ ಕೊಡುವ ಸಂಗತಿಯಾದರೆ, ಮತ್ತೊಂದು ಇರುವುದನ್ನೇ ಅನಾವರಣಗೊಳಿಸಿ ಚಿಂತನೆಗೆ ಹಚ್ಚುವುದು ವಿಶೇಷ, ಹೀಗೆ ನೋಡುಗರನ್ನು ಒಂದಷ್ಟು ಹೊತ್ತು ಯೋಚಿಸುವಂತೆ, ಕೆಲ ಸಮಸ್ಯೆಗಳತ್ತ ಚಿಂತಿಸುವಂತೆ ಮಾಡುವ ಇನ್‌ಸ್ಟಾಲೇಷನ್ ಕಲಾಕೃತಿಗಳು ಇತ್ತೀಚಿನ ವರ್ಷಗಳ ಕಲಾಮಹೋತ್ಸಗಳಲ್ಲಿ ನಿರ್ಮಾಣಗೊಂಡು ತನ್ನ ಕಾಲಮಾನಕ್ಕೆ ಪ್ರತಿಯೊಂದು ಕಲಾ ಪ್ರಕಾರವು ತನ್ನ ಶೈಲಿ ಹಾಗೂ ಉದ್ದೇಶಗಳಲ್ಲಿ ಬದಲಾವಣೆ ಆಗುವುದು ಸಮಕಾಲೀನ ಕಲೆಯ ಗುಣಧರ್ಮ, ಎಂಬ ದೋರಣೆಗೆ ಸಾಕ್ಷಿಯಾಗಿವೆ. ಈ ಹಿನ್ನಲೆಯಲ್ಲಿ ಗುಲಬರ್ಗಾದ ಹಲವು ದೃಶ್ಯಕಲಾ ವಿದ್ಯಾರ್ಥಿಗಳು ಇನ್‌ಸ್ಟಾಲೇಷನ್ ಕಲಾಕೃತಿಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ.



ಇನ್‌ಸ್ಟಾಲೇಷನ್ ಕಲಾಕೃತಿ – ಪರಶುರಾಮ ಪಿ.

ಇನ್‌ಸ್ಟಾಲೇಷನ್ ಕಲಾಕೃತಿಗಳಲ್ಲಿ ಮೊಬೈಲ್, ಸಿಮ್ ಕಾರ್ಡ್, ಪ್ಲಾಸ್ಟಿಕ್ ಚೀಲ, ದಾರ, ಟೇಬಲ್ ಲ್ಯಾಂಪ್, ವೃತ್ತ ಪತ್ರಿಕೆ, ನಾಣ್ಯ ಮತ್ತು ನೋಟ್‌ಗಳು, ಮಕ್ಕಳ ಆಟಿಕೆಗಳು, ಗಾಜಿನ ಟ್ಯೂಬ್, ಹೂವುಗಳು, ಪೋಟೊಗ್ರಾಫಿ, ಪುಸ್ತಕಗಳು, ಕೌದಿ, ಛತ್ರಿ, ಮುಖವಾಡ, ಫೈಬರ್‌ಗ್ಲಾಸ್, ಪೇಪರ್ ಪಲ್ಪ್ ಹೀಗೆ ನಾವು ಊಹಿಸದ ಅದೆಷ್ಟೋ ಪದಾರ್ಥಗಳನ್ನು ಈ ಕಲಾ ವಿದ್ಯಾರ್ಥಿಗಳು ದುಡಿಸಿಕೊಂಡಿದ್ದಾರೆ.

ನೀರಿನ ರಕ್ಷಣೆ, ಪ್ಲಾಸ್ಟಿಕ್ ಸಂಸ್ಕೃತಿಯನ್ನು ವಿರೋಧಿಸುವ, ಬಾಲಕಾರ್ಮಿಕ ಸಮಸ್ಯೆ, ನಗರ ಪ್ರದೇಶಗಳಲ್ಲಿ ಪಕ್ಷಿಗಳು ಎದುರುಸುತ್ತಿರುವ ಸಮಸ್ಯೆ, ಭಾರತದ ಬದುಕನ್ನು ಹೀನಸ್ಥಿತಿಗೆ ತಂದ ಇಲ್ಲಿನ ಮೂಢನಂಬಿಕೆಗಳು, ಬದಲಾಗುತ್ತಿರುವ ಆಹಾರ ಸಂಸ್ಕೃತಿ, ಸ್ತ್ರೀಸಂವೇದನೆ ಹೀಗೆ ಹಲವಾರು ಗಂಭೀರ ಸಮಸ್ಯೆಗಳನ್ನು ಕುರಿತು ಇನ್‌ಸ್ಟಾಲೇಷನ್ ಕಲಾಕೃತಿಗಳು ವೈವಿಧ್ಯಮಯವಾಗಿ ಮೂಡಿ ಬಂದಿವೆ. ದೃಶ್ಯಕಲೆಯಲ್ಲಿ ಇಂತಹ ಸ್ವಾತಂತ್ರ್ಯ ಮತ್ತು ಅನೇಕ ಸಾಧ್ಯತೆಗಳನ್ನೊಳಗೊಂಡ ಮಾಧ್ಯಮ ವೆಂದು ಕಂಡುಕೊಂಡ ಹೈದ್ರಾಬಾದ ಪ್ರದೇಶದ ಯುವ ದೃಶ್ಯ ಕಲಾವಿದರು ಈ ಮಾಧ್ಯಮದಲ್ಲಿ ತಮ್ಮನ್ನು ಹೆಚ್ಚು-ಹೆಚ್ಚು ತೊಡಗಿಸಿಕೊಳ್ಳುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಇಂತಹ ಪ್ರತಿಷ್ಠಾಪನೆಗಳು ಜನಸಾಮಾನ್ಯರ ಜೀವನದ ಒಂದು ಭಾಗವಾಗಿದ್ದುವು. ಇಲ್ಲಿಯ ಪ್ರತಿಷ್ಠಾಪನೆಗಳು ಕೂಡಾ ತುಂಬಾ ಕಲಾತ್ಮಕವಾಗಿ ಮತ್ತು ಉದ್ದೇಶ ಪೂರ್ವಕವಾಗಿ ಪ್ರತಿಷ್ಠಾಪಿಸಲ್ಪಟ್ಟಿರುತ್ತವೆ. ಇಂತಹುಗಳಲ್ಲಿ ದೇವರ ಮೂರ್ತಿಶಿಲ್ಪಗಳು, ಹೊಲದಲ್ಲಿ ಒಟ್ಟುವ ಬಣವಿ, ತುಳಸಿ ಕಟ್ಟೆ, ಮನೆಯಲ್ಲಿರುವ ಅಡಕಲು ಗಡಿಗೆ ಇತ್ಯಾದಿಗಳು. ಆದರೆ ಆಗಿನ ಭಾರತದ ಪ್ರತಿಸ್ಠಾಪನೆಗಳನ್ನು ಕಲೆಯಾಗಿ ಸ್ವೀಕರಿಸಲಿಲ್ಲ. ಅದರಲ್ಲಿಯ ಕಲಾತ್ಮಕ ಗುಣಗಳನ್ನು ಗುರುತಿಸಿ ದಾಖಲಿಸಿದ ಯಾವ ದಾಖಲೆಗಳು ನೋಡಲು ಸಿಗುವುದು ಇಲ್ಲ. ಹೀಗಾಗಿ ಈ ಪ್ರತಿಷ್ಠಾಪನೆಗಳು ಜನ ಸಾಮಾನ್ಯರ ಪ್ರತಿಷ್ಠಾಪನೆಗಳಾಗಿ ಉಳಿದುಕೊಂಡವು. ಇವು ದೃಶ್ಯಕಲಾ ಕ್ಷೇತ್ರದಲ್ಲಿ ಕಲಾವಿದರ ಅಭಿವ್ಯಕ್ತಿಗಳಾಗಿ ಹೊರ ಹೊಮ್ಮಲು ಬಹಳ ಕಾಲ ಬೇಕಾಯಿತು.

ಹೈದ್ರಾಬಾದ ಕರ್ನಾಟಕ ಪ್ರದೇಶದ ದೃಶ್ಯ ಕಲಾವಿದರು ಅಭಿವ್ಯಕ್ತಿಸುವ ಈ ಬಗೆಯ ಹೆಚ್ಚಿನ ಇನ್‌ಸ್ಟಾಲೇಷನ್ ಕಲಾಕೃತಿಗಳಲ್ಲಿ ಜನಪದ ಅಥವಾ ಜನಪದ ವಸ್ತು-ವಿಷಯಗಳ ಅತಿಯಾದ ಪ್ರಭಾವವನ್ನು ಕಾಣಬಹುದು. ಇಲ್ಲಿ ಬರುವ ಬಹುತೇಕ ವಿದ್ಯಾರ್ಥಿಗಳು ಅಥವಾ ಯುವ ಕಲಾವಿದರು ಗ್ರಾಮೀಣ ಪ್ರದೇಶದವರಾಗಿದ್ದು, ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ಜನಪದ ಕಲಾಪ್ರಕಾರಗಳನ್ನು ನೋಡಿರುವುದರಿಂದ ಸಹಜವಾಗಿಯೇ ಜನಪದಶಿಲ್ಪ, ವಾಸ್ತುಶಿಲ್ಪ ಮತ್ತು ಜನಪದ ಪ್ರದರ್ಶನ ಕಲೆಗಳ ಪ್ರಭಾವವನ್ನು ಇವರ ಇನ್‌ಸ್ಟಾಲೇಷನ್ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಆಚರಣೆಗಳಲ್ಲಿ ಪ್ರತಿಷ್ಠಾಪನಾ ಕಲೆ (Installation art)ಯು ಹಾಸುಹೊಕ್ಕಾಗಿದೆ. ನೋಡುವ ಕಣ್ಣಿದ್ದರೆ ನಮ್ಮ ಜನಜೀವನದ ಪ್ರತಿಕ್ಷಣದಲ್ಲಿಯೂ ಕಲಾವಂತಿಕೆ ಅಡಿಗಿರುತ್ತದೆ. (ಪಿಪಿ)

ಈ



ಈರಣ್ಣ ಪಿ. ಕಂಬಾರ: ಪ್ರತಿಭಾವಂತ ಚಿತ್ರ ಶಿಲ್ಪ ಕಲಾವಿದ. ಸಮಕಾಲೀನ ಶಿಲ್ಪಕಲೆಯಲ್ಲಿ ತಮ್ಮ ಅಪೂರ್ವ ಸಾಂಪ್ರದಾಯಿಕ ಚಿತ್ರ ಶಿಲ್ಪಕಲೆಯಿಂದ ತೀವ್ರ ಗಮನ ಸೆಳೆದಿರುವ ಶಿಲ್ಪಿ ಈರಣ್ಣ ಪಿ. ಕಂಬಾರ. ಇವರು ಮೂಲತಃ ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಬಟಗೇರ ಗ್ರಾಮದವರು. ಶಿಲ್ಪಕಲೆ ಪರಂಪರಾನುಗತವಾಗಿ ಬಂದಿದುದರಿಂದ ಇವರಿಗೆ ಬಾಲ್ಯದಲ್ಲಿಯೇ ಕಲೆಯ ಅಭಿರುಚಿ ಬೆಳೆಯಿತು.

ಕಲಬುರ್ಗಿಯ ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟ್ಯೂಟ್‌ನಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ಡಿಪ್ಲೋಮಾ ಪಡೆದಿದ್ದಾರೆ. ಇವರು ಅನೇಕ ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕಲಬುರ್ಗಿಯ ರೇಖಾಚಿತ್ರ ಹಾಗೂ ವರ್ಣಚಿತ್ರಗಳ ಪ್ರದರ್ಶನ, ಗುಲಬರ್ಗಾದ 58ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರದರ್ಶನ, ಬೆಂಗಳೂರಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರದರ್ಶನ, ಗುಲಬರ್ಗಾದ ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟ್ಯೂಟ್‌ನ ಪ್ರದರ್ಶನ, ದೆಹಲಿಯ ಅವಂತಿಕಾ 7ನೇ ಭಾರತೀಯ ಚಿತ್ರಕಲಾ ಪ್ರದರ್ಶನ, ಹೀಗೆ ಹಲವಾರು ಪ್ರದರ್ಶನಗಳಲ್ಲಿ ಇವರು ಭಾಗವಹಿಸಿ ತಮ್ಮ ಕಲಾಕೃತಿಗಳಿಂದ ವಿಮರ್ಶಕರ, ಕಲಾಸಕ್ತರ ಗಮನ ಸೆಳೆದಿದ್ದಾರೆ.

ಇವರು ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡಿದ್ದಾರೆ. ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಬೆಂಗಳೂರಿನ ಚಿತ್ರಕಲಾ ಪರಿಷತ್, ಬೆಂಗಳೂರಿನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಧಾರವಾಡದ ಸಾಂಪ್ರದಾಯಿಕ ಶಿಲ್ಪಕಲಾ ಶಿಬಿರ, ಸುರಪುರದ ಸಂಪ್ರದಾಯಿಕ ಶಿಲ್ಪಕಲಾ ಶಿಬಿರ, ಕಲಬುರ್ಗಿ ಕಂಪುವಿನ ಶಿಲ್ಪಕಲಾ ಶಿಬಿರ, ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನದ ಶಿಬಿರ ಹೀಗೆ ಹಲವಾರು ಶಿಬಿರಗಳಲ್ಲಿ ಇವರು ಭಾಗವಹಿಸಿ ತಮ್ಮ ಕ್ರಿಯಾಶೀಲತೆಯನ್ನು ಪ್ರದರ್ಶಿಸಿದ್ದಾರೆ.

ಇವರು ಶಿಲ್ಪಕಲೆಯನ್ನು ತಮ್ಮ ವೃತ್ತಿ ಪ್ರವೃತ್ತಿಯನ್ನಾಗಿಸಿಕೊಂಡಿರುವರು. ಮನೆಗಳ ದ್ವಾರ ಬಾಗಿಲು, ಹೊಸ್ತಿಲು,



ಕಟ್ಟಿಗೆ ಮಾಧ್ಯಮದ ಕೃತಿ

ಪಟ್ಟುಗಳಲ್ಲಿ ಸುಂದರವಾದ ಕುಸುರಿ ಕಲೆಯನ್ನಲ್ಲದೇ, ಜಾನಪದ, ಪೌರಾಣಿಕ ವಿಷಯಗಳ ಸುಂದರ, ಆಕರ್ಷಕ ಕೆತ್ತನೆಯಿಂದ ಬೇಡಿಕೆಯ ಕಾಷ್ಠ ಶಿಲ್ಪಿಗಳಾಗಿದ್ದಾರೆ. ಈ ಪ್ರಕಾರಗಳಲ್ಲಿ 'ಕಳಶ ಹೊತ್ತ ಮದನಿಕೆ', 'ಶಕುಂತಲಾ ಪತ್ರಲೇಖನ', 'ಶ್ರೀ ಗಣೇಶ', 'ನಾಟ್ಯ ಸರಸ್ವತಿ', ಧನಲಕ್ಷ್ಮಿ ಮುಂತಾದ ಕೃತಿಗಳು ಜನಪ್ರಿಯವಾಗಿವೆ. ಇವರು ಕಾಷ್ಠ ಮಾಧ್ಯಮವಲ್ಲದೇ ಸಿಮೆಂಟ, ಕಲ್ಲು ಮುಂತಾದ ಮಾಧ್ಯಮಗಳಲ್ಲೂ ಶಿಲ್ಪಕೃತಿಗಳನ್ನು ಅರಳಿಸಿದ್ದಾರೆ.

ಇವರು ಮೂಲತಃ ಚಿತ್ರಕಲಾವಿದ. ತಮ್ಮ ಪೇಂಟಿಂಗ್‌ಗಳಿಂದಲೂ ಖ್ಯಾತರಾಗಿದ್ದಾರೆ. ಭಾರತೀಯ ನ್ಯಾಯ ಪದ್ಧತಿಯ ಆಧಾರ ಸ್ತಂಭ 'ಮಿತಾಕ್ಷರ' ಗ್ರಂಥ ಕರ್ತೃ ವಿಜ್ಞಾನೇಶ್ವರನ ಮೂಲ ಭಾವಚಿತ್ರ ರಚಿಸಿರುವ ಹೆಗ್ಗಳಿಕೆ ಇವರದ್ದಾಗಿದೆ. ಮರ್ತೂರಿನ ವಿಜ್ಞಾನೇಶ್ವರ ಸ್ಮಾರಕ ಭವನಕ್ಕಾಗಿ ಇವರು ಈ ಕೃತಿ ರಚಿಸಿದ್ದಾರೆ. ಮೈಸೂರು ದಸರಾ ಪ್ರದರ್ಶನಗಳಲ್ಲಿ ತಮ್ಮ ಕೃತಿಗಳಿಗೆ ನಾಲ್ಕು ವರ್ಷ ಸತತವಾಗಿ ಪ್ರಥಮ ಬಹುಮಾನ ಪಡೆದಿರುವರು.

ಇವರು 1985ರಿಂದ ಮೈಸೂರು ದಸರಾ ಉತ್ಸವಕ್ಕಾಗಿ ಕಲಬುರ್ಗಿಯನ್ನು ಪ್ರತಿನಿಧಿಸುವ ಸ್ತಬ್ಧಚಿತ್ರ ಪ್ರದರ್ಶನಗಳಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲತೆಯನ್ನು ಮೆರೆಯುತ್ತಿದ್ದಾರೆ. ಜಗದ್ವಿಖ್ಯಾತ ಚಿತ್ರಕಲಾವಿದ ಗುಲಬರ್ಗಾದ ಡಾ. ಎಸ್.ಎಂ. ಪಂಡಿತ ಹಾಗೂ ಧನಂಜಯ ಶಿಲ್ಪಿ ಅವರಿಂದ ತುಂಬಾ ಪ್ರಭಾವಿತರಾಗಿರುವ ಇವರು ತಮಗೆ ಅವರು ಸ್ಫೂರ್ತಿಯನ್ನೂ, ಪ್ರೇರಣೆಯನ್ನೂ ನೀಡಿದ್ದಾರೆ ಎಂದು ಸ್ಮರಿಸುತ್ತಾರೆ.

ಇವರು ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವರು. ಕರ್ನಾಟಕ ರಾಜ್ಯ ವಿಶ್ವಕರ್ಮ ಸುವರ್ಣ ಮಹೋತ್ಸವದ ಮಯ ಬ್ರಹ್ಮ ಪ್ರಶಸ್ತಿ, ಐ.ಎಫ್.ಐ ವಾರ್ಷಿಕ ಅತ್ಯುತ್ತಮ ಪ್ರಶಸ್ತಿ, ಬೆಂಗಳೂರಿನ ಕಲಾರತ್ನ ಪ್ರಶಸ್ತಿ, ಕಲಬುರ್ಗಿ ಕಂಪುವಿನ ವಿಕಾಸ ಪ್ರೇರಕ ಪ್ರಶಸ್ತಿ ಮುಂತಾದವುಗಳು ಇವರು ಪಡೆದಿರುವ ಪ್ರಮುಖ ಪ್ರಶಸ್ತಿಗಳು. ಸಾಂಪ್ರದಾಯಿಕ, ಪರಂಪರಾನುಗತ, ದೇಸೀಯ, ಜಾನಪದೀಯ ಶೈಲಿಗಳಲ್ಲಿ ಇವರು ತಮ್ಮ ಛಾಪನ್ನು ಮೂಡಿಸಿರುವುದಾದರೂ ಹೊಸ ಸಂವೇದನೆಗಳನ್ನು, ಹುಡುಕಾಟವನ್ನು, ಕ್ರಿಯಾಶೀಲತೆಯನ್ನು ನಿರಂತರವಾಗಿ ತಮ್ಮ ಕೃತಿಗಳಲ್ಲಿ ಹಿಡಿದಿಡುವಲ್ಲಿ ನಿರತರಾಗಿರುವುದು ಪ್ರಶಂಸನೀಯವಾಗಿದೆ. (ಎಂಎಸ್)

ಈಶ್ವರ ಹತ್ತಿ: ಇವರ ರಂಗಾಸಕ್ತಿ, ರಚನಾತ್ಮಕ ಮನಸ್ಸು, ವಿನಯ, ಸೌಜನ್ಯತೆ, ಜೀವನದ ಶಿಸ್ತು, ಸಂಸ್ಕಾರ ಹೊಂದಿದ ಬದುಕು. ಗುಲಬರ್ಗಾದಲ್ಲಿ ಗದುಗಿನ ವಿರೇಶ್ವರ ಹಿರೇಮಠರ 'ವಿರೇಶ್ವರ ನಾಟ್ಯ ಸಂಘ' ಕ್ಯಾಂಪ ಮಾಡಿದಾಗ ಸಾಳುಂಕೆಯವರ 'ಹಸಿರುಕ್ರಾಂತಿ' ನಾಟಕದಲ್ಲಿ ಅಭಿನಯಿಸಿದ್ದು; 1975–76ರ ಕಾಲವಿರಬೇಕು. ಅಂದಿನಿಂದ ಇಂದಿನವರೆಗೂ ರಂಗಾಸಕ್ತಿ ಕಡಿಮೆಯಾಗಿಲ್ಲ ಅಭಿನಯದಿಂದ, ನಿರ್ದೇಶನದಿಂದ, ನಾಟಕಗಳ ರಚನೆಯಿಂದ ರಂಗಸೇವೆ ಸಾಗಿ ಬಂದಿದೆ. ಇಂದು ಕೊಪ್ಪಳದಲ್ಲಿ 'ವಿರಂಚಿ' ಸಂಘವನ್ನು ಹುಟ್ಟುಹಾಕಿ ಆಗಾಗ ಆ ಸಂಘದಿಂದ ನಾಟಕಗಳನ್ನು ಪ್ರಯೋಗಿಸುತ್ತಲೇ ಇದ್ದಾರೆ. ಕಳೆದ ಒಂದೆರಡು ವರ್ಷಗಳ ಹಿಂದೆ ಕೊಪ್ಪಳದಲ್ಲಿ ರಂಗ ಸ್ನೇಹಿತರನ್ನು ಕಟ್ಟಿಕೊಂಡು 'ಸಾಕು ಮಗನ ಸವಾಲು' 'ದುಡಿಕಿನ ಮಾವ ಸಿಡುಕಿನ ಸೊಸೆ' ವೃತ್ತಿ ಕಂಪನಿಯ ಶೈಲಿಯಲ್ಲಿಯೇ ನಾಟಕವನ್ನು ಪ್ರಯೋಗಿಸಿದ್ದುಂಟು. ಆಗ ಅವು ಪ್ರೇಕ್ಷಕರಲ್ಲಿ ಬಹಳಷ್ಟು ಗಮನ ಸೆಳೆದ ನಾಟಕಗಳಾಗಿದ್ದವು. ಈ ಎರಡೂ ನಾಟಕಗಳ ರಚನೆ, ನಿರ್ದೇಶನ ಇವರದೇ ಆಗಿತ್ತು.

ಕೊಪ್ಪಳದ ಜಿಲ್ಲಾ ಪಂಚಾಯತಿಯ ಕಾರ್ಯಾಲಯದಲ್ಲಿ ಸೇವೆಸಲ್ಲಿಸುತ್ತ ದುಡಿಮೆಗೆ ಚ್ಯುತಿ ತಂದುಕೊಳ್ಳದೆ ರಂಗ ಹವ್ಯಾಸದ ಚಟುವಟಿಕೆಗಳಲ್ಲಿ ಭಾಗಿಯಾಗುತ್ತ ಕೊಪ್ಪಳ ರಂಗಭೂಮಿಗೆ ಬೆಳಕಾಗಿ ರಂಗಾಸಕ್ತರ ಪ್ರಿಯ ಹಾಗೂ ಗೌರವದ ವ್ಯಕ್ತಿಯಾಗಿದ್ದಾರೆ. ಅವರ ಪ್ರತಿಭೆ, ಶ್ರಮ, ರಂಗಾಸಕ್ತಿ, ರಂಗ ಕಾಳಜಿ ಪ್ರಸಂಶನೀಯ.

ಬೀದರಿಂದ ಭೀಮರಾಯಗುಡಿಗೆ ವರ್ಗವಾಗಿ ಬಂದ ಹತ್ತಿಯವರು ಅಲ್ಲಿಯೂ ಸುಮ್ಮನೆ ಕೂಡಲಿಲ್ಲ. 'ಕಲಾಬಳಗ' ಎನ್ನುವ ತಂಡ ಕಟ್ಟಿ ಅದರ ಮುಖಾಂತರ ರಂಗಚಟುವಟಿಕೆ, ನಾಟಕ ಪ್ರದರ್ಶನ ಕೈಕೊಂಡರು. 'ದಾರಿ ಯಾವುದಯ್ಯಾ ಮುಂದೆ' 'ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ' ಎರಡು ಪ್ರಮುಖ ನಾಟಕಗಳನ್ನು ನಿರ್ದೇಶಿಸಿ ಗಮನಾರ್ಹ ನಿರ್ದೇಶಕರೆನಿಸಿಕೊಂಡರು. ಅವರ ರಚನೆಯ 'ಅಪೂರ್ಣ' ನಾಟಕ ಅಲ್ಲಿಯೂ ಜನಮೆಚ್ಚಿಗೆ ಗಳಿಸಿತು. ನಿನಾಸಂದಂಥ ತಂಡವನ್ನು

ಭೀಮರಾಯನಗುಡಿಗೆ ಮೇಲಿಂದ ಮೇಲೆ ಕರೆ ತಂದು ಅನೇಕ ಅವರ ಪ್ರಮುಖ ನಾಟಕಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಕೊಟ್ಟರು. ಹಸಿರುಕ್ರಾಂತಿ, ಅತೃಪ್ತ ಆತ್ಮಗಳು, ಅಪೂರ್ಣ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ ಈ ಪ್ರಮುಖ ನಾಟಕಗಳಲ್ಲೆಲ್ಲ ನಾಯಕನ ಪಾತ್ರದಲ್ಲಿಯೇ ಕಾಣಿಸಿ ಕೊಂಡಿದ್ದಾರೆ.

ಇವರ ಮೂರುದಶಕದ ರಂಗಸೇವೆ ಪ್ರಶಂಸನೀಯ. ಒಂದು ಇಲಾಖೆಯಲ್ಲಿ ಸರಕಾರಿ ನೌಕರದಾರರಾಗಿದ್ದೂ ರಂಗಭೂಮಿಗೆ ತಮ್ಮದೇ ಆದ ಕಾಣಿಕೆ ಸಲ್ಲಿಸಿದ್ದಾರೆ. ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ, ಸಂಘಟಕರಾಗಿ ರಂಗಭೂಮಿಯ ಭವ್ಯತೆಯನ್ನು, ಸಾಂಸ್ಕೃತಿಕ ಹಿರಿಮೆಯನ್ನು ಮೆರೆದ ಈಶ್ವರ ಹತ್ತಿ ಅಭಿನಂದನಾರ್ಹರು. 'ಓರ್ವ ಅಪ್ಪಟ ಕಲಾವಿದರಾಗಿ, ನಟರಾಗಿ, ನಿರ್ದೇಶಕರಾಗಿ ಉತ್ತಮ ವಾಗ್ಮಿಗಳಾಗಿ ರಂಗಭೂಮಿಯ ತುಡಿತವನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕೊಪ್ಪಳ ಜಿಲ್ಲೆ ಕಂಡ ಅಪರೂಪದ ವ್ಯಕ್ತಿ'.

ಇಂಥ ಒಬ್ಬ ಕ್ರಿಯಾಶೀಲ, ನಾಟಕಕಾರ, ಸಾಹಿತಿ ನಾಡು ನುಡಿಯ ಅಭಿಮಾನಿ, ಜನ್ಮ ಪಡೆದುದು ಕೊಪ್ಪಳ ಜಿಲ್ಲೆಯ ಯಲಬರ್ಗಾ ತಾಲ್ಲೂಕಿನ ಗುನ್ನಾಳ ಗ್ರಾಮದ ರೈತ ಮನೆತನದ ಹನುಮಪ್ಪ ಹತ್ತಿ ಹಾಗೂ ಕಳಕಮ್ಮ ದಂಪತಿಗಳ ಹಿರಿಯ ಮಗನಾಗಿ 1955ರಲ್ಲಿ. (ಜಿಎಚ್)

ಈಶ್ವರಪ್ಪ ಫರಹತಾಬಾದ: ನಟ. ಕಲಾವಿದ. ತಮ್ಮದೇ ಆದ ಕಲ್ಪನೆಯಲ್ಲಿ ಥರ್ಮಾಕೋಲ್‌ದಿಂದ ವಿಧಾನಸೌಧವನ್ನೇ ನಿರ್ಮಿಸಿ, ಎಲ್ಲರಿಗೂ ಅಚ್ಚರಿಪಡಿಸಿದ್ದಾರೆ. ರಾಜ್ಯೋತ್ಸವದ ಅಂಗವಾಗಿ ಕಲಬುರ್ಗಿ ಜಿಲ್ಲಾ ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಇವುಗಳ ಆಶ್ರಯದಲ್ಲಿ ನಾಡಹಬ್ಬ 2001 ಸಂದರ್ಭದಲ್ಲಿ 4 ದಿವಸಗಳ ವರೆಗೆ ಈ ಥರ್ಮಾಕೋಲ್ ಪ್ರದರ್ಶನಗೊಂಡಿತು.

ಮೂಲತಃ ಕಲಬುರ್ಗಿ ತಾಲ್ಲೂಕಿನ ಫರಹತಾಬಾದ ಗ್ರಾಮದ ನಿವಾಸಿ 33 ವರ್ಷಗಳ ಕಾಲ ಕಲಬುರ್ಗಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆ ಕಾರ್ಯದರ್ಶಿಗಳಾಗಿ ಸೇವೆಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

ಕವಿ–ಕಲಾವಿದರಾಗಿರುವ ಇವರಿಗೆ ಸರ್ಕಾರಿ ಸೇವೆಯಲ್ಲಿದ್ದಾಗಲೂ ಕಲೆಯ ಮೇಲೆ ಅಪಾರ ಆಸಕ್ತಿ. ಹವ್ಯಾಸಿ ನಾಟಕಗಳಲ್ಲೂ ಅಭಿನಯಸಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ. ಅಣ್ಣ ತಂಗಿ, ಆದರ್ಶ ಪ್ರೇಮ, ರಕ್ತದೀಪ, ವರನೋಡಿ ಹೆಣ್ಣುಕೊಡು, ಬೆಳದಿಂಗಳು ಎಂಬಿತ್ಯಾದಿ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿ ಭೇಷ್ ಎನಿಸಿಕೊಂಡಿದ್ದಾರೆ. ಮೂರು ಮೆಟ್ಟಲಿನ ಕಥೆ, ಕುದುರೆಯ ಮೊಟ್ಟೆ, (ಬೇಲೂರು ಕೃಷ್ಣಮೂರ್ತಿ) ತಾಯಿ (ಎಸ್.ಮಾಲತಿ ನಿರ್ದೇಶಿತ), ಹವ್ಯಾಸಿ ನಾಟಕಗಳಲ್ಲೂ ಅಭಿನಯಿಸಿದ್ದಾರೆ. ಬೆಳ್ಚಿ ನಾಟಕ, ಸಮುದಾಯ ತಂಡದಿಂದ ಬೀದಿನಾಟಕಗಳಲ್ಲೂ ಇವರು ಅಭಿನಯಿಸಿ ತಮ್ಮ ಸಾಮಾಜಿಕ ಕಳಕಳಿಯನ್ನು ತೋರಿಸಿದ್ದಾರೆ.

ಗುಡಿಸಲಿನ ಗುಡುದಾಳಿ ಶಟವಿ, ಯಥಾ ಪ್ರೇಕ್ಷಕ ತಥಾ ನಾಟಕ, "ಋಣಭಾರ" ಮುಂತಾದ ದೂರದರ್ಶನ ಕಿರುಚಿತ್ರದಲ್ಲಿ ನಟಿಸಿದ್ದಾರೆ. ಸಾಕ್ಷ್ಯಚಿತ್ರಗಳು, ಸಹರಾ–ಉರ್ದು ನಾಟಕ, ಸಾರಾಂಶ ಕುಟುಂಬ ಕಲ್ಯಾಣದ ಬಗ್ಗೆ ಸರ್ಕಾರಿ ಕಾರ್ಯಕ್ರಮಗಳು. ಮಹಾದಾಸೋಹಿ ಶರಣಬಸವ, ಏಳುಕೋಟಿ ಮಾರ್ತಂಡ ಭೈರವ, ಮಾರ್ಕೇಟ ರೌಡಿ ನವಾಜ, ಕಡಕೋಳ ಮಡಿವಾಳ, ಪ್ರೌಢ ದೇವರಾಯನ ಯುವ ವೈಭವ, ಬಾಲಿ, ಕಪುನರ್ ಮಿಲನ, ಮಹ್ಮದ್ ಐವಾನ್ ಸುಮಾರು 30ಕ್ಕೂ ಹೆಚ್ಚು ರೇಡಿಯೋ ನಾಟಕಗಳಲ್ಲೂ ಅಭಿನಯಿಸಿದ್ದಾರೆ. 'ಗುಡಿಸಲಿನ ಗುಡುದಾಳಿ' ಜಿಲ್ಲಾ ಮಟ್ಟದಲ್ಲಿ ಪ್ರಥಮ ಪ್ರಶಸ್ತಿ ಹಾಗೂ ಉತ್ತಮ ನಟ ಎನಿಸಿಕೊಂಡು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದಾರೆ. (ಎಎಂ)



ಈಶ್ವರಪ್ಪ ಬಡಿಗೇರ: ಇವರು ಶಿಲ್ಪಕಲಾವಿದರು. ಭವ್ಯ ಇತಿಹಾಸ ಹೊಂದಿರುವ ರಥಗಳ ನಿರ್ಮಾಣ ಈಗ ಸಾಕಷ್ಟು ಜನಪ್ರಿಯವಾಗಿಲ್ಲ ಆದರೂ ನಮ್ಮ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿ, ರಥ ನಿರ್ಮಾಣ ಮಾಡುವುದರಲ್ಲೇ ತಮ್ಮನ್ನು ಅರ್ಪಿಸಿಕೊಂಡವರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂರು ಗ್ರಾಮದ ಈಶ್ವರಪ್ಪ ಬಡಿಗೇರ ಅವರು ಒಬ್ಬರು. ಇವರು ಎಪ್ಪತ್ತೈದು ವರ್ಷಗಳ ಹಿಂದೆ ತಂದೆ ಮಾನಪ್ಪ ತಾಯಿ ಅಯ್ಯಮ್ಮನವರ ಪುತ್ರರಾಗಿ ಜನಿಸಿದರು.

ಕಲಾವಿದರ ಮನೆತನದ ಈ ಕುಟುಂಬದಲ್ಲಿ ತಾತ ವೀರಪ್ಪನವರು ರಥ ನಿರ್ಮಿಸುವುದರಲ್ಲಿ ಪರಿಣಿತಿ ಪಡೆದಿದ್ದರು. ಇವರ ಬಳಿ ಈಶ್ವರನವರು ಪರಮ ಶಿಷ್ಯರಾಗಿ ರಥ ನಿರ್ಮಿಸುವುದನ್ನು ಕಲಿತರು. ಇವರು ಸ್ವತಂತ್ರವಾಗಿ ರಥಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದು 1948 ರಿಂದ ಇವರು ತಯಾರಿಸಿದ ಪ್ರಥಮ ರಥ ರಾಯಚೂರು ಜಿಲ್ಲೆಯ ರಂಗನಾಥಸ್ವಾಮಿಯ ರಥ. ನಂತರ 1960ರಲ್ಲಿ ಮಾನ್ವಿ ತಾಲ್ಲೂಕು ಅಮೀನಗಡದ ಹುಚ್ಚಮ್ಮನ ರಥ, 1963ರಲ್ಲಿ ಆಂಧ್ರಪ್ರದೇಶದ ಆದವಾನಿ ತಾಲ್ಲೂಕು ಬಾವೂರಿನ ಶ್ರೀ ಹುಚ್ಚ ಬುಡ್ಡಪ್ಪನ ರಥ, 1977 ರಲ್ಲಿ ಮಾನ್ವಿಯ ನಾರಾಯಣ ತೀರ್ಥರಥ, 1979ರಲ್ಲಿ ಬಳ್ಳಾರಿಯ ರಾಘವೇಂದ್ರ ಸ್ವಾಮಿಗಳ ರಥ ಮುಂತಾದವು ಇವರ ಪ್ರತಿಭೆ, ಕುಶಲಕಲಾ ನೈಪುಣ್ಯತೆಯನ್ನು ಪ್ರತಿಬಿಂಬಿಸುತ್ತದೆ.


ಇವರು ಅನೇಕ ಹಳೆಯ ರಥಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. ಅವುಗಳಲ್ಲಿ ಬಿಜಾಪುರ ತಾಲ್ಲೂಕಿನ ಗಲಗರಿಯ ಲಕ್ಷ್ಮೀನರಸಿಂಹಸ್ವಾಮಿ ರಥ, ಕಲಬುರ್ಗಿ ಜಿಲ್ಲೆಯ ಸನ್ನತಿಯ ಶ್ರೀ ಚಂದ್ರಲಾ ಪರಮೇಶ್ವರಿ ರಥ, ರಾಯಚೂರಿನ ಲಿಂಗಸೂರಿನ ಶ್ರೀ ಕುಪ್ಪೆ ಭೀಮಸ್ವಾಮಿಯ ರಥಗಳು ಮುಖ್ಯವಾದವು. ಕೇವಲ ರಥಶಿಲ್ಪ ನಿರ್ಮಾಣದಲ್ಲೇ ತೊಡಗದೆ ಮರದ ವಿಗ್ರಹಗಳನ್ನು ಕೂಡ, ದೇವಾಲಯಗಳಿಗೆ ರಚಿಸಿಕೊಟ್ಟಿದ್ದಾರೆ. ಅವುಗಳಲ್ಲಿ ರಾಮ, ಲಕ್ಷ್ಮಣ, ಸೀತೆ, ಲಕ್ಷ್ಮೀ, ಸರಸ್ವತಿ, ಚಂದ್ರಲಾ ಪರಮೇಶ್ವರಿ ಮುಂತಾದ ವಿಗ್ರಹಗಳನ್ನು ರಚಿಸಿದ್ದಾರೆ.

ಇವರು ದೇವರ ಪಲ್ಲಕ್ಕಿಗಳನ್ನು ನಿರ್ಮಿಸುವದರಲ್ಲೂ ಸಿದ್ಧಹಸ್ತರಾಗಿದ್ದು, ಇವರು ತಯಾರಿಸಿದ ಪಲ್ಲಕ್ಕಿಗಳು ಬಾಗಲಕೋಟೆ, ಲಿಂಗಸೂಗೂರು ಮತ್ತು ಬಳ್ಳಾರಿಯ ಶ್ರೀ ರಾಘವೇಂದ್ರ ಸ್ವಾಮಿಯ ದೇವಾಲಯಗಳಲ್ಲಿವೆ. ರಥಗಳ ನಿರ್ಮಾಣದಲ್ಲಿ ತೊಡಗಿ, ಈ ರಥವನ್ನು ರಥೋತ್ಸವದಲ್ಲಿ ಬಳಸುವುದರಿಂದ ಎಲ್ಲ ಧರ್ಮದವರನ್ನು ಸಮನಾಗಿ, ಜಾತಿ ಜನಾಂಗದವರನ್ನೂ ಆಕರ್ಷಿಸಿ ಭೇದ ಭಾವವನ್ನು ದೂರಮಾಡಿ ಸರ್ವರಲ್ಲಿಯೂ ಐಕ್ಯತೆಯ ತತ್ವವನ್ನು ಭಿತ್ತರಿಸುವ ರಥಗಳನ್ನು ರಚಿಸುತ್ತಿರುವ ಈಶ್ವರಪ್ಪ ಬಡಿಗೇರರ ಸಾಧನೆ ಮೆಚ್ಚುವಂತಹದು. ರಥಗಳ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರಿಗೆ 1999ನೇ ಸಾಲಿನ ಕರ್ನಾಟಕ ಸರ್ಕಾರವು ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ನೀಡಿ ಗೌರವಿಸಿದೆ. (ಪಿಪಿ)

ಉ

ಉದ್ಧರಣಿ ಚಿತ್ರಕಲೆ: ವೀರಶೈವ ತತ್ವಗಳ ರಹಸ್ಯವನ್ನು ತಿಳಿಸುವ ಒಂದು ಸಾಧನ. ಸಚಿತ್ರ ಹಸ್ತಪ್ರತಿಗಳಲ್ಲಿ ಉದ್ಧರಣಿ ಪಟಲಗಳಿಗೆ ಅಗ್ರಸ್ಥಾನ ಇದೆ. ವೀರಶೈವ ತತ್ವಗಳಾದ ಅಷ್ಟಾವರಣ, ಭಕ್ತಿ, ಜಂಗಮ, ಶೂನ್ಯಲಿಂಗ, ಮಹಾಲಿಂಗ, ಭಾವಲಿಂಗ, ನವಚಕ್ರ, ಪಂಚೀಕರಣ, ಷಡಕ್ಷರಿ, ಬಸವಾಕ್ಷರ, ಪ್ರಣವ, ಕುಂಡಲಿನಿ ಮೊದಲಾದವುಗಳ ಸ್ವರೂಪವನ್ನು ಸಾಂಕೇತಿಕವಾಗಿ ತಿಳಿಸುವುದೇ ಇವುಗಳ ಮುಖ್ಯ ಉದ್ದೇಶ. ಈ ಉದ್ದೇಶಕ್ಕನು ಗುಣವಾಗಿ ಆಯಾ ಉದ್ಧರಣೆಗಳನ್ನು ಚಿತ್ರಗಳ ಮೂಲಕ ಬಿಡಿಸಲಾಗಿದೆ.

ಚಿತ್ರ ಪ್ರಧಾನವಾದ ಉದ್ಧರಣಿಗಳು, ವೀರಶೈವ ಶಾಸ್ತ್ರ ಸಾಹಿತ್ಯ ಹಾಗೂ ಚಿತ್ರ ಪರಂಪರೆಗೆ ವಿಶೇಷ ಕೊಡುಗೆ ಆಗಿರುವುದನ್ನು ಗಮನಿಸಹುದಾಗಿದೆ. ಪರಿಪೂರ್ಣವಾಗಿ ಚಿತ್ರಗಳಿಂದೊಡಗೂಡಿದ ಉದ್ಧರಣಿಗಳು ರಚನೆಗೊಂಡಿವೆ. ಈ ಸಾಧನಗಳು–



ಉದ್ಧರಣಿ ಚಿತ್ರಕಲೆ

ಅನಾದಿ ಭಕ್ತೋದ್ಧರಣಿ, ಅಷ್ಟಾವರಣೋದ್ಧರಣಿ, ಅನಾದಿ ಜಂಗಮೋದ್ಧರಣಿ, ಮಕುಟೋದ್ಧರಣಿ, ಶೂನ್ಯಲಿಂಗೋದ್ಧರಣಿ, ಚಿದಂಬರೋದ್ಧರಣಿ, ಷಡ್ಬ್ರಂಹ್ಮೋದ್ಧರಣಿ, ಪಂಚ ಮೂರ್ತಿ ಲಿಂಗೋದ್ಧರಣಿ, ಶಾಂಭವೀಚಕ್ರೋದ್ಧರಣಿ ಮಹಾ ಲಿಂಗೋದ್ಧರಣಿ, ವೃಷಭೋದ್ಧರಣಿ, ನವಚಕ್ರೋದ್ಧರಣಿ, ತತ್ವಪಂಚೀಕರಣೋದ್ಧರಣಿ, ಮಂತ್ರಪಂಚೀಕರಣೋದ್ಧರಣಿ, ಲಿಂಗಪಂಚೀಕರಣೋದ್ಧರಣಿ, ಷಡಕ್ಷರೋದ್ಧರಣಿ, ಬಸವಾಕ್ಷರೋದ್ಧರಣಿ, ನೂರೆಂಟು ಪ್ರಣವೋದ್ಧರಣಿ, ಅಧೋ ಕುಂಡಲಿ ಉದ್ಧರಣಿ, ಉರ್ಧ್ವಕುಂಡಲಿ ಉದ್ಧರಣಿ, ಲಿಂಗ ಷಡಕ್ಷರೋದ್ಧರಣಿ, ಅಂಗ ಷಡಕ್ಷರೋದ್ಧರಣಿ, ಜ್ಞಾನ ಚಕ್ರೋದ್ಧರಣಿ, ಗೋಮುಖೋದ್ಧರಣಿ, ಪ್ರಣವೋದ್ಧರಣಿ, ನೂರೊಂದು ತೆರೆದ ಅರ್ಪಣೋದ್ಧರಣಿ, ಅರವತ್ತಾರು ತೆರೆದ ಕಾರಣಾರ್ಪಣೋದ್ಧರಣಿ, ನಾಲ್ವತ್ತೆಂಟು ತೆರೆದ ಅರ್ಪಣೋ ದ್ಧರಣಿ, ಮೂವತ್ತಾರು ತೆರೆದ ಮಿಶ್ರಾರ್ಪಣೋದ್ಧರಣಿ, ಕಾರ್ಯಾರ್ಪಣೋದ್ಧರಣಿ, ಲಯ ಯೋಗ ಸಮಾಧಿ ಉದ್ಧರಣಿ ಗಣೇಶ್ವರನೋದ್ಧರಣಿ, ರಥೋದ್ಧರಣಿ ಎಂಬಿತ್ಯಾದಿಯಾಗಿವೆ.

ಉದ್ಧರಣ ಎಂಬುದು ಉತ್+ಹರಣ ಎಂಬ ಎರಡು ಪದಗಳಿಂದ ಕೂಡಿದೆ. "ಉತ್" ಎಂದರೆ ಮೇಲೆ, ಮುಂದೆ ಎಂದರ್ಥ, ಹರಣ ಎಂದರೆ ಅಪಹರಿಸು, ತೆಗೆದುಕೊಂಡು ಹೋಗು ಎಂದರ್ಥ. ಹೀಗಾಗಿ ಉದ್ಧರಣಿ ಎಂದರೆ ಉದ್ಧರಿಸು, ಮೇಲೆತ್ತು, ಬಂಧನದಿಂದ ಮುಕ್ತಿಗೊಳಿಸು, ಪರಿಪೂರ್ಣ ಹಂತಕ್ಕೆ ಮುಟ್ಟಿಸು ಎಂಬಿತ್ಯಾದಿ ಅರ್ಥಗಳು ಪ್ರಾಪ್ತವಾಗುತ್ತವೆ.

ಉದ್ಧರಣಗಳು ಅಧೋಮುಖಿಯಾದ ಜೀವಿಯನ್ನು ಊರ್ಧ್ವಮುಖಿಗೊಳಿಸುವ ಉತ್ಕರ್ಷಕ ಸಿದ್ಧಾಂತ, ತತ್ವ ಮತ್ತು ತಂತ್ರ ಸಾಹಿತ್ಯ ಇದಾಗಿದೆ. ಉದ್ಧರಣಿಗಳು ಚಿತ್ರ (ಪಟಲ) ಹಾಗೂ ಪಠ್ಯ (ವಾಚ್ಯ)ಗಳೆಂಬ ಎರಡು ರೀತಿಯಲ್ಲಿ ಬೆಳೆದು ಬಂದಿದೆ. ದೃಶ್ಯ ಶ್ರವ್ಯದಿಂದೊಡಗೂಡಿದ ಸಾಹಿತ್ಯವಾಗಿದೆ.

ಜ.ಚ.ನಿ. ಅವರು ಉದ್ಧರಣಿ ಸಾಹಿತ್ಯ ವಾಚ್ಯವೂ (ವಾಙ್ಮಯ) ಹೌದು, ವರ್ಣಮಯವೂ (ಬಣ್ಣ) ಹೌದು ರೂಪ



ಉದ್ಧರಣಿ ಚಿತ್ರಕಲೆ

ದೃಷ್ಟಿಯಿಂದ ಅಂಕಿ, ಅಕ್ಷರ, ವರ್ಣಪ್ರಧಾನ ಸಾಹಿತ್ಯ, ಸಮನ್ವಯ ದೃಷ್ಟಿಯಿಂದ ಸಾಂಖ್ಯ, ಯೋಗ, ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಲಕ್ಷಣವುಳ್ಳ ಸಾಹಿತ್ಯ ಎಂದಿದ್ದಾರೆ.

ಉದ್ಧರಣಿಯಲ್ಲಿನ ಸಂಕೇತಗಳು ಶರಣರ ವಚನಗಳಿಗೆ ತೀರಾ ಹತ್ತಿರವಾಗಿ ಕಾಣುತ್ತವೆ. ಇಂಥ ಹಲವಾರು ಸಂಕೇತಗಳೇ ಚಿತ್ರಗಳಾಗಿ ಮೂಡಿ ನಿಲ್ಲುತ್ತವೆ. ಈ ಕೃತಿಗಳು ಕಣ್ಣಿಗೆ ಒಗಟಾಗಿ ಕಂಡರೂ, ಇವು ಕೇವಲ ಕಲ್ಪನೆಯ ಅಥವಾ ಭ್ರಮೆಯ ಚಿತ್ರಗಳಲ್ಲ. ಇವುಗಳನ್ನು ಅನುಭಾವದ ನಿಲುಗನ್ನಡಿಗಳೆಂದೇ ಹೇಳಬೇಕಾಗುತ್ತದೆ. ಈ ಕಾರಣಕ್ಕಾಗಿ ಉದ್ಧರಣಿಗಳನ್ನು ಚಿತ್ರಸಾಹಿತ್ಯ ಶಾಸ್ತ್ರಕ್ಕೆ ಸಂಬಂಧಿಸಿದವು ಎಂದು ಹೇಳುತ್ತಾರೆ. ಇವು ಗಳನ್ನು ರಚಿಸುವವನಿಗೆ ಉನ್ನತ ಅಧ್ಯಯನ, ಪರಿಶ್ರಮ, ಹಲವು ವಿಷಯಗಳ ಜ್ಞಾನ, ಸಂಸ್ಕಾರಗಳು ಇರುವುದನ್ನು ಗಮನಿಸಬಹುದಾಗಿದೆ.

"ಶ್ರೀ ಗುರುಬಸವಲಿಂಗಾಯನಮಃ!" ಉದ್ಧರಣಿಯ ವಾಚ್ಯ ಬೆಂಗಳೂರಿನಲ್ಲಿರುವ ಕೋಟಿಲಿಂಗಶಾಸ್ತ್ರಿ, ಕುಮಾರ ಶರಬಯ್ಯನವರು ಬರೆದುಕೊಟ್ಟಿದ್ದು, ಕಂಪ್ಲಿಯಲ್ಲಿರುವ ಕಲ್ಲುಗುಡಿದೊಡ್ಡಪ್ಪನವರಿಗೆ ಉದ್ಧರಣಿ ವಾಚ್ಯ ವಹಿರುಜು ಇದು ಉದ್ಧರಣಿಯ ಪಟಲವಾಗಿರುವುದರಿಂದ ಸುಂದರವಾದ 23 ಚಿತ್ರಪಟಲಗಳಿವೆ.

ಕೊಪ್ಪಳ ಜಿಲ್ಲೆಯ ಬನ್ನಿಕೊಪ್ಪ ಗ್ರಾಮದ ತೋಟನಗೌಡ ಅಪ್ಪನಗೌಡ ಪೊಲೀಸ್ ಪಾಟೀಲರ ಮನೆಯಲ್ಲಿ ಉದ್ಧರಣಿ ಪಟಲವು 32 ಚಿತ್ರಗಳಿಂದ ಕೂಡಿದ್ದು, ಒಂದು ಕಡೆ ಚಿತ್ರ ಮತ್ತೊಂದು ಕಡೆ ಚಿತ್ರಕ್ಕೆ ಸಂಬಂಧಿಸಿದ ವಾಚ್ಯವನ್ನು ಬರೆಯಲಾಗಿದೆ. ಸದ್ಯ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂರಕ್ಷಿಸಲಾಗಿದೆ.

ಉದ್ಧರಣಿ ಪಟಲಗಳು-ತಾಳೆಗರಿಗಳು ಮತ್ತು ಕಾಗದ ರೂಪದಲ್ಲಿ ಕಾಣಸಿಗುತ್ತವೆ. ತಾಳೆಗರಿಗಳಲ್ಲಿಯ ಉದ್ಧರಣಿಗಳು ವಿರಳವಾಗಿದ್ದು, ಕಾಗದದ ಪ್ರತಿಗಳು ಹೇರಳವಾಗಿವೆ. ಕಾರಣ ವೇನೆಂದರೆ "ಉದ್ಧರಣಿಗಳ ಸ್ಥಾಯೀಗುಣ ಚಿತ್ರಕಲೆ". ಅದರಲ್ಲೂ ವರ್ಣಚಿತ್ರಗಳಿಗೆ ಕಾಗದ ಉಪಯೋಗ ಸಾಮಗ್ರಿ ಹೆಚ್ಚಾಗಿದ್ದು, ರೇಖಾಚಿತ್ರಗಳಿಗೆ ತಾಳೆಗರಿ ಉಪಯೋಗ ಸಾಮಗ್ರಿಗಳ ಬಳಕೆ ಪ್ರಧಾನವಾಗಿರುವುದು ಕಂಡುಬರುತ್ತದೆ.

ಉದ್ಧರಣಿ ಚಿತ್ರಗಳಿಗೆ ಬಣ್ಣಗಳನ್ನು ಕಲಾವಿದರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯ ನೈಸರ್ಗಿಕ ವಸ್ತುಗಳಿಂದಲೇ ಬಣ್ಣಗಳನ್ನು ತಯಾರಿಸುತ್ತಿದ್ದರು. ಕೆಂಪು, ಕಪ್ಪು, ನೀಲಿ, ಹಳದಿ, ಹಸಿರು ಬಣ್ಣಗಳನ್ನು ತಯಾರಿಸುತ್ತಿದ್ದರು. ಅದರಲ್ಲಿ ವಿಶೇಷವಾಗಿ ಹಳದಿ, ಗುಲಾಬಿ, ಕೆಂಪು, ನೀಲಿ ಮತ್ತು ಕಾವಿ ಬಣ್ಣಗಳನ್ನು ಹೆಚ್ಚಾಗಿ ಬಳಸಿದ್ದು ಕಂಡು ಬರುತ್ತದೆಯಾದರೂ, ಬಣ್ಣಗಳ ಆಯ್ಕೆ ಚಿತ್ರಕಾರನ ಮನೋಧರ್ಮಕ್ಕೆ ಬಿಟ್ಟಂತೆ ಕಂಡುಬರುತ್ತದೆ.

ಅಧೋಕುಂಡಲಿನಿ, ಊರ್ಧ್ವಕುಂಡಲಿನಿ, ಉದ್ಧರಣಿಯ ವರ್ಣಚಿತ್ರಗಳು ಕುತೂಹಲಕರವಾಗಿವೆ. ಜಿಂಕೆಯ ಮುಖ, ಎದೆಯಿಂದ ನಡುವಿನವರೆಗೆ ಸ್ತ್ರೀ ದೇಹ, ನಡುವಿನಿಂದ ಕೆಳಗೆ ಪ್ರಾಣಿಯಾಕಾರದ ದೇಹದ ಚಿತ್ರ, ಅಲ್ಲದೆ ಹಾವು, ಮೀನು, ಸಿಂಹ, ಹರಿಣಿ, ಆಕಳು ಮೊದಲಾದ ಚಿತ್ರಗಳೂ ಸಹ ಸಾಂಕೇತಿಕವಾಗಿ ಬಂದಿವೆ.

ಉದ್ಧರಣಿ ಚಿತ್ರಗಳು ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಂಗಮವಾಗಿ, ವೀರಶೈವ ಚಿತ್ರಕಲಾ ಪರಂಪರೆಗೆ ಬಹುದೊಡ್ಡ ಕೊಡುಗೆಗಳಾಗಿವೆ. ಬಣ್ಣಗಾರಿಕೆಯಲ್ಲಿ ತತ್ವವನ್ನು ಬಣ್ಣಿಸುವ ತಂತ್ರಗಾರಿಕೆ ಕಲಾರಾಧನೆಗೆ ಮತ್ತೊಂದು ಕೌಶಲವಾಗಿದೆ. ಜ್ಯೋತಿಷ್ಯ ಸೂತ್ರ, ಭಾಷೆ, ಶಾಸ್ತ್ರ, ಗಣಿತಗಳ ಜೊತೆಗೆ ರೇಖೆ, ವರ್ಣಚಿತ್ರಗಳ ಸಮಗ್ರತೆಯನ್ನು ಇವುಗಳಿಂದ ಅರಿಯಲು ಸಾಧ್ಯವಾಗುತ್ತದೆ

(ಬಿಎಂಪಿ)

ಉಮರ್ ಫಾರೂಕ್: ಯುವ ಚಿತ್ರಕಲಾವಿದ. ಯಾರೇ ಆಗಲಿ ತಮ್ಮ ಆಸಕ್ತಿ ಕ್ಷೇತ್ರದಲ್ಲಿ ಬೆಳೆಯಲು ಬಿಟ್ಟರೆ ಉತ್ತಮ ಸಾಧನೆ ಮಾಡುತ್ತಾರೆ ಎಂಬುದಕ್ಕೆ ಫಾರೂಕ್ ಸಾಕ್ಷಿಯಾಗಿದ್ದಾರೆ. ರಾಯಚೂರಿನ 'ಯರ್‌ಮರಸ್'ನಲ್ಲಿ ಜನಿಸಿದ ಇವರು ಚಿಕ್ಕ ವಯಸ್ಸಿನಲ್ಲಿಯೇ ಕಲೆಯ ಬಗ್ಗೆ ಅಪಾರ ಆಸಕ್ತಿಯನ್ನು ತಳೆದರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರಿಗೆ

ಪ್ರೇರಕರಾಗಿ ತಾಯಿ ನಿಂತರು. ತತ್ಫಲವಾಗಿ ರಾಯಚೂರಿನ ಶ್ರೀ ಗುರು ಕಲಾ ಮಂದಿರದಲ್ಲಿ ಡಿ.ಎಂ.ಸಿ. ಮುಗಿಸಿ. ಗುಲ್ಬರ್ಗದ ಎಂ.ಎಂ.ಕೆ. ಕಲಾಮಂದಿರದಲ್ಲಿ ಬಿ.ಎಫ್.ಎ. ಮತ್ತು ಬೆಂಗಳೂರಿನ ಜ್ಞಾನ ಕಲಾಮಂದಿರದಲ್ಲಿ ಎ.ಎಂ.ಜಿ.ಡಿ.ಯನ್ನು ಉನ್ನತ ಶ್ರೇಣಿಯಲ್ಲಿ ಪಾಸು ಮಾಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ (ಎಂ.ವಿ.ಎ.) ಪದವಿಯನ್ನು ಪಡೆದಿದ್ದಾರೆ.

ಪ್ರಮುಖವಾಗಿ ಇವರ ಕುಂಚದಲ್ಲಿ ಅಭಿವ್ಯಕ್ತಿಸಲ್ಪಡುವುದು ತಳ ಅಲಕ್ಷಿತ ಸಮುದಾಯಗಳ ಮೇಲಿನ ದೌರ್ಜನ್ಯದ ಖಂಡನೆ. ಬಣ್ಣದ ಮೇಲಿನ ಸ್ವಾಮ್ಯದಿಂದಾಗಿ ಮೂಡುವ ವಿಸ್ತಾರ ಆಳ. ದೌರ್ಜನ್ಯದ ವಿವಿಧ ಸ್ಥರಗಳು, ತಕ್ಕ ಪರಿಸರದಲ್ಲೇ ಮನುಷ್ಯನ ವರ್ತಮಾನದ ಗುಣ ಸ್ವಭಾವಗಳ ಅಭಿವ್ಯಕ್ತಿ ಇವರ ಕಲಾ ಪ್ರಬುದ್ಧತೆಗೆ ಹಿಡಿದ ಕೈಗನ್ನಡಿ. ಬಣ್ಣ, ಕಲೆ, ಭಾವಾಭಿವ್ಯಕ್ತಿ ಇವುಗಳ ಅಂತರ್ ಸಂಯೋಜನೆಯಿಂದ ಇವರ ಕಲಾಕೃತಿಗಳು ತೀವ್ರತೆಯನ್ನು ಪಡೆದುಕೊಂಡಿವೆ. ಕಲಾಕೃತಿಗಳು ಸರಳವಾಗಿ ಕಂಡರೂ ಸಂಕೀರ್ಣತೆ, ತುಡಿತ, ಬಂಡಾಯಗಳನ್ನು ಮೈಗೂಡಿಸಿಕೊಂಡಿವೆ.

ಇವರು ಕೊಲಾಜ್ ಆರ್ಟ್, ಲ್ಯಾಂಡ್‌ಸ್ಕೇಪ್, ಪೆನ್ ಮತ್ತು ಇಂಕ್ ಡ್ರಾಯಿಂಗ್, ಮ್ಯೂರಲ್, ಇನ್‌ಸ್ಟಾಲೇಷನ್ ಇವುಗಳ ಮೂಲಕವೂ ಸಹಿತ ಸಮಷ್ಟಿ ಪ್ರಜ್ಞೆಯನ್ನು ಸೂಕ್ಷ್ಮವಾಗಿ ಬಿಂಬಿಸುತ್ತಾರೆ. ಇವರ ಅನೇಕ ಕಲಾಕೃತಿಗಳು ಲಲಿತಕಲಾ ಅಕಾಡೆಮಿಗೆ ಆಯ್ಕೆಗೊಂಡಿವೆ. ಹಾಗೆಯೇ ರಾಯಚೂರಿನಲ್ಲಿ ನಡೆದ ಯಂಗ್ ಸ್ಟ್ರೋಕಿನಲ್ಲಿ. ಗುಲ್ಬರ್ಗಾದಲ್ಲಿ ಕಾಲೇಜು ವತಿಯಿಂದ ಏರ್ಪಡಿಸಿದ ಪ್ರದರ್ಶನದಲ್ಲಿ. ಬೆಂಗಳೂರು ಮತ್ತು ಮಂಗಳೂರಿನಲ್ಲಿ 2001 ರಲ್ಲಿ ಲಲಿತಕಲಾ ಅಕಾಡೆಮಿವತಿಯಿಂದ ನಡೆದ ಪ್ರದರ್ಶನದಲ್ಲಿ, ಬೀದರ್‌ನಲ್ಲಿ ಯುವ ಕಲಾವಿದರ ಕ್ಯಾಂಪ್‌ನಲ್ಲಿ ಭಾಗವಹಿಸಿ ತಮ್ಮ ಅನೇಕ ಕಲಾಕೃತಿಗಳನ್ನು ಪ್ರದರ್ಶಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಹೊಸ ಶೈಲಿಯ ಚಿತ್ರಗಳಲ್ಲಿ ಬಣ್ಣಗಳ ಪ್ರಯೋಗಗಳಲ್ಲಿದ್ದ ಸಾಂಪ್ರದಾಯಿಕ ಸಿದ್ಧಾಂತಗಳನ್ನು ಕೈ ಬಿಟ್ಟು ಹೊಸ ಅನುಭವವನ್ನು ಮತ್ತು ಸಂವೇದನೆಗಳನ್ನು ಭಿನ್ನ ಮಗ್ಗಲಿನಿಂದ ತಮ್ಮ ಕಲಾಕೃತಿಗಳಲ್ಲಿ ಪ್ರಯೋಗಿಸಿದ್ದಾರೆ. (ಇಜೆಬಿ)

ಉಸ್ತಾದ ಶೇಖ್ ಹನ್ನುಮಿಯಾ: ಗಾಯಕರು. ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕುರುರ್ ಗ್ರಾಮದ ಶ್ರೀ ಮಹಬೂಬಸಾಬ್, ಶ್ರೀಮತಿ ಮೌಲಾನ್‌ಬಿ ಮಹಿಬೂಬಸಾಬ ದಂಪತಿಗಳ ಏಕೈಕ ಪುತ್ರನಾಗಿ ಜನಿಸಿದವರೆ ಉಸ್ತಾದ ಶೇಖ ಹನ್ನುಮಿಯಾ. ತಂದೆ ಶ್ರೀ ಮಹಿಬೂಬಸಾಬ್ ಒಬ್ಬ ಉತ್ತಮ ಸಾರಂಗಿ ವಾದಕರಾಗಿದ್ದರು. ಅವರು ಮಗ ಕೂಡ ಇದೇ ಕ್ಷೇತ್ರದಲ್ಲಿ ಮುಂದುವರಿಯ ಬೇಕೆಂಬ ಹಿರಿದಾದ ಆಸೆಯಿಂದಾಗಿ ಪ್ರಾರಂಭಿಕ ವಿದ್ಯೆಯನ್ನು ಅವರೆ ನೀಡಿದರು. ನಂತರ ಹೆಚ್ಚಿನ ವಿದ್ಯೆಗಾಗಿ ಮಹಾರಾಷ್ಟ್ರದ ಖ್ಯಾತ ಗಾಯಕರು ಹಾಗೂ ತಬಲಾ ವಾದಕರಾದ ಉಸ್ತಾದ 'ಗುಲಾಮ ರಸುಲ್ ಪರವನಿ' ಅವರ ಹತ್ತಿರ 14 ವರ್ಷಗಳ ಕಾಲ ನಿರಂತರ ಗಾಯನ ಹಾಗೂ ತಬಲಾದ ವಿದ್ಯೆಯನ್ನು ಪಡೆದು 1979ರಲ್ಲಿ ಭಾಲ್ಕಿಗೆ ಬಂದು ವಾಸವಾದರು.



ಗಾಯನದಲ್ಲಿ ಇವರದು ಗ್ವಾಲೀಯರ ಘರಾಣೆ ಉಸ್ತಾದ ಬಡೆಗುಲಾಮಲಿ ಖಾನ್, ಉಸ್ತಾದ ಅಮೀರ ಅಲಿಖಾನ್, ಉಸ್ತಾದ ಅಮೀರಖಾನ, ಮುಂತಾದ ಉಸ್ತಾದರ ಗಾಯನವನ್ನು ಕೇಳಿ ತಮ್ಮ ಗಾಯಕಿಯಲ್ಲಿಯು ಕೇಳಿ ಅಳವಡಿಸಿಕೊಂಡರು. ಝಾಕೀರ ಹುಸೇನ, ಅಲ್ಲಾರಖಾನ್, ಸಮತಾ ಪ್ರಸಾದರಂತಹ, ಮಹಾನ್ ತಬಲಾ ಕಲಾವಿದರು ಆದರ್ಶ ಪ್ರಾಯವಾಗಿಟ್ಟುಕೊಂಡು ತಬಲಾದಲ್ಲಿಯು ಕೂಡ ನೈಪುಣ್ಯತೆಯನ್ನು ಪಡೆದು ಕೊಂಡರು. ಅನೇಕ ವರ್ಷಗಳ ಕಾಲ, ಗುಲಬರ್ಗಾ ಆಕಾಶವಾಣಿಯ ಸಂಗೀತ ಆಯ್ಕೆ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ ಅನುಭವ ಇವರದಾಗಿರುತ್ತದೆ. ಕಳೆದ 35 ವರ್ಷಗಳಿಂದ ಭಾಲ್ಕಿಯಲ್ಲಿ ಸರಸ್ವತಿ ಸಂಗೀತ ವಿದ್ಯಾಲಯ ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ, ತಬಲಾ, ಹಾರ್ಮೋನಿಯಂ ಅಲ್ಲದೆ ವಾದ್ಯಗಳ ರಿಪೇರಿಯ, ವಿದ್ಯೆಯನ್ನು ಕೂಡ ಸಂಗೀತ ಸಮೂಹಕ್ಕೆ ನೀಡುತ್ತಿದ್ದಾರೆ.

ಶಾಸ್ತ್ರೀಯ ಸಂಗೀತವೆಂದರೆ ಇವರಿಗೆ ಅತ್ಯಂತ ಪಂಚಪ್ರಾಣ, ದರ್ಬಾರಿ, ಮುಲ್ತಾನಿ, ತೊಂಡಿ, ಭೈರವ, ಕೇದಾರ, ಛಾಯಾನಾ, ಮುಂತಾದ ರಾಗಗಳು, ಪ್ರಿಯವಾದ ರಾಗಗಳು ಅಲ್ಲದೆ ಶುಶ್ರವ್ಯವಾಗಿ ಹಾಡುಬಲ್ಲರು. ಬೀದರ, ಭಾಲ್ಕಿ, ಹೈದ್ರಾಬಾದ, ಜಾಲ್ನಾ, ಅಹಮದನಗರ, ಲಾತೂರ, ಬೆಂಗಳೂರು ಮುಂತಾದ ಮಹಾನಗರಗಳಲ್ಲಿ ಯಶಸ್ವಿ ಕಾರ್ಯಕ್ರಮ ನೀಡಿರುತ್ತಾರೆ.

ಇವರ ಈ ಮಹಾನ ಸಾಧನೆಯನ್ನು ಕಂಡು ಕರ್ನಾಟಕ ರಾಜ್ಯ ಸರಕಾರವು 2003ರಲ್ಲಿ 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಭಾಲ್ಕಿ ಮಠದ ಆಸ್ತಾನ ಗಾಯಕರಾಗಿ ಅನೇಕ ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ತಾವೂ ಹಾಡುವದರ ಜೊತೆಗೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶದ ಮಹಾನ್ ಕಲಾವಿದರನ್ನು ಭಾಲ್ಕಿಗೆ ಆವ್ಹಾನಿಸಿ ಅವರ ಕಾರ್ಯಕ್ರಮ ಆಯೋಜಿಸಿದ ಕೀರ್ತಿ ಸಲ್ಲುತ್ತದೆ. ಇವರ ಪರಂಪರೆಯನ್ನು ಇವರ ಶಿಷ್ಯಂದಿರಾದ ಶ್ರೀ ಈಶ್ವರಪ್ಪಾ ಪಂಚಾಳ ಬೀದರ, ಶ್ರೀ ಗುಣವಂತರಾವ ಬದ್ದೆ ಉದಗೀರ, ಶ್ರೀ ಶ್ರೀಧರ ಕುಲಕರ್ಣಿ, ಶ್ರೀ ಮಹಾಂತಶಂಕರ ಭಾರತಿ ಸ್ವಾಮಿಜಿ ಸಂಜಿವಿನಿಗಡ ಮುಂತಾದವರು ಇವರ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

(ಎಂಬಿ)

ಏ

ಏವೂರಿನ ಜಿನ ಮಂದಿರ: ಯಾದಗಿರಿ ಜಿಲ್ಲೆಯ ಸುರಪೂರ ತಾಲ್ಲೂಕಿನ ಏವೂರು ಈಗ ಒಂದು ಪುಟ್ಟ ಗ್ರಾಮವಾಗಿದ್ದರೂ, ಇದಕ್ಕೆ ಸಾವಿರ ವರುಷಗಳಿಗೂ ಹಿಂದಿನ ಇತಿಹಾಸವಿದೆ; ಕಲೆ ಹಾಗೂ ಸಾಂಸ್ಕೃತಿಕ ಬದುಕಿನ ಹಿನ್ನೆಲೆ ಇದೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಳಚೂರಿ ರಾಜವಂಶಗಳಾಳ್ವಿಕೆಯ ಕಾಲದ ಸುಂದರ ದೇವಾಲಯಗಳ, ಶಾಸನಗಳ ನೆಲೆ ಇದು.

ಏವೂರು ತಾಲ್ಲೂಕು ಕೇಂದ್ರವಾದ ಸುರಪುರದಿಂದ ವಾಯುವ್ಯಕ್ಕೆ 50 ಕಿ.ಮೀ. ದೂರದಲ್ಲಿ ಮತ್ತು ಶಹಾಪೂರದಿಂದ ಪಶ್ಚಿಮಕ್ಕೆ 28 ಕಿ.ಮೀ. ದೂರದಲ್ಲಿ ಶಹಾಪುರ ವಿಜಾಪೂರ ಮುಖ್ಯರಸ್ತೆಯಲ್ಲಿದೆ. ಈ ಊರಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಸ್ವಯಂಭೂ ಸೋಮೇಶ್ವರ ತ್ರಿಕೂಟ ದೇವಾಲಯ (ಜನರು ಸಂಗಮೇಶ್ವರ ದೇವಸ್ಥಾನ ಮತ್ತು ಬಸವಣ್ಣನಗುಡಿ ಎಂದು ಕರೆಯುತ್ತಾರೆ) ಅರ್ಧ ಸುಸ್ಥಿತಿಯಲ್ಲಿರುವ ಸುಂದರ ಕಲಾತ್ಮಕ ದೇವಾಲಯವಾಗಿದೆ. ಈ ದೇವಾಲಯಕ್ಕಿಂತಲೂ ಹಳೆಯದಾದ ಕ್ರಿ.ಶ. 10ನೆಯ ಶತಮಾನದ ರಾಷ್ಟ್ರಕೂಟರ ಕಾಲದ ಭಗ್ನ ಜಿನಾಲಯವೊಂದು ಪಶ್ಚಿಮಕ್ಕಿರುವ ಈಳಿಗೇರಿ ಓಣಿಯಲ್ಲಿ ಕೊಟ್ಟಿಗೆಯಾಗಿ ಬಳಕೆಯಾಗುತ್ತ ತುಂಬಾ ದುಸ್ಥಿತಿಯಲ್ಲಿದೆ. 60 ಅಡಿ ದಕ್ಷಿಣೋತ್ತರ, 48 ಅಡಿ ಪೂರ್ವ ಪಶ್ಚಿಮ ಅಳತೆಯುಳ್ಳ, ಉತ್ತರಾಭಿಮುಖವಾದ ಈ ಏಕಕೂಟ ಬಸದಿಯನ್ನು ನೆಲಗಟ್ಟಿನಿಂದ 5 ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ಕಟ್ಟಿದ್ದಾರೆ. ಉಪಾನ, ತ್ರಿಪಟ್ಟಕುಮದ, ಪಟ್ಟಿಗೆಗಳನ್ನೊಳಗೊಂಡಿರುವ ಅಧಿಷ್ಠಾನದ ಮೇಲೆ ನುಣುಪಾದ ಸುಂದರ ಹೊರಮೈ ಭಿತ್ತಿಗೆ ಅಳವಡಿಸಲಾದ ಷೋಡಶ ಮತ್ತು ಅಷ್ಟಕೋನಾಕೃತಿಯ ನಕ್ಷತ್ರೋಪಾದಿಯಲ್ಲಿರುವ ಕಲಾತ್ಮಕ ಉಬ್ಬು ಕಂಬಗಳು ಶಿಲ್ಪಿಯ ಕಲಾ ಚಾತುರ್ಯಕ್ಕೆ ಕೈಗನ್ನಡಿಯಾಗಿವೆ.


ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವ ಈ ಜಿನಮಂದಿರದ ಗರ್ಭಗೃಹದ ದ್ವಾರಬಂಧದ ಪಟ್ಟಿಕೆಗಳಲ್ಲಿ ಕಳಶದಿಂದ ಹೊರಟು ಬಳ್ಳಿ ಸುಳುವುಗಳನ್ನು, ಆನೆಯ ಮೇಲೆ ಆಕ್ರಮಣ ಭಂಗಿಯಲ್ಲಿ ನಿಂತಿರುವ ಆರು ಆರು ಸಿಂಹಗಳನ್ನು ತುಂಬಾ ಮನೋಜ್ಞವಾಗಿ ಬಿಡಿಸಿದ್ದಾರೆ. ಈ ಬಾಗಿಲುವಾಡದ ಲಲಾಟ ಬಿಂಬ ಧ್ಯಾನಸಕ್ತನಾಗಿ ಕುಳಿತ ಜಿನನದ್ದಾಗಿದೆ. ಒಂದು ಕಾಲದಲ್ಲಿ ಅಗರ ಚಂದನದ, ಅಷ್ಟಗಂಧದ, ಪರಿಮಳದಿಂದಲೂ ಪ್ರಜಾ ಸಮಯದಲ್ಲಿ ಮೊಳಗುವ ಮಂಗಳಕರ ಘಂಟೆನಾದದಿಂದಲೂ ವಂದಿಸುತ್ತಿದ್ದ ಗರ್ಭಗೃಹ ಈಗ ಜಿನಬಿಂಬ ರಹಿತವಾಗಿದೆ. ಧೂಳು ಕಸಕಡ್ಡಿಗಳ ಆಗರವಾಗಿ ಗಬ್ಬು ವಾಸನೆ ಬೀರುತ್ತಿದೆ. ಇಷ್ಟೂ ಸಾಲದೆಂಬಂತೆ ಮುರಿದ ಒಡೆದ ಸಾಮಾನುಗಳು, ಕುಳ್ಳು ಕಟ್ಟಿಗೆಗಳನ್ನು ಯಥೇಚ್ಛವಾಗಿ ತುಂಬಿದ್ದಾರೆ. ಈ ಗರ್ಭಗೃಹದ ಅಕ್ಕಪಕ್ಕ ಚತುರ್ಭುಜಗಳುಳ್ಳ ದ್ವಾರಪಾಲಕರು ಅವರ ಪಕ್ಕಕ್ಕೆ ಚಾಮರಧಾರಿಣಿಯರನ್ನು ಬಹು ಚಂದವಾಗಿ ಕೆತ್ತಿದ್ದಾರೆ. ನವರಂಗ ನಾಲ್ಕು ಕಂಬಗಳನ್ನು ಹೊಂದಿದೆ. ಈ ಕಂಬಗಳ ತಳ ವಿನ್ಯಾಸ ಚೌಕಾಕಾರದ ಘನ. ಅದರ ಮೇಲೆ ಸಿಲಿಂಡರಾಕಾರದ, ಮಧ್ಯೆ ಅಷ್ಟಕೋನಾಕೃತಿಯ 5 ಇಂಚು ಅಣಲಳತೆಯ ಬಳೆ ಸುತ್ತು ಬಳಸಿದೆ. ಅದರ ಮೇಲೆ ಕಂಬಗಳ ನಾಲ್ಕು ಕಡೆ ಆಯಾತಾಕಾರದ ಪಟ್ಟಿಗಳ ಮಧ್ಯದಲ್ಲಿ ಗೋಪುರಾಕಾರವನ್ನು ಕೆತ್ತಿದ್ದಾರೆ. ಮೇಲ್ಭಾಗದ ಬೋದುಗೆಗಳು ವರ್ತುಲಾಕಾರವಾಗಿ ವಿಶಾಲವಾಗಿ ದೊಡ್ಡಚೌಕಗಳು ಮಧ್ಯದಲ್ಲಿದೆ. ಈ ನವರಂಗ ಈಗ ದನಗಳ ಕೊಟ್ಟಿಗೆಯಾಗಿ ಸಗಣಿ, ಗಂಜಳದಿಂದ ತುಂಬಿದೆ. ನವರಂಗದ ನುಣುಪಾದ ಹಾಸುಗಲ್ಲಿನ ಮೇಲೆ ರುಬ್ಬುವ ಒರಳೊಂದನ್ನು ತೋಡಿದ್ದಾರೆ. ಎತ್ತಿನ ಗಾಡಿಯ ಮುರಿದ ಸಾಮಾನುಗಳು, ತುಂಡು, ತೊಲೆಗಳು, ಹುಲ್ಲುಕಣಿಕೆಗಳಿಂದ ಮಂದಿರದ ವಿಕೃತಿಗೆ ಕಳಸ ವಿಟ್ಟಂತಾಗಿದೆ. ಪ್ರವೇಶ ದ್ವಾರದ ಮುಂದೆ 16 ಅಡಿ ಅಗಲ 11 ಅಡಿ ಉದ್ದದ ಜಗಲಿಗೆ, ಕೆಳಗೆ ಪಾವಟಿಗಳಿವೆ. ಪಾವಟಿಗಳ ಅಕ್ಕಪಕ್ಕ ಮೊಸಳೆಗಳ ಬಾಯಿಯಿಂದ ಹೊರ ಶಾರ್ದೂಲಗಳನ್ನೂ ಬಿಡಿಸಿದ್ದಾರೆ.

(ಡಿಎನ್‌ಎ)

ಐ


ಐತಿಹಾಸಿಕ ಸ್ಮಾರಕಗಳು: ಕಲಬುರ್ಗಿ ಜಿಲ್ಲೆಯಲ್ಲಿ ಎಲ್ಲೆಂದರಲ್ಲಿ ಪುರಾತನ ದೇವಾಲಯಗಳು, ಮಂಟಪಗಳು ಗುಂಬಜಗಳು, ಕೋಟೆಗಳು, ಹೂಡೆಗಳು ಕಾಣುತ್ತೇವೆ. ಸಾವಿರ ವರ್ಷಗಳ ಅಪೂರ್ವ ಇತಿಹಾಸ ಹೊಂದಿರುವ ಈ ಪ್ರಾಚೀನ ಸ್ಮಾರಕಗಳು ಇಂದು ಕುಸಿದು ಅಸ್ತಿ ಪಂಜರವಾಗಿ ನಾಮಾವಶೇಷವಾಗುತ್ತಿವೆ.

ಕಲಬುರ್ಗಿಯಿಂದ ಕೇವಲ 25 ಕಿ.ಮೀ. ಅಂತರದಲ್ಲಿ ಬೆಂಗಳೂರು ಹೆದ್ದಾರಿಯ ಭೀಮಾ ತೀರದಲ್ಲೊಂದು ಅತ್ಯಂತ ದೊಡ್ಡ ಕೋಟೆಯಿದೆ. ಮುಖ್ಯ ರಸ್ತೆಯಿಂದ ಒಂದು ಕಿ.ಮೀ. ಒಳಗೆ ಹೋದಾಗ ಫಿರೋಜಾಬಾದ ಗ್ರಾಮ ಸಿಗುತ್ತದೆ. ಗ್ರಾಮದ ಪಕ್ಕದಲ್ಲೇ ಈ ಬೃಹತ್ ಕೋಟೆ ಕಾಣಸಿಕ್ಕುತ್ತದೆ. ಈ ಕೋಟೆಗೆ ನಾಲ್ಕು ಕಮಾನುಗಳಾಕಾರದ ಮಹಾದ್ವಾರಗಳಿವೆ. ಒಳಗೆ ವಿಶಾಲವಾದ ಜಾಮಿಯಾ ಮಸೀದೆಯಿದೆ. ಇಡೀ ಕೋಟೆ, ಗುಂಬಜಗಳು ಮತ್ತು ಉಳಿದೆಲ್ಲ ಕಟ್ಟಡಗಳನ್ನು ಸ್ಥಳೀಯವಾಗಿ ದೊರೆಯುವ ಫರಸಿ ಕಲ್ಲುಗಳನ್ನು ಬಳಸಿ ಗಟ್ಟಿಮುಟ್ಟಾಗಿ ನಿರ್ಮಿಸಲಾಗಿದೆ. ಇದರ ಇತಿಹಾಸವನ್ನು ಕೆದಕಿ ನೋಡಿದಾಗ, ಈ ಪ್ರದೇಶವನ್ನು ಸುಮಾರು 25 ವರ್ಷಗಳ ಕಾಲ ಆಳಿದ ಫರೋಜ್ ಶಾಹ್ ಬಹಮನಿ 1397ರಲ್ಲಿ ಈ ಕೋಟೆ ನಿರ್ಮಿಸಿದ್ದಾಗಿ ತಿಳಿದು ಬರುತ್ತದೆ. ಇಡೀ ಕೋಟೆ ಹಾಗೂ ಜಾಮಿಯಾ ಮಸೀದೆ ಕುಸಿದು



ಜಾಮಾಮಸೀದಿ, ಗುಲಬರ್ಗಾ

ಬೀಳುತ್ತಿದ್ದರೂ, ಇದರ ನಿರ್ಮಾಣದಲ್ಲಿನ ಕುಸುರಿ ವಾಸ್ತುಶಿಲ್ಪದ ಸೌಂದರ್ಯವನ್ನು ಇಂದಿಗೂ ಕಾಣಬಹುದು. ಬಹಮನಿ ಅರಸು ಮನೆತನವು ನಿರ್ಮಿಸಿದ ಮೊದಲ ಕೋಟೆ ಇದಾಗಿದೆ. ಅನಂತರ ಕಲಬುರ್ಗಿ ನಗರದಲ್ಲಿ, ಮುಂದೆ ಬೀದರನಲ್ಲೊಂದು ಕೋಟೆಯನ್ನು ಇದೇ ಮನೆತನದ ಸಹೋದರರು ನಿರ್ಮಿಸಿದರು. ಕಲಬುರ್ಗಿ ಮತ್ತು ಬೀದರ ಕೋಟೆಗಳು ನಗರ ಪ್ರದೇಶದಲ್ಲಿರುವುದರಿಂದ ಅಷ್ಟೊಂದು ಹಾಳಾಗಿಲ್ಲ. ಇನ್ನು ಬಹಮನಿ ಅರಸರು ನಿರ್ಮಿಸಿದ ಮೊದಲ ಕೋಟೆ ಫಿರೋಜಾಬಾದನಲ್ಲಿರುವದು ಬಹುತೇಕ ನಿರ್ನಾಮವಾಗಿದೆ. ಕೋಟೆಯೊಳಗೆ ಸ್ನಾನಗೃಹ, ಅಡುಗೆ ಮನೆಗಳೆಂದು ಹೇಳಲಾದ ಕಟ್ಟಡಗಳು



ಬಹಮನಿ ಅರಸರು ನಿರ್ಮಿಸಿದ ಮೊದಲ ಕೋಟೆ, ಫಿರೋಜಾಬಾದ

ಕುಸಿದು ಕುಪ್ಪೆ ಹಾಕಿದಂತೆ ಕಾಣುತ್ತವೆ. ಇನ್ನು ನಾಲ್ಕು ಮಹಾದ್ವಾರಗಳ ಪೈಕಿ ಬಹುತೇಕ ದ್ವಾರಗಳು ಬಿದ್ದು ಅಸ್ತಿ ಪಂಜರದಂತೆ ನಿಂತಿವೆ. ಒಳಗೆ ಹೋಗಲು ಸಾಧ್ಯವಿಲ್ಲದಂತೆ, ಮುಳ್ಳು ಜಾಲಿ ಗಿಡಗಳು ಬೆಳೆದು, ಇತಿಹಾಸಕ್ಕೆ ಮುಳ್ಳು ಬಡಿದು ಯಾರಿಗೂ ಕಾಣದಂತೆ ಮುಚ್ಚಿಟ್ಟಂತೆ ಕಾಣುತ್ತದೆ. ಈ ಕೋಟೆ ಹಾಗೂ ಇಲ್ಲಿನ ಎಲ್ಲ ಅವಶೇಷಗಳು ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸೇರಿದವುಗಳು. (ಎಸ್‌ಆರ್‌ಎಂ)

ಐತಿಹಾಸಿಕ ಸ್ಮಾರಕಗಳು: (ಸೇಡಂ) ಮಳಖೇಡದಲ್ಲಿ ಕೋಟೆ ಕೊತ್ತಲಗಳು, ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಜೀರ್ಣೋದ್ಧಾರಗೊಂಡ ಜೈನ ಮಂದಿರ ಕಲಾತ್ಮಕತೆಗೆ ಪ್ರಸಿದ್ಧವಾಗಿದೆ. ಇಲ್ಲಿಯ ಹನುಮಾನ್ ಮಂದಿರಗಳು, ಸಂತಾನ ಗೋಪಾಲಕೃಷ್ಣ ಮಂದಿರ, ಮಲಯಾದ್ರಿ ಮಾಧವ ದೇವಾಲಯ, ಈಶ್ವರ ದೇಗುಲಗಳನ್ನು, ಕೋಟೆ ಕೊತ್ತಲಗಳ ಮಧ್ಯದಲ್ಲಿರುವ ಶಿವ, ವಿಷ್ಣುವಿನ ಮೂರ್ತಿಗಳು, ಮುಸ್ಲಿಂ ದರ್ಗಾಗಳು ನೋಡುಗರನ್ನು ಆಕರ್ಷಿಸುತ್ತಿವೆ. ಭಗ್ನಗೊಂಡ ಮಳಖೇಡದ ಕೋಟೆಯು ತನ್ನ ಶೌರ್ಯ ಪರಾಕ್ರಮತೆ, ಹಿಂದಿನ ರಾಜವೈಭವತೆ, ರಾಷ್ಟ್ರಕೂಟ ಆಡಳಿತ ಧರ್ಮ ಸಂಸ್ಕೃತಿಯನ್ನು ಸಾರುತ್ತವೆ. ಮಳಖೇಡದಲ್ಲಿ ಇರುವ ಟೀಕಾಚಾರ್ಯರ ಮಠ ಐತಿಹಾಸಿಕವಾಗಿದೆ.




ರಾಷ್ಟ್ರಕೂಟರ ಕಾಲದ ಸ್ಮಾರಕ, ಸೇಡಂ

ತ ಾ ಲ ೂ ್ಲ ಕ ಾ

ಕೇಂದ್ರವಾಗಿರುವ ಸೇಡಂ ಪಟ್ಟಣ ಸುಂದರ ವಾದ ಐತಿಹಾಸಿಕ ತಾಣ. ಶಾಸನೋಕ್ತವಾದ ಹೆಸರು ಸೇಡಿಂಬ. ಅದು ಬರಬರುತ್ತಾ ಸೇರಂ, ಸೇಡಂ ಆಗಿದೆ. ಶತ ಶತಮಾನಗಳ ಕಾಲ ವೈಭವಯುತವಾಗಿ ತನ್ನ ಮೇರು ಸದೃಶಗಳನ್ನು ವಿಜೃಂಭಿಸುತ್ತಲೇ ಬಂದಿದೆ. ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ, ಹೈಹಯ ಶ್ರೇಷ್ಠ ವಂಶಜರ ಆಳ್ವಿಕೆಯಲ್ಲಿ ರಾಜಕೀಯ ಮತ್ತು ಆಡಳಿತ ಘಟಕವಾಗಿ ಅಗ್ರಹಾರದಂತಹ ಶಿಕ್ಷಣ ಕೇಂದ್ರವಾಗಿ, ಸೈನ್ಯದ ನೆಲವೀಡಾಗಿ, ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ನೂತನ ಚುಟವಟಿಕೆಗಳಿಗೆ ಸ್ಫೂರ್ತಿ, ಹಮ್ಮಸ್ಸು ನೀಡುವ ಜ್ಯೋತಿಯನ್ನು ಹೊತ್ತಿಸುವ ಬೆಳಕಿನ ಆಗರವೇ ಸೇಡಂ ಪಟ್ಟಣವಾಗಿದೆ. ಅಸಂಖ್ಯಾತ ಮಂದಿರಗಳು ನೂರಾರು ಸ್ಮಾರಕಶಿಲ್ಪಗಳು ಭೂಮಿಯಲ್ಲಿ ಹೂತುಹೋಗಿವೆ. ಹೆಜ್ಜೆಗೂ ದೇಗುಲಗಳು, ಸಾಲು ಮಂಟಪಗಳು, ಶಾಸನ ಸ್ಮಾರಕಗಳು ನಮ್ಮನ್ನು ಗತಕಾಲಕ್ಕೆ ಕೊಂಡೊಯ್ಯುತ್ತವೆ. ಹೈದ್ರಾಬಾದ್ ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪಗಳ ಅಥವಾ ದೇವಾಲಯಗಳ ತೊಟ್ಟಿಲು ಸೇಡಂ–ಮಳಖೇಡ ಪರಿಸರವಾಗಿದೆ.

ಸೇಡಂದಿಂದ 13 ಕಿ.ಮೀ. ಅಂತರದಲ್ಲಿರುವ ಆಡಕಿ ಗ್ರಾಮ ಪ್ರಾಚೀನ ಕಾಲದಲ್ಲಿ ಜೈನ ಧರ್ಮದ ಕೇಂದ್ರವು ಮತ್ತು ಜೈನ ವಣಿಕ ಶೆಟ್ಟಿ ಸಮುದಾಯವು ನಡೆಸುತ್ತಿರುವ ವ್ಯಾಪಾರ ಕೇಂದ್ರವೂ ಆಗಿತ್ತು. ಇಲ್ಲಿ ಒಟ್ಟು ಐದು ಶಾಸನಗಳು ಮತ್ತು



ಪ್ರಾಚೀನಕಾಲದ ಮಾನಸ್ಥಂಭ, ಸೇಡಂ

ಹತ್ತಾರು ಸ್ಮಾರಕಗಳು ನಾಡಿನ ಚರಿತ್ರೆ ಬಿಂಬಿಸುತ್ತವೆ. ಇಲ್ಲಿಯ ಹನುಮಾನ ಮಂದಿರ, ಈಶ್ವರ ದೇಗುಲಗಳು ಪ್ಯಾಟಿ ಎಂದು ಕರೆಯಿಸಿಕೊಳ್ಳುವ ಸ್ಥಳದ ಐತಿಹಾಸಿಕ ಕಟ್ಟಡಗಳು ಮತ್ತು ಕೋಟೆಯ ಎಲ್ಲ ಅವಶೇಷಗಳು ಕಲ್ಯಾಣ ಚಾಲುಕ್ಯರ ಕಾಲದ ಜೈನ ಧರ್ಮದ ಬೆಳವಣಿಗೆ, ವ್ಯಾಪಾರ ವಹಿವಾಟಿನ ಕೇಂದ್ರ ವಾಗಿತ್ತು ಎನ್ನುವುದಕ್ಕೆ ಖಚಿತಪಡಿಸುತ್ತವೆ.

ಸೇಡಂದಿಂದ 9 ಕಿ.ಮೀ. ಅಂತರದಲ್ಲಿ ಇರುವ ಒಂದು ಸಣ್ಣ ಊರು ಊಡಗಿ. ಈ ಗ್ರಾಮ ರಾಷ್ಟ್ರಕೂಟರ ರಾಜಧಾನಿ ಮಾನ್ಯ ಖೇಟದಿಂದ ತೀರ ಸಮೀಪವಿದೆ. ಕೇವಲ ನಾಲ್ಕು ಕಿ.ಮೀ. ಅಂತರದಲ್ಲಿ ಕಾಗಿನ ನದಿಯ ದಂಡೆಯ ಮೇಲೆ ನಿಂತಿದೆ. ಇಲ್ಲಿ ರುವುದು ಕೇವಲ ಒಂದೇ ಒಂದು ಭವ್ಯ ಕಲಾತ್ಮಕ ಲೋಕೇಶ್ವರ ದೇವಾಲಯ. ದೇವಾಲಯ ತುಂಬ ಅಲಂಕಾರಿಕವಾಗಿದೆ. ಗಿಳ ಪಾಯದಲ್ಲಿ ಅನೇಕ ಪಟ್ಟಿಕೆಗಳು, ಪ್ರಾಣಿ, ಪಕ್ಷಿಚಿತ್ರಗಳು ಸುಂದರ ವಾಗಿ ಮೂಡಿಬಂದಿವೆ. ತಾಲ್ಲೂಕಿನ ಕುರುಕುಂಟಾದಲ್ಲಿನ ಸಂಗಮೇಶ್ವರ ದೇವಾಲಯ; ಅಲ್ಲಿಯೇ ಇರುವ ಕಲಾತ್ಮಕ ವೀರ ಗಲ್ಲುಗಳು, ಬಟಗೇರದಲ್ಲಿನ ದೇಗುಲಗಳು, ಶಿಲಾರ ಕೋಟೆ ಯಲ್ಲಿರುವ ಕೋಟೆ ಮತ್ತು ಅವಶೇಷಗಳು, ಮುಧೋಳ ದಲ್ಲಿರುವ ಮಣ್ಣಿನ ಕೋಟೆ ಮತ್ತು ರಾಮಮಂದಿರ ಮುಗುನೂರಿ ನಲ್ಲಿರುವ ರಾಮಲಿಂಗೇಶ್ವರ ದೇವಾಲಯ, ಕುಕ್ಕುಂದಾದಲ್ಲಿರುವ ನಾಗಲಿಂಗೇಶ್ವರ, ಕೋಡ್ಲಾದಲ್ಲಿರುವ ಶಂಭುಲಿಂಗೇಶ್ವರ ದೇವಾ ಲಯ ಮತ್ತಿತರ ಗ್ರಾಮಗಳಲ್ಲಿ ದೊರೆಯುವ ಸ್ಮಾರಕಗಳೆಲ್ಲ ಇತಿಹಾಸದ ಪುಟಗಳನ್ನು ತೆರೆಯುತ್ತವೆ.

ಯಾನಾಗುಂದಿಯ ಮಾಣಿಕಗಿರಿಯು ತಾಲ್ಲೂಕಿನ ಐತಿ ಹಾಸಿಕ ಮತ್ತು ಪವಿತ್ರ ಸ್ಥಳವಾಗಿದೆ. ಮಾತಾ ಮಾಣಿಕೇಶ್ವರಿ ಯು ಬಾಲ್ಯದಿಂದಲೂ ಅನ್ನ ನೀರು ಬಿಟ್ಟು ಲೋಕ ಕಲ್ಯಾಣ ಬಯಸಿ ಅನುಷ್ಠಾನ ಮಾಡುತ್ತಾ ಭಕ್ತರಿಗೆ ದಿವ್ಯದರ್ಶನ ನೀಡುತ್ತಾ ಬಂದಿದ್ದಾರೆ. (ಎಂಜಿಉ)

ಕ

ಕಂಚುಗಾರ ಕಾಳಪ್ಪ: ಕರಕುಶಲ ಕಲಾವಿದ. ತಂದೆ ಕೋಡೇಕಲ್ಲ ಬಸಣ್ಣ ಕಂಚುಗಾರ. ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ಶಹಬ್ಬಾಶಗಿರಿ ಪಡೆಯುವಂಥ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ.

ನಾವು ನಿತ್ಯ ಬಳಸುವ ಸಾಬೂನುಗಳು ಈತನ ಕೈಯಲ್ಲಿ ಕಲಾಕೃತಿಗಳಾಗಿ ರೂಪಗೊಂಡಿವೆ. ಇಂಥ ಕಲೆ ಇವನಿಗೆ ಕರಗತ. ಥರ್ಮಾಕೋಲ, ಕಾಷ್ಠ ಶಿಲ್ಪ, ಶಿಲೆಯಲ್ಲಿ ಶಿಲ್ಪ, ಮಣ್ಣಿನಲ್ಲಿ ಶಿಲ್ಪ ಮಾಡುವುದು ಇವರ ವೃತ್ತಿ ಜೀವನದ ಮುಂದಿನ ಕೈಚಳಕ. ಕಾಳಪ್ಪ ಕಂಚುಗಾರ ಥರ್ಮಾಕೋಲನಲ್ಲಿ ಹಂಪಿಯ ಕಲ್ಲಿನ ರಥ, ಬಸವಣ್ಣ ದೇವಸ್ಥಾನ, ಗಜಾನನ ಉತ್ಸವದಲ್ಲಿ ಥರ್ಮಾಕೂಲ ರಥ, ಗಣೇಶ ವಿಗ್ರಹ ಮುಂತಾದವು ಗಳು ಸಾರ್ವಜನಿಕರ ಗಮನ ಸೆಳೆದಿವೆ. ಕಾಷ್ಠಶಿಲ್ಪದಲ್ಲಿ ಲಕ್ಷ್ಮೀ ಗಣೇಶ, ಕಲ್ಲಿನಲ್ಲಿ ಹಲವು ಕೃತಿಗಳನ್ನು ರಚನೆ ಮಾಡಿದ್ದಾನೆ.

ಇವರ ಇತ್ತೀಚಿನ ಹೊಸ ಕೃತಿ ಎಂದರೆ, ಹಂಪಿಯ ಕಲ್ಲಿನ ರಥ. ಐತಿಹಾಸಿಕ ವಿಜಯ ವಿಠಲ ಮಂದಿರದ ಮುಂದಿರುವ ಕಲ್ಲಿನ ರಥ, ಇವರ ಕೈಚಳಕದಲ್ಲಿರುವ ಥರ್ಮಾಕೋಲನ ಅತ್ಯುತ್ತಮ ಕೃತಿಯಾಗಿ ಗಮನ ಸೆಳೆದಿದೆ. (ಬಿಬಿಎ)

ಕಂಬಳಿಯ ಕೇಶ್ವಾರ: ಗುಲ್ಬರ್ಗ ಜಿಲ್ಲೆಯ ಚಿಂಚೋಳಿಯಿಂದ 20 ಕಿ.ಮೀ. ದೂರದಲ್ಲಿರುವ ಗ್ರಾಮ. 10–11ನೆಯ ಶತಮಾನ ದಲ್ಲಿ ಕಲ್ಯಾಣದ ಚಾಲುಕ್ಯರ ಪ್ರಮುಖ ಕೇಂದ್ರವಾಗಿತ್ತು. ಜೈನ, ಶೈವ ದೇವಾಲಯಗಳು ಈ ಗ್ರಾಮದಲ್ಲಿ ಇರುವುದರಿಂದ ಚಾಲುಕ್ಯ ಕಾಲದಲ್ಲಿ ಜೈನರು ಹಾಗೂ ಶೈವರು ಇಲ್ಲಿ ನೆಲೆಸಿದ್ದರು. 8ನೆಯ ಶತಮಾನದಿಂದ 14ನೆಯ ಶತಮಾನದ ಕಾಲಕ್ಕೆ ಸೇರಿದ ಒಟ್ಟು ಐದು ಶಾಸನಗಳು ಇಲ್ಲಿಯ ಇತಿಹಾಸದ ಬಗ್ಗೆ ಮಾಹಿತಿ

ನೀಡುತ್ತವೆ. 11ನೇ ಶತಮಾನದಲ್ಲಿ ದೊರೆತ ಶಾಸನವು ಚಾಲುಕ್ಯರ ಅರಸ ಮಸಣಯ್ಯ ಪಾರ್ಶ್ವನಾಥ ಚೈತಾಲ್ಯಯವನ್ನು ನಿರ್ಮಿಸಿದ ಎಂಬುದನ್ನು ತಿಳಿಸುತ್ತದೆ. 10–11ನೇ ಶತಮಾನದಲ್ಲಿ ನಿರ್ಮಿಸಿದ ದೇವಾಲಯಗಳು ಎನ್ನಲಾದ ಕೇಶವ ನಾರಾಯಣ ಗುಡಿ, ಊರ ಹೊರಗಿರುವ ಸಿದ್ಧೇಶ್ವರ ಗುಡಿ, ದ್ವಿಕೂಟ ಕರಿದೇವರ ಗುಡಿ, ಲಿಂಗದೇವರ ಗುಡಿ, ಸಂಗನಾಥ ಗುಡಿ, ಲಕ್ಷ್ಮೀ ಗುಡಿ ಇವು ಅವಸಾನದ ಅಂಚಿನಲ್ಲಿವೆ. ಗ್ರಾಮಸ್ಥರರಿಗೆ ಪ್ರತ್ಯೇಕವಾಗಿ ಗುಡಿಯ ಹೆಸರು ತಿಳಿದಿಲ್ಲವಾದರೂ, ಎಲ್ಲರೂ 'ಕರಿದೇವರ ಗುಡಿ' ಎಂದು ಕರೆಯುತ್ತಾರೆ. 10–11ನೇ ಶತಮಾನದ ದೇವಾಲಯಗಳು ದನದ ಕೊಟ್ಟಿಗೆಯಾಗಿ ಬಳಕೆಯಾಗುತ್ತಿರುವುದು ಕಾಣಬಹುದಾಗಿದೆ. ಕೋಟೆಯ ಮುಖ್ಯದ್ವಾರ ಹಾಗೂ ಅಗಸಿ ಶಿಥಿಲಗೊಂಡಿವೆ.

ಕಂಬಳಿಗೆ ಕೇಶ್ವಾರ ಗ್ರಾಮ ರಾಜ್ಯದಲ್ಲಿಯೇ ಖ್ಯಾತಿಯನ್ನು ಪಡೆದಿದೆ. ಅಂದಾಜು 25 ಕುಟುಂಬಗಳು ಕಂಬಳಿ ನೇಯುವ ಕೆಲಸವನ್ನು ಈಗಲೂ ಮಾಡುತ್ತಿವೆ. ಇಲ್ಲಿನ ಕಂಬಳಿಗಳ ಬೆಲೆ 1,600 ರೂಪಾಯಿಂದ ಆರಂಭವಾಗಿ ಮೂರರಿಂದ ನಾಲ್ಕು ಸಾವಿರ ರೂಪಾಯಿಗಳವರೆಗೂ ಮಾರಾಟವಾಗುತ್ತವೆ. ಈ ನೇಯ್ಗೆಗೆ ತಾಲ್ಲೂಕಿನ ಸುಲೇಪೇಟೆಯೇ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ಹೈದರಾಬಾದ್ ನಿಜಾಮನ ಕಾಲದಲ್ಲಿ ನಿಜಾಮ ದೊರೆಯೊಬ್ಬರು ಈ ಗ್ರಾಮಕ್ಕೆ ಭೇಟಿ ನೀಡಿದಾಗ ಅವರಿಗೆ ಕಾಣಿಕೆಯಾಗಿ ಚಿಕ್ಕ ಬಿದಿರಿನ ಕೊಳವೆಯಲ್ಲಿಟ್ಟು ಕಂಬಳಿ ನೀಡಿದ್ದರಿಂದ ಉತ್ಕೃಷ್ಟ ದರ್ಜೆಯ ಸಾಂಪ್ರದಾಯಿಕ ಕಂಬಳಿ ನೇಯುವ ಕಲೆ ಉಳಿಸಲು ಸ್ವತಃ ನಿಜಾಮ ಆಂಧ್ರದ ಮೆಹಬೂಬ ನಗರಕ್ಕೆ ತರಬೇತಿ ನೀಡಲು ಕಂಬಳಿಯ (ಕುರುಬ) ನೇಕಾರನನ್ನು ಕರೆದೊಯ್ದಿದ್ದ ಎನ್ನುವುದನ್ನು ಗ್ರಾಮಸ್ಥರು ನೆನೆಪಿಸಿಕೊಳ್ಳುತ್ತಾರೆ.

ಗ್ರಾಮಕ್ಕೆ ಜನಪ್ರತಿನಿಧಿಯೇ ಬರಲಿ, ಮಠಾಧೀಶರು ಸೇರಿದಂತೆ ಯಾವುದೇ ಗಣ್ಯರು ಬರಲಿ ಅವರಿಗೆ ಶಾಲಿನಿಂದ ಸನ್ಮಾನ ಮಾಡುವುದು ಸಹಜ. ಆದರೆ ಕೇಶ್ವಾರ ಗ್ರಾಮಕ್ಕೆ ಯಾವುದೇ ಗಣ್ಯವ್ಯಕ್ತಿ ಬಂದರೂ ಅವರಿಗೆ ದೊರೆಯುವುದು ಕಂಬಳಿ ಸನ್ಮಾನ. ಇಂದಿಗೂ ಈ ಭಿನ್ನ ಸಂಪ್ರದಾಯವನ್ನು ಇಲ್ಲಿನ ಗ್ರಾಮಸ್ಥರು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

(ಪಿಜಿಕೆ)

ಕಂಟೆಪ್ಪ ಮಾಸ್ತರ: ಗುಲಬರ್ಗಾ ಜಿಲ್ಲೆಯ ಕೋಡ್ಲಿ ಗ್ರಾಮದ ಕನ್ನಡ ಶಾಲಾ ಶಿಕ್ಷಕರಾದ ಶ್ರೀ ಕಂಟೆಪ್ಪ ಮಾಸ್ತರರ ಹೆಸರು ಪ್ರಮುಖವಾದದ್ದು. ಶಿಕ್ಷಕ ವೃತ್ತಿಯ ಜೊತೆ ಜೊತೆಗೆ ಹಳ್ಳಿಗರ ದುಡಿಮೆಯ ಬದುಕಿನ ಏಕತಾನತೆಯನ್ನು ಮುರಿದು ಉತ್ಸಾಹದ ಬದುಕಿನೆಡೆಗೆ ಹೊಸ ಸಾಂಸ್ಕೃತಿಕ ಆಯಾಮ ಬರೆದವರು ಕಂಟೆಪ್ಪ ಮಾಸ್ತರ. ಇಂದಿನ ಬದುಕಿನಲ್ಲಿ ಮೋಸ, ವಂಚನೆ, ರಾಜಕೀಯ ಮುಖವಾಡಗಳ ಹಿಂದಿನ ನೈಜ ಬದುಕಿಗೆ ಬೆನ್ನು ತಿರುಗಿಸಿ, ನಿಜದ ನೆಲೆಯ ನೈತಿ ಮೌಲ್ಯದ ಮಾನವೀಯ ಬದುಕೆ ಅರ್ಥಪೂರ್ಣ ಎಂಬ ಸಂದೇಶದ ನಾಟಕಗಳನ್ನು ಬರೆದು ಜಾತ್ರೆ, ಪರೀಕ್ಷೆ, ಹಬ್ಬ ಹರಿದಿನಗಳಲ್ಲಿ ಹಳ್ಳಿಯ ಕೃಷಿ ಕೂಲಿ ಕಾರ್ಮಿಕರು, ರೈತರನ್ನು ಒಗ್ಗೂಡಿಸಿ ತಮ್ಮ ಖರ್ಚಿನಲ್ಲಿ ಅವರಿಗೆ ನಾಟಕ ಕಲಿಸಿ ಅವರಲ್ಲಿ ಮಿಂಚಿದ ಉತ್ಸಾಹವನ್ನು ನೋಡಿ ತಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿಕೊಂಡವರು.

ಯಾವ ಪ್ರಚಾರವನ್ನು ಬಯಸದೆ, ಯಾವ ಪ್ರಶಸ್ತಿಗಳನ್ನು ಅಪೇಕ್ಷಿಸದೆ, ಪ್ರಶಸ್ತಿಗಾಗಿ ಯಾರ ಮನೆಯ ಬಾಗಿಲು ತಟ್ಟದೆ ತಮ್ಮ ಪಾಡಿಗೆ ತಾವು ನಾಟಕ ರಚನೆ, ನಿರ್ದೇಶನ ಮಾಡಿ ತಾವೂ ಭಾಗವಹಿಸಿ ಗ್ರಾಮೀಣ ರಂಗ ಚಿಂತನೆಗೆ ಇಂಬಾದವರು.

ಇವರು ತಮ್ಮ ಈತನಕ ಬದುಕಿನಲ್ಲಿ 30ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದು ರಂಗಭೂಮಿಗೊಂದು ಹೊಸ ಉಡುಗೊರೆ. ಹೆಸರಿಸಲೇಬೇಕಾದ ಅವರ ನಾಟಕಗಳೆಂದರೆ 'ತವರು ಮನೆ ತಣ್ಣಗಿರಲಿ', 'ಬಾಳಬೇಕಿದ್ದಾರೆ ತಾಳಬೇಕು', 'ರಾಮ–ರಹೀಮ', 'ಕುಡುಕನಾದರೂ ಕೊಲೆಗಡುಕನಲ್ಲ' ಹಾರಕೂಡ ಚನ್ನ ಬಸವೇಶ್ವರ ಮಹಾತ್ಮೆ', 'ಸತ್ಯ ಸತ್ತಿಲ್ಲ' ಮುಂತಾದವು ಹಳ್ಳಿ ಹಳ್ಳಿಗಳಲ್ಲಿ ನೂರಾರು ಮರು ಪ್ರದರ್ಶನ ಕಂಡ ನಾಟಕಗಳು.

ಇವರು ಕನ್ನಡ ಶಾಲಾ ಶಿಕ್ಷಕರಾಗಿದ್ದಾಗಲೇ ಹಿರಿಯ ಶಿಕ್ಷಕರಾದ ಶ್ರೀ ಬಸವಲಿಂಗಯ್ಯ ಮಲ್ಲಾಪೂರ, ವೈ.ಎಸ್. ಆಚಾರ ಇದರೊಂದಿಗಿನ ಒಡನಾಟ, ಸಾಹಿತ್ಯ ಓದು, ವಿಚಾರ ಮಂಥನದಿಂದ ಪ್ರಭಾವಿತರಾದವರು ಕಂದಗಲ್ ಹನಮಂತರಾಯರ ನಾಟಕಗಳೆಂದರೆ ಇವರಿಗೆ ಅಚ್ಚು ಮೆಚ್ಚಚು. 1964ರಲ್ಲಿ ಕಂದಗಲ್ಲ ಹಾನಮಂತರಾಯರ 'ರಕ್ತ ರಾತ್ರಿ' ನೋಡಿ ತಡೆಯಾಗದೇ ತಮ್ಮೊಳಗಿನ ಪ್ರತಿಭೆಯನ್ನು 'ರಾಜಾ–ರಾಣಿ–ಗುಲಾಮ' ಎಂಬ ನಾಟಕ ಬರೆಯುವ ಮೂಲಕ ರಂಗಸಾಹಿತ್ಯಕ್ಕೆ ಪಾದಾರ್ಪಣೆ ಮಾಡಿದವರು.

ಕಂಟೆಪ್ಪ ಮಾಸ್ತರರ ರಂಗಭೂಮಿಯ ವಿಶೇಷ ಕೊಡುಗೆ ಎಂದರೆ, ಲಕ್ಷಾಂತರ ರೂಪಾಯಿ ಖರ್ಚಾಗುವ ನಾಟಕಗಳನ್ನು ತಯಾರಿಸದೆ, ಇದ್ದ ಇತಿಮಿತಿಯಲ್ಲೇ ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆ ಸವಾಲುಗಳಿಗೆ ಉತ್ತರ ಕೊಡುವ ಕಡಿಮೆ ಖರ್ಚಿನ ನಾಟಕ ಮಾಡಿಸುವುದು.

ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ, ಸಂಘಟಕರಾಗಿ ಹಳ್ಳಿಯಲ್ಲಿ ನಾಟಕ ಕಲಿಸುವ ಮಾಸ್ತರಾಗಿ ಇವರು ಸಲ್ಲಿಸಿದ ಸೇವೆ ಗಮನಾರ್ಹ. 1965 ರಿಂದ 1985ರ ವರೆಗೂ ಗುಲಬರ್ಗಾ ಬೀದರ ಜಿಲ್ಲೆಗಳ ಗ್ರಾಮೀಣ ಜನರಲ್ಲಿ ಇವರ ನಾಟಕಗಳೆಂದರೆ ಅಚ್ಚು ಮೆಚ್ಚು.

ಇವರು ತಮ್ಮೊಂದಿಗೆ ಅನೇಕ ನಟರನ್ನು, ನಾಟಕ ರಚನಾಕಾರರನ್ನು ಹುಟ್ಟು ಹಾಕಲು ಕಾರಣಕರ್ತರಾಗಿದ್ದಾರೆ. ಶ್ರೀ ಸಿದ್ದಣ್ಣ ಡಿಗ್ಗಿ, ವಿಶ್ವನಾಥ ಬೆಳಗುಂಪಿ, ಶಂಕರ ಕಾಳಗಿ, ಅನಂತ ಜೋಷಿ, ಚಂದ್ರಕಾಂತ ತಾಳಿಕೋಟಿ, ಬಸವರಾಜ ಪಾಟೀಲ, ಸಾಯಬಣ್ಣ ಮುಂತಾದವರು ಶ್ರೀ ಕಂಟೆಪ್ಪ ಮಾಸ್ತರ ಗರಡಿಯಲ್ಲೇ ಬೆಳೆದವರು. ಶಿಕ್ಷಣ ಮತ್ತು ರಂಗಭೂಮಿಗೆ ಇವರು ಜೀವ ಸೆಲೆ ಇದ್ದಂತೆ.

(ಎಸ್‌ಆರ್‌ಜಿ)

ಕಟ್ಟಿಮನಿ ಜಿ.ಬಿ.: ಚಿತ್ರಕಲಾವಿದ. ಕಲಬುರ್ಗಿಯ ಪ್ರಸಿದ್ಧ ಕಲಾ ಸಂಸ್ಥೆ ಐಡಿಯಲ್ ಫೈನ್‌ಆರ್ಟ್‌ನಲ್ಲಿ ಪ್ರವೇಶ ಪಡೆದು, ಇಲ್ಲಿ ಕಲೆಯ ಮೂಲತತ್ವಗಳನ್ನು ಅಭ್ಯಾಸ ಮಾಡಿದರು. ಕಲಾಶಾಲೆಯ ಗುರುವೃಂದದಿಂದ ಶಿಕ್ಷಣ ಪಡೆದ ಇವರು ಮುಂದೆ ಧಾರವಾಡದ ಬಿ.ಕೆ.ಕೆ. ಕಲಾಶಾಲೆಯಲ್ಲಿ ಶಿಕ್ಷಣ ಪೂರ್ತಿಗೊಳಿಸಿ. ಅದೇ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿದ್ದ ಕಲಾಸಂವೇದನೆ, ಸೃಜನಶೀಲತೆ ಸದಾ ಲವಲವಿಕೆಯಿಂದ ಕೂಡಿದ್ದರಿಂದ ಅನೇಕ ಅದ್ಭುತ ಕಲಾ ರಚನೆಗೆ ಕಾರಣವಾಗಿ, ಇವರಿಂದ ಕಲಾಕೃತಿಗಳಲ್ಲಿ ಸೃಜನಶೀಲತೆಗೆ ಅಪ್ಪಿ, ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಗಣೇಶನ ಕಲಾಕೃತಿಗಳನ್ನು ತಮ್ಮ ಕುಂಚದಲ್ಲಿ ವೈವಿಧ್ಯಮವಾಗಿ ಹೊರ ಹೊಮ್ಮಿಸಿದ್ದಾರೆ. ಈ ಕಲಾಕೃತಿಗಳಲ್ಲಿ ರೇಖಾ ಲಾಲಿತ್ಯದೊಂದಿಗೆ ವರ್ಣ ಸಂಯೋಜನೆ ಹಾಗೂ ಮೈವಳಿಕೆ ನೋಡುಗರಿಗೆ ತಮ್ಮೆಡೆ ಸೆಳೆಯುವಲ್ಲಿ ಯಶಸ್ಸು ಕಂಡುಕೊಂಡಂತಿವೆ. ಕಲಾವಿದರ ಸೃಜನಶೀಲತೆಗೆ ಬರೀ ಗಣೇಶನ ಕೃತಿಗಳಿಗೆ ಮಾತ್ರ ಸೀಮಿತವಾಗದೇ, ಸಾಮಾಜಿಕ ಕಳಕಳಿ, ಸ್ತ್ರೀ ಸಂವೇದನೆ, ಶಿಕ್ಷಣ ಮುಂತಾದ ವಿಷಯಗಳಿಂದಾಗಿ ಕಲಾವಿದ ಅಭಿವ್ಯಕ್ತಿ ಮಾಧ್ಯಮದಿಂದ ಮಾಡಿದುದನ್ನು ಕಾಣುತ್ತೇವೆ.

ಸ್ತ್ರೀಯರ ಮೇಲಿನ ದೌರ್ಜನ್ಯ ಸ್ತ್ರೀಯ ಮಾನಸಿಕ ತುಮುಲ, ಶಿಕ್ಷಣದ ಮಹತ್ವವನ್ನು ಸಮಾಜದ ಬೆಳವಣಿಗೆಗೆ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಹಾಗೂ ಸಮಾಜದ ಒಳಿತಿಗಾಗಿ ಕಲಾವಿದನ ಮನದ ತುಡಿತ ಅವನ ಅಭಿವ್ಯಕ್ತಿ ಮಾಧ್ಯಮವಾದ ಕುಂಚಗದ ಮೂಲಕ ವ್ಯಕ್ತಪಡಿಸಿರುವದನ್ನು ಇವರ ಕಲಾಕೃತಿಗಳಲ್ಲಿ ಕಾಣಬಹುದು.

ಯಾವುದೇ ಒಬ್ಬ ಕಲಾವಿದನ ಮನದ ಭಾವನೆಗಳನ್ನು ಅಭಿವ್ಯಕ್ತಿಯ ಮೂಲಕ ಹೊರಬಂದ ಕಲೆಯನ್ನು ಪ್ರದರ್ಶಿಸಲು ಒಂದು ವೇದಿಕೆ ಬೇಕಾಗುತ್ತದೆ. ಅದೇರೀತಿ ಕಟ್ಟಿಮನಿಯವರ ಈ ಕಲಾಕೃತಿಗಳ ಪ್ರದರ್ಶನವನ್ನು ಕಲ್ಬುರ್ಗಿಯಲ್ಲಿ ನಡೆಸಿದ್ದಾರೆ.

(ಎಸ್‌ಪಿಡಬ್ಲ್ಯೂ)

ಕಣಗಳು (ರಾಶಿ): ಹೊಲಗಳಲ್ಲಿ ಧಾನ್ಯ ಒಕ್ಕಣೆಗಾಗಿ ರಚಿಸಿಕೊಂಡ ಅಂಗಳ. ಇದರ ಆಕಾರ–ಚಚ್ಚೌಕ. 'ಕೈಗೆ ಬಂದ ತುತ್ತು ಬಾಯಿಗೂ ಬರಬೇಕಾದರೆ', ರೈತ ತಾನು ಬೆಳೆದ ಬೆಳೆಗಳನ್ನು ಸಂರಕ್ಷಿಸಿ, ಸಂಸ್ಕರಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಬೇಕಾಗುವದೇ ಕಣ. ಒಕ್ಕಲುತನದ ಕಡೆಯ ಪ್ರಕ್ರಿಯೆಯೇ ಇದಾಗಿದೆ. ಬೆಳೆ ಬೆಳೆದ ಮೇಲೆ ಕಟಾವು ಮಾಡಿದ ತೆನೆಗಳಿಗೆ ಸುರಕ್ಷಿತವಾದ ಜಾಗಬೇಕು. ಅದಕ್ಕಾಗಿಯೇ ರೈತನು ವೆಚ್ಚದಾಯಕವಲ್ಲದ, ಹಾಗೂ ತನ್ನ ಸುತ್ತಮುತ್ತಲಿರುವ ವಸ್ತುಗಳನ್ನೇ ಬಳಸಿ ಕಣಗಳ ನಿರ್ಮಾಣ ಮಾಡುತ್ತಾನೆ.


ಕಣಗಳ ನಿರ್ಮಾಣ ಕಾರ್ಯದಲ್ಲೂ ಅನುಭವಸ್ಥರ ಆವಶ್ಯಕತೆ ಇದೆ. ನೀರು ನಿಲ್ಲದ, ಗಟ್ಟಿಯಾದ ಪ್ರದೇಶದಲ್ಲಿ ಎಲ್ಲ ಹಳ್ಳ (ಕಲ್ಲು), ದಿನ್ನೆ, ಕಸಗಳನ್ನೆಲ್ಲ ತೆಗೆದು ಮೇಲ್ಪದರದ ಮಣ್ಣನ್ನು ತೆಗೆದು, ನೀರು ಹೊಡೆದು ಹದವಾಗಿ ಕಲ್ಲಿನಿಂದ ಜಜ್ಜಿ, ಮೇಲೆದ್ದ ಚಿಕ್ಕ ಚಿಕ್ಕ ಕಲ್ಲುಗಳನ್ನೆಲ್ಲ ಒತ್ತಿ ನಂತರ ಸೆಗಣಿಯನ್ನು ಹಾಕಿ, ಎರಡೆತ್ತು, ನಾಲ್ಕೆತ್ತು ಅಥವಾ ಎಂಟೆತ್ತು ಹೀಗೆ ತನಗೆ ಬೇಕಾದ ಅಳತೆಗೆ ಅನುಸಾರವಾಗಿ ಎತ್ತುಗಳನ್ನು ಬಳಸಿ, ಜಾಗವನ್ನು ಗಟ್ಟಿಗೊಳಿಸುವರು. ಒಂದು ದಿನ ನೆಲ ಆರಿದ ಅನಂತರ ಮತ್ತೆ ಸೆಗಣಿಯನ್ನು ಹಾಕಿ ಸಾರಿಸಿ, ಸಿದ್ಧಪಡಿಸಿದ ತಳ ತಳ ಹೊಳೆಯುವ ಜಾಗವೇ ಕಣ.

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು' ಎಂಬಂತೆ ಕಣದ ಮಧ್ಯದಲ್ಲಿರುವ ಮೇಟಿ ಕಂಬವು ರಾಶಿ ಮಾಡುವಾಗ ಎತ್ತುಗಳು ಅಥವಾ ರೋಣಕಲ್ಲು ಕಣದಿಂದ ಆಚೆ ಈಚೆ ಹೋಗದಂತೆ ತಡೆಯುವ ಮುಖ್ಯಸ್ಥನಂತೆ ವರ್ತಿಸುತ್ತದೆ. ಕಟಾವು ಆದ ತೆನೆಗಳನ್ನು ಕಣಕ್ಕೆ ಹಾಕಿ ಎರಡು ಅಥವಾ ಮೂರು ದಿನ ಒಣಗಿಸಿ, ಮೇಟಿ ಕಂಬಕ್ಕೆ ಎತ್ತು ಕಟ್ಟಿ ಹಂತಿ ಹೊಡೆಯುವರು. ಸಂಪೂರ್ಣ ಕಾಳುಗಳು ಬೇರ್ಪಡುವವರೆಗೂ ಹಂತಿಯ ಮೂಲಕ ತುಳಿಸುವರು ಅಥವಾ ರೋಣಗಲ್ಲಿನ ಮೂಲಕ ಎಳೆಸುವರು. ಹೀಗೆ ಕಾಳುಗಳಿಂದ ಬೇರ್ಪಟ್ಟಿರುವ ಸಿಪ್ಪೆ, ರವದಿ, ಇತ್ಯಾದಿ ಕಸ–ಕಡ್ಡಿಗೆ 'ಕಂಕಿ' ಎನ್ನುವರು. ಈ ಕಂಕಿಯನ್ನೆಲ್ಲ ಒಂದೆಡೆ ಸೇರಿಸಿ, ಕಾಳಿನಿಂದ ಕಂಕಿಯನ್ನೆಲ್ಲ ಬೇರ್ಪಡಿಸಿ, ಕಣದ ಹೊರಗೆ ಎಸೆಯುವರು ನಂತರ ಕಾಳುಗಳನ್ನೆಲ್ಲ ಗ್ವಾರಿಯ (ಕಾಳುಗಳನ್ನು ಸುಲಭವಾಗಿ ಒತ್ತಟ್ಟಿಗೆ ಕೂಡಿಸುವ ಉಪಕರಣ) ಮೂಲಕ ಒಂದೆಡೆ ಗುಂಪೆ ಹಾಕುವರು.

ಕಣದಲ್ಲಿಯೇ ನಡೆಯುವ ಮಹತ್ವದ ಮತ್ತೊಂದು ಕೆಲಸವೆಂದರೆ ಕಾಳುಗಳನ್ನೆಲ್ಲ ಗಾಳಿ ಬಿಟ್ಟಾಗ ತೂರುವುದು. ಗೂರುವಲ್ಲಿಯೂ ಕೂಡ ರೈತನ ಜಾಣ್ಮೆ ಅಡಗಿದೆ. ಅತಿ ಹೆಚ್ಚು ಗಾಳಿ ಬಿಟ್ಟಾಗ ನೆಲದಲ್ಲಿ ನಿಂತು, ಅತಿ ಕಡಿಮೆ ಗಾಳಿ ಬಿಟ್ಟಾಗ ಮೂರು ಕಾಲಿನ ಮೆಟ್ಟ ನಾಲಿಗೆಯ ಮೇಲೆ ನಿಂತು ತೂರುವರು. ತೂರಿದ ಕಾಳುಗಳನ್ನು ಕಣದಲ್ಲಿ ಒಬ್ಬರು ಕೆಳಗೆ ಕುಳಿತು ಸೆಳ್ಳ (ಉತ್ತರಾಣಿ ಕಡ್ಡಿಯಿಂದ ತಯಾರಿಸಿದ ಬಾರಿಗೆ) ದಿಂದ ಗುಣಿ ಇದ್ದ ಕಾಳುಗಳನ್ನು, ಸರಿ ಇದ್ದ ಕಾಳುಗಳನ್ನು ಬೇರ್ಪಡಿಸುವರು. ನಂತರ ಕಾಳುಗಳನ್ನು ಗುಣಿಯಿಂದ ಬೇರ್ಪಡಿಸಲು ಕೊಡತೆ (ಬಡಿಯಲು ಬೇಕಾದ ದಪ್ಪನೆಯ ಬಡಿಗೆ)ಯನ್ನು ಬಳಸುವರು. ಹೀಗೆ ಕಣ ತುಂಬಿದ ರಾಶಿಯಿರುವಾಗ, ಹೊಲದಲ್ಲಿಯೇ ಒಲೆ ಹೂಡಿ, ಅಡುಗೆ ಮಾಡಿ, ರಾಶಿಗೆ ಪೂಜೆ ಸಲ್ಲಿಸಿ, ಎಡೆ ಮಾಡಿ, ಕಣದಲ್ಲಿಯೇ ಕುಳಿತು ಊಟ ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಹೀಗೆ ಕಣಗಳು ರೈತನ ಹರುಷದ ಬದುಕಿನ ಹಾದಿಗಳಾಗಿವೆ.

(ಎಸ್‌ಎಸ್‌ಎಂ)

ಕನಕಗಿರಿ: ಕನಕಗಿರಿ: ಅಪೂರ್ವ ಶಿಲ್ಪ ರತಿಯ ತಾಣ. 'ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕು' ಎಂಬ ನಾಣ್ಣುಡಿ ಇದೆ. ಹಂಪಿ ಮತ್ತು ಕನಕಗಿರಿಗೆ ಅಂತರ ಕೆಲವೇ ಕೆಲವು ಕಿಲೋ ಮೀಟರಗಳು. ಬೇಲೂರು–



ಕನಕಾಚಲಪತಿಯ ದೇವಾಲಯದ ಒಳನೋಟ

ಹಳೇಬೀಡುಗಳನ್ನು ಮೀರಿಸುವಂತಹ ಶಿಲ್ಪಕಲೆ ಕನಕಗಿರಿಯಲ್ಲಿವೆ. ವೆಂಕಟಪತಿಬಾವಿ, ನೆಲಮಟ್ಟದ ಬಾವಿಗಳೂ ವಿಜ್ಞಾನಿಗಳಿಗೂ ಸವಾಲಾಗಬಲ್ಲವು. ನೆಲಮಟ್ಟದ ಬಾವಿ, ಆಗಿನ ರಾಣಿಯರ ಸ್ನಾನಗೃಹ ಒಂದೇ ಶಿಲೆಯಲ್ಲಿ ನಿರ್ಮಾಣವಾಗಿದ್ದು. ಯೋಧನೊಬ್ಬ ಸಿಂಹದ ಮೇಲೆ ಸವಾರಿ ಮಾಡುವದು, ಸಿಂಹ ನಿಂತಿರುವುದು, ಆನೆಯ ಸೊಂಡಿಲು ಮೇಲೆ ಅದು ಬಾಯಿ ತೆರೆದಿದ್ದು, ಬಾಯಲ್ಲಿ ಗುಂಡು ಇತ್ತು. ಆದರೆ ನೋಡುವವರಿಲ್ಲದ ಇಂತಹ ಅಪೂರ್ವ ಶಿಲೆಯ ಬಾಯಿ ಒಡೆದು, ತುಂಟ ಹುಡುಗರು ಗುಂಡು ತೆಗೆದಿದ್ದಾರೆ. (ಎಎಂಜಿ)

ಕನಕೇಶ್: ಯುವ ಕಲಾವಿದ. ಪೇಂಟಿಂಗ್ ಹಾಗೂ ಚಿತ್ರಕಲೆಯು ಇವರಿಗೆ ಸಿದ್ಧಿಸಿದೆ. ಈ ಕಲಾವಿದ ಯಾವುದೇ ಗುರುವಿನಲ್ಲೂ ಕಲಿಯಲಿಲ್ಲ, ಯಾರದೇ ಕಲಾಶಾಲೆಯಲ್ಲಿ ಅಭ್ಯಸಿಸಲಿಲ್ಲ ಅಲ್ಲದೆ ಯಾರ ಹಸ್ತ ಸಹಾಯವನ್ನೂ ಬೇಡದೆ ಚಿಕ್ಕವನಿರುವಾಗಲೇ ಚಿತ್ರಕಲೆ ಹಾಗೂ ನಾಮಫಲ ಬರೆಯುವಲ್ಲಿ ಇವರಿಗೆ ಎಷ್ಟು ಆಸಕ್ತಿ ಇತ್ತೋ ಅಷ್ಟೆ ಶ್ರಮವಹಿಸಿ ಚಿಕ್ಕಂದಿನಿಂದಲೇ ಈ ಕಲೆಯನ್ನು ಬರೆಯುವಲ್ಲಿ ಪಳಗಿಕೊಂಡು ಆಸಕ್ತಿಯಿಂದ ತಮ್ಮ ಮನೆಯಲ್ಲಿ ಚಿತ್ರಿಸುತ್ತ ಬರೆಯುತ್ತ ಬಂದು ಈಗ ಯಲಬುರ್ಗಾ ನಗರದಲ್ಲಿಯೇ ಆರ್ಟಿಸ್ಟ್ ಕನಕೇಶ್ ಎಂದು ಗುರುತಿಸಿ ಕೊಂಡಿದ್ದಾರೆ.

ಕುಂಚ ದೇವೋಭವ ಎಂದು ನಂಬಿ ಹಿಡಿದ ಕುಂಚ ವನ್ನು ಕನಕೇಶ್ ಎಂದು ಕೈ ಬೀಡಲಿಲ್ಲ. ಹಾಗೆಯೇ ಕುಂಚವೂ ಸಹ ಇವರ ಕೈ ಬೀಡಲಿಲ್ಲ. ಇವರು ಕಲಾಭಿವ್ಯಕ್ತಿಯ ಸೂಕ್ಷ್ಮ ಸಂವೇದನೆಯನ್ನು ಮೈಗೂಡಿಸಿಕೊಂಡ ಸೃಜನಶೀಲ ಕಲಾವಿದರಾಗಿ ರೂಪಗೊಂಡರು. ನಿಸರ್ಗದ ಸಹಾಯ ಸೌಂದರ್ಯ ಇವರ ಕುಂಚದಿಂದ ಇನ್ನೂ ಹೆಚ್ಚಿನ ಮೆರಗು ಪಡೆಯಿತು. ಅಂಗಡಿ ಮುಂಗಟ್ಟಿನ, ಸರ್ಕಾರಿ ಅರೆ ಸರ್ಕಾರಿ ನಾಮಫಲಕಗಳು ವಿವಾಹ–ಸಭೆ ಸಮಾರಂಭ, ಮನೆ ದೇವಸ್ಥಾನ, ಗೋಡೆಗಳ ಬರಹ ಹಾಗೇ ಚಿತ್ರಿಸುವ ವರ್ಣಚಿತ್ರ ಬರೆಯುವುದು, ಮತ್ತು ಗ್ಲಾಸ್ ಪೇಂಟಿಂಗ್‌ನಲ್ಲಿ ಚಿತ್ರಿಸುವುದು ಹಾಗೂ ಥರ್ಮಕೋಲ್‌ನಿಂದ ಕಟಿಂಗ್ಸ್ ಅಲ್ಲದೇ ಕರಕುಶಲಕಲೆಯಲ್ಲಿ ಪ್ರತಿಯೊಂದು ಕಲೆಯು ಕುಡಿತದ ಸಿಂಚನದಿಂದ ಇವರ ಕೈಚಳಕದಿಂದ ಮಾಡಿದಾಗ ವರ್ಣಸಂಯೋಜನೆಯ ಕಲೆಗಾರಿಕೆಯ ಕುಶಲತೆ ನೋಡುಗರ ಮನ ಸೆಳೆಯುತ್ತದೆ. ಯಾವ ಚಿತ್ರಕಲೆಯ ವಿದ್ಯಾ ಸಂಸ್ಥೆಯಲ್ಲಿಯೂ ಗುರುವಿನ ಮಾರ್ಗದರ್ಶನದಲ್ಲಿಯೂ ಕಲೆಯದೇ ದೇವರ ದೇಣಿಗೆಯಾಗಿ ಬೆಳೆದ ಈ ಯುವ ಕಲಾವಿದ ಕನಕೇಶ್‌ನಿಗೆ ಆ ಕಲಾ ಸರಸ್ವತಿ ನಿಜಕ್ಕೂ ಒಲಿದಿದ್ದಾಳೆ. (ವಿಎಸ್‌ಎಸ್)

ಕಮ್ಮಾರ ಸಾಲೆ (ಕಂಬಾರ): ಗ್ರಾಮೀಣ ಜನರ ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುವವರು. ಮಹಾಭಾರತದ ಬಲರಾಮನ ಆಯುಧ ನೇಗಿಲಾಗಿದ್ದು, ರಾಮಾಯಣದಲ್ಲಿ ನೇಗಿಲಿನಿಂದ ಭೂಮಿಯನ್ನು ಊಳುವಾಗ ಸೀತೆ ದೊರೆತದ್ದು, ಬಸವಣ್ಣನವರ 'ಕಾಶಿ ಕಮ್ಮಾರನಾದ' ಮೌನೇಶ್ವರರ 'ಕಮ್ಮಾರರ ಅಗ್ನಿ ಸೂರ್ಯನ ಪ್ರತೀಕ' ಎನ್ನುವಂತಹ ವಚನಗಳಿಂದ ರಾಮಾಯಣ, ಮಹಾಭಾರತ ಕಾಲದಿಂದ ಇಂದಿನವರೆಗೂ ಸಮಾಜದಲ್ಲಿ ಕಮ್ಮಾರಿಕೆ ಕಾಯಕ ಪ್ರಚಲಿದಲ್ಲಿದ್ದುದನ್ನು ತಿಳಿಯಬಹುದಾಗಿದೆ.

ಪಾಂಚಾಳರಲ್ಲಿ ಒಬ್ಬರಾದ ಕಮ್ಮಾರರು ವಿಶ್ವಕರ್ಮನ ಮಗ ಮನುವಿನ ವಂಶಜರು. ಇಂತಹ ಕಮ್ಮಾರರು ಕೆಲಸ ಮಾಡುವ ಸ್ಥಳವನ್ನು 'ಕಮ್ಮಾರಸಾಲೆ' ಎಂದು ಕರೆಯಲಾಗುತ್ತದೆ. ಇಲ್ಲಿ ಕಮ್ಮಾರರು ಹಳ್ಳಿಯ ಗೃಹಬಳಕೆಯ ವಸ್ತುಗಳು ಕೃಷಿ ಸಲಕರಣೆಗಳನ್ನು ತಯಾರಿಸುತ್ತಾರೆ. ಇತ್ತೀಚೆಗೆ ಯಾಂತ್ರಿಕ ಸಲಕರಣೆಗಳು ತಯಾರಿಕೆ ಕಾರ್ಯವನ್ನು ಸಹ ಮಾಡುತ್ತಾರೆ. ಕಮ್ಮಾರ ಸಾಲೆಯಲ್ಲಿ ಕಮ್ಮಾರರು ತಿದಿ, ಅಡಿಗಲ್ಲು, ಸುತ್ತಿಗೆ, ಇಕ್ಕುಳ, ಬಕ್ಕಸ ಗೋಲು (ಅಗ್ನಿಯಲ್ಲಿ ಇದ್ದಿಲನ್ನು ಸರಿಸುವದಕ್ಕೆ ಬಳಸುವ ಸಾಧನ), ದೊಡ್ಡ ಸುತ್ತಿಗೆ, ಚಿಮ್ಮಟಿಗೆ ಡೊಂಕಿನ ಹಾರಿ, ವಂಕಿ, ಚಾನ, ಬಗ್ಗರಿ, ಮಾಚ್ರಾ, ಪಾಗರ, ನೀರಬಾಗಿ, ಇದ್ದಿಲು ಮುಂತಾದ ಸಲಕರಣೆಗಳನ್ನು ಬಳಸಿ ವಸ್ತುಗಳನ್ನು ತಯಾರಿಸುತ್ತಾರೆ.

ಕಮ್ಮಾರಸಾಲೆ ನಿತ್ಯವು ಕುಲುಮೆ ಪೂಜೆಯೊಂದಿಗೆ ದೈನಂದಿನ ಕಾರ್ಯ ಪ್ರಾರಂಭವಾಗುತ್ತದೆ. ಇಲ್ಲಿ ಯಾವುದೇ ವಸ್ತುವನ್ನು ತಯಾರಿಸಬೇಕಾದರು ಅದಕ್ಕೆ ಬೇಕಾಗುವಷ್ಟು ಕಬ್ಬಿಣವನ್ನು ತೆಗೆದುಕೊಂಡು ಕುಲುಮೆಯಲ್ಲಿಟ್ಟು ಅದರ ಸುತ್ತಲು ಇದ್ದಿಲು ಹಾಕಿ ಮುಚ್ಚುತ್ತಾರೆ. ಸಹಾಯಕನು ತಿದಿಯನ್ನು ಒತ್ತುತ್ತಾನೆ. ಕಬ್ಬಿಣ ಕಾದು ಕೆಂಪಾಗಿ ಹದಕ್ಕೆ ಬರುವವರೆಗೆ ಕಾಯಿಸುತ್ತಾರೆ. ಅನಂತರ ಇಕ್ಕುಳದಿಂದ ಅದನ್ನು ಅಡಿಗಲ್ಲ ಮೇಲಿಟ್ಟು ಚಿಮ್ಮಟಿಗೆ, ಸುತ್ತಿಗೆ ಮಾಚ್ರಾ, ಬಗ್ಗರಿ ಮುಂತಾದವು ಗಳಿಂದ ಬಡಿದು ತಿದ್ದಿ ತೀಡಿ ಬೇಕಾದ ಆಕಾರಕ್ಕೆ ತಂದು ಉಪಕರಣಗಳನ್ನು ಸಿದ್ಧಪಡಿಸುತ್ತಾರೆ. ಸಿದ್ದವಾದ ಮೇಲೆ ಅದನ್ನು ಕಠಿಣ



ಕಮ್ಮಾರಸಾಲೆ (ಕಂಬಾರ)

ಗೊಳಿಸಲು ನೀರಬಾನಿಗೆ ಹಾಕಿ ತಣ್ಣಗೆ ಮಾಡುತ್ತಾರೆ. ಕಬ್ಬಿಣದ ವಸ್ತುಗಳು ಮುರಿದಾಗ ಮುರಿದ ಭಾಗದಲ್ಲಿ ಕಬ್ಬಿಣದ ತುಂಡಿಟ್ಟು 'ಬಳಗಾರ' ಎಂಬ ಒರೆಸೆಯುವ ಸಾಧನ ಸೇರಿಸಿ ಕುಲುಮೆಯಲ್ಲಿ ಕಾಸಿ ಬಡಿಯುವ ಮೂಲಕ ರಿಪೇರಿ ಮಾಡುತ್ತಾರೆ.

ಕಮ್ಮಾರಸಾಲೆಯಲ್ಲಿ ಕುಳ, ಕುಡ, ಗಾಲಿಯಬ್ಬು, ಕುಡ ಗೋಲು, ಕುರ್ಪಿ ಬೆಲ್ಲದ ಕೊಪ್ಪರಿಗೆ, ಸೇರು, ಪಾವು, ಪಡಿ, ಚಟಾಕಿ, ಗಿದ್ದನಿ, ತಕ್ಕಡಿ, ಕಲ್ಲುಗಳು ಘಂಟೆಯ ಕಬ್ಬಿಣದ ನಾಲಿಗೆ ಹೀಗೆ ವ್ಯವಸಾಯ, ಗೃಹ ಬಳಕೆ ಯುದ್ಧ, ವ್ಯಾಪಾರ ಧಾರ್ಮಿಕ ಮುಂತಾದ ವಲಯಗಳಿಗೆ ಸಂಬಂಧಿಸಿದ ವಸ್ತುಗಳು ತಯಾರಾಗುತ್ತವೆ. ಆದ್ದರಿಂದ 'ಕೂಸು ಹುಟ್ಟಿದರು ಕಮ್ಮಾರು ಬೇಕು ಸತ್ತರೂ ಕಮ್ಮಾರ ಬೇಕು' ಎಂಬ ಮಾತು ಪ್ರಚಲಿತದಲ್ಲಿದೆ.

(ಆರ್‌ಎಸ್)

ಕಮ್ಮಾರರು: ಮಾನವ ತನ್ನ ಜೀವನಕ್ಕಾಗಿ ಹಲವು ಬಗೆಯ ವೃತ್ತಿಗಳನ್ನು ನಿರ್ವಹಿಸುತ್ತಾನೆ. ಅವನು ಕೈಗೊಂಡ ವೃತ್ತಿಗಳನ್ನು ಆಧರಿಸಿಯೇ ಜಾತಿಗಳು ಹುಟ್ಟಿಕೊಂಡಿವೆ. ಉದಾ: ಮಡಿಕೆಗಳನ್ನು ಮಾಡುವವನು ಕುಂಬಾರನಾದರೆ, ಬಟ್ಟೆಗಳನ್ನು ಶುಚಿಗೊಳಿಸುವವನು ಮಡಿವಾಳ, ಚಪ್ಪಲಿಗಳನ್ನು ತಯಾರಿಸುವವನು ಚಮ್ಮಾರ ಹೀಗೆ ವ್ಯಕ್ತಿ ಅಥವಾ ಸಮುದಾಯ ಯಾವ ಯಾವ ವೃತ್ತಿಗಳನ್ನು ಕೈಗೊಂಡಿರುತ್ತಾರೆಯೋ ಅವರನ್ನು ಆ ಹೆಸರಿನಿಂದಲೇ ಕರೆಯುವ ಪದ್ಧತಿ ಸಮಾಜದಲ್ಲಿ ರೂಢಿಯಲ್ಲಿರುವಂತೆ ಕಬ್ಬಿಣದ ಕೆಲಸವನ್ನು ಮಾಡುವವನಿಗೆ ಕಮ್ಮಾರ ಎಂದು ಕರೆಯುತ್ತಾರೆ.

ಪಾಂಚಾಳ ಸಮುದಾಯದಲ್ಲಿ ಒಂದು ವೃತ್ತಿಯಾಗಿರುವ ಕಮ್ಮಾರಿಕೆ ಇಂದು ನಿನ್ನೆಯದಲ್ಲ. ಇದಕ್ಕೆ ಶಾಸನ, ಕಾವ್ಯ, ಮೌಖಿಕ ಸಾಹಿತ್ಯದಲ್ಲಿ ಶತಮಾನಗಳಷ್ಟು ಹಿಂದಿನದೆನ್ನ ಬಹುದಾದ ಉಲ್ಲೇಖಗಳು ದೊರೆಯುತ್ತವೆ. ಇತಿಹಾಸದಲ್ಲಿ ಇವರನ್ನು ಕರ್ಮಹರ, ಕಂಬರ, ಕಮ್ಮುರ, ಕಂಬಾರ, ಕುಲುಮೆ ಕಂಬಾರ, ಕಮ್ಮಾರಸಾಲಿ ಎಂಬೆಲ್ಲ ಪರ್ಯಾಯ ಪದಗಳಿಂದ ಕರೆಯಲಾಗಿದೆ. 'ಕೂಸು ಹುಟ್ಟಿದರೆ ಕಮ್ಮಾರಬೇಕು, ಸತ್ತರೆ ಕಮ್ಮಾರಬೇಕು' ಎಂಬ ಕಮ್ಮಾರ ಬಗೆಗಿನ ನಾಣ್ಣುಡಿಯು ಮನುಷ್ಯನ ಹುಟ್ಟಿನಿಂದ ಹಿಡಿದು ಅವನ ಸಾಯುವವರೆಗಿನ ಅಗತ್ಯಗಳನ್ನು ಪೂರೈಸುವಲ್ಲಿ ಕಮ್ಮಾರನ ಮಹತ್ವವನ್ನು ತಿಳಿ ಸುತ್ತದೆ. ಅಂದರೆ ಕಮ್ಮಾರಿಕೆಯ ವೃತ್ತಿಯಿಂದ ಧಾರ್ಮಿಕತೆಗೆ ಸಂಬಂಧಿಸಿದ ಗೃಹೋಪಯೋಗಿ ಉಪಕರಣಗಳು, ಬೇಟೆಯ ಉಪಕರಣಗಳು ಮತ್ತು ಗೃಹೋಪಯೋಗಿ ಉಪಕರಣಗಳು ತಯಾರುಗೊಳ್ಳುತ್ತಿದ್ದು ಅವುಗಳ ಉಪಯೋಗ ಹಾಗೂ ಅಗತ್ಯತೆಗಳನ್ನು ತಿಳಿಸುತ್ತದೆ ಹೀಗಾಗಿಯೇ ಈ ವೃತ್ತಿಯು ಜನಜೀವನದಲ್ಲಿ ಹಾಸುಹೊಕ್ಕಾಗಿದ್ದು ತಲೆತಲಾಂತರದಿಂದಲೂ ಉಳಿದುಕೊಂಡು ಬಂದಿದೆ.

ಪ್ರಾಚೀನ ಕಾಲದಲ್ಲಿ ಯುದ್ಧಕ್ಕೆ ಬೇಕಾದ ಭರ್ಜಿ, ಖಡ್ಗ, ಕತ್ತಿ, ಈಟಿ, ಗುರಾಣಿ, ಅಂಗಾಂಗಗಳ ಕವಚಗಳಿಗೆ ಅಲಂಕರಿಸುವ ಸರಪಳಿಗಳನ್ನು ತಯಾರಿಸುತ್ತಿದ್ದರು. ಅಲ್ಲದೆ ಕಮ್ಮಾರರೇ ಬೇಟೆಗೆ ಸಂಬಂಧಿಸಿದ ಈಟಿ ಬಿಲ್ಲೆ ಖಡ್ಗ, ಕತ್ತಿ ವಿವಿಧ ಪ್ರಕಾರದ ಬಾಣಗಳಿಗೆ ತುದಿಗಳನ್ನು ತಯಾರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಈ ಯುದ್ಧ ಮತ್ತು ಬೇಟೆ ಸಂಸ್ಕೃತಿಯು ಕಣ್ಮರೆಯಾಗಿದೆ ಅಲ್ಲದೆ ಅದರ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಯುದ್ಧಗಳಲ್ಲಿ ಬಳುಸುತ್ತಿದ್ದ ಕತ್ತಿ ಅಥವಾ ಖಡ್ಗಕ್ಕೆ ಬದಲಾಗಿ ಬಂದೂಕು, ಸಿಡಿಮದ್ದುಗಳು, ಅಂಗಾಂಗಗಳ ಕವಚಗಳ ಜಾಗದಲ್ಲಿ ಗುಂಡು ನಿರೋಧಕ ವಸ್ತ್ರಗಳು ಸ್ಥಾನ ಪಡೆದುಕೊಂಡಿವೆ. ಪ್ರಾಣಿ–ಪಕ್ಷಿಗಳನ್ನು ಬೇಟೆಯಾಡುವುದೇ ಕಾನೂನು ಬಾಹಿರವಾಗಿರುವುದರಿಂದ ಬೇಟೆಯ ಉಪಕರಣಗಳ ಅಗತ್ಯತೆಯೇ ಇಲ್ಲವಾಗಿದೆ. ಹಾಗಾಗಿ ಇಂದು ಕಮ್ಮಾರಿಕೆಯು ಕೃಷಿ ಕೆಲಸದಲ್ಲಿ ಹೆಚ್ಚಾಗಿ ಬಳಕೆಯಾಗುತ್ತಲಿದೆ. ಕೃಷಿಗೆ ಸಂಬಂಧಿಸಿದಂತೆ ಕುಡ, ಕಳೆ ಕೀಳಲು ಬಳಸುವ ಕುರ್ಚಿಗೆ, ಉಡುಗೋಲು, ಕೊಡ್ಲಿ, ಎತ್ತುಗಳಿಗೆ ಮೇವನ್ನು ಕತ್ತರಿಸಲು ಬಳಸುವ ಕತ್ತರಿ ಸಲಿಕೆ ಗುದ್ದಲಿ, ಪಿಕಾಸಿ, ಆರೆ ಕುಡುಗೋಲು (ಹುಣಸೆಕಾಯಿ ಕೀಳಲು ಬಳಕೆ), ಹೀಗೆ ಕೃಷಿಗೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಕೃಷಿಕರು ಕಮ್ಮಾರನಿಂದ ಮಾಡಿಸಿ ಕೊಳ್ಳುತ್ತಾರೆ. ಕಮ್ಮಾರಿಕೆಯ ಕೆಲಸದಲ್ಲಿ ಬಂಡಿಗೆ ಸಂಬಂಧಿಸಿದಂತೆ ಚಕ್ರಕ್ಕೆ ಹಳಿಹಾಕುವುದು ತುಂಬ ಕಷ್ಟಕರವಾದ ಕೆಲಸ. ಎರಡು ಇಂಚು ದಪ್ಪ, ಐದು ಅಡಿ ಉದ್ದದ ಮೆಟ್ಟ ಕಬ್ಬಿಣವನ್ನು, ಕಾಲಮಾನಕ್ಕೆ ತಕ್ಕಂತೆ ಹೊಂದಿಕೊಳ್ಳುವ ಹಾಗೆ ಬಂಡಿಯಚಕ್ರವನ್ನು ತಯಾರಿಸುವಲ್ಲಿ ಕಮ್ಮಾರನಿಗೆ ದೈಹಿಕ ಶ್ರಮದ ಜೊತೆಗೆ ಪ್ರತಿಭೆಯೂ ಕೂಡ ಅತಿ ಮುಖ್ಯವಾಗುತ್ತದೆ.

ಹೀಗೆ ಕೃಷಿ ಉಪಕರಣಗಳ ಜೊತೆಗೆ ಗೃಹೋಪಯೋಗಿ ವಸ್ತುಗಳಾದ ಈಳಿಗೆ, ಚಮಚ, ಊದುಗೊಳವೆ, ಬಾಗಿಲು ಚಿಲಕ, ಕಬ್ಬಿಣದ ಸಲಾಕೆ, ಆರೆ ಕೋಲು, ಕತ್ತರಿ ಸಾಲೆ ಮಣಿ ಮೊದಲಾದವು ಹಾಗೂ ಅಳತೆಯ ಮಾಪನಗಳಾಗಿರುವ ಸೇರು, ಅಚ್ಚೇರು, ಪಡಿ, ಪಾವು, ತಕ್ಕಡಿ ಅಳತೆ ಕಲ್ಲು ಮೊದಲಾದ ಅತ್ಯುಪಯುಕ್ತ ಸಾಮಗ್ರಿಗಳನ್ನು ತಯಾರಿಸಿಕೊಡುತ್ತಿದ್ದರು. ಇವುಗಳ

ಜೊತೆ ಜೊತೆಗೆ ದೇವಾಲಯಗಳಿಗೆ ಬೇಕಾಗುವ ಗಂಟೆಗಳು, ಖಡ್ಗ, ಪ್ರಾಣಿ ಬಲಿಗಾಗಿ ಬಳಸುವ ಮಚ್ಚು, ಹತಾರಗಳನ್ನು ತಯಾರಿಸಿಕೊಡುವವರು ಕಮ್ಮಾರರೇ ಆಗಿದ್ದಾರೆ. ಹೀಗೆ ಈ ಕಮ್ಮಾರರು ಜನಜೀವನದ ಎಲ್ಲಾ ಹಂತಗಳಲ್ಲಿಯೂ ಒಡನಾಡಿಗಳಾಗಿರುವದನ್ನು ಕಾಣಬಹುದಾಗಿದೆ. (ಎನ್‌ಎಚ್)

ಕಮತಾಣ: ಕನ್ನಡ ನಾಡಿನಲ್ಲಿ ಜೈನ ಧರ್ಮದ ಅಧ್ಯಯನಕ್ಕೆ ಈ ನಾಡಿನ ಕಿರೀಟ ಪ್ರಾಯವಾಗಿರುವ ಬೀದರ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ಈ ಜಿಲ್ಲೆಯಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಜೈನ ಧರ್ಮದ ಶಾಸನಗಳು, ಜಿನಾಲಯಗಳು, ಶಿಲ್ಪಗಳು ಇತ್ಯಾದಿ ವಿವಿಧ ಪುರಾತತ್ವ ಕುರುಹುಗಳ ಹಿನ್ನೆಲೆಯಲ್ಲಿ ಜೈನ ಧರ್ಮದ ಪ್ರಾಚೀನತೆ ಕ್ರಿ.ಶ. ಸುಮಾರು 11ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಈ ಜಿಲ್ಲೆಯ ಪ್ರದೇಶವು ಕ್ರಿ.ಶ. ಸುಮಾರು 12ನೆಯ ಶತಮಾನದಿಂದೀಚೆಗೆ ತುಘಲಕ್, ಬಹಮನಿ, ಸುಲ್ತಾನ, ಮೊಗಲ, ಹೈದ್ರಾಬಾದಿನ ನಿಜಾಮ ಮೊದಲಾದ ಮುಸ್ಲಿಂ ಅರಸು ಮನೆತನಗಳ ಆಳ್ವಿಕೆಗೊಳಪಡುತ್ತ ಬಂದಿರುವುದು ಆ ಮನೆತನಗಳಿಗೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ಹಾಗೂ ಧಾರ್ಮಿಕ ಮತ್ತು ಲೌಕಿಕ ಸ್ಮಾರಕಗಳಿಂದ ಸ್ಪಷ್ಟವಾಗುತ್ತದೆ. ಆ ಮನೆತನಗಳ ಆಳ್ವಿಕೆಯ ಸಂದರ್ಭದಲ್ಲಿ ಈ ಜಿಲ್ಲೆಯ ಪ್ರದೇಶದಲ್ಲಿ ಜೈನ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳು ಸ್ಥಗಿತವಾದವು. ಅಲ್ಲದೇ ನೂರಾರು ಪ್ರಾಚೀನ ಜಿನಾಲಯಗಳು, ಶಿಲ್ಪಗಳು ಶಾಸನಗಳು ಹಾಳಾದವು. ಹಾಳಾದ ಈ ಅವಶೇಷಗಳು ಆ ಮನೆತನದ ಸ್ಮಾರಕಗಳಿಗೆ ಮಾಧ್ಯಮಗಳಾ ಗಿವೆ. ಈ ಜಿಲ್ಲೆಯ ಪ್ರದೇಶದಲ್ಲಿ ನೆಲೆಸಿದ್ದ ಜೈನ ಧರ್ಮಿಯರು ತಮ್ಮ ರಕ್ಷಣೆಗಾಗಿ ಮುಂಬಯಿ–ಕರ್ನಾಟಕ ಪ್ರದೇಶದೆಡೆಗೆ ವಲಸೆ ಹೋಗಿ ಕೃಷ್ಣಾನದಿ ತೀರದಗುಂಟ ನೆಲೆಸಿದರು. ಕೆಲವರು ಸಮಕಾಲೀನ ಇತರ ಧರ್ಮಗಳಿಗೆ ಮತಾಂತರರಾದರು. ಹೀಗಾಗಿ ಇಂದು ಜಿಲ್ಲೆಯಲ್ಲಿ ಜೈನ ಅವಶೇಷಗಳ ಪ್ರಮಾಣ ಮತ್ತು ಜೈನ ಧರ್ಮೀಯರ ಸಂಖ್ಯೆ ಅತೀ ವಿರಳವಾಗಿವೆ.

ಜೈನ ಧರ್ಮವು ಕನ್ನಡ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಹಾಸು ಹೊಕ್ಕಾಗಿ ಬೆಳೆದು ಬರಲು ಜೈನ ಮುನಿಗಳು, ಭಟ್ಟಾರಕರು, ಕಂತಿಯರು ಕವಿಗಳ ಪಾತ್ರ ಬಹುಮುಖ್ಯವಾಗಿದೆ. ಈ ನಾಡನ್ನಾಳಿದ ವಿವಿಧ ಅರಸು ಮಹಾಮಂಡಳೇಶ್ವರ ಮಹಾಸಾಮಂತ ಇತ್ಯಾದಿ ಮನೆತನಗಳ ಅರಸರು, ರಾಣಿಯರು ಅಧಿಕಾರಿಗಳು ಮೊದಲಾದವರ ಕೊಡುಗೆಯೂ ಅಪಾರವಾಗಿದೆ. ಅವರೆಲ್ಲರ ಆಶ್ರಯ, ಪ್ರೋತ್ಸಾಹದಡಿಯಲ್ಲಿ ಬೀದರ ಜಿಲ್ಲೆಯ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಅಳವಾಯಿ, ಉಜ್ಜಳಂಬ, ಕಮತಾಣ, ಕಾಡವಾದ, ಗೋರಟಾ, ಬಸವಕಲ್ಯಾಣ, ಬರೂರು, ಭಾಲ್ಕಿ, ಬೀದರ ಧನ್ನೂರಾ, ಹಲಸಿ, ಮಿರಕಲ್ಲ, ಚಿಟಗುಪ್ಪ ಹುಮನಾಬಾದ, ಔರಾದ, ಜವಳಗಾ, ಮೋರಖಂಡಿ ಮೊದಲಾದ ಕೇಂದ್ರಗಳಲ್ಲಿ ಜೈನ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳು ಅವಿಚ್ಛಿನ್ನವಾಗಿ ಬೆಳೆದು ಬಂದಿವೆ. ಈ ಕೇಂದ್ರಗಳಲ್ಲಿ ಕಮತಾಣವು ಇಂದಿಗೂ ಅತಿಶಯ ಮತ್ತು ಜಾಗೃತ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ.

ಬೀದರ ತಾಲ್ಲೂಕಿನಲ್ಲಿರುವ ಕಮತಾಣ ಬೀದರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಶ್ರವಣ ಬೆಳಗೊಳ, ಕೊಪ್ಪಳ, ಮುಳಗುಂದ, ಬಂಕಾಪುರ ಮೊದಲಾದ ಕೆಲವು ಕೇಂದ್ರಗಳಂತೆ ಜೈನ ಮುನಿಗಳು ಮತ್ತು ಶ್ರಾವಕರ ಸಮಾಧಿ ಮರಣದ ಕೇಂದ್ರವಾಗಿತ್ತು. ಹೀಗಾಗಿ ಈ ಕೇಂದ್ರದಲ್ಲಿ ಅನೇಕ ಮುನಿಗಳು ಮತ್ತು ಶ್ರಾವಕರು ಸಲ್ಲೇಖನ ವ್ರತವನ್ನು ಧರಿಸಿ ಸಮಾಧಿಮರಣ ಹೊಂದಿರುವುದನ್ನು ಈ ಗ್ರಾಮದ ಪರಿಸರದಲ್ಲಿರುವ ಪ್ರಾಚೀನ ಪಾದ ಚಿಹ್ನೆಗಳ ನಿಷಿಧಿ ಕುರುಹುಗಳು ಧೃಡಪಡಿಸುತ್ತವೆ. ಕಲ್ಯಾಣದ ಚಾಳುಕ್ಯ ಮನೆತನದ ಆಳ್ವಿಕೆಯ ಕಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಈ ಗ್ರಾಮದಲ್ಲಿ ಪಾರ್ಶ್ವನಾಥನ ಜಿನಾಲಯ ನಿರ್ಮಾಣವಾಗಿತ್ತು. ಪ್ರಾಯಶಃ ಆ ಜಿನಾಲಯವು ಕಮಠ ಪಾರ್ಶ್ವನಾಥ ಜಿನಾಲಯ ಎಂದು ಕರೆಯಲ್ಪಡುತ್ತಿತ್ತು. ಆ ಜಿನಾಲಯದ ಕಮಠ ಎಂಬ ಪೂರ್ವಪದವೇ ಈ ಸ್ಥಳಕ್ಕೆ ಕಮತಾಣ ಎಂದು ಗ್ರಾಮನಾಮ ರೂಢಿಗತವಾದಂತೆ ತೋರುತ್ತದೆ. ಕಮತಾಣ=ಖಮ್ಮ ಠಾಣ ಪ್ರಾಕೃತಭಾಷೆಯಲ್ಲಿ ಖಮ್ಮ ಎಂದರೆ ಕ್ಷಮಾ, ಠಾಣ ಎಂದರೆ ಸ್ಥಾನ. ಏಕೆಂದರೆ ಇಲ್ಲಿನ ಜಿನಮುನಿಗಳ ನೆಲೆಯಲ್ಲಿ ಕ್ಷಮೆಗೆ ಮೊದಲಸ್ಥಾನ, ಜೀವದಲ್ಲಾದ ಪ್ರಮಾದಗಳಿಗೆ ಪ್ರಾಯಶ್ಚಿತ ಹಾಗೂ ಕ್ಷಮೆ ಇಲ್ಲೆ ಲಭಿಸುತ್ತಿದ್ದ ಕಾರಣ ಈ ಠಾಣ ಖಮ್ಮ ಠಾಣ ಕಮತಾಣ ಆಗಿದೆ ಎಂದು ಡಿ.ಎನ್. ಅಕ್ಕಿಯವರು ತರ್ಕಿಸಿದ್ದಾರೆ. ಈ ಜಿನಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ಸ್ವರೂಪವನ್ನು ಪಡೆದಿದೆ. ಆದರೆ ಜಿನಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವು ಇಂದಿಗೂ ಮೂಲ ಸ್ವರೂಪದಲ್ಲಿ ಉಳಿದು ಬಂದಿದೆ.

ಪಾರ್ಶ್ವನಾಥ ತೀರ್ಥಂಕರನ ಶಿಲ್ಪ: ಬೀದರ ಜಿಲ್ಲೆಯ ಪ್ರದೇಶದಲ್ಲಿ ಮುಸ್ಲಿಂ ಅರಸು ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ರಕ್ಷಣೆಯ ದೃಷ್ಟಿಯಿಂದ ಈಗಿರುವ ಜಿನಾಲಯದ ನೆಲಮಾಳಿಗೆಯಲ್ಲಿ ಪ್ರತಿಷ್ಠಾಪಿಸಲಾಗಿತ್ತು. 1987ರಲ್ಲಿ ಆಚಾರ್ಯ 108 ಶ್ರೀ ಶ್ರುತ ಸಾಗರ ಮುನಿಗಳು ವಿಹಾರ ಕೈಗೊಂಡು ಕಮತಾಣ ಗ್ರಾಮಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಈ ಶಿಲ್ಪವನ್ನು ನೆಲಮಾಳಿಗೆ ಯಿಂದ ಹೊರತೆಗೆಯಿಸಿ ಎತ್ತರವಾದ ವೇದಿಕೆಯ ಮೇಲೆ ಪ್ರತಿಷ್ಠಾಪನೆ ಮಾಡಿಸಿದರು. ಕಪ್ಪುಮಿಶ್ರಿತ ನೀಲಿ ಛಾಯೆಯ ಬಳಪದ ಶಿಲೆಯಲ್ಲಿ ಕಂಡಿರಿಸಲ್ಪಟ್ಟಿರುವ ಈ ಶಿಲ್ಪವು 115 ಸೆಂ.ಮೀ. ಎತ್ತರ ಮತ್ತು 55 ಸೆಂ.ಮೀ ಅಗಲವಾಗಿದೆ. ಪರ್ಯಂಕಾಸನದಲ್ಲಿರುವ ಪಾರ್ಶ್ವನಾಥನ ಶಿರದ ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಮೇಲ್ಭಾಗದಲ್ಲಿ ಏಳು ಹೆಡೆಗಳ ಸರ್ಪ ಆಶ್ರಯವೊಡ್ಡಿದೆ. ಪಾರ್ಶ್ವನಾಥನ ಎದೆಯ ಮೇಲೆ ಶ್ರೀವತ್ಸ ಚಿಹ್ನೆಯನ್ನು ತೋರಿಸಲಾಗಿದೆ.

ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲೆ ಎರಡು ಸಾಲುಗಳ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಅಪ್ರಕಟಿತ ಶಾಸನವಿದೆ. ಇದು ಶ್ರೀ ಮೂಲಸಂಘ ಪರಂಪರೆಯ ರೇಚಿಸೆಟ್ಟಿ ಎಂಬಾತ ಈ ಶಿಲ್ಪವನ್ನು ಪ್ರತಿಷ್ಠಾಪಿಸಿದ ಎಂಬ ವಿವರ ವನ್ನೊಳಗೊಂಡಿದೆ. ಪ್ರಸ್ತುತ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಇದರ ಪಾದಪೀಠದ ಮೇಲಿರುವ ಶಾಸನ ಹಲವು ದೃಷ್ಟಿ ಗಳಿಂದ ಮಹತ್ವದ್ದೆನಿಸುತ್ತದೆ. ಕನ್ನಡ ನಾಡಿನಲ್ಲಿರುವ ಹಲವು ಅಪರೂಪದ ಪ್ರಾಚೀನ ಪಾರ್ಶ್ವನಾಥ ತೀರ್ಥಂಕರನ ಶಿಲ್ಪಗಳಲ್ಲಿ ಪ್ರಸ್ತುತ ಶಿಲ್ಪವು ಒಂದಾಗಿದೆ. ಕೆಲವು ಪ್ರಾಚೀನ ಜೈನಾಗಮಗಳ (ಆಶಾಧಾರನ ಪ್ರತಿಷ್ಠಾಸಾರೋದ್ಧಾರ, ಜಿನೇಂದ್ರನ ಕಲ್ಯಾಣಾ ಭ್ಯುದಯ ಇತ್ಯಾದಿ) ನಿರ್ದೇಶನದಂತೆ ರೂಪ, ಲಕ್ಷಣ, ಪ್ರಮಾಣ, ಅಸನಾದಿಗಳಲ್ಲಿ ಕಂಡರಿಸಲ್ಪಟ್ಟಿರುವ ಈ ಶಿಲ್ಪ ಬಾಹ್ಯ ಸೌಂದರ್ಯಕ್ಕಿಂತ ಅಂತರ್ಮುಖಿ ಸೌಂದರ್ಯದೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಿದೆ. ಪಾರ್ಶ್ವನಾಥನ ವೀತರಾಗತೆ, ಗಾಂಭೀರ್ಯ, ಸಂಯಮ, ಪ್ರಶಾಂತತೆ, ಪ್ರಸನ್ನತೆ, ವೈರಾಗ್ಯ, ತ್ಯಾಗ, ಧ್ಯಾನಮುದ್ರೆ, ತಪೋತನ್ಮಯತೆ ಮೊದಲಾದುಗಳು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಹೀಗಾಗಿ ಈ ಶಿಲ್ಪವು ಮುನಿಗಳು, ಶ್ರಾವಕರು ಮತ್ತು ಜೈನಾಭಿನಾನಿಗಳನ್ನು ತನ್ನೆಡೆಗೆ ಆಕರ್ಷಿಸಿ ಅವರಿಗೆ ಆತ್ಮ ಕಲ್ಯಾಣವನ್ನು ಸಾಧಿಸಿಕೊಳ್ಳಲು ಸ್ಫೂರ್ತಿ ಮತ್ತು ಪ್ರೇರಣೆದಾಯಕವಾಗಿದೆ. ಪಾರ್ಶ್ವನಾಥ ತೀರ್ಥ ಕರನ ಎದೆಯ ಮೇಲೆ ಶ್ರೀವತ್ಸ ಚಿಹ್ನೆಯನ್ನು ತೋರಿಸಿರುವುದು ಗಮನಾರ್ಹವಾಗಿದೆ. ಉತ್ತರ ಭಾರತದ ಸಂದರ್ಭದಲ್ಲಿ ತೀರ್ಥಂಕರರ ಪ್ರಾಚೀನ ಶಿಲ್ಪಗಳಲ್ಲಿ ಶ್ರೀವತ್ಸ ಚಿಹ್ನೆಯನ್ನು ತೋರಿ ಸುವುದು ರೂಢಿಯಲ್ಲಿತ್ತು. ಆ ಪರಂಪರೆ ದಕ್ಷಿಣ ಭಾರತದಲ್ಲಿ ರೂಢಿಯಲ್ಲಿರಲಿಲ್ಲ. ಆದರೆ ಹೈದರಾಬಾದ-ಕರ್ನಾಟಕ ಪ್ರದೇಶ ದಲ್ಲಿರುವ ಕ್ರಿ.ಶ. ಸುಮಾರು 11-12ನೆಯ ಶತಮಾನದ ಹಲವು ತೀರ್ಥಂಕರರ ಶಿಲ್ಪಗಳಲ್ಲಿ ಲಾಂಛನ, ಶ್ರೀವತ್ಸ ಇತ್ಯಾದಿ ಕೆಲವು ಉತ್ತರ ಭಾರತದ ಲಕ್ಷಣಗಳು ಗೋಚರಿಸುತ್ತವೆ. ಹೀಗಾಗಿ ಈ ಪ್ರದೇಶದಲ್ಲಿ ಉತ್ತರ ಭಾರತದ ಶಿಲ್ಪಿಗಳು ಕಾರ್ಯನಿರ್ವಹಿಸಿರ ಬಹುದು. ಇಲ್ಲವೇ ಈ ಪ್ರದೇಶದ ಶಿಲ್ಪಿಗಳು ಉತ್ತರ ಭಾರತದ ಶಿಲ್ಪಗಳ ಪ್ರಭಾವಕ್ಕೊಳಗಾಗಿರ ಬಹುದು. ಶ್ರೀವತ್ಸ ಚಿಹ್ನೆಯ ತೀರ್ಥಂಕರರ 1008 ಶುಭ ಲಕ್ಷಣಗಳಲ್ಲಿ ಒಂದಾಗಿದೆ. ಇದು ಪುನರ್ಜನ್ಮ ಚಕ್ರದಿಂದ ಪಾರಾಗಿ ಮುಕ್ತಿಯನ್ನು ಸಂಪಾದಿಸಿದ ಸಿದ್ಧ ಪರಮೇಷ್ಠಿಗಳಿಗೆ ಮಾತ್ರ ಇರುತ್ತದೆ. ತೀರ್ಥಂಕರರು ಅಂತರಂಗ ಮತ್ತು ಬಹಿರಂಗ ಸಂಪತ್ತುಳ್ಳವರೂ, ಬಹಿರಂಗವಾಗಿ ಸಮವಸರಣ ಮಂಟಪ ವೈಭವ ಸಂಪತ್ತಿನಿಂದ ಶೋಭಿಸುತ್ತಿ ರುವವರೂ, ಅನಂತ ದರ್ಶನ, ಅನಂತಜ್ಞಾನ, ಅನಂತಸುಖ, ಅನಂತವೀರ್ಯ ಎಂಬ ನಾಲ್ಕು ಅಂತರಂಗದ ಅನಂತ ಚತುಷ್ಟಯ ಸಂಪತ್ತುಳ್ಳವರೆಂದು ಶ್ರೀವತ್ಸ ಚಿಹ್ನೆಯ ತಾತ್ಪರ್ಯ ವಾಗಿದೆ. ಈ ಎಲ್ಲ ಪ್ರತಿಮಾ ಲಕ್ಷಣಗಳನ್ನು ಮೈಗೂಡಿಸಿಕೊಂಡಿ ರುವ ಈ ಶಿಲ್ಪವು, ಪಾರ್ಶ್ವನಾಥ ತೀರ್ಥಂಕರನು ಕೇವಲ ಜ್ಞಾನದ ತರುವಾಯ ಸಮವಸರಣ ಮಂಟಪದ ಗಂಧಕುಟಿಯಲ್ಲಿ ಆಸೀನನಾಗಿ ಸಕಲ ಜೀವಿಗಳನ್ನುದ್ದೇಶಿಸಿ ಪ್ರಥಮೋಪದೇಶದಲ್ಲಿ ತೊಡಗಿರುವುದನ್ನು ಪ್ರತಿನಿಧಿಸುತ್ತದೆ.

ಬೀದರ ಜಿಲ್ಲೆಯಲ್ಲಿ ಇದುವರೆಗೆ ಹದಿನೇಳು ಜೈನ ಶಾಸನ ಗಳು ಬೆಳಕಿಗೆ ಬಂದಿವೆ. ಪ್ರಸ್ತುತ ಪಾದಪೀಠ ಶಾಸನವು ಈ ಸಂಖ್ಯೆಯಲ್ಲಿ ಹದಿನೆಂಟಕ್ಕೇರಿಸಿದೆ. ಶಾಸನೋಕ್ತ ಮೂಲಸಂಘವು ಕನ್ನಡ ನಾಡಿನಲ್ಲಿ ಪ್ರಚಲಿತದಲ್ಲಿದ್ದ ವಿವಿಧ ಮುನಿ ಸಂಘಗಳಲ್ಲಿ (ಯಾಪನೀಯ ಸಂಘ, ಮನ್ನಾಟಸಂಘ ಇತ್ಯಾದಿ) ಅತೀ ಪ್ರಾಚೀನ ಸಂಘವಾಗಿದೆ. ಇದನ್ನು ದ್ರಾವಿಡ ಸಂಘ, ದ್ರವಿಳ ಸಂಘ ಎಂದಿತ್ಯಾದಿಯಾಗಿಯೂ ಕರೆಯಲಾಗುತ್ತಿತ್ತು. ಬೀದರ ಜಿಲ್ಲೆಯ ಪ್ರದೇಶದಲ್ಲಿ ಮೂಲಸಂಘ ಪರಂಪರೆಯ ಮುನಿಗಳು, ಭಟ್ಟಾರಕರು, ಕಂತಿಯರ ವಿಹಾರ ಮತ್ತು ಪ್ರಭಾವ ವ್ಯಾಪಕ ವಾಗಿತ್ತು. ಆ ಮುನಿಗಳ ಉಪದೇಶ ಮತ್ತು ಪ್ರೇರಣೆಯಿಂದ ಸಮಕಾಲೀನ ಆಳರಸರು, ಅಧಿಕಾರಿಗಳು, ವರ್ತಕರು, ಶ್ರಾವ ಕರು, ಜೈನಾಭಿಮಾನಿಗಳು ಈ ಜಿಲ್ಲೆಯಲ್ಲಿ ಜೈನ ಧರ್ಮದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಈಗಾ ಗಲೇ ಈ ಜಿಲ್ಲೆಯಲ್ಲಿ ಬೆಳಕಿಗೆ ಬಂದಿರುವ ಜೈನ ಶಾಸನಗಳು ಈ ವಿಚಾರವನ್ನು ಸ್ಪಷ್ಟಪಡಿಸುತ್ತವೆ. ಅಂತವರಲ್ಲಿ ಪ್ರಸ್ತುತ ಪಾದಪೀಠ ಶಾಸನೋಕ್ತ ರೇಚಿಸೆಟ್ಟಿಯೂ ಒಬ್ಬನಾಗಿದ್ದಾನೆ. ಅಂತಹ ವಿವಿಧ ಜೈನ ಚಟುವಟಿಕೆಗಳು ಇಂದಿಗೂ ಈ ಜಿಲ್ಲೆಯಲ್ಲಿ ಅವಿಚ್ಛಿನ್ನವಾಗಿ ಮುಂದುವರೆದಿವೆ.


ಹೀಗೆ ಕ್ರಿ.ಶ. ಸುಮಾರು 12ನೆಯ ಶತಮಾನದ ಪೂರ್ವ ದಿಂದಲೂ ಬೀದರ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಕಮಠಾಣ ಕೇಂದ್ರದ ಕೊಡುಗೆ ಜೈನ ಧರ್ಮದ ಪ್ರಾದೇಶಿಕ ಅಧ್ಯಯನಕ್ಕೆ ಒಂದು ದಿಕ್ಸೂಚಿಯಾಗಿದೆ. ಈ ಕೇಂದ್ರವು ಕೆಲವು ಕಾಲ (?) ಜೈನ ವಿದ್ಯಾಕೇಂದ್ರವಾಗಿಯೂ ಮೆರೆದಿದೆ. ಪರಮಪೂಜ್ಯ ಶ್ರೀ ಜಯಭದ್ರಮುನಿ, ಪರಮಪೂಜ್ಯ ಶ್ರೀ ಶ್ರುತಸಾಗರ ಮುನಿ, ಕ್ಷುಲಕ ಶ್ರೀ ಅಜಿತಸಾಗರ ಮುನಿ ಮೊದಲಾದ ಕೆಲವು ಮುನಿಗಳು ಆಗಾಗ ಈ ಕೇಂದ್ರಕ್ಕೆ ಆಗಮಿಸಿ ಜಿಲ್ಲೆಯ ಜೈನ ಧರ್ಮಿಯರನ್ನು ಜಾಗೃತಗೊಳಿಸಿ ಇದನ್ನು ಪ್ರಸಿದ್ಧ ಕ್ಷೇತ್ರವನ್ನಾಗಿ ರೂಪಿಸಲು ಪ್ರೇರಣೆ ನೀಡಿದ್ದಾರೆ. ಅದರ ಫಲವಾಗಿ ಜಿಲ್ಲೆಯ ಜೈನ ಧರ್ಮಿಯರು ಸಮಿತಿಯೊಂದನ್ನು ಮಾಡಿಕೊಂಡು ಕ್ಷೇತ್ರದ ಅಭಿವೃದ್ಧಿಯತ್ತ ವಿಶೇಷ ಗಮನ ಹರಿಸಿದ್ದಾರೆ. ಇದರಿಂದ ಈ ಕ್ಷೇತ್ರದಲ್ಲಿ ಪ್ರತಿವರ್ಷ ಮಾಘ ಶುದ್ಧ ಪಂಚಮಿಯಿಂದ ಸಪ್ತಮಿವರೆಗೆ ವಾರ್ಷಿಕ ರಥೋತ್ಸವ ಕಾರ್ಯ ಕ್ರಮ ಜರುಗುತ್ತಿದೆ. ಜೊತೆಗೆ ವಸತಿಕೋಣೆಗಳು, ಪಾಕಶಾಲೆ, ಸಭಾಭವನ, ಮಾನಸ್ತಂಭ, ಶ್ರುತಜ್ಞಾನ ವಿದ್ಯಾರ್ಥಿ ನಿಲಯಗಳ ನಿರ್ಮಾಣವನ್ನು ಕೈಗೊಳ್ಳಲಾಗುತ್ತದೆ. ಈ ಕೇಂದ್ರದೊಂದಿಗೆ ಜೈನ ಧರ್ಮಿಯರಷ್ಟೇ ಅಲ್ಲದೇ ಅನ್ಯ ಧರ್ಮೀಯರೂ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ. ಪ್ರಸ್ತುತ ಪಾರ್ಶ್ವನಾಥ ತೀರ್ಥಂಕರನ ದರ್ಶನದಿಂದ ಕೆಲವರ ಜೀವನದಲ್ಲಿ ಜೀವಂತ ಪವಾಡ ಸದೃಶ್ಯಗಳೂ ಜರುಗಿವೆ. ಹಾಗಾಗಿ ಈ ಕೇಂದ್ರವು ಅತಿಶಯ ಮತ್ತು ಜಾಗೃತ ಕ್ಷೇತ್ರವಾಗಿ ಇಂದಿಗೂ ಮುನ್ನಡೆ ಯುತ್ತಿದೆ.

(ಎಎನ್‌ಎಚ್)




'ಕರ್ಣಾರ್ಜುನರ ಯುದ್ಧ' ಎಸ್. ಎಮ್. ಪಂಡಿತರ ತೈಲವರ್ಣ ಚಿತ್ರ


ಚಿತ್ರ ಸೂಚಿ – ೧



ಖಾಜನಗೌಡರ ಮನೆಯ ಭಿತ್ತಿಚಿತ್ರ



ಗೋಡೆ ಚಿತ್ರ, ಅಹಮದ್ ಶಾಹ್ ಬಹಮನಿ, ಮೊಜೈಯಿಕ್ ವರ್ಕ್ಸ್, ಅಷ್ಟೂರು (ಬೀದರ್)




ಉದ್ಧರಣೆ ಚಿತ್ರಕಲೆ




ದಖ್ಖನಿ ಕಿರುರೂಪ ಚಿತ್ರಗಳು

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳ ಸಂಪುಟ




ಜಗನ್ನಾಥ ವಾಡೆಯಲ್ಲಿನ ಹೂಬಳ್ಳಿ ವಿನ್ಯಾಸದ ಭಿತ್ತಿಚಿತ್ರ (ಚಿತ್ತಾಪೂರ)




ಮಡ್ಡಿಪೇಟೆಯ ಹನುಮಾನ ಮಂದಿರದಲ್ಲಿನ ಸಮುದ್ರ ಮಂಥನ ಭಿತ್ತಿಚಿತ್ರ (ರಾಯಚೂರು)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಚಿತ್ರಕಲೆಗಳ ಸಂಪುಟ




ಗೋಡೆ ಮೇಲಿನ ದಖ್ಖನಿ ಚಿತ್ರಕಲೆ, ಖ್ವಾಜಾ ಬಂದೇ ನವಾಜ್ ದರ್ಗಾ (ಗುಲಬರ್ಗಾ)



ಅಬುಲ್ ಫೈಜ್ ದರ್ಗಾ (ಬೀದರ್)




ರಥ ಶಿಲ್ಪಗಳು



ಗೃಹಾಲಂಕಾರಗಳು



ಕಾಷ್ಠ ಕಲೆ



ಆಡಿಟೋರಿಯಂ ಮತ್ತು ಆರ್ಟ್ ಗ್ಯಾಲರಿ (ಗುಲಬರ್ಗಾ)

ಕಲಬುರಗಿ ವಿಭಾಗದಲ್ಲಿ ಸಂಗೀತ ವಿದ್ಯಾಲಯಗಳು: ಹೈದ್ರಾಬಾದ ಕರ್ನಾಟಕ ಪ್ರದೇಶ ಐತಿಹಾಸಿಕವಾಗಿ, ರಾಜಕೀಯವಾಗಿ ಧಾರ್ಮಿಕವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವ ಪಡೆದುಕೊಂಡಿದೆ. ಅದರಲ್ಲೂ ಸಂಗೀತಕ್ಕೆ ಬಹುಪಾಲು ಕಾಣಿಕೆ ನೀಡಿದೆ. ಜೈನರ ಕಾವ್ಯ, ಶರಣರ ವಚನ, ದಾಸರ ಹಾಡು, ಅನುಭಾವಿಗಳ ತತ್ವಪದ, ಪುರಾಣ ಮಹಾಕಾವ್ಯಗಳು ಈ ನೆಲದಲ್ಲಿ ಹುಟ್ಟಿಕೊಂಡು ಜನರ ಮನಸ್ಸಿನಲ್ಲಿ ಸಂಗೀತದ ಲಯದ ಮೂಲಕ ನೆಮ್ಮದಿ ತರುವ ಕೆಲಸ ಮಾಡಿದೆ.



ವರ್ಣಸಿಂಧು ನೃತ್ಯ ಕಲಾ ಕೇಂದ್ರ, ಗುಲಬರ್ಗಾ

ಈ ಭಾಗದಲ್ಲಿ ಸಿದ್ಧರಾಮ ಜಂಬಲದಿನ್ನಿ, ಗುಂಡಾ ಭಟ್ಟ ಜೋಶಿ, ಸುಮನ್ ಕುಲಕರ್ಣಿ, ಮಾಣಿಕರಾವ್ ಪೋತ್ದಾರ್, ಗುರುನಾಥರಾವ್ ಆಲಗೋಡ್, ಎನ್.ಆರ್. ಕುಲಕರ್ಣಿ, ಕಿಶನ್ ರಾವ್ ಮಲ್ಲೆ, ರಾಜಾ ವೆಂಕಟಪ್ಪ ನಾಯಕ, ಪಾಂಡು ರಂಗರಾವ್ ಪತಕಿ, ರಾಮರಾವ್ ಪತಕಿ, ಪಾರ್ವತಿದೇವಿ ಹೊಂಬಳ, ಸರೋಜ ಅನಗರಕರ, ಗೋದಾವರಿ, ಕೆ.ಎಸ್. ಹಡಪದ, ಮಾಣಿಕರಾವ್ ರಾಯಚೂರಕರ್, ಬಿ.ಆರ್. ಕುಲಕರ್ಣಿ ಎನ್.ಆರ್. ಕುಲಕರ್ಣಿ, ಚೌಡಾಪುರಕರ, ಎಸ್. ಎ. ತಪಲೆ, ನರಸಿಂಹಲು ವಡವಾಟಿ, ಹನುಮಣ್ಣ ನಾಯಕದೊರೆ, ಫಕೀರೇಶ ಕಣವಿ, ಮಾಧವರಾವ್ ಇನಾಂದಾರ್, ಸದಾಶಿವ ಪಾಟೀಲ, ವಾಜ್ಯೋತ್ರಮಚಾರ್ಯ, ರಾಮಾಚಾರಿ ಕಾಖಂಡಕಿ, ಕಲ್ಯಾಣರಾವ್ ಮಡಕೆ, ವೆಂಕಟರಾಮುಲು, ಷಣ್ಮುಖಯ್ಯ ಗವಾಯಿ, ಕೇಶವ ರಾವ್ ವಾಗ್ದೋರಿ, ಮಾಣಿಕನಗರ ಸಂಸ್ಥಾನ, ಅನಂತರಾಜ, ನಿರ್ಮಲಾ ರಾಜಗುರು, ಗೀತಾ ಗಾಯತ್ರಿ ಚಕ್ರವರ್ತಿ, ಶಿವಕುಮಾರ ಕುಕನೂರು, ಶರಣಪ್ಪ ಮಸಬ ಹಂಚಿನಾಳ, ತಾಳಕೇರಿ ಬಸವರಾಜ, ಮಹಾಬಳೇಶ್ವರ ಹಾಸಿ ನಾಳ ಮುಂತಾದ ಪ್ರಸಿದ್ಧ ಹಿಂದೂಸ್ತಾನಿ, ತಬಲಾ, ಶಹನಾಯಿ, ಕ್ಲಾರಿಯನೆಟ್, ಹಾರ್ಮೋನಿಯಂ, ಸುಗಮ ಸಂಗೀತದ ಗಾಯಕರಾಗಿ ಪ್ರಸಿದ್ಧಿ ಹೊಂದಿದ ಕಲಾವಿದರು. ಇಂತಹ ಒಂದು ಕಲಾವಿದರನ್ನು ಹೊಂದಿದ ಈ ಭಾಗ ಸಿರಿವಂತವಾಗಿದೆ.

ಹೈದ್ರಾಬಾದ ಕರ್ನಾಟಕದ ಸರಕಾರಿ ಕಾಲೇಜುಗಳಲ್ಲಿ ಒಂದೂ ಸಂಗೀತ ವಿಭಾಗಗಳು ಇಲ್ಲ. ಎಲ್ಲವೂ ಖಾಸಗಿಯಾಗಿಯೇ ಇವೆ. ಅವು ಆ ಕಾಲೇಜಿನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಫಲವಾಗಿ ಆರಂಭವಾಗಿವೆ. ಕಲಬುರ್ಗಿ, ಕೊಪ್ಪಳ, ರಾಯಚೂರು, ಬೀದರ, ಬಳ್ಳಾರಿ ಈ ಐದು ಜಿಲ್ಲೆಗಳಲ್ಲಿ ಕಾಲೇಜಿನಲ್ಲಿ ಸಂಗೀತ ವಿಭಾಗ ಇರುವವು. ಕೇವಲ ನಾಲ್ಕೇ ಕಾಲೇಜು ಅವು ಕಲಬುರ್ಗಿಯಲ್ಲಿ ಈ ಪ್ರದೇಶದ ಪ್ರತಿಯೊಂದು ನಗರ, ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸಾಕಷ್ಟು ಸಂಗೀತ ಪಾಠ ಶಾಲೆಗಳು ಇವೆ. ಅನೇಕ ಕಲಾವಿದರು ಮನೆ ಮನೆಗೆ ಹೋಗಿ ಹೇಳಿ ಬರುತ್ತಿದ್ದಾರೆ. ಕೆಲವರಂತೂ ಸಂಗೀತ ಉಚಿತವಾಗಿ ಕಲಿಸುವ ಪರಿಪಾಠ ಇಲ್ಲಿ ಹಾಕಲಾಗಿದೆ. ಅಲ್ಲಲ್ಲಿ ಸರಕಾರಿ, ಖಾಸಗಿ ಹೈಸ್ಕೂಲು, ಪ್ರಾಥಮಿಕ ಶಾಲೆಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಸಂಗೀತ ಕಲಿಸುತ್ತಿದ್ದಾರೆ. ಪದವಿ ಕಾಲೇಜಿನಲ್ಲಿ ಸಂಗೀತ ವಿಭಾಗಗಳು ಎಲ್ಲಾ ಕಡೆ ಇಲ್ಲ. ಉಳಿ ದವರು ಸಣ್ಣ-ಪುಟ್ಟ ಕಾರ್ಯ ಮಾಡಲಿ ಅದು ಸಂಗೀತದ ಸೇವೆಯೇ ಅದರ ಮುಂದುವರಿಕೆಯಾಗಿ ಪದವಿ ಕಾಲೇಜುಗಳಲ್ಲಿ ಇರಬೇಕಾದದ್ದು ಅವಶ್ಯ. ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ (1970), ಗೋದುತಾಯಿ ದೊಡ್ಡಪ್ಪ ಅಪ್ಪ ಮಹಿಳಾ ಮಹಾ ವಿದ್ಯಾಲಯ (1973), ವ್ಹಿ.ಜಿ. ಮಹಿಳಾ ಮಹಾವಿದ್ಯಾಲಯ (1978) ಹಾಗೂ ಎನ್.ವಿ. ಪದವಿ ಮಹಾವಿದ್ಯಾಲಯ (1991) ಹೀಗೆ ನಾಲ್ಕು ಕಾಲೇಜುಗಳಲ್ಲಿ ಸಂಗೀತಕ ಐಚ್ಛಿಕವಾಗಿ ಪದವಿ ಕಾಲೇಜುಗಳಲ್ಲಿ ಬೋಧನೆ ನಡೆಯುತ್ತಿದೆ.

ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ, ಕಲಬುರಗಿ: ಹೈದ್ರಾಬಾದ ಕರ್ನಾಟಕದಲ್ಲಿ ಮೊಟ್ಟಮೊದಲು ಕಾಲೇಜಿನಲ್ಲಿ ಸಂಗೀತ ವಿಭಾಗ (1970) ಆರಂಭವಾದದ್ದು ಎಸ್.ಬಿ. ಕಲಾ ಕಾಲೇಜಿನಲ್ಲಿ. ಈ ಭಾಗದ ಆರಾಧ್ಯ ದೈವ ಶರಣಬಸವೇಶ್ವರ ಸಂಸ್ಥಾನದ ಪೀಠಾಧಿಪತಿಗಳಾದ ಶರಣಬಸಪ್ಪ ಅಪ್ಪ ಅವರ ಸಂಗೀತ-ಚಿತ್ರಕಲೆ ಆಸಕ್ತಿ ಮೇರೆಗೆ ಈ ಕಾಲೇಜಿನಲ್ಲಿ ಸಂಗೀತ ವಿಭಾಗ ಆರಂಭವಾದಾಗ ಪಂ. ಸಿದ್ಧರಾಮ ಜಂಬಲ ದಿನ್ನಿ ಅವರಂಥ ಪ್ರಸಿದ್ಧ ಸಂಗೀತಗಾರರು ಸೇವೆ ಸಲ್ಲಿಸಿದ್ದಾರೆ. ಪ್ರಾರಂಭದಲ್ಲಿ ಕೇವಲ ಐವತ್ತು ವಿದ್ಯಾರ್ಥಿಗಳಿಂದ ಕೂಡಿದ ಈ ವಿಭಾಗದಲ್ಲಿ ಇಂದು ಎರಡುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ತಬಲಾ ಇನ್‌ಸ್ಟ್ರಕ್ಟರ್ ಆಗಿ ಕೆ.ಎಸ್. ಹಡಪದ ಅವರು ಸೇವೆ ಸಲ್ಲಿಸಿದರು. ಅನಂತರ ಆರ್.ಸಿ. ಹಿರೇಮಠರು ಕುಲಪತಿಗಳಾದ ಮೇಲೆ ಹಡಪದರು ಪ್ರಾಧ್ಯಾಪಕರಾಗಿ ದುಡಿದಿ



ಗಿರಿಜಾದೇವಿ ನೃತ್ಯ ಕಲಾ ಶಾಲೆ, ಗುಲಬರ್ಗಾ

ದ್ದಾರೆ. ಅನೇಕ ಕಡೆಯಿಂದ ಬಂದ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿ ತಬಲಾದ ಅನೇಕ ವಿವರ ನೀಡಿ 1990ರಲ್ಲಿ ನಿವೃತ್ತಿ ಹೊಂದಿದರು. ರವೀಂದ್ರ ಜಕಾತೆ ಗಾಯನ ಅಧ್ಯಾಪಕರಾಗಿ ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ. 1982ರಲ್ಲಿ ಹನುಮಣ್ಣ ನಾಯಕದೊರೆ ಪ್ರಾಧ್ಯಾಪಕರಾಗಿ ಹೆಸರು ಮಾಡಿದ್ದರು. ಸುಮನಕರ್, ವೀಣಾ ಮರಡೂರ ಅವರು 1996ರಲ್ಲಿ ಎರಡು ವರ್ಷ ಸೇವೆ. ಈಗ 1990ರಿಂದ ಎಂ.ಎಸ್. ಪಾಟೀಲರು ತಬಲಾ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸಂಗೀತ ವಿಭಾಗ ನಡೆಸಿ ಕೊಂಡು ಬರುತ್ತಿದ್ದಾರೆ. ಛಾಯಾ ಭರತನೂರು ಗಾಯನ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ಸಂಗೀತ ವಿಭಾಗದಲ್ಲಿ ಈಗಾಗಲೇ ನೂರಾರು ವಿದ್ಯಾರ್ಥಿಗಳು ಖ್ಯಾತ ಸಂಗೀತಗಾರರಾಗಿ ಹೋಗಿದ್ದಾರೆ. ಅಂಥವರಲ್ಲಿ ನರಸಿಂಹಲು ವಡವಾಟಿ, ಎಂ.ಎಸ್. ಪಾಟೀಲ, ಶಂಕರ ಕವಡಿಮಟ್ಟಿ, ಗದಿಗಯ್ಯಸ್ವಾಮಿ, ಗೊರಟಿ, ಶಂಭುಲಿಂಗ, ಮಡಿವಾಳಯ್ಯ ಸಾಲಿ, ಉಷಾ ಬಿರಾದಾರ್ ಹಾಗೂ ಮಹೇಶ ಕುಮಾರ ಬಡಿಗೇರ. ಅಲ್ಲದೇ ಇಲ್ಲಿಯೇ ಸಂಗೀತ ವಿಭಾಗದಲ್ಲಿ ಕಲಿತ ಡಾ. ಸರಸ್ವತಿ ಪೂಜಾರರಂಥ ಅನೇಕರು ಸಾಹಿತ್ಯ ಕ್ಷೇತ್ರದಲ್ಲಿ ದುಡಿದು ಸಂಗೀತಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸಂಗೀತ ವಿಭಾಗದ ವಿದ್ಯಾರ್ಥಿಗಳು ಅನೇಕ ಪ್ರಶಸ್ತಿ, ಶೀಲ್ಡ್ ಪಡೆದು ಯಾವುದೇ ಸ್ಪರ್ಧೆಯಿರಲಿ ಪ್ರಾಮಾಣಿಕ ವಾಗಿ ಸ್ಪರ್ಧಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಈ ಕಾಲೇಜಿನ ಸಂಗೀತ ವಿಭಾಗ ತನ್ನದೇ ಆದ ಕಾಣಿಕ ನೀಡುತ್ತಾ ಬಂದಿದೆ.

ಗೋದುತಾಯಿ ದೊಡ್ಡಪ್ಪ ಅಪ್ಪ ಮಹಿಳಾ ಮಹಾ ವಿದ್ಯಾಲಯ, ಕಲಬುರಗಿ: ಶ್ರೀ ಶರಣಬಸವೇಶ್ವರ ಸಂಸ್ಥೆಯ ಮತ್ತೊಂದು ಕಾಲೇಜ ಗೋದುತಾಯಿ ಮಹಿಳಾ ಕಾಲೇಜಿನಲ್ಲಿ 1973ರಲ್ಲಿ ಕೆಲವೇ ವಿದ್ಯಾರ್ಥಿನಿಯರಿಂದ ಆರಂಭವಾದ ಸಂಗೀತ ವಿಭಾಗದಲ್ಲಿ ಇಂದು ಅರವತ್ತು ವಿದ್ಯಾರ್ಥಿನಿಯರು ಅಭ್ಯಾಸ ಮಾಡುತ್ತಿದ್ದಾರೆ. ಪ್ರಾರಂಭದಲ್ಲಿ ಪಾರ್ವತಿ ಹೊಂಬಾಳ ಅವರು ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಇವರ ಕೈಯಲ್ಲಿ ಕಲಾವತಿ ದೊರೆ ಕಲಿತಿದ್ದಾರೆ. ಇನ್ನೂ ಹಲವರನ್ನು ಬೆಳೆಸಿದ್ದಾರೆ. ಸರಯು ಸೊನ್ನ ಅವರು ಎರಡು ವರ್ಷ ಅಧ್ಯಯನ ಮಾಡಿಸಿದರು. ನಂದಾ ಪಾಟೀಲರು ಒಂದು ವರ್ಷ ಸೇವೆ, 1988ರಲ್ಲಿ ಸುರೇಖಾ ಕಲ್ಲೂರ ಸೇವೆ ಸಲ್ಲಿಸಿದರು. ಇಲ್ಲಿಯೇ ಕಲಿತು ಎಂ.ಎ. ಸಂಗೀತ ಮಾಡಿ ಇಲ್ಲಿಯೇ 1989 ರಿಂದ ಅಧ್ಯಾಪಕರಾದವರು ಕಲಾವತಿ ದೊರೆ ಅವರು. ಛಾಯಾ ಭರತನೂರ ಅವರು ಸಂಗೀತ ಗಾಯನ ಅಧ್ಯಾಪಕರಾಗಿದ್ದಾರೆ. ಇಲ್ಲಿರುವ ವಿದ್ಯಾರ್ಥಿನಿಯ ಪ್ರತಿಯೊಂದು ಕಲಬುರ್ಗಿ ಜಿಲ್ಲೆ, ವಿಭಾಗ, ರಾಜ್ಯ ಮಟ್ಟದಲ್ಲಿ ಸ್ಪರ್ಧಿಸಿ ಸಂಗೀತದಲ್ಲಿ ಅನೇಕ ಪ್ರಶಸ್ತಿ, ಶೀಲ್ಡು, ಟ್ರೋಫಿ ಗೆದ್ದುಕೊಂಡು ಬಂದಿದ್ದಾರೆ. ಇಲ್ಲಿರುವ ವಿದ್ಯಾರ್ಥಿನಿಯರು ಹೆಚ್ಚು ಕ್ರಿಯಾಶೀಲರಾಗಿ ಎಲ್ಲದರಲ್ಲಿ ಪಾಲ್ಗೊಂಡು ಸಂಗೀತ ವಿಭಾಗವನ್ನು ಮೇಲಕ್ಕೆ ತರುತ್ತಿದ್ದಾರೆ. ನುರಿತ ಅಧ್ಯಾಪಕರಿಂದ ಹೆಚ್ಚಿನ ಮಟ್ಟದಲ್ಲಿ ಬೆಳವಣಿಗೆ ಆಗುತ್ತಿದೆ.



ಗೋದುತಾಯಿ ದೊಡ್ಡಪ್ಪ ಅಪ್ಪ ಮಹಿಳಾ ಸಂಗೀತ ಮಹಾವಿದ್ಯಾಲಯ, ಗುಲಬರ್ಗಾ

ವ್ಹಿ.ಜಿ. ಮಹಿಳಾ ಮಹಾವಿದ್ಯಾಲಯ, ಕಲಬುರಗಿ: ಈ ಭಾಗದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದು. ಎಚ್.ಕೆ.ಇ. ಸಂಸ್ಥೆಯ ಈ ಕಾಲೇಜು 1978–79ರಲ್ಲಿ ಆರಂಭಗೊಂಡಿತು. ಹದಿನೈದು ವಿದ್ಯಾರ್ಥಿನಿಯರಿಂದ ಆರಂಭಗೊಂಡು ಇಂದು ಅರವತ್ತು ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಪ್ರಾರಂಭದಿಂದ ಮಹಿಮುದ್‌ಮಿಯಾ ಅವರು ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಅಪಾರ ಅನುಭವ ಪಡೆದಿದ್ದಾರೆ. ಇವರೊಂದಿಗೆ ತಾರಾ ಕುಲಕರ್ಣಿ ಅವರು ಗಾಯನ ಅಧ್ಯಾಪಕರಾಗಿದ್ದರು. 1992ರ ಇಂದ ಮುಖಮಿಯಾ, ರೇಣುಕಾ ಹಾಗರಗುಂಡಗಿ ಈಗ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಗೀತ ವಿಭಾಗದಲ್ಲಿ ಉಷಾ ಪಟವಾರಿ, ಸಂಗೀತಾ ಕಟ್ಟಿ, ಎಸ್.ಎ ತಪಲೆ, ರೇವಯ್ಯಾ ವಸ್ತ್ರದಮಠ ಅವರು ಸಹ ಸೇವೆ ಸಲ್ಲಿಸಿ ಹೋಗಿದ್ದಾರೆ. ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದ ಇಂದಿನವರೆಗೂ ಘಟಿಕೋತ್ಸವದಲ್ಲಿ ಹಾಡುತ್ತಾ ಬಂದಿದ್ದಾರೆ. ಶಾಸ್ತ್ರೀಯ ಗಾಯನ, ವಾದನ, ನೃತ್ಯ ಮೂರು ಪ್ರಕಾರದಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದಾರೆ. ಅನೇಕ ಕಡೆ ವಿದ್ಯಾರ್ಥಿನಿಯರ ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿ, ದೂರದರ್ಶನ, ಯುವಜನ ಮಹೋತ್ಸವ, ಅಲ್ಲದೇ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಪಾಲು ಪ್ರಶಸ್ತಿ ಸಂಗೀತದಲ್ಲಿ ತೆಗೆದುಕೊಂಡು ಬಂದು ಕಾಲೇಜಿಗೆ, ವಿಶ್ವವಿದ್ಯಾಲಯಕ್ಕೆ ಹೆಸರು ತಂದಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಮಾಡುತ್ತಿದೆ.



ವ್ಹಿ.ಜಿ. ಮಹಿಳಾ ಸಂಗೀತ ಮಹಾವಿದ್ಯಾಲಯ, ಗುಲಬರ್ಗಾ

ನೂತನ ಪದವಿ ಮಹಾವಿದ್ಯಾಲಯ, ಕಲಬುರಗಿ: ಕಲಬುರಗಿಯ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದು. ರಾಷ್ಟ್ರೀಯ ಆಂದೋಲನದಲ್ಲಿ ವಿದ್ಯಾರ್ಥಿಗಳಿಗೆ ದೇಶಾಭಿಮಾನ ಸ್ವಾತಂತ್ರ್ಯ ಪ್ರೇಮ ಹುಟ್ಟಿಸಲು ಕಾರಣವಾದ ಸಂಸ್ಥೆ. ವ್ಹಿ.ಪಿ. ದೇವುಳಗಾಂವ ಕರ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾದ ಅನಂತರಾವ್ ದೇಶ ಮುಖ ಹಾಗೂ ಕಲ್ಯಾಣರಾವ್ ಬಕ್ಷಿ ಮುಂತಾದವರು ಸಾಹಿತ್ಯ, ಚಿತ್ರಕಲೆ, ಸಂಗೀತ ಪ್ರೇಮಿಗಳಾದ್ದರಿಂದ ಅವರ ಸ್ಫೂರ್ತಿಯ ಕೂಸು ಸಂಗೀತ ವಿಭಾಗವಾಗಿದೆ. 1991ರಲ್ಲಿ ಕೇವಲ ಐದು ವಿದ್ಯಾರ್ಥಿಗಳಿಂದ ಆರಂಭವಾದ ಸಂಗೀತ ವಿಭಾಗ ಹತ್ತು ವರ್ಷ ದಲ್ಲಿ ಸಾಕಷ್ಟು ಬೆಳೆದಿದೆ-ಬೆಳೆಯುತ್ತಿದೆ.

ಶ್ರೀಕಾಂತ ದೇವಿಪುರ ತಬಲಾ ವಾದಕರಾಗಿ, 1991ರಲ್ಲಿ ಸೇವೆ ಸಲ್ಲಿಸಿದರು. ಕೃಷ್ಣಾ ಮಾಹುರಕರ ಅವರು, ತಾರಾಬಾಯಿ ಕುಲಕರ್ಣಿ, ಸರೋಜ ಅನಗರಕರ್, ಹಲವಾರು ಪ್ರತಿಭಾನ್ವಿತ ಕಲಾವಿದ ಉಪನ್ಯಾಸಕರು ಕಾರ್ಯನಿರ್ವಹಿಸಿದರು. ಕಲಾವತಿ ದೊರೆ ರಮೇಶ ಕುಲಕರ್ಣಿ ಉಪನ್ಯಾಸಕರಾಗಿ ತಮ್ಮ ಛಾಪು ನೀಡಿದ್ದಾರೆ. ಈಗ ಪೂರ್ಣಕಾಲಿಕ ಹುದ್ದೆ ಹೊಂದಿ ಮಹೇಶ ಕುಮಾರ ಬಡಿಗೇರ ಮುಖ್ಯಸ್ಥರಾಗಿ, ರಾಘವೇಂದ್ರ ಕುಲಕರ್ಣಿ, ಶ್ರೀನಿವಾಸ ಕುಲಕರ್ಣಿ ತಬಲಾ ಅಧ್ಯಾಪಕರಾಗಿ, ಭವಾನಿ ಜೋಶಿ, ಲಕ್ಷ್ಮೀಶಂಕರ ಜೋಶಿ ಗಾಯನ ಉಪನ್ಯಾಸಕರಾಗಿ ತಮ್ಮ ಕರ್ತವ್ಯ ಸಲ್ಲಿಸುತ್ತಿದ್ದಾರೆ.

ಸಂಗೀತ ವಿಭಾಗ ಆರಂಭವಾದಾಗಿನಿಂದಲೂ ಇಲ್ಲಿ ನುರಿತ ಉಪನ್ಯಾಸಕ ವೃಂದ ಕ್ರಿಯಾಶೀಲ ವಿದ್ಯಾರ್ಥಿಗಳಿಂದ ವಿಭಾಗ ತುಂಬಿದೆ. ಪ್ರತಿನಿತ್ಯ ನಿರಂತರ ಅಭ್ಯಾಸ ನಡೆದಿದೆ. ಇಲ್ಲಿನ ಸಂಗೀತ-ಸಾಹಿತ್ಯ ವಿದ್ವಾಂಸರಿಗೆ ಸನ್ಮಾನ, ವಿಚಾರ ಸಂಕಿರಣ, ಉಪನ್ಯಾಸ ನಡೆಸಿ ವಿದ್ಯಾರ್ಥಿಗಳಲ್ಲಿ ಸಂಗೀತ ಆಸಕ್ತಿ ಹುಟ್ಟಿಸು ತ್ತಿದ್ದಾರೆ. ಇಲ್ಲಿಯೇ ಕಲಿತ ರಮೇಶ ಕುಲಕರ್ಣಿ ಹೆಸರಾಂತ ಗಾಯಕರಾಗಿದ್ದಾರೆ. ಕೀರ್ತಿಕುಮಾರ ಬಡಶೇಷಿ, ಪೂರ್ಣಿಮಾ ರಾಮಾಚಾರಿ, ನರಸಿಂಹ ಕುಲಕರ್ಣಿ, ಸುರೇಖಾ, ಬನಶಂಕರಿ ಅವರು ಅನೇಕ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದು, ಸೌತ್‌ಝೋನ್ ದಲ್ಲಿ ಉತ್ತಮ ಪ್ರಶಸ್ತಿಯನ್ನು ಶಾಸ್ತ್ರೀಯ ಸಂಗೀತದಲ್ಲಿ ಪಡೆದು ಕೊಂಡಿದ್ದಾರೆ. ಇವರೇ ಅನೇಕ ಕಡೆ ಸಂಗೀತ ಸೇವೆ ಸಲ್ಲಿಸು ತ್ತಿದ್ದಾರೆ. ಬನಶಂಕರಿ ದೇಶಪಾಂಡೆ ಯುವಜನ ಮಹೋತ್ಸವ ದಲ್ಲಿ ಉತ್ತಮ ನಾಟಕ ಪಾತ್ರಕ್ಕೆ ಹೆಸರಾಗಿ ಪ್ರಶಸ್ತಿ ಪಡೆದಿದ್ದಾರೆ. 'ಅರಣ್ಯದಲ್ಲೊಂದು ವಿಚಾರಣೆ' ಡಾ. ಸ್ವಾಮಿರಾವ್ ಕುಲಕರ್ಣಿ ಅವರ ನಾಟಕ ಯುಥ್ ಫೆಸ್ಟಿವಲ್‌ದಲ್ಲಿ ಪ್ರಶಂಸನೀಯವಾಯಿತು. ಇಲ್ಲಿನ ವಿದ್ಯಾರ್ಥಿಗಳು, ಅಧ್ಯಾಪಕರು, ರೋಗಿಗಳಿಗೆ, ಕೈದಿಗಳ ಮನಸ್ಸು ಹಗುರಗೊಳಿಸಲು ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಗುರುಕುಲ ಪದ್ಧತಿಯ ಗುರು-ಶಿಷ್ಯ ಪರಂಪರೆ ಇಲ್ಲಿ ನಡೆದಿದೆ. ಅನೇಕ ವಿದ್ಯಾರ್ಥಿಗಳಾದ ಕು. ರಂಜಿತಾ ಜೋಷಿ, ನೀತಾ ಕುಲಕರ್ಣಿ, ರೋಹಿಣಿ, ಭಾರ್ಗವಿ ಸಂತೆ ಕೆಲ್ಲೂರ, ಶ್ರೀದೇವಿ, ದೀಪಾ, ವಾಣಿ ಹಾಗೂ ಅಪ್ಪಣ್ಣ ಭೂವಿ, ರಾಜೀವ ಕುಲಕರ್ಣಿ, ಮಹಾಂತೇಶ ಅವರು ತಬಲಾ ದಲ್ಲಿ, ಶಾಸ್ತ್ರೀಯ, ಸುಗಮ ಸಂಗೀತದಲ್ಲಿ ಅರಳುವ ಪ್ರತಿಭೆ ಗಳಾಗಿವೆ. ರಾಜಕೀಯ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಕಾಶವಾಣಿ, ದೂರದರ್ಶನ ಕಲಾವಿದರಾಗಿದ್ದಾರೆ. ಪ್ರತಿಯೊಂದು ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮ ಪ್ರಶಸ್ತಿ ಪಡೆದಿದ್ದು ಇವರ ಸಾಧನೆ. ಆಡಳಿತ ಮಂಡಳಿ, ಪ್ರಾಚಾರ್ಯರಾದ ಡಾ. ಸ್ವಾಮಿರಾವ್ ಕುಲಕರ್ಣಿ, ವಿಭಾಗದ ಮಹೇಶ ಬಡಿಗೇರ ಹಾಗೂ ಸಿಬ್ಬಂದಿ ಪ್ರೇರಣೆ ಪ್ರೋತ್ಸಾಹದಿಂದ ಸಂಗೀತ ವಿಭಾಗ ಮುಂದೆ ಬರಲು ಕಾರಣ ವಾಗಿದೆ.

ಹೀಗೆ ಹೈದ್ರಾಬಾದ ಕರ್ನಾಟಕದಲ್ಲಿ ಕೇವಲ ನಾಲ್ಕು ಪದವಿ ಕಾಲೇಜುಗಳಲ್ಲಿ ಸಂಗೀತ ವಿಭಾಗ ಇವೆ. ಇಲ್ಲಿ ಸಾಕಷ್ಟು ಕಲಾ ವಿದರು, ಅಧ್ಯಾಪಕರು, ಸಂಗೀತಗಾರರು ಇದ್ದಾರೆ.

(ಜಿಎಚ್‌ಪಿ)



ನೂತನ ಪದವಿ ಸಂಗೀತ ಮಹಾವಿದ್ಯಾಲಯ, ಗುಲಬರ್ಗಾ

ಕಲಾ ಮಹಾವಿದ್ಯಾಲಯಗಳು (ಚಿತ್ರ): ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕೇಂದ್ರ ಸ್ಥಾನ ಗುಲಬರ್ಗಾ ಜಿಲ್ಲೆ. ಈ ಜಿಲ್ಲೆಯು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿದೆ. ಈ ಪ್ರದೇಶದಲ್ಲಿ 1920ರ ದಶಕದಲ್ಲಿ ಜಿಲ್ಲೆಯ ಪ್ರಾಥಮಿಕ ಶಾಲೆಯಲ್ಲಿ ಚಿತ್ರಕಲೆ ಯನ್ನು ಕಲಿಸುವ ಪದ್ಧತಿ ಪಠ್ಯಕ್ರಮದಲ್ಲಿ ಇತ್ತು. ಮುಂದೊಮ್ಮೆ ನೂತನ ವಿಶ್ವವಿದ್ಯಾಲಯದಲ್ಲಿ ಶಂಕರರಾವ



ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಬಸವಕಲ್ಯಾಣ (ಬೀದರ)

ಆಳಂದಕರ ಅವರು ಕಲಾಶಿಕ್ಷಕರಾಗಿ ಸೇರಿದ ಮೇಲೆ ಅಲ್ಲಿ ಚಿತ್ರಕಲೆಯ ಶಿಕ್ಷಣವನ್ನು ಪ್ರಾರಂಭಿಸಿದರು. ಈ ಚಿತ್ರಕಲೆಯ ಪ್ರತ್ಯೇಕ ವಿಭಾಗದಲ್ಲಿ ಎಸ್. ಎಂ. ಪಂಡಿತ್, ಚಂದ್ರಶೇಖರ, ಎಂ.ಡಿ. ಬೋಸಲೆ, ಜೆ.ಡಿ. ಕಮಡೇಕರ ಮೊದಲಾದ ಹಿರಿಯ ಕಲಾವಿದರು ಪ್ರಾರಂಭಿಕ ಕಲಾಶಿಕ್ಷಣ ಪಡೆದರು.ವಿಶೇಷವಾಗಿ ರಾಷ್ಟ್ರಮಟ್ಟದ ಖ್ಯಾತಿಯನ್ನು ಪಡೆದ ಎಸ್.ಎಂ. ಪಂಡಿತರ (ನೋಡಿ) ಕಲಾಗ್ಯಾಲರಿಯಲ್ಲಿ ನೈಜಚಿತ್ರಣ ಅತ್ಯಂತ ಸುಂದರವಾದ ಕಲಾಕೃತಿಗಳು ರಾರಾಜಿಸು ತ್ತವೆ, ಇದಲ್ಲದೆ ಎಸ್.ಸಿ. ಪಾಟೀಲರ ಕಲಾಕೃತಿಗಳಿಂದ ಸಾಧನೆಯ ಅರಿವು ಗ್ಯಾಲರಿ ನೋಡಿದಾಗ ಅನಿಸುತ್ತದೆ.

ಐಡಿಯಲ್ ಫೈನ್ ಆರ್ಟ್ಸ್ ಇನ್ಸ್‌ಟಿಟ್ಯೂಟ್, ಗುಲಬರ್ಗಾ: ಹಿರಿಯ ಕಲಾವಿದ ಜೆ. ಎಸ್. ಖಂಡೇರಾವ ಅವರು ಈ ಕಲಾ ಸಂಸ್ಥೆಯನ್ನು ಪ್ರಾರಂಭಿಸಿದರು (1965). ಇವರ ಮಾರ್ಗ ದರ್ಶನದಲ್ಲಿ ಅನೇಕ ಕಲಾವಿದರು ಕಲಾಭ್ಯಾಸ ಮಾಡಿದರು, ಇದರಲ್ಲಿ ಹಿರಿಯ ಕಲಾವಿದ ವಿ.ಜಿ. ಅಂದಾನಿ, ಹಾಗೂ ಉಪ್ಪಿನ ಕುಟುಂಬ ವರ್ಗದವರು ಪ್ರಮುಖರು. ಅನಂತರದಲ್ಲಿ ಈ ಚಿತ್ರಕಲಾ ಮಹಾವಿದ್ಯಾಲಯದ ಜವಾಬ್ದಾರಿಯನ್ನು ಕಲಾವಿದ ವಿ.ಜಿ. ಅಂದಾನಿಯವರು ವಹಿಸಿಕೊಂಡು ಉತ್ತಮ ರೀತಿಯಲ್ಲಿ ಇದನ್ನು ನಡೆಸಿ, ಬೆಳೆಸಿಕೊಂಡು ಬಂದದ್ದನ್ನು ಕಾಣುತ್ತೇವೆ. ಇಲ್ಲಿ ಡಿಪ್ಲೊಮಾ ತರಗತಿಗಳಲ್ಲದೇ, ಕಂಪ್ಯೂಟರ್ ಮತ್ತು ಎನಿಮೇಶನ್ ತರಬೇತಿ ಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶ ಗಳನ್ನು ಕಲ್ಪಿಸಿದ್ದಾರೆ.

ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್, ಗುಲಬರ್ಗಾ: ವಿ.ಜಿ. ಅಂದಾನಿಯವರ ಮಾರ್ಗದರ್ಶನದಲ್ಲಿ ಚಿತ್ರ ಕಲೆಯಲ್ಲಿ ಉಚ್ಚಶಿಕ್ಷಣವನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ವಾಣಿಜ್ಯ ಚಿತ್ರಕಲೆ, ಗ್ರಾಫಿಕ್ ಕಲೆ, ಶಿಲ್ಪಕಲೆ ಇತ್ಯಾದಿ ಕೋರ್ಸ್‌ಗಳನ್ನು ಸುವ್ಯವಸ್ಥಿತವಾಗಿ, ಗುಣಮಟ್ಟದ ಕಲಾಶಿಕ್ಷಣ ವನ್ನು ಈ ಭಾಗದಲ್ಲಿ ತರಬೇತಿ ನೀಡುತ್ತಾ ಬಂದಿದ್ದಾರೆ. ಜೊತೆಗೆ ಇಲ್ಲಿನ ಅನೇಕ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಜೊತೆಗೆ ಅಂತರಾಷ್ಟ್ರೀಯ ಮಟ್ಟದ ಅನೇಕ ಕಲಾಪ್ರದರ್ಶನ, ಕಲಾಶಿಬಿರ, ಸ್ಪರ್ದೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಹಾಗೂ ಪುರಸ್ಕಾರ ಗಳನ್ನು ಪಡೆದಿದ್ದಾರೆ.

ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ, ಗುಲಬರ್ಗಾ: ಹಿರಿಯ ಕಲಾವಿದ ಜೆ.ಎಸ್. ಖಂಡೇರಾವ ಅವರು ಗುಲಬರ್ಗಾ ವಿಶ್ವವಿದ್ಯಾಲಯದ ಈ ಚಿತ್ರಕಲಾ ವಿಭಾಗಕ್ಕೆ ನಿರ್ದೇಶಕರಾಗಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯವು 1971ರಲ್ಲಿ ಪ್ರಾರಂಭವಾಯಿತು. ಅನಂತರದಲ್ಲಿ ಚಿತ್ರಕಲೆಯಲ್ಲಿ ಸ್ನಾತ ಕೋತ್ತರ ಪದವಿ ವಿಭಾಗವು ಈ ಸಂಸ್ಥೆಯಲ್ಲಿ ಪ್ರಾರಂಭ ವಾಯಿತು (1980). ಈ ಹಿನ್ನೆಲೆಯಲ್ಲಿ ಅನೇಕ ವಿದ್ಯಾರ್ಥಿಗಳು ಉತ್ತಮ ಕಲಾ ಶಿಕ್ಷಣ ಪಡೆದು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ್ದು ವಿಶೇಷವಾಗಿದೆ.



ಶ್ರೀ ಶರಣಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಗುಲಬರ್ಗಾ



ಗೋದುತಾಯಿ ದೊಡ್ಡಪ್ಪ ಅಪ್ಪ ಮಹಿಳಾ ಚಿತ್ರಕಲಾ ಮಹಾವಿದ್ಯಾಲಯ



ವ್ಹಿ. ಜಿ. ಮಹಿಳಾ ಕಲಾ ಮಹಾವಿದ್ಯಾಲಯ, ಗುಲಬರ್ಗಾ

ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ, ಬೀದರ. 1982ರಲ್ಲಿ ಶ್ರೀ ಚನ್ನವೀರಸ್ವಾಮಿ ಮಠದ ಅವರು ಈ ಸಂಸ್ಥೆ ಯನ್ನು ಸ್ಥಾಪಿಸಿ ಬೆಳೆಸಿದರು. ಹೈದ್ರಾಬಾದ್ ಕರ್ನಾಟಕ ಭಾಗದ ಹೆಸರಾಂತ ಕಲಾಸಂಸ್ಥೆಗಳಲ್ಲೊಂದಾದ ಈ ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ ಆ ಭಾಗದಲ್ಲಿ ಅನೇಕ ಕಲಾ ಚಟುವಟಿಕೆ ಗಳನ್ನು ಹಮ್ಮಿಕೊಂಡು ಕಲೆಯ ಉನ್ನತಿಗಾಗಿ ಶ್ರಮಿಸಿದೆ. ಇಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ನಾಡಿನ ಕಲಾಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆಗೈದಿದ್ದಾರೆ.



ನೂತನ ಕಲಾ ಮಹಾವಿದ್ಯಾಲಯ, ಗುಲಬರ್ಗಾ


ಗುರು ಕಲಾಮಂದಿರ, ರಾಯಚೂರು: ಸಾಂಸ್ಕೃತಿಕ ಸೇವಾ ಸಮಿತಿಯ ಮಂಡಳಿ ಯವರು ಈ ಗುರು ಕಲಾಮಂದಿರವನ್ನು ರಾಯಚೂರಿನಲ್ಲಿ ಸ್ಥಾಪಿಸಿದರು (1987). ಉತ್ತಮ ಆಡಳಿತ ಮತ್ತು ಸಿಬ್ಬಂದಿ ವರ್ಗವಿದ್ದುಇಲ್ಲಿನ ಪ್ರತಿಭಾವಂತ ವಿದ್ಯಾರ್ಥಿ ಗಳು ರಾಜ್ಯಮಟ್ಟದ ಕಲಾಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದು ಸಂತಸದ ಸಂಗತಿಯಾಗಿದೆ.

ನೂತನ ಕಲಾಮಂದಿರ, ರಾಯಚೂರು: ರಾಯಚೂರಿನ ಕಲಾಕ್ಷೇತ್ರದಲ್ಲಿ ತನ್ನದೆ ಆದ ಹೆಸರು ಮಾಡಿದ ಈ ಸಂಸ್ಥೆಯನ್ನು ಶ್ರೀಮಾಳಿಯವರು ಸ್ಥಾಪಿಸಿದರು. ಉತ್ತಮ ಬೋಧಕ ವರ್ಗ ಕಲಾವಾತಾವರಣ ಇರುವುದರಿಂದ ಇಲ್ಲಿನ ಪ್ರತಿಭಾವಂತರು ರಾಜ್ಯ ಮಟ್ಟದ ಕಲಾಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ.

ದಿ ಆರ್ಟ್ ಇಂಟಿಗ್ರೇಷನ್, ಗುಲಬರ್ಗಾ: ಈ ಕಲಾಶಾಲೆ ಯನ್ನು 1993ರಲ್ಲಿ ನೀಲಮ್ಮ ಬೆಳಮಗಿಯವರು ಸ್ಥಾಪಿಸಿದರು. ವಾಣಿಜ್ಯ ಕಲೆ, ಹಾಗೂ ಕಲಾಶಿಕ್ಷಣದ ಇತರ ತರಗತಿಗಳನ್ನು ನಡೆಸಲಾಗುತ್ತಿದೆ. ಉತ್ತಮ ಕಲಾಚಟುವಟಿಕೆಗಳ ಜೊತೆಗೆ ಅನೇಕ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಸರ್ವತೋ ಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ಸಹ ತಮ್ಮ ಪ್ರತಿಭೆಯೊಂದಿಗೆ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡುತ್ತಿರುವುದು ಮಹತ್ವದ್ದಾಗಿದೆ.

ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಹುಮನಾಬಾದ್ : ತುಮಕೂರಿನ ಕೆ. ಬಾಬುರಾವ್ ಅವರು 1995–96ರಲ್ಲಿಈ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಪದವಿ, ಡಿಪ್ಲೊಮಾ, ಕಲಾಶಿಕ್ಷಣ ದೊರೆಯುತ್ತಿದೆ. ಜೊತೆಗೆ ಉತ್ತಮ ಕಲಾಚಟುವಟಿಕೆಗಳನ್ನು ಯೋಜಿಸಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಪ್ರಿಯಂಕಾಗಾಂಧಿ ಫೈನ್‌ಆರ್ಟ್ ಕಾಲೇಜ, ಹುಮನಾಬಾದ ಗುಲಬರ್ಗಾ, ರಾಜೀವ ಗಾಂಧಿ ಮೆಮೋರಿಯಲ್ ಫೈನ್‌ಆರ್ಟ್ ಕಾಲೇಜ್ ಹಳ್ಳಿಖೇಡ, ಗುಲಬರ್ಗಾ, ಶ್ರೀ ಚನ್ನಬಸವ ಪಟ್ಟದ



ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯ,ಹುಮನಾಬಾದ

ದೇವರು ಫೈನ್‌ಆರ್ಟ್ ಕಾಲೇಜ್, ಬಾಲ್ಕಿ, ಹೀಗೆ ಅನೇಕ ಚಿತ್ರಕಲಾ ಮಹಾವಿದ್ಯಾಲಯ ಗಳು ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ ಉತ್ತಮ ಕಲಾಶಿಕ್ಷಣ ನೀಡುವುದರ ಜೊತೆಗೆ, ಆರ್ಟ್ ಸೆಮಿನಾರ್, ಕಲಾ ಪ್ರದರ್ಶನ, ಕಲಾಶಿಬಿರದಂತಹ ಕಲಾ ಚಟುವಟಿಕೆಗಳನ್ನು ಹಮ್ಮಿಕೊಂಡು ಚಿತ್ರಕಲಾ ಕ್ಷೇತ್ರದಲ್ಲಿ ಶ್ರೇಷ್ಠ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. (ಎಟಿಎ)



ಕಲಾವತಿ ಎಚ್. ದೊರೆ: ರಾಯಚೂರು ಜಿಲ್ಲೆಯ ಅರಿಕೇರಿ ಸಂಸ್ಥಾನದ ರಾಜ ವಂಶಸ್ಥರ ಮನೆತನದವರಾದ ಡಾ. ಕಲಾವತಿ ಎಚ್. ದೊರೆ ಇವರು ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತದಲ್ಲಿ ಎತ್ತಿದ ಕೈ. ಇವರು ಅನೇಕ ಸಂಗೀತ ಹಿರಿಯ ಗುರುಗಳಾದ ಗೋವಿಂದರಾವ ಇನಾಮದಾರ ಮತ್ತು ಇವರಿಗೆ ಪ್ರಾರಂಭಿಕ ಸಂಗೀತ ಶಿಕ್ಷಣ ತಮದೆ ನರಸಿಂಹ ಶಿಗ್ಗಾಂವಿ, ಪತಿ ಡಾ. ಹನುಮಣ್ಣ ನಾಯಕ ದೊರೆ, ಪದ್ಮಭೂಷಣ ಪಂಡಿತ ಡಾ. ಬಸವರಾಜ ರಾಜಗುರು, ಪಂಡಿತ ಪಂಚಾಕ್ಷರಿ ಸ್ವಾಮಿ, ಪಂಡಿತ ಕೆ.ಜಿ. ಗಿಂಡೆ, ಡಾ. ಕಮಲ ಪುರಂಧರೆ, ಶ್ರೀಮತಿ ಜಾನಕಿ ಅಯ್ಯರ್, ಇನ್ನೂ ಅನೇಕ ಗವಾಯಿಗಳ ಹತ್ತಿರ ಸಂಗೀತ ವಿದ್ಯೆಯನ್ನು ಕಲಿತು ಒಳ್ಳೆ ಹಾಡು ಗಳನ್ನು ಹಾಡಿದ್ದಾರೆ. ಉದಾ: ಭಾವಗೀತೆ, ಜನಪದ ಗೀತೆ, ವಚನಗಳು, ದಾಸೋಹ ಸೂತ್ರಗಳ ಶಾಸ್ತ್ರೀಯ ಸಂಗೀತ ವಿವಿಧ ರೀತಿಯ ಹಾಡುಗಳು ಬೇರೆ ಬೇರೆ ಭಾಗದಲ್ಲಿ, ಉತ್ಸವಗಳಲ್ಲಿ, ಸಮ್ಮೇಳನಗಳಲ್ಲಿ, ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಮತ್ತು ಇವರ ಸಂಗೀತ ಗುರುಗಳು ಹಾಗೂ ಪತಿ ಡಾ.

ಹನುಮಣ್ಣನಾಯಕ ದೊರೆಯವರೊಂದಿಗೆ ದೇಶದಾದ್ಯಂತ ಅವರ ಅನೇಕ ಶಾಸ್ತ್ರೀಯ ಸಂಗೀತ ಕಛೇರಿಯಲ್ಲಿ ತಂಬೂರಿ ಸಾಥಿಯಾಗಿ, ಸಂಗೀತ ಕಾರ್ಯಕ್ರಮಗಳು ಕೊಟ್ಟಿರುತ್ತಾರೆ.

ಡಾ. ಕಲಾವತಿಯವರು ಎಂ.ಎ., ಪಿಎಚ್.ಡಿ ಸಂಗೀತ ವಿಷಯದಲ್ಲಿ ಮುಗಿಸಿರುತ್ತಾರೆ. ಇವರು 22 ವರ್ಷ ನಿರಂತರ ವಾಗಿ ಸಂಗೀತ ಉಪನ್ಯಾಸಕಿಯಾಗಿ ವಿವಿಧ ಮಹಾವಿದ್ಯಾಲಯ ದಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಸಂಗೀತ ಶಿಕ್ಷಕಿ ಕೇಂದ್ರಿಯ ವಿದ್ಯಾಲಯ ಗುಲಬರ್ಗಾ, 1991ರಿಂದ 1992, ಸಂಗೀತ ಉಪನ್ಯಾಸಕಿಯಾಗಿ ನೂತನ ಮಹಾವಿದ್ಯಾಲಯ ಗುಲಬರ್ಗಾ 1993ರಿಂದ 1997, ಹಿರಿಯ ಉಪನ್ಯಾಸಕಿಯಾಗಿ ಗೋದುತಾಯಿ ಪದವಿ ಪೂರ್ವ ಮಹಿಳಾ ಮಹಾವಿದ್ಯಾಲಯ ಗುಲಬರ್ಗಾ 1997ರಿಂದ ಪ್ರಸ್ತುತ ಇವರ ಜೊತೆಯಲ್ಲಿ ಉಪನ್ಯಾಸಕರಾದ ಡಾ. ಸೀಮಾ ಪಾಟೀಲ ರೇವಯ್ಯವಸ್ತ್ರದ ಮಠ, ಛಾಯಾ ಭರತನೂರ, ಎಂ.ಎಸ್. ಪಾಟೀಲ ಮತ್ತು ಎಸ್ ಚಕ್ಕಿ, ಇವರೆಲ್ಲರೂ ವಿದ್ಯಾರ್ಥಿನಿಯರಿಗೆ ಸಂಗೀತ ವಿದ್ಯಾ ಕಲಿಸುತ್ತಿದ್ದಾರೆ. ಡಾ. ಕಲಾವತಿಯರು ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿ ಹೆಸರುವಾಸಿಯಾಗಿರುತ್ತಾರೆ.

ಇವರಿಗೆ ಅನೇಕ ಪ್ರಶಸ್ತಿಗಳು ಬಂದಿರುತ್ತವೆ. ಶರಣ ಬಸವೇಶ್ವರ ಸಂಸ್ಥಾನ ಗುಲಬರ್ಗಾದಿಂದ ಕಾಯಕರತ್ನ 1994 ರಲ್ಲಿ, ಮಹಾಂತಜ್ಯೋತಿ ಪ್ರತಿಷ್ಠಾನ ಗುಲಬರ್ಗಾದಿಂದ 'ಕರ್ನಾಟಕ ಜ್ಯೋತಿ' ಪ್ರಶಸ್ತಿ 2008, ಚೈತನ್ಯಮಯ ಆರ್ಟ್ ಗ್ಯಾಲರಿ ಗುಲಬರ್ಗಾದಿಂದ 'ಚೈತನ್ಯಮಯಿ' ಪ್ರಶಸ್ತಿ 2010, ಶರಣಬಸವೇಶ್ವರ ಸಂಸ್ಥಾನದಿಂದ 'ಅತ್ಯುತ್ತಮ ಶಿಕ್ಷಕಿ' ಬಂಗಾರ ಪದಕದೊಂದಿಗೆ 1995, ಇನ್ನೂ ಅನೇಕ ಪ್ರಶಸ್ತಿಗಳು ಬಂದಿ ರುತ್ತವೆ.

ಇವರ ಸಂಶೋಧನಾ ಮಹಾಪ್ರಬಂಧ 'ಜೈಪೂರ ಘರಾಣಿಯ ಗಾಯಕ ಪಂ. ಸಿದ್ಧರಾಮ ಜಂಬಲದಿನ್ನಿ' ಒಂದು ಅಧ್ಯಯನ (2005). 'ಆಸ್ಮಿ' ಪ್ರಕಾಶನ ಧಾರವಾಡದಿಂದ ಪ್ರಕಟಗೊಂಡ ನಾಡೋಸ್ಮಿ ಸ್ಮರಣ ಸಂಚಿಕೆಯಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸಂಗೀತ ಪರಂಪರೆ 2011, ಯುಜಿಸಿ ಸಹಯೋಗದೊಂದಿಗೆ ಬಸವೇಶ್ವರ ಆರ್ಟ್ ಕಾಲೇಜು ಬಾಗಲ ಕೋಟೆಯಲ್ಲಿ ಆಯೋಜಿಸಿದ ಒಂದು ದಿನದ ವಿಚಾರ ಸಂಕಿರಣ ದಲ್ಲಿ ವಿಷಯ 'ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಸವಾಲು ಗಳು ಮತ್ತು ಅವಕಾಶಗಳು' 2011, ಡಾ. ಕಲಾವತಿ ಎಚ್. ದೊರೆಯವರು ಅನೇಕ ಶೈಕ್ಷಣಿಕ ಮಂಡಳಿಗಳ ಅನುಭವ ಇಲ್ಲಿ ಹಂಚಿಕೊಳ್ಳುತ್ತಿದ್ದಾರೆ ಡಾ. ಕಲಾವತಿ ಎಚ್. ದೊರೆಯವರ ಸಾಧನೆ ಅಪಾರವಾದದ್ದು, 'ಸಂಗೀತದಲ್ಲಿ ಎಷ್ಟು ಕಲಿತರು ಕಲಿಸಿ ದರು ಕಡಿಮೆ'. ಅನ್ನ ದಾಸೋಹಕ್ಕಿಂತ ಸಂಗೀತ ದಾಸೋಹ ಮೇಲು ಅನ್ನುವುದು ಅವರ ಭಾವನೆಯಾಗಿದೆ.

(ಎಸ್ಎಂಎನ್)

ಕಲ್ಮಾಲಿಯ ಶಂಕರಪ್ಪ ಮಾಸ್ತರರು: ಶ್ರೇಷ್ಠ ನಾಟಕಕಾರ. ಇವರು ಕಲ್ಬುರ್ಗಿಯಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ತಮ್ಮ ಆತ್ಮೀಯ ಗೆಳೆಯರ ಒಂದು ವೈಚಾರಿಕ ವರ್ತುಳವನ್ನು ನಿರ್ಮಿಸಿಕೊಂಡು, ನಾಡಿನ ಬಗ್ಗೆ, ಸಮಾಜದ ಬಗ್ಗೆ ಚಿಂತನೆಯನ್ನು ಮಾಡಲು ಕ್ರಮಿಸಿದ್ದರು.

ಜೀವನ ನಿರ್ವಹಣೆಗಾಗಿ ಶಾಲಾ ಮಾಸ್ತರರಾಗಿ ಸೇವೆ ಸಲ್ಲಿಸುವಂತಾದರೂ ಸದಾ ಸಮಾಜಜೀವಿಯಾಗಿ ಬಾಳಿದವರು. ಆರ್ಯ–ದ್ರಾವಿಡ ಎಂಬ ಪುರಾತನ ಕಾಲದಿಂದಲೂ ನಡೆದು ಬಂದ ಜನಾಂಗ ಭೇದದ ನಿರ್ಮೂಲನೆಗಾಗಿ 'ಉಷಾರಾಣಿ' ನಾಟಕವನ್ನು ಬರೆದರು. ತಮ್ಮ ಕಲ್ಪನೆಯ ಶ್ರೇಷ್ಠ ನಟ ಬಾಣಾ ಸುರನನ್ನು ಕಲ್ಮಾಲಿಯ 'ರಂಗಾ ಈಶ್ವರಣ್ಣ'ನವರಲ್ಲಿ ಕಂಡರು. 'ರಂಗಾ ಈಶ್ವರಣ್ಣ'ನವರು 'ರಂಗಭೂಮಿಯ ರಾಕ್ಷಸ' ಎಂಬ ಬಿರುದು ಪಡೆಯಲು ಇವರ ಪರಿಶ್ರಮವೇ ಕಾರಣ.

ಜೋತಿರ್ಲಿಂಗ, ಭಕ್ತ ಮಾರ್ಕಂಡೇಯ, ತ್ರಿಪುರ ವಿಜಯ ಮೊದಲಾದ ಐದು ನಾಟಕಗಳನ್ನು ಬರೆದರು. ಕೊನೆಯ ಮೂರು ನಾಟಕಗಳು ಪ್ರದರ್ಶಿತವಾಗುವ ಮೊದಲೇ ಇವರು ನಿಧನರಾದರು.

(ಎಬಿ)

ಕಲ್ಮೇಶ ವಡ್ಡರ: ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮುಧೋಳ ಗ್ರಾಮದವರು. ತಿಮ್ಮಣ್ಣ–ತಾಯವ್ವರ ಪುತ್ರ. ಮಗ ವಿದ್ಯಾವಂತನಾಗಲೆಂದು ಶಾಲೆಗೆ ಕಳಿಸಿದರು. 7ನೆಯ ತರಗತಿ ಪಾಸಾಗಿ, ಮುಂದೆ 1991ರಲ್ಲಿ ಗ್ರಾಮದ ಶ್ರೀಲಿಂಗೇಶ್ವರ ಪ್ರೌಢ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು. ಮುಂದೆ ನರೇಗಲ್ಲದ ಅನ್ನದಾನೇಶ್ವರ ಮಹಾವಿದ್ಯಾಲಯದಲ್ಲಿ ಪದವಿ ಪಡೆದರು. ಆದರೆ, ಇವರ ವೃತ್ತಿಧರ್ಮವೇ ಬೇರೆಯಾಯಿತು.

ಅನಂತರ ಚಿತ್ರಕಲೆಯ ಹವ್ಯಾಸವನ್ನು ಬೆಳೆಸಿಕೊಂಡು ಚಿತ್ರ ಬಿಡಿಸತೊಡಗಿದರು. ಚಿತ್ರಕಲೆಯಲ್ಲಿ ಯಾವುದೇ ಪದವಿ ಪಡೆಯ ಲಿಲ್ಲವಾದರೂ, ಕಲ್ಮೇಶಿಯ ಕೆತ್ತನೆಯಂತ ಕೈಗಳಿಂದ ಅರಳಿ ಬರುವ ಕಲಾಕೃತಿಗಳಿವೆಯಲ್ಲ, ಅವುಗಳು ಚಿತ್ರಕಲೆಯಲ್ಲಿ ಪದವಿ–ಪುರಸ್ಕಾರ ಪಡೆದವರನ್ನೂ ಮೀರಿಸುವಂಥವು. ಆ ರೀತಿ ಕಲ್ಮಶ ಚಿತ್ರ ಬಿಡಿಸುವದನ್ನು ಕರಗತ ಮಾಡಿಕೊಂಡ. ಈತನ ಚಿತ್ರಗಳು ಕಲಾರಸಿಕರನ್ನು ಕಲಾಲೋಕಕ್ಕೆ ಕೊಂಡೊಯ್ದು ಬಿಡುತ್ತವೆ.

4ನೆಯ ತರಗತಿ ಓದುತ್ತಿದ್ದಾಗಲೇ ಚಿತ್ರಕಲೆಯಲ್ಲಿ ಆಸಕ್ತಿ ವಹಿಸುತ್ತಿದ್ದರು. ಆಗಲೆ ಮಹಾತ್ಮರ ಭಾವಚಿತ್ರಗಳನ್ನು ಬಿಡಿಸು ತ್ತಿದ್ದರು. ಇವರ ಕುಂಚದಿಂದ ಜೀವ ಪಡೆದ ಕಲಾಕೃತಿ ಗಳು ಕ್ಷಣ ಮಾತ್ರದಲ್ಲಿ ಎಲ್ಲರನ್ನೂ ಆಕರ್ಷಿಸುವ ಸಾಮರ್ಥ್ಯ ಹೊಂದಿವೆ. ಈ ಸಾಮರ್ಥ್ಯದಿಂದಲೆ ಈ ಭಾಗದಲ್ಲಿನ ಜನ ರೆಲ್ಲರೂ ಇವರ ಕಲಾ ಪ್ರೌಢಿಮೆಗೆ ಬೆಕ್ಕಸ ಬೆರಗಾಗಿದ್ದಾರೆ. ಮುಖ್ಯವಾಗಿ ಪ್ರಕೃತಿ ಆರಾಧಕರಾಗಿರುವ ಕಲ್ಮೇಶ ಪ್ರಕೃತಿ ದೇವತೆಯ ವರ್ಣನೆಗಳ ಬಗ್ಗೆ ಚಿತ್ರಗಳನ್ನು ಚಿತ್ರಸಿದ್ದಾರೆ.

ನೈಸರ್ಗಿಕವಾಗಿ ಚಿತ್ರಗಳನ್ನರಳಿಸುವುದರಲ್ಲಿ ನಿಪುಣನಾಗಿರುವ ಇವರು ನೈಸರ್ಗಿಕ ಚಿತ್ರಗಳಂತೂ ಮೈದುಂಬಿ ನಿಂತಿರುತ್ತವೆ. ಅಂತೆಯೇ ಈತನ ಕಲಾಕೃತಿಗಳೂ ಪ್ರಕೃತಿ ದತ್ತವಾಗಿವೆ ಎನಿಸುತ್ತವೆ. ಬೋರ್ಡ್ ಮತ್ತು ಗೋಡೆ ಬರಹ, ಬ್ಯಾನರ್ ಇನ್ನು ಮುಂತಾದವುಗಳಿಂದ ಬರುವ ಆದಾಯದಿಂದಲೇ ಜೀವನ ಸಾಗಿಸುತ್ತಿದ್ದಾರೆ.

ಕೊಪ್ಪಳ ತಾಲ್ಲೂಕಿನ ಕೂಕನಪಲ್ಲಿ, ಗಂಗಾವತಿ ತಾಲ್ಲೂಕಿನ ಇಂದರಗಿ, ಯಲಬುರ್ಗಾ ತಾಲ್ಲೂಕಿನ, ಕರಮುಡಿ, ಬೊವಗಿ ಸ್ವಗ್ರಾಮ ಮುಧೋಳದ ಪ್ರಾಥಮಿಕ ಶಾಲೆಗಳಲ್ಲಿನ ಅನೇಕ ಚಿತ್ರ, ಗೋಡೆ ಬರಹಗಳನ್ನು ಬರೆದಿದ್ದಾನೆ. ಇಲ್ಲಿಯವರೆಗೆ ಕಲ್ಮೇಶ ಅನೇಕ ದೇವತೆ-ದೇವರುಗಳ ಚಿತ್ರಗಳನ್ನು ಬಿಡಿಸಿದ್ದಾರೆ. ಅವುಗಳಲ್ಲಿ ಉತ್ತರ ಕರ್ನಾಟಕ ಸುಪ್ರಸಿದ್ಧ ದೇವತೆ, ರೋಣ ತಾಲ್ಲೂಕಿನ ಇಟಗಿ ಗ್ರಾಮದ ಕಲಿಯುಗದ ಮಹಾನ ಶಿವಶರಣೆ ಶ್ರೀ ಭೀಮಾಂಬಿಕೆ, ಲಕ್ಷ್ಮಿ, ಸರಸ್ವತಿ, ಹನುಮಂತ, ಗಾನಯೋಗಿ ಪಂಚಾಕ್ಷರ ಗವಾಯಿ ಇನ್ನು ಮುಂತಾದವರ ಭಾವಚಿತ್ರಗಳನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ.

(ಎಸ್ಎಸ್‌ಪಿ)

ಕಲ್ಯಾಣ ಚಾಲುಕ್ಯರ ದೇವಾಲಯಗಳು: ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕು ಕೇಂದ್ರವಾಗಿದ್ದು ಜಿಲ್ಲೆಯಿಂದ ವಾಯವ್ಯಕ್ಕೆ 48 ಕಿ.ಮಿ. ದೂರದಲ್ಲಿದೆ. ಆಳಂದ ತಾಲ್ಲೂಕು ಪುರಾತನ ಕಾಲದಿಂದಲೂ ರಾಜಕೀಯ ಹಾಗೂ ಸಾಂಸ್ಕೃತಿಕ ರಂಗದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಕಲ್ಯಾಣ ಚಾಲುಕ್ಯರ ಶಾಸನಗಳು ಮತ್ತು ದೇವಾಲಯಗಳು ನಮಗೆ ಕಂಡುಬರುತ್ತವೆ. ಕಲ್ಯಾಣ ಚಾಲುಕ್ಯರ ರಾಜರು ಈ ಪ್ರದೇಶವನ್ನು ಅನೇಕ ವರ್ಷಗಳು ಆಳ್ವಿಕೆ ನಡೆಸಿದ್ದ ಪ್ರಯುಕ್ತ ಈ ಭಾಗದಲ್ಲಿ ಅವರ ನೂರಾರು ಶಿಲಾಶಾಸನಗಳು ಹಾಗೂ ವಾಸ್ತು ಶಿಲ್ಪಗಳನ್ನು ನಾವು ಕಾಣುತ್ತೇವೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಗಡಿಭಾಗವಾದ ಈ ತಾಲೂಕು ಭೌಗೋಳಿಕವಾಗಿ ಮಹತ್ವ ಪಡೆದ ಪ್ರದೇಶವಾಗಿದೆ. ಶಾತವಾಹನರಿಂದ ಹೈದ್ರಾಬಾದ್ ನಿಜಾಮರವರೆಗೆ ಅನೇಕ ರಾಜಮಹಾರಾಜರು ಆಳಿದ ಈ ಪ್ರದೇಶ ತಮ್ಮ ತಮ್ಮ ವಾಸ್ತು ಶೈಲಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಆಳಂದ ತಾಲ್ಲೂಕಿನ ದೇವಾಲಯಗಳು ಹೀಗಿವೆ.

ಸೋಮೇಶ್ವರ (ಆಳಂದ), ಮಾಹೇಶ್ವರ (ಚಿಂಚನಸೂರ), ಈಶ್ವರ (ನಿಂಬರ್ಗಾ), ಕಲ್ಲೇಶ್ವರ (ಬೋಧನ) ಕೇಶವ, ಮಾಹದೇವ (ಮಾದನ ಹಿಪ್ಪರಗಾ), ಮಹಾದೇವ (ರುದ್ರವಾಡಿ), ಮಹಾದೇವ (ಹೊಡಲ), ಈಶ್ವರ (ಲಾಡ ಚಿಂಚೋಳಿ), ಭೋಗೇಶ್ವರ (ದುತ್ತರಗಾಂವ), ಹೀಗೆ ಅನೇಕ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪಗಳನ್ನು ಕಾಣುತ್ತೇವೆ. ಈ ದೇವಾಲಯಗಳಿಂದ ಅಂದಿನ ಕಾಲದ ಕಲೆ, ಶಿಕ್ಷಣ, ಸಾಮಾಜಿಕ ಜೀವನದ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಈ ದೇವಾಲಯಗಳು ರಾಜ ಯುದ್ಧದಲ್ಲಿ ಗೆದ್ದ ಸಂಕೇತವಾಗಿ ಕಟ್ಟಿಸಿದ ಹಾಗೂ ರಾಣಿಯ ಹೆಸರಿನಲ್ಲಿ ಕಟ್ಟಿಸಿದ, ಅಥವಾ ತಂದೆ-ತಾಯಿಗಳ ಹೆಸರಿನಿಂದ ಕಟ್ಟಿಸಿದ ದೇವಾಲಯಗಳು, ಸಾಮಂತರಿಂದ ನಿರ್ಮಾಣವಾದ ದೇವಾಲಯಗಳು, ಧರ್ಮಗುರುಗಳು ನಿರ್ಮಿಸಿದ ದೇವಾಲಯಗಳು, ಹೀಗೆ ಅನೇಕ ಕಾರ್ಯಗಳ ನಿಮಿತ್ತ ಕಟ್ಟಿಸಿದ ದೇವಾಲಯಗಳು ಇವೆ. ವೈದಿಕ ಆಚರಣೆಗಳ ಜೊತೆಗೆ ಪೌರಾಣಿಕ ನಂಬಿಕೆಗಳೂ ಸೇರಿದ್ದರಿಂದಲೇ ದೇವಾಲಯಗಳು ಎಲ್ಲ ವರ್ಗಗಳ ಜನರಿಂದ ಪ್ರೋತ್ಸಾಹಿತವಾಗಿವೆ.

ದೇವಾಲಯಗಳಿಂದ ನಾವು ಭೂಮಿದಾನ, ಗ್ರಾಮದಾನ, ಅನ್ನದಾನ, ಮಹೋನ್ನತಿ, ವಿದ್ಯಾದಾನದಂತಹ ಮಹತ್ವವನ್ನು ಕುರಿತ ವಿವರಣೆಗಳನ್ನು ತಿಳಿದುಕೊಳ್ಳಬಹುದಾಗಿದೆ. ಅಂದಿನ ಕಾಲದಲ್ಲಿ ಸಮಾಜದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾದ ಒಂದು ದೇವಾಲಯಗಳ ಜೊತೆಗೆ ಕೆರೆ, ಬಾವಿಗಳ ನಿರ್ಮಾಣವೂ ನಡೆದಿದೆ. ಕಾಡನ್ನು ಕಡಿದು ಊರನ್ನು ಕಟ್ಟಿಸಿದಾಗ ಊರಿನ ಮುಂದೆ ಒಂದು ದೇವಾಲಯ ಮತ್ತು ಊರಿಗೊಂದು ಕೆರೆಯ ನಿರ್ಮಾಣವು ಅವರ ಪ್ರಧಾನ ಕಾರ್ಯಗಳಾಗಿದ್ದವು. ದೇವಾಲಯಗಳಲ್ಲಿ ಶಿಕ್ಷಣ ಪ್ರಧಾನ ಕೆಲಸವಾಗಿದ್ದು, ಸಾಂಸ್ಕೃತಿಕ ಬೆಳವಣಿಗೆಯ ಒಂದು ಮುಖ್ಯಘಟ್ಟ, ವೈದಿಕ ಕಾಲದ ಗುರುಕುಲಗಳು ಮಠ ಮತ್ತು ಶಾಲೆಗಳಾಗಿ ಮುಂದುವರೆದಿವೆ. ಆಳಂದ ತಾಲ್ಲೂಕಿನ ಹೊಡಲ, ರುದ್ರವಾಡಿಗಳಲ್ಲಿ ಗುರುಕುಲಗಳಿಂದ ಇವು ಅಂದಿನ ಕಾಲದ ಶಿಕ್ಷಣದ ಬಗ್ಗೆ ಶಾಸನ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಚಿಂಚನಸೂರ: ತಾಲ್ಲೂಕು ಕೇಂದ್ರವಾದ ಆಳಂದದಿಂದ 31 ಕಿ. ಮೀ. ದೂರದಲ್ಲಿರುವ ಐತಿಹಾಸಿಕ ಮಹತ್ವದ ಸ್ಥಳ. ಈವರೆಗೆ ಎರಡು ಶಾಸನಗಳು ವರದಿಯಾಗಿದ್ದು ಊರ ನಡುವೆ ಇರುವ ಮಾಹೇಶ್ವರ ಗುಡಿಯೇ ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವಾಗಿದ್ದು ಇದು ಏಕಕೂಟ ದೇವಾಲಯವಾಗಿದೆ. ಇದರ ನವರಂಗದ ಭಾಗ ಪೂರ್ಣ ನಶಿಸಿಹೋಗಿದೆ. ಉಳಿದ ಗರ್ಭಗೃಹದಲ್ಲಿ ಬೃಹತ್ ಶಿವಲಿಂಗವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗ್ರಾಮದಲ್ಲಿ ಅತಿ ದೊಡ್ಡ ದೇವಾಲಯವಾಗಿದೆ. ಇದರ ಬಾಗಿಲವಾಡವು ಚತುರ ಶಾಖಾಲಂಕೃತವಾಗಿದ್ದು ಕೆಳಗೆ ಶೈವ ದ್ವಾರಪಾಲಕರು ಹಾಗೂ ಚೌರಿಧಾರಿಗಳಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಇದರ ಹೊಸ್ತಿಲು ಸುಂದರವಾಗಿದೆ. ಲಲಿತ ಅಂತರಾಳದಲ್ಲಿ ಆಕರ್ಷಕವಾದ ಚಂದ್ರಶಿಲೆ ಇದೆ. ಈ ದೇವಾಲಯದ ಆಕರ್ಷಣೆಯೆಂದರೆ ಇದರ ಭಿತ್ತಿಗಳನ್ನು ಅಲಂಕರಿಸಿರುವ ಉಬ್ಬು ಶಿಲ್ಪಗಳು ಮೂರು ಹೊರಗೋಡೆಗಳಿಗಿವೆ. ಮೂರು ಹೊರಗೋಡೆಗೆ ಒಂದೊಂದು ದೇವಕೋಷ್ಠಗಳಿದ್ದು ಅವುಗಳಲ್ಲಿ ಗಣಪತಿ, ಭದ್ರಕಾಳಿ, ಭೈರವರ ವಿಗ್ರಹಗಳಿವೆ. ಈ ದೇವಾಲಯವು ಹೂಬಳ್ಳಿಯಿಂದ ಸುಂದರವಾಗಿ ಕೆತ್ತಲಾಗಿದ್ದು ಭಿತ್ತಿಯ ತುಂಬ ಭೈರವ, ಭೈರವಿ ವಿವಿಧ ಉಬ್ಬು ಶಿಲ್ಪಗಳಿದ್ದು ವಾದ್ಯ ನುಡಿಸುತ್ತಿರುವ ಸುಂದರಿಯರು, ರತಿ ಮನ್ಮಥ ಉಬ್ಬು ಕೆತ್ತನೆಗಳನ್ನು ನಾವು ಕಾಣುತ್ತೇವೆ. ಅತ್ಯಂತ

ಸುಂದರವಾದ ಈ ದೇವಾಲಯವು ಸೂಕ್ಷ್ಮ ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಹೆಸರು ವಾಸಿಯಾದ ಪ್ರಸಿದ್ಧ ದೇವಾಲಯವಾಗಿದೆ.


ದುತ್ತರಗಾಂವ: ಆಳಂದ ತಾಲ್ಲೂಕು ಕೇಂದ್ರದಿಂದ 20 ಕಿ.ಮೀ. ದೂರದಲ್ಲಿದೆ. ಈ ಗ್ರಾಮ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಒಂದು ಅಗ್ರಹಾರದಿಂದ ಪ್ರಸಿದ್ಧಿ ಪಡೆದಿದ್ದು ಶಾಸನಗಳಿಂದ ಗೊತ್ತಾಗುತ್ತದೆ. ಊರಿನಲ್ಲಿ ಭೋಗಲಿಂಗೇಶ್ವರ ದೇವಾಲಯವಾಗಿದ್ದು ಅರಸ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದ್ದು 1109ರಲ್ಲಿ ಆತನ ಹಿರಿಯ ರಾಣಿಯಾದ ಅಚಲಾದೇವಿಯ ಸರ್ವ ನಮಸ್ಯದಗ್ರಹಾರ ದುತ್ತರಗಾವೆಯಲ್ಲಿ ನಿರ್ಮಿಸಿದ ಕೇಶವ ದೇವಗಣ ಪೂಜಾವಿಧಿಗೆಂದು ಊರು ಪ್ರಭುಗಳು 50 ಮತ್ತರು ಭೂಮಿಯನ್ನು ದಾನ ಬಿಟ್ಟು ವಿಷಯವನ್ನು ತಿಳಿಸುತ್ತದೆ. ಈ ಶಾಸನಗಳ ಮೂಲಕ ತಿಳಿದ ವಿದ್ಯಾಭ್ಯಾಸ ಕ್ರಮವನ್ನು ಸಮಕಾಲೀನ ಜೀವನದ ಪರಿಚಯ ಮಾಡುವ ಕಾವ್ಯಗಳೂ ಪರಿಚಯಿಸಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಗ್ರಹಾರಗಳು, ಬ್ರಹ್ಮಪುರಿಗಳು ತಮ್ಮ ವ್ಯಾಪ್ತಿಯೊಳಗಿನ ದೇವಾಲಯ ಮತ್ತು ಮಠಗಳಲ್ಲಿ ವಿದ್ಯಾ ಪ್ರಸಾರಕ್ಕೆ ಎಲ್ಲಾ ರೀತಿಯ ಅನುಕೂಲಗಳನ್ನು ಒದಗಿಸಿವೆ. ಜೊತೆಗೆ ಘಟಿಕಾಸ್ಥಾನಗಳು ಉಚ್ಚ ಶಿಕ್ಷಣ ಕೇಂದ್ರ್ಥಾನಗಳಾಗಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ.

ಹೊಡಲ್: ಈ ಗ್ರಾಮ ತಾಲ್ಲೂಕು ಕೇಂದ್ರದಿಂದ 40 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಹೊಡಲ್ ಪೊಡಲ ಹೊಡಲ ಎಂದೇ ಉಲ್ಲೇಖಗೊಡಿವೆ. ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಎರಡು ಶಾಸನಗಳು ಪತ್ತೆಯಾಗಿದ್ದು ಅವು ಈಗಾಗಲೇ ಪ್ರಕಟಗೊಂಡಿರುತ್ತವೆ. ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಹೊಡಲ ರಾಮೇಶ್ವರ ದೇವಾಲಯ ಹಿಂದೆ ಅದಕ್ಕೆ ರಾಮಲಿಂಗೇಶ್ವರ ದೇವಾಲಯವಾಗಿದೆ. ಈ ದೇವಾಲಯ ತ್ರಿಕೂಟವಾಗಿದ್ದು ಎತ್ತರವಾದ ಜಗತಿಯ ಮೇಲೆ ಪೂರ್ವಾಭಿಮುಖವಾಗಿದೆ. ಪ್ರತ್ಯೇಕವಾದ ಮೂರು ಗರ್ಭಗೃಹವಿದ್ದು ಮುಖ್ಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಉಳಿದೆರಡು ಗರ್ಭಗೃಹಗಳು ಬರಿದಾಗಿವೆ. ಗರ್ಭಗೃಹದ ಬಲಭಾಗದಲ್ಲಿ ಸಪ್ತಮಾತೃಕೆಗಳು ಇದ್ದು ನೋಡಲು ಸುಂದರವಾಗಿದೆ. ದೇವಾಲಯದ ನವರಂಗದ ಭಿತ್ತಿಗೆ ಸುಂದರವಾಗಿ ಆಕರ್ಷಣೀಯವಾದ ಕೆತ್ತನೆಗಳನ್ನು ಕಾಣುತ್ತೇವೆ. ಶಿವಪಾರ್ವತಿ ನಂದಿ ಮೇಲೆ ಕುರಿತು ಸವಾರಿ ಮಾಡುವ ದೃಶ್ಯ ಮತ್ತು ಇಬ್ಬರು ನೃತ್ಯ ಮಾಡುವ ದೃಶ್ಯಗಳನ್ನು ನೋಡಬಹುದು. ಈ ದೇವಾಲಯ ಒಂದು ಸುಂದರ ಐತಿಹಾಸಿಕ ತಾಣವಾಗಿದ್ದು, ಸುಂದರ ಕೆತ್ತನೆಗೆ ಹೆಸರು ವಾಸಿಯಾಗಿದೆ ಹಾಗೂ ಈ ದೇವಾಲಯದ ಎದುರು ವಿಶಾಲವಾದ ನಂದಿ ಮಂಟಪವಿದ್ದು ಸುತ್ತಲೂ ಕಂಬಗಳಿಂದ ಕೂಡಿದೆ. ಈ ಮಂಟಪಕ್ಕೆ ಪೂರ್ವ ಹಾಗೂ ಪಶ್ಚಿಮ ದಿಕ್ಕಿಗೆ ದ್ವಾರಗಳಿದ್ದು ಮಧ್ಯ ಬೃಹತ್ ನಂದಿ ವಿಗ್ರಹವಿದೆ. ದೇವಾಲಯದ ಒಳಗಡೆ ದೊಡ್ಡ ಶಾಸನವಿದ್ದು ಈಗ ಅದರ ಮೇಲೆ ಕೆಂಪು ಬಣ್ಣ ಹಚ್ಚಿ ಅದರಲ್ಲಿ ಇತಿಹಾಸವನ್ನು ಮುಚ್ಚಿ ಹಾಕಿದಂತಾಗಿದೆ.

ಈ ಗ್ರಾಮಗಳಲ್ಲಿ ಇರುವ ಐತಿಹಾಸಿಕ ದೇವಾಲಯಗಳು ಈಗ ದುಸ್ಥಿತಿಯಲ್ಲಿವೆ. ಅಂದಿನ ಕಾಲದಲ್ಲಿ ಅನೇಕ ರಾಜಮಹಾರಾಜರು ತಮ್ಮ ತಮ್ಮ ಕಾರ್ಯದ ಸಂಕೇತವಾಗಿ ಅನೇಕ ಶಾಸನಗಳು, ವೀರಗಲ್ಲುಗಳು, ದೇವಾಲಯಗಳು, ಬಸದಿಗಳು ಹೀಗೆ ಅನೇಕ ರೀತಿಯ ಕುರುಹುಗಳನ್ನು ನಮ್ಮ ಪಾಲಿಗೆ ಬಿಟ್ಟು ಹೋಗಿದ್ದಾರೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೇರಳವಾದ ಶಾಸನಗಳು ಮತ್ತು ದೇವಾಲಯಗಳನ್ನು ಕಾಣುತ್ತೇವೆ. ಅವರು ದೇವಾಲಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವುಗಳಿಗೆ ದಾನ ದತ್ತಿಗಳನ್ನು ಕೊಟ್ಟಿದ್ದಾರೆ. ಬಾದಾಮಿ ಚಾಲುಕ್ಯ, ಕಲೆಗೆ ಕೊಟ್ಟ ಪ್ರೋತ್ಸಾಹಕ್ಕಿಂತ ಹೆಚ್ಚಿನವಾಗಿ ಕಲ್ಯಾಣ ಚಾಲುಕ್ಯರು ಸೂಕ್ಷ್ಮವಾದ ಕೆತ್ತನೆಗೆ ಪ್ರೇರಣೆ ಕೊಟ್ಟರು. (ಎಎಸ್‌ಎಸ್‌ಎ)

ಕಲ್ಯಾಣ ಚಾಲುಕ್ಯರ ಪ್ರಮುಖ ಸಾಂಸ್ಕೃತಿಕ ನೆಲೆ: (ಏವೂರು)

ಗುಲಬರ್ಗಾ ಜಿಲ್ಲೆ ಸುರಪುರ ತಾಲ್ಲೂಕಿನ ಏವೂರು ಈಗ ಒಂದು ಸಣ್ಣ ಗ್ರಾಮ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಅದು ಒಂದು ಪ್ರಮುಖ ಸಾಂಸ್ಕೃತಿಕ ನೆಲೆಯಾಗಿತ್ತು. ಈ ಮಾತು ಏವೂರಿನ ಬಗ್ಗೆ ಕುತೂಹಲ ಮೂಡಿಸಬಹುದಷ್ಟೇ ಹೊರತು, ಆ ಬಗ್ಗೆ ಎಲ್ಲವನ್ನು ಹೇಳುವುದಿಲ್ಲ. ಇಲ್ಲಿ 24 ಶಾಸನಗಳಿವೆ. ಇವುಗಳ ಪೈಕಿ 22 ಶಾಸನಗಳು ಕಲ್ಯಾಣ ಚಾಲುಕ್ಯರ ಕಾಲಕ್ಕೇ ಸೇರುತ್ತವೆ. ಇನ್ನೆರಡು ನಂತರ ಕಲಚುರ್ಯರ ಕಾಲದವು. ಕಲ್ಯಾಣ ಚಾಳುಕ್ಯರ ಕಾಲಕ್ಕೆ ಅದು ಒಂದು ಭತ್ತಗ್ರಾಮವಾಗಿತ್ತು. ಭತ್ತಗ್ರಾಮವೆಂದರೆ ಇನಾಮು/ಜಹಗೀರು ಅಥವಾ ಉಂಬಳಿಯಾಗಿ ಪಡೆದ ಗ್ರಾಮ ಎಂಬ ಅರ್ಥವಿದೆ. ಯಾವುದೇ ವ್ಯಕ್ತಿಯ ವಿಶಿಷ್ಟ ಸೇವೆಯನ್ನು ಗೌರವಿಸಿ ದಾನವಾಗಿ ನೀಡಿದ ಗ್ರಾಮವನ್ನು ಭತ್ತಗ್ರಾಮ ಅಥವಾ ಭತ್ತಗಾವೆ ಎಂದು ಪರಿಗಣಿಸುತ್ತಿದ್ದಂತೆ ತೋರುತ್ತದೆ. ಯಾವುದೇ ಒಬ್ಬ ವ್ಯಕ್ತಿಯ ವಿಶಿಷ್ಟ ಕಾರ್ಯಕ್ಕೆ ಈ ಗೌರವ ಸಲ್ಲಬಹುದು. ಎಷ್ಟೋ ಅಧಿಕಾರಿಗಳೂ ಈ ಗೌರವಕ್ಕೆ ಪಾತ್ರರಾಗಿರುವುದನ್ನು ಹಲವು ಶಾಸನಗಳು ಸ್ಪಷ್ಟಪಡಿಸಿವೆ. ಏವೂರು ಅಂತಹ ಒಂದು ಭತ್ತಗ್ರಾಮವಾಗಿದ್ದ ವಿಷಯವನ್ನು ಏವೂರಿನ ಕ್ರಿ.ಶ. 1119ರ ಒಂದು ಶಾಸನ ದಾಖಲಿಸಿದೆ. ಭತ್ತಗ್ರಾಮ ಏಹೂರ ಸ್ವಯಂಭು ಸೋಮೇಶ್ವರ ದೇವರ ಉತ್ತರಕ್ಕೆ ಚಟ್ಟೇಶ್ವರ ದೇವಾಲಯ ಇದ್ದ ವಿಷಯವನ್ನೂ ಶಾಸನ ಸ್ಪಷ್ಟಪಡಿಸಿದೆ. ಮೇಲಿನ ಶಾಸನ ಪ್ರಸ್ತಾಪಿಸಿರುವ ಸ್ವಯಂಭು ಸೋಮೇಶ್ವರ ದೇವಾಲಯವು ಕ್ರಿ.ಶ. 1077ರ ವೇಳೆಗೆ ನಿರ್ಮಾಣ ಆಗಿದ್ದ ವಿಷಯವನ್ನು ಏವೂರಿನ ಮತ್ತೊಂದು ಶಾಸನ ತಿಳಿಸುತ್ತದೆ. ಈ ಶಾಸನವು ರವಿಗ ಚಮೂಪನ ಅಧಿಕಾರ ವಿಸ್ತರಣೆಯನ್ನು ದಾಖಲಿಸಿದೆ. ಮೊದಲು ಲಾಳ ಸಂಧಿವಿಗ್ರಹಿಯಾಗಿ, ನಂತರ ಹೇರಿಸಂಧಿ ವಿಗ್ರಹಿಯಾಗಿ ಮತ್ತು ಅಂತಿಮವಾಗಿ ಹೇರಿಲಾಳ ಸಂಧಿವಿಗ್ರಹಿಯಾಗಿ ಹಂತ ಹಂತವಾಗಿ ಮೇಲೇರಿದ್ದನ್ನು ತಿಳಿಸುತ್ತಲೇ ರವಿಗ ಚಮೂಪನ ನಿರ್ದೇಶನದಂತೆ ಪೇರ್ಗಡೆ ನಾಗವರ್ಮನು ಏವೂರಿನಲ್ಲಿ ಸ್ವಯಂಭು ಶಿವಾಲಯವನ್ನು ನಿರ್ಮಾಣ ಮಾಡಿಸಿದ್ದನ್ನು ತಿಳಿಸಿದೆ. ಈ ಸ್ವಯಂಭು ಶಿವಾಲಯವೇ ಈ ಮೊದಲು ಪ್ರಸ್ತಾಪಿತವಾದ ಸ್ವಯಂಭು



ಸ್ವಯಂಭು ಸೋಮೇಶ್ವರ ದೇವಾಲಯ, ಏವೂರು (ಗುಲಬರ್ಗಾ)

ಸೋಮೇಶ್ವರ ದೇವಾಲಯವೆಂದು ಭಾವಿಸಲು ಅವಕಾಶಗಳಿವೆ. ರವಿಗ ಚಮೂಪನು ಮೊದಲನೆಯ ಎರಡನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯರ ಅಂದರೆ ಮೂರು ರಾಜರ ಆಳ್ವಿಕೆಯಲ್ಲಿ ಅಧಿಕಾರ ಹೊಂದಿದ್ದ; ಇವನು ಎರಡನೆಯ ಅಥವಾ ಮೂರನೆಯ ಸೋಮೇಶ್ವರನ ಕಾಲದಲ್ಲಿ ಅಧಿಕಾರಿ ನಾಗವರ್ಮ ದೇವಾಲಯ ನಿರ್ಮಾಣ ಮಾಡಿರುವ ಸಾಧ್ಯತೆ ಇರುವುದರಿಂದ, ದೇವಾಲಯಕ್ಕೆ ಸೋಮೇಶ್ವರನ ಹೆಸರು ಹೊಂದಿಕೊಂಡಿರುವಂತಿದೆ. ಇದರಲ್ಲಿ ಬಾದಾಮಿ ಚಾಲುಕ್ಯ ಮತ್ತು ಕಲ್ಯಾಣ ಚಾಲುಕ್ಯರ ಸಂಬಂಧ ಪ್ರಸ್ತಾಪಿತವಾಗಿದೆ.

ಏವೂರಿನ ಸ್ವಯಂಭು ದೇವಾಲಯವು ಕಾಳಾಮುಖ ಗುರುಗಳ ನೇತೃತ್ವದಲ್ಲಿತ್ತು. ದೇವಾಲಯದ ಜೊತೆಗೆ ಶಿವಪುರ ಎಂಬ ಹೆಸರಿನಲ್ಲಿ ಊರನ್ನು ನಿರ್ಮಿಸಿ, ಅಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಏವೂರಿನ ಸ್ವಯಂಭು ದೇವಾಲಯವೂ ಅಂತಹುದೇ ಒಂದು ಕಾಳಾಮುಖ ಕೇಂದ್ರವಾಗಿತ್ತು ಎಂದು ಶಾಸನದ ಮೂಲಕ ಸ್ಪಷ್ಟವಾಗುತ್ತದೆ. ಶಾಸನದ ಪಠ್ಯವನ್ನು ಗಮನಿಸಿದಾಗ ಸ್ವಯಂಭು ಸೋಮೇಶ್ವರ ದೇವಾಲಯವು ಒಂದು ವಿದ್ಯಾ ಕೇಂದ್ರವಾಗಿತ್ತು ಎಂದು ಸ್ಪಷ್ಟವಾಗುತ್ತದೆ.

ಇಲ್ಲಿ ಕ್ರಿ.ಶ. 1110ರ ಒಂದು ಶಾಸನವು ಕಂಮಟೇಶ್ವರ ದೇವರಿಗೆ ವಿವಿಧ ಕೊತ್ತಳಿಯವರು ನೀಡಿದ ದಾನಗಳನ್ನು ದಾಖಲಿಸಿದೆ. ಶಾಸನಗಳ ಮೂಲಕ ತಿಳಿದಿರುವಂತೆ ಏವೂರಿನಲ್ಲಿ ಸ್ವಯಂಭು ಸೋಮೇಶ್ವರ, ಈಸಪೇಶ್ವರ, ಗವಜೇಶ್ವರ, ಕೇಶವ, ಕಂಮಟೇಶ್ವರ, ಚಟ್ಟೇಶ್ವರ, ಮಲ್ಲಿಕಾರ್ಜುನ ಮತ್ತು ದಾಯಿಮೇಶ್ವರ ದೇವಾಲಯಗಳಿರಬೇಕು. ಈಗ ಅಲ್ಲಿ ಸ್ವಯಂಭು ಸೋಮೇಶ್ವರ ದೇವಾಲಯವು ಪ್ರಮುಖವಾಗಿ ಉಳಿದಿದೆ. ಇದಕ್ಕೆ ಹೊಂದಿಕೊಂಡಿರುವ ಸಂಗಮೇಶ್ವರ ದೇವಾಲಯ ಸಂಕೀರ್ಣವು ಏವೂರಿನಲ್ಲಿರುವ ಪ್ರಮುಖ ದೇವಾಲಯ, ಗವಜೇಶ್ವರ ಮತ್ತು ಕಂಮಟೇಶ್ವರ ದೇವಾಲಯಗಳ ಉಲ್ಲೇಖವಿರುವ ಶಾಸನಗಳು ಊರಿನ ಮಸೀದಿ ಕಟ್ಟೆಯಲ್ಲಿವೆ. ಕೆಲವು ಸಾಸನೋಕ್ತ ದೇವಾಲಯಗಳು ಮಾತ್ರ ಉಳಿ ದಿವೆ. ಕೆಲವು ದೇವಾಲಯಗಳು ಶಿಥಿಲಾವ್ಯಸ್ಥೆಯಲ್ಲಿವೆ.


ಏವೂರಿನ ಸೋಮೇಶ್ವರ ಮತ್ತು ಸಂಗಮೇಶ್ವರ ದೇವಾಲಯ ಸಂಕೀರ್ಣದಲ್ಲಿ ಬಹುತೇಕ ಶಾಸನೋಕ್ತ ದೇವಾಲಯಗಳನ್ನು ಕಾಣಬಹುದು. ಸೋಮೇಶ್ವರ ದೇವಾಲಯವೇ ಶಾಸನೋಕ್ತ ಸ್ವಯಂಭು ಸೋಮೇಶ್ವರ ದೇವಾಲಯ ಎಂದು ಒಪ್ಪಿಕೊಳ್ಳಲಾಗಿದೆ. ಸಂಗಮೇಶ್ವರ ದೇವಾಲಯವೇ ಚಟ್ಟೇಶ್ವರ ದೇವಾಲಯ. ಬಾವಿ ಬಸವಣ್ಣ ದೇವಾಲಯವೇ ಗವಶ್ವರ ದೇವಾಲಯ, ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹ ಮಾತ್ರ ಉಳಿದಿದೆ. ಶಾಸನಗಳು ಸಾಮಾನ್ಯವಾಗಿ ಸಂಬಂಧಿಸಿದ ದೇವಾಲಯಗಳಿಗೆ ಹೊಂದಿಕೊಂಡಂತೆಯೇ ಇರುತ್ತದೆ ಎಂಬ ಸಾಮಾನ್ಯ ಊಹೆಗೆ ವಿರುದ್ಧವಾಗಿ ಇಲ್ಲಿ ಶಾಸನಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಗವಜೇಶ್ವರ ಮತ್ತು ಕಂಮಟೇಶ್ವರ ದೇವರ ಪ್ರಸ್ತಾಪ ಇರುವ ಶಾಸನಗಳು ಮಸೀದಿಯ ಕಟ್ಟೆಯಲ್ಲಿ ಸೇರಿವೆ.

ಈಗ ಸ್ವಯಂಭು ಸೋಮೇಶ್ವರ ದೇವಾಲಯ ಸಂಕೀರ್ಣ ಆಸಕ್ತರ ಗಮನ ಸೆಳೆಯುತ್ತಿದೆ. ಇದು ದ್ವಿಕೂಟವೇ ಅಥವಾ ತ್ರಿಕೂಟವೇ ಎಂದು ಸ್ಪಷ್ಟವಾಗಿ ನಿರ್ಧರಿಸಲೂ ಸಾಧ್ಯವಾಗದಂತೆ ದೇವಾಲಯದ ಸ್ವರೂಪ ಬದಲಾಗಿದೆ. ದೇವಾಲಯದ ತಳ ವಿನ್ಯಾಸವು ನಕ್ಷತ್ರಾಕಾರಕ್ಕೆ ಬದಲಾವಣೆಗೊಳ್ಳುತ್ತಿರುವ ಹಂತವನ್ನು ಇಲ್ಲಿ ಕಾಣಬಹುದು. ಕಂಬಗಳು ಕಲ್ಯಾಣ ಚಾಲುಕ್ಯ ಶೈಲಿಯನ್ನು ನೆನಪಿಗೆ ತರುತ್ತದೆ. ನವರಂಗದ ಕಂಬಗಳ ಸ್ವರೂಪವು



ಸ್ವಯಂಭು ಸೋಮೇಶ್ವರ ದೇವಾಲಯದ ಕಂಬದ ಕೆತ್ತನೆ

ಶಿಲ್ಪಿಗಳ ಪ್ರಯೋಗಶೀಲತೆಯ ಗುರುತಾಗಿದೆ. ಸ್ವಯಂಭು ಸೋಮೇಶ್ವರ ದೇವಾಲಯದ ಬದಿಗಿರುವ ಸಂಗಮೇಶ್ವರ ದೇವಾಲಯವು ತ್ರೈಪುರುಷ ದೇವಾಲಯ ಆಗಿದ್ದಿರುವ ಸಾಧ್ಯತೆ ಇದೆ. ದೇವಾಲಯದ ಪಶ್ಚಿಮಾಭಿಮುಖದ ಕಿರುಗೂಡುಗಳಲ್ಲಿ ಬ್ರಹ್ಮ ಮತ್ತು ವಿಷ್ಣುವಿನ ಮೂರ್ತಿಗಳಿವೆ. ಉತ್ತರಾಭಿಮುಖದ ಕಿರುಗೂಡು ಖಾಲಿ ಇದೆ. ಬಹುಶಃ ಅಲ್ಲಿ ಶಿವನ ಮೂರ್ತಿ ಅಥವಾ ಶಿವಲಿಂಗ ಇದ್ದಿರುವ ಸಾಧ್ಯತೆಗಳಿವೆ. ದೇವಾಲಯದ ಈ ಭಾಗಕ್ಕೆ ಹೊಂದಿಕೊಂಡಂತೆ, ವಾಯುವ್ಯ ಭಾಗಕ್ಕೆ ಶಾಲಾ ವಾಸ್ತು ಇದೆ. ಇದರಿಂದ ಇದೊಂದು ತ್ರೈಪುರುಷ ದೇವಾಲಯ ಎಂದು ಸ್ಪಷ್ಟವಾಗುತ್ತದೆ. ಈ ದೇವಾಲಯದ ಹಿಂದಿನ ಮಂಟಪ ವನ್ನು ಶಾಸನ ಮಂಟಪ ಎಂದು ಕರೆಯಲಾಗುತ್ತಿದೆ. ಇದರೊಳ ಗಿನ ಕಂಬದ ನಾಲ್ಕೂ ಮುಖಗಳಲ್ಲಿ ಕ್ರಿ.ಶ. 1077ರ ಶಾಸನ ಇದೆ. ಈ ಶಾಸನದ ಬಗ್ಗೆ ಈಗಾಗಲೇ ತಿಳಿಸಲಾಗಿದೆ. ಬಾದಾಮಿ ಚಾಲುಕ್ಯ ಮತ್ತು ಕಲ್ಯಾಣಚಾಲುಕ್ಯ ವಂಶಗಳ ನಡುವಿನ ಸಂಬಂಧವನ್ನು ತಿಳಿಸುವ ಈ ಶಾಸನವು ರವಿಗ ಚಮೂಪನ ಅಧಿಕಾರಿ ನಾಗವರ್ಮಯ್ಯ ಮಾಡಿಸಿದ ಸ್ವಯಂಭು ದೇವಾ ಲಯದ ಬಗೆಗೆ ತಿಳಿಸುತ್ತದೆ. ಸ್ವಯಂಭು ಸೋಮೇಶ್ವರ ದೇವಾ ಲಯದ ಉತ್ತರಕ್ಕೆ ಚಟ್ಟೇಶ್ವರದ ದೇವಾಲಯ ವಿದ್ದುದನ್ನು ಕ್ರಿ.ಶ. 1119ರ ಶಾಸನ ತಿಳಿಸಿದೆ. ದೇವಾಲಯದ ಮುಂದಿನ ಪುಷ್ಕರಣಿಯೂ ಅಚ್ಚುಕಟ್ಟಾದ ನಿರ್ಮಾಣ. ಇದರ ಮೇಲ್ಭಾಗ ದಲ್ಲಿ ವಿವಿಧ ಬಗೆಯ ಶಿಲ್ಪಗಳಿರುವ ಫಲಕಗಳಿವೆ. ಇವು ದೇವಾ ಲಯದ ಮುಖಮಂಟಪದಲ್ಲಿನ ಕಕ್ಷಾಸನದ ಹಿಂಭಾಗದಶಿಲ್ಪ ಗಳನ್ನು ನೆನಪಿಗೆ ತರುತ್ತವೆ. ಆದ್ದರಿಂದಯಾವುದೋ ದೇವಾ ಲಯ ಶಿಥಿಲಗೊಂಡಾಗ ಅಲ್ಲಿನ ಕಕ್ಷಾಸನದ ಫಲಕಗಳನ್ನು ಪುಷ್ಕರಣಿಯ ದುರಸ್ತಿಯ ಸಂದರ್ಭದಲ್ಲಿ ಬಳಸಿಕೊಂಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕು ವಂತಿಲ್ಲ. ಮುಖ್ಯ ದೇವಾ ಲಯದ ಮೂರನೆಯ ಗರ್ಭ ಗೃಹವು ಮತ್ತಾವುದೋ ದೇವಾಲಯದ ಭಾಗವಾಗಿರ ಬಹುದು ಎಂಬ ಅನುಮಾನ ಕಾಡುತ್ತದೆ. ಬಹುತೇಕ ಅಲ್ಲಿಯೇ ಇದ್ದ ಮತ್ತಾವುದೋ ದೇವಾಲಯವು ಇಲ್ಲಿಗೆ ಸ್ಥಳಾಂತರಗೊಂಡಿರುವಂತಿದೆ. ನಂದಿ ಮಂಟಪವು ಹೊಸದು ಎಂಬಂತೆ ಕಾಣುತ್ತದೆ. ನಂದಿ ಮೂರ್ತಿಯ ಹಿಂಭಾಗದಲ್ಲಿ ಏಳು ಕುದುರೆಗಳ ಪೀಠವಿದೆ. ಇದರ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸೂರ್ಯ ವಿಗ್ರಹದ ಪೀಠದ ಮೇಲೆ ಲಿಂಗ ಉಳಿದಿದೆ.



ಶಾಸನ ಏವೂರ

ಹೊರಭಾಗದಿಂದ ಕಾಣುವ ದೇವಾಲಯದ ಸ್ವರೂಪ ಮತ್ತು ದೇವಾಲಯದ ಒಳಭಾಗದ ಸ್ವರೂಪಗಳು ಭಿನ್ನ ಎನಿಸು ತ್ತದೆ. ಇದರಿಂದ ದೇವಾಲಯವು ಅನೇಕ ಬಾರಿ ಜೀರ್ಣೋ ದ್ಧಾರ ಅಥವಾ ದುರಸ್ತಿಯ ನೆಪದಲ್ಲಿ ಬದಲಾವಣೆಗಳನ್ನು ಕಂಡಿರುವಂತಿದೆ. ಇವೆಲ್ಲವನ್ನೂ ಗಮನಿಸಿದಾಗ ಶಾಸನೋಕ್ತ ದೇವಾಲಯಗಳೆಲ್ಲವೂ ಒಂದೆಡೆಯೆ ನಿರ್ಮಾಣಗೊಂಡಿರುವ ಸಾಧ್ಯತೆಗಳಿವೆ. ಊರಿನ ವ್ಯಾಪಾರಿಗಳು ವಿವಿಧ ವರ್ಗದ ಕೊತ್ತಳಿ ಗಳು ಮತ್ತು ಅಧಿಕಾರಿಗಳ ಆಸಕ್ತಿಯಿಂದ ನಿರ್ಮಾಣಗೊಂಡ ದೇವಾಲಯಗಳು ಆ ಕಾಲಕ್ಕೆ ವಾಸ್ತು ಶೈಲಿಯಲ್ಲಿ ನಡೆಯುತ್ತಿದ್ದ ಕೆಲವು ಪ್ರಯೋಗಗಳ ಸಂಕೇತವಾಗಿವೆ.

ಸ್ವಯಂಭು ಸೋಮೇಶ್ವರ ದೇವಾಲಯಕ್ಕೆ ಸಮೀಪ ಕಲ್ಯಾಣ ಚಾಲುಕ್ಯರ ಆರಂಭಕಾಲದ ಬಸದಿಯೊಂದು ಅತ್ಯಂತ ದುಸ್ಥಿತಿ ಯಲ್ಲಿದೆ. ಕೆಲವು ಭಾಗಗಳ ಹೊರಭಿತ್ತಿ ಉರುಳಿ ಬಿದ್ದಿದೆ. ಈ ದೇವಾಲಯವು ನಕ್ಷತ್ರಾಕಾರದ ರಚನೆಯ ಆರಂಭಿಕ ಹಂತದ ನೆನಪು ಮಾಡುತ್ತದೆ. ಹಿಂಭಾಗದ ಹೊರಭಿತ್ತಿ ಉಳಿದಿದೆ. ಗರ್ಭಗೃಹದಲ್ಲಿ ಯಾವುದೇ ತೀರ್ಥಂಕರನ ಮೂರ್ತಿ ಇಲ್ಲ.

ಒಂದು ಕಾಲಕ್ಕೆ ಜೈನ, ಶೈವ ಮತ್ತು ವೈಷ್ಣವ ದೇವಾಲಯ ಗಳಿಗೆ ಎಡೆ ನೀಡಿದ್ದ ಏವೂರಿನಲ್ಲಿ ಅಧಿಕಾರಿಗಳು ಮಾತ್ರವಲ್ಲದೆ, ವ್ಯಾಪಾರಿಗಳು ಮತ್ತು ಕೊತ್ತಳಿಗಳೂ ದೇವಾಲಯ ನಿರ್ಮಾಣ ದಲ್ಲಿ ಆಸಕ್ತಿ ವಹಿಸಿದ್ದರ ಫಲವಾಗಿ ವಾಸ್ತು ಶೈಲಿಯಲ್ಲೂ ಪ್ರಯೋಗಗಳು ನಡೆದಿರುವುದನ್ನು ಗಮನಿಸಬಹುದು.

ಪೂಜೆಗೊಳ್ಳುತ್ತಿರುವ ದೇವರುಗಳನ್ನು ಗಮನದಲ್ಲಿಟ್ಟು ಕೊಂಡು ದೇವಾಲಯಗಳನ್ನು ಗುರುತಿಸುವುದೂ ಸುಲಭದ ಮಾತಲ್ಲ. ದೇವಾಲಯಗಳು ನಿರಂತರವಾಗಿ ಹಲವು ಬದ ಲಾವಣೆಗಳ ದಾಳಿಗೆ ತುತ್ತಾಗಿವೆ. ಶಾಸನೋಕ್ತ ಕೇಶವ ದೇವಾ ಲಯವು ಈಗ ಕಾಣುತ್ತಿಲ್ಲ. ಜೈನ ಬಸದಿಯು ಎಷ್ಟು ಶಿಥಿಲ ವಾಗಿದೆ ಎಂದರೆ ಇದನ್ನು ಸಂರಕ್ಷಿಸಲು ಸಾಧ್ಯವೇ ಇಲ್ಲವೇನೋ ಎನಿಸುತ್ತದೆ. (ಎಚ್ಎಸ್ಜಿ)

ಕಲ್ಯಾಣ ಚಾಲುಕ್ಯರ ಶಿಲ್ಪ ಸ್ಮಾರಕಗಳು: ಕಲಬುರ್ಗಿಯಿಂದ ಪೂರ್ವಕ್ಕೆ 35 ಕಿ.ಮೀ. ದೂರದ ಈಶಾನ್ಯ ದಿಕ್ಕಿನಲ್ಲಿರುವ ಟೇಂಗಳಿ ಗ್ರಾಮ, ಮಳಖೇಡದಿಂದ ಉತ್ತರಕ್ಕೆ ಕಾಗಿಣಾ ನದಿ ದಾಟಿದರೆ, ಕೇವಲ 8 ಕಿ.ಮೀ. ದೂರದಲ್ಲಿದೆ. ಗ್ರಾಮದ ಸುತ್ತ ಮುತ್ತ ಜುಳು-ಜುಳು ಹರಿಯುವ ಬೆಣ್ಣೆತೊರೆ ನದಿಯು ಗ್ರಾಮದ ಅಂದವನ್ನು ಮತ್ತಷ್ಟು ಹೆಚ್ಚಿಸಿದೆ.

ಕ್ರಿ.ಶ. 12ನೆಯ ಶತಮಾನದ ಕೊನೆಯಲ್ಲಿ ಕಲ್ಯಾಣ ಚಾಲುಕ್ಯರ ಮೂರನೆ ತೈಲಪನ ಆಡಳಿತಕ್ಕೆ ಈ ಗ್ರಾಮವು ಒಳಪಟ್ಟಿತ್ತೆಂದು ಹೇಳಲಾಗುತ್ತದೆ. ಕಲ್ಯಾಣ ಚಾಲುಕ್ಯರ ಅರಸರ ಪ್ರಭಾವದಿಂದ ಹಿಂದು ದೇವಾಲಯಗಳು, ಬೌದ್ಧ ದೇವಾಲಯ ಗಳು, ಜೈನ ಬಸದಿಗಳು ನಿರ್ಮಾಣವಾದವು. 11 ಮತ್ತು 12 ಶತಮಾನಗಳು ಚಾಲುಕ್ಯ ರಾಜವಂಶಜರಿಗೆ ಸಿರಿ ಸಂಪತ್ತಿನಿಂದ

ಕೂಡಿದ ಸಮೃದ್ಧಿ ತುಂಬಿದ ನಾಡಾಗಿತ್ತೆಂದು ಇತಿಹಾಸಕಾರರು ಹೇಳುತ್ತಾರೆ.

ರಾಜವಂಶಜರು ಮಾತ್ರವಲ್ಲದೆ, ಕಲಾಪ್ರೇಮಿಗಳು, ಶ್ರೀಮಂತ ಭಕ್ತರು, ಕೃಷಿಕರು, ಬಡಭಕ್ತರಿಂದ ಚಾಲುಕ್ಯರ ಅವಧಿಯಲ್ಲಿ ಸುಂದರ ಶಿಲ್ಪಕಲಾಕೃತಿಗಳ ದೇವಸ್ಥಾನಗಳು ನಿರ್ಮಾಣವಾದುವು.

ಟೇಂಗಳಿ ಗ್ರಾಮಕ್ಕೆ ತನ್ನದೇ ಆದ ವೈಶಿಷ್ಟ್ಯಪೂರ್ಣ ಇತಿಹಾಸವಿದ್ದು, ಗ್ರಾಮದ ಮೂಲ ಹೆಸರು ತೆಂಕಣ ಗಾಳಿ. ತೆಂಕ+ಗಾಳಿ=ತೇಂಗಳಿಯಾಗಿ ಮಾರ್ಪಟ್ಟಿದೆ. ಪ್ರತಿ 3 ಗ್ರಾಮಕ್ಕೆ ಹೊಂದಿಕೊಂಡು ನದಿ ಹರಿಯುತ್ತಿರುವುದರಿಂದಾಗಿ ತೇಂಗನ ಗಾಳಿ (ತೆಂಗಳಿ) ಎಂದು ಕರೆಯುತ್ತಿರಬಹುದೆಂದು ಕಲ್ಪಿಸಿಕೊಳ್ಳಬಹುದು.

ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಎರಡು ಪ್ರತ್ಯೇಕ ದೇವಸ್ಥಾನಗಳು ಗ್ರಾಮ ಹೊಂದಿದ್ದು, ಶ್ರೀ ಭೋಗೇಶ್ವರ ಮತ್ತು ಶ್ರೀ ನಾಚೇಶ್ವರ ದೇವಾಲಯಗಳು ಕಾಲ ಕಳೆದಂತೆ ತಮ್ಮ ಮೂಲ ಹೆಸರು ಕಳೆದುಕೊಂಡವು. ಗ್ರಾಮಕ್ಕೆ ಹೊಂದಿಕೊಂಡು ಬೆಣ್ಣಿ ತೊರೆ ನದಿಯ ಪಕ್ಕದಲ್ಲಿ ತನ್ನ ಮೂಲ ಹೆಸರು ಕಳೆದುಕೊಂಡ ದೇವಾಲಯವು, ಕಲಿಯುಗದಲ್ಲಿ ಕರೀಬಸವಣ್ಣ ದೇವಸ್ಥಾನವಾಗಿ ನಾಮಾಂಕಿತವಾಗಿದೆ.

ಕ್ರಿ.ಶ. 18 ಮತ್ತು 19ನೆಯ ಶತಮಾನ ಸಮೀಪಿಸಿದಂತೆ ದೇವಸ್ಥಾನಕ್ಕೆ ಅನೇಕ ಹೆಸರುಗಳು ಬದಲಾವಣೆಯಾದವು. ಕಲ್ಯಾಣ ಚಾಲುಕ್ಯರ ನಂತರ ರಾಜ್ಯವಾಳಿದ ಹೊಯ್ಸಳರು, ಕಳಚೂರ್ಯರು, ಯಾದವರು ಹಾಗೂ ಕಾಕತೀಯರ ಕಾಲ ಮುಗಿಯುತ್ತಿದ್ದಂತೆ ರಜಾಕರ ಕಾಲ ಪ್ರಾರಂಭವಾಯಿತು.

ಕ್ರಿ.ಶ. 18 ಮತ್ತು 19 ಶತಮಾನದಲ್ಲಿ ರಜಾಕರ ಕಪಿ ಮುಷ್ಠಿಗೆ ಈ ದೇವಾಲಗಳು ನಾಶವಾದವು. ನಂತರ ದೇವಾಲಯಕ್ಕೆ ಕಾಲಿ ಮಜೀದ ಎಂದು ನಾಮಕರಣ ಮಾಡಿದರು. ಮುಸ್ಲಿಮರು ಕಾಲಿ ಮಜೀದ ಎಂದು, ಹಿಂದುಗಳು ಕರಮಸ್ತಿ ಎಂತಲೂ ಕರೆಯಲು ಪ್ರಾರಂಭಿಸಿದರು.


ನಿಜಾಮ ಶಾಹಿ ಅಧಿಕಾರ ಅವಧಿ ಮುಗಿಯುತ್ತಿದ್ದಂತೆ ದೇವಸ್ಥಾನಗಳು ಮತ್ತೆ ಹಿಂದುಗಳ ವಶವಾದವು. ಕಾಲೀಮಜೀದ ಎಂಬ ಹೆಸರು, ಕರೀಬಸವಣ್ಣನ ದೇವಸ್ಥಾನ ಎಂದು ಕರೆಯಲು ಪ್ರಾರಂಭಿಸಿದರು. ಈ ಸ್ಮಾರಕದಲ್ಲಿ ಈಗಲೂ ಕರೀಬಸವಣ್ಣನ ಮೂರ್ತಿ ನೋಡಲು ಸಿಗುತ್ತದೆ.

ಬಾದಾಮಿಯ ಚಾಲುಕ್ಯರು ಚೌಕಾಕಾರದ ಸ್ಥಂಬಗಳನ್ನು ನಿರ್ಮಿಸಿದರೆ, ಕಲ್ಯಾಣ ಚಾಲುಕ್ಯರು ಚರಕಿ ಯಂತ್ರವನ್ನು ಬಳಸಿ ದುಂಡಗಿನ ಕಂಬಗಳ ಮೇಲೆ ಚಿತ್ರಿಸಿದ ಚಿತ್ರಗಳು ಇಲ್ಲಿ ನೋಡಲು ಸಿಗುತ್ತವೆ. ದೇವಾಲಯವು ಕದಂಬನಾಗರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಕಲ್ಯಾಣಚಾಲುಕ್ಯ ಕಾಲದ ದೇವಾಲಯಗಳು ಸಮೀಕ್ಷೆ ನಡೆಸಿದಾಗ, ಹಲವು ದೇವಾಲಯಗಳು ಪುರಾಣೋಕ್ತ ಶೈವಸಂಘ ಅನುಸರಿಸಿದರೆ, ಇನ್ನು ಹಲವು ದೇವಾಲಯಗಳು ಲಾಕುಳೀಶ, ಕಾಳಮುಖ, ಶೈವ ಪಂಥಗಳನ್ನು ಅನುಸರಿಸಿವೆ.

ಟೇಂಗಳಿ ಗ್ರಾಮದ ಕರೀಬಸವಣ್ಣ ದೇವಸ್ಥಾನವು ಕಲಿಯುಗದ ಆಶ್ರಯದಾತರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುತ್ತದೆ. ದನಗಳ ಕೊಟ್ಟಿಗೆಯಾಗಿ, ಜೂಜು ಕೋರರ ಅಡಗುದಾಣವಾಗಿ, ನಿದ್ದೆ ಬಡುಕರ ಆಶ್ರಮವಾಗಿ. ನದಿ ನೀರಿನ ತಂಗಾಳಿಗೆ ದೇವಸ್ಥಾನವು ತನ್ನನ್ನು ತಾ ಮೈ ಮರೆತು ಕಕ್ಕಾಬಿಕ್ಕಿಯಾಗಿ, ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಮೂಕ ರೋಧನವನ್ನು ಪ್ರಕೃತಿಗೆ ಸಮರ್ಪಿಸಿಕೊಂಡು ರೋಧಿಸುತ್ತಿದೆ.


(ಎಸ್‌ಬಿ)

ಕಲ್ಯಾಣ ಚಾಳುಕ್ಯರ ಕಲೆ: ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪವು ಬಾದಾಮಿಯ ಚಾಲುಕ್ಯರ ವಾಸ್ತುಶಿಲ್ಪ ಸಂಪ್ರದಾಯದಿಂದಲೇ ಆರಂಭವಾದರೂ ಕೊನೆಯಲ್ಲಿ ತನ್ನದೇ ಆದ ಸ್ವಂತಿಕೆಯಿಂದ ಕೂಡಿದ ಒಂದು ಹೊಸ ರೂಪವನ್ನು ಪಡೆಯಿತ್ತೆನ್ನಬಹುದಾಗಿದೆ. ಕಗ್ಗಲ್ಲು ಬಳಕೆಯಲ್ಲಿ ಮುಂದುವರಿದರೂ ಕೂಡ ನುಣುಪಾದ, ಮೆದುವಾದ, ಸುಂದರವಾದ ಶಿಲ್ಪಗಳನ್ನು ತಯಾರುಮಾಡಲು



ಕಲ್ಯಾಣ ಚಾಳುಕ್ಯರ ಕಲಾತ್ಮಕ ಕಂಬ ಕೆತ್ತನೆ (ಐಪೂರು)

ಅನುಕೂಲವಾಗುವ ಕರಿಯ ಕಲ್ಲಿನ ಬಳಕೆಯು ಆರಂಭ ವಾಯಿತು. ಕಲ್ಲಿನಲ್ಲಿ ಗುಹೆಗಳನ್ನು ಕೊರೆಯುವ ಸಂಪ್ರದಾಯ ವನ್ನು ಇವರು ಮುಂದುವರಿಸಲಿಲ್ಲ. ಇವರ ಕಾಲದ ದೇವಾಲಯಗಳಲ್ಲಿ ಶಿಲ್ಪ ಮತ್ತು ಅಲಂಕಾರಗಳಿಗೆ ವಿಶೇಷ ಮಹತ್ವವನ್ನು ಕೊಡುವ ಪದ್ಧತಿಯು ಬೆಳೆದು ಬಂದಿತು. ಕಂಬಗಳನ್ನು ಚರಕಿ ಯಂತ್ರದ ಮೇಲೆ ತಿರುಗಿಸುವುದರಿಂದ ಅವುಗಳನ್ನು ಗುಂಡಾಗಿಯೂ ಮತ್ತು ನುಣುಪಾಗಿಯೂ ಮಾಡುವಲ್ಲಿ ಯಶಸ್ವಿಯಾದರು.



ಸೂಕ್ಷ್ಮ ಕೆತ್ತನೆಯ ಬಾಗಿಲು, ಜಲಸಂಗಿ (ಬೀದರ)

ಚಾಳುಕ್ಯ ವಾಸ್ತುಶೈಲಿಯಲ್ಲಿ ಸಮಕೋನದ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ. ಈ ಕಾಲದ ದೇವಾಲಯಗಳಲ್ಲಿ ಗರ್ಭಗೃಹ, ಅಂತರಾಳ ಮತ್ತು ಅದರ ಮುಂದೆ ಅನೇಕ ಕಂಬಗಳಿಂದ ಕೂಡಿದ ಭಿತ್ತಿರಹಿತ ತೆರೆದಮಂಟಪ ಇರುತ್ತದೆ. ಈ ಮಂಟಪದ ಹೊರ ಅಂಚಿನಲ್ಲಿ ಸುತ್ತಲೂ ಕಕ್ಷಾಸನಗಳು ಇರುತ್ತವೆ. ಇವರ ದೇವಾಲಯಗಳಲ್ಲಿ ಒಂದಕ್ಕಿಂತ ಹೆಚ್ಚು ದ್ವಾರಗಳಿರುವುದು. ಪಕ್ಕಗಳಿಂದಲೇ ಮುಖ್ಯದ್ವಾರಗಳಿರುವುದು ವಿರಳವೇನಲ್ಲ. ಹೆಚ್ಚಿನ ದೇವಾಲಯಗಳು ಪೂರ್ವಾಭಿಮುಖವಾಗಿವೆ. ದೇವಾಲಯದ ಗೋಡೆಯಲ್ಲಿ ಜಾಲಾಂಧ್ರಗಳು ವಿಶೇಷವಾಗಿಯೂ ಕಲಾತ್ಮಕವಾಗಿಯೂ ಇರುತ್ತವೆ. ಇದರಿಂದ ಗರ್ಭಗುಡಿಗೆ ಸಾಕಷ್ಟು ಗಾಳಿ ಮತ್ತು ಬೆಳಕು ಬರುವಂತೆ ಮಾಡಲಾಗಿದೆ. ದ್ವಾರಬಂಧಗಳು ಅಲಂಕಾರಿಕವಾಗಿರುತ್ತವೆ. ಸೂಕ್ಷ್ಮ ಕೆತ್ತನೆಯ ಕೆಲಸಗಳಿಂದ ಕೂಡಿದ ಈ ಬಾಗಿಲುವಾಡಗಳು ನೋಡಲು ಬಲು ಸುಂದರವಾಗಿರುತ್ತವೆ.

ಕಲ್ಯಾಣಿಯ ಚಾಳುಕ್ಯರ ದೇವಾಲಯಗಳಲ್ಲಿ ಗರ್ಭಗೃಹ, ಸುಕನಾಸಿ, ಹಲವು ಕಂಬಗಳುಳ್ಳ ತೆರೆದ ಮಂಟಪಗಳಿರುವುದು ಸಾಮಾನ್ಯ. ಶಿವದೇವಾಲಯಗಳಲ್ಲಿ ಮುಂದೆ ಬೇರೆಯಾಗಿ ಒಂದು ನಂದಿ ಮಂಟಪವಿರುತ್ತದೆ. ಸುಕನಾಸಿ ಅಥವಾ ಅರ್ಧ ಮಂಟಪಕ್ಕೆ ಗೋಡೆ, ಬಾಗಿಲುಗಳಲ್ಲದೆ ಎರಡು ತೆಲುಗಂಬಗಳ ಮೇಲೆ ಸುಂದರವಾಗಿ ಕಂಡರಿಸಿದ ಮಕರ ತೋರಣಗಳಿರುತ್ತವೆ.

ಸಿರಿವಾಳ, ಮುದೆನೂರು, ಕೆಂಬಾವಿ ಮೊದಲಾದ ಕಡೆಯಲ್ಲಿ ಮಧ್ಯದಲ್ಲಿ ಚತುರಸ್ರವಾದ ಗರ್ಭಗುಡಿ, ಅದರ ನಾಲ್ಕು ಕಡೆಗೂ ಅರ್ಧ ಮಂಟಪ, ಮಹಾಮಂಟಪ ಮತ್ತು ಗರ್ಭಗೃಹಗಳಿದ್ದು ನಾಲ್ಕು ಬೇರೆ ಬೇರೆ ದೇವಾಲಯಗಳು ಮಧ್ಯದ ದೇವಾಲಯಕ್ಕೆ ಕೂಡಿಕೊಂಡಂತಿರುವ ವಿಶಿಷ್ಟ ವಿನ್ಯಾಸವುಳ್ಳ ದೇವಾಲಯಗಳುಂಟು.

ಡಂಬಳದ ದೊಡ್ಡ ಬಸಪ್ಪದೇವಾಲಯ ನಕ್ಷತ್ರಾಕಾರದ ವಿನ್ಯಾಸದಲ್ಲಿದೆ. ಹಳೇಬೀಡಿನ ದೇವಾಲಯವನ್ನು ಬಿಟ್ಟರೆ ಕರ್ನಾಟಕದಲ್ಲಿಯೇ ಇದು ಅತ್ಯಂತ ಸುಂದರ ದೇವಾಲಯ ಎಂದು ಕಸನ್ಸ್ ಅಭಿಪ್ರಾಯ ಪಟ್ಟಿದ್ದಾರೆ. ಬೀದರ, ಗುಲಬರ್ಗಾ, ಬಿಜಾಪುರ, ಧಾರವಾಡ, ಬೆಳಗಾಂವಿ, ಬಳ್ಳಾರಿ, ರಾಯಚೂರು ಜಿಲ್ಲೆ ಮೊದಲಾದ ಕಡೆಗಳಲ್ಲಿ ಇವರ ಕಾಲದ ದೇವಾಲಯಗಳ ಅವಶೇಷಗಳು ಕಂಡುಬರುತ್ತವೆ.

ಕಲ್ಯಾಣಿ ಚಾಳುಕ್ಯರ ಕಾಲದ ದೇವಾಲಯಗಳಲ್ಲಿ ಪ್ರಮುಖ ವಾಸ್ತುಗಳಲ್ಲಿ ಕುಕ್ಕನೂರಿನ ಕಲ್ಲೇಶ್ವರ ಮತ್ತು ನವಲಿಂಗ, ಲಕ್ಕುಂಡಿಯ ಕಾಶಿವಿಶ್ವೇಶ್ವರ ಮತ್ತು ಜೈನದೇವಾಲಯ, ಇಟಗಿಯ–ಮಹಾದೇವ ದೇವಾಲಯ ಚೌಡದಾನಪುರದ–ಮುಕ್ತೇಶ್ವರ ದೇವಾಲಯ, ಕುರುವತ್ತಿಯ–ಮಲ್ಲಿಕಾರ್ಜುನ ಗದುಗಿನ–ತ್ರಿಕೂಟೇಶ್ವರ ಮತ್ತು ಸರಸ್ವತಿ, ಡಂಬಳದ–ಬಸಪ್ಪ ದೇವಾಲಯ ಮತ್ತು ಜಲಸಂಗಿಯ ದೇವಾಲಯಗಳಲ್ಲದೆ ಬಳ್ಳಿಗಾವೆಯ ಸತ್ತಿ, ಸವದಿ, ಲಕ್ಮೇಶ್ವರ, ಸೂಡಿ, ನರೇಗಲ್ಲು, ಬೆಳಗಾವಿ, ಹೂಲಿ ಇತ್ಯಾದಿ ಅನೇಕ ಸ್ಥಳಗಳಲ್ಲಿಯ ದೇವಾಲಯಗಳನ್ನು ಹೆಸರಿಸಬಹುದು. (ಜೆಟಿಜಿ)

ಕಲ್ಯಾಣಿ ಭಜಂತ್ರಿ: 1983 ಮೇ 31 ರಂದು ಹುಟ್ಟಿದ ಇವರು ಸ್ನಾತಕೋತ್ತರ ನಾಟಕ ಡಿಪ್ಲೋಮಾ ಪದವೀಧರರಾಗಿದ್ದಾರೆ. ಮನೆತನದ ವೃತ್ತಿಯಿಂದ ಬಂದ ಭಜಂತ್ರಿ ಕಾಯಕದಲ್ಲಿ ತಂದೆಯವರೊಂದಿಗೆ ಮದುವೆ, ಮಂಗಲ ಕಾರ್ಯಕ್ರಮದಲ್ಲಿ ಚಿಕ್ಕಂದಿನಿಂದ ಭಾಗವಹಿಸಿದ ಕಲ್ಯಾಣಿ ಭಜಂತ್ರಿಯವರಿಗೆ ಚರ್ಮವಾದ್ಯಗಳನ್ನು ನುಡಿಸುವುದು ನೀರು ಕುಡಿದಷ್ಟೆ ಸರಳ. ತಬಲಾ, ಡೋಲಕ್, ಕಾಂಗೊ, ನಗಾರಿ, ತಾಶ್, ಹಲಗೆ ದಪ್ಪಡಿ, ಜಂಬೆ, ಖಣಿ, ಸಂಬಾಳ ಮತ್ತು ಡೊಳ್ಳು ಮುಂತಾದ ಚರ್ಮವಾದ್ಯಗಳನ್ನು ತಾಳ ಲಯಕ್ಕೆ ತಕ್ಕಂತೆ ನುಡಿಸುವುದೆಂದರೆ ಎಲ್ಲಿಲ್ಲದ ಸಂತಸ. ತಮ್ಮ 13ನೇ ವಯಸ್ಸಿನಿಂದ ಈ ವೃತ್ತಿ



ಯನ್ನೂ ಈಗಲೂ ಮುಂದುವರಿಸಿದ್ದಾರೆ. 2004ರಲ್ಲಿ ಸಮುದಾಯ ಗುಲಬರ್ಗಾ ಘಟಕವು ಗುಲಬರ್ಗಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಿ ಗುಲಬರ್ಗಾದ ಎಲ್ಲ ಗ್ರಾಮ ಪಂಚಾಯ್ತಿಯಲ್ಲಿ ಮಾಡಿದ ಬೀದಿ ನಾಟಕ ಜಾಥಾದ ನಾಟಕಗಳೆಂದರೆ 'ಬಾರಮ್ಮ ಭಾಗೀರತಿ', 'ನೀರ ಶಕುನ', 'ಜ್ಯೋತಿಗೆಲ್ಲದೆ ಜಾತಿ', 'ದಾರಿಯಾವುದು' ಸುಜಾತ, ರೈತರಿಗೆ ನೇಣು ಉತ್ತರವಲ್ಲ, ಮುಂತಾದವು.

ಇವರು ಪಲ್ಸ್ ಪೋಲಿಯೋ, ಏಡ್ಸ್ ಬಗ್ಗೆ ಜಾಗ್ರತಿ ರಾಷ್ಟ್ರೀಯ ಭಾವೈಕ್ಯತೆಯ ಕ್ಯಾಂಪ್‌ಗಳಲ್ಲಿ ಸ್ವಯಂ ಪ್ರೇರಣೆಯಿಂದ ಭಾಗ ವಹಿಸಿದ್ದಾರೆ. ಈ ಎಲ್ಲ ಅನುಭವಗಳ ಹಿಂದೆ ಹೆಸರಾಂತ ನಿರ್ದೇಶಕರುಗಳಾದ ಸಿ. ಬಸವಲಿಂಗಯ್ಯ, ಪ್ರಸನ್ನ, ವಾಸುದೇವ ಗಂಗೇರ, ಮಲ್ಲೇಶ ಬಡಿಗೇರ, ಸಂಪತ್ತ, ರಾಜಪ್ಪ ದಳವಾಯಿ, ಶಂಕರಯ್ಯ ಘಂಟಿ ಮುಂತಾದವರು ನೀಡಿದ ತರಬೇತಿ, ಮಾರ್ಗದರ್ಶನ ಕಲ್ಯಾಣಿ ಭಜಂತ್ರಿಯವರು ಸಮುದಾಯ ಗುಲಬರ್ಗಾದಲ್ಲಿ ಕಾರ್ಯಕಾರಿ ಸದಸ್ಯರಾಗಿ, ಕಲಾವಿದರಾಗಿ, ಸಂಗೀತ ಸಂಯೋಜಕರಾಗಿ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾದ ಸಾಂಸ್ಕೃತಿಕ ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್‌ಆರ್‌ಜಿ)

ಕಲ್ಲಪ್ಪ ತಳವಾರ: ಕರಡಿ ಮಜಲು ಕಲಾವಿದ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕು ಸಂಗನಾಳ ಗ್ರಾಮದವರು. ತಂದೆ ಶಿವಪ್ಪ ತಳವಾರ ಬಹುಮುಖ ಪ್ರತಿಭೆ ಹೊಂದಿದ ಜನಪದ ಕಲಾವಿದ. ಎಲೆಮರೆಯ ಕಾಯಿಯಂತೆ ಜನಪದ ಕಲೆ ಸೇವೆ ಯಲ್ಲಿ ಮೂವತ್ತೈದು ವರ್ಷ ಸೇವೆ ಸಲ್ಲಿಸಿ ಈಗ ಅರವತ್ತರ ಹೊಸ್ತಿಲಲ್ಲಿದ್ದರೂ ಕಲಾಸೇವೆ ಬಿಟ್ಟಿಲ್ಲ.

ಗ್ರಾಮೀಣ ಪ್ರದೇಶದ ಕರಡಿ ಮಜಲು ವಾದ್ಯ ಇಂದು ನಮ್ಮಿಂದ ದೂರವಾಗುತ್ತಿದೆ. ಇಂದು ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಇವರು ಕರಡಿ ಮಜಲು ವಾದ್ಯ ನುಡಿಸುವದರಲ್ಲಿ ನಿಪುಣರು. ಮದುವೆ, ಮುಂಜಿ, ಹಬ್ಬ ಹರಿದಿನ ಗಳಲ್ಲಿ ಪಾಲ್ಗೊಂಡು ಪ್ರದರ್ಶನ ನೀಡಿ ಸೈ ಎನಿಸಿಕೊಂಡ ಕಲಾ ವಿದ. ತತ್ವಪದಗಳ ರಿವಾಯತ ಪದಗಳನ್ನು ಕಲ್ಲಪ್ಪ ಹಾಡುತ್ತಿದ್ದರೆ ಮೈನವಿರೇಳುತ್ತದೆ.


ಅದ್ಭುತವಾದ ಕಂಠಸಿರಿ ಹೊಂದಿದ ಈ ಕಲಾವಿದ ನುರಿತ ತಬಲಾ ಪಟು. ತಬಲಾ ಬಾರಿಸುತ್ತ ಹಾಡುವುದು ಇವರ ಹವ್ಯಾಸ. ಪುರಾಣಗಳಲ್ಲಿ ಕಾರ್ಯಕ್ರಮಗಳಲ್ಲಿ ತಬಲಾ ವಾದನ ದಿಂದ ಈ ಭಾಗದ ಹಳ್ಳಿ ಜನರನ್ನು ಪರಿಚಯಿಸಿಕೊಂಡ ಕಲಾ ವಿದ. ಈ ಭಾಗದಲ್ಲಿ ತಿರುಗಾಡಿ ಇಲಾಖೆಯ ಸಹಾಯ ದೊಂದಿಗೆ ನೂರಾರು ಕಾರ್ಯಕ್ರಮ ನೀಡಿದ್ದಾನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಇಲಾಖೆಯಿಂದ ನೂರಾರು ಕಾರ್ಯಕ್ರಮ ನೀಡಿದ್ದಾನೆ. ಗ್ರಾಮೀಣ ಪ್ರದೇಶದ ಈ ಬಡ ಕಲಾವಿದ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. (ಆರ್‌ಕೆಎಸ್)

ಕಲ್ಲಪ್ಪ ಬಗರಿಕಾರ: ಸಂಗೀತ ಪರಿಕರಗಳನ್ನು ಸಿದ್ಧಪಡಿಸುವಾತ. ಜನಪದ ಗಾಯಕ. ಇವರ ಸ್ವಂತ ಊರು ಯಲಬುರ್ಗಾ ತಾಲ್ಲೂಕಿನ ಕಲ್ಲೂರು ಗ್ರಾಮ. ಅಜ್ಜ–ಮುತ್ತಜ್ಜರಿಂದ ನಡೆದು ಕೊಂಡು ಬಂದಿರುವ ಉದ್ಯೋಗ ತಬಲಾ ಮತ್ತು ಡೋಲಕ್ ಗಳನ್ನು ತಯಾರಿಸುವದು. ಇದು ಇವರ ಕುಲ ಕಸಬು ಹಾಗೂ ಮನೆತನದ ಕಸಬು. ಏಳು ಜನ ಅಣ್ಣ ತಮ್ಮಂದಿರು. ಎಲ್ಲರೂ ಇದೇ ಉದ್ಯೋಗ ಮಾಡಿಕೊಂಡಿದ್ದಾರೆ. ಆದರೆ, ಇವರೊಬ್ಬರು ಮಾತ್ರ ಕುಷ್ಟಗಿಯಲ್ಲಿ ನೆಲೆಸಿದ್ದಾರೆ. ಇವರಿಗೆ ಇರಲು ಒಂದು ಮನೆ ಸಹಿತ ಇಲ್ಲ. ಚಪ್ಪರ ಹಾಕಿ ಒಂದು ಗುಡಿಸಲಲ್ಲಿ ಇವರ ವಾಸ.

ತಬಲಾ, ಮೃದಂಗ, ತಪ್ಪಿಡಿ, ಚೌಗಡ, ಕಬ್ಬಿಣದ ಡಗ್ಗ, ಮೊದಲಿ (ದೊಡ್ಡಾಟ) ಡೋಲಕ ಮತ್ತು ಡೊಳ್ಳು ಇವೆಲ್ಲವನ್ನೂ ಗುಡಿಸಲಿನಲ್ಲಿಯೇ ಇಟ್ಟಿರುತ್ತಾರೆ. ಇವೆಲ್ಲವನ್ನು ಗುಡಿಸಲಿನಲ್ಲಿ ಇಟ್ಟು, ಕಾಯುವ ಕಾಲ ಬಂದೊದಗಿದೆ. ಹಾಗೆಯೇ ಬಿಟ್ಟರೆ, ರಾತ್ರಿ ಕಳ್ಳಕಾಕರ ಭಯ. ಇವರ ಗುಡಿಸಲಿಗೆ ಬಾಗಿಲಿಲ್ಲ. ಕೀಲಿ ಇಲ್ಲ. 15–20 ವರ್ಷಗಳಿಂದ ಇದೇ ಉದ್ಯೋಗವನ್ನೇ ಮಾಡುತ್ತ ಬಂದಿದ್ದಾರೆ. ಜೊತೆಗೆ ಇನ್ನೊಂದು ಕಲೆ ಇದೆ. ತಬಲಾ ಬಾರಿ ಸುವುದು, ತುಂಬಾ ಚೆನ್ನಾಗಿ ನುಡಿಸುತ್ತಾರೆ. ಜನಪದ, ಭಜನೆ ಪದ ಗಾಯಕ ಕಲಾಗಾರರಾದ ಲಿಂಗದಹಳ್ಳಿ ಚಂದ್ರಶೇಖರ ಇವರ ಜೊತೆ ತಬಲಾ ಮತ್ತು ಡೋಲಿಕೆ ಬಾರಿಸಿದ್ದು ಆರು ಕ್ಯಾಸೆಟ್‌ಗಳು ಈಗಾಗಲೇ ಬಿಡುಗಡೆಯಾಗಿವೆ. ನಾಯಕ ಕಂಪನಿ ಗಳಾದ ಕುಕನೂರ ಬಾಬಣ್ಣ, ಸೂಡಿ ಶೆಟ್ಟರ್, ರಾಮರಾವ ದೇಸಾಯಿ ಮೂರು ಕಂಪನಿಗಳಲ್ಲಿ ತಬಲಾ ಬಾರಿಸಿದಾಗ ತಿಂಗಳಿಗೆ 2,500 ಸಹಾಯಧನ ಕೊಟ್ಟಿದ್ದಾರೆ. ಈಗ ಅವರ ಕಂಪನಿಗಳು ಮುಚ್ಚಿದ್ದರಿಂದ ಇವರು ಮತ್ತೆ ತಮ್ಮ ವಾದ್ಯಗಳನ್ನು ಮಾಡುವ ಕಾಯಕದಲ್ಲಿ ತೊಡಗಿದ್ದಾರೆ. (ಆರ್‌ಪಿಕೆ)

ಕಸೂತಿ ಚಿತ್ರಕಲಾ ವಿನ್ಯಾಸಗಳು: ಕೌದಿ ಕಲೆಯ ಸಹೋದರ ಕಲೆ ಕಸೂತಿ. ಕೌದಿಯಂತಹ ಹೊಲಿಗೆಯ ಕಲೆಯ ಮುಂದು ವರೆದ ರೂಪವೇ ಈ ಕಸೂತಿ ಕಲೆಯೆನ್ನಬಹುದು. 'ಕಸೂತಿ' ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ. ವಸ್ತ್ರದ ಮೇಲೆ ವಿರಳವಾಗಿ ಚರ್ಮ ಇತರ ವಸ್ತುಗಳ ಮೇಲೆ ಸೂಜಿ–ದಾರಗಳಿಂದ ಹೆಣೆದು ಮಾಡಿದ ಅಲಂಕಾರ ವನ್ನೇ ಕಸೂತಿ ಎನ್ನಬಹುದು. ವಸ್ತ್ರಕಲೆಯ ಒಂದು ಕಲಾತ್ಮಕ ಅಂಗ ಕಸೂತಿ.

ಕಸೂತಿ ಕಲೆಯ ಕುರಿತು ಅನೇಕ ನಂಬಿಕೆಗಳು ಗ್ರಾಮೀಣ ಜನರಲ್ಲಿ ಬೆಳೆದುಕೊಂಡು ಬಂದಿವೆ. ಹಿಂದುಗಳಲ್ಲಿ ಮದುವೆ ಯಾಗಿ ಗಂಡನ ಮನೆಗೆ ಹೋಗುವ ಸುಮಂಗಲೆಯರಿಗೆ ಶುಭ ಸೂಚಕವೆಂದು ಕರಿಯ ಚಂದ್ರಕಾಳಿ ಸೀರೆಯನ್ನು ಕೊಡುವ ಪದ್ಧತಿಯಿದೆ. ಹಾಗೆಯೇ ಚೊಚ್ಚಲ ಗರ್ಭವತಿಯರಿಗೆ ಕಳ್ಳಮಗ್ಗಿ ಯನ್ನು ಮಾಡುವಾಗ ಬಿಳಿ ಬಟ್ಟೆಯ ಮೇಲೆ ಕಸೂತಿ ತೆಗೆದು ತೊಡಿಸುವ ರೂಢಿಯೂ ಇದೆ. ಬಟ್ಟೆಯ ತುಂಬ ಕಸೂತಿ



ಕಸೂತಿ ಕಲೆ

ತೆಗೆಯುವುದು ಸಾಧ್ಯವಾಗದಿದ್ದಲ್ಲಿ, ಕೇವಲ ತೋಳಿನ ಮೇಲೆ 'ಹೂ'ಗಳನ್ನಾದರೂ ಕಸೂತಿಯಿಂದ ಅಲಂಕೃತಗೊಳಿಸಿ ಅವರ ಬಯಕೆಯನ್ನು ಪೂರ್ಣಗೊಳಿಸುವ ಸಂಪ್ರದಾಯವಿದೆ. ಲಂಬಾಣಿ ಜನಾಂಗದಲ್ಲಿ ಕಸೂತಿಗೆ ವಿಶಿಷ್ಟ ಸ್ಥಾನವಿದೆ. ಅವರ ಬದುಕಿನ ಒಂದು ಅಂಗವಾಗಿ ಅದು ಅವರಲ್ಲಿ ಕಾಣಿಸಿ ಕೊಂಡಿದೆ. ಕಸೂತಿ ರಚನಾ ವಿಧಾನದಲ್ಲಿ ಎರಡು ವಿಧಾನಗಳಿವೆ. ಹೊಲಿಗೆ ಕಸೂತಿ ಮತ್ತು ಹೆಣಿಗೆಯ ಕಸೂತಿಗಳೆಂದು.

ಹೊಲಿಗೆಯ ಕಸೂತಿಯಲ್ಲಿ ಸೂಜಿಯಿಂದ ವರ್ಣ ರಂಜಿತ ವಾದ ದಾರಗಳನ್ನು ಪೋಣಿಸಿ ಅರಿವೆಯ ಮೇಲೆ ಹೊಲಿಗೆ ಯಿಂದ ಮಾಡುವ ಕಸೂತಿಯ ಕೆಲಸವನ್ನು ಹೊಲಿಗೆಯ ಕಸೂತಿ ಎಂದು ಕರೆಯುತ್ತಾರೆ. ಇದರಲ್ಲಿ ವಿವಿಧ ನಮೂನೆ ಗಳಿವೆ. ಎಳೆ ಹೊಲಿಗೆ, ಕತ್ತರಿಹೊಲಿಗೆ, ಕಾಶ್ಮೀರಿಹೊಲಿಗೆ, ಕಂಬಳಿ ಹೊಲಿಗೆ, ಸರಪಳಿ ಹೊಲಿಗೆ, ರೆಕ್ಕೆ ಹೊಲಿಗೆ, ಅಂಜಿನ ಹೊಲಿಗೆ, ಜೇನುಹುಟ್ಟಿನ ಹೊಲಿಗೆ, ದೇಟಿನ ಹೊಲಿಗೆ, ಗುಂಡಿಮನಿ ಹೊಲಿಗೆ, ಗಂಟಿನಹೊಲಿಗೆ, ಹೂವಿನಹೊಲಿಗೆ, ಹಗ್ಗದ ಹೊಲಿಗೆ, ಜೇಡದಬಲೆ ಹೊಲಿಗೆ, ಮೀನದ ಎಲುಬಿನ ಹೊಲಿಗೆ, ಸುತ್ತಿದ ಹೊಲಿಗೆ ಇತ್ಯಾದಿ ಪ್ರಕಾರಗಳಿವೆ. ಕೈಚೀಲ, ಟೇಬಲ, ಕುರ್ಚಿಗಳಿ ಗಾಗಿ ಬಾಗಿಲುತೋರಣ ತಲೆದಿಂಬು ಮಕ್ಕಳ ತೊಟ್ಟಿಲು ಬಿಟ್ಟು ಮುಂತಾದವುಗಳಿಗೆ ಹೊಲಿಗೆ ಕಸೂತಿ ಬಳಕೆಯಾಗುತ್ತದೆ.

ಹೆಣಿಗೆಯ ಕಸೂತಿಯಲ್ಲಿ ದಾರದಲ್ಲಿ ದಾರವನ್ನು ಅಥವಾ ರೇಷ್ಮೆಯ ನೂಲನ್ನು ತೆಗೆದುಕೊಂಡು ಕೊಕ್ಕೆ ಸೂಜಿಯಿಂದ ದಾರವನ್ನೇ ಹೆಣೆಯುತ್ತ ಕಸೂತಿ ಚಿತ್ರವಿನ್ಯಾಸ ಬಿಡಿಸುತ್ತಾರೆ. ನೂಲನ್ನು ಅಥವಾ ದಾರವನ್ನು ಎಡಗೈ ತೋರಬೆರಳಿಗೆ ಸುತ್ತಿ ಕೊಂಡು ಅಲ್ಲಿಂದ ದಾರವನ್ನು ಎಡಗೈ ಹೆಬ್ಬೆರಳು ಮತ್ತು ನಡು ವಿನ ಬೆರಳುಗಳ ಮೂಲಕ ಸ್ವಲ್ಪಸ್ವಲ್ಪ ದಾರವನ್ನು ಬಿಡುತ್ತ ಬಲಗೈ ಯಲ್ಲಿ ಹಿಡಿದು ಕೊಕ್ಕೆ ಸೂಜಿಯಿಂದ ಹೆಣೆಯುತ್ತ ಹೋಗುತ್ತಾರೆ. ಇದರಲ್ಲಿಯೂ ಬೇರೆ ಬೇರೆ ನಮೂನೆಗಳಿರುತ್ತವೆ. ಕಸೂತಿ ಅಪ್ಪಟ ಸ್ತ್ರೀ ಪ್ರಧಾನವಾದ ಕಲೆಯಾಗಿದೆ.

ಕಸೂತಿ ರಚನೆಯಲ್ಲಿ ಕಟ್ಟಿಗೆಯ ರಿಂಗು, ಸೂಜಿ, ಕತ್ತರಿ, ವಿವಿಧ ವರ್ಣದ ಸಾದಾ ಹಾಗೂ ರೇಷ್ಮೆಯ ದಾರ, ಅಂಗುಸ್ತಾನ, ಪೆನ್ಸಿಲ್ ಇತ್ಯಾದಿ ಸಾಮಗ್ರಿಗಳು ಬಳಕೆಯಾಗುತ್ತವೆ. ಕಸೂತಿ ಚಿತ್ರ ಗಳು ವೈವಿಧ್ಯಮಯವಾಗಿದ್ದು ಆಯಾ ಪ್ರಾದೇಶಿಕ ವೈಶಿಷ್ಟ್ಯತೆ ಯನ್ನು ಹೊಂದಿರುತ್ತವೆ. ವಿವಿಧ ಧರ್ಮದ ಧಾರ್ಮಿಕ ಚಿಹ್ನೆಗಳು ಸಂಕೇತಗಳು, ದೇವರುಗಳ ಚಿತ್ರಗಳ, ಹಾಗೆಯೇ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನೈಸರ್ಗಿಕ, ಭೂಮಿತಿ ಆಕೃತಿ ಪ್ರಧಾನವಾದ ಚಿತ್ರವಿನ್ಯಾಸಗಳು ಕಂಡುಬರುತ್ತವೆ. ಕರ್ನಾಟಕದ ಕಸೂತಿಯ ವೈಶಿಷ್ಟ್ಯತೆಗಳು ನಾಲ್ಕು ರೀತಿಯಲ್ಲಿವೆ. 1. ಗಾಂವಟಿ (ದೇಸಿ) ಕಸೂತಿ 2. ಮೆಂತೆ ಕಸೂತಿ 3. ನೇಯ್ಗೆ ಕಸೂತಿ 4. ಮುರುಗಿ ಕಸೂತಿ.

1. **ಗಾಂವಟಿ ಕಸೂತಿ:** ಇದನ್ನು ಕನ್ನಡ ಕಸೂತಿ ಎಂದು ಕರೆಯುತ್ತಾರೆ. ಈ ಕಸೂತಿ ತುಂಬಾ ಕಲಾತ್ಮಕವಾದುದು ಮತ್ತು ಸುಂದರವಾದುದು, ನಯನಾಜೂಕಿನದೆಂದು ಹೆಸ ರಾಗಿದೆ. ಇದರಲ್ಲಿ ಆದಿ ಅಂತ್ಯಗಳನ್ನು ಗುರುತಿಸುವುದು ಕಷ್ಟದಾಯಕ. ಕೆಳಗಿನ ಹಾಗೂ ಮೇಲಿನ ಬದಿಗಳೆರಡನ್ನೂ ಬೇಕಾದ ಹಾಗೆ ತಿರುಗಿಸಿ ನೋಡಿದರೂ ಈ ಕಸೂತಿಯ ವಿನ್ಯಾಸ ಒಂದೇ ರೀತಿಯದಾಗಿರುತ್ತದೆ.
2. **ಮೆಂತೆ ಕಸೂತಿ:** ಮೆಂತೆಯ ಕಾಳಿನೋಪಾದಿಯಲ್ಲಿ ಕಸೂತಿಯ ಸಾಲುಗಳು ಇರುವುದರಿಂದ ಈ ಹೆಸರು ಬಂದಿ ರುವಂತಿದೆ. ಇದು ಹಾಕಲು ಕಷ್ಟಕರವಾದುದು. ಇದರಲ್ಲಿ ಸಾಕಷ್ಟು ಪ್ರಯತ್ನ ಏಕಾಗ್ರತೆ ಇದ್ದರೆ ಮಾತ್ರ ಇದನ್ನು ಹಾಕಲು ಸಾಧ್ಯವಾಗುತ್ತದೆ. ಅರಿವೆಯ ಬಣ್ಣದ ಹಿನ್ನೆಲೆಯಲ್ಲಿ ಈ ಕಸೂತಿ ರಚನೆಯಾಗುತ್ತದೆ. ಬಟ್ಟೆಯಲ್ಲಿ ಎಳೆಗಳನ್ನೂ ಎಣಿಸಿ ಈ ಕಸೂತಿ ಹಾಕಬೇಕಾಗುತ್ತದೆ.
3. **ನೇಯ್ಗೆ ಕಸೂತಿ:** ನೇಯ್ಗೆ ಕಸೂತಿಯನ್ನು ಬಟ್ಟೆಯ ಮೇಲಿರುವ ಅಡ್ಡ ಮತ್ತು ಉದ್ದಗೆರೆಗಳಲ್ಲಿ ಬಟ್ಟೆಯ ಅಡ್ಡ ಎಳೆಗಳೊಡನೆ ನೇಯ್ದಂತೆ ಹಾಕುತ್ತಾರೆ. ಹೀಗಾಗಿ ಕಸೂತಿಯ ವಿನ್ಯಾಸಗಳು ನೇಯ್ದಂತೆ ಕಾಣಿಸುತ್ತವೆ. ಅದ ಕ್ಕಾಗಿಯೇ ಇದನ್ನು ನೇಯ್ಗೆ ಕಸೂತಿ ಎಂದು ಕರೆಯುತ್ತಾರೆ.
4. **ಮುರುಗಿ ಕಸೂತಿ:** ಇಲ್ಲಿ ಹೆಣಿಕೆ ಮುರುಗಿ ಮುರುಗಿ ಯಾಗಿರುವುದರಿಂದ ಈ ಕಸೂತಿಗೆ ಮುರುಗಿ ಕಸೂತಿ ಎಂದು ಹೆಸರು. ಮುರುಗಿ ಕಸೂತಿಯಲ್ಲಿ ಎಳೆಗಳನ್ನು ಹೆಣೆಯುತ್ತ ಹೋದಂತೆ ಎಳೆಗಳ ಕೊನೆಗೆ ಎಲ್ಲಿಯೋ ನಿಂತಂತೆಯೂ ಮೆಂತೆ ಕಸೂತಿಯ ಅರ್ಧಭಾಗ ದಂತೆಯೂ ಇದು ಕಾಣಿಸುತ್ತದೆ.

ಇವು ಕರ್ನಾಟಕದ ವೈಶಿಷ್ಟ್ಯ ಪೂರ್ಣ ಕಸೂತಿಗಳೆಂದು ಪ್ರಸಿದ್ಧವಾಗಿವೆ. ಸಮಕಾಲೀನ ಸಂದರ್ಭದಲ್ಲಿ ಈ ಸನಾತನ ಕೈ ಕಸೂತಿಗೆ ಬದಲಾಗಿ ಯಂತ್ರದಿಂದ ಕಸೂತಿ ಹಾಕುವ ಆಧುನಿಕ ತಂತ್ರಜ್ಞಾನದ ಯಂತ್ರದ ಕಸೂತಿಗಳು ಬಂದಿವೆ. ಕಸೂತಿಯನ್ನು ಕಡಿಮೆ ವೇಳೆಯಲ್ಲಿ ವರ್ಣರಂಜಿತ ಕೈ ಕಸೂತಿಯಂತಹ ಚಿತ್ತಾರ ಗಳನ್ನು ಈ ಯಂತ್ರ ನಿರ್ಮಿಸಿಕೊಡುತ್ತದೆ. ಒಂದು ರೀತಿ ಯಲ್ಲಿ ಪಾರಂಪರಿಕ ಕೈ ಕಸೂತಿಗೆ ಇದರಿಂದ ತುಂಬಾ ಪೆಟ್ಟು ಬಿದ್ದಿದೆ. ಆದರೆ ಕೈಕಸೂತಿಯಲ್ಲಿ ಇರುವ ಸೃಜನಶೀಲತೆ ಸಂತೋಷ ಯಂತ್ರದ ಕಸೂತಿಯಲ್ಲಿ ಸಿಗುವುದಿಲ್ಲವೆಂಬುದು ಅಷ್ಟೇ ವಾಸ್ತವದ ಸಂಗತಿ.

(ಎಸ್‌ಸಿಪಿ)

ಕಳಕೇಶ ಅರಕೇರಿ: ಕೊಪ್ಪಳ ಜಿಲ್ಲೆ ಯಲಬುರ್ಗಾ ನಗರದ ಯುವ ಗಾಯಕ, ಕ್ರೀಡಾ ಪಟು, ಚಿತ್ರಕಲಾವಿದ. ಕಲಾವಿದ ಹುಟ್ಟುವಾಗಲೇ ಪೋಲೀಯೋಕ್ಕೆ ತುತ್ತಾಗಿ, ತಮ್ಮ ಒಂದು ಕಾಲನ್ನು ಕಳೆದುಕೊಂಡರು. ಕುಂಟುತ್ತ ನಡೆಯುವ ಇವರು ಅಂಗವಿಕಲತೆಯನ್ನು ಸ್ವೀಕರಿಸಿ ಚಿಕ್ಕಂದಿನಿಂದಲೂ ಕ್ರೀಡೆಯಲ್ಲಿ, ಅಭಿನಯದಲ್ಲಿ, ಹಾಡುವುದರಲ್ಲಿ, ಚಿತ್ರ ಬಿಡಿಸುವಲ್ಲಿ ಎಷ್ಟು ಆಸಕ್ತಿ ಇತ್ತೋ ಅಷ್ಟೇ ಇವತ್ತಿಗೂ ಅದನ್ನೇ ರೂಡಿಸಿಕೊಂಡು, ಹಲ ವಾರು ಕಾರ್ಯಕ್ರಮಗಳಲ್ಲಿ ಹೆಸರು ಗಳಿಸಿದ್ದಾರೆ.

ಅಲ್ಲದೇ ತಮ್ಮ ಜೀವನದಲ್ಲಿ ಚಿತ್ರಕಲಾವಿದರಾಗಿ ಬೆಳೆಯ ಬೇಕೆಂಬ ಆಸೆ ಹೊತ್ತ ಈ ಯುವ ಕಲಾವಿದ, ತಮ್ಮ ಮಿತ್ರರ ಸಹಾಯದಿಂದ ಇಂದು ನನಸಾಗಿ ಚಿತ್ರಕಲಾವಿದನಾಗಿ ಬೆಳೆದು, ಅತಿ ಚಿಕ್ಕ ವಯಸ್ಸಿನಲ್ಲಿಯೇ ಸಾಧನೆಯ ಹಾದಿಯಲ್ಲಿ ಮುನ್ನುಗ್ಗು ತ್ತಿದ್ದಾರೆ. ಗದಗ ನಗರದ ವಿಜಯ ಕಲಾ ಮಂದಿರದಲ್ಲಿ ಸದ್ಯ ವಿ. ಎಂ. ಆರ್ಟ್ಸ್ ಮಾಸ್ಟರ್ ಕೋರ್ಸ್ ಅಭ್ಯಸಿಸುತ್ತಿದ್ದು, ತಮ್ಮ ವಿದ್ಯಾ ಭ್ಯಾಸದ ಬಿಡುವಿನಲ್ಲಿ ಅನೇಕ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯ ಕ್ರಮಗಳಲ್ಲಿ ಭಾಗವಹಿಸುತ್ತ, ತಮ್ಮ ಸುಮಧುರ ಕಂಠಸಿರಿ ಯಿಂದ ಭಾವಪೂರ್ಣವಾಗಿ ಭಕ್ತಿ ಹಾಡುಗಳು, ಜಾನಪದ, ಇನ್ನಿತರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾನೆ. ಅಲ್ಲದೇ, ಮಿಮಿಕ್ರಿ, ಹಾಸ್ಯ ಮತ್ತು ಏಕಪಾತ್ರಾಭಿನಯವನ್ನೂ ಮಾಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರನಾಗಿದ್ದಾರೆ.

ಈಗಾಗಲೇ ಅನೇಕ ಭಾಗದಲ್ಲಿ ತಮ್ಮ ಕಲೆಯ ಮೂಲಕ ಗುರುತಿಸಿಕೊಂಡಿದ್ದಾರೆ. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ವಿಜಾಪೂರದಲ್ಲಿ 1996–97 ನಡೆದ ಹಾಗೂ 1998–99ನೇ ಗುರುದೇವಾ ಆತ್ಮನಗರದ ಗೆಳೆಯರ ಬಳಗ ಮನಿಹಾಳ, ಸುರೇಬಾನದಲ್ಲಿ ಜಾನಪದ ತರಬೇತಿಯಲ್ಲಿ ಎಲ್ಲರ ಗಮನ ಸೆಳೆದು ಪ್ರಥಮ ಸ್ಥಾನ ಪಡೆದಿದ್ದಾನೆ. 2001 ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವದಲ್ಲಿ ಏಕಾಂಕ ನಾಟಕ ಸ್ಪರ್ಧೆಯಲ್ಲಿ ತಮ್ಮ ಅಭಿನಯದಿಂದ ಪ್ರಥಮ ಸ್ಥಾನ ಮತ್ತು ಜಾನಪದ ಗೀತೆ ಸ್ಪರ್ಧೆಯಲ್ಲಿ ತಮ್ಮ ಪ್ರತಿಭೆಯನ್ನು ಮೆರೆದು ಪ್ರಥಮ ಸ್ಥಾನ ಗಿಟ್ಟಿಸಿ, ಜಾನಪದ ಗೀತೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ಈ ಯುವ ಗಾಯಕ ಕಲಾವಿದ, ಉತ್ತರ ಕರ್ನಾಟಕದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕೀರ್ತಿ ಸಂಪಾದಿಸಿದ್ದಾರೆ.

ಜಲವರ್ಣ, ತೈಲವರ್ಣ ಜೊತೆಗೆ ಚಿತ್ರಕಲೆಯಲ್ಲಿ ಬರುವ ಎಲ್ಲಾ ಬಗೆಯ ಕಲೆಯಲ್ಲಿ ಚಿಕ್ಕವಯಸ್ಸಿನಲ್ಲಿಯೇ ಪಳಗಿರುವ ಇವರು ಆಧುನಿಕ ಕಲೆಯಲ್ಲಿ ಆಸಕ್ತಿ ಹೊಂದಿದ್ದಾರೆ. ಇವರು ರಚಿಸಿದ ಕೃತಿಗಳಲ್ಲಿ ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಅಭಿವ್ಯಕ್ತಪಡುವ ಸೊಬಗನ್ನು ಚಿತ್ರಸಿದ್ದಾರೆ. ಹಾಗೇ ಕರಕುಶಲ ಕಲೆಯಲ್ಲಿಯೂ ಆಸಕ್ತಿ ಹೊಂದಿದ್ದಾನೆ. ಕೆಲಸಕ್ಕೆ ಬಾರದ ವಸ್ತು ಗಳನ್ನು ಸಹ ಚಾಕಚಕ್ಯತೆಯಿಂದ ಬಳಸಿಕೊಂಡರೆ ಅವು 'ಕಸದಿಂದ ರಸ' ಎಂಬಂತೆ ಅನೇಕ ತರಹದ ಕೆಲಸಕ್ಕೆ ಬಾರದ ವಸ್ತುಗಳಿಂದ ಕಲೆ ಅರಳಿಸಿದ್ದಾರೆ. ಅವುಗಳಲ್ಲಿ ರಟ್ಟಿನಿಂದ ತಯಾರಿಸಿದ ರಥ ತುಂಬ ಆಕರ್ಷಣೀಯವಾಗಿದೆ.

ಇವರ ಅನೇಕ ಚಿತ್ರಕಲಾಕೃತಿಗಳು, ಕರಕುಶಲ ಕಲೆಗಳು ಅನೇಕ ಚಿತ್ರಕಲಾ ಗ್ಯಾಲರಿಯಲ್ಲಿ ಗದಗ, ಬಿಜಾಪೂರ, ಹುಬ್ಬಳ್ಳಿ, ಯಲಬುರ್ಗಾ, ಹಂಪಿ, ಧಾರವಾಡ, ಇನ್ನು ಅನೇಕ ಭಾಗದಲ್ಲಿ ಪ್ರದರ್ಶನಗೊಂಡಿವೆ. ಇವರು ಕಲೆಗೆ ಜೀವನೀಡಿದ್ದಾರೆ. ಇವರು ಪ್ರಶಸ್ತಿ ಪತ್ರ, ಪದಕಗಳನ್ನು ಪಡೆದು ಸನ್ಮಾನಿತರಾಗಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಅಂಗವಿಕಲನಾಗಿ, ಅದೊಂದು ಶಾಪವೆಂದು ಕೊರಗುತ್ತ ಕೂಡದೆ ಛಲವನ್ನು ಮೈಗೂಡಿಸಿಕೊಂಡು, ತಮ್ಮ ಗುರಿ ಸಾಧನೆಯ ಮೆಟ್ಟಿಲನ್ನೇರುತ್ತ ಯಶಸ್ವಿಯಾದವರು.

(ವಿಎಸ್‌ಎಸ್)

ಕಾ

ಕಾಡಿಗೆ: ದೀಪದ ಕುಡಿಯಿಂದ ಹೊರಡುವ ಹೊಗೆಯ ಮಸಿ ಅಥವಾ ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು ಕಾಡಿಗೆ ಪ್ರಾಚೀನ ಕಾಲದಿಂದಲೂ ಶೃಂಗಾರಸಾಧನವಾಗಿ ಬಳಕೆಯಾಗುವುದ ರೊಂದಿಗೆ ಕಣ್ಣಿನ ರಕ್ಷಣೆಯನ್ನು ಮಾಡುತ್ತಾ ಬಂದಿದೆ. ಅದ್ದ ರಿಂದ ಇದನ್ನು ಒಂದು ಆಯುರ್ವೇದಿಕ ಮುಲಾಮು ಎನ್ನು ಬಹುದು.

ಪ್ರಾಚೀನ ಕಾಲದಿಂದಲೂ ಕಾಡಿಗೆಯನ್ನು ಮನೆಯಲ್ಲಿಯೇ ತಯಾರಿಸುವ ಪದ್ಧತಿ ರೂಢಿಯಲ್ಲಿದೆ. ಮನೆಯಲ್ಲಿ ಹೆಣ್ಣು ಮಕ್ಕಳಿಗೆ ಹೆರಿಗೆಯಾದ 7ನೆಯ ದಿನಕ್ಕೆ ಕಾಡಿಗೆಯನ್ನು ತಯಾರಿ ಸುತ್ತಾರೆ. ಇದನ್ನು 'ಕಾಡಿಗೆ ಹಿಡಿಯುವುದು' ಎನ್ನುತ್ತಾರೆ.

ಆಡಿನ (ಕುರಿ) ಹಿಕ್ಕೆ, ಬಜೆಬೇರು, ಕರಿಮಣೆಸು, ಹಿಪ್ಪಲಿ, ನಾರುಬೇರು, ಸಬ್ಬಸಿಗೆ ಸೊಪ್ಪು ಮುಂತಾದ ಔಷಧೀಯ ಗುಣ ಗಳಿರುವ ವಸ್ತುಗಳನ್ನು ಬಿಸಿಲಲ್ಲಿ ಒಣಗಿಸಿ, ಪುಡಿಮಾಡಿ ಜರಡಿಯಲ್ಲಿ ಸಾಣಿಸಿಕೊಳ್ಳುತ್ತಾರೆ. ಈ ಎಲ್ಲ ಪುಡಿಯನ್ನು ಹತ್ತಿ ಯೊಂದಿಗೆ ಸೇರಿಸಿ ದಪ್ಪನೆಯ ಬತ್ತಿ ತಯಾರಿಸುತ್ತಾರೆ. ಒಂದು ಮಣ್ಣಿನ ಹಣತೆಯಲ್ಲಿ ಈ ಬತ್ತಿ ಇಟ್ಟು ಆಕಳ ತುಪ್ಪ ಹಾಕಿ ದೀಪ ಹಚ್ಚುತ್ತಾರೆ. ಈ ದೀಪದ ಸುತ್ತಲು 3 ಚಿಕ್ಕಕಲ್ಲು ಅಥವಾ ಕುಳ್ಳು (ಬೆರಣಿ)ಗಳನ್ನು ಇಟ್ಟು ಅವುಗಳ ಮೇಲೆ ಹಿತ್ತಾಳೆಯ ಗಂಗಾಳ ವನ್ನು ಬೋರಲು ಹಾಕುತ್ತಾರೆ. ಗಂಗಾಳದಲ್ಲಿ ಕಪ್ಪು ಸಂಗ್ರಹ ವಾಗುತ್ತದೆ. ನಂತರ ಈ ಕಪ್ಪನ್ನು ಉದುರಿಸಕೊಂಡು ಆಕಳ ಬೆಣ್ಣಿಯಲ್ಲಿ ಕಲಿಸಿದರೆ ಕಾಡಿಗೆ ಸಿದ್ಧವಾಗುತ್ತದೆ. ಈ ಕಾಡಿಗೆ ಎಷ್ಟು ವರ್ಷಗಳವರೆಗೆ ಇಟ್ಟರೂ ಏನು ಆಗುವುದಿಲ್ಲ.

ಇಂತಹ ಕಾಡಿಗೆಯನ್ನು ಚಿಕ್ಕಮಕ್ಕಳಿಗೆ ಕಣ್ಣಿನ ರಕ್ಷಣೆ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಹಚ್ಚುತ್ತಾರೆ. ಶಿಶುಗಳ ಕಣ್ಣಿಗೆ ಕಾಡಿಗೆ ಹಚ್ಚುವುದರಿಂದ ಆ ಮಕ್ಕಳು ಚೆನ್ನಾಗಿ ನಿದ್ದೆ ಮಾಡುತ್ತಾವೆ. ಮತ್ತು ಅವುಗಳ ಕಣ್ಣುಗುಡ್ಡೆಗಳು ಉಬ್ಬುವುದಿಲ್ಲ. ಔಷಧೀಯ ವಸ್ತು



ಕಾಡಿಗೆ


ಗಳಿಂದ ಕಾಡಿಗೆಯನ್ನು ತಯಾರಿಸಿರುವುದರಿಂದ ಇದು ಕಣ್ಣುಗಳ ರಕ್ಷಣೆ ಮಾಡುತ್ತದೆ. ಜೊತೆಗೆ ಕಾಡಿಗೆಗೆ ಕೆಟ್ಟ ದೃಷ್ಟಿಯನ್ನು ತಡೆಹಿಡಿಯುವ ಶಕ್ತಿ ಇದೆ ಎಂಬ ನಂಬಿಕೆ ನಮ್ಮ ಜನಪದರಲ್ಲಿದೆ. ಅದಕ್ಕಾಗಿ ಮಕ್ಕಳಿಗೆ ದೃಷ್ಟಿತಾಗಬಾರದೆಂದು ಗಲ್ಲಕ್ಕೆ, ಹಣೆಗೆ, ಅಂಗೈಗೆ, ಅಂಗಾಲಿಗೆ ಕಾಡಿಗೆ ಹಚ್ಚುತ್ತಾರೆ. ಹಾಗೆಯೇ ಮದುವೆ, ಸೀಮಂತ ಕಾರ್ಯಗಳಲ್ಲಿ ವಧುವರರಿಗೆ, ಗರ್ಭಿಣಿಗೆ ದೃಷ್ಟಿ ಯಾಗಬಾರದೆಂದು ಕೆನ್ನೆಗೆ ಕಾಡಿಗೆಯಿಂದ ದೃಷ್ಟಿಬೊಟ್ಟು ಇಡುವುದುಂಟು.

ಇತರರು ಕಾಡಿಗೆಯನ್ನು ಹಚ್ಚಿಕೊಳ್ಳುವುದು ಆರೋಗ್ಯದ ದೃಷ್ಟಿಗಿಂತ ಅಲಂಕಾರದ ದೃಷ್ಟಿಯಿಂದ, ಕಾಡಿಗೆ ಹಚ್ಚುವುದು ಮುಖಾಲಂಕಾರದ ಒಂದು ಮಹತ್ವದ ವಿಧಾನವಾಗಿದೆ. ಕಾಡಿಗೆ ಹಚ್ಚುವುದರಿಂದ ಕಣ್ಣುಗಳು ಹೆಚ್ಚು ಕಾಂತಿಯುಕ್ತವಾಗಿ ತೋರು ತ್ತವೆ. ಅದಕ್ಕಾಗಿ ಮಹಿಳೆಯರು ಕಾಡಿಗೆ ಹಚ್ಚಿಕೊಳ್ಳುವ ಮೂಲಕ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುತ್ತಾರೆ. ಅದಕ್ಕಾಗಿಯೇ 'ಕಣ್ಣಿನ ಕಾಡಿಗೆ ಅಳೆಯಲಾಗಿ ಕಣ್ಣಿನ ಬಣ್ಣ ಕೆಟ್ಟಿತು' ಎಂದು ಕಾವ್ಯದಲ್ಲಿ ವರ್ಣಿಸಲಾಗಿದೆ. (ಆರ್‌ಎಸ್)

ಕಾಮಾಜಿ ಬಿ.ವ್ಹಿ.: ಕಲೆಯ ಅನೇಕ ಪ್ರಕಾರಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು, ಅನೇಕ ವಿಷಯಗಳ ಬಗ್ಗೆ ಚಿಂತಿಸಿ ಹೆಚ್ಚಿನ ಕಾಲವನ್ನು ಚಿತ್ರ ರಚನೆಯಲ್ಲಿ ಕಳೆಯುತ್ತಿರುವ ಕಲಾವಿದ. ವಿಶೇಷವಾಗಿ ಇವರು ಭಾವಚಿತ್ರಗಳ ರಚನೆ ಯಲ್ಲಿ ಸಿದ್ಧಹಸ್ತರು. ಎಸ್.ಎಂ. ಪಂಡಿತ್ ಹಾಗೂ ಜೆ.ಎಸ್. ಖಂಡೇರಾವ್‌ರಂಥ ಖ್ಯಾತ ಕಲಾವಿದರ ಅನಂತರ ಭಾವ ಚಿತ್ರದಲ್ಲಿ ಬಹುಷಃ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಎದ್ದು ಕಾಣುವ ಹಾಗೂ



ಭಾವಚಿತ್ರ ರಚಿಸುವ ಕಲಾವಿದ ಎಂದು ಇವರನ್ನು ಗುರ್ತಿಸ ಬಹುದು. ಇವರು ಪ್ರಕೃತಿಚಿತ್ರ ರಚನೆಯಲ್ಲಿಯೂ ಕೂಡ ವಿಶೇಷವಾದ ಆಸಕ್ತಿಯಿಂದ ಕೂಡಿದ ಕಲಾವಿದರಾಗಿದ್ದಾರೆ. ಇವರು ರಚಿಸಿದ ತಾಯಿ ಮತ್ತು ಮಗು ಕಲಾಕೃತಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಶಸ್ತಿ ಪಡೆದು ಕೊಂಡಿದೆ ಇದಲ್ಲದೆ ಇವರ ನಿಸರ್ಗ ಚಿತ್ರಕ್ಕೆ ಕರ್ನಾಟಕ ಲಲಿತಕಲಾ ಅಕಾಡೆಮಿ ಕೂಡ ಅತ್ಯುತ್ತಮ ಕಲಾಕೃತಿ ಪ್ರಶಸ್ತಿ ನೀಡಿ ಗೌರವಿಸಿದೆ (2010).



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಇವರು 1977 ಜುಲೈ 20ರಂದು ಆಳಂದ ತಾಲ್ಲೂಕಿನ ಮುನ್ನಳ್ಳಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ತಮ್ಮ ಗ್ರಾಮದಲ್ಲಿಯೇ ಪೂರೈಸಿ, ಚಿತ್ರಕಲಾ ಅಭ್ಯಾಸಕ್ಕಾಗಿ ಗುಲಬರ್ಗಾ ದಿ. ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಡಿಪ್ಲೋಮಾ ಪದವಿಯನ್ನು ಪೂರ್ಣಗೊಳಿಸಿದರು. ಅನಂತರ ಸ್ನಾತಕೋತ್ತರ ಪದವಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ದಿಂದ ಪಡೆದಿದ್ದಾರೆ.

ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಅನೇಕ ಪ್ರದರ್ಶನ ಗಳು, ಶಿಬಿರಗಳು ಹಾಗೂ ಉಪನ್ಯಾಸಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗಳನ್ನು ಪಡೆದುಕೊಂಡಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಸಂಸ್ಕೃತಿ ಸಂಭ್ರಮ, ರಾಷ್ಟ್ರೀಯ ಭಾವೈಕ್ಯತಾ ಶಿಬಿರ ನವದೆಹಲಿ, ವೆಂಕಟಪ್ಪ ಆರ್ಟ್‌ಗ್ಯಾಲರಿ ಬೆಂಗಳೂರು, ಯುಕಲಾವಿದರ ಶಿಬಿರ ಶಹಪೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರ ಶಿಬಿರ ಬೆಂಗಳೂರು, ಹೀಗೆ ಅನೇಕ ಕಡೆಗಳಲ್ಲಿ ಭಾಗವಹಿಸಿ ತಮ್ಮ ಕಲಾಕೃತಿಗಳಿಂದ ಚಿರಪರಿಚಿತ ರೆನಿಸಿದ್ದಾರೆ. (ಎಎಸ್‌ಎಸ್)


ಕಾಶಿ ಎಂ. ಆಸ್ವಳ್ಳಿ: ಚಿತ್ರಕಲಾವಿದೆ. ಇವರು ಕಲಬುರ್ಗಿಯ ಕಲಾನಿಕೇತನದಿಂದ ಅರಳಿದ ಪ್ರತಿಭೆ. ಅಕ್ಟೋಬರ್ 31 ನೇ ತಾರೀಖು 1975 ರ ಇಪ್ಪಿಯಲ್ಲಿ ಜನಿಸಿದರು. ಇವರು 1997 ರಲ್ಲಿ ಗುಲಬರ್ಗಾ ಮಾತೋಶ್ರೀ ಮಾಣಿಕಬಾಯಿ ಕೋಠಾರಿ ಕಾಲೇಜ್



ಆಫ್ ವಿಜ್ವಲ್ ಆರ್ಟನಿಂದ ಪೇಂಟಿಂಗ್‌ನಲ್ಲಿ ಪದವಿ ಪಡೆದಿರುವರು. 2001 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಫೈನ್‌ಆರ್ಟನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವುರು.

ಕಾಶಿ ಆಸ್ಪಳ್ಳಿ ಗುಲಬರ್ಗಾದ ಕಲಾಮಹೋತ್ಸವ, ದೆಹಲಿಯ ಎಐಎಫ್‌ಎಸಿಎಸ್ ಪ್ರದರ್ಶನ, ಬೆಂಗಳೂರಿನ 'ಮಿಕ್ಸ್‌ಡ್ ಬ್ಯಾಗ್' ಪ್ರದರ್ಶನ ಸೇರಿದಂತೆ ಹಲವು ಕಡೆ ಭಾಗವಹಿಸಿ ತಮ್ಮ ಕಲಾಕೃತಿಗಳಿಂದ ಮೆಚ್ಚುಗೆ ಪಡೆದಿದ್ದಾರೆ.

1997 ರಲ್ಲಿ ಗುಲಬರ್ಗಾದಲ್ಲಿ ಜರುಗಿದ ಗ್ರಾಫಿಕ್ ಕ್ಯಾಂಪ್, 2011ರಲ್ಲಿ ಜರುಗಿದ ಪೇಂಟಿಂಗ್, ಗ್ರಾಫಿಕ, ಛಾಯಾಚಿತ್ರ ಹಾಗೂ ಡ್ರಾಯಿಂಗ್ ಕ್ಯಾಂಪ್, 2011 ರಲ್ಲಿ ಗುಲಬರ್ಗಾದಲ್ಲಿ ಶ್ರೀ ಗುರು ವಿದ್ಯಾಪೀಠ ಆಯೋಜಿಸಿದ ಅಂತರಾಷ್ಟ್ರೀಯ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದರು.



'ಬಟರ್ ಫ್ಲೈಯಿ-3' ಅಕ್ರೇಲಿಕ್ ಮಾಧ್ಯಮ

ತಮ್ಮ ಕಲಾಕ್ಷೇತ್ರದ ಸಾಧನೆಗೆ ತಮ್ಮ ತಂದೆಯ ಪ್ರೋತ್ಸಾಹವನ್ನು ವಿಶೇಷವಾಗಿ ಸ್ಮರಿಸುವ ಕಾಶಿ, ಇಡೀ ಪರಿವಾರದ ಸಹಕಾರವೂ ತಾವು ಕಲಾವಿದೆಯಾಗಲು ಮಹತ್ವದ ಪಾತ್ರ ಎನ್ನುತ್ತಾರೆ. ವಿದ್ಯಾರ್ಥಿ ಜೀವನದಿಂದಲೂ ಇವರಿಗೆ ಲ್ಯಾಂಡ್‌ಸ್ಕೇಪ್, ಮಿನೆಚೇರ್ ಹಾಗೂ ಇಚ್ಚಿಂಗ್ ಗ್ರಾಫಿಂಗ್ ಮುಂತಾದ ಮಾಧ್ಯಮಗಳು ಪ್ರಭಾವಿತಗೊಳಿಸಿದೆ. ಕಾಶಿ ಅವರಿಗೆ ಅಕ್ರಲಿಕ್, ತೈಲವರ್ಣಗಳಲ್ಲಿ ಪೇಂಟಿಂಗ್ ಮಾಡುವುದು ಖುಷಿ ನೀಡುತ್ತವೆ. ಬಟರ್‌ಫ್ಲೈ ಸೀರಿಜ್‌ನ ಪೇಂಟಿಂಗ್‌ಗಳನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ರಚಿಸುತ್ತಾರೆ.

ಕಾಶಿ ಅವರ ಚಿತ್ರಗಳಲ್ಲಿ ಸ್ತ್ರೀ ಸಂವೇದನೆಗಳನ್ನು ಗುರುತಿಸಬಹುದಾಗಿದೆ. ರೇಖೆಗಳ ಸಂಯೋಜನೆಯಲ್ಲಿ ಅಮೂರ್ತ ಆಕೃತಿಗಳ ರಚನೆಗಳಲ್ಲಿ ಬಣ್ಣಗಳ ಬಳಸುವಿಕೆಯಲ್ಲಿ ಕಾಶಿಯವರ ಪ್ರತಿಭೆ ಕಾಣಬಹುದಾಗಿದೆ. ಈ ಕಲಾವಿದೆ ಪ್ರಸ್ತುತ ಗುಲಬರ್ಗಾದ ಪೂಜ್ಯ ದೊಡ್ಡಪ್ಪಾ ಅಪ್ಪಾ ಇಂಜಿನೀಯರಿಂಗ್ ಮಹಾವಿದ್ಯಾಲಯದ ವಾಸ್ತುಶಿಲ್ಪ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. (ಎನ್‌ಎಂಜೆ)

ಕಾಶೀನಾಥ ಅಂಬಲಗೆ: ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಮುಚಳಂಬಿ ಗ್ರಾಮದವರಾದ ರಾಚಪ್ಪ ಹಾಗೂ ಗುರಮ್ಮ ದಂಪತಿಗಳಿಗೆ 1947 ಅಕ್ಟೋಬರ್ 10 ರಂದು ಜನಿಸಿದರು. ಡಾ. ಕಾಶೀನಾಥ ಅಂಬಲಗೆ ಕವಿಯಾಗಿ, ಭಾಷಾಂತರ ತಜ್ಞರಾಗಿ, ಹಿಂದಿ ಭಾಷಾ ಪಂಡಿತರಾಗಿ ರಾಷ್ಟ ಮಟ್ಟದಲ್ಲಿ ಪ್ರಸಿದ್ಧಿ ಪಡೆದವರು. ಕರ್ನಾಟಕಕ್ಕೆ ಇವರ ಸೇವೆ ಅಪಾರ ಹಿಂದಿ ಪ್ರಾಧ್ಯಾಪಕರಾಗಿ ಮುಖ್ಯಸ್ಥರಾಗಿ ಈಚೆಗೆ ನಿವೃತ್ತರಾಗಿದ್ದಾರೆ.



ಶ್ರೀಯುತರು ಲಂಕೇಶರ ನಾಟಕ 'ಕ್ರಾಂತಿ ಬಂತು ಕ್ರಾಂತಿ' ಬೇಂದ್ರೆಯವರ ಜಾತ್ರೆ, ಕೆಲವು ಮುಖ್ಯ ರೂಪಕಗಳನ್ನು ಹಿಂದಿಗೆ ಅನುವಾದಿಸಿ ಕೊಟ್ಟಿದ್ದು ಹಳೆಯ ಮಾತು. ಇತ್ತೀಚೆಗೆ ಸಪ್ದಾರ್ ಹಶ್ಮಿಯವರ 'ಮಕ್ಕಳ ನಾಟಕಗಳನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದ ಮಾಡಿಕೊಟ್ಟದ್ದರಿಂದ ಕರ್ನಾಟಕದ ನಾಲ್ಕು ದಿಕ್ಕಿನಲ್ಲಿನ ಮಕ್ಕಳ ಬೇಸಿಗೆ ಶಿಬಿರದಲ್ಲಿ ಆ ನಾಟಕಗಳು ಪ್ರದರ್ಶನಗೊಂಡಿವೆ. ಸೌಂದರ್ಯಶಾಸ್ತ್ರ ಎಂಬ ಆಕರ ಗ್ರಂಥವನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದರಿಂದ ಶೈಕ್ಷಣಿಕವಾಗಿ ಹಾಗೂ ರಂಗಭೂಮಿಗೆ ಆಕರಗ್ರಂಥವಾಗಿ ಉಪಯೋಗಿಸಲ್ಪಡುತ್ತಿದೆ. ಆಕಾಶವಾಣಿ ಗುಲಬರ್ಗಾ ಕೇಂದ್ರದ ವಿನಂತಿಯ ಮೇರೆಗೆ ಹತ್ತಾರು ರೇಡಿಯೋ ನಾಟಕಗಳನ್ನು 'ಆಕಾಶವಾಣಿಯ ರಾಷ್ಟ್ರೀಯ ಸ್ಪರ್ಧೆಗೆ ಕನ್ನಡದಿಂದ ಹಿಂದಿಗೆ ಅನುವಾದಿಸಿ ಕನ್ನಡ ಮತ್ತು ಹಿಂದಿ ನಾಟಕಗಳ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಸಾಹೇಬರು ಬರುತ್ತಾರೆ (ರಃ ಗೊಗೋಲ್) ಕುರಿ, ಮಹಿಮಾಪುರ, ಸಂಸ್ಥಾ, ಮುಂತಾದ ನಾಟಕದಲ್ಲಿ ಮುಖ್ಯ ಪಾತ್ರದಲ್ಲಿ ನಟನೆ ಮಾಡಿದರೂ 1979ರಿಂದ ಶ್ರೀಯುತರು ರಂಗ ಸಂಘಟಕರೆಂದೇ ಖ್ಯಾತಿ, ರಂಗಶಿಬಿರ ನೇಪಥ್ಯ ಶಿಲ್ಪ, ಸಂಗೀತ ಕಾರ್ಯಾಗಾರಗಳಿಗೆ ಕಲಾವಿದರನ್ನು ಗುರುತಿಸಿ, ಹಿಡಿದು ತಂದು

ರಂಗಭೂಮಿಗೆ ಹಚ್ಚಿದ್ದರಿಂದ ಗುಲಬರ್ಗಾ ಬೀದರನಲ್ಲಿ ರಂಗಭೂಮಿ ಜೀವಂತಿಕೆ ಪಡೆದಿದೆ. ರಂಗಭೂಮಿಯ ಕಾರ್ಯಾಗಾರಗಳಲ್ಲಿ ನಟನೆ, ಸೌಂದರ್ಯಶಾಸ್ತ್ರ, ಸಂಸ್ಕೃತಿ ಮತ್ತು ಕಲೆ, ಕಲೆ ಮತ್ತು ಕಲಾವಿದರ ಬದ್ಧತೆ, ರಂಗಭೂಮಿ ಮತ್ತು ಸಾಹಿತ್ಯ ಕುರಿತು ಘಂಟೆಗಟ್ಟಲೆ ಮಾತನಾಡುತ್ತಾರೆ. ಈ ಭಾಗದಲ್ಲಿ ಇವರೊಬ್ಬ ಮಹತ್ವದ ಸಂಪನ್ಮೂಲ ವ್ಯಕ್ತಿ.

ಪ್ರಸನ್ನ, ಸಿ.ಬಸವಲಿಂಗಯ್ಯ, ರಾಘನಂದನ್, ಲಿಂಗದೇವರು ಹಳೇಮನೆ, ಎಸ್.ಮಾಲತಿ, ಕೊಟಗಾನಳ್ಳಿ ರಾಮಯ್ಯ, ಗಂಗಾಧರಸ್ವಾಮಿ, ಸಿದ್ಧಲಿಂಗ ಪಟ್ಟಣಶೆಟ್ಟಿ ಮುಂತಾದ ರಂಗ ದಿಗ್ಗಜರೊಂದಿಗೆ ಇವರ ಒಡನಾಟ ಸದಾ ಹಸಿಹಸಿರಾದ ಗೆಳೆತನದ್ದು. (ಎಸ್‌ಆರ್‌ಜಿ)



ಕಾಶಿನಾಥ ಡಿ.: ಚಿತ್ರಕಲಾವಿದ. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ಶ್ರೀಯುತ ಧರ್ಮಣ್ಣಾ ಹೀರಾಬಾಯಿ ದಂಪತಿಗಳ ಪುತ್ರರಾದ ಕಲಾವಿದ ಕಾಶಿನಾಥ ಡಿ.ರವರು ಕಲಬುರ್ಗಿ ದೃಶ್ಯ ಕಲಾಕ್ಷೇತ್ರ ಕಂಡ ವಿಶಿಷ್ಟ ಯುವ ಕಲಾವಿದ.

ತಂದೆಯವರ ಕುಲ ಕಸುಬಾದ ಕಲ್ಲುಕೆತ್ತನೆಯ ವಾತಾವರಣದಲ್ಲಿ ಬೆಳೆದ ಕಾಶಿನಾಥರಿಗೆ ಬಾಲ್ಯದಲ್ಲಿಯೇ ತಂದೆಯವರು ಕೆತ್ತುವ ಕಲ್ಲುಗಳು ಅವರ ಕೈಗಳಲ್ಲಿ ವಿವಿಧ ಆಕಾರಗಳನ್ನು ಪಡೆಯುವ ಸಂದರ್ಭ ತುಂಬಾ ಪ್ರಭಾವ ಬೀರಿತ್ತು.

ಗ್ರಾಮೀಣ ಹಿನ್ನೆಲೆ ಅಲ್ಲಿಯ ಪರಿಸರ ಹಾಗೂ ಸಂಸ್ಕೃತಿಯನ್ನು ಹೊಂದಿರುವ ಕಾಶಿನಾಥ ಡಿ. ಯವರು ಕಲಾ ಶಿಕ್ಷಣ ಪಡೆದದ್ದು, ಗುಲಬರ್ಗಾದ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ, ಎಲ್ಲರಂತೆಯೇ ಚಿತ್ರಕಲಾ ಶಿಕ್ಷಣ ಪದವಿ ಪಡೆಯಲು ಬಂದ ಕಾಶಿನಾಥ ರವರು ಡಿಪ್ಲೊಮಾ, ಎ.ಎಂ ಹಾಗೂ ಸ್ನಾತಕೋತ್ತರ ಪದವಿಯನ್ನು ಎಂ.ಎಂ.ಕೆ. ಕಾಲೇಜ ಮತ್ತು ವಿಜ್ಯೂವಲ್ ಆರ್ಟ್‌ನಲ್ಲಿ 2004ರಲ್ಲಿ ಪಡೆದಿದ್ದಾರೆ. ಅಲ್ಲದೆ ಮುಂದೆ ಡಾ. ಅಂದಾನಿ ವಿ.ಜಿ. ಯವರ ಮಾರ್ಗದರ್ಶನ ದಲ್ಲಿ 'ಶಾಂತಿನಿಕೇತನದ ಭಿತ್ತಿಚಿತ್ರಗಳು ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಸಂಶೋಧನೆ ಕೈಗೊಂಡು ಗುಲಬರ್ಗಾ ವಿಶ್ವವಿದ್ಯಾಲಯದಿಂದ 2011ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಕಲಾವಿದ ಕಾಶಿನಾಥರವರು ಕಲಾಬರಹಕ್ಕಿಂತ ಕಲಾಕೃತಿಗಳನ್ನು ರಚಿಸುವಲ್ಲಿ ತಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಗ್ರಾಮೀಣ ಪರಿಸರ, ವಾತಾವರಣ ಇವರ ಕಲಾಕೃತಿಗಳ ಮುಖ್ಯ ವಿಷಯ ವಸ್ತು ಎನ್ನಬಹುದು. ಅದರಲ್ಲಿಯೂ ಅವರ ಕಲಾಕೃತಿಯಲ್ಲಿ ಬಹುವಾಗಿ ಆಕ್ರಮಿಸಿದ ವಸ್ತು ಎಂದರೆ ಈ ಪ್ರದೇಶದ ಬಲಾಢ್ಯತೆಯನ್ನು ಹಾಗೂ ಗಾಂಭೀರ್ಯತೆಯನ್ನು ಮೇಳವಿಸಿಕೊಂಡಿರುವ 'ಹೋರಿ' (Bull) ಎಂದು ಹೇಳಬಹುದು. ಅವುಗಳ ಚಲನೆ ನೋಡುಗರನ್ನು ಅಪಾರವಾಗಿ ಆಕರ್ಷಿಸುತ್ತವೆ. ಅಲ್ಲದೆ ಈ ಭಾಗದಲ್ಲಿ ಅವು ಬಹುವಾಗಿ ಕಂಡುಬರುವುದರಿಂದ ಹೋರಿಗಳು ಈ ಭಾಗದ ಸಂಕೇತ ಸೂಚಕವಾಗಿವೆ. ಕಲಾವಿದರಿಗೆ ಕುದುರೆ ಮತ್ತು ಗೂಳಿಗಳು ವಿಶೇಷವಾದ ವಸ್ತು ವಿಷಯವಾಗಿರುವುದರಿಂದ ಬಹಳಷ್ಟು ಕಲಾವಿದರು ಅವುಗಳನ್ನು ಬಳಸಿಕೊಂಡಿದ್ದಾರೆ. ಏಕೆಂದರೆ ಇವುಗಳನ್ನು ಪ್ರತಿಷ್ಠಾಪಿಸುವಾಗ ಮಾಡುವ ಪ್ರತಿಯೊಂದು ರೇಖೆಗಳಿಗೆ ತನ್ನದೇ ಆದ ತೀವ್ರತೆ ಇರುತ್ತದೆ. ಏಕೆಂದರೆ ಅಶ್ವಗಳು ಹಾಗೂ 'ಹೋರಿಗಳು ಬಲಾಡ್ಯ ಹಾಗೂ ಬಿರುಗಾಳಿಯನ್ನು ಸಂಕೇತಿಸುವ ಪ್ರಾಣಿಗಳಾಗಿರುವುದರಿಂದ ಅವುಗಳ ಚಿತ್ರ'ಗಳು ವಿಶಿಷ್ಟವಾದ ಅನುಭವವನ್ನು ನೀಡುತ್ತವೆ. ಈ ದೃಷ್ಟಿಯಿಂದ ಕಾಶಿನಾಥರವರ ಕ್ಯಾನ್‌ವಾಸಿನ ಮೇಲೆ ಹೋರಿಯ ಇಡೀ ವ್ಯಕ್ತಿತ್ವವನ್ನು ವಿವಿಧ ಆಯಾಮಗಳಲ್ಲಿ ಹಿಡಿದಡುವ ಪ್ರಯತ್ನ ಮಾಡುತ್ತಿದ್ದಾರೆ. ಕಾಶಿನಾಥರವರ ರೇಖೆಗಳು ತುಂಬಾ ವಿಶಿಷ್ಟವಾಗಿದ್ದು ಗಣನೀಯವಾಗಿ ಮನಸೆಳೆಯುತ್ತವೆ. ಬಡತನದ ಬೇಗೆಯಲ್ಲಿ ಬಂದ ಆ ಅನುಭವಗಳನ್ನು ಉತ್ತಮ ನೆಲೆಗಟ್ಟಿನಲ್ಲಿ ಕಲಾಕೃತಿಗಳನ್ನು ಕಟ್ಟಿಕೊಡುವ ಪ್ರಯತ್ನದಲ್ಲಿ ಅನೇಕ ಕಡೆ ಪ್ರದರ್ಶನಗಳು, ಶಿಬಿರಗಳು, ಹೀಗೆ ಕರ್ನಾಟಕವಲ್ಲದೆ ದೇಶ ವಿದೇಶಗಳಲ್ಲಿ ಅನೇಕ ಕಡೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿದ್ದಾರೆ.


ಕರ್ನಾಟಕ ಲಲಿತಕಲಾ ಅಕಾಡೆಮಿ ಧನ ಸಹಾಯ ದೊಂದಿಗೆ ಮೈಸೂರಿನಲ್ಲಿ ಏರ್ಪಡಿಸಿದ ಗುಂಪು ಪ್ರದರ್ಶನ, ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿಯು ಕೂಡಾ ಇವರ ಜೀವನದ ಬಹುದೊಡ್ಡ ಪ್ರದರ್ಶನ ಹಾಗೂ ಪ್ರಶಸ್ತಿಗಳಲ್ಲಿ ಒಂದಾಗಿವೆ. ಗುಲಬರ್ಗಾ ವಿಶ್ವವಿದ್ಯಾಲಯ ಕಲಾಪ್ರದರ್ಶನ, ನಾಗಪೂರ ಕಲ್ಚರಲ್ ಸೆಂಟರ್ ಪ್ರದರ್ಶನ, 1995 ರಾಷ್ಟ್ರೀಯ ಕಲಾಮೇಳ ಬೆಂಗಳೂರು, ಕಲ್ಕತ್ತಾ ಕಲಾಮೇಳ, ದೆಹಲಿ ರಾಷ್ಟ್ರೀಯ ಕಲಾಮೇಳ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರದರ್ಶನಗಳಂತಹ ಅನೇಕ ಪ್ರದರ್ಶನಗಳಲ್ಲಿ ಕಲಾವಿದ ಕಾಶಿನಾಥರವರು ಭಾಗವಹಿಸಿದ್ದಾರೆ. ಭಾರತದ ದೃಶ್ಯಕಲಾ ಪರಂಪರೆಯಲ್ಲಿ ಅತೀ ಉನ್ನತ ಸ್ಥಾನವನ್ನು ಹೊಂದಿರುವ ಶಾಂತಿನಿಕೇತನದಲ್ಲಿ ಸಂಶೋಧನೆ ಕೈಗೊಂಡಾಗ ಅಲ್ಲಿ ಕಳೆದ ದಿನಗಳ ಅನುಭವ ಅಲ್ಲಿರುವ ಹಿರಿಯ ಕಲಾವಿದರ ಒಡನಾಟ ಅಲ್ಲಿಯ ಪರಿಸರ ಕಾಶಿನಾಥರವರ ಮೇಲೆ ತುಂಬಾ ಪ್ರಭಾವ ಬೀರಿವೆ.

ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ದಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಹೆಚ್‌ವಿಎಂ)

ಕಾಷ್ಠಕಲೆ: ಹೈದ್ರಾಬಾದ ಕರ್ನಾಟಕದ ಗ್ರಾಮೀಣ ಪ್ರದೇಶ ದಲ್ಲಿರುವ ಅತ್ಯಂತ ವೈಶಿಷ್ಟ್ಯ ಪೂರ್ಣವಾದ ಕಲೆ. ಇಂದು ಆಧುನಿಕ ಯುಗದಲ್ಲಿ, ಆರ್ಥಿಕ ಅನುಕೂಲ ಹಾಗೂ ಆಸಕ್ತರ ಕೊರತೆಯಿಂದಾಗಿ ಕಾಷ್ಠ ಶಿಲ್ಪದ ಬಗ್ಗೆ ಯಾರೂ ಅಷ್ಟೊಂದು ತಲೆ ಕೆಡಿಸಿಕೊಳ್ಳುವುದಿಲ್ಲ. ಕಾಷ್ಠ ಶಿಲ್ಪಗಳಿಗೆ ಬೇಡಿಕೆಯ ಕೊರತೆ ಯಿಂದಾಗಿ, ತಲೆ ತಲಾಂತರದಿಂದ ಈ ಉದ್ಯೋಗ ಮಾಡುತ್ತ, ಜೀವನ ಸಾಗಿಸುವುದರೊಂದಿಗೆ ಕಲೆಯಲ್ಲಿ ಆನಂದವನ್ನು ಕಾಣುವ ಕುಶಲ ಕರ್ಮಿಗಳ ಸ್ಥಿತಿ ಇಂದು ಚಿಂತಾಜನಕವಾಗಿದೆ.

ಜನಪದ ಕಲೆ ಹಾಗೂ ಕರಕುಶಲ ಕಲೆ, ನಮ್ಮ ಸಂಸ್ಕೃತಿಯ ಎರಡು ಮಹತ್ತರವಾದ ಭಾಗಗಳಾಗಿವೆ. ಪ್ರಪಂಚದ ಇತಿಹಾಸ ದಲ್ಲಿ ಮೊದಲು ಹುಟ್ಟಿದ್ದು ಕಲೆ. ಅನಂತರ ಸಾಹಿತ್ಯ ಮತ್ತು ಇನ್ನಿತರ ಪ್ರಕಾರಗಳು. ಪ್ರಾಚೀನ ಕಾಲದಿಂದಲೂ ಮನುಷ್ಯ ತನ್ನ ಭಾವನೆಗಳಿಗೆ ಆಕಾರವನ್ನು ಚಿತ್ರಗಳ (ರೇಖೆಗಳ) ರೂಪದಲ್ಲಿ ತೋರ್ಪಡಿಸಿದ. ತದನಂತರದ ದಿನಗಳಲ್ಲಿ ಅವರು ಚಿತ್ರಿಸಿದ ರೇಖಾ ರೂಪವೇ ಕಲೆಯಾಗಿ ಮಾರ್ಪಟ್ಟಿತು. ಕಲೆ ಎನ್ನುವದು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ. ಕಲೆಯಿಂದಲೇ ಮೋಕ್ಷ ಎನ್ನುವಷ್ಟರ ಮಟ್ಟಿಗೆ ಪಾವಿತ್ರ್ಯವನ್ನು ನಾವು ಕಲೆಗೆ ಕಲ್ಪಿಸಿ ಕೊಟ್ಟಿದ್ದೇವೆ. ಗಂಧದ ಕಟ್ಟಿಗೆ ಹಾಗೂ ವಿವಿಧ ಬಗೆಯ ಕಟ್ಟಿಗೆ ಯಲ್ಲಿ, ಬಗೆ ಬಗೆಯ ಕಲಾಕೃತಿಗಳನ್ನು ಮಾಡುವ ಜನಾಂಗ ಇಂದು ನಮ್ಮ ಮುಂದೆ ಬದುಕಿದೆ. ಹಿಂದಿನ ಕಾಲದ ರಾಜರ ಇತಿಹಾಸದಲ್ಲಿ ಶಿಲ್ಪಗಳಿಂದ ಕೆತ್ತಿದ ಶಿಲಾ ಕಲೆಯನ್ನು ಈ ಜನಾಂಗ ಅದೇ ಆಕರ್ಷಕ ಭಂಗಿಯಲ್ಲಿ ನಾಜೂಕಾಗಿ ಕಟ್ಟಿಗೆ ಯಲ್ಲಿ ಮಾಡಿ, ತೋರಿಸುವಷ್ಟು ಸಿದ್ಧ ಹಸ್ತರು.



ಕಾಷ್ಠ ಕಲೆಯ ಕಲಾಕೃತಿಗಳು

ಇಂದು ನಮ್ಮ ಮಧ್ಯೆ ಬದುಕುತ್ತಿರುವ ಕರಕುಶಲ ಶ್ರಮಿಕ ವರ್ಗದವರು ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ವ್ಯವಹಾರದಲ್ಲಿ ಯಾವುದೇ ರೀತಿಯ ಲಾಭವನ್ನು ಗಳಿಸದೆ, ಅದನ್ನು ಬಿಟ್ಟು ಬೇರೆ ಕೆಲಸಕ್ಕೂ ತಮ್ಮನ್ನು ತೊಡಗಿಸಿ ಕೊಳ್ಳಲಾರದಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಒದ್ದಾಡುತ್ತಿದ್ದಾರೆ. ಕಟ್ಟಿಗೆ ಯಿಂದ ತಯಾರಿಸಲಾಗುತ್ತಿದ್ದ ಮನೆ ಅಲಂಕಾರಿಕ ಸಾಮಾನು ಗಳಾದ, ನಯ ನಾಜೂಕಿನ ಕೆತ್ತನೆಯ ಕುಸುರಿ ಕಲೆಯ ತೊಟ್ಟಿಲು, ಬಾಗಿಲಿನ ತೋಳು, ಕಿಟಕಿಗಳು ಹಾಗೂ ಇನ್ನಿತರ ಕಟ್ಟಿಗೆಯಿಂದ ತಯಾರಿಸಿದ ಸಾಮಾನುಗಳಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ. ಅವನ್ನು ತಯಾರಿಸುವ ಕುಶಲಕರ್ಮಿಗಳು ತಮ್ಮ ಬದುಕಿನ ದಾರಿ ಕಾಣದಾಗಿದ್ದಾರೆ.

(ಎಂಎಂಜೆ)

ಕಾಳಗಿ: ಗುಲಬರ್ಗಾ ಜಿಲ್ಲೆಯ ಐತಿಹಾಸಿಕ ಗ್ರಾಮ. ಈ ಊರಲ್ಲಿ ನೂರಾ ಒಂದು ದೇವಸ್ಥಾನಗಳಿದ್ದುವು ಎಂಬ ಐತಿಹ್ಯವಿದೆ. ಸರ್ಕಾರ ಹಾಗೂ ಸ್ಥಳೀಯ ಆಡಳಿತದ ನಿರ್ಲಕ್ಷ್ಯ ಹಾಗೂ ಊರಿನ ಜನರ ಉಪೇಕ್ಷೆಯಿಂದ ಕಾಳಗಿಯ ಸ್ಮಾರಕಗಳು ಕಳೆದು ಹೋಗುತ್ತಿವೆ. ಶಿಲ್ಪಕಲಾ ಸಂಸ್ಕೃತಿಯ ಪ್ರತೀಕವಾದ ಇಲ್ಲಿನ ಒಂದೊಂದು ಕಲ್ಲುಗಳೂ ಕರುಣಾಜನಕ ಕಥೆ ಹೇಳುತ್ತವೆ. ಎರಡನೆಯ ಶತಮಾನದ ನೀಲಕಂಠ ಕಾಳೇಶ್ವರ ದೇವಸ್ಥಾನ ಇಲ್ಲಿನ ಪ್ರಮುಖ ಆಕರ್ಷಣೆ. ಕೃತಯುಗದಲ್ಲಿ ಜ್ಯೋತೀಶ್ವರ ಲಿಂಗ. ತ್ರೇತಾಯುಗದಲ್ಲಿ ಸೋಮೇಶ್ವರ ಲಿಂಗ. ದ್ವಾಪರದಲ್ಲಿ ನೀಲಕಂಠ ಹಾಗೂ ಕಲಿಯುಗದಲ್ಲಿ ಕಾಳೇಶ್ವರ ಎಂದು ಪೂಜಿಸಲ್ಪಡುತ್ತಿದೆ ಎಂಬ ನಂಬಿಕೆ ಇದೆ. ದೇವಸ್ಥಾನದ ಎದುರು ವರ್ಷವಿಡೀ ತೀರ್ಥೋದ್ಭವವಾಗುತ್ತದೆ. ನಿರಂತರ ಚಿಮ್ಮುವ 'ಬತ್ತದ ಗಂಗೆ'ಯಿಂದ ಹನ್ನೆರಡು ಸಾವಿರ ಮಂದಿಗೆ ನಿತ್ಯ ಕುಡಿ ಯುವ ನೀರು ಹಾಗೂ 1600 ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಸಿಕ್ಕಿದೆ.

ದ್ವಾಪರಯುಗದಲ್ಲಿ ಕಾಳೇಶ್ವರ ಎಂಬ ಸತ್ಪುರುಷ ಬೀದರ ನಿಂದ ಕಾಶಿಗೆ ಹೋಗುವ ಮಾರ್ಗದಲ್ಲಿ ನೀಲಕಂಠೇಶ್ವರನನ್ನು ಪೂಜಿಸಿ, ಕಾಶಿಯಾತ್ರೆ ಕೈಗೊಂಡರು. ತೀರ್ಥಯಾತ್ರೆಯಿಂದ ಹಿಂದಿರುಗುವಾಗ ಕಾಳಾಸುರ ಎಂಬ ರಾಕ್ಷಸ ಅವರಿಗೆ ಚಿತ್ರಹಿಂಸೆ



ಕಾಳೇಶ್ವರ ದೇವಾಲಯ, ಕಾಳಗಿ

ನೀಡುವುದಾಗಿ ಬೆದರಿಕೆ ಹಾಕಿದ. ಭಕ್ತನ ರಕ್ಷಣೆಗೆ ಮುಂದಾದ ನೀಲಕಂಠ ಕಾಳಾಸುರನಿಗೆ ಶಾಪ ನೀಡಿದ. ಶಾಪಗ್ರಸ್ತನಾದ ರಾಕ್ಷಸ ನೀಲಕಂಠೇಶ್ವರ ದೇವಸ್ಥಾನದ ಎರಡನೆಯ ಬಾಗಿಲಲ್ಲಿ ಕಾವಲುಗಾರನಾಗಿ ಕಾಯುತ್ತಿದ್ದಾನೆ ಎಂಬ ಐತಿಹ್ಯವಿದೆ. ಕಲಿ ಯುಗದಲ್ಲಿ ನೀಲಕಂಠನ ಸ್ಥಾನದ ಮೇಲೆ ಕುಳಿತುಕೊಳ್ಳುವಂತೆ ಕಾಳೇಶ್ವರರಿಗೆ ಅಪ್ಪಣೆಯಾಗುತ್ತದೆ ಎಂಬ ಪುರಾಣ ಕಥೆಯಿದೆ.

ದೇವಸ್ಥಾನದ ಮುಂದೆ ಇರುವ ಕ್ರಿ.ಶ. 1103ರ ಶಾಸನದ ಪ್ರಕಾರ ಇದೊಂದು ದೇವಸ್ಥಾನ ಸಂಕೀರ್ಣ. ಪೂರ್ವಾಭಿಮುಖ ವಾಗಿ ಸ್ವಯಂಭೂ ಕಾಳೇಶ್ವರ ದೇವಸ್ಥಾನ, ರೇವಣ ಸಿದ್ದೇಶ್ವರ ಹಾಗೂ ಈಶ್ವರನ ಗುಡಿ, ಉತ್ತರಕ್ಕೆ ಸೋಮೇಶ್ವರ ಹಾಗೂ ವೀರಭದ್ರ ದೇವಸ್ಥಾನ, ವಿಶಾಲ ತೆರೆದಮಂಟಪ, ಬದಿಯಲ್ಲೇ ಪುಷ್ಕರಣಿ, ಪಕ್ಕದಲ್ಲಿ ಹನ್ನೆರಡು ತಿಂಗಳೂ ಹರಿಯುವ ನದಿ. ಆವರಣದಲ್ಲಿ ಚತುರ್ಮುಖ ಗಣಪತಿ ಶಿಲ್ಪ, ಕಾರ್ತಿಕೇಯ ಕಿರಣ ಸ್ತಂಭ, ವೀರಗಲ್ಲುಗಳಿವೆ. ಸೋಮೇಶ್ವರ ದೇವಸ್ಥಾನದಲ್ಲಿ ಬಲಹರಿಲಿಂಗವಿದೆ. ಚಾಲುಕ್ಯ ಅರಸರ ಕಾಲದಲ್ಲಿ ನವೀಕರಣ ಗೊಂಡ ಈ ದೇವಾಲಯ ಅಪೂರ್ವ ಶಿಲ್ಪಕಲೆಯಿಂದ ಗಮನ ಸೆಳೆಯುತ್ತದೆ. ದೇವಸ್ಥಾನದ ಅಂತರಾಳದ ಛಾವಣಿಯಲ್ಲಿ ಕಲ್ಯಾಣ ಚಾಲುಕ್ಯ ಕಾಲದ ಶಾಸನ ಕಲ್ಲಿನ ಶಿರೋಭಾಗದಲ್ಲಿ ಆನೆಯ ಸುಂದರ ಕೆತ್ತನೆ ಇದೆ.

ಬಾಣ ವಂಶಕ್ಕೆ ಸೇರಿದ ಮಹಾಮಂಡಳೇಶ್ವರರ ರಾಜಧಾನಿ ಯಾಗಿದ್ದ ಕಾಳಗಿಯಲ್ಲಿ ಹನ್ನೊಂದು ಶಾಸನಗಳು ದೊರೆತಿವೆ. ಈ ಊರಿನಲ್ಲಿ ನೂರೊಂದು ದೇವಸ್ಥಾನಗಳಿದ್ದುವು ಎನ್ನಲಾಗಿದೆ. ಸೋಮೇಶ್ವರ, ಬಿಬ್ಬೇಶ್ವರ, ಜಯಲಿಂಗೇಶ್ವರ, ಗೊಂಕೇಶ್ವರ ದೇವಸ್ಥಾನಗಳ ಉಲ್ಲೇಖ ಶಾಸನಗಳಲ್ಲಿದೆ. ಬಹುತೇಕ ಎಲ್ಲ ಶಾಸನಗಳು ದಾನಪತ್ರಗಳು. ದೇವಸ್ಥಾನಗಳಿಗೆ ಸುಮಾರು 600 ಹೆಚ್ಚು ಭೂಮಿಯನ್ನು ಉಂಬಳಿ ಬಿಟ್ಟ ಮಾಹಿತಿ ಎಕರೆಗಿಂತ ಇವುಗಳಲ್ಲಿದೆ. ಈ ದೇವಸ್ಥಾನದ ಬಲ ಭಾಗದಲ್ಲಿ ಹದಿಮೂರನೇ ಶತಮಾನದ ಸೂರ್ಯನಾರಾಯಣ ಗುಡಿ ಶಿಥಿಲಾವಸ್ಥೆ ತಲುಪಿದೆ.


ಮೂರು ಪ್ರತ್ಯೇಕ ಗರ್ಭಗೃಹಗಳು, ತೆರೆದ ಅಂತರಾಳ, ನಡುವೆ ನವರಂಗ, ಪೂರ್ವಕ್ಕೆ ಮುಖಮಂಟಪ ಇರುವ ಭವ್ಯ ತ್ರಿಕೂಟ ದೇವಾಲಯ ಇದು. ಸಪ್ತ ಶಾಖಾ ಅಲಂಕೃತ ಚಿತ್ತಾಕರ್ಷಕ ಬಾಗಿಲವಾಡಗಳು ಬೀಳುವ ಸ್ಥಿತಿಯಲ್ಲಿವೆ. ಪ್ರಧಾನ ಗರ್ಭಗುಡಿಯ ಅಕ್ಕಪಕ್ಕದಲ್ಲಿರುವ ಬಲಹರಿ ಮತ್ತು ಎಡಹರಿ ಲಿಂಗಗಳೂ ಧ್ವಂಸವಾಗಿವೆ. ಹೊರ ಆವರಣದಲ್ಲಿ ವಿಷ್ಣು, ಬ್ರಹ್ಮ, ಶಿವ, ಭೈರವ, ನಟರಾಜ, ಉಮಾಮಹೇಶ್ವರ, ಮಹಿಷಮರ್ದಿನಿ, ಗಣಪತಿ, ವಿವಿಧ ಭಂಗಿಯಲ್ಲಿ ನಿಂತ ಶಿಲಾಬಾಲಿಕೆಯರ ಸುಂದರ ಶಿಲ್ಪಗಳು ಹಾಗೂ ವೈವಿಧ್ಯಮಯ ಕಿರು ಶಿಖರಗಳಿಂದ ಅಲಂಕೃತಗೊಂಡಿವೆ. ಆರನೇ ವಿಕ್ರಮಾದಿತ್ಯನ ಕಾಲದ ಅಪೂರ್ವ ರಚನೆ ಎನ್ನಲಾದ ಈ ದೇವಾಲಯದ ಛತ್ತುಗಳು ಕೂಡ ವಿಶಿಷ್ಟ ಅಲಂಕಾರಿಕೆ ಹೊಂದಿವೆ.

ಪುಷ್ಕರಣಿಗೆ ಹೊಂದಿಕೊಂಡು ನಕ್ಷತ್ರಾಕಾರದ ತಳ ವಿನ್ಯಾಸದ ಈಶ್ವರ–ನರಸಿಂಹ ದೇವಾಲಯ, ಗರ್ಭಗೃಹ ಮುಖ ಮಂಟಪವನ್ನಷ್ಟೇ ಹೊಂದಿರುವ ಸಹಸ್ರಲಿಂಗ ನೇತ್ರೇಶ್ವರ ಗುಡಿ ಇದೆ. ಅಂತರಾಳದ ಛತ್ತಲ್ಲಿ ನಕ್ಷತ್ರಾಕಾರದ ಛತ್ರಿ ವಿಶಿಷ್ಟವಾಗಿದೆ. ಶೈವ ದ್ವಾರಪಾಲಕರು, ರತಿ, ಮನ್ಮಥರ ಬಿಡಿ ವಿಗ್ರಹಗಳು ಅನಾಥ ವಾಗಿ ಬಿದ್ದಿವೆ. ಊರಿನೊಳಗೆ ಬನಶಂಕರಿ ದೇವಸ್ಥಾನದ ಎದುರು ತ್ರಿಕೂಟ ಬಸದಿ ಇದೆ. ಪಾರ್ಶ್ವನಾಥ ಬಸದಿಯ ಪ್ರಧಾನ ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ಪದ್ಮಾಸೀನ ಶಿಲ್ಪ ವಿದೆ. ಇಡೀ ಬಸದಿ ಆವರಣ ಕಸ ಚೆಲ್ಲುವ ತೊಟ್ಟಿಯಾಗಿ ಮಾರ್ಪಟ್ಟಿದೆ. ಮುಖಮಂಟಪದ ಕಕ್ಷಾಸನದ ಮುಂದೆ ಚಂದ್ರ ಶಿಲೆಯಿದೆ. ಊರ ಹೊರಗಿನ ಹನುಮಂತನ ಗುಡಿಯಲ್ಲಿ ಹತ್ತಡಿ ಎತ್ತರ, ಆರಡಿ ಅಗಲದ ಗಣಪತಿಯ ಶಿಲ್ಪವಿದೆ. ಗುಡಿಯ ಮುಂದೆ ಪೀಠಸ್ಥ ಚತುರ್ಮುಖ ಬ್ರಹ್ಮನ ಶಿಲ್ಪ ಅಪರೂಪದ್ದು. ಅದನ್ನು ಬಿಂಬಿಸುವ ಅಪೂರ್ವ ಲೋಹದ ಫಲಕವೂ ಇಲ್ಲಿ ಸಿಕ್ಕಿತ್ತು. ಅದೀಗ ಗುಲಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿದೆ. ಕಾಳಗಿಯ ಸುತ್ತಮುತ್ತಲ ಭರತನೂರು, ರಾಜಾ ಪುರಗಳಲ್ಲೂ ಇಂಥದ್ದೇ ಶಿಲ್ಪವೈಭವ ನೋಡಲು ಸಿಗುತ್ತದೆ.

(ಯುಬಿ)



ಕಾಳಪ್ಪ ನಾಗಲಿಂಗ ವಿಶ್ವಕರ್ಮ: ಕಾಷ್ಠಶಿಲ್ಪಿ. ಗುಲಬರ್ಗಾದ ಸುತ್ತಮುತ್ತಲಿನ ಸ್ಥಳಗಳಲ್ಲಿ ಮರದ ಕೆತ್ತನೆ, ಶಿಲ್ಪಗಳಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಬಯಲು ಸೀಮೆಯ ಸತ್ವವನ್ನು ಮೈಗೂಡಿಸಿಕೊಂಡ ಈ ಪರಂಪರೆಯು ಆ ಪ್ರದೇಶದ ಜೀವನಾಡಿಯೂ ಆಗಿದೆ. ಅದ ರಲ್ಲಿಯೂ ಬಾಗಿಲುಗಳಿಗೆ ವಿಶೇಷವಾಗಿ ಜೋಡಿಸುವ ಕುದುರೆಮುಖದ ಜೋಡಿ ಶಿಲ್ಪಗಳು ಮನೆಗಳ ಅಂದ




ಕೆತ್ತನೆಯ ಶಿಲ್ಪ

ವನ್ನೇ ಹೆಚ್ಚಿಸುತ್ತವೆ. ಈ ಕಲೆಯಲ್ಲಿ ಸಿದ್ಧಹಸ್ತರು ಕಾಳಪ್ಪ. ಗುಲ್ಬರ್ಗ ಜಿಲ್ಲೆ ಜೇವರ್ಗಿಯ ನಾಗಲಿಂಗಪ್ಪ ಮತ್ತು ಶೇಷಮ್ಮ ದಂಪತಿಗಳ ಪುತ್ರರು. 1949 ಜುಲೈ 8ರಂದು ಕುಕನೂರಿನಲ್ಲಿ ಜನಿಸಿದರು. ಮೊದಲು ಸ್ವತಃ ಮಾವನವರಾದ ಸಗರದ ಮಾರ್ತಾಂಡಪ್ಪ ಅವರಲ್ಲಿ ಕಾಷ್ಠ ಶಿಲ್ಪದ ಅಭ್ಯಾಸ ಮಾಡಿದರು. ಜೊತೆಗೆ ಸಂಗೀತ ಶಾಸ್ತ್ರ ಹಾಗೂ ಜ್ಯೋತಿಷ ಶಾಸ್ತ್ರ ಕ್ಷೇತ್ರಗಳಲ್ಲೂ ಪ್ರಾವೀಣ್ಯತೆಯನ್ನು ಗಳಿಸಿದ್ದಾರೆ.

ನಿರಂತರವಾಗಿ ಕಾಷ್ಠ ಶಿಲ್ಪಗಳ ಮೂಲಕ ಆ ಪ್ರದೇಶದಲ್ಲಿ ಕಲಾವಂತಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಇವರದು, ಸರಳ ವ್ಯಕ್ತಿತ್ವ ಇವರ ಕೃತಿಗಳು ಜೇವರ್ಗಿ, ಕುಕನೂರು, ಸಾತಖೇಡ, ಸಿಂಧಗಿ, ಇಂಡಿ, ಕಾಚಾಪುರ, ಹಿಪ್ಪರಗಿ, ಕಾಕಹಳ್ಳಿ, ಚೆನ್ನೂರು, ಔರಾದ ಗಳಂತಹ ಗ್ರಾಮೀಣ ಪ್ರದೇಶದಲ್ಲಿ ಮಾತ್ರವೇ ಅಲ್ಲ, ರಾಯಚೂರು, ಬೆಂಗಳೂರುಗಳಂತಹ ನಗರಪ್ರದೇಶ ಗಳಲ್ಲಿಯೂ ವಿರಾಜಮಾನವಾಗಿದೆ.

ಕಾಷ್ಠಶಿಲ್ಪಗಳ ಕ್ಷೇತ್ರದಲ್ಲಿ ನಿರಂತರವಾಗಿ ಕ್ರಿಯಾಶೀಲ ವಾಗಿರುವ ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2008ರ ಸಾಲಿನ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

(ಸಿಎಸ್‌ಕೆ)



ಕಾಳಪ್ಪ ಪತ್ತಾರ: ಅಭಿಜಾತ ಕಲಾವಿದರು. ತಳಕಲ್ಲಿನ ಬಡ ಅಕ್ಕಸಾಲಿಗರ ಮನೆತನದಲ್ಲಿ 1916ರಲ್ಲಿ ಜನಿಸಿದರು. ಇವರ ಪ್ರತಿಭೆ ಸೀಮಿತವಾದುದಲ್ಲ. ಶಾಲೆ ಕಾಲೇಜುಗಳ ಕಟ್ಟೆ ಯನ್ನೇರದಿದ್ದರೂ ಸ್ವಪ್ರಯತ್ನ ದಿಂದ ಹುಟ್ಟು ಪ್ರತಿಭೆಯನ್ನು ವಿಕಾಸಗೊಳಿಸಿ ಪ್ರಬುದ್ಧ ಕಲಾವಿದರಾಗಿ ರೂಪು ಗೊಂಡರು. ಖ್ಯಾತ ತಬಲಾ ವಿದ್ವಾಂಸ ತಳಕಲ್ಲಿನ ಖಾನ ಗೌಡರಲ್ಲಿ ತಬಲಾ ಕಲಿತರು. ತಮ್ಮೆಲ್ಲ ಕಲೆಯನ್ನು ಇವರಿಗೆ ಧಾರೆಯೆರೆದ ಖಾನಗೌಡರು ಶಿಷ್ಯನ ಅತ್ಯದ್ಭುತ ತಬಲಾ ವಾದನ ಚಾತುರ್ಯಕ್ಕೆ ತಾವೇ ಅಪ್ರತಿಭರಾಗುತ್ತಿದ್ದರು. 'ಚಿತ್ರಕಲೆ, ಮೂರ್ತಿಕಲೆ, ಸಂಗೀತ, ರಂಗಭೂಮಿ ಮುಂತಾದ ಲಲಿತಕಲೆಗಳಲ್ಲಿ, ಪ್ರಾವೀಣ್ಯತೆ ಪಡೆದ ಇವರದು ನಿಜವಾದ ಅರ್ಥದಲ್ಲಿ 'ಬಹು ಮುಖ ಪ್ರತಿಭೆಯ ವ್ಯಕ್ತಿತ್ವ' ವೆಂದು ಹಿರಿಯ ಮಿತ್ರ ಬಂ.ರಂ. ಸರಮೊಕದ್ದಮ್ ಉದ್ಗರಿಸಿದ್ದಾರೆ. ತಬಲಾದಲ್ಲಿ 'ಮಾಸ್ಟರ್' ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಸಂಗೀತ ಕ್ಷೇತ್ರದ ದಿಗ್ಗಜಗಳಾದ ಪಂಡಿತ್ ಭೀಮಸೇನ್ ಜೋಶಿ, ಮಲ್ಲಿಕಾರ್ಜುನ ಮನಸೂರ್, ಗಂಗೂ ಬಾಯಿ ಹಾನಗಲ್, ಜಸರಾಜ್, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ಕುಮಾರ ಗಂಧರ್ವ, ಪಂಚಾಕ್ಷರಿ ಗವಾಯಿಗಳು ಮೊದಲಾದವರ ಸಂಗೀತ ಕಚೇರಿಗಳಲ್ಲಿ ತಬಲಾ ಸಾಥಿ ನೀಡಿ ಪ್ರಶಂಸೆ ಗಳಿಸಿದ್ದಾರೆ. ಇವರ ತಬಲಾ ವಾದನ ಮೋಡಿಗೆ ಮರುಳಾದ ಮಲ್ಲಿಕಾರ್ಜುನ ಮನಸೂರ, ಸಿದ್ಧರಾಮ ಜಂಬಲದಿನ್ನಿವರಂತೂ ಕೊಪ್ಪಳದ ಸುತ್ತಮುತ್ತ ಯಾವುದೇ ಸ್ಥಳದಲ್ಲಿ ತಮ್ಮ ಕಚೇರಿ ನಡೆದರೂ ತಬಲಾ ಸಾಥಿಗೆ ಕಾಳಪ್ಪ ನವರನ್ನೇ ಕರೆಸಲು ಒತ್ತಾಯಿಸು ತ್ತಿದ್ದರು. ಸುಪ್ರಸಿದ್ಧ ಸರೋದ್ ವಾದಕ ರಾಜೀವ್ ತಾರಾನಾಥ, ಧಾರವಾಡದ ಪ್ರಬುದ್ಧ ತಬಲಾ ಕಲಾವಿದ ಟಿ.ಕೆ. ದೇಸಾಯಿ, ಕುಡುತಿನಿಯ ವಿರೂಪಾಕ್ಷಪ್ಪ ಅಕ್ಕಿ ಇವರ ಶಿಷ್ಯವರ್ಗದಲ್ಲಿ ಪ್ರಮುಖರು. ಆಯುರ್ವೇದ ಪಂಡಿತ ತಾರಾನಾಥರು, ಸಂಗೀತಜ್ಞ ಗುರುರಾವ್ ದೇಶಪಾಂಡೆಯವರು ಕಾಳಪ್ಪನವರ ಪ್ರತಿಭೆಯನ್ನು ಗುರುತಿಸಿದ್ದರು.

1934ರಲ್ಲಿ ಹರಿಜನ ನಿಧಿಸಂಗ್ರಹ ಸಂದರ್ಭದಲ್ಲಿ ಗಾಂಧೀಜಿ ಭಾನಾಪುರ ರೈಲು ನಿಲ್ದಾಣದಲ್ಲಿ 90 ನಿಮಿಷ ತಂಗಿದ್ದರು. ಕಾಳಪ್ಪನವರು ತಾವು ರಚಿಸಿದ ಗಾಂಧೀಜಿಯವರ ಭಾವಚಿತ್ರ ವನ್ನು ಅವರಿಗೆ ಅರ್ಪಿಸಿದರು. ಅಪಾರವಾಗಿ ಮೆಚ್ಚಿಕೊಂಡ ಮಹಾತ್ಮರು ಅದನ್ನು ಹರಾಜು ಹಾಕಿ ಬಂದ ಹಣವನ್ನು ಕಾಳಪ್ಪ ನವರ ಹೆಸರಿನಲ್ಲಿ ನಿಧಿಗೆ ಸ್ವೀಕರಿಸಿದರು. ಇವರು ಬರೆದ ಗವಿಮಠದ ಸ್ವಾಮಿಗಳು, ಶಿಶುನಾಳ ಶರೀಫರು, ಅಜ್ಜಾರಾಮರು

ಮೊದಲಾದ ಮಹಮಹಿಮರುಗಳ, ಹಲವು ಕುಟುಂಬಗಳ ಹಿರಿಯರ ಕಪ್ಪು ಬಿಳುಪು ಇಲ್ಲವೇ ವರ್ಣಚಿತ್ರಗಳನ್ನು ಚಿನ್ನ-ಬೆಳ್ಳಿ-ತಾಮ್ರ ವಿವಿಧ ಲೋಹಗಳ ಸುಂದರ ಕೆತ್ತನೆಯ ಮೂರ್ತಿಗಳನ್ನು ಕೊಪ್ಪಳ, ಯಲಬುರ್ಗಿ, ಗದಗ, ಗಂಗಾವತಿ, ಹೊಸಪೇಟೆ, ಬಳ್ಳಾರಿ ತಾಲ್ಲೂಕುಗಳ ಬಹುತೇಕ ಹಳ್ಳಿ ಪಟ್ಟಣಗಳ ಅನೇಕ ಮನೆಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಕಪಟ-ವಂಚನೆ ಅರಿಯದ ಪ್ರಾಮಾಣಿಕತೆಯ ಸರಳಜೀವಿ ಇವರು ಹಳ್ಳಿಯ ಮಣ್ಣಿನಲ್ಲಿ ಅರಳಿದ 'ಕಲಾಕುಸುಮ'. ಕಲೆಯೇ ನಿತ್ಯದ ಬಾಳ ಬುತ್ತಿಯಾಗಿದ್ದ ಇವರು ಜೀವನದುದ್ದಕ್ಕೂ ಅನುಭವಿಸಿದ್ದು ನೋವು ಮಾತ್ರ. ಅಗಸ್ಟ 5ರಂದು 1971ರಂದು ನಿಧನ ಹೊಂದಿದರು.

(ಓಕೆಜಿ)

ಕಿ

ಕಿನ್ನಾಳ ಕಲೆ: ಕುಶಲ ಕರ್ಮಿಗಳ ನೆಲೆಬೀಡು ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮ. ಈಗ ಸುಮಾರು 25 ಜನ ಕುಶಲಕರ್ಮಿಗಳ ಪ್ರಯತ್ನದಿಂದ ದೇಶದ ಜನರನ್ನು ಆಕರ್ಷಿಸಿದೆ. ಇಲ್ಲಿ ವಿಜಯನಗರ ಅರಸರ ಕಾಲದಿಂದಲೂ ಕಲಾವಿದರು ತಮ್ಮ ಸೃಜನಶೀಲ ಪ್ರತಿಭೆಯನ್ನು ಪ್ರಕಟಗೊಳಿಸುತ್ತ ಬಂದಿದ್ದಾರೆ.



ಸೂರ್ಯ ರಥದ ಸಾರಥಿಯಾಗಿರುವ ಬ್ರಹ್ಮ, ವಿಷ್ಣು, ಮಹೇಶ್ವರ

ದೇವರ ಪಲ್ಲಕ್ಕಿ, ಮಂಟಪ, ಬೊಂಬೆಗಳ ಕೆತ್ತನೆಗೆಲಸ, ಪೀಠೋಪಕರಣಗಳು, ಷೋಕೇಸ್, ಒಡವೆ ಪೆಟ್ಟಿಗೆ, ಮತ್ತು ಕಿನ್ನಾಳದ 'ಆಟಿಕೆಗಳು' ತುಂಬ ಪ್ರಸಿದ್ಧವಾಗಿವೆ. ಮೊದಲು ಗ್ರಾಮ ದೇವತೆಗಳಿಗೆ ಬಣ್ಣದ ಲೇಪನ ಮಾಡುತ್ತಿದ್ದ ಈ ಕಲಾವಿದರು ಕಾಲಕ್ಕೆ ತಕ್ಕಂತೆ ತಮ್ಮ ಕಲಾಕೃತಿಗಳಲ್ಲಿ ವೈವಿಧ್ಯತೆ ಯನ್ನು ತಂದುಕೊಂಡಿದ್ದಾರೆ.

ಕಟ್ಟಿಗೆಯ ತುಂಡು, ಚಹಾಪೆಟ್ಟಿಗೆ, ತಟ್ಟಿನಗುಂಜು, ಮಣ್ಣು, ಕಟ್ಟಿಗೆಯ ಪಾಟಿ, ಹುಣಸೆಯ ಸರಿ ಮುಂತಾದ ವಸ್ತುಗಳನ್ನು ಬಳಸಿ ಕಲಾಕೃತಿಗಳನ್ನು ನಿರ್ಮಿಸುತ್ತಾರೆ. ಈ ಕಲಾಕೃತಿಗಳಿಗೆ ಬಳಸುವ ಬಣ್ಣಗಳು ಎರಡು ರೀತಿಯಲ್ಲಿವೆ. ಒಂದು ಬಾಳಪ್ಪನ ಬಣ್ಣ ಇನ್ನೊಂದು ಲಜಾವರ ಬಣ್ಣ.

ಬಾಳಪ್ಪನ ಬಣ್ಣ: ಇದು ಬಳಪದ ಬಣ್ಣವಾಗಿದ್ದು ಜನಪದರ ಬಾಯಲ್ಲಿ ಬಾಳಪ್ಪನ ಬಣ್ಣವಾಗಿದೆ. ಬಳಪದ ಕಲ್ಲನ್ನು ತಂದು ನೀರಿನಲ್ಲಿ ನೆನೆಯಿಟ್ಟು ಅರೆದು ಇಲ್ಲವೆ ತೇಯ್ದು ಅಂಚು ಹಾಕಿ ಸೋಸುತ್ತಾರೆ. ಹೀಗೆ ಸೋಸಿದ ದ್ರಾವಣವನ್ನು ಆಟಿಕೆ ವಸ್ತುಗಳಿಗೆ ಲೇಪಿಸುತ್ತಾರೆ.

ಲಜಾವರ ಬಣ್ಣ: ಇದನ್ನು ಬಣ್ಣಗಳ ರಾಜನೆಂದು ಕರೆಯುತ್ತಾರೆ. ಕಿನ್ನಾಳ ಕಲಾವಿದರು ಈ ಬಣ್ಣಕ್ಕೆ ವಿಶೇಷ ಮಹತ್ವವನ್ನು ಕೊಟ್ಟಿದ್ದಾರೆ. ಕುಟ್ಟಿದ ತವರಕ್ಕೆ ಮೀನಸರಿ ಹಾಕಿ ಹದಬರುವಂತೆ ಮಾಡುತ್ತಾರೆ. ಆಮೇಲೆ ನೀರಿನಲ್ಲಿ ಕೆಲವು ಸಮಯ ನೆನೆಯಿಟ್ಟು ನಂತರ ಈ ದ್ರಾವಣವನ್ನು ಸೇರಿಸುತ್ತಾರೆ. ಹೀಗೆ ಸಿದ್ಧವಾದುದೆ ಲಜಾವರ ಬಣ್ಣ. ಕಿನ್ನಾಳದ ಕಲಾವಿದರು ಗೊಂಬೆಗಳನ್ನು ಮಣ್ಣಿನಲ್ಲಿ ಮತ್ತು ಕಟ್ಟಿಗೆ ಹಾಗೂ ಮಣ್ಣುಗಳೆರಡನ್ನು ಬಳಸಿ ಗೊಂಬೆಗಳನ್ನು ತಯಾರಿಸುತ್ತಾರೆ. ಕಿನ್ನಾಳ ಈ ಜನಪದ



ಕಿನ್ನಾಳ ಕಲೆ

ಚಿತ್ರಕಾರರು ಹಿಂದೆ ದೇವಾಲಯಗಳಲ್ಲಿ ಭಿತ್ತಿಚಿತ್ರಗಳನ್ನು ನಿರ್ಮಿಸುತ್ತಿದ್ದುದಾಗಿ ತಿಳಿಯುತ್ತದೆ. ತೊಟ್ಟಿಲು, ಆನೆ ಕುದುರೆ ಯಂತಹ ಮಕ್ಕಳ ಆಟಿಕೆಯ ವಸ್ತುಗಳನ್ನು ಮಾಡುವಲ್ಲಿ ಇವರು ಅತ್ಯಂತ ಪ್ರವೀಣರೆನಿಸಿದ್ದಾರೆ. (ಎಸ್‌ಸಿಪಿ)

ಕಿರುರೂಪ ಚಿತ್ರಗಳು: ಅತ್ಯಂತ ಚಿಕ್ಕದಾದ ಸ್ಥಳದಲ್ಲಿ ವಸ್ತುಗಳನ್ನು ಮತ್ತು ವ್ಯಕ್ತಿಗಳನ್ನು ಅತ್ಯಂತ ಚಿಕ್ಕದಾಗಿ, ಸಂಯೋಜಿಸಿ, ವರ್ಣಗಳ ಹೊಂದಾಣಿಕೆಯನ್ನು ಮಾಡುತ್ತ, ಶಕ್ತಿಯುತವಾಗಿ ರೇಖೆಗಳನ್ನು ಸೂಕ್ಷ್ಮವಾಗಿ ಬಳಸುವ ಕಲೆ. ಗೋಡೆಗಳ ಮೇಲೆ ಭಿತ್ತಿಚಿತ್ರಗಳನ್ನು ದೊಡ್ಡದಾಗಿ ಚಿತ್ರಿಸಿದ್ದು, ಅಲ್ಲಿ ಕೈಗಳಿಗಿರುವ ಸ್ವಾತಂತ್ರ್ಯ ವ್ಯಾಪ್ತಿ ಕಿರುರೂಪಗಳಿಗೆ ಎಂದು ದೊರೆಯುವುದಿಲ್ಲ.



ಮೊಗಲ ರಾಣಿ (ಕಿರುರೂಪ ಚಿತ್ರ)

ಹಸ್ತಪ್ರತಿ ಚಿತ್ರಗಳು: ಹಸ್ತಪ್ರತಿಗಳು ನಮ್ಮ ಪ್ರಾಚೀನ ಜನಾಂಗದ ಅಭಿವ್ಯಕ್ತಿಯ ಅಮೂಲ್ಯ ಸಂಪತ್ತಾಗಿವೆ. ಇವುಗಳ ಅಧ್ಯಯನವೆಂದರೆ ನಮ್ಮ ಪೂರ್ವಜರ ಸಾಂಸ್ಕೃತಿಕ ಜೀವನದ ಅಧ್ಯಯನವೇ ಆಗಿದೆ. ಕರ್ನಾಟಕದಲ್ಲಿ ಹಸ್ತಪ್ರತಿಗಳ ಸಂಖ್ಯೆ ಅಪಾರವಾಗಿದ್ದು, ಈಗ ಸಿಕ್ಕಿರುವ ಹಸ್ತಪ್ರತಿಗಳಲ್ಲಿ ರೇಖಾಚಿತ್ರ ಮತ್ತು ವರ್ಣಚಿತ್ರ ಹೊಂದಿದ ಹಸ್ತಪ್ರತಿಗಳು ಬಹುಸಂಖ್ಯೆ ಯಲ್ಲಿವೆ. ಜೈನ, ಬೌದ್ಧ, ವೀರಶೈವ, ವೈಷ್ಣವ, ಪಾರ್ಷಿ ಹೀಗೆ ನಮ್ಮ ನಾಡಿನ ಚಿತ್ರಕಲೆಯ ಇತಿಹಾಸವನ್ನು ಪುನರ್‌ರಚಿಸುವ ಸಾಂಸ್ಕೃತಿಕ ಸಂಪತ್ತನ್ನು ಎತ್ತಿಹಿಡಿಯುವ ಈ ಹಸ್ತಪ್ರತಿಗಳು ಅತ್ಯಂತ ಮಹತ್ವದ ಕಲಾವಸ್ತುಗಳಾಗಿವೆ.

ಕರ್ನಾಟಕದ ಧವಳಾ ಗ್ರಂಥಗಳಲ್ಲಿಯ ಕಿರುರೂಪ ಚಿತ್ರ ಗಳ ಸಂಪ್ರದಾಯವನ್ನೇ ದೇಶದ ಇತರೆ ಓಲೆಗರಿ ಗ್ರಂಥ ಗಳಲ್ಲಿಯೂ ಮುಂದವರೆಸಿಕೊಂಡು ಬಂದಿದ್ದು ಒಂದೆಡೆ ಆದರೆ, ಭಿತ್ತಿ ಚಿತ್ರಗಳಲ್ಲಿ ಕಿರುರೂಪ ಚಿತ್ರಗಳ ಶೈಲಿ, ತಂತ್ರ, ವಿನ್ಯಾಸಗಳನ್ನು ಅಳವಡಿಸಿಕೊಂಡು, ವಿಜಯನಗರ ಭಿತ್ತಿ ಚಿತ್ರಗಳು ಈ ನಾಡಿನ ಭಿತ್ತಿ ಚಿತ್ರಗಳಿಗೆ ಹೊಸ ಸಂಪ್ರದಾಯವನ್ನೇ ಹಾಕಿಕೊಟ್ಟಿತು.

ದಖ್ಖನ್ ಕಿರುರೂಪ ಚಿತ್ರಗಳು: ದಖ್ಖನ್‌ದ ಬೀದರ್, ಗುಲಬರ್ಗಾ, ಗೊಲ್ಕೊಂಡ, ಅಹಮದ್ ನಗರ, ಬಿಜಾಪುರದ ಅರಸರು ಕ್ರಿ.ಶ. 1565ರಲ್ಲಿ (ಸುಲ್ತಾನರೆಲ್ಲಾ) ಒಂದು ಗೂಡಿ ವಿಜಯನಗರ ಅರಸರನ್ನು ಸೋಲಿಸಿದ ಅನಂತರ, ಪರ್ಷಿಯನ್ ಮೂಲದ ಚಿತ್ರ, ಸಂಗೀತ, ವಾಸ್ತು ನಿರ್ಮಾಣಗಳಿಗೆ ಪ್ರೋತ್ಸಾಹ ನೀಡಿದ ಸುಲ್ತಾನರು, ವಿಜಯನಗರ ಕಲಾಶೈಲಿಯ ಹಿಂದೂ ಕಲಾವಿದರನ್ನು ಆ ಸ್ಥಾನದಲ್ಲಿರಿಸಿಕೊಂಡು, ದಖ್ಖನ್ ಚಿತ್ರಗಳನ್ನು ರಚಿಸಲು ಪ್ರೇರೇಪಿಸಿದರು. ಇದರಿಂದಾಗಿ ಭಾರತದ ರಾಜಕೀಯ, ಸಾಮಾಜಿಕ ಮತ್ತು ಅಧ್ಯಾತ್ಮಿಕ ವಿಷಯಗಳು, ಇಲ್ಲಿಯ ಉಡುಗೆ ತೊಡುಗೆಗಳು, ಪರ್ಷಿಯನ್ ಕಲಾ ತಂತ್ರ ಗಳನ್ನೊಳಗೊಂಡ ಚಿತ್ರಗಳು ದಖ್ಖನ್ ಚಿತ್ರಗಳಾಗಿ ಹೊರ ಹೊಮ್ಮಿದವು. ಈ ಸುಲ್ತಾನರ ಅವಧಿಯಲ್ಲಿ ಚಿತ್ರಗಳಿಂದ ಅಲಂಕೃತಗೊಂಡ ಕಾಗದದ ಹಸ್ತಪ್ರತಿ ಗ್ರಂಥಗಳು ಹೆಚ್ಚಾಗಿ ರಚನೆಗೊಂಡವು.

ಈ ದಖ್ಖನ್ ಕಿರುರೂಪ ಚಿತ್ರಗಳು ಚಿತ್ರ, ಸಂಗೀತ, ಕಾವ್ಯಗಳ ಸಂಗಮವಾಗಿ ರಚನೆಗೊಂಡ ದಖ್ಖನ್ ರಾಗಮಾಲಾ ಚಿತ್ರಗಳು, ಭಾರತೀಯ ಕಲಾ ಇತಿಹಾಸದಲ್ಲಿ ಪ್ರಥಮಬಾರಿಗೆ ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದ ಶ್ರೇಯಸ್ಸು ದಖ್ಖನ ಕಲಾ ವಿದರಿಗೆ ಸಲ್ಲುತ್ತದೆ. ಈ ಸೂಕ್ಷ್ಮ ಪ್ರಮಾಣದ ವರ್ಣಚಿತ್ರಕಲೆ ಚಿಕ್ಕದಾದರೂ, ಜಗತ್ತಿನಾದ್ಯಂತ ರಸಿಕರನ್ನು ರೋಮಾಂಚನ ಗೊಳಿಸಿದ ರಮ್ಯ ಅಧ್ಯಾಯ 20ನೆಯ ಶತಮಾನದವರೆಗೂ ಭಾರತದ ದಕ್ಷಿಣದಿಂದ ಉತ್ತರಕ್ಕೂ ಬೆಳೆದುಬಂದಿತು.

(ಬಿಎಂಪಿ)

ಕಿಶೋರ ಹಿರೇಮಠ: ಚಿತ್ರಕಲಾವಿದ. ಕಲಬುರ್ಗಿಯಿಂದ ವಲಸೆ ಹೋದವರ ಸಾಲಿನಲ್ಲಿ ಪ್ರಬುದ್ಧ ಕಲಾವಿದರಾಗಿ, ಕಲಾ ಉಪನ್ಯಾಸಕರಾಗಿ ಕಲಾಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಇವರು ಮೂಲತಃ ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದವರು. ಸ್ವಂತ ಊರಲ್ಲೇ ಪ್ರೌಢ ಶಿಕ್ಷಣ ಮುಗಿಸಿ, ಕಲೆಯ ವ್ಯಾಮೋಹಕ್ಕೊಳಗಾಗಿ, ಕಲಬುರ್ಗಿಯ ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆ ಸೇರಿದರು. ಖ್ಯಾತ ಕಲಾವಿದ



ವಿ.ಜಿ. ಅಂದಾನಿ, ಎಂ.ಬಿ. ಲೋಹಾರ್ ಅವರ ಮಾರ್ಗ ದರ್ಶನ ಹಾಗೂ ಸತತ ಪರಿ ಶ್ರಮದಿಂದ ಪ್ರತಿಭಾವಂತ ಕಲಾ ವಿದರಾಗಿ ರೂಪುಗೊಳ್ಳಲು ಸಹಕಾರಿಯಾಯಿತು.

ಮುಂದೇನು ಎಂಬ ಯೋಜನೆಯಲ್ಲಿರುವಾಗಲೇ, ತುಮಕೂರಿನ ರವೀಂದ್ರ ಕಲಾ ಶಾಲೆಯಿಂದ ಆಹ್ವಾನ ಬಂದಿತು. ದೂರದ ಊರಿಗೆ ಒಲ್ಲದ ಮನಸ್ಸಿನಿಂದಲೇ ತೆರಳಿದ ಇವರು, ಮಕ್ಕಳಿಗೆ ತರಬೇತಿ ನೀಡುತ್ತಾ ಬಹು ಬೇಗ ಅಲ್ಲಿನ ವಾತಾವರಣಕ್ಕೆ ಹೊಂದಿ ಕೊಂಡರು. ಇಂದಿಗೂ ಅಲ್ಲಿ ಯುವ ಕಲಾವಿದರನ್ನು ರೂಪಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಕಲಬುರ್ಗಿಯಲ್ಲಿ ಕಲಾವಿದರ ಕೊರತೆ ಮೊದಲಿ ನಿಂದಲೂ ಇಲ್ಲ ಆದರೆ ಅವರಿಗೆ ಇಲ್ಲಿ ತಮ್ಮ ಬದುಕನ್ನು ಸುಂದರ ಗೊಳಿಸಲು, ರೂಪಿಸಿಕೊಳ್ಳಲು ಅಥವಾ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಪರಿಸರದ ಕೊರತೆ ಇದ್ದೇ ಇದೆ. ಅಂತೆಯೇ ಚಂದ್ರಶೇಖರ, ಶಾಂತಲಿಂಗಪ್ಪಾ ಪಾಟೀಲ,



'ಹಾರ್ಸ್ ವಿಥ್ ವುಮನ್' ತೈಲವರ್ಣ

ಎಸ್.ಎಂ. ಪಂಡಿತ ಅವರಂತಹ ಅನೇಕ ಪ್ರಾಖ್ಯಾತ ಕಲಾ ವಿದರು, ಕಲಬುರ್ಗಿಯಲ್ಲೇ ಹುಟ್ಟಿದ ಕಲಾವಿದರಾಗಿದ್ದರೂ, ಅವರು ಬೆಳಕಿಗೆ ಬಂದದ್ದು ದೂರದ ಮುಂಬೈ, ಹೈದ್ರಾಬಾದ ಗಳಂತಹ ಪ್ರದೇಶಕ್ಕೆ ಸೇರಿದ್ದರಿಂದ. ಅಲ್ಲೇ ತಮ್ಮ ಕಲೆಗೆ ಹೊಸ ದಿಕ್ಕನ್ನು ಕಂಡುಕೊಂಡರು. ಇವರು ಕೂಡ ಅನೇಕ ಪ್ರದರ್ಶನ ಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಕಲಾ ಪ್ರತಿಭೆಯನ್ನು ವಿವಿಧೆಡೆ ನಿರಂತರವಾಗಿ ಪ್ರದರ್ಶಿಸುತ್ತ ಬೆಳೆಯುತ್ತಿದ್ದಾರೆ.

ಬುದ್ಧ ಅಹಿಂಸೆಯನ್ನು ಬೋಧಿಸಿದ ಮಹಾನ್ ಮಾನವತಾ ವಾದಿ, ಆತನ ತತ್ವಗಳು ಎಂದಿಗೂ ನಿತ್ಯ ನೂತನವಾಗಿ ಜಗತ್ತೇ ಅಂಗೀಕರಿಸಿದೆ. ಬುದ್ಧನ ಆದರ್ಶ ತತ್ವಗಳು ಕೇವಲ ಸಾಹಿತ್ಯಿಕ ವಾಗಿ ಮೆರೆಸದೇ, ಕಲೆಯಲ್ಲಿಯೂ ಪ್ರಭಾವಶಾಲಿಯಾಗಿ ಬಳಸಬಹುದು ಎಂಬುದನ್ನು ಇವರ ಕೃತಿಗಳಲ್ಲಿ ಕಾಣಬಹುದು. ಅದೇ ರೀತಿ ಕಲಾವಿದರ ಮಾನಸಿಕ ಸ್ವಂತಿಕೆಯಿಂದ ದೊರತ ಅನೇಕ ವಿಚಾರಗಳು, ವಿಷಯಗಳು ಕ್ಯಾನ್‌ವಾಸ್‌ನಲ್ಲಿ ಅಚ್ಚಿಟಿ ಕೊಂಡು, ತಾವೊಂದು ಕಲಾಕೃತಿಗಳಾಗಿ, ಉಳಿದು ಬಿಟ್ಟಿವೆ. ತಿರುಕನ ಕನಸು, ಕನಸು–ಬದುಕು, ಇಂತಹ ಅನೇಕ ಕೃತಿಗಳು, ಸ್ತ್ರೀ ಸಂವೇದನೆಯ ಕಲ್ಪನೆಯನ್ನು ಇವರ ಕೃತಿಗಳಲ್ಲಿ ಸಾಕ್ಷಾತ್ಕಾರ ಗೊಂಡಿವೆ.

ಯುವಕರಾಗಿದ್ದಾಗಿನಿಂದಲೇ ಕಲಾಚಟುವಟಿಕೆಗಳಲ್ಲಿ ಭಾಗವಹಿಸುತ್ತ ಬಂದಿರುವ ಇವರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಕೇಂದ್ರ ಲಲಿತಕಲಾ ಅಕಾಡೆಯ ಕ್ಯಾಮಲಿನ್ ಆರ್ಟ್ ಫೌಂಡೇಶನ್, ನಾಗಪೂರ ಕಲಾಪ್ರದರ್ಶನ ಹೀಗೆ ಹಲವಾರು ಕಲಾಪ್ರದರ್ಶನ ಮತ್ತು ಕಲಾಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ರಚಿಸಿದ್ದಾರೆ. ಮತ್ತು ಪ್ರದರ್ಶಿದ್ದಾರೆ. ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಅಖಿಲ ಭಾರತ ಆರ್ಟ್ ಪ್ರದರ್ಶನ ನಾಗಪುರ ಪ್ರಶಸ್ತಿ, ಜಿಲ್ಲಾ ಮಟ್ಟದ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಭಾರತದ ಬಹುತೇಕ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ ಶ್ರೇಯಸ್ಸು ಇವರದು. ಕಲಾವಿದ ಎಲ್ಲೇ ಇರಲಿ. ಆತನ ಮೂಲ ಬೇರು, ಹುಟ್ಟಿದ ಮಣ್ಣಿನ ವಾಸನೆ ಆತನ ಕೃತಿಗಳಲ್ಲಿ ನಿರಂತರ ಎದ್ದು ಕಾಣಬೇಕು. ಅಂದಾಗ ಮಾತ್ರ ಆತನ ಕಲೆ ಮೌಲಿಕ ಎಂದು ಪರಿಗಣಿಸಲು ಸಾಧ್ಯ. ಇವರ ಪ್ರತಿಯೊಂದು ಕಲಾಕೃತಿಗಳಲ್ಲೂ ತಮ್ಮ ಗ್ರಾಮೀಣ ಹುಟ್ಟು ಹಾಗೂ ಪರಿಸರದ ವಾಸನೆ ಕಾಣಬಹುದು.

(ಎಚ್‌ವಿಎಂ)

ಕಿಳ್ಳೇಕ್ಯಾತರು: ತೊಗಲುಗೊಂಬೆ (ಚರ್ಮದ ಗೊಂಬೆ) ಆಟ ಆಡಿಸುವ ಮೂಲಕ ಗ್ರಾಮೀಣ ಜನರಿಗೆ ಮನರಂಜನೆ ಕೊಡುವ ಒಂದು ಜನಾಂಗ. ಪ್ರಾದೇಶಿಕವಾಗಿ ಇವರನ್ನು ಗೊಂಬೆರಾಮು, ಶಿಳ್ಳೆಕ್ಯಾತ, ಚೆಳ್ಳಿಕ್ಯಾತ, ಕಿಳ್ಳೆಕ್ಯಾತ, ಕಟುಬರು ಎಂಬ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಹೈದ್ರಾಬಾದ ಕರ್ನಾಟಕ ದಲ್ಲಿ ಇವರನ್ನು ಕಟುಬರು ಎಂದು ಗುರುತಿಸಲಾಗುತ್ತದೆ.

ಆಧುನಿಕ ಜೀವನ ಶೈಲಿಗೆ ಮಾರುಹೋಗಿ ತಮ್ಮ ಮೂಲ ಸಾಂಪ್ರದಾಯಿಕ ವೃತ್ತಿಗಳನ್ನು ಬಿಡುತ್ತಿರುವ, ಸಾಕಷ್ಟು ಬದಲಾವಣೆ ಹೊಂದುತ್ತಿರುವ ಆದಿವಾಸಿ ಜನಾಂಗಗಳ ಸಾಲಿಗೆ ಕಿಳ್ಳೆಕ್ಯಾತರು ಸೇರುತ್ತಾರೆ.

ಭಾರತದ ಹಲವಾರು ಜಾತಿಗಳಿಗಿರುವಂತೆ ಕಿಳ್ಳೆಕ್ಯಾತ ಜನಾಂಗದ ಉಗಮದ ಬಗ್ಗೆಯೂ ಸಹ ದಂತಕಥೆ ಇದೆ. ಬೃಹ್ಮದೇವ ಸರಸ್ವತಿಯ ಮನರಂಜನೆಯ ಸಲುವಾಗಿ ಈ ಜನಾಂಗವನ್ನು ಸೃಷ್ಟಿಮಾಡಿದನೆಂದು ಹೇಳಲಾಗುತ್ತದೆ. ಅವರ ವಂಶದ ಹೆಣ್ಣುಮಗಳೊಬ್ಬಳು ಮಹಾರಾಷ್ಟ್ರದ ಕಾಳಾಚಾರಿ ಎಂಬುವನೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಳು. ಅವಳಿಗೆ 7 ಜನ ಮಕ್ಕಳಿದ್ದರು. ಅವರಿಗೆ ಕಾಳಾಚಾರಿ ತೊಗಲುಗೊಂಬೆ ಮಾಡುವ ಮತ್ತು ಆಡಿಸುವ ವಿದ್ಯೆ ಕಲಿಸಿದನೆಂದು ಹೇಳಲಾಗುತ್ತದೆ. ಕಲಿಯುಗದ ಆರಂಭದಲ್ಲಿ ಗೊಂಬೆ ಕುಣಿಸುವ ವೃತ್ತಿ ದೇವರಿಂದಲೇ ನೇಮಕವಾಯಿತೆಂದು ಆದ್ದರಿಂದ ಅವರಿಗೆ ಕಲಿಕ್ಯಾತ ಎಂದು ಕರೆಯಲಾಗುತ್ತಿದ್ದು ಅನಂತರ ಅದೇ 'ಕಿಳ್ಳೆಕ್ಯಾತ' ಆಯಿತೆಂದು ಹೇಳಲಾಗುತ್ತದೆ. 'ಕೀಳುಕಥಾ' ಎಂಬ ಪದವು ಕ್ರಮೇಣವಾಗಿ 'ಕಿಳ್ಳೆಕ್ಯಾತ' ಆಗಿರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತದೆ. ಆದರೆ ಇವರು ವೈದಿಕ ಸಂಪ್ರದಾಯ ಶ್ರೇಷ್ಠ ಕಥೆಗಳನ್ನು ಹೇಳುವುದರಿಂದ 'ಕೀಳುಕಥಾ' ಪದದಿಂದ ಬಂದಿದೆ ಎಂಬುದನ್ನು ತಳಿಹಾಕಲಾಗುತ್ತದೆ. ಆದರೆ ಕಥೆಯನ್ನೇ ವ್ಯಕ್ತಪಡಿಸುವ ಶೈಲಿ ಕೀಳಾಗಿರುವುದರಿಂದ ಈ ಹೆಸರು ಬಂದಿರಬಹುದೆಂದು ಹೇಳಲಾಗುತ್ತದೆ. ಭಾಷಾ ವಿಜ್ಞಾನಿ ಬ್ರೂ ಅವರು 'ಕೇರಿಕ್ಯಾತ' ಎಂಬ ಸಂಸ್ಕೃತಪದ ಅಪಭ್ರಂಶವಾಗಿ ಕಿಳ್ಳೆಕ್ಯಾತ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಮಹಾರಾಷ್ಟ್ರ, ಹೈದ್ರಾಬಾದ ಕರ್ನಾಟಕ, ಉತ್ತರ ಕರ್ನಾಟಕದಲ್ಲಿ ಇವರನ್ನು ಕಟುಬರು ಎಂದು ಕರೆಯಲಾಗುತ್ತದೆ. ತೊಗಲು ಗೊಂಬೆ ಆಟದಲ್ಲಿ ಕಟುಬ ಎಂಬ ವಿದೂಷಕನ ಪಾತ್ರ ಬರುವದರಿಂದ ಇವರಿಗೆ ಈ ಹೆಸರು ಬಂದಿದೆ. 'ಕಿಳ್ಳೆ' ಎಂಬ ಪದಕ್ಕೆ ನಿಘಂಟಿನಲ್ಲಿ ಜೇಷ್ಟೆ, ಕೀಟಲೆ ಹುಡುಗಾಟಿಕೆ, ತುಂಟತನ ಎಂಬ ಅರ್ಥಗಳಿದ್ದು, ಇವರ ಆಟದಲ್ಲಿ ಅಶ್ಲೀಲ ಪದಗಳ ಬಳಕೆ ಹೆಚ್ಚಿರುವುದರಿಂದ ಕಿಳ್ಳೆ ಎಂಬ ಪದ ಈ ಜನಾಂಗಕ್ಕೆ ಬಂದಿರುವ ಸಾಧ್ಯತೆಗಳಿವೆ.

ಕಿಳ್ಳೆಕ್ಯಾತ ಜನಾಂಗದವರ ಮುಖ್ಯ ಉದ್ಯೋಗ ತೊಗಲು ಗೊಂಬೆಗಳನ್ನು ಆಡಿಸುವದು. ಇವರು ಮಳೆಗಾಲ ಹೊರತುಪಡಿಸಿ ಆಮಂತ್ರಿಸಿದ ಊರಿಗೆ ಹೋಗಿ ಆಟ ಪ್ರದರ್ಶಿಸುತ್ತಾರೆ. ಗ್ರಾಮದೇವತೆಗಳ ಜಾತ್ರೆ, ಕಾರ್ತಿಕೋತ್ಸವ ಸಂದರ್ಭಗಳಲ್ಲಿ ಊರಿನ ವತಿಯಿಂದ ಇವರನ್ನು ಆಮಂತ್ರಿಸಿ ಆಟ ಏರ್ಪಡಿಸಲಾಗುತ್ತದೆ. ಮಳೆ ಬರಲು ಈ ಆಟ ಅವಶ್ಯಕ ಎಂಬ ನಂಬಿಕೆ ಗ್ರಾಮೀಣರಲ್ಲಿ ಇರುವುದರಿಂದ, ಮಳೆ ಬರದಾಗ ಸಹ ಇವರನ್ನು ಆಮಂತ್ರಿಸಿ ಆಟ ಆಡಿಸಲಾಗುತ್ತದೆ. ಆಟಗಳ ಇರದಾಗ, ಮಳೆಗಾಲದಲ್ಲಿ ಇವರು ಲೋಹದ ಕೆಲಸ, ಹಾಳಾದ ಪಾತ್ರೆಗಳನ್ನು ಸರಿಪಡಿಸುವುದು, ತಬಲ, ಹಾರ್ಮೋನಿಯಂ ತಯಾರಿಸುವುದು, ಕೌದಿ ಹೊಲಿಯುವುದು ಮುಂತಾದ ಉಪ ಕಸಬುಗಳನ್ನು ಮಾಡುತ್ತಾರೆ.

ಕಿಳ್ಳೆಕ್ಯಾತರ ವೃತ್ತಿಗೆ ಮೂಲ ತೊಗಲು ಗೊಂಬೆಗಳು. ಇವರು ಈ ಗೊಂಬೆಗಳನ್ನು ನಿರ್ದಿಷ್ಟವಾದ ಪ್ರಾಣಿಗಳ ಚರ್ಮವನ್ನು ಬಳಸಿ ಚಳಿ ಮಳೆಗಳಿಗೆ ಹಾಳಾಗದಂತೆ ತಯಾರಿಸುತ್ತಾರೆ. ಹೈದ್ರಾಬಾದ ಕರ್ನಾಟಕದಲ್ಲಿ ಜಿಂಕೆ ಮತ್ತು ಆಡಿನ ಚರ್ಮವನ್ನು ಬಳಸಿ ಈ ಗೊಂಬೆಗಳನ್ನು ತಯಾರಿಸುತ್ತಾರೆ. ಕೆಲವು ಕಡೆ ಮೇಕೆ, ಕುರಿ, ಎಮ್ಮೆ, ಕತ್ತೆ, ಒಂಟೆಯ ಚರ್ಮ್ಮಗಳಿಂದಲೂ ಗೊಂಬೆಗಳನ್ನು ತಯಾರಿಸುತ್ತಾರೆ. ಸಂಗ್ರಹಿಸಿದ ಚರ್ಮವನ್ನು ಪರಿಣಿತರಿಂದ ಲೇಕ್ಕಿಸಿ ತೆಳ್ಳಗೆ ಮಾಡಿಸುತ್ತಾರೆ. ಆಗ ಚರ್ಮವು ಮಾಂಸ, ಕೂದಲು, ವಾಸನೆ ಕಳೆದುಕೊಂಡು ರಾತ್ರಿಯ ಬೆಳಕಿನಲ್ಲಿ ಪರದೆಯ ಮೇಲೆ ಚಿತ್ರ ಚೆನ್ನಾಗಿ ಕಾಣುವಂತೆ ಹೊಳೆಯುತ್ತದೆ. ಹೀಗೆ ಸಿದ್ಧಗೊಂಡ ಚರ್ಮದ ಮೇಲೆ ಇದ್ದಿಲಿನಿಂದ ತಮಗೆ ಬೇಕಾದ ವಿನ್ಯಾಸ ಮಾಡಿಕೊಂಡು ಅನಂತರ ಮೊಳೆ ಅಥವಾ ದಬ್ಬಣದಿಂದ ವಿನ್ಯಾಸ ಮಾಡಿಸುತ್ತಾರೆ. ಪಾತ್ರಕ್ಕೆ ತಕ್ಕಂತೆ ನಟನಾದವನ ವೇಷದಲ್ಲಿ ಕಾಣುವಂತೆ ಗೊಂಬೆಗಳಲ್ಲಿ ಕಾಣುವ ಹಾಗೆ ಚಿತ್ರಿಸಲಾಗುತ್ತದೆ. ಅಂದರೆ ಪುರುಷಪಾತ್ರ ದೊಡ್ಡವು, ಸ್ತ್ರೀ ಪಾತ್ರ ಚಿಕ್ಕವು ಕಟುಬ ಬಂಗಾರಕ್ಕನ ವೇಷ ಅತಿ ಚಿಕ್ಕವು, ಸ್ತ್ರೀ ಪಾತ್ರ ಆಕರ್ಷಕ ಹೀಗೆ ಗೊಂಬೆ ನೋಡಿದ ತಕ್ಷಣ ಇದು ಇದೇ ಪಾತ್ರ ಎಂದು ತಿಳಿಯುವಂತೆ ಚಿತ್ರಿಸುತ್ತಾರೆ. ಅನಂತರ ಚೂಡಾದ ಉಳಿ ಮೊಳೆ ತೆಗೆದುಕೊಂಡು ಚರ್ಮವನ್ನು ಕತ್ತರಿಸಿ ಅವಯವಗಳು ಚಲಿಸಲು ಬರುವಂತೆ ಜೋಡಿಸುತ್ತಾರೆ. ಅನಂತರ ಇವು ಕುಣಿಯಲು ತಿರುಗಲು ಬರುವಂತೆ ನೀಳವಾದ ಕೋಲಿಗೆ ಅಂಟಿಸಲಾಗುತ್ತದೆ.

ಹೀಗೆ ಗೊಂಬೆಗಳು ಸಿದ್ಧವಾದ ಅನಂತರ ಇವುಗಳಿಗೆ ಬಣ್ಣ ಲೇಪನ ಮಾಡುತ್ತಾರೆ. ಗಿಡಮೂಲಿಕೆಗಳನ್ನು ರಾಸಾಯನಿಕ ದ್ರವಗಳನ್ನು ಕರಗಿಸಿ ಸಿದ್ಧವಾದ ದ್ರಾವಣದಿಂದ ಬಣ್ಣ ಹಾಕುತ್ತಾರೆ. ಇತ್ತೀಚೆಗೆ ಪೇಟೆಯಲ್ಲಿ ಸಿಗುವ ಕೃತಕ ಬಣ್ಣಗಳನ್ನು ಬಳಸುತ್ತಿದ್ದಾರೆ. ಕಣ್ಣು, ಕಿವಿ, ಮೂಗು, ಬಾಯಿ, ರಥ ಕಿರೀಟ, ಬಿಲ್ಲುಬಾಣ, ಆಭರಣಗಳು ಎದ್ದುಕಾಣುವಂತೆ ಗುರುತಿಸುವ ರೀತಿಯಲ್ಲಿ ವಸ್ತುಗಳ ಅಂಚಿನಲ್ಲಿ ಗೀರು ಸುರುಳಿಗಳನ್ನು ಮಾಡುತ್ತಾರೆ. ಈ ಮೂಲಕ ಗೊಂಬೆಗಳ ನಿಜವಾದ ಪಾತ್ರಗಳೇನೂ ಎಂದು ತೋರುವಂತೆ ಇವುಗಳನ್ನು ಸಿದ್ಧಪಡಿಸುತ್ತಾರೆ.

ಒಮ್ಮೆ ಈ ಗೊಂಬೆಗಳನ್ನು ಸಿದ್ಧಪಡಿಸಿದ ಅನಂತರ ಎಷ್ಟೋ ವರ್ಷಗಳವರೆಗೆ ಇವುಗಳನ್ನು ಬಳಸುತ್ತಾರೆ. ಇವುಗಳ ತಯಾರಿಕೆ ವೆಚ್ಚ ಹೆಚ್ಚಿರುವುದರಿಂದ ಇವುಗಳು ಹಾಳಾಗದಂತೆ ಜತನದಿಂದ ಕಾಪಾಡಿಕೊಳ್ಳುತ್ತಾರೆ. ಮಳೆ, ಗಾಳಿಗೆ ಇವು ಹಾಳಾಗಬಾರದೆಂದು ಇವುಗಳನ್ನು ಬಾವಲಿ (ಚರ್ಮದ ಚೀಲ)ಗಳಲ್ಲಿ ಇಡುತ್ತಾರೆ. ಆಟ ಮುಗಿದ ತಕ್ಷಣ ಇವನ್ನು ಬಾವಲಿಯಲ್ಲಿ ಹಾಕಿದರೆ ಮತ್ತೆ ಪ್ರದರ್ಶನದ ವೇಳೆಗೆ ಹೊರ ತೆಗೆಯುತ್ತಾರೆ.

ತೊಗಲುಗೊಂಬೆ ಆಟವನ್ನು ಆಡಲು ಆಮಂತ್ರಿಸಿದ ಗ್ರಾಮದ ವಿಶಾಲ ಬಯಲಿನಲ್ಲಿ ಮಂಟಪವನ್ನು ಸಿದ್ಧಪಡಿಸ

ಲಾಗುತ್ತದೆ. ಮಂಟಪದಲ್ಲಿ ಪ್ರೇಕ್ಷಕರಿರುವ ದಿಕ್ಕಿಗೆ ಬಿಳಿಪರದೆ ಕಟ್ಟಿ ಉಳಿದ ಭಾಗವನ್ನು ಗುಡಾರ ಅಥವಾ ಕಂಬಳಿಯಿಂದ ಮುಚ್ಚಲಾಗುತ್ತದೆ. ಬಿಳಿಪರದೆ ಇರುವಲ್ಲಿ ನೆಲದಿಂದ 4 ಅಡಿ ಹೊದಿಕೆ ಹಾಕಲಾಗಿರುತ್ತದೆ. ಇದರಿಂದ ಪರದೆ ಮತ್ತು ಗೊಂಬೆ ಮಾತ್ರ ಕಾಣಿಸುತ್ತದೆಯೇ ಹೊರತು ಗೊಂಬೆ ಆಡಿಸುವವನು ಕಾಣಿಸುವುದಿಲ್ಲ. ಮಂಟಪ ಸಿದ್ಧಗೊಂಡ ಅನಂತರ ಸಾಂಪ್ರದಾಯಿಕವಾಗಿ ವಿಘ್ನೇಶ್ವರ ಪೂಜೆ ನಡೆದು ಆಟ ಪ್ರಾರಂಭವಾಗುತ್ತದೆ. ಬಯಲಾಟ, ದೊಡ್ಡಾಟದಲ್ಲಿರುವಂತೆ ಇಲ್ಲಿಯೂ ಸಹ ಹಿಮ್ಮೇಳ ಮುಮ್ಮೇಳದವರು ಇರುತ್ತಾರೆ. ಆಟಗಾರರು ಗೊಂಬೆಗಳನ್ನು ಚಲಿಸುತ್ತಿರುತ್ತಾರೆ. ಗೊಂಬೆಗಳು ಚಲಿಸಿದಂತೆ ಕಥೆಗಾರ ಪಾತ್ರಗಳಿಗೆ ತಕ್ಕಂತೆ ಕಥೆ, ಹಾಡು, ಸಂಭಾಷಣೆ ಹೇಳುತ್ತಾ ಕಥೆ ನಡೆಸುತ್ತಾನೆ. ಸಂಭಾಷಣೆಯನ್ನು ಸ್ತ್ರೀ ಪುರುಷ ಪಾತ್ರಗಳಿಗೆ ತಕ್ಕಂತೆ ಸ್ತ್ರೀ ಪುರುಷರು ಹೇಳುತ್ತಾರೆ. ಕುಟುಂಬದ ಗಂಡು, ಹೆಣ್ಣು ಮಕ್ಕಳು ಒಟ್ಟಾಗಿಯೇ ಈ ಪ್ರದರ್ಶನದಲ್ಲಿ ಭಾಗ ವಹಿಸುತ್ತಾರೆ. ಕಥೆ ನಡೆದಂತೆಯೇ ಗೊಂಬೆಗಳು ಜೀವತಳೆದಂತೆ ಕುಣಿದು ನೋಡುಗರನ್ನು ಸಮ್ಮೋಹನ ಗೊಳಿಸುತ್ತವೆ.


ತೊಗಲುಗೊಂಬೆಯಾಟದಲ್ಲಿ ಬಹುತೇಕ ಪೌರಾಣಿಕ ಕಥೆಗಳನ್ನು ಹೇಳುತ್ತಾರೆ. ರಾಮಾಯಣ, ಮಹಾಭಾರತದ ಸೀತಾಪಹರಣ, ಕರ್ಣಾರ್ಜುನರ ಯುದ್ಧ, ವಿರಾಜಪರ್ವ ಯುದ್ಧ, ಅಭಿಮನ್ಯು ಯುದ್ಧ, ಮುಂತಾದ ಕಥೆಗಳನ್ನು ಆಡುತ್ತಾರೆ. ಇವು ಪುಣ್ಯಕಥೆಗಳಾಗಿರುವುದರಿಂದ ಇವುಗಳ ಕೇಳವಿಕೆಯಿಂದ ಮಳೆಯಾಗುತ್ತದೆಂಬ ನಂಬಿಕೆ ಗ್ರಾಮೀಣರಲ್ಲಿದೆ.

(ಆರ್‌ಎಸ್)

ಕೀ

ಕೀರ್ತಿಕುಮಾರ ಬಡಶೇಷಿ: ಸಂಗೀತಗಾರ. ಪ್ರತಿಭಾವಂತ ಕಲಾವಿದ. ಚಿಕ್ಕಂದಿನಿಂದಲೂ ದಾಸರ ಪದಗಳನ್ನು ಹಾಡುತ್ತ ಸಂಗೀತ ಅಭಿರುಚಿ ಬೆಳೆಸಿಕೊಂಡು ಬಂದವರು. ಇವರ ದೊಡ್ಡಪ್ಪ ರಂಗರಾವ ಬಡಶೇಷಿಯವರೂ ಹಾಡುಗಾರರು. ಅವುಗಳನ್ನೇ ಆಗೊಮ್ಮೆ ಈಗೊಮ್ಮೆ ಹಾಡುತ್ತ ಬೆಳೆದ ಕೀರ್ತಿಕುಮಾರ ಇವರ ಒಲವು ಸಂಗೀತದ ಕಡೆ ವಾಲಿತು.

ಇವರ ಮೊದಲ ಗುರು ಇವರ ಅಜ್ಜಿ. ಶಾಸ್ತ್ರೀಯವಾಗಿ ಸಂಗೀತ ಕಲಿಸಿದವರು ಚಿತ್ತಾಪುರದ ರಾಮಾಚಾರ್ ಜಾಲಿಹಾಳ. ಅನಂತರ ಕಲಬುರ್ಗಿಯ ಗೀತಾ ಗಾಯಿತ್ರಿ ಚಕ್ರವರ್ತಿ ಅವರ ಬಳಿ ಸಂಗೀತ ಪಾಠ ಮುಂದುವರೆಸಿದರು.



ನೂತನ ವಿದ್ಯಾಲಯದ ವಿಜ್ಞಾನ ವಿಭಾಗದ ವಿದ್ಯಾರ್ಥಿಯಾಗಿದ್ದ ಇವರು, ಓದಿನಲ್ಲೂ ಹಿಂದೆ ಬೀಳಲಿಲ್ಲ. ಬಿ.ಎಸ್.ಸಿ. ಪದವಿ ಪಡೆದುಕೊಂಡರು. ಆದರೆ ಇವರ ಆಸಕ್ತಿ ಸಂಗೀತ. ಮನೆಯ ಹಿರಿಯರು ಇವರ ಆಸಕ್ತಿ ಬೆಳೆಯಲು ಪ್ರೋತ್ಸಾಹಿಸಿ ಬೆಳೆಸಿದರು. ಒಮ್ಮೆ ಪಂ. ವಿನಾಯಕ ತೊರವಿ ಅವರು ಕಲಬುರ್ಗಿಗೆ ಬಂದಾಗ, ಇವರ ಮನೆಗೆ ಭೇಟಿ ಕೊಟ್ಟಿದ್ದರು. ಇವರ ಹಾಡನ್ನು ಕೇಳಿ ತಲೆದೂಗಿ, ಇವರಲ್ಲಿರುವ ಸಂಗೀತ ಆಸಕ್ತಿಯನ್ನು ಮನಗಂಡರು. ಇವರನ್ನು ಶಿಷ್ಯನನ್ನಾಗಿ ಮಾಡಿಕೊಳ್ಳುತ್ತೇನೆ. ತಮ್ಮೊಂದಿಗೆ ಕಳಿಸಿ. ಸಂಗೀತವನ್ನು ಧಾರೆಯೆರೆಯುತ್ತೇನೆಂದು ಕೀರ್ತಿಗೆ ಬೆಂಗಳೂರಿಗೆ ಬರಲು ಹೇಳಿದರು. ಕೀರ್ತಿಗೂ ಅದೇ ಬೇಕಾಗಿತ್ತು. ಪಂ. ತೊರವಿಯವರ ಶಿಷ್ಯರಾದರು.

ಪಂ. ಭೀಮಸೇನ ಜೋಶಿ ಹಾಗೂ ಪಂ. ಗುರುರಾಜ ದೇಶಪಾಂಡೆಯವರ ಶಿಷ್ಯರು ಪಂ. ವಿನಾಯಕ ತೊರವಿ. ಗುರುವಿಗೆ ತಕ್ಕ ಶಿಷ್ಯರಾದರು. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಹಾಗೂ ಸಂಗೀತ ನಾಟಕ ಅಕಾಡೆಮಿಯ ಶಿಷ್ಯವೇತನ ಪಡೆದುಕೊಂಡು, ತಮ್ಮ ಅಭ್ಯಾಸವನ್ನು ಮುಂದುವರೆಸಿದರು.

ಇವರು ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿದ್ದಲ್ಲದೆ, ದೂರದರ್ಶನದ ಅನೇಕ ಕಾರ್ಯಕ್ರಮಗಳಲ್ಲಿ ಹಿನ್ನೆಲೆ ಗಾಯಕರಾಗಿ ಹೆಸರು ಮಾಡಿದ್ದಾರೆ. ಬಿ.ವಿ. ಕಾರಂತರ ನಿರ್ದೇಶನದಲ್ಲಿ ಮೂಡಿಬಂದ ಹಿಂದಿ ಕಾರ್ಯಕ್ರಮ ಕೊಟ್ಟು, ಹಿನ್ನೆಲೆ ಗಾಯಕರೆನಿಸಿಕೊಂಡಿದ್ದಾರೆ.

ಕನ್ನಡದ ಧಾರಾವಾಹಿ ವಚನ ವೈಭವದಲ್ಲಿ ಅನೇಕ ವಚನಗಳನ್ನು ಸುಶ್ರಾವ್ಯವಾಗಿ ಹಾಡಿ, ಸಂಗೀತ ಕ್ಷೇತ್ರದಲ್ಲಿ ಗಮನ ಸೆಳೆದಿದ್ದಾರೆ. ಅನೇಕ ಚಾನಲ್‌ಗಳಲ್ಲಿ ಸಂಗೀತ ಕಾರ್ಯಕ್ರಮ

ನೀಡುತ್ತಿದ್ದಾರೆ. ಇವರ ಮೊದಲ ಧ್ವನಿಸುರುಳಿ 'ದಾಸ ರಸರಂಗ' ಕರ್ನಾಟಕದ ಅನೇಕ ಸಂಗೀತ ಪ್ರಿಯರ ಮನೆಗಳಲ್ಲಿ ಕಾಣಬಹುದು.

ಈಗಾಗಲೇ ಇವರ ಸಂಗೀತ ಕಾರ್ಯಕ್ರಮಗಳು ದೇಶದ ಅನೇಕ ಮಹಾನಗರ, ಪಟ್ಟಣಗಳಲ್ಲಿ ಜರುಗಿವೆ. ಭಾರತದ ಹೊರಗೂ ಇವರು ಕಾರ್ಯಕ್ರಮಗಳನ್ನು ನಡೆಸಿ, ಅಲ್ಲಿನ ಸಂಗೀತಾಸಕ್ತರಿಗೆ, ಹಿಂದೂಸ್ತಾನಿ ಸಂಗೀತ ಉಣಬಡಿಸಿದ್ದಾರೆ. ಇತ್ತೀಚೆಗೆ ಲಹರಿ ರಿಕಾರ್ಡಿಂಗ್ ಸಂಸ್ಥೆಯವರು, ಕೀರ್ತಿಕುಮಾರ ಬಡಶೇಷಿಯವರ ಹಿಂದೂಸ್ತಾನಿ ಗಾಯನದ ಧ್ವನಿಸುರುಳಿ ಹಾಗೂ ಸಿ.ಡಿ.ಯನ್ನು ಹೊರ ತಂದಿದ್ದಾರೆ. ಈಗ ಕೀರ್ತಿಕುಮಾರ ವಿದ್ಯಾನಿಕೇತನ ಹೆಬ್ಬಾಳದಲ್ಲಿ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಯುವಕರಿಗೆ, ಮಕ್ಕಳಿಗೆ ಸಂಗೀತ ಮಾರ್ಗ ದರ್ಶನ ನೀಡುತ್ತಿದ್ದಾರೆ. ಇತ್ತೀಚೆಗೆ ಗುರುಗಳ ಜೊತೆಯಲ್ಲಿ ಅಮೇರಿಕಕ್ಕೆ ಭೇಟಿ ಕೊಟ್ಟು, ಅಲ್ಲಿಯೂ ಇವರು ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. (ಜಿಕೆಐ)

ಕು

ಕುಪ್ಪುಸ: ಸೀರೆಗೆ ಕುಬುಸ ಜೊತೆಯಾಗಿದೆ. ಕುಪ್ಪುಸವನ್ನೇ ಕುಬುಸ ಎಂದು ಕರೆಯುವರು. ಈ ಕುಬುಸದೊಂದಿಗೆ ಜಂಪರ್ ಮತ್ತು ರವಿಕೆಗಳು ಸ್ಪರ್ಧೆ ಹೂಡಿವೆ. ಹಿಂದಿನ ಕಾಲದ ಕುಬುಸಗಳಲ್ಲಿ ಒಂಬತ್ತು ತುಂಡಿನ ಕುಬುಸ, ತುಂಡಿನ ಕುಬುಸ, ಕಟೋರಿ ಮತ್ತು ಗಂಧರ್ವ ಎಂಬ ಹೆಸರಿನ ಆಕಾರ ಭೇದಗಳ ಕುಬುಸಗಳಿವೆ. ಇವೆಲ್ಲಕ್ಕೂ ಮೂಲಾಧಾರ ವಾದ ಅಖಂಡ ಕುಬಸವೊಂದಿದೆ. ಆದರೆ ಈಗ ಬಳಕೆಯಲ್ಲಿಲ್ಲ. ಮಲೆಕಟ್ಟಿನ ಕುಬುಸ ಮತ್ತು ಗುಂಡಿ ಹಚ್ಚಿದ ಕುಬುಸ ಎಂಬ ಎರಡು ವಿಧಗಳನ್ನು ಕಾಣಬಹುದು.

ಉತ್ತರ ಕರ್ನಾಟಕದಲ್ಲಿ ಗುಳೇದಗುಡ್ಡ ಭಾಗದಲ್ಲಿ ತಯಾರಾದ ಖಣಗಳನ್ನು ಕುಬುಸಕ್ಕಾಗಿ ಬಳಸುತ್ತಾರೆ. ಇವು ಹೊರರಾಜ್ಯಗಳಿಗೂ ಹೋಗುತ್ತವೆ. ಬೆನ್ನಿನ ಕೆಳಭಾಗ ಮತ್ತು ತೋಳಿನ ಅಂಚು ಸೀರೆಯ ಅಂಚಿನ ಹಾಗಿದ್ದು ಉಳಿದ ಭಾಗ ಚಿತ್ತಾರದಿಂದ ಕೂಡಿರುತ್ತದೆ.

ಹೆಣ್ಣು ಬಸುರಿಯಾದಾಗ 'ಸೀರೆ ಮಾಡುವ ಕಾರ್ಯ' ಮುಗಿದಾದ ಮೇಲೆ ನೆರೆಹೊರೆಯವರು ಸಂಬಂಧಿಕರು 'ಕುಬುಸಾ ಮಾಡುವ ಕಾರ್ಯ'ವಿದೆ. ಮನೆಗೆ ಬಂದ ಅತಿಥಿ ಮುತ್ತೈದೆಯರಿಗೆ ಸಂಬಂಧಿಕ ಮುತ್ತೈದೆಯರಿಗೆ ಮರಳಿ ಹೋಗುವಾಗ ಕುಂಕುಮದೊಂದಿಗೆ ಕುಬುಸದ ಖಣ ನೀಡುವ ಪದ್ಧತಿ ಹಿಂದಿನಂದಲೂ ಬಂದಿದೆ. ಈಗ ಖಣದ ಬದಲಿಗೆ ಬ್ಲೋಸ್‌ಪೀಸ್ ಕೊಡಲಾಗುತ್ತಿದೆ. (ಎಂಬಿಎಚ್)

ಕುಮಾರ ಚಂದ್ರ ಶೇಖರ: ಗುಲಬರ್ಗಾ ವಿಭಾಗದ ಕಲಾವಿದರು. ಆದರೂ ಬಾಂಬೆ ಕಲಾಕೇಂದ್ರದ ಪ್ರಭಾವಕ್ಕೊಳಗಾಗಿ ಅಲ್ಲಿ ಶಿಕ್ಷಣವನ್ನು ಪಡೆದು ಈ ಭಾಗಕ್ಕೆ ಹೊಸ ಆಯಾಮವನ್ನು ದೊರಕಿಸಿಕೊಟ್ಟರು. ಇವರು ಕಲಬುರಗಿಯಲ್ಲಿ ಜನಿಸಿದರು. ಮಾಧ್ಯಮಿಕ ಶಿಕ್ಷಣ ನೂತನ ವಿದ್ಯಾಲಯದಲ್ಲಿ ಕಲಾ ಗುರುಗಳಾದ ಶಂಕರರಾವ್ ಆಳಂದಕರರ ಮಾರ್ಗದರ್ಶನದಲ್ಲಿ ಕಲಾ ಶಿಕ್ಷಣ ಪಡೆದರು. ಶಾಂತಲಿಂಗಪ್ಪ ಪಾಟೀಲ, ಎಂ.ಟಿ. ಭೋಪಲೆ, ಎಸ್.ಎಂ. ಪಂಡಿತ, ವ್ಹಿ.ಎನ್. ಬಂಕೂರಕರ್ ಮುಂತಾದವರ ಆತ್ಮೀಯ ಮಿತ್ರ ಬಳಗವು ಇವರಿಗೆ ಇತ್ತು.



1930ರಲ್ಲಿ ಡ್ರಾಯಿಂಗ್ ಪರೀಕ್ಷೆಯನ್ನು ಪ್ರಥಮ ಸ್ಥಾನದೊಂದಿಗೆ ಉತ್ತೀರ್ಣರಾಗಿ 1932ಕ್ಕೆ ಪುಣೆಗೆ ಹೋಗಿ ನಂತರ ಅಲ್ಲಿ ಛಾಯಾಚಿತ್ರಕಲೆ (Poster's)ಗಳ ಹೊಸ ಕ್ಷಿತಿಜ, ಅಲೆ ಕಂಡರು. 1934ರಲ್ಲಿ ಮುಂಬೈಗೆ ಪ್ರಯಾಣ ಬೆಳೆಸಿ ಶ್ರೀ ಕೇತಕರ್, ಹಲ್ದನಕರ್ ಸಹಾಯದಿಂದ ಜೆ.ಜೆ. ಸ್ಕೂಲ್‌ನಲ್ಲಿ 1938ರಲ್ಲಿ ಜೆ.ಡಿ. ಆರ್ಟ್ ಮುಗಿಸಿದರು. 1940 ಪ್ರವಾಸ, ಲಘು ಸಿನಿಮಾ, 1941ರಲ್ಲಿ ಅನೇಕ ಚಲನಚಿತ್ರಗಳ (Poster's)ನ್ನು ರಚಿಸಿದರು. ರಾಜಕಮಲ ಕಲಾಮಂದಿರದಲ್ಲಿ ಕಲಾ ಸಹಾಯಕನಾಗಿ ಕೆಲಸ ಮಾಡಿದರು. ಇವರಿಗೆ ಆರ್ಸೆಲ್ ವೆಲ್ ಪ್ರಶಸ್ತಿ ದೊರೆಯಿತು. ಶಕುಂತಲಾ, ಭಕ್ತಿತೋಟ, ಡಾ. ಕೊಟ್ನಿಸರ್ ಅಮರಕಥೆ, ಪರ್ವತ ಎಂಬ ಚಿತ್ರಗಳಿಗೆ ಸಹಾಯಕನಾಗಿ, ಪೋಸ್ಟರಗಳನ್ನು ಹಾಗೂ ಪರದೆ ಹಿಂದಿನ ನಿಸರ್ಗ ಚಿತ್ರಗಳನ್ನು ಕೂಡ ರಚಿಸಿದರು. ವನವಾಸಿ ಚಿತ್ರವನ್ನು ಸ್ವತಂತ್ರವಾಗಿ ನಿರ್ದೇಶಿಸಿದರು. ಆದರೆ ಇವರ ಪ್ರಗತಿ ವಿಧಿಗೆ ಸಹಿಸಲಾಗಲಿಲ್ಲ. 1946ರಲ್ಲಿ ಇವರು ಎಡಕಣ್ಣಿನ ದೃಷ್ಟಿಯನ್ನು ಕಳೆದುಕೊಂಡರು. 1956ರಲ್ಲಿ ಸೂಕ್ಷ್ಮ ಶಸ್ತ್ರಕ್ರಿಯೆ ನಡೆಯಿತು. 1958ರಲ್ಲಿ ಇವರು ರಚಿಸಿದ ಪೋಸ್ಟರಿಗೆ ವರ್ಷದ ವಿಶ್ವಶ್ರೇಷ್ಠ ಪ್ರಶಸ್ತಿ ಲಭಿಸಿತು. ಕೆಲವು ಕಾಲ ಲಂಡನಿನಲ್ಲಿ ಇದ್ದು ಮರಳಿದೊಡನೆ ಅನೇಕ ದೇವ, ದೇವತೆಗಳ ಪೌರಾಣಿಕ, ರಾಮಾಯಣ, ಮಹಾಭಾರತದಂತಹ ಚಿತ್ರಗಳನ್ನು ರಚಿಸಿ ಪ್ರಖ್ಯಾತರಾದರು.

ಇವರು ರಚಿಸಿರುವ ಕೆಲವು ರೇಖಾಚಿತ್ರಗಳನ್ನು ನೋಡಿದಾಗ ಅದರಲ್ಲಿರುವ ವರ್ಣ ಸಂಯೋಜನೆಯು ನೋಡುಗರ ಮನ ಸೆಳೆಯುತ್ತವೆ. ಪ್ರಸಿದ್ಧ ಚಲನಚಿತ್ರ ನಿರ್ಮಾಪಕರಾದ ವ್ಹಿ. ಶಾಂತರಾಮರ ಮುಂಬೈ ಸ್ಟುಡಿಯೋದಲ್ಲಿ ಕೆಲವು ವರ್ಷ ಕಲಾವಿದರಾಗಿ ಸೇವೆ ಸಲ್ಲಿಸಿದರು. ಇವರ ಕಲೆಯ ಖ್ಯಾತಿಯು



'ಲೈಫ್ ಪೇಂಟಿಂಗ್' ಜಲವರ್ಣ ಚಿತ್ರ

ಮುಂಬೈ ಪಟ್ಟಣದ ತುಂಬೆಲ್ಲ ಹರಡಿತ್ತು. 26.04.1958ರಂದು ಚಿತ್ರಪಟ ನಿಮಿತ್ಯ ಕುಮಾರರು ಜಯಪೂರಕ್ಕೆ ಹೋದಾಗ ರಾತ್ರಿ ನಿದ್ರಿಸುತ್ತಿರುವಾಗ ಇವರ ಪ್ರಗತಿಯನ್ನು ಸಹಿಸದೆ ಕೆಲವು ಕಿಡಿಗೇಡಿಗಳು ಇವರನ್ನು ಕೊಲ್ಲಲು ಪ್ರಯತ್ನಿಸಿದಾಗ ತಲೆಯ ಮೇಲೆ ಪೆಟ್ಟು ಬಿದ್ದು ಇವರ ಎರಡೂ ಕಣ್ಣುಗಳು ದೃಷ್ಟಿಯನ್ನು ಕಳೆದುಕೊಂಡವು. ಆಗ ಇವರಿಗೆ ಕಲೆ ಪರಕೀಯವಾಯಿತು. ಆಕಾಶ ಕಳಚಿ ಮೈಮೇಲೆ ಬಿದ್ದಂತಾಯಿತು. ಕುರುಡನಾಗಿದ್ದರಿಂದ ಇವರ ಶ್ರೇಷ್ಠತೆಯನ್ನೇ ಮರೆತ ಸಮಾಜವು ಇವರನ್ನು ಧಿಕ್ಕರಿಸಿತು. ಇದರಿಂದ ಇವರು ತಮ್ಮ ಕೊನೆಯ ಕಾಲದಲ್ಲಿ ಕೆಲಸವಿಲ್ಲದೆ, ಹಣವಿಲ್ಲದೆ, ಪರದಾಡುತ್ತಿರುವಾಗ, ಹೆಂಡತಿ–ಮಕ್ಕಳು ಸಹ ಇವರನ್ನು ತಮ್ಮಿಂದ ದೂರವಿಟ್ಟರು. ಹೀಗೆ ಪರದಾಡುತ್ತಿರುವಾಗ ಆಳಂದಕರವರು ಇವರನ್ನು 1966 ರಲ್ಲಿ 2000/– ರೂಪಾಯಿ ಬಹುಮಾನವನ್ನು ಕೊಟ್ಟು ಸತ್ಕರಿಸಿದರು. ಇಂತಹ ಒಬ್ಬ ಶ್ರೇಷ್ಠ ಕಲಾವಿದ ಕಲಬುರಗಿಯಲ್ಲಿ ಇದ್ದರೆಂಬುದೇ ಯುವಪೀಳಿಗೆಯ ಕಲಾವಿದರಿಗೆ ಹೆಮ್ಮೆಯ ವಿಷಯ. **(ಜಿಜಿಕೆ)**

ಕೂ

ಕೂರಿಗೆ (ಕೃಷಿಕಲೆ): ರೈತನ ಬದುಕಿನಲ್ಲಿ ಅತಿ ಪ್ರಮುಖವಾದ ಹಾಗೂ ನೂರಾರು ವರುಷದ ಹಳೆಯ ಉಪಕರಣ. ಹೊಲಗಳಲ್ಲಿ ಬೀಜ ಬಿತ್ತುವ ಉಪಕರಣ. ಈ ಕೂರಿಗೆಯ ಬೀಜ ಬಟ್ಟಲುಗಳ ಕಲಾವಿನ್ಯಾಸ ಸುಂದರವಾದುದಾಗಿದೆ. ನಮ್ಮ ಜನಪದರು ಧಾರ್ಮಿಕ ಪ್ರವೃತ್ತಿಯುಳ್ಳವರಾಗಿದ್ದು, ಬಿತ್ತುವ ಮುನ್ನ ಕೂರಿಗೆಯ ಪೂಜೆಯನ್ನು ಕೈಗೊಳ್ಳುತ್ತಾರೆ. ಇಡೀ ಹೊಲ ಸಮೃದ್ಧವಾಗಿ ಹಾಗೂ ಶಿಸ್ತುಬದ್ಧವಾಗಿ ಬೆಳೆ ಬೆಳೆಯಲು ಮೂಲ ಕಾರಣವೇ ಈ ಕೂರಿಗೆ. ಈ ಕೂರಿಗೆಯಲ್ಲಿ ಅವರೆ, ಶೇಂಗಾ ಕಾಳು ಬಿತ್ತುವ ದೊಡ್ಡ ಗಾತ್ರದ ಕೂರಿಗೆ, ಜೋಳ, ಗೋಧಿಯನ್ನು ಬಿತ್ತಲು ಮಧ್ಯಮ ಗ್ರಾಮದ ಕೂರಿಗೆ ಸಜ್ಜೆ, ನವಣೆ, ಎಳ್ಳುಗಳನ್ನು ಬಿತ್ತಲು ಸಣ್ಣ ಗಾತ್ರದ ಕೂರಿಗೆಯನ್ನು ರೈತರು ಬಳಸುತ್ತಾರೆ. ಈ ಕೂರಿಗೆಯು ಮಿಶ್ರಬೆಳೆ, ಆರು ಸಾಲಿಗೊಂದು ಅಕ್ಕಡಿ ಬೆಳೆ ಬೆಳೆಯಲು ಸಹಾಯಕವಾಗುತ್ತದೆ.



ಕೂರಿಗೆ (ಕೃಷಿಕಲೆ)

ಹೈದ್ರಾಬಾದ ಕರ್ನಾಟಕದಲ್ಲಿ ಹೆಚ್ಚಾಗಿ ಮೂರುಸಾಲು, ನಾಲ್ಕು ಸಾಲುಳ್ಳ ಬಟ್ಟಲಿನ ವೈವಿಧ್ಯಮಯವಾದ ಕೂರಿಗೆಗಳು ಬಳಕೆ ಯಲ್ಲಿವೆ. ಕೂರಿಗೆಯ ಮೇಲ್ಭಾಗದಲ್ಲಿ ಬೀಜ ಉದುರಿಸುವ ಬಟ್ಟಲು ಇದೆ. ಇದನ್ನು 'ಬೀಜ ಬಟ್ಟಲು' ಅಥವಾ 'ಸಡ್ಡೆ ಬಟ್ಟಲು' ಎಂದು ಕರೆಯುವರು. ಈ ಬೀಜ ಬಟ್ಟಲುಗಳಲ್ಲಿಯೂ ವೈವಿಧ್ಯತೆಯಿದೆ. ಕೆಲವು ಬಟ್ಟಲುಗಳು ಮೂರು ರಂಧ್ರ, ಕೆಲವು ಬಟ್ಟಲುಗಳಿಗೆ ನಾಲ್ಕು ರಂಧ್ರಗಳಿರುತ್ತವೆ. ಈ ನಾಲ್ಕು ರಂಧ್ರವುಳ್ಳ ಕೂರಿಗೆಯನ್ನು 'ಬೀಸು ಕೂರಿಗೆ' ಎಂತಲೂ ಕರೆಯುವರು. ಈ ಎಲ್ಲಾ ರಂಧ್ರಗಳಿಗೆ ಬಿದಿರಿನ ಕೊಳವೆ ಜೋಡಿಸಿರುತ್ತಾರೆ. ಬಿದಿರಿನ ಕೊಳವೆಯ ಇನ್ನೊಂದು ಭಾಗವನ್ನು ಕೆಳಭಾಗದಲ್ಲಿ ನಾಲ್ಕು ಅಡಿ ಉದ್ದದಿಂದ ಕಟ್ಟಿ ದಿಂಡಿಗೆ ಸೇರಿಸುತ್ತಾರೆ. ಕೊಳವೆ ಸೇರುವ ದಿಂಡಿನ ಭಾಗದಲ್ಲಿ ರಂಧ್ರ ಮಾಡಿ, ಮುಕ್ಕಾಲು ಅಡಿ ಕಬ್ಬಿಣ ಇಲ್ಲವೆ ಮರದ ಕೊಳವೆಗಳಿರುವ ಕಡ್ಡಿಗಳನ್ನು ಅಡಿಗೆ ಒಂದರಂತೆ ಸೇರಿಸಿರುತ್ತಾರೆ. ಇದಕ್ಕೆ 'ತಾಳು' ಎನ್ನುತ್ತಾರೆ. ಈ ತಾಳಿನ ಸಂಖ್ಯೆಯನ್ನು ಆಧರಿಸಿಯೇ ಕೂರಿಗೆಯನ್ನು ಕರೆಯುವರು.

ಕೂರಿಗೆಯ ಸಾಮಗ್ರಿಗಳು: 1. ಕೂರಿಗೆಯ ದಿಂಡು: ದಪ್ಪವಾದ ಕಟ್ಟಿಗೆಯಿಂದ ತಯಾರಿಸಿದ್ದು, 2. ಕೂರಿಗೆಯ ತಾಳು: ಬಿತ್ತನೆಗೆ ಬೀಜ ಬೀಳುವ ತಾಳ, 3. ಮಂಡಿಯ ಕೋಲು: ಬಿತ್ತುವ ಮಂಡಿಯಿಂದ ಕಾಳುಗಳು ನೇರವಾಗಿ ಬೀಳಲು ತಯಾರಿಸಿದ ಚೊಳ್ಳು ಬಿದಿರು, 4. ಬಿತ್ತುವ ಮಂಡಿ: ಮೂರು ಅಥವಾ ನಾಲ್ಕು ರಂಧ್ರಗಳಿರುವ ಅಖಂಡ ಕಟ್ಟಿಗೆಯಲ್ಲಿ ತಯಾರಿಸಿದ ಮಂಡಿ. ಇದು ತಾಳುಗಳಿಗೆ ಸಮಾನವಾಗಿ ಕಾಳು

ಗಳನ್ನು ಕಳಿಸುವದು, 5. ಮೇಳಿ: ಇಡೀ ಕೂರಿಗೆಯ ದಿಂಡು ಕಸದಿಂದ ತುಂಬಿದಾಗ ಅಥವಾ ಜಾಸ್ತಿ ಭೂಮಿಯಲ್ಲಿ ಹಾಯಿಸ ಬೇಕಾದಾಗ ಒತ್ತುವ, ಎತ್ತುವ ಉಪಕರಣ, 6. ಗೊಬ್ಬರ ಮಂಡಿ: ತೆಳ್ಳಗಿರುವ ಕಟ್ಟಿಗೆಯ ಪಳಿಯಿಂದ 3 ಅಥವಾ 4 ರಂಧ್ರ ಮಾಡಿ, ಅದಕ್ಕೆ ಬಿತ್ತುವ ತಾಳುಗಳಿಗೆ ಅನುಗುಣವಾಗಿ ಬಿದಿರಿನ ಕೋಲು ಗಳನ್ನು ಜೋಡಿಸಿ, ದಪ್ಪ ರಂಧ್ರಗಳುಳ್ಳ ಮಂಡಿ ಜೋಡಿಸಿ, ಗೊಬ್ಬರವನ್ನು ಬಿತ್ತುವದು, 7. ಎಳಸೆಡ್ಡಿ: ಮೂರು ಸಾಲಿಗೆ ಅಥವಾ ನಾಲ್ಕು ಸಾಲಿಗೆ ಅಕ್ಕಡಿ ಕಾಳು ಹಾಕಲು ದಪ್ಪದಾದ ಬಿದಿರಿನಿಂದ ತಯಾರಿಸಿದ್ದು. 8. ಬುಕ್ಕದ ಕೋಲು: ಎಳಸೆಡ್ಡಿ ಯಿಂದ ಹಗ್ಗವನ್ನು ಎಳೆದು ಕಟ್ಟುವ ಕಬ್ಬಿಣದ ಕೋಲು.

'ಉಡಿಯಾಗಿನ ಬೀಜಕ್ಕಿಂತ ಹಿಡಿಯಾಗಿನ ಬೀಜ ಮೇಲು' ಎನ್ನುವ ನಮ್ಮ ಜನಪದರು ಕೂರಿಗೆ ಬಳಸುವಾಗ ಬಹು ಎಚ್ಚರಿಕೆಯಿಂದ ಬೀಜವನ್ನು ಉದುರಿಸುತ್ತಾರೆ. ಸಣ್ಣ ಹಿಡುವಳಿ ದಾರರು ಮೂರು ತಾಳಿನ ಕೂರಿಗೆಯನ್ನು ಬಳಸುತ್ತಾರೆ, ಹಾಗೂ ನಾಲ್ಕು ತಾಳಿನ ಕೂರಿಗೆಯನ್ನು ಬಳಸುತ್ತಾರೆ. ಹೀಗೆ ಕೂರಿಗೆಯು ರೈತನ ಬದುಕಿನಲ್ಲಿ ಹಾಸುಹೊಕ್ಕಾಗಿದ್ದು, ವಿಶಿಷ್ಟವಾದ ಕಲಾ ವಿನ್ಯಾಸವನ್ನು ಹೊಂದಿದೆ.

(ಎಸ್ಎಸ್ಎಂ)

ಕೇ



ಕೇರಿ ಎನ್.ಡಿ.: ಶಿಲ್ಪ ಕಲಾ ವಿದ. ಇವರು 1977 ಡಿಸೆಂಬರ್ 15ರಂದು ಗುಲಬರ್ಗಾ ತಾಲ್ಲೂಕಿನ ಬೆಳ ಕೋಟಾ ಗ್ರಾಮದಲ್ಲಿ ಜನಿಸಿ ದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಮ್ಮ ಹುಟ್ಟೂರಿನಲ್ಲಿ ಪೂರ್ತಿ ಗೊಳಿಸಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಗುಲಬರ್ಗಾದ ದಿ. ಆರ್ಟ್ ಇಂಟಿಗ್ರೇಶನ್ ಮಹಾ ವಿದ್ಯಾ ಲಯದಲ್ಲಿ ಪೂರ್ಣಗೊಳಿಸಿ, ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಯಲ್ಲಿ ಪೂರ್ಣಗೊಳಿಸಿದರು. ಅನಂತರ ಶಿಲ್ಪಕಲೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಖಾಸಗಿ ಸಂಸ್ಥೆಯೊಂದ ರಲ್ಲಿ ಸುಮಾರು ಮೂರು ವರ್ಷಗಳ ಕಾಲ ತರಬೇತಿ ಹಾಗೂ ಕೃತಿ ರಚನೆಯಲ್ಲಿ ತೊಡಗಿದ್ದರು. ಬಾಲ್ಯದಿಂದಲೇ ಇವರಿಗೆ ಚಿತ್ರಕಲೆ ಯಲ್ಲಿ ಆಸಕ್ತಿ ಇರುವ ಕಾರಣದಿಂದಾಗಿ ಇವರು ಚಿತ್ರಕಲಾ ಭ್ಯಾಸದಲ್ಲಿ ಪ್ರವೇಶವನ್ನು ಪಡೆದರಾದರೂ ಇವರ ಆಂತರ್ಯ ದಲ್ಲಿ ಹುದುಗಿರುವ ಶಿಲ್ಪ ಕಲಾವಿದ ಕೊನೆಗೂ ಹೊರಬಂದು ಅನೇಕ ಶಿಲ್ಪ ಕಲಾಕೃತಿಗಳನ್ನು ರಚಿಸಿದ.

ಇವರು ರಚಿಸಿದ ಅನೇಕ ಶಿಲ್ಪ ಕಲಾಕೃತಿಗಳು ದೇಶದ ನಾನಾ ಕಡೆಗಳಲ್ಲಿ, ವಿವಿಧ ದೇವಾಲಯಗಳಲ್ಲಿ ನೋಡ ಸಿಗುತ್ತವೆ. ಇವರು ರಚಿಸಿದ ಚಾಲುಕ್ಯ ಶೈಲಿಯ ನಾಟ್ಯ ಗಣಪತಿ ಯನ್ನು ನೋಡಿದವರಿಗೆ ಇವರೊಬ್ಬ ಪ್ರತಿಭಾವಂತ ಶಿಲ್ಪ ಕಲಾವಿದ ನೆಂದೆನಿಸುವುದು ಸಹಜ. ಈ ವಿಗ್ರಹ ಕಲ್ಲಿನಲ್ಲಿ ರೂಪು ಗೊಂಡಿದ್ದು ಇಡೀ ಶಿಲ್ಪದ ಮೈಏಳಿಕೆ ಹಾಗೂ ಭಾವತುಂಬಿ ಬರುವಂಥಹ ಆ ರೂಪ ಇವರ ನೈಪುಣ್ಯತೆಗೆ ಸಾಕ್ಷಿಯಾಗಿದೆ. ಹೀಗೆ ಇವರು ಅನೇಕ ಶಿಲ್ಪಗಳು ಶಿಲೆಗಳಲ್ಲಿ, ಕಟ್ಟಿಗೆಗಳಲ್ಲಿ ಅನೇಕ ರೀತಿಯ ಮಾಧ್ಯಮಗಳಲ್ಲಿ ರೂಪುಗೊಂಡು ಅನೇಕ ಕಡೆಗಳಲ್ಲಿ ಜನ ಮನ್ನಣೆಯನ್ನು ಪಡೆದಿದೆ.


ಗಣೇಶನ ಶಿಲ್ಪ

ಇವರು ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಶಿಲ್ಪಕಲೆಯ ಉಪನ್ಯಾಸಕ ರಾಗಿ ಸೇವೆ ಸಲ್ಲಿಸುತ್ತಿದ್ದು ಅನೇಕ ಕಡೆಗಳಲ್ಲಿ ತಮ್ಮ ಕಲೆಯ ಪ್ರದರ್ಶನ ಕೂಡ ಮಾಡಿದ್ದಾರೆ. ಹಾಗೆಯೇ ಅನೇಕ ಶಿಬಿರಗಳಲ್ಲಿಯೂ ಭಾಗವಹಿಸಿದ್ದಾರೆ. ಶಿಲ್ಪ ಕಲಾಶಿಬಿರ 2005ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯೂ ಇವರಿಗೆ ಶಿಬಿರದಲ್ಲಿ ಭಾಗವಹಿಸಲು ಆಹ್ವಾನ ನೀಡಿತ್ತು. ವೆಂಕಟಪ್ಪ ಆರ್ಟ್ ಗ್ಯಾಲರಿ ಯಲ್ಲಿಯೂ ಇವರ ಕಲಾಕೃತಿ ಪ್ರದರ್ಶನಗೊಂಡಿದೆ. 'ಕಲಬುರಗಿ ಕಂಪು' ಶಿಲ್ಪ ಕಲಾಶಿಬಿರದಲ್ಲಿಯೂ ಕೂಡ ಇವರು ಭಾಗವಹಿಸಿ ಸುಂದರವಾದ ಶಿಲ್ಪ ಕಲಾಕೃತಿಯನ್ನು ರಚಿಸಿದ್ದಾರೆ.

(ಎಎಸ್ಎಸ್)

ಕೇಶವರಾವ್ ವಾಘಮಾರೆ: ಬೀದರ ಜಿಲ್ಲೆಯಲ್ಲಿ ಹಿಂದೂಸ್ತಾನಿ ಸಂಗೀತವನ್ನು ಆ ಮೂಲಕ ತಬಲಾ ವಾದನವನ್ನು ಜನಪ್ರಿಯ ಗೊಳಿಸಿದವರು. ಪಟ್ಟಣದ ಹೆಸರಾಂತ ತಬಲಾ ವಾದಕ ಪಂ. ಕೇಶವರಾವ್ ವಾಘಮಾರೆ ಕರ್ನಾಟಕದ ಹಿರಿಯ ತಲೆ ಮಾರಿನ ತಬಲಾ ವಿದ್ವಾಂಸರ ಲ್ಲೊಬ್ಬರಾಗಿದ್ದಾರೆ. ಎಂಭತ್ತರ ಪಂಡಿತ್ ಪರಶುರಾಮ ಖಮೀತಕರ, ಪಂಡಿತ್ ದಾಮ ಅಣ್ಣಾಮಂಗಳ

ಪೇಟೇಕರ್, ಪಂಡಿತ್ ನರಹರಿ ಭಟ್ ಮುಂತಾದ ಹಿರಿಯ ತಲೆಮಾರಿನ ದಿಗ್ಗಜರಲ್ಲಿ ಇವರು ಶಿಕ್ಷಣ ಪಡೆದಿದ್ದಾರೆ.




ದೇಶದಾದ್ಯಂತ ಹಲವಾರು ಹಿಂದೂಸ್ತಾನಿ ಸಂಗೀತ ಕಲಾವಿದರಿಗೆ ತಬಲಾ ಸಾಥ್ ನೀಡಿ ಇವರು ಜನಪ್ರಿಯತೆ ಗಳಿಸಿಕೊಂಡಿದ್ದಾರೆ. ಪಂಡಿತ್ ನನ್ನೆ ಬಾಬು, ಪಂಡಿತ್ ಕಂಡೆ ಬುವಾ ಈಚಲಕಾರಂಜಿ, ಪಂಡಿತ್ ಬಾಬುರಾವ್ ಈಚಲಕಾರಂಜಿ, ಪಂಡಿತ್ ದಾಂಡೇಕರ್ ಫಂಡರಪುರ್, ಪಂಡಿತ್ ಕಾಗಲ್‌ಕರ್ ಭಾರ್ಸಿ ಮುಂತಾದ ಹಿರಿಯ ಹಿಂದೂಸ್ತಾನಿ ಸಂಗೀತ ವಿದ್ವಾಂಸರು ಇವರ ತಬಲಾ ಸಾಥ್ ಪಡೆದಿದ್ದಾರೆ. ಇವರ ಈ ಸಂಗೀತ ಸೇವೆ ನಾಡಿನಾದ್ಯಂತ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ಮತ್ತು ಮಠ ಮಂದಿರಗಳಲ್ಲಿ ನಡೆದಿದೆ.

ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದ ಶಾಖೆಯನ್ನು ಬೀದರ ಜಿಲ್ಲೆಯ ಹುಮನಾ ಬಾದಿನಲ್ಲಿ ತೆರೆದು, ಸುಮಾರು ಎರಡು ದಶಕಗಳಿಂದ ಈ ಶಾಖೆಯ ಮೂಲಕ ನೂರಾರು ಸಂಗೀತ ಕಲಾವಿದರು ಮತ್ತು ತಬಲಾ ವಾದಕರನ್ನು ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಇವರು ತಮ್ಮ ಸುದೀರ್ಘ ಸಂಗೀತ ಸೇವೆಗಾಗಿ ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ರಾಷ್ಟ್ರೋತ್ಥಾನ ಪ್ರಶಸ್ತಿ. ಪಂಚಾಕ್ಷರಿ ಗವಾಯಿಗಳ ಪುಣ್ಯ ಸ್ಮರಣೆ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ ಮತ್ತು ಹಲವಾರು ಮಠಾಧೀಶರುಗಳು ನೀಡಿರುವ ಗೌರವ ಸನ್ಮಾನಗಳು ಪ್ರಮುಖವಾದವು. ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 2004–05ನೇ ಸಾಲಿನ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದೆ.

ಇವರು ತಾವೇ ಸ್ವತಃ ತಬಲಾ ವಾದಕರಾಗಿ, ಅನೇಕ ಜನ ತಬಲಾ ನುಡಿಸುವ ಶಿಷ್ಯರನ್ನು ತಯಾರಿಸಿದ್ದಾರೆ. ಇವರ ಮಗ ಜನಾರ್ಧನ ಹೈದ್ರಾಬಾದ ಕರ್ನಾಟಕ ಭಾಗದ ಜನಪ್ರಿಯ ತಬಲಾ ವಾದಕರಲ್ಲೊಬ್ಬರಾಗಿದ್ದಾರೆ. ಇವರು ತಬಲಾ ವಾದ್ಯ ತಯಾರಿಕೆಯಲ್ಲೂ ನಿಷ್ಣಾತರಾಗಿದ್ದಾರೆ. ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದ ಸಂಸ್ಥಾನ ಹಿರೇಮಠದಲ್ಲಿ ಇವರ ತಬಲಾ ವಾದನ ಅಸಂಖ್ಯಾತ ಸಂಗೀತ ಪ್ರೇಮಿಗಳ ಮನಸೂರೆಗೊಳ್ಳುತ್ತದೆ. ಮಾಣಿಕ ನಗರದ ಮಾಣಿಕಪ್ರಭು ಸಂಸ್ಥಾನದ ಸಂಗೀತ ದರ್ಬಾರಿನಲ್ಲಿ ಇವರು ಅನೇಕ ವರ್ಷಗಳಿಂದ ತಬಲಾ ಸೇವೆ ಮಾಡುತ್ತಿದ್ದಾರೆ. ಇವರ ಪರಿಶ್ರಮದ ಫಲವಾಗಿ ಬೀದರ ಜಿಲ್ಲೆಯಲ್ಲಿ ತಬಲಾ ವಾದನ ತುಂಬ ವ್ಯಾಪಕವಾಗಿ ಪ್ರಸಾರಗೊಂಡಿದೆ. (ಎಸ್‌ಎಂಜಿ)

ಕೇಶವರಾವ್ ಸೂರ್ಯವಂಶಿ: ಬೀದರ ಜಿಲ್ಲೆಯಲ್ಲಿ ಹಿಂದೂಸ್ತಾನಿ ಸಂಗೀತವನ್ನು ವ್ಯಾಪಕವಾಗಿ ಪ್ರಸಾರ ಮಾಡಿದವರು. ತಬಲಾ ವಾದನದಲ್ಲಿ ಅಪಾರ ಸಾಧನೆಗೈದು ತಬಲಾ ವಾದಕರಾಗಿ ಹೆಸರು ಸಂಪಾದಿಸಿದ್ದಾರೆ. ಕನ್ನಡ ನಾಡಿನ ಜನಪ್ರಿಯ ತಬಲಾ ವಾದಕರಲ್ಲೊಬ್ಬರು. 05.05.1937ರಂದು ಕೀರ್ತನಕಾರರ ಹಾಗೂ ಭಜನ್ ಗಾಯಕರ ಮನೆತನದಲ್ಲಿ ಜನಿಸಿದರು. ತಂದೆ ಸೂಭಾನ ರಾವ್ ಸೂರ್ಯವಂಶಿ. ಭಜನ್ ಹಾಗೂ ಕೀರ್ತನಕಾರರಾದ ಇವರಿಗೆ ಮಾತ್ರ ಲಯ ವಾದ್ಯಗಳ ಕಡೆಗೆ ಒಲವು ಮೂಡಿತು. ಹಾಗಾಗಿ ಇವರು ಪಂ. ಶಾಂತಾರಾಮ ಚಿಗ್ರಿ ಗುರೂಜಿ ವಿಜಾಪುರಕರ್ ಲಾತೂರ ಇವರುಗಳಲ್ಲಿ ತಬಲಾ ವಾದನದಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದು ಮುಂದೆ ಪುಣೆಯ ಪಂ. ಆಯವಂತರಾವ್ ಮಿರಜ್‌ಕರ್ ಅವರಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ.



1962ರಲ್ಲಿ ಪುಣೆಯಲ್ಲಿ ಸವಾಯ್ ಗಂಧರ್ವರ ಪುಣ್ಯತಿಥಿಯಂದು, ಇವರು ನೀಡಿದ ತಬಲಾ ವಾದನ ಇವರ ಮೊದಲ ಕಾರ್ಯಕ್ರಮ. ಅನಂತರ ಲಾತೂರಿನ ಸಂಗೀತ ಸಮ್ಮೇಳನ, ಬೆಂಗಳೂರು, ಬೀದರ್ ಮೊದಲಾದ ಊರುಗಳಲ್ಲಿ ನರಸಿಂಹಲು ವಡವಟ್ಟಿಯವರ ಕ್ಲಾರಿಯೊ ನೆಟ್, ನನ್ನೆಬಾಬು ಕುವರ್ ಇವರ ಹಾರ್ಮೋನಿಯಂ ವಾದನಕ್ಕೆ ಅಲ್ಲದೆ ಅನೇಕ ಸಂಗೀತ ಬೈಠಕ್, ದರಬಾರ್‌ಗಳಲ್ಲಿ ತಮ್ಮ ಪ್ರತಿಭೆಯನ್ನು ಬೆಳಗಿಸಿದ್ದಾರೆ.

ಪ್ರಸ್ತುತ ಬಾಲ್ಕಿಯ ಶಾರದಾ ಸಂಗೀತ ಕಲಾ ಮಂಡಳಿಯ ಅಧ್ಯಕ್ಷರಾಗಿ, ಬೀದರ್ ಜಿಲ್ಲಾ ಸಂಗೀತ ಕಲಾಗಾರ ಸಂಘಟನೆ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ಸದ್ಗುರು ಸಂಗೀತ ವಿದ್ಯಾಲಯದ ಸಂಚಾಲಕರೂ ಆಗಿದ್ದಾರೆ.

ಇವರು ತಬಲಾ ವಾದಕರಾದರೂ ವಂಶ ಪಾರಂಪಾರ್ಯವಾಗಿ ಬಂದಿರುವ ಕೀರ್ತನ ಮತ್ತು ಭಜನ್ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದು ಅದರಲ್ಲೂ ಸಾಕಷ್ಟು ಪರಿಣತಿಯನ್ನು ಹೊಂದಿದ್ದಾರೆ.

ಹೀಗೆ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೇವೆ ಸಲ್ಲಿಸಿರುವ ಇವರನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರ ಪ್ರಯತ್ನದ ಫಲವಾಗಿ ಬೀದರ ಜಿಲ್ಲೆ ಹಾಗೂ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಹಿಂದೂಸ್ತಾನಿ ಸಂಗೀತ ಜನಪ್ರಿಯತೆ ಗಳಿಸಿದೆ. ಇವರ ವಿಶೇಷ ಆಸಕ್ತಿಯಿಂದಾಗಿ ಭಾಲ್ಕಿಯ ಹಿರೇಮಠ,

ಕುಂಟೆಗಾಂ ವದ ಹನುಮಾನ ಸಂಗೀತ ದರ್ಬಾರ, ಭಾಲ್ಕಿ ದೇವಿ ನಗರದ ನವರಾತ್ರಾ ಸಂಗೀತ ದರ್ಬಾರಗಳು ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸುವಲ್ಲಿ ಸಫಲವಾಗಿವೆ.
(ಎಸ್ಎಂಜಿ)

ಕೊ

ಕೊಟ್ಟಿಗೆ: ರೈತನ ದನ–ಕರುಗಳಿಗಾಗಿ ಬಳಸುವ ಮನೆಯ ಒಂದು ಭಾಗ. ದನದ ಹಟ್ಟಿ. ಭಾರತದ ದನಕರುಗಳಲ್ಲಿ ಅಸಂಖ್ಯಾತ ತಳಿಗಳಿವೆ. ಕಾಠೇವಾಡ ಮತ್ತು ಪಂಜಾಬದಲ್ಲಿ ವಿಶೇಷ ಮಾದರಿಯ ತಳಿಗಳಿವೆ. ಹಾಗೆಯೇ ಕರ್ನಾಟಕದಲ್ಲಿ ವಿಶಿಷ್ಟ ಜಾತಿಯ ಕೊಂಬಿನ ಹೋರಿಗಳಿವೆ. ಹೀಗೆ ರೈತರು ದಿನನಿತ್ಯದ ಕೆಲಸದಲ್ಲಿ ಭಾಗಿಯಾಗುವ ದನಕರುಗಳನ್ನು ಕಟ್ಟಲು ವಿಶಿಷ್ಟ ವಾದ, ಕಲಾತ್ಮಕವಾದ ಕೊಟ್ಟಿಗೆಗಳನ್ನು ನಿರ್ಮಿಸುವರು. ಗ್ರಾಮೀಣ ಪ್ರದೇಶದ ಮನೆಗಳ ವಿನ್ಯಾಸವೇ ಸುಂದರವಾದುದು, ಕೊಟ್ಟಿಗೆಗಳಿಲ್ಲದ ಮನೆಗಳನ್ನು ಅವರು ಕಟ್ಟುವುದಿಲ್ಲ ಏಕೆಂದರೆ ದನ ಕರುಗಳು ರೈತನ ಬದುಕಿನೊಂದಿಗೆ ಹಾಸು ಹೊಕ್ಕಾಗಿವೆ. ಮನೆಯ ಮುಂಭಾಗದಲ್ಲಿ ಆಚೆ ಈಚೆ ಕಟ್ಟೆಗಳಿರುವ ಬಂಕ, ಬಂಕದಿಂದ ಸ್ವಲ್ಪ ಮುಂದೆ ಸಾಗಿದರೆ ಕೊಟ್ಟಿಗೆ, ನಂತರ ಪಡ ಸಾಲೆ, ನಂತರ ಅಡುಗೆ ಕೋಣೆ, ಮಲಗುವ ಕೋಣೆ, ಬಚ್ಚಲು ಕೋಣೆ, ಬಾಣಂತಿ ಕೋಣೆ, ದೇವರ ಕೋಣೆ ಇತ್ಯಾದಿ ಇವು ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಸಾಮಾನ್ಯವಾಗಿರುವವು. ಇಂದು ಈ ಎಲ್ಲಾ ಲಕ್ಷಣಗಳುಳ್ಳ ಮನೆಗಳನ್ನು ಕಾಣುವದೇ ವಿರಳವಾಗಿದೆ.



ಕೊಟ್ಟಿಗೆ

ಕೊಟ್ಟಿಗೆಗಳು ಎಂದರೆ ಮನೆಯ ಹೊರ ಭಾಗದಲ್ಲಿ ಪಶು, ಅಶ್ವಗಳನ್ನು ಕಟ್ಟಲೆಂದೇ ಕಟ್ಟಿದ ಚಿಕ್ಕಕೊಠಡಿ. ಕೊಟ್ಟಿಗೆಗಳಿಗೆ ಹಟ್ಟಿ, ಹಕ್ಕೆ, ಕೊಟಿಗೆ, ಗೋದಲಿ ಇತ್ಯಾದಿ ಹೆಸರುಗಳಿರುವವು. ಕೊಟ್ಟಿಗೆ ಗಳು ದನ ಕರುಗಳನ್ನು ಕಟ್ಟುವ ಸುರಕ್ಷಿತ ಸ್ಥಳಗಳು. ಮಳೆ, ಗಾಳಿ, ಬಿಸಿಲುಗಳಿಂದ ದನ ಕರುಗಳನ್ನು ರಕ್ಷಿಸಲು ಮೇಲ್ಛಾವಣಿಯುಳ್ಳ ಕೊಟ್ಟಿಗೆಗಳನ್ನು ಕಟ್ಟುವ ರೂಢಿ ಹೈದ್ರಾಬಾದ ಕರ್ನಾಟಕ ಹಾಗೂ ಕರ್ನಾಟಕದ ಇತರ ಪ್ರದೇಶಗಳಲ್ಲಿದೆ. ಕೊಟ್ಟಿಗೆಗಳಲ್ಲಿ ಎರಡು ಮಾದರಿಯ ಕೊಟ್ಟಿಗೆಗಳನ್ನು ಕಾಣುತ್ತೇವೆ. 1. ಗೋಡೆಗೆ ಹತ್ತಿಕೊಂಡ ಕೊಟ್ಟಿಗೆಗಳು. 2. ಇದರ (ಎದುರು ಬದುರಾದ) ಕೊಟ್ಟಿಗೆಗಳು.


1. **ಗೋಡೆಗೆ ಹತ್ತಿಕೊಂಡ ಕೊಟ್ಟಿಗೆಗಳು:** ಇವು ಸಾಧಾರಣ ಕೊಟ್ಟಿಗೆಗಳಾಗಿದ್ದು, ದನಗಳನ್ನು ಕಟ್ಟಲು ಕಟ್ಟಿಗೆಯ ಗೂಟ ಗಳನ್ನು ಇಲ್ಲವೆ ರಂಧ್ರವುಳ್ಳ ಕಲ್ಲನ್ನೊ ಹಾಕಿರುತ್ತಾರೆ. ಕೊಟ್ಟಿಗೆಯಲ್ಲಿಯ ಇನ್ನೊಂದು ವಿನ್ಯಾಸವೆಂದರೆ ದನಗಳು ತಿನ್ನುವ ಹುಲ್ಲು ಆಚೆ–ಈಚೆ ಸರಿದು, ಬಿದ್ದು ಹಾಳಾಗದಂತೆ ಕಟ್ಟಿಗೆಯ ಪಳಿಯನ್ನೊ ಅಥವಾ ಕಲ್ಲಿನ ಪಡಿಯನ್ನೊ ಹಾಕಿರುತ್ತಾರೆ.

2. **ಗೋದಲಿ–** ಇದು ಹೈದ್ರಾಬಾದ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾದುದು. ಅತಿ ಹೆಚ್ಚು ಪ್ರಮಾಣದ ದನ ಕರುಗಳನ್ನು ಕಟ್ಟಲು, ಎದುರು ಬದುರಾಗಿ ನಿಲ್ಲುವ ವ್ಯವಸ್ಥೆ ಮಾಡಿರುವುದೇ ಇದರ ಗೋದಲಿ ಅಥವಾ ಎದುರು ಬದರಾದ ಕೊಟ್ಟಿಗೆಗಳು.

ಅಂಟ ನಿರ್ಮಾಣ: ಕೊಟ್ಟಿಗೆಗಳ ಮೇಲೆ ನಿರ್ಮಿಸಲಾದ ಬಹು ವಿಶಿಷ್ಟವಾದ ಹಾಗೂ ರೈತನ ಜಾಣ್ಮೆ ಪ್ರತೀಕವೇ ಈ ಅಂಟ ಗಳು (ಅಟ್ಟ). ಈ ಅಂಟದಲ್ಲಿ ಮೇವು, ಕನಕಿ, ಕೊರಪ, ಹೊಟ್ಟು ಇತ್ಯಾದಿ ಕೃಷಿ ಉಪಕರಣಗಳನ್ನು ಇಡುತ್ತಿದ್ದರು. ಕೊಟ್ಟಿಗೆಗಳಲ್ಲಿ ಒಂದು ಅಂಕಣದ ಕೊಟ್ಟಿಗೆ, ಎರಡು ಅಂಕಣದ ಕೊಟ್ಟಿಗೆ, ಐದು ಅಂಕಣದ ಕೊಟ್ಟಿಗೆ, ಹತ್ತು ಅಂಕಣದ ಕೊಟ್ಟಿಗೆಗಳು ಇವೆ. **ಅಂಕಣವೆಂದರೆ:** ಇದು ಅಳತೆಯ ಮಾಪನ ಐದು ಅಡಿಗೆ ಒಂದು ಅಂಕಣವೆಂದು ಗ್ರಾಮೀಣರು ಕರೆಯುತ್ತಾರೆ. ಹೀಗೆ ಕೊಟ್ಟಿಗೆಗಳ ಅಳತೆಯು ಗ್ರಾಮೀಣರ ಪ್ರತಿಷ್ಠೆಯನ್ನು ನಿರ್ಧರಿಸುವವಾಗಿದ್ದವು. ಗ್ರಾಮೀಣರ ಬದುಕಿಗೆ ಅವಶ್ಯಕವಾಗಿ ಇರಲೇಬೇಕಾದವುಗಳಲ್ಲಿ ಕೊಟ್ಟಿಗೆಯು ಒಂದು. ನಮ್ಮ ಜನಪದ ದಲ್ಲಿ ಕೊಟ್ಟಿಗೆಯನ್ನು ಕುರಿತಾಗಿ ಗಾದೆಯ ಮಾತೊಂದಿದೆ 'ಇಕ್ಕುವವಳು ನಮ್ಮವಳಾದರೆ ಕೊಟ್ಟಿಗೆಯಲ್ಲಾದರೂ ಉಂಡೇನು' ಎಂಬುದಿದೆ. ಇಂದು ಕೊಟ್ಟಿಗೆಗಳ ಪ್ರಾಮುಖ್ಯತೆ ಯನ್ನೇ ಬಿಂಬಿಸುತ್ತದೆ.

(ಎಸ್ಎಸ್ಎಂ)

ಕೊಪ್ಪಳದ ಶಿರಹಟ್ಟಿ ವೆಂಕೋಬರಾಯ: ವೃತ್ತಿ ರಂಗ ಭೂಮಿ ನಟ. ರಂಗಭೂಮಿಗೆ ಅಪೂರ್ವ ಕೊಡುಗೆ ನೀಡಿ ದವರು. ಕೀರ್ತನಕೇಸರಿ ಜಯ ರಾಮಚಾರರಿಂದ ಕೊಪ್ಪಳ ಪ್ರಸಿದ್ಧಿಗೆ ಬಂದಂತೆ ನಾಟಕ ಸಾರ್ವಭೌಮ ವೆಂಕೋಬ ರಾಯರಿಂದ ಶಿರಹಟ್ಟಿ ಪ್ರಸಿದ್ಧಿ ಪಡೆಯಿತು. ಶಿರಹಟ್ಟಿ ವೆಂಕೋಬರಾಯರು



ಕೂಡಾ ಮೂಲತಃ ಕೊಪ್ಪಳದವರು. 1903ರಲ್ಲಿ ವೆಂಕೋಬರಾಯರು ನಾಟಕ ಕಂಪನಿ ಕಟ್ಟಿದಾಗ, ಬೈಲಹೊಂಗಲದ ಶಿವಮೂರ್ತಿ ಸ್ವಾಮಿ ಕಣಬರಗಿ ಮಠರು 1901ರಲ್ಲಿ 'ಕೊಣ್ಣೂರು ಕಾಡಸಿದ್ಧೇಶ್ವರ ಸಂಗೀತ ನಾಟಕ ಮಂಡಳಿ' ಸ್ಥಾಪಿಸಿ ಎರಡು ವರ್ಷ ಗತಿಸಿತ್ತು. 'ಮೈಸೂರಲ್ಲಿ ರತ್ನಾವಳಿ ನಾಟಕ ಸಭಾ' ಆರಂಭಿಸಿ ಒಂದು ವರ್ಷವಾಗಿತ್ತು. ಉತ್ತರ ಕರ್ನಾಟಕದ ವಾಮನ್‌ರಾವ್ ಮಾಸ್ತರ ಕಂಪನಿ 'ವಿಶ್ವ ಗುಣಾದರ್ಶ ಮಂಡಳಿ' ಆರಂಭಗೊಂಡದ್ದು 1913ರಲ್ಲಿ. ಇವರು ಶಿರಹಟ್ಟಿ ವೆಂಕೋಬರಾಯರ ಕಂಪನಿಯಲ್ಲಿ ಪಳಗಿ ಪ್ರಸಿದ್ಧಿಗೆ ಬಂದವರು. ಕೊಪ್ಪಳ ತಾಲ್ಲೂಕಿನ ಕವಲೂರಿನವರಾದ ಗರೂಡ ಸದಾಶಿವರಾಯರ 'ದತ್ತಾತ್ರೇಯ ಸಮಗೀತ ನಾಟಕ ಮಂಡಳಿ' ಆರಂಭವಾದದ್ದು 1913–14ರಲ್ಲಿ. ಗುಬ್ಬಿ ಕಂಪನಿ ಗುಬ್ಬಿ ವೀರಣ್ಣನವರ ಒಡೆತನಕ್ಕೆ ಬಂದದ್ದು 1917ರಲ್ಲಿ. ಕರ್ನಾಟಕ ರಂಗಭೂಮಿಯ ಆರಂಭ ಕಾಲದ ಇತಿಹಾಸ ನೋಡಿದರೆ ಶಿರಹಟ್ಟಿ ವೆಂಕೋಬರಾಯರು ಕರ್ನಾಟಕ ರಂಗಭೂಮಿಗೆ ಸಲ್ಲಿಸಿದ ಗಣನೀಯ ಸೇವೆಯ ಅರಿವಾಗುತ್ತದೆ.

ಇವರು ಕೊಪ್ಪಳದ ಹುಲಗೇರಿ ಹನುಮಂತರಾವ್ ವಕೀಲರ ಮಗ. ತಾಯಿ ಕೃಷ್ಣವೇಣಿ; ಜನನ 1885ರಲ್ಲಿ. ಇವರು ಹನ್ನೆರಡು ವರ್ಷದವರಾದಾಗ ತಂದೆ ತೀರಿಕೊಂಡರು. ಬೇರೆ ದಾರಿ ಕಾಣದೆ ತಾಯಿ ಚಿಕ್ಕಮಗನನ್ನು ಕರೆದುಕೊಂಡು ತವರೂರಿಗೆ ಬಂದರು. ಅಣ್ಣ ತಮ್ಮಣ್ಣ ನಾಯಕರು ತಂಗಿ ಅಳಿಯರಿಬ್ಬರಿಗೂ ಅಕ್ಕರೆಯ ಆಶ್ರಯನೀಡಿದರು. ಶಿರಹಟ್ಟಿಗೆ ಇದು ಭಾಗ್ಯವಾಗಿ ಪರಿಣಮಿಸಿತು. ಕೊಪ್ಪಳ ವೆಂಕೋಬರಾಯರೆಂದು ಪ್ರಸಿದ್ಧರಾಗಬಹುದಿದ್ದವರು ಶಿರಹಟ್ಟಿ ವೆಂಕೋಬರಾಯರೆಂದು ಪ್ರಖ್ಯಾತರಾದರು!

ಶಾಲೆಯಲ್ಲಿ ಜರುಗುತ್ತಿದ್ದ ನಾಟಕಗಳಲ್ಲಿ ವೆಂಕೋಬರಾಯರದು ಸಿಂಹಪಾಲು. ಮರಾಠಿ ನಾಟಕಗಳನ್ನು ನೋಡಿದ ಮೇಲಂತೂ ಇವರಲ್ಲಿ ಸುಪ್ತಾಭಿಲಾಷೆ ಜಾಗೃತವಾಯಿತು. ಮರಾಠಿ ನಾಟಕಗಳಿಗೆ ಸರಿದೊರೆಯಾಗುವ ನಾಟಕ ಕಂಪನಿ ಕಟ್ಟುವ ಹಂಬಲ ಪ್ರಬಲವಾಯಿತು. 1898ರಲ್ಲಿಯೇ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಶಿರಹಟ್ಟಿ ಸಂಗೀತ ನಾಟಕ ಮಂಡಳಿ' ಸ್ಥಾಪಿಸಿಬಿಟ್ಟರು. ಶಿರಹಟ್ಟಿ ಹಾಗೂ ನೆರೆಯ ಗ್ರಾಮಗಳಲ್ಲಿ ಪ್ರತಿಭೆಯುಳ್ಳ ಯುವಕರನ್ನು ಶೋಧಿಸಿ ತಮ್ಮ ಕಂಪನಿಗೆ ಸೇರಿಸಿಕೊಂಡರು. ಇದರಿಂದಾಗಿ ಆ ಭಾಗದ ಕಲಾವಿದರು ಸೇರಿಸಿಕೊಂಡರು. ಇದರಿಂದಾಗಿ ಆ ಭಾಗದ ಕಲಾವಿದರು ಬೆಳಕಿಗೆ ಬಂದರು.


ಕರ್ನಾಟಕದಲ್ಲಿ ಶಿರಹಟ್ಟಿ ವೆಂಕೋಬರಾಯರು ನಾಟಕವಾಡದ ಸ್ಥಳವೇ ಇಲ್ಲ. ಗದಗ, ಹುಬ್ಬಳ್ಳಿ, ಹಾವೇರಿ, ಧಾರವಾಡ, ಮಂಗಳೂರು, ಶಿವಮೊಗ್ಗ, ಬಾದಾಮಿ, ಬಾಗಲಕೋಟೆ, ಬೆಳಗಾವಿ, ಬೈಲಹೊಂಗಲ, ಹುಕ್ಕೇರಿ, ಸವದತ್ತಿ, ಅಥಣಿ, ನಿಪ್ಪಾಣಿ, ಕೊಪ್ಪಳ, ಹೊಸಪೇಟೆ, ಬಳ್ಳಾರಿ ಹೀಗೆ ನೂರಾರು ನಗರಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿ ಪ್ರಸಿದ್ಧಿ ಪಡೆದರಲ್ಲದೆ, ಮದ್ರಾಸ್, ಕೊಯಿಮತ್ತೂರು, ಆದವಾನಿ, ಮಿರಜ್, ಸಾಂಗ್ಲಿ, ಸೊಲ್ಲಾಪುರ ಹೀಗೆ ಕನ್ನಡ ಸರಿಯಾಗಿ ತಿಳಿಯದಿದ್ದ ತಮಿಳು, ತೆಲುಗು ಮರಾಠಿ ಪ್ರದೇಶಗಳಲ್ಲಿ ವೆಂಕೋಬರಾಯರು ತಮ್ಮ ಕಲಾ ವೈಖರಿಯಿಂದ ಜನಮೆಚ್ಚುಗೆ ಪಡೆದದ್ದು ಒಂದು ಸಾಹಸವೇ ಸರಿ. 1938ರ ಜುಲೈ 15ರಂದು ಇಹಲೋಕ ತ್ಯಜಿಸಿದ ಇವರು ಕನ್ನಡ ವೃತ್ತಿ ರಂಗಭೂಮಿಯ ಪಿತಾಮಹರೆನ್ನಿಸಿ ನಾಟಕ ಸಾರ್ವಭೌಮರೆನ್ನಿಸಿದ್ದಾರೆ. (ಎಸ್‌ಕೆಇ)

ಕೋ

ಕೋಟೆ ಕೊತ್ತಲುಗಳು: (ಗುಲ್ಬರ್ಗಾ ಜಿಲ್ಲೆ) ಗುಲ್ಬರ್ಗಾ ಜಿಲ್ಲೆಯ ಭಾಗವು ಬಟ್ಟ ಬಯಲಿನಲ್ಲಿ ಹರಡಿದ ಪ್ರದೇಶ. ಇದರ ಬಟ್ಟಬಯಲು ಕಾಲದುದ್ದಕ್ಕೂ ಬಿಟ್ಟ ಕೋಟೆಗಳನ್ನು ನೀಡಿದುದನ್ನು ಆ ಜಿಲ್ಲೆಯ ಇತಿಹಾಸ ಹೇಳುತ್ತದೆ. ಈ ಜಿಲ್ಲೆಯ ವಿಸ್ತಾರದಲ್ಲಿ ಸಾಕಷ್ಟು ದೊಡ್ಡದು. ಈ ಜಿಲ್ಲೆಯಲ್ಲಿ ಇತಿಹಾಸದುದ್ದಕ್ಕೂ ಶಿಲಾಶಾಸನಗಳು, ಗುಡಿಗುಂಡಾರಗಳು, ಕೆರೆ ಬಾವಿ ಪುಷ್ಕರಣಿಗಳು, ಬೌದ್ಧ ಸ್ತೂಪಗಳು, ಬ್ರಾಹ್ಮಣ ಅಗ್ರಹಾರಗಳು, ಮಸೀದಿಗಳು, ಗುಂಬಝುಗಳು, ದರ್ಗಾಗಳು, ರಕ್ಷಣಾ ಗೋಡೆಗಳು, ಕೋಟೆಗಳು ಕೊತ್ತಲಗಳು ಇತ್ಯಾದಿ ಸಾಕಷ್ಟು ಪರಂಪರೆಯ ನಿದರ್ಶನಗಳಾಗಿವೆ.

ಬೌದ್ಧ ಸಂಪ್ರದಾಯದ ತಾಣ, ಶಾತವಾಹನರ ಕಾಲದ ಒಂದು ವೈಶಿಷ್ಟ್ಯ ಪೂರ್ಣ ಸನ್ನತಿ ಆಗಿದೆ. ಶಾತವಾಹನರ ಕಾಲೀನ ಸ್ತೂಪಗಳು ಜಾತಕ ಫಲಕಗಳು, ಚಂದ್ರಲಾಂಬಾ ದೇವಾಲಯದ ಪಾವಟಿಗೆಗೆ ಉಪಯೋಗಿಸಿದ್ದ ಅಶೋಕನ ಶಿಲಾಶಾಸನ ಅಲ್ಲದೆ, ಚಂದ್ರಾಕಾರದಲ್ಲಿ ಸುತ್ತಿ ಬಳಸಿ ಹರಿಯುವ ಭೀಮಾ ನದಿಯ ದಂಡೆಗುಂಟ ಎರಡು ಸುತ್ತಗಳಲ್ಲಿರುವ

ಸಾರ್ವಜನೀಯ ಕೋಟೆ, ಅತ್ಯಂತ ಪ್ರಾಚೀನ ಕರ್ನಾಟಕದ ಕೋಟೆ ಎಂದು ಹೇಳಬಹುದು. ಗೋಡೆಯ ಪರಿಚ್ಛೇದ ವೀಕ್ಷಿಸಿದರೆ, ಅದರ ಒಳಮೈಯಲ್ಲಿ ಶಾತವಾಹನರ ಇಟ್ಟಿಗೆಗಳ ಜೋಡಣೆ ಇದ್ದು, ಹೊರ ಎರಡೂ ಬದಿಗಳಲ್ಲಿ ಮಣ್ಣಿನ ಇಳಿಜಾ



ಗುಲಬರ್ಗಾ ಕೋಟೆ

ರಾದ ದಿಬ್ಬಗಳನ್ನು ಪೇರಿಸಲಾಗಿದೆ. ಒಳಕೋಟೆಯು ಎತ್ತರ ಪ್ರದೇಶವನ್ನು ಆವರಿಸಿದರೆ ಹೊರಕೋಟೆಯು ಕೆಳಗಿನ ಪಾತಳೀಯ ಪ್ರದೇಶವನ್ನು ಅಕ್ರಮಿಸಿಕೊಂಡಿದೆ. ಇದೊಂದು ಜಲದುರ್ಗ ಹಾಗೂ ಸ್ಥಲ ದುರ್ಗಗಳ ಸಂಯುಕ್ತ ಮಾದರಿ ಪ್ರಾಚೀನ ಕೋಟೆಗಳು, ಸುಮಾರು 200 ಕ್ರಿ.ಶ. ದ ಸುತ್ತಮುತ್ತ, ಹೇಗೆ ಇರುತ್ತಿದ್ದವು ಎಂಬ ಕುತೂಹಲಕ್ಕೆ ಇದೊಂದು ಉತ್ತಮ ಪ್ರಥಮ ಘಟ್ಟ.

ಸನ್ನತಿ ತರುವಾಯ, ಗತಿಸಿದ 700 ವರುಷಗಳ ಅನಂತರ ಕಟ್ಟಲ್ಪಟ್ಟ, ರಾಷ್ಟ್ರಕೂಟರ ರಾಜಧಾನಿಯ ಮಳಖೇಡ ಕೋಟೆ. ಕಾಗಿನಾ ನದಿಯ ದಡವನ್ನು ಸ್ವಾಭಾವಿಕ ನೀರಿನ ರಕ್ಷಣಾ ಪಾತ್ರವನ್ನಾಗಿ ಉಪಯೋಗಿಸಿ, ಅದರ ದಂಡೆಗುಂಟ ಭದ್ರವಾದ, ಗ್ರಾನಾಯಿಟ್ ಹಾಗೂ ಡೆಕ್ಕನ ಟ್ರಾಪ್ ಶಿಲೆಗಳಲ್ಲಿ ವ್ಯವಸ್ಥಿತವಾಗಿ ಎರಡು ಸುತ್ತಗಳಲ್ಲಿ ಕಟ್ಟಲಾದ, ಕೋಟೆಯಿದು. ಇಲ್ಲಿ ಸುತ್ತಲಿನ ಅಗಳ, ಬುರುಜುಗಳು ಚಾಕಚಕ್ಯತೆಯ ಪ್ರವೇಶದ್ವಾರಗಳು, ಅರಮನೆ ತಾಣಗಳು, ಸಾಮಾನ್ಯರ ವಸತಿಗಳು ಇತ್ಯಾದಿಗಳ ಸ್ಪಷ್ಟ ಅಳವಡಿಕೆ ಇಲ್ಲಿ.

ಈ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಪ್ರಾಮುಖ್ಯವಾದ 14 ಕೋಟೆಗಳನ್ನು ಸಮೀಕ್ಷಿಸಲಾಗಿದ್ದು, ಅವು ಹೀಗಿವೆ: ಸನ್ನತಿ (ತಾ.ಚಿತ್ತಾಪುರ), ಇಜೇರಿ (ತಾ. ಜೇವರ್ಗಿ), ಫೀರೋಜಾಬಾದ (ತಾ. ಗುಲಬರ್ಗಾ), ಚಿನ್ನಳ್ಳಿ (ತಾ. ಅಫಜಲ್‌ಪುರ), ಮಳಖೇಡ (ತಾ. ಸೇಡಂ), ಯಾದಗಿರಿ (ತಾ. ಯಾದಗಿರಿ), ಯಾದಗಿರಿ (ತಾ. ಯಾದಗಿರಿ), ವನದುರ್ಗ (ತಾ. ಶಹಪುರ), ವಾಘಣಗೇರಿ (ತಾ. ಸುರಪುರ), ಶಹಪುರ (ತಾ. ಶಾಹಪುರ), ಸಾಗರ (ತಾ. ಶಹಪುರ) ಸುರಪುರ (ತಾ. ಸುರಪುರ) ಸೇಡಂ (ತಾ. ಸೇಡಂ), ಹಾಗೂ ಅಫಜಲಪುರ (ತಾ. ಅಫಜಲಪುರ) ಹೀಗೆ ಹದಿನಾಲ್ಕು ಕೋಟೆಗಳನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಇಲ್ಲಿಯ ಕೋಟೆಗಳು ಇತಿಹಾಸದ ಮೂರು ಮಹತ್ವದ ಕಾಲಘಟ್ಟಗಳಲ್ಲಿ–ಪ್ರಾಚೀನಕಾಲ, ಮಧ್ಯಯುಗೀನ ಕಾಲ ಹಾಗೂ ಮಧ್ಯಯುಗೀನ ಅಂತ್ಯಕಾಲ ಅಥವಾ ಆಧುನಿಕ ಕಾಲಗಳಲ್ಲಿ ಬೆಳೆದು ಬಂದಿವೆ ಎಂಬುದು ಕಂಡುಬಂದಿವೆ.

ಇಸ್ಲಾಂ ಕೋಟೆಗಳು: ಗುಲಬರ್ಗಾದ ಬಹಮನಿ/ಶಾಹಿಗಳು ಪ್ರಬುದ್ಧರಾಗಿ ಇಸ್ಲಾಂ ಬದುಕಿಗೆ ಬೇಕಾಗುವಂಥ ಕೋಟೆ, ಮಸೀದಿ, ಸಮಾದಿ (Tomb) ಅರಮನೆ, ನೀರಿನ ಸಂಗ್ರಹ, ಸೈನ್ಯ ಠಾಣೆ, ವೀಕ್ಷಣಾಲಯ ಬುರುಜ್, ದರಬಾರ್ ಹಾಲ್, ರಂಗೀನ್ ಮಹಲ್ ತೋಫ್ ಇಡುವ ಬುರುಜುಗಳು, ರಾಣೀ ಮಹಲ್, ಕಾರಂಜೀ, ಹೇಜ್, ನೀರಿನಕೊಳ ತೋಟ, ಇತ್ಯಾದಿಗಳನ್ನು ಅಳವಡಿಸಲಾಯಿತು. ಡೆಕ್ಕನ ಸುಲ್ತಾನರ ರಾಜ್ಯ ವಿಸ್ತಾರಗಳ ಪ್ರಕ್ರಿಯೆಯಲ್ಲಿ, ಹಾಗೂ ಅವರು ಉಪಯೋಗಿಸುವ ಯುದ್ಧೋಪಕರಣಗಳಲ್ಲಿ ಮುದ್ದು ಗುಂಡು ತುಬಾಕಿ ತೋಪು ಹಾಗೂ ಪ್ರಚುರ ಪಡಿಸಿದ ಯುದ್ಧ ಕಲೆಯಲ್ಲಿ ಈ ಭಾಗದ ಇಸ್ಲಾಂ ಕೋಟೆಗಳ ವಿನ್ಯಾಸ, ರಚನೆಗಳು ಹಿಂದುಕೋಟೆಗಳಿಂದ ಭಿನ್ನವಾಗಿ ರಚನೆಗೊಂಡವು. ಅಂಥ ಈ ಜಿಲ್ಲೆಯ ಇಸ್ಲಾಂ ಕೋಟೆಗಳಲ್ಲಿ ಕೆಲವುಗಳನ್ನು ಫಿರೋಜಾಬಾದ, ಅಫಜಲಪುರ, ಯಾದಗೀರ, ಇಜೇರಿ, ಸೇಡಂ, ಸಾಗರ, ಶಹಪುರ ಇತ್ಯಾದಿ ಕೋಟೆಗಳನ್ನು ಸೇರಿಸಬಹುದು. ಇವುಗಳನ್ನು ಔರಂಗಜೇಬನ ಅವಸಾನ (ಕ್ರಿ.ಶ. 1707)ದ ವರೆಗೆ, ಹಾಗೂ ತದನಂತರ ನಿಜಾಮಶಾಹಿ ಹೈದ್ರಾಬಾದ ಸಂಸ್ಥಾನ ಆಡಳಿತದವರೆಗೂ 18–19 ಹಾಗೂ 20ನೆಯ ಶತಮಾನದ ಆದಿವರೆಗೂ ಹಾಗೂ ಜೋಡಿಸಬಹುದು. ಇವುಗಳಲ್ಲಿ ಸ್ಥಳ ದುರ್ಗಗಳೇ ಹೆಚ್ಚು.

ಇತಿಹಾಸದ್ದುಕ್ಕೂ ಈ ಭಾಗದ ನೆಲದಲ್ಲಿ ಸಾಹಿತ್ಯಿಕ ಆಧ್ಯಾತ್ಮಿಕ ಮನಸ್ಸುಗಳ ಚಿಂತನೆ ನಡೆದಿದೆ ಆಯಾ ಕೋಟೆಗಳ ಒಳಾಂಗಣದಲ್ಲಿ.

ಸನ್ನತಿ ಕೋಟೆ: ಚಿತ್ತಾಪೂರ ತಾಲ್ಲೂಕಿನಲ್ಲಿ, ಅರ್ಧ ಚಂದ್ರಾಕಾರವಾಗಿ ಹರಿವ ತಿರುಗುವ ಭೀಮಾ ನದಿಯ ದಡದಲ್ಲಿ ಇರುವ ಸನ್ನತಿ ಕೋಟೆ ಕರ್ನಾಟಕದ ನೆಲದಲ್ಲಿ ಅತ್ಯಂತ ಪ್ರಾಚೀನ ಕೋಟೆ. ಕಾಲ ಕ್ರಿ.ಶ. 200, ಶಾತವಾಹನರ ಆಳ್ವಿಕೆಯ ಸಮಯ. ಕ್ರಿ.ಪೂ. 3ನೇ ಶತಕದ ಅಶೋಕನ ಶಿಲಾಶಾಸನ ದೊರೆಕಿದೆ ಇಲ್ಲಿ ಇದೊಂದು ಪ್ರಾಚೀನ ಕರ್ನಾಟಕದ ಬೌದ್ಧ ಕೇಂದ್ರ. ಇತ್ತೀಚಿನ ಪುರಾತತ್ವ ಉತ್ಖನನದಲ್ಲಿ ಇಲ್ಲಿ ಎರಡು ಭವ್ಯ ಬೌದ್ಧ ಸ್ತೂಪಗಳನ್ನು ಶೋಧಿಸಲಾಗಿದೆ. ರಾಷ್ಟ್ರಕೂಟರ ಕಾಲೀನ ಚಂದ್ರಲಾಂಬ ದೇವಸ್ಥಾನವು ನದಿ ದಡದಲ್ಲಿದೆ. ಈ ಕೋಟೆ ಎರಡು ಅರ್ಧ ಚಂದ್ರಕೃತಿಯ ವಿನ್ಯಾಸಗಳಲ್ಲಿ, ಒಂದರೊಳ ಗೊಂದರಂತೆ, ನದಿಯ ದಡದ ಗುಂಟ, ಇಟ್ಟಿಗೆಗಳ ಗೋಡೆಯ ಎರಡೂ ಬದಿಗೆ ಸೇರಿಸಿದ ಮಣ್ಣಿನ ದಿಬ್ಬಗಳಿಂದ ನಿರ್ಮಿಸಲಾಗಿದೆ. ಈ ಕೋಟೆ ಎರಡು ನೆಲಮಟ್ಟಗಳಲ್ಲಿ ಇದ್ದು ರಣಮಂಡ ಮೇಲ್ ಕೋಟೆ (Citadeel) ಹಾಗೂ ಕೆಲಕೋಟೆ (lower fort) ಹೀಗೆ ವಿಭಾಗಿಸಲ್ಪಟ್ಟು ಅರಸುಗಳಿಗೆ ಹಾಗೂ ಜನಸಾಮಾನ್ಯರಿಗೆ ಕ್ರಮವಾಗಿ ಸ್ಥಾನನೀಡಿ, ವಾಸಿಸಲು ಪ್ರವೇದ ಪಾತಳಿಗಳನ್ನು ನೀಡಿತ್ತು. ಹೊರಗಡೆಯ ಗೋಡೆಯು ಸುಮಾರು 2 ಕಿ.ಮೀ. ಒಳಗೋಡೆಯು ಸುಮಾರು 1 ಕಿ.ಮೀ. ಉದ್ದಳತೆಗಳಲ್ಲಿ ಹರಡಿವೆ.

ಪೂರ್ವ ಬದಿಯಿಂದ ಒಂದರ ನೇರ ಮತ್ತೊಂದರಂತೆ ಪ್ರವೇಶ ದ್ವಾರಗಳು ಈ ಎರಡೂ ಕೋಟೆ ಗೋಡೆಗಳನ್ನು ಭೇದಿಸಿವೆ. ಇದೊಂದು ಸರಳ ಸಾದಾ ಗೋಡೆಗಳಿರುವ ಕೋಟೆ. ಬೌದ್ಧ ನೆಲೆಯಾಗಿದ್ದರಿಂದ ಇದು ಸಾರ್ವಜನೀಯೋಪಯೋಗಿ, ಅಷ್ಟೇನೂ ರಕ್ಷಣಾ ಚಾಕಚಕ್ಯತೆಗಳು ಇಲ್ಲದ ಕೋಟೆ; 'ಶಾಶಂತಿ ಕಾಲದ ಶಾಂತಿ ಕೋಟೆ' ಎಂದು ಕರೆಯಬಹುದು.

ಮಳಖೇಡ (ಮಾನ್ಯಖೇಡ) ಕೋಟೆ: ಸೇಡಂ ತಾಲ್ಲೂಕಿನ ಕಾಗಿನಾ ನದಿಯ ದಂಡೆಯ ಮೇಲೆ, 8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಆಳಿದ ರಾಷ್ಟ್ರಕೂಟರ ವಿಶಾಲ ರಾಜ್ಯದ ರಾಜಧಾನಿ ಮಳಖೇಡ.

ಕಾಲಕಾಲಕ್ಕೆ ಆಕ್ರಮಣಗೊಂಡ ಪ್ರಾಚೀನ ಮಳಖೇಡ ಕೋಟೆಯು ಮುಸ್ಲಿಮರ ಕಾಲಕ್ಕೆ ಪೂರ್ತಿ ಮಾರ್ಪಾಟಾಗಿ, ಇಸ್ಲಾಂ ವಾಸ್ತುಶಿಲ್ಪ ಹೊತ್ತ ರೂಪ ತಳೆಯಿತು. ದುಂಡನೆ ಬುರುಜುಗಳು, ತಂಗುರಾಗಳು, ಮಸೀದಿ, ಬತ್ತೇರಿ, ಕೊಳ, ಕಾರಂಜಿ, ಮಿನಾರ್ ಗುಂಬಜ್‌ಗಳು, ಕಬ್ರಗಳು ಬೆಳೆದು ಬಂದವು. ಮಳಖೇಡ ಕೋಟೆಯು ಎರಡು ಸುತ್ತಿನ ಕೋಟೆ. ಹೊರಸುತ್ತು ಸಾರ್ವಜನಿಕರಿಗೆ ಬಳಸುತ್ತಾ ಬಾದಶಹನ ಮನೆತನ ದವರೆಗೆ. ಪಶ್ಚಿಮದ ಕಾಗಿನಾ ನದಿಯು ಹಾಗೂ ದಕ್ಷಿಣದಲ್ಲಿ ಹರಿಯುವ ಹಳ್ಳವು ನೈಸರ್ಗಿಕ ಕಂದರಗಳಾಗಿವೆ. ಉಪ್ಪಲೀ ಬುರ್ಜ, ಹುಸೇನಿ ದರ್ಗಾ, ಕಾಲೀ ಮಸೀದಿ, ಕಮಾನುಗಳುಳ್ಳ ಅರಮನೆಯ ಅವಶೇಷಗಳು ಹಾಗೂ ವೈಷ್ಣವ ಸಂತ ಮಧ್ವಾ ಚಾರ್ಯರಲ್ಲಿಯ ನಾಲ್ವರು ಶಿಷ್ಯರಲ್ಲಿ ಒಬ್ಬರಾದ ಅಕ್ಷೋಭ್ಯ ತೀರ್ಥರ ಶಿಷ್ಯರಾದ ಜಯತೀರ್ಥರು (ಟೀಕಾಚಾರ್ಯರು) ಮಳಖೇಡನ್ನು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡು, ಮಧ್ವಾ ಚಾರ್ಯರ ಕೃತಿಗಳ ಮೇಲೆ ಟೀಕೆಗಳನ್ನು ಬರೆದರು. ದೂರದಲ್ಲಿ ಈ ಇಬ್ಬರೂ ಯತಿಗಳ ಸಮಾಧಿಗಳಿವೆ. ಇದೊಂದು ಅತ್ಯಂತ, ಇತಿಹಾಸದಲ್ಲಿ ಮಹತ್ವವಾದ ತಾಣ; ಭಾಗಶಃ ಜಲಾವೃತ, ಭಾಗಶಃ (ಮೂರು ಕಡೆ) ಸ್ಥಳಾವೃತ್ತ ಸಂಕೀರ್ಣ ಕೋಟೆ ಇದು ಕನ್ನಡಿಗರ ಸ್ವಾಭಿಮಾನವನ್ನು ಎತ್ತರಿಸಿದ ಕೋಟೆ ಇದು.

ಫಿರೋಜಾಬಾದ್ ಕೋಟೆ: ಗುಲಬರ್ಗಾ ತಾಲ್ಲೂಕಿನಲ್ಲಿ, ಗುಲಬರ್ಗಾದಿಂದ ದಕ್ಷಿಣಕ್ಕೆ ಜೇವರ್ಗಿ ರಸ್ತೆಯಲ್ಲಿ 34 ಕಿ.ಮೀ. ದೂರದಲ್ಲಿದೆ. ಭೀಮಾನದಿ ದಡದಲ್ಲಿ, ಬಹಳ ಅಂದವಾಗಿ ತಾಜುದ್ದೀನ ಫಿರೋಜ್‌ಶಹನು ಒಬ್ಬ ವಿದ್ವಾಂಸ ಅರಸನೆಂದು ಪ್ರತೀತಿ–ದೌಲತಾಬಾದಿನಲ್ಲಿ ಖಗೋಲ ವೀಕ್ಷಣಾಲಯ ಕಟ್ಟಿದ, ಹಾಗೂ ಯಾವಾಗಲೂ ವಿದ್ವಾಂಸರ ಸಂಗದಲ್ಲಿರುವ ಅರಸು– ಕ್ರಿ.ಶ. 1400ರಲ್ಲಿ ಕಟ್ಟಿಸಿದನು.

ಬಲಿಷ್ಠವಾದ ಕೋಟೆ, ಭದ್ರಬಾಗಿಲುಗಳು, ತೆನೆಗಳು, ಬುರುಜುಗಳು, ಪ್ರವೇಶ ಸುಂದರ ದ್ವಾರಗಳು, ಅಂಗಳ, ತೋಫು ಗಳು, ಕಮಾನುಗಳುಳ್ಳ ಕಾವಲುಗಾರರ ಕೋಣೆಗಳು, ಬಂದೂಕು ಕಿಂಡಿಗಳು, ದಿಕ್ಕು ತಪ್ಪಿಸುವ ತಿರುಗುಗಳು ಅಗಲವಾದ ಕೋಟೆ ಗೋಡೆಗಳು ಉದ್ದುದ್ದಾದ ಸುಣ್ಣದ ಕಲ್ಲುಗಳಿಂದ ಸಂದಿ ಇಲ್ಲದೆ ಕಟ್ಟಲ್ಪಟ್ಟಿವೆ. ಪೂರ್ವದ ಬಾಗಿಲು ಬಲು ಭದ್ರ. ಪಶ್ಚಿಮ ದಿಕ್ಕಿನಲ್ಲಿ



ಫಿರೋಜಾಬಾದ್ ಕೋಟೆ

ನದಿಯು ಸ್ವಾಭಾವಿಕ ರಕ್ಷಣಾ ವಲಯವನ್ನ ನಿರ್ಮಿಸಿದೆ. ಪೂರ್ವದ ಹಾಗೂ ಪಶ್ಚಿಮದ ಪ್ರವೇಶ ದ್ವಾರಗಳನ್ನು ಜೋಡಿ ಸುವ ಅಗಲ ರಸ್ತೆ, ಎಡ–ಬಲ ಬದಿಗೆ ಅಳಿದುಳಿದ ಕಟ್ಟಡಗಳು, ಪಶ್ಚಿಮದ್ವಾರದ ಸಮೀಪ ಅರಮನೆ. ಎರಡು ಮಹಡಿಗಳುಳ್ಳ ರಾಣಿಯರ ವಾಸದ ಮನೆ ಗಳು, ಸ್ನಾನದ ಮನೆಗಳು, ನೀರಿನ ಸರಬರಾಜಿನ ವ್ಯವಸ್ಥೆ. ಅರಮನೆ ಆವರಣದ ಪೂರ್ವಕ್ಕೆ ದೊಡ್ಡ ಸುಂದರ ಜಾಮೀ ಮಸೀದಿ (95'X95') ಸಭಾಂಗಣ ಇವೆ. ಕೋಟೆಯ ಉತ್ತರಕ್ಕೆ 2 ಕಿ.ಮೀ. ದೂರದಲ್ಲಿ ಬಹಮನಿ ಕಾಲದ ಖಲೀಫಲ್ ಅಲ್ ರಹಮಾನನ ದರ್ಗಾ ಇದೆ. ದಕ್ಷಿಣ ಭಾರತ ದಲ್ಲಿ ಇಸ್ಲಾಂ ಅರಸರು ಕಟ್ಟಿಸಿದ ಸುಂದರ ಕೋಟೆಗಳಲ್ಲಿ ಇದೊಂದು ಮೈಲುಗಲ್ಲಾಗಿದೆ.

ಶಹಪುರ ಕೋಟೆ: ತಾಲ್ಲೂಕು ಕೇಂದ್ರವಾದ ಶಹಪುರವು ಗುಲಬರ್ಗಾದಿಂದ ದಕ್ಷಿಣಕ್ಕೆ 77 ಕಿ.ಮೀ. ದೂರದಲ್ಲಿದ್ದು, ಪೌರಾಣಿಕ ಸಗರ ಚಕ್ರವರ್ತಿಯ ಸಗರನಾಡಿನ ಮುಖ್ಯ ಕೇಂದ್ರ ವಾಗಿ ಇದ್ದೀತೆಂದೂ, ಸಮೀಪದ ಬೆಟ್ಟ ಸಗರಾದ್ರಿಯೆಂದೂ ಕರೆಯಲಾಗುತ್ತಿದೆ.

ಊರ ಸುತ್ತಲೂ ಕೋಟೆಗೋಡೆ ಈಗ ಬಹಳಷ್ಟು ನಾಶ ವಾಗಿದೆ. ಪಶ್ಚಿಮದ ಗೋಗಿದರ್ವಾಜಾ, ಸುರಪುರಕ್ಕೆ ಹೋಗುವ ರಸ್ತೆಯ ಪಕ್ಕದ ಮತ್ತೊಂದು ದರ್ವಾಜಾ ಮಾತ್ರ ಉಳಿದಿವೆ. ಊರ ದಕ್ಷಿಣಕ್ಕೆ ಇರುವ ಬೆಟ್ಟದ ಮೇಲಿನ ಬಹಳ ಸುತ್ತುಗಳಿಂದ ಕೂಡಿದ ಕೋಟೆಯು ಸಂಶೋಧಕರ ಗಮನ ಸೆಳೆಯುತ್ತದೆ. ಪೂರ್ವದ ಬೆಟ್ಟ ಹಾಗೂ ಪಶ್ಚಿಮದ ಬೆಟ್ಟಗಳ ಮೇಲಿರುವ ಕೋಟೆಗಳನ್ನು, ಮಧ್ಯದ ಕೊಳ್ಳದಲ್ಲಿರುವ ಕೋಟೆಯ ಗೋಡೆ ಗಳು ಜೋಡಿಸಿರುವುದರಿಂದ ಎರಡೂ ಸೇರಿ ಒಂದೇ ಕೋಟೆ ಯಂತೆ ಭಾಸವಾಗುತ್ತದೆ. ಇದು ಬಿಜಾಪುರದ ಆದಿಲ್‌ಶಹನ ಕಾಲದಲ್ಲಿ ಕ್ರಿ.ಶ. 1555ರಲ್ಲಿ ಮುಹಮ್ಮದ ಯುಸುಫನಿಂದ ಕಟ್ಟಲ್ಪಟ್ಟಿತ್ತೆಂದು ಪೂರ್ವದ ಕೋಟೆಯ ಬಾಗಿಲಿನ ಮೇಲಿರುವ ಶಾಸನ ಹೇಳುತ್ತದೆ. ಗೋಗಿ ದರ್ವಾಜಾ ಶಾಸನವೊಂದು ನಸ್ರತಾಬಾದ ನಿರ್ಮಾತೃ ಮೀರ್ ಮುಹಮ್ಮದನು ಈ ಕೋಟೆ ಮತ್ತು ನಗರವನ್ನು ಕ್ರಿ.ಶ. 1558–59ರಲ್ಲಿ ಕಟ್ಟಿಸಿದನೆಂದು ಹೇಳುತ್ತದೆ. ಮುಹಮ್ಮದೀ ಬುರಜ್ (ಕ್ರಿ.ಶ. 1656–57) ಹಾಗೂ

ಇನ್ನೊಂದು ಬುರುಜನ್ನು ಶಹ ಮುಹಮ್ಮದನು ಕ್ರಿ.ಶ. 1666–67)ರಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಕ್ರಿ.ಶ. 1555–1666ರ ವರೆಗೆ ಒಂದು ಶತಮಾನಕ್ಕಿಂತ ಹೆಚ್ಚು ನಿರಂತರ ಕಾಲ ದಲ್ಲಿ/ಇತಿಹಾಸದಲ್ಲಿ ತನ್ನ ಬದುಕನ್ನು ಈ ಕೋಟೆಯು ನೀಡಿದೆ.

ಬೆಟ್ಟದ (ಪೂರ್ವದ) ಮೇಲಿನ ಕೋಟೆಗೆ 6 ಪ್ರವೇಶ ದ್ವಾರಗಳಿವೆ. ಮೊದಲನೆಯ ಬಾಗಿಲು ನೆಲಸಮತಟ್ಟಾದ ಪ್ರದೇಶ ದಲ್ಲಿದ್ದು, ಉಳಿದವು ಮೇಲೆ ಏರಿದಂತೆ ಎತ್ತರ ಎತ್ತರ ಪ್ರದೇಶ ಗಳಲ್ಲಿ ಕಟ್ಟಲ್ಪಟ್ಟಿವೆ. ದುಂಡನೆಯ ಹಿಂದು ಕಂಬಗಳು, ಚೌಕಟ್ಟು ಗಳು, ಬಾಗಿಲು ಶಾಖೆಗಳು, ಇದು ಮೊದಲು ಹಿಂದು ಆಡಳಿತದಲ್ಲಿ ಇತ್ತು ಎಂದು ಗುರುತಿಸುತ್ತವೆ. ಇದೊಂದು ಇಸ್ಲಾಂ ಕೋಟೆಯ ಉತ್ತಮ ಉದಾಹರಣೆ.

ಯಾದಗಿರಿ ಕೋಟೆ: ಗುಲಬರ್ಗಾದಿಂದ ಅಗ್ನೇಯಕ್ಕೆ 124 ಕಿ.ಮೀ. ದೂರದಲ್ಲಿ ಯಾದಗಿರಿ ಇದೆ. ಶಾಸನಗಳಲ್ಲಿ 'ಏತಗಿರಿ', 'ಯದುಗಿರಿ' ಎಂದು ಹೆಸರುಗಳು. ಕಲ್ಯಾಣ ಚಾಲುಕ್ಯ ಅರಸು ಜಯಸಿಂಹ ಕ್ರಿ.ಶ. 1019–33, ಇದನ್ನು ರಾಜಧಾನಿಯನ್ನಾಗಿ ಸಿದ್ಧ. ಕ್ರಿ.ಶ. 1044–50ರ ಮಧ್ಯೆ, ಚೋಳರು ಕೃಷ್ಣೆಯನ್ನು ದಾಟಿ ಇಲ್ಲಿ ಬೀಡುಬಿಟ್ಟು, ಹುಲಿಯ ಲಾಂಛನದ ಸ್ತಂಭ ನೆಟ್ಟರು. ವಿಕ್ರಮಾದಿತ್ಯ ಕ್ರಿ.ಶ. 1077ರಲ್ಲಿ ಏತಗಿರಿಯಲ್ಲಿ ಅದು ಅವನ ರಾಜಧಾನಿ–ತುಲಾಪುರುಷ ಹಾಗೂ ಹಿರಣ್ಯ ಗರ್ಭದಾನ.

ಇಷ್ಟೊಂದು ವೈಭವೋಪೇತವಾದ ಹಿಂದು ಅರಸರ ರಾಜಧಾನಿ ಏತಗಿರಿ ತನ್ನ ಮೂಲ ಕೋಟೆಯ ಸ್ವರೂಪವನ್ನು ಆದಿಲ್ ಶಹರ 14–15 ಶತಕಗಳಲ್ಲಿ ಕಳೆದುಕೊಂಡು, 'ಇಸ್ಲಾಂಮತ್ವ' ಪಡೆದುಕೊಂಡಿತು. ಇದೊಂದು 'ತೋಫುಗಳ ಕೋಟೆ' ಎಂದು ವಿಶೇಷ ಹೆಸರಿನಿಂದ ಕರೆಯಬಹುದು. ಎಲ್ಲ ಬುರುಜುಗಳ ಮೇಲೆ, ಪ್ರವೇಶದ್ವಾರಗಳ ಮೇಲೆ, ಮೇಲಟ್ಟಣೆಗಳ ಮೇಲೆ ತೋಫುಗಳೇ ತೋಫುಗಳು. ಇಲ್ಲಿ ತೋಫುಗಳನ್ನು ತಯಾರಿಸುತ್ತಿದ್ದರೆಂದು ಪುಷ್ಟೀಕರಿಸಲು ಕ್ರಿ.ಶ. 1557ರಲ್ಲಿ ಒಬ್ಬ ಮೆಟಲರ್ಜಿಸ್ಟ್ ಮುಹಮ್ಮದ ಅಲಿ ಆತನ ನೆಂಬವನ ನೇತೃತ್ವದಲ್ಲಿ ತೋಫು ತಯಾರಾದ ವಿಷಯದ ಶಾಸನವೊಂದು ಹೇಳುತ್ತದೆ. ಕ್ರಿ.ಶ. 1785ರಲ್ಲಿ ಹೈದ್ರಾಬಾದಿನ ನಿಜಾಮ ಆಲೀಖಾನನ ಭೆಟ್ಟಿಯ ನೆನಪಿನಲ್ಲಿ 'ನಿಜಾಮ್ ಬುರ್ಜ್' ಎಂಬ ಬುರುಜನ್ನು ಕಟ್ಟ ಲಾಯಿತು.

ಬೆಟ್ಟದ ಮೇಲಿನ ಮೂರು ಸುತ್ತಿನ ಕೋಟೆ, ಅನಿಯಮಿತ ವಿನ್ಯಾಸ, ಬೆಟ್ಟದ ಕಂಟೂರ್ ಬಳಸಿ, ಬಡೆಗಲ್ಲುಗಳ ಆಸರೆ ಹೊಂದಿ, ಅರ್ಧ, ಪೂರ್ಣ ಹಾಗೂ ಚೌಕಾದ ಬುರುಜುಗಳನ್ನು ಜೋಡಿಸಿ, ಹರಡಿದ ಭದ್ರಕೋಟೆ ಇದು. ಎಂಟು ಪ್ರವೇಶ ದ್ವಾರಗಳು, ಪ್ರತಿ ದ್ವಾರದ ಎಡಬಲಗಳಲ್ಲಿ ಅರ್ಧ ಇಲ್ಲವೆ ಪೂರ್ಣ ವರ್ತುಲಗಳ ಬುರುಜುಗಳು ಮೇಲಿಟ್ಟ ತೋಫುಗಳು, ಕಾವಲುಗಾರರ ಗುಮ್ಮಟವುಳ್ಳ ಕೊಠಡಿಗಳು, ಅಲ್ಲಲ್ಲಿ ಬಾವಿಗಳು, ಕೊಳ್ಳಗಳು, ಬೆಟ್ಟವನ್ನು ಮೇಲೇರಿದಂತೆ ಕಾಣಸಿಗುತ್ತವೆ.

ಕೊನೆಯ ಬಾಗಿಲು ದಾಟಿದ ಕೂಡಲೆ ಚೌಕಾಕಾರದ ಆವರಣ, ಶಿಥಿಲವಾದ ಕಟ್ಟಡದ ಅವಶೇಷಗಳು ಇಲ್ಲಿ. ಫಿರ್ ದೇಶ ಮಹಲ್, ಮೋತಿ ತಲಾಬ್, ದರಬಾರ್ ಮಹಾಲ್, ಕಬೂತರ್ ಖಾನಾ, ಚೀನಿ ಮಸೀದಿ, ಎಣ್ಣೆ ಶೇಖರಿಸುವ ಕೊಳ, ಹಿಂದೂ ದೇವಾಲಯಗಳೂ ಕೂಡ, ಪಾತಾಳ ಬಾವಿ, ವೃತ್ತಾ ಕಾರದ ಬತೇರಿಗಳು ಅಲ್ಲಲ್ಲಿ. ಅವು ಕೋಟೆಯ ಗೋಡೆಗಿಂತ ಎತ್ತರವಾಗಿದ್ದು, ತೋಫು ಹೊತ್ತು ನಿಂತಿವೆ.

ನಗರ ಕೋಟೆ: ತಾಲ್ಲೂಕು ನೆಲೆಯಾದ ಶಹಾಪೂರದಿಂದ ನೈರುತ್ಯಕ್ಕೆ 10 ಕಿ.ಮೀ. ದೂದ ಕೃಷ್ಣೆ ಹಾಗೂ ಭೀಮೆಗಳ ಮಧ್ಯ ದಲ್ಲಿ ನಗರವು ಸೈನಿಕ ಹಾಗೂ ಆಡಳಿತ ಕೇಂದ್ರ, ಅಲ್ಲಾವುದ್ದೀನ ಖಿಲಜಿಯ ಮಗ ಮುಬಾರಕ ಖಿಲಜಯು ಒಬ್ಬ ಅಧಿಕಾರಿ ಯನ್ನು ನೇಮಿಸಿದ್ದನು. ಮಹಮ್ಮದ್ ಬಿನ್ ತುಘಲಕ್‌ನ ಕಾಲ ದಲ್ಲಿ ಅವನ ದಾಯಾದಿ ಬಾಹುದ್ದೀನ ಗುರುಷಾಸ್ಪನು ನಗರ ಪ್ರಾಂತದ ಅಧಿಕಾರಿಯಾಗಿದ್ದನು. ಕ್ರಿ.ಶ. 1347ರಲ್ಲಿ ಬಹಮನಿ ರಾಜ್ಯ ಸ್ಥಾಪನೆಯಾದ ಮೇಲೆ ನಗರವೂ ದಕ್ಷಿಣ ಭಾಗದ ಪಟ್ಟಣ ವಾಯಿತು.

ಬಹಮನಿ ಅರಸರ ಕಾಲದಲ್ಲಿ ಇಲ್ಲಿಯ ಕೋಟೆ ಮತ್ತು ಇತರ ಅನೇಕ ಕಟ್ಟಡಗಳು ನಿರ್ಮಾಣವಾದವು, ಆದಿಲಶಹರ ಕಾಲದಲ್ಲಿಯೂ ಕೂಡ. ಕ್ರಿ.ಶ. 1686ರಲ್ಲಿ ಬಿಜಾಪುರದ ಅರಸರ ಕೈಯಲ್ಲಿದ್ದ ನಗರವೂ ಔರಂಗಜೇಬನ ವಶವಾಗಿತ್ತು ಹಾಗೂ ಆತನ ಮರಣದವರೆಗೆ ಇದು ಮೊಘಲರ ದಕ್ಷಿಣದ ಟಂಕಸಾಲೆ ಯಾಗಿತ್ತು. ಈ ತಾಣದ ಪಶ್ಚಿಮಕ್ಕೆ ಇರುವ ಕೋಟೆ ಗೋಡೆಯು 8 ಮೀ. ಅಗಲ ಮತ್ತು 5 ಮೀ. ಎತ್ತರವುಳ್ಳ ಮಣ್ಣಿನ ಗೋಡೆ ಯನ್ನು ಹೊಂದಿದೆ. ಕೋಟೆಯು ನಾಲ್ಕು ವೃತ್ತಾಕಾರದ ಬುರುಜುಗಳನ್ನು ಹೊಂದಿದ್ದು ಪೂರ್ವ ಹಾಗೂ ಉತ್ತರ ದಿಕ್ಕು ಗಳಲ್ಲಿ ಒಂದೊಂದು ಬಾಗಿಲುಗಳಿವೆ. ಪಶ್ಚಿಮಕ್ಕೆ ರೋಜಾ ಗುಮ್ಮಟಗಳು ಜಾಮಿ ಮಸೀದಿ ಸೂಫಿ ಸಂತ ಹಜರತ್ ದರ್ಗಾ, ವಾಯವ್ಯಕ್ಕೆ ಕೆರೆ, ಕಮಾನುಗಳು ಬಾಗಿಲವಾಡಗಳು ಬಾವಿಗಳು ಅಲ್ಲಲ್ಲಿ ಇದ್ದು, ಈ ಕೋಟೆ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ.


ವನದುರ್ಗಾ ಕೋಟೆ: ಹೆಸರೇ ಸೂಚಿಸುವಂತೆ ಇದೊಂದು ವನದುರ್ಗಾ. ಶಹಾಪುರ, ತಾಲ್ಲೂಕಿನ, ಶಹಾಪುರದಿಂದ ನೈರುತ್ಯಕ್ಕೆ 24 ಕಿ.ಮೀ. ದೂರದಲ್ಲಿದೆ. ಊರ ಪಶ್ಚಿಮಕ್ಕೆ ಚಿಕ್ಕ ಕೋಟೆ ಇದು. ಹೊರಕೋಟೆಯ ಪ್ರವೇಶದ್ವಾರದ ಮೇಲೆ ಇರುವ ಶಾಸನವು ಕ್ಷೇತ್ರಪಾಲನಾದ ವೇಣುಗೋಪಾಲಸ್ವಾಮಿಯ ವರಪುತ್ರನಾದ ಬದರೀಬಹಾದ್ದೂರ ರಾಜಾಪಿಡ್ಡನಾಯಕನು ತನ್ನ ರಾಣಿ ವೆಂಕಮ್ಮಳ ಬೇಡಿಕೆಯಂತೆ ಕ್ರಿ.ಶ. 1806ರಲ್ಲಿ ಈ ವನದುರ್ಗವನ್ನು ಕಟ್ಟಲು ಮುಂದಾದನಂತೆ.

ಕೋಟೆ ಚೌಕಾಗಿದ್ದು, ಎರಡು ಸುತ್ತಿನಲ್ಲಿ 250'x250' ಹರಡಿ, ಹೊರಗೋಡೆ ಎತ್ತರವಾಗಿದ್ದು, ಪೂರ್ವದ ಗೋಡೆ ಅತಿ ಎತ್ತರವಾಗಿದೆ. ವಿಶಿಷ್ಟ ಕಟ್ಟುವ ಪದ್ಧತಿ ಇಲ್ಲಿ. ಒಳಮೈಯನ್ನು ಕಲ್ಲಿನಿಂದ ಸ್ತರಗಳಲ್ಲಿ ಕಟ್ಟಿ, ಹೊರಮೈಯನ್ನು ಮಣ್ಣಿನ ಇಳಿಜಾರಿನಲ್ಲಿ ನಿರ್ಮಿಸಲಾಗಿದೆ. ಇಂಥ ಚೌಕಾದ ಎರಡು ಸುತ್ತಿನ ಗೋಡೆ ಹೀಗೆಯೇ ಕಟ್ಟಲಾಗಿದೆ. ಇವುಗಳ ಮಧ್ಯದಲ್ಲಿ ಕಂದಕವಿದೆ.

ಪ್ರವೇಶ ದ್ವಾರದಲ್ಲಿ 'U' ಆಕಾರದ ವಿನ್ಯಾಸವಿದ್ದು, ಪ್ರವೇಶಕರನ್ನು ದಂಗು ಬಡಿಸುತ್ತವೆ. ಕಾವಲುದಾರರ ಕೋಣೆ, ಬಾಗಿಲುಗಳ ಕಮಾನುಗಳು ತೆನೆಗಳು; ಒಳಗೋಡೆಯನ್ನು ಚೆನ್ನಾದ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಕಲ್ಯಾಣ ಚಾಲುಕ್ಯ ಕಂಬಗಳನ್ನು ಇಲ್ಲಿಯ ಕೆಲವು ಅಂಕಣಗಳಿಗೆ ಉಪಯೋಗಿಸಲಾಗಿದೆ. ನೈರುತ್ಯ ಮೂಲೆಯಲ್ಲಿ ಚೌಕಾಕಾರದ ಒಂದು ಕಟ್ಟಡವಿದೆ. ಪಟ್ಟಕೋಟೆಯಾದರೂ, ವಿನ್ಯಾಸ ಹಾಗೂ ಕಟ್ಟಡದ ಅಳವಡಿಕೆಯಲ್ಲಿ ಸೌಂದರ್ಯ ಪಡೆದಿದೆ.

ಸುರಪುರ ಕೋಟೆ: ಇದು ತಾಲ್ಲೂಕು ಕೇಂದ್ರವಾಗಿದ್ದು ಗುಲಬರ್ಗಾದ ದಕ್ಷಿಣಕ್ಕೆ 166 ಕಿ.ಮೀ. ದೂರ. ಇದು 18ನೆಯ ಶತಮಾನದ ಕೋಟೆ. ಕ್ರಿ.ಶ. 1707ದಲ್ಲಿ ಔರಂಗಜೇಬನು ಅಹಮದಾಬಾದಿನಲ್ಲಿ ಮರಣ ಹೊಂದಿದಾಗ ಪಿಡ್ಡ ನಾಯಕನೆಂಬ ಆಡಳಿತಗಾರನು ಕೋಟೆಯನ್ನು ವಶಪಡಿಸಿಕೊಂಡು 'ಸುರಪುರ'ವೆಂಬ ಹೊಸ ನಗರವನ್ನು ನಿರ್ಮಿಸಿದನು. ನಗರದ ಸುತ್ತ ವಾಘಣಗೇರಿ ಕೋಟೆಯನ್ನು ಕಟ್ಟಿಸಿದನು ಹಾಗೂ ಶ್ರೀ ವೇಣುಗೋಪಾಲಸ್ವಾಮಿಯ ಅಡಿಪಾಯವನ್ನು ಹಾಕಿದನು. ವೆಂಕಟಪ್ಪ ನಾಯಕನು (ಕ್ರಿ.ಶ. 1747–52) ಊರ ಮಧ್ಯದಲ್ಲಿ ಹಳೆ ದರ್ಬಾರ ಅರಮನೆಯನ್ನು ಕಟ್ಟಿಸಿ ಕೋಟಿಸಿ ಕೋಟೆಯ ಗೋಡೆಯ ಆಯಕಟ್ಟಿನ ಸ್ಥಳವಾಗಿ ಹೆಚ್ಚು ಬುರುಜುಗಳನ್ನು ಕಟ್ಟಿಸಿ ಅವುಗಳ ಮೇಲೆ ತೋಫುಗಳನ್ನು ಇಡಿಸಿದನು. ನಾಲ್ಕನೆಯ ವೆಂಕಟಪ್ಪನ ಕಾಲದಲ್ಲಿ (ಕ್ರಿ.ಶ. 1820–48) ನಯಾ ದರ್ಬಾರ ಅರಮನೆ ಹಾಗೂ ಮೆಡೋಸ್ ಟೇಲರ್‌ಗಾಗಿ ಟೇಲರ್ ಮಂಜಿಲನ್ನು ಕಟ್ಟಲಾಯಿತು.

ಈ ಕೋಟೆಯ ಬೆಟ್ಟಗಳ ಮಧ್ಯದಲ್ಲಿ ಎತ್ತರವಾದ ಪ್ರದೇಶದಲ್ಲಿ ಹಾಗೂ ಸ್ವಲ್ಪ ತಗ್ಗಾದ ಪ್ರದೇಶದಲ್ಲಿ ಕಣಿವೆಯ ಸುತ್ತ ಬೆಟ್ಟಗಳನ್ನು ಜೋಡಿಸಿ ಗೋಡೆಯನ್ನು ಇಡಿಯಾಗಿ ಒಂದಕ್ಕೊಂದರಂತೆ ಸೇರಿಸಲಾಗಿದೆ. ಕೋಟೆಯ ವಿನ್ಯಾಸ ಅನಿಯಮಿತ ಜ್ಯಾಮಿತಿಯಲ್ಲಿದ್ದು ಕೆತ್ತಿದ ದಪ್ಪ ಕಲ್ಲುಗಳಿಂದ ಕಟ್ಟಲಾಗಿದೆ ಹಾಗೂ ಅಲ್ಲಲ್ಲಿ ಗುಂಡು ಕಲ್ಲುಗಳನ್ನು, ಚಿಕ್ಕ ಕಲ್ಲುಗಳನ್ನು ಉಪಯೋಗಿಸಲಾಗಿದೆ. ವೃತ್ತಾಕಾರದ ಬುರುಜುಗಳ ಮೇಲೆ ತೋಫುಗಳನ್ನು ಇಡಲಾಗಿದೆ. ಕೋಟೆಯ ಪ್ರವೇಶಕ್ಕಾಗಿ ವಿವಿಧ ದಿಕ್ಕುಗಳಲ್ಲಿ ಆರು ಪ್ರವೇಶ ದ್ವಾರಗಳನ್ನು ಕಟ್ಟಲಾಗಿದೆ. ಪೂರ್ವಕ್ಕೆ ರಂಗಮ್‌ಪೇಟೆ ಅಗಸೆ, ಉತ್ತರಕ್ಕೆ ಸಿದ್ದಾಪುರ ಅಗಸೆ, ಪಶ್ಚಿಮಕ್ಕೆ ಕಪ್ಪಲಿ.....ಅಗಸೆ, ದೇವನ ಅಗಸೆ ಇತ್ಯಾದಿಗಳು. ಇವುಗಳಲ್ಲಿ ದೇವಪುರ ಅಗಸೆಯು ದೊಡ್ಡದು.



ಸುರಪುರ ಕೋಟೆ

ಊರ ಮಧ್ಯದಲ್ಲಿ ಒಳಕೋಟೆ ಚಿಕ್ಕದಾಗಿದ್ದು 350 ಮೀ. ಉದ್ದ 250 ಮೀ. ಅಗಲ ಆಯತಾಕಾರದಲ್ಲಿದ್ದು 20 ಮೀ. ಎತ್ತರವಿರುವ ಈ ಕೋಟೆಯ ಹೊರಗೋಡೆಯಲ್ಲಿ ಮುಂದೆ ಚಾಚಿದ ಕಿಟಕಿಗಳಿವೆ. ಒಳಕೋಟೆಯಲ್ಲಿ ಅದಾಗಲೇ ಹೇಳಿದಂತೆ ವೇಣುಗೋಪಾಲಸ್ವಾಮಿಯ ದೇಗುಲ ಸುಂದರವಾಗಿದೆ. ಅದರ ಹೊರ ಮಂಟಪದಲ್ಲಿ 46 ಕಂಬಗಳಿದ್ದು ಅಂತರಾಳ ಹಾಗೂ ಗರ್ಭಗೃಹದಿಂದ ಈ ದೇವಾಲಯವು ವಿನ್ಯಾಸಗೊಂಡಿದೆ. ಇದು 19ನೆಯ ಶತಮಾನದ ಕರ್ನಾಟಕದ ಸುರಪುರ ನಾಯಕರ ಕೋಟೆಯೆಂದೇ ಹೆಸರು ಪಡೆದಿದ್ದು ಮೆಡೋಸ್ ಟೇಲರ್ ಎಂಬ ಬ್ರಿಟಿಷ್ ಕಲೆಕ್ಟರನು ಇಲ್ಲಿ ವಾಸವಾಗಿದ್ದು ಆತನಿಂದ ಪ್ರಾಗೈತಿಹಾಸ ಕಾಲದ ಇತಿಹಾಸ ಸಂಶೋಧಕನೆಂದು ಪ್ರಸಿದ್ಧಿ.

ವಾಘಣಗೇರಿ ಕೋಟೆ: ಇದು ಸುರಪುರ ತಾಲ್ಲೂಕಿನಲ್ಲಿದೆ. ಸುರಪುರದಿಂದ ಪಶ್ಚಿಮಕ್ಕೆ 7 ಕಿ.ಮೀ. ದೂರ ಬಿಜಾಪುರದ ಸುಲ್ತಾನ ಮುಹಮ್ಮದ ಆದಿಲ್‌ಶಾಹನು 1ನೆಯ ಪಿಡ್ಡನಾಯಕನಿಗೆ ಕರ್ಶಿಹಳ್ಳಿಯನ್ನು ಕೊಟ್ಟಾಗ, ಪಿಡ್ಡ ನಾಯಕನು ಈ ವಾಘಣಗೇರಿ ಕೋಟೆಯನ್ನು ಕಟ್ಟಿಸಿದನು, ಹಾಗೂ ಆಳಿದನು (ಕ್ರಿ.ಶ. 1639–66). ಕ್ರಿ.ಶ. 1705ರಲ್ಲಿ ಔರಂಗಜೇಬನ ವಶವಾಯಿತು. ತತ್‌ಪೂರ್ವದಲ್ಲಿ ಇದು ಸುರಪುರ ಸಂಸ್ಥಾನದ ರಾಜಧಾನಿ ಆಗಿತ್ತು.

ಇಲ್ಲಿ ಎರಡು ಕೋಟೆಗಳಿವೆ– ಪಶ್ಚಿಮದ 'ಪಡುಕೋಟೆ' ಪೂರ್ವದ ಹೊಸಕಿಲ್ಲಾ. ಪಡುಕೋಟೆಯಲ್ಲಿ ಎರಡು ಭಾಗಗಳು. ಕೆಳಕೋಟೆಯ ಭೂಮಟ್ಟದಲ್ಲಿ ಚಾಚಿ, ಊರನ್ನು ಸುತ್ತುವರಿದು, ಬೆಟ್ಟವನ್ನೇರಿದೆ: ಮೇಲ್ ಕೋಟೆ ಬೆಟ್ಟದ ಮೇಲೆ ಇದೆ. ಈ ಬೆಟ್ಟದ ಮೇಲಿನ ಕೋಟೆಯನ್ನು ಕ್ರಿ.ಶ. 1705ರಲ್ಲಿ ಔರಂಗಜೇಬನು ಭದ್ರಪಡಿಸಿದನು; ಭದ್ರಪಡಿಸಲು ದೇವಾಲಯದ ಕಂಬ, ಬಾಗಿಲುವಾಡ, ಅಧಿಷ್ಠಾನಗಳನ್ನು ಉಪಯೋಗಿಸಲಾಗಿದೆ. ವೃತ್ತಾಕಾರದ ಬುರುಜುಗಳ ಜೋಡಣೆಯಿಂದ, ಕೋಟೆಯ ಗೋಡೆಗಳು 450ಮೀx 150ಮೀx6ಮೀ(ಎ) ದಷ್ಟು ಚಾಚಿವೆ. ಗೋಡೆಯ ಮೇಲೆ ನಡೆದಾಡಲು ಕಿರಿದಾದ ದಾರಿ ಇದೆ. ತೆನೆಗಳು ಹಾಗೂ ಬುರುಜುಗಳು ಬಂದೂಕು ಕಿಂಡಿಗಳೂ ಇವೆ.

ಪಶ್ಚಿಮಕ್ಕಿರುವ ಕೆಳಕೋಟೆಗೆ ದಕ್ಷಿಣದಲ್ಲಿ ಬಾಗಿಲಿದೆ; ಎರಡು ಅರ್ಧವೃತ್ತಾಕಾರದ ಬುರುಜುಗಳ ಮಧ್ಯ ಈ ಬಾಗಿಲಿದೆ. ಈಗ ಶಿಥಿಲವಾಗಿದೆ, ಇದರ ಮುಂದೆ ಚೌಕಾದ ಆವರಣವಿದೆ; ಇಲ್ಲಿ ಮರಾಠಾ ಸೈನಿಕರ ವಂಶಸ್ಥರ ಮನೆಗಳಿವೆ, ಒಂದು ದೇವಾಲಯ, ಕಟ್ಟೆಗಳುಳ್ಳ ಒಂದು ಬಾವಿ; ಬಾವಿಯ ದಕ್ಷಿಣಕ್ಕೆ ಮಸೀದಿ, ದುಂಡನೆಯ ಬಾವಿ, ವೀರಗಲ್ಲು, ನರಸಿಂಹ, ವಾಮನ, ರಾಮಕೃಷ್ಣರ ಕೆತ್ತನೆಯ ಕಂಬಗಳು, ಇತ್ಯಾದಿಗಳು ಈ ಕೆಳ ಕೋಟೆಯ ಅವಶೇಷಗಳು.

ಹೊಸಕಿಲ್ಲಾ ಪಡುಕೋಟೆಯ ಪೂರ್ವಕ್ಕೆ ಬೆಟ್ಟದ ಮೇಲೆ ಇದೆ. ಇದು ವಿನ್ಯಾಸದಲ್ಲಿ ವೃತ್ತಾಕಾರವಾಗಿದೆ. ದಕ್ಷಿಣ ಮತ್ತು ನೈರುತ್ಯಗಳಲ್ಲಿ ಕಡಿದಾದ ಭಾಗವಿದ್ದು, ಈ ಭಾಗಗಳ ಆಚೆ ಮಾತ್ರ ಗೋಡೆಗಳನ್ನು ಕಟ್ಟುವ ಪ್ರಕ್ರಿಯೆ ನಡೆದಿದೆ. ಹೊರಕೋಟೆಗೆ ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರವಿದೆ. ಒಳಕೋಟೆಯ ಪೂರ್ವ ಗೋಡೆಯಲ್ಲೂ ಪ್ರವೇಶ ದ್ವಾರವಿದೆ. ಕೋಟೆಯ ಮಧ್ಯದಲ್ಲಿ ಎತ್ತರವಾದ ಚೌಕಾದ ಕಟ್ಟಡವಿದೆ. ಇದು ಮದ್ದಿನ ಮನೆಯೂ ವೀಕ್ಷಣಾ ಕಟ್ಟೆಯೂ ಆಗಿರ ಬಹುದು. ವಾಯವ್ಯ ಭಾಗದಲ್ಲಿ ಕೆಲ ಅಳಿದುಳಿದ ಕಟ್ಟಡಗಳ ಅವಶೇಷಗಳಿವೆ. ಇದೊಂದು ಮೂಲತಃ ಹಿಂದೂ ರಕ್ಷಣಾ ವಾಸ್ತು ಹೊಂದಿದ ಕೋಟೆ, ಆ ಮೇಲೆ ಮುಸ್ಲಿಮರ ಕೈಯಿಂದ ಬಹಳ ಮಾರ್ಪಾಟಾಗಿದೆ.

ಇಜೇರಿ ಕೋಟೆ: ಇದು ಜೇವರಗಿಯಿಂದ ನೈರುತ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಕಲ್ಯಾಣ ಚಾಲುಕ್ಯ ಅರಸರ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1088ರ ಶಾಸನವು ಈ ಊರನ್ನು 'ಇರಜೇರಿ' ಎಂದು ಕರೆದಿದೆ, ಹಾಗೂ ಶ್ರೀ ಶಂಕರನಾರಾಯಣ ದೇವರಿಗೆ ಮತ್ತು ಅಗ್ರಹಾರದ ವಿದ್ಯಾರ್ಥಿಗಳಿಗೆ ಕೊಟ್ಟ ದಾನ ವನ್ನು ಉಲ್ಲೇಖಿಸುತ್ತದೆ. ಮುಸ್ಲಿಂ ದಾಳಿ ತಡೆಯಲು ಸುರಪುರದ ಎರಡನೆಯ ವೆಂಕಟಪ್ಪ ನಾಯಕನು (ಕ್ರಿ.ಶ. 1773–1802) ಇಲ್ಲಿ ಕೋಟೆಯನ್ನು ಕಟ್ಟಿಸಿದನು. ಊರ ನೈರುತ್ಯಕ್ಕೆ ಎರಡು ಸುತ್ತಿನ ಚೌಕಾಕಾರದ ಚಿಕ್ಕ ಕೋಟೆ. ಅದರ ಹೊರಗಡೆ ಇದ್ದ ಕಂದಕ ಮುಚ್ಚಿ ಹೋಗಿದೆ. ಹೊರಗೋಡೆಯ ಹೊರ ಬದಿ ಬಿದ್ದು, ಅದರ ಮಣ್ಣಿನ ದಿಬ್ಬ ಮಾತ್ರ ಉಳಿದಿದೆ. ಒಳಬದಿ ಕೋಣೆ ಗೋಡೆ ಉಳಿದಿದೆ. ಊರ ಹೊರಗಡೆಯ ಹೊರ ಕೋಟೆಯ ಉತ್ತರ ಭಾಗದಲ್ಲಿ ಪ್ರವೇಶ ದ್ವಾರವಿದೆ. ಬಾಗಿಲ ಪಕ್ಕದಲ್ಲಿ ಕೊತ್ತಲಗಳಿಲ್ಲ ಅದರ ಚೌಕಟ್ಟಿನಲ್ಲಿ ಲಲಾಟದ ಮೇಲೆ ಸೂರ್ಯ ಚಂದ್ರ ವೃತ್ತಾಕಾರದ ಹೂ ಇವೆ. ವೈರಿಯ ಕಣ್ಣು ಮರೆಮಾಚಲು ಅದರ ಮುಂದೆ ಮತ್ತೊಂದು ಗೋಡೆ ಕಟ್ಟಲಾಗಿದೆ.

ಒಳಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಬುರುಜುಗಳಿವೆ. ಪೂರ್ವದ ಗೋಡೆಯಲ್ಲಿ ಪ್ರವೇಶದ್ವಾರವಿದೆ. ಎದುರು ಬದುರಾದ ಮೀನುಗಳೆರಡು ಇವೆ, ಅವು ಸುರಪುರ ರಾಜರ ಜಿನ್ಹೆ, ಕೋಟೆಯ ಒಳಭಾಗ 185x185x1 (ದ) ಮೀ. ಇದೆ ಯಾವುದೇ ಕಟ್ಟಡಗಳಿಲ್ಲ. ಇದೊಂದು ಸರಳ ಸಾದಾ ಚೌಕಾದ ವಿನ್ಯಾಸದ ಕೋಟೆ.

ಚಿನ್ಮಳ್ಳಿ ಕೋಟೆ: ಈ ಕೋಟೆಯು ಅಫಜಲಪುರ ತಾಲ್ಲೂಕಿ ನಲ್ಲಿದ್ದು, ಅದರಿಂದ ಆಗ್ನೇಯಕ್ಕೆ 42 ಕಿ.ಮೀ. ಹಾಗೂ ಗುಲಬರ್ಗಾದಿಂದ ನೈರುತ್ಯಕ್ಕೆ, 53 ಕಿ.ಮೀ. ದೂರದಲ್ಲಿದೆ. ಇಲ್ಲಿ 11–12 ಶತಕದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯ ಉತ್ತರಾಭಿ ಮುಖವಾಗಿದೆ. ಎದುರಿಗೆ ಹರಿವ ಭೀಮಾನದಿಗೆ ಹೋಗಲು ಪ್ರಾಕಾರದಲ್ಲಿ ದ್ವಾರಮಂಟಪವಿದೆ.

ಈ ಕೋಟೆಯು ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನೊಳ ಗೊಂಡು, ಊರನ್ನು ಸುತ್ತುವರಿದಿದೆ. ಪೂರ್ವಭಾಗದ ಕೋಟೆ ಯು ಸರಳ ರೇಖೆಯಲ್ಲಿದ್ದು, ಈಶಾನ್ಯ ಮೂಲೆಯ ಮೊನಚಾದ ಕೋನಗಳಿಂದ ಓರೆಯಾಗಿ ಸರಳ ರೇಖೆಯಲ್ಲಿ ನದಿಯ ದಂಡೆಯ ಮೇಲೆ ಪಶ್ಚಿಮ ಬಾಗಿಲದ ಪಕ್ಕದ ಕೊತ್ತಲವನ್ನು ಸೇರುತ್ತದೆ. ಪೂರ್ವ ಪಶ್ಚಿಮದಲ್ಲಿ ಎರಡು ಬಾಗಿಲಗಳು, ಉತ್ತರ ದಕ್ಷಿಣ ಭಾಗಗಳಲ್ಲಿ ಎರಡು ದಿಡ್ಡಿ ಬಾಗಿಲಗಳು, ಮತ್ತು ಹದಿನಾರು ವೃತ್ತಾಕಾರದ ಅರ್ಧ ವೃತ್ತಾಕಾರದ ಬುರುಜುಗಳು ಇವೆ. ಗೋಡೆ ಚೆನ್ನಾಗಿ ಕತ್ತರಿಸಿದ ಕಟೆದ ಕಲ್ಲುಗಳಿಂದ ಸ್ತರ ಗಳನ್ನು ಹೊಂದಿದೆ. ಇದೆ ಮಲ್ಲಿಕಾರ್ಜುನ ದೇವಾಲಯದಿಂದ ನದಿಗೆ ಹೋಗಲು ಉತ್ತರ ದಿಕ್ಕಿನಲ್ಲಿ ಕೋಟೆಯ ಮೂಲಕ ಮೆಟ್ಟಿಲುಗಳ ದಾರಿ ಇದೆ.

ಸೇಡಂ ಕೋಟೆ: ಗುಲಬರ್ಗಾದಿಂದ ಪೂರ್ವಕ್ಕೆ ಸುಮಾರು 25 ಕಿ.ಮೀ. ದೂರ ಇದೆ. ಇದು ರಾಷ್ಟ್ರಕೂಟರ ದಕ್ಷಿಣ ಭಾಗದ ಮಹತ್ವದ ಆಡಳಿತ ಕೇಂದ್ರವಾಗಿತ್ತು. (900 ಸುತ್ತಮುತ್ತ ಕ್ರಿ.ಶ.); ಇಲ್ಲಿ ಜೈನ ಬಸದಿಗಳು, ಮಾನಸಸ್ತಂಭ, ಅವುಗಳಲ್ಲಿ ಇರುವ ಶಿಲಾಲೇಖಗಳು, ಬಾವಿಗಳು ರಾಷ್ಟ್ರಕೂಟರ ಐತಿಹಾಸಿಕ ಸಂಪರ್ಕ ಸಾರುತ್ತವೆ; ಶಿಥಿಲವಾದ, ಬಹುಮಟ್ಟಿಗೆ ತನ್ನ ಇಡೀ ವಿನ್ಯಾಸವನ್ನೇ ಕಳೆದುಕೊಂಡ ರಾಷ್ಟ್ರಕೂಟರ ಕಾಲೀನ ಕೋಟೆ ಯಂತೂ ಗುರುತಿಸಲು ಕಷ್ಟ. ಕಲ್ಯಾಣ ಚಾಲುಕ್ಯರ ಶಿವಾಲಯ ಗಳು ಒಂದೆರಡು ಇವೆ. ಮುಸ್ಲಿಂ ಆಡಳಿತದಲ್ಲಿ 1500–1800 ಕ್ರಿ.ಶ. ರವರೆಗೆ ಇದರ ಕೋಟೆಯು ಅಲ್ಲಲ್ಲಿ ದುರಸ್ತಿಗೊಂಡಿದ್ದು, ಉತ್ತರ ಪಶ್ಚಿಮ ದಿಶೆಯಲ್ಲಿ ಮಾತ್ರ ಪ್ರವೇಶದ್ವಾರವಿದೆ 'ಐ' ಆಕಾರದಲ್ಲಿ. ಈ ಪ್ರವೇಶದ್ವಾರದಲ್ಲಿ ಎರಡೂ ಬದಿಗೆ ಬೇಕಾದ ಬುರುಜುಗಳಿವೆ. ಒಂದು ಬುರುಜಿನ ಮೇಲೆ ಗುಮ್ಮಟವುಳ್ಳ ಮಸೀದಿಯನ್ನು ಕಟ್ಟಲಾಗಿದೆ. ಇದು ಪುಟ್ಟದಾಗಿದೆ.

(ಎಸ್‌ಕೆಜೆ)

ಕೋಲೆಬಸವನ ವೇಷಭೂಷಣಗಳು: ಕೋಲೆಬಸವನ ಆಟವನ್ನು ಕವಲೆತ್ತಿನವರು (ಗೌಳಿಗರು) ಪ್ರದರ್ಶಿಸುತ್ತಾರೆ. ಆಂಧ್ರ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಈ ಕಲೆಯನ್ನು ಗೌಳಿಗರು ವಂಶ ಪಾರಂಪರ್ಯವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಗ್ರಾಮೀಣ ಭಾಗದಲ್ಲಿ ದೇವರಿಗೆ ಹರಕೆಯಾಗಿ ಬಿಟ್ಟ ಆಕಳು ಗಳನ್ನು ಕಪಿಲೆ ಎಂದು ಎತ್ತುಗಳನ್ನು ಗೂಳಿ ಎಂದು ಕರೆಯುತ್ತಾರೆ. ಅಂತಹ ದೇವರಿಗೆ ಬಿಟ್ಟ ಆಕಳುಗಳನ್ನು ತಂದು ಅವುಗಳಿಗೆ ತರಬೇತಿ ನೀಡಿ ಆಟ ಆಡಿಸುತ್ತಾ ಹೊಟ್ಟೆ ಹೊರೆದು ಕೊಳ್ಳುವ ವೃತ್ತಿಕಾರರನ್ನು ಕೌಲೆತ್ತಿನವರು. ಜೊತೆಗೆ ಈ ಎತ್ತುಗಳಿಗೆ ಕೌಲೆತ್ತು, ಗೌಲೆತ್ತು, ಗಂಗೆತ್ತು ಎಂದೂ ಕರೆಯುವುದ ರಿಂದ ಇದನ್ನು ಆಡಿಸುವದವರಿಗೆ ಕೌಲೆತ್ತಿನವರು, ಗೌಲೆತ್ತಿ ನವರು, ಗಂಗೆತ್ತಿನವರು ಎಂದು ಸಹ ಕರೆಯುತ್ತಾರೆ. ಇವರು ಆಟ ಆಡಿಸಲು ಹೋಗುವಾಗ ಬುರ್ ಬುರ್ ಎಂದು ಡೋಲು ಬಡಿಯುತ್ತಾ ಹೋಗುತ್ತಾರೆ. ಆದರಿಂದ ಮಕ್ಕಳು ಇವರನ್ನು 'ಬುರ್ ಬುರ್ ಬಸವಣ್ಣ' ಎಂದು ಸಹ ಕರೆಯುತ್ತಾರೆ. ಚುಡಿತದ ಜೀವನದಿಂದ ಬೇಸತ್ತಾಗ ಅದರಿಂದ ಹೊರ ಬರಲು ಮನೋ



ಕೋಲೆಬಸವ

ರಂಜನೆ ಅವಶ್ಯ. ಮನುಷ್ಯನ ಈ ಬೇಸರಿಕೆ ಯನ್ನು ಕಳೆಯಲು ಅನೇಕ ಮನರಂಜನಾ ವಿಧಾನಗಳು ಹುಟ್ಟಿಕೊಂಡವು. ಮನುಷ್ಯನ ಅನೇಕ ರೀತಿಯ ವೇಷಭೂಷಣ ಗಳನ್ನು ಧರಿಸಿ ಮನರಂಜನೆ ಕೊಡಲು ಮುಂದಾದ. ಜೊತೆಗೆ ಕರಡಿ, ಎತ್ತು, ಗಿಳಿ ಮುಂತಾದ ಪ್ರಾಣಿ ಪಕ್ಷಿಗಳನ್ನು ಸಾಕಿ ಅವುಗಳಿಂದ ಆಟ ಆಡಿ ಸುವ ಮೂಲಕ ಮನುಷ್ಯನನ್ನು ಮನರಂಜಿಸುವ ಪರಂಪರೆ ಬೆಳೆ ಯಿತು. ಹಾಗೆ ಹುಟ್ಟಿಕೊಂಡ ಪರಂಪರೆಗಳಲ್ಲಿ ಕೋಲೆ ಬಸವನ ಆಟ ಒಂದಾಗಿದೆ.

ಕೋಲೆಬಸವನ ಆಟದ ಬಗ್ಗೆ ದಂತಕತೆ ಇದೆ. ವ್ಯಾಘ್ರಾ ಸುರನೆಂಬ ರಾಕ್ಷಸನು ದೇವತೆಗಳಿಗೆ ಕಾಟ ಕೊಡಲು ಪ್ರಾರಂಭಿಸಿದನಂತೆ ಇವನ ಉಪಟಳವನ್ನು ತಾಳದ ದೇವತೆಗಳು ತಮ್ಮ ರಕ್ಷಣೆಗಾಗಿ ಶಿವನಿಗೆ ಮೊರೆ ಹೋಗುತ್ತಾರೆ. ಆಗ ಅವನನ್ನು ಸಂಹಾರ ಮಾಡಲು ನಿರ್ಧರಿಸಿದ. ಶಿವ ತನ್ನ ವಾಹನ ನಂದಿ ಯನ್ನು ಎತ್ತನ್ನಾಗಿ ಮಾಡಿ, ತಾನು ವಾಲಗ ಬಾರಿಸುವ ವೇಷ ವನ್ನು ಹಾಕಿಕೊಳ್ಳುತ್ತಾನೆ. ವಿಷ್ಣು ಬಸವನಾಡಿಸುವನಾಗುತ್ತಾನೆ. ಮೂರು ಜನ ಸೇರಿ ವ್ಯಾಘ್ರಾ ಸುರನ ಆಸ್ಥಾನಕ್ಕೆ ಬಂದು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇವರ ಆಟವನ್ನು ಮೆಚ್ಚಿದ ಅಸುರರು ಕಾಣಿಕೆ ಕೇಳಿ ಎನ್ನುತ್ತಾನೆ. ಆಗ ಇವರು ರಾಕ್ಷಸನ ಗದ್ದುಗೆಯನ್ನೇ ಕೇಳುತ್ತಾರೆ. ಇದರಿಂದ ಕೋಪಗೊಂಡು ಮೂವರನ್ನೂ ನುಂಗುತ್ತಾನೆ. ಆಗ ಬಸವ ತನ್ನ ಕೋಡಿನಿಂದ ರಾಕ್ಷಸನ ಎದೆ ಸೀಳಿ ಹೊರಬರುತ್ತಾನೆ. ಇದರಿಂದ ರಾಕ್ಷಸನ ಸಂಹಾರವಾಗುತ್ತದೆ. ಇದರಿಂದ ದೇವತೆಗಳಿಗೆ ನೆಮ್ಮದಿ ಉಂಟಾ ಯಿತು. ಬಸವನು ದುಷ್ಟ ಸಂಹಾರ ಶಿಷ್ಟ ರಕ್ಷಣೆ ಮಾಡಿದ್ದರಿಂದ ದುಷ್ಟಸಂಹಾರ, ಪೀಡೆ ಕಳೆಯುವುದಕ್ಕಾಗಿ ಈ ಆಟವನ್ನು ಆಡಿಸುತ್ತಾ ಬಂದಿದ್ದಾರೆಂದು ಹೇಳಲಾಗುತ್ತದೆ. ಜೊತೆಗೆ ಗೊಲ್ಲರ ಆರಾಧ್ಯ ದೈವ ಜುಂಜಪ್ಪ ಬಸವನ ವೇಷ ತಾಳಿದ್ದರಿಂದ ತಾವು ಈ ಆಟವನ್ನು ಆಡಿಸುವದಾಗಿ ಗೊಲ್ಲರು ಹೇಳುತ್ತಾರೆ.

ಕೋಲೆಬಸವನ ಆಟಕ್ಕೆ, ನಾಟಕಕ್ಕೆ ಬೇಕಾಗುವಂತಹ ಯಾವ ಪರಿಕರುಗಳನ್ನು ಬಳಸುವುದಿಲ್ಲ. ಕವಲೆತ್ತುಗಳು, ಡುರ್ ಡುರ್ ಎಂದು ಬಾರಿಸುವ ಡೋಲು ಮತ್ತು 2,3 ಜನ ಕಲಾವಿದರು ಮಾತ್ರ ಈ ಆಟದಲ್ಲಿ ಇರುತ್ತಾರೆ. ಈ ಆಟದಲ್ಲಿ ಆಕಳು ಮತ್ತು ಎತ್ತುಗಳಿರುತ್ತವೆ. ಅಥವಾ ವಿಚಿತ್ರವಾದ ಅಂಗ, ವಿಚಿತ್ರವಾದ ಸುಳಿಗಳು ಬೆಳೆದಿರು ವಂತಹ ಆಕಳು ಎತ್ತುಗಳಾಗಿರುತ್ತವೆ. ಇಂತಹ ಪ್ರಾಣಿಗಳನ್ನು ಗ್ರಾಮೀಣರು ದೈವಾಂಶದ ಪ್ರಾಣಿ ಗಳೆಂದು ಈ ಜನಾಂಗಕ್ಕೆ ದಾನದ ರೂಪದಲ್ಲಿ ಕೊಟ್ಟಿ ರುತ್ತಾರೆ. ಇಂತಹ ಪ್ರಾಣಿಗಳಿಗೆ ಇವರು ತರಬೇತಿ ಕೊಟ್ಟು ಇವನ್ನು ಆಡಿಸಲು ತರುತ್ತಾರೆ. ಚೇವಸ್ಥಾನ ದಿಂದ ಅಥವಾ ದಾನವಾಗಿ ಪಡೆದ ಈ ಎತ್ತುಗಳನ್ನು ಅವರು ಯಾವುದೇ ಕಾರಣಕ್ಕೂ ಕಟುಕರಿಗೆ ಮಾರು ವುದಿಲ್ಲ. ಒಂದು ವೇಳೆ ಇವನ್ನೇನಾದರೂ ಮಾರಿದರೆ ಮಾರಿದಂತಹವರಿಗೆ ದಂಡ ವಿಧಿಸುವದರೊಂದಿಗೆ ಅವರನ್ನು ಹನ್ನೊಂದು ವರ್ಷ ಕುಲದಿಂದ ಹೊರ ಗಿಡಲಾಗುತ್ತದೆ.

ಕೋಲೆಬಸವನನ್ನು ಆಡಿಸುವ ಕಲಾವಿದ ಬಿಳಿಯ ಧೋತರ ಉಟ್ಟು, ಅಂಗಿ ಹಾಕಿ ಮೇಲೊಂದು ಕೋಟು ಧರಿಸಿ. ತಲೆಗೆ ರುಮಾಲು ಸುತ್ತಿ. ಹಣೆಗೆ ಕುಂಕುಮ, ವಿಭೂತಿ ಹಚ್ಚಿರುತ್ತಾನೆ. ಮೇಲೆ ಶಲ್ಯೆ ಹೊದ್ದಿರುತ್ತಾನೆ. ಕೈಯಲ್ಲಿ ಹಿತ್ತಾಳೆ, ತಾಮ್ರ, ಬೆಳ್ಳಿಯ ಉಂಗುರುಗಳನ್ನು ಧರಿಸಿರುತ್ತಾನೆ. ಕೈಯಲ್ಲಿ ಬಾರಕೋಲು ಹಿಡಿದಿರುತ್ತಾನೆ. ಹೆಣ್ಣು ಮಕ್ಕಳು ಬಲಕ್ಕೆ ಸೆರಗು ಹಾಕಿ ಸೀರೆ ಉಟ್ಟು. ಕುಪ್ಪುಸ ಧರಿಸಿರುತ್ತಾರೆ. ಆಟವನ್ನು ಆಡಿಸುವವರು. ಹೆಚ್ಚಾಗಿ ಗಂಡುಮಕ್ಕಳು ಆಟ ಆಡಿಸಲು ಬೇಕಾಗುವಷ್ಟು ಗಂಡು ಮಕ್ಕಳು ಇರದಿದ್ದರೆ ಮಾತ್ರ ಹೆಣ್ಣುಮಕ್ಕಳನ್ನು ಆಟಕ್ಕೆ ಕರೆದು ಕೊಂಡು ಹೋಗುತ್ತಾರೆ. ಗಂಡಸರು ಆಟ ಆಡಿಸಲು ಹೋದಾಗ ಹೆಣ್ಣುಮಕ್ಕಳು ಊರಲ್ಲಿ ಬಾಚಣಿಕೆ ಹೇರಪಿನ್ನು, ಬುಟ್ಟಿ, ಮುಂತಾದ ದಿನಬಳಕೆಯ ವಸ್ತುಗಳ ಮಾರಾಟಕ್ಕೆ ಹೋಗುತ್ತಾರೆ. ಇವರು ಧರಿಸುವ ಬಟ್ಟೆಗಳೆಲ್ಲವೂ ಬೇಡಿತಂದ ಬಟ್ಟೆಗಳೇ ಆಗಿವೆ.

ಕೋಲೆಬಸವನನ್ನು ಆಡಿಸುವವರು ತಾವು ತಂದ ಬಸವನ ಕೋಡುಗಳಿಗೆ ಬಣ್ಣ ಬಣ್ಣದ ಬಟ್ಟೆ ಸುತ್ತಿ ಮೇಲೆ ಕುಚ್ಚು ಕಟ್ಟು ವರು. ಎತ್ತಿನ ಕೋಡುಗಳು ಗಿಡ್ಡ ಇದ್ದರೂ ಅವುಗಳಿಗೆ ಅಣಸು ಹಾಕಿ ಅವು ಕಿಲಾರಿ ಹೋರಿಗಳಂತೆ ಕಾಣುವ ಹಾಗೆ ಮಾಡು ತ್ತಾರೆ. ಹಣೆಗೆ ಪಟ್ಟಿ, ಕೊರಳಲ್ಲಿ ಹಿರಿಗೆಜ್ಜೆ, ಸರಘಂಟೆ, ಕಾಲಲ್ಲಿ ಕಡಗ, ಗಗ್ಗರಿ, ಗೆಜ್ಜೆ ಕಟ್ಟಿರುತ್ತಾರೆ. ಅವುಗಳ ಹಣೆಯ ಮೇಲೆ ಅಂಗೈಯಗಳಲ್ಲಿ ರಾಮ, ಆಂಜನೇಯ ಮುದ್ರೆಯಿರುವ ಹಿತ್ತಾಳೆಯ ತಗಡನ್ನು ಹೊದಿಸಿರುತ್ತಾರೆ. ಬೆನ್ನಮೇಲೆ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿರುತ್ತಾರೆ. ಹೀಗೆ ಬಟ್ಟೆ ಆಭರಣಗಳಿಂದ ಅಲಂಕರಿಸಿ ನೋಡಲು ಒಬ್ಬ ಪುರುಷನಂತೆ ಕಾಣುವ ಹಾಗೆ ಮಾಡಿರುತ್ತಾರೆ. ಬೆನ್ನ ಮೇಲೆ ಕಂಬಳಿ ಕಟ್ಟಿರುತ್ತಾರೆ. ದಾನಿಗಳು ಕೊಟ್ಟ ದವಸಧಾನ್ಯಗಳನ್ನು ಅದರಲ್ಲಿ ಹಾಕಿರುತ್ತಾರೆ.

ಆಕಳ ಹಣೆಗೆ ಕುಂಕುಮ ಹಚ್ಚಿ, ಕಾಲಿಗೆ ಗೆಜ್ಜೆ, ಕಟ್ಟಿ, ಕೋಡಿಗೆ ಹೂವು ಹಾಕುತ್ತಾರೆ. ಬೆನ್ನ ಮೇಲೆ ಬಣ್ಣ ಬಣ್ಣದ ಸೀರೆಗಳನ್ನು ಹಾಕುತ್ತಾರೆ. ಹೆಣ್ಣು ಮಗಳನ್ನು ಹೋಲುವಂತೆ ಆಕಳನ್ನು ಅಲಂಕಾರ ಮಾಡುತ್ತಾರೆ. (ಆರ್‌ಎಸ್)

ಕೌ


ಕೌದಿ ಕಲೆ: ಜನಪದ ಕಲಾ ಪ್ರಕಾರಗಳಲ್ಲಿ ಒಂದು, ಗ್ರಾಮೀಣ, ಜನರು ಹಾಸಲು ಹೊದೆಯಲು ಬಳಸುವ **ಕೌದಿ** ಬಡವರ ಕಂಬಳಿಯಾಗಿದೆ. ಇದು ಮಳೆಗಾಲ, ಚಳಿಗಾಲದಲ್ಲಿ ಬೆಚ್ಚಗೆ, ಬೇಸಿಗೆ ಕಾಲದಲ್ಲಿ ತಂಪಾದ ಅನುಭವ ನೀಡುತ್ತದೆ. ಅದಕ್ಕೆ ಇದನ್ನು **ಹವಾ ನಿಯಂತ್ರಿತ** ಹೊದಿಕೆ ಎಂದು ಕರೆಯುತ್ತಾರೆ. ಹೈದ್ರಾಬಾದ ಕರ್ನಾಟಕದ ಗ್ರಾಮೀಣರು ಕೌದಿಯನ್ನು ಹಾಸಲು ಹೊದೆಯಲು ಈಗಲೂ ಬಳಸುತ್ತಾರೆ.

ಕೌದಿಯನ್ನು ತಯಾರಿಸಲು, ಮನೆಯ ಗಂಡಸರು ಉಟ್ಟು ಬಿಟ್ಟ ಹಳೆಯ ಧೋತರ, ಸೀರೆಗಳನ್ನು ಲ್ಯಾವಿಯನ್ನಾಗಿ ಮಾಡಿ ಕೊಂಡು ಅದರ ಮೇಲೆ ಮಕ್ಕಳ ಬಣ್ಣ-ಬಣ್ಣದ ಹಳೆಯ ಅರಿವೆ ತುಂಡುಗಳು, ಹಳೆಯ ಅಂಗಿ ಪ್ಯಾಂಟು, ಸೀರೆ, ಜಂಪರುಗಳ ತುಂಡುಗಳು ಸಿಂಪಿಗರ ಅಂಗಡಿಯಲ್ಲಿಯ ಹೊಸ ಬಟ್ಟೆ ತುಂಡು ಗಳು, ದಪ್ಪ ಸೂಜಿ, ದಪ್ಪನೆಯ ಕೌದಿ ದಾರ, ಕುಡಗೋಲ ಕತ್ತರೆ, ಇವಿಷ್ಟು ಬಂಡವಾಳದೊಂದಿಗೆ ತಮ್ಮ ಕಲ್ಪನೆಯ ರೂಪಗಳಿಗೆ ಆಕಾರ ಕೊಡುತ್ತಾ, ಬಣ್ಣ-ಬಣ್ಣದ ಅರಿವೆ ತುಂಡುಗಳನ್ನು ಇಟ್ಟು ಹೊಲಿಯುತ್ತಾ ಹೋಗುತ್ತಾರೆ. ಹೊಲಿ ಯುವುದು ಮುಗಿದಾಗ ಒಂದು ಸುಂದರವಾದ ಕೌದಿ ಕಲಾತ್ಮಕವಾಗಿ ನಿರ್ಮಾಣ ವಾಗುತ್ತದೆ. ಇದಕ್ಕೆ ಸಮಕಾಲೀನ ಕಲಾಪ್ರಕಾರವಾದ **'ಕೋಲಾಜ್ ಕಲೆ'** ಕೌದಿ ಕಲೆಯ ಮುಂದುವರಿದ ರೂಪ ಎಂಬುದು ಎಸ್.ಸಿ. ಪಾಟೀಲ ಅವರ ಅಭಿಪ್ರಾಯ. ಕೌದಿ ಕಲೆಯೇ ಆಧುನಿಕ ಕಲಾ ಪ್ರಕಾರವಾದ ಬಾಟಿಕ, ಕಸೂತಿ ಕಲೆಗೆ ಮೂಲ ಎನ್ನಬಹು ದಾಗಿದೆ.

ಕೌದಿಯ ನಾಲ್ಕು ಮೂಲೆಗೆ ಬಣ್ಣದ ಅರಿವೆ ತುಂಡನ್ನು ಮಡಚಿ ಜೋಡಿಸುತ್ತಾರೆ. ಇದಕ್ಕೆ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಕೌದಿ ಒಗಟು ಚಾಲ್ತಿಯಲ್ಲಿದೆ. ಹೆಣ್ಣುಮಕ್ಕಳು ಸಂಜೆ ವೇಳೆ ಕೆಲಸ ಮುಗಿಸಿ, ಹರಟೆ ಹೊಡೆಯುತ್ತಾ ಕುಳಿತಾಗ ಒಂದು ಗುಂಪು ಒಗಟನ್ನು ಹೇಳಿದರೆ ಇನ್ನೊಂದು ಗುಂಪು ಬಿಡಿಸುತ್ತದೆ. ಕೌದಿ



ಕೌದಿ ಕಲೆ



ದೊಡ್ಡವರ ಕೌದಿ


ಕುರಿತು ಇಂಥ ಒಂದು ಒಗಟು ಹೀಗಿದೆ 'ನಾಲ್ಕು ಮೂಲಿಗೆ ನಾಲ್ಕು ಗೊಂಬಿ, ಸಂಜಿಕಿ ಬರತಾಳ ಮುದರೋಂಡಿ' ಈ ಒಗಟಿನಲ್ಲಿ ಕೌದಿಯ ಆವಶ್ಯಕತೆಯ ಒಳಮರ್ಮ ಅಡಿಗಿದೆ. ರಾತ್ರಿ ಯಾದರೆ ಸಾಕು ಗ್ರಾಮೀಣ ಜನರಿಗೆ, ಬೆಚ್ಚನೆಯ ಹೊದಿಕೆ ಯಾಗಿ ಕೌದಿ ಬೇಕಾಗುತ್ತದೆ. ಅದಕ್ಕೆ ಜನಪದರು ಜಗದ್ಗುರು ಜಗದೀಶ, ಥಂಡಿ ಗುರು ಕೌದೀಶ ಎಂದು ಹೇಳಿದ್ದಾರೆ.

ಗ್ರಾಮೀಣ ಹೆಣ್ಣುಮಕ್ಕಳು ಗಂಡನ ಮನೆಗೆ ಹೋಗುವಾಗ ತವರು ಮನೆಯ ಉಡುಗೊರೆಯಾಗಿ ಕೌದಿಯನ್ನು ಕೊಡುವ ಸಂಪ್ರದಾಯ ಈಗಲೂ ಗ್ರಾಮೀಣರಲ್ಲಿ ರೂಢಿಯಲ್ಲಿದೆ. ಕೌದಿ ಯಲ್ಲಿ ಅನೇಕ ಬಗೆಯ ಚಿತ್ರಗಳನ್ನು ಕಾಣುತ್ತೇವೆ. ಧಾರ್ಮಿಕ ಚಿತ್ರಗಳು, ಸಾಮಾಜಿಕ ಚಿತ್ರಗಳು, ಅಲಂಕಾರಿಕ ಚಿತ್ರಗಳು, ರಾಮಾಯಣ-ಮಹಾಭಾರತದ ದೃಶ್ಯಗಳನ್ನು ಕಲ್ಪಿಸಿಕೊಂಡು ಕೌದಿಯಲ್ಲಿ ವಿವಿಧ ಆಕಾರಗಳನ್ನು ಕೊಡುತ್ತಾರೆ. ಇಂತಹ ಧಾರ್ಮಿಕ ಭಾವನೆಯ ಕೌದಿಗಳನ್ನು ಜಾತ್ರೆ, ಮುಂತಾದ ಸಂದರ್ಭಗಳಲ್ಲಿ ಪೂಜಿಸುವ ಪದ್ಧತಿ ಇದೆ. ಕೌದಿ ಕಲೆಯನ್ನೇ ತಮ್ಮ ಜೀವನದ ವೃತ್ತಿಯಾಗಿಸಿಕೊಂಡ ಅನೇಕ ಹೆಣ್ಣು ಮಕ್ಕಳನ್ನು ಹೈದ್ರಾಬಾದ ಕರ್ನಾಟಕ, ಭಾಗದಲ್ಲಿ ನೋಡುತ್ತೇವೆ. ಕೌದಿಯ ಆನಂತರ ನಗರದ ಮಾರುಕಟ್ಟೆಯಲ್ಲಿ ಸಿಗುವ ಚಾದರ, ಕಂಬಳಿ, ರಗ್ಗ, ಬಳಕೆಯಲ್ಲಿ ಬಂದರೂ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಕೌದಿಗಳು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ. ಈ ಮೂಲಕ 'ಕೌದಿ ಕಲೆ' ಜನಪದ ಕಲೆಯಾಗಿ ಗ್ರಾಮೀಣ ಜನರ ಮನೆ, ಮನ ಸೇರಿಕೊಂಡಿದೆ.

(ಪಿಬಿಜಿ)

ಖ

ಖಂಡೇರಾವ ಜೆ.ಎಸ್. : ಕಲಾ ಕ್ಷೇತ್ರದಲ್ಲಿ ಬಹು ಎತ್ತರಕ್ಕೆ ಬೆಳೆದ ಕಲಾವಿದರು. ಜಗದೇವಪ್ಪ ಶಂಕರಪ್ಪ ಖಂಡೇರಾವ ಇವರ ಪೂರ್ಣ ಹೆಸರು. ತಮ್ಮ ಪ್ರತಿಭೆ, ಸಾಧನೆಗಳಿಂದಾಗಿ ಕರ್ನಾಟಕ ಕಲಾವಲಯವನ್ನೇ ಶ್ರೀಮಂತಗೊಳಿಸಿದ್ದಾರೆ. ಕಲಾವಿದರಾಗಿ, ಕಲಾಶಿಕ್ಷಕರಾಗಿ, ಕಲಾ ಸಂಸ್ಥೆಯೊಂದರ ನಿರ್ದೇಶಕರಾಗಿ ಇವರು ನೀಡಿರುವ ಕೊಡುಗೆ ಅನನ್ಯವಾದುದು.



ಕಲಬುರ್ಗಿಯ ಸುಸಂಸ್ಕೃತ ಮನೆತನದ ಶ್ರೀ ಶಂಕರಪ್ಪ ಹಾಗೂ ಬಸಮ್ಮ ದಂಪತಿಗಳ ಮಗನಾಗಿ 1940ರ ನವಂಬರ್ 1ರಂದು ಜನಿಸಿದ ಜಗದೇವಪ್ಪ ನವರು, ಹುಟ್ಟಿದ ಮರು ಘಳಿಗೆಯಲ್ಲೇ ತಮ್ಮ ತಾಯಿಯನ್ನು ಕಳೆದುಕೊಂಡರು. ಕಲಬುರ್ಗಿ ಸಮೀಪದ ಖಾಜಾ ಕೋಟ್ನೂರ್‌ನಲ್ಲಿ ತಮ್ಮ ಸೋದರತ್ತೆಯವರ ಆರೈಕೆಯಲ್ಲಿ ಬೆಳೆಯುತ್ತ ಬಾಲ್ಯದ ಕನಸುಗಳನ್ನು ಕಂಡವರು. ಇವರ ಆರಂಭದ ಶಿಕ್ಷಣ ಕಲಬುರ್ಗಿಯ ಆಸಫ್‌ಗಂಜ್ ಶಾಲೆಯಲ್ಲಾಯಿತು. 'ಇತಿಹಾಸ' ಜಗದೇವಪ್ಪನವರ ಆಸಕ್ತಿಯ ವಿಷಯ. ಅದರಲ್ಲೂ ಭೂಗೋಳ ವಿಷಯಕ್ಕೆ ಸಂಬಂಧಿಸಿದಂತೆ ನಕಾಶೆ ಚಿತ್ರಗಳನ್ನು ಬರೆದು ಅದರಲ್ಲಿ ಬಣ್ಣ ತುಂಬುವ ಹುಚ್ಚು ಜಗದೇವಪ್ಪನವರ ಮನಸ್ಸನ್ನಾವರಿಸಿ ಸಾಮಾನ್ಯ ಶಿಕ್ಷಣದಿಂದ ಕಲೆಯೆಡೆಗೆ ವಾಲಿಸಿತು. ಬಹುಶಃ ಜಗದೇವಪ್ಪನವರು ಕಲಾವಿದರಾಗಲು ಇದು ಆರಂಭದ ಹೆಜ್ಜೆ ಎಂತಲೂ ಭಾವಿಸಬಹುದು.

ಹೈಸ್ಕೂಲ್ ಶಿಕ್ಷಣಕ್ಕಾಗಿ ಕಲಬುರ್ಗಿಯ ಎಂ.ಪಿ.ಎಚ್.ಎಸ್. ಶಾಲೆಗೆ ಸೇರಿದರು. 'ಸೈಯದ್ ಹುಸೇನ್' ಎನ್ನುವವರು ಈ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದವರು. ಜಗದೇವಪ್ಪನವರ ಕಲಾಸಕ್ತಿಯ ಬೆಳವಣಿಗೆ ತಂದೆ ಶಂಕರಪ್ಪನವರಿಗೆ ಚಿಂತೆಗೀಡು ಮಾಡಿತು. ತಮ್ಮ ಮಗ ವೈದ್ಯಕೀಯ ಇಲ್ಲವೆ ತಾಂತ್ರಿಕ ಅಧ್ಯಯನ ಕೈಗೊಳ್ಳುವಂತಾಗಬೇಕು ಎಂದು ಶಂಕರಪ್ಪನವರು ಬಯಸಿದ್ದರಾದರೂ, ಜಗದೇವಪ್ಪನವರು ಈ ನೆಲೆಯಲ್ಲಿ ಯಾವತ್ತೂ ಯೋಚನೆ ಮಾಡಿದವರಲ್ಲ. ಬದಲಾಗಿ ಬಣ್ಣ-ಕುಂಚಗಳ ಒಡನಾಟವನ್ನು ತೀವ್ರಗೊಳಿಸುತ್ತಲೇ ಬಂದವರು. ಈ ಬೆಳವಣಿಗೆ ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಕಲಾಧ್ಯಯನ ಕೈಗೊಳ್ಳಬೇಕೆಂಬ ಬಲವಾದ ಆಸೆಯನ್ನು ಹುಟ್ಟುಹಾಕಿತು. ತಮ್ಮ ಮನೆಯಲ್ಲಿ ಕಲಾಧ್ಯಯನಕ್ಕೆ ವಿರೋಧವಿದ್ದರೂ ಅದಾವುದನ್ನೂ ಲೆಕ್ಕಿಸದೆ ಮುಂಬೈಗೆ ತೆರಳಿ ಜೆ.ಜೆ. ಕಲಾಶಾಲೆಯಲ್ಲಿ ಪ್ರವೇಶ ಪಡೆದರು. ಮುಂಬೈನ 'ನೂತನ ಕಲಾಮಂದಿರ'ವೂ ಸಹ ಖಂಡೇರಾವ್ ಅವರಿಗೆ ಆಸರೆಯಾಗಿದ್ದನ್ನು ನಾವು ಮರೆಯುವಂತಿಲ್ಲ. ಕರ್ನಾಟಕದವರೇ ಆದ, 'ಕಲಾಗುರು' ಎಂದೇ ಪ್ರಖ್ಯಾತರಾಗಿದ್ದ ಜಿ.ಎಸ್. ದಂಡಾವತಿಮಠ ಅವರು ಈ ಕಲಾಶಾಲೆಯ ರೂವಾರಿಗಳಾಗಿದ್ದರು.

ಮುಂಬೈನ 'ಜಹಾಂಗೀರ ಆರ್ಟ್ ಗ್ಯಾಲರಿ' ಜಗತ್ತಿನ ಶ್ರೇಷ್ಠ ಕಲಾಗ್ಯಾಲರಿಗಳಲ್ಲಿ ಒಂದು ಈ ಗ್ಯಾಲರಿಯಲ್ಲಿ ನಡೆಯುವ ಪ್ರತಿಯೊಂದು ಪ್ರದರ್ಶನಗಳನ್ನು ವೀಕ್ಷಿಸುವ ಅವಕಾಶ ಜೆ.ಜೆ. ಕಲಾಶಾಲೆಯ ವಿದ್ಯಾರ್ಥಿಗಳಿಗಿತ್ತು. ಎಂ.ಎಫ್. ಹುಸೇನ, ಎನ್.ಎಸ್. ಬೇಂದ್ರೆ, ಬಿ. ಪ್ರಭಾ, ಮಾಧವರಾವ ಸಾತ್ವೋಲಕರ್, ಕೆ.ಕೆ. ಹೆಬ್ಬಾರ್, ಎಸ್.ಎಂ. ಪಂಡಿತ್ ಮೊದಲಾದವರು ಅಂದಿನ ದಿನಗಳಲ್ಲೇ ಸಾಕಷ್ಟು ಹೆಸರು ಮಾಡಿದ್ದರು. ಈ ಕಲಾವಿದರ ಕೃತಿಗಳ ಪ್ರದರ್ಶನ, ಪ್ರಾತ್ಯಕ್ಷಿಕೆ, ಚರ್ಚೆ ಸಂವಾದಗಳ ಮೂಲಕ ತಮ್ಮ ಕಲಾಬದುಕನ್ನು ವೃದ್ಧಿಸಿಕೊಳ್ಳುವ ಅವಕಾಶವೂ ಅಲ್ಲಿತ್ತು. ಖಂಡೇರಾವ ಅವರ ಆರಂಭವ ಕಲಾಕೃತಿಗಳಲ್ಲಿ ಎನ್.ಎಸ್. ಬೇಂದ್ರೆ ಅವರ ಕಲಾಕೃತಿಗಳ ಪ್ರಭಾವವಿರುವುದನ್ನು ನಾವು ಕಾಣುತ್ತೇವೆ.

ಮೃಘಾಂಕ್ ಜೋಶಿ, ಗೋಪಾಲ, ಅಡಿವೀರೇಕರ್, ಚವ್ಹಾಣ, ವರ್ಮಾ, ಮೆನನ್, ಪರದೇಶಿ, ಜೆ.ಎಸ್. ಶೆಣೈ ಮೊದಲಾದವರು ಖಂಡೇರಾವ ಅವರ ಒಡನಾಡಿಗಳು. ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ವೇಳೆ ಸ್ನೇಹಿತರೆಲ್ಲರೂ ಅವರವರ ಮನೆತನದ ಹೆಸರಿನಿಂದ ಕರೆದುಕೊಳ್ಳುತ್ತಿದ್ದರು ಹಾಗಾಗಿ 'ಖಂಡೇರಾವ' ಎಂಬ ಹೆಸರು ರೂಢಿಯಲ್ಲಿ ಬಂದಿತು. 1960ರಿಂದ 1963ರ ವರೆಗೆ ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಮಾಡಿದ ಖಂಡೇರಾವ ಅವರು ಚಿತ್ರಕಲೆಯಲ್ಲಿ ಡಿಪ್ಲೋಮಾ ಮುಗಿಸಿದವರೇ ಕಲಬುರ್ಗಿಗೆ ಮರಳಿ ಬಂದರು.

ವೃತ್ತಿಜೀವನ ಮತ್ತು ಕಲಾಬದುಕು: ಖಂಡೇರಾವ ಅವರಿಗೆ ಆಪ್ತರಾಗಿದ್ದ ಸಿ.ವಿ. ಕರಡಗಿ ಅವರು ಕರ್ನಾಟಕ ಸರ್ಕಾರದ 'Art & Craft' ವಿಭಾಗದಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಸಹಕಾರದಿಂದಾಗಿ ವಾರ್ತಾ ಇಲಾಖೆಯಲ್ಲಿ ಕೆಲಸವೂ ಸಿಕ್ಕಿತು. ಆದರೆ, ಖಂಡೇರಾವ ಅವರ ಮನಸ್ಥಿತಿಗೆ ಈ ಕೆಲಸ ಸರಿಹೊಂದಲಿಲ್ಲ. ಮರಳಿ ಮತ್ತೆ ಕಲಬುರ್ಗಿಗೆ ಬಂದರು. 1965ರಲ್ಲಿ ಈಗಿನ ಕಿರಾಣಾ ಬಜಾರ್‌ನಲ್ಲಿ ವಿಶಾಲವಾದ ಕೋಣೆಯೊಂದನ್ನು ಬಾಡಿಗೆಗೆ ಪಡೆದು 'ಆದರ್ಶ ಕಲಾಶಾಲೆ'ಯನ್ನು ಹುಟ್ಟು ಹಾಕಿದರು. ತನ್ಮೂಲಕ ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣ ಪರಂಪರೆಯು ಪುನರುಜ್ಜೀವನಗೊಳ್ಳಲು ಸಾಧ್ಯವಾಯಿತೆನ್ನಬಹುದು. ಹೆಸರಾಂತ ಕಲಾವಿದರಾದ ಡಾ.ವಿ.ಜಿ. ಅಂದಾನಿ, ಎಸ್.ಬಿ. ಉಪ್ಪಿನ್, ಬಿ.ಆರ್, ಉಪ್ಪಿನ್, ಎಂ.ಬಿ. ಲೋಹಾರ್ ಇವರೆಲ್ಲರೂ ಆದರ್ಶ ಕಲಾಶಾಲೆಯಲ್ಲಿ ಅಧ್ಯಯನ ಮಾಡಿದ ಮೊದಲ ತಂಡವಾಗಿ ಹೊರಬಂದರು.

1971ರಲ್ಲಿ ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿಕೊಂಡಿರುವ ಕಾರಣ ಖಂಡೇರಾವ ಅವರು 'ಆದರ್ಶ ಕಲಾಶಾಲೆ'ಯ ಏನೆಲ್ಲ ಜವಾಬ್ದಾರಿಯನ್ನು ಶಿಷ್ಯ ಅಂದಾನಿಯವರಿಗೆ ವಹಿಸಿದರು. ಈ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿಗಳ ಬದುಕಿಗೆ ಬೆಳಕಾದರು ಮಾತ್ರವಲ್ಲ ಸಾಕಷ್ಟು ಸಂಖ್ಯೆಯ ಚಿತ್ರಕಲಾವಿದರು ಬೆಳೆದುಬರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸುಮಾರು ಮೂರು ದಶಕಗಳ ಕಾಲ ಶ್ರೀ ಶರಣಬಸವೇಶ್ವರ ಸಂಸ್ಥೆಯಲ್ಲಿ ಕಲಾ ಶಿಕ್ಷಕರಾಗಿ, ವಿಭಾಗವೊಂದರ ಮುಖ್ಯಸ್ಥರಾಗಿ, ಅಲ್ಲದೇ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸುವುದರೊಂದಿಗೆ 1998ರಲ್ಲಿ ನಿವೃತ್ತಿಯನ್ನು ಹೊಂದಿದರು. ಆದರೆ, ಈಗಲೂ ಕಲಾ ಸೃಷ್ಟಿಯಲ್ಲಿ ನಿರತರು. ಅಕಾಡೆಮಿಕ್ ಶೈಲಿಯಲ್ಲಿ ಸಾಕಷ್ಟು ಕಲಾಕೃತಿಗಳನ್ನು ಸೃಷ್ಟಿಸಿದ್ದಾರೆ. ಒಂದೊಮ್ಮೆ ಶೈಲಿ ಬದ್ಧತೆಗೆ ಒಳಗಾಗಿ 'ಕಿಟಕಿಯಿಂದ ತೂರಿಬಂದ ಬೆಳಕಿನ ಕಿರಣ'ಗಳು ಎನ್ನುವ ಸಾಂಕೇತಿಕ ಅರ್ಥಕೊಡುವ 'ವಿಂಡೋ ಸರಣಿ'ಯ ಅಮೂರ್ತ ಚಿತ್ರರಚನೆಗೆ ಮುಂದಾದರು. ರಾಜ್ಯ, ದೇಶದ ತುಂಬೆಲ್ಲ ಈ ಸರಣಿ ಚಿತ್ರಗಳು ಕಾಣಸಿಗುತ್ತವೆ. ಸಂಯೋಜನೆ, ಭಾವಚಿತ್ರ, ನಿಸರ್ಗಚಿತ್ರ ಎಲ್ಲದರಲ್ಲೂ ಪಳಗಿದ ವ್ಯಕ್ತಿತ್ವ ಇವರದು.

ಬಹುಶಃ ಕರ್ನಾಟಕದಲ್ಲಿ ಖಂಡೇರಾವ ಅವರ ಕಲಾಕೃತಿಗಳು ಸಂಗ್ರಹವಿಲ್ಲದ ಕಲಾ ಸಂಸ್ಥೆಯಿಲ್ಲ ಎನ್ನುವಷ್ಟರ ಮಟ್ಟಿಗೆ ನಾಡಿನುದ್ದಕ್ಕೂ ಚಿರಪರಿಚಿತರು. ಇವರ ಭಾವಚಿತ್ರಗಳು ಇವರದೇ ಶೈಲಿಯಿಂದ (ಖಂಡೇರಾವ ಶೈಲಿ) ಪ್ರಸಿದ್ಧಿ ಪಡೆದಿದೆ. ಕೇವಲ 30ರಿಂದ 40 ನಿಮಿಷಗಳಲ್ಲಿ ಒಂದೆರಡು ಕುಂಚಗಳ ಸಹಾಯದಿಂದ ಬಣ್ಣ ಬಣ್ಣದ ತೆಪ್ಪೆಯನ್ನು ಕ್ಯಾನ್ವಾಸ್ ಮೇಲೆ ಲೇಪಿಸುತ್ತ ವ್ಯಕ್ತಿಯ ಹಾವ-ಭಾವವನ್ನು ಕ್ಷಣಾರ್ಧದಲ್ಲಿ ತೋರಿಸಬಲ್ಲ ಇವರ ಸಾಮರ್ಥ್ಯ ಎಂಥವರನ್ನೂ ಬೆರಗುಗೊಳಿಸಬಲ್ಲದು. ಕಲಾಸಕ್ತ ಶ್ರೀಮಂತ ವ್ಯಕ್ತಿಗಳು ಈ ಕಲಾವಿದರಿಂದ ತಮ್ಮ ಹಾಗೂ ತಮ್ಮ ಪರಿವಾರದವರ ಭಾವಚಿತ್ರಗಳನ್ನು ಚಿತ್ರಿಸಿಕೊಂಡಿದ್ದಾರೆ. ರಾಜ್ಯದ ಕಲಾಶಾಲೆಗಳಲ್ಲದೇ ಇನ್ನಿತರ ಖಾಸ್ಗಿ ಸಂಘ-ಸಂಸ್ಥೆಗಳು ತಮ್ಮ ಬಳಿಯಲ್ಲೂ ಖಂಡೇರಾವ ಅವರ ಕೃತಿ ಇರಲೆಂಬ ಕಾರಣಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸಾಮಾನ್ಯವಾಗಿದೆ. ಒಬ್ಬ ಕಲಾವಿದ ಏನೆಲ್ಲ ಮಾಡಬಹುದು ಎಂದು ತೋರಿಸಿಕೊಟ್ಟ ಸರಳ ಹಾಗೂ ಸಜ್ಜನಿಕೆಯ ವ್ಯಕ್ತಿಗಳು ಖಂಡೇರಾವರು. ಕಲಬುರ್ಗಿ ಪರಿಸರದಲ್ಲಿ ಕಲೆಗೆ ಒಂದು ಶಾಶ್ವತ ನೆಲೆ ದೊರಕಿಸಿಕೊಟ್ಟವರಲ್ಲಿ ಖಂಡೇರಾವ ಅವರೂ ಒಬ್ಬರು ಎಂದು ಹೆಮ್ಮೆಯಿಂದ ಹೇಳಬಹುದು.

ರಾಜ್ಯ ಮತ್ತು ರಾಷ್ಟ್ರದ ಅನೇಕ ಕಡೆಗಳಲ್ಲಿ ನೂರಾರು ಕಲಾ ಪ್ರದರ್ಶನಗಳನ್ನು ಹಮ್ಮಿಕೊಂಡಿದ್ದಾರೆ. ಸಾಕಷ್ಟು ಸಂಖ್ಯೆಯ ಕಲಾಶಿಬಿರ, ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಚಿತ್ರಕಲಾ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿರುವ ಕಲಾ ಸಾಧಕರಿಗೆ ಕೊಡಮಾಡುವ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ, ಶಂಕರ ಪಾಟೀಲ ಪ್ರಶಸ್ತಿ, ಟಿ.ಪಿ. ಅಕ್ಕಿ ಪ್ರಶಸ್ತಿ; ಹೀಗೆ ಪ್ರಶಸ್ತಿ- ಪುರಸ್ಕಾರಗಳ ಸರಮಾಲೆಯೇ ಇವರನ್ನು ಹುಡುಕಿಕೊಂಡು ಬಂದಿದೆ. 2002ರಲ್ಲಿ ಭಾರತ ಸರ್ಕಾರದ ಸೀನಿಯರ್ ಫೆಲೋಷಿಪ್ ಸಹ ಇವರಿಗೆ ಸಂದಿದೆ. ಬಹುಶಃ ಕರ್ನಾಟಕದಲ್ಲಿ ಖಂಡೇರಾವ ಅವರಿಗೆ ಸಲ್ಲದ ಯಾವ ಪ್ರಶಸ್ತಿಯೂ ಉಳಿದಿಲ್ಲ ಎಂದು ಹೇಳಿದರೆ ತಪ್ಪೇನಿಲ್ಲ. ಇವರ ಕಲಾಬದುಕನ್ನು ಕುರಿತು ಟಿ.ವಿ. ಮಾಧ್ಯಮಗಳು ಪ್ರಸರಣ ಮಾಡಿವೆ. ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಸಾಂದರ್ಭಿಕ ಕೃತಿಗಳಲ್ಲಿ ಇವರ ಕಲೆ ಮತ್ತು ಬದುಕನ್ನು ಕುರಿತು ಬರೆಹಗಳು ಅಚ್ಚಾಗಿದ್ದರೆ, ಒಂದೆರಡು ಪ್ರತ್ಯೇಕ ಕಿರುಹೊತ್ತಿಗೆಗಳೂ ಪ್ರಕಟಗೊಂಡಿವೆ.



ಭಾವಚಿತ್ರ, ತೈಲವರ್ಣ


ಇತ್ತೀಚೆಗೆ (2011ರ ಜನವರಿ) ಹೊರರಾಷ್ಟ್ರ ಕೆನಡಾದಲ್ಲಿ ಕಲಾ ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸಗಳನ್ನು ನೀಡುವ ಮೂಲಕ ಅಂತರಾಷ್ಟ್ರ ಮಟ್ಟದಲ್ಲೂ ತಮ್ಮ ಕಲೆಯ ಆಳ-ಹರವುಗಳನ್ನು ತೋರ್ಪಡಿಸಿದ್ದಾರೆ. ಖಂಡೇರಾವ ಅವರು ತಾವು ಬೆಳೆಯುತ್ತಲೇ ತಮ್ಮ ಸುತ್ತಲಿನ ಕಲಾ ಸಮುದಾಯವನ್ನೂ ಬೆಳವಣಿಗೆಯತ್ತ ಕೊಂಡೊಯ್ಯುವ ಚಾಣಾಕ್ಷ ಚಿತ್ರಶಿಲ್ಪಿಯೂ ಹೌದು.

(ಎಂಸಿಬಿ)

ಖಾ

ಖಾಜನಗೌಡರ ವಾಡೆ: ರಾಯಚೂರು ಪೇಟೆಯ ಜನನಿಬಿಡ ಪ್ರದೇಶದಲ್ಲಿರುವ ಒಂದು ವಾಡೆ, ಮೂರಂತಸ್ತಿನ ವಿಶಾಲವಾದ ಕಟ್ಟಡ. ಇದರ ಮಹಡಿಯ ಮೇಲಿನ ಮೂರು ಕೋಣೆಗಳಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತವೆ. ಚಿತ್ರಿತ ಆಕೃತಿಗಳಲ್ಲಿ ಮಾನವಾಕಾರಗಳಿಗಿಂತ ಪಶುಪಕ್ಷಿಗಳು, ಗಿಡಮರಗಳು ಅಧಿಕವಾಗಿವೆ. ಹೂ ಕುಂಡದಿಂದ ಹೊರಟ ನೇರ ನಿಂತಿರುವ ಪೊರೆಯಾಕಾರದ ಗಿಡದಲ್ಲಿ ತುಂಬಿರುವ ಹಸುರೆಲೆಗಳು ಕೆಂಪು ಹೂಗಳು. ಅಲ್ಲಲ್ಲಿ ಗಿಳಿ ಗೊರವಂಕಗಳು ಕೊಕ್ಕರೆ, ಹಂಸ ಇತ್ಯಾದಿಗಳಿಂದ ತುಂಬಿದ ರಚನೆ ಗೋಡೆಯ ಕೆಳಹಂತದಲ್ಲಿ ಸಾಲಾಗಿ ಚಿತ್ರಿಸಲಾಗಿದೆ. ಪ್ರತಿಕುಂಡದ ಅಕ್ಕಪಕ್ಕದಲ್ಲಿ ನವಿಲು ಇಲ್ಲವೆ ಕೊಕ್ಕರೆ, ಕಾಮಧೇನು, ಹಂಸ, ಜಿಂಕೆ, ಸಾರಂಗ, ಇತ್ಯಾದಿ ಯಾವುದಾದರೊಂದು ಪ್ರಾಣಿ–ಪಕ್ಷಿಗಳು ಎದುರು ಬದುರು ನಿಂತಂತೆ ಚಿತ್ರಿತವಾಗಿವೆ. ಕೆಳಹಂತದಲ್ಲಿ ಒಂದಡಿಯಷ್ಟಿರುವ ಕುಂಡಗಳು ಮೇಲುಹಂತದಲ್ಲಿ ವಿಶಾಲವಾಗಿ ಮೂರು ಅಡಿಗಳಷ್ಟು ದೊಡ್ಡವಾಗಿವೆ. ಆಕಾರಕ್ಕೆ ತಕ್ಕಂತೆ ಪ್ರಾಣಿ ಪಕ್ಷಿಗಳು ಇವೆ. ಕೋತಿಗಳ ಚಿತ್ರಣವೂ ಕಡಿಮೆಯಿಲ್ಲ.

ಕಥಾ ಚಿತ್ರಣದಲ್ಲಿ ಕೃಷ್ಣನ ಬಾಲಲೀಲೆಗೆ ಸೇರಿದ ಚಿತ್ರಣಗಳೇ ಅಧಿಕವಾಗಿದೆ. ಗೆಳೆಯರ ನೆರವಿನಿಂದ ಬೆಣ್ಣೆ ಕಡಿಯುತ್ತಿರುವ, ತಾಯಿಗೆ ಬಾಯಲ್ಲೇ ಮೂರುಲೋಕ ತೋರಿಸುತ್ತಿರುವ, ವೃಕ್ಷರೂಪದ ದೇವತೆಗಳಿಗೆ ಮೋಕ್ಷ ನೀಡುತ್ತಿರುವ ವಟಪತ್ರಶಾಯಿ ಕೃಷ್ಣ, ದಾಸರಂತೆ ತಂಬೂರಿ ಮೀಟುತ್ತ ಹಾಡುತ್ತಿರುವ ಒಬ್ಬ ವೃದ್ಧ, ತಂಬೂರಿ ಹಿಡಿದು ತಾಳ ಹಾಕುತ್ತಾ ನೃತ್ಯದ ಭಂಗಿಯಲ್ಲಿರುವ ಸ್ತ್ರೀಯರ ಚಿತ್ರಣ ಒಂದು ಬದಿಯಲ್ಲಿ ಕಾಣಬಹುದು. ಬಾಗಿಲೊಂದರ ಮೇಲೆ ವಿಶಾಲವಾದ ಅಂಕಣದಲ್ಲಿ ಅರ್ಜುನ ಹಂಸಧ್ವಜರ(?) ಕಾಳಗ; ಅರಸನೊಬ್ಬ ಅಂತಃಪುರದ ರಾಣಿ ವಾಸದೊಂದಿಗೆ ಕುಳಿತು ದಾಸರೊಬ್ಬರಿಂದ ಹಾಡು ಕೇಳುತ್ತಿರುವುದು ಇತ್ಯಾದಿ ಚಿತ್ರಿತವಾಗಿದೆ. ಗೋಪಿಕಾ ವಸ್ತ್ರಾಪಹರಣದ ದೃಶ್ಯ ಎರಡು ಕಡೆಗಳಲ್ಲಿ ಚಿತ್ರಿತವಾಗಿದೆ. ಎಲ್ಲ



ಖಾಜನಗೌಡರ ಮನೆ ದೌಲತ್ ಮಹಲಿನ ಪಾರ್ಶ್ವ ನೋಟ



ಖಾಜನಗೌಡರ ಮನೆಯ ಭಿತ್ತಿಚಿತ್ರ

ಸ್ತ್ರೀಯರೂ ಮೈತುಂಬಾ ವಸ್ತ್ರಧರಿಸಿರುವುದು ಇಲ್ಲಿಯ ವಿಶೇಷ. ಪಾಶ್ಚಿಮಾತ್ಯ ಗಂಧರ್ವರನ್ನು (ಏಂಜಲ್ಸ್) ಹೋಲುವಂತಹ ಕೆಲವು ಚಿತ್ರಗಳೂ ಇಲ್ಲಿವೆ.

ಬಿಳಿಯ ಗೋಡೆಯ ಹಿನ್ನೆಲೆಯಲ್ಲಿ ಹಳದಿ, ನೀಲಿ, ಹಸಿರು, ಕೆಂಪು ಬಣ್ಣಗಳಿಂದ ರೇಖಾ ಪ್ರಧಾನವಾದ ಆಕೃತಿಗಳು ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ವಸ್ತ್ರಾಭರಣಗಳು ಮರಾಠರ ಶೈಲಿಯಲ್ಲಿದ್ದು ಮುದ್ದಾದ ಮುಖಗಳು ಮೈಸೂರು ಶೈಲಿಗೆ ಹತ್ತಿರವಾಗಿದೆ. ನುರಿತ ಕಲಾವಿದನ ಕಸಬುಗಾರಿಕೆಯಿದೆ. ಕಿಟಕಿ, ಕಂಬ, ಬಾಗಿಲುಗಳು ಮರದಲ್ಲಿ ಕಲಾತ್ಮಕವಾಗಿ ಕಡೆದಿದ್ದು ಬಣ್ಣದ ಗಾಜನ್ನು ಹೊದಿಸಲಾಗಿದೆ. ಶೈಯಾಗೃಹದ ಗೂಡೊಂದರಲ್ಲಿ ರಾಜ–ರಾಣಿಯರನ್ನು ಹೋಲುವ ಪ್ರತ್ಯೇಕ ಚಿತ್ರವಿದ್ದು 1828 ಎಂಬ ಬರಹವಿದೆ. ಆದುದರಿಂದ ಇವು 19ನೆಯ ಶತಮಾನದಲ್ಲಿ ರಚಿತವಾದ ಚಿತ್ರಗಳಿರಬಹುದು. ಖಾಜಿನಗೌಡರ ಪೂರ್ವಜರ ಬಗ್ಗೆ ಲಾವಣಿಯೊಂದಿರುವುದು ಕುತೂಹಲಕಾರಿಯಾಗಿದೆ.

(ಎಎಲ್ಎ)

ಗ

ಗಂಗಣ್ಣಗೌಡ ಆಲ್ದಾಳ: ರಂಗ ಕಲಾವಿದ. ಯಾದಗಿರ ಜಿಲ್ಲೆ ಶಹಾಪುರ ತಾಲ್ಲೂಕಿನ ಆಲ್ದಾಳ ಗ್ರಾಮದವರು. ಬಾಲ್ಯದಿಂದಲೇ ಕಲೆಯನ್ನು ಕರಗತ ಮಾಡಿಕೊಂಡಿರುವ ಎಲ್.ಬಿ.ಕೆ. ಆಲ್ದಾಳ ಮತ್ತು ಹಣಮಂತ್ರಾಯಗೌಡ ಅವರಂಥ ಹಿರಿಯ ಕಲಾವಿದರ ಗರಡಿಯಲ್ಲಿ ಪಳಗಿರುವ ಇವರು, ಕಥಾನಾಯಕನ ಪಾತ್ರಕ್ಕೆ ಹೇಳಿ ಮಾಡಿಸಿದವರು. ತಮ್ಮ ಭಾವುಕ ಅಭಿನಯದಿಂದ ಪ್ರೇಕ್ಷಕರಿಗೆ ಹೃದಯಸ್ಪರ್ಶಿಯಾಗಿ ಮನ ಕರಗುವಂಥ ಅಭಿನಯಿಸಬಲ್ಲ ಸಾಮರ್ಥ್ಯ ಇವರದು.

ನಾಟಕದ ಎಲ್ಲ ಪ್ರಕಾರದ ಪಾತ್ರಗಳಿಗೂ ಸೈ ಎನಿಸಿಕೊಳ್ಳುವ ಸಮರ್ಥ ನಟ. ವಿಶೇಷವಾಗಿ ಸಾಮಾಜಿಕ ನಾಟಕಗಳಲ್ಲಿ ಬರುವ ಕಥಾನಾಯಕನ ಪಾತ್ರಕ್ಕೆ ಜೀವ ತುಂಬಿ ಪ್ರೇಕ್ಷಕರ ಕಣ್ಣಲ್ಲಿ ಕಂಬನಿ ತರಿಸುವ ಕಲೆಗಾರಿಕೆ ಇವರದು.

ತಂದೆ ಮಾರುತಿ ರಾಯಗೌಡರ. ಇವರು ಪ್ರಾಥಮಿಕ ವ್ಯಾಸಂಗ ಸ್ವಗ್ರಾಮದಲ್ಲಿ ಮುಗಿಸಿದರು. ಮುಂದಿನ ವ್ಯಾಸಂಗಕ್ಕೆ ಕಡಿವಾಣ ಹಾಕಿ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ವೃತ್ತಿಯಿಂದ ಕೃಷಿಕರಾದರೂ ಪ್ರವೃತ್ತಿಯಿಂದ ಕಲಾವಿದರು. ಬಾಲ್ಯದಿಂದಲೇ ವಿಘ್ನೇಶ್ವರ, ಬಾಲಗೋಪಾಲ ಪಾತ್ರಗಳಿಂದ ಹಿಡಿದು ಕಥಾನಾಯಕನ ಪಾತ್ರಗಳವರೆಗೆ ಎಲ್ಲ ಪ್ರಕಾರದ ಪಾತ್ರಗಳಲ್ಲಿ ಅಭಿನಯಿಸಿದರು.

ಸ್ವತಃ ಶ್ರೀದೇವಿ ನಾಟ್ಯ ಸಂಘ ಆಲ್ದಾಳ ಎಂಬ ಕಂಪನಿಯನ್ನು ಸ್ಥಾಪಿಸಿ, ಶ್ರೀ ಮರಡಿ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವದಲ್ಲಿ ಬಂಜೆ ತೊಟ್ಟಿಲು ಮತ್ತು ಚಿನ್ನದ ಗೊಂಬೆ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ, ಅಪಾರ ಜನ ಪ್ರೇಕ್ಷಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸ್ವಗ್ರಾಮದ ವಿಶೇಷ ಸಂದರ್ಭಗಳಲ್ಲಿ ಕನಿಷ್ಠ ಒಂದು ವರ್ಷಕ್ಕೆ ಒಂದು ಸಲವಾದರೂ ನಾಟಕ ಪ್ರದರ್ಶಿಸಿ ಕಲೆಯನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ.

ಬಂಜೆ ತೊಟ್ಟಿಲು, ಚಿನ್ನದ ಗೊಂಬೆ, ರತ್ನ ಮಾಂಗಲ್ಯ, ಕೈಲಾಗದಗಂಡ ಕೈಲಾಸಕಂಡ, ಗೌಡರ ಗದ್ದಲ, ಕಿವುಡ ಮಾಡಿದ ಕಿತಾಪತಿ, ಗೌಡ ಸಾಕಿದ ಹುಲಿ, ಗರುಡ ರಾಜ್ಯದಲ್ಲಿ ಘಟಸರ್ಪ ಮುಂತಾದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಸಾಮಾಜಿಕ ನಾಟಕಗಳಲ್ಲಿ ತಮ್ಮ ಅಭಿನಯ ಸಾಮರ್ಥ್ಯವನ್ನು ಮೆರೆದಿದ್ದಾರೆ.

ನಮ್ಮ ಗ್ರಾಮದ ಕವಿ ಎಲ್. ಗೋವಿಂದರಾಜ ಆಲ್ದಾಳ ವಿರಚಿತ ಪಾಪದಸತಿ ಪುಣ್ಯದಪತಿ ಎಂಬ ನಾಟಕದಲ್ಲಿ ಕಥಾನಾಯಕ ಬಸವರಾಜನಾಗಿ ಅಭಿನಯಿಸಿ, ಪ್ರೇಕ್ಷಕರ ಕಣ್ಣೀರ ಕೋಡಿ ಹರಿಸಿದ್ದು ಸ್ಮರಣೀಯ. ಅಲ್ಲದೇ ಬಯಲಾಟಗಳಲ್ಲಿ ಕೂಡ ಅಭಿನಯಿಸಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

(ಎಕೆಎನ್)

ಗಂಗಾಧರ ಎಂ. ಸೋನಾರ: ಪ್ರತಿಭಾವಂತ ಚಿತ್ರಕಲಾವಿದ. ಸಮಕಾಲೀನ ಚಿತ್ರಕಲಾವಿದರಲ್ಲಿ ತಮ್ಮ ಪ್ರತಿಭೆಯಿಂದ



ಗಮನಾರ್ಹವಾಗಿ ಗಮನ ಸೆಳೆಯುತ್ತಿರುವ ಚಿತ್ರಕಲಾವಿದ. ಇವರು ಮೂಲತಃ ಕಲಬುರ್ಗಿ ಜಿಲ್ಲೆಯ ಕಡಣಿ ಗ್ರಾಮದವರು. ಕುಲಕಸುಬು ಅಕ್ಕಸಾಲಿಗತನ. ಕಲಾವಿದರು ಕುಶಲಕರ್ಮಿಗಳ ಪರಿವಾರ ವಿದ್ದುದರಿಂದ ಇವರಿಗೆ ಸಹಜವಾಗಿಯೇ ಚಿತ್ರಕಲೆ ಒಲಿಯಿತು. ಬಾಲ್ಯದಲ್ಲಿಯೇ ಪ್ರಕೃತಿಯಿಂದ ಪ್ರಭಾವಿತರಾದರು. ಚಿತ್ರಕಲೆ ಬಗೆಗಿನ ಇವರ ಆಸಕ್ತಿ ಕಂಡು ಕುಟುಂಬದವರು ಪ್ರೋತ್ಸಾಹ ನೀಡಿದರು.

ಎಂ.ಎಂ.ಕೆ. ಕಾಲೇಜ್ ಆಫ್ ಆರ್ಟ್‌ನಿಂದ ಪೇಂಟಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ವಿದ್ಯಾರ್ಥಿ ಜೀವನದಲ್ಲಿಯೇ ತಮ್ಮ ಪ್ರತಿಭೆಯಿಂದಾಗಿ ಪ್ರಾಂಶುಪಾಲರಾದ ಪ್ರೊ. ವ್ಹಿ.ಜಿ. ಅಂದಾನಿ ಅವರಿಂದ ಸೂಕ್ತ ಮಾರ್ಗದರ್ಶನ ಪಡೆದರು. ಇವರು ಅನೇಕ ಪ್ರದರ್ಶನಗಳಲ್ಲಿ, ಶಿಬಿರಗಳಲ್ಲಿ ಭಾಗವಹಿಸಿ ವಿಮರ್ಶಕರ, ಕಲಾಸಕ್ತರ ಗಮನ ಸೆಳೆದಿರುವರು. ಮೈಸೂರಿನ ದಸರಾ ಪ್ರದರ್ಶನ, ನಾಗಪುರದ ಪ್ರದರ್ಶನ, ಬೆಂಗಳೂರಿನ 8ನೇ ರಾಷ್ಟ್ರೀಯ ಕಲಾಮೇಳದ ಪ್ರದರ್ಶನ, ಗುಲಬರ್ಗಾ ವಿಶ್ವವಿದ್ಯಾಲಯದ ಪ್ರದರ್ಶನ, ಮುಂಬೈನ ಜಹಾಂಗೀರ ಆರ್ಟ್‌ಗ್ಯಾಲರಿಯ ಪ್ರದರ್ಶನ ಹೀಗೆ ಅನೇಕ ಪ್ರದರ್ಶನಗಳಲ್ಲಿ ಇವರು ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

1994ರಲ್ಲಿ ಮಳಖೇಡದಲ್ಲಿ ಜರುಗಿದ ಲ್ಯಾಂಡ್‌ಸ್ಕೇಪ್ ಪ್ರದರ್ಶನ, 1995ರಲ್ಲಿ ಮಧುಗಿರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟ ಜಲವರ್ಣ ಶಿಬಿರ, 1996ರಲ್ಲಿ ಹಂಪಿಯ ಶಿಬಿರ, 1996ರಲ್ಲಿ ಸೋನದಗೇರಿ, ಮಂಗಳೂರಿನಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಾಯೋಜಿತ ಭಾವಚಿತ್ರಗಳ ಕಲಾಶಿಬಿರ ಮುಂತಾದವುಗಳಲ್ಲಿ ಇವರು ಭಾಗವಹಿಸಿ ಪ್ರಯೋಜನ ಪಡೆದ ಮಹತ್ವದ ಶಿಬಿರಗಳು.

ಇವರ ಕುಂಚಗಳಲ್ಲಿ ಅರಳಿದ ಸುಂದರ ಲ್ಯಾಂಡ್‌ಸ್ಕೇಪ್ ಚಿತ್ರಗಳು, ಭಾವಚಿತ್ರಗಳು ಮನಸ್ಸಿಗೆ ಮುದ ನೀಡುತ್ತವೆ. ತಮ್ಮ ಕ್ರಿಯಾಶೀಲತೆ, ಕಲ್ಪನೆ, ಸೌಂದರ್ಯ ಪ್ರಜ್ಞೆ ತಮ್ಮ ಕಲಾಕೃತಿಗಳಲ್ಲಿ ಮೂಡಿಬರಬೇಕು ಎಂದು ಹಂಬಲಿಸುವ ಇವರು ಜಾನಪದ



'ಲ್ಯಾಂಡ್ ಸ್ಕೇಫ್' ಜಲವರ್ಣ ಮಾಧ್ಯಮ

ಸಂಸ್ಕೃತಿ ಪರಂಪರೆಗಳಿಂದ ತುಂಬಾ ಪ್ರಭಾವಿತರಾಗಿದ್ದಾರೆ. ತಮ್ಮ ಸ್ನಾತಕೋತ್ತರ ಪದವಿಗಾಗಿ ಜಾನಪದ ಕಲೆ ಸಂಸ್ಕೃತಿಯ ಬಗೆಯೇ ಲಘು ಸಂಶೋಧನಾ ಪ್ರಬಂಧ ಮಂಡಿಸಿ ಜಾನಪದ ಕಲೆ ಕುರಿತಾದ ತಮ್ಮ ಪ್ರೀತಿ, ಆಸಕ್ತಿಯನ್ನು ತೋರಿಸಿರುವ ಇವರು ಚಿತ್ರಕಲಾ ಕ್ಷೇತ್ರಕ್ಕೆ ಜನಪದರ ಕಲೆಯೇ ಬುನಾದಿ ಎನ್ನುತ್ತಾರೆ. ಪ್ರಸ್ತುತ ಕಲಾಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. (ಎಂಎಸ್)

ಗಂವ್ಹಾರ : ಗಂವ್ಹಾರ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ 8–9 ಸಾವಿರ ಜನಸಂಖ್ಯೆಯಿರುವ ಊರು. ಇದು ಜೇವರ್ಗಿ–ಶಹಾಪುರದ ಮುಖ್ಯರಸ್ತೆಯಲ್ಲಿರುವ 'ಚಿಗರಹಳ್ಳಿ' ಕ್ರಾಸ್‌ದಿಂದ ಪೂರ್ವಕ್ಕೆ 5 ಕಿ.ಮೀ. ದೂರದಲ್ಲಿದೆ. ಜೈನ ಧರ್ಮಕ್ಕೆ ಸಂಬಂಧಿಸಿದ ತೀರ್ಥಂಕರರ ವಿಗ್ರಹಗಳೂ ಯಕ್ಷ–ಯಕ್ಷಿಯರ ಪೂರ್ಣ ಹಾಗೂ ಒಡೆದ ಅನೇಕ ಪ್ರತಿಮೆಗಳೂ ಈ ಭಾಗದಲ್ಲಿ ಸಿಕ್ಕಿವೆ. ಕಲೆ ಮತ್ತು ಐತಿಹಾಸಿಕವಾಗಿ ಮಹತ್ವವಾದ ಯಕ್ಷ–ಯಕ್ಷಿಯರ ಪ್ರತಿಮೆಗಳು ಈ ಊರಲ್ಲಿವೆ.

ಗಂವ್ಹಾರದ ಊರಿನ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಒಂದು ದೊಡ್ಡ ಮಂಟಪವಿದೆ. ಇದನ್ನು ಊರಿನ ಜನರು ಸರಸ್ವತಿ (ಮಂದಿರ) ಮಂಟಪ ಎಂದು ಕರೆಯುತ್ತಾರೆ. ವಾಸ್ತು ಶಿಲ್ಪದ ದೃಷ್ಟಿಯಿಂದ ಇದು ಅಷ್ಟೇನೂ ಪ್ರಮುಖವಾದದ್ದಲ್ಲ. ಮೇಲ್ಛಾವಣಿ ರಹಿತವಾದ ಇದು ಹೊರನೋಟಕ್ಕೆ ಒಂದು ಬಯಲು ಚಾವಡಿಯಂತೆ ಕಂಡುಬರುತ್ತದೆ. ಈ ಚಾವಡಿಯಲ್ಲಿ ಕುಳಿತ ಭಂಗಿಯಲ್ಲಿರುವ ಎರಡು ಗಣೇಶನ ಶಿಲ್ಪಗಳು, ತ್ರಿಭಂಗಿಯಲ್ಲಿ ನಿಂತಿರುವ ಒಂದು ಧರಣೇಂದ್ರಯಕ್ಷ ಹಾಗೂ ಒಂದು ಪದ್ಮಾವತಿ ಯಕ್ಷಿಯ ವಿಗ್ರಹಗಳಿವೆ. ಧರಣೇಂದ್ರಯಕ್ಷನ ವಿಗ್ರಹವು ಮೂರು ಅಡಿ ಎತ್ತರವಿದೆ. ಪಾಶ, ಅಂಕುಶ, ತಾವರೆ ಹೂ ಬೀಜಪೂರ ಫಲಗಳನ್ನು ಧರಿಸಿರುವ ಧರಣೇಂದ್ರ ಯಕ್ಷನ ಒಡಲ ತುಂಬಾ ಸೂಕ್ಷ್ಮವಾದ ಕುಸುರಿ ಕೆಲಸಗಳಿಂದೊಡಗೂಡಿರುವ ಆಭರಣಗಳನ್ನು ಧರಿಸಿರುವಂತೆ ಕಂಡರಿಸಲಾಗಿದೆ. ತಲೆಯ ಮೇಲೆ ಕಿರೀಟ, ಕಿವಿಯಲ್ಲಿ ಕರ್ಣಕುಂಡಲ, ಕೊರಳಲ್ಲಿ ಹಲವು ಬಗೆಯ ಹಾರಗಳು ಉದರಬಂಧ, ಕಟೀಬಂಧ, ಯಜ್ಞೋಪವೀತ, ಉಪವೀತ, ಕೈಗಳಲ್ಲಿ ಹಾಗೂ ಕಾಲುಗಳಲ್ಲಿ ಕಡಗಗಳು, ಭುಜಕೀರ್ತಿ, ತೋಳುಬಂಧಿ ಮುಂತಾದ ಆಭರಣಗಳನ್ನು ತೊಟ್ಟಿದ್ದಾನೆ. ಆತನು ಧರಿಸಿರುವ ವಸ್ತುಗಳು ಸಹ ಸ್ಪಷ್ಟವಾಗಿ ಕಾಣುವಂತಿವೆ. ಆತನ ಕಟೀವಸ್ತ್ರವು ಸೊಂಟವನ್ನು ಬಳಸಿ ನೆಲದವರೆಗೆ ಜೋತಾಡುವಂತೆ ಚಿತ್ರಿಸಲ್ಪಟ್ಟಿದೆ. ಧರಣೇಂದ್ರನ ಹಿಂಭಾಗದಲ್ಲಿರುವ ಪ್ರಭಾವಳಿಯಿಂದ ಕೂಡಿರುವ ಶಿಲಾಫಲಕವು ವಿಗ್ರಹಕ್ಕೆ ಆಧಾರವನ್ನೊದಗಿಸುವ ಸಲುವಾಗಿ ನಿರ್ಮಿತವಾಗಿದ್ದು ಆಕರ್ಷಕವಾಗಿದೆ. ಕಿರೀಟದ ಮೇಲೆ ಮೂರು ಹೆಡೆಗಳ ಸರ್ಪವಿದೆ ಹಾಗೂ ಕಿರೀಟದ ಮಧ್ಯೆ ಸಣ್ಣದಾದ ಕುಳಿತ ಜಿನಬಿಂಬವಿದೆ.

ಪದ್ಮಾವತಿ ವಿಗ್ರಹ 2¾ ಅಡಿ ಎತ್ತರವಿದೆ. ತ್ರಿಭಂಗಿಯಲ್ಲಿರುವ ಪದ್ಮಾವತಿ ಯಕ್ಷಿಯು ಪಾಶ, ಅಂಕುಶ, ಬೀಜಪೂರ ಹಾಗೂ ಪುಷ್ಪವನ್ನು ಹಿಡಿದಿದ್ದಾಳೆ. ಕರಂಡಮಕುಟ, ಕರ್ಣಕುಂಡಲ, ಕಂಕಣ, ಕಾಲಂದುಗೆ ಹಾಗೂ ಕೊರಳಲ್ಲಿ ಹಲವು ರೀತಿಯ ಸರಗಳನ್ನು ಧರಿಸಿದ್ದಾಳೆ. ಆಕೆಯ ಸೊಂಟದಲ್ಲಿರುವ ವಸ್ತ್ರಗಳು ಮೊಣಕಾಲಿನವರೆಗೆ ಇಳಿಬಿದ್ದಿವೆ. ಆಕೆಯ ಕಟೀವಸ್ತ್ರವು ಹಲವು ನೆರಿಗೆಗಳಿಂದೊಡಗೂಡಿ ಎಡಬಲಗಳಲ್ಲಿ ಕೆಳಭಾಗದವರೆಗೆ ಇಳಿಬಿದ್ದಿದೆ. ತಲೆಯ ಮೇಲಿರುವ ಕಿರೀಟವು ಸೂಕ್ಷ್ಮವಾದ ಚಿಕಣಿ ಕೆಲಸದಿಂದ ಕೂಡಿದೆ. ಕಿರೀಟದ ಮಧ್ಯಭಾಗದಲ್ಲಿ ಸಣ್ಣದಾದ ಜಿನಬಿಂಬ, ಹಾಗೂ ಕಿರೀಟದ ಮೇಲ್ಭಾಗದಲ್ಲಿ ಒಂದು ಹೆಡೆಯ ಸರ್ಪವಿದೆ. (ಡಿಎನ್‌ಎ)



ಗಝುಲ್ ಗುಂಡಮ್ಮ: ಪ್ರಸಿದ್ಧ ಮುಜರಾ ಕಲಾವಿದೆ. ಮೂಲ ಸುರುಪುರದವರಾದರೂ ಗುಲಬರ್ಗಾದಲ್ಲಿ ವಾಸವಾಗಿದ್ದರು. ಅಜ್ಜಿ ಅಚ್ಚಮ್ಮ ಮತ್ತು ತಾಯಿ ರಂಗಮ್ಮ ಸಂಗೀತ ನೃತ್ಯ ಕಲಾವಿದೆಯರು. ಮುಜರಾದಿಂದ ಅವರು ಜೀವನ ಸಾಗಿಸುತ್ತಿದ್ದರು. ಹೈದ್ರಾಬಾದ ಕರ್ನಾಟಕದ ಪ್ರಸಿದ್ಧ ಗವಾಯಿಗಳಾದ ಪಂಚಾಕ್ಷರಿ ಗವಾಯಿಗಳು ಇವರ ತಂದೆ. ಬಾಲ್ಯ ಕಲಬುರ್ಗಿಯಲ್ಲಿ ಕಳೆಯಿತು. ಮೊದಲ ಸಂಗೀತ ಗುರು ತಂದೆ. ಮನೆಯಲ್ಲಿ ತಾಯಿ ಹಾಡುವುದನ್ನು ಕೇಳಿ ಹಾಡುಗಾರಿಕೆ ರೂಢಿಸಿಕೊಂಡರು. 1948ರಲ್ಲಿ ತಾಯಿಯೊಂದಿಗೆ ರಾಯಚೂರಿಗೆ ಬಂದರು. ಆಗ ಗುಂಡಮ್ಮನವರಿಗೆ 14 ವರ್ಷ. ಕಾಖಂಡಿಕೆ ಶೀನಪ್ಪಾಚಾರ್ಯರಲ್ಲಿ ಸಂಗೀತ ಅಭ್ಯಾಸ ಪ್ರಾರಂಭವಾಯಿತು. ಮುಂದೆ ಅಜೀಜ್ ಮಾಸ್ಟರ್‌ರಿಂದ ಕೆಲದಿನ ಸುಗಮ

ಸಂಗೀತ, ಗಝಲ್ ಮತ್ತು ಫಿಲ್ಮ್ ಸಂಗೀತ ಕಲಿತರು. ಆ ಬಳಿಕ ಮಮ್ತಾಜ ಮಾಸ್ತರರಿಂದ ಹೆಚ್ಚು ಅಭ್ಯಾಸವಾಗಿ ಗಝಲ್ ಹಾಡುವುದರಲ್ಲಿ ಪರಿಣಿತ ಬಂತು. ಬಾಬಾಸಾನಿಯವರ ಗಾನಾ ಪಾರ್ಟಿ ಸೇರಿ ಏಳೆಂಟು ವರ್ಷಗಳಲ್ಲಿ ಗಝಲ್ ಹಾಡುವುದರಲ್ಲಿ ದೊಡ್ಡ ಹೆಸರು ಪಡೆದರು.

ಮುಗ್ಧರಾದ ಗುಂಡಮ್ಮ ಅತಿ ಸರಳಜೀವಿ. ಮನೆತನದ ಕಾರಣದಿಂದ ಇವರು ಈ ವೃತ್ತಿ ಹಿಡಿದರು. ಒಂದು ವೇಳೆ ಇವರ ತಾಯಿ, ಈ ವೃತ್ತಿಯಿಂದ ದೂರವಿರಲು ಬಯಸಿದ ಗುಂಡಮ್ಮ ನವರನ್ನು ಬಿಟ್ಟಿದ್ದರೆ ಖಂಡಿತ ಗುಂಡಮ್ಮ ಈ ವೃತ್ತಿಯಲ್ಲಿರದೇ ಸಂಸಾರಿಯಾಗಿ ದುಡಿದು ಜೀವಿಸುತ್ತಿದ್ದರು! ತಾಯಿ ಬಿಡಲಿಲ್ಲ. ಅನಿವಾರ್ಯವಾಗಿ ಬಂದದ್ದನ್ನು ಸ್ವೀಕರಿಸಿ ನಿಂತರು. ಆ ಜಾತಿ ಯಲ್ಲಿ ಹುಟ್ಟ ಸಮಾಜದ ಕ್ರೂರ ಸಂಪ್ರದಾಯಗಳಿಗೆ ಬಲಿಯಾಗಿ ಅವರು ಇಚ್ಛಿಸಿದ್ದು ಸಿಗಲಿಲ್ಲ. ಆದರೆ ಒಳಗಿನ ನೋವು ಕಹಿ ಯಾಗಲಿಲ್ಲ. ಬದಲಾಗಿ ಹೃದಯಕ್ಕೆ ಸಂಸ್ಕಾರ ಕೊಟ್ಟಿತು. ಪಾಲಿಗೆ ಬಂದ ಬದುಕನ್ನು ತಿಳಿದು ಜೀವಿಸುವ ಶಕ್ತಿ ಪಡೆದುಕೊಂಡರು.

ರಾಯಚೂರಿನ 'ಗಾನಾಪಾರ್ಟಿ' ಗಝಲ್ ವಿದುಷಿ ಗುಂಡಮ್ಮ ಎಂದೇ ಹೆಸರಾಗಿರುವ ಇವರ ಕಂಠ ಅತಿ ಮಧುರ. ಎಂತಹ ಸೂಕ್ಷ್ಮ ಭಾವಗಳನ್ನು ಮನಮುಟ್ಟುವಂತೆ, ಅರ್ಥವನ್ನು ಅನುಭವಿಸಿ, ಭಾವವನ್ನು ಮೈಗೂಡಿಸಿಕೊಂಡು ಹಾಡುವ ಕಲೆ ಗಾರಿಕೆ ಅವರದು. ಗಝಲಿನಷ್ಟೇ ತತ್ವ ಪದಗಳನ್ನೂ ಸಮರ್ಥ ವಾಗಿ ಹಾಡುತ್ತಾರೆ. ಕಾಲ ಅವರಿಗೆ ಅವಕಾಶ ದೊರಕಿಸಿದ್ದರೆ ಗುಂಡಮ್ಮ ಭಾರತದ ಸುಪ್ರಸಿದ್ಧ ಗಝಲ್ ಹಾಡುವವರಲ್ಲಿ ಒಬ್ಬರಾಗುತ್ತಿದ್ದರು.

ತಾಳಿಕೋಟಿ ವೆಂಕೋಬರಾಯರ ಜೊತೆ ಸಂಸಾರಿಕ ಸಂಬಂಧ ಸಾಗಿಸಿದ ಗುಂಡಮ್ಮ ನಾಲ್ಕು ಹೆಣ್ಣುಮಕ್ಕಳ ತಾಯಿ. ಮಕ್ಕಳು ದೊಡ್ಡವರಾದಂತೆ ಸ್ವಂತ ತಾವೇ ಒಂದು ಗಾನಾಪಾರ್ಟಿ ಕಟ್ಟಿ ಕಾರ್ಯಕ್ರಮ ಪ್ರಾರಂಭಿಸಿದರು. ಹೈದ್ರಾಬಾದ ಕರ್ನಾಟಕದ ತುಂಬ ಇವರ ಗಾನಾಪಾರ್ಟಿ ತನ್ನ ಯಶೋ ದುಂದುಭಿಯನ್ನು ಮೊಳಗಿಸಿತು. ಸತತ 35ವರ್ಷಗಳ ಕಾಲ ಗಝಲ್‌ಗಳಿಂದ ಮಹಫಿಲ್‌ಗಳನ್ನು ಬೆಳಗಿಸಿದ 75 ವರ್ಷದ ಗುಂಡಮ್ಮ, ಇಂದಿಗೂ ಅದೇ ಕಂಠ, ಅದೇ ಮಾಧುರ್ಯ, ಅದೇ ತನ್ಮಯತೆ ಉಳಿಸಿಕೊಂಡಿರುವ ಇವರು ಅಭಿರುಚಿಯುಳ್ಳವರು. ಮನೆಗೆ ಹೋದರೆ ಹಾಡುತ್ತಾರೆ. ಆದರೆ ಈಗ ಗಾನಾಪಾರ್ಟಿಗೆ ಹೋಗು ವುದಿಲ್ಲ. ಮಕ್ಕಳೊಂದಿಗೆ ಮನೆಯಲ್ಲಿರುತ್ತಾರೆ.

(ಎಎನ್)


ಗಡಾದ ಎಸ್.ಎನ್.: ನಾಟಕಕಾರ. ಸತ್ಯಕ್ಕೆ ಸೋತಿತು ಸರಕಾರ, ಸಮಾಜಕ್ಕೆ ಶಿಕ್ಷೆ, ಧನಿಕರ ದೌರ್ಜನ್ಯ, ಗರತಿ ಹೆಣ್ಣಿಗೆ ಗರ್ವದ ಗಂಡ ಇವರು ರಚಿಸಿದ ನಾಟಕಗಳು.

ರಾಜ್ಯದ ವಿವಿಧ ಗ್ರಾಮೀಣ ಪ್ರದೇಶದೆಲ್ಲೆಡೆ ಪ್ರಯೋಗಿಸಲ್ಪಟ್ಟ ಹೆಸರಾಂತ ನಾಟಕಗಳಾಗಿ ಮೆಚ್ಚುಗೆ ಗಳಿಸಿರುವುದು ಇವರ ನಾಟಕ ರಚನೆಯ ಪ್ರೌಢಿಮೆಗೆ ಸಾಕ್ಷಿ. ನಾಟಕದಲ್ಲಿ ಪಾತ್ರ ಮಾಡಿದವರಿಗೆ ಮತ್ತೊಮ್ಮೆ ಪಾತ್ರ ಮಾಡಬೇಕೆನಿಸುತ್ತದೆ, ನೋಡಿದ ಪ್ರೇಕ್ಷಕರಿಗೆ ತಾವು ನಾಟಕ ಆಡಲೇಬೇಕೆನಿಸುತ್ತದೆ. ಅಂತಹ ಆಕರ್ಷಣೀಯ ಹಾಗೂ ಕಲಾಪ್ರೌಢಿಮೆ ಇವರ ನಾಟಕ ಗಳಲ್ಲಿ ಕಾಣಬಹುದು. ತಮ್ಮ ನಾಟಕಗಳ ಮೂಲಕ ಗ್ರಾಮೀಣ ಪ್ರದೇಶದೆಲ್ಲೆಡೆ ಗುರುತಿಸಿಕೊಂಡಿದ್ದಾರೆ.

(ವೈಸಿ)

ಗಡಿಕೇಶ್ವಾರ: ಪ್ರಾಚೀನ ಜೈನಧರ್ಮ ಕೇಂದ್ರಗಳಲ್ಲೊಂದು. ಕಲಬುರ್ಗಿ ಜಿಲ್ಲೆ ಚಿಂಚೋಳಿಯಿಂದ ನೈರುತ್ಯಕ್ಕೆ 25 ಕಿ.ಮೀ. ಕಲಬುರ್ಗಿಯಿಂದ ಈಶಾನ್ಯಕ್ಕೆ 65 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಕೇಶವಪುರವೆಂದು ಉಲ್ಲೇಖಗೊಂಡಿರುವ ಇದು, ಕೇಶ್ವಾರ, ಗಡಿಕೇಶ್ವಾರವೆಂದು ಮಾರ್ಪಾಟಾಗಿದೆ. ಇಲ್ಲಿನ ಕುಂಬಾರ ಓಣಿಯಲ್ಲಿರುವ ಜಿನಾಲಯವನ್ನು ಜನ ದೇಗುಲ, ಜೈನರ ಗುಡಿ ಎಂದು ಅಲ್ಲಿರುವ ದೇವರುಗಳನ್ನು ಕಂಚ್ಗಾರರ ದೇವರು ಎಂದು ಹೇಳುತ್ತಾರೆ. ರಾಷ್ಟ್ರಕೂಟರ ಕಾಲದ ಇಲ್ಲಿನ ಬಸದಿ ಕಾಲಕಾಲಕ್ಕೆ ಬದಲಾಗಿದೆ. ಜೀರ್ಣೋದ್ಧಾರಗೊಂಡಿದೆ.

ಅಂದಾಜು ಪೂರ್ವಪಶ್ಚಿಮ 65 ಅಡಿ ಉದ್ದ, ದಕ್ಷಿಣೋತ್ತರ



ಪಾರ್ಶ್ವನಾಥರ ಪದ್ಮಾಸನ ಪ್ರತಿಮೆ

30 ಅಡಿ ಅಗಲ ಪೂರ್ವಾಭಿಮುಖವಾಗಿರುವ ಈ ಜಿನಾಲಯ ಗರ್ಭಗೃಹ, ತೆರೆದ ಅಚಿತ ರಾಳ, ನವರಂಗ, ಮುಖಮಂಟಪಗಳನ್ನು ಹೊಂದಿದೆ. ಮುಖಮಂಟಪದ ಮುಂಭಾಗ ಬಿದ್ದು ಬಯಲಾಗಿದೆ. ಇಲ್ಲಿ ಕಕ್ಷಾಸನಗಳಿದ್ದ ಕುರುಹುಗಳಿವೆ. ಮಂದಿರಕ್ಕೆ ಪೂರ್ವ ದಕ್ಷಿಣ ದಿಕ್ಕುಗಳಿಂದ ಒಳಬರಲು ಬಾಗಿಲುಗಳಿವೆ. ಅರೆಗಂಭಗಳ ಸಾದಾ ಹೊರಭಿತ್ತಿಯನ್ನು ಸೇದಿ (ಸುಣ್ಣದ) ಕಲ್ಲಿನಿಂದ ಕಟ್ಟಿದ್ದರೆ, ಒಳಮೈಗೆ ಕರಿಕಲ್ಲುಗಳನ್ನು ಬಳಸಿದ್ದಾರೆ. ಉಪಾನ, ತ್ರಿಪಟ್ಟ ಕುಮುದ, ಪಟ್ಟಿಕೆಗಳ ಅಧಿಷ್ಠಾನದ ಈ ಬಸದಿಗೆ ಇಳಿಜಾರಾದ ದಪ್ಪಕಲ್ಲಿನ ಸಾದಾ ಲೋವೆ ಇದೆ. ಗರ್ಭಗೃಹ, ನವರಂಗ ರಾಷ್ಟ್ರಕೂಟರ ಕಾಲದ್ದಾದರೆ, ಮುಖಮಂಟಪ ಹಾಗೂ ಮುಖಮಂಟಪದ ಕಂಬಗಳ ಶೈಲಿ ಕಲ್ಯಾಣ ಚಾಲುಕ್ಯರ ಕಾಲದವುಗಳೆಂದು ತೋರುತ್ತದೆ. ಬಸದಿಯ ಮುಂದೆ ತೀರ್ಥಂಕರರ ಆಸೀನ (ಸಿಂಹ) ಪೀಠವೊಂದಿದೆ. ದ್ವಿಶಾಖೆಯ ದ್ವಾರಬಂಧಗಳನ್ನು ಹೊಂದಿರುವ ಗರ್ಭಗೃಹ ಮತ್ತು ನವರಂಗದ ಬಾಗಿಲುವಾಡಗಳ ಲಲಾಟ ಪಟ್ಟಿಕೆಗಳ ಮೇಲೆ ಕೂಡುಕೀರ್ತಿ ಮುಖಗಳುಳ್ಳ ನಾಲ್ಕು ಚೈತ್ಯಾಕಾರದ ಕಿರು ಕಮಾನುಗಳನ್ನು ಕೆತ್ತಿದ್ದಾರೆ. ನವರಂಗದ ಉತ್ತರದ ಕಡೆ ಅಂತ ರಾಳದ ಗೋಡೆಗಾನಿಸಿ ಪೂರ್ವಕ್ಕೆ ಮುಖಮಾಡಿ ನಿಲ್ಲಿಸಿದ, 23ನೆಯ ತೀರ್ಥಂಕರ ಭಗವಾನ್ ಪಾರ್ಶ್ವನಾಥರ (5'x3') ಭವ್ಯ ಸುಂದರ ಖಡ್ಗಾಸನದ (ನಿಂತ) ಕಪ್ಪು ಕಲ್ಲಿನ ಪ್ರತಿಮೆ ಗಮನ ಸೆಳೆಯುವಂತಿದೆ. ಮೃದು ಮಂದಹಾಸದ ಗುಂಗುರು ಕೂದಲಿನ ತಲೆಯ ಮೇಲೆ, ಜಿನನ ತಪಸ್ಸಿಗೆ ಭಂಗ ಬಾರದಂತೆ ಉಪಸರ್ಗವನ್ನು ತಡೆಯಲು ಧರಣನೆಂಬ ಸರ್ಪ (ಧರಣೇಂದ್ರ ಯಕ್ಷ) ಸಪ್ತ ಫಣಿಗಳನ್ನು ಬಿಚ್ಚಿ ನೆರಳಾಸರೆ ನೀಡಿದೆ. ಹೆಡೆಯ ಮಧ್ಯ ಭಾಗದಲ್ಲಿ ಪ್ರಭಾಮಂಡಲವಿದೆ. ಸರ್ಪದ ಹೆಡೆಯ ಮೇಲೆ ಒಕ್ಕೊಡೆ ಇದೆ. ಪ್ರತಿಮೆಯ ಪಾದಗಳ ಎಡ ಬಲದಲ್ಲಿ ಯಕ್ಷ-ಯಕ್ಷಿಯರ ಕಿರು ಶಿಲ್ಪಗಳಿಲ್ಲ.



ಭಗವಾನ ಪಾರ್ಶ್ವನಾಥ

ಗರ್ಭ ಗೃಹದಲ್ಲಿ ಪಾರ್ಶ್ವನಾಥರ ಪದ್ಮಾಸನದ ಪ್ರತಿಮೆ ಇದೆ. 5 ಅಡಿ ಎತ್ತರ 3 ಅಡಿ ಅಗಲದ ಕರಿಕಲ್ಲಿನ ಗುಂಗುರ ಕೂದಲಿನ ತಲೆಯ ಮೇಲೆ, ಏಳು ಹೆಡೆಯ ಸುಂದರ ನಾಗಶಿಲ್ಪವಿದೆ. ನಾಗನ ತಲೆಯ ಮೇಲೆ ಸ್ವಾಮಿಯ ಮೂರು ಲೋಕದ ಸ್ವಾಮ್ಯತ್ವದ ಸಂಕೇತವಾಗಿ ಮುಕ್ಕೊಡೆ ಇದೆ. ನೀಳಕರ್ಣಗಳ ಮುಖದ ಹಿಂದೆ ಪ್ರಭಾಮಂಡಲವಿದೆ. ಒರಗು ದಿಂಬು, ಪ್ರತಿಮೆಯ ಕೆಳಭಾಗದಲ್ಲಿ ಎಡಬಲದಲ್ಲಿ ಆನೆಯ ತಲೆಯ ಮೇಲೆ ಲಂಘಿಸಿ ನಿಂತ ಸಿಂಹಗಳು ಅದರ ಮೇಲೆ ಬಾಯ್ದೆರೆದ ಮಕರಗಳು,ಇವುಗಳ ಮೇಲೆ ತೊಡೆಯವರೆಗಿರುವ ದ್ವಿಭಂಗಿಯ ದ್ವಿಭುಜಗಳ ಚಾಮರಧಾರಿಗಳಿದ್ದಾರೆ. ಕಿರೀಟ, ಪತ್ರಕುಂಡಲ, ಎದೆಹಾರ, ಭುಜದಾಭರಣ, ತೋಳುಬಂಧಿ, ಕಂಕಣ, ಉದರ ಬಂಧ, ನಡುಬಂಧ, ಉಪವೀತಗಳನ್ನು ಈ ಚವರಿಗರು ಹೊಂದಿದ್ದಾರೆ. ಬಲಗಡೆಯ ಚಾಮರಧಾರಿಯ ಬಲಗೈಯಲ್ಲಿ ಚಾಮರ, ಎಡಗೈಯಲ್ಲಿ ಫಲವಿದೆ. ಎಡ ಚಾಮರಧಾರಿಯ ಎಡಗೈಯಲ್ಲಿ ಚವರಿಯನ್ನು ಹಿಡಿದಿದ್ದರೆ ಬಲಗೈ ಫಲದಿಂದ ಕೂಡಿದೆ. ಸೇವಾ ಧನ್ಯತೆಯ ಸಂತೃಪ್ತತೆ; ಮಿನುಗುವ ಮಂದ ಹಾಸ ಚಾಮರಧಾರಿಗಳ ವದನದಲ್ಲಿದೆ. ಇವರ ಹಿಂದೆ ತಲೆಯ ಮೇಲಿರುವ ಪ್ರಭಾವಳಿಯಲ್ಲಿ ಸುರುಳಿಯಾಕಾರದ ಲತಾಪಟ್ಟಿಕೆಗಳಲ್ಲಿ ಕಿರುಮಾನವ ಬಿಂಬಗಳಿವೆ. ಧ್ಯಾನದ ಗಾಢತೆ ಮತ್ತು ಅದರಿಂದ ಲಭಿಸುವ ಪ್ರಶಾಂತತೆಯನ್ನು ಜಿನನ ಮುಖದಲ್ಲಿ ವ್ಯಕ್ತಗೊಳಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ. (ಡಿಎನ್ಎ)

ಗಬ್ಬೂರು: ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದ ದೇವದುರ್ಗ ತಾಲೂಕಿನ ವಂದಲಿ, ಹೂವಿನಹೆಡ್ಗಿ, ಬೆಣಕಲ್, ಇಟಗಿ, ಗಬ್ಬೂರು, ಅಲಸಂದಿ ಗುಡ್ಡಗಳು ಪ್ರಮುಖವಾಗಿವೆ. ಇವುಗಳ ವಂದಲಿಯಲ್ಲಿ ಬೂದಿ ದಿನ್ನೆ, ಗಬ್ಬೂರು ಗುಡ್ಡದ ಬಂಡೆಗಲ್ಲುಗಳಲ್ಲಿ ಪ್ರಾಗೈತಿಹಾಸಿಕ ಕಾಲದ ರೇಖಾಚಿತ್ರಗಳು, ಅಲಸಂದಿ ಗುಡ್ಡದಲ್ಲಿ ಕಬ್ಬಿಣದ ಕಿಟ್ಟ ದೊರಕಿವೆ.

ದೇವದುರ್ಗ ಪ್ರದೇಶದ ಇತಿಹಾಸ ಮೌರ್ಯರು, ಶಾತವಾಹನರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಳಚೂರಿಗಳು, ಸೇವುಣರು, ವಿಜಯನಗರ ಸಾಮ್ರಾಜ್ಯ, ಬಹಮನಿಸುಲ್ತಾನರು ನಂತರ ಹಲವು ರಾಜ ಮನೆತನದ ಮತ್ತು ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ದೇವದುರ್ಗ ಪ್ರದೇಶ ಪಾಳೆಯಗಾರರ ಕಾಲಕ್ಕೆ ಹಲವು ಶೂರ ಬೇಡ ನಾಯಕರಾದ ದೇವದುರ್ಗ, ಕ್ಯಾದಿಗ್ಗೇರಾ, ಅರಕೇರ, ಕರಿಗುಡ್ಡ, ಗೂಗಲ್ ಗ್ರಾಮಗಳಾಗಿದ್ದು, ಇವರಲ್ಲಿ ಅರಕೇರ, ಕ್ಯಾದಿಗ್ಗೇರಾ ಊರು ಮತ್ತು ಬೆಟ್ಟಗಳಲ್ಲಿ ಇವರು ಶೌರ್ಯ ಸಾಹಸ, ದರ್ಪದಿಂದ ಆಡಳಿತ ನಡೆಸಿದ ಬಗ್ಗೆ ಇವರುಗಳ ಅಸಂಖ್ಯ ವೀರಗಲ್ಲುಗಳು ಇವರ ನೆನಪುಗಳ ಕುರುಹುಗಳಾಗಿವೆ.

ದೇವದುರ್ಗ ತಾಲೂಕು ಕಲ್ಯಾಣ ಚಾಲುಕ್ಯರ ಕಾಲದಿಂದ ಸ್ಪಷ್ಟವಾದ ಇತಿಹಾಸ ಗೋಚರವಾಗುತ್ತದೆ. ಗಬ್ಬೂರು ಇದನ್ನು ಗೋಪುರಪುರ (ಗೋಪುರಗ್ರಾಮ), ಹಿರಿಯ ಗಬ್ಬೂರು ಎಂದು ಶಾಸನಗಳಲ್ಲಿ ಉಲ್ಲೇಖವಾಗಿರುವ ಪ್ರಸಿದ್ಧ ಅಗ್ರಹಾರ ಬ್ರಹ್ಮಪುರಿ ಆಗಿತ್ತು. ಈ ಊರಿನಲ್ಲಿ ಹೆಜ್ಜೆ ಹೆಜ್ಜೆಗೂ ದೇವಾಲಯಗಳು ಕಾಣಿಸುತ್ತವೆ.

ಕರ್ನಾಟಕದಲ್ಲಿ ಹಂಪೆಯನ್ನು ಬಿಟ್ಟರೆ ಅತಿಹೆಚ್ಚು ದೇವಾಲಯಗಳಿರುವ ತಾಣವೆಂದರೆ ಗಬ್ಬೂರು ಎಂದರೆ ಅತಿಶಯೋಕ್ತಿಯಾಗಲಾರದು. ಇಲ್ಲಿಯ ಜನರು ಗಬ್ಬೂರನ್ನು ಎರಡನೆಯ ಹಂಪೆ ಎಂದು ಕರೆಯುತ್ತಾರೆ. ಈ ಊರಲ್ಲಿ

ವೆಂಕಟೇಶ್ವರ, ಹರಿಹರ, ಈಶ್ವರ ಏಳುಬಾವಿಬಸವಣ್ಣ, ಚಿಂಚೋಳಿ ಬಸವಣ್ಣ, ಬಜಾರ ವೀರಭದ್ರೇಶ್ವರ, ಮಹಾಬಳೇಶ್ವರ ಬಂಗಾರದ ಬಸವಣ್ಣ, ಕೇಶವ ನೀಲಕಂಠೇಶ್ವರ, ಬಾಲ ಹನುಮಾನ, ಚೌಡೇಶ್ವರಿ, ಮೇಲಶಂಕರ, ವೀರಭದ್ರೇಶ್ವರ ಭಗವನ್ನಾಥ, ಹಂಪಣ್ಣಗುಡಿ, ನಾಗಭೂಷಣ, ಸೋಮೇಶ್ವರ, ಸೂಗೂರೇಶ್ವರ ದೇವಾಲಯಗಳಲ್ಲದೆ ಇನ್ನೂ ಕೆಲವು ದೇವಾಲಯಗಳಿಗೆ ಹೆಸರುಗಳನ್ನು ಹುಡುಕಲು ಸಂಶೋಧನೆ ನಡೆಯಬೇಕಾಗಿದೆ.

ಹಲವು ದೇವಾಲಯಗಳು, ಜೈನ ಬಸದಿಗಳು, ಪುಷ್ಕರಣಿ ಗಳು ಭೂಗತವಾಗಿವೆ. ಅವುಗಳ ಉತ್ಖನನ ಈ ಊರು ಹಲವು ವೈಶಿಷ್ಟ್ಯಗಳಿಂದ ಕೂಡಿದ್ದು, ಒಂದು ಪುಷ್ಕರಣಿಯಲ್ಲಿ ಏಳು ಪುಷ್ಕರಣಿಗಳು, ಒಂದು ರಥಕ್ಕೆ ಆರು ಗಾಲಿಗಳು ಇತ್ಯಾದಿಗಳು ಬೇರೆ ಬೇರೆ ವಿಶಿಷ್ಟತೆಗಳು ಈ ಊರಲ್ಲಿವೆ. ಗಬ್ಬೂರನ್ನು ನೋಡಿದರೆ ಮತ್ತೊಮ್ಮೆ ಮಗದೊಮ್ಮೆ ನೋಡ ಬೇಕೆಂದೆನಿ ಸುತ್ತದೆ. ಇದರೊಂದಿಗೆ ಈ ತಾಲೂಕಿನ ಚಂದನಕೆರೆ ಯಲ್ಲಿ ಹಲವಾರು ದೇವಾಲಯಗಳು, ಜೈನ ಬಸದಿಗಳು ಮೂರ್ತಿ ಶಿಲ್ಪಗಳನ್ನು ಜನರು ದುರಪಯೊಗ ಪಡಿಸಿಕೊಂಡ ಕಾರಣ ಇವುಗಳು ಶಿಥಿಲವಾಗಿವೆ. ಕೃಷ್ಣಾ ನದಿಯ ಬಲ (ದಕ್ಷಿಣ) ದಂಡೆಗೆ ಇರುವ ಅಂಜುಳಾದ ಅಂಜುಳಾದೇವಿ ದೇವಾಲಯ, ಬೆಣಕಲ್‌ನ ಅಣೆಮಲ್ಲೇಶ್ವರ ದೇವಾಲಯ, ಕೊಪ್ಪರದ ನರಸಿಂಹಸ್ವಾಮಿ ದೇವಾಲಯ, ಗೂಗಲ್ ಗ್ರಾಮದ ಅಲ್ಲಮ ಪ್ರಭು ದೇವಾಲಯಗಳು ಪ್ರಸಿದ್ಧ ಐತಿಹಾಸಿಕ ಕ್ಷೇತ್ರಗಳಾಗಿವೆ.

ಗಬ್ಬೂರಿನ ಬೂದಿ ಬಸವೇಶ್ವರಮಠ, ಜಾಲಹಳ್ಳಿಯ ಜಯ ಶಾಂತಲಿಂಗೇಶ್ವರಮಠ, ಗಲಗಿನ ಚೆನ್ನಬಸವೇಶ್ವರಮಠ, ಗುಂಡಗುರ್ತಿಯ ಮೈಲಾರಲಿಂಗೇಶ್ವರಮಠ, ದೇವರಗುಡ್ಡದ ಅಮಾತೇಶ್ವರಮಠ, ಗೆಜ್ಜೆ ಬಾವಿಯ ಚೆನ್ನಬಸವೇಶ್ವರ ಸ್ವಾಮಿ ಮಠ, ದೇವದುರ್ಗದ ಸಿದ್ದರಾಮೇಶ್ವರಮಠ, ಹಾಳಜಾಡಲ ದಿನ್ನಿ, ನಿಲಗಲ್ ಯರಮರಸ್ ಇತ್ಯಾದಿ ಊರುಗಳಲ್ಲಿ ಮಠಗಳು ಪ್ರಸಿದ್ಧವಾಗಿವೆ. (ಸಿಎಂಎ)

ಗರಡಿ ಮನೆ: ದೇಹದಾರ್ಢ್ಯತೆ, ಶಿಸ್ತು, ಸಂರಕ್ಷಣೆ ವಿಧಾನವನ್ನು ಕಲಿಸುವ ಕೇಂದ್ರ. ಇವು ಆಯಾ ಗ್ರಾಮ, ಊರು, ನಗರ ಇವು ಗಳಲ್ಲಾಗುವ ಊರಹಬ್ಬ-ಉತ್ಸವಗಳಲ್ಲಿ ಕೆಲವೊಂದು ಅಹಿತಕರ ಘಟನೆಗಳನ್ನು ಅಥವಾ ಸಂಭವನೀಯ ಅಶಿಸ್ತುಗಳನ್ನು ತಡೆ ಗಟ್ಟಲು ಸಹಾಯಕವಾಗಿದ್ದುವು. ಈಗ ಆ ಕೆಲಸವನ್ನು ಪೊಲೀಸ್ ಸ್ಟೇಷನ್‌ಗಳು ಮಾಡುತ್ತಿವೆ. ಗರಡಿ ಮನೆಗಳು ಫೈಲ್ವಾನ್‌ರನ್ನು ತಯಾರಿಸುವ ಕೇಂದ್ರಗಳಾಗಿದ್ದುವು. ಈಗಲೂ ಸಹ ಅದೇ ಧ್ಯೇಯ ಹೊಂದಿದೆ. ರಾಜಮಹಾರಾಜರುಗಳಿಗೆ ಅಥವಾ ರಾಜ್ಯವನ್ನಾಳುವವರಿಗೆ ಪೈಲ್ವಾನರ ಸಹಕಾರ ಅಗತ್ಯವಾಗಿತ್ತು. ಇವರುಗಳ ಬೆಳವಣಿಗೆಗೆ ಸರ್ವರೀತಿಯ ಸಹಕಾರ ನೀಡುತ್ತಿದ್ದರು. ಇಂದು ದೈಹಿಕ ಶಕ್ತಿ ಪಡೆದವರಿಗಿಂತ ಬೌದ್ಧಿಕಶಕ್ತಿ ಪಡೆದವರ ಹಾಗೂ ತಂತ್ರಜ್ಞಾನವುಳ್ಳ ಆಯುಧಗಳ ಬಳಕೆ ಅತಿಯಾದುದರಿಂದ ಗರಡಿ ಮನೆಗಳು ಕ್ಷೀಣಿಸುತ್ತಿವೆ. ಅದಕ್ಕೆ ವೃತ್ತಿರಂಗಭೂಮಿ ಕ್ಷೀಣಿಸುತ್ತಿರುವ ಉದಾಹರಣೆ ನೀಡಬಹುದು.

ಗರಡಿ ಮನೆಯಲ್ಲಿ ಉಸ್ತಾದ, ಖಲಿಫ, ಯಜಮಾನ್ ಈ ಮೂರು ಬಗೆಯ ಮುಖ್ಯಸ್ಥರಿರುತ್ತಾರೆ. ಉಸ್ತಾದರ ಕೆಲಸ ಕುಸ್ತಿ ಅಭ್ಯಾಸಿಗಳಿಗೆ ಬಯಲು ಸಾಧನೆ ಕರೆದುಕೊಂಡು ಹೋಗು ವುದು. ಈ ಬಯಲು ಸಾಧನೆಯಲ್ಲಿ 5 ವಿಧಗಳುಂಟು. ಹುಲಿಹೆಜ್ಜೆ, ಬಾತುಕೋಳಿ ನಡಿಗೆ, ಕುಪ್ಪುವುದು, (ಅಂದರೇ ಕಪ್ಪೆ ಕುಪ್ಪಳಿಸುವ ಹಾಗೆ) ದೌಡ್ (ಓಡುವುದು) ಮತ್ತು ಜೋಶ್ ಇವುಗಳನ್ನು ಸಹಜ ಪ್ರಕೃತಿಯ ನೆಲೆಯಲ್ಲಿ ಮೂಡಿಸಿಕೊಂಡು ಒಂದು ಗರಡಿ ಮನೆಗೆ ಕರೆದೊಯ್ಯುವ ಕೆಲಸ ಉಸ್ತಾದರದು. ಅನಂತರ ಬಸ್ಕಿ, ದಂಡ ಅರ್ಧಬೈಠಕ್ ಚಪ್ಪಡಿ ಬಿಡುವುದು, ಕಠಾರಿ, ಕರೋಲ (ಮರದ ಗದೆ ತಿರುಗಿಸುವುದು) ಗರಗದ ಕಲ್ಲು ಕತ್ತಿಗೆ ಧರಿಸಿ ನಡೆದಾಡುವುದು, ಸಾಂಬ್ರಣಿ ಕಲ್ಲನ್ನೆತ್ತುವುದು, ಮಲ್ಲಕಂಬ ಕಟ್ಟುವುದು ಇತ್ಯಾದಿ ಮೂಡಿಸಿ ಪೈಲ್ವಾನನ ಅಂಗಾಂಗ ಸದೃಢವಾಗಲು ಸಹಕಾರಿಯಾಗುತ್ತಾರೆ. ಇದು ಬೆಳಗಿನ ವ್ಯಾಯಾಮ ಅನ್ನಬಹುದು. ಖಲೀಫರ ಕೆಲಸ ಮಧ್ಯಾಹ್ನದ ನಂತರದ್ದು. ಅಂದರೆ ಸುಮಾರು 3 ಗಂಟೆ ನಂತರದಲ್ಲಿ ಕುಸ್ತಿ ಅಭ್ಯಾಸ ಮಾಡಿಸುವುದು. ಇವುಗಳಲ್ಲಿ ಕೈ, ಕೈಮಿಲಾಯಿಸುವುದು ಪ್ರಥಮ ಹಂತ. ಖಡಕ ನಿಲುಗಡೆ ಕುಸ್ತಿ ಭಾಷೆಯಲ್ಲಿ ಪೈತ್ರ ಎನ್ನುತ್ತಾರೆ.

ಡಾವು (ದಾಯ) ಇವುಗಳನ್ನು ಸಮ ಜೋಡಿಯೊಡನೆ ಬಿಟ್ಟು ಅಭ್ಯಾಸ ಮಾಡಿಸುತ್ತಾರೆ. ಕುಸ್ತಿಯ ಪಟ್ಟುಗಳಲ್ಲಿ ಡಾಕ್, ಟಾಂಗ್, ಕಳಾವರ್‌ಜಂಗ್, ಅಂಟಿ ಮತ್ತು ಸಖಿ ಎಂಬ ಹಲವು ಬಗೆಗಳುಂಟು. ಟಾಂಗ್‌ನಲ್ಲಿ ಸಹ ಅಂದರೆ, ಬಾಯರ್ ಎಂಬ ಬಿಳಿಮುಖ ಮತ್ತು ಹೊರಮುಖದಲ್ಲಿರುವ ಪಟ್ಟುಗಳಿವೆ. ಅಂಟಿ, ಸಖಿಗಳಲ್ಲಿ ಕಾಲಲ್ಲಿ ವಿರೋಧಿಯನ್ನು ಮಣಿಸುವ ಚಮತ್ಕಾರಗಳ ತೋರಿಸುವುದಾಗಿರುತ್ತದೆ. ಖಲೀಫರು ಸ್ವತಃ ನಿಂತು ಈ ವಿದ್ಯೆ ಕಲಿಸಿಕೊಡುತ್ತಾರೆ.

ಯಜಮಾನ್ ಇವರು ಪರಂಪರೆಯಿಂದ ಬಂದವ ರಾಗಿದ್ದು, ಕುಸ್ತಿ ಕ್ಷೇತ್ರದ ಗರಡಿ ಮನೆಯ ಸಮಗ್ರ ವಿಷಯ ತಿಳಿದವರಾಗಿದ್ದು ಯಾರೇ ವ್ಯತ್ಯಯ ಮಾಡಿದರೂ ತಿಳಿಹೇಳು ವುದರೊಂದಿಗೆ ಸಮಗ್ರ ಅಭಿವೃದ್ಧಿಯತ್ತ ಚಿಂತಿಸುವ ದಾರ್ಶನಿಕರಾಗಿರುತ್ತಾರೆ. ಇವರ ಮಾತೇ ಅಂತಿಮ.

ಗರಡಿ ಮನೆ ಸಂಪ್ರದಾಯಗಳು

- ಕೈ, ಕಾಲು ತೊಳೆಯದೆ ಒಳಗೆ ಪ್ರವೇಶಿಸುವಂತಿಲ್ಲ.
- ಗರಡಿ ಮನೆಯ ಹೊರಭಾಗದಲ್ಲಿ ಬಲಕ್ಕೆ ಅಂಜನೇಯ, ಎಡಕ್ಕೆ ಗರುಡನ ಚಿತ್ರ ಅತ್ಯಾವಶ್ಯಕವಾಗಿರಬೇಕು.
- ಮಟ್ಟಿಯ ಮೇಲೆ ಅಭ್ಯಾಸಕ್ಕೆ ತೆರಳುವ ಮುನ್ನ ಯಜಮಾನ, ಉಸ್ತಾದ್, ಖಲೀಫ್ ಹಾಗೂ ಆ ಸಮಯದಲ್ಲಿ ಉಪಸ್ಥಿತರಿದ್ದ ಹಿರಿಯರ ಆಶೀರ್ವಾದ ಪಡೆದು ಸಮ ವಯಸ್ಕರಿಗೆ ಹಸ್ತ ಲಾಘವ ನೀಡಿ, ಹನುಮಂತ ದೇವರಿಗೆ

ಮನದಲ್ಲಿ ವಂದನೆ, ಮಟ್ಟಿಯನ್ನು ಮುಟ್ಟಿ ಅಂಬಾ ತಾಯಿಗೆ ವಂದಿಸಿ(ಶಕ್ತಿ ದೇವತೆಗೆ) ನಂತರ ಮಟ್ಟಿಮೇಲೆ ನಿಂತು ತೊಡೆತಟ್ಟಿ ಷಡ್ ಹೊಡೆದು ಅಂದರೆ ಮುಂಡಾ ತಟ್ಟಿ ತನ್ನ ಸಹಪಾಠಿಯೊಂದಿಗೆ ಅಭ್ಯಾಸ ಆರಂಭಿಸಬೇಕು, ಇಲ್ಲವೆ ಕುಸ್ತಿಗಿಳಿಯಬೇಕು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬೇಕಾದ ಕ್ರೀಡೆಯಲ್ಲಿಯೂ ಗುರು ಹಿರಿಯರಿಗೆ ನಮಸ್ಕರಿಸಿ ಮುನ್ನೆಡೆಯುವ ಪದ್ಧತಿ ಇಲ್ಲ.


ಗರಡಿ ಮನೆಯ ಅಂಗಳದ ಒಟ್ಟು ಅಳತೆಯಲ್ಲಿ ಅರ್ಧಭಾಗ ಕೆಮ್ಮಣ್ಣು(ಮಟ್ಟಿ) ಇದ್ದರೆ ಉಳಿದರ್ದ ಅಂಗಸಾಧನ ಸಲಕರಣೆಗಳಿರುತ್ತವೆ. ಮಟ್ಟಿಯಲ್ಲಿ ಪ್ರತಿನಿತ್ಯ ಹೊರಳಾಡಿ ಸ್ನಾನ ಮಾಡುವುದರಿಂದ ಕ್ರಮೇಣ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಬರುತ್ತದೆ. ಆದ್ದರಿಂದ ಪ್ರತಿವರ್ಷ ಮಟ್ಟಿ ತುಂಬುವ ಕಾರ್ಯಕ್ರಮವು ಗರಡಿ ಮನೆಯ ಒಂದು ವಿಶೇಷವೆನ್ನಬಹುದು.

ವರಮಹಾಲಕ್ಷ್ಮಿ ಹಬ್ಬದಂದು ಮೂರು ಮಂಕರಿಯಲ್ಲಿ (ಕುಕ್ಕೆ) ಶೋಧಿಸಿದ ಕೆಮ್ಮಣ್ಣನ್ನು ಮೆರವಣಿಗೆ ಮೂಲಕ ಗರಡಿಗೆ ತಂದು ಪೂಜೆ ಸಲ್ಲಿಸಿ ಸೇರಿಸುತ್ತಾರೆ. ಒಂದುವೇಳೆ ಆ ದಿನ ತಪ್ಪಿದಲ್ಲಿ ಉಪಕರ್ಮ ಬರುವ ದಿನದಂದು ತರುತ್ತಾರೆ. ಉಳಿದಂತೆ ಎಂದೂ ಮಟ್ಟಿ ತರುವ ಕೆಲಸ ಮಾಡುವುದಿಲ್ಲ. ದಸರಾ, ನವರಾತ್ರಿಗೆ ಮುನ್ನ ತಂದ ಈ ಮಟ್ಟಿಯನ್ನು ಬೆರೆಸುವುದರಲ್ಲೂ ಒಂದು ಸಂಪ್ರದಾಯವಿದೆ. ಐದು ನಿಂಬೆ ಹಣ್ಣು, ತೆಂಗಿನಕಾಯಿ ಮಟ್ಟಿಯ ಮಧ್ಯಭಾಗದಲ್ಲಿ ಹೂತು ಅದರ ಮೇಲೆ ಸುತ್ತಲಿರುವ ಮಣ್ಣನ್ನು ಗೋಪುರದಂತೆ ಏರಾಕಬೇಕು. ಅರ್ಥಾತ್ ರಾಶಿ ಹಾಕಬೇಕು. ನಂತರದಲ್ಲಿ ಅದಕ್ಕೆ ಕೊಂಚ ನೀರನ್ನು ಸಿಂಪಡಿಸಿ ಚೆನ್ನಾಗಿ ತಟ್ಟಿ ನಯಗೊಳಿಸಿ ಜಿಗಟು ಬರುವಂತೆ ಮಾಡಿರುತ್ತಾರೆ. ಅನಂತರದಲ್ಲಿ ಒಂದು ದಿನ ಭಗದಿಪಡಿಸಿ ಅಂಬಾ ಪೂಜೆ ಮಾಡುವ ಸಂದರ್ಭದಲ್ಲಿ ಇನ್ನಿತರ ಗರಡಿ ಮುಖ್ಯಸ್ಥರನ್ನು, ಹಿರಿಯರನ್ನು ಕರೆಸಿ ಸೌಹಾರ್ದವನ್ನು ಮೆರೆಯುತ್ತಾರೆ. ಆ ನಂತರದ ದಿನದಲ್ಲಿ ಮುತ್ತೈದೆಯರ ಪೂಜೆ ಮಾಡುತ್ತಾರೆ. ಕಾರಣ ತಾಯಂದಿರಲ್ಲವೇ ನಮಗೆ ಜನ್ಮ ನೀಡಿದವರು ಎಂಬ ವಿಶಾಲ ಭಾವನೆ. ಅದೊಂದೆ ದಿನ ಹೆಂಗಸರಿಗೆ ಗರಡಿಗೆ ಬರಲು ಅವಕಾಶ. ಈ ಮುತ್ತೈದೆ ಪೂಜೆ ಮಾರನೇ ದಿನವೇ ಮಟ್ಟಿ ಹೊಡೆಯುವ ಕಾರ್ಯಕ್ರಮ. ಕುಸ್ತಿ ಪಟುಗಳ ಸಾಹಸ ತೋರಿಸಲು ಸುದಿನವಿದು.

ಮಟ್ಟಿ ಹೊಡೆಯುವುದು ಎಂದರೆ ನಯಗೊಳಿಸಿದ ಆ ಮಣ್ಣು ಗೋಪುರವನ್ನು ಮೂರ್‍ನಾಲ್ಕು ಕುಸ್ತಿಪಟುಗಳು ತಮ್ಮ ತಮ್ಮ ಮುಂಗೈಗಳಿಂದ ಗುದ್ದಿ ಹನುಮಾನ್ ರೇ, ಭೀಮನ ರೇ, ಲಕ್ಷ್ಮಣ್ ರೇ, ಗಜನಿಂಬೇ ರೇ, ಯಜಮಾನ್ ರೇ, ಉಸ್ತಾದ್ ರೇ, ಖಲೀಫ ರೇ, ಪೈಲ್ವಾನ್ ರೇ, ದೊಡ್ಡವ್ರ ರೇ, ಚಿಕ್ಕವ್ರ ರೇ ಜೈ ಎಂಬ ಘೋಷಣೆ ಮಾಡುತ್ತಿರುತ್ತಾರೆ. ಮಟ್ಟಿ ಹೊಡೆಯುವಾಗ ಯಾರಕೈಗೆ ನಿಂಬೆ ಹಣ್ಣು ಅಥವಾ ಕಾಯಿ ಸಿಗುತ್ತದೋ ಅವರಿಗೆ ಕಫ ಮತ್ತಿತ್ತರ ಬಹುಮಾನ ನೀಡುತ್ತಾರೆ. ಆ ಕುಸ್ತಿ ಪಟುವಿನ ಹೆಮ್ಮೆಯ ಸಾಧನೆಯಾಗಿರುತ್ತದೆ ಇದು.

ಮಟ್ಟಿಯ ಮೇಲ್ಮೈ: ಮಟ್ಟಿ ಕೆಂಪಗೆ ಕಾಣುತ್ತದೆಂದರೆ ಶುದ್ಧವಾದ ಅರಿಸಿನ, ಕುಂಕುಮ ಮತ್ತು ಚಂದ್ರ (ಸಿಂಧೂರ) ಇವನ್ನು ಮೂಟೆಗಟ್ಟಲೆ ಬೆರಸುತ್ತಾರೆ. ಜೊತೆಗೆ ಪಚ್ಚ ಕರ್ಪುರ, ಹುಚ್ಚೆಳ್ಳೆಣ್ಣೆಯನ್ನು ಅವಶ್ಯವಿದ್ದಷ್ಟು ಚೆನ್ನಾಗಿ ಹದಗೊಳಿಸಿರುತ್ತಾರೆ. ಹೂವಿನ ಹಾಸಿಗೆ ತರಹ ಅದರ ಸುಖ ಕಾಣಬಹುದೆನ್ನುತ್ತಾರೆ. ಅನುಭವಿ ಪೈಲ್ವಾನರು ಈ ತೆರನ ಮಟ್ಟಿಯೊಳಗೆ ತಲೆ ಹೊರತು ಪಡಿಸಿ ಮಲಗುವುದರಿಂದ ಅನೇಕ ಖಾಯಿಲೆ ನಿವಾರಣೆ ಆಗುತ್ತದೆಂಬುದು ಆಯುರ್ವೇದದ ಸಿದ್ಧಾಂತವೂ ಸಹ ಆಗಿದೆ.

ಗರಡಿಮನೆ ಬಾಗಿಲು: ಗರಡಿಮನೆ ಬಾಗಿಲು ಕಿರಿದಾಗಿರುವುದು ಎಂತಹ ಪೈಲ್ವಾನ್ ಅಥವಾ ಜಟ್ಟಿಯಾದರೂ ತಗ್ಗಿ ಬಗ್ಗಿ ನಡೆಯಬೇಕೆಂಬ ಉದ್ದೇಶ, ದೇವಾಲಯದ ಗರ್ಭಗುಡಿಗೆ ಕೊಟ್ಟಷ್ಟು ಪ್ರಾಮುಖ್ಯತೆ ಗರಡಿ ಮನೆಗೂ ನೀಡುತ್ತಾರೆಂಬುದಕ್ಕೆ ಯಾವ ಕುಸ್ತಿಪಟುಗಳು ದುಃಶ್ಚಟಗಳಿಂದ ದೂರವಾಗಿರಬೇಕು. ಒಂದು ವೇಳೆ ವ್ಯಸನಿಯಾಗಿದ್ದರೆ ಆತನನ್ನು ಆ ಗರಡಿಯಿಂದ ಹೊರಕ್ಕೆ ಕಳುಹಿಸಲು ಅಲ್ಲಿನ ಯಜಮಾನರು ಸರ್ವ ಹಕ್ಕನ್ನು ಪಡೆದಿರುತ್ತಾರೆ.



ಗರಡಿ ಮನೆ ಬಾಗಿಲು

ಯಜಮಾನ್, ಉಸ್ತಾದ, ಖಲೀಪ ಈ ಮೂವರನ್ನು ಆಯ್ಕೆ ಮಾಡುವ ಮಾನದಂಡವೆಂದರೆ ಅವರವರು ಅದೇಸ್ಥಾನದಿಂದ ಅಂದರೆ ವಂಶಪಾರಂಪರಿಕವಾಗಿ ಬಂದವರಾಗಿದ್ದವರಿಗೆ ಮೊದಲ ಆದ್ಯತೆ. ಒಂದುವೇಳೆ ಹಾಗಾಗದೇ ಇದ್ದಲ್ಲಿ ಅನ್ಯರನ್ನು ಆ ಸ್ಥಳಗಳಿಗೆ ಆಯ್ಕೆ ಮಾಡಬೇಕಾದಲ್ಲಿ ಊರ ತುಂಬಾ ಡಂಗೂರ ಸಾರಿಸಿ ಅರ್ಥಾತ್ ಜನರಿಗೆ ತಿಳಿಪಡಿಸಿ ಅನಂತರ ಸಂಬಂಧಿಸಿದ ಕ್ಷೇತ್ರಕ್ಕೆ ಅವರ ಕೊಡುಗೆ ಏನು ಎಂದು ತಿಳಿದು ಆಯ್ಕೆ ಮಾಡುತ್ತಿದ್ದರು. ಇಂದು ಸರಳೀಕೃತವಾಗಿದೆ. ಸಾದಕ ಅರ್ಥಾತ್ ಕುಸ್ತಿ ಪಟು ಲಂಗೋಟಿ ಕಟ್ಟುವುದು ಮೇಲೆ ಕಾಚಾ ಧರಿಸುವುದು ಸಹ ವಿಶೇಷವೇ. ಅದೆಷ್ಟು ಬಿಗಿಯಾಗಿರುತ್ತದೆಯೆಂದರೆ ವಿರೋಧಿ ಕುಸ್ತಿಪಟು ಬೆರಳನ್ನು ಕಾಚಾದೊಳಗೆ

ಹಾಕಲು ಸಾಧ್ಯವಿಲ್ಲದಷ್ಟು. ಕಾಚಾ ಕಟ್ಟುವ ನವಾರ ತುದಿಯಲ್ಲಿ ಕುಚ್ಚು ಇರುತ್ತದೆ. ಇವು ಗರಡಿಯೊಳಗಿನ ಶಿಕ್ಷಕ ಮತ್ತು ಸಾಧಕರ ನಡುವಿನ ಮಟ್ಟಿ ಕುರಿತಂತೆ ವಿಶ್ಲೇಷಣೆಯಾದರೆ, ಸಾಧನೆ ಮಾಡುವ ಆಯುಧಗಳಾದ ದಂಡೆ ಹೊಡೆಯುವ ಕೈಪಿಡಿ, ಮರದ ಕರೋಲ, ಮರದ ಗಧೆ, ಮರದ ಕೊಂಟು, ಗರಗಂದ ಕಲ್ಲು, ಸಾಂಬ್ರಾಣಿ ಕಲ್ಲು, ಮಲ್ಲಕಂಬ ಬಿಜಲಿ, ದೊಣ್ಣೆ ಇವು ಮುಖ್ಯವೆನಿಸುತ್ತವೆ.

ಗರಡಿ ಮನೆಯ ಗುರುಗಳಾದ ಯಜಮಾನ್, ಉಸ್ತಾದ್, ಖಲೀಫ್ ಇವರಲ್ಲಿ ಯಾರೂ ಸತ್ತರೂ ಅವರ ಶವಸಂಸ್ಕಾರದ ಮೆರವಣಿಗೆಯಲ್ಲಿ ಅವರವರ ಶಿಷ್ಯರು ತಮ್ಮ ಗುರು ಸತ್ತರೂ ಅವರ ಕಲಿಸಿಕೊಟ್ಟ ವಿದ್ಯ ಸತ್ತಿಲ್ಲ ಎಂಬುದರ ಸಂಕೇತವಾಗಿ ದಾರಿಯುದ್ದಕ್ಕೂ ಕತ್ತಿವರಸೆ (ಕತ್ತಿಹಿಡಿದು ಚಮತ್ಕಾರ ತೋರಿಸುವುದು) ಪಟಾವರಸೆ (ಬಿದಿರಿನ ದೊಣ್ಣೆ ಚಮತ್ಕಾರ) ಬಿಜಲಿ ವರಸೆ (ತಗಡಿನ ಪಟ್ಟಿ ಮೂಲಕ ಚಮತ್ಕಾರ ತೋರುವುದು) ಮಾಡುತ್ತಾ ಅಂತಿಮ ಸಂಸ್ಕಾರ ಮಾಡುತ್ತಾರೆ.

ಪ್ರತಿ ಜಿಲ್ಲೆಯಲ್ಲಿಯೂ ಸುಮಾರು 200ಕ್ಕೂ ಮೇಲ್ಪಟ್ಟು ಗರಡಿ ಮನೆಗಳಿವೆ ಎಂಬ ಅಂದಾಜಿವೆ. ಕರ್ನಾಟಕದಾದ್ಯಂತ 6–7 ಸಾವಿರವಿರಬಹುದು. ಆದರೆ ಇಂದು ಇವುಗಳು ಕ್ಷೀಣಿಸುತ್ತಾ ಬಂದಿವೆ. ಕಾರಣ ಇಂದು ಜನರಿಗೆ ಬಿಡುವಿಲ್ಲದ ಕಾರ್ಯ ದೊತ್ತಡದ ಜೊತೆಗೆ ಈ ಕುಸ್ತಿ ಕಲೆಯಿಂದ ಆಗುವ ಪ್ರಯೋಜನ ವೇನು ಎಂಬ ತಾತ್ಸಾರ ಭಾವನೆ, ಆಶಕ್ತರಿಗೆ ಪ್ರೋತ್ಸಾಹದ ಕೊರತೆ, ಹಲವು ವಿಧದ ಕ್ರೀಡೆ, ಮನರಂಜನೆ ಗೃಹದ ಒತ್ತಡಗಳು ಇವುಗಳಿಂದ ಗರಡಿಮನೆಗಳು ತನ್ನ ಹಿಂದಿನ ವೈಭವವನ್ನು ಕಳೆದುಕೊಳ್ಳುತ್ತಿವೆ. ಆದರೂ ಹವ್ಯಾಸಿ ನೆಲೆಗಟ್ಟಿನಲ್ಲಿ ಸುಬದ್ರತೆಯನ್ನು ಕಂಡುಕೊಳ್ಳವಲ್ಲಿ ಯಶಸ್ವಿಯಾಗುತ್ತಿದೆ ಯೆನ್ನಬಹುದು. (ಎಲ್‌ಎಸ್)

ಗರುಡಾದ್ರಿ ಎರಡನೇ ಬಾನಯ್ಯ: ಕರ್ನಾಟಕದ ಅನೇಕ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಸುರಪುರ ಸಂಸ್ಥಾನವೂ ಒಂದು. ಈ ಸಂಸ್ಥಾನದ ಅರಸರು ಸಂಗೀತಗಾರರಿಗೆ, ಚಿತ್ರಕಲಾವಿದರಿಗಲ್ಲದೆ ಸಕಲ ಶಾಸ್ತ್ರಗಳಲ್ಲಿ ನಿಪುಣರಾದ ಪಂಡಿತ ವರೇಣ್ಯರಿಗೆ ಆಶ್ರಯ ನೀಡಿದ್ದರಿಂದ ಅಂದು ಸುರಪುರ ಸಂಸ್ಥಾನವು ಮಹತ್ವಪೂರ್ಣ ಲಲಿತಕಲೆಗಳ ಕೇಂದ್ರವೆನಿಸಿ ಕೊಂಡಿತ್ತು. ಸುರಪುರ ಆಸ್ಥಾನದಲ್ಲಿ ರಾಜಾಶ್ರಯ ಪಡೆದ ಚಿತ್ರಕಲಾವಿದರು ಗರುಡಾದ್ರಿಯವರದು ಮನೆತನ.

ಎರಡನೆಯ ಬಾನಯ್ಯ ಅಪ್ರತಿಮ ಕಲಾವಿದನಾಗಿದ್ದನಲ್ಲದೆ ತಮ್ಮ ಮನೆತನದ ಕೀರ್ತಿಯ ಪತಾಕೆಯನ್ನು ಬಾನುದ್ದಕ್ಕೂ ಹಾರಿಸಿದರು. ಇವರ ಕಲಾಚಾತುರ್ಯಕ್ಕೆ ವಿದೇಶಿಯರೂ ಬೆರಗಾಗಿದ್ದರು ಎಂದು ತಿಳಿದು ಬರುತ್ತದೆ. ಇವರು ಸುರಪುರ ದಲ್ಲಿ ನಾಲ್ಕನೆಯ ತರಗತಿವರೆಗೆ ಅಭ್ಯಾಸವನ್ನು ಮಾಡಿದ್ದರು. ಸಂಸ್ಥಾನದ ಪತನಾನಂತರದಲ್ಲಿ ಸುರಪುರವು ಹೈದರಾಬಾದಿನ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದರಿಂದ ಈ ಪ್ರದೇಶದಲ್ಲಿ



ಆಂಗ್ಲರ ಪ್ರಭಾವವು ಹೆಚ್ಚಾಗಿತ್ತು ಹಾಗಾಗಿ ಬಾನಯ್ಯ ಅಂದಿನ ಶಿಕ್ಷಣವನ್ನು ಆಂಗ್ಲ ಮತ್ತು ಉರ್ದು ಭಾಷೆಯಲ್ಲಿ ಪಡೆದ ರೆಂದೂ ಹೇಳಲಾಗುತ್ತದೆ. ತಮ್ಮ ತಂದೆ ತೀರಿ ಹೋದ ಮೇಲೆ ಇವರು ತಮ್ಮ ದೂರದ ಸಂಬಂಧಿ ಅಲ್ಲದೆ ತಾತನಾದ ವೆಂಕಟರಾಮಯ್ಯನವರೊಡನೆ ಹೈದರಾಬಾದಿಗೆ ಹೋಗಿ ಅಲ್ಲಿ ಯೇ ನೆಲೆನಿಂತರು. ಇಂದಿಗೂ ಬಾನಯ್ಯನವರ ಮಕ್ಕಳು, ಮೊಮ್ಮಕ್ಕಳು ಹೈದರಾಬಾದಿನಲ್ಲಿ ವಾಸವಾಗಿದ್ದಾರೆ.

ತಮ್ಮ ತಾತ ವೆಂಕಟರಾಮಯ್ಯನವರಿಂದ ಚಿತ್ರಕಲೆಯ ಅನೇಕ ವಿಷಯಗಳನ್ನು ತಿಳಿದುಕೊಂಡನು. ಇವರಿಗೆ ವೆಂಕಟ ರಾಮಯ್ಯನವರೇ ಕಲಾ ಗುರುಗಳಾಗಿದ್ದರೆಂದು ಹೇಳಬಹುದು. ಪ್ರಾರಂಭದಲ್ಲಿ ತಮ್ಮ ತಾತನೊಂದಿಗೆ ಹೈದರಾಬಾದಿಗೆ ಸಾಲಾರ್ ಜಂಗ್ ವಸ್ತುಸಂಗ್ರಹಾಲಯದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಈ ಅವಧಿಯಲ್ಲಿ ವೆಂಕಟರಾಮಯ್ಯನವರು ಹೈದರಾಬಾದಿನ 'ಗೌಲಿಪುರ' ಎಂಬ ಬಡಾವಣೆಯಲ್ಲಿ ವಾಸಿಸುತ್ತಿದ್ದರು.

ಬಾನಯ್ಯನು ಚಿತ್ರಕಲೆಯಲ್ಲಿ ಪಳಗಿದಂತೆಲ್ಲ ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡಲು ಅವಕಾಶಗಳು ಬಂದೊದಗಿದ್ದುವು. ಅಂದಿನ ಹೈದರಾಬಾದಿನ ನವಾಬರಾಗಿದ್ದ ಅಶ್ರಫ್ ಅಲೀಖಾನ್ ರವರು ಕಲಾ ಕೇಂದ್ರವೊಂದನ್ನು ಪ್ರಾರಂಭಿಸಿದ್ದರು. ಇಲ್ಲಿ ಬಾನಯ್ಯನಿಗೆ ಕಲಾವಿದನಾಗಿ ಸೇವೆಯನ್ನು ಸಲ್ಲಿಸುವ ಅವಕಾಶ ದೊರೆಯಿತು. ಈ ಕಲಾ ಕೇಂದ್ರದಲ್ಲಿ ಕೆಲಸ ಮಾಡುವುದ ರೊಂದಿಗೆ ಬಾನಯ್ಯನು ಅನೇಕ ಕಲಾಕೃತಿಗಳನ್ನು ರಚಿಸಿದನು. ಇವುಗಳಲ್ಲಿ ನವಾಬ್‌ರ ಕುಟುಂಬಕ್ಕೆ ಸಂಬಂಧಿಸಿದ ಚಿತ್ರಗಳಲ್ಲದೇ ನಿಸರ್ಗ ಚಿತ್ರಗಳು ಹಾಗೂ ದೇವಾನುದೇವತೆಗಳ ಸಾಕಷ್ಟು ಚಿತ್ರಗಳು ರಚನೆಗೊಂಡಿವೆ. ಅಲ್ಲದೆ ಕೆಲವೊಂದು ಚಿತ್ರಗಳ ಅನುಕರಣೆಯೂ ಸಹ ಬಾನಯ್ಯನವರಿಂದ ಚಿತ್ರಿಸಲ್ಪಟ್ಟಿದ್ದುವು. ಈ ಕಲಾ ಕೇಂದ್ರದಲ್ಲಿ ಸುಮಾರು 1947ರಿಂದ 51ರ ವರೆಗೆ ಕಲಾವಿದರಾಗಿ ಸೇವೆಯನ್ನು ಸಲ್ಲಿಸಿದರು. ಇದೇ ಅವಧಿಯಲ್ಲಿ ಇವರು ಒಂದು ಕಡಲೇ ಕಾಳಿನ ಮೇಲೆ ಹೈದರಾಬಾದಿನ ನವಾಬರಾಗಿದ್ದ ಅಲ್ ಹಜರತ್‌ಮೀರ್ ಉಸ್ಮಾನ್ ಅಲೀಖಾನ್ ಬಹದ್ದೂರರ ಉರ್ದು ಕವಿತೆಯನ್ನು ಬರೆದಿದ್ದನಲ್ಲದೆ ಒಂದು ಅಕ್ಕಿಕಾಳಿನ ಮೇಲೆ ಅಂಬಾರಿ ಸಹಿತ ಏಳು ಆನೆಗಳನ್ನು ಸೂಕ್ಷ್ಮವಾಗಿ ಕೆತ್ತಿದ್ದಾರೆ.

1951ರಲ್ಲಿ ಅಲಿ ಹೈದರಿ ಎನ್ನುವವಳು ಹೈದರಾಬಾದಿನಲ್ಲಿ 'ನಿರ್ಮಲಾ ಇಂಡಸ್ಟ್ರೀಸ್' ಎನ್ನುವ ಕರಕುಶಲ ಕೇಂದ್ರವೊಂದನ್ನು



ಬಾನಯ್ಯ ಗರಡಾದ್ರಿ – 1700 ಜಲವರ್ಣ (ಪುರಾಣ ಆಧಾರಿತ)


ಪ್ರಾರಂಭಿಸಿದಳು. ಇಲ್ಲಿ ಆಶ್ರಯ ಪಡೆದ ರಾಷ್ಟ್ರದ ಅನೇಕ ಜನ ಕಲಾವಿದರಲ್ಲಿ ಬಾನಯ್ಯನೂ ಒಬ್ಬರಾಗಿದ್ದರು. ಈ ಸಂಸ್ಥೆಯಲ್ಲಿ ಕಲಾವಿದರಾಗಿ ಸೇರಿಕೊಂಡ ಮೇಲೆ ಇವರು ವಿವಿಧ ಮಾಧ್ಯಮ ಗಳಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದರು. ಅಂದಿನ ದಿನಗಳಲ್ಲಿ ವಿದೇಶೀಯರು ಹೈದರಾಬಾದಿಗೆ ಬಂದರೆ ಈ ಸಂಸ್ಥೆಗೆ ಭೇಟಿ ನೀಡದೆ ಹೋಗುತ್ತಿರಲಿಲ್ಲ. ಹೀಗಾಗಿ ಇಲ್ಲಿ ರಚನೆಗೊಂಡಿರುವ ಅಲಂಕಾರಿಕ ಕರಕುಶಲ ವಸ್ತುಗಳಲ್ಲದೆ ಸುಂದರ ಚಿತ್ರಗಳನ್ನು ಅವರು ಖರೀದಿಸಿ ತಮ್ಮ ದೇಶಕ್ಕೆ ಕೊಂಡೊಯ್ಯುತ್ತಿದ್ದರು. ಹೀಗೆ ವಿದೇಶಿಯರು ಕೊಂಡೊಯ್ದ ಸಾಕಷ್ಟು ಕಲಾಕೃತಿಗಳಲ್ಲಿ ಬಾನಯ್ಯನ ಕಲಾಕೃತಿಗಳೂ ಸೇರಿವೆ.

ಸುರಪುರ ಚಿಕಣಿ ಚಿತ್ರಗಳಲ್ಲಿ ಕಂಡುಬರುವ ಛಾಯಾಚಿತ್ರದ ಬಳಕೆಯ ತಂತ್ರಗಾರಿಕೆ ಎರಡನೆಯ ಬಾನಯ್ಯನ ಚಿತ್ರ ಗಳಲ್ಲಿಯೂ ಕಾಣಬಹುದಾಗಿದೆ. ವಿಶೇಷವಾಗಿ ಆಂಧ್ರಪ್ರದೇಶದ ಸಿರಿವಂತರ ಮನೆಗಳಲ್ಲಿ ಸಂಗ್ರಹಗೊಂಡಿರುವ ಭಾವಚಿತ್ರಗಳಲ್ಲಿ ಇವರು ಚಿತ್ರಿಸಿದ ಚಿತ್ರಗಳಿವೆ. ಈ ಚಿತ್ರಗಳಲ್ಲಿ ಬಳಸಲಾದ ಛಾಯಾಚಿತ್ರಗಳು 1930ರ ಅವಧಿಯಲ್ಲಿ ಕ್ಲಿಕ್ಕಿಸಿದವುಗಳಾಗಿವೆ.

1950ರ ದಶಕದಲ್ಲಿ ಇವರಿಗೆ ಹೈದರಾಬಾದ ಸರ್ಕಾರ ಹಾಗೂ ಖಾಸಗಿ ಸಂಘ-ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಲಭಿಸಿವೆ. ಇದೇ ಸಂದರ್ಭದಲ್ಲಿ ಬಾನಯ್ಯನವರಿಗೆ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಚಿತ್ರಗಳನ್ನು ಬಿಡಿಸುವ ಅವಕಾಶ ಒದಗಿ ಬಂತು. 1954ರಲ್ಲಿ ಇವರು ದೆಹಲಿಯ ರಾಷ್ಟ್ರಪತಿ ಭವನದ ಗೋಡೆಗಳ ಮೇಲೆ ವಿವಿಧ ಬಗೆಯ ಚಿತ್ರಗಳನ್ನು ಚಿತ್ರಿಸಿದರು. ಆಗ ಬಾಬು ರಾಜೇಂದ್ರ ಪ್ರಸಾದರವರು ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾಗಿದ್ದರು. ಅದೇ ವೇಳೆಗೆ ಬಾನಯ್ಯ ರಾಷ್ಟ್ರಪತಿಗಳ ಭಾವಚಿತ್ರವನ್ನು ಕೇವಲ ಒಂದು ಚದರ ಅಂಗುಲ ಕಾಗದದ ಮೇಲೆ ಚಿತ್ರಿಸಿಕೊಟ್ಟಿದ್ದಾರೆ. ಈ ಕಾರ್ಯಕ್ಕಾಗಿ ರಾಷ್ಟ್ರಪತಿಗಳು ಸನ್ಮಾನಿಸಿ ಗೌರವಿಸಿದ ವಿಷಯವಂತೂ ಈ ಭಾಗದ ಜನರಲ್ಲಿ ಮನೆ ಮಾತಾಗಿದೆ.

ಹೈದರಾಬಾದಿನ ನಿರ್ಮಲಾ ಇಂಡಸ್ಟ್ರೀಸ್ ಕರಕುಶಲ ಸಂಸ್ಥೆಯಲ್ಲಿ ಸುಮಾರು 1962ರ ವರೆಗೆ ಸೇವೆಯನ್ನು ಸಲ್ಲಿಸಿದ ಬಾನಯ್ಯನವರಿಗೆ 1962ರಲ್ಲಿ ಆಂಧ್ರಪ್ರದೇಶ ಕರಕುಶಲ ಸಂಸ್ಥೆಯಲ್ಲಿ ಮುಂಬಡ್ತಿ ದೊರೆಯಿತು. ಈ ಅವಧಿಯಲ್ಲಿ ನಿರ್ವಹಿಸಬೇಕಾದ್ದ ನಕ್ಷಾ (Design) ವಿನ್ಯಾಸದ ಕೆಲಸದೊಂದಿಗೆ ದೇವಾನುದೇವತೆಗಳ ಚಿತ್ರಗಳಲ್ಲದೇ ಪ್ರಾಚೀನ ಸ್ಮಾರಕಗಳ ಅನೇಕ ಚಿತ್ರಗಳನ್ನು ಕಿರುರೂಪ ಮಾದರಿಯಲ್ಲಿ ಚಿತ್ರಿಸಿದನು. ಈ ಅವಧಿಯಲ್ಲಿ ಇವರ ಆರೋಗ್ಯ ಸ್ಥಿತಿ ತೀರಾ ಹದಗೆಟ್ಟಿತ್ತು. 1962 ರಿಂದ 66ರ ವರೆಗೆ ಈ ಕರಕುಶಲ ಸಂಸ್ಥೆಯಲ್ಲಿ ಕಲಾವಿದನಾಗಿ ಸೇವೆಯನ್ನು ಸಲ್ಲಿಸಿದ ಬಾನಯ್ಯನು 1966ರ ಫೆಬ್ರವರಿ 26 ರಂದು ತೀರಿಕೊಂಡರು. ಇವರ ಜೀವಿತಾವಧಿಯ ಸಾಧನೆಯನ್ನು ಮನಗಂಡು ಭಾರತ ಸರ್ಕಾರವು ಮರಣೋತ್ತರ ರಾಷ್ಟ್ರಪ್ರಶಸ್ತಿಯನ್ನು ಪ್ರಕಟಿಸಿತು.

(ಎಂಸಿಬಿ)



ಗರೂಡ ಸದಾಶಿವರಾವ್: ಮೂಲತಃ ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮದವರು. ನಟ, ನಾಟಕಕಾರ, ವೃತ್ತಿನಾಟಕ ಮಂಡಳಿಯ ಒಡೆಯರು. ಕನ್ನಡ ರಂಗಭೂಮಿಗೆ ಇವರು ಸಲ್ಲಿಸಿದ ಸೇವೆ ಅನುಪಮವಾದುದು. ಇವರಿಗೆ ನಾಟಕದ ಗೀಳು ಆರಂಭವಾದದ್ದು ಕಲಬುರ್ಗಿಯಲ್ಲಿ. ಕಲಬುರ್ಗಿಯಲ್ಲಿ ಪ್ರಚಲಿತದಲ್ಲಿದ್ದ ಮರಾಠಿ ನಾಟಕಗಳ ಪ್ರಭಾವಕ್ಕೊಳಗಾದ ಗರೂಡರು ಸ್ವತಃ ಕನ್ನಡ ನಾಟಕಗಳನ್ನು ರಚಿಸಿ ಅವುಗಳನ್ನು ರಂಗಕ್ಕೆ ತರುವಲ್ಲಿ ಶ್ರಮಿಸಿದ್ದು ಅವರ ಮೊದಲ ಪ್ರಯತ್ನವಾಗಿದೆ.

ಕಲಬುರ್ಗಿಯಲ್ಲಿ ಕೆಲವು ವರುಷ ರಂಗ ಚಟುವಟಿಕೆಗಳಲ್ಲಿಯೇ ತೊಡಗಿದರು. ಅನಂತರ ಗದಗ ತಾಲ್ಲೂಕಿನ ಹೊಂಬಳದ ಶಂಕರ ನಾಟಕ ಕಲಾಮಂಡಳಿಯಲ್ಲಿ ಕೆಲಕಾಲ ಕಾರ್ಯನಿರ್ವಹಿಸಿ, ಅನಂತರ ದತ್ತಾತ್ರೇಯ ನಾಟಕ ಮಂಡಳಿಯನ್ನು ಗದುಗಿನಲ್ಲಿ ಸ್ಥಾಪಿಸಿದರು 1920. ಸಂಗೀತಮಯವಾಗಿದ್ದ ಮರಾಠಿ ರಂಗಭೂಮಿಗೆ ವ್ಯತಿರಿಕ್ತವಾಗಿ ಕನ್ನಡ ವೃತ್ತಿ ರಂಗಭೂಮಿಯನ್ನು ಅಭಿನಯದ ಗೀಳಿಗೆ ಹುಟ್ಟು ಹಾಕಿದವರು ಗರೂಡ ಸದಾಶಿವರಾಯರು.

ಇವರ ನಾಟಕಗಳು ಉತ್ತರ ಕರ್ನಾಟಕದ ಭಾಗಕ್ಕಿಂತ ಹೆಚ್ಚಾಗಿ ದಕ್ಷಿಣ ಕನ್ನಡದಲ್ಲಿಯೇ ಹೆಚ್ಚು ಜನಪ್ರಿಯವಾದವು. ಮಂಗಳೂರು, ಉಡುಪಿ, ತಿಪಟೂರು, ಕುಂದಾಪುರ, ಭಟ್ಕಳ ಮುಂತಾದ ಕಡೆಗೆಲ್ಲ ಇವರ ನಾಟಕಗಳು ಹೆಚ್ಚು ಪ್ರಯೋಗಗೊಂಡವು. ಸ್ವತಃ ತಾವೇ ದಶರಥನ ಪಾತ್ರ ನಿರ್ವಹಿಸಿ


ಪ್ರಯೋಗಿಸುತ್ತಿದ್ದ 'ಶ್ರೀರಾಮಪಾದುಕಾ ಪಟ್ಟಾಭಿಷೇಕ' ನಾಟಕವನ್ನು ರಚಿಸಿದ್ದು ಕುಂದಾಪುರದಲ್ಲಿ. ನಟವರ್ಗಕ್ಕೆ ಸೂಕ್ತ ತರಬೇತಿ ನೀಡುವುದು, ನಾಟಕ ಪ್ರಯೋಗಗೊಳ್ಳುವಲ್ಲಿ ಕಾಯ್ದುಕೊಳ್ಳಬೇಕಾದ ಸಮಯಪ್ರಜ್ಞೆ ಹಾಗೂ ರಂಗಭೂಮಿಯ ಶಿಸ್ತು, ಇವುಗಳು ಗರೂಡರ ರಂಗಭೂಮಿಯ ವೈಶಿಷ್ಟ್ಯಗಳಾಗಿವೆ.

(ಡಿಪಿಎ)

ಗವಾನ್ ಮದರಸಾ: ವಿಶ್ವವಿಖ್ಯಾತಿ ಪಡೆದ ಬೀದರನ ಮಹ್ಮದ್ ಗವಾನ್ ಮದರಸಾ!. ಒಂದು ಕಾಲದಲ್ಲಿ ಇಡೀ ವಿಶ್ವದ ವಿದ್ವಾಂಸರನ್ನು, ಅಧ್ಯಯನಶೀಲರನ್ನು, ವಿದ್ಯಾಕಾಂಕ್ಷಿಗಳನ್ನು ಕೈಬೀಸಿ ಕರೆದು, ಜ್ಞಾನಧಾರೆ ಎರೆದಿದ್ದ ಜ್ಞಾನದೇಗುಲ ಇಂದು ಅಕ್ಷರಶಃ ಅನಾಥ ಪ್ರಜ್ಞೆಯಿಂದ ನರಳುತ್ತಿದೆ.

ಶಿಕ್ಷಣಪ್ರೇಮಿ, ದಕ್ಷ ಆಡಳಿತಗಾರ ಎಂದೇ ಹೆಸರಾಗಿದ್ದ ಖಾಜಾ ಇಮಾಮುದ್ದೀನ್ ಮಹಮ್ಮದ್ ಗವಾನ್ (ಜನನ: 1395; ಮರಣ: 1481) 1472ರಲ್ಲಿ ಈ ಜ್ಞಾನದೇಗುಲವನ್ನು ನಿರ್ಮಿಸಿದ್ದರು.

ರಾಜ್ಯಶಾಸ್ತ್ರ, ತತ್ವಜ್ಞಾನ, ಭೂಗೋಳ ಶಾಸ್ತ್ರ, ಖಗೋಳ ಶಾಸ್ತ್ರ, ಗಣಿತ, ಔಷಧ ವಿಜ್ಞಾನ, ಕಾವ್ಯ, ಜ್ಯೋತಿಶಾಸ್ತ್ರ, ಸಂಸ್ಕೃತ, ಅರಬ್ಬಿ ಭಾಷೆ, ಖುರಾನ್, ವಾಸ್ತುಶಿಲ್ಪ ಮುಂತಾದವುಗಳಲ್ಲಿ ಪಾರಾಂಗತರಾಗಿದ್ದ ಜಗತ್ತಿನ ವಿವಿಧ ಭಾಗಗಳ ವಿದ್ವಾಂಸರು ಇಲ್ಲಿ ಜ್ಞಾನಾರ್ಜನೆ ಮಾಡುತ್ತಿದ್ದರು. ವಿದ್ವಾಸಕ್ತರಾದ ದೇಶ ವಿದೇಶಗಳ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದರು. ವಿವಿಧ ಶಾಸ್ತ್ರಗಳ ಅಧ್ಯಯನದ ಜೊತೆಗೆ ವಿಜ್ಞಾನ ಮತ್ತು ಖಗೋಳಶಾಸ್ತ್ರದಲ್ಲಿ ಸಂಶೋಧನೆ ಸಹ ನಡೆಯುತ್ತಿತ್ತು ಎಂಬುದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ.



ಗವಾನ ಮದರಸಾ – ಬೀದರ್

ಶಿಕ್ಷಣಪ್ರೇಮಿ ಹಾಗೂ ಸ್ವತಃ ತಜ್ಞನಾಗಿದ್ದ ಮಹಮ್ಮದ್ ಗವಾನ್ ಈ ಸೌಧವನ್ನು ಯೋಜನಾಬದ್ಧವಾಗಿ ನಿರ್ಮಿಸಿದ್ದ. ಮೂರು ಅಂತಸ್ತುಗಳ ಭವ್ಯ ಕಟ್ಟಡದಲ್ಲಿ ಸುಸಜ್ಜಿತ ಗ್ರಂಥಾಲಯ, ಅಧ್ಯಾಪಕರಿಗೆ ಪ್ರತ್ಯೇಕ ವಸತಿ, ಖಗೋಳವೀಕ್ಷಣಾಲಯ, ಪ್ರಯೋಗಶಾಲೆ, ಪ್ರಾರ್ಥನೆಗಾಗಿ ವಿಶಾಲವಾದ ಪ್ರಾಂಗಣ ಮುಂತಾದ ಸಕಲ ಸೌಲಭ್ಯಗಳಿದ್ದವು. ಸುಸಜ್ಜಿತ ಗ್ರಂಥಾಲಯದಲ್ಲಿ ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದ 3,000ಕ್ಕೂ ಹೆಚ್ಚು ಪುಸ್ತಕಗಳಿದ್ದವು. ಬಹಮನಿ ಅರಸರ ಕಾಲದ ಭವ್ಯ ವಾಸ್ತುಶಿಲ್ಪ ಪರಂಪರೆಯನ್ನು ಸಾರುವ ಈ ಬೃಹತ್ ಕಟ್ಟಡ ಇಂದು ಶಿಥಿಲಾವಸ್ಥೆಗೆ ತಲುಪಿದೆ.

ಐತಿಹಾಸಿಕ ಹಿನ್ನೆಲೆ ಹೊಂದಿರುವ ಬೀದರ ನಗರದ ಆಕರ್ಷಣೆಯನ್ನು ಹೆಚ್ಚಿಸುವ ಸ್ಮಾರಕಗಳಲ್ಲಿ ಗವಾನ್ ಮದರಸಾ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಕೋಟೆಕೊತ್ತಲಗಳು ಎಲ್ಲೆಡೆ ಕಾಣಲು ಸಾಧ್ಯವಿದೆಯಾದರೂ ಗವಾನ್ ಮದರಸಾದಂತಹ ಜ್ಞಾನದೇಗುಲ ಕಾಣಸಿಗುವುದು ತೀರಾ ವಿರಳ.

ಮಹ್ಮದ್ ಗವಾನ್ ಈ ಜ್ಞಾನ ದೇಗುಲದ ರೂವಾರಿ, ಬಹಮನಿ ಅರಸರ ಪ್ರಧಾನಮಂತ್ರಿಯಾಗಿದ್ದ ಖಾಜಾ ಇಮಾಮುದ್ದೀನ್ ಮಹಮ್ಮದ್ ಗವಾನ್ ಮೂಲತಃ ಇರಾನ್ ಮೂಲದವರು. ವ್ಯಾಪಾರಕ್ಕಾಗಿ ವಿಶ್ವಪರ್ಯಟನ ಮಾಡುತ್ತ ಬೀದರಗೆ ಬಂದ ಅನಂತರ ನೆಲೆಯೂರಿದ ಅವರು, ತಮ್ಮ ಜಾಣ್ಮೆ ಹಾಗೂ ಚಾಣಕ್ಷ್ಯತನದಿಂದ ಬಹುಬೇಗ ಅರಸರ ಕಣ್ಣಿಗೆ ಬಿದ್ದು, ಹಂತಹಂತವಾಗಿ ಮೇಲೇರುತ್ತ ಪ್ರಧಾನ ಮಂತ್ರಿಯ ಸ್ಥಾನಕ್ಕೇರಿದ್ದರು. ಮಹಮ್ಮದ್ ಗವಾನ್ ಮಾಡಿರುವ ಸುಧಾರಣೆಗಳು ಅಪಾರ. ಆನಾನುರಾಗಿಯಾಗಿದ್ದು ಅವರು ಸಾಮಾನ್ಯರಿಗಾಗಿ ಸಾಕಷ್ಟು ಶ್ರಮಿಸಿದ್ದರು. (ಎಂಎಸ್‌ಜಿ)

ಗವೀಶ ಹಿರೇಮಠ: ಕೊಪ್ಪಳ ಜಿಲ್ಲೆಯಲ್ಲಿ 1946ರಲ್ಲಿ ಜನಿಸಿದ ಗವೀಶ ವೀರಭದ್ರಯ್ಯ ಹಿರೇಮಠರವರು ರಂಗಭೂಮಿ ಕಂಡ ಅಪರೂಪದ ಲೇಖಕರಲ್ಲಿ ಗುರುತಿಸಲೇಬೇಕಾದ ನಿಷ್ಠಾವಂತ ಬರಹಗಾರರು. ಹತ್ತು ಸಂಪಾದಿತ ಕೃತಿಗಳು 13 ಸ್ವತಂತ್ರ ಕೃತಿಗಳನ್ನು ಹೊರತಂದು ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ.

ಹನಿಗವನ, ಕವಿತಾ ಸಂಕಲನ, ಚಿತ್ರಕಲಾವಿದರ ಸಾಹಸ ಯಾತ್ರೆಯಂತ ಸೃಜನಶೀಲಸಾಹಿತ್ಯ ಕೊಟ್ಟು ಉತ್ತರ ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ್ದಾರೆ. 'ರಂಗ



ಕುಸುಮಗಳು' ಎಂಬ ಇವರ ಅಂಕಣ ಬರಹದಿಂದ ನೆಲದ ಮರೆಯ ನಿಧಾನದಲ್ಲಿದ್ದ ಎಷ್ಟೊ ರಂಗ ಕಲಾವಿದರಿಗೆ ಅಕಾಡೆಮಿ ಗುರುತಿಸಿ ಗೌರವಿಸಿದ್ದು ಗವೀಶರ ಕಾಳಜಿಯ ಬರಹದಿಂದ ಬಣ್ಣದ ಬದುಕಿನ ಹಿಂದಿನ ನಿಜದ ನೆಲೆ ಕಲಾವಿದನಿಗೆ ಗೊತ್ತು. ಅದನ್ನು ಗೊತ್ತು ಮಾಡಿದ ಶ್ರೇಯಸ್ಸು ಗವೀಶರಿಗೆ ಸಲ್ಲಬೇಕು. ಗವೀಶ ಹಿರೇಮಠರು ಸಿದ್ಧಗೊಳಿಸಿರುವ, ಸಧ್ಯ ಪ್ರಚಲಿತವಾಗಿರುವ ನಾಡಿನ 13 ಕಂಪನಿಗಳ ಇತಿಹಾಸವನ್ನು ರೂಪಕದಲ್ಲಿ 'ರಂಗಜಂಗಮರು' ಎನ್ನುವ ಶೀರ್ಷಿಕೆಯಿಂದ ಗುಲಬರ್ಗಾ ಆಕಾಶವಾಣಿ ಕೇಂದ್ರ ಪ್ರಸಾರಗೊಳಿಸಲು ಸಿದ್ಧಪಡಿಸಿಕೊಂಡಿದೆ.

1972ರಿಂದ ವೃತ್ತಿ ರಂಗಭೂಮಿಯ ಬಗ್ಗೆ ವಿಶೇಷ ಅಧ್ಯಯನ ನಡೆಸಿದ ಇವರು ಅಧ್ಯಯನ ಮಾಡುತ್ತ ತಾವೇ ಒಂದು ಕಂಪನಿಯಾದವರು. ಸ್ವತಃ ತಾವೇ ನಿಂತು 'ಸ್ವಯಂ ಜ್ಯೋತಿ' ನಾಟಕ ಕಂಪನಿಯ ಸಂಚಾಲಕರಾಗಿ ಟಿಕೇಟ್ ಮಾರಿ ಕೈ ಸುಟ್ಟುಕೊಂಡವರು. ಇಂತಹವರಿಗೆ ಬಣ್ಣದ ಬದುಕಿನ ಹಿಂದಿನ ಸಿಹಿ ಕಹಿಗಳನ್ನು ಸಂವೇದನೆಯಿಂದ ನೋಡುವ ಮನಸ್ಸಿರುತ್ತದೆ ಎನ್ನುವುದಕ್ಕೆ ಅವರು ಇತ್ತೀಚೆಗೆ ತಂದ 'ಹೊತ್ತು ಮುಳುಗುವ ಮುನ್ನ' ಎಂಬ ಕೃತಿಯೇ ಸಾಕ್ಷಿ. ವೃತ್ತಿ ರಂಗಭೂಮಿಯ ನೂರಾರು ಕಲಾವಿದರ ಬದುಕು, ಅವರು ಬಣ್ಣ ಹಚ್ಚಿ ಪಾತ್ರಗಳಿಗೆ ಪ್ರಾಣ ತುಂಬಿದ ಕಸರತ್ತು, ಬಣ್ಣ ಒರೆಸಿ ಹೊರ ಬಂದಾಗಿನ ನೈಜ ತಲ್ಲಣಗಳನ್ನು ಗವೀಶರು ಕಂಡದ್ದು ಕಂಡ ಹಾಗೆ ಬರದಿದ್ದಾರಿಂದ ಇದೊಂದು ಗಮನಾರ್ಹ ಆಕರಗ್ರಂಥ.

ವೃತ್ತಿ ರಂಗಭೂಮಿಯ 'ಕಂಪನಿ' ಮಾಲೀಕರು, ಮತ್ತು ನಟರ ಒಗ್ಗಟ್ಟಿನ ಬಗ್ಗೆ ವಿಶೇಷ ಕಾಳಜಿಯಿಂದ ಗವೀಶರು ಮೂಡಿಸಿದ ಮತ್ತೊಂದು ಗರಿ. ಕುಮಾರೇಶ್ವರ ನಾಟ್ಯ ಸಂಘ ಹಾಗನಲ್ಲ ತಂಡ ಗುಲಬರ್ಗಾದಲ್ಲಿ ಸತತ ಎರಡು ವರ್ಷ ನಾಟಕ ಪ್ರದರ್ಶಿಸಿದ ಸಂದರ್ಭದಲ್ಲಿ ಆ ಕಂಪನಿಯ ಮಾಲೀಕರಾದ ಶೇಖ ಮಾಸ್ತರ ಅವಿರತ ಶ್ರಮ ಇದಕ್ಕೆ ಸಾಥಿದಾರ ಎನ್ನುವ ಶ್ರೀಧರ ಹೆಗಡೆಯವರ ಭಗೀರತ ಪ್ರಯತ್ನದ ವೃತ್ತಿ ನಾಟಕ ಪ್ರಯೋಗಗಳ ಬಗ್ಗೆ ಸ್ಮರಣ ಸಂಚಿಕೆಯನ್ನು ಸುಮಾರು 50 ಜನ ಬರಹಗಾರರಿಂದ ಬರೆಸಿದ ಸಂಪಾದನಾ ಕೃತಿ ಗವೀಶರ ಸಾರ್ಥಕ ಶ್ರಮ.

ನೃಪತುಂಗ ಕಲಾವಿದರ ಬಳಗದ 'ಅಧ್ಯಕ್ಷರಾಗಿ, ಗುಲಬರ್ಗಾ ಫಿಲಂ ಕ್ಲಬ್‌ನ ಕಾರ್ಯಕಾರಿ ಸದಸ್ಯರಾಗಿ, ನಾಟಕ ಅಕಾಡೆಮಿಯ ಸದಸ್ಯರಾಗಿ, ಜನಪದ ಅಕಾಡೆಮಿಯ ಸದಸ್ಯರಾಗಿ, ಸದಾ ಕಲಾವಿದರ ಬಗ್ಗೆ ದುಡಿತ, ತುಡಿತ ಇಟ್ಟುಕೊಂಡ ಗವೀಶರ ಬಗ್ಗೆ ಬರೆದಷ್ಟು ಬರಹ ಕಮ್ಮಿ. ಸಾಹಿತಿ, ಕಲಾವಿದ, ಸಂಘಟಕ, ಕಂಪನಿ ಮಾಲೀಕ, ಹೀಗೆ ಹತ್ತು ಜನರ ಒಟ್ಟಾಗಿ ಸೇರಿಸಿದ್ದರೆ ಒಬ್ಬ ಗವೀಶ ಆಗುತ್ತಾರೆ. ಕಡೆಯ ಮಾತು ಗತಿಸಿಹೋದ ವೃತ್ತಿ ರಂಗಭೂಮಿಯ ವೈಭವವನ್ನು ನಮ್ಮೆದುರಿಗೆ ತಂದಿಟ್ಟು ವರ್ತಮಾನಕ್ಕೆ ಅರ್ಥ ತುಂಬಿದ ಗವೀಶ ಹಿರೇಮಠರ ಪ್ರಯತ್ನ ಶ್ಲಾಘನೀಯ.

(ಎಸ್‌ಆರ್‌ಜಿ)

ಗಾ

ಗಾಜಿನ ಚಿತ್ರಕಲೆ: 18–19ನೆಯ ಶತಮಾನಗಳಲ್ಲಿ ಭಾರತದಲ್ಲಿ ಕಾಣಿಸಿಕೊಂಡ ಗಾಜಿನ ಚಿತ್ರಕಲೆಯು ಒಂದು ಕಾಲಕ್ಕೆ ಜನಪ್ರಿಯ ಕಲಾಮಾಧ್ಯಮವಾಗಿ ಬೆಳೆಯಿತು. ಪಾಶ್ಚಿಮಾತ್ಯರಿಂದ ಆಮದಾದ ಗಾಜಿನ ಚಿತ್ರಕಲೆಯು ಭಾರತದೊಡನೆ ಐರೋಪ್ಯರು ಹೊಂದಿದ ವ್ಯಾಪಾರ ಸಂಪರ್ಕಗಳಿಂದ ಪರಿಚಯವಾಯಿತೆಂದು ಹೇಳಬಹುದು. ಈ ಕಲೆ ಯುರೋಪಿನಲ್ಲಿ ಮಧ್ಯಯುಗದಿಂದಲೇ ಪ್ರಚಲಿತದಲ್ಲಿತ್ತು. ಆರಾಧನ ಮಂದಿರ (ಚರ್ಚು) ಗಳ ಕಿಟಕಿಗಳಲ್ಲದೆ ಗೋಡೆಗಳನ್ನು ಅಂದಗೊಳಿಸುವುದಕ್ಕಾಗಿ ವರ್ಣದ ಗಾಜುಗಳನ್ನು ಬಲಸಲಾಗುತ್ತಿದ್ದ ಪರಂಪರೆಯೊಂದು ಮುಂದೊಮ್ಮೆ ಪ್ರತ್ಯೇಕ ಕಲಾಪ್ರಕಾರವಾಗಿ ಬೆಳೆದು ಗಾಜಿನ ಚಿತ್ರಕಲೆ ಎನಿಸಿಕೊಂಡಿತು. ಮುಖ್ಯವಾಗಿ ಟ್ರಾನ್ಸಿಲೇವಿಯಾ ಗಾಜಿನ ಚಿತ್ರಕಲೆಗೆ ಪ್ರಮುಖ ಕೇಂದ್ರವಾಗಿದ್ದರೂ ಐರೋಪ್ಯ ರಾಷ್ಟ್ರಗಳಾದ ಯುಗೋಸ್ಲಾವಿಯಾ, ಜೆಕೊಸ್ಲಾವಿಯಾ ಮತ್ತು ಜರ್ಮನಿಗಳಲ್ಲಿಯೂ ಈ ಕಲೆ ಜನಪ್ರಿಯ ಕಲೆಯಾಗಿ ಬೆಳೆದಿತ್ತು. ಈ ಕಲೆಯನ್ನು ಏಷಿಯಾ ರಾಷ್ಟ್ರಗಳಿಗೆ ಪರಿಚಯಿಸಿದವರು ಚೀನಾ ದೇಶದ ಕಲಾವಿದರು. ಚೀನಾ ವ್ಯಾಪಾರಿಗಳು ಐರೋಪ್ಯ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿದ್ದರಿಂದ ಅವರು ಗಾಜಿನ ಚಿತ್ರಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಹಾಗಾಗಿ ಚೀನಾದ ಬಂದರುಗಳಲ್ಲಿ ಈ ಕಲೆಯು ಹೆಚ್ಚು ಜನಪ್ರಿಯತೆಯನ್ನು ಹೊಂದಿತು.

ಐರೋಪ್ಯ ಕಲಾ ಮಾಧ್ಯಮವಾದ ಗಾಜಿನ ಚಿತ್ರಕಲೆಯ ತಂತ್ರವಿಧಾನಗಳನ್ನು ಕಲಿತ ಚೀನದ ಕಲಾವಿದರೂ ಈ ಮಾಧ್ಯಮದ ಚಿತ್ರಗಳನ್ನು ರಚಿಸಲು ಆರಂಭಿಸಿದರು. ೧ನಾದ ನಂತರ ಈ ಕಲೆ ಭಾರತದಲ್ಲೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿತು. ಐರೋಪ್ಯ ರಾಷ್ಟ್ರಗಳ ವ್ಯಾಪಾರ ಸಂಪರ್ಕ ಸೇತುವೆಯಂತಿದ್ದ ಭಾರತದ ಕರಾವಳಿ ಪ್ರದೇಶದಲ್ಲಿ ಈ ಕಲೆ



'ಕಲ್ಕಿ' ಗಾಜಿನ ಚಿತ್ರ

ಪರಿಚಯಗೊಂಡಿತು. ಐರೋಪ್ಯ ಕಲಾವಿದರೊಂದಿಗೆ ಚೀನಾದ ಕಲಾವಿದರೂ ಅಂದು ಈ ನಾಡಿನ ಸಂಸ್ಥಾನಿಕರ ಆಶ್ರಯ ಪಡೆದುದಲ್ಲದೆ ಗಾಜಿನ ಚಿತ್ರಕಲೆಯನ್ನು ಪರಿಚಯಿಸಿದರು. ಭಾರತದ ಕರಾವಳಿ ಪ್ರದೇಶಗಳಾದ ಕಲ್ಕತ್ತಾ, ವಿಶಾಖಪಟ್ಟಣ, ಮದ್ರಾಸ್ (ಇಂದಿನ ಚೆನ್ನೈ) ಮುಂಬೈ ಅಲ್ಲದೆ ಹೈದ್ರಾಬಾದ, ತಂಜಾವೂರು, ಮೈಸೂರು, ಪೂನಾ, ಸತಾರ, ಅಕ್ಕಲಕೋಟೆ ಮುಂತಾದ ನಗರಗಳು ಅಂದು ಗಾಜಿನ ಚಿತ್ರಕಲೆಯ ಪ್ರಮುಖ ಕೇಂದ್ರಗಳಾಗಿದ್ದವು.

ಚಿತ್ರ ರಚನಾ ವಿಧಾನ: ಕೇವಲ ಭಿತ್ತಿ ಅಥವಾ ಕಾಗದದ ಮೇಲೆ ಚಿತ್ರ ರಚಿಸುವ ಸಂಪ್ರದಾಯವೊಂದಿದ್ದ ಕಾಲದಲ್ಲಿ ಹೊಸ ಪ್ರಯೋಗಗಳೊಂದಿಗೆ ಕಾಣಿಸಿಕೊಂಡ ಗಾಜಿನ ಮೇಲೆ ಚಿತ್ರ ರಚಿಸುವ ನವೀನ ತಂತ್ರ ವಿಧಾನ ಹೆಚ್ಚು ಆಕರ್ಷಿಸತೊಡಗಿತು. ಗಾಜಿನ ಮೇಲೆ ಚಿತ್ರ ರಚಿಸಬೇಕಾದರೆ ಅದರದೇ ಆದ ರಚನಾ ವಿಧಾನವಿದೆ. ಗಾಜಿನ ಮೇಲೆ ಚಿತ್ರ ರಚಿಸುವ ಮೊದಲು ಕರಡು ಪ್ರತಿಯೊಂದನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಕಾಗದ ಅಥವಾ ಭಿತ್ತಿಯ ಮೇಲೆ ಯಥಾವತ್ ಚಿತ್ರರಚನಾ ತಂತ್ರವನ್ನು ಬಳಸಿದರೆ, ಗಾಜಿನ ಚಿತ್ರ ರಚನೆಯಲ್ಲಿ ಗಾಜಿನ ಹಿಂಭಾಗದಲ್ಲಿ (Refluent form) ಚಿತ್ರಿಸಿದರೆ ಅದು ಮುನ್ನಲೆಯ ಚಿತ್ರದ ಪ್ರತಿಬಿಂಬವನ್ನು (Introspective) ಮೂಡಿಸುವಂತಹ ರಚನಾ ತಂತ್ರಗಾರಿಕೆಯನ್ನು ಹೊಂದಿದೆ. ಒಂದರ್ಥದಲ್ಲಿ ಈ ಗಾಜಿನ ಚಿತ್ರರಚನಾ ವಿಧಾನವು ಕಲಾವಿದರ ಕುಶಲತೆಯನ್ನು ವ್ಯಕ್ತ ಪಡಿಸುತ್ತದೆ.

ಗಾಜಿನ ಮೇಲಿನ ಚಿತ್ರರಚನೆಯಲ್ಲಿ ಉತ್ತಮ ಸಂಯೋಜನೆ ಹಾಗೂ ಆಕೃತಿಗಳಲ್ಲಿನ ಉಡುಪು ಆಭರಣಗಳಿಗೆ ಬೆಳ್ಳಿ ಮತ್ತು ಬಂಗಾರದ ಕಲ್ಪನೆಯನ್ನು ಮೂಡಿಸುವಲ್ಲಿ ಕಲಾವಿದನು ಸಫಲನಾಗಿದ್ದಾನೆ. ಚಿತ್ರದಲ್ಲಿ ಬಂಗಾರದ ಆಭರಣಗಳನ್ನು ಚಿತ್ರಿಸುವಾಗ ಆಭರಣಗಳ ವಿನ್ಯಾಸಕ್ಕೆ ತಕ್ಕಂತೆ ಬಂಗಾರ ವರ್ಣದ ತೆಳುವಾದ ಹಾಳೆಯನ್ನು ಕತ್ತರಿಸಿಕೊಂಡು ಅಂಟಿಸಲಾಗುತ್ತದೆ. ನಂತರದಲ್ಲಿ ಚಿತ್ರ ಸಂಯೋಜನೆಗೆ ಹೊಂದುವ ವರ್ಣಗಳನ್ನು ಲೇಪನ ಮಾಡುವುದಲ್ಲದೆ, ಅಗತ್ಯ ವರ್ಣಗಳನ್ನು ಮಿಶ್ರಣ ಮಾಡುವದರೊಂದಿಗೆ ತ್ರಿಮಾನ (3D)ದ ಕಲ್ಪನೆಯನ್ನು ಚಿತ್ರದಲ್ಲಿ ಮೂಡಿಸಬಹುದಾಗಿದೆ. ಚಿತ್ರದ ಹಿನ್ನೆಲೆಯಲ್ಲಿ ಹೊಂದಿಕೊಳ್ಳುವ ಹಿನ್ನೆಲೆಯ ಪರಿಸರ, ಕಟ್ಟಡಗಳು ಮುನ್ನೆಲೆಯ ದೃಶ್ಯ ಇತ್ಯಾದಿ ಆಕಾರಗಳನ್ನು ಚಿತ್ರದಲ್ಲಿ ಅಗತ್ಯದ ಮೇರೆಗೆ ಸಂಯೋಜಿಸಿ ಕೊಳ್ಳಬಹುದಾಗಿದೆ. ಈ ತಂತ್ರದ ಒಂದು ವಿಶಿಷ್ಟತೆ ಏನೆಂದರೆ ಮುನ್ನಲೆಯಲ್ಲಿ ಕಾಣಿಸಬೇಕಾದ ಆಕೃತಿಗಳನ್ನು ಮೊದಲು ಚಿತ್ರಿಸಿ. ಹಿನ್ನೆಲೆಯಲ್ಲಿ ಕಾಣುವ ಆಕೃತಿಗಳನ್ನು ನಂತರದಲ್ಲಿ ಚಿತ್ರಿಸಿಕೊಂಡು ಚಿತ್ರವನ್ನು ಪೂರ್ಣಗೊಳಿಸ ಲಾಗುತ್ತದೆ. ಕೊನೆಯಲ್ಲಿ ಚಿತ್ರ ರಚನೆಯು ಅಂತಿಮವಾದ ಮೇಲೆ ಕಪ್ಪು ವರ್ಣವನ್ನು ಚಿತ್ರದ ಮೇಲೆ ಏಕಪ್ರಕಾರವಾಗಿ ಲೇಪಿಸಲಾಗುತ್ತದೆ. ಹೀಗೆ ಮಾಡುವುದರಿಂದ ಚಿತ್ರಕ್ಕೆ ಯಾವುದೇ ರೀತಿಯ ಹಾನಿ ಯಾಗುವುದಿಲ್ಲ.

ಜನಪ್ರಿಯ ಕಲೆಯಾಗಿ: ಈ ಮೊದಲೇ ವಿವರಿಸಿದಂತೆ ಐರೋಪ್ಯ ಕಲಾಶೈಲಿಯಾದ ಗಾಜಿನ ಚಿತ್ರಕಲೆಯು 18–19ನೆಯ ಶತಮಾನದಲ್ಲಿ ಭಾರತಕ್ಕೆ ಪರಿಚಯವಾಯಿತಲ್ಲದೆ ಅಂದು ಈ ಮಾಧ್ಯಮದ ಚಿತ್ರಕಲೆ ಹೆಚ್ಚು ಜನಪ್ರಿಯತೆ ಪಡೆಯಿತು. ಇಂದಿಗೂ ಈ ಕಲೆ ಪ್ರಚಲಿತದಲ್ಲಿದೆ. ಬಹುತೇಕ ಹವ್ಯಾಸಿ ಹಾಗೂ ವಾಣಿಜ್ಯದ ನೆಲೆಯಲ್ಲಿ ಗಾಜಿನ ಚಿತ್ರಕಲೆಯು ಕಾಣಿಸಿಕೊಂಡಿದೆ. ಹವ್ಯಾಸಿ ನೆಲೆಯಲ್ಲಿ ವಿಶೇಷವಾಗಿ ಗೃಹಿಣಿಯರು, ಸ್ತ್ರೀಯರು ಕುತೂಹಲಕ್ಕಾಗಿ ಗಾಜಿನ ಚಿತ್ರಗಳನ್ನು ರಚಿಸುವುದನ್ನು ಕಂಡರೆ, ವ್ಯಾಪಾರಿಗಳು ತಮ್ಮ ಅಂಗಡಿಗಳ ಸೌಂದರ್ಯವನ್ನು ಹೆಚ್ಚಿಸಲು ಗಾಜಿನ ಕಲಾಕೃತಿಗಳನ್ನು ತೂಗು ಹಾಕುತ್ತಿದ್ದರು. ಹಾಗಾಗಿ ಈ ಕಲೆಯ ವಾಣಿಜ್ಯ ನೆಲೆಯಲ್ಲಿಯೂ ಕಾಣಿಸಿಕೊಂಡಿತು.

18–19ನೆಯ ಶತಮಾನಗಳಲ್ಲಿ ರಾಜಾಶ್ರಯ ಕಳೆದುಕೊಂಡ ಸಾಂಪ್ರದಾಯಿಕ ಚಿತ್ರಕಲಾವಿದರ ಇನ್ನೊಂದು ವರ್ಗ ತಮ್ಮ ಉಪಜೀವನ ನಡೆಸುವುದಕ್ಕಾಗಿ ಅಂದಿನ ಪುಣ್ಯಸ್ಥಳಗಳಲ್ಲಿ ದರ್ಶನಕ್ಕೆ ಬರುವ ಭಕ್ತರಿಗಾಗಿ ಈ ಸ್ಥಳದ ಅಥವಾ ಅಲ್ಲಿಯ ದೇವಾನುದೇವತೆಗಳ ಚಿತ್ರಗಳನ್ನು ಸ್ಥಳದಲ್ಲಿಯೇ ರಚಿಸಿಕೊಡುವ ಸಂಪ್ರದಾಯವನ್ನು ಬೆಳೆಸಿಕೊಂಡರು. ತಿರುಪತಿ, ಶ್ರೀಶೈಲ, ತಂಜಾವೂರು, ಮಧುರೈ, ಪಂಢರಾಪುರ, ತುಳಜಾಪುರ, ಹೈದ್ರಾಬಾದ ಇತ್ಯಾದಿ ಸ್ಥಳಗಳು ಅಂದು ಪ್ರಮುಖ ಪ್ರೇಕ್ಷಣೀಯ. ಧಾರ್ಮಿಕ ಕೇಂದ್ರಗಳೆನಿಸಿಕೊಂಡಿದ್ದವು. ಈ ಸ್ಥಳಗಳಲ್ಲಿ ಕಲಾವಿದರು ತಾವು ಚಿತ್ರಿಸಿದ ಚಿತ್ರಗಳನ್ನು ಮಾರಾಟಕ್ಕೆ ಇಟ್ಟಾಗ ಯಾತ್ರಾರ್ಥಿಗಳು ಆ ಕಲಾಕೃತಿಗಳನ್ನು ಕೊಂಡುಕೊಳ್ಳುತ್ತಿದ್ದರು.

ಸಾಮಾನ್ಯರಿಗೆ ಕೊಂಡುಕೊಳ್ಳುವುದಕ್ಕೆ ಆಗುವಂತೆ ಚಿತ್ರಿಸಲಾದ ಈ ಕಲಾಕೃತಿಗಳನ್ನು 'ಬಜಾರ ಕಲೆ' ಅಥವಾ 'ಜನಪ್ರಿಯ ಕಲೆ' ಎಂದು ಕರೆಯಲಾಯಿತು. ಹೀಗೆ ಸಾಂಪ್ರದಾಯಿಕ ಕಲೆಯನ್ನು ವಾಣಿಜ್ಯಪರಗೊಳಿಸಿದ ಗಾಜಿನ ಚಿತ್ರಗಳ ಕಲಾವಿದರು ಕಲಾಸಕ್ತರ ಸಂಗ್ರಹ ಪ್ರವೃತ್ತಿಗೆ ಸ್ವರೂಪ ನೀಡಿ ಕಲೆಯನ್ನು ಜನಪರಗೊಳಿಸಿದ ಬಗೆ ಮೆಚ್ಚುವಂತಹದು. ಸುಮಾರು ನಾಲ್ಕಾರು ತಲೆಮಾರುಗಳಷ್ಟು ಹಳೆಯದಾದ ಕಲಾವಿದರ ಸಂತತಿ ಬಹುಶಃ ನಶಿಸಿ ಹೋಗಿದ್ದರೂ ಅವರು ಹಾಕಿಕೊಟ್ಟ ಕಲಾಪರಂಪರೆಯ ಕುರುಹು ಈಗಲೂ ಜೀವಂತವಾಗಿರುವುದನ್ನು ನಾವು ಕಾಣಬಹುದು.

ವಸ್ತುವಿಷಯ: ಗಾಜಿನ ಮೇಲಿನ ಚಿತ್ರಗಳಲ್ಲಿ ಧಾರ್ಮಿಕತೆ, ಸಾಮಾಜಿಕತೆಯ ವೈಭವೀಕರಣದ ಆಶಯವನ್ನು ಗುರುತಿಸಬಹುದಾಗಿದೆ. ಇದಕ್ಕೆ ಕಾರಣವೂ ಇಲ್ಲವೆಂದಲ್ಲ. ರಾಜಾಶ್ರಿತ ಕಲಾವಿದರು ಅರಮನೆಯ ಸುಖದ ಸುಪ್ಪತ್ತಿಗೆಯಲ್ಲಿ ತಮ್ಮ ಅಭಿವ್ಯಕ್ತಿಯನ್ನು ನಿರೂಪಿಸಿದರು. ಅವರು ತಮ್ಮ ಪ್ರಸಿದ್ಧಿ ವೃದ್ಧಿಸಿಕೊಳ್ಳಲು ಅನಿವಾರ್ಯವಾಗಿ ವೈಭವೀಕರಣದ ಆಶಯವನ್ನೇ ತಮ್ಮ ಅಭಿವ್ಯಕ್ತಿಯ ಮೂಲ ಸಿದ್ಧಾಂತವಾಗಿಸಿಕೊಂಡಿರುವುದಂತೂ ಸತ್ಯ.

ಧಾರ್ಮಿಕ ಹಿನ್ನೆಲೆಯಾಧಾರಿತ ಕಲಾಕೃತಿಗಳಲ್ಲಿ ಶಿವ-ಪಾರ್ವತಿ, ಗಣಪ, ಸರಸ್ವತಿ, ಶ್ರೀಕೃಷ್ಣನ ಸರಸ ಸಲ್ಲಾಪಗಳು, ವೆಂಕಟೇಶ್ವರ ಶ್ರೀದೇವಿ ಭೂದೇವಿಯೊಂದಿಗಿನ ದೃಶ್ಯ ಇತ್ಯಾದಿ. ಚಿತ್ರಗಳಲ್ಲಿ ಆರೋಗ್ಯವಂತ ವ್ಯಕ್ತಿತ್ವವನ್ನು ಕಲಾವಿದರು ಕುಬ್ಜವಾಗಿ ತೋರ್ಪಡಿಸಿದ್ದಾರೆ. ಅಂದಿನ ಕಲಾವಿದರಿಗೆ ರಾಜಮಹಾರಾಜರೆಂದರೆ ಗಂಧರ್ವರೆಂಬ ಭಾವನೆಯನ್ನು ಚಿತ್ರಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅದೇ ರೀತಿ ರಾಣಿಯನ್ನು ಗಂಧರ್ವ ಕನ್ಯೆಯಂತೆ ಚಿತ್ರಿಸಿದ್ದಲ್ಲದೆ, ರಾಜನಿಗೂ ತನ್ನ ಪಟ್ಟದರಾಣಿ ಗಂಧರ್ವ ಕನ್ಯೆಯೆಂಬಂತಹ ಭಾವನೆಯನ್ನು ತುಂಬುವಷ್ಟರ ಮಟ್ಟಿಗೆ ಕಲಾವಿದರಿಗೆ ಅರಮನೆಯ ಜೀವನದ ಪದ್ಧತಿ ಪ್ರಭಾವ ಬೀರಿದೆ.


'ಬಲರಾಮನು ಹಸ್ತಿನಾವತಿ ನಗರವನ್ನು ಗಂಗೆಗೆ ಎಳೆಯುತ್ತಿರುವದು'

ಶೃಂಗಾರಪರ ಚಿತ್ರಗಳಲ್ಲಿ ಭಾವವನ್ನು ಶೃಂಗಾರದ ನೆಲೆಯಲ್ಲಿಯೇ ಚಿತ್ರಿಸಿದ್ದಾರೆ. ಗೌಪ್ಯವಾಗಿರುತ್ತಿದ್ದ ಅರಮನೆಯ ಶೃಂಗಾರ ಘಟನೆಗಳನ್ನು ಅತ್ಯಂತ ದಿಟ್ಟತನದಿಂದ ಹೊರಜಗತ್ತಿಗೆ ಚಿತ್ರದ ಮೂಲಕ ಅನಾವರಣಗೊಳಿಸಿರುವ ಕಲಾವಿದರು, ಆ ಕೃತಿಗಳಲ್ಲಿ ಭಾವಪ್ರಚೋದಕ ಗುಣಗಳನ್ನು ತುಂಬಿದ್ದಾರೆ. ರಾಜ-ರಾಣಿಯರ ಚಿತ್ರಗಳನ್ನು ಅರಮನೆಯ ವಿಲಾಸೀ ಜೀವನದ ಪ್ರಭಾವದಿಂದ ಕಲಾವಿದರು ರಚಿಸಿದ್ದು ಕಂಡುಬರುತ್ತದೆ. ಆ ಕೃತಿಗಳಿಗೆ ಅಲಂಕಾರದ ಪೋಷಾಕುಗಳನ್ನು ಚಿತ್ರಿಸಿರುವ ಕಲಾವಿದರು. ಚಿತ್ರದ ಹಿನ್ನೆಲೆಯಾಗಿ ಅರಮನೆಯಲ್ಲಿ ಕಂಡುಬರುವ ಕಂಬಗಳ ವಿನ್ಯಾಸಗಳು, ಪರದೆಯಗಳನ್ನು ಸಹ ವೈಭವೀಕರಣದ ನೆಲೆಯಲ್ಲಿ ಚಿತ್ರಿಸಿ ಜನಸಾಮಾನ್ಯರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಗಾಜಿನ ಚಿತ್ರಕಲೆ ಕಂಪನಿ ಚಿತ್ರಕಲೆಯ ಮುಂದುವರೆದ ರೂಪವಾಗಿದ್ದರೂ ಈ ಕಲೆಯಲ್ಲಿ ಭಾರತದ ಪ್ರಾದೇಶಿಕ ಲಕ್ಷಣಗಳನ್ನು ಕಾಣಬಹುದಾಗಿದೆ. ಈ ಕಲೆಯಲ್ಲಿ ತಂಜಾವೂರು ಶೈಲಿ, ಮರಾಠಾ ಶೈಲಿ ಹಾಗೂ ಮೈಸೂರು ಶೈಲಿಗಳೆಂದು ಗುರುತಿಸಲಾಗುತ್ತದೆ. ಮರಾಠಾವಾಡಾ, ಮೈಸೂರು ಮತ್ತು ತಂಜಾವೂರು ಅರಸರು ಗಾಜಿನ ಚಿತ್ರಕಲೆಗೆ ಹೆಚ್ಚಿನ ರೀತಿಯ ಪ್ರೋತ್ಸಾಹ ಮತ್ತು ಪೋಷಣೆಯನ್ನು ನೀಡಿದ್ದರು. ಅದರ ಫಲವಾಗಿ ಗಾಜಿನ ಚಿತ್ರಕಲೆಯು ಇಡೀ ದಕ್ಷಿಣ ಭಾರತದಲ್ಲಿ ವ್ಯಾಪಿಸಿಕೊಂಡಿತ್ತಲ್ಲದೇ ದಖನಿ ಚಿತ್ರಕಲೆಯಲ್ಲಿನ ಅನೇಕ ಪ್ರಾದೇಶಿಕ ಕಲೆಗಳಲ್ಲಿ ಒಂದಾಗಿರಿಸಿಕೊಂಡಿದೆ. ಸುಮಾರು 200 ವರ್ಷಗಳಿಗೂ ಅಧಿಕ ಕಾಲದ ಇತಿಹಾಸವನ್ನು ಹೊಂದಿರುವ ಈ ಕಲೆಯ ಕುರಿತು ಖ್ಯಾತ ಇತಿಹಾಸ ತಜ್ಞೆ ಜಯಾ ಅಪ್ಪಾಸ್ವಾಮಿಯವರು ಒಂದಿಷ್ಟು ಕೆಲಸವನ್ನು ಮಾಡಿದ್ದಾರೆ. ಅಲ್ಲದೇ ಕೆಲವೊಂದು ಗ್ರಂಥಗಳಲ್ಲಿ ಈ ಕಲೆಯ ಕುರಿತು ಪರಿಚಯಾತ್ಮಕ ಲೇಖನಗಳು ಪ್ರಕಟವಾಗಿದ್ದನ್ನು ಹೊರತುಪಡಿಸಿ ಗಂಭೀರವಾದ ಅಧ್ಯಯನಗಳು ಇದುವರೆಗೂ ನಡೆದಿರುವುದಿಲ್ಲ.

ಗಾಜಿನ ಚಿತ್ರಗಳ ಸ್ಥಿತಿ-ಗತಿ: ಕಲಾಪೋಷಕರುಗಳಿಂದ ಸಂರಕ್ಷಿಸಲ್ಪಟ್ಟ ಗಾಜಿನ ಚಿತ್ರಗಳು ಈ ನಾಡಿನಲ್ಲಿ ಸಾವಿರಾರಿವೆ. ಕೆಲವರು ಈ ಕಲಾಕೃತಿಗಳನ್ನು ತಮ್ಮ ಮನೆಯಲ್ಲಿ ಶಾಶ್ವತವಾಗಿ ಪ್ರದರ್ಶಿಸಲ್ಪಟ್ಟಿದ್ದರೆ, ಇನ್ನೂ ಕೆಲವರು ಹಬ್ಬ ಹರಿದಿನಗಳಲ್ಲಿ ಮಾತ್ರ ಅವುಗಳನ್ನು ಹೊರತೆಗೆದು ಪೂಜಿಸುತ್ತಾರೆ. ಅದೇ ರೀತಿ ಈ ಭಾಗದ ಮಠ-ಮಾನ್ಯಗಳಲ್ಲದೇ ಅನೇಕ ದೇವಾಲಯಗಳಲ್ಲಿಯೂ ಗಾಜಿನ ಕಲಾಕೃತಿಗಳು ಸಂಗ್ರಹಗೊಂಡಿದೆ. ಇಂದು ಹೆಚ್ಚಿನ ಕಲಾಕೃತಿಗಳು ಯಾವ ಸಂರಕ್ಷಣೆಯಿಲ್ಲದೇ ನಶಿಸಿ ಹೋಗುತ್ತಿವೆ. ಅದರಲ್ಲೂ ವಿಶೇಷವಾಗಿ ಈ ಚಿತ್ರಗಳಿಗಿರುವ ಚೌಕಟ್ಟುಗಳು ಕಿತ್ತುಹೋಗಿರುವುದರಿಂದಲೇ ಚಿತ್ರಗಳಿಗೆ ಹೆಚ್ಚಿನ

ಹಾನಿ ಸಂಭವಿಸುತ್ತಲಿದೆ. ಕಿತ್ತುಹೋದ ಚೌಕಟ್ಟಿನೊಳಗೆ ನೀರು ಸೇರಿಕೊಳ್ಳುವುದರಿಂದ ಚಿತ್ರಗಳಿಗೆ ಲೇಪಿಸಿದ ವರ್ಣಗಳು ಉದುರಿಹೋಗುತ್ತಿವೆ. ಹಾಗಾಗಿ ಈ ಸಾಂಪ್ರದಾಯಿಕ ನೆಲೆಯ ಗಾಜಿನ ಚಿತ್ರಗಳಿಗೆ ಮತ್ತೆ ಹೊಸ ಚೌಕಟ್ಟುಗಳನ್ನು ಹಾಕಿಸುವುದರ ಮೂಲಕ ಈ ಕಲಾಕೃತಿಗಳ ಆಯುಷ್ಯವನ್ನು ಹೆಚ್ಚಿಸಬಹುದಾಗಿದೆ. ಇದರಿಂದ ಅಳಿದುಹೋಗುತ್ತಿರುವ ಪರಂಪರೆಯೊಂದು ಉಳಿಯುತ್ತದೆ.

ಹೀಗೆ ಅತ್ಯಂತ ಪ್ರಾಚೀನ ಇತಿಹಾಸವನ್ನು ಹೊಂದಿದ ಈ ಕಲೆಯು ಇಂದಿನ ಆಧುನಿಕ ಯುಗದಲ್ಲಿಯೂ ಅನೇಕ ಬಗೆಯ ಪ್ರಯೋಗಗಳೊಂದಿಗೆ ಹೊಸ ಸ್ವರೂಪವನ್ನು ಪಡೆಯಹತ್ತಿದೆ. ದೊಡ್ಡ ದೊಡ್ಡ ಹೋಟೆಲ್ ಅಥವಾ ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿ ಅಲಂಕಾರಕ್ಕಾಗಿ (Glass Etching) ಮಾಧ್ಯಮವಾಗಿ ಈ ಕಲೆಯ ಹೆಚ್ಚು ಪ್ರಚಲಿತದಲ್ಲಿದೆ. ಮುಖ್ಯವಾಗಿ ಕಿಟಕಿ, ಬಾಗಿಲು, ಛತ್ತುಗಳಲ್ಲಿ ಗಾಜುಗಳನ್ನು ಬಳಸಿಕೊಂಡು ಅವುಗಳ ಮೇಲೆ ಚಿತ್ರ, ನಕ್ಷಾ ವಿನ್ಯಾಸಗಳನ್ನು ರಚಿಸಲಾಗುತ್ತದೆ. ಗಾಜಿನ ಚಿತ್ರಗಳ ಪ್ರಮುಖ ಲಕ್ಷಣಗಳು;

- ಐರೋಪ್ಯ ರಾಷ್ಟ್ರಗಳಿಂದ ಭಾರತಕ್ಕೆ ಆಮದಾಗಿ ಬಂದ ಗಾಜಿನ ಚಿತ್ರಕಲೆಯ ಐರೋಪ್ಯ ಕಲಾಶೈಲಿಯ ಲಕ್ಷಣಗಳೊಂದಿಗೆ ದೇಸಿ ನೆಲೆಯಲ್ಲಿಯೂ ಕಾಣಿಸಿಕೊಂಡಿದೆ.
- ಗಾಜಿನ ಮೇಲೆ ಚಿತ್ರ ರಚಿಸುವ ಕಲಾವಿದರಲ್ಲಿ ಕೆಲವರು ಕಂಪನಿ ಸರಕಾರದ ಅಧಿಕಾರಿಗಳನ್ನು ಆಶ್ರಯಿಸಿದ್ದರಿಂದ ಈ ಅಧಿಕಾರಿಗಳು ತಮ್ಮ ಚಿತ್ರಗಳಲ್ಲಿ ತಮಗಿಷ್ಟವಾದ ಸ್ಮಾರಕಗಳಲ್ಲದೆ ಪ್ರಾಣಿ, ಪಕ್ಷಿಗಳು ಹಾಗೂ ನಿಸರ್ಗವನ್ನು ತಮ್ಮ ಭಾವಚಿತ್ರದ ಹಿನ್ನಲೆಯಾಗಿ ಬರುವಂತೆ ಈ ಕಲಾವಿದರಿಂದ ಚಿತ್ರಿಸಿಕೊಂಡಿದ್ದಾರೆ. ಅಲ್ಲದೇ ಈ ಚಿತ್ರಗಳಲ್ಲಿ ಸಂಯೋಜಿಸಲಾದ ಹಿನ್ನಲೆಯ ಪರದೆ, ಟೇಬಲ್, ಗಡಿಯಾರ, ಇತ್ಯಾದಿ ಉಪಕರಣಗಳು ಐರೋಪ್ಯ ಮಾದರಿಯಲ್ಲಿವೆ.
- ದೇಸಿ ನೆಲೆಯಲ್ಲಿ ಕಾಣಿಸಿಕೊಂಡ ಗಾಜಿನ ಚಿತ್ರಗಳಲ್ಲಿ ಪೌರಾಣಿಕ ಹಾಗೂ ಧಾರ್ಮಿಕ ವಿಷಯಗಳು ಪ್ರಮುಖವಾಗಿವೆ. ಇದರಲ್ಲಿ ದೇವಾನು ದೇವತೆಗಳ ಚಿತ್ರಗಳಲ್ಲದೇ ಐತಿಹಾಸಿಕ ಘಟನೆಗಳ ಚಿತ್ರಗಳೂ ಸೇರಿವೆ.
- ಗಾಜಿನ ಹಿಂಭಾಗದಲ್ಲಿ ಚಿತ್ರಿಸಿದರೆ ಅದು ಮುನ್ನಲೆಯ ಪ್ರತಿಬಿಂಬವನ್ನು ಮೂಡಿಸುವಂತಹ ಈ ಕಲೆಯು ಚಪ್ಪಟೆಯಾಕಾರದ ವರ್ಣಲೇಪನದ ಪದ್ಧತಿಯನ್ನು ಹೊಂದಿದ್ದರೂ, ಚಿತ್ರಗಳ ಸೌಂದರ್ಯವನ್ನು ಹೆಚ್ಚಿಸಲು ತ್ರಿಮಾನದ ಕಲ್ಪನೆಯನ್ನು ಗಾಜಿನ ಚಿತ್ರಗಳ ಕಲಾವಿದರು ಅಭಿವ್ಯಕ್ತಿಸಿದ್ದು ಮೆಚ್ಚುವಂತಹುದಾಗಿದೆ.
- ಚಿತ್ರಗಳಲ್ಲಿನ ಆಕೃತಿಗಳು ಇತರೆ ಸಾಂಪ್ರದಾಯಿಕ ಚಿತ್ರಗಳಲ್ಲಿ ಕಂಡುಬರುವ ಆಕೃತಿಗಳಿಗೆ ಹೋಲದೆ ಕುಬ್ಜವಾಗಿ ಕಂಡು ಬರುತ್ತದೆ. ಆದರೂ ಈ ಕಲಾಕೃತಿಗಳಲ್ಲಿ ಮಹಾರಾಷ್ಟ್ರ ಆಂಧ್ರಪ್ರದೇಶ ಹಾಗೂ ಮೈಸೂರು ಪ್ರಾಂತಗಳ ಲಕ್ಷಣಗಳನ್ನು ಅತ್ಯಂತ ಸುಲಭವಾಗಿ ಗುರುತಿಸಬಹುದಾಗಿದೆ.
- ಭಿತ್ತಿ, ಕಾಗದ ಇಲ್ಲವೆ ಬಟ್ಟೆಗಳ ಮೇಲೆ ಚಿತ್ರ ರಚನೆ ಮಾಡುತ್ತಿದ್ದ ಸಂದರ್ಭದಲ್ಲೇ ನುಣುಪಾದ ಮೇಲ್ಮೈಯನ್ನು ಹೊಂದಿರುವ ಗಾಜಿನ ಮೇಲೆ ಚಿತ್ರ ಬಿಡಿಸುವ ನವೀನ ತಂತ್ರ ವಿಧಾನವನ್ನು ಕಲಾಪ್ರಪಂಚಕ್ಕೆ ಪರಿಚಯಿಸುವ ಗಾಜಿನ ಚಿತ್ರಗಳ ಕಲಾವಿದರ ಕುಶಲತೆಯನ್ನು ಇಲ್ಲಿ ಮೆಚ್ಚಲೇ ಬೇಕಾಗುತ್ತದೆ.

(ಎಂಸಿಬಿ)

ಗಿ

ಗಿರಿಜಾ ಧರ್ಮರಾಜ ಪೂಜಾರ್: ಕಲಾವಿದೆ ಶ್ರೀಮತಿ ಗಿರಿಜಾ ಧರ್ಮರಾಜ ಪೂಜಾರ್ ಅವರು ರಾಯಚೂರು ಜಿಲ್ಲೆಯ ಸಂಗಣ್ಣ ಚಾಪರ್ಸಕರ ಮತ್ತು ಬಸಮ್ಮ ಚಾಪರ್ಸಕರ ದಂಪತಿಗಳ ಮಗಳಾಗಿ 1964 ಏಪ್ರಿಲ್ 24 ರಂದು ಜನಿಸಿದರು. ತವರು ಮತ್ತು ಗಂಡನ ಮನೆಯಲ್ಲಿ ಕಲೆಯನ್ನು ಪೂಜ್ಯ ಭಾವನೆಯಿಂದ ಶ್ರದ್ಧಾಭಕ್ತಿಯಿಂದ ಆರಾಧಿಸುವರು. ಹಾಗಾಗಿ ಗಿರಿಜಾರವರ ಹುಟ್ಟಿದ ಮತ್ತು ಮೆಟ್ಟಿದ ಮನೆಯಲ್ಲಿ ಕಲಾವಿದೆ ರಾರಾಜಿಸುತ್ತಿದ್ದಾಳೆ. ಇವರು ಪ್ರಸ್ತುತ ಗುಲಬರ್ಗಾ ನಗರದ ಪ್ರಖ್ಯಾತ ಸಂಸ್ಥೆಯಾದ ಶ್ರೀ ಶರಣಬಸವೇಶ್ವರ ಸಂಸ್ಥೆಯ ಮಹಾದೇವಿ ಕನ್ಯಾ ಪ್ರೌಢ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ತಂದೆ ಸಂಗಣ್ಣ ಚಾಪರ್ಸ್ಕರ ಫೋಟೊಗ್ರಾಫಿ ವೃತ್ತಿಯನ್ನು ಆರಂಭಿಸಿ ಫೋಟೋ ಸ್ಟುಡಿಯೋವನ್ನು ರಾಯಚೂರಿನಲ್ಲಿ ಆರಂಭಿಸಿದ್ದರು. ಕಲೆಯ ಅಭಿರುಚಿಯು ಬಾಲ್ಯದಿಂದಲೇ ಗಿರಿಜಾ ಪೂಜಾರ್‌ರವರ ನೃತ್ಯ ಚಿತ್ರಕಲೆ, ಸಂಗೀತ ನಾಟಕ ಮುಂತಾದ ವಿದ್ಯೆಯನ್ನು ಪಡೆದುಕೊಂಡರು.



ಗುಲಬರ್ಗಾ ನಗರದಲ್ಲಿ ರೂಂ ಮಾಡಿ ತಮ್ಮ ಅಕ್ಕನೊಂದಿಗೆ ವಿದ್ಯಾಭ್ಯಾಸ ಮುಂದುವರೆಸಿ 1981 ರಲ್ಲಿ ಡಿಪ್ಲೋಮಾ ಇನ್ ಡ್ರಾಯಿಂಗ್ ಮತ್ತು ಪೇಟಿಂಗ್ ಅನ್ನು ದಿ ಐಡಿಯಲ್ ಫೈನ್ ಆರ್ಟ್ಸ್ ಕಾಲೇಜಿನಲ್ಲಿ ಮುಗಿಸಿದರು.

ಅವರು ಚಿತ್ರಕಲೆಗಳಲ್ಲಿ



ನಾಟಕದ ಒಂದು ದೃಶ್ಯದಲ್ಲಿ

ಪ್ರಮುಖವಾಗಿ ಲ್ಯಾಂಡಸ್ಕೇಪ್, ಡೆಕೊರೇಟ್ಟಿವ್, ಸ್ಟೈಲ್ ಜಾನಪದ, ಪೋರ್ಟರೇಟ್, ಲೈಫ್ ಪೇಂಟಿಂಗ್ ಪ್ರಕೃತಿ ಕಿನ್ನಾಳ ಕಲೆ, ಹೆಚ್ಚಿನ ಮಹತ್ವ ನೀಡಿ ನೋಡುವವರ ಹೃದಯಗಳನ್ನು ಸೂಜಿಗಲ್ಲಿನಂತೆ ಇಂದಿಗೂ ತಮ್ಮೆಡೆಗೆ ಸೆಳೆಯುವಂತೆ ಚಿತ್ರ ಕಲೆಯ ಸಮಾಜದ ಕೈಗನ್ನಡಿ ಸುಂದರವಾಗಿ ಚಿತ್ರಿಸಿದ ಚಿತ್ರಗಳ ಮೂಲಕ ಸಾಮಾಜಿಕ ಮೌಲ್ಯಗಳನ್ನು ಬಿಂಬಿಸುವುದಕ್ಕೆ ಬುಕ್ ಕವರ್‌ಪೇಜ್. ಗಿರಿಜಾ ಪೂಜಾರ ತಮ್ಮ ಡ್ರಾಯಿಂಗ್‌ನಲ್ಲಿ ಡಿಪ್ಲೋಮಾ ಮುಗಿಸಿದ ನಂತರ ಕಲೆಯನ್ನು ಪ್ರೀತಿಸುವ ಧರ್ಮರಾಜ ಪೂಜಾರ, ಡಿಪ್ಲೋಮಾ ಬಿ.ಎಫ್.ಎ., ಎಂ.ಎಂ. ಅವರನ್ನು ತಮ್ಮ ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡು ಕೈಹಿಡಿದು 1985ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

1981ರಲ್ಲಿ ಕಲೆಯ ಜೀವನದಲ್ಲಿ ಇನ್ನೊಂದು ತಿರುವನ್ನು ಕಂಡರು. ರಂಗ ನಾಟಕಗಳಲ್ಲಿ ಅತ್ಯುತ್ತಮ ಅಭಿನಯದಿಂದ ನೈಜ ಪಾತ್ರಗಳಿಗೆ ಜೀವ ತುಂಬಿದ ಅವರಲ್ಲಿ ಸಾಂಸ್ಕೃತಿಕ ಕಲೆ, ಚಿತ್ರಕಲೆ, ನೃತ್ಯ, ನಟನೆ, ಸಂಗೀತ ನಿರ್ದೇಶನ ನಿರ್ಮಾಪಕರಾಗಿ ಕಲೆಯ ವಿಭಿನ್ನ ರೂಪಗಳನ್ನು ಗಿರಿಜಾ ಪೂಜಾರರವರಲ್ಲಿ ಕಾಣಬಹು ದಾಗಿದೆ. ಗಿರಿಜಾ ಪೂಜಾರರವರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದವರಾಗಿದ್ದಾರೆ. ಹಾಗೆಯೇ ಹಲವು ರಂಗ ತರಬೇತಿ ಶಿಬಿರಗಳಲ್ಲಿ ಭಾಗಿಯಾಗಿ ಅಪಾರವಾದ ಜ್ಞಾನವನ್ನು ಪಡೆದವರಾಗಿದ್ದಾರೆ. ಕರ್ನಾಟಕ ದಾಂದ್ಯತ ಇವರು ಹಲವಾರು ನಾಟಕಗಳಲ್ಲಿ ಭಾಗವಹಿಸಿ ಪ್ರದರ್ಶಿಸಿದ್ದಾರೆ. ಇವರು ನಿರ್ದೇಶನ ಮಾಡಿದ ನಾಟಕ ಮತ್ತು ನೃತ್ಯ ರೂಪಕಗಳು ಕರ್ನಾಟಕದಾದ್ಯಂತ ಪ್ರದರ್ಶನಗೊಂಡು ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಮಕ್ಕಳಿಗಾಗಿ ಬೇಸಿಗೆ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ (ಆಯುಕ್ತರ ಕಛೇರಿ, ಬೆಂಗಳೂರು) ಚೈತ್ರ ಚಿಗುರು ಬೇಸಿಗೆ ಶಿಬಿರ 2000 ಮತ್ತು 2001ರಲ್ಲಿ ಸಂಗೀತ, ನೃತ್ಯಕ್ಕೆ ನಿರ್ದೇಶನ ಮಾಡಿದ್ದಾರೆ. 2000ರಲ್ಲಿ ಹುಬ್ಬಳಿಯ ಹತ್ತಿರ ಯಲ್ಲಾಪುರದಲ್ಲಿ ಬ್ರಹ್ಮಕುಮಾರಿ ಏರ್ಪಡಿಸಿದ ರಾಜ್ಯ ಮಟ್ಟದ ಶಿಬಿರಾರ್ಥಿಗಳಿಗೆ ಸಾವಿಲ್ಲದ ಮನೆಯ ಸಾಸಿವೆಕಾಳು ಮತ್ತು ತಿಂಗಳ ಯೋಗ ಶಿಬಿರ ಅಲ್ಲದೆ ನಾಟಕದ ನಿರ್ದೇಶಕರಾಗಿ ಪ್ರದರ್ಶನ ಮಾಡಿದ್ದಾರೆ.

(ಎಕೆ)

ಗಿರಿಧರ ಕೆ.ಪಿ.: ರಂಗ ಕರ್ಮಿ. ಕಲಾವಿದ ರಂಗದ ಮೇಲೆ ನಟನಾಗಿ ಮೆರೆಯಬೇಕೆಂಬ ಇಚ್ಛೆಯುಳ್ಳವರೆ ಆಗಿರುತ್ತಾರೆ. ಆದರೆ, ರಂಗದ ಹಿಂದಿನ ಈ ಮುಖ್ಯವಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ತುಂಬಾ ವಿರಳ. ಅಂಥ ವಿರಳರ ಸಾಲಿನಲ್ಲಿ ನಿಲ್ಲುವವರು ಕೆ.ಪಿ. ಗಿರಿಧರರವರು.

1959ರಲ್ಲಿ ಜನಿಸಿದರು. ಚಿಕ್ಕವರಿದ್ದಾಗಿನಿಂದಲೇ ನಾಟಕ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು. ಇವರ ತಂದೆ ಪದ್ಮನಾಭಾಚಾರ್ಯರು. ಗಿರಿಧರರವರು ಚಿಕ್ಕವರಿದ್ದಾಗ ಒಮ್ಮೆ ಪಾತ್ರ ವಹಿಸಿದ್ದರಂತೆ, ನಂತರ ಪಾತ್ರವಹಿಸಿಲ್ಲವಾದರೂ ನಾಟಕ ತಂಡಗಳೊಂದಿಗೆ ಸಂಪರ್ಕ ಬೆಳೆಸಬೇಕೆಂದು ಬಯಸಿದ್ದರಂತೆ. ಕಾಲೇಜು ವ್ಯಾಸಂಗ ಮಾಡುವಾಗ, ಅವರ ಗೆಳೆಯ ಕೇಶವ ಮೂರ್ತಿ ಕುಲಕರ್ಣಿಯವರು ಇವರನ್ನು ರಂಗಮಾಧ್ಯಮದ ನಾಟಕ ತಂಡಕ್ಕೆ ಪರಿಚಯಿಸಿದರಂತೆ.

ವಾಣಿಜ್ಯ ಶಾಸ್ತ್ರದ ಪದವೀಧರರಾದ ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸು ತ್ತಿದ್ದಾರೆ. ವೃತ್ತಿಯಲ್ಲೂ ಒಳ್ಳೆ ಹೆಸರನ್ನು ಪಡೆದಿರುವ ಗಿರಿಧರ ವರು, ತಮ್ಮ ಪ್ರವೃತ್ತಿಯಿಂದ ರಂಗಭೂಮಿಯಲ್ಲಿಯೂ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾರೆ. ನಾಟಕದ ಜೊತೆಗೆ ಇವರು ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಇವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಸಂಗಮೇಶ್ವರ ಮಹಿಳಾ ಮಂಡಲಿ ತನ್ನ ಬೆಳ್ಳಿಹಬ್ಬದ ಆಚರಣೆ ಸಂದರ್ಭದಲ್ಲಿ ಇವರನ್ನು ಸನ್ಮಾನಿಸಿದೆ. ರಂಗಮಾಧ್ಯಮದ ನಂಟು ಬೆಳೆಸಿದ ನಂತರ ಅಲ್ಲಿಯ ಎಲ್ಲಾ ಸದಸ್ಯರೊಂದಿಗಿನ ಇವರ ಬಾಂಧವ್ಯ ತುಂಬಾ ಆತ್ಮೀಯವಾಗಿದೆ.

ಇವರು ನಟಿಸಿದ ನಾಟಕಗಳ ಸಂಖ್ಯೆ ಇಪ್ಪತ್ತಕ್ಕೂ ಮೇಲ್ಪಟ್ಟಿವೆ. ರಂಗಮಾಧ್ಯಮದ ನಾಟಕಗಳಲ್ಲದೆ ಬೇರೆ ನಾಟಕ ಗಳಲ್ಲೂ ಭಾಗವಹಿಸಿದ್ದಾರೆ. ಕೆ.ಎಸ್. ರಾಜನಂದಿ ನಿರ್ದೇಶನದ ಕೆಲ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಂಗಮಾಧ್ಯಮದ ತಂಡ ದೊಂದಿಗೆ ಅನೇಕ ಊರುಗಳನ್ನು ಸುತ್ತಿದ್ದಾರೆ. ದೂರದ ಚೆನ್ನೈಗೆ ಹೋಗಿದ್ದಾರೆ. ಇತ್ತೀಚೆಗೆ ಶೋಭಾ ರಂಜೋಳಕರ ಅವರ ನಿರ್ದೇಶನದಲ್ಲಿ ಮೂಡಿಬಂದ ಖರೋ-ಖರ ನಾಟಕದಲ್ಲಿ ಇವರ ಪೊಲೀಸ ಪಾತ್ರ ನೋಡಿದ ಪ್ರೇಕ್ಷಕರು, ಇವರ ನಟನೆ ಯನ್ನು ಮರೆಯಲಾರರು. ಅದೇ ರೀತಿ ಕಲಬುರ್ಗಿ ದೂರ ದರ್ಶನದಲ್ಲಿ ಶಿವಾನಂದ ಬೇಕಲ್ ಅವರ ನಿರ್ದೇಶನದಲ್ಲಿ ಮೂಡಿಬಂದ ಅಳಿಯನ ಅವಾಂತರದಲ್ಲಿ ಇವರು ವಹಿಸಿದ

ಭಿಕ್ಷುಕನ ಪಾತ್ರ ಮರೆಯಲಾರದಂಥದ್ದು. ದೂರದರ್ಶನದ ಕೆಲ ನಾಟಕಗಳಲ್ಲಿ ಅಭಿನಯಿಸಿರುವ ಗಿರಿಧರ ಅವರು ಆಕಾಶ ವಾಣಿಯ ಅನೇಕ ನಾಟಕಗಳಲ್ಲಿಯೂ ಭಾಗವಹಿಸಿದ್ದಾರೆ. ಇವರು ಅನೇಕ ನಾಟಕಗಳಿಗೆ ಬೆಳಕಿನ ಸಂಯೋಜನೆ ಮಾಡಿದ್ದಾರೆ. ರಂಗಮಾಧ್ಯಮದ ನಾಟಕಗಳ ಬೆಳಕಿನ ವ್ಯವಸ್ಥೆಗಾಗಿ ವಿಜಾಪುರದಿಂದ ಯೋಗೇಂದ್ರಸಿಂಗರವರು ಬರುತ್ತಾ ಇದ್ದರು. ಅವರ ಸಹಾಯಕರಾಗಿ ಗಿರಿಧರರವರು ಕಾರ್ಯ ನಿರ್ವಹಿಸುತ್ತಿದ್ದುದರಿಂದ, ಬೆಳಕಿನ ವ್ಯವಸ್ಥೆ ಮಾಡುವುದರಲ್ಲಿ ಪರಿಣಿತರು. ಇವರು ರಂಗದ ಹಿಂದೆ ನಿಂತು ಪಾತ್ರಗಳಿಗೆ ಪ್ರಾಂಪ್ಟ ಮಾಡುತ್ತಾರೆ. ಕಲಾವಿದ ಮುಖಕ್ಕೆ ಒಮ್ಮೊಮ್ಮೆ ಬಣ್ಣ ಹಚ್ಚುತ್ತಾರೆ.

(ಜಿಕೆಇ)

ಗೀ

ಗೀತಾಂಜಲಿ ಬೀದಿಮನಿ: ಚಿತ್ರ ಕಲಾವಿದೆ. ತಂದೆ ಗುಲ್ಬರ್ಗಾದ ಶಿವಾನಂದ ಬೀದಿಮನಿ ತಾಯಿ ಕಮಲಮ್ಮ. ಚಿಕ್ಕಂದಿನಿಂದಲೇ ಚಿತ್ರಕಲೆಯತ್ತ ಅಪಾರ ಆಸಕ್ತಿಯನ್ನು ವಹಿಸಿದ್ದರು. ಮಗಳ ಆಸಕ್ತಿಗೆ ಪೂರಕವಾಗಿ ತಂದೆ ಇವರಿಗೆ ಚಿತ್ರಕಲೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸುವುದಕ್ಕೆ ಪ್ರೇರಣೆ ನೀಡಿದರು. ಇದರ ಫಲವಾಗಿಯೇ ಗೀತಾಂಜಲಿಯವರು 1999ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಈಗ ಚಂದ್ರಕಾಂತ ಪಾಟೀಲ್ ಆಂಗ್ಲ್ ಮಾಧ್ಯಮ ಶಾಲೆಯಲ್ಲಿ ಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ತಮ್ಮ ಕೃತಿಗಳಲ್ಲಿ ಹೆಣ್ಣಿನ ನೋವು, ನಲಿವು ಬಡತನ, ಮುಪ್ಪು, ಮುಂತಾದ ಭಾವನೆಗಳನ್ನು ಬಣ್ಣದ ಭಾಷೆಯ ಮೂಲಕ ಹೇಳಲು ಪ್ರಯತ್ನಿಸುತ್ತಾರೆ. ಇವರ ಹೆಚ್ಚು ಕೃತಿಗಳು ಸ್ತ್ರೀ ಸಂವೇದನೆಯ ಹಸಿ ಹಸಿ ಚಿತ್ರಣದಿಂದಾಗಿ ಮನ ಕಲಕುತ್ತವೆ. ಬಣ್ಣದ ಬಳಕೆಯಿಂದ ಮೂಡಿಸುವ ವಿಸ್ತಾರ. ಆಳಗಳು, ಹೆಣ್ತನದ ವರ್ತಮಾನದ ಸ್ವಭಾವಗಳನ್ನು ಬಿಂಬಿಸುವ ಗುಣ ಮತ್ತು ಪರಿಣಾಮದ ಮೊತ್ತ ಎಲ್ಲವೂ ಅವರ ಕೃತಿಗಳಲ್ಲಿ ಅಡಕವಾಗಿವೆ. ಸಾಂಪ್ರದಾಯಿಕ ಕಲೆಯಲ್ಲಿಯೂ ಆಸಕ್ತಿಯಿರುವ ಇವರು ಚಿಕಣಿ ಕಲೆ, ಹಾಗೂ ಕಾಂಗ್ರಾ, ರಾಜಸ್ಥಾನಿ ಶೈಲಿಯಲ್ಲಿಯೂ ಕಲಾಕೃತಿಗಳನ್ನು ರಚಿಸಿದ್ದಾರೆ. ಈ ಕಲಾಕೃತಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸುವ ನೈಪುಣ್ಯತೆ ಎದ್ದು ಕಾಣುತ್ತದೆ.

ಈಗಾಗಲೇ ಗುಲ್ಬರ್ಗ, ಬೀದರ್, ಬಿಜಾಪುರ, ಬೆಂಗಳೂರು, ಮುಂತಾದ ಕಡೆಗಳಲ್ಲಿ ಸಮೂಹ ಚಿತ್ರಕಲಾ ಪ್ರದರ್ಶನವನ್ನು ನಡೆಸಿದ ಗೀತಾಂಜಲಿಯವರು ಚಿತ್ರಕಲಾ ಪ್ರದರ್ಶನ ಮತ್ತು ಚಿತ್ರಕಲಾ ಶಿಬಿರಗಳಲ್ಲಿ ಕಲಾಕೃತಿಗಳನ್ನು ರಚಿಸುವ ಮೂಲಕ ಹಿರಿಯ ಕಲಾವಿದರಿಂದ ಮೆಚ್ಚುಗೆಯನ್ನು ಪಡೆದಿದ್ದಾರೆ.

1995–96ರಲ್ಲಿ ಚೆನ್ನೈನಲ್ಲಿ ನಡೆದ ಅಂತರ್ ವಿಶ್ವವಿದ್ಯಾಲಯಗಳ ಕಲಾ ಪ್ರದರ್ಶನ. 1999ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಯುವಜನೋತ್ಸವ ಕಲಾ ಪ್ರದರ್ಶನ, 2002–03ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ 5ನೇ ಅಖಿಲ ಭಾರತ ಕಲಾ ಪ್ರದರ್ಶನ, ಮುಂತಾದವುಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಕಲಾ ಸಾಧನೆಯ ಪುಟ್ಟ ಪುಟ್ಟ ಹೆಜ್ಜೆಯಿಡುತ್ತಾ ನಡೆದಿದ್ದಾರೆ.

(ಎಜಿಕೆ)

ಗು



ಗುಂಡಭಟ್ ಜೋಶಿ: ಕಲಬುರ್ಗಿ ಜಿಲ್ಲೆಯ ಸಂಗೀತ ವಿದ್ವಾಂಸ. ಸಂಗೀತ ಮನೋರಂಜನೆಗಿಂತ ದೈವೀ ಸಾಕ್ಷಾತ್ಕಾರಕ್ಕಾಗಿ ಎಂದು ತಿಳಿದು, ನಿರಂತರ ಸಾಧನೆ ಮಾಡುತ್ತಿರುವ ಸಂಗೀತ ಕ್ಷೇತ್ರದ ಸಂತರಂತೆ ಜೀವನ ನಡೆಸುತ್ತಿರುವ ಅನೇಕ ವಿದ್ವಾಂಸರಲ್ಲಿ ಒಬ್ಬರು.

ಪಂ. ಗುಂಡಭಟ್ ಜೋಶಿಯವರು ತಮ್ಮ ಪಾಡಿಗೆ ತಾವು ಸಂಗೀತ ದೇವಿಯ ಉಪಾಸನೆಯಲ್ಲೇ ಜೀವನ ನಡೆಸುತ್ತಿರುವ ಸರಳ, ಸಜ್ಜನ ವ್ಯಕ್ತಿತ್ವ ಹೊಂದಿರುವ ಅಪರೂಪದ ಕಲಾವಿದರು. 1933ರಲ್ಲಿ ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅರಣಕಲ್ ಗ್ರಾಮದ ವೈದಿಕ ಬ್ರಾಹ್ಮಣ ಮನೆತನದಲ್ಲಿ ಜನಿಸಿದರು. ತಂದೆ ಶೇಷಭಟ್ಟ ಜೋಶಿ ತಾಯಿ ಪ್ರಯಾಗ ಬಾಯಿ. ತಂದೆಯ ಸ್ನೇಹಿತರಾದ ಪಂ. ನರಹರಿಭಟ್ ಜೋಶಿ (ಇವರು ಮಾಣಿಕ ನಗರದ ಸಂಸ್ಥಾನದ ದರ್ಬಾರ ಗಾಯಕರು. ಇವರು ಆರಣಕಲ್ಲಿನಲ್ಲಿಯೇ ವಾಸವಾಗಿದ್ದರು) ಅವರ ಹತ್ತಿರ ತಮ್ಮ ಸಂಗೀತ ಪಾಠ ಪ್ರಾರಂಭಿಸಿದರು.

ನರಹರಿಭಟ್ ಜೋಶಿಯವರು ದಕ್ಷಿಣಾದಿ ಮತ್ತು ಉತ್ತರಾದಿ ಎರಡು ಶೈಲಿಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಜೋಶಿಯವರಿಗೆ ಮೊದಲು ದಕ್ಷಿಣಾದಿ ಶೈಲಿಯಲ್ಲಿ ಅಲಂಕಾರ ಸ್ವರಗಳನ್ನು ಹಾಗೂ ಕರ್ನಾಟಕ ಸಂಗೀತದ 8–10 ತಾಳದ

ಮಾಹಿತಿಗಳ ಜೊತೆಗೆ ಹಾರ್ಮೋನಿಯಂ ನುಡಿಸಲೂ ತರಬೇತಿ ನೀಡುತ್ತ, ಶಾಸ್ತ್ರೀಯ ಗಾಯನದಲ್ಲಿ ರಾಗ ಭೂಪಾಲದೊಂದಿಗೆ ಶಾಸ್ತ್ರೀಯ ವಿದ್ಯೆಯನ್ನು ಪ್ರಾರಂಭಿಸಿದರು.

ನಿತ್ಯ ಮೂರ್ನಾಲ್ಕು ತಾಸುಗಳ ರಿಹಾಜ್, ಸುಮಾರು 3 ವರ್ಷಗಳ ಕಾಲ ತರಬೇತಿ ನೀಡಿ, ಮುಂದೆ ಸ್ವತಃ ಗುರುಗಳೇ, ಗುಂಡಭಟ್ಟರಿಗೆ ಇನ್ನು ನೀನು ಹೆಚ್ಚಿನ ಅಭ್ಯಾಸಕ್ಕೆ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಹೋಗು ಎಂದು ಸೂಚಿಸಿದರು. ಅದರಂತೆ ಜೋಶಿಯವರ ತಂದೆಯ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಕಳಿಸಿದರು. ಅಲ್ಲಿ ಪಂ. ಪುಟ್ಟರಾಜ ಗವಾಯಿಗಳ ಸಮ್ಮುಖದಲ್ಲಿ ಗುಂಡಭಟ್ ಇವರು ಸುಮಾರು 10-15 ವರ್ಷಗಳ ಕಾಲ ಸಂಗೀತ ಸಾಧನೆಯನ್ನು ನಡೆಸಿದರು.

ಸಂಗೀತ ಸಾಧನೆ ಮಾಡುವಾಗ ನಮ್ಮ ಸುತ್ತಲಿನ ವಾತಾವರಣ, ಸ್ನೇಹಿತರು ಕೂಡ ಸಂಗೀತಾಸಕ್ತರು ಅಥವಾ ಸಂಗೀತಗಾರರೇ ಆಗಿದ್ದಲ್ಲಿ ಇನ್ನು ಹೆಚ್ಚಿನ ಪಾಂಡಿತ್ಯ ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಇವರಿಗೆ ಸ್ನೇಹಿತರಾಗಿ ದೊರೆತವರು ಸಂಗೀತದ ವಿದ್ವಾಂಸರೇ ಹೆಚ್ಚು. ಅವರಲ್ಲಿ ಮುಖ್ಯವಾಗಿ ಪಂ.ಕೆ.ಎಸ್. ಹಡಪದ್, ಪಂಚಾಕ್ಷರಿ ಅವರಲ್ಲಿ ಮುಖ್ಯವಾಗಿ ಪಂ.ಕೆ.ಎಸ್. ಹಡಪದ್, ಪಂಚಾಕ್ಷರಿ ಮತ್ತಿಗಟ್ಟಿ, ಪಂ. ಸಿದ್ದರಾಮ ಜಂಬಲದಿನ್ನಿ, ಧುತ್ತರಗಾಂವ್‌ದ ಪಂ. ಚನ್ನಬಸವಾರ್ಯ, ಪಂ. ದೊಡ್ಡಬಸವಾರ್ಯ ಜಾಲಿ ಬೆಂಚಿ, ಪಂ. ಎಲ್ಲಪ್ಪ ಅಮರಗೋಳ್ ಅವರಂತಹ ವ್ಯಕ್ತಿಗಳ ಜೊತೆಗೆ ಬೆಳೆದ ಜೋಶಿಯವರಿಗೆ ಬೆಳಗಿನಿಂದ ಸಂಜೆಯವರೆಗೂ ಕೇವಲ ಸಂಗೀತವೇ ಮಾತು, ಸಂಗೀತವೇ ಧ್ಯಾನ. ಈ ಎಲ್ಲ ಕಾರಣಗಳಿಂದಾಗಿ ಅವರು ಇಂದು ಸಂಗೀತ ಕ್ಷೇತ್ರದಲ್ಲಿ ಗುರುತಿಸುವಂಥ ಕಲಾವಿದರಾಗಲು ಸಾಧ್ಯವಾಯಿತು.

ರಂಗಭೂಮಿ ಸೇವೆ: ಒಂದು ಕಾಲದಲ್ಲಿ ರಂಗಭೂಮಿಗೆ ವಿಶೇಷ ಜನಮನ್ನಣೆ ಇತ್ತು. ಆ ಕಾರಣಕ್ಕಾಗಿ ಜೋಶಿಯವರು ಆಶ್ರಮದಲ್ಲಿರುವಾಗಲೇ, ಗುರುಗಳ ಕಂಪನಿಯಲ್ಲಿ 3 ವರ್ಷಗಳ ಕಾಲ ಹಾರ್ಮೋನಿಯಂ ವಾದಕರಾಗಿ ಸೇವೆ ಸಲ್ಲಿಸಿದರು. ಜೊತೆಗೆ ನಾಟಕಗಳ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡುತ್ತಿದ್ದರು. ಆಗಿನ ನಾಟಕಗಳ ಎಲ್ಲ ಹಾಡುಗಳೂ ಶಾಸ್ತ್ರೀಯ ಸಂಗೀತ ಆಧಾರವಾಗಿಯೇ ಹಾಡುವ ಸಂಪ್ರದಾಯವಿತ್ತು.

ಮುಂದೆ ಇಳಕಲ್ ಮಹಾಂತೇಶ್ವರಸ್ವಾಮಿ ಮಠದಲ್ಲಿ ಸಂಗೀತ ಶಿಕ್ಷಕರೆಂದು ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ, ಕಂದಗೋಳ್ ಹಣಮಂತರಾಯರ ನಾಟಕ ಕಂಪನಿಯಲ್ಲಿ ಒಂದು ವರ್ಷ ನಾಟಕದ ಹಾಡುಗಳ ಸಂಯೋಜನಿಕರೆಂದು ಸೇವೆಸಲ್ಲಿಸಿದರು. ಜೊತೆಗೆ ಸುಮಾರು ಐದು ತಿಂಗಳು ಬಿಜಾಪುರದಲ್ಲಿಯೂ ಸಂಗೀತ ನಿರ್ದೇಶಕರೆಂದು ನಾಟಕ ಕಂಪನಿಯಲ್ಲಿ ಸೇವೆ ಸಲ್ಲಿಸಿದರು.

ಹೈದ್ರಾಬಾದ ಯಾತ್ರೆ: ನಾಟಕ ಕಂಪನಿಯಲ್ಲಿ ಹಾರ್ಮೋನಿಯಂ ನುಡಿಸುವುದು, ಹಾಡುವುದು, ಎಲ್ಲವನ್ನೂ ಕಂಡ ಜೋಶಿಯವರಿಗೆ, ಸಂಗೀತ ಕ್ಷೇತ್ರದಲ್ಲಿ ತಾನು ಸಾಧಿಸುವುದು ಇಷ್ಟೆಯೇ? ಎಂಬ ಪ್ರಶ್ನೆಯು ಕಾಡಿತು. ಆಗ ತಮ್ಮದೇ ಆದ ಒಂದು ಗಾಯನ ಶೈಲಿಯ ಜೊತೆಗೆ ಶ್ರೇಷ್ಠ ಗಾಯಕನಾಗ ಬೇಕು ಎಂಬ ಕಾರಣಕ್ಕಾಗಿ, ಈ ಎಲ್ಲ ಕೆಲಸಗಳನ್ನು ಬದಿಗಿಟ್ಟು, ಕೇವಲ ಸಂಗೀತ ಸಾಧನೆ ಮಾಡಬೇಕೆಂಬ ಕಾರಣಕ್ಕಾಗಿ ತಮ್ಮ 25ನೆಯ ವಯಸ್ಸಿನಲ್ಲಿ ಹೈದ್ರಾಬಾದಿಗೆ ಬಂದು, ಪಂ. ಬಾಬುಸಿಂಗ್ ಎಂಬ ವಿದ್ವಾಂಸರ ಬಳಿ ಸಂಗೀತ ಅಭ್ಯಾಸ ಪಡೆಯಲು ಆರಂಭಿಸಿದರು.

ಪಂ. ಬಾಬುಸಿಂಗ್ ಅವರಿಗೆ ಮಕ್ಕಳಿರಲಿಲ್ಲ. ಆ ಕಾರಣಕ್ಕಾಗಿ ಶಿಷ್ಯರನ್ನೇ ತಮ್ಮ ಸ್ವಂತ ಮಕ್ಕಳಂತೆ ಪ್ರೀತಿಸುತ್ತಿದ್ದರು. ಅದರಂತೆ ವಿದ್ಯೆಯನ್ನು ಕೂಡ ಧಾರೆಯೆರೆಯುತ್ತಿದ್ದರು. ಎಲ್ಲ ಕಾರ್ಯಕ್ರಮಗಳಿಗೆ ಜೋಶಿಯವರನ್ನು ತಂಬೂರಿ ಸಾಥ ನೀಡಲು ಕರೆದು ಕೊಂಡು ಹೋಗುತ್ತಿದ್ದರು. ಕಾರ್ಯಕ್ರಮ ನಡೆಯುವಾಗ ಗ್ವಾಲಿಯರ್ ಘರಾಣೆಯ ವೈಶಿಷ್ಟ್ಯತೆ, ಸ್ವರಹಚ್ಚುವ ಪದ್ಧತಿ, ತರತರಹದ ತಾನ್‌ಗಳು, ಲಯದೊಂದಿಗೆ, ಲಯಕಾರಿ ಮಾಡುವುದು, ಮಂದ್ರ, ಮಧ್ಯ, ತಾರ ಮೂರು ಸಪ್ತಕಗಳಲ್ಲಿ ಗಾಯಕರಾದವರು, ರಾಗ ವಿಸ್ತಾರ ಮಾಡುವ ಪದ್ಧತಿ ಈ ಎಲ್ಲಾ ಅಂಶಗಳನ್ನು ಶಿಷ್ಯರಿಗೆ ಪ್ರಾಯೋಗಿಕವಾಗಿ ತರಬೇತಿ ನೀಡುತ್ತಿದ್ದರು.

ಸಂಗೀತ ಯಾತ್ರೆ: ಪಂ. ಗುಂಡ ಭಟ್ ಜೋಶಿಯವರ ತಮ್ಮ ಮೊದಲನೆಯ ಕಾರ್ಯಕ್ರಮವನ್ನು 15ನೇ ಆಗಸ್ಟದಂದು ಸಿಕಂದ್ರಾಬಾದನಲ್ಲಿ ರಾಗ ಛಾಯಾನಾಟ್‌ದೊಂದಿಗೆ ನೀಡಲು ಪ್ರಾರಂಭಿಸಿದರು. ವಿಲಂಬಿತ ಏಕತಾಳದಲ್ಲಿ ಪ್ರಾರಂಭಿಸಿದ ರಾಗದ ಚೀಜ್ 'ಏರಿ ಆಬ ಗುಂದಲಾವೋ', ದೃತ್ ತೀನ ತಾಳದಲ್ಲಿ 'ಪ್ಯಾರೆ ನವಲಿ ಲಾಡಲಿ ರಾಧಿಕಾ' ಎಂಬ ಶಾಸ್ತ್ರೀಯ ಗಾಯನದೊಂದಿಗೆ ಪ್ರಾರಂಭಿಸಿದ ನಂತರ ಹಿಂದಿಯಲ್ಲಿ ಭಜನ, ಠುಮ್ರಿ ಹಾಡಿ ಕೊನೆಗೆ ಭೈರವಿಯೊಂದಿಗೆ ಮುಗಿಸಿದರಂತೆ.

ಇದರೊಂದಿಗೆ ಪ್ರಾರಂಭವಾದ ಸಂಗೀತ ಯಾತ್ರೆ, ಮುಂದೆ ಹೈದ್ರಾಬಾದ, ಸಿಕಂದ್ರಾಬಾದ, ಗದಗ, ಬೀದರ, ಮಾಣಿಕನಗರ, ಜಹೀರಾಬಾದ, ಬೆಂಗಳೂರು, ಕಲಬುರ್ಗಿ, ಗಾಣಗಾಪೂರ, ರಾಯಚೂರು ಇನ್ನೂ ಅನೇಕ ನಗರಗಳಲ್ಲಿ ಇವರು ಯಶಸ್ವಿ ಸಂಗೀತ ಕಾರ್ಯಕ್ರಮಗಳನ್ನು ನೀಡುವ ಮೂಲಕ ಶ್ರೋತೃಗಳ ಹೃದಯ ಗೆದ್ದರು. ಇವರು ಗಾಯನದ ಜೊತೆಗೆ ಹಾರ್ಮೋನಿಯಂ ನುಡಿಸುವಲ್ಲಿಯೂ ಕೂಡ ಅಷ್ಟೇ ಪಾಂಡಿತ್ಯ ಹೊಂದಿದ್ದರಿಂದ ಪ್ರಸಿದ್ಧ ಗಾಯಕರಾದ ಪಂ. ಭೀಮಸೇನ ಜೋಶಿ, ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು, ಪಂ. ಸಿದ್ದರಾಮ ಜಂಬಲದಿನ್ನಿ, ಪಂ ಮಾಧವ ಗುಡಿ, ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಬಿ.ಎ. ಕಾಗಲ್‌ಕರ್, ಪಂ. ವಿನಾಯಕ ತೊರವಿ ಇನ್ನೂ ಅನೇಕ ವಿದ್ವಾಂಸರಿಗೆ ಹಾರ್ಮೋನಿಯಂ ಸಾಥ ಕೂಡ ನೀಡಿದ್ದಾರೆ.

ತಬಲಾ ಸಾಮ್ರಾಟ ಪಂ. ಉಸ್ತಾದ ಶೇಖದಾಹುದ ಖಾನ ಸಾಹೇಬರಿಗೆ ತಬಲಾ ಸೋಲೋ ಸಂದರ್ಭದಲ್ಲಿ ಹಾರ್ಮೋನಿಯಂ ಕೂಡ ಗುಂಡಭಟ್ಟ ಜೋಶಿಯವರು ನುಡಿಸುತ್ತಿದ್ದರು.


ಪರಮ ಸದ್ಗುರು ದತ್ತಾ ಎಂಬ ದಾಸವಾಣಿಯ ಧ್ವನಿಸುರುಳಿಯನ್ನು ಹೊರತಂದಿದ್ದಾರೆ. ಜೊತೆಗೆ ಈ ಧ್ವನಿಸುರುಳಿಯಲ್ಲಿ ಎರಡು ಗೀತೆಗಳ ಸಾಹಿತ್ಯ ರಚಿಸುವ ಮೂಲಕ ಪಾಂಡಿತ್ಯಕ್ಕೆ ಪ್ರಮಾಣ ಪತ್ರ ಮುಖ್ಯವಲ್ಲ, ಅನುಭವ ಎಂದು ಹೇಳುತ್ತಾರೆ. ಏಕೆಂದರೆ ಜೋಶಿಯವರು ಓದಿದ್ದು ಕೇವಲ 3ನೆಯ ಇಯತ್ತೆ ಅಥವಾ ನಾಲ್ಕನೇ ತರಗತಿ ಅದು ಮರಾಠಿಯಲ್ಲಿ.

ಬೆಂಗಳೂರು ಆಕಾಶವಾಣಿ ಕೇಂದ್ರದ 'ಬಿ' ಗ್ರೇಡ ಶ್ರೇಣಿಯ ಶಾಸ್ತ್ರೀಯ ಸಂಗೀತ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿದ್ದಾರೆ. ಜೊತೆಗೆ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತ ವಿಶಾರದ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದು, ತಮ್ಮ ಇಳಿ ವಯಸ್ಸಿನಲ್ಲಿಯೂ ಶಿಷ್ಯರಿಗೆ ವಿದ್ಯಾದಾನ ಮಾಡುವ ಮೂಲಕ ಸಂಗೀತ ಕ್ಷೇತ್ರಕ್ಕೆ ಅನೇಕ ಶಿಷ್ಯರನ್ನು ನೀಡಿದ್ದಾರೆ.

ಪತ್ನಿ ತುಳಸಾಬಾಯಿ ಜೋಶಿ ಕೂಡ ಸಂಗೀತಗಾರತಿ. ಈ ವಯಸ್ಸಿನಲ್ಲಿಯೂ ನನಗೆ ಸಂಗೀತ ಸಾಧನೆಗೆ ಇವರು ಪತಿಗೆ ಪ್ರೇರಣೆ ನೀಡುತ್ತಾರೆ. ಆದರೆ ಈಗ ಇವರು ಹಾಡುವುದೆಲ್ಲ ಆ ದತ್ತ ದಿಗಂಬರರಿಗೆ ಅರ್ಪಣೆ. ಆ ಮಾಣಿಕ ನಗರದ ಪ್ರಭುವಿಗೆ ಅರ್ಪಣೆ ಎಂದು ಹೃದಯ ತುಂಬಿ ಹೇಳುತ್ತಾರೆ.

ಈ ಕಲಾವಿದನ ಪಾಂಡಿತ್ಯಕ್ಕೆ ಭಾರತೀಯ ಸಂಗೀತ ವಿದ್ಯಾಲಯ ಕಲಬುರ್ಗಿ, ಹಂಸಧ್ವನಿ ಕಲಾ ನಿಕೇತನ ಕಲಬುರ್ಗಿ, ಸ್ವರ ಸಾಧನ ಸಂಗೀತ ಸಂಸ್ಥೆಗಳು ಸನ್ಮಾನಿಸಿವೆ. ಜೊತೆಗೆ ಕರ್ನಾಟಕ ಸಂಗೀತ ಅಕಾಡೆಮಿಯವತಿಯಿಂದ ಈ ಹಿರಿಯ ಕಲಾವಿದರಿಗೆ ಮಾಸಾಶನ ನೀಡುತ್ತಿದೆ. (ಎಂಬಿ)


ಗುಂಬಜಗಳು: ಐತಿಹಾಸಿಕ ಸ್ಮಾರಕಗಳು. ಕೋಟೆಕೊತ್ತಲಗಳು, ದೇವಸ್ಥಾನದ ಶಿಲ್ಪಕಲಾ ವೈಭವಕ್ಕೇನೂ ಕಲಬುರ್ಗಿ ಜಿಲ್ಲೆಯಲ್ಲಿ ಕೊರತೆಯಿಲ್ಲ. ಹಿಂದೆ ಕಲೆ ಮತ್ತು ಸಂಸ್ಕೃತಿ ಹಾಗೂ ಸಿರಿ ಸಂಪತ್ತಿನಿಂದ ಅತ್ಯಂತ ವೈಭವದಿಂದ ಮೆರೆದ ಈ ನಾಡಿನಲ್ಲಿ ಇಂದು ಆ ವೈಭವದ ಸ್ಮಾರಕಗಳು ಎಲ್ಲರ ಕಣ್ಣೆದುರಲ್ಲೇ ಹಾಳಾಗಿ ಹೋಗುತ್ತಿವೆ. ಕಲಬುರ್ಗಿ ನಗರದ ಮಧ್ಯದಲ್ಲಿ ಕಂಗೊಳಿಸುವ 13ನೆಯ ಶತಮಾನದ ಭವ್ಯವಾದ ಹಸನ್ ಗಂಗೂ ಬಹಮನಿ ಅರಸರು ನಿರ್ಮಿಸಿದ ಎರಡು ಸುತ್ತಿನ ಕೋಟೆ, ಕೋಟೆಯೊಳಗೆ ವಿಶ್ವ ವಿಖ್ಯಾತವಾದ ಸ್ಪೇನ್ ಮಾದರಿಯ ಜಾಮಿ ಮಸೀದೆ,



ಶೋರ್ ಗುಂಬಜ – ಗುಲಬರ್ಗಾ

ಈಶ್ವರ ದೇವಾಲಯದ ಶಿಲ್ಪಕಲಾಕೃತಿಗಳು ಹಾಗೂ ಬೃಹದಾಕಾರದ ಬತೇರಿ, ಅದರ ಮೇಲೆ ಉಕ್ಕಿನ ಬೃಹತ್ ತೋಪುಗಳು, ಕೋಟೆಗೆ ಮುಳ್ಳು ಬಾಗಿಲುಗಳು, ಕೋಟೆ ಇವೆಲ್ಲ ಈಗ ಅವಶೇಷಗಳು. ಇದೇ ಕಾಲದಲ್ಲಿ ನಿರ್ಮಿಸಲಾಗಿರುವ ಗುಂಬಜಗಳಂತೂ ನಗರದ ತುಂಬೆಲ್ಲ ಇವೆ. ಜಿಲ್ಲೆಯ ಬಹುತೇಕ ಗ್ರಾಮ ಹಾಗೂ ಪಟ್ಟಣಗಳಲ್ಲಿ ಇಂಥ ಗುಂಬಜಗಳನ್ನು ಕಾಣಬಹುದು. ಅವುಗಳ ಬಾಗಿಲಿಗೆ ರಕ್ಷಿತ ಸ್ಮಾರಕ ಎಂಬ ಫಲಕದ ಹೊರತಾಗಿ, ಯಾವುದೇ ಗುಂಬಜಗಳೂ ಇಂದು ಸುರಕ್ಷಿತವಾಗಿ ಉಳಿದಿಲ್ಲ.


ನಗರದ ರೋಜಾ ಬಡಾವಣೆಗೆ ಹೋಗುವ ದಾರಿಯಲ್ಲಿ ಏಳು ಗುಂಬಜಗಳ ಸಮುಚ್ಚಯ ಒಂದೇ ಕಡೆ ಇದ್ದು, ಇದನ್ನು ಸಾತ ಗುಂಬಜ ಎಂದು ಕರೆಯಲಾಗುತ್ತದೆ. ಇವುಗಳ ಪಕ್ಕದಲ್ಲೇ ಗುಂಬಜಗಳಿಗೆ ಹೊಂದಿಕೊಂಡಂತೆಯೇ ಅಕ್ರಮ ಕಟ್ಟಡಗಳು, ವಾಣಿಜ್ಯ ಸಂಕೀರ್ಣ, ಖಾಸಗಿ ಶಾಲಾ ಕಟ್ಟಡ ಮುಂತಾದವುಗಳು ತಲೆ ಎತ್ತಿವೆ. ಕೆಲವೊಂದು ಗುಂಬಜಗಳಲ್ಲಿ ಇತ್ತೀಚೆಗೆ ಯಾರದೋ ಹೆಸರಿನ ಸಮಾಧಿ ನಿರ್ಮಿಸಿ, ಅವುಗಳನ್ನು ದರ್ಗಾ ಎಂದು ಹೇಳಿಕೊಂಡು ಈ ಐತಿಹಾಸಿಕ ಸ್ಮಾರಕಗಳನ್ನು ವಶಪಡಿಸಿಕೊಂಡಿರುವ ಘಟನೆಗಳೂ ನಡೆಯುತ್ತಿವೆ. ಇದಲ್ಲದೇ ಚೋರಗುಂಬಜ್, ಬಡೆಗುಂಬಜ್, ಮದರಸಾಗುಂಬಜ್, ಶೋರಗುಂಬಜ್, ನವಾಜ್‌ಗುಂಬಜ್, ಶೇಖಗುಂಬಜ್ ಸೇರಿದಂತೆ ನಗರ ಸುತ್ತಲೂ ಸುಮಾರು 19 ಗುಂಬಜಗಳಿರುವುದನ್ನು ಕಾಣಬಹುದಾಗಿದೆ. ಈ ಗುಂಬಜಗಳು ಎಷ್ಟು ಭದ್ರವಾಗಿವೆ ಎಂದರೆ, ಇವುಗಳ ಗೋಡೆಗಳಿಗೆ ಬಳಿದ ಗಾರೆಯನ್ನು ಕಿತ್ತಲು ಸಾಧ್ಯವಾಗುವುದಿಲ್ಲ. ಇನ್ನೂ ಕೆಲ ಗುಂಬಜಗಳು ರಸ್ತೆ ಬದಿಯಲ್ಲಿರುವುದರಿಂದ ವಾಹನಗಳ ಸಂಚಾರದಿಂದ ಅಭದ್ರವಾಗುತ್ತಿವೆ. ಬಿಸಿಲು–ಗಾಳಿ–ಮಳೆ ಹೊಡೆತಕ್ಕೆ ಗೋಡೆಗಳು ಬಿರುಕು ಬಿಟ್ಟಿವೆ. ಅನೇಕ ಗುಂಬಜಗಳಲ್ಲಿ ಮೇಲುಪ್ಪರಿಗೆ ಹಾಗೂ ಗೋಡೆಗಳಲ್ಲಿ ಗಿಡ ಮರಗಳು ಬೆಳೆದು, ಗೋಡೆಗಳನ್ನು ಮತ್ತಷ್ಟು ಅಭದ್ರಗೊಳಿಸುತ್ತಿವೆ. ರಕ್ಷಣೆ ಇಲ್ಲದೇ ಅನಾಥ



ಸಾತ ಗುಂಬಜ– ಗುಲಬರ್ಗಾ

ವಾಗಿರುವ ಈ ಗುಂಬಜಗಳು, ತಮ್ಮನ್ನು ನಿರ್ಮಿಸಿರುವ ಕಾಲದ ಗತವೈಭವವನ್ನು ನೆನೆ ನೆನೆದು, ಇಂದಿನ ತಮ್ಮ ಸ್ಥಿತಿಗೆ ಕಣ್ಣೀರು ಸುರಿಸುತ್ತ ನೆಲಕಚ್ಚ ತೊಡಗಿವೆ. (ಎಸ್‌ಬಿಅ)

ಗುರುರಾಜ ಶೇಷಗಿರಿ ದಂಡಾಪೂರ: ಹಿಂದೂಸ್ತಾನಿ ಸಂಗೀತದ ಮೂಲ ಪರಂಪರೆ ಗ್ವಾಲಿಯರ್ ಘರಾಣೆಯನ್ನು ವಂಶಪರಂಪರೆಯಿಂದ ಬೆಳೆಸಿ ಕೊಂಡು ಬಂದ ಪಂ. ಶೇಷಗಿರಿ ನಾರಾಯಣಾ ಚಾರ್ಯ ದಂಡಾಪೂರ ಹಾಗೂ ಶ್ರೀಮತಿ ಕಮಲಾಕ್ಷಿ ಶೇಷಗಿರಿ ದಂಡಾಪೂರ ಇವರ ವಂಶದಲ್ಲಿ ಇವರು ಜನಿಸಿ ದರು. ಶೈಕ್ಷಣಿಕ ತರಬೇತಿ ಯನ್ನು ಬಿ. ಮ್ಯೂಜಿಕ್ ಹಾಗೂ ಎಂ. ಮ್ಯೂಜಿಕ್‌ನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪೂರೈಸಿ ದ್ದಾರೆ. ಸಂಗೀತ ವಿಷಯದಲ್ಲಿ ಸಂಶೋಧನೆ (ಪಿಎಚ್.ಡಿ) ಯನ್ನು ಡಾ. ಕಮಲ ಪುರಂದರೆ ಇವರ ಮಾರ್ಗದರ್ಶನದಲ್ಲಿ ಪೂರೈಸಿದ್ದಾರೆ. ಪ್ರಸ್ತುತ ಒಂಬತ್ತು ವರ್ಷಗಳಿಂದ ಗುಲಬರ್ಗಾದ ನೂತನ ವಿದ್ಯಾಲಯ ಸಂಸ್ಥೆಯ ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿ ಉಪನ್ಯಾಸಕ (ಹಿಂದೂಸ್ತಾನಿ ಗಾಯನದಲ್ಲಿ) ರಾಗಿ, ಜೊತೆಗೆ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಮೂಲತಃ ಗ್ವಾಲಿಯರ್ ಘರಾಣೆಯನ್ನು ಅನುಸರಿಸಿ ಕೊಂಡು ಶಾಸ್ತ್ರೀಯ ಸಂಗೀತದ ಮೂಲಾಧಾರಗಳಾದ ಧೃಪದ್ ಧಮಾರ ಗಾಯನ ಪರಂಪರೆಯನ್ನು ಉಳಿಸಿ ಬೆಳೆಸುತ್ತ ಖ್ಯಾಲ್ ಗಾಯನದಲ್ಲಿ ಪರಿಣಿತಿ ಹೊಂದಿದವರಾಗಿದ್ದಾರೆ. 1995ರಲ್ಲಿ 'ನಿನಾದ ಸಂಸ್ಥೆ ಧಾರವಾಡ' ಇವರು ನಡೆಸಿದ ಯುವ ಸಂಗೀತೋತ್ಸವದಲ್ಲಿ ಪ್ರಥಮ ಶಾಸ್ತ್ರೀಯ ಗಾಯನ ಕಾರ್ಯಕ್ರಮ, ನಂತರ ಧಾರವಾಡ, ಗುಲಬರ್ಗಾಗಳಲ್ಲಿ ಪ್ರತಿಷ್ಠಿತ ಕಾರ್ಯಕ್ರಮಗಳಲ್ಲಿ ಶಾಸ್ತ್ರೀಯ ಗಾಯನ ಹಾಗೂ ದಾಸವಾಣಿ ಪ್ರಸ್ತುತಿ.



ಗುಲಬರ್ಗಾ ಉತ್ಸವ–2011 ರಲ್ಲಿ ಗಾಯನ ಪ್ರಸ್ತುತ ಪಡಿಸುತ್ತಿರುವದು

2010 ರಲ್ಲಿ ಗದಗಿನ ಪಂಡಿತ ಪುಟ್ಟರಾಜ ಗವಾಯಿಗಳ ರವರ ಸಂಗೀತ ಮಹಾವಿದ್ಯಾಲಯ ಆಯೋಜಿಸಿದ ರಾಷ್ಟ್ರ ಮಟ್ಟದ ಸಂಗೀತ ವಿಷಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಎರಡು ಪ್ರಬಂಧ ಮಂಡಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ. 2010 ರಲ್ಲಿಯೇ ಬಾಗಲಕೋಟೆಯ ಬಸವೇಶ್ವರ ಮಹಾವಿದ್ಯಾಲಯ ಏರ್ಪಡಿಸಿದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ದಲ್ಲಿ ಭಾಗವಹಿಸಿ ಪ್ರಬಂಧವನ್ನು ಮಂಡಿಸಿದ್ದಾರೆ. ನೂತನ ಪದವಿ ಮಹಾವಿದ್ಯಾಲಯ ಆಯೋಜಿಸಿದ ಇತಿಹಾಸ ವಿಷಯಕ ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಸಮಾಜಶಾಸ್ತ್ರ ವಿಷಯಕ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ಹಾಗೂ IQAC ಏರ್ಪಡಿಸಿದ ಎರಡು ದಿನ ರಾಜ್ಯಮಟ್ಟದ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಸಂಗೀತ ಶಾಸ್ತ್ರವನ್ನು ಕುರಿತು 2011ರಲ್ಲಿ 'ಸಂಗೀತ ಕಮಲ' ಮತ್ತು 'ಸಂಗೀತ ಕುಸುಮ' ಎಂಬ ಎರಡು ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಸಧ್ಯ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸಂಗೀತ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ನೇಮಕಗೊಂಡಿದ್ದಾರೆ.

18.12.2002 ರಂದು ಧಾರವಾಡ ತಾಲ್ಲೂಕು ಬ್ರಾಹ್ಮಣ ಸಭಾ ಆಯೋಜಿಸಿದ ಅಭಿನಂದನಾ ಸಮಾರಂಭದಲ್ಲಿ ಡಾ. ಗಂಗೂಬಾಯಿ ಹಾನಗಲ್ ಇವರಿಂದ ಸನ್ಮಾನ, 2002 ಮಾರ್ಚ್‌ನಲ್ಲಿ ಶ್ರೀ ಶ್ರೀ ಶ್ರೀ ಪೇಜಾವರ ಶ್ರೀಗಳವರಿಂದ ಸನ್ಮಾನ, 04.09.2008ರಂದು ನೂತನ ವಿದ್ಯಾಲಯ ಸಂಸ್ಥೆ ಇವರು ಕೊಡಮಾಡುವ 'ಉತ್ತಮ ಶಿಕ್ಷಕ' ಪ್ರಶಸ್ತಿ, ಹಾಗೂ ಗಾನಸುಧಾ, ಶಾರದಾ ಸಂಗೀತ ವಿದ್ಯಾಲಯಗಳ ವಾರ್ಷಿಕೋತ್ಸವ ಸಮಾ ರಂಭಗಳಲ್ಲಿ ಸನ್ಮಾನಿತರಾಗಿದ್ದಾರೆ. (ಆರ್‌ಡಿ)

ಗುರುನಾಥ ಚವ್ಹಾಣ: ಪ್ರತಿಭಾವಂತ ಚಿತ್ರ–ಛಾಯಾಗ್ರಾಹಕ ಕಲಾವಿದ. ಚಿತ್ರಕಲೆಯನ್ನು ಹಾಗೂ ಛಾಯಾಗ್ರಹಣವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿಸಿಕೊಂಡು ಅವುಗಳ ಮೂಲಕ ತಮ್ಮ ಕ್ರಿಯಾಶೀಲತೆಯಿಂದ, ಪ್ರತಿಭೆಯಿಂದ ಗಮನ ಸೆಳೆಯುತ್ತಿರುವ ಇವರ ತಾಯಿ ಶೃತಿಬಾಯಿ ತಂದೆ ಲಕ್ಮೂ ಇವರ ಕೊನೆಯ ಮಗನಾಗಿ 1971 ಜೂನ್ 01ರಂದು ಜನಿಸಿದರು. ಮೂಲತಃ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಲಕ್ಷ್ಮಿಪುರ ತಾಂಡದವರು.

ಛಾಯಾಗ್ರಹವೂ ಒಂದು ಕಲೆ, ಯಥಾವತ್ತಾಗಿ ಚಿತ್ರವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು, ನೋಡುಗರಿಗೆ ಅದು ಆಹ್ಲಾದಕರವಾಗಿ ಕಾಣುವಂತೆ ಸೆರೆಹಿಡಿಯುವುದು ಒಂದು ತಾಂತ್ರಿಕ ವಿದ್ಯೆ. ಅದನ್ನು ಅತ್ಯಂತ ಸಮರ್ಥವಾಗಿ ಪರಿಣಾಮ ಕಾರಿಯಾಗಿ ಸೆರೆಹಿಡಿಯುವುದು ಕಷ್ಟದ ಕೆಲಸವೇ.

ಗ್ರಾಮೀಣ ಪ್ರದೇಶದ ಜೀವನದೊಂದಿಗೆ ಬೆಳೆದು ಬಂದಿ



ರುವ ತಾಂಡಾ ಜೀವನವನ್ನು ಅತ್ಯಂತ ಸಮೀಪದಿಂದ ಕಂಡಿರುವ ಇವರು ಲಂಬಾಣಿ ತಾಂಡಾದ ಜೀವನ ಶೈಲಿಯನ್ನು ತಮ್ಮ ಕುಂಚದಲ್ಲಿ ವಿಶಿಷ್ಟ ರೂಪದಲ್ಲಿ ಚಿತ್ರಿಸುತ್ತ ಚಿತ್ರ ಕಲಾವಿದರಾಗಿ ಬೆಳೆದರು. ಅದರಲ್ಲೇ ಶಿಕ್ಷಣವನ್ನೂ ಪಡೆದ ಇವರು ಕಲಾತ್ಮಕ ಛಾಯಾ ಗ್ರಹಣವನ್ನೂ ರೂಢಿಸಿಕೊಂಡು, ಗ್ರಾಮೀಣ ಜೀವನ ಶೈಲಿ, ದೈವಾರಾಧನೆ ಮುಂತಾದ ವಿಶೇಷತೆಗಳನ್ನು ತಮ್ಮ ಕುಂಚ ಮತ್ತು ಛಾಯಾ ಗ್ರಹಣದಲ್ಲಿ ಸೆರೆ ಹಿಡಿದಿರುವುದು ಇವರ ವೈಶಿಷ್ಟ್ಯ. ಚಿತ್ರಕಲೆ ಮತ್ತು ಛಾಯಾಗ್ರಹಣ ಎರಡನ್ನೂ ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿಸಿಕೊಂಡು, ಅವುಗಳ ಮೂಲಕ ತಮ್ಮ ಕ್ರಿಯಾಶೀಲ ಪ್ರತಿಭೆಯಿಂದ ತಮ್ಮದೇ ಆದ ಕ್ಷೇತ್ರವನ್ನು ಸೃಷ್ಟಿಸಿಕೊಂಡು ಇವರು ಗುರುತಿಸಿಕೊಂಡಿದ್ದಾರೆ.

ಕಲಬುರ್ಗಿಯ ಫೈನ್ ಆರ್ಟ್ ಕಾಲೇಜಿನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಪದವಿ ಪಡೆದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರಿಗೆ ನಿಸರ್ಗ ಚಿತ್ರಣ, ಭಾವಚಿತ್ರಗಳ ರಚನೆ, ಸ್ಟಿಲ್‌ಲೈಫ್ ಪ್ರಕಾರಗಳು ಸೆಳೆದವು. ಇವರ ಕಲಾಕೃತಿಗಳಲ್ಲಿ ಲಂಬಾಣಿ ಜನ-ಜೀವನ, ಸಂಸ್ಕೃತಿ, ಕೊಳಚೆ ಪ್ರದೇಶದ ಜನರ



'ಸುಖ-ದುಃಖ' ಡಿಜಿಟಲ್ ಪೇಂಟಿಂಗ್

ಬದುಕು ಮುಂತಾದವುಗಳು ಪ್ರಭಾವಶಾಲಿಯಾಗಿ ಮೂಡಿ ಬಂದಿವೆ. ಜಲವರ್ಣ ಚಿತ್ರಗಳ ರಚನೆ ಇವರಿಗೆ ತುಂಬ ಪ್ರಿಯ. ಈ ಮಧ್ಯೆ ಫೋಟೊಗ್ರಾಫಿಯನ್ನು ಸೃಜನಶೀಲತೆಯ ಮೂಲಕ ಅದರಲ್ಲೂ ತಮ್ಮ ಕಲಾತ್ಮಕತೆಯ ಛಾಪು ಮೂಡಿಸಿ ಗಮನ ಸೆಳೆದಿದ್ದಾರೆ.

ಇವರು ವೃತ್ತಿಪರ ಕಲಾವಿದ ಛಾಯಾಗ್ರಾಹಕರಾಗಿ ಗುಲಬರ್ಗಾ, ಬೆಂಗಳೂರು, ಮುಂಬಯಿಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಮಾಡೆಲಿಂಗ್ ಫೋಟೊಗ್ರಾಫಿ ಹಾಗೂ ಡಿಜಿಟಲ್ ಪೇಂಟಿಂಗ್‌ನಲ್ಲಿ ವಿಶೇಷ ಪರಿಣಿತಿ ಪಡೆದಿದ್ದಾರೆ. ನಾಗಪುರದ ಸಾಂಸ್ಕೃತಿಕ ಕೇಂದ್ರ ಹಾಗೂ ಉಡುಪಿಯ ಯಕ್ಷಗಾನ ಅಕಾಡೆಮಿಯ, ಬುಡಕಟ್ಟು ಜನಾಂಗದ ಕುರಿತಾದ ಸಾಕ್ಷ್ಯ ಚಿತ್ರದ ನಿರ್ಮಾಣದಲ್ಲಿ ತೊಡಗಿಸಿಕೊಂಡು ತಮ್ಮ ಕ್ರಿಯಾಶೀಲತೆಯಿಂದ ಚಿತ್ರಕಲಾ ಕ್ಷೇತ್ರದಲ್ಲಿ ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಚಿತ್ರ ನಿರ್ಮಾಣಗಳಲ್ಲೂ ಕಲಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಸಾಕಷ್ಟು ಅನುಭವ ಪಡೆದಿದ್ದಾರೆ. ಇವರ ಛಾಯಾಚಿತ್ರಗಳನ್ನು ನಾಡಿನ ಅನೇಕ ಪ್ರಮುಖ ದಿನಪತ್ರಿಕೆಗಳು ಬಳಸಿಕೊಂಡಿರುವುದು ಇವರ ಕಲಾ ನೈಪುಣ್ಯತೆಗೆ ಹಿಡಿದ ಕನ್ನಡಿಯಾಗಿದೆ. ಲಂಬಾಣಿ ಜನಾಂಗದ ಜನರ ಜೀವನ, ಸಂಸ್ಕೃತಿ ಮತ್ತು ಪರಂಪರೆಗಳನ್ನು ವಿವಿಧ ಮಗ್ಗುಲಗಳಿಂದ ಕ್ಯಾಮೆರಾದಲ್ಲಿ ಕಲಾತ್ಮಕವಾಗಿ ಸೆರೆಹಿಡಿದಿರುವ ಇವರು, ಹೂವಿನಿಂದ ಮಕರಂದ ಹೀರುವ ಅನೇಕ ಮಾತ್ರದ, ವರ್ಣಗಳ ಚಿತ್ತಾರದ ಸುಂದರ ಚಿಟ್ಟೆಗಳು, ತಂತಿಗಳ ಮೇಲೆ ನೀಟಾಗಿ ಪೋಜು ಕೊಡಲೆಂದೇ ಎಂಬಂತೆ ಕುಳಿತಿರುವ ಪಕ್ಷಿಗಳು, ತಮ್ಮ ಗತಕಾಲದ ವೈಭವಗಳಿಗೆ ಮೂಕಸಾಕ್ಷಿ ಎಂಬಂತೆ ನಿಂತಿರುವ ನಾಡಿನ ಸ್ಮಾರಕಗಳು ಮುಂತಾದ ಇವರು ಕ್ಲಿಕ್ಕಿಸಿದ ಚಿತ್ರಗಳ ಸೊಗಡು ನೋಡಿಯೇ ಸವಿಯಬೇಕು. ಲಂಬಾಣಿಗರ ಕಸೂತಿ ಕಲೆಯ ಬಗ್ಗೆ ಅಧ್ಯಯನ ಮಾಡುತ್ತಿರುವ ಬೆಲ್ಜಿಯಂ ಜೂಲಿಯನ್ ಹಾಗೂ ಜಾನ್ ಅವರ ಜೊತೆ ಇವರು ಕಾರ್ಯ ನಿರ್ವಹಿಸಿದ್ದಾರೆ.

ಇವರು ತಮ್ಮ ಕಲಾಕೃತಿ ಮತ್ತು ಸಾಧನೆಗಾಗಿ ಹಲವು ಬಹುಮಾನ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಧಾರವಾಡದ ವಿಜ್ಞಾನ ಪರಿಷತ್‌ನಿಂದ 'ಬೆಸ್ಟ್ ಪೇಂಟಿಂಗ್' ಗಾಗಿ ಪ್ರಮಾಣ ಪತ್ರ, ಗುಲಬರ್ಗಾದ ಯುವ ಬರಹಗಾರರ ಬಳಗದ ಧೂಮಪಾನ ನಿಷೇಧ ಭಿತ್ತಿಚಿತ್ರ ಸ್ಪರ್ಧೆಯಲ್ಲಿ ಪ್ರಥಮಸ್ಥಾನ, ಗುಲಬರ್ಗಾದ ಎಂ.ಎಂ.ಕೆ ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ವಿಶ್ವ ಛಾಯಾಗ್ರಾಹಕರ ದಿನದ ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ಬಹುಮಾನ ಮುಂತಾದವುಗಳ ಇವರು ಪಡೆದ ಪ್ರಮುಖ ಪುರಸ್ಕಾರಗಳಾಗಿವೆ.

ತಮ್ಮ ಚಿತ್ರಕಲೆ ಹಾಗೂ ಛಾಯಾಗ್ರಹಣದಲ್ಲಿ ಆಧುನಿಕ ಡಿಜಿಟಲ್ ತಂತ್ರಜ್ಞಾನ ಬಳಸಿಕೊಂಡು ಅವುಗಳ ಮೂಸೆಯಲ್ಲಿ ಕ್ರಿಯೇಟಿವ್ ಆಗಿ ತಮ್ಮ ಕಲಾಕೃತಿಗಳನ್ನು ಹೊರಹೊಮ್ಮಿಸುತ್ತಿರುವ ಇವರ ಪ್ರಯತ್ನ, ಕ್ರಿಯಾಶೀಲತೆ, ಕಲ್ಪನೆ, ಪ್ರಯೋಗ

ಶೀಲತೆಗಳೆಲ್ಲವೂ ಪ್ರಶಂಸನೀಯ. ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯದ ಸಮೂಹ ಮಾಧ್ಯಮ ವಿಭಾಗದಲ್ಲಿ ಗುರುನಾಥ ಚವ್ಹಾಣ ಅವರು ಕಲಾವಿದ ಮತ್ತು ಛಾಯಾಗ್ರಾಹಕ ರಾಗಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎನ್ಎಂಜೆ)



ಗುರುನಾಥರಾವ್ ಎಸ್. ಅಲಗೂಡಕರ: ಹೈದ್ರಾಬಾದ ಕರ್ನಾಟಕ ಭಾಗದ ಕಲ್ಬುರ್ಗಿ ಪ್ರದೇಶದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಪ್ರಚಾರಪಡಿಸಿದವರಲ್ಲಿ ಒಬ್ಬರು. ಆ ಭಾಗದ ಹಿರಿಯ ತಲೆಮಾರಿನ ಸಂಗೀತ ಗಾರರಾಗಿದ್ದಾರೆ. ಇವರು ತಮ್ಮ 7ನೆಯ ವಯಸ್ಸಿನಲ್ಲಿಯೇ ತಮ್ಮ ಕಾಕ ಶಂಕರಭಟ್ಟ ಅಲಗೂಡ ಅವರಿಂದ ಪ್ರಥಮವಾಗಿ ಕಲಿಯಲಾರಂಭಿಸಿದರು. ಚಿಕ್ಕಂದಿನಿಂದಲೂ ಕಲೆಯ ಬಗೆಗೆ ತೀವ್ರ ಒಲವು ಇದ್ದುದರಿಂದ 8ನೆಯ ವಯಸ್ಸಿನಲ್ಲಿ ಗುಲಾಮ ಬೀಕಖಾನ ಸಾಹೇಬರು ಸಾರಂಗಿ ವಾದಕರಿಂದ ಹಾರ್ಮೋನಿಯಂ ಮತ್ತು ಗಾಯನ ಕಲಿಯಲು ಆರಂಭಿಸಿದರು. ಶಾಲಾ ಶಿಕ್ಷಣವನ್ನು ಬಿಡಿಸಿ 15ನೆಯ ವಯಸ್ಸಿನಲ್ಲಿ ಗುಲಬರ್ಗಾದ ಎನ್.ವಿ ಶಾಲೆಗೆ ಸೇರಿಸಲಾಯಿತು. ಅದೇ ಸಮಯದಲ್ಲಿ ಕಲಬುರ್ಗಿಯಲ್ಲಿದ್ದ ಗೋಪಾಲರೆಡ್ಡಿಯವರು ನಡೆಸುತ್ತಿದ್ದ ಸಂಗೀತ ಶಾಲೆಯಲ್ಲಿ ತಬಲಾ ಹಾಗೂ ಹಾರ್ಮೋನಿಯಂ ಸಾಥಿ ನೀಡಲಾರಂಭಿಸಿದರು. ಮಹಾರಾಷ್ಟ್ರದ ಅಬ್ಬಾಸಾಹೇಬ ಮಜಮುದಾರ ಹಾಗೂ ಡಿ.ಆರ್. ಪರ್ವತೀರಕರ, ಡಾ. ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಕಿಶೋರಿ ಅಮೋನಕರ ಡಾ. ಪರವೀನ್ ಸುಲ್ತಾನ, ಡಾ. ಪ್ರಭಾ ಅತ್ರೆ, ಡಾ. ಪುಟ್ಟರಾಜ ಗವಾಯಿ ಇವರೇ ಮುಂತಾದ ಅನೇಕ ಹೆಸರಾಂತ ಕಲವಿದರುಗಳಿಗೆ ತಬಲಾ ಹಾಗೂ ಹಾರ್ಮೋನಿಯಂ ಸಾಥಿಯನ್ನು ನೀಡಿದ್ದಾರೆ.

ಸಂಗೀತ ಶಿಕ್ಷಣ ಕ್ಷೇತ್ರದಲ್ಲಿಯೂ ಇವರ ಸೇವೆ ಅಪಾರ. ಅಧಿಕ ಸಂಖ್ಯೆಯಲ್ಲಿ ತಬಲಾ ಹಾಗೂ ಹಾರ್ಮೋನಿಯಂ ಅನ್ನು ಅವರಿಂದ ಕಲಿತ ವಿದ್ಯಾರ್ಥಿಗಳು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನಿತ್ತಿದ್ದಾರೆ.

ಪ್ರತಿಭಾಶಾಲಿ ಕಲಾವಿದರಾದ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 'ಕರ್ನಾಟಕ ಕಲಾತಿಲಕ' ಬಿರುದಿನೊಂದಿಗೆ 1994–95ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

(ಎಸ್ಎಂಜಿ)

ಗುರುಪಾದಸ್ವಾಮಿ ಎಂ. ಗವಾಯಿ: ಹಿಂದುಸ್ಥಾನಿ ಸಂಗೀತದ ಹಿರಿಯ ಗಾಯಕ. ಸಂಗೀತದಲ್ಲಿ ಅಪಾರ ಸಾಧನೆ ಗೈದಿದ್ದಾರೆ. ಸಂಗೀತ ಶಾಲೆ ಸ್ಥಾಪಿಸಿ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡುತ್ತ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಪ್ರಸಾರ ಮಾಡುವ ಕಲಾ ಕಾಯಕದಲ್ಲಿ ನಿರತರಾಗಿದ್ದಾರೆ.

ತಮ್ಮ ವಿಶಿಷ್ಠ ಶೈಲಿಯ ಹಾಡುಗಾರಿಕೆಯಿಂದ ಕನ್ನಡನಾಡಿನ ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಹಿಂದೂಸ್ಥಾನಿ ಸಂಗೀತದ ಕಂಪನ್ನು ಹರಡುತ್ತಿರುವ ಇವರು ನೂರಾರು ಯುವ ಕಲಾವಿದರನ್ನು ಪರಿಣತಗೊಳಿಸಿ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

ಬಾಲ್ಯದ 10ನೆಯ ವಯಸ್ಸಿನಲ್ಲೆ ಶಾಸ್ತ್ರೀಯ ಸಂಗೀತದಲ್ಲಿ ಹಿರಿಯಣ್ಣನವರಿಂದ ಶಿಕ್ಷಣ ಪ್ರಾರಂಭವಾಯಿತು. ಅನಂತರ ಪುಟ್ಟರಾಜ ಗವಾಯಿ ಅವರಿಂದ ಪ್ರೌಢಶಿಕ್ಷಣ ಪಡೆದರು. ಇವರು ಯರೋಳರಾಮ್ ಬುವಾ ಮತ್ತು ಮುರುಡೇಶ್ವರ ಗವಾಯಿಗಳಲ್ಲಿ ಅಭ್ಯಾಸ ಮಾಡಿ ಗ್ವಾಲಿಯರ್ ಘರಾಣಾ ಶೈಲಿಯನ್ನು ತಮ್ಮದಾಗಿಸಿಕೊಂಡರು.

ಗವಾಯಿಗಳ ಹಿಂದೂಸ್ತಾನಿ ಸಂಗೀತ ಗಾಯನವನ್ನು ಶ್ರೀಮಂತಗೊಳಿಸಿದ್ದು ಹರಪನಹಳ್ಳಿ ನರಸಿಂಗರಾಯರಿಂದ ಅವರು ಮಾಡಿದ್ದು ಕರ್ನಾಟಕ ಸಂಗೀತ ಅಭ್ಯಾಸ. ಹಾರ್ಮೋನಿಯಂ ವಾದನದಲ್ಲೂ ಪರಿಶ್ರಮ ಮಾಡಿರುವ ಗವಾಯಿಗಳು ದೇಶದ ಅನೇಕ ಪ್ರಖ್ಯಾತ ಗಾಯಕರ ಕಾರ್ಯಕ್ರಮಗಳಲ್ಲಿ ಹಾರ್ಮೋನಿಯಂ ಸಹಕಾರ ನೀಡಿ ಖ್ಯಾತರಾಗಿದ್ದಾರೆ. ರಾಯಚೂರಿನ ತಮ್ಮ 'ಭಾರತೀ ಸಂಗೀತ ಪಾಠ ಶಾಲೆ' ಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಗಾಯನ ಹಾಗೂ ವಾದ್ಯ ವಾದನದಲ್ಲಿ ತರಬೇತು ನೀಡುತ್ತಿರುವ ಗವಾಯಿಗಳ ಸೇವೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ.

ಇವರ ಸಂಗೀತ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 1997–98ನೆಯ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿವೆ. (ಎಸ್ಎಂಜಿ)

ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್, ಕಲ್ಚರ್ ಆ್ಯಂಡ್ ಲಿಟರೇಚರ್: ಕನ್ನಡ ನಾಡಿನಲ್ಲಿ ಕಲೆ, ಸಂಸ್ಕೃತಿ ಇನ್ನೂ ಜೀವಂತವಾಗಿರುವುದಕ್ಕೆ ಕಲಾಸ್ತಕರ ಅಭಿಮಾನವೇ ಪ್ರಮುಖ ಕಾರಣ. ಜೊತೆಗೆ ಅಳಿದು ಹೋದ ಇತಿಹಾಸದಿಂದ ಕಲೆಯನ್ನು ಪರಂಪರಾಗತವಾಗಿ ಬೆಳೆಸಿಕೊಂಡು ಬರುತ್ತಿರುವ ನಮ್ಮ ನಾಡಿನ ಕಲಾವಿದರು ನಮ್ಮ ಕಲಾ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಇಂತಹ ಕಲಾ ಪರಂಪರೆಯ ಸಂಸ್ಕೃತಿಯನ್ನು ಎತ್ತಿ ಹಿಡಿದು ಪ್ರೋತ್ಸಾಹಿಸುತ್ತಿರುವ ಕಾರ್ಯವನ್ನು ನಮ್ಮ ನಾಡಿನ ಕಲಾ ಸಂಸ್ಥೆಗಳ ಬಹು ಪ್ರಾಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿವೆ ಎಂದು ಹೇಳಬಹುದು.

ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್, ಕಲ್ಚರ್ ಆ್ಯಂಡ್ ಲಿಟರೇಚರ್



ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್, ಕಲ್ಚರ್ ಆ್ಯಂಡ್ ಲಿಟರೇಚರ್ ಗ್ಯಾಲರಿ

ಕಲೆ ಹಾಗೂ ಕಲಾವಿದರನ್ನು ಗುರುತಿಸಿ ಗೌರವಿಸುವ ಸಂಸ್ಥೆಗಳು ನಾಡು ಹಾಗೂ ಹೊರನಾಡಿನಲ್ಲಿ ಹಲವಾರು ಇದ್ದರೂ ಗುಲಬರ್ಗಾ ಜಿಲ್ಲೆಯಲ್ಲಿ ತನ್ನದೇ ಕೆಲ ವೈಶಿಷ್ಟತೆಯಿಂದ ಅಚ್ಚಳಿಯದ ಕಾರ್ಯ ನಿರ್ವಹಿಸುತ್ತಿರುವ ಅಕಾಡೆಮಿ ಎಂದರೆ ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್ ಕಲ್ಚರ್ ಆ್ಯಂಡ್ ಲಿಟರೇಚರ್. ಈ ಅಕಾಡೆಮಿ ಕರ್ನಾಟಕ ಸೊಸೈಟಿ ರಜಿಸ್ಟ್ರೇಶನ್ ಕಾಯ್ದೆ-1960ರ ಅಡಿಯಲ್ಲಿ ವರ್ಷ 2011ರಲ್ಲಿ ನೊಂದಣಿಯಾಗಿದ್ದು ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯ ಎದುರುಗಡೆ ಇರುವ ಸಿದ್ದೇಶ್ವರ ಕಾಲೋನಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕಲೆಯನ್ನು ಗುರುತಿಸಿ, ಕಲಾವಿದರನ್ನು ಪ್ರೋತ್ಸಾಹಿಸುವುದು ಬಹು ದೊಡ್ಡ ಸಾಹಸ ಕಾರ್ಯವೆಂದು ಹೇಳಬಹುದು. ಗುಲಬರ್ಗಾ ಜಿಲ್ಲೆಯಲ್ಲಿ ಹಿರಿಯ ಕಲಾವಿದರು ಸೇರಿದಂತೆ ಕಿರಿಯ ಕಲಾವಿದರು ಅನೇಕ ಕಲಾ ಸಂಸ್ಥೆಗಳನ್ನು ಹುಟ್ಟು ಹಾಕಿ ಅನೇಕ ಕಾರ್ಯ ಚಟವಟಿಕೆಗಳು ಮಾಡುತ್ತಿವೆ. ಆದರೆ ಇಲ್ಲಿ ಇದಕ್ಕಿಂತ ಭಿನ್ನವಾಗಿ ಕಲಾವಿದರೇತರ ಸಂಸ್ಥೆಯೊಂದನ್ನು ಹುಟ್ಟು ಹಾಕಿರುವುದು.

ಅಕಾಡೆಮಿ ವರ್ಷ ಪೂರ್ತಿ ಯಾವುದಾದರೂ ಕಲಾ ಚಟುವಟಿಕೆ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಕಲಾಮಹೋತ್ಸವ, ಗುಂಪು ಕಲಾಕೃತಿಗಳ ಪ್ರದರ್ಶನ, ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ, ಕಲಾಶಿಬಿರ. ವಿಜ್ಞಾನ ವಿಚಾರ ಸಂಕಿರಣ, ಪ್ರದರ್ಶನ, ಕ್ರೀಡಾ ಸ್ಪರ್ಧೆ, ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳು, ಗ್ರಾಮೀಣ ಕಲೆ, ಸಾಹಿತ್ಯ, ಸಂಸ್ಕೃತಿ ಕುರಿತು ವಿಚಾರ ಗೋಷ್ಠಿ, ಆರೋಗ್ಯ ಕುರಿತು ಕಾರ್ಯಕ್ರಮ, ಪುಸ್ತಕ ಪ್ರಕಟಣೆ, ಕಲಾಪ್ರದರ್ಶನ, ಶಾಲಾ ವಿದ್ಯಾರ್ಥಿಗಳಿಗಾಗಿ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಚಿತ್ರಕಲಾ ಶಿಕ್ಷಕರಿಗೆ ಸನ್ಮಾನ ಹೀಗೆ ಪ್ರತಿಯೊಬ್ಬರಲ್ಲಿ ಅಡಗಿರುವ ಕಲಾ ಪ್ರತಿಭೆಯನ್ನು ಗುರುತಿಸಿ ಅವರ ಕಾರ್ಯ ಸಾಧನೆಯನ್ನು ನಾಡಿನ ಜನತೆಗೆ ಮುಂತಾದ ವಿವಿಧ ಪ್ರಕಾರ ಕಾರ್ಯಕ್ರಮವನ್ನು ರೂಪಿಸುತ್ತಾ ಪ್ರಚಾರ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ಹೊಸತನವನ್ನು ಮೈಗೂಡಿಸಿಗೊಂಡು ವಿನೂತನ ಕಾರ್ಯ ಕ್ರಮವನ್ನು ರೂಪಿಸುತ್ತಾ ಕಲೆ, ಕಲಾವಿದರ ಬಗ್ಗೆ ವಿಶೇಷ ಕಾಳಜಿವಹಿಸಿದ ಸಂಸ್ಥೆ ಇತ್ತೀಚೆಗೆ ರಾಷ್ಟ್ರೀಯ ಮಟ್ಟದ ಕಲಾ ಪ್ರದರ್ಶನವನ್ನು ಗುಲಬರ್ಗಾ ನಗರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುವರ್ಣ ಸಮುಚ್ಚಯದ ಸುಸಜ್ಜಿತ ಆರ್ಟ್ ಗ್ಯಾಲರಿಯಲ್ಲಿ ಮೊದಲ ಪ್ರದರ್ಶನ ಆಚೋಜಿಸಿರುವುದರ ಮೂಲಕ ಕಲಾ ಪ್ರತಿಭೆಯನ್ನು ಗುರುತಿಸಿ ಕಲಾಸಕ್ತರ ಕಲಾ ದಾಹವನ್ನು ನೀಗಿಸುತ್ತಿದೆ ಎಂದು ಹೇಳಬಹುದು. ಅಲ್ಲದೇ ಮಹಾನ್ ಹಾಗೂ ವರನಟ ಡಾ. ರಾಜಕುಮಾರ ಹೆಸರಿನಲ್ಲಿ ಪ್ರತಿ ವರ್ಷ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ವ್ಯಕ್ತಿಯನ್ನು ಗುರುತಿಸಿ ಅವರನ್ನು ಸನ್ಮಾನಿಸಿ ಗೌರವಿಸುವ ಯೋಜನೆಯನ್ನು ಹೊಂದಿದೆ.

ಕಲೆಗೆ ಬೆಲೆ ಕಟ್ಟಲಾಗದು ಕಲೆಯನ್ನು ಸಾಕಾರಗೊಳಿಸುವ ಕಾರ್ಯದ ಜೊತೆಗೆ ಅದಕ್ಕೆ ಸೂಕ್ತ ಪ್ರಚಾರ ನೀಡುವುದರ ಮೂಲಕ ಸಾರ್ವಜನಿಕ ಹಾಗೂ ಕಲಾವಿದರ ನಡುವೆ ಅಕಾಡೆಮಿ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರೆ ಇಲ್ಲಿ ತಪ್ಪಾಗಲಾರದು. ಕಲೆಯನ್ನು ಒಂದೇ ದೃಷ್ಟಿಯಲ್ಲಿ ನೋಡುವಂತಹದ್ದು ಅಲ್ಲ, ಅದನ್ನು ಮುಕ್ತವಾಗಿ ಅದು ಎಲ್ಲರೂ ಸವಿಯುವಂತಹದ್ದು. ಆದ್ದರಿಂದ ಕಲಾ ಪ್ರದರ್ಶನ ಮೂಲಕ ಇಲ್ಲಿ ಕಲಾಸ್ತಕರಿಗೆ ಕಲಾ ದಾಹವನ್ನು ನೀಗಿಸುವುದರ ಮೂಲಕ ಅಕಾಡೆಮಿ ಕಲಾ ಕಾರಂಜಿಯಾಗಿದೆ.

ಹಿರಿಯ ಕಲಾವಿದರು, ಕಿರಿಯ ಕಲಾವಿದರು ಎಂಬ ಭೇದ ಭಾವ ಸಲ್ಲದು, ಕಲೆಯಲ್ಲಿ ಯಾರು ದೊಡ್ಡವರಲ್ಲ, ಚಿಕ್ಕವರಲ್ಲ ಯಾರಲ್ಲಿ ಪ್ರತಿಭೆ ಇದೆಯೋ ಅವರು ಖಂಡಿತ ನಿಶ್ಚಿತ ಗುರಿ ತಲುಪುವುದು ಖಚಿತವೆಂಬ ಮಾತು ಇಲ್ಲಿ ಹೇಳಬೇಕಾಗಿದೆ. ಹಳೇಬೇರು ಹೊಸಚಿಗುರು ಎಂಬಂತೆ ಕೆಲವೊಂದು ಕಡೆ ಹಿರಿಯ ಕಲಾವಿದರನ್ನು ಗುರುವಾಗಿ ಸ್ವೀಕರಿಸಿ, ಅವರನ್ನು ಅನುಸರಿಸುವುದು ಕಿರಿಯ ಕಲಾವಿದರ ಕಾರ್ಯವಾಗಿದೆ. ನಾಡಿನಲ್ಲಿ ಕಲೆ ಸಮೃದ್ಧವಾಗಿದೆ. ಆದರೂ ಪ್ರಸ್ತುತ ಎಲೆ ಮರೆ ಕಾಯಿಯಂತೆ ಕಲಾವಿದರು ಇರುವುದು ನಾವು ಗಮನಿಸಬೇಕಾಗಿದೆ. ಅವರನ್ನು ಸೂಕ್ತ ವೇದಿಕೆ ಮೂಲಕ ಸಾರ್ವಜನಿಕವಾಗಿ ಅವರ ಕಲಾ ಸಾಧನೆಯನ್ನು ಗುರುತಿಸಿ ಗೌರವಿಸಬೇಕಾಗಿದೆ. ನಿಜವಾಗಿಯೂ ಕಲೆಗೆ ಸಂದ ಸತ್ಕಾರವಾಗುತ್ತದೆ. ಕಲೆ ಕಣ್ಮರೆಯಾಗುವುದು ಬೇಡ, ಕಲೆ ನಮ್ಮಲ್ಲಿನ ಪ್ರತಿಭೆಯನ್ನು ಎಲ್ಲರೂ ಗುರುತಿಸುವಂತಾಗಬೇಕೆ ಹೊರತು ಎಲ್ಲದ್ದಕ್ಕೂ ಅನುಕರಣೆ ಅನುಸರಿಸುವುದು ಸರಿಯಾದ ಕ್ರಮವಲ್ಲ. ನಮ್ಮಲ್ಲಿನ ಸ್ವಂತಿಕೆಯನ್ನು ಬಳಸಿಕೊಂಡು ಸಾಂಪ್ರದಾಯಿಕ, ಆಧುನಿಕ, ಗ್ರಾಮೀಣ ಸೊಗಡಿನ ಕಲಾ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದು ನಮ್ಮ ಕಲಾವಿದರು ಮಾಡಬೇಕು. ಇದನ್ನು ನಾವು ಗುರುತಿಸಿ ಸಂಸ್ಥೆಯ ಮೂಲಕ ಜನಮನ ತಲುಪಿಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಕಲಾ ಸಂಸ್ಥೆಯೊಂದನ್ನು ಹುಟ್ಟು ಹಾಕಿರುವುದಕ್ಕೆ ಸಾರ್ಥಕವಾಗುತ್ತದೆ. (ಆರ್‌ಎಸ್‌ಪಿ)

ಗುಲಬರ್ಗಾದ ಭಿತ್ತಿ ಚಿತ್ರಗಳು: ಜಾಗತಿಕ ದೃಶ್ಯಕಲಾ ಪ್ರಪಂಚದಲ್ಲಿ ಭಾರತೀಯ ಭಿತ್ತಿಚಿತ್ರಕಲೆಗೆ ತನ್ನದೇ ಆದ ಮಹತ್ವವಿರುವಂತೆ ಭಾರತೀಯ ಚಿತ್ರಕಲೆಯಲ್ಲಿ ಕರ್ನಾಟಕದ ಭಿತ್ತಿ ಚಿತ್ರಕಲೆ ಅದರಲ್ಲೂ ಹೈದ್ರಾಬಾದ ಕರ್ನಾಟಕದ ಭಿತ್ತಿ ಚಿತ್ರಕಲಾ ಕೊಡುಗೆಗೆ ತುಂಬಾ ಮಹತ್ವದ ಸ್ಥಾನವಿದೆ. ಈ ನಾಡಿನ ಕಲಾವಿದರು ಭಿತ್ತಿಚಿತ್ರಗಳನ್ನು ರಚಿಸುವ ಮೂಲಕ ಕಲಾಕಾರರು ಹಾಗೂ ಪೋಷಕರು ಆಗಿರುವುದು ವಿಶೇಷವಾಗಿದೆ. ಮುಂದುವರೆದ ಈ ಭಿತ್ತಿಚಿತ್ರ ನಿರ್ಮಾಣ ಪರಂಪರೆಯನ್ನು ಜೀವಂತವಾಗಿರಿಸುವುದರ ಜೊತೆಗೆ ಈ ನಾಡನ್ನು ಸಂಪದ್ಭರಿತ ಪ್ರದೇಶವನ್ನಾಗಿ ಮಾಡಿದ್ದಾರೆ. ಮಾತ್ರವಲ್ಲ; ಜಗತ್ತಿನ ಕಲಾ ಲೋಕದ ಗಮನವನ್ನೆ ಈ ಕಡೆಗೆ ಸೆಳೆದಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

ಭಿತ್ತಿಚಿತ್ರ ರಚನಾ ಪರಂಪರೆ ಇತ್ತೀಚಿನದೇನಲ್ಲ. ಪ್ರಾಗೈತಿಹಾಸಿಕ ಕಾಲದಿಂದ ಮೊದಲುಗೊಂಡು ಹಲವು ಬದಲಾವಣೆಗಳೊಂದಿಗೆ ಇಂದಿನವರೆಗೂ ಉಳಿದುಕೊಂಡು ಬಂದಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯಾಗಿ ಸೃಷ್ಟಿಗೊಂಡಿದೆ. ಪ್ರಾದೇಶಿಕತೆ, ಆಯಾ ಪ್ರದೇಶದ ಜನರ ಜೀವನ ವಿಧಾನ, ಆಚಾರ, ವಿಚಾರ, ಧಾರ್ಮಿಕ ನಂಬಿಕೆ ಮುಂತಾದುವುಗಳು ಅವರ ಭಿತ್ತಿಚಿತ್ರ ಸೃಷ್ಟಿಯ ಮೇಲೆ ಪ್ರಭಾವ ಬೀರಿ ಈ ಪರಂಪರೆಯನ್ನು ವೈವಿಧ್ಯಮಯವಾಗಿ ರೂಪಗೊಳ್ಳಲು ಕಾರಣವಾಗಿದೆ. ಯಾವುದೇ ಕಾಲದ ಭಿತ್ತಿಚಿತ್ರಗಳು ಆಯಾ ಕಾಲದ ಸಮಕಾಲೀನ ಜನಜೀವನದ ವಿವರಗಳನ್ನು ಒಳಗೊಗಂಡಿರುತ್ತವೆ. ಹಾಗೆಯೇ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ, ಇತಿಹಾಸವನ್ನು ತಿಳಿಸಲು ಇವು ಮಹತ್ವದ ಆಕರಗಳಾಗಿ ಉಳಿದುಕೊಂಡಿರುತ್ತವೆ. ಕಾಲನುಕ್ರಮದಲ್ಲಿ ಹಲವು ಬದಲಾವಣೆಗಳು ಘಟಿಸಿದ್ದಾಗಲೂ ಮೂಲ ಮಾದರಿಗಳು ಪೂರ್ಣವಾಗಿ ಕಣ್ಮರೆಯಾಗಿ, ಹೋಗಿಲ್ಲ. ಗುಲಬರ್ಗಾ ಮಹಾನಗರ ಸಹ ಈ ಪ್ರವೃತ್ತಿಯಿಂದ ಹೊರತಾಗಿಲ್ಲ. ಗುಲಬರ್ಗಾ ಹಳೆಯ ಮನೆಗಳು ನವೀಕರಣಗೊಳ್ಳುತ್ತಿವೆ. ಅರೆಗಚ್ಚು ಹಾಗೂ



ಗೋಡೆ ಮೇಲಿನ ಭಿತ್ತಿಚಿತ್ರ, ಅಕ್ರೇಲಿಕ್ ಮಾಧ್ಯಮ

ಮಣ್ಣು ಹೋಗಿ ಬಹುವಿನ್ಯಾಸದ ಗ್ರ್ಯಾನೇಟ್ ಗೋಡೆಗಳು ಅಲಂಕರಿಸುತ್ತಿವೆ. ಅಂತಹ ಕಟ್ಟಡಗಳ ಗೋಡೆಗಳ ಮೇಲೆಯು ಭಿತ್ತಿಚಿತ್ರಗಳು ತಮ್ಮ ಸ್ಥಾನ ಗಟ್ಟಿಗೊಳಿಸಿಕೊಂಡಿವೆ.



ಗೋಡೆ ಮೇಲಿನ ಭಿತ್ತಿಚಿತ್ರ, ಅರ್ಥಕಲರ್ ಮಾಧ್ಯಮ

ಗುಲಬರ್ಗಾದಲ್ಲಿ ಈಗಲೂ ಉಳಿದಿರುವ ಕೆಲವು ಹಳೆಯ ಕಾಲದ ಮನೆಗಳ ಗೋಡೆಗಳ ಮೇಲೆ ವಿನ್ಯಾಸಗಳಲ್ಲಿ ಆರೆಗಚ್ಚಿನ ಭಿತ್ತಿಚಿತ್ರಗಳನ್ನು ಕಾಣಬಹುದು. ಹೂ, ಬಳ್ಳಿ, ಇತ್ಯಾದಿಗಳು ಅಲ್ಲಿ ಚಿತ್ರಿತವಾಗಿವೆ. ಪ್ರಾಚೀನ ಪರಂಪರೆಯ ಭಿತ್ತಿಚಿತ್ರಗಳ ಉದ್ದೇಶ ಶೈಲಿ ಒಂದು ಕಡೆಯಾದರೆ ಇತ್ತೀಚಿನ ಆಧುನಿಕ ಶೈಲಿಯ ಭಿತ್ತಿ ಪರಂಪರೆ ವಿಭಿನ್ನ ರೀತಿಯಾಗಿದೆ. ಮೊದಲು ಚಿತ್ರಗಳು ದೇವಾಲಯ, ಅರಮನೆ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ಅಷ್ಟೇ ನಾವು ಕಾಣಬಹುದು. ಆದರೆ ಬರಬರುತ್ತಾ ಅವು ಸಾರ್ವಜನಿಕಗೊಂಡು ಒಂದು ಕಟ್ಟಡದ ಸಂಕೇತ ಸೂಚಕವಾಗಿ ಚಿತ್ರವನ್ನು ಬಳಸಲು ಪ್ರಾರಂಭಿಸಿದರು. ಕ್ರೀಡಾಂಗಣ, ವಿಜ್ಞಾನ ಭವನ, ವಸ್ತು ಸಂಗ್ರಹಾಲಯ, ಖಾದಿಭಂಡಾರ, ರೈಲುನಿಲ್ದಾಣ ಉದ್ಯಾನವನ, ಹೋಟೆಲ್ ಹೀಗೆ ಅನೇಕ ಸ್ಥಳಗಳಲ್ಲಿ ಅವುಗಳ ಅಸ್ತಿತ್ವವನ್ನು ಹೇಳುವಂತಹ ಹಾಗೂ ಪೂರಕವಾಗಿರುವಂತಹ ಭಿತ್ತಿಚಿತ್ರಗಳು ಪ್ರಾರಂಭವಾಗಿ ತೀರಾ ಇತ್ತೀಚಿಗೆ ತಮ್ಮ ಮನೆಗಳಲ್ಲಿಯೂ ಸಹ ಭಿತ್ತಿಚಿತ್ರಗಳನ್ನು ರಚಿಸಲು ಆಸಕ್ತಿ ವಹಿಸುತ್ತಿದ್ದಾರೆ. ಗುಲಬರ್ಗಾ ಕಲೆಯ ಚಟುವಟಿಕೆಗಳನ್ನು ಹೊಂದಿರುವ ಪ್ರದೇಶವಾಗಿರುವುದರಿಂದ ಕಲಾಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಹೊಸ ಹೊಸ ಆಯಮಗಳು ಇಲ್ಲಿ ಮೈಗೊಡಿಸಿಕೊಳ್ಳುವುದು ಸಹಜ.

ಗುಲಬರ್ಗಾದ ಕಾರ್ಯಸೌಧದ ಭಿತ್ತಿಚಿತ್ರ: ಗುಲಬರ್ಗಾ ಕಟ್ಟಡಗಳಲ್ಲಿ ಅತ್ಯಂತ ಆಕರ್ಷಕವಾಗಿರುವಂತಹ ಕಟ್ಟಡವೆಂದರೆ ಕಾರ್ಯಸೌಧ ಇದನ್ನು ಮಿನಿ ವಿಧಾನಸೌಧ ಎಂತಲೂ ಕರೆಯುತ್ತಾರೆ.ಈ ವಿಧಾನಸೌಧದ ಮುಂಭಾಗದಲ್ಲಿರುವ ಮೆಟ್ಟಿಲೇರಿ ಒಳ ಪ್ರವೇಶಿಸಿದರೆ ಸಭಾಂಗಣದ ಬಾಗಿಲು ನಮಗೆ ಸ್ವಾಗತಿ ಸುತ್ತಿದೆ. ಆ ಸಭಾಂಗಣದ ಪ್ರವೇಶದ್ವಾರದ ಮೇಲಿರುವುದೇ ಇತ್ತೀಚೆಗೆ ರಚನೆಯಾದ ಅತಿ ಬೃಹತ್ ಹಾಗೂ ಆಕರ್ಷಕ ಶೈಲಿಯ ಭಿತ್ತಿಚಿತ್ರ, ಕಲಾವಿದ ಅಂದಾನಿಯವರು ರಚಿಸಿದ ಭಿತ್ತಿಚಿತ್ರ ಮುಖ್ಯವಾಗಿ ಭಾರತೀಯ ಸಂಸ್ಕೃತಿಯ ಇತಿಹಾಸವನ್ನು ತ್ಯಾಗ,

ಶಿಕ್ಷಣವನ್ನು ಬಿಂಬಿಸುವಂತಹ ಹಿನ್ನೆಲೆಯಲ್ಲಿ ರಚಿತ ಗೊಂಡಿದೆ. ಈ ಕೃತಿಯಲ್ಲಿ ಬಹುಭಾಗ ಕೆಂಪು ವರ್ಣದಿಂದ ಕೊಡಿದೆ. ಬಹುಶಃ ಇದು ಈ ಭಾಗದ ಬಿಸಿಲು ಹಾಗೂ ಬರಡನ್ನು ಬಿಂಬಿಸುತ್ತಿರಬೇಕು ಅದರ ಮೇಲೆ ಬೌದ್ಧಧರ್ಮದ ಸಂಕೇತ ವಾಗಿರುವ ಸ್ತೂಪಗಳು ಅಲ್ಲಿಯೇ ಹಸನ್ಮುಖಿಯಾಗಿರುವ ಗೌತಮ ಬುದ್ಧ, ಮಹಾವೀರ, ಶಿವಶರಣರು, ಇವರಲ್ಲದೇ ಈ ಭಾಗದ ವಾಸ್ತುಶಿಲ್ಪಗಳು, ಯಾತ್ರೆ ಸ್ಥಳಗಳು, ಕಮಾನುಗಳು ಇವಲ್ಲದೇ ಈ ಭಾಗದ ದಿನ ನಿತ್ಯದ ಬದುಕಿನಲ್ಲಿ ಹರಡಿರುವ ಜನ ಜೀವನಶೈಲಿ ಹಾಗೂ ಇಲ್ಲಿಯ ಗಟ್ಟಿತನದ ಸಂಕೇತಗಳನ್ನು ತೋರಿಸುವ ಗೊಳಿ, ಇವೆಲ್ಲ ಕೃತಿಯ ಜೀವಾಳವಾಗಿವೆ. ಈ ಕೃತಿಯ ಎಡಭಾಗದಲ್ಲಿ ಭಾರತೀಯ ಮಹಾನ್ ನಾಯಕರಾದ ಡಾ.ಬಿ.ಆರ್. ಅಂಬೇಡ್ಕರ, ನೆಹರು, ಇಂದಿರಾ ಗಾಂಧಿಯವರ ಭಾವಚಿತ್ರಗಳು ಹಾಗೂ ಮಹಾತ್ಮ ಗಾಂಧಿಯವರನ್ನು ಬಾಲಕ ಕರೆದೊಯ್ಯುತ್ತಿರುವ ಚಿತ್ರ ಮೇಲ್ಭಾಗದಲ್ಲಿ ಅಜಂತಾ ಚಿತ್ರಗಳ ಪಡೆಯಚ್ಚು ಹಾರುತ್ತಿರುವ ಬಳ್ಳಿಯ ಪಾರಿವಾಳಗಳು, ಸ್ವತಂತ್ರತೆ ಯನ್ನು ಸೂಚಿಸುತ್ತವೆ ಹಾಗೂ ಕೆಳಗಡೆ ವಿಶ್ವವಿದ್ಯಾಲಯ ಇವೆಲ್ಲ ಈ ಭಾಗದ ಸಮಗ್ರ ಚಿಂತನೆಯನ್ನು ಪ್ರತಿಬಿಂಬಿಸುತ್ತವೆ.

ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯಲ್ಲಿ ಮುಖ್ಯವಾಗಿ ಮೂರು ನಾಲ್ಕು ಭಿತ್ತಿಚಿತ್ರಗಳನ್ನು ಕಾಣಬಹುದು. 1. ಪ್ರೇಸ್ಕೊ ಶೈಲಿಯ ಭಿತ್ತಿಚಿತ್ರ ರಚಿಸಿದ್ದು, 2. ಆಕ್ರಾಲಿಕ ಶೀಟ್‌ಗಳ ತುಕಡಿಗಳನ್ನು ಬಳಸಿ ರಚಿಸಿದ್ದಾರೆ. 3. ವಾರ್ಲಿ ಶೈಲಿಯ ಭಿತ್ತಿಚಿತ್ರ ವಾಗಿದೆ 4. ಮಧುಬನಿ ಶೈಲಿಯ ಭಿತ್ತಿಚಿತ್ರವಾಗಿದೆ. ಎಂಬತ್ತರ ದಶಕದ ಪ್ರಾರಂಭದಲ್ಲಿ ಈ ಸಂಸ್ಥೆ ಈಗಿರುವ ಸ್ಥಳದಲ್ಲಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಿದಾಗ ಅಲ್ಲಿ ಕಲಾಶಾಲೆ ಯನ್ನು ಪ್ರಸ್ತುತಪಡಿಸುವ ಅಥವಾ ಕಲೆಯ ಅಸ್ತಿತ್ವವನ್ನು ತೋರಿಸುವ ಒಂದು ವಾತಾವರಣ ಅವಶ್ಯಕತೆಯನ್ನು ಮನಗಂಡ ಕಲಾವಿದ ಅಂದಾನಿಯವರು ಸಂಸ್ಥೆಯ ಕಟ್ಟಡದ ಬಲಭಾಗದಲ್ಲಿ ಒಂದು ಭಿತ್ತಿಚಿತ್ರವನ್ನು ರಚಿಸಿದ್ದಾರೆ. ಬಹುತೇಕ ನೀಲಿ ಹಾಗೂ ಬಿಳಿಯ ಬಣ್ಣದಲ್ಲಿ ರಚನೆಯಾದ ಈ ಕೃತಿ ಆಕೃತಿಯ ಬಹುಭಾಗ ಮಹಿಳೆಯನ್ನು ಪ್ರಕೃತಿಯನ್ನಾಗಿ ಇಲ್ಲಿ ಬಿಂಬಿಸಲು ಪ್ರಯತ್ನಿಸಿದ್ದಾರೆ. ಅದೇ ರೀತಿ ಜಾನಪದದ ಕೋಲಾಟದ ತಂಡವನ್ನು ಕೇವಲ ರೇಖೆಗಳ ಮುಖಾಂತರ ಚಿತ್ರಿಸಿದ್ದಾರೆ. ಇವೆಲ್ಲದರ ಮಧ್ಯ ಗಂಟೆ ಕೊರಳಲ್ಲಿ ಕಟ್ಟಿಕೊಂಡ ದೊಡ್ಡ ಬೆಕ್ಕು ಹಾಗೂ ಪಕ್ಕದಲ್ಲಿಯೇ ಇಲಿಗಳನ್ನು ಚಿತ್ರಿಸಿದ್ದು ಕಲಾವಿದ ಸೂಕ್ಷ್ಮವಾಗಿ ಯಾವುದೋ ಸಂದೇಶಗಳನ್ನು ನೀಡು ವಂತೆ ಗೋಚರಿಸುತ್ತದೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ರಚಿತ ವಾಗಿರುವ ಕೋಲೇಜ್ (ಮೂಜೈಯಿಕ್) ಭಿತ್ತಿಚಿತ್ರ ಬಣ್ಣ ಬಣ್ಣದ ಆಕ್ರಾಲಿಕ್ ತುಕಡಿಗಳನ್ನು ಬಳಸಿ ಈ ಭಿತ್ತಿಚಿತ್ರವನ್ನು ರಚಿಸಿದ್ದಾರೆ.


ಗೋಡೆ ಮೇಲಿನ ಭಿತ್ತಿಚಿತ್ರ

ಕಲಾವಿದರಾದ ಚಿತ್ರಶೇಖರ್‌ರವರು ಈ ಭಿತ್ತಿಚಿತ್ರ ರಚಿಸಿದು ಕಲಾವಿದ ಅಂದಾನಿಯವರು ಇದರ ಸಂಯೋಜನೆ ಹಾಗೂ ಡ್ರಾಯಿಂಗ್‌ನ್ನು ಮಾಡಿದ್ದಾರೆ. ಇದರ ಆಕ್ರಾಲಿಕ್ ತುಣುಕುಗಳು ಆ ಕಾಲೇಜಿನ ವಿದ್ಯಾರ್ಥಿ ವೃಂದದವರು ಜೋಡಿಸಿದ್ದಾಗಿದೆ. ಕಲಾಕೃತಿಯನ್ನು ಕಾಲೇಜಿನ ದಾರಿಯಲ್ಲಿ ಮಾಡಿದ್ದಾಗಿದೆ. ಕಲಾಕೃತಿ ಮೂಜೈಯಿಕ ಮಾಧ್ಯಮದಿಂದ ಕೂಡಿದ್ದಾಗಿದೆ. ಭಿತ್ತಿಚಿತ್ರ ನಮ್ಮ ಸಂಸ್ಕೃತಿಯಲ್ಲಿ ನಮ್ಮ ಬದುಕಿನ ಪರಂಪರೆಯ ಹಿನ್ನೆಲೆಯಲ್ಲಿ ರಚಿತಗೊಳ್ಳುವ ಒಂದು ಪ್ರಬಲವಾದ ದೃಶ್ಯ ಮಾಧ್ಯಮವಾಗಿ ಕಲಾವಿದನ ಕಲ್ಪನೆಯ ಅಭಿವ್ಯಕ್ತಿಗೆ ಗೋಡೆಗಳು ಹಾಗೂ ತಾರಸಿಗಳು ಸೂಕ್ತ ಸ್ಥಳಗಳಾಗಿದ್ದವು ಎಂಬುದಕ್ಕೆ ಜಗತ್ ಪ್ರಸಿದ್ಧ ಅಜಂತಾ ಭಿತ್ತಿಚಿತ್ರಗಳೇ ಸಾಕ್ಷಿಯಾಗಿವೆ.

ರೇಖಾಚಿತ್ರಗಳು ವರ್ಣಚಿತ್ರಗಳು ಗೋಡೆಗಳನ್ನು ಅಲಂಕರಿಸಿ ರುವುದು ಗಮನಿಸಬೇಕಾದ ಇನ್ನೊಂದು ಅಂಶ. ಹಳೆಯ ಕಾಲದ ಮನೆಗಳಲ್ಲಿ ಗ್ರಾಮೀಣ ಹಿನ್ನೆಲೆಯ ಮಹಿಳೆ ಯರು ತಮ್ಮ ಮನೆಯ ಬಾಗಿಲ ಅಕ್ಕ ಪಕ್ಕ ಬಣ್ಣದಿಂದ ರಂಗೋಲಿ ರೀತಿಯ ಚಿತ್ತಾರ ಬಿಡಿಸುತ್ತಿದ್ದುದು ಸಾಮಾನ್ಯ ವಾಗಿತ್ತು. ಈಗ ಆ ಬಗೆಯ ಗೋಡೆ ಮೇಲಿನ ರಂಗೋಲಿ ಅಪರೂಪವಾದರು ಬಾಗಿಲಲ್ಲಿ ನೆಲದ ಮೇಲೆ ಅಥವಾ ಗೋಡೆ ಮೇಲೆ ಎನಾಮಲ್ ಪೇಂಟ್‌ನಿಂದ ರಂಗೋಲಿ ಚಿತ್ರ ಬಿಡಿಸು ವುದು ಅಥವಾ ರಂಗೋಲಿ ಚಿತ್ರ ಇರುವ ಸಿದ್ದಪಡಿಸಿದ ಸ್ಟಿಕರ್‌ಗಳನ್ನು ಕೊಂಡುತಂದು ಅಂಟಿಸಿಕೊಳ್ಳುವವರು ಕಡಿಮೆ ಏನೂ ಇಲ್ಲ. ಗುಲಬರ್ಗಾದ ಎಂ.ಆರ್. ವೈದ್ಯಕೀಯ ಕಾಲೇಜಿನಲ್ಲಿರುವ ಭಿತ್ತಿಚಿತ್ರವು ಈ ವೈದ್ಯಕೀಯ ಕಾಲೇಜಿನ ಮುಂಭಾಗದಲ್ಲಿರುವ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರು ಹಾಗೂ ಶಿಕ್ಷಣಪ್ರೇಮಿಗಳಾದ ಶ್ರೀ ಮಹಾದೇವಪ್ಪಾ ರಾಂಪುರೆ ಅವರ ಶಿಲ್ಪವಿದ್ದು, ಇದನ್ನು ಖ್ಯಾತ ಕಲಾವಿದರಾದ ಧನಂಜಯ ಶಿಲ್ಪಿಯವರು ಶಿಲ್ಪವನ್ನು ರಚಿಸಿದ್ದಾರೆ. ಒಳ ಪ್ರವೇಶಿಸಿದರೆ ಒಳಾಂಗಣದಲ್ಲಿ ಅತಿ ಬೃಹತ್ ಹಾಗೂ ಆಕರ್ಷಕ ಶೈಲಿಯ ಭಾರತೀಯ ವೈದ್ಯಕೀಯ ಶಾಸ್ತ್ರದ ಬಗೆಗಿನ ಭಿತ್ತಿಚಿತ್ರವು ವೈದ್ಯಕೀಯ ಶಾಸ್ತ್ರದ ಬಗೆಗೆ ಸಂಪೂರ್ಣವಾಗಿ ತಿಳಿ ಹೇಳುವಂತಿದೆ. ಈ ಭಿತ್ತಿಚಿತ್ರವನ್ನು ರಚಿಸಿದವರು ಕಲಾವಿದ ಡಾ. ಆಕಾಶ ಡಿ.ವಿ ಅವರು. 10x30 ಅಡಿ ಅಳತೆಯ ಈ ಭಿತ್ತಿಚಿತ್ರ ಮುಖ್ಯವಾಗಿ ಭಾರತೀಯ ವೈದ್ಯಕೀಯ ಶಾಸ್ತ್ರದ ಶಿಕ್ಷಣ

ಹಾಗೂ ಇತಿಹಾಸವನ್ನು ಬಿಂಬಿಸುವ ಹಿನ್ನೆಲೆಯಲ್ಲಿ ರಚಿತ ಗೊಂಡಿದೆ. ಸಿಮೆಂಟ್ ಗೋಡೆಯ ಮೇಲೆ ಬಿಳಿಯ Acrylic Emotion ಬಳಿದು ನಂತರ ಆಕೃತಿಗಳನ್ನು ರಚಿಸಿ ಆದಾದ ನಂತರ ಆಕ್ರಾಲಿಕ ವರ್ಣಗಳಿಂದ ಪೂರ್ತಿಗೊಳಿಸಲಾಗಿದೆ. ಆಕ್ರಾಲಿಕ್ ವರ್ಣಗಳು ಪ್ಲಾಸ್ಟಿಕ್ ಗುಣವನ್ನು ಹೊಂದಿರುವುದ ರಿಂದ ಬಹುಕಾಲ ಬಾಳಿಕೆ ಬರುವುದಲ್ಲದೆ ಪರಿಸರದ ವೈಪರಿತ್ಯಕ್ಕೂ ಗುಣಾತ್ಮಕವಾಗಿ ಹೊಂದಿಕೊಳ್ಳುತ್ತದೆ.

ಆಕೃತಿಗಳ ಶೈಲಿಯು ಭಾರತೀಯ ಶೈಲಿಯಲ್ಲೊಂದಾದ ಗಾಂಧಾರ ಶೈಲಿಯಲ್ಲಿ ಚಿತ್ರಗಳ ರಚನೆಯಾಗಿದ್ದು ಈ ಭಿತ್ತಿಚಿತ್ರದ ಸಂಪೂರ್ಣ ಸಾರವು ಬ್ರಹ್ಮನ ಓಂಕಾರದೊಂದಿಗೆ ಹುಟ್ಟು ಯಮರಾಜನೊಂದಿಗೆ ಸಾವು ಎಂಬುದು ತಿಳಿಸುತ್ತದೆ. ಇದರ ಮಧ್ಯದಲ್ಲಿ ಭಾರತೀಯ ವೈದ್ಯಕೀಯ ಶಾಸ್ತ್ರದಲ್ಲಿ ಬೆಳೆದು ಬಂದ ದಾರಿ ಹಾಗೂ ಬೆಳೆವಣಿಗೆಯ ಹಂತಗಳನ್ನು ಹಂತ ಹಂತವಾಗಿ ರಚಿತವಾಗಿವೆ. ತದನಂತರ ಶುಶ್ರುತಋಷಿ ಎಂಬ ಮಹಾ ವೈದ್ಯಕೀಯ ತಜ್ಞರು ಮೊಟ್ಟ ಮೊದಲ ಬಾರಿಗೆ ಭಾರತೀಯ ವೈದ್ಯಕೀಯ ಶಾಸ್ತ್ರದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿದನು ಎಚಿಬು ದನ್ನು ಕಾಣಬಹುದು. ಈ ಭಿತ್ತಿಚಿತ್ರದಲ್ಲಿ ಅದರ ಜೊತೆಗೆ ಈಗಿನ ಹೊಸ ತಂತ್ರಜ್ಞಾನದ ಸಿಟಿಸ್ಕ್ಯಾನ್ ಮಷೀನನ್ನು ಕೂಡ ರಚಿಸಿದ್ದು, ಹೊಸ ತಂತ್ರಜ್ಞಾನದ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿರುವುದನ್ನು ರಚಿಸಲಾಗಿದೆ. ಕೊನೆಯಲ್ಲಿ ಯಮರಾಜನನ್ನು ಬಿಡಿಸಿದ್ದು, ಇದರ ಅರ್ಥ ಸಾವು ಅನಿವಾರ್ಯ ಎಂಬಂತೆ ಬಿಂಬಿಸಿದನ್ನು ನೋಡಬಹುದು.

ವೀರೇಂದ್ರ ಪಾಟೀಲ ಕಲ್ಯಾಣ ಮಂಟಪದ ಒಳಗಡೆ ಹೋದಾಗ ಒಂದೆಡೆಯಲ್ಲಿ ವೀರೇಂದ್ರ ಪಾಟೀಲರ ಶಿಲ್ಪವಿದ್ದು, ಅದರ ಎದುರುಗಡೆಗೆ 5x7 ಅಡಿ ಅಳತೆಯ ದುಂಡ ದುಂಡನೆಯ ದಪ್ಪನೆಯ ಕಲಾಕೃತಿಗಳ ಭಿತ್ತಿಚಿತ್ರಗಳು ಮಾದರಿ ಯಲ್ಲಿ ಸಂಯೋಜಿಸಿ ಸಾಧಾರಣ ಗೋಡೆಯೇ ಶಾಶ್ವತ ಕಲಾ ಪ್ರದರ್ಶನದ ಭಿತ್ತಿಯಂತೆ ಮಾಡಲಾಗಿದೆ. ಈ ಭಿತ್ತಿಚಿತ್ರವು ಕಲ್ಯಾಣಮಂಟಪದೊಳಗೆ ಬರುವವರನ್ನು ವಾದ್ಯ ಮೇಳ ದೊಂದಿಗೆ ಸ್ವಾಗತಿಸುವದಾಗಿದೆ.


ಅತ್ಯಂತ ಪ್ರೌಢಿಮೆಯ ಕುಶಲತೆಯ ಭಿತ್ತಿಚಿತ್ರ ಹಾಗೂ ಶಿಲ್ಪ ಗಳನ್ನು ನೋಡಬೇಕು ಎನ್ನುವವರಿಗೆ ಗುಲಬರ್ಗಾ ವಿಶ್ವ ವಿದ್ಯಾಲಯ ಅತ್ಯುತ್ತಮ ಸ್ಥಳ. ಕಾರ್ಯಸೌಧದ ಪಕ್ಕದಲ್ಲಿರುವ ಈ ಶಿಲ್ಪವನ್ನು ಬೆಂಗಳೂರಿನ ಕಲಾವಿದರಾದ ವೆಂಕಟಾಚಲಪತಿ ಯವರು ರಚಿಸಿದ್ದು ಈ ಶಿಲ್ಪವು ಶಿಕ್ಷಣ (ಓದು), ವಿಜ್ಞಾನ ಹಾಗೂ ಕ್ರೀಡೆಯ ಬಗೆಗೆ ರಚನೆಯಾಗಿದ್ದು, ಒಂದು ಮಹತ್ವ ಪೂರ್ಣ ಸಂದೇಶ ಸಾರುವುದಾಗಿದೆ. ಅದೇ ರೀತಿ ಕನ್ನಡ ಅಧ್ಯಯನ ಸಂಸ್ಥೆಯ ಪಕ್ಕದ ಗೋಡೆಯ ಮೇಲೆ ಬಹು ಸುಂದರವಾದ ಭಿತ್ತಿಚಿತ್ರ ರಚಿಸಿದ್ದು, ಸಿಮೆಂಟ್ ಮತ್ತು ಗಾಜಿನ ತುಂಡುಗಳಿಂದ ರಚಿತಗೊಂಡಿದ್ದು ಜಾನಪದ ವಿಷಯವನ್ನಾ ಧರಿಸಿ ರಚಿತವಾಗಿರುವುದನ್ನು ಕಾಣಬಹುದು. ಇದನ್ನು ರಚಿಸಿದ ಕಲಾವಿದರು ಬಾಸುದಿದಾಸ ಗುಪ್ತಾ ಅವರು. ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದಲ್ಲಿರುವ ಭಿತ್ತಿಚಿತ್ರಗಳು ಸಸ್ಯಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ್ದಾಗಿದರೆ ಗಣಿತಶಾಸ್ತ್ರ ವಿಭಾಗದಲ್ಲಿ ಗಣಿತಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ್ದಾಗಿದ್ದು, ಇಲ್ಲಿನ ವೈಶಿಷ್ಟ್ಯವಾಗಿದೆ.

ಹೋಟೆಲು, ಥಿಯೇಟರು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಮದುವೆ ಮಂಟಪಗಳು ಹೀಗೆ ಎಲ್ಲೆಡೆಯೂ ಗೋಡೆಗಳ ಮೇಲೆ ರಚಿಸಿದ ವರ್ಣಚಿತ್ರ ಅಥವಾ ಶಿಲ್ಪಕಲಾಕೃತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಪೌರಾಣಿಕ ವಿಷಯಗಳಿಂದ ಹಿಡಿದು ಆಧುನಿಕ ಬದುಕಿನವರೆಗಿನ ವಿಷಯಗಳು ಸಾಂಪ್ರದಾಯಿಕ ಶೈಲಿಯಿಂದ ನವ್ಯಶೈಲಿಯವರೆಗೆ ವಿಷಯಕ್ಕೆ ತಕ್ಕ ಕಲಾವಿದನ ಮನೋಭಾವಕ್ಕೆ ತಕ್ಕ ನಿರೂಪಣೆ ಶೈಲಿಯಿಂದ ಜಾನಪದೀಯ ವಸ್ತು ಶೈಲಿಗಳು ವಿಶೇಷವಾಗಿರುವುದು ದೇಶಿ ಆಕರ್ಷಣೆಯ ಪ್ರತೀಕ. ಜನಪದ ಶೈಲಿಯ ಚಿತ್ರಗಳು ನೋಡುಗರ ಕಣ್ಸೆಳೆಯುತ್ತವೆ. ವಿಶೇಷ ವೆಂದರೆ ಕೆಲವು ಗೋಡೆಗಳ ತುಂಬಾ ಚೀನಾ, ಇಟಲಿ ಮೊದಲಾದ ವಿದೇಶಿ ಸಂಪ್ರದಾಯದ ಚಿತ್ರಗಳಿವೆ. ಈ ಭಿತ್ತಿಚಿತ್ರ ಶಿಲ್ಪಗಳಿಗೆ ಬಳಕೆಯಾಗಿರುವ ಸಾಮಗ್ರಿಗಳು ವೈವಿಧ್ಯಮಯ, ಕೆಲವಡೆ ಏಕವರ್ಣದ ರೇಖಾಚಿತ್ರಗಳಷ್ಟೆ ಇದ್ದರೆ ಕೆಲವಡೆ ಬಹುವರ್ಣಗಳು ಬಳಕೆಯಾಗಿವೆ. ಕೆಲವಡೆ ಬಣ್ಣದ ಸಣ್ಣ ಸಣ್ಣ ಟೈಲ್ಸ್ ಬಿಲ್ಲೆಗಳನ್ನು (ತುಂಡುಗಳನ್ನು) ಬಳಸಿಯೇ ವರ್ಣಚಿತ್ರದ ಕೃತಿ ರಚನೆಯಾಗಿವೆ. ಭಿತ್ತಿಚಿತ್ರ ಹಾಗೂ ಶಿಲ್ಪಗಳಿಗೆ ಕಲ್ಲು, ಸಿಮೆಂಟ್, ಲೋಹ, ಫೈಬರ್ ಹಂಚಿನ ಚೂರು ಇತ್ಯಾದಿಗಳು ಬಳಕೆಯಾಗಿವೆ. ಈ ಕಲಾಕೃತಿಗಳು ಒಂದು ಅಡಿಯಿಂದ ಕಟ್ಟಡದ ಇಡೀ ಗೋಡೆಯ ಉದ್ದಗಲ ವ್ಯಾಪಿಸಿದ, ಅಂದರೆ ಸುಮಾರು 20 ರಿಂದ 30 ಅಡಿಯ ಎತ್ತರದ ಚಿತ್ರಗಳು ಇವೆ. ಶ್ರೀಮಂತರು ಶಿಕ್ಷಣ ಸಂಸ್ಥೆಗಳು ಹಾಗೂ ಕಾರ್ಪೋರೇಟ್ ಸಂಸ್ಥೆಗಳು ಈ ಭಿತ್ತಿಚಿತ್ರ ಮತ್ತು ಶಿಲ್ಪಗಳಿಗಾಗಿ ಲಕ್ಷಾಂತರ ಹಣ ಖರ್ಚು ಮಾಡಿದರೆ ಕೆಲವರು ನೂರು ಅಥವಾ ಸಾವಿರ ರೂಪಾಯಿ ವಿನಿಯೋಗಿಸಿ ಸುಂದರ ಚಿತ್ತಾರ ಮಾಡಿಸಿದ ಮಧ್ಯಮ ವರ್ಗದವರೂ ಇದ್ದಾರೆ ವಿಶ್ವಾಸದಿಂದ ಉಚಿತವಾಗಿ ರಚಿಸಿದ ಚಿತ್ರಗಳು ಉಂಟು.

ಡಾ. ವಿ.ಜಿ. ಅಂದಾನಿ, ಎಸ್.ಎಸ್. ಸಿಂಪಿ, ರಾಜೇಶ ದೇವಣಗಾಂವಕರ್, ಅಮೃತ ಸಾಹು, ಆಕಾಶ ಡಿ. ವೀರೇಂದ್ರ ಶಾಹ, ರಾಜಕುಮಾರು ಎಸ್.ಕೆ. ವಿಕ್ರಮ ಗೋಕಲೆ, ಸಂತೋಷ ರಾಠೋಡ ಹೀಗೆ ಅನೇಕ ಹತ್ತಾರು ಕಲಾವಿದರು ಇಂದಿಗೂ ಗುಲಬರ್ಗಾ ನಗರವನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುತ್ತಿದ್ದಾರೆ.

(ಕೆಡಿ)

ಗುಲ್ಬರ್ಗಾ ಕೋಟೆ ಮತ್ತು ತೋಪುಗಳು: ಗುಲಬರ್ಗಾ ಕೋಟೆ ಯಾದವರ ಸಾಮಂತನಾದ ರಾಜಾ ಗುಲಚಂದ ಕಟ್ಟಿಸಿದನೆಂದು ಪ್ರತೀತಿಯಿದೆ. ಅನಂತರ ಈ ಕೋಟೆಯನ್ನು ವಶಪಡಿಸಿಕೊಂಡ ಹಸನ ಬಹಮನ್ ಷಾ, ಮಹಮದ್ ಷಾ ಇದನ್ನು ಬಲಪಡಿಸಿದರು. ನೆರೆಯ ಹಿಂದೂ ಸಾಮ್ರಾಜ್ಯದಿಂದ ಮತ್ತು ತುಘಲಕರಿಂದ ರಕ್ಷಣೆಯನ್ನು ಪಡೆಯುವ ನಿಟ್ಟಿನಲ್ಲಿ ಕೋಟೆ



ಗುಲಬರ್ಗಾ ಕೋಟೆ ಮೇಲಿನ ತೋಪು

ಯಲ್ಲಿ ಹಲವು ವಿಶೇಷ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಂಡರು. ಸುಮಾರು 61 ಎಕರೆ ವಿಸ್ತೀರ್ಣ ಹೊಂದಿರುವ ಈ ಕೋಟೆ ಎರಡು ಸುತ್ತಿನ ಗೋಡೆಯನ್ನು ಹೊಂದಿದೆ. ವೃತ್ತಾಕಾರದಲ್ಲಿರುವ ಈ ಕೋಟೆಯ ಎರಡು ಗೋಡೆಗಳಲ್ಲಿ ಕೊತ್ತಳ (ಬುರುಜು)ಗಳನ್ನು ನಿರ್ಮಿಸಲಾಗಿದೆ. ರಾಜಧಾನಿಯ ರಕ್ಷಣೆಯಲ್ಲಿ ಈ ಬುರುಜುಗಳು ಅತಿ ಮಹತ್ವದ ಪಾತ್ರವನ್ನು ವಹಿಸಿವೆ. ಕೃತಕ ಕಂದಕದಿಂದ ಆವೃತವಾಗಿರುವ ಈ ಕೋಟೆಯು ಎರಡು ಪ್ರಮುಖ ದ್ವಾರಗಳು ಮತ್ತು ಕೆಲವು ಗುಪ್ತ ದ್ವಾರಗಳನ್ನು ಹೊಂದಿದೆ. ಕೋಟೆಯ ಒಳಗಡೆ 15 ಕಮಾನುಗಳ ಮೂಲಕ ಪ್ರವೇಶಿಸಬಹುದು. ಕೋಟೆಯ ಪಶ್ಚಿಮ ಭಾಗದ ದ್ವಾರವು ಇಂದಿಗೂ ಅತ್ಯಂತ ಸದೃಢ ಸ್ಥಿತಿಯಲ್ಲಿದೆ. 20 ಅಡಿ ಎತ್ತರ 10 ಅಡಿ ಅಗಲದ ವಿಶಾಲವಾದ ಈ ದ್ವಾರಕ್ಕೆ ರಕ್ಷಣೆಯ ದ್ವಾರವನ್ನು (ಬಾಗಿಲು) ಮಾಡಿ ಅದರ ಮೇಲೆ ಕಬ್ಬಿಣದ ಲೇಪನವನ್ನು ನಿರ್ಮಿಸಲಾಗಿದೆ. ಅದರ ಮುಂಭಾಗದಲ್ಲಿ ಮೊನಚಾದ ಕಬ್ಬಿಣದ ಮೊಳೆಗಳನ್ನು ಜೋಡಿಸಲಾಗಿದೆ. ಕೋಟೆ ಕಾಳಗದಲ್ಲಿ ಶತ್ರುಗಳು ಗಜಗಳನ್ನು ಬಳಸಿ ಪ್ರವೇಶದ್ವಾರ ಧ್ವಂಸಗೊಳಿಸಬಾರದೆಂದು ಈ ರಕ್ಷಣಾ ವ್ಯವಸ್ಥೆ ಅಳವಡಿಸಲಾಗಿದೆ.


ಹೀಗೆ ಕೋಟೆಯ ಒಳಗಡೆ ಹಲವು ರೀತಿಯ ರಕ್ಷಣಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದಲೇ ಈ ಕೋಟೆಯು ಅಂದಿನಿಂದ ಇಂದಿನವರೆಗೆ ಅತ್ಯಂತ ಸುಭದ್ರ ಸ್ಥಿತಿಯಲ್ಲಿದೆ.

ಬಹಮನಿಯರ ಕಾಲದ ತೋಪುಗಳು: 1325ರಲ್ಲಿ ಸ್ಪೇನಿನಲ್ಲಿ ಮೊದಲ ಬಾರಿಗೆ ಸಿಡಿಮದ್ದನ್ನು ಗ್ರನಾಡದ ಮೂವರು ತಮ್ಮ ಯುದ್ಧದಲ್ಲಿ ಬಳಸಿದರು. ಬಹಮನಿಯರಲ್ಲಿ ಸೇವೆಗಾಗಿ ಬಂದ ಟರ್ಕಿ ಮತ್ತು ಪರ್ಶಿಯನ್ನರು ಈ ಸಿಡಿಮದ್ದು ವಿದ್ಯೆಯನ್ನು ಬಲ್ಲವರಾಗಿದ್ದರು. ಇವರಿಗೆ ತಮ್ಮ ಸೈನ್ಯದಲ್ಲಿ ಅವಕಾಶ ನೀಡಿರುವ ಬಹಮನಿಯ ಸುಲ್ತಾನರು ತಮ್ಮ ಯುದ್ಧಗಳಲ್ಲಿ ಈ ತಂತ್ರವನ್ನು ಅಳವಡಿಸಿಕೊಂಡರು. ಕ್ರಮೇಣ ತೋಪುಗಳ ಬಳಕೆ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿತು. 1365ರಲ್ಲಿ ಮಹಮದ್ ಷಾಹ 'ಆಧೋನಿ' ಯುದ್ಧದಲ್ಲಿ ವಿಜಯನಗರದ ವಿರುದ್ಧ ಇದನ್ನು ಬಳಸಿ ಅತಿ ಶೀಘ್ರದಲ್ಲಿಯೇ ಜಯಶಾಲಿಯಾದ. ಇದಾದ ಅನಂತರವೇ ಬಾಬರ 1526ರ ಪಾಣಿಪತ್ತ ಯುದ್ಧದಲ್ಲಿ ಫಿರಂಗಿಯನ್ನು ಬಳಸಿದ. ಈ ಸಿಡಿಮದ್ದಿನ ಬಳಕೆಯಿಂದ ರಕ್ಷಣಾ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ಆರಂಭವಾಯಿತು. ಸ್ಥಳೀಯ ಅರಸರು ಇದನ್ನು ಬಳಸಬಹುದೆನ್ನುವುದನ್ನು ಗಮನದಲ್ಲಿಟ್ಟುಕೊಂಡು ಬಹಮನಿಯ ಅರಸರು ತಮ್ಮ ಕೋಟೆಯ ರಚನಾ ವ್ಯವಸ್ಥೆಯನ್ನೇ ಬದಲಾಯಿಸಿದರು. ಜೋಡು ಕೋಟೆ ಗೋಡೆಯ ನಿರ್ಮಾಣದ ಉದ್ದೇಶ ಶತ್ರುಗಳು ಸಿಡಿಮದ್ದನ್ನು ಬಳಸಿ ಕೋಟೆಗೋಡೆ ಧ್ವಂಸಗೊಳಿಸಬಾರದೆಂದು ಗೋಡೆಯ ಆಕೃತಿಯನ್ನೇ ಬದಲಿಸಿದರು. ಕೆಳಹಂತದ ಗೋಡೆ ದಪ್ಪವಾಗಿದ್ದು ಮೇಲೆ ಹೋದಂತೆ ಒಂದೇ ಕಲ್ಲಿನಲ್ಲಿ ಅಂತ್ಯಗೊಳ್ಳುತ್ತದೆ. ಹೊರಗೋಡೆಗಿಂತ ಒಳಗೋಡೆಯು ಎತ್ತರವಾಗಿದ್ದು ಮೇಲಿನಿಂದ ಬರುವ ಸಿಡಿಮದ್ದನ್ನು ನಿಲ್ಲಿಸುವ ಸಾಮರ್ಥ್ಯ ಈ ಗೋಡೆಗಳಿಗಿದೆ. ಈ ರೀತಿಯ ಕೋಟೆಯ ರಚನೆಯ ತಾಂತ್ರಿಕ ಹಿನ್ನೆಲೆಯನ್ನು ನಾವು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರೆ, ಶತ್ರುಗಳು ಒಂದು ವೇಳೆ ಕೋಟೆ ಕಾಳಗದಲ್ಲಿ ಸಿಡಿಮದ್ದನ್ನು ಬಳಸಿದರೆ ಆ ಮದ್ದಿನ ಶಕ್ತಿಯನ್ನು ಕಂದಕದಲ್ಲಿಯ ನೀರು ಸ್ವಲ್ಪಮಟ್ಟಿಗೆ ಕಡಿಮೆ ಮಾಡುತ್ತದೆ. ನಂತರ ಮೊದಲನೆಯ ಗೋಡೆಗೆ ಸಿಡಿದು ಕಂದಕದ ನೀರಿನಲ್ಲಿ ಬಿದ್ದು ತನ್ನ ಸಂಪೂರ್ಣ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಒಂದು ವೇಳೆ ತೋಪುಗಳ ಗುರಿ ಎತ್ತರವಾಗಿದ್ದರೆ ಎರಡನೆಯ ಗೋಡೆಗೆ ತಗುಲಿ ಎರಡು ಗೋಡೆಗಳ ಮಧ್ಯದಲ್ಲಿರುವ ಖಾಲಿ ಸ್ಥಳದಲ್ಲಿ ಬೀಳುತ್ತದೆ. ಇದರಿಂದ ಯಾವುದೇ ರೀತಿಯ ಹಾನಿ ಸಂಭವಿಸುವುದಿಲ್ಲ. ಕೋಟೆಕಾಳಗದಲ್ಲಿ ಪ್ರತಿದಾಳಿಯ ವ್ಯವಸ್ಥೆಗಾಗಿ ಕೋಟೆಯ ಸುತ್ತಲೂ 26 ಬೃಹತ್ ಪ್ರಮಾಣದ ತೋಪುಗಳನ್ನು ನಿಲ್ಲಿಸಿದ್ದಾರೆ. ಒಳಗೋಡೆಯ ಬುರುಜುಗಳ ಮೇಲೆ ಅರ್ಧವೃತ್ತಾಕಾರದ ತೋಪು ಕಟ್ಟೆ ನಿರ್ಮಿಸಿ ಕೇಂದ್ರದಲ್ಲಿರುವ ಕಲ್ಲಿಗೆ 5 ರಂಧ್ರಗಳನ್ನು ಹಾಕಿ 'ಗ' ಆಕೃತಿಯ ಲೋಹದ ಪಾಸ್ಪಿಯನ್ನು ಮಾಡಿ ಅದರ ಮೇಲೆ ತೋಪನ್ನು ಜೋಡಿಸಲಾಗುವುದು. ತೋಪನ್ನು ಅರ್ಧವೃತ್ತಾಕಾರದಲ್ಲಿ ತಿರುಗಿಸುವ ವ್ಯವಸ್ಥೆ ಪ್ರತಿಯೊಂದು ತೋಪಿಗೂ ಇದೆ.

ತೋಪುಗಳ ರಚನೆ: ಟರ್ಕಿ, ಸ್ಪೇನ್ ಮತ್ತು ಪರ್ಶಿಯಾದಿಂದ ಬಂದ ಸೈನಿಕರು ಮತ್ತು ಲೋಹ ತಯಾರಕರು ಗುಲಬರ್ಗಾದ ಬಹಮನಿಯಲ್ಲಿ ಸೇವೆಗೆ ಸೇರಿ ವಿವಿಧ ಆಕೃತಿಯ ತೋಪುಗಳ ಬಿಡಿ ಭಾಗಗಳನ್ನು ನಿರ್ಮಿಸಲು ಆರಂಭಿಸಿದರು. ಮೊದಲು ತೋಪಿನ ಬಿಡಿ ಭಾಗವನ್ನು ನಿರ್ಮಿಸಿ ಅದನ್ನು ನಿಗದಿಪಡಿಸಿದ ಸ್ಥಳದಲ್ಲಿ ಕ್ರಮಬದ್ಧವಾಗಿ ಜೋಡಿಸಿ ಸ್ವಲ್ಪ ಪ್ರಮಾಣದಲ್ಲಿ ಶಾಖ ನೀಡಿ ಅದನ್ನು ಭದ್ರಗೊಳಿಸಿಸುತ್ತಿದ್ದರು. ತೋಪುಗಳ ರಚನೆಯ ಕ್ರಮ ಈ ರೀತಿಯಲ್ಲಿದೆ:

ಮೊದಲು 4 ಇಂಚು ಅಗಲ 15 ಅಡಿ ಉದ್ದ ಮತ್ತು ಒಂದು ಇಂಚು ದಪ್ಪನೆಯ ಲೋಹದ ಪಟ್ಟಿಯನ್ನು ಸಿದ್ಧಪಡಿಸಿ

ನಂತರದಲ್ಲಿ 3 ಇಂಚು ಅಗಲದ ಒಂದು ಇಂಚು ದಪ್ಪನೆಯ ಲೋಹದ ಬಳೆಗಳನ್ನು ತಯಾರಿಸುವುದು. ನಂತರ ಮುಂಭಾಗದಲ್ಲಿ ಮತ್ತು ಹಿಂಭಾಗಕ್ಕೆ ಅತಿ ದಪ್ಪನೆಯ ಬಳೆಗಳನ್ನು ತಯಾರಿಸಿಕೊಂಡು ಅದನ್ನು ಕ್ರಮಬದ್ಧವಾಗಿ ಜೋಡಿಸಲಾಗುವುದು. ಜೊತೆಗೆ ಅದನ್ನು ತಿರುಗಿಸಲು ಪ್ರತಿ ಎರಡು ಅಡಿಗೆ ಒಂದೊಂದು ಬಳೆಗಳನ್ನು ಜೋಡಿಸಲಾಗುವುದು. ಅತಿ ಭಾರ ವಾದ ತೋಪನ್ನು ಕೇವಲ ಕೆಲವೇ ಸೈನಿಕರು ತಿರುಗಿಸುವಂತೆ ಜೋಡಿಸಲಾಗುವುದು. ಗುಲಬರ್ಗಾ ಕೋಟೆಯ ಸುತ್ತಲೂ 26 ತೋಪು ಕಟ್ಟೆಯನ್ನು ಗುರುತಿಸಲಾಗಿದೆ. ಅದರಲ್ಲಿ 15 ಅಡಿ ಉದ್ದದ 5 ತೋಪುಗಳು 10 ಅಡಿ ಉದ್ದದ 4 ತೋಪುಗಳು, 4 ಅಡಿ ಉದ್ದದ 2 ತೋಪುಗಳು ಮತ್ತು 25 ಅಡಿ ಉದ್ದದ ದೈತ್ಯಾಕಾರದ ಒಂದು ತೋಪು ಇಂದಿಗೂ ಕೋಟೆಯ ಗೋಡೆಯ ಮೇಲಿದೆ. ಬೃಹದಾಕಾರದ 2 ಅಥವಾ 3 ತೋಪುಗಳಿದ್ದರೆ ಅದಕ್ಕಾಗಿ ದಪ್ಪನೆಯ ವೇದಿಕೆಯನ್ನು ನಿರ್ಮಿಸಲಾಗಿದೆ. ಇದನ್ನು ರಣಮಂಡಲ ಅಥವಾ ಬಾಲ ಹಿಸ್ಸಾರ ಎಂದು ಕರೆಯುತ್ತಾರೆ. ಈ ಸ್ಥಳದಲ್ಲಿ ಮದ್ದು ಗುಂಡಿನ ಸಂಗ್ರಹಣಾ ವ್ಯವಸ್ಥೆಯೂ ಇದೆ.



ಗುಲಬರ್ಗಾ ಕೋಟೆ ಮೇಲಿರುವ ತೋಪು

ತೋಪುಗಳ ಬಳಕೆ ವಿಧಾನ: ತೋಪಿನ ಮುಂಭಾಗದಿಂದ ಕಲ್ಲಿನ ಚಂಡುಗಳು, ಸೀಸದ ಗುಂಡುಗಳು ಮಧ್ಯಮಧ್ಯದಲ್ಲಿ ಸ್ವಲ್ಪ ಪ್ರಮಾಣದ ಸ್ಫೋಟಕ ವಸ್ತುವನ್ನು ಬೆರೆಯಿಸಿ ತೋಪಿನ ಒಳಗಡೆ ತುಂಬಲಾಗುತ್ತಿತ್ತು. ಅದಕ್ಕೂ ಮುಂಚೆ ಒಂದು ಬತ್ತಿಯನ್ನು ಜೋಡಿಸಿ ತೋಪಿನ ಹಿಂಭಾಗದಲ್ಲಿರುವ ರಂಧ್ರದ ಮೂಲಕ ಅದನ್ನು ಹೊರತಂದು ಸ್ವಲ್ಪ ದೂರದಲ್ಲಿ ನಿಂತು ಅದಕ್ಕೆ ಬೆಂಕಿ ಹಚ್ಚಿದರೆ ಒಳಗಡೆಯ ಸ್ಫೋಟಕ ವಸ್ತು ಕಲ್ಲಿನ ಚಂಡುಗಳನ್ನು ಮತ್ತು ಸೀಸದ ಗುಂಡುಗಳನ್ನು ಚೂರು ಚೂರಾಗಿಸಿ, ದೂರದಲ್ಲಿ ಸಿಡಿದು ಬೀಳುತ್ತಿದ್ದವು. ಇನ್ನೂ ಬೃಹದಾಕಾರದ ತೋಪುಗಳಿದ್ದರೆ ಅಲ್ಲಿಯ ಸ್ಫೋಟದಿಂದ ಭಯಾನಕ ಶಬ್ದ ಬಂದು ಸೈನಿಕರ ಕಿವಿಗಳು ಕಿವುಡಾಗುತ್ತಿದ್ದರಿಂದ ತೋಪಿನ ಹಿಂಭಾಗದಲ್ಲಿ ಕೃತಕ ಬಾವಿಯನ್ನು ನಿರ್ಮಿಸಿ ಅದರಲ್ಲಿ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಸೈನಿಕರು ತೋಪಿಗೆ ಬೆಂಕಿ ಹಚ್ಚಿದ ನಂತರ ನೀರಿನಲ್ಲಿ ಮುಳುಗುವುದರಿಂದ ಅವರ ಕಿವಿಯ ಮೇಲೆ ಯಾವುದೇ ರೀತಿಯ ಪರಿಣಾಮ ಆಗುತ್ತಿರಲಿಲ್ಲ.

ಇನ್ನೂ ಕೆಲವೊಂದು ವಿಶೇಷ ರೀತಿಯ ತೋಪುಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ನಿಟ್ಟಿನಲ್ಲಿ ತಯಾರಿಸಲಾಗಿದೆ. ಮಿಶ್ರಲೋಹದಿಂದ ಮಾಡಿರುವ ಈ ತೋಪಿನ ಮೇಲೆ ಅದರ ಬಳಕೆಯ ವಿಧಾನವನ್ನು ಕೆಲವು ಚಿಹ್ನೆಗಳ ಮೂಲಕ ತೋರಿಸಲಾಗಿದೆ. ಅಂತಹ ಕೆಲವೊಂದು ವಿಶೇಷ ತೋಪುಗಳು ಬಹಮನಿಯರ ಕೋಟೆಯ ಮೇಲ್ಭಾಗದಲ್ಲಿ ಕಾಣಬಹುದು. ಕೋಟೆಯ ಉತ್ತರ ಭಾಗದ ಗೋಡೆಯ ಮೇಲೆ 4 ಅಡಿ ಉದ್ದನೆಯ ತಾಮ್ರ ವರ್ಣದ ತೋಪು ಇದೆ. ಇದು ಏಕಲೋಹದಲ್ಲಿ ನಿರ್ಮಿಸಲಾಗಿದೆ. ವಿವಿಧ ಹೂ ಬಳ್ಳಿಗಳಿಂದ ಅಲಂಕೃತವಾದ ಈ ತೋಪಿನ ಮೇಲೆ ಎರಡು ಸಾಲಿನ ಪರ್ಶಿಯನ್ ಶಾಸನವಿದೆ. ಜೊತೆಗೆ ಕೇಂದ್ರ ಭಾಗದಲ್ಲಿ ಎರಡು ಮೀನುಗಳು ಒಂದರ ಹಿಂದೆ ಮತ್ತೊಂದು ತಿರುಗುತ್ತಿದೆ. ಈ ಸಂಕೇತ ತೋಪಿನ ಬಳಕೆಯನ್ನು ಸೂಚಿಸುತ್ತದೆ. ಇದರಿಂದ ಹೊರಬರುವ ಸ್ಫೋಟಕ ವಸ್ತು ಗೋಲಾಕೃತಿಯಲ್ಲಿ ತಿರುಗಿ ಶತ್ರುಗಳಿಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಈ ರೀತಿಯ ಹೊಸ ಹೊಸ ಬಗೆಯ ತಂತ್ರಜ್ಞಾನವನ್ನು ಬಹಮನಿಯ ಅರಸರು ಬಾಬರನಿಗಿಂತ ಮುಂಚೆ ಬಳಸಿದರೆಂದರೆ ಅತಿಶಯೋಕ್ತಿಯೇನಲ್ಲ.

ಈ ರೀತಿಯ ಸ್ಥಿರ ತೋಪುಗಳಲ್ಲದೆ ಯುದ್ಧ ಭೂಮಿಯಲ್ಲಿ ಬಳಸುವ ತೋಪುಗಳು, ಸೈನಿಕರು ಬಳಸುವ ತೋಪುಗಳು ವಿವಿಧ ಬಗೆಯಲ್ಲಿದ್ದುವು. ಸ್ಫೋಟಕ ಅಂಶವಿರುವ ಕಲ್ಲಿನ ಚಂಡುಗಳನ್ನು ಇಂದಿನ ಆಳಂದ ಮತ್ತು ಖಜೂರಗಿಯ ಪ್ರದೇಶದಿಂದ ತರಿಸುತ್ತಿದ್ದರೆಂದು ಉಲ್ಲೇಖವಿದೆ. ಇಂತಹ ಕಲ್ಲಿನ ಚಂಡುಗಳು ಕೋಟೆಯಲ್ಲಿ ಸದಾ ಸಂಗ್ರಹಿಸಿಡುತ್ತಿದ್ದರು. ಬಹಮನಿಯ ಸುಲ್ತಾನರು ಈ ರೀತಿಯ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವದರಿಂದಲೇ ಅವರ ಎಲ್ಲಾ ಕೋಟೆಗಳು ಇಂದಿಗೂ ಸದೃಢವಾಗಿವೆ.

(ಎಸ್‌ಎಸ್‌ವಿ)

ಗೃ

ಗೃಹಾಲಂಕಾರಗಳು: ಆದಿಮಾನವನ ಕಾಲದಿಂದ ಇಂದಿನ ವರೆಗೆ ಗೃಹಾಲಂಕಾರ ಬೆಳೆವಣಿಗೆ ಕಂಡಿದೆ. ಕ್ರಿ.ಪೂ. ದಿಂದ ಹಿಡಿದು ಕ್ರಿ.ಶ.ದ ವರೆಗೆ ಮಾನವನ ಬುದ್ಧಿಶಕ್ತಿ ಬೆಳೆವಣಿಗೆ ಆದಂತೆ ತಾನು ವಾಸಿಸುವ ಗೃಹ, ಕಲ್ಪನೆ, ಕಾಡಿನಲ್ಲಿನ ಹುಲ್ಲು, ಜೋಪಡಿ, ತೆಂಗಿನ ಮರದ ಗರಿಯಿಂದಾಗಿಸಿದ ತಗ್ಗಿನ ಮನೆ ಯಾದರೂ ಇರುವ ಸೌಲಭ್ಯದಲ್ಲೇ ಅಲಂಕರಣವಾಗಿವೆ. ಹಳ್ಳಿಯ ತೊಟ್ಟಿಮನೆ ಮುಚ್ಚಿದ ಮನೆಯಾಗಿದೆ. ಕುಂಬಾರ ಹಂಚು, ಮಂಗಳೂರು ಹಂಚು, ಅನಂತರದ ಕಲ್ನಾರುಷೀಟು, ಜಿಂಕ್‌ಷೀಟ್, ಫೈಬರ್‌ಷೀಟು ಇವುಗಳು ಸಾಂದರ್ಭಿಕವಾಗಿ ಗೃಹಲಂಕಾರದ ಭಾಗವಾಗಿವೆ. ಕೆಲವೆಡೆ ಕಲ್ನಾರುಷೀಟು ಮನೆಯ ಮೇಲೆ ಹೊದಿಕೆಯಾಗಿದೆ. ಇವೆಲ್ಲವನ್ನು ಮೀರಿದ ಕಾಂಕ್ರೀಟ್ ಮಾಡುವುದು ಇಂದು ವ್ಯಾಪಕವಾಗಿದೆ. ಸಿಮೆಂಟ್, ಇಟ್ಟಿಗೆ ಗೃಹಲಂಕಾರದ ಒಂದು ಭಾಗವಾಗಿದೆ. ಹೊರ ಆವರಣದ ಗೋಡೆ ಅಲಂಕಾರಕ್ಕೆ ಅಲ್ಲಲ್ಲಿ ನಯವಾದ ಸಂಗಮವರಿ ಅಥವಾ ತತ್ಸಮಾನ ಕಲ್ಲುಗಳ ಬಳಕೆ, ಭಿತ್ತಿಚಿತ್ರಗಳ ಅಳವಡಿಕೆ, ಕೆಲವೆಡೆ ಕಗ್ಗಲ್ಲುಗಳನ್ನೇ ತುಂಡು ತುಂಡಾಗಿ ಮಾಡಿಸಿ ಬಹು ಓರಣವಾಗಿ ಜೋಡಿಸಿ ಅಲಂಕರಿಸುವಿಕೆ, ಏರುವ ಮೆಟ್ಟಿಲುಗಳಿಗೂ ಸಿಮೆಂಟ್ ಬಿಲ್ಲೆ ಅಳವಡಿಕೆ, ಮೆಟ್ಟಿಲು ಏರಲು ಅಕ್ಕಪಕ್ಕದ ಹಿಡಿಕೆಗಳಿಗೂ ತಿರುಗಣೆಯಂತಹ ಕಂಬಗಳ ಅಳವಡಿಕೆಯಿಂದ, ಕಬ್ಬಿಣದ ಹಿಡಿಕೆಗಳತ್ತ ಸಾಗಿ ಇಂದು ಮಿರಿ ಮಿರಿ ಮಿಂಚುವ ಸ್ಟೀಲ್ ಕೊಳವೆ (ಪೈಪ್) ಬಳಕೆ ಮಾಡು ತ್ತಿರುವುದು ಅಲಂಕಾರದ ದ್ಯೋತಕ, ಗೃಹಾಲಂಕಾರದ ಹೊರಭಾಗದಲ್ಲಿ ಬಣ್ಣ ಬಣ್ಣದ ಹೂಗಿಡ ಬೆಳಸುವಿಕೆ, ವಾಹನ ನಿಲುಗಡೆಗೆ ಅವಕಾಶ ಮಾಡುವುದು, ಗೃಹಾಲಂಕಾರದ ಬಾಹ್ಯ ರೂಪದ್ದೊಂದು ಭಾಗ.

ನಮ್ಮ ಹಳ್ಳಿಮನೆಗಳಲ್ಲೂ, ವಾಡೆಗಳಲ್ಲಿಯೂ, ಹತ್ತಾರು ಕಂಬದ ಹಟ್ಟಿ ಎಂದು ಕರೆಯುತ್ತಿದ್ದು ಹೊರಭಿತ್ತಿಯಲ್ಲಿ ವಿಶಾಲ ವಾದ ಜಗಲಿಗಳನ್ನು ಹಾಗು ಎತ್ತಿನ ಗಾಡಿ ಬಿಡಲು ದನಕರು ಗಳನ್ನು ಕಟ್ಟಲು ಸ್ಥಳಾವಕಾಶ ಮಾಡಿ ಜನವಾಸ ಮತ್ತು ದನವಾಸ ಇವುಗಳನ್ನು ಬೇರ್ಪಡಿಸಿ ಅಲಂಕರಣ ಗೊಳಿಸು ತ್ತಿದ್ದುದು ಅಂದು ಮಾತ್ರವಲ್ಲ ಇಂದಿಗೂ ಇದೆ.

ಗೃಹವನ್ನು ಒಳಹೊಕ್ಕುತ್ತಿದ್ದಂತೆಯೇ ಮುಂಬಾಗಿಲು ವಿವಿಧ ಚಿತ್ರಗಳಿಂದ ಮಾಡಿ ಅಂದಗೊಳಿಸುವುದು ಬಾಗಿಲಿನ ಕೆಳ ಮತ್ತು ಮೆಟ್ಟಿಲುಗಳಲ್ಲಿ ಅರಿಶಿನ, ಕುಂಕುಮ ಹಚ್ಚಿ ಇಲ್ಲವೇ ಕೆಮ್ಮಣ್ಣು ನೀರಿನಲ್ಲಿ ಕಲಿಸಿ ಹಚ್ಚಿ, ಹಬ್ಬ ಹರಿದಿನಗಳಲ್ಲಿ ಮಾವಿನ ಸೊಪ್ಪು, ಬಾಳೆಕಂಬ ಕಟ್ಟಿ ಅಲಂಕಾರಗೊಳಿಸುವುದು, ನವ್ಯತೆಯ ಸೋಂಕು ತಗಲಿಲ್ಲದ ಕಡೆ ಸ್ಥಳೀಯ ಬಣ್ಣಗಳಿಂದ ಚಿತ್ತಾರ ಬಿಡಿಸುತ್ತಿರುವುದು ಇಂದಿಗೂ ಉಳಿದಿರುವ ಗೃಹಾಲಂಕಾರದ ಭಾಗವಾಗಿದೆ.

ಆಧುನಿಕತೆಯ ಸ್ಪರ್ಶವಾಗುತ್ತಿದ್ದಂತೆ ಒಳಬಾಗಿಲುಗಳು ಸಹ ಮಣಿ ತೋರಣಗಳಿಂದ ಮತ್ತು ಕಸೂತಿ ಹೆಣಿಗೆ ಮೂಲಕ ತೋರಣ, ಪಟ್ಟಿಕೆಗಳಿಂದ ಅಲಂಕಾರ ಮಾಡಲು ಗೃಹಣಿಯರೇ ತಮ್ಮ ಬಿಡುವಿನ ವೇಳೆಯನ್ನು ಮೀಸಲಿಡುತ್ತಿದ್ದರು. ಇಂದು ಪ್ಲಾಸ್ಟಿಕ್ ಮತ್ತು ತತ್ಸಮಾನವಾದ ಮತ್ತೊಂದು ಮಾಧ್ಯಮದಿಂದ ನಿರೀಕ್ಷಣೆಗೆ ಮೀರಿದ ಬಣ್ಣ ಮತ್ತು ಆಕಾರಗಳಿಂದ ಉತ್ಪಾದನೆ ಆಗಿ ಬರುತ್ತಿರುವುದರಿಂದ ಅದರಲ್ಲು ವಿಶೇಷವಾಗಿ ವಿದೇಶಿ ಆಮದಾದವುಗಳಿಂದ, ಗೃಹಾಲಂಕಾರ ವೈವಿಧ್ಯತೆಗಳಿಂದ ಕೂಡುತ್ತಾ ಬಂದಿದೆ. 'ಉಪಯೋಗಿಸಿ ಬಿಸಾಕು' ಎಂಬ ಸಿದ್ಧಾಂತದಲ್ಲಿ ಗೃಹಾಲಂಕಾರ ವಸ್ತುಗಳು ಬಳಕೆಯಾಗುತ್ತಿವೆ. ಹೊರಾಂಗಣದ ಜಗಲಿ ಮಾಯವಾಗಿ ಒಳಾಂಗಣದಲ್ಲಿ ಸರಿದು ಟಿ.ವಿ. ನೋಡಲನುಗುಣವಾಗಿ ಅಂಗಳವಾಗಿದೆ. ಸಾಮಾನ್ಯ ದರ್ಜೆಯ ಕುರ್ಚಿಯಿಂದ ಅವರವರ ಅಪೇಕ್ಷೆ ಮತ್ತು ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಕುರ್ಚಿಗಳ ಸ್ವರೂಪ ಬದಲಾಗುತ್ತಾ ಜೊತೆ ಜೊತೆಗೆ ಸೋಫಾಗಳು, ಊಟದ ಮೇಜುಗಳು, ಗಾಜಿನ ತಳ್ಳುವ ಬಾಗಿಲುಗಳುಳ್ಳ ಗೋಡೆ ಬೀರುಗಳು, ಮೂಲೆ ಮಣೆಗಳು, ವಿವಿಧ ರೀತಿಯ ಕಪಾಟುಗಳು ಬಂದಿವೆ. ಕುಳಿತುಕೊಳ್ಳುವ ಆಸನಕ್ಕೂ ಸಹ ವಿವಿಧ ರೀತಿಯ ಕಲಾ ವಿನ್ಯಾಸಗೊಳಿಸಿದ ಮೇಲುಹೊದಿಕೆ ಬಂದಿದೆ. ದೇವರ ಕೋಣೆಯಂತೂ ಅವರವರ ಇಷ್ಟ ದೇವತಾ ಚಿತ್ರವನ್ನೊಳಗೊಂಡು ಬಾಗಿಲು ಸೇರಿದಂತೆ ಅಲಂಕಾರಗೊಂಡಿರುತ್ತದೆ. ಸಾಮಾನ್ಯ ದರ್ಜೆಯ ಅಲಂಕರಣ ವೆಂದರೆ ಮನೆಗಳ ನೆಲಮಟ್ಟದಿಂದ ಸುಮಾರು ಎರಡರಿಂದ ಎರಡೂವರೆ ಅಡಿ ಎತ್ತರದವರೆಗೆ ಬಣ್ಣಗಳನ್ನು ಹೊಡೆ ಯುವುದು. ಇದರಲ್ಲಿ ಎರಡು ಉದ್ದೇಶವಿದ್ದು ಒಂದನೆಯದು ಅಂದವಾಗಿ ಕಾಣಲೆಂಬುದಾದರೆ, ಮತ್ತೊಂದು ಯಾವುದೇ ಮನುಷ್ಯ ನೆಲದ ಮೇಲೆ ಕುಳಿತಾಗ ಅವನ ತಲೆಯಲ್ಲಿರುವ ಎಣ್ಣೆ ಅಂಶ ಸುಣ್ಣದ ಗೋಡೆಗೆ ತಾಗಿ ಕೊಳಕಾಗಿ ಕಾಣುವುದನ್ನು ತಡೆಗಟ್ಟುವುದಕ್ಕಾಗಿ ಬಣ್ಣದ ಬಳಕೆ ಆಗುತ್ತಿತ್ತು. ಇಂದು ನೆಲದ ಮೇಲೆ ಕೂರುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಅದರ ಬದಲಾಗಿ ಬಣ್ಣದ ಬಿಲ್ಲೆ (ಟೈಲ್ಸ್) ಅಂಟಿಸುವ ಕ್ರಿಯೆ ಅಲಂಕರಣದ ಭಾಗವಾಗಿದೆ. ನೆಲಹಾಸು, ಗೋಡೆಹಾಸು, ಅದರಲ್ಲೂ ವಿಶೇಷವಾಗಿ ಅಡಿಗೆ ಮನೆ ಮತ್ತು ಸ್ನಾನದ ಮನೆ ಶೌಚಾಲಯಗಳು ಬಣ್ಣ ಬಣ್ಣದ ಬಿಲ್ಲೆಗಳ ಬಳಕೆಯಲ್ಲಿ ಅಗ್ರಸ್ಥಾನ ದಲ್ಲಿವೆ. ಸ್ನಾನಗೃಹ ವಿವಿಧ ರೀತಿಯ ತೊಟ್ಟಿಗಳಿಂದ (Tub) ಹಾಗೂ ತುಂತುರು ನೀರು ಬರುವ (Shaver Bath) ನಳಿಕೆಗಳಿಂದ ಅಲಂಕಾರಗೊಳಿಸುವುದು, ನಿಲುಗನ್ನಡಿ, ಅಳವಡಿಕೆ, ಶಯನಗೃಹವು ಸಹ ಸಾಧಾರಣ ನೆಲ ಚಾಪೆ ಅಥವಾ ಮಂಚದಿಂದಿಡಿದು ಅತ್ಯಾಧುನಿಕವಾದ ಕುಶನ್ ಬೆಡ್ ನವರೆಗೆ ಹಾಗೆಯೇ ಶೃಂಗಾರೋತ್ಪತ್ತಿಯ ಸಾಧನ ಸಲಕರಣೆ ಗಳೊಂದಿಗೆ ಕಂಗೊಳಿಸುವ ಪುಷ್ಪ ಮತ್ತು ಸುಗಂಧಾದಿ ಪರಿಕರ ಗಳು ಇಂದಿನ ಗೃಹಾಲಂಕಾರದ ಒಂದು ಭಾಗವೇ ಆಗಿದೆ.

ರಂಗವಲ್ಲಿ ಹಾಕುವುದು ಹಿಂದಿನ ಪದ್ಧತಿ ಇಂದಿಗೂ ಮುಂದುವರೆದಿದೆ. ಆದರೂ ಆಧುನಿಕತೆಯ ಅಲಂಕರಣ

ಹಾಳಾಗದಂತೆ ಸಾಂಕೇತಿಕವಾಗಿದೆ. ರಂಗವಲ್ಲಿ ಬಿಡುವ ತೂತುಬಿಲ್ಲೆಗಳು ಬಂದಿವೆ. ಅದರಲ್ಲಿ ರಂಗವಲ್ಲಿ ತುಂಬಿ ಉರುಳಿಸುವ ಅಥವಾ ಅತ್ತಿತ್ತ ಚಲಿಸುವಂತೆ ಮಾಡುವ ಮೂಲಕ ವಿವಿಧ ರೀತಿ ಚಿತ್ತಾರಗಳನ್ನು ಸೃಷ್ಟಿಸಿ ಅಲಂಕಾರ ಗೊಳಿಸಬಹುದಾಗಿದೆ. ಮಣ್ಣಿನ ಗೋಡೆಗೆ, ನೆಲಕ್ಕೆ ಸಗಣಿ ಸಾರಿಸಿ ಅದರ ಮೇಲೆ ಅಕ್ಕಿಹಿಟ್ಟಿನ ರಂಗೋಲಿ ಬಿಡುತ್ತಿದ್ದ ಕ್ರಮ ತೀರಾ ಹಳತಾಗಿದೆ. ಬಿದಿರು, ಕಾಡುಸೊಪ್ಪು ಮಣ್ ಮುದ್ದೆಯೊಳಗೆ ಬೆರೆಸಿ ಗೋಡೆಯಂತೆ ಅಲ್ಲಲ್ಲಿ ಕಗ್ಗಲ್ಲನ್ನು ಬಳಸಿ ಮಾಡುತ್ತಿದ್ದುದು, ಅದರ ಮೇಲೆ ಸಗಣಿ ಸಾರಿಸಿ ಮೇಲೊಂದು ಸುಣ್ಣದ ಪಟ್ಟೆಹೊಡೆದು ಇಲ್ಲವೇ ಕಲ್ಕಂಬಗಳಿಗೆ ಸುಣ್ಣದ ಅಥವಾ ಕೆಮ್ಮಣ್ಣು ಪಟ್ಟಿ ಹೊಡೆದಿರುವಂತಹ ಸ್ಮಾರಕಗಳು ಉತ್ಖನನಗಳಿಂದ ದೊರೆತಿರುವುದು ಅಂದಿನ ಗೃಹಾಲಂಕರಣದ ವಾಸ್ತವಿಕತೆಯನ್ನು ಬಿಂಬಿಸುವಂತಾಗಿದೆ. ಶಿಲಾಯುಗ, ಮಧ್ಯ ಶಿಲಾಯುಗ, ಕಬ್ಬಿಣ ಯುಗ ಇತ್ಯಾದಿ ವಿಂಗಡನೆ ಮೂಲಕ ಅಲಂಕಾರಗಳಿಗೆ ಅಂದು ಬಳಸುತ್ತಿದ್ದ ಮಾಧ್ಯಮಗಳ ತಿಳುವಳಿಕೆಯುಂಟಾಗುತ್ತದೆ.

ನವರಾತ್ರಿಗೆ ಗೊಂಬೆ ಕೂರಿಸುವುದು, ದೀಪಾವಳಿಗೆ ಮಣ್ಣಿನ ಹಣತೆ ಹಚ್ಚುವುದು, ಯುಗಾದಿಗೆ ತಳಿರು ತೋರಣ ಕಟ್ಟುವುದು, ಹೊಂದಿಕೆಯಾಗುವಂತಹ ಸೀರೆ ಕುಪ್ಪಸ ಧರಿಸಿ ಮೆರೆಯುವುದು, ಕಿಟಕಿ, ಬಾಗಿಲುಗಳಿಗೆ ಬಣ್ಣ ಬಣ್ಣದ ಪರದೆ ಹಾಕುವುದು, ಟಿ.ವಿ ಮತ್ತು ಧ್ವನಿಪೆಟ್ಟಿಗೆ ಅಳವಡಿಕೆ, ಕಂಪ್ಯೂಟರ್‌ಗೊಂದು ಸ್ಥಳ ಒಟ್ಟಾರೆ ಗೃಹೋಪಯೋಗಿ ವಸ್ತುಗಳನ್ನು ಅಲಂಕಾರವಾಗಿ ಜೋಡಿಸಿ ಸಾಂದರ್ಭಿಕವಾಗಿ ಅವುಗಳ ಉಪಯೋಗ ಪಡೆಯುವುದು. ಇದು ನಿನ್ನೆ ಮೊನ್ನೆಯದಲ್ಲ, ರಾಜರ ಇಲ್ಲವೇ ಶ್ರೀಮಂತರ ಸ್ವತ್ತಾಗಿದ್ದ ಅಲಂಕರಣಗಳು ಜನಸಾಮಾನ್ಯರ ಸ್ವತ್ತಾಗಿವೆ. ಇಂದು 'ಒಳಾಂಗಣ ವಿನ್ಯಾಸ ಕಲಿಕೆ' ಕಾಲೇಜು ಶಿಕ್ಷಣದ ಭಾಗವಾಗಿದೆ. ಒಟ್ಟಾರೆ ಹೇಳುವುದಾದರೆ ಗೃಹಾಲಂಕರಣ ಜೀವನದ ಒಂದು ಭಾಗವಾಗಿದೆ. ಇಂದು ಹೊಸತೆನ್ನುವುದು ನಾಳೆಗೆ ಹಳತು.

(ಎಲ್‌ಎಸ್)

ಗೊ

ಗೊಂದಲಿಗರು: ಅಂಬಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವುದನ್ನೇ ತಮ್ಮ ಪ್ರಧಾನ ವೃತ್ತಿಯನ್ನಾಗಿಸಿಕೊಂಡಿರುವ ಅಲೆಮಾರಿ ಜನಾಂಗ. ಅತೀ ಪ್ರಾಚೀನಕಾಲದಿಂದಲೂ ನೆಲಸಿರುವ ಬುಡಕಟ್ಟಿನ ಜನಾಂಗಗಳಲ್ಲಿ ಒಂದು. ಕನ್ನಡ ಮರಾಠಿಯನ್ನು ಮಾತೃಭಾಷೆಯನ್ನಾಗಿಸಿಕೊಂಡಿರುವ ವೃತ್ತಿಗಾಯಕರಾದ ಇವರು ಪ್ರದರ್ಶನಾತ್ಮಕ ಕಲೆಗಳಾದ ಗೊಂದಲ ಕಲೆ,



ಗೊಂದಲಿಗರು

ಕಥೋಪ ಜೀವಿಗಳ ಕಲೆ, ಭುಟಕ ಕಲೆ, ಬೂತೇರ ಕಲೆ, ಸಿಂಗರ ಕಲೆ, ವಾಸುದೇವ ಕಲೆ, ಚಿತ್ರಪಟ ಕಲೆ, ಗಿಳಿಶಾಸ್ತ್ರದ ಕಲೆ ಜ್ಯೋತಿಷ್ಯ ಕಲೆಗಳಂತೆ ಬುಡುಬುಡಕಿಯ ಕಲೆಯೂ ಒಂದು ಶಕುನ ಹೇಳಿಕೊಂಡು ಜೀವನ ನಡೆಸುವ ಇವರಿಗೆ ನರಸಣ್ಣ ಎಂತಲೂ ಕರೆಯಲಾಗುತ್ತದೆ.

ಶ್ರೀಕೃಷ್ಣನ ಕೊಡುಗೆಯಿಂದ ಬುಡುಬುಡಿಕೆಯ ಪರಂಪರೆ ಬೆಳೆದು ಬಂದಿತು ಎಂದು ಹೇಳುವ ಇವರು ತಮ್ಮ ಕಲೆಯಲ್ಲಿ ಮುಖ್ಯವಾಗಿ ಚರ್ಮ ಸಾಗವಾಣಿ ಕಟ್ಟಿಗೆಯನ್ನು ನಡುವೆ ಚಿಕ್ಕದಾಗಿ ಕೊರೆದು ಎರಡೂ ಮಗ್ಗುಲು ದೊಡ್ಡಾದಾಗಿರುವಂತೆ ನಡುವೆ ಪೊಳ್ಳಾಗಿರುವಂತೆ ಮಾಡಿ ಅದಕ್ಕೆ ನೆರಳಲ್ಲಿ ಒಣಗಿಸಿದ ಆಡಿನ ಜಠರದ ಚರ್ಮವನ್ನು ಲಯವಾಗಿ ನಾದ ಹೊಮ್ಮುವಂತೆ ಬಿಗಿಯಾಗಿ ಬಿಗಿಯುತ್ತಾರೆ. ಹೀಗೆ ಬಿಗಿಯುವ ದಾರಕ್ಕೆ ಬದ್ಯೆದಾರ ಎಂದು ಕರೆಯುತ್ತಾರೆ. ಬಿಗಿದಿರುವ ವಾದ್ಯದ ಮಧ್ಯ ಭಾಗವನ್ನು 'ಬದ್ದೆ' ಎಂದು ಕರೆಯುತ್ತಾರೆ. ಬದ್ದೆದಾರವನ್ನು ಎಂಟತ್ತು ಭಾಗಗಳನ್ನಾಗಿ ಮಾಡಿ ಪೋಣಿಸಿರುತ್ತಾರೆ. ಬದ್ದೆಯ ಭಾಗದಲ್ಲಿ ವಿರುದ್ಧವಾದ ದಿಕ್ಕಿನಲ್ಲಿ ಎರಡು ದಾರದ ತುಂಡುಗಳನ್ನು ಕಟ್ಟಿ ಅದರ ತುದಿಗೆ ಮೇಣವನ್ನು ಅಂಟಿಸಿರುತ್ತಾರೆ. ಬುಡಬುಡಿಕೆಯ ಎರಡೂ ಮುಖದ ಮಧ್ಯದಲ್ಲಿ ಬಡಿಯುವಂತೆ ಕಟ್ಟಿರುವ ಇವುಗಳಿಗೆ 'ತಾಳು'ಗಳೆಂದು ಕರೆಯುವರು. ವಾದ್ಯದ 'ಟೊಳ್ಳಾಗಿರುವ ಮಧ್ಯಭಾಗವನ್ನು ಗಟ್ಟಿಯಾಗಿ ಹಿಡಿದು ಅಲ್ಲಾಡಿಸಿದಾಗ ಗಂಟುಗಳು ಎರಡೂ ಮುಚ್ಚಳಿಕೆಗಳ ಮೇಲೆ ಬಡಿದು ನಾದ ಹೊಮ್ಮುತ್ತದೆ. ತಮ್ಮ ನಡೆ-ನುಡಿಗೆ ತಕ್ಕ ನಾದ ಬರುವಂತೆ ಕಲಾತ್ಮಕವಾಗಿ ಬುಡಬುಡಿಕೆಯನ್ನು ನುಡಿಸುವ

ಇವರು ಅದು ಇನ್ನೂ ಸುಂದರವಾಗಿ ಕಾಣಲು ಸಣ್ಣ ವಸ್ತ್ರ ಮತ್ತು ಒಂದೆರಡು ಗೆಜ್ಜೆಗಳನ್ನು ಕಟ್ಟಿರುತ್ತಾರೆ.

ತಮ್ಮ ತಮ್ಮಲ್ಲಿಯೇ ಊರುಗಳನ್ನು ಹಂಚಿಕೊಂಡ ಈ ವೃತ್ತಿಯವರು ತಮಗೆ ಸಂಬಂಧಿಸಿದ ಗೌಡ, ಪಟೇಲ, ಕುಲಕರ್ಣಿಯಿಂದ ಒಪ್ಪಿಗೆ ಪಡೆದಿರುತ್ತಾರೆ. ಮಧ್ಯರಾತ್ರಿಯಲ್ಲಿಯೇ ಸ್ಮಶಾನಕ್ಕೆ ಹೋಗಿ, ಅಲ್ಲಿ ನುಡಿಯುವ ಹಾಲಕ್ಕಿ ನುಡಿಯನ್ನು ಆಲಿಸಿ, ಶಕುನ ನುಡಿಯಲು ಸಜ್ಜಾಗುತ್ತಾರೆ. ಬುಡಬುಡಕೆಯವರಿಗೆ ಇಂತಹದ್ದೇ ವೇಷಭೂಷಣ ಎಂದೇನೂ ಇಲ್ಲವಾದರೂ ತಮ್ಮ ಅನುಕೂಲಕ್ಕೆ ತಕ್ಕಂತೆ ತಲೆಗೆ ಪೇಟ, ಉದ್ದನೆಯ ನಿಲುವಂಗಿ, ಕೋಟು, ಕಚ್ಚೆಪಂಚೆ, ಹೆಗಲಿಗೆ ಹಿಂದು ಮುಂದು ಇಳಿಬಿಟ್ಟಿರುವ ಜೋಳಿಗೆ ಚಿಲಗಳು ಹೆಬ್ಬೆರಳಿನಲ್ಲಿ ಗಗ್ಗರ, ಕೈಗೆ, ಕಡಗ, ಗೆಜ್ಜೆ ಉದ್ದನೆಯ ನಾಮ ಧರಿಸಿ ಪ್ರತಿನಿತ್ಯ ಕೋಳಿಕೂಗುವ ಮೊದಲೇ ಎದ್ದು ದೇವರನ್ನು ಪೂಜಿಸಿ ಪ್ರತಿ ಮನೆಯ ಬಾಗಿಲಿಗೆ ಹೋಗಿ ತಮ್ಮ ವಾದ್ಯ ನುಡಿಸಿಕೊಳ್ಳುತ್ತಾ ಜಯವಾಗಲಿ ಸ್ವಾಮಿ ಜಯವಾಗಲಿ ಸ್ವಾಮಿ ಎಂದು ಶುಭವನ್ನು ಹಾರೈಸುತ್ತ ಶಕುನ ನುಡಿಯುತ್ತಾರೆ. ಆನರ ಶುಭಾಶುಭಗಳನ್ನು ಬಹುಜಾಣ್ಮೆಯಿಂದ ಹೇಳುವ ಇವರು ಅಶುಭ ಇದ್ದಾಗ ಅದಕ್ಕೆ ಶಾಂತಿ ಪರಿಹಾರವನ್ನು ಸೂಚಿಸುತ್ತಾರೆ. 'ಹಾಲಕ್ಕಿ ಶಾಸ್ತ್ರ' ಎಂದು ಹೇಳುವ ಈ ಶಾಸ್ತ್ರ ನುಡಿದಂತೆ ಸತ್ಯವಾಗುತ್ತದೆ ಎಂಬ ನಂಬಿಕೆ ಈ ವೃತ್ತಿಕಲಾವಿದರಲ್ಲಿಯೂ ಜನರಲ್ಲಿಯೂ ಬೇರೂರಿದೆ. (ಜಿಎ)

ಗೋ

ಗೋವರ್ದನ್ ಕೆ.: ಚಿತ್ರಕಲಾವಿದ. ಇವರು ಮೂಲತಃ ರಾಯಚೂರಿನ ಕೊರ್ತಕುಂದಾ ಎಂಬ ಗ್ರಾಮದವರು. ತಂದೆ ಕನಕಚಾರ್ಯ. ತಾಯಿ ಚಿನ್ನಗುಂಟಮ್ಮ. ಅಕ್ಟೋಬರ್ 2. 1974ರಲ್ಲಿ ಜನಿಸಿದರು. ಗುಲಬರ್ಗಾ ಎಂ.ಎಂ.ಕೆ ಕಾಲೇಜಿನಲ್ಲಿ ಬಿ.ಎಫ್.ಎ. ಮುಗಿಸಿಕೊಂಡು ಸ್ವತಂತ್ರ ಕಲಾವಿದರಾಗಿ ಅನೇಕ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ.

ಇವರ ಕಲಾಕೃತಿಗಳ ಗುಣವಿಶೇಷವೆಂದರೆ ಮೊದಲು ಭಾರತೀಯ ಸಂಸ್ಕೃತಿಯಲ್ಲಿ ಮಾಡುತ್ತಿದ್ದು. ರಾಮಾಯಣ ಮತ್ತು ಮಹಾಭಾರತದಲ್ಲಿ ಯುದ್ಧ ಪ್ರಾರಂಭವಾಗುವ ಮುನ್ನ 'ಶಂಖ' ವನ್ನು ಊದುತ್ತಿದ್ದರು. ಕಾರಣ ಅಲ್ಲಿದ್ದ ದುಷ್ಟಶಕ್ತಿಗಳು ಓಡಿ ಹೋಗಲಿ ಎನ್ನುವ ಕಾರಣಕ್ಕೆ ಶಂಖ ಊದುತ್ತಿದ್ದು ಈ



'ಡೂ ನಾಟ್ ಸೀ ಬ್ಯಾಕ್' ಅಕ್ರೇಲಿಕ್ ಮಾಧ್ಯಮ

ನಿಟ್ಟಿನಲ್ಲಿ 'ಶಂಖ' ವನ್ನು ಇಟ್ಟುಕೊಂಡು ಬಹಳಷ್ಟು ಕಲಾಕೃತಿಗಳನ್ನು ರಚಿಸಿದ್ದರು. ಅಲ್ಲದೇ ಗ್ರಾಮೀಣ ಪ್ರದೇಶದಲ್ಲಿ ಮನೆಗಳ ಮುಂದೆ, ಭಿಕ್ಷುಕ ಶಂಖವನ್ನು ಊದಿಕೊಂಡು ಭಿಕ್ಷೆಗೆಂದು ಬರುತ್ತಿದ್ದರು. ಕಾರಣ ಮನೆಯಲ್ಲಿರುವ ಕ್ರಿಮಿಕೀಟಗಳು ಓಡಿ ಹೋಗಲೆನ್ನುವ ಸಂಕೇತವಾಗಿ 'ಶಂಖ' ವನ್ನು ಊದುತ್ತಿದ್ದರು. ಇಂತಹ ಪರಿಕಲ್ಪನೆಯನ್ನು ಮೂಡಿಸುವ ಹಿನ್ನೆಲೆಯಲ್ಲಿ ಚಿತ್ರಿಸುತ್ತಿದ್ದು ಅನಂತರದಲ್ಲಿ ಹೆಣ್ಣು ಮಕ್ಕಳು ವೇಶ್ಯವಾಟಿಕೆಗಳಲ್ಲಿ ತೊಡಗುತ್ತಾರೆ ಏಕೆ? ಎನ್ನುವ ನಿಟ್ಟಿನಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದರು. ಹಂಪಿಯ ನಿಸರ್ಗ ಚಿತ್ರಣಗಳನ್ನು ಮಾಡಲು ಮುಂದಾದರು. ತದನಂತರದಲ್ಲಿ 'ಅಂತರಾಳದ ಪಯಣ' ಎನ್ನುವ ವಿಷಯದಲ್ಲಿ ನೋಡುಗರ ಭಾವನೆಗಳಿಗೆ ಇವರ ಕಲಾಕೃತಿಗಳು ಸ್ಪಂದಿಸುತ್ತವೆ. ಅಲ್ಲದೇ ಸಮಾಜದ ದೈನಂದಿನ ಜೀವನದ ಒಳಗತೆಗಳನ್ನು ಸಾರಿ ಹೇಳುತ್ತವೆ. ಹೀಗೆ ಇವರ ಅಕ್ರಲಿಕ್ ಮಾಧ್ಯಮದಲ್ಲಿ ಹಲವು ಕಲಾಕೃತಿಗಳನ್ನು ಚಿತ್ರಿಸಿದ್ದಾರೆ.

ರಾಜ್ಯ ಮತ್ತು ಹೊರ ರಾಜ್ಯ, ರಾಷ್ಟ್ರಮಟ್ಟದಲ್ಲಿ ಹಲವಾರು ಕಲಾಪ್ರದರ್ಶನ ಮತ್ತು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. 1996ರಲ್ಲಿ ರಾಷ್ಟ್ರೀಯ ಕಲಾಮೇಳ ಕಲ್ಕತ್ತ, 1996-97ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, 1997ರಲ್ಲಿ ರಾಷ್ಟ್ರೀಯ ಕಲಾಮೇಳ ನವದೆಹಲಿ, 2000ರಲ್ಲಿ ಭಾರತದಾದ್ಯಂತ ಚಿತ್ರಕಲಾ ಪ್ರದರ್ಶನ, ಎಸ್‌ಸಿಝಡ್‌ಸಿಸಿ ನಾಗಪುರ್, 1998-99ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 1999-2000ರಲ್ಲಿ ಕಲಾಮಹೋತ್ಸವ ಎಂ.ಎಂ.ಕೆ. ಕಾಲೇಜ್, ಗುಲಬರ್ಗಾ, 2000-01ರಲ್ಲಿ ಎ.ಬಿ.ವಿ.ಪಿ ಬೆಂಗಳೂರು, 1998-99ರಲ್ಲಿ ಭಾರತದದ್ಯಾಂತ ತಸ್ಮಾಯ ಆರ್ಟ್ಸ್ ಪ್ರದರ್ಶನ, 2000ರಲ್ಲಿ ಕೆ.ಕೆ. ಹೆಬ್ಬಾರ್ ಅವರ ಆರ್ಟ್ಸ್ ಪೌಂಡೇಷನ್ ಪ್ರದರ್ಶನ ಬೆಂಗಳೂರು, 2008ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಗುಂಪು ಪ್ರದರ್ಶನ, 1996-97ರಲ್ಲಿ ಶ್ರೀ ಗುರು ಕಲಾಮಂದಿರ ಮತ್ತು 1998ರಲ್ಲಿ ಕನ್ನಡ ಭವನ

ರಾಯಚೂರನಲ್ಲಿ ಅಲ್ಲದೇ ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು, ಹಾಗೂ ಸ್ವಾತಿ ಕನ್‌ಟೆಂಪ್ರರಿ ಆರ್ಟ್ಸ್ 2008ರಲ್ಲಿ– ಹೀಗೆ ಅನೇಕ ಕಡೆ ಪ್ರದರ್ಶನಗೊಂಡಿದ್ದು ಹಲವು ಕಡೆ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಸೌಹಾರ್ದ ಕಲಾಶಿಬಿರ ಮತ್ತು ಕೊರ್ತಗುಂಧ ಆರ್ಟ್ಸ್ ಹಾಗೂ 'ಘಟ್ಟ' ಕಲಾಗ್ರಾಮದ ಕಲಾಶಿಬಿರ, ಹೀಗೆ ಹಲವು ಕಲಾಶಿಬಿರ ಮತ್ತು ಕಲಾಪ್ರದರ್ಶನ ಗಳನ್ನು ಮಾಡಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ಕೊಂಡು ಎಂ.ಎಂ.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್ಸ್ ಗುಲಬರ್ಗಾ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಇವರು ಚಿತ್ರಗಳನ್ನು ರಚಿಸುವಾಗ ಒಂದೇ ವಿಷಯಕ್ಕೆ ಸೀಮಿತವಾಗಿರದೇ ಸಮಾಜದಲ್ಲಿರುವ ನ್ಯೂನ್ಯತೆಗಳಿಗೆ ಸ್ಪಂಧಿ ಸುತ್ತಾ ಬೇರೆಬೇರೆ ವಿಷಯಗಳತ್ತ ಗಮನಹರಿಸಿ ನೋಡುಗರ ಭಾವನೆಗಳಿಗೆ ಮನಸ್ಸು ಸೆಳೆಯುವಂತೆ ರೂಪಿಸಿದ್ದಾರೆ.

(ಬಿಕೆಎಲ್)

ಗೌ

ಗೌತಮ ಅಂದಾನಿ: ಕಲಬುರ್ಗಿಯ ಯುವ ಕಲಾವಿದರಲ್ಲಿ ಒಬ್ಬರು. ಕಲಾಕೃತಿಯು ಸರಳವಾಗಿ ತನ್ನನ್ನು ತಾನು ತೆರೆದುಕೊಳ್ಳುತ್ತಾ ಹೋದಾಗ ನೋಡುಗ ಅದರಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾನೆ. ಕಲಾವಿದನಾದವನು ಭಿನ್ನವಾದ ನೆಲೆಯಲ್ಲಿ ಕಲಾಕೃತಿಗಳನ್ನು ರಚಿಸಿ, ನೋಡುಗರ ಕುತೂಹಲ ಕೆರಳಿಸಬೇಕು. ಅಂದಾಗ ಮಾತ್ರ ಕಲಾಕೃತಿ ಹಾಗೂ ನೋಡುಗನ ಮಧ್ಯೆ ಸಂಭಾಷಣೆ ಸಾಧ್ಯ. ಈ ಹಿನ್ನೆಲೆ ಯಲ್ಲಿ ಇವರು ಕೃತಿ ರಚಿಸಿ ದ್ದಾರೆ. ಎಂದು ಗುರುತಿಸಿ ಕೊಂಡವರಲ್ಲಿ ಕಲಾವಿದರ ಮನೆತನ ಹಿನ್ನೆಲೆಯುಳ್ಳ ಇವರಿಗೆ ಕಲೆಯು ಬಳವಳಿ ರೂಪದಲ್ಲಿ ಸಿದ್ದಿಸಿದೆ. ಇವರ ತಂದೆ ವಿ.ಜಿ. ಅಂದಾನಿ ಬಣ್ಣ, ಬ್ರಶ್‌ಗಳ ಒಡನಾಟ ಇವರಿಗೆ ಹೊಸದಲ್ಲ. ಬಣ್ಣ ಖಾಲಿ ಯಾದ ಟ್ಯೂಬ್‌ಗಳು, ಮೊನಚು ಕಳೆದುಕೊಂಡ ಬ್ರಶ್‌ಗಳೇ ಇವರಿಗೆ ಆಟಿಕೆ ಗಳಾದ ಪರಿಸರ. ಸಹಜವಾಗೇ ಚಿತ್ರಕಲೆಯಲ್ಲಿ ಇವರಿಗೆ ಆಸಕ್ತಿ.



ತಮ್ಮ ತಂದೆಯವರು ಕಲಬುರ್ಗಿಯಲ್ಲಿ ಕಟ್ಟಿ ಬೆಳೆಸಿದ ಸಂಸ್ಥೆ ದಿ ಐಡಿಯಲ್ ಫೈನ್ ಆರ್ಟ್ಸ್‌ನಲ್ಲಿ ಕಲಾ ಶಿಕ್ಷಣ, ಅನಂತರ, ಗದಗದ ವಿಜಯ ಲಲಿತಕಲಾ ಮಹಾವಿದ್ಯಾಲಯ ದಲ್ಲಿ ಸ್ನಾತಕೋತ್ತರ ಪದವಿ, ಇವು ಚಿತ್ರಕಲಾ ಶಿಕ್ಷಣದಲ್ಲಿ ಏರಿದ ಕೆಲವು ಮಜಲುಗಳು. ಶಿಕ್ಷಣ ಕೇವಲ ವಿದ್ಯೆ ನೀಡುತ್ತದೆ. ಸೃಜನಶೀಲತೆ ಮಾತ್ರ ಅಂತರಾಳದಿಂದ ಹೊರಹೊಮ್ಮುತ್ತದೆ ಎಂಬುದು ಒಂದು ಮಾತು. ಕಲೆಯನ್ನು ಬದುಕಾಗಿ ಸ್ವೀಕರಿಸಿದ ಗೌತಮರು ಸೃಜನಶೀಲ ಕಲಾವಿದ. ಅದು ಅವರ ಕೃತಿಗಳಲ್ಲಿ ಬಿಂಬಿತವಾಗುತ್ತದೆ. ತಾವೇ ಕಾನ್‌ವಾಸ್‌ಗಳನ್ನು ತಯಾರಿಸಿ ಕೊಂಡು ಚಿತ್ರಕೃತಿ ನಿರ್ಮಿಸಲು ತೊಡಗಿದರೆ, ಅದು ಪೂರ್ಣಗೊಳ್ಳುವವರೆಗೂ ಕಲೆಯಲ್ಲಿ ತಲ್ಲೀನತೆ.

ಇವರ ಕೃತಿಗಳು ಹೆಚ್ಚಾಗಿ ಬೌದ್ಧ ಧರ್ಮದ ಹಾಗೂ ಬುದ್ಧನ ಕುರಿತಾಗಿವೆ. ಇವರು ಚಿತ್ರಕೃತಿಗಳನ್ನಷ್ಟೇ ರಚಿಸದೇ ಶಿಲ್ಪಕಲೆಯಲ್ಲೂ ಗಮನಾರ್ಹ ಸಾಧನೆ ಮಾಡಿದ್ದಾರೆ. ಮಣ್ಣು, ಕಲ್ಲು, ಕಟ್ಟಿಗೆ, ಗ್ರಾನೈಟ್, ಹಾಸುಗಲ್ಲು, ಕಂಚು ಹೀಗೆ ಅನೇಕ ಮಾಧ್ಯಮಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ವಿಶೇಷವಾಗಿ ಕಂಚು, ಹಾಸುಗಲ್ಲು ಹಾಗೂ ಬೀಸುಗಲ್ಲಿನಲ್ಲಿ ರಚಿಸಿದ ಬುದ್ಧನ ಕೃತಿಗಳು ಆಕರ್ಷಕವಾಗಿವೆ. ಕಲಾವಿದ ಗೌತಮರು ವಿವಿಧೆಡೆ ಪ್ರದರ್ಶನ ಗಳ ಏರ್ಪಡಿಸುವ ಮೂಲಕ ತಮ್ಮದೇ ಆದ ರೀತಿಯಲ್ಲಿ ಕಲಾಪ್ರಪಂಚಕ್ಕೆ ಕೊಡುಗೆ ನೀಡುತ್ತಿದ್ದಾರೆ. ಕರ್ನಾಟಕ ಯುವ ಕಲಾವಿದರ ಶಿಬಿರ (ಬೆಂಗಳೂರು), ಮೆಟಲ್ ಕಾಸ್ಟಿಂಗ್ ಶಿಬಿರ (ನಾಗಪುರ, ತ್ರಿವೇಂದ್ರಂ) ವಲಯ ಲಲಿತಕಲಾ ಅಕಾಡೆಮಿ ಶಿಬಿರ (ಚೆನ್ನೈ), ಟೆರ್ರಾಕೋಟಾ ಶಿಬಿರ (ಕಲಬುರ್ಗಿ) ಅಲ್ಲದೇ,



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಬಿಜಾಪುರ, ಸೋಲಾಪುರ ನಗರಗಳಲ್ಲಿ ಏಕವ್ಯಕ್ತಿ ಪ್ರದರ್ಶನ ಏರ್ಪಡಿಸಿದ್ದಾರೆ. ನವದೆಹಲಿಯ ಲಲಿತಕಲಾ ಅಕಾಡೆಮಿಯಿಂದ ಶಿಷ್ಯವೇತನ, ಮಾನವ ಸಂಪನ್ಮೂಲ ವಿಭಾಗದಿಂದ ಫೆಲೋಷಿಪ್ ಪಡೆದಿದ್ದು ಇವರ ಕಲಾ ಪ್ರತಿಭೆಗೆ ಸಾಕ್ಷಿ. ಸದ್ಯಕ್ಕೆ, ಗೌತಮರು ಕಲಬುರ್ಗಿಯ 'ದಿ ಐಡಿಯಲ್ ಫೈನ್ ಆರ್ಟ್ಸ್' ನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕಲಾಕೃತಿಗಳು ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನದನ್ನು ನಿರೀಕ್ಷಿಸುವಂತೆ ಮಾಡಿವೆ.
(ಕೆಡಿ)

ಗೌರಿಶಂಕರ ಬಿ.ಜಿ: ಗುಲಬರ್ಗಾ ಜಿಲ್ಲೆಯ ಕಿಣ್ಣಿ ಸಡಕ್ ಎಂಬ ಹಳ್ಳಿಯ ರೈತಾಪಿ ಮನತನದಲ್ಲಿ ತಂದೆ ಬಸವಯ್ಯ ಗೋಗಿ, ತಾಯಿ ಕುಸುಮತಿಯವರ ಮಗನಾಗಿ 1982 ಜುಲೈ 20 ರಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹಳ್ಳಿಖೇಡ ಗ್ರಾಮದಲ್ಲಿ ಪೂರೈಸಿ, ತಮ್ಮ ಚಿತ್ರಕಲಾ ಶಿಕ್ಷಕರ ಸೂಕ್ತ ಮಾರ್ಗದರ್ಶನದಂತೆ ಹುಮನಾಬಾದನ ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು ಡಿ.ಎಂ.ಸಿ. ಪ್ರಥಮ ಮತ್ತು ದ್ವಿತೀಯ ವರ್ಷ ಪೂರ್ಣಗೊಳಿಸಿ, ಕಲಬುರ್ಗಿಯ ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಾ ಶಿಕ್ಷಣ ಹಾಗೂ ಡಿಪ್ಲೋಮಾ ಇನ್ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಮತ್ತು ಆರ್ಟ್ ಮಾಸ್ಟರ್ ಪದವಿಯನ್ನು ಪಡೆದರು.





ಶಿಲ್ಪ ಕಲಾಕೃತಿ

ಇವರ ಶಿಲ್ಪಕಲಾ ನೈಪುಣ್ಯತೆಯನ್ನು ಮನಗೊಂಡು ಇತ್ತೀಚಿಗೆ ಇವರನ್ನು ಶಿಲ್ಪಕಲಾ ಶಿಬಿರಗಳಲ್ಲಿ ಭಾಗ ವಹಿಸುವ ಅವಕಾಶ ದೊರೆಯುತ್ತಿವೆ. ಇತ್ತೀಚಿಗೆ ಗುಲಬರ್ಗಾದ ವರ್ಣ ಭೂಮಿ ಶ್ರೀ ಗುರು ವಿದ್ಯಾ ಪೀಠದವರು ಆಯೋಜಿಸಿದ 'ಇಂಟರ್ ನ್ಯಾಶನಲ್ ಸಿಂಪೊಜಿಯಂ, 2011–12ರ ಧಾರವಾಡ ಜಿಲ್ಲೆ ಉತ್ಸವದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಆಯೋಜಿಸಿದ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಇವರು ಚಿತ್ರ ಹಾಗೂ ಶಿಲ್ಪಗಳೆರಡರಲ್ಲಿ ಉತ್ತಮ ನೈಪುಣ್ಯತೆಯನ್ನು ಹೊಂದುವುದರ ಜೊತೆಗೆ ಪ್ರಸ್ತುತ ಗುಲಬರ್ಗಾದ ಶ್ರೀ ಗುರು ವಿದ್ಯಾಪೀಠದಲ್ಲಿ ಕಲಾ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಚಿತ್ರ ಶಿಲ್ಪಗಳನ್ನು ಹೇಳಿಕೊಡುವ ಕಾರ್ಯದಲ್ಲಿ ತೊಡಗಿದ್ದಾರೆ.
(ಎಸ್‌ಪಿಡಬ್ಲೂ)

ಗ್ರಾ

ಗ್ರಾಮದೇವತೆಗಳು: (ಗುಲ್ಬರ್ಗಾ ಭಾಗ) ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಅಲ್ಲೂರ ದುರಗಮ್ಮ, ಅದೇ ತಾಲ್ಲೂಕಿನ ಕೊಡದೂರ ಮರಗಮ್ಮ, ನಾಲವಾರ ಮರಗಮ್ಮ, ಸಂಕರಡಗಿ ಪಾಲಕಮ್ಮ, ಗೋಳ್ಯಾದ ದ್ಯಾವಮ್ಮ, ಬಳ್ಳಡಗಿ ಎಲ್ಲಮ್ಮ, ಸೂಗೂರು ದ್ಯಾವಮ್ಮ, ಕುನ್ನೂರ ಕಾಳಮ್ಮ, ಗುಲ್ಬರ್ಗಾ ತಾಲ್ಲೂಕಿನ ಕೀರಣಗಿ ಮರಗಮ್ಮ, ಆಲಳ್ಳಿ ಮರಗಮ್ಮ, ಹಡಗಲಿ ಎಲ್ಲಮ್ಮ, ಗುಲ್ಬರ್ಗಾ ನಗರದ ಜಗತಿ ಎಲ್ಲಮ್ಮ, ಅಫಜಲಪೂರ ತಾಲ್ಲೂಕಿನ ಹಡಲಗಿ ಎಲ್ಲಮ್ಮ, ಮಾಸ್ಯಾಳ ಚೌಡಮ್ಮ, ಘತ್ತರಗಿ ಭಾಗಮ್ಮ (ಭಾಗವಂತಿ), ಗೊಬ್ಬೂರ ಎಲ್ಲಮ್ಮ, ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ, ಗೋಳ್ಯಾ ಲಕ್ಕಮ್ಮ, ಸುರಪುರದ ದುರಗಮ್ಮ, ಕೆಂಭಾವಿ ದ್ಯಾವಮ್ಮ, ಸೇಡಂ ತಾಲ್ಲೂಕಿನ ಯಾನಾಗುಂದಿ ಮಾಣಿಕಮ್ಮ, ಕೊಳ್ಳಿ ಮರಗಮ್ಮ, ಶಹಾಪುರ ತಾಲ್ಲೂಕಿನ ಹಾಲಗೇರಿ ಎಲ್ಲಮ್ಮ, ಯಾದಗಿರಿ ತಾಲ್ಲೂಕಿನ ಬಳಿಚಕ್ರದ ಮಸ್ಸೆಮ್ಮ, ಅರಕೇರಿ ಎಲ್ಲಮ್ಮ, ಚಿಂಚೋಳಿ ತಾಲ್ಲೂಕಿನ ನಿಡಗುಂದಿ ಚೌಡಮ್ಮ ದ್ಯಾವಮ್ಮ, ಹೊರಗುಂಟ ಪಾಲಕಮ್ಮ.

ಈ ಹೆಣ್ಣು ಗ್ರಾಮದೇವತೆಗಳ ನಡುವೆ ಒಬ್ಬನೇ ಪುರುಷ ಗ್ರಾಮದೇವತೆ ಹನುಮಂತ. ಮಧ್ವಾಚಾರ್ಯ ಮತ್ತು ಸಮರ್ಥ ರಾಮದಾಸರ ಪ್ರಭಾವದಿಂದ ಹಿಂದೂಧರ್ಮ ಸಂರಕ್ಷಣೆಗಾಗಿ, ಯುವಶಕ್ತಿಯನ್ನು ಬೆಳೆಸಲು ಪ್ರತಿ ಊರಿನಲ್ಲಿ ಹನುಮಂತ ದೇವರ ಸ್ಥಾಪನೆಯಾಯಿತು. ಗ್ರಾಮದೇವತೆಗಿರುವ ಎಲ್ಲ ಹಕ್ಕುಗಳು, ಚ್ಯಾಜ ಎಂದರೆ ಅಧಿಕಾರಗಳು ಹನುಮಂತನಿಗೆ ಇರುವುದರಿಂದ ಹನುಮಂತನನ್ನೂ ಗ್ರಾಮದೇವತೆಯೆಂದು ಸ್ವೀಕರಿಸಲಾಗಿದೆ.

ಪ್ರೇತಾತ್ಮದ ಸಂಕೇತವಾದ ದೇವತೆ. ಊರಿನ ಎಲ್ಲ ಜನರಿಂದಲೂ ಪೂಜಿಸಲ್ಪಡುವ ಹಿರಿಯ ದೇವತೆ, ಪ್ರತಿ ಊರಿನಲ್ಲಿ ಒಂದಲ್ಲ ಒಂದು ಸ್ವರೂಪದಲ್ಲಿ ಇರುವಳು. ವಾಸ್ತವವಾಗಿ



ದ್ಯಾವಮ್ಮ ದೇವಿ

ದ್ಯಾವಮ್ಮ ಮಾತ್ರ ಊರದೇವತೆ. ಬೇರೆಲ್ಲ ದೇವತೆಗಳು ಅವಳ ಸಹಾಯಕರು. ಗುಲ್ಬರ್ಗಾ ಜಿಲ್ಲೆಯ ಶೇಕಡ ಮೂವತ್ತೊಂದ ರಷ್ಟು ಜನ ದ್ಯಾಮವ್ವನನ್ನು ಪೂಜಿಸುತ್ತಾರೆ. ಚಿತ್ತಾಪೂರ ತಾಲ್ಲೂಕಿನ ಶಂಕರವಾಡಿ ಗ್ರಾಮದಲ್ಲಿ ಸಂತಾನದ ಸಲುವಾಗಿ ದ್ಯಾಮವ್ವನನ್ನು ಏಳು ಮಕ್ಕಳ ತಾಯಿಯೆಂಬ ಭೂತದ ರೂಪ ದಲ್ಲಿ ಪೂಜಿಸ ಲಾಗುತ್ತಿದೆ. ಸಂತಾನ, ಸಕಾಲಕ್ಕೆ ಮಳೆ, ಬೆಳೆಯ ರಕ್ಷಣೆ, ಒಡ್ಡುಗಳ ಸಂರಕ್ಷಣೆ, ಹೈನು ಹೆಚ್ಚಳ, ಸಾಂಕ್ರಾಮಿಕ ರೋಗಗಳು ಊರೊಳಗೆ ಬಾರದಂತೆ ತಡೆಯುವಿಕೆ, ಶಿಶು ಮರಣ ನಿಲ್ಲಿಸುವಿಕೆ, ಹೊಲಗಳ ಗಡಿ ನಿರ್ಧರಿಸುವಿಕೆ, ಜಗಳ ಬಿಡಿಸುವಿಕೆ, ಭೂತ ಪ್ರೇತೋಚ್ಚಾಟನೆ, ಹುಚ್ಚು ಬಿಡಿಸುವಿಕೆ, ಬಂಜೆತನ ನಿವಾರಣೆ ಇವೇ ಮುಂತಾದವು ದ್ಯಾವಮ್ಮನ ಕಾರ್ಯಗಳೆಂದು ಪರಿಗಣಿಸಲಾಗಿದೆ.

ದ್ಯಾವಮ್ಮ ಸಾತ್ವಿಕ ದೇವತೆ, ಸಮೃದ್ಧಿಯ ದೇವತೆ. ಮಾಲೇಗೌಡನ ಮನೆತನದವಳು. ಊರ ಮಧ್ಯೆ, ದೊಡ್ಡ ಗುಡಿ ಯಲ್ಲಿ ಅಥವಾ ಸಣ್ಣ ಗುಡಿಯಲ್ಲಿ, ಮನೆಯಲ್ಲಿ ಗೋಡೆಯಲ್ಲಿ ಈ ದೇವತೆಯ ವಾಸ್ತವ್ಯವಿರುತ್ತದೆ. ತಳವಾರ ಈ ದೇವತೆಯ ಆನುವಂಶಿಕ ಪೂಜಾರಿ. ದ್ಯಾವಮ್ಮನ ಮೂರ್ತಿಯನ್ನು ಶ್ರೀಗಂಧದ ಅಥವಾ ಮಳಗಿಯ ಮರದಿಂದ ತಯಾರಿಸುವರು. ಆಸೀನಮೂರ್ತಿ ಇವಳು. ಚಂದ್ರಾಯುಧ, ತ್ರಿಶೂಲ, ಭರ್ಜಿ ಇವಳ ಆಯುಧಗಳು. ವಾಹನ ಸಿಂಹ. ಈ ದೇವಿಗೆ ಪಾದುಕೆ ಗಳಿಲ್ಲ. ಬಿಳಿ ಸೀರೆ, ಬಿಳಿ ಕುಪ್ಪಸ ಅಥವಾ ಕೆಂಪು ಸೀರೆ, ಕೆಂಪು ಕುಪ್ಪಸ, ಕೆಂಪು ಅಥವಾ ಹಸಿರು ಬಳೆ, ತಾಳಿ, ಮೂಗುತಿ, ಡಾಬುಗಳನ್ನು ಧರಿಸಿರುತ್ತಾಳೆ. ದೇವಿಯ ಮುಂದುಗಡೆ ಪೂಜೆ. ಶುಕ್ರವಾರ ಈ ದೇವಿಯ ವಾರವಾಗಿರುತ್ತದೆ. ಕುರಿ, ಕೋಣ ಗಳನ್ನು ಬಲಿ ಕೊಡಲಾಗುತ್ತದೆ. ಕುರಿ, ಕೋಣಗಳ ಬಲಿ ಯನ್ನು ಕುರಿತಂತೆ ಇರುವ ಕಥೆಯು ಮಾರಮ್ಮನ ಕಥೆಯನ್ನು ಹೋಲುವಂತಿದ್ದು ಆ ಪ್ರಕಾರವಾಗಿ ಮೇಲ್ಜಾತಿಯಲ್ಲಿ ಹುಟ್ಟಿದ ದ್ಯಾವಮ್ಮನನ್ನು ಪಂಚಮನೊಬ್ಬನು ಮೋಸದಿಂದ ಮದುವೆ ಯಾದ. ಅವನಿಂದ ಅವಳಿಗೆ ಎರಡು ಮಕ್ಕಳಾದ ಮೇಲೆ ಗಂಡ ತನಗೆ ಮಾಡಿದ ಮೋಸವನ್ನು ತಿಳಿದು ಅವನನ್ನು ಕೊಂದುಹಾಕಿ ಎಂದು ತನ್ನ ಅಧೀನ ದೇವತೆಗಳಿಗೆ ಆಜ್ಞೆ ನೀಡಲು ಅದರಂತೆ ಅವನ ಬೆನ್ನಟ್ಟಿ ಹೋಗಿ ಕೊಂದು ಅವನ ರುಂಡವನ್ನು ತಂದು ದ್ಯಾಮವ್ವನ ಮುಂದಿಟ್ಟರು. ಈ ಘಟನೆಯ ನೆನಪಾಗಿ ಪ್ರತಿವರುಷ ಉತ್ಸವ ನಡೆಸಿ ಕುರಿ, ಕೋಣಗಳನ್ನು ದ್ಯಾಮವ್ವನ ಮುಂದೆ ಬಲಿ ಕೊಡುವರು. ಭಕ್ತರಿಗೆ ಹಣಚಿ ಬಟ್ಟು ಮುದ್ರೆ ಹಾಕಲಾಗುತ್ತದೆ. ದೀವಟಿಗೆ ಇರುತ್ತದೆ. ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಡನೆ ಕುಣಿತ ಉತ್ಸವದ ಸಂದರ್ಭದಲ್ಲಿ ನಡೆಯುತ್ತದೆ. ಈ ದೇವಿಗೆ ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಉತ್ಸವ ನಡೆಯುತ್ತದೆ. ದ್ಯಾವಮ್ಮನ ತವರೂರು ಗುಲ್ಬರ್ಗಾ ಜಿಲ್ಲೆಯ ಖಾಜಾಪುರ, ಸುರಪುರ ತಾಲ್ಲೂಕಿನ ಯಾಳಗಿ, ಸೇಡಂ ತಾಲ್ಲೂಕಿನ ಹಾಬಳ, ಚಿತ್ತಾಪುರ ತಾಲ್ಲೂಕಿನ ಗೋಳ್ಳ, ಜೇವರ್ಗಿ ತಾಲ್ಲೂಕಿನ ಕುಕನೂರು, ಕೆಂಭಾವಿ, ಸೂಗೂರು, ನಿಡಗುಂದಿ ಈ ಏಳೂ ಊರುಗಳಲ್ಲಿ ದ್ಯಾಮವ್ವನ ಗಂಡನ ಮನೆಗಳಿವೆ. ಗಂಡನ ಮನೆಯಾದ ಮಾಗಣಗೇರಿಯಿಂದ ತವರೂರಾದ ಖಾಜಾ ಪುರಕ್ಕೆ ದ್ಯಾಮವ್ವನನ್ನು ಉತ್ಸವದ ವೇಳೆಗೆ (ಬಾದಾಮಿ ಅಮಾವಾಸ್ಯೆ) ತರುವರು. ಇಲ್ಲಿ ಹದಿನೈದು ದಿನವಿರಿಸಿಕೊಂಡು ಮತ್ತೆ ಗಂಡನ ಮನೆಗೆ ಕಳುಹುವರು. ಅಲ್ಲಿಂದ ಬರುವ ವರ್ಷದ ವರೆಗೆ ಪ್ರತಿ ತಿಂಗಳು ಹದಿನೈದು ದಿನಕ್ಕೊಮ್ಮೆ ಒಂದೊಂದು ಊರಿಗೆ ಗಂಡನ ಮನೆಯಲ್ಲಿದ್ದು ಮುಂದೆ ಹೊರಡುವಳು. ದ್ಯಾಮವ್ವನ ತವರಿನವರು ತಳವಾರರು, ಗಂಡನ ಮನೆಯವರು ಬಡಿಗೇರರು. ತಳವಾರ ಮತ್ತು ಬಡಿಗೇರ ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸುವುದೇ ದ್ಯಾಮವ್ವನ ಈ ಉತ್ಸವದ ಉದ್ದೇಶ. ಊರ ದ್ಯಾವಮ್ಮ ದೇವಿಯ ಪೂಜೆ, ಉತ್ಸವ ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದು ಮುಂಜಾನೆಯಲ್ಲಿ ಗುಡಿಯ ಸಿಂಗಾರ, ಊರ ಜನರ ಮನೆಗಳ ಸಿಂಗಾರ, ದೇವಿಯ ಸ್ನಾನ, ಊರ ಜನರ ಗಂಗಾಸ್ನಾನ, ಶುಭ್ರವಸ್ತ್ರ, ಅಲಂಕಾರ, ಹಲಗೆ ಡೊಳ್ಳುಗಳೊಂದಿಗೆ ಊರಲ್ಲಿ ಮೆರವಣಿಗೆ; ಎರಡನೆ ಯದು ಮಧ್ಯಾಹ್ನದಲ್ಲಿ ದೇವಿಗೆ ಹರಕೆ ಸಲ್ಲಿಸುವುದು, ದೀಡ ನಮಸ್ಕಾರ, ಗಂಟೆ ಬಾರಿಸುವುದು, ಜಾವಳ (ಕೂದಲು ತೆಗೆಸುವುದು), ದೇವಿಗೆ ಪ್ರದಕ್ಷಿಣೆ ಹಾಕುವುದು, ಕೋಣ ಕುರಿ ಕೋಳಿ ಬಲಿಕೊಡುವುದು, ಕಾಯಿ ಒಡೆದು ಕರ್ಪೂರದಾರತಿ ಬೆಳಗುವುದು; ಮೂರನೆಯದು ಸಂಜೆಯಲ್ಲಿ ದೇವರ ಹೇಳಿಕೆ, ಊರ ಜನರ ಊಟ, ಲಾವಣಿ ಹಾಡುವುದು, ಬಯಲಾಟ

ಆಡುವುದು, ಮತ್ತಿತರ ಮನರಂಜನೆಯ ಕಾರ್ಯಕ್ರಮಗಳನ್ನು ನಡೆಸುವುದು.

ದ್ಯಾಮವ್ವನ ಪೂಜಾರಿ ತಳವಾರರಾಗಿದ್ದಾಗ ಮಾತ್ರ ಪೂಜಾರಿ ತಳವಾರನ ಮನೆಯ ಜಗುಲಿಯ ಮೇಲೆ ಮನೆ ದ್ಯಾಮವ್ವನಿರುತ್ತಾಳೆ. ಬೆಳ್ಳಿ, ತಾಮ್ರ, ಕಂಚಿನಿಂದ ಊರ ದ್ಯಾಮವ್ವನಿಗೆ ಮಾಡಿದ ಮುಖ, ಕಳಸಗಳನ್ನು ಗುಡಿಯಲ್ಲಿ ಡುವುದು ವಿಹಿತವಲ್ಲವೆಂದು ಪೂಜಾರಿಯು ಅವುಗಳನ್ನು ತನ್ನ ಮನೆಯಲ್ಲಿ ತಂದಿಡುವನು, ಜಾತ್ರೆ ಉತ್ಸವ ವಿಶೇಷ ದಿನಗಳಲ್ಲಿ ಗುಡಿಗೊಯ್ದು ಪೂಜಾದಿ ಕಾರ್ಯಗಳ ನಂತರ ಪುನಃ ತನ್ನ ಮನೆಯ ಜಗುಲಿಯ ಮೇಲೆ ತಂದಿಟ್ಟು ಪ್ರತಿ ಶುಕ್ರವಾರ ವಿಶೇಷ ಪೂಜೆ ಮಾಡುವನು. ಪೂಜಾರಿಯ ಮನೆತನ ಹೆಚ್ಚಿದಂತೆಲ್ಲ ದ್ಯಾಮವ್ವ ಈ ಎಲ್ಲರ ಮನೆಗಳ ಜಗುಲಿ ಮೇಲೆ ಇಡಲ್ಪಟ್ಟು ಮನೆ ದ್ಯಾಮವ್ವನೆನಿಸುವಳು. ಊರ ದ್ಯಾಮವ್ವನಿಗೆ ಸಲ್ಲಿಸುವಂತೆ ಇವಳಿಗೂ ಕೆಂಪುಸೀರೆ ರವಿಕೆ ತೊಡಿಸಿ, ಹೂ ಮುಡಿಸಿ, ಚಂದ್ರ ಕುಂಕುಮ ಹಚ್ಚಿ, ಮಡಿಲಕ್ಕಿ ಇಟ್ಟು, ಹೋಳಿಗೆ ಹುಗ್ಗಿ ಉಂಡೆ ನೈವೇದ್ಯಕ್ಕಿಟ್ಟು ಏಳು ಮಂದಿ ಸುವಾಸಿನಿಯರಿಗೆ ಉಣ ಬಡಿಸುವರು.

ಸುರಪುರ ತಾಲ್ಲೂಕಿನ ಯಾಳಗಿ ದೇಮವ್ವನ ಉತ್ಸವದ ಜೊತೆಯಲ್ಲೇ ಲಕ್ಷ್ಮಿಯ ಉತ್ಸವವನ್ನೂ ಆಚರಿಸುವರು. ದ್ಯಾಮವ್ವನ ಮೆರವಣಿಗೆಯಾಗಿ ಗಂಗಾಸ್ನಾನದ ನಂತರ ಲಕ್ಷ್ಮಿ ಗುಡಿಗೆ ಬಂದು ಲಕ್ಷ್ಮಿಗೂ ಜಳಕ ಮಾಡಿಸುವರು, ಅಲಂಕಾರ, ಪೂಜೆ, ಕುರಿ ಬಲಿ ನಡೆಸುವರು. ಸಂಜೆತನಕ ಕುಸ್ತಿಗಳು ನಡೆಯುವುವು. ಸಂಜೆಯಾಗುತ್ತಲೇ ದೇವಿ ಊರ ಸಂಚಾರ ಮಾಡಿ ಮೂಲಸ್ಥಾನಕ್ಕೆ ಹಿಂದಿರುಗುವಳು.

ಚಿಂಚೋಳಿ ತಾಲ್ಲೂಕಿನ ನಿಡಗುಂದಿ ದ್ಯಾಮವ್ವನ ಗುಡಿಯು ಊರ ಮಧ್ಯದಲ್ಲಿದ್ದು ದೇವಿಯ ಮೂರ್ತಿಯು ಮರದಿಂದ ಮಾಡಿದ್ದು ಆರಡಿ ಎತ್ತರವಿದೆ. ಇಲ್ಲಿ ಪೂಜಾರಿಗಳು ಕಬ್ಬಲಿಗರು. ಇಲ್ಲಿನ ಸ್ಥಳಪುರಾಣದ ಪ್ರಕಾರ ಪಕ್ಕದ ಊರಾದ ಮೀರಾಣದಲ್ಲಿ ಜಾತ್ರೆ ನಡೆದಾಗ ಅಗಸನೊಬ್ಬನು ಅನ್ನದ ಫಲಿ ತರಲು ಹೋದ ನಂತೆ. ಹಿಂದಿರುಗುವಾಗ ಅಗಸಿ ಬಾಗಿಲು ಹಾಕಿದ್ದರಿಂದ ಸಿಕ್ಕಿಬಿದ್ದಾಗ ಬಾಗಿಲ ಕಿಟಕಿಯಲ್ಲಿ ತಲೆಯಿಟ್ಟು ತನ್ನ ಜತೆಯಲ್ಲಿ ಬಂದಿದ್ದ ಜನರಿಗೆ ತನ್ನ ತಲೆಯನ್ನು ಕಡಿದು ಊರಿಗೆ ಕೊಂಡೊಯ್ಯಲು ಹೇಳಿದನಂತೆ. ಅದರಂತೆ ಅಗಸನ ತಲೆ ಅಗಸಿಯಲ್ಲಿದೆ, ಸೀಮೆಯ ಮೇಲೆ ಅವನ ನೆನಪಿನಲ್ಲಿ ದಂಡ ನಿಲ್ಲಿಸಿದ್ದಾರೆ. ಮೊದಲು ದಂಡವಿದ್ದಲ್ಲಿಗೆ ಹೋಗಿ ದೀಪಹಚ್ಚಿ ಪೂಜೆ ಸಲ್ಲಿಸಿ ನಂತರ ರುಂಡಕ್ಕೆ ಕಾಯಿ ಕರ್ಪೂರ ಸಲ್ಲಿಸಿದ ಬಳಿಕವೇ ದ್ಯಾಮವ್ವನ ಪೂಜೆ ನಡೆಯುವುದು.

ಎಲ್ಲಮ್ಮ: ಮೂಲದಲ್ಲಿ ಈ ದೇವತೆ ಎಲ್ಲೆ ಅಥವಾ ಸೀಮೆಯ ದೇವತೆ. ಇವಳು ಲೋಕ ದೇವತೆಯೂ ಹೌದು, ಸ್ಥಳೀಯ ದೇವತೆಯೂ ಹೌದು. ಇವಳನ್ನು ಬ್ರಾಹ್ಮಣರು ರೇಣುಕಾ, ವೀರಶೈವರು ಸತ್ಯಕ್ಕ, ಜೈನರು ಪದ್ಮಾವತಿ, ಕೆಳವರ್ಗದವರು ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವರು.

ಗುಲಬರ್ಗಾ ಜಿಲ್ಲೆಯ ಎಲ್ಲಮ್ಮ ದೇವತೆಗಳು ತುಂಬಾ ವಿಶಿಷ್ಟರಾಗಿದ್ದಾರೆ. ಚಿತ್ತಾಪುರ ತಾಲ್ಲೂಕಿನ ನಾಗಾಯಿ ಎಲ್ಲಮ್ಮ ಮತ್ತು ಬಳ್ಳಡಗಿ ಎಲ್ಲಮ್ಮ ಮಹತ್ವದ ದೇವತೆಗಳೆನಿಸಿದ್ದಾರೆ. ಇತರೆಡೆ ಎಲ್ಲಮ್ಮನ ಗುಡಿಯ ಪೂಜಾರಿಗಳು ಕೆಳವರ್ಗದವ ರಾಗಿದ್ದಾರೆ; ಆದರೆ ಈ ಎಲ್ಲಮ್ಮ ಗುಡಿಯಲ್ಲಿ ಪೂಜಾರಿ ಬ್ರಾಹ್ಮಣ. ನಾಗಾಯಿ ಎಲ್ಲಮ್ಮನ ಗುಡಿಯ ತಳಭಾಗ ದಲ್ಲಿ ಬರುವ ಝರಿಯ ನೀರಿನಿಂದ ದೇವಿ ಪೂಜೆಯು ನಡೆಯುತ್ತದೆ. ನಾಗಾಯಿ ಎಲ್ಲಮ್ಮನ ಪಕ್ಕದಲ್ಲಿರುವ ನಂದಿ ಬಾವಿ ಬತ್ತಬೇಕು, ಕಲ್ಲಕೋಳಿ ಕೂಗಬೇಕು, ಮುಲ್ಲಾ ಜವಾಬು ಕೊಡಬೇಕು ಆಗ ಜಗತ್ತು ಪ್ರಳಯವಾಗುತ್ತದೆ ಎಂಬ ಜನವದಂತಿ ಇದೆ. ದ್ಯಾಮವ್ವ, ಮರಗಮ್ಮ, ದುರಗಮ್ಮರನ್ನು ಒಬ್ಬರೊಳಗೊಬ್ಬರನ್ನು ಸೇರಿಸಿ ದಂತೆ ಎಲ್ಲಮ್ಮನನ್ನು ಪ್ರತ್ಯೇಕ ದೇವತೆಯಾಗಿರಿಸಿ ಗುಲಬರ್ಗಾ ಜಿಲ್ಲೆಯ ಚುಂಚುರ ಮಾಪುರತಾಯಿ, ಬೀದರ ಜಿಲ್ಲೆಯ ಬಗದುರಿ ಎಲ್ಲಮ್ಮ, ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ, ಮುನಿರಾಬಾದಿನ ಹುಲಿಗೆಮ್ಮರನ್ನು ಎಲ್ಲಮ್ಮನ ಗುಂಪಿನ ದೇವತೆಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಕಾರಣ, ಎಲ್ಲಮ್ಮನ ಪೂಜೆಯ ರೀತಿಯಲ್ಲಿಯೇ ಈ ದೇವತೆಗಳಿಗೂ ಪೂಜೆ ನಡೆಯುತ್ತದೆ. ಎಲ್ಲಮ್ಮ ಹುಲಿಸವಾರಿ ಮಾಡಿದ್ದರಿಂದ ಆಕೆಗೆ ಹುಲಿಗೆಮ್ಮನೆಂಬ ಹೆಸರೂ, ಸವಾರೆಮ್ಮ ಎಂಬ ಹೆಸರೂ, ಮಹಾರಾಷ್ಟ್ರದ ಮಾಪುರದಿಂದ ಬಂದವಳೆಂದು ಎಲ್ಲಮ್ಮನಿಗೆ ಚುಂಚುರ ಮಾಪುರತಾಯಿ ಎಂಬ ಹೆಸರೂ ಬಂದವು. ಅಲ್ಲದೆ, ಜಮದಗ್ನಿ ಋಷಿಯ ಪತ್ನಿ ರೇಣುಕಾಳ ಪಾತಿವ್ರತ್ಯ ಭಂಗ ವಾದಾಗ ಪತಿಯ ಶಾಪದಿಂದ ಮೈಯೆಲ್ಲ ಹುತ್ತಿನಂತೆ ಹುಣ್ಣಾಗಿ ಹೋದ ಕಾರಣ ರೇಣುಕಾಳ ಅವತಾರಿಯಾದ ಎಲ್ಲಮ್ಮನನ್ನು ಹುತ್ತಿನೆಲಮ್ಮ ಎಂದು ಕರೆಯುತ್ತಾರೆ. ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಸಗರದ ಎಲ್ಲಮ್ಮ, ಶಹಾಪುರ ತಾಲ್ಲೂಕಿನ ಹಾಲ್ಗೇರಿ ಎಲ್ಲಮ್ಮರು ಕುರಿಬಲಿಗಳಿಂದ ಉಟ್ಟಿಗೆ ಉಡುವುದ ರಿಂದ ಪ್ರಸಿದ್ಧರಾಗಿದ್ದಾರೆ.

ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ ಇಂದು ಭಾರತದಲ್ಲೇ ಪ್ರಸಿದ್ಧಿಯನ್ನು ಪಡೆ ದಿರುವ ದೇವತೆ. ಈ ಚುಂಚುರ ಪ್ರದೇಶದಲ್ಲಿ ಚಂಚು ಎಂಬ ಕಾಡುಜನಾಂಗ ಇದ್ದುದರಿಂದ ಊರಿಗೆ ಈ ಹೆಸರು ಬಂದಿದೆ. ಚಂಚು ಜನರ ದೇವತೆ ಮಾಪುರತಾಯಿಯೇ ಎಲ್ಲಮ್ಮ ಆದಳು. ಜನಪದರ ಕಥೆಯ ಪ್ರಕಾರ ಮಾಪುರತಾಯಿ ಮಹಾರಾಷ್ಟ್ರದ ಮೋಹಿತ ಆಂಬ್ರಾ ಪ್ರದೇಶಕ್ಕೆ ಸೇರಿದ್ದು ಸಂಚಾರ ಹೊರಟು ಏಳುಗುತ್ತಿ ಗುಡ್ಡಕ್ಕೆ ಬಂದಾಗ ಚುಂಚುರದಲ್ಲಿದ್ದ ಮಹಾಸುರ, ಬಾಣಾಸುರ, ಗೌಳಾಸುರ, ಸಂಕಾಸುರ, ಸಿದ್ಧಾಸುರ, ಶಿವಲಿಂಗಾಸುರ, ಸೋಮಾಸುರರನ್ನು ಕೊಂದು ಊರ ಜನ ರನ್ನು ಪರೀಕ್ಷಿಸಲು ಮೈಯೆಲ್ಲ ಹುಣ್ಣುಳ್ಳ ಮುಪ್ಪಾನ ಮುದುಕಿ ಯಾಗಿ ಊರೊಳಗೆ ಬಂದಳು. ಯಾರೂ ಲಕ್ಷಿಸದ ಇವಳನ್ನು ಪಾಡೇವಾರ ಮಲ್ಲಪ್ಪ ರಾಶಿಗಳು ಹೆಗಲ ಮೇಲೆ ಕೂರಿಸಿಕೊಂಡು ತಮ್ಮ ಮನೆಗೆ ಕರೆತಂದರು. ಅಂದು ಅವರ ಮನೆಯಲ್ಲೇ ತಂಗಿದ್ದ ಮಾಪುರತಾಯಿಯು ಮಾರನೆಯ ದಿನ ಮಧ್ಯಾಹ್ನ



ಮಾಪುರತಾಯಿ, ಚಿಂಚನಸೂರ

ಕುಳ್ಳು ಹಿಡಿಯುವ ನೆಪದಿಂದ ಹಂಡಿ ಬುಟ್ಟಿ ತೆಗೆದುಕೊಂಡು ಅವನ ಇಬ್ಬರು ಹೆಣ್ಣು ಮಕ್ಕಳಾದ ಗಂಗಮ್ಮ, ನೀಲಮ್ಮರನ್ನು ಕರೆದುಕೊಂಡು ಏಳುಗುತ್ತಿ ಅಣಿ ಕೆಳಗಡೆ ಹುಣಸೀಮರದ ನಡುವೆ ಐಕ್ಯಳಾಗಿ ಮಲ್ಲಪ್ಪ ಮತ್ತು ಊರಗೌಡನ ಕನಸಿನಲ್ಲಿ ಬಂದು ಅವರಿಬ್ಬರಿಗೂ ತಾನಿರುವ ಎಡೆಯನ್ನು ತಿಳಿಸಿ ಅಲ್ಲಿ ಗುಡಿಯನ್ನು ತನಗೆ ಕಟ್ಟಿಸಬೇಕೆಂದೂ ತನ್ನ ಸೇವೆಗೆ ನಿಂತ ಹೆಣ್ಣು ಮಕ್ಕಳ ಭಾರವನ್ನು ಗೌಡ ಕುಲಕರ್ಣಿ ಹೊರಬೇಕೆಂದೂ, ವೈಶಾಖ ಮಾಸದಿಂದ ಕಾರುಹುಣ್ಣಿಮೆಯ ತನಕ ತನ್ನನ್ನು ಮಾಡಬೇಕೆಂದೂ, ಹಾಗೆ ಪೂಜೆ ಮಾಡಿದೋರ ಮನಸ್ಸಿನ ಮಾತು ಸತ್ಯವಾಗುವುದೆಂದೂ ತಿಳಿಸಿದಳು. ಅದರಂತೆ ಮಾಪುರ ತಾಯಿಯ ಗುಡಿಯು ಚುಂಚುರದಲ್ಲಿ ಕಟ್ಟಲಾಗಿದೆ. ಅಂದಿನಿಂದ ಮಲ್ಲಪ್ಪ ಪಾಡೇವಾರ ಮನೆತನದವರೇ ಇಂದಿನವರೆಗೆ ಈ ದೇವತೆಯ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುಲಬರ್ಗಾ ಜಿಲ್ಲೆಯಲ್ಲಿ ಈ ದೇವಿಗೆ ರಥೋತ್ಸವ ನಡೆಯುವುದಿಲ್ಲ.

ಎಲ್ಲಮ್ಮ ಜಮದಗ್ನಿ ಋಷಿಯ ಪತ್ನಿ ರೇಣುಕೆಯೆಂದೂ ಬ್ರಾಹ್ಮಣ ದೇವತೆಯೆಂದೂ ಪರಿಗಣಿಸಲ್ಪಟ್ಟಿರುವ ಕಾರಣ ಚಿತ್ತಾಪುರ ತಾಲ್ಲೂಕಿನ ಬಳ್ಳಡಗಿ ಎಲ್ಲಮ್ಮನ ಪೂಜಾರಿಗಳು ಬ್ರಾಹ್ಮಣರು. ಜಮದಗ್ನಿ ಋಷಿಯು ಸೀಲಗೆಟ್ಟ ರೇಣುಕೆಯನ್ನು ತಾಯಿಯನ್ನು ಬದುಕಿಸಿದನು. ಒಮ್ಮೆ ಅವಳು ಉರಿಬಿಸಿಲಲ್ಲಿ ನಡೆಯಲಸಾಧ್ಯವಾದಾಗ ಭೃಗು ಮಹರ್ಷಿಗಳು ಕರುಣೆ ದೋರಿ ಅವಳಿಗೆ ಪಾದುಕೆ ಛತ್ರಗಳನ್ನು ನೀಡಿದರಂತೆ. ಆ ಪಾದುಕೆಗಳನ್ನು ಇವತ್ತಿಗೂ ಸಾಂಕೇತಿವಾಗಿಟ್ಟು ಕೊರಳಲ್ಲಿ ಕಟ್ಟಿಕೊಳ್ಳುವರು, ಎಲ್ಲಮ್ಮನ ಮುಂದೆ ಪೂಜೆಗಾಗಿ ಇಡುವರು. ಆಕೆಯ ದರ್ಶನಕ್ಕಿಂತಲೂ ಅವಳ ಪಾದುಕೆಗಳ ದರ್ಶನ ಅತ್ಯಂತ ಮಹತ್ವದ್ದೆಂದು ಜನ ತಿಳಿಯುತ್ತಾರೆ.

ಎಲ್ಲಮ್ಮನಿಗೆ ಪತಿಯ ಶಾಪದಿಂದ ತೊನ್ನು ರೋಗ ಹತ್ತಿತ್ತು. ಮುಂದೆ ಜೋಗುಳ ಬಾವಿಯಲ್ಲಿ ಮಿಂದಾಗ ತೊನ್ನು ರೋಗ ನಿವಾರಣೆಯಾಯಿತು. ತನ್ನ ಪತ್ನಿಗೆ ಶಾಪ ವಿಮೋಚನೆ ನೀಡಿದ ಎಕ್ಕಯ್ಯ ಜೋಗಯ್ಯರಿಗೆ ಷಂಡತನ ಬರಲಿ ಎಂದು ಜಮದಗ್ನಿಯು ಶಾಪ ನೀಡಿದರು. ಆದುದರಿಂದ ಎಲ್ಲಮ್ಮನ ಹತ್ತಿರ ಗಂಡು ಜೋಗರನ್ನು ಕಾಣುತ್ತೇವೆ. ಎಲ್ಲಮ್ಮನ ಪೂಜೆಯಾಗುವಾಗ ಜೋಗಯ್ಯರ ಸ್ತುತಿಯೂ ಆಗುವುದು.

ಎಲ್ಲಮ್ಮನಿಗೆ ಮಾತಂಗಿ ಎಂಬ ರೈತ ಪತ್ನಿಯು ಆಶ್ರಯ ನೀಡಿದ್ದಕ್ಕಾಗಿ ಎಲ್ಲಮ್ಮನು ಪ್ರಸನ್ನಳಾಗಿ ನನ್ನ ಪೂಜೆಗೆ ಮೊದಲು ನಿನಗೆ ಪೂಜೆ ಸಲ್ಲಲಿ ಎಂದು ವರವನ್ನು ನೀಡಿದಳು. ಅದರಂತೆ ಎಲ್ಲಮ್ಮನ ಪೂಜೆಯಲ್ಲಿ ಮೊದಲ ಎಡೆ ಮಾತಂಗಿಗೆ ನೀಡಲಾಗುತ್ತದೆ. ಇನ್ನೊಂದು ಕಥೆಯ ಪ್ರಕಾರ ಎಲ್ಲಮ್ಮ ಮಕ್ಕಳನ್ನು ಹಡೆಯಲು ಹೋದಾಗ ಜಮದಗ್ನಿ ಋಷಿ ತನ್ನ ಸೇವೆಗಾಗಿ ಮಾತಂಗಿಯನ್ನಿಟ್ಟುಕೊಂಡಿದ್ದನೆಂದೂ ಮಾತಂಗಿಯು ಎಲ್ಲಮ್ಮನ ತಂಗಿ ಎಂದು ಹೇಳಲಾತ್ತದೆ. ಅದಕ್ಕಾಗಿ ಹಳ್ಳಿಗಳಲ್ಲಿ ಬ್ರಾಹ್ಮಣರು, ಗೌಡರು, ಸಾಹುಕಾರರು ಮಾತಂಗಿಯ ಸಂಬಂಧವನ್ನು ಇಟ್ಟುಕೊಳ್ಳುವುದು ಸಾಮಾನ್ಯವಾಗಿದ್ದಿತು. ಎಲ್ಲಮ್ಮನೂ ಶಕ್ತಿದೇವತೆಯಾದ ಕಾರಣ ಮಾರಮ್ಮನ ಆಚಾರ-ವಿಚಾರಗಳನ್ನು ಎಲ್ಲಮ್ಮನಿಗೂ ಆರೋಪಿಸಲಾಯಿತು. ಇದರಿಂದ ಕುರಿ ಬಲಿಯ ಉತ್ಸವದಾಚರಣೆಯಲ್ಲಿ ಸೇರಿತು. ದ್ಯಾಮವ್ವನಂತೆ ಎಲ್ಲಮ್ಮನೂ ಫಲೋತ್ಪತ್ತಿ ದೇವತೆಯೆಂದು ಕೊಡದ ಪೂಜೆಯನ್ನೂ ಸೇರಿಸಲಾಯಿತು.

ಮರಗಮ್ಮ: ಮರಗಮ್ಮ, ಮರೆಮ್ಮ ಮೂಲದಲ್ಲಿ ಮರಣದಿಂದ ಉಳಿಸುವ ದೇವತೆ. ಆದರೆ ಇಂದು ಇವಳು ಮರಣ ತರುವ ದೇವತೆಯೆಂದು ಪರಿಗಣಿಸಲಾಗುತ್ತದೆ. ಇವಳನ್ನು ಪ್ಲೇಗು, ಕಾಲರ, ಸಿಡುಬುಗಳ ದೇವತೆಯೆಂದೂ ಹೇಳಲಾಗುತ್ತದೆ. ಹಳ್ಳಿಗಳಲ್ಲಿ ಮರಗಮ್ಮನ ಸ್ಥಾಪನೆಯಾದದ್ದು ಮರಣದ ಭಯದಿಂದ. ಆದಿಮಾನವನು ಪೂಜಿಸುತ್ತಿದ್ದ ಮರ ಅಮ್ಮನಾಗಿ ಗ್ರಾಮಗಳಾದಾಗ ರೋಗರುಜಿನ, ಬಂಜೆತನ ನಿವಾರಕಳಾಗಿ, ಆಯುರ್ವೇದ ವೃತ್ತಿಯಾಧಾರವಾಗಿ ವೃಕ್ಷ ದೇವತೆಯಾಗಿ ಪೂಜೆಗೊಳ್ಳತೊಡಗಿದಳು. ಈಳಿಗರು ಈಚಲ, ಮ್ಯಾದರು-ಬಿದರು, ಪಾಂಚಾಲರು-ಬನ್ನಿ, ಶೈವರು-ಬಿಲ್ವ, ಬ್ರಾಹ್ಮಣರು-ತುಳಸಿ, ಬ್ಯಾಡರು ಮತ್ತು ತಳವಾರರು-ಬೇವು, ಕುರುಬರು-ಕುಸಬಿ, ಮಾದರು-ಮಾವು, ಕುಂಬಾರರು-ಕುಂಬಳ, ಜಾಡರು-ಜಾಲಿ ಮರಗಳನ್ನು ತಮ್ಮ ತಮ್ಮ ಕೇರಿಗಳ ದೇವತೆಗಳೆಂದು ಪೂಜಿಸುತ್ತಾರೆ.

ಊರು ಮರಗಮ್ಮ, ಗಾಳಿ ಮರಗಮ್ಮ, ಸೀಮೆ ಮರಗಮ್ಮ, ಕೌಟಾ ಮರಗಮ್ಮ, ಗಡವಂತಿ ಮರಗಮ್ಮ, ಕೀರಣಗಿ ಮರಗಮ್ಮ ಎಂಬ ಪ್ರಭೇಧಗಳು ಈ ದೇವತೆಯಲ್ಲಿ ಕಂಡುಬರುತ್ತವೆ. ಊರು ಮರಗಮ್ಮ ಎಂದರೆ ಊರಿನ ರಕ್ಷಣೆಗಾಗಿ ಇರುವವಳು ಎಂದರ್ಥ. ಈಕೆ ಊರಿನ ಮಧ್ಯೆ ಇದ್ದು ಊರನ್ನು ಕಾಯುವ ದ್ಯಾಮವ್ವನನ್ನು ನಡೂರ ದೇವಮ್ಮನೆಂದು ಕರೆದರೆ ಊರ ಮುಂದಿದ್ದು ಸಾವಿನಿಂದ ಕಾಯುವ ಮರಗಮ್ಮನನ್ನು ಊರ ಮುಂದಿನ ಮರಗಮ್ಮನೆನ್ನುವರು. ದ್ಯಾಮವ್ವನಿಗೆ ಸಲ್ಲುವ ಪೂಜೆಗಳು ಮರಗಮ್ಮನಿಗೂ ಸಲ್ಲಿಸಲಾಗುವುದು. ಊರಲ್ಲಿ ಸಾವು ನೋವುಗಳಾದಾಗ, ಭೀಕರ ರೋಗ ರುಜಿನವುಂಟಾದಾಗ ಮರಗಮ್ಮನಿಗೆ ವಿಶೇಷ ಪೂಜೆಗಳನ್ನು ಮಾಡಲಾಗುವುದು. ಮರಗಮ್ಮನ ಗುಡಿಯ ಮುಂದೆ ಹಲಗೆ ಡೊಳ್ಳುಗಳನ್ನು ಬಡಿಯುತ್ತ, ಬಾರಿಸುತ್ತ ಜೊತೆಗೆ ಪೂಜಾರಿಯನ್ನು ಕರೆದು ಕೊಂಡು ದೇವಿಯ ಗುಡಿಗೆ ಬರುತ್ತಿದ್ದರು. ಆಗ ಪೂಜಾರಿಯ ಮೈಮೇಲೆ ದೇವಿಯು ಮೂಡಿ ಬಂದು ಜನರು ಕೇಳಿದ ಪ್ರಶ್ನೆಗಳಿಗೆ ಹೇಳಿಕೆ ನೀಡುವನು. ಮರಗಮ್ಮನ ಉತ್ಸವ ಮಾಡಲು ಹೇಳುವನು. ಈ ಉತ್ಸವ ನಡೆಸುವ ಸಂಪೂರ್ಣ ಜವಾಬ್ದಾರಿಯನ್ನು ಮರಗಮ್ಮನ ಮನೆತನದ ಕುಲಕರ್ಣಿ ಹೊರುವನು. ಊರಲ್ಲಿ ಏಳು ದಿವಸ ದೀಪ ಇಡುತ್ತಾರೆ. ಆ ಏಳೂ ದಿವಸಗಳಲ್ಲಿ ಹೊರಗಿನ ಜನ ಊರೊಳಗಾಗಲೀ, ಊರಿನ ಜನ ಊರ ಹೊರಗೆ ಹೋಗುವುದಾಗಲೀ ನಿಷಿದ್ಧ. ಏಳೂ ದಿನಗಳ ಉತ್ಸವದ ಕೊನೆಯಲ್ಲಿ ಸಿಂಗಾರಗೊಂಡ ಗಾಳಿ ಮರಗಮ್ಮನನ್ನು ಬಂಡಿಯ ಮೇಲೆ ಕೂರಿಸಿಕೊಂಡು ಹಲಗೆ ಡೊಳ್ಳುಗಳನ್ನು ಮೆರೆಸುತ್ತ ಏಳೂರು ಸೀಮೆ ಕೂಡುವಲ್ಲಿಗೆ ತಂದು ಇಡುತ್ತಿದ್ದರು. ಗಾಳಿ ಮರಗಮ್ಮನನ್ನು ಊರು ಸೀಮೆ ದಾಟಿಸಿ ಬಂದದ್ದರಿಂದ ರೋಗದ ಹಾವಳಿ ಊರು ಬಿಟ್ಟು ಹೋಯಿತು ಎಂದು ಜನ ಸಂತೋಷದಿಂದ ಹಿಂತಿರುಗುವರು. ಊರು ಮರಗಮ್ಮನ ಸಮೀಪದಲ್ಲಿ ಗಾಳಿ ಮರಗಮ್ಮ ಏಳು ದಿನಗಳು ಕುಳಿತಿದ್ದ ಸ್ಥಳದಲ್ಲಿ ಗುಡಿಕಟ್ಟಿಸಿ ಗಾಳಿಮರಗಮ್ಮನ ಮೂರ್ತಿಗಳನ್ನು ಮಾಡಿಸಿ ಒಂದು ಮೂರ್ತಿಯನ್ನು ಸೀಮೆಯ ಮೇಲಿಟ್ಟು, ಇನ್ನೊಂದು ಮೂರ್ತಿಯನ್ನು ಊರ ಮರಗಮ್ಮನ ಸಮೀಪದಲ್ಲಿ ಸ್ಥಾಪಿಸುವರು. ಪ್ರತಿ ಬೇಸಿಗೆಯಲ್ಲೊಮ್ಮೆ ಮರಗಮ್ಮನಿಗೆ ಕುರಿಬಲಿಯನ್ನು ಕೊಟ್ಟು ಉತ್ಸವವನ್ನು ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿಯಲ್ಲಿ ಈಗಲೂ ಆಚರಿಸುತ್ತಾರೆ. ಆಳಂದ ತಾಲ್ಲೂಕಿನ ಇವತ್ತಿನ ಕಮಲನಗರ ಹಿಂದೆ ಕೌಂಟಗಿ ಆಗಿತ್ತು. ಆ ಕೌಂಟಗಿ ಊರಿನ ಮರಗಮ್ಮ ಜೇವರ್ಗಿ ತಾಲ್ಲೂಕಿನ ಅಡವಿ ಸೇರಿ ವೈಭವದಿಂದ ಪೂಜೆಗೊಳ್ಳುತ್ತಿದ್ದಾಳೆ. ಇವಳಿಗೆ ಒಂದೇ ದಿನದ ಉತ್ಸವ. ರಾತ್ರಿ ಇಲ್ಲಿ ಯಾರೂ ಇರುವಂತಿಲ್ಲ. ಪ್ರತಿ ಶುಕ್ರವಾರ ಈ ದೇವಿಯ ಉತ್ಸವ ಚೈತ್ರದಿಂದ ಜ್ಯೇಷ್ಠದವರೆಗೆ ನಡೆಯುತ್ತದೆ. ಗುಲಬರ್ಗಾ ತಾಲ್ಲೂಕಿನ ಆಲಳ್ಳಿ ಮರಗಮ್ಮನ ಪೂಜಾರಿ ಬಲವಾದ ಹೇಳಿಕೆ ಮಾಡುವುದರಿಂದ ಈ ದೇವಿಯ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಕೀರಣಗಿಯಲ್ಲಿರುವ ದೇವಿಯ ಜೋಡು ಮರಗಮ್ಮರಿಂದ ಪ್ರಸಿದ್ಧವಾಗಿದೆ. ಇಲ್ಲಿ ಹೇಳಿಕೆ ಮಾಡುವವಳು ಹರಿಜನರ ಹೆಣ್ಣು ಮಗಳು. ಉತ್ಸವದ ದಿನ ಮಾತ್ರ ಎಲ್ಲರೂ ಅವಳ ಕಾಲುಮುಟ್ಟಿ ನಮಸ್ಕರಿಸುವರು. ಇಲ್ಲಿ ಊರ ಮುಂದೆ ಊರ ಮರಗಮ್ಮ ಮತ್ತು ಸೀಮೆಯ ಮೇಲೆ ದಂಡಿನ ಮರಗಮ್ಮ ಇದ್ದಾಳೆ. ಐದು ದಿನಗಳ ಉತ್ಸವವಿದ್ದದ್ದು ಈಗ ಮೂರು ದಿನಕ್ಕಿಳಿದಿದೆ. ಸಂಜೆ ರಥೋತ್ಸವವಿರುತ್ತದೆ. ಇಲ್ಲಿ ರಥಕ್ಕೂ ಸೀರೆ ಉಡುಸುವುದೊಂದು ವಿಶೇಷ. ಕುರಿ ಕೋಣಗಳನ್ನು ಬಲಿಕೊಡುವರು. ಕೈಗೆ ಮೈಗೆ ಹಣೆಗೆ ಹಣಚಿ ಬಟ್ಟಿನ ಮುದ್ರೆ ಇದೆ. ಉರುಳುಸೇವೆ ನಡೆಯುತ್ತದೆ. ರಾತ್ರಿಯಲ್ಲಿ ದೀವಟಿಯಿದೆ. ಹೊಳೆ ಕೆರೆ ಬಾವಿ ಇಲ್ಲ. ಉಟ್ಟಬಟ್ಟೆಯ ಮೇಲೆ ನ್ಯಾಯ ಸ್ಥಾನವಿದೆ. ಮಂಗಳವಾರ ದೇವಿಯ ವಾರ. ಹಸಿರು ಸೀರೆ, ಹಸಿರು ರವಿಕೆ, ಹಸಿರು ಬಳೆ, ಡಾಬು, ಮೂಗುತಿ ಇವಳ ಉಡುಗೆ ಆಭರಣಗಳು, ಚಂದ್ರಾಯುಧ, ತ್ರಿಶೂಲ, ಭರ್ಜಿಗಳು ಆಯುಧಗಳು, ವಾಹನ ಸಿಂಹ. ಬಯಲಾಟ, ಕುಣಿತ ಮನರಂಜನೆಗಳು.

ಪಾಲಕಮ್ಮ, ಪೋಚಮ್ಮ: ಗುಲಬರ್ಗಾ ಜಿಲ್ಲೆಯಲ್ಲಿ ಮಕ್ಕಳ ದೇವತೆ. ಪಾಲಕಮ್ಮನ ತಂಗಿಗೆ ಪೋಚಮ್ಮ ಪೋಷಮ್ಮ ಎಂದು ಹೆಸರು. ದ್ಯಾಮವ್ವ ಊರಿಗೆ ಮಳೆಬೆಳೆಯಿಂದ ಸಮೃದ್ಧಿ, ಸುಖ ಉಂಟುಮಾಡುವ, ಮರಗಮ್ಮ, ಕುಂಡಿಬಾಯಿ ಹಾವಳಿಯಿಂದ ಉಳಿಸುವ ದೇವತೆಗಳಾದರೆ ಪಾಲಕಮ್ಮ, ಪೋಚಮ್ಮರು ಮಕ್ಕಳನ್ನು ಥಟ್ಟು, ಹೊಟ್ಟು, ಗೊಬ್ಬರ, ದೇವಿ, ಗಣಜಲು, ಉರಿಚಳಿಗಳಿಂದ ಉಳಿಸುವ ದೇವತೆಗಳು. ಜೋಡು ದ್ಯಾವಮ್ಮ, ಜೋಡು ಮರಗಮ್ಮ ಇರುವಂತೆ ಪಾಲಕಮ್ಮನ ಜೊತೆಗಾರ್ತಿಯಾಗಿ ತಂಗಿಯಾಗಿ ಹಾಲು ಕುಡಿವ ಮಕ್ಕಳನ್ನು ಪೋಷಿಸಲು ಪೋಚಮ್ಮನಿರುವಳು. ಪೋಚಮ್ಮ ಸಹಾಯಕ ದೇವತೆಯಾದ್ದರಿಂದ ಅವರಿಬ್ಬರೂ ಒಂದೇ ಗುಡಿಯಲ್ಲಿದ್ದರೂ ಆ ಗುಡಿಯನ್ನು ಪಾಲಕಮ್ಮನ ಗುಡಿ ಎನ್ನುವರು.

ಪಾಲಕಮ್ಮ ಪ್ರಮುಖ ಗ್ರಾಮದೇವತೆಯಲ್ಲ. ಆದರೆ ಮಾರಮ್ಮನ ಉಪದೇವತೆ. ಮಾರಮ್ಮ ಊರಿನ ಸ್ತ್ರೀಪುರುಷರ ರೋಗಗಳನ್ನು ನಿವಾರಿಸಿದರೆ ಪಾಲಕಮ್ಮ ಅವರ ಮಕ್ಕಳ ಪೀಡೆಗಳನ್ನು ಪರಿಹರಿಸುವಳು. ಇವಳು ಸೌಮ್ಯದೇವತೆ. ಇವಳ ಅನುವಂಶಿಕ ಪೂಜಾರಿ ತಳವಾರ. ಆಭರಣಗಳು ಹಸಿರುಬಳೆ, ಹಸಿರು ಮಣಿಸರ, ಅರಿಷಿಣ, ಉಡಿಗೆ ಬಿಳಿ ಪತ್ತಲ, ಬಿಳಿ ರವಿಕೆ, ಆಯುಧಗಳು, ವಾಹನ, ವಾದ್ಯ, ದೀವಟಿಗೆ, ತೇರು, ಪಲ್ಲಕ್ಕಿ ಈ ದೇವತೆಗಿಲ್ಲ. ಸ್ವರೂಪ ಆಲದ ಮರ ಮತ್ತು ಹುತ್ತ ಸಸ್ಯಾಹಾರ ಮಾಂಸಾಹಾರ ಎರಡನ್ನು ನೈವೇದ್ಯಕ್ಕಿಡುವರು. ಇವಳು ಅಲೆಮಾರಿ ದೇವತೆಯಲ್ಲ. ಪರಿಶಿಷ್ಟರ ದೇವತೆ, ಕಟ್ಟಿಗೆಯಲ್ಲಿ ಮೂರ್ತಿ ಮಾಡಿ ಜಾಜಿಬಣ್ಣ ಹಚ್ಚುವರು. ದೇವಿಯ ವಾರ ಮಂಗಳವಾರ.

ದುರಗಮ್ಮ: ದುರಗಮ್ಮ ಮೂಲತಃ ಶಬರರ ದೇವತೆ, ಸ್ಥಳೀಯ ದೇವತೆ. ಸಪ್ತಮಾತೃಕೆಯರಲ್ಲಿ ಮೂರನೆಯವಳು. ದುರಗಮ್ಮ ಯಾವುದೇ ವರ್ಗದ ಅಥವಾ ಉದ್ಯೋಗದ ದೇವತೆಯಾಗಿಲ್ಲದೆ ಯುದ್ಧದ ಮತ್ತು ದುರ್ಗದ ದೇವತೆಯಾಗಿದ್ದಾಳೆ. ಆದ್ದರಿಂದ ಕೋಟೆಯಿರುವ ಊರುಗಳಲ್ಲಿ ಮಾತ್ರ ಇವಳು ಗ್ರಾಮದೇವತೆ, ಕಷ್ಟದ ದೇವತೆ. ಗುಲಬರ್ಗಾ ಜಿಲ್ಲೆಯ

ಚಿತ್ತಾಪುರ ತಾಲ್ಲೂಕಿನ ಆಲ್ಲೂರಿನಲ್ಲಿ ಕೋಟೆಯ ಮುಂದುಗಡೆ ದುರಗಮ್ಮನನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಇವಳಿಗೆ ಕಾಳಿ, ಕರಾಳಿ, ಕಾಪಾಲಿ, ಕಾತ್ಯಾಯಿನಿ, ಕುಮಾರಿ, ಚಂಡಿ ಮುಂತಾದ ಬಿರುದುಗಳು ಅವಳು ಎಸಗುವ ಕಾರ್ಯಕ್ಕಾಗಿ ಬಂದಿವೆ. ಗುಡ್ಡಗಾಡು, ಗುಹೆಗಳು, ಕಾಡುಗಳಲ್ಲಿ ವಾಸವಾಗಿದ್ದ ಶಬರ, ಪುಳಿಂದ, ಬರ್ಬರ ಮೊದಲಾದ ಕಾಡು ಜನಾಂಗಗಳ ಕುಲದೇವತೆಯಾಗಿದ್ದಳು. ಗ್ರಾಮದೇವತೆಗಳಾದ ದ್ಯಾಮವ್ವ ಮಾರಮ್ಮರ ಎಲ್ಲ ಆಚಾರ-ವಿಚಾರಗಳನ್ನು ಈಕೆಗೂ ಆರೋಪಿಸಿ ಗ್ರಾಮದೇವತೆಯಾಗಿ ಮಾಡಲಾಗಿದೆ. ಈಕೆ ಸಂಪತ್ತನ್ನು ಹೆಚ್ಚಿಸುವ ದೇವತೆಯೆಂದು ಶುಕ್ರವಾರದ ದಿನ ಇವಳಿಗೆ ವಿಶೇಷ ಪೂಜೆ ನಡೆಸುವರು.

ಲೋಕ ಸಂಚಾರಕ್ಕಾಗಿ ಹೊರಟ ದೇವಿ ಮೊದಲು ಬಂದು ಆಲ್ಲೂರಿನ ಒಂದು ಕಟ್ಟೆಯ ಮೇಲೆ ವಿಶ್ರಾಂತಿಗಾಗಿ ಕುಳಿತಿದ್ದರಿಂದ ಇವಳನ್ನು ಕಟ್ಟೆಮ್ಮನೆನ್ನುವರು. ಮುಂದೆ ಅಲ್ಲಿಂದ ನಡೆದು ಬಂದು ಈಗಿರುವ ದಿಬ್ಬದ ಸ್ಥಳದಲ್ಲಿ ನೆಲೆಸಿ ದುರಗಮ್ಮನಾಗಿದ್ದಾಳೆ. ದುರಗಮ್ಮನದು ಅರಸು ಮನೆತನ. ಈ ದೇವಿಯ ಪೂಜಾರರು ತಳವಾರರು. ಮೂರ್ತಿ ಕಟ್ಟಿಗೆಯದು. ವಾಹನ ಸಿಂಹ. ಕೆಂಪು ಬಳೆ, ಮೂಗುತಿ, ಕೆಂಪು ಮಣಿಸರ, ಅರಿಷಿಣ, ಇವಳ ಆಭರಣ, ಅಲಂಕಾರ, ಚಂದ್ರಾಯುಧ, ತ್ರಿಶೂಲ ಭರ್ಜಿ, ಖಡ್ಗ ಈ ದೇವತೆಯ ಆಯುಧಗಳು ಉಗ್ರಮುಖಭಾವದ ದೇವತೆಯಿವಳು.

ಶಹಾಪುರ ತಾಲ್ಲೂಕಿನ ಸೀಪುರ ಗೋನಾಳದ ದುರಗಮ್ಮನ ಮೂರ್ತಿ ಕಂಚಿನದು, ನಾಲ್ಕು ಆಡಿ ಎತ್ತರವಿದೆ. ದೇವಿಯ ವಾಹನ ಸಿಂಹ ಹಿತ್ತಾಳೆಯದು. ಇಲ್ಲಿ ದೇವಿಯ ಪೂಜಾರಿ ಹರಿಜನ. ಅಲ್ಲೂರ ದುರ್ಗಮ್ಮನ ಗುಡಿ ಗುಡ್ಡದ ಮೇಲಿದೆ. ದೇವಿಯ ಮೂರ್ತಿಯನ್ನು ದೊಡ್ಡ ಬಂಡೆಯ ಮೇಲೆ ಕೊರೆಯಲಾಗಿದೆ. ಇವಳಿಲ್ಲಿ ಬಡಿಗೇರರ ದೇವತೆ. ಜಾತ್ರೆ ಫೆಬ್ರವರಿಯಲ್ಲಿ. ಪ್ರತಿ ಮೂರು ವರುಷಕ್ಕೆ ಒಮ್ಮೆ ತಪ್ಪದೇ ಜಾತ್ರೆ ನಡೆಸುವರು. ಬೇಸಿಗೆಯಲ್ಲಿ ಬಾದಾಮಿ ಅಮಾವಾಸ್ಯೆಯಲ್ಲಿ ಮತ್ತು ಚಳಿಗಾಲದಲ್ಲಿ ಉತ್ಸವ ನಡೆಸುರು. ಆಗ ಅಗ್ನಿ ತುಳಿಯುವರು. ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಂದಿಗೆ ದ್ವಿಪದಿ, ತ್ರಿಪದಿ, ಚೌಪದಿಗಳನ್ನು ಹಾಡುತ್ತ ದುರಗಿ ಮುರಗಿ ಕುಣಿತ ನಡೆಸುವರು. ಕುರಿಯನ್ನು ಬೇರೆಡೆ ಕಡಿದು ಕುರಿಯ ಮಾಂಸವನ್ನು ತಂದು ದೇವಿಗೆ ನೈವೇದ್ಯಕ್ಕಿಡುವರು. ದೇವಿಯು ತಪ್ಪಿತಸ್ಥರನ್ನು ಉಗ್ರವಾಗಿ ಶಿಕ್ಷಿಸುವಳೆಂಬ ಭಯದಿಂದ ಯಾರೂ ಕಳ್ಳತನ ಮಾಡುವುದಿಲ್ಲ. ಉತ್ಸವದ ಕೊನೆಯಲ್ಲಿ ಭಕ್ತರಿಗೆಲ್ಲ ಚಜ್ಜುಕ (ಸಜ್ಜಿಗೆ)ದ ಊಟವನ್ನು ಮಾಡಿಸುವರು.

ಕಾಳಮ್ಮ: ಯುದ್ಧ ದೇವತೆ, ಪಾಂಚಾಳರ (ಬಡಿಗೇರ, ಅಕ್ಕಸಾಲಿಗ, ಕಂಬಾರ, ಪತ್ತಾರ, ಕಂಚುಗಾರ)ರ ಉದ್ಯೋಗ ದೇವತೆ, ಬುಡಕಟ್ಟಿನ ದೇವತೆ. ಎಲ್ಮೋರರ ಅಭಿಪ್ರಾಯದಲ್ಲಿ ಕಾಳಿ-ದುರ್ಗೆ ಒಂದೇ. ಆದರೆ ಹೈದ್ರಾಬಾದ ಕರ್ನಾಟಕದಲ್ಲಿ ಆಚಾರ-ವಿಚಾರ, ಸ್ವರೂಪದಲ್ಲಿ ಇವರಿಬ್ಬರೂ ಬೇರೆ ಬೇರೆ ದೇವತೆಗಳು. ಕಾಳಮ್ಮ ಲೋಕದೇವತೆಯೂ ಹೌದು, ಸ್ಥಳೀಯ ದೇವತೆಯೂ ಹೌದು, ಅಂತೆಯೇ ಇವಳು ಶಿಷ್ಟರ ಮತ್ತು ಪರಿಶಿಷ್ಟರ ದೇವತೆಯೂ ಹೌದು. ಕಾಳಮ್ಮನ ಗುಡಿಯು ಯಾವಾಗಲೂ ಪಾಂಚಾಳರ ಕೇರಿಯಲ್ಲಿರುತ್ತದೆ. ಆದರೆ ಕುನ್ನೂರ ಕಾಳಮ್ಮನ ಗುಡಿಯು ಮಾತ್ರ ಊರ ಹೊರಗೆ ಭೀಮಾ ಮತ್ತು ಕಾಗಿಣಿ ನದಿಗಳು ಯನಗುಂಟಿ ಸಮೀಪ ಸಂಗಮವಾಗಿರುವ ಕೆಳಭಾಗದಲ್ಲಿ ಹೊಳೆದಂಡೆಯ ಮೇಲಿದೆ. ಕುನ್ನೂರ ಕಾಳಮ್ಮನಿಗೆ ನಡೆದುಕೊಂಡರೆ ಸಾಕು, ಧಾರವಾಡದ ಸಿರಸಿಂಗಿಗೆ ಹೋಗಬೇಕಾದ ಅಗತ್ಯವಿರುವುದಿಲ್ಲವೆಂಬ ಜನಹೇಳಿಕೆ ಇದೆ. ಪೌರಾಣಿಕ ಹಿನ್ನೆಲೆಯಲ್ಲಿ ಇವಳು ದಕ್ಷಬ್ರಹ್ಮನ ಯಾಗದಲ್ಲಿ ಸುಟ್ಟುಹೋದ ಕಾರಣ ಕಪ್ಪು ಮೈಯವಳಾದಳು. ಇವಳ ಗುಡಿಯಲ್ಲಿ ಅನುವಂಶಿಕ ಪೂಜಾರಿ ಪಾಂಚಾಳನು. ಮೂರ್ತಿ ಮರದ್ದು. ಪಾದುಕೆ ಇಲ್ಲ. ವಾಹನ ಸಿಂಹ, ಕರಿ ಸೀರೆ, ಕರಿ ಕುಬುಸ, ಕರಿ ಬಳೆ, ಮೂಗುತಿ, ಇವಳ ಉಡುಗೆ ತೊಡುಗೆಗಳು. ಕೊಡಲಿ, ಖಡ್ಗ, ಭರ್ಜಿ, ತ್ರಿಶೂಲಗಳು ಇವಳ ಆಯುಧಗಳು. ಉಗ್ರ ದೇವತೆಯಿವಳು. ದೇವಿಯ ವಾರ ಶುಕ್ರವಾರ. ಗುಡಿಯ ಸ್ಥಳ ಊರೊಳಗೆ. ಈ ದೇವಿಗೆ ಚಳಿಗಾಲ ಹಾಗೂ ಬೇಸಿಗೆ ಕಾಲಗಳಲ್ಲಿ ಜಾತ್ರೆ ನಡೆಯುವುದು. ದೀವಟಿಗೆ ಇಲ್ಲ. ದೀಪದ ಕಂಬ ಇದೆ. ತೇರು, ಪಲ್ಲಕ್ಕಿ ಇವೆ. ಡೋಲು, ಮದ್ದಳೆ, ಕೊಂಬು, ಕಹಳೆ, ತಾಳ, ಜಾಗಟೆ ವಾದ್ಯಗಳನ್ನು ದೇವಿಯ ಪೂಜೆ ಉತ್ಸವಗಳಲ್ಲಿ ನುಡಿಸಲಾಗುವುದು. ಹಲಗೆ, ಡೊಳ್ಳುಗಳನ್ನು ಅಪವಿತ್ರವಾದ ವಾಧ್ಯಗಳೆಂದು ನಿಷೇಧಿಸಿರುವರು. ದೇವಿಯ ಉತ್ಸವವನ್ನು ಕೆಲವರು ಶಿವರಾತ್ರಿಗೆ, ಇನ್ನೂ ಕೆಲವರು ಯುಗಾದಿಗೆ ಆಚರಿಸುವರು. ಈಕೆಯ ಉತ್ಸವವನ್ನು ಕೆಲವೆಡೆ ಐದು ದಿವಸ, ಕೆಲವೆಡೆ ಒಂಬತ್ತು ದಿವಸಗಳ ಕಾಲ ಆಚರಿಸುವರು.

ಚೌಡಮ್ಮ: ನೇಕಾರರ ಉದ್ಯೋಗದೇವತೆ. ಲೋಕದೇವತೆ ಮತ್ತು ಸ್ಥಳೀಯದೇವತೆ ಎರಡೂ ಆಗಿದ್ದಾಳೆ. ಜನಪದರ ಹೇಳಿಕೆಯಲ್ಲಿರುವ ಕಥೆಗಳೆಂದರೆ ಏಳುಕೊಳ್ಳದಲ್ಲಿ ಮುಳುಗಿದ ಎಲ್ಲಮ್ಮ ಮೇಲೇಳದಿದ್ದಾಗ ಚೌಡಿಕೆ ವಾದ್ಯದ ಶಬ್ದಕ್ಕೆ ಸಂಪ್ರೀತಳಾಗಿ ಮೇಲೆದ್ದು ಬಂದಳಂತೆ. ಹೀಗೆ ಚೌಡಿಕೆಯಿಂದ ಸಂಪ್ರೀತಳಾದ ಅಮ್ಮನನ್ನು ಚೌಡಮ್ಮ ಎಂದೇ ಕರೆಯಲಾಯಿತು. ಇನ್ನೊಂದು ಕಥೆಯ ಪ್ರಕಾರ ಚಾವಡಿಯಲ್ಲಿ ಪೂಜೆಗೊಳ್ಳುತ್ತಿದ್ದ ಅಮ್ಮ ಚೌಡಮ್ಮ. ಇವಳು ಚೇಳಿನ ಅಮ್ಮನೆಂದೂ, ಚೇಳಮ್ಮ < ಚೌಳಮ್ಮ < ಚೌಡಮ್ಮ ಎಂದಾಯಿತೆಂದೂ ಹೇಳುವರು. ರಾಘವಾಂಕ ಕವಿಯ ವೀರೇಶ ಚರಿತೆಯಲ್ಲಿ ಹೇಳಿರುವಂತೆ ವೀರಭದ್ರನು ದಕ್ಷಯಜ್ಞ ನಾಶದ ಸಂದರ್ಭದಲ್ಲಿ ಜನರನ್ನು ಕೊಲ್ಲುತ್ತಾ ಬಂದಾಗ ರಕ್ತವು ಮಡುಕಟ್ಟಿ ನಿಂತು ಮುಂದೆ ನಡೆದು ಹೋಗಲು ಅಡ್ಡಿಯಾಗಲು ವೀರಭದ್ರನು ಶಿವನನ್ನು ಪ್ರಾರ್ಥಿಸಲು ಚೌಡಮ್ಮನನ್ನು ಸೃಷ್ಟಿಸಿದನು. ಚೌಡಮ್ಮ ವೀರಭದ್ರ ಕಡಿದ ರುಂಡಗಳಿಂದ ಕಾರುತ್ತಿದ್ದ ರಕ್ತವನ್ನು ತನ್ನ ನಾಲಗೆ ಚಾಚಿ ನೆಕ್ಕುತ್ತ ನಡೆದಳು. ಚೌಡಮ್ಮನಿಗೆ ರಕ್ತದಾಹ ಹೆಚ್ಚಾಗಿ ರಕ್ತ ಮೆತ್ತಿದ ವೀರಭದ್ರನ ಹಿಂಬಡಗಳನ್ನು ನೆಕ್ಕತೊಡಗಿದಾಗ ವೀರಭದ್ರನು ಕೋಪಗೊಂಡು ಅವಳನ್ನು ಮೂರು ತುಂಡಾಗಿ ಕತ್ತರಿಸಿದನು.



ಕಲ್ಯಾಣ ಚಾಲುಕ್ಯರ ಮಹಾದೇವ ಮಂದಿರ, ಇಟಗಿ (ಕೊಪ್ಪಳ)



ಕಲ್ಯಾಣ ಚಾಲುಕ್ಯರ ನವಲಿಂಗ ದೇವಾಲಯ, ಕುಕನೂರು (ಕೊಪ್ಪಳ)

ಅದಕ್ಕಾಗಿ ರುಂಡವನ್ನು ಹಟಗಾರರೂ, ಮುಂಡವನ್ನು ಬ್ರಾಹ್ಮಣರೂ, ಪಾದವನ್ನು ಮಾದರೂ ಹಂಚಿಕೊಂಡು ಪೂಜಿಸುತ್ತಾರೆ.

ಮೂಲದಲ್ಲಿ ಚೌಡಮ್ಮ ಕಾಳಮ್ಮನಂತೆ ಉಗ್ರದೇವತೆ. ಆದರೆ ಸಸ್ಯಾಹಾರಿಗಳಾದ ನೇಕಾರರ ದೇವತೆಯಾದ್ದರಿಂದ ಮಾಂಸಾಹಾರ ನೈವೇದ್ಯವಿಲ್ಲ. ಹೋಳಿಗೆ, ಹುಗ್ಗಿ, ಕಡುಬು, ಅನ್ನ, ತುಪ್ಪಗಳನ್ನು ನೈವೇದ್ಯಕ್ಕಿಡುವರು. ಗುಲಬರ್ಗಾ ಜಿಲ್ಲೆಯಲ್ಲಿ ನೇಕಾರರು ಹೆಚ್ಚಾಗಿರುವುದು ಜೇವರ್ಗಿ ತಾಲ್ಲೂಕಿನ ಮಳ್ಳಿಯಲ್ಲಿ, ಅಫಜಲಪುರ ತಾಲ್ಲೂಕಿನ ಮಾಸ್ಯಾಳದಲ್ಲಿ. ಚೌಡಮ್ಮ ಗುಡಿಯಲ್ಲಿ ಕೇವಲ ರುಂಡದ ರೂಪದಲ್ಲಿರುವಳು. ಒಂದೇ ರುಂಡ ಇಡುವುದು ಸರಿಯಲ್ಲವೆಂದು ಗುಡಿಯ ಗದ್ದುಗೆಯ ಮೇಲೆ ಚೌಡಮ್ಮನ ಜೋಡಿ ರುಂಡವಿಡುವರು. ಆಕೆಯ ಮುಖವನ್ನು ಕಟ್ಟಿಗೆಯಿಂದ ಮಾಡಿ ಕೆಂಪುಬಣ್ಣವನ್ನು ಹಚ್ಚುವರು. ಖಡ್ಗ, ತ್ರಿಶೂಲ, ಚಕ್ರ, ಕೊಡಲಿ ಈ ಆಯುಧಗಳನ್ನು ಇವಳ ರುಂಡದ ಪಕ್ಕದಲ್ಲಿಡುವರು. ಕೊಂಬು, ಕಹಳೆ, ಹಲಗೆ, ಡೊಳ್ಳುಗಳನ್ನು ಈಕೆಯ ಉತ್ಸವದಲ್ಲಿ ಬಾರಿಸುವರು ಸಂಪತ್ತಿನ ದೇವತೆಯೆಂದು ಈಕೆಯನ್ನು ಶುಕ್ರವಾರದ ದಿನದಲ್ಲಿ ವಿಶೇಷವಾಗಿ ಪೂಜಿಸುವರು. ಗುಲಬರ್ಗಾ ಜಿಲ್ಲೆಯಲ್ಲಿ ಚೌಡಮ್ಮನ ಸ್ಥಳಗಳೆಂದರೆ ನಾಲವಾರ, ಕನ್ನೇಕೋಳೂರ, ಮಳ್ಳಿ ಮತ್ತು ಮಾಸ್ಯಾಳ. ಮೊದಲು ಇವಳ ಉತ್ಸವ ಐದು ದಿನಗಳು ನಡೆಯುತ್ತಿದ್ದು ಈಗ ಮೂರು ದಿನ ಮಾತ್ರ ನಡೆಯುತ್ತದೆ. ಕುದುರೆ ಕುಣಿತ, ಕೋಳಿಬಲಿ, ಕುಸ್ತಿ, ಬಯಲಾಟ, ನಾಟಕ, ಹಾಡಕ್ಕಿ, ಉತ್ಸವದ ದಿನಗಳಲ್ಲಿ ನಡೆಯುವುದು.

ಇಂದಿಗೂ ಈ ಗ್ರಾಮದೇವತೆಗಳ ಪ್ರಭಾವ ಜನಸಾಮಾನ್ಯರ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಗಾಢವಾಗಿಯೇ ಉಳಿದುಕೊಂಡು ಬಂದಿರುತ್ತದೆ. (ಬಿಎಸ್‌ಎಸ್‌ಆರ್)

ಘ

ಘಟ್ಟ ಕಲಾಗ್ರಾಮ: ಹೈದ್ರಾಬಾದ ಕರ್ನಾಟಕದ ಜನತೆಗೆ ಕಲೆಯ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಈ ಭಾಗದ ಯುವ ಕಲಾವಿದರಿಗೆ ಕಲಾಶಿಬಿರಗಳು ಮತ್ತು ಕಲಾ ಪ್ರದರ್ಶನಗಳು. ಜಿಲ್ಲಾ, ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಅಲ್ಲದೇ ರಾಷ್ಟ್ರ ಮಟ್ಟದಲ್ಲಿ ಬೆಳೆಯುವಂತೆ ಪ್ರೇರೇಪಿಸುವ ಮತ್ತು ಅವಕಾಶ ಕಲ್ಪಿಸಿ ಕೊಡುವ ಈ ಕಲಾಗ್ರಾಮದ ಮುಖ್ಯ ಉದ್ದೇಶ.


ಹೈದ್ರಾಬಾದ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ರಾಯಚೂರು ಕೋಟೆಗಳಿಂದ ಕೂಡಿದ ಒಂದು ಸುಂದರನಗರ, ರಾಯಚೂರಿನಿಂದ ಇಪ್ಪತ್ತೈದು ಕಿ.ಮೀ. ದೂರದಲ್ಲಿ ಕೊರ್ತಕುಂದಾ ಗ್ರಾಮದ ವ್ಯಾಪ್ತಿಗೆ ಬರುವ ದೇವಾಲಯದ ಅಧಿದೇವನಾಗಿರುವ ಶ್ರೀರಂಗನಾಥ ಸ್ವಾಮಿ ಸುತ್ತಮುತ್ತಲ ನೂರಾರು ಗ್ರಾಮಗಳಿಗೆ ಆರಾಧ್ಯ ದೈವರಾಗಿದ್ದಾನೆ. ಇಂಥಹ ಒಂದು ಕ್ಷೇತ್ರದ ಹತ್ತಿರ ಇಪ್ಪತ್ತು ಎಕರೆ ಪ್ರದೇಶದಲ್ಲಿ 'ಘಟ್ಟ' ಎಂಬ ಹೆಸರಿನ ಕಲಾಗ್ರಾಮವನ್ನು ಸ್ಥಾಪಿಸಲು ರಂಗನಾಥಸ್ವಾಮಿ ದೇವಾಲಯದ ಅರ್ಚಕರಾದ ರಂಗಾಚಾರ್ಯರು, ಕೃಷ್ಣಮೂರ್ತಿ, ಕನಕಚಾರ್ಯರುರವರು ಭೂಮಿಯನ್ನು ಕಲಾಗ್ರಾಮಕ್ಕೆ ದಾನವಾಗಿ ಕೊಟ್ಟಿದ್ದಾರೆ.




ಘಟ್ಟ ಕಲಾಗ್ರಾಮ

ಈ ಪ್ರದರ್ಶನ ಯಶಸ್ವಿಯಾಗಿ ನಡೆಯಿತು ಮತ್ತು ನಿರಂತರವಾಗಿ ಈ ಘಟ್ಟ ಕಲಾಗ್ರಾಮ ಒಂದಲ್ಲ ಒಂದು ಕಲಾ ಚಟುವಟಿಕೆಗಳನ್ನು ನಡೆಸುತ್ತಲೇ ಬಂದಿದೆ. ಸಾಕಷ್ಟು ಯುವ ಕಲಾವಿದರಿಗೆ ಪ್ರೇರಣೆ ನೀಡುತ್ತ ಅನೇಕ ಜನರಿಗೆ ಚಿತ್ರ ಮತ್ತು ಶಿಲ್ಪಕಲಾ ಪ್ರದರ್ಶನಗಳು ಮತ್ತು ಕಲಾಶಿಬಿರವನ್ನು ಮಾಡುತ್ತಿದ್ದು. 2011 ಜುಲೈ 24 ರಂದು ರೋರಿಕ್ ಆರ್ಟ್ಸ್ ಹೋಟೆಲ್‌ನಲ್ಲಿ ಚಿತ್ರಕಲಾ ಪ್ರದರ್ಶನವನ್ನು ಹಮ್ಮಿಕೊಂಡಿದ್ದು, ಕಲಾವಿದ ಗುರುದಾಸ್ ಶೆಣೈರವರು ಉದ್ಘಾಟನೆ ಮಾಡಿ ಯುವ ಕಲಾವಿದರಿಗೆ ಪ್ರೋತ್ಸಾಹಿಸಿದರು. ಈ ಘಟ್ಟ ಕಲಾಗ್ರಾಮವ ಪ್ರಾರಂಭವಾದಾಗಿನಿಂದಲೂ ಒಂದಲ್ಲ ಒಂದು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಹೈದ್ರಾಬಾದ ಕರ್ನಾಟಕದ ಜನತೆಗೆ ಕಲೆಯ ಒಂದು ವಾತಾವರಣ ಮೂಡಿಸಿಕೊಂಡು ಬಂದಿರುತ್ತಾರೆ.

(ಬಿಕೆಎಲ್)



ಈಶ್ವರ ದೇವಾಲಯ ಹಾಗೂ ಕಾಳೇಶ್ವರ ದೇವಾಲಯದ ಮೇಲಿರುವ ಮದನಿಕಾ ಶಿಲ್ಪಗಳು



ಶ್ರೀ ಪಂಚಲಿಂಗೇಶ್ವರ ದೇವಾಲಯದ ದ್ವಾರಪಾಲಕ ಮದನಿಕಾ ಶಿಲ್ಪಗಳು, ಸೇಡಮ್ (ಗುಲಬರ್ಗಾ)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳು ಸಂಪುಟ




ಬಿದ್ರಿ ಕುಸುರಿ ಕಲೆ (ಬೀದರ್)

ಚಿತ್ರ ಸೂಚಿ – ೯




ಕಲ್ಲಿನಲ್ಲಿ ಕೆತ್ತಲ್ಪಟ್ಟ ಅಕ್ಷರಗಳು, ನೇಮಿತ್ತುಲ್ಲಾ ಕಿರಮಾನಿ ದರ್ಗಾ (ಬೀದರ್)




ಗಾರೆಯಲ್ಲಿ ಕೆತ್ತಲ್ಪಟ್ಟ ಮುಸ್ಲಿಂ ವಾಸ್ತುಶಿಲ್ಪ ವಿನ್ಯಾಸಗಳು, ಹೀರಾಪೂರ (ಗುಲಬರ್ಗಾ)




ಮೊಹ್ಮದ್ ಬಿನ್ ತುಘಲಕ್ ಕಾಲದ ವಾಸ್ತು ವಿನ್ಯಾಸ, ಹೊಳಕುಂದಾ (ಗುಲಬರ್ಗಾ)



ಮುಸ್ಲೀಂ ವಾಸ್ತುಶಿಲ್ಪ ವಿನ್ಯಾಸಗಳು



ರಾಯಚೂರಿನ ಸ್ಮಾರಕಗಳು



ತೀರ್ಥಂಕರ ಮೂರ್ತಿಗಳು, ಭಂಕೂರು

ಸದಸ್ಯತ್ವವನ್ನು ಪಡೆಯುವ ಸದಸ್ಯರಿಗೆ ಮೂರು ನಾಟಕಗಳನ್ನು ತೋರಿಸುತ್ತಿದ್ದರು. ಸದಸ್ಯತ್ವದಿಂದ ಹಾಗೂ ಬೇರೆ ಮೂಲಗಳಿಂದ ಸಂಗ್ರಹಿಸಿದ ಹಣದಿಂದ ಸುಮಾರು ಹತ್ತು ಸಾವಿರದಷ್ಟು ನಾಟಕದ ಸಲಕರಣೆಗಳನ್ನು ಪೂರೈಸಿಕೊಟ್ಟರು.


'ಗಂಗಾರಾಂ ಕಟ್ಟಡ ದುರಂತ' ಮತ್ತು ಸವದತ್ತಿಯಲ್ಲಿಯ 'ದೇವದಾಸಿ ಪದ್ಧತಿ' ಮೇಲೆ ನಾಟಕಗಳನ್ನು ಬರೆದು ಪ್ರದರ್ಶಿಸಿದ್ದಾರೆ. ಅವು ಇನ್ನೂ ಅಪ್ರಕಟಿತ. ಒಂದು ನೂರಕ್ಕೂ ಹೆಚ್ಚು ತೈಲ ಮತ್ತು ಜಲವರ್ಣ ಚಿತ್ರಗಳನ್ನು ರಚಿಸಿದ್ದಾರೆ.

ಕವಿ, ಸಂಪಾದಕ, ನಾಟಕಕಾರ, ಚಿತ್ರಕಲಾವಿದ, ಸಂಗೀತಜ್ಞ, ನಿರ್ದೇಶಕ ಮುಂತಾದ ಬಹುಮುಖ ಪ್ರತಿಭೆಗಳನ್ನು ಮೇಳವಿಸಿಕೊಂಡ ಚಂದ್ರಕಾಂತ ಕುಸನೂರರು ಅಪೂರ್ವ ಕಲಾಚೇತನವಾಗಿದ್ದಾರೆ. ಇವರ ಪ್ರತಿಯೊಂದು ಸಿದ್ಧಿ, ಸಾಧನೆ, ಸಾಹಸಗಳ ಹಿಂದೆ ಬೆನ್ನೆಲುಬಾಗಿ ನಿಂತು ಸೌಮ್ಯಳಾಗಿ, ಸಹನಶೀಲಳಾಗಿ, ಸದಾ ಸಹಕಾರವನ್ನು ನೀಡುತ್ತಿರುವವರು ಇವರ ಪತ್ನಿ ಸರೋಜಿನಿ ಕುಸನೂರ. (ಜಿಕೆಎ)



ಚಂದ್ರಗುಪ್ತ ಚಾಂದಕವತೆ: ಬೀದರ ಜಿಲ್ಲೆಯ ಭಾರತ ಸಂಚಾರ ನಿಗಮದಲ್ಲಿ ಇಂಜನೀಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ ಜೀವನ ನಡೆಸುತ್ತಿರುವ ಶ್ರೀ ಚಂದ್ರಗುಪ್ತ ಚಾಂದಕವತೆ ಹವ್ಯಾಸಿ ರಂಗಭೂಮಿಯ ದೊಡ್ಡ ಕೊಡುಗೆ. ಶಾಲಾ ಕಾಲೇಜಿನ ಶಿಕ್ಷಣ ಅವಧಿಯಲ್ಲೇ ನಾಟಕದಲ್ಲಿ ಅಭಿನಯಿಸುವ ಗೀಳು ಅಂಟಿಸಿಕೊಂಡ ಇವರು ಜೊತೆಯಲ್ಲಿದ್ದ ಗೆಳೆಯರನ್ನೇ ಕಲಾವಿದರಾಗಿ ರೂಪಾಂತರಿಸಿದವರು.

ಗುಲಬರ್ಗಾ ದೂರವಾಣಿಯಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸಿದವರು ರಂಗಮಾಧ್ಯಮ 'ನೃಪತುಂಗ ಕಲಾವಿದರು' ಸಮುದಾಯ ತಂಡಗಳಲ್ಲಿ ನಾಟಕ ತಾಲೀಮಿದೆ ಅಂದರೆ ಅಲ್ಲಿ ಚಾಂದಕವತೆ ಇದ್ದಾರೆಂದೇ ಅರ್ಥ. 1980ರಲ್ಲಿ ಬೀದರಗೆ ವರ್ಗಾವಣೆಯಾಗಿ ದೂರವಾಣಿ ಕಛೇರಿಯಲ್ಲಿ ವೃತ್ತಿ ಸಂಜೆ 6 ಗಂಟೆಯ ನಂತರ ನಾಟಕ ತಾಲೀಮು ಪ್ರವೃತ್ತಿ. ಬೀದರನಲ್ಲಿ 'ಅಭಿನಯ ಗಂಗೋತ್ರಿ' ಜನಪದ ಅಧ್ಯಯನ ವೇದಿಕೆ, ಸಮುದಾಯ ಬೀದರ ಮುಂತಾದ ಸಂಘಟನೆಗಳನ್ನು ಕಟ್ಟಿ ಬೆಳೆಸಿದವರು. 40 ಕ್ಕೂ ಹೆಚ್ಚು ನಾಟಕಗಳಲ್ಲಿ ಮುಖ್ಯ ಪಾತ್ರವನ್ನು ಅರ್ಥಪೂರ್ಣವಾಗಿ ನಿಭಾಯಿಸಿದ್ದಾರೆ.



'ಅಗ್ನಿ ಮತ್ತು ಮಳೆ' ನಾಟಕದಲ್ಲಿ ಚಂದ್ರಗುಪ್ತ ಚಾಂದಕವತೆ

ಹೆಚ್ಚು ನಾಟಕಗಳಲ್ಲಿ ಪಾತ್ರ ಮಾಡಿದವರು ಒಂದಿಲ್ಲಾ ಒಂದು ನಾಟಕ ನಿರ್ದೇಶಿಸುತ್ತೇನೆನ್ನುವ ಮಾತು ಅಪ್ಪಟ ಸತ್ಯ. ಹಾಗೆಯೇ ಚಾಂದಕವತೆ ಅವರು 'ಕೊಡೆಗಳು' ಜಾತ್ರೆ, 'ಕುಂಟಾ ಕುಂಟಾ ಕುರವತ್ತಿ', ತೆರೆಗಳು, ಬೆಳೆದವರು, ಹೀಗೆ 18 ನಾಟಕಗಳನ್ನು ನಿರ್ದೇಶಿಸಿದ್ದಾರೆ.

ರಂಗಭೂಮಿ ಸಾಮಾಜಿಕ ಸುಧಾರಣೆಯ ಮಹತ್ವದ ಮಾಧ್ಯಮ ಎಂಬುದನ್ನು ನಂಬಿದ ಚಾಂದಕವತೆ, ಬೀದರ ಸಾಕ್ಷರತಾ ಆಂದೋಲನದ 15 ನಾಟಕಗಳಲ್ಲಿ ಮತ್ತು ಕಲಾ ಜಾಥಾದಲ್ಲಿ ಭಾಗವಹಿಸಿ ಸಮಾಜಸೇವೆ ಮಾಡಿದ್ದಾರೆ. ಬೀದರ ಜಿಲ್ಲೆಯ 'ಭಾರತ ಜ್ಞಾನ ವಿಜ್ಞಾನ ಸಮಿತಿ'ಯು ಹಮ್ಮಿಕೊಂಡ 'ಜನರ ಬದುಕಿಗಾಗಿ ವಿಜ್ಞಾನ' ಎಂಬ ಧೇಯವಾಕ್ಯದ ಅಡಿಯಲ್ಲಿ ತಿಂಗಳು ಗಟ್ಟಲೆ ನಿಯೋಜನೆ ಮೇಲೆ ಜಾಥಾದಲ್ಲಿ ಭಾಗವಹಿಸಿ ಜನರಲ್ಲಿ ವೈಜ್ಞಾನಿಕ ಮನೋಭಾವನೆಯ ಬೀಜ ಬಿತ್ತುವಲ್ಲಿ ಕಾರಣಕರ್ತರಾಗಿದ್ದಾರೆ.

1977ರಿಂದ ಗುಲಬರ್ಗಾ ಆಕಾಶವಾಣಿ ಕಲಾವಿದರಾಗಿ ಗುರುತಿಸಿಕೊಂಡ ಚಂದ್ರಗುಪ್ತ ಚಾಂದಕವತೆ ಸುಮಾರು 80 ರೇಡಿಯೋ ನಾಟಕಗಳಿಗೆ ಕಂಠದಾನ ಮಾಡಿದ್ದಾರೆ. ವೃತ್ತಿಯಿಂದ ನಿವೃತ್ತಿರಾದರೂ ಶ್ರೀಯುತರು 76ರ ಹರೆಯದಲ್ಲೂ ಹವ್ಯಾಸಿ ರಂಗಭೂಮಿಯ ಕಲಾವಿದರೊಂದಿಗೆ, ಬೀದರ ಜಿಲ್ಲೆಯ ಶಾಲಾ ಕಾಲೇಜುಗಳಿಗೆ, ನಾಟಕ ರಚಿಸಿ, ನಿರ್ದೇಶನ ಮಾಡುವುದು, ಸರ್ಕಾರಿ, ಅರೆಸರ್ಕಾರಿ ಇಲಾಖೆಗಳ ಜನಪದ ಯೋಜನೆಗಳೊಂದಿಗೆ ಸಂಪನ್ಮೂಲ ವ್ಯಕ್ತಿಯಾಗಿ ರಂಗಭೂಮಿಯನ್ನು ಸದಾ ಹಸಿರಾಗಿಟ್ಟಿದ್ದಾರೆ.

ಇವರ ರಂಗ ಕ್ರಿಯಾಶೀಲ ಚಟುವಟಿಕೆಗಳನ್ನು ಗುರುತಿಸಿ, ಸ್ಥಳೀಯ ಸಂಘ, ಸಂಸ್ಥೆಗಳು, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಮುಂತಾದ ಸಂಸ್ಥೆಗಳು ಅಭಿನಂದಿಸಿ ಸನ್ಮಾನಿಸಿದೆ. ಕರ್ನಾಟಕ ನಾಟಕ ಅಕಾಡೆಮಿ ಬೀದರನಿಂದ ಗುರುತಿಸಿ ಗೌರವ ಸನ್ಮಾನ ನೀಡಿದೆ. (ಎಸ್ಆರ್‌ಜಿ)



ಚಂದ್ರಶೇಖರ್ ಬ್ಯಾಕೋಡ್: ತಮ್ಮ ಅಪೂರ್ವ ಛಾಯಾಚಿತ್ರಗಳಿಂದ ಖ್ಯಾತಿಯನ್ನು ಗಳಿಸಿರುವ ಚಂದ್ರಶೇಖರ ಬ್ಯಾಕೋಡ ಈ ಭಾಗದ ಛಾಯಾಗ್ರಹಣ ಕಲಾ ಕ್ಷೇತ್ರಕ್ಕೊಂದು ಹೊಸ ಆಯಾಮವನ್ನೇ ಒದಗಿಸಿ ಕೊಟ್ಟಂತಹ ಕಲಾವಿದ.

ಛಾಯಾಗ್ರಹಣವು ಒಂದು ಕಲೆ ಫೋಟೊ ಕ್ಲಿಕ್ಕಿಸುವಾಗ ಒಂದು ವಿಜನ್ ಇರಬೇಕು. ಯಾವ ಕೋನದಿಂದ ಚಿತ್ರ ತೆಗೆದರೆ ಅದು ಪ್ರಭಾವಶಾಲಿಯಾಗಿ ಮೂಡಿ ಬರುತ್ತದೆ. ಚಿತ್ರದ ಸಂಯೋಜನೆ ಹೇಗಿರಬೇಕು ? ನೆರಳು ಬೆಳಕಿನ ಪರಿಣಾಮ ಎಷ್ಟಿರಬೇಕು ? ಅಂತರ ಎಷ್ಟಿರಬೇಕು ? ಎಂಬಂತಹ ಈ ಎಲ್ಲಾ ಅಂಶಗಳನ್ನು ಒಬ್ಬ ಛಾಯಾಗ್ರಾಹಕ ಅಳವಡಿಸಿಕೊಂಡರೆ ಮಾತ್ರ ಹತ್ತು ಹಲವು ಪುಟಗಳಲ್ಲಿ ಹೇಳಬೇಕಾದುದನ್ನು ತನ್ನ ಒಂದೇ ಛಾಯಾಚಿತ್ರದಲ್ಲಿ ಪರಿಣಾಮಕಾರಿಯಾಗಿ ಕ್ಲಿಕ್ಕಿಸಿ ವೀಕ್ಷಕರನ್ನು ವಿಸ್ಮಯಗೊಳಿಸುತ್ತಾನೆ. ಇದಕ್ಕೆಲ್ಲಾ ನೈಪುಣ್ಯತೆ ಬೇಕು. ಇಂತಹ ನೈಪುಣ್ಯತೆಯನ್ನು ಕರಗತ ಮಾಡಿಕೊಂಡಿದ್ದಾರೆ. ಚಂದ್ರಶೇಖರ್ ಬ್ಯಾಕೋಡ್ ಮೂಲತಃ ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ರಾಂಪುರ ಗ್ರಾಮದವರಾದ ಶೇಖರ ಕಲಬುರ್ಗಿಯ ಶರಣಬಸವೇಶ್ವರ ಕಲಾ ಮಹಾವಿದ್ಯಾಯಲದ ವಾಣಿಜ್ಯ ಚಿತ್ರಕಲೆ ವಿಭಾಗದಲ್ಲಿ ವ್ಯಾಸಂಗ ಮಾಡಿ ಪಿ.ಯು.ಸಿ. ಎರಡನೇ ವರ್ಷದಲ್ಲಿ ರಾಜ್ಯಕ್ಕೆ 2ನೇ ರ್‍ಯಾಂಕ್ ಗಳಿಸಿ, ಮುಂದೆ ಕಲಬುರ್ಗಿಯ ಕಲಾನಿಕೇತನದಲ್ಲಿ ಬಿ.ಎಫ್.ಎ ಪದವಿಯನ್ನು ಗಳಿಸಿದರು. ಪದವಿ ಪಡೆದರು. ಅನಂತರ ಗುಲಬರ್ಗಾದಲ್ಲಿ ತಮ್ಮದೇ ಆದ ಪುಟ್ಟ ಸ್ಟೂಡಿಯೊ ತೆರೆದು ಶೇಖರ ಛಾಯಾಗ್ರಾಹಕನಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಕ್ಯಾಮೆರಾ ಬ್ಯಾಗ್ ಹೆಗಲಿಗೇರಿಸಿ ಲೂನಾ ಹತ್ತಿ ನಗರದ ಸಂಚಾರಕ್ಕಿಳಿದರು. ಮೊದಮೊದಲು ಅವರಿಗೆ ಬಂಧುಗಳು, ಸ್ನೇಹಿತರು ಗ್ರಾಹಕರಾದರು ಸಭೆ ಸಮಾರಂಭಗಳಿಗೆ ಹೋಗುವುದು ಕ್ಯಾಮೆರಾ ಕ್ಲಿಕ್ಕಿಸುವುದು ಅವರ ನಿತ್ಯ ಕಾಯಕವಾಯಿತು. ಶೇಖರ್ ವೃತ್ತಿ ಜೀವನಕ್ಕೆ ತಿರುವು ಸಿಕ್ಕಿದ್ದು ಅವರ ಪತ್ರಿಕಾರಂಗದ ಪ್ರವೇಶದಿಂದಾಗಿ ಅತ್ಯಂತ ಜನಪ್ರಿಯ ಪತ್ರಿಕೆ 'ಕ್ರಾಂತಿ'ಗೆ ಅವರು ಛಾಯಾಗ್ರಾಹಕರಾಗಿ ಸೇರಿಕೊಂಡ ಬಳಿಕ ಬದಲಾಯಿತು. ಅವರಲ್ಲಿದ್ದ ವಿಜನ್ ಪ್ರಜ್ಞೆ ಜಾಗೃತವಾಯಿತು. ಕ್ಯಾಮೆರಾದಲ್ಲಿ ಸೆರೆಹಿಡಿದ ಒಂದೊಂದೂ ಚಿತ್ರಗಳು ದೃಶ್ಯಕಾವ್ಯಗಳಾಗಿ ಗಮನ ಸೆಳೆದವು. ಪ್ರತಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ತಮ್ಮ ಛಾಯಾಚಿತ್ರಗಳಿಂದ ಶೇಖರ್ ಕಲಬುರ್ಗಿಯ ಮನೆ ಮಾತಾದರು.

ಶೇಖರ್ ಅವರ ಛಾಯಾಚಿತ್ರಗಳು ಪತ್ರಿಕೆಯ ಓದುಗರ ತೀವ್ರ ಗಮನ ಸೆಳೆಯುತ್ತಿದ್ದವು. ಪಾನ ನಿಷೇಧವಿರುವ ಪ್ರದೇಶದಲ್ಲೇ ಸೆರೆ ಕುಡಿಯುತ್ತಿರುವರು. ಗೋಡೆ ಬರಹ ನಿಷೇಧವಿರುವದೆಡೆಗೆ ಬರಹ ಬರೆಯುತ್ತಿರುವರು, ಕರ್ಫ್ಯೂ ಸಂದರ್ಭದಲ್ಲಿ ತೆರೆದ ವಾಹನಗಳಲ್ಲಿ ಮಷಿನ್ ಗನ್‌ಗಳೊಂದಿಗೆ ನಗರದಲ್ಲಿ ಸಂಚರಿಸುವ ಅರೆ ಸೈನಿಕರು, ತಿಪ್ಪೆಯನ್ನೇ ತನ್ನ ವಾಸ ಸ್ಥಾನವನ್ನಾಗಿ ಮಾಡಿಕೊಂಡ ಹುಚ್ಚ, ಹೀಗೆ ಸಮಾಜದ ವೈವಿದ್ಯಮಯ, ವ್ಯಕ್ತಿ, ಘಟನೆಗಳ ದೃಶ್ಯಗಳ ಛಾಯಾಚಿತ್ರಗಳು ಶೇಖರ್ ಅವರಿಗೆ ಜನಪ್ರಿಯತೆಯನ್ನೊದಗಿಸಿದವು. ಅವರ ಸಾಹಸ ಪ್ರವೃತ್ತಿ ಬೀಭತ್ಸ ಕ್ರೈಂ ಚಿತ್ರ ತೆಗೆಯುವಲ್ಲಿಯೂ ಹಿಂದೇಟು ಹಾಕಲಿಲ್ಲ.

ಕಲಬುರ್ಗಿಯ ಅನೇಕ ಸ್ಮಾರಕಗಳನ್ನು ಪತ್ರಿಕೆ ಮೂಲಕ ಬೆಳಕಿಗೆ ತಂದ ಶ್ರೇಯಸ್ಸು ಶೇಖರ್ ಅವರಿಗೆ ಸಲ್ಲುತ್ತದೆ. ಕಲಬುರ್ಗಿಯ ಕೋಟೆಯಲ್ಲಿ ಪೊದೆ ಗಿಡಗಂಟಿಗಳಲ್ಲಿ ಅಡಗಿಕೊಂಡಿದ್ದ ಸುಂದರ ಶಿವನ ಮಂದಿರವನ್ನು ಶೋಧಿಸಿ 'ಕ್ರಾಂತಿ' ಪತ್ರಿಕೆಯ ಮೂಲಕ ತೋರಿಸಿದಾಗ ಓದುಗರು ಬೆರಗಾದರು! ಕೋಟೆಯಲ್ಲಿರುವ ಅತ್ಯಂತ ವಿಶಾಲ ಸುಂದರ ಭವ್ಯ ಜಾಮಾ ಮಸೀದಿಯ ಒಳಾಂಗಣದ ಸುಂದರ ರಮ್ಯ ದೃಶ್ಯಗಳು ಛಾಯಾಚಿತ್ರ ನೋಡಿ ಸ್ಮಾರಕಗಳಿಗೆ ಭೇಟಿಕೊಡುವ ಜನರ ಸಂಖ್ಯೆ ಹೆಚ್ಚಾಯಿತು.

ಇನ್ನು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ, ಕೊಳಚೆ ಪ್ರದೇಶದ ಜನ ಜೀವನ, ರಸ್ತೆಗಳ ಮೇಲೆ ವಾಹನ ಪರಿವೆಯೇ ಇಲ್ಲದೆ ಆರಾಮಾಗಿ ಓಡಾಡಿಕೊಂಡಿರುತ್ತಿದ್ದ ಬಿಡಾದಿ ದನಕರುಗಳು, ಸತ್ತ ಪ್ರಾಣಿಯಿಂದ ಹಸಿಮಾಂಸ ಕಿತ್ತು ತಿನ್ನುವ ಪಕ್ಷಿ, ಸುರಿಯುತ್ತಿರುವ ಮಳೆಯಲ್ಲಿ ಕಂಬಳಿ ಹೊದ್ದು ರಸ್ತೆ ಒಂದು ಬದಿಗೆ ಕುಳಿತ ಅಸಹಾಯಕ ಮುಂತಾದ ಚಿತ್ರಗಳು ಶೇಖರ್‌ಗಿರುವ ಸಮಾಜ ಕುರಿತಾದ ಸ್ಪಂದನೆಯನ್ನು ಅಭಿವ್ಯಕ್ತಪಡಿಸುತ್ತಿದ್ದವು.

ಶೇಖರ್ ಅವರ ಛಾಯಾಚಿತ್ರಗಳ ಪ್ರದರ್ಶನಗಳು ಜನರ ಗಮನ ಸೆಳೆದಿವೆ. ಗುಲಬರ್ಗಾದಲ್ಲಿ ಶರಣಬಸವೇಶ್ವರ ಚಿತ್ರಕಲಾ ಮಹಾವಿದ್ಯಾಯಲದ ಪ್ರದರ್ಶನ, ಗ್ರಾಮೀಣ ಪೊಲೀಸ್ ಠಾಣೆ



ನೈಜ ಛಾಯಾಚಿತ್ರ

ಯಲ್ಲಿ ಜರುಗಿದ ಕ್ರೈಂ ಛಾಯಾಚಿತ್ರಗಳ ಪ್ರದರ್ಶನ, ದಿ ಐಡಿಯಲ್ ಫೈನ್ ಆರ್ಟ ಕಾಲೇಜಿನಲ್ಲಿ ಜರುಗಿದ ಪ್ರದರ್ಶನಗಳು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಗುಲಬರ್ಗಾ ಗೆಜೆಟೀಯರ್‌ನಲ್ಲಿ ಚಂದ್ರಶೇಖರ ಬ್ಯಾಕೋಡರವರ ಛಾಯಾಗ್ರಹಣ ಕ್ಷೇತ್ರದಲ್ಲಿ ಇವರ ಹೆಸರು ದಾಖಲೆಯಾಗಿದೆ.


ಶೇಕರ್ ಅವರು 1988ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಿಂದ, 1991ರಲ್ಲಿ ಮೈಸೂರಿನ ದಸರಾ ಚಿತ್ರಕಲಾ ಪ್ರದರ್ಶನದಿಂದ 1992ರಲ್ಲಿ ಕಲಬುರ್ಗಿ ಜಿಲ್ಲಾ ಉದಯೋನ್ಮುಖ ಯುವ ಬರಹಗಾರರ ಬಳಗದಿಂದ, 1989 ರಲ್ಲಿ ನಾಗಪುರದ ಸಾಂಸ್ಕೃತಿಕ ಕೇಂದ್ರದಿಂದ ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಬೆಂಗಳೂರಿನ ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿಗೂ ಭಾಜನರಾಗಿರುವ ಶೇಖರ್ ಅವರಿಗೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

ಶೇಖರ್ ಅವರ ಮತ್ತೊಂದು ವೈಶಿಷ್ಟ್ಯವೇನೆಂದರೆ, ಅವರ ದೇಹ ದಾರ್ಢ್ಯತೆ! ಆರೋಗ್ಯಕರ ದೇಹ, ಆರೋಗ್ಯಕರ ಮನಸ್ಸು ಹೊಂದಿರುವ ಯುವಕರು ದೇಶದ ಸಂಪತ್ತು. ಶೇಖರರವರು ಚೇತನ ಯುಥ್ ಪೋರಮ್ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸಿ 'ಚೇತನ ಶ್ರೀ' ಬಿರುದಿನೊಂದಿಗೆ ಪ್ರಥಮ ಬಹುಮಾನ ಪಡೆದಿದ್ದಾರೆ. ಚಿಕ್ಕಮಂಗಳೂರಿನ ಆಂಜನೇಯ ವ್ಯಾಯಾಮ ಶಾಲೆ, ಬಳ್ಳಾರಿ ಜಯಭೀಮ ವ್ಯಾಯಾಮ ಶಾಲೆಗಳಿಂದಲೂ ಪ್ರಶಸ್ತಿ ಪಡೆದಿರುವರು. ಅಂದ ಹಾಗೆ ಚಂದ್ರಶೇಖರ್ ಬ್ಯಾಕೋಡ ಅವರು 'ಫೋಟೋಗ್ರಾಫರ್ ಶೇಖರ್' ಎಂದೇ ಖ್ಯಾತರು! ಪ್ರಸ್ತುತ ಬಂಬೂ ಬಜಾರದ ಗಂಜ ಪ್ರದೇಶದಲ್ಲಿ ತಮ್ಮ ಸುಸಜ್ಜಿತ ಫೋಟೊ ಸ್ಟುಡಿಯೋದಲ್ಲಿ ಕಾರ್ಯ ನಿರತರಾಗಿದ್ದಾರೆ.

(ಎಂಎಸ್‌ಕೆ)

ಚಂದ್ರಶೇಖರ ಜಿ. ಪಾಟೀಲ: ಸಮಕಾಲೀನ ದೃಶ್ಯಕಲೆ ಇವತ್ತು ವಿಭಿನ್ನ ಆಶಯ ಮತ್ತು ಶೈಲಿಗಳಿಗೆ ತನ್ನ ರೂಪಕೊಟ್ಟು ಬಗೆಬಗೆಯ ಅರ್ಥಗಳಿಗೆ ದನಿಯಾಗಿ ನಿಂತಿದೆ. ಚಿತ್ರ ರಚನೆಗೆ ತೊಡಗಿದ ಕಲಾವಿದ ತನ್ನ ಅಭಿವ್ಯಕ್ತಿಯನ್ನು ಕ್ಯಾನ್ವಾಸಿಗೆ ತಂದನಂತರ ಅದು ಭಿನ್ನ ವಿಭಿನ್ನ ನೆಲೆಯಲ್ಲಿ ನೋಡುಗರಿಗೆ ಸಂವಾದಕ್ಕಿಳಿಸುತ್ತದೆ. ಇಂಥ ಸಂವಾದ ನಡೆದಾಗಲೇ ಕಲಾಕೃತಿ ಮೌಲ್ಯ ಕಂಡುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕೃತಿ ರಚನೆಯಲ್ಲಿ ತೊಡಗಿ ಕೊಂಡಿರುವ





'ಕಾಂಪೋಜಿಷನ್' ಮಿಶ್ರ ಮಾಧ್ಯಮ

ಗುಲಬರ್ಗಾದಲ್ಲಿ ಇವರು 1976ರಲ್ಲಿ ಜನಿಸಿದರು.

ಇವರು ಎಂ.ಎಂ.ಕೆ. ಕಲಾ ಕಾಲೇಜಿಯಲ್ಲಿ ಪ್ರವೇಶ ಪಡೆದು, 2002 ರಲ್ಲಿ ಬಿ.ಎಫ್.ಎ. ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕದೊಂದಿಗೆ ಪೇಂಟಿಂಗ್ ಪದವಿಯನ್ನು ಪಡೆದುಕೊಂಡರು. 2004ರಲ್ಲಿ ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಸಮಕಾಲಿನ ಕಲಾಶೈಲಿಯನ್ನು ಸೃಜನಶೀಲ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಕಲಾಕೃತಿಗಳನ್ನು ರಚಿಸುತ್ತ ವಿದ್ಯಾರ್ಥಿ ದಿಶೆಯಿಂದಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾ ಪ್ರದರ್ಶನ ಹಾಗೂ ಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಅವುಗಳಲ್ಲಿ ಇವರ ಕಲಾಕೃತಿಗಳು ಆಯ್ಕೆಗೊಂಡಿವೆ. ಅವುಗಳಲ್ಲಿ ಪ್ರಮುಖವಾದವು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ಲೋಕಮಾನ್ಯ ತಿಲಕ್ ರಾಷ್ಟ್ರೀಯ ಕಲಾಪ್ರದರ್ಶನ ಪುಣೆ. ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರ ನಾಗಪುರ, ಹೀಗೆ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಇವರ ಸಂವೇದನೆ ಹೆಚ್ಚಾಗಿ ನಗರೀಕರಣದಿಂದಾಗುವ ತೊಂದರೆಗಳು ಅಲ್ಲಿಯ ಸಂಚಾರ ನಿಯಮಗಳು ಹಾಗೂ ಅದರ ತೊಂದರೆಗಳನ್ನು ಸಾಂಕೇತಿಕವಾಗಿ (Form) ಆಕಾರಗಳನ್ನು ಬಳಸಿಕೊಂಡು ಅದಕ್ಕೆ ಸೂಕ್ತವಾದ ವರ್ಣ ಸಂಯೋಜನೆಯನ್ನು ಇವರ ಕಲಾಕೃತಿಗಳಲ್ಲಿ ಕಾಣುತ್ತೇವೆ. ಇವರ ಕಲಾಕೃತಿಗಳಲ್ಲಿ ನಗರೀಕರಣ ಹೊಂದಿದ ನಗರಗಳಲ್ಲಿ ಬದುಕಲು ಬೇಕಾಗುವ ವಿಷಯಗಳನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ. ಅದರಲ್ಲಿ ಇಂಗ್ಲಿಷನಲ್ಲಿ ಬಳಕೆ ಒತ್ತಡದ ಬದುಕು ನಿಯಮಾನುಸಾರ ಸಂಚಾರ–ಹೀಗೆ ಅನೇಕ ವಿಷಯಗಳನ್ನು ತಮ್ಮ ಕಲಾಕೃತಿಗಳಲ್ಲಿ ವಿಷಯ ವಸ್ತುಗಳಾಗಿ ಅಭಿವ್ಯಕ್ತಿಗೊಳಿಸಿರುವುದನ್ನು ಕಾಣುತ್ತೇವೆ. ಇವರ ಕಲಾಕೃತಿಗಳು

ನಗರೀಕರಣದ ಸ್ಥಿತಿಗತಿಯ ಕುರಿತು ಬೆಳಕು ಚಲ್ಲುವದರ ಜೊತೆಗೆ ಅಲ್ಲಿ ರೇಖೆ, ವರ್ಣ ಸಂಯೋಜನೆ ನೋಡುಗರಿಗೆ ಅಷ್ಟೇ ಸಂತೋಷವನ್ನು ನೀಡುತ್ತವೆ.

ತನ್ನ ಅಭಿವ್ಯಕ್ತಿಯನ್ನು ನೋಡಿ ಆನಂದಿಸುವುದರ ಜೊತೆಗೆ ಅಲ್ಲಿ ಹೇಳಲಾದ ವಿಷಯದ ಕಡೆಗೆ ಗಮನ ಹರಿಸಿದರೆ ಅದರೊಂದಿಗೆ ಸಂವಾದಕ್ಕೆ ಇಳಿಸುವುದರಿಂದ ಆ ಕಲಾಕೃತಿ ಆಶಯವಾಗಿರುತ್ತದೆ. ಇವರು ಅಭಿವ್ಯಕ್ತಿಗೊಳಿಸಿದ ಕೆಲವು ಕಲಾ ಕೃತಿಗಳು ಪ್ರಶಸ್ತಿ ಪಡೆದಿವೆ. ಕಲಬುರ್ಗಿ ಕಲಾಮಹೋತ್ಸವ 2002, 2004ರ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಆಯೋಜಿಸಿದ ಸಂಸ್ಕೃತಿ ಸಂಭ್ರಮದಲ್ಲಿ ಪ್ರಥಮ ಬಹುಮಾನ 2000ರ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ, 2002ರಲ್ಲಿ ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರ ನಾಗಪುರ ಪ್ರಶಸ್ತಿ 2002, ಮಾನವ ಸಂಕೇತ ಅಕಾಡೆಮಿ ಉಜ್ವಯನ್ (ಎಂಪಿ) ನಿಂದ ಚಿನ್ನದ ಪದಕ ಹೀಗೆ ಪ್ರಶಸ್ತಿಗಳನ್ನು ಪಡೆದ ಇವರಿಗೆ ಪ್ರಶಸ್ತಿಗಳು ಇನ್ನಷ್ಟು ಪ್ರೇರಣೆ ಹಾಗೂ ಜವಾಬ್ದಾರಿಯುತವಾಗಿ ಕಲಾಕೃತಿ ರಚನೆಗೆ ಪ್ರೇರಣೆ ಕೊಟ್ಟಿವೆ. ಇವರಿಗೆ ವಿದ್ಯಾರ್ಥಿ ದಿಶೆಯಲ್ಲಿಯೇ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಶಿಷ್ಯವೇತನ ಇವರಿಗೆ ಸಂದಿದೆ.

ಇವರು ಒಬ್ಬ ಸೃಜನಶೀಲ ಯುವಕಲಾವಿದರಾಗಿ ಕಲಾ ಕೃತಿಗಳನ್ನು ರಚಿಸುತ್ತ ಕಲಾಚಟುವಟಿಕೆಯಲ್ಲಿ ಭಾಗವಹಿಸುತ್ತ ಗುಲಬರ್ಗಾದ ಶ್ರೀ ಸ್ವಾಮಿನಾರಾಯಣ ಇಂಟರ್ ನ್ಯಾಷಲ್ ಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಸೇವೆಸಲ್ಲಿಸುತ್ತ ಕಲಾಕೃತಿಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಇವರು ಕಲಾ ಕೃತಿಗಳು ಹೆಚ್ಚಾಗಿ ರಚಿಸುವುದು ಆಕ್ರೆಲಿಕ್ ಮಾಧ್ಯಮಗಳಲ್ಲಿವೆ.

(ಎಸ್‌ಪಿಡಬ್ಲ್ಯೂ)

ಚಂದ್ರಶೇಖರ ಹೊಸೂರಕರ್: ಜನಪದ ಕಲಾವಿದ. ಇವರು ಕಲ್ಬುರ್ಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಮಣ್ಣೂರು ಗ್ರಾಮದವರು. 03.05.1959ರಲ್ಲಿ ಮಧ್ಯಮ ವರ್ಗದ ಮಹಾದೇವಪ್ಪ ಮತ್ತು ಶಾಂತಾಬಾಯಿ ಇವರ ಐದು ಜನ ಗಂಡು ಮಕ್ಕಳಲ್ಲಿ ಹಿರಿಯ ಮಗನಾಗಿ ಜನಿಸಿದ ಇವರು ತಮ್ಮ ಪ್ರಾಥಮಿಕ, ಪ್ರೌಢ ಶಿಕ್ಷಣ ಮಣ್ಣೂರಿನಲ್ಲಿ ಮುಗಿಸಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದರು. ಸರಕಾರಿ ಕೆಲಸಕ್ಕೆ ಸೇರಿದ್ದರೂ ಕಲೆ ಇವರನ್ನು ತನ್ನ ಮಾರ್ಗದೆಡೆಗೆ ಸೆಳೆಯುತ್ತಿತ್ತು.

ಚಿಕ್ಕಂದಿನಲ್ಲೇ ಉತ್ಸಾಹಭರಿತರಾಗಿ ಹೆಚ್ಚಿನ ಸಮಯವನ್ನು ಕಲೆಗಾಗಿ ಸವೆಸುತ್ತಿದ್ದರು. ಶಿಕ್ಷಣ ಮುಗಿದ ಮೇಲೆ ಪೂರ್ತಿಯಾಗಿ ತಮ್ಮ ಸಮಯವನ್ನು ಕಲೆಗಾಗಿ ಮೀಸಲಿಟ್ಟರು. ದೊಡ್ಡಾಟಗಳಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಅಭಿನಯಿಸಿ ಜನರ ಮೆಚ್ಚುಗೆಗೆ ಪಾತ್ರರಾದರು. ದೇವಿ ಪಾತ್ರ, ದ್ರೌಪದಿ, ಸೀತೆ, ಕುಂತಿ, ಶ್ರೀ ಕೃಷ್ಣ, ದಾಕ್ಷಾಯಿಣಿ, ಶ್ರೀರಾಮಚಂದ್ರ, ಧರ್ಮರಾಜನ ಪಾತ್ರಗಳು ದೊಡ್ಡಾಟಗಳಲ್ಲಿ ಇವರು ಮಾಡಿದ ಪಾತ್ರಗಳು.

ಇವರು ಆಡಿದ ದೊಡ್ಡಾಟಗಳೆಂದರೆ ದೇವಿ ಮಹಾತ್ಮೆ, ದಕ್ಷ ಬ್ರಹ್ಮ, ಯುದ್ಧಕಾಂಡ, ವನಕಾಂಡ, ಲಂಕಾದಹನ, ಬೀಮ ವಿಲಾಸ, ದ್ರೌಪದಿ ವಸ್ತ್ರಾಪಹರಣ, ಶ್ರೀಕೃಷ್ಣನ ಕಾರಸ್ಥಾನ, ಕರ್ಣಾರ್ಜುನರ ಕಾಳಗ, ಮಹಿಷಾಸುರ ಮರ್ಧಿನಿ, ಬಾಣಸುರ, ಕನಕಾಂಗಿ, ದಾನಶೂರ ಕರ್ಣ.

ಆಕಾಶವಾಣಿ ಕಲಾವಿದರಾದ ಇವರು ಅಭಿನಯಿಸಿದ 31 ದೊಡ್ಡಾಟಗಳು ಪ್ರಸಾರಗೊಂಡಿವೆ. ದೂರದರ್ಶನದಲ್ಲಿಯೂ ಇವರ ದೊಡ್ಡಾಟಗಳು ಪ್ರಸಾರಗೊಂಡಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಡಿನೆಲ್ಲೆಡೆ ಕಾರ್ಯಕ್ರಮಗಳನ್ನು ನೀಡಿದ್ದಾರೆ.


ಇವರಿಗೆ ಸಂದ ಪ್ರಶಸ್ತಿಗಳೆಂದರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕಲಾಕೇಸರಿ ಬಿರುದು, ರಾಜ್ಯೋತ್ಸವ ಸಮಿತಿ ದಂಡಾಧಿಕಾರಿಗಳ ಕಛೇರಿಯಿಂದ 2005ರಲ್ಲಿ ಕಲಾಪ್ರವೀಣ ಪ್ರಶಸ್ತಿ, ಕರ್ಜಗಿ ವಲಯದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಗೌರವ, ಮಹಾದೇವ ಬಯಲಾಟ ಸಂಘ ಕಟ್ಟಿ 25 ವರ್ಷಗಳಿಂದ ಅಧ್ಯಕ್ಷರಾಗಿ ಸೇವೆ. (ಜಿಕೆ)



ಚಂದ್ರಹಾಸ ಜಾಲಿಹಾಳ: ನಿಸರ್ಗ ಕಲಾವಿದ. ನಿಸರ್ಗ ವೈಭವದ ಸೊಬಗಿಂದ ವಂಚಿತ ವಾದ ಹೈದ್ರಾಬಾದ ಕರ್ನಾಟಕ ದಂತಹ ಬರಡು ಭೂಮಿಯಲ್ಲಿ ಹುಟ್ಟಿ ಬೆಳೆದರೂ ನಿಸರ್ಗದತ್ತ ಭಾವನಾತ್ಮಕ ಸಂಬಂಧ ಬೆಳೆಸಿ ಕೊಂಡ ಚಂದ್ರಹಾಸ ಜಾಲಿ ಹಾಳ ಕ್ಯಾನ್‌ವಾಸ್ ಮೇಲೆ ಸೃಷ್ಟಿಸಿದ ಚಿತ್ರಗಳು ನೋಡು ಗರನ್ನು ಒಂದು ಕ್ಷಣ ಭಾವನಾ ಲೋಕಕ್ಕೆ ಕರೆದೊಯ್ಯುತ್ತವೆ. ಇಂತಹ ಸೂಕ್ಷ್ಮಗಳನ್ನು ಚಿತ್ರಗಳ ಮೂಲಕ ತೆರೆದಿಡುವ ಸೃಜನ ಶೀಲ ಕಲಾವಿದ ಚಂದ್ರಹಾಸ ಇತರಗಿಂತ ಭಿನ್ನವಾಗಿ ನಿಲ್ಲುತ್ತಾರೆ.

ಗ್ರಾಫಿಕ್ ಹಾಗೂ ಪೇಂಟಿಂಗ್‌ಗಳಲ್ಲಿ ವಿಶಿಷ್ಟವಾದ ಕೃತಿ ಗಳನ್ನು ರಚಿಸಿರುವ ಜಾಲಿಹಾಳ ಯುವ ಕಲಾವಿದರ ಸಾಲಿನಲ್ಲಿ ವಿಭಿನ್ನವಾಗಿ ಗುರುತಿಸಲ್ಪಡುತ್ತಾರೆ. ಚಿತ್ರಕಲೆಯಲ್ಲಿ ನೈಜತೆ, ನೈಪುಣ್ಯತೆ ಮೈಗೂಡಿಸಿಕೊಂಡಿರುವ ಜಾಲಿಹಾಳ್ ಅವರ ಕಲಾ ಕೃತಿಗಳು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಪ್ರದರ್ಶನಗೊಂಡು ಕಲಾ ಆಸಕ್ತರ ಮೆಚ್ಚುಗೆ ಗಳಿಸಿದೆ.

ರಾಯಚೂರು ಜಿಲ್ಲೆ ಮಸ್ಕಿ ಸಮೀಪದ ಬಳಗಾನೂರು ಹಳ್ಳಿಯಲ್ಲಿ ಹುಟ್ಟಿ ಬೆಳೆದವರು. ಪ್ರಾಥಮಿಕ ವಿದ್ಯಾಭ್ಯಾಸದ ದಿನಗಳಲ್ಲಿ ಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಜಾಲಿಹಾಳ ಅವರ ತಂದೆ ಕೂಡಾ ಮಗನ ಅಭಿರುಚಿಗೆ ತಕ್ಕಂತೆ



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಹುರಿದುಂಬಿಸಿದ್ದನ್ನು ನೆನೆಸಿಕೊಳ್ಳುತ್ತಾರೆ. ಮುಖ್ಯವಾಗಿ ಗ್ರಾಫಿಕ್ ಮತ್ತು ಪೇಂಟಿಂಗ್‌ಗಳಲ್ಲಿ ನೂರಾರು ಕಲಾಕೃತಿಗಳನ್ನು ರಚಿಸಿರುವ ಜಾಲಿಹಾಳ ಗುಲ್ಬರ್ಗದ ಕಾಲೇಜ್ ಆಫ್ ವಿಜುವಲ್ ಆರ್ಟ್‌ನಲ್ಲಿ ಬಿ.ಎಫ್.ಎ. ಪದವಿ ಗಳಿಸಿ ಕೋಲ್ಕತ್ತಾದ ಶಾಂತಿನಿಕೇತನದಲ್ಲಿ ಲಿಥೋಗ್ರಾಫಿಕ್ ವಿಷಯವನ್ನು ತೆಗೆದುಕೊಂಡು ಪೋಸ್ಟ್ ಡಿಪ್ಲೋಮಾ ಮಾಡಿರುವ ಚಂದ್ರಹಾಸ ಪ್ರಸ್ತುತ ಗುಲ್ಬರ್ಗದ ಎಂ.ಎಂ.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ.

ಜಾಲಿಹಾಳ ಗ್ರಾಮೀಣ ಪರಿಸರದಿಂದ ಬೆಳೆದು ಬಂದಿರುವುದರಿಂದಲೋ ಏನೋ ಬಡತನದ ಬೇಗೆಯಲ್ಲಿ ನೊಂದ ಜನರ ಹಾಗೂ ಮಹಿಳೆಯರ ದುಃಖ ದುಮ್ಮಾನ, ಕ್ರೌರ್ಯ, ಹಿಂಸೆಯ ಸೂಕ್ಷ್ಮ ಸಂವೇದನೆಗಳನ್ನು ಚಿತ್ರಗಳಲ್ಲಿ ಯಥಾವತ್ತಾಗಿ ಹಿಡಿದಿಟ್ಟಿದ್ದಾರೆ. ಹೆಣ್ಣಿನ ಜೀವನದ ಎಲ್ಲ ಮಜಲುಗಳು ಇವರ ಚಿತ್ರಗಳಲ್ಲಿ ಸಾಕಾರಗೊಂಡಿವೆ.

ಬಹಳ ಹಿಂದಿನ ಕಾಲದಿಂದಲೂ ಕಲಾಕ್ಷೇತ್ರಗಳಲ್ಲಿ ಮುಂದುವರೆದುಕೊಂಡು ಬಂದಿರುವ ಲಿಥೋಗ್ರಾಫಿಕ್ ಮಾಧ್ಯಮ ಇತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿವೆ. ಆದರೂ ಈ ಗ್ರಾಫಿಕ್ ಚಿತ್ರಕಲೆಯಲ್ಲಿ ಹೆಚ್ಚು ಪರಿಜ್ಞಾನ ಹೊಂದಿರುವ ಕೆಲವೇ ಕೆಲವು ಕಲಾವಿದರಲ್ಲಿ ಜಾಲಿಹಾಳ ಕೂಡ ಒಬ್ಬರು. ಗ್ರಾಫಿಕ್ ಅನ್ನುವುದೇ ಕಠಿಣ ಪರಿಶ್ರಮದ ಚಿತ್ರಕಲೆ ಮಾಧ್ಯಮ. ಒಬ್ಬ ಕಲಾವಿದ ಪೇಂಟಿಂಗ್ ಕಲಾಕೃತಿಗಳನ್ನು ಐದಾರು ದಿನಗಳಲ್ಲಿ ಮುಗಿಸಿದರೆ ಗ್ರಾಫಿಕ್ ಕೃತಿ ಮುಗಿಸಲು 15 ರಿಂದ 20 ದಿನಗಳು ಬೇಕು. ಇಂದಿನ ದಿನಗಳಲ್ಲಿ ಗ್ರಾಫಿಕ್ ಕಲೆ ಅಧ್ಯಯನಕ್ಕೆ ಮುಂದಾಗುವವರೇ ಕಮ್ಮಿ. ಗ್ರಾಫಿಕ್ ಕಲೆ ಎಲ್ಲರಿಗೂ ಒಲಿಯುವುದಿಲ್ಲ. ಕಲಾವಿದನಲ್ಲಿ ತಾಳ್ಮೆ, ಶ್ರದ್ಧೆ, ಏಕಾಗ್ರತೆ ಹೆಚ್ಚು ಇದ್ದವರಿಗೆ ಮಾತ್ರ ಸೀಮಿತ. ಆ ದೃಷ್ಟಿಯಲ್ಲಿ ನೋಡಿದಾಗ ಜಾಲಿಹಾಳ ಗ್ರಾಫಿಕ್ ಮಾಧ್ಯಮದಲ್ಲಿ ಯಶಸ್ವಿಯಾಗಿ ಮುಂದೆ ಬಂದಿದ್ದು ಅವರನ್ನು 'ಗ್ರಾಫಿಕ್ ಕಲಾವಿದ' ಎಂದೇ ಕಲಾ ವಿಮರ್ಶಕರು ಗುರುತಿಸುತ್ತಾರೆ.

1990ರಲ್ಲಿ ದೆಹಲಿಯಲ್ಲಿ 62ನೇ ಅಖಿಲ ಭಾರತ ಫೈನ್ ಆರ್ಟ್ ಮತ್ತು ಕ್ರಾಫ್ಟ್ ಪ್ರದರ್ಶನ, 1991ರಲ್ಲಿ ಭೂಪಾಲದಲ್ಲಿ ನಡೆದ 2ನೇಯ ಅಂತರರಾಷ್ಟ್ರೀಯ ಪ್ರಿಂಟ್ಸ್ ಬೆನಾಲೆ ಚಿತ್ರಕಲಾ ಪ್ರದರ್ಶನ. 1993ರಲ್ಲಿ ಮುಂಬಯಿಯಲ್ಲಿ 101ನೆಯ ಅಖಿಲ ಭಾರತ ವಾರ್ಷಿಕ ಕಲಾ ಪ್ರದರ್ಶನ. ಅದೇ ವರ್ಷಗಳಲ್ಲಿ ನಾಗಪುರದಲ್ಲಿ 7ನೇ ಅಖಿಲ ಭಾರತ ಕಲಾಪ್ರದರ್ಶನ ದೆಹಲಿಯಲ್ಲಿ 36ನೇ ರಾಷ್ಟ್ರೀಯ ಕಲಾಪ್ರದರ್ಶನ. 1994 ಚೆನ್ನೈಯ ಲಲಿತಕಲಾ ಅಕಾಡೆಮಿಯ ಪ್ರಾದೇಶಿಕ ವಾರ್ಷಿಕ ಕಲಾ ಪ್ರದರ್ಶನ. 1996ರಲ್ಲಿ ಭೂಪಾಲ್‌ನಲ್ಲಿ 3ನೇ ರಾಷ್ಟ್ರೀಯ ಪ್ರಿಂಟ್ಸ್ ಬೆನಾಲೆ ಚಿತ್ರಕಲಾ ಪ್ರದರ್ಶನ. 1997ರಲ್ಲಿ ಬೆಂಗಳೂರಿನಲ್ಲಿ 40ನೇ ರಾಷ್ಟ್ರೀಯ ಕಲಾಪ್ರದರ್ಶನ. 2000ರಲ್ಲಿ ಜೈಪುರ ಮತ್ತು ದೆಹಲಿಯಲ್ಲಿ 42ನೇ ರಾಷ್ಟ್ರೀಯ ಕಲಾಪ್ರದರ್ಶನ. 2001ರಲ್ಲಿ ಭೂಪಾಲ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಪ್ರಿಂಟ್ಸ್ ಬೆನಾಲೆ ಕಲಾಪ್ರದರ್ಶನಗಳಲ್ಲಿ ಇವರ ಕಲಾ ಚಿತ್ರಗಳು ಕಲಾಪ್ರಿಯರ ಮನ್ನಣೆ ಪಡೆದಿದೆ.

1989 ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ 1991ರಲ್ಲಿ ಕೋಲ್ಕತ್ತದ ಅಕಾಡೆಮಿ ಆಫ್ ಫೈನ್ ಆರ್ಟ್‌ನಲ್ಲಿ ಜಾಲಿಹಾಳರ ಏಕವ್ಯಕ್ತಿ ಕಲಾ ಚಿತ್ರಗಳು ಪ್ರದರ್ಶನಗೊಂಡಿದೆ. ಜತೆಗೆ ಲಿಥೋಗ್ರಾಫಿಕ್ ಕ್ಯಾಂಪ್‌ಗಳಲ್ಲಿ ಕೂಡಾ ರಾಷ್ಟ್ರದ ವಿವಿಧ ಕಡೆಗಳಲ್ಲಿ ಚಂದ್ರಹಾಸ್ ಜಾಲಿಹಾಳ ಪಾಲ್ಗೊಂಡಿದ್ದಾರೆ. 1994 ರಿಂದ 1999ರ ವರೆಗೆ ಬೆಳಗಾವಿ, ಬೆಂಗಳೂರು, ಮೈಸೂರು, ಧಾರವಾಡ, ತುಮಕೂರುಗಳಲ್ಲಿ ಗ್ರಾಫಿಕ್ ಶಿಬಿರಕ್ಕೆ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.

1988ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಸ್ಕಾಲರ್‌ಶಿಫ್. 1991 ವಿಶ್ವಭಾರತಿ ವಿಶ್ವವಿದ್ಯಾಲಯ ಶಾಂತಿನಿಕೇತನ ಮೆರಿಟ್ ಸ್ಕಾಲರ್‌ಶಿಫ್. 1994ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿ. 1996ರ ಅಹಮದಾಬಾದ್ ಆರ್ಟ್ ಸೊಸೈಟಿ ಪ್ರಶಸ್ತಿ.. 2002ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ದೆಹಲಿಯ ಲಲಿತಕಲಾ ಅಕಾಡೆಮಿಯ ಜೂನಿಯರ್ ಫೆಲೋಶಿಫ್ ಪ್ರಶಸ್ತಿ. 2004ರಲ್ಲಿ 112ನೇ ಅಖಿಲ ಭಾರತ ಕಲಾಪ್ರದರ್ಶನದಲ್ಲಿ ಮುಂಬಯಿ ಆರ್ಟ್ ಸೊಸ್ಯೆಟಿಯ ಪ್ರಶಸ್ತಿ. ಮತ್ತೆ ಅದೇ ವರ್ಷ ಪುಣೆಯ ಲೋಕಾಮಾನ್ಯ ತಿಲಕ್ ಸ್ಮಾರಕ ಕಲಾಪ್ರದರ್ಶನ ಪ್ರಶಸ್ತಿಗಳನ್ನು ಕೂಡಾ ತನ್ನ ಮುಡಿಗೇರಿಸಿಕೊಂಡಿದ್ದಾರೆ.

(ಸಿಕೆ)

ಚನ್ನಬಸಪ್ಪ ಬನ್ನಿಕೊಪ್ಪ: ಸ್ತ್ರೀ ಪಾತ್ರಕ್ಕೆ ಜೀವ ತುಂಬುವ ರಂಗನಟ. ಕೊಪ್ಪಳ ತಾಲ್ಲೂಕಿನ ಹಲಗೇರಿ ಗ್ರಾಮದವರು. 1945ರಲ್ಲಿ ಜನಿಸಿದರು. ತಂದೆ ಪರೆಪ್ಪ. ತಾಯಿ ದ್ಯಾಮಮ್ಮ ಪುತ್ರ. ಓದಿದ್ದು 3ನೇಯ ತರಗತಿಯವರೆಗೆ ಮಾತ್ರ. ಸಂಪೂರ್ಣ ಓದದಿದ್ದರೂ ಓದು, ಬರೆಹ, ಲೆಕ್ಕ, ಶಬ್ದಗಳ ನಾವೀನ್ಯತೆ, ಉಚ್ಚಾರ, ಪಾತ್ರಧಾರಿಗಳಿಗೆ ನಿರ್ದೇಶಿಸುತ್ತಿರುವ ರೀತಿಯನ್ನು ನೋಡಿದಾಗ ಆಶ್ಚರ್ಯವಾಗುತ್ತದೆ.

ಬಾಲ್ಯದಿಂದಲೂ ರಂಗಭೂಮಿಯ ಬಗ್ಗೆ ಎಲ್ಲಿಲ್ಲದ ಅಭಿರುಚಿ. ಅರವತ್ತರ ದಶಕದಿಂದಲೂ ರಂಗಭೂಮಿಯಲ್ಲಿ ನಾಟಕಗಳಿಗೆ 'ಸ್ತ್ರೀ' ಪಾತ್ರವನ್ನು ಸ್ತ್ರೀಯರು ಅಭಿನಯಸುತ್ತಿರಲಿಲ್ಲ. ಇಂತಹ ಕಾಲದಲ್ಲಿ ಪ್ರತಿನಾಟಕದಲ್ಲಿಯೂ ಸ್ತ್ರೀ ಪಾತ್ರವನ್ನೇ ಅಭಿನಯಿಸಿ, ಸ್ತ್ರೀಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಇವರ ನೆನಪಿನಾಳದಿಂದ ಹೊರಹೊಮ್ಮಿದ ಕೆಲವು ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಅಭಿನಯಿಸಿದ್ದು ನೆನಪಿಸಿಕೊಳ್ಳುತ್ತಾರೆ.

'ದಸರಾ' ನಾಟಕದಲ್ಲಿ ಮಲ್ಲಿಯ ಹಾಸ್ಯ ಪಾತ್ರ, 'ಅಣ್ಣತಂಗಿ' ನಾಟಕದಲ್ಲಿ ಗೌರಿ ಗಂಗಾಳ ಪಾತ್ರ, 'ಮನೆಮಗಳು' ನಾಟಕದಲ್ಲಿ ವಿಮಲಾ, 'ಸ್ತ್ರೀರತ್ನ' ನಾಟಕದಲ್ಲಿ ಶೋಭಾ, 'ಹಿರಿತನದ ಹೆಣ್ಣು' ನಾಟಕದಲ್ಲಿ ಮಧುಮತಿ 'ಸೌಭಾಗ್ಯ ಲಕ್ಷ್ಮೀ' ನಾಟಕದ ಲಕ್ಷ್ಮೀ, 'ಮುತ್ತಳಿ' ನಾಟಕದಲ್ಲಿ ಜಯಾ, 'ಗಂಡನ ಮಾನ' ನಾಟಕದಲ್ಲಿ ನಂದಿನಿ, 'ಮನೆ ಬೆಳಗಿದ ಸೊಸೆ' ನಾಟಕದಲ್ಲಿ ಸೊಸೆ, 'ರೇಣುಕಾ ಯಲ್ಲಮ್ಮ'ನ ನಾಟಕದಲ್ಲಿ ಯಲ್ಲಮ್ಮ 'ತಾಯಿ ಕರುಳಿ'ನಲ್ಲಿ ಗೌರಮ್ಮನ ಪಾತ್ರ ಅಭಿನಯಿಸಿ ರಂಗಭೂಮಿಗೆ ಕಳೆತಂದು ಕೊಟ್ಟಿದ್ದಾರೆ.

ತಾಯಿ ಕರುಳು ನಾಟಕದಲ್ಲಿ ಗೌರಮ್ಮನ ಪಾತ್ರವನ್ನು ಇವರು ಸದಾ ಸ್ಮರಿಸುತ್ತಾರೆ. ರಂಗಭೂಮಿಯ ಮೇಲೆ ಗೌರಮ್ಮನಾಗಿ ಬಂದಾಗ ಮೈತುಂಬ ನೀರು ಹಾಕಿಕೊಂಡು ಗಡಗಡನೇ ನಡುಗುತ್ತ ಹಮಾಲಿ ಮಾಡುವ ದೃಶ್ಯ ಎಂತಹ ಕಟುಗರ ಕಣ್ಣಲ್ಲಿಯೂ ನೀರು ತುಂಬಿ ಬರುತ್ತಿದ್ದವು ಎಂದು ನೆನಪಿಸಿಕೊಳ್ಳುತ್ತಾರೆ. ಅದೇರೀತಿ ರೇಣುಕಾ ಯಲ್ಲಮ್ಮನ ಪಾತ್ರವನ್ನು ಭಕ್ತಿಪೂರ್ವಕವಾಗಿ ನೆನಪಿಸಿಕೊಳ್ಳುವರು. 'ಜಡೆ ಧರಿಸಿ ಹಾವಿನ ಸಿಂಬೆಯ ಮೇಲೆ ಕೊಡ ಹೊತ್ತುಕೊಂಡು ಸಭಿಕರ ಮುಂದೆ ಬಂದಾಗ, ನಾಸ್ತಿಕನೂ ಕೂಡ ನಮಸ್ಕರಿಸುವ ಭಾವನೆ ಮೂಡುತ್ತಿತ್ತಂತೆ.

ನಾಟಕ ರಂಗದಲ್ಲಿಯಂತೆ ಬಯಲಾಟದಲ್ಲಿಯೂ ಕೂಡ 'ಸ್ತ್ರೀ'ಪಾತ್ರದಲ್ಲೇ ಅಭಿನಯಿಸಿದ್ದಾರೆ. 'ಸಂಪೂರ್ಣ ರಾಮಾಯಣ' ಬಯಲಾಟದಲ್ಲಿ ಮಾಯಾಸ್ತ್ರೀ, ಸೀತಾಳ ಪಾತ್ರ, 'ಕನಕಾಂಗಿ' ಬಯಲಾಟದಲ್ಲಿ ರೇವತಿಯ ಪಾತ್ರ 'ವೀರ ಅಭಿಮನ್ಯು' ಬಯಲಾಟದಲ್ಲಿ ಚಂದ್ರಿಕೆಯ ಪಾತ್ರ ಅಭಿನಯಿಸಿ, ತಮ್ಮ ಕಲೆಯ ಛಾಪನ್ನು ಮೂಡಿಸಿದ್ದಾರೆ. 'ಸ್ತ್ರೀ' ಪಾತ್ರಗಳಿಗೆ ಜೀವ ತುಂಬಿದ್ದುದನ್ನು ನೆನಪಿಸಿಕೊಳ್ಳುತ್ತಾ ಹಲಗೇರಿಯವರೇ ಆದ ನಾಟ್ಯರಾಣಿ ಎಂದೇ ಪ್ರಸಿದ್ಧಿಯಾಗಿದ್ದ ನೀಲಕಂಠಪ್ಪ ಮಾಸ್ತರ ಮತ್ತು ಇನ್ನೋರ್ವ ರಂಗಭೂಮಿ ಕಲಾವಿದ ಭೀಮರಾಯ ಕುಲಕರ್ಣಿ ಇಂತಹ ಅತಿರಥ–ಮಹಾರಥರ ಕಲಾಗರಡಿಯಲ್ಲಿ ಪಳಗಿ ಸ್ತ್ರೀ ಪಾತ್ರಗಳಿಗೆ ಭಾವನೆಗಳ ಸಂವೇದನಾ ರೂಪ ಕೊಟ್ಟುದನ್ನು ಚೆನ್ನಬಸಪ್ಪನವರು ಸ್ಮರಿಸುತ್ತಾರೆ.

ರಂಗಭೂಮಿ ಮೇಲೆ ಕೇವಲ ಸ್ತ್ರೀ ಪಾತ್ರಗಳಿಗೆ ಜೀವ ತುಂಬುವುದಲ್ಲದೇ, ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಯಲಬುರ್ಗಾ ತಾಲ್ಲೂಕಿನ ಬಿನ್ನಾಳ ಗ್ರಾಮದ ಬಸಪ್ಪ ಮಾಸ್ತರ ಅವರ ಶಿಷ್ಯರಾಗಿ, ಸತತ ಮೂರು ವರ್ಷಗಳ ಕಾಲ ಹಾರ್ಮೋನಿಯಂ ಕಲಿತು ಸಂಗೀತ ಕ್ಷೇತ್ರದಲ್ಲೂ ಸೈ ಎನಿಸಿಕೊಂಡಿದ್ದಾರೆ. ಹಾರ್ಮೋನಿಯಂ ಬಾರಿಸುವುದರ ಜೊತೆಗೆ ತಬಲಾ ವಾದನ ಮಾಡುವುದು ಇವರ ಬಹುಮುಖ ಪ್ರತಿಭೆ ತೋರಿಸುತ್ತದೆ.

ಈಗಾಗಲೇ ಇವರು ಸಾಕಷ್ಟು ನಾಟಕಗಳಿಗೆ ಮತ್ತು ಬಯಲಾಟಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಅವುಗಳಲ್ಲಿ ಕೆಲವನ್ನು ಉದಾಹರಿಸಬಹುದಾದರೆ, ಭಲೇ ಮಗಳು (2ಸಲ) ದುರಹಂಕಾರಿ (2ಸಲ) ಚಿನ್ನದ ಗೊಂಬೆ (4ಸಲ) ಮಾತು ತಪ್ಪಿದ ಮೈದುನರು, ಪ್ರೇಮ ಪಂಜರ, ಪಂಕಜ, ಕೈಲಾಗದ ಗಂಡ ಕೈಲಾಸ ಕಂಡ, ಸೇಡಿನ ದುರಂತ, ಹುಚ್ಚ ಹಚ್ಚಿದ ಕಿಚ್ಚು, ರಕ್ತ ಸಿಂಧೂರ, ರೌದ್ರ ರಾತ್ರಿ, ಮಿತ್ರದ್ರೋಹಿ, ನೊಂದ ಜೀವಿಗಳು ಜೊತೆಗೆ ಬಯಲಾಟಗಳಲ್ಲಿಯೂ 'ಸಂಪೂರ್ಣ ರಾಮಾಯಣ' ಮತ್ತು 'ಮೈಲಾರಲಿಂಗೇಶ್ವರ ಮಹಾತ್ಮೆ' ಸಂಗೀತ ನಿರ್ದೇಶನ ಮಾಡಿದ್ದಾರೆ. ಸದಾ ಕಲಾ ಬದುಕಿಗಾಗಿಯೇ ದುಡಿಯುತ್ತಿರುವ ಇವರು ತಮ್ಮ ವೈಯಕ್ತಿಕ ಬದುಕನ್ನೇ ಬದಿಗೊತ್ತಿದ್ದಾರೆ.

ಹರೆಯದ ವಯಸ್ಸಿನಲ್ಲಿ ತಮ್ಮ ರಂಗಭೂಮಿ ಕಲಾಮಿತ್ರರಾದ ದೇವರಾಜ ಹಲಗೇರಿಯವರು ಸ್ಥಾಪಿಸಿದ ನಾಟಕ ಕಂಪನಿಯಲ್ಲಿ 2 ತಿಂಗಳುಗಳ ಕಾಲ ಪಾತ್ರಗಳನ್ನು ಮಾಡಿದ್ದಾರೆ. ಆರ್ಥಿಕ ತೊಂದರೆಯಿಂದಾಗಿ ಕಂಪನಿಯು ಹಾನಿಗೊಳಗಾದಾಗ ರಾತ್ರೋರಾತ್ರಿ ಇಬ್ಬರೂ ಇಲಕಲ್‌ನಿಂದ ಬಂದರು. 'ಕಂಪನಿ ನಡೆಸಿಕೊಂಡು ಹೋಗೋದು ಸುಲಭದ ಮಾತಲ್ಲ! ಕೈಯಿಂದ ರೊಕ್ಕ ಕಳಕೊಂಡು ರಾತ್ರೋರಾತ್ರಿ ಯಾರಿಗೂ ಹೇಳದೇ ಕೇಳದೇ ಬಂದೀವ್ರಿ !' ಎಂದು ತಮ್ಮ ಗತಕಾಲದ ನೆನಪುಗಳನ್ನು ಬಿಚ್ಚಿಡುತ್ತಾರೆ. (ಎಚ್‌ಎಸಿ)

ಚನ್ನಬಸಪ್ಪಗೌಡ ಮಾಲಿಪಾಟೀಲ: ಚಿತ್ರಕಲೆ, ನಟನೆ, ಛಾಯಾಗ್ರಹಣ ಮತ್ತು ಹಾಡುಗಾರಿಕೆಯಲಿ ಸಾಧನೆ ಮಾಡಿದ್ದಾರೆ. ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದವರು. ಚಿತ್ರಕಲೆಯಲ್ಲಿ ಮಾಸ್ಟರ್ ಆಫ್ ಫೈನ್‌ಆರ್ಟ್ ಸ್ನಾತಕೋತ್ತರ ಪದವಿ ಪಡೆದರು. ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಿಂದ 1994 ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಎರಡನೇ ರ್‍ಯಾಂಕ್ ಗಳಿಸಿದರು. ನಿಸರ್ಗಚಿತ್ರಣ, ಭಾವ ಚಿತ್ರಣ, ವರ್ಣಸಂಯೋಜನೆ ಮತ್ತು ರಾಗ ಸಂಯೋಜನೆಗಳಲ್ಲಿ ಇವರು ಎತ್ತಿದ ಕೈ. ದೆಹಲಿ, ನಾಗಪುರ, ಮುಂಬಯಿ,



ಬೆಂಗಳೂರಿನಂತಹ ಮಹಾ ನಗರಗಳಲ್ಲಿ ಸಮೂಹ ಚಿತ್ರ ಪ್ರದರ್ಶನ ಮಾಡಿ ಮೆಚ್ಚುಗೆ ಗಳಿಸಿದ್ದಾರೆ. ಇವರ ಕೆಲವು ಚಿತ್ರಕಲಾಕೃತಿಗಳು 1996ರಲ್ಲಿ ಫ್ರಾನ್ಸ್ ದೇಶದಲ್ಲೂ ಮಾರಾಟ ವಾಗಿರುವದು ಉಲ್ಲೇಖ ನೀಯ.

ಇವರು ಕರ್ನಾಟಕ ಸರಕಾರದ ಬೋರ್ಡ್ ಪರೀಕ್ಷೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸೀನಿಯರ್ ಗ್ರೇಡ್ ಉತ್ತೀರ್ಣರಾಗಿ ಬಿ.ಎ. ಪದವಿಯಲ್ಲಿ ಸಂಗೀತವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಮೂರನೇ ರ್‍ಯಾಂಕ್ ಪಡೆದು ತೇರ್ಗಡೆ ಯಾಗಿದ್ದಾರೆ.

1992ರಿಂದ ಇಲ್ಲಿಯವರೆಗೆ ಕಲಬುರ್ಗಿ ಆಕಾಶವಾಣಿ ಕೇಂದ್ರದಿಂದ ಸುಗಮ ಸಂಗೀತ ಕಾರ್ಯಕ್ರಮ ನೀಡುತ್ತಿದ್ದು, 1994ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಬುರ್ಗಿ ವತಿಯಿಂದ ಸತತವಾಗಿ ಕಾರ್ಯಕ್ರಮ ನೀಡುತ್ತ ಬಂದಿದ್ದಾರೆ.

ಕಲಬುರ್ಗಿ ದೂರದರ್ಶನದಲ್ಲೂ ಗುರುಗಳೊಂದಿಗೆ ಸಂಗೀತ ಕಾರ್ಯಕ್ರಮ ನೀಡಿ ಗಮನ ಸೆಳೆದಿದ್ದಾರೆ. ಕಾಲೇಜು, ಅಂತರ್ ಕಾಲೇಜು, ವಿಶ್ವವಿದ್ಯಾಲಯ ಮಟ್ಟದಲ್ಲಿ ಹಾಗೂ ಕಲಬುರ್ಗಿಯ ನೆಹರು ಯುವಕ ಕೇಂದ್ರದಿಂದ ಅನೇಕ ಪ್ರಶಸ್ತಿಗಳು ಇವರ ಪ್ರತಿಭೆ ಗುರುತಿಸಿ ಬಂದಿವೆ.

ಜಿಲ್ಲಾ ವಚನೋತ್ಸವ ಸಮಿತಿ ನಡೆಸುವ ವಚನೋತ್ಸವದಲ್ಲಿ 'ಕಲಾ ಆರಾಧಕ' ಎಂಬ ಬಿರುದು ನೀಡಿ ಗೌರವಿಸಿದ್ದಾರೆ. ಬೆಂಗಳೂರಿನ ಖ್ಯಾತ ಗಾಯಕ ಜಿ.ವಿ. ಅತ್ರಿ ಅವರು ನಡೆಸುತ್ತಿದ್ದ 'ಸಂಗೀತ ಗಂಗಾ' ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದಿದ್ದಾರೆ.

ಇವರು ನಾಟಕರಂಗದಲ್ಲೂ ಕೈಯಾಡಿಸಿ, 'ಗ್ರಹಣ' ಎಂಬ ನಾಟಕದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಪಾತ್ರ ಮಾಡಿ ಪ್ರೇಕ್ಷಕರ ಗಮನ ಸೆಳೆದರು. ಅನಂತರ 2003ರಲ್ಲಿ ಅರ್ಥ ಚಲನಚಿತ್ರದಲ್ಲಿ ಗೌರವ ನಟರಾಗಿ ಅಭಿನಯಿಸುವ ಅವಕಾಶ ಪಡೆದರು. 2002–03ರಲ್ಲಿ ಕಲಬುರ್ಗಿ ಆಕಾಶವಾಣಿಯಿಂದ ಪ್ರಸಾರಗೊಂಡ 'ಜೀವನಮೋಜಲ್ಲ' ನಾಟಕದಲ್ಲೂ ಅಭಿನಯಿಸಿ ಶ್ರೋತೃಗಳ ಗಮನ ಸೆಳೆಯುವ ಕಲಾವಿದರೆನಿಸಿಕೊಂಡರು.

ಸಂಗೀತ ವಿಶ್ವವಿದ್ಯಾಲಯದ ಕುಲಪತಿ ಹನುಮಣ್ಣ ನಾಯಕ ದೊರೆ ಹಾಗೂ ಖ್ಯಾತ ಸಂಗೀತಗಾರರಾದ ಫಕೀರೇಶ ಕಣವಿ ಅವರಲ್ಲಿ ಶಾಸ್ತ್ರೋಕ್ತ ಸಂಗೀತವನ್ನೂ ಅಭ್ಯಾಸ ಮಾಡಿದ್ದಾರೆ.



'ಭಾವಚಿತ್ರ' ಜಲವರ್ಣ ಮಾಧ್ಯಮ

1998ರಿಂದ 2003ರ ವರೆಗೆ ಅಫಜಲಪುರದ ಶ್ರೀ ಮಹಾಂತೇಶ್ವರ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಎನ್.ಸಿ.ಸಿ. ಯವರು ನಡೆಸಿದ 13ನೇ ರಾಷ್ಟ್ರ ಮಟ್ಟದ ಸಮ್ಮೇಳನದಲ್ಲೂ ಎರಡು ಬಾರಿ ಭಾಗವಹಿಸುವ ಅವಕಾಶ ಪಡೆದುಕೊಂಡರು. 2004 ರಿಂದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಪ್ರಾಂಶುಪಾಲರಾಗಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ.

(ಎನ್‌ಎಂಜೆ)

ಚಾ



ಚಾಂದ ಪಾಶಾ: ವಿಜಯನಗರ ಹಾಗೂ ನಿಜಾಮರ ಆಳ್ವಿಕೆ ಯಲ್ಲಿದ್ದ ಹೈದ್ರಾಬಾದ ಕರ್ನಾಟಕದ ಒಂದು ಭಾಗ ರಾಯಚೂರ ಇಂಡೋ–ಇಸ್ಲಾಮಿಕ್ ಸಾಂಪ್ರದಾಯಿಕ ವಾಸ್ತುಶಿಲ್ಪ ಹಾಗೂ ಭಿತ್ತಿಚಿತ್ರ ಕಲೆಗಳು ಈ ಜಿಲ್ಲೆಯಲ್ಲಿ ಕಂಡು ಬರುವುದು ಸಹಜ. ಭಿತ್ತಿಚಿತ್ರ ಎಂದ ಕೂಡಲೇ ಖಾಜಾ ಗೌಡರ ಮನೆ ಜ್ಞಾಪಕ್ಕೆ ಬರುತ್ತದೆ. ರಿಯಾಲಿಸ್ಟಿಕ್ ಪೇಂಟಿಂಗ್ ಅಂದರೆ ಡಾ. ಎಸ್.ಎಂ. ಪಂಡಿತರು ಗುರುತಿಸಿಕೊಳ್ಳುತ್ತಾರೆ. ಇದೇ ರೀತಿ ರಾಯಚೂರನಲ್ಲಿ ರಿಯಾಲಿಸ್ಟಿಕ್, ಪೊರ್ಟ್ರೇಟ್ಸ್, ಫಿಗರೇಟಿವ್, ನೈಜಶೈಲಿ, ಭಾವಚಿತ್ರಗಳು, ಸೃಜನ ಚಿತ್ರಗಳು ಸಮಕಾಲೀನ ವಿಷಯಗಳನ್ನು ರಚಿಸುವ ಹಿರಿಯ ಚಿತ್ರಕಲಾವಿದರಾದ ಶ್ರೀ ಚಾಂದ ಪಾಶಾ. ಇವರು 1947 ಮೇ 10ರಂದು ರಾಯಚೂರು ಜಿಲ್ಲೆಯಲ್ಲಿ ಜನಿಸಿದರು. ಗುಲಬರ್ಗಾದಲ್ಲಿ ಚಿತ್ರಕಲೆಯ ಶಿಕ್ಷಣವನ್ನು ಪಡೆದು ರಾಯಚೂರನಲ್ಲಿ ಟ್ಯಾಗೊರ ಮೆಮೋರಿಯಲ್ ಶಾಲೆಯಲ್ಲಿ ಚಿತ್ರಕಲೆಯ ಶಿಕ್ಷಕರಾಗಿ ನೇಮಕ ಗೊಂಡರು. ಗ್ಯಾಗೊರ ಮೆಮೋರಿಯಲ್ ಸ್ಕೂಲ್‌ನಲ್ಲಿ ಜೀವನ ಪೂರ್ತಿ ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತರಾದರು.

ಒಂದು ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಮಕ್ಕಳನ್ನು ಕಲಿಸುತ್ತ ಸ್ವತಃ ಕೂಡ ಅನೇಕ ಕಲಾಕೃತಿಗಳನ್ನು ರಚಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರಮಟ್ಟಕ್ಕೆ ತನ್ನ ಕಲಾಕೃತಿಗಳನ್ನು ಕಳುಹಿಸಿದರು. ಶಾಲೆಯ ಕೆಲಸದಿಂದ ಬಿಡುವಾದ ತಕ್ಷಣ ತನ್ನ ಸ್ಟುಡಿಯೋನಲ್ಲಿ ಹೋಗಿ ತನ್ನ ಮನಸ್ಸಿನಲ್ಲಿರುವುದನ್ನು ಕ್ಯಾನವಸ್‌ನ ಮೇಲೆ ಬಣ್ಣಗಳ ಮುಖಾಂತರ ಸಂಯೋಜನೆಯನ್ನು ಮಾಡುತ್ತಾರೆ. ಇವರು ಏಕವ್ಯಕ್ತಿ ಹಾಗೂ ಗುಂಪು ಕಲಾ ಪ್ರದರ್ಶನಗಳನ್ನು ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕರ್ನಾಟಕ ಉರ್ದು ಅಕಾಡೆಮಿ ಹಾಗೂ ಇನ್ನಿತರಗಳಲ್ಲಿ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿ ಅನೇಕ ವಿಷಯಗಳ ಮೇಲೆ ಚಿತ್ರಗಳನ್ನು ಬಿಡಿಸಿ ಪ್ರಶಸ್ತಿಗಳನ್ನು ಹಾಗೂ ಗೌರವನ್ನು ಪಡೆದು ಕೊಂಡಿದ್ದಾರೆ. (ಆರ್‌ಪಿ)



'ಪ್ರಕೃತಿ ಚಿತ್ರ' ತೈಲವರ್ಣ ಮಾಧ್ಯಮ

ಚಾರಣಗಿರಿ: ಜೈನ–ಧಾರ್ಮಿಕ ಕೇಂದ್ರ. ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದಿಂದ ನೈಋತ್ಯಕ್ಕೆ ನಾಲ್ಕು ಕಿ.ಮೀ. ದೂರದಲ್ಲಿ ಅನೇಕ ಕಿರುಬೆಟ್ಟಗಳ ಮಧ್ಯದಲ್ಲಿದೆ. ಕ್ರಿ.ಶ. 7–8ನೆಯ ಶತಮಾನದಿಂದಲೂ ಇಂದೊಂದು ಪ್ರಸಿದ್ಧ ಜೈನ ಧಾರ್ಮಿಕ ಕೇಂದ್ರವಾಗಿದ್ದಿರಬಹುದಾದ ಸಾಧ್ಯತೆಯನ್ನು ಇಲ್ಲಿರುವ ಅವಶೇಷಗಳಿಂದ ಗುರುತಿಸಬಹುದು. ಈ ಬೆಟ್ಟದ ಮೇಲ್ಭಾಗದಲ್ಲಿ ಬಂಡೆಗಳ ಮೇಲೆ ಎರಡು ಕಡೆ ಇಬ್ಬರೂ ಜಿನ ಮುನಿಗಳು ಸಮಾಧಿ ಮರಣ ಪಡೆದುದರ ಕುರುಹಾಗಿ ಶ್ರೀ ಚರಣ, ಕಮಂಡಲು, ಪಿಂಛಿಗಳನ್ನು ಕೆತ್ತಿದ್ದಾರೆ. ಈ ಚರಣಗಳಿರುವ ಕಾರಣ ಗಿರಿಗೆ ಚರಣಗಿರಿ ಎಂಬ ಹೆಸರಾಗಿ ಮುಂದೆ ಚಾರಣಗಿರಿ ಎಂದಾಗಿರಬಹುದು. ಜನರ ಗೌಜು ಗದ್ದಲಗಳಿಂದ ದೂರವಾಗಿ ಪ್ರಶಾಂತ ಗಿರಿವನಗಳ ಮಧ್ಯೆ, ತುಂಬಿ ಹರಿಯುವ ಝರಿ ತೊರೆಗಳಿಂದಲೂ ಫಲ ಪುಷ್ಪಭರಿತ ಮರಬಳ್ಳಿಗಳೂ, ಕಲ್ಲಾಸರೆಗಳೂ, ತ್ಯಾಗ, ವೈರಾಗ್ಯದ ಯೋಗಿಗಳಿಗೆ ಸಾಧನೆಗೆ ತಕ್ಕ ತಾಣವೆನಿಸಿ; ಅನೇಕ ಜಿನ ಯತಿಗಳನ್ನು ಇಲ್ಲಿಗೆ ಆಕರ್ಷಿಸಿರಬಹುದು. ಚರಣಗಿರಿಯ ಪಶ್ಚಿಮ ಭಾಗಕ್ಕಿರುವ ಏಕಶಿಲಾ ಹೆಬ್ಬಂಡೆಯ ಮಧ್ಯಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಕಾಯೋತ್ಸರ್ಗ ಭಂಗಿಯಲ್ಲಿ (ಪಾದಗಳನ್ನು ನಾಲ್ಕು ಅಂಗುಲಗಳ ಅಂತರದಲ್ಲಿಟ್ಟು, ಎರಡೂ ಕೈಗಳನ್ನೂ ಸರಳವಾಗಿ ಕೆಳಕ್ಕೆ ಇಳಿಬಿಟ್ಟು ಬೆರಳುಗಳನ್ನು ನೀಳವಾಗಿರಿಸಿ ಅಂಗೈ ತೊಡೆಯತ್ತ ಇರುವಂತೆ ಇಟ್ಟು, ನಿಶ್ಚಲವಾಗಿ ನಿಲ್ಲುವುದಕ್ಕೆ ಕಾಯೋತ್ಸರ್ಗ

ಎನ್ನುವರು) 23ನೇ ತೀರ್ಥಂಕರ ಭಗವಾನ್ ಪಾರ್ಶ್ವನಾಥರ ಉಬ್ಬು ಶಿಲ್ಪವನ್ನು ಕೊರೆದಿದ್ದಾರೆ. ಈ ವಿಗ್ರಹದ ಎಡಗಡೆ ಪದ್ಮಾವತಿ ಯಕ್ಷಿಯ ಉಬ್ಬುಶಿಲ್ಪ ಹಿಂದೆ ಇತ್ತು. ಆದರೆ ಕಿಡಿಗೇಡಿಗಳ ಕಲ್ಲೇಟಿಗೆ ತುತ್ತಾಗಿ ಈಗ ಅಳಿಸಿಹೋಗಿದೆ. ಈ ಹೆಬ್ಬಂಡೆಯ ಕೆಳಭಾಗದಲ್ಲಿ ಎಡಗಡೆ ಒಂದು ನೈಸರ್ಗಿಕ ಗುಹೆ ಇದೆ. ಇಲ್ಲಿ ಮುನಿಗಳು ತಪೋನಿರತರಾಗಿರುತ್ತಿದ್ದಿರಬಹುದು. ಈ ಬೆಟ್ಟದ ಪೂರ್ವಕ್ಕಿರುವ ನೈಸರ್ಗಿಕ ಗುಹೆಯ ಮುಂಭಾಗದಲ್ಲಿ ಗೋಡೆ ಕಟ್ಟಿ ಕಿರಿಬಾಗಿಲನ್ನಿರಿಸಿದ್ದಾರೆ. ಕುದುರೆ ಮೇಲೆ ಕುಳಿತ ವಿಗ್ರಹವನ್ನು ಜನ ಮಲ್ಲಯ್ಯ ಎಂದು ಕರೆದು ಪೂಜಿಸುತ್ತಾರೆ.

(ಡಿಎನ್‌ಎ)

ಚಿ

ಚಿಂಚನಸೂರು ದೇಗುಲ: ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಚಿಂಚನಸೂರ ಒಂದು ಮುಖ್ಯ ಗ್ರಾಮ. ಜಿಲ್ಲಾ ಕೇಂದ್ರದಿಂದ ಸುಮಾರು 22 ಕಿ.ಮೀ. ದೂರದಲ್ಲಿರುವ ಈ ಗ್ರಾಮ ಒಂದು ಕಾಲಕ್ಕೆ ಮಾಪುರತಾಯಿ ಬೆತ್ತಲೆ ಸೇವೆಯಿಂದ ಪ್ರಸಿದ್ಧಿ ಪಡೆದಿತ್ತು. ಅನಂತರ ಸಾಮಾಜಿಕ ಸಂಘಟನೆಗಳು ಹಾಗೂ ಪೊಲೀಸರ ನೆರವಿನಿಂದ ಈ ಸಾಮಾಜಿಕ ಅನಿಷ್ಟ ಈ ಊರಿನಿಂದ ದೂರವಾಗಿದೆ. ಆದರೆ, ಚಿಂಚನಸೂರ ಗ್ರಾಮ ವೆಂದರೆ ಎಲ್ಲರೂ ಗುರುತಿಸುವ ಮಟ್ಟಿಗೆ ಖ್ಯಾತಿಯನ್ನು ಉಳಿಸಿ ಕೊಂಡಿದೆ. ಇದಲ್ಲದೇ ಚಿಂಚನಸೂರ ಗ್ರಾಮ ಐತಿಹಾಸಿಕ ಹಾಗೂ ಪೌರಾಣಿಕವಾಗಿಯೂ ಪ್ರಸಿದ್ಧವಾಗಿತ್ತೆಂಬ ಬಗ್ಗೆ ಇಲ್ಲಿ ರುವ ಪ್ರಾಚೀನ ಕಾಲದ ಮಹೇಶ್ವರ ಶೈವ ದೇವಾಲಯದಿಂದ ಕಂಡು ಬರುತ್ತದೆ. ಈ ಊರಿನ ಪ್ರಮುಖ ಆಕರ್ಷಣೆ ಪ್ರಾಚೀನ ಕಾಲದ ಮಹೇಶ್ವರ ಶೈವ ದೇಗುಲ ಐತಿಹಾಸಿಕವಾದ ಮಹತ್ವ ಹೊಂದಿದೆ. ಒಂದು ಕಾಲಕ್ಕೆ ಭವ್ಯ ಇತಿಹಾಸದಿಂದ ಮೆರೆದ ಈ ದೇಗುಲದ ಸುತ್ತೆಲ್ಲ ಮುಳ್ಳುಕಂಟಿ ಬೆಳೆದು, ಸುತ್ತಲೂ ಹೊಲಸು ಪರಿಸರ ನಿರ್ಮಾಣವಾಗಿದೆ.

ದೇಗುಲದ ನವರಂಗ ಮುಖಮಂಟಪ ಎಂದೋ ಬಿದ್ದು ಹೋಗಿದೆ. ಮೇಲೆ ತಗಡನ್ನು ಹೊದಿಸಿದ್ದಾರೆ. ಕೆಲವು ಮೂರ್ತಿಗಳು, ಸುಂದರವಾದ ಕೆತ್ತನೆಯ ಕಂಬಗಳು ಭಗ್ನವಾಗಿ ಬಿದ್ದಿವೆ. ಕುಸುರಿ ಕೆತ್ತನೆಯಿಂದ ಕೂಡಿದ ಗರ್ಭಗುಡಿಯ ದ್ವಾರಬಂಧದಲ್ಲಿ ದ್ವಾರಪಾಲಕರು ಸಕಲಾಯುಧಗಳೊಂದಿಗೆ ನಿಂತಿದ್ದು, ಕೆತ್ತನೆಯ ಕೌಶಲ್ಯ ನೋಡಲು ಎರಡು ಕಣ್ಣುಗಳು ಸಾಲದು. ಗರ್ಭಗುಡಿಯಲ್ಲಿ ಬೃಹತ್ ಈಶ್ವರ ಲಿಂಗವಿದೆ.

ದೇಗುಲದ ಹೊರಮೈ ಗೋಡೆಯ ಭಿತ್ತಿಯು ಸುಂದರ ಶಿಲ್ಪಗಳಿಂದ ಕೂಡಿದೆ. ಇಲ್ಲಿನ ಶಿಲ್ಪಿಗಳು ಸ್ತ್ರೀ ಶಿಲ್ಪಗಳಿಗೆ ಆದ್ಯತೆ ನೀಡಿದ್ದಾರೆ. ಹೆಣ್ಣಿನ ವಿವಿಧ ಭಾವಭಂಗಿಗಳನ್ನು ಸಮರ್ಥ, ಸುಂದರವಾಗಿ ಚಿತ್ರಿಸಲಾಗಿದೆ. ನಾಟ್ಯವಾಡುವ ನಾಟ್ಯಗಾತಿ, ಮೃದಂಗ, ಕೊಳಲುಗಳನ್ನು ನುಡಿಸುತ್ತಿರುವ ಸಂಗೀತ ಕೋವಿದೆ. ಮೊದಲಾದ ಕಲಾಸಕ್ತೆಯರು ಇಲ್ಲಿ ಮೈತಾಳಿದ್ದಾರೆ. ಪಶ್ಚಿಮದ ಗೋಡೆಯಲ್ಲಿ ಸ್ತ್ರೀಯೊಬ್ಬಳು ಎಡಗೈಯಲ್ಲಿ ಲೇಖನ ಪಟ ಹಿಡಿದು, ಬಲಗೈಯಿಂದ ಏನನ್ನೋ, ಬರೆಯುವುದರಲ್ಲಿ ತಲ್ಲೀನಳಾಗಿದ್ದಾಳೆ. ಕಾಲು ತಳುಕು ಹಾಕಿಕೊಂಡು ತಲೆ ಮೇಲೆತ್ತಿ ಬರೆಯುತ್ತಿರುವ ಅವಳ ಮೈ ಬಿಲ್ಲಿನಂತೆ ಬಾಗಿದೆ.

ಈ ಪತ್ರ ಲೇಖಿಕೆಯ ಶಿಲ್ಪ ಜಲಸಂಗಿ (ಬೀದರ ಜಿಲ್ಲೆ) ದೇಗುಲದ ಪ್ರಸಿದ್ಧ ಸ್ತ್ರೀ ಶಿಲ್ಪವನ್ನು ಸ್ವಲ್ಪ ಮಟ್ಟಿಗೆ ಹೋಲುತ್ತದೆ. ಖಡ್ಗ ಹಿಡಿದ ವೀರನಾರಿ, ಮರ್ಕಟ ಮೋಹಿನಿ, ನಾಗಿಣಿಯರು ಇಲ್ಲಿದ್ದಾರೆ. ಅಂದಿನ ಸ್ತ್ರೀಯರ ವೇಷಭೂಷಣ, ಕೇಶವಿನ್ಯಾಸ ಕುತೂಹಲ ಹುಟ್ಟಿಸುತ್ತವೆ. ಗರ್ಭಗುಡಿಯ ಹೊರಗೋಡೆಯಲ್ಲಿ ಮೂರು ದೇವಗೋಷ್ಠಗಳಿವೆ. ಇವುಗಳಲ್ಲಿ ನಗ್ನರೂಪಿ ಭೈರವ, ಗಣಪತಿ, ಮಹಿಷಾಸುರ ಮರ್ದಿನಿಯರ ಮೋಹಕ ಪ್ರತಿಮೆಗಳಿವೆ. ಈ ದೇಗುಲದ ವಾಸ್ತು ಶೈಲಿಯು ಸ್ಥೂಲವಾಗಿ ಗಮನಿಸಿದಾಗ ಕಲ್ಯಾಣ ಚಾಳುಕ್ಯರ ಶೈಲಿಯನ್ನು ಹೋಲುತ್ತದೆ. ಸಮಕಾಲೀನ ಯಾವ ಶಾಸನಗಳೂ ದೇಗುಲದ ಪರಿಸರದಲ್ಲಿ ಕಾಣಿಸುವುದಿಲ್ಲ. ಆದರೆ 14ನೇ ಶತಮಾನದ ಅಂತ್ಯಕಾಲದ ಶಾಸನ (ಕ್ರಿ.ಶ. 1390) ವೊಂದು ಗರ್ಭಗುಡಿಯ ದ್ವಾರಬಂಧದ ಮೇಲೆ ಇದೆ. 'ಕೊಳಲೂರಿನ ಯಿರಸಂಗಪನ ಮಗ ಮಾಯಂಣನೆಂಬುವನು ಶ್ರೀ ಮಹೇಶ್ವರ ದೇವರಿಗೆ ದಂಡವೃತವನ್ನು ಮಾನ್ಯ ಮಾಡಿರುವುದಾಗಿ' ಶಾಸನ ಹೇಳುತ್ತದೆ. ಈ ಊರಲ್ಲಿ ವಿಠ್ಠಲರಾವ್ ಪಾಟೀಲ ಎಂಬುವವರಿಗೆ ಸೇರಿದ ಹಳೆಯ ಕಾಲದ ದೊಡ್ಡವಾಡೆಯೂ ನೋಡುವಂತಿದೆ. ಹಳೆಯ ಕಾಲದ ವಾಡೆಯೊಂದು ಅರಮನೆಯಂತಿದ್ದು, ಕಾಷ್ಠ ಶಿಲ್ಪ ಈ ವಾಡೆಯಲ್ಲಿ ಹೇರಳವಾಗಿ ನೋಡಲು ಸಿಗುತ್ತದೆ. ಪ್ರಾಚೀನ ಕಾಲದ ಇಂಥ ದೇವಾಲಯ ಹಾಗೂ ವಾಡೆಗಳು ಮುಂದಿನ ಪೀಳಿಗೆಗಳಿಗೆ ನಮ್ಮ ಕಲೆ ಹಾಗೂ ಸಂಸ್ಕೃತಿಯ ಬಗ್ಗೆ ಪರಿಚಯ ಮಾಡಿಕೊಡುತ್ತವೆ. (ವಿಕೆಎಂ)

ಚಿಂಚೋಳಿ ಪ್ರದೇಶದ ದೇವಾಲಯಗಳು: ಚಿಂಚೋಳಿ ತಾಲ್ಲೂಕು ಕೇಂದ್ರವಾಗಿದ್ದು, ಗುಲ್ಬರ್ಗಾ ಜಿಲ್ಲೆಯ ಈಶಾನ್ಯ ಮೂಲೆಯಲ್ಲಿದೆ. ಬೆಟ್ಟ, ಗುಡ್ಡ, ಅರಣ್ಯ, ನದಿ, ಕಣಿವೆ ಮತ್ತು ಹಳ್ಳಕೊಳ್ಳಗಳಿಂದ ತುಂಬಿರುವ ಈ ಪ್ರದೇಶ ವಿಭಿನ್ನವಾದ ಭೌಗೋಳಿಕ ಪರಿಸರದಿಂದ ಕೂಡಿದೆ. ತಾಲ್ಲೂಕಿನ ಪಶ್ಚಿಮ ಭಾಗದಲ್ಲಿ ಬಸಾಲ್ಟ್ ಕಲ್ಲು ದೊರೆತರೆ, ಮಧ್ಯ ಹಾಗೂ ದಕ್ಷಿಣ ಭಾಗದಲ್ಲಿ ಸುಣ್ಣದ ಕಲ್ಲು ದೊರೆಯುವುದು. ಅದೇ ರೀತಿ ಪೂರ್ವಭಾಗದಲ್ಲಿ ಜಂಬಿಟ್ಟಿಗೆ ದೊರೆಯುತ್ತದೆ. ಹೀಗೆ ವಿಭಿನ್ನವಾದ ಭೂ ಅಡಕಗಳನ್ನು ಹೊಂದಿರುವ ಚಿಂಚೋಳಿ ಪ್ರದೇಶ ಪ್ರಾಚೀನ ಕಾಲದಿಂದಲೂ ಮಾನವನ ಅಸ್ತಿತ್ವಕ್ಕೆ ನೆಲೆಯಾಗಿ ರುವುದು ಗಮನಾರ್ಹ. ತಾಲ್ಲೂಕಿನ ಪೂರ್ವಭಾಗ ಅರಣ್ಯ

ಮಯವಾಗಿದ್ದು, ಪ್ರಾಗೈತಿಹಾಸಿಕ ನೆಲೆಗಳನ್ನು ಒಳಗೊಂಡಿದೆ. ಭೋನಸಪುರದಲ್ಲಿ ನವಶಿಲಾಯುಗದ ಆಯುಧಗಳು ಬೆಳಕಿಗೆ ಬಂದಿವೆ. ಗೊಟ್ಟಂಗೊಟ್ಟ ಪ್ರದೇಶದಲ್ಲಿ ಆದಿ ಚಾರಿತ್ರಿಕ ನೆಲೆಯ ಕುರುಹುಗಳು ದೊರೆತಿವೆ. ಅಲ್ಲಿನ ಗುಡ್ಡದಂಚಿನಲ್ಲಿ ರಕ್ಷಣೆ ದೃಷ್ಟಿಯಿಂದ ನಿರ್ಮಿಸಿರುವ ಇಟ್ಟಿಗೆ ಗೋಡೆಯ ಅವಶೇಷವನ್ನು ಶಾತವಾಹನರ ಕಾಲಕ್ಕೆ ನಿರ್ದೇಶಿಸ ಬಹುದಾಗಿದೆ. ಇಲ್ಲಿ ಬಳಸಿರುವ ಇಟ್ಟಿಗೆಯ ಪ್ರಮಾಣದಲ್ಲೇ ಗಣಿಯಿಂದ ಕತ್ತರಿಸಿ ನಿರ್ಮಾಣಕ್ಕೆ ಬಳಸಿರುವುದು ಗಮನಾರ್ಹ. ಹೀಗೆ ಪ್ರಾಗೈತಿಹಾಸಿಕ ಮತ್ತು ಆದಿಚಾರಿತ್ರಕ ಕಾಲದ ಅವಶೇಷಗಳನ್ನು ಹೊಂದಿರುವ ಈ ಪ್ರದೇಶದಲ್ಲಿ ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ. ಕರ್ನಾಟಕದ ಉಳಿದ ಪ್ರದೇಶಗಳಂತೆ ಚಿಂಚೋಳಿ ಪ್ರದೇಶವು ಸಹ ಶ್ರೀಮಂತವಾದ ಮೈಗೂಡಿಸಿ ಕೊಂಡಿದೆ.

ಇಲ್ಲಿನ ಭೌಗೋಳಿಕ ಪರಿಸರ, ಇಲ್ಲಿ ಪ್ರಾಚೀನ ಕಾಲದಿಂದಲೂ ದೇವಾಲಯ ಸಂಸ್ಕೃತಿ ನೆಲೆಯೂರಲು ಕಾರಣವಾಯಿತು. ಇಲ್ಲಿನ ನದಿ, ಹಳ್ಳಗಳು ಹಾಗೂ ನೀರಿನ ಚಿಲುಮೆಗಳು ಇಲ್ಲೊಂದು ಅಧ್ಯಾತ್ಮ ಲೋಕವನ್ನೇ ನಮ್ಮ ಮುಂದಿರಿಸಿವೆ. ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳು ಕಂಡುಬರುತ್ತವೆ. ಈಗಲೂ ಈ ಪ್ರದೇಶದಲ್ಲಿನ ಏಕಾಂತದ ನೆಲೆಗಳಲ್ಲಿ ಅಧ್ಯಾತ್ಮದ ಸಾಧನೆಯಲ್ಲಿ ತೊಡಗಿರುವ ಸಾಧುಸಂತರನ್ನು ಕಾಣಬಹುದು. ತಾಲ್ಲೂಕಿನಲ್ಲಿ ಹರಿಯುವ ಮುಲ್ಲಾಮಾರಿ ಜೀವನದಿಯಾಗಿದ್ದು, ಅದರ ದಂಡೆಗಳಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ. ಇದಕ್ಕೆ ಕಾರಣ ಈ ಪ್ರದೇಶದಲ್ಲಿ ಸಮೃದ್ಧವಾದ ಅಂತರ್ಜಲವಿರುವುದು. ಬಾವಿ ತೋಡಿದಲ್ಲಿ ನೀರು ದೊರೆಯುತ್ತದೆ. ಹೀಗೆ ಎಲ್ಲ ಮೂಲಗಳಿಂದ ಹೆಚ್ಚಿನ ನೀರು ಸೌಕರ್ಯವಿರುವ ಈ ಪ್ರದೇಶದಲ್ಲಿ ಸಹಜವಾಗಿಯೇ ದೇವಾಲಯ ಸಂಸ್ಕೃತಿ ಬೆಳೆಯಿತು.

ಚಿಂಚೋಳಿ ಪ್ರದೇಶದಲ್ಲಿ ಕಂಡುಬರುವ ಪ್ರಾಚೀನ ದೇವಾಲಯಗಳು ಮುಖ್ಯವಾಗಿ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದವು. ಬಹುತೇಕ ದೇವಾಲಯಗಳು ಭಗ್ನ ಸ್ಥಿತಿಯಲ್ಲಿದ್ದು, ಅವನತಿಯ ಅಂಚಿನಲ್ಲಿವೆ. ಕೆಲವೊಂದು ಅಲ್ಪಸ್ವಲ್ಪ ಸುಸ್ಥಿತಿಯಲ್ಲಿವೆ. ಕೆಲವು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡಿವೆ. ಇನ್ನು ಕೆಲವಡೆ ಹಳೆ ದೇವಾಲಯಗಳನ್ನು ಸಂಪೂರ್ಣವಾಗಿ ಕೆಡವಿ ಹೊಸ ದೇವಾಲಯಗಳನ್ನು ನಿರ್ಮಿಸುತ್ತಿದ್ದಾರೆ. ಹೀಗೆ ನಾಲ್ಕು ಸ್ಥಿತಿಯಲ್ಲಿರುವ ದೇವಾಲಯಗಳು ಈ ಭಾಗದಲ್ಲಿವೆ. ಪ್ರಸ್ತುತ ಗ್ರಾಮವಾರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಹತ್ವದ ಪ್ರಾಚೀನ ದೇವಾಲಯಗಳು, ಮೂರ್ತಿಶಿಲ್ಪಗಳು ಮತ್ತಿತರ ಅವಶೇಷಗಳು ಬೆಳಕಿಗೆ ಬಂದಿವೆ. ತಾಲ್ಲೂಕಿನ ಮಿರಿಯಾಣ, ಸುಲೇಪೇಟೆ, ನಿಡಗುಂದ, ಕೇಶವಾರ, ಪಸ್ತಾಪುರ, ಶಿರೋಳಿ ಮೊದಲಾದ ಊರುಗಳಲ್ಲಿ ರಾಷ್ಟ್ರಕೂಟರ ಕಾಲದ ಉಲ್ಲೇಖಾರ್ಹ ದೇವಾಲಯಗಳಿವೆ. ಅದೇ ರೀತಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರುವ ಮಹತ್ವದ ದೇವಾಲಯಗಳು ದೇಗುಲಗುಡಿ, ಮೊಘೆ, ರುಮನಗುಡ, ರಟಕಲ್, ಕೊಡ್ಲಿ, ಚಂಗಟ ಮೊದಲಾದ ಗ್ರಾಮಗಳಲ್ಲಿವೆ. ಈ ಎಲ್ಲ ದೇವಾಲಯಗಳು ಆ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಅಧ್ಯಯನದ ದೃಷ್ಟಿಯಿಂದ ಪ್ರಮುಖ ಸ್ಮಾರಕಗಳಾಗಿವೆ.

ತಾಲ್ಲೂಕಿನಲ್ಲಿ ಕಂಡುಬರುವ ರಾಷ್ಟ್ರಕೂಟರ ಕಾಲದ ದೇವಾಲಯಗಳು ಭಿನ್ನ ರಚನೆಯವು. ಅಂದರೆ ಏಕ, ದ್ವಿಕೂಟ ಮತ್ತು ತ್ರಿಕೂಟ ಮಾದರಿಯಲ್ಲಿ ನಿರ್ಮಾಣಗೊಂಡಿವೆ. ಇದಲ್ಲದೆ ಗುಂಪು ದೇವಾಲಯಗಳ ನಿರ್ಮಾಣವನ್ನು ವಿಶೇಷವಾಗಿ ಗುರುತಿಸಬಹುದು. ಏಕಕೂಟ ದೇವಾಲಯಗಳು ತಾಲ್ಲೂಕಿನಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತವೆ. ದ್ವಿಕೂಟ ಮಾದರಿಯ ದೇವಾಲಯಗಳನ್ನು ರಾಮತೀರ್ಥ, ಕೇಶವಾರ ಮತ್ತು ನಿಡಗುಂದ ಗ್ರಾಮಗಳಲ್ಲಿ ಕಾಣಬಹುದು. ತ್ರಿಕೂಟ ಮಾದರಿಯ ದೇವಾಲಯ ನಿಡಗುಂದದಲ್ಲಿದೆ. ಇನ್ನು ಗುಂಪು ದೇವಾಲಯಗಳನ್ನು ಮಿರಿಯಾಣ, ನಿಡಗುಂದ ಗ್ರಾಮಗಳಲ್ಲಿ ಇವೆ. ಈ ಎಲ್ಲ ದೇವಾಲಯಗಳ ನಿರ್ಮಾಣದಲ್ಲಿ ಸುಣ್ಣಕಲ್ಲನ್ನು ಬಳಸಲಾಗಿದೆ. ಆದರೆ ಕಟ್ಟಡದ ಭಾರ ಬೀಳುವೆಡೆ ಬಸಾಲ್ಟ್ ಶಿಲೆಯ ಕಂಬ ಮತ್ತು ತೊಲೆಗಳನ್ನು ಅಳವಡಿಸಿದ್ದಾರೆ. ಭಿತ್ತಿಯ ರಚನೆಗೆ ಸುಣ್ಣಕಲ್ಲನ್ನು ಬಳಸಿರುವುದರಿಂದ ಯಾವುದೇ ಅಲಂಕರಣವಿಲ್ಲದೆ ಸರಳ ರಚನೆಯಾಗಿ ನಿರ್ಮಾಣಗೊಂಡಿದೆ. ಇದರಿಂದಾಗಿ ಗೋಡೆಭಾಗ ಸಪಾಟಾಗಿದ್ದು, ಸರಳತೆಯಲ್ಲೂ ಸೌಂದರ್ಯ ಪ್ರಕಟಗೊಳ್ಳುವುದು, ಈ ಕಾಲದ ಮತ್ತು ಪ್ರದೇಶದ ದೇವಾಲಯ ಗಳ ಒಂದು ವಿಶೇಷವೆನ್ನಬಹುದು. ಕೆಲವು ದೇವಾಲಯಗಳಲ್ಲಿನ ಹೊರಭಿತ್ತಿಯಲ್ಲಿ ಬಸಾಲ್ಟ್ ಶಿಲೆಯನ್ನು ಅಳವಡಿಸಿರುವುದರಿಂದ ಅರ್ಧಕಂಬ ಮತ್ತು ದೇವ ಕೋಷ್ಠಕಗಳ ಅಲಂಕರಣಗಳನ್ನು ಕಾಣಬಹುದು. ಆದರೆ ಒಳಭಿತ್ತಿಯಲ್ಲಿ ಸುಣ್ಣದಕಲ್ಲನ್ನೇ ಅಳವಡಿಸಿದ್ದಾರೆ.

ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯಗಳ ಮೇಲೆ ಕಳಿಂಗ ನಾಗರ ಶೈಲಿಯ ಶಿಖರಗಳು ಕಂಡುಬರುತ್ತವೆ. ಪಿರಮಿಡ್ ಆಕೃತಿಯ ಈ ಶಿಖರದ ನಿರ್ಮಾಣಕ್ಕೆ ಸುಣ್ಣದಕಲ್ಲು ಹೇಳಿ ಮಾಡಿಸಿದಂತಿದೆ. ಹಾಗಾಗಿ ಬಹುತೇಕ ದೇವಾಲಯಗಳ ಮೇಲೆ ಈ ಶಿಖರವನ್ನು ಕಾಣುತ್ತೇವೆ. ನಿಡಗುಂದದ ದೇವಿ ಮಂದಿರದ ಮೇಲೆ ಮೆಟ್ಟಿಲಾಕಾರದ ಶಾಲಾ ಮಾದರಿಯ ಶಿಖರವನ್ನು ಸುಣ್ಣದ ಕಲ್ಲಿನಿಂದ ನಿರ್ಮಿಸಿದ್ದಾರೆ. ಇದು ವಿಶೇಷ ರಚನೆಯ ಶಿಖರವಾಗಿದ್ದು, ವಾಸ್ತುತಜ್ಞರ ಗಮನ ಸೆಳೆದಿದೆ. ಹೀಗೆ ರಾಷ್ಟ್ರಕೂಟರು ತಮ್ಮ ಪರಿಸರದಲ್ಲಿ ದೊರೆಯುತ್ತಿದ್ದ ಸುಣ್ಣದಕಲ್ಲನ್ನು ದೇವಾಲಯಗಳ ನಿರ್ಮಾಣಕ್ಕೆ ವ್ಯಾಪಕ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಸುಣ್ಣದ ಕಲ್ಲುಗಳ ಬಳಕೆ ಪ್ರಾಚೀನವಾದುದು. ಅಂದರೆ ಶಾತವಾಹನರ ಕಾಲದಲ್ಲೇ ಸುಣ್ಣದಕಲ್ಲನ್ನು ಬಳಸಿ ಸ್ತೂಪ, ಇತರ ಕಟ್ಟಡಗಳು ಮತ್ತು ಬಿಡಿ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು. ಆ ಪರಂಪರೆ ರಾಷ್ಟ್ರಕೂಟರ ಕಾಲದಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಮುಂದುವರೆಯಿತು. ಇಂದಿಗೂ ಈ ಪ್ರದೇಶದಲ್ಲಿ ಜನಸಾಮಾನ್ಯರು ತಾವು ವಾಸಿಸುವ ಮನೆಗಳ ನಿರ್ಮಾಣದಲ್ಲಿ ಸುಣ್ಣಕಲ್ಲನ್ನು ಯಥೇಚ್ಛವಾಗಿ ಬಳಸುತ್ತಾರೆ.

ಇನ್ನು ಬಿಡಿ ಶಿಲ್ಪಗಳನ್ನು ಬಸಾಲ್ಟ್ ಶಿಲೆಯಿಂದ ರಚಿಸಿದ್ದಾರೆ. ಶಿಲ್ಪಗಳನ್ನು ಮುಖ್ಯವಾಗಿ ಗಣೇಶನ ಶಿಲ್ಪಗಳ ಅಧಿಕ ಸಂಖ್ಯೆಯಲ್ಲಿವೆ. ಇವುಗಳಲ್ಲಿ ಮಿರಿಯಾಣದಲ್ಲಿರುವ ಬೃಹತ್ ಗಾತ್ರದ ದ್ವಿಭುಜ ಗಣಪತಿ ಉಲ್ಲೇಖಾರ್ಹವಾದುದು. ಇದೇ ಊರಿನ ಮೂರು ಗುಡಿ ಆವರಣದಲ್ಲಿ ದೇವಾಲಯದ ಮುಂದಿರುವ ಎರಡು ಸ್ತ್ರೀ ಶಿಲ್ಪಗಳು ರಾಷ್ಟ್ರಕೂಟದ ಕಾಲದ ಮೂರ್ತಿಶಿಲ್ಪಕಲೆಗೆ ಉತ್ತಮ ಉದಾಹರಣೆಗಳೆನ್ನಬಹುದು. ತಾಲ್ಲೂಕಿನ ನಿಡಗುಂದದಲ್ಲಿ ಜೈನ, ಶೈವ, ಮತ್ತಿತರ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅವುಗಳಲ್ಲಿ ಶೈವ ದ್ವಾರಪಾಲಕರ ಬೃಹತ್ ಶಿಲ್ಪಗಳು ಮನಮೋಹಕವಾಗಿವೆ. ಸುಲೇಪೇಟೆಯ ಶಂಕರಲಿಂಗ ದೇವಾಲಯದ ಮಕರತೋರಣ ಶಿಲ್ಪದ ಕೆತ್ತನೆ ಅಲಂಕರಣವು ಗಮನಾರ್ಹವಾದುದು. ತಾಲ್ಲೂಕಿನ ಮಿರಿಯಾಣ, ನಿಡಗುಂದ ಮೊದಲಾದ ಸ್ಥಳಗಳಲ್ಲಿ ರಾಷ್ಟ್ರಕೂಟರ ಕಾಲದ ಮೂರ್ತಿಶಿಲ್ಪಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಚಿಂಚೋಳಿ ಪ್ರದೇಶದಲ್ಲಿ ರಾಷ್ಟ್ರಕೂಟರ ಕಾಲದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ವಿಫುಲವಾದ ಅವಕಾಶಗಳಿವೆ. ಮಿರಿಯಾಣ, ನಿಡಗುಂದ ಮತ್ತು ಸುಲೇಪೇಟೆಗಳ ದೇವಾಲಯಗಳನ್ನು ಸಂರಕ್ಷಿತ ಸ್ಮಾರಕಗಳನ್ನಾಗಿ ಘೋಷಿಸುವುದರ ಜೊತೆಗೆ, ಅವುಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸುವ ಮೂಲಕ ಈ ಭಾಗದ ಅಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡಿದಂತಾಗುವುದು.

ಚಿಂಚೋಳಿ ಪ್ರದೇಶದಲ್ಲಿ ಉಳಿದಂತೆ ಕಂಡುಬರುವ ಪ್ರಾಚೀನ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದವು. ಈ ಕಾಲದ ದೇವಾಲಯಗಳು ಮತ್ತು ಬಿಡಿಶಿಲ್ಪಗಳು ವ್ಯಾಪಕ ಪ್ರಮಾಣದಲ್ಲಿ ಕಂಡುಬರುತ್ತವೆ. ಮೊಘೆ, ರುಮನಗುಡ, ರಟಕಲ್, ಮಿರಿಯಾಣ, ಕೇಶವಾರ, ಕೊಡ್ಲಿ, ದೇಗುಲಮಡಿ, ಚಂಗಟ ಮೊದಲಾದ ಗ್ರಾಮಗಳಲ್ಲಿ ಮಹತ್ವದ ದೇವಾಲಯಗಳಿವೆ. ದೇವಾಲಯಗಳು ಏಕ, ದ್ವಿಕೂಟ ಮಾದರಿಯಲ್ಲಿ ನಿರ್ಮಾಣಗೊಂಡಿವೆ. ಇವುಗಳಲ್ಲಿ ಮೊಘೆಯಲ್ಲಿರುವ ರಾಮಲಿಂಗೇಶ್ವರ ದೇವಾಲಯವು ನಾಗರ ಶೈಲಿಯ ಶಿಖರವನ್ನು ಹೊಂದುವ ಮೂಲಕ ಈ ಭಾಗದ ವಿಶಿಷ್ಟ ಸ್ಮಾರಕವೆನಿಸಿದೆ. ದೇವಾಲಯವು ದಾಕ್ಷಿಣಾತ್ಯ ಅಧಿಷ್ಠಾನ ಹೊಂದಿದ್ದು, ಗರ್ಭಗೃಹ, ಅರ್ಧಮಂಟಪ ಮತ್ತು ರಂಗಮಂಟಪಗಳಿಂದ ಕೂಡಿದೆ. ರಂಗಮಂಟಪವು ಉತ್ತರ ಮತ್ತು ದಕ್ಷಿಣದಿಂದ ಪ್ರವೇಶವನ್ನು ಹೊಂದಿದೆ. ಗರ್ಭಗೃಹದ ಮೇಲಿರುವ ನಾಗರ ಶೈಲಿಯ ಶಿಖರವು ತುದಿಯಲ್ಲಿ ಜೀರ್ಣೋದ್ಧಾರಗೊಂಡಿದೆ. ಕಂಬಗಳ ಬೋದಿಗೆ ಪೀಠದಲ್ಲಿನ ಗುಂಡುಗಳ ಅಲಂಕರಣದಿಂದಾಗಿ ಕಂಬಗಳು ವಿಶಿಷ್ಟ ರಚನೆಗಳಂತೆ ಕಂಡುಬರುತ್ತವೆ. ಈ ಅಲಂಕರಣದಲ್ಲಿ ಸ್ಥಳೀಯ ಶೈಲಿಯ ಪ್ರಭಾವವನ್ನು ಗುರುತಿಸಬಹುದು. ಸಮೀಪದ ರುಮನಗುಡದಲ್ಲಿರುವ ನೀಲಕಂಠೇಶ್ವರ ದೇವಾಲಯವು ಮೂಲತಃ ವೈಷ್ಣವ ಸಂಪ್ರದಾಯದ ಉಗ್ರ ನರಸಿಂಹ ದೇವಾಲಯವೆಂದು ಗುರುತಿಸುವ ಪ್ರಯತ್ನ ಮಾಡಿದೆ ಹಾಗೂ ಭಗ್ನ ರಂಗಮಂಟಪದ ಕಂಬಗಳ ಮೇಲೂ ವೈಷ್ಣವ ಸಂಬಂಧವಾದ ಉಬ್ಬು ಶಿಲ್ಪಗಳನ್ನು ಕಾಣಬಹುದು. ಈ ದೇವಾಲಯದ ಕಂಬಗಳು ಅಲಂಕರಣದಲ್ಲಿ ರಾಮನಾಥ ದೇವಾಲಯದ ಕಂಬಗಳನ್ನು ಹೋಲುತ್ತವೆ.

ತಾಲ್ಲೂಕಿನ ದೇಗುಲಮಡಿಯಲ್ಲಿರುವ ಸಂಗಮೇಶ್ವರ ದೇವಾಲಯ ತ್ರಿಕೂಟ ರಚನೆಯದು. ಅಲ್ಲಲ್ಲಿ ಬಿರುಕು ಬಿಟ್ಟ ದೇವಾಲಯವು ತೀವ್ರ ಅಪಾಯದಲ್ಲಿದೆ. ನವರಂಗದ ಭುವನೇಶ್ವರಿಯಲ್ಲಿ ಅತ್ಯಂತ ಸುಂದರವಾದ ಕೆತ್ತನೆಯ ಅಲಂಕರಣವಿದೆ. ಅದೇ ರೀತಿ ತೊಲೆಗಳು, ಕಂಬಗಳು ಸಹ ಕೆತ್ತನೆಮಯವಾಗಿವೆ. ಎಲ್ಲಿಯೂ ಒಂದಿಂಚು ಸಪಾಟಾದ ಜಾಗವೆಂಬುದಿಲ್ಲ. ಅಂದರೆ ದೇವಾಲಯದ ಒಳಭಾಗ ಸಂಪೂರ್ಣವಾಗಿ ಕೆತ್ತನೆಯ ಅಲಂಕರಣದಿಂದ ತುಂಬಿ ಹೋಗಿದೆ. ಹಾಗಾಗಿ ಈ ಭಾಗದ ಜನಸಾಮಾನ್ಯರು ದೇಗುಲ ಮಡಿ ಗ್ರಾಮದ ಸಂಗಮೇಶ್ವರ ದೇವಾಲಯದ ಹೆಸರನ್ನು ಉದಾಹರಿಸಿ ಅದರ ಶಿಲ್ಪಕಲೆಯನ್ನು ಹೊಗಳುತ್ತಾರೆ. ಇದು ಚಾಲುಕ್ಯ ಶೈಲಿಯ ದೇವಾಲಯಕ್ಕೆ ಒಂದು ಉತ್ತಮ ನಿದರ್ಶನ. ಇನ್ನು ಮಿರಿಯಾಣದ ಬಸದಿ, ಚಂಗಟದ ಸೋಮೇಶ್ವರದೇವಾಲಯ. ಕೊಡ್ಲಿಯ ಭೋಗಲಿಂಗೇಶ್ವರ ಗುಡಿ ಮತ್ತು ಕೇಶವಾರದ ಮಲ್ಲಿಕಾರ್ಜುನದೇವಾಲಯ, ರಟಕಲ್ಲಿನ ಬಂಕನಾಥ ದೇವಾಲಯ, ಮತ್ತಿತರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ದೇವಾಲಯಗಳಾಗಿವೆ.

ತಾಲ್ಲೂಕಿನಾದ್ಯಂತ ಕಲ್ಯಾಣ ಚಾಲುಕ್ಯರ ಕಾಲದ ಬಿಡಿಶಿಲ್ಪಗಳು ಕಂಡುಬರುತ್ತವೆ. ಅಂದರೆ ಶಿಲ್ಪಗಳು ಅಲ್ಲಿ ದೇವಾಲಯಗಳಿದ್ದ ಸೂಚನೆಯನ್ನು ನೀಡುತ್ತವೆ. ಅನೇಕ ದೇವಾಲಯಗಳು ಮತ್ತು ಬಸದಿಗಳು ಕಣ್ಮರೆಯಾದರೂ ಅವುಗಳ ಶಿಲ್ಪಾವಶೇಷಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಅಲ್ಲಿ ದೇವಾಲಯಗಳಿದ್ದವೆಂದು ಪರಿಭಾವಿಸಿಕೊಂಡು ಅಧ್ಯಯನ ಕೈಗೊಳ್ಳಬಹುದಾಗಿದೆ. ಶಿಲ್ಪಗಳಲ್ಲಿ ಲಿಂಗ, ನಂದಿ, ಗಣೇಶ, ಸಪ್ತಮಾತೃಕೆಯರ ಶಿಲ್ಪಫಲಕ, ಜೈನಶಿಲ್ಪಗಳು ಮತ್ತು ನಾಗಶಿಲ್ಪಗಳು ಪ್ರಮುಖವಾಗಿವೆ. ಈ ಎಲ್ಲ ಶಿಲ್ಪಗಳು ಬಸಾಲ್ಟ್ ಶಿಲೆಯ ರಚನೆಗಳಾಗಿವೆ. ಶಿಲ್ಪಗಳ ರಚನೆಯಲ್ಲಿ ಸ್ಥಳೀಯ ಶೈಲಿಯ ಪ್ರಭಾವವನ್ನು ಗುರುತಿಸಬಹುದು. ತುಂಗಭದ್ರ ಕಣಿವೆಯಲ್ಲಿ ಕಂಡುಬರುವ ಇದೇ ಕಾಲದ ಶಿಲ್ಪಗಳ ರಚನೆ, ಸೌಂದರ್ಯ ಶೈಲಿ, ಅಲಂಕರಣ ಮೊದಲಾದ ವಿಷಯಗಳಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಚಿಂಚೋಳಿ ಪ್ರದೇಶದಲ್ಲಿ ಗಣೇಶ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ವಿಷ್ಣು, ಸೂರ್ಯ, ಚಂದ್ರ, ಭೈರವ, ಭೈರವಿ ಮತ್ತು ಸಪ್ತಮಾತೃಕೆಯರ ಶಿಲ್ಪಫಲಕಗಳು ಹೆಚ್ಚಾಗಿ ಕಂಡು ಬರುವುದಿಲ್ಲ. ಬಹುತೇಕ ಶಿವಾಲಯಗಳಲ್ಲಿ ಲಿಂಗ ಮತ್ತು ನಂದಿ ಶಿಲ್ಪಗಳು ಮಾತ್ರ ಕಂಡುಬರುತ್ತವೆ. ತಾಲ್ಲೂಕಿನಲ್ಲಿ ಒಟ್ಟು 150 ಗ್ರಾಮಗಳಿವೆ, 65 ಪ್ರಾಚೀನ ದೇವಾಲಯಗಳಿವೆ, ಇಲ್ಲಿರುವ ಮೂರ್ತಿಶಿಲ್ಪಗಳನ್ನು ಹಾಗೂ ಅಪ್ರಕಟಿತ ಶಾಸನಗಳನ್ನು ಸಹ ದಾಖಲಿಸಿಲ್ಲ. ಇವು ಸಾಮಾನ್ಯವಾಗಿ ಬಸವಣ್ಣ ಮತ್ತಿತರ ಗ್ರಾಮದೇವತೆಗಳ ದೇವಾಲಯಗಳಾಗಿವೆ. ವೈವಿಧ್ಯಮಯವಾದ ಭೌಗೋಳಿಕ ಲಕ್ಷಣಗಳಿಂದ ಕೂಡಿದ ಚಿಂಚೋಳಿ ಪ್ರದೇಶವು ಗಾಢವಾದ ಸಾಂಸ್ಕೃತಿಕ ಪರಿಸರವನ್ನು ಹೊಂದಿದೆ. (ಸಿಎಂ)

ಚಿಗುರು ಕಲಾ ಸಂಘಟನೆ: ಒಂದು ಸಾಂಸ್ಕೃತಿಕ ವೇದಿಕೆ. ಇದರ ಮೂಲ ಉದ್ದೇಶ ಮಕ್ಕಳಲ್ಲಿರುವ ಅದಮ್ಯ ಹಾಗೂ ಅಗೋಚರ ವಾದಂಥ ಪ್ರತಿಭೆಯನ್ನು ಗುರುತಿಸಿ, ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿರುವ ಹವ್ಯಾಸಗಳು, ವಿವಿಧ ಕ್ಷೇತ್ರಗಳಲ್ಲಿರುವ ಉತ್ಸಾಹವನ್ನು ಕಂಡುಕೊಂಡು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೂ ಕೂಡ ಪ್ರಮುಖವಾದವುಗಳೆಂದು ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವುದು.



'ಚಿಗುರು' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮೈಮ ಪ್ರದರ್ಶನ ನೀಡುತ್ತಿರುವ ಪುಟಾಣಿಗಳು

ಮಕ್ಕಳು ಕೇವಲ ಪುಸ್ತಕದ ಹುಳುಗಳಾಗದೆ ಇನ್ನೂ ಅನೇಕ ವಿಷಯಗಳು ಅಂದರೆ ಸಮಾಜದಲ್ಲಿ ಆಯಾ ಕ್ಷೇತ್ರಗಳಿಗೆ ಅನುಸಾರವಾಗಿ ಅವುಗಳದೇ ಆದ ಸ್ಥಾನಮಾನಗಳಿವೆ ಎಂಬುದನ್ನು ಮನವರಿಕೆ ಮಾಡಿಕೊಡುವುದು ಅಲ್ಲದೇ ಎಲ್ಲಾ ವರ್ಣ ಹಾಗೂ ಎಲ್ಲ ವರ್ಗದ ಜನರಿಗೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಲು ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ 2002ರಲ್ಲಿ ಗುರುರಾಜ ದತ್ತಾತ್ರೇಯರಾವ್ ಕುಲಕರ್ಣಿಯವರು ಗಣೇಶ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದರ ಅಂಗ ಸಂಸ್ಥೆಯೇ 'ಚಿಗುರು' ಚಿಣ್ಣರ ಸಾಂಸ್ಕೃತಿಕ ಸಂಘಟನೆ, ಅಶೋಕ ಎಸ್. ಶಟಕಾರ ಅವರು ಈ ಸಂಸ್ಥೆಯ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹಲವು ವರ್ಷಗಳಿಂದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗುಲಬರ್ಗಾ ಜಿಲ್ಲೆಯಲ್ಲಿ ನಡೆಸುತ್ತಾ ಮಕ್ಕಳಿಗಾಗಿ, ಚಿತ್ರಕಲಾ ಸ್ಪರ್ಧೆ, ಸಂಗೀತ ಸ್ಪರ್ಧೆ, ಕಥೆ ಹೇಳುವ ಸ್ಪರ್ಧೆ, ನಾಟಕಗಳ ಶಿಬಿರ ಹಾಗೂ ಸ್ಪರ್ಧೆ, ರಂಗೋಲಿ, ನೃತ್ಯ, ಈಜು ಸ್ಪರ್ಧೆಗಳು ಅಲ್ಲದೇ ದೈಹಿಕವಾಗಿ ಮಕ್ಕಳು ಬಲಿಷ್ಠವಾಗಿರಲು ಬಗೆ-ಬಗೆಯ ಹಳ್ಳಿಯ ಆಟಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಮತ್ತು ಈ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಹಿನ್ನೆಲೆಯಲ್ಲಿ ಅನೇಕ ಹೊರಾಂಗಣ ಆಟಗಳ ಸ್ಪರ್ಧೆಗಳನ್ನು ಏರ್ಪಡಿಸುತ್ತಾ ಬಂದಿದೆ. ಈ ಕಲಾ ಸಂಘಟನೆಯೂ ನಡೆಸುವ ಎಲ್ಲ ರೀತಿ ಕಾರ್ಯಕ್ರಮಗಳಿಗೆ, ಸ್ಪರ್ಧೆಗಳಿಗೆ, ಗುಲಬರ್ಗಾ ಜನರ ಪುಟಾಣಿ ಮಕ್ಕಳ ಹಾಗೂ ಮಾಧ್ಯಮದವರ ಸಹಕಾರ ತುಂಬಾ ಉತ್ತಮ ವಾಗಿದೆ.

ಚಿಗುರು ಕಲಾ ಸಂಘಟನೆಯ ಮೊಟ್ಟ ಮೊದಲನೆಯ ಕಾರ್ಯಕ್ರಮ 2005ರಲ್ಲಿ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಯಿತು, ಅದಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ಜಿಲ್ಲೆಯ ಎಲ್ಲಾ ಶಾಲೆಗಳ ಚಿತ್ರಕಲಾ ಶಿಕ್ಷಕರು ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿಯವರು ನೀಡಿದ ಸಹಕಾರ ಸ್ಮರಣೀಯವಾದದ್ದಾಗಿದೆ. ಜಿಲ್ಲಾಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಸುಮಾರು ಆರು ಸಾವಿರ ವಿದ್ಯಾರ್ಥಿಗಳು ಭಾಗವಹಿಸಿ ಸಂಘಟನೆಯ ಸ್ಫೂರ್ತಿಗೆ ಹಾಗೂ ಸಂಘಟನೆಯ ಕೆಲಸಕ್ಕೆ ನಾಂದಿ ಹಾಡಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರ, 400 ರೂಪಾಯಿಗಳು, ಬೆಳ್ಳಿ ಹಾಗೂ ಬಂಗಾರದ ಪದಕಗಳನ್ನು ನೀಡಿ ಮಕ್ಕಳ ಪ್ರೋತ್ಸಾಹಕ್ಕೆ ಪ್ರೇರಣೆ ನೀಡಿತು. ಅದೇರೀತಿ ಅತ್ಯುತ್ತಮ ಮೂರು ಕಲಾಕೃತಿಗಳಿಗೆ ಸೈಕಲಗಳ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

2006ರಿಂದ ಇಲ್ಲಿಯವರೆಗೆ ಸತತವಾಗಿ ಪ್ರತಿ ವರ್ಷವೂ ಚಿತ್ರಕಲಾ ಸ್ಪರ್ಧೆ ಬೇಸಿಗೆ ಶಿಬಿರ ಹಾಗೂ ಇನ್ನಿತರ ಅನೇಕ ಸ್ಪರ್ಧೆಗಳನ್ನು ಏರ್ಪಡಿಸುತ್ತ ಬಂದಿದೆ. 2006ರಲ್ಲಿ ನಡೆಸಿದ ಬೇಸಿಗೆ ಶಿಬಿರದಲ್ಲಿ ಸುಮಾರು 250 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮುಂದೆ 2007 ರಿಂದ 2010ರ ವರೆಗೆ ಬಹಳಷ್ಟು ಕಲಾಶಿಬಿರಗಳು ಆಯೋಜಿಸಿ ಪುಟಾಣಿಗಳಿಗೆ ಚಿತ್ರಕಲೆ, ಕ್ರಾಫ್ಟ್, ಸಂಗೀತ, ನೃತ್ಯ, ಕ್ಲೇಮಾಡಲಿಂಗ್, ಕೋಲಾಜ್ ಚಿತ್ರಗಳು, ರಂಗೋಲಿ, ಫ್ರೀಹ್ಯಾಂಡ್ ಡಿಜೈನ್, ನಾಟಕಗಳು, ರಂಗಗೀತೆಗಳು, ಥೀಯೇಟರ್ ಗೇಮ್ಸ್, ಈಜಾಡುವುದು, ಹಾಗೂ ಮಕ್ಕಳಿಗೆ ಅಚ್ಚು ಮೆಚ್ಚಿನ ಆಟಗಳ ಸ್ಪರ್ಧೆಗಳನ್ನು ಇಟ್ಟು, ಆಯಾ ವಿಷಯಗಳ ತಜ್ಞರನ್ನು ಬೇರೆ ಬೇರೆ ರಾಜ್ಯದ ಹಾಗೂ ಗುಲಬರ್ಗಾವನ್ನು ಒಳಗೊಂಡ ಪರಿಣಿತರನ್ನು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಗಿತ್ತು. ವಿಶೇಷವಾಗಿ ನೃತ್ಯ ಸಂಯೋಜನೆಗಾಗಿ ಸಿನಿಮಾಗಳಲ್ಲಿ ನೃತ್ಯ ಸಂಯೋಜಕರಾಗಿ ಕೆಲಸ ಮಾಡಿದ ಸೆಲ್ವ ರವರು ಅನೇಕ ಬಾರಿ ನಮ್ಮ ಶಿಬಿರಕ್ಕೆ ಆಗಮಿಸಿ ನೃತ್ಯ ಸಂಯೋಜನೆ ಮಾಡಿದ್ದಾರೆ. ರಂಗಕರ್ಮಿ ನಿರ್ದೇಶನ ಮಾಡಿದ್ದಾರೆ. ಶ್ರೀ ಲಿಂಗಪ್ಪ ಕೆ. ಶ್ರೀಶೈಲ ಘೂಳಿ, ಪ್ರೊ. ಆರ್.ಕೆ. ಹುಡಗಿ, ಸಂಗಯ್ಯ ಹಳ್ಳದಮಠ ಹೀಗೆ ಹಲವಾರು ಆತ್ಮೀಯರು ಈ ಕಲಾ ಸಂಘಟನೆಯ ಎಲ್ಲಾ ಕಾರ್ಯಕ್ರಮಗಳಿಗೆ ಬೆನ್ನುಲಬಾಗಿದ್ದಾರೆ.

ಅಶೋಕ ಶಟಕಾರ ಅವರು ಈ ಕಲಾ ಸಂಘಟನೆಯ ಜವಾಬ್ದಾರಿಯನ್ನು ಹೊತ್ತು ಇದರ ಸಂಪೂರ್ಣ ಏಳ್ಗೆಗಾಗಿ ಕ್ರಿಯಾಶೀಲರಾಗಿ ಮಕ್ಕಳೊಂದಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಒಟ್ಟಾರೆ ಸಾಂಸ್ಕೃತಿಕ ಕ್ಷೇತ್ರಕ್ಕೆ 'ಚಿಗುರು' ಕಲಾ

ಸಂಘಟನೆಯೂ ಯಾವಾಗಲೂ ತನ್ನನ್ನು ತಾನು ತೊಡಗಿಸಿಕೊಂಡು ಸಮಾಜಕ್ಕೆ ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಉತ್ತಮವಾದಂಥ ಭವಿಷ್ಯವನ್ನು ನೀಡುವಲ್ಲಿ ಶ್ರಮಿಸುತ್ತಿದೆ.

(ಬಿಕೆಎಲ್)

ಚಿತ್ರಕಲೆ ಮತ್ತು ಶಿಕ್ಷಣ: ಮಾನವನ ಜೀವನ ಮುಖ್ಯವಾಗಿ ತನು, ಮನ, ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾಕಾಲವು ಮಾಡು ತ್ತಿರುತ್ತದೆ. ತನುವಿಗೆ ಬೇಕಾದ ಅಶನ-ವಸತಿ ಸಂಸಾರಕ್ಕೆ ಬೇಕಾದ ಉಪಜೀವನದ ಮಾರ್ಗವನ್ನು, ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ, ಕಲೆ, ನೈತಿಕ ಮೌಲ್ಯಗಳನ್ನು ಕೊಡಬಲ್ಲದೆ ನಿಜವಾದ ಶಿಕ್ಷಣ (ಸಮಗ್ರ ಶಿಕ್ಷಣ). ಈ ರೀತಿಯ ವಿದ್ಯಾ ಪ್ರಸಾರದಿಂದ ಕರ, ಉರ, ಶಿರಗಳ ಸಂವರ್ಧನೆಯಾಗುವುದು. 'ಕರ' ವು ಕಾರ್ಯವನ್ನು 'ಉರ' ವು ಹೃದಯವನ್ನು 'ಶಿರ' ವು ಅರಿವನ್ನು ಸೂಚಿಸುತ್ತದೆ. ಶಿಕ್ಷಣವು ದೇಹ ಪುಷ್ಟಿಯನ್ನು, ಮನಕ್ಕೆ ವೈಶಾಲ್ಯವನ್ನು, ಆತ್ಮಕ್ಕೆ ಆನಂದವನ್ನು ಕೊಟ್ಟು ಅಂತಃಕರಣವನ್ನು ಅರಳಿಸಿ ಸದ್ಗುಣ ಗಳನ್ನು ಮೈಗೂಡಿಸಿಕೊಂಡು ಬರಲು ಪ್ರೇರಣೆಯನ್ನು ನೀಡು ತ್ತದೆ. ವಿದ್ಯಾವಂತರೆಲ್ಲರೂ ಕಲೆಯನ್ನು ಬಲ್ಲವರಲ್ಲ.. ಕಲೆಯನ್ನು ಬಲ್ಲವರೆಲ್ಲರೂ ವಿದ್ಯಾವಂತರಲ್ಲ. ಕಲೆಯೂ ಒಂದು ವಿದ್ಯೆ. ವಿದ್ಯೆಯಲ್ಲಿ ಪ್ರಕಾರಗಳನ್ನು ಮಾಡಿ ಕಲೆಯ ಅರ್ಥವನ್ನು ನಿರೂಪಿಸಿ, ಆಗ ಮಾತ್ರ ವಿದ್ಯೆಯನ್ನು ಕಲೆಯನ್ನಾಗಿ ಸ್ವೀಕರಿಸ ಬಹುದು. ಯಾವ ಕರ್ಮಗಳನ್ನು ಪೂರ್ಣವಾಗಿ ಮಾತು ಗಳಿಂದ ಹೇಳಲು ಶಕ್ಯವೋ ಅವು ವಿದ್ಯೆ; ವರ್ಣಗಳನ್ನು ಉಚ್ಚ ರಿಸಲು ಶಕ್ತರಲ್ಲದ ಮೂಕರೂ ಸಹ ಕಲಿಯಲು ಸಾಧ್ಯವಾದ ಚಿತ್ರ, ನೃತ್ಯಾದಿಗಳು ಕಲೆ; ಅಂತೆ ಕಲೆಯನ್ನು ಶಿಕ್ಷಣವಿಲ್ಲದ ಅವಿದ್ಯಾವಂತರಲ್ಲಿ, ಮೂಕನಲ್ಲಿ, ಕಿವುಡನಲ್ಲಿ ಕಾಣುತ್ತೇವೆ. ವಿದ್ಯೆ ಎಂಬುದು ಜ್ಞಾನದ ಹಸಿವು ಎನಿಸಿದರೆ ಕಲೆ ಎನ್ನುವುದು ವ್ಯಕ್ತಿ ವಿಶೇಷ ಪ್ರತಿಭೆಯೆನಿಸುವುದು. ಅವಿದ್ಯಾವಂತ ಕೂಡ ಕಲೆಯ ಹುಟ್ಟು, ಬೆಳವಣಿಗೆಗೆ ಕಾರಣವಾಗಬಲ್ಲ. ಏನಿದ್ದರೂ ಮನುಷ್ಯ ನಲ್ಲಿ ಸ್ಫುರಿಸುವ ನೂರಾರು ಭಾವನೆಗಳಿಗೆ ತನ್ನ ಕಲ್ಪನಾ ಚಾತುರ್ಯದಿಂದ ಹೊಸ ರೂಪಕೊಟ್ಟು ನಿರ್ಮಿಸಿದ್ದೇ ಕಲೆ ಎಂದು ಅರ್ಥ ನೀಡಬಹುದು.

ಆ ಭಾವಾಭಿವೃದ್ಧಿಗೆ ಮಾಧ್ಯಮ ಹುಡುಕಿಕೊಳ್ಳಲು ಪ್ರಯತ್ನ ಪಟ್ಟವನೇ ಕಲಾವಿದ. ಯಾವ ಯಾವ ಭಾವಗಳಿಗೆ ಹೊಸ ರೂಪಕೊಟ್ಟು ಸಂತೋಷಪಟ್ಟರೋ ಅವುಗಳನ್ನು ನಮ್ಮ ಪ್ರಾಚೀನ ಭಾರತೀಯರು ವಿದ್ಯೆಗಳೆಂದು, ಕಲೆಗಳೆಂದು ಸಮಾನ ರೀತಿಯಲ್ಲಿ ಕರೆದುಕೊಂಡು ಬಂದಿದ್ದಾರೆ. ಜೊತೆಗೆ ಮುಂದಿನ ಪೀಳಿಗೆಗೆ ಇವು ಉಳಿಯಲೆಂದು ಸಂಗ್ರಾಹ್ಯವಾಗಿ ಪರಂಪರೆ ಯಾಗಿ ಉಳಿಸಿಕೊಂಡು ಬಂದಿದ್ದಾರೆ. ಇವುಗಳನ್ನು ಕೆಲವರು 64 ವಿದ್ಯೆಗಳು, 64 ಕಲೆಗಳು ಎಂದು ಗುರುತಿಸಿದ್ದುದು ಕಂಡು ಬರುತ್ತದೆ. ಇಲ್ಲಿ ವಿದ್ಯೆಗಳೆಂದರೆ ಕಲೆಗಳು, ಕಲೆಗಳೆಂದರೆ ವಿದ್ಯೆ ಗಳು ಎಂಬ ಮನೋಭಾವ ಇರುವುದನ್ನು ಕಾಣುತ್ತೇವೆ. ಈ 64 ವಿದ್ಯೆಗಳಲ್ಲಿ ಅಥವಾ 64 ಕಲೆಗಳಲ್ಲಿ ಚಿತ್ರಕಲೆಯೂ ಒಂದು ಅಧ್ಯಯನದ ವಿಷಯವಾಗಿತ್ತು ಎಂಬುದು ಗಮನಾರ್ಹ ಅಂಶ.

ಇಂದಿನ ಆಧುನಿಕ ಅರ್ಥ ಪರಿಕಲ್ಪನೆಯಲ್ಲಿ ಚಿತ್ರಕಲೆ ಮತ್ತು ವಿದ್ಯೆ (ಶಿಕ್ಷಣ) ಬೇರೆ ಬೇರೆಯಾಗಿ ಕಂಡುಬಂದರೂ ಕೂಡ ಇವು ಪರಸ್ಪರ ಪೂರಕ ಮತ್ತು ಪ್ರೇರಕವಾದವುಗಳಾಗಿವೆ. ಶಿಕ್ಷಣ ಬುದ್ಧಿ ಗಮ್ಯವಾದರೆ ಚಿತ್ರಕಲೆ ಭಾವಗಮ್ಯವಾದುದು. ಬುದ್ಧಿ, ಭಾವಗಳ ಸಮತೋಲನದಿಂದ ಮಕ್ಕಳಲ್ಲಿ ಒಳ್ಳೆಯ ವ್ಯಕ್ತಿತ್ವ ನಿರ್ಮಾಣ ಸಾಧ್ಯ. ಚಿತ್ರಕಲೆಯಿಂದ ಶಿಕ್ಷಣವು ಕಳೆಗೊಂಡರೆ, ಶಿಕ್ಷಣದಿಂದ ಚಿತ್ರಕಲೆ ಬಲಶಾಲಿಯಾಗುತ್ತದೆ. ಶಿಕ್ಷಣವು ಇಲ್ಲಿ ದೇಹವಾದರೆ, ಚಿತ್ರಕಲೆಯು ಅದರೊಳಗಿನ ಚೈತನ್ಯ. ಚೈತನ್ಯವಿಲ್ಲದ ದೇಹದಂತೆ ಚಿತ್ರಕಲೆಯಿಲ್ಲದ ಶಿಕ್ಷಣವು ಮೃತಪ್ರಾಯವಾಗುತ್ತದೆ. ಚಿತ್ರ ಕಲೆಯೂ ಶಿಕ್ಷಣದ ಒಂದು ಸಚೇತನ ಅಂಗ. ಹೂವಿನೊಳಗಿನ ಕಂಪಿನಂತೆ ಶಿಕ್ಷಣದೊಳಗೆ ಚಿತ್ರಕಲೆ ಸಾಮರಸ್ಯವನ್ನು ಹೊಂದಿದೆ. ಚಿತ್ರಕಲೆಯ ಸಂಪರ್ಕ ಇಲ್ಲದ ಶಿಕ್ಷಣ ಒಂದು ರೀತಿಯಲ್ಲಿ ಸತ್ವಹೀನವಾಗುತ್ತದೆ. ರಸಾತ್ಮಕವಾದ ಈ ಚಿತ್ರಕಲೆ ಶಿಕ್ಷಣಕ್ಕೆ ಸತ್ವವನ್ನು, ಸೊಬಗನ್ನು ನೀಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಯಾವುದೇ ಅಡಿಪಾಯ ಭವ್ಯ ಮಹಡಿ ಯನ್ನು ಸದೃಢಗೊಳಿಸುತ್ತದೆ. ಅಡಿಪಾಯಕ್ಕೆ ಮಹಡಿಯ ಭವ್ಯತೆ ಶರಣು ಎನ್ನುತ್ತದೆ. ಹಾಗೆಯೇ ಇಲ್ಲಿ ಶಿಕ್ಷಣದ ಅಡಿಪಾಯಕ್ಕೆ ಚಿತ್ರಕಲೆ ಚೇತೋಹಾರಿ ಯಾಗಿದೆ. ಇದನ್ನರಿತ ಪಾಶ್ಚಿಮಾತ್ಯ ದೇಶಗಳು ಕಲೆಯ ಮೂಲ ಶಿಕ್ಷಣವನ್ನು ಪ್ರಾರಂಭಿಸಿವೆ. (Art through Education) ನಮ್ಮ ದೇಶದ ಶಿಕ್ಷಣದಲ್ಲಿ ಕಲೆಗೆ ಇನ್ನೂ ಆ ಸ್ಥಾನ ಸಿಕ್ಕಿಲ್ಲ. ಆಡಿ, ಮಾಡಿ, ನೋಡಿ, ಕೇಳಿ, ಓದಿ, ಅರಿಯು ವುದೇ ಶಿಕ್ಷಣ. ಈ ಎಲ್ಲ ಕ್ರಿಯೆಗಳು ಜೀವನಾನುಭವದಿಂದ ದೊರೆಯುವಂಥವುಗಳು. ಚಿತ್ರಕಲೆಗೂ ಈ ಜೀವನಾನುಭವವೇ ತಳಹದಿ. ಸತ್ಯ, ಸತ್ವ, ಸೌಂದರ್ಯ ಇದರಲ್ಲಿಯ ವಿಶೇಷ. ಅಂತೆಯೇ, ಚಿತ್ರಕಲೆಯೂ ಆಕರ್ಷಕವಾದುದು ಮತ್ತು ಮೋಹಕವಾದುದು ಆಗಿದೆ. ಶಿಕ್ಷಣ ಮತ್ತು ಕಲೆಗಳ ಸುಮಧುರ ಬಾಂಧವ್ಯವೇ ವ್ಯಕ್ತಿತ್ವ ವಿಕಾಸಕ್ಕೆ ದಾರಿ ಎಂಬುದು ಬಹುಪಾಲು ವಿದ್ವಾಂಸರ ಅಭಿಮತವಾಗಿರುವುದು ಇವುಗಳ ಪರಸ್ಪರ ಸಂಬಂಧವನ್ನು ತಿಳಿಸುತ್ತದೆ.

ಚಿತ್ರಕಲೆ ಜೀವನದ ಕೈಗನ್ನಡಿಯಷ್ಟೇ ಅಲ್ಲ. ಅದು ನಮ್ಮ ಬದುಕಿನ ಮುನ್ನಡೆಗೂ ಕಾರಣವಾಗಬಲ್ಲದು. ಒಂದು ರೀತಿ ಯಲ್ಲಿ ಚಿತ್ರಕಲೆ ಜೀವನದ ಪ್ರತಿಬಿಂಬ ಅಷ್ಟೇ ಅಲ್ಲ, ಅದು ಗತಿಬಿಂಬವೂ ಹೌದು. ಧರ್ಮ, ಮತ, ತತ್ವಗಳ ಪ್ರಚಾರಕ್ಕಾಗಿ, ಸಂಸ್ಕೃತಿಯ ಪ್ರಸಾರಕ್ಕಾಗಿ, ಜೀವನದರ್ಶನಕ್ಕಾಗಿ ಶಿಕ್ಷಣದಲ್ಲಿ ವಿಜ್ಞಾನ ತಂತ್ರಜ್ಞಾನಕ್ಕಿಂತಲೂ ಚಿತ್ರಕಲೆಯ ಪಾತ್ರವು ತುಂಬಾ ಅವಶ್ಯಕವಿದೆ. ಜನಸಾಮಾನ್ಯರಿಗೆ ಸುಲಭವಾಗಿ ಅನುಭವ ವಾಗಬಲ್ಲ ಕಲಾಮಾಧ್ಯಮಗಳಲ್ಲಿ ಚಿತ್ರಕಲೆ ಪ್ರಮುಖವಾದುದು. ಇದಕ್ಕೆ ಕಾಲ, ದೇಶ, ಭಾಷೆ, ಪ್ರದೇಶಗಳನ್ನು ಮೀರಿದ ವ್ಯಾಪ್ತಿಯಿದೆ. ಹೀಗಾಗಿ ಚಿತ್ರಕಲೆಯನ್ನು ಅಂತಾರಾಷ್ಟ್ರೀಯ ಭಾಷೆ ಯೆಂದು ಕರೆಯಲಾಗುತ್ತದೆ. 'ಚಿತ್ರಕಲೆಯಿಲ್ಲದ ಶಿಕ್ಷಣ ಕಿಟಕಿ ಗಳಿಲ್ಲದ ಮನೆಯ ಹಾಗೆ' ಎಂಬ ಮಾತು ಚಿತ್ರಕಲೆ ಹಾಗೂ

ಶಿಕ್ಷಣದ ಸಾಮರಸ್ಯದ ಕುರಿತಾಗಿರುವ ಮಾತಾಗಿದೆ. ಬರ್ನಾರ್ಡ್ ಶಾ ಹೇಳುವಂತೆ, 'ನೋಯಿಸದೆ ವಿದ್ಯೆ ನೀಡಬಲ್ಲ ಶಿಕ್ಷಕನೆಂದರೆ ಕಲೆಯು ಮಾತ್ರ' ಎನ್ನುವುದರಲ್ಲಿ ಔಚಿತ್ಯವಿದೆ. ಕಲೆಯು ಮಾನವ ನನ್ನು ಅತಿಮಾನವನನ್ನಾಗಿ ಮಾಡುವ ಸಾಧನವಾಗಿದೆ. ಅಷ್ಟೇ ಅಲ್ಲ, ಒಂದು ಚಿತ್ರಕ್ಕೆ ಸಾವಿರ ಶಬ್ದಗಳ ಶಕ್ತಿಯಿದೆ. ಹೀಗಾಗಿ ಅದೊಂದು ದೃಶ್ಯಕಾವ್ಯವೆನ್ನಬಹುದು.

ಶಿಕ್ಷಣದ ಮೂಲ ಉದ್ದೇಶ ಓದು, ಬರಹ, ಲೆಕ್ಕವನ್ನು ಅವಲಂಬಿಸಿದರೆ, ಚಿತ್ರಕಲೆಯ ಮೂಲಧ್ಯೇಯ ಆನಂದ, ಸಂತೋಷವನ್ನು ಕೊಡುವಂಥದ್ದಾಗಿದೆ. ಹೃದಯಕ್ಕೆ, ಮನಸ್ಸಿಗೆ ಉತ್ತಮ ಸಂಸ್ಕಾರವನ್ನು ಕೊಡುವ ಗುಣವನ್ನು ಈ ಕಲೆಯು ಹೊಂದಿದೆ. ಈ ದಿಶೆಯಲ್ಲಿ ನಮ್ಮ ದೇಶದ ಶಿಕ್ಷಣ ಸನ್ನದ್ಧವಾಗ ಬೇಕಾಗಿದೆ.

ಸೃಜನಾತ್ಮಕ ಗುಣಗಳನ್ನು ವೃದ್ಧಿಸುವುದು ಶಿಕ್ಷಣದ ಒಂದು ಗುರಿಯಾದರೆ, ಈ ಸೃಜನಾತ್ಮಕತೆಯನ್ನು ಹೊಂದಿರುವ ಕಲೆ ಚಿತ್ರಕಲೆ. ಹೀಗಾಗಿ ಕಲೆ ಶಿಕ್ಷಣದ ಒಂದು ಪ್ರಮುಖ ಪ್ರಕ್ರಿಯೆ ಯಾಗಿ ಕಂಡುಬರುತ್ತದೆ. ಕಲೆ ಯಾವುದೇ ದೇಶದ ಆಯಾ ಸಂಸ್ಕೃತಿಯ ಬಹುಮುಖ್ಯವಾದ ಅಂಗ. ಅದು ಜನರ ಜೀವನ ವನ್ನು ಹಲವಾರು ರೀತಿಯಲ್ಲಿ ಪ್ರಭಾವಿತಗೊಳಿಸುವ ಗುಣ ವಿಶೇಷತೆಯನ್ನು ಹೊಂದಿದೆ. ಸಂಸ್ಕೃತಿಯ ಬಹು ಮುಖ್ಯವಾದ ಈ ಅಭಿವ್ಯಕ್ತಿ ಶಿಕ್ಷಣದಲ್ಲಿ ಸೇರಬೇಕಾದುದು ಕ್ರಮಪ್ರಾಪ್ತ.

ರೂಸೋ, ಜಾನ್ ಡ್ಯೂಯಿ, ಪ್ರೊ. ಸಜಕ್, ಎಂಡ್ರೊ, ಖುತ್ ಗ್ರಿಪ್ಟ್, ಪಾಲ್ ಟೊರೆನ್ಸ್, ಪ್ರೊಬೆಲ್, ಡಾ. ಮಾರಿಯಾ ಮಾಂಟೋಸರಿ, ಹರ್ಬರ್ಟರೀಡ್, ಡಿಕ್ ಫೀಲ್ಡ್‌ರಂತಹ ಅನೇಕ ಪಾಶ್ಚಿಮಾತ್ಯ ವಿದ್ವಾಂಸರು ಶಿಕ್ಷಣದಲ್ಲಿ ಚಿತ್ರಕಲೆಯ ಮಹತ್ವದ ಕುರಿತು ಚಿಂತನೆ ಮಾಡಿದ್ದಾರೆ. ನಮ್ಮ ದೇಶದ ಡಾ. ಆನಂದ ಕುಮಾರಸ್ವಾಮಿ, ರವೀಂದ್ರನಾಥ ಟ್ಯಾಗೋರ, ಅರವಿಂದರು, ಗಾಂಧೀಜಿ ಮುಂತಾದವರು ಸಹ ಚಿತ್ರಕಲೆಯ ಅಧ್ಯಯನ ತುಂಬಾ ಮಹತ್ವದ್ದೆಂದು ಶಿಕ್ಷಣದಲ್ಲಿ ಅದಕ್ಕೆ ವಿಶೇಷ ಸ್ಥಾನ ಕಲ್ಪಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ಬಂದ ಅನೇಕ ಶೈಕ್ಷಣಿಕ ಆಯೋಗಗಳು ಸಹ ಚಿತ್ರಕಲೆಯನ್ನು ಶಿಕ್ಷಣದಲ್ಲಿ ಅಳವಡಿಸುವ ಕುರಿತು ಶಿಫಾರಸ್ಸು ಗಳನ್ನು ಮಾಡಿವೆ. 1902ರ ಪ್ರಾಥಮಿಕ ಶಿಕ್ಷಣದಲ್ಲಿ ಆಯೋಗ, ಲಾರ್ಡ್ ಕರ್ಜನ್‌ನ ಶಿಫಾರಸ್ಸು, 1913ರ ಶಿಕ್ಷಣ ನೀತಿ, 1935ರ ಕೇಂದ್ರ ಸಲಹಾ ಮಂಡಳಿ, ಗಾಂಧೀಜಿಯವರ ವಾರ್ಧಾ ಶಿಕ್ಷಣ ನೀತಿ, 1944ರ ಸಾರ್ಜಟ ಆಯೋಗ, 1952ರ ಡಾ. ಲಕ್ಷ್ಮಣಕುಮಾರ್ ಮೊದಲಿಯಾರ ವರದಿ, 1964ರ ಕೊಠಾರಿ ಆಯೋಗಗಳು ಚಿತ್ರಕಲೆ ಪಠ್ಯ ವಸ್ತುವಿನಲ್ಲಿ ಬರುವುದರ ಕುರಿತು ಸಾಕಷ್ಟು ಶಿಫಾರಸ್ಸುಗಳನ್ನು ಮಾಡಿದರೂ ಸಹ ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲಿ ಈ ವಿಷಯಕ್ಕೆ ಸಿಗಬೇಕಾಗದ ಮಹತ್ವ ಸಿಗದೇ ಇರುವುದು ತುಂಬಾ ಶೋಚನೀಯ ಸಂಗತಿ ಎಂದೇ ಹೇಳ ಬೇಕಾಗುತ್ತದೆ.

1986ರ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿ 'ಕಲೆ ಹಾಗೂ ಸೃಜನಾತ್ಮಕ ಅಭಿವ್ಯಕ್ತಿ ಎಂದು ಶಾಲಾ ಹಂತದಲ್ಲಿ ಚಿತ್ರಕಲಾ ಪಠ್ಯವನ್ನು ತಯಾರಿಸಿದ್ದು ಒಂದು ಒಳ್ಳೆಯ ಉಪಕ್ರಮವೆಂದೇ ಹೇಳಬೇಕು. ಅಮೇರಿಕೆಯ ಗೆಟಿ ಕಲಾಶಿಕ್ಷಣ ಸಂಸ್ಥೆಯ ಕಾರ್ಯ ವನ್ನು ಇಲ್ಲಿ ಅವಶ್ಯವಾಗಿ ನೆನಪಿಸಲೇಬೇಕು. ಚಿಕ್ಕ ಮಕ್ಕಳ ಶಿಕ್ಷಣ ದಲ್ಲಿ ಚಿತ್ರಕಲೆ ವಹಿಸುವ ಪಾತ್ರದ ಕುರಿತು ಇದು ದೇಶದಾದ್ಯಂತ ಸಮೀಕ್ಷೆಯೊಂದನ್ನು ಕೈಗೊಂಡಿತು ಮತ್ತು ಆ ಅಧ್ಯಯನದಿಂದ ಕಂಡುಬಂದ ಅಂಶವೆಂದರೆ ಅಲ್ಲಿ ಹೊಸ ಪಠ್ಯ ವಸ್ತುವನ್ನು ಚಿತ್ರಕಲೆಯ ಹಿನ್ನೆಲೆಯಲ್ಲಿ ರಚಿಸುವ ಸಲಹೆ ಮಾಡಿತು. ಅದರಿಂದ ನಿರ್ದಿಷ್ಟ ಜ್ಞಾನವಿಭಾಗವನ್ನವಲಂಬಿಸಿದ ಕಲಾ ಶಿಕ್ಷಣದ ಪಠ್ಯಕ್ರಮ ಜಾರಿಗೆ ಬಂದಿತು. ಇದನ್ನು Discipline based Art Education ಎಂದು ಕರೆಯಲಾಗಿದೆ. ಶಿಸ್ತಿಗೆ ಅವರು ಕೊಡುವ ಅರ್ಥ ಕಲೆಯ ಮೌಲ್ಯೀಕರಣ. ಕಲಾ ವಿಮರ್ಶೆ, ಕಲಾ ಇತಿಹಾಸ ಹಾಗೂ ಸೌಂದರ್ಯಾನುಭೂತಿಯ ಅಧ್ಯಯನ ವೆಂದು. ಈ ಸಂಸ್ಥೆಯು ತನ್ನ ವರದಿಯಲ್ಲಿ ನಾಲ್ಕು ಮುಖ್ಯ ಅಂಶಗಳನ್ನು ಸೂಚಿಸಿದೆ. 1. ಉತ್ಪಾದನೆ 2. ವಿಮರ್ಶೆ 3. ಇತಿಹಾಸ ಮತ್ತು ಸಂಸ್ಕೃತಿ 4. ಸೌಂದರ್ಯಾನುಭೂತಿ ಎಂದು. ಚಿತ್ರಕಲಾ ಶಿಕ್ಷಣದಿಂದ ಮಕ್ಕಳಲ್ಲಿ ಅವರ ಕಲಿಕಾ ಸಾಮರ್ಥ್ಯಗಳು, ಮನೋಧೋರಣೆಗಳನ್ನು ಸುಲಭವಾಗಿ ಶಾಲಾ ಹಂತದಲ್ಲಿ ಬೆಳೆಸಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ ವಿಚಾರ ಸಂಕಿರಣ, ಕಮ್ಮಟಗಳು ಮತ್ತು ಕಲಾ ಶಿಕ್ಷಕರಿಗೆ ತರಬೇತಿ ಕೊಡುವುದರ ಮೂಲಕ ಹೊಸ ಆಂದೋಲನ ನಡೆಯುತ್ತಿದೆ. ಆಸ್ಟ್ರೇಲಿಯಾ ದೇಶ ತನ್ನ ಶಾಲಾ ಶಿಕ್ಷಣದಲ್ಲಿ ಕಲೆ ಮತ್ತು ಸೃಜನಾತ್ಮಕ ಅಭಿವ್ಯಕ್ತಿಗಿಂತ ಮುಂದೆ ಹೋಗಿ ಸೌಂದರ್ಯಾನು ಭೂತಿ ಹಾಗೂ ಮೆಚ್ಚುಗೆಗೆ ಒತ್ತು ಕೊಡುವಂಥಹ ರೀತಿಯಲ್ಲಿ ಪಠ್ಯವಸ್ತುವಿನಲ್ಲಿ ತಂದಿದೆ. ಬ್ರಿಟನ್ ಹಾಗೂ ಫಿನ್‌ಲ್ಯಾಂಡಿನ ಶಾಲಾ ಹಂತದ ಪಠ್ಯವಸ್ತುವನ್ನು ಗಮನಿಸಿದಾಗ ಅಲ್ಲಿಯೂ ಚಿತ್ರಕಲಾ ಶಿಕ್ಷಣವನ್ನು 4 ರೀತಿಯಲ್ಲಿ ಕೊಡಲಾಗುತ್ತಿದೆ. 1. ಅಭಿವ್ಯಕ್ತಿ ಹಾಗೂ ಉತ್ಪಾದನೆ 2. ಪ್ರತ್ಯಕ್ಷ ಜ್ಞಾನ 3. ವಿಶ್ಲೇಷಣೆ ಮತ್ತು ವಿಮರ್ಶೆ 4. ಕಲೆ ಮತ್ತು ಇತಿಹಾಸ ಹೀಗೆ ಪಾಶ್ಚಿಮಾತ್ಯ ದೇಶಗಳು ಚಿತ್ರಕಲೆಗೆ ಕೊಟ್ಟ ಪ್ರಾಮುಖ್ಯತೆ ಅನನ್ಯವಾದುದು.

ಭಾರತದಲ್ಲಿಯೂ 1986ರಲ್ಲಿ ಬಂದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲೆ ಹಾಗೂ ಸೃಜನಾತ್ಮಕ ಅಭಿವ್ಯಕ್ತಿಗೆ ಶೇ. 15ರ ಸ್ಥಾನವನ್ನು ಪಠ್ಯಕ್ರಮದಲ್ಲಿ ನೀಡಿದೆ. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಇಲ್ಲಿ ಚಿತ್ರಕಲೆಯ ವಿಷಯ ಪಠ್ಯದಲ್ಲಿ ಬಂದಿರುವುದು ಗಮನಾರ್ಹ ಅಂಶ. ಆದರೆ ಈ ವಿಷಯವನ್ನು ಕಲಿಸುವ ಶಿಕ್ಷಕರು ಪ್ರಾಥಮಿಕ ಹಂತದ ಶಿಕ್ಷಣ ದಲ್ಲಿ ಇಲ್ಲದಿರುವುದು ಅಷ್ಟೇ ವಿಪರ್ಯಾಸದ ಸಂಗತಿ ಕೂಡ. ಬರೀ ಪಠ್ಯಕ್ರಮದಲ್ಲಿ ಈ ವಿಷಯ ಬಂದರೆ ಸಾಲದು. ಅದು ಸಮರ್ಪಕವಾಗಿ ಮಕ್ಕಳಿಗೆ ತಲುಪುವಂತಾಗಬೇಕು. ಇದನ್ನು ಶಿಕ್ಷಣ ತಜ್ಞರು ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಶಿಕ್ಷಕರು ಗಮನಿಸಬೇಕಾಗದ ಅಂಶ.

ಚಿತ್ರಕಲೆಯನ್ನು ನಮ್ಮ ಶಿಕ್ಷಣದಲ್ಲಿ ಅಳವಡಿಸುವ ಉದ್ದೇಶ, ಚಿತ್ರಕಲಾ ಶಿಕ್ಷಣದಿಂದ ಸಾಮಾಜಿಕವು, ಆಧ್ಯಾತ್ಮಿಕವು,

ಸೌಂದರ್ಯಾನುಭೂತಿ ಪರವು ಆದ ತ್ರಿವರ್ಗವನ್ನು ಗಳಿಸಿಕೊಳ್ಳ ಬಹುದು. ಸಾಮಾನ್ಯವೂ ಸಾಮಾಜಿಕವೂ, ಸಮತೋಲನಕ್ಕೂ ಪ್ರಯೋಜನಕಾರಿಯಾಗಿದೆಯಷ್ಟೇ ಅಲ್ಲ, ವ್ಯಕ್ತಿಯು ಸಮಾಜ ಜೀವಿಯಾಗಿ, ಸಮಾಜ ಪ್ರಯೋಜಕನಾಗಿ ಇರಲು ಸಹಾಯ ಮಾಡುತ್ತದೆ. ಚಿತ್ರಕಲೆಯಲ್ಲಿ ಮಕ್ಕಳು ಪಾಲ್ಗೊಳ್ಳುವುದರಿಂದ ಆಗುವ ಪ್ರಸನ್ನತೆ, ಸಂತೋಷ, ಶಿಸ್ತು, ಸಹಕಾರ ಮುಂತಾದ ಶೈಕ್ಷಣಿಕ ಪ್ರಯೋಜನಗಳಲ್ಲದೆ, ಅನುವಂಶೀಯತೆಯ ಸೌಲಭ್ಯ, ಸೌಕರ್ಯಗಳನ್ನುಳ್ಳ ಮಕ್ಕಳಿಗೆ ವಿಶೇಷ ಪ್ರಾವೀಣ್ಯವನ್ನು ಗಳಿಸಿ ಕೊಳ್ಳಲು ಇದು ಸ್ಫೂರ್ತಿಯನ್ನು ಪ್ರವೇಶವನ್ನು ಒದಗಿಸಿ ಕೊಡುತ್ತದೆ. ಹೀಗೆ ಚಿತ್ರಕಲೆ ಮತ್ತು ಶಿಕ್ಷಣ ಒಂದಕ್ಕೊಂದು ನಿಕಟವಾದ ಪೂರಕ ಸಹ ಸಂಬಂಧವನ್ನು ಹೊಂದಿವೆ. ಅಲ್ಲದೆ ಅವುಗಳ ಬಾಂಧವ್ಯ ಒಂದನ್ನೊಂದು ಬಿಡಿಸಲಿಕ್ಕೆ ಬಾರ ದಂತಹದು. (ಎಸ್‌ಸಿಪಿ)

ಚಿತ್ರಗಾರ ಎಚ್.ಎನ್.: ಹೈದ್ರಾಬಾದ್ ಕರ್ನಾಟಕ ಕಂಡ ಅಪರೂಪದ ಕಲಾವಿದ ಸಾಹಿತಿ, ಸಂಶೋಧಕ, ಗಮಕಿ, ಶಿಕ್ಷಕ. ಕಿತ್ತು ತಿನ್ನುವ ಬಡತನದಲ್ಲೂ ಎಲ್ಲವನ್ನೂ ಸಾಧಿಸಿ ಎರಡೆರಡು ಸ್ನಾತಕೋತ್ತರ ಪದವಿಗಳನ್ನು, ಅದಕ್ಕೂ ಮಿಗಿಲಾಗಿ ಡಾಕ್ಟರೇಟ್ ಪದವಿಯನ್ನು ಪಡೆದು ತಮ್ಮ ಜೀವಂತಿಕೆಯನ್ನು ಮೆರೆದ ಕಲಾವಿದ.

ಇವರ ತಂದೆ ನಿಂಗಣ್ಣ ಗ್ರಾಮೀಣ ಜನರ ಜೀವನಾಡಿ ಯಾದ ಕೃಷಿಗೆ ಬೇಕಾಗುವ ಕಟ್ಟಿಗೆಯ ಬಂಡಿ (ಚಕ್ಕಡಿ) ತಯಾರಿಸುವಲ್ಲಿ ನಿಷ್ಣಾತರು. ಇವರ ಕಕ್ಕ ಹಾಗೂ ದೊಡ್ಡಪ್ಪ ನವರು ಚಿತ್ರಕಲೆ, ಶಿಲ್ಪಕಲೆ ಹಾಗೂ ತಾಂತ್ರಿಕತೆಯಲ್ಲಿ ತಜ್ಞರು. ಅಂದಿನ ನಿಜಾಮ ಸರಕಾರಕ್ಕೆ ಹಾಗೂ ಮದ್ರಾಸ ಸರಕಾರಕ್ಕೆ (ಅಧಿಕೃತ) ಬಂದೂಕು ತಯಾರಿಸಿಕೊಡುತ್ತಿದ್ದ ಕಾರಣ ಇವರ ಮನೆಗೆ ಆಗ ಭರ್ಜರಿ ಪೋಲಿಸ ಕಾವಲು ಇತ್ತು. ಇಂಥ ಉದ್ಯೋಗ ಪ್ರಿಯ 01.06.1956 ರಂದು ಜನಿಸಿದರು. ಬಹು ಚಿಕ್ಕಂದಿನಿಂದಲೇ ತಂದೆಯ ಉದ್ಯೋಗಕ್ಕೆ ಸಹಾಯಕರಾಗಿ ಬಂಡಿ ಕುಂಭಗಳ ಜಂತ್ರಿ ಹಿಡಿಯುವಲ್ಲಿ ಬಂದ ಎದೆನೋವನ್ನು ನುಂಗಿಕೊಂಡು ಬೆಳೆದರು. ಏನೇನೂ ಅನುಕೂಲತೆಗಳಿಲ್ಲದ ಮನೆ ವಯಸ್ಸಿಗೆ ಮೀರಿದ ಕಠಿಣ ಪರಿಶ್ರಮ, ಬಡತನ ಇವೆಲ್ಲ ಇವರಿಗೆ ಮರೆಯದ ಅನುಭವ ತಂದಿವೆ. ಇಂಥ ಬಡತನದಲ್ಲೇ ಬಾಲ್ಯ ಸಾಗಿದಾಗ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಮುಂದೆ ಯಲಬುರ್ಗಾ ತಾಲ್ಲೂಕಿನ ಹಿರೆಬಂಕಲಗುತ್ತಿಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆದು ಪಿ.ಯು.ಸಿ.ಯನ್ನು ಯಲಬುರ್ಗಾ ದಲ್ಲಿ ಪೂರ್ತಿಗೊಳಿಸಿದರು. ಚಿತ್ರರಚನೆಯಲ್ಲಿ ತಮ್ಮ ಬಡತನದ ನೋವು ಮರೆಯುತ್ತಿದ್ದರು. ಇವರ ಜೀವನಕ್ಕೆ ಹೊಸ ತಿರುವು ತಂದಿದ್ದು ಈ ಚಿತ್ರಕಲೆ. ಕುಷ್ಟಗಿ ಮಠದಲ್ಲಿ ಇವರ ಕಲಾಕೃತಿ ಗಳನ್ನು ನೋಡಿದ ಹಿತೈಶಿಗಳ ಸಹಾಯದಿಂದ ಗದುಗಿನ ಪ್ರಸಿದ್ಧ ಶ್ರೀ ತೋಂಟದಾರ್ಯರ ಮಠದಲ್ಲಿ ಆಶ್ರಯ ಪಡೆದರು. ಇಲ್ಲಿಂದ ಇವರ ಭಾಗ್ಯದ ಬಾಗಿಲು ತೆರೆಯಿತು.

ಶ್ರೀಮಠದಲ್ಲಿ ಜನಸೇವೆಗಿಂತ 'ದನಸೇವೆ' ಯನ್ನೇ ಸಂತಸ ದಿಂದ ಮಾಡುತ್ತಾ ಮಠದ ಪಕ್ಕದಲ್ಲಿದ್ದ ಕಲಾಗುರು ಟಿ.ಪಿ. ಅಕ್ಕಿಯವರ ವಿಜಯ ಕಲಾಮಂದಿರದಲ್ಲಿ ಚಿತ್ರಕಲೆಯ ಅಧ್ಯಯನ ಪ್ರಾರಂಭಿಸಿದರು. ಏಕಾಗ್ರತೆಯಿಂದ ಚಿತ್ರಕಲೆಯನ್ನು ಅಭ್ಯಸಿಸಿ ಆರ್ಟ್ ಮಾಸ್ಟರ್ ಪರೀಕ್ಷೆಯಲ್ಲಿ ಪಾಸಾದರು (1974). ಇದೇವೇಳೆ ಜೆ.ಟಿ. ಮಹಾವಿದ್ಯಾಲಯದಲ್ಲಿ ಕಲಿತ ಬಿ.ಎ ಪದವಿಯು ಇವರ ಮುಂದಿನ ಉನ್ನತ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿತು. ಈಶಾನ್ಯ ಕರ್ನಾಟಕದ ಸಾಂಸ್ಕೃತಿಕ ರಂಗಕ್ಕೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡು ಇವರು ಸಲ್ಲಿಸುತ್ತಿರುವ ನಿಷ್ಕಾಮ ಸೇವೆ ಪ್ರಶಂಸನೀಯವಾದದ್ದು.

ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತ್ತಕೋತ್ತರ ಪದವಿ. ಪ್ರಾಚೀನ ಭಾರತ ಚರಿತ್ರೆ ಮತ್ತು ಸಂಸ್ಕೃತಿ ವಿಷಯದಲ್ಲಿ ಹೈದ್ರಾಬಾದ್ ಉಸ್ಮಾ ನಿಯಾ ವಿಶ್ವವಿದ್ಯಾಲಯದಿಂದ ಸ್ನಾತ್ತಕೋತ್ತರ ಪದವಿ. ಉರ್ದು ವಿನಲ್ಲಿ ಡಿಪ್ಲೊಮಾ. ಚಿತ್ರಕಲೆಯಲ್ಲಿ ಆರ್ಟ್ ಮಾಸ್ಟರ್ ಪದವಿ ಹಾಗೂ 'ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ಒಂದು ಅಧ್ಯಯನ' ವಿಷಯ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ 2005 ಪಡೆದುಕೊಂಡು ತಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಂಡರು.

ನವದೆಹಲಿಯ ಸಿ.ಸಿ.ಆರ್.ಬಿ. ಸಾಂಸ್ಕೃತಿಕ ಕೇಂದ್ರದಲ್ಲಿ ಭಾರತೀಯ ಲಲಿತಕಲೆಗಳ ವಿಮರ್ಶೆ ಮತ್ತು ಪ್ರಸಾರ, ಭಾರತ ದಲ್ಲಿ ಗೊಂಬೆಯಾಟಗಳ ಪರಂಪರೆ ಹಾಗೂ ವಿವಿಧ ಗೊಂಬೆ ಗಳ ತಯಾರಿ (puppet) ಕುರಿತು ತರಬೇತಿ, ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಶ್ರೀ. ಬಿ.ಎಂ. ಶ್ರೀ ಪ್ರತಿಷ್ಠಾನ,-ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇಲ್ಲಿ ಪ್ರಾಚೀನ ಹಸ್ತಪ್ರತಿ ಸಂಗ್ರಹ-ಸಂರಕ್ಷಣೆ ಹಾಗೂ ಸಂಶೋಧನೆ ಕುರಿತು ಅನೇಕ ತರಬೇತಿಗಳನ್ನು ಪಡೆದಿದ್ದಾರೆ. ರಾಯಚೂರು ಜಿಲ್ಲೆಯ ಐತಿಹಾಸಿಕ ಪರಂಪರೆ (ಶಿಲ್ಪ, ವಾಸ್ತುಶಿಲ್ಪ, ಹಸ್ತಪ್ರತಿ) ಗಳನ್ನು ಕುರಿತು ಉತ್ತಮ ಸಂಶೋಧನೆಗಳನ್ನು ಕೈಗೊಂಡಿದ್ದಾರೆ. ಇವರು ಕೇವಲ ಕಲಾ ವಿದರು-ಸಂಶೋಧಕರು ಆಗಿರದೆ ಸಾಹಿತಿಗಳೂ ಆಗಿದ್ದಾರೆ. ಅನೇಕ ಕಥಾ ಸಂಕಲನ, ಕವನ ಸಂಕಲನ, ನಾಟಕ, ರೂಪಕಗಳು ಅಲ್ಲದೆ ಪ್ರಸಿದ್ಧ ಪತ್ರಿಕೆಗಳಿಗೆ ವೈಚಾರಿಕ ಲೇಖನಗಳನ್ನು ಬಹು ದೊಡ್ಡ ಸಂಖ್ಯೆಯಲ್ಲಿ ಬರೆದಿದ್ದಾರೆ. ಹಿಂದಿ ಹಾಗೂ ಆಂಗ್ಲ ಭಾಷೆಯ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಈಶಾನ್ಯ ಕರ್ನಾಟಕದ ಕ್ರಿಯಾಶೀಲ ಸಾಹಿತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರು ಸಾಹಿತಿಯಾದಂತೆ ಉತ್ತಮ ಉಪನ್ಯಾಸಕರು ಹಾಗೂ ಗಮಕ ವ್ಯಾಖ್ಯಾನಕಾರರೂ ಹೌದು. ಸಾರ್ವಜನಿಕ ಶಿಕ್ಷಣ ಇಲಾಖೆಯ ಹೊಸಶಿಕ್ಷಣ ನೀತಿ, ಸರ್ವಶಿಕ್ಷಣ ಅಭಿ ಯಾನ, ಶಿಕ್ಷಣದಲ್ಲಿ ಚಿತ್ರಕಲೆಯ ಮಹತ್ವ ಮೊದಲಾದ ಅನೇಕ ವಿಷಯಗಳ ಕುರಿತು ರಾಯಚೂರು ಜಿಲ್ಲಾ ಪ್ರೌಢ ಶಾಲಾ

ಶಿಕ್ಷಕರಿಗೆ ಮತ್ತು ಔರಂಗಾಬಾದ (ಮಹಾರಾಷ್ಟ್ರ), ಚೆನ್ನೈ, ಕಾಂಚಿಪುರಂ (ತಮಿಳುನಾಡು), ನವದೆಹಲಿಯ ಸಾಂಸ್ಕೃತಿಕ ಕೇಂದ್ರದ ಕಾರ್ಯಾಗಾರಗಳಲ್ಲಿ ವಿದ್ವತ್‌ಪೂರ್ಣ ಉಪನ್ಯಾಸ ಗಳನ್ನು ಕೊಟ್ಟಿದ್ದಾರೆ. ಪ್ರಾಚೀನ ಕಾವ್ಯಗಳ ಆರಾಧಕರಾದ ಇವರು ತಮ್ಮ ಪಾಂಡಿತ್ಯವನ್ನು ಗಮಕಿಗಳ ರೂಪದಲ್ಲಿ ಪ್ರದರ್ಶಿಸುತ್ತಿರುವುದು ಪ್ರಶಂಸನಾರ್ಹ. ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ, ಹರಿಹರ, ರಾಘವಾಂಕರಂಥ ಶ್ರೇಷ್ಠ ಕವಿಗಳ ಕೃತಿಗಳನ್ನು ಅಲ್ಲದೆ ಶಿವಶರಣರ ವಚನಗಳನ್ನು, ಡಿ.ವಿ.ಜಿ. ಕುವೆಂಪು, ಕನಕದಾಸರ ಪ್ರಸಿದ್ಧ ರಚನೆಗಳನ್ನು ಹೃದಯಂಗಮವಾಗಿ ಗಮಕ ವ್ಯಾಖ್ಯಾನಗಳಿಂದ ವಿವರಿಸುವ ವಿದ್ವಾನರಿವರು. ಇಂಥ ನೂರಾರು ವ್ಯಾಖ್ಯಾನಗಳನ್ನು ನಾಡಿನ ತುಂಬಾ ಸಂಚರಿಸಿ ಕೊಟ್ಟಿದ್ದಾರೆ.

ಹೆಚ್ಚಾಗಿ ಜಲವರ್ಣಗಳಲ್ಲಿಯೇ ಚಿತ್ರಿಸುವ ಇವರು ವಾಶ್ ಅಂಡ್ ಟೆಂಪೆರಾ ವಿಧಾನದಲ್ಲಿ ದಶಾವತಾರ, ಪೌರಾಣಿಕ ವಿಷಯಗಳನ್ನಾಧರಿಸಿದ ಫಿಗರೇಟಿವ್ ಕಲಾಕೃತಿಗಳನ್ನು ರಚಿಸು ವಲ್ಲಿ ಹೆಚ್ಚಿನ ಆಸಕ್ತಿ ಉಳ್ಳವರು. ಎಲ್ಲ ವಿವರಗಳನ್ನೊಳಗೊಂಡ ತದ್ರೂಪ-ರಿಯಾಲಿಸ್ಟಿಕ್-ಶೈಲಿಯ ಚಿತ್ರಗಳನ್ನು ಸೂಕ್ಷ್ಮ ಬಾಹ್ಯರೇಖೆಗಳಿಂದ ಪೂರ್ತಿಗೊಳಿಸಿದಾಗ ಸಿಗುವ ಪರಿಣಾಮ ವಿಶೇಷವಾದುದು. ದಟ್ಟ ಕೆಂಪು, ನೀಲಿ, ಗಾಢ ವರ್ಣ ಸಂಯೋಜನೆಯ ಇವರ ಚಿತ್ರಗಳು ತಕ್ಷಣ ಗಮನ ಸೆಳೆಯು ವಂಥವು. ಇವರು ರಚಿಸುವ ಲೈನ್ ಗ್ರಾಫಿಕ್ ಡ್ರಾಯಿಂಗ್ ಗಳಂತೂ ವೈಶಿಷ್ಟ್ಯ ಪೂರ್ಣವಾಗಿವೆ. ಕಪ್ಪು ಬಿಳುಪು ವರ್ಣ ಗಳಲ್ಲಿ ಅತಿ ಕಾಳಜಿಯೊಂದಿಗೆ ಚಿತ್ರಿಸುವ ಪರಿ ಅನನ್ಯವಾದುದು.

ನವಿರಾದ ರೇಖೆಗಳಲ್ಲಿನ ಶಕ್ತಿಯುತ ಚಲನೆ, ತಾಂತ್ರಿಕ ಶೈಲಿಯನ್ನು ನೆನಪಿಗೆ ತರುವ ಜಾಮಿತಿ ಆಕೃತಿಗಳೊಂದಿಗೆ ಮಾನವರ, ಕೀಟಗಳ ವಿವಿಧ ಪ್ರಾಣಿಗಳನ್ನು ಸಮೀಕರಿಸಿ ಸಂಯೋಜಿಸುವ ಚಾಣಾಕ್ಷತನ, ಹಳೆಯದರೊಂದಿಗೆ-ಹೊಸ ವಿಷಯವನ್ನು ಮಿಶ್ರಣ ಮಾಡಿ ಚಿತ್ರಿಸಿದ ರೀತಿ ಎಲ್ಲವೂ ಚಿತ್ರಗಾರರ ನೈಪುಣ್ಯಕ್ಕೆ ಸಾಕ್ಷಿಯಾಗಿವೆ. ಪಠ್ಯಪುಸ್ತಕ ಇಲಾಖೆಯ ಪಠ್ಯಗಳಿಗೆ ಸಾಂದರ್ಭಿಕ ಚಿತ್ರಗಳನ್ನು, ಪುಸ್ತಕಗಳ ವರ್ಣರಂಜಿತ ಮುಖಪುಟಗಳನ್ನು ಹಾಗೂ ತಾವು ಬರೆದ ಎಲ್ಲ ಪುಸ್ತಕಗಳಿಗೆ ವಿವರಣಾತ್ಮಕ ಚಿತ್ರಗಳನ್ನು ಚಿತ್ರಗಾರ ಬಹುದೊಡ್ಡ ಪ್ರಮಾಣದಲ್ಲಿ ಚಿತ್ರಿಸಿದ್ದಾರೆ. ತಮ್ಮ ಕಲಾಕೃತಿಗಳ ಪ್ರದರ್ಶನಗಳನ್ನು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ, ಜಿಲ್ಲಾಮಟ್ಟದ ಸಮಾರಂಭಗಳಲ್ಲಿ ಏರ್ಪಡಿಸಿದ್ದಾರೆ. ರಾಯಚೂರಿನ ಪಂ. ತಾರಾನಾಥರು ಸ್ಥಾಪಿಸಿದ ಹಮ್‌ದರ್ದ್ ಪ್ರೌಢ ಶಾಲೆಯಲ್ಲಿ 04.09.1978 ರಿಂದ ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸುತಿದ್ದಾರೆ. (ಎಂಕೆ)

ಚಿತ್ರಶೇಖರ ವಿ. ಮಾರ್ಪಳ್ಳಿ: ಸಮಕಾಲೀನ ಚಿತ್ರಕಲಾವಿದರಲ್ಲಿ ತಮ್ಮದೇ ಶೈಲಿ, ಕಲ್ಪನೆ, ತಂತ್ರಗಾರಿಕೆ, ಅನುಭವ ಹಾಗೂ ಅಭಿವ್ಯಕ್ತಿಯ ವಿಶಿಷ್ಟ ವಿಧಾನದೊಂದಿಗೆ ಗಮನಾರ್ಹವಾಗಿ ಗುರುತಿಸಿಕೊಳ್ಳುತ್ತಿರುವ ಚಿತ್ರಕಲಾವಿದ. 1970 ಅಗಸ್ಟ್ 3 ರಂದು ಕಲಬುರ್ಗಿಯಲ್ಲಿ ಜನಿಸಿದರು.



ಇವರು 1991ರಲ್ಲಿ ಕಲಬುರ್ಗಿಯ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ದಿಂದ ಪೇಂಟಿಂಗ್‌ನಲ್ಲಿ ಪದವಿ, 1994ರಲ್ಲಿ ಗ್ರಾಫಿಕ್ ನಲ್ಲಿ ಗುಲಬರ್ಗಾ ವಿಶ್ವ ವಿದ್ಯಾಲಯದಿಂದ ಸ್ನಾತ ಕೋತ್ತರ ಪದವಿ, 1996ರಲ್ಲಿ ಬರೋಡ ವಿಶ್ವವಿದ್ಯಾಲಯ ದಿಂದ ಮ್ಯೂರಲ್ ಪೇಂಟಿಂಗ್‌ನಲ್ಲಿ ಸ್ನಾತ ಕೋತ್ತರ ಡಿಪ್ಲೊಮಾ ಪದವಿ ಯನ್ನು ಪಡೆದುಕೊಂಡರು.

ಇವರು 1990ರಲ್ಲಿ ವೆಂಕಟಪ್ಪ ಆರ್ಟ್‌ಗ್ಯಾಲರಿ, 1992ರಲ್ಲಿ ಜರುಗಿದ 5ನೆಯ ರಾಷ್ಟ್ರೀಯ ಕಲಾಮೇಳ, 1996ರಲ್ಲಿ ಬರೋಡಾ ಕೋರ್ ಗ್ಯಾಲರಿ, 2011ರಲ್ಲಿ ಚಿತ್ರಕಲಾ ಪರಿಷತ್ ಬೆಂಗಳೂರು ಸೇರಿದಂತೆ ಅನೇಕ ಕಡೆ ಜರುಗಿದ ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ತಮ್ಮ ಕಲೆಯಲ್ಲಿ ಪಕ್ವತೆ ಯನ್ನು, ಕೌಶಲ್ಯವನ್ನು ಪಡೆದಿದ್ದಾರೆ.

ಇವರು ಕರ್ನಾಟಕ ಲಲಿತಕಲಾ ಅಕಾಡೆಮಿ, ಎ.ಐ.ಎಫ್. ಎ.ಸಿ.ಎನ್, ನವದೆಹಲಿ, ಎಸ್.ಸಿ.ಝಡ್.ಸಿ ನಾಗಪುರ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಕಲಾ ಮಹೋ ತ್ಸವ, ಆಲ್ ಇಂಡಿಯಾ ಪ್ರಿಂಟ್ ಟುಡೆ ಕರ್ನಾಟಕ, ಲಲಿತಕಲಾ ಅಕಾಡೆಮಿ, ಅಖಿಲಭಾರತ ದಸರಾ ಪ್ರದರ್ಶನ, ಮೈಸೂರು, ಮುಂತಾದ ಕಡೆ ಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಕಲಾಕೃತಿ ಗಳಿಂದ ವಿಮರ್ಶಕರ ಗಮನ ಸೆಳೆದಿರುವರು.

ಇವರು 1986ರಲ್ಲಿ ಹಂಪಿಯ ಲ್ಯಾಂಡ್‌ಸ್ಕೇಪ್, 1990ರಲ್ಲಿ ಬೆಂಗಳೂರಿನ ಕರ್ನಾಟಕ ಕಲಾಮೇಳ, 1996ರಲ್ಲಿ ಬರೋಡಾದ ಟೆರ್ರಾಕೋಟಾ, 2009ರಲ್ಲಿ ಅಹ್ಮದಾಬಾದ್ 'ಡಿಜೈನ್ ಥಿಂಕಿಂಗ್ ವರ್ಕಶಾಪ್' ಸೇರಿದಂತೆ ಪ್ರಮುಖ ಶಿಬಿರಗಳಲ್ಲಿ ಭಾಗವಹಿಸಿ ದ್ದಾರೆ.

ಇವರು 1988ರಲ್ಲಿ ಗುಲಬರ್ಗಾ ಕಲಾಮಹೋತ್ಸವ, 1989-90ರಲ್ಲಿ ಮೈಸೂರಿನ ಅಖಿಲ ಭಾರತ ದಸರಾ ಪ್ರದರ್ಶನ, 1991ರಲ್ಲಿ ಪಾಂಡಿಚೇರಿಯ ಮನಕಲಾಯಿ ಅಕಾಡೆಮಿ, 1993 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, 1994ರಲ್ಲಿ ಬಾಂಬೆ ಆರ್ಟ್ ಸೊಸೈಟಿ ನಡೆಸಿದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಇವರು ಇತ್ತೀಚಿಗೆ ತಮ್ಮ ಕಲಾಕೃತಿಗಳಿಗೆ ಬಳಸಿ ಕೊಳ್ಳು ತ್ತಿರುವ ವಸ್ತು ಸೇಬುಹಣ್ಣು, ಆಕರ್ಷಿಸಲ್ಪಟ್ಟಿರುವ, ಕಾಡುತ್ತಿರುವ ವಸ್ತು! ಅವರು ಸೇಬನ್ನು ಬಳಸಿಕೊಂಡು ನೂರಾರು ಚಿತ್ರಕೃತಿ ಗಳನ್ನು ರಚಿಸಿರುವರು. ತಮ್ಮ ಅನೇಕ ಕಲ್ಪನೆಗಳನ್ನು ಸೇಬಿನ




'ಪ್ರಕೃತಿ ಚಿತ್ರ' ಇಂಕ್ ಮಾಧ್ಯಮ

ಆಕೃತಿಯಲ್ಲಿ ಹಿಡಿದಿಡುವಲ್ಲಿ, ವಿವಿಧ ಸಂಯೋಜನೆಗಳಲ್ಲಿ ಅಭಿವ್ಯಕ್ತಿಸುವಲ್ಲಿ ವಿಶಿಷ್ಟ ಪ್ರತಿಭೆ ತೋರಿದ್ದಾರೆ. ಈ ಚಿತ್ರ ಕೃತಿಗಳದ್ದೇ ಇತ್ತೀಚಿಗೆ ಪ್ರದರ್ಶನಗಳನ್ನು ಏರ್ಪಡಿಸಿ ವಿಮರ್ಶಕರ, ಕಲಾರಸಿಕರ ಗಮನ ಸೆಳೆದಿದ್ದಾರೆ. ಈ ಕಲಾವಿದ ಪ್ರಸ್ತುತ ಕೋಮಂಬತ್ತೂರಿನ ಚಿನ್ಮಯಿ ಅಂತಾರಾಷ್ಟ್ರೀಯ ರೆಸಿಡೆನ್ಸಿಯಲ್ ಶಾಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

(ಎಂಎಸ್‌ಕೆ)

ಚಿದಾನಂದ ಎಸ್. ಸುತಾರ: ಇವರು ಗುಲಬರ್ಗಾ ಜಿಲ್ಲೆ ಗರೂರ ಗ್ರಾಮದಲ್ಲಿ 1977 ಜುಲೈ 04 ರಂದು ಜನಿಸಿದರು. ಇವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿಯನ್ನು ದಿ ಆರ್ಟ್ ಇಂಟೆಗ್ರೇಷನ್ ಹಾಗೂ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಎಂ.ಎಂ.ಕೆ. ಕಾಲೇಜನಲ್ಲಿ ಪೂರೈಸಿದರು.

ಇವರು ಮಹಾವಿದ್ಯಾಲಯದ ಕಲಾಮಹೋತ್ಸವ ಪ್ರಶಸ್ತಿ, ಆಲ್ ಇಂಡಿಯಾ ಅವಂತಿಕಾ ಆರ್ಟ್ ಪ್ರದರ್ಶನ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾದಿಂದ ರಾಜ್ಯೋತ್ಸವ ಪುರಸ್ಕಾರ ಹೀಗೆ ಅನೇಕ ಪ್ರಶಸ್ತಿಗಳ ಪಡೆದುಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ತಿಂಗಳ ಚಿತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಚಿತ್ರಕಲಾ ಶಿಬಿರ, ವಚನ ಮಹೋತ್ಸವ, ಕಲಾನಿಕೇತನ ಕಲಬುರ್ಗಿ ಕಂಪು ಕಲಾಶಿಬಿರ ಹೀಗೆ ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. 2006 ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಧನ ಸಹಾಯದಡಿಯಲ್ಲಿ ಹೈದ್ರಾಬಾದನ ಸ್ಟೇಟ್ ಗ್ಯಾಲರಿಯಲ್ಲಿ ಏಕವ್ಯಕ್ತಿ ಪ್ರದರ್ಶನ ಏರ್ಪಡಿಸಿದ್ದಾರೆ. ಹಾಗೂ 2007 ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕಲಾಶಾಲೆ ದಾವಣಗೆರೆಯಲ್ಲಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ.



ಇವರು ಅನೇಕ ಗುಂಪು ಪ್ರದರ್ಶನಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಗುಲಬರ್ಗಾ, ಬಿಜಾಪುರ, ಅಲಹಬಾದ್, ಬೆಂಗಳೂರು, ಚಿತ್ರಕಲಾ ಪರಿಷತ್ತಗಳಲ್ಲಿ ಗುಂಪು ಪ್ರದರ್ಶನ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಕಲಾ ಮಹೋತ್ಸವ ಗುಲಬರ್ಗಾ, ಕೆ.ಕೆ. ಹೆಬ್ಬಾರ



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಫೌಂಡೇಶನ್ ಬೆಂಗಳೂರು, ಹೀಗೆ ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿ ಈ ಭಾಗದ ಯುವ ಕಲಾವಿದರಲ್ಲಿ ಅತ್ಯಂತ ಪ್ರತಿಭಾನ್ವಿತ ಕಲಾವಿದರಾಗಿದ್ದಾರೆ.

(ಎಎಸ್‌ಎಸ್)

ಚೆ

ಚೆನ್ನಕೇಶವ ಪುಣ್ಯಕ್ಷೇತ್ರ: (ಮಣೂರ) ಐತಿಹಾಸಿಕವಾಗಿ ಹಾಗೂ ಪೌರಾಣಿಕವಾಗಿ ಪ್ರಸಿದ್ಧಿ ಪಡೆದಿರುವ ಕಲಬುರ್ಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಮಣೂರ ಗ್ರಾಮದ ಮೂಲ ಹೆಸರು ಮಣಿಪುರ. ಹಿಂದೆ ಅಗ್ರಹಾರವಿದ್ದ ಇಲ್ಲಿ ವೇದಾಧ್ಯಯನ ನಡೆಯುತ್ತಿತ್ತು ಎಂದು ತಿಳಿದು ಬರುತ್ತದೆ. ಆದ್ದರಿಂದಲೇ ಇಲ್ಲಿ ಧ್ರುವರಾಜಕರಾರ್ಚಿತ ಶ್ರೀ ಚೆನ್ನಕೇಶವ ದೇವಾಲಯ ಮತ್ತು ಯತಿಶ್ರೇಷ್ಠರಾದ ಶ್ರೀ ವೇದೇಶತೀರ್ಥರು, ಶ್ರೀ ಮಾಧವ ತೀರ್ಥರು ಮತ್ತು ಶ್ರೀ ಗೋವಿಂದತೀರ್ಥರು ಮೂಲ ಬೃಂದಾನ ವನಗಳು ಇಲ್ಲಿನ ಭೀಮಾರಥಿ ನದಿ ತೀರದಲ್ಲಿವೆ. ಆದ್ದರಿಂದಲೇ ಇದು ಆಧ್ಯಾತ್ಮ ಜಗತ್ತಿನ ಅತ್ಯಂತ ಪವಿತ್ರವಾದ ತೀರ್ಥಕ್ಷೇತ್ರ ವೆನಿಸಿಕೊಂಡಿದೆ.

ಆದ್ಯ ಕುಲಸಂಜಾತರಿಗೆ ಇದು ಸ್ಫೂರ್ತಿಯ ಮಹಾತಾಣ. ಹಿರಿಯರಾದ ಶೇಷಾದ್ರಿಗಳಿಗೆ ಆಶ್ರಯವಿತ್ತು. ಅವರ ಸುಪುತ್ರ ರಾದ ವರದರಾಜರಿಗೆ ಆಧ್ಯಾತ್ಮ ರಕ್ಷಾಕವಚವನ್ನು ತೊಡಿಸಿ ಆಶೀರ್ವದಿಸಿದ ಪಾವನ ಭೂಮಿ ಇದು. ಇಂದು ಭಾರತದ ಯಾವ ಪ್ರಾಂತದಲ್ಲಿಯೇ ವಾಸವಾಗಿದ್ದರೂ ಆದ್ಯ ವಂಶಜರು ಜೀವನದಲ್ಲಿ ಒಂದು ಸಲವಾದರೂ ತಮ್ಮ ತವರು ನೆಲದ ಧೂಳಿ ಯನ್ನು ಶಿರೋಧಾರಣ ಮಾಡಲು ಇಲ್ಲಿಗೆ ಬಂದೇ ಬರುತ್ತಾರೆ. ಆದ್ಯರ ಕುಲದೈವನಾದ ಶ್ರೀ ವರದರಾಜಸ್ವಾಮಿಯ ಸೇವೆ ಹಾಗೂ ದರ್ಶನ ಮಾಡಿದಾಗಲೇ ಮೊದಲು ಈ ಗ್ರಾಮದ ಇತಿಹಾಸ ಹಾಗೂ ಇಲ್ಲಿರುವ ವಿಭೂತಿಪುರುಷರ ಚರಿತ್ರೆ ತಿಳಿದು ಕೊಳ್ಳುವುದು ಅಗತ್ಯ.

ಭೀಮಾರಥಿ ನದಿ ದಂಡೆಯಲ್ಲಿರುವ ಈ ಅಗ್ರಹಾರವು ಹಿಂದೆ ಹೆಸರುವಾಸಿ. ಈ ಅಗ್ರಹಾರದಲ್ಲಿ ಮೂರು ಸಾವಿರ ಶ್ರೋತ್ರೀಯ ಬ್ರಾಹ್ಮಣರು ಆಶ್ರಯ ಹೊಂದಿದ್ದರು. ಮುನ್ನೂರು ಯತಿಶ್ರೇಷ್ಠರು ಈ ನೆಲದಲ್ಲಿ ತಪಗೈದು ಸಿದ್ಧಿ ಪಡೆದರೆಂದು ಸತ್ಯನಾಥ ವಿಜಯದಿಂದ ತಿಳಿದುಬರುತ್ತದೆ. ಈ ಗ್ರಾಮವು ಕೆಲಕಾಲ ವಿಜಾಪುರದ ಆದಿಲ್ ಶಾಹಿಯ ಅಧೀನದಲ್ಲಿ ಮತ್ತು ಕೆಲಕಾಲ ಪೇಶ್ವೆಯವರ ಆಡಳಿತ, ಅನಂತರ ಹೈದ್ರಾಬಾದ ನಿಜಾಮರ ಪ್ರಭುತ್ವ ಹೊಂದಿತ್ತು ಎಂದು ತಿಳಿದು ಬರುತ್ತದೆ.

ಅತ್ಯಂತ ಎತ್ತರದ ಪ್ರದೇಶದ ಮೇಲೆ ಪೂರ್ವ-ಪಶ್ಚಿಮ ದಿಸೆಯಲ್ಲಿ ಬೆಳೆದಿರುವ ಈ ಗ್ರಾಮವು ಭೀಮಾರಥಿ ನದಿ ತೀರ ದಲ್ಲಿದ್ದು, ಕೋಟೆಕೊತ್ತಲಗಳಿಂದ ಹಾಗೂ ಸುತ್ತಲೂ ಫಲವತ್ತಾದ ಕಪ್ಪು ಎರೆಭೂಮಿ ಹರಡಿದೆ. ಭೀಮಾಶಂಕರದಿಂದ ಹರಿದು ಬಂದಿರುವ ಭೀಮಾರಥಿಯು, ಪಂಢರಪುರ, ಅಗರಖೇಡ ಮುಂತಾದ ಪುಣ್ಯಸ್ಥಳಗಳನ್ನು ದಾಟಿ, ವೇದ ವಿದ್ಯಾ ಪ್ರವಾಹ ವನ್ನು ಕೂಡಿಕೊಳ್ಳಲು ಆತುರದಿಂದ ಬರುತ್ತಿದೆಯೇನೋ ಎಂಬಂತೆ ತೋರುತ್ತದೆ. ಈ ಭೀಮಾರಥಿಯು ಮಣಿಪುರದ ಜನತೆಗೆ ಚಿರಂತನಶ್ರಯ ವಿತ್ತವಳು. ಭೀಮಾರಥಿಯ ಪ್ರವಾಹವು ಸ್ಫಟಿಕದಂತೆ ಶುಭ್ರ ಹಾಗೂ ಅತ್ಯಂತ ಮಧುರತೆಯಿಂದ ಕೂಡಿದೆ. ಈ ಪ್ರವಾಹದಲ್ಲಿಯೇ ಆದ್ಯರ ಹಿರಿಯರು ಭಾರತದ ಸಕಲ ತೀರ್ಥಗಳನ್ನು ಕಂಡು ಪುನೀತರಾಗಿದ್ದಾರೆ.

ಮಣಿಪುರವು ಒಂದು ವಿದ್ಯಾಪೀಠವಾಗಿತ್ತು. ಇದೊಂದು ಆಶ್ರಮವಿದ್ದಂತೆ. ಅಂದರೆ ಜ್ಞಾನ, ವಿಜ್ಞಾನ, ಸಂಯಮ, ಉದ್ಯೋಗ ಮತ್ತು ಕರ್ಮಾದಿಗಳ ಕೇಂದ್ರಸ್ಥಾನ ಎಂಬ ಅರ್ಥ. ಇದು ಶಾಸ್ತ್ರಾರ್ಥ ವಿಚಾರ ವಿನಿಮಯದ ಕೇಂದ್ರವಾಗಿತ್ತು. ದೇಶದ ನಾನಾ ಭಾಗಗಳಿಂದ ಈ ಆಶ್ರಮದಲ್ಲಿ ಜ್ಞಾನಾರ್ಜನೆ ಹೊಂದಲು ಜ್ಞಾನ ಪಿಪಾಸುಗಳು ಇಂತಹ ಕ್ಷೇತ್ರಗಳನ್ನು ಹುಡುಕಿ ಕೊಂಡು ಬರುತ್ತಿದ್ದರು. ಇಡೀ ಗ್ರಾಮವೇ ಒಂದು ಕುಟುಂಬ ವೆಂಬಂತೆ ಜೀವಿಸುತ್ತಿದ್ದರು. ಇಲ್ಲಿ ಶೈವ, ವೈಷ್ಣವ ಎಂಬ ಮೇಲು-ಕೀಳು ಭೇದವಿಲ್ಲದೇ ಆಧ್ಯಾತ್ಮ ಪ್ರಪಂಚದಲ್ಲಿ ಸಮತಾ ಭಾವ ಮನೆಮಾಡಿತ್ತು. ಇದರಿಂದಾಗಿ ಇಡೀ ಪರಿಸರ ಆನಂದ ಮಯವಾಗಿ ಇರುತ್ತಿತ್ತು. ಸಂಸಾರ ಸಾಗರದಲ್ಲಿ ಬಿದ್ದು ಬಳಲುತ್ತ, ದಾರಿಕಾಣದ ಪಥಿಕನಿಗೆ ಇಲ್ಲಿಯ ತಪಸ್ವಿಗಳ ಸಹವಾಸದಿಂದ ಜೀವನದಲ್ಲಿ ಉಲ್ಲಾಸ ಪ್ರಾಪ್ತಿಯಾಗುತ್ತಿತ್ತು. ಇಲ್ಲಿಯ ವಿದ್ಯಾರ್ಥಿ ಗಳು ವಿದ್ಯಾರ್ಜನೆ ಹೊಂದಿ, ನಂತರ ಪ್ರಚಾರಕ್ಕಾಗಿ ಭಾರತದ ಮೂಲೆ ಮೂಲೆಗಳಿಗೆ ಸಂಚರಿಸುತ್ತಿದ್ದರು.

ಈ ಗ್ರಾಮವು ವೈಷ್ಣವೋಪಾಸನೆಯ ಪ್ರತೀಕವಾಗಿ ಶ್ರೀ ಚೆನ್ನಕೇಶವ ಮಂದಿರ, ಶಿವೋಪಾಸನೆಯ ಪ್ರತೀಕವಾಗಿ ಶಂಕರನ ದೇವಾಲಯ, ತೀರ್ಥಂಕರ್ ಮಂದಿರ, ಗ್ರಾಮಜೀವಿಗಳ ದೇವತೆ ಯಾದ ಯಲ್ಲಮ್ಮದೇವಿ ಮಂದಿರಗಳು ಇಂದಿಗೂ ಉಳಿದು ಕೊಂಡು ಬಂದಿವೆ. ಅಲ್ಲದೇ ಶ್ರೀ ಯಾದವಾರ್ಯರು ವಾಸ ಮಾಡುತ್ತಿದ್ದ ಮನೆ ಹಾಗೂ ಕೃಷ್ಣದ್ವೈಪಾಯನವರು ತಪಸ್ಸು ಮಾಡುತ್ತಿದ್ದ ಗುಹೆ ಮೊದಲಾದವುಗಳನ್ನು ಇಂದಿಗೂ ಕಾಣ ಬಹುದು.

ಈ ಗ್ರಾಮಕ್ಕೆ ಮಣಿಪುರವೆಂದು ಹೆಸರು ಬರಲು ಪ್ರಮುಖ ಕಾರಣ, ಮಣಿಪೂರದ ಮಣಿಮಾಲೆ ಎಂಬ ಗ್ರಂಥದ 33ನೇ ಪುಟದಲ್ಲಿ ಮಣ್ಣಿನ ಊರು ಎಂದಾಗಿದೆ ಎಂದು ಹೇಳಿದ್ದಾರೆ. ಆದರೆ, ವಂಶಪ್ರದೀಪದ ಮೂಲ ಲೇಖಕರು ಈ ಗ್ರಾಮಕ್ಕೆ 'ಪುರೀ ಹೃದ್ಯಾ ವಿದ್ವನ್ಮಣಿಬಿರಕಥಿಕಂ ದೇವಮಣಿನಾತ್ವಯಾ ಶ್ರೀನಾಥೇಯಂ ಮಣಿರಿಶಿ ಪುರೀಣಾಂ ಯದಜನಿ ವಿದ್ವದ್ವ ರೈರ್ಮಣಿಪುರಸ್ಥಿ ತಭೂಸುರೇಂದ್ರೈಃ ಮಣಿಗ್ರಾಮನಾಮ್ನೇರಿತೇ ಪುಣ್ಯದೇಶೆ' ಎಂದು ವರ್ಣಿಸಿದ್ದಾರೆ. ಆದ್ದರಿಂದ ಇದು ಅನೇಕ ವಿದ್ವನ್ಮಣಿಗಳಿಂದಲೂ, ಸರ್ವೋತ್ತಮನಾದ ದೇವಮಣಿಯಂತಿ ರುವ ಶ್ರೀನಾಥನೆಂದು ಖ್ಯಾತನಾದ ಶ್ರೀ ಚೆನ್ನಕೇಶವನ ಆವಾಸ ದಿಂದಲೂ, ಭೂಸರರೆಂದು ಖ್ಯಾತರಾದ ಮಣಿಪುರದ ಮಹಾ ಮಣಿ ಮುತ್ತುಗಳಂತಿರುವ ದ್ವಿಜೋತ್ತಮರಾದ ತಪಸ್ವಿ ಗಳಿಂದಲೂ ಕೂಡಿದ ಪುಣ್ಯ ಊರು ಎಂದು ವರ್ಣಿಸಿದ್ದಾರೆ.

ಹಾಗೆಯೇ ಹಿರೇಮಣ್ಣೂರು ಘನಪಾಠಗಳಿಗಾಗಿ ವಿಖ್ಯಾತ ವಾಗಿತ್ತು. ಅರುಣೋದಯಕ್ಕೆ ಮನೆಮನೆಗಳಲ್ಲಿ ವೇದಘೋಷ ಕೇಳಿಬರುತ್ತಿತ್ತು. ವಿದ್ಯಾರ್ಥಿಗಳು ಶಾಸ್ತ್ರ ಪಾಠಚಿಂತನೆಯಲ್ಲಿ

ತೊಡಗಿರುತ್ತಿದ್ದರು. ಅಗ್ನಿಹೋತ್ರಿಗಳ ಮನೆಮನೆಗಳಲ್ಲಿ ಧೂಮವು ಎಲ್ಲಡೆಗೆ ಹರಡುತ್ತಿತ್ತು. ಆ ಪರಂಪರೆ ಇಂದಿಗೂ ಘನಪಾಠಿಗರು ಈ ಕ್ಷೇತ್ರದಲ್ಲಿ ಉಳಿದುಕೊಂಡಿದ್ದಾರೆ.

ಈ ಕ್ಷೇತ್ರವು ಜ್ಞಾನ ಹಾಗೂ ತಪಸ್ಸುಗಳ ಕೇಂದ್ರವಾಗಿ ಪ್ರಸಿದ್ಧವಾಗಿದೆ. ಶ್ರೀ ರಘುನಾಥ ತೀರ್ಥರಲ್ಲಿ ಶ್ರೀ ವರದ ರಾಜಾರ್ಯರು ಇಲ್ಲಿಯೇ ಶಾಸ್ತ್ರಾಧ್ಯಯನ ಮಾಡಿದರು. ಶ್ರೀ ರಘೋತ್ತಮತೀರ್ಥರ ನಂತರ ಶ್ರೀ ವಿದ್ಯಾಧೀಶತೀರ್ಥರು ವಿಜಾಪುರದಿಂದ ಶ್ರೀ ಪಾಂಡುರಂಗಿ ಅವರನ್ನು ಇಲ್ಲಿಗೆ ಕರೆಸಿ ಕೊಂಡು, ಅವರಿಗೆ ಆಶ್ರಮ ಕೊಟ್ಟು ಇಲ್ಲೇ ಶ್ರೀ ವೇದವ್ಯಾಸ ತೀರ್ಥರಿಂದ ಶ್ರೀ ವೇದೇಶತೀರ್ಥರಿಂದ ಆಶ್ರಮವಾಯಿತು. ಅವರ ವೃಂದಾವನವೂ ಇಲ್ಲಿದೆ. ಅವರ ಪುಣ್ಯತಿಥಿಯನ್ನು ಅನ್ನ ಸಂತರ್ಪಣೆಯೊಂದಿಗೆ ವಿಜೃಂಭಣೆಯಿಂದ ಜರುಗುತ್ತದೆ. ಇಲ್ಲಿಯ ಅವಧಾನಿ ಮನೆತನದವರೇ ಮುಂದೆ ಆಶ್ರಮ ಪಡೆದು ಶ್ರೀ ಸತ್ಯನಾಥತೀರ್ಥರೆಂದು ಹೆಸರಾದರು.

ಚೆನ್ನಕೇಶವನ ಅಂದ ನೋಡಿ ಬೇಲೂರನ್ನು ನೋಡ ಲಾಗದ ಕಣ್ಣು ಇಲ್ಲಿನ ಚೆನ್ನಕೇಶವನ ಕಂಡು ಸಂತೃಪ್ತಿ ಪಡ ಬಹುದು. ಸೆರಗಿನಲ್ಲಿ ಚೇಳನ್ನು ಕಂಡು ಚಕಿತಳಾದ ಶಿಲಾಬಾಲಿಕೆ ಬೇಲೂರಿನಲ್ಲಿ ಕಂಡರೆ, ಕಪಿಚೇಷ್ಟೆಗಾಗಿ ಕಾತರಗೊಂಡ ಶಿಲಾ ಕನ್ನಿಕೆ ಮಣ್ಣೂರಿನಲ್ಲಿ ಕಾಣುವೆವು. ಬೇಲೂರು–ಮಣ್ಣೂರುಗಳಲ್ಲಿ ಭಿತ್ತಿಶಿಲ್ಪಗಳಲ್ಲಿ ತುಂಬಾ ಸಾದೃಶ್ಯವಿದೆ. ಶಂಖಚಕ್ರಧಾರಿಗಳಾದ ಅನೇಕ ವಿಷ್ಣುಮೂರ್ತಿಗಳಿವೆ. ಬಾಗಿಲದ ಹಣೆಪಟ್ಟಿಯ ಮೇಲೆ ಶ್ರೀ ನರಸಿಂಹ ಮೂರ್ತಿಯಿದೆ. ಗರ್ಭಗುಡಿಯ ಗದ್ದುಗೆಯು ಈಗ ಅಲ್ಲಿರುವ ಮೂರ್ತಿಗೆ ಸರಿಯಾದುದಲ್ಲ ದೊಡ್ಡದಾಗಿ ತೋರುತ್ತದೆ. ಅಲ್ಲಿರುವ ಈಗಿನ ಮೂರ್ತಿ ಪಂಚಲೋಹ ನಿರ್ಮಿತವಾದುದು. ಅದು ಶಿಲೆಯ ಮೂರ್ತಿಯಾಗಿಲ್ಲ. ಚಲಪ್ರತಿಮೆಯಾಗಿದೆ. ಈ ಗುಡಿಯಲ್ಲಿ ಸಂಸ್ಕೃತ ಶಿಲಾಲೇಖವೂ ಇದೆ. ಯವನರ ಮೂರ್ತಿಭೇದದ ಹಾವಳಿಯಲ್ಲಿ ಇದೇ ಗುಡಿಯಲ್ಲಿದ್ದ ಶ್ರೀ ಚೆನ್ನಕೇಶವ ದೇವರಮೂರ್ತಿಯನ್ನು ನದಿ ಯಲ್ಲಿ ಸುರಕ್ಷತೆಗಾಗಿ ಬಚ್ಚಿಟ್ಟಿರಬೇಕು. ಸ್ಥಳೀಯ ಜನರು ಯಲ್ಲಮ್ಮನ ವಿಗ್ರಹವನ್ನು ಕೆಲಕಾಲದ ನಂತರ ಬರಿದಾದ ಗುಡಿ ಯಲ್ಲಿ ಸ್ಥಾಪಿಸಿರಬೇಕೆಂದು ತಜ್ಞರು ತರ್ಕಿಸುತ್ತಾರೆ.

ಭೀಮರಥಿ ನದಿಯ ಪಾತ್ರವನ್ನು ದಾಟಿ ಮೇಲೆ ಹೋದೊಡನೆ ಉನ್ನತವೂ, ವಿಶಾಲವೂ ಆದ ಕಟ್ಟೆಯ ಮೇಲೆ ಶ್ರೀ ವೇದೇಶತೀರ್ಥ, ಶ್ರೀ ಮಾಧವತೀರ್ಥ ಹಾಗೂ ಶ್ರೀ ತಂಗಳ ಒಡೆಯರ ಗೋವಿಂದ ತೀರ್ಥರ ಮೂರು ವೃಂದಾವನಗಳು ಸಾಲಾಗಿ ಕಂಗೊಳಿಸುತ್ತವೆ. ಶ್ರೀ ಮಾಧವತೀರ್ಥರು ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರು. ಶ್ರೀ ವೇದೇಶತೀರ್ಥರು ಮಠಾದಿಪತ್ಯದ ಆಕರ್ಷಣೆಯನ್ನು ಕೂಡ ಬಿಟ್ಟುಕೊಟ್ಟ ಮಹಾ ತ್ಯಾಗಿಗಳು, ತಪಸ್ವಿಗಳು, ಜ್ಞಾನ ತಪಸ್ಸುಗಳಿಗಾಗಿಯೇ ಅವರು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟವರು.

(ಎಸ್‌ಪಿಎನ್)

ಚೆನ್ನೂರಿನ ದೇವಾಲಯಗಳು: ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬರುವ ಬಹುತೇಕ ಹಳ್ಳಿಗಳು ತನ್ನದೇ ಆದ ಇತಿಹಾಸ ಹೊಂದಿವೆ. ಈ ಪ್ರದೇಶದಲ್ಲಿ ಅನೇಕ ಐತಿಹಾಸಿಕ ದೇವಾಲಯಗಳು, ಶಿಲ್ಪಗಳು, ಶಾಸನಗಳು ನೋಡ ಸಿಗುತ್ತವೆ. ಒಂದು ಕಾಲದಲ್ಲಿ ಈ ದೇಶದ ಕಲೆ ಸಂಸ್ಕೃತಿ ಹಾಗೂ ಧಾರ್ಮಿಕವಾಗಿ ವೈಭವದಿಂದ ಮೆರೆದು ಪೂಜೆಗೊಳಪಟ್ಟ ದೇವಾಲಯಗಳು ವಿಶ್ವಕ್ಕೆ ಐಕ್ಯತೆಯ ಸಂದೇಶ ನೀಡಿದ್ದುವು. ಇಂಥ ದೇವಾಲಯಗಳಲ್ಲಿ ಸುರಪುರ ತಾಲ್ಲೂಕಿನ ಚನ್ನೂರಿನಲ್ಲಿ ದೇವಾಲಯಗಳು ಸೇರುತ್ತವೆ.

ಕಲಬುರ್ಗಿ ಜಿಲ್ಲೆ ಸುರಪುರ ತಾಲ್ಲೂಕಿನಲ್ಲಿ ಬರುವ ಚೆನ್ನೂರ ಗ್ರಾಮ ಹುಣಸಗಿಯಿಂದ ಪೂರ್ವಕ್ಕೆ 5 ಕಿ.ಮೀ. ಹೋಗಿ ಅಲ್ಲಿಂದ ಸ್ವಲ್ಪ ಉತ್ತರಕ್ಕೆ ಹೋದರೆ ಕಾಣಿಸುತ್ತದೆ. ಪ್ರಾಚೀನ ಶಾಸನಗಳಲ್ಲಿ ಚಣ್ಣಪುರ ಎಂದು ಕರೆಯಿಸಿಕೊಂಡಿರುವ ಇಂದಿನ ಚನ್ನೂರ ಗ್ರಾಮದಲ್ಲಿ, ಕ್ರಿ.ಶ. 12ನೇ ಶತಮಾನಕ್ಕೆ ಸೇರಿದ ದೇವಾಲಯ, ಶಿಲ್ಪಗಳು ನೋಡಲು ಸಿಕ್ಕರೂ ಅವುಗಳ ಸ್ಥಿತಿ ಗಂಭೀರ. ಈ ಗ್ರಾಮದಲ್ಲಿ ಎರಡು ಶಾಸನಗಳು ದೊರೆತ ಬಗ್ಗೆ ವರದಿಯಾಗಿವೆ. ಈಶ್ವರ ದೇವಾಲಯದ ಬಳಿ ಇರುವ ಕ್ರಿ.ಶ. 1123ರ ಕಲ್ಯಾಣ ಚಾಲುಕ್ಯ ಅರಸನ 6ನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿವೆ.

ಈಶ್ವರ ದೇವಾಲಯ ಗರ್ಭಗೃಹ ತೆರೆದ ಅಂತರಾಳ ನವರಂಗ ಹಾಗೂ ಸದಾ ಕಂಬಳನ್ನು ಹೊಂದಿದೆ. ಗರ್ಭಗೃಹ ದಲ್ಲಿ ಶಿವಲಿಂಗ, ನವರಂಗದಲ್ಲಿ ನಂದಿ ವಿಗ್ರಹಗಳಿವೆ. ಅಲ್ಲದೇ ಇಲ್ಲಿ ಗಜಲಕ್ಷ್ಮಿ ಶಿಲ್ಪ, ನಾಗಶಿಲ್ಪ, ದ್ವಾರಪಾಲಕ ಶಿಲ್ಪ ಹಾಗೂ ಶಿವಪಾರ್ವತಿಯರ ಶಿಲ್ಪ ಕಾಣಬಹುದು. ಸದ್ಯ ದೇವಾಲಯ ಶಿಖರ ಕಳೆದುಕೊಂಡು ಹಾಳಾಗಿ ನಿಂತಿದೆ. ಗಂಗಾಧರೇಶ್ವರ ದೇವಾಲಯ ಗರ್ಭಗೃಹ ತೆರೆದ ಅಂತರಾಳ ಹಾಗೂ ನವರಂಗ ಗಳನ್ನು ಹೊಂದಿದ್ದು ಗರ್ಭಗೃಹದಲ್ಲಿ ಎರಡು ಶಿವಲಿಂಗಗಳಿದ್ದು ಅವುಗಳಲ್ಲಿ ಕರಿಕಲ್ಲಿನಿಂದ ಕೆತ್ತಿರುವ ಚತುರ್ಮುಖ ಲಿಂಗವು ಸುಂದರವು, ವಿಶಿಷ್ಟವಾಗಿದೆ. ಸುಮಾರು 15 ಕಂಬಗಳನ್ನು ಹೊಂದಿರುವ ಈ ದೇವಾಲಯದ ಆವರಣದಲ್ಲಿ 2 ನಂದಿ ವಿಗ್ರಹ, ಸಪ್ತಮಾತೃಕೆಯರ ಶಿಲ್ಪ, ಸೂರ್ಯ, ಮಹೇಶ ಮರ್ದಿನಿ ಶಿಲ್ಪ ಹಾಗೂ ಶಿವನ ಶಿಲ್ಪಗಳು ಬಹಳ ಸುಂದರವಾಗಿವೆ. ಇವುಗಳಲ್ಲಿ ಕೆಲ ಶಿಲ್ಪ ಭಗ್ನಗೊಂಡರೂ ಕೆಲವು ಉತ್ತಮ ಸ್ಥಿತಿ ಯಲ್ಲಿವೆ. ಇದೊಂದು ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹದಲ್ಲಿರುವ ಚತುರ್ಮುಖ ಲಿಂಗ ನಾಲ್ಕು ಮುಖ ಹೊಂದಿದ್ದು ಕಿವಿಯಲ್ಲಿ ಕಿವಿಯೋಲೆ ಮತ್ತು ಮೇಲೆ ಕಿರೀಟ ಮುಕುಟವಿದೆ. ಚತುರ್ಮುಕ ಬ್ರಹ್ಮನನ್ನು ಈ ಲಿಂಗದಲ್ಲಿ ಕೆತ್ತಿರುವುದು ಈ ಭಾಗದಲ್ಲಿ ಇದೊಂದು ವಿಶೇಷ ಶಿಲ್ಪವಾಗಿದೆ. ಇದರ ಪಕ್ಕದಲ್ಲಿ ಒಂದು ಸಾದಾ ಶಿವಲಿಂಗವಿದೆ. ಒಟ್ಟಾರೆ ಈ ದೇವಾಲಯ ಹಾಳಾದ ಸ್ಥಿತಿಯಲ್ಲಿದ್ದರೂ ಅವುಗಳಲ್ಲಿರುವ ಶಿಲ್ಪಗಳಂತೂ ಹೊಸತನ ತುಂಬುತ್ತವೆ.

ಮಹಿಷ ಮರ್ದಿನಿ ಶಿಲ್ಪವು ಸುಮಾರು 3 ಅಡಿ ಎತ್ತರ 2 ಅಡಿ ಅಗಲವಿರುವ ವಿಗ್ರಹ. ಸಿಂಹ ಪೀಠದ ಮೇಲೆ ಉಗ್ರ ರೂಪದಲ್ಲಿ ನಿಂತಿದ್ದು, 10 ಕೈಗಳನ್ನು ಹೊಂದಿದೆ. ಎಡಗಾಲಿನಿಂದ ಮಹಿಷಿ (ಕೋಣ) ತುಳಿದು ಬಲಗೈಯಲ್ಲಿರುವ ತ್ರಿಶೂಲದಿಂದ ಮಹಿಷಿಕ್ಕೆ ತಿವಿಯುತ್ತಿದ್ದಾನೆ. ಮಹಿಷಿನ ನಾಲಗೆ ಇನ್ನೊಂದು ಎಡಗೈಯಿಂದ ಹಿಡಿದಿದ್ದಾಳೆ. ಕೆಳಗೆ ಬಲಗಡೆ ಸಿಂಹವಿದೆ. ಮಹಿಷಿ ಮರ್ದಿನಿ ವಿಗ್ರಹಕ್ಕೆ ಕಿವಿಯೋಲೆ ಕೊರಳಲ್ಲಿ ಮಣಿಹಾರ, ಜನಿವಾರ, ಕಂಠಹಾರ ಕೆತ್ತಲಾಗಿದೆ. ಕೆಳಗಿರುವ ಸಿಂಹ ಪೀಠಕ್ಕೆ 2 ಸಿಂಹ ಶಿಲ್ಪಗಳಿವೆ. ಕೋಣನ ಕೈಯಲ್ಲಿ ಗದೆ ಮತ್ತು ಡಾಲು ಇದೆ. ಈ ವಿಗ್ರಹದ 10 ಕೈಗಳಲ್ಲಿ ಬಲಗೈ 5 ಎಡಗೈ 5 ಕೆತ್ತಿದ್ದು ಸದ್ಯ 2 ಬಲಗೈ 1 ಎಡಗೈ ಭಗ್ನಗೊಂಡಿವೆ. ಉಳಿದವುಗಳನ್ನು ಕ್ರಮವಾಗಿ ಬಲಗೈಗಳಲ್ಲಿ ಅಭಯ ಹಸ್ತ, ಖಡ್ಗ, ತ್ರಿಶೂಲ ಹೊಂದಿದ್ದರೆ ಎಡಗೈಗಳಲ್ಲಿ ಶಂಖ, ಬಿಲ್ಲು, ಡಾಲು, ಕೋಣದ ನಾಲಗೆ ಇವೆ. ಒಟ್ಟಾರೆ ಈ ವಿಗ್ರಹ ಸುಂದರವಾಗಿದೆ.

ಸುಮಾರು 2 ಅಡಿ ಎತ್ತರ ಒಂದೂವರೆ ಅಡಿ ಅಗಲವಿರುವ ಶಿವನ ವಿಗ್ರಹ ಸ್ಥಾನಿಕ ಭಂಗಿಯಲ್ಲಿದ್ದು ಎರಡೂ ಕೈಗಳು ಭಗ್ನಗೊಂಡಿವೆ. ವಿಗ್ರಹದ ಸುತ್ತ ಹೂಗಳ ಕೆತ್ತನೆ ಹಾಗೂ ಅಕ್ಕಪಕ್ಕದಲ್ಲಿ ಅನೇಕ ಕೆತ್ತನೆ ಶಿಲ್ಪಗಳಿವೆ. ಸೂರ್ಯವಿಗ್ರಹ 3 ಅಡಿ ಎತ್ತರ 2 ಅಡಿ ಅಗಲವಿದ್ದು 2 ಕೈಗಳು ತ್ರುಟಿತಗೊಂಡಿವೆ. ವಿಗ್ರಹದ ಎಡ ಮತ್ತು ಬಲಕ್ಕೆ ಚೌರಿ ಶಿಲ್ಪಗಳಿವೆ. ವಿಗ್ರಹದ ಕೆಳಗಿನ ಪೀಠಕ್ಕೆ 7 ಚಿಕ್ಕಚಿಕ್ಕ ಶಿಲ್ಪಗಳಿವೆ.

ಮಹೇಶ್ವರ-ಮಾರ್ತಂಡ ದೇವಾಲಯಗಳು ಗಾತ್ರದಲ್ಲಿ ಚಿಕ್ಕದಾಗಿದ್ದು ಕೇವಲ ಗರ್ಭಗೃಹ ಹಾಗೂ ಅರ್ಧಮಂಟಪ ಹೊಂದಿದ್ದು ಸದ್ಯ ಹಾಳಾದ ಸ್ಥಿತಿಯಲ್ಲಿವೆ. 2 ಗರ್ಭಗೃಹದಲ್ಲಿ ಶಿವಲಿಂಗವಿದೆ. ಚೆನ್ನೂರ ಗ್ರಾಮವು ಕ್ರಿ.ಶ. 12ನೆಯ ಶತಮಾನದಲ್ಲಿ ಶೈವ (ಶಿವ) ಸಂಪ್ರದಾಯದ ಒಂದು ಮಹತ್ವದ ಗ್ರಾಮವಾಗಿತ್ತೆಂದು ಸಧ್ಯ ಇಲ್ಲಿ ಅಳಿದುಳಿದಿರುವ ದೇವಾಲಯಗಳು ಹಾಗೂ ಶಾಸನಗಳೇ ಸಾಕ್ಷಿ. (ಎನ್‌ಎಚ್‌ಡಿ)

ಚೈ

ಚೈತನ್ಯಮಯಿ ಆರ್ಟ್‌ಗ್ಯಾಲರಿ: 2003ರಲ್ಲಿ ಈ ಭಾಗದ ಹಿರಿಯ ಕಲಾವಿದರಾದ ಅಪ್ಪಾರಾವ್ ಶಿವಶಂಕರ ಪಾಟೀಲರು ಚೈತನ್ಯಮಯಿ ಆರ್ಟ್ ಗ್ಯಾಲರಿಯನ್ನು ಪ್ರಾರಂಭಿಸಿ ಅನೇಕ ಯುವ ಮತ್ತು ಹಿರಿಯ ಕಲಾವಿದರಿಗೆ ಕಲಾಪ್ರದರ್ಶನ ಮಾಡುವ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇದರ ಪರಿಣಾಮವಾಗಿ ಹಲವಾರು ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಗಳು ಈ ಗ್ಯಾಲರಿಯಲ್ಲಿ ನಡೆದಿವೆ.



ಚೈತನ್ಯಮಯಿ ಆರ್ಟ್‌ಗ್ಯಾಲರಿಯ ಹೊರಾಂಗಣ ದೃಶ್ಯ

ಗುಲ್ಬರ್ಗಾದ ವಿಶ್ವೇಶ್ವರಯ್ಯ ನಗರದಲ್ಲಿರುವ ಚೈತನ್ಯಮಯಿ ಆರ್ಟ್ ಗ್ಯಾಲರಿಯನ್ನು ಏಪ್ರಿಲ್ 24, 2003ರಂದು ಶರಣಬಸಪ್ಪ ಅಪ್ಪ ಅವರಿಂದ ಉದ್ಘಾಟನೆಗೊಂಡಿತು. ಇಲ್ಲಿಯವರೆಗೆ ಸುಮಾರು 30ಕ್ಕೂ ಹೆಚ್ಚು ಏಕವ್ಯಕ್ತಿ ಮತ್ತು ಸಮೂಹ ಕಲಾ ಪ್ರದರ್ಶನಗಳು ನಡೆದಿವೆ.

ಚೈತನ್ಯಮಯಿ ಆರ್ಟ್‌ಗ್ಯಾಲರಿಯ ಮುಖಾಂತರ ಪಾಟೀಲರು ಅನೇಕ ಯೋಜನೆಗಳನ್ನು ಹಾಕಿಕೊಂಡು ಈ ಭಾಗದಲ್ಲಿ ಚಿತ್ರಕಲೆಯ ಬೆಳವಣಿಗೆಗೆ ಸಹಕರಿಸುತ್ತಿದ್ದಾರೆ. ಮುಖ್ಯವಾಗಿ ಯುವ ಕಲಾವಿದರಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ ತಮ್ಮ ಗ್ಯಾಲರಿಯಲ್ಲಿ ಯಾವುದೇ ಶುಲ್ಕವಿಲ್ಲದೇ ಸ್ಥಳಾವಕಾಶ ಕಲ್ಪಿಸಿ ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಈ ಕಲಾಗ್ಯಾಲರಿಯು ಕಲಾಕೃತಿಗಳ ಪ್ರದರ್ಶನಕ್ಕೆ ಉತ್ತಮ ಸ್ಥಳಾವಕಾಶ, ಆಧುನಿಕ ಬೆಳಕಿನ ವ್ಯವಸ್ಥೆ, ದೂರವಾಣಿ ಸೌಲಭ್ಯ, ಅತಿಥಿಕೋಣೆ, ಕಲಾಕೃತಿಗಳ ಸಂಗ್ರಹಕೋಣೆ ಮತ್ತು ಕಛೇರಿಯನ್ನೊಳಗೊಂಡ ಕಲಾತ್ಮಕವಾದ ಮತ್ತು ಸುಸಜ್ಜಿತವಾದ ಸಂಕೀರ್ಣವಾಗಿದೆ.

ಈ ಕಲಾಗ್ಯಾಲರಿಯು ಗುಲ್ಬರ್ಗಾದ ಸೂಪರ್ ಮಾರ್ಕೇಟ್‌ನಿಂದ ಮೂರು ಕಿ.ಮೀ. ದೂರದಲ್ಲಿದ್ದು, ಗುಲ್ಬರ್ಗಾ ವಿಶ್ವವಿದ್ಯಾಲಯದ ರಸ್ತೆಗೆ ಹೊಂದಿಕೊಂಡಂತೆ, ವಿಶ್ವೇಶ್ವರಯ್ಯ ನಗರದಲ್ಲಿದೆ. (ಪಿಪಿ)

ಛ

ಛತ್ರಿ–ಚಾಮರ: ನೆರಳು ನೀಡಲು ಸಿದ್ದ ಪಡಿಸಿದ ವಸ್ತು. ಇದು ಕೊಡೆಯ ಆಕಾರದಲ್ಲಿದೆ. ಛತ್ರಿ–ಚಾಮರ ಇವೆರಡು ಭಿನ್ನ ಪದವಾದರೂ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ಛತ್ರಿ ಸಾಮಾನ್ಯ ನೆಲೆಯಲ್ಲಿ ಬಿಸಿಲಿನ ಝಳದಿಂದ ಪಾರಾಗಲೂ ಹಾಗೂ ಮಳೆಯಿಂದ ತೋಯದಂತೆ ಇರಲು ಬಳಸುವರು. ಕರಿ ಬಣ್ಣದ ಬಟ್ಟೆ ಛತ್ರಿ ವ್ಯಾಪಕವಾಗಿಯೂ, ಬಿಳಿ ಬಟ್ಟೆಯ ಛತ್ರಿಗಳನ್ನು ಕ್ವಚಿತ್ತಾಗಿಯೂ ಬಳಸುತ್ತಾರೆ. ಆದರೆ ಇವುಗಳ ಉದ್ದೇಶ ಮಾತ್ರ ಒಂದೇ. ಬಣ್ಣ ಬಣ್ಣದ ಪಟ್ಟೆಯುಳ್ಳ ಬಟ್ಟೆಯ ಛತ್ರಿಯನ್ನು ಆಕರ್ಷಣೆಯವಾಗಿ ಕಾಣಲು ಉಪಯೋಗಿಸುವುದುಂಟು. ಇಂತಹವುಗಳನ್ನು ವಾಣಿಜ್ಯ ಸಂಕೀರ್ಣಗಳಲ್ಲಿ, ಸಮುದ್ರದ ದಂಡೆಗಳಲ್ಲಿ (ಬೀಚ್) ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಸಾಮಾನ್ಯ ಬಳಕೆ ಛತ್ರಿಯ ಅಗಲಕ್ಕಿಂತ ಮೂರು–ನಾಲ್ಕು ಪಟ್ಟು ವಿಸ್ತಾರವುಳ್ಳದನ್ನು ಬಳಸುತ್ತಾರೆ. ಬಟ್ಟೆಯ ಬದಲಿಗೆ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮಾತಿತ್ತು. (ಈಗ ರಾಜರಿಲ್ಲ) ಹೀಗಾಗಿ ರಾಜನ ಒಡ್ಡೋಲಗ ಸಂದರ್ಭದಲ್ಲಿ ಕುಳಿತುಕೊಳ್ಳುವ ಸಿಂಹಾಸನದ ಮೇಲೆ ಛತ್ರಿ ಇರುತ್ತಿತ್ತು. ಇಂದಿಗೂ ಮೈಸೂರು ಅರಮನೆಯ ಸಿಂಹಾಸನದಲ್ಲಿನ ಸಂಗ್ರಹಿಸಿಟ್ಟಿರುವ ಸ್ಥಳದಲ್ಲೆಲ್ಲಾ ರಾಜರ, ಪಾಳೆಯಗಾರರ, ದಳವಾಯಿಗಳ ಅಥವಾ ನವಾಬರು ಬಳಸುತ್ತಿದ್ದವುಗಳೆಂದು ನೋಡಿ ತಿಳಿಯಬಹುದು. ಇಲ್ಲವೇ ರಾಜ್ಯಾಡಳಿತ ನಡೆಸುವ ಸಂದರ್ಭದಲ್ಲಿನ ಚಿತ್ರಗಳನ್ನು ನೋಡಿ ಅರಿಯಬಹುದು ರಾಜರು ಮೆರವಣಿಗೆ ಹೊರಟಾಗಲೂ ಛತ್ರಿ ಹಿಡಿಯುವ ಚಾಮರ ಬೀಸುವ ಆಸ್ತ ಸಿಬ್ಬಂದಿ ಇದ್ದೇ ಇರುತ್ತಿದ್ದರು. ಅಷ್ಟೇ ಅಲ್ಲದೆ ವಾದ್ಯ ನುಡಿಸುವವರು ವಿವಿಧ ರೀತಿ ಆಯುಧ ಹಿಡಿದವರು, ಜಗಜಟ್ಟಿಗಳು, ಇವೆಲ್ಲಾ ಪರಿವಾರದೊಡನೆ ಹೊರಡುತ್ತಿದ್ದರು. ಇಂತಹ ಸಮೂಹದೊಡನೆ ಸಾಗುವುದು ಹೆಮ್ಮೆಯ ಅಥವಾ ಪ್ರತಿಷ್ಠೆಯ ವಿಷಯವಾಗಿತ್ತು.

ಛತ್ರಿ ಚಾಮರಗಳು ಅರಮನೆ ಮಾತ್ರವಲ್ಲ ಗುರುಮನೆಯನ್ನು ಅಲಂಕರಿಸಿವೆ. ಜೈನ, ಬೌದ್ಧ, ಹಿಂದೂ, ವೀರಶೈವ ಇದಾವುದೇ ಇರಲಿ, ಆಯಾಯ ಸಂಪ್ರದಾಯ ಗುರುಗಳು ಧಾರ್ಮಿಕ ಸಭೆ ನಡೆಸುವಾಗ, ಮೆರವಣಿಗೆ ಹೊರಟಾಗ ಛತ್ರಿ ಹಿಡಿಯುವವರು ಛಾಮರ ಬೀಸುವವರು ಇರುತ್ತಾರೆ. ಗುರುವಿನ ತೋರಿಸುವ ಗೌರವದ ಸಂಕೇತವಾಗಿ ಇವುಗಳ ಬಳಕೆಯಾಗುತ್ತದೆ.

ದೇವರ ವಿಚಾರ ಬಂದಾಗಲಂತೂ ಇವುಗಳು ಕಡ್ಡಾಯ. ಬೆಳ್ಳಿ ಅಥವಾ ಚಿನ್ನದ ಛತ್ರಿಗಳನ್ನು ಕುಳಿತಾಸನದ ಮೇಲ್ಗಡೆ ಅಳವಡಿಸಿರುತ್ತಾರೆ. ಚಾಮರ ದಾರಣೆಯರನ್ನು ಕೆತ್ತನೆ ಮೂಲಕವಾಗಲೀ, ಇಲ್ಲವೆ ಚಿತ್ರದ ರೂಪದಲ್ಲಾಗಲಿ ಇರುವುದನ್ನು ಎಲ್ಲೆಡೆ ಕಾಣುತ್ತೇವೆ. ದೇವರ ಸೇವೆ ಮಾಡುವಾಗ ಅರ್ಥಾತ್ ವಿಧ ವಿಧವಾದ ಆಚರಣೆ ಮಾಡುವಾಗ ಛತ್ರಿ ಮತ್ತು ಚಾಮರ ಸೇವೆಯೂ ಒಂದಾಗಿರುತ್ತದೆ. ಗುರುಗಳಾದವರು ಪೂಜಿಸುವಾಗ ಸಣ್ಣ ಪ್ರಮಾಣದ ಛತ್ರಿ ಚಾಮರಗಳ ಮೂಲಕ ಮಂತ್ರೋಚ್ಚಾರಣೆಯಿಂದ ಸೇವೆ ಸಲ್ಲಿಸುತ್ತಾರೆ. ಕೆಲವೊಂದು ಯತಿಗಳು ಬೆತ್ತದ ಕಡ್ಡಿಗಳಿಂದ ಮಾಡಿದ ಛತ್ರಿಯನ್ನು ಬಳಸುತ್ತಾರೆ. ಇವರ ದೃಷ್ಟಿಯಲ್ಲಿ ಬಟ್ಟೆಯ ಛತ್ರಿ ನಿಶಿದ್ಧ, ಒಟ್ಟಾರೆ ಹೇಳುವುದಾದರೇ ಛತ್ರಿ ಸರ್ವವ್ಯಾಪಿ. ಚಾಮರ ಎಂಬುದು ಚಮಣೆ ಮೃಗದ ಕೂದಲುಗಳಿಂದ ಮಾಡಿದ ಬೀಸಣಿಕೆಯಾಗಿದ್ದು ಮೇಲಸ್ತರದ ಬಳಕೆಯಾಗಿದೆ.

ರಾಜರ ಅಥವಾ ದೇವರ ಮೆರೆವಣಿಗೆಗೆ ಬಳಸುವ ಛತ್ರಿಗೆ ಉದ್ದವಾದ ದಂಡವಿದ್ದು ಅದು ಮನುಷ್ಯನ ಎತ್ತರದ ಎರಡರಷ್ಟಿರುತ್ತದೆ. ಅಲ್ಲದೆ ಛತ್ರಿಯ ಮೇಲ್ ಹೊದಿಕೆ ಬಟ್ಟೆ ಮೌಲ್ಯಯುತದ್ದಾಗಿದ್ದು ಅದರ ಒಂದೊಂದು ತುದಿಗೂ ಕುಬ್ಬಗಳನ್ನು ಇಲ್ಲವೇ ರೇಶ್ಮೆ ದಾರದೆಳೆಗಳನ್ನು ಕಟ್ಟಿ ಅಂದಗೊಳಿಸಿರುತ್ತಾರೆ. ಕೆಲವೊಂದು ಮಾವಿನ ನೆಲೆಯ ರೀತಿ ಬಣ್ಣದ ಬಟ್ಟೆಗಳಿಂದ ಹೊಲಿಸಿ ಕಟ್ಟಿರುವುದು ಉಂಟು ಇಂತಹ ಛತ್ರಿಗಳನ್ನು ಮಡಿಸಲಾಗುವುದಿಲ್ಲ. ಯಾವಾಗಲೂ ಛತ್ರಿ ತೆರೆದಂತೆಯೇ ಇರುತ್ತದೆ. ದೇವರ ಅಥವಾ ರಾಜರ ಮೆರವಣಿಗೆ ಆನಂತರ ಅದನ್ನು ಗೋಡೆಗೆ ಒರಗಿಸಿ ಒಂದು ಪ್ರತ್ಯೇಕ ಕೋಣೆಯಲ್ಲಿ ಟ್ಟಿರುತ್ತಾರೆ. ಚಾಮರ ಅರ್ಥಾತ್ ಬೀಸಣಿಕೆಯ ಹಿಡಿಯನ್ನು ಸಹ ದುಂಡಾದ ಮರದ ಕೋಲಿನಿಂದ ಮಾಡಿದ್ದರೂ ಅದಕ್ಕೆ ಹಿತ್ತಾಳೆ ಬೆಳ್ಳಿ ಇಲ್ಲವೇ ಚಿನ್ನದ ಪಾಲಿಶ ಹಾಕಿದ ಕವಚ ಮಾಡಿ ವೈಭವೀಕರಿಸಿರುತ್ತಾರೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿಯೂ ಛತ್ರಿ ಮತ್ತು ಚಾಮರಗಳ ಬಳಕೆ ಹಿಂದಿನಿಂದಲೂ ಬಂದಿದೆ.

(ಎಲ್‌ಎಸ್)

ಛಾ

ಛಾಯಾ ವೀರಭದ್ರಪ್ಪ ಭರತನೂರ : ಮನೆತನದಿಂದ ಸಂಗೀತ ವಾತಾವರಣದಲ್ಲಿ ಬೆಳೆದ ಕಲಾವಿದೆ. 1962 ಜುಲೈ 05ರಂದು ಜನಿಸಿದರು. ಅನುವಂಶಿಕವಾಗಿ ತಾಯಿ, ಅಜ್ಜಿ, ಸೋದರತ್ತೆಯವರಿಂದ ಹಾಡುಗಾರಿಕೆಯಲ್ಲಿ ಬೆಳೆದವರು. ಇವರು ಗದುಗಿನ ವಿರೇಶ್ವರ ಪುಣ್ಯಾಶ್ರಮದ ಪಂ. ಪಂಚಾಕ್ಷರಿ ಗವಾಯಿಗಳವರ ಹತ್ತಿರ ಅಭ್ಯಾಸ ಮಾಡಿದ ಪಂ. ರಾಮಯ್ಯನವರಿಂದ ಶಾಸ್ತ್ರೋಕ್ತ ಸಂಗೀತ ಅಭ್ಯಾಸ ಪ್ರಾರಂಭವಾಯಿತು. ಪ್ರಾಥಮಿಕ ಐದನೆಯ ತರಗತಿಯಲ್ಲಿರುವಾಗಲೇ ಸಂಗೀತ ಅಭ್ಯಾಸ ಮಾಡುತ್ತ ಮುಂದೆ ಕಾಲೇಜು ಶಿಕ್ಷಣವನ್ನು ಪ್ರತಿಷ್ಠಿತ ಸಂಸ್ಥೆಯಾದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದಲ್ಲಿ ಮುಗಿಸಿದರು. ಉನ್ನತ ಪದವಿ ಪಡೆಯಲು ಹೆಚ್ಚಿನ ಸಂಗೀತ ಅಭ್ಯಾಸ ಶಾಸ್ತ್ರೀಯವಾಗಿ ಕಲಿಯಲು ಸ್ಥಳೀಯ ಪ್ರಖ್ಯಾತ ಸಂಗೀತತಜ್ಞ ಪ್ರೊ. ರೇವಯ್ಯ

ವಸ್ತ್ರದಮಠ ಹಾಗೂ ಶ್ರೀಮತಿ ಸರೋಜ ಅನಗರಕರರ ಹತ್ತಿರ ಕಿರಾಣಾ ಘರಾಣ ಸಂಗೀತ ಅಭ್ಯಾಸವನ್ನು ಮುಗಿಸಿದರು. ಇಂದಿರಾ ಸಂಗೀತ ಕಲಾ ವಿಶ್ವ ವಿದ್ಯಾಲಯ ಛತ್ತೀಸಗಡದಿಂದ ಎಂ.ಎ. ಪದವಿ ಪಡೆದು 1992–93ರಲ್ಲಿ ಶರಣಬಸವೇಶ್ವರ ವಿದ್ಯಾ ವರ್ಧಕ ಸಂಘದ ಗೋದು ತಾಯಿ ಪದವಿ ಮಹಿಳಾ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕಿ ಯಾಗಿ ಸೇವೆಗೆ ಸೇರಿದರು. ಪ್ರಸ್ತುತ 2008–09 ರಿಂದ ಇಲ್ಲಿಯವರೆಗೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.



ಆಕಾಶವಾಣಿ ಹಾಗೂ ದೂರದರ್ಶನದ 'ಗ್ರೇಡ' ಕಲಾವಿದೆ ಯಾಗಿ 1995ರಿಂದ ಸಂಗೀತ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಕಡೆ ಕಾರ್ಯಕ್ರಮ ನೀಡುತ್ತಿರುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮ ಹಾಗೂ ಧ್ವನಿ ಸುರುಳಿಗಳಾದ 'ಹೆಣ್ಣಿನ ಕಣ್ಣೀರು, ಹಾರಕೂಡ ಚೆನ್ನಬಸವ, ಕರುಣೇಶ್ವರ ಭಕ್ತಿಗೀತೆಗಳು, ಘತ್ತರಗಿ ಭಾಗಮ್ಮ, ಓಂ ಚೆನ್ನ ಕಾಳಿ ಕ್ರಿಯೇಷನ್ಸ್‌ರವರ ದೂರದರ್ಶನದ ಧಾರಾವಾಹಿಗೆ ಹಿನ್ನೆಲೆ ಗಾಯನ, ಮಂಗಳೂರು ಸಾಹಿತ್ಯ ಸಮ್ಮೇಳನ, ಮಳಖೇಡ ಉತ್ಸವ, ಗಡಿನಾಡು ಉತ್ಸವ, ಹೀಗೆ ಅನೇಕ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ವಚನೋತ್ಸವ ಮಹಾಪರಿಷತ್ತು ಗುಲಬರ್ಗಾ ಇವರಿಂದ 'ಗೀತ ವಿದೂಷಿ' ಎಂಬ ಬಿರುದು ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದಿಂದ 'ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿ ನೀಡಿ ಗೌರವಿಸಿದೆ. ಸಂಗೀತದಲ್ಲಿ ಸಂಶೋಧನೆಯ ಕಾರ್ಯ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾದಲ್ಲಿ ಮಾಡುತ್ತಿದ್ದಾರೆ.

(ಎಸ್‌ಎಪಿ)

ಜ


ಜಗದೀಶ ಎಂ. ಕಾಂಬಳೆ: ಲಲಿತಕಲಾ ಶಿಕ್ಷಣ ಪರಂಪರೆಯಲ್ಲಿ ಗುರುಶಿಷ್ಯ ಪರಂಪರೆಯನ್ನು ಭಾರತೀಯರಲ್ಲಿ ಹಿಂದಿನಿಂದಲು ಕಾಣುತ್ತೇವೆ. ಅದರಲ್ಲಿ ಚಿತ್ರ ಹಾಗೂ ಸಂಗೀತ ಕಲೆಯಲ್ಲಿ ಇದರದೇ ಆದ ಮಹತ್ವ ಹಾಗೂ ಒಂದು ಶಿಷ್ಯ ಪರಂಪರೆ ಇದೆ. ಇಂದಿನ ಸಮಕಾಲೀನ ಕಲಾ ಪರಂಪರೆಯಲ್ಲಿಯ ಈ ಗುರು ಶಿಷ್ಯ ಪರಂಪರೆ ಹೆಚ್ಚಾಗಿ ಸಾಂಪ್ರದಾಯಿಕ, ಕಿರುರೂಪ ಚಿತ್ರರಚನೆ ಮಾಡುವ ಕಲಾವಿದ ರಲ್ಲಿ ಕಾಣುತ್ತೇವೆ. ಕನ್ನಡ ನಾಡಿನ 'ಸಾಂಪ್ರದಾಯಿಕ ಕಿರುರೂಪ ಚಿತ್ರಕಲಾವಿದರಾಗಿ ಅಂತಾ ರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡು ಸುರಪುರ ಕಲಾಶೈಲಿಯನ್ನು, ಖ್ಯಾತಿಯ ವಿಜಯ ಹಾಗರ ಗುಂಡಿಯವರ ಶಿಷ್ಯರಾದ ಇವರು 1971 ಜೂನ್ 15ರಂದು ಗುಲಬರ್ಗಾದಲ್ಲಿ ಜನಿಸಿದರು.



ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ನಗರದ ಮಿಲಿಂದ ಸ್ಕೂಲ್‌ನಲ್ಲಿ ಪಡೆದರು. ಇಂದು ಸಾಂಪ್ರದಾಯಿಕ ಚಿತ್ರಕಲಾವಿದನಾಗಿ ರೂಪುಗೊಳ್ಳಲು ಸಾಧ್ಯ ವಾಯಿತು ಎಂದು ಸಂತಸದಿಂದ ಹೇಳುತ್ತಾರೆ. ಇವರಲ್ಲಿ ಚಿತ್ರರಚನೆಯ ಆಸಕ್ತಿಯನ್ನು ಮನಗಂಡು ಚಿತ್ರಕಲಾವಿದ ವಿಜಯ ಹಾಗರಗುಂಡಗಿಯವರು ಚಿತ್ರಕಲೆಯ ಪ್ರಾಥಮಿಕ ಹಂತದ ರಚನಾ ವಿಧಾನವನ್ನು ಹೇಳಿಕೊಡಲು ಪ್ರಾರಂಭಿ ಸುತ್ತಾರೆ. ಅದನ್ನು ನಿಷ್ಠೆಯಿಂದ ಕಲಿತ್ತಿದ್ದಾರೆ.

ಎಸ್.ಎಸ್.ಎಲ್.ಸಿ, ಪಿಯುಸಿ ನಂತರ ಇಂಜಿನೀಯರ ಆಗುವ ಹಂಬಲ. ಆದರೆ ಇವರಲ್ಲಿದ್ದ ಇವರ ಅಂತರಾಳದಲ್ಲಿದ್ದ ಕಲಾವಿದ ಅದನ್ನು ಒಪ್ಪಲಿಲ್ಲ ಹಾಗೂ ತನಗೆ ಇಷ್ಟವಿದ್ದ ಕ್ಷೇತ್ರದಲ್ಲಿ ಶಿಕ್ಷಣ ಪಡೆಯಬೇಕೆಂಬ ಬಯಕೆಯಿಂದ ನಗರದ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಕಲಾ ಮಹಾವಿದ್ಯಾಲಯ ದಲ್ಲಿ ಪ್ರವೇಶ ಪಡೆದು ಬಿ.ಎಫ್.ಎ ಹಾಗೂ ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಹಾಗೂ ಸಮಕಾಲಿನ ಕಲೆ, ಕಲಾ ಪರಿಸರ, ಕಲಾ ಇತಿಹಾಸ, ಕಲಾ ಸಂವೇದನೆಯನ್ನು ಮೈಗೂಡಿಸಿ ಕೊಂಡರು. ವಿಜಯ ಹಾಗರಗುಂಡಗಿಯವರ ಕಲಾ ಶೈಲಿಯ ಪ್ರಭಾವಕ್ಕೆ ಒಳಗಾಗಿ ಶೈವ, ವೈಷ್ಣವ, ರಾಗಗಳು, ಗಜಲ್, ಹೀಗೆ ಅನೇಕ ವಿಷಯದ ಕುರಿತು ಕಿರುರೂಪ ಕಲಾಕೃತಿಗಳನ್ನು ರಚನೆ ಮಾಡುತ್ತ ಇಂದು ಯುವ ಸಾಂಪ್ರದಾಯಿಕ ಕಲಾವಿದರಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಸಾಂಪ್ರದಾಯಿಕ ವಿಷಯವನ್ನು ಸಮಕಾಲಿನ ಸಮಯದಲ್ಲಿ ಸಾಂಪ್ರದಾಯಿಕ ಕಲಾ ಪ್ರಕಾರವನ್ನು ತನ್ನದೇ ಆದ ಹೊಸ ಸಂಯೋಜನೆ ಮೂಲಕ ಅಭಿವ್ಯಕ್ತಿ ಪಡಿಸುವುದರಿಂದ ಇಂದು ಇವರನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕಲಾಶಿಬಿರದಲ್ಲಿ ಚಿತ್ರ ರಚನೆಯ ಅವಕಾಶ ಹಾಗೂ ಅಂತರಾಷ್ಟ್ರೀಯ ಪ್ರಖ್ಯಾತಿ ಕಲಾವಿದರೊಂದಿಗೆ ಚಿತ್ರಕಲಾ ಪ್ರದರ್ಶನದಲ್ಲಿ ಗುರುತಿಸಿ ಕೊಳ್ಳುವುದಕ್ಕೆ ಕಾರಣವಾಗಿದೆ.




'ಶಕ್ತಿ' ಜಲವರ್ಣ ಇಂಕ್ ಮತ್ತು ಬ್ರಶ್

ಇವರ ಕಲಾಕೃತಿಗಳು ಅನೇಕ ಪ್ರದರ್ಶನಗಳಲ್ಲಿ ಆಯ್ಕೆ ಗೊಂಡಿವೆ. ಅವುಗಳಲ್ಲಿ ಪ್ರಮುಖವಾದವು. 1996ರಲ್ಲಿ 9ನೇ ರಾಷ್ಟ್ರೀಯ ಕಲಾಮೇಳ, 2001ರಲ್ಲಿ ಹೈದ್ರಾಬಾದ ಆರ್ಟ್ ಸೊಸೈಟಿ 44,46,50ನೇ ರಾಷ್ಟ್ರೀಯ ಕಲಾಪ್ರದರ್ಶನ ಕೇಂದ್ರ ಲಲಿತಕಲಾ ಅಕಾಡೆಮಿ ಹೊಸದಿಲ್ಲಿ, 2001–02 10ನೇಯ ಅಖಿಲ ಭಾರತೀಯ ಕಲಾಪ್ರದರ್ಶನ ಮುಂಬಯಿ ಆರ್ಟ್ ಸೊಸೈಟಿ, 2002ರಲ್ಲಿ ಅಖಿಲ ಭಾರತೀಯ ಕಲಾಪ್ರದರ್ಶನ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ, ಹೀಗೆ ಅನೇಕ ಪ್ರತಿಷ್ಠಿತ ಕಲಾಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿವೆ.

ಕಲಾಶಿಬಿರಗಳಲ್ಲಿ ತಮ್ಮ ಚಿತ್ರ ರಚನೆಯಿಂದ ಎಲ್ಲರ ಗಮನ ಸೆಳೆದಿದ್ದಾರೆ. ಕೇಂದ್ರ ಲಲಿತಕಲಾ ಅಕಾಡೆಮಿಯ 50ನೇ ವರ್ಷಾ ಚರಣೆಯ ಅಂಗವಾಗಿ ಕಲಾಶಿಬಿರ, ಹಾಗೂ ಅಂತಾರಾಷ್ಟ್ರೀಯ ಕಲಾ ಸಿಂಪೋಜಿಯಂ ಆಯೋಜನೆ ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾ ರಾಷ್ಟ್ರೀಯ ಮಟ್ಟದ ಕಲಾಶಿಬಿರದಲ್ಲಿ ರಾಷ್ಟ್ರದ ಕಲಾವಿದರಾದ ಕೆ. ಲಕ್ಷ್ಮಣ, ಜಿ. ಅನುಪಮ ಸಿಂದೆ, ಅರ್ಪರ್ಣಾ ಸಿ, ರಾಣಿ ದುಮಲ್ ಅವರೊಂದಿಗೆ ಕಲಾಶಿಬಿರ ಹಾಗೂ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ ಯುವ ಕಲಾವಿದ. 2011–12ರಲ್ಲಿ ನಡೆದ ಅಂತಾರಾಷ್ಟ್ರೀಯ ಸಿಂಪೋಜಿಯಂ ಗುಲಬರ್ಗಾ ಶ್ರೀಗುರು ವಿದ್ಯಾಪೀಠದಲ್ಲಿ ನಡೆದ ಶಿಬಿರದಲ್ಲಿಯು ಭಾಗವಹಿಸಿದ ಇವರಿಗೆ 1995ರಲ್ಲಿ ಗುಲಬರ್ಗಾ ವಿಶ್ವವಿದ್ಯಾ ಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ 1996,98,99, 2001–02ರ ಕಲಬುರ್ಗಿ ಕಲಾಮಹೋತ್ಸ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿ ಹಾಗೂ ಶಿಬಿರಗಳಲ್ಲಿ ಭಾಗವಹಿಸುತ್ತ ಸ್ವತಂತ್ರ ಕಲಾವಿದರಾಗಿ ಸಾಂಪ್ರದಾಯಿಕ ಚಿತ್ರ, ಭಾವಚಿತ್ರ ಹಾಗೂ ಸಮಕಾಲಿನ ಕಲಾಶೈಲಿಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. (ಎಸ್‌ಪಿಡಬ್ಲ್ಯೂ)


ಜಗನ್ನಾಥ ಎನ್. ಚೆಂಗಟಾ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ತಬಲಾ ವಾದನದಲ್ಲಿ ನಿಪುಣರು. ಚಿಂಚೋಳಿ ತಾಲ್ಲೂಕಿನ 'ಕೋಡ್ಲಿ'ಯಲ್ಲಿ 1965 ಜೂನ್ 1ರಂದು ಜನಿಸಿದರು. ತಂದೆ ನಾಗಪ್ಪ ಚೆಂಗಟಾ. ತಾಯಿ ನಾಗಮ್ಮ. ಹಿಂದೂಸ್ತಾನಿ ಶಾಸ್ತ್ರೀಯ ತಬಲಾ ವಾದನದಲ್ಲಿ ಪಳಗಿದವರಾಗಿದ್ದಾರೆ. ಕೆ.ಎಸ್. ಹಡಪದ ಅವರಲ್ಲಿ ತಬಲಾ ವಿದ್ಯಾಭ್ಯಾಸವನ್ನು ಮಾಡಿದರು.



ಇವರು ಆಕಾಶವಾಣಿ ದೂರದರ್ಶನ 'ಬಿ' ಗ್ರೇಡ್ ತಬಲಾ ವಾದಕರಾಗಿ ಸುಮಾರು 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಲವು ಕಾರ್ಯ ಕ್ರಮಗಳನ್ನು ನೀಡಿದ್ದಾರೆ. ಇವರು ಕರ್ನಾಟಕ ಪ್ರೌಢ ಶಿಕ್ಷಣ ಸಂಗೀತ ಮಂಡಳಿಯ ಪರಿ ವೀಕ್ಷಕರಾಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ತಬಲಾ ವಾದನದಲ್ಲಿ ವಿದ್ವತ್ ಗ್ರೇಡ್ ಪಡೆದ ಇವರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ರಾಜ್ಯಗಳಲ್ಲಿ ಹೆಸರು ಪಡೆದು ಕೊಂಡಿದ್ದಾರೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಹಲವು ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ಕಲಾರತ್ನ, ತಬಲಾ ನಿಪುಣ, ಕಲಾಜ್ಯೋತಿ, ಹಾಗೂ ಚೆನ್ನವೀರೇಶ್ವರ ವಿರಕ್ತಮಠ ಬಬಲಾದ ಇವರಿಂದ 'ಉತ್ತಮ ತಬಲಾ ವಾದಕ' ರೆಂದು ಪ್ರಶಸ್ತಿ ನೀಡಿ ಗೌರವಿಸಿದೆ. (ಆಯ್‌ಕೆ)

ಜಗನ್ನಾಥ ಬಿ. ಬೆಲ್ಲದ: ಇವರು ಗುಲಬರ್ಗಾ ನಗರದ ಬಡಾ ರೋಜಾ ಕಾಲೋನಿಯಲ್ಲಿ 1978 ಜೂನ್ 15ರಂದು ಒಂದು ಬಡ ಸಂಪ್ರದಾಯಿಕ ಕುಟುಂಬದಲ್ಲಿ ಜನಿಸಿದರು. ಬಡತನ ದಲ್ಲಿಯೇ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಗುಲಬರ್ಗಾ ದಲ್ಲಿಯೇ ಮುಗಿಸಿದ ಇವರು ಚಿಕ್ಕವಯಸ್ಸಿನಲ್ಲಿಯೇ ಸಮು ದಾಯ, ಸಂಘ, ಸಂಸ್ಥೆಗಳ ಮುಖಾಂತರ ಬುದ್ಧನ ಜಾತಕ ಕಥೆಗಳ ಮೇಲೆ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸುವ ಮುಖಾಂತರ ಚಿತ್ರಕಲಾ ಜಗತ್ತಿಗೆ ಕಾಲಿರಿಸಿದರೆನ್ನ ಬಹುದು. ಇಂತಹ ಜಾತಕ ಕಥೆಗಳ ಮುಖಾಂತರ ಪ್ರಭಾವಿತರಾದ ಕಲಾವಿದ ಇವರು. ಪ್ರೌಢ ಶಿಕ್ಷಣ ಮುಗಿಸಿದ ಮೇಲೆ ಮುಂದಿನ ವಿದ್ಯಾಭ್ಯಾಸವನ್ನು ಕಲೆ ಯಲ್ಲಿಯೇ ಮುಂದುವರಿಸಲು



ನಿರ್ಧರಿಸಿದರು. ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯು ದೃಶ್ಯಕಲಾ ಶಿಕ್ಷಣಕ್ಕೆ ತನ್ನದೇ ಆದ ಪರಂಪರೆಯಿಂದ ಗುರುತಿಸಿ ಕೊಂಡು ಹಾಗೂ ಹೊಸ ದೃಷ್ಟಿ ನೀಡುವ ವಿದ್ಯಾರ್ಥಿಗಳಿಗೆ ಆಗಾದವಾದ ಪ್ರೇರಣೆ ಕೇಂದ್ರವಾಗಿತ್ತು. ಹೀಗಾಗಿ ಸಹಜ ವಾಗಿಯೇ ಅದರತ್ತ ಗಮನಸೆಳೆಯಿತು. ಕಲಾಶಿಕ್ಷಣ ಪಡೆಯಲು ಪ್ರವೇಶ ಪಡೆದ ಇವರು ಖ್ಯಾತ ಕಲಾವಿದ ವಿ.ಜಿ. ಅಂದಾನಿ ಯವರ ಮಾರ್ಗದರ್ಶನದಲ್ಲಿ ಸಮಕಾಲೀನ ಕಲೆಯ ಬಗೆಗೆ ತಿಳಿದುಕೊಂಡರೆ ಸಂಪ್ರದಾಯ ಚಿತ್ರಕಲೆಯನ್ನು ವಿಜಯ ಹಾಗರಗುಂಡಗಿಯವರಿಂದ ಪಡೆದರು. ಸಂಪ್ರದಾಯಕ ಚಿತ್ರಕಲೆಯನ್ನು ಸಮಕಾಲೀನ ಚಿತ್ರಕಲೆಯ ಜೊತೆಗೆ ಮೂಡಿಸಿ ಕೊಂಡು ಕಲಾಕೃತಿಗಳ ರಚನೆ ಮಾಡುವುದು ಇವರ ವಿಶಿಷ್ಟ ತಂತ್ರಗಾರಿಕೆ. ಇಂತಹ ತಂತ್ರಗಾರಿಕೆಯಿಂದ ರಚನೆಯಾದ ಇವರ ಕಲಾಕೃತಿಗಳ ಶೈಲಿಯನ್ನು ಮನಗಂಡ ಗುಲಬರ್ಗಾ ವಿಶ್ವವಿದ್ಯಾ ಲಯವು ಇವರಿಗೆ ವಿದ್ಯಾರ್ಥಿ ದಿಶೆಯಲ್ಲಿಯೇ ವಿಶ್ವವಿದ್ಯಾ ಲಯದ ರಾಜೋತ್ಸವ ಪ್ರಶಸ್ತಿಯನ್ನು 2003ರಲ್ಲಿ ನೀಡಿ ಗೌರವಿಸಿತ್ತು. ಇನ್ನೂ ವಿದ್ಯಾರ್ಥಿಯ ದಿಶೆಯಲ್ಲಿಯೇ ಗುಲಬರ್ಗಾ ವಿಶ್ವವಿದ್ಯಾಲಯದ ಯುವಜನೋತ್ಸವದಲ್ಲಿ ಚಿನ್ನದ ಪದಕವನ್ನು ಪಡೆದರು. ಹೀಗೆ ವಿದ್ಯಾರ್ಥಿಯಾಗಿರುವಾಗಲೇ



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಅನೇಕ ಪ್ರಶಸ್ತಿಗಳನ್ನು ಪಡೆದ ಇವರು ಮುಂದೆ 2003ರಲ್ಲಿಯೇ ಎಂ.ಎಫ್.ಎ. ಪೇಂಟಿಂಗ್‌ನಲ್ಲಿ ತೇರ್ಗಡೆ ಹೊಂದಿದರು.

ನಿರಂತರವಾಗಿ ಚಿತ್ರಕಲೆಯಲ್ಲಿ ತಮ್ಮನ್ನು ದುಡಿಸಿ ಕೊಳ್ಳು ತ್ತಿರುವ ಕಲಾವಿದ ಬೆಲ್ಲದರವರ ಹೆಚ್ಚಿನ ಕೃತಿಗಳು ಆಕ್ರೆಲಿಕ ವರ್ಣಗಳಾಗಿವೆ. ಜೀವನಾನುಭವ ಹಾಗೂ ಕಲ್ಪನೆಗಳ ಸಂಗಮ ವಾಗಿ ಕಲಾಕೃತಿಗಳಲ್ಲಿ ಕಲಾವಿದನ ವೈಯಕ್ತಿಕ ಶೈಲಿ ಅಭಿವ್ಯಕ್ತಿ ಕೌಶಲ್ಯ ಕಲಾಸೂಕ್ಷ್ಮತೆ ಸಾಮಾಜಿಕ ನೆಲೆಯ ಸಂವೇದನೆಗಳನ್ನು ಕಾಣಬಹುದು. ಕಲಾಕೃತಿಗಳಲ್ಲಿ ಶೀರ್ಷಿಕೆಗೆ ಅನುರೂಪವಾಗು ವಂತಹ ವರ್ಣ ಸಂಯೋಜನೆ ಸಂಪ್ರದಾಯಕ ಶೈಲಿಗಳ ಮಾನವಾಕೃತಿಗಳ ಮೂರ್ತ ಹಾಗೂ ಅಮೂರ್ತ ರೂಪ ಗಳೊಂದಿಗೆ ಪೂರಕವಾದ ಸಮೃದ್ಧ ಸಂಕೇತಗಳು ಹಾಗೂ ರೇಖೆಗಳು ಅಧಿಕ ಪ್ರತಿನಿತ್ಯ ಪಡೆದಿವೆ. ಸಾಮಾನ್ಯವಾಗಿ ಇವರ ಕಲಾಕೃತಿಗಳು ಸಾಂಪ್ರದಾಯಿಕ ಚಿತ್ರಕಲೆಯ ಶೈಲಿಗಳೆನಿಸಿದರು. ಸಮಕಾಲೀನ ಸಮಸ್ಯೆಗಳ ಭಿನ್ನ ಪರಿಕಲ್ಪನೆಗಳೊಂದಿಗೆ ಭಾವ ನಾತ್ಮಕ ಪರಿಣಾಮ ಬೀರುವ ಪ್ರಬುದ್ಧ ಕಲಾಕೃತಿಗಳಾಗಿವೆ.

ಇವರು ಈಗಾಗಲೇ ಹಲವಾರು ಗುಂಪು ಪ್ರದರ್ಶನಗಳನ್ನು ಮಾಡಿದ್ದಾರೆ. Atlantis Gallery London ಬಾಂಬೆ, ದೆಹಲಿ, ಬೆಂಗಳೂರು, ಪೂನಾ, ಹೈದ್ರಾಬಾದ ಕಲ್ಕತ್ತಾ, ಮದ್ರಾಸ್ ಹಾಗೂ ಕೇರಳ ಹೀಗೆ ಮುಂತಾದ ಕಡೆಗಳಲ್ಲಿ ನಡೆಸಿಕೊಂಡು ಬಂದಿ ದ್ದಾರೆ. ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನದಲ್ಲಿ ಒಂದು ಬಾರಿ ಇವರ ಕಲಾಕೃತಿ ಆಯ್ಕೆ ಯಾಗಿದ್ದು, ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರದರ್ಶನ ಸೇರಿದಂತೆ ಬಾಂಬೆ ಆರ್ಟ್ ಸೊಸೈಟಿ, ತಿಲಕ ಸ್ಮಾರಕ, ನಾಗಪೂರ, ಬಿರ್ಲಾ ಅಕಾಡೆಮಿ ಕಲ್ಕತ್ತಾ ಹೀಗೆ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸುವುದಲ್ಲದೆ ಹತ್ತು ಹಲವು ಕಲಾ ಶಿಬಿರಗಳಲ್ಲಿ ಸಹ ಇವರು ಭಾಗವಹಿಸಿರುತ್ತಾರೆ. 1996ರಲ್ಲಿ ಹಂಪಿ ಕಲಾಶಿಬಿರ, ಬೆಂಗಳೂರಿನ ಕಲಾಶಿಬಿರ, ಕರ್ನಾಟಕ ಕಲಾಮೇಳದ ಕಲಾಶಿಬಿರ, ಸುನಾಮಿಯ ಕಲಾಶಿಬಿರ ಗುಲಬರ್ಗಾ, ಮತ್ತು ಸಾಂಪ್ರದಾಯಿಕ ಶೈಲಿಯ ಕಲಾಶಿಬಿರ ಕೇರಳ ಲಲಿತಕಲಾ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ, ಭಾರತೀಯ ಸಂಪ್ರದಾಯಿಕ ಕಲಾಶಿಬಿರ ಮೈಸೂರು, ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ಸಂಗ್ರಹಾಲಯ ಕಲಾಶಿಬಿರ ಕೇರಳ, ನಾಗಪೂರ ಹಾಗೂ ಬೆಂಗಳೂರು ಸಂಪ್ರದಾಯಿಕ ಶೈಲಿಯ ಕಲಾಶಿಬಿರ, ಅಲ್ಲದೇ ಇನ್ನೂ ಅನೇಕ ಸಂಘ-ಸಂಸ್ಥೆಗಳ ಕಲಾಶಿಬಿರಗಳಲ್ಲಿ ಭಾಗವಹಿಸಿ ದ್ದಾರೆ. ಇವರ ಕಲಾಕೃತಿಗಳ ಶೀರ್ಷಿಕೆಗಳು ಸಾಮಾನ್ಯ ಅನುಭವ ಗಳಾದರೂ ಅವುಗಳನ್ನು ಚಿತ್ರಿಸಿದ ಶೈಲಿ ವಿಭಿನ್ನ ಪರಿಕಲ್ಪಗಳು ವರ್ಣಗಳ ಸಾಧನೆಯ ಸಫಲತೆಯನ್ನು ಬಿಂಬಿಸುತ್ತವೆ. ಇವರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. 2002ರಲ್ಲಿ ಬಾಂಬೆ ಆರ್ಟ್ ಸೊಸೈಟಿ ಪ್ರಶಸ್ತಿ, Glory of India ಪ್ರಶಸ್ತಿ, IIFS ದೆಹಲಿ ಮತ್ತು ಲಂಡನ್ ಪ್ರಶಸ್ತಿಗಳು, ಇನ್ನೂ ಅನೇಕ ಪ್ರಶಸ್ತಿಗಳನ್ನು ಪಡೆದಿ ದ್ದಾರೆ. ಅನೇಕ ಹೊಸ ಹೊಸ ಶೈಲಿಯ ಕಲಾಕೃತಿಗಳನ್ನು ರಚನೆ ಮಾಡುತ್ತಿರುತ್ತಾರೆ. ಇವರ ಕಲಾಸಂಗ್ರಹಗಳು ಕೂಡಾ ದೇಶ

ವಿದೇಶಗಳಲ್ಲಿಯೂ ಇವೆ. ದೃಶ್ಯಕಲಾ ಕ್ಷೇತ್ರ ಆರಿಸಿಕೊಂಡಿದ್ದು ತುಂಬಾ ಆಸೆಯಿಂದ ಅದನ್ನು ತಮ್ಮ ಬದುಕಿನಲ್ಲಿ ಸ್ವೀಕಾರ ಮಾಡಿಕೊಂಡು ಪ್ರಸ್ತುತ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವ ಕನಸಿನೊಂದಿಗೆ ತಮ್ಮ ಕಲಾರಾಧನೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. (ಕೆಡಿ)

ಜಗನ್ನಾಥ ವಾಡೆಯಲ್ಲಿನ ಭಿತ್ತಿ ಚಿತ್ರಗಳು: ಪ್ರಸ್ತುತ ವಾಡೆ ತಾಲೂಕು ಕೇಂದ್ರವೆನಿಸಿದ ಚಿತ್ತಾಪೂರ ಪಟ್ಟಣದಲ್ಲಿದೆ. ಒಂದು ಕಾಲದಲ್ಲಿ ಈ ಪಟ್ಟಣ 'ನಾಗಾವಿ' ಹೆಸರಿನಿಂದಲೇ ಗುರುತಿಸಿ ಕೊಂಡಿತ್ತು. ಕ್ರಿ.ಶ. 1750ರ ಸುಮಾರಿಗೆ ಚಿತ್ತಾಷಾವಲಿ ಎಂಬ ಸೂಫಿ ಇಲ್ಲಿಗೆ ಆಗಮಿಸಿದ. ಅನೇಕ ಪವಾಡಗಳನ್ನು ಮಾಡುತ್ತ ಇಲ್ಲಿನ ಜನರ ಇಷ್ಟಾರ್ಥಗಳನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ. ಇವೆಲ್ಲ ಕಾರಣಗಳಿಂದಾಗಿ ಈ ಸೂಫಿ ಇಲ್ಲಿಯೇ ನೆಲೆಯನ್ನು ಕಂಡುಕೊಂಡ ಇಲ್ಲಿಯೇ ಸಮಾಧಿಯನ್ನೂ ಹೊಂದಿದ್ದಾನೆ. ಚಿತ್ತಾಷಾವಲಿ ಸೂಫಿ ಹೆಸರಿನಿಂದಾಗಿ ಈ ಪ್ರದೇಶವನ್ನು ಚಿತ್ತಾಪೂರ ಎಂದು ಕರೆಯಲಾಯಿತು ಎಂದು ದಾಖಲೆಗಳು ಹೇಳುತ್ತವೆ.

ಹೈದರಾಬಾದ ನಿಜಾಮನ ಆಡಳಿತಕ್ಕೆ ಒಳಪಟ್ಟಿದ ಈ ಪ್ರದೇಶದಲ್ಲಿ ಆ ರಾಜ್ಯದ ಆಚರಣೆ, ಸಂಸ್ಕೃತಿಗಳ ಅನುಕರಣೆ ಗಳೂ ಆದವು. ಹಿಂದೆ ನಿಜಾಮನು ಇಲ್ಲಿಗೆ ಬಂದಾಗ ವಿಶ್ರಾಂತಿಗೆಂದು ಕಟ್ಟಡವೊಂದನ್ನು ನಿರ್ಮಿಸಲಾಯಿತು. ಈ ವಾಸ್ತುಶೈಲಿಯು ಇಲ್ಲಿನ ಇತರ ಮನೆಗಳ ರಚನೆಗೂ ಆಧಾರ ವಾಯಿತು. ಸುಮಾರು ನೂರೈವತ್ತು ವರ್ಷಗಳ ಹಿಂದೆಯೇ ಬೇರೆ ಬೇರೆ ಓಣಿಗಳಲ್ಲಿ ಇಂಥ ಭವ್ಯ ಬಂಗಲೆಗಳು ನಿರ್ಮಾಣ ಗೊಂಡವು. ಈ ಬಂಗಲೆಗಳ ಒಳವಿನ್ಯಾಸ ಸ್ಥಳೀಯ ಲಕ್ಷಣ ಗಳಿಂದ ಕೂಡಿದ್ದರೂ, ನಿಜಾಮ್ ರಾಜ್ಯದಲ್ಲಿ ಪ್ರಚಲಿತವಿದ್ದ ಗಾರೆನಿರ್ಮಿತಿ ಕಿಟಕಿ ಮುಚ್ಚಿಕೆಗಳು, ಗಾಜಿನ ತೂಗುದೀಪಗಳು, ಅಪೂರ್ವ ಕಲಾಕೃತಿಗಳು, ಅಲಂಕಾರಿಕ ವಸ್ತುಗಳು ಸಾಮಾನ್ಯ ವಾಗಿ ಇಲ್ಲಿನ ಎಲ್ಲ ಮನೆಗಳನ್ನು ಅಲಂಕರಿಸಿದುವು. ಈ ರೀತಿಯ




ಜಗನ್ನಾಥ ವಾಡೆ, ಚಿತ್ತಾಪೂರ

ಸುಮಾರು ಎಂಟರಿಂದ ಹತ್ತು ಮನೆಗಳು ಚಿತ್ತಾಪೂರ ಪಟ್ಟಣ ದಲ್ಲೇ ಇವೆ. ಅವುಗಳಲ್ಲಿ ನಂದ್ಯಾಲರ ವಾಡೆ, ಝಳಕಿಯವರ ವಾಡೆ, ಭಾವಿಕಟ್ಟಿಯವರ ವಾಡೆ, ಬಾಗೋಡಿಯವರ ವಾಡೆ, ದೇಶಮುಖರ ವಾಡೆ, ಭಾಲಚಂದ್ರ ನಾಯಿಕರ ವಾಡೆ, ಅಂತಯ್ಯ ಕಲಾಲ್‌ರ ವಾಡೆ, ಜಗನ್ನಾಥರ ವಾಡೆ ಮುಂತಾದವುಗಳನ್ನು ಹೆಸರಿಸಬಹುದು. ಇವೆಲ್ಲವುಗಳಲ್ಲಿ ಜಗನ್ನಾಥ ವಾಡೆಯು ಕಲಾತ್ಮಕ ದೃಷ್ಟಿಯಿಂದ ಮಾತ್ರವಲ್ಲ ಭಿತ್ತಿ ಚಿತ್ರಗಳುಳ್ಳ ಏಕೈಕ ನೆಲೆಯಾಗಿಯೂ ಕಾಣಿಸಿಕೊಳ್ಳುತ್ತದೆ.

ಪ್ರಸ್ತುತ ವಾಡೆ ಜಗನ್ನಾಥ ನಾಗಪ್ಪನವರ ಒಡೆತನಕ್ಕೆ ಸೇರಿದೆ. ಈ ವಾಡೆಯಲ್ಲಿಂದು ಅವರ ಮಕ್ಕಳು ಮೊಮ್ಮಕ್ಕಳು ನೆಲೆಸಿದ್ದಾರೆ. ಚಿತ್ತಾಪೂರ ಪಟ್ಟಣದ ನಾಗಾವಿ ಪರಿಸರದಲ್ಲಿ ಅಪಾರ ಭೂಮಿ ಯನ್ನು ಹೊಂದಿದ್ದ ನಾಗಪ್ಪನವರು ಕೃಷಿ ಕಾಯಕ ದೊಂದಿಗೆ ದಿನಸಿ ಅಂಗಡಿ ವ್ಯಾಪಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದರು. ದಿನಸಿ ಅಂಗಡಿಯ ಸಾಮಾನುಗಳನ್ನು ಒಟ್ಟ ಲಿಕ್ಕೆಂದೇ ಖಾಲಿ ಬಿದ್ದಿದ್ದ ಈ ವಾಡೆಯನ್ನು 1940ರ ಸುಮಾರಿಗೆ ಕೊಂಡುಕೊಂಡರು. ಇದಕ್ಕೂ ಮುಂಚೆ ಕೋಟಾ ಎಂದೇ ಕರೆಯಲಾಗುತ್ತಿದ್ದ ಈ ಹಳೇಯ ಬಂಗಲೆಯನ್ನು ನಾಗಪ್ಪನವರು ಖರೀದಿಸಿದ ಮೇಲೆ ಈ ವಾಡೆಗೆ ಜಗನ್ನಾಥ ನಾಗಪ್ಪನವರ ವಾಡೆ ಯೆಂದು ಕರೆಯುವುದು ರೂಢಿಯಾಯಿತು. ಈ ವಾಡೆಯನ್ನು ಕಟ್ಟಿಸಿದವರು ಆಂಧ್ರ ಮೂಲದ ಜೈನ ಸಮುದಾಯಕ್ಕೆ ಸೇರಿದ ಒಬ್ಬ ಶ್ರೀಮಂತ ವ್ಯಕ್ತಿ. ಈ ವಾಡೆಗೆ ಹೊಂದಿಕೊಂಡೇ ಇನ್ನೆರಡು ಚಂದ್ರಶೇಖರ ಬಾಗೋಡಿಯವರ ಮನೆ ಮತ್ತು ಶೇಷಗಿರಿರಾವ್ ಕುಲಕರ್ಣಿಯವರ ಮನೆಗಳಿವೆ. ಒಂದು ಮನೆಯಿಂದ ಇನ್ನೊಂದು ಮನೆಗೆ ತೆರಳಲು ಬಾಗಿಲುಗಳೂ ಇವೆ.

ಶತಮಾನದಷ್ಟು ಹಳೆಯದಾದ, ಎರಡು ಅಂತಸ್ತುಳ್ಳ ಜಗನ್ನಾಥ ವಾಡೆ ಪೂರ್ವಾಭಿಮುಖವಾಗಿದ್ದು, ಎತ್ತರವಾದ ಜಗಲಿಯ ಮೇಲೆ ನಿರ್ಮಾಣಗೊಂಡಿದೆ. ಸ್ಥಳೀಯ ಬಿಳಿ ಶಿಲೆಯಲ್ಲಿ ನಿರ್ಮಾಣಗೊಂಡರೂ ಹೊರಭಾಗದ ಬಾಲ್ಕನಿ ವಿನ್ಯಾಸಗಳು ಮತ್ತು ಮೇಲಂತಸ್ತಿನ ಗಾರೆ ವಿನ್ಯಾಸವು ನಿಜಾಮ ರಾಜ್ಯದ ವಾಸ್ತು ರಚನೆಗಳನ್ನು ಹೋಲುತ್ತದೆ. ಕಟ್ಟಡದ ಒಳ ವಿನ್ಯಾಸ ಸ್ಥಳೀಯ ಲಕ್ಷಣಗಳನ್ನು ಒಳಗೊಂಡಿದೆ. ವಾಡೆಯನ್ನು ಪ್ರವೇಶಿಸುತ್ತಿದ್ದಂತೆಯೇ ಇಕ್ಕೆಲಗಳಲ್ಲಿ ಎತ್ತರವಾದ ಝಳಜಿ ಯಿದೆ. ಉಳಿದಂತೆ ಒಳಾವರಣ ಚೌಕಾಕಾರದ ವಿನ್ಯಾಸವನ್ನು ಹೊಂದಿದ್ದು, ಎತ್ತರವಾದ ಜಗಲಿಯ ಮೇಲೆ ಸುತ್ತಲೂ ಇರುವ ಕಮಾನುಗಳನ್ನು 12 ಕಂಬಗಳು ಹೊತ್ತು ನಿಂತಿವೆ. ಪ್ರತಿಯೊಂದು ಕಂಬಗಳ ಹಾಗೂ ಬೋದಿಗೆಗಳ ಮೇಲಿನ ಕೆತ್ತನೆ ವಿಭಿನ್ನ ವಾಗಿದೆ. ಎರಡಂತಸ್ತಿನ ಈ ವಾಡೆಯ ಕೆಳ ಅಂತಸ್ತಿಗೆ ಸಾಗು ವಾನಿ ಮರದ ಕಟ್ಟಿಗೆಗಳನ್ನು ಬಳಸಲಾಗಿದ್ದರೆ, ಮೇಲಂತಸ್ತಿಗೆ ಮಾವು, ಬೇವಿನ ಮರದ ಕಟ್ಟಿಗೆಗಳನ್ನು ಬಳಸಿದೆ.

ತಲಬಾಗಿಲ ಮೇಲಿನ ಕಿಟಕಿಗಳು ಕಾಷ್ಠಪಟ್ಟಿಕೆಗಳಿಂದ ಕೂಡಿವೆ. ಹಾಗೆಯೇ ಮೇಲಂತಸ್ತಿನ ಒಳಮಾಳಿಗೆಯಲ್ಲೂ ಕಾಷ್ಠ ಪಟ್ಟಿಕೆಗಳ ಜೋಡಣೆಯಿದ್ದು, ಇದರಲ್ಲಿ ವಿವಿಧ ವರ್ಣಗಳಿಂದ ಬಿಡಿಸಿದ ಹೂಬಳ್ಳಿಗಳ ವಿನ್ಯಾಸಗಳಿವೆ. ಕೆಂಪು, ನೀಲಿ, ಹಳದಿ,



ಜಗನ್ನಾಥ ವಾಡೆಯಲ್ಲಿನ ಹೂಬಳ್ಳಿ ವಿನ್ಯಾಸದ ಭಿತ್ತಿಚಿತ್ರ

ಬಿಳಿ ವರ್ಣಗಳೊಂದಿಗೆ ಮಿಶ್ರವರ್ಣಗಳ ಬಳಕೆ ಈ ಚಿತ್ರಗಳಲ್ಲಾಗಿದೆ. ಮಾತ್ರವಲ್ಲ ಹೂಬಳ್ಳಿಗಳಲ್ಲಿ ನೆರಳು ಬೆಳಕಿನ ವ್ಯತ್ಯಾಸಗಳನ್ನು ತೋರಿಸಿದೆ. ಮೊದಲು ಕಟ್ಟಿಗೆಯ ಫಲಕಗಳ ಮೇಲೆ ಈ ಚಿತ್ರಗಳನ್ನು ಬಿಡಿಸಿ ಅನಂತರದಲ್ಲಿ ಒಳಮಾಳಿಗೆಗೆ ಜೋಡಿಸಿರಬಹುದಾದ ಸಾಧ್ಯತೆಗಳಿವೆ. ಒಂದರ್ಥದಲ್ಲಿ ಈ ಚಿತ್ರ ಸ್ವರೂಪಗಳು ವಾಡೆಯ ಕಲಾ ಮೌಲ್ಯವನ್ನು ಹೆಚ್ಚಿಸಿವೆ ಎನ್ನಬಹುದು. ಈ ಮನೆಯಲ್ಲಿ ಏನೇ ಶುಭಕಾರ್ಯಗಳು ನಡೆದರೆ ಸುಣ್ಣ-ಬಣ್ಣಗಳಿಂದ ಅಲಂಕರಿಸಲಾಗುತ್ತದೆ. ಆದರೆ, ಚಿತ್ರಿತ ಪಟ್ಟಿಕೆಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದೆ ಎನ್ನುತ್ತಾರೆ ಮನೆಯ ಹಿರಿಯರು.

ಈ ವಾಡೆಯಲ್ಲಿ ನಿಜಾಮ್ ರಾಜ್ಯದಲ್ಲಿ ಪ್ರಚಲಿತವಿದ್ದ ಗಾಜಿನ ತೂಗುದೀಪಗಳು, ದೇವಾನು-ದೇವತೆಗಳ ವರ್ಣ ಚಿತ್ರಗಳು, ಅಲಂಕಾರಿಕ ವಸ್ತುಗಳಿವೆ. ಹಾಗೆಂದ ಮಾತ್ರಕ್ಕೆ ದಿವಂಗತ ನಾಗಪ್ಪನವರೇ ಈ ಕಲಾತ್ಮಕ ವಸ್ತುಗಳನ್ನು ಸಂಗ್ರಹಿಸಿದ್ದಾರೆಂದು ಹೇಳಲಾಗದು. ಬಹುಶಃ ಇವರು ಈ ಮನೆಯನ್ನು ಕೊಂಡುಕೊಳ್ಳುವಾಗಲೇ ಮೂಲ ವಾರಸುದಾರರು ಈ ಕಲಾತ್ಮಕ ವಸ್ತುಗಳನ್ನು ಇಲ್ಲಿಯೇ ಬಿಟ್ಟು ಹೋಗಿರಬಹುದೆಂದು ಹೇಳಲಾಗುತ್ತದೆ.

(ಎಂಸಿಜಿ)

ಜನಪದ ಕಲಾವಿದರು: (ಕೊಪ್ಪಳ ಜಿಲ್ಲೆ) ಈ ಜಿಲ್ಲೆಯ ಪ್ರತಿಹಳ್ಳಿಯಲ್ಲಿಯೂ ಜಾನಪದ ಕಲೆ ಮತ್ತು ಕಲಾವಿದರನ್ನು ಕಾಣಬಹುದು. ಬಡತನವನ್ನು ಬೆನ್ನಿಗಂಟಿಸಿಕೊಂಡು ಅನಕ್ಷರಸ್ಥರಾದರೂ ಕಲೆಯನ್ನು ಪೋಷಿಸುತ್ತ ಬಂದ ಸಾವಿರಾರು ಕಲಾವಿದರಿಂದ ಈ ಜಿಲ್ಲೆ ಶ್ರೀಮಂತವಾಗಿದೆ. ನೂರಾರು ಜನಪದ ಕಲಾಪ್ರಕಾರಗಳು ಈ ಜಿಲ್ಲೆಯ ಹಳ್ಳಿ ಹಳ್ಳಿಯ ಮನೆ ಮನೆಗಳಲ್ಲಿ ತುಂಬಿ ತುಳುಕುತ್ತಿದೆ. ಕೊಪ್ಪಳ ಜಿಲ್ಲೆಯ ಜಾನಪದ ಸಿರಿಯನ್ನು ಬೆಳಗಿಸಿದ ಕೆಲವು ಕಲಾವಿದರ ವೃತ್ತಿ-ಬದುಕಿನ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಕೊಪ್ಪಳ ತಾಲ್ಲೂಕಿನ ಮೋರನಾಳ ಎಂಬ ಕುಗ್ರಾಮದಲ್ಲಿ ಚಿಕ್ಕ ಗುಡಿಸಲಿನಲ್ಲಿಯೇ ಎಂಟು ದಶಕಗಳನ್ನು ಕಂಡ **ಭೀಮವ್ವ,** ಅನಕ್ಷರಸ್ಥೆಯಾದರೂ ತೊಗಲು ಗೊಂಬೆಯಾಟದ ಕಲಾ ಪ್ರದರ್ಶನದಲ್ಲಿ ಸಿದ್ಧಹಸ್ತಳು. ಗಂಡ **ದೊಡ್ಡ ಬಾಳಪ್ಪ** ಒಬ್ಬ ಶ್ರೇಷ್ಠ ತೊಗಲುಗೊಂಬೆಯ ಕಲಾವಿದನಾಗಿ 1987ರಲ್ಲಿಯೇ ಕರ್ನಾಟಕ ಜಾನಪದ ಅಕಾಡೆಮಿಯಿಂದ ಪ್ರಶಸ್ತಿಯನ್ನು ಪಡೆದಿದ್ದರು. ಈ ಕಲೆಯನ್ನು ಮುಂದುವರೆಸಿಕೊಂಡು ಬಂದ ಭೀಮವ್ವ ತಾನೂ ಜನಪದ ಅಕಾಡೆಮಿಯ ಪ್ರಶಸ್ತಿಯನ್ನು ಪಡೆಯುವ ಮಟ್ಟಿಗೆ ಬೆಳೆದು ನಿಂತಿದ್ದಾಳೆ.

ಕರ್ನಾಟಕ ಉದ್ದಗಲಕ್ಕೂ ಕಲಾಪ್ರದರ್ಶನವನ್ನು ನೀಡಿದ ಭೀಮವ್ವ ಪ್ಯಾರೀಸ್, ಲಂಡನ್, ಸ್ವಿಜರಲ್ಯಾಂಡ್, ಇರಾನ್-ಇರಾಕ್ ಜರ್ಮನಿ. ತೆಹರಾನ, ಅರೆಬಿಯಾ ಮುಂತಾದ ಹತ್ತಾರು ದೇಶಗಳಿಗೆ ಸುತ್ತಾಡಿ ಕೊಪ್ಪಳದ ತೊಗಲುಗೊಂಬೆಯ ಕಲೆಯನ್ನು ಜಗದ ಬಾನಂಚಿನಲ್ಲಿ ಮಿನುಗಿಸಿದ್ದಾಳೆ.

ಭೀಮವ್ವನ ಮಕ್ಕಳಾದ ವಿರುಪಾಕ್ಷಪ್ಪ ಮತ್ತು ಯಂಕಪ್ಪಾ ಕಿಳ್ಳೇಕ್ಯಾತರ ಹಾಗೂ ಬೆಳಗಟ್ಟಿಯ ರಾಮಣ್ಣ ಮತ್ತು ಹನುಮಪ್ಪ ಕಿಳ್ಳೇಕ್ಯಾತರ ಮುಂತಾದವರು ಭೀಮವ್ವನ ಈ ಕಲೆ ಮುಂದುವರೆಸಿಕೊಂಡು ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಈ. ಕರಿಯಪ್ಪ ಮಾಸ್ತರ (ಹುಲಿಹೈದರ): ಡಪ್ಪಿನಾಟದ ಕಲಾವಿದ. ಜನಪದ ಕಲೆಗಳಲ್ಲಿಯೇ ಹೆಚ್ಚು ಜನಾಕರ್ಷಿತವೆಂದು ಹೇಳಬಹುದಾದ ಡಪ್ಪಿನಾಟವು ಕೊಪ್ಪಳ ಜಿಲ್ಲೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಈ ಡಪ್ಪಿನಾಟದ ಶ್ರೇಷ್ಠತೆಯ ಹಿಂದೆ ಕೇಳಿ ಬರುತ್ತಿರುವ ಪ್ರಮುಖವಾದ ಹೆಸರು ಜಿ. ಕರಿಯಪ್ಪ ಮಾಸ್ತರ. ಹುಲಿಹೈದರ ಎಂಬ ಚಿಕ್ಕ ಗ್ರಾಮದಲ್ಲಿ ಜನಿಸಿದರು. ಚಿಕ್ಕವರಾಗಿದ್ದಾಗಲೆ, ಪ್ರಾಥಮಿಕ ಶಿಕ್ಷಣಕ್ಕೆ ತಮ್ಮ ಓದನ್ನು ನಿಲ್ಲಿಸಿ ಡಪ್ಪಿನಾಟಕ್ಕೆ ಮರುಳಾಗಿ ಅದರ ಹಿಂದೆ ಹೊರಟವರು. ರತಿಕಲ್ಯಾಣ ಡಪ್ಪಿನಾಟದಲ್ಲಿ ಸ್ತ್ರೀಪಾತ್ರ ಮಾಡುವುದರ ಮೂಲಕ ರಂಗ ಪ್ರವೇಶ ಮಾಡಿದ, ಇವರ ಪ್ರತಿಭೆಯನ್ನು ಕಂಡ ಡಪ್ಪಿನಾಟದ ಹೆಸರಾಂತ ಕಲಾವಿದ ಹೊಳೆಯಪ್ಪ ಮಾಸ್ತರ ಕರಿಯಪ್ಪನವರಿಗೆ ತಮ್ಮ ಸಂಪೂರ್ಣ ಕಲೆಯನ್ನು ಧಾರೆ ಯೆರೆದರು. ರತಿಕಲ್ಯಾಣ, ಗಿರಿಜಾಕಲ್ಯಾಣ ಮುಂತಾದ ಡಪ್ಪಿನಾಟಗಳಲ್ಲಿ ಕಲಾವಿದನಾಗಿ ಭಾಗವಹಿಸಿದ ಕರಿಯಪ್ಪನವರು ಡಪ್ಪಿನಾಟದ ನಿರ್ದೇಶನಕ್ಕೂ ಕೈ ಹಾಕಿದರು. ಬಾಲಭಿಕ್ಷರಾಜ,

ಛತ್ರಪತಿ ರಾಜಾ, ಕಬೀರದಾಸ, ಸಂಗ್ಯಾಬಾಳ್ಯಾ, ತಿರುನೀಲಕಂಠ, ಬಸವಂತ ಬಲವಂತ, ಸ್ಟೇಷನ್ ಮಾಸ್ತರ ಹಾಗೂ ಮೈನಾವತಿ ಮುಂತಾದ ಅನೇಕ ಡಪ್ಪಿನಾಟಗಳನ್ನು ನಿರ್ದೇಶಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಮಾಧುರ್ಯದಿಂದ ಕೂಡಿದ ಕಂಠಸಿರಿಯನ್ನು ಹೊಂದಿದ, ಸ್ಪಷ್ಟ ಸಂಭಾಷಣೆಗೆ ಹೆಸರಾದ ಲಯಬದ್ಧವಾಗಿ ಡಪ್ಪನ್ನು ಬಾರಿಸುವ ಕರಿಯಪ್ಪ ಮಾಸ್ತರ ಶಿಷ್ಟ ಸಾಹಿತ್ಯದಿಂದ ಕೂಡಿದ, ಚಂಪೂಶೈಲಿಯ ಶುದ್ಧ ಡಪ್ಪಿನಾಟ ಕಲೆಯನ್ನು ಕಲಿಸಲು ನಾಡಿನುದ್ದಗಲಕ್ಕೂ ಸಂಚರಿಸಿದ್ದಾರೆ. ರಾಮದುರ್ಗ, ಸುರೇಬಾನು, ಇಟಗಿ, ಲಕ್ಷ್ಮೇಶರ, ಯಲ್ಲಾಪುರ ಹಳೇಕೋಟೆ, ಶಿರಗುಪ್ಪಾ, ಹೊಸಪೇಟೆ, ಔರಾದ್, ಕಮಲಾಪುರ ಮುಂತಾದ ಕಡೆಗಳಲ್ಲಿ ಸಂಚರಿಸಿದ ಕರಿಯಪ್ಪನವರು ಕರ್ನಾಟಕದ ಬೀದರದಿಂದ ಮಹಾರಾಷ್ಟ್ರದ ಸಾಂಗ್ಲಿಯವರೆಗೆ ಅನೇಕ ಊರುಗಳಲ್ಲಿ ಡಪ್ಪಿನಾಟದ ನಿರ್ದೇಶನವನ್ನು ಮಾಡಿದ್ದಾರೆ. ಡಪ್ಪಿನಾಟದೊಂದಿಗೆ ಇತರ ಜನಪದ ಕಲೆಗಳನ್ನು ಕರಿಯಪ್ಪನವರು ಕರಗತ ಮಾಡಿಕೊಂಡಿದ್ದಾರೆ.

ಭಜನೆಹಾಡು, ರಂಗಗೀತೆ, ದಾಸರ, ಶರಣರಪದಗಳು, ಜನಪದ ಗಾಯನ ಮುಂತಾದ ಅನೇಕ ಜಾನಪದ ಕಲಾಪ್ರಕಾರಗಳನ್ನು ಮೈಗೂಡಿಸಿಕೊಂಡ ಕರಿಯಪ್ಪನವರಿಗೆ ಅನೇಕ ಪುರಸ್ಕಾರಗಳು, ಸನ್ಮಾನಗಳು ದೊರೆತಿವೆ. ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನೆಗಳನ್ನು ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಾರೆ. ಜನಪರ ಹಾಡುಗಳೊಂದಿಗೆ ಜನ ಜಾಗೃತಿ ಮೂಡಿಸಿರುತ್ತಾರೆ. ತಮ್ಮ ಜನಪದ ಸಿರಿಯನ್ನು ಹನ್ನೊಂದು ಆಡಿಯೋ ಕ್ಯಾಸೆಟ್‌ಗಳಲ್ಲಿ ತುಂಬಿಕೊಟ್ಟಿದ್ದಾರೆ.

ಚುಟ್ಟವ್ವ (ಸುಟ್ಟವ್ವಾ) ಹರಿಜನ: ಜನಪದ ಹಾಡುಗಾರ್ತಿ. ಈ ಜಿಲ್ಲೆಯಲ್ಲಿ ಯಾರಾದರೂ ತೀರಿಕೊಂಡರೆ ಅವರ ಮನೆಯಲ್ಲಿ ಭಜನೆ ಪದಗಳನ್ನು, ತತ್ವಪದಗಳನ್ನು ಹಾಡುವ ಸಂಪ್ರದಾಯವು ಇದೆ. ಆಗ ಹಳ್ಳಿಗರಿಗೆಲ್ಲಾ ತಕ್ಷಣ ನೆನಪಾಗುವವಳೇ ಜನಪದ ಸಿರಿ ಎನಿಸಿರುವ ಚುಟ್ಟಮ್ಮ ಹರಿಜನ. ದಿನಗಟ್ಟಲೇ ಭಜನೆ ಪದಗಳನ್ನು ಹಾಡುವ ಮೂಲಕ ಸೂತಕದ ಮನೆಯಲ್ಲಿ ಜೀವನದ ನಶ್ವರತೆಯನ್ನು, ಆಧ್ಯಾತ್ಮಕ ಅನಿವಾರ್ಯತೆಯನ್ನು, ಸಾರುವ ಹಾಡುಗಳನ್ನು ಚುಟ್ಟಮ್ಮಾ ಹಾಡುತ್ತಾಳೆ. ಇದಲ್ಲದೆ ಮದುವೆ ಸಂದರ್ಭಗಳಲ್ಲಿ ಸೋಬಾನೆ ಪದಗಳು, ನಾಮಕರಣ ಸಮಯದಲ್ಲಿ ಜೋಗುಳ ಪದಗಳನ್ನು, ಗುಡಿಗಳಲ್ಲಿ ಸಭೆ ಸಮಾರಂಭಗಳಲ್ಲಿ ಭಜನೆ ಪದಗಳನ್ನು, ತತ್ವಪದಗಳನ್ನು ನಿರಾತಂಕವಾಗಿ ಹಾಡುವ ಕಲೆಗಾರಿಕೆ ಇವಳಲ್ಲಿದೆ. ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಸತತವಾಗಿ 6 ದಿನಗಳ ಕಾಲ ನಿರಂತರವಾಗಿ ಭಜನಾ ಪದಗಳನ್ನು ಹಾಡಿದ ಕೀರ್ತಿ ಚುಟ್ಟವ್ವಳಿಗೆ ಸಲ್ಲುತ್ತದೆ.

ಆರವತ್ತೈದರ ಇಳಿವಯಸ್ಸಿನಲ್ಲಿಯೂ ಸಾವಿರಾರು ಪದಗಳನ್ನು ನಿರರ್ಗಳವಾಗಿ ಹಾಡುವ ಚುಟ್ಟಮ್ಮಾ ಮಸಬಹಂಚಿನಾಳ ಎಂಬ ಪುಟ್ಟ ಗ್ರಾಮದ ದೇವದಾಸಿ ಕುಟುಂಬದಿಂದ ಬಂದವರು. ಇದ್ದೊಬ್ಬ ಮಗಳನ್ನು ಕಳೆದುಕೊಂಡು ಮೊಮ್ಮಕ್ಕಳನ್ನು ಪೋಷಿಸಿಕೊಂಡು ಬರುವ ಚುಟ್ಟಮ್ಮನಿಗೆ ದೇವದಾಸಿ ಪುನರ್ವಸತಿ ಯೋಜನೆಯಲ್ಲಿ ಬಂದ ಒಂದು ಪುಟ್ಟ ಮನೆಯಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡುವ ಕಲಾವಿದರ ಮಾಸಾಶನ ಪಡೆಯುತ್ತಿದ್ದಾರೆ. ಈ ಕಲಾವಿದೆಯ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜನಪದ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅನಾರೋಗ್ಯದಿಂದ ಬಳಲುತ್ತಿರುವ ಈ ಕಲಾವಿದೆಯ ಕಂಠದಲ್ಲಿ ಹುದುಗಿದ ಸಾವಿರಾರು ಪದಗಳು ದಾಖಲಾಗಬೇಕಿದೆ.

ರೇಚಪ್ಪಾ ಮಾಸ್ತರ ಮಡಿವಾಳರ: ದೊಡ್ಡಾಟದ ಕಲಾವಿದರು. ಏಕತಾರಿ ಪದಗಳನ್ನು ಹಾಡುವುದರಲ್ಲಿ ಸಿದ್ಧಹಸ್ತರು. ಯಲಬುರ್ಗಾ ತಾಲ್ಲೂಕಿನ ತಳಕಲ್ ಗ್ರಾಮದವರು. ಏಕತಾರಿ ತಂಬೂರಿಯನ್ನು ಹಿಡಿದು ದಾಸರ ಪದಗಳನ್ನು ಶರಣರ ವಚನಗಳನ್ನೂ, ಶರೀಫರ ತತ್ವಪದಗಳನ್ನು, ಅನುಭಾವ ಗೀತೆ ಗಳನ್ನು ಹಾಡುತ್ತ ಕುಳಿತರೆ ಕೇಳುಗರನ್ನು ಆಧ್ಯಾತ್ಮ ಲೋಕಕ್ಕೆ ಕೊಂಡೊಯ್ಯುತ್ತಾರೆ. ಆಕಾಶವಾಣಿ ಕಲಾವಿದರಾದ ಇವರು ಜಿಲ್ಲೆಯಾದ್ಯಂತ ಹಾಡುಗಾರಿಕೆಯನ್ನು ಮೆರೆದಿದ್ದಾರೆ. ಮೂಲತಃ ಇವರು ದೊಡ್ಡಾಟದ ಕಲಾವಿದರು, ದೊಡ್ಡಾಟಗಳಲ್ಲಿ ಅನೇಕ ಸ್ತ್ರೀ–ಪುರುಷ ಪಾತ್ರಗಳನ್ನು ಮಾಡುತ್ತಾ ಕಲಾವಿದರಾಗಿ ಬೆಳೆದರು. ಪ್ರಬುದ್ಧ ಕಲಾವಿದರಾಗಿ ರೂಪುಗೊಂಡ ನಂತರ ದೊಡ್ಡಾಟದ ನಿರ್ದೇಶನಕ್ಕೂ ಕೈ ಹಾಕಿದರು. ಅನೇಕ ಪೌರಾಣಿಕ ಮತ್ತು ಐತಿಹಾಸಿಕ ದೊಡ್ಡಾಟದ ಪ್ರಸಂಗಗಳನ್ನು ರಂಗಕ್ಕಿಳಿಸಿದರು. ಜೀವನದುದ್ದಕ್ಕೂ ಜನಪದ ಕಲೆಗಳನ್ನು ಉಳಿಸಿ ಬೆಳೆಸಿದ್ದಾರೆ. ಕರ್ನಾಟಕ ಜನಪದ ಅಕಾಡೆಮಿ ಈ ಶ್ರೇಷ್ಠ ಕಲಾವಿದರನ್ನು ಕೈಬೀಸಿ ಕರೆದು ಪ್ರಶಸ್ತಿಯ ಗರಿಯನ್ನು ಮೂಡಿಸಿದ್ದಾರೆ.

ಬೀರಪ್ಪಾ ಯಡಿಯಾಪುರ: ಗೀಗೀ ಮೇಳವನ್ನು ಕಟ್ಟಿಕೊಂಡು ನಾಡಿನಾದ್ಯಂತ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿದ ಬೀರಪ್ಪನವರ ಜಾನಪದ ಬತ್ತಳಿಕೆಯಲ್ಲಿ ನೂರಾರು ಪದಗಳಿವೆ. ಹರದೇಶಿ–ನಾಗೇಶಿ ಸಂವಾದಿ ಪದದಲ್ಲಿ ಎಚಿತಹವರಿಗೂ ಸವಾಲೆಸಗುವ ಛಾತಿ ಇವರಿಗಿದೆ. ರಾತ್ರಿ ಇಡೀ ಗೀಗೀ ಪದಗಳ ಮೂಲಕ ಜನರಿಗೆ ಮನರಂಜನೆ ನೀಡುತ್ತ ನೀತಿಪಾಠ ಹೇಳುತ್ತಾ ಬದುಕಿನ ವಾಸ್ತವತೆಯನ್ನು ಬಿಂಬಿಸುತ್ತ ಸಾಗಿದ್ದಾರೆ.

ಕಿತ್ತೂರು ರಾಣಿ ಚೆನ್ನಮ್ಮಾ, ವೀರ ಸಿಂಧೂರಲಕ್ಷ್ಮಣ, ಮಹಾತ್ಮಗಾಂಧೀಜಿ ಮುಂತಾದ ಗಣ್ಯರ ಕುರಿತು ಲಾವಣಿ ಪದಗಳನ್ನು ಕಟ್ಟಿ ಹಾಡುತ್ತಾರೆ. ಹಂತಿ ಪದ, ಲಾವಣಿ ಪದ, ಭಜನೆ ಪದ ಹಾಡುವುದರಲ್ಲಿಯೂ ಇವರಿಗೆ ಆಸಕ್ತಿ ಇದೆ. ಇವರ ಇನ್ನೊಂದು ಆಸಕ್ತಿಯ ಜನಪದ ಪ್ರಕಾರವೆಂದರೆ ಡೊಳ್ಳಿನ ಪದ, ಡೊಳ್ಳಿನ ಪದಗಳನ್ನು ಹಾಡುವಾಗ ಇಡೀ ಮೇಳದ ಮುಖಂಡತ್ವ ಇವರದ್ದಾಗಿರುತ್ತದೆ. ಸರ್ಕಾರಿ ಕಾರ್ಯಕ್ರಮಗಳಾದ ಅಕ್ಷರ ಕ್ರಾಂತಿ, ಮರಳಿ ಬಾ ಶಾಲೆಗೆ, ಬಿಸಿಯೂಟ, ಉದ್ಯೋಗ ಖಾತ್ರಿ ಯೋಜನೆ, ಏಡ್ಸ್ ಜಾಗೃತಿ, ಶೌಚಾಲಯ, ಮುಂತಾದ ವಿಷಯಗಳ ಬಗ್ಗೆ ಪದಕಟ್ಟಿ ಹಾಡುತ್ತಾ ಜನಜಾಗೃತಿ ಮೂಡಿಸಿದ್ದಾರೆ.

ಜಾನಪದ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಯಡಿಯಾಪುರರವರ ಮಡಿಲು ಸೇರಿವೆ. ಮೈಸೂರು ದಸರಾದಲ್ಲಿ ಗೀಗೀ ಪದಕ್ಕೆ ಪ್ರಶಸ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ತಾಯಮ್ಮಾ ಎಸ್.ಸಿ. ಮಲ್ಲಯ್ಯ ದತ್ತಿ ಪ್ರಶಸ್ತಿಗಳಲ್ಲದೆ; ಸಾಹಿತ್ಯ ಸಮ್ಮೇಳನದಲ್ಲಿ, ಜನಪದ ಜಾತ್ರೆ ಉತ್ಸವಗಳಲ್ಲಿ ಮೆಚ್ಚುಗೆ ಪತ್ರಗಳನ್ನು ಪಡೆದಿದ್ದಾರೆ. ಇವರ ಬಾಳಸಂಗಾತಿ ಬೀರವ್ವ ಒಬ್ಬ ಪ್ರತಿಭಾನ್ವಿತ ಜನಪದ ಕಲಾವಿದೆ. ಸೋಬಾನೆ ಪದ, ಬೀಸುವ, ಕುಟ್ಟುವ ಪದ, ದೇವರ ನಾಮಗಳು, ಮೈಲಾರಲಿಂಗಪ್ಪನ ಪದ, ಯಲ್ಲಮ್ಮನ ಪದ, ಸಂಪ್ರದಾಯದ ಪದಗಳು ಹೀಗೆ ಅನೇಕ ಜನಪದ ಶೈಲಿಯ ಹಾಡುಗಳನ್ನು ಬೀರವ್ವ ಹಾಡುತ್ತಾರೆ. ಹೊಸಪೇಟೆ ಆಕಾಶವಾಣಿಯಲ್ಲಿಯೂ ಇವರ ಹಾಡುಗಳು ಬಿತ್ತರವಾಗಿವೆ. ಅರವತ್ತೈದರ ಮಾಗಿದ ಕಲಾವಿದೆ ಗಂಡನಿಂದಲೆ ಸಂವಾದಿ ಪದಗಳನ್ನು ಕಲಿಯುತ್ತಿರುವುದು ವಿಶೇಷವಾಗಿದೆ.

ವಾಲ್ಮೀಕಿ ಯಕ್ಕರನಾಳ: ಪ್ರವೃತ್ತಿಯಿಂದ ಜನಪದ ಕಲಾವಿದರು. ವೃತ್ತಿಯಿಂದ ಶಿಕ್ಷಕರು. ವಾಲ್ಮೀಕಿ ಯಕ್ಕರನಾಳ ಕುಷ್ಟಗಿಯಲ್ಲಿ ನೆಲೆ ನಿಂತಿದ್ದಾರೆ. ಒಂದು ತ್ರಿಪದಿಯನ್ನು ನಲವತ್ತೆರಡು ಜನಪದ ದಾಟಿಗಳಲ್ಲಿ ಹಾಡಿ ತೋರಿಸುವ ವಿಶಿಷ್ಟ ಪ್ರತಿಭೆ ಇವರದು. ಇದರ ಪ್ರಯೋಗಗಳನ್ನು ನಾಡಿನಾದ್ಯಂತ ಮಾಡಿ ತೋರಿಸುವ ಮೂಲಕ ಜನಪದದ ವೈವಿಧ್ಯತೆಗಳನ್ನು ಸಾರಿ ಹೇಳುತ್ತಾರೆ. ಲಾವಣಿ ಪದಗಳನ್ನು ರಚಿಸುವಲ್ಲಿ ಇವರ ಜಾಣ್ಮೆ ಎದ್ದು ಕಾಣುತ್ತದೆ. ಪ್ರಸಕ್ತ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ತಮ್ಮ ಲಾವಣಿಗಳ ಮೂಲಕ ಹೇಳುತ್ತಾ ಜಿಡ್ಡುಗಟ್ಟಿದ ವ್ಯವಸ್ಥೆಗೆ ಚಾಟಿ ಏಟು ನೀಡುತ್ತಾರೆ. ಪುಣ್ಯಕೋಟಿ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರಾಗಿದ್ದಾರೆ. ಕಥೆ, ಕವನ, ನಾಟಕ, ರೂಪಕಗಳನ್ನು ಬರೆದು ಅನೇಕ ಕೃತಿಗಳನ್ನು ಹೊರ ತಂದ ಇವರು ಆಕಾಶವಾಣಿ ಕಲಾವಿದರೂ ಹೌದು. ಬೆಂಗಳೂರು ದೂರದರ್ಶನದ ಸಿರಿಗಂಧ ಜಾನಪದ ಧಾರಾವಾಹಿಯಲ್ಲಿ ವಿಶಿಷ್ಟ ಜಾನಪದ ಕಲಾವಿದರಾಗಿ ಈ ನಾಡಿಗೆ ಪರಿಚಿತರಾಗಿದ್ದಾರೆ.

ಶರಣಪ್ಪಾ ವಡಗೇರಿ: ಕೈಯಲ್ಲಿ ಡಪ್ಪು ಚಿಟಿಕೆಗಳನ್ನು ಹಿಡಿದು ತಲೆಗೊಂದು ರುಮಾಲು ಸುತ್ತಿ ಅಪ್ಪಟ ಜನಪದ ವೇಷದೊಂದಿಗೆ ವೇದಿಕೆಗಿಳಿದ ಶರಣಪ್ಪ ವಡಗೇರಿ ಕ್ಷಣಾರ್ಧದಲ್ಲಿ ಇಡೀ ಸಭಾ ಜನರನ್ನು ತಮ್ಮ ಹಾಡುಗಳ ಮೂಲಕ ತಮ್ಮತ್ತ ಸೆಳೆದು ಕೊಳ್ಳುತ್ತಾರೆ. ಇವರ ಕಂಠಸಿರಿಯಿಂದ ಒಂದೊಂದು ಜನಪದ ಹಾಡುಗಳು ಹೊರಬರುತ್ತಿದ್ದಂತೆ. ಕರತಾಡನದ ಮಳೆ ಸುರಿಯಲಾರಂಭಿಸುತ್ತದೆ. ತತ್ವಪದಗಳನ್ನು, ಲಾವಣಿಪದಗಳನ್ನು ಹಾಡುವುದರ ಮೂಲಕ ಜನಪದ ಸಿರಿಯ ಆರಾಧಕರಾಗುತ್ತಾರೆ. ಯುವಕರಾಗಿದ್ದಾಗಲೆ ಅನೇಕ ಯುವಜನ ಮೇಳಗಳಲ್ಲಿ, ಜನಪದ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಹೋಗಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ಯುವ ಸಂಘಟನೆ ಗಳನ್ನು ಮಾಡುವಲ್ಲಿ ನಿಸ್ಸೀಮರು ಇವರ ಯುವಜನ ಸೇವೆಯನ್ನು ಪರಿಗಣಿಸಿ ರಾಜ್ಯ ಸರಕಾರ ಯುವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ದೂರದರ್ಶನ ಸಿರಿಗಂಧ ಧಾರಾವಾಹಿಯಲ್ಲಿ ಅನೇಕ ಜನಪದ ಗೀತೆಗಳನ್ನು ಹಾಡಿದ ಇವರು ಆಕಾಶವಾಣಿಯ ಕಲಾವಿದರಾಗಿಯೂ ಅನೇಕ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ಹಲವಾರು ಸಂಘ ಸಂಸ್ಥೆಗಳಿಂದ ಬಿರುದು–ಸನ್ಮಾನಗಳನ್ನು ಪಡೆದಿದ್ದಾರೆ. ಕಳೆದ ಬಾರಿ ಕರ್ನಾಟಕ ಜಾನಪದ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ.

ಮಾರೆಪ್ಪಾ ಮಾರೆಪ್ಪ ದಾಸರ: ತತ್ವಪದಗಳ ಕಲಾವಿದ. ಇವರು ಕೇವಲ ನಾಲ್ಕನೆ ತರಗತಿ ಓದಿದವರಾಗಿದ್ದಾರೆ. ತುಮರಗುದ್ದಿ ದಾಸರ ಕುಟುಂಬದಲ್ಲಿ ಜನಿಸಿದ ಮಾರಪ್ಪನವರು ಬಡತನದ ಬೇಗೆಯಲ್ಲಿಯೇ ಬಾಳು ಸಾಗಿಸಿದವರು. ಜನಪದ ದೇವತೆ ಇವರ ಕಂಠದಲ್ಲಿ ನಲಿದಾಡುತ್ತಾಳೆ. ವೇದಿಕೆಯಲ್ಲಿ ಏಕತಾರಿ ಪಿಟೀಲು ಬಾರಿಸುತ್ತ ಹಾಗೂ ಚೌಡಕಿ ಹಾಗೂ ತಾಳಗಳನ್ನು ಬಾರಿಸುತ್ತ ತತ್ವಪದಗಳನ್ನು ಹಾಡಲು ಪ್ರಾರಂಭಿಸಿದರೆ ಕುಳಿತ ಪ್ರೇಕ್ಷಕರೆಲ್ಲಾ ಮಂತ್ರಮುಗ್ಧರಾಗುತ್ತಾರೆ. ಇವರ ಮಗ ಯಂಕಣ್ಣನು ಸಾಥ ಕೊಡುತ್ತಾರೆ. ದಾಸರ, ಶರಣರ, ಸೂಫಿ ಸಂತರ ತತ್ವಪದಗಳನ್ನು ಹಾಡುವುದರ ಮೂಲಕ ಹೊಸದೊಂದು ಆಧ್ಯಾತ್ಮದ ಲೋಕವನ್ನು ಸೃಷ್ಟಿಸಿಕೊಡುತ್ತಾರೆ. ಇವರ ಈ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಜನಪದ ಅಕಾಡೆಮಿಯು ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇಮಾಮಸಾಬ ಅಲ್ಲಾನಗರ: ಜನಪದ ಕಲಾವಿದ. ಕೊಪ್ಪಳ ಜಿಲ್ಲೆಯ ಶ್ರೇಷ್ಠ ಜನಪದ ಹಾಡುಗಾರರೆಂದು ಪ್ರಸಿದ್ಧಿ ಪಡೆದಿದ್ದಾರೆ. ರಿವಾಯತ್ ಪದ, ಮೊಹರಂ ಪದ, ತತ್ವಪದ, ಲಾವಣಿ ಪದ, ಗೀಗೀ ಪದ ಹೀಗೆ ಅನೇಕ ಜನಪದ ಪ್ರಕಾರದ ಪದಗಳನ್ನು ಮೂಲದಾಟಿಯಲ್ಲಿಯೇ ಹಾಡುತ್ತ ಜನಮಾನಸದಲ್ಲಿ ಚಿರ ಸ್ಥಾಯಿಯಾಗಿದ್ದಾರೆ.

ರಿವಾಯತ್ ಮತ್ತು ಮೋಹರಂ ಪದಗಳ ಮೂಲಕ ಸೂಫಿ–ಸಂತರ, ತತ್ವಪದಗಳ ಮೂಲಕ ಮುಸ್ಲಿಂ ಸಂವೇದನೆಯ ಭಾವೈಕ್ಯತೆಯ ದೀವಟಿಗೆಯನ್ನು ಹಿಡಿದು ಜನಪದ ದೇವತೆಯ ಆರಾಧನೆ ಮಾಡಿದಂತೆ ಇಮಾಮ ಸಾಹೇಬರು ಬದುಕಿನುದ್ದಕ್ಕೂ ಜನಪದವನ್ನು ಮೈಗೂಡಿಸಿಕೊಂಡು ಬೆಳೆದಿದ್ದಾರೆ. ಇವರಿಗೆ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ 2000ರಲ್ಲಿಯೇ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಭರಮಪ್ಪ ಹರಿಜನ: ಡಪ್ಪಿನಾಟದ ಹಿರಿಯ ಕಲಾವಿದ. ಕುಷ್ಟಗಿ ತಾಲ್ಲೂಕಿನವರು. ತಾವರಗೇರೆಯಲ್ಲಿ ಜನಿಸಿದವರು. ಬಾಲ್ಯದಿಂದಲೆ, ತತ್ವಪದ, ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಡಪ್ಪಿನಾಟಗಳಲ್ಲಿ ವಿಶೇಷ ಆಸಕ್ತಿ ವಹಿಸಿದ ಇವರು ಡಪ್ಪಿನಾಟದ ಹಾಡುಗಾರಿಕೆ, ನಿರ್ದೇಶನ ಕುಣಿತ ಹಾಗೂ ಡಪ್ಪು ಬಾರಿಸುವದನ್ನು ರೂಢಿಸಿಕೊಂಡಿದ್ದಾರೆ. ಇವರು ಸಂಗ್ಯಾ ಬಾಳ್ಯಾ, ಸ್ಟೇಷನ್ ಮಾಸ್ತರ, ಬಾಲ ಭಿಕ್ಷುಕ ರಾಜಾ ಸೇರಿದಂತೆ ಅನೇಕ ಡಪ್ಪಿನಾಟವನ್ನು ಬೇರೆಯವರಿಗೂ ಕಲಿಸಿದ್ದಾರೆ.

ನೂರಾರು ಪ್ರಯೋಗಗಳನ್ನು ಮಾಡಿಸಿ ಎಲ್ಲರ ಮನ ಗೆದ್ದಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಇಲಾಖೆ ಹಾಗೂ ವಿವಿಧ ಸಂಸ್ಥೆಗಳ ಆಶ್ರಯದಲ್ಲಿ ದೊಡ್ಡಾಟದ ವಿಭಿನ್ನ

ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಆಶ್ರಯದಲ್ಲಿ ಇವರ ಡಪ್ಪಿನಾಟ ಪದಗಳನ್ನು ಹಾಡಿ ಜನಮನ ಸೆಳೆದಿದ್ದಾರೆ. ತಮ್ಮ ಊರಲ್ಲಿ ಯುವಕರನ್ನು ಸೇರಿಸಿ ಈ ಕಲೆ ನಶಿಸದಂತೆ ಅವರಿಗೆ ಕಲಿಸುತ್ತಿದ್ದಾರೆ.

ಸಿದ್ದಪ್ಪ ಇಟಗಿ: ಡಪ್ಪಿನಾಟದ ಕಲಾವಿದ. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಡೋಣಿಗುಡ್ಡ ಗ್ರಾಮದ ಗುರುಪಾದಪ್ಪ ಇಟಗಿ ಇವರ ತಂದೆ. ಬಾಲ್ಯದಿಂದಲೂ ತಂದೆಯ ಕಲೆ ಡಪ್ಪಿನಾಟಗಳನ್ನು ನೋಡಿ ಮಾರುಹೋದ ಸಿದ್ದಪ್ಪ ಇವರು ಹಳ್ಳಿಯಲ್ಲಿ ದೊಡ್ಡಾಟವನ್ನು, ಮಾಡುತ್ತಾ, ಮಾಡಿಸುತ್ತಾ, ಇಂದು ಜನಪದ ಕಲೆ ಉಳಿಯಲಿ ಎಂದು ತಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲಿ ದೊಡ್ಡಾಟಗಳನ್ನು ಮಾಡಿ ಜನಮನ ಗೆದ್ದಿದ್ದಾರೆ.

ಬಾಷುಸಾಬ ಚೌಧರಿ: ಡಪ್ಪು ಬಾರಿಸುವದರಲ್ಲಿ ಪ್ರಾವೀಣ್ಯತೆ ಹೊಂದಿದ್ದಾರೆ. ಕುಷ್ಟಗಿ ವಾಸಿಯಾಗಿದ್ದಾರೆ. ಬಾಲ್ಯದಿಂದಲೂ ತತ್ವಪದ, ಭಜನೆ ಪದಗಳನ್ನು ಹಾಡುತ್ತಾ ದೊಡ್ಡಾಟದ ಹಿಮ್ಮೇಳದಲ್ಲಿ ಹಾಡುವದರ ಮೂಲಕ ತಾಳ ಹಾಕುವದರಲ್ಲಿ ಮೇಲುಗೈ ಸಾಧಿಸುತ್ತಾ ಶಾಂತಯ್ಯ ಸಗಣಾಚಾರಿಯವರ ಶಿಷ್ಯರಾಗಿ ಇವರು ಡಪ್ಪಿನಾಟ ಸಣ್ಣಾಟ ಪ್ರಕಾರಗಳಲ್ಲಿ ಭಾಗ ವಹಿಸುತ್ತಾ ಬಂದಿದ್ದಾರೆ. ಈ ಭಾಗದ ಜನಪ್ರಿಯ ಡಪ್ಪಿನ ನಾಟಕಗಳಾದ ಸಂಗ್ಯಾ-ಬಾಳ್ಯಾ ಸೇರಿದಂತೆ ಅನೇಕ ಡಪ್ಪಿನಾಟಗಳನ್ನು ತಾಲ್ಲೂಕಿನಾದ್ಯಂತ ಮಾಡಿಸಿದ್ದಾರೆ. ಬಸವಂತ, ಬಲವಂತ, ಸ್ಟೇಷನ್ ಮಾಸ್ತರ, ಬಾಲ ಭಿಕ್ಷುಕ ರಾಜ ಸೇರಿದಂತೆ ಅನೇಕ ಡಪ್ಪಿನಾಟಗಳು ಸಾಕಷ್ಟು ಪ್ರಯೋಗಗಳನ್ನು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಲೆಯಲ್ಲಿ ಶ್ರೀಮಂತನಾದರೂ ಜೀವನದಲ್ಲಿ ಬಡತನ ಕಾಡುತ್ತಿದೆ.

ಪರಶುರಾಮ ಹಾಗೂ ಹನುಮಂತಪ್ಪ: ಈ ಜೋಡಿ ಕಲಾವಿದರು ತಮ್ಮ ಬದುಕಿಗಾಗಿ ಜನಪದ ಕಲೆಯನ್ನು ತಮ್ಮ ವೃತ್ತಿ ಬದುಕಾಗಿಸಿಕೊಂಡಿದ್ದಾರೆ. ರಾತ್ರಿಯಿಡಿ ಕಥೆ ಹೇಳುತ್ತಾ ಹಾಡುವುದು ಕುಣಿಯುವದು ಮಾಡಿ ಮನರಂಜನೆಯನ್ನು ನೀಡುತ್ತಾರೆ. ಈ ಕಲಾವಿದರು ಜೈರಾಣಿ ಕಥೆ, ಬಸಕುಮಾರ, ಲೋಹಿತಕುಮಾರ, ವಿದ್ಯಾವತಿ, ಶೀಲಾವತಿ, ಪದ್ಮಾವತಿ, ಅರಣ್ಯಕುಮಾರ ಮುಂತಾದ 50ಕ್ಕೂ ಮಿಕ್ಕಿ ಜನಪದ ಸರಗಥೆಯನ್ನು ಹೇಳುತ್ತಾ ಬದುಕು ಸಾಗಿಸುತ್ತಿದ್ದಾರೆ. ಇವರು ಜ್ಯೋತಿಷ್ಯ ಕೂಡಾ ಹೇಳುತ್ತಾ ತಮ್ಮ ಜನಪದ ಶೈಲಿಯಲ್ಲಿ ಉಡುಗೆ-ತೊಡುಗೆ ತೊಟ್ಟುಕೊಂಡು ಸಾಂಬಾಳ ಹಿಡಿದು ತಾಳ ಹಾಕುತ್ತಾ ಬರುತ್ತಾರೆ. ಗೊಂದಲಿಗರ ಆರಾಧ್ಯ ದೈವವಾದ ಹುಲಿಗೆಮ್ಮನ ಮೇಲೆ ಪದ ರಚಿಸಿದ್ದಾರೆ. ಇವರು ಕಲೆಯನ್ನು ಉಸಿರಾಗಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ.

ಮುದಕವ್ವಾ ಮಾದರ: ಗೀಗೀ ಪದ ಕಲಾವಿದೆ. ಹಿರೇಗೊಣ್ಣಾಗರ ಗ್ರಾಮದವರು. ಬಾಲ್ಯದಿಂದಲೇ ಸಾಂಪ್ರದಾಯಕ ಪದಗಳತ್ತ ಹೆಚ್ಚು ಒಲವು. ಬೀಸುವಕಲ್ಲು ಪದಗಳು, ಹಂತಿ ಪದ, ಗೀಗೀ ಪದಗಳನ್ನು ಹಾಡುವುದನ್ನು ಕಲಿತು ಅವರ ಗುರುಗಳಾದ ಫಕೀರಮ್ಮ ದೇವದುರ್ಗ ಇವರ ಮಾರ್ಗದರ್ಶನದೊಂದಿಗೆ ಈ ಕಲೆಯನ್ನು ಬೆಳೆಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮೋಹರಂ, ಜಾತ್ರೆ, ಉತ್ಸವ, ಹಬ್ಬ, ಹರಿದಿನ ಮುಂತಾದ ವಿಶಿಷ್ಟ ಸಂದರ್ಭಗಳಲ್ಲಿ ಜಿಲ್ಲೆಯಾದ್ಯಂತ ದೇವಪ್ಪಾ ಕುರಬರ, ಫಕೀರಪ್ಪಾ ಹಾಬಲಕಟ್ಟಿ ಇವರೊಂದಿಗೆ ಕಾರ್ಯಕ್ರಮ ನೀಡಿದ್ದಾರೆ.

ಹನುಮಂತಪ್ಪಾ ಪೂಜಾರ: ದೊಡ್ಡಾಟದ ಮಾಸ್ತರ ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಇದಲ್ಲದೆ ಡಪ್ಪು ಬಾರಿಸುವದರಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದಾರೆ. ಇವರು ಹಿನ್ನೆಲೆಯಾಗಿ ಹಾಡುವುದನ್ನು ಸಹ ರೂಢಿಸಿಕೊಂಡಿದ್ದಾರೆ. ಕಂದಗಲ್ ಹನುಮಂತರಾಯರ ಎಲ್ಲಾ ಪೌರಾಣಿಕ ನಾಟಕಗಳನ್ನು ಈ ಭಾಗದ ಕಲಾವಿದರಿಗೆ ಕಲಿಸಿ ರಂಗಪ್ರವೇಶ ಮಾಡಿಸಿದ್ದಾರೆ. ದೊಡ್ಡಾಟ, ಡಪ್ಪಿನಾಟ ನಶಿಸಿಹೋಗದಂತೆ ಇಂದಿಗೂ ಶ್ರಮಿಸುತ್ತಿರುವ ಹನುಮಂತಪ್ಪನವರು ಅನೇಕ ಯುವಕರಿಗೆ ಕಲಿಸಿ ಕಲಾವಿದರನ್ನು ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಡೊಳ್ಳು ಕುಣಿತದ ತಂಡ: ಕುಷ್ಟಗಿ ತಾಲ್ಲೂಕಿನ ಟಿಕ್ಕಳಿಕೆ ಗ್ರಾಮದಲ್ಲಿ ಬೀರಲಿಂಗೇಶ್ವರ ಡೊಳ್ಳು ಕುಣಿತದ ಸಂಘ ವಿಶೇಷವಾದುದು. ಏಕೆಂದರೆ ಇವರು ಹಾಡುವುದರೊಂದಿಗೆ ಕುಣಿಯುವದರಿಂದ ಜನಪ್ರಿಯತೆಯನ್ನು ಗಳಿಸಿದ್ದಾರೆ. ಹಿರಿಯ ಕಲಾವಿದರಾದ ಸಿದ್ದಪ್ಪ ಬಿಜಕಲ್ ಇವರ ಮಾರ್ಗದರ್ಶನದಲ್ಲಿ ತಂಡದ ಕಲಾವಿದರಾದ ಭರಮಣ್ಣ ಕಂಬಳಿ, ದೊಡ್ಡಪ್ಪಾ ಕಂಬಳಿ, ಬಾಲಪ್ಪ ಮೆಂಟಗಿ, ಹನುಮಂತ ಮೆಂಟಗೇರಿ, ಮಳಿಯಪ್ಪ, ರೇವಣಸಿದ್ದಪ್ಪ ಇವರುಗಳು ಡೊಳ್ಳಿನ ಪದಗಳನ್ನು ಹಾಡುವುದನ್ನು ರೂಢಿಸಿಕೊಂಡಿದ್ದು ಜಿಲ್ಲೆಯಲ್ಲಿ ಬೇರೆ ಯಾವುದೇ ಹಬ್ಬ ಹರಿದಿನ ಜಾತ್ರೆ, ಮದುವೆ ಇಂತಹ ವಿಶೇಷ ಸಂದರ್ಭಗಳಲ್ಲಿ ಡೊಳ್ಳಿನ ಪದಗಳನ್ನು ಹಾಡುತ್ತಾರೆ. ಜನಪದ ಕಲೆಯ ಸೊಗಡನ್ನು ಗ್ರಾಮೀಣ ಮತ್ತು ನಗರ ಪ್ರದೇಶಕ್ಕೆ ಕೊಂಡೊಯ್ಯುವ ತಂಡವಾಗಿದೆ.

ಈ ತಂಡವು ಪ್ರಮುಖ ಡೊಳ್ಳಿನ ಪದಗಳನ್ನು ಹಾಡುವುದನ್ನು ಮತ್ತು ಕಲಾತ್ಮಕವಾಗಿ ಡೊಳ್ಳು ಬಾರಿಸುವದನ್ನು ಕರಗತ ಮಾಡಿಕೊಂಡಿದ್ದು; ರಾಜ್ಯದ ಅನೇಕ ಜಿಲ್ಲೆಗಳಲ್ಲಿ ತಮ್ಮ ಪ್ರದರ್ಶನ ವನ್ನು ನೀಡಿದ್ದಾರೆ.

ಶಿವಪ್ಪ ಬಸರಿಗಿಡ: ರಂಗಭೂಮಿ ಮತ್ತು ದೊಡ್ಡಾಟದ ಕಲಾವಿದ. ಕುಕುನೂರಿನ ರೆಹಮಾನವ್ವ ಕಂಪನಿಯಲ್ಲಿ ಕಲಾವಿದರಾಗಿ ಕೆಲಸ ಮಾಡಿದ ಶಿವಪ್ಪ ತಾವೇ ಸಂಗಮೇಶ್ವರ ನಾಟ್ಯ ಸಂಘ ಪ್ರಾರಂಭಿಸಿ ಕಲಾಸೇವೆ ಗೈದರು. ಆದರೆ ಯಶಸ್ಸು ಕಾಣಲಿಲ್ಲ. ಅನಂತರ ದೊಡ್ಡಾಟದಲ್ಲಿ ಹೆಸರು ಮಾಡಿದ ಮರೇಗೌಡ್ರು ಇವರ ಗುರುಗಳಾದರು.

ಶಿವಪ್ಪನವರು 50ಕ್ಕೂ ಹೆಚ್ಚು ದೊಡ್ಡಾಟ ಮಾಡಿಸಿ ಜನಮನ ಸೆಳೆದಿದ್ದಾರೆ. ಇವರ ಕಂಚಿನ ಕಂಠ, ಸಂಭಾಷಣಾ ಶೈಲಿ, ಮುಖ ಭಾವ ಅಭಿನಯದಿಂದ ತಮ್ಮ ಕಲಾಪ್ರತಿಭೆಯನ್ನು ತೋರಿಸಿ ಕೊಡುತ್ತಾರೆ. ರಾಮಾಂಜನೇಯ ಯುದ್ಧ. ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ, ಲವಕುಶ, ಬಾಲ ಭಿಕ್ಷುಕರಾಜ ಹೀಗೆ ಹಲವಾರು ನಾಟಕಗಳನ್ನು ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇದೇ ತಾಲ್ಲೂಕಿನ ಇನ್ನೊಬ್ಬ ದೊಡ್ಡಾಟದ ಮಾಸ್ತರ ಬಸವಂತಪ್ಪ ಪಟ್ಟಲಚಿಂತಿ ಗ್ರಾಮದವರಾಗಿದ್ದಾರೆ. ಇವರು ಕಲಾಸಕ್ತರಿಗೆ ಈ ಕಲೆಯನ್ನು ಕಲಿಸಿದ್ದಲ್ಲದೆ ಅನೇಕ ಊರುಗಳಲ್ಲಿ ಸಂಚರಿಸಿ ಈ ಕಲೆಯನ್ನು ಬೆಳೆಸುತ್ತಿದ್ದಾರೆ. ಕುಷ್ಟಗಿಯ ಭಾಷುಸಾಬ ಹೊಕ್ಕಳ ಇವರು ಡಪ್ಪಿನಾಟದ ಮಾಸ್ತರ ಎಂದೇ ಖ್ಯಾತರಾಗಿದ್ದಾರೆ. ತಾಳಕ್ಕೆ ತಕ್ಕ ಹಾಗೆ ಡಪ್ಪು ಬಾರಿಸುವುದು. ಹಿಮ್ಮೇಳನದಲ್ಲಿ ಹಾಡುವುದು ಹಾಗೂ ಇವರ ವಿಶೇಷತೆ ಎಂದರೆ, ಸಂಗ್ಯಾ-ಬಾಳ್ಯಾ, ಸ್ಟೇಷನ್ ಮಾಸ್ತರ, ಬಾಲ ಭಿಕ್ಷುಕ ರಾಜ ಸೇರಿದಂತೆ ಅನೇಕ ಡಪ್ಪಿನಾಟ ನಿರ್ದೇಶಿಸಿ ಪ್ರದರ್ಶನ ಗಳನ್ನು ಮಾಡಿಸಿ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಈಶಪ್ಪ ಕಾಮನೂರ: ಬಯಲಾಟದ ಕಲಾವಿದ. ಕುಷ್ಟಗಿ ತಾಲ್ಲೂಕಿನ ಕಂದಕೂರು ಗ್ರಾಮದವರು. ಇವರು ಏಕತಾರಿ, ತತ್ವಪದಗಳನ್ನು ಹಾಡಿಕೊಂಡು ಬೆಳೆದವರು. 25 ಬಯಲಾಟ ಗಳ ನಿರ್ದೇಶಕರಾಗಿ ಅದರಲ್ಲೂ ಸ್ತ್ರೀ ಪಾತ್ರದಲ್ಲಿ ಭಾವನಾತ್ಮಕ ವಾಗಿ ನಟಿಸಿದರೆ ಗಂಡೋ ಅಥವಾ ಹೆಣ್ಣೋ ಎಂದು ಅನುಮಾನ ಬರುವಂತೆ ಇವರ ನಟನೆ ಅತ್ಯದ್ಭುತವಾಗಿರುತ್ತದೆ. ಇವರ ಗುರುಗಳು ಕಳಕಪ್ಪ ಮಾಸ್ತರರಾಗಿದ್ದರು. ಜೊತೆಗೆ ಹಾರ್ಮೋನಿಯಂ ನುಡಿಸುವುದು, ಬಯಲಾಟದ ರಾಗ ಹಾಗೂ ತಾಳಗಳನ್ನು ಕಲಾಸಕ್ತರಿಗೆ ಕಲಿಸಿಕೊಡುತ್ತಾರೆ.

ಅಡಿವೆಪ್ಪ ಮಡಿವಾಳರ: ಜನಪದ ಕಲಾವಿದ. ಹನುಮ ಸಾಗರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜನಪದ ಕಲೆ, ಭಜನೆ ಹಾಡು, ತತ್ವಪದಗಳನ್ನು ಬಾಲ್ಯದಿಂದಲೂ ಬೆಳಸಿಕೊಂಡು ಬಂದು ಈ ಕಲೆಯನ್ನು ಬೆಳಸುತ್ತಿದ್ದಾರೆ. ಸತ್ಯವಾನ ಸಾವಿತ್ರಿ, ಗಿರಿಜಾ ಕಲ್ಯಾಣ, ಮಾರ್ಕಂಡೇಯ ಮೃದ್ವತಿ, ಬಯಲಾಟ, ದೊಡ್ಡಾಟ, ನಾಟಕಗಳಲ್ಲಿ ವಿಶೇಷವಾಗಿ ಸ್ತ್ರೀ ಪಾತ್ರಧಾರಿಯಾಗಿ ಕಾಣಿಸಿಕೊಂಡಾಗ ಪ್ರೇಕ್ಷಕರಿಗೆ ಆಶ್ಚರ್ಯ ಮೂಡಿಸುತ್ತಿದ್ದರು, ಮೃದಂಗ, ತಪ್ಪಡಿ ಬಾರಿಸುತ್ತಾರೆ.

ಇದೇ ಊರಿನ ಇನ್ನೊಬ್ಬ ಹಿರಿಯ ಕಲಾವಿದ **ಶಂಕ್ರಪ್ಪ ಹೂಗಾರ ಕರಡಿ** ಮಜಲು ವಾದಕರು. ಉದ್ಯೋಗದಲ್ಲಿ ಹೂ ಮಾರಿದರೂ ಕರಡಿ ಮಜಲು ಮಾಸ್ತರ ಎಂದೇ ಹೆಸರು ವಾಸಿ ಯಾಗಿದ್ದಾರೆ. ಹಲಗೆ ಬಾರಿಸುವುದು, ತಪ್ಪಡಿ ಬಡಿಯುವುದು ಚರ್ಮವಾದ್ಯಗಳಲ್ಲಿ ಶಬ್ದ ಹೊರಡಿಸುವದೆಂದರೆ, ಇವರಿಗೆ ಬಲು ಖುಷಿ. ಚಂದ್ರಹಾಸ ನಾಟಕದಲ್ಲಿ ಕಾಳಿಕಾದೇವಿ ಪಾತ್ರಮಾಡಿ ನೋಡುಗರ ಕಣ್ಣಲ್ಲಿ ರೋಮಾಂಚನ ಹುಟ್ಟಿಸುತ್ತಾರೆ. 70ರ ವಯಸ್ಸಿನಲ್ಲಿಯೂ ಈ ಕ್ರಿಯಾಶೀಲ ಮನಸ್ಸು ಗೀತಾ ಪ್ರವಚನ, ದೇವಿ ಪುರಾಣ ಶರಣ ಸಂಸ್ಕೃತಿಯ ಬಗ್ಗೆ ಮಕ್ಕಳನ್ನು ಕೂಡಿಸಿ ಕೊಂಡು ಕಥೆ ಹೇಳಿ ಕಾಲಕಳೆಯುತ್ತಿದ್ದಾರೆ.

ಕೃಷ್ಣಪ್ಪ ಗೊಂದಳಿ ಮನ್ನೇರಾಳ: ಜಾನಪದ ಕ್ಷೇತ್ರದಲ್ಲಿ ಗೊಂದಳಿಗರ ಕಥೆಗಳಿಂದ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರ ಮಗ ರಾಮಚಂದ್ರನ ಜೊತೆಗೆ ಅನೇಕ ಊರುಗಳಲ್ಲಿ ಕಥೆಯನ್ನು ಹೇಳುತ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಕಾರ್ಯಕ್ರಮ ಕೊಡುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ತಾಲ್ಲೂಕಿನಲ್ಲಿ ದೊಡ್ಡಾಟದ ಕಲಾವಿದರಾದ ಪೀಟಿಲು ವಾದಕ ಶೇಖರಯ್ಯ ಗುರುಸ್ಥಲಮಠ ಇವರು ದೊಡ್ಡಾಟದಲ್ಲಿ ವಿಶೇಷವಾಗಿ ಪೀಟಿಲು ತಂತಿ ವಾದ್ಯವನ್ನು ನುಡಿಸುವುದರಿಂದ ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ನೀಡಿರುವುದಲ್ಲದೆ ಇವರಿಗೆ ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನ ದೊರೆತಿವೆ. ಇವರಿಗೆ ಕಲಾವಿದರ ಮಾಸಾಶನ ಬರುತ್ತದೆ. ಈಗ ಇವರು ಯಮನೂರಿನಲ್ಲಿ ವಾಸವಾಗಿದ್ದಾರೆ.

ಜಗದಯ್ಯ ಸಾಲಿಮಠ: ಯುವಕ ಮಂಡಳಿಯ ಅಧ್ಯಕ್ಷರಾದ ಜಗದಯ್ಯ ಸಾಲಿಮಠರು 2004-05ನೇ ಸಾಲಿನ ರಾಜ್ಯ ಯುವ ಪ್ರಶಸ್ತಿಯನ್ನು ಪಡೆದವರಾಗಿದ್ದಾರೆ. ಪ್ರಸ್ತುತ ವರ್ಷದಲ್ಲಿ ಇವರ ಯುವಕ ಮಂಡಳಿಯಿಂದ ಬಯಲಾಟ ತರಬೇತಿ ಶಿಬಿರ, ವಿಭಾಗಮಟ್ಟದ ಭಜನಾ ಸ್ಪರ್ಧೆ, ಮಹಿಳೆಯರಿಗೆ ತರಬೇತಿ, ಸರಾಯಿ ನಿಷೇಧ ಕಾರ್ಯಕ್ರಮ, ಶ್ರಮದಾನದಿಂದ ಬಾವಿ ಹೂಳೆತ್ತುವುದು. ರಂಗೋಲಿ ಸ್ಪರ್ಧೆ, ಏಡ್ಸ್ ಜಾಗೃತಿ ಕಾರ್ಯ ಕ್ರಮ, ವರದಕ್ಷಿಣೆ ಪಿಡುಗು ನಿವಾರಣೆ ಕಾರ್ಯಕ್ರಮ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

2002-03ರಲ್ಲಿ ಸೊರಬದಲ್ಲಿ ನಡೆದ ಬಯಲಾಟದ ಪ್ರದರ್ಶನವನ್ನು ನೀಡಿ ಪ್ರಥಮ ರಾಜ್ಯ ಪ್ರಶಸ್ತಿ ಇವರಿಗೆ ಲಭಿಸಿದೆ. 2004ರಲ್ಲಿ ತುಮಕೂರಿನ ಶಿರಾದಲ್ಲಿ ರಾಜ್ಯಮಟ್ಟದ ಬಯ ಲಾಟದ ಪ್ರಥಮ ರಾಜ್ಯ ಪ್ರಶಸ್ತಿ ದೊರಕಿದೆ. ಎರಡು ಬಾರಿ ಯುವಜನ ಮೇಳದಲ್ಲಿ ರಾಜ್ಯ ಪ್ರಶಸ್ತಿಯನ್ನು ಇವರು ಪಡೆದು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರ ಜಾನಪದ ಕಲೆ ಯನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಯವರು ಗೌರವ ಸನ್ಮಾನ ವನ್ನು ನೀಡಿದ್ದಾರೆ.

ಹೀಗೆ, ಕೊಪ್ಪಳ ಜಿಲ್ಲೆ ಇಂಥ ನೂರಾರು ಜನ ಜನಪದ ಕಲಾವಿದರನ್ನು ತುಂಬಿಕೊಂಡು ಕಂಗೊಳಿಸುತ್ತಿದೆ. ಈ ಕಲಾವಿದ ರಿಂದ ಶ್ರೀಮಂತರಾದ ಕಲೆಯೂ ವೈಭವದಿಂದ ದೊರೆಯುತ್ತಿದೆ.

(ಎಸ್ಎಂಉ)

ಜಾನಪದ ಕಲಾವಿದರು (ಗುಲಬರ್ಗಾ ಜಿಲ್ಲೆ): ಗುಲಬರ್ಗಾ ಜಿಲ್ಲೆ ಅನೇಕ ಕವಿ, ಕಲಾವಿದರ ನೆಲೆ ಬೀಡಾಗಿದೆ. ಸಾವಿರಾರು ವರ್ಷಗಳ ಹಿಂದೆಯೇ ಇಲ್ಲಿನ ಜಾನಪದ ಕವಿ, ಸಾಹಿತ್ಯವನ್ನು ಕುರಿತು ಕವಿರಾಜಮಾರ್ಗಕಾರನು ವರ್ಣಿಸಿರುವನು. ಇಲ್ಲಿನ ಜನರ ಬದುಕಿನಲ್ಲಿ ಜನಪದ ಸಂಸ್ಕೃತಿ ಹಾಸು ಹೊಕ್ಕಾಗಿದೆ. ಅದು ಅವರ ಬದುಕು, ಭಾಷೆ ಧರ್ಮ, ವೈದ್ಯ ಕಲೆ, ಸಾಹಿತ್ಯದಲ್ಲಿ ಕಾಣದೆ ಇರಲಾರೆವು. ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಜಾನಪದ ಕ್ಷೇತ್ರದಲ್ಲಿ ದೇಶಿಯ, ವಿದೇಶಿ ವಿದ್ವಾಂಸರಿಂದ ಸಂಗ್ರಹ, ಸಂಪಾದನೆ ಪ್ರಕಟಣೆ ಕಾರ್ಯ ನಡೆಯುತ್ತಿದ್ದರೆ. ಈ ಪ್ರದೇಶದ ಜನತೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಇಲ್ಲಿನ ಕವಿ, ಕಲಾವಿದರ ಬಗೆಗೆ ಕೆಲಸ ಕಾರ್ಯಗಳೇ ನಡೆಯಲಿಲ್ಲ.

ಈ ಜಿಲ್ಲೆಯ ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ, ಸಂಗ್ರಹ, ಸಂಪಾದನೆ ಕೆಲಸಗಳು ಮೊಟ್ಟ ಮೊದಲ ಬಾರಿಗೆ 1976 ರಿಂದ ಈಚೆಗೆ ನಡೆಯಿತೆಂದು ಹೇಳಬಹುದು. ಅದೂ ಕರ್ನಾಟಕ ವಿಶ್ವವಿದ್ಯಾಲಯದ ಕಲಬುರ್ಗಿ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಿದ ಮೇಲೆಯೇ. ಬಿ.ಬಿ. ಹೆಂಡಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಜಾನಪದ ಸಾಹಿತ್ಯ ಸಂಶೋಧನೆ ಅನೇಕ ಉತ್ಸಾಹಿ ಯುವ ಸಂಶೋಧಕರನ್ನು ಈ ಕ್ಷೇತ್ರಕ್ಕೆ ಧುಮಿಕಿಸಿತು. ಇದರಿಂದಾಗಿ ಇಲ್ಲಿನ ಅನೇಕ ಸಾಹಿತ್ಯ, ಕಲಾ ಪ್ರಕಾರಗಳ ಜೊತೆಗೆ ಅವುಗಳ ಸೃಷ್ಟಿಕಾರರಾದ ಕವಿ ಕಲಾವಿದರು ಬೆಳಕಿಗೆ ಬರಲಾರಂಭಿಸಿದರು. ಇಂದು ಜಿಲ್ಲೆಯ ಅನೇಕ ಕಲಾವಿದರು ತಮ್ಮ ವಿಶಿಷ್ಟ ಕಲಾ ಪ್ರತಿಭೆಯಿಂದ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಿಂಚಿದ್ದಾರೆ. ಅನೇಕ ಪ್ರಶಸ್ತಿ ಗೌರವಗಳನ್ನು ಪಡೆದಿದ್ದಾರೆ. ಇಷ್ಟಾಗಿಯೂ ಈ ಸ್ಥಾನಮಾನಗಳನ್ನು ಇನ್ನೂ ಹಲವರಿಗೆ ದಕ್ಕದೆ ಹೋಗಿವೆಯಾದರೂ, ಅವರ ಕಲಾ ಪ್ರತಿಭೆಯೇನು ಕಡಿಮೆಯಾಗಿಲ್ಲ ಅಂತಹ ಪ್ರಮುಖ ಕಲಾವಿದರ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ನಾಗಲಿಂಗಪ್ಪ ಕಾಶಿಪತಿ ಪತ್ತಾರ: ಇವರು ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಜನಿಸಿದರು. ವಿಶ್ವಕರ್ಮ ಮನೆತನಕ್ಕೆ ಸೇರಿದ ನಾಗಲಿಂಗಪ್ಪ ಕೋರವಾರ ಅಣವೀರಭದ್ರೇಶ್ವರನ ಪರಮಭಕ್ತರು. ದೇವರ ಜಾತ್ರೆ, ಉತ್ಸವ, ಮದುವೆ ಮುಂತಾದ ಧಾರ್ಮಿಕ, ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಬಹುಕಾಲದಿಂದ ಪುರುವಂತಿಕೆ ಕಲೆಯನ್ನು ಪ್ರದರ್ಶಿಸಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಸರುವಾಸಿಯಾದ ಕಲಾವಿದರಾಗಿದ್ದಾರೆ. ನಾಗಲಿಂಗಪ್ಪ ಪುರುವಂತಿಕೆ ಕಲಾವಿದರಾಗಿದ್ದಂತೆಯೇ ಜನಪದ ಹಾಡುಗಾರರೂ ಆಗಿದ್ದಾರೆ. ಜಿಲ್ಲೆಯಾದ್ಯಂತ ಹಲವಾರು ಕಾರ್ಯಕ್ರಮಗಳಲ್ಲಿ ತಮ್ಮ ಕಲೆ ಪ್ರದರ್ಶಿಸಿ ಕಲಾ ಪೋಷಕರೂ ಆಗಿರುವ ಅವರಿಗೆ ಜಾನಪದ ಅಕಾಡೆಮಿ ಬೆಂಗಳೂರು 1980ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಶರಣಪ್ಪ ಮೈಲಾರಪ್ಪ ಕಾಳೆ: ಇವರು ಗುಲಬರ್ಗಾ ನಗರದ ಜಗತ್ ಬಡಾವಣೆಯ ಮೇಲಿನಕೇರಿಯ ನಿವಾಸಿಯಾಗಿದ್ದಾರೆ. ದೊಡ್ಡಾಟದ ಕಲಾವಿದರು. ಹಲವಾರು ದಶಕಗಳಿಂದ ಅನೇಕ ದೊಡ್ಡಾಟದಲ್ಲಿ ವಿವಿಧ ಪಾತ್ರಗಳನ್ನು ಹಾಕಿ ಅಭಿನಯಿಸಿ ಜಿಲ್ಲೆಯಾದ್ಯಂತ ಹೆಸರಾಗಿದ್ದಾರೆ. ಅವರು ಅಭಿನಯಿಸಿದ ಪ್ರಮುಖ ಬಯಲಾಟಗಳಲ್ಲಿ, ಐರಾವಣ–ಮೈರಾವಣ, ಶುಂಭ–ನಿಶುಂಭ, ಪಾಂಡವ ವನವಾಸ, ಶ್ರೀಕೃಷ್ಣ ಸಂಧಾನ, ದೇವಿ ಮಹಾತ್ಮೆ ಮುಂತಾದವು ಸೇರಿವೆ. ಮೈಲಾರಲಿಂಗೇಶ್ವರ ಬಯಲಾಟ ಸಂಘ ಕಟ್ಟಿ ನೂರಾರು ಜನರನ್ನು ತರಬೇತು ಗೊಳಿಸಿದ್ದಾರೆ. 1981ರಲ್ಲಿ ರಾಜ್ಯ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರನ್ನು ಗೌರವಿಸಿ ಸನ್ಮಾನಿಸಿದೆ.

ಶಿವಶರಣಪ್ಪ ಬಸಣ್ಣಪ್ಪ ನಾಟಕಕಾರ: ಇವರು ಲಾವಣಿ ಹಾಡುಗಾರರೆಂದೇ ಪ್ರಸಿದ್ಧರು. ಇವರ ಹುಟ್ಟೂರು ಗುಲಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ಧಂಗಾಪುರ, ತುಂಬಾ ಹಿಂದೆ ಈ ತಾಲ್ಲೂಕಿನಲ್ಲಿ ದ್ಯಾಗವಿ ಗುಂಡಪ್ಪನೆಂಬ ಪ್ರಸಿದ್ಧ ಲಾವಣಿ ಕವಿ ಆಗಿ ಹೋಗಿದ್ದಾನೆ. ಗುಂಡಪ್ಪನ ಅನೇಕ ಶಿಷ್ಯ ಬಳಗ ತಾಲ್ಲೂಕಿನಾದ್ಯಂತ ಕಾಣಿಸುತ್ತಾರೆ. ಶಿವಶರಣಪ್ಪ ನಾಟಕಕಾರ ದ್ಯಾಗಾವಿ ಗುಂಡಪ್ಪ, ಸಾವಳಗಿ ಮಹಮ್ಮದಸಾಬ್‌ರ ಲಾವಣಿಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುತ್ತಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 1982 ಪ್ರಶಸ್ತಿ ಲಭಿಸಿದೆ.

ಬಸಪ್ಪ ಸಿದ್ರಾಮಪ್ಪ ಹೊಟ್ಟಿ: ಗುಲಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕುರುಕುಂಟಾದವರಾದ ಬಸಪ್ಪ ಹೊಟ್ಟಿ ದೊಡ್ಡಾಟದ ಕಲಾವಿದರು. ಜಿಲ್ಲೆಯ ದೊಡ್ಡಾಟ ಪರಂಪರೆಗೆ ಬಸಪ್ಪ ಹೊಟ್ಟಿಯವರ ಕೊಡುಗೆ ಸಾಕಷ್ಟಾಗಿದೆ. ಇವರ ಕಲಾ ಸೇವೆಯನ್ನು ಗುರುತಿಸಿದ ರಾಜ್ಯ ಜಾನಪದ ಅಕಾಡೆಮಿಯು 1983ರಲ್ಲಿ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ.



ಮೋನಪ್ಪ ಸುತಾರ (ಬಡಿಗೇರ): ಗುಲಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕಿನ ಚಿಂಚೋಳಿಯವರು. ತಮ್ಮ ಕುಲಕಸುಬು ಬಡಿಗತನದೊಂದಿಗೆ ದೊಡ್ಡಾಟ. ಹಾಡುಗಾರಿಕೆ ಹಾಗೂ ಪುರವಂತಿಕೆಯ ಸೇವೆಯಲ್ಲಿ ತೊಡಗಿರುವ ಶ್ರೇಷ್ಠ ಜಾನಪದ ಕಲಾವಿದರಾಗಿದ್ದಾರೆ. ಇವರು ಗುಲಬರ್ಗಾ, ಬೀದರ, ರಾಯಚೂರು, ಬೆಂಗಳೂರು ಮುಂತಾದ ಕಡೆಗಳಲ್ಲಿ ತಮ್ಮ ಕಲಾಪ್ರದರ್ಶನದಿಂದ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದ ಕಲಾವಿದರು. ಕೆಲವು ವರ್ಷಗಳ ವರೆಗೆ ಗುಲಬರ್ಗಾ ವಿಶ್ವವಿದ್ಯಾಲಯ ಎಂ.ಎ. ಜಾನಪದ ವಿದ್ಯಾರ್ಥಿಗಳಿಗೆ ದೊಡ್ಡಾಟ, ಸಣ್ಣಾಟಗಳ ತರಬೇತಿ ನೀಡಿದ್ದಾರೆ. 1984ರಲ್ಲಿ ಇವರಿಗೆ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಸಿದ್ದಪ್ಪ ರೇವಣಪ್ಪ ನಾಗೋಜಿ: ಆಳಂದ ತಾಲ್ಲೂಕಿನ ಧಂಗಾಪೂರ ಗ್ರಾಮದವರಾಗಿದ್ದಾರೆ. ಇವರು ಅಪ್ಪಟ ಜಾನಪದ ಬಯಲಾಟ ಕಲಾವಿದರು. ಸಾರಥಿ ಪಾತ್ರ ಮಾಡುವುದರಲ್ಲಿ ಇವರದು ಎತ್ತಿದ ಕೈ. ಸುತ್ತಲೆಲ್ಲ ಪ್ರಸಿದ್ಧರಾಗಿದ್ದಾರೆ. ಪ್ರಸ್ತುತ 1985ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಗೆ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಸೋಮಯ್ಯ ಚನ್ನಬಸಯ್ಯ ಬೀಳಗಿ: ಗುಲಬರ್ಗಾ ಜಿಲ್ಲೆ ಅಫಜಲ್‌ಪುರ ತಾಲ್ಲೂಕಿನ ಹಿರೇಮಣ್ಣೂರಿನಲ್ಲಿ ಜನಿಸಿದ ಸೋಮಯ್ಯ ಬೀಳಗಿಯವರು ಸಣ್ಣಾಟ, ದೊಡ್ಡಾಟ ಹಾಗೂ ಜಾನಪದ ಭಜನೆ ಹಾಡುಗಳಿಗೆ ಪ್ರಸಿದ್ಧರಾಗಿದ್ದಾರೆ. ಸ್ವತಃ ಕವಿಯಾದ ಬೀಳಗಿಯವರು ಅನೇಕ ಭಜನೆ ಹಾಡುಗಳನ್ನು ರಚಿಸಿರುವರು. 1986ರಲ್ಲಿ ಇವರಿಗೆ ಕರ್ನಾಟಕ ಜಾನಪದ

ಅಕಾಡೆಮಿಯಿಂದ ಅವರ ಜಾನಪದ ಕಲಾ ಪ್ರದರ್ಶನಕ್ಕೆ ಪ್ರಶಸ್ತಿ ದೊರಕಿದೆ.

ಅಣ್ಣಪ್ಪ ಸಾಬಣ್ಣ ಸಂಕರಡಗಿ: ಇವರು ಚಿತ್ತಾಪುರ ತಾಲ್ಲೂಕಿನ ಸಂಕರಡಿ ಗ್ರಾಮದವರು. ಜಾನಪದ ಹಾಡುಗಾರಿಕೆಗೆ ತುಂಬ ಪ್ರಸಿದ್ಧ ಕಲಾವಿದರಾಗಿದ್ದಾರೆ. ಇವರ ತಂದೆಯ ಹೆಸರು ಸಾಬಣ್ಣ. ತಂದೆಯೇ ಅಣ್ಣಪ್ಪನವರಿಗೆ ಹಾಡು ಕಲಿಸಿದ ಗುರುವಾಗಿದ್ದರು. ಸುದೀರ್ಘವಾದ ಖಂಡಕಾವ್ಯವನ್ನು ಹಾಡುವುದರಲ್ಲಿ ಈ ಕಲಾವಿದರು ಪ್ರಸಿದ್ಧರಾಗಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಅಲ್ಲದೆ 1987ರಲ್ಲಿ ರಾಜ್ಯಮಟ್ಟದ ಜಾನಪದ ಅಕಾಡೆಮಿಯ ಪ್ರಶಸ್ತಿ ಅಣ್ಣಪ್ಪ ಅವರಿಗೆ ದೊರಕಿತು.

ಹೈದರ ಸಾಹೇಬ ಮೋದಿನ ಸಾಹೇಬ ಬೈರಾಮಡಗಿ: ಹೈದರ ಸಾಹೇಬ ಅವರು ಅಫಜಲ್‌ಪುರ ತಾಲ್ಲೂಕಿನ ಬೈರಾಮಡಿಗಿಯವರು. ಇವರು ಗೀಗೀ ಪದಗಳನ್ನು ಹಾಡುವುದರಲ್ಲಿ ಅತ್ಯಂತ ನಿಷ್ಣಾತರು. ಗುಲಬರ್ಗಾ, ಬೆಂಗಳೂರು, ಮೈಸೂರು ಮುಂತಾದೆಡೆಗಳಲ್ಲಿ ಹಲವಾರು ಸಭೆ ಸಮಾರಂಭಗಳಲ್ಲಿ ಇವರು ತಮ್ಮದೆ ವಿಶಿಷ್ಟ ಶೈಲಿಯ ಹಾಡುಗಾರಿಕೆಯಿಂದ ಜನಮನ ಗೆದ್ದ ಕಲಾವಿದರಾಗಿದ್ದಾರೆ. 1988ರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಹೈದರ ಸಾಹೇಬ ಅವರಿಗೆ ದೊರಕಿದೆ.



ಕಾಶೆಪ್ಪ ಮರೆಪ್ಪ ಹಾಲು: ಆಳಂದ ತಾಲ್ಲೂಕಿನ ಖಾನಾಪುರದವರಾದ ಕಾಶೆಪ್ಪ ಹಾಲು ಜಿಲ್ಲೆಯ ಪ್ರತಿಭಾವಂತ ಗೀಗೀ ಹಾಡುಗಾರರೆನಿಸಿದ್ದಾರೆ. ಇವರು ಹಾಡಲು ಆರಂಭಿಸಿದರೆ ಶ್ರೋತೃ ವೃಂದ ಅತ್ಯಂತ ಆನಂದ ಪಡುವುದು. ಇಂಥ ಪ್ರತಿಭಾವಂತ ಹಾಡುಗಾರನಿಗೆ 1989ರಲ್ಲಿ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶಿವಶರಣಪ್ಪ, ಮಹಾಂತಪ್ಪ ಮಲ್ಲೆ: ಗುಲಬರ್ಗಾ ಜಿಲ್ಲೆಯವರಾದ ಶಿವಶರಣಪ್ಪ ಮಲ್ಲೆ ಅವರು ದೊಡ್ಡಾಟದ ಕಲಾವಿದರು ಮತ್ತು ಮುಮ್ಮೇಳದ ಹಾಡುಗಾರರಾಗಿದ್ದಾರೆ. ಇವರಿಗೆ ದೊಡ್ಡಾಟ ಪಾತ್ರಾಭಿನಯಕ್ಕಾಗಿ 1990ರಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿದೆ.

ಅಂಬವ್ವ ಭೀಮಣ್ಣ ಪಟ್ಟಣ: ಜನಪದ ಸಂಪ್ರದಾಯದ ಹಾಡುಗಳನ್ನು ಹಾಡುವ ಕಲಾವಿದೆಯಾದ ಅಂಬವ್ವ ಪಟ್ಟಣ ಅಫಜಲ್‌ಪುರ ತಾಲ್ಲೂಕಿನ ಗೂಡೂರು ಗ್ರಾಮದವರಾಗಿದ್ದಾರೆ. 1991ರಲ್ಲಿ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿದೆ.

ಗುರಣ್ಣ ಮಾರ್ತಾಂಡಪ್ಪ ಹಡಪದ: ಗುರಣ್ಣ ಹಡಪದ ಅವರು ಶಹಾಪೂರ ತಾಲ್ಲೂಕಿನ ದೊಡ್ಡ ಸಗರಿನವರಾಗಿದ್ದಾರೆ. ಹಲವಾರು ದಶಕಗಳಿಂದ ನಾಟಿ ವೈದ್ಯ ನಡೆಸುತ್ತಿರುವ ಅವರು ಶಹಾಪುರ ಹಾಗೂ ಸುತ್ತಮುತ್ತಲಿನಲ್ಲೆಲ್ಲ ತುಂಬ ಪ್ರಸಿದ್ಧರಾಗಿದ್ದಾರೆ. ಅವರಿಗೆ ರಾಜ್ಯ ಜಾನಪದ ಅಕಾಡೆಮಿಯು 1992ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಕೃಷ್ಣಯ್ಯ ಭೀಮಯ್ಯ ದಾಸರ: ಕೃಷ್ಣಯ್ಯ ಭೀಮಯ್ಯ ದಾಸರ ಬಯಲಾಟದ ಕಲಾವಿದರು. ಊರು ಯಾದಗಿರ ತಾಲ್ಲೂಕಿನ ಅನುಪನೂರ, ಹಲವಾರು ವರ್ಷಗಳಿಂದ ಬಯಲಾಟಗಳನ್ನು ಆಡಿಸಿ, ಸ್ವತಃ ಪಾತ್ರವಹಿಸುತ್ತ ಗ್ರಾಮೀಣ ಜನಪದ ಕಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ರಾಜ್ಯ ಜಾನಪದ ಅಕಾಡೆಮಿ ಕೃಷ್ಣಯ್ಯನವರ ಸೇವೆಯನ್ನು ಗುರುತಿಸಿ 1993ರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ನೀಡಲಾಗಿದೆ.

ಸಾಂತರವ್ವ ಸಾಬಣ್ಣ ಸುಣಗಾರ: ಜಾನಪದ ಸಂಪ್ರದಾಯ, ಸೋಬಾನೆ ಹಾಗೂ ತತ್ವಪದಗಾರಿಕೆಯಲ್ಲಿ ಹೆಸರು ಮಾಡಿದ ಸಾಂತರೆವ್ವ ಸುಣಗಾರ ಅವರು ಚಿತ್ತಾಪುರ ತಾಲ್ಲೂಕಿನ ನಾಲವಾರ ಗ್ರಾಮದವರು. ಅವರಿಗೆ ಜಾನಪದ ಹಾಡುಗಾರಿಕೆಗಾಗಿ ರಾಜ್ಯ ಮಟ್ಟದ ಪ್ರಶಸ್ತಿಯನ್ನು 1994ರಲ್ಲಿ ನೀಡಲಾಗಿದೆ.

ನೂರಂದಪ್ಪ ಹೆರೂರ: ನೂರಂದಪ್ಪ ಹೆರೂರ ಆಳಂದ ತಾಲ್ಲೂಕಿನ ವ್ಹಿ.ಕೆ. ಸಲಗರ ಗ್ರಾಮದವರಾಗಿದ್ದಾರೆ. ಇವರು ಬಯಲಾಟದ ಕಲಾವಿದರು. ಇವರ ಜಾನಪದ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಅಕಾಡೆಮಿ 1995ರಲ್ಲಿ ಸನ್ಮಾನಿಸಿ ಗೌರವಿಸಿದೆ.

ಸಿದ್ದಪ್ಪ ಮೇಟಿ: ಸಿದ್ದಪ್ಪ ಮೇಟಿ ಶಹಾಪೂರ ತಾಲ್ಲೂಕಿನ ಸೈದಾಪುರದವರು. ವಿಶಿಷ್ಟ ಜಾನಪದ ಹಾಡುಗಾರ. ಡೊಳ್ಳಿನ ಹಾಡು, ಹಾಲುಮತ ಕುರಿತು ಸುದೀರ್ಘವಾಗಿ ಹಾಡುತ್ತಿದ್ದ ಸಿದ್ದಪ್ಪ ಮೇಟಿಯವರಿಗೆ ಜಾನಪದ ಹಾಡುಗಾರಿಕೆಗೆ 1996ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ದೊರಕಿತು. ಇತ್ತೀಚೆಗೆ ಈ ಕಲಾವಿದರು ಮರಣ ಹೊಂದಿದ್ದಾರೆ.

ಹನುಮಂತ ಮಾರುತಿ ಹೂಗಾರ: ಹನುಮಂತ ಹೂಗಾರ ಅವರು ಆಳಂದ ತಾಲ್ಲೂಕಿನ ಖಾನಾಪುರ ಗ್ರಾಮದವರಾಗಿದ್ದಾರೆ. ತಮ್ಮ ನಾಟಿ ವೈದ್ಯ ಸೇವೆಯಿಂದ ತಾಲ್ಲೂಕಿನ ಸುತ್ತಮುತ್ತಲೆಲ್ಲ ಪ್ರಸಿದ್ಧರಾದ ಹನುಮಂತಪ್ಪನವರಿಗೆ 1997ರಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ಲಭಿಸಿದೆ.

ಗಿರಿಜಮ್ಮ ಅಲ್ದಿಹಾಳ: ಇಂಪಾದ ತನ್ನ ಕಂಠ ಸಿರಿಯಿಂದ ಗೀಗೀ ಪದಗಳನ್ನು ಹಾಡುವ ಗಿರಿಜಮ್ಮ ಲಂಬಾಣಿ ಸಮುದಾಯಕ್ಕೆ ಸೇರಿದ ಕಲಾವಿದೆಯಾಗಿದ್ದಾಳೆ. ಚಿತ್ತಾಪುರ ತಾಲ್ಲೂಕಿನ ಅಲ್ದಿಹಾಳ ತಾಂಡಾದಲ್ಲಿ ನೆಲೆಸಿದ್ದಾರೆ. 1998 ರ ಕರ್ನಾಟಕ ಜಾನಪದ ಅಕಾಡೆಮಿಯ ಪ್ರಶಸ್ತಿ ದೊರೆತಿರುವುದು.

ಗಿರಿಜಾಬಾಯಿ ಜಿ. ರಾಠೋಡ: ಗೀಗೀ ಪದ ಗಾಯಕಿ ಗಿರಿಜಾಬಾಯಿ ರಾಠೋಡ ಲಂಬಾಣಿ ಬುಡಕಟ್ಟು ಜನಾಂಗಕ್ಕೆ ಸೇರಿದ ಜನಪದ ಕಲಾವಿದೆ. ಈಗವರು ಗುಲಬರ್ಗಾದ ಆದರ್ಶನಗರ ಬಡಾವಣೆಯಲ್ಲಿ ನೆಲೆಸಿದ್ದಾರೆ. ಪ್ರಸ್ತುತ ಅವರ ಹಾಡುಗಾರಿಕೆ ಕಲೆಗೆ ರಾಜ್ಯಮಟ್ಟದ ಪ್ರಶಸ್ತಿ ದೊರಕಿರುತ್ತದೆ.

ಶಿವಲಿಂಗಪ್ಪ ಡಿಗ್ಗಿ: ಶಿವಲಿಂಗಪ್ಪ ಡಿಗ್ಗಿ ಶಹನಾಯಿ ವಾದಕರಾಗಿದ್ದು ಜಿಲ್ಲೆಯಲ್ಲಿ ತಮ್ಮ ಶಹನಾಯಿ ವಾದನದಿಂದ ಮನೆ ಮಾತಾಗಿದ್ದಾರೆ. ಅವರಿಗೆ ಹಲವು ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದೆ. 2006ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದಿರುತ್ತಾರೆ.



ಸಂಬಣ್ಣ ಪುರವಂತ: ಪುರವಂತಿಕೆ ವೇಷ ಹಾಗೂ ಕುಣಿತದಲ್ಲಿ ತುಂಬ ಪ್ರಸಿದ್ಧಿ ಹೊಂದಿದ್ದಾರೆ. ಅಲ್ಲದೆ ಏಕತಾರಿ ಹಾಡುಗಾರರೂ ಆಗಿರುವರು. ಗುಲಬರ್ಗಾ ಜಿಲ್ಲೆ ಜೇವರ್ಗಿ ತಾಲ್ಲೂಕಿನ ನೆಲೋಗಿಯವರು. ಸಂಬಣ್ಣನವರ ಸೇವಾ ವಿಶಿಷ್ಟತೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ 1999ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಗಿರಿಜಾ ಮಲ್ಲಪ್ಪ ಕರ್ಪೂರ: ಗಿರಿಜಾ ಕರ್ಪೂರ ಅವರು ಸಂಪ್ರದಾಯದ ಹಾಡುಗಳನ್ನು ಹೇಳುವ ಕಲಾವಿದರು. ಸಧ್ಯಕ್ಕೆ ಗುಲಬರ್ಗಾ ನಗರದ ವೆಂಕಟೇಶ ನಗರದಲ್ಲಿ ವಾಸವಾಗಿದ್ದಾರೆ. ಕಲಬುರ್ಗಿ ಜಿಲ್ಲಾ ಸಾಹಿತ್ಯ ಸಮ್ಮೇಳನ, ಆಕಾಶವಾಣಿ, ದೂರದರ್ಶನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ಹಾಡುಗಾರಿಕೆಗೆ 2003ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ನೀಡಿದೆ.

ಸಿದ್ರಾಮಪ್ಪ ಗುರುಬಸಪ್ಪ ಗುರುನಂಜಿ: ಜನಪದ ವೈದ್ಯರು. 85 ವರ್ಷದಲ್ಲಿರುವ ಶ್ರೀಯುತರ ಹುಟ್ಟೂರು ಅಫಜಲ್‌ಪುರ ತಾಲ್ಲೂಕು ಬೈರಾಮಡಗಿಯಾಗಿದೆ. ಜನಪದ ಸಂಗೀತಗಾರರು. ಯುನಾನಿ ವೈದ್ಯಪದ್ಧತಿಯನ್ನು ಜನಸೇವೆಗೆ ಬಳಸಿದ ಎಲೆ ಮರೆಯಕಾಯಿಯಂತಿರುವ ಸಿದ್ರಾಮಪ್ಪ ಅವರಿಗೆ 2008ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

(ಬಿಪಿಪಿ)

ಜನಪದ ಕಲಾವಿದರು: (ಬೀದರ ಜಿಲ್ಲೆ) ತಮ್ಮ ಬದುಕಿನ ದಿನನಿತ್ಯದ ಅನುಭವದಲ್ಲಿ ನೂರಾರು ಜನಪದ ಕಲೆಗಳನ್ನು ಹುಟ್ಟಿಸಿ ಬೆಳೆಸಿದ ಕೀರ್ತಿ ಬೀದರ ಜಿಲ್ಲೆಯ ನೂರಾರು ಕಲಾವಿದರಿಗೆ ಸಲ್ಲುತ್ತದೆ. ಜನಪದ ಸಾಹಿತ್ಯ, ಸಂಗೀತ ಹಾಗೂ ಕಲೆಗಳೊಂದಿಗೆ ಅನೇಕ ಕಲಾವಿದರು ಇಲ್ಲಿ ಆಗಿಹೋಗಿದ್ದಾರೆ ಹಾಗೂ ರೂಪುಗೊಳ್ಳುತ್ತಿದ್ದಾರೆ. ಆ ಕಲಾಕಾರರ ಕಲೆ ಹಾಗೂ ಸಾಹಿತ್ಯವನ್ನು ಉಳಿಸಿಕೊಂಡು ಮುಂದಿನ ಜನಾಂಗಕ್ಕೆ ತೋರಿಸಬೇಕಾದುದು ಇಂದಿನ ಆದ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ಈಗ ಪ್ರಸಿದ್ಧಿ ಪಡೆದು ಹೋಗಿರುವ ಕೆಲವು ಜನಪದ ಕಲಾಕಾರರ ಸ್ಥೂಲ ಪರಿಚಯವನ್ನಿಲ್ಲಿ ನೀಡಿದೆ.

1980ಕ್ಕಿಂತ ಮುಂಚೆಯೇ ಇಲ್ಲಿ ನೂರಾರು ಕಲಾಕಾರರು ಆಗಿಹೋಗಿದ್ದರೂ ಸಹ ಜನಪದ ಕಲಾಕಾರರನ್ನು ಗುರುತಿಸುವ ಕಾರ್ಯ ಆರಂಭವಾದುದು ಇಲ್ಲಿ 1980ರಿಂದಲೇ. ಅವರಲ್ಲಿ 1980ರಲ್ಲಿ 'ನನ್ನಾಸಾಹೇಬ ಮಂಗಲಗಿ' ಯವರನ್ನು ಜಿಲ್ಲೆಯ ಜನಪದ ಕಲಾಕಾರನೆಂದು ಗುರುತಿಸಿ ಅವರಿಗೆ 'ಪ್ರಶಸ್ತಿ' ನೀಡಲಾಯಿತು.

ನನ್ನಾ ಸಾಹೇಬ ಮಂಗಲಗಿ: ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಮಂಗಲಗಿ ಗ್ರಾಮದ ಇವರು ಶ್ರೇಷ್ಠ ಜನಪದ ಕಲಾಕಾರರು. ತತ್ವಪದ, ಭಜನೆಹಾಡು, ಮೋಹರಂ ಹಾಡು, ಕಲ್ಗಿತುರಾಯಿ ಮೊದಲಾದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಕಲಾವಿದರು. ಮುಸ್ಲಿಂ ಕುಟುಂಬದಲ್ಲಿ ಜನಿಸಿದ ನನ್ನಾಸಾಹೇಬ ನಿರಕ್ಷರಿಗಳಾಗಿದ್ದರು. ಬಡತನ ಕುಟುಂಬದ ತಂದೆ ಫಕೀರ್ ಅಹಮದ್, ತಾಯಿ ಮೌಲಾನಬಿಯವರು ಈತನನ್ನು ಶಾಲೆಗೆ ಕಳಿಸಿರಲಿಲ್ಲ. ಚಿಕ್ಕಂದಿನಿಂದ ಹಾಡುವ ಹವ್ಯಾಸವುಳ್ಳ ಇವರು ಅಲ್ಲಿ ಇಲ್ಲಿ ತಿರುಗುತ್ತ, ಅಲ್ಪಸ್ವಲ್ಪ ಮೋಡಿ ಅಕ್ಷರ ಜ್ಞಾನ ಪಡೆದುಕೊಂಡಿದ್ದರು. 'ಕಲ್ಗಿ ತುರಾಯಿ' ಹಾಡುಗಾರಿಕೆಯಲ್ಲಿ ಪ್ರಾವೀಣ್ಯ ಪಡೆದ ಇವರು ಹಾಡುತ್ತ ಹಾಡುತ್ತ ಊರೂರು ತಿರುಗತೊಡಗಿದರು. ನಂತರದಲ್ಲಿ ಈ ಭಾಗದ ಪ್ರಸಿದ್ಧ ಲಾವಣಿಕಾರರೆನಿಸಿದರು. ಸುತ್ತಮುತ್ತಲಿನ ಜಾತ್ರಾ ಸ್ಥಳಗಳಲ್ಲಿ ಲಾವಣಿ ಹಾಡುತ್ತಿದ್ದ ಇವರಿಗೆ ದುಬಲಗುಂಡಿ ಗ್ರಾಮದ ಶರಣಪ್ಪ ಫತ್ತೆಪುರ ಅವರು ಹೆಚ್ಚಿನ ಪ್ರೋತ್ಸಾಹ ನೀಡಿ ಗೌರವಿಸಿದರು. ಮಂಗಲಗಿಯು 'ಮೌಲಾಹುಸೇನಿ' ಯವರು ಇವರಿಂದ ಪ್ರಭಾವಿತರಾದರೆ, ಅಮಿನಸಾಬ ಎಂಬವರು ನನ್ನಾಸಾಹೇಬರ ಶಿಷ್ಯರಾದರು, ಇವರ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1980ರಲ್ಲಿ ಅವರಿಗೆ ಪ್ರಶಸ್ತಿ ನೀಡಿತು. ಪ್ರಶಸ್ತಿ ಗಳಿಸಿದ ಕೆಲವೇ ವರ್ಷಗಳಲ್ಲಿ ನನ್ನಾಸಾಹೇಬರು ತಮ್ಮ 65ನೆಯ ವಯಸ್ಸಿನಲ್ಲಿ ನಿಧನರಾದರು.

ಚಿಮಣಾಬಾಯಿ: ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಗ್ರಾಮದವರಾದ ಚಿಮಣಾಬಾಯಿ ಬೀದರ ಜಿಲ್ಲೆಯ ಪ್ರಸಿದ್ಧ ಜನಪದ ಕಲಾವಿದೆ. ಹೆಣ್ಣುಮಕ್ಕಳ 'ಸಾಂಪ್ರದಾಯಿಕ ಹಾಡು'ಗಳನ್ನು ಹಾಡುವ ಕಲೆ ಇವರಿಗೆ ಕರಗತವಾಗಿತ್ತು. ಬೀಸುವ, ಕುಟ್ಟುವ, ಮದುವೆ, ಸೋಭಾನ ಹಾಗೂ ಶೀಗಿ ಹಾಡುಗಳನ್ನು ಹಾಡುತ್ತಿದ್ದ ಇವಳು ಅಂಧಕಲಾವಿದೆ. ಇವಳ ತಂದೆ ಶಿವಪುತ್ರಪ್ಪ, ತಾಯಿ ಶಿವಮ್ಮ ಇವಳು ಏಳು ವರ್ಷದವಳಾಗಿದ್ದಾಗ ಶ್ರೀ ಮಡೆಪ್ಪ ಕಲ್ಲಶೆಟ್ಟಿ ಎಂಬುವವರ ಜೊತೆಯಲ್ಲಿ ವಿವಾಹವಾಗಿತ್ತು. ಎಣ್ಣೆಗಾಣ ಹೊಡೆಯುವ ತಂದೆ-ತಾಯಿಯರೊಂದಿಗೆ ಉದ್ಯೋಗದಲ್ಲಿಯೇ ಸಹಾಯ ಮಾಡುತ್ತ ಹಾಡಲು ಕಲಿತು ಚಿಮಣಾಬಾಯಿ ಮುಂದೆ ಒಬ್ಬ ಉತ್ತಮ ಹಾಡುಗಾರ್ತಿಯಾಗಿ ರೂಪುಗೊಂಡಳು.

ಚಿಮಣಾಬಾಯಿಯ ವೈಯಕ್ತಿಕ ಬದುಕು ತುಂಬಾ ಕಷ್ಟದ್ದಾಗಿತ್ತು. ಅವಳು ಬೇಗನೆ ತನ್ನ ಗಂಡ ಹಾಗೂ ಮಗನನ್ನು ಕಳೆದುಕೊಂಡಳು. ಈ ಮೊದಲೇ ಕುರುಡಿಯಾಗಿದ್ದ ಅವಳ

ಬದುಕಿನಲ್ಲಿ ಇದರಿಂದ ಅಂಧಕಾರ ಕವಿಯಿತು. ಆದರೂ ಅವಳು 'ಸಾಂಪ್ರದಾಯಕ ಹಾಡು' ಗಳನ್ನು ಹಾಡುತ್ತ ಎಲ್ಲ ಮರೆತಳು. ಅವಳೊಬ್ಬ ಉತ್ತಮ ಜನಪದ ಕಥೆಗಾರಳೂ ಆಗಿದ್ದಳು. ಅವಳಿಗೆ ಅನೇಕ ಕಥೆಗಳು ಬರುತ್ತಿದ್ದವು. ಕಥೆ ಹಾಗೂ ಹಾಡು ಹೇಳುವ ಸಂದರ್ಭದಲ್ಲಿ ತನ್ನನ್ನೇ ತಾನು ಮರೆತು ಅದರಲ್ಲೇ ತಲ್ಲೀನ ವಾಗುತ್ತಿದ್ದ ದೃಶ್ಯ ಅನುಪಮವಾದುದು. ಅವಳ ಈ ಕಲೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1981ರಲ್ಲಿ ಅವಳಿಗೆ ಪ್ರಶಸ್ತಿ ನೀಡಿ ಗೌರವಿಸಿತು.

ಶಾಂತಪ್ಪ ಶೀಲವಂತ: 'ಅಕ್ಕಸಾಲಿಗ' ನಾದ ಶಾಂತಪ್ಪ ತನ್ನ ಉದ್ಯೋಗದೊಂದಿಗೆ ಜನಪದ ಕಲೆಯನ್ನು ಮೈಗೂಡಿಸಿ ಕೊಂಡು ಬೆಳೆದ ಕಲಾವಿದ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮದವನಾಗಿರುವ ಈತನು ತನ್ನ ಜೀವನದ 40 ವರ್ಷಗಳ ಕಾಲ ಜನಪದ ಹಾಡುಗಳನ್ನು ಹೇಳುತ್ತ 'ಡಪ್ಪಿನಾಟ' ಕಲಿಸುತ್ತಿದ್ದ. ತಂದೆ ಶಿವಲಿಂಗಪ್ಪ. ತಾಯಿ ನೀಲಮ್ಮ, ಶಾಂತಪ್ಪನ ಈ ಕಲೆಗೆ ಗುರು ಬಸವಣ್ಣೆಪ್ಪ ತನ್ನ ಉದ್ಯೋಗದಲ್ಲಿ ಅಲ್ಪಸ್ವಲ್ಪ ಹಾಡುತ್ತ ಇದ್ದ ಇವರಿಗೆ ಬಸವಣ್ಣೆಪ್ಪರ ಕಲ್ಗಿ ತುರಾಯಿಹಾಡು, ಡಪ್ಪಿನಾಟದ ಹಾಡುಗಳು ಪ್ರಭಾವ ಬೀರಿದವು. ಇದರಿಂದ ಬಸವಣ್ಣೆಪ್ಪನ ಶಿಷ್ಯರಾಗಿ ಅವರಿಂದ ಇವು ಗಳನ್ನು ಕಲಿತನು. ತಾನೇ ಸ್ವತಃ ಕೆಲವು ಹಾಡುಗಳನ್ನು ರಚಿಸಿದನು. ಅಷ್ಟೇ ಅಲ್ಲದೆ ಅಂದು ಆಡುತ್ತಿದ್ದ 'ಮದನ ಮಂಜರಿ', ಸತ್ಯಹರಿಶ್ಚಂದ್ರ ಮೊದಲಾದ ಡಪ್ಪನಾಟಗಳಲ್ಲಿ ಸ್ವತಃ ಪಾತ್ರಧಾರಿಯಾಗಿ ಜನಮನ್ನಣೆ ಗಳಿಸಿದರು.

ಬೀದರ ಜಿಲ್ಲೆ ತುಂಬ ಅನೇಕ ಊರುಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತ ಬಂದಿರುವ ಈತನು ಬಹಳಷ್ಟು ಡಪ್ಪಿನಾಟಗಳನ್ನು ಆಡಿಸಿದ್ದಾನೆ. ಒಂದು ಮಳೆಗಾಲದಲ್ಲಿ ಸಿಡಿಲಿನ ಹೊಡೆತಕ್ಕೆ ಸಿಲುಕಿ ತನ್ನೆರಡು ಕಾಲುಗಳನ್ನು ಕಳೆದುಕೊಂಡರೂ ಸಹ ವಿಚಲಿತನಾಗದೆ ತನ್ನ ಹಾಡುಗಾರಿಕೆಯನ್ನು ಹಾಗೆ ಉಳಿಸಿ ಕೊಂಡು ಬಂದ ವ್ಯಕ್ತಿ. 1982ರಲ್ಲಿ ಈತನ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯು ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು. ನಂತರದ 3ನೇ ವರ್ಷದಲ್ಲಿ ಇವರು ನಿಧನರಾದರು.

ಹಣಕುಣಿ ನಾಗಮ್ಮ: ಬುಲಾಯಿ ಹಾಡು, ಕುಟ್ಟುವ, ಬೀಸುವ ಹಾಡು, ಮದುವೆ ಹಾಡು, ಶೀಗಿ-ಗೌರಿ ಹಾಡುಗಳನ್ನು ಹಾಡು ತ್ತಿದ್ದ ಶ್ರೇಷ್ಠ ಹಾಡುಗಾರ್ತಿ. ಹುಮನಾಬಾದ ತಾಲ್ಲೂಕಿನ ಹಣಕುಣಿ ಗ್ರಾಮದವಳು. ತಂದೆ ಭೀಮರೆಡ್ಡಿ. ತಾಯಿ ಲಿಂಗಮ್ಮ. ಅದೇ ಊರಿನ ಗುಂಡಪ್ಪರೆಡ್ಡಿ ಎಂಬುವರೊಡನೆ ಬಾಲ್ಯವಿವಾಹ ಮಾಡಿಕೊಂಡ ಇವಳು ಶಾಲೆ ಕಲಿತವಳಲ್ಲ. ಒಕ್ಕಲುತನದ ಉದ್ಯೋಗದ ಮನೆತನದಲ್ಲಿ ತನ್ನ ಮನೆಗೆಲಸ ಮಾಡಿಕೊಳ್ಳು ವುದರೊಂದಿಗೆ ಜಾನಪದ ಹಾಡುಗಳನ್ನು ಹಾಡುವುದನ್ನು ರೂಢಿಸಿಕೊಂಡರು. ತನ್ನ ಸುತ್ತಮುತ್ತಲ ಹಿರಿಯರು ಹಾಡುತ್ತಿದ್ದ ಹಾಡುಗಳನ್ನು ಕಲಿತು ತಾನು ಚೆನ್ನಾಗಿ ಹಾಡುವುದನ್ನು ರೂಢಿಸಿ ಕೊಂಡಿರುವ ನಾಗಮ್ಮ ಈ ಭಾಗದ ಹಾಡುಗಾರಿಕೆಯಲ್ಲಿ ತುಂಬಾ ಪ್ರಸಿದ್ಧಿ ಪಡೆದರು. ಇಬ್ಬರು ಹೆಣ್ಣುಮಕ್ಕಳು ಹಾಗೂ ಒಂದು ಗಂಡುಮಗುವನ್ನು ಪಡೆದ ಇವಳು ನಂತರದಲ್ಲಿ ಗಂಡ ನನ್ನು ಕಳೆದುಕೊಂಡು ಸಂಸಾರದ ಭಾರ ತಾನೇ ಹೊತ್ತು ಬಳಲಿದಳು. ಆದರೂ ಅವಳು ಹಾಡುವುದನ್ನು ತನ್ನ ಉಸಿ ರಾಗಿರಿಸಿಕೊಂಡು ನಾಡಿಗೆ ಹಾಡುಗಾರಿಕೆಯ ಶ್ರೀಮಂತಿಕೆಯನ್ನು ತಂದುಕೊಟ್ಟಳು. ಇದರ ಫಲವಾಗಿ 1983ರಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಳು.

ಗೊಂದಳಿ ವಿಠ್ಠಲರಾವ: ಗೊಂದಲ ಹಾಕುವ ಕಲಾವಿದ. ದುಮ್ಮನಸೂರಿನ ಸಿದ್ಧಪ್ರಭುಗಳ ಶಿಷ್ಯ ಇವರು ಭಾಲ್ಕಿ ತಾಲ್ಲೂಕಿನ ಭಾತಮ್ರಾ ಊರಿನವರು. ತಂದೆ ಜಯವಂತರಾವ ತಾಯಿ ಅಂಬಾಬಾಯಿ ಚಿಕ್ಕಂದಿನಿಂದಲೇ ತಂದೆ ತಾಯಿಗಳಿಂದ ಜನಪದ ಕಲೆಯನ್ನು ಕಲಿತರು. ತಂದೆಯು ಇವರಿಗೆ ತಮ್ಮ ಕುಲಕಸುಬಾದ ಗೊಂದಲ ಹಾಕುವುದನ್ನು ಕಲಿಸಿದರೆ, ತಾಯಿ ಈತನಿಗೆ ಹಾಡು ಹಾಡುವುದನ್ನು ಹೇಳಿಕೊಟ್ಟಳು. ಹೀಗಾಗಿ ಇವರು ಎರಡೂ ಕಲೆಯಲ್ಲಿ ಪರಿಣಿತಿ ಪಡೆದರು. ಮೊದ ಮೊದಲು ತತ್ತ್ವಪದಗಳನ್ನು ಹಾಡುತ್ತಿದ್ದ ಇವರು, ನಂತರದಲ್ಲಿ ಭಜನೆಹಾಡು, ಲಾವಣಿಪದ, ಜೋಗುಳಪದ ಹಾಗೂ ಅನುಭಾವ ಪದಗಳನ್ನು ಹಾಡಿ ಜನಮನ ಗೆದ್ದರು. ಬೀದರ ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಸಂಚಾರಮಾಡಿ ಹಲವು ಕಲಾಮೇಳಗಳಲ್ಲಿ ತಮ್ಮ ಹಾಡುಗಾರಿಕೆಯನ್ನು ಪ್ರದರ್ಶಿಸಿ ಪ್ರಸಿದ್ಧ ರಾದರು. 1984ರಲ್ಲಿ ಇವರ ಕಲಾಸೇವೆಯನ್ನು ಕಂಡ ಕರ್ನಾಟಕ ಜಾನಪದ ಅಕಾಡೆಮಿಯು ರಾಜ್ಯ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿತು.

ಕೊಳಾರ ಇಮಾಮಸಾಬ: ಡಪ್ಪು ಬಾರಿಸುವ ಕಲೆಯಲ್ಲಿ ನಿಷ್ಣಾತರಾಗಿದವರು. ಬಯಲಾಟದ ಕಲಾವಿದ. ಕೊಳಾರ ಗ್ರಾಮ ದವರು. ತಂದೆ ಪೀರಸಾಬ ಹಾಗೂ ತಾಯಿ ಖುಲಸುಂಬಾ, ಇಮಾಮಸಾಬರಿಗೆ ಉರ್ದು ಓದು ಬರಹ ಗೊತ್ತಿರಲಿಲ್ಲ. ಅಲ್ಪ-ಸ್ವಲ್ಪ ಮೋಡಿ ಲಿಪಿಯನ್ನು ಕಲಿತ ಇವರು ಬೀದರ ಜಿಲ್ಲೆಯ ಅದ್ಭುತ ಕಲಾವಿದರೆನಿಸಿದ್ದರು. ಡಪ್ಪು ಬಾರಿಸುವ ಕಲೆಯಲ್ಲಿ ನೈಪುಣ್ಯತೆ ಪಡೆದಿದ್ದ ಇವರು ಪಾತ್ರಧಾರಿಯೂ ಹಾಗೂ ಬಯಲಾಟದ ರಚನಾಕಾರರೂ ಆಗಿದ್ದರು. ಕನಕಾಂಗಿ ಕಲ್ಯಾಣ, ಐರಾವಣ-ಮೈರಾವಣ, ದ್ರೌಪದಿ ವಸ್ತ್ರಾಪಹರಣ ಮೊದಲಾದ ಅನೇಕ ಡಪ್ಪಿನಾಟಗಳನ್ನು ರಚಿಸಿ ಪ್ರದರ್ಶಿಸಿದ್ದಾಗಿ ತಿಳಿದು ಬರುತ್ತದೆ. ಸುಮಾರು 96 ವರ್ಷಗಳ ಕಾಲ ಬದುಕಿದ್ದ ಇಮಾಮರು ತಮ್ಮ ಜೀವಿತದ ಕೊನೆಯ ಅವಧಿಯಲ್ಲಿ ಶಾಲಿವಾನ, ಸತ್ಯಭಗಿಣಿ, ಭಾಗ್ಯಶಾಲಿ, ಕೊಮಟಿಗನ ಆಟ ಮತ್ತು ಕಬೀರದಾಸ ಮೊದಲಾದ ಆಟಗಳನ್ನು ರಚಿಸಿದರು, ಜನಪದ ವೈದ್ಯರೂ ಆಗಿದ್ದ ಇವರು ಡಪ್ಪು ಬಾರಿಸುವ ಕಲೆಯಲ್ಲಿ ಅದ್ವಿತೀಯರಾಗಿದ್ದರು. ಇವರ ಈ ಸೇವೆಯನ್ನು ಗುರುತಿಸಿದ ಜಾನಪದ ಅಕಾಡೆಮಿ 1985ರ ರಾಜ್ಯಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಬಹುರೂಪಿ ಏಕನಾಥ: ಬಹುರೂಪಿ ಕಲೆಯಲ್ಲಿ ಪ್ರಸಿದ್ಧಿ ಪಡೆದಿದ್ದವರು. ಹುಮನಾಬಾದ ತಾಲ್ಲೂಕಿನ ನಿರ್ಣಾವಾಡಿ ಯವರು. 1924ರಲ್ಲಿ ಜನಿಸಿದರು. ಇವರ ತಂದೆ ಗಂಗಪ್ಪ ತಾಯಿ

ಚನ್ನಮ್ಮ. ಬಹುರೂಪಿ ಕಲೆ ಇವರ ಮನೆತನದ ಕಸುಬಾಗಿತ್ತು. ಹೀಗಾಗಿ ಬಾಲ್ಯ ದಿಂದಲೇ ತಂದೆಯಿಂದ ಈ ಕಲೆಯಲ್ಲಿ ಪರಿಣಿತಿ ಪಡೆದರು. ಬಹುರೂಪಿ ಆಟಗಳಲ್ಲಿ ಬಾಲ ಪಾತ್ರಗಳನ್ನು ಧರಿಸುತ್ತ ತಮ್ಮ ಇಂಪಾದ ಕಂಠದಿಂದ ಜನಮನ ಗಳಿಸಿದರು. ಓದಿ-ಬರೆದಿದ್ದು ಕೇವಲ ನಾಲ್ಕನೆಯ ಇಯತ್ತೆಯಾದರೂ ಅವರು ಬಹುರೂಪಿಯಿಂದ ಕಲಿತದ್ದು ಅಪಾರ.



ತಮ್ಮ ಬಹುರೂಪಿಯಲ್ಲಿ ಅನೇಕ ಪಾತ್ರಗಳನ್ನು ಮಾಡಿರುವ ಏಕನಾಥರು ವಿಶ್ವಾಮಿತ್ರ, ಭೀಮ, ಘಟೋತ್ಕಜ, ಭಸ್ಮಾಸುರ, ಮೋಹಿನಿ ಮೊದಲಾದ ಪೌರಾಣಿಕ ಪಾತ್ರಗಳೇ ಶ್ರೇಷ್ಠವೆನ್ನುತ್ತಾರೆ. ಇದರೊಂದಿಗೆ ಸಿಂಧೂರ ಲಕ್ಷ್ಮಣ, ಸೂರದಾಸ, ಸತ್ಯಹರಿಶ್ಚಂದ್ರ, ಬಸವಣ್ಣ ಮೊದಲಾದ ಪಾತ್ರಗಳು ಜನಮನ್ನಣೆ ಗಳಿಸಿದ್ದನ್ನೂ ಹೇಳುತ್ತಾರೆ. ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ ಅವರ ಅಲೆದಾಟ ಒಂದು ಸಂಸ್ಕೃತಿಯ ಸಂಚಾರವಾಗಿದೆ. 70ರ ಅಂಚಿನಲ್ಲಿರುವ ಈ ಕಲಾಕಾರನಿಗೆ ಅನೇಕ ಶಿಷ್ಯ ವರ್ಗವಿದೆ. ದೇವೀಂದ್ರಪ್ಪ, ಕುಪೇಂದ್ರ, ಲಕ್ಷ್ಮಣ, ರಾಮಚಂದ್ರ, ಯಲ್ಲಪ್ಪ ಮೊದಲಾದವರು ಈ ಕಲೆಯನ್ನು ಮುಂದುವರೆಸಿಕೊಂಡು ಸಾಗಿದ್ದಾರೆ. ಬಹುರೂಪಿ ಕಲೆ ಒಂದು ಸಂಯುಕ್ತ ಕಲೆ. ಅಲ್ಲಿಯ ಹಾಡು, ಸಾಹಿತ್ಯ, ಪಾತ್ರದ ವೇಷಭೂಷಣ, ಕುಣಿತ, ಸಂಗೀತ ಇವುಗಳಿಗಾಗಿ ಬಳಕೆಯಾಗುವ ಹಲವು ವಾದ್ಯಗಳು ಕೇಳುಗರ ಹಾಗೂ ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತದೆ. ಆ ರೀತಿ ಕಲಾಪ್ರದರ್ಶನ ಮಾಡುತ್ತಿದ್ದ 'ಏಕನಾಥ' ನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1986ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶರಣಪ್ಪ ಭೂತೇರ: ಭೂತೇರ ಕಲಾವಿದ. 1987ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದ ಇವರು ಹುಟ್ಟಿದ್ದು ಆಂಧ್ರಪ್ರದೇಶದ ಮೊರಗಿಯಲ್ಲಿ. ತಂದೆ ರಾಮಶೆಟ್ಟಿ ತಾಯಿ ಶಂಕರಮ್ಮ, ಬಡವರಾದ ಇವರು ತಮ್ಮ ಚಿಕ್ಕ ಮಗನೊಂದಿಗೆ ಬೀದರಕ್ಕೆ ವಲಸೆ ಬಂದು ಇಲ್ಲಿಯೇ ನೆಲೆಸಿದರು. ಶರಣಪ್ಪ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಕೆಲಸಕ್ಕೆ ಸೇರಿಕೊಂಡು ದುಡಿಯತೊಡಗಿದರು. ಆಗ ಭಕ್ತಿಯ ಹಾಡುಗಳನ್ನು ಹಾಡತೊಡಗಿದರು. ಅನಂತರದಲ್ಲಿ ಈ ಹಾಡೇ ಇವರ ಉದ್ಯೋಗವಾಗಿ ತುಳಜಾಭವಾನಿಯ ಭಕ್ತನಾಗಿ ಭೊತೇರ ವೃತ್ತಿ ಆರಂಭಿಸಿದರು. ಕೈಯಲ್ಲಿ ಹಡಗಿ ಮೈಯಲ್ಲಿ ಕುಂಕುಮ, ಕೊರಳಲ್ಲಿ ಕವುಡಿಸರ, ಕಾಲಲ್ಲಿ ಕಿರುಗೆಜ್ಜೆ, ಕಟ್ಟಿಕೊಂಡು ಒಂದು ಕೈಯಲ್ಲಿ ದೀವಟಿಗೆ ಹಿಡಿದುಕೊಂಡು ಭೂತೇರಾಗಿ ನಿಂತರು.

ಭೂತೇರ ಶರಣಪ್ಪ ಜಿಲ್ಲೆಯಾದ್ಯಂತ 'ಎಲ್ಲಮ್ಮನ' ಆಟವನ್ನು ಆಡಿ ತೋರಿಸಿದರು. ಪರಶುರಾಮನ ಕಥೆಯನ್ನೊಳಗೊಂಡ ಈ ಆಟದ ಕಥೆ ವಿಚಿತ್ರವೆನಿಸಿದ್ದರೂ ಗಮನಾರ್ಹವಾಯಿತು. 'ರಾಮ ರಾಮ' ಎಂಬ ಪಲ್ಲವಿಯೊಡನೆ ಆರಂಭವಾಗಿ ಸಾಗುವ ಇಲ್ಲಿಯ ಕಥಾನಕವನ್ನು ಶರಣಪ್ಪ ಹಾಡುತ್ತಿದ್ದರೆ ಜನ ನಿಂತು ಕೇಳುತ್ತಿತ್ತು. ಇಂಥ ಈ ಕಲೆಯು ಬೆಂಗಳೂರಿನ 10ನೆಯ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿಯೂ ಪ್ರದರ್ಶಿತವಾಯಿತು.

ಈರಮ್ಮ ಚಿನಕೇರಾ: ಸೋಬಾನೆ ಹಾಡುಗಾರ್ತಿ. ಹುಮನಾಬಾದ ತಾಲ್ಲೂಕಿನ ಚಿನಕೇರಾ ಗ್ರಾಮದವರು. ತಾಯಿ ನಾಗಮ್ಮನಿಂದಲೇ ಹಾಡು ಕಲಿತು ಮುಂದೆ ಈ ಜಿಲ್ಲೆಯ ಶ್ರೇಷ್ಠ ಕಲಾಕಾರರಾಗಿ ಬೆಳೆದರು. ಗಂಡ ಅನಾರೋಗ್ಯದಿಂದ ತೀರಿಹೋದಾಗ ತುಂಬಾ ಬಡತನ ಕಾಡುತ್ತಿತ್ತು. ತಮ್ಮ ಹಾಡುಗಾರಿಕೆಯಿಂದಲೇ ಅದನ್ನು ಎದುರಿಸಿ ನಿಂತಳು. ಮದುವೆ ಹಾಡು, ಭಜನೆ ಪದ ಹಾಗೂ ಸೋಬಾನ ಹಾಡುಗಳನ್ನು ಹಾಡುವುದರಲ್ಲಿ ಅದ್ವಿತೀಯರೆನಿಸಿದ್ದ ಈರಮ್ಮ ದೂರದರ್ಶನದಲ್ಲಿಯೂ ಹಾಡಿಸೈ ಎನಿಸಿಕೊಂಡಳು. ಇವಳ ಹಾಡುಗಾರಿಕೆ ಗುರುತಿಸಿದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1988ರಲ್ಲಿ ಇವರಿಗೆ ರಾಜ್ಯಪ್ರಶಸ್ತಿ ಗೌರವಿಸಿತು.

ಗುಂಡಪ್ಪ ಬೆಮಳಗಿ: ಬೀದರ ಜಿಲ್ಲೆಯ ತಾದಲಾಪುರ ಗ್ರಾಮದವರು. ದೈವಭಕ್ತರಾಗಿದ್ದ ಇವರು ದಿನಾಲು ಪೂಜಾ-ಪಾಠಗಳನ್ನು ಮಾಡುತ್ತಾರೆ. ಆ ಪೂಜೆಯೊಂದಿಗೆ ಸುಶ್ರಾವ್ಯವಾಗಿ ಹಾಡುವುದನ್ನು ಕಲಿತರು. ತಾದಲಾಪುರದ ದತ್ತಮಹಾರಾಜರು ಇವರ ಆರಾಧ್ಯದೈವ. ಪ್ರತಿ ಗುರುವಾರ ಹಾಗೂ ಹುಣ್ಣಿಮೆ ಅಮವಾಸ್ಯೆಗಳಂದು ಈ ಮಠದಲ್ಲಿ ಭಜನೆ ಹಾಡುಗಳನ್ನು ಹಾಡುತ್ತಿದ್ದರು. ಜಿಲ್ಲೆಯ ಸಮಗ್ರ ಇತಿಹಾಸ ಬಲ್ಲವರಾದ ಇವರು ಬೀದರ ಜಿಲ್ಲೆಯಾದ್ಯಂತ, ಜಹಿರಾಬಾದ, ಉದಗಿರಿ ಮುಂತಾದ ಕಡೆಗಳಲ್ಲಿ ತಿರುಗಾಡಿ ತಮ್ಮ ಹಾಡುಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಇವರ ಈ ಕಲಾವಂತಿಕೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1989ರ ರಾಜ್ಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು.

ರತ್ನಮ್ಮ ತಂಬಾಕಿ: ಸೋಬಾನೆಯ ಹಾಡುಗಾರ್ತಿ. ಈ ಕಲಾವಿದೆ ಹುಟ್ಟು ಕುರುಡಿ. ಅಂಗವಿಕಲತೆಯನ್ನು ಎಂದೂ ಲಕ್ಷಕ್ಕೆ ತಂದುಕೊಳ್ಳದ ಈ ಕಲಾಗಾರ್ತಿ ಸದಾ ಹಾಡನ್ನು ಹಾಡಲು ಕಲಿತಳು. ಜನಪದ ಸಾಹಿತ್ಯ ಬಾಯಿಂದ ಬಾಯಿಗೆ ಕಿವಿಯ ಮೂಲಕ ಹರಿದು ಬಂದದ್ದು ಎಂಬುದಕ್ಕೆ ಸಾಕ್ಷಿಯಂತೆ ಈ ಕುರುಡು ಕಲಾವಿದೆ ಕಂಡು ಬರುತ್ತಾಳೆ. ಇವಳು ಮದುವೆ, ಮುಂಜಿ, ತೊಟ್ಟಿಲು ಕಾರ್ಯಕ್ರಮ ಹಾಗೂ ನೋವು ನಲಿವಿನ ಪ್ರಸಂಗದಲ್ಲಿ ತಮ್ಮ ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದರು.

1990ರಲ್ಲಿ ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ದೊರೆಯಿತು. ಕಣ್ಣು ಇಲ್ಲದಿದ್ದರೂ ಬಾಳನ್ನು ಕಳೆದುಕೊಂಡವಳಲ್ಲ. ಬದುಕಿನಲ್ಲಿ ಸದಾ ಆಸಕ್ತಿಯನ್ನುಳಿಸಿಕೊಂಡ ಹೃದಯವಂತೆ. ಹಾಡುಗಳನ್ನೇ ತನ್ನ ಬದುಕಿನ ಊರು

ಗೋಲಾಗಿಸಿಕೊಂಡವರು. ಭಜನೆ ಮೇಳದಲ್ಲಿಯೂ ಇವರ ಪಾತ್ರ ಹಿರಿದಾಗಿತ್ತು. ಬೀದರ ಜಿಲ್ಲೆಯ ತುಂಬ ಹೆಸರುವಾಸಿಯಾಗಿದ್ದ ರತ್ನಮ್ಮನ ಹಲವು ಶಿಷ್ಯೆಯರು ಈಗಲೂ ಸುಂದರವಾಗಿ ಹಾಡುತ್ತಾರೆ.

ಅಬ್ರಾಹಿಮ್ ಸುಂದ್ಯಾಳ: ಜನಪದ ಮತ್ತು ಚಲನಚಿತ್ರ ಗೀತೆಗಳನ್ನು ಹಾಡುವ ಕಲಾವಿದ. ಚಿಕ್ಕಂದಿನಿಂದಲೇ ಹಾಡುವುದರಲ್ಲಿ ಆಸಕ್ತಿ ಹೊಂದಿದ್ದ ಅಬ್ರಾಹಿಮ್ ಔರಾದ ತಾಲ್ಲೂಕಿನ ಸುಂದ್ಯಾಳದವ. ಆರಂಭದಲ್ಲಿ ಸಿನಿಮಾ ಹಾಡುಗಳನ್ನು ಚೆನ್ನಾಗಿ ಹಾಡಲು ಕಲಿತ ಅಬ್ರಾಹಿಮ್ ಅನಂತರದಲ್ಲಿ ಜನಪದ ಹಾಡುಗಳಲ್ಲಿ ಆಸಕ್ತಿ ಹೊಂದಿದರು. ತುಂಬಾ ಸುಂದರವಾಗಿ ಜನಪದ ಹಾಡುಗಳನ್ನು ಹಾಡುತ್ತ, ಹಾಡುತ್ತ ಎಲೆಯಿಂದ ಸ್ವರ ಹೊರಡಿಸಿ, ಅದರಿಂದಲೇ ಹಾಡುಗಳನ್ನು ಹಾಡುವ ರೀತಿ ಜನರನ್ನು ಮೆಚ್ಚಿಸಿತು. ಈ ಕಲೆಯಲ್ಲಿ ಪರಿಣತಿ ಹೊಂದಿದ ಅಬ್ರಾಹಿಮ್‌ರು ಆ ಮೂಲಕ ಅನೇಕ ಕಾರ್ಯಕ್ರಮಗಳನ್ನು ನೀಡಿದರು. ಈ ಕಲೆ ಹಾಗೂ ಕಲಾವಿದನನ್ನು ಗುರುತಿಸಿದ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1991 ಪ್ರಶಸ್ತಿಯನ್ನು ನೀಡಿ ಇವರನ್ನು ಗೌರವಿಸಿತು.

ರತ್ನಮ್ಮ ಗಾದ್ಗಿ: ರತ್ನಮ್ಮ ಅವರು ಬೀದರ ಜಿಲ್ಲೆಯ ಇನ್ನೋರ್ವ ಹೆಸರಾಂತ ಕಲಾಕಾರ್ತಿ. ಬೀದರ ಜಿಲ್ಲೆ ಹಲವಾರು ಜನಪದ ಕಲೆಗಳ ಹುಲ್ಲುಗಾವಲು. ಇಲ್ಲಿನ ವಿಶಿಷ್ಟ ಕಲೆಗಳಾದ ಕೋಲಾಟ, ಬುಲಾಯಿಹಾಡು, ಗೀಗೀ ಪದ, ಸಾಂಪ್ರದಾಯಿಕ ಹಾಡುಗಳ ರಾಶಿ ಇದೆ. ರತ್ನಮ್ಮ ಗಾದ್ಗಿ ಹೆಣ್ಣುಮಕ್ಕಳ ಸಂಪ್ರದಾಯಕ್ಕೆ ಸೇರಿದ ಬುಲಾಯಿ ಪದ ಹಾಗೂ ಗೀಗೀ ಪದಗಳನ್ನು ಸುಶ್ರಾವ್ಯವಾಗಿ ಹಾಡುಬಲ್ಲರು. ಹಾಡಿನ ಭಂಡಾರ ಹೊಂದಿರುವ ಕಲಾವಿದೆ. ಸರಸ್ವತಿ ಗದ್ದೆಮ್ಮ, ಪದ್ಮಾವತಿ, ಪಾಪಮ್ಮ, ಚಂದ್ರಮ್ಮರಂತಹ ಶಿಷ್ಯೆಯರನ್ನು ತಯಾರಿಸಿದ್ದಾರೆ. 1992ರ ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಇವರಿಗೆ ದೊರೆಯಿತು.

ಕಾಶಮ್ಮ ಮರ್ಖಲೆ: 1993ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ರಾಜ್ಯಪ್ರಶಸ್ತಿಯನ್ನು ಪಡೆದ ಕಾಶಮ್ಮ ಬೀದರ ಜಿಲ್ಲೆಯ ಅಪರೂಪದ ಜಾನಪದ ಕಲಾವಿದೆ. ಜಿಲ್ಲೆಯ ಹಿಂದುಳಿದ ಗ್ರಾಮವಾದ ಮರ್ಖಲೆಯಲ್ಲಿ ಜನಿಸಿದರು. ಜೀವನದುದ್ದಕ್ಕೂ ಬಡತನವನ್ನು ಅನುಭವಿಸಿದರು. ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಹೊತ್ತಿನಲ್ಲೂ ಜನಪದ ಹಾಡುಗಳಿಗೆ ಮನಸೋತರು. ಕುಟ್ಟುವ, ಬೀಸುವ, ಕಸ ತೆಗೆಯುವ ಹಾಡುಗಳೆಲ್ಲ ಇವಳ ನಾಲಗೆಯ ಮೇಲೆ ಸದಾ ಕುಣಿದಾಡುತ್ತಿದ್ದವು. ಇತರ ಜನಪದ ಹಾಡುಗಳಾದ ತೊಟ್ಟಿಲಹಾಡು, ಸೋಬಾನ ಪದ, ಭಜನೆಹಾಡು ಹಾಗೂ ಹಂತಿಪದಗಳನ್ನು ಹಾಡುವುದರಲ್ಲಿಯೂ ನಿಷ್ಣಾತರು. ಅನೇಕ ಶಿಷ್ಯರಿಗೆ ತಮ್ಮ ಹಾಡುಗಳನ್ನು ಕಲಿಸಿದ ಕೀರ್ತಿಯೂ ಈ ಕಲಾವಿದೆಗಿದೆ.

ನಾಗಮ್ಮ ಗುಂಡಯ್ಯಸ್ವಾಮಿ: ಸಂಪ್ರದಾಯದ ಹಾಡುಗಾರ್ತಿ. ಭಾಲ್ಕಿ ತಾಲ್ಲೂಕಿನ ಆಳಂದಿ ಗ್ರಾಮದವರು. ತವರು ಮನೆಯಾದ ಹಳ್ಳಿಖೇಡ(ಬಿ)ಯಲ್ಲಿಯೇ ಈ ಹಾಡುಗಳನ್ನು ಕಲಿತಳು. ಅದರಲ್ಲೂ ತೊಟ್ಟಿಲುಹಾಡು, ಸೋಬಾನೆಪದ ಹಾಗೂ ಮದುವೆ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವಳು. ಅವಳಿಗೆ 1994ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು.

ಸಂಗಪ್ಪ ಕರಡ್ಯಾಳ: ಜನಪದ ಹಾಡುಗಾರ. ಸಂಗಪ್ಪ ಬೀದರ ಜಿಲ್ಲೆಯ ಅಪರೂಪದ ಕಲಾವಿದ. ಭಾಲ್ಕಿ ತಾಲ್ಲೂಕಿನ ಕರಡ್ಯಾಳ ಈತನ ಊರು. ಜಾನಪದ ಹಾಡುಗಳನ್ನು ಹಾಡಿಕೊಳ್ಳುತ್ತ ದುಡಿಯುತ್ತಿದ್ದ ಇಲ್ಲಿಯ ಜನಪದ ಹಾಡುಗಳ ಕಣಜವಾಗಿದ್ದಾನೆ. ತತ್ವಪದ, ಬುಲಾಯಿಹಾಡು, ಜೋಗುಳಪದ, ಭಜನೆಹಾಡು, ಹಂತಿಪದ, ಲಾವಣಿ ಹಾಗೂ ಸೋಬಾನೆಪದಗಳನ್ನು ಸೊಗಸಾಗಿ ಹಾಡುವ ವ್ಯಕ್ತಿ. ಆಕಾಶವಾಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ ಪರಿಷತ್ತು ಮೊದಲಾದ ಕನ್ನಡ ಸಂಘ ಸಂಸ್ಥೆಗಳ ಆಶ್ರಯದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಹಾಡಿ ಯಶಸ್ವಿಯಾಗಿದ್ದಾರೆ. ಜಾನಪದ ಹಾಡುಗಳ ಅದ್ಭುತವಾದ ಸವಿಯನ್ನು ಜನರಿಗೆ ಹಂಚುತ್ತ, ತಮ್ಮ ಜೀವನ ಸಾಗಿಸಿದ ಅವರಿಗೆ ಹಾಡುಗಾರಿಕೆ ಒಂದು ಬಳುವಳಿಯಂತಿದೆ. ಇವರ ಈ ಜನಪ್ರಿಯತೆ ಹಾಗೂ ಹಾಡುಗಾರಿಕೆಯ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ ಅವರಿಗೆ 1995ರ ರಾಜ್ಯಪ್ರಶಸ್ತಿ ನೀಡಿ ಸನ್ಮಾನಿಸಿತು. ಒಕ್ಕಲುತನದ ಮನೆಯ ವಾತಾವರಣದಿಂದ ಬಂದ ಸಂಗಪ್ಪನವರು ಹಳ್ಳಿಯ ಜನರ ಹತ್ತಾರು ಸಮಸ್ಯೆಗಳನ್ನು ಕಣ್ಣಾರೆ ಕಂಡಿದ್ದರು ಹಾಗೂ ಅನುಭವಿಸಿದ್ದರು. ಸ್ವತಃ ಕವಿಯಾದ ಅವರು ಬಡತನ, ಬರಗಾಲ, ಜನಸಂಖ್ಯೆಯಂತಹ ಸಮಸ್ಯೆಗಳನ್ನು ಕುರಿತು ಹಾಡು ಬರೆದು, ಹಾಡುತ್ತಿದ್ದರು. ಇಂತಹ ಜನಪದ ಗಾಯಕರಿಂದಲೇ ಜಾನಪದ ಹಾಡುಗಳ ಕ್ಷೇತ್ರ ಅತ್ಯಂತ ಶ್ರೀಮಂತವಾಗಿದೆ ಎನ್ನಬಹುದು.

ನೂರೊಂದಪ್ಪ ಹೆರೂರ: ಬಯಲಾಟ ಕಲಾವಿದ. ಬಯಲಾಟದ ಹವ್ಯಾಸವನ್ನು ಚಿಕ್ಕವಯಸ್ಸಿನಲ್ಲಿಯೇ ರೂಢಿಸಿಕೊಂಡಿದ್ದರು. ಈ ಆಟಗಳಲ್ಲಿಯ ಗಣಪತಿ, ಸಾರಥಿ, ಮತ್ತಿತರ ಪಾತ್ರ ಮಾಡಿದ್ದಲ್ಲದೆ, ಹಿಮ್ಮೇಳಕ್ಕೆ ಸೇರಿಕೊಂಡು ಹಾಡಿದ್ದು ಕೂಡ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಬಯಲಾಟದ ಪಾತ್ರಗಳೊಂದಿಗೆ ಏಕತಾರಿಪದ ಹಾಡುವುದರಲ್ಲೂ ಇವರು ನಿಸ್ಸೀಮರು. ಪ್ರಸಿದ್ಧಿ ಕಲಾಕಾರರಾಗಿದ್ದ ಇವರು ತಮ್ಮ ವೃದ್ಧಾಪ್ಯ ಜೀವನವನ್ನು ಕಲಬುರ್ಗಿಯಲ್ಲಿ ಕಳೆದರು.

ಕಾಶೀನಾಥ ಗವಾಯಿ: ತತ್ತ್ವಪದ ಹಾಡುವವರು ಜನಪದ ಕಲಾವಿದ. ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಹಿಲಾಲಪುರದ ಅಂಧರಾಗಿದ್ದರು. 1919ರಲ್ಲಿ ಹುಟ್ಟಿದ ಪಂಚಶೀಲ ಗವಾಯಿಗಳು ಸಿಡುಬುರೋಗಕ್ಕೆ ತುತ್ತಾಗಿ ತಮ್ಮ ಎರಡೂ ಕಣ್ಣು ಕಳೆದುಕೊಂಡರು. ಆದರೆ ತಮ್ಮ ಸಂಗೀತ-ಸಾಹಿತ್ಯವನ್ನು ಜನರ ಮಧ್ಯೆ ಹಾಡುತ್ತ, ಅದರ ಪ್ರಚಾರ ಮಾಡುತ್ತ ಜನಮನ ಗೆದ್ದರು. ತಮ್ಮ 12ನೆಯ ವಯಸ್ಸಿನಿಂದ ಸಂಗೀತಾಭ್ಯಾಸ ಮಾಡಿದ ಇವರು ಹಾರ್ಮೋನಿಯಂ, ಕೊಳಲು, ತಬಲಾ ನುಡಿಸುವುದನ್ನು ಕಲಿತರು. ತತ್ವಪದ, ಭಜನೆಹಾಡು, ಇತರ ಜನಪದ ಗೀತೆಗಳನ್ನು ಹಾಡುತ್ತ, ಸ್ವತಃ ಸಾಹಿತ್ಯ ರಚಿಸುತ್ತ ಸಾಗಿದರು.

ಬುದ್ಧ, ಬಸವ, ಅಂಬೇಡ್ಕರ ಅವರ ಚಿಂತನೆಗಳನ್ನು ಜನಪದ ಶೈಲಿಯಲ್ಲಿ ರಚಿಸಿ, ಹಾಡಿ ಅವುಗಳನ್ನು ಜನಪ್ರಿಯಗೊಳಿಸಿದ್ದಲ್ಲದೇ ಅವುಗಳನ್ನು ತಮ್ಮ ಶಿಷ್ಯ ಬಳಗಕ್ಕೆ ಕಲಿಸಿದರು. ಗಡಿನಾಡ ಚಳವಳಿ, ರೈತ ಚಳವಳಿ ಮುಂತಾದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಡಾ. ಬಾಬಾಸಾಹೇಬ ಅಂಬೇಡ್ಕರ ರಾಷ್ಟ್ರೀಯ ಪ್ರಶಸ್ತಿ ಲಭಿಸಿವೆ. ಕಾಶಿನಾಥ ಕಾಳಿದಾಸ ಹಿಲಾಲಪುರ ಎಂಬ ಹುಟ್ಟು ಹೆಸರುಳ್ಳ ಇವರನ್ನು ಜನತೆ ಅಭಿಮಾನದಿಂದ ಪಂಚಶೀಲ ಗವಾಯಿಗಳೆಂದೇ ಕರೆಯುತ್ತಾರೆ.

ಘಾಳೆ ಸಿದ್ರಾಮಪ್ಪ: ಜನಪದ ಹಾಡುಗಾರ. ಬೀದರ ಜಿಲ್ಲೆಯ ಕಪಲಾಪುರ ಗ್ರಾಮದವನು. ಬೀದರ ಸಂಸ್ಕೃತಿಯ ಜನಪದ ಪರಂಪರೆಯಲ್ಲಿ ಹೆಸರುವಾಸಿಯಾದ ಕಲಾವಿದ, ಹುಟ್ಟಿನಿಂದಲೇ ಹಳ್ಳಿಯಲ್ಲಿ ಬೆಳೆದ ಈತನು ತನ್ನ ಸುತ್ತಮುತ್ತಲ ಪರಿಸರದಲ್ಲಿ ಕೇಳಿಬರುತ್ತಿದ್ದ ಹಾಡುಗಳನ್ನು ಕಲಿತು, ತಾನು ಹಾಡುತ್ತ ನಂತರದಲ್ಲಿ ಜನಪ್ರಿಯತೆ ಗಳಿಸಿದ ಹಾಡುಗಾರ, ಇಲ್ಲಿ ಜನಪದ ಹಾಡುಗಳಾದ ಬುಲಾಯಿಪದ, ಹಂತಿಹಾಡು, ತತ್ವಪದ, ಲಾವಣಿಗಳನ್ನು ಜನಮೆಚ್ಚುವಂತೆ ಹಾಡುತ್ತಿದ್ದ ಸಿದ್ರಾಮಪ್ಪನವರು ಸಾಹಿತಿಯೂ ಆಗಿದ್ದರು. ವಚನ ಸಾಹಿತ್ಯ ಕುರಿತು ಅವರು ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾರ್ವಜನಿಕ ಸೇವೆಯಲ್ಲಿ ಆಸಕ್ತಿ ಮೂಡಿಸಿಕೊಂಡಿದ್ದ ಇವರು ಜಾನಪದ ಸಾಹಿತ್ಯದ ಅಭಿವ್ಯಕ್ತಿಯ ಮೂಲಕ ಸಾಮಾಜಿಕ ಜಾಗೃತಿಯನ್ನುಂಟು ಮಾಡಿದರು. ಜನಪದ ಸಾಹಿತ್ಯದ ನಿರಂತರತೆಗಾಗಿ ಬಹು ಶ್ರಮಿಸಿದ ಇವರ ಕಲಾವಂತಿಕೆಗೆ ರಾಜ್ಯ ಅಕಾಡೆಮಿ ಪ್ರಶಸ್ತಿಯೂ ದೊರಕಿತು.

ಗಂಗಮ್ಮ ಮಂಠಾಳಕರ: ಜನಪದ ಕಲಾವಿದೆ. ಮೂಲತಃ ಮಂಠಾಳದವರಾದ ಇವರು ಹುಮನಾಬಾದಕ್ಕೆ ಬಂದು ಖಾನಾವಳಿ ನಡೆಸುತ್ತ ಉಪಜೀವನ ಸಾಗಿಸಿದರು. ಸೊಗಸಾದ ಅಡಿಗೆ ತಯಾರಿಸುವ ಗಂಗಮ್ಮ ಒಳ್ಳೆಯ ಹಾಡುಗಾರ್ತಿಯೂ ಆಗಿದ್ದಾಳೆ. ಬೀದರ ಭಾಗದ ಜನಪ್ರಿಯ ಸಿಹಿಯೂಟವಾದ 'ಹುಗ್ಗಿ' ತಯಾರಿಸುವುದರಲ್ಲಿ ಅತ್ಯಂತ ನಿಪುಣೆ. ಗಂಗಮ್ಮ ತತ್ವಪದ, ಭಜನೆಪದ, ಬೀಸುವಹಾಡು, ಶೀಗಿಪದಗಳನ್ನು ಹಾಡತೊಡಗಿದರೆ ಜನ ಕುಳಿತು ಕೇಳುತ್ತಿತ್ತು. ಇವಳು ಪಾಕಶಾಸ್ತ್ರಜ್ಞೆ ಹಾಗೂ ಜನಪದ ಗಾಯಿಕೆಯ ಕಲೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವಳಿಗೆ 2002ರ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದೆ.

ಜಗನ್ನಾಥ ಮಹಾರಾಜ: ಇವರು ಬೀದರ ಜಿಲ್ಲೆಯ ಬೆಳ್ಳೂರ ಗ್ರಾಮದವರು. ಹಡಪದ ಸಮಾಜಕ್ಕೆ ಸೇರಿದವರು. ಇವರ ತಂದೆ ನಾಗಪ್ಪ. ತಾಯಿ ಪಾರಮ್ಮ. 10ನೆಯ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುವ ಇವರು ಮೊದಲು ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಿ, ಅನಂತರ ರಾಜ್ಯ ಪೊಲೀಸ ಇಲಾಖೆ ಸೇರಿಕೊಂಡರು. ಪ್ರಾಮಾಣಿಕತನಕ್ಕೆ ಹೆಸರಾಗಿರುವ ಇವರು ಪಾಂಡುರಂಗನ ಭಕ್ತರು. ಸೇವೆಯಲ್ಲಿದ್ದಾಗಲೇ ಸದಾ ಏಕಾಂತವಾಸ ಬಯಸುತ್ತಿದ್ದ ಇವರು ಹೆಚ್ಚಾಗಿ ಧ್ಯಾನಾಸಕ್ತರಾಗಿರುತ್ತಿದ್ದರು. ಮುಂದೆ ಇವರ ಗುರು ಮಿರ್ಜಾಪುರದ ಕಲ್ಲಪ್ಪ ಮಹಾರಾಜರ ಪ್ರಭಾವಕ್ಕೊಳಗಾಗಿ ಏಕತಾರಿ ಹಾಗೂ ರಾಮತಾಳಗಳನ್ನು ಹಿಡಿದರು. ಗುರುವಿನ ಅಪ್ಪಣೆಯಂತೆ, ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ಗಡಿಭಾಗದ ಉದ್ದಕ್ಕೂ ಸಂಚರಿಸುತ್ತ, ಹಿಂದಿ, ಮರಾಠಿ, ತೆಲುಗು ಹಾಗೂ ಕನ್ನಡ ಭಾಷೆಗಳಲ್ಲಿ ನಿರರ್ಗಳವಾಗಿ 'ತತ್ವಪದ'ಗಳನ್ನು ಹಾಡುತ್ತ ಮುನ್ನಡೆದರು. ಇವರ ಹಾಡಿನ ಮೋಡಿಗೆ ಒಳಗಾಗದವರೇ ಇಲ್ಲವೆನ್ನಬಹುದು. ಭಕ್ತಿರಸದ ಹೊನಲನ್ನು ಹರಿಸುವ ಇವರ ಗಾಯನವು ಸಮುದಾಯದ ಮನಸ್ಸನ್ನು ಪರಿವರ್ತಿಸಿ ನೀತಿ, ತತ್ವ ಆಧ್ಯಾತ್ಮದೆಡೆಗೆ ಕೊಂಡೊಯ್ದಿದೆ. ಜಗನ್ನಾಥ ಮಹಾರಾಜರ ಅಖಂಡ ಅಧ್ಯಾತ್ಮಿಕ ಗಾಯನ ಸೇವೆಯನ್ನು ಮೆಚ್ಚಿ ನಾಡಿನ ಅನೇಕ ಗುರು ಮಠಗಳು ಮತ್ತು ಹತ್ತು ಹಲವು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 2003ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ.



ನಬಿಲಾಲ: ಜನಪದ ಕಲಾವಿದ. ಬಸವಕಲ್ಯಾಣ ತಾಲ್ಲೂಕಿನ ಹಿಪ್ಪರಗಾ ಭಾಗದ ಕಲಾವಿದ. ಉರ್ದು ಭಾಷಿಕನೊಬ್ಬನ ಕಲಾ ಸೇವೆಯಿಂದಾಗಿ ಅಪಾರ ಜನಮನ ಗೆದ್ದಿರುವ ಈ ಜನಪದ ಕಲಾವಿದ ಅನಕ್ಷರಸ್ಥ, ತಮ್ಮ 65 ವರ್ಷಗಳ ಇಡೀ ಬದುಕಿನಲ್ಲಿ ಜನಪದ ಸಂಗೀತದೊಂದಿಗೆ ಕಳೆದಿರುವುದು ವಿಶೇಷ, ಕೋಲಾಟ, ಡಪ್ಪಿನಾಟ, ಮೋಹರಂ ಪದಗಳನ್ನು ಹಾಡುವ ಈ ಕಲೆ ನಬಿಲಾಲರಿಗೆ ಚಿಕ್ಕವಯಸ್ಸಿನಿಂದಲೇ ಕರಗತವಾಯಿತು. ಆಮೇಲೆ ಹರದೇಶಿ–ನಾಗೇಶಿ ಪದಕಟ್ಟಿ ಹಾಡುವ ಮೂಲಕ ಜನಮನ ಸೆಳೆದರು. ಇವರ ಹಾಡಿನ ಧಾಟಿ, ಚುಟುಕು ಸಂಭಾಷಣೆಗಳಿಂದ ಪ್ರೇರೇಪಿತರಾದ, ಕುಟುಂಬ ಕಲ್ಯಾಣ ಇಲಾಖೆ, ಕುಟುಂಬ ಯೋಜನೆ ಕುರಿತ ಹಾಡುಗಳನ್ನು ಸಭೆ, ಸಮಾರಂಭಗಳಲ್ಲಿ ಹಾಡಿಸುವ ಮೂಲಕ ಇವರ ಕಲೆಗೆ ಪ್ರೋತ್ಸಾಹ ನೀಡಿದರು. ಮುಂದೆ ಸಾಕ್ಷರತಾ ಮಿತ್ರ ಯೋಜನೆಯಲ್ಲಿ ಹಾಡಿದ ನಬಿಲಾಲರು ಜನಪ್ರಿಯ ಕಲಾವಿದರಾದರು. ರಾಜ್ಯ ಸಾಹಿತ್ಯ ಸಮ್ಮೇಳನ, ಯುವಜನ ಮೇಳ, ಜನಪದ ಕಲಾಮೇಳಗಳಲ್ಲಿ ಸೊಗಸಾಗಿ ಹಾಡಿದರು. ತನಗಾಗಿ ಏನನ್ನೂ ಮಾಡಿಕೊಳ್ಳದ ಈ ಇಳಿ ವಯಸ್ಸಿನ ಹಾಡುಹಕ್ಕಿಗೆ 2004ರ ರಾಜ್ಯ ಪ್ರಶಸ್ತಿ ದೊರಕಿದೆ.

ಗಂಗಾಧರಯ್ಯಸ್ವಾಮಿ ಚಿಕ್ಕಮಠ: ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ (ಕೆ) ಗ್ರಾಮದವರು. ಭಜನೆಪದಗಳ ಹಾಡುಗಾರ. ತಂದೆ ಶಿವಲಿಂಗಯ್ಯ ತಾಯಿ ನಾಗಮ್ಮ. ಇವರು ತಂದೆಯಿಂದಲೇ ಭಜನೆಪದ, ತತ್ವಪದಗಳನ್ನು ಹಾಡಲು ಕಲಿತರು.

ತಮ್ಮ ಬಾಲ್ಯದಲ್ಲಿಯೇ ಭಜನೆ ಪದಗಳ ಗುಂಗಿಗೆ ಮೊರೆಹೋಗಿ ಆ ಕಾಲದ ಪ್ರಸಿದ್ಧ ತತ್ವಪದಕಾರರ ಜೊತೆ ತಿರುಗಾಡಿ ಈ ಕಲೆಯನ್ನು ರೂಢಿಸಿಕೊಂಡರು. ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಚೆಳ್ಳಗುರಕಿ ಎರಿತಾತ, ನಿಜಗುಣ ಶಿವಯೋಗಿ ಹೀಗೆ ಮೊದಲಾದ ತತ್ವಪದಕಾರರ ಹಾಡುಗಳನ್ನು ಇವರು ಲೀಲಾಜಾಲವಾಗಿ ಹಾಡುತ್ತಾರೆ. ಇವರ ಈ ಕಲಾಸೇವೆಯನ್ನು ಅರಿತ ಕರ್ನಾಟಕ ಜಾನಪದ ಅಕಾಡೆಮಿ 2005ರ ರಾಜ್ಯಪ್ರಶಸ್ತಿ ನೀಡಿ ಗೌರವಿಸುವುದರ ಮೂಲಕ ಭಜನೆಪದ ಪ್ರಸಾರಕ್ಕೆ ಮಾನ್ಯತೆ ನೀಡಿದೆ.

ಗುರುನಾಥ ಕೋಟೆ: ಇವರು ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಜೀರಗಾ ಗ್ರಾಮದವರು. ಏಳನೆಯ ಈಯತ್ತೆ ಪಾಸು ಮಾಡಿರುವ ಇವರು ಪೌರಾಣಿಕ ನಾಟಕ, ದೊಡ್ಡಾಟದ ಬಹುದೊಡ್ಡ ಕಲಾವಿದರು. ಒಕ್ಕಲುತನ ಮಾಡಿಕೊಂಡು ಶಾಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿ ಅನೇಕ ವಿದ್ಯಾರ್ಥಿಗಳನ್ನು ಬೆಳೆಸಿದ್ದಾರೆ. 1936ರಲ್ಲಿ ಜನಿಸಿದರು ಇವರ ತಂದೆ ಉಂಗರಶೆಟ್ಟಿ ತಾಯಿ ರತ್ನಮ್ಮ, ತಮ್ಮ 16ನೆಯ ವಯಸ್ಸಿನಲ್ಲಿ ದೊಡ್ಡಾಟಕ್ಕೆ ಪ್ರವೇಶ ಮಾಡಿದರು.

ಪೌರಾಣಿಕ ನಾಟಕದಲ್ಲಿ ಅನೇಕ ಪಾತ್ರಗಳನ್ನು ಮಾಡಿ ಜನಮನ್ನಣೆ ಗಳಿಸಿದ ಮೇಲೆ ತಮ್ಮ ಅಭಿನಯಾನುಭವವನ್ನು ಧಾರೆಯೆರೆಯಬೇಕೆಂದು, ಬಹಳಷ್ಟು ನಾಟಕಗಳ ನಿರ್ದೇಶಕರಾಗಿ ಕೆಲಸ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರು-ಶಿಷ್ಯ ಪರಂಪರೆ ಯೋಜನೆಯಡಿಯಲ್ಲಿ ದೊಡ್ಡಾಟ ಕಲಿಕಾ ಕೇಂದ್ರಕ್ಕೆ ಗುರುಗಳಾಗಿ ತರಬೇತಿ ನೀಡಿದ್ದಾರೆ. ಸುಗ್ಗಿ ಯೋಜನೆಯಡಿ ದೊಡ್ಡಾಟ ಪ್ರದರ್ಶನ ಮಾಡಿದ್ದಾರೆ. ನಂತರ 'ಶಿವಲಿಂಗೇಶ್ವರ ನಾಟಕ ಸಂಘ(ರಿ)ವನ್ನು ಕಟ್ಟಿಕೊಂಡು ಸತತವಾಗಿ ಯುವಕರಿಗೆ ದೊಡ್ಡಾಟ ತರಬೇತಿ ನೀಡಿ ಪ್ರದರ್ಶನವೇರ್ಪಡಿಸಿದ್ದಾರೆ. ಇವರಿಗೆ ಹಲವಾರು ಸಂಘ ಸಂಸ್ಥೆಗಳ ಸನ್ಮಾನ ದೊರಕಿದೆ. 2006ರಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಗೌರಮ್ಮಜ್ಜಿ ಕಾಡಾದಿ: ತತ್ವ ಪದ ಮತ್ತು ವಚನಗಳ ಹಾಡುಗಾರ್ತಿ. ತನ್ನ 80ರ ಇಳಿವಯಸ್ಸಿನಲ್ಲಿ ಕುಗ್ಗದ ಉತ್ಸಾಹದ ಗೌರಮ್ಮಜ್ಜಿ ಬೀದರ ಜಿಲ್ಲೆಯ ಮಹಾನ್ ಕಲಾವಿದೆ. ಜಿಲ್ಲೆಯ ಹುಲುಸೂರ ಗ್ರಾಮದವರು. ಇವರು ಕಾಡಾದಿ ಮನೆತನದವರು. ತಮ್ಮ ಸುಮಧುರ ಕಂಠದಿಂದ ತತ್ವಪದಗಳು ಮತ್ತು ವಚನಗಳನ್ನು ಹಾಡುವ ಮೂಲಕ ಜನಜಾಗೃತಿ ತರುವುದರಲ್ಲೇ ನಿಜ ಜೀವನ ಶೈಲಿಯನ್ನು ಪರಿಚಯಿಸಿದ ಕೀರ್ತಿ ಈ ಹಾಡುಗಾರ್ತಿಯದು. ಅವಸಾನದ ಅಂಚಿನಲ್ಲಿರುವ ಜಿಲ್ಲೆಯ ಜಾನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇವರು ಬಹಳಷ್ಟು ಶ್ರಮಸಿದ್ದಾರೆ. ನೂರಾರು ತತ್ವಪದಗಳು ಸೇರಿದ 'ಕಾಡಾದಿ ಗೌರವ್ವ ಹಾಡಿದ ಹಾಡುಗಳು' ಎಂಬ ಕೃತಿಯನ್ನು ಸಹ ಇವರು ಹೊರತಂದಿದ್ದಾರೆ. ಸೋಬಾನೆಹಾಡುಗಳು, ತೊಟ್ಟಿಲಹಾಡು, ಬುಲಾಯಿಹಾಡು, ಕೋಲಾಟ ಹಾಗೂ ಸಂತರ, ಶರಣರ ತತ್ವಪದಗಳನ್ನು ನಿರಾಳವಾಗಿ ಹಾಡುತ್ತಾರೆ. ಅವರ ಹಾಡುಗಾರಿಕೆ ಸುತ್ತ-ಮುತ್ತಲಿನ ಊರುಗಳಲ್ಲೆಲ್ಲ ಚಿರಪರಿಚಿತವಾಗಿದೆ.

ಗೌರಮ್ಮ ಕಾಡಾದಿ ಅವರ ಸಾಧನೆಗಾಗಿ ಹುಲುಸೂರ್ ಗುರುಬಸವೇಶ್ವರ ಸಂಸ್ಥಾನಮಠ, ಭಾಲ್ಕಿ ಹಿರೇಮಠಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಗೌರಮ್ಮಜ್ಜಿಯ ಕಲಾ ಶ್ರೀಮಂತಿಕೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ ಅವರಿಗೆ 2008ನೆಯ ಸಾಲಿನ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕೂಡಲ ಸಂಗಮದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದ ಖ್ಯಾತಿ ಗೌರಮ್ಮನವರದಾಗಿದೆ.

ಪ್ರಶಸ್ತಿ ಪಡೆದ ಕಲಾವಿದರ ಸಂಖ್ಯೆ ಇಷ್ಟಿದ್ದರೆ, ಯಾವ ರೀತಿಯ ಪ್ರಶಸ್ತಿಗಾಗಿ ಹಂಬಲಿಸದೇ ತಮ್ಮ ಜೀವನದ ಕಷ್ಟ ಸುಖಗಳಲ್ಲಿ ಸಂತೋಷವಾಗಿ ಹಾಡಿಕೊಂಡು ಜನಪದ ಸಾಹಿತ್ಯ ಸಿರಿಯನ್ನು ಸದಾ ಉಳಿಸಿಕೊಂಡು ಬಂದ ನೂರಾರು ಕಲಾವಿದರು ಈ ಬೀದರ ಜಿಲ್ಲೆಯಲ್ಲಿ ಸಿಗುತ್ತಾರೆ.

(ಎಸ್‌ಎಸ್‌ವೈ)

ಜನಪದ ಕಲೆಗಳು: (ರಾಯಚೂರು ಜಿಲ್ಲೆ) ರಾಯಚೂರು ಜಿಲ್ಲೆ ಜನಪದ ಕಲೆಗಳ ಆಗರವೆನಿಸಿದೆ. ಹಿಂದುಳಿದ ಪ್ರದೇಶವಾದ್ದರಿಂದ ಆಧುನಿಕತೆಯ ಸೋಂಕು-ಸೊಗಡುಗಳಿಲ್ಲದೆ ಹಲವಾರು ಜನಪದ ಕಲೆಗಳು ಮೂಲದ ಸೊಗಡನ್ನುಳಿಸಿ ಕೊಂಡು ಈಗಲೂ ಪ್ರದರ್ಶಿಸಲ್ಪಡುತ್ತಿವೆ. ಎಲ್ಲ ಕಲಾಪ್ರಕಾರಗಳೂ ಜಿಲ್ಲೆಯಲ್ಲಿ ಬಳಕೆಯಲ್ಲಿರುವುದನ್ನು ಕ್ಷೇತ್ರಾಧ್ಯಯನದ ಮೂಲಕ ಮನಗಾಣಬಹುದಾಗಿದೆ. ಗೀಗೀ-ಲಾವಣಿ, ಹೊಳ್ಳು, ಹಂತಿ, ಭಜನೆ, ಚೌಡಿಕೆ, ಶಹನಾಯಿ, ಕಣಿಹಲಗೆ, ವೀರಗಾಸೆ, ಸುಡುಗಾಡಸಿದ್ಧ, ವೇಷಗಾರರು, ತೊಗಲುಗೊಂಬೆಯಾಟ, ಹುಲಿವೇಷ, ದೊಡ್ಡಾಟ-ಮುಂತಾದ ಕಲಾಮೇಳಗಳು ಜನತೆಯ ಮಧ್ಯದಲ್ಲಿ ಬದುಕುತ್ತಿವೆ. ಜಿಲ್ಲೆಯ ಜನಪ್ರಿಯ ಕಲಾಕಾರರು ಮತ್ತು ಮೇಳಗಳು ಹೀಗಿವೆ.

ಗೀಗೀ-ಲಾವಣಿ: ಸಿಂಧನೂರ ತಾಲ್ಲೂಕಿನ ಉಮಲೂಟಿಯ ಮಲ್ಲಿಕಾರ್ಜುನ ಬಡಿಗೇರ ಮತ್ತು ಸಂಗಡಿಗರು, ಕೊಪ್ಪಳ ತಾಲ್ಲೂಕಿನ ಹೊಸಳ್ಳಿಯ ಹುಲಿಗೆಮ್ಮ ಮೇಳ.

ರಿವಾಯ್ತು: ಲಿಂಗಸುಗೂರ ತಾಲ್ಲೂಕಿನ ಕೈರವಾಡಗಿಯ ಗದ್ದೆಪ್ಪ ಗೌಂಡಿ ಸಂಗಡಿಗರು ಅಲಾಯಿ ಹೆಜ್ಜೆ ಹಾಕುವುದರಲ್ಲಿ ಪ್ರವೀಣರು. ದೇವದುರ್ಗ ತಾಲ್ಲೂಕಿನ ಮದಕಲ್ಲಿನ ಮಲ್ಲಪ್ಪ, ಗಣೇಕಲ್ಲಿನ ನಾಯ್ಕಪ್ಪ, ಲಿಂಗಸುಗೂರಿನ ಒಡ್ಡರ ಮಹುಮಂತಪ್ಪ, ಸಂತೆಕೆಲ್ಲೂರಿನ ಶಂಕರಪ್ಪ, ಮಡ್ಡಿಪೇಟೆ ಭೀಮರೆಡ್ಡಿಯವರು ರಿವಾಯ್ತು ಹಾಡುಗಳನ್ನು ಸುಮಧುರವಾಗಿ ಹೇಳುತ್ತಾರೆ. ಏವೂರು, ಕುರಡಿ, ಮಾನ್ವಿ, ಮರ್ಚೇಡ, ಮರಳಿ ಮುಂತಾದ ಗ್ರಾಮದಲ್ಲಿ ಅಲಾಯಿ ಮೇಳಗಳಿವೆ.

ಡೊಳ್ಳು: ಕುಷ್ಟಗಿ ತಾಲ್ಲೂಕಿನ ಬೆಂಚಮಟ್ಟಿ ಶಿವಪ್ಪ ತಂಡ, ಏಗನೂರ ಸಣ್ಣಯಲ್ಲಪ್ಪ ತಂಡ, ಡೊಳ್ಳಿನ ನೃತ್ಯ ಮಾಡುವಲ್ಲಿ ನಿಸ್ಸೀಮರು. ಯಲಬುರ್ಗಿಯ ರೇವಣೆಪ್ಪ, ಸಂತೆಕೆಲ್ಲೂರ

ಗ್ಯಾನಪ್ಪ ಪಿಪಿಲಾಳ, ಯರದೊಡ್ಡಿ ದ್ಯಾವಪ್ಪ, ಕ್ವಾಣಾಪುರ ಸಣ್ಣಹನುಮಪ್ಪ ಮುಂತಾದವರು 'ಡೊಳ್ಳಿನ ಹಾಡು' ಗಳನ್ನು ರಸವತ್ತಾಗಿ ಹೇಳುತ್ತಾರೆ. ಲಿಂಗಸೂಗೂರ ತಾಲ್ಲೂಕ ಕರಡಿಕಲ್ಲಿನ ಡೊಳ್ಳುಮೇಳ ರಾಜ್ಯ ಪ್ರಶಸ್ತಿ ಪಡೆದಿದೆ.

ಗೊಂದಲಿಗರು: ಕರಡಿಗುಡ್ಡ ಶಂಕರಪ್ಪ, ಗೆಜ್ಜಲಗಟ್ಟಿ ಮಲ್ಲಪ್ಪ ಗೊಂದಲಿಗರು, ಗೊಂದಲ ಹಾಕುವುದರಲ್ಲಿ ಹೆಸರಾದವರು. ಇವರಲ್ಲದೆ ತಾವರಗೇರಿ, ಹಿರೇಮನ್ನಾಪುರ, ಮಾನ್ವಿ, ಮನ್ನೇರಾಳ ಮುಂತಾದ ಗ್ರಾಮಗಳಲ್ಲಿ ಗೊಂದಲಿಗರ ಮೇಳ ಗಳಿವೆ.

ಚೌಡಿಕೆ: ರಾಯಚೂರಿನ ಗಜಲಪ್ಪ ಚೌಡಿಕೆಯಲ್ಲಿ ಹೆಸರು ವಾಸಿಯಾಗಿದ್ದಾನೆ.

ವೇಷಗಾರರು: ಗಂಗಾವತಿ ತಾಲ್ಲೂಕಿನ ಸಿದ್ಧಾಪುರದ ಶರಣಪ್ಪ ಸಂಗಡಿಗರು ವೇಷಗಾರ ವೃತ್ತಿಯಲ್ಲಿ ಪ್ರವೀಣರು.

ಸುಡುಗಾಡಸಿದ್ಧ: ಚಿಕ್ಕವಂಕಲಕುಂಟಿಯ ಸಿದ್ರಾಮಯ್ಯ, ಯಲಬುರ್ಗಾದ ಸಿದ್ರಾಮಪ್ಪ ಪರಿಮೋಡಿ ಹಾಕುವುದರಲ್ಲಿ ಪ್ರಸಿದ್ಧರು.

ಕಣಿಹಲಗೆ: ಲಿಂಗಸುಗೂರ ತಾಲ್ಲೂಕಿನ ಅಮದಿಹಾಳದ ಲಕ್ಕಪ್ಪ ಬಜಂತ್ರಿ, ದಿನ್ನಿ ನರಸಪ್ಪ ಇವರು ಹಲಗೆ ನುಡಿಸುವುದರಲ್ಲಿ ಶ್ರೇಷ್ಠರು.

ಏಕತಾರಿ: ಪೂರ್ತಿಪ್ಲೆ ನರಸಪ್ಪ ತಂತಿವಾದ್ಯ ನುಡಿಸುತ್ತ ಜನರಂಜಿಸುತ್ತಾನೆ.

ಶಹನಾಯಿ: ದಿನ್ನಿಯ ಆಂಜನೇಯ ಹಾಗೂ ಸಂಗಡಿಗರು ಶಹನಾಯಿ ನುಡಿಸುವಲ್ಲಿ ಪ್ರವೀಣರು.

ಭಜನೆ: ಕುಕನೂರಿನ ಶಿವಮೂರ್ತಯ್ಯ, ಯಲಬುರ್ಗಾ ತಾಲ್ಲೂಕಿನ ತಾಳಕೇರಿ ಗ್ರಾಮದ ಬಸವರಾಜ ಹೂಗಾರ, ಸಿಂಧನೂರ ತಾಲ್ಲೂಕಿನ ಬಳಗಾನೂರ ಶರಭಯ್ಯ ಸ್ವಾಮಿ, ಕೆ. ಬಸಾಪುರದ ಲಿಂಗಪ್ಪ ಮಣ್ಣೂರ, ರಾಯಚೂರಿನ ಮೂಕಯ್ಯ ಸ್ವಾಮಿ, ದಿನ್ನಿ ಚಿದಾನಂದ ಮುಂತಾದವರು ಸುಪ್ರಸಿದ್ಧ ಭಜನಾ ಹಾಡುಗಾರರು. ತಾಳಕೇರಿ ಬಸವರಾಜರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ಸಂಪ್ರದಾಯದ ಹಾಡು: ಹೊಸಪೇಟ ನರಸಮ್ಮ ಗಂಗಪ್ಪ, ತಲೇಖಾನ ಅಮೃತಾಬಾಯಿ, ಬನ್ನಿಕೊಪ್ಪ ಶಾಂತವ್ವ, ಬನ್ನಿಕೊಪ್ಪ ಗೌರಮ್ಮ ಕೊಂತೆಮ್ಮಪ್ಪ, ಯರಮರಸ ಶಾಂತಾಬಾಯಿ, ಬನ್ನಿಕೊಪ್ಪ ಯಮನವ್ವತಾಯಿ, ಕುಕನೂರ ದೇವಯ್ಯ, ಯರಗೇರಾ ಕಾಶೀಬಾಯಿ, ಗಬ್ಬೂರ ಲಕ್ಷ್ಮೀಬಾಯಿ, ತಾವರ ಗೇರಿಯ ಯಮನವ್ವ, ಬಿಳೇಗುಡ್ಡ, ಜವಳಗೇರಿಯ ಭಾಗಮ್ಮ, ದೇವದುರ್ಗ ಕಾಳಮ್ಮ ಮುಂತಾದ ಗರತಿಯರು ಸಂಪ್ರದಾಯದ ಹಾಡುಗಳನ್ನು ಸುಮಧುರವಾಗಿ ಹೇಳುತ್ತಾರೆ. ದೇವದುರ್ಗದ ಶ್ರೀಮತಿ ಕಾಳಮ್ಮ ಚೆಲವಾದಿ ಅವರಿಗೆ 1995ರ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ವೀರಗಾಸೆ: ದೇವಸುಗೂರಿನ ರಾಚಯ್ಯ ಸ್ವಾಮಿ ವೀರಗಾಸೆ ನೃತ್ಯವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತಾನೆ. ಅಲ್ಲದೆ ಒಡಪು ಗಳನ್ನು ಹೇಳುತ್ತಾನೆ. ಸಿಂಧನೂರಿನಲ್ಲಿಯೂ ವೀರಗಾಸೆ ಮೇಳ ಗಳಿವೆ.

ಕೋಲಾಟ: ರಾಯಚೂರಿನ ತಿಪ್ಪಯ್ಯ ಸಂಗಡಿಗರು ಕೋಲಿನ ಹಾಡುಗಳನ್ನು ಹೇಳುತ್ತ ಕೋಲಾಟ ಕಲೆಯನ್ನು ತೋರಿಸುತ್ತಾರೆ. ಅಲ್ಲದೆ, ಹುಲಗಿ, ಎರಗೇರ, ರಾಮಪುರ, ಕುಷ್ಟಗಿ, ಲಿಂಗದ್ಹಳ್ಳಿ, ಬೆನಕಲ್ಲ, ವಲ್ಕಂದಿನ್ನಿ ಮುಂತಾದ ಊರು ಗಳಲ್ಲಿ ಕೋಲಾಟದ ತಂಡಗಳಿವೆ.

ತೊಗಲುಗೊಂಬೆಯಾಟ: ಮಾನ್ವಿ ತಾಲ್ಲೂಕಿನ ಕುರಡಿ ಗ್ರಾಮದ ಕೃಷ್ಣಪ್ಪ ಸುಪ್ರಸಿದ್ಧ ತೊಗಲುಗೊಂಬೆಯಾಟ ಕಲಾವಿದ ನಾಗಿದ್ದು ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾನೆ. ಕೊಪ್ಪಳದ ರಾಮಣ್ಣ ಕಿಳ್ಳಿಕ್ಯಾತರ ಈ ಕಲೆಯಲ್ಲಿ ನಿಪುಣನಾಗಿದ್ದಾನೆ. ಚೀಕಲಪರ್ವಿ, ಹಟ್ಟಿ, ಕನಕಾಪುರ ಮುಂತಾದ ಗ್ರಾಮಗಳಲ್ಲಿ ತೊಗಲುಗೊಂಬೆಯಾಟ ಕಲಾವಿದರಿದ್ದಾರೆ.

ಕರಡಿ ಮೇಳ: ಗೊರಲೇಕೊಪ್ಪ, ಈಚಗಿ ಗ್ರಾಮಗಳಲ್ಲಿ ಕರಡಿ ಮೇಳಗಳಿವೆ.

ಹುಲಿವೇಷ: ಕುಷ್ಟಗಿಯ ಈರಪ್ಪ ತೋಟದ ಹುಲಿವೇಷ ವನ್ನು ಜನ ಮೆಚ್ಚುವಂತೆ ಹಾಕುತ್ತಾನೆ.

ನವಿಲು ಕುಣಿತ: ಬನ್ನಿಗೋಳ ಶರಣಪ್ಪ ನವಿಲಿನ ಕುಣಿತ ಮಾಡುವಲ್ಲಿ ಹೆಸರಾಗಿದ್ದಾನೆ.

ಕವ್ವಾಲಿ: ಮದಗಲ್ಲು ಮಹಬೂಬ ಕವ್ವಾಲಿ ಹಾಡು ಹೇಳು ವಲ್ಲಿ ನಿಪುಣನಾಗಿದ್ದಾನೆ. ಇವನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿದೆ (1981ರಲ್ಲಿ). ಗುಲಬರ್ಗಾ ಆಕಾಶವಾಣಿಯಿಂದ ಹಲವು ಬಾರಿ ಇವರ ಹಾಡು ಗಳು ಪ್ರಸಾರಗೊಂಡಿವೆ. ಜನ 'ಭಾಕ್ಷುಮಿಯಾ' ಎಂದು ಕರೆಯು ತ್ತಿದ್ದರು.

ದೊಡ್ಡಾಟ: ತಾವರಗೇರಿಯ ತಿಪ್ಪಣ್ಣ ನಾಯಕ. ಹುಲಿ ಹೈದರದ ಕರಿಯಪ್ಪ ಮಾಸ್ತರ, ಹೊಸೂರಿನ ಫಕೀರಪ್ಪ ಖಂಡಯ್ಯ, ಹಂದ್ರಾಳ ರಾಯಣ್ಣ, ಇಟಗಿಯ ಲಾಲಮಹ್ಮದ ಪಠಾಣ, ಗೆಜ್ಜಲಗಟ್ಟಿ ಆದನಗೌಡ, ಮೊತ್ನಾಳ ಈರಪ್ಪ ಅಗಸರ, ಸಿರವಾರ ಕರಿಯಪ್ಪ ಲಂದೆ, ಕಲ್ಲೂರ ನಾಗಪ್ಪಗೊಲ್ಲರ, ನೆಲಹಾಳ ಪಂಚಯ್ಯಸ್ವಾಮಿ, ರಾಮವಡಗಿ ಮಲ್ಲಪ್ಪ ಭೀಮಪ್ಪ, ಕಲ್ಮರಗಿ ಮಾದಪ್ಪವಾಲೀಕಾರ, ಜಗರಕಲ್ಲ ರೇವಣಯ್ಯ ಮಠದ, ಇಲಚಿ ಶೈಲಪ್ಪ ನಾಗಪ್ಪ, ರಾಯಚೂರು ವೆಂಕಪ್ಪ ಮತ್ತು ತಿಮ್ಮಯ್ಯ, ಮಲಕಾಪುರ ವೆಂಕಪ್ಪ, ಗಾರಲದಿನ್ನಿ ನಬಿಸಾಹೇಬ, ಪೂರ್ತಿಪ್ಲೆ ಗೌಸಮಾಸ್ತರ, ಯಗಸನಳ್ಳಿ ರಂಗಪ್ಪ, ಯರಗೇರ ದಾಸಪ್ಪ ಅಸ್ಕಿಹಾಳ ರಾಮಣ್ಣ, ಕಲ್ಲೂರ ಓಮಂದಯ್ಯ, ಮಾನ್ವಿ ವೆಂಕಣ್ಣ ಗೊಲಲ್ದಾಸ, ಮಟವಾರಿ ಸಿದ್ಧಯ್ಯಸ್ವಾಮಿ, ಕುಕನೂರ ವಾಸು ದೇವ ಹಣಮಂತರಾವ ಮುಂತಾದವರು ದೊಡ್ಡಾಟದ ಸುಪ್ರಸಿದ್ಧ ಕಲಾವಿದರಾಗಿದ್ದಾರೆ. ಜಿಲ್ಲೆಯಾದ್ಯಂತ ಹೆಸರಾಗಿ ದ್ದಾರೆ.

ರಾಯಚೂರಿನ ಎನ್. ಫಕೀರಪ್ಪ ದೊಡ್ಡಾಟ ಕಲಿಸುವು ದಲ್ಲದೆ ಭಾಗವಂತಿಕೆ, ಮದ್ದಲೆ ಮತ್ತು ಡಪ್ಪು ಬಾರಿಸುವುದ ರಲ್ಲಿಯೂ ನಿಪುಣನಾಗಿದ್ದು ಸುಮಾರು ಎಪ್ಪತ್ತು ವರುಷಗಳ ವರೆಗೆ ಈ ಕಲೆಯನ್ನು ನಡೆಸಿಕೊಂಡು ಬಂದಿದ್ದಾನೆ. ಹೆಜ್ಜೆ ಮೇಳ ದಲ್ಲಿಯೂ ಫಕೀರಪ್ಪ ಪ್ರಭುತ್ವವನ್ನು ಪಡೆದಿದ್ದ. ರಾಯಚೂರಿನ ಕಲಾಕಾರರಲ್ಲಿ ಫಕೀರಪ್ಪ ಕಿರೀಟದಂತಿದ್ದಾನೆ. ಇವನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1980ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ದೇವದುರ್ಗ ತಾಲ್ಲೂಕಿನ ಕೊತ್ತಿದೊಡ್ಡಿಯ ಮುದ್ದಯ್ಯ ನೂಲಿ ಬಯಲಾಟದ ಬಹುದೊಡ್ಡ ಕಲಾವಿದ. ಇವನಿಗೆ 'ಬಯಲಾಟದ ಮಾಸ್ತರ' ಎಂದೇ ಕರೆಯುತ್ತಿದ್ದರು. ಸ್ವತಃ ಪಾತ್ರವನ್ನು ಧರಿಸಿ ಅಭಿನಯಿಸುತ್ತಿದ್ದ. ಹನ್ನೆರಡು ಬಯಲಾಟ ಗಳನ್ನು ಕಲಿಸಿದ ಶ್ರೇಯಸ್ಸು ಇದೆ. ಈತನ ಕಲಾಸಂಪತ್ತನ್ನು ಗಮನಿಸಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1984ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿವೆ. **(ಬಿಪಿಪಿ)**

ಜನಪದ ಕವಿ–ಕಲಾಕಾರರು: (ರಾಯಚೂರ ಜಿಲ್ಲೆ) 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಖ್ಯಾತಿಗೆ ಪಾತ್ರರಾದ ಹಲವಾರು ಜನಪದ ಕಲಾವಿದರು ರಾಯಚೂರು ಜಿಲ್ಲೆಯಲ್ಲಿ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಜನಪದದ ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಜನತೆಯ ಜ್ಞಾನದಾಸೋಹಕ್ಕೆ ಇಲ್ಲಿನ ಹಿರಿ–ಕಿರಿಯ ಕವಿ ಕಲಾವಿದರು ಶ್ರಮವಹಿಸಿದ್ದಾರೆ. ಅಂಥವರಲ್ಲಿ ಈ ಕೆಳಕಂಡವರು ಪ್ರಮುಖರಾಗಿದ್ದಾರೆ.

ಕೂಡಲೂರು ಬಸವಲಿಂಗ: (1725–96) ಯಾದಗಿರಿ ತಾಲ್ಲೂಕಿನ ಬಳಿಚಕ್ರ ಗ್ರಾಮದಲ್ಲಿ ಜನಿಸಿ, ಸುಮಾರು ಇಪ್ಪತ್ತು ವರುಷ ತಮ್ಮೂರಿನಲ್ಲಿ ಕಳೆಯುತ್ತಾರೆ. ಜ್ಞಾನಪಿಪಾಸೆ ಹೆಚ್ಚಿ, ಆಧ್ಯಾತ್ಮ ತೃಷೆಗಾಗಿ ಊರು ಬಿಡುತ್ತಾರೆ. ಮದುವೆಗೆ ಒಪ್ಪದೆ ವೈರಾಗ್ಯ ತಾಳುತ್ತಾರೆ. ಇವರು ಕಡಕೋಳ ಮಡಿವಾಳಪ್ಪನವರ ಸಮಕಾಲೀನರಾದ್ದರಿಂದ ಆಗಾಗ ಬಸವಲಿಂಗರು ಕಡಕೋಳಕ್ಕೆ ಹೋಗಿ ಅನುಭವ ಗೋಷ್ಠಿಗಳನ್ನು ನಡೆಸಿ ಬರುತ್ತಿದ್ದರೆಂದು ಕಾಣುತ್ತದೆ. ಹಂಪೆಗೆ ಬಂದು ದೀರ್ಘಕಾಲ ತಪಸ್ಸು ಮಾಡಿ ಸಿದ್ಧಿ ಪಡೆಯುತ್ತಾರೆ. 'ಕೂಡಲೂರೇಶ' ಎನ್ನುವ ಅಂಕಿತದಲ್ಲಿ ತತ್ವಪದ ಗಳನ್ನು ರಚಿಸುತ್ತಾರೆ. ಗುಲಬರ್ಗಾ ಮತ್ತು ರಾಯಚೂರ ಜಿಲ್ಲೆಯ ಹಲವಾರು ಊರುಗಳಲ್ಲಿ ಅಡ್ಡಾಡಿ ಜನತೆಯ ಪ್ರೀತಿ ಗಳಿಸುತ್ತಾರೆ. ದೇವದುರ್ಗ ತಾಲ್ಲೂಕಿನ 'ಖಾನಾಪೂರ' ಗ್ರಾಮ ದಲ್ಲಿ ಲಿಂಗೈಕ್ಯರಾಗುತ್ತಾರೆ.

ಬಸವಲಿಂಗರು ರಚಿಸಿದ ತತ್ವಪದಗಳು ಗುಲಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಯಾದ್ಯಂತ ಪಸರಿಸಿವೆ. ಈಗಲೂ ಈ ಪ್ರದೇಶದ ಜನ ಭಜನೆ, ಹಬ್ಬ–ಹರಿದಿನ, ಜಾತ್ರೆ ಮುಂತಾದ ಶುಭ ಸಂದರ್ಭಗಳಲ್ಲಿ ಇವರ ಹಾಡುಗಳನ್ನು ಹೇಳಿ ತೃಪ್ತಿ ಪಡುತ್ತಾರೆ. ಅನೇಕ ಹಾಡುಗಳು ಆಕಾಶವಾಣಿ ಮೂಲಕ ಬಿತ್ತರಗೊಂಡಿವೆ. ಬಸವಲಿಂಗರು ರಚಿಸಿದ ಹಾಡುಗಳನ್ನು ಸಂಗ್ರಹಿಸಿ ಕೆಲವರು ಪ್ರಕಟಿಸಿದ್ದಾರೆ.

ಅಪರಾಳ ತಮ್ಮಣ್ಣ: (1800–1880) ರಾಯಚೂರ ಜಿಲ್ಲೆಯ ಅಪರಾಳ ಗ್ರಾಮ 'ಶ್ರೀಕೃಷ್ಣ ಪಾರಿಜಾತ' ದ ಜನ್ಮಸ್ಥಳ. ಇಲ್ಲಿನ ತಮ್ಮಣ್ಣ ಕವಿ ಗೀತನಾಟಕವಾಗಿ ಈ ಕೃತಿಯನ್ನು ರಚಿಸಿದ್ದಾನೆ. ತಮ್ಮಣ್ಣನ ಗೀತನಾಟಕದ ಪ್ರೇರಣೆಗೆ ಒಳಗಾಗಿ ಬೆಳಗಾವಿ ಜಿಲ್ಲೆಯ ಕುಲಗೋಡ ಗ್ರಾಮದ ತಮ್ಮಣ್ಣ ಕವಿ ಇದನ್ನು ಸಣ್ಣಾಟಕ್ಕೆ ತಿರುಗಿಸುತ್ತಾನೆ. ಇದು ಎಲ್ಲೆಡೆ ಪ್ರದರ್ಶಿಸಲ್ಪಟ್ಟು 'ಸಣ್ಣಾಟಗಳ ರಾಜ' ನೆನ್ನುವ ಕೀರ್ತಿ ಪಡೆಯಿತು. ಜೊತೆಗೆ ರಾಜ್ಯಮಟ್ಟದ ಜಾನಪದ ಕೃತಿಗಳ ಶ್ರೇಷ್ಠ ಮಾಲಿಕೆಯಲ್ಲಿ ಅಗ್ರಸ್ಥಾನ ಪಡೆಯಿತು. ಇದಕ್ಕೆ ಅಪರಾಳ ತಮ್ಮಣ್ಣ ಮೂಲ ಪ್ರೇರಕ. ತಮ್ಮಣ್ಣ ರಾಯಚೂರು ಜಿಲ್ಲೆಯ ಹೆಮ್ಮೆಯ ಕವಿ. 'ಕನಕಾದ್ರಿವಾಸ' ಎನ್ನುವ ಅಂಕಿತದಲ್ಲಿ ಕೃತಿಯನ್ನು ರಚಿಸಿದ್ದಾನೆ.

ನೀರಲಕೇರಿ ಬಸವಲಿಂಗ: (1812–1872) ತತ್ತ್ವಪದಕಾರ. ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಹಿರೇಗೂಡೂರು ಗ್ರಾಮದವರು. ಇವರು ಸಂಚರಿಸುತ್ತ ರಾಯಚುರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ನೀರಲಕೇರಿಗೆ ಬಂದು ಜನಸೇವೆಗೆ ತೊಡಗುತ್ತಾರೆ. ಹಲವು ಜನರ ಅಪವಾದ, ನಿಂದನೆಗಳ ಮಧ್ಯ ದಲ್ಲಿ ಬದುಕುತ್ತಾರೆ. ಸಮಾಧಾನ ಚಿತ್ತದಿಂದ ಜನರನ್ನು ನೀತಿ ತತ್ತ್ವಗಳತ್ತ ಸೆಳೆಯುತ್ತಾರೆ. ಶಕ್ತಿಯ ಆರಾಧಕರಾಗುತ್ತಾರೆ. 'ಗಡಿಯ ನೀರಲಕೇರಿಯ ಒಡೆಯ ಪಂಚಾಕ್ಷರಿ' ಅಂಕಿತದಲ್ಲಿ ತತ್ವಪದಗಳನ್ನು ರಚಿಸುತ್ತಾರೆ.

ಘನ ವಿದ್ವಾಂಸರೂ, ಮಹಾ ತಪೋನಿಧಿಗಳೂ, ಪ್ರತಿಭಾನ್ವಿತ ಕವಿಗಳೂ ಆದ ಸಂತೆಕೆಲ್ಲೂರಿನ ಘನಮಠಾರ್ಯರು ಅಂದು ಇವರನ್ನು ಸಂದರ್ಶಿಸುವ ನೀರಲಕೇರಿಗೆ ಬಂದಿದ್ದರಂತೆ. ಇಬ್ಬರೂ ಸೇರಿ ಜ್ಞಾನದಾಸೋಹ ಕಾರ್ಯದಲ್ಲಿ ನಿರತರಾಗಿ ಕಲ್ಯಾಣದ ಶರಣರ ಕಾರ್ಯವನ್ನು ಮುಂದುವರಿಸಿಕೊಂಡು ಬಂದಂತೆ ಕಾಣುತ್ತದೆ. ಈಗಲೂ ಈ ಪ್ರದೇಶದ ಜನ ಇವರ ಹಾಡುಗಳನ್ನು ಭಜನೆಯ ಸಂದರ್ಭದಲ್ಲಿ ಹೇಳುತ್ತಾರೆ.

ಸಂತೆಕೆಲ್ಲೂರಿನ ನಾಗಭೂಷಣ: ತತ್ತ್ವಪದಗಾರ. (1829–80) ಮೂಲತಃ ಆಂಧ್ರಪ್ರದೇಶದ 'ದೋರವಾಡ' ಗ್ರಾಮದವರು. ಹಿರಿಯರ ಒತ್ತಾಯಕ್ಕೆ ಮಣಿದು ಮದುವೆಯಾಗಿ, ಒಂದು ಹೆಣ್ಣುಮಗುವಿನ ತಂದೆಯಾಗಿ ಮುಂದೆ ವೈರಾಗ್ಯ ತಾಳಿದರು. ಪರಮ ಮುಕ್ತಿಗಾಗಿ ಹಂಬಲಿಸಿ ಊರನ್ನು ಬಿಟ್ಟು ಕರ್ನಾಟಕ ವನ್ನು ಪ್ರವೇಶಿಸಿದರು. ರಾಯಚೂರು ಅವರ ಕರ್ಮಸ್ಥಳ ವಾಯಿತು. ಜನರ ಆಧ್ಯಾತ್ಮಿಕ ತೃಷೆಯನ್ನು ಹಿಂಗಿಸುತ್ತಾರೆ. ನೂರಾರು ತತ್ವಪದಗಳನ್ನು 'ಘನಮಠೇಶ' ಅಂಕಿತದಲ್ಲಿ ಕಟ್ಟಿ ಹಾಡುತ್ತಾರೆ. 'ಕೃತಿಜ್ಞಾನ ಪ್ರದೀಪಿಕೆ' ಎನ್ನುವ ಕೃತಿಯೊಂದನ್ನು ರಚಿಸುತ್ತ ರೈತರ ಕೃಷಿ ಸಮಸ್ಯೆಗೆ ಪರಿಹಾರ ನೀಡುತ್ತಾರೆ ಇವರು ಬರೆದ ಕೃತಿಗಳು ಈಗಾಗಲೇ ಪ್ರಕಟವಾಗಿವೆ.

ಘನಮಠೇಶರ ಪದಗಳು ರಾಯಚೂರು ಜಿಲ್ಲೆಯಾದ್ಯಂತ ಕೇಳಿಬರುತ್ತವೆ. ಜೋಗುಳ, ಭಜನೆ, ಮಂಗಳಾರತಿ ಹೀಗೆ ವಿವಿಧ

ಸಂದರ್ಭಗಳಲ್ಲಿ ಇವರು ಹಾಡು ಹೇಳುವುದನ್ನು ಕೇಳ ಬಹುದಾಗಿದೆ.

ತಾಳಕೇರಿ ಬಸವರಾಜ ಹೂಗಾರ: ಕವಿ-ಕಲಾವಿದ. ಇವರು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲ್ಲೂಕಿನ ತಾಳಕೇರಿ ಗ್ರಾಮದಲ್ಲಿ 1930ರಲ್ಲಿ ಜನಿಸಿದರು. ಮನೆತನದಿಂದಲೇ ಕಲೆಯನ್ನು ರೂಢಿಸಿಕೊಂಡು ಬಂದರು. ಚಿಕ್ಕವಯಸ್ಸಿನಲ್ಲೇ ಸಂಗೀತಕ್ಕೆ ಮಾರುಹೋದರು. ತಮ್ಮ ಹನ್ನೊಂದನೆಯ ವರ್ಷದಲ್ಲಿ ಪಂಚಾಕ್ಷರಿ ಗವಾಯಿಗಳ ನಾಟ್ಯ ಸಂಘದಲ್ಲಿ ಸೇರಿಕೊಳ್ಳುವರು. ಎಂಟನೆಯ ತರಗತಿಯವರೆಗೆ ಮಾತ್ರ ಅಭ್ಯಾಸ ಮಾಡುವರು. ಹಲವು ವಾದ್ಯಗಳನ್ನು ನುಡಿಸುವ ಪರಿಣತಿ ಹೊಂದಿದ ಇವರು ನಾಟಕದಲ್ಲಿ ಪಾತ್ರಗಳನ್ನು ಹಾಕಿ ಅಭಿನಯಿಸುವುದೆಂದರೆ ಎಲ್ಲಿಲ್ಲದ ಸಂತಸ. 'ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ 'ನಾಗಮ್ಮ' ನ ಪಾತ್ರ ಹಾಕಿ ಒಳ್ಳೆಯ ನಟರೆನ್ನುವ ಕೀರ್ತಿ ಸಂಪಾದಿಸಿದರು. ಇವರು ಒಟ್ಟು 35 ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹುಪಾಲು ಕೃತಿಗಳು ಜನಪದಕ್ಕೆ ಮೀಸಲಾದವುಗಳಾಗಿವೆ. ಅವುಗಳಲ್ಲಿ 'ಬಸವಗೀತ', 'ಕಲ್ಯಾಣ ಗೀತ', 'ತಾಯಿಯ ಹಾಡು' ಕೃತಿಗಳು ಅಮೂಲ್ಯವಾದವುಗಳು. ಇವುಗಳಲ್ಲಿನ ಹಾಡುಗಳು ಎಲ್ಲೆಡೆ ಪ್ರಸಾರವಾಗಿ ಜನಮನ ಸೂರೆಗೊಂಡಿವೆ. ಜನ ಮಂತ್ರಮುಗ್ಧರಾಗಿ ಈ ಹಾಡುಗಳನ್ನು ಕೇಳಿದ್ದಾರೆ. ಉತ್ತರ ಕರ್ನಾಟಕ ಹೆಚ್ಚು ಕಡಿಮೆ ಎಲ್ಲ ಹಳ್ಳಿಗಳಲ್ಲಿ ಇವರು ರಚಿಸಿದ ಹಾಡುಗಳನ್ನು ಭಜನೆ, ಹೆಣ್ಣು ಮಕ್ಕಳ ಹಾಡುಗಳನ್ನು ಗಳೆ ಹೊಡೆಯುವಾಗ, ಜೋಕಾಲಿ ಜೀಕುವಾಗ, ಹಬ್ಬದದಿನ, ಜಾತ್ರೋತ್ಸವ-ಹೀಗೆ ಹಲವು ಸಮಯ ಸಂದರ್ಭಗಳಲ್ಲಿ ಹೇಳುತ್ತಾರೆ. ತಮ್ಮೆಲ್ಲ ಹಾಡುಗಳಿಗೆ ಕವಿ 'ಮುದ್ದುಬಸವ' ಎನ್ನುವ ಅಂಕಿತ ಬಳಸಿದ್ದಾರೆ.

ತಾಳಕೇರಿ ಬಸವರಾಜರು ರಚಿಸಿದ ಹಾಡುಗಳು ಎಂಥವರ ಬಾಯಲ್ಲೂ ಗುಣಗುಣಿಸುತ್ತವೆ. ತವರುಮನೆಯ ನೆನಪು, ತಾಯಿಯ ಮಹತ್ವ ಕುರಿತು ರಚಿಸಿದ ಹಾಡುಗಳನ್ನು ಕೇಳುಕೇಳುತ್ತ ಕಣ್ಣೀರಿಟ್ಟವರೂ ಇದ್ದಾರೆ. ಇನ್ನೊಂದು ಸಲ ಹಾಡಲು ಒತ್ತಾಯಿಸಿ ಕೇಳಿ ತಣಿದಿದ್ದಾರೆ. ನಿತ್ಯ ಜೀವನದ ಕೌಟುಂಬಿಕ ಸಂಗತಿಗಳೇ ಇಲ್ಲಿನ ಹಾಡುಗಳಿಗೆ ವಸ್ತುವಾಗಿರುವುದರಿಂದ ಜನಮನವನ್ನು ಇವು ಹೆಚ್ಚು ಸ್ಪಂದಿಸಿವೆ. ಇವರ ಬಹುಮುಖ ಪ್ರತಿಭೆಯನ್ನು ಗಮನಿಸಿ ಇವರಿಗೆ 'ಜಾನಪದ ಸಂಗೀತ ವಿಭೂಷಣ', 'ಸಂಗೀತ ಸಾಹಿತ್ಯ ನಾಟ್ಯ ಕಲಾರತ್ನ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. 25 ವರುಷ ಭಾರತ ಸರಕಾರದ ಕ್ಷೇತ್ರ ಪ್ರಚಾರ ಇಲಾಖೆಯಲ್ಲಿ ಹಾಗೂ ಸಾಂಗ್ ಆ್ಯಂಡ್ ಡ್ರಾಮಾ ವಿಭಾಗದ ರಿಜಿಸ್ಟರ್ಡ್ ಕಲಾವಿದರಾಗಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಜನಪದ ಕಲೆಯ ಪ್ರದರ್ಶನ ನಡೆಸಿದ್ದಾರೆ. ಇವರ ಕಲಾಸಂಪತ್ತು, ಪ್ರತಿಭೆ, ಜನಮನ್ನಣೆ ಕಂಡು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1983ರ ಪ್ರಶಸ್ತಿ ನೀಡಿ ಗೌರವಿಸಿದೆ.

ಗಬ್ಬೂರ ಹಂಪಣ್ಣ ಮತ್ತು ಗುರಣ್ಣ: (1893-1978) ಹಂಪಣ್ಣ 'ಘನ ವೃಷಭ' ಎನ್ನುವ ಅಂಕಿತದಲ್ಲಿ 'ಮೋಹವಿವೇಕ' ಎನ್ನುವ ದೊಡ್ಡಾಟವೊಂದನ್ನು ರಚಿಸಿದ್ದಾನೆ. ಇದೇ ಊರಿನ ಗುರಣ್ಣ 'ಹರದೇಶಿ' ಹಾಡುಗಳನ್ನು ವ್ಯಾಪಕವಾಗಿ ರಚಿಸಿದ್ದುದು ತಿಳಿದು ಬರುತ್ತದೆ. ಸುತ್ತಲಿನ ಜನ ಈತನ ಹಾಡುಗಳನ್ನು ಮೇಳಕಟ್ಟಿ ಹೇಳುತ್ತಾರೆ.

ಬಳಗಾನೂರ ಮರಿಸ್ವಾಮಿ: (1860-1930) ಈತ 'ಬಂಧುಶತಧೀಶ' ಎನ್ನುವ ಅಂಕಿತದಲ್ಲಿ 'ದೇವಿಕಥೆ', 'ಜಲಂಧರ', 'ಗಿರಿಜಾಕಲ್ಯಾಣ' ಎಂದು ಮೂರು ದೊಡ್ಡಾಟಗಳನ್ನು ರಚಿಸಿದ್ದಾನೆ.

ಕುಷ್ಟಗಿ ಲಿಂಗಣ್ಣ: (1900-1965) 'ರಾಮಲಿಂಗೇಶ' ಎನ್ನುವ ಅಂಕಿತದಲ್ಲಿ 'ಮಹಿಷಾಸುರ ಮರ್ದನ' ಎನ್ನುವ ದೊಡ್ಡಾಟವೊಂದನ್ನು ರಚಿಸಿದ್ದಾನೆ.

ಸಿಂಗನೇಡಿಯ ಭೀಮಾಚಾರಿ: (1900-1964) 'ವಿಠ್ಠಲ' ಎನ್ನುವ ಅಂಕಿತದಲ್ಲಿ 'ಶಬರ ಶಂಕರ' ಕಥೆ ರಚಿಸಿದ್ದಾನೆ.

ಮರ್ಲೇನೇಡದ ಸಿದ್ಧಯ್ಯ: (1912-70) 'ಮ್ಯಾಗಡಿ ಭೀಮಪ್ಪ' ಎನ್ನುವ ಅಂಕಿತದಲ್ಲಿ 'ವೀರಸಂಗಯ್ಯ', 'ಚಿತ್ರಸೇನ', 'ಗಯ್ಯಪ್ಪಾಕ್ಷನ ಕಥೆ', 'ಗುಣಸುಂದರ' ಬಯಲಾಟಗಳನ್ನು ಬರೆದಿದ್ದಾನೆ.

ಮಾನ್ವಿ ಗುಂಡಾಚಾರಿ: (1912-70) 'ಶ್ಯಾಮಸುಂದರ ಎನ್ನುವ ಅಂಕಿತದಲ್ಲಿ 'ಸತಿ ಸ್ವಯಂವರ', 'ಲಂಕಾದಹನ' ಎಂಬೆರಡು ಕೃತಿಗಳನ್ನು ರಚಿಸಿದ್ದಾನೆ.

ಸಗಮಕುಂಟ ರಾಮಾಚಾರಿ: (1912-72) ಪ್ರತಿಭಾವಂತ ಬಯಲಾಟದ ಕವಿ. ಸುಭದ್ರಾ ಕಲ್ಯಾಣ, ಬಾಣಾಸುರ, ರಂಭಾ ವಿಲಾಸ, ಲವ-ಕುಶ ಕಾಳಗ, ಭೀಮಸೇನ ವಿಲಾಸ, ಕನಕಾಂಗಿ ಕಲ್ಯಾಣ, ಸತ್ಯರತ್ನ ಕಥೆ, ಸುಧನ್ವಕಾಳಗ, ಐರಾವಣ-ಮೈರಾವಣ, ಹಿರಣ್ಯಂಧರಾಸುರ, ಕರ್ಣಾರ್ಜುನ ಕಾಳಗ, ಬಬ್ರುವಾಹನ, ದುಶ್ಯಾಸನ ಕಥೆ, ಕುರುಕ್ಷೇತ್ರ, ಶಂಭಕಾಸುರ, ಸುಗಂಧಿತ ಪುಷ್ಪ-ಹೀಗೆ ಒಟ್ಟು 16 ದೊಡ್ಡಾಟಗಳನ್ನು ರಚಿಸಿದ್ದಾನೆಂದು ತಿಳಿದು ಬರುತ್ತದೆ.

ಮದರಕಲ್ಲ ನಾಗಯ್ಯ: (1917-72) 'ಮದರಶೀಲವಾಸ' ಎನ್ನುವ ಅಂಕಿತದಲ್ಲಿ ದೊಡ್ಡಾಟಗಳನ್ನು ಬರೆದ ಕವಿ ನಾಗಯ್ಯ ಈತ 'ಚಿತ್ರ ಪರಿಶೋಧನ', 'ಉತ್ತರಾಸುರ' ಎಂಬೆರಡು ದೊಡ್ಡಾಟಗಳನ್ನು ರಚಿಸಿದ್ದಾನೆ.

ಕುಕನೂರ ಸಿದ್ರಾಮಪ್ಪ ಮಾಸ್ತರ: 1919ರಲ್ಲಿ ಬದುಕಿ 'ರಾಮಲಿಂಗೇಶ' ಎನ್ನುವ ಅಂಕಿತದಲ್ಲಿ ಚಂದ್ರಪ್ರಭೆ ಸ್ವಯಂವರ', 'ಮೂರರ್ಧ ವಜ್ರದ ಕಥೆ', 'ಗೋಪಿಚಂದ್ರ', 'ಸತ್ಯಹರಿಶ್ಚಂದ್ರ' ಎಂಬ ದೊಡ್ಡಾಟಗಳನ್ನು ರಚಿಸಿದ ಕವಿ. ಈತ ಒಳ್ಳೆಯ ಕಲಾಕಾರನೂ ಆಗಿದ್ದನೆಂದು ತಿಳಿಯುತ್ತದೆ.

ಚಿಕ್ಕಸುಗೂರಿನ ನೀಲಕಂಠ ಶಾಸ್ತ್ರಿ: ಲಾವಣಿಹಾಡು ರಚಿಸುವಲ್ಲಿ ಶ್ರೇಷ್ಠರಾಗಿದ್ದರೆಂದು ತಿಳಿಯುತ್ತದೆ. ಶಾಸ್ತ್ರಿಯವರ ನಿಖರವಾದ ಕಾಲ ಮತ್ತು ಅಂಕಿತವನ್ನು ಶೋಧಿಸಬೇಕಿದೆ.

(ಬಿಪಿಪಿ)

ಜನಪದ ಚಿತ್ರಕಲೆ: ಸಂಪ್ರದಾಯ, ನಂಬಿಕೆ, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿದುದೇ ಜನಪದ ಚಿತ್ರಕಲೆ. ಲಲಿತಕಲೆ ಮತ್ತು ಕುಶಲ ಕಲೆಗಳ ಮೂಲ ನೆಲೆ ಜನಪದವೇ, ಮಳಲ ಮೇಲಿನ ಹೆಜ್ಜೆ ಯಂತೆ ತೋರುವ ಇವುಗಳ ಮೂಲರೂಪ ಜನಪದದಲ್ಲಿದೆ. ತಾವು ಪಡೆದ ಅನುಭವಗಳಿಗೆ ಸಹಜವಾದ ಮೂರ್ತರೂಪ ಪಡೆದು ಹೊರಬರುವ ಕಲೆ ಜನಪದ ಚಿತ್ರಕಲೆ.

ಜನಪದ ಚಿತ್ರಕಲೆಯು ವಸ್ತು, ರೇಖಾವಿನ್ಯಾಸ, ಬಣ್ಣಗಾರಿಕೆ, ಬಳಕೆಯ ಸಾಮಗ್ರಿ ಮೊದಲಾದವುಗಳಲ್ಲಿ ಶುದ್ಧ ಜಾನಪದೀಯ ಅಂಶಗಳನ್ನು ಪಡೆದುಕೊಂಡಿರುತ್ತದೆ.

ಹಚ್ಚೆ ಕಲೆ: ಜನಪದ ಚಿತ್ರಕಲಾ ಪರಂಪರೆಯಲ್ಲಿ ಹಚ್ಚೆ, ಶರೀರದ ಮೇಲೆ, ಶಾಶ್ವತ ಚಿತ್ರಕಲೆಯಾಗಿ ಪ್ರಪಂಚವ್ಯಾಪಿ ದೀರ್ಘ ಇತಿಹಾಸ ಹೊಂದಿದೆ. ಇದೊಂದು ಜನಪ್ರಿಯ ಕಲೆ. ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರುಬಣ್ಣದ ಗುರುತೇ ಹಚ್ಚೆ. ಹಚ್ಚೆಯ ಕುರಿತು ಜನಪದರಲ್ಲಿ ಅನೇಕ ಕಥೆ ಗಳು, ಐತಿಹ್ಯಗಳು, ನಂಬಿಕೆಗಳು, ಒಗಟು, ಹಾಡುಗಳು ಪ್ರಚಲಿತ ದಲ್ಲಿವೆ. ಹಚ್ಚೆಯನ್ನು ಸ್ತ್ರೀಯರು ಹೆಚ್ಚಾಗಿ ಹಾಕಿಸಿಕೊಳ್ಳುತ್ತಿದ್ದು, ಪುರುಷರು ಕಡಿಮೆ ಪ್ರಮಾಣದಲ್ಲಿ ಹಾಕಿಸಿಕೊಳ್ಳುತ್ತಾರೆ, ಹಚ್ಚೆ ಯನ್ನು ಶರೀರದ ಎಲ್ಲ ಭಾಗಗಳಲ್ಲಿಯೂ ಹಾಕಿಸಿಕೊಳ್ಳುತ್ತಾರೆ. ಮುಖ, ಕೊರಳು, ಕೈ, ಎದೆ, ಹೊಟ್ಟೆ, ಬೆನ್ನು, ಗುಪ್ತಾಂಗ, ಕಾಲು ಮುಂತಾದ ಕಡೆಗೆ ಸೌಂದರ್ಯದ ಹಿನ್ನೆಲೆಯಲ್ಲಿ, ಧಾರ್ಮಿಕ ಹಿನ್ನೆಲೆ ಹಾಗೂ ವೈದ್ಯಕೀಯ ಚಿಕಿತ್ಸೆಯಾಗಿ ಕೂಡ ಹಾಕಿಸಿಕೊಳ್ಳು ವುದುಂಟು. ಒಂದೊಂದು ಸ್ಥಳದಲ್ಲಿ ಹಾಕಿಸಿಕೊಳ್ಳುವ ಹಚ್ಚೆಗೆ ಅದರದೇ ಆದ ಜನಪದ ಸಂಪ್ರದಾಯ, ನಂಬಿಗೆ ಆಶಯಗಳಿವೆ. ಹಚ್ಚೆಯನ್ನು ಸೂಜಿಯಿಂದ ಚುಚ್ಚಿ ಚುಚ್ಚಿ ಹಾಕುತ್ತಾರೆ. ಈ ಸಂದರ್ಭದಲ್ಲಿ ಹಾಡು ಹೇಳುವುದುಂಟು. ಹಚ್ಚೆಯ ಚಿತ್ರವಿನ್ಯಾಸ ಗಳು ವೈವಿಧ್ಯತೆಯಿಂದ ಕೂಡಿದವುಗಳಾಗಿದ್ದು ಧಾರ್ಮಿಕ ದೇವಾನುದೇವತೆಗಳು, ಪುರಾಣ, ರಾಮಾಯಣ, ಮಹಾ ಭಾರತದ ಚಿತ್ರಗಳು, ನೈಸರ್ಗಿಕ ಚಿತ್ರಗಳು, ಪ್ರಾಣಿ, ಪಕ್ಷಿ, ಹೂ, ಎಲೆಬಳ್ಳಿ ಮುಂತಾದ ಸ್ಥಳೀಯ ಪರಿಸರದ ಚಿತ್ರಗಳು, ಕೃಷಿ



ಹಚ್ಚೆ ಹಾಕುವುದು

ಪ್ರಧಾನವಾದ ವಸ್ತುಗಳು, ವಿವಿಧ ಧಾನ್ಯಗಳ ಚಿತ್ರಗಳು ಮತ್ತು ಹೆಸರುಗಳನ್ನು ಹಾಕಿಸಿಕೊಳ್ಳುತ್ತಿದ್ದು ಚಿತ್ರಗಳಲ್ಲಿ ಸರಳರೇಖಾ ಮತ್ತು ವಕ್ರರೇಖಾ ಚಿತ್ರವಿನ್ಯಾಸಗಳು ಹೇರಳವಾಗಿ ಕಂಡು ಬರುತ್ತವೆ.

ಮದರಂಗಿ ಕಲೆ: ಕಣ್ಣಿಗೆ ಇಂಪು, ಒಡಲಿಗೆ ತಂಪು ನೀಡುವ ಮದರಂಗಿ ಸಂಪ್ರದಾಯ, ಕಲಾತ್ಮಕತೆ, ಸೌಭಾಗ್ಯದ ಕುರುಹು ಗಳಾಗಿಯೂ ಬಳಕೆಗೊಳ್ಳುತ್ತದೆ. ಪ್ರಾಚೀನ ಕಾಲದಿಂದಲೂ ಬೆಳೆದುಬಂದ ಈ ಕಲೆ ವಿವಿಧ ರೀತಿಯ ಹೆಸರುಗಳಿಂದ ದೇಶ, ಭಾಷೆ, ಪ್ರದೇಶಗಳಲ್ಲಿ ಮೀರಿ ಜನಪ್ರಿಯವಾಗಿದೆ.



ಮದರಂಗಿ ಕಲೆ

ಮದರಂಗಿಯನ್ನು ಹಬ್ಬ, ಹುಣ್ಣಿಮೆ, ಉತ್ಸವ, ಮದುವೆ ಮುಂಜಿಯ ಸಂದರ್ಭಗಳಲ್ಲಿ ಹಚ್ಚಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಸೌಂದರ್ಯದ ಸಾಧನವಾಗಿ ಯಾವಾಗಬೇಕಾದರೂ ಹಚ್ಚಿಕೊಳ್ಳಲಾಗುತ್ತಿದೆ. ಮದರಂಗಿಯ ಬಣ್ಣ ತಯಾರಿಕೆ ತುಂಬ ಸರಳ. ಮದರಗಂಗಿ ಗಿಡದ ತಪ್ಪಲನ್ನು ಚೆನ್ನಾಗಿ ಒಣಗಿಸಿ ಕುಟ್ಟಿ ಪುಡಿ ಮಾಡಿ ಅಥವಾ ಹಸಿಯಾಗಿಯೂ ಬಳಸಬಹುದು. ಈಗ ಇದರ ಪುಡಿ ಅಂಗಡಿಗಳಲ್ಲಿ ಲಭ್ಯವಾಗುತ್ತದೆ. ನೀಲಗಿರಿ ಎಣ್ಣೆ, ಲಿಂಬೆಹಣ್ಣಿನ ರಸ ಮತ್ತು ಮದರಂಗಿ ಪುಡಿಯನ್ನು ಚೆನ್ನಾಗಿ ಕಲಸಿ ದ್ರಾವಣ ತಯಾರಿಸುವುದೂ ಉಂಟು. ಇಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ. ಬೆಂಕಿಕಡ್ಡಿಯ ಹಿಂಭಾಗ, ಇಲ್ಲವೇ ಬೇರೆ ಕಡ್ಡಿಯ ಸಹಾಯದಿಂದ ಚಿತ್ರ ಬರೆಯುವುದುಂಟು. ಈಗ ಆಧುನಿಕ ಸಲಕರಣೆಗಳು ಬಂದಿವೆ.


ಮದರಂಗಿಯ ಚಿತ್ರಗಳು ಮಾನವಾಕೃತಿಯಲ್ಲಿ ಇರದೆ ಹೆಚ್ಚಾಗಿ ವಲ್ಲರಿ ಆಕೃತಿಯುಳ್ಳವುಗಳಾಗಿವೆ. ಇದರಲ್ಲಿ ಬಳ್ಳಿ, ಆಕೃತಿ, ಸುಳುಹುಗಳಿಗೆ ಹೆಚ್ಚಿನ ಪ್ರಾಧಾನ್ಯತೆ' ಸ್ವಸ್ತಿಕ, ಶ್ರೀ, ಓಂ ನಂತಹ ಸಂಕೇತಪ್ರಧಾನ ಆಕೃತಿಗಳು, ಶುಭ-ಲಾಭ, ಸೂರ್ಯ-ಚಂದ್ರ ಮುಂತಾದ ವಿವಿಧ ಆಭರಣಗಳ ಮಾದರಿಯ ಚಿತ್ರ ವಿನ್ಯಾಸಗಳು ಹೆಚ್ಚಾಗಿ ಕಂಡುಬರುತ್ತವೆ. ಹೀಗೆ ಹತ್ತು ಹಲವಾರು ರೀತಿಯ ಸುಂದರ ವಿನ್ಯಾಸಗಳ ಮದರಂಗಿಯು ಒಣಗಿದ ಮೇಲೆ ಸಾಸಿವೆ ಎಣ್ಣೆ ಇಲ್ಲವೆ ನಿಂಬೆರಸವನ್ನು ನಯವಾಗಿ ಇದರ ಮೇಲೆ ಲೇಪಿಸಲಾಗುತ್ತದೆ.

ತಾಳೆಗರಿ, ಕಾಗದ ಕಡತ, ರಟ್ಟಿನ ಮೇಲಿನ ಜನಪದ ಚಿತ್ರಕಲೆ: ಜನಪದ ಚಿತ್ರಕಲಾ ಸೃಷ್ಟಿ, ತಾಳೆಗರಿ, ಕಾಗದ, ಕಡತ, ರಟ್ಟುಗಳಂತಹ ಮಾಧ್ಯಮಗಳಲ್ಲಿಯೂ ಬಳಕೆಯಾಗಿದ್ದುದು ಕಂಡು ಬರುತ್ತದೆ. ಇವುಗಳಲ್ಲಿ ಮುಖ್ಯವಾಗಿರುವ ನೀಲಿಹೊತ್ತಿಗೆ ಮತ್ತು ಗಿಳಿ ಶಕುನದ ಚಿತ್ರವಿನ್ಯಾಸಗಳು ವಿಶೇಷವಾಗಿವೆ.

ನೀಲಿ ಹೊತ್ತಿಗೆಯೆಂದರೆ ಚಿತ್ರಗಳಿರುವ ಒಂದು ಪುಸ್ತಕ. ಗಿಳಿಶಕುನದ ಚಿತ್ರಗಳೆಂದರೆ ಚಿತ್ರದ ಕಾರ್ಡುಗಳಿದ್ದ ಕಟ್ಟು. ಗಿಳಿಯಿಂದ ಈ ಕಾರ್ಡನ್ನು ತೆಗೆಯಿಸಿ, ಆ ಚಿತ್ರದ ಮೂಲಕ ಭವಿಷ್ಯ ಹೇಳುತ್ತಾರೆ. ಇವೆರಡು ಒಂದೇ ಆಶಯದ ಬೇರೆ ಬೇರೆ ಮಾಧ್ಯಮಗಳು. ಎರಡರಲ್ಲೂ ಶುಭ ಮತ್ತು ಅಶುಭ ಚಿತ್ರಗಳ ರಚನೆಗಳಿದ್ದು ರೇಖಾ ಮತ್ತು ವರ್ಣಚಿತ್ರಗಳು ಒಳಿತು ಕೆಡುಕಿನ ಹಿನ್ನೆಲೆಯಲ್ಲಿ ಚಿತ್ರರಚನೆಯಾಗಿರುವುದು ವೈಶಿಷ್ಟ್ಯ. ಮುತ್ತಿನ ತೆನಿ, ಈಶ್ವರ, ಬಸವಣ್ಣ, ಋಷಿ, ತೊಟ್ಟಿಲು, ಕಸಬರಿಗೆ, ಹೆಣ, ಗೂಗೆ, ಹಲ್ಲಿ, ಬೆಕ್ಕು, ಇಲಿ, ಹುಲಿ, ಕಲ್ಲು, ಮರ, ಗರಗಸ, ಗ್ರಹಣ, ಮೋಡಿ ಆಟ, ನಾರದ, ಕಛೇರಿ, ಇತ್ಯಾದಿಗಳು ಇದ್ದು ಅವುಗಳ ಮೇಲೆ ಕೇಳುಗರಿಗೆ ಮನವರಿಕೆಯಾಗುವ ಹಾಗೆ ಕಲಾತ್ಮಕವಾಗಿ ವಿವರಣೆ ನೀಡಿ ವೃತ್ತಿಯನ್ನು ಮಾಡುವ ಕಸುಬುದಾರಿಕೆ ಇಲ್ಲಿದೆ. ಈ ಚಿತ್ರಗಳನ್ನು ಜಿನಗಾರರು ರಚಿಸಿಕೊಟ್ಟಿರುತ್ತಾರೆ. ಇದನ್ನು ಗೊಂದಲಿಗ ಬುಡಬುಡಕಿ, ರಾಮಕೊಂಡಡಿ, ಮುಂತಾದ ಜನಾಂಗದವರು ವೃತ್ತಿಯಾಗಿಸಿಕೊಂಡಿದ್ದಾರೆ.

ಕೌದಿ ಕಲೆ: ಹೊಲಿಗೆಯಿಂದ ನಿರ್ಮಾಣವಾಗುವ ಹಾಸಿಗೆ–ಹೊದಿಕೆಯಂತಹ ಅಗತ್ಯ ವಸ್ತುವಿನಲ್ಲಿ ಈ ಕಲೆ ಮೂಡಿಬಂದಿದೆ. ಪ್ರಯೋಜನ ಮೂಲದ ಹಿನ್ನೆಲೆಯಲ್ಲಿ ಆವಿರ್ಭವಿಸಿದ ಇದು ಮುಂದೆ ಸೌಂದರ್ಯವನ್ನು ಮೈಗೂಡಿಸಿಕೊಂಡು ಬೆಳೆದು ಬಂದಿದೆ. ಕೌದಿಯಲ್ಲಿ ಹಲವಾರು ವಿಧಗಳಿವೆ. ಮುಖ್ಯವಾಗಿ ದೊಡ್ಡವರ ಕೌದಿ ಮತ್ತು ಚಿಕ್ಕವರ ಕೌದಿಗಳು ಪ್ರಖ್ಯಾತವಾಗಿವೆ. ಈ ಕೌದಿಗಳಲ್ಲಿ ಹೊರಮೈ ಮತ್ತು ಒಳಮೈಗಳಿದ್ದು ಒಳಮೈಯಲ್ಲಿ ಕೌದಿಯ ಸೌಂದರ್ಯವನ್ನು ವಿಶೇಷವಾಗಿ ಕಾಣಬಹುದಾಗಿದೆ.

ಕೌದಿಯಲ್ಲಿ ರಾಮಾಯಣ, ಮಹಾಭಾರತ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ಅಲಂಕಾರಿಕ, ಮುಂತಾದ ರೀತಿಯ ಚಿತ್ರಗಳನ್ನು ಕಾಣಬಹುದು. ಕೌದಿಯ ಚಿತ್ರಗಳು ಆಕಾರ ಪಡೆಯುವುದು ಎರಡು ರೀತಿಯಿಂದ. ಒಂದು ದಾರದ ರೇಖಾ ವಿನ್ಯಾಸಗಳಿಂದಾದ ಚಿತ್ರಗಳು, ಇನ್ನೊಂದು ವಿವಿಧ ಆಕಾರದ ಬಣ್ಣದ ಅರಿವೆಯ ತುಕಡಿಗಳ ಸಂಯೋಜನಾ ಚಿತ್ರಗಳು. ಸುಳುಹು, ಪಶು, ಪಕ್ಷಿ, ಹೂ, ಎಲೆ, ಸೂರ್ಯ, ಚಂದ್ರ, ನಕ್ಷತ್ರದಂತಹ ಹಲವಾರು ವಿನ್ಯಾಸಗಳು ದಾರದಿಂದ ರೇಖೆಯ ರೂಪ ಪಡೆದರೆ, ಕೌದಿಯ ಸರ್ವ ಸಮಗ್ರ ಸೌಂದರ್ಯವಿರುವುದು ಬಣ್ಣದ ವಿನ್ಯಾಸದ ಚಿತ್ರಗಳಲ್ಲಿ. ಬಣ್ಣದ ಅರಿವೆಯ ತುಕಡಿಗಳ ಚೌಕಾಕೃತಿ, ತ್ರಿಕೋನಾಕೃತಿ, ಆಯತಾಕೃತಿ ಜಾಮಿತ್ರೀಯ, ಆಕೃತಿಯ ಚಿತ್ರಗಳು ಇಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಹೊಲಿಗೆ ಮುಗಿದ ಮೇಲೆ ಈ ಬಣ್ಣದ ಪಟ್ಟಿಗಳು ಕೌದಿಯ ಮೇಲೆ ಬಣ್ಣ ಮೂಡಿದಂತೆ ಕಾಣಿಸುತ್ತವೆ. ಇಲ್ಲಿ ಜನಪದ ಕಲಾವಿದರ ಸೌಂದರ್ಯಪ್ರಜ್ಞೆಯನ್ನು ವಿಶೇಷವಾಗಿ ಕಾಣಬಹುದು.



ಪಗಡಿ ವಿನ್ಯಾಸ (ಹೊಲಿಗೆ ಕಲೆ)

ಕೌದಿಯ ಚಿತ್ರ ನಿರ್ಮಾಣಕಾರರು ಹೆಚ್ಚಾಗಿ ಸ್ತ್ರೀಯರೇ ಇರುವುದು ವೈಶಿಷ್ಟ್ಯ. ಮುಸ್ಲಿಂ ಜನಾಂಗದವರ ಕೌದಿಗಳಲ್ಲಿ ಅರ್ಧಚಂದ್ರಾಕೃತಿ ನಕ್ಷತ್ರಗಳಿದ್ದರೆ, ಹಿಂದೂಗಳ ಕೌದಿಗಳಲ್ಲಿ ಪಾಂಡವರ ಪಗಡೆಯಾಟ, ಕೊಳಬಾಯಿ, ಸೀತೆಯ ಸೆರಗು, ಈಶ್ವರ, ಹನುಮಂತ ಮುಂತಾದ ದೇವರ ಚಿತ್ರಗಳು ಇದ್ದು, ಕ್ರೈಸ್ತರ ಮನೆಯ ಕೌದಿಗಳಲ್ಲಿ ಶಿಲುಬೆಯಾಕೃತಿಗಳು ಹೀಗೆ ವಿವಿಧ ಧರ್ಮದ ಜನರ ಧಾರ್ಮಿಕ ಹಿನ್ನೆಲೆಯ ಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ.

ಕಸೂತಿ ಕಲೆ: ಕೌದಿಯಂತಹ ಹೊಲಿಗೆಯ ಕಲೆಯ ಮುಂದುವರಿಕೆಯೇ ಕಸೂತಿಕಲೆ ಎನ್ನುಬಹುದು. ಇಲ್ಲಿ ಹೊಲಿಗೆಗೆ ಬದಲು ಹೆಣಿಗೆ ಕಾಣಸಿಕೊಂಡಿದೆ.

ಸಾಮಾನ್ಯವಾಗಿ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಕಲಾತ್ಮಕವಾಗಿ ಮಾಡುವ ಹೆಣಿಗೆಯ ಅಲಂಕಾರವೇ ಕಸ್ತೂತಿಯಾಗಿದೆ. ಕೌದಿ ಕಲೆಯ ಸಹೋದರ ಕಲೆ ಕಸೂತಿ. ಕರ್ನಾಟಕದಲ್ಲಿ ಎರಡು ರೀತಿಯಲ್ಲಿ ಕಸೂತಿ ಹಾಕುವ ವಿಧಗಳಿವೆ. ಒಂದು ಕೈ ಕಸೂತಿ, ಇನ್ನೊಂದು ಯಂತ್ರದ ಕಸೂತಿ. ಕೈ ಕಸೂತಿಯಲ್ಲಿ ಹೊಲಿಗೆಯ ಕಸೂತಿ ಮತ್ತು ಹೆಣಿಗೆಯ ಕಸೂತಿಗಳಿವೆ. ಹೆಸರೇ ಸೂಚಿಸುವಂತೆ ಹೊಲಿಯುವಿಕೆಯ ಕಸೂತಿ, ಹೆಣಿಗೆಯಿಂದ ಹಾಕುವ ಕಸೂತಿಗಳಾಗಿವೆ, ಯಂತ್ರದ ಕಸೂತಿಯು ಯಂತ್ರದ ಸಹಾಯದಿಂದ ಹಾಕುವ ಕಸೂತಿಯಾಗಿದೆ.

ನೇಯ್ಗೆಯ ಚಿತ್ರಕಲೆ: ಹೊಲಿಗೆಯ ಕಲೆ ಹೆಣಿಗೆ ಕಲೆಗೆ ಮೂಲವಾದಂತೆ ಹೆಣಿಗೆಕಲೆ ನೇಯ್ಗೆಯ ಕಲೆಗೆ ಮೂಲವಾಗಿದೆ. ಹೊಲಿಗೆ, ಹೆಣಿಗೆ, ನೇಯ್ಗೆ ಈ ಮೂರು ದಾರದ ಸಾಧನದಿಂದ ಪೂರ್ಣಗೊಂಡ ಕಲೆಗಳು.

ನೇಯ್ಗೆಯ ಕಲೆಯಲ್ಲಿ ಪ್ರಯೋಜನ ದೃಷ್ಟಿಗೂ ಸೌಂದರ್ಯದ ಅಭಿವ್ಯಕ್ತಿಗೂ ನೇರವಾದ ಪರಸ್ಪರ ಸಂಬಂಧ

ವಿದೆ. ಪ್ರಾಚೀನ ಮಾನವ ನಾಗರಿಕತೆಯ ಹೊಸ್ತಿಲಲ್ಲಿ ಕಾಲಿಡುವಾಗ ತನ್ನ ಮೈಯನ್ನು ರಕ್ಷಿಸಿಕೊಳ್ಳಲು ತಯಾರಿಸಿದ ಬಟ್ಟೆಗಳನ್ನು ಉಡುಪುಗಳನ್ನಾಗಿ ಮಾಡಲು ಕಂಡುಕೊಂಡ ವಿಧಾನವೇ 'ನೇಯ್ಗೆ' ಎನ್ನಬಹುದು.

ನೇಯ್ಗೆಯೂ ಹೊದಿಕೆ ಮತ್ತು ಹಾಸಿಗೆಗಳಲ್ಲಿ ಕಂಡುಬರುತ್ತದೆ. ಹೊದಿಕೆಯಲ್ಲಿ ಕಂಬಳಿಗಳು, ಚಾದರಗಳನ್ನು ಹೆಸರಿಸಬಹುದು. ಇಲ್ಲಿ ಕರಿಯ ಕಂಬಳಿಯಲ್ಲಿ ಅಚ್ಚ ಬಿಳಿಯ ಪಟ್ಟಿಕೆಗಳು ಕಲಾತ್ಮಕವಾಗಿ ವಿನ್ಯಾಸಗೊಂಡಿರುತ್ತವೆ. ಕಂಬಳಿಯಲ್ಲಿ ಹುರಿಗಂಬಳಿ ಮತ್ತು ಉಜ್ಜುಗಂಬಳಿಗಳೆಂದು ಎರಡು ವಿಧಗಳಿದ್ದು ಉಜ್ಜುಗಂಬಳಿ ಹೆಚ್ಚು ಕಲಾತ್ಮಕವಾಗಿರುತ್ತದೆ. ಬಣ್ಣ ಬಣ್ಣದ ಎಣ್ಣೆಯನ್ನು ಉಪಯೋಗಿಸಿ, ಚೌಕ ಆಯತದಂತಹ ಜ್ಯಾಮಿತಿ ಆಕೃತಿಯ ಚಿತ್ರ ವಿನ್ಯಾಸಗಳು ಕಂಡುಬರುತ್ತವೆ. ನೇಯ್ಗೆಯಿಂದ ತಯಾರಿಸುವ ಹಾಸಿಗೆಗಳಲ್ಲಿಯಂತು ಸುಂದರವಾದ ಚಿತ್ರ ವಿನ್ಯಾಸಗಳು ಹೆಚ್ಚು ಕಲಾತ್ಮಕವಾಗಿ ಇರುವುದನ್ನು ಕಾಣಬಹುದು. ಧಾರವಾಡ ಜಿಲ್ಲೆಯ ನವಲಗುಂದದ ಜಮಖಾನೆಗಳು ತುಂಬಾ ಪ್ರಸಿದ್ಧವಾಗಿವೆ. ಇದರಲ್ಲಿ ಪಗಡಿ, ಅಟ್ಟೆ, ಚೌಪಟ ಶತರಂಜ, ಎಂಬ ವಿವಿಧ ರೀತಿಯ ಚಿತ್ರವಿನ್ಯಾಸಗಳ ಪ್ರಕಾರಗಳಿವೆ. ಜಮಖಾನೆಗಳಲ್ಲಿ ಪಗಡೆಯಾಟ, ಹೂಗಳು, ನವಿಲುಗಳು, ಹೀಗೆ ಹಲವಾರು ಉಪ ವಿನ್ಯಾಸಗಳು ಕಂಡುಬರುತ್ತವೆ. ಹಾಗೆಯೇ ಸೀರೆಗಳಲ್ಲಿ ಕೂಡ. ಎಲೆ, ಹೂ, ಬಳ್ಳಿಗಳ ಕಲಾತ್ಮಕ ವಿನ್ಯಾಸಗಳಿಗೆ ಕೊರತೆಯಿಲ್ಲ. ವಿವಿಧ ಬಣ್ಣಗಳ ಸೀರೆಗಳಲ್ಲಿ ನೈಸರ್ಗಿಕ ವಿನ್ಯಾಸದ ಚಿತ್ರಗಳು, ಜ್ಯಾಮಿತೀಯ ಆಕೃತಿ ವಿನ್ಯಾಸಗಳು ಪ್ರಮುಖವಾಗಿ ಕಂಡುಬರುತ್ತವೆ. ಹೀಗೆ ನೇಯ್ಗೆಯ ಈ ಕಲೆ ಕರಕುಶಲ ಕಲೆಯಾಗಿ ವಾಣಿಜ್ಯ ಕ್ಷೇತ್ರದಲ್ಲಿ ವಿಸ್ತರಿಸಿಕೊಂಡಿದೆ.

ಜನಪದ ಚಿತ್ರಕಲೆ ಈ ಹಿಂದೆ ವಿವೇಚಿಸಿದ ವಸ್ತ್ರಗಳಲ್ಲಿ ಮಾತ್ರವಲ್ಲದೆ ಕಟ್ಟಿಗೆ, ಲೋಹಗಳ ಉಪಕರಣಗಳಲ್ಲಿಯೂ, ಮಣ್ಣಿನಿಂದ ಮಾಡಿದ ಮಡಿಕೆ ಕುಡಿಕೆಗಳಲ್ಲಿ, ಬಿದಿರಿನಿಂದ ಮಾಡಿದ ಬುಟ್ಟಿ ಚಾಪೆಗಳ ವಸ್ತುಗಳಲ್ಲಿಯೂ, ದಂತದ ಕೆತ್ತನೆಯಂತಹ ವಸ್ತುಗಳಲ್ಲಿಯೂ ಕಾಣಿಸಿಕೊಂಡಿದೆ.

ತೊಗಲುಗೊಂಬೆಯಾಟದ ಚಿತ್ರಕಲೆ: ಜಗತ್ತಿನ ಜನಪದ ವರ್ಣಚಿತ್ರಕಲಾ ಪ್ರಪಂಚಕ್ಕೆ ಭಾರತದ ಅಮೂಲ್ಯ ಕೊಡುಗೆ ತೊಗಲುಗೊಂಬೆ ಚಿತ್ರಕಲೆ. ತೆರೆಯ ಹಿಂದೆ ವರ್ಣರಂಜಿತ ಮಾಯಾ ಲೋಕವನ್ನು ಸೃಷ್ಟಿಸುವ ಅದ್ಭುತ ಕೈಚಳಕದ ಈ ಕಲೆ, ಕೇವಲ ಒಬ್ಬ ವ್ಯಕ್ತಿಗೆ, ಸೀಮಿತವಾಗಿರದೆ ಇಡೀ ಕುಟುಂಬದ ಜನರನ್ನು ತೊಡಗಿಸಿಕೊಳ್ಳುವ ಜನಸಮುದಾಯದ ಕಲೆಯಾಗಿದೆ.

ತೊಗಲು ಗೊಂಬೆಯ ಚಿತ್ರಕಲೆಯಾಟ ಅಪ್ಪಟ ಜನಪದ ಮೂಲದಿಂದ, ಜಾನಪದೀಯ ಅಂಶಗಳಿಂದ ಕೂಡಿ ಬೆಳೆದು ಬಂದಿದೆ. ಮೇಕೆ, ಕುರಿ, ಎಮ್ಮೆ, ಕತ್ತೆ ಹಾಗೂ ಒಂಟೆಯ ಚರ್ಮವನ್ನು ಉಪಯೋಗಿಸಿ ಈ ತೊಗಲುಗೊಂಬೆ ಚಿತ್ರಗಳನ್ನು ರಚಿಸಲಾಗುತ್ತದೆ. ಇಲ್ಲಿ ಕೆಂಪು, ಕಪ್ಪು, ಹಳದಿ, ನೀಲಿ, ಹಸಿರು, ಮದರಂಗಿ ಬಣ್ಣವನ್ನು ಬಳಸಲಾಗುತ್ತದೆ. ಹಳ್ಳಿಗಳಲ್ಲಿ ಮಳೆಗಾಲ ಹೊರತುಪಡಿಸಿ, ಈ ಆಟವನ್ನು ರಾತ್ರಿಯಿಡೀ ದೀಪದ ಬೆಳಕಿನಲ್ಲಿ ಪ್ರದರ್ಶನ ಮಾಡುತ್ತಾರೆ.

ಸೂತ್ರದ ಗೊಂಬೆಯಾಟದ ಚಿತ್ರಕಲೆ: ಸೂತ್ರದ ಗೊಂಬೆಗಳ ನಿರ್ಮಾಣ ಹಂತದಲ್ಲಿ ಕಟ್ಟಿಗೆಯ ಆಯ್ಕೆ, ಬೇಕಾದ ಗಾತ್ರಕ್ಕೆ ಕಟ್ಟಿಗೆಯ ಬಿಡಿಭಾಗಗಳ ತಯಾರಿಕೆ, ಎದೆ, ತೋಳು, ಮುಂಗೈ, ಹಸ್ತ, ತೊಡೆ, ಮುಂಗಾಲು, ಪಾದ, ಹೀಗೆ ಸಿದ್ಧಗೊಳಿಸಿಕೊಳ್ಳಲಾಗುತ್ತದೆ. ಹೀಗೆ ಸಿದ್ಧವಾದ ನಂತರ ಗೊಂಬೆಗಳಿಗೆ ಕೀಲು ಜೋಡಿಸಲಾಗುತ್ತವೆ. ಇದು ತುಂಬ ಮಹತ್ವದ ಹಂತವೆಂದು ಹೇಳಲಾಗುತ್ತದೆ. ಇಲ್ಲಿ ಕನಿಷ್ಠ ಆರು ಸೂತ್ರಗಳನ್ನು ಜೋಡಿಸಲಾಗುತ್ತದೆ. ಮುಖದ ಎಡಬಲಕ್ಕೆ ಎರಡು, ಒಂದು ಕೋಲಿಗೆ ಕೈಗಳಿಗೆ ಕಟ್ಟಿದ ಸೂತ್ರಗಳು ಕಾಲಿಗೆ ಕಟ್ಟಿದ ಎರಡು ಸೂತ್ರಗಳು ಮೂರನೆಯ ಕೋಲಿಗೆ ಹೀಗೆ ಅಂಗಾಂಗಗಳ ಚಲಿಸುವಿಕೆಗೆ ಅನುಗುಣವಾಗಿ ಈ ಸೂತ್ರದ ಜೋಡಣೆ ಇನ್ನೂ ಹೆಚ್ಚಿಗೆ ಆಹುವುದು ಉಂಟು. ಈ ಸೂತ್ರಗಳಿಗೆ ಜವಿ, ಕಪ್ಪುದಾರ, ತಂತಿ, ನಾರಾಚಗಳನ್ನು ಬಳಸುತ್ತಾರೆ.

ಸೂತ್ರದ ಗೊಂಬೆಗಳ ವರ್ಣಾಲಂಕಾರ, ವೇಷ-ಭೂಷಣಗಳ ವಿನ್ಯಾಸ ಸೂತ್ರದ ಗೊಂಬೆಯ ರಚನೆಯ ಇನ್ನೊಂದು ಮಹತ್ವದ ಹಂತವೆಂದು ಹೇಳಬಹುದು. ನಯಗೊಳಿಸಿದ ಕಟ್ಟಿಗೆ ಬಿಡಿಭಾಗಗಳಿಗೆ, ಅದರಲ್ಲೂ ಮುಖಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗುತ್ತದೆ. ಹರಿದಾಳ, ನೀಲಿ, ಕೆಂಪು, ಬಿಳಿ ಬಣ್ಣದ ಜೊತೆಗೆ ಗಚ್ಚಿನ ಎಣ್ಣೆ, ಅರಗು ಬಳಸಿಕೊಂಡು ಮುಖಕ್ಕೆಲ್ಲ ಹರಿದಾಳದ ಲೇಪನಮಾಡಿ ನಂತರ ಕಣ್ಣಿನ ಅಲಂಕಾರ ಮಾಡುತ್ತಾರೆ. ಬಯಲಾಟದ ಪಾತ್ರಗಳಿಗೆ ಹಚ್ಚುವಂತೆ ಇಲ್ಲಿಯೂ ವಿವಿಧ ಪಾತ್ರದ ಗೊಂಬೆಗಳಿಗೆ ಆಯಾ ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿ ಬಣ್ಣ ಲೇಪನ ಮಾಡುತ್ತಾರೆ. ಮುಖವರ್ಣಿಕೆ ಅತ್ಯಂತ ಆಕರ್ಷಕವಾಗಿರುತ್ತದೆ. ಮುಖ, ಪಾದ, ಹಸ್ತ ಮುಂಗೈಗಳಲ್ಲಿ ಮಾತ್ರ ವರ್ಣಲೇಪನ ಮಾಡಲಾಗುತ್ತದೆ. ಗೊಂಬೆಯ ಶರೀರದ ಇನ್ನುಳಿದ ಭಾಗಗಳು ಆಯಾ ಪಾತ್ರದ ಗುಣಧರ್ಮಕ್ಕನುಗುಣವಾಗಿ ವೇಷ-ಭೂಷಣವನ್ನು ವಿನ್ಯಾಸ ಗೊಳಿಸಲಾಗುತ್ತಿದೆ. ಹೀಗೆ ಅಂಗಾಂಗಗಳೆಲ್ಲ ತುಂಬ ಕಲಾತ್ಮಕವಾದ ಅಲಂಕಾರಗಳಿಂದ ಕೂಡಿರುತ್ತವೆ.

ಗೊಂಬೆಗಳ ಮುಖದಲ್ಲಿಯ ವರ್ಣಗಳು ಬಹುಕಾಲ ಬಾಳಿಕೆ ಬರುವ ಸಲುವಾಗಿ ಬೇವಿನ ಅಂಟು ಲೇಪಿಸುವುದೂ ಉಂಟು. ಶ್ರೀರಾಮ, ಕೃಷ್ಣ, ಪರಶುರಾಮ, ಆಂಜನೇಯ ಮುಂತಾದ ಗೊಂಬೆಗಳ ಮುಖಕ್ಕೆ ನೀಲಿಬಣ್ಣ, ಉಗ್ರಪಾತ್ರಗಳ ಗೊಂಬೆಗಳಿಗೆ ಕೆಂಪುವರ್ಣ, ರಾಕ್ಷಸ ಮುಂತಾದ ಪಾತ್ರಗಳಿಗೆ ಕಪ್ಪುಬಣ್ಣದ ಲೇಪನ ಮಾಡುತ್ತಾರೆ. ರೌದ್ರತೆಯನ್ನು ಬಿಂಬಿಸಲೂ ಕಪ್ಪು, ಬಿಳಿಬಣ್ಣದ ಚುಕ್ಕೆ ಇಡುತ್ತಾರೆ. ಗೊಂಬೆಗಳ ಹಣೆಯ ಮೇಲೆ ಬಿಳಿ ಮತ್ತು ಕೆಂಪು ನಾಮವನ್ನು, ವಿಭೂತಿ, ಗಂಧದ ಬೊಟ್ಟುಗಳನ್ನು ಮಾಡಲಾಗುತ್ತದೆ. ಕೋಳಿಯ ಮೊಟ್ಟೆ ಬಿಳಿಯ ದ್ರವವನ್ನು ಬಣ್ಣಗಳೊಡನೆ ಬೆರೆಸಿ ಬಳಸಿದ ಗೊಂಬೆಗಳು ಹೆಚ್ಚು

ಹೊಳಪನ್ನು, ಸ್ಥಿರತೆಯನ್ನು ತರುತ್ತವೆ. ಹೀಗೆ ಸೂತ್ರದ ಗೊಂಬೆಗಳಲ್ಲಿ ವೇಷಭೂಷಣಗಳಂತೆ ವರ್ಣವಿನ್ಯಾಸವು ಮಹತ್ವದ ಅಂಶವಾಗಿ ಪರಿಗಣಿತವಾಗುತ್ತದೆ.


ದೊಡ್ಡಾಟಗಳ ಚಿತ್ರಕಲೆ: ಮುಖ ವರ್ಣಿಕೆಯಲ್ಲಿ ಕೆಂಪು, ನೀಲಿ, ಕಪ್ಪು ಬಿಳಿ ಬಣ್ಣಗಳ ಬಳಕೆ ಪ್ರಮುಖವಾಗಿರುತ್ತದೆ. ಇಲ್ಲಿ ಬಣ್ಣಗಳು ನೇರವಾಗಿ ಬಳಕೆಯಾಗುವುದಿಲ್ಲ. ಕೆಂಪು, ನೀಲಿ ಬಣ್ಣಗಳಲ್ಲಿ ಬಿಳಿ ಬಣ್ಣ ಬೆರಸಿ, ತಿಳಿವರ್ಣ ತಯಾರಿಸಿಕೊಳ್ಳುವರು. ಪಾತ್ರಗಳಿಗೆ ತಕ್ಕಂತೆ ಇವನ್ನು ಮುಖದ ಮೇಲೆ ಲೇಪಿಸುತ್ತಾರೆ. ಕೃಷ್ಣನ ಪಾತ್ರವಾದರೆ ಕಪ್ಪು, ಕೆಂಪು ಬಣ್ಣದ ದಟ್ಟ ಲೇಪನವಿರುತ್ತದೆ. ರಾಣಿಯರಂಥ ಸ್ತ್ರೀಮುಖ ವರ್ಣಿಕೆಯಲ್ಲಿ ಹುಬ್ಬು, ಹಣೆ ಕೆನ್ನೆಗಳಲ್ಲಿ ತಿದ್ದಿ ತೀಡಿದ ಅಲಂಕಾರವಿರುತ್ತದೆ. ಸ್ತ್ರೀ ಪಾತ್ರಕ್ಕೆ ಕೆಂಪು ಬಣ್ಣ ಬಳಕೆಯಾಗುತ್ತದೆ. ದಾಸಿ ಪಾತ್ರಗಳಿಗೆ ಕಡಿಮೆ ಪ್ರಮಾಣದ ವರ್ಣಗಾರಿಕೆ, ಅಲಂಕಾರವಿರುತ್ತದೆ.

ವೇಷಭೂಷಣಗಳಲ್ಲಿ ಉಡುಗೆ ತೊಡುಗೆಯಾಗಿ, ಕೃತಕ ಅಲಂಕಾರಕ್ಕಾಗಿ ಕೆಲವು ಪರಿಕರಗಳನ್ನು ಬಳಸುತ್ತಾರೆ. ಭುಜ ಕೀರ್ತಿ, ಎದೆಹಾರ, ಎದೆಕಟ್ಟು, ರಟ್ಟೆ, ಕಟ್ಟು, ಮುಂಗೈಕಟ್ಟು, ಮಣಿಕಟ್ಟು, ಕೈಕಟ್ಟು, ಕರ್ಣಕುಂಡಲ ಇತ್ಯಾದಿಗಳಲ್ಲಿ ವರ್ಣ ವೈವಿಧ್ಯತೆಯನ್ನು ಕಾಣುತ್ತೇವೆ. ಸ್ತ್ರೀ ಪಾತ್ರಗಳಲ್ಲಿ ಭುಜಕೀರ್ತಿ ಹಾಗೂ ಎದೆಹಾರವಿರುವುದಿಲ್ಲ. ಬದಲಿಗೆ ಕೈಕಡಗ, ಜಡೆಬಿಲ್ಲೆ, ತುರುಬು, ನಾಗರ ಜಡೆಗಳಿರುತ್ತವೆ.

ಸ್ತ್ರೀ ಹಾಗೂ ಪುರುಷ ಪಾತ್ರಗಳಿಗೆ ಸಂಬಂಧಿಸಿ ಕಿರೀಟ ಬಳಸುತ್ತಾರೆ. ಪುರುಷ ಕಿರೀಟ, ಸ್ತ್ರೀಯರಿಗಿಂತ ದೊಡ್ಡದಿರುತ್ತದೆ. ಎರಡರಲ್ಲಿಯೂ ಅಲಂಕಾರ ವಿಶೇಷತೆಯು ನೋಡಲು ಸಿಗುತ್ತದೆ. ಪುರುಷರ ಕಿರೀಟದಲ್ಲಿ 1. ಬಟ್ಟಲ ಕಿರೀಟ, 2. ಜುಟಗಾರಿ ಕಿರೀಟ, 3. ಕಳಸ ಕಿರೀಟ, 4. ಗಜ ಕಿರೀಟ, 5. ಮಯೂರ ಕಿರೀಟ, 6. ಹುಲಿ ಕಿರೀಟ, 7. ಸರ್ಪ ಕಿರೀಟ ಎಂಬ ವೈವಿಧ್ಯಮಯ ಕಿರೀಟಗಳಿದ್ದರೆ, ಸ್ತ್ರೀಯರ ಕಿರೀಟಗಳಲ್ಲಿ 1. ಮಣಿ ಕಿರೀಟ, 2. ಸಿರಿಪೇಚ ಕಿರೀಟ, 3. ನರಸುತ್ತ ಕಿರೀಟವೆಂಬ ಅಲಂಕೃತ ಕಿರೀಟಗಳಿರುತ್ತವೆ.

ಪಾತ್ರಗಳ ಘನತೆಗೆ ತಕ್ಕಂತೆ ಈ ಕಿರೀಟಗಳು ರಚನೆ ಗೊಂಡಿರುತ್ತವೆ. ಧೀರೋದಾತ್ತ ಸಾಹಸ ಪ್ರಧಾನ ಪಾತ್ರಗಳಿಗೆ ಗಜದ ಸೊಂಡಿಲ ವಿನ್ಯಾಸದ ರಾಜಕಿರೀಟ, ಹುಲಿಕಿರೀಟ, ದೇವತೆ ಪಾತ್ರಗಳಿಗೆ ಮಯೂರ ಕಿರೀಟ; ರಾಕ್ಷಸಾದಿ ಉಗ್ರ ಪಾತ್ರಗಳಿಗೆ ಸರ್ಪ ಕಿರೀಟಗಳಿರುತ್ತವೆ. ಜೀರಿಂಬೆ ರೆಕ್ಕೆ, ಗಾಜಿನಚೂರು, ವಿವಿಧ ಬಣ್ಣದ ಬ್ಯಾಗಡಿ ಚೂರು, ಮಣಿ ಇತ್ಯಾದಿಗಳನ್ನು ಅಂಟಿಸಿ, ಮಂದಬೆಳಕಿನಲ್ಲಿ ಅದು ಹೊಳೆಯವಂತೆ ವಿನ್ಯಾಸ ಮಾಡಿರುತ್ತಾರೆ.

ರಂಗೋಲಿ ಚಿತ್ರಕಲೆ: ಅತ್ಯಂತ ಪ್ರಾಚೀನ ಜನಪದ ಕಲೆ. ಬದುಕಿನ ಪ್ರಸನ್ನತೆಯನ್ನು ಹೇಳುವ ಲಾಲಿತ್ಯಪೂರ್ಣ ಕಲಾ ಕೌಶಲ್ಯವೇ ರಂಗವಲ್ಲಿ. ಇದು ಅಲಂಕಾರಿಕ ಮಾತ್ರವಲ್ಲ ಮಂಗಲ ಕರವೂ ಆಗಿದೆ. ಇದು ಭಾರತದ ಹಳ್ಳಿ ಹಳ್ಳಿಗಳಲ್ಲಿ ತುಂಬಿರುವ ಸೌಂದರ್ಯ ಪ್ರಜ್ಞೆಯ ದ್ಯೋತಕ. 'ರಂಗ' ಎಂದರೆ ಬಣ್ಣ; 'ವಲ್ಲಿ' ಎಂದರೆ ಬಳ್ಳಿ, ಬಣ್ಣದ ಸಾಲು, ರಂಗೋಲಿ ಪುಟಿ, ಬಣ್ಣಗಳಿಂದ ರಚಿಸಿದ ಬಳ್ಳಿಯ ಚಿತ್ರವೇ ರಂಗೋಲಿ ಎನ್ನಬಹುದು. ಬಣ್ಣದ ಗೆರೆಗಳ ಕಲಾತ್ಮಕ ಸಮೂಹವೇ ರಂಗೋಲಿಯಾಗಿದೆ. ಮಾನವ ಬದುಕಿನ ಚಿತ್ರಕಲೆಯ ಪ್ರವೇಶದೊಂದಿಗೆ ರಂಗೋಲಿಯು ಪ್ರವೇಶ ಪಡೆದಿದೆ.



ಜಾನಪದ ರಂಗೋಲಿ ಚಿತ್ರಕಲೆ

ರಂಗೋಲಿಯನ್ನು ಎರಡು ವಿಧದಿಂದ ಹಾಕುವುದುಂಟು. ಒಂದು ಚುಕ್ಕೆಯ ರಂಗೋಲಿ. ಚುಕ್ಕೆಗಳನ್ನು ಇಟ್ಟು ಆ ಚುಕ್ಕೆಗಳಿಗೆ ಗೆರೆಗಳನ್ನು ಕೂಡಿಸುತ್ತ ಅಪೇಕ್ಷಿತ ಚಿತ್ರಕೃತಿಗಳನ್ನು ರಚಿಸುವುದು. ಇನ್ನೊಂದು ಚುಕ್ಕೆರಹಿತ ರಂಗೋಲಿ, ಇದನ್ನು ಸರಳಗೈ ರಂಗೋಲಿ, ಬಳ್ಳಿ ರಂಗೋಲಿ ಎಂದು ಕರೆಯುತ್ತಾರೆ. ಇದರಲ್ಲಿ ಚುಕ್ಕೆಗಳನ್ನು ಇಡದೆ ನೇರವಾಗಿ ಬಳ್ಳಿ, ಎಲೆ, ಹೂ, ಗಿಡ, ಪಕ್ಷಿ ಇತ್ಯಾದಿ ರೀತಿಯ ಚಿತ್ರವಿನ್ಯಾಸಗಳನ್ನು ರಚಿಸುತ್ತಾರೆ. ಇದು ಹೆಚ್ಚಾಗಿ ಸ್ತ್ರೀ ಪ್ರಧಾನವಾದ ಕಲೆಯಾಗಿದೆ. ರಂಗೋಲಿಯಲ್ಲಿ ಮೂರು ಪ್ರಕಾರಗಳನ್ನು ಮಾಡಿ ಅಧ್ಯಯನ ಮಾಡಬಹುದು. ಅ) ಉತ್ಸವದ ರಂಗೋಲಿ, ಆ) ಉತ್ಸಾಹದ ರಂಗೋಲಿ, ಇ) ಸಂಕೀರ್ಣ ರಂಗೋಲಿಗಳೆಂದು.

ನಿರ್ದಿಷ್ಟ ದಿನ, ವಾರ ತಿಂಗಳು ಹಬ್ಬ-ಹರಿದಿನ, ಮದುವೆ, ಮುಂಜಿ ಜಾತ್ರೆಗಳಂತಹ ಸಂದರ್ಭದಲ್ಲಿ ಹಾಕುವ ರಂಗೋಲಿಗಳನ್ನು ಉತ್ಸವದ ರಂಗೋಲಿಗಳೆಂದು ಕರೆಯಬಹುದು. ಇಲ್ಲಿ ಧಾರ್ಮಿಕತೆ ಮತ್ತು ಅಲಂಕಾರಿಕತೆಗಳೆರಡೂ ಇರುತ್ತವೆ. ನಿತ್ಯದ ರಂಗೋಲಿ, ನಿರ್ದಿಷ್ಟ ವಾರದ ರಂಗೋಲಿ, ತಿಂಗಳ ರಂಗೋಲಿ, ಚಾತುರ್ಮಾಸದ ರಂಗೋಲಿ, ದೀಕ್ಷಾ ಸಂದರ್ಭದ ರಂಗೋಲಿ, ದೇವರ ಮುಂದೆ ಹಾಕುವ ರಂಗೋಲಿ, ಹಬ್ಬದ ರಂಗೋಲಿ, ಮದುವೆಯ ರಂಗೋಲಿಗಳು ತುಂಬಾ ಪ್ರಸಿದ್ಧವಾದವುಗಳಾಗಿವೆ.

ಉತ್ಸಾಹದ ರಂಗೋಲಿಗಳದು ಇನ್ನೊಂದು ರೀತಿಯ ಅಭಿವ್ಯಕ್ತಿ. ಸೌಂದರ್ಯದ ಸೃಷ್ಟಿಕ್ರಿಯೆ ಉತ್ಸಾಹದ ರಂಗೋಲಿಯಲ್ಲಿ ಹೆಚ್ಚಾಗಿರುತ್ತದೆ. ಇಲಿ, ಹೂವಿನ ರಂಗೋಲಿ, ಧಾನ್ಯಗಳ ರಂಗೋಲಿ, ಆರತಿ ತಟ್ಟೆಯ ರಂಗೋಲಿ, ಊಟದ ತಟ್ಟೆಯ ರಂಗೋಲಿ, ಸುಗ್ಗಿಯ ರಂಗೋಲಿ, ನೀರಿನ ರಂಗೋಲಿ, ಶೇಡಿಯ ರಂಗೋಲಿ, ಜಾತ್ರೆಯ ರಂಗೋಲಿ, ಪ್ರಮುಖವಾಗಿವೆ.

ಜನಪದರು ತಮ್ಮ ಸುತ್ತಮುತ್ತಲು ಸಿಗುವ ಧವಸಧಾನ್ಯ, ಹೂಬಳ್ಳಿ, ಎಲೆ, ಹಣ್ಣುಕಾಯಿ, ಮೊದಲಾದ ವಸ್ತುಗಳನ್ನು ರಂಗೋಲಿಯಲ್ಲಿ ಬಳಸುತ್ತಾರೆ. (ಎಸ್‌ಸಿಪಿ)

ಜನಪದ ಚಿತ್ರಕಲೆ ವರ್ಗೀಕರಣ: ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಕಲೆಗಳು ಆಯಾಪ್ರದೇಶದ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ. ಜನಪದರ ಈ ರೀತಿಯ ಸಂಸ್ಕೃತಿಯೊಂದರ ಅಧ್ಯಯನ ಅತ್ಯಂತ ಮಹತ್ವ ಪೂರ್ಣವೆನಿಸಿದೆ. ಇದರಿಂದ ಜನಪದ ಸಂಸ್ಕೃತಿ–ಸಮಾಜ ಮತ್ತು ಕಲೆಗಳಿರುವ ಸಂಬಂಧದ ಪರಿಚಯವಾಗುತ್ತದೆ. ಈ ಜನಪದ ಕಲೆಗಳಿಂದ ಒಂದೊಂದು ರೀತಿಯ ಆಯಾ ಜನಪದ ಸಂಸ್ಕೃತಿಯನ್ನು ಚೆನ್ನಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಜಾನಪದದ ಈ ಕಲಾತ್ಮಕ ಕ್ಷೇತ್ರದ ಒಂದು ಅಂಗ ಜನಪದ ಕಲಾವಿಭಾಗ. ಶಾಖೋಪಶಾಖೆಗಳಲ್ಲಿ ಮೈಚಾಚಿದ ಈ ಕ್ಷೇತ್ರದ ಹರವು ವಿಸ್ತಾರವಾದುದು. ಅಧ್ಯಯನಕಾರರಿಗೆ ಇದೊಂದು ಕನ್ನೆ ನೆಲ. ಈ ಜನಪದ ಕಲಾವಿಭಾಗದ ಕ್ರಿಯಾತ್ಮಕ ಗುಂಡಿಗೆ ಸೇರುವ ಕಲೆಗಳಲ್ಲಿ ಜನಪದ ಚಿತ್ರಕಲೆಯೂ ಒಂದು ಪ್ರಮುಖ ಕಲಾ ಪ್ರಕಾರ.

ಕರ್ನಾಟಕದ ಜನಪದ ಚಿತ್ರಕಲೆ ಅತ್ಯಂತ ಆಕರ್ಷಕ ಮತ್ತು ಶ್ರೀಮಂತವಾಗಿರುವುದಲ್ಲದೆ ವಿಸ್ತಾರವಾದ ನೆಲೆಗಟ್ಟಿನ ಮೇಲೆ ನಿಂತಿರುವಂಥದ್ದಾಗಿದೆ. ಇದರ ವ್ಯವಸ್ಥಿತ ಅಧ್ಯಯನಕ್ಕಾಗಿ ವರ್ಗೀಕರಣ ತುಂಬಾ ಅವಶ್ಯವಾಗಿದೆ.

ಬಿ.ಆರ್. ಹಿರೇಮಠ ಅವರು 'ಕರ್ನಾಟಕದ ಸಮಸ್ತ ಜಾನಪದ ಕಲೆಗಳನ್ನು ಕುರಿತು ನಾಲ್ಕು ರೀತಿಯಲ್ಲಿ ವರ್ಗೀಕರಿಸಿದ್ದಾರೆ. 1. ಪ್ರಯೋಜಕ ಕಲೆಗಳು 2. ಉಪಜೀವನ ಕಲೆಗಳು 3. ಉತ್ಸವದ ಕಲೆಗಳು 4. ಉತ್ಸಾಹದ ಕಲೆಗಳು ಇವುಗಳನ್ನು ಮತ್ತೆ ಕ್ರಮವಾಗಿ ಪುರುಷ, ಸ್ತ್ರೀ ಪ್ರಧಾನಕಲೆಗಳೆಂದು ಇದರಲ್ಲಿ ಲೌಕಿಕ ಧಾರ್ಮಿಕ, ಧಾರ್ಮಿಕ ಮನರಂಜನೆ, ಮನರಂಜನೆ ಧಾರ್ಮಿಕ ಕಲೆಗಳೆಂದು ಉಪವಿಭಾಗಗಳಲ್ಲಿ ವಿಂಗಡಿಸಿದ್ದಾರೆ'. ಇಲ್ಲಿ ವ್ಯಕ್ತಿನಿಷ್ಠ, ಸಮುದಾಯನಿಷ್ಠ ಕಲೆಗಳೆಂದೂ, ಸ್ತ್ರೀನಿಷ್ಠ, ಪುರುಷನಿಷ್ಠ ಕಲೆಗಳೆಂದು ವರ್ಗೀಕರಿಸಿದ ರೀತಿ ಅತ್ಯಂತ ಪ್ರಮುಖವಾದುದಾಗಿದೆ. ಜನಪದ ಚಿತ್ರಕಲೆಗೂ ಈ ವರ್ಗೀಕರಣ ಅನ್ವಯವಾಗುವಂತಹದ್ದಾಗಿದೆ. ಇವರು ಜನಪದ ಚಿತ್ರಕಲೆಯಲ್ಲಿ ರಂಗವಲ್ಲಿ, ಕಸೂತಿ, ಪಾತ್ರೆಗಳ ಮೇಲಿನ ಚಿತ್ರ, ಹಣಚಿ, ದುರಗ ಮುರಗವ್ವನ ಗುಡಿ, ಪಾಲಕಿ, ಚಾಮರ, ಖಡ್ಗ, ಕೊಡಲಿಗಳ ಮೇಲಿನ ವಿವಿಧ ಚಿತ್ರಗಳು ಮೊದಲಾದವು ಸೇರ್ಪಡೆಯಾಗುತ್ತವೆಂದು ಈ ವರ್ಗೀಕರಣದ ಮೂಲಕ ವ್ಯಕ್ತಪಡಿಸಿದ್ದಾರೆ.

ಜೀ.ಶಂ. ಪರಮಶಿವಯ್ಯ ಅವರು 'ಜನಪದ ಕಲೆಗಳನ್ನು ಎರಡು ರೀತಿಯಲ್ಲಿ ಹೀಗೆ ವರ್ಗೀಕರಿಸಿದ್ದಾರೆ. 1. ಜನಪದ ಪ್ರದರ್ಶನಾತ್ಮಕ ಕಲೆಗಳು 2. ಇತರ ಜನಪದ ಕಲೆಗಳು ಪ್ರದರ್ಶನಾತ್ಮಕ ಕಲೆಗಳಲ್ಲಿ ಯಕ್ಷಗಾನ, ಬಯಲಾಟಗಳು, ನಾಟಕಗಳು, ಬೊಂಬೆಯಾಟಗಳು, ಜನಪದ ನೃತ್ಯಗಳು, ಜನಪದ ಮನರಂಜಕ ಕಲೆಗಳು, ಮೋಡಿಗಳು ಮುಂತಾದವುಗಳು ಸೇರುತ್ತವೆ. ಇಷ್ಟೇ ವೈವಿಧ್ಯಮಯವಾಗಿ ಇತರ ಕಲೆಗಳೂ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತವೆ. ಜನಪದ ಚಿತ್ರಕಲೆಯಲ್ಲಿ ರಂಗವಲ್ಲಿಯ ಕಲೆ, ಗೋಡೆಗಳ ಮೇಲೆ ಬಿಡಿಸುವ ಕಲೆ, ಮಡಕೆ, ಕುಡಿಕೆ, ಪಾತ್ರೆ–ಪಗಡಿಗಳ ಮೇಲಿನ ಕಲೆ, ಬಟ್ಟೆ ಬರೆಗಳ ಮೇಲಿನ ಕಲೆ, ದೇವಾಲಯ, ಶ್ರೀಮಠಗಳ ಭಿತ್ತಿಚಿತ್ರಗಳ ಮೇಲೆ ಬಿಡಿಸುವ ಕಲೆ, ಯಕ್ಷಗಾನ ಬಯಲಾಟಗಳ ಮುಖವರ್ಣಿಕೆ, ತೊಗಲು ಗೊಂಬೆ, ಸೂತ್ರದಗೊಂಬೆಗಳ ಬಣ್ಣಗಾರಿಕೆ, ಹಚ್ಚೆಯ ಕಲೆ, ಮುಖವಾಡಗಳ ಬಣ್ಣಗಾರಿಕೆ, ಹೆಣಿಗೆಗಳ ಕಲೆ ಮುಂತಾದವು ಪರಿಗಣಿತವಾಗುತ್ತವೆ' ಎನ್ನುತ್ತಾರೆ. ಅವರ ವರ್ಗೀಕರಣ ಇಲ್ಲಿ ಜನಪದ ಚಿತ್ರಕಲೆಯ ರೂಪರೇಷೆಗಳನ್ನು ಸಮೀಕ್ಷಿಸಿದ್ದಾರೆ.

ದೇ.ಜವರೇಗೌಡ ಅವರು 'ಜನಪದ ಕಲೆಗಳನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿದ್ದಾರೆ. 1. ಉಪಯುಕ್ತ ಕಲೆಗಳು 2. ಮತೀಯ ಕಲೆಗಳು 3. ಅಲಂಕರಣ ಕಲೆಗಳು 4. ಲಲಿತಕಲೆಗಳು ಬುಟ್ಟಿ ಕುಡಿಕೆ ಮಡಿಕೆಗಳ ತಯಾರಿಕೆ, ಅಡುಗೆ, ಬಲೆ, ಹೆಣಿಗೆ ಇವೇ ಮುಂತಾದವುಗಳು ಉಪಯುಕ್ತ ಕಲೆಗಳ ಪರಿಧಿಯಲ್ಲಿ ಬರುತ್ತವೆ. ದೇವೋಪಾಸನೆಯ ಹಿನ್ನೆಲೆಯಲ್ಲಿ ಉಗಮಗೊಂಡ ಭೂತನೃತ್ಯ, ನಂದಿಕೋಲು ಕುಣಿತ, ವೀರಗಾಸೆ ಕುಣಿತ ಮೊದಲಾದವುಗಳನ್ನು ಮತೀಯ ಕಲೆಗಳ ಪಟ್ಟಿಯಲ್ಲಿ ಸೇರಿಸಬಹುದು. ವಸ್ತ್ರಾಭರಣಗಳು ಜಡೆ, ತುರುಬು, ರಂಗವಲ್ಲಿ ಮುಂತಾದುವನ್ನು ಅಲಂಕರಣ ಅಥವಾ ಶೃಂಗಾರಕಲೆಗಳೆಂದು ಕರೆಯಬಹುದು. ಸಾಹಿತ್ಯ, ಸಂಗೀತ, ಶಿಲ್ಪ ಮೊದಲಾದವು ಲಲಿತಕಲೆಗಳ ಹೆಸರಿನಲ್ಲಿ ಪ್ರಾಚುರ್ಯ ಪಡೆದಿವೆ' ಎಂಬುದಾಗಿ ಹೇಳುತ್ತಾರೆ. ಇಲ್ಲಿಯ ವರ್ಗೀಕರಣದಲ್ಲಿ ಜನಪದ ಚಿತ್ರಕಲೆಗಳು ಮೇಲಿನ ನಾಲ್ಕೂ ವಿಭಾಗದಲ್ಲಿ ಕಾಣಿಸಿಕೊಳ್ಳುವಂಥಹವುಗಳಾಗಿವೆ.

ರಂಗಾರೆಡ್ಡಿ ಕೋಡಿರಾಂಪುರ ಅವರು 'ಕುಶಲ ಕಲೆಗಳಲ್ಲಿ ಜನಪದ ಚಿತ್ರಕಲೆಯನ್ನು ಹೆಸರಿಸಿ ಮೂರು ರೀತಿಯಲ್ಲಿ ವರ್ಗೀಕರಣ ಮಾಡಿದ್ದಾರೆ. 1. ಧಾರ್ಮಿಕ ಮೌಲ್ಯಗಳನ್ನು ಪರಂಪರೆಯಿಂದ ಹರಿದುಬಂದ ಆಸ್ತಿಕ ಮನೋಭಾವಗಳನ್ನು ಪ್ರತಿಬಿಂಬಿಸುವಂಥಹವು. 2. ಲೈಂಗಿಕತೆಯ ಆಂಗಿಕ ಅಭಿನಯಗಳನ್ನು ಚಿತ್ರಿಸುವುದು. 3. ಮನರಂಜನೆಯನ್ನು ಸೌಂದರ್ಯವನ್ನು ಮುಖ್ಯ ಉದ್ದೇಶವಾಗಿ ಹೊಂದಿರುವುದು. ಇಲ್ಲಿಯೂ ಕೂಡ ಹಚ್ಚೆ, ರಂಗೋಲಿ, ಮುಂತಾದ ಜನಪದ ಚಿತ್ರಕಲೆಗಳನ್ನು ಹೆಸರಿಸುತ್ತಾರೆ. ಈ ಮೂರು ವಿಭಾಗದಲ್ಲಿ ಜನಪದ ಚಿತ್ರಕಲೆಗಳ ಹರವು ಇರುವುದನ್ನು ನಾವು ಕಾಣುತ್ತೇವೆ.

ನಂ. ತಪಸ್ವೀಕುಮಾರ ಅವರು 'ಜನಪದ ಕಲೆಗಳನ್ನು ಎರಡು ರೀತಿಯಲ್ಲಿ ವಿಭಾಗಿಸಿದ್ದಾರೆ. 1. ವಾಚಿಕ ಕಲೆಗಳು (Verbal Arts) 2. ಅವಾಚಿಕ ಕಲೆಗಳು (Nonverbal arts) ವಾಚಿಕ ಕಲೆಗಳಲ್ಲಿ ಜನಪದ ಗೀತೆ, ಸಂಗೀತ, ಗಾದೆ, ಒಗಟು, ಮಾತುಗಳನ್ನು ಮತ್ತು ವಾಚಿಕ ಕಲೆಗಳಲ್ಲಿ ಶಿಲ್ಪ, ಮರದ ಹಾಗೂ

ಲೋಹದ ಕೆತ್ತನೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಬಗೆಬಗೆಯ ಕರಕುಶಲ ಸಾಮಗ್ರಿ ನಿರ್ಮಾಣ, ಹೆಣಿಗೆ, ರಂಗವಲ್ಲಿ, ಚಿತ್ತಾರ ಬಿಡಿಸುವಿಕೆ, ಕಸೂತಿ, ಬಟ್ಟೆಬರೆಗಳ ಮೇಲಿನ ಕಲಾತ್ಮಕ ನೇಯ್ಗೆ, ಮನೆ-ಮಠಗಳ ಅಲಂಕಾರ' ಇತ್ಯಾದಿಯಾಗಿ ಹೇಳುತ್ತಾರೆ.

ಜನಪದ ಚಿತ್ರಕಲೆಯ ಸ್ವತಂತ್ರವಾದ ಅಧ್ಯಯನಕ್ಕಾಗಿ ಅದರ ವ್ಯವಸ್ಥಿತವಾದ ಶಾಸ್ತ್ರೀಯ ಹಿನ್ನೆಲೆಯ ವರ್ಗೀಕರಣ ಅವಶ್ಯ ವಿದ್ದು ಅದನ್ನು ವರ್ಗೀಕರಿಸಿ ಅಧ್ಯಯನ ಮಾಡುವುದು ಹೆಚ್ಚು ಕ್ರಮಪ್ರಾಪ್ತವಾದುದಾಗಿದೆ.

ಬಾಗ್ಸ್ ಅವರ ವರ್ಗೀಕರಣದ ಮಾದರಿಯಲ್ಲಿ ಕರ್ನಾಟಕದ ಜನಪದ ಚಿತ್ರಕಲೆಯನ್ನು ಸ್ಥೂಲವಾಗಿ ಇಲ್ಲಿ ಪರಿಚಯಿಸಲಾಗಿದೆ. 1. ಸೌಂದರ್ಯಮೂಲ ಜನಪದ ಚಿತ್ರಕಲೆ 2. ಧರ್ಮಮೂಲ ಜನಪದ ಚಿತ್ರಕಲೆ 3. ವೃತ್ತಿಮೂಲ ಜನಪದ ಚಿತ್ರಕಲೆ

1. ಸೌಂದರ್ಯಮೂಲ ಜನಪದ ಚಿತ್ರಕಲೆ: ಜನಪದ ಸೌಂದರ್ಯಮೂಲ ಅಭಿವ್ಯಕ್ತಿಯ ಸಾಧನವಾಗಿ ರಚನೆಗೊಂಡ ಚಿತ್ರಕಲೆಯನ್ನು ಸೌಂದರ್ಯಮೂಲ ಜನಪದ ಚಿತ್ರಕಲೆಯೆಂದು ಕರೆಯಬಹುದು. ಇದರಲ್ಲಿ ಪ್ರಯೋಜನಮೂಲ ಮತ್ತು ಮನರಂಜನಮೂಲ ಜನಪದ ಚಿತ್ರಕಲೆಯೆಂದು ವಿಭಜಿಸ ಬಹುದು.

i. **ಪ್ರಯೋಜನಮೂಲ ಜನಪದ ಚಿತ್ರಕಲೆ:** ಇದರಲ್ಲಿ ಮತ್ತೆ ವಿವಿಧ ರೀತಿಯಲ್ಲಿ ವಿಭಜಿಸಬಹುದು. 1. ಗೃಹಾಲಂಕರಣದ ಚಿತ್ರವಿನ್ಯಾಸ 2. ನೆಲಗೋಡೆಯ ಮೇಲಿನ ಚಿತ್ರವಿನ್ಯಾಸ 3. ಚರ್ಮದ ಮೇಲಿನ ಚಿತ್ರವಿನ್ಯಾಸ 4. ತಾಳೆಗರಿ, ಕಾಗದ, ಕಡತ, ರಟ್ಟಿನ ಮೇಲಿನ ಚಿತ್ರವಿನ್ಯಾಸ 5. ದಾರದ ಸಾಧನದ ಚಿತ್ರವಿನ್ಯಾಸ ಇತ್ಯಾದಿ

ಗೃಹಾಲಂಕರಣದ ಚಿತ್ರವಿನ್ಯಾಸದಲ್ಲಿ ಮನೆಯನ್ನು ಸುಣ್ಣ ಬಣ್ಣ ಹುರಮಂಜಿನಿಂದ ಅಲಂಕರಿಸುವ ಅಲಂಕಾರಿಕೆಯ ಚಿತ್ರ ವಿನ್ಯಾಸಗಳು. ನೆಲಗೋಡೆಯ ಮೇಲಿನ ಚಿತ್ರವಿನ್ಯಾಸದಲ್ಲಿ ರಂಗೋಲಿ, ಬೆಳದಿಂಗಳ ಚಿತ್ರ (ತಿಂಗಳ ಮಾವನ ಚಿತ್ರ) ಹಾಲಕ್ಕಿ ಗಳ ಹಲಿಚಿತ್ರ, ಜಗಲಿ, ಗದ್ದಿಗೆ, ತುಳಸಿಕಟ್ಟೆಯ ಮೇಲಿನ ಚಿತ್ರ ಇತ್ಯಾದಿಯಾಗಿ ಹೆಸರಿಸಬಹುದು. ಚರ್ಮದ ಮೇಲಿನ ಚಿತ್ರಕಲೆ ಯಲ್ಲಿ ಶಾಶ್ವತವಾಗಿ ಉಳಿದುಕೊಳ್ಳುವ ಚಿತ್ರವಿನ್ಯಾಸ ಮತ್ತು ಅಶಾಶ್ವತವಾಗಿ ಉಳಿಯುವ ಚಿತ್ರವಿನ್ಯಾಸಗಳೆಂದು ವಿಂಗಡಿಸ ಬಹುದು. ಶಾಶ್ವತ ಕಲೆಯಲ್ಲಿ ಹಚ್ಚೆ ಅಶಾಶ್ವತವಾಗಿ ಉಳಿಯುವ ಚಿತ್ರವಿನ್ಯಾಸಗಳೆಂದು ವಿಂಗಡಿಸಬಹುದು. ಶಾಶ್ವತ ಕಲೆಯಲ್ಲಿ ಹಚ್ಚೆ ಅಶಾಶ್ವತ ಕಲೆಯಲ್ಲಿ ಮದರಂಗಿ ಮುಂತಾದವುಗಳು ಬರುತ್ತವೆ.

ತಾಳೆಗರಿ ಕಾಗದ ಕಡತ ರಟ್ಟಿನ ಮೇಲಿನ ಚಿತ್ರವಿನ್ಯಾಸಗಳಲ್ಲಿ ಜನಪದರ ನೀಲಿ ಹೊತ್ತಿಗೆಯ ಚಿತ್ರ, ಗಿಳಿಶಕುನದ ಚಿತ್ರಗಳು, ಹಸ್ತ ಪ್ರತಿಯಲ್ಲಿಯ ಚಿತ್ರಗಳು, ದಾರದ ಸಾಧನದ ಚಿತ್ರವಿನ್ಯಾಸ ಗಳಲ್ಲಿ ಹೊಲಿಗೆಯ ಚಿತ್ರವಿನ್ಯಾಸದ ಕೌದಿ, ಹೆಣಿಗೆ ಚಿತ್ರವಿನ್ಯಾಸದ ಕಸೂತಿ, ನೆಯ್ಗೆಯ ಚಿತ್ರವಿನ್ಯಾಸದ ಸೀರಿ, ಕುಬಸ, ಗುಡಾರ, ಜಮಖಾನ, ಕಂಬಳಿ ಇತ್ಯಾದಿ ವಸ್ತ್ರಾಲಂಕಾರಗಳು ಬರುತ್ತವೆ.

ಇತರ ಸಾಧನದ ಚಿತ್ರವಿನ್ಯಾಸಗಳಲ್ಲಿ ವಿವಿಧ ಲೋಹಗಳ ಮಡಿಕೆ, ಕುಡಿಕೆ, ಬಿದಿರುಬುಟ್ಟಿ, ಚಾಪೆ, ದಂತದ ಮೇಲಿನ ಚಿತ್ರ ವಿನ್ಯಾಸಗಳನ್ನು ಹೆಸರಿಸಬಹುದು.

ii. **ಮನರಂಜನ ಮೂಲ ಜನಪದ ಚಿತ್ರಕಲೆ:** ಮನರಂಜನೆಯ ಸಾಧನವಾಗಿ ಬಳಕೆಯಾದ ಈ ಚಿತ್ರಕಲೆ ಯನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದಾಗಿದೆ. ಒಂದು ಮನೆಯ ಒಳಾಂಗಣ ಆಟಗಳಲ್ಲಿಯ ಚಿತ್ರಕಲೆ. ಇನ್ನೊಂದು ಮನೆಯ ಹೊರಾಂಗಣ ಆಟಗಳಲ್ಲಿಯ ಚಿತ್ರಕಲೆ. ಮನೆಯ ಒಳಾಂಗಣ ಆಟಗಳಲ್ಲಿ ಗಂಜೀಫಾ ಎಲೆಗಳ ಮೇಲೆ ಚಿತ್ರಿಸಿದ ಚಿತ್ರಕಲೆ. ಪಗಡೆಮನೆ ಆಟದ ಚಿತ್ರಕಲೆ, ಹುಲಿಮನೆ ಆಟದ ಚಿತ್ರವಿನ್ಯಾಸ, ಚಕಾರಮನಿಯಾಟ, ಕೈಲಾಸ ಪಟದಾಟಗಳಲ್ಲಿ ರೇಖಾವಿನ್ಯಾಸ ಇತ್ಯಾದಿಗಳು ಬರುತ್ತವೆ. ಮನೆಯ ಹೊರಾಂಗಣ ಆಟಗಳಲ್ಲಿಯ ಚಿತ್ರಕಲೆಯಲ್ಲಿ ಯಕ್ಷಗಾನ, ದೊಡ್ಡಾಟ, ಬಯಲಾಟ ನೃತ್ಯಗಳಲ್ಲಿಯ ಮುಖವರ್ಣಿಕೆ ವೇಷಭೂಷಣಗಳು ಮತ್ತು ಗೊಂಬೆಯಾಟಗಳಲ್ಲಿಯ ಚಿತ್ರಕಲೆಯಲ್ಲಿ ತೊಗಲು ಗೊಂಬೆ ಸೂತ್ರದಗೊಂಬೆ, ಕೀಲುಗೊಂಬೆಯಾಟದ, ಗೊಂಬೆಗಳ ವರ್ಣವಿನ್ಯಾಸ ಮುಂತಾದವುಗಳನ್ನು ಹೆಸರಿಸಬಹುದು.

2. ಧರ್ಮಮೂಲದ ಜನಪದ ಚಿತ್ರಕಲೆ: ಧಾರ್ಮಿಕ ಹಿನ್ನೆಲೆಯ ದೈವಿಪರಿಕಲ್ಪನೆಯಲ್ಲಿ ಮತ್ತು ಆರಾಧನಾ ಸಂದರ್ಭ ದಲ್ಲಿ ಜನಪದ ಚಿತ್ರಕಲೆ ಬೆಳೆದು ಬಂದುದರಿಂದ ಅದನ್ನು; ಧರ್ಮಮೂಲ ಜನಪದ ಚಿತ್ರಕಲೆಯೆಂದು ಕರೆಯಬಹುದು. ಜನಪದರು ದೈವದ ಬಗೆಗೆ ಮಾಡಿದ ಚಿಂತನೆ ಸಾಹಿತ್ಯಕ್ಕೆ ಮೂಲ ವಾದಂತೆ ದೈವದ ಮುಂದೆ ಮಾಡಿದ ಕುಣಿತ ಹಾಡುಗಳು ನೃತ್ಯ ಸಂಗೀತಗಳಿಗೆ ಮೂಲವಾಗಿರುವಂತೆ ದೈವಕ್ಕೆ ಮಾಡಿದ ಅಲಂಕಾರ ಚಿತ್ರವಿನ್ಯಾಸಗಳು ಧಾರ್ಮಿಕ ಚಿತ್ರಕಲೆಗೆ ಮೂಲ ವಾಗಿವೆ. ಇದರಲ್ಲಿ ಧಾರ್ಮಿಕ ಜನಪದ ಚಿತ್ರಕಲೆ ಮತ್ತು ತಾಂತ್ರಿಕ ಜನಪದ ಚಿತ್ರಕಲೆಯೆಂದು ವಿಂಗಡಿಸಬಹುದು.

ಧಾರ್ಮಿಕ ಜನಪದ ಚಿತ್ರಕಲೆಯಲ್ಲಿ ಪುನಃ ಹೀಗೆ ವಿಂಗಡಿಸ ಬಹುದಾಗಿದೆ. 1. ಹಬ್ಬ ಹರಿದಿನಗಳಲ್ಲಿ ಚಿತ್ರಿಸುವ ಜನಪದ ಚಿತ್ರವಿನ್ಯಾಸ 2. ದೇವರ ಉತ್ಸವ ಜಾತ್ರೆಗಳಲ್ಲಿ ಚಿತ್ರಿಸುವ ಚಿತ್ರವಿನ್ಯಾಸ 3. ಮದುವೆ ಮುಂಜಿವೆಗಳಲ್ಲಿಯ ಚಿತ್ರವಿನ್ಯಾಸಗಳು 4. ಸಂಕೀರ್ಣ ರೀತಿಯ ಚಿತ್ರವಿನ್ಯಾಸಗಳು ಇತ್ಯಾದಿ.

ತಾಂತ್ರಿಕ ಜನಪದ ಚಿತ್ರಕಲೆಯಲ್ಲಿ ಯಜ್ಞ, ಮಂತ್ರ, ಮಾಟ, ಬಾನಾಮತಿ, ತಾಯತದಯಂತ್ರ, ದಿಗ್‌ಬಂಧನ, ಭೂತ ಬಿಡಿಸುವ ಸಂದರ್ಭದಲ್ಲಿ ಹಾಕುವ ಮಂಡಲದ ವರ್ಣವಿನ್ಯಾಸ ಇತ್ಯಾದಿ ಚಿತ್ರಕಲೆಗಳನ್ನು ಹೆಸರಿಸಬಹುದು.

3. ವೃತ್ತಿಮೂಲ ಜನಪದ ಚಿತ್ರಕಲೆ: ಕೃಷಿಯನ್ನೇ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡ ಜನಪದರು ತಮ್ಮ ವ್ಯವಸಾ ಯದ ಉಪಕರಣಗಳಲ್ಲಿ ನಿತ್ಯದ ಬದುಕಿನಲ್ಲಿ ಸೌಂದರ್ಯವನ್ನು ಕಾಣಬಯಸಿದ ಪರಿಣಾಮವಾಗಿ ಅವರ ದೈನಂದಿನ ಚಟುವಟಿಕೆ ಗಳಲ್ಲಿ ವೃತ್ತಿಮೂಲದ ವಸ್ತುಗಳಲ್ಲಿ ಕಲಾತ್ಮಕ ಅಂಶಗಳು ಬಳಕೆ ಗೊಂಡವು. ಹೀಗೆ ಜನಪದ ವೃತ್ತಿಯಲ್ಲಿ ಪ್ರವೇಶವಾದ ಅವರ ಈ

ಚಿತ್ರಕಲೆಯನ್ನು ವೃತ್ತಿಮೂಲ ಜನಪದ ಚಿತ್ರಕಲೆಯೆಂದು ಕರೆಯಬಹುದು.

ವೃತ್ತಿಮೂಲ ಜನಪದ ಚಿತ್ರಕಲೆಯಲ್ಲಿ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ವೃತ್ತಿಯಲ್ಲಿ ಕಲೆಯ ಆರೋಪ ಇನ್ನೊಂದು ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವುದು. ವೃತ್ತಿಯಲ್ಲಿ ಕಲೆಯ ಆರೋಪ ಇದರಲ್ಲಿ ಮತ್ತೆ ಎರಡು ವಿಧ ಗಳನ್ನಾಗಿ ವಿಭಜಿಸಬಹುದು. ಕೃಷಿ ಪ್ರಧಾನ ವಸ್ತುವಿನಲ್ಲಿಯ ಕಲಾವಿನ್ಯಾಸಗಳು ಮತ್ತು ಕೃಷಿಯೇತರ ಗೃಹೋಪಕರಣ ಗಳಲ್ಲಿಯ ಕಲಾವಿನ್ಯಾಸಗಳೆಂದು.

ಕೃಷಿ ಪ್ರಧಾನ ವಸ್ತುವಿನಲ್ಲಿಯ ಚಿತ್ರಕಲಾ ವಿನ್ಯಾಸಗಳಲ್ಲಿ ಸಾಮಾನ್ಯವಾಗಿ ಉಳುವ, ಅಗೆಯುವ ಬಿತ್ತುವ, ರಾಶಿಮಾಡುವ, ಕತ್ತರಿಸುವ ಅಳತೆಮಾಡುವ, ಕುಟ್ಟುವ, ಕೊಯ್ಯುವ, ಸಾಧನೋ ಪಕರಣಗಳು. ಇನ್ನು ಕೃಷಿಯೇತರ ಗೃಹೋಪಕರಣಗಳಲ್ಲಿ ಬಡಿಗರು ಮಾಡುವ ತೊಟ್ಟಿಲು, ಮಂಚದ ತೂಗುಮಣಿ, ಒನಕೆ, ಅಡ್ಡಣಗಿ, ಈಳಿಗೆ, ಹೋಳಿಗೆ ಮಣಿ, ಲಟ್ಟಣಗಿ, ಕೊಣಕ ಕುಡಗೋಲ ಮುಂತಾದವುಗಳು ಕುಂಬಾರರು ಮಾಡುವ ಗಡಿಗೆ, ಕುಡಿಕೆ, ತತ್ರಾಣಿಗೆ, ಬಿಂದಿಗೆ ಹರವಿಗಳಿಗೆ ಮಾಡುವ ಸುಳುವು ರೇಖಾ ವಿನ್ಯಾಸಗಳು. ಇದೇ ರೀತಿ ಕಂಚುಗಾರರು, ಒಡ್ಡರು, ಅಕ್ಕಸಾಲಿಗರು, ಚಮ್ಮಾರರು, ಜಿನಗಾರರು ನಿರ್ಮಿಸುವ ವಸ್ತು ಗಳಲ್ಲಿಯ ಕಲಾವಿನ್ಯಾಸ ಇತ್ಯಾದಿ.

ವೃತ್ತಿಯಲ್ಲಿ ಕಲೆಯ ಆರೋಪ ಇದರಲ್ಲಿ ಕಲೆಯನ್ನು ವೃತ್ತಿಯನ್ನಾಗಿಸಿಕೊಂಡು ಉಪಜೀವನ ನಡೆಯಿಸುವ ರೀತಿ ಇನ್ನೊಂದು ಬಗೆಯದು ಇದರಲ್ಲಿ 1. ಚಿತ್ರಕಲೆ ರೂಪಿಸುವ ವೃತ್ತಿಯವರು 2. ರೂಪಿಸಿದ ಚಿತ್ರಕಲೆಗಳಿಂದ ಬದುಕುವ ವೃತ್ತಿಯವರು 3. ಸಂಕೀರ್ಣ ವೃತ್ತಿಯವರು

ಚಿತ್ರಕಲೆ ರೂಪಿಸುವ ವೃತ್ತಿಯವರು: ಜನಪದ ವೃತ್ತಿಗಳಂತೆ ಇವರು ಚಿತ್ರಸೃಷ್ಟಿಯನ್ನು ಪ್ರಧಾನವೃತ್ತಿಯನ್ನಾಸಿಕೊಂಡು ಕುಟುಂಬಗಳ ಕುರಿತು ಅಭ್ಯಾಸ ಮಾಡುವುದು. ಉದಾ: ಧಾರವಾಡ ಜಿಲ್ಲೆಯ ಕಲಘಟಗಿ ಊರಿನ ತೊಟ್ಟಿಲು ಮಾಡುವ ಚಿತ್ರಕಾರರು. ಬೆಳಗಾಂವ ಜಿಲ್ಲೆಯ ಗೋಕಾಕದ ಆಟಿಗೆಯ ವಸ್ತು ಚಿತ್ರವಿನ್ಯಾಸಕಾರರು. ಹಾಗೆಯೇ ತಾಳಿಕೋಟೆಯ ಜಿನಗಾರರು ಮುತ್ತಗಿಯ ದೊಡ್ಡಾಟದ ವಸ್ತುಗಳ ಕಲಾವಿನ್ಯಾಸಕಾರರು, ತೊನಶ್ಯಾಳ, ಕಿನ್ನಾಳದ ದೇವರ ಮೂರ್ತಿಗಳಿಗೆ ಅಟಿಗೆಯ ಮುಂತಾದ ಕಲಾತ್ಮಕ ವಸ್ತುಗಳಿಗೆ ವರ್ಣಲೇಪನ ಮಾಡುವ ಮುಂತಾದ ಕುಟುಂಬಗಳು ಬರುತ್ತವೆ. ಇವರೆಲ್ಲ ಚಿತ್ರಕಲೆಯನ್ನು ರೂಪಿಸುವ ವೃತ್ತಿಯವರು.

ರೂಪಿಸಿದ ಚಿತ್ರಗಳಿಂದ ಬದುಕುವ ವೃತ್ತಿಯವರು ಎಂದರೆ ಮೇಲೆ ಹೇಳಿದ ಚಿತ್ರರೂಪಿಸುವ ವೃತ್ತಿಯವರಿಂದ ಚಿತ್ರಗಳನ್ನು ಮಾಡಿಸಿಕೊಂಡು ಆ ಚಿತ್ರಗಳಿಂದ ವೃತ್ತಿ ನಡೆಯಿಸುವವರನ್ನು ರೂಪಿಸಿದ ಚಿತ್ರಗಳಿಂದ ಉಪಜೀವನ ನಡೆಸುವ ವೃತ್ತಿಯವ ರೆಂದು ಕರೆಯಬಹುದು. ಉದಾ: ದುರಗ ಮುರಗಿಯವರು, ಬುಡಬುಡಕಿಯವರು, ನೀಲಿಹೊತ್ತಿಗೆ ಹೇಳುವವರು, ಗಿಳಿ ಶಕುನದ ವೃತ್ತಿಕಾರರು ಇತ್ಯಾದಿ.

ಸಂಕೀರ್ಣ ವೃತ್ತಿಕಾರರಲ್ಲಿ ಚಿತ್ರಬಿಡಿಸುವ ಮತ್ತು ಆ ಚಿತ್ರ ಗಳನ್ನು ಉಪಯೋಗಿಸಿ ವೃತ್ತಿ ಮಾಡುವವರು. ಉದಾ: ಮೋಡಿಕಾರ, ವೇಷಗಾರರ, ಸಾರುವಅಯ್ಯನವರು, ಕಿಳ್ಳಿಕೇತರು, ಸುಡಗಾಡಸಿದ್ಧರು, ಆವಗಿಅಯ್ಯನವರು ಮುಂತಾದವರನ್ನು ಹೆಸರಿಸಬಹುದು.

ಒಟ್ಟಾರೆ ಒಂದೊಂದು ಜನಪದ ಚಿತ್ರಕಲೆಗಳನ್ನು ಗಮನಿಸಿ ದಾಗ ಕೆಲವು ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟವೆನಿಸುವಂತೆ ಕಂಡುಬಂದರೂ ಮತ್ತೆ ಕೆಲವು ಕಲೆಗಳು ಸಾಮಾನ್ಯವಾಗಿ ಇನ್ನುಳಿದ ಕಡೆಗಳಲ್ಲಿ ಕಂಡುಬರುತ್ತವೆ. ಅವು ಆಯಾ ಪ್ರದೇಶದ ಜನಾಂಗಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಹಾಗೂ ಭೌಗೋಳಿಕ ಪರಿಸರವನ್ನು ಅವಲಂಬಿಸಿ ರೂಪುತಳೆದಿರುತ್ತದೆ. ಜನಪದರ ಈ ಚಿತ್ರಕಲೆ ಯನ್ನು ಸೂಕ್ಷ್ಮವಾದ ಪರಿವೀಕ್ಷಣೆ ವರ್ಗೀಕರಣ ಹಾಗೂ ಅಧ್ಯಯನಗಳ ಮೂಲಕ ಜಾನಪದರ ಸಾಂಸ್ಕೃತಿಕ ಹಿನ್ನೆಲೆ ಯನ್ನು ತಿಳಿದುಕೊಳ್ಳಬಹುದಾಗಿದೆ. (ಎಸ್‌ಸಿಪಿ)


ಜನಪದ ವಾಸ್ತು ಶಿಲ್ಪಗಳು: ಜನಪದರ ನೂರಾರು ಕಲೆಗಳಲ್ಲಿ ವಾಸ್ತು ಶಿಲ್ಪಕಲೆಗಳು ಮಹತ್ವದವುಗಳಾಗಿವೆ. ಬದುಕಿನ ಎಲ್ಲ ರಂಗಗಳ ವಿವಿಧಾಂಗಗಳೇ ಜನಪದ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ಸಂಪ್ರದಾಯ ನಂಬಿಕೆಗಳು ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿದ್ದು ಜನಪದ ವಾಸ್ತುಶಿಲ್ಪಕಲೆ.

ಜನಪದ ವಾಸ್ತುಶಿಲ್ಪಕಲೆಯ ಕಲಾತ್ಮಕ ಮತ್ತು ಪ್ರಯೋಜ ನಾತ್ಮಕ ಹಿನ್ನೆಲೆಯಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ. ಸಾಮಾಜಿಕ ಜೀವನದ ಒಳರಕ್ತಮಾಂಸಗಳನ್ನು ಅಮೂರ್ತ ಕಲ್ಪನೆಯ ಮೂಲಕ ಚಲನಶೀಲವಾಗುವಂತೆ ಮಾಡುವ ಸಾಮರ್ಥ್ಯ ಜನಪದ ವಾಸ್ತು ಶಿಲ್ಪಕಲೆಗೆ ಇದೆ. ಇವು ಸರಳ ಚೌಕಟ್ಟಿನೊಂದಿಗೆ ಮನಸ್ಸಿನ ಸ್ವಾತಂತ್ರ್ಯದೊಂದಿಗೆ ಕೆಲವು ಸಲ ಸಮೂಹವಾಗಿಯೇ ನಿತ್ಯ ಬಳಕೆಯಲ್ಲಿ ಬಂದುದುಂಟು. ಮಣ್ಣಿನಿಂದ ಮಾಡುವ ಜೋಕುಮಾರ ಶಿಲ್ಪ, ಮಣ್ಣೆತ್ತಿನ ಅಮವಾಸ್ಯೆಯಲ್ಲಿ ಮಾಡುವ ಮಣ್ಣಿನ ಬಸವಣ್ಣಗಳು, ದೀಪಾವಳಿಯ ಹಬ್ಬದಲ್ಲಿ ಸೆಗಣಿಯಿಂದ ಮಾಡುವ ಪಾಂಡವ ಕೌರವರ ಶಿಲ್ಪ ಹಾಗೆಯೇ ಭಾವಿ ಮತ್ತು ಕೋಟೆ ಗೋಡೆಯ ವಿನ್ಯಾಸ, ಬೀಸುವ, ಕುಟ್ಟುವ ಮೂರ್ತಿಶಿಲ್ಪ ವಿನ್ಯಾಸ, ಮಳೆ ಬರುವುದರ ಸಲುವಾಗಿ ಪ್ರಾರ್ಥಿಸುವ ಗುರ್ಜಿ, ಗುಳ್ಳವ್ವನ ಮಣ್ಣಿನ ಮೂರ್ತಿಗಳು ಕಟ್ಟಿಗೆಯ ಮೂರ್ತಿಗಳು, ಇದೇ ಸಂದರ್ಭದಲ್ಲಿ ಮಾಡುವ ಸಕ್ಕರೆಯ ಮೂರ್ತಿ ವಿನ್ಯಾಸಗಳು, ತೇರು, ಗುಡಿ, ಒಂಟೆ, ಆರತಿ, ಸಕ್ಕ ಸರಗಿ, ಕೋಳಿ, ನವಿಲು, ಗುಬ್ಬಿ, ಬಾತುಕೋಳಿ, ಬೀಸುಕಲ್ಲು, ಗಣೇಶನ ಹಬ್ಬದ ಗಣಪತಿ ಮುಂತಾದವು ಜನಪದರ ವ್ಯಕ್ತಿ ಸೃಷ್ಟಿಯಾಗಿ ಸಮಷ್ಟಿಯ ಗುಂಪಾಗಿ ಪ್ರವರ್ತಿಸುತ್ತವೆ. ಅಂದರೆ ಇಲ್ಲಿ ವಾಸ್ತು ಶಿಲ್ಪಕಲೆ ಆಚರಣೆಯಾಗಿ, ಸಂಪ್ರದಾಯವಾಗಿ ಅರ್ಥಪಡೆದು ನಿಲ್ಲುತ್ತದೆ.

1. ಅರಳೆಲೆ ಬಸವನ ಮೂರ್ತಿಶಿಲ್ಪ: ಬಸವಣ್ಣ ರೈತರ ಬದುಕಿನ ಆರಾಧ್ಯ ದೇವರು. ಅವನನ್ನು ಅನೇಕ ರೀತಿಯಲ್ಲಿ ಪೂಜಿಸುತ್ತಾರೆ. ವಿಶೇಷವಾಗಿ ಹೆಣ್ಣುಮಕ್ಕಳು ಶೀಗಿ ಹುಣ್ಣಿಮೆಯ ಚರಗದೂಟಮಾಡಿ ಮನೆಗೆ ಬರುವಾಗ ಮಳಲು ತರುವ ಸಂಪ್ರದಾಯವಿದೆ. ಆ ಮಣ್ಣಿನಿಂದ ಕುಳಿತ ಬಸವಣ್ಣನ ಮೂರ್ತಿ ಮಾಡಿ ಪತ್ರಿ–ಪುಷ್ಪಗಳಿಂದ ಒಂದು ಸುಂದರವಾದ ಮಂಟಪದಲ್ಲಿ ಸ್ಥಾಪಿಸಿ ಪೂಜೆ ಸಲ್ಲಿಸುವ ಆಚರಣೆಯಿದೆ. ಕೆಲವರು ಊರೊಳಗಿನ ಬಸವಣ್ಣನ ಗುಡಿಗೆ ಹಾಡುಹೇಳುತ್ತ ಕೋಲಾಟವಾಡುತ್ತ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಇನ್ನು ಕೆಲವು ಕಡೆಗೆ ಹೆಣ್ಣುಮಕ್ಕಳು ಮಂಗಳಾರತಿಯೊಂದಿಗೆ ಊದಿಸುತ್ತ, ಬಾರಿಸುತ್ತ ಜಲಾಶಯದ ಹತ್ತಿರ ಮಣ್ಣನ್ನು ತರುವುದು ರೂಢಿಯಲ್ಲಿದೆ. ಇದಕ್ಕೆ ಮಳಲು ತರುವುದು ಎಂದು ಹೆಸರು. ಈ ಮಳಲಿನಿಂದ ಬಸವಣ್ಣನನ್ನು ಮಾಡಿ ಪೂಜಿಸುವುದಕ್ಕೆ ಅರಳೆಲೆ ಬಸವನ ಮೂರ್ತಿಶಿಲ್ಪದ ಆಚರಣೆಯೆಂದು ಕರೆಯುತ್ತಾರೆ.

2. ಮಣ್ಣೆತ್ತಿನ ಬಸವಣ್ಣನ ಮೂರ್ತಿಶಿಲ್ಪಗಳು: ಮಣ್ಣೆತ್ತಿನ ಅಮಾವಾಸ್ಯೆಯೆಂದು ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಎಲ್ಲರ ಮನೆಗಳಲ್ಲಿ ಮಣ್ಣಿನಿಂದ ಮಾಡಿದ ಎತ್ತುಗಳ ಮೂರ್ತಿಶಿಲ್ಪಗಳನ್ನು ಮನೆಯಲ್ಲಿ ಜಗಲಿಯಲ್ಲಿಟ್ಟು ಪೂಜಿಸುವ ಆಚರಣೆ ಸರ್ವಸಾಮಾನ್ಯವಾದುದಾಗಿದೆ.

ಹಳ್ಳಿಗಳಲ್ಲಿ ಕುಂಬಾರರು ಹೆಚ್ಚಾಗಿ ಈ ಮಣ್ಣಿನ ಎರಡು ಜೋಡಿ ನೀಟಾದ ಕೋಡುಗಳುಳ್ಳ ಜೋಡೆತ್ತುಗಳನ್ನು ಮಾಡುತ್ತಾರೆ. ಮತ್ತು ಆಹಾರ ತಿನ್ನಲೆಂದು ಅವುಗಳ ಮುಂದೆ ಒಂದು ಸಣ್ಣ ಡೋಣಿಯನ್ನು ಮಾಡಿ ಊರಲ್ಲಿಯ ಪ್ರತಿ ಮನೆಮನೆಗೆ ಕೊಟ್ಟು ಅದಕ್ಕೆ ಪ್ರತಿಯಾಗಿ ಚಾಜವನ್ನು ಕಾಳುಕಡಿಯ ರೂಪದಲ್ಲಿ ಒಯ್ಯುತ್ತಾರೆ. ಎತ್ತುಗಳ ನಿರ್ಮಾಣದಲ್ಲಿ ಕುಂಬಾರರ ಕಲಾವಂತಿಕೆ ವಿಶೇಷವಾಗಿರುತ್ತದೆ. ಈ ಮಣ್ಣಿನ ಜೋಡೆತ್ತುಗಳಿಗೆ ಮನೆಯಲ್ಲಿ ಗಂಡು ಮಕ್ಕಳು ವಿಶೇಷ ಅಲಂಕಾರ ಮಾಡುತ್ತಾರೆ. ಅವುಗಳ ಕೋಡುಗಳಿಗೆ ಬಣ್ಣ ಹಚ್ಚಿ ಕೊರಳಲ್ಲಿ ಗಜ್ಜೆ ಮುಂತಾದ ಎತ್ತುಗಳಿಗೆ ಹಾಕುವ ಆಭರಣಗಳ ಅಲಂಕಾರ ಈ ಎತ್ತುಗಳಿಗೂ ಮಾಡಿ ಅವುಗಳಿಗೂ ಜೂಲ ಹಾಕಿ ಮನೆಯಲ್ಲಿ ವಿಶೇಷವಾದ ಪೂಜೆ ಸಲ್ಲಿಸುತ್ತಾರೆ. ಮರುದಿವಸ ಇವುಗಳನ್ನು ಮನೆಯ ಗೂಡುಗಳಲ್ಲಿ ಇಡುವ ಸಂಪ್ರದಾಯವಿದೆ.



ಮಣ್ಣೆತ್ತಿನ ಬಸವಣ್ಣ

3. ಹುತ್ತಪ್ಪ (ನಾಗಪ್ಪ) ಶಿಲ್ಪ: ನಾಗರ ಪಂಚಮಿಯ ಸ್ತ್ರೀಯರು ಆಚರಿಸುವ ಬಹುದೊಡ್ಡ ಹಬ್ಬ. ಈ ಸಂದರ್ಭದಲ್ಲಿ ಹುತ್ತಪ್ಪ (ನಾಗಪ್ಪ)ನಿಗೆ ಪೂಜೆ ಮಾಡಿ ಹಾಲು ಹೊಯ್ಯುವ ಸಂಪ್ರದಾಯವಿದೆ.

ಬಸವಣ್ಣನ ಶಿಲ್ಪದ ಆಚರಣೆಯಂತೆ ಹುತ್ತಪ್ಪನ ಶಿಲ್ಪದ ಸಂಪ್ರದಾಯ ತುಂಬಾ ಆಕರ್ಷಕವಾಗಿ ನಡೆಯುತ್ತದೆ. ಪ್ರತಿಯೊಂದು ಮನೆಮನೆಗಳಲ್ಲಿ ಹುತ್ತಪ್ಪ (ನಾಗಪ್ಪ) ನನ್ನು ಮಾಡಿ ಪೂಜಿಸುತ್ತಾರೆ. ಮಣ್ಣಿನ ಮುಟ್ಟದಾದ ನಾಗಪ್ಪನನ್ನು ಬಡಿಗೇರರು ಹೂಗಾರರು ಕೆಲವು ಊರಲ್ಲಿ ಕೆರೆ ಹಳ್ಳಗಳ ಹತ್ತಿರದಿಂದ ಮಣ್ಣನ್ನು ತಂದು ನಾಗಪ್ಪನನ್ನು ಮಾಡಿ ಮನೆಮನೆಗೆ ಹಬ್ಬದ ದಿನ ತಂದು ಕೊಟ್ಟು ಮರುದಿನ ಪಂಚಮಿಯಂದು ಎಳ್ಳು ಉಂಡಿ, ಹಣ ಇತ್ಯಾದಿ ಧಾನ್ಯಗಳನ್ನು ಚ್ಯಾಜವಾಗಿ ಬಂದು ಒಯ್ಯುವ ಸಂಪ್ರದಾಯವು ಇದೆ. ಇತ್ತೀಚೆಗೆ ನಾಗಪ್ಪನ ಶಿಲ್ಪಗಳಿಗೆ ಬಣ್ಣದ ಲೇಪನ ಮಾಡಲಾಗುತ್ತಿದೆ. ಹಾವಿನ ಆಕಾರದ ಈ ಶಿಲ್ಪಗಳಲ್ಲಿ ಹೆಡೆಯೂ ಪ್ರಮುಖವಾಗಿ ಕಾಣಿಸುವಂತೆ ರಚಿಸಿರುವುದು ವೈಶಿಷ್ಟ್ಯ.



ನಾಗ ಶಿಲ್ಪ

4. ಗುಳ್ಳವ್ವನ ಮೂರ್ತಿಶಿಲ್ಪ: ಮಣ್ಣೆತ್ತಿನ ಅಮಾವಾಸ್ಯೆಯಿಂದ ನಾಗರ ಅಮಾವಾಸ್ಯೆಯವರೆಗೆ ಆಷಾಢ ತಿಂಗಳಲ್ಲಿ ಬರುವ ನಾಲ್ಕು ಇಲ್ಲವೆ ಐದು ಮಂಗಳವಾರಗಳಂದು ಈ ಹಬ್ಬವನ್ನು ಆಚರಿಸಲಾಗುತ್ತಿದೆ. ಸ್ತ್ರೀ ಪ್ರಧಾನವಾದ ಗುಳ್ಳವ್ವನ ಹಬ್ಬವನ್ನು

ಸುಮಾರು ಹತ್ತು ಹನ್ನೆರಡು ವರ್ಷದ ಬಾಲಕಿಯರು ವಿಶೇಷವಾಗಿ ಆಚರಿಸುತ್ತಾರೆ.

ಗುಳ್ಳವ್ವನ ಮೂರ್ತಿ ಶಿಲ್ಪಕ್ಕೆ ಕುಸಬಿಯ ಬೀಜಗಳಿಂದ ಗುಲಗಂಜಿಗಳಿಂದ ಅಲಂಕಾರ ಮಾಡುತ್ತಾರೆ. ಬಿಳಿಯ ಕುಸಬಿ ಬೀಜಗಳು ಕೆಂಪುಬಣ್ಣದ ಗುಲಗಂಜಿ ಬೀಜಗಳು ಅಲ್ಲಲ್ಲಿ ಗುಳ್ಳವನಿಗೆ ಹಸಿಮಣ್ಣಿನಲ್ಲಿ ಒತ್ತಿ ಇಟ್ಟು ತುಂಬ ಕಲಾತ್ಮಕವಾಗಿ ವಿನ್ಯಾಸಗೊಳಿಸಿರುತ್ತಾರೆ. ಅಲ್ಲದೆ ಬಣ್ಣ ಬಣ್ಣದ ಕಾಗದಗಳಿಂದ ವಿವಿಧ ರೀತಿಯ ಹೂಗಳನ್ನು ನಕ್ಷೆಗಳನ್ನು ಕತ್ತರಿಸಿ (ಅಲಂಕಾರ) ಮಾಡುವುದುಂಟು. ಮುತ್ತು ಹವಳ ಹಾಗೂ ಹೆಣಿಗೆ ಕಸೂತಿಯ ವಸ್ತುಗಳು ವಿವಿಧ ರೀತಿಯ ಗೊಂಬೆಗಳು ಈ ಸಂದರ್ಭದಲ್ಲಿ ಅಲಂಕಾರಕ್ಕಾಗಿ ಇಡುತ್ತಾರೆ. ಹುಡುಗಿಯರು ತಮ್ಮ ಕಲಾತ್ಮಕತೆಯನ್ನು ಪ್ರದರ್ಶಿಸಲು ಇದೊಂದು ಉತ್ತಮ ಸಂದರ್ಭವಾಗಿದೆ.

ಹೀಗೆ ಅಲಂಕರಣಗೊಂಡ ಗುಳ್ಳವ್ವನ ಮೂರ್ತಿಶಿಲ್ಪದ ಮುಂದೆ ಇನ್ನೊಂದು 'ಗೊಗ್ಗವ್ವ' ಎಂಬ ಹೆಣ್ಣಿನಾಕಾರದ ಮೂರ್ತಿಯನ್ನು ನಿಲ್ಲಿಸಿರುತ್ತಾರೆ. ಇದು ಕಟ್ಟಿಗೆಯಿಂದ ಕೂಡಿದ್ದು ಇನ್ನು ಕೆಲವು ಸಲ ಮಣ್ಣಿನಿಂದಲೂ ಮಾಡಿರುತ್ತಾರೆ. ಶಿಲ್ಪವು ನೋಡಲು ವಿಕಾರ ಸ್ವರೂಪದಲ್ಲಿದ್ದು ಇದೊಂದು ವಿದೂಷಕ ಶಿಲ್ಪವಾಗಿದೆ. ಇದನ್ನು ದೀಪದ ಗೊಗ್ಗವ್ವನೆಂದು ಕರೆಯುತ್ತಾರೆ. ಮೊದಲು ಇದೊಂದು ದೀಪಸ್ಥಂಭವಿದ್ದು ನಂತರ ಇದು ಗೊಂಬೆಯ ಆಕಾರ ಪಡೆದಿರುವುದಾಗಿ ಹೇಳುತ್ತಾರೆ.

5. ಗಣೇಶನ ಶಿಲ್ಪ: ಹಳ್ಳಿಗಳಲ್ಲಿ ಸೆಗಣಿಯಿಂದ ಬೆನಕನನ್ನು ಮಾಡುತ್ತಿದ್ದುದಾಗಿ ತಿಳಿದು ಬರುತ್ತದೆ. ಮುಂದೆ ಆ ಸೆಗಣಿಯ ಬದಲಾಗಿ ಮಣ್ಣಿನ ಬಳಕೆಯಾಗುತ್ತ ಬಂದಿದೆ. ಕರ್ನಾಟಕದಲ್ಲಿ ಈ ಸಂಪ್ರದಾಯ ಮೊದಲು ಮಹಾರಾಷ್ಟ್ರದಿಂದ ಬಂದುದಾಗಿ ಹೇಳಲಾಗುತ್ತಿದ್ದು ಈ ಆಚರಣೆಯಲ್ಲಿ ಈಗ ಮಣ್ಣಿನಿಂದಲೇ ಗಣೇಶನನ್ನು ಮಾಡುತ್ತಾರೆ. ಹಬ್ಬಕ್ಕೆ ಪೂರ್ವದಲ್ಲಿಯೇ ಮಣ್ಣನ್ನು ತಂದು ಸಂಗ್ರಹಿಸಿ ಅದನ್ನು ನೆನೆಹಾಕಿ ಜಿಗುಟು ಮಾಡುತ್ತಾರೆ. ಹಳ್ಳಿಗಳಲ್ಲಿ ಹಬ್ಬದ ಹಿಂದಿನ ದಿವಸ ರಾತ್ರಿಯುದ್ದಕ್ಕೂ ಈ ಬೆನಕನನ್ನು ಮಾಡಿ ಹಬ್ಬದ ದಿನ ಅಲಂಕಾರ ಮಾಡಿಕೊಡುವ ಸಂಪ್ರದಾಯವಿದೆ. ಪತ್ತಾರರು, ಜಿನಗಾರರು, ಬಡಿಗರು, ಕುಂಬಾರರು, ಮೊದಲು ಈ ಮೂರ್ತಿಶಿಲ್ಪವನ್ನು ಮಾಡಿ ಊರಲ್ಲಿ ಕೊಟ್ಟು ಅದಕ್ಕೆ ಪ್ರತಿಯಾಗಿ ಚ್ಯಾಜವನ್ನು ಪಡೆಯುವ ಸಂಪ್ರದಾಯವಿತ್ತು. ಈಗ ಯಾರು ಬೇಕಾದರೂ ಈ ಶಿಲ್ಪವನ್ನು ಮಾಡುತ್ತಿದ್ದು ಗಣೇಶನ ಶಿಲ್ಪವು ಶಿಷ್ಟ ಸಂಸ್ಕೃತಿಗೆ ತಿರುಗಿರುವುದು ಕಂಡುಬರುತ್ತದೆ. ಮೊದಲು ಜನಪದರ ಗಣೇಶನ ಶಿಲ್ಪ ಜನಪದ ವೈಲಕ್ಷಣಗಳನ್ನು ಹೊತ್ತು ಬರುತ್ತಿದ್ದರೆ ಇಂದು ಶಾಸ್ತ್ರೋಕ್ತವಾದ ಪ್ರಮಾಣಬದ್ಧತೆಗೆ ಬದ್ಧವಾದ ವರ್ಣಗಾರಿಕೆಯಿಂದ ಕೂಡಿದ ಶಿಲ್ಪವನ್ನು ರಚಿಸಲಾಗುತ್ತದೆ.

ಜನಪದರಲ್ಲಿ ಗಣೇಶನ ಮೂರ್ತಿಶಿಲ್ಪ ತುಂಬಾ ಸರಳ. ಯಾವುದೇ ರೀತಿಯ ವರ್ಣಗಾರಿಕೆ ವಿಪರೀತ ಅಲಂಕಾರಿಕೆಗಳಿಲ್ಲದೆ ಪೂಜೆಗೊಳ್ಳುವ ಶಿಲ್ಪವಾಗಿದ್ದುದು ತಿಳಿದು ಬರುತ್ತದೆ.

ದೊಡ್ಡ ಹೊಟ್ಟೆ, ಉದ್ದವಾದ ಸೊಂಡಿಲು, ಆನೆಯ ಮುಖವಿನ್ಯಾಸದ ಗಣೇಶನ ಹತ್ತಿರ ಆತನ ವಾಹನ ಇಲಿಯೂ ಅವಶ್ಯಕವಾಗಿ ರಚನೆಗೊಂಡಿರುವುದು ವೈಶಿಷ್ಟ್ಯ. ಹಾಗೆಯೇ ಹೊಟ್ಟೆಗೆ ಸುತ್ತಿದ ಹಾವು ಇವೆಲ್ಲ ಗಣೇಶನ ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿ ಶಿಲ್ಪವನ್ನು ರಚಿಸುವುದು ಹಿಂದಿನಿಂದ ನಡೆದು ಬಂದ ಸಂಪ್ರದಾಯವಾಗಿದೆ.

5. ಜೋಕುಮಾರ ಶಿಲ್ಪ: ಗಂಗಾಮತಸ್ಥರಾದ ಕಬ್ಬಲಿಗರು, ಅಂಬಿಗರು, ಸುಣಗಾರರು, ಅಗಸರು ಈ ಆಚರಣೆಯಲ್ಲಿ ಪ್ರಮುಖರಾಗಿ ಕಂಡುಬರುತ್ತಾರೆ. ಇವರು ಜೋಕುಮಾರ ಮೂರ್ತಿಶಿಲ್ಪವನ್ನು ಮಣ್ಣಿನಿಂದ ರಚಿಸುತ್ತಾರೆ. ಮೊದಲು ಮಣ್ಣನ್ನು ತಂದು ನೆನೆಹಾಕಿ ಅನಂತರ ಅದನ್ನು ಕುಟ್ಟಿ ಹದಮಾಡಿಕೊಳ್ಳುತ್ತಾರೆ. ಅದರಲ್ಲಿ ಅರಳಿ (ಹತ್ತಿ) ಒತ್ತದ ಹುಲ್ಲನ್ನು ಕೂಡಿಸಿ ಮಣ್ಣನ್ನು ಹದ ಮಾಡಿಕೊಂಡು ಜೋಕುಮಾರನ ಮೂರ್ತಿಶಿಲ್ಪ ತಯಾರಿಸಲಾಗುತ್ತದೆ. ಇವನ ಮೂರ್ತಿಯೂ ಕಲಾಪೂರ್ಣವಾಗಿದ್ದು ರಸಿಕತೆಯನ್ನು ಸೂಸುತ್ತದೆ. ಅಗಲವಾದ ಮುಖ ಅದಕ್ಕನುಗುಣವಾದ ಆಕರ್ಷಕ ಕಣ್ಣುಗಳು ತಲೆಯ ಮೇಲೆ ಕಿರೀಟದಂತಹ ತೊಡಗೆ (ರುಮಾಲು) ಕಲ್ಲಿ ಮೀಸೆಗಳಿಂದ ಅವನ ಸಿರಿವಂತಿಕೆಯನ್ನು ಹೆಚ್ಚಿಸಲಾಗುತ್ತದೆ. ದೊಡ್ಡದಾದ ಬಾಯಿ ಒಂದು ಕೈಯಲ್ಲಿ ಕತ್ತಿ, ಇನ್ನೊಂದು ಕೈಯಲ್ಲಿ ಅಂಬಲಿಯಬಟ್ಟಲು ದೊಡ್ಡದಾದ ಪುರುಷೇಂದ್ರಿಯವು ಅವನ ಕಾಮುಕತೆಯನ್ನು ತೋರಿಸುತ್ತದೆ. ಕುಳಿತ ಭಂಗಿಯ ಶಿಲ್ಪವನ್ನು ಸ್ತ್ರೀಯರೇ ಹೆಚ್ಚಾಗಿ ಮಾಡುತ್ತಾರೆ.

ಮಣ್ಣಿನಿಂದ ತಯಾರಿಸಿದ ಜೋಕುಮಾರನ ಶಿಲ್ಪಕ್ಕೆ ಸರಳವಾದ ಅಲಂಕಾರ ಮಾಡಲಾಗುತ್ತದೆ. ಹಣೆಗೆ ಎದ್ದು ಕಾಣಿಸು



ಜೋಕುಮಾರ ಮೂರ್ತಿಶಿಲ್ಪ

ವಂತೆ ವಿಭೂತಿ ಬಳಿಯುತ್ತಾರೆ. ಮುಖದಲ್ಲಿ ಕುಂಕುಮ ಮತ್ತು ಬಾಯಿಯಲ್ಲಿ ಬೆಣ್ಣೆಯ ಮುದ್ದೆಯನ್ನು ಇಟ್ಟಿರುತ್ತಾರೆ. ಈ ಬೆಣ್ಣೆ ಬಿಸಿಲಿಗೆ ಕರಗದಂತೆ ಅದರ ಸುತ್ತಲು ಹಸಿಮಣ್ಣನ್ನು ಬೇವಿನ ತಪ್ಪಲನ್ನು ಹೊದಿಸಿರುತ್ತಾರೆ. ಹೊಸದಾದ ಬಿದಿರಿನ ಬುಟ್ಟಿಯಲ್ಲಿ ರಾಗಿ, ಜೋಳ, ಕೆಲವು ಭಾಗದಲ್ಲಿ ಅಕ್ಕಿ ಹಾಕಿರುತ್ತಾರೆ. ನಡುವೆ ಜೋಕುಮಾರನ ಮೂರ್ತಿಶಿಲ್ಪವನ್ನು ಇಟ್ಟು ಸುತ್ತಲೂ ಬೇವಿನಿಂದ ಅಲಂಕರಿಸಿರುತ್ತಾರೆ.

ಜೋಕುಮಾರನ ಶಿಲ್ಪದ ಅಲಂಕಾರದೊಂದಿಗೆ ಏಳುದಿನಗಳು ಊರಲ್ಲಿ ಮನೆಮನೆಗೆ ಸಂಚಾರ ನಡೆಯುತ್ತದೆ. ಬುಟ್ಟಿಯಲ್ಲಿ ಜೋಕುಮಾರನ್ನು ಕುಳ್ಳಿರಿಸಿಕೊಂಡು ಹೆಂಗಸರು ಮನೆಮನೆಗೆ ಹೋಗಿ ಹಾಡು ಹೇಳುತ್ತಾರೆ. ಜೋಕುಮಾರ ಬಂದಿದ್ದಾನೆ. ಬೆಣ್ಣೆ ಕಾಳು ಕಡಿ ಕೊಡಲು ಕೇಳಿಕೊಳ್ಳುತ್ತಾರೆ. ಜನ ಮನೆ ಮನೆಯಿಂದ ಕಾಳುಕಡಿ ರಾಗಿ, ಬತ್ತ, ಅಕ್ಕಿ ಅಲ್ಲದೆ ಮನೆಯಲ್ಲಿ ತಗಣಿ, ಉಣ್ಣೆ, ಚಿಕ್ಕಾಡ, ಗುಂಗಾಡ ಆಗದಿರಲೆಂದು, ಜೋಕುಮಾರನಿಗೆ ಉಪ್ಪು ಮೆಣಸಿನಕಾಯಿ, ಎಣ್ಣೆ ಬೆಣ್ಣೆ ಅಂಬಲಿಯನ್ನು ಕೊಡುತ್ತಾರೆ. ಈತ ಜನಪದರಲ್ಲಿ ಮಳೆ ತರಿಸುವ ಮತ್ತು ಸಮೃದ್ಧ ಬೆಳೆ ಬರಿಸುವ ಸಂತಾನಪ್ರಾಪ್ತಿ ಮಾಡುವ ದೇವತೆಯಾಗಿ ಆಚರಣೆಗೊಳ್ಳುತ್ತಾನೆ.

7. ಗುರ್ಚಿ ಮೂರ್ತಿಶಿಲ್ಪ: ಲಿಂಗದಾಕೃತಿಯ ಮೂರ್ತಿಶಿಲ್ಪವನ್ನು ಸೆಗಣಿಯ ಉಂಡೆಯಿಂದ ಮಾಡಿ ಅದಕ್ಕೆ ಮೇಲೆ ಕರಕಿಯ ಪತ್ರಿಯನ್ನು ಚುಚ್ಚುತ್ತಾರೆ. ಇದಕ್ಕೆ 'ಗುರ್ಚಿ' ಎಂದು ಕರೆಯುತ್ತಾರೆ. ಈ ಮೂರ್ತಿಶಿಲ್ಪವನ್ನು ತಯಾರಿಸಿದ ಮೇಲೆ ರೊಟ್ಟಿ ಮಾಡುವ ಹಂಚನ್ನು ತಂದು ಅದನ್ನು ಬೋರಲು ಹಾಕಿ (ಡಬ್ಬ ಹಾಕಿ) ಅದರ ಮೇಲೆ ಗುರ್ಚಿಯ ಮೂರ್ತಿಶಿಲ್ಪವನ್ನು ಅಂಟಿಸುತ್ತಾರೆ. ಹೀಗೆ ಸಿದ್ಧವಾದ ಗುರ್ಚಿಯನ್ನು ಪೂಜಿಸಿ ನಂತರ ತಲೆಯ ಮೇಲೆ ಹೊತ್ತುಕೊಂಡು ಊರಲ್ಲಿ ಮನೆ ಮನೆಗೆ, ಓಣಿ ಓಣಿಗೆ ತಿರುಗುವ ಸಂಪ್ರದಾಯವಿದೆ.

8. ಶೀಗಿ, ಗೌರಿ ಮೂರ್ತಿಶಿಲ್ಪಗಳು: ಶೀಗಿ ಹಾಗೂ ಗೌರಿ ಹುಣ್ಣಿಮೆಗಳಲ್ಲಿ ಈ ಮೂರ್ತಿಶಿಲ್ಪದ ಆಚರಣೆ ನಡೆಯುತ್ತದೆ. ಈ ಹುಣ್ಣಿಮೆಯಲ್ಲಿ ರೈತರು ಹೊಲದಲ್ಲಿ ಭೂತಾಯಿಗೆ ಪೂಜೆ ಮಾಡಿ ಚರಗ ಚಲ್ಲುವ ಸಂಪ್ರದಾಯ ಇದೆ. ಹುಣ್ಣಿಮೆಯ ಐದು ದಿನ ಹಿಂದೆ ಪಾಂಡವರು ಅಜ್ಞಾತವಾಸಕ್ಕೆ ಹೋದ ಸ್ಮರಣೆಗಾಗಿ ಪಾಂಡವರ ಐದು ಕಲ್ಲುಗಳನ್ನು ಪೂಜಿಸುವ ವಾಡಿಕೆ ಇದೆ. ಚರಗದ ಬುಟ್ಟಿಗಳಲ್ಲಿ ತುಂಬ ಸುಂದರವಾದ ಚಿತ್ರ ವಿನ್ಯಾಸಗಳನ್ನು ಚಿತ್ರಿಸುತ್ತಾರೆ. ಬುಟ್ಟಿಗೆ ಕಾವಿಯನ್ನು ಬಳಿದು ಅದರ ಮೇಲೆ ನಿಚ್ಚಣಿಕೆ, ಚೇಳು, ಗಿಳಿ, ಹೂ ಹಣ್ಣು ಹಾವು, ಸೂರ್ಯ–ಚಂದ್ರ ಇತ್ಯಾದಿ ಹಲವಾರು ತಮ್ಮ ದೈನಂದಿನ ಬದುಕಿನ ಚಿತ್ರಗಳನ್ನು ಸುಣ್ಣದ ಬಿಳಿಯ ಬಣ್ಣದಿಂದ ಚಿತ್ರಿಸಿರುತ್ತಾರೆ.

ಹೊಲದಲ್ಲಿ ಚರಗ ಚಲ್ಲಿದ ಮೇಲೆ ಕೆಲವರು ಶೀಗಿಯನ್ನು ಮಣ್ಣಿನಿಂದ ಮಾಡಿ ಪೂಜಿಸುತ್ತಾರೆ. ಇನ್ನು ಕೆಲವರು ಮನೆಗೆ ಬರುವಾಗ ಮಣ್ಣನ್ನು ತಂದು, ಮನೆಯಲ್ಲಿ ಮಣ್ಣನ್ನು ಮಿದ್ದಿ ಹದಮಾಡಿ ಎರಡು ಶೀಗಿಗಳನ್ನು ತಯಾರಿಸುತ್ತಾರೆ. ಇವು ಅಡಕಲ ಗಡಿಗೆಯ ಹಾಗೆ ಒಂದರ ಮೇಲೆ ಒಂದರಂತೆ ಶಿಖರದ ಆಕಾರವನ್ನು ಹೊಂದಿರುತ್ತವೆ. ಇಲ್ಲಿ ರಚಿಸುವ ಮೂರ್ತಿಶಿಲ್ಪದ ವಿನ್ಯಾಸಗಳು ಶಿಖರದಾಕೃತಿಯಲ್ಲಿಯೇ ರಚನೆಯಾಗಿರುವುದನ್ನು ಕಾಣಬಹುದು. ಈ ವಿನ್ಯಾಸಗಳು ಐದು ಏಳು ಒಂಬತ್ತು ಹೀಗೆ ಹತ್ತೊಂಬತ್ತು ಬೆಸ ಸಂಖ್ಯೆಯ ಸುತ್ತುಗಳಿಂದ ರಚಿಸಲ್ಪಟ್ಟಿರುವುದೂ ಉಂಟು. ದೊಡ್ಡ ಹಾಗೂ ಚಿಕ್ಕ ಗಾತ್ರದ ಶಿಲ್ಪಗಳನ್ನು ರಚಿಸುತ್ತಾರೆ. ಈ ಶಿಲ್ಪಗಳ ಮುಂದೆ ಐದು ಸಣ್ಣ ಗಾತ್ರದ ಶಿಲ್ಪಗಳನ್ನು ಮಾಡಿ ಇಡುವುದು ಉಂಟು. ಇವುಗಳನ್ನು ಪಾಂಡವರೆಂದೂ ಕೊಂತಿಮಕ್ಕಳೆಂದೂ ಕರೆಯುತ್ತಾರೆ. ಕೆಲವರು ಕಟ್ಟಿಗೆಯಿಂದಲೂ ಈ ಶಿಲ್ಪವನ್ನು ಮಾಡಿಸಿ ಇಟ್ಟಿರುತ್ತಾರೆ.

ಹುಣ್ಣಿಮೆಯಲ್ಲಿ ಐದು ದಿನವಿರುವಾಗಲೇ ಹಳ್ಳಿಯ ಹೆಣ್ಣು ಮಕ್ಕಳು ಬೆಳದಿಂಗಳಲ್ಲಿ ಮನೆಯಲ್ಲಿ ಗೌರಿಯನ್ನು ಕುಳ್ಳಿರಿಸಿ ಪೂಜಿಸಿ ದಿನವೊಂದು ತರಹದ ಸಕ್ಕರೆಯ ಪ್ರಾಣಿ, ಪಕ್ಷಿಗಳ ವೈವಿಧ್ಯಮಯವಾದ ಆರತಿಗಳನ್ನು ಮಾಡಿ ಹೂಗಳನ್ನು ಗೌರಿಗೆ ಏರಿಸಿ ಆರತಿ ಬೆಳಗುವ ಆಚರಣೆಯಿದೆ. ಗೌರಿಯ ಶಿಲ್ಪವನ್ನು ಊರಲ್ಲಿ ಕುಂಬಾರರು, ಬಡಿಗರು, ಅಕ್ಕಸಾಲಿಗರು ಮುಂತಾದ ಜನಾಂಗದವರು, ಮಣ್ಣಿನ ಈ ಶಿಲ್ಪವನ್ನು ಮಾಡುತ್ತಾರೆ. ಇಲ್ಲಿ ಶಿವ, ಹಾಗೂ ಗೌರಿಗಂಗೆಯರ ಶಿಲ್ಪಗಳಿರುತ್ತವೆ. ಕುಳಿತ ಭಂಗಿಯ ಶಿವನ ಮೂರ್ತಿಶಿಲ್ಪದಲ್ಲಿ ಶಿವನ ತೊಡೆಯ ಮೇಲೆ ಗೌರಿಯ ಶಿಲ್ಪ ಶಿವನ ತಲೆಯ ಜಡೆಯಲ್ಲಿ ಗಂಗೆಯ ಮೂರ್ತಿ ಶಿಲ್ಪವನ್ನು ಮಾಡಿರುತ್ತಾರೆ. ಈ ಶಿಲ್ಪವನ್ನು ಒಟ್ಟಾರೆಯಾಗಿ ಗೌರಿಯ ಶಿಲ್ಪವೆನ್ನುತ್ತಾರೆ. ಈ ಮೂರು ಮೂರ್ತಿಶಿಲ್ಪಗಳಿಗೆ ಸ್ಥಳೀಯ ಕಲಾವಿದರೇ ತಯಾರಿಸಿದ ಹಸಿರು, ಕೆಂಪು, ಹಳದಿ, ಕಪ್ಪು ಇತ್ಯಾದಿ ಬಣ್ಣದ ಅಲಂಕಾರ ಮಾಡಿರುತ್ತಾರೆ. ಇನ್ನು ಕೆಲವರು ಕಟ್ಟಿಗೆಯಿಂದಲೇ ಈ ಮೂರ್ತಿಶಿಲ್ಪವನ್ನು ಅಖಂಡವಾಗಿ ಒಂದೇ ಶಿಲ್ಪದಲ್ಲಿ ಮಾಡಿಸಿರುತ್ತಾರೆ. ಆ ಶಿಲ್ಪವನ್ನೇ ಗೌರಿ ಹುಣ್ಣಿಮೆಯಲ್ಲಿ ಪೂಜೆಗಾಗಿ ಬಳಸುತ್ತಾರೆ.

ಶ್ರಾವಣ ಮಾಸದಲ್ಲಿ ಗಡಿಗೆಯ ಮೇಲೆ ಚಿತ್ರಾಲಂಕಾರ ಮಾಡಿದ ಗೌರಿಯ ಮೂರ್ತಿಶಿಲ್ಪವು ಕಂಡು ಬರುತ್ತದೆ. ಮನೆ ಮನೆಯಲ್ಲಿ ಮಣ್ಣಿನ ಹೊಸ ಗಡಿಗೆಗಳನ್ನು ತಂದು ಅವಕ್ಕೆ ಬೆಂಡಿ ಬಾಳನ್ನು ದಪ್ಪವಾಗಿ ಲೇಪನ ಮಾಡಿ ಚಿತ್ರಾಲಂಕಾರ ಮಾಡುತ್ತಾರೆ. ಅದರ ಮೇಲೆ ಕಪ್ಪು ಮತ್ತು ಬಿಳಿಯ ಬಣ್ಣದ ಚುಕ್ಕೆಗಳಿಂದ ಹಲವಾರು ಚಿತ್ರಗಳನ್ನು ಕಡ್ಡಿಗಳಿಂದ ಬಣ್ಣದಲ್ಲಿ ಎದ್ದಿ ಚಿತ್ರಿಸಿರುತ್ತಾರೆ. ಹೆಣ್ಣುಮಕ್ಕಳು ವಿಶೇಷವಾಗಿ ಈ ಹಬ್ಬವನ್ನು ಆದರಿಸುತ್ತಾರೆ. ಗಡಿಗೆಯ ಪಾರ್ಶ್ವವನ್ನು ಐದು ಭಾಗಗಳಾಗಿ ವಿಭಾಗಿಸಿಕೊಂಡು ಲಕ್ಷ್ಮಿಯ ಮುಖ ಇಲ್ಲವೇ ಸಂಪೂರ್ಣ ದೇಹ ಆಕಳು, ತುಳಸಿಕಟ್ಟೆ, ಶಂಖ, ಚಕ್ರ ಮುಂತಾದುವನ್ನು ಚಿತ್ರಿಸುತ್ತಾರೆ. ಮುಚ್ಚಳವನ್ನು ಪೂರ್ತಿ ಲಕ್ಷ್ಮಿಯ ಮುಖವನ್ನಾಗಿ ಪರಿವರ್ತಿಸಿಕೊಂಡು ಕೂದಲಿನ ಕಪ್ಪು ಬಣ್ಣವನ್ನು ಕಾಲುಭಾಗಕ್ಕೆ ಬಳಿದು ಮುಕ್ಕಾಲು ಭಾಗದಲ್ಲಿ ಸುಂದರವಾದ ಮುಖವನ್ನು ಚಿತ್ರಿಸಲಾಗುತ್ತದೆ. ಮೇಲೆ ಗಿಂಡಿಯನ್ನು ಬಳಸಿ ಚಿತ್ರ ಬರೆಯುತ್ತಾರೆ. ಗಡಿಗೆಯ ಮೇಲೆ ತೆಂಗಿನ ಕಾಯಿಯನ್ನಿಟ್ಟು ಮುಖದ ವ್ಯವಸ್ಥೆ ಮಾಡಿ ಪೂಜಿಸುತ್ತಾರೆ.

9. ಹಟ್ಟಿಹಬ್ಬದ ಪಾಂಡವರ ಮೂರ್ತಿಶಿಲ್ಪಗಳು: ದೀಪಾವಳಿ ಹಬ್ಬವನ್ನು ಹಳ್ಳಿಗಳಲ್ಲಿ ಹಟ್ಟಿ, ಹಬ್ಬವೆಂದು ಕರೆಯುತ್ತಾರೆ.

ಪ್ರತಿಪದೆಯ ದಿವಸ ಸೆಗಣಿಯ ಪಾಂಡವರನ್ನು ಮಾಡಿ ಅವರನ್ನು ಊರಿನಲ್ಲಿ ಬರಮಾಡಿಕೊಳ್ಳುವ ಸಂಪ್ರದಾಯ ನಡೆಯುತ್ತದೆ. ಸೆಗಣಿಯಿಂದ ಗುಪ್ಪೆಯಾಕೃತಿಯ ನೂರಾರು ಮೂರ್ತಿಶಿಲ್ಪಗಳನ್ನು ಹೆಣ್ಣುಮಕ್ಕಳು ರಚಿಸುತ್ತಾರೆ. ಅಂದು ಮನೆಯಲ್ಲಿ ಈ ಹಬ್ಬಕ್ಕಾಗಿಯೇ ದನಗಳ ಸೆಗಣಿಯನ್ನು ಮೊದಲೇ ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ತಮಗೆ ಇಷ್ಟವೆನಿಸಿದ ಸೆಗಣಿಯ ವಾಸ್ತುವಿನ್ಯಾಸಗಳು, ಅಲ್ಲಿ ತಯಾರಾಗುತ್ತವೆ. ಉದಾ: ಬಾವಿ, ಕೋಟೆ, ಬೀಸುವಕಲ್ಲು, ಮನೆ, ಪ್ರಾಣಿ, ಪಕ್ಷಿಗಳು ಆಕಾರ ಪಡೆಯುತ್ತವೆ. ಇವುಗಳನ್ನು ಬಾಗಿಲಲ್ಲಿ, ಹೊಸ್ತಿಲಲ್ಲಿ, ಮನೆಯ ಮೂಲೆ ಮೂಲೆಗಳಲ್ಲಿ ಹಟ್ಟಿಯಲ್ಲಿ ಬೀಸುವಕಲ್ಲಿನ ಮೇಲೆ ತಿಪ್ಪೆಯ ಮೇಲೆ ಹೀಗೆ ಮನೆಯಲ್ಲೆಲ್ಲಾ ಈ ಗುಪ್ಪೆಯಾಕೃತಿಯ ಶಿಲ್ಪಗಳನ್ನು ಮಾಡಿ ಇಡುತ್ತಾರೆ. ಇವುಗಳಿಗೆ ತಲೆಯ ಮೇಲೆ ಉತ್ತರಾಣಿ ಕಡ್ಡಿಯನ್ನು ಅವರೆಯ ಹೂವನ್ನೋ ಹೊನ್ನಾವರಿಯ ಹೂ ದಂಟುಗಳನ್ನು ಚುಚ್ಚುತ್ತಾರೆ. ಮನೆಯ ಒಂದು ಭಾಗದಲ್ಲಿ ಮಾತ್ರ ವೃತ್ತಾಕಾರವಾಗಿ ಸಾರಿಸಿದ ನೆಲದ ಮೇಲೆ ಒಂದು ನೂರಾ ಒಂದು ಇಂತಹ ಗುಪ್ಪೆಯಾಕೃತಿಯ ಶಿಲ್ಪಗಳನ್ನು ಮಾಡಿ ನಡುವೆ ಒಂದು ದೊಡ್ಡದಾದ ಇಂತಹದೆ ಗುಪ್ಪೆಯಾಕೃತಿಯ ಶಿಲ್ಪವನ್ನು ಮಾಡಿಡುತ್ತಾರೆ. ಇದಕ್ಕೆ ಗಾಂಧಾರಿ ಎಂದು ಉಳಿದವುಗಳಿಗೆ ಪಾಂಡವ ಕೌರವರೆಂದು ಒಂದು ಗುಪ್ಪೆಗೆ ಕರ್ಣನೆಂದು ಕರೆಯುತ್ತಾರೆ. ಇನ್ನು ಕೆಲವರು ಈ ದೊಡ್ಡ ಶಿಲ್ಪಕ್ಕೆ 'ಹಟ್ಟೆವ್ವ' ನೆಂದು ಹಟ್ಟಿಯ ಲಕ್ಕವ್ವನೆಂದು ಉಳಿದವುಗಳನ್ನು ಗುರ್ಚಿಗಳೆಂದು ಕರೆಯುತ್ತಾರೆ.

ಅಂದು ಪಾಂಡವರ ಹೆಜ್ಜೆಯ ಗುರುತುಗಳೆಂದು ಕಾವಿಯ ಮಣ್ಣಿನ ಮೇಲೆ ಸುಣ್ಣದ ಹೆಜ್ಜೆಯ ಚಿತ್ರಗಳನ್ನು ಮನೆಯ ಎಲ್ಲ ಕೊಠಡಿಗಳಲ್ಲಿ ಹಟ್ಟಿಯ ಹೊರಗೆ ಎಲ್ಲೆಲ್ಲೂ ಇಂತಹ ಹೆಜ್ಜೆಯ ಚಿತ್ರಗಳನ್ನು ಚಿತ್ರಿಸಿರುತ್ತಾರೆ. ಈ ವಾಸ್ತು ಮೂರ್ತಿಶಿಲ್ಪಗಳಿಗೆ ಹೊಸ ಬೆಳೆಯ ಧಾನ್ಯಗಳಿಂದ ಅಡಿಗೆ ಮಾಡಿ ಪೂಜೆ ಸಲ್ಲಿಸಿ ನೈವೇದ್ಯ ಮಾಡುವ ಸಂಪ್ರದಾಯವಿದೆ.

ಮರುದಿವಸ ಈ ಎಲ್ಲ ಸೆಗಣಿಯ ಮೂರ್ತಿಶಿಲ್ಪಗಳನ್ನು ಮನೆಯ ಮಾಳಿಗೆಯ ಕುಂಬಿಗಳ ಮೇಲೆ ಸಾಲಾಗಿ ಇಡುತ್ತಾರೆ. ಊರಲ್ಲಿ ಎಲ್ಲರೂ ತಮ್ಮ ತಮ್ಮ ಮನೆಯ ಮೇಲೆ ಹೀಗೆ ಇಡುವುದರಿಂದ ಊರಿನ ಎಲ್ಲ ಮನೆಯ ಕುಂಬಿಗಳು ತುಂಬಾ ಅಲಂಕಾರಯುತವಾಗಿ ಶೋಭಿಸುತ್ತವೆ.

10. ಹೋಳಿ ಹಬ್ಬದ ಕಾಮಣ್ಣ ರತಿಶಿಲ್ಪಗಳು: ಹೋಳಿ ಹಬ್ಬಕ್ಕೆ ಕಾಮನ ಹಬ್ಬವೆಂದು ಕರೆಯುತ್ತಾರೆ. ಕಾಮನ ತುಂಬ ಸುಂದರನೆಂದು ಅವನನ್ನು ಎಲ್ಲರೂ ಹಾಡಿ ಹೊಗಳಿರುವುದು ಸರ್ವವಿದಿತ. ಚಲುವಿಕೆಗೆ ಇನ್ನೊಂದು ಹೆಸರೇ ಕಾಮ. ಇಂತಹ ಚಲುವಿನ ಹಿನ್ನೆಲೆಯಿರುವ ಕಾಮನ ಶಿಲ್ಪವನ್ನು ಅತ್ಯಂತ ರಸಿಕತನದಿಂದ ಸೊಗಸುಗಾರಿಕೆಯಿಂದ ನಿರ್ಮಿಸುತ್ತಾರೆ. ಹೋಳಿ ಹುಣ್ಣಿಮೆಯ ದಿವಸ ಕಾಮನ ಸುಂದರವಾದ ಮೂರ್ತಿಶಿಲ್ಪವನ್ನು ಮಾಡಿಸಿ ಊರಲ್ಲಿಯ ಕಾಮನ ಕಟ್ಟೆಯ ಚಾವಡಿಯಲ್ಲಿ ಅವನನ್ನು ಅಲಂಕಾರ ಮಾಡಿ ಪೂಜಿಸುವ ಆದರಣೆಯಿದೆ.

ಇನ್ನೂ ಕೆಲವು ಕಡೆಗೆ ದೊಡ್ಡ ಕೋಲನ್ನು ನಿಲ್ಲಿಸಿ ಹುಲ್ಲು ಹರಿದ ಅರಿವೆ ಮುಂತಾದವನ್ನು ಕಟ್ಟಿ ಬಟ್ಟೆ ತೊಡಿಸಿ ಮೇಲೆ ಗಡಿಗೆಯ ಮುಖ ಹಾಕಿರುವ ದೊಡ್ಡ ಆಕೃತಿಯೂ ಬಹಳಷ್ಟು ಕಡೆಗೆ ನೋಡಲು ಸಿಗುತ್ತದೆ. ಸುಂದರವಾದ ಕಟ್ಟಿಗೆಯ ಮುಖ ಕೈಕಾಲುಗಳಿದ್ದು ಇದನ್ನು ಜೋಡಿಸಿ ದೊಡ್ಡ ಮುಂಡಾಸು ಸುತ್ತಲಾಗಿರುತ್ತದೆ. ಕೈಯಲ್ಲಿ ಬಿಲ್ಲು ಹಿಡಿದು ಬಾಣ ಹೊಡೆಯಲು ಸಿದ್ಧನಾಗಿ ನಿಂತಿರುವಂತೆ ಮೂರ್ತಿಯನ್ನು ಮಾಡಿರುವುದು ಸಾಮಾನ್ಯ. ಕೆಲವು ಭಾಗದಲ್ಲಿ ಸಂಪೂರ್ಣವಾಗಿ ಕಟ್ಟಿಗೆಯಿಂದಲೆ ಕಾಮನ ಮೂರ್ತಿಶಿಲ್ಪ ರಚನೆಯಾಗುತ್ತದೆ. ಅವನೊಂದಿಗೆ ರತಿಯ ಹೆಣ್ಣು ಶಿಲ್ಪವನ್ನು ಮಾಡಿ ಕಾಮನ ತೊಡೆಯ ಮೇಲೆ ಕೂರಿಸಲಾಗುತ್ತದೆ. ಇನ್ನೂ ಹಲವು ಊರುಗಳಲ್ಲಿ ಕಾಮ ಮತ್ತು ರತಿಯ ಮಣ್ಣಿನ ಶಿಲ್ಪಗಳನ್ನು ಮಾಡಿ ಮುಖಕ್ಕೆ ಬಣ್ಣದ ಲೇಪನ ಮಾಡಿ ಆಕರ್ಷಕವಾಗಿ ಅಲಂಕರಿಸುತ್ತಾರೆ.

11. ರಾಶಿ ಹುಲುಸಾಗಿಸುವ ಬೂದಗಶಿಲ್ಪ: ದೃಷ್ಟಿದೋಷ ಪರಿಹಾರ ಆಶಯದ ಹಿನ್ನೆಲೆಯಲ್ಲಿ ರಚನೆಗೊಂಡಿರುವ ಬೂದಗಶಿಲ್ಪದ ಆಚರಣೆ ಉತ್ತರ ಕರ್ನಾಟಕದಲ್ಲಿ ಕಂಡು ಬರುತ್ತದೆ. ಪ್ರತಿಯೊಬ್ಬ ರೈತ ಕಣದಲ್ಲಿ ರಾಶಿ ಮಾಡುವಾಗ ತನ್ನ ರಾಶಿಯೂ ಹುಲುಸಾಗಲೆಂದು ಹಂತಿ ಹೊಡೆಯುವ ಕಡೆಯ ಎತ್ತಿನ ಸೆಗಣಿಯಿಂದ ಗುಪ್ಪೆಯಾಕೃತಿಯ ಶಿಲ್ಪವನ್ನು ಮಾಡಿ ಅದಕ್ಕೆ ಜೋಳದ ಕಾಳನ್ನು ಅಂಟಿಸಿ ಎತ್ತಿನ ಬಾಲದ ಜವಿಯನ್ನು ಕಿತ್ತಿ ಜುಟ್ಟದ ಹಾಗೆ ಸಿಕ್ಕಿಸುತ್ತಾನೆ. ಅದನ್ನು ಕಂಬಳಿ ಹೊದೆದುಕೊಂಡು ವ್ಯಕ್ತಿಯೊಬ್ಬ ಬಂದು ಪೂಜಿಸಿ ಕೈಯಲ್ಲಿ ಹಿಡಿದುಕೊಂಡು ಕಣದ ರಾಶಿಯನ್ನು ಐದು ಸುತ್ತುಹಾಕುತ್ತಾನೆ. ನಂತರ ರಾಶಿಯ ಮಧ್ಯದಲ್ಲಿ 'ಬುದುಗ' ಶಿಲ್ಪವನ್ನು ಇಟ್ಟು ಮತ್ತೆ ಪೂಜಿಸಲಾಗುತ್ತದೆ. ಈ ಸಂದರ್ಭದಲ್ಲಿ ರಾಸಿಯ ಮೇಲೆ ಬೂದಿಯ ರಂಗೋಲಿ ಹಾಕುತ್ತಾರೆ. ಸೂರ್ಯ ಚಂದ್ರ, ನಕ್ಷತ್ರ ಮುಂತಾದ ಚಿತ್ರಗಳನ್ನು ಬಿಡಿಸುತ್ತಾರೆ. ರಾಶಿ ಮುಗಿದ ಮೇಲೆ ಮನೆ ಹಗೆಯಲ್ಲಿ ಈ ಧಾನ್ಯಗಳನ್ನು ಹಾಕುವಾಗ ಅದರೊಂದಿಗೆ ಮಧ್ಯದಲ್ಲಿ ಈ ಬೂದುಗ ಶಿಲ್ಪವನ್ನು ಹಾಕುತ್ತಾರೆ.

(ಎಸ್‌ಸಿಪಿ)

ಜನಪದ ಸಂಗೀತ: 'ಹಾಡುವಿಕೆ' ಎಂಬುದು ಭಾವ-ಭಾವನೆಗಳ ಧ್ವನಿರೂಪಿ ಅಭಿವ್ಯಕ್ತಿ. ಹಿತ ನೀಡುವ, ಮುದಕೊಡುವ ನಾದಾಭಿವ್ಯಕ್ತಿಯೂ ಹೌದು. ಮಾತಿನಾಕ್ಷರದ ಭಿನ್ನ ಅಭಿವ್ಯಕ್ತಿ, ಮಾತಿಗೂ ಮೀರಿದ ಅಭಿವ್ಯಕ್ತಿ ಸಾಧ್ಯತೆ ಶಕ್ತತೆಯದು.

ಜನಪದ ಸಂಗೀತವನ್ನು ಇಟ್ಟು ನೋಡಿದಾಗ ಈ ಅರ್ಥಗಳಷ್ಟೇ ಅಲ್ಲ, ಖುಷಿ ಆನಂದದ ಸಂದರ್ಭಗಳಲ್ಲದೆ ಅತ್ಯಂತ ನೋವಿನ ಕ್ಷಣದಲ್ಲೂ ಹೊಮ್ಮುವುದು ಜನಪದ ಹಾಡು.

ಸಾವಾದ ವ್ಯಕ್ತಿಯ ಹೆಣ ನೋಡಲು ಬರುವವರು ಹಾಡಿನ ಲಯಪೂರಿತ ಮಾತುಗಳಿಂದಲೇ ತಮ್ಮ ನೋವನ್ನು ಅಭಿವ್ಯಕ್ತಿಸುವುದನ್ನು ಇಂದಿಗೂ ನೋಡುತ್ತೇವೆ.

ತಾಳ, ತಂತಿ, ಊದುವ, ಚರ್ಮವಾದ್ಯಗಳ ನಾಲ್ಕು ರೂಪಗಳೊಂದಿಗೆ ನಾದ ಹೊಮ್ಮಿಸುವ ವಾದ್ಯಗಳು, ಹಾಡುವ ಹೆಂಗಸರು, ಗಂಡಸರು, ಮಕ್ಕಳ ಹಾಡುವಿಕೆಯ ನಾನಾ ರೂಪಗಳು ಅವುಗಳ ವೈಶಿಷ್ಟ್ಯವನ್ನು ಹೇಳಹೋಗುವ ಈ ಪ್ರಯತ್ನ ತುಂಬಿದ ಕೆರೆಯಲ್ಲಿನ ಬೊಗಸೆ ಬೊಗಸೆಯಷ್ಟನ್ನು ಹೇಳಹೊರಟಂತೆಯೇ ಸರಿ.

ವಾದ್ಯಗಳ ಸ್ವರೂಪ, ಸಂರಚನೆ, ನಾದೋತ್ಪತ್ತಿಯ ರೂಪಗಳು ಪರಿಣಾಮ, ವಾದ್ಯ ವಾದ್ಯಗಳೊಂದಿಗಿನ ಬೆರೆಯುವಿಕೆ ಔಟ್‌ಪುಟ್‌ಗಳನ್ನು ಅವಲೋಕಿಸಿದಾಗ, ಇದಕ್ಕೆ ಪೂರಕವಾಗಿ ವಾದ್ಯಗಳ ಕುರಿತ ನಂಬಿಕೆಗಳು, ಪುರಾಣಗಳು, ಸೃಷ್ಟಿ ಪುರಾಣಗಳು ಎಲ್ಲವನ್ನು ನೋಡಿದಾಗ ಕೊರಗರು, ಬೆಟ್ಟ ಕುರುಬರು ಹಾಗೂ ಊರ ಕುರುಬರ ಡೊಳ್ಳುಮೇಳಗಳು ನೆಲದ ಅತ್ಯಂತ ಪ್ರಾಚೀನ ವಾದ್ಯಮೇಳಗಳಾಗಿ ಕಾಣಬರುತ್ತವೆ. ಈ ಮೇಳಗಳು ಇಂದಿಗೂ ತಮ್ಮ ಜೀವಂತಿಕೆ ಮತ್ತು ಕ್ರಿಯಾಶೀಲತೆಯನ್ನು ಉಳಿಸಿಕೊಂಡಿವೆ. ಇವರ 'ಡೋಲು', 'ಡೊಳ್ಳು'ಗಳು ಆಯಾ ಬುಡಕಟ್ಟುಗಳಿಗೆ ಪವಿತ್ರಭಾವದ ವಾದ್ಯಗಳು. ಕುರುಬರ 'ಹಾಲುಮತ ಪುರಾಣ' ಅಥವಾ 'ಬೀರಪ್ಪನ ಕಾವ್ಯ' ಡೊಳ್ಳಿನ ನಾದದ ಹಿಮ್ಮೇಳದ ಹಾಡಿಕೆಯದು. 'ಡೊಳ್ಳು' ಡೊಳ್ಳು ಕುಣಿತ ಹಾಗೂ ಸುದೀರ್ಘ ಜನಪದ ಕಾವ್ಯಗಳ ಗಾಯನ ಕ್ರಿಯೆಗಳೆರಡರಲ್ಲೂ ಇಂದಿಗೂ ಪಾಲ್ಗೊಳ್ಳುತ್ತದೆ. ಅವರ ಸಂಗೀತದ ವಾದ್ಯಗಳ ನಾದಗಳ ಫಲುಕುಗಳಲ್ಲಿ ಪರಂಪರೆಯ ಗತ್ತುಗಳ ರೂಪಗಳನ್ನು ಗುರುತಿಸಲು ಸಾಧ್ಯವಿದೆ. ಇಂತಹದೇ ಕೆಲವು ಹಿನ್ನೆಲೆಗಳು ಕುರುಬರ ಡೊಳ್ಳಿಗೂ ಅನ್ವಯಿಸುತ್ತದೆ.

ಡೊಳ್ಳು ಮೇಳಗಳಲ್ಲೂ ಕೊಳಲು ನುಡಿಸಲಾಗುತ್ತಿತ್ತು. ಈಗ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ. ಡೊಳ್ಳಿನ ಗತ್ತುಗಳ ಮಧ್ಯದ ತುಸು ಬಿಡುವಲ್ಲಿ ನಾದ ಏರಿಳಿತ ಕಟ್ಟುವ ನಡೆಯದ್ದಾಗಿತ್ತು ಕೊಳಲಿನದು. ಜನಪದ ಸಂಗೀತವನ್ನು 1. ವಾದ್ಯ ಸಹಿತ 2. ವಾದ್ಯ ರಹಿತ ಎಂದು ಸ್ಥೂಲವಾಗಿ ಎರಡು ಭಾಗಗಳನ್ನಾಗಿ ವಿಭಾಗಿಸಬಹುದು.

1. ವಾದ್ಯ ಸಹಿತ: ವಾದ್ಯಸಹಿತ ಸಂಗೀತದಲ್ಲಿ ಸಾಕಷ್ಟು ಒಳವಿಭಾಗಗಳು ಬರುತ್ತವೆ. ಅವುಗಳಲ್ಲಿ ಕೆಲವನ್ನು ಸ್ಥೂಲವಾಗಿ ಹೇಳುತ್ತಿದ್ದೇನೆ.

ವಾದ್ಯವೇ ಪ್ರಧಾನವಾದ ಮೇಳಗಳು: ವಾದ್ಯಸಹಿತ ಮೇಳಗಳಲ್ಲಿ ಕರ್ನಾಟಕದ ಅತ್ಯಂತ ಪ್ರಧಾನ ವಾದ್ಯ ಮೇಳಗಳು ಕರಡಿ ಮಜಲು ಮೇಳ, ಜಗ್ಗಲಿಗೆ ಮೇಳ, ಚಕೂರಿ ಮೇಳ, ಚಿಟ್ ಮೇಳ, ಭಜಂತ್ರಿ ಮೇಳ, ಸನಾದಿ ಮೇಳ, ನಾದಸ್ವರ ಮೇಳ, ಕೊಂಬು, ಕೊಟ್ಟು ವಾಲಗ ಮೊದಲಾದ ಸಾಕಷ್ಟು ಮೇಳಗಳಿವೆ. ಈ ಮೇಳಗಳಲ್ಲಿ ಕರಡಿ, ಖಣಿ, ಟಕೂರಿ, ಸಂಪ್ರದಾನಿ, ಡೋಲು ಮೊದಲಾದ ಚರ್ಮವಾದ್ಯಗಳು, ಸನಾದಿ, ನಾಗಸ್ವರ, ಮೌರಿ ಮೊದಲಾದ ಊದುವ ವಾದ್ಯಗಳು, ತಾಳವಾದ್ಯಗಳು ಒಳಗೊಂಡ ಪೂರ್ಣಮೇಳಗಳಿವು. ಮದುವೆ, ದೇವರ ಉತ್ಸವ, ಮೆರವಣಿಗೆಗಳಲ್ಲಿ ತಮ್ಮ ಭಿನ್ನ ವಿಭಿನ್ನ ನಾದಗಳ ಸೊಗಸುವಿಕೆಯಿಂದಲೆ ಮಜಲು ಕಟ್ಟುತ್ತವೆ.

ವೃತ್ತಿಗಾಯಕ ಮೇಳಗಳು: ವಾದ್ಯಸಹಿತ ವೃತ್ತಿಗಾಯಕ ಮೇಳಗಳಲ್ಲಿ ನೀಲಗಾರರು, ತಂಬೂರಿಯವರು, ದೇವರ ಗುಡ್ಡರು, ಚೌಡಿಕೆಯವರು, ಗಣೆಯವರು, ಗೊಂದಲಿಗರು, ಕರಪಾಲದವರು, ಕಿನ್ನರಿ ಜೋಗಿಗಳು ಮೊದಲಾದ ಹಾಡು ಮೇಳಗಳು ಮುಖ್ಯವಾದವು. ತಂಬೂರಿ, ತಮಟೆ, ದಮಡಿ, ಕಂಸಾಳೆ ಚೌಡಿಕೆ, ಗುಣಿಚೌಡಿಕೆ, ಸಂಬಾಳ, ತಾಳಗಳು ಇಲ್ಲಿನ ವಾದ್ಯಗಳು. ಹಾಡುಗಾರರ ಹಾಡುವಿಕೆಗೆ ಇವು ಪೂರಕ ಸಹವರ್ತಿಗಳು. ಈ ಮೇಳಗಳ ವಿಶೇಷವೆಂದರೆ ಹಾಡುಗಾರರೇ ವಾದ್ಯಗಾರರು ಆಗಿರುವುದು. ತಮ್ಮ ಹಾಡು-ಕಥನ ನಿರ್ಮಿತಿಯ ಗಾಯನಕ್ಕೆ ನಾದದ ಸೊಗಸು ತುಂಬಿಕೊಂಡ ರೂಪ ಇಲ್ಲಿಯದು. ಬರೀ ವಾದ್ಯಗಳೇ ಮೇಳಗಳನ್ನು ಮುನ್ನಡೆಸಲಾರವು. ಹಾಗಾಗಿ ಹಾಡು-ನಾದಗಳ ಅನುಸಂಧಾನದ ಅನುಸರಣೆ ಇಲ್ಲಿದೆ. ಆದ್ದರಿಂದಲೇ ಕಾವ್ಯಗಾಯನಕ್ಕೆ ಸೊಗಸುಗಾರಿಕೆ ಏರ್ಪಡುತ್ತಿರುವುದು. ಬರೀ ಧ್ವನಿಯ ಏಕತಾನತೆಯನ್ನು ಮುರಿದು ವಾದ್ಯಗಳು ಸೊಬಗು ಕಟ್ಟುತ್ತವೆ. ಕಾವ್ಯ ರಸಾಸ್ವಾದಕ್ಕೆ ಸೆಳೆವು ತುಂಬುತ್ತವೆ. ಹಾಡುಗಾರರೇ ವಾದ್ಯಗಾರರು ಆಗಿರುವುದರಿಂದ ವಾದ್ಯಗಳನ್ನು ಎಲ್ಲಿ, ಹೇಗೆ, ಯಾವ ತಾನ-ಅಬ್ಬರದಲ್ಲಿ ತಂದುಕೊಳ್ಳಬೇಕು ಎಂಬುದು ತಮ್ಮ ಕೈಯ ನಿಯಂತ್ರಣವಾಗಿರುತ್ತದೆ. ನುಡಿಗಳ ಪುನರಪಿ ಗಾಯನ, ಪಲ್ಲವಿಗಳ ಪುನರಪಿ ಗಾಯನದ ವೇಳೆಯಲ್ಲಿ ವಾದ್ಯಗಳ ಅವಾಜ್ ಹೆಚ್ಚಿಸುವ ಉಳಿದಂತೆ ಹದಮಿದದಲ್ಲಿ ವಾದ್ಯಗಳನ್ನು ನುಡಿಸುವುದು ಇಲ್ಲಿನ ರೀತಿ. ಇದು ಯಾವುದೇ ಬಗೆಯ ಹಾಡು ಮೇಳಗಳಿಗೂ ಇರಬೇಕಾದ ಎಚ್ಚರ. ಹಳ್ಳಿಗಳಲ್ಲಿ ಕಲಿಸುವ ನಾಟಕಗಳಲ್ಲಿ ನಾಟಕದ ಮಾಸ್ತರರು ಬಹುಶ್ರಮದಿಂದ ತಿದ್ದಿ ತೀಡಿ ಪಾತ್ರಧಾರಿಗೆ ಹಾಡು ಕಲಿಸುತ್ತಾರೆ.

ಕಣಿ/ಭವಿಷ್ಯಮೇಳಗಳು: ಬುಡುಬುಡಿಕೆ, ಕುರುಮಾಮ, ಎಣ್ಣೆಜೋಗಿ, ಇರುಳಿಗರ ಕಣಿ, ಸೋಲಿಗರ ಸೋರೆಬುರುಡೆ ಕಣಿ ಮೊದಲಾದ ಮೇಳಗಳಲ್ಲಿ ಬುಡುಬುಡು ನುಡಿವ ಬುಡುಬುಡಿಕೆ, ಟಿಂಗ್ ಟಿಂಗ್ ಎನ್ನುವ ತಂಬೂರಿ, ಚೌಡಿಕೆ, ಕಣಿದಮಟೆ, ಸೋರೆಬುರುಡೆಗಳು ವಾದ್ಯಗಳಾಗಿ ದುಡಿಮೆಗೊಳ್ಳುತ್ತವೆ. ತನ್ನೆದುರಿನ ಭವಿಷ್ಯ ಕೇಳುವ ಕೇಳುಗರ ಮನೋ ನೆಲೆಯ ಮೇಲೆ ಛಾಪುಹಾಕಲು ಹಾಗೂ ಹೇಳುವವನ ಹೇಳುವಿಕೆಯ ಗುರಿಗೆ ಪೂರಕ ನಾದ ಹೊಮ್ಮಿಸಿ, ಹೇಳುವ ನುಡಿಗಳ ಉತ್ಪತ್ತಿಗೆ ಉತ್ತೇಜಕವಾಗಿ ಈ ವಾದ್ಯಗಳು ನಿರ್ವಹಿಸುತ್ತವೆ. ಇದರಿಂದ ನುಡಿವ ನುಡಿಗೆ ಗಂಭೀರತೆ ಉಂಟಾಗುತ್ತದೆ. ಇದೇ ಕುಣಿಗಾರನ ಗುರಿ. ಆದರೆ ಇಲ್ಲೂ ಸಂಗೀತವಿದೆ. ಅದರ ಪಾತ್ರ ಬೇರೆ ಅಷ್ಟೆ.

ಕುಣಿತ ಸಂಬಂಧಿ ವಾದ್ಯಮೇಳಗಳು: ಡೊಳ್ಳು ಕುಣಿತ, ಪ್ರಜಾ ಕುಣಿತ, ರಂಗದಕುಣಿತ, ಪಟದ ಕುಣಿತ, ದಟ್ಟಿ ಕುಣಿತ, ಖರ್ಬಲ ಕುಣಿತ, ವೀರಗಾಸೆ, ಕೋಲಾಟ ಮೊದಲಾದ ಕುಣಿತ ಪ್ರಧಾನ

ವಾದ ಜನಪದ ಕಲೆಗಳ ಕುಣಿತಗಳ ನಡೆ, ನಿಯಂತ್ರಣ, ಮಜಲು ತುಂಬುವಿಕೆ, ಸೊಗಸಿನ ವಿನ್ಯಾಸ ನಿರ್ಮಾಣದ ಹಿಂದೆ ವಾದ್ಯಗಳು ಹೆಗಲಿಗೆ ಹೆಗಲುಕೊಟ್ಟು ದುಡಿಯುತ್ತವೆ. ಅಂತಲ್ಲಿ ಮಾತ್ರ ಕುಣಿತದ ಉನ್ನತತೆ ಉಂಟಾಗುತ್ತವೆ. ನಾದ ಮತ್ತು ಕುಣಿತ ಎರಡರ ಪರಿಣತೆಯ ಪರಿಣಾಮ ಇಲ್ಲಿ ಬಹುಮುಖ್ಯವಾದುದು. ವಾದ್ಯಗಾರ-ಕುಣಿತಗಾರ, ನಾದಕೌಶಲ್ಯ-ಕುಣಿತಕೌಶಲ್ಯ ಇಲ್ಲಿ ಒಂದನ್ನೊಂದು ತಬ್ಬಿ ನಡೆಯುವಂತಹವು. ವಾದ್ಯಗಳ ಹೊರತು ಕುಣಿತ ಇಲ್ಲಿ ನಿಸ್ತೇಜ.

ಆಚರಣಾ ಸಂಬಂಧಿ ವಾದ್ಯಗಳು: ವಾದ್ಯಗಳೇ ದೈವವಾಗಿರುವ ಹೆಬರೆ, ಚೌಡಿಕೆಗಳಿಂದ ಹಿಡಿದು ಅಸಾದಿ ತಮಟೆ, ಢಗಮು, ಡೊಳ್ಳು, ಡೋಲು ಹೀಗೆ ಲೆಕ್ಕವಿಲ್ಲದಷ್ಟು ವಾದ್ಯಗಳು ಆಚರಣೆಗಳಲ್ಲಿ ಪಾಲ್ಗೊಳ್ಳುತ್ತವೆ. ಆಚರಣೆಗೆ ಭಕ್ತಿ ಅಥವಾ ಆಚರಣಾ ಉದ್ದೇಶದ ಭಾವ ನಿರ್ಮಿತಿಗೆ ಈ ವಾದ್ಯಗಳು ಆಗ ಹೊರಡಿಸುವ ನಾದ ಮುಖ್ಯವಾದುದು. ಆವೇಶದ ಗಂಭೀರ ಭಾವದ ಉನ್ಮಾದಕತೆ ಉಂಟುಮಾಡಲು ವಾದ್ಯಮೇಳಗಳನ್ನು ಕ್ರಿಯಾಶೀಲವಾಗಿ ದುಡಿಸಿಕೊಳ್ಳಲಾಗುತ್ತದೆ. ಮೆರೆವ ದೇವರುಗಳ ಆವೇಶಕ್ಕೆ ಉತ್ತೇಜನಕಾರಿಯಾದವು ಈ ವಾದ್ಯಗಳು. ಮನುಷ್ಯ ಅಂತಹ ಕ್ರಿಯೆ ಉಂಟುಮಾಡಲು ಇವುಗಳನ್ನು ಆವಿಷ್ಕರಿಸಿಕೊಂಡಿದ್ದಾನೆ ಅಥವಾ ಅದಕ್ಕಾಗಿ ದುಡಿಸಿಕೊಂಡಿದ್ದಾನೆ. ದುಡಿಸಿಕೊಳ್ಳುತ್ತಿದ್ದಾನೆ, ಮಾರಮ್ಮ, ಪಟ್ಲದಮ್ಮ, ಸೋಮುಗಳು, ಭೂತಗಳು ಎಲ್ಲ ಬಗೆಯ ದೇವರುಗಳು ಬೀದಿಗೆ ಅಡಿ ಇಟ್ಟರೆ ವಾದ್ಯಗಳು ನುಡಿಯಲೇಬೇಕು ಅಂತಹ ರೂಪ ಸಂಸ್ಕೃತಿಯಲ್ಲಿ ಮಿಳಿತವಾಗುವಷ್ಟು ಒಳಗಾಗಿದೆ. ಏನೇ ಆದರೂ ಬೇರಾವುದೇ ಪ್ರದರ್ಶನ ಸಂದರ್ಭಗಳಲ್ಲೂ ನುಡಿಸದ ನಾದಗತ್ತುಗಳು ಇಲ್ಲಿ ಹುಟ್ಟುತ್ತವೆ. ಆಕಾರ ಪಡೆಯುತ್ತಿವೆ ಮೆರೆಯುತ್ತವೆ.

ಪೂಜಾ ಸಂದರ್ಭಕ್ಕೆ ನುಡಿಸುವ ಗಂಟೆ, ಶಂಖ, ಭಾಂಕಿ, ಚಂಡೆ, ನಗಾರೆ, ಸೂರ್ಯವಾದ್ಯ, ಚಂದ್ರವಾದ್ಯ, ಭೇರಿಗಳ ನಾದರೂಪವನ್ನು ದೈವದ ಭಾವವನ್ನು ಉದ್ದೀಪನಗೊಳಿಸಲು ಅತ್ಯಂತ ಸಹಕಾರಿಯಾದವು.

ಹೀಗೆ ಜನಪದ ಸಂಗೀತದ ಬೇರೆ ಬೇರೆ ರೂಪಗಳನ್ನೆಲ್ಲಾ ನೋಡುತ್ತಾ ಹೋದರೆ ಬರವಣಿಗೆ ಸಾಗಿಯೇ ಇರುತ್ತದೆ. ಇನ್ನು ಮಕ್ಕಳ ಹಾಡುಗಳು, ಅವರ ಶಿಶುಪ್ರಾಸ ಅವರು ಊದುವ ತೆಂಗಿನ ಗರಿಯ ಪೀಪಿಗಳು, ದಂಟಿನ ಪೀಪಿ, ಜೊಂಡಿನ ಪೀಪಿ, ಗಡಿಗೆ ಕಂದ ದಮಡಿ, ಸಿಳ್ಳೆ ಮೊದಲಾದ ಸಂಗೀತದ ಸಹಜ ರೂಪಗಳನ್ನು ನೋಡಬಹುದು. ಇವುಗಳ ಕುರಿತು ಚರ್ಚಿಸುತ್ತಾ ಹೋದಷ್ಟು ವಿಸ್ತರಿಸುತ್ತಾ ಹೋಗುತ್ತದೆ.

ಸಂಗೀತದಲ್ಲಿ ವಾದ್ಯ ಸಂಗೀತವನ್ನು ಕರಗತಮಾಡಿ ಕೊಳ್ಳುವುದು ಸರಳವಾದದ್ದಲ್ಲ. ಚರ್ಮವನ್ನು ಚರ್ಮವಾದ್ಯವನ್ನು ಮುಟ್ಟುವುದೇ ಮೈಲಿಗೆ, ಎಂದು ಭಾವಿಸಿ ಶತಶತಮಾನಗಳು ಸಂದಿವೆ. ಈಗ ಮಾತ್ರ ಆ ಗುಣ ಕರಗಿ ಮುಕ್ತತೆಗೆ ತಿರುಗಿದೆ.

ವಾದ್ಯಸಹಿತದಲ್ಲಿ ಕರ್ನಾಟಕದ ಅತ್ಯಂತ ಪ್ರಧಾನ ವಾದ್ಯಮೇಳಗಳಲ್ಲಿ ಕರಡಿ ಮಜಲು ವಿಶೇಷವಾದುದು. ಅತ್ಯಂತ ಸೂಕ್ಷ್ಮ ಲೆಕ್ಕಾಚಾರದ ಗತಿ ಚಲನೆಗಳ ಲೆಕ್ಕದೊಂದಿಗೆ ನಿರ್ಮಿತಿಗೊಳ್ಳುವ ಇದರ ನಾದದ ಮಜಲುಗಳನ್ನು ಕಂಡರೆ ಅಭಿಜಾತತೆಗೆ ಹೊಕ್ಕಾಡಿದಂತೆ ಭಾಸವಾಗದಿರದು. ಅಭಿಜಾತ ಸಂಗೀತದ ಲಕ್ಷಣಗಳನ್ನು ಹೊಂದಿರುವುದನ್ನು ಗುರುತಿಸಲು ಸಾಧ್ಯ. ಆದರೆ ಇಂದಿಗೂ ಜನಪದ ವಾದ್ಯಮೇಳವಾಗಿಯೆ ಉಳಿದಿದೆ. ಹೆಚ್ಚು ಹೆಚ್ಚು ಅಭಿಜಾತವಾದರೆ ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತದೆ. ಹಾಗೆಯೇ ಹೆಚ್ಚು ಹೆಚ್ಚು ಚೌಕಟ್ಟಿಗೆ ಬಂಧಿಯಾಗುತ್ತದೆಯೇ ಎನಿಸದಿರದು. ವಿಚಿತ್ರವೆಂದರೆ ಕರ್ನಾಟಕ ಸಂಗೀತದ ಮೂಲ ಸ್ಥಾನ 'ಬಾದಾಮಿ' ಎಂದು ಮತ್ತೆ ಮತ್ತೆ ಹೇಳುತ್ತಿರುವ ಈ ಹೊತ್ತಿನಲ್ಲಿ ಕರಡಿ ಮಜಲನ್ನು ಇಟ್ಟುನೋಡಿದರೂ ಈ ಅಂಶ ಪೂರಕವಾಗಿ ಕಾಣಬರುತ್ತದೆ. ಬಿಜಾಪುರ, ಬಾಗಲಕೋಟೆ, ಹಾವೇರಿ, ಧಾರವಾಡ, ಗದಗ, ಬಳ್ಳಾರಿ, ರಾಯಚೂರು, ಕೊಪ್ಪಳ, ಶಿವಮೊಗ್ಗ, ದಾವಣಗೆರೆ ದಕ್ಷಿಣ ಕರ್ನಾಟಕದ ಭಾಗಗಳಲ್ಲೂ ಇಂದಿಗೂ ಕಾಣಬರುತ್ತಿರುವ ವಾದ್ಯಮೇಳ ಇದು.

ಕರಡೆಯದು ಕಣಕಣ, ದಿಮ್ಮುವಿನದು ಡಿಮ್‌ಡಿಮ್ ಎರಡು ಪ್ರತ್ಯೇಕ ವಾದ್ಯಗಳು ಈ ಆಕಾರದಲ್ಲಿ ಒಂದನ್ನೊಂದು ಹೋಲುತ್ತವೆ. ಹೊಮ್ಮಿಸುವ ನಾದ, ಕೆಲಸ ಬೇರೆ ಬೇರೆ.

ಕರಡಿ ಮಜಲಿನ ಮತ್ತೊಂದು ವಿಸ್ತಾರ ಜಗ್ಗಲಿಗೆ, ವಿಚಿತ್ರವೆಂದರೆ ಉತ್ತರ ಕರ್ನಾಟಕದ ವಾದ್ಯ ಸಂಬಂಧಿ ಯಾವ ಜನಪದ ಕಲೆಯು ಕರಡಿ ಮಜಲಿನ ಗತ್ತುಗಳ ಪ್ರಭಾವಕ್ಕೆ ಒಳಗಾಗದೆ ನಡೆಯಲಾರದು ಎಂಬಂತೆ ಆವರಿಸಿದ ಕಲೆ. ಅದರ ತಾಳದ ನಡೆಗಳು ಖಣಿಮಜಲು, ಸಂಪ್ರದಾನಿ ಮೇಳ ಡೊಳ್ಳು ಮೇಳಗಳ ನಾದ ನಿರ್ಮಿತಿಯಲ್ಲಿ, ಚಲನೆಯಲ್ಲಿ, ಕರಡಿ ಮಜಲಿನ ಸಂಯೋಜನೆಯನ್ನು ನೋಡಬಹುದು. ಡೊಳ್ಳು ಭಿನ್ನವಾದ ಸ್ವತಂತ್ರವಾದ ವಾದ್ಯ ವಿಶೇಷ. ಬಾದಾಮಿ, ಬಿಜಾಪುರ ಭಾಗಗಳಲ್ಲಿ ಡೊಳ್ಳನ್ನು ಕೊರಳಿಗೆ ನೇತು ಹಾಕಿಕೊಂಡು, ಕುಣಿತಕ್ಕಿಂತ ನಾದದ ನಿರ್ಮಿತಿಗೆ ಒತ್ತಾಗಿ ನುಡಿಸುವುದನ್ನು ಕಾಣುತ್ತೇವೆ. ಸುತ್ತಿನ ಹತ್ತಾರು ಜನ ಒಂದೇ ಗತ್ತು ನುಡಿಸುತ್ತಿದ್ದರೆ ಮಧ್ಯಕ್ಕೆ ಬರುವ ಡೊಳ್ಳಿನವ ಆ ಗತ್ತಿನ ಬಿಡುವಲ್ಲಿ ತನ್ನ ಗತ್ತು ನಿರ್ಮಿಸುತ್ತಾ ಹೋಗುವುದನ್ನು ಕಾಣುತ್ತೇವೆ.

ಅನುಚಿತ ಬದಲಾವಣೆಗಳು: ಚರ್ಮವೇ ಪ್ರಧಾನವಾದ ತಮಟೆ, ಡೊಳ್ಳು, ಸಮ್ಮೇಳ, ತಾರ್ಸೆಗಳು ಈಗಾಗಲೇ ಚರ್ಮದ ಬದಲು ಫೈಬರ್‌ಶೀಟ್ ಒಂದಿಗೆ ನಿಂತಿವೆ. ಚರ್ಮ ಬಿಗಿದ ವಾದ್ಯದ ನಾದಸೂಕ್ಷ್ಮತೆ, ವೈಬ್ರೇಶನ್‌ನಿಂದ ಉಂಟಾಗುವ ನಾದದ ಫಲುಕು, ಚೆಲುವು, ಸೊಬಗು ಫೈಬರ್‌ನಲ್ಲಿ ಆ ಪ್ರಮಾಣದಲ್ಲಿ ಉಂಟಾಗದು. ಹಾಗೆಯೇ ಮರದ ಹೊಳವು ಬಳಸಿ ರೂಪಿಸಿದ ಡೊಳ್ಳಿನ ನಾದ, ಸ್ಟೀಲ್‌ಡ್ರಮ್ ಬಳಸಿದ ಡೊಳ್ಳಿನಿಂದ ಹೊಮ್ಮಲು ಸಾಧ್ಯವಿಲ್ಲ. ಸಾವಿರಾರು ವರ್ಷಗಳಲ್ಲಿ, ಲೆಕ್ಕವಿಲ್ಲದಷ್ಟು ಅನುಭವಿ ಜನರು ಮತ್ತೆ ಮತ್ತೆ ಹದಗೊಳಿಸಿ, ಪರಿಷ್ಕರಿಸಿ ಇದು ಉತ್ತಮ ಎಂದು ಅಳೆದು ಸುರಿದು ನಿಗದಿ ಗೊಳಿಸಿದ್ದಾರೆ. ಹಾಗೆಯೇ ಅಂತಹ ಉತ್ತಮಿಕೆಗಳನ್ನು ಪರಂಪರೆಯ ಜನ ಜತನದಿಂದ ಹೊತ್ತು ತಂದಿದ್ದಾರೆ. ನಮ್ಮ ಇಂದಿನ ಜನ ಅಂತಹ ನಾದ ಸೂಕ್ಷ್ಮತೆಗಳನ್ನು ಅರಿಯದೆ, ತತಕ್ಷಣ ಸುಲಭತೆ/ ತಿರುಗಿ

ಈಗಲೇ ಅರಿಯದೆ ಹೋದರೆ ಮುಂದೆ ಇಂತಹ ಅರೆಬರೆ ವಾದ್ಯಗಳೇ ಉಳಿದಾವು.

ಹೊಸ ಬದಲಾವಣೆಗಳು: ಈ ವಾದ್ಯ ಕಲೆಗಳು ಜಾತಿಯ ಕಟ್ಟುಪಾಡು ಮೀರಿ ಎಲ್ಲರಿಗೂ ಸಂದು ನಿಲುಕಿವೆ. ನಾದದ ಗತ್ತುಗಳು ಕುಣಿತದ ಗತ್ತುಗಳಲ್ಲಿ ಇಂದಿನ ಯುವ ಜನತೆ ಭಿನ್ನ ವಿಭಿನ್ನ ಗತ್ತುಗಳನ್ನು ಕಂಡುಕೊಳ್ಳತೊಡಗಿದ್ದಾರೆ. ತೀವ್ರವಾದ ಸ್ಪರ್ಧಾ ಮನೋಭಾವ ಕಲೆಯ ಸೂಕ್ಷ್ಮ ಪರಿಷ್ಕಾರಕ್ಕೆ ಈಡಾಗಲು ಕಾರಣವಾಗಿದೆ.

ವಾದ್ಯರಹಿತ: ಜನಪದ ವಾದ್ಯಗಳಲ್ಲಿ ಎಷ್ಟೆಲ್ಲಾ ವಾದ್ಯಗಳು ನಾಡಿನಲ್ಲಿ ಬಳಕೆಯಲ್ಲಿವೆ. ನೋಡುತ್ತಾ ಹೋದರೆ ಅಚ್ಚರಿ ಎನಿಸದಿರದು. ಇವುಗಳಲ್ಲಿಯೂ ವ್ಯಕ್ತಿಯಿಂದ ವ್ಯಕ್ತಿಗೆ ಸಮುದಾಯದಿಂದ ಸಮುದಾಯಕ್ಕೆ ಊರಿನಿಂದ ಊರಿಗೆ, ಸೀಮೆಯಿಂದ ಸೀಮೆಗೆ ವಿವಿಧತೆ ಮತ್ತು ವ್ಯತ್ಯಾಸಗಳು ತುಂಬಿವೆ. ಕೆಲವೊಮ್ಮೆ ಮುಖ್ಯ ಚೌಕಟ್ಟು ಒಂದೇ ಅನಿಸಿದರೂ ಒಳಗಿನ ಚಿತ್ರಗಳು ಬೇರೆ ಬೇರೆಯೋ ಎಂಬಂತೆ ನಿರ್ಮಾಣಗೊಳ್ಳುವುದು ಅಭಿವ್ಯಕ್ತಿಗೊಳಿಸುವುದು ಜನಪದ ಸಂಗೀತದ ಒಂದು ವಿಶೇಷ ಗುಣ. ಅದು ಇಲ್ಲಿ ಜೀವಂತವಾಗಿದೆ. ಇದು ಈ ಯಾವ ವಾದ್ಯಗಳ ಆಸರೆ, ಒತ್ತಾಸೆಯೂ ಇಲ್ಲದೆ ಹಾಡುವ ಸಾವಿರ ಸಾವಿರ ಸಂಖ್ಯೆಯಲ್ಲಿ ಈಗಲೂ ಹಾಡುತ್ತಿರುವ ಹೆಂಗಸರ ಹಾಡಿಗೂ ಅನ್ವಯಿಸುತ್ತದೆ. ನಾಡಿನ ಉದ್ದಗಲಕ್ಕೂ ಮೂಲೆ ಮೂಲೆಗೂ ಅಸಂಖ್ಯ ಅಸಂಖ್ಯ ಹೆಂಗಸರ ಹಾಡು ಮೇಳಗಳು ಇನ್ನು ತಮ್ಮ ತಾಜಾ ದನಿ ಬನಿಗಳೊಂದಿಗೆ ಹಾಡುತ್ತಿವೆ.

ಇವರ ದನಿಗಳಲ್ಲಿ ಹಿತದ ಭಾವ ಹೊಮ್ಮುವ ಚಂದವಿದೆ. ಮುಮ್ಮೇಳ ಹಿಮ್ಮೇಳಗಳ ಸಂಯೋಜನೆಯ ತಾಳಮೇಳವಿದೆ. ಅಭಿಜಾತ ಸಂಗೀತದ ಶೃತಿ ಪ್ರಜ್ಞೆ ಇಲ್ಲಿ ತಟ್ಟನೆ ಕಾಣದಿದ್ದರೂ, ತಮ್ಮೊಳಗೆ ತಾನೇತಾನಾದ ಶೃತಿ ಪ್ರಜ್ಞೆಗೆ ಒಳಗಾಗಿಯೇ ಇವರು ಹಾಡುತ್ತಾರೆ. ತೊಡಕಾದ ದನಿ, ಶೃತಿ ತಟಕ್ಕನೆ ಎತ್ತೆತ್ತಲೋ ವಿನಾಕಾರಣ ಸರಿದಾಗ ತಪ್ಪೆಂದು ಗೊಣಗಿಕೊಳ್ಳುತ್ತಾರೆ. ಅಷ್ಟಕ್ಕೆ ನಿಲ್ಲಿಸದೆ ಸಾವರಿಸಿಕೊಂಡು ಹಾಡುತ್ತಾರೆ. ಅನೇಕ ರಾತ್ರಿಗಳ ಕಾಲ ಹಾಡಬಲ್ಲ ಭಂಡಾರದಂತಹ ಹಾಡುಗಾರ್ತಿಯರಿದ್ದಾರೆ. ವಿಚಿತ್ರವೆಂದರೆ ಕೇಳುವ ತಕ್ಕ ಕಿವಿಗಳಿಲ್ಲದೆ ಹಾಡು ಬಡವಾಗುತ್ತಿವೆ, ಸೊರಗುತ್ತಿವೆ. ಉತ್ತೇಜನದ ಪೂರ್ತಿ ಕೊರತೆ ಈ ಹಾಡು ಮೇಳದ್ದಾಗಿದೆ. ಜನಪದ ಕುಣಿತಗಳತ್ತ ತಿರುಗಿದಷ್ಟು ಈ ಹಾಡು ಮೇಳಗಳತ್ತ ಯುವಕ ಯುವತಿಯರು ತಿರುಗಿಲ್ಲ.

ಹೆಂಗಸರು ಹಾಡುವ ಹಾಡುಗಳಲ್ಲಿ ಬೀಸುವ ಪದಗಳು ಮುಖ್ಯವಾದವು. ಹೆಂಗಸರ ಈ ಬಗೆಯ ಹಾಡುವಿಕೆ ಈ ಬೀಸುವ ಪದಗಳಿಂದಲೇ ಆರಂಭಗೊಂಡಿರುವುದು ಎಂಬುದೇ ನನ್ನ ಭಾವನೆ. ಹಾಡುಗಳ ನಿಧಾನದ ಅವಸರವಲ್ಲದ ತಾಳದ ಪ್ರಜ್ಞೆಯ ಸರಳ ಲಯಗಾರಿಕೆ ಇಲ್ಲಿದೆ. ಇದೇ ಮುಂದೆ ಇತರ ಕೆಲಸದ ಹಾಡುಗಳಾದ ಕುಟ್ಟುವ, ಮೊಸರು ಕಡೆವ ಪದಗಳಲ್ಲಿ ಹಬ್ಬಿದೆ. ಮದುವೆಯ ಹಾಡುಗಳಲ್ಲಿ ಕುಟ್ಟುವ ಬೀಸುವ ಶಾಸ್ತ್ರಗಳನ್ನು ಒಳಗೊಂಡುದೇ ಹಾಗಾಗಿ. ಇಲ್ಲೂ ಅಂತಹುದೇ ದನಿ–ರೂಪದ ಹಾಡುಗಳು ಏರ್ಪಟ್ಟಿವೆ ಎನಿಸುತ್ತದೆ.

ಪರಂಪರೆಯು ಹೆಚ್ಚು ತಬ್ಬಿ ನಡೆಯುವುದು ಜಾನಪದದ ಗುಣ. ಆದರೆ ಎಲ್ಲಾ ಸಂದರ್ಭದಲ್ಲೂ ಅದನ್ನೇನು ಮೊಳೆ ಹೊಡೆದುಕೊಂಡಂತೆ ಕಟ್ಟಿಹಾಕಿ ಇಟ್ಟುಕೊಳ್ಳದು. ಡೊಳ್ಳಿನ ಗತ್ತುಗಳಲ್ಲಿ ಅದೆಷ್ಟೋ ರೂಪಗಳು ಈಗ ಹೊಮ್ಮಿವೆ. ತಮಟೆಯ ನಾದದ ಸಾಧ್ಯತೆ ಮಹಾವಿಸ್ತಾರಕ್ಕೆ ತಿರುಗಿದೆ. ಈ ಎಲ್ಲಾ ಕಡೆ ಜನಪದ ಸಂಗೀತ ಗೋಚರವಾಗಿ ಅಗೋಚರವಾಗಿ ಕಾಲದ ಅಪೇಕ್ಷೆಗಳೊಂದಿಗೆ ಬೆರೆಯುತ್ತದೆ. ಅತ್ಯಂತ ಸೂಕ್ಷ್ಮವಾಗಿ ರೂಪಾಂತರ ಹೊಂದುತ್ತಿರುತ್ತದೆ. ಅದೇ ಅದರ ಜೀವಂತಿಕೆ.

ಒಟ್ಟಾರೆಯಾಗಿ ನೋಡಿದರೆ ಎಂದಿಗಿಂತ ಹೆಚ್ಚು ಗಮನ ಸೆಳೆಯುವಿಕೆಗೆ ಜನಪದ ಸಂಗೀತ ಈಗ ಒಳಪಡುತ್ತಿದೆ. ಅಭಿಜಾತ ಸಂಗೀತಗಾರರು, ಸುಗಮ ಸಂಗೀತಗಾರರ ಕಣ್ಣು ಕಿವಿ ತೆರೆದು ಇವರ ದನಿ ಬನಿ ರೂಪಗಳನ್ನು ತಮ್ಮಲ್ಲಿ ಸೇರಿಸಿಕೊಳ್ಳಲು ತೆರೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ಹಳ್ಳಿಗಳಿಂದ ಹಿಡಿದು ನಗರದವರು ಹಿಂದೆಂದಿಗಿಂತ ಈ ಹಾಡುಗಳ ಸರಳ ಸಹಜ ಚೆಲುವಿಗೆ ಮನಸೋಲುತ್ತಿದ್ದಾರೆ. ಭಾವಗೀತೆಗಳನ್ನು ಮೀರಿ ಜನಪದ ಗೀತೆಗಳನ್ನು ಕೇಳುವ ಮತ್ತು ಹಾಡುವ ವರ್ಗ ದಿನೇದಿನೇ ಹೆಚ್ಚಾಗುತ್ತಿದೆ. ಕಲಿಕೆ ಸುಲಭದ್ದೆಂದರೆ ಸುಲಭದ್ದು, ಕಷ್ಟದ್ದೆಂದರೆ ಕಷ್ಟದ್ದು, ಅವರವರಿಗೆ ಎಟಕಿದಂತೆ ನಿಲುಕಬಲ್ಲದ್ದು, ಜನಪದ ಸಂಗೀತ. ಒಂದಿಷ್ಟು ಪರಿಶ್ರಮಕ್ಕೆ ದಕ್ಕಲೂಬಹುದಾದದ್ದು. ಯಾರಿಗೂ ಇಷ್ಟವಾಗುವ ದನಿ–ಸಾಹಿತ್ಯ–ಭಾವಗಳು ಇಲ್ಲಿಯವು ಜನಪದ ಸಂಗೀತ ತನ್ನ ನಿಜದ ತಾಕತ್ತಿನಿಂದಲೇ ಜೀವಂತವಾಗಿದೆ. (ಕೆಬಿ)

ಜನಪದ ಸಂಗೀತ ವಾದ್ಯಗಳು: ಅನುಕರಣ ಮತ್ತು ಪ್ರಯೋಗಶೀಲ ಸ್ವಭಾವದ ಮಾನವ ಏನೆಲ್ಲ ಕಲೆಗಳ ಸೃಷ್ಟಿಗೆ ಕಾರಣನಾಗಿದ್ದಾನೆ. ಸಂಗೀತ ಕಲೆಯನ್ನೂ ಅನುಕರಣೆಯಿಂದ ಕಲಿತು ವೈವಿಧ್ಯತೆಯನ್ನು ತಂದಿದ್ದಾನೆ. ನಿಸರ್ಗದ ಕೂಸಾಗಿ ಬೆಳೆದ ಮಾನವ ಅದರ ವಿವಿಧ ಲಯ, ಸಡಗರ, ಆರ್ಭಟಕ್ಕೆ ಸ್ಪಂದಿಸಿ, ಹಾಡಿ ಕುಣಿದಿದ್ದಾನೆ. ತನಗೆ ಸುಲಭ ಸಾಧ್ಯವಾದ ವಸ್ತುಗಳಿಂದ ವಾದ್ಯಗಳ ನಿರ್ಮಾಣಕ್ಕೆ ಕೈಹಾಕಿದ್ದಾನೆ. ಆದಿ ಮಾನವನು ಪ್ರಾಣಿಗಳನ್ನು ಬೇಟೆಯಾಡುವ ದಿನಗಳಲ್ಲಿಯೇ ಚರ್ಮವಾದ್ಯಗಳ ಕಲ್ಪನೆ ಮೂಡಿರಬೇಕು. ಇವುಗಳ ಉಗಮ ಕುರಿತು ನಿರ್ದಿಷ್ಟವಾಗಿ ಹೇಳಲಿಕ್ಕಾಗದು.

ಚರ್ಮವಾದ್ಯಗಳಿಗೆ ಅತಿ ಪ್ರಾಚೀನ ಇತಿಹಾಸವಿದೆ. ಹರಪ್ಪ ಉತ್ಖನನದಲ್ಲಿ ಡೋಲು ಬಾರಿಸುತ್ತಿರುವ ಚಿತ್ರ ಮುದ್ರೆಗಳಿವೆ. ಋಗ್ವೇದದಲ್ಲಿಯೂ ವಾದ್ಯಗಳ ಪ್ರಸ್ತಾಪ ಬಂದಿದೆ. ಭರತಮುನಿ ವಿವಿಧ ವಾದ್ಯಗಳ ಉಲ್ಲೇಖ ಮಾಡಿದ್ದಾನೆ. ಕನ್ನಡ ನಾಡಿನ ಕಾವ್ಯ, ಶಾಸನ, ಶಿಲ್ಪಗಳಲ್ಲಿ ವಾದ್ಯಗಳ ಪ್ರಸ್ತಾಪವಿದೆ. ಜನಪದ ಜೀವನದಲ್ಲಿಯಂತೂ ಇನ್ನೂ ಈ ವಾದ್ಯಗಳೂ ತಮ್ಮ ಜೀವಂತಿಕೆಯನ್ನು ಮೆರೆಯುತ್ತವೆ.

ಜನಪದ ವಾದ್ಯಗಳನ್ನು ಸಾಮಾನ್ಯವಾಗಿ ಚರ್ಮವಾದ್ಯ, ತಂತಿವಾದ್ಯ, ಉಸಿರುವಾದ್ಯ ಹಾಗೂ ಲೋಹವಾದ್ಯಗಳೆಂದು ಅವುಗಳ ಸ್ವರೂಪ ವ್ಯತ್ಯಾಸಗಳಿಂದ ವಿಭಾಗಿಸಿ ಹೆಸರಿಸುತ್ತಾರೆ.

ಇವೆಲ್ಲವುಗಳಲ್ಲಿ ಚರ್ಮವಾದ್ಯಗಳಿಗೆ ತುಂಬಾ ಪ್ರಾಚೀನತೆ ಇದೆ. ಚರ್ಮವಾದ್ಯಗಳನ್ನು ಏಕಮುಖ ಚರ್ಮವಾದ್ಯ, ದ್ವಿಮುಖ ಚರ್ಮವಾದ್ಯಗಳೆಂದು ವಿಂಗಡಿಸಬಹುದು. ಏಕಮುಖ ಚರ್ಮ ವಾದ್ಯಗಳಲ್ಲಿ ಒಂದು ಭಾಗಕ್ಕೆ ಚರ್ಮ ಬಿಗಿದಿರುತ್ತಾರೆ. ಇನ್ನೊಂದು ಭಾಗ ಖುಲ್ಲಾ ಆಗಿರುತ್ತದೆ. ಅವು ದಪ್ಪಹಲಗೆ, ದಮ್ಮಡಿ ಮುಂತಾದವುಗಳಾದರೆ, ವಾದ್ಯದ ಒಂದು ಭಾಗಕ್ಕೆ ಚರ್ಮದ ಹೊದಿಕೆಯಿದ್ದು ಇನ್ನೊಂದು ಭಾಗ ಮುಚ್ಚಿರುತ್ತದೆ. ಅವು: ನಗಾರಿ, ತಾಸೆ, ಸಂಬಾಳ, ಚೌಗಡೆ ಮುಂತಾದವುಗಳು. ಇನ್ನು ದ್ವಿಮುಖ ಚರ್ಮವಾದ್ಯಗಳು ಎರಡೂ ಭಾಗಕ್ಕೆ ಚರ್ಮ ಬಿಗಿದವುಗಳು. ಅವು: ಕರಡಿ, ಡೋಲು, ಡೊಳ್ಳು, ಡಮರುಗ ದುರಗಮುರಗಿ ವಾದ್ಯ, ಬುಡಬುಡಕಿ ವಾದ್ಯ ಮುಂತಾದವುಗಳು. ಅಲ್ಲದೆ ಡಮರು ಆಕಾರದ ವಾದ್ಯಗಳು ಹಲಗೆ ಆಕಾರದ ವಾದ್ಯಗಳು, ನಗಾರಿ ಆಕಾರದ ವಾದ್ಯಗಳು ಹಾಗೂ ಡೋಲು ಆಕಾರದ ವಾದ್ಯಗಳೆಂದು ವಿಭಾಗಿಸಿ ಹೇಳಲಾಗುತ್ತದೆ. ಈ ಎಲ್ಲ ವಿಂಗಡಣೆಗಳು ಚರ್ಮವಾದ್ಯಗಳ ಆಕಾರ ನುಡಿಸುವ ಕ್ರಮ, ರೂಪವೈವಿಧ್ಯ ಹಾಗೂ ಚರ್ಮ ಮುಖಗಳನ್ನು ಅವಲಂಬಿಸಿವೆ.

ನಗಾರಿ: ನಗಾರಿ ಎತ್ತು ಮುಂದ ಮುಂದ ಪರಸಿ ಹೊಂಟೈತಿ ಹಿಂದ ಹಿಂದ ಎಂಬ ಮಾತಿನಲ್ಲಿ ಮೇಳ ವಾದ್ಯ ಗಳಲ್ಲಿ ನಗಾರಿಯ ಸ್ಥಾನ ನಿರ್ದೇಶಿತವಾಗಿದೆ. ಉತ್ಸವ ಹೊರಡುವ ಕಾಲದಲ್ಲಿ ನಗಾರಿಗಳನ್ನು ಎತ್ತುಗಳ ಮೇಲೆ ಹೇರಿ ಕೊಂಡು ನುಡಿಸುತ್ತಾ ಉತ್ಸವದ ಮುಂಚೂಣಿಯಲ್ಲಿರುತ್ತಿದ್ದರು. ಪ್ರಾಚೀನ ಕಾಲದ ಯುದ್ಧಗಳಲ್ಲಿ ಸೈನಿಕರನ್ನು ಹುರಿದುಂಬಿಸಲು, ವೈರಿಗಳ ಆಗಮನವನ್ನು ಸೂಚಿಸಲು, ಮಹತ್ವದ ಸುದ್ದಿ ಸಾರಲು ಈ ವಾದ್ಯವನ್ನು ಬಳಸಿಕೊಳ್ಳುತ್ತಿದುದು ತಿಳಿದುಬರುತ್ತದೆ. ತಮ್ಮಟೆ ಮುಂತಾದ ಪಂಚ ಮಹಾವಾದ್ಯಗಳಲ್ಲಿ ನಗಾರಿಯೂ ಒಂದು. ಇದನ್ನು ನೌಬತ್ತು, ಭೇರಿ, ದುಂದುಭಿ ಎಂಬ ಉಪನಾಮ ಗಳಿಂದಲೂ ಕರೆಯುತ್ತಾರೆ. ಸದ್ಯ ಈ ವಾದ್ಯದ ಉಪಯೋಗ ಕೆಲವು ಪ್ರಾಚೀನ ಪರಂಪರೆಯುಳ್ಳ ದೊಡ್ಡ ಮಠ-ಮಂದಿರಗಳ ಪೂಜಾ ಸಮಯದಲ್ಲಿ ಮಾತ್ರ ಬಳಕೆಯಾಗುತ್ತದೆ. ಚರ್ಮವಾದ್ಯ ಗಳಲ್ಲಿ ಗಾತ್ರ ಮತ್ತು ನಾದಗಳಲ್ಲಿ ಡೊಳ್ಳನ್ನು ಬಿಟ್ಟರೆ ಮಾಡಿದ ಐದು ಅಡಿಗೂ ಹೆಚ್ಚು ವ್ಯಾಸ ಬಾಯುಳ್ಳ ಪಡಗ, ಎಮ್ಮೆಯ ಚರ್ಮವನ್ನು ಬಾರುಗಳಿಂದ ಬಿಗಿದಿರುತ್ತಾರೆ. ಇದನ್ನು ಗಟ್ಟಿ ಕೋಲು (ಗುಣಿ) ಯಿಂದ ಬಾರಿಸಿದಾಗ ಗಂಭೀರವಾದ ಶಬ್ದ ಹೊರಡುತ್ತದೆ.



ನಗಾರಿ ವಾದ್ಯ

ಸಂಬಾಳ: ಇದು ಜೋಡು ಬೋಗಾಣಿಯುಳ್ಳ ಚರ್ಮ ವಾದ್ಯ. ಬೋಗಾಣಿ ಲೋಹ, ಕಟ್ಟಿಗೆ ಇಲ್ಲವೇ ಮಣ್ಣಿನಿಂದ ತಯಾರಿಸುತ್ತಾರೆ. ಈ ಎರಡೂ ಬೋಗಾಣಿಗಳ ಬಾಯಿ ಸುಮಾರು 10 ಅಂಗುಲ ವ್ಯಾಸವುಳ್ಳದ್ದಾಗಿರುತ್ತದೆ. ಬೋಗಾಣಿ




ಸಂಬಾಳ ವಾದ್ಯ

ಗಳ ಬಾಯಿಗೆ ಆಡಿನ ಚರ್ಮ ಬಿಗಿದಿರುತ್ತಾರೆ. ಬಲಭಾಗದ್ದು ದಪ್ಪಚರ್ಮ, ಎಡಭಾಗದ್ದು ತಿಳು ಚರ್ಮವುಳ್ಳದ್ದಾಗಿರುತ್ತದೆ. ಬಲಭಾಗದ ಚರ್ಮಕ್ಕೆ ಕರಣಿಯನ್ನು ಮೇಲ್ಭಾಗ ಇಲ್ಲವೇ ಒಳಭಾಗದಲ್ಲಿ ಲೇಪಿಸಿರುತ್ತಾರೆ. ಗೊಂದಲಿಗರು ವಿಶೇಷವಾಗಿ ಈ ವಾದ್ಯವನ್ನು ಬಳಸುತ್ತಾರೆ. ಪುರವಂತರ ಕುಣಿತ, ಕಂಬಿ ಹಾಡುಗಳಲ್ಲಿ ಈ ವಾದ್ಯವೇ ಪ್ರಧಾನವಾಗಿರುತ್ತದೆ. ಹಾಡಿನ ಸ್ವರಕ್ಕನುಗುಣವಾಗಿ ಹಗ್ಗಗಳನ್ನು ಬಿಗಿ ಅಥವಾ ಸಡಿಲು ಮಾಡಿಕೊಂಡು ಕೊರಳಿಗೆ ತೂಗಿಹಾಕಿಕೊಂಡು ಒಂದು ಬೋಗಾಣಿಯಾಕಾರದ ವಾದ್ಯವನ್ನು ವಾದನಕಾರ ತನ್ನ ಎರಡೂ ತೊಡೆಗಳ ಸಂದಿನಲ್ಲಿಟ್ಟು ಬಿಗಿದ ಹಗ್ಗಕ್ಕೆ ಒತ್ತು ಕೊಡುತ್ತಾ, ಬಾರಿಸುವಾಗ ಒಂದು ರೀತಿಯ ವಿಲಕ್ಷಣ ಧ್ವನಿ ಹೊರಡುತ್ತದೆ. ಶ್ರೋತೃಗಳನ್ನು ರಂಜಿಸುತ್ತದೆ. ನಾದದ ಇಂಪು ಹೆಚ್ಚಾಗಲು ಇದನ್ನು ಕಾಸಲಾಗುತ್ತದೆ. ಹೆಚ್ಚಾಗಿ ಇದರಲ್ಲಿ ಚೌತಾಳ, ತ್ರಿತಾಳಗಳನ್ನು ಬಳಸುತ್ತಾರೆ. ಅದು ಪುರವಂತದ ಕುಣಿತದ ಸಮಯದಲ್ಲಿ–ಸದ್ಯ ಬಾರಿಸುವ ತಾಳ ಯಾವುದು ಎಂದು ಪ್ರಶ್ನಿಸಿದಾಗ ಆ ವಾದನಕಾರ ಇದು ಅಡತಾಳರಿ ಎಂದು ಹೇಳಿದ. ಬಹುಶಃ ಇದು ಅರ್ಧತಾಳ ಇಲ್ಲವೇ ಅಟತಾಳ ಆಗಿರಬೇಕು.

ತಾಸೆ: ಸರ್ಕಸ್ಸು, ಡೊಂಬರಾಟ ಮುಂತಾದ ಪ್ರಚಾರ ಮಾಧ್ಯಮಕ್ಕೆ ಮಂದಿರ ಮಸೀದಿಗಳಲ್ಲಿಯೂ ಈ ವಾದ್ಯದ ಉಪಯೋಗವಾಗುತ್ತದೆ. ಒಂದು ಅಡಿ ವ್ಯಾಸ ಬಾಯಿ ಇರುವ ಕಂಚಿನ ಬೋಗಾಣಿಗೆ ಆಡಿನ ಚರ್ಮವನ್ನು ಉಂಗರುಗಳ ಮೂಲಕ ಹಾದು ಬರುವ ಹಗ್ಗಗಳಿಂದ ಬಿಗಿದಿರುತ್ತಾರೆ. ಸುತ್ತ ನಾಲ್ಕೂ ಕಡೆ ಸಿಲಿಂಡರನ ಆಕಾರವಿರುವ ಮರದ ಚೂರು ಗಳನ್ನು ಹಗ್ಗಕ್ಕೆ ಬರುವಂತೆ ಜೋಡಿಸಿರುತ್ತಾರೆ. ಈ ವಾದ್ಯವನ್ನು ಕತ್ತಿನಿಂದ ಇಳಿಬಿಟ್ಟು ಇಲ್ಲವೇ ಮೇಲಿಟ್ಟು ಎರಡೂ ಕೈಯಿಂದ ಬಿದಿರು ಕಡ್ಡಿಗಳಿಂದ ಟಪ–ಟಪ–ಟಪವೆಂದು ಬಾರಿಸುತ್ತಾರೆ.

ಚೌಗಡ: ಇದನ್ನು ಹಲಿಗೆ ಮಜಲಿನಲ್ಲಿ ಪಕ್ಕ ವಾದ್ಯ ವಾಗಿ ಬಳಸುತ್ತಾರೆ. ಇದರ ಆಕಾರ ಡಗ್ಗಾದಂತೆ ಇರುತ್ತದೆ. ಕೆಲವು ಭಾಗದಲ್ಲಿ ಇದಕ್ಕೆ ದಿಮ್ಮಿಯೆಂದು ಕರೆಯುತ್ತಾರೆ. ಕುರಿ ಅಥವಾ ಆಡಿನ ದಪ್ಪವಾದ ಚರ್ಮದಿಂದ ಸಿದ್ಧಪಡಿಸಿರುತ್ತಾರೆ. ಒಂದು ಅಡಿ ವ್ಯಾಸವುಳ್ಳ ಮಣ್ಣಿನ ಇಲ್ಲವೇ ಕಟ್ಟಿಗೆಯ ಬೋಗಾಣಿಗೆ ಈ ತೊಗಲನ್ನು ಬಿಗಿದಿರುತ್ತಾರೆ. ತೊಗಲು ನಾದದ ಹದಕ್ಕೆ ಬರ ಬೇಕಾದರೆ ಅದರಲ್ಲಿ ಕುರಿಯ ಇಲ್ಲವೇ ಎಮ್ಮಿಯ ಹಾಲನ್ನು ಹಾಕಿ ಅಂತರದಲ್ಲಿ ಗೂಟಕ್ಕೋ ಕಂಬಕ್ಕೋ ಕಟ್ಟುತ್ತಾರೆ. ನಂತರ ಇದನ್ನು ಬಿಗಿದಾದ ಬಳಿಕ ಒಣಗಿದಾಗ ವಿಶಿಷ್ಟವಾದ ಧ್ವನಿ ಬರುತ್ತದೆ. ಚೌಗಡಕ್ಕೆ ಹಗ್ಗವೊಂದನ್ನು ಕಟ್ಟಿ ಕೊರಳಿಗೋ ಹೆಗಲಿಗೋ ಹಾಕಿಕೊಳ್ಳುತ್ತಾರೆ. ಬಲಗೈಯಲ್ಲಿ ಕಟ್ಟಿಗೆಯ ಗುಣಿ ಇರುತ್ತದೆ. ಗುಣಿಯ ಮುಂದಿನ ಭಾಗವನ್ನು ಅರಿವೆ ಸುತ್ತಿ ಒಂದು ತರದ ಜಿಡ್ಡನ್ನು ಆ ಭಾಗಕ್ಕೆ ಲೇಪಿಸಿರುತ್ತಾರೆ. ಚೌಗಡದ ಮಧ್ಯ ಭಾಗಕ್ಕೆ ಅದನ್ನು ತಟ್ಟುತ್ತಾರೆ. ಹಾಗೆಯೇ ಎಡಗೈ ತುದಿಯ ಬೆರಳನ್ನು ವಾದನಕ್ಕೆ ಬಳಸುತ್ತಾರೆ. ಹಲಗೆಯ ಮಜಲಿಗೆ ಬೇಕಾದ ವಿವಿಧ ತಾಳಗಳನ್ನು ಆದಿ, ಮಿಶ್ರ ಮುಂತಾದ ಬೇರೆ ಬೇರೆ ತಾಳಗಳಲ್ಲಿ ನುಡಿಸುತ್ತಾರೆ.

ಡೊಳ್ಳು: ಜನಪದ ವಾದ್ಯ ಸಮುದಾಯದಲ್ಲಿ ಚಕ್ರವರ್ತಿ ಎನ್ನಬಹುದಾದ ದೊಡ್ಡ ಗಾತ್ರದ ಒಂದು ಚರ್ಮವಾದ್ಯ. ಡೊಳ್ಳು ವಾದನದ ಈ ಕಲೆ ಗಂಡು ಕಲೆಯೇ ಆಗಿದೆ. ಈ ಕಲೆಯ ಆರಾಧಕರು ಬೀರ ಭಕ್ತರಾದ ಕುರುಬರು. 'ಕುರಿಯ ಮೇಲೆ ಕಣ್ಣಿರಲೆಪ್ಪಾ ಡೊಳ್ಳಿನ ಮೇಲೆ ಒಂದು ಕೈಯಿರಲಿ' ಎಂದು ಹಾಡಿನಲ್ಲಿ ಹೇಳಿಕೊಂಡಿದ್ದಾರೆ. ಕುರುಬ ಕುರಿಗಳೊಂದಿಗೆ ಕಾಡಿನಲ್ಲಿರುವಾಗ ಕಾಡಿನ ಕ್ರೂರ ಮೃಗಗಳ ಕಾಟ ತಪ್ಪಿಸಿ ಕೊಳ್ಳುವುದಕ್ಕಾಗಿ ಈ ವಾದ್ಯವನ್ನು ನಿರ್ಮಿಸಿಕೊಂಡಿದ್ದಾನೆಂದು ಹೇಳಲಾಗುತ್ತದೆ. ಯಾವ ಬದಲಾವಣೆಗಳಿಗೂ ಒಳಪಡದೇ ತನ್ನ ಮೂಲ ರೂಪದಲ್ಲಿಯೇ ಉಳಿದುಕೊಂಡು ಬಂದಿರುವ ಈ ವಾದ್ಯದ ರಚನೆ ಸರಳ ವಿಧಾನದಿಂದ ಕೂಡಿದೆ. ಪೊಳ್ಳಾಗಿರುವ ಸಿಲೆಂಡರ ಆಕಾರದ ಅರ್ಧ ಅಂಗುಲ ದಪ್ಪಗಿನ ಅಂಚುಳ್ಳ ಕಟ್ಟಿಗೆಯ ಪಡಗದ ಎರಡೂ ಮಗ್ಗುಲಿಗೆ ಚರ್ಮದ ಹೊದಿಕೆ ಹಾಕಿ ತಯಾರಿಸಲಾಗುತ್ತದೆ. ಪಡಗದ ಕಟ್ಟಿಗೆ ಮಾವಿನ, ಬೇವಿನ ಇಲ್ಲವೇ ಹೊನ್ನೆಯ ಮರದ್ದು ಇರುತ್ತದೆ. ಇದರ ಎಡಭಾಗಕ್ಕೆ ಆಡಿನ ಚರ್ಮ, ಬಲಭಾಗಕ್ಕೆ ಹೋತಿನ ಚರ್ಮವನ್ನು ಬಿಗಿಯುತ್ತಾರೆ. ಹೊದಿಕೆಯ ಹೊರಭಾಗದ ತುಂಬೆಲ್ಲ ಬಾಳೆಯ




ಡೊಳ್ಳು ವಾದ್ಯ

ಸೊಪ್ಪಿನ ಬೂದಿ ಹಾಗೂ ಎಣ್ಣೆಯಲ್ಲಿ ತಯಾರಿಸಿದ ಜಿಗಿಯನ್ನು ತೆಳ್ಳಗೆ ಲೇಪಿಸಲಾಗುತ್ತದೆ. ಇದರಿಂದಾಗಿ ಆ ಭಾಗ ಸಾಮಾನ್ಯ ವಾಗಿ ಬೆಳ್ಳಗಿರುತ್ತದೆ. ಅದು ತೆಳುವಾದ 'ತಾರ' ನಾದ ಕೊಡು ವರು. 'ಮುಂದ್ರ' ನಾದದ ಭಾಗವನ್ನು ಕಟ್ಟಿಗೆಯ ಗುಣಿಯಿಂದ ಬಾರಿಸಿದರೆ, ಇನ್ನೊಂದು ಭಾಗವನ್ನು ನಾಲ್ಕು ಬೆರಳು ಏಕಕಾಲಕ್ಕೆ ಪೆಟ್ಟು ಹಾಕುವಂತೆ ಕೈಯಿಂದ ಬಡಿಯಲಾಗುತ್ತದೆ. ಚರ್ಮದ ಹೊದಿಕೆಯನ್ನು ಪಡಗಕ್ಕೆ ಹೊಂದಿಸಿ ಗಟ್ಟಿಯಾಗಿ ಹಿಡಿದಿಟ್ಟಿರಲು ಅವುಗಳ ಮೇಲೆ ಪಡಗದ ಅಂಚಿನ ಸುತ್ತಲೂ ಪ್ರತಿಯೊಂದು ಹೊದಿಕೆಗೂ ಒಂದೊಂದು ಕಟ್ಟಿಗೆಯ ಉಲುಪಿಯ ಕಂಕಣ ವನ್ನು ಹಾಕಲಾಗುತ್ತದೆ. ಎರಡೂ ಕಂಕಣಗಳನ್ನು ನೂಲಿನ ಇಲ್ಲವೇ ನಾರಿನ ಹಗ್ಗದಿಂದ ಜಗ್ಗಿ ಕಟ್ಟಿ ಬಿಗಿಗೊಳಿಸಲಾಗುತ್ತದೆ. ಡೊಳ್ಳಿನ ಗಾತ್ರ ಉದ್ದದಲ್ಲಿ ಒಂದೂವರೆ ಅಡಿಯಿಂದ ಎರಡಡಿಯವರೆಗೆ ಮತ್ತು ವ್ಯಾಸದಲ್ಲಿ 18 ಅಂಗುಲದಿಂದ 24 ಅಂಗುಲದವರೆಗೆ ವಿವಿಧ ಪ್ರಮಾಣದ ನಾದ ಹೊರಡುವ ಗಾತ್ರದ್ದಿರುತ್ತದೆ. ಇಬ್ಬರು ವಾದನಕಾರರಿಂದ ಪ್ರಾರಂಭವಾಗಿ ಹತ್ತಾರು ವಾದನಕಾರರವರೆಗೂ ಸಂಖ್ಯೆ ಬೆಳೆಯುತ್ತದೆ. ಈ ಮೇಳಕ್ಕೆ ಡೊಳ್ಳಿನ ವಾಲಗ, ಒಡ್ಡಿ ವಾಲಗ ಎಂದು ಮುಂತಾಗಿ ಕರೆಯುತ್ತಾರೆ. ಬಾರಿಸುವವರು ಡೊಳ್ಳನ್ನು ಕುತ್ತಿಗೆಗೆ ಹಾಕಿಕೊಳ್ಳು ತ್ತಾರೆ. ಇಲ್ಲವೇ ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ದೇವರ ರಥೋತ್ಸವ, ಪಲಕ್ಕಿ ಉತ್ಸವ ಮುಂತಾದ ಸಾಂಸ್ಕೃತಿಕ ಉತ್ಸವಗಳ ಮುಂಚೂಣಿಯಲ್ಲಿ ಎರಡು ಸಾಲಾಗಿ 'ಡಗಂ ಪಟದಾ' ಎಂದು ತಾಳ ಹಾಕುತ್ತಾ ನಡೆಯುತ್ತಾರೆ. ಮೆರವಣಿಗೆಯ ಮುಂದೆ ಡೊಳ್ಳು ಬಾರಿಸುತ್ತಾ ಮಾರ್ಗದಲ್ಲಿರುವ ದೇವಾಲಯಗಳ ಮುಂದೆ ಕೆಲ ನಿಮಿಷ ನಿಂತು ವಾದ್ಯ ಸೇವೆ ಸಲ್ಲಿಸಿ ಮುಂದು ವರಿಯುವರು. ಆವೇಶಪೂರಿತರಾಗಿ ಕುಣಿಯುತ್ತಾರೆ. ಲಾಗ ಹಾಕುತ್ತಾರೆ. ಬಾರಿಸುವ ವೇಗ ಕ್ರಮೇಣ ಬೆಳೆದು ಕೊನೆಯಲ್ಲಿ ಗಂಭೀರ ಧ್ವನಿಯಿಂದ ಇಡೀ ವಾತಾವರಣವೇ ಭಾವೋನ್ಮಾದಕ್ಕೆ ಮುಟ್ಟುತ್ತದೆ.

'ದಿಲ್ಲಿಗೆ ಹೋದರೂ ಡೊಳ್ಳಿಗೆ ಒಂದೇ ಪೆಟ್ಟು' ಎಂಬ ಮಾತಿನ ಹಿನ್ನೆಲೆಯಲ್ಲಿ ಬಾರಿಸುವ ವಿಧಾನ ಎಲ್ಲ ಗತ್ತುಗಳಲ್ಲಿಯೂ ಒಂದೇ ರೀತಿಯಿರುತ್ತದೆ. ಒಂದು ಗುಣಿಗೆ ಮೊದಲು ಹೆಜ್ಜೆ ಎಂದು ಕರೆಯುತ್ತಾರೆ. ಅಂದರೆ ಒಂದು ಗುಣಿ ಪೆಟ್ಟು, ಬಳಿಕ ಒಂದು ಕೈಪೆಟ್ಟು–ಇದೇ ಕ್ರಮೇಣ ಹೆಚ್ಚುತ್ತಾ ಹೋಗುತ್ತದೆ. ಹೀಗೆ ಐದು ಗುಣಿ ಪೆಟ್ಟಿನವರೆಗೂ ಬಡಿಯುತ್ತಾರೆ. ಇದು ಹಾಡುರಹಿತ ಮತ್ತು ಹಾಡುಸಹಿತವಾದ ವಾದ್ಯ.

ದುರುಮುರಗಿ ವಾದ್ಯ: ಇದಕ್ಕೆ ಬರಬುರಕಿ ಎಂದು ಡೋಲು, ಡೊಳ್ಳು ಎಂದು ಕರೆಯುತ್ತಾರೆ. ದುರಗವ್ವ–ಮರಗವ್ವ ಉರಿಮಾರವ್ವಾ ಎಂಬ ಮುಂತಾದ ಹೆಸರುಗಳಿಂದ ಕರೆಯಿಸಿಕೊಳ್ಳುವ ಉಗ್ರದೇವತೆಯನ್ನು ಹೊತ್ತಾಡುವ ಅಲೆಮಾರಿ ಪೂಜಾರಿ ವರ್ಗ ಈ ವಾದ್ಯವನ್ನು ಉಪಯೋಗಿಸುತ್ತಾರೆ.




ದುರುಮುರಗಿ ವಾದ್ಯ

ಸುಮಾರು 15 ಅಂಗುಲ ವ್ಯಾಸವಿರುವ 30 ಅಂಗುಲ ಉದ್ದವಿರುವ ಕಂಚು ಅಥವಾ ಹಿತ್ತಾಳೆಯ ಪಡಗಕ್ಕೆ ಎರಡೂ ಕಡೆ ಹದ ಮಾಡಿದ ಆಡಿನ ಅಥವಾ ಜಿಂಕೆಯ ಚರ್ಮವನ್ನು ಬಿಗಿದು ಕಟ್ಟಿರುತ್ತಾರೆ. ಬಡಿಯಲು ಎರಡು ಗಟ್ಟಿಯಾದ ತೆಂಗಿನ ಅಥವಾ ಈಚಲು ಮರದ ಗರಿಗಳ ಕಡ್ಡಿಗಳನ್ನು ಬಳಸುತ್ತಾರೆ. ಬಡಿಯುವ ಕೋಲು ಬಲಗೈಯಲ್ಲಿರುತ್ತದೆ. ಎಡಗೈ ಕೋಲು ಬಡಿಯುವ ಕೋಲಿಗಿಂತಾ ಗಾತ್ರದಲ್ಲಿ ಸಣ್ಣದಾಗಿದ್ದು ಕಮಾನಿನಂತೆ ಬಾಗಿರುತ್ತದೆ. ಈ ಬಾಗಿದ ಕೋಲನ್ನು ಚರ್ಮದ ಮೇಲೆ ತಿಕ್ಕುವದರಿಂದ ಬುರು ಬುರು ಡರ ಡರ ನಾದ ಹೊರಡುತ್ತದೆ. ಇದು ತುಂಬಾ ಕರ್ಕಶವಾಗಿ ಕಿವಿಗೆ ಒಂದು ತರದ ಹಿಂಸೆಯನ್ನು ಕೊಡುವುದಾಗಿರುತ್ತದೆ. ತಿಕ್ಕುವ ಸ್ಥಳದಲ್ಲಿ ಔಡಲ ಬೀಜಗಳನ್ನು ಕುಟ್ಟಿ ತೆಗೆದ ಜಿಡ್ಡನ್ನು (ದ್ರವವನ್ನು) ಹಚ್ಚುತ್ತಾರೆ. ಹೀಗೆ ಲೇಪಿಸಿದ ಭಾಗದಲ್ಲಿ ತಿಕ್ಕುವುದರಿಂದ ಒಂದು ವಿಲಕ್ಷಣ ಧ್ವನಿ ಹೊರಡುತ್ತದೆ. ಇದಕ್ಕೆ ಉರಮೆ ವಾದ್ಯ ಎಂದೂ ಕರೆಯಲಾಗುತ್ತದೆ. ಉರಿಮಾರೆಮ್ಮನನ್ನು ಹೊತ್ತಾಡುವ ಜನರ ವಾದ್ಯವಾದುದರಿಂದ ಮೇಲಿನ ಈ ಹೆಸರು ಬಂದಿರಬೇಕು.

ಢಕ್ಕೆ: ವೃತ್ತಿ ಗಾಯಕರಾದ ನೀಲಗಾರರು ತಂಬೂರಿಯ ಜೊತೆಗೆ ಢಕ್ಕೆಯೆಂಬ ವಾದ್ಯವನ್ನು ಬಳಸುತ್ತಾರೆ. 12ನೆಯ ಶತಮಾನದ ವಚನಕಾರರಲ್ಲಿ ಢಕ್ಕೆಯ ಮಾರಯ್ಯ ಢಕ್ಕೆಯ ಬೊಮ್ಮಣ್ಣರೆಂಬ ಜನಪದ ಕಲಾವಿದರಿದ್ದಾರೆ. ಢಕ್ಕೆಯ ವಾದನವೇ ಅವರ ವೃತ್ತಿಯಾಗಿದ್ದರಿಂದ ಈ ಹೆಸರು ಬಂದಿರಬೇಕು. ಮೊರದಲ್ಲಿ ಮಾರಿಯನ್ನಿಟ್ಟುಕೊಂಡು ತನ್ನ ಕೈಯಲ್ಲಿ ಬಳೆ ಧರಿಸಿ, ಕತ್ತಿ ಬಟ್ಟಲು ಹಿಡಿದು ಮನೆ ಮನೆಗೆ ಢಕ್ಕೆಯನ್ನು ಬಾರಿಸುತ್ತ ಬರುತ್ತಿದ್ದನೆಂಬುದು ಅವನ ಒಂದು ವಚನದಿಂದ ತಿಳಿದು ಬರುತ್ತದೆ. ಢಕ್ಕೆಯ ಉದ್ದ ಸುಮಾರು 10 ಅಂಗುಲ ಇರುತ್ತದೆ. ಚರ್ಮದ ಹೊದಿಕೆಯ ಎರಡೂ ಮುಖಗಳು ಸುಮಾರು ನಾಲ್ಕು ಅಂಗುಲ ವ್ಯಾಸದ್ದಿರುತ್ತವೆ. ಇದಕ್ಕೆ ದನದ ಚರ್ಮವನ್ನು ಬಳಸುತ್ತಾರೆ. ಕಟ್ಟಿಗೆ ಹಲಸಿನ ಮರದ್ದು. ಚರ್ಮದ ಹೊದಿಕೆಯನ್ನು ಕೈಯಿಂದ ಅಥವಾ ನಯವಾದ ಕೋಲಿನಿಂದ ಬಡಿದು ಶಬ್ದ ಹೊರಡಿಸುತ್ತಾರೆ. ವಾದ್ಯಕ್ಕೆ ಬಿಗಿದಿರುವ ದಾರಗಳನ್ನು ಧ್ವನಿ ಬದಲಾವಣೆಗಾಗಿ ಆಗಾಗ್ಗೆ ಅದುಮಿ ತ್ವರಿತವಾಗಿ ಕೈಯನ್ನು ಹಿಂದೆಳೆದುಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ನಾದ ವೈವಿಧ್ಯ ಏರ್ಪಡುತ್ತದೆ. ಇದು ಡಮರುಗಾಕಾರವನ್ನು ಹೋಲುತ್ತದೆ. ಶಾಸನಗಳಲ್ಲಿ 'ಢಕ್ಕೆಯ ಕೇರೆ'ಯ ಉಲ್ಲೇಖಗಳೂ ಬರುತ್ತವೆ. ಆದ್ದರಿಂದ ಇದು ಜನಪ್ರಿಯ ವಾದ್ಯವೇ ಸರಿ.

ಡಮರುಗ: ರಚನೆಯಲ್ಲಿ ಢಕ್ಕೆಯನ್ನೇ ಹೋಲುವ ಡಮರು ಗದ ನಡುವೆ ಎರಡು ದಾರದ ಗಂಟುಗಳನ್ನು ಕಟ್ಟಿರುತ್ತಾರೆ. ಡಮರುಗವನ್ನು ಹದವರಿತು ಅಲುಗಾಡಿಸುವುದರಿಂದ ಎರಡೂ ಗಂಟುಗಳು ಎರಡೂ ಕಡೆಯ ಚರ್ಮದ ಹೊದಿಕೆಗೆ ಬಡಿದು ಢಮ ಢಮ ಧ್ವನಿ ಹೊರಡುತ್ತದೆ. ಈ ಢಮ ಢಮ ನಾದದಿಂದಲೇ ಇದಕ್ಕೆ ಡಮರುಗವೆಂದು ಕರೆದಿರಬೇಕು. ಇದು ಶಿವನ ವಾದ್ಯವೆಂದು ತಿಳಿದು ಶಿವಭಕ್ತರಾದ ಗೊರವರು ಈ ವಾದ್ಯವನ್ನು



ಡಮರುಗ ವಾದ್ಯ

ಪೂಜಿಸಿ ಉಪಯೋಗಿಸುತ್ತಾರೆ. ಗೊರವರ ಕಲಾಪ್ರದರ್ಶನಕ್ಕೆ ಈ ವಾದ್ಯದಿಂದಾಗಿ ಎಲ್ಲಿಲ್ಲದ ಕಳೆಕಟ್ಟುತ್ತದೆ. 4–5 ಜನ ಗೊರವಯ್ಯಗಳು ವಿಶಿಷ್ಟವಾದ ತಾಳ ಲಯಗಳೊಂದಿಗೆ ಡಮರುಗದ ನಾದದೊಡನೆ ಸ್ತುತಿ ಪದಗಳನ್ನು ಹೇಳುತ್ತಾ ಕುಣಿಯುತ್ತಾರೆ. ಕುಣಿತ ಪರಾಕಾಷ್ಠೆಯನ್ನು ಮುಟ್ಟಿದಾಗ ಡಮರುಗದ ನಾದದೊಂದಿಗೆ ಅವರ ಕುಣಿತ ರುದ್ರಸ್ವರೂಪವನ್ನು ತಾಳುತ್ತದೆ.

ಗೊರವರಲ್ಲದೇ ಕೆಲವು ಭಾಗದಲ್ಲಿ ಹಾವಾಡಿಗರು, ಮಂಗನಾಡಿಸುವವರು ಈ ವಾದ್ಯವನ್ನು ತಮ್ಮ ಕಲೆಯಲ್ಲಿ ಬಳಸಿಕೊಳ್ಳುತ್ತಾರೆ.

ಬುಡಬುಡಕಿಯ ವಾದ್ಯ: ಚರ್ಮವಾದ್ಯಗಳಲ್ಲಿ ಅತಿ ಚಿಕ್ಕದಾದುದು. ಇದನ್ನು ಕಿರು ಡಮರುಗ ವಾದ್ಯವೆಂದು ಕರೆಯಬಹುದು. ಈ ವಾದ್ಯದ ಉಗಮದ ಬಗ್ಗೆ ದಂತ ಕಥೆಗಳಿವೆ. ಶ್ರೀಕೃಷ್ಣನು ತಾರಕಾಸುರ–ಮಾರಕಾಸುರರನ್ನು ಸಂಹಾರ ಮಾಡಲು ಹೋದಾಗ ಬುಡಬುಡಕಿಯ ವಾದ್ಯ ಹಿಡಿದು ವೇಷ ಮರೆಸಿಕೊಂಡು ಹೋಗಿದ್ದನಂತೆ. ಶ್ರೀಕೃಷ್ಣನಿಂದ ಬಳುವಳಿಯಾಗಿ ಈ ಕಲೆ ತಮಗೆ ಬಂದಿದೆಯಂದು ಬುಡಬುಡಕಿಯವರು ಹೇಳುತ್ತಾರೆ. 'ಕಿಡಬುಡ' ಈ ನಾದದ ಕಾರಣವಾಗಿಯೇ ಈ ವಾದ್ಯ ಹೀಗೆ ಕರೆಸಿಕೊಳ್ಳುತ್ತಿರಬೇಕು. ಮೂಡಲದ ಹಣೆಯಲ್ಲಿ ಬೆಳ್ಳಿ ಮೂಡುವ ಮುನ್ನ ಪ್ರಶಾಂತ ನಿಶೆಯೊಳಗೆ ಊರಲ್ಲಿ ತನ್ನ ಮಧುರ ಕಂಠದಿಂದ ಹಾಡುತ್ತ ತಿರುಗುವ ಬುಡಬುಡಕನಿಗೆ ಅವನ ವಾದ್ಯದ ರಮ್ಯನಿನಾದವು ಜೊತೆಗೂಡಿ ಮೇಳ ನಿದ್ದೆಯಲ್ಲಿ ಇದ್ದವರನ್ನು ಸುಖ ನಿದ್ದೆಯಲ್ಲಿ ತೂಗುತ್ತದೆ. ಈತ ಹೇಳುವ ಶಕುನದ ವಿಫಲತೆಯಿಂದಾಗಿ 'ಬುಡಬುಡಕ್ಯಾನ ಮಾತ ಬುಡಕತನಕ ಸುಳ್ಳ' ಎಂಬ ಗಾದೆ ಹುಟ್ಟಿಕೊಂಡಿದೆ. ಸುಮಾರು 8 ಅಂಗುಲ ಉದ್ದವಿರುವ ಕಳಸಿನ ಎರಡೂ ಬಾಯಿಗಳಿಗೂ ಕಪ್ಪೆ ಚರ್ಮ ಇಲ್ಲವೆ ಆಡಿನ ಜಠರದ ಚರ್ಮವನ್ನು ದಾರಗಳ ಸಹಾಯದಿಂದ ಬಿಗಿದಿರುತ್ತಾರೆ. ಬಿಗಿಯುವ ದಾರಕ್ಕೆ ಬದ್ದೆ ದಾರವೆಂದು ಕರೆಯುತ್ತಾರೆ. ಬದ್ದೆಯ ಭಾಗದಲ್ಲಿ ಎರಡು ಮಗ್ಗಲು ತದ್ವಿರುದ್ಧವಾಗಿ ಎರಡು ದಾರದ ತುಂಡುಗಳನ್ನು ಕಟ್ಟಿರುತ್ತಾರೆ. ಈ ದಾರದ ತುಂಡುಗಳ ಬಡಿಯುವ ತುದಿಗೆ ಮೇಣವನ್ನಂಟಿಸಿ ಸಣ್ಣ ಗಂಟುಗಳನ್ನಾಗಿ ಮಾಡಿ ಬಡಿಯುತ್ತಾರೆ. ಈ ಗಂಟುಗಳು ಎರಡು ಮುಖದ ಮಧ್ಯದಲ್ಲಿ ಬಂದು ಇನ್ನೊಂದು ಬುಡಬುಡಕೆಯ ಎರಡೂ ಮುಖದ ಬದಿ ಬಡಿಯುವಂತೆ ಕಟ್ಟಿರುತ್ತಾರೆ. ಇವುಗಳಿಗೆ ತಾಳುಗಳೆಂದು ಹೆಸರು. ಕಳಸಿನ ನಡುವೆ ಬೆರಳುಗಳಿಂದ ಹಿಡಿದು ಕೈ ಚಳಕದಿಂದ ತ್ವರಿತವಾಗಿ ಈ ವಾದ್ಯವನ್ನು ಅಲುಗಿಸಿದಾಗ ಗಂಟು ಹಾಕಿದ ದಾರಗಳು ಚರ್ಮದ ಭಾಗಗಳಿಗೆ ಬಡಿದು 'ಕಿಡಬುಡ' ನಾದ ಕೊಡುತ್ತದೆ. ವಾದ್ಯದ ನಡುವೆ ಬಣ್ಣ–ಬಣ್ಣದ ಬಟ್ಟೆಗಳನ್ನು ಕಟ್ಟಿ ಈ ಬಟ್ಟೆಗಳಿಂದ ಬಿಗಿಯಾಗಿ ಹಿಡಿದು ನುಡಿಸುತ್ತಾರೆ.



ಬುಡಬುಡಕಿಯ ವಾದ್ಯ


ಕರಡಿ: ಉತ್ತರ ಕರ್ನಾಟಕದಲ್ಲಿ 'ಕರಡಿ ಮಜಲು' ಎಂದೇ ಕರೆಯಿಸಿಕೊಂಡಿರುವ ಈ ವಾದ್ಯದ ವಾದನದ ಕಲೆ ತುಂಬಾ ಜನಪ್ರಿಯವಾದುದು. ಇದನ್ನು ದಕ್ಷಿಣ ಕರ್ನಾಟಕದಲ್ಲಿ ಕರಡಿ ಮೇಳ ಎಂದು ಕರೆಯುತ್ತಾರೆ. ಜಾತ್ರೆ ಉತ್ಸವಗಳಲ್ಲಿ ಧರ್ಮಗುರುಗಳನ್ನು ಊರೊಳಗೆ ಬರಮಾಡಿಕೊಳ್ಳುವಲ್ಲಿ ಮದುವೆ ಮೆರವಣಿಗೆಯಲ್ಲಿ ಈ ವಾದ್ಯದ ಮಜಲು ನಡೆಯುತ್ತದೆ. ಕರಡಿ ವಾದ್ಯ ಇತರ ಪಕ್ಕ ವಾದ್ಯಗಳ ಸಹಕಾರದಿಂದ ವಿಜೃಂಭಿಸುತ್ತದೆ. 8 ಅಂಗುಲ ವ್ಯಾಸವುಳ್ಳ 24 ಅಂಗುಲ ಉದ್ದವಿರುವ ಮರದ ಪಡಗಕ್ಕೆ ಆಡಿನ ಇಲ್ಲವೆ ಚಿಗರೆಯ ಚರ್ಮವನ್ನು ಎರಡೂ ಬಾಯಿಗೆ ಅಳವಡಿಸುತ್ತಾರೆ. ನಯವಾದ ಎರಡು ಗುಣಿಗಳಿಂದ ಒಳ್ಳೆಯ ಗತ್ತಿನಿಂದ ಬಾರಿಸುತ್ತಾರೆ. ಇದನ್ನು ಸೊಂಟಕ್ಕೆ ಇಲ್ಲವೆ ಕುತ್ತಿಗೆಗೆ ತೂಗು ಹಾಕಿಕೊಂಡಿರುತ್ತಾರೆ. ಬಡಿತದಲ್ಲಿ ಆದಿತಾಳ, ಏಕತಾಳ, ಝುಂಪತಾಳ, ಚೌತಾಳ, ಚಾಲು ಮುಂತಾದವು ಬಾರಿಸುವುದು ಮಿಶ್ರತಾಳ ಮುಂತಾದ ತಾಳಗಳನ್ನು ಹೆಸರಿಸುತ್ತಾರೆ.



ಕರಡಿ ಮಜಲು


ನಿಧಾನವಾಗಿ ಪ್ರಾರಂಭವಾದ ಕರಡಿ ಮಜಲಿನ ಗತ್ತು ಗತಿಗಳು ಹಂತ ಹಂತವಾಗಿ ಏರಿ ಕ್ರಮೇಣ ಅದೇ ಗತಿಯಲ್ಲಿ ನಿಧಾನವಾಗಿ ಮುಕ್ತಾಯವಾಗುತ್ತವೆ.

ಮದ್ದಳೆ: ಜನಪದ ಆಟಗಳಾದ ಯಕ್ಷಗಾನ, ದೊಡ್ಡಾಟಗಳಲ್ಲಿ ಈ ವಾದ್ಯಕ್ಕೆ ಅತ್ಯಂತ ಪ್ರಾಧಾನ್ಯತೆ ಇದೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲಿಯೂ ಮದ್ದಳೆಯ ಪ್ರಸ್ತಾಪವಿರುತ್ತದೆ. ಮದ್ದಳೆಯು ಮೃದಂಗದ ಮತ್ತೊಂದು ರೂಪವೆಂದರೂ ಇದು ಮೃದಂಗಕ್ಕಿಂತ ಗಾತ್ರದಲ್ಲಿ ಸ್ವಲ್ಪ ದೊಡ್ಡದು. ಕೇರಳದ ಕಥಕ್ಕಳಿ ನೃತ್ಯದಲ್ಲಿ ಕೆಲವು ದೇವಾಲಯಗಳಲ್ಲಿ ಪೂಜಾ ಸಮಯಕ್ಕೆ ಈ ವಾದ್ಯವನ್ನು ನುಡಿಸುವ ರೂಢಿಯಿದೆ.



ಮದ್ದಳೆ ವಾದ್ಯ

ಹಲಗೆ: ಹಲಗೆಗಳಲ್ಲಿ ಹಲವು ಪ್ರಕಾರಗಳಿವೆ. ಚಿಟ್ಟ ಹಲಗೆ, ರಣಹಲಗೆ, ಜಗ್ಗಲಗೆ, ಕಣಿಹಲಗೆ, ತಮಟೆ, ಪರೆ, ಸಂಪರದಾನಿ ಎಂದು ಮುಂತಾಗಿ ಕರೆಯುತ್ತಾರೆ. 'ಹಲಗೆಯಿಲ್ಲದ ಊರಿಲ್ಲ ಒಲೆಯಿಲ್ಲದ ಓಣಿಯಿಲ್ಲ' ಎಂಬ ಗಾದೆ ಇದೆ. ಗ್ರಾಮ ದೇವತೆಗಳ ಉತ್ಸವ, ಜಾತ್ರೆ ವಿವಿಧ ಎತ್ತುಗಳ ಹಾಗೂ ವ್ಯಕ್ತಿಗಳ ಮೆರವಣಿಗೆ, ಮದುವೆ, ಮರಣ, ಡಂಗುರ ಮುಂತಾದ ಪ್ರಚಾರ ಮಾಧ್ಯಮಕ್ಕಾಗಿ ಹೀಗೆ ವಿವಿಧ ಸಂದರ್ಭಗಳಲ್ಲಿ ಪ್ರಾದೇಶಿಕ ಭಿನ್ನತೆಯೊಂದಿಗೆ ಈ ವಾದ್ಯ ಉಪಯೋಗ ಬೀಳುತ್ತದೆ. ಪೋತರಾಜನಿಗಂತೂ ಇದು ವೃತ್ತಿ ವಾದ್ಯವಾಗಿದೆ. ಹಲಗೆ ಬಾರಿಸುವ ಮತ್ತು ತಯಾರಿಸುವ ಕಸುಬು ಹೊಲೆ ಮಾದಿಗರಲ್ಲಿದೆ. ಈ



ಹಲಗೆ ವಾದ್ಯ

ವಾದ್ಯದ ರಚನೆ ಸರಳವಾಗಿದೆ. ವೃತ್ತಾಕಾರವಾಗಿ ಸಿದ್ಧಗೊಳಿಸಿದ ಒಂದು ಮರದ ಬಳೆ: ವ್ಯಾಸ ಸು. 1,2,3 ಅಡಿ ಹೀಗೆ ವಿವಿಧ ಪ್ರಮಾಣದ್ದಾಗಿರುತ್ತದೆ. ಈ ಬಳೆಗೆ ಚೆನ್ನಾಗಿ ಹದಗೊಳಿಸಿದ ಕೋಣನ ಚರ್ಮವನ್ನು ಬಿಗಿದು ಕಟ್ಟಿರುತ್ತಾರೆ. ಕಟ್ಟಲು ಚರ್ಮದ ದಾರಗಳನ್ನು ಬಳಸುತ್ತಾರೆ. ಹಲಗೆ ಚರ್ಮ ವನ್ನು ಮೊದಲು ಸುಣ್ಣದಲ್ಲಿ ಇಟ್ಟಿರುತ್ತಾರೆ. ಅದು ಸುಣ್ಣ ಮೇದಷ್ಟು ಧ್ವನಿ 'ತಾರ' ಬರುತ್ತದೆಂದು ಹೇಳುತ್ತಾರೆ. ಹೆಗಲಿಗೆ ತೂಗು ಹಾಕಲು ಅನುಕೂಲವಾಗುವಂತೆ ಹೆಗಲುಪಟ್ಟಿ ಜೋಡಿಸಿ ಬಾರಿಸಲು ಒಂದು ಕಟ್ಟಿಗೆ ಗುಣಿಯನ್ನು ಇನ್ನೊಂದು ತಿಳುವಾದ ಕಡ್ಡಿಯನ್ನು ಉಪಯೋಗಿಸುತ್ತಾರೆ. ಏರುಧ್ವನಿ ಬರುವಂತೆ ಹಲಗೆಯನ್ನು ಬಿಸಿಲು ಇಲ್ಲವೆ ಬೆಂಕಿಯಲ್ಲಿ ಕಾಯಿಸಿ ಕಣ ಕಣ ನಾದ ಹೊರಡಿಸುತ್ತಾರೆ. ಹಲಗೆಯ ಬಡಿತದಲ್ಲಿ ನಾನಾ ರೀತಿಗಳಿವೆ. ಇದೊಂದು ವಿಶಿಷ್ಟ ಕಲೆಯಾಗಿಯೇ ಗ್ರಾಮಗಳಲ್ಲಿ ಬೆಳೆದಿದೆ. ವಿವಿಧ ಬಗೆಯ ಧ್ವನಿಗಳನ್ನು ಹಲಗೆಯಲ್ಲಿಯೇ ಬಡಿದು ತೋರಿಸುವ ಕಲೆಗಾರರಿದ್ದಾರೆ. ಚಿಟ್ಟಲಗಿ ಮೇಳದಲ್ಲಿ ತ್ವರಿತಗತಿಯಲ್ಲಿ ಬಾರಿಸುವ ರೀತಿ ಆಶ್ಚರ್ಯಕರವಾಗಿರುತ್ತದೆ. ಹಲಗೆಯ ಬಡಿತದಲ್ಲಿ ವಿವಿಧ ಗತ್ತುಗಳಿವೆಯಂತೆ. ದೀನಬಾಜು, ಹಣಮಂತನ ಗತ್ತು, ಕುದುರೆಯ ಗತ್ತು, ಗಂವಾರ ಹೆಜ್ಜೆ, ದೇವರ ಗತ್ತು, ಚಿತ್ತಾಟ, ಭೂತಾಲ.....ಎಂದು ಮುಂತಾಗಿ ಕರೆಯುತ್ತಾರೆ. ಆರು ಮಾತ್ರೆಯ ದಾದರಾ, ಚೌತಾಳ, ತ್ರಿತಾಳ, ಝುಂಪಾ, ಧಮಾಳ ಹೀಗೆ ವಿಲಂಬಿತ, ಮಾಧ್ಯಮ ಹಾಗೂ ಧೃತಿಗಳಲ್ಲಿ ವಾದನ ಮುಂದುವರೆಯುತ್ತದೆ. ಈ ವಾದ್ಯದ ವಾದನ ಕಲೆಯನ್ನು ಎಲ್ಲಿಯೂ ಶಾಸ್ತ್ರೋಕ್ತವಾಗಿ ಕಲಿಯುವುದಿಲ್ಲ. ಕೂಡು ಬಡಿತದಲ್ಲಿಯೇ ಈ ಕಲೆಯನ್ನು ಕರಗತ ಮಾಡಿ ಕೊಳ್ಳುತ್ತಾರೆ. ಹತ್ತಾರು ಹಲಗೆಗಳ ಬಡಿತದಲ್ಲಿ ಧ್ವನಿ ಏರಿಳಿತ ಒಂದೇ ಬಗೆಯಾಗಿ ಸಮಷ್ಟೀ ಸ್ವರೂಪ ಪಡೆದಿರುತ್ತದೆ. ಬಡಿಯುವಾಗ ಕೆಲವು ಕಲೆಗಳನ್ನು ತೋರಿಸುತ್ತಾರೆ. ಅಕ್ಕಪಕ್ಕಕ್ಕೆ ಸರಿದು ತಿರುಗಿ, ಅಂಗಾತ ಮಲಗಿ ಎರಡು ಕಾಲುಗಳ ಮಧ್ಯಕ್ಕೆ ಇಟ್ಟು ಕೊಂಡು ಹೀಗೆ ನಾನಾ ವಿನ್ಯಾಸಗಳಲ್ಲಿ ಬಾರಿಸುವುದುಂಟು. ನಾಣ್ಯಗಳನ್ನು ಬಚ್ಚಿಟ್ಟು ಹಲಗೆ ಬಡಿತದ ಸಂಕೇತದಿಂದ ಅದನ್ನು ಹುಡುಕಿ ತೆಗೆಯುವುದನ್ನು ನೋಡಲು ಕುತೂಹಲ ಕಾರಿಯಾಗಿರುತ್ತದೆ. ಹಲಗೆಯ ಬಡಿತದಲ್ಲಿ ಸವಾಲು ಜವಾಬುಗಳನ್ನು ನಡೆಸುತ್ತಾರೆ. ಹೀಗೆ ಹಲಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವಾದ್ಯವೆಂದು ಹೇಳಬಹುದು.

ದಪ್ಪು: ಈ ವಾದ್ಯ ಒಂದಿಲ್ಲ ಒಂದು ಕಲೆಗೆ ಪೋಷಕವಾಗಿದೆ. ಕೆಲವು ಬಯಲಾಟಗಳು ದಪ್ಪಿನಾಟವೆಂದೂ ಹಾಡುಗಳು ದಪ್ಪಿನ ಪದಗಳೆಂದು ಕರೆಸಿಕೊಳ್ಳುತ್ತವೆ. ಕೋಲಾಟದಲ್ಲಿ ಅಲಾವಿ ಕುಣಿತದಲ್ಲಿ ಈ ವಾದ್ಯವನ್ನು ಬಳಸುತ್ತಾರೆ. ದಪ್ಪ ಚರ್ಮವಾದ್ಯಗಳಲ್ಲಿ ಪ್ರಮುಖ ಮತ್ತು ವೈಶಿಷ್ಟ್ಯ ಪೂರ್ಣವಾದುದು. ಲಾವಣಿ ಮತ್ತು ಗೀಗೀ ಪದಗಳಲ್ಲಂತೂ ಇದರ ಸ್ಥಾನ ಹೆಚ್ಚಿನದು. ಬೆಡಗಿನಿಂದ ಕೂಡಿದ ಹಾಡುಗಳಿಗೆ ಪುಷ್ಟಿ ಕೊಡುವ ತಾಳ ಲಯಗಳನ್ನು ಇದು ಹೊಂದಿರುತ್ತದೆ. ದಪ್ ದಫ್ ಎಂಬ




ದಪ್ಪು ವಾದ್ಯ

ನಾದದ ಧ್ವನಿ ಅನುಕರಣದಿಂದ ಈ ವಾದ್ಯಕ್ಕೆ ದಪ್ಪು ಎಂದು ಕರೆದಿರಬೇಕು. ಹಾಡಿನ ಸ್ವರಾಂದೋಲನದಲ್ಲಿ ವಾದನಕಾರ ತನ್ನ ತುದಿಬೆರಳುಗಳಿಂದ ತರಂಗಿತ ಧ್ವನಿಯನ್ನುಂಟು ಮಾಡುತ್ತಾನೆ. ಲಾವಣಿಯ ಒಂದೇ ಧಾಟಿಯಲ್ಲಿ ದಪ್ಪಿನ ಹಲವಾರು ತಾಳ ಕೈಚಳಕ ತೋರಿಸುವವರೂ ಇದ್ದಾರೆ. ಹೆಚ್ಚಾಗಿ ತ್ರಿತಾಳ ಗಳಲ್ಲಿಯೇ ಬಾರಿ ಸುತ್ತಾರೆ. ಅಲ್ಲದೇ ದಪ್ಪಿನ ತಾಳಗತಿ ಮೂರು ಮೂರು ಮಾತ್ರೆಗಳಲ್ಲಿ ಸಾಗುವದರಿಂದ ಅದು ಜನಪದ ಹಾಡಿಗೆ ಮೆರುಗನ್ನು ನೀಡುತ್ತದೆ.

ದಪ್ಪಿನ ಆಕಾರ ದುಂಡಗೆ ಕಟ್ಟಿಯ ಹಲಗೆಯಂತೆ ಸಪಾಟಾಗಿದ್ದು, ಲಗೆಯ ಬಣ್ಣವನ್ನೇ ಹೋಲುತ್ತದೆ. ಸುಮಾರು 1 ಘೂಟು ವ್ಯಾಸದ 4–5 ಇಂಚು ಎತ್ತರದ ದುಂಡಗಿನ ಇಲ್ಲವೇ ತೆಳುವಾದ ಕಂಠಕ್ಕೆ ಕೋಣದ ತೊಗಲನ್ನು ಹೊದಿಕೆಯಾಗು ವಂತೆ ಒಂದೇ ಕಡೆಗೆ ಬಿಗಿದಿರುತ್ತಾರೆ. ತೊಗಲು ವಯಸ್ಸಾದ ಕೋಣನದ್ದಾಗಿರದೇ 2 ರಿಂದ 3 ವರ್ಷ ವಯಸ್ಸಿನ ಕೋಣನ ದಾಗಿರುತ್ತದೆ. ಕಾರಣ ತುಂಬಾ ಗಟ್ಟಿ ಇರುವದರಿಂದ ನಾದ ಸರಿ ಹೊರಡುತ್ತದೆ. ಹೆಚ್ಚಾಗಿ ಇದನ್ನು ಹಾಡುಗಾರಿಕೆಯ ಹಿನ್ನೆಲೆಯಲ್ಲಿ ಬಳಸುತ್ತಾರೆ.

ಚಮ್ಮಡಿ ಮತ್ತು ಖಂಜರಿ: ಇವೆರಡೂ ಒಂದೇ ಮಾದರಿಯ ಒಂದೇ ಉದ್ದೇಶಕ್ಕೆ ಹುಟ್ಟಿಕೊಂಡ ವಾದ್ಯಗಳು. ದಮ್ಮಡಿ 6 ಅಂಗುಲ ವ್ಯಾಸವುಳ್ಳ ಕಂಬಳಿ ಮರದ ಕಟ್ಟಿಗೆಯ ವೃತ್ತ ಭಾಗಕ್ಕೆ ಉಡುವಿನ ಚರ್ಮವನ್ನು ಒಂದು ಮುಖಕ್ಕೆ ಅಂಟಿಸಿರುತ್ತಾರೆ. ಇದಿಲ್ಲದೆ ಭಜನಾ ಮೇಳಗಳೇ ಇರುವುದಿಲ್ಲ. ಇತ್ತೀಚೆಗೆ ಇದರ ಬದಲಾಗಿ ಡಗ್ಗಾ ಉಪಯೋಗಿಸುತ್ತಾರೆ. ವೇಷಗಾರರ ಹೆಂಗ ಸರು ತಮ್ಮ ಹಾಡಿಗೆ ದಮ್ಮಡಿ ಉಪಯೋಗಿಸುತ್ತಾರೆ. ದೇವರ ಗುಡಿಯಲ್ಲಿ ದೊಂಬಿ ದಾಸರಲ್ಲಿ ಈ ವಾದ್ಯದ ಬಳಕೆ ಇದೆ. ಖಂಜರಿಯು 4 ಅಂಗುಲ ವ್ಯಾಸವುಳ್ಳ ಚರ್ಮವಾದ್ಯ ವೃತ್ತ ಭಾಗದ ತಗಡಿನ ಹಾಗೂ ಕಟ್ಟಿಗೆಯ ಭಾಗವನ್ನು ಕೊರೆದು ಅಲ್ಲಿ ಝಣಝಣಿಸುವ ಲೋಹದ ಬಿಲ್ಲೆಗಳನ್ನು ಅಳವಡಿಸಿ ನುಡಿ ಸುತ್ತಾರೆ. ಈ ವಾದ್ಯಗಳು ಹೆಚ್ಚಾಗಿ ಭಜನೆಯಲ್ಲಿ ಉಪಯೋಗ ವಾಗುವದರಿಂದ ಒಂದೇ ಲಯವಿರುವದರಿಂದ 4 ಮಾತ್ರೆಯ ಕೇರವಾ ತಾಳಗಳನ್ನು ಹೊಂದಿರುತ್ತದೆ.

ಜನಪದ ವಾದ್ಯಗಳ ವಾದನ ಕಲೆಯನ್ನು ಜನಪದ ಕಲಾಕಾರರು ಸಮೂಹದೊಂದಿಗೆ ಕೂಡಿ ನುಡಿಸುವಾಗ ಅನು ಕರಣೆಯಿಂದ ಕಲಿತಿರುತ್ತಾರೆ. ಅವರ ರಾಗವಾಗಲೀ ತಾಳವಾಗಲೀ ಶಾಸ್ತ್ರೀಯ ವಾಗಿ ಇಂಥದ್ದೇ ಎಂದು ಕರಾರುವಕ್ಕಾಗಿ ಹೇಳಲಿಕ್ಕಾಗದು. ಹಾಡಿನ ನಾದ ಲಯಕ್ಕನುಗುಣ ವಾಗಿ ತಾಳ ಸಂಯೋಜನೆಯನ್ನುಂಟು ಮಾಡಿ ಕೊಳ್ಳುತ್ತಾರೆ. ಇಂದಿನ ಅಭಿಜಾತ ಸಂಗೀತ ತಾಳ ಲಯಗಳ ಮೂಲ ಜನಪದ ಸಂಗೀತ ದಲ್ಲಿಯೇ ಗುರುತಿಸುವುದು ಅವಶ್ಯವಿದೆ. ಕೆಲವು ತಾಳಗಳನ್ನು ಇನ್ನೂ ಹೆಸರಿಸಿಲ್ಲವಂತೆ. ವಸ್ತುಸ್ಥಿತಿ ಹೀಗಿರುವಾಗ ಮಿಶ್ರ ತಾಳಗಳನ್ನೇ ಹೊಂದಿದ ಜನಪದ ಸಂಗೀತ ದಲ್ಲಿಯ ಚರ್ಮವಾದ್ಯಗಳ ವಾದನದ ಕಲೆ ಮತ್ತು ತಾಳಗಳ ಬಗ್ಗೆ ನಿರ್ದಿಷ್ಟವಾಗಿ ಹೇಳುವದು ಕಷ್ಟ ಸಾಧ್ಯ. ಒಂದು ರಾಗದಲ್ಲಿ ವೈವಿಧ್ಯತೆಯನ್ನು ತಂದುಕೊಳ್ಳುವಂತೆ ತಾಳಗಳಲ್ಲಿಯೂ



ಚಮ್ಮಡಿ ಮತ್ತು ಖಂಜರಿ

ವೈವಿಧ್ಯತೆಯನ್ನುಂಟು ಮಾಡುತ್ತಾರೆ. ಒಂದು ರಾಗದಲ್ಲಿ ಅದು ಯಾವುದಾದರೂ ತಾಳವಾಗಿರಬಹುದು.

(ಎಂಎಂಪಿ)

ಜಯತೀರ್ಥ ಕುಲಕರ್ಣಿ: ವೇಣು ವಾದಕ. ಕಲಬುರ್ಗಿ ನಗರದ ಬ್ರಹ್ಮಪುರ ಬಡಾವಣೆಯ ಒಂಟಿಖಾನೆ ಎಂಬ ಒಂದು ವಠಾರ ದಲ್ಲಿ ವಾಸ. ಅಖಿಲ ಭಾರತ ಆಕಾಶವಾಣಿಯ ಯುವಜನ ಸಂಗೀತ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕೊಳಲುವಾದನ ಸಂಗೀತ ಕ್ಷೇತ್ರದಲ್ಲಿ ಅಷ್ಟೇನು ಜನಪ್ರಿಯ ಕ್ಷೇತ್ರವಲ್ಲ. ಆದರೂ ಸಮರ್ಥ ಕಲಾವಿದ ಶೇಖ್ ಅಬ್ದುಲ್ಲಾ ಖಾಜಿಯವರ ನೇತೃತ್ವದಲ್ಲಿ ವೇಣು ವಾದಕರ ಸೃಷ್ಟಿ ಆಶಾ ಭಾವನೆ ಮೂಡಿಸಿದೆ. ಕಲಬುರ್ಗಿ ಆಕಾಶವಾಣಿ ಕಲಾವಿದ ಖಾಜಿಯವರು, ಈ ಭಾಗದಲ್ಲಿ ಕೊಳಲು ವಾದನದಲ್ಲಿ ಪ್ರಖ್ಯಾತಿ ಹೊಂದಿದವರು. ಇವರ ಗರಡಿಯಲ್ಲಿ ಪಳಗಿದ ಶಿಷ್ಯ

ಜಯತೀರ್ಥ ಕುಲಕರ್ಣಿ. ಬಡತನದ ಕುಟುಂಬವಾದರೂ ಪ್ರತಿಭೆಗೆ ಬಡತನವಿಲ್ಲ. ಚಿಂಚೋಳಿ ತಾಲ್ಲೂಕಿನ ಹಲಚೇರಿ ಗ್ರಾಮದ ಭೀಮಸೇನರಾವ ಕುಲಕರ್ಣಿ ಹಾಗೂ ಪ್ರತಿಭಾ ಕುಲಕರ್ಣಿ ಅವರ ಪುತ್ರ ಈ ಜಯತೀರ್ಥ. ಈ ಯುವಕ ಕೊಳಲಿನಲ್ಲಿ ಬೆರಳಾಡಿಸುವ ಕೌಶಲ್ಯ ಮೆಚ್ಚುವಂಥದ್ದು, ಆಕಾಶವಾಣಿ, ದೂರದರ್ಶನದ ಯುವವಾಣಿ ಸಂಗೀತ ಕಲಾವಿದ ಕೂಡ ಆಗಿದ್ದಾನೆ. ಕಲಬುರ್ಗಿ ವಿಶ್ವವಿದ್ಯಾಲಯ, 2002ನೆಯ ಸಾಲಿನಲ್ಲಿ ಏರ್ಪಡಿಸಿದ್ದ ಯುವ ಜನೋತ್ಸವದಲ್ಲಿ ತಮ್ಮ ವೇಣುವಾದನ ಪ್ರತಿಭೆ ಮೆರೆದು, ಬೆಳ್ಳಿ ಪದಕ ಪಡೆದು ಹೆಸರು ಮಾಡಿದರು. ಅಖಿಲ ಭಾರತ ಮಟ್ಟದಲ್ಲಿ ಆಕಾಶವಾಣಿ ನಡೆಸುವ ಯುವಜನ ಸಂಗೀತ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದು ಈಗ ನಿಲಯದ 'ಬಿ' ದರ್ಜೆ ಕಲಾವಿದನಾಗಿ ಬಡ್ತಿ ಪಡೆದಿದ್ದಾರೆ. ಇದರಿಂದಾಗಿ ಹೈದರಾಬಾದ ಕರ್ನಾಟಕದ ಮತ್ತೊಂದು ಪ್ರತಿಭೆ ರಾಷ್ಟ್ರಮಟ್ಟದಲ್ಲಿ ಕುಡಿವೊಡೆದಂತಾಗಿದೆ. ಕಲಬುರ್ಗಿ ಆಕಾಶವಾಣಿಗೆ ಪ್ರಥಮ ಬಾರಿಗೆ ಇಂತಹ ಪ್ರಶಸ್ತಿ ಸಂದಿದೆ.

(ಎಸ್‌ಎಸ್‌ಪಿಕೆ)

ಜಯರಾವ ಕುಲಕರ್ಣಿ ಸಗರ: ಸಗರ ನಾಡಿನ ಪ್ರತಿಭಾವಂತ ಕಲಾವಿದರಾದ ಶ್ರೀ ಜಯರಾವ ಕುಲಕರ್ಣಿ ಇವರು ಸುರಪುರ ತಾಲ್ಲೂಕಿನ ಸಗರ ಗ್ರಾಮದಲ್ಲಿ ಜನಿಸಿದರು. ಮೂಲತಃ ಸಂಗೀತ ಮನೆತನದಲ್ಲಿ ಜನಿಸಿದ್ದರಿಂದ ತಮ್ಮ ಪ್ರಾರಂಭಿಕ ತಬಲಾ ವಿದ್ಯಾಭ್ಯಾಸ ತಂದೆ ಹಾಗೂ ಗುರುಗಳಾದ ಶ್ರೀ ಗಣಪತರಾವ ಕುಲಕರ್ಣಿಯವರಿಂದ ಆರಂಭಿಸಿದರು. ಮುಂದಿನ ಕಾಲೇಜು ಜೀವನವನ್ನು ಸುರಪುರದಲ್ಲಿಯೇ ಕಲಿಯುವದರೊಂದಿಗೆ ಶ್ರೀರಾಜಾ ವೆಂಕಟಪ್ಪಾ ನಾಯಕರಲ್ಲಿ ತಮ್ಮ ತಬಲಾ ಶಿಕ್ಷಣವನ್ನು ಮುಂದುವರೆಸಿದರು. ನಂತರ ಗುಲಬರ್ಗಾ ಆಕಾಶವಾಣಿಯ ನಿಲಯದ ಪ್ರಸಿದ್ಧ ತಬಲಾ ವಾದಕರಾದ ಶ್ರೀ ಪಶೂನ ಚಟರ್ಜಿ ಯವರ ಹತ್ತಿರ ತಬಲಾ ಶಿಕ್ಷಣವನ್ನು ಮುಂದುರೆಸಿದರು. ಶ್ರೀ ಪಶುನ ಚಟರ್ಜಿಯವರು ಅಂತರಾಷ್ಟ್ರೀಯ ಖ್ಯಾತಿಯನ್ನು ಹೊಂದಿದ ಉಸ್ತಾದ ಅಲ್ಲಾರಖಾ ಅವರ ಶಿಷ್ಯರು. ಚಟರ್ಜಿ ಯವರಲ್ಲಿ ಐದು ವರ್ಷಗಳ ಕಾಲ ಅಭ್ಯಾಸವನ್ನು ಮಾಡಿದರು. 1970–71ರಲ್ಲಿ ಇವರಿಗೆ ಶಹಾಬಾದದ ಪಂಡಿತ ಗುರುನಾಥರಾವ ಆಲಗೂಡಕರರವರ ಪರಿಚಯವಾಯಿತು. ಪಂಡಿತ ಗುರುನಾಥ ರಾವ ಆಲಗೂಡಕರ ತಬಲಾ ಹಾಗೂ ಹಾರ್ಮೋನಿಯಂ ಪಾರಂಗತರಾಗಿದ್ದರು. ಶ್ರೀ ಜಯರಾವ ಕುಲಕರ್ಣಿ ಅವರ ತಬಲಾ ನುಡಿಸುವಿಕೆ ಮಾಧುರ್ಯವನ್ನು ಕಂಡು ಪಂಡಿತ ಗುರುನಾಥರಾವ ಆಲಗೂಡಕರರವರು ತಮ್ಮಲ್ಲಿರುವ ಹಲವಾರು ತಬಲಾ ಸಂಗತಿಗಳನ್ನು ತಿಳಿಸಿಕೊಟ್ಟರು. ಪ್ರತಿನಿತ್ಯ ಅಭ್ಯಾಸದ ಪರಿಪಾಠವನ್ನು ಹಾಕಿಕೊಟ್ಟರು. ಅದೇ ಶಹಾಬಾದದಲ್ಲಿ ಇನ್ನೊಬ್ಬ ಖ್ಯಾತ ತಬಲಾ ವಾದಕರಾದ ಶ್ರೀ ಸುಮನರಾವ ಕುಲಕರ್ಣಿರವರ ಪರಿಚಯವು ಆದ್ದರಿಂದ ಅವರ ವಾದನಕ್ಕೆ ಮೆಚ್ಚಿ ಶ್ರೀ ಜಯರಾವ ಕುಲಕರ್ಣಿರವರು ಶ್ರೀ ಸುಮನರಾವ ಅವರ ಹತ್ತಿರ ಹಲವಾರು ವರ್ಷ ತಬಲಾ ಶಿಕ್ಷಣವನ್ನು ಪಡೆದಿರುತ್ತಾರೆ. ಶ್ರೀ ಸುಮನರಾವ ಅವರ ಪುತ್ರ ಅಜರಾಡಾ ಘರಾನೆಯ ಖ್ಯಾತ ತಬಲಾ ವಾದಕ ಶ್ರೀ ರಾಜು ಕುಲಕರ್ಣಿ– ಜಯರಾವರ ಪ್ರಾಣಸ್ನೇಹಿತ. ಇವರಲ್ಲಿ ತಬಲಾಗೆ ಸಂಬಂಧ ಪಟ್ಟಂತೆ ಹಲವಾರು ಸಂಗತಿಗಳು ವಿನಿಮಯವಾದವು. 1991 ರಲ್ಲಿ ಆಕಾಶವಾಣಿ ಕ್ಲಾಸಿಕಲ್ 'ಬಿ' ಶ್ರೇಣಿ ಪಾಸಾಗಿರುತ್ತಾರೆ.


ಮೂಲತಃ ದಿಲ್ಲಿ ಹಾಗೂ ಪಂಜಾಬ ಘರಾನೆಯ ಅನುಯಾಯಿ ಆಗಿರುವ ಇವರು ಸೋಲೋ ಮತ್ತು ಸಾಥಿಗಾಗಿ ಹೇಳಿ ಮಾಡಿಸಿರುವ ಕೈ ಇವರದು. ಸಾಥ್ ಸಂಗತ ಬಹು ಮೆಚ್ಚುಗೆಯನ್ನು ಪಡೆದಿದೆ. ಮುಖ್ಯ ಸಂಗೀತಗಾರನ ಪ್ರಜ್ಞೆಯನ್ನು ಅರಿತುಕೊಂಡು ಸಂದರ್ಭಕ್ಕೆ ಅನುಸಾರವಾಗಿ ಬೋಲುಗಳ ಪ್ರಯೋಗ ಮಾಡುವ ಕಲಾವಿದನೆಂದರೆ ಶ್ರೀ ಜಯರಾವ ಕುಲಕರ್ಣಿ.

ಅನೇಕ ಜನ ಶಿಷ್ಯರನ್ನು ತಯಾರು ಮಾಡಿದ ಕೀರ್ತಿ ಇವರದ್ದಾಗಿದೆ. ಮುಖ್ಯವಾಗಿ ಶ್ರೀ ಹಣಮಂತಾಚಾರ್ಯ ಸರಡಗಿ, ಶ್ರೀ ಶೇಷಶಯನಂ, ಶ್ರೀ ರವೀಂದ್ರ ಕುಲಕರ್ಣಿ ಶ್ರೀ ಸಮೀರ ಜೋಶಿ ಅನೇಕ ಶಿಷ್ಯರನ್ನು ತಯಾರು ಮಾಡಿದ ಕೀರ್ತಿ ಇವರದ್ದಾಗಿದೆ. ಇವರು ಕೇವಲ ಶಿಷ್ಯರನ್ನು ತಯಾರು ಮಾಡಿ ರುವುದು ಅಷ್ಟೇ ಅಲ್ಲ ಪಾಠ ಹೇಳಿಕೊಡುವ ವಿದ್ವತ್‌ನ್ನು ಶಿಷ್ಯರಿಗೆ ಹೇಳಿಕೊಟ್ಟ ಮಹಾಪುರುಷರು.

ಸಾಥಿ ಹಾಗೂ ಸಂಗತನ್ನು ಇವರು ಭಾರತದ ಹಲವಾರು ರಾಜ್ಯಗಳಲ್ಲಿ ಕಾರ್ಯಕ್ರಮವನ್ನು ನೀಡಿರುತ್ತಾರೆ. ಹಲವಾರು ಸಂಗೀತಗಾರರನ್ನು ಸಂಗತ್ ಮಾಡಿರುತ್ತಾರೆ. ಅವರಲ್ಲಿ ಮುಖ್ಯ ವಾಗಿ, ಶ್ರೀಮತಿ ಸರೋಜ ಅನಗರಕರ, ಶ್ರೀಮತಿ ಗೀತಾ ಗಾಯತ್ರಿ ಚಕ್ರವರ್ತಿ, ಶ್ರೀ ಎಂ. ವೆಂಕಟೇಶಕುಮಾರ, ಪಂಡಿತ ಮಾಧವ ಗುಡಿ, ಪಂಡಿತ ವಿನಾಯಕ ತೋರವಿ, ಪಂ. ಆಯತೀರ್ಥ ಮೇವುಂಡಿ, ಹಲವಾರು ಸಂಗೀತಗಾರರನ್ನು ಸಾಥಿ ಮಾಡಿರುತ್ತಾರೆ. ಪ್ರಸ್ತುತ ಇವರು ಗುಲಬರ್ಗಾ ಮಹಾನಗರ ಪಾಲಿಕೆಯಲ್ಲಿ ಪ್ರಥಮ ದರ್ಜೆ ಗುಮಾಸ್ತನೆಂದು ಸೇವೆಯಲ್ಲಿ ದ್ದಾರೆ.

(ಆರ್‌ಕೆಕೆ)

ಜಾ



ಜಾಯೆದ್ ಅನ್ಸಾರಿ: ಒಬ್ಬ ಕಲಾವಿದನಿಗೆ ತನ್ನ ಕೃತಿ ರಚನೆಯಲ್ಲಿ ವರ್ಣ, ಬ್ರಷ್,ಕ್ಯಾನ್‌ವಾಸ್ ಎಷ್ಟು ಮುಖ್ಯವೋ ಅದೇ ರೀತಿ ಅವನ ಮನಸ್ಸಿನ ಭಾವನೆಗಳು, ತುಡಿತ–ಮಿಡಿತಗಳೂ ಅಷ್ಟೇ ಮುಖ್ಯ. ಒಂದೆಡೆ ವಿಜ್ಞಾನವು ಅತೀವೇಗದಲ್ಲಿ ಬೆಳೆಯುತ್ತಿದ್ದು, ಪ್ರಸ್ತುತ ಜೀವನದಲ್ಲಿ ಪ್ರಕೃತಿಗೆ ಸವಾಲೊಡ್ಡಿ ನಿಂತಿರುವಂತೆ, ಕಲಾ ಜಗತ್ತಿನಲ್ಲಿ ಮಾನವನ ಬುದ್ಧಿವಂತಿಕೆ ವೇಗ ಆಂತರಿಕ ಮನಸ್ಸಿನ ಕ್ರಿಯಾಶೀಲತೆ ಕಲಾವಿದನನ್ನು ಕ್ಯಾನ್‌ವಾಸ್ ಮೇಲೆ ಮೂಡಿಸುವಂತೆ ಪ್ರೇರೇಪಿಸುತ್ತದೆ. ಇತ್ತೀಚೆಗೆ ತೈಲವರ್ಣ ಹಾಗೂ ಅದರ ಪ್ರತಿಸ್ಪರ್ಧಿ ಮಾಧ್ಯಮವೆಂದೇ ಖ್ಯಾತಿ ಪಡೆದಿರುವ ಆಕ್ರಲಿಕ್ ಮಾಧ್ಯಮಗಳಲ್ಲೇ ಹಲವಾರು ಕಲಾವಿದರು ಕೃತಿ ರಚಿಸುತ್ತಿರುವ ಯುವ ಪೀಳಿಗೆಯಲ್ಲಿ ಅದೇ ಕ್ಯಾನ್‌ವಾಸ್ ಅಥವಾ ಪೇಪರ್ ಮೇಲೆ ಹೊಸ ಆಯಾಮ ಸೃಷ್ಟಿಸಿ ಹೊಸ ರೂಪ ವಿನ್ಯಾಸಗೊಳಿಸಿ ಕೃತಿ ರಚಿಸುತ್ತಿರುವ ಚಿತ್ತಾಪುರದ ಕಲಾವಿದ ಜಾಯೆದ್ ಅನ್ಸಾರಿ ಒಬ್ಬ ಪ್ರತಿಭಾವಂತ ಎಂಬುದು ಅತಿಶಯೋಕ್ತಿಯೇನಲ್ಲ.

ಜಾಯೆದ್ ಮೂಲತಃ ಗುಲಬರ್ಗಾ ಜಿಲ್ಲೆಯ ಚಿತ್ತಾಪುರದ ನಾಲವಾರ ಸ್ಟೇಷನ್‌ನವರು. ಈ ಯುವಕ ಗುಲಬರ್ಗಾದ ಐಡಿಯಲ್ ಫೈನ್‌ಆರ್ಟ್ ಕಾಲೇಜಿನಲ್ಲಿ ಅಂತಿಮ ವರ್ಷದ ಡಿಪ್ಲೋಮಾ ಪದವಿಯಲ್ಲಿ ವ್ಯಾಸಂಗ ಮಾಡಿದ್ದಾರೆ. ಇತ್ತೀಚಿಗಷ್ಟೇ ದಾವಣಗೆರೆ ನಗರದ ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜಿನಲ್ಲಿ ನಡೆದ ಜಾಯೆದ ಅನ್ಸಾರಿಯವರ ಏಕವ್ಯಕ್ತಿ ಕಲಾಪ್ರದರ್ಶನದಲ್ಲಿ ಒಟ್ಟು ಹದಿನಾರು ಕಲಾಕೃತಿಗಳಿದ್ದು ಎಲ್ಲವೂ ಮಿಶ್ರಮಾಧ್ಯಮದಲ್ಲೇ ರೂಪಗೊಂಡಿದ್ದು; ಅದರಲ್ಲೂ ಫೋಟೋಗ್ರಾಫಿ ಮಾಧ್ಯಮದ ಪ್ರಿಂಟ್ ತುಣುಕುಗಳನ್ನು ಅಲ್ಲಲ್ಲಿ ಅಂಟಿಸಿ ಸಂಯೋಜಿಸಿದ್ದು ಒಂದು ಬಗೆಯ ವಿಶೇಷವಾಗಿತ್ತು. ಮಿಶ್ರ ಮಾಧ್ಯಮಗಳಾದ ಜಲವರ್ಣ, ಪೋಸ್ಟರ್ ವರ್ಣ, ಆಯಿಲ್– ಅಕ್ರಲಿಕ್ ಜೊತೆಗೆ ಫೋಟೋಗಳ ತುಣುಕುಗಳನ್ನು ಉಪಯೋಗಿಸಿಕೊಂಡಿದ್ದೇ ಎಲ್ಲಾ ಕೃತಿಗಳಲ್ಲೂ ಹೆಚ್ಚು ಪಾಲು ಕಂಡುಬಂದಿದ್ದು, ಕೃತಿಗಳಿಗೆ ಒಂದು ಬಗೆಯ ರೂಪ ನೀಡಿದಂತಿತ್ತು.

ಅವರ ಈ ಕಲಾಪ್ರದರ್ಶನ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಾಯೋಜಿತವಾಗಿದ್ದು, ಜನವರಿ 25 ರಿಂದ 27ರ ವರೆಗೆ ಲಲಿತಕಲಾ ಕಾಲೇಜಿನಲ್ಲಿ ಪ್ರದರ್ಶನಕ್ಕೆ ಏರ್ಪಡಿಸಲಾಗಿತ್ತು. ಅತೀ ಚಿಕ್ಕವಯಸ್ಸಿನಲ್ಲೇ ಹಲವಾರು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಕ್ಯಾಮಲಿನ್ ಆರ್ಟ್ ಫೌಂಡೇಷನ್ ಬೆಂಗಳೂರವರ ಎರಡನೇ ಸೌತ್ ರೀಜನಲ್ ಆರ್ಟ್ ಎಕ್ಸಿಬಿಷನ್‌ನಲ್ಲಿ ಆಯ್ಕೆಯಾಗಿರುವುದು ಒಂದು ಪ್ರಶಂಸನೀಯ ಅಂಶ. ಈಚೆಗೆ ದಿಲ್ಲಿಯ ಆಲ್ ಇಂಡಿಯಾ ಫೈನ್‌ಆರ್ಟ್ ಅಂಡ್ ಕ್ರಾಫ್ಟ್ ಸೊಸೈಟಿ ಇವರು ಏರ್ಪಡಿಸಿದ್ದ ಕಲಾ ಪ್ರದರ್ಶನಕ್ಕೂ ಇವರ ಕೃತಿ ಆಯ್ಕೆಯಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯವರಿಂದ ಹಿಂದೊಮ್ಮೆ ಇವರ ಏಕವ್ಯಕ್ತಿ ಕಲಾಪ್ರದರ್ಶನ ಏರ್ಪಾಡಾಗಿತ್ತು. ಅನ್ಸಾರಿಯವರ ಕಲಾಕೃತಿಗಳು ಶಹಾಬಾದ್‌ನ ಶಾಸ್ತ್ರೀಯ ಆರ್ಟ್ ಹೌಸ್‌ನಲ್ಲಿ ಸಂಗ್ರಹಗೊಂಡಿವೆ. ಹೆಚ್ಚು ಪಾಲು ಅಮೂರ್ತತೆಯ ಅಡಿಯಲ್ಲಿ ಕೃತಿ ರಚಿಸುವ ಅನ್ಸಾರಿಯವರು ಒಮ್ಮೊಮ್ಮೆ ಭಾವೋದ್ವೇಗದಿಂದ ಕಲಾಕೃತಿಗಳ ಮೇಲೆ ಕನ್ನಡದಲ್ಲಿ ಕಲಾತ್ಮಕ ಶ್ಲೋಕಗಳನ್ನು ನೀಡುತ್ತಾರೆ. ಇಂತಹ ಪ್ರತಿಭೆಗಳು ರಾಜ್ಯಮಟ್ಟಕ್ಕಲ್ಲದೇ ರಾಷ್ಟ್ರಮಟ್ಟಕ್ಕೂ ಬೆಳೆಯಬೇಕೆಂಬುದೆ ಪ್ರಮುಖವಾದ ಅಂಶ. (ಟಿಜೆ)



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಜಿ

ಜಿನ ಮಂದಿರ: (ಗೋಗಿ) ಶಹಾಪುರ–ಬಿಜಾಪುರದ ಮುಖ್ಯ ರಸ್ತೆಯಲ್ಲಿ ಶಹಾಪುರದಿಂದ ಪಶ್ಚಿಮಕ್ಕೆ 11ಕಿ.ಮೀ. ದೂರ ದಲ್ಲಿರುವ ಗೋಗಿ ಶಹಾಪುರ ತಾಲ್ಲೂಕಿನ ಒಂದು ಹೋಬಳಿ ಹಾಗೂ ದೊಡ್ಡ ವ್ಯಾಪಾರಿ ಕೇಂದ್ರ. 'ಗೋಗಿ' ಪ್ರಮುಖ ಊರಾಗಿತ್ತೆಂಬುದಕ್ಕೆ ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು, ಕಂಬಗಳು, ದ್ವಾರಬಂಧಗಳು, ಲಲಾಟ ಪಟ್ಟಿಕೆಗಳು, ಭಗ್ನ ಬಿಂಬಗಳು, ಅವಶೇಷಗಳು ಸಾಕ್ಷ್ಯಾಧಾರ ಗಳಾಗಿವೆ. ಇಲ್ಲಿನ ಕಲ್ಯಾಣ ಚಾಳುಕ್ಯರ ಕಾಲದ ದೇಗುಲ ವೊಂದನ್ನು ಜನ ಮುದುಕಿ ಮನೆ ಎಂದೂ 'ಬುಡ್ಡಿ ಕಾ ಘರ್' ಎಂದೂ ಕರೆಯುತ್ತಾರೆ.

ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯ ಈ ಮಂದಿರ (ಮುದುಕಿ ಮನೆ)ದಲ್ಲಿ ಯಾವ ಪ್ರತಿಮೆಗಳೂ ಇಲ್ಲ. ಆದರೆ ಈ ದೇಗುಲದ ಕಲಾತ್ಮಕ ಕಂಬಗಳಲ್ಲಿ ಕೆಲವು ಅಲ್ಲಲ್ಲಿ ಒಡೆದಿವೆ. ಕೆಲವೊಂದನ್ನು ಗೋಡೆ ಕಟ್ಟಿ ಮುಚ್ಚಿದ್ದಾರೆ. ಇದೇ ಶೈಲಿಯ ಕಂಬಗಳು ಊರಲ್ಲಿಯ ಅನೇಕ ಹಳೆಯ ಕಟ್ಟಡಗಳಿಗೆ ಬಳಕೆ ಯಾಗಿವೆ. ಗೋಗಿಯಲ್ಲಿರುವ ಪಾರ್ಶ್ವನಾಥ ಜಿನ ಮಂದಿರ ಸುಮಾರು 9–10ನೆಯ ಶತಮಾನಕ್ಕೆ ಸೇರಿದ್ದರೂ ಈಗ ಇರುವ ಗುಡಿಯನ್ನು ಅನೇಕ ಸಲ ಬಿಚ್ಚಿ ಕಟ್ಟಿ ಜೀರ್ಣೋದ್ಧಾರ ವಾದುದನ್ನು ಗುರುತಿಸಬಹುದು. ಆದರೆ ಜಿನಮಂದಿರದಲ್ಲಿರುವ ವಿಗ್ರಹಗಳು ಮಾತ್ರ ರಾಷ್ಟ್ರಕೂಟರ ಹಾಗೂ ಕಲ್ಯಾಣ ಚಾಲುಕ್ಯರ ಕಾಲದವುಗಳು. ಒಂಭತ್ತು ಅಂಕಣಗಳ ಗರ್ಭಗೃಹ ಮತ್ತು ಒಂಭತ್ತು ಅಂಕಣಗಳ ಸಭಾಮಂಟಪ ಹೊಂದಿರುವ ಈ ಗುಡಿಯ ಗರ್ಭಗೃಹಕ್ಕೆ ಮೂರು ಬಾಗಿಲುಗಳಿವೆ. ಮಧ್ಯದ ಬಾಗಿಲು ದೊಡ್ಡದಾಗಿದ್ದು ಅಕ್ಕ–ಪಕ್ಕ ಕಿರುಬಾಗಿಲುಗಳನ್ನಿರಿ ಸಿದ್ದಾರೆ. ಪ್ರದಕ್ಷಿಣಾ ಪಥವಿದೆ. ಗರ್ಭಗೃಹದ ಮುಖ್ಯ ಬಾಗಿಲವಾಡದಲ್ಲಿ ಗಜಲಕ್ಷ್ಮಿಯ ವಿಗ್ರಹವಿದೆ. ದ್ವಾರ ಬಂಧದ ಕೆಳಗಡೆ ಚತುರ್ಭುಜಗಳನ್ನು ಹೊಂದಿರುವ ದ್ವಾರಪಾಲಕರ ಅಕ್ಕ–ಪಕ್ಕದಲ್ಲಿ ಸ್ತ್ರೀ ಪ್ರತಿಮೆಗಳಿವೆ. ಹಿಂಭಾಗದಲ್ಲಿ ಪ್ರಭಾವಳಿ ಯನ್ನು ಹೊಂದಿರುವ 23ನೆಯ ತೀಥಂಕರ ಭಗವಾನ್ ಪಾರ್ಶ್ವನಾಥರ ಕಪ್ಪು ಶಿಲೆಯ ಉಬ್ಬುಶಿಲ್ಪ ಕಾಯೋತ್ಸರ್ಗ (ಖಡ್ಗಾಸನ) ಭಂಗಿಯಲ್ಲಿದೆ. ವಿಗ್ರಹದ ಕೆಳಗೆ ಧರಣೇಂದ್ರಯಕ್ಷ, ಪದ್ಮಾವತಿಯಕ್ಷಿಯ ಪ್ರತಿಮೆಗಳನ್ನು ಕೆತ್ತಿದ್ದಾರೆ. ಕಮಠನ ಉಪಸರ್ಗದಿಂದ ಭಗವಂತನ ಧ್ಯಾನಕ್ಕೆ ತೊಂದರೆಯಾಗದಂತೆ ತೀರ್ಥಂಕರ ಹಿಂದೆ ಅಂಕು–ಡೊಂಕಾಗಿ ಮೈಚಾಚಿದ ಸಪ್ತ ಫಣಿಗಳುಳ್ಳ ಸರ್ಪ ಹೆಡೆ ತೆರೆದುಕೊಂಡು ನಿಂತಿದೆ. ಸರ್ಪದ ಮೇಲೆ ಕೊಡೆಯಿದೆ. ಅಕ್ಕ–ಪಕ್ಕ ಅರೆಗಂಬಗಳ ಮೇಲೆ ಮಕರಗಳ ಬಾಯಿಂದ ಹೊರಟ ಸುಳುಹುಗಳ ಪ್ರಭಾವಳಿಯಿದೆ. ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿದ; ಪ್ರಶಾಂತವಾದ, ವಿರಕ್ತಭಾವದ ತಪೋಮಗ್ನ ಪ್ರತಿಮೆ ನಿಜಕ್ಕೂ ಚಿತ್ತಾಕರ್ಷಕವಾಗಿದೆ.

ಇದೇ ಮಂದಿರದಲ್ಲಿ ಪಚ್ಚೆ ಶಿಲೆಯ ಎಂಟನೆಯ ತೀರ್ಥಂಕರರಾದ ಚಂದ್ರನಾಥರ ಪ್ರತಿಮೆಯ ಕೆಳಭಾಗದಲ್ಲಿ, ಅಕ್ಕ–ಪಕ್ಕ ಶಾಮಯಕ್ಷ ಹಾಗೂ ಜ್ವಾಲಾಮಾಲಿನಿ ಯಕ್ಷಿಯ ಕಿರು ಶಿಲ್ಪಗಳಿವೆ. ಪ್ರತಿಮೆಯ ತಲೆಯ ಹಿಂದೆ ಪ್ರಭಾಮಂಡಲವಿದೆ. ಮೇಲೆ ತ್ರಿಲೋಕ ಸ್ವಾಮಿತ್ವದ ಲಾಂಛನವಾದ ಮುಕ್ಕೊಡೆ ಇದೆ. ಪ್ರತಿಮೆಯ ಎಡಬಲ ಭುಜಗಳ ಹತ್ತಿರ ಚಾಮರಗಳನ್ನು ಬಿಡಿಸಿ ದ್ದಾರೆ. ಈ ಜಿನಬಿಂಬವೂ ಖಡ್ಗಾಸನದಲ್ಲಿದೆ.

ಸದರಿ ಜಿನಮಂದಿರದಲ್ಲಿ ನಾಲ್ಕು ಮೈಗಳುಳ್ಳ ಚೌಕಾಕಾರದ ಶಿಲಾಸ್ತಂಭದಲ್ಲಿ ಪ್ರತಿಮೆಯಲ್ಲೂ ಆರು ಜಿನ ಬಿಂಬಗಳುಳ್ಳ ಇಪ್ಪತ್ತ ನಾಲ್ಕು ತೀರ್ಥಂಕರರ ಕಿರು ಶಿಲಾಸ್ತಂಬ, ಕಂಚಿನ ಕುಂಥುನಾಥ ತೀರ್ಥಂಕರ ಪ್ರತಿಮೆ, ವಿಜಯನಗರ ಶೈಲಿಯ ನಿಂತ ಪದ್ಮಾವತಿಯ ಕಂಚಿನ ವಿಗ್ರಹ ಇವೆಲ್ಲ ಗಮನ ಸೆಳೆಯುವಂತಿವೆ. ಈ ಜಿನಾಲಯದಲ್ಲಿ ಚಂದ್ರ (ಸಿಂಧೂರ) ಮತ್ತು ತೈಲ ಇದರಿಂದ ರೂಪ ತಾಳಿದ ಕ್ಷೇತ್ರಪಾಲನಿದ್ದಾನೆ. (ಡಿಎನ್‌ಎ)

ಜಿನ್ನಪ್ಪನ ಬೆಟ್ಟ (ಯಾದಗಿರಿ): ಯಾದಗಿರಿ ಬೆಟ್ಟದ ಮೇಲೆ ಒಂದು ಸುಂದರವಾದ ಜೈನ ಬಸದಿಯಿದೆ. ಸುಮಾರು 150 ಅಡಿ ಎತ್ತರದ ಬೆಟ್ಟದ ಮೇಲೆ ಬಾದಾಮಿ ಗುಹೆಗಳಂತೆ ಇಲ್ಲಿಯೂ ಒಂದು ಗುಹಾಂತರ ಬಸದಿ ಕಾಣಬಹುದು. ಜಿನ್ನಪ್ಪನ ಬೆಟ್ಟ ವೆಂದೇ ಪ್ರಸಿದ್ಧಿಯಾದ ಈ ಬೆಟ್ಟಕ್ಕೆ ಸರಿಯಾದ ರಸ್ತೆಮಾರ್ಗವಿಲ್ಲ.

ಬೆಟ್ಟಗುಡ್ಡಗಳ ಮಧ್ಯೆಯೆ ಇರುವ ಗುಹಾಂತರ ಬಸದಿ ಯನ್ನು ಸುಮಾರು 10–11ನೆಯ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ರಚನೆಯಾಗಿದ್ದು, ಬಸದಿಯ ಹೆಬ್ಬಂಡೆಯ ಮೇಲೆ ಪಾರ್ಶ್ವನಾಥ ತೀರ್ಥಂಕರರ ಸುಮಾರು 4 ಅಡಿ ಎತ್ತರದ, ಒಂದೂವರೆ ಅಡಿ ಅಗಲದ ಶಿಲ್ಪವು ದೂರದಿಂದಲೇ ನೋಡುಗನ ಕಣ್ಮನ ಸೆಳೆಯುತ್ತದೆ.

ಇದು ಉಬ್ಬು ಶಿಲ್ಪವಾಗಿದ್ದು, ಏಳು ಹೆಡೆ ಹಾವಿನ ಶಿಲ್ಪದ ಅಕ್ಕಪಕ್ಕದಲ್ಲಿ ದೀಪ ಹಚ್ಚಲು ಅನುಕೂಲವಾಗುವಂತೆ ದೀಪದ ಕಮಾನುಗಳನ್ನು ಮಾಡಿದಂತೆ ಗೋಚರಿಸುತ್ತದೆ. ಪಾರ್ಶ್ವನಾಥ ತೀರ್ಥಂಕರರ ಉಬ್ಬು ಶಿಲ್ಪದ ಮೂಗಿನ ಕೆಳಭಾಗವು ವಿಕೃತ ಮನಸ್ಸಿನ ವಿಘ್ನ ಭಂಜಕರಿಂದ ಭಗ್ನಗೊಂಡಿದೆ. ಈ ಬಸದಿಯಲ್ಲಿ ಗರ್ಭಗೃಹದ ಬೃಹತ್ ಗೋಡೆಯ ಮೇಲೆ ಒಂದೇ ಸಾಲಿನಲ್ಲಿ 5 ಜಿನ ಮೂರ್ತಿಗಳ ಬೃಹತ್ ಉಬ್ಬು ಶಿಲ್ಪಗಳ ಸಾಲಿದ್ದು, ಅವು ಗಳಲ್ಲಿ ನಡುವೆ ಇರುವ ಪದ್ಮಾಸೀನ ಜಿನ ತೀರ್ಥಂಕರ ಉಬ್ಬು ಶಿಲ್ಪಗಳು ಬಹಳ ಸುಂದರವಾಗಿವೆ.

ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ಯಕ್ಷಿಯರಲ್ಲಿ ಪದ್ಮಾವತಿ ದೇವಿ ಅರಣ್ಯ. ಈಕೆಯ ನೂರಾರು ಮೂರ್ತಿಗಳು ಹತ್ತಾರು ಮಂದಿರಗಳು ಬಹಳ ಹಿಂದಿನಿಂದ ದೊರೆಯುತ್ತವೆ ಎಂದು ಹೇಳಲಾಗಿದೆ. ಹಾಗೆಯೇ ಕಲಬುರ್ಗಿ ಜಿಲ್ಲೆಯ ಮಳಖೇಡ, ಭಂಕೂರಿನ ಬಸ್ತಿ (ಬಸದಿ) ಗುಡಿಯಲ್ಲಿ ಪದ್ಮಾವತಿ ಯಕ್ಷಿಯ ಮೂರ್ತಿಯಿದೆ ಎಂದು ಹೇಳುತ್ತಾರೆ.

ಅಯ್ಯಾವೊಳೆ (ಐಹೊಳೆ)ಯ 1182ರ ಶಾಸನದ ಹೇಳಿಕೆ ಯಂತೆ ಪದ್ಮಾಪತಿ ಐಹೊಳೆಯ ದೇವತೆಯಾಗಿದ್ದಳು. ಪದ್ಮಾವತಿ ಪ್ರಭಾವಶಾಲಿಯಾದ ಪರಿಹಾರ ದೇವತೆ. ಗಂಗರು ಮತ್ತು ಹೊಯ್ಸಳರು ತಮ್ಮ ಸಾಮ್ರಾಜ್ಯವು ಪದ್ಮಾವತಿ ದೇವಿಯಿಂದ ಬಂದ ಹಸಾದ (ಪ್ರಸಾದ) ವೆಂದು ಹೇಳಿಕೊಂಡಿದ್ದಾರೆ. ಅದರಂತೆಯೇ ಇನ್ನೂ ಕೆಲವು ಅರಸು ಕುಲಗಳು, ಮಹಾ ಸಾಮಂತ, ಮಹಾಮಂಡಲೇಶ್ವರರೂ ಸಹ ಜಿನ ಶಾಸನ ದೇವತೆ ಯಾದ ಪದ್ಮಾವತಿ ದೇವಿಯು ಕರುಣಿಸಿದ ವರಪ್ರಸಾದದಿಂದ ತಾವು ಸುಖ ಪರಂಪರೆಯನ್ನು ಪಡೆದುದಾಗಿ ಹೇಳಿಕೊಂಡಿವೆ.

ಪದ್ಮಾವತಿ ಯಕ್ಷಿಯ ಹೆಸರು ಜೈನ ಸಮಾಜದ ನಿತ್ಯ ಗಾಯತ್ರಿ. ಮನೆಯಲ್ಲಿ ಜರಿಯನ್ನು ಕಂಡರೆ, ಜೈನರು ಅದನ್ನು ಪದ್ಮಾವತಿಯ ಜಡೆಯೆಂದು ನಂಬಿರುವುದರಿಂದ ಕೊಲ್ಲುವುದಿಲ್ಲ.

ಪದ್ಮಾವತಿಯು ತೀರ್ಥಂಕರರ ಶಾಂತ, ಸೌಮ್ಯ, ತಪಸ್ಸನ್ನು ರಕ್ಷಿಸಿದವಳೆಂದು ಮನ್ನಿಸಲಾಗಿದೆ. ಇದೇ ರೀತಿ ಧರಣೇಂದ್ರ ಯಕ್ಷನೂ ರಕ್ಷಣೆ ಮಾಡಿದ್ದಾನೆ. ಪದ್ಮಾವತಿಯು ಮಸ್ತಕದ ಮೇಲೆ ಸರ್ಪದ ಹೆಡೆಯ ಕೊಡೆಯಿದೆ. ಈಕೆಯ ಭುಜಸಂಖ್ಯೆಯ ವಿಚಾರವಾಗಿ ಮತಭೇದಗಳಿವೆ.

ಈ ದೇವಿಯ ಮೂರ್ತಿಗೆ ಇಂದು ಸ್ಥಳೀಯ ಭಕ್ತರು ಸಾಂಪ್ರದಾಯಿಕ ಉಡುಗೆ ತೊಡುಗೆಗಳಿಂದ ಅಲಂಕರಿಸಿ ಭಕ್ತಿ ಯಿಂದ ಪೂಜೆ ಪುನಸ್ಕಾರಗಳನ್ನು ನಡೆಸುತ್ತಾರೆ. ಈ ಮೂರ್ತಿಯ ಎಡಬದಿಯಲ್ಲಿ ಪಾದಗಳ ಉಬ್ಬು ಶಿಲ್ಪವಿದ್ದು, ಹಾಗೂ ಅದರ ಎಡಬದಿಯಲ್ಲಿ ಪಾದಗಳ ಉಬ್ಬ ಶಿಲ್ಪವಿದ್ದು, ಹಾಗೂ ಅದರ ಪಕ್ಕದಲ್ಲಿಯೇ ಮತ್ತೆರಡು ಚಿಕ್ಕ-ಚಿಕ್ಕ ಉಬ್ಬು ಶಿಲ್ಪಗಳಿವೆ. ಅದರಲ್ಲಿ ಒಂದು ಶಿಲ್ಪವು ಕಮಂಡಲದಂತೆ ಗೋಚರಿಸುತ್ತದೆ. ಇನ್ನೊಂದು ಚಿಕ್ಕ ಶಿಲ್ಪದ ಐತಿಹ್ಯ ತಿಳಿಯ ದಾಗಿದೆ.

ಈ ಬೆಟ್ಟದ ಮೇಲೆ ಆಂಜನೇಯನ ಉಬ್ಬು ಶಿಲ್ಪವೂ ಇದೆ. ಒಂದು ಗವಿಯೂ ಇದೆ. ಈ ಪ್ರದೇಶದ ಸುತ್ತಮುತ್ತ ಯಾವುದೇ ಶಾಸನಗಳು ಕಾಣಸಿಗುವುದಿಲ್ಲ. ಇಲ್ಲಿನ ಹಲವಾರು ಉಬ್ಬು ಶಿಲ್ಪಗಳಿಗೆ ಭಕ್ತರು ಬಣ್ಣಗಳನ್ನು ಬಳಿದು ಪೂಜೆಗೈಯುತ್ತಿದ್ದಾರೆ. ಈ ಬೆಟ್ಟದ ಕೆಳಭಾಗದಿಂದ ಸುಮಾರು 100 ಅಡಿ ಅಂತರದಲ್ಲಿ 2 ಚಿಕ್ಕ ಭಾವಿಗಳಿವೆ.

ತೀರ್ಥಂಕರರ ಉಬ್ಬು ಶಿಲ್ಪ, ಪದ್ಮಾವತಿ ಯಕ್ಷಿಯರಂತಹ ಅನೇಕ ಉಬ್ಬು ಶಿಲ್ಪಗಳಿರುವ ಈ ಸುಂದರವಾದ ಗುಹಾಂತರ ಬಸದಿಯನ್ನು ನಿಸರ್ಗ ತಾಣವನ್ನು ರಕ್ಷಿಸಿ, ಪ್ರವಾಸಿ ತಾಣಗಳಲ್ಲಿ ಒಂದಾಗುವಂತೆ ಮಾಡುವುದು ಅಗತ್ಯವಾಗಿದೆ.

(ಪಿಬಿಎಸ್)

ಜೀ

ಜೀತೆಂದರ್ ಜಿ. ಕೊತಳೀಕರ್: ಗುಲಬರ್ಗಾದ ಸಾಂಪ್ರದಾಯಿಕ ಮನೆತನದಲ್ಲಿ 1973 ಅಗಸ್ಟ್ 19ರಂದು ಜನಿಸಿದರು. ಇವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಗುಲಬರ್ಗಾದಲ್ಲಿ ಮುಗಿಸಿದರು. ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಿಂದ ಬಿ.ಎ. ಫೈನ್‌ಆರ್ಟ್ ಪದವಿಯನ್ನು 4ನೇ ರ‍್ಯಾಂಕ್ ಪಡೆದು ಮುಂದೆ ಎಂ.ಎ. ಇನ್ ಫೈನ್‌ಆರ್ಟ್ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಶ್ರೀಶರಣ ಬಸವೇಶ್ವರ ಕಲಾ ಮಹಾ ವಿದ್ಯಾಲಯ ಸ್ನಾತಕೋತ್ತರ ಕೇಂದ್ರ ಗುಲಬರ್ಗಾದಿಂದ ಪಡೆದಿದ್ದಾರೆ. ನಾಡೋಜ ಡಾ. ಜೆ.ಎಸ್. ಖಂಡೇರಾವ ಅವರ ಗರಡಿಯಲ್ಲಿ ತಮ್ಮ ಕಲಾ ಶಿಕ್ಷಣ ಪಡೆದು ಸೃಜನಾತ್ಮಕವಾಗಿ ಕಲಾಕೃತಿ ರಚನೆಯ ಜೊತೆಗೆ



ಕಲಾಪ್ರದರ್ಶನಗಳನ್ನು ಕೈಗೊಳ್ಳುತ್ತ ಕಲಬುರ್ಗಿಯ ಯುವ ಕಲಾವಿದರಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದಲ್ಲದೇ 'ದಿಶಾ ಗ್ರೂಪ್' ಎಂದೇ ಕಲಾಸಂಸ್ಕೃತಿಯ ಕ್ಷೇತ್ರದಲ್ಲಿ ತಮ್ಮ ಕಲಾ ಪ್ರದರ್ಶನ ಹಾಗೂ ಕಲಾ ಚಟುವಟಿಕೆಯಿಂದ ಗುಲಬರ್ಗಾದಲ್ಲಿ ಗುರುತಿಸಿ ಕೊಂಡು ಈ ದಿಶಾ ಗ್ರೂಪ್‌ನ ಸ್ಥಾಪಕ ಸದಸ್ಯರಾಗಿ, ಸಂಘಟಕರಾಗಿ ಈ ಗ್ರೂಪ್‌ನ್ನು ಮುನ್ನಡೆಸಿಕೊಂಡು ಹೋಗು ತ್ತಿದ್ದಾರೆ.

ಇವರು ಇಂಥಾ ಕಲಾಸಂಘಟನೆಯ ಜೊತೆಗೆ ಕಲಾ ಕ್ಷೇತ್ರದಲ್ಲಿ ಸಂಶೋಧನೆಗೂ ತೊಡಗಿಸಿಕೊಂಡು ನಾಡಿನ ಖ್ಯಾತ ಹಿರಿಯ ಕಲಾವಿದರು ಹಾಗೂ ಕಲಾಶಿಕ್ಷಣ ತಜ್ಞರಾದ ಡಾ. ವ್ಹಿ.ಜಿ. ಅಂದಾನಿ ಅವರ ಮಾರ್ಗದರ್ಶನದಲ್ಲಿ ಕಲಾವಿದ ವಿದ್ಯಾ ಭೂಷಣ ಅವರ ಜೀವನ ಹಾಗೂ ಕೃತಿಗಳ ಕುರಿತು ಅಧ್ಯಯನ ವನ್ನು ಕೈಗೊಂಡು ಸಂಶೋಧನ ಪ್ರಬಂಧವನ್ನು ರಚಿಸಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ದೃಶ್ಯಕಲೆಯಲ್ಲಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ.

ರಾಜ್ಯ ಮತ್ತು ರಾಷ್ಟ್ರದ ಅನೇಕ ಕಲಾಪ್ರದರ್ಶನ ಹಾಗೂ ಕಲಾಶಿಬಿರಗಳಲ್ಲಿ ಇವರು ತಮ್ಮ ಕಲಾಕೃತಿಗಳು ಪ್ರದರ್ಶನ



'ಕಾಂಪೋಜಿಶನ್-1' ಅಕ್ರೇಲಿಕ್ ಮಾಧ್ಯಮ

ಹಾಗೂ ಕಲಾಕೃತಿ ರಚನೆಯಿಂದ ಗಮನ ಸೆಳೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದವು 1994, 95,96, 98, 2004, 2009ರ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಅಂಗವಾಗಿ ನಡೆಯುವ ವಾರ್ಷಿಕ ಕಲಾ ಪ್ರದರ್ಶನ 1996, 97, ರಲ್ಲಿ ಅಖಿಲ ಭಾರತ ಕಲಾಪ್ರದರ್ಶನ, ಇಂಡಿಯಾ ಅಕಾಡೆಮಿ ಆಫ್ ಅಮೃತ್‌ಸರ್ 2000ರಲ್ಲಿ ಕ್ಯಾಮಲಿನ ಆರ್ಟ್ ಫೌಂಡೇಷನ್ ಬೆಂಗಳೂರು, 2002ರಲ್ಲಿ ಕೆ.ಕೆ. ಹೆಬ್ಬಾರ್ ಆರ್ಟ್ ಫೌಂಡೇಶನ್ ಬೆಂಗಳೂರು, 2001, 2003, 2004, ಮುಂಬೈ ಆರ್ಟ್ ಸೊಸೈಟಿ, 1997, 2006, 2007, 2008, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಹೀಗೆ ಅನೇಕ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿ ಪ್ರದರ್ಶನಗೊಂಡಿವೆ. 1996, 2000ರಲ್ಲಿ ನಿಸರ್ಗ ಚಿತ್ರಕಲಾ ಶಿಬಿರ ಹಂಪಿ, 2005ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ, 2008ರಲ್ಲಿ ಉಡುಪಿ ಆಯೋಜನ ಕರ್ನಾಟಕ ಲಲಿತಕಲಾ ಅಕಾಡೆಮಿ ಹೀಗೆ ಅನೇಕ ಕಲಾಶಿಬಿರಗಳಲ್ಲಿ ಕಲಾಕೃತಿಗಳನ್ನು ರಚಿಸಿ ಗಮನ ಸೆಳೆದಿದ್ದಾರೆ.

ಇವರು ರಾಷ್ಟ್ರದ ಪ್ರಸಿದ್ಧ ಆರ್ಟ್‌ಗ್ಯಾಲರಿಯಾದ ಮುಂಬಯಿ ಜಹಾಂಗೀರ್ ಆರ್ಟ್‌ಗ್ಯಾಲರಿ ಇಂಥ ಅನೇಕ ರಾಷ್ಟ್ರದ ಆರ್ಟ್‌ಗ್ಯಾಲರಿಯಲ್ಲಿ ಸಮೂಹ ಕಲಾಪ್ರದರ್ಶನವನ್ನು ಕೈಗೊಂಡಿದ್ದಾರೆ. ಇವರ ಕಲಾಕೃತಿಗಳಿಗೆ ಪ್ರಶಸ್ತಿ ಲಭಿಸಿವೆ. ಅವುಗಳಲ್ಲಿ 1994,96ರಲ್ಲಿ ಎಸ್.ಬಿ. ಕಲಾ ಮಹಾವಿದ್ಯಾಲಯದ ವಾರ್ಷಿಕ ಪ್ರಶಸ್ತಿ, 1995ರ ಗುಲಬರ್ಗಾ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವದಲ್ಲಿ ಚಿನ್ನದ ಪದಕ 1996ರಲ್ಲಿ ಚಿನ್ನದ ಪದಕ ಸೌಥ್ ಝೋನ್ ವಿಶಾಖಪಟ್ಟಣ, 2000ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾದ ರಾಜ್ಯೋತ್ಸವ ಪ್ರಶಸ್ತಿ, 2005ರ ತಿಲಕ ಸ್ಮಾರಕ ಮಂದಿರ ಪ್ರಶಸ್ತಿ ಪುಣೆ, ಹೀಗೆ ಹತ್ತು ಹಲವು ಪ್ರಶಸ್ತಿ ಪಡೆದ ಇವರು ಸದಾ ಸೃಜನಶೀಲ ವಿಚಾರಗಳೊಂದಿಗೆ ತಮ್ಮ ಅಭಿವ್ಯಕ್ತಿ ವಿಷಯವನ್ನು ಗ್ರಾಮೀಣ ಜನಪದ ಬದುಕನ್ನು ಹೊಸ ಶೈಲಿಯ ಮುಖಾಂತರ (ಸಿಂಬಾಲಿಕ್ ಆಗಿ) ಫಾರ್ಮಗಳನ್ನು ಬಳಸಿ, ವರ್ಣ ಸಂಯೋಜನೆಯನ್ನು ಮಾಡಿದ ಕಲಾಕೃತಿಯು ನೋಡುಗರಿಗೆ ಸಹೃದಯನಿಗೆ ಕಲಾಕೃತಿ ಸಂವಾದಕ್ಕಿಳಿಸುತ್ತವೆ. ಇದು ಯಾವುದೇ ಕಲಾವಿದನ ಮೂಲ ಉದ್ದೇಶವಾಗಿರುತ್ತದೆ. ತನ್ನ ಕಲಾಕೃತಿ ನೋಡುಗರೊಂದಿಗೆ ಮಾತನಾಡಬೇಕೆಂಬುದು ಆ ನಿಟ್ಟಿನಲ್ಲಿ ಇವರ ಕಲಾಕೃತಿಗಳು ಯಶಸ್ಸನ್ನು ಕಾಣುತ್ತಿವೆ.

ಇವರ ಸೃಜನಶೀಲ ಕಲಾಕೃತಿಗಳ ರಚನೆಗೆ ಸಾಕ್ಷಿ ಎಂಬಂತೆ 2007ರಲ್ಲಿ ಭಾರತ ಸರಕಾರದ ಕಲೆ ಮತ್ತು ಸಂಸ್ಕೃತಿ ಮಂತ್ರಾಲಯದಿಂದ 'ಜೂನಿಯರ್ ಫೆಲೋಶಿಫ್ ಲಭಿಸಿದೆ. ಈ ಎಲ್ಲಾ ಬೆಳವಣಿಗೆಯಿಂದ ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಬೆಳೆಸಿಕೊಂಡು ತಮ್ಮ ಕಲಾಕೃತಿಗಳಲ್ಲಿ ಜಾನಪದ ವಸ್ತು ವಿಷಯ ವನ್ನು ಬೆಳೆಸಿಕೊಂಡು ಮಾಧ್ಯಮದಲ್ಲಿ ಹೆಚ್ಚಾಗಿ ಕಲಾಕೃತಿಗಳ ರಚನೆಯ ಜೊತೆಗೆ ಗುಲಬರ್ಗಾದ ನೂತನ ಪದವಿ ಮಹಾ ವಿದ್ಯಾಲಯದಲ್ಲಿ ಕಲಾ ವಿಭಾಗದ ಉಪನ್ಯಾಸಕರಾಗಿ ಕಲಾ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡುತ್ತ ಕಲಾಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. (ಎಸ್‌ಪಿಡಬ್ಲ್ಯೂ)

ಜು

ಜುಗಲ್‌ಬಂದಿ ಜೋಡಿ: ಶ್ರೀಮತಿ ಗೀತಾ ಗಾಯಿತ್ರಿ ಚಕ್ರವರ್ತಿ ಹಾಗೂ ನಿರ್ಮಲಾ ರಾಜಗುರು ಖಾಸಾ ಅಕ್ಕ ತಂಗಿಯವರು. ಡಾ. ಪಾಂಡುರಂಗರಾವ ಪತ್ಕಿಯವರ ಹತ್ತಿರ ಸತತ ಎಂಟು ವರ್ಷಗಳ ಕಾಲ ಸಂಗೀತ ಅಭ್ಯಾಸ ಹೇಳಿಸಿಕೊಂಡು ಕರ್ನಾಟಕದ ಪ್ರಸಿದ್ಧ 'ಜುಗಲ್‌ಬಂದಿ' ಜೋಡಿಯಾಗಿ ಹೊರ ಹೊಮ್ಮಿದರು.

ಶ್ರೀಮತಿ ಗೀತಾ ಗಾಯಿತ್ರಿಯವರದು ಅತ್ಯಂತ ಸುಮಧುರ ಕಂಠ. ಅಚ್ಚ ಬಿಳುಪಿನ ಬಣ್ಣದ ನೆಟ್ಟ ಮೂಗಿನ ಗಾಯಿತ್ರಿಯವರು 1960 ಜೂನ್ 10ರಂದು ಜನಿಸಿದರು. ಶ್ರೀಮತಿ ನಿರ್ಮಲಾ ರವರು ಅದಕ್ಕಿಂತ ಎರಡು ವರ್ಷ ಮೊದಲು ಕರ್ನಾಟಕ ಸರಕಾರ ನಡೆಸುವ ವಿಶೇಷ ಸಂಗೀತ ಪರೀಕ್ಷೆ ಪ್ರೋಫೆಸಿಯನ್ಸಿ ಗ್ರೇಡ್, ಹಾಗೂ ಗಂಧರ್ವ ಮಹಾವಿದ್ಯಾಲಯ ಮುಂಬೈ ನಡೆಸುವ ಅಲಂಕಾರ ಪರೀಕ್ಷೆ ಪಾಸು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಎಂ.ಎ (ಸಂಗೀತ) ಮಾಡಿದ್ದಾರೆ.



ಶ್ರೀಮತಿ ಗೀತಾ ಗಾಯಿತ್ರಿಯವರು 1982ರಿಂದ ಸರಕಾರಿ ಪದವಿಪೂರ್ವ ಹೆಣ್ಣು ಮಕ್ಕಳ ಕಾಲೇಜಿನಲ್ಲಿ ಸಂಗೀತ ಶಿಕ್ಷಕಿಯಾಗಿ ಸೇವೆಯಲ್ಲಿದ್ದಾರೆ. ನಿರ್ಮಲಾರವರು ಮಳಖೇಡದ ಎ.ಸಿ.ಸಿ ಸಿಮೆಂಟ್ ಫ್ಯಾಕ್ಟರಿ ಸ್ಕೂಲ್‌ನಲ್ಲಿ ಸಂಗೀತ ಅಧ್ಯಾಪಕಿಯಾಗಿ ಸೇವೆಸಲ್ಲಿಸುತ್ತಿದ್ದಾರೆ.

ಇವರ ಜೋಡಿ ಕಾರ್ಯಕ್ರಮಗಳು ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ನಡೆದಿವೆ. ಮುಖ್ಯವಾಗಿ ಕುಂದಗೋಳದ ಸವಾಯಿ ಗಂಧರ್ವ ಸಮಾರೋಹ ಬೆಂಗಳೂರಿನ ಆರೋಹಿ ಟ್ರಸ್ಟ್ ಏರ್ಪಡಿಸಿದ್ದ ಕಾರ್ಯಕ್ರಮ ಹೈದ್ರಾಬಾದನ ಮಹಾರಾಷ್ಟ್ರ ಮಂಡಳಿಯಲ್ಲಿ ಹಾಗೂ ಮಳಖೇಡ, ತಾಳಿಕೋಟೆ, ಶಹಾಬಾದ, ಗಂಗಾವತಿ ಹುಮನಾಬಾದ, ಮಾಣಿಕನಗರದ ಸಂಸ್ಥಾನದಲ್ಲಿ ಹತ್ತೂ ಹಲವು ಕಡೆ ಕಾರ್ಯಕ್ರಮ ನೀಡಿ ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಆಕಾಶವಾಣಿ ಹಾಗೂ ದೂರದರ್ಶನದ 'ಬಿ' ಗ್ರೇಡ್ ಕಲಾವಿದೆಯರಾದ ಇವರುಗಳು 'ಶಾಸ್ತ್ರೀಯ ಸಂಗೀತವನ್ನು



ಸಹಕಲಾವಿದರೊಂದಿಗೆ ಗಾಯನ

ಗುಲಬರ್ಗಾ ಹಾಗೂ ಧಾರವಾಡ ಆಕಾಶವಾಣಿಯಲ್ಲಿ ಸತತ ಎಂಟು ವರ್ಷಗಳ ಕಾಲ ಗಾಯನ ಪ್ರಸ್ತುತ ಪಡಿಸಿದ್ದಾರೆ. ಕಿರಾನಾ ಘರಾಣೆಯ ಇವರ ಗಾಯನ ಪದ್ಧತಿ ಡಾ. ಪತ್ಕಿಯವರ ಬಳುವಳಿ. ಡಾ. ಪತ್ಕಿಯವರು ಸವಾಯಿ ಗಂಧರ್ವರ ಶಿಷ್ಯರು ಹೀಗಾಗಿ ಕಿರಾನಾ ಘರಾನಾದ ಕಂಪು ಇರಲೇಬೇಕು. ಡಾ. ಪತ್ಕಿಯವರು ಜನರಲ್ ಫಿಜಿಸಿಯನ್ ಆಗಿ ವೈದ್ಯಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಆದರೆ ಪ್ರವೃತ್ತಿ ಸಂಗೀತ ಇತ್ತು. ಹೀಗಾಗಿ ಶಿಷ್ಯಂದಿರನ್ನು ಕೆಲವೇ ಜನರನ್ನು ಮಾಡಿಕೊಂಡರು.

ಗೀತಾ ಗಾಯಿತ್ರಿ ಚಕ್ರವರ್ತಿ ಹಾಗೂ ನಿರ್ಮಲಾ ರಾಜಗುರು ಹೈದ್ರಾಬಾದ ಕರ್ನಾಟಕದ ವಿಶಿಷ್ಟ ಜೋಡಿ ತೀರ ಇತ್ತೀಚೆಗೆ ಶ್ರೀಮತಿ ಗಾಯಿತ್ರಿಯವರಿಗೆ 'ವಿವೇಕಾನಂದ ಪ್ರಶಸ್ತಿ' ಲಭಿಸಿದೆ.

(ಎಲ್‌ಎಸ್‌ಜೆ)

ಜೂ

ಜೂಲುಗಳು: ಜೂಲನ್ನು ವಿವಿಧ ಬಗೆಯ ಬಣ್ಣ ಬಣ್ಣದ ಅರಿವೆ ತುಂಡುಗಳು, ಬಣ್ಣದ ದಾರ, ಗಾಜಿನ ಚೂರು, ಅಗಲವಾದ ಲೇಸಗಳನ್ನು ಉಪಯೋಗಿಸಿ ಹೊಲಿದು ತಯಾರಿಸುತ್ತಾರೆ. ಸಮಕಾಲೀನ ಕಲಾಶೈಲಿಯಾದ ಕೋಲಾಜ್ ಕಲೆ ಎತ್ತಿನ ಜೂಲುಗಳು ಒಂದು ಉತ್ತಮ ಉದಾಹರಣೆ. ಈ ಜೂಲುಗಳ ನಾಲ್ಕು ಅಂಚಿಗೆ 3 ರಿಂದ 4 ಇಂಚಿನ ಬಣ್ಣದ ಬಟ್ಟೆಯ ತುಂಡನ್ನು ಮಡಿಚಿ ಹೊಲಿದಿರುತ್ತಾರೆ. ಅಂಚಿನ ನಕ್ಷೆಗಾಗಿ ವಿವಿಧ ಪಕ್ಷಿಗಳು, ಹೂವು, ಮೊಗ್ಗೆ, ಎಲೆಗಳನ್ನು ಅಲಂಕಾರಿಕವಾಗಿ ಕತ್ತರಿಸಿಕೊಂಡು ಅಂಚುಗಳ ಸುತ್ತಲೂ ಹೊಲಿದಿರುತ್ತಾರೆ. ಇದರ ನಡು, ನಡುವೆ, ಚೌಕ, ವೃತ್ತಾಕಾರದ ಕನ್ನಡಿ ಗ್ಲಾಸಿನ ತುಂಡುಗಳನ್ನು ಉಪಯೋಗಿಸುತ್ತಾರೆ. ಮಧ್ಯಭಾಗದಲ್ಲಿ ಅಲಂಕಾರಿಕಗಾಗಿ ಪ್ರಾಣಿ ಪಕ್ಷಿಗಳನ್ನು, ವಿವಿಧ ನಮೂನೆಯ ಹೂವುಗಳನ್ನು ಕತ್ತರಿಸಿಕೊಂಡು ಹೊಲಿದಿರುವದು. ಹೀಗೆ ತಯಾರಿಸಿದ ಜೂಲ ಒಂದು ಸುಂದರ ಕೋಲಾಜ್ ಕಲಾಕೃತಿಯಾಗಿ ಕಂಗೊಳಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಸವನ ಆಡಿಸುವಾತ ಒಂಟಿ ಎತ್ತಿಗೆ, ಎರಡು ಕೋಡುಗಳಿಗೆ ವಿವಿಧ ನಮೂನೆಯ ಬಣ್ಣದ ರಿಬ್ಬನ್, ಗೆಜ್ಜೆಗಳನ್ನು ಕಟ್ಟಿ ಹಣೆಗೆ ಹಣೆಪಟ್ಟಿ ಕೊರಳಿಗೆ ಗೆಜ್ಜೆ ಸರ, ಬೆನ್ನ ಮೇಲೆ ಜೂಲನ್ನು ತೊಡಿಸಿ, ಅಲಂಕಾರ ಮಾಡಿ, ಎತ್ತ(ಬಸವ)ನ್ನು ಆಡಿಸಿ, ಜನರಿಗೆ ಮನರಂಜನೆ ಒದಗಿಸುತ್ತಾನೆ ಈ ಕಾಯಕದಿಂದಲೇ ತನ್ನ ಕುಟುಂಬ ಸಾಕಿ ಸಲಹುತ್ತಾನೆ.

(ಪಿಬಿಜಿ)

ಜೈ

ಜೈನ ಗುಹಾಶಿಲ್ಪಗಳು: ಯಾದಗಿರಿಯ ಕೋಟೆಯಿರುವ ಬೆಟ್ಟ, ಪ್ರಚಾರ ವಂಚಿತ ಸ್ಥಳಗಳಲ್ಲಿ ಒಂದು. ಊರ ಪೂರ್ವಕ್ಕಿರುವ ಈ ಬೆಟ್ಟ ಪ್ರಾಚೀನ ಇತಿಹಾಸವನ್ನು ತನ್ನ ಒಡಲಲ್ಲಿರಿಸಿಕೊಂಡಂತೆ ನೈಸರ್ಗಿಕ ಕೌತುಕಗಳಿಂದಲೂ ಕೂಡಿದೆ.

ಜಿನಮುನಿಗಳು ಸಮಾಧಿ ಮರಣ ಪಡೆದ ಅನೇಕ ಚಾರಣ ಗಿರಿಗಳು ಈ ಜಿಲ್ಲೆಯಲ್ಲಿ ಅನೇಕ ಕಡೆ ಇವೆ. ಯಾದಗಿರಿಯ ಬೆಟ್ಟದ ಸಮೀಪ ಇರುವ 'ಜಿನ್ನಪ್ಪನ ಬೆಟ್ಟವು' ಅಂಥದ್ದೊಂದು ಚಾರಣಗಿರಿ. ಕೋಟೆಯಿರುವ ಗುಡ್ಡದಲ್ಲಿ ಪ್ರವೇಶ ದ್ವಾರದಿಂದ ಪಶ್ಚಿಮದತ್ತ ಸಾಗಿದಾಗ ಏಕಶಿಲಾ ಹೆಬ್ಬಂಡೆಯಲ್ಲಿ 10 ಅಡಿ ಎತ್ತರದಲ್ಲೊಂದು ಗುಹೆಯಲ್ಲಿ ಜೈನತೀರ್ಥಂಕರರ, ಯಕ್ಷ–ಯಕ್ಷಿಯರ ಉಬ್ಬು ಶಿಲ್ಪಗಳನ್ನು ಕೊರೆದಿದ್ದಾರೆ. ಉತ್ತರಾಭಿ ಮುಖವಾಗಿರುವ ಈ ಗವಿಯ ಮಧ್ಯದ ಬಂಡೆಯಲ್ಲಿ 22ನೆಯ ತೀರ್ಥಂಕರ ನೇಮಿನಾಥ, 23ನೇ ತೀರ್ಥಂಕರ ಪಾರ್ಶ್ವನಾಥ, 24ನೆಯ ತೀರ್ಥಂಕರ ಮಹಾವೀರರ ನಿಂತ ಭಂಗಿಯ ಉಬ್ಬು ಶಿಲ್ಪಗಳ ಕೆಳಗೆ. ಶಂಖ, ಸರ್ಪ, ಸಿಂಹ ಲಾಂಛನಗಳನ್ನು ಆಯಾ ತೀರ್ಥಂಕರರ ಶಿಲ್ಪಗಳಿಗೆ ಅಳವಡಿಸಿದ್ದಾರೆ. ಪ್ರತಿ ತೀರ್ಥಂಕರ ಪ್ರತಿಮೆಯ ತಲೆಯ ಮೇಲೆ ಒಕ್ಕೊಡೆಗಳಿವೆ. ಪಾರ್ಶ್ವನಾಥ ಪ್ರತಿಮೆಯ ಮೇಲೆ ಏಳು ಹೆಡೆಯ ಸರ್ಪವಿದೆ. ಒಂದೇ ಸಾಲಿನಲ್ಲಿರುವ ಈ ಮೂರು ಪ್ರತಿಮೆಗಳ ಪೂರ್ವದ ಕಡೆ ಕೆಳಭಾಗದಲ್ಲಿ ಪಾರ್ಶ್ವನಾಥರ ಯಕ್ಷ ಧರಣೇಂದ್ರನ ಕಿರು ಉಬ್ಬು ಶಿಲ್ಪವಿದೆ. ಕಿರೀಟದ ಮೇಲೆ ಒಂದು ಹೆಡೆಯ ಸರ್ಪ, ಕರ್ಣಕುಂಡಲ, ಎದೆಹಾರ, ಕಡಗಗಳನ್ನು ಹೊಂದಿರುವ ಈ ದ್ವಿಭುಜ ಪ್ರತಿಮೆ ಸುಖಾಸೀನ ಭಂಗಿಯಲ್ಲಿದ್ದು ಬಲಗೈಯಲ್ಲಿ ಪುಷ್ಪ, ಎಡಗೈಯಲ್ಲಿ ಬೀಜಪೂರ ಫಲವನ್ನು ಹೊಂದಿದೆ. ಚತುರ್ಭುಜೆಯಾದ ಸುಖಾಸೀನ ಭಂಗಿಯ ಪದ್ಮಾವತಿ ಯಕ್ಷಿಯ ಬಲಮೇಲುಗೈಯಲ್ಲಿ ಅಂಕುಶ, ಕೆಳಗೈಯಲ್ಲಿ ಪುಷ್ಪ, ಎಡ ಮೇಲುಗೈಯಲ್ಲಿ ಪಾಶ, ಕೆಳಗೈಯಲ್ಲಿ ಬೀಜಪೂರ ಫಲವಿದೆ. ಈ ಗವಿಯ ಅನೇಕ ಜಿನಮುನಿಗಳ ತಪದ ತಾಣ ವಾಗಿದ್ದಿರಬಹುದು. ಈ ಗವಿಯನ್ನು ದಾಟಿ ಪಶ್ಚಿಮದತ್ತ ಸಾಗಿ ದಲ್ಲಿ ಕಡಿದಾದ ಬೃಹತ್ ಏಕಶಿಲಾ ಹೆಬ್ಬಂಡೆಯ ಮಧ್ಯಭಾಗದಲ್ಲಿ ಮುಂಚಾಚಿದ ಬಂಡೆ ಮತ್ತು ನೈಸರ್ಗಿಕ ಗವಿಯಲ್ಲಿ 22ನೆಯ ತೀರ್ಥಂಕರ ನೇಮಿನಾಥರ ಯಕ್ಷಿ ಕೂಷ್ಮಾಂಡಿನಿಯ (ಅಂಬಿಕಾ, ಆಮ್ರಾ) ಉಬ್ಬುಶಿಲ್ಪವಿದೆ. ಆಕೆಯ ವಾಹನ ಸಿಂಹ ಇದೆ. ಕಿರೀಟದ ಮಧ್ಯಭಾಗದಲ್ಲಿ ಪದ್ಮಾಸನದ ಕಿರುಜಿನ ಬಿಂಬವಿದೆ. ಅಕ್ಕಪಕ್ಕ ಆಕೆಯ ಸುತರಾದ ಶುಭಂಕರ, ಪ್ರಿಯಂಕರರ ಕಿರು ಶಿಲ್ಪಗಳಿವೆ. ಕೂಷ್ಮಾಂಡಿನಿ ಮಾವಿನ ಮರದಡಿಯಿರುವವಳು ಎಂಬುದನ್ನು ಬಿಂಬಿಸಲು ಫಲಭರಿತ ಮಾವಿನ ಟೊಂಗೆಯನ್ನು ಕೆತ್ತಿದ್ದಾರೆ. ಈ ಎಲ್ಲಾ ಗುಹಾ ಜೈನ ಶಿಲ್ಪಗಳು ರಾಷ್ಟ್ರಕೂಟರ ಅಥವಾ ಅದಕ್ಕೂ ಮುಂಚಿನ ಕಾಲದವುಗಳಾಗಿರಬಹುದು.

ಸುರಕ್ಷಿತತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪುರಾತನ ಅರಸರು ಈ ದುರ್ಗಮ ಬೆಟ್ಟದಲ್ಲಿ ಕೋಟೆಯೊಂದನ್ನು ಕಟ್ಟಿದರು. ದೀರ್ಘ ವೃತ್ತಾಕಾರದಲ್ಲಿ ಬೆಣಚು ಕಲ್ಲಿನಲ್ಲಿ ಕಟ್ಟಿದ ಯಾದಗಿರಿಯ ಈ ಕೋಟೆ ಒಂದು ಪರ್ವತದುರ್ಗ. ಬೇರೆ ಬೇರೆ ರಾಜವಂಶಗಳ ಕಾಲದಲ್ಲಿ ಈ ಕೋಟೆ ಅಭಿವೃದ್ಧಿ ಮತ್ತು ಪರಿವರ್ತನೆ ಹೊಂದಿದೆ. ಕಲ್ಯಾಣ ಚಾಲುಕ್ಯ, ಯಾದವ, ಬಹಮನಿ, ಆದಿಲ್‌ಶಾಹಿ, ನಿಜಾಮ್ ರಾಜಮನೆತನದವರು ಇಲ್ಲಿ ರಾಜ್ಯಭಾರ ಮಾಡಿದ್ದಾರೆ. ಈ ಸ್ಥಳ ನೈಸರ್ಗಿಕವಾಗಿಯೂ ಅಷ್ಟೇ ಆಕರ್ಷಕ. ಬೆಟ್ಟದ ತುತ್ತ ತುದಿ ಏರಿ ಬೆಳಗು ಬೈಗುಗಳ ಸುಂದರ ದೃಶ್ಯವನ್ನು ಸುತ್ತಲೂ ನಿಟ್ಟಿಸಿದಾಗ ಮಾನವ ಮುಗ್ಧನಾಗುತ್ತಾನೆ.

(ಡಿಎನ್‌ಎ)

ಜೈನ ಬಸದಿಯಲ್ಲಿನ ಭಿತ್ತಿ ಚಿತ್ರಗಳು: (ಚಿತ್ತಾಪೂರ) ಪಟ್ಟಣ ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರ **'ಚಿತ್ತಾಪೂರ'**. ಒಂದು ಕಾಲದಲ್ಲಿ 'ನಾಗಾವಿ' ಹೆಸನಿಂದಲೇ ಪ್ರಖ್ಯಾತಿ ಹೊಂದಿದ್ದ ಪ್ರದೇಶವಿದು. ಕ್ರಿ.ಶ. 1750ರ ಪೂರ್ವದಲ್ಲಿ ಚಿತ್ತಾಪೂರ ನಗರವೇ ನಿರ್ಮಾಣಗೊಂಡಿರಲಿಲ್ಲ. ಮಾತ್ರವಲ್ಲ ಹಿಂದೆ ಈ ಪ್ರದೇಶ 'ಕಂಗಳಾಪುರ'ವೆಂಬ ಹೆಸರನ್ನು ಹೊಂದಿತ್ತು ಎಂದು ಶಾಸನಗಳು ಉಲ್ಲೇಖಿಸುತ್ತವೆ. ಚಿತ್ತಾಪೂರದ ಬ್ರಾಹ್ಮಣ ಗಲ್ಲಿಯಲ್ಲಿ ಕಂಗಳೇಶ್ವರ ದೇವಾಲಯವಿರುವುದು ಈ ಮಾತಿಗೆ ಇನ್ನಷ್ಟು ಪುಷ್ಠಿ ನೀಡುತ್ತದೆ. ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಹೈಹಯರು, ಹೈದರಾಬಾದ ನಿಜಾಮರ ಆಳ್ವಿಕೆಗೆ ಒಳಪಟ್ಟಿರುವುದಲ್ಲದೇ ಬ್ರಿಟಿಷರೂ ಇಲ್ಲಿ ತಮ್ಮ ಪ್ರಭುತ್ವದ ಪ್ರಾಬಲ್ಯವನ್ನು ಬೀರಿದ್ದಾರೆ. ಇಲ್ಲಿ ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಅನೇಕ ಸ್ಮಾರಕಗಳಿದ್ದು, ಅವುಗಳಲ್ಲಿ ಕೆಲವು ವಿಶಿಷ್ಟವೆನಿಸುತ್ತವೆ. ಪ್ರಸ್ತುತ ಜೈನ ಬಸದಿಯೂ ಸಹ ವಿಶೇಷಗಳ ಸಾಲಿಗೆ ಸೇರುತ್ತದೆ. ಈ ಬಸದಿಯು ಸ್ಥಳೀಯ ಮುಖಂಡರೊಬ್ಬರ ಒಡೆತನದಲ್ಲಿದ್ದು, ಆಗಾಗ ಪೂಜೆ–ಪುನಸ್ಕಾರಗಳು ನಡೆಯುತ್ತಿವೆ.



ಜೈನ ಬಸದಿಯಲ್ಲಿರುವ ಸುಳುವಿನ ವಿನ್ಯಾಸದ ಭಿತ್ತಿಚಿತ್ರ

ಚಿತ್ತಾಪೂರ ಪಟ್ಟಣದ ಮಧ್ಯಭಾಗದಲ್ಲಿರುವ ಕಂಗಳೇಶ್ವರ ದೇವಾಲಯದ ಸಮೀಪವೇ ಪ್ರಸ್ತುತ ಜೈನ ಬಸದಿಯಿದೆ. ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡಿರಬಹುದಾದ ಈ ಬಸದಿ ತೆರೆದ ನವರಂಗ, ಮುಖಮಂಟಪ ಹಾಗೂ ಗರ್ಭಗೃಹ ಹೊಂದಿದೆ. ಮಾತ್ರವಲ್ಲ ಸೋಪಾನಗಳಂತೆ ನಿರ್ಮಿಸಿದ ಗೋಪುರವನ್ನೂ ಹೊಂದಿದೆ. ಬಸದಿಯ ಹೊರಭಾಗದ ಬಲ ಬದಿಯ ಮೂಲೆಯೊಂದರಲ್ಲಿ ಚಿಕ್ಕ ದೇಗುಲವಿದ್ದು, ಬಾಗಿಲು ಪಟ್ಟಿಕೆಯಲ್ಲಿ ಸುಂದರ ಕೆತ್ತನೆಯಿದೆ. ಒಂದುಕಾಲದಲ್ಲಿ ಈ ಬಸದಿಯ ಆವರಣ ವಿಶಾಲವಾಗಿದ್ದು, ಕಾಲಾನಂತರದಲ್ಲಿ ಸುತ್ತಲೂ ಮನೆಗಳು ನಿರ್ಮಿಸಲ್ಪಟ್ಟಿರುವ ಕಾರಣ ಇಂದು ನಡು ಮಧ್ಯದಲ್ಲಿ ಸಿಕ್ಕುಹಾಕಿಕೊಂಡಂತೆ ಭಾಸವಾಗುತ್ತದೆ. ಬಸದಿಯ ಪ್ರವೇಶದ್ವಾರದ ಬಲಬದಿಯಲ್ಲೂ ಅನೇಕ ದೇಗುಲಗಳಿದ್ದ ಛಾಯೆ ಕಾಣಸಿಗುತ್ತದೆ. ಗರ್ಭಗೃಹದಲ್ಲಿ ಜೈನ ತೀರ್ಥಂಕರರ ಪೀಠವಿದ್ದು, ಪೀಠದ ಮೇಲಿನ ಶಿಲ್ಪ ಆಕರ್ಷಕ ಕೆತ್ತನೆಯಿಂದ ಕೂಡಿದೆ. ಬಸದಿಯೊಳಗೆ ಪಾರ್ಶ್ವನಾಥ, ಸೂಪಾರ್ಶ್ವನಾಥ ತೀರ್ಥಂಕರರ ಪ್ರತಿಮೆಗಳೊಂದಿಗೆ ಅನೇಕ ಶಿಲ್ಪರಚನೆಗಳನ್ನು ಕಾಣಬಹುದು. ಹಾಗೆಯೇ ಈ ಬಸದಿಯಲ್ಲಿ ಭಿತ್ತಿಚಿತ್ರಗಳೂ ರಚನೆಗೊಂಡಿದ್ದು, ಇದೀಗ ಪ್ರಥಮ ಬಾರಿಗೆ ಅವು ಶೋಧನೆ ಗೊಳಪಡುತ್ತಿವೆ.

ಬಸದಿಯ ತೆರೆದ ನವರಂಗದಲ್ಲಿನ ಮೂರೂ ಗೋಡೆಗಳಲ್ಲಿ ಹಣತೆಗಳನ್ನಿಡುವ ಗಾತ್ರದಲ್ಲಿ ಚಿಕ್ಕ ಚಿಕ್ಕ ಮಾಡುಗಳನ್ನು ಮಾಡಿದೆ. ಈ ಮಾಡುಗಳ ಸುತ್ತಲೂ ಹಾಗೂ ದ್ವಾರದ ಸುತ್ತಲೂ ಸುಳಿವಿನ ವರ್ಣಚಿತ್ರಗಳಿದ್ದರೆ, ಕಲ್ಲಿನ ತೊಲೆಗಳ ಮೇಲೆ ಮನುಷ್ಯಾಕೃತಿಗಳು ರಚನೆಗೊಂಡಿವೆ. ಬಸದಿಯ ಗೋಡೆಗಳ ಮೇಲೆ ಆಗಾಗ ಸುಣ್ಣ ಬಳಿಯಲಾಗಿದೆ. ಇದರಿಂದಾಗಿ ಚಿತ್ರಗಳು ಸುಣ್ಣದ ಪದರಿನಿಂದ ಮುಚ್ಚಿಹೋಗಿವೆ.

ಚಿತ್ರರಚನೆಗೆಂದು ಗಾರೆ ನಿರ್ಮಿತಿಯನ್ನೂ ಇಲ್ಲಿ ಮಾಡಿ ಕೊಂಡಿರುವ ಸಾಧ್ಯತೆಗಳಿವೆ. ಕರ್ನಾಟಕದ ಪ್ರಾಚೀನ ಭಿತ್ತಿ ಚಿತ್ರಗಳ ನೆಲೆಗೆ ಈ ಬಸದಿಯು ಮತ್ತೊಂದು ಸೇರ್ಪಡೆ ಇಲ್ಲಿನ ಬಹುಪಾಲು ಚಿತ್ರಗಳು ನಶಿಸಿ ಹೋಗಿವೆ.

ಬಹುಶಃ ಈ ಬಸದಿಯಲ್ಲಿನ ಚಿತ್ರಗಳು ಜೈನ ತೀರ್ಥಂಕರರಿಗೆ ಸಂಬಂಧಿಸಿವೆ ಎಂದು ಹೇಳಬಹುದು. ಕೆಂಪು, ನೀಲಿ, ಹಸಿರು, ಹಳದಿ ವರ್ಣಗಳಿಂದ ಬಿಡಿಸಿದ ಈ ಚಿತ್ರಗಳು ರೇಖಾಪ್ರಧಾನವಾಗಿವೆ. ಹೊಯ್ಸಳರ ಕಾಲದಲ್ಲಿ ರಚನೆಗೊಂಡಿದ್ದೆಂದು ಹೇಳಲಾಗುವ ಶ್ರವಣಬೆಳಗೊಳದ ಬಸದಿಯೊಂದರ ಚಿತ್ರಸ್ವರೂಪವನ್ನು ಈ ಚಿತ್ರಗಳು ಹೋಲುತ್ತವೆ. ಮತ್ತು ಜೈನ ಧಾರ್ಮಿಕ ಹಿನ್ನೆಲೆಯ ಕೆಲವೊಂದು ಸಾಂಕೇತಿಕ ಅರ್ಥಗಳೂ ಇಲ್ಲಿನ ಚಿತ್ರಗಳಲ್ಲಿ ತೋರ್ಪಡಿಸಿದೆ. ಚಿತ್ರಗಳ ವಿಷಯ, ಚಿತ್ರಿತ ಶೈಲಿ ಮತ್ತು ವರ್ಣಲೇಪನ ಆಧಾರದ ಮೇಲೆ ಬಹುಶಃ ಈ ಭಿತ್ತಿ ಚಿತ್ರಗಳು ಬಹಳ ಹಿಂದೆಯೇ ಚಿತ್ರಿಸಿದವು ಎಂದು ಹೇಳಬಹುದು. ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯರ ಕಾಲದ ಅನೇಕ ಸ್ಮಾರಕಗಳು ಚಿತ್ತಾಪೂರ ಪಟ್ಟಣದುದ್ದಕ್ಕೂ ಕಂಡು ಬರುತ್ತವೆಯಾದರೂ ಅಲ್ಲೆಲ್ಲೂ ವರ್ಣಚಿತ್ರಗಳು ಕಂಡು ಬರುವುದಿಲ್ಲ. ಮಾತ್ರವಲ್ಲ ಈ ಬಸದಿಯ ಸಮೀಪದಲ್ಲೇ ಇನ್ನೂ ಅನೇಕ ಸ್ಮಾರಕಗಳಿವೆ ಅಲ್ಲೂ ಚಿತ್ರಗಳು ಕಾಣಸಿಗುವುದಿಲ್ಲ. ಆದರೆ, ಪ್ರಸ್ತುತ ಬಸದಿಯಲ್ಲಿ ಮಾತ್ರ ಚಿತ್ರ ರಚನೆ ಕಂಡುಬರುವ ಮೂಲಕ ಒಂದು ರೀತಿಯ ಅಚ್ಚರಿಯನ್ನೂ ಮೂಡಿಸುತ್ತದೆ.

ಇಂದು ಈ ಬಸದಿಯ ಮೇಲ್ಛಾವಣಿಯು ಜೀರ್ಣ ಗೊಂಡಿದ್ದು, ಮಳೆಗಾಲದಲ್ಲಿ ನೀರು ಜಿನುಗುವುದರಿಂದ ಗೋಡೆಗಳು ಹಾಗೂ ತೊಲೆಗಳು ಪಾಚಿಗಟ್ಟಿವೆ. ಇದರಿಂದಾಗಿ ಚಿತ್ರಗಳ ಮೇಲಿನ ವರ್ಣಗಳು ಉದುರುತ್ತಲಿವೆ. ಮಾತ್ರವಲ್ಲ ಅಳಿದುಳಿದ ಚಿತ್ರಗಳು ವರ್ಣಕಾಂತಿಯನ್ನು ಕಳೆದುಕೊಳ್ಳುತ್ತಿವೆ. ಇದೀಗ 'ನಾಗಾವಿ ಸಂಶೋಧನ ಹಾಗೂ ಪಾರಂಪರಿಕ ಅಧ್ಯಯನಗಳ ಕೇಂದ್ರವು ಈ ಭಿತ್ತಿಚಿತ್ರಗಳ ಕುರಿತಾದ ಹೆಚ್ಚಿನ ಅಧ್ಯಯನದಲ್ಲಿ ತೊಡಗಿದೆ ಬಹುಶಃ ಮುಂಬರುವ ದಿನಗಳಲ್ಲಿ ಪೂರಕ ನೆಲೆಗಳನ್ನು ಆಧರಿಸಿ, ಪ್ರಸ್ತುತ ಜೈನ ಬಸದಿಯಲ್ಲಿನ ಚಿತ್ರಗಳ ಕಾಲಮಾನ ಮತ್ತು ವಿಷಯ ವಿವರಣೆ ಕುರಿತಂತೆ ಇನ್ನೂ ಕೆಲ ಒಳ ಸಂಗತಿಗಳು ಲಭ್ಯವಾಗುವುದರಲ್ಲಿ ಅನುಮಾನವಿಲ್ಲ.

(ಎಂಸಿಬಿ)

ಜೈನ ಸ್ಮಾರಕಗಳು: (ಸೇಡಂ) ಸೇಡಂ ನಗರದ ಕೆಲಸ್ಮಾರಕಗಳು ಅಧ್ಯಯನ ಯೋಗ್ಯವಾಗಿವೆ. ಸೇಡಿಂಬ ನಗರ ಅರಸರ, ಅಧಿಕಾರಗಳ ಆಡಳಿತ ಕೇಂದ್ರವಾಗಿದ್ದಂತೆ ಧಾರ್ಮಿಕ ನೆಲೆಗಟ್ಟೂ ಆಗಿತ್ತೆಂಬುದಕ್ಕೆ ಅಲ್ಲಿ ದೊರೆಯುವ ಅಳಿದುಳಿದ ಜಿನಮಂದಿರಗಳು ಜಿನಬಿಂಬಗಳು ಯಕ್ಷ ಯಕ್ಷಿಯರ ವಿಗ್ರಹಗಳು ಸಾಕ್ಷಿಯಾಗಿವೆ. ಕೆಲವೊಂದು ಜಿನಮಂದಿರಗಳ ವಿಗ್ರಹಗಳು ರಾಷ್ಟ್ರಕೂಟರ ಕಾಲದವುಗಳಾಗಿದ್ದರೆ ಬಹುತೇಕ ಅವಶೇಷಗಳು ಕಲ್ಯಾಣ ಚಾಲುಕ್ಯರ ಕಾಲದವುಗಳಾಗಿವೆ. ಲಭ್ಯವಿರುವ ಕ್ರಿ.ಶ. 1079, 1124, 1137, 1138, 1228, ಇನ್ನಿತರ ಶಾಸನಗಳಾಧಾರದ ಮೇಲೆ ತ್ರಿಕೂಟ ಬ್ರಹ್ಮ ಜಿನಾಲಯ, ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿ ಇನ್ನಿತರ ಜಿನಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ.

ಈ ಬಸದಿಗಳ ಪೈಕಿ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿಯ ಕೆಲ ಅಪೂರ್ವ ವಿಗ್ರಹಗಳು ಅಧ್ಯಯನಕ್ಕೆ ಯೋಗ್ಯವಾಗಿವೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹೊಂದಿರುವ ಈ ಜಿನಾಲಯದ ಮೂಲ ತೀರ್ಥಂಕರ ಭಗವಾನ್ ಪಾರ್ಶ್ವನಾಥ ಸ್ವಾಮಿ, ಕಾಯೋತ್ಸರ್ಗ ಭಂಗಿಯ 5 ಅಡಿ ಎತ್ತರದ ಈ ಪ್ರತಿಮೆಯ ಪಾದಗಳ ಇಕ್ಕೆಡೆ ಧರಣೇಂದ್ರ ಪದ್ಮಾಪತಿ ಯಕ್ಷ ಯಕ್ಷಿಯರ ಚಿಕಣಿ ಶಿಲ್ಪಗಳಿವೆ. ತೀರ್ಥಂಕರ ತಲೆಯ ಮೇಲೆ ಸಪ್ತ ಫಣಿಗಳುಳ್ಳ ನಾಗ ಶಿಲ್ಪದ ಮೇಲ್ಭಾಗದಲ್ಲಿ ಮುಕ್ಕೊಡೆ ಇದೆ. ಧರಣೇಂದ್ರ ಪದ್ಮಾವತಿ ಈ ಶಿಲ್ಪಗಳ ಮೇಲೆ ಕಿರು ಮಂಟಪಗಳಲ್ಲಿ ಧ್ಯಾನಾಸಕ್ತ ನಿಂತ ಜಿನ ಬಿಂಬಗಳು ಅವುಗಳ ಮೇಲೆ ಇಕ್ಕೆಡೆ ಚಾಮರಗಳನ್ನು, ಚಾಮರಗಳ ಮೇಲ್ಭಾಗದಲ್ಲಿ ಕಿರುಮಂಟಪಗಳಲ್ಲಿ ಪದ್ಮಾಸೀನ ಜಿನ ಬಿಂಬಗಳನ್ನು ಬಿಡಿಸಿದ್ದಾರೆ. ಈ ಪ್ರತಿಮೆಯ ರಚನಾ ವಿನ್ಯಾಸ

ದಿಂದ ಇದು ಕ್ರಿ.ಶ. 10ನೆಯ ಶತಮಾನದ ಮಧ್ಯ ಅಥವಾ ಅಂತ್ಯ ಭಾಗದ ರಚನೆ ಎಂದೆನಿಸುತ್ತದೆ. ಗರ್ಭಗೃಹದ ಮುಂದಿರುವ ತೆರೆದ ಅಂತರಾಳದ ಎದುರು ಬದರು ಗೋಡೆಗಳಲ್ಲಿ ಗುಪ್ತ ಮಾರ್ಗದ ಗೂಡುಗಳಿವೆ. ನವರಂಗದ ಬಲಭಾಗದ ಗೋಡೆಗೆ ಹೊಂದಿಕೊಂಡು ಖಡ್ಗಾಸನದ ಕಪ್ಪುಶಿಲೆಯ 5 ಅಡಿಗೂ ಮಿಕ್ಕ ಜಿನ ಬಿಂಬದ ಲಾಂಛನದಲ್ಲಿ ಸ್ಪಷ್ಟತೆಯಿಲ್ಲ, ಪ್ರತಿಮೆಯ ಮುಖದಲ್ಲಿ ಪ್ರಸನ್ನತೆ ಶಾಂತತೆ ಮನಾಕರ್ಷಕವಾಗಿದೆ. ಪ್ರಭಾಮಂಡಲ, ಮುಕ್ಕೊಡೆಗಳನ್ನು ಹೊಂದಿರುವ ಈ ಬಿಂಬದ ಪಾದಗಳ ಅಕ್ಕಪಕ್ಕ ಯಕ್ಷ ಯಕ್ಷಿ ಪ್ರತಿಮೆಯ ಬದಲು ಬಲಗಡೆ ಜೈನ ಮುನಿಯ ಕುಳಿತ ವಿಗ್ರಹ ಕೆತ್ತಿದ್ದಾರೆ. ಎಡಗಡೆ ದಂಪತಿಗಳ ಕಿರು ಶಿಲ್ಪಗಳಿವೆ. ಬಹುಶಃ ಜಿನ ಮುನಿಗಳ ಪ್ರೇರಣೆಯಿಂದ ಮಂದಿರ ನಿರ್ಮಿಸಿದ ರಾಜ ದಂಪತಿಗಳ ಅಥವಾ ಮಾಂಡಲಿಕ, ಮಂತ್ರಿ, ಸೇನಾಪತಿ, ಪುರಪ್ರಮುಖ ದಂಪತಿಗಳ ಶಿಲ್ಪಗಳಾಗಿರಬಹುದು ಅಥವಾ ಅನಂತ ನೋಂಪಿ ಇನ್ನಿತರ ನೋಂಪಿ ಪೂರೈಸಿದ ದಂಪತಿಗಳು ಉದ್ಯಾಪನೆ ಮಾಡಿದಾಗ ಅದರ ಸ್ಮರಣಾರ್ಥ ಈ ಭಗವತ್ಪ್ರತಿಮೆಯನ್ನು ಈ ಬಸದಿಗೆ ನೀಡಿರಬಹುದು. ಯಾವುದಕ್ಕೂ ಸಂಶೋಧನೆಯಾದಲ್ಲಿ ಸ್ಪಷ್ಟತೆಯಾಗುವುದು.

ಕಲಾತ್ಮಕ ಯಕ್ಷಿ ಪ್ರತಿಮೆಗಳು: ಇದೇ ಬಸದಿಯ ಪ್ರವೇಶ ದ್ವಾರದ ಒಳಭಾಗದಲ್ಲಿ ನವರಂಗಕ್ಕೆದುರಾಗಿ ಕೂಷ್ಮಾಂಡಿನಿ, ಪದ್ಮಾವತಿ ಯಕ್ಷಿ ಪ್ರತಿಮೆಗಳು ತುಂಬಾ ವಿಶೇಷವಾಗಿವೆ. ಈ ಭಾಗದಲ್ಲಿ ಹೆಚ್ಚಾಗಿ ಆಸೀನ ಭಂಗಿಯ ಕೂಷ್ಮಾಂಡಿನಿ ಪದ್ಮಾವತಿಯರ ವಿಗ್ರಹಗಳೇ ಲಭ್ಯವಿದ್ದು, ಈ ಪ್ರತಿಮೆಗಳು ನಿಂತ ಭಂಗಿಯಲ್ಲಿವೆ.

ಕೂಷ್ಮಾಂಡಿನಿ: ಇಪ್ಪತ್ತೆರಡನೆಯ ತೀರ್ಥಂಕರರಾದ ಭಗವಾನ್ ನೇಮಿನಾಥರ ಯಕ್ಷಿ ಕೂಷ್ಮಾಂಡಿನಿಯ ವಿಗ್ರಹದ ಆಧಾರದ ಮೇಲೆ ಇಲ್ಲಿ ನೇಮಿನಾಥ ಜಿನಾಲಯ ಇದ್ದ ಸಾಧ್ಯತೆ ಉಂಟು. ನಾಲ್ಕಡಿಗೂ ಮಿಕ್ಕ ದ್ವಿಭಂಗಿಯ ನಿಂತ ಯಕ್ಷಿ ಪ್ರತಿಮೆ ಸೂಕ್ಷ್ಮತೆ, ಸುಂದರತೆಗೆ ಸಾಕ್ಷಿಯಾಗಿದೆ. ಆಮ್ರಾ, ಅಂಬಿಕಾ ಎಂದೂ ಪೂಜೆಗೊಳ್ಳುವ ಈ ಯಕ್ಷಿಯ ಪ್ರತಿಮೆ ದ್ವಿಭುಜವುಳ್ಳದ್ದು. ಎರಡೂ ಹಸ್ತ ಭಾಗಗಳು ಮುಕ್ಕಾಗಿವೆ. ಕಿರೀಟರಹಿತವಾಗಿದ್ದು ಪ್ರಭಾವಳಿಯ ತುತ್ತ ತುದಿಯಲ್ಲಿ ಪದ್ಮಾಸನದ ಜಿನ ಬಿಂಬವಿದೆ. ಹಾಗೇ ತಲೆಯ ಮೇಲ್ಭಾಗದಲ್ಲಿ ಎಡಬಲ ಮಾವಿನ ಹಣ್ಣುಗಳ ತೊಂಗುಲವಿದೆ (ಅಮ್ರ ಮರದ ತಡಿಯಧೀರೆ, ಮಾವಿನಮರದ ನೆರಳಿನಲಿರುವವಳು) ಕೊರಳಹಾರ, ಕಂಠಹಾರ, ಎದೆಹಾರಗಳಿವೆ, ನಡುಬಂಧ, ತೋರ ಹಾರಗಳಲ್ಲದೆ ಕಾಲಲ್ಲಿ ಕಡಗ ಅಂದುಗೆಗಳಿವೆ. ಬಲಗೈ ಕೆಳಗೆ ಬಲಗಾಲ ಪಕ್ಕದಲ್ಲಿ ಆಕೆಯ ಪುತ್ರ ಶುಭಂಕರನ ಶಿಲ್ಪವಿದ್ದು ಮಗನ ತಲೆಯತ್ತ ಕೈ ಚಾಚಿದ ಭಂಗಿ ಇದೆ. (ಹಸ್ತ ಮುಕ್ಕಾದ ಕಾರಣ ಸ್ಪಷ್ಟತೆಯಿಲ್ಲ) ಎಡಗಡೆ ಆಕೆಯ ವಾಹನ ಸಿಂಹವಿದೆ. ಅದರ ಮೇಲೆ ಸವಾರನೊಬ್ಬನಿದ್ದಾನೆ (ಬಹುಶಃ ಸರ್ವಾಹಣ ಯಕ್ಷನಿರಬಹುದು) ಅದರ ಪಕ್ಕ ಇನ್ನೊಬ್ಬ ಮಗ ಪ್ರಿಯಂಕರನ ಶಿಲ್ಪವಿದೆ. ಈ ಪ್ರತಿಮೆಯನ್ನು ಅನೇಕರು ಜ್ವಾಲಾ ಮಾಲಿನಿ ಪ್ರತಿಮೆಯೆಂದು ತಪ್ಪಾಗಿ ಗುರುತಿಸಿದ್ದಾರೆ. ಈ ಭಾಗದಲ್ಲಿ ದೊರೆತ ಕೂಷ್ಮಾಂಡಿನಿ ಪ್ರತಿಮೆಗಳಲ್ಲೇ ಸೇಡಮ್ ಜಿನ ಮಂದಿರದ ಈ ವಿಗ್ರಹ ಉತ್ಕೃಷ್ಟವಾಗಿದೆ. ಶಿಲ್ಪಿಯು ಅಂಗಶಾಸ್ತ್ರ ಪ್ರವೀಣನಷ್ಟೇ ಅಲ್ಲ ಕುಶಲಿಯೂ ಎಂಬುದನ್ನು ಈ ಪ್ರತಿಮೆ ತಿಳಿಸುತ್ತದೆ.

ಪದ್ಮಾವತಿಯ ಪ್ರತಿಮೆ: ಇಪ್ಪತ್ಮೂರನೆಯ ತೀರ್ಥಂಕರರಾದ ಭಗವಾನ್ ಪಾರ್ಶ್ವನಾಥರ ಯಕ್ಷಿ ಪದ್ಮಾವತಿಯ ನಾಲ್ಕಡಿಗೂ ಮಿಕ್ಕ ನಿಂತ ತ್ರಿಭಂಗಿಯ ಈ ಪ್ರತಿಮೆ ಅಂಗಾಂಗ ಪ್ರಮಾಣ ಬದ್ಧತೆಯಿಂದ ಕಲಾಕುಸುರಿಯಿಂದ ಕೂಡಿದೆ. ಗೋಪುರಾಕಾರದ ಕಿರೀಟದ ಮೇಲೆ ಒಂದು ಹೆಡೆಯನಾಗ, ನಾಗಹೆಡೆಯ ಮೇಲೆ ಕುಳಿತ ಜಿನ ಬಿಂಬವಿದೆ. ಕಿವಿಯಲ್ಲಿ ಪತ್ರಕುಂಡಲ, ಕಂಠಹಾರ, ಎದೆಹಾರ, ಭುಜದಾಭರಣ ಕಂಕಣಗಳುಳ್ಳ ಚತುರ್ಭುಜ ವಿಗ್ರಹದ ಬಲ ಮೇಲಗೈಯಲ್ಲಿ ಅಂಕುಶವಿದೆ. ಬಲ ಕೆಳಗೈ ಮುಕ್ಕಾಗಿದೆ (ವರದ ಹಸ್ತವೋ ಅಭಯ ಹಸ್ತವೋ ಇದ್ದಿರಬಹುದು). ಎಡಮೇಲುಗೈಯಲ್ಲಿ ಪಾಶ, ಎಡಕೆಳಗೈ ಬೀಜಪೂರ ಫಲವಿದೆ. ಕಾಲಲ್ಲಿ ಅಂದುಗೆ ಇನ್ನಿತರ ಆಭರಣಗಳಿವೆ. ಪಾದಗಳ ಹತ್ತಿರ ಬಲಗಡೆ ತ್ರಿಭಂಗಿಯ ಚಾಮರ ಧಾರಣಿ ಇದ್ದರೆ ಎಡಗಡೆ ದ್ವಿಭಂಗಿಯ ದ್ವಿಭುಜದ ಚಾಮರ ಧಾರಣಿ ಇದ್ದಾಳೆ. ಈ ಪ್ರತಿಮೆಯ ದೇಹ ಪ್ರಮಾಣ ಮುಖದಲ್ಲಿನ ಚೆಲುವು, ನಿಂತ ನಿಲುವು–ಒಂದೊಂದೂ ಶಿಲ್ಪಿಯ ಕಲಾಪರಿಣಿತಿಗೆ ಸಾಕ್ಷಿಯಾಗಿದೆ. ಇಂಥ ಪ್ರಬುದ್ಧ ಕಲಾವಿದರನ್ನು ಪ್ರಕಾಂಡ ಪಂಡಿತರನ್ನು ಉಗ್ರ ತಪೋಧನರನ್ನು ಚತುಃಸಮಯದೀಪಕರಾದ ದೊರೆಗಳನ್ನು ನಿಷ್ಠಾವಂತ ಮತ್ತು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ಎಂಬ ಖ್ಯಾತಿಯ ಜನಪದರನ್ನು ಹೊಂದಿದ್ದ ಭವ್ಯ ಸಾಂಸ್ಕೃತಿಕ ಪರಂಪರೆಯ ನಾಡು ನಮ್ಮವರ ಅವಜ್ಞೆಗೆ ಏಕೆ ಈಡಾಯಿತೆಂಬುದು ಪ್ರಶ್ನಾರ್ಹವಾದ ವಿಷಯ.

ಮಾಣಿಕೇಶ್ವರಿ ಗುಡಿ: ಸೇಡಂ ನಗರದಲ್ಲಿರುವ ಮಾಣಿಕೇಶ್ವರ ಗುಡಿಯನ್ನು ಜನ ಲಿಂಗದ ಗುಡಿ ಎಂದು ಕರೆಯುತ್ತಾರೆ. ಕ್ರಿ.ಶ. 10, 11ನೆಯ ಶತಮಾನದ 45 ಕಂಬಗಳುಳ್ಳ ಇದು ಸಾಲು ಮಂಟಪ ಇದರ ಮಧ್ಯಭಾಗದಲ್ಲಿ ಚಿಕ್ಕಗುಡಿಯನ್ನು ನಿರ್ಮಿಸಿದ್ದಾರೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಈಶಾನ್ಯ ದಿಕ್ಕಿಗೆ ಎತ್ತರವಾದ ಕಂಬವಿದೆ. ಈ ಕಂಬಕ್ಕೆ ಜನ ಬಾಣಿಕಲ್ಲು, ಬಾಣಂತಿಕಲ್ಲು ಎಂದು ಕರೆಯುತ್ತಾರೆ. ವಾಸ್ತವವಾಗಿ ಇದೊಂದು ಮಾನಸ್ತಂಭ. ಜೈನ ವಿದ್ಯಾಕೇಂದ್ರವಾಗಿದ್ದ ಮಾಣಿಕೇಶ್ವರಿ (ಲಿಂಗದಗುಡಿ) ಗುಡಿಯ ಜೊತೆಗೆ ಆದಿ ತೀರ್ಥಂಕರರ ಬಸದಿಯೂ ಆಗಿದ್ದಿರಬಹುದು. ಮಾಣಿಕ ಎಂಬ ಹೆಸರು ಜೈನ ಆದಿ ತೀರ್ಥಂಕರ (ವೃಷಭನಾಥ)ರ ಸಾವಿರ ಹೆಸರುಗಳೂ ರೂಢಿಯಲ್ಲಿವೆ. ಅಲ್ಲದೆ ಕ್ರಿ.ಶ. 1137ರ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಶಾಸನದಲ್ಲಿ ದಂಡನಾಯಕ ಕಾಳಿದಾಸನ ಅಳಿಯ ಭೀಮ ಚಮೂಪ ಮತ್ತು ಅಗ್ರಹಾರದ ಮೂರುನೂರು ಮಹಾಜನರು ಬಸದಿಯ ಆದಿ ಭಟ್ಟಾರಕ ದೇವರಿಗೆಂದು 45 ಮತ್ತರು ಭೂಮಿಯನ್ನು ಎರಡು ಮತ್ತರು ಕೇದಿಗೆಯ ತೋಟಗಳನ್ನು ದಾನಕೊಟ್ಟುದಲ್ಲದೆ ನಾನಾ ದೇಶಿ



ಸೇಡಮ್ ಅಗ್ರಹಾರದಲ್ಲಿರುವ ಮಾಣಿಕೇಶ್ವರಿ ದೇವಾಲಯ

ಮುಮ್ಮರಿ ದಂಡಗಳು ವಿವಿಧ ವಸ್ತುಗಳ ಮೇಲಿನ ಆಯವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಆದಿ ಭಟ್ಟಾರಕ ಪದ, ಮಾನಸ್ತಂಭ, ಇನ್ನಿತರ ಪುರಾವೆಗಳಿಂದ ಮಾಣಿಕೇಶ್ವರ ಜಿನಾಲಯ ಧಾರ್ಮಿಕ ರಾಜಕೀಯ ವಿಪ್ಲವದಲ್ಲಿ ಪರಿವರ್ತನೆ ಯಾಗಿದೆ. ಅದೊಂದು ಜೈನ ವಿದ್ಯಾಕೇಂದ್ರ ಹಾಗೂ ಅದಕ್ಕೆ ಹೊಂದಿಕೊಂಡೇ ಇದ್ದ ಆದಿ ಜಿನನ ಮಂದಿರ ಇದು ಎಂದು ಹೇಳಬಹುದು. (ಮಾಣಿಕ್ಯ ಜಿನನ) ಮಂದಿರ ಬಿದ್ದುದರಿಂದ ಅಲ್ಲಿ ಮಾನಸ್ತಂಭವನ್ನು ನಿರ್ಮಿಸಿದ್ದಾರೆ. ಈ ಪ್ರದೇಶದಲ್ಲಿ ಮಾನಸ್ತಂಭಗಳು ಕಾಣಸಿಕ್ಕುವುದು ಅಪರೂಪ. ಈಗಲೂ ಸುಸ್ಥಿತಿ ಯಲ್ಲಿರುವ ಮಾನಸ್ತಂಭ ಜೈನ ಕುರುಹಾಗಿ ಸೇಡಮ್ ನಗರ ಜೈನ ಧರ್ಮದ ನೆಲೆವೀಡಾಗಿತ್ತೆಂಬುದನ್ನು ಸಾರಿಸಾರಿ ಹೇಳುತ್ತದೆ. (ಡಿಎನ್‌ಎ)

ಜೈನರ ಮನೆಗಳು: ಸಹಬಾಳ್ವೆ, ಸಹಿಷ್ಣುತೆಗೆ, ಸತ್ಯತೆ, ಸಭ್ಯತೆಗೆ ಹೆಸರಾದ ಅಹಿಂಸಾವಾದಿಗಳೂ ಶಾಂತ ಪ್ರಿಯರೂ ಆದ ಜೈನರು ಭಾರತದ ಎಲ್ಲಾ ಭಾಗಗಳಲ್ಲಿ ವಾಸವಾಗಿದ್ದಾರೆ. ಅತೀ ಪ್ರಾಚೀನದ್ದಾಗಿದೆ. ಇತರೇ ಬಂಧುಗಳು ಭಾರತದ ಎಲ್ಲಾ ಪ್ರದೇಶಗಳಲ್ಲಿ ವಾಸವಾಗಿರುವಂತೆ ಇದ್ದರೂ ಕೂಡಿ ಸಹಬಾಳ್ವೆ ನಡೆಸುತ್ತ ಬಂದಿದ್ದಾರೆ.

ಆಯಾ ಪ್ರದೇಶಗಳಿಗೆ ಅನುಕೂಲವಾದ ವಾತಾವರಣ ಪರಿಸರಗಳಿಗೆ ಹೊಂದಿಕೊಂಡು ಉಳಿದವರಂತೆ ತಮ್ಮ ಯೋಗ್ಯ ತಾನುಸಾರವಾಗಿ ಮನೆಗಳನ್ನು ಕಟ್ಟಿಕೊಂಡು ನೆಮ್ಮದಿಯಿಂದ ಜೀವನ ಸಾಗಿಸುತ್ತ ಬಂದಿದ್ದಾರೆ. ಹಳ್ಳಿಗಳಲ್ಲಿ ಹೆಚ್ಚಾಗಿ ಕಲ್ಲು, ಮಣ್ಣು ಸಾದಾ ಇಟ್ಟಿಗೆ, ಕೆಂಪು ಇಟ್ಟಿಗೆ ಮತ್ತು ಕಟ್ಟಿಗೆಗಳನ್ನು ಉಪಯೋಗಿಸಿಕೊಂಡು ಮತ್ತು ಮೇಲ್ಛಾವಣೆಯನ್ನು (ಸಿಮೆಂಟಿನ ಶ್ಲಾಬ್‌ದಂತೆ) ಇನ್ನು ಕೆಲವರು ಕೆಂಪುಹಂಚು, ಸಿಮೆಂಟಿನ, ತಗಡಿನ ಪತ್ರೆಗಳನ್ನು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಮನೆಗಳಿಗೆ ಹಾಳುಮಣ್ಣು, ಸುಣ್ಣ, ಮತ್ತು ಕೇವಿ ಬಣ್ಣಗಳನ್ನು ಹಚ್ಚಿ ಶೃಂಗರಿಸಿ ಕೊಳ್ಳುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ ಹೆಚ್ಚಾಗಿ ಸಿಮೆಂಟಿನ ಮನೆಗಳನ್ನು ಕಟ್ಟಿಕೊಂಡಿರುವರು. ಪಡಸಾಲೆಯಲ್ಲಿ ಬಾಹುಬಲಿ, ತೀರ್ಥಂಕರರ ಮತ್ತು ಮುನಿಗಳ ಚಿತ್ರ ಕೆಲವರು ಹಾಕಿದರೆ ಇನ್ನು ಕೆಲವರು ತಮ್ಮ ಜಗಲಿಯ ಮೇಲೆ ಧರ್ಮಕ್ಕೆ ಸಂಬಂಧಿಸಿದಪೋಟೋಗಳನ್ನು ಹಾಗೂ ತಾಂಬ್ರ, ಹಿತ್ತಾಳೆ ಮೂರ್ತಿಗಳನ್ನು ಇಟ್ಟು ಪೂಜಿಸುವುದುಂಟು. ಕೆಲವರು ಗಣೇಶನ ಪ್ರತಿಷ್ಠಾನ ಮಾಡುವರು. ತಮ್ಮ ಯೋಗ್ಯತೆಗೆ ಅನು ಗುಣವಾಗಿ, ಪಡಸಾಲೆ, ನಡುವಿನಮನೆ, ದೇವರ ಮನೆ, ಅಡಿಗೆ ಮನೆ ಸ್ನಾನಗ್ರಹ ಮತ್ತು ಹಿತ್ತಲು ಅಂಗಳುಗಳಿರುವಂತೆ ಮನೆ ಗಳನ್ನು ಕಟ್ಟಿಕೊಳ್ಳುವರು. ಕೆಲವರು ಹೆಚ್ಚಾಗಿ ಮನೆ ಬಿಟ್ಟು ದೂರ ದಲ್ಲಿ ಸೌಚಾಲಯಗಳನ್ನು ಕಟ್ಟಿರುತ್ತಾರೆ.

ಜೈನ ಬಸದಿ-ಕಟ್ಟಡಗಳ ಇತಿಹಾಸ ಬಹಳಷ್ಟು ಇದೆ. ಈಗಿನ ಪರಿಸ್ಥಿತಿಯಲ್ಲಿ ಬಸದಿಗಳು ತಳವಿನ್ಯಾಸ ನಕ್ಷತ್ರಾಕಾರದ್ದು. ಪೂರ್ವಕ್ಕೆ ಆಗಲಿ, ಉತ್ತರ ದಿಕ್ಕಿಗಾಗಲಿ ಬಸದಿಯ ಮುಖವಾಗಿ ಕಟ್ಟುತ್ತಾರೆ. ಈ ಬಸದಿಯ ಎದುರಿಗೆ ಪ್ರಮಾಣಬದ್ಧ ಅಂತರ ದಿಂದ ಎದುರಿಗೆ ಮಾನಸ್ತಂಭ ಇರಲೇಬೇಕು. ಈ ಸ್ತಂಭದಲ್ಲಿ ಭಗವಾನ್ ಜಿನರ ನಾಲ್ಕೂ ದಿಕ್ಕಿಗಳಿಗೆ ಮುಖವಿರುವಂತೆ ಒಂದು ಶಿಲ್ಪವಿರುತ್ತದೆ. ಇದನ್ನು ಅಲ್ಲಿ ಪ್ರತಿಷ್ಠಾನಗೊಳಿಸುತ್ತಾರೆ. ಬಸದಿಯ ಪಕ್ಕದಲ್ಲಿ ಬ್ರಹ್ಮ ದೇವರನ್ನೂ ಪೂಜಿಸುತ್ತಾರೆ.


ಮನೆಯಲ್ಲಿ ಮುಂಜಾನೆ ಸ್ನಾನವು ಮುಗಿದ ಮೇಲೆ ತಮ್ಮ ಮನೆಯ ಜಗಲಿಯಲ್ಲಿರುವ ತೀರ್ಥಂಕರರ ಯಕ್ಷ ಯಕ್ಷಿಯ ಚಿತ್ರ ಪಟಗಳಿಗೆ ಕಂಚಿನ (ಸ್ಥಿತಿವಂತರು ಬೆಳ್ಳಿಯ ಪ್ರತಿಮೆಗಳಿಗೆ) ಮೂರ್ತಿಗಳಿಗೆ ಪೂಜೆ ಸಲ್ಲಿಸಿ ತಮ್ಮ ದಿನ ನಿತ್ಯ ಕೆಲಸಗಳಿಗೆ ಹೋಗುತ್ತಾರೆ. ವಿಶೇಷವಾಗಿ ಪರ್ವ ಉತ್ಸವ, ಹಬ್ಬ-ಹರಿದಿನಗಳ ಆಚರಣೆಯ ಸಲುವಾಗಿ ಸಮೀಪದ ಬಸದಿಗೆ ಹೋಗಿ ಪೂಜೆ ಮಾಡಿ ಬರುತ್ತಾರೆ. ಹೆಚ್ಚಾಗಿ ಬೇಸಿಗೆಯಲ್ಲಿ ಸುತ್ತ-ಮುತ್ತಲಿನ ಊರುಗಳು ಜೈನರು ಸೇರಿಕೊಂಡು ಸ್ಥಳೀಯ ಜನರಿಗೆ ಹೆಚ್ಚು ಒತ್ತು ಕೊಟ್ಟು ಐದು ದಿನಗಳ 'ಪಂಚಕಲ್ಯಾಣ' ಪೂಜೆ ಮಾಡುತ್ತಾರೆ. ಈ ಅವಧಿಯಲ್ಲಿ ಮುನಿಗಳ ಹಿರಿತನದಲ್ಲಿ ಪಂಚಕಲ್ಯಾಣ ಮಹೋತ್ಸವ ಮಾಡುತ್ತಾರೆ.

(ಎಂಆರ್‌ಜಿ)

ಟೇ

ಟೇಲರ್ ಮತ್ತು ಚಿತ್ರಕಲೆ: ಬ್ರಿಟಿಷ್ ಸರ್ಕಾರದ ರಾಜಕೀಯ ಪ್ರತಿನಿಧಿಯಾಗಿ ಸುರಪುರ ಸಂಸ್ಥಾನದ ಅಧಿಕಾರ ವಹಿಸಿ ಕೊಳ್ಳುವ ಪೂರ್ವದಲ್ಲೇ ಟೇಲರನು ರೇಖಾ ಮತ್ತು ವರ್ಣ ಚಿತ್ರಗಳನ್ನು ಬಿಡಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದ. ಸುರಪುರ ಸಂಸ್ಥಾನದಲ್ಲಿ ಅಧಿಕಾರಿಯಾಗಿ ಬಂದನಂತರ ಟೇಲರನ ವರ್ಣಚಿತ್ರಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಕಾಣಬಹುದು.

ಟೇಲರ್‌ನು ಸುರಪುರಕ್ಕೆ ಬರುವ ಪೂರ್ವದಲ್ಲೇ ಸುರಪುರ ಸಂಸ್ಥಾನದಲ್ಲಿ 'ಗರುಡಾದ್ರಿ' ಎಂಬ ಚಿತ್ರಕಲಾವಿದರ ಮನೆತನವು ಆಶ್ರಯವನ್ನು ಪಡೆದಿದ್ದು, ಅವರಿಂದ ಸಾಕಷ್ಟು ಚಿತ್ರಗಳೂ ರಚನೆಗೊಂಡಿದ್ದವು. ಈ ಆಸ್ಥಾನ ಕಲಾವಿದರ ನಿಕಟ ಸಂಪರ್ಕದಿಂದ ಟೇಲರನು ಸ್ಮಾರಕಗಳ ಹಾಗೂ ನಿಸರ್ಗ ಚಿತ್ರಗಳನ್ನು ಚಿತ್ರಿಸಿದ್ದಾನೆ. ಟೇಲರನು ಚಿತ್ರಿಸಿದ ಒಂದೆರಡು ವರ್ಣಚಿತ್ರಗಳಲ್ಲಿ ನಿಸರ್ಗ ದೃಶ್ಯದೊಂದಿಗೆ ಹಿನ್ನಲೆಯಾಗಿ ಬಳಕೆಗೊಂಡಿರುವ ವ್ಯಕ್ತಿಗಳು ಮತ್ತು ಅವರು ಧರಿಸಿದ ಉಡುಪುಗಳು ಸುರಪುರ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಬರುವ ಮನುಷ್ಯಾಕೃತಿಯನ್ನು ಹೋಲುತ್ತವೆ. ಈ ರೀತಿಯ ಚಿತ್ರರಚನೆಗಾಗಿ ಬಳಸಿದ ವರ್ಣ ಮಾತ್ರ ರಾಸಾಯನಿಕ ಮೂಲದ ವರ್ಣಗಳಾಗಿವೆ. ಸುರಪುರ ಸಾಂಪ್ರದಾಯಿಕ ಅಥವಾ ಕಿರುರೂಪ ಚಿತ್ರಕಲೆಯಲ್ಲಿ ಬಳಸಲಾಗಿರುವ ವರ್ಣಗಳು ನೈಸರ್ಗಿಕ ಮೂಲದ ವರ್ಣ ಗಳಾಗಿವೆ. (ಆದರೂ ಸುರಪುರದ ಕೊನೆಯ ಹಂತದಲ್ಲಿನ ಕೆಲವೊಂದು ಚಿತ್ರಗಳಲ್ಲಿ ನೈಸರ್ಗಿಕ ಮೂಲದ ವರ್ಣಗಳ ಬಳಕೆಯೂ ಆಗಿರುವುದನ್ನು ಅಲ್ಲಗಳೆಯುವಂತಿಲ್ಲ) ಬಹುಶಃ ಈ ರೀತಿಯ ವರ್ಣಲೇಪನ ಪದ್ಧತಿಯಲ್ಲಿ ಬದಲಾವಣೆಗಳು ಕಂಡುಬರಲು ಟೇಲರನೇ ಕಾರಣವೆಂದು ಹೇಳಿದರೆ ತಪ್ಪೇನಿಲ್ಲ.



ಫಿಲಿಪ್ ಮೆಡೋಸ್ ಟೇಲರ್

ಟೇಲರನ ಆಗಮನದ ನಂತರ ಸುರಪುರ ಆಸ್ಥಾನ ಕಲಾವಿದರ ಕೃತಿ ರಚನೆಗಳಲ್ಲಿ ಕೆಲವೊಂದು ಬದಲಾವಣೆಗಳು ಕಂಡುಬಂದುವು. ಅದರಲ್ಲೂ ಈ ಅವಧಿಯಲ್ಲಿ ಕಂಡುಬರುತ್ತದೆ. 1850–60ರ ದಶಕದಲ್ಲೇ ಮೆಡೋಸ್ ಟೇಲರನ ಮೂಲಕ ಛಾಯಾಚಿತ್ರಕಲೆಯು ಸುರಪುರಕ್ಕೆ ಪರಿಚಯವಾಯಿತು. ಈ ಅವಧಿಯಲ್ಲಿ ಸುರಪುರ ಆಸ್ಥಾನ ಪ್ರಮುಖರಲ್ಲದೇ ಶ್ರೀಮಂತ ವರ್ಗದವರು ತಮ್ಮ ಹಾಗೂ ತಮ್ಮ ಪರಿವಾರದವರ ಚಿತ್ರಗಳನ್ನು ಕ್ಲಿಕ್ಕಿಸಿಕೊಂಡ ಸಾಕಷ್ಟು ಛಾಯಾಚಿತ್ರಗಳು ನಮಗೆ ಸುರಪುರ ಪ್ರದೇಶದಲ್ಲಿ ಈಗಲೂ ನೋಡಲು ಸಿಗುತ್ತವೆ. ಸುರಪುರ ಆಸ್ಥಾನ ಕಲಾವಿದರಲ್ಲೇ ಶ್ರೇಷ್ಠನಾದ ಗರುಡಾದ್ರಿ ಮೊದಲ ಬಾನಯ್ಯನು ಸಾಂಪ್ರದಾಯಿಕ ನೆಲೆಯ ಕಿರುರೂಪ ಚಿತ್ರಗಳಲ್ಲಿ ಛಾಯಾಚಿತ್ರವನ್ನು ಬಳಸಿ ಕೃತಿರಚನೆ ಮಾಡಿದ್ದಾನೆ. ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಛಾಯಾಚಿತ್ರವನ್ನು ಬಳಸಿ ಚಿತ್ರರಚಿಸುವ ತಂತ್ರಗಾರಿಕೆಯನ್ನು ಕಲಾಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಸುರಪುರ ಆಸ್ಥಾನ ಕಲಾವಿದರಿಗೆ ಸಲ್ಲುತ್ತದೆ. ಈ ಯಶಸ್ಸಿನ ಹಿಂದೆ ಟೇಲರನ ಪಾತ್ರವನ್ನೂ ನಾವು ಇಲ್ಲಿ ಅಲ್ಲಗಳೆಯುವಂತಿಲ್ಲ.

ಟೇಲರ್‌ನು ಚಿತ್ರಿಸಿದ ಚಿತ್ರಗಳಲ್ಲಿ ಬಹುಪಾಲು ಚಿತ್ರಗಳು ದಖನ್ ಪ್ರದೇಶದ ಸ್ಮಾರಕಗಳ ಕುರಿತಾಗಿದೆ. ಈ ಪ್ರದೇಶದ ಭೌಗೋಳಿಕ ಲಕ್ಷಣಗಳನ್ನು ಅತ್ಯಂತ ಸೂಕ್ಷ್ಮ ರೇಖೆಗಳ ಮೂಲಕ ನೆರಳು–ಬೆಳಕಿನ ವ್ಯತ್ಯಾಸವನ್ನು ತೋರಿಸಲು ಯತ್ನಿಸಿದ. ಹಾಗಾಗಿ ಟೇಲರನ ರೇಖಾಚಿತ್ರಗಳು ಹೆಚ್ಚು ಆಕರ್ಷಿಸುತ್ತವೆ. ಈ ಚಿತ್ರಗಳಲ್ಲಿ ದೂರ ಮತ್ತು ಸಮೀಪದ (ದೃಗ್ದರ್ಶನ) ಕಲ್ಪನೆಯು ಸೊಗಸಾಗಿ ಮೂಡಿಬಂದಿದೆ. ಈ ದೃಗ್ದರ್ಶನದ ಕಲ್ಪನೆಗಾಗಿ ಕಪ್ಪುವರ್ಣದ ರೇಖೆಗಳೊಂದಿಗೆ ಅಲ್ಲಲ್ಲಿ ಬಿಳಿವರ್ಣವನ್ನೂ ಬಳಸಿದ್ದು ಟೇಲರ್‌ನ ಕಲಾನೈಪುಣ್ಯತೆಯನ್ನು ಸ್ಪಷ್ಟಪಡಿಸುತ್ತದೆ. ದಖನ್ ಪ್ರದೇಶದಲ್ಲಿ ವಿಶೇಷವಾಗಿ ಆದೋನಿಯ ಸಿದಿ ಮಸೂದಖಾನ್ ಸಮಾಧಿ, ಬೀದರ್‌ನ ಬರೀದ ಷಾಹಿಗಳ ಸ್ಮಾರಕಗಳು, ಬೀದರನ ಮದರಸಾ ಕಟ್ಟಡ, ಕಲಾದಗಿಯ ಪ್ರಾಚೀನ ದೇವಾಲಯದ ಮಹಾದ್ವಾರ, ಬಿರಾರ ಸಮೀಪದ ಅಕೋಲಾದಲ್ಲಿನ ಕೋಟೆಯ ಚಿತ್ರ, ಬಿರಾರ ಸಮೀಪವೇ ಇರುವ



ಮೆಡೋಸ್ ಟೇಲರ್ ಚಿತ್ರಿಸಿದ ಭೂದೃಶ್ಯ

ಇನ್ನೊಂದು ಸ್ಮಾರಕ ಗವಾಯಿಲ್‌ಫರ್, ಸಗರನಾಡು ಪ್ರದೇಶದ ಇಂದಿನ ಶಹಾಪೂರ ತಾಲ್ಲೂಕಿನ ಭೀಮರಾಯನಗುಡಿ ಸಮೀಪದ ಕಲ್ಲು-ಬಂಡೆಗಳ ಸಮೂಹ, ರಾಜನಕೋಳೂರ ಸಮೀಪದ ಕಲ್ಗೋರಿಗಳ ಚಿತ್ರಣ, ಹೈದ್ರಾಬಾದ ಸಮೀಪದ ಗೋಲ್ಕೊಂಡ ಕೋಟೆ ಮತ್ತು ಸಮಾಧಿಗಳು, ಚಾರಮಿನಾರ್ ಸ್ಮಾರಕ, ಭುರಾಣಪೂರದಲ್ಲಿನ ಸ್ಮಾರಕ, ನಂದಿಬೆಟ್ಟದ ವಿಹಂಗಮ ನೋಟವಲ್ಲದೆ ನಂದಿ ಮಹಾದ್ವಾರ ಮುಂತಾದ ಸ್ಮಾರಕಗಳನ್ನು ತಮ್ಮ ರೇಖೆಗಳಲ್ಲಿ ಸೆರೆಹಿಡಿದಿದ್ದಾರೆ. ಈ ರೇಖಾಚಿತ್ರಗಳನ್ನು ಪೆನ್ನು ಮತ್ತು ಇಂಕ್‌ನಿಂದ ಚಿತ್ರಿಸಲಾಗಿದ್ದು, ಕೆಲವೊಂದು ಸಂದರ್ಭದಲ್ಲಿ ಸ್ಮಾರಕ ಅವಶೇಷಗಳನ್ನು ದೂರ ಮತ್ತು ಸಮೀಪವೆಂಬಂತೆ ತೋರಿಸಲು ದೂರದಲ್ಲಿರುವ ದೃಶ್ಯಗಳನ್ನು ಕೇವಲ ಪೆನ್ನು ಅಥವಾ ಪೆನ್ಸಿಲ್‌ನಿಂದ ತೋರಿಸಲಾಗಿದ್ದು, ಹತ್ತಿರವೆಂಬಂತೆ ತೋರಿಸಲು ಗಡುಸಾದ ರೇಖೆಗಳನ್ನು ಮತ್ತು ಇಂಕ್‌ನ್ನು ಬಳಸಲಾಗಿದೆ. ಇವು ಟೇಲರನು ಚಿತ್ರಿಸಿದ ರೇಖಾಚಿತ್ರಗಳ ವಿವರಣೆಯಾದರೆ ವರ್ಣಚಿತ್ರ ರಚನೆಗೆಂದು ಜಲವರ್ಣವನ್ನು ಹೆಚ್ಚು ಬಳಸಿದ್ದಾನೆ.

ಟೇಲರನು ಚಿತ್ರಿಸಿದ ರೇಖಾ ಮತ್ತು ವರ್ಣಚಿತ್ರಗಳಲ್ಲಿ ಸ್ಥಳಾವಕಾಶ, ದೃಗ್ದರ್ಶನದ ಪರಿಕಲ್ಪನೆಯನ್ನು ಗಮನಿಸಿದರೆ ಇವನೊಬ್ಬ ನುರಿತ ಚಿತ್ರಕಲಾವಿದ ಎನ್ನುವುದರಲ್ಲಿ ಯಾವ ಅನುಮಾನವೂ ಇರಲಾರದು. (ಎಂಸಿಬಿ)

ಡೆ

ಡೆಕ್ಕನ್ ಆರ್ಟ್ ಸಂಸ್ಥೆ: ಗುಲಬರ್ಗಾ ಜಿಲ್ಲೆಯ ಕಲಾಪರಂಪರೆ ಈ ನಾಡಿಗೆ ಪರಿಚಯಗೊಂಡಿರುವುದು ಈ ಭಾಗದ ಅನೇಕ ಕಲಾವಿದರ ಸಾಧನೆಗಳ ಮುಖಾಂತರ, ನಗರದ ಹಿರಿಯ ಕಲಾವಿದರೊಂದಿಗೆ ಯುವಕಲಾವಿದರೂ ಸಹ ಈ ಆಧುನಿಕ ಕಲಾಜಗತ್ತಿನಲ್ಲಿ ತಮ್ಮ ಕಲಾಪ್ರತಿಭೆಯ ಮೂಲಕ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆದು ನಿಂತಿರುತ್ತಾರೆ. ಶ್ರಮಜೀವಿಗಳಾದ ಈ ಭಾಗದ ಯುವ ಕಲಾವಿದರು ಕಲಾಕ್ಷೇತ್ರದಲ್ಲಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವುದು ಗಮನಾರ್ಹ.

ಗುಲಬರ್ಗಾ ನಗರದ ಹನ್ನೊಂದು ಯುವ ಕಲಾವಿದರಿಂದ ಅಸ್ತಿತ್ವಕ್ಕೆ ಬಂದಿರುವ ಡೆಕ್ಕನ್ ಆರ್ಟ್ ಸಂಸ್ಥೆಯು ದಿನಾಂಕ 29 ಆಗಸ್ಟ್ 2009 ರಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಜೆ.ಎಸ್. ಖಂಡೇರಾವ ಅವರಿಂದ ಉದ್ಘಾಟನೆಗೊಂಡಿದ್ದು, ಈ ಸಂಸ್ಥೆಯು ಮೊದಲು ಸಂಸ್ಥಾಪಕ ಪದಾಧಿಕಾರಿಗಳ ಚಿತ್ರಕಲಾ ಪ್ರದರ್ಶನದೊಂದಿಗೆ ಪ್ರಾರಂಭಗೊಂಡಿತ್ತು.

ಈ ಸಂಸ್ಥೆಯೊಂದನ್ನು ಕಟ್ಟಲು ಸಾಕಷ್ಟು ಶ್ರಮ ವಹಿಸಿರುವ ಪ್ರತಿಭಾನ್ವಿತ ಕಲಾವಿದ ಅಧ್ಯಕ್ಷ ಸ್ಥಾನದಲ್ಲಿರುವ ಶಾಹೇದ್ ಪಾಶಾ, ಕಾರ್ಯದರ್ಶಿ ಪರಶುರಾಮ ಪಿ, ಉಪಾಧ್ಯಕ್ಷ ಮಹ್ಮದ್ ಅಯಾಜುದ್ದೀನ್ ಪಟೇಲ್, ಸಹಕಾರ್ಯದರ್ಶಿ ಡಾ. ರಹೆಮಾನ ಪಟೇಲ್, ಸಂಸ್ಥೆಯ ಖಜಾಂಚಿ ಅಂಬಾರಾಯ ಚಿನ್ನಮಳ್ಳಿ, ಹಾಗೂ ಸದಸ್ಯತ್ವವನ್ನು ಹೊಂದಿರುವ ಕಲಾವಿದರಾದ ಎಲ್.ಎನ್. ಮನೋಕರ್, ಮಲ್ಲಿಕಾರ್ಜುನ್ ಶೆಟ್ಟಿ, ಬಸವರಾಜ ಕಾಮಾಜಿ, ರೇವಣಸಿದ್ದಪ್ಪ ಮುಕರಂಬಿ, ಶಫೀಕ್ ಮಾಶಾಳಕರ್, ವಿಶ್ವರಾಧ್ಯ ಧೂಳಾ ಹಾಗೂ ನಾಗರಾಜ ಕುಂಬಾರ್ ಅವರು ಸಂಸ್ಥಾಪನಾ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಿಜಾಮರ ಕಾಲದಲ್ಲಿ ದಕ್ಷಿಣ ಭಾರತದ ಚಿತ್ರಕಲೆಯು ದಖನಿ ಕಲೆ ಎಂದೇ ಜನಪ್ರಿಯವಾಗಿತ್ತು. ಇಂದು ಆ ಕಲೆಯನ್ನು ಕೆಲವು ಕಲಾವಿದರು ಮಾತ್ರ ಅನುಕರಣೆ ಮಾಡು ತ್ತಿದ್ದಾರೆ. ಡೆಕ್ಕನ್ ಹೆಸರನ್ನು ಇನ್ನಷ್ಟು ಜನಪ್ರೀಯಗೊಳಿಸುವ ಉದ್ದೇಶದಿಂದ ಈ ಸಂಸ್ಥೆಗೆ ಡೆಕ್ಕನ್ ಆರ್ಟ್ ಸೊಸಾಯಿಟಿ ಎಂದು ನಾಮಕರಣ ಮಾಡಲಾಯಿತು. ಅಷ್ಟೇ ಅಲ್ಲದೇ ಗುಲಬರ್ಗಾ ಜಿಲ್ಲೆಯ ತಾಜ್‌ಸುಲ್ತಾನ್‌ಪೂರದಲ್ಲಿರುವ (ಕೈಂಚಿನ್ ಮಹೆಲ್ ನೃತ್ಯ ಮಂಟಪ) ಒಂದು ಸ್ಮಾರಕದ ಗೋಡೆಯ ಮೇಲಿರುವ ದಖ್ಖನಿ ವಾಸ್ತು ಶಿಲ್ಪದ ಒಂದು ಉಬ್ಬು ಶಿಲ್ಪವನ್ನು ಈ ಸಂಸ್ಥೆಯ ಚಿಹ್ನೆ ಎಂದು ಅಂಗೀಕರಿಸಲಾಯಿತು. ಈ ಸಂಸ್ಥೆಯು ಪ್ರಾರಂಭದಿಂದ ಇಲ್ಲಿಯವರೆಗೆ ಅನೇಕ ಕಲಾಚಟುವಟಿಕೆಗಳನ್ನು ಹಂತ ಹಂತವಾಗಿ ಮಾಡಿಕೊಂಡು ಬಂದಿರುತ್ತದೆ. ಬೆಂಗಳೂರಿನ ಯುವ ಕಲಾವಿದರಾದ ಉಮೇಶ್ ಎಚ್. ಅವರ ಕಲಾಪ್ರತಿಭೆಯನ್ನು ಗುರಿತಿಸಿ ಇವರ ಏಕವ್ಯಕ್ತಿ ಚಿತ್ರಕಲಾ



ಸಂಸ್ಥೆಯ ಚಿಹ್ನೆ

ಪ್ರದರ್ಶನವೊಂದನ್ನು ದಿನಾಂಕ. 4 ರಿಂದ 7 ಡಿಸೆಂಬರ್ 2009 ರಂದು ಗುಲಬರ್ಗಾ ನಗರದ ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ಹಮ್ಮಿಕೊಂಡಿತ್ತು. ತಾಯಿ ಮತ್ತು ಮಗುವಿನ ಸರಣಿಯಲ್ಲಿರುವ ಇವರ ಕಲಾಕೃತಿಗಳು ಮಾನವೀಯ ಅಂತಃಕರಣದ ಜೊತೆಗೆ ಶ್ರೇಷ್ಟತೆಯನ್ನು ಬಿಂಬಿಸುವ ಉತ್ತಮ ಕಲಾಕೃತಿಗಳಾಗಿವೆ. ಈ ಪ್ರದರ್ಶನದ ಕೆಲ ದಿನಗಳ ನಂತರ ಡೆಕ್ಕನ್ ಸಂಸ್ಥೆಯು ಗುಲಬರ್ಗಾ ನಗರದ ಹಿರಿಯ ಮತ್ತು ಯುವ ಕಲಾವಿದರ ಚಿತ್ರಕಲಾ ಶಿಬಿರವೊಂದನ್ನು ಆಯೋಜಿಸಿತ್ತು.

ನಗರದ ಸೇಡಮ್ ಶಹಾಬಾದ ರಿಂಗ್ ರಸ್ತೆಯಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡಾ. ಸಿದ್ದಯ್ಯ ಪುರಾಣಿಕ ಆರ್ಟ್‌ಗ್ಯಾಲರಿಯಲ್ಲಿ ದಿನಾಂಕ 18 ರಿಂದ 20 ಡಿಸೆಂಬರ್ 2009 ರವರೆಗೆ ಈ ಶಿಬಿರವು ನಡೆದಿತ್ತು. ಹದಿನೈದಕ್ಕೂ ಹೆಚ್ಚು ಹಿರಿಯ ಮತ್ತು ಯುವ ಕಲಾವಿದರು ಈ ಶಿಬಿರದಲ್ಲಿ ಭಾಗವಹಿಸಿದ್ದು, ತಮ್ಮ ಅತ್ಯುತ್ತಮ ಕಲಾಕೃತಿಗಳಿಂದ ಪ್ರೇಕ್ಷಕರ ಗಮನ ಸೆಳೆದರು. ಈ ಅಪೂರ್ವ ಚಿತ್ರಕಲಾ ಶಿಬಿರದಲ್ಲಿ ಹಿರಿಯ ಕಲಾವಿದ ಮತ್ತು ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ನಾಡೋಜ ಡಾ.ಜೆ.ಎಸ್. ಖಂಡೇರಾವ ಅವರೊಂದಿಗೆ ಡಾ. ವ್ಹಿ.ಜಿ.ಅಂದಾನಿ, ಎ.ಎಸ್. ಪಾಟೀಲ್, ವಿಜಯ ಹಾಗರಗುಂಡಗಿ, ಬಸವರಾಜ ಎಲ್. ಜಾನೆ, ಮೋಹನ ಸೀತನೂರ, ಕೆ.ಎಸ್.ನಾಗೂರೆ, ವ್ಹಿ.ಬಿ.ಬಿರಾದಾರ್, ಎಸ್.ಎಂ. ನೀಲಾ, ಪ್ರಕಾಶ್ ಗಡಕರ್, ಶೇಷರಾವ ಬಿರಾದಾರ್, ಮಲ್ಲಿಕಾರ್ಜುನ ಶೆಟ್ಟಿ, ವೀರೇಂದ್ರ ಶಾಹ, ಬಾಬುರಾವ್.ಹೆಚ್, ಅಶೋಕ್ ಶಟ್ಕಾರ್, ಎಲ್.ಎನ್. ಮನೋಕರ್, ಪೂರ್ಣಿಮಾ ಪಾಟೀಲ್ ಹಾಗೂ ನಾಗರತ್ನ ಸಾಹು ಅವರುಗಳು ಒಂದೊಂದು ಕಲಾಕೃತಿ ರಚಿಸಿದರು.

ಡೆಕ್ಕನ್ ಸಂಸ್ಥೆಯು ಇತರೆ ಸಂಸ್ಥೆಗಳೊಂದಿಗೆ ಬೆರೆತು ಅನೇಕ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ರಾಜ್ಯದ ಇತರೆ ಭಾಗಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿರುತ್ತದೆ. ಜನೇವರಿ 2010 ರಲ್ಲಿ ಗುಲಬರ್ಗಾ ರೋಟರಿ ಕ್ಲಬ್ ಆಲೋಜಿಸಿರುವ 26ನೇಯ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಡೆಕ್ಕನ್ ಆರ್ಟ್ ಸಂಸ್ಥೆಯು ಯುವ ಕಲಾವಿದರ ಚಿತ್ರಕಲಾ ಪ್ರದರ್ಶನವನ್ನು ಹಮ್ಮಿಕೊಂಡಿತ್ತು. ರಾಜ್ಯ, ಹೊರರಾಜ್ಯ ಮತ್ತು ಹೊರದೇಶಗಳಿಂದ ಆಗಮಿಸಿದ ಪ್ರತಿನಿಧಿಗಳು ಪ್ರದರ್ಶನದಲ್ಲಿ ಭಾಗವಹಿಸಿ ಕಲಾವಿದರ ಕಲಾಪ್ರತಿಭೆಗಳಿಗೆ ಪ್ರೋತ್ಸಾಹಿಸುತ್ತ, ಉತ್ತಮ ಕಲಾಕೃತಿಗಳನ್ನು ಖರೀದಿಸುವುದರ ಮೂಲಕ ಈ ಪ್ರದರ್ಶನವನ್ನು ಯಶಸ್ವಿಗೊಳಿಸಿದರು. ಇದಲ್ಲದೇ ನಗರದ ಕಲಾಶಾಲೆಗಳ ಅನೇಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಗಣ್ಯರ ಹಾಗೂ ಇತರೆ ಪ್ರೇಕ್ಷಕರ ಭಾವಚಿತ್ರಗಳನ್ನು ರಚಿಸಿದ್ದು, ಸಾವಿರಾರು ರೂಪಾಯಿಗಳನ್ನು ವಿದ್ಯಾರ್ಥಿಗಳು ಸ್ವಯಂ ಗಳಿಸಿದ್ದು, ಡೆಕ್ಕನ್ ಸಂಸ್ಥೆಗೆ ಮತ್ತಿಷ್ಟು ಕೀರ್ತಿಯನ್ನು ತಂದುಕೊಟ್ಟರು. ಈ ಕಾರ್ಯಕ್ರಮದಡಿಯಲ್ಲಿ ಅನೇಕ ವಿದ್ಯಾರ್ಥಿಗಳು ಒಂದುಗೂಡಿ ನಗರದ ಎಸ್.ಎಮ್. ಪಂಡಿತ ರಂಗ ಮಂದಿರದಾವರಣದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಒಂದು ಇನ್‌ಸ್ಟಾಲೇಷನ್ ಕಲಾಕೃತಿ ಮಾಡಿದ್ದು ಪ್ರೇಕ್ಷಕರ ಗಮನವನ್ನು ಸೆಳೆದರು.

ಡೆಕ್ಕನ್ ಆರ್ಟ್ ಸಂಸ್ಥೆಯು ಪ್ರತಿವರ್ಷ ಸಂಸ್ಥೆಯ ಹೆಸರಿನಿಂದ ಒಂದು ಪ್ರಶಸ್ತಿ ನೀಡುವಂತಹ ಉತ್ತಮ ಯೋಜನೆವೊಂದನ್ನು ಹೊಂದಿರುತ್ತದೆ. ದಿ. ಬಾಂಬೆ ಆರ್ಟ್ ಸಂಸ್ಥೆಯು ಆಯೋಜಿಸಿರುವ 118ನೇ ಮತ್ತು 119ನೇ ಸಾಲಿನ ಅಖಿಲ ಭಾರತ ಕಲಾಪ್ರದರ್ಶನದಲ್ಲಿ ಕಲಾವಿದ ಸ್ವಪ್ನಿಲ್ ಗವಾಟೆ ಹಾಗೂ ನಾಗನಾಥ ಘೋಡಕೆ ಅವರ ಉತ್ತಮ ಕಲಾಕೃತಿಗಳಿಗೆ 'ಡೆಕ್ಕನ್ ಆರ್ಟ್ ಸೊಸಾಯಿಟಿ ಪ್ರಶಸ್ತಿ' ಲಭಿಸಿರುತ್ತದೆ.

ಡೆಕ್ಕನ್ ಆರ್ಟ್ ಸಂಸ್ಥೆಯು ತನ್ನ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಗುಲಬರ್ಗಾ ಜಿಲ್ಲೆಯ ಕಲಾವಿದರ, ಕಲಾಸಂಸ್ಥೆಗಳ ಹಾಗೂ ಕಲಾಗ್ಯಾಲರಿಗಳ ವಿಳಾಸವುಳ್ಳ ಒಂದು ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು. ಸಮಕಾಲೀನ ಹಾಗೂ ಹಿರಿಯ ಮತ್ತು ಉದಯೋನ್ಮುಖ ಕಲಾವಿದರ ವಿಳಾಸ, ಸಂಪರ್ಕ ಸಂಖ್ಯೆ, ಇ–ಮೇಲ್ ವಿಳಾಸಗಳನ್ನು ಒಳಗೊಂಡಿರುವ ಈ ಪ್ರಕಟಣೆಯು ಸಂಪರ್ಕ ಮತ್ತು ಸಂವಹನಕ್ಕೆ ಅನುಕೂಲವಾಗುವಂತೆ ಮಾಡುವುದೇ ಈ ಸಂಸ್ಥೆಯ ಮುಖ್ಯ ಗುರಿಯಾಗಿತ್ತು.

ಸರಕಾರಿ ಶಾಲಾಮಕ್ಕಳ ಮೇಲೆ ಈ ಸಂಸ್ಥೆಯು ವಿಶೇಷವಾದ ಗಮನಹರಿಸುತ್ತಿದೆ. ಏಪ್ರೀಲ್ 2011 ರಲ್ಲಿ ಮಕ್ಕಳಿಗಾಗಿ ನಗರದ ಸೇಡಂ ಶಹಾಬಾದ ರಿಂಗ್ ರೋಡ್‌ನಲ್ಲಿರುವ ಡಾ. ಸಿದ್ದಯ್ಯಾ ಪುರಾಣಿಕ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಕಲಾಗ್ಯಾಲರಿಯಲ್ಲಿ ನಾಗಪೂರ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದೊಂದಿಗೆ ಒಂದು ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಿತ್ತು. ಈ ಶಿಬಿರದಲ್ಲಿ ಕೊಳಚೆ ಪ್ರದೇಶದ ಮಕ್ಕಳಿಗೆ ಹಾಗೂ ಬಡ ಮಕ್ಕಳಿಗೆ ಉಚಿತ ಪ್ರವೇಶದೊಂದಿಗೆ ಹಾಗೂ ಶಿಬಿರಕ್ಕೆ ಬೇಕಾಗಿರುವ ಕಲಾಸಾಮಗ್ರಿಗಳನ್ನು ಒದಗಿಸುವುದರೊಂದಿಗೆ, ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರವನ್ನು ನಾಗಪೂರ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರವು ನೀಡಿ ಗೌರವಿಸಿತ್ತು. ಈ ಶಿಬಿರದಲ್ಲಿ ಮಕ್ಕಳಿಗೆ ವಿಶೇಷ ಕಲಾತಜ್ಞರಿಂದ ಪೆಂಟಿಂಗ್, ಮಾಸ್ಕ್ ಮೇಕಿಂಗ್, ಕ್ಲೇ ಮಾಡಲಿಂಗ್, ಕ್ರಾಫ್ಟ್ ಮೇಕಿಂಗ್, ಕ್ಯಾಂಡಲ್ ಮೇಕಿಂಗ್ ಮತ್ತು ನೃತ್ಯವನ್ನು ಕಲಿಸಲಾಯಿತ್ತು. ಇಂತಹ ಅನೇಕ ಯೋಜನೆಗಳನ್ನು ಹೊಂದಿರುವ ಈ ಸಂಸ್ಥೆಯು ಯಶಸ್ಸಿನ ಹಾದಿಯಲ್ಲಿ ಸಾಗಿದ್ದು ಕಂಡುಬರುತ್ತದೆ. ಡೆಕ್ಕನ್ ದೋಣಿಯನ್ನು ಮುಂದಕ್ಕೆ ಸಾಗಿಸುತ್ತಿರುವ ಈ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ ಕಾರ್ಯವು ಪ್ರಶಂಸನೀಯವಾದದ್ದು.

(ಎಸ್‌ಪಿ)

ಡೊ

ಡೊಂಬರ ಕಲೆ: ಡೊಂಬರು ಅಥವಾ ದೊಂಬರು ಎನ್ನುವುದು ಒಂದು ಆದಿವಾಸಿ ಅಲೆಮಾರಿ ಜನಾಂಗ. ಡೊಂಬ ಪದಕ್ಕೆ ಪರ್ಯಾಯವಾಗಿ ದೊಂಬ, ಡಂಬರ, ಡೋಮ, ಡುಮ್ಮರ, ಡೊಮ್ಮರ, ಕೊಲ್ಲತಿಗೆ, ದೋಮ ಎಂಬ ಹಲವಾರು ಪದಗಳು ಬಳಕೆಯಲ್ಲಿವೆ. ಡೊಂಬರ ಪ್ರದೇಶದಂತೆ ಭಾಷೆ ಸಂಕೀರ್ಣ ವಾದುದು. ಇವರಿಗೆ ಇಂತಹದ್ದೇ ಎಂದು ಗುರುತಿಸಬಹುದಾದ ಭಾಷೆಯಿಲ್ಲ ಹೀಗಾಗಿ ಇವರು ಬಹುಭಾಷಿಕರು.

ಡೊಂಬರು ಹಲವು ಬಗೆಯ ಕಲೆಗಳಲ್ಲಿ ಪರಿಣಿತರು, ಜನರನ್ನು ರಂಜಿಸುವ ಪ್ರದರ್ಶನಾತ್ಮಕ ಕಲೆಗಳ ಜೊತೆಗೆ ಹೆಂಗಸರು. ಹಚ್ಚೆ, ನೇಯುವಿಕೆಯಂತಹ ಕೆಲವು ವಿಶಿಷ್ಟ ಬಗೆಯ ಕುಶಲ ಕಲೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದರೂ ಇವರು ಹೆಚ್ಚಾಗಿ ತಮ್ಮ ಜೀವನೋಪಾಯಕ್ಕಾಗಿ ಆಶ್ರಯಿಸಿರುವುದು ಪ್ರದರ್ಶನಾತ್ಮಕ ಕಲೆಗಳನ್ನು. ಇದರಲ್ಲಿ ಗಂಡು-ಹೆಣ್ಣು ಇಬ್ಬರೂ ಪಾಲ್ಗೊಳ್ಳುತ್ತಾರೆ.

ಡೊಂಬರು, ವೀರಕಲೆ, ಶೌರ್ಯಸಾಹಸ, ಕ್ರೀಡೆಗಳ ಪ್ರದರ್ಶನಾತ್ಮಕ ಕಲೆಗಳಲ್ಲಿ ಸಿದ್ಧಹಸ್ತರು. ಡೊಂಬರು ತಮ್ಮ ಕಲೆಯನ್ನು ಪ್ರದರ್ಶಿಸುವುದಕ್ಕಾಗಿ ಒಂದು ಸಮೃದ್ಧವಾದ ಊರನ್ನು ಆಯ್ಕೆ ಮಾಡಿಕೊಂಡು ಬೀಡು ಬಿಡುತ್ತಾರೆ. ನಂತರ ಊರ ಮುಖಂಡರನ್ನು ಭೇಟಿಯಾಗಿ ಪ್ರದರ್ಶನಕ್ಕೆ ಅನುಮತಿ ಪಡೆದು ಅವರನ್ನು ಆಹ್ವಾನಿಸಿ ಬರುತ್ತಾರೆ. ನಂತರ ಊರಲ್ಲೆಲ್ಲಾ ಡೋಲು ಬಡಿಯುತ್ತಾ, ಸುತ್ತಾಡುವ ಮೂಲಕ ಪ್ರದರ್ಶನದ ವಿಷಯವನ್ನು ಸ್ಥಳವನ್ನು ಪ್ರಚಾರ ಮಾಡುತ್ತಾರೆ. ಇವರ ಪ್ರದರ್ಶನಗಳು ನಡೆಯುವುದು ಹೆಚ್ಚಾಗಿ ರೈತರಿಗೆ ಗಳೆ ಇಲ್ಲದ ಇಲ್ಲವೆ ರೈತರು ದುಡಿಮೆಯಿಂದ ಮರಳಿ ಬರುವ ಸಂಜೆಯ ವೇಳೆಯಲ್ಲಿಯೇ.

ಡೊಂಬರು ತಮ್ಮ ಪ್ರದರ್ಶನಕ್ಕೆ ಅನುಗುಣವಾಗಿ ಎತ್ತುಗುಂಡು, ಕರೀಗುಂಡಕಲ್ಲು, ಗುರುಸಾಣಿಕಲ್ಲು, ಕಡೆಗೋಲು, ಕವಣೆ, ಕವಣೆಕಲ್ಲು, ಗಣಿ, ಗಟ್ಟಿಗಂಬ, ಡೊಂಬು. ಕಬ್ಬಿಣದ ಹಾರೆ, ಸುತ್ತಿಗೆ ದೊಡ್ಡ ಮತ್ತು ಸಾಧಾರಣ ಗಾತ್ರದ ಕಬ್ಬಿಣದ ಬಳೆಗಳು, ಕತ್ತಿ, ಕಿರುಗತ್ತಿ, ದೊಡ್ಡ ಕತ್ತರಿ, ಚಕ್ರಗಾಲಿ, ಚೂಪಾದ ಕಬ್ಬಿಣದ ಬಾಣ, ಚಕ್ರ, ಖಡ್ಗಗಳು, ಗಂಟೆ, ಗೆಜ್ಜೆಸರ, ಕಿರುಗಂಟೆ, ಮುಂತಾದ ಕಬ್ಬಿಣದ ಅಥವಾ ಲೋಹದ ಸಲಕರಣೆ, ಗಣಿ 20x30 ಅಡಿ ಎತ್ತರದ ಗಟ್ಟಿಯಾದ ಡಂಬು ಡೋಲು, ಮಿಣಿ ಹಗ್ಗಗಳು, ದೊಣ್ಣೆಗಳು, ಬಗನಿ, ಮರದ ಬಡಿಗೆಗಳು, ಗೂಟ, ಮರಗಾಲು, ಮೊಗವಾಡ, ನಾಗರಬೆತ್ತ, ಬೆತ್ತ, ಕತ್ತರಿಗೋಲು, ಡೋಲು, ನಿಚ್ಚಣಿಕೆ, ಹಗ್ಗದ ನಿಚ್ಚಣಿಕೆ ಮೋಡಿಬುಟ್ಟಿ, ಬಾರು ಕೋಲು ಇತ್ಯಾದಿ ಅಗತ್ಯ ಸಲಕರಣೆಗಳನ್ನು ಕೊಂಡೊಯ್ಯುತ್ತಾರೆ. ಆದರೆ ಇವರ ಕಲೆಗೆ ಇಂತಹದ್ದೇ ಸಲಕರಣೆಗಳಿರಬೇಕೆಂದೇನೂ ಇಲ್ಲ. ಇವರ ಕಲೆ, ಸಾಮರ್ಥ್ಯ ಮತ್ತು ನೈಪುಣ್ಯತೆಗಳು ಆಟ ಪ್ರದರ್ಶನವನ್ನು ಸಲಕರಣೆಗಳನ್ನು ಅವಲಂಬಿಸಿರುತ್ತದೆ.



ಡೊಂಬರ ಕಲೆ

ತಮ್ಮ ಶಕ್ತಿ, ಕೌಶಲ, ಕುಣಿತ, ಹಾಡು, ನೆಗೆತ, ಜಿಗಿತಗಳನ್ನು ಪ್ರದರ್ಶಿಸುವ ಡೊಂಬರ ವೇಷಭೂಷಣ ಇತರರಿಗಿಂತ ಖಂಡಿತ ಭಿನ್ನವಾಗಿದ್ದು ಜನರನ್ನು ಆಕರ್ಷಿಸುವ ಮತ್ತು ರಂಜಿಸುವ ಸಲುವಾಗಿ ವಿವಿಧ ಬಗೆಯ ವೇಷಭೂಷಣಗಳನ್ನು ಧರಿಸುತ್ತಾರೆ. ಗಂಡಸರು ಬಿಗಿಯಾದ ಹನುಮಾನ ಚಡ್ಡಿ, ರಟ್ಟೆ ಮುಂಗೈ ಮತ್ತು ಕಾಲುಗಳಲ್ಲಿ ಕಡಗ, ಉಕ್ಕಿನ ಅಥವಾ ಕಬ್ಬಿಣ ಬಳೆ, ಎದೆಯ ಮೇಲೆ ತೂಗು ತಾಯತ, ಮೈಮೇಲೆ ಉಣ್ಣೆ ಅಥವಾ ಹತ್ತಿಯ ಕರಿಕೋಟು ಹಾಕಿ ಕೂದಲನ್ನು ಕೂಡಿಸಿ ಎತ್ತಿ ಕಟ್ಟಿ ಅದಕ್ಕೆ ಕಪ್ಪು ಬಟ್ಟೆಯನ್ನು ಕಟ್ಟಿಕೊಂಡಿರುತ್ತಾರೆ. ಹದಿಹರೆಯದ ಯುವತಿಯರು ಮತ್ತು ಆರರಿಂದ ಹತ್ತು ಹನ್ನೆರಡು ವರ್ಷದ ಬಾಲಕಿಯರ ವೇಷಭೂಷಣ ಹೆಚ್ಚು ರಂಗು ರಂಗಿನಿಂದ ಕೂಡಿದ್ದು ಆಕರ್ಷಕವಾಗಿರುತ್ತದೆ. ಉದ್ದುದ್ದ ಗಗ್ಗರಿ, ಲಂಗ, ತೆಳ್ಳನೆ ಮೇಲುದ ಲೋಲುಕು, ಮುಂಗುರುಳಿಗೆ ಆಚೀಚೆ ಕಪೋಲಗುಂಟ ಇಳಿಬಿಟ್ಟ ಜುಮಕಿ ಅಥವಾ ಚಿಕ್ಕ ಚಿಕ್ಕ ರೇಸಿಮೆಗೊಂಡೆ ಎರಡೂ ಕೈಗಳಿಂದ ಬೆನ್ನಿಗೆ ತೂಗುಗೊಂಡೆಗಳಿಂದ ಸರಗಂಟಾ ಹಾಕಿ ಕಟ್ಟಿದ ಕುಪ್ಪಸ ಅಲ್ಲಲ್ಲಿ ಗಾಜಿನ ಸಣ್ಣ ಸಣ್ಣ ತುಂಡುಗಳನ್ನಿಟ್ಟು ತೋಳು ಎದೆ ಇತ್ಯಾದಿ ಭಾಗಗಳಲ್ಲಿ ಎದ್ದು ಕಾಣುವಂತೆ ಹೊಲಿದು ಕುಸರಿಗೆಲಸ ಮಾಡಿ ತಾನೇ ಸಿದ್ಧಪಡಿಸಿಕೊಂಡ ಕೆಂಚುಕ ಮತ್ತು ಅದಕ್ಕೊಪ್ಪುವ ದಾವಣಿ ಇತ್ಯಾದಿ ಧರಿಸುತ್ತಿದ್ದರೂ ಇದೇ ಡೊಂಬರ ವಿಶಿಷ್ಟ ವೇಷ ಭೂಷಣ ಉಡುಗೆ-ತೊಡುಗೆ ಎಂದು ನಿಖರವಾಗಿ ಗುರುತಿಸಿ ಹೇಳಲಾಗದ್ದು ಯಾಕೆಂದರೆ ಇದು ಅವರ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ.

ಪ್ರದರ್ಶನಕ್ಕೆ ಆ ಊರಿನ ಜನರು ಸೇರಲು ಅನುಕೂಲಕರವಾದ ವಿಶಾಲವಾದ ಬಯಲನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆ ಜಾಗದಲ್ಲಿ ಪ್ರದರ್ಶನಕ್ಕೆ ಮುಖ್ಯವಾಗಿ ಗಣಿನಟ್ಟು ಆಯಕಟ್ಟಿನ ಕಡೆಗಳಲ್ಲಿ ಅಲ್ಲಲ್ಲಿ ಗೂಂಟ ಬಡಿದು ದಪ್ಪ-ದಪ್ಪ ಉದ್ದುದ್ದದ

ಹಗ್ಗಗಳಿಂದ ಕಟ್ಟಿ 'ಗಣಿ ಬಿಗಿ ಮಾಡುತ್ತಾರೆ. ಬದಿಯಲ್ಲಿ ಕೆಲವು ಗಟ್ಟಿ ಡಂಬುಸಿಟ್ಟು ಎರಡೆರಡು ಡಂಬುಗಳಿಗೆ ಕೂಡಿಸಿ ತಂತಿ ಅಥವಾ ಮಿಣಿ (ಹಗ್ಗ) ಬಿಗಿಯುತ್ತಾರೆ. ಹಗ್ಗ/ತಂತಿಯ ಮೇಲೆ ನಡೆದಾಡುವಾಗ, ಓಡಾಡುವಾಗ ಅದು ಸಣ್ಣ ಸಣ್ಣ ಚಿಲುಮೆ ಪುಟಿಗೆ ಕೊಡುವಷ್ಟು ಗಟ್ಟಿಯಾಗಿ ಬಿಗಿದು ಹಗ್ಗಿದಿಂದ ಕಗ್ಗಂಟು ಹಾಕಿ ಭದ್ರಪಡಿಸಿ ತಮ್ಮ ಕಲಾ ಪ್ರದರ್ಶನಕ್ಕೆ ರಂಗ ಸಿದ್ಧಗೊಳಿಸಿ ಕೊಂಡು ಗಂಡು-ಹೆಣ್ಣು ತಮ್ಮ ತಮ್ಮ ವೇಷಭೂಷಣ ಧರಿಸಿ ಪ್ರದರ್ಶನಕ್ಕೆ ಸಿದ್ಧರಾಗುತ್ತಾರೆ.

ಪ್ರದರ್ಶನಕ್ಕೆ ಮೊದಲು ತಾವು ಸಿದ್ಧಪಡಿಸಿಕೊಂಡ ರಂಗದ ಒಂದು ಮೂಲೆಯಲ್ಲಿ ಒಂದು ಚಾಪೆಹಾಕಿ ಅದರ ಮೇಲೆ ಕಂಬಳಿ/ಕೌದಿ ಹಾಸುತ್ತಾರೆ. ಅದರ ಮೇಲೆ ತಮಗೆ ವಂಶ ಪಾರಂಪರ್ಯವಾಗಿ ಬಂದಿರುವ ಕಠಾರಿ, ಖಡ್ಗ, ಕಬ್ಬಿಣ ಗುಂಡು, ಮಂತ್ರಮಾಟದ ಗಾಜಿನ ಗುಂಡು ಮತ್ತೆ ಒಂದೆರಡು ಎಲುಬಿನ ಕೋಲಿನ-ತುಂಡು ಇತ್ಯಾದಿ ವಸ್ತುಗಳನ್ನು ಇಡುತ್ತಾರೆ. ಇತ್ತ ಕಡೆ ಕೆಲವರು ಡೋಲು ಬಾರಿಸುತ್ತ, ಲಾಗ ಹಾಕುತ್ತಲೇ ಇರುತ್ತಾರೆ. ಇದರ ಪಕ್ಕದಲ್ಲಿಯೇ ನೆಲ ಸ್ವಚ್ಛಮಾಡಿ ಸೆಗಣಿಯಲ್ಲಿ ಸಿದ್ಧಗೊಳಿಸಿದ ಬೆನಕನನ್ನು ಇಟ್ಟು ರಂಗೋಲಿ ಹಾಕಿ ಕುಂಕುಮದಿಂದ ಪೂಜಿಸಿ ಗುಂಪಿನ ಮುಖ್ಯಸ್ಥ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ಚಿರತೆ ಕೊಲ್ಲಿಟ್ಟು ನಿಲುವಂಗಿ, ಚಲ್ಲಣ ಧರಿಸಿ ಎದೆಯ ಮೇಲೆ ಸಾಲಾಗಿ ತನಗೆ ಮೆಚ್ಚುಗೆಯ ಕಾಣಿಕೆಗಳಾಗಿ ಬಂದ ಪದಕಗಳನ್ನು ಅಲಂಕರಿಸಿಕೊಂಡು ಬಂದು ಮುಖ್ಯ ಗಣಿಹತ್ತಿರ ನಿಂತು ಊರ ಪ್ರಮುಖರ ಸ್ತುತಿ ಮಾಡುತ್ತಾನೆ. ನಂತರ ನಿಂತಲ್ಲಿಯೇ ಅಂತರ್ಲಾಗ, ತಿಪ್ಪರಲಾಗ, ಹಿಂದಕ್ಕೆ ಮುಂದಕ್ಕೆ ಲಾಗ ಹಾಕುವುದು, ಚಲಿಸುವುದು ಚಂಗನೆ ಹಾರಿ ಗಣಿಗೆ ಬಿಗಿದ ತಂತಿಯ ಮೇಲೆ ಕುಳಿತು ಗಿರಿಗಟ್ಟೆಯಂತೆ ತಿರುಗುವುದು ಕೈಯಲ್ಲಿ ಒಂದು ಬಿದಿರಿನ ಗಳುವನ್ನು ಹಿಡಿದು ತಂತಿಯ ಮೇಲೆ ನಡೆಯುವುದು ಅಲ್ಲದೆ ತಂತಿಯ ಮಧ್ಯಭಾಗದಲ್ಲಿ ನಿಂತು ವಿವಿಧ ನಮೂನೆಯ ಕಸರತ್ತುಗಳನ್ನು ಮಾಡುತ್ತಾರೆ.

ಡೊಂಬರ ಯುವಕರು ಕುಸ್ತಿ ಕಲೆಯಲ್ಲಿ ಪರಿಣತರು. ಗಟ್ಟಿಮುಟ್ಟಾದ ಜಟ್ಟಿಗಳು ಕಣಕ್ಕಿಳಿಯುತ್ತಾರಾದರೂ ಅವರು ಕುಸ್ತಿಯಾಡುವುದಿಲ್ಲ. ಬದಲಿಗೆ ದೊಣ್ಣೆವರಸೆ, ಕತ್ತಿವರಸೆ, ಗಾತ್ರದ ಕರೀಕಲ್ಲು ಗುಂಡನ್ನು ಅನಾಮತ್ತಾಗಿ ಎತ್ತಿ ಹೆಗಲ ಮೇಲಿಂದ ಹಿಂದೆ ಒಗೆಯುವುದು. ಒಂದೇ ಕೈಯಿಂದ ಗುರುಸಾಣಿ ಕಲ್ಲನ್ನು ಮೇಲೆತ್ತಿ ಹಿಡಿದು ನೆಲಕ್ಕೆ ಒಗೆಯುವುದು. ಕಬ್ಬಿಣದ ರಾಡನ್ನು ಯುವಕ-ಯುವತಿಯರು ಎದುರು ಬದುರಾಗಿ ಗಂಟಲಕ್ಕೆ ಆನಿಸಿ ಹಿಡಿದು ಎರಡೂ ಕಡೆಯಿಂದ ಸಮ ಪ್ರಮಾಣದಿಂದ ಅದನ್ನು ಮಣಿಸುವುದು. ದೊಡ್ಡ ದಿಮ್ಮಿಗೆ ಹಗ್ಗ ಕಟ್ಟಿ ಅದನ್ನು ಹಲ್ಲಿನಿಂದಲೇ ಕಚ್ಚಿ ಹಿಡಿದು ಮೇಲೆತ್ತುವುದು, ಕೊಡದಲ್ಲಿ ನೀರು/ಮರುಳು ತುಂಬಿ ಅದನ್ನ ಹಲ್ಲಿನಿಂದ ಕಚ್ಚಿ ಹಿಡಿದು ಮೂರ್ನಾಲ್ಕು ಸುತ್ತು ಹಾಕುವುದು. ಮರಗಾಲು ಕಟ್ಟಿಕೊಂಡು ಅತ್ತಿಂದಿತ್ತ ಓಡಾಡುವುದು ಸಣ್ಣ ಪುಟ್ಟ ಹುಡುಗ-ಹುಡುಗಿಯರು ತಂತಿ ಮೇಲೆ ನಡೆದಾಡುವುದು ಅಲ್ಲಿಂದಲೇ ಲಾಗ ಹಾಕುತ್ತ ತಮ್ಮವರ ಹೆಗಲ ಮೇಲೆ ನೆಗೆದು ಮತ್ತೆ ನೆಲಕ್ಕೆ ಜಿಗಿಯುವುಂತಹ ಪ್ರದರ್ಶನಗಳು ನಡೆಯುತ್ತವೆ. ಇಷ್ಟೇ ಅಲ್ಲದೆ ಡೊಂಬರು ಶಕ್ತಿ ಪ್ರದರ್ಶನಾತ್ಮಕ ಕಲೆಗಳನ್ನು ಪ್ರದರ್ಶಿಸುತ್ತಾರೆ. ಡೊಂಬ ಯುವಕ ನೊಬ್ಬ ಬಂಡೆಯ ಮೇಲೆ ಅಂಗಾತ ಮಲಗುವುದು ಅವನ ಮೇಲೆ ಉದ್ದವಾದ ಬಂಡೆಗಲ್ಲು-ಚಪ್ಪಡಿಗಲ್ಲು ಹೇರಿ ದೊಡ್ಡ ಸುತ್ತಿಗೆಯಿಂದ ಎದೆ ಮೇಲಿನ ಬಂಡೆಗಲ್ಲು ಸೀಳುವಂತೆ ಏಟು ಹಾಕುವುದು ಒಬ್ಬ ಯುವಕ ತನ್ನ ಎರಡೂ ತೊಡೆಗೆ ಒಬ್ಬ ನಿಚ್ಚಣಿಕೆ ಇಟ್ಟುಕೊಂಡರೆ ಒಬ್ಬ ತರುಣಿ ಅದನ್ನು ನಿರಾಧಾರವಾಗಿ ಏರಿ, ನಿಚ್ಚಣಿಗೆಯ ತುದಿಗೆ ನಿಂತು ಲಾಗ ಹಾಕುತ್ತ ಕೆಳಕ್ಕೆ ಜಿಗಿಯುತ್ತಾಳೆ.

ಈ ಎಲ್ಲ ಪ್ರದರ್ಶನಗಳು ನಡೆಯುವಾಗ ಡೊಂಬರ ತರುಣಿ ಡೋಲು ಬಾರಿಸುತ್ತ ಇದ್ದರೆ, ಮುಖ್ಯಸ್ಥನು ಪ್ರದರ್ಶನ ನೀಡುವವರಿಗೆ ಮತ್ತು ಪ್ರೇಕ್ಷರಿಗೆ ಉತ್ಸಾಹ ತುಂಬುತ್ತಿರುತ್ತಾರೆ. ಕೊನೆಯಲ್ಲಿ ಆತನಿಂದಲೇ ಒಂದು ಪ್ರದರ್ಶನವಿರುತ್ತದೆ. ಒಂದು ಉದ್ದನೆಯ ಗಳದ ಮೇಲೇರಿ ವಿವಿಧ ಕಸರತ್ತುಗಳನ್ನು ತೋರಿಸಿ ಅದರ ತುದಿಯಲ್ಲಿ ನಿಂತು ತಲೆಯ ಮೇಲೆ 5-6 ಮಡಿಕೆಗಳನ್ನು ಒಂದರ ಮಲೆ ಒಂದರಂತೆ ಜೋಡಿಸಿಕೊಂಡು ಕೈಬಿಟ್ಟು ಗಿಲ್ಲುವುದು ಇಲ್ಲವೆ ಬಲಗಾಲಿನಿಂದ ಎಡಗಾಲಿಗೆ ಅಥವಾ ಎಡಗಾಲಿನಿಂದ ಬಲಗಾಲಿಗೆ ಕಾಲುಗಳನ್ನು ಬದಲಿಸುತ್ತಾನೆ. ಮತ್ತೊಬ್ಬನು ಗಳುವನ್ನು ಏರಿ ಮಡಿಕೆಗಳನ್ನು ಒಂದೊಂದಾಗಿ ಕೆಳಗಿಳಿಸಿ ಬಂದು ಬೆನಕನ ಹತ್ತಿರ ಹೋಗಿ ನಮಸ್ಕರಿಸಿ ಆಟ ಮುಗಿಸುತ್ತಾರೆ. ಯುವತಿ ಡೋಲು ಬಡಿಯುತ್ತಲೇ ಕೈಯಲ್ಲಿ ಮೊರ/ತಟ್ಟೆ ಹಿಡಿದು ಸುತ್ತು ನೆರದ ಜನರು ಕೊಡುವ ಹಣ, ದವಸ ಧಾನ್ಯ ಪಡೆದು ಮತ್ತೆ ಮುಂದಿನ ಪ್ರಯಾಣಕ್ಕೆ ಸಿದ್ಧರಾಗುತ್ತಾರೆ.

ಡೊಂಬರು ತಮ್ಮ ಜೀವನಕ್ಕಾಗಿ ಪ್ರದರ್ಶನಾತ್ಮಕ ಕಲೆಗಳನ್ನು ಅವಲಂಬಿಸಿದಂತೆ ಉಪಜೀವನಕ್ಕಾಗಿ ಕೆಲವು ವಿಶಿಷ್ಟ ಬಗೆಯ ಕುಶಲಕಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈಚಲ ಗರಿಯ ಚಾಪೆ, ಬಿದಿರ ಕಡ್ಡಿಯ ತಡಿಕೆ ಬುಟ್ಟಿ ಮೊರ, ಹುಲ್ಲುಚಾಪೆ, ಬಾರಿಗೆಗಳನ್ನು ತಯಾರಿಸಿ ಮಾರುತ್ತಾರೆ. ಡೊಂಬ ಮಹಿಳೆಯರು 'ಹಚ್ಚೆ ಕಲೆ'ಯಲ್ಲಿ ಪರಿಣತರಾಗಿದ್ದು ವಿವಿಧ ವಿನ್ಯಾಸಗಳನ್ನು ಮೂಡಿಸುವುದು ಮತ್ತು ವಿಶೇಷ ಸೂಜಿ ಮತ್ತು ಅದರಿಂದ ಚುಚ್ಚಿದ ಬಳಿಕ ಅದು ಗಾಯವಾಗದಂತೆ ಎಚ್ಚರಿಕೆ ವಹಿಸುವುದರಲ್ಲಿಯೂ ನಿಪುಣರಾಗಿದ್ದಾರೆ.

(ಎನ್‌ಎಚ್)

ತ

ತಳಕಲ್ಲಿನ ಖಾನಗೌಡ್ರು: ಪ್ರಸಿದ್ಧ ತಬಲಾ ವಾದಕ. 1922ರಲ್ಲಿ ಶ್ರೀ ಗವಿಮಠದ ಪೀಠಾರೋಹಣ ಮಾಡಿದ ಲಿಂ. ಜಗದ್ಗುರು ಶ್ರೀ ಮರಿಶಾಂತವೀರ ಮಹಾಸ್ವಾಮಿಗಳವರು ಸಂಸ್ಕೃತಿ ಪಾಂಡಿತ್ಯ, ಯೋಗ, ತಪಸ್ಸು, ವೈರಾಗ್ಯ ಹಾಗೂ ವೈದ್ಯಕೀಯದಲ್ಲಿ ಪ್ರಕಾಂಡ ಪಂಡಿತರಾಗಿದ್ದಂತೆ ಸಾಹಿತ್ಯ ಸಂಗೀತಗಳಿಗೆ ದೊಡ್ಡ ಆಶ್ರಯ ದಾತರಾಗಿದ್ದರು. ಆ ಕಾಲದಲ್ಲಿ ಈ ನಾಡಿನ ಸಂಗೀತಗಾರರು ಸಂಗಿತವಾದ್ಯ ವಾದನ ಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಅವರಲ್ಲಿಗೆ ಬರುತ್ತಿದ್ದರು. ತಳಕಲ್ಲಿನ ಖಾನಗೌಡರು ತಮ್ಮ ತಬಲಾ ವಾದನ ವೈಖರಿಯಿಂದಾಗಿ ಆಳವಾದ ಪಾಂಡಿತ್ಯ ಪ್ರತಿಭೆಗಳಿಂದಾಗಿ ಆಗಿನ ಸಂಗೀತಗಾರರಿಗೊಂದು ಒರೆಗಲ್ಲಾಗಿದ್ದರು. ಶ್ರೀ ಗವಿಮಠಕ್ಕೆ ಬರುವ ಸಂಗೀತಗಾರರಿಗೆ ಖಾನಗೌಡರೊಂದು ದೊಡ್ಡ ಆಕರ್ಷಣೆಯಾಗಿದ್ದರು.

ಪಂಚಾಕ್ಷರ ಗವಾಯಿಗಳು ಆ ಕಾಲದಲ್ಲಿ ಸಂಗೀತಕ್ಕೊಂದು ದೊಡ್ಡ ಹೆಸರು. ಈಗಿರುವ ಅವರ ಶಿಷ್ಯರಾದ ಪುಟ್ಟರಾಜ ಕವಿ ಗವಾಯಿಗಳು ಕೂಡಾ ಕರೂರು ಗುರುಬಸವಾರ್ಯ ಗವಾಯಿಗಳು, ಮುನ್ನೂರ ಬಸವರಾಜಪ್ಪ, ಸೊದರ ಪಂ. ಮಲ್ಲಿಕಾರ್ಜುನ ಮನ್ಸೂರು, ವಿಠ್ಠಲಸಾ ಗದಗ ಮೊದಲಾದವರೆಲ್ಲ ದಿ. ತಳಕಲ್ಲ ಖಾನಗೌಡರ ತಬಲಾ ಪಾಂಡಿತ್ಯಕ್ಕೆ ಮನಸೋತು ಬೆಳತನಕ ಸಂಗೀತ ಕಛೇರಿಗಳನ್ನು ಮಾಡುತ್ತಿದ್ದರು. ಬೇರೆ ಊರುಗಳಲ್ಲಿ ಇವರ ಕಾರ್ಯಕ್ರಮಗಳಿರುತ್ತಿದ್ದರೆ ಖಾನಗೌಡರನ್ನು ಕರೆಯಿಸಿಕೊಳ್ಳುತ್ತಿದ್ದರು. ನಾಟಕಕಾರ ಪಂ. ನೆಲವಡಿ ಶ್ರೀಕಂಠಶಾಸ್ತ್ರಿಗಳವರು ಖಾನಗೌಡರ ಆತ್ಮೀಯ ಸ್ನೇಹಿತರಾಗಿದ್ದರು.

ಖಾನಗೌಡರಿಂದಾಗಿ ಆ ಕಾಲದಲ್ಲಿ ತಳಕಲ್ಲು ಪ್ರಸಿದ್ಧವಾಗಿತ್ತು. ಯಾರಾದರೂ ತಳಕಲ್ಲು ಎಂದರೆ 'ಖಾನಗೌಡರ ತಳಕಲ್ಲಾ?' ಎಂದು ಕೇಳುವಷ್ಟು ಇವರ ಹೆಸರು ಪ್ರಸಿದ್ಧಿಗೊಂಡಿತ್ತು. ಇವರು ಹೊಸ ಹೊಸ ಬೋಲ್‌ಗಳನ್ನು ಸೃಷ್ಟಿಸುತ್ತಿದ್ದರು. ತಬಲಾದ ಮೇಲೆ ಅಧಿಕಾರಯುತವಾಗಿ ಒಂದು ಗ್ರಂಥವನ್ನು ರಚಿಸಿದ್ದಾರೆ. ಅದರ ಪ್ರತಿ ಕೂಡಾ ದೊರಕುತ್ತದೆ. ಸಂಗೀತ ಪ್ರೇಮಿಗಳು ಈ ಕುರಿತು ಅವರ ಪಾಂಡಿತ್ಯದ ವಿಮರ್ಶೆ ಮಾಡಬಹುದು. ಆಗಿನ ಕಾಲಕ್ಕೆ ತಬಲಾ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾದಾನದ ಜೊತೆಗೆ ಅನ್ನದಾನ ಮಾಡುತ್ತಾ ಪ್ರೋತ್ಸಾಹ ನೀಡುತ್ತಿದ್ದರು. ಇವರ ಶಿಷ್ಯವರ್ಗ ಅಪಾರ. ಅವರಲ್ಲಿ ಮರಿತಮ್ಮಪ್ಪ ಪತ್ತಾರ, ಕಾಳಪ್ಪ ಪತ್ತಾರ, ವೀರಯ್ಯ ಮೋರಗೇರಿ, ವಿರುಪಣ್ಣ ಅಕ್ಕಿ ಕುಡುತಿನಿ, ಬ್ರಹ್ಮಜ್ಞ ಮೋರಗೇರಿ, ರಾಮಭಟ್ಟ ವೈದ್ಯ, ವೀರಣ್ಣ ಹೊಳಗುಂದಿ, ವೀರಸಂಗಯ್ಯ ಮುಧೋಳ, ಹುಚ್ಚಪ್ಪ ಸೂಡಿ, ಚನ್ನಬಸಪ್ಪ ಸೂಡಿ, ಮುರಲೀಧರ ಪತ್ತಾರ, ಭಾಗ್ಯವಾನ, ಗುರುನಾಥ ಇನ್ನೂ ಅನೇಕರು ಪ್ರಸಿದ್ಧರು. 1962ರಲ್ಲಿ ಖಾನಗೌಡ್ರು ತಮ್ಮ 90ನೇ ವಯಸ್ಸಿನಲ್ಲಿ ತೀರಿಕೊಂಡಾಗ ಪಂ. ಮಲ್ಲಿಕಾರ್ಜುನ ಮನಸೂರರು ತಮ್ಮ ಅಪಾರ ಶೋಕವನ್ನು ವ್ಯಕ್ತಪಡಿಸಿದ್ದು ಗೌಡರ ಮೇಲೆ ಇವರಿಗಿದ್ದ ಗೌರವವನ್ನು ವ್ಯಕ್ತಪಡಿಸುತ್ತದೆ.

(ಎಸ್‌ಎಸ್‌ಟಿ)

ತಳವಾರ ಎಚ್.ಡಿ.: ಶಿಲ್ಪ ಕಲಾವಿದ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಮಂಡಲಗಿರಿಯವರು. ಹೈಸ್ಕೂಲ್ ಓದುವಾಗಲೇ ಚಿತ್ರ ಬಿಡಿಸುವ ಹವ್ಯಾಸ ಬೆಳೆಸಿಕೊಂಡಿದ್ದ ಈ ಯುವಕ, ಅತ್ಯಂತ ಅಪರೂಪದ ಚಿತ್ರಕಲಾವಿದನಾಗಿ ಹಾಗೂ ಶಿಲ್ಪ ಕಲಾಕೃತಿಗಳನ್ನು ರಚಿಸುವಲ್ಲಿ ಆಗಾಧ ಪ್ರೌಢಿಮೆಯನ್ನು ಮೆರೆದಿದ್ದಾರೆ. ವಿಶ್ವವಿಖ್ಯಾತ ವಿಶ್ವಕರ್ಮನ ಕೆತ್ತನೆಯ ಕಲಾ ಕುಸುಮ ನೋಡುಗರ ಕಣ್ಮನ ಸೆಳೆಯುವದು ಸ್ವಾಭಾವಿಕ. ಅಂಥ ಕಲಾಕೃತಿಗಳನ್ನು ರಚಿಸುವುದು ಈ ಯುವಕನ ಹೆಬ್ಬಯಕೆಯಾಗಿದೆ.

ಯಲಬರ್ಗಾ ಕಾಲೇಜಿನಲ್ಲಿ ಚಿತ್ರಕಲೆಯ ವ್ಯಾಸಂಗ ಮಾಡಿ, ಗೋಡೆಬರೆಹ, ವಿವಾಹ ಸಮಾರಂಭಗಳಲ್ಲಿ ಚಿತ್ರಬಿಡಿಸುವುದು, ಥರ್ಮಾಕೋಲ್‌ದಲ್ಲಿ ಮದುಮಕ್ಕಳ ಹೆಸರು ಬರೆದು ಜೀವನ ಸಾಗಿಸುತ್ತಿದ್ದರು. ಅನಂತರ ಬೆಂಗಳೂರಿಗೆ ಹೋಗಿ ಕೆ.ಪಿ.ಜೆ. ಪ್ರಭು ಕರಕುಶಲ ತರಬೇತಿ ಕೇಂದ್ರದಲ್ಲಿ ದಿನಕ್ಕೆ ನೂರು ರೂ.ಗಳಂತೆ, ದಿನಗೂಲಿ ಕೆಲಸಕ್ಕೆ ಹೋಗುತ್ತಿದ್ದರು. ದಿನಗೂಲಿಯಲ್ಲಿದ್ದೂ ಶಿಲ್ಪಗಳನ್ನು ರಚಿಸುವ ಪ್ರತಿಭೆಯನ್ನು ಗುರುತಿಸಿದ ಮಹಾನಗರಿಯ ವಿವಿಧ ಸಂಘ–ಸಂಸ್ಥೆಗಳು, ಈ ಯುವಕನ ಪ್ರತಿಭೆಗೆ ಪುರಸ್ಕರಿಸಿ ಬೆನ್ನು ತಟ್ಟಿದರು.

ಕಾಡುಗಲ್ಲಿಗೆ ಉಳಿಯ ಏಟುಗಳನ್ನು ಹಾಕಿದರೆ ನೀಟಾಗಿ, ಮಾಟವಾಗಿ ಮೂರ್ತಿ ಸ್ವರೂಪ ತಳೆಯುತ್ತದೆ ಎಂಬಂತೆ, ಕೈಯಲ್ಲಿ ಚೂಪಾದ ಚಾಣ ಹಾಗೂ ಸುತ್ತಿಗೆ ಹಿಡಿದು, ಶ್ರದ್ಧೆಯಿಂದ ತಮ್ಮ ಕಲ್ಪನೆಯ ವಿಗ್ರಹಗಳಿಗೆ ರೂಪ ನೀಡತೊಡಗಿದರು. ಇವರ ಪಳಗಿದ ಕೈಯಲ್ಲಿ ಒಂದರ ಹಿಂದೆ ಒಂದರಂತೆ ಗಣಪತಿ, ವಿಷ್ಣು, ವಿಶ್ವಕರ್ಮ, ನಟರಾಜ, ಆಂಜನೇಯ, ಲಕ್ಷ್ಮಿ ಹಾಗೂ ಇತರ ಕಲಾಕೃತಿಗಳನ್ನು ಸುಂದರ ಕುಸುರಿಕಲೆಯೊಂದಿಗೆ ಕೆತ್ತಿದ್ದಾರೆ.

ಒಂದು ಕಲ್ಲನ್ನು ಕಟೆದು ಮೂರ್ತಿ ಮಾಡುವುದಕ್ಕೆ ಅತ್ಯಂತ ಕಡಿಮೆ ಕಾಲಾವಕಾಶ ತೆಗೆದುಕೊಂಡು, ಜನರ ಮೆಚ್ಚಿನ ಚಿತ್ರವನ್ನು ಕಲ್ಲಿನಲ್ಲಿ ಕೆತ್ತಿ ಎಲ್ಲರ ಮೆಚ್ಚುಗೆ ಗಳಿಸಿದರು. ಇವರ ಕೈಚಳಕ ಅಷ್ಟೊಂದು ನುರಿತಿದೆ.

ಇವರ ಕೆತ್ತನೆಯ ಶಿಲ್ಪಕಲಾಕೃತಿಗಳಿಗೆ ಈಗ ಬೆಂಗಳೂರಿನಲ್ಲಿ ಎಲ್ಲಿಲ್ಲದ ಬೇಡಿಕೆಯಲ್ಲಿ ಮಾರಾಟವಾಗುತ್ತಿವೆ. ಈಗಾಗಲೇ ಇವರು ಕೆತ್ತಿರುವ, ನಟರಾಜನ ವಿಗ್ರಹ, ವಿಷ್ಣುವಿನ ವಿಗ್ರಹ ಹಾಗೂ ಗಣಪತಿ ವಿಗ್ರಹಕ್ಕೆ ಅತಿ ಹೆಚ್ಚಿನ ಬೇಡಿಕೆ ಇದೆ. ಅದೇರೀತಿ

ಇವರು ಕಟ್ಟಿಗೆಯಲ್ಲಿಯೂ ಸಹ ವಿವಿಧ ಕಲಾಕೃತಿಗಳನ್ನು ರಚಿಸಿದ್ದಾರೆ. ಬಾಗಿಲಿಗೆ ಅಂದವಾದ ಚಿತ್ತಾರ ಬಿಡಿಸಿ, ಅದರಲ್ಲಿ ಚಿಕ್ಕ ಚಿಕ್ಕ ಸುಂದರವಾದ ದೇವರ ಮೂರ್ತಿಗಳನ್ನು ಕೆತ್ತನೆ ಮಾಡಿದ್ದಾರೆ.

ಆದರೆ ಇದೀಗ ಬೆಂಗಳೂರಿನ ಕದಂಬ ಶಿಲ್ಪಲೋಕದಲ್ಲಿ ಇವರು ಶಿಲ್ಪ ಕೆತ್ತನೆಯ ಕೆಲಸದಲ್ಲಿದ್ದಾರೆ. ಬೆಂಗಳೂರಿನ ವಾದಿರಾಜ ಸ್ಮೃತಿ ಸಮಿತಿಯವರು ಈ ಕಲಾವಿದರಿಗೆ ಸನ್ಮಾನಿಸಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. (ಬಿಎನ್‌ಬಿ)

ತಾ

ತಾಲ ನಿನಾದ: ಪಕ್ಕದ ಮಹಾರಾಷ್ಟ್ರದ 17.01.2012 ರಂದು ಪರಮ ಪೂಜ್ಯ ರವಿಶಂಕರ ಗುರುಜೀಯವರ ದಿವ್ಯ ಸಾನಿಧ್ಯದಲ್ಲಿ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸೋಲಾಪುರ ವಸುಂಧರಾ ಮಹಾವಿದ್ಯಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ 'ತಾಲನಿನಾದ' ಕಾರ್ಯಕ್ರಮ ಗಿನ್ನಿಸ್ ದಾಖಲೆಯಾಗಿದೆ. ಒಂದೇ ವೇದಿಕೆಯಲ್ಲಿ ವಿವಿಧ ರಾಜ್ಯಗಳಿಂದ 1548 ತಬಲಾ ಮತ್ತು ಪಖವಾಜ ಕಲಾವಿದರು. ಸುಮಾರು 60 ನಿಮಿಷಗಳ ಸಾಮೂಹಿಕವಾಗಿ ಸೂಲು ನುಡಿಸಿದ್ದಾರೆ. ಬನಾರಸ ಘರಾನೆಯ ಪ್ರಸಿದ್ಧ ತಬಲಾ ವಾದಕರಾದ ಪಂ. ಅರವಿಂದ ಆಜಾದ ಇವರ ನಿರ್ದೇಶನದಲ್ಲಿ ನಡೆದ ಈ ದಾಖಲೆಯ ಕಾರ್ಯಕ್ರಮ ಖ್ಯಾತ ತಬಲಾ ವಾದಕರಾದ ಪಂ. ಆನಂದ ಬದಾಮಿಕರ್ ಮಾರ್ಗ ದರ್ಶನದಲ್ಲಿ ನಡೆಯಿತು. ಒಂದೇ ವೇದಿಕೆಯಲ್ಲಿ 1548 ಕಲಾವಿದರು ತಬಲಾ ಮತ್ತು ಪಖವಾಜ ಏಕಕಾಲಕ್ಕೆ ನುಡಿಸುತ್ತಿದ್ದರೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಪ್ರೇಕ್ಷಕರ ಕರವಾಳಗಳಿಂದ ಅವರ ಪ್ರೋತ್ಸಾಹದಿಂದ ಕಾರ್ಯಕ್ರಮ ಯಶಸ್ವಿಯಾಯಿತು. ಇಂತಹ 'ಗಿನ್ನಿಸ್ ದಾಖಲೆ' ಕಾರ್ಯಕ್ರಮ 'ತಾಲನಿನಾದ'ದಲ್ಲಿ ನಮ್ಮ ಹೈದ್ರಾಬಾದ ಕರ್ನಾಟಕದ ಕಲಾವಿದರು ತಬಲಾ ಕಲಾವಿದರಾದ ಶ್ರೀ ಮಧುಸೂದನ ಮುತಾಲಿಕ್ ರಾಯಚೂರ, ಮತ್ತು ನೂತನ ವಿದ್ಯಾಲಯ ಪದವಿ ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಘವೇಂದ್ರ ಕುಲಕರ್ಣಿ, ಶ್ರೀ ರವೀಂದ್ರ ಕುಲಕರ್ಣಿ, ಶ್ರೀ ನಿಖಿಲ್ ಕೋಲ್ಹಾರಕರ್, ಹಾಗೂ ಗುಲಬರ್ಗಾದ ಯುವ ತಬಲಾ ಕಲಾವಿದರಾದ ಕು. ಷಣ್ಮುಖ ಪಾಟೀಲ ಮತ್ತು ಶ್ರೀಕಾಂತ ಮಾನೆ ಆಯ್ಕೆಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದಾರೆ. (ಜೆಡಿ)




'ತಾಲ ನಿನಾದ' ಕಾರ್ಯಕ್ರಮದಲ್ಲಿ ತಬಲಾ ನುಡಿಸುತ್ತಿರುವದು

ತಿ

ತಿಂಥಣಿ ಮೌನೇಶ: ಮೂಲತಃ ಸುರಪೂರದ ದೇವರ ಗೋನಾಲದ ಮೌನೇಶ್ವರರು ಸುಮಾರು 1450–1560ರಲ್ಲಿ ಬದುಕಿದವರೆಂದು ತಿಳಿದು ಬರುತ್ತದೆ. ಹೂಜಿ, ಕೊಡಲಿ, ಪರಸು ಬಟ್ಟಲು, ಇವು ಮೌನೇಶನ ಭಕ್ತರ ಧರ್ಮ ಲಾಂಛನಗಳು, ಹೂಜಿ ಜ್ಞಾನಕುಂಭದ ಸಂಕೇತ. ತಾಮಸಿ ಪ್ರವೃತ್ತಿಗಳ ಸಂಕೇತ. ಪರಸು ಬಟ್ಟಲು– ಕಾಯಕ ಮಾಡಿ ತನ್ನ ಅನ್ನವನ್ನು ತಾನುಣ್ಣುವ ಸ್ವಾಭಿಮಾನಿ ಸಂಕೇತ. ಸದಾ ಈ ಲಾಂಛನಗಳೊಂದಿಗೆ ಕಾಣಿಸಿ ಕೊಳ್ಳುವ ಭಾವೈಕ್ಯದ ಹರಿಕಾರನೇ ಮೌನೇಶ. ತಿಂಥಣಿ ಇವರ ಕಾರ್ಯ ಕ್ಷೇತ್ರವಾದರೂ ತಪಸ್ಸಿದ್ಧಿ ಸಾಧಿಸಿದ್ದು ಶಹಾಪುರ ಬೆಟ್ಟದ ಗವಿಯಲ್ಲಿ. ಈ ಗವಿಯಲ್ಲಿ ಅವರ ಚಿಂತನೆ ಗಟ್ಟಿಗೊಂಡಿತು. ಮಾನವೀಯ ಸಂವೇದನೆಯೇ ಇವುಗಳ ಜೀವಾಳವಾದರೂ ಮೇಲ್ನೋಟಕ್ಕೆ ಇವು ಹರಿತವಾದ ಆಯುಧಗಳಂತೆ ದುಷ್ಟರಲ್ಲಿ ಅಗೋಚರ ಭಯವನ್ನುಂಟು ಮಾಡುವಷ್ಟು ಪ್ರಭಾವಶಾಲಿ ಯಾಗಿವೆ. ಹಾಗಾಗಿ, ಶಹಾಪೂರ ಈ ಗುಡ್ಡದ ಗವಿ ಡೋಂಗಿ, ಜಾತಿವಾದಿಗಳ ಹುಳುಕನ್ನು ಬಯಲುಗೊಳಿಸುತ್ತವೆ.

ಶಹಾಪುರದ ಹಳೆಪೇಟೆಯಿಂದ ಪೂರ್ವಕ್ಕೆ ಬೆಟ್ಟ ಹತ್ತಲು ಪ್ರಾರಂಭಿಸಿದರೆ 20 ನಿಮಿಷಗಳಲ್ಲಿ ಈ ಗವಿ ಸಿಗುತ್ತದೆ. ಬೆಟ್ಟ ಹತ್ತುವಾಗ ಒಂದು ದೊಡ್ಡ ವಿಶಾಲವಾದ ಬಂಡೆಯ ಮೇಲೆ ಪಾದದ ಗುರುತುಗಳಿವೆ. ಅವಕ್ಕೆ 786, ಓಂ 777, ಮೋನಪ್ಪಯ್ಯನ ಪಾದ ಎಂಬಿತ್ಯಾದಿ ಹೆಸರುಗಳನ್ನು ಪೇಂಟ್ ನಿಂದ ಬರೆದು, ಆ ಕುರುಹುಗಳಿಗೆ ಐತಿಹಾಸಿಕ ಮಹತ್ವ ನೀಡಿದ್ದಾರೆ. ಕಡಿದಾದ ಗುಡ್ಡದ ಮೇಲೆ ಸ್ವಲ್ಪ ನಡೆದರೆ ಗದ್ದೆಗಳು, ಅವುಗಳನ್ನು ದಾಟಿ ಮುಂದೆ ಸಾಗಿದರೆ ಮೋನಪ್ಪನ ಗವಿಯ ವಿಶಾಲ, ಎತ್ತರವಾದ ಬಂಡೆಯ ಹಿಂಭಾಗಕ್ಕೆ ಬಂದು,




ತಿಂಥಿಣಿ ಮೌನೇಶ್ವರ ದೇವಸ್ಥಾನ, ತಿಂಥಿಣಿ (ಯಾದಗಿರ)

ಕೆಳಗಿಳಿಯುತ್ತಿದ್ದಂತೆ, ಕಲ್ಲುಗುಡ್ಡದ ಮಧ್ಯೆ ಗಿಡಮರಗಳ ಸುಂದರ ತಾಣ, ಅದುವೇ ಮೋನಪ್ಪಯ್ಯನ ಗವಿ. ಈ ವಿಶಾಲ ಬಂಡೆಯಡಿ ಸುಮಾರು 50 ಅಡಿಗೂ ಮೇಲ್ಪಟ್ಟು ಉದ್ದ, ಒಳಗೆ 30 ಅಡಿ ಉದ್ದ, 10 ಅಡಿ ಎತ್ತರದ ವಿಶಾಲ ಜಾಗೆ ಇದೆ. ಗವಿಯ ಛಾವಣಿ ಕೆಲವೆಡೆ ತೀರಾ ಕೆಳಗಿಳಿದು, ಇನ್ನೊಂದೆಡೆ ಮೇಲಕ್ಕೇರಿ, ಒರಟೊರಟಾಗಿದೆ. ಗವಿಯ ಪಕ್ಕಾ ಸ್ವರೂಪ ಹೊಂದಿದೆ. ಬಂಡೆಯ ಮೇಲಿನ ತುದಿತನಕ ಕಬ್ಬಿಣದ ಗ್ರಿಲ್ ಬಾಗಿಲು ಕಿಟಕಿ ಕೂಡಿಸಿ, ಗೋಡೆ ಕಟ್ಟಲಾಗಿದೆ. ಒಳಗಡೆ ಎಡಕ್ಕೆ ಮೋನಪ್ಪಯ್ಯನ ಶಿಷ್ಯ ಎನ್ನಲಾದ ಗಂಗಪ್ಪಯ್ಯನ (ಮಜಾರ) ಸಮಾದಿ ಇದೆ. ಅದು ಗೋರಿಯನ್ನೇ ಹೋಲುತ್ತದೆ. ಸುಮಾರು 30 ಅಡಿ ಒಳ ಹೋದರೆ ಮುಸ್ಲಿಂ ಗೋರಿ ಹೋಲುವ ಇನ್ನೊಂದು ದೊಡ್ಡ ಗೋರಿ ಇದೆ. ಕೆಂಪು ವಸ್ತ್ರ ಹೊದಿಸಲಾಗಿದೆ. ಮೇಲೆ 'ಚಾಂದ್' ಲಾಂಛನವಿದೆ. ಇದರ ಎದುರಿಗೆ ಒಳಭಾಗದಲ್ಲಿ ಒಂದು ಸಣ್ಣ ಗವಿಯಿದ್ದು, ಅಲ್ಲಿ ಪಾಣಿವಾಟೆಯ ಮೇಲೆ ಒಂದು ಚಿಕ್ಕ ಲಿಂಗ ಪ್ರತಿಷ್ಠಾಪನೆಗೊಂಡಿದೆ. ಇದರ ಎಡಕ್ಕೆ ಮತ್ತೊಂದು ಸಣ್ಣ ಗವಿ ಇದೆ. ಗುಡ್ಡದ ಮೇಲಿನಿಂದ ಬಸಿದ ನೀರು ಇಲ್ಲಿ ಈ ಗವಿಯೊಳಗೆ ಸಂಗ್ರಹ ವಾಗುತ್ತದೆ. ಹಾಗೆಂದು ಮೇಲ್ನೋಟಕ್ಕೆ ಕಂಡು ಬಂದರೂ, ಈ ನೀರು ಯಾವತ್ತೂ ಬತ್ತಿಲ್ಲದಿರುವುದು ವಿಶೇಷ. ಒಂದೇ ಛಾವಣಿಯಡಿ ಎರಡು ಧರ್ಮಗಳ ದೇವರಿಗೆ ಪೂಜೆ ಸಲ್ಲಿಸುವ ವಿಶಿಷ್ಟ ಸಂಪ್ರದಾಯವನ್ನು ಹಾಕಿದ ಕೀರ್ತಿ ಮೋನಪ್ಪಯ್ಯಗೆ ಸಲ್ಲುತ್ತದೆ. ತಿಂಥಣಿಯ ಮೋನಪ್ಪಯ್ಯನ ಗುಡಿಯಲ್ಲೂ ಗೋರಿ ಎದುರು ಲಿಂಗವಿದೆ. ಅಲ್ಲದೇ ಹಿಂದೂಗಳಿಗೆ, ಮತ್ತು ಮುಸ್ಲಿಮರಿಗೆ ಪ್ರತ್ಯೇಕ ಪ್ರಾರ್ಥನೆ ಸ್ಥಳ ಗಳಿವೆ. ಇವು ಗುಡಿಯ ಒಂದೇ ಆವರಣದಲ್ಲಿವೆ ಎಂಬುದು ಬಹಳ ಮುಖ್ಯ.

ಗವಿಯ ಈ ವಿಶಾಲ, ಎತ್ತರದ ಬಂಡೆಯ ಹಿಂದೆ ಸ್ವಲ್ಪ ಸಮತಟ್ಟಾದ ನೆಲವಿದೆ. ಅದರ ಹಿಂದೆ ಪಸ್ತಾಪುರ ಎಂಬ ಕೆರೆಯಿದೆ. ಕೆರೆ ತುಂಬಿದಾಗ ನೀರು ಗವಿಯ ಬಂಡೆಯ ಮೇಲೆ ಹರಿದು, ಎತ್ತರದಿಂದ ಕೆಳಗೆ ಬೀಳುವಾಗ ಆ ಜಲಪಾತದ ದೃಶ್ಯ ರಮಣೀಯ. ಮಳೆಗಾಲದಲ್ಲಿ ಇದರ ಅಂದ ನೋಡುವುದೇ ಚಂದ. ಗವಿಯ ಮುಂದೆ ವಿಶಾಲ ಆವರಣವಿದೆ. ಇದರ ಕೆಳಗಡೆ ಸ್ವಲ್ಪ ಕಡಿದಾದ ಕಣಿವೆಯಿದ್ದು, ನೀರು ಇದರ ಮೂಲಕ ಹರಿದು, ಗುಡ್ಡದ ಕೆಳಗಿರುವ 'ರಾಕಂಗೇರಾ' ಕೆರೆಗೆ ಸೇರುತ್ತದೆ. ಬರೀ ಬಂಡೆಗಲ್ಲುಗಳ ಈ ಗುಡ್ಡದಲ್ಲಿ, ಮೋನಪ್ಪಯ್ಯನ ಜಾಗದಲ್ಲಿ ಮಾತ್ರ ಬೇವಿನಮರ, ಅರಳಿಮರ, ಇತರೆ ದೊಡ್ಡದೊಡ್ಡ ಮರಗಳಿರುವುದು ಈ ಜಾಗದ ಒಂದು ಆಕರ್ಷಣೆ.

(ಎಸ್‌ಇಎಸ್)

ತಿವಾರಿ ಆರ್ಟ್‌ಗ್ಯಾಲರಿ: ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ಕಲಬುರ್ಗಿ ಮಹಾನಗರಕ್ಕೊಂದು ಅವೋಘವಾದ ಇತಿಹಾಸವಿದೆ. ಚಿತ್ರಕಲೆ ಮತ್ತು ಕಲಾಕೃತಿಗಳ ಪ್ರದರ್ಶನಕ್ಕೆ ಇಲ್ಲೊಂದು ಆರ್ಟ್‌ಗ್ಯಾಲರಿ ಇರಲಿಲ್ಲ. ಇತ್ತೀಚೆಗೆ ಭವ್ಯ ಹಾಗೂ ಅಚ್ಚುಕಟ್ಟಾದ ತಿವಾರಿ ಆರ್ಟ್‌ಗ್ಯಾಲರಿ ನಿರ್ಮಾಣಗೊಂಡಿದೆ. ಗ್ಯಾಲರಿಯ ಮುಖ್ಯ ನಿರ್ದೇಶಕಿ ವಿಶ್ವೇಶ್ವರಿ ತಿವಾರಿ ಅವರು ಕಲಾವಿದರಾಗಿ ಗೃಹಿಣಿಯಾಗಿ ಕಲಾವಿದರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರು. ಇವರು ತಮ್ಮ ಸ್ವಂತ ಬಂಡವಾಳ ಹಾಕಿ, ತಂದೆ–ತಾಯಿ ಹಾಗೂ ಬಂಧುಗಳ ಸಹಕಾರದಿಂದ ಈ ಆರ್ಟ್‌ಗ್ಯಾಲರಿ ಪ್ರಾರಂಭಿಸಿ, ಸ್ಥಳೀಯ ಕಲಾವಿದರಿಗೆ ಕೃತಿಗಳನ್ನು ಪ್ರದರ್ಶಿಸಲು ವೇದಿಕೆಯ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ.



ತಿವಾರಿ ಆರ್ಟ್‌ಗ್ಯಾಲರಿ, ಗುಲಬರ್ಗಾ

ಕಲಬುರ್ಗಿಯಲ್ಲಿ ಶೇ. 70ರಷ್ಟು ಚಿತ್ರಕಲಾ ಪ್ರಿಯರಿದ್ದಾರೆಂದರೆ, ಬೆಂಗಳೂರು, ಚಿತ್ರಕಲೆಯಲ್ಲಿ ಮೊದಲ ಕಣ್ಣಾದರೆ, ಕಲಬುರ್ಗಿ ಎರಡನೆಯದು. ಚಿತ್ರಕಲಾವಿದರಿಗೆ, ತಮ್ಮ ಚಿತ್ರ ಕಲೆಯನ್ನು ಪ್ರದರ್ಶನ ಮಾಡಲು ಒಂದು ಸುವರ್ಣ ಅವಕಾಶ ಇದೀಗ ಕೂಡಿ ಬಂದಿದೆ. (ಆರ್‌ಎಸ್‌ಜೆ)

ತು

ತುಕಾರಾಮ ಭಕ್ತಂಪಳ್ಳಿ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಚಿಮ್ಮನಚೋಡನಲ್ಲಿ 1965 ಆಗಸ್ಟ್ 1ರಂದು ಜನಿಸಿದರು. ತಂದೆ ನಾಗಪ್ಪ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪಳಗಿದವರಾಗಿದ್ದರು. ಪಂ. ಪುಟ್ಟರಾಜ ಗವಾಯಿಗಳವರಲ್ಲಿ ಸಂಗೀತ ಅಭ್ಯಾಸವನ್ನು ಪೂರೈಸಿದ್ದಾರೆ.

ಇವರು ಲಿಂಗಸ್ಗೂರು ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕದ ಹಲವಾರು ಆಕಾಶವಾಣಿ ಕೇಂದ್ರಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಹಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಲಿಂಗಸ್ಗೂರು ತಾಲ್ಲೂಕಿನಲ್ಲಿ 'ಉತ್ತಮ ಶಿಕ್ಷಕ' ಪ್ರಶಸ್ತಿ ಲಭಿಸಿದೆ. ಅಲ್ಲದೆ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಪ್ರಾರಂಭದಲ್ಲಿ ತಮ್ಮ ಸ್ವಂತ ಊರಲ್ಲಿ ಉಪಜೀವನಕ್ಕಾಗಿ ಕೂಲಿ ಕೆಲಸ ಮಾಡುವಾಗ ಸ್ಫೋಟಕವೊಂದರಿಂದ ಕಣ್ಣು ಕಳೆದುಕೊಂಡು ನಿರಾಶ್ರಿತರಾದಾಗ ಭಂಗವಚಿತರಾದ ಕಣ್ಣೂರ ಅವರ ಸಹಾಯದಿಂದ ಗದುಗಿಗೆ ಹೋಗಿ ಸಂಗೀತ ಅಭ್ಯಾಸ ಮಾಡಿ ಗವಾಯಿಗಳಾದರು. ನಂತರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಂಗೀತ ಶಿಕ್ಷಕರಾಗಿ ಆಯ್ಕೆಯಾದರು. ಅಲ್ಲದೆ ರಾಜ್ಯದ ಹಲವು ಸಂಘ–ಸಂಸ್ಥೆಗಳಿಂದ ಸನ್ಮಾನಗಳನ್ನು ಸ್ವೀಕರಿಸಿದವರಾಗಿದ್ದಾರೆ. (ಆಯ್‌ಕೆ)

ತುಕಾರಾಮ ಬಡಿಗೇರ: ಶಿಲ್ಪಿ. ರಾಯಚೂರು ಜಿಲ್ಲೆ ಸಿಂಧನೂರಿನವರು. ಈ ಕಲಾವಿದರ ವಾಸ್ತುಶಿಲ್ಪ ಹಾಗೂ ಸ್ಮರಣಶಕ್ತಿ ಕಲ್ಪನಾ ಶಕ್ತಿ ನಿಜಕ್ಕೂ ಅದ್ಭುತ. ಇವರು ಕೆತ್ತಿದ ಕೃತಿಗಳಲ್ಲಿ ನೆಹರು, ಸುಭಾಸಚಂದ್ರ ಬೋಸ್, ಮಹಾತ್ಮ ಗಾಂಧಿ ಮುಂತಾದ ನಾಯಕರು ಇವರ ಕೈಚಳಕದಲ್ಲಿ ರೂಪ ಪಡೆದಿದ್ದಾರೆ. ಚಿತ್ರಕಲಾ ಶಿಕ್ಷಕರಾಗಿರುವ ಇವರು, ತಮ್ಮ 7ನೆಯ ವರ್ಷದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ ಹೊಂದಿದವರು.

ವೃತ್ತಿಯಿಂದ ಬಡಿಗೇರರಾಗಿರುವ ಇವರು, ಹೊಟ್ಟೆಪಾಡಿಗಾಗಿ ತಂದೆ ಮಾಡುತ್ತಿದ್ದ ಮಣ್ಣಿನ ಗಣೇಶನಲ್ಲಿ ಇವರು ಕಲೆಯನ್ನು ಗುರುತಿಸಿಕೊಂಡು ಪ್ರಾರಂಭದಲ್ಲಿ ಚಾಕ್‌ಪೀಸ್ ಹಾಗೂ ಸಾಬೂನಿನಲ್ಲಿ ಸುಂದರ ಮೂರ್ತಿಗಳನ್ನು ಹಾಗೂ ಹೂಗಳನ್ನು ರಚಿಸಿ ಇದನ್ನು ಶಾಸ್ತ್ರೋಕ್ತವಾಗಿ ಶಿಕ್ಷಣ ಪಡೆದುಕೊಂಡು, ಉತ್ತಮ ಶಿಲ್ಪಿಯಾಗಿ ಹೊರ ಹೊಮ್ಮಿದ್ದಾರೆ. ಶಕ್ತಿಯ ಮೂರ್ತಿಗಳ ಮೇಲೆ ಇವರದು ವಿಶೇಷ ಆಸಕ್ತಿ. ಇಲ್ಲಿಯವರೆಗೆ ಒಂದು ನೂರಾ ಐವತ್ತಕ್ಕೂ ಹೆಚ್ಚು ಮೂರ್ತಿಗಳನ್ನು ಕೆತ್ತಿದ್ದು, ರಾಜ್ಯದ ಹೊರಗೂ ಒಳಗೂ ಇವರ ಮೂರ್ತಿಗಳು ಪ್ರತಿಷ್ಠಾಪಿತಗೊಂಡು ವೈಭವದಿಂದ ಪೂಜೆಗೊಳ್ಳುತ್ತಿವೆ. ಅನೇಕ ಕಡೆ ಇವರು ನಿರ್ಮಿಸಿದ ದ್ವಾರ ಬಾಗಿಲುಗಳು ಕೂಡ ರಾರಾಜಿಸುತ್ತಿವೆ. 18 ಅಡಿ ಎತ್ತರದ ದ್ವಾರ ನಿರ್ಮಿಸಿದ ಕೀರ್ತಿಯೂ ಸಹ ಇವರಿಗೆ ಸಲ್ಲುತ್ತದೆ.

ಶಿಲ್ಪಕಲೆಯಲ್ಲಿ ಭಾರತೀಯ ಸಂಸ್ಕೃತಿಯೇ ಅತ್ಯಂತ ಶ್ರೇಷ್ಠ ಎಂದು ನಂಬಿರುವ ಈ ಶಿಲ್ಪಿಯ ಕೈಯಿಂದ ಈಗಾಗಲೇ ಅಂಭಾ ಭವಾನಿ, ಗಣೇಶ, ಮಾರ್ಕಂಡೇಶ್ವರ, ಆಂಜನೇಯ, ಲಕ್ಷ್ಮೀ ಶಿವಲಿಂಗಗಳು, ನಂದಿ, ರಾಮ, ಸೀತಾ, ಲಕ್ಷ್ಮಣ ಶಿಲಾ ಮೂರ್ತಿಗಳು ಸಾಕಾರಗೊಂಡು ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ರಾಜ್ಯದ ನಾನಾ ಮೂಲೆಗಳಿಂದ ಭಕ್ತರು ಬಂದು ತಮ್ಮ ಆರಾಧ್ಯ ದೇವರನ್ನು ಖರೀದಿಸುತ್ತಾರೆ. ಕಲೆಗೆ ಬೆಲೆಯೇ ಇಲ್ಲ ಎಂದು ನಯವಾಗಿ ಹೇಳುವ ಬಡಿಗೇರ ಅವರು, ಕೊಟ್ಟಷ್ಟು ಇವರು ಪಡೆದಷ್ಟು. ಇಂದಿನ ದಿನಮಾನಗಳಲ್ಲಿ ಆಧುನಿಕ ಯಂತ್ರಗಳಿಂದ ಮೂರ್ತಿಗಳನ್ನು ಅತ್ಯಲ್ಪ ಸಮಯದಲ್ಲಿ ಸಿದ್ಧಗೊಳಿಸುತ್ತಿವೆ. (ಎಸ್‌ಕೆಎಸ್)

ತುಳಜಾಸಾ ಬಸುದೆ: ಚಿತ್ರಕಲಾವಿದ. ಕುಷ್ಟಗಿ ತಾಲ್ಲೂಕಿನ ಹನುಮಸಾಗರ ಗ್ರಾಮದ ಪ್ರತಿಭೆ ಮತ್ತು ಪರಿಶ್ರಮ ಎರಡೂ ಹದವಾಗಿ ಮೇಳೈಸಿದರೆ ಎಂಥ ಪ್ರತಿಕೂಲ ಸ್ಥಿತಿಯನ್ನೂ ಹಿಮ್ಮೆಟ್ಟಿಸಿ, ಒಬ್ಬ ವ್ಯಕ್ತಿ ಹೇಗೆ ಸಾಧನೆ ಮಾಡುತ್ತಾನೆ ಎಂಬುದಕ್ಕೆ ಇವರೆ ಸಾಕ್ಷಿ. ಬಾಲ್ಯದಲ್ಲಿಯೇ ಈ ಹವ್ಯಾಸವನ್ನು ಬೆಳೆಸಿಕೊಂಡಿರುವ ಈ ಯುವಕ ಬಡ ಕುಟುಂಬದಿಂದ ಬಂದವನು. ತಂದೆ ನೇಕಾರಿಕೆ ಮಾಡುತ್ತಿದ್ದು, ಇದರಿಂದಲೇ ಇವರ ಜೀವನ. ಮಗನಿಗೆ ಬೋರ್ಡ ಬರೆಯುವ, ಬ್ಯಾನರ್ ಬರೆಯುವ, ಸ್ಕ್ರೀನ್ ಪ್ರಿಂಟಿಂಗ್, ಕ್ರಾಫ್ಟ್, ಥರ್ಮಾಕೋಲ್ ಕಟಿಂಗ್, ರೇಡಿಯಂ ಕಟಿಂಗ್, ಪ್ಲಾಸ್ಟಿಕ್ ಡಿಜೈನ್ಸ್, ವಿಗ್ರಹಗಳನ್ನು ತಯಾರಿಸುವ ಆಸಕ್ತಿ.

ಕಡು ಬಡವನಾದರೂ, ಅವನಲ್ಲಿರುವ ಪ್ರತಿಭೆ ಮಾತ್ರ ಅವನನ್ನು ಶ್ರೀಮಂತಿಕೆಯತ್ತ ಕರೆದೊಯ್ಯುತ್ತಿದೆ ಎನ್ನುವುದಕ್ಕೆ ಈ ಯುವಕ ಸಾಕ್ಷಿಯಾಗಿದ್ದಾನೆ. ಇವರ ಕೈಯಲ್ಲಿ ಅನೇಕ ನಿರುಪಯುಕ್ತ ವಸ್ತುಗಳು ನಾನಾ ರೀತಿಯ ಆಕಾರ ಪಡೆದು, ಕಲೆಯ ಸಿರಿಯ ಮೆರುಗನ್ನು ಪಡೆದಿವೆ. ಮರಳಿನಿಂದ ಚಿತ್ರಗಳು, ಬಣ್ಣದ ಸೀಸಿನಿಂದ ರೇಖಾಚಿತ್ರ, ಸೀಮೆ ಸುಣ್ಣದ ಬಳಪದಲ್ಲಿ ಕೆತ್ತನೆ, ಕಸವೆಂದು ಬೀಸಾಡುವ ವಸ್ತುಗಳು ಈ ಕಲಾವಿದನ ಕೈಯಲ್ಲಿ ಜೀವ ಪಡೆದಿವೆ. ಹೆಚ್ಚಾಗಿ ಕಮರ್ಷಿಯಲ್ ಡ್ರಾಯಿಂಗ್, ಪ್ರಕೃತಿ ಚಿತ್ರಗಳನ್ನು ಬಿಡಿಸುವ ಈ ಯುವಕ, ಸ್ವಪ್ರಯತ್ನದಿಂದಲೇ ವಿವಿಧ ಕಲಾಪ್ರದರ್ಶನ ಮಾಡಿದ್ದಾನೆ. ಇವರಿಗೆ ಚಿತ್ರಕಲೆಯಲ್ಲಿ ಜಲವರ್ಣವೇ ಹೆಚ್ಚು ಖುಷಿ ನೀಡುವ ಮಾಧ್ಯಮ. ಅದರಲ್ಲೂ ಸಂಯೋಜನಾ ಚಿತ್ರ, ವ್ಯಕ್ತಿಚಿತ್ರಗಳಿಗಿಂತ ನಿಸರ್ಗ ಚಿತ್ರಗಳೇ ಸಂತೋಷ ಕೊಡುತ್ತವೆ. ನಿಸರ್ಗದಲ್ಲಿ ಗೋಚರಿಸುವ ಬಣ್ಣಗಳೇ ಬಣ್ಣದ ಜ್ಞಾನಕ್ಕೆ ಪ್ರಯೋಗಕ್ಕೆ ತುಂಬಾ ಹತ್ತಿರವಾದದ್ದು. ಅದರಲ್ಲಿ ಸಿಗುವ ಬಣ್ಣಗಳ ಬಳಕೆ, ಪರಿಕಲ್ಪನೆ, ಯಥಾದರ್ಶನಗಳು ಹಸ್ತ ಕೌಶಲ್ಯಕ್ಕೆ ಚಾಲನೆ, ಸ್ಫೂರ್ತಿ ನೀಡುತ್ತವೆ ಎನ್ನುವುದು ಇವರ ಅಭಿಪ್ರಾಯ.



ಕಿನ್ನಾಳ ಕಲೆ (ಕೊಪ್ಪಳ)

ಚಿತ್ರ ಸೂಚಿ – ೧೭

ಕೊಪ್ಪಳ ಜಿಲ್ಲೆಯಲ್ಲಿನ ಅಂದ-ಚೆಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾನೆ. ಬಾಲ್ಯದಲ್ಲಿಯೇ ಶಿಕ್ಷಣದ ಜೊತೆಗೆ ಈ ಕಲೆಯನ್ನೂ ಬೆಳೆಸಿಕೊಂಡು, ತಮ್ಮ ಹವ್ಯಾಸಿ ಕಲೆ ವಿಷಯವನ್ನೇ ಪಡೆದು ಬಿ.ಎ. ಪದವೀಧರರಾದ ಇವರು, ಪ್ರಸ್ತುತ ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾನೆ. ಯಾವುದೇ ಒಂದು ವಸ್ತುವನ್ನು ನೋಡಿದಾಗ, ಆ ವಸ್ತುವಿನ ಕುರಿತು ತಮ್ಮದೇ ಆದ ಒಂದು ಭಾವನೆಯನ್ನು ಬಹಿರಂಗಕ್ಕೆ ತರಲು ಆ ಕುಂಚದ ಕಲೆ ಇವರಿಗೆ ಸಹಕಾರಿಯಾಗಿದೆ. ಅಷ್ಟೇ ಅಲ್ಲ, ವಿಶೇಷವಾಗಿ ಆಸಕ್ತಿಯುಳ್ಳವರಿಗೆ ಮನೆಯಲ್ಲಿಯೇ ಆಸಕ್ತರಿಗೆ ತರಬೇತಿ ಕೊಡುತ್ತಾನೆ. (ಆರ್‌ಪಿಕೆ)

ತೊ

ತೊಗಲು ಗೊಂಬೆಯಾಟ: ಜನಪದ ರಂಗಭೂಮಿಯ ಒಂದು ಪ್ರಮುಖ ಕಲೆ. ತೊಗಲು ಗೊಂಬೆಯಾಟದ ಕಲೆಯನ್ನು ತಲೆತಲಾಂತರಗಳಿಂದಲೂ ಬಂದಿರುವ ಕಿಳ್ಳೇಕ್ಯಾತ ಎಂಬ ಜನಾಂಗದವರು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರತಿ ಹಳ್ಳಿ ಹಳ್ಳಿಗಳಲ್ಲಿ, ನಗರ ಪ್ರದೇಶದಲ್ಲಿ ತಮ್ಮ ಮಧುರ ಕಂಠದಿಂದ ಕಲಾ ಕೌಶಲ್ಯದ ಜನಪದ ಶೈಲಿಯಲ್ಲಿ ತೊಗಲು ಗೊಂಬೆಯಾಟ ಪ್ರದರ್ಶಿಸುತ್ತಾ, ರಾಜ ಮಹಾರಾಜರ ಶಿವಭಕ್ತರ ಚರಿತ್ರೆ ಮಹಾಭಾರತ ಮತ್ತು ರಾಮಾಯಣದಂತಹ ಕಥೆಗಳನ್ನು ಆಧರಿಸಿ, ಮೋಹಕ ರಾತ್ರಿಯಲ್ಲಿ ತೊಗಲು ಗೊಂಬೆಯಾಟಗಳನ್ನು ನಿರೂಪಿಸುತ್ತಾ, ಪ್ರದರ್ಶಿಸುತ್ತಾ ರಂಜಿಸುತ್ತಾ ಬಂದ ಈ ಕಲಾವಿದರು, ಇತ್ತೀಚೆಗೆ ಸಿನಿಮಾ ಹಾಗೂ ದೂರದರ್ಶನ ಮಾಧ್ಯಮದ ಪೈಪೋಟಿಯಿಂದಾಗಿ ಈಗ ಅಪರೂಪವಾಗುತ್ತಿದ್ದಾರೆ.

ಭಾರತದ ಜನಪದ ರಂಗಭೂಮಿ ಪ್ರಕಾರಗಳಲ್ಲಿ ತೊಗಲು ಗೊಂಬೆಯಾಟವು ಒಂದು ಪ್ರದರ್ಶನಾತ್ಮಕ ರಂಗಕಲೆ. ಈ ಕಲಾಪ್ರಕಾಶಕ್ಕೆ ವಿಶ್ವ ಪರಂಪರೆಯಿದೆ. ಭಾರತದ ಬಹುತೇಕ ರಾಜ್ಯಗಳಲ್ಲಿ ತೊಗಲು ಗೊಂಬೆಯಾಟ ಪ್ರಚಲಿತವಿದೆ. ಹಾಗೆಯೇ ಆಯಾ ರಾಜ್ಯಗಳಲ್ಲಿ ಈ ಗೊಂಬೆಯಾಟಕ್ಕೆ ವಿವಿಧ ಹೆಸರಿನಿಂದ ಕರೆಯುವುದುಂಟು. ಒಡಿಸ್ಸದಲ್ಲಿ ರಾಮು ಭಾವ, ರಾಜಸ್ತಾನದಲ್ಲಿ ಕಟಪುತ್ಲಿ, ಉತ್ತರ ಪ್ರದೇಶದಲ್ಲಿ ಗುಲಾಬೋ, ಕೇರಳದಲ್ಲಿ ಪಾಲಿಕ್ಕೊತ್ತು, ಮಧ್ಯ ಪ್ರದೇಶದಲ್ಲಿ ನಿತಾಬೋ ಹಾಗೂ ಪಶ್ಚಿಮ ಬಂಗಾಳದಲ್ಲಿ ಪುತಲ್ ನಾಚ್– ಹೀಗೆ ಭಾರತದಾದ್ಯಂತ ಇನ್ನೂ ಅನೇಕ ರಾಜ್ಯಗಳಲ್ಲಿ ಈ ತೊಗಲು ಗೊಂಬೆಯಾಟದ ಕಲೆ ಹರಡಿಕೊಂಡಿದೆ. ಅಲ್ಲದೆ; ಚೀನ, ಮಲೇಶಿಯಾ, ಥಾಯ್ಲೆಂಡ್, ಜಾವಾ ಇನ್ನೂ ಅನೇಕ ಏಷ್ಯದ ದೇಶದಲ್ಲಿ ತೊಗಲು ಗೊಂಬೆಯಾಟಗಳು ಪ್ರಚಲಿತವಿದೆ. ಈ ಕಲೆ ಸುಮಾರು 3000 ವರ್ಷದಷ್ಟು ಪ್ರಾಚೀನವಾದದು ಎಂದು ಹೇಳಲಾಗಿದೆ. ಪ್ರಾಚೀನ ಗ್ರೀಸ್‌ನಲ್ಲಿ ತೊಗಲು ಗೊಂಬೆಯಾಟದ ಶಾಲೆಗಳೇ ಇದ್ದುವೆಂದು ಹೇಳಲಾಗುತ್ತದೆ. ಈಜಿಪ್ತ್ ದೇಶದಲ್ಲಿ ಗೋರಿಗಳಲ್ಲಿ ಈ ಗೊಂಬೆಯಾಟದ ಕಲೆಗೆ ಸಂಬಂಧಿಸಿದ ಅವಶೇಷಗಳು ದೊರೆತಿವೆ ಎಂಬ ಅಂಶ ಬೆಳಕಿಗೆ ಬಂದಿದೆ.

ಕರ್ನಾಟಕದಲ್ಲಿ 11ನೆಯ ಶತಮಾನದ ನೇಮಿನಾಥ ಪುರಾಣದಲ್ಲಿ 'ತೊಗಲ್ಪಾವೆ' ಎಂಬ ಪದ ಈ ತೊಗಲು



'ಅಶೋಕ ವನ' ತೊಗಲುಗೊಂಬೆ

ಗೊಂಬೆಯಾಟದ ಪ್ರಾಚೀನತೆಯನ್ನು ಸಾರುತ್ತದೆ. ಶ್ರೀ ಕೃಷ್ಣ ದೇವರಾಯನ ಕಾಲದಲ್ಲಿ ತೊಗಲು ಗೊಂಬೆಯಾಟವು ಊರ್ಜಿತಾವಸ್ಥೆಯಲ್ಲಿತ್ತೆಂದು ಹೇಳಲಾಗಿದೆ. ಮೂಲತಃ ಕಿಳ್ಳೆಕ್ಯಾತ ಜನಾಂಗವು, ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಬೆಸ್ತರು ಎಂಬ ಗ್ರಹಿಕೆ ಇದೆ. ಇನ್ನೊಂದು ಕಡೆ ಗೊಂಬೆಯಾಟದ ಕುಟುಂಬದ ಪೂರ್ವಜರು ಶ್ರೀರಾಮನ ಕಾಲದವರಂತೆ. ಇವರು ಶ್ರೀರಾಮನ ಅತ್ಯಂತ ನಿಷ್ಠಾವಂತ ಭಕ್ತರಾಗಿದ್ದರು. ಶ್ರೀರಾಮ ಈ ಲೋಕದಿಂದ ನಿರ್ಗಮಿಸುವಾಗ ಇವರ ಮೂಲ ಪುರುಷರು, 'ನೀನಂತೂ ಹೊರಟೆ. ಇನ್ನು ನಮ್ಮ ಪಾಡೇನು ? ನಮ್ಮ ಜೀವನೋಪಾಯಕ್ಕೆ ಒಂದು ಹಾದಿ ತೋರಿಸು' ಎಂದು ಶ್ರೀರಾಮನಲ್ಲಿ

ಬೇಡಿಕೊಂಡಾಗ, ಶ್ರೀರಾಮ ತನ್ನ ಒಂದು ಚಿತ್ರಪಟವನ್ನು ಅವರಿಗೆ ಕೊಟ್ಟು 'ಇದನ್ನು ಜನರಿಗೆ ತೋರಿಸಿ ನೀವೆಲ್ಲರೂ ಜೀವಿಸಿರಿ' ಎಂದು ಹೇಳಿದನಂತೆ! ಅಂದಿನಿಂದ ಕಿಳ್ಳೇಕ್ಯಾತ ಕುಟುಂಬ ಗೊಂಬೆಯಾಟವನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಹಾಗೆಯೇ ಇಂದಿಗೂ ಈ ಜನಾಂಗದಲ್ಲಿ ಮೊದಲು ಹುಟ್ಟಿದ ಮಗುವಿಗೆ ರಾಮನ ಹೆಸರು ಇಡುತ್ತಾರೆ. ಹೀಗೆ ಪೌರಾಣಿಕ ಕಥೆಯುಂಟು. ಕಿಳ್ಳೇಕ್ಯಾತ ಜನಾಂಗದ ತೊಗಲು ಗೊಂಬೆ ಯಾಟಕ್ಕೆ ತನ್ನದೇ ಆದ ಜಾನಪದ ನಂಬಿಕೆಯೊಂದಿದೆ. ಇವರು ವಿರಾಟಪರ್ವ ಗೊಂಬೆಯಾಟವನ್ನು ಪ್ರದರ್ಶಿಸಿದರೆ, ಬಹು ಕಾಲದಿಂದ ಬಾರದಿದ್ದ ಮಳೆ ಬರುತ್ತದೆಯಂತೆ. ಹಾಗೆಯೇ ರೋಗರುಜಿನಗಳು ದೂರವಾಗುತ್ತವೆಂಬ ಬಲವಾದ ನಂಬಿಕೆ ಇಂದಿಗೂ ಉಂಟು!

ತೊಗಲು ಗೊಂಬೆಗಳನ್ನು ಹೆಚ್ಚಾಗಿ ಜಿಂಕೆ, ಆಡು, ಮುಂತಾದ ಪ್ರಾಣಿಗಳ ಚರ್ಮದಿಂದ ಮಾಡುತ್ತಾರೆ. ಮತ್ತು ಈ ತೊಗಲು ಗೊಂಬೆಯಾಟ ಪ್ರದರ್ಶನದಲ್ಲಿ ಗಂಡು ಗೊಂಬೆ ಕಿಳ್ಳೇಕ್ಯಾತ ಹಾಗೂ ಹೆಣ್ಣುಗೊಂಬೆ ಬಂಗಾರಕ್ಕ ಈಕೆ ಕಿಳ್ಳೇಕ್ಯಾತನ ಮಡದಿ ಈ ಗೊಂಬೆಯಾಟವನ್ನು ಪ್ರದರ್ಶಿಸುವಾಗ, ಈ ಎರಡು ಪಾತ್ರಗಳು ಮುಖ್ಯವಾದುವು. ಇವು ಆಟದುದ್ದಕ್ಕೂ ಬರುತ್ತಿರುತ್ತವೆ. ಜೊತೆಗೆ ಆಗಾಗ ಪ್ರೇಕ್ಷಕರನ್ನು ನಕ್ಕು ನಲಿಸಿ, ಆಟವನ್ನು ಮುಂದುವರಿಸುವುವು. ಈ ಕಿಳ್ಳೇಕ್ಯಾತ ಜನಾಂಗದ ತೊಗಲು ಗೊಂಬೆಯಾಟದ ಹೆಚ್ಚು ಕಲಾವಿದರು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಲಕಸಮುದ್ರ ಗ್ರಾಮದಲ್ಲಿ ದುರುಗಪ್ಪ ಹಾಗೂ ಸಂಗಡಿಗರು ಹೆಸರು ಗಳಿಸಿಕೊಂಡಿದ್ದಾರೆ.

ಯಲಬುರ್ಗಾ ನಗರದ ಸಿದ್ಧರಾಮ ಶಿವಾಚಾರ್ಯ ಮಹಾ ಸ್ವಾಮಿಗಳು ಇವರಿಗೆ ಬೊಂಬೆಯಾಟದ ಚತುರರು ಎಂಬ ಬಿರುದು ನೀಡಿ ಸನ್ಮಾನಿಸಿದ್ದಾರೆ. ಹಿಂದೆ ರಾಜಾಶ್ರಯ ಪಡೆದಿದ್ದ ತೊಗಲು ಗೊಂಬೆಯಾಟ ಕಲೆ ಉತ್ತುಂಗ ಶಿಖರಕ್ಕೇರಿತ್ತು. ಆದರೆ ಇಂದು ಈ ಕಲಾವಿದರ ಕಲಾ ಪ್ರದರ್ಶನವು ಬದಲಾಗುತ್ತಿರುವ ಸನ್ನಿವೇಶದಲ್ಲಿ ಸೊರಗುತ್ತಿದೆ. ಹಾಗೆಯೇ ಗ್ರಾಮೀಣ ಭಾಗದಲ್ಲೂ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಈ ತೊಗಲು ಗೊಂಬೆ ಯಾಟದ ಪ್ರದರ್ಶನವು ಬಹಳ ಕಡಿಮೆಯಾಗಿದೆ. ಈ ಜನಾಂಗದ ಕಲೆ ಇಂದು ಆಧುನಿಕ ದೃಶ್ಯಮಾಧ್ಯಮಗಳ ಒತ್ತಡಕ್ಕೆ ಸಿಲುಕಿ, ಕ್ರಮೇಣ ಬಹುದೂರ ಮರೆಯಾಗುತ್ತಿದ್ದಾರೆ.


(ವಿಎಸ್‌ಎಸ್)

ದ

ದಖ್ಖನಿ ಚಿತ್ರಗಳು: ಗುಲ್ಬರ್ಗವನ್ನು ಕೇಂದ್ರವಾಗಿರಿಸಿಕೊಂಡು 1347ರಲ್ಲಿ ಮಹಮದ್ದೀಯ ಅರಸು ಮನೆತನವೊಂದು ರಾಜ್ಯಾಡಳಿತ ಆರಂಭಿಸಿತು. ಮಹಮದ್ ಶಾಹನ ಕಾಲದಲ್ಲಿ (1482–1518) ಈ ಸಾಮ್ರಾಜ್ಯ ಐದು ಭಾಗಗಳಾಗಿ ಒಡೆದು ಬೀದರ್, ಬಿರಾರ್, ಗೋಲ್ಕೊಂಡ, ಅಹಮದ್‌ನಗರ, ಮತ್ತು ಬಿಜಾಪುರಗಳಲ್ಲಿ ಸ್ವತಂತ್ರವಾಗಿ ರಾಜ್ಯಭಾರ ಆರಂಭಿಸಿತು. ಇವುಗಳಲ್ಲಿ ಅಹಮದ್‌ನಗರ ಹಾಗೂ ಬಿಜಾಪುರಗಳ ಅರಸರು ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ನೀಡಿದರು. ಅಹಮದ್‌ನಗರದಲ್ಲಿ 1ನೆಯ ಹುಸೇನ್ ನಿಜಾಮ್ ಶಹ (1553–65) ಕಾಲದಲ್ಲಿ 'ತಾರಿಫ್–ಇ–ಹುಸೇನ್ ಶಾಹಿ' ಎಂಬ ಚಿತ್ರಮಯ ಗ್ರಂಥವೂ 1590ರ ಸುಮಾರಿಗೆ ಕೆಲವು ರಾಗಮಾಲ ಚಿತ್ರಗಳೂ ರಚಿತ ವಾದವು.

ಬಿಜಾಪುರದ ಆದಿಲ್‌ಶಾಹಿ ಅರಸರುಗಳಲ್ಲಿ 1ನೆಯ ಅಲಿಗೆ (1558–80) ಚಿತ್ರಕಲೆಯ ಬಗ್ಗೆ ಆಸಕ್ತಿಯಿದ್ದು ಪರ್ಷಿಯ ಮತ್ತು ತುರ್ಕಿಸ್ಥಾನಗಳೊಂದಿಗೆ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದ. ಒಡೆದ ಐದು ರಾಜ್ಯಗಳೂ ಒಟ್ಟಾಗಿ ವಿಜಯನಗರದ ಅರಸರನ್ನು ಗೆದ್ದ ಬಗ್ಗೆ 1565ರಲ್ಲಿ 'ತಾರಿಫ್–ಇ–ಹುಸೇನ್–ಶಾಹಿ' ಗ್ರಂಥ ರಚನೆಯಾಗಿದ್ದು ಈಗ ಅದು ಪುಣೆಯ ಇತಿಹಾಸ ಸಂಶೋಧನಾ ಮಂಡಳದಲ್ಲಿದೆ. ಇದರ ಅನಂತರ ಈತನ ಕಾಲದಲ್ಲಿ (1570) 'ನುಜುಮ್–ಅಲ್–ಉಲೂಮ್' ಎಂಬ ನಕ್ಷತ್ರ ಶಾಸ್ತ್ರದ ಪುಸ್ತಕ ರಚನೆಯಾಗಿದ್ದು 876 ಚಿತ್ರಗಳನ್ನು ಒಳಗೊಂಡಿತ್ತು. ಚಿತ್ರ ಸಂಗೀತಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದುದು 2ನೆಯ ಇಬ್ರಾಹಿಂ ಆದಿಲ್‌ಶಾಹಿಗೆ (1580–1627). ಈತ ಬರೆದ 'ಕಿತಾಬ್ ಇ ನೌರಸ್' ಎಂಬ ಸಂಗೀತ ಶಾಸ್ತ್ರಗ್ರಂಥದಲ್ಲೂ ಕೆಲವು ಚಿತ್ರಗಳಿವೆ. ಈತ ತನ್ನ ಮಗಳನ್ನು ಅಕ್ಬರ್‌ಗೆ ಮದುವೆ ಮಾಡಿಕೊಡುವ ಸಂದರ್ಭದಲ್ಲಿ ಕೊಟ್ಟ ಉಡುಗೊರೆಗಳಲ್ಲಿ ಚಿತ್ರ ಭರಿತವಾದ ಎರಡು ಸಾವಿರ ಪುಸ್ತಕಗಳೂ ಇದ್ದವೆಂದು ಹೇಳಿಕೆಯಿದೆ. ಮುಂದೆ ಮಹಮದ್‌ನ ಕಾಲದಲ್ಲೂ (1627–56) ಚಿತ್ರರಚನೆ ಮುಂದುವರಿಯಿತು.


ದಖ್ಖನಿ ಚಿತ್ರಗಳಲ್ಲಿ ಮೊದಲಿಗೆ ಪರ್ಶಿಯಾದ ಪ್ರಭಾವವನ್ನು ನಂತರದ ಕಾಲದಲ್ಲಿ ಮುಘಲ್ ಪ್ರಭಾವವನ್ನೂ ಗುರುತಿಸ



ದಖ್ಖನಿ ಚಿತ್ರ



ಸಪ್ತರಥ ಮಾದರಿಯಲ್ಲಿರುವ ಮಹಾದೇವ ದೇವಾಲಯ, ಉಮಾಪುರ–ಲಾಹೇಶ್ವರ (ಬೀದರ್)



ಶಿವ ದೇವಾಲಯ ಮುಖಮಂಟಪದ ಸುಂದರ ಕೆತ್ತನೆಯ ಮಕರ ತೋರಣ, ನಾರಾಯಣಪೂರ (ಬೀದರ್)

ಲಾಗಿದೆ. ರಾಜರ ಹಾಗೂ ರಾಜ ಪರಿವಾರದವರ ಚಿತ್ರಣಗಳೇ ಅಧಿಕ. ಯುದ್ಧ, ಬೇಟೆ ಇತ್ಯಾದಿಗಳು ಇಲ್ಲವೆನ್ನುವಷ್ಟು ಕಡಿಮೆ. ಪ್ರಮಾಣಬದ್ಧವಾದ ಸಪೂರಾದ ಆಕೃತಿಗಳು, ನವುರಾದ ರೇಖಾ ವಿನ್ಯಾಸ, ಸೂಕ್ತ ದೇಹ ರಚನಾಶಾಸ್ತ್ರ(ಅನಾಟಮಿ) ಹಿನ್ನೆಲೆ ಮುನ್ನೆಲೆಗಳಲ್ಲಿ ಸುಂದರವಾದ ಪ್ರಕೃತಿ ದೃಶ್ಯ, ಚಿತ್ರದ ಒಟ್ಟು ಸಂಯೋಜನೆಗೆ ಪೂರಕವಾಗುವ ಅರಮನೆಯ ವಾಸ್ತುಶಿಲ್ಪ, ಗಾಢವಲ್ಲದ ಹಿತಮಿತ ಬಣ್ಣಗಾರಿಕೆ ಇತ್ಯಾದಿಗಳಿಂದ ಕೂಡಿದ ದಖ್ಖನಿ ಚಿತ್ರಗಳು ವೈಭವೋಪೇತ ಶ್ರೀಮಂತಿಕೆಯನ್ನು ಮೆರೆಸುವಂತೆ ಕಾಣುತ್ತವೆ. ರಾಜ–ರಾಣಿ, ಅಧಿಕಾರಿ, ಸೇವಕ, ಯೋಗಿಣಿ, ತಪಸ್ವಿ ಇತ್ಯಾದಿ ಜನರನ್ನು ಸ್ಪಷ್ಟವಾಗಿ ಗುರುತಿಸುವಂತೆ ಅವರ ವೇಷ ಭೂಷಣಗಳು ರಚಿತವಾಗಿವೆ.

ದಖ್ಖನಿ ಚಿತ್ರದ ಹಲವಾರು ಶಾಖೆಗಳು ಮುಂದೆ ಗೋಲ್ಕೊಂಡ, ಹೈದರಾಬಾದ್, ಕರ್ನೂಲ್‌ಗಳಲ್ಲದೆ ಕರ್ನಾಟಕದ ಸುರಪುರಗಳಲ್ಲೂ ಬೆಳೆದು ಬಂದಿದ್ದು ತಂಜಾವೂರು ಹಾಗೂ ಮೈಸೂರು ಶೈಲಿಗಳ ಮೇಲೂ ತನ್ನ ಪ್ರಭಾವವನ್ನು ಬೀರಿರುವುದು ಕಾಣಬಹುದು.

(ಎಎಲ್‌ಎನ್)

ದಯಾನಂದ ಹಿರೇಮಠ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತಬಲಾ ವಾದಕರು. ಚಿಂಚೋಳಿ ತಾಲ್ಲೂಕಿನ ಕಲ್ಲೂರಿನಲ್ಲಿ 1982 ಮೇ 8ರಂದು ಜನಿಸಿದರು. ತಂದೆ. ಸಿದ್ಧರಾಮಯ್ಯ. ತಾಯಿ ಸಂಗಮ್ಮ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತಬಲಾ ವಾದಕರಾಗಿ ಪ್ರಸಿದ್ಧರಾಗಿದ್ದರು.

ಇವರು ಅಣ್ಣ ರೇವಣಸಿದ್ಧಯ್ಯನವರ ಪ್ರೋತ್ಸಾಹ ಹಾಗೂ ಪ್ರೇರಣೆಯಿಂದ ಗದುಗಿಗೆ ಹೋಗಿ ಪಂ. ಪುಟ್ಟರಾಜ ಗವಾಯಿಗಳವರ ಹತ್ತಿರ 8 ವರ್ಷಗಳ ಕಾಲ ತಬಲಾ ವಾದನದಲ್ಲಿ ಅಭ್ಯಾಸ ಮಾಡಿದ್ದಾರೆ.

ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ರಾಜ್ಯಗಳಲ್ಲಿ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಗುಲಬರ್ಗಾ ಆಕಾಶವಾಣಿ ಕೇಂದ್ರದ ಯುವವಾಣಿ ಕಾರ್ಯಕ್ರಮದಲ್ಲಿ ತಬಲಾ ಸೋಲೋ ನುಡಿಸಿದ್ದಾರೆ. ಬೀದರನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಗದುಗಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಇವರನ್ನು ಅನೇಕ ಸಂಘ–ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ತಬಲಾ ವಾದನದಲ್ಲಿ ವಿದ್ವತ್ ವಿಶಾರದ, ತಾಲಮಾತ್ರಿಕಾ, ತಬಲಾ ಚತುರ್, ಲಯ ಗಾರುಡಿಗ ಮೊದಲಾದ ಪರೀಕ್ಷೆಗಳನ್ನು ಪಾಸು ಮಾಡಿದ ಕೀರ್ತಿ ಇವರಿಗೆ ಲಭಿಸಿದೆ.

(ಆಯ್‌ಕೆ)

ದಾ

ದಾದಾಪೀರ್ ಮಂಜರ್ಲಾ: ತತ್ವಪದ ಗಾಯಕ. ಅನುಭವ ಸಾಹಿತ್ಯಕ್ಕೆ ರಾಯಚೂರು ಜಿಲ್ಲೆಯ ಕೊಡುಗೆ ಅಪಾರವಾದುದು. ಅನುಭಾವಿಗಳು ತಮ್ಮ ವಿಚಾರಗಳನ್ನು ಜನ ಸಮುದಾಯಕ್ಕೆ ತಲಪಿಸುವ ಮೂಲಕ ಭಾವನಾತ್ಮಕವಾಗಿ, ಕಲಾತ್ಮಕವಾಗಿ ಮನಸ್ಸಿಗೆ ರಂಜನೆ ನೀಡುವುದರೊಂದಿಗೆ ಅನುಭವದ ದೀಪವನ್ನು ಎದೆ ಎದೆಗಳಲ್ಲಿ ಹಚ್ಚುವ ಕೆಲಸವನ್ನು ನಮ್ಮಲ್ಲಿ ಅನೇಕ ಕಲಾವಿದರು ಮಾಡುತ್ತಾ ಬಂದಿದ್ದಾರೆ. ಅಂತಹ ಕಲಾವಿದರಲ್ಲಿ ತತ್ವಪದ ಗಾಯಕ ದಾದಾಪೀರ್ ಮಂಜರ್ಲಾ ಅವರೂ ಒಬ್ಬರು. ಇವರು ಹುಟ್ಟಿದ ಗ್ರಾಮ ರಾಯಚೂರು ತಾಲ್ಲೂಕಿನ ಮಂಜರ್ಲಾ. ತಂದೆ ಖಾದರವಲಿ. ತಾಯಿ ಮಹೆಬೂಬಿ, ತಂದೆ ಆಧ್ಯಾತ್ಮ ಜೀವಿ, ತತ್ವಪದಕಾರ. ಖಾದರವಲಿಯವರು ನೂರಕ್ಕೂ ಹೆಚ್ಚು ತತ್ವಪದಗಳನ್ನು ತೆಲುಗಿನಲ್ಲೂ ಬರೆದಿದ್ದಾರೆ. ಅವೆಲ್ಲವುಗಳನ್ನು ಈ ಕಲಾವಿದ ಸೊಗಸಾಗಿ ಹಾಡಿ ಅಪ್ಪಟ ದೇಸೀಯ ಸೊಗಡನ್ನು ಮೆರೆದಿದ್ದಾರೆ.

ತಂದೆಯಿಂದಲೇ ಸಂಗೀತಾಕ್ಷರವನ್ನು ಹೇಳಿಸಿಕೊಂಡ ಇವರಿಗೆ ಗುರುಗಳಾಗಿ ಒಲಿದು ಬಂದವರು ಉಭಯಗಾನ ವಿದುಷಿ ಶ್ಯಾಮಲಾ ಜಿ. ಭಾವೆ ಹಾಗೂ ಪಂ. ಚಂದ್ರಶೇಖರಯ್ಯ ಸ್ವಾಮಿ ಪುಲಚಿಂತಿ. ಸದ್ಯ ಇವರಿಗೆ ಗುರುಗಳಾಗಿ ದೊರೆತವರೆಂದರೆ ಕಲ್ಕತ್ತಾದ ಖ್ಯಾತ ಕಲಾವಿದ ಉಸ್ತಾದ್ ರಶೀದ್‌ಖಾನರು. ದಾದಾಪೀರರು ಕನ್ನಡ, ತೆಲುಗು ಹಾಗೂ ಹಿಂದಿಯಲ್ಲೂ ತತ್ವಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಈಗಾಗಲೇ, 74 ಧ್ವನಿ ಸುರುಳಿ ಬಿಡುಗಡೆಯಾಗಿದ್ದು ಜನ ಮನಸೂರೆಗೊಂಡಿವೆ. ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಇವರ ಹಾಡುಗಳಿಗೆ ಬೇಡಿಕೆಯಿದೆ.

ದಾದಾಪೀರ್ ಮಂಜರ್ಲಾ ಆಕಾಶವಾಣಿ, ದೂರದರ್ಶನಗಳಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಅಲ್ಲದೇ, ಕರ್ನಾಟಕದ ಪ್ರಮುಖ ಉತ್ಸವಗಳಾದ ಮೈಸೂರು ದಸರ ಗಡಿನಾಡು ಉತ್ಸವ ಹಾಗೂ ಹೊರ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನೀಡಿದ ಕೀರ್ತಿ ಇವರದಾಗಿದೆ. ಇವರ ಕಲಾಪ್ರತಿಭೆಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಅಲ್ಲದೇ, ಅನೇಕ ಸಂಘ ಸಂಸ್ಥೆಗಳು, ಮಠ–ಮಾನ್ಯಗಳು ಅನೇಕ ಬಿರುದುಗಳನ್ನು ನೀಡಿ ಗೌರವಿಸಿವೆ. (ಎಸ್‌ಕೆ)

ದಿ

ದಿ ಆರ್ಟ್ ಇಂಟಿಗ್ರೇಶನ್ ಸಂಸ್ಥೆ ಗುಲಬರ್ಗಾ: ದಿ ಆರ್ಟ್ ಇಂಟಿಗ್ರೇಶನ್ ಸಂಸ್ಥೆಯು 20.05.1995 ರಂದು ಪ್ರಾರಂಭ ವಾಯಿತು. ಪ್ರಾರಂಭದ ಹಂತದಿಂದ ಇಲ್ಲಿಯವರೆಗೆ ಅನೇಕ ರೀತಿಯ ಏಳು ಬೀಳುಗಳ ನಡುವೆಯೂ ಅತ್ಯಂತ ತಾಳ್ಮೆಯಿಂದ ತೆಗೆದುಕೊಂಡ ದೃಢ ನಿರ್ಧಾರವನ್ನು ಚಾಚೂ ತಪ್ಪದೇ ಮಾಡಬೇಕಾದ ಕೆಲಸಗಳನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತ



ದಿ ಆರ್ಟ್ ಇಂಟಿಗ್ರೇಶನ್ ಸಂಸ್ಥೆ, ಗುಲಬರ್ಗಾ

ಬಂದಿದ್ದು ಈಗ ಈ ಮಹಾವಿದ್ಯಾಲಯ ರಾಜ್ಯಮಟ್ಟದವರೆಗೆ ಬರುವಲ್ಲಿ ನೀಲಮ್ಮ ಬೆಳಮಗಿಯವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಈ ಮಹಾವಿದ್ಯಾಲಯ ಹಂತ ಹಂತವಾಗಿ ತನ್ನ ಬೆಳವಣಿಗೆಯನ್ನು ಹೆಚ್ಚಿಸಿಕೊಳ್ಳುತ್ತ ಬಂದಿದ್ದು, ಇದರ ಬೆಳವಣಿಗೆ ಹಾಗೂ ಕಾರ್ಯ ಕ್ಷಮತೆಯನ್ನು ಗಮನಿಸಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2006–07ರ ಶೈಕ್ಷಣಿಕ ವರ್ಷದಲ್ಲಿ ಶಾಶ್ವತ ಅನುದಾನ ನೀಡಿದೆ.

ಈ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಪ್ರತಿ ವರ್ಷ ವನಭೋಜನ, ಕಲಾಶಿಬಿರ, ಶೈಕ್ಷಣಿಕ ಪ್ರವಾಸ ಹೀಗೆ ಹಲವಾರು ವಿಶಿಷ್ಟ ಕಾರ್ಯಕ್ರಮ ಏರ್ಪಡಿಸುತ್ತಾ ಅವರಿಗಾಗಿ ಅನೇಕ ವಿಶೇಷ ದಿನಗಳಂದು ಚಿತ್ರಕಲಾ ಸ್ಪರ್ಧೆಗಳು, ವಿದ್ಯಾರ್ಥಿಗಳಿಗೆ ಸಹಾಯವಾಗುವ ನಿಟ್ಟಿನಲ್ಲಿ ಅವರಿಗೆ ಪ್ರಶಸ್ತಿಗಳು, ಧನಸಹಾಯ ಅದರಲ್ಲಿಯೂ ಬಡ ವಿದ್ಯಾರ್ಥಿಗಳಿಗಾಗಿ ವಿಶೇಷವಾದ ಸೌಕರ್ಯಗಳನ್ನು ಈ ಮಹಾವಿದ್ಯಾಲಯ ಕಲ್ಪಿಸುವ ಮೂಲಕ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಮಹಾವಿದ್ಯಾಲಯವಾಗಿ ಪರಿಣಮಿಸಿದೆ.

ಈ ಸಂಸ್ಥೆಯ ಅಡಿಯಲ್ಲಿ ಅಂಕುರ ಕಲಾಗ್ಯಾಲರಿಯನ್ನು ಸ್ಥಾಪಿಸಿ ಆ ಮೂಲಕ ಹೈದ್ರಾಬಾದ ಕರ್ನಾಟಕ ಅಕಾಡೆಮಿ ವಿಭಾಗದ ಸಂಯುಕ್ತಾಶ್ರಯದಲ್ಲಿ ಹೈದ್ರಾಬಾದ ಕರ್ನಾಟಕ ಯುವ ಕಲಾವಿದರ ಕಲಾಪ್ರದರ್ಶನಗಳನ್ನು ಪ್ರತಿ ತಿಂಗಳು ಏರ್ಪಡಿಸುವ ಮೂಲಕ ಈ ಭಾಗದ ಕಲಾವಿದರಿಗೆ ವಿಶೇಷ ವಾದ ಅವಕಾಶವನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಆರಂಭದಿಂದ ಇಲ್ಲಿಯವರೆಗೆ ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾವಿದರು, ರಾಜಕೀಯ ಮುಖಂಡರು, ಕವಿಗಳು, ಸಾಹಿತಿಗಳು, ಹಾಗೂ ತತ್ವಜ್ಞಾನಿಗಳು, ಆಗಮಿಸಿ ಮಹಾವಿದ್ಯಾಲಯದ ಸಾಧನೆಯನ್ನು ಕೊಂಡಾಡಿ ದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವಾರು ಕಾರ್ಯಕ್ರಮಗಳಾದ ತಿಂಗಳ ಚಿತ್ರ ಹಾಗೂ ಕಲಾಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು, ವಿಚಾರ ಸಂಕಿರಣ ಗಳು, ಸಾಹಿತ್ಯ ಸಂಘಟನೆಯ ಹಲವಾರು ಕಾರ್ಯ ಕ್ರಮಗಳು, ವಿಜ್ಞಾನ ಸಂಘಟನೆಯ ವೈಜ್ಞಾನಿಕ ಕಾರ್ಯಕ್ರಮಗಳು. ರಂಗ ತರಬೇತಿ ಶಿಬಿರಗಳು, ಸಂಗೀತ ಕಾರ್ಯಕ್ರಮಗಳು ವಿವಿಧ ಸ್ಪರ್ಧೆಗಳು, ಹಾಸ್ಯ ಕಾರ್ಯಕ್ರಮಗಳು ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮ ಗಳು ಹೀಗೆ ಹಲವಾರು ರೀತಿಯ ಕಾರ್ಯಕ್ರಮಗಳು ಈ ಮಹಾವಿದ್ಯಾಲಯದಲ್ಲಿ ನಡೆಯುವ ಮೂಲಕ ಹಾಗೂ ನಗರದ ಬುದ್ಧಿ ಜೀವಿಗಳು ಹಾಗೂ ಮಾಧ್ಯಮ ಮಿತ್ರರ ಸಹಕಾರದಿಂದ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ಗುರುತಿಸಿ ಕೊಂಡಿದೆ.

(ಎಎಸ್ಎಸ್)

ದಿ ಐಡಿಯಲ್ ಫೈನ್‌ಆರ್ಟ್ ಇನ್ಸ್‌ಟಿಟ್ಯೂಟ/ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್: 1965ರಲ್ಲಿ ಪ್ರೊ. ಜೆ.ಎಸ್. ಖಂಡೇರಾವ ಡಿಪ್ಲೋಮಾ ಪೇಂಟಿಂಗ್ ಮೂಲಕ ದಿ ಐಡಿಯಲ್ ಫೈನ್‌ಆರ್ಟ್ ಇನ್ಸ್‌ಟಿಟ್ಯೂಟನ್ನು ಪ್ರಾರಂಭಿಸಿದರು. ಮುಂದೆ 1971–72ರಿಂದ ಪ್ರೊ. ವ್ಹಿ.ಜಿ ಅಂದಾನಿಯವರು ಅದರ ಸರ್ವತೋಮುಖ ಬೆಳವಣಿಗೆಗಾಗಿ ಸರಕಾರದಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದು, ಡ್ರಾಯಿಂಗ್ ಟೀಚರ್ ಟ್ರೇನಿಂಗ್ ಕೋರ್ಸ್ ಹಾಗೂ ಆರ್ಟ್ ಮಾಸ್ಟರ್ ಕೋರ್ಸ್‌ಗಳನ್ನು ಪ್ರಾರಂಭಿಸಿದರು. ಸಾವಿರಾರು ವಿದ್ಯಾರ್ಥಿಗಳು ಇಂದು, ಕಲಾವಿದರಾಗಿ, ಕಲಾಶಿಕ್ಷಕರಾಗಿ ಡ್ರಾಫ್ಟ್‌ಮನ್‌ರಾಗಿ, ಡಿಜೈನ್‌ರಾಗಿ ಸೇವೆಸಲ್ಲಿಸುತ್ತಿದ್ದಾರೆ. 1985ರಲ್ಲಿ ಕಾಲೇಜ ಆಫ್ ವಿಜ್ಯೂವಲ್ ಆರ್ಟ್‌ಗೆ ಗುಲಬರ್ಗಾ ವಿಶ್ವವಿದ್ಯಾಲಯದ ಮಾನ್ಯತೆ ದೊರೆಯಿತು. ಇದರ ಮೂಲಕ ಸ್ನಾತಕೋತ್ತರ ಹಾಗೂ ಪಿಜಿ (BVA-MVA) ಕೋರ್ಸ್‌ಗಳನ್ನು ಪ್ರಾರಂಭಿಸುವ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ರಾಷ್ಟ್ರ ಮಟ್ಟದಲ್ಲಿ ಹಾಗೂ ನೂರಾರು ವಿದ್ಯಾರ್ಥಿಗಳಿಗೆ ಕೇಂದ್ರೀಯ ವಿದ್ಯಾಲಯಗಳಲ್ಲಿ, ರಾಜ್ಯದ ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆಗೆ ಅವಕಾಶಗಳು ದೊರೆಕಿದವು. ಬೇರೆ ರಾಷ್ಟ್ರಗಳಲ್ಲಿಯೂ




ಬುದ್ಧ ವಿಹಾರ (ಗುಲಬರ್ಗಾ)




ಜೈನ ಸ್ಮಾರಕಗಳು



ಶ್ರೀ ಶರಣಬಸವೇಶ್ವರ ದೇವಸ್ಥಾನ, (ಗುಲಬರ್ಗಾ)



ಹಜರತ್ ಖ್ವಾಜಾ ಬಂದೇನವಾಜ್ ದರ್ಗಾ (ಗುಲಬರ್ಗಾ)




ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟಿಟ್ಯೂಟ್, ಗುಲಬರ್ಗಾ

ವಿದ್ಯಾರ್ಥಿಗಳಿಗೆ ಅವಕಾಶ ದೊರಕಿ, ಇಂದು ಕಲಾವಿದರಾಗಿ, ಉಪನ್ಯಾಸಕರಾಗಿ, ಕಂಪನಿಗಳಲ್ಲಿ ಡಿಸೈನ್‌ರಗಳಾಗಿ ಫೋಟೊ ಗ್ರಾಫಿ, ಕಂಪ್ಯೂಟರ್ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಸಂಸ್ಥೆಗೆ ನ್ಯಾಕ್‌ನಿಂದ B++ ಮಾನ್ಯತೆ ದೊರಕಿದೆ. ಎಚ್‌ಆರ್‌ಡಿ, ಕೇಂದ್ರ ಲಲಿತಕಲಾ ಅಕಾಡೆಮಿಗಳಿಂದ ವಿದ್ಯಾರ್ಥಿ ಗಳಿಗೆ ಶಿಷ್ಯವೇತನ ದೊರಕಿ, ತಮ್ಮ ಭವಿಷ್ಯವನ್ನು ಸೃಷ್ಟಿಸಿ ಕೊಂಡಿದ್ದಾರೆ. ರಾಷ್ಟ್ರಮಟ್ಟದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡು, ಪ್ರದರ್ಶನಗಳಲ್ಲಿ ಭಾಗವಹಿಸಿ ಮಾನ್ಯತೆ ಪಡೆದುಕೊಂಡಿದ್ದಾರೆ. ಇಂದು ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪಡೆದ ದೃಶ್ಯಕಲಾ ಮಹಾವಿದ್ಯಾಲಯವಾಗಿ, ಸುಸಜ್ಜಿತ ಗ್ರಂಥಾಲಯ, ಸ್ಟೂಡಿಯೋಗಳು, ಫೋಟೊಗ್ರಾಫಿ, ಪ್ರಿಂಟ್‌ಮೇಕಿಂಗ್, ಪೇಂಟಿಂಗ್, ಅಪ್ಲೈಡ್ ಆರ್ಟ್ ಶಿಲ್ಪ ಕೋರ್ಸ್‌ಗಳಲ್ಲದೆ. ಟೆರಾಕೊಟಾ, ಸಂಪ್ರದಾಯಿಕ ಕಲೆ, ಶಿಲೆ, ಕಂಚು, ಪ್ಲಾಸ್ಟರ್ ಆಫ್ ಪ್ಯಾರಿಸ್‌ಗಳಲ್ಲಿ ಯುವಕರ ಪ್ರತಿಭೆಗೆ ಅವಕಾಶಗಳಿವೆ. ಅಂತರಾಷ್ಟ್ರೀಯ, ರಾಷ್ಟ್ರೀಯ ಕಲಾಶಿಬಿರ ಗಳನ್ನು ಹಮ್ಮಿ ಕೊಳ್ಳುತ್ತಿದ್ದು, ಇದರ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ವಾತಾವರಣ ಕಲ್ಪಿಸುವಲ್ಲಿ ವಿದ್ಯಾಲಯವು ಶ್ರಮಿಸುತ್ತಾ ಬಂದಿದೆ. ವಿಶ್ವವಿದ್ಯಾಲಯದ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ನಾಟಕ, ರಂಗಸಜ್ಜಿಕೆ, ಸ್ಪರ್ಧೆಗಳಿಂದ ಪ್ರಶಸ್ತಿಗಳನ್ನು ಪಡೆದು ಕೊಂಡು ಸ್ಫೂರ್ತಿದಾಯಕ ವಾತಾವರಣವನ್ನು ನಿರ್ಮಿಸಿ ದ್ದಾರೆ. ಸುಂದರವಾದ ಕಲ್ಲಿನ ಕಟ್ಟಡದ ವಾಸ್ತುವಿನ್ಯಾಸದ ಕಟ್ಟಡದಲ್ಲಿ ತನ್ನದೇಯಾದ ಕಲಾವಾತಾವರಣ ಕಲ್ಪಿಸಿಕೊಂಡು ಬಂದಿದೆ. 2012–13 ರಲ್ಲಿ ತನ್ನ ಬೆಳ್ಳಿಹಬ್ಬವನ್ನು ಆಚರಿಸುತ್ತಿದ್ದು, ವಿಶ್ವವಿದ್ಯಾಲಯದಿಂದ ಶಾಶ್ವತ ಮಾನ್ಯತೆಪಡೆದ ವಿದ್ಯಾಲಯವಾಗಿದ್ದು, ದೃಶ್ಯಕಲೆಯಲ್ಲಿ, ಡಿಗ್ರಿ, ಪಿಜಿ., ಎಂ.ಫಿಲ್, ಪಿಎಚ್.ಡಿ ಗಳಿಗೆ ಅವಕಾಶ ಹೊಂದಿದ್ದು ಇಂದು ರಾಷ್ಟ್ರದ ಬೇರೆ ಬೇರೆ ರಾಜ್ಯಗಳಿಂದ ವಿದ್ಯಾರ್ಥಿ ಗಳು ಶಿಕ್ಷಣ ಪಡೆಯಲು ಬರುತ್ತಿದ್ದು, ಕಲಾತ್ಮಕ ವಾತಾ ವರಣ ಮುಡಿಬಂದಿದೆ. ವಾರ್ಷಿಕ ಕಲಾಪ್ರದರ್ಶನ, ಕಲಾಮಹೋತ್ಸವ, 'ಮಿಕ್ಸ್‌ಡ್‌ಬ್ಯಾಗ್' ಗುಂಪು ಪ್ರದರ್ಶನ, ವಾರ್ಷಿಕ ಡಿಸ್‌ಪ್ಲೇ, ವಿಚಾರ ಸಂಕಿರಣ, ಹೀಗೆ ಹತ್ತಾರು ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮತ್ತು ರಚನಾತ್ಮಕ ಮನೋವೃತ್ತಿಯಿಂದ ಬೆಳೆಯುತ್ತಿದ್ದಾರೆ.

ಪ್ರವಾಸ, ಮತ್ತು ಗ್ಯಾಲರಿಗಳ ವೀಕ್ಷಣೆಗಳಿಂದ ವಿದ್ಯಾರ್ಥಿಗಳಲ್ಲಿನ ಪ್ರಬುದ್ಧತೆಗೆ ವೃತ್ತಿಪರ ಹೋರಾಟದ ಮನಸ್ಸು ಸೃಷ್ಟಿಗೊಳ್ಳುತ್ತಿವೆ. ಗುಲಬರ್ಗಾದಂತ ಪ್ರದೇಶದಲ್ಲಿ ಉದ್ದಿಮೆಗಳಿಗೆ ಅವಕಾಶಗಳಿಲ್ಲದಿದ್ದರೂ ಇಂದು ವಿದ್ಯಾರ್ಥಿಗಳು, ಬಾಂಬೆ, ಬೆಂಗಳೂರು, ಹೈದ್ರಾಬಾದ, ಮದ್ರಾಸ್, ಪುನಾ, ದಿಲ್ಲಿ ಅನೇಕ ಪ್ರದೇಶಗಳಲ್ಲಿ ಅವಕಾಶಗಳನ್ನು ಕಲ್ಪಿಸಿಕೊಂಡು ಉದ್ಯೋಗ ನಿರ್ವಹಿಸುತ್ತಿದ್ದಾರೆ. ಈ ಎಲ್ಲದರ ಹಿಂದೆ ಪ್ರೊ. ಅಂದಾನಿಯವರ ಕಾಳಜಿ ಮತ್ತು ಅಭಿವೃದ್ಧಿಶೀಲ ವಿಚಾರ ಗಳಿಂದ ಕಲಾಸಂಸ್ಥೆಯನ್ನು ಬೆಳೆಸಿದ್ದಾರೆ. ಅನೇಕ ಕನಸುಗಳಿಂದ ಆರ್ಟ್‌ಗ್ಯಾಲರಿ, ಶಾಸ್ವತ ಆರ್ಟ್‌ಗ್ಯಾಲರಿ ಕಲಾಕೃತಿಗಳ ಸಂಗ್ರಹ



ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್, ಗುಲಬರ್ಗಾ

ದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅನೇಕ ಯೋಜನೆಗಳ ಮೂಲಕ ನಾಡನ್ನು ಸಾಂಸ್ಕೃತಿಕವಾಗಿ ಶ್ರೀಮಂತ ಗೊಳಿಸಿದ್ದಾರೆ.

(ವ್ಹಿಜಿಎ)

ದು

ದುಬಲಗುಂಡಿಯ ಕಲಾಸಂಗ್ರಹ: ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿ ಬರುವ ಒಂದು ಸಣ್ಣ ಗ್ರಾಮ ದುಬಲಗುಂಡಿ. ಇಲ್ಲಿ ರಾಜನಂತೆಯೇ ವೈಭವದ ಜೀವನವನ್ನು ನಡೆಸಿದ ಶ್ರೀಮಂತ ವ್ಯಕ್ತಿ ಶರಣಪ್ಪ ಫತ್ತೇಪುರೆಯವರ ಮನೆಯಿದೆ. ಇದು ಅರಮನೆಯನ್ನೇ ಹೋಲುವಂತಿದೆ. ಈ ಗ್ರಾಮದಲ್ಲಿನ ಬಹುಸಂಖ್ಯಾತರು ಮರಾಠಿ ಭಾಷೆ ಮಾತನಾಡುವ ಕಾರಣ ಈ ಮನೆಯನ್ನು ವಾಡೆಯೆಂದೂ ಕರೆಯುತ್ತಾರೆ. 2002–03ರಲ್ಲಿ ಈ ವಾಡೆಯ ವೀಕ್ಷಣೆಗೆಂದೇ ನಾನು ದುಬಲ ಗುಂಡಿಗೆ ಹೋಗಿದ್ದೆ. ಮನೆಯ ಎಲ್ಲ ಕಡೆ ಸುತ್ತಾಡಿ ಕೆಲ ಛಾಯಾ ಚಿತ್ರಗಳನ್ನೂ ಮಾಡಿಕೊಂಡಿದ್ದೆ. ಅದಾಗಲೇ ನನಗೆ ಈ ಮನೆಯ ಕಲಾಮೌಲ್ಯದ ಅರಿವಾಗಿತ್ತು.

ಇತ್ತೀಚಿನ ದಿನಗಳಲ್ಲಿ ಈ ವಾಡೆಯಲ್ಲಿ ಸಿನೇಮಾ ಚಿತ್ರೀಕರಣ ನಡೆಯುತ್ತಿದೆ ಈ ಮನೆಯಲ್ಲಿ ಬೆಲೆ ಕಟ್ಟಲಾಗದ ಮೌಲ್ಯವುಳ್ಳ ಕಲಾತ್ಮಕ ವಸ್ತುಗಳಿದ್ದು, ಅವುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವ ಅಗತ್ಯವಿದೆ.

ಶರಣಪ್ಪ ಫತ್ತೇಪುರೆ ಅವರು ಶ್ರೀಮಂತರು ಮಾತ್ರವಲ್ಲ ನಿಜಾಮ್ ರಾಜ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ್ದರು. ಹಾಗೆ ನೋಡಿದರೆ ಇವರ ಪೂರ್ವಿಕರು ತಲತಲಾಂತರದಿಂದ ಬಂದ ಶ್ರೀಮಂತರೇನಲ್ಲ. ಸ್ವಂತ ದುಡಿಮೆಯಿಂದಾಗಿ ಮೇಲೆ ಬಂದ ವರು. 'ಸಂಗಪ್ಪ' ಈ ವಂಶಸ್ಥರ ಹಿರೀಕರು. ಇವರಿಗೆ ಶಿವಪ್ಪ ಎಂಬ ಮಗನಿದ್ದು, ಇವರಿಗೆ ಸಂಗಪ್ಪ (ಈ ಮನೆತನದಲ್ಲಿ ಮನೆಯ ಹಿರಿಯರ ಒಂದೆರಡು ಹೆಸರುಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ) ಹಾಗೂ ನೂರೊಂದಪ್ಪ ಎನ್ನುವ ಇಬ್ಬರು ಗಂಡು ಮಕ್ಕಳಲ್ಲಿ ನೂರೊಂದಪ್ಪನ ಸಂತತಿಯ ವಿವರ ತಿಳಿದು ಬಂದಿಲ್ಲ. ಆದರೆ, ಸಂಗಪ್ಪನಿಗೆ ಸಂಗನಬಸಪ್ಪ, ಶಿವಪ್ಪ, ವೀರಪ್ಪ, ಭೀಮಣ್ಣ, ಮಲ್ಲಪ್ಪ, ಸಿದ್ದಪ್ಪ ಎನ್ನುವ ಆರುಜನ ಗಂಡುಮಕ್ಕಳು. ಇವರಲ್ಲಿ ಮೊದಲ ಮಗ ಸಂಗನಬಸಪ್ಪನ ಸಂತತಿಯನ್ನು ಹೊರತುಪಡಿಸಿ ಇನ್ನುಳಿದ ಐದು ಜನರ ಸಂತತಿ ಇಲ್ಲವೆ ಕುಟುಂಬದ ವಿವರ ತಿಳಿದುಬಂದಿಲ್ಲ.

ಸಂಗನಸಬಪ್ಪನವರಿಂದ ಈ ಮನೆತನ ಹೊಸ ಚರಿತ್ರೆಯನ್ನು ಕಟ್ಟಿಕೊಳ್ಳುತ್ತದೆ. ಇವರಿಗೆ ನೀಲಮ್ಮ ಹಾಗೂ ರಾಮವ್ವ ಎಂಬ ಇಬ್ಬರು ಹೆಂಡಂದಿರಿರು. ಈ ದಂಪತಿಗಳಿಗೆ ಶರಣಪ್ಪ ಚನ್ನಬಸಪ್ಪ ರೇವಣಪ್ಪ ಎಂಬ ಮೂರುಜನ ಗಂಡುಮಕ್ಕಳು ಹಾಗೂ ಗಂಗಮ್ಮ ಸಿದ್ದಮ್ಮ ಚನ್ನಮ್ಮ ಎಂಬ ಮೂರುಜನ ಹೆಣ್ಣುಮಕ್ಕಳು. ಒಟ್ಟು ಆರುಜನ ಮಕ್ಕಳಲ್ಲಿ ಚನ್ನಬಸಪ್ಪನವರಿಂದ ಮಾತ್ರ ಈ ಮನೆತನದ ಸಂತತಿ ಮುಂದುವರೆದಿದೆ. ಆದರೆ, ಶರಣಪ್ಪನವ ರಿಂದಲೇ ಈ ಮನೆತನ ಪ್ರಸಿದ್ಧಿಗೆ ಬಂದಿರುವ ಕಾರಣ ಉಳಿ ದವರ ಹೆಸರುಗಳಾಗಲಿ, ಕುಟುಂಬದ ವಿವರಗಳಾಗಲಿ ಇಲ್ಲಿ ಗೌಣವಾಗಿವೆ ಎಂದು ಊಹಿಸಲೂ ಇಲ್ಲಿ ಅವಕಾಶವಿದೆ.

ಪ್ರಸ್ತುತ ವಾಡೆಯನ್ನು ಕಟ್ಟಿಸಿರುವವರು ಸಂಗನಬಸಪ್ಪನವರ ಮೊದಲ ಮಗ ಶರಣಪ್ಪನವರು. ಇವರ ತಂದೆ ಸಂಗನ ಬಸಪ್ಪನವರು ಧರ್ಮ–ಆಧ್ಯಾತ್ಮ ಜೀವಿಗಳು. ಕೃಷಿ ಕಾಯಕವನ್ನು ಮಾಡಿಕೊಂಡು ಬಂದವರು. ತಮಗೆ ಮೊದಲ ಮಗ ಜನಿಸಿದ ತರುವಾಯ ಊರಿಗೆ ಅನ್ನ ಸಂತರ್ಪಣೆ ಮಾಡಿ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ್ದರು. ಮಾತ್ರವಲ್ಲ ಲೆಕ್ಕ–ಪತ್ರಗಳ ವ್ಯವಹಾರದಲ್ಲಿ ನಿಸ್ಸೀಮರೆನಿಸಿದ್ದ ಪಂಡಿತ ವೀರಯ್ಯಸ್ವಾಮಿ ಎನ್ನುವವರನ್ನು ಗುರುಗಳನ್ನಾಗಿ ನೇಮಿಸಿ ತಮ್ಮ ಮಗನಿಗೆ ಒಳ್ಳೆಯ ಶಿಕ್ಷಣದ ವ್ಯವಸ್ಥೆಯನ್ನು ಮಾಡಿದರು. ಅಂದು ಬೀದರ ಜಿಲ್ಲೆ ಹೈದರಾಬಾದ ನಿಜಾಮ್ ರಾಜ್ಯದ ಆಡಳಿತಕ್ಕೆ ಒಳಪಟ್ಟಿರುವ ಕಾರಣ, ಇವರ ಆರಂಭಿಕ ಶಿಕ್ಷಣ ಉರ್ದು ಹಾಗೂ ಮರಾಠಿ ಭಾಷೆಯಲ್ಲಾಯಿತು. ಶರಣಪ್ಪನವರು ಬಾಲ್ಯದಲ್ಲೇ ಚತುರ ಮಾತುಗಾರನಾಗಿ ಹೆಸರು ಮಾಡಿದವರು. ನಾಲ್ಕಾರು ಮಕ್ಕಳನ್ನು ಸಹಾಯಕರನ್ನಾಗಿ ಮಾಡಿಕೊಂಡು ತಾನು ಶ್ರೀಮಂತ ವ್ಯಕ್ತಿ ಯಂತೆ ನಟಿಸಿ, ಮುಂದೆ ಅದರಂತೆಯೇ ಆದರು. ಶ್ರೀ ಶರಣಪ್ಪನವರಿಗೂ ಇಬ್ಬರು ಹೆಂಡಂದಿರು.

ಶರಣಪ್ಪನವರು ವಯಸ್ಕರಾಗುತ್ತಿದ್ದಂತೆಯೇ ದುಬಲ ಗುಂಡಿಯ ಪಾಟೀಲ ಮನೆತನದ ಹೆಣ್ಣುಮಗಳೊಂದಿಗೆ ವಿವಾಹ ವಾಯಿತು. ಆದರೆ, ಇವರ ದಾಂಪತ್ಯ ಜೀವನ ಬಹಳ ಕಾಲ ಉಳಿಯಲಿಲ್ಲ. ಪ್ಲೇಗ್‌ನಿಂದಾಗಿ ತಮ್ಮ ಹೆಂಡತಿಯನ್ನು ಕಳೆದು ಕೊಳ್ಳಬೇಕಾಯಿತು. ಸ್ವಲ್ಪದಿನಗಳ ಕಾಲ ಏಕಾಂತ ಜೀವನ ವನ್ನು ನಡೆಸಿದ್ದರಾದರೂ, ಮನೆಯಲ್ಲಿ ಎಲ್ಲರ ಒತ್ತಾಸೆಯ ಮೇರೆಗೆ ದುಬಲಗುಂಡಿ ಸಮೀಪದ ಬೇಲೂರಿನ ಸಿದ್ದಪ್ಪ ಪಾಟೀಲರ ಮಗಳು ಸೌಭಾಗ್ಯವತಿ ಬಸವಲಿಂಗಮ್ಮನವರನ್ನು ಮದುವೆ ಯಾದರು. ಇವರನ್ನು ಸಾಕ್ಷಾತ್ ಅನ್ನಪೂರ್ಣೇಶ್ವರಿಯ ಅವತಾರ ಎಂದು ಜನ ಕೊಂಡಾಡುತ್ತಿದ್ದರು. ಶರಣಪ್ಪನವರು ಹಣ, ಐಶ್ವರ್ಯಗಳಿಂದಾಗಿ ನಿಜಾಮ್ ರಾಜ್ಯದಲ್ಲಿ ವಿಶೇಷವಾಗಿ ಗುರುತಿಸಿಕೊಂಡರು. ಒಂದೊಮ್ಮೆ ನಿಜಾಮ್‌ನು; ಶರಣಪ್ಪನವರು ಹೈದರಾಬಾದಗೆ ಬಂದರೆ, ಹೋಗಿ ಬರುವ ವೆಚ್ಚವನ್ನು ತಮ್ಮ ಸರ್ಕಾರವೇ ಭರಿಸುತ್ತದೆ ಎನ್ನುವ ರಾಜಮರ್ಯಾದೆಯನ್ನು ದಯಪಾಲಿಸಿದ. ಮಾತ್ರವಲ್ಲ ನಿಜಾಮ್ ಆಸ್ಥಾನದಲ್ಲಿ ಶರಣಪ್ಪ ನವರಿಗೆ ಒಂದು ಕುರ್ಚಿಯನ್ನು ಮೀಸಲಿರಿಸಿದ ವಿಷಯವನ್ನು ದಾಖಲೆಗಳು ಹೇಳುತ್ತವೆ. ಒಂದೆರಡು ದಶಕಗಳಲ್ಲೇ ಶರಣಪ್ಪ ನವರು ಇಷ್ಟೊಂದು ಹೆಸರು ಮಾಡಿಬಿಟ್ಟರು.

ನಿಜಾಮ್ ರಾಜ್ಯದ ಸಂಪರ್ಕದಿಂದಾಗಿ ಶರಣಪ್ಪನವರು ಕಲೆಯಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡರು. ಒಂದೊಮ್ಮೆ ಪಾಶ್ಚಿಮಾತ್ಯ ಕಲೆ ಹಾಗೂ ಸಂಸ್ಕೃತಿಗೆ ಮಾರುಹೋಗಿದ್ದುಂಟು. ಆ ಕಾರಣದಿಂದಾಗಿಯೇ ಅರಮನೆಯನ್ನು ಹೋಲುವಂಥ ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಮಾತ್ರವಲ್ಲ ಪಾಶ್ಚಿಮಾತ್ಯ ಮಾದರಿಯ ಕೈಗಡಿಯಾರ, ಗೋಡೆ ಗಡಿಯಾರ, ಗಾಜಿನ ವಸ್ತುಗಳು, ಸೋಫಾ ಮಾದರಿಯ ಉನ್ನತ ಕುರ್ಚಿ, ಕಪಾಟು

ಗಳು, ಪಿಂಗಾಣಿ ಪಾತ್ರೆಗಳು, ಅಲಂಕಾರಿಕ ಪರದೆಗಳು, ರತ್ನ ಗಂಬಳಿ ನೆಲಹಾಸುಗಳನ್ನು ಬಳಸಿದ್ದಾರೆ. ಇವರು ಧರಿಸುವ ಚಪ್ಪಲಿಗಳ ಪೆಟ್ಟಿಗೆಯೇ ಬಂಗಾರದ ಎಳೆಗಳಿಂದ ನಿರ್ಮಿಸ ಲಾಗಿತ್ತು ಎಂದರೆ ಅವರ ಶ್ರೀಮಂತಿಕೆ, ವೈಭವಗಳನ್ನು ಊಹಿಸ ಬಹುದು.

ನಿಜಾಮ್ ರಾಜ್ಯದುದ್ದಕ್ಕೂ ಸಂಚರಿಸುವ ಮೂಲಕ ಕಲಾತ್ಮಕವಸ್ತುಗಳನ್ನು ಖರೀದಿಸಿ ತಮ್ಮ ಸಂಗ್ರಹದಲ್ಲಿಟ್ಟಿದ್ದಾರೆ. ಕೆಲವೊಮ್ಮೆ ನಿಜಾಮ್‌ನೇ ಮೌಲ್ಯಯುತ ವಸ್ತುಗಳನ್ನು ಉಡುಗೊರೆಯಾಗಿ ನೀಡಿದ ಉದಾಹರಣೆಗಳಿವೆ. ಶರಣಪ್ಪನವರ ಸಂಗ್ರಹದಲ್ಲಿ ದೇಶ ವಿದೇಶಗಳ ಅಮೂಲ್ಯ ವಸ್ತುಗಳಾದ ಕೈಗಡಿಯಾರ, ಗೋಡೆ ಗಡಿಯಾರ, ಗಾಜಿನ ವಸ್ತುಗಳು, ಸೋಫಾ ಮಾದರಿಯ ಉನ್ನತ ಕುರ್ಚಿ, ಗಾಜಿನ ಚಿತ್ರಗಳುಳ್ಳ ಕಪಾಟುಗಳು, ಪಿಂಗಾಣಿ ಪಾತ್ರೆಗಳು, ಅಲಂಕಾರಿಕ ಪರದೆಗಳು, ರತ್ನಗಂಬಳಿ ನೆಲಹಾಸು, ಪಂಚಲೋಹದ ಮೂರ್ತಿಶಿಲ್ಪಗಳು, ತೈಲವರ್ಣ, ಜಲವರ್ಣ ಕಲಾಕೃತಿಗಳು, ಬ್ಯಾಟರಿಗಳು, ಕಂದಿಲು ಮುಂತಾದ ಅನೇಕ ಕಲಾತ್ಮಕ ವಸ್ತುಗಳಿವೆ. ಇದೀಗ ಈ ವಾಡೆ ಸರಸ್ವತಿಯವರ ವಾರಸುತನದಲ್ಲಿದೆ. ಇವರು ಎಲ್ಲ ಕಲಾತ್ಮಕ ವಸ್ತುಗಳನ್ನು ಜೋಪಾನವಾಗಿಟ್ಟಿದ್ದಾರೆ.

ರಾಜಾಶ್ರಯ ತಪ್ಪಿದಮೇಲೆ ಕೆಲ ಕಲಾವಿದ ಕುಟುಂಬಗಳು ದೇವಾಲಯ ಇಲ್ಲವೆ ಮಠದ ಆವರಣದಲ್ಲಿ ಅಂಗಡಿಯನ್ನು ಇಟ್ಟುಕೊಂಡು ಚಿತ್ರಗಳನ್ನು ರಚಿಸುವ ಮೂಲಕ ಜೀವನ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಹುಮನಾಬಾದ ಸಮೀಪದ ಮಾಣಿಕನಗರದಲ್ಲಿ ಈ ರೀತಿಯ ಕಲಾ ವಾತಾವರಣ ನಿರ್ಮಾಣವಾಗಿತ್ತು. ಶರಣಪ್ಪನವರು ಸಹಜವಾಗಿಯೇ ಅಲ್ಲಿಗೆ ಹೋದಾಗ ಒಂದೆರಡು ಕಲಾಕೃತಿಗಳನ್ನು ಖರೀದಿಸಿ ಕಲಾವಿದ ಕುಟುಂಬಗಳಿಗೆ ಆರ್ಥಿಕ ಸಹಾಯ ಮಾಡಿದ ಉದಾಹರಣೆ ಗಳಿವೆ. ಕೆಲವೊಮ್ಮೆ ಕಲಾವಿದರನ್ನು ತಮ್ಮ ಮನೆಯಲ್ಲೇ ಇರಿಸಿಕೊಂಡು ಅವರಿಂದ ಸಾಕಷ್ಟು ಚಿತ್ರಗಳನ್ನು ಬರೆಸಿ ಕೊಂಡದ್ದೂ ಉಂಟು. ನಿಂಬಾಳದ ಖ್ಯಾತ ಚಿತ್ರಕಾರ ಶಾಂತಲಿಂಗಪ್ಪ ಪಾಟೀಲರು ಶರಣಪ್ಪನವರ ಮನೆಯಲ್ಲಿದ್ದು ಕೊಂಡು ರಚಿಸಿದ ಸಾಕಷ್ಟು ವರ್ಣಚಿತ್ರಗಳು ಈಗಲೂ ದುಬಲಗುಂಡಿಯ ಅವರ ಮನೆಯಲ್ಲಿ ನೋಡಲು ಸಿಗುತ್ತವೆ. ಒಟ್ಟಿನಲ್ಲಿ ಶರಣಪ್ಪ ಫತ್ತೆಪುರೆಯವರು ವ್ಯಕ್ತಿಗಳು ಮಾತ್ರವಲ್ಲ ಕಲಾವಿದರಿಗೆ ಆಶ್ರಯ ನೀಡುವುದರ ಮೂಲಕ ಕಲಾ ಪೋಷಕರಾಗಿಯೂ ಕಾಣಿಸಿಕೊಳ್ಳುತ್ತಾರೆ. (ಎಂಸಿಬಿ)

ದೃ

ದೃಶ್ಯಕಲಾ ಶಿಕ್ಷಣ: (ಗುಲಬರ್ಗಾ ಜಿಲ್ಲೆ) ದಕ್ಷಿಣ ಭಾರತದ ಇತಿಹಾಸದಲ್ಲಿ ಗುಲಬರ್ಗಾ ಶಿಲ್ಪ, ವಾಸ್ತುಶಿಲ್ಪ ಮತ್ತು ಚಿತ್ರಕಲೆ ಯಲ್ಲಿ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಈ ಪ್ರದೇಶದಲ್ಲಿ ರಾಷ್ಟ್ರಕೂಟ, ಚಾಲುಕ್ಯ, ಬಹಮನಿ ರಾಜ ಮನೆತನ ಗಳ ಹಾಗೂ ಜೈನ ವೀರಶೈವ ಧರ್ಮಗಳ ಸಾಂಸ್ಕೃತಿಕ ಪರಂಪರೆ ಯನ್ನು ಕಾಣುತ್ತೇವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಸ್ಥಳವೆಂದರೆ, ಇಂದಿನ ಚಿತ್ತಾಪೂರ ತಾಲ್ಲೂಕಿನ ನಾಗಾಯಿ, ಹಾಳುಬಿದ್ದ ಈ ಊರಲ್ಲಿ ರಾಷ್ಟ್ರಕೂಟ ಅರಸರ ಗತವೈಭವ ಸಾರುವ ಅನೇಕ ಶಿಲಾಶಾಸನಗಳು ದೊರೆತಿವೆ. ಇದರಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳೂ ಲಭ್ಯವಾಗಿವೆ. ನಾಗಾಯಿ ವಿಶ್ವವಿದ್ಯಾಲಯ ಮಟ್ಟದ ಜ್ಞಾನಪ್ರಸಾರದ ಸಂಸ್ಥೆ ಯಾಗಿತ್ತು. ನಾಗಾಯಿ 8ನೆಯ ಶತಮಾನದ ಉತ್ತರಾರ್ಧ ಮತ್ತು 9ನೇ ಶತಮಾನದ ಪೂರ್ವಾರ್ಧದಲ್ಲಿ ಉತ್ಕೃಷ್ಟ ಶಿಕ್ಷಣ ಸಂಸ್ಥೆ ಯಾಗಿತ್ತೆಂದು ತಿಳಿದುಬರುತ್ತದೆ.

ಸಂಪ್ರದಾಯ ಮತ್ತು ಸಮಕಾಲೀನ ಪ್ರಜ್ಞೆಯೊಂದಿಗೆ ಗುಲಬರ್ಗಾ ಜಿಲ್ಲೆಯ ಚಿತ್ರ, ವಾಸ್ತುಶಿಲ್ಪಗಳಲ್ಲಿ ತನ್ನದೇ ಆದ ನೆಲದ ಕಲ್ಪನೆ ನಿರೂಪಿಸಿಕೊಂಡಿದೆ. ಹಲವಾರು ಕ್ರಾಂತಿ, ದಾಳಿಗಳ ಪ್ರಭಾವದಿಂದ ಬರಗಾಲ, ಬಡತನ ಎದುರಿಸುತ್ತ ನಿರಂತವಾಗಿ ತನ್ನ ನೋವನ್ನು ಚಿತ್ರಕಲೆ, ಶಿಲ್ಪ ಮತ್ತು ವಾಸ್ತುಕಲೆ ಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಹಲವಾರು ಚಿತ್ರ–ಶಿಲ್ಪ ಕಲಾಕೃತಿ ಗಳಿಗೆ ಶಾಶ್ವತವಾಗಿ ಯಾವುದೇ ರೀತಿಯ ಪೋಷಣೆ ಸಿಗದೆ ನೂರಾರು ರೀತಿಯ ಅನಾಹುತಗಳಿಗೆ ತುತ್ತಾಗಿ ಅಳಿದು–ಉಳಿದ ಕಲಾಕೇಂದ್ರಗಳು ಈಗಲು ನೋಡಲು ಸಿಗುತ್ತವೆ. ಇವುಗಳಲ್ಲಿ ಕಾಳಗಿ, ಸಿರಿವಾಳ, ಸನ್ನತಿ, ಏವೂರು, ಕಿರಣಗಿ, ಮಣ್ಣೂರು, ಮಳಖೇಡ, ಹರಸೂರದಂತಹ ಹಲವಾರು ಗ್ರಾಮಗಳು ಒಂದಾನೊಂದು ಕಾಲಕ್ಕೆ ಮೆರೆದ ಐತಿಹಾಸಿಕ ಕಲಾಕೇಂದ್ರ ಗಳಾಗಿದ್ದವು. ರಾಷ್ಟ್ರಕೂಟರ, ಹೊಯ್ಸಳರ, ಜೈನ ಶೈವ, ಮುಸ್ಲಿಂರ ವಿವಿಧ ಸಾಂಸ್ಕೃತಿಕ ಶೈಕ್ಷಣಿಕ ಧಾರ್ಮಿಕ ಜೀವನದ ಬೆಳವಣಿಗೆಗಳ ವಿಕಾಸವನ್ನು ಅಳಿದುಳಿದ ಚಿತ್ರ–ಶಿಲ್ಪಗಳಿಂದ ತಿಳಿಯಬಹುದಾಗಿದೆ.

ಸಿರಿವಾಳ ಶಿಲ್ಪ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾದ ಕಲಾ ಕೇಂದ್ರವಾಗಿದ್ದು, 1ನೆಯ ಶತಮಾನದ ನಾಗರಿಕತೆಯ ಜೊತೆಗೆ ದೇವಾಲಯಗಳು ಕೈ ಶಾಲೆಗಳ ಕೆತ್ತನೆಯ ಕೆಲಸ ಅದರ ಉತ್ಕೃಷ್ಟತೆ ಈಗಲೂ ನೋಡಲು ಸಿಗುತ್ತವೆ. ಇದು 3ನೆಯ ಶತಮಾನದಲ್ಲಿ ಮಹಾನಗರವಾಗಿತ್ತು. ಇಲ್ಲಿಯ ಒಂದು ನೀರಿನ ಬಾವಿಯ ವಾಸ್ತುಶಿಲ್ಪವು ಕಲಾತ್ಮಕ ಮತ್ತು ವಿಶೇಷವಾದುದ್ದಾಗಿದೆ. ಇಲ್ಲಿ ನೂರಕ್ಕೂ ಹೆಚ್ಚು ಶೈವ ದೇವಾಲಯಗಳು, ಜೈನ ಬಸದಿಗಳು ಇದ್ದವು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಇದೇ ರೀತಿ ಕಾಳಗಿ 3ನೆಯ ಶತಮಾನದ ಪಟ್ಟಣವಾಗಿದ್ದು, ಅಲ್ಲಿ ಚಾಲುಕ್ಯ, ರಾಷ್ಟ್ರಕೂಟರ ಶೈಲಿಯ ದೇವಾಲಯಗಳನ್ನು ಈಗಲೂ ನೋಡಬಹುದು. ದೇವಾಲಯಗಳ ಸುತ್ತಲಿನ ಶಿಲ್ಪಕೃತಿ, ಶಿಲಾಬಾಲಿಕೆಯರ ವಿಗ್ರಹಗಳು ತುಂಬಾ ಕಲಾತ್ಮಕವಾಗಿ ಕೆತ್ತಲ್ಪಟ್ಟಿವೆ. ಇಲ್ಲಿ ನಿರ್ಮಾಣಗೊಂಡ ಕಾಳೇಶ್ವರ ದೇವಾಲಯದ



ಗುಲಬರ್ಗಾ ಕೋಟೆ



ಬೀದರ್ ಕೋಟೆ

ಹತ್ತಿರದ ಭಾವಿ ಅದರ ವಾಸ್ತು ಶಿಲ್ಪಕಲೆ ನಿರ್ಮಾಣಗೊಂಡ ರೀತಿ ದಕ್ಷಿಣ ಭಾರತದಲ್ಲಿಯೇ ವಿಶೇಷವಾದದ್ದೆಂದು ಇತಿಹಾಸಕಾರರು ಹೇಳಿದ್ದಾರೆ.

ಗುಲಬರ್ಗಾ ಪ್ರದೇಶದ ದೃಶ್ಯಕಲಾ ಶಿಕ್ಷಣವನ್ನು ಬೇರೆ ಬೇರೆ ಹಂತಗಳಲ್ಲಿ ಗುರುತಿಸಬಹುದು. ಹಿಂದಿನ ಸಾಂಪ್ರದಾಯಿಕ ಕಲಾ ಶಿಕ್ಷಣ, ಗುರುಕುಲ ಶಿಕ್ಷಣ. ವಂಶಪಾರಂಪರ್ಯವಾಗಿ ಮುಂದು ವರೆಯುತ್ತಿದ್ದ ಪದ್ಧತಿಗಳು ಇದ್ದುವು. ಸುರಪುರ ಸಂಸ್ಥಾನದ ಆಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರು ಚಿತ್ರಿಸಿದ ಚಿತ್ರಗಳು ನಮ್ಮ ಚಿತ್ರಗಳಲ್ಲೇ ವಿಶಿಷ್ಟ ಚಿತ್ರಗಳಾಗಿವೆ. ಭಾರತಕ್ಕೆ ಬ್ರಿಟಿಷರ ಆಗಮನದಿಂದ ಬದಲಾದ ಪರಿಸ್ಥಿತಿಯಲ್ಲಿ ಅದಕ್ಕೆ ನಮ್ಮ ದೇಶದ ರಾಜಮನೆತನದ ಒತ್ತಾಸೆ ದೊರಕಿದ್ದರಿಂದ ಒಂದು ರೀತಿಯ ಪಾಶ್ಚಾತ್ಯ ಪ್ರಭಾವದಿಂದ ದೃಶ್ಯಕಲಾ ಶಿಕ್ಷಣ ಬೆಳೆಯಲು ನೆರವಾಯಿತು.

ಸಾಂಪ್ರದಾಯಿಕ ಚಿತ್ರಕಲೆಯ ನಂತರ ಬ್ರಿಟಿಷ ಮಾದರಿಯ ಕಲಾಶಿಕ್ಷಣ ಕೇಂದ್ರಗಳಾದ ಮುಂಬೈ, ಕಲ್ಕತ್ತಾ ಮತ್ತಿತರ ಕಲಾ ಶಾಲೆಗಳಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಕಲಾವಿದರು ಕಲಾಶಿಕ್ಷಣ ಪಡೆದು ಅಲ್ಲಿಯ ಪ್ರಭಾವಕ್ಕೊಳಗಾಗಿ ಹೈದ್ರಾಬಾದ ಕರ್ನಾಟಕದ ದೃಶ್ಯಕಲೆಗೆ ಹೊಸ ಆಯಾಮವನ್ನು ದೊರಕಿಸಿ ಕೊಟ್ಟರು. ಇವರುಗಳಲ್ಲಿ ಶಂಕರರಾವ್ ಆಳಂದಕರ್, ಶಾಂತಲಿಂಗಪ್ಪ ಪಾಟೀಲ್, ಎಂ.ಟಿ. ಭೋಪಲೇ, ಕುಮಾರ ಚಂದ್ರಶೇಖರ್, ಎಸ್.ಎಂ. ಪಂಡಿತ್, ವಿದ್ಯಾಭೂಷಣ, ಜಿ.ಎಸ್. ಖಂಡೇರಾವ್, ವಿ.ಜಿ. ಅಂದಾನಿ ಎ.ಎಸ್. ಪಾಟೀಲರು ಪ್ರಮುಖರು.

ಯಾವುದೇ ದೇಶದ ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ಸಾಮಾಜಿಕ ಮೌಲ್ಯವನ್ನು ಎತ್ತಿಹಿಡಿಯುವುದೇ ದೃಶ್ಯಕಲೆಯ ಮೂಲ ಉದ್ದೇಶ. ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಯಾರದೆಂದು ಯೋಚಿಸಿದಾಗ, ಇದರಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರವೇನು? ಎನ್ನುವ ಪ್ರಶ್ನೆ ಎದುರಾಗುವುದು ಸಹಜ. ಈ ದಿಶೆಯಲ್ಲಿ ದೃಶ್ಯಕಲಾ ಶಿಕ್ಷಣ ನೀಡುತ್ತಿರುವ ಕಾಲೇಜುಗಳ ಪಾತ್ರ ಅತಿ ಮಹತ್ವದಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ದೃಶ್ಯಕಲಾ ಶಿಕ್ಷಣವು ಮುಖ್ಯವಾಗಿ ಎರಡು ಕವಲು ದಾರಿಗಳಲ್ಲಿ ಸಾಗಿದೆ. ಅದರಲ್ಲಿ ಚಿತ್ರಕಲಾವಿದ ರನ್ನು ಸಿದ್ಧಗೊಳಿಸಲು ಚಿತ್ರಕಲಾ ಶಿಕ್ಷಣವನ್ನು ಪ್ರತ್ಯೇಕವಾಗಿ ನೀಡುವ ಚಿತ್ರಕಲಾ ಶಾಲೆಗಳು ಅಥವಾ ಕಾಲೇಜುಗಳು ಮೊದಲನೆಯದಾದರೆ. ಎರಡನೆಯದೆಂದರೆ ಸಾಮಾನ್ಯ ಶಿಕ್ಷಣ ನೀಡುವ ಶಾಲೆಗಳಲ್ಲಿ ಚಿತ್ರಕಲೆಯೂ ಒಂದು ವಿಷಯವಾಗಿರು ವಂತಹ ಶಿಕ್ಷಣ ಸಂಸ್ಥೆಗಳು.

ಗುಲಬರ್ಗಾ ಜಿಲ್ಲೆಯ ದೃಶ್ಯಕಲಾ ಶಿಕ್ಷಣಕ್ಕೆ ಶಂಕರರಾವ ಆಳಂದಕರ್‌ರವರ ಕೊಡುಗೆ ಬಹಳ ಮಹತ್ವದಾಗಿದೆ. 1938ರಲ್ಲಿ ಗುಲಬರ್ಗಾದ ನೂತನ ವಿದ್ಯಾಲಯದಲ್ಲಿ ಚಿತ್ರಕಲಾ ವಿಭಾಗ ಪ್ರಾರಂಭಿಸಿದರು. ಈ ಕಲಾಶಾಲೆಯಲ್ಲಿ ಲೋಯರ್ ಗ್ರೇಡ್, ಹೈಯರ ಗ್ರೇಡ್, ಕಲಾಪ್ರಥಮ ಮತ್ತು ಕಲಾಮಾಧ್ಯಮ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಇಲ್ಲಿನ ಹಲವಾರು ಕಲಾವಿದರಿಗೆ ಪ್ರೇರಕವಾಗಿ ಚಿತ್ರ ಕಲಾ ಶಿಕ್ಷಣ ನೀಡಿದ ಮಹಾನ್ ಕಲಾವಿದ ಶಂಕರರಾವ್ ಆಳಂದಕರ ಇವರ ಗರಡಿಯಲ್ಲಿಯೇ ಸ್ಫೂರ್ತಿಗೊಂಡ ಪ್ರಖ್ಯಾತಿ ಕಲಾವಿದರುಗಳಲ್ಲಿ ಡಾ. ಎಸ್.ಎಂ. ಪಂಡಿತ್ ಮತ್ತು ವಿದ್ಯಾಭೂಷಣ್ ಅವರು ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಲಾವಿದರು.

1949 ರಿಂದ 60ರ ವರೆಗೆ ಕಲಬುರ್ಗಿಯಲ್ಲಿ ಹಲವಾರು ಕಲಾವಿದರು ಚಿತ್ರಕಲಾ ಪ್ರದರ್ಶನ ಮಾಡುತ್ತ ಬಂದಿದ್ದಾರೆ. ಅದರಲ್ಲಿ ಎಸ್.ಬಿ. ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದು, ಉತ್ತಮ ಕಲಾವಾತಾವರಣವನ್ನು ಮೂಡಿಸಿದ ವಿ.ಎಸ್. ಬಂಕುರಕರರವರನ್ನು ಮರೆಯುವಂತಿಲ್ಲ. ಅವರು ಒಂದು ಗುಂಪನ್ನು ಕಟ್ಟಿಕೊಂಡು ಆಗಾಗ ಕಲಾಚಟುವಟಿಕೆಗಳನ್ನು ಮಾಡುತ್ತಿದ್ದರಲ್ಲದೆ, ಕಲಾಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿದ್ದರು. ಬಂಕೂರಕರ್ ಅವರು ಬಹಳ ಕಲಾಕೃತಿಗಳನ್ನು ರಚಿಸಿಲ್ಲವಾದರೂ, ಅನುಭವಿ ಸೃಜನಶೀಲ ಚಿತ್ರಕಲಾ ಶಿಕ್ಷಕರೆಂದು ಹೇಳಬಹುದು. ಇವರ ಮಾರ್ಗದರ್ಶನ ದಲ್ಲಿ ಸ್ಫೂರ್ತಿಗೊಂಡ ನಾಡೋಜ ಡಾ. ಜೆ.ಎಸ್. ಖಂಡೇರಾವ ಅವರು ಬಾಂಬೆಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಿಂದ ಚಿತ್ರಕಲಾ ಶಿಕ್ಷಣ ಪಡೆದು 1966ರಲ್ಲಿ ದಿ. ಐಡಿಯಲ್ ಫೈನ್ ಆರ್ಟ್ ಸಂಸ್ಥೆಯನ್ನು ಪ್ರಾರಂಭಿಸಿದ್ದರು. 1971ರ ವರೆಗೆ ಈ ಕಲಾ ಶಾಲೆಯನ್ನು ನಡೆಸಿದ್ದರು. ಜಿ.ಎಸ್. ಖಂಡೇರಾವ ಅವರ ಮಾರ್ಗದರ್ಶನದಲ್ಲಿ ವ್ಹಿ.ಜಿ. ಅಂದಾನಿ, ಬಸವರಾಜ ಉಪ್ಪಿನ್ ಮತ್ತು ಎಂ.ಬಿ. ಲೋಹಾರ್ ಅವರು ಕಲಾವಿದರಾಗಿ ರೂಪ ಗೊಂಡರು 1972ರಲ್ಲಿ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆ ಯನ್ನು ವಿ.ಜಿ. ಅಂದಾನಿಯವರಿಗೆ ಒಪ್ಪಿಸಿ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಅಧ್ಯಾಪಕ ರಾಗಿ ನೇಮಕಗೊಂಡರು ಅಲ್ಲದೆ ಪೂಜ್ಯ ಶ್ರೀ ಶರಣಬಸವಪ್ಪಾ ಅವರ ಆಸಕ್ತಿ ಮತ್ತು ಪೋಷಣೆಯಿಂದ ದೃಶ್ಯಕಲೆಯನ್ನು ಸ್ನಾತಕೋತ್ತರ ಪದವಿ ಮಟ್ಟಕ್ಕೆ ಬರಲು ಕಾರಣವಾಯಿತು. ಅವರ ಸಾಹಸ ಹಾಗೂ ಸಹಕಾರಗಳು ಅಭಿನಂದನೀಯ. ಇದು ಗುಲಬರ್ಗಾದ ದೃಶ್ಯಕಲಾ ಶಿಕ್ಷಣದಲ್ಲಿ ಹೊಸ ಅಧ್ಯಾಯವೆಂದು ಹೇಳಬಹುದು.

1977–78ರಲ್ಲಿ ಮಾತೋಶ್ರೀ ಗೋದುತಾಯಿ ದೊಡ್ಡಪ್ಪ ಅಪ್ಪ ಮಹಿಳಾ ಮಹಾವಿದ್ಯಾಲಯದಲ್ಲಿ ಕೂಡ ಚಿತ್ರಕಲಾ ವಿಭಾಗವನ್ನು ಪ್ರಾರಂಭಿಸಲಾಯಿತು. ಈ ಚಿತ್ರಕಲಾ ವಿಭಾಗಕ್ಕೆ ಎ.ಎಸ್. ಪಾಟೀಲ ಅವರು ಮುಖ್ಯಸ್ಥರಾಗಿ ನೇಮಕಗೊಂಡರು. ಕಲಾವಿದ ಎ.ಎಸ್. ಪಾಟೀಲರ ಮಾರ್ಗದರ್ಶನದಲ್ಲಿ ನೂರಾರು ಕಲಾ ವಿದ್ಯಾರ್ಥಿನಿಯರು ದೃಶ್ಯಕಲಾ ಶಿಕ್ಷಣದ ತರಬೇತಿ ಪಡೆದಿದ್ದಾರೆ. 1972ರಲ್ಲಿ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆ ಅಂದಾನಿಯರವರ ಕೈಗೆ ಬಂದಾಗ ಅದಕ್ಕೆ ಹೊಸ ಆಯಾಮ ವನ್ನು ನೀಡಿದ್ದರು. 1973ರಿಂದ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಪ್ರಾರಂಭ ವಾಯಿತು.

ಕಳೆದ ನಾಲ್ಕು ದಶಕಗಳಿಂದ ತಮ್ಮ ಜೀವನವನ್ನೇ ದೃಶ್ಯಕಲಾ ಕ್ಷೇತ್ರಕ್ಕೆ ಅರ್ಪಿಸುವ ಮೂಲಕ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ ಹೆಸರನ್ನು ರಾಷ್ಟ್ರಮಟ್ಟಕ್ಕೆ ಬೆಳೆಸಿರುವುದಲ್ಲದೆ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಸ್ಥಾಪಿಸಿದ ಕೀರ್ತಿ ಇವರದಾಗಿದೆ. ಈ ಕಾಲೇಜಿನಲ್ಲಿ ದೃಶ್ಯಕಲಾ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿ. ಬಸವರಾಜ ಉಪ್ಪಿನ್ ಎಂ.ಬಿ. ಲೋಹಾರ್, ಬಸವರಾಜ ಜಾನೆ, ವಿಜಯ ಬಾಗೋಡಿ, ವಿಜಯ ಹಾಗರಗುಂಡಿಗಿ, ಶೇಷರಾವ ಬಿರಾದಾರ, ಬಸವರಾಜ ಮೂಸಾವಳಗಿ, ಕಿಶೋರ ನಾಗೂರೆ, ವಿ.ಬಿ. ಬಿರಾದಾರ, ವೀರಣ್ಣ ಜಿ.ಆರ್, ವೀರೇಂದ್ರ ಶಾ, ಮಲ್ಲಿಕಾರ್ಜುನ ಶೆಟ್ಟಿ, ಪ್ರಕಾಶ ಗಡಕರ್, ಮೋಹನ್ ಸೀತನೂರ, ಅಮೃತ ಸಾಹು, ಬಾಬುರಾವ ಎಚ್, ಅಂಬಾರಾಯ ಚಿನ್ನಮಳ್ಳಿ, ರಾಮಗಿರಿ ಪೊಲೀಸ್ ಪಾಟೀಲ್, ಶಶಿಕಾಂತ ಮಾಶಾಳಕರ್, ಶಿವಾನಂದ ಬಸವಂತಪ್ಪ, ಶರಣು ಅಳ್ಳೊಳ್ಳಿ, ಸಂತೋಷ ಅಂದಾನಿ, ಸುನೀಲ ಲೋಹಾರ ದೃಶ್ಯಕಲೆಯ ವಿವಿಧ ಮಾಧ್ಯಮ ಗಳಲ್ಲಿ ತಮ್ಮ ವೈಯಕ್ತಿಕ ಶೈಲಿಗಳ ಮೂಲಕ ಗುರುತಿಸಿ ಕೊಂಡಿದ್ದಾರೆ. ವಿ.ಜಿ. ಅಂದಾನಿ ಅವರು ಕೇವಲ ಕಲಾವಿದ ರಾಗಿರದೆ ಕಲಾಸಂಘಟಕರಾಗಿ ಮತ್ತು ಉತ್ತಮ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ವಿ.ಜಿ. ಅಂದಾನಿರವರ ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಗೆ ಕೆ.ಕೆ. ಹೆಬ್ಬಾರ್, ಎ.ಎ. ಆಲಮೇಲಕರ್, ಆದಿಮೂಲಂ, ಬೇಂದ್ರೆ, ಪಲ್ಸೀಕರ್, ನಾಡೋಜ್, ಆರ್.ಎಂ. ಹಡಪದ, ಮುಂತಾದ ಚಿತ್ರಕಲಾವಿದರು. ದೃಶ್ಯಕಲಾ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಈ ಕಲಾ ಕಾಲೇಜಿನಲ್ಲಿ ಸಮಕಾಲೀನ ದೃಶ್ಯಕಲೆಯ ಕುರಿತು ಹೊಸ ಹೊಸ ತಂತ್ರಗಳ ವಿಧಾನಗಳ ಕುರಿತಾಗಿ ಚರ್ಚೆ ಮತ್ತು ವಿಚಾರ ಸಂಕಿರಣಗಳು ನಡೆದಿದೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಚಿತ್ರ-ಶಿಲ್ಪ ಮತ್ತು ಪ್ರಿಂಟನ್ ಸಿಂಪ್ರೆಜಿಯಮ್‌ಗಳು, ಪ್ರದರ್ಶನಗಳು, ಶಿಬಿರಗಳು ಮೇಲಿಂದ ಮೇಲೆ ನಡೆದಿವೆ.

ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಪೇಂಟಿಂಗ್, ಗ್ರಾಫಿಕ್, ಅಪ್ಲೈಡ್ ಆರ್ಟ್‌ಗಳಲ್ಲಿ ಬಿ.ವಿ.ಎ. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ನೀಡಲಾಗುತ್ತದೆ. ದೃಶ್ಯಕಲೆಯ ಮಟ್ಟದಲ್ಲಿ ಭಾವಚಿತ್ರ ನೇಚರ್ ಡ್ರಾಯಿಂಗ್, ಕಾಂಪೋಜಿಸನ್, ಕ್ರಿಯೇಟಿವ್ ಪೇಂಟಿಂಗ್, ಕೋಲೋಗ್ರಾಫಿ ವುಡಕಟ್, ಲಿಥೋಗ್ರಾಫ್, ಕ್ಲೇ ಮಾಡೆಲಿಂಗ್ ಮುಂತಾದ ಇನ್ನು ಅನೇಕ ಸೃಜನಶೀಲತೆಯ ಕಲೆಗಳು ಮತ್ತು ತತ್ವಗಳನ್ನು ಕಲಿಸ ಲಾಗುತ್ತದೆ.

ದಿ. ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ ಕಲಾ ಇತಿಹಾಸ, ಕಲಾ ಸಾಹಿತ್ಯ ಕಲಾವಿದರ ಜೀವನ ಚರಿತ್ರೆ ಮತ್ತು ಮುದ್ರಣ ಕಲೆ ಮುಂತಾದವುಗಳು ಕುರಿತು ಸುಮಾರು 10,000ಕ್ಕೂ ಹೆಚ್ಚು ಕಲಾ ಪುಸ್ತಕಗಳನ್ನು ಹೊಂದಿದ್ದ ಸುಸಜ್ಜಿತ ವಾದ ಗ್ರಾಂಥಾಲಯ ಇದೆ. ಕಲೆಗೆ ಸಂಬಂಧಿಸಿದ ಪತ್ರಿಕೆಗಳು, ಕ್ಯಾಟಲಾಗಗಳು ಮತ್ತು ಕಲೆಗೆ ಸಂಬಂಧಿಸಿದ ಸ್ಲೈಡುಗಳು ದೃಶ್ಯಕಲೆಯ ವಿವಿಧ ವಿಷಯಗಳ ಪರಿಚಯ ಮಾಡಿಕೊಡುತ್ತವೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಕಲಾ ವಿದ್ಯಾರ್ಥಿಗಳು ಮತ್ತು ಕಲಾವಿದರು ಈ ಗ್ರಂಥಾಲಯದ ಲಾಭ ಪಡೆಯುತ್ತಿದ್ದಾರೆ. ಇತ್ತೀಚಿನ ವರ್ಷ ಗಳಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ದೃಶ್ಯಕಲೆಯಲ್ಲಿ ಪಿಎಚ್.ಡಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಜಿ.ಓ. ಶಿವಕುಮಾರ್, ಮಲ್ಲಿಕಾರ್ಜುನ ಬಾಗೋಡಿ, ವಿಶ್ವೇಶ್ವರಿ ತಿವಾರಿ, ಮೋಹನ್ ಪಂಚಾಳ, ಸೂರ್ಯಕಾಂತ ಮಂಟಗಿ, ರೆಹಮಾನ ಪಟೇಲ್, ಸತೀಶ ವಲ್ಲಾಪೂರೆ, ಕಾಶಿನಾಥ ಡಿ ಅವರು ಹೈದ್ರಾಬಾದ ಕರ್ನಾಟಕ ಪ್ರದೇಶದ ದೃಶ್ಯಕಲೆಯಲ್ಲಿ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದುಕೊಂಡಿದ್ದಾರೆ. ಇದೀಗ ವಿಶ್ವವಿದ್ಯಾಲಯ ಆವರಣದಲ್ಲಿ ಎಂ.ವ್ಹಿ.ಎ (ಪೇಂಟಿಂಗ್) ಕೋರ್ಸ್‌ನ್ನು ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರೊ. ಪಿ.ಕೆ. ಖಂಡೋಬಾ ಅವರ ಕೊಡುಗೆ ಗಮನಾರ್ಹವಾಗಿದೆ.

1995ರಲ್ಲಿ ಪ್ರಾರಂಭವಾಧ ಗುಲಬರ್ಗಾದ ದಿ. ಆರ್ಟ್ ಇಂಟಿಗ್ರೇಷನ್ ಫೈನ್‌ಆರ್ಟ್ ಕಾಲೇಜು ಸಹ ಉತ್ತಮ ಗುಣಮಟ್ಟದ ದೃಶ್ಯಕಲಾ ಶಿಕ್ಷಣ ನೀಡುತ್ತಿದೆ. ಇಂದಿನ ವೈಜ್ಞಾನಿಕ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಹುಪಾಲು ದೃಶ್ಯಕಲೆಯನ್ನು ಅವಲಂಬಿಸಿವೆ. ಇಡೀ ಪ್ರಪಂಚದ ಕಣ್ಣು ದೃಶ್ಯಕಲಾವಿದರ ಮೇಲೆ ಇರುವುದರಿಂದ ಸಮಕಾಲೀನ ದೃಶ್ಯಕಲಾ ಪ್ರಪಂಚಕ್ಕೆ ದೃಶ್ಯ ಕಲಾವಿದರನ್ನು ತಯಾರು ಮಾಡಿ ಅರ್ಪಿಸುವಲ್ಲಿ, ದೃಶ್ಯಕಲಾ ಶಿಕ್ಷಣ ನೀಡುತ್ತಿರುವ ಕಾಲೇಜುಗಳ ಪಾತ್ರ ಬಹಳ ಗಮನಾರ್ಹ ವಾಗಿದೆ ಎಂದು ಹೇಳಬಹುದು.

ಪ್ರಸ್ತುತ ಹೈದ್ರಾಬಾದ ಕರ್ನಾಟಕ ಪ್ರದೇಶದ ದೃಶ್ಯಕಲಾ ಶಿಕ್ಷಣದ ಬೆಳವಣಿಗೆಯನ್ನು ನೋಡಿದರೆ, ಕರ್ನಾಟಕದ ದೃಶ್ಯಕಲಾವಿದರಲ್ಲಿ ಅರ್ಧಭಾಗದಷ್ಟು ಸೃಜನಶೀಲ ದೃಶ್ಯ ಕಲಾವಿದರು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸಿಗುತ್ತಾ ರೆಂಬುದು ನಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿದೆ.

(ಪಿಪಿ)

ದೃಶ್ಯಕಲಾ ಸಂಶೋಧನೆ: ಹೈದ್ರಾಬಾದ್ ಕರ್ನಾಟಕದ ದೃಶ್ಯಕಲೆಯ ಕ್ಷೇತ್ರದಲ್ಲಿ ಸಂಶೋಧನೆಯು ತೊಂಭತ್ತರ ದಶಕದ ಇತ್ತೀಚೆಗೆ ಅಧ್ಯಯನ ಪ್ರಾರಂಭಗೊಂಡಿದ್ದು. ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿಎಚ್.ಡಿ. ಯಂತಹ ಪದವಿಯ ಹಿನ್ನೆಲೆಯಲ್ಲಿ ಅಧ್ಯಯನ ಪ್ರಾರಂಭಗೊಂಡಿದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಹಿಂದುಳಿಯಲು ಮುಖ್ಯಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸುಗಳು ಕರ್ನಾಟಕದಲ್ಲಿ

ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು ಮತ್ತು ವಿಶೇಷವಾಗಿ ಈ ಎಲ್ಲ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ವಾಣಿಜ್ಯ ಕಲಾವಿದರಾಗಿ (ಕಮರ್ಶಿಯಲ್ ಆರ್ಟಿಸ್ಟ್) ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿರುವುದು ಸಾಮಾನ್ಯವಾಗಿ ಕಂಡುಬರುವ ಅಂಶವಾಗಿದೆ. ಚಿತ್ರಕಲೆ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ತರಗತಿಗೆ ಸೇರಲೇಬೇಕೆಂದರೆ ನಡುವೆ ಒಂದು ವರ್ಷದ ಬ್ರಿಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಬ್ರಿಜ್ ಕೋರ್ಸ್ ಮಾಡಿಕೊಳ್ಳಲು ಆಗದೆ ಸ್ನಾತಕೋತ್ತರ ಪದವಿಯಿಂದ ವಂಚಿತರಾಗಿರುವುದೇ ಹೆಚ್ಚು.

ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆಗಳ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿಯಲು ಕಾರಣವಾಗಿದೆ. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಆಗ ಪ್ರಾರಂಭಗೊಂಡಿದ್ದು ಅವು ಹೆಚ್ಚಾಗಿ ಪದವಿ ಹಂತಕ್ಕೆ ಮಾತ್ರ ಸೀಮಿತಗೊಂಡಿದ್ದವು. ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ವಿಶ್ವವಿದ್ಯಾಲಯದಲ್ಲಿ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ.

ಈ ಎಲ್ಲ ಕೊರತೆಗಳ ಮಧ್ಯದಲ್ಲಿಯೂ ಹೈದ್ರಾಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಗುಲಬರ್ಗಾದಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಪದವಿ ಕೋರ್ಸ್‌ಗಳು ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಪ್ರಾರಂಭವಾಗಿದ್ದುದು ಒಂದು ಐತಿಹಾಸಿಕ ದಾಖಲೆಯಾಗಿದೆ. ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಬೋಧನೆ ಮಾಡುತ್ತಿದ್ದ ಅಧ್ಯಾಪಕರೆಲ್ಲರೂ ಯಾವುದೇ ಸಂಶೋಧನೆಯ ಹಿನ್ನೆಲೆಯಿಂದ ಬರದೇ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವೇ ಈ ಹಂತದಲ್ಲಿ ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನದ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನು ಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್., ಪಿಎಚ್.ಡಿ.ಯಂತಹ ಸಂಶೋಧನೆಗೆ 2002ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾದ ಡಾ. ಕುಟಿನೋ ಮತ್ತು ವಿಶೇಷ ಕಾಳಜಿ ವಹಿಸಿದವರು ಕಲಾನಿಕಾಯದ ಡೀನ್‌ರಾದ ಡಾ. ಪಿ.ಕೆ. ಖಂಡೋಬಾ ಅವರು, ಆಗಿನ ಫೈನ್‌ಆರ್ಟ್ ಫೆಕಲ್ಟಿ ಅಧ್ಯಯನ ಮಂಡಳಿಯ ಸದಸ್ಯರಾದ ಡಾ. ಎಸ್.ಸಿ. ಪಾಟೀಲ ಮುಂತಾದವರ ಪ್ರಯತ್ನದಿಂದ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ದೃಶ್ಯಕಲಾ ಸಂಶೋಧನಾ ಅಧ್ಯಯನಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಿತು.

ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಈಗ ವಿಶ್ವವಿದ್ಯಾಲಯದ ಹಂತದಲ್ಲಿ ಗಂಭೀರವಾಗಿ ಇನ್ನುಳಿದ ವಿಷಯಗಳಂತೆ ಇಲ್ಲಿಯೂ ಕೂಡಾ ಸಂಶೋಧನೆಗೆ ಪ್ರಾಧಾನ್ಯತೆ ಸಿಕ್ಕಿದೆ. ಈಗ ಸಾಕಷ್ಟು ವಿದ್ಯಾರ್ಥಿಗಳು, ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಂಡು ಅಧ್ಯಯನ ಮಾಡುತ್ತಿದ್ದಾರೆ.

ಒಟ್ಟಾರೆ ಹೈದ್ರಾಬಾದ್ ಕರ್ನಾಟಕದ ದೃಶ್ಯಕಲಾ ಸಂಶೋಧನ ಅಧ್ಯಯನದ ನೆಲೆ–ಹಿನ್ನೆಲೆಯನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಿಕೊಂಡು ವಿವೇಚಿಸಲಾಗಿದೆ.

1. ವಿದ್ಯಾರ್ಥಿಗಳ ಸಂಶೋಧನ ಅಧ್ಯಯನಗಳು,
2. ಪ್ರಾಧ್ಯಾಪಕರ ಸಂಶೋಧನ ಯೋಜನೆಗಳು

1. ವಿದ್ಯಾರ್ಥಿಗಳ ಸಂಶೋಧನ ಅಧ್ಯಯನಗಳು

1. ಪಿಎಚ್.ಡಿ. ಮಹಾಪ್ರಬಂಧಗಳು
2. ಎಂ.ಫಿಲ್. ಪ್ರಬಂಧಗಳು
3. ಡಿ.ಲಿಟ್. ಪ್ರಬಂಧಗಳು
4. ಕಿರುಸಂಶೋಧನ ಪ್ರಬಂಧಗಳು

ಇಲ್ಲಿ ಪ್ರಮುಖವಾಗಿ ಈ ಕೆಳಗಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವು ರೂಪಗೊಂಡಿದೆ.


1. ಹೈದ್ರಾಬಾದ್‌ಕರ್ನಾಟಕದ ಕಲಾವಿದರು/ಸಾಹಿತಿಗಳು ಬೇರೆ ಕಡೆಗೆ ಹೋಗಿ ನೆಲೆಸಿ ಈ ಪ್ರದೇಶದ ಕುರಿತು ಸಂಶೋಧನ ಅಧ್ಯಯನ ಕೈಗೊಂಡಿರುವುದು.
2. ಹೈದ್ರಾಬಾದ್ ಕರ್ನಾಟಕೇತರ ಪ್ರದೇಶ ಕಲಾವಿದರು/ಸಾಹಿತಿಗಳು ಈ ಪ್ರದೇಶ ಕುರಿತು ನಡೆಸಿದ ಅಧ್ಯಯನಗಳು
3. ಹೈದ್ರಾಬಾದ್‌ಕರ್ನಾಟಕ ಪ್ರದೇಶದಲ್ಲಿ ಬೇರೆ ಪ್ರದೇಶದಿಂದ ಬಂದು ಇಲ್ಲಿಯೇ ನೆಲೆನಿಂತ ಕಲಾವಿದರು/ಸಾಹಿತಿಗಳ ಅಧ್ಯಯನಗಳು.
4. ಹೈದ್ರಾಬಾದ್ ಪ್ರದೇಶದ ಕಲಾವಿದರು/ಸಾಹಿತಿಗಳು ಅಲ್ಲಿಯೇ ಇದ್ದುಕೊಂಡು ನಡೆಸಿದ ಅಧ್ಯಯನಗಳು.

ಹೀಗೆ ಈ ನಾಲ್ಕು ನೆಲೆಗಳಲ್ಲಿ ನಡೆದ ಸಂಶೋಧನ ಅಧ್ಯಯನದ ಸ್ಥೂಲ ನೋಟವನ್ನು ಮೇಲಿನ ವರ್ಗೀಕರಣದ ಹಿನ್ನೆಲೆಯಲ್ಲಿ ಒಂದು ಕಡೆಗೆ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಹೈದ್ರಾಬಾದ್ ಕರ್ನಾಟಕದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಈ ಪ್ರದೇಶದ ಕಲಾವಿದರಾದ ಎಸ್.ಸಿ. ಪಾಟೀಲ ಅವರು 1983ರಲ್ಲಿ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ**



ಬೀದರ್ ರಂಗೀನ ಮಹಲ್‌ನ ದ್ವಾರದ ಮೇಲಿನ ಭಿತ್ತಿಚಿತ್ರ



ಶಾಹ ಖಲೀಲ್ಲಿಲ್ಲಾ ಭುತ್‌ಶೀಕಾನ ಚೌಖಂಡಿ (ಬೀದರ್)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಚಿತ್ರಕಲೆಗಳ ಸಂಪುಟ

ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ ಎಂಬ ಕಿರು ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು ಇದು ದೃಶ್ಯಕಲಾ ಕ್ಷೇತ್ರದಲ್ಲಿ, ಕರ್ನಾಟಕದಲ್ಲಿ ವಿಶ್ವವಿದ್ಯಾಲಯ ಹಂತದಲ್ಲಿ ನಡೆಸಿದ ಪ್ರಥಮ ಕಿರುಸಂಶೋಧನ ಅಧ್ಯಯನ ವಾಗಿದೆ. ಪಿಹೆಚ್.ಡಿ ಅಧ್ಯಯನಗಳು ಪ್ರಾರಂಭಗೊಂಡಿದ್ದು 1990ರ ದಶಕದಲ್ಲಿ ಎನ್ನಬಹುದು.

1. ಪಿಎಚ್.ಡಿ. ಮಹಾ ಪ್ರಬಂಧಗಳು: 1991ರಲ್ಲಿ ಡಾ.ಎಸ್.ಸಿ. ಪಾಟೀಲ ಅವರು **ಕರ್ನಾಟಕದ ಜನಪದ ಚಿತ್ರಕಲೆ** ಎಂಬ ವಿಷಯಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿ ಪಡೆದರು. ಇದು ಪೂರ್ಣ ಪ್ರಮಾಣದಲ್ಲಿ ಚಿತ್ರಕಲೆಯನ್ನೇ ಕುರಿತು ಸಂಶೋಧನೆ ನಡೆಸಿದ ಕರ್ನಾಟಕದ ಮೊಟ್ಟ ಮೊದಲ ಪಿಹೆಚ್.ಡಿ. ಮಹಾಪ್ರಬಂಧವಾಗಿದೆ. ಹಾಗೆಯೇ ಹೈದ್ರಾಬಾದ್ ಕರ್ನಾಟಕದ ಜನಪದ ಚಿತ್ರಕಲೆಗಳ ಕುರಿತಾದ ಮೊದಲ ಅಧ್ಯಯನವೂ ಇದಾಗಿದೆ. ಈ ಗ್ರಂಥ 1993ರಲ್ಲಿ ಪ್ರಕಟವಾಗಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ವೃತ್ತಿಮೂಲ, ಸೌಂದರ್ಯ ಮೂಲ, ಧರ್ಮ ಮೂಲವೆಂದು ವಿಂಗಡಿಸಿಕೊಂಡು ವಿಶೇಷ ವಾಗಿ ಪ್ರಾಗೈತಿಹಾಸಿಕ ಚಿತ್ರಕಲೆ, ಹಚ್ಚೆ, ಕಸೂತಿ, ಮದರಂಗಿ, ತೊಗಲುಗೊಂಬೆ, ರಂಗೋಲಿ, ಗಂಜೀಫಾ, ಹಬ್ಬ ಹರಿದಿನಗಳಲ್ಲಿ, ಉತ್ಸವಗಳಲ್ಲಿ, ಮದುವೆ ಮುಂತಾದ ಜನಪದ ಚಿತ್ರಕಲೆಗಳನ್ನು ಕುರಿತು ಹೈದ್ರಾಬಾದ್ ಕರ್ನಾಟಕ ಪ್ರದೇಶ ಗಳಾದ ಗುಲಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಯಾದಗೀರ ಮುಂತಾದ ಜಿಲ್ಲೆಗಳನ್ನು ಅಧ್ಯಯನಕ್ಕೊಳಪಡಿಸಿ ನಡೆಸಿದ ಸಂಶೋಧನಾ ಗ್ರಂಥ ಇದಾಗಿದೆ.

1995ರಲ್ಲಿ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು** ಎಂಬ ಸಂಶೋಧನಾ ಮಹಾಪ್ರಬಂಧವು ಬೆಂಗಳೂರು ವಿಶ್ವವಿದ್ಯಾಲಯದಿಂದ ಅ.ಲ.ನರಸಿಂಹನ್ ಅವರಿಂದ ಬಂದಿದ್ದು, ಅವರು ಈ ಪ್ರದೇಶದ ರಾಯಚೂರಿನ ಗಾಜಿನ ಗೌಡರ್ ಮನೆಯ ಭಿತ್ತಿಚಿತ್ರಗಳು ಮತ್ತು ಸುರಪುರ ಅರಮನೆಯ ಭಿತ್ತಿಚಿತ್ರಗಳು, ಬೀದರಿನ ಅಸರ್ ಮಹಲ್ ಮುಂತಾದ ಭಿತ್ತಿಚಿತ್ರ ಗಳನ್ನು ಕುರಿತು ಪ್ರಾಸಂಗಿಕವಾಗಿ ಅಧ್ಯಯನ ಮಾಡಿದ್ದಾರೆ.

2000ರಲ್ಲಿ ಯಾದಪ್ಪ ಪರದೇಶಿ ಅವರು **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ** ಎಂಬ ವಿಷಯದ ಸಂಶೋಧನ ಮಹಾಪ್ರಬಂಧವು ಈ ಪ್ರದೇಶದ ಸುರಪುರ, ಬೀದರ್, ರಾಯಚೂರು, ಗುಲಬರ್ಗಾ, ಕೊಪ್ಪಳ ಮುಂತಾದ ಪ್ರದೇಶಗಳ ಮಠ–ಮಂದಿರ, ಅರಮನೆ, ದೇವಾಲಯ, ಮಸೀದಿ ಮುಂತಾದ ಸ್ಥಳಗಳಲ್ಲಿನ ಭಿತ್ತಿಚಿತ್ರಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ. 2002ರಲ್ಲಿ ಶಿವಾನಂದ ಬಂಟನೂರ ಅವರು **ಕರ್ನಾಟಕದ ಜನಪದ ಶಿಲ್ಪಕಲೆ,** ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ಬಂದ ಈ ಸಂಶೋಧನ ಮಹಾಪ್ರಬಂಧದಲ್ಲಿ ಹೈದ್ರಾಬಾದ್ ಕರ್ನಾಟಕದ ಜನಪದ ಶಿಲ್ಪಗಳನ್ನು ಶಿಲೆ, ಲೋಹ, ಮರ, ಮಣ್ಣು ಮುಂತಾದ ಸಂಕೀರ್ಣ ಮಾಧ್ಯಮದ ಜನಪದ ಶಿಲ್ಪಗಳನ್ನು ಕುರಿತು ಇಲ್ಲಿ ವ್ಯಾಪಕವಾಗಿ ಚಿತ್ರಗಳ ಸಹಿತ ಅಧ್ಯಯನ ಮಾಡಿದ್ದಾರೆ. ಇದೇ ವರ್ಷದಲ್ಲಿ ಈ ಪ್ರದೇಶದ ಕಲಾವಿದರಾದ ಲಕ್ಷ್ಮೀದೇವಿ ಗವಾಯಿ ಅವರು **ಚಿತ್ರಕಲಾವಿದ ಎಂ.ವಿ. ಚೆಟ್ಟಿ ಜೀವನ ಮತ್ತು ಕಲಾಕೃತಿಗಳು** ವಿಷಯದ ಮೇಲೆ ಸಂಶೋಧನ ಮಹಾಪ್ರಬಂಧವನ್ನು ರಚಿಸಿದ್ದಾರೆ.

2002ರಲ್ಲಿ ಡಾ. ಎಸ್.ಸಿ. ಪಾಟೀಲ ಅವರ ದ್ವಿತೀಯ ಪಿಹೆಚ್.ಡಿ ಮಹಾಪ್ರಬಂಧ **ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಶಲ್ ರೆಫರೆನ್ಸ್ ಟು ಡ್ರಾಯಿಂಗ್ ಅಂಡ್ ಪೇಂಟಿಂಗ್ ಅಟ್ ಸ್ಕೂಲ್ ಲೆವೆಲ್** ವಿಷಯದ ಕುರಿತು ಅಧ್ಯಯನ ಮಾಡಿದ್ದು, ಈ ಪ್ರದೇಶದಲ್ಲಿನ ಜಿಲ್ಲೆ, ತಾಲೂಕುಗಳನ್ನು ಅಧ್ಯಯನಕ್ಕೆ ಮಾದರಿ ಗಳನ್ನಾಗಿ ಬಳಸಿಕೊಂಡು ಮಾಧ್ಯಮಿಕ ಹಂತದ ಶಾಲಾಶಿಕ್ಷಣ ದಲ್ಲಿ ಚಿತ್ರಕಲೆಯ ಸ್ಥಿತಿಗತಿಯನ್ನು ಕುರಿತು ಅಧ್ಯಯನ ಮಾಡಿದ್ದಾರೆ.

2004ರಲ್ಲಿ ಶರಣಬಸಪ್ಪ ಕೋಲ್ಕಾರ್ ಅವರು **ಕೊಪ್ಪಳ ಹಂಪಿ ಪ್ರದೇಶದ ಪ್ರಾಗೈತಿಹಾಸದ ಕಲೆ** ಎಂಬ ವಿಷಯದ ಕುರಿತು ಇತಿಹಾಸ ಪೂರ್ವಕಾಲದ ಅನೇಕ ಹೊಸ ಹೊಸ ನೆಲೆಗಳನ್ನು ಶೋಧಿಸುವುದರ ಜೊತೆಗೆ ಈ ಪ್ರದೇಶದ ಪ್ರಾಗೈತಿಹಾಸಿಕ ಕಲೆಯ ಚಿತ್ರಗಳ ವಸ್ತುವಿಷಯವನ್ನು ತೌಲನಿಕವಾಗಿ ಚರ್ಚಿಸಿ ದ್ದಾರೆ. ಇವರು ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದು ಕೊಂಡಿದ್ದಾರೆ.

ಇದೇ ಅವಧಿಯಲ್ಲಿ ಜಿ.ಓ. ಶಿವಕುಮಾರ ಅವರು **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು** ವಿಷಯದ ಮೇಲೆ ಸಂಶೋಧನ ಅಧ್ಯಯನ ಮಾಡಿದ್ದು, ಹೈದ್ರಾಬಾದ್ ಕರ್ನಾಟಕದ ಅನೇಕ ಪ್ರದೇಶಗಳನ್ನು ವಾಣಿಜ್ಯ ಕಲೆಯ ಹಿನ್ನೆಲೆ ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಅಧ್ಯಯನ ವನ್ನು ಮಾಡಿ ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

ವಿ.ಎಂ. ಭಾಗಾಯತ್ ಅವರು **ಕರ್ನಾಟಕದ ಮುಸ್ಲೀಂ ಅರಸರ ಕಾಲದ ಚಿತ್ರಕಲೆ (1400–1800)** ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ್ದು, ಗುಲಬರ್ಗಾ, ಬೀದರ್ ಮುಂತಾದ ಹೈದ್ರಾಬಾದ್ ಕರ್ನಾಟಕದಲ್ಲಿ ದಖಣಿ ಚಿತ್ರಕಲೆ, ಭಿತ್ತಿಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ, ಮುಸ್ಲೀಂ ಅರಸರ ಕಾಲದಲ್ಲಿ ಪ್ರಸಾರಗೊಂಡ ನೆಲೆ–ಹಿನ್ನೆಲೆಯನ್ನು ಶೋಧಿಸಿ ವ್ಯವಸ್ಥಿತವಾಗಿ ಅಧ್ಯಯನ ಮಾಡಿದ್ದಾರೆ.

2005ರಲ್ಲಿ ಶಶಿಕಲಾ ಹೂಗಾರ ಅವರು **ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ** ಬಗ್ಗೆ, ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕದ ರಥ ಶಿಲ್ಪಕಲೆ** ವಿಷಯದ ಮೇಲೆ ಹಾಗೂ ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ** ಕುರಿತು ಇವರೆಲ್ಲರೂ ಕ್ರಮವಾಗಿ ಈ ಪ್ರದೇಶದ ತೊಗಲು ಗೊಂಬೆ ಕಲೆ, ಕಲಾವಿದರ ನೆಲೆಗಳ ಕುರಿತು, ವಿವಿಧ ಮಾಧ್ಯಮದಲ್ಲಿ ರಚನೆಯಾದ ರಥಶಿಲ್ಪಗಳ ಕುರಿತು ಹಾಗೆಯೇ

ಹೈದ್ರಾಬಾದ್ ಕರ್ನಾಟಕದ ಹಸ್ತಪ್ರತಿಗಳ ವೈವಿಧ್ಯಮಯವಾದ ಚಿತ್ರಗಳ ಕುರಿತು ಧಾರ್ಮಿಕ ಹಾಗೂ ಸೌಂದರ್ಯದ ಹಿನ್ನೆಲೆಯಲ್ಲಿ ಸಂಶೋಧನ ಅಧ್ಯಯನ ಮಾಡಿದ್ದಾರೆ. ಇವರೆಲ್ಲರೂ ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿ ಪಡೆದುಕೊಂಡಿದ್ದಾರೆ.

2006ರಲ್ಲಿ ವಿಶ್ವೇಶ್ವರಿ ತಿವಾರಿಯವರು **ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು** ಎಂಬ ವಿಷಯದ ಮೇಲೆ ಈ ಪ್ರದೇಶದ ರಂಗೋಲಿ ಚಿತ್ರಕಲೆಯ ವಸ್ತುವಿಷಯ, ರಚನಾ ವಿಧಾನ ಮುಂತಾದ ಸಾಂಸ್ಕೃತಿಕ ಅಂಶಗಳ ಕುರಿತು ಸಂಶೋಧನ ಅಧ್ಯಯನ ಮಾಡಿದ್ದಾರೆ. ಹಾಗೆಯೇ ಮಲ್ಲಿಕಾರ್ಜುನ ಬಾಗೋಡಿ ಅವರು **ಸುರಪುರ ಚಿತ್ರಕಲೆ ಒಂದು ಅಧ್ಯಯನ** ಎಂಬ ವಿಷಯದಲ್ಲಿ ಸುರಪುರ ಸಂಪ್ರದಾಯದ ಚಿತ್ರಕಲಾ ಶೈಲಿಯನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೊಳಪಡಿಸಿದ್ದಾರೆ. ಭಿತ್ತಿಚಿತ್ರಕಲೆ, ಹಸ್ತಪ್ರತಿ ಚಿತ್ರಕಲೆ ಮುಂತಾದ ಈ ಪ್ರದೇಶದ ಚಿತ್ರಕಲೆ, ಗರುಡಾದ್ರಿ ಚಿತ್ರಕಲಾವಿದರ ಪರಂಪರೆ ಕುರಿತು ಅಧ್ಯಯನ ಮಾಡಿದ್ದಾರೆ. 2007ರಲ್ಲಿ ಮೋಹನ ಬಿ. ಪಾಂಚಾಳ ಅವರು **ಎಸ್.ಎಂ. ಪಂಡಿತ್ ಕಲಾ ಬದುಕು ಮತ್ತು ಕಲಾಕೃತಿಗಳು** ಕುರಿತಾಗಿ ಈ ನಾಡಿನ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ, ಈ ಪ್ರದೇಶದ ಪ್ರಮುಖ ಕಲಾವಿದ ರಾದ ಡಾ. ಎಸ್. ಎಂ. ಪಂಡಿತರ ಜೀವನ ಮತ್ತು ಕಲಾಕೃತಿಗಳ ಕುರಿತು, ದೇಶ–ವಿದೇಶದಲ್ಲಿ ಗಳಿಸಿದ ವಿಶೇಷ ಸ್ಥಾನಮಾನಗಳ ಕುರಿತು ಅಧ್ಯಯನ ಮಾಡಿದ್ದಾರೆ. ಇವರೆಲ್ಲರೂ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

2008ರಲ್ಲಿ ಪ್ರೇಮಾನಂದ ತಿ. ಲಕ್ಕಣ್ಣನವರ ಅವರು **ಕರ್ನಾಟಕದ ಚಿತ್ರಕಲಾ ಸಾಹಿತ್ಯ ಒಂದು ವೈಚಾರಿಕ ಅಧ್ಯಯನ** ಎಂಬ ವಿಷಯದ ಕುರಿತಾಗಿ ವಿಶೇಷವಾಗಿ ಈ ಪ್ರದೇಶದ ಚಿತ್ರಕಲಾ ಸಾಹಿತ್ಯ ಕೃತಿಗಳನ್ನು ಸಾಂದರ್ಭಿಕವಾಗಿ ಅಧ್ಯಯನ ಮಾಡಿದ್ದಾರೆ. ಇವರು ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದು ಕೊಂಡಿದ್ದಾರೆ.

2009ರಲ್ಲಿ ರೆಹಮಾನ್ ಪಟೇಲ್ ಅವರು **ಕರ್ನಾಟಕದ ಬಿದ್ರಿಕಲೆ ಒಂದು ಅಧ್ಯಯನ** (ವಿಶೇಷವಾಗಿ ಬೀದರನ್ನು ಅನುಲಕ್ಷಿಸಿ) ವಿಷಯದ ಕುರಿತು ಬಿದ್ರಿಕಲೆಯ ಹುಟ್ಟು, ಬೆಳವಣಿಗೆ, ರಚನಾ ವಿಧಿವಿಧಾನಗಳು, ಕಲಾಕೃತಿಗಳ ವಸ್ತುವಿಷಯ, ಪ್ರಭಾವ, ಪ್ರೇರಣೆ ಮತ್ತು ಕಲಾವಿದರ ಬದುಕು, ಬವಣೆ, ಮಾರುಕಟ್ಟೆ ಇತ್ಯಾದಿ ಅಂಶಗಳ ಕುರಿತು ಅಧ್ಯಯನ ಮಾಡಿದ್ದಾರೆ. ಸೂರ್ಯಕಾಂತ ಮಂಟಗಿ ಅವರು **ಕಲಾವಿದ ಧನಂಜಯ ಶಿಲ್ಪಿ ಬದುಕು ಮತ್ತು ಕಲಾಕೃತಿಗಳು** ಎಂಬ ವಿಷಯದ ಕುರಿತು ವೈವಿಧ್ಯಮಯವಾದ ಶಿಲ್ಪಕಲಾಕೃತಿಗಳ ವಸ್ತುವಿಷಯ ಮತ್ತು ಅವರ ಜೀವನ ಸಾಧನೆಯನ್ನು ಅಧ್ಯಯನ ಮಾಡಿದ್ದಾರೆ. ಇದೇ ಅವಧಿಯಲ್ಲಿ ಗುಲ್ಬರ್ಗಾದ ಆಕಾಶ ವಡ್ಡರ್ ಅವರ **ಶಾಂತಿನಿಕೇತನದ ಭಿತ್ತಿಚಿತ್ರಗಳು** ಎಂಬ ವಿಷಯದ ಕುರಿತು ಕರ್ನಾಟಕೇತರ ಪ್ರದೇಶದ ಭಿತ್ತಿಚಿತ್ರಗಳ ಬಗೆಗೆ ಅಧ್ಯಯನ ಮಾಡಿದ್ದಾರೆ. 2010ರಲ್ಲಿ ಶತೀಶ್ ವಲ್ಲೇಪುರ ಅವರು **ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಕಲಿತ ಕರ್ನಾಟಕದ ಕಲಾವಿದರು** ಎಂಬ ವಿಷಯದ ಕುರಿತು ಕರ್ನಾಟಕದ ಅಜ್ಞಾತ ಅನೇಕ ಕಲಾವಿದರನ್ನು ಬೆಳಕಿಗೆ ತರುವ ಪ್ರಯತ್ನ ಈ ಮಹಾಪ್ರಬಂಧದ ಮೂಲಕ ನಡೆದಿದೆ. ಇದೇ ವರ್ಷದಲ್ಲಿ ಕಾಮಾಕ್ಷಿ ಸಿ. ಸೊಪ್ಪಣ್ಣ ಅವರು **ಬಟ್ಟೆ ಮಾಧ್ಯಮದ ಚಿತ್ರಕಲೆ** (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತು ಅಧ್ಯಯನ ಮಾಡಿದ್ದು, ಈ ಪ್ರದೇಶದ ಬಟ್ಟೆ ಮಾಧ್ಯಮದಲ್ಲಿ ಮೂಡಿಬಂದ ಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಇವರೆಲ್ಲರೂ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

2010ರಲ್ಲಿ ಎನ್. ಎಂ. ಅಂಗಡಿ ಅವರ **ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ** ಕುರಿತು, 2011ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ** ಬಗೆಗೆ ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಯಾದಗೀರ ಮೊದಲಾದ ಜಿಲ್ಲೆಗಳಲ್ಲಿನ ಗಾಜಿನ ಮೇಲಿನ ಚಿತ್ರಕಲೆಯ ವಸ್ತುವಿಷಯಗಳನ್ನು ಮತ್ತು ಗಂಜೀಫಾ ಚಿತ್ರಕಲೆಗಳ ನೆಲೆ–ಹಿನ್ನೆಲೆ ಗಳನ್ನು ಇಲ್ಲಿ ಅಧ್ಯಯನ ಮಾಡಿದ್ದು ಕಂಡುಬರುತ್ತದೆ. ಇವರಿಬ್ಬರೂ ಕನ್ನಡ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ.

ಇವು ಇಲ್ಲಿಯವರೆಗೆ ಹೈದ್ರಾಬಾದ್ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ನಡೆಸಿದ ಪಿಎಚ್.ಡಿ. ಪದವಿಯ ಸಂಶೋಧನಾ ಅಧ್ಯಯನಗಳಾಗಿವೆ.

2. ಎಂ.ಫಿಲ್. ಅಧ್ಯಯನಗಳು: ಕರ್ನಾಟಕದಲ್ಲಿ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ. 2002ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ,** ಇಲ್ಲಿ ಗುಲಬರ್ಗಾದ ಹಿರಿಯ ಕಲಾವಿದ ಜೆ. ಎಸ್. ಖಂಡೇರಾವ್ ಅವರ ಬದುಕು ಮತ್ತು ಕಲಾಕೃತಿಗಳನ್ನು ಅಧ್ಯಯನಕ್ಕೊಳಪಡಿಸಿಕೊಂಡು ಸಂಶೋಧನ ಅಧ್ಯಯನ ಮಾಡಿದ್ದಾರೆ.

2007ರಲ್ಲಿ ಗುಲಬರ್ಗಾದ ರಾಜು ಕಾಳೆಯವರ **ಔಂದ್ ಮ್ಯೂಸಿಯಂನಲ್ಲಿನ ಕರ್ನಾಟಕ ಕಲಾವಿದರ ಕೃತಿಗಳು,** ಇಲ್ಲಿ ಕರ್ನಾಟಕದ ಅನೇಕ ಕಲಾವಿದರ ಕಲಾಕೃತಿಗಳು ಔಂದ್ ಮ್ಯೂಸಿಯಂನಲ್ಲಿ ಸಂಗ್ರಹಗೊಂಡಿದ್ದು, ಅವುಗಳ ಕುರಿತು ಅಧ್ಯಯನ ಮಾಡಿದ ವಿವರ ಇಲ್ಲಿದೆ. ಇದೇ ಅವಧಿಯಲ್ಲಿ ಬಂದ ಜಿತೇಂದ್ರ ಕೋಥಳೀಕರ ಅವರ **ಕಲಾವಿದ ವಿದ್ಯಾಭೂಷಣ,** ಅವರ ಜೀವನ ಮತ್ತು ಕಲಾಬದುಕನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಹಾಗೆಯೇ ಸಂಗೀತಾ ಗಂಗಾಣಿ ಅವರ **ಚಿತ್ರಕಲೆಯಲ್ಲಿ ಶರಣರು,** ಎಂಬ ವಿಷಯದ ಕುರಿತು ಕಲಾವಿದರು ಶರಣರನ್ನು ತಮ್ಮ ಕಲಾಕೃತಿಯಲ್ಲಿ ಚಿತ್ರಿಸಿದ ವಿವಿಧತೆಯನ್ನು

ಅಧ್ಯಯನಕ್ಕೊಳಪಡಿಸಿದ್ದಾರೆ. ವಿಜಯಕುಮಾರ್ ಕೊಪ್ಪದ್ ಅವರ **ರಾಷ್ಟ್ರ ಪ್ರಶಸ್ತಿ ಪಡೆದ ಕರ್ನಾಟಕ ಕಲಾವಿದರು,** ಇಲ್ಲಿ ಕರ್ನಾಟಕ ಕಲಾವಿದರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಮೇಲಿನ ಎಲ್ಲ ಎಂ.ಫಿಲ್ ಪ್ರಬಂಧಗಳು ಗುಲಬರ್ಗಾ ವಿಶ್ವವಿದ್ಯಾಲದಿಂದ ಬಂದಿವೆ.

ಇದೇ ಅವಧಿಯಲ್ಲಿ ರವಿ ನಾಯಕ ಅವರ **ಕಿನ್ನಾಳ ಕಲೆ** ಎಂಬುದರಲ್ಲಿ ಕೊಪ್ಪಳ ಜಿಲ್ಲೆಯ ಕಿನ್ನಾಳದ ದೇಸಿ ಚಿತ್ರಕಲಾ ಕೇಂದ್ರದಲ್ಲಿನ ಕಲೆ, ಕಲಾವಿದರನ್ನು ಕುರಿತು ಅಧ್ಯಯನ ಮಾಡಿದ್ದಾರೆ. 2008ರಲ್ಲಿ ಮಹಾಂತೇಶ ಪಲದಿನ್ನಿ ಅವರು **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,** ಎಂಬ ವಿಷಯದಲ್ಲಿ ವಿಶೇಷವಾಗಿ ಕರ್ನಾಟಕದುದ್ದಕ್ಕೂ ಇರುವ ಲಜ್ಜಾಗೌರಿ ಶಿಲ್ಪಗಳನ್ನು ಕುರಿತು ಅಧ್ಯಯನಕ್ಕೊಳಪಡಿಸಿದ್ದಾರೆ. ಈ ಪ್ರದೇಶದ ಲಜ್ಜಾಗೌರಿ ಶಿಲ್ಪಗಳನ್ನು ಇಲ್ಲಿ ಸಾಂದರ್ಭಿಕವಾಗಿ ಅಧ್ಯಯನ ಮಾಡಿದ್ದಾರೆ. ಈ ಮೇಲಿನ ಎರಡು ಎಂ.ಫಿಲ್ ಪ್ರಬಂಧಗಳು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಬಂದಿವೆ.

3. ಡಿ.ಲಿಟ್.ಪದವಿಗಳು: 2001ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,** ಎಂಬ ವಿಷಯದ ಬಗ್ಗೆ ಸಂಶೋಧನ ಅಧ್ಯಯನ ಮಾಡಿದ್ದು, ಇಲ್ಲಿ ಹೈದ್ರಾಬಾದ್ ಕರ್ನಾಟಕದ ರಂಗಭೂಮಿ ಮತ್ತು ಪ್ರಸಾಧನ ಕಲೆಯ ಕುರಿತು ವಿಶೇಷವಾಗಿ ರಂಗಸಜ್ಜಿಕೆ ಮತ್ತು ರಂಗಭಿತ್ತಿಚಿತ್ರಕಲೆಯನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ಈ ಡಿ.ಲಿಟ್ ಮಹಾಪ್ರಬಂಧವು ಕನ್ನಡ ವಿಶ್ವವಿದ್ಯಾಲಯದಿಂದ ಹೊರಬಂದಿದೆ.

4. ಲಘುಶೋಧ ಕಿರುಪ್ರಬಂಧಗಳು: ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ಹಂತದಲ್ಲಿಯೂ ಕಿರುಶೋಧ ಪ್ರಬಂಧಗಳು ರಚನೆಯಾಗುತ್ತಲಿರುವುದು ಗಮನಾರ್ಹ ಸಂಗತಿಯಾಗಿದೆ. ಐದು ವರ್ಷದ ಚಿತ್ರಕಲಾ ಡಿಪ್ಲೋಮಾ ಅಂತಿಮ ವರ್ಷದ ತರಗತಿಯಲ್ಲಿ ಈ ಕೋರ್ಸ್‌ನ ಭಾಗವಾಗಿ ಲಘುಶೋಧ ಕಿರುಪ್ರಬಂಧಗಳನ್ನು ರಚಿಸುತ್ತಿದ್ದು, ಇವುಗಳ ಸಂಖ್ಯೆ ಸಾವಿರಕ್ಕೂ ಅಧಿಕವಾಗಿವೆ. ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್, (ಬಿ.ಎಫ್.ಎ.) ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿ.ವಿ.ಎ.), ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ ಎಜ್ಯುಕೇಶನ್ (ಬಿ.ವಿ.ಇಡಿ) ಪದವಿ ಹಾಗೂ ಮಾಸ್ಟರ್ ಆಫ್ ವಿಜ್ಯುವಲ್ ಆರ್ಟ್ಸ್ (ಎಮ್.ವಿ.ಎ.) ಪದವಿ, ಮಾಸ್ಟರ್ ಆಫ್ ಫೈನ್‌ಆರ್ಟ್ಸ್ (ಎಮ್.ಎಫ್.ಎ.) ಸ್ನಾತಕೋತ್ತರ ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಈ ಲಘುಶೋಧ ಕಿರುಪ್ರಬಂಧಗಳು ರಚನೆಯಾಗುತ್ತಿದ್ದು, ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲಬರ್ಗಾ, ರಾಯಚೂರು, ಯಾದಗೀರ ಮೊದಲಾದ ಜಿಲ್ಲೆಗಳಲ್ಲಿನ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳು ಡಿಪ್ಲೊಮಾ/ಪದವಿ, ಸ್ನಾತಕೋತ್ತರ ತರಗತಿಗಾಗಿ ಈ ಮೇಲೆ ತಿಳಿಸಿದಂತೆ ಲಘುಶೋಧ ಕಿರುಪ್ರಬಂಧಗಳನ್ನು ರಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ ಎಂ.ಎಂ.ಕೆ. ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಸುಮಾರು 250ಕ್ಕೂ ಹೆಚ್ಚು, ಕನ್ನಡ ವಿಶ್ವವಿದ್ಯಾಲಯದಲ್ಲಿ ಸುಮಾರು 150ಕ್ಕೂ ಹೆಚ್ಚು ಹಾಗೂ ಎಸ್.ಬಿ. ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ಸುಮಾರು 20ಕ್ಕೂ ಹೆಚ್ಚು, ಬೀದರಿನ ಮೂರು ಡಿಪ್ಲೊಮಾ ಕಾಲೇಜುಗಳು, ಹುಮ್ನಾಬಾದ್‌ನ ವೀರಭದ್ರೇಶ್ವರ ಕಾಲೇಜು, ಭಾಲ್ಕಿಯ ಲಲಿತಕಲಾ ಮಹಾವಿದ್ಯಾಲಯ, ಬಸವಕಲ್ಯಾಣದ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಗುಲ್ಬರ್ಗಾದ ಆರ್ಟ್ ಇಂಟಿಗ್ರೇಷನ್ ಕಲಾ ಮಹಾವಿದ್ಯಾಲಯ, ರಾಯಚೂರು, ಸಿಂಧನೂರು, ಯಾದಗೀರ, ಲಿಂಗಸ್ಗೂರು ಮೊದಲಾದ ಚಿತ್ರಕಲಾ ಮಹಾವಿದ್ಯಾಲಯಗಳ ಡಿಪ್ಲೊಮಾ ಪದವಿ ಅಧ್ಯಯನದ ಭಾಗವಾಗಿ ಈ ಇನ್ನೂರಕ್ಕೂ ಹೆಚ್ಚು ಲಘುಶೋಧ ಕಿರುಪ್ರಬಂಧಗಳು ಸಲ್ಲಿಕೆಯಾಗಿದ್ದು ಈ ಭಾಗದ ದೃಶ್ಯಕಲಾ ಸಂಶೋಧನೆಗೆ ಇವುಗಳದೇ ಆದ ಕೊಡುಗೆಯಿದೆ ಎಂದರೆ ತಪ್ಪಾಗಲಾರದು. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸ್ನಾತಕೋತ್ತರ ಪದವಿ ಎಂ.ವಿ.ಎ., ಬಿ.ವಿ.ಎ., ಬಿ.ವಿ.ಇಡಿ., ಎ.ಟಿ.ಸಿ. ಮುಂತಾದ ಕೋರ್ಸಿನ ಭಾಗವಾಗಿ ಮುನ್ನೂರಕ್ಕೂ ಹೆಚ್ಚು ಲಘುಶೋಧ ಕಿರುಪ್ರಬಂಧಗಳು ಸಲ್ಲಿಕೆಯಾಗಿವೆ. ಅದರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕುರಿತು ಅನೇಕ ಕಲಾನೆಲೆಗಳ ಕುರಿತು, ಕಲಾವಿದರ ಬಗೆಗೆ, ಕಲಾಶೈಲಿ, ಕಲಾಪರಂಪರೆ ಕುರಿತು, ಚಿತ್ರ, ಶಿಲ್ಪ ಮುಂತಾದ ದೃಶ್ಯಕಲೆಗಳ ಕುರಿತಾದ ಲಘುಶೋಧ ಕಿರುಪ್ರಬಂಧಗಳು ರಚನೆಗೊಂಡಿವೆ.

ಈ ಕಿರು ಪ್ರಬಂಧಗಳು ವಿದ್ಯಾರ್ಥಿಗಳು ಆಯಾ ಕೋರ್ಸ್‌ನ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಸಂಶೋಧನಾ ಅಧ್ಯಯನಗಳಾಗಿದ್ದು, ಇವು ಮುಂದೆ ಅಧ್ಯಯನಕ್ಕೆ ಅಭ್ಯರ್ಥಿಗಳು ತೊಡಗಿಸಿಕೊಳ್ಳಲು ಈ ಹಂತದ ಅಧ್ಯಯನಗಳು ತುಂಬಾ ಸಹಾಯಕಾರಿಯಾಗಿವೆ. ಮತ್ತು ಅನೇಕ ವೈವಿಧ್ಯಮಯವಾದ ವಿಷಯದ ಈ ಕಿರುಪ್ರಬಂಧಗಳು ಮುಂದೆ ಸಂಶೋಧನಾ ಅಧ್ಯಯನ ನಡೆಸುವವರಿಗೆ ಆಕರ ಸಾಮಗ್ರಿಯಾಗಿವೆ.

2. ಪ್ರಾಧ್ಯಾಪಕರ ಸಂಶೋಧನ ಯೋಜನೆಗಳು: ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರೊ. ಪಿ.ಕೆ. ಖಂಡೋಬಾ ಅವರು ಅನೇಕ ದೃಶ್ಯಕಲಾ ವಿದ್ಯಾರ್ಥಿಗಳಿಗೆ ಅಂತರಶಿಸ್ತಿಯ ಅಧ್ಯಯನದ ಭಾಗವಾಗಿ ಪಿಹೆಚ್.ಡಿ ಸಂಶೋಧನ ಅಧ್ಯಯನದ ಮಾರ್ಗದರ್ಶಕರಾಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಮತ್ತು ಸಹ ಮಾರ್ಗದರ್ಶನದಲ್ಲಿ ಎಂಟು ಜನ ವಿದ್ಯಾರ್ಥಿಗಳು ಪಿಹೆಚ್.ಡಿ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಗಾಜಿನ ಮೇಲಿನ ಚಿತ್ರಕಲೆಯ ಕುರಿತು ಯುಜಿಸಿ.ಯ ಯೋಜನೆಯೊಂದನ್ನು ಮಾಡುತ್ತಿದ್ದಾರೆ. ಹಾಗೆಯೇ ಶಾಸ್ತ್ರೀಯಭಾಷೆ ಯೋಜನೆಯಡಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಲಲಿತಕಲೆಗಳ ಸಾಂಸ್ಕೃತಿಕ ವಿಶ್ವಕೋಶ ಮತ್ತು ಹೈದ್ರಾಬಾದ್ ಕರ್ನಾಟಕದ ಜಾನಪದ ಸಾಂಸ್ಕೃತಿಕ ವಿಷಯ ಕೋಶಗಳ ಯೋಜನೆಯನ್ನು ಕೈಗೊಂಡಿದ್ದಾರೆ. ಡಾ. ಬಸವರಾಜ ಸಬರದ ಅವರು ಸಹ ದೃಶ್ಯಕಲೆಯ ಅನೇಕ ವಿದ್ಯಾರ್ಥಿಗಳಿಗೆ ಅಂತರಶಿಸ್ತಿಯ

ಅಧ್ಯಯನದ ಭಾಗವಾಗಿ ಪಿಹೆಚ್.ಡಿ ಸಂಶೋಧನ ಅಧ್ಯಯನದ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಲಾವಿದ ಡಾ. ವಿ.ಜಿ. ಅಂದಾನಿ ಅವರ ಮಾರ್ಗದರ್ಶನದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲೆಯಲ್ಲಿ ಮೂರು ವಿದ್ಯಾರ್ಥಿಗಳು ಪಿಹೆಚ್.ಡಿ ಹಾಗೂ ಮೂರು ಜನ ವಿದ್ಯಾರ್ಥಿಗಳು ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಇವರು ನಿವೃತ್ತರಾಗಿದ್ದಾರೆ. ಡಾ. ಎಸ್.ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ ಇದೇ ವಿಶ್ವವಿದ್ಯಾಲಯದಲ್ಲಿ ದೃಶ್ಯಕಲೆಯಲ್ಲಿ 6 ಜನ ವಿದ್ಯಾರ್ಥಿಗಳು ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಮತ್ತು ಹಲವಾರು ವಿದ್ಯಾರ್ಥಿಗಳಿಗೆ ಸಹಮಾರ್ಗದರ್ಶಕರಾಗಿ ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ದೃಶ್ಯಕಲೆಯ ಕುರಿತು ಹಲವಾರು ಯೋಜನೆಗಳನ್ನು ಕೈಗೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭ ವಾದ ದೃಶ್ಯಕಲಾ ಸಂಶೋಧನಾ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಕರ್ನಾಟಕದ ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನವು ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. ಹೀಗಾಗಿ ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳು ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷಾ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನ ಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನ ಅಧ್ಯಯನಗಳು ಸ್ವಲ್ಪ ಪ್ರಮಾಣದಲ್ಲಿ ನಡೆದಿರುವುದು ಮೇಲಿನ ಸಂಶೋಧನಾ ಅಧ್ಯಯನಗಳಿಂದ ಕಂಡುಬರುತ್ತದೆ.

(ಎಸ್‌ಸಿಪಿ)

ದೃಶ್ಯಕಲಾ ಸಾಹಿತ್ಯ: ಹೈದ್ರಾಬಾದ್ ಕರ್ನಾಟಕದಲ್ಲಿ ಲಲಿತಕಲೆಗಳ ಕುರಿತಾದಂತಹ ಸಾಹಿತ್ಯದ ರಚನೆ ಬಹಳ ಕಡಿಮೆ. ಅದರಲ್ಲೂ ಕನ್ನಡ ಸಾಹಿತ್ಯದ ಬಗ್ಗೆ ಬಂದಷ್ಟು ಸಾಹಿತ್ಯ ಕೃಷಿ ಇನ್ನುಳಿದ ಕಲಾಪ್ರಕಾರಗಳಾದ ಶಿಲ್ಪ, ಚಿತ್ರಕಲೆ, ವಾಸ್ತುಶಿಲ್ಪ, ಸಂಗೀತ, ನೃತ್ಯ, ನಾಟಕ, ಛಾಯಾಚಿತ್ರ ಮುಂತಾದ ಕಲೆಗಳ ಕುರಿತು ಸಾಹಿತ್ಯ ರಚನೆ ತುಂಬಾ ಕಡಿಮೆ. ಬಂದಿರುವ ದೃಶ್ಯಕಲಾ ಸಾಹಿತ್ಯವನ್ನು ಕನ್ನಡ ಸಾಹಿತ್ಯಕ್ಕೆ ಹೋಲಿಸಿದರೆ ಏನು ಅಲ್ಲವೇ ಅಲ್ಲವೇನೊ ಎಂಬಂಥಹ ವಾತಾವರಣವಿದೆ. ಕಾರಣ ಕನ್ನಡ ಸಾಹಿತ್ಯೇತರ ಈ ಲಲಿತಕಲೆಗಳೆಲ್ಲಾ ಪ್ರಾಯೋಗಿಕತೆಗೆ ಹೆಚ್ಚು ಆಧ್ಯತೆಯಿರುವ ಕಲೆಗಳಾಗಿವೆ. ಮತ್ತು ಈ ಕ್ಷೇತ್ರದ ಕಲಾವಿದರು ತಮ್ಮ ಕಲಾಪ್ರದರ್ಶನಗಳ, ಕಲಾಭ್ಯಾಸಗಳ ಕಡೆಗೆಯೇ ಹೆಚ್ಚಾಗಿ ಆಶಕ್ತಿವಹಿಸಿರುವುದು ಕಂಡುಬರುತ್ತದೆ. ಹೀಗಾಗಿ ಪ್ರಾಯೋಗಿ ಕತೆಯೇ ಪ್ರಧಾನವಾಗಿ ಸೈದ್ಧಾಂತಿಕ ವಿಷಯಗಳು ಗೌಣವಾಗಿ ಉಳಿಯಲು ಕಾರಣವಾಗಿವೆ.

ಈ ಲಲಿತಕಲೆಗಳ ಕಲಿಕೆಯಲ್ಲಿ, ಬೋಧನೆಯಲ್ಲಿ ಸಹ ಪ್ರಾಯೋಗಿಕತೆಗೆ ಹೆಚ್ಚಿನ ಒತ್ತುಕೊಟ್ಟು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಿರುವ ಕಾರಣ ಓದುವಿಕೆ, ಬರೆಯುವಿಕೆ ಕೇವಲ ನೆಪಮಾತ್ರವಾಗಿ ಪರೀಕ್ಷೆಯ ಒಂದೆರಡು ವಿಷಯಗಳನ್ನು ಯಾಂತ್ರಿಕವಾಗಿ ಓದಿ ಪರೀಕ್ಷೆಗಾಗಿ ಉತ್ತೀರ್ಣರಾಗಿರುವುದೇ ಹೆಚ್ಚು. ಮತ್ತು ಈ ವಿಷಯಗಳಿಗೆ ಪಠ್ಯಪುಸ್ತಕಗಳು ಸಹ ವ್ಯವಸ್ಥಿತ ವಾಗಿ ರಚನೆಯಾಗದೇ ಇರುವುದು ಒಂದು ದೊಡ್ಡ ಕೊರತೆ ಯಾಗಿದೆ. ಹೀಗಾಗಿ ಸೈದ್ಧಾಂತಿಕ ವಿಷಯ ಹಿಂದೆ ಸರಿದು ಪ್ರಾಯೋಗಿಕತೆ ಇಲ್ಲಿ ಪ್ರಧಾನ ಪಾತ್ರವಹಿಸಿದೆ.

ಈ ಕಲೆಗಳನ್ನು ಕುರಿತು ಆಯಾ ಕ್ಷೇತ್ರದ ಅನುಭವಿ ಕಲಾವಿದರು ಬರೆದಿರುವಂತಹ ಕಲಾಸಾಹಿತ್ಯ ತುಂಬಾ ಕಡಿಮೆ. ಅಲ್ಲಲ್ಲಿ ಕೆಲವು ಕಲಾಸಾಹಿತ್ಯದ ಕೃತಿಗಳು, ಲೇಖನಗಳು ಬಂದರೂ ಅವುಗಳನ್ನು ಪ್ರಾರಂಭಿಕ ಹಂತದಲ್ಲಿ ಬರೆದವರು ವಿದೇಶೀ ವಿದ್ವಾಂಸರು, ಕನ್ನಡ ಸಾಹಿತಿಗಳು ಮತ್ತು ಪತ್ರಿಕಾ ವರದಿಗಾರರೇ ಹೆಚ್ಚಾಗಿ ಕಂಡುಬರುತ್ತಾರೆ. ಈ ಎಲ್ಲಾ ಮಾತುಗಳಿಗೆ ದೃಶ್ಯಕಲಾ ಸಾಹಿತ್ಯ ಹೊರತಾಗಿಲ್ಲ. ಇಲ್ಲಿ ಶಿಲ್ಪ, ಚಿತ್ರಕಲೆ, ವಾಸ್ತುಶಿಲ್ಪ, ಅನ್ವಯಿಕ ಕಲೆ, ಕಲಾಇತಿಹಾಸ, ಮುದ್ರಣಕಲೆ, ಛಾಯಾಚಿತ್ರ ಮುಂತಾದ ಕಲೆಗಳನ್ನು ದೃಶ್ಯಕಲೆ ಗಳೆಂದು ಕರೆಯಲಾಗುತ್ತದೆ. ಈ ಕಲೆಗಳ ಕುರಿತು ಸೃಷ್ಟಿಯಾದ ಸಾಹಿತ್ಯವನ್ನು ದೃಶ್ಯಕಲಾ ಸಾಹಿತ್ಯವೆಂದು ಗುರುತಿಸಿ ಈ ದೃಶ್ಯಕಲಾ ಸಾಹಿತ್ಯ ಸೃಷ್ಟಿಗೊಂಡ ಕುರಿತು ಅದರಲ್ಲೂ ವಿಶೇಷ ವಾಗಿ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಾದ ಬೀದರ್, ಗುಲಬರ್ಗಾ, ರಾಯಚೂರು, ಯಾದಗೀರ, ಕೊಪ್ಪಳ ಈ ಜಿಲ್ಲೆಗಳನ್ನು ಅನುಲಕ್ಷಿಸಿ ಪ್ರಸ್ತುತ ದೃಶ್ಯಕಲಾ ಸಾಹಿತ್ಯವನ್ನು ಇಲ್ಲಿ ಗಮನಿಸಲಾಗಿದೆ.

ಹೈದ್ರಾಬಾದ್ ಕರ್ನಾಟಕದಲ್ಲಿ ಇವತ್ತು ಪ್ರಾದೇಶಿಕ ಹಿನ್ನೆಲೆ ಯಲ್ಲಿ ಈ ಭಾಗದಲ್ಲಿ ದೃಶ್ಯಕಲೆ ರಾಷ್ಟ್ರೀಯ ಅಂತ ರಾಷ್ಟ್ರೀಯಮಟ್ಟದಲ್ಲಿ, ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ ಮತ್ತು ಬೆಳೆಯುತ್ತಲಿದೆ. ಈ ವೇಗದಲ್ಲಿ ದೃಶ್ಯಕಲಾ ಸಾಹಿತ್ಯ ಅಷ್ಟೊಂದು ಬೆಳೆಯದೇ ಇರುವುದು ಅಷ್ಟೇ ಗಮನಾರ್ಹ ಅಂಶವಾಗಿದೆ. ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ದೃಶ್ಯಕಲಾ ಸಾಹಿತ್ಯವೂ ಅಂಬೆ ಗಾಲಿಡುತ್ತ ಬೆಳೆಯುತ್ತಲಿರುವುದು ಈ ಪ್ರದೇಶದ ಒಂದು ಆಶಾದಾಯಕವಾದ ಬೆಳೆವಣಿಗೆ ಎಂದರೆ ತಪ್ಪಾಗಲಾರದು. ಕಾರಣ ಯುವಪೀಳಿಗೆಯ ಅನೇಕ ದೃಶ್ಯ ಕಲಾವಿದರು, ದೃಶ್ಯ ಕಲಾಸಂಶೋಧಕರಾಗಿ, ಕಲಾಸಾಹಿತಿಗಳಾಗಿಯೂ ಬರ ವಣಿಗೆಯ ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾದ ದೃಶ್ಯಕಲಾ ಸಾಹಿತ್ಯವನ್ನು ಗಮನಿಸಿದರೆ ಸ್ವಾತಂತ್ರ್ಯಪೂರ್ವದಲ್ಲಿ ಸೃಷ್ಟಿಯಾದ ಸಾಹಿತ್ಯ ನಮಗೆ ಕಂಡುಬರುವುದು, ಪ್ರಮುಖವಾಗಿ ಪಾಶ್ಚಿಮಾತ್ಯ ವಿದ್ವಾಂಸರಿಂದ ಅವರು ಬರೆದ ಲೇಖನ, ಗ್ರಂಥಗಳ ಮೂಲಕವೇ ನಾವು ದೃಶ್ಯಕಲಾ ಸಾಹಿತ್ಯದ ಇತಿಹಾಸವನ್ನು ಗುರುತಿಸಬೇಕಾಗಿದೆ. ಇಲ್ಲಿ

ನಾಲ್ಕು ಹಂತದಲ್ಲಿ ದೃಶ್ಯಕಲಾ ಸಾಹಿತ್ಯವನ್ನು ಅಧ್ಯಯನದ ಅನುಕೂಲತೆಗಾಗಿ ಗುರುತಿಸಲಾಗಿದೆ.

1. ಸ್ವಾತಂತ್ರ್ಯ ಪೂರ್ವದ ಹಂತ, 2. ಸ್ವಾತಂತ್ರ್ಯೋತ್ತರ ಹಂತ, 3. ಎಪ್ಪತ್ತರ ದಶಕದ ಹಂತ, 4. ಎರಡುಸಾವಿರ ನಂತರದ ಹಂತ ಎಂದು ಸ್ಥೂಲವಾಗಿ ವಿಂಗಡಿಸಿಕೊಂಡು ದೃಶ್ಯಕಲಾ ಸಾಹಿತ್ಯವನ್ನು ಇಲ್ಲಿ ಸಮೀಕ್ಷಿಸಲಾಗಿದೆ.

1. ಸ್ವಾತಂತ್ರ್ಯ ಪೂರ್ವದ ಹಂತ : 1817ರಲ್ಲಿ ಹೇನ್ ಬೆಂಜಾಮಿನ್ ಅವರ 'An account of the Bidery (Vidri) ware in India-a short note on the industry at Bidar' ಎಂಬ ಲೇಖನ 'Asiatic Journal'ನಲ್ಲಿ ಪ್ರಕಟವಾಗಿದ್ದು, ಇದು ಹೈದ್ರಾಬಾದ್ ಕರ್ನಾಟಕದ ಬೀದರಿನ ಬಿದರಿಕಲೆಯ ಬಗ್ಗೆ ಬಂದ ಮೊಟ್ಟ ಮೊದಲ ದೃಶ್ಯಕಲಾ ಸಾಹಿತ್ಯ ಕುರಿತ ಲೇಖನವಾಗಿದೆ. 1852ರಲ್ಲಿ ವೆಂಕಟರಂಗೋ ಕಟ್ಟಿಯವರು ಸಂಪಾದಿಸಿದ 'ಮುಂಬೈ ಕರ್ನಾಟಕದ ಗೆಝೆಟಿಯರ್'ನಲ್ಲಿ ಬಿದರಿ ಮತ್ತು ಹಚ್ಚೆ ಕಲೆಯನ್ನು ವಿವಿಧ ಜನಾಂಗದವರು ವೃತ್ತಿಯಾಗಿ ಮಾಡಿಕೊಂಡಿರುವ ವಿವರವನ್ನು ನೀಡುತ್ತಾರೆ. 1879ರಲ್ಲಿ ಅಲಿ ಅಕ್ಬರ್ ಸಾಹಿದಿ ಅವರ Tarikh – 1 Bidari – yi Iranian, Farhang" ಎಂಬ ಲೇಖನದಲ್ಲಿ ಬೀದರಿನ ಬಿದರಿಕಲೆಯು ಮೂಲತಃ ಇರಾನ್‌ದಿಂದ ಭಾರತಕ್ಕೆ ಬಂದ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

1907ರಲ್ಲಿ ಹರ್ಸ್ಟ್ ಆರ್‌ಜೆ ಅವರ 'Note on the Bidri Ware of Purnea' ಎಂಬ ಲೇಖನದಲ್ಲಿ ಬಿದರಿಕಲೆಯು ಉತ್ತರಪ್ರದೇಶದ ಪೂರ್ಣಿಯಾ ಶೈಲಿಯನ್ನು ಹೋಲುವ ಕಲೆಯಾಗಿದೆಯೆಂದು ಪ್ರತಿಪಾದನೆ ಮಾಡಲಾಗಿದೆ. 1938ರಲ್ಲಿ ಸ್ಪೈಟ್ ಈ.ಈ. ಅವರ 'Bidriware' ಎಂಬ ಲೇಖನದಲ್ಲಿ ಬೀದರಿನ ಬಿದರಿಕಲೆಯನ್ನು ಪರಿಚಯಿಸಿದ್ದಾರೆ. 1947ರಲ್ಲಿ ಯಾಜ್ದನಿ ಜಿ. ಅವರ 'Bidar its History and Monuments' ಎಂಬ ಲೇಖನದಲ್ಲಿ ಬೀದರಿನ ಇತಿಹಾಸ ಮತ್ತು ಇಲ್ಲಿನ ಸ್ಮಾರಕಗಳ ಕುರಿತು ಹೇಳುತ್ತ ಬಿದರಿಕಲೆಯ ಕುರಿತು ಚರ್ಚಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಪಾಶ್ಚಾತ್ಯ ವಿದ್ವಾಂಸರ ಈ ಲೇಖನಗಳು ಹೆಚ್ಚಾಗಿ ಬಿದ್ರಿಕಲೆಯ ಕುರಿತಾಗಿಯೇ ಬಂದಿವೆ. ಇಲ್ಲಿ ಸ್ವತಂತ್ರ ಗ್ರಂಥಗಳು ಕಂಡುಬಂದಿಲ್ಲವೆಂಬುದು ಗಮನಾರ್ಹ ಅಂಶವಾಗಿದೆ.

2. ಸ್ವಾತಂತ್ರ್ಯೋತ್ತರ ಹಂತ: ಈ ಹಂತದಲ್ಲಿಯೂ ಪಾಶ್ಚಿಮಾತ್ಯರು ಬರೆದ ಲೇಖನ ಮತ್ತು ಗ್ರಂಥಗಳೇ ನಮಗೆ ಮೂಲಾಧಾರವಾಗಿವೆ. 1956ರಲ್ಲಿ ಗೈರೋಲಾ ಟಿ.ಆರ್. ಅವರ 'Bidriware Ancient India' ಎಂಬ ಗ್ರಂಥದಲ್ಲಿ ಬೀದರಿನ Bidriware ಎಂಬ ಪರಿಚಯಾತ್ಮಕ ವಿವರವನ್ನು ನೀಡಿದ್ದಾರೆ. 1961ರಲ್ಲಿ ಚೌದರಿ ಅನಿಲ್‌ರಾಯ್ ಅವರು 'Bidri Ware' ಎಂಬ ಕ್ಯಾಟಲಾಗನ್ನು ಹೈದ್ರಾಬಾದಿನ ಸಾಲಾರ್ ಜಂಗ್ ಮ್ಯೂಸಿಯಂನಿಂದ ಪ್ರಕಟಿಸಿದ್ದು, ಅಲ್ಲಿ ಬೀದರಿನ ಬಿದರಿಕಲೆಯ ಚರಿತ್ರೆ, ತಂತ್ರ, ಇತ್ಯಾದಿ ಸಂಗ್ರಹಗಳ ಕುರಿತು ಮಾಹಿತಿ ನೀಡಿದ್ದಾರೆ. ಪಂತ ಜಿ.ಎನ್. ಅವರ 'Catalogue of Edged Arms and Armour in Salar Jung Museum Salarjung Museum, Hydrabad' ಎಂಬ ಪರಿಚಯ ಪುಸ್ತಕದಲ್ಲಿ ಬೀದರಿನ ಬಿದರಿಕಲೆಗಳಿಂದ ನಿರ್ಮಿತವಾದ ಯುದ್ಧೋಪಕರಣಗಳ ಸಾಮಗ್ರಿಗಳಲ್ಲಿನ ಕಲಾವಿನ್ಯಾಸ ಹಾಗೂ ಬಿದರಿಕಲೆಯ ಸ್ಥೂಲವಾದ ಚರಿತ್ರೆಯನ್ನು ನೀಡಿದ್ದಾರೆ. 1964ರಲ್ಲಿ ಗೌಡ ಕೆ.ವಿ.ಎನ್. ಅವರ 'Bidriware' ಎಂಬ ಲೇಖನ ಮತ್ತು 1967ರಲ್ಲಿ ಇವರೇ ಬರೆದ ಇನ್ನೊಂದು ಲೇಖನ 'Bidriware' ಬಿದರಿಕಲೆಯ ಕುರಿತ ಈ ಎರಡು ಲೇಖನಗಳಲ್ಲಿ ಸರ್ವೇಕ್ಷಣೆ ಮಾಡಿದ ವಿವರವಿದೆ. ಈ ಹಂತದಲ್ಲಿ ವಿದೇಶಿಯರ ಬರಹಗಳೇ ಅಧಿಕವಾಗಿ ನಮಗೆ ಸಿಗುತ್ತವೆ. ಮತ್ತು ಲೇಖನಗಳ ಜೊತೆಯಲ್ಲಿ ಬಿದ್ರಿಕಲೆಯ ಗ್ರಂಥಗಳು, ಕ್ಯಾಟಲಾಗ್‌ಗಳು, ಪರಿಚಯಾತ್ಮಕ ಲೇಖನಗಳು ಬಂದಿರುವುದು ಗಮನಾರ್ಹ. ಇಲ್ಲಿಯೂ ಬಿದ್ರಿಕಲೆಯೇ ಪ್ರಮುಖವಾಗಿ ಎಲ್ಲ ಬರಹಗಾರರ ಬರವಣಿಗೆಯ ವಸ್ತುವಾಗಿದೆ.

3. ಎಪ್ಪತ್ತರ ದಶಕದ ಹಂತ: 1970ರಲ್ಲಿ ಬಂದ ರಾಯಚೂರ ಜಿಲ್ಲಾ ಗೆಜೆಟಿಯರ್‌ನಲ್ಲಿ ಕಿನ್ನಾಳದ ಕಲೆ, ಕಲಾವಿದರ ಕುರಿತು ವಿವರಗಳಿವೆ. 1974ರಲ್ಲಿ ಬಾಲಕೃಷ್ಣ ವಾಮನ ಜೋಗ ಅವರ ಸಂಪಾದನೆಯ 'ಶಂಕರರಾವ ಆಳಂದಕರ' ಎಂಬ ಗ್ರಂಥದಲ್ಲಿ ಗುಲ್ಬರ್ಗಾ ವಿಭಾಗದ ಶ್ರೇಷ್ಠ ಕಲಾವಿದರಲ್ಲಿ ಒಬ್ಬರಾದ ಶಂಕರರಾವ್ ಅಳಂದಕರ ಅವರ ಕುರಿತು ಪ್ರಕಟವಾಗಿರುವ ಸ್ಮರಣ ಸಂಚಿಕೆಯಿದು. ಶಂಕರರಾವ್ ಆಳಂದಕರರ ಜೀವನ ಮತ್ತು ಕಲಾಕೃತಿಗಳ ಬಗ್ಗೆ ಅಲ್ಲದೇ ಕಲೆಯ ಕುರಿತು ಕನ್ನಡ, ಹಿಂದಿ, ಇಂಗ್ಲಿಷ್‌ನಲ್ಲಿ ಲೇಖನಗಳಿವೆ. ಇದು ಶಂಕರರಾವ ಆಳಂದಕರ ಅವರ ಕುರಿತು ಕನ್ನಡದಲ್ಲಿ ಬಂದ ಹೈದ್ರಾಬಾದ್ ಕರ್ನಾಟಕದ ಮೊದಲ ಕನ್ನಡದಲ್ಲಿ ಬಂದ ಅಭಿನಂದನ ಗ್ರಂಥವಾಗಿದೆ.

1975ರಲ್ಲಿ ಓ.ಪಿ. ಅಗರ್‌ವಾಲ್ ಅವರು 'ಮ್ಯೂಸಿಯಂ' ಎಂಬ ಗ್ರಂಥದಲ್ಲಿ ಬೀದರಿನ ಬಿದರಿಕಲೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. 1980ರಲ್ಲಿ ನಾಗ್ವಿ ಶಾಹಿರ್ ಎಂ. ಅವರ 'Bidriware with special reference to its collection in the state museum' ಎಂಬ ಲೇಖನದಲ್ಲಿ ಸಹ ಬಿದರಿಕಲೆಯ ಸಂಗ್ರಹಗಳ ವಿವರದ ಪ್ರಸ್ತಾಪವಿದೆ. ಮಹ್ಮದ್ ಸಹಿದ್ ಜಫರ್ ಅವರ 'Metal Technology in Medieval India' ಎಂಬ ಲೇಖನವು Bidri Metallurgy ನಲ್ಲಿ ಪ್ರಕಟವಾಗಿದ್ದು, ಬಿದರಿಕಲೆಯ ಲೋಹ ತಂತ್ರದ ಕುರಿತ ಸರ್ವೇಕ್ಷಣದ ವಿವರವನ್ನು ದಾಖಲಿಸಿದ್ದಾರೆ. ಹಾಗೆಯೇ 1982ರಲ್ಲಿ ಎಂ. ಜಿಬ್ರೋವೆಸ್ಕಿಯ 'Bidri Metalware from Islamic Courts of India' ಎಂಬ ಗ್ರಂಥದಲ್ಲಿ ಬೀದರಿನ ಬಿದರಿ ಕಲೆಯ ಕುರಿತಾಗಿಯೇ ಬರೆದಿದ್ದಾರೆ. ಲೇತ್ ಅಂಡ್ರೆ ಅವರ 'Islamic Arms and Armour from Private Collection' ಎಂಬ ಗ್ರಂಥದಲ್ಲಿ ಮತ್ತು ಡಿ. ಗಣೇಶ ಅವರ 'ಕುಶಲ ಕಲೆಗಳು' ಎಂಬ

ಕಿರುಗ್ರಂಥದಲ್ಲಿ ಈ ಪ್ರದೇಶದ ಬಿದರಿಕಲೆಯನ್ನು ಪ್ರಾಸಂಗಿಕವಾಗಿ ಪರಿಚಯಿಸಿದ್ದಾರೆ.

1983ರಲ್ಲಿ ಗುಲ್ಬರ್ಗಾದ ಗವೀಶ್ ಹಿರೇಮಠರ 'ಕಲಾವಿದರು ನಡೆದುಬಂದ ದಾರಿ' ಪುಸ್ತಕದಲ್ಲಿ ಹೈದರಾಬಾದ್ ಕರ್ನಾಟಕದ ಆರು ಜನ ಚಿತ್ರಕಲಾವಿದರ ಕಲೆ ಮತ್ತು ಜೀವನವನ್ನು ಕುರಿತು ಪರಿಚಯ ಮಾಡಿಕೊಟ್ಟಿದ್ದಾರೆ. ಈ ಭಾಗದ ಚಿತ್ರಕಲಾವಿದರ ಕುರಿತು ಬಂದ ಪೀಠಿಕೆ ರೂಪದ ಬರವಣಿಗೆಯನ್ನಬಹುದು. ಸುಜಿತ್ ನಾರಾಯಣ ಸೇನ್ ಅವರ 'Catalogue on Damask in and Bidri Art in the Indian museum' ಎಂಬ ಗ್ರಂಥದಲ್ಲಿ ಕರ್ನಾಟಕದ ಬೀದರಿನ ಬಿದರಿಕಲೆಯ ಕುರಿತಾಗಿ ಬಂದ ಮತ್ತೊಂದು ಕೃತಿ. ಜಗದೀಶ ಮಿತ್ತಲ್ ಅವರ 'Indo-Islamic Metal and Glassware in An Age of Splendour Islamic Art in India' ಎಂಬ ಲೇಖನದಲ್ಲಿ ಬಿದರಿ ಕಲೆಯು ಲೋಹದ ಪಾತ್ರೆಗಳ ಮೇಲೆ ವಿನ್ಯಾಸಗೊಂಡ ಕುರಿತು ಲೇಖನ ವಿದೆ. ಪಂತ ಜಿಎನ್. ಅವರ 'Indo-Islamic Arms and Armour in An Age of Splendour Islamic Art in India' ಎಂಬ ಲೇಖನದಲ್ಲಿ ಬಿದರಿಕಲೆಯ ಪರಿಚಯಾತ್ಮಕ ಲೇಖನ ವಿದೆ. ಎಸ್.ಎನ್. ಚಂದ್ರಶೇಖರ್ ಅವರು ಸಂಪಾದಿಸಿದ ಕರ್ನಾಟಕ ಕಲಾವಿದರ ಪರಿಚಯಾವಳಿ ಎಂಬ ಗ್ರಂಥದಲ್ಲಿ ಹೈದ್ರಾಬಾದ್ ಕರ್ನಾಟಕದ ಕಲಾವಿದರ ಸ್ಥೂಲ ಪರಿಚಯ ಮತ್ತು ಅವರ ಕಲಾಕೃತಿಗಳನ್ನು ಪ್ರಕಟಿಸಿದ ಗ್ರಂಥವಾಗಿದೆ.

1985ರಲ್ಲಿ Susan Stronge ಅವರು 'Bidriware Metal Work from India' ಎಂಬ ಗ್ರಂಥದಲ್ಲಿ ಬಿದರಿ ಕಲೆಯನ್ನು ಚಿತ್ರಗಳ ಸಹಿತ ವಿವರಿಸಿದ ಒಂದು ಉತ್ತಮ ಗ್ರಂಥವಾಗಿದೆ. ಇದೇ ಅವಧಿಯಲ್ಲಿ Mukherji TN ಅವರ "Bidriware" ಎಂಬ ಲೇಖನ The Journal of Indian Art ನಲ್ಲಿ ಪ್ರಕಟವಾಗಿದ್ದು, ಬಿದರಿ ಕಲೆಯ ಕುರಿತ ಸರ್ವೇಕ್ಷಣದ ವಿವರವಿದೆ. 1986ರಲ್ಲಿ ಬೆನಕನಹಳ್ಳಿ ಜಿ. ನಾಯಕ್ ಅವರ 'ಕರ್ನಾಟಕದ ಕಲೆಗಳು' (ಮೂರನೆಯ ಸಂಪುಟ 'ಕರಕುಶಲ ಕಲೆಗಳು') ಇಲ್ಲಿ ಜಾನಪದ ಕಲೆಗಳು, ಕಸೂತಿ ಕಲೆ, ಮರದ ಕೆತ್ತನೆ, ಕಲ್ಲುಕೆತ್ತನೆಯೊಂದಿಗೆ ಬಿದರಿಕಲೆಯನ್ನು ಈ ಪ್ರದೇಶದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಇದೇ ವರ್ಷದಲ್ಲಿ ಜಿ. ಆರ್. ತಿಪ್ಪೇಸ್ವಾಮಿಯವರು 'ಕರ್ನಾಕಟದ ಕಲೆಗಳು' (ಹತ್ತನೆಯ ಸಂಪುಟ 'ಕನ್ನಡನಾಡಿನ ಕಲಾವಿದರು') ಎಂಬ ಗ್ರಂಥದಲ್ಲಿ ಹೈದ್ರಾಬಾದ್ ಕರ್ನಾಟಕದ ಚಿತ್ರಕಲಾವಿದರ ಜೀವನ ಮತ್ತು ಸಾಧನೆಗಳ ಸ್ಥೂಲ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

1987ರಲ್ಲಿ La Niece S ಮತ್ತು Martin G. ಅವರ 'The Technical Examination of Bidriware' ಎಂಬ ಲೇಖನವು Studies in Conservation ಎಂಬ ಗ್ರಂಥದಲ್ಲಿ ಬಿದರಿ ಕಲೆಯ ಲೋಹ ಕಪ್ಪಾಗಿಸುವಿಕೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದ್ದಾರೆ. ಈ ಅವಧಿಯಲ್ಲಿ ಬಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕಲಾವಿದರಾದ ಡಾ. ಎಸ್.ಸಿ. ಪಾಟೀಲ ಅವರು 'ಬಾರೋಕ್‌ಕಲೆ' ಕೃತಿಯಲ್ಲಿ ಪಾಶ್ಚಿಮಾತ್ಯಕಲೆ, ಬಾರೋಕ್‌ಕಲೆ, ಕಲಾವಿದರ ಜೀವನ, ಕಲಾಸಾಧನೆಯ ಕುರಿತಾದ ಗ್ರಂಥವಿದಾಗಿದೆ. 1989ರಲ್ಲಿ ವಿ.ಟಿ.ಕಾಳೆ ಅವರು ಬರೆದ 'ಎಸ್. ಎಂ. ಪಂಡಿತ್' ಕೃತಿಯಲ್ಲಿ ಪಂಡಿತರ ಜೀವನ ಮತ್ತು ಕಲಾಕೃತಿಗಳನ್ನು ಪರಿಚಯಿಸಲಾಗಿದೆ. 1990ರಲ್ಲಿ Lal K ಅವರ 'National Museum Collection' ಎಂಬ ಗ್ರಂಥದಲ್ಲಿ ಬೀದರಿನ ಬಿದರಿಕಲೆಯ ಸಂಗ್ರಹಗಳ ಕುರಿತು ಬಂದ ವಿವರಣೆಯ ಗ್ರಂಥವಾಗಿದೆ. ಬಿ.ವಿ.ಕೆ. ಶಾಸ್ತ್ರೀ ಅವರ 'ದೃಶ್ಯ ಕಲೆಯ ಸೃಜನಶೀಲರು' ಎಂಬ ಕೃತಿಯಲ್ಲಿ ಈ ಪ್ರದೇಶದ ಕಲಾವಿದರಾದ ಡಾ.ಎಸ್.ಎಂ. ಪಂಡಿತ, ಜೆ.ಎಸ್. ಖಂಡೇ ರಾವ್, ವ್ಹಿ.ಜಿ. ಅಂದಾನಿ ಮುಂತಾದ ಕಲಾವಿದರ ಜೀವನ, ಸಾಧನೆ ಮತ್ತು ಕಲಾಕೃತಿಗಳನ್ನು ಒಳಗೊಂಡ ಕೃತಿಯಿದಾಗಿದೆ. ಚಂದ್ರಕಾಂತ ಕುಸನೂರ ಅವರ 'ಕಲೆ ಅನುಭವ ಮತ್ತು ಅನುಭಾವ' ಎಂಬ ಕೃತಿಯಲ್ಲಿ ಕಲೆಯ ಅರ್ಥ, ರಸಾನುಭವ ಮುಂತಾದ ಕಲೆಯ ಕುರಿತಾದ ಚಿಂತನೆಗಳಿವೆ. 1991ರಲ್ಲಿ ಗವೀಶ್ ಹಿರೇಮಠ ಅವರ 'ಸೃಜನಶೀಲ ಕಲಾವಿದರು' ಪುಸ್ತಕದಲ್ಲಿ ಹೈದರಾಬಾದ್ ಕರ್ನಾಟಕದ ಕಲಾವಿದರನ್ನು ಒಳಗೊಂಡಂತೆ ಕರ್ನಾಟಕದ ಬೇರೆ ಬೇರೆ ಭಾಗದ ದೃಶ್ಯ ಕಲಾವಿದರ ಜೀವನ ಮತ್ತು ಕಲಾಕೃತಿಗಳನ್ನು ಕುರಿತು ಬರೆದಿದ್ದಾರೆ. 1992ರಲ್ಲಿ ಆರ್.ಎಚ್. ಕುಲಕರ್ಣಿ ಅವರು ರಚಿಸಿದ 'ಕಿನ್ನಾಳದ ಚಿತ್ರಕಲೆ' ಎಂಬ ಪುಸ್ತಕದಲ್ಲಿ ಕಿನ್ನಾಳ ಸಂಪ್ರದಾಯದ ಚಿತ್ರ, ಶಿಲ್ಪಕಲಾ ಪರಂಪರೆ ಬೆಳೆದು ಬಂದ ಬಗೆಯನ್ನು ವಿವರಿಸಿದ್ದಾರೆ.

1993ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ತಿರುಳ್ಗನ್ನಡ'ದಲ್ಲಿ ಅನೇಕ ಹೈದ್ರಾಬಾದ್ ಕರ್ನಾಟಕದ ಚಿತ್ರಕಲೆ ಮತ್ತು ಶಿಲ್ಪಕಲೆ, ಕಲಾವಿದರ ಕುರಿತು ವಿಶೇಷವಾಗಿ ಕಿನ್ನಾಳ ಚೌಕಿ ಕಲೆಯ ಕುರಿತು ಹಲವಾರು ಲೇಖನಗಳು ವಿದ್ವಾಂಸರಿಂದ ಸಂಗ್ರಹಗೊಂಡಿವೆ. 1993ರಲ್ಲಿ ಡಾ. ಎಸ್. ಸಿ ಪಾಟೀಲರವರ 'ಕರ್ನಾಟಕದ ಜನಪದ ಚಿತ್ರಕಲೆ' ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ಬಂದ ಕೃತಿ ಮತ್ತು ಅವರ ಪಿಹೆಚ್.ಡಿ ಮಹಾಪ್ರಬಂಧವಾಗಿದ್ದು, ಇದು ಚಿತ್ರಕಲಾ ಕ್ಷೇತ್ರದಲ್ಲಿ ಬಂದ ಕರ್ನಾಟಕದ ಮೊದಲ ಪಿಹೆಚ್.ಡಿ. ಮಹಾಪ್ರಬಂಧ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಗ್ರಂಥದಲ್ಲಿ ಜನಪದ ಚಿತ್ರಕಲೆಯನ್ನು ವರ್ಗೀಕರಣ ಮಾಡಿಕೊಂಡು ವಿವೇಚಿಸ ಲಾಗಿದೆ. ವೃತ್ತಿಮೂಲ, ಸೌಂದರ್ಯಮೂಲ, ಧರ್ಮಮೂಲ ವಾಗಿ ಬೆಳೆದು ಬಂದ ಹೈದ್ರಾಬಾದ್ ಕರ್ನಾಟಕದ ಜನಪದ ದೇಶಿಯ ಚಿತ್ರಕಲೆಯನ್ನು ವ್ಯಾಪಕವಾಗಿ, ಇಲ್ಲಿ ಸಂಶೋಧನೆ ಮಾಡಿ ಅನೇಕ ಕಲೆಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದ ಮಹಾಪ್ರಬಂಧವಾಗಿದೆ. ಇದೇ ಅವಧಿಯಲ್ಲಿ ಶಾಂತರಸ ಅವರು ಸಂಪಾದಿಸಿದ 'ಬಾರಮಾಸ' ಕೃತಿಯಲ್ಲಿ ವಿಜಯ ಹಾಗರಗುಂಡಿ ಯವರು ಬಾರಮಾಸದ ಆಶಯದ ಹಿನ್ನೆಲೆಯಲ್ಲಿ ಅನೇಕ ಚಿತ್ರಗಳನ್ನು ರಚಿಸಿಕೊಟ್ಟಿದ್ದು ಅವು ಈ ಗ್ರಂಥದಲ್ಲಿ ಪ್ರಕಟವಾಗಿವೆ. ಪಿ.ಆರ್. ತಿಪ್ಪೇಸ್ವಾಮಿ ಅವರ 'ಪ್ರಶಸ್ತಿ ಪಡೆದ ಕಲಾವಿದರು' ಕೃತಿಯಲ್ಲಿ 1965ರಿಂದ 1993ರ ವರೆಗೆ ಪ್ರಶಸ್ತಿ ಪಡೆದ ಈ

ಪ್ರದೇಶದ ದೃಶ್ಯಕಲಾವಿದರ ಬಗ್ಗೆ ವಿವರ ನೀಡುವ ಪುಸ್ತಕ ಇದಾಗಿದೆ. ಇದೇ ಅವಧಿಯಲ್ಲಿ ಚಂದ್ರಕಾಂತ ಕುಸನೂರ ಅವರ 'ಸಾಹಿತ್ಯ ಮತ್ತು ಚಿತ್ರಕಲೆ' ಎಂಬ ಪುಸ್ತಕದಲ್ಲಿ ಸಾಹಿತ್ಯಕ್ಕೂ ಮತ್ತು ಚಿತ್ರಕಲೆಗೂ ಇರುವ ಅಂತರ ಸಂಬಂಧದ ಕುರಿತು ಅಂತರ್ ಶಿಸ್ತಿಯ ನೆಲೆಯಲ್ಲಿ ಅಧ್ಯಯನ ಮಾಡಿದ ಕೃತಿಯಾಗಿದೆ.

1994ರಲ್ಲಿ ಎನ್. ಮರಿಶಾಮಾಚಾರ್, ಡಾ. ಅ.ಲ. ನರಸಿಂಹನ್, ವಿ.ಟಿ. ಕಾಳೆ, ಡಾ.ಬಿ.ಕೆ ಹಿರೇಮಠ ಅವರು ಸಂಪಾದಿಸಿದ 'ಕಲಾಕೋಶ' ಎಂಬ ಈ ಕೃತಿಯಲ್ಲಿ ಈ ಪ್ರದೇಶದ ಕಲಾವಿದರ, ಕಲೆಗಳ ಕುರಿತು, ಸಂಕ್ಷಿಪ್ತವಾದ ವಿವರಗಳಿವೆ. ಅ. ಸುಂದರ ಅವರ 'ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆ' ಎಂಬ ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಚಿತ್ರಗಳನ್ನು, ರಾಯಚೂರು, ಯಾದಗೀರ, ಕೊಪ್ಪಳ ಜಿಲ್ಲೆಗಳಿಗನ್ವಯಿಸಿ ಸಹ ಅಧ್ಯಯನ ಮಾಡಿದ್ದಾರೆ. ರಾಜೇಂದ್ರ ಯಾರನಾಳೆ ಅವರ 'ಶೀಗಿ ಹಾಡುಗಳು' ಕೃತಿಯಲ್ಲಿ ಶೀಗಿ ಕಲೆಯ ಹಾಡು ಮತ್ತು ಕಲೆಯನ್ನು ಚಿತ್ರಗಳ ಸಹಿತ ಪರಿಚಯಿಸಿ ದ್ದಾರೆ.

1995ರಲ್ಲಿ ಡಾ. ಎಸ್.ಸಿ. ಪಾಟೀಲರು ಸಂಪಾದಿಸಿದ 'ಚಿತ್ರಾಕ್ಷಿ' ಎಂಬ ಸ್ಮರಣ ಸಂಚಿಕೆಯಲ್ಲಿ ಧಾರವಾಡದ ಸ್ಕೂಲ್ ಆಫ್ ಆರ್ಟ್ಸ ಮತ್ತು ಚಿತ್ರಕಲೆಯ ಕುರಿತಾದಂತಹ ಹಲವಾರು ಲೇಖನಗಳ ಸಂಗ್ರಹದ ಕೃತಿ ಇದಾಗಿದೆ. ಬಸವರಾಜ ಉಪ್ಪಿನ ಅವರು 'ಬಾನಯ್ಯ ಗರುಡಾದ್ರಿ' ಗ್ರಂಥದಲ್ಲಿ ಸುರಪುರ ಸಂಪ್ರದಾಯದ ಕಲಾವಿದ ಬಾನಯ್ಯ ಗರುಡಾದ್ರಿಯವರ ಜೀವನ ಮತ್ತು ಕಲಾಕೃತಿಗಳ ಪರಿಚಯ ಮಾಡಿದ್ದಾರೆ. ಡಾ. ಎಸ್.ಸಿ. ಪಾಟೀಲರ 'ಜನಪದ ಕಲೆ' ಕೃತಿಯಲ್ಲಿ ವಿಶೇಷವಾಗಿ ಜನಪದ ಚಿತ್ರಕಲೆಗಳನ್ನು ಚಿತ್ರಗಳೊಂದಿಗೆ ಚರ್ಚಿಸಿದ್ದಾರೆ. ಇದೇ ಅವಧಿ ಯಲ್ಲಿ ಬಂದ ಅವರ ಸಂಪಾದನಾ ಗ್ರಂಥ 'ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು' ಕೃತಿಯಲ್ಲಿ ಚಿತ್ರ, ಶಿಲ್ಪಕಲೆ, ಶಿಕ್ಷಣ, ಸಂಗೀತ, ನಾಟಕ, ರಂಗಭೂಮಿ, ಇತಿಹಾಸ, ಸಮಾಜ, ಶಾಸನ ಮುಂತಾದ ಪೂರಕ ಕ್ಷೇತ್ರಗಳ ಸಹಸಂಬಂಧದ ಕುರಿತು ಬರೆದ 14 ಲೇಖನಗಳ ಸಂಗ್ರಹಗಳನ್ನೊಳಗೊಂಡ ಸಂಪಾದನ ಕೃತಿ ಯಾಗಿದೆ.

1996 ಗವಿಸಿದ್ಧ ಎನ್. ಬಳ್ಳಾರಿ ಅವರ 'ಕಿನ್ನಾಳದ ಗೊಂಬೆಗಳು' ಇಲ್ಲಿ ಕಿನ್ನಾಳ ಕಲೆಯ ಕಲಾವಿದರ ಕುರಿತು ಸ್ಥೂಲವಾಗಿ ವಿವರಿಸಲಾಗಿದೆ. ಇದೇ ಅವಧಿಯಲ್ಲಿ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಸಂಪಾದಿಸಿದ 'ಕರ್ನಾಟಕ ಜನಪದ ಕಲೆಗಳ ಕೋಶ' ಗ್ರಂಥದಲ್ಲಿ ಹೈದ್ರಾಬಾದ್ ಕರ್ನಾಟಕದ ಜನಪದ ಕಲೆಗಳನ್ನು ಸಹ ಅಧ್ಯಯನಕ್ಕೊಳಪಡಿಸಿ ಬಂದ ಗ್ರಂಥವಾಗಿದೆ. ರಾಜೇಂದ್ರ ಯರನಾಳೆ ಅವರ 'ವಿಶ್ವವಿಖ್ಯಾತ ಬಿದ್ರಿಕಲೆ' ಗ್ರಂಥದಲ್ಲಿ ಬಿದರಿಕಲೆಯ ಸಂಕ್ಷಿಪ್ತ ಮಾಹಿತಿಯಿದೆ. 1997ರಲ್ಲಿ ಚಂದ್ರಹಾಸ ವೈ. ಜಾಲಿಹಾಳ ಅವರು ಸಂಪಾದಿಸಿದ 'ಕಲಾವಿದ ಅಂದಾನಿ ಐವತ್ತು' ಅಭಿನಂದನಾ ಕೃತಿಯಲ್ಲಿ ಅಂದಾನಿಯವರ ಜೀವನ, ಸಾಧನೆ ಮತ್ತು ಕಲಾಕೃತಿಗಳ ಕುರಿತು ಹಲವರು ಲೇಖನಗಳನ್ನು ಇಲ್ಲಿ ಸಂಪಾದಿಸಿದ್ದಾರೆ.

1998ರಲ್ಲಿ ಡಾ. ಅ.ಲ. ನರಸಿಂಹನ್ ಅವರ 'ಕರ್ನಾಟಕದ ಭಿತ್ತಿ ಚಿತ್ರ ಪರಂಪರೆ' ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಸುರಪುರ ಮತ್ತು ಕೆಲವು ಭಿತ್ತಿ ಚಿತ್ರಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಿದ ಸಂಶೋಧನ ಗ್ರಂಥ. ಇದೇ ಅವಧಿಯಲ್ಲಿ ಬಂದ ಮಮತಾ ಜಿ. ಸಾಗರ ಅವರ 'ಎಸ್. ಎಸ್. ಮನೋಳಿ' ಈ ಪುಸ್ತಕದಲ್ಲಿ ಹೈದರಾಬಾದ್ ಕರ್ನಾಟಕದ ಹಿರಿಯ ಕಲಾವಿದ ಮನೋಳಿ ಅವರ ಜೀವನ ಸಾಧನೆ ಮತ್ತು ಕಲಾಕೃತಿಗಳನ್ನು ಪರಿಚಯಿಸಿದ್ದಾರೆ. ಡಾ. ಎಸ್. ಸಿ. ಪಾಟೀಲ ಅವರ 'ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು' ಕೃತಿಯಲ್ಲಿ ಜೋಕುಮಾರ, ಗುಳ್ಳವ್ವ, ಗುರ್ಚಿ, ಗಣಪತಿ ಮುಂತಾದ ಈ ಪ್ರದೇಶದ ಜನಪದ ಮೂರ್ತಿಶಿಲ್ಪಗಳನ್ನು ಆಚರಣೆಯ ಹಿನ್ನೆಲೆಯಲ್ಲಿ ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ.

1999ರಲ್ಲಿ ಡಿ.ಎನ್. ಅಕ್ಕಿಯವರು ಬರೆದ 'ಎಂ.ಟಿ. ಭೋಪಲೆ' ಕೃತಿಯಲ್ಲಿ ಎಂ.ಟಿ. ಭೋಪಲೆ ಅವರ ಜೀವನ, ಸಾಧನೆ ಮತ್ತು ಕಲಾಕೃತಿಗಳ ಸ್ಥೂಲ ವಿವರಣೆಯಿದೆ. ಹಾಗೆಯೇ ಎನ್. ಮರಿಶಾಮಾಚಾರ್ ಅವರ 'ರಮ್ಯಕಲೆಯ ರಸಋಷಿ ಎಸ್.ಎಂ. ಪಂಡಿತ್' ಕೃತಿಯಲ್ಲಿ ಪಂಡಿತರ ಜೀವನ ಸಾಧನೆಯ ಚರಿತ್ರೆಯಿದೆ. ಕುಪ್ಪಣ್ಣ ಕಂದಗಲ್ ಅವರ ಜೆ.ಎಸ್. ಖಂಡೇರಾವ್ ಕೃತಿಯಲ್ಲಿ ಸಹ ಖಂಡೇರಾವ್‌ರ ಜೀವನ ಮತ್ತು ಕಲೆಯ ಪರಿಚಯವನ್ನು ಮಾಡಿದ್ದಾರೆ. 1999ರಲ್ಲಿ ವ್ಹಿ.ಜಿ. ಅಂದಾನಿಯವರು 'ಆರ್ಟ್‌ಗುಲ್' ಎಂಬ ಕಲೆಯ ಕುರಿತಾದ ಪತ್ರಿಕೆಯೊಂದನ್ನು ಈ ಪ್ರದೇಶದಲ್ಲಿ ಮೊದಲ ಬಾರಿಗೆ ತಂದಿ ದ್ದಾರೆ. ಆದರೆ ಈ ಪತ್ರಿಕೆ 2–3 ಸಂಚಿಕೆ ಬರುವಷ್ಟರಲ್ಲಿ ಕಾರಣಾಂತರದಿಂದ ನಿಂತು ಹೋಗಿರುವುದು ಈ ಕ್ಷೇತ್ರಕ್ಕಾದ ಒಂದು ದೊಡ್ಡ ಕೊರತೆ ಎನ್ನಬಹುದು.

ಈ ದಶಕದಲ್ಲಿ ಚಿತ್ರಕಲಾವಿದರಾದ ಆಳಂದಕರ ಅವರ ಕುರಿತು ಕನ್ನಡದಲ್ಲಿ ಬಂದ ಪ್ರಮುಖ ಅಭಿನಂದನಾ ಗ್ರಂಥ ವಾಗಿದೆ. ಈ ಹಂತದಲ್ಲಿ ಲೇಖನಗಳ ಸಂಖ್ಯೆ ಕಡಿಮೆಯಾಗಿ, ಗ್ರಂಥಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಗ್ರಂಥಗಳು ಕನ್ನಡ ಮತ್ತು ಆಂಗ್ಲಭಾಷೆ ಎರಡರಲ್ಲಿಯೂ ಸಮನಾಗಿ ಕಾಣಿಸಿಕೊಂಡಿವೆ. ಕನ್ನಡದಲ್ಲಿ ಹೈದ್ರಾಬಾದ್ ಕರ್ನಾಟಕದ ಹಲವಾರು ಕಲಾವಿದರ, ಕಲಾಕೃತಿಗಳ ಕುರಿತಾದ ಸಾಹಿತ್ಯ ಇಲ್ಲಿ ಸೃಷ್ಟಿಯಾಗಿದೆ. ಮತ್ತು ವಿಶೇಷವಾಗಿ ಸಂಶೋಧನಾ ಗ್ರಂಥಗಳು ಪ್ರಕಟವಾಗಿವೆ. ಕಿನ್ನಾಳ ಮತ್ತು ಪ್ರಾಗೈತಿಹಾಸಿಕ ಕಲೆ ಅಲ್ಲದೇ ಜನಪದ ಚಿತ್ರಕಲಾ ಕೇಂದ್ರಗಳ ಬಗೆಗೆ ಪಿಹೆಚ್.ಡಿ ಯಂತಹ ಸಂಶೋಧನಾ ಅಧ್ಯಯನಗಳು ಹಾಗೂ ಕಲಾಕೋಶಗಳು, ಸ್ಮರಣಸಂಚಿಕೆಗಳು ಅಂತರ್ ಸಂಬಂಧದ ಹಲವಾರು ಗ್ರಂಥ ಗಳು ಬಂದಿರುವುದು ವಿಶೇಷವಾಗಿದೆ. ಅಲ್ಲದೇ ಜನಪದ ಶಿಲ್ಪಗಳ ಬಗೆಗೆ ಮತ್ತು ಆರ್ಟ್‌ಗುಲ್ ಎಂಬ ಕಲಾಪತ್ರಿಕೆ, ಲಲಿತಕಲಾ ಅಕಾಡೆಮಿಯ ಪ್ರಕಟಣೆಗಳು ಈ ಹಂತದಲ್ಲಿ ವಿಶೇಷವಾಗಿ ಪ್ರಕಟವಾಗಿರುವುದು ಮಹತ್ವದ ಬೆಳವಣಿಗೆ ಯೆನ್ನಬಹುದು.

4. ಎರಡುಸಾವಿರ ನಂತರದ ಹಂತ: 2000ರಲ್ಲಿ ಡಾ. ಕರೀಗೌಡ ಬೀಚನಹಳ್ಳಿ ಅವರು 'ಕರಕುಶಲ ಕಲೆಗಳ' ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕವನ್ನು ಸೇರಿದಂತೆ ಕರಕುಶಲ ಕಲೆಗಳ ಪರಂಪರೆ ಮತ್ತು ಇತಿಹಾಸ, ಅಲಂಕರಣ ಸಂಬಂಧಿ ಕರಕುಶಲ ಕಲೆಗಳು, ಆರಾಧನಾ ಸಂಬಂಧಿ ಕರಕುಶಲ ಕಲೆಗಳು, ಗೃಹೋಪಯೋಗಿ ಕರಕುಶಲ ಕಲೆಗಳು, ಮನರಂಜನಾ ಸಂಬಂಧಿ ಕರಕುಶಲ ಕಲೆಗಳು, ವ್ಯವಸಾಯ ಸಂಬಂಧಿ ಕರಕುಶಲ ಕಲೆಗಳು ಮೊದಲಾಗಿ ವಿಂಗಡಿಸಿಕೊಂಡು 79 ಲೇಖನಗಳನ್ನು ಆಯಾ ಕ್ಷೇತ್ರದ ತಜ್ಞರಿಂದ ಬರೆಯಿಸಿದ ಗ್ರಂಥ ವಾಗಿದೆ. ಇದೊಂದು ಉತ್ತಮವಾದ ಆಕರ ಗ್ರಂಥವಾಗಿದೆ. ಹನಮಂತ ಮಂತಟ್ಟಿ ಅವರು ಬರೆದ 'ಶಾಂತಲಿಂಗಪ್ಪ ಪಾಟೀಲ' ಕೃತಿಯಲ್ಲಿ ಪಾಟೀಲರ ಜೀವನ ಕಲಾಕೃತಿಗಳನ್ನು ಕುರಿತು ಬರೆದಿದ್ದಾರೆ. ಹಾಗೆಯೇ ಎಂ.ಎಸ್. ನಂಜುಂಡರಾವ್ ಅವರ 'ಕರ್ನಾಟಕ ತೊಗಲುಗೊಂಬೆ' ಕೃತಿಯಲ್ಲಿ ಕರ್ನಾಟಕದ ತೊಗಲುಗೊಂಬೆ ಕಲೆಯ ಬಗ್ಗೆ ಹೇಳುತ್ತ ಹೈದರಾಬಾದ್ ಕರ್ನಾಟಕದ ತೊಗಲುಗೊಂಬೆ ಕಲೆ ಕಲಾವಿದರ ಪರಿಚಯ ವನ್ನು ನೀಡಿದ್ದಾರೆ. 2001ರಲ್ಲಿ ಡಾ. ಎಸ್.ಕೆ. ಅರುಣಿ ಅವರ 'ದಖನಿ ಚಿತ್ರಕಲೆ' ಈ ಗ್ರಂಥದಲ್ಲಿ ಹೈದ್ರಾಬಾದ್ ಕರ್ನಾಟಕದ ದಖನಿ ಚಿತ್ರಕಲೆ, ಕಂಪನಿ ಚಿತ್ರಕಲೆ, ಸುರಪುರ ಚಿತ್ರಕಲೆ, ಮುಂತಾದ ಈ ಪ್ರದೇಶದ ಕಲೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಡಾ. ಎಸ್.ಸಿ. ಪಾಟೀಲರ 'ವರ್ಣಸಂಚಯ' ಕೃತಿಯಲ್ಲಿ ಕೌದಿ, ಕಸೂತಿ ಮುಂತಾದ ಚಿತ್ರಕಲೆಯ ಹಲವಾರು ಸಂಶೋಧನಾ ಲೇಖನಗಳನ್ನು ಹಲವಾರು ಚಿತ್ರಗಳೊಂದಿಗೆ ಇಲ್ಲಿ ವಿವೇಚಿಸಿದ್ದಾರೆ.

2003ರಲ್ಲಿ ಡಾ. ಎಸ್.ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಅವರು ಸಂಪಾದಿಸಿದ 'ನಿಜದ ನೆಲೆ' ಎಂಬ ಬೃಹತ್ ಗ್ರಂಥದಲ್ಲಿ ಈ ಪ್ರದೇಶದ ಚಿತ್ರಕಲೆಯ ಕುರಿತಾದ ಲೇಖನಗಳು ಸಂಗ್ರಹಗೊಂಡಿವೆ. ಅಧ್ಯಯನಕಾರರಿಗೆ ಇದೊಂದು ಮಹತ್ವದ ಆಕರ ಗ್ರಂಥವಾಗಿದೆ. ಇದೇ ಅವಧಿಯಲ್ಲಿ ವಿ.ಜಿ. ಅಂದಾನಿ ಅವರು ಸಂಪಾದಿಸಿದ ಬಯಲು ಬಯಲಾದ ರೇಖೆಗಳು ಕೃತಿ ಯಲ್ಲಿ ಅವರ ರೇಖಾಚಿತ್ರಗಳ ಮತ್ತು ಅವರನ್ನು ಕುರಿತು ಬರೆದ ಹಲವು ಲೇಖನಗಳ ಸಂಗ್ರಹವಿದೆ. ಡಾ.ಶಿವಾನಂದ ಬಂಟನೂರ ಅವರ ಪುಟ್ಟ ಪುಸ್ತಕ ಸೌಭಾಗ್ಯ ಈ ಕೃತಿಯಲ್ಲಿ ಎ.ಎಸ್. ಪಾಟೀಲರ ಜೀವನ ಮತ್ತು ಕಲಾಕೃತಿಗಳ ಸ್ಥೂಲವಾದ ವಿವೇಚನೆಯಿದೆ.

2004ರಲ್ಲಿ ಡಾ. ಎಸ್.ಸಿ. ಪಾಟೀಲರ ಸಂಪಾದನೆಯಲ್ಲಿ ಲಲಿತಕಲಾ ಅಕಾಡೆಮಿಯಿಂದ ಒಂಭತ್ತು ಗ್ರಂಥಗಳು ಬಂದಿವೆ. ಅದರಲ್ಲಿ ಮಹಾದೇವ ಎಂ. ಜಗತಾಪ ಅವರು ಬರೆದ ಕಸೂತಿ ಚಿತ್ರಕಲೆ ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಕಸೂತಿ ಕಲೆಯ ಪರಿಚಯಾತ್ಮಕ ವಿವರಣೆಯಿದೆ. ಇವರ ಮತ್ತೊಂದು ಸಂಪಾದಿಸಿದ ಚಿತ್ತಾರದ ಗೊಂಬೆ ಚಿತ್ರಕಲೆ ಎಂಬ ಗ್ರಂಥವನ್ನು ಡಾ. ಓ.ಗೋವಿಂದರಾಜು ಅವರು ಬರೆದದ್ದು, ತೊಗಲುಗೊಂಬೆ ಚಿತ್ರಕಲೆಯನ್ನು ಮತ್ತು ಅದರ ಕಲಾವಿದರ ಕುರಿತಾದ ಪರಿಚಯ ವನ್ನು ಮಾಡಿಕೊಟ್ಟ ಗ್ರಂಥ ಇದಾಗಿದೆ. ಪಾಟೀಲರು ಸಂಪಾದಿಸಿದ 'ನಾಗಾರಾಧನೆ ಮತ್ತು ಚಿತ್ರಕಲೆ' ಎಂಬ ಕೃತಿ ಯನ್ನು ಉಪಾಧ್ಯಾಯ ಮೂಡುಬೆಳ್ಳೆ ಅವರು ಬರೆದಿದ್ದು, ಕರಾವಳಿ ಪ್ರದೇಶದ ಕಲೆಯಾದ ನಾಗಾರಾಧನೆಯಲ್ಲಿ ಚಿತ್ರಕಲೆ ಬೆಳೆದು ಬಂದದ್ದನ್ನು ಈ ಕೃತಿ ಪರಿಚಯಿಸುತ್ತದೆ. ಇದೇ ಅವಧಿ ಯಲ್ಲಿ ಬಂದ ಇವರ ಮತ್ತೊಂದು ಸಂಪಾದನಾ ಗ್ರಂಥ 'ಬಿದರಿ ಚಿತ್ರಕಲೆ' ಡಾ. ವಿ.ಎಂ. ಬಾಗಾಯತ್‌ರವರು ಬರೆದದ್ದು, ಬಿದರಿ ಕಲೆಯ ನೆಲೆ-ಹಿನ್ನೆಲೆಯನ್ನು ಪರಿಚಯಿಸುವ ಗ್ರಂಥವಿದಾಗಿದೆ. ಹಾಗೆಯೇ ಬೆಳದಿಂಗಳ ಚಿತ್ರಕಲೆಯನ್ನು ಆನಂದ ಕೆ. ಪೂಜಾರ ಅವರು ಬರೆದದ್ದು, ಈ ಗ್ರಂಥದಲ್ಲಿ ಉತ್ತರ ಕರ್ನಾಟಕದಲ್ಲಿನ ಬೆಳದಿಂಗಳ ಚಿತ್ರಕಲೆಯನ್ನು ಜಾನಪದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. 'ರಂಗೋಲಿ ಚಿತ್ರಕಲೆ', ಹಚ್ಚೆ ಚಿತ್ರಕಲೆ ಎಂಬ ಎರಡು ಕೃತಿಗಳನ್ನು ಇದೇ ಅವಧಿಯಲ್ಲಿ ಡಾ. ಎಸ್.ಸಿ. ಪಾಟೀಲರು ಹೊರತಂದಿದ್ದಾರೆ. ಈ ಕೃತಿಗಳಲ್ಲಿ ರಂಗೋಲಿ, ಹಚ್ಚೆ ಹಾಕುವುದನ್ನು ಮತ್ತು ಅವುಗಳ ಸಾಂಪ್ರದಾಯಿಕ ಹಿನ್ನೆಲೆ, ಪರಿಕರ ಮತ್ತು ವಸ್ತುವಿಷಯಗಳನ್ನು ಸಂಶೋಧನೆ ಮಾಡಿ ಬರೆದ ಕೃತಿಯಾಗಿವೆ. ಹಾಗೆಯೇ 'ಶೀಗಿ ಚಿತ್ರಕಲೆ' ಕೃತಿಯನ್ನು ಡಾ. ಯಾದಪ್ಪ ಬಿ. ಪರದೇಶಿ ಅವರು ಬರೆದದ್ದು, ಈ ಕೃತಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಕಲೆಯಾದ ಶೀಗಿ ಚಿತ್ರಕಲೆಯ ಕುರಿತು ಜಾನಪದೀಯ ಹಿನ್ನೆಲೆಯಲ್ಲಿ ಚಿತ್ರಗಳ ಸಹಿತ ಅಧ್ಯಯನ ಮಾಡಿದ್ದಾರೆ. ಹೀಗೆ ಈ ಎಲ್ಲ ಕೃತಿಗಳನ್ನು ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ.

2004ರಲ್ಲಿ ಶ್ರೀ ಪ್ರಭುಲಿಂಗಯ್ಯ ಬಿ. ಟಂಕಸಾಲಿಮಠ ಅವರು ಸಂಪಾದಿಸಿದ 'ಕಲ್ಯಾಣ (ಕಲಾಪ್ರತಿಭೆ)' ಎಂಬ ಸ್ಮರಣ ಸಂಚಿಕೆಯಲ್ಲಿ ಅವರ ಕಲಾಶಾಲೆ, ವಿದ್ಯಾರ್ಥಿ ಅಧ್ಯಾಪಕರ ಕಲಾಸಾಧನೆಯ ಪರಿಚಯಾತ್ಮಕ ಲೇಖನಗಳಿವೆ. 2004ರಲ್ಲಿ ಡಾ. ರಾಜೇಂದ್ರ ಯಾರನಾಳೆ ಅವರು ಸಂಪಾದಿಸಿದ 'ಬೀದರ್ ಜಿಲ್ಲೆಯ ಸಾಹಿತಿ ಮತ್ತು ಕಲಾವಿದರು' ಎಂಬ ಗ್ರಂಥದಲ್ಲಿ ಬೀದರ ಜಿಲ್ಲೆಯ ಸಾಹಿತಿ ಕಲಾವಿದ ರನ್ನು ಕುರಿತಾದ ಕೃತಿ ಇದಾಗಿದೆ. ಡಾ. ಶಿವಾನಂದ ಎಚ್. ಬಂಟನೂರರ 'ವಿ.ಜಿ. ಅಂದಾನಿ' ಎಂಬ ಕೃತಿಯಲ್ಲಿ ಅಂದಾನಿಯವರ ಜೀವನ, ಕಲಾಕೃತಿಗಳ ಸಂಕ್ಷಿಪ್ತ ನೋಟವನ್ನು ನೀಡಿದ್ದಾರೆ. ಡಾ.ವೀರೇಶ್ ಬಡಿಗೇರ ಅವರ 'ಧನಂಜಯ ಶಿಲ್ಪಿ' ಎಂಬ ಕೃತಿಯಲ್ಲಿ ಕಲಾವಿದ ಧನಂಜಯ ಶಿಲ್ಪಿಯವರ ಬದುಕು, ವೃತ್ತಿ ಜೀವನ, ಕಲಾಸಾಧನೆಯನ್ನು ವಿವೇಚಿಸಿದ್ದಾರೆ.

2005ರಲ್ಲಿ ಪ್ರೊ. ವಿ.ಜಿ. ಅಂದಾನಿ ಅವರ 'ಡಾ. ಎಸ್.ಎಂ. ಪಂಡಿತ' ಕೃತಿಯಲ್ಲಿ ಪಂಡಿತರ ಕುರಿತು ಬಂದ ಹಲವಾರು ಲೇಖನಗಳ ಸಂಗ್ರಹವಿದೆ. 2006ರಲ್ಲಿ ಎಲ್. ಶಿವಲಿಂಗಪ್ಪ ಅವರ 'ಕರ್ನಾಟಕದಲ್ಲಿ ಚಿತ್ರಕಲಾ ಬೆಳವಣಿಗೆ ಒಂದು ಸಮೀಕ್ಷೆ' ಎಂಬ ಕೃತಿಯಲ್ಲಿ ದಖನಿ ಶೈಲಿ, ಬಂಡೆಯಾಸರೆ ಚಿತ್ರಗಳ ಕುರಿತು ಹೈದ್ರಾಬಾದ್ ಕರ್ನಾಟಕದ ಕಲಾವಿದರ ಜೀವನ ಸಾಧನೆಯ ಕುರಿತು ಚರ್ಚಿಸಿದ್ದಾರೆ. 2007ರಲ್ಲಿ ಎಚ್.ಎ. ಅನಿಲ್ ಕುಮಾರ್ ಅವರ 'ಶಂಕರಗೌಡ ಬೆಟ್ಟದೂರ್' ಕೃತಿಯಲ್ಲಿ ಅವರ ಜೀವನ

ಮತ್ತು ಕಲಾಕೃತಿಗಳ ಕುರಿತು ಚಿಂತನೆ ಮಾಡಿದ್ದಾರೆ.

2008ರಲ್ಲಿ ವಿಲ್ಸನ್ ಎಸ್. ಸೋನಫರ್ ಮತ್ತು ಈ ಪ್ರದೇಶದ ಕಲಾವಿದ ಡಾ. ಮೋಹನರಾವ ಬಿ. ಪಂಚಾಳ ಅವರು ಸಂಪಾದಿಸಿದ 'ವಜ್ರವಿಜಯ, ನೆನಪಿನ ಸಂಚಿಕೆಯಲ್ಲಿ ವಿಜಯಕಲಾ ಮಂದಿರದ ವಜ್ರ ಮಹೋತ್ಸವದ ಸಂಕ್ಷಿಪ್ತ ಪರಿಚಯದೊಂದಿಗೆ ಅನೇಕ ಕಲೆ, ಕಲಾವಿದರ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಕಾ. ಮಮತಾ ಚತುರ್ವೇದಿ ಅವರ 'ಸೌಂದರ್ಯಶಾಸ್ತ್ರ' ಎಂಬ ಕೃತಿಯನ್ನು ಹೈದ್ರಾಬಾದ್ ಕರ್ನಾಟಕದ ಬರಹಗಾರ ಡಾ. ಕಾಶೀನಾಥ ಅಂಬಲಗೆ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇಲ್ಲಿ ಕಲೆಯ ಅರ್ಥ, ಲಲಿತಕಲೆಗಳ ಸಂಬಂಧ ಪಾಶ್ಚಾತ್ಯ ಸೌಂದರ್ಯ ಶಾಸ್ತ್ರ, ಅನೇಕ ಸೌಂದರ್ಯದ ಕಲಾಸಿದ್ಧಾಂತಗಳನ್ನು ಮತ್ತೆ ಭಾರತೀಯ ಸೌಂದರ್ಯಶಾಸ್ತ್ರದ ಸಿದ್ಧಾಂತಗಳನ್ನು ಈ ಕೃತಿ ಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

2009ರಲ್ಲಿ ಐ.ಬಿ. ರಾಠೋಡ್ ಅವರ 'ರೇಖೆಗಳಲ್ಲಿ ಚಿತ್ರ ಕಲಾವಿದರು' ಎಂಬ ಗ್ರಂಥದಲ್ಲಿ ಹೈದರಾಬಾದ್ ಕರ್ನಾಟಕದ ಕಲಾವಿದರನ್ನು ಭಾವರೇಖಾಚಿತ್ರಗಳೊಂದಿಗೆ ಪರಿಚಯಿಸಿದ್ದಾರೆ. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಅವರು ಬರೆದ 'ಚಿತ್ರಲೇಖ' ದಲ್ಲಿ ಮೈಸೂರು, ವಿಜಯನಗರ, ಬಿದರಿ, ಸುರಪುರ, ಮೊದಲಾದ ಪ್ರದೇಶಗಳ ಕಲೆಗಳ ಕುರಿತು, ಕಲಾವಿದರ ಕುರಿತು ಪರಿಚಯಾತ್ಮಕ ಲೇಖನಗಳನ್ನು ಒಳಗೊಂಡ ಕೃತಿ ಇದಾಗಿದೆ. ಇದೇ ಅವಧಿಯಲ್ಲಿ ಬಂದ ಅವರ ಕೃತಿ 'ಲೇಖಾವರಣ'ದಲ್ಲಿ ಹನ್ನೊಂದು ಕಲೆಯ ಕುರಿತ ಲೇಖನಗಳಿವೆ. ಅಲ್ಲದೇ ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಮತ್ತೊಂದು ಕೃತಿ 'ಸುರಪುರ ಚಿತ್ರಕಲೆ' ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ರಾಜಾಶ್ರಯ ಮತ್ತು ಚಿತ್ರಕಲೆ, ಸುರಪುರ ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಕಲೆ, ಸಂಕೀರ್ಣ ಮಾಧ್ಯಮದ ಚಿತ್ರಕಲೆ ಹೀಗೆ ಸುರಪುರ ಸಂಪ್ರದಾಯದ ಚಿತ್ರಕಲಾ ಪರಂಪರೆ ಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಡಾ. ಶಿವಾನಂದ ಎಚ್. ಬಂಟನೂರ ಅವರ 'ದೃಷ್ಟಿ ಸೃಷ್ಟಿ' ಎಂಬ ಕೃತಿಯಲ್ಲಿ ಕಲೆಗಳಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನೊಳ ಗೊಂಡ ಕೃತಿಯಾಗಿದೆ. ಇದರಲ್ಲಿ ಹೈದ್ರಾಬಾದ್ ಕರ್ನಾಟಕದ ಕಲಾವಿದರು ಮತ್ತು ಕಲೆಯ ಕುರಿತು ಲೇಖನಗಳಿವೆ.

2010ರಲ್ಲಿ ಪ್ರೊ. ಎಂ.ಎಚ್. ಕೃಷ್ಣಯ್ಯ ಮತ್ತು ಡಾ. ವಿಜಯಾ ಅವರು ಸಂಪಾದಿಸಿದ 'ಕರ್ನಾಟಕ ಕಲಾದರ್ಶನ' ಎಂಬ ಬೃಹತ್ ಸಂಪುಟದಲ್ಲಿ ಈ ಪ್ರದೇಶದ ಕಲಾವಿದರ ಮತ್ತು ದೃಶ್ಯಕಲೆಗಳಾದ ಚಿತ್ರ, ಶಿಲ್ಪ, ಕರಕುಶಲ ಮುಂತಾದ ಕಲೆಗಳನ್ನು ಚಿತ್ರಗಳೊಂದಿಗೆ ಸುದೀರ್ಘ ವಾಗಿ ವಿವೇಚಿಸಿದ ಕೃತಿಯಿದಾಗಿದೆ. ಡಾ. ಎಸ್.ಸಿ. ಪಾಟೀಲ ಅವರು ರಚಿಸಿದ 'ಎಲ್. ಶಿವಲಿಂಗಪ್ಪ' ಎಂಬ ಕೃತಿಯಲ್ಲಿ ಕಲಾವಿದ ಎಲ್. ಶಿವಲಿಂಗಪ್ಪನವರ ಬದುಕಿನ ವಿವಿಧ ಹಂತಗಳನ್ನು ಪರಿಚಯಿಸುತ್ತ, ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮತ್ತು ಅವರ ಕಲಾಸಾಧನೆ ಯನ್ನು ಈ ಗ್ರಂಥ ಒಳಗೊಂಡಿದೆ. ಡಾ. ವಿ.ಜಿ. ಅಂದಾನಿ ಮತ್ತು ಡಾ. ಡಿ.ಬಿ. ನಾಯಕ್ ಅವರು ಸಂಪಾದಿಸಿದ 'ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು' ಕೃತಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ನೀಡುವ ಪ್ರಶಸ್ತಿ ಪುರಸ್ಕೃತ ಕಲಾವಿದರ ಜೀವನ ಮತ್ತು ಅವರ ಕಲಾಕೃತಿಗಳ ಸ್ಥೂಲ ನೋಟವನ್ನು ನೀಡುವ ಕೃತಿ ಇದಾಗಿದೆ. ಇದೇ ಅವಧಿಯಲ್ಲಿ ಬಂದ ಡಾ. ಮೋಹನರಾವ್ ಬಿ. ಪಂಚಾಳ ಅವರ 'ದೃಶ್ಯಾನುಭವ' ದಲ್ಲಿ ಬೀದರಿನ ಬಿದರಿಕಲೆ, ಶೀಗಿಕಲೆ ಮುಂತಾದ ಕಲೆಗಳ ಕುರಿತಾದ ಲೇಖನಗಳಿವೆ. ಇದೇ ವರ್ಷದಲ್ಲಿ ಇವರ ಚಿತ್ರಕಲಾವಿದ ಡಾ. ಎಸ್.ಎಂ. ಪಂಡಿತರ ಕುರಿತಾದ ಪರಿಚಯಾತ್ಮಕ ಕೃತಿ ಪ್ರಕಟವಾಗಿದೆ. ಪರಶುರಾಮ ಪಿ. ಅವರ ದೃಶ್ಯಕಲಾ ಮಂಥನ ಎಂಬ ಪುಸ್ತಕ ಕಲೆಗಳಿಗೆ ಸಂಬಂಧಿಸಿದ 13 ಲೇಖನಗಳನ್ನು ಒಳಗೊಂಡ ಕೃತಿ ಇದಾಗಿದೆ.

2011ರಲ್ಲಿ ಡಾ. ಎಸ್.ಸಿ. ಪಾಟೀಲ ಅವರ ಸಂಪಾದನೆಯ 'ಜ್ಞಾನ ಶಿವ' ಎಂಬ ಸ್ಮರಣ ಸಂಚಿಕೆಯು ಬಾದಾಮಿ 3ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟವಾಗಿದ್ದು. ಇಲ್ಲಿ ಅನೇಕ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದ ಲೇಖನಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಇವರದೇ ಇನ್ನೊಂದು ಗ್ರಂಥ 'ಕರ್ನಾಟಕದ ಚಿತ್ರಕಲೆಯ ವಿವರಣಾತ್ಮಕ ಗ್ರಂಥಸೂಚಿ'ಯಲ್ಲಿ ಕರ್ನಾಟಕದಲ್ಲಿ ಇಲ್ಲಿಯವರೆಗೆ ಚಿತ್ರಲೆಯ ಕುರಿತು ಪ್ರಕಟಗೊಂಡ ಸುಮಾರು 440 ಕೃತಿಗಳ ಸಂಕ್ಷಿಪ್ತವಾದ ವಿವರಗಳನ್ನು ಒಳಗೊಂಡಿದೆ. ಇವರದೇ ಮತ್ತೊಂದು ಕೃತಿ 'ನಾಡೋಜ ಚಿತ್ರಕಲಾವಿದ ವಿ.ಟಿ. ಕಾಳೆ' ಎಂಬ ಗ್ರಂಥದಲ್ಲಿ ಕಾಳೆಯವರ ಜೀವನ, ವ್ಯಕ್ತಿತ್ವ ಮತ್ತು ಕಲಾಸಾಧನೆಗಳ ಕುರಿತು ಅವರು ರಚಿಸಿದ ಕಲಾಕೃತಿಗಳೊಂದಿಗೆ ವಿವರಿಸಲಾಗಿದೆ.

2011ರಲ್ಲಿ ಚಂದ್ರಕಾಂತ ಕುಸನೂರ ಅವರ 'ಕಲೆ ಒಂದು ಚಿಂತನೆ' ಹೆಸರೇ ಸೂಚಿಸುವಂತೆ ಕಲೆಯ ಕುರಿತಾದ ದೇಶಿಯ ಮತ್ತು ವಿದೇಶಿ ವಿದ್ವಾಂಸರ ಚಿಂತನೆಗಳನ್ನು ಒಳಗೊಂಡ ಪುಟ್ಟಕೃತಿ ಇದಾಗಿದೆ. ಇದೇ ಅವಧಿಯಲ್ಲಿ ದೇವುಪತ್ತಾರ ಅವರ ಸಂಪಾದನೆಯ 'ಸೊಗಡು' ಕೃತಿಯಲ್ಲಿ ವಿಶ್ವಕರ್ಮ ಸಮಾಜದ ಚಿತ್ರ ಮತ್ತು ಶಿಲ್ಪಕಲಾವಿದರ ಜೀವನ ಸಾಧನೆಯ ಕುರಿತಾದ ಲೇಖನಗಳು ಸಂಗ್ರಹಗೊಂಡಿವೆ. ಇದು ಅವರ ತಂದೆಯವರ ಸ್ಮರಣ ಸಂಚಿಕೆಯಾಗಿದೆ.

ಪ್ರೊ. ಪಿ.ಕೆ. ಖಂಡೋಬಾ ಅವರು ಲಂಬಾಣಿ ಸಂಸ್ಕೃತಿಯ ಕುರಿತು ಸಂಶೋಧನೆ ಮಾಡಿದ್ದು, ಅಲ್ಲಿ ಲಂಬಾಣಿ ಕರಕುಶಲ ಕಲೆಗಳನ್ನು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ವಿಶೇಷವಾಗಿ ಲಂಬಾಣಿ ಹಚ್ಚೆ, ರಂಗೋಲಿ, ಕಸೂತಿ ಮುಂತಾದ ಕಲೆಗಳ ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. ಡಾ. ವೀರಣ್ಣ ದಂಡೆಯವರು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಹೈದ್ರಾಬಾದ್ ಕರ್ನಾಟಕದ ಅನೇಕ ಚಿತ್ರ, ಶಿಲ್ಪಕಲೆ, ಕಲಾವಿದರ ಕುರಿತು ಲೇಖನಗಳನ್ನು ಬರೆದಿದ್ದಾರೆ. ಕೃಷ್ಣ ರಾಯಚೂರು, ಪಿ.ಎಂ. ಮಣ್ಣೂರ್, ದೇವು ಪತ್ತಾರ, ಸಂಗಮ್‌ನಾಥ್, ನಾರಾಯಣ ಜೋಶಿ, ಡಾ. ಹೆಚ್.ಎನ್. ಚಿತ್ರಗಾರ, ಸಂತೋಷಕುಮಾರ

ಗುಲ್ವಾಡಿ, ಚಿ.ಸು. ಕೃಷ್ಣಶೆಟ್ಟಿ, ಡಾ.ಅ.ಲ. ನರಸಿಂಹನ್ ಮುಂತಾದವರಲ್ಲದೇ ಹಲವಾರು ಜನ ಪತ್ರಿಕಾ ಬರಹಗಾರರು, ಸಂಪಾದಕರು, ದೈನಂದಿನ ಪತ್ರಿಕೆಗಳಲ್ಲಿ ಕಲೆ, ಕಲಾವಿದರ ಕುರಿತಾದ ಅನೇಕ ಲೇಖನಗಳು ಪ್ರಕಟವಾಗಿವೆ. ಶಾಹಿದ್ ಪಾಷಾ, ಪರುಶುರಾಮ ಪಿ, ಡಾ. ವಿಶ್ವೇಶ್ವರಿ ತಿವಾರಿ, ಡಾ ರೆಹಮಾನ್ ಪಟೇಲ್, ಹನುಮಂತ ಮಂತಟ್ಟಿ, ನೀಲಾ, ಅಶೋಕ ಶೆಟ್ಕರ್, ಬಸವರಾಜ ಕಲೆಗಾರ ಮುಂತಾದ ಯುವಕಲಾವಿದರು ಈಗ ಬರವಣಿಗೆಯಲ್ಲಿ ತೊಡಗಿದ್ದುದು ಕಂಡುಬರುತ್ತದೆ. ಹಾಗೆಯೇ ಗುಲಬರ್ಗಾ ಮತ್ತು ರಾಯಚೂರಿನಲ್ಲಿ ನಡೆದ ರಾಜ್ಯ ಮಟ್ಟದ ಚಿತ್ರಕಲಾ ಶಿಕ್ಷಕರ ಸಮ್ಮೇಳನದ ಸ್ಮರಣ ಸಂಚಿಕೆಗಳಲ್ಲಿ, ಈ ಪ್ರದೇಶದ ಗೆಝೆಟಿಯರ್‌ಗಳಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನಗಳ ಸ್ಮರಣಸಂಚಿಕೆಗಳಲ್ಲಿ ದೃಶ್ಯಕಲೆಯ ಲೇಖನಗಳು ಸಂಪಾದನೆಗೊಂಡಿವೆ. ಹೀಗೆ 2000ದ ನಂತರದಲ್ಲಿ ಸೃಷ್ಟಿಯಾದ ಹೈದ್ರಾಬಾದ್ ಕರ್ನಾಟಕದ ದೃಶ್ಯಕಲಾ ಸಾಹಿತ್ಯದ ಗ್ರಂಥಗಳು ವಿಶೇಷವಾಗಿ ಸಾಕಷ್ಟು ಪ್ರಮಾಣದಲ್ಲಿ ರಚನೆಯಾಗಿವೆ. ಸಂಶೋಧನಾ ಗ್ರಂಥಗಳು, ಸಂಪಾದನಾ ಗ್ರಂಥಗಳು, ಬಿಡಿ ಲೇಖನಗಳ ಗ್ರಂಥಗಳು, ಅನುವಾದ ಗ್ರಂಥಗಳು, ಸ್ಮರಣ ಸಂಚಿಕೆಗಳು, ಜನಪದ ಮತ್ತು ಶಿಷ್ಟಪದ ದೃಶ್ಯಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳು, ಕಲೆ-ಕಲಾವಿದರ ಕುರಿತಾಗಿ ಪ್ರಕಟಗೊಂಡಿವೆ. ಈ ಹಂತದಲ್ಲಿ ದೃಶ್ಯಕಲಾ ಸಾಹಿತ್ಯ ಕನ್ನಡ ಸಾಹಿತ್ಯದಂತೆ ವೈವಿಧ್ಯತೆಯಿಂದ ಸೃಷ್ಟಿಯಾಗಿರುವುದು ಮತ್ತು ಆಗುತ್ತಲಿರುವುದು ಹೈದ್ರಾಬಾದ್ ಕರ್ನಾಟಕದ ದೃಶ್ಯಕಲಾ ಸಾಹಿತ್ಯದ ಸಮೃದ್ಧ ಬೆಳವಣಿಗೆಯ ದಿಕ್ಸೂಚಿಯಾಗಿದೆ.

(ಎಸ್‌ಸಿಪಿ)

ದೇ

ದೇಸಾಯಿ ಡಿ.ಎಸ್.: ಇವರು ಜೇವರ್ಗಿ ತಾಲ್ಲೂಕಿನ ಗುಲಬರ್ಗಾ ಜಿಲ್ಲೆಯ ಅವರಾದ ಗ್ರಾಮದಲ್ಲಿ 1972 ಜುಲೈ 01ರಂದು ಜನಿಸಿದರು. ಇವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ, ಆರ್ಟ್‌ಮಾಸ್ಟರ್ ಪದವಿ ಹಾಗೂ ಬಿ.ಎಫ್.ಎ ಪದವಿಯನ್ನು ಪಡೆದುಕೊಂಡಿದ್ದಾರೆ.

ಇವರು ಅನೇಕ ಗುಂಪು ಪ್ರದರ್ಶನಗಳು ಹಾಗೂ ಕೆಲವು ಏಕವ್ಯಕ್ತಿ ಪ್ರದರ್ಶನಗಳನ್ನು ಏರ್ಪಡಿಸಿರುತ್ತಾರೆ. ಅಲ್ಲದೇ ಅನೇಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸ್ಪರ್ಧೆ ಹಾಗೂ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಬೆಂಗಳೂರಿನ ಕೇನ್ ಸ್ಕೂಲ್ ಹಾಗೂ ಗುಲಬರ್ಗಾದ ದಿ ಐಡಿಯಲ್ ಫೈನ್‌ಆರ್ಟ್‌ನಲ್ಲಿ ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನಗಳಾದ ರಾಷ್ಟ್ರೀಯ ಕಲಾಮೇಳ ಮದ್ರಾಸು, ರಾಷ್ಟ್ರೀಯ ಕಲಾಮೇಳ ಬೆಂಗಳೂರು, ವೆಂಕಟಪ್ಪ ಆರ್ಟ್‌ಗ್ಯಾಲರಿ ಬೆಂಗಳೂರು, ಅಂಕುರ ಆರ್ಟ್‌ಗ್ಯಾಲರಿ ಗುಲಬರ್ಗಾ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಧನ ಸಹಾಯದಡಿಯಲ್ಲಿ ಧಾರವಾಡದಲ್ಲಿ ಭಾಗವಹಿಸಿದ್ದಾರೆ.




ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ದಸರಾ ಕಲಾಪ್ರದರ್ಶನ ಮೈಸೂರು ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಭುವನೇಶ್ವರ, ಚಿತ್ರ ಕಲಾಪರಿಷತ್ತ ಬೆಂಗಳೂರು, ಎಸ್.ಸಿ.ಝಡ್.ಸಿ ಸೆಂಟರ್ ನಾಗಪುರ, ಅಖಿಲ ಭಾರತಿ ಪ್ರದರ್ಶನ ರಾಜಸ್ಥಾನ ಹೀಗೆ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ವಿಭಾಗ ಮಟ್ಟದ ಚಿತ್ರಕಲಾಶಿಬಿರ ಗುಲಬರ್ಗಾ, ರುಮಾಲೆ ಚನ್ನ ಬಸವಯ್ಯಾರವರ ಸಂಸ್ಮರಣೆಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರುರವರ ಪ್ರಾಯೋಜಕತ್ವದಲ್ಲಿ ಶಿಬಿರ ಹೀಗೆ ಅನೇಕ ಶಿಬಿರಗಳಲ್ಲಿ ಭಾಗವಹಿಸಿ ಈ ಭಾಗದ ಉತ್ತಮ ಕಲಾವಿದರಾಗಿ ಬೆಳೆದಿದ್ದಾರೆ. ಪ್ರಸ್ತುತ ಚಿತ್ರಕಲಾ ಶಿಕ್ಷಕರಾಗಿ ಸರಕಾರಿ ಪ್ರೌಢಶಾಲೆ, ಕಪನೂರಲ್ಲಿ ತಮ್ಮ ಸೇವೆಸಲ್ಲಿಸುತ್ತಿದ್ದಾರೆ.

(ಎಎಸ್‌ಎಸ್)



'ಟ್ರೈಬಲ್ ವುಮನ್ ವಿಥ್ ಪೀಕಾಕ್' ತೈಲ ವರ್ಣ



ದೇವದಾಸ ಚಿಮಕೋಡ: ಬೀದರ ಜಿಲ್ಲೆಯ ಚಿಮಕೋಡ ಗ್ರಾಮದ ದೇವದಾಸ ಚಿಮಕೋಡ ಬಾಲ್ಯದಿಂದಲೂ ಬಡತನವನ್ನು ಹಾಸಿಹೊದ್ದವರು. ಆದರೆ, ಸಂಗೀತ, ಗಾಯನ, ನಾಟಕವೆಂದರೆ ಇವರಿಗೆ ಎಲ್ಲಿಲ್ಲದ ಹುರುಪು. ದಲಿತ ಪರಂಪರೆಯಿಂದ ಬಂದ ಕಲಾ ಆರಾಧನೆಯು ಇವರಿಗೆ ವಂಶಾ ಪಾರುಪರ್ಯವಾಗಿ ಬಂದದ್ದು ಹೀಗಾಗಿ ಗೀಗಿಪದ, ಮೋಹರಮ್ ಪದ, ದಾಸರ ಪದ, ತತ್ವಪದ. ಭಜನೆ, ಲಾವಣಿ, ವಚನಗಾಯನ ನಾಡಗೀತೆ ಖವಾಲಿ, ಹಾಡುವುದಷ್ಟೇ ಅಲ್ಲ ಎಲ್ಲಾ ಹಾಡಿನ ಮಟ್ಟಗಳಿಗೆ ತಕ್ಕಂತೆ ತಬಲಾ, ಡೋಲಕ್, ಹಲಗೆ, ತಾಶ್ ದಪ್ಪಡಿ, ಜೆಪ್ಪು, ದಿಮಡಿ ಖಂಜರ, ಮುಂತಾದ ವಾದ್ಯಗಳನ್ನು ನುಡಿಸುವುದರಲ್ಲಿ ಅಷ್ಟೇ ಪ್ರವೀಣ್ಯತೆ ಪಡೆದವರು.

ಬೀದರ ಸಮುದಾಯದ ಕಾರ್ಯಾಗಾರ, ರಂಗತಾಲೀಮು ನೇಪಥ್ಯ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. 18 ವರ್ಷಗಳಿಂದ ನಿರಂತರ ರಂಗಭೂಮಿಯ ಒಂದಲ್ಲಾ ಒಂದು ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಸರ್ಕಾರ ವಿವಿಧ ಯೋಜನೆಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ, ಕೇಂದ್ರ ಸರ್ಕಾರದ ಸಮಾಜ ಕಾರ್ಯದ ಯೋಜನೆಗಳಿಗೆ ಜಿಲ್ಲಾ ಸಂಯೋಜಕರಾಗಿ ದುಡಿದ ಇವರು, ಏಡ್ಸ್ ಜಾಗೃತಿ, ಕುಷ್ಟರೋಗ ನಿರ್ಮೂಲನೆ, ಆನೆಕಾಲು ರೋಗದ ಬಗ್ಗೆ ಅರಿವು ತಾಯಿ ಮತ್ತು ಮಗುವಿನ ಆರೋಗ್ಯ, ಬಾನುಮತಿ, ವೈಜ್ಞಾನಿಕ ಅರಿವು ಮುಂತಾದ ಕಾರ್ಯಕ್ರಮಗಳಲ್ಲಿ ಲಘು ನಾಟಕ ವಿಚಾರ ಸಂಕಿರಣ, ಹಾಡು ಗಾರಿಕೆ, ಸಂಗೀತ ಕಲಾವಿದರಾಗಿ 500ಕ್ಕೂ ಹೆಚ್ಚು ಕಾರ್ಯಕ್ರಮ ನೀಡಿದ್ದಾರೆ.

ಮಹಿಳಾ ಶೋಷಣೆ, ಭ್ರೂಣ ಹತ್ಯೆ, ಜಲ ಸಂರಕ್ಷಣೆ, ಉದ್ಯೋಗ ಖಾತ್ರಿ, ಸ್ತ್ರೀಶಕ್ತಿ ಸ್ವ–ಸಹಾಯ ಸಂಘದ ನಟರಾಗಿ ಸೇವೆ ಸಲ್ಲಿಸಿದವರು ಬೀದರ ಸಮುದಾಯ ಸಮನ್ವಯ 'ಸಮಿತಿಯ ಸಂಚಾಲಕರಾಗಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಂಘಟಕರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ರಾಷ್ಟ್ರೀಯ ನಾಟಕ ಶಾಲೆಯ ಕಾರ್ಯಾಗಾರದಲ್ಲಿ ಕಲಾವಿದರಾಗಿ 45 ದಿನಗಳ ತರಬೇತಿ, ನಾಟಕ ಅಕಾಡೆಮಿಯ ರಂಗ ಶಿಬಿರಗಳಲ್ಲಿ ಕಲಾವಿದರಾಗಿ ತರಬೇತಿ ಪಡೆದ ಇವರು, ರಂಗ ತಜ್ಞರಾದ ಬಿ.ವಿ. ಕಾರಾಂತ, ಬಿ. ಜಯಶ್ರೀ, ಸಿ. ಬಸವಲಿಂಗಯ್ಯ, ಬಿ.ವಿ ರಾಜರಾಮ್, ಆರ್, ನಾಗೇಶ, ರಂಗಾಯಣ ರಘು, ಮಾಲತಿ, ಆರ್.ಟಿ. ರಮಾ, ಮಾಲ್ತೇಶ ಬಡಿಗೇರ, ಮುಂತಾದವರ ಮಾರ್ಗದರ್ಶನದಲ್ಲಿ ಪಳಗಿದ ಶ್ರೀಯುತರಿಗೆ 1995ರಿಂದ, 'ಸಂಗೀತ ಕಲಾಪ್ರಶಸ್ತಿ' ಅತ್ಯುತ್ತಮ ಸಮಾಜ ಸೇವಾ ಪ್ರಶಸ್ತಿ' ಜಿಲ್ಲಾ ಆಡಳಿತ ಪ್ರಶಸ್ತಿ', ಬೀದರ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಶ್ರೀಯುತರು ನಟರಾಗಿ ದುಡಿದ ಮುಖ್ಯ ನಾಟಕಗಳು 'ನಾಗಮಂಡಲ' ಪಂಚಮ, ಕತ್ತೆ ಮತ್ತು ಧರ್ಮ, ಜೋಗತಿ, ಚಂಬು ಪುರಾಣ, ತಾರ್ ಸೂರ್ಯ ಶಿಕಾರಿ ಹೀಗೆ ಸುಮಾರು 50 ನಾಟಕಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದಾರೆ. ಸಂಗೀತ ಹಾಡುಗಾರಿಕೆ, ನಟನೆ, ಸಂಘಟನೆ ಹೀಗೆ ವಿವಿಧ ಆಯಾಮಗಳಲ್ಲಿ ದುಡಿದ ಶ್ರೀಯುತರು ರಂಗಭೂಮಿಯ ಒಳ್ಳೆಯ ಸಂಪನ್ಮೂಲ ವ್ಯಕ್ತಿ. (ಎಸ್ಆರ್ಜಿ)

ದೇವರಾಜ ಹಲಿಗೇರಿ: ಬಹುಮುಖ ಪ್ರತಿಭೆಯುಳ್ಳ ಕಲಾವಿದ. ಸಂಗೀತ, ಸಾಹಿತ್ಯ, ನಾಟಕ ನಿರ್ದೇಶನ, ಹಿನ್ನಲೆ ಗಾಯನ, ಸಂಗೀತ ನಿರ್ದೇಶನ ಹಾಗೂ ನಾಟಕ ಪಾತ್ರ ನಿರ್ದೇಶನ, ನಾಟಕ ಪಾತ್ರಾಭಿನಯ ಮತ್ತು ವಾದಕರಾಗಿ ಇವರು ಸಲ್ಲಿಸಿದ ಸೇವೆ ಅಪಾರ. ಮೂಲತಃ ಕೊಪ್ಪಳ ಜಿಲ್ಲೆಯ ಹಲಿಗೇರಾದವರಾದ ದೇವರಾಜರವರು ಬಡತನವನ್ನು ಬೆನ್ನ ಹಿಂದೆ ಕಟ್ಟಿಕೊಂಡವರು. ಬಡತನದ ಪರಿಸ್ಥಿತಿಯಲ್ಲಿ ಆರನೆಯ ತರಗತಿಗೆ ಓದಿಗೆ ಶರಣೆಂದರು. ಅನಂತರ ಸಂಗೀತದಲ್ಲಿ ಆಸಕ್ತಿ ಹೆಚ್ಚಿತು. ಅತ್ತ ಒಲವು ತೋರಿದರು. ಅದರಲ್ಲಿ ಆಸಕ್ತಿ ವಹಿಸಿ ಸಂಗೀತ, ಕ್ಯಾಸಿಯೋ, ಗಿಟಾರ್, ತಬಲಾ, ಹಾರ್ಮೋನಿಯಂಗಳನ್ನು ಯತೇಚ್ಛವಾಗಿ ಕಲಿತರು. ಬರುಬರುತ್ತಾ ಈ ಕಲೆ ವೃತ್ತಿಯಾಗಿ ಪರಿವರ್ತನೆಯಾಯಿತು. ಕ್ರಮೇಣ ಈ ಕಲೆಯಲ್ಲಿ ಪರಿಣಿತಿ ಪಡೆದರು. ಪ್ರತಿಭಾವಂತ ಕಲಾವಿದರೆಂದು ಕೊಪ್ಪಳ ಜಿಲ್ಲೆಗೆ ಪರಿಚಯರಾದರು. ಜೊತೆಗೆ ಸಾಹಿತ್ಯದಲ್ಲೂ ಆಸಕ್ತಿ ವಹಿಸಿದ ಇವರು ಎರಡು ನೂರಕ್ಕೂ ಹೆಚ್ಚು ಭಾವಗೀತೆ ಹಾಗೂ ಜನಪದ ಗೀತೆಗಳನ್ನು ಸುಂದರವಾಗಿ ರಚಿಸಿದ್ದಾರೆ. ಅವುಗಳನ್ನು ಅಷ್ಟೇ ಸುಂದರವಾಗಿ ಹಾಡುತ್ತಾರೆ. ಪವಾಡ ಪುರುಷರು, ಹಸಿರು ಪಟಗದವರು ಹಾಗೂ ವಿಶ್ವಜ್ಯೋತಿ ಇವರು ರಚಿಸಿ, ಹಾಡಿದ ಮೂರು ಭಕ್ತಿಗೀತೆಗಳು ಬಸವಣ್ಣ ಎಂಬ ಹೆಸರಿನಲ್ಲಿ ಧ್ವನಿ ಸುರುಳಿಗಳಾಗಿವೆ.

ರಾಜ್ಯದ ಒಂಭತ್ತು ಹೆಸರಾಂತ ನಾಟಕ ಕಂಪನಿಗಳಲ್ಲಿ ಸಂಗೀತ ನಿರ್ದೇಶಕರಾಗಿ, ಹಿನ್ನೆಲೆ ಗಾಯಕರಾಗಿ, ನಾಟಕ ನಿರ್ದೇಶಕರಾಗಿ, ವಾದಕರಾಗಿ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ನಾಟಕ ಕಂಪನಿಗಳು ನೀಡುತ್ತಿದ್ದ ಸಂಭಾವನೆ ಜೀವನೋಪಾಯಕ್ಕೆ ಸಾಲದೆ ಕಂಪನಿ ಬಿಟ್ಟು ಹೊರಬಂದು ತಾವೇ ಒಂದು ಮುರುಡೇಶ್ವರ ಎಂಬ ಹೆಸರಿನಲ್ಲಿ ನಾಟಕ ಕಂಪನಿಯೊಂದನ್ನು ಪ್ರಾರಂಭಿಸಿ ಅದರಲ್ಲೂ ಕೈ ಸುಟ್ಟುಕೊಂಡರು. ಜೀವನದಲ್ಲಿ ನೂರಾರು ಕನಸುಗಳನ್ನು ಕಟ್ಟಿಕೊಂಡು ಅವು ನನಸಾಗದೆ ನೊಂದುಕೊಂಡವರು.

ಒಂದೇ ಸಮಯದಲ್ಲಿ ಕ್ಯಾಸಿಯೋ, ಹಾರ್ಮೋನಿಯಂ, ಗಿಟಾರ್ ಹಾಗೂ ಹಿನ್ನೆಲೆ ಗಾಯನವನ್ನು ಗಂಡು, ಹೆಣ್ಣು ಎರಡು ಧ್ವನಿಗಳಲ್ಲಿ ಹಾಡುವ ಕಲಾವಿದ ಇವರು. ಐದು ಜನ ಮಾಡುವ

ಕೆಲಸವನ್ನು ಇವರೊಬ್ಬರೆ ನಿರ್ವಹಿಸಬಲ್ಲ ಸಾಮರ್ಥ್ಯವುಳ್ಳವರು. ಅನೇಕ ಬಾರಿ ನಾಟಕ ಕಂಪನಿಗಳಲ್ಲಿ ಐದು ಜನರ ಕೆಲಸವನ್ನು ಒಬ್ಬರೇ ಮಾಡಿ ಮಾಲೀಕರ ಮೆಚ್ಚುಗೆ ಪಡೆದು ಸನ್ಮಾನಗಳನ್ನು ಗಿಟ್ಟಿಸಿಕೊಂಡವರು. 1986ರಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು 'ಪಂಚಕಲಾ ಪ್ರವೀಣ' ಎಂಬ ಬಿರುದು ನೀಡಿ ಇವರನ್ನು ಸನ್ಮಾನಿಸಿದ್ದಾರೆ. (ಕೆಎಂಎ)

ದೇವಿ ಶಿಲ್ಪಗಳು: (ಬೀದರ ಜಿಲ್ಲೆ) ಈ ಭಾಗದ ದೇವಿ ಮಂದಿರಗಳು ಲಕ್ಷ್ಮೀ, ಮಹಾಲಕ್ಷ್ಮೀ, ಅಂಬಾಭವಾನಿ, ಚಂಡಿಕೇಶ್ವರಿ, ಚಳಕಮ್ಮ, ವೆಂಕಮ್ಮ, ಯಲ್ಲಮ್ಮ ಮುಂತಾದ ಹೆಸರುಗಳಿಂದ ಖ್ಯಾತಿಗಳಿಸಿವೆ. ಕೆಲವು ಊರುಗಳು ತಮ್ಮ ಗ್ರಾಮದೇವತೆಗಳ ಹೆಸರುಗಳನ್ನು ಹೊಂದಿವೆ. ಈ ಜಿಲ್ಲೆಯಲ್ಲಿ ಭಾಲ್ಕಿ ತಾಲ್ಲೂಕಿನ ಚಳಕಾಪುರದ ಚಳಕಮ್ಮ, ಹಲ್ಸಿ ತೂಗಾವಿಯ ಲಕ್ಷ್ಮೀ, ಅಂಬೆಸಂಗವಿಯ ಅಂಬೆ, ಲಖಣಗಾವಿಯ ಲಕ್ಕಾದೇವಿ, ಸಂಗಮದ ಲಕ್ಷ್ಮೀ, ಬೀದರ ತಾಲ್ಲೂಕಿನ ಅಳವಾಯಿಯ ಲಕ್ಷ್ಮೀ, ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪುರದ ಚಂಡಿಕಾದೇವಿ, ಗೊರ್ಟದ ಮಹಾಲಕ್ಷ್ಮೀ, ಹುಮನಾಬಾದ ತಾಲ್ಲೂಕಿನ ಹುಡಗಿಯ ವೆಂಕಮ್ಮ, ಹಳ್ಳಿಖೇಡದ ಅಂಬಾಭವಾನಿ, ಉಡಬಾಳದ ಯಲ್ಲಮ್ಮ ದೇವಿ ಮುಂತಾದವು ಇಂದು ಖ್ಯಾತಿಗಳಿಸಿವೆ.

ಬೀದರ ಜಿಲ್ಲೆಯಲ್ಲಿ ದೇವಿ ಹೆಸರಿನಲ್ಲಿದ್ದ ಪ್ರಾಚೀನ ದೇವಾಲಯಗಳು ಇಂದು ಕಂಡುಬರುವುದಿಲ್ಲ. ಆದರೆ ಈ ಕಾಲದ ಹಲವಾರು ದೇವಾಲಯಗಳ ಮೂಲ ಹೆಸರುಗಳು ಬದಲಾಗಿರುವುದನ್ನು ಅಲ್ಲಲ್ಲಿ ಕಾಣಬಹುದು.

ಬಸವಕಲ್ಯಾಣ ತಾಲ್ಲೂಕಿನ ನಾರಾಯಣಪುರದ ಒಂದು ಮಂದಿರ ಮೂಲತಃ ದೇವಿ ದೇಗುಲವಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದರು. ಈ ಗ್ರಾಮದ ಮಧ್ಯದಲ್ಲಿರುವ ಈ ದೇಗುಲ ಪೂರ್ವಕ್ಕೆ ಮುಖ ಮಾಡಿದ್ದು ಶಿಥಿಲಗೊಂಡಿದೆ. ಹಾಗೂ ಅಲ್ಪ ಸ್ವಲ್ಪ ಬದಲಾವಣೆಯಾಗಿದೆ. ಎತ್ತರವಾದ ಅಧಿಷ್ಠಾನವಿದ್ದು, ಇದರ ತಳಪಾಯವು ಮೂಲತಃ ತ್ರಿಕೂಟ ಮಾದರಿಯಲ್ಲಿದೆ. ಗರ್ಭಗೃಹ, ತೆರೆದ ಅಂತರಾಳ ಸಭಾಮಂಟಪ ಮತ್ತು ಮುಖಮಂಟಪಗಳಿವೆ.

ಗರ್ಭಗೃಹದ ಬಾಗಿಲವಾಡದಲ್ಲಿ ಆರು ಶಾಖೆಗಳಿದ್ದು, ವೈಷ್ಣವ ದ್ವಾರಪಾಲಕರನ್ನು ಹೊಂದಿದೆ. ದ್ವಾರಪಾಲಕರ ಕೈಗಳಲ್ಲಿ ಚಕ್ರ ಮತ್ತು ಶಂಖಗಳು ಮೇಲಿನ ಕೈಗಳಲ್ಲಿದ್ದು ಕೆಳಗಿನ ಕೈಗಳು ಮುರಿದಿವೆ. ಲಲಾಟ ಬಿಂಬದಲ್ಲಿ ಲಕ್ಷ್ಮಿಯ ಬಿಂಬವಿದೆ. ಇದರ ಮೇಲಿನ ಉತ್ತರಾಂಗದಲ್ಲಿ ಸಾಲಾಗಿ ಒಂಬತ್ತು ಚಿಕಣಿ ಶಿಲ್ಪಗಳಿವೆ. ಈ ಶಿಲ್ಪಗಳು ಸಪ್ತ ಮಾತೃಕೆಯರದ್ದಾಗಿರುವುದು ಗಮನಾರ್ಹ. ಈ ಸಾಲಿನಲ್ಲಿ ಪ್ರತ್ಯೇಕ ವಿಮಾನ ಮಾದರಿಯ ಗೂಡುಗಳಿವೆ. ಈ ವಿಮಾನಗಳಲ್ಲಿ ಕೆಲವು ದೇವಿಯರನ್ನು ಮಧ್ಯ ತೋರಿಸಲಾಗಿದೆ. ಈ ಸಾಲಿನಲ್ಲಿ ವೀರಭದ್ರ ಮತ್ತು ಗಣೇಶರ ಮಧ್ಯ ಬ್ರಾಹ್ಮಿ, ಮಹೇಶ್ವರಿ, ಚಾಮುಂಡಿ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಕೌಮಾರಿಯರೆಂಬ ಏಳು ದೇವತೆಯರಿದ್ದಾರೆ.

ತೆರೆದ ಅಂತರಾಳದ ಮುಂದುಗಡೆ ಎರಡು ಉದ್ದ ಕಂಬಗಳಿದ್ದು ಇವುಗಳಲ್ಲಿ ಸುಂದರ ಮದನಿಕೆಯರ ಶಿಲ್ಪಗಳಿವೆ. ಮುಂದೆ ವಿಶಾಲ ಸಭಾಮಂಟಪವಿದೆ. ಈ ಮಂಟಪದ ಮಧ್ಯ ಭಾಗವು ವೃತ್ತಾಕಾರದಲ್ಲಿ ಸ್ವಲ್ಪ ಎತ್ತರವಾಗಿದ್ದು ಅದರ ಮೇಲೆ ನಾಲ್ಕು ಕಂಬಗಳಿವೆ. ಇದರ ಮುಚ್ಚಿಗೆಯಲ್ಲಿ ಕಮಲದ ಅಲಂಕಾರವಿದೆ. ಕಮಲದ ನಾಲ್ಕು ಮೂಲೆಗಳಲ್ಲಿ ಕೀರ್ತಿಮುಖಗಳಿವೆ. ಇವುಗಳ ಮಧ್ಯೆ ಗಣೇಶ, ಸರಸ್ವತಿ, ನೃತ್ಯಗಾರ್ತಿಯರು, ಚೌರಿ ಹಿಡಿದ ಹೆಂಗಸರು, ಮದ್ದಳೆಗಾರರು, ಲಕ್ಷ್ಮೀ, ನಾಟ್ಯ ಸರಸ್ವತಿಯರಿದ್ದಾರೆ.

ಈ ದೇವಾಲಯದ ಮುಂದೆ ಒಂದು ಶಿಲ್ಪ ಫಲಕವಿದ್ದು, ಇದರಲ್ಲಿನ ಒಂಭತ್ತು ಹಂತಗಳಲ್ಲಿ ಪಂಚಾಯತನ ಗುಂಪಿಗೆ ಸೇರಿದ ಚಿಕಣಿ ಶಿಲ್ಪಗಳಿವೆ. ಇದರ ಮೇಲಿನ ಎರಡು ಸಾಲುಗಳಲ್ಲಿ (8–9) ಕ್ರಮವಾಗಿ ಏಳು ಮತ್ತು ಎಂಟು ಶಿವಲಿಂಗಗಳಿವೆ. ಎರಡನೇ ಲಿಂಗ ಸಾಲಿನಲ್ಲಿ ಎಡದಿಂದ ಎರಡು ಮತ್ತು ಮೂರನೇ ಲಿಂಗದ ಮೇಲೆ ಒಂದೊಂದು ನಿಂತ ನಂದಿಗಳಿವೆ. ಮೂರು ಮತ್ತು ನಾಲ್ಕನೇ ಸಾಲುಗಳಲ್ಲಿ (6–7) ವಿಷ್ಣುವಿನ ಬಿಂಬಗಳಿವೆ. ಚತುರ್ಭುಜಧಾರಿಯಾದ ಸಮಭಂಗದಲ್ಲಿ ಈತ ಆಯುಧಗಳನ್ನು ಹಿಡಿದು ನಿಂತಿದ್ದಾನೆ. ಈ ಎರಡೂ ಸಾಲುಗಳಲ್ಲಿ ಎಂಟೆಂಟು ವಿಷ್ಣು ಬಿಂಬಗಳಿವೆ. ಇದರ ಕೆಳಗಡೆ (5ನೇ ಸಾಲು) ಒಂದು ಸಾಲಿನಲ್ಲಿ ಏಳು ಸೂರ್ಯದೇವನ ಚಿತ್ರಗಳಿವೆ. ಸೂರ್ಯನು ಸಮಭಂಗದಲ್ಲಿದ್ದು ತನ್ನ ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದಾನೆ. ಸೂರ್ಯನ ಕೆಳಗಿನ ಎರಡು ಸಾಲುಗಳಲ್ಲಿ (3–4) ಬಲದಿಂದ (ಮೇಲಿನ ಸಾಲಿನಲ್ಲಿ) ವೀರಭದ್ರ ಮತ್ತು ನಾಲ್ಕು ದೇವತೆಯರು ಹಾಗೂ (ಇನ್ನೊಂದು ಸಾಲಿನಲ್ಲಿ) ಮೂರು ದೇವತೆಯರು ಮತ್ತು ಗಣೇಶ ಹಾಗೂ ಆಯುಧಗಳನ್ನು ಹಿಡಿದ ಸಪ್ತಮಾತೃಕಾ ಪರಿವಾರವಿದೆ.

ಈ ದೇವಾಲಯದ ಅಧಿಷ್ಠಾನದ ಕೆಳಭಾಗದಲ್ಲಿ ಒಂದೇ ಸಾಲಿನಲ್ಲಿ ಚಿಕಣಿ ಶಿಲ್ಪಗಳಿದ್ದು ಕೆಲವನ್ನು ಪ್ರತ್ಯೇಕ ವಿಮಾನದ ಮಧ್ಯ ತೋರಿಸಲಾಗಿದೆ. ಇವುಗಳಲ್ಲಿ ಲಕ್ಷ್ಮೀ, ಬುದ್ಧ, ಗರುಡ, ಗಣೇಶ, ಸೂರ್ಯ, ಯಕ್ಷರು, ಕುಬೇರ, ನೃತ್ಯಗಾರ್ತಿಯರು ಮುಖ್ಯರಾಗಿದ್ದಾರೆ. ಇದರ ಸಭಾಮಂಟಪದಲ್ಲಿ ಭೈರವ, ವರಾಹ, ವಿಷ್ಣು, ಮುಂತಾದ ಶಿಲ್ಪಗಳಿವೆ. ಈ ದೇವಾಲಯ ಎಡಬದಿಗೆ ಒಂದು ವಿಷ್ಣುವಿನ ದೇವಾಲಯವಿದ್ದು ಈ ಎರಡು ದೇವಾಲಯಗಳ ಬದಿಗೆ ಹಲವಾರು ಬಿಡಿ ಶಿಲ್ಪಗಳಿವೆ.

ದುರಗಮೇಶ್ವರಿಯ ದೇಗುಲ: ನಾರಾಯಣಪುರದ ಕೆರೆಯ ತೂಬಿನ ಹತ್ತಿರದ ಏರಿ ಮೇಲೆ ಇತ್ತೀಚಿನ ದೇವಿಯ ಮಂದಿರವಿದೆ. ಭವಾನಿ ಮಂದಿರವೆಂದು ಇದಕ್ಕೆ ಹೆಸರು. ಇಚಿದ ಹತ್ತಿರದ ಕೆರೆ ತೂಬಿನಲ್ಲಿ ಒಂದು ಚಾಮುಂಡಿಯ ಶಿಲ್ಪ ಹಾಗೂ ಇದರ ಪಕ್ಕ ಕ್ರಿ.ಶ. 1107ರ ಒಂದು ಕನ್ನಡ ಶಾಸನವು ಬೆಳಕಿಗೆ ಬಂದಿದೆ. ಈ ಶಾಸನದ ಮೇಲೆ ನೃತ್ಯಭಂಗಿಯಲ್ಲಿ ತೋರಿಸಿದ ಚಾಮುಂಡಿಯ ಚಿತ್ರವಿದೆ. ಚತುರ್ಭುಜಗಳನ್ನು ಹೊಂದಿದ ಈ

ದೇವಿಯ ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲ ಗಳಿವೆ. ವಸ್ತ್ರಾಭರಣಗಳಿಂದ ಈ ದೇವಿಯ ಅಲಂಕೃತಳಾಗಿದ್ದಾಳೆ. ಪಕ್ಕದಲ್ಲಿ ಸೂರ್ಯ, ಚಂದ್ರ ಆಕಳು-ಕರುಗಳಿವೆ. ಈ ಫಲಕ ದಲ್ಲಿರುವ ಶಾಸನದಲ್ಲಿ ದುರಗಮೇಶ್ವರಿ ದೇವಿಯ ಉಲ್ಲೇಖವಿದೆ.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಚಡಕಾಪುರವೆಂಬ ಗ್ರಾಮವಿದೆ. ಅಲ್ಲಿಯ ಚಂಡಿಕಾದೇವಿ ಹೆಸರು ಈ ಗ್ರಾಮಕ್ಕೆ ಬಂದಿರುವುದೆಂದು ಅಲ್ಲಿಯ ಅಂಬಿಕೆ.

ಶಿಲ್ಪಗಳು, ಶಿಲ್ಪ ಫಲಕಗಳು ದೊರೆತಿದ್ದು ಅನೇಕ ಶಿಲ್ಪಗಳು, ದೇವಿ ದೇವಾಲಯಗಳು ಅಸ್ತಿತ್ವದಲ್ಲಿದ್ದುದನ್ನೂ ಸೂಚಿಸುತ್ತವೆ. ಅವುಗಳಲ್ಲಿ ಬಸವಕಲ್ಯಾಣದ ಗೋಸಾಯಿ ಗಲ್ಲಿಯ ಮಾರುತಿ ಮಂದಿರ ಹಿಂಭಾಗದ ಒಂದು ಮನೆಯ ಗೋಡೆಯಲ್ಲಿ ದೇವಿಯ ಸ್ತಂಭ ತೋರಣವಿರುವುದು ಗಮನೀಯ. ನಾರಾಯಣಪುರದದ ಶಿವ ದೇವಸ್ಥಾನದಲ್ಲಿರುವ ಹಸ್ತಿ ಹಸ್ತದ ರೀತಿಯಲ್ಲಿ, ಶೈಲಿಯಲ್ಲಿ ಈ ಫಲಕವಿದೆ. ಈ ಫಲಕದ ಮಧ್ಯದಲ್ಲಿ ಲಕ್ಷ್ಮೀ ದೇವಿಯು ಎತ್ತರದ ಪೀಠದ ಮೇಲೆ ಪದ್ಮಾಸನದಲ್ಲಿದ್ದು ಕಮಲಗಳನ್ನು ತನ್ನ ದ್ವಿಭುಜಗಳ ಕೈಯಲ್ಲಿ ಹಿಡಿದಿರುತ್ತಾಳೆ. ಕೆಳಗೆ ಸಾಲಾಗಿ ಹಾರ ಹಿಡಿದು ಹಾರಾಡುವ ಭಂಗಿಯಲ್ಲಿನ ಅಪ್ಸರೆ ಯರು, ಬದಿಗಳಲ್ಲಿ ಚೌರಿ ಹಿಡಿದು ನಿಂತ ಸೇವಕಿಯರು ಹಾಗೂ ನೃತ್ಯಗಾರರು, ವಾದ್ಯ ಬಾರಿಸುವವರಿದ್ದಾರೆ.

ಈ ನಗರದ ಇನ್ನೊಂದು ಕಡೆ ಸ್ತಂಭತೋರಣದ ಭಿನ್ನ ಫಲಕವಿದೆ. ತ್ರಿಕೋನಾಕಾರದಲ್ಲಿರುವ ಈ ಫಲಕದಲ್ಲಿ ಪೂರ್ಣ ಕುಂಭದ ಮೇಲೆ ಪದ್ಮಗಳನ್ನು ಹಿಡಿದು ಪದ್ಮಾಸನದಲ್ಲಿ ಲಕ್ಷ್ಮೀ ಕುಳಿತಿರುವಳು. ಇವಳ ತೊಡೆಯ ಬದಿಗಳಲ್ಲಿ ಆನೆಗಳು ಕುಂಭ ಗಳನ್ನು ಸೊಂಡಿಲಲ್ಲಿ ಹಿಡಿದು ಎತ್ತಿ ನಿಂತಿವೆ. ಇದರಿಂದ ಈ ಫಲಕವು ಗಜಲಕ್ಷ್ಮಿಯ ಸ್ತಂಭ ಫಲಕವೆಂದು ಹೇಳಬಹುದು.

ಹುಮನಾಬಾಧ ತಾಲ್ಲೂಕಿನ ಜಲಸಂಗಿ ಗ್ರಾಮದ ಮಹದೇವ ದೇವಾಲಯ ಮತ್ತು ಬಸವಕಲ್ಯಾಣ ತಾಲ್ಲೂಕಿನ ಉಮಾಪುರದ ಉಮಾ-ದೇವಾಲಯಗಳು ದೇವಿಯ ದೇವಾಲಯಕ್ಕೆ ಸೇರಿದವಾಗಿವೆ. ಜಲಸಂಗಿಯ ಮಹದೇವ ದೇವಾಲಯದ ಗರ್ಭಗೃಹದ ಲಲಾಟಬಿಂಬದಲ್ಲಿ ಸರಸ್ವತಿ ದೇವಾಲಯದ ಭಿತ್ತಿಯಲ್ಲಿ ವಿವಿಧ ರೀತಿಯ ಸುರಸುಂದರಿ ಯರು, ಗಣೇಶ, ಚಾಮುಂಡಿ, ಸರಸ್ವತಿ, ನರಸಿಂಹ, ನಟರಾಜ (ದೇವಕೋಷ್ಟಕಗಳಲ್ಲಿ) ಇತ್ಯಾದಿ ಚಿತ್ರಗಳಿವೆ.

ಶಿಲ್ಪಗಳು: ಸಾಮಾನ್ಯವಾಗಿ ಬೀದರ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲೂ ದೇವಿ ಶಿಲ್ಪಗಳಿದ್ದು ಈ ಶಿಲ್ಪಗಳು ಸಾಮಾನ್ಯವಾಗಿ ಕಟ್ಟಿಗೆ ಮತ್ತು ಲೋಹದ ವಿಗ್ರಹಗಳಾಗಿದ್ದು ಇವು ಇತ್ತೀಚಿನ ಕಾಲದ್ದಾಗಿವೆ. ಉಳಿದವು ಶಿಲೆಯ ಶಿಲ್ಪಗಳಾಗಿವೆ. ಇವುಗಳಲ್ಲಿ ಮಹಿಷಾಸುರಮರ್ಧಿನಿ, ದುರ್ಗಾ, ಭೈರವಿ, ಚಾಮುಂಡಿ, ಕಾಳಿ, ಸರಸ್ವತಿ, ಮಹಾಲಕ್ಷ್ಮೀ ಮುಖ್ಯವಾದವು. ಇನ್ನುಳಿದವು ನಾಗಿನಿ, ಯಕ್ಷಿಯರ ಶಿಲ್ಪಗಳಾಗಿವೆ.

ಬಸವಕಲ್ಯಾಣ ತಾಲ್ಲೂಕಿನ ಮೊರಖಂಡಿಯಲ್ಲಿರುವ ಸಪ್ತ ಮಾತೃಕೆಯರ ಮತ್ತು ಮಹಿಷಾಸುರಮರ್ಧಿನಿ ಶಿಲ್ಪಗಳು ಅತ್ಯಂತ ಪ್ರಾಚೀನ. ಬಸವಕಲ್ಯಾಣ ತಾಲ್ಲೂಕಿನ ಮೊರಖಂಡಿಯಲ್ಲಿರುವ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಬ್ರಾಹ್ಮಿ, ವೈಷ್ಣವಿ, ಇಂದ್ರಾಣಿ, ವಾರಾಹಿ ಶಿಲ್ಪಗಳಿದ್ದು, ಈ ಶಿಲ್ಪಗಳ ಪದ್ಮ ಪೀಠಗಳಲ್ಲಿ ಕ್ರಮವಾಗಿ ಆ ದೇವಿಯರ ಲಾಂಛನಗಳಾದ ಹಂಸ, ಗರುಡ, ಆನೆ, ಎಮ್ಮೆಯ ಶಿಲ್ಪಗಳನ್ನು ಬಿಡಿಸಿದೆ.

ಚಾಮುಂಡಿ: ಇದ್ದು ಅರ್ಧಪರ್ಯಂಕಾಸನದಲ್ಲಿ ಕುಳಿತ ಭಂಗಿ ಇದ್ದು ಚತುರ್ಭುಜಗಳನ್ನು ಹೊಂದಿದ ಕೆಲವು ಶಿಲ್ಪಗಳು ಮಾತ್ರ ಕಾಣಿಸಿಕೊಂಡಿವೆ. ಬಸವಕಲ್ಯಾಣ, ಚಂಡಕಾಪುರ ನಾರಾಯಣಪುರ ಮತ್ತು ಮೊರಖಂಡಿಯ ಸಿದ್ದೇಶ್ವರ ದೇವಸ್ಥಾನದ ದಾರಿಬದಿಯಲ್ಲಿ ಹಾಗೂ ಈ ಊರ ಅಗಸಿಯ ಒಂದು ಗೂಡಿನಲ್ಲಿ ಕುಳಿತ ಭಂಗಿಯ ಶಿಲ್ಪಗಳಿವೆ.

ನೃತ್ಯಭಂಗಿಯಲ್ಲಿರುವ ಚಾಮುಂಡಿ ಶಿಲ್ಪಗಳು ಈ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿವೆ. ಈಕೆಯ ಶಿಲ್ಪದಲ್ಲಿ ನೃತ್ಯಭಂಗಿಯಲ್ಲಿ ಕೈ-ಕಾಲುಗಳು ಮತ್ತು ದೇಹಭಾಗವಿರುತ್ತದೆ. ಈಕೆಯ ಸಮಗ್ರ ದೇಹಾಂಗದಲ್ಲಿ ರಕ್ತ ಮಾಂಸ ಬತ್ತಿ ಹೋಗಿ ಕೇವಲ ಎಲಬು ಮೂಳೆಗಳು ಮತ್ತು ಜೋತಾಡುವ ಕುಚಗಳನ್ನು ಪ್ರಧಾನವಾಗಿ ಬಿಡಿಸಿರುತ್ತಾರೆ. ಕೈಗಳು ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಧರಿಸಿದ ರುಂಡಮಾಲೆಯ ಈಕೆಯ ತೊಡೆ ಅಥವಾ ಕಾಲುಗಳ ಮೇಲೆ ಇಳಿಬಿದ್ದಿರುತ್ತದೆ. ನಾಲ್ಕಕ್ಕಿಂತ ಹೆಚ್ಚು ಕೈಗಳಿದ್ದರೆ ಎಡಗಡೆಯ ಒಂದು ಕೈ ಮಡಚಿ ಅದರ ಬೆರಳಿನ ತುದಿಯನ್ನು ತುಟಿಗೆ ಮುಟ್ಟಿಸುವ ರೀತಿಯಲ್ಲಿ ಇರುತ್ತದೆ ಹಾಗೂ ಮಡಚಿದ ಕೈಯಲ್ಲಿ ಸಾಮಾನ್ಯವಾಗಿ ಕಟ್ವಾಂಗ ಹಿಡಿದಿರುವುದು ಈ ಭಾಗದಲ್ಲಿ ಕಂಡುಬರುತ್ತದೆ. ಹೆಚ್ಚಾಗಿ ಪ್ರೇತದ ಮೇಲೆ ಕಾಲನ್ನಿಟ್ಟು ನೃತ್ಯಮಾಡುವ ಶಿಲ್ಪಗಳು ಕಾಣುತ್ತದೆ. ಕೆಲವೊಮ್ಮೆ ಸ್ತನಗಳ ಮಧ್ಯೆ ಅಥವಾ ಹೊಟ್ಟೆಯ ಮೇಲೆ ಚೇಳು ಇರುತ್ತದೆ. ನೃತ್ಯ ಮಾಡುವ, ವಾದ್ಯ ಬಾರಿಸುವ ಇತ್ಯಾದಿ ರೀತಿಯ ಪೈಶಾಚಿಗಳು ಇವಳ ಕಾಲಿನ ಬದಿಯಲ್ಲಿ ತೋರಿಸಲಾಗಿದೆ. ಜಟಾಮಕುಟ, ಕಿವಿ ಓಲೆ, ಕಂಠಹಾರ, ಪಟ್ಟಿ, ಕಡಗ ಇತ್ಯಾದಿ ಆಭರಣಗಳನ್ನು ಧರಿಸಿ ರುವಳು.

ಬಸವಕಲ್ಯಾಣ ನಗರದ ಕೋಟೆ ಒಳಗಡೆ ಬಹು ಮುಕ್ಕಾದ ಒಂದು ಸುಂದರ ಚಾಮುಂಡಿ ಶಿಲ್ಪವಿದೆ. ಇವಳ ಕಾಲುಗಳ ಬದಿಗಳಲ್ಲಿ ತಾಳ, ಡಮರು, ಕೊಳಲು, ಮದ್ದಳೆಗಳನ್ನು ಹಿಡಿದು ಬಾರಿಸುವ ವಾದ್ಯಮೇಳವಿದೆ. ಒಂದು ಪೈಶಾಚಿಕ ನೃತ್ಯ ಮಾಡು ತ್ತಿದ್ದರೆ, ಮೂರು ಪೈಶಾಚಿಕಗಳು ವಿವಿಧ ಭಂಗಿಯಲ್ಲಿ ಕುಳಿತ ನಿಂತ ಭಂಗಿಯಲ್ಲಿವೆ. ಪ್ರೇತದ ಮುಖದ ಬಲಗಡೆ ಸೇವಕ-ಸೇವಕಿಯರಿದ್ದಾರೆ. ಜಲಸಂಗಿಯ ಮಹದೇವ ದೇವಾಲಯದ ಭಿತ್ತಿಯಲ್ಲಿ (ಉತ್ತರ ದಿಕ್ಕು) ಈಕೆಯ ಒಂದು ಶಿಲ್ಪವಿದೆ. ಇಲ್ಲಿ ಈಕೆಯ ಬಲಬಾಗಿಲಿನ ಬದಿಗೆ ನಾಯಿಯಿರುವುದು ತನ್ನ ಎಂಟು ಕೈಗಳಲ್ಲಿ ಕಠಾರಿ, ತ್ರಿಶೂಲ, ಡಮರು, ಸರ್ಪ(ಬಲ-ಎಡಕೈಗಳಲ್ಲಿ) ಕಟ್ವಾಂಗ (ಈ ಮೇಲೆ ಹೇಳಿದಂತೆ ಈ ಕೈಯನ್ನು ಮಡಚಿ ರುವಳು), ನರಮುಂಡ (ಇದರ ತಲೆಯ ಕೂದಲನ್ನು ಮತ್ತು ಕಪಾಲಗಳನ್ನು ಬಲಗಡೆಯಿಂದ ಕ್ರಮವಾಗಿ ಹಿಡಿದಿರುವಳು) ಇಲ್ಲಿ ಪ್ರೇತ, ಚೇಳುಗಳನ್ನು ತೋರಿಸಿಲ್ಲ. ತಲೆಯ ಸುತ್ತಲೂ

ಮೊಟ್ಟೆಯಾಕಾರದ ಪ್ರಭಾಮಂಡಲದ ಅಲಂಕಾರವಿದೆ. ಆಟಾ ಮಕುಟ. ಓಲೆ, ಕೊರಳ ಮತ್ತು ಕುಚಹಾರ, ಪಟ್ಟಿ, ವಸ್ತ್ರ, ರುಂಡಮಾಲೆ, ಕಡಗ, ಬಳೆ ಇತ್ಯಾದಿ ಧರಿಸಿದವಳು. ಬಸವ ಕಲ್ಯಾಣದ ಕೋಟೆಯ ದ್ವಾರ ಬಾಗಿಲ ಬದಿಗೆ ಈಕೆಯ ಒಂದು ಶಿಲ್ಪವಿದೆ. ಇದೂ ಸಹ ದೇವಾಲಯದ ಗೋಡೆ ಭಾಗದ ಶಿಲ್ಪವಾಗಿದೆ. ಈಕೆಗೆ ಎಂಟು ಕೈಗಳಿವೆ. ಇಲ್ಲಿ ದೇವಿಯು ಪ್ರೇತದ ಮೇಲೆ ನಿಂತು ನೃತ್ಯ ಮಾಡುತ್ತಿರುವಳು. ಎಡಗಾಲನ್ನು ಮೇಲಕ್ಕೆ ಎತ್ತಿ ಅಡ್ಡವಾಗಿ ಹಿಡಿದಿರುವುದನ್ನು ಬದಿಗಳಲ್ಲಿ ದುಂಡಾದ ಅರ್ಧಗಂಬಗಳನ್ನು ತೋರಿಸಿರುವುದು ವಿಶೇಷ.

ಶಿವಪುರದ ಶಿವದೇವಸ್ಥಾನದ ಹೊರಗಡೆ ಈಕೆಯ ಒಂದು ಶಿಲ್ಪವಿದೆ. ಈ ಶಿಲ್ಪವೂ ದೇವಾಸ್ಥಾನದ ಭಿತ್ತಿ ಭಾಗದ್ದಾಗಿದೆ. ಪ್ರೇತದ ಮೇಲೆ ನಿಂತ ನೃತ್ಯ ಮಾಡುತ್ತಿದ್ದು ಸೊಂಟಕ್ಕೆ ಗೆಜ್ಜೆಪಟ್ಟಿ ಕಟ್ಟಿರುವಳು, ಕುಚಗಳನ್ನು ನಾಗಗಳಿಂದ ಕಟ್ಟಿರುವಳು. ಆರು ಕೈಗಳನ್ನು ಹೊಂದಿದ ಈಕೆಯ ಹೊಟ್ಟೆಯ ಮೇಲೆ ಚೇಳನ್ನು ತೋರಿಸಲಾಗಿದೆ. ಕೈಗಳಲ್ಲಿ ಕಠಾರಿ, ತ್ರಿಶೂಲ, ಡಮರು, ಕಟ್ವಾಂಗ ಒಡೆದಿದೆ, ಕಪಾಲಗಳಿವೆ.

ಉಮಾಪುರದ ಶಿಲ್ಪದಲ್ಲಿ ಈಕೆ ಪ್ರೇತದ ಮೇಲೆ ನಿಂತು ನೃತ್ಯ ಮಾಡುತ್ತಿರುವಳು. ತನ್ನ ಬಲಗಾಲನ್ನು ಮೇಲಕ್ಕೆ ಎತ್ತಿ ಅಡ್ಡವಾಗಿ ಹಿಡಿದಿದ್ದಾಳೆ. ಇಲ್ಲಿ ತನ್ನ ಕೈಗಳಲ್ಲಿ ಅಭಯ (ಅಕ್ಷಮಾಲ), ಡಮರು, ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದಿರುವುದು ವಿಶೇಷ. ಇಂತಹದೇ ಇನ್ನೊಂದು ಶಿಲ್ಪದಲ್ಲಿ ಈಕೆಗೆ ಆರು ಕೈಗಳಿದ್ದು ಇಲ್ಲಿ ಹೊಟ್ಟೆಯ ಮೇಲೆ ಚೇಳನ್ನು ತೋರಿಸಲಾಗಿದೆ. ಈ ಶಿಲ್ಪದಲ್ಲಿ ಪ್ರೇತನನ್ನು ತೋರಿಸಿಲ್ಲ. ತೊಡೆಗಳನ್ನು ಸರ್ಪ ದಿಂದ ಬಿಗಿದಿದ್ದು ಎಂಟು ಕೈಗಳನ್ನು ಹೊಂದಿದ್ದಾಳೆ. ಕಿವಿಯಲ್ಲಿ ನಾಗಗಳನ್ನು ಧರಿಸಿರುವುದು ವಿಶೇಷ. ಈ ಶಿಲ್ಪದ ಮೇಲ್ಭಾಗ ತ್ರಿಕೋನಾಕಾರದಲ್ಲಿದೆ. ನಾರಾಯಣಪುರದ ಒಂದು ಶಿಲ್ಪದಲ್ಲಿ ದೇವಿಗೆ ನಾಲ್ಕು ಕೈಗಳಿದ್ದು ಅಲ್ಲಿ ಪ್ರೇತನನ್ನು ಪಾದ ಪೀಠದಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ. ಪೈಶಾಚಿಗಳು ಬದಿಗಳಲ್ಲಿವೆ.

ಚಂಡಕಾಪುರದ ಶಿಲ್ಪವೊಂದರಲ್ಲಿ ಚಾಮುಂಡಿಯ ಕೆಲವು ಹೊಸ ಅಂಶಗಳಿವೆ. ನೃತ್ಯ ಭಂಗಿಯಲ್ಲಿರುವ ದೇವಿಯ ಬದಿಗೆ ಅರ್ಧಗಂಭಗಳಿವೆ. ಈಕೆಗೂ ಎಂಟು ಕೈಗಳಿವೆ. ಬಲಗಾಲನ್ನು ಕಾಲುಗಳ ಪೀಠದ ಮೇಲಿರುವ ಪ್ರೇತದ ಮೇಲಿಟ್ಟಿರುವಳು. ದೇವಿಯು ತನ್ನ ಎಡಗಾಲನ್ನು ನೃತ್ಯಭಂಗಿಯಲ್ಲಿ ಮೇಲಕ್ಕೆ ಎತ್ತಿ ಈ ಮೇಲಿನಂತೆ ಇದನ್ನು ಅಡ್ಡ ಮಡಚಿರುವಳು ಈ ಶಿಲ್ಪದಲ್ಲಿ ದೇವಿಯು ಸೊಂಟಕ್ಕೆ ಮತ್ತು ಕುಚಗಳಿಗೆ ನಾಗನನ್ನು ಕಟ್ಟಿರುವಳು.

ಹಳ್ಳಿಖೇಡ (ಬಿ) ನಗರದ ಒಂದು ಚಾಮುಂಡಿ ಶಿಲ್ಪದಲ್ಲಿ ಕೆಲವು ಲಕ್ಷಣಗಳು ವಿಶೇಷವೆನ್ನಿಸಿವೆ. ದೇವಿ ಬದಿಯಲ್ಲಿ ಕೆಲವು ಭಕ್ತರು ನೃತ್ಯ ಮಾಡುತ್ತಿರುವರು. ಇವರ ಕೈಗಳಲ್ಲಿ ಕತ್ತಿಗಳಿವೆ.

ಮಹಾಲಕ್ಷ್ಮೀ: ಮಹಾಲಕ್ಷ್ಮೀಯ ಶಿಲ್ಪಗಳು ಬಸವಕಲ್ಯಾಣ ತಾಲ್ಲೂಕಿನ ನೀಲಕಂಠ ಗ್ರಾಮದ ಮಾರುತಿ ಮಂದಿರದಲ್ಲಿ ಮತ್ತು ತ್ರಿಪ್ಪರಾಂತದ ಮಾರುತಿ ಮಂದಿರದಲ್ಲಿವೆ. ದೇವಿಯು ಸಮಭಂಗದಲ್ಲಿ ನಿಂತಿದ್ದು ಈಕೆಗೆ ಚತುರ್ಭುಜಗಳಿವೆ. ಕೈಗಳಲ್ಲಿ ಫಲ, ಗದೆ, ಡಾಲು (ಖೇತಕ) ಮತ್ತು ಬಟ್ಟಲುಗಳನ್ನು ಕ್ರಮವಾಗಿ ಕೆಳಗಿನ ಬಲಕೈಯಿಂದ ಹಿಡಿದಿರುವಳು. ಅರ್ಧಗಂಬ-ತೋರಣಗಳಿಂದ ಸುತ್ತಲೂ ಅಲಂಕರಿಸಲಾಗಿದೆ. ಕಿರೀಟಮಕುಟ, ಕುಂಡಲ, ಕಂಠಹಾರ, ಕಟಸೂತ್ರ, ವಸ್ತ್ರ, ಬಳೆ, ತೋಳುಬಂದಿ, ಸೊಂಟ ಪಟ್ಟಿ, ಕಡಗ ಇತ್ಯಾದಿ ವಸ್ತ್ರಾಭರಣ ಭೂಷಿತಳಾಗಿದ್ದಾಳೆ.

ಸರಸ್ವತಿ: ಹಲವಾರು ಸರಸ್ವತಿ ಶಿಲ್ಪಗಳು ಇಲ್ಲಿ ಕಂಡು ಬಂದಿವೆ. ಈ ದೇವಿ ಸಾಮಾನ್ಯವಾಗಿ ಚತುರ್ಭುಜಳಾಗಿದ್ದು ಪದ್ಮಾಸನ ಅಥವಾ ಸವ್ಯಲಲಿತಾಸನದ ಭಂಗಿಯಲ್ಲಿರುವಳು. ಕೈಗಳಲ್ಲಿ ಅಕ್ಷಮಾಲ, ಪಾಶ, ಅಂಕುಶ ಮತ್ತು ಪುಸ್ತಕಗಳನ್ನು ಕ್ರಮವಾಗಿ ಕೆಳಗಿನ ಬಲಗೈಯಿಂದ ಹಿಡಿದಿರುವಳು. ಇವಳ ವಾಹನ ಹಂಸವನ್ನೂ ತೋರಿಸಲಾಗಿದೆ. ವಸ್ತ್ರಾಭರಣಗಳನ್ನು ಧರಿಸಿರುವಳು. ಈ ರೀತಿಯ ಸರಸ್ವತಿ ಶಿಲ್ಪಗಳು ಬಸವಕಲ್ಯಾಣ ತಾಲ್ಲೂಕಿನ ಪರ್ತಾಪುರ, ಕೌಡಿಹಾಳ್ (ಎಸ್) ಮುಂತಾದ ಸ್ಥಳ ಗಳಲ್ಲಿವೆ. ಪರ್ತಾಪುರದ ಶಿಲ್ಪದಲ್ಲಿ ದೇವಿಯ ಪೀಠದ ಒಂದು ಕಡೆ ಆಕೆಯ ವಾಹನ ಹಂಸವನ್ನು ಇನ್ನೊಂದು ಕಡೆ ಭಕ್ತರನ್ನು ತೋರಿಸಲಾಗಿದೆ. ದೇವಿಯು ಪದ್ಮಾಸನದಲ್ಲಿರುವಳು. ಇವಳ ಪೀಠವು ಸ್ವಲ್ಪ ಎತ್ತರವಾಗಿರುವುದು. ಮತ್ತು ಅರ್ಧಗಂಬಗಳ ಮೇಲೆ ಮಕರ ತೋರಣವಿದ್ದು ಇದರ ಮಧ್ಯ ದೇವಿಯನ್ನು ತೋರಿಸಲಾಗಿದೆ. ಇನ್ನೊಂದು ಶಿಲ್ಪದಲ್ಲಿ ದೇವಿಯು ಸವ್ಯ ಲಲಿತಾಸನದಲ್ಲಿ ಕುಳಿತಿರುವಳು. ಬಲಗಾಲನ್ನು ಕೆಳಗೆ ಓರೆಯಾಗಿ ಇಳಿಬಿಟ್ಟಿದ್ದು ಎಡಗಾಲನ್ನು ಮಡಚಿರುವಳು. ವಿವಿಧ ವಸ್ತ್ರಾಭರಣ ಗಳನ್ನು ಈಕೆಯು ಧರಿಸಿರುವಳು. ಜಲಸಂಗಿಯ ಮಹದೇವ ದೇಗುಲದ ಭಿತ್ತಿಯಲ್ಲಿರುವ ಒಂದು ಗೂಡಿನಲ್ಲಿ ಈಕೆಯ ಒಂದು ಶಿಲ್ಪವಿದೆ.

ದುರ್ಗಾ: ದುರ್ಗಾ ಶಿಲ್ಪಗಳು ಜಲಸಂಗಿಯ ಮಹದೇವ ದೇಗುಲದ ಗೋಡೆಯಲ್ಲಿರುವ ದೇವಿಯ ಸುತ್ತ ಅರ್ಧಗಂಬ ಮತ್ತು ಅವುಗಳ ಮೇಲೆ ವಿಮಾನ ಮತ್ತು ಬದಿಗಳಲ್ಲಿ ಮಕರ ಹಾಗೂ ಸುತ್ತಲೂ ಲತಾ ಬಳ್ಳಿಗಳಿಂದ ಅಲಂಕೃತಗೊಂಡಿವೆ ಸವ್ಯ ಲಲಿತಾಸನದಲ್ಲಿ ದೇವಿಯು ಕುಳಿತಿದ್ದು ಚತುರ್ಭುಜಳಾಗಿದ್ದಾಳೆ. ಈಕೆಯ ವಾಹನವನ್ನು ಕಾಲಿನ ಕೆಳಗೆ ತೋರಿಸಲಾಗಿದೆ. ಬಸವಕಲ್ಯಾಣ ತಾಲ್ಲೂಕಿನ ದನ್ನೂರಿ (ಆರ್)ನಲ್ಲಿ ದುರ್ಗೆಯ ಒಂದು ಶಿಲ್ಪವಿದೆ.

ಜಲಸಂಗಿಯ ಮಹದೇವ ದೇವಾಲಯದ ಸಭಾ ಮಂಟಪದ ಗೋಡೆಯಲ್ಲಿ ಈಕೆಯ ಒಂದು ಶಿಲ್ಪವನ್ನು ಕೂಡಿಸ ಲಾಗಿದೆ. ಕುಳಿತ ಲಲಿತಾಸನದಲ್ಲಿರುವ ಈಕೆಗೆ ಚತುರ್ಭುಜ ಗಳಿವೆ. ಅಕ್ಷಮಾಲೆ (ಅಭಯ), ತ್ರಿಶೂಲ, ನಾಗ ಮತ್ತು ಕಳಸ ಗಳನ್ನು ಹಿಡಿದಿರುವಳು. ಈಕೆಯ ಬದಿಗಳಲ್ಲಿ ಮೇಲಕ್ಕೆ ಎದ್ದು ನಿಂತ ಮಕರಗಳ ಬಾಯಿಂದ ಹೊರಟ ಮಣಿಮುತ್ತಿನ ಹಾರ ಹಾಗೂ ಇದರ ಮೇಲೆ ಸುರಳಿಯ ತೋರಣದ ಅಲಂಕಾರವಿದೆ. ಈ ತೋರಣದ ಮೇಲೆ (ಮಧ್ಯದಲ್ಲಿ) ಕೀರ್ತಿ ಮುಖವಿದೆ. ದೇವಿಯ ಪ್ರತ್ಯೇಕ ಪೀಠದ ಮೇಲೆ ಕುಳಿತಿರುವಳು.

ಮಹಿಷಾಸುರಮರ್ಧಿನಿ: ಮಹಿಷಾಸುರಮರ್ಧಿನಿ ಅಥವಾ ಮಹಿಷಮರ್ಧಿನಿ ಶಿಲ್ಪಗಳು ಈ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆ ಯಲ್ಲಿವೆ. ಭಾಲ್ಕಿ, ಮಾಸಿಮೋಡ, ಚಳಕಾಪುರ, ಹಳಖೇಡ (ಬಿ), ಬ್ಯಾಲಳ್ಳಿ, ಕಣಜಿ, ಯಣ್ಣಿಕುರ, ಹಿಪ್ಪರಗಾ, ಆಟರಗಾ, ಬಸವ ಕಲ್ಯಾಣ, ನೀಲಕಂಠ, ಬೇಟಮೆಳಕುಂದಿ, ನಾರಾಯಣಪುರ, ಹಿಪ್ಪರಗಾ, ಶಿವಪುರ, ಪರ್ತಾಪುರ, ಮೊರಖಂಡಿ, ಸಸ್ತಾಪುರ, ಮಿರ್ಕಲ್ ಮುಚ್ಚಳಂಚಾ, ಹುಲಸೂರು, ಬೇಲೂರು ಇತ್ಯಾದಿ (ಬಸವಕಲ್ಯಾಣ ತಾಲ್ಲೂಕು) ಔರಾದ (ಔರಾದ ತಾಲ್ಲೂಕು) ಬೀದರ, ಅಲಿಯಬರ, ಸಂಗೊಳಗಿ, ಕಡವಾಡ, ಮೈವಳ್ಳಿ, ಖಣಿರಂಜೋಳ (ಬೀದರ ತಾಲ್ಲೂಕು) ಇತ್ಯಾದಿ ಸ್ಥಳಗಳಲ್ಲಿ ಮಹಿಷಾಸುರ ಮರ್ಧಿನಿ ಶಿಲ್ಪಗಳಿವೆ.

ಈ ಶಿಲ್ಪದಲ್ಲಿ ಸಾಮಾನ್ಯವಾಗಿ ವಿವಿಧ ಆಯುಧಗಳನ್ನು ಹಿಡಿದ ದೇವಿಯು ತ್ರಿಶೂಲದ ತುದಿಯಿಂದ ಸುರನನ್ನು ಸಂಹಾರ ಮಾಡುವುದು, ಒಂದು ಕಾಲನ್ನು ಕೋಣದ ಮೇಲೆ ಮೆಟ್ಟಿ ರುವುದು; ಮಲಗಿದ ಕೋಣದ ಶಿರದಿಂದ ಅಸುರಕ ಹೊರ ಬರುವುದು, ಅಸುರನ್ನು ಕೈಗಳಲ್ಲಿ ಖಡ್ಗ ಮತ್ತು ಡಾಲನ್ನು ಹಿಡಿದಿರುವುದು ದೇವಿಗೆ ನಾಲ್ಕು ಅಥವಾ ಆರು ಅಥವಾ ಎಂಟು ಕೈಗಳಿರುವುದು, ಮುಖ್ಯ ಲಕ್ಷಣಗಳಾಗಿವೆ.

ಈಕೆಯ ಪಾದದ ಬದಿಗೆ ಸಿಂಹವನ್ನು ತೋರಿಸಿದ ಶಿಲ್ಪಗಳು ಶಿವಪುರ, ಬಸವಕಲ್ಯಾಣ, ಹಾಲಳ್ಳಿ ಇತ್ಯಾದಿ ಕಡೆಗಳಲ್ಲಿವೆ. ಕೇವಲ ಕೋಣನ ತಲೆಯನ್ನು ಈಕೆಯ ಶಿಲ್ಪದ ಪಾದ ಪೀಠದಲ್ಲಿ ಪ್ರತ್ಯೇಕವಾಗಿ ತೋರಿಸಿದ ಶಿಲ್ಪಗಳು ಹಳ್ಳಿಖೇಡ (ಬಿ) ಶಿವಪುರ ಇತ್ಯಾದಿ ಕಡೆಗಳಲ್ಲಿವೆ. ದೇವಿಯು ಒಂದು ಕೈಯಿಂದ ಕೋಣದ ಬಾಲವನ್ನು ಹಿಡಿದು ಮೇಲಕ್ಕೆ ಎತ್ತಿರುವುದು, ಹಿಪ್ಪರಗಾ ಇತ್ಯಾದಿ ಕಡೆಗಳಲ್ಲಿ ಅಸುರನು ಕೋಣದ ಶಿರ ಅಥವಾ ಬಾಯಿಂದ ಹೊರ ಬರುವ ಅನೇಕ ಶಿಲ್ಪಗಳು ಇಲ್ಲಿ ಕಾಣುತ್ತವೆ. ಈಕೆಯ ಬದಿಗೆ ಗಣೇಶನನ್ನು ತೋರಿಸಿದ ಶಿಲ್ಪ ಬ್ಯಾಲಳ್ಳಿಯಲ್ಲಿರುವುದು ವಿಶೇಷ ವಾಗಿದೆ. ಕೆಲವು ಶಿಲ್ಪಗಳಲ್ಲಿ ಅರ್ಧಗಂಬ ತೋರಣದ ಮಧ್ಯೆ ದೇವಿಯನ್ನು ಬಿಡಿಸಿರುತ್ತಾರೆ. ದೇವಿಯ ಪಾದದ ಮುಂದೆ ಕೋಣದ ಮುಖವನ್ನು ಎಡ ಅಥವಾ ಬಲಕ್ಕೆ ತೋರಿಸಿರುವುದು ಕಂಡುಬರುತ್ತದೆ. ಈಕೆಯ ತನ್ನ ಎಡ ಅಥವಾ ಬಲಗಾಲನ್ನು ಕೋಣದ ಮೇಲೆ ಇಟ್ಟಿರುವುದು ಕಾಣುತ್ತದೆ.

ಹಳ್ಳಿಖೇಡ (ಬಿ) ಗ್ರಾಮದ ಒಂದು ಶಿಲ್ಪದಲ್ಲಿ ಕೆಳಗಿನ ಬಲಕೈಯಲ್ಲಿ ಹಿಡಿದ ತ್ರಿಶೂಲದ ತುದಿಯಿಂದ ನಿಂತ ಅಸುರನ ಬೆನ್ನಿಗೆ ಕೈ ಹಾಕಿದ್ದಾಳೆ. ಕೆಳಗಿನ ಎಡಗೈಯಿಂದ ಅಸುರನ ಬಲಗೈ ಹಿಡಿದಿರುವಳು. ಈ ಅಸುರನು ಕೆಳಗಡೆ (ದೇವಿಯ ಎಡಗಡೆ ಮುಖ ಮಾಡಿದ) ಕೋಣದ ಕುತ್ತಿಗೆಯಿಂದ ಹೊರಬಂದಿದ್ದಾನೆ. ಬಲಗಾಲನ್ನು ಕೋಣದ ಬೆನ್ನಿನ ಮೇಲೆ ಇಟ್ಟಿದ್ದಾಳೆ. ಬಲ ಬದಿಗೆ ಈಕೆಯ ವಾಹನ ಸಿಂಹವಿದೆ. ಇದರ ಪೀಠದಲ್ಲಿ ನಾಲಿಗೆಯನ್ನು ಹೊರಚಾಚಿದ ಕೋಣದ ತಲೆಯನ್ನು ತೋರಿಸಿರುವುದು ವಿಶೇಷ ವಾಗಿದೆ. ಅಸುರ ತನ್ನ ಬಲಗೈಯಲ್ಲಿ ಕತ್ತಿ ಹಿಡಿದು ಮೇಲೆಕ್ಕೆ ಎತ್ತಿದ್ದಾನೆ. ಕೋಣದ ಕುತ್ತಿಗೆಯಲ್ಲಿ ಗಂಟೆಗಳ ಸರಮಾಲೆಯಿದೆ.

ಬ್ಯಾಲಹಳ್ಳಿಯ ಮಹಿಷಾಸುರ ಮರ್ಧಿನಿಯ ಶಿಲ್ಪದಲ್ಲಿ ಚತುರ್ಭುಜ ಧಾರಿಯಾದ ಈಕೆಯು ಕೆಳಗಿನ ತನ್ನ ಬಲಗೈಯಲ್ಲಿ ಹಿಡಿದ ತ್ರಿಶೂಲದ ತುದಿಯಿಂದ ಅರ್ಧ ಮನುಷ್ಯ ಅರ್ಧ ಪ್ರಾಣಿ (ಕೋಣ ಮುಖ) ರೂಪದ ಮಹಿಷಾಸುರನಿಗೆ ಇರಿದಿದ್ದಾಳೆ. ಮೇಲಿನ ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಹಿಡಿದಿದ್ದಾಳೆ. ಕೆಳಗಿನ ಎಡಗೈಯನ್ನು ಸೊಂಟದ ಮೇಲಿಟ್ಟಿರುವಳು. ಬಲ ಗಾಲನ್ನು ಅಸುರನ ತಲೆಯ ಬಲ ಕೋಡಿನ ಮೇಲಿಟ್ಟಿದ್ದಾನೆ. ಈಕೆಯ ವಾಹನ ಸಿಂಹವನ್ನೂ ಬಲಬದಿಯಲ್ಲಿ, ಮತ್ತು ಕುಳಿತ ದ್ವಿಭುಜ ಗಣಪತಿಯನ್ನೂ, ಎಡಗಡೆ ತೋರಿಸಿರುವುದು ಮತ್ತು ಚಿಕ್ಕ ತ್ರಿಶೂಲ ತೋರಿಸಿರುವುದು ಅಪರೂಪದ್ದಾಗಿವೆ.

ಹಿಪ್ಪರಗಾ (ಬಸವಕಲ್ಯಾಣ ತಾಲ್ಲೂಕ) ಗ್ರಾಮದ ಈಕೆಯ ಒಂದು ಶಿಲ್ಪದಲ್ಲಿ ಅಸುರನ ಸಂಹಾರದ ಕೆಳಗೆ ಸಿಂಹವಿದೆ. ಈಕೆಗೆ ಎಂಟು ಕೈಗಳಿದ್ದು ಕೆಳಗಿನ ಕೈಯಲ್ಲಿ ಹಿಡಿದ ತ್ರಿಶೂಲದಿಂದ ಕೋಣನ ಹೊಟ್ಟೆಗೆ ತಿವಿಯುತ್ತಿರುವಳು. ಹಾಗೂ ಕೆಳಗಿನ ಎಡಗೈ ಯಿಂದ ಕೋಣದ ಬಾಲವನ್ನು ಎತ್ತಿ ಬಿಗಿಯಾಗಿ ಹಿಡಿದಿರುವುದು ವಿಶೇಷವಾಗಿದೆ. ಹಳ್ಳಿಖೇಡ (ಬಿ) ಇತ್ಯಾದಿ ಗ್ರಾಮಗಳ ಈಕೆಯ ಶಿಲ್ಪಗಳಲ್ಲಿ ನಾಲ್ಕು ಕೈಗಳಿವೆ. ಇದಲ್ಲದೆ ಈಕೆಯ ಬದಿಗೆ ಸಿಂಹವನ್ನು ತೋರಿಸಿದ ಶಿಲ್ಪಗಳು ಬಸವಕಲ್ಯಾಣ, ಹುಲಸೂರು, (ಬಸವಕಲ್ಯಾಣ ತಾಲ್ಲೂಕು) ಸಂಗೊಳಗಿ (ಬೀದರ ತಾಲ್ಲೂಕು) ಬ್ಯಾಲಹಳ್ಳಿ ಭಾಲ್ಕಿ (ಭಾಲ್ಕಿ ತಾಲ್ಲೂಕು) ಮತ್ತು ಹಳ್ಳಿಖೇಡ (ಬಿ) ಹುಮನಾಬಾದ ತಾಲ್ಲೂಕು)ಗಳಲ್ಲಿವೆ.

ಕಾಳಿ: ಈ ಜಿಲ್ಲೆಯ ಹಲವಾರು ಗ್ರಾಮದಲ್ಲಿ ಕಾಳಿಯ ಶಿಲ್ಪಗಳಿವೆ. ಇವುಗಳಲ್ಲಿ ಲಕಣಗಾಂ, ಅಂಬೆ ಸಂಗವಿ, ಮೆಹಕೆರ (ಭಾಲ್ಕಿ ತಾಲ್ಲೂಕು), ಬಸವಕಲ್ಯಾಣ, ಖಂಡಾಳ (ಬಸವಕಲ್ಯಾಣ ತಾಲ್ಲೂಕು) ಗ್ರಾಮದ ಶಿಲ್ಪಗಳು ಮುಖ್ಯವಾಗಿವೆ. ಸಾಮಾನ್ಯವಾಗಿ ಕಾಳಿಯು ಚತುರ್ಭುಜಧಾರಿಯಾಗಿದ್ದು ಪದ್ಮಾಸನದಲ್ಲಿ ಕುಳಿತಿ ರುವಳು. ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲ ಗಳನ್ನು ಹಿಡಿದಿರುವಳು. ಬಸವಕಲ್ಯಾಣದ ಧರಮ ಪ್ರಕಾಶಗಲ್ಲಿ ಮುದುರಮ್ಮ ಮಂದಿರ, ದೇಶಪಾಂಡೆ ಗಲ್ಲಿಯ ಶ್ರೀ ಭವಾನಿ ಮಂದಿರ ಮತ್ತು ರಜಪೂತಗಲ್ಲಿಯ ಶಿಲ್ಪಗಳಲ್ಲಿ ಈಕೆಯು ಸವ್ಯಲಲಿತಾಸನದಲ್ಲಿ ಕುಳಿತರುವುದನ್ನು ಕಾಣಬಹುದು.

ಯಕ್ಷಿ ಶಿಲ್ಪಗಳು: ಜೈನ ಧರ್ಮದಲ್ಲಿಯ ಒಂದಾದ ಯಾಪನೀಕಯ ಸಂಘ ಪ್ರಾಚೀನ ಕರ್ನಾಟಕದಲ್ಲೂ ಖ್ಯಾತಿ ಗಳಿಸಿತ್ತು. ಈ ಸಂಘದಲ್ಲಿ ಜನ ಸಾಮಾನ್ಯರಿಗೂ ಅದರಲ್ಲೂ ಹೆಂಗಸರಿಗೂ ಸ್ವತಂತ್ರ್ಯ ನೀಡಲಾಗಿತ್ತು. ಈ ಸಂಘದ ಸನ್ಯಾಸಿ ಗಳು ಯಕ್ಷಿಯರಾದ ಪದ್ಮಾವತಿ, ಜ್ವಾಲಮಾಲಿನಿಯ ಆರಾಧನೆಯ ಪ್ರಚಾರ ಮಾಡಿದರು. ತದನಂತರ ಕಾಲದಲ್ಲಿ ಈಕೆಯು ಜೈನಧರ್ಮದಲ್ಲಿ ಸ್ವತಂತ್ರ ದೇವತೆಯಾಗಿದ್ದಾಳೆ. ಬೀದರ ಜಿಲ್ಲೆಯಲ್ಲಿ ವಿವಿಧ ಯಕ್ಷಿಯರ ಶಿಲ್ಪಗಳಿವೆ.

ಭಾಲ್ಕಿ ತಾಲ್ಲೂಕಿನ ಭಾಲ್ಕಿ, ಲಖಣಗಾಂ: ಬೀದರ ತಾಲ್ಲೂಕಿನ ಅಲೆಂಬರ ಇನ್ನಿತರ ಗ್ರಾಮಗಳಲ್ಲಿ ಜೈನ ಯಕ್ಷಿಯರ ಶಿಲ್ಪಗಳಿವೆ. ಹಾಗೂ ಬಸವಕಲ್ಯಾಣ ತಾಲ್ಲೂಕಿನ ಮಿರ್ಕಲ್ ಮತ್ತು ಉಮಾ

ಪುರಗಳಲ್ಲಿ ಜೈನ ಯಕ್ಷಿ ಪದ್ಮಾಪತಿಯ ಶಿಲ್ಪಗಳಿವೆ. ಬಸವ ಕಲ್ಯಾಣ ಕೋಟೆ ಒಳಗೆ ಜೈನ ಯಕ್ಷಿಯ ಶಿಲ್ಪದಲ್ಲಿ ಅಂಬಿಕ ನಿಂತ ಭಂಗಿಯಲ್ಲಿರುವಳು. ಭಾಲ್ಕಿಯ ಮಾರುತಿ ಕಟ್ಟೆ, ಮುಂದಿನ ಶಿಲ್ಪದಲ್ಲಿ ಈಕೆಯು ಕುಳಿತ ಭಂಗಿಯಲ್ಲಿರುವಳು. ಹಾಗೂ ಶಿವಪುರ ಮಾರುತಿ ಮಂದಿರದ ತಾಯಿ ಮಗುವಿನ ಶಿಲ್ಪ ಜೈನ ಯಕ್ಷಿ ಅಂಬಿಕೆಯಾದಾಗಿದೆ. (ಆರ್‌ಎಂಎಸ್)



ದೇವೇಂದ್ರ ಟಿ: ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸದಾ ಕಲಾ ಚಟುವಟಿಕೆಯಲ್ಲಿ ನಿರತರಾಗಿರುವ ಇವರು ಒಬ್ಬ ಸೃಜನಶೀಲ ಕಲಾಶಿಕ್ಷಣದ ಚಿಂತಕ. ಮಕ್ಕಳಲ್ಲಿ ಚಿತ್ರಕಲೆಯ ಮೂಲಕ ಸ್ಪರ್ಧೆ, ಧಾರ್ಮಿಕ ವ್ಯಕ್ತಿತ್ವವನ್ನು ಬೆಳೆಸುವುದಕ್ಕಾಗಿ ಸದಾ ಚಿಂತನಶೀಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರು 1961ರಲ್ಲಿ ತಂದೆ ಶಿವಪ್ಪಾ ತಾಯಿ ಗಂಗಮ್ಮಾನವರ ಮಗನಾಗಿ ಗುಲಬರ್ಗಾ ಜಿಲ್ಲೆಯ ತೊಟನಳ್ಳಿ ಎಂಬ ಹಳ್ಳಿಯಲ್ಲಿ ಜನಿಸಿದ್ದಾರೆ. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ದಿ. ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟ್ಯೂಟ್‌ನಲ್ಲಿ ಕಲಾಶಿಕ್ಷಣಕ್ಕೆ ಸೇರಿ ಕಲಾ ಅಭ್ಯಾಸವನ್ನು ಕೈಗೊಂಡು ಚಿತ್ರಕಲೆಯಲ್ಲಿ ಎ.ಎಂ.ಸಿ. ಡಿಪ್ಲೋಮಾ ಇನ್ ಪೇಂಟಿಂಗ್ ಮತ್ತು ಡ್ರಾಯಿಂಗ್ ಪದವಿಯನ್ನು ಪಡೆದರು. ವಿದ್ಯಾರ್ಥಿ ದಿಸೆಯಲ್ಲಿಯೇ ಸೃಜನಶೀಲ ಕಲಾ ವಿದ್ಯಾರ್ಥಿಯಾಗಿ ಸದಾ ಕಲಾಚಟುವಟಿಕೆಗಳಲ್ಲಿ ಭಾಗಿಯಾಗಿ ಕಲಾಕೃತಿಗಳ ರಚನೆಯ ಜೊತೆಗೆ ಸಂಘಟನಾ ಜೀವಿಯಾಗಿ ಕೆಲಸ ಮಾಡುತ್ತ ಬಂದಿದ್ದಾರೆ.

ರಾಜ್ಯ ಹಾಗೂ ರಾಷ್ಟ್ರಮಟ್ಟದ ಅನೇಕ ಕಲಾಪ್ರದರ್ಶನಗಳಲ್ಲಿ ಹಾಗೂ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಕಲಬುರ್ಗಿ ಕಲಾಮಹೋತ್ಸವ, ಕರ್ನಾಟಕ ಲಲಿತಕಲಾ ಅಕಾಡೆಮಿ, AIFACES ರಾಷ್ಟ್ರೀಯ ಕಲಾಪ್ರದರ್ಶನ ದೆಹಲಿ, ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿ, ವಾರ್ಷಿಕ ಕಲಾಪ್ರದರ್ಶನ ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಅಖಿಲ ಭಾರತೀಯ ಕಲಾಪ್ರದರ್ಶನ SZCC ನಾಗಪುರ ಮೊದಲಾದವುಗಳು ಪ್ರಮುಖವಾಗಿವೆ.

ಡ್ರಾಯಿಂಗ್ ಸಯೋಜನಾ ಚಿತ್ರಗಳು ಹಾಗೂ ಭಾವಚಿತ್ರಗಳನ್ನು ರಚಿಸುವುದರ ಮೂಲಕ ಕಲಾಕ್ಷೇತ್ರಕ್ಕೆ ಪರಿಚಿತರು. ಇಂಕ್, ಚಾರ್‌ಕೋಲ್, ಪೆನ್ ಡ್ರಾಯಿಂಗ್, ಈ ಮಾಧ್ಯಮದಲ್ಲಿ ಹೆಚ್ಚಾಗಿ ಚಿತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಭಾವಚಿತ್ರ ರಚನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಂಥ ಕಲಾವಿದರಲ್ಲಿ ಇವರು ಒಬ್ಬರು. ಇವರ ಭಾವಚಿತ್ರಗಳು ನೋಡಿದಾಗ ಖ್ಯಾತ ಕಲಾವಿದರಾದ ಡಾ. ಎಸ್.ಎಂ. ಪಂಡಿತ್ ಪ್ರಭಾವ ಇವರ ಮೇಲೆ ಗಾಢವಾಗಿರುವುದನ್ನು ಕಾಣುತ್ತೇವೆ. ಅಷ್ಟೇ ನಯವಾದ ವರ್ಣಗಳ ಸಂಯೋಜನೆ 'ಲೈಕ್‌ನೇಸ್' ಹೊಂದಿದ ಭಾವ ಚಿತ್ರಗಳು ಈ ಕಲಾವಿದರ ಕಲಾನೈಪುಣ್ಯತೆಯನ್ನು ಇವರು ರಚಿಸಿರುವ ಭಾವಚಿತ್ರಗಳಲ್ಲಿ ಕಾಣುತ್ತದೆ.

ದೇವಿಂದ್ರರವರು ಕಲಾಕೃತಿಗಳ ರಚನೆಯ ಜೊತೆಗೆ ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನವನ್ನು ರಾಷ್ಟ್ರದ ಅನೇಕ ಪ್ರತಿಷ್ಠಿತ ಕಲಾಗ್ಯಾಲರಿಗಳಾದ ಮುಂಬಯಿ ಜಹಾಂಗೀರ್ ಆರ್ಟ್‌ಗ್ಯಾಲರಿ, ದೆಹಲಿಯ ಮಾರ್ಡನ್ ಆರ್ಟ್‌ಗ್ಯಾಲರಿ ವೆಂಕಟಪ್ಪ ಆರ್ಟ್‌ಗ್ಯಾಲರಿ ಬೆಂಗಳೂರು ಹೀಗೆ ರಾಷ್ಟ್ರದ ಅನೇಕ ಕಲಾಗ್ಯಾಲರಿಗಳನ್ನು ಇವರ ಕಲಾಕೃತಿಗಳ ಪ್ರದರ್ಶನ ಕಂಡಿವೆ ಹಾಗೂ ಅನೇಕ ಸಂಗ್ರಾಹಕರ ಸಂಗ್ರಹದಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

1983ರಲ್ಲಿ ಉತ್ತಮ ವಿದ್ಯಾರ್ಥಿ ಪ್ರಶಸ್ತಿ ದಿ. ಐಡಿಯಲ್ ಫೈನ್ ಆರ್ಟ್ ಇನ್ಸಿಟಿಟೂಟ್ ಗುಲಬರ್ಗಾ, 1989ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ. 1997ರಲ್ಲಿ ದೆಹಲಿಯ ಅವಂತಿಕಾ ಎ ಗ್ರೂಪ್ ಆಫ್ ಆರ್ಟ್‌ನ ಪ್ರಶಸ್ತಿ, ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಒಳ್ಳೆಯ ಶಿಕ್ಷಣವನ್ನು ನೀಡಿರುವುದಕ್ಕಾಗಿ 1998ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಹಾಗೂ ನಂತರ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗಳು ಇವರಿಗೆ ಲಭಿಸಿದೆ. ಇವರ ಸಾಧನೆಯನ್ನು ಗುರುತಿಸಿ 2007ರಲ್ಲಿ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಲಾಯಿತು. 1998–2001ರ ವರೆಗೆ ಕರ್ನಾಟಕ ಲಲಿತಕಲಾ



'ಟ್ರಾಪ್ಡ್ ಮ್ಯಾನ್' ಇಂಕ್ ಡ್ರಾಯಿಂಗ್

ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೂ ಗುಲಬರ್ಗಾ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ ಗುಲಬರ್ಗಾ ವಿಭಾಗೀಯ ಚಿತ್ರಕಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ ಅನೇಕ ಸಂಘ ಸಂಸ್ಥೆಗಳ ಜೊತೆಗೂಡಿ ರಚನಾತ್ಮಕ ಚಟುವಟಿಕೆಯಲ್ಲಿ ಭಾಗಿಯಾಗಿ ಕೆಲಸ ಮಾಡುವದರ ಜೊತೆಗೆ ಮಕ್ಕಳಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡುವಂತೆ ಚಿತ್ರಕಲಾ ಶಿಕ್ಷಕನಾಗಿ ಉತ್ತಮ ಶಿಕ್ಷಣ ನೀಡುವದರ ಜೊತೆಗೆ ತಮ್ಮ ಸಹಪಾಠಿ ಚಿತ್ರಕಲಾ ಶಿಕ್ಷಕರಿಗೂ ಪ್ರೇರಣೆ ಕೊಡುತ್ತ ಶಿಕ್ಷಣ, ಸಂಘಟನೆ, ಸಾಮಾಜಿಕ ಕಳಕಳಿಯ ಜೊತೆ ಕಲಾಕೃತಿ ರಚಿಸುತ್ತ ನಾಡಿನ ಜನ ಸಮುದಾಯದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಇವರು ಈಶಾನ್ಯ ವಲಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

(ಎಸ್‌ಪಿವಿ)

ದೊ

ದೊಡ್ಡಾಟ: ಕರ್ನಾಟಕದ ಒಂದು ರಂಗ ಸಂಪ್ರದಾಯ. ವಿಶೇಷತಃ ಉತ್ತರಕರ್ನಾಟಕ ಹೈದ್ರಾಬಾದ್ ಕರ್ನಾಟಕಗಳಲ್ಲಿರುವ ಗಂಡು ಕಲೆ. ದೊಡ್ಡಾಟದಲ್ಲಿಯ ರೌದ್ರರಸ ಪ್ರಧಾನವಾದ ಪೌರಾಣಿಕ ಕಥಾ ಪ್ರಸಂಗಗಳು, ರಂಗು ರಮಣಿಯ ಬೆಡಗು ಬಿನ್ನಾಣದಿ, ಥಳಕು ಬಳಕಿನ ಆಭರಣಾದಿ ವೇಷ ಭೂಷಣಗಳು. ಮೇಘ ಘರ್ಜನೆಯ ಆರ್ಭಟದ ಸಂಭಾಷಣೆಯ ವೈಖರಿಗಳು, ಕಡಲ ಕೋಲಾಹಲದಂತೆ ಅದ್ಭುತ ಕುಣಿತ ಜಿಗಿತಗಳ ಭಾವಾವೇಶದ ರಮ್ಯ ತಂತ್ರ ರೋಮಾಂಚನಗಳು, ನದಿಯ ನಿನಾದದಂತೆ ಹಿಮ್ಮೇಳದವರ ಹಾಡು, ಪಾತ್ರಗಳಿಗೆ ಉತ್ಸಾಹ. ತುಂಬುವ ವಾದ್ಯಗಳ ಗತ್ತು ಗಮ್ಮತ್ತಿನ ವೈಭವಗಳು, ಅದರಲ್ಲಿ ವಿಶೇಷವಾಗಿ ಹೋಂಕರಿಸುವ ಮದ್ದಲಿ ತಾಳಗಳ ಲಯಬದ್ಧ ವೀರಸದ್ದಿನ ಸಂಭ್ರಮಗಳು, ವಿಜೃಂಭಣೆಯಿಂದ ಕೂಡಿದ ವಿಶಾಲವಾದ ಅಟ್ಟದ ಮುಂದೆ ರಾತ್ರಿ ಇಡೀ ತಣಿಯಲು ಸನ್ನದ್ಧರಾದ ಪ್ರೇಕ್ಷಕರ ಉತ್ಸಾಹ ಸಡಗರಗಳು, ಸಾಂಸ್ಕೃತಿಕ ಸಮರವನ್ನು ಪರಿಕಲ್ಪಿಸುವಂತೆ ಹಳ್ಳಿಗಳಲ್ಲಿ ಹಬ್ಬದ ರಸದೂಟದಂತೆ, ನಿರ್ಮಿತವಾಗಿರುವಂಥವುಗಳು. ಈ ಎಲ್ಲಾ ಅಂಶಗಳಿಂದಲೂ ದೊಡ್ಡಸ್ಥಿಕೆಯಲ್ಲಿರುವದೆಂಬ ಕಾರಣದಿಂದಲೇ ಈ ಆಟಕ್ಕೆ 'ದೊಡ್ಡಾಟ' ವೆಂದು ಕರೆದಿರಬಹುದು.

ಚೊಡ್ಡಾಟ, ಮುಖ್ಯವಾಗಿ ಐದು ಅಂಶಗಳನ್ನೊಳಗೊಂಡಿದೆ. ಸಂಗೀತ, ನೃತ್ಯ, ಸಾಹಿತ್ಯ, ವರ್ಣ ಹಾಗೂ ಕುಶಲಕಲೆ, ಅಭಿನಯ ಸಂಗಮವಾಗಿದೆ. ಜನಪದ ರಂಗಭೂಮಿಯ ಎಲ್ಲಾ ಪ್ರಕಾರಗಳಲ್ಲಿ 'ದೊಡ್ಡಾಟ' ತನ್ನ ಛಾಪು ಒತ್ತಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಪುಟ್ಟಹಳ್ಳಿಯ ಪುಟಗಮರಿಯ ತಮ್ಮಣ್ಣನವರು ತಮ್ಮದೆ ಆದ ಧಾಟಿಯಲ್ಲಿ ದೊಡ್ಡಾಟವನ್ನು ನಡೆಸಿಕೊಂಡು ಬಂದವರು. 'ದೊಡ್ಡಾಟ' ಎತ್ತರದಲ್ಲಿ ಗೌರಿ ಶಂಕರದಂತೆ, ಶಬ್ದದಲ್ಲಿ ಸಿಡಿಲಿನಂತೆ,. ಘನತೆಯಲ್ಲಿ ವಜ್ರದಂತೆ, ಕಾಂತಿಯಲ್ಲಿ ಶುಕ್ರನಂತೆ, ತೂಕದಲ್ಲಿ ಭೂಮಿಯಂತೆ. ವೇಗದಲ್ಲಿ ಮನಸ್ಸಿನಂತೆ, ಚುರುಕಿನಲ್ಲಿ ಮಿಂಚಿನಂತೆ ಸ್ಪರ್ಶದಲ್ಲಿ ಪುರುಷ ದಂತೆ, ಜಾನಪದ ರಂಗಭೂಮಿ ಪ್ರಕಾರಗಳಲ್ಲಿಯೇ ಇದು ಅತ್ಯುನ್ನತ ಸ್ಥಾನದ ವ್ಯಾಪ್ತಿಯನ್ನು ಹೊಂದಿದೆಯೆಂದು ಹೇಳುತ್ತಾರೆ.



'ದೊಡ್ಡಾಟ' ಗಂಡುಗಲಿ ಗಳಿಗೆ ಮಾತ್ರ ಭಾಗಿಯಾಗಲು ಸಾಧ್ಯವಿರುವ ವೀರಕಲಾ ಪ್ರಕಾರ. ದುರ್ಬಲ ದೇಹ ದವರು ಈ ಆಟದಲ್ಲಿ ಅಭಿನಯಿಸಲು ಅಥವಾ ಹಾಡಲು, ವಾದ್ಯ ನುಡಿಸಲೂ ಸಾಧ್ಯವಾಗದು ಎನ್ನುತ್ತಾರೆ ಹಾಸ್ಯ ಕಲಾವಿದ ಅಡಿವೆಪ್ಪ ಅಂಗಡಿ. ಯಾಕಂದ್ರೆ ಇಲ್ಲಿ ದೃಢಕಾಯದ ಹಾಗೂ ದೊಡ್ಡ ಧ್ವನಿಯವರಿಗೆ ಮಾತ್ರ ಆಟವಾಡುವುದರಲ್ಲಿ ಅವಕಾಶ. ಆಟ ನೋಡಲು ಸೇರುತ್ತಿದ್ದ ಹಳ್ಳಿಗರೆಲ್ಲರಿಗೂ ಪಾತ್ರಧಾರಿಗಳು ಆಡಿದ ಸಂಭಾಷಣೆ ಕೇಳಬೇಕಾಗಿರತ್ಯೆತ್ರಿ, ಅಂದಾಗ ಅವರ ಕಂಠ ಸಂಪತ್ತು ಹೇಗಿದ್ದಿರಬೇಕು? ಕುಣಿತವೆಂದರೆ ಸಾಮಾನ್ಯವಲ್ಲ. ಸುಮಾರು ನಾಲ್ಕು ಐದು ಅಡಿ ಎತ್ತರದ ಮೇಲಿಂದ ಕೆಳಕ್ಕೆ, ಅಲ.... ಅಲಲಲ.......ಶಹವ್ವಾ.... ಎನ್ನುತ್ತ ಜಿಗಿಯಬೇಕು. ಪ್ರತಿಯೊಂದು ಸನ್ನಿವೇಶ ಸಾರಥಿಯದೆ. ಸಾರಥ್ಯ ಪಾತ್ರಧಾರಿ, ಇಡೀ ಪಾತ್ರದ ಅಭಿನಯ ಮುಕ್ಕಾಲು ಭಾಗ ಕುಣಿತದಲ್ಲಿಯೇ ಸಾಗುತ್ತದೆ. ಇನ್ನು ಕಥೆಗಾರ, ಎಲ್ಲಾ ಪಾತ್ರ ಗಳ ಪದಗಳನ್ನು ಒಬ್ಬನೇ ರಾತ್ರಿ ಇಡೀ ಹಾಡಬೇಕು. ಒಂದು ಆಟದಲ್ಲಿ ಸುಮಾರು ಇನ್ನೂರು ಐವತ್ತರಿಂದ ಮುನ್ನೂರು ಪದಗಳಿರು ತ್ತವೆ. ಅಷ್ಟೆಲ್ಲ ಪದಗಳನ್ನು ಏರಿದ ಧ್ವನಿಯಲ್ಲಿ ಹಾಡ ಬೇಕಾದರೆ, ಆತನ ಧ್ವನಿ ಹೇಗಿದ್ದಿರಬೇಕು. ಇದು ಕೇವಲ ಒಂದು ದಿನದ ಮಾತಲ್ಲ. ಆರು ತಿಂಗಳು ತಾಲೀಮು (ಸಾಧನೆ) ಮಾಡುತ್ತಾರೆ.

ಇನ್ನು ಮದ್ದಲಿ ಬಡಿಯುವವನಿಗೂ ಅಷ್ಟೇ ಶ್ರಮ. ಮದ್ದಲಿ ಸುಮಾರು ಐದು ಅಡಿ ಉದ್ದ ಎರಡೂವರೆ ಅಡಿ ಎತ್ತರ ಇದ್ದು. ಎರಡೂ ಕಡೆಗೂ ಬಾಹುಗಳನ್ನು ನೇರವಾಗಿ ಚಾಚಿದರೆ ಮಾತ್ರ ಇದರ ಮುಖಗಳು ಸಿಲುಕಲು ಸಾಧ್ಯ. ಅಂಥದ್ದರಲ್ಲಿ ಹಾಗೆ ಚಾಚಿದ ಬಾಹುಗಳನ್ನು ಕೆಳಗಿಳಿಸದೇ ಬಾರಿಸಬೇಕಾದರೆ, ಆತನಿ ಗೆಂಥ ತಾಕತ್ತಿರಬೇಕು. ಆದ್ದರಿಂದ ದೊಡ್ಡಾಟ ಕಲಾಜಟ್ಟಿ ಗಳ ಕಸರತ್ತೇ ಎನ್ನಬೇಕು. ಇಲ್ಲಿಯ ಕಲಾವಿದರಿಗೆ ಸಂಗೀತಗಾರರಿಗೆ ಶ್ರದ್ಧೆ ಭಕ್ತಿ ಹಾಗೂ ಏಕಾಗ್ರತೆಗಳೂ ಅಷ್ಟೆ ಮುಖ್ಯ.

(ಕೆಎಸ್‌ಎಂ)

ಧ

ಧನಂಜಯ ಶಿಲ್ಪಿ: ಹೆಸರಾಂತ ಶಿಲ್ಪಿ. ಕರ್ನಾಟಕದಿಂದ ನೆರೆ ರಾಜ್ಯಗಳಿಗೆ ವಲಸೆಹೋಗಿರುವ ಕಲಾವಿದರು ಹಲವರು. ಅಂಥ ನೆರೆರಾಜ್ಯಗಳಿಂದ ನಮ್ಮ ನೆಲಕ್ಕೆ ವಲಸೆಬಂದ ಕಲಾವಿದರ ಮನೆತನಗಳೂ ಕಮ್ಮಿಯಿಲ್ಲ. ಹಾಗೆ ವಲಸೆ ಬಂದು ನಮ್ಮ ರಾಜ್ಯದ ಕಲೆಯ ಬೆಳವಣಿಗೆಯಲ್ಲಿ ಹಲವು ವಿಧದಲ್ಲಿ ನೆರವಾದವರ ವಂಶಕ್ಕೆ ಸೇರಿದವರೇ ಧನಂಜಯ ಶಿಲ್ಪಿ. ಇವರ ಪೂರ್ವಜರು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಗೆ ಸೇರಿದವರು. ಕಾರಣಾಂತರದಿಂದ ಅವರು ಬೆಳಗಾವಿಗೆ 2–3 ತಲೆ ಮಾರುಗಳ ಮೊದಲೇ ಬಂದು ನೆಲಸಿದರು. ಬೆಳಗಾವಿಯಲ್ಲಿಯೇ ಧನಂಜಯರ ಜನನ 1934. ಅಲ್ಲಿ ಇವರ ತಂದೆ ದೇವಾಲಯ ಗಳಿಗಾಗಿ ದೇವತಾಮೂರ್ತಿಗಳನ್ನು ತಯಾರು ಮಾಡುವುದರಲ್ಲಿ ಹೆಸರಾದವರೂ ಹೌದು.

ಇಂತಹ ಹಿನ್ನೆಲೆಯಲ್ಲಿ ಬೆಳೆದ ಧನಂಜಯ ಶಿಲ್ಪಿಕಲೆಯಲ್ಲಿ ಪ್ರಸಿದ್ಧಿ ಪಡೆದಿರುವುದು ಸ್ವಾಭಾವಿಕ ಇವರು ತಮ್ಮ ಮೆಟ್ರಿಕ್ ಪರೀಕ್ಷೆಗೆ ಬೆಳಗಾವಿಯ ಸರ್ದಾರ್ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿರು ವಾಗಲೇ, ಅಲ್ಲಿಯ ಚಿತ್ರಕಲಾ ಶಿಕ್ಷಕ ಸಿ.ವಿ. ಕರದಗಿ ಯವರಿಂದ ಪ್ರಭಾವಿತರಾಗಿ, ಚಿತ್ರಕಲೆಯಲ್ಲಿ ಓನಾಮ ಕಲಿತು ಮೆಟ್ರಿಕ್‌ಗೆ ಮೊದಲೇ, ಎಂದರೆ ವಿಷಯವನ್ನಾಗಿ ತೆಗೆದುಕೊಂಡು ಮೂರು ವರ್ಷಗಳ ಅಧ್ಯಯನದ ನಂತರ ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾದರು.. ಬಿ.ಎ. ಪ್ರಥಮ ದರ್ಜೆಯಲ್ಲಿ ಪದವಿ ಪಡೆದ ಇವರು ಕಲಾಶಿಕ್ಷಣ ಮುಂದುವರೆಸಿ ಎಂ.ಎ. ಫೈನ್‌ಆರ್ಟ್ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ 1951 ರಲ್ಲಿ ಇಂಟರ್ ಗ್ರೇಡ್ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣ ರಾದರು. ಅನಂತರ 1953 ರಲ್ಲಿ ಮೆಟ್ರಿಕ್‌ನಲ್ಲಿಯೂ ಪಾಸಾಗಿ ಸರಕಾರಿ ವೆಲ್‌ಫೇರ್ ಇನ್ಸ್‌ಪೆಕ್ಟರಾಗಿ ಐದು ವರ್ಷ ಸೇವೆಯನ್ನು ಸಲ್ಲಿಸಿದರು.

ಆದರೆ ಕಲೆಯನ್ನು ಮುಂದುವರಿಸಬೇಕೆಂಬ ಉತ್ಕಟಾಕಾಂಕ್ಷೆ ಯಿಂದ ಆ ಕೆಲಸಕ್ಕೆ ರಾಜೀ ನಾಮೆಯಿತ್ತು. ಶಿಲ್ಪ ಮತ್ತು ಮಾಡಲಿಂಗ್‌ನಲ್ಲಿ ಹೆಚ್ಚಿನ ತರಬೇತಿಗಾಗಿ ಮುಂಬೈನ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿದರು. ಅಲ್ಲಿನ ಜೀವನೋಪಾಯಕ್ಕಾಗಿ ಕಲಾ ವಿದ ಬಲವಂತರಾವ್ ತಾಲೀಮರಲ್ಲಿ ಸಹಾಯಕ ರಾಗಿ ದುಡಿಯುತ್ತಿದ್ದರು. ಮೊದಲನೆಯ ವರ್ಷದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದುದ ರಿಂದ ಇವರನ್ನು ನೇರವಾಗಿ ಮೂರನೆಯ ತರಗತಿಗೆ ತೇರ್ಗಡೆ ಮಾಡಲಾಯಿತು. ಹೀಗೆ ತಮ್ಮ ಐದು ವರ್ಷಗಳ ಕಲಾವ್ಯಾಸಂಗದಲ್ಲಿ ಪ್ರತಿ ವರ್ಷವೂ ರ್‍ಯಾಂಕ್ ಗಳಿಸಿ, ಮೂರು ವಿದ್ಯಾರ್ಥಿವೇತನಗಳನ್ನು ಒಂದೇ ಸಮನೆ ಅನುಭವಿಸುತ್ತಿದ್ದರು. ಅವೆಂದರೆ ಕಚ್ ಮಹಾರಾಜರ ವಿದ್ಯಾರ್ಥಿ ವೇತನ, ಕೇಂದ್ರ ಸರಕಾರದ ವೇತನ ಹಾಗೂ ಜೆ.ಜೆ. ಸ್ಕೂಲಿನ ಪ್ರತಿಭಾ ವೇತನ, ವಿದ್ಯಾರ್ಥಿದೆಸೆಯಲ್ಲಿಯೇ ಇವರ ಕೃತಿಗಳಿಗೆ ಮೇಲಿಂದಮೇಲೆ ಪದಕಗಳು ದೊರಕಿರುವುದು ಒಂದು ದಾಖಲೆಯೇ ಸರಿ!



ತಮ್ಮ ವ್ಯಾಸಂಗವನ್ನು 1964ರಲ್ಲಿ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನುರಿತ ಶಿಲ್ಪಿಗಳಾದ ನಾನಾ ಕರ್ಮರ್‌ಕರ್, ಬಲವಂತ ರಾವ್ ತಾಲೀಮರಲ್ಲಿ ಕೆಲಸ ಮಾಡಿದರು. ಆ ಸಂದರ್ಭ ದಲ್ಲಿ ಧನಂಜಯರು ಭಾಗವಹಿಸಿದ ಅಂತಾ ರಾಷ್ಟ್ರೀಯ ಶಿಲ್ಪಿಗಳ ಶಿಬಿರ ದಲ್ಲಿ ಒಂದು ನಗದು ಬಹುಮಾನವನ್ನೂ ಗಳಿಸಿ ದರು.



'ವೀಣೆ ನುಡಿಸುತಿರುವ ಸರಸ್ವತಿ'

ಮುಂದೆ ಕೆಲವು ಕಾಲ ಶಿಲ್ಪ ಭಾರತಿಯಲ್ಲಿ ಕೆಲಸ ಮಾಡಿ 1967 ರಲ್ಲಿ ಬೆಂಗಾಲ್ ಪಾಟರೀಸ್‌ನ ಚೀಫ್ ಮಾಡೆಲರ್ ಆಗಿ ಸೇರಿದರು. ಆದರೆ ಸ್ವಲ್ಪ ಕಾಲದಲ್ಲೇ ತಮ್ಮ ವಿದ್ಯಾ ದಾಯಿನಿಯಾದ ಜೆ.ಜೆ. ಸ್ಕೂಲಿನ ಆಹ್ವಾನವನ್ನು ಮನ್ನಿಸಿ ಆ ಖ್ಯಾತ ಕಲಾ ಶಾಲೆಯಲ್ಲಿ ಉಪನ್ಯಾಸಕರಾಗಿ, ಅಲ್ಲಿನ ಕೆತ್ತನೆ ವಿಭಾಗವನ್ನು ಸ್ಥಾಪಿಸುವುದರಲ್ಲಿ ನೆರವಾದರು. ಈ ಕೆಲಸ ಧನಂಜಯರಿಗೆ ತೃಪ್ತಿ ತಂದು ಅಲ್ಲಿ 1979 ರ ವರೆಗೂ ಸೇವೆ ಸಲ್ಲಿಸಿದರು. ಅದೇ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಆ ಕೆಲಸಕ್ಕೆ ರಾಜೀನಾಮೆಯಿತ್ತು, ಅಲ್ಲಿಂದೀಚೆಗೆ ಸ್ವಂತವಾಗಿ ಗುಲಬರ್ಗಾದಲ್ಲಿ ನೆಲಸಿ ಕಾರ್ಯನಿರತ ರಾಗಿದ್ದಾರೆ.

ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ 1980ರಿಂದ 83ರ ವರೆಗೆ ಸೇವೆ ಸಲ್ಲಿಸಿದ್ದಾರೆ. ಇವರು ರಚಿಸಿರುವ ಕೃತಿಗಳು ದೇಶದ ನಾನಾ ಭಾಗಗಳಲ್ಲಿ ಹರಡಿವೆ. ದೇವತಾ ಮೂರ್ತಿಗಳಲ್ಲದೇ, ಹೆಸರಾಂತ ವ್ಯಕ್ತಿಗಳ ಶಿಲ್ಪಕೃತಿಗಳ ನಿರ್ಮಾಣದಲ್ಲಿಯೂ ಇವರು ಸೈ ಎನಿಸಿಕೊಂಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಚಿತ್ರದುರ್ಗದ ಮದಕರಿನಾಯಕನ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ನಿರ್ಮಿಸಿದ ವ್ಯಕ್ತಿಚಿತ್ರ ಹಾಗೂ ಅಂಬೇಡ್ಕರ ಕೃತಿಗಳೇ ಸಾಕ್ಷಿ. (ಎಸ್‌ಎಂಎಸ್)

ಧು

ಧುತ್ತರಗಿ ಪಿ.ಬಿ.: ರಾಜ್ಯದ ವೃತ್ತಿ ರಂಗಭೂಮಿಯ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರು. ದೇಶವೆಲ್ಲಾ ಸುತ್ತಿ ಪ್ರಸಿದ್ಧಿ ಪಡೆದವರು. ಹುಟ್ಟಿದ್ದು ಬಾಗಲಕೋಟೆಯಲ್ಲಿ. ಆದರೆ ಇವರು ಮೂಲತಃ ಕುಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನವರು. ತಂದೆ ಬಸವನಗೌಡ ಧುತ್ತರಗಿಯವರು ಸುಮಾರು ನಾಲ್ಕು ದಶಕಗಳ ಕಾಲ ನಾಟಕ ರಂಗದಲ್ಲಿ ಸೇವೆಸಲ್ಲಿಸಿದ ಅಪ್ರತಿಮರು.

ನಾಟಕಕಾರರಾಗಿ, ನಟರಾಗಿ, ನಿರ್ದೇಶಕರಾಗಿ, ಕಂಪನಿ ಮಾಲೀಕರಾಗಿ ಅವಿರತವಾಗಿ ದುಡಿದ, ದುಡಿಯುತ್ತಿರುವ ಇವರಿಗೀಗ ಎಂಭತ್ತು ವಸಂತ ಕಳೆದರೂ 'ವಯಸ್ಸು ನನ್ನ ದೇಹಕ್ಕೆ ಆಗೇತ್ರೀ, ನನಗಲ್ಲ' ಎಂಬ ಅದಮ್ಯ ಚೈತನ್ಯ, ರಂಗಭೂಮಿ ಬಗೆಗಿನ ಉತ್ಸಾಹ ಅವರ ಕಂಗಗಳಲ್ಲಿ ಹೊರ ಸೂಸುತ್ತದೆ.

ಫಂಡರಪುರದ ಪುಡರೀಕಾಕ್ಷನ ಹರಕೆಯ ಫಲವಾಗಿ ಹುಟ್ಟಿದ್ದರಿಂದ ತಾಯಿ ಇಟ್ಟ ಹೆಸರು 'ಪುಂಡಲೀಕ'. ವೃತ್ತಿ ನೇಯ್ಗೆ. ದೇವಾಂಗ ಮತದವರಾಗಿದ್ದರೂ, ವೈದಿಕರಂತೆ ಜನಿವಾರ, ಲಿಂಗವಂತರಂತೆ ಲಿಂಗಾರಾಧನೆ ಇವರ ವಿಶಿಷ್ಟತೆ. ಆರಾಧ್ಯದೇವಿ ಬನಶಂಕರಿ. ಹೀಗೆ ಸರ್ವಮತ ಧರ್ಮಗಳ ಸಂಗಮದಂತಿರುವ ಇವರು ಕಲಿತದ್ದು 6ನೆಯ ತರಗತಿ. ಅಷ್ಟಕ್ಕೇ ಕಲಿಕೆಗೆ ಸಲಾಂ ಹೊಡೆದರು. ಮುಂದೆ ಬದುಕಿನಲ್ಲಿ ಕಲಿತಿದ್ದೆಲ್ಲಾ ಸ್ವಾನುಭವ ಹಾಗೂ ಸ್ವಪರಿಶ್ರಮದಿಂದ.

ವೃತ್ತಿಗಿಂತ ಪ್ರವೃತ್ತಿಗೆ ಪ್ರಾಧಾನ್ಯತೆ ನೀಡಿದುದೇ ಇವರ ಜೀವನದ ಧ್ಯೇಯ. ತಂದೆ ಹಂದಿಗನೂರು ಸಿದ್ರಾಮಪ್ಪ ಅವರ ನಾಟಕ ಕಂಪನಿಯಲ್ಲಿ ನಟರಾಗಿದ್ದ ಕಾರಣ ಅವರ ಪ್ರಭಾವವೂ ಮಗನ ಮೇಲಾಗಿತ್ತು. 'ದೇಶಕ್ಕೂ ಸ್ವಾತಂತ್ರ್ಯ ಬರೂ ಮೊದಲ ಬರಗಾಲ ಬಂದಿತ್ರಿ, ಬಾಗಲಕೋಟೆನೂ ಹೊರತಾಗಿರಲಿಲ್ಲ. ಅದಕ್ಕ ಮನ್ಯಾಗ ಸಾಲಿ ಬಿಡಿಸಿದ್ದರು' ಇದು ಇವರು ನೊಂದು ನುಡಿವ ಮಾತು.

ಅನವರತ ಓದು, ಗೆಳೆಯ ಮೋನಪ್ಪ ಹಾಗೂ ಮಿಣಜಿಗಿ ಅವರೊಟ್ಟಿಗೆ ನಾಟಕವಾಡಲು ಆರಂಭ. ಅದರ ಫಲವಾಗಿ ಖ್ಯಾತ ನಾಟಕಕಾರರಾದ ಜಿ.ಜಿ. ಹೆಗಡೆ ಪರಿಚಯ. ನಾಟಕ ಬರೆಯಲು ಪ್ರೇರಣೆ ಸಿಕ್ಕಿದ ಪರಿಣಾಮವಾಗಿ 1951ರಲ್ಲಿ 'ಕುಂಕುಮ' ನಾಟಕ ರಚನೆ. ನಂತರ 'ಕಲ್ಪನಾ ವಿಲಾಸ' ಯಶಸ್ವಿ ನಲವತ್ತು ಪ್ರಯೋಗ ಕಂಡು ಮತ್ತಷ್ಟು ಬರವಣಿಗೆ ಹರಿತಗೊಂಡು, 'ಅತ್ತಿಗೆ' 'ಸರ್ವಮಂಗಳಾ' 'ಪಣಕ್ಕಿಟ್ಟ ಪ್ರಮಾಣ' 'ಮಲಮಗಳು', 'ಸಂಪತ್ತಿಗೆ ಸವಾಲ್' ಮೊದಲಾದ ಮೂವತ್ತು ಸಾಮಾಜಿಕ ನಾಟಕಗಳು ಇವರ ವೈಚಾರಿಕ ಮೂಸೆಯಿಂದ ಹೊರಬಂದ ಅಣಿಮುತ್ತುಗಳು. ಅಲ್ಲದೇ 'ಸಿಂಧೂರ ಲಕ್ಷ್ಮಣ' 'ಕಿತ್ತೂರ ಚೆನ್ನಮ್ಮ' 'ಛತ್ರಪತಿ ಶಿವಾಜಿ' 'ಹರಗಿರಿಜೆ' 'ಪುರಂದರದಾಸರು' ಹೀಗೆ ಒಂಭತ್ತು ಐತಿಹಾಸಿಕ, ಐದು ಪೌರಾಣಿಕ ನಾಟಕಗಳನ್ನೂ, ಏಳು-ಭಕ್ತಿಪ್ರಧಾನ, ಹಲವು ಹತ್ತು ಬಾನುಲಿ ನಾಟಕಗಳನ್ನು ರಚಿಸಿ ಕೀರ್ತಿವಂತರಾಗಿ ಶ್ರಮಸಾಧನೆ ಸಾರ್ಥಕ್ಯಗೊಳಿಸಿದ್ದಾರೆ.

ಇವರ ನಾಟಕಗಳ ಜೀವಾಳವೆಂದರೆ, ಮಾತಿನ ಮೋಡಿ, ಬಡವ ಶ್ರೀಮಂತರ ನಡುವಿನ ತಾರತಮ್ಯ, ಸಿರಿವಂತರ ದಬ್ಬಾಳಿಕೆ, ಹೆಣ್ಣಿನ ಶೋಷಣೆ, ಸಾಮಾಜಿಕ ಮೌಲ್ಯಗಳನ್ನು ಜನರಿಗೆ ಪಾತ್ರಗಳ ಮುಖಾಂತರ ಸಾಂಕೇತಿಕವಾಗಿ ತಿಳಿಯ ಪಡಿಸುವುದಾಗಿದೆ.

ಶಾಂತಾಬಾಯಿ ಅವರೊಂದಿಗೆ ವಿವಾಹ ಗೆಳೆಯರೊಡ ಗೂಡಿ ಕಟ್ಟಿದ 'ರವೀಂದ್ರ ವಾಚನಾಲಯ' 1950ರಲ್ಲಿ ಸಂಘ ಕಥೆ, ಕಾದಂಬರಿ, ರನ್ನ, ಪಂಪ, ಜನ್ನ, ರತ್ನಾಕರ, ರಾಘವಾಂಕ ಸರ್ವಜ್ಞ, ಬಸವಣ್ಣ, ಇವರೆಲ್ಲ ಮಹನೀಯ, ದಾರ್ಶನಿಕರ ಕಾವ್ಯ, ವಚನಗಳ, ಜೊತೆಗೆ ಸಮಕಾಲೀನರ ಕೃತಿಗಳ ಸಮಗ್ರ ಅಧ್ಯಯ ನಕ್ಕೆ ಸುಗ್ರಾಸವನ್ನೆ ಒದಗಿಸಿದ ಹಾಗಾಯಿತು. ಅಪಾರ ಜ್ಞಾನ ಭಂಡಾರ ದೊರೆತು, ನೈಜ ನೆಲೆಗಟ್ಟಿನ, ಗಟ್ಟಿನಾಟಕ ರಚನೆ, ನಟನೆ, ನಿರ್ದೇಶನಕ್ಕೆ ದಾರಿದೀಪವಾದವು. ನಾಟಕಗಳು ಜನ ಪ್ರಿಯಗೊಂಡು, ಪ್ರಯೋಗಗಳಾಗುತ್ತಿರುವಾಗ 'ಸಂಪತ್ತಿಗೆ ಸವಾಲ್' 200 ಪ್ರಯೋಗಗಳನ್ನು ಗೋಕಾಕದ 'ಶಾರದಾ ಸಂಗೀತ ನಾಟಕ ಮಂಡಳಿ' ಕನಕಪುರದಲ್ಲಿ ಆಡುವಾಗ, ವರನಟ ರಾಜಕುಮಾರ್ ನಾಟಕ ನೋಡಿ ಮೆಚ್ಚುಗೆ ವ್ಯಕ್ತ ಪಡಿಸಿದರು. ಅದನ್ನು 'ಚಲನಚಿತ್ರವಾಗಿ' ಮಾಡುವ ಹೆಬ್ಬಯಕೆ ವ್ಯಕ್ತಪಡಿಸಿ, ಕೈಗೆತ್ತಿಕೊಂಡು, ಇತಿಹಾಸದ ದಾಖಲೆಯಾಗಿಸಿ ದರು. ತಮಿಳು, ತೆಲುಗು, ಮಲಯಾಳಿ ಭಾಷೆಗಳಲ್ಲೂ ದಾಖಲೆ ಯೊಂದಿಗೆ ಧುತ್ತರಗಿಯವರಿಗೆ ಎತ್ತರಕ್ಕೇರುವಂತಾಗಿಸಿತು. ಅಲ್ಲದೇ 'ಅತ್ತೆಗೆ ತಕ್ಕ ಸೊಸೆ' ನಾಟಕವೂ ಚಲನಚಿತ್ರವಾಗಿ ಹೆಸರು ಮಾಡಿತು.

ಯಶಸ್ಸಿನ ಹಿಂದೆ ಎಡೆಬಿಡದ ಪ್ರಯತ್ನ ನಿರಂತರವಾಗಿ ನಡೆದು 1969ರಲ್ಲಿ ಸಿದ್ಧಲಿಂಗೇಶ್ವರ ವಿಜಯ ನಾಟ್ಯ ಸಂಘ ವೆಂದು, ಐಹೊಳೆ ಸಿದ್ಧನಕೊಳ್ಳದ ಸಿದ್ಧಪ್ಪನ ಆಶೀರ್ವಾದದ ಫಲವಾಗಿ ಉದಯಿಸಿತು. ಕಂಪನಿಗೆ ನಟಿ ಸರೋಜಮ್ಮ ಸೇರಿ ಕೊಂಡರು, ಮುಂದೆ ಬಾಳಸಂಗಾತಿಯಾಗಿಯೂ ಹಗಲಿಗೆ ಹಗಲು ನೀಡಿ ಸಮಾರು ಹದಿನೇಳು ವರ್ಷಗಳವರೆಗೆ ನಾಟಕ ಕಂಪನಿ ನಡೆಸಿದರು. ಐವತ್ತನೇ ಪ್ರಯೋಗದ ನಿಮಿತ್ಯ ನಡೆದ ಸಮಾರಂಭದಲ್ಲಿ ಸಿದ್ದಪ್ಪಜ್ಜನವರು, ಧುತ್ತರಗಿಯವರಿಗೆ 'ನಾಟಕ ಕವಿಪ್ರಕಾಶ' ಬಿರುದು ನೀಡಿ ಆಶೀರ್ವದಿಸಿದರು. ಬಸವರಾಜಪ್ಪ ಜವಲಿಮಠರೊಡಗೂಡಿ 1969ರಲ್ಲಿ ಶ್ರೀ ತ್ರಿಪುರ ಸುಂದರಿ ನಾಟ್ಯ ಸಂಘ ಹುಟ್ಟು ಹಾಕಿದ್ದರು. 1975ರಲ್ಲಿ ಸ್ವತಂತ್ರ ಮಾಲೀಕತ್ವ ಪಡೆದು ತೂಗಿಸಿಕೊಂಡು, ಏಳು-ಬೀಳುಗಳ ಮಧ್ಯೆ ನಡೆಸಿ ಕೊಂಡು 1985ರಲ್ಲಿ ಯಲಬುರ್ಗಿ ಕ್ಯಾಂಪಿನಲ್ಲಿ ಇದಕ್ಕೆ ಮಂಗಳ ಹಾಡಿದರು. ಅನಂತರ ವೃತ್ತಿರಂಗಭೂಮಿಯವರಿಗೆ ಕೇವಲ

ಇನ್ನೂರು, ಮುನ್ನೂರು ರೂಪಾಯಿಗಳಿಗೆ ನಾಟಕ ಬರೆದು ಕೊಡುತ್ತಿದ್ದ ಇವರು ಕಾಲ ಕಳೆದಂತೆ ನಾಲ್ಕೈದು ಸಾವಿರ ಸಂಭಾವನೆಯಾಗಿ ಬರೆದರೂ, ಕಂಪನಿ ಸಾಲದ ಹೊರೆ ಬಾಧಿಸುತ್ತಿತ್ತು. ಗುಬ್ಬಿ ಕಂಪನಿಯೂ ಸೇರಿದಂತೆ ಉತ್ತರ ಕರ್ನಾಟಕದ ಸುಮಾರು ಮೂವತ್ತೈದು ನಾಟಕ ಮಂಡಳಿಯವರಿಗೆ ಹಣದ ಹೊಳೆಯನ್ನೆ ಹರಿಸುವಂತೆ ಹೊಚ್ಚ ಹೊಸ ನಾಟಕ ಬರೆದು ನೀಡಿ ಕಂಪನಿಗಳು ಮರು ಹುಟ್ಟು ಪಡೆದ ನಿದರ್ಶನಗಳಿವೆ.

ಧುತ್ತರಗಿಯವರ ನಾಟಕಗಳ ಚಿತ್ರಿತಗೊಂಡಿವೆ. ಬಾನುಲಿ ಪ್ರಸಾರಗೊಂಡಿವೆ, ಅಂತೆಯೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1985) ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1996) ದೊರೆತಿದೆ. ಇವರ ಕುರಿತಾಗಿ ಬರೆದಿರುವ ವೀರಣ್ಣ ರಾಜೂರ ಅವರ 'ಪಿ.ವಿ. ಧುತ್ತರಗಿ' ಪುಸ್ತಕ ಸಮಗ್ರ ಮಾಹಿತಿ ನೀಡುತ್ತದೆ. ಅತ್ಯಂತ ಹಿರಿಯ ಪ್ರಶಸ್ತಿಯಾದ 'ಗುಬ್ಬಿ ವೀರಣ್ಣ' ಪ್ರಶಸ್ತಿ ಅವರಿಗೆ ಸಂದುದು ರಂಗಭೂಮಿಗೆ ಸಂದ ಗೌರವವಾಗಿದೆ.

(ಎಸ್‌ವಿಟಿ)

ಧೋ



ಧೋತ್ರೆ ಮತಿ: ಇವರು 1946 ಆಗಸ್ಟ್ 06 ರಂದು ಯಾದಗೀರ ಜಿಲ್ಲೆ ಶಹಾಪೂರ ತಾಲ್ಲೂಕಿನ ಗೋಗಿಪೇಠದಲ್ಲಿ ಹುಟ್ಟಿದ್ದಾರೆ. ತಮ್ಮ ಐದನೇ ತರಗತಿಯಿಂದಲೇ ನಾಟಕ ಬರೆದು ಆಡಿಸುವ ಗೀಳಿನಿಂದ ಹೊರಬರಲಾಗದೆ 'ರೊಟ್ಟಿ' ಎಂಬ ನಾಟಕ ಬರೆದು ಪ್ರಸ್ತುತ ಪಡೆಸಿದ ಶ್ರೀಯುತರು ಎಂ.ಎ. ಸಮಾಜಶಾಸ್ತ್ರ ಮತ್ತು ಪತ್ರಿಕೋದ್ಯಮ ಡಿಪ್ಲೋಮಾ ಪದವೀಧರರಾಗಿದ್ದಾರೆ. ತಮ್ಮ ಪದವಿ ವ್ಯಾಸಂಗದ ದಿನಗಳಲ್ಲೆ ಲೋಕೋಪಯೋಗಿ ಇಲಾಖೆ. ಕಂದಾಯ ಇಲಾಖೆ, ಹಾಗೂ ಆರೋಗ್ಯ ಇಲಾಖೆಯಲ್ಲಿ ಆರೋಗ್ಯ ಶಿಕ್ಷಕರೆಂದು ಸೇರಿದರು. ಇವರ ಸೇವೆಯನ್ನು ಗುರುತಿಸಿ ಹಲವು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಇವರು ರಚಿಸಿದ ಆರೋಗ್ಯ ಸಾಹಿತ್ಯವನ್ನು ಗುರುತಿಸಿ ಕರ್ನಾಟಕ ಸರ್ಕಾರ ಪ್ರಶಂಸೆ ಪತ್ರವನ್ನು ನೀಡಿದೆ.

ಧೋತ್ರೆ ಪ್ರಕಾಶನ ಗೋಗಿಯಿಂದ ಇವರು ರಚಿಸಿದ ಸಾಹಿತ್ಯ ಕೃತಿಗಳೆಂದರೆ 1. ಆರೋಗ್ಯ ಶಿಕ್ಷಣ ಮತ್ತು ಭೋಧಕರು (1990ರಲ್ಲಿ ಗು.ವಿ.ಗು. ದಿಂದ ಪ್ರಶಸ್ತಿ ಹಾಗೂ ನಗದು ಬಹುಮಾನ ಪಡೆದ ಕೃತಿ) 2. ಕಾವ್ಯಮತಿ, 3. ಅಪೂರ್ವದರ್ಶನ (ರಂಗ ಕೃತಿ), 4. ನೂರು ಚಿತ್ರ ನೂರು ನುಡಿ, 5. ನೇತ್ರಹೀನ ಬಾಲಕರಿಗೆ ಮಾರ್ಗದರ್ಶನ ಹೀಗೆ ? 6. ಮೇರು ಸಾಧಕ (ಸಗರ ಕೃಷ್ಣಾಚಾರ್ಯರ ಅಭಿನಂದನಾ ಗ್ರಂಥ) 7. ಸೃಜನ (ಆರೋಗ್ಯ ಶಿಕ್ಷಣದ ಬಗ್ಗೆ ಸಮ್ಮೇಳನ ಸ್ಮರಣಸಂಚಿಕೆ. ಗುಲಬರ್ಗಾ ಆಕಾಶವಾಣಿ ಕೇಂದ್ರದ 'ಎ ಗ್ರೇಡ್' ಕಲಾವಿದರಾಗಿ 180 ರೇಡಿಯೋ ನಾಟಕಗಳಲ್ಲಿ ಭಾಗವಹಿಸಿದ್ದಾರೆ.

ರಂಗಾನುಭವ: ಗುಡಿಸಲಿನ ಗುಡದಾಳಿ (ರ: ರಾಜನಂದಿ) ಶಟವಿ (ರ: ಸಂಗಮೇಶ ಸೌದತ್ತಿಮಠ) ಓಕಳಿ (ರ: ಸೌದತ್ತಿಮಠ) ತಾಯಿ (ರ: ಬರ್ಟೋಲ್ಟ್ ಬ್ರೆಕ್ಟ್) ಈರೋಬಿ (ಜಾನಪದ ನಾಟಕ) ಚಾರ್ವಾಕ, ಮಹಿಮಾಪುರ (ಪ್ರಸನ್ನ) ಅಧೋಲೋಕದಲ್ಲಿ ಲ್ಯೂಕುಲ್ಲಸ್ (ರ: ಬರ್ಟೋಲ್ಟ್ ಬ್ರೆಕ್ಟ್) ಕೊಳ್ಳಿ-ದೀಪ (ರ: ಆರ್.ಕೆ. ಹುಡಗಿ) ಜಾತಿ ಧರ್ಮಗಳಾಚೆ (ರ: ಶಾಂತರಸ) ಧೋತ್ರೆ ಅವರು ರಂಗ ದಿಗ್ಗಜರಾದ ಜಿ.ಎಮ್. ಶಿರಹಟ್ಟಿ, ಎಸ್.ಎಮ್. ಹಿರೇಮಠ, ಸಿ. ಬಸವಲಿಂಗಯ್ಯ, ಎಸ್. ಮಾಲತಿ, ಕೃಷ್ಣಮೂರ್ತಿ ಕತ್ತಾರ, ರಘುನಂದನ, ಶಂಕರಯ್ಯ ಘಂಟಿ, ಜಯರಾಮ ತಾತಾಚಾರ ಮುಂತಾದವರ ನಿರ್ದೇಶನ ಗರಡಿಯಲ್ಲಿ ಪಳಗಿದ್ದರಿಂದಲೇ ಉತ್ತಮ ಕಲಾವಿದರಾಗಿ ಗುರುತಿಸಿ ಕೊಂಡಿದ್ದಾರೆ. ಹತ್ತಾರು ಸ್ವಯಂ ಸೇವಾ ಸಂಘಟನೆಯಲ್ಲಿ ಸಂಘಟಕರಾಗಿ ದುಡಿಯುತ್ತಿದ್ದಾರೆ. ಇವರು ರಚಿಸಿದ ರೇಡಿಯೋ ನಾಟಕ ಖಾನ್ ಅಬ್ದುಲ್ ಗಫಾರಖಾನ್ ರಾಜ್ಯದ ಎಲ್ಲಾ ಬಾನುಲಿಗಳಿಂದ ಪ್ರಸಾರಗೊಂಡು ತುಂಬಾ ಪ್ರಶಂಸೆ ಪಡೆದಿದೆ. ಸಾಹಿತಿಯಾಗಿ, ನಾಟಕ ರಚನಾಕಾರರಾಗಿ, ರಂಗ ಕಲಾವಿದರಾಗಿ, ಸಂಘಟರಾಗಿ ಶ್ರೀಯುತರು ಹೊಸ ಪೀಳಿಗೆಯ ಕಲಾವಿದರಿಗೆ ಮಾದರಿಯಾಗಿದ್ದಾರೆ.

(ಎಸ್‌ಆರ್‌ಜಿ)

ನ

ನಂದೀಧ್ವಜ: ಶೈವ ಸಂಪ್ರದಾಯದ ಗಂಡುಕಲೆ. ಹಳೆ ಮೈಸೂರು ಭಾಗದಲ್ಲಿ ಅದರ ಸ್ವರೂಪ ನಿರೂಪಗಳು ಉತ್ಕೃಷ್ಟವಾಗಿದ್ದರೆ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸರಳತೆಯ ಸೋಪಜ್ಞತೆಯಿಂದಿದೆ. ಧ್ವಜ ಅಥವಾ ಕಂಬವನ್ನು ಆಯ್ಕೆ ಮಾಡುವಲ್ಲಿಯೇ ಒಂದು ವಿಶೇಷತೆ ಇದೆ. ಸುಮಾರು 15 ಅಡಿಯಿಂದ 35 ಅಡಿ ಉದ್ದದ ಬೊಂಬು ಎಲ್ಲಿಯೂ ಬಾಗು ಇಲ್ಲದೆ ಸರಳ ಲಂಬ ರೇಖೆಯಂತಿರಬೇಕು. ಯಾವುದೇ ಬೊಂಬನ್ನು ಆಯ್ಕೆ ಮಾಡಿಕೊಂಡರೂ ಒಂದು ಸ್ವಲ್ಪವಾದರೂ ಬಾಗು ಬಳಕು ಇರುತ್ತದೆ. ಅದು ಒಣಗುತ್ತಾ ಮತ್ತಷ್ಟು ಬಿರುಸಾಗಲುಬಹುದು. ಸಾಧ್ಯವಾದ ಉತ್ತಮ ಬೊಂಬನ್ನು ಬಿದಿರು ಮೆಳೆಯಿಂದ ಕಡಿದು ತಂದ ಅನಂತರ ಹದಗೊಳಿಸುವುದು ಒಂದು ಕಲೆ ಮಟ್ಟಸವಾದ ನೆಲದ ಮೇಲಿಟ್ಟು ಅದರ ಉದ್ದಕ್ಕೂ ಇಕ್ಕೆಡೆಗಳಲ್ಲಿ ಕನಿಷ್ಟ 2 ಅಡಿಗೊಂದರಂತೆ ಗೂಟಗಳನ್ನು ನೆಲಕ್ಕೆ ಎದರು ಬದರಾಗಿ ಬಡಿದು ಅವುಗಳ ಮಧ್ಯದಲ್ಲಿ ಕಂಬ ಇರುವಂತೆ ಮಾಡಿ ಜೊತೆಗೆ ಮೇಲ್ಮುಖವಾಗಿ ಉಬ್ಬದಂತೆ ಸೂಕ್ತವಾದ ಮೇಲ್ ಹಾಸನ್ನಿರೆ ಚಪ್ಪಡೆ ಕಲ್ಲುಗಳನ್ನು ಹೇರುವ ಮೂಲಕ ಆನೆಯನ್ನು ಖೆಡ್ಡಾದಲ್ಲಿ ಪಳಗಿಸುವಂತೆ ಬಿದಿರಿನ ಬೊಂಬನ್ನು ಪಳಗಿಸುವ ಕೆಲಸ ಮಾಡಬೇಕು. ಈ ರೀತಿ ಪಳಗಿಸುವ ಕ್ರೀಯೆಗೆ ಮುನ್ನ ಹಸಿಯಾಗಿದ್ದಾಗಲೇ ಅದರ ಗಿಣ್ಣುಗಳನ್ನು ಮಚ್ಚಿನಿಂದ ಸವರಿ ನಯಗೊಳಿಸುವುದು ಅತ್ಯಾವಶ್ಯಕ ಇದು ಮೊದಲ ಕ್ರಮ.

ತಿಂಗಳುಗಳು ಉರುಳಿದ ಅನಂತರ ಚಪ್ಪಡಿ ಸರಗಿಸಿ ಹೊರತೆಗೆದು ಮತ್ತೆಲ್ಲಿ ಬಾಗು ಇದೆಯೋ ಅಲ್ಲಿಗೆ ಆದ್ಯತೆ ನೀಡಿ ಸರಿಪಡಿಸುವ ಕ್ರೀಯೆ ಆಗಬೇಕು. ನಂತರವೇ ಧ್ವಜಕ್ಕೆ ಸಂಸ್ಕಾರ ನೀಡಬೇಕು. ಅಂದರೇ ಕಂಬದ ತಳದಿಂದ ಸುಮಾರು 3 ಅಡಿ ಎತ್ತರದಲ್ಲಿ ಸಿಂಬಿಯಾಕಾರದಲ್ಲಿ ಬಟ್ಟೆ, ಹಗ್ಗ ಮತ್ತಿತರ ಸಾದನೆಗಳಿಂದ ಕಂಬದ ಸುತ್ತ ಸುತ್ತಿ ಗೋಲಾಕಾರವಾಗಿ ಆವರಿಸಿರುವಂತೆ ಅತ್ಯಂತ ಬಿಗಿಯಾಗಿ ಕಟ್ಟುವುದು ಅತ್ಯಾವಶ್ಯಕ ಕಾರಣ ಆ ವೃತ್ತಾಕಾರದ ಸಿಂಬಿಯ ಮೇಲೆಯೇ ಹರಡೆ, ಚತ್ತು, ಬಾವುಟ, ಕಸೆ, ಕಳಸ, ಹಗ್ಗ, ಕುಚ್ಚು ಇವೆಲ್ಲವನ್ನು ಹೊರುವಂತಿರಬೇಕು. ಒಂದು ವೇಳೆ ಸಿಂಬಿಯು ಕಂಭ ಕುಣಿಸುವ ರಬಸಕ್ಕೆ ಕಿತ್ತು ಬಂದರೆ ಇಲ್ಲವೇ ಸಡಿಲವಾದರೇ ಇಡಿ ವ್ಯವಸ್ಥೆಯೇ ಕೆಟ್ಟು ಅಪಹಾಸ್ಯವಾಗುವ ಸಂಬವವುಂಟು. ಆದ್ದರಿಂದ ಇದು ಬುನಾದಿ ಇದ್ದ ಹಾಗೆ. 2ನೇ ಕ್ರಮವಿದು.

ನಂತರದ್ದೆ ಕಂಬ ಕುಣಿತಕ್ಕೆ ಶೃಂಗಾರಗೊಳಿಸುವುದು. ಸಿಂಬಿಯಾಕಾರದ ಬುನಾದಿ ಮೇಲೆ ಮಂಟಪ ಜೋಡಿಸುವುದು ಸುಮಾರು ಒಂದರಿಂದ ಒಂದುವರೆ ಅಡಿ ಎತ್ತರ ಅಷ್ಟೇ ವಿಸ್ತೀರ್ಣವುಳ್ಳದ್ದು ಅಥವಾ ಸುಮಾರು ಒಂದು ಒಂದುವರೆ ಅಡಿ ಉದ್ದಗಲದ ದಪ್ಪ ಹಲಗೆಯನು ಕಂಬದೊಳಗೆ ಹೋಗಲನುವಾಗುವಂತೆ ರಂಧ್ರ ಮಾಡಿ ಜೋಡಿಸುವುದು. ಇದರ ಮೇಲೆಯೇ ಹರಡೆ ಮತ್ತು ಚತ್ತು (ಛತ್ರಿ)ಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಬೇಕು. ಕಂಬದ ಉದ್ದದ ಶೇಕಡ 60ರಷ್ಟು ಭಾಗ ಹರಡೆ ಚತ್ತುಗಳಿಗೆ ಮೀಸಲಾಗಿಸಿದರೆ ಅದರ ಮೇಲೆ ನೀಳವಾದ ಗಟ್ಟಿಯಾದ ಹಗ್ಗಗಳೆರಡನ್ನು ಎದರು ಬದರು ಬರುವಂತೆ ಹಾಗೂ ಒಂದಕ್ಕೂ ಮತ್ತೊಂದಕ್ಕೂ ಒಂದೆರಡು ಅಡಿ ಎತ್ತರದಲ್ಲಿ ವ್ಯತ್ಯಾಸ ಇರುವಂತೆ ಕಟ್ಟಬೇಕು ಕೆಲವೊಂದು ವೇಳೆ ಮೂರು ಹಗ್ಗ ಹಾಕುವುದು ಉಂಟು. (ಆದಿಕವಾದ ಗಾಳಿ ಇರುವ ಬಯಲು ಪ್ರದೇಶದಲ್ಲಿ ಮಾತ್ರ) ಹಗ್ಗ ಕಟ್ಟಿ ಹಿಡಿದುಕೊಳ್ಳುವ ಉದ್ದೇಶ ನಂದಿ ಕಂಬ ಕುಣಿಸುವವರಿಗೆ ಆಯ ತಪ್ಪದಂತೆ, ವಾಲಿಸದಂತೆ, ಬೀಳದಂತೆ ಕಾಪಾಡಲು ಮಾತ್ರ ಹಗ್ಗ ಹಿಡಿಯುವವರಿಗೂ ಕೌಶಲ್ಯವುಬೇಕು. ಒಂದು ರೀತಿ ಸೂತ್ರ ದಾರಿ ಇದ್ದಂತೆ. ಈ ಹಗ್ಗಗಳ ನಡುವೆ ಹರಡೆ ಚತ್ತುಗಳ ಮೇಲೆ ಬಣ್ಣ ಬಣ್ಣದ ದಮಾಸ್ ಬಟ್ಟೆಯ ಬಾವುಟವನ್ನು ಕಟ್ಟುತ್ತಾರೆ. ಬಾವುಟದ ತುದಿಗಳು ತ್ರಿಕೋನಾಕಾರವಾಗಿ ಮಾಡಿದ್ದು ತುದಿಯಲ್ಲಿ ರೇಶ್ಮೆ ಎಳೆಗಳ ಕುಚ್ಚುಗಳಿಂದ ಶೃಂಗಾರಗೊಳಿಸಿದರೆ ಬಾವುಟದ ಮಧ್ಯದಲ್ಲಿ ಲಿಂಗ ಮತ್ತು ಬಸವ ಅಥವಾ ಶೈವ ಸಂಬಂಧವಾದ ಚಿತ್ರಗಳನ್ನು ವಿವಿಧ ಬಣ್ಣದ ಬಟ್ಟೆಗಳಿಂದ ಹೊಲಿಸಿರುತ್ತಾರೆ. ಕಂಬದ ಶಿಖಿರಕ್ಕೆ ಕಳಸವನ್ನು ಬೆಳ್ಳಿ ಅಥವಾ ಹಿತ್ತಾಳೆಯಿಂದ ಮಾಡಿ ಜೋಡಿಸಿರುತ್ತಾರೆ.

ಹರಡೆಯ ವಿಶೇಷವೆಂದರೇ ಕಂಬದೊಳಗೆ ಜೋಡಿಸುವಂತೆ ಮಧ್ಯ ಭಾಗದಲ್ಲಿ ವೃತ್ತಾಕಾರವಾಗಿ ಹರಡೆಯ ಉದ್ದಕ್ಕೂ ಕೊಳಗದಂತೆ ಮಾಡಿರುವುದು ಹಾಗೆಯೆ ಕುಂಬಳಕಾಯಿಯಂತೆ ಮಾಡಿದ ಹರಡೆಯ ಒಳಭಾಗದಲ್ಲಿ ಸಣ್ಣ ಕಲ್ಲು ಅಥವಾ ಹುಣಸೆಬೀಜ ಹಾಕುವುದು. ಒಂದೇ ಅಳತೆಯ ಮೂರು ಕುಂಬಳಕಾಯಿ ಜೋಡಿಸಿದಾಗ ಹೇಗೆ ಕಾಣುತ್ತದೋ ಹಾಗೆ ಹರಡೆಗಳನ್ನು ಮಾಡುವುದು ಇವುಗಳು ಸಹ ವ್ಯಾಸದಲ್ಲಿ ಕಡಿಮೆಯಾಗುತ್ತಾ ಹೋಗುತ್ತವೆ. ಟೊಳ್ಳಾಗಿರುವುದರಿಮದ ಕುಲುಕಿದಂತೆಲ್ಲಾ ಶಬ್ದೋತ್ಪತ್ತಿಯಾಗುತ್ತದೆ.

ಛತ್ತು ಅಥವಾ ಚತ್ರಿಯು ಹೆಸರೆ ಹೇಳುವಂತೆ ಕೊಳಗದ ಮೇಲೆ ಚತ್ರಿ ಆಕಾರದಲ್ಲಿ ಹರಡಿರುವ ಲೋಹದ ತಟ್ಟೆಯ ಅಂಚುಗಳು ತ್ರಿಕೋನಾಕಾರವಾಗಿ ಚೂಪಾಗಿರುವುದಲ್ಲದೆ ಪ್ರತಿ ಚೂಪಿಗೂ ಒಂದೊಂದು ಲೋಲಾಕ್‌ನಂತಹ ತಾಮ್ರದ ತಗಡು ವಿವಿಧ ಆಕಾರಗಳಿಂದ ಕೂಡಿರುವುದನ್ನು ಜೋಡಿಸಿರುತ್ತಾರಾದ್ದರಿಂದ ಕುಣಿತಕ್ಕೆ ತಕ್ಕಂತೆ ಅದು ಶಬ್ದ ಸಹ ಮಾಡುತ್ತದೆ. ಧ್ವಜ ಕುಣಿಸುವವನಿಗೆ ಒಂದು ಬಗೆಯ ಸ್ಫೂರ್ತಿದಾಯಕವಾಗುತ್ತದೆನ್ನಬಹುದು.

ಹರಡೆ ಚತ್ತುಗಳಿಲ್ಲದ್ದು ಹೈದ್ರಾಬಾದ ಕರ್ನಾಟಕದ ಧ್ವಜಗಳದ್ದು, ಉದ್ದವಾದ ಅರ್ಥಾತ್ ಬೊಂಬುವಿನ ತುದಿಯಲ್ಲಿ ಮಾತ್ರ ಒಂದು ಲೋಹದ ತಗಡಿನ ಮಂಟಪ ಅದರೊಳಗೆ ಅವರವರ ಇಷ್ಟ ದೇವತಾ ಮೂರ್ತಿ ಇಟ್ಟು ಹೂವಿನಿಂದ ಶೃಂಗರಿಸಿ, ಉಳಿದ ಕಂಬದುದ್ದಕ್ಕೂ ಬಣ್ಣ ಬಣ್ಣದ ಬಟ್ಟೆ ಸುತ್ತಿರು

ವುದು ಇಲ್ಲವೆ ಹೊಳವಿನ ತೈಲವರ್ಣ ಹಚ್ಚಿ (ಎನಾಮಿಲ್ ಕಲರ್) ಶೃಂಗಾರಗೊಳಿಸಿ ಕುಣಿಸುವುದು ಅಲ್ಲಿನ ಕಲೆ ಹೆಚ್ಚಿನ ಭಾರ ಇಲ್ಲದಿರುವುದರಿಂದ ಹಿಡಿತಕ್ಕೆ ಹಗ್ಗ ಕಟ್ಟುವುದಾಗಲಿ, ಹೆಚ್ಚಿನ ಸಹ ಕಲಾವಿದರ ಸಹಕಾರವಾಗಲಿ ಅಗತ್ಯ ಕಂಡು ಬರುವುದಿಲ್ಲ. ಕಚ್ಚೆಹಾಕಿ, ತಲೆಗೆ ಪೇಟಾದಂತೆ ಸುತ್ತಿ ಸಾಂಪ್ರದಾಯಿಕ ಬೆಡಗಿನಿಂದ ಕುಣಿಯುವುದು, ಮತ್ತು ಸುಶಿರ ವಾದ್ಯ ಮತ್ತು ಇತರ ಚರ್ಮವಾದ್ಯಗಳನ್ನು ಸಹ ಬಳಕೆ ಮಾಡು ವುದು ಇಲ್ಲಿನ ಸಂಪ್ರದಾಯ ಕಳಸದ ಕೆಳಗೆ ಹಾಗೂ ಬಾವುಟದ ಮೇಲೆ ಇರುವ ಭಾಗದಲ್ಲಿ ಬಣ್ಣ ಬಣ್ಣದ ಬಟ್ಟೆಯ ಪಟ್ಟಿಯಾ ಕಾರದ ಕಸೆ ಹಾರಾಡುವಂತೆ ಕಟ್ಟುವುದು, ಚೌರಿ ಮತ್ತಿತರ ಆಕರ್ಶಕವಾದವುಗಳನ್ನು ಸಹ ಕಟ್ಟುವುದು ಶೃಂಗಾರ ಗೊಳಿಸು ವುದು ಮೂರನೇ ಕ್ರಮ.

ಇವೆಲ್ಲದರ ಅನಂತರದಲ್ಲಿ ಕಂಬ ನಂದಿ ಕಂಬವಾಗ ಬೇಕಾದರೇ ಗರ್ಭಗುಡಿಯಲ್ಲಿ ಇಟ್ಟಿದ್ದ ಲೋಹದ ನಂದಿ ಮೂರ್ತಿ ಕರಡಿ ವಾದ್ಯಗಳ ಸಹಿತ ಪೂಜಿಸಿ ಅದನ್ನು ಕಂಬದ ಆದಿಯಲ್ಲಿ ಜೋಡಿಸಿರುವ ಮಂಟಪದಲ್ಲಿ ಇಲ್ಲವೆ ಹಲಗೆಯ ಮೇಲೆ ನಂದಿಯನ್ನು ಪ್ರತಿಷ್ಠಾಪಿಸುತ್ತಾರೆ. ಕೆಲವೊಂದು ಕಡೆ ವೀರಭದ್ರನ ಲೋಹದ ಪಟವನ್ನು ಅಳವಡಿಸುವುದುಂಟು. ಬೀಳದಂತೆ ನಟ, ಬೋಲ್ಟ್‌ಗಳನ್ನು ಅಳವಡಿಸಬೇಕಾದದ್ದು ಅನಿವಾರ್ಯ ಹಾಗೂ ಅಗತ್ಯವೂ ಕೂಡಾ ಈ ಕ್ರಿಯೆ ನಂತರ ಮಂಗಳಾರತಿ ಮಾಡಿ ಮೊದಲಿಗೆ ನುರಿತ ಧ್ವಜ ಕುಣಿತ ತಜ್ಞನು ಆ ಕಂಬ ಕೂರಲು ಅನುಕೂಲವಾಗುವಂತೆ ಹೊಲಿಸಿರುವ ನವಾರ, ಡವಾಲಿ ಎಂದೆಲ್ಲಾ ಕರೆಯುವ ಕಂಬ ಚೀಲವನ್ನು ಬುಜದ ಎಡದಿಂದ ಬಲಕ್ಕೆ ಬರುವಂತೆ ಹಾಕಿಕೊಂಡು, ಆ ಚೀಲದ ಮುಂಭಾಗವನ್ನು ದೇಹದ ಮಧ್ಯಕ್ಕೆ ತಂದುಕೊಂಡು ನಾಲ್ಕಾರು ಜನರ ಸಹಾಯದಿಂದ ಅದರೊಳಗಿರಿಸಿಕೊಂಡು ಕರಡಿ ಮಜಲಿನ ತಾಳಕ್ಕೆ ತಕ್ಕಂತೆ ಕುಣಿಯಲು ಆರಂಭಿಸುತ್ತಾನೆ.

ಧ್ವಜ ಕುಣಿತದಲ್ಲಿ ಸಹ ಒಂದ್ಹೆಜ್ಜೆ, ಎರಡ್ಹೆಜ್ಜೆ, ಮೂರ್ಹೆಜ್ಜೆ, ನಾಲ್ಕ್ಹೆಜ್ಜೆ ಎಂಬ ಗತ್ತುಗಳುಂಟು. ಕಂಬ ಕುಣಿಸುವವರು ತಮ್ಮ ತಮ್ಮ ಹೆಜ್ಜೆ ನೋಡುತ್ತಾ ಕುಣಿಯುವುದು ಉತ್ತಮ ಬಗೆ, ಅದಕ್ಕೆ ತಕ್ಕ ಹಗೆ ಕರಡಿ ವಾದ್ಯದ ತಾಳ ಹಾಕಬೇಕು. ಕುಣಿತಗಾರ, ವಾದ್ಯಗಾರ ಎದುರು ಬದುರಾಗಿ ನಿಂತು ತಮ್ಮ ತಮ್ಮ ಕಲಾಶಕ್ತಿ ಪ್ರದರ್ಶಿಸುವುದಕ್ಕೆ ಆರಂಭಿಸಿದರೇ ಅದನ್ನು ನೋಡುವುದೇ ಒಂದು ಸೊಗಸು. ನುರಿತವರು ಎದೆಯ ಮೇಲಿಟ್ಟುಕೊಂಡು, ಹೆಗಲ ಮೇಲೆ, ಎರಡು ಅಂಗೈಗಳನ್ನು ಜೋಡಿಸಿಟ್ಟುಕೊಂಡು, ಇಲ್ಲವೇ ಹಗ್ಗವೆರಡನ್ನು ತಾನೇ ಹಿಡಿದುಕೊಂಡು ನಂದಿಧ್ವಜ ಕುಣಿಸುವುದು ಒಂದು ಬಗೆಯಾದರೇ ಎರಡೆರಡು ನಂದಿ ಕಂಬ ಗಳನ್ನು ಎರಡು ನವಾರಗಳ ಮೂಲಕ ಹಾಕಿಕೊಂಡು ಕುಣಿಸುವ ವರು ಇದ್ದಾರೆ ಇದಕ್ಕೆಲ್ಲಾ ಅನುಭವ, ತಕ್ಕ ಶಕ್ತಿ ಇರಬೇಕಷ್ಟೆ.

(ಎಂಎಸ್)

ನಟರಾಜ ಎಂ. ಶಿಲ್ಪ: ಶಿಲ್ಪ ಕಲಾವಿದ. ಗುಲಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ದಿಗ್ಗಾಂ ಎಂಬ ಗ್ರಾಮದಲ್ಲಿ 01.06.1977 ರಲ್ಲಿ ಜನಸಿದರು. ತಾಯಿ ಶಾಂತಾಬಾಯಿ. ತಂದೆ ಮಹಾದೇವಪ್ಪ ಶಿಲ್ಪಿ. ಇವರಿಗೆ ಶಿಲ್ಪಕಲೆ ಎನ್ನುವುದು ದೈವದತ್ತವಾಗಿದ್ದು, ಇವರ ಸಹೋದರರು ಸಹ ಕಲಾ ಶ್ರೀಮಂತಿಕೆಯುಳ್ಳವರಾಗಿದ್ದಾರೆ. ಕಲೆ ಇವರಿಗೆ ವೃತ್ತಿಪರ ಜೀವನವಾಗಿದ್ದರೂ, ನಟರಾಜ ಶಿಲ್ಪ ಇವರು ಚಿತ್ರಕಲೆಯಲ್ಲಿ ಡಿ.ಎಂ.ಸಿ, ಎ.ಎಂ.ಜಿಡಿ, ಮತ್ತು ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಬಿ.ವಿ.ಎ, ಎಂ.ಎಫ್.ಎ. ಪದವಿಯನ್ನು ಪಡೆದು ಶಿಲ್ಪಕಲೆ ಮತ್ತು ಚಿತ್ರಕಲೆ ಎರಡರಲ್ಲೂ ಪರಿಣಿತಿಯನ್ನು ಹೊಂದಿದ್ದಾರೆ.

ಪರಿಸರದ ಬಗ್ಗೆ ಕಾಳಜಿ ಇಟ್ಟುಕೊಂಡು ಅನೇಕ ಕಲಾಕೃತಿ ಗಳನ್ನು ರಚಿಸಿದ್ದು, ಅಲ್ಲದೇ ಆರೋಗ್ಯದ ಬಗ್ಗೆ ಕಾಳಜಿವಹಿಸಿ ಮಕ್ಕಳಲ್ಲಿ ಸಹಜವಾಗಿ ಯಾವ ರೀತಿ ಆಹಾರ ಪೂರೈಕೆಯಾಗ ಬೇಕು. ಶರೀರ ಸದೃಢವಾಗಿದ್ದರೆ ಆ ಸದೃಢವಾದ ಮನಸ್ಸು, ಬುದ್ಧಿ, ಮೆದುಳು ಸದೃಢವಾಗಿರುತ್ತದೆ. ಆಗ ಸದೃಢವಾದ ಸಮಾಜವನ್ನು ಕಟ್ಟಬಹುದು. ಹಾಗೂ ಆರೋಗ್ಯದ ರಕ್ಷಣೆ, ಮಗುವಿನ ಸಂಪೂರ್ಣ ಆರೋಗ್ಯ, ಮತ್ತು ಸುತ್ತಮುತ್ತಲಿನ ಆಗು-ಹೋಗುಗಳನ್ನು ವೀಕ್ಷಣೆಮಾಡಿ, ಚಿಂತನಶೀಲರಾಗಿ ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಯಲ್ಲಿ ಹಲವು ಕಲಾಕೃತಿ ಗಳನ್ನು ರಚಿಸಿದ್ದಾರೆ.

ಹೈದ್ರಾಬಾದ ಸಾಲಾರ್‌ಜಂಗ್ ಮ್ಯೂಜಿಯಂನಲ್ಲಿರುವ ಹೆಣ್ಣಿನ ಮೂರ್ತಿ ಮಾರ್ಬಲ್ ಕಲ್ಲಿನಲ್ಲಿ ಪಾರದರ್ಶಕತೆ ತೋರಿಸಲು ಪ್ರಯತ್ನಪಟ್ಟಿದ್ದಾರೆ. ಆ ಶಿಲ್ಪ ಇವರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಬೀರಿದೆ, ಚಿತ್ರದಲ್ಲಿ ತಿಳಿಬಣ್ಣ ದಿಂದ ಪಾರದರ್ಶಕತೆಯನ್ನು ಸರಳವಾಗಿ ತೋರಿಸಬಹುದು. ಆದರೆ ಕಲ್ಲಿನಲ್ಲಿ ಕೆತ್ತುವುದು ಬಹು ಕಠಿಣವಾದ ಕೆಲಸ. ಪಾರದರ್ಶಕತೆಯ ಪ್ರಭಾವಕ್ಕೆ ಒಳಗಾಗಿ ಮಾರ್ಬಲ್ ಕಲ್ಲಿನ ಹೆಣ್ಣಿನ ಮೂರ್ತಿಯ ಇವರು ರಚಿಸಿರುವ ಕಲಾಕೃತಿಗಳಲ್ಲಿ ಪಾರದರ್ಶಕತೆ ತರಲು ಪ್ರಯತ್ನಸಿದ್ದಾರೆ. ಹಾಗೂ ಪೈಬರ್ ಕಂಚು, ಪಿ.ಓ.ಪಿ, ಲೋಹ ಮತ್ತು ಮಿಶ್ರ ಮಾಧ್ಯಮಗಳಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅಲ್ಲದೇ ಸಂಘಟಿತ ಗುಂಪು ಕಲಾ ಪ್ರದರ್ಶನ ಮತ್ತು ಅನೇಕ ಕಲಾಶಿಬಿರಗಳು, ಹಾಗೂ ಇನ್ನೂ ಬಹಳ ಸಂಘಟಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

2000 ರಿಂದ 2003ರ ವರೆಗೆ ವಿಶ್ವಕರ್ಮ ಶಿಕ್ಷಣ ಸಂಸ್ಥೆ, ಗುಲಬರ್ಗಾ, 2001ರಲ್ಲಿ Fiptive Group Show, Neharu Art Centre. 'Vision' 2008 ಸ್ವಸ್ತಿ ಕಾನ್‌ಟೆಂಪ್ರೆ ಆರ್ಟ್ಸ್ ಗ್ಯಾಲರಿ, ಬೆಂಗಳೂರು, 1 to 8 Group Show ಚಿತ್ರಕಲಾ ಪರಿಷತ್ ಬೆಂಗಳೂರು, 2011 ಡಿಸೆಂಬರ್ 20, ವೈಬ್ರಷನ್ ವಿಕ್ಟೋರಿಸಸ್ ಆರ್ಟ್ಸ್‌ಗ್ಯಾಲರಿ ಜಯನಗರ, ಬೆಂಗಳೂರು, 2011 ಜುಲೈ 24, ರೋರಿಕ್ ಆರ್ಟ್ಸ್ ಹೋಟೆಲ್, ಬೆಂಗಳೂರು.

1999-ಲ್ಯಾಂಡ್‌ಸ್ಕೇಪ್ ಕ್ಯಾಂಪ್ ಹಂಪಿ, 2001 ಕಲಾ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು

ರೋಟರಿ ಕ್ಲಬ್, ಗುಲಬರ್ಗಾ. 2002 ಶಿಲ್ಪ ರೇಖಾಚಿತ್ರ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಶೃಂಗೇರಿ ಮಠ, ಶೃಂಗೇರಿ. 2006 ಶಿಲ್ಪ ಮತ್ತು ಚಿತ್ರಕಲಾ ಶಿಬಿರ, ನುಡಿಹಬ್ಬ ಹಂಪಿ. 2006 ಸಿಲಿಕಾನ್ ರಬ್ಬರ್, ಅಚ್ಚಿನಿಂದ ಫೈಬರ್ ಮಾಧ್ಯಮದಲ್ಲಿ ಚಾಲುಕ್ಯ ಶೈಲಿಯ ಶಿಲ್ಪಗಳ ರಚನಾ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಜಿಲ್ಲಾ ಆಡಳಿತ ಬಾಗಲಕೋಟೆ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಬಾದಾಮಿ–ಬನಶಂಕರಿ. 2006 ಭಾವಶಿಲ್ಪ ಹಾಗೂ ಸಮಕಾಲೀನ ಶಿಲ್ಪಕಲಾ ಶಿಲ್ಪ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಶಿವಕುಮಾರ ಕಲಾಸಂಘ, ಸಾಣೇಹಳ್ಳಿ. (ಚಿತ್ರದುರ್ಗ ಜಿಲ್ಲೆ). 2007 ಜನಪದ ಶೈಲಿಯ ಕಂಚಿನ, ಏರಕದ ಶಿಲ್ಪಕಲಾ ಶಿಬಿರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ಕೆನರಾ ಬ್ಯಾಂಕ್ ಪ್ರಯೋಜಿತ ಕೆ.ಪಿ.ಜೆ ಪ್ರಭು, ಕರಶಕುಶಲ ತರಬೇತಿ ಸಂಸ್ಥೆ, ಜೋಗರದೊಡ್ಡಿ. 2008 ವೇರಿಯಷನ್ (Variations) ಈ ಕಲಾಶಿಬಿರದಲ್ಲಿ ಕಲಾವಿದರ ಶಿಬಿರ, ಬಿಹಾರ ರಾಜ್ಯದ, ಪಟ್ಟಣದಲ್ಲಿ ನಡೆದ ಕರ್ನಾಟಕದ ಶಿಲ್ಪ ಕಲಾವಿದರು. 2008 ಘಟ್ಟ ಕಲಾಗ್ರಾಮ ಕಲಾವಿದರ ಶಿಬಿರ ರಾಯಚೂರು. 2010 ಸಮಕಾಲಿನ ಶಿಲಾ ಶಿಲ್ಪಕಲಾ ಶಿಬಿರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ವಿಜಯ ಚಿತ್ರಕಲಾ ಮಹಾ ವಿದ್ಯಾಲಯ ಇಳಕಲ್ಲ. 2010 ಕಲಬುರ್ಗಿ ಕಂಪು ಶಿಲ್ಪಕಲಾ ಶಿಬಿರ ಗುಲಬರ್ಗಾ.

1995–2000 ಕಲಾಮಹೋತ್ಸವ ದಿ. ಐಡಿಯಲ್ ಫೈನ್ ಆರ್ಟ್ಸ್ ಕಾಲೇಜ, ಗುಲಬರ್ಗಾ. 1997–2000 ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. 1999–19ನೆಯ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು. 2010 ಕಲಬುರ್ಗಿ ಕಂಪು, ಕಲಾಪ್ರದರ್ಶನ ಗುಲಬರ್ಗಾ. 2011 ಬಾಂಬೆ ಆರ್ಟ್ಸ್ ಸೊಸೈಟಿ ವಾರ್ಷಿಕ ಕಲಾಪ್ರದರ್ಶನ ಮಾಡಿದ್ದು ಅಲ್ಲದೇ 1998ರಲ್ಲಿ ಬೆಸ್ಟ್ ಆವಾರ್ಡ್ ಕಲಾಮಹೋತ್ಸವ ಐ.ಫೈ.ಆ. ಕಾಲೇಜ ಬೆಂಗಳೂರು ಮತ್ತು 2000ರಲ್ಲಿ ರಾಜ್ಯ ಮಟ್ಟದ ಫೈನ್ ಆರ್ಟ್ಸ ಪ್ರದರ್ಶನ ಹಾಗೂ ಶಿಲ್ಪಕಲಾ ಮೇರಿಟ್ ಆವಾರ್ಡ್ ದೊರೆತಿದೆ.

ಇವರು ಚಿತ್ರ ಮತ್ತು ಶಿಲ್ಪಕಲಾವಿದರಾಗಿ, ಮತ್ತು ಘಟ್ಟ ಕಲಾ ಗ್ರಾಮದ ರಾಯಚೂರಿನ ಅಧ್ಯಕ್ಷರಾಗಿ ಈ ಭಾಗದ ಜನರಿಗೆ ಕಲೆಯ ಅಭಿರುಚಿಯನ್ನು ಮೂಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದ್ದು, ಇನ್ನೂ ಅನೇಕ ಕಲಾಸಂಘಟನೆಗಳಲ್ಲಿ ಸಕ್ರೀಯ ಪಾಲುಗಾರಾಗಿದ್ದು, ಕಲಾಜಗತ್ತಿನಲ್ಲಿ ತಮ್ಮದೇ ಆದ ವಿಶೇಷ ಕಲಾಭಿರುಚಿಯಿಂದ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

(ಬಿಕೆಎಲ್)

ನರಸಿಂಹ ಜೋಷಿ: ಮಿಮಿಕ್ರಿ ಕಲಾವಿದ. ಲಿಂಗಸೂಗರು ತಾಲ್ಲೂಕಿನ ಅನಾಹೊಸೂರಿನಲ್ಲಿ ಜನಿಸಿದರು. ತಂದೆ ಪ್ರಹ್ಲಾದಾ ಚಾರ್ಯ. ತಾಯಿ ಶಕುಂತಲಾಬಾಯಿ. ಪಿ.ಯು.ಸಿ ವರೆಗೆ ವಿದ್ಯಾಭ್ಯಾಸವನ್ನು ಮಾನ್ವಿಯಲ್ಲಿ ಮಾಡಿದರು.

ಚಿಕ್ಕ ವಯಸ್ಸಿನಲ್ಲಿಯೇ ಕನ್ನಡದ ಖ್ಯಾತ ನಟರನ್ನು ಅನುಕರಿಸುವ, ಇವರ ಹಾವಭಾವ ಹಾಗೂ ಮಾತನಾಡುವ ಶೈಲಿಯ ಕಲೆಯನ್ನು ರೂಢಿಸಿಕೊಂಡ ಇಲ್ಲಿಯವರೆಗೆ 328 ಕಾರ್ಯಕ್ರಮಗಳನ್ನು ನೀಡಿದ್ದಾರೆ. ಬಾಯರ್ ಇಂಡಿಯಾ ಲಿಮಿಟೆಡ್ ಸಂಸ್ಥೆಯಲ್ಲಿ ಕ್ಷೇತ್ರ ಸಹಾಯಕರಾಗಿ ಸೇವೆ ಸಲ್ಲಿಸು ತ್ತಿದ್ದಾರೆ.

ರಾಜಕುಮಾರ, ವಿಷ್ಣುವರ್ಧನ್, ಶ್ರೀನಾಥ, ಮುಖ್ಯಮಂತ್ರಿ ಚಂದ್ರು, ಧೀರೇಂದ್ರ ಗೋಪಾಲ್, ಟೆನ್ನಿಸ್ ಕೃಷ್ಣ, ಬಾಲಕೃಷ್ಣ, ಶಂಕರ್‌ನಾಗ್‌ರ ಅಭಿನಯವನ್ನು ಸಹಜರೀತಿಯಲ್ಲಿ ಉಕ್ಕಿಸುವ ಸನ್ನಿವೇಶಗಳಿಂದ ತಮ್ಮ ಕಾರ್ಯಕ್ರಮವನ್ನು ವಿನೂತನವಾಗಿ ನಡೆಸಿಕೊಡುವರು. ಇವರು ಸಂಗೀತದ ಅಭಿಮಾನಿ ಕೂಡ ಆಗಿರುವುದು ವಿಶೇಷ.

ಗುರು ಮೆಲೋಡೀಸ್ ಸಂಸ್ಥೆಯವರು, ಹುಬ್ಬಳ್ಳಿಯ ವಿಜಯಕುಮಾರ್ ಮತ್ತು ಮುನ್ನಾ ಹಾಗೂ ಹಲವಾರು ಕಲಾಭಿಮಾನಿಗಳ ಪ್ರೋತ್ಸಾಹದಿಂದ ಮಿಮಿಕ್ರಿ ಕಲಾವಿದರಾಗಿ ರೂಪಗೊಂಡ ಇವರು, ಹೈದ್ರಾಬಾದ ಕರ್ನಾಟಕ ಭಾಗದ ಮಿಮಿಕ್ರಿ ದಯಾನಂದ ಎಂದು ಖ್ಯಾತಿ ಪಡೆದಿದ್ದಾರೆ.

ಗಂಗಾವತಿಯಲ್ಲಿ ಜರುಗಿದ ರಂಗೋತ್ಸವ ಸಮಾರೋಪ ಸಮಾರಂಭದಲ್ಲಿ ಮಿಮಿಕ್ರಿ ದಯಾನಂದರನ್ನೇ ಅನುಕರಿಸಿದಾಗ, ನಾನು ಬೇರೆ ನಟರ ಮಿಮಿಕ್ರಿ ಮಾಡಿದರೆ, ಜೋಷಿಯವರು ತಮ್ಮನ್ನೇ ಅನುಕರಣೆ ಮಾಡಿ ಅವರ ಅಭಿಮಾನಿಯನ್ನಾಗಿ ಮಾಡಿದ್ದಾರೆ ಎಂದು ಪ್ರಶಂಸಿರುವರು.

ಹಾಸ್ಯ ನಟ–ನಿರ್ಮಾಪಕ ದ್ವಾರಕೀಶ್, ಪ್ರಣಯರಾಜ ಶ್ರೀನಾಥ ಮುಂತಾದ ನಟರಿಂದ ಮೆಚ್ಚುಗೆ ಪಡೆದಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಹಲವಾರು ಜಾತ್ರೆ ಉತ್ಸವ, ಸಮಾರಂಭಗಳಲ್ಲಿ ಉತ್ತಮ ಅಭಿನಯ ಪ್ರದರ್ಶನ ನೀಡಿ, ಅನೇಕ ಗಣ್ಯರ, ಅಭಿಮಾನಿಗಳ ಪ್ರೀತಿ ಸಂಪಾದಿಸಿದ್ದಾರೆ.

(ವಿಬಿಇ)

ನರಸಿಂಹಲು ವಡವಟ್ಟಿ: ನರಸಿಂಹಲು ವಡವಟ್ಟಿಯವರು ನಾಡಿನ, ರಾಷ್ಟ್ರದ ಮತ್ತು ಅಂತರಾಷ್ಟ್ರೀಯ ಮಟ್ಟದ ಖ್ಯಾತ ಸಂಗೀತಗಾರ. ರಾಯಚೂರಿನ ಈ ಪ್ರತಿಭೆ ಅಂತರಾಷ್ಟ್ರೀಯ ಮಟ್ಟದ ಕ್ಲಾರಿಯೊನೆಟ್ ನುಡಿಸುವುದರಲ್ಲಿ ಇಂದು ಖ್ಯಾತ ನಾಮ ರಲ್ಲಿ ಇವರೂ ಒಬ್ಬರು.

ರಾಯಚೂರಿನ ಸಂಗೀತ ಕುಟುಂಬದಿಂದ ಬಂದ ವಡ ವಟ್ಟಿಯವರ ತಂದೆ ಬಂಡೆಪ್ಪ ತಬಲ ವಾದಕರು, ಅಜ್ಜ ಶಹನಾಯಿ ವಾದಕರು. ನಮ್ಮ ದೇಶದ ಖ್ಯಾತ ಸಂಗೀತಗಾರರು ಮತ್ತು ರಾಯಚೂರಿನವರೇ ಆದ ದಿವಂಗತ ಪಂಡಿತ್ ಸಿದ್ಧರಾಮ ಜಂಬಲದಿನ್ನಿ ಅವರು ಇವರ ಗುರುಗಳು. ಇವರ



ಮೂರ್ತಿಯನ್ನು ತಮ್ಮ ವಿದ್ಯಾ ಸಂಸ್ಥೆಯ ಆವರಣದಲ್ಲಿ ಸ್ಥಾಪನೆ ಮಾಡಿದ್ದಾರೆ. ಅಲ್ಲದೇ ಇವತ್ತಿಗೂ ಜಂಬಲದಿನ್ನಿ ಅವರ ಮೂರ್ತಿಗೆ ಪೂಜೆ ಮಾಡಿದ ನಂತರವೇ ಇವರು ತಮ್ಮ ದಿನದ ಸಂಗೀತ ಸೇವೆಯನ್ನು ಪ್ರಾರಂಭಿಸುತ್ತಾರೆ. ಇದು ಇವರು ತಮ್ಮ ಗುರುಗಳ ಬಗ್ಗೆ ಹೊಂದಿದ ಅಭಿಮಾನಕ್ಕೆ ಸಾಕ್ಷಿಯಾಗಿದೆ. ಗುರುಗಳ ಹೆಸರಿನಲ್ಲಿ ಸಂಗೀತ, ಸಮ್ಮೇಳನ ನಡೆಸಿ ಹೆಸರಾಂತ ಸಂಗೀತಗಾರರನ್ನು ಕರೆಯಿಸಿ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಈ ಪರಂಪರೆ ಕಳೆದ 15 ವರ್ಷಗಳಿಂದ ತಪ್ಪದೆ ನಡೆಯುತ್ತಲಿದೆ. ಈ ಗುರುವಂದನ ಕಾರ್ಯಕ್ರಮದಿಂದ ವಡವಟ್ಟಿಯವರು ರಾಯಚೂರಿನ ಸಾಂಸ್ಕೃತಿಕ ಲೋಕಕ್ಕೆ ದೇಶದ ಅನೇಕ ಸಂಗೀತಗಾರರನ್ನು ಹಾಗೂ ಸಂಗೀತ ಪರಂಪರೆಯನ್ನು ನಿರಂತರವಾಗಿ ಅನಾವರಣಗೊಳಿಸುತ್ತಾ ಬಂದಿದ್ದಾರೆ. ಇವರು ಗುರುಗಳಿಂದ ಕಲಿತದ್ದು ಗಾಯನ ಪರಂಪರೆ ಆದರೆ ಇವರು ತಮ್ಮ ಆಸಕ್ತಿ ಕ್ಲಾರಿಯೊನೆಟ್ ನುಡಿಸುವುದರಲ್ಲಿದ್ದ ಪ್ರಯುಕ್ತ ಗಾಯನಕ್ಕಿಂತ ಕ್ಲಾರಿಯೊನೆಟ್ ನುಡಿಸುವುದರಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದಾರೆ. ಇವರು ಇಂದು ದೊಡ್ಡ ಪ್ರಮಾಣದಲ್ಲಿ ಹೆಸರು ಮಾಡಿರುವುದು ಕ್ಲಾರಿಯೊನೆಟ್ ನುಡಿಸುವುದರಲ್ಲಿಯೇ ಎಂದರೆ ತಪ್ಪಾಗಲಾರದು.

ವಡವಟ್ಟಿಯವರು ಇಂದು ವಿದೇಶಿ ಮಾಧ್ಯಮದಲ್ಲಿ ಸುಶ್ರಾವ್ಯವಾಗಿ ಹಿಂದುಸ್ತಾನಿ ರಾಗಗಳನ್ನು ನುಡಿಸುವಲ್ಲಿ ಸುಪ್ರಸಿದ್ಧ ಸರೋದವಾದಕ ಪಂ. ರಾಜೀವ ತಾರನಾಥ ಅವರ ಮಾರ್ಗದರ್ಶನವನ್ನು ಪಡೆದಿದ್ದಾರೆ. ವಿದೇಶಿ ವಾದ್ಯವಾದ ಸ್ಯಾಕ್ಸೋಫೋನಿನಲ್ಲಿ ಭಾರತೀಯ ಸಂಗೀತವನ್ನು ನುಡಿಸುತ್ತಿರುವ ಖ್ಯಾತ ನಾಮರು ಪಂ. ಕದ್ರಿ ಗೋಪಿನಾಥ್‌ರವರು ಪಂ. ವಡವಟ್ಟಿಯವರ ಹಾಗೂ ಪಂ. ಗೋಪಿನಾಥ ಅವರ ಕ್ಲಾರಿಯೊನೆಟ್ ಹಾಗೂ ಸ್ಯಾಕ್ಸೋಫೋನಿನ ಜುಗಲ್‌ಬಂದಿ ಕಾರ್ಯಕ್ರಮ ದೇಶವಿದೇಶದಲ್ಲಿ ಖ್ಯಾತಿಯನ್ನು ಗಳಿಸಿದೆ. ಇವರ ಜುಗಲ್‌ಬಂದಿಯ ಕ್ಯಾಸೆಟ್‌ಗಳು ಇಂದು ದೇಶ–ವಿದೇಶದಲ್ಲಿ ಹೆಸರು ಮಾಡಿವೆ. ಸರಳಜೀವಿಯಾದ ವಡವಟ್ಟಿಯವರು ತಮ್ಮ ಕ್ಲಾರಿಯೊನೆಟ್‌ನ್ನು ಭಾರತದ ಅನೇಕ ನಗರಗಳಲ್ಲಿ ನುಡಿಸಿದ್ದಾರೆ. ಕರ್ನಾಟಕ ಸಂಗೀತದಲ್ಲೂ ಕ್ಲಾರಿಯೊನೆಟ್ ನುಡಿಸುವ ವಿದ್ವಾನ ಎ.ಕೆ.ಸಿ. ನಟರಾಜನರವರೊಂದಿಗೆ ಹಿಂದೂಸ್ತಾನಿ ಸಂಗೀತ ನುಡಿಸಿದ ಹಿರಿಮೆ ಇವರದ್ದಾಗಿದೆ. ಡಾ. ಕಾರ್ನೈಕುಡಿ ಸುಬ್ರಮಣ್ಯಂರ ವೀಣೆಯೊಂದಿಗೂ ಕ್ಲಾರಿಯೊನೆಟ್ ಜುಗಲಬಂದಿ ನುಡಿಸಿದ್ದಾರೆ. ಹೀಗೆ ಜುಗಲಬಂದಿ ಕಾರ್ಯಕ್ರಮಗಳ ಮೂಲಕ ಪ್ರಖ್ಯಾತಿಯ ಶಿಖರವನ್ನು ಏರಿದ್ದರೂ ತಮ್ಮ ಸರಳ ಸೌಜನ್ಯ ಪೂರಿತ ವ್ಯಕ್ತಿತ್ವದಿಂದ ಸಂಗೀತ ಪ್ರಪಂಚದಲ್ಲಿ ತಮ್ಮದೇ ಆದ ವಿಶಿಷ್ಟವಾದ ಛಾಪನ್ನು ಮೂಡಿಸಿದ್ದಾರೆ. ಜುಗಲಬಂದಿ ಅಲ್ಲದೇ ಒಬ್ಬರೇ ತಮ್ಮ ವಾದ್ಯವನ್ನು ನುಡಿಸುವ ಮೂಲಕ ಅನೇಕ ಸಂಗೀತ ಕಛೇರಿಗಳನ್ನು ದೇಶ–ವಿದೇಶಗಳಲ್ಲೂ ನಡೆಸಿಕೊಟ್ಟಿದ್ದಾರೆ. ಕ್ಲಾರಿಯೊನೆಟ್‌ನಲ್ಲಿ ಇವರ ತಜ್ಞತೆಯನ್ನು ಗುರುತಿಸಿದ ವಿದೇಶಿಯರು ಅನೇಕ ಬಾರಿ ತಮ್ಮ ದೇಶಕ್ಕೆ ಕರೆಸಿಕೊಂಡಿದ್ದಾರೆ. ಸಂದರ್ಶಕ ಉಪನ್ಯಾಸಕರಾಗಿ 1998ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದ್ದಾರೆ.

ನರಸಿಂಹಲು ವಡವಟ್ಟಿಯವರ ಸಂಗೀತ ಸಾಧನೆಯನ್ನು ಗುರುತಿಸಿ ಅನೇಕ ಪ್ರಶಸ್ತಿಪುರಸ್ಕಾರಗಳು ಬಂದಿವೆ. 1997–98ರ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 'ಹಿಂದೂಸ್ತಾನಿ ಕ್ಲಾರಿಯೊನೆಟ್ ಸಂಗೀತರತ್ನ' ಎಂಬ ಬಿರುದನ್ನು ತಮಿಳುನಾಡು ಸರಕಾರದ ಕೋಯಮುತ್ತೂರು ಸಂಗೀತ ಕಾಲೇಜಿನವರು ನೀಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಕರ್ನಾಟಕ ಕಲಾತಿಲಕ, ಮುಂಬೈನ ಸುರ್‌ಸಿಂಗಾರ್ ಸಂಸದ್‌ರವರಿಂದ 'ಸುರಮಣಿ' ಎಂಬ ಬಿರುದುಗಳು ನರಸಿಂಹಲು ವಡವಟ್ಟಿಯವರನ್ನು ಹುಡುಕಿಕೊಂಡು ಬಂದಿವೆ. ಶ್ರೀ ಶೃಂಗೇರಿ ಶಾರದಾ ಪೀಠದ ಶ್ರೀ ಜಗದ್ಗುರು ಶ್ರೀಮದ್ ಭಾರತಿ ತೀರ್ಥ ಸ್ವಾಮಿಜಿಯವರಿಂದ 'ಆಸ್ಥಾನ ವಿದ್ವಾನ್' ಎಂಬ ಪ್ರಶಸ್ತಿ ಮತ್ತು ಬಂಗಾರದ ಪದಕವನ್ನು ನೀಡಿ ಗೌರವಿಸಿದ್ದಾರೆ. ಇಂದು ಕರ್ನಾಟಕ ರಾಜ್ಯದ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ರಾಜ್ಯದ ಅನೇಕ ಭಾಗಗಳಲ್ಲಿ ಸಂಗೀತದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಪ್ರೀತಿಯನ್ನು ಗಳಿಸಿದ್ದಾರೆ. ವಡವಟ್ಟಿಯವರು ಕಲಿಯುವುದರಲ್ಲಿ ಮತ್ತು ಕಲಿಸುವುದರಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದು, ತಮ್ಮ ಮಗನಿಗೂ ಸಹ ಕ್ಲಾರಿಯೊನೆಟ್ ಕಲಿಸುತ್ತಿದ್ದಾರೆ. ಇವರ ಇಬ್ಬರು ಹೆಣ್ಣುಮಕ್ಕಳು ಹಿಂದೂಸ್ತಾನಿ ಗಾಯಕರಾಗಿ ಹೆಸರು ಮಾಡುತ್ತಿದ್ದಾರೆ.

ರಾಯಚೂರಿನ ಪರಿಸರದಲ್ಲಿ ಸಂಗೀತ ಪರಂಪರೆ ಜೀವಂತವಾಗಿ ಉಳಿಯಲು ಸ್ವರ ಸಂಗಮ ಸಂಗೀತ ಶಾಲೆಯೊಂದನ್ನು ಪ್ರಾರಂಭಿಸಿದ್ದಾರೆ. ಇದು ಅವರ ಬಹುದಿನದ ಬಯಕೆ ಕೂಡ ಆಗಿತ್ತು. ಈ ಸಂಗೀತ ಶಾಲೆಯಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬಂದ ಬಡವಿದ್ಯಾರ್ಥಿಗಳಿಗೆ ಇವರು ಸಂಗೀತದ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. (ಎಸ್‌ಸಿಪಿ)

ನರ್ಮದಾ ಚಿಂಚನಸೂರ: ಕಲಿಕೆ, ಕಲೆ, ಹವ್ಯಾಸಗಳಿಗೆ ವಯಸ್ಸು, ಎಂದೆಂದಿಗೂ ಅಡ್ಡಿಯಾಗದು. ಆಸಕ್ತಿಯೊಂದಿದ್ದರೆ ಏನನ್ನಾದರೂ ಸಾಧಿಸಬಹುದು. ಇದಕ್ಕೆ ಕಲಬುರ್ಗಿಯ 76 ರ ಹರೆಯದ ನರ್ಮದಾಬಾಯಿ ಚಿಂಚನಸುರ ಸಾಕ್ಷಿಯಾಗುತ್ತಾರೆ. ಇವರೊಬ್ಬ ಅಪರೂಪದ ಮಹಿಳೆ, ಕಲಬುರ್ಗಿಯ ಎನ್.ಜಿ.ಓ. ಕಾಲೋನಿಯಲ್ಲಿ ವಾಸವಾಗಿರುವ ಇವರು ಚಿಕ್ಕವಯಸ್ಸಿ

ನಿಂದಲೇ ಕಸೂತಿ, ಕರಕುಶಲ ಕಲೆ, ರಂಗೋಲಿ ಹಾಗೂ ಇನ್ನಿತರ ಹವ್ಯಾಸಗಳನ್ನು ರೂಢಿಸಿ ಕೊಂಡಿದ್ದು, ಇಂದಿಗೂ ತಮ್ಮ ಕೈ ಯಿಂದ ಒಂದಿಲ್ಲೊಂದು ಕಲಾಕೃತಿ ಯನ್ನು ಹೊರ ತರುತ್ತಲೇ ಇದ್ದಾರೆ.



ಇತ್ತೀಚೆಗೆ ಗಣೇಶ ಚತುರ್ಥಿ ಸುಂದರ್ಭದಲ್ಲಿ ಕಲಬುರ್ಗಿಯ ಸೇಡಂ ರಸ್ತೆಯಲ್ಲಿರುವ ಚೈತನ್ಯ ಮಯಿ ಆರ್ಟ್‌ಗ್ಯಾಲರಿಯಲ್ಲಿ ಏರ್ಪಪಡಿಸಲಾಗಿದ್ದ 'ಗಣೇಶ ದರ್ಶನ' ಕಾರ್ಯಕ್ರಮಗಳಲ್ಲಿ ನರ್ಮದಾಬಾಯಿ ಅವರು ಸಿದ್ಧ ಪಡಿಸಿದ ವೈವಿಧ್ಯಮಯ ಗಣೇಶ ವಿಗ್ರಹಗಳ ಪ್ರದರ್ಶನ ನಡೆಯಿತು. ಈ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯುವಲ್ಲಿ ಯಶಸ್ವಿ ಯಾಯಿತು.

ಹವ್ಯಾಸಿ ಸಂಗ್ರಹಕಾರರೂ, ಹಿರಿಯ ಕರಕುಶಲ ಕಲಾ ವಿದೆಯೂ ಆದ ನರ್ಮದಾಬಾಯಿ ಚಿಂಚನಸೂರ ಅವರು ಮನೆಯಲ್ಲಿಯೇ ಲಭ್ಯವಿರುವ ಹಳೆಯ ಟೂಥ್‌ಪೇಸ್ಟ್ ಡಬ್ಬಿ, ಬಾಟಲಿ, ಮದುವೆಯ ಕಾರ್ಡ್, ಹತ್ತಿ ಬೀಜ, ಹತ್ತಿ, ಟೆಂಗಿನ ಗುಂಜು, ಶಂಖ, ಹಳೆಯ ಉಳಿದ ಜರಿ ಬಟ್ಟೆ ಇನ್ನಿತರ ವಸ್ತು ಗಳನ್ನು ಉಪಯೋಗಿಸಿ ಕಲಾತ್ಮಕ ಗೊಂಬೆಗಳನ್ನು ತಯಾರಿಸಿ ದ್ದಾರೆ. ಇದಲ್ಲದೇ ಗಣೇಶ, ಗೌರಿ–ಲಕ್ಷ್ಮೀ, ಅಂಬಾ ಭವಾನಿ, ವೆಂಕಟರಮಣ ವಿಗ್ರಹಗಳನ್ನು ತಯಾರಿಸಿದ್ದಾರೆ. ಈ ವಿಗ್ರಹಗಳ ಪೈಕಿ ಗಣೇಶನ ವಿಗ್ರಹಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವೆಲ್ಲವೂ ಆಕರ್ಷಕವಾಗಿವೆ.

ಮನೆಯಲ್ಲಿಯೇ ಲಭ್ಯವಿರುವ ಎಲ್ಲಾಗಳನ್ನು ಉಪಯೋಗಿಸಿ ಕೊಂಡೇ ಅನೇಕ ಸಣ್ಣ ಪುಟ್ಟ ಆಟಿಕೆ ಬೊಂಬೆಗಳನ್ನು ಅವರು ಸಿದ್ಧಪಡಿಸಿದ್ದಾರೆ. ಆಕರ್ಷಕ ಗೊಂಬೆ ವಿಗ್ರಹಗಳನ್ನು ಸಿದ್ಧಪಡಿಸು



ಗೊಂಬೆ ಕಲಾಕೃತಿಗಳು

ವುದಕ್ಕಾಗಿ ಅವರು ಎಲ್ಲಿಯೂ ತರಬೇತಿ ಪಡೆದಿಲ್ಲ. ವಿವಿಧ ಕಡೆಗಳಲ್ಲಿ ನಡೆಯುವ ಕಲಾಕೃತಿಗಳ ಪ್ರದರ್ಶನ ವೀಕ್ಷಣೆ ಮಾಡಿಯೋ ಇಲ್ಲವೇ ಪುಸ್ತಕಗಳಲ್ಲಿರುವ ಚಿತ್ರಗಳನ್ನು ನೋಡಿಯೇ ಕಲಾಕೃತಿಗಳನ್ನು ರಚಿಸಿದ್ದಾರೆ. ಈಗಾಗಲೇ ನೂರಾರು ಕಲಾಕೃತಿಗಳನ್ನು ರಚಿಸಿರುವ ಅವರು, ಅಗತ್ಯ ಕಂಡು ಬಂದಲ್ಲಿ ಅಡಕೆ, ಉತ್ತತ್ತಿ ಉಪಯೋಗಿಸಿದ್ದಾರೆ. ಗಣೇಶನ ಕಿವಿ ರೂಪ ಹೋಗುವುದಕ್ಕಾಗಿ ಗೊಡಂಬಿಯನ್ನು ಬಳಕೆ ಮಾಡಿರು ವುದು ಮತ್ತೊಂದು ವಿಶೇಷ.

ಇವರು 45 ವರ್ಷದವರಾಗಿದ್ದಾಗಲೇ ಪತಿಯನ್ನು ಕಳೆದು ಕೊಂಡರು ಆದರೂ ತಮ್ಮ ಏಳು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಮಾಡಿದರು. ಇದೇ ಕಾರಣಕ್ಕಾಗಿ ಕಲಾಕೃತಿಗಳನ್ನು ರಚನೆ ಮಾಡುವ ಕೆಲಸ ನಿಲ್ಲಿಸಬೇಕಾಯಿತು. ಮತ್ತೆ ಒಂದೂವರೆ ದಶಕದ ನಂತರ ಅವರು ಕಲಾಕೃತಿಗಳನ್ನು ರಚನೆ ಮಾಡಲು ಪ್ರಾರಂಭಿಸಿದ್ದಾರೆ. ನರ್ಮದಾ ಬಾಯಿ ಅವರ ಪ್ರತಿಭೆಯನ್ನು ಗುರುತಿಸಿ ಚೈತನ್ಯಮಯಿ ಆರ್ಟ್ ಗ್ಯಾಲರಿಯ ನಿರ್ದೇಶಕರೂ, ಖ್ಯಾತ ಕಲಾವಿದರೂ ಆಗಿರುವ ಎ.ಎಸ್. ಪಾಟೀಲ ಅವರು ಗಣೇಶ ಉತ್ಸವದ ಸಂದರ್ಭದಲ್ಲಿ ಅವುಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದಾರೆ.

ನರ್ಮದಾಬಾಯಿ ಅವರ ತೃತೀಯ ಪುತ್ರ ಅನಂತ ಚಿಂಚನಸೂರ ಅವರು ಕಲಬುರ್ಗಿಯ ಹೆಸರಾಂತ ಭರತನಾಟ್ಯ ಸಂಸ್ಥೆ ವರ್ಣಸಿಂಧು ನೃತ್ಯ ಕಲಾಕೇಂದ್ರದ ನಿರ್ದೇಶಕರಾಗಿ ದ್ದಾರೆ. ಮಗ ಅನಂತ ಹಾಗೂ ಸೊಸೆ ಉಮಾ ಅವರ ಪೂರ್ಣ ಸಹಕಾರದಿಂದ ತಾವು ಕಲಾಕೃತಿಗಳನ್ನು ರಚನೆ ಮಾಡಲು ಸಾಧ್ಯವಾಗಿದೆ. ಮುಂಬರುವ ದಿನಗಳಲ್ಲಿ ಗಣೇಶನ ಬೇರೆ ಬೇರೆ ವಿನ್ಯಾಸದ ಮೂರ್ತಿಗಳನ್ನು ತಯಾರಿಸುವ ಆಸೆಯನ್ನು ಹೊಂದಿದ್ದಾರೆ. (ಜೆಕೆ)

ನವಲಿ ಐ.ಎಸ್.: ರಂಗಭೂಮಿ ಕಲಾವಿದ. ವೃತ್ತಿ ಮತ್ತು ಪ್ರವೃತ್ತಿ ಎರಡನ್ನೂ ಅತ್ಯಂತ ನಿಷ್ಠೆಯಿಂದ ಮಾಡುತ್ತ ಎರಡಕ್ಕೂ ನ್ಯಾಯ ದೊರಕಿಸಿ ಜೀವಿಸುವವರು ಅಪರೂಪ. ಅಂಥ ಅಪರೂಪದ ವ್ಯಕ್ತಿಗಳಲ್ಲಿ ಸರಳ ಹಾಗೂ ಸಜ್ಜನಿಕೆಯ ರಂಗ ಕಲಾವಿದ. ಮೂಲತಃ ಬಿಜಾಪೂರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೋಟಗಿ ಗ್ರಾಮದವರು. ತಮ್ಮ ನಾಟಕದ ಹವ್ಯಾಸವನ್ನು ತಂದೆ ಸೋಮಣ್ಣ ನವಲಿಯವರಿಂದ ಬಳುವಳಿಯಾಗಿ ಪಡೆದು ಕೊಂಡವರು. ಬಾಲ್ಯ ಶಿಕ್ಷಣದ ಜೊತೆಗೆ ನಾಟಕಗಳಲ್ಲಿ ಪಾತ್ರವಹಿ ಸುವುದೆಂದರೆ ಅತ್ಯಂತ ಹರ್ಷ. ತಮ್ಮ ಏಳನೆಯ ವಯಸ್ಸಿನಲ್ಲಿ ಕಪಟ ವೇಷಧಾರಿ ಎಂಬ ನಾಟಕದೊಂದಿಗೆ ರಂಗಪ್ರವೇಶ ಮಾಡಿ, ಅನಂತರ ಕೆ.ಎನ್. ಸಾಳುಂಕೆಯವರ ಹೊಸಬಾಳು ನಾಟಕದಲ್ಲಿ ಅಭಿನಯಸಿದರು. ಹಳ್ಳಿಯಲ್ಲಿ ಜರುಗುವ ಬಯಲಾಟ ಶ್ರೀಕೃಷ್ಣ ಪಾರಿಜಾತ ಮುಂತಾದ ಕಾರ್ಯಕ್ರಮ ಗಳಲ್ಲಿ ಪಾಲ್ಗೊಂಡು ಊರವರ ಕಣ್ಮಣಿಯಾಗಿ ಬೆಳೆದರು. ಮುಂದೆ ವ್ಯಾಸಂಗ ಮುಗಿಯುವ ವರೆಗೂ ತಮ್ಮ ಹವ್ಯಾಸಕ್ಕೆ

ಕಡಿವಾಣ ಹಾಕಿ, ಅಭ್ಯಾಸದತ್ತ ಗಮನ ನೀಡಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರು.

1973ರಲ್ಲಿ ದೂರವಾಣಿ ಇಲಾಖೆ ಕೆಲಸಕ್ಕೆ ಸೇರಿ ಕಲಬುರ್ಗಿಗೆ ಬಂದ ಅನಂತರ ಮತ್ತೆ ನಾಟಕದ ಗೀಳು ಪ್ರಾರಂಭವಾಯಿತು. 1975ರಲ್ಲಿ ಗಿರಡ್ಡಿ ಗೋವಿಂದರಾಜ್, ಚಂದ್ರಕಾಂತ ಕುಸನೂರು, ಕೆ. ಶ್ರೀಧರ ರಾವ್, ಸಿ.ಬಿ.ಮಠ, ಹೇಮಂತ ಕೊಲ್ಹಾಪುರ ಅವರೊಡನೆ ನಿಕಟ ಸಂಪರ್ಕದಿಂದ ರಂಗ ಮಾಧ್ಯಮ ನಾಟಕ ತಂಡ ಸೇರಿದರು. ಅಂದಿನ ಯುವ ಪೀಳಿಗೆಯವರೊಂದಿಗೆ ಅನೇಕ ನಾಟಕಗಳನ್ನು ಪ್ರದರ್ಶಿಸಿದರು. ಅಂದಿನ ಸುಪ್ರಸಿದ್ಧ ನಟರಾದ ಧನ್ಯಕುಮಾರ ಕಿವಡೆ, ಡಾ. ಅಶೋಕ ತೋಳನೂರು, ಎಂ.ಸಿ. ಕೋರಿ, ಚಂದ್ರಗುಪ್ತ ಚಾಂದಕವಟೆ, ಸೀತಾ ಜೋಷಿ (ಮುಲ್ಲಾಬಾದಿ), ಹೇಮಂತ ಕೋಲ್ಹಾಪೂರೆ, ಮಲ್ಲಿಕಾರ್ಜುನ ಹಸರಗುಂಡಿಗಿ ಅವರೊಂದಿಗೆ ಹವ್ಯಾಸಿ ನಾಟಕಗಳ ಪ್ರದರ್ಶನದಲ್ಲಿ ಕ್ರಾಂತಿಯನ್ನೇ ಮಾಡಿದರು. ತಮ್ಮ ನಾಟಕದ ಹವ್ಯಾಸದಿಂದ ರಿಹರ್ಸಲ್ ತಪ್ಪಬಾರದು ಕೆಲಸವೂ ನಡೆದಿರಬೇಕು. ನಾಟಕಕ್ಕಾಗಿ ತಮ್ಮ ಕೆಲಸದ ಸಮಯವನ್ನು ರಾತ್ರಿಯ ಪಾಳಿಗೆ ಬದಲಾಯಿಸಿಕೊಳ್ಳುತ್ತಿದ್ದರು. ರಂಗ ಮಾಧ್ಯಮದಿಂದ ಚಂದ್ರಕಾಂತ ಕುಸನೂರ ಅವರ 'ಮನೆ', ವಿಠಲ್‌ರಾವ್ ಕುಲಕರ್ಣಿಯವರ ನಿರ್ದೇಶನದಲ್ಲಿ ಚಂದ್ರಶೇಖರ ಕಂಬಾರರ 'ಖರೋಖರ ಚಾಳೀಶಾ', ಶ್ರೀರಂಗದ 'ಏನು ಬೇಡಲಿ' ಮುಂತಾದ ನಾಟಕಗಳಲ್ಲಿ ಸಮರ್ಥವಾಗಿ ಪಾತ್ರ ನಿರ್ವಹಿಸಿ ಜನಮೆಚ್ಚುಗೆ ಪಡೆದರು.

ನೃಪತುಂಗ ಬರಹಗಾರರ ಸಂಘದಿಂದ ಶ್ರೀರಂಗರ ಏನ ಬೇಡಲಿ. ಪ್ರಪ್ರಥಮ ಬಾರಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದರು. ಮುಂದೆ ಮತ್ತೆ ರಂಗ ಮಾಧ್ಯಮದಿಂದ ಕುಸನೂರರ ಭರತಖಂಡೇ, ಜಂಭೂದ್ವೀಪೆ, ಕಂಬಾರರ ಜೈಸಿದ್ಧ ನಾಯಕ, ಹರಕೆಯ ಕುರಿ(1975), ಶ್ರೀರಂಗರ ಕೇಳು ಜನಮೇಜಯ, ಸಮಗ್ರಮಂಥನ, ಶಂಕರ ಶೇಷರ ಆಧುನಿಕ ದ್ರೋಣ ಮುಂತಾದ ನಾಟಕಗಳಲ್ಲಿ ಪಾತ್ರವಹಿಸಿ, ಪಾತ್ರಗಳಿಗೆ ಜೀವ ತುಂಬಿದರು.

ಜೈಸಿದ ನಾಯಕದ ಉರಿನಿಂಗ ಪಾತ್ರದಲ್ಲಿ ನವಲಿಯವರು ಅತ್ಯುನ್ನತವಾಗಿ ಅಭಿನಯಿಸಿ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದರು. ಆ ಪಾತ್ರದಲ್ಲಿ ಏಕಾಂಗಿಯಾಗಿ ಹೋರಾಡುವ ಯುವಕನಾಗಿ, ಹತಾಶೆ ನೋವುಗಳನ್ನು ಪಾತ್ರದಲ್ಲಿ ಅಭಿವ್ಯಕ್ತಿಸಿ, ಉರಿನಿಂಗನ ಪಾತ್ರಕ್ಕೆ ಅತ್ಯುತ್ತಮವಾದ ಹೆಸರು ತಂದರು. ಇಂದಿಗೂ ಅವರ ಉರಿನಿಂಗನ ಪಾತ್ರ ಅಚ್ಚಳಿಯದೇ ಕಲಾಪ್ರೇಮಿಗಳ ಮನದಲ್ಲಿ ಹಚ್ಚ ಹಸುರಾಗಿದೆ. ಬೀದರ, ಬಾಗಲಕೋಟೆ, ಹುನಗುಂದ, ರಾಯಚೂರು, ಯಾದಗಿರಿ, ಶಹಾಬಾದ್, ಬೆಂಗಳೂರು, ಚೆನ್ನೈ ಮುಂತಾದ ಕಡೆಗಳಲ್ಲಿ ಅಭಿನಯಿಸಿ, ಅಪಾರ ಜನ ಮೆಚ್ಚುಗೆ ಪಡೆದಿದ್ದಾರೆ.

ಕಲಬುರ್ಗಿ ಆಕಾಶವಾಣಿ ಕೇಂದ್ರದ ಬಿ–ಹೈ ಕಲಾವಿದರಾಗಿ ಸುಮಾರು 50ಕ್ಕೂ ಹೆಚ್ಚು ನಾಟಕಗಳಲ್ಲಿ ಪಾಲ್ಗೊಂಡಿದ್ದಾರೆ. ಇವರ ಧ್ವನಿಯಲ್ಲಿ ವಿಶೇಷವಾದ ಆಕರ್ಷಣೆಯಿದೆ. ಧ್ವನಿಯಲ್ಲಿನ ಏರಿಳಿತ, ಕಂಚಿನ ಕಂಠ, ನೋವು, ಆರ್ದತೆ, ಯಾಚನೆ ಸಂಕಟ ಏನೆಲ್ಲ ಭಾವನೆಗಳನ್ನು ಬಿಂಬಿಸುವ ಕಂಠ ಹಾಗೆಂದೇ ಜಿ.ಎಂ. ಶಿರಹಟ್ಟಿ (ನಿವೃತ್ತ ನಿಲಯ ನಿರ್ದೇಶಕರು, ದೂರದರ್ಶನ ಕೇಂದ್ರ, ಬೆಂಗಳೂರು) ಈ ಕಲಾವಿದನನ್ನು ಬಹಳಷ್ಟು ಇಷ್ಟಪಡುತ್ತಿದ್ದರು. ಆಕಾಶವಾಣಿಯಲ್ಲಿ ಕದಡಿದ ನೀರು ನಾಟಕದಲ್ಲಿ ಮುದುಕನ ಪಾತ್ರವಹಿಸಿ, ತಮ್ಮ ಕಂಠದಿಂದ ನೋವಿನ ಯಾತನೆಯ ಭಾವವನ್ನು ಚಿಮ್ಮಿಸಿ ಕೇಳುಗರ ಕಣ್ಣಲ್ಲಿ ನೀರುಕ್ಕಿಸಿದರು. ಅಷ್ಟೊಂದು ಭಾವಪರವಶರಾಗಿ ತನ್ನದೆ ನೋವೆಂಬುವಂತೆ ಅನುಭವಿಸುತ್ತಾರೆ, ಅದನ್ನು ಪ್ರದರ್ಶಿಸುತ್ತಾರೆ.

ಇದರ ಜೊತೆಗೆ ದೂರದರ್ಶನಕ್ಕಾಗಿ ಜಿ.ಎಂ. ಶಿರಹಟ್ಟಿಯವರ 'ಜೋಗಿಭಾವಿ', ಅನಂತ ಹರಸೂರ ಅವರ 'ಮಾವಟೆಲಿ' ನಾಟಕಗಳಲ್ಲಿಯೂ ಭಾಗವಹಿಸಿ ಶಹಬ್ಬಾಸಗಿರಿ ಪಡೆದರು. ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣರ ಅಸ್ಫೋಟದಲ್ಲಿ ಅಭಿನಯಿಸಿ ಬೆಳ್ಳಿ ತೆರೆಯಲ್ಲೂ ಮಿಂಚಿದ್ದಾರೆ. ರಂಗದ ಮೇಲಷ್ಟೇ ತಮ್ಮ ಪ್ರತಿಭೆ ತೊರುವವರು ಹಲವರಿದ್ದಾರೆ. ಆದರೆ ಇವರು ನೇಪಥ್ಯದಲ್ಲೂ ಕೆಲಸ ಮಾಡಿ ಮಿಂಚಿದ್ದಾರೆ. ರಂಗಮಂಚದ ಮೇಲೆ ಜಮುಖಾನೆ ಹಾಸುವುದರಿಂದ ಹಿಡಿದು, ಪರದೆ ಕಟ್ಟುವುದು ಲೈಟುಗಳನ್ನು ಕಟ್ಟುವುದು ರಂಗಕ್ಕೆ ಬೆಳಕನ್ನು ನೀಡುವುದು ಬ್ಯಾಟರಿಯ ಸಹಾಯದಿಂದ ಮೂಲ ಪ್ರತಿಯನ್ನು ವೀಕ್ಷಿಸುವುದು, ತಪ್ಪಿದ್ದಲ್ಲಿ ಮುಂದಿನ ದೃಶ್ಯದಲ್ಲಿ ತಿದ್ದಿಕೊಳ್ಳುವುದಕ್ಕಾಗಿ ಮಾರ್ಗದರ್ಶನ ನೀಡುವುದು, ಪ್ರೇಕ್ಷಕರ ಖುರ್ಚಿಗಳನ್ನು ಹಾಕುವುದು ಒಂದೇ ಎರಡೇ ಹೀಗೆ ರಂಗಭೂಮಿಯ ಎಲ್ಲ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಇವರ ಅಭಿನಯ ರಂಗ ಚಟುವಟಿಕೆಗಳ ಕೆಲಸಗಳನ್ನು ಕಂಡು ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು–ಕಲಬುರ್ಗಿ ವಿಶ್ವವಿದ್ಯಾಲಯ ಹಾಗೂ ಸಂಗಮೇಶ್ವರ ಮಹಿಳಾ ಮಂಡಲದ ಸಂಯುಕ್ತಾಶ್ರಯದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ. ಚಿತ್ರಕಲೆ ಹಾಗೂ ಸಂಗೀತವನ್ನು ಅಪಾರವಾಗಿ ಮೆಚ್ಚುವ ನವಲಿಯವರು, ಒಂದು ಜವಾಬ್ದಾರಿಯುತ ದೊಡ್ಡ ಹುದ್ದೆಯಲ್ಲಿದ್ದು ಅತ್ಯಂತ ಸರಳತನದಿಂದ ಜೀವನ ನಡೆಸುತ್ತಿದ್ದಾರೆ. (ಪಿಕೆ)

ನವಲಿಂಗ ಪಾಟೀಲ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಪೋಲಕಪಳ್ಳಿಯಲ್ಲಿ 1970ರಲ್ಲಿ ಜನಿಸಿದರು. ಅನಾಥ ಬಾಲಕನಾಗಿ ಹುಟ್ಟಿ ರೇವಣಸಿದ್ಧಪ್ಪ ಪಾಟೀಲರ ಸಾಕು ಮಗನಾಗಿ ಬೆಳೆದರು. ಚನ್ನಬಸವಪಟ್ಟಿ ದೇವರಿಂದ 1983ರಲ್ಲಿ ಲಿಂಗ ದೀಕ್ಷೆ ಪಡೆದು 'ನವಲಿಂಗ' ಎಂದು ನಾಮಕರಣಗೊಂಡರು. ಮುಂದೆ ಗದುಗಿನ ಪಂ. ಪುಟ್ಟರಾಜ ಗವಾಯಿಗಳ ಶಿಷ್ಯತ್ವ ಪಡೆದು 10 ವರ್ಷಗಳ ಕಾಲ ತಬಲಾ ಅಭ್ಯಾಸ ಮಾಡಿ ವಿದ್ವತ್ ಗ್ರೇಡ್ ಪಡೆದುಕೊಂಡಿದ್ದಾರೆ.

ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ರಾಜ್ಯಗಳಲ್ಲಿ ನಡೆಯುವ ಪ್ರವಚನ, ಕೀರ್ತನೆ, ಸಂಗೀತ ಸಮಾರಂಭಗಳಲ್ಲಿ ಅನೇಕ ಹಿರಿಯ, ಕಿರಿಯ ಕಲಾವಿದರೊಂದಿಗೆ ಕಾರ್ಯಕ್ರಮವನ್ನು ನೀಡಿದ ಕೀರ್ತಿ ಇವರಿಗಿದೆ. ಆಕಾಶವಾಣಿ, ದೂರದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪರಿಷತ್ತು, ಪ್ರತಿ ವರ್ಷ ಕೇಂದ್ರ ಕಾರಗೃಹದಲ್ಲಿ ನೃತ್ಯರೂಪಕ ಹಾಗೂ ಸಂಗೀತ ಮಂಜರಿ, ಕಾರ್ಯಕ್ರಮಗಳನ್ನು ನೀಡಿ ಜನರ ಮನ ತಣಿಸಿದ್ದಾರೆ. ಇವರೊಬ್ಬ ಹಾಸ್ಯ ಕಲಾವಿದರು.

ಪಾಟೀಲ ಅವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಇವರಿಗೆ ಹಲವಾರು ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ತಬಲಾ ವಾದನ ಚತುರ, ತಬಲಾ ಪ್ರವೀಣ, ನಗೆಮಾರಿ ನವಲಿಂಗ ಮೊದಲಾದ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

(ಆಯ್‌ಕೆ)

ನಾ



ನಾಗಣ್ಣ ಬಡಿಗೇರ: ಅನನ್ಯ ಕಾಷ್ಠ ಶಿಲ್ಪಿ. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಗೋನಾಳ ಎಸ್.ಡಿ. ಗ್ರಾಮದವರಾದ ಬಡಿಗೇರ್ ಓದಿದ್ದು ಕೇವಲ ಎರಡನೇ ತರಗತಿ. ಆದರೆ ನಿರಂತರ ಶ್ರದ್ಧೆ, ಶ್ರಮ ಮತ್ತು ಸಾಧನೆಯಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಅವರನ್ನು ಅರಸಿಕೊಂಡು ಬಂದುವು.

ತಾವು ನಿತ್ಯ ಬದುಕಿನಲ್ಲಿ ಕಂಡ ವಸ್ತು–ವಿಷಯ, ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸುವ ಮೂಲಕ ಅದನ್ನು ಕಲೆಯ ಬಲೆಯಲ್ಲಿ ನೇಯುತ್ತಿದ್ದರು. ಆ ಮೂಲಕ ಸಾಂಪ್ರದಾಯಿಕ ಕಲೆಯಲ್ಲಿ ಸಾಕಷ್ಟು ಸುಧಾರಣೆ ತಂದಿದ್ದರು. ಪರಂಪರಾಗತ ಶೈಲಿಯ ಜೊತೆಗೆ ಜಾನಪದೀಯ ಅಂಶಗಳನ್ನು ಬೆರೆಸಿ ನೂತನ ರೀತಿಯಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದ ಅವರ ಕಲಾ ಕೌಶಲ್ಯ ಎಂಥವರೂ ಮೆಚ್ಚುವಂತಿತ್ತು.

ಒಂದು ಮರದ ತುಂಡಿನಲ್ಲಿ ರಚಿಸಿದ ಗುಮರಿ, ಅನೇಕ ಕಟ್ಟಿಗೆಯ ತುಂಡುಗಳನ್ನು ಅಳತೆಬದ್ಧವಾಗಿ ಕೆತ್ತಿ ಚೆಂಡಿನಂತೆ ಹೆಣೆದಿದ್ದು. ಗಾಜಿನ ಬಾಟಲಿಯಲ್ಲಿ ರಾಗವಲ್ಲು, ಕೂರಿಗೆ, ಗ್ವಾರಿ, ತೇರು, ಹೊರಸು (ಹಗ್ಗದಿಂದ ಹೆಣೆದ ಮಂಚ) ಅಗಲಗತ್ತರಿ ಒಕ್ಕಲುತನದ ಸಲಕರಣೆಗಳು ಹಾಕಿರುವುದು ಇವರ ಕಲಾ ವಿಶೇಷಗಳೆಂದು ಹೇಳಬಹುದು.

1987ರಲ್ಲಿ ನಡೆದ ಮೈಸೂರು ದಸರಾ ವಸ್ತು ಪ್ರದರ್ಶನ, 1995ರಲ್ಲಿ ಸುರಪುರದಲ್ಲಿ ನಡೆದ ಸಗರನಾಡು ದರ್ಶನ ಕಾರ್ಯಕ್ರಮ, 2005ರಲ್ಲಿ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ವಾರ್ಷಿಕ ಶಿಲ್ಪಕಲಾ ಪ್ರದರ್ಶನದಲ್ಲಿ ಇವರ ಕಾಷ್ಠಶಿಲ್ಪಗಳು ಪ್ರದರ್ಶನಗೊಂಡಿದ್ದುವು.

ತಮ್ಮ ಸುದೀರ್ಘ ಕಲಾಜೀವನದಲ್ಲಿ ಹಲವಾರು ಗೃಹಾಲಂಕಾರ ಉಪಕರಣಗಳನ್ನು ವಾಸ್ತುಶಾಸ್ತ್ರ ರೀತಿಯಲ್ಲಿ ಮಾಡಿ ಕೊಟ್ಟಿದ್ದಾರೆ. ದೇವರ ಮನೆ, ಚದುರಂಗ ಪಡಸಾಲೆ, ತೊಲೆ, ಬೋದು, ಕಂಬ, ಗಡಿಗೆ, ತೋರಣ ಹೀಗೆ ಎಲ್ಲವೂ ಅಲಂಕಾರಗಳಿಂದ ತುಂಬಿರುತ್ತಿದ್ದವು. ಇವರು ತಯಾರಿಸಿದ ಪಲ್ಲಕ್ಕಿ, ರಥ, ಮಂಟಪ ಹಾಗೂ ಜನಪದ ಶೈಲಿಯ ಅನೇಕ ದೇವತಾ ವಿಗ್ರಹಗಳನ್ನು ಗುಲ್ಬರ್ಗ, ಬೀದರ್, ರಾಯಚೂರು ಜಿಲ್ಲೆ ಮಾತ್ರವಲ್ಲ ನೆರೆಯ ಆಂಧ್ರಪ್ರದೇಶದಲ್ಲೂ ಕಾಣಬಹುದು.

ಗುಲ್ಬರ್ಗದ ಶರಣಬಸವೇಶ್ವರ ದೇವಸ್ಥಾನದ ದಾಸೋಹ ಮನೆಯ ಬಾಗಿಲಿನ ಮೇಲೆ ಮತ್ತು ಅದರ ಬದಿಯಲ್ಲಿನ ಮಾವಿನಕಾಯಿ ಸುಳುವು, ಎಲೆ ಸುಳುವು, ಚಕೋರಪಕ್ಷಿ, ಗಿಳಿ, ಹಂಸ, ನವಿಲು, ಕಾಮಧೇನು, ಸರಪಳಿ, ರುದ್ರಾಕ್ಷಿಮಾಲೆ ಮುಂತಾದ ಚಿತ್ರ ಚಿತ್ತಾರಗಳು ಪ್ರವಾಸಿಗರ ಮನಸೆಳೆಯುತ್ತವೆ.


ತಂದೆ ಮೋನಪ್ಪ ಅವರನ್ನೇ ಗುರುವಾಗಿ ಮಾಡಿಕೊಂಡ ನಾಗಣ್ಣ ಬಡಿಗೇರ್ ಸಾಂಪ್ರದಾಯಿಕ ಮರಗೆತ್ತನೆ ಮೂಲಕ ಕಲಾ ಕೌಶಲವನ್ನು ಬಳಸಿ ಸಮಾಜ ಬೆಸೆಯುವ ಕೆಲಸಮಾಡಿದ್ದರು.

(ಎಸ್‌ಎಸ್)

ನಾಗಪ್ಪ ಶೇರಿಕಾರ: ದೊಡ್ಡಾಟದ ಕಲಾವಿದ. ಗುಲಬರ್ಗಾದ ಬಸವೇಶ್ವರ ನಗರದಲ್ಲಿ 1930ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಬಯಲಾಟದ ಗೀಳು ಹಚ್ಚಿಕೊಂಡವರು. ಮನೆಯಲ್ಲಿ ಸೋದರ ಮಾವ ಶಿವಲಿಂಗಪ್ಪ ಸಾಲಿ ದೊಡ್ಡ ತಂಡ ಕಟ್ಟಿಕೊಂಡು ಬಯಲಾಟದ ಮಾಸ್ತರರಾಗಿ ಮೆರೆದವರು. ಮಾವನೊಂದಿಗೆ 10–12 ವರ್ಷ ಎಲ್ಲದರಲ್ಲೂ ಪರಿಣಿತರಾಗಿ ಮುಂದೆ ಬೇರೆ ಬೇರೆ ಊರುಗಳಿಗೆ ಅತಿಥಿ ಕಲಾವಿದರಾಗಿ, ಮಾಸ್ತರರಾಗಿ ಕಲಿಸಿ ಆಡಿಸಿದ ಆಟಗಳು ನೂರಾರು.

ವೀರ ಅಭಿಮನ್ಯು, ಶಿವ ಜಲಂಧರ, ಬಸವೇಶ್ವರ, ಸತ್ಯಶೀಲ, ಹರಿಶ್ಚಂದ್ರ, ರಾಮ, ಲಕ್ಷ್ಮಣ, ಲವಕುಶ, ಐರಾವಣ–ಮೈರಾವಣ, ಸೀತಾಪಹರಣ, ರಾಮಾಯಣ, ಲಂಕಾದಹನ, ಚನ್ನಬಸವ, ಭೀಮ, ವಿಲಾಸ, ಸೀತಾ ಸ್ವಯಂವರ, ಪ್ರೇಮಿಲಿ, ಬಭ್ರುವಾನ ಇವರು ಆಡಿದ ಮತ್ತು ಆಡಿಸಿದ ಆಟಗಳು.

ಖ್ಯಾತ ಬಯಲಾಟದ ಮಾಸ್ತರರಾದ ಶಾಂತಪ್ಪ ಉಡುಚಣ ಅವರು ರಚಿಸಿದ ಶರಣಬಸವೇಶ್ವರ ಬಯಲಾಟದ ತಂಡದ ಸದಸ್ಯರಾಗಿ ಅವರಿಗೆ ಬಲಗೈಯಾಗಿ ಸತತ 40 ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿದವರು. ಆಟದಲ್ಲಿ ಬರುವ ಪಾತ್ರಗಳಲ್ಲಿ ತೊಡುವ, ವೇಷಭೂಷಣಗಳ ತಯಾರಿಕೆ ಇವರ ಕಾಯಕ. ರಾಜರ ವೇಷಭೂಷಣಗಳಂತೂ ಇವರ ಚಾಕಚಕ್ಯತೆಯಿಂದ ಅಂದವನ್ನು ಹೆಚ್ಚಿಸಿಕೊಳ್ಳುತ್ತಿದ್ದವು. ಕಿರಿಟ ಹಿಡಿದು ಪಾದದ ಪಾದುಕೆಗಳವರೆಗೆ ತಯಾರಿಸುವ ಮತ್ತು ಅದರಲ್ಲಿ ಆನಂದವನ್ನು ಹೊಂದುವ ನಾಗಪ್ಪನವರ ಪ್ರತಿಭೆ ಎದ್ದು ಕಾಣುತ್ತಿದ್ದವು. ತಂಡದ ವಸ್ತ್ರಗಳನ್ನು ತಯಾರಿಸುವುದು, ಪಾತ್ರ ಮಾಡುವುದು ಮತ್ತು ಹಾಡುಗಾರಿಕೆ ಇವರ ಇನ್ನೊಂದು ವಿಶಿಷ್ಟ ಕಲೆ, ದುಃಖವಿರಲಿ, ವಿಷಾದವಿರಲಿ, ಹಾಸ್ಯವಿರಲಿ, ರೌದ್ರವಿರಲಿ, ವೀರವಿರಲಿ, ಎಲ್ಲ ಪ್ರಸಂಗಗಳನ್ನು ಪ್ರೇಕ್ಷಕರ ಮನಮುಟ್ಟುವಂತೆ ಹಾಡುವ ಹಾಡುಗಾರಿಕೆ ತಾಳ ಮದ್ದಳೆಗಳ ಗತ್ತಿಗೆ ಕುಣಿತಕ್ಕೆ ಅನುವಾಗುವಂತೆ ಹಾಡಿನ ದಾಟಿಗಳನ್ನು ಸಂಯೋಜಿಸಿ ಹಾಡುವ ಇವರ ಅನುಭವ ಮತ್ತು ಪರಿಣತಿಗಳು ಹಾಗೂ ಸಾಹಿತ್ಯ ಸಮೃದ್ಧತೆಯು ಎಲ್ಲಕ್ಕಿಂತ ದೊಡ್ಡದು. ಅಫಜಲಪೂರ, ತಾಂಡೂರ, ಆಳಂದ, ಶಹಾಪೂರ, ಸುರಪುರ, ಲಿಂಗಸೂಗೂರ, ಯಾದಗಿರಿ, ಸೇಡಂ, ಮಹಾರಾಷ್ಟ್ರದ ಸೋಲಾಪುರ, ಅಕ್ಕಲಕೋಟ, ಚಿಂಚೋಳಿ, ಸುಲೇಪೇಟ, ಜೇವರ್ಗಿ ಎಲ್ಲ ಕಡೆಯಿಂದಲೂ ಭೇಷ್ ಎನಿಸಿಕೊಂಡ ನಾಗಪ್ಪನವರು ಶರಣ ಸಂಸ್ಥೆಯ ಪೂಜ್ಯ ದೊಡ್ಡಪ್ಪ ಅಪ್ಪ ಅವರಿಂದ ಸೈ ಎನಿಸಿಕೊಂಡರು. ಇನ್ನೂ ಆಟದ ಮಾಸ್ತರರಾಗಿ ಸೇವೆ ನೀಡುತ್ತಲಿದ್ದಾರೆ. (ಜಿಕೆ)



ಫೈಬರ್ ಶಿಲ್ಪ ಕಲಾಕೃತಿ

ನಾಗರತ್ನ ಎ. ಸಾಹು: 1972 ಡಿಸೆಂಬರ್ 4ರಂದು ಕಲಬುರ್ಗಿಯ ಸುಸಂಸ್ಕತ ಶ್ರೀಮಂತ ಮನೆತನವೊಂದರಲ್ಲಿ ತಂದೆ ಶ್ರೀ ದೇವರಾವ ಪಾಟೀಲ ತಾಯಿ ಶ್ರೀಮತಿ ಚನ್ನಮ್ಮ ಪಾಟೀಲ ಮಗಳಾಗಿ ಜನಿಸಿದರು. ತಮ್ಮ ಆರಂಭಿಕ ಶಿಕ್ಷಣವನ್ನು ನೂತನ ಕನ್ಯಾಶಾಲೆ ಗುಲಬರ್ಗಾದಲ್ಲಿ ಶಿಕ್ಷಣವನ್ನು ಮುಗಿಸಿ, ಪ್ರೌಢ ಶಿಕ್ಷಣವನ್ನು ಬೀದರಲ್ಲಿ ಸಿ.ಆರ್. ಎಸ್. ಸ್ಕೂಲ್‌ನಲ್ಲಿ ಮತ್ತು ಅಕ್ಕಮಹಾದೇವಿ ಶಾಲೆಯಲ್ಲಿ ಮುಗಿಸಿದರು.



ತಮ್ಮ 9ನೇ ತರಗತಿಯಲ್ಲಿ ನೂತನ ವಿದ್ಯಾಲಯದ ಸ್ಥಾಪನೆಯ 75ನೇ ವರ್ಷದ ನಿಮಿತ್ಯ ಏರ್ಪಡಿಸಿದ ಚಿತ್ರಕಲೆ ಸ್ಪರ್ಧೆಯಲ್ಲಿ ಇವರ ಚಿತ್ರಕಲೆಗೆ ಬಹುಮಾನ ಬಂದಿರುವದರಿಂದ ಎಲ್ಲಾ ಶಿಕ್ಷಕರ ಪ್ರೀತಿ ಪ್ರಶಂಸೆಗೆ ಪಾತ್ರರಾದರು. ಇವರು ಎಸ್‌ಎಸ್‌ಎಲ್‌ಸಿ ನಂತರ ಕಲೆಯಲ್ಲಿ ಹೆಚ್ಚಿನ ಆಸಕ್ತಿ ಉಳ್ಳವ ರಾಗಿದ್ದುದರಿಂದ ಇವರ ಆಸಕ್ತಿ ಮೇರೆಗೆ ಗೋದುತಾಯಿ ದೊಡ್ಡಪ್ಪ ಅಪ್ಪ ಕಲಾ ಮತ್ತು ವಾಣಿಜ್ಯ ಪದವಿಪೂರ್ವ ಮಹಿಳಾ ಮಹಾವಿದ್ಯಾಲಯದ 'ಓಕೇಶನಲ್ ಕೋರ್ಸ್'ನಲ್ಲಿ ಪ್ರವೇಶ ಪಡೆದು ಇಲ್ಲಿ ಹೋಲಿಗೆ (ಸ್ಟಿಚಿಂಗ್) ಮತ್ತು ಎಂಬ್ರಾಯಿಡರ್ ಎರಡು ವರ್ಷದ ಅಧ್ಯಯನದ ನಂತರ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ನಂತರ ಬಿ.ಎ.ಯಲ್ಲಿ ಪ್ರವೇಶವನ್ನು ಪಡೆದು ಇತಿಹಾಸ, ಸಂಗೀತ ಹಾಗೂ ಚಿತ್ರಕಲೆಯಲ್ಲಿ ಐಚ್ಛಿಕ ಗುಲಬರ್ಗಾ ದಲ್ಲಿ , ಎಂ.ಎ. ಪ್ರಥಮ ದರ್ಜೆಯಲ್ಲಿ ಪದವಿ ಪಡೆದಿದ್ದಾರೆ.

ಡಾ. ಜೆ.ಎಸ್. ಖಂಡೇರಾವ ಅವರ ಮಾರ್ಗದರ್ಶನದಲ್ಲಿ, ಭಾವಚಿತ್ರ, ಸಂಯೋಜನಾ ಚಿತ್ರ, ಪ್ರಕೃತಿಚಿತ್ರ, ಸ್ಥಿರಚಿತ್ರ ಹೀಗೆ ಬೇರೆ ಬೇರೆ ಕಲಾಪ್ರಕಾರಗಳಲ್ಲಿ ಕಲಾನೈಪುಣ್ಯತೆಯನ್ನು ಪಡೆದು ವಿದ್ಯಾರ್ಥಿ ದಿಸೆಯಿಂದಲೇ ಕಲಬುರ್ಗಿಯ ಯುವ ಮಹಿಳಾ ಕಲಾವಿದೆಯರಲ್ಲಿ ಗುರುತಿಸಿಕೊಂಡು ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಸೃಜನಶೀಲ ಕಲಾಕೃತಿಗಳನ್ನು ರಚಿಸುತ್ತ ಕಲಾಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತ ಮುನ್ನಡೆದರು. ಕರ್ನಾಟಕದ

ಕಲಾಕ್ಷೇತ್ರದಲ್ಲಿ ತನ್ನ ಸೃಜನಶೀಲ ಕಲಾಕೃತಿಗಳಿಂದ ಕಲಾ ಚಟುವಟಿಕೆಗಳಿಂದ ಯುವ ಕಲಾವಿದರಾಗಿ ಗುರುತಿಸಿಕೊಂಡ ಶ್ರೀ ಅಮೃತ್ ಸಾಹು ಅವರ ಬಾಳಸಂಗಾತಿಯಾಗಿ ಕೈಹಿಡಿದ ನಂತರ ಇವರಲ್ಲಿದ್ದ ಸೃಜನಶೀಲ ಕಲಾವಿದೆಗೆ ಕಲಾಪರಿಸರ ದೊರೆಯಿತು. ಆದ್ದರಿಂದ ಸದಾ ಕಲಾಕೃತಿಗಳ ರಚನೆಯ ಜೊತೆಗೆ ಕಲಾಶಿಬಿರಗಳಲ್ಲಿ ಸತತವಾಗಿ ಭಾಗವಹಿಸುತ್ತ ಕಲಾಕೃತಿ ಹಾಗೂ ಶಿಲ್ಪಕೃತಿಗಳನ್ನು ರಚಿಸುತ್ತಿದ್ದಾರೆ. 1999ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ, 2003ರಲ್ಲಿ ಸೌಥ್ ಸೆಂಟ್ರಲ್ ಝೋನ್ ನಾಗಪೂರ, 2007ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, 2008ರಲ್ಲಿ ಪ್ರಾಚ್ಯವಸ್ತು ಸಂಗ್ರಾಹಾಲಯ ಮತ್ತು ಪರಂಪರೆ ಇಲಾಖೆ, ಬೆಂಗಳೂರು ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಮೈಸೂರು, ದಿ. ಐಡಿಯಲ್ ಫೈನ್‌ಆರ್ಟ್ ಗುಲಬರ್ಗಾ ಇವರ ಸಂಯುಕ್ತ ಆಶ್ರಯದಲ್ಲಿ ಹಿರಿಯ ಚಿತ್ರಕಲಾವಿದರ ಚಿತ್ರಕಲಾ ಶಿಬಿರ ಹಾಗೂ ಅನೇಕ ಸಮೂಹ ಕಲಾಪ್ರದರ್ಶನಗಳನ್ನು ರಾಷ್ಟ್ರದ ಪ್ರತಿಷ್ಠಿತ ಕಲಾಗ್ಯಾಲರಿಗಳಲ್ಲಿ ನಡೆದಿವೆ.

1994ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಇವರು 2005ರಲ್ಲಿ ನೂತನ ಮಹಾವಿದ್ಯಾಲಯ ಹಾಗೂ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ನಾಡಿನ ಖ್ಯಾತ ಶಿಲ್ಪಕಲಾವಿದ ರಾದ ಶ್ರೀ ವೆಂಕಟಾಚಲಪತಿಯವರ ಮಾರ್ಗದರ್ಶನದಲ್ಲಿ ನಡೆದ 'ಫೈಬರ್ ಶಿಲ್ಪಕಲಾ ಶಿಬಿರದಲ್ಲಿ ಇವರಲ್ಲಿದ್ದ ಶಿಲ್ಪಕಲಾವಿದೆ ಯನ್ನು ಜಾಗೃತಗೊಳಿಸಿತ್ತು.

ಚಿತ್ರ ಹಾಗೂ ಶಿಲ್ಪ ರಚನೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡು ಇತ್ತೀಚಿಗೆ ನಡೆದ 'ಅಂತರಾಷ್ಟ್ರೀಯ ಶಿಂಪೋ ಜಿಯಮ್ 2011–12' ಶ್ರೀಗುರು ವಿದ್ಯಾಪೀಠ ಕಲಬುರ್ಗಿ ಯವರು ಆಯೋಜಿಸಿದ ಶಿಬಿರದಲ್ಲಿಯು ತಾಯಿ ಮಗುವಿನ ಸೃಜನಾತ್ಮಕ ಫೈಬರ್ ಶಿಲ್ಪವನ್ನು ರಚಿಸಿ ನಾಡಿನ ಹಿರಿಯ ಶಿಲ್ಪ ಕಲಾವಿದರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಇವರ ಕಲಾಕೃತಿಗಳಲ್ಲಿಯ ಪ್ರಮುಖ ವಿಷಯಗಳು ಮಹಿಳೆಯ ಬಾಲ್ಯ, ಗೆಳತಿ, ಜೀವನದ ಮೌಲ್ಯ, ಮುಂಗಾರು ಮಳೆ, ಪ್ರಕೃತಿಯಲ್ಲಿ ಸೌಂದರ್ಯ ಹೀಗೆ ಮಹಿಳಾ ಕಲಾವಿದೆಯ ಭಾವನೆಗಳನ್ನು ತನ್ನ ಅಭಿವ್ಯಕ್ತಿ ಮಾಧ್ಯಮವಾದ ಚಿತ್ರ ಹಾಗೂ ಶಿಲ್ಪಕಲಾ ಮಾಧ್ಯಮಗಳ ಮುಖಾಂತರ ಸೃಜನಾತ್ಮಕವಾದ ಕೃತಿ ರಚನೆಯನ್ನು ಮಾಡುತ್ತಿದ್ದಾರೆ. ಇವರು ಹೆಚ್ಚಾಗಿ ಜಲವರ್ಣ ಹಾಗೂ ತೈಲವರ್ಣ ಮತ್ತು ಆಕ್ರೆಲಿಕ್ ವರ್ಣಗಳಲ್ಲಿ ಚಿತ್ರ ಹಾಗೂ ಶಿಲ್ಪಗಳನ್ನು ಫೈಬರ್ ಮಾಧ್ಯಮದಲ್ಲಿ ರಚಿಸುತ್ತಾರೆ.

ಇವರು ಕಲಾಕೃತಿ ರಚನೆಗೆ ಬಹಳ ಮಹತ್ವವನ್ನು ಕೊಟ್ಟು ಸಮಕಾಲೀನ ಕಲಾಬೆಳೆವಣಿಗೆಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತ ಚಿತ್ರರಚನೆಯಲ್ಲಿ ತೊಡಗಿದ ಕಲಬುರ್ಗಿಯ ಮಹಿಳಾ ಕಲಾವಿದೆ ಯಲ್ಲಿ ಒಬ್ಬರಾಗಿ ಗುರುತಿಸಿಕೊಳ್ಳುವುದರ ಜೊತೆಗೆ ನಗರದ ಪ್ರತಿಷ್ಠಿತ ನೂತನ ಮಹಾವಿದ್ಯಾಲಯದಲ್ಲಿ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾಗಿ ಕಲಾ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನದ ಮಾಡುವುದರ ಜೊತೆಗೆ ವಿಭಾಗದ ಬೆಳವಣಿಗೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದಾರೆ.

(ಎಸ್‌ಪಿಡಬ್ಲ್ಯೂ)

ನಾಗರತ್ನಮ್ಮ: ಕಸೂತಿ ಕಲಾವಿದೆ. ಕುಷ್ಟಗಿ ತಾಲ್ಲೂಕಿನ ಹನಮಸಾಗರ ಗ್ರಾಮದವರು. ಕಸೂತಿ ಕಲೆ, ಕೇವಲ ಹೊಲಿಗೆ ಅಷ್ಟೇ ಅಲ್ಲ. ಅದರ ಜೊತೆಗೆ ಎಂಬ್ರಾಯಡರಿ, ಪೇಂಟಿಂಗ್, ಹ್ಯಾಂಡ ಎಂಬ್ರಾಯಡರಿ ಕಲಿಸುತ್ತಾರೆ. 40 ರಿಂದ 45ದರ ವರೆಗೂ ಮಹಿಳೆಯರು ಬರುತ್ತಾರೆ. ಕ್ರೋಶಾ ವಾಯರ್, ಉಲನ್ ಹೆಣಿಕೆ, ಗೊಬ್ಬರ ಚೀಲದಲ್ಲಿ ಹೆಣಿಕೆ, ಇನ್ನೂ ಅನೇಕ ಹೆಣಿಕೆಯಲ್ಲಿ ನುರಿತ ಮಹಿಳೆ. ಎಸ್.ಎಸ್.ಎಲ್.ಸಿ ವರೆಗೆ ಕಲಿತ ಇವರು ಬಡತನದಿಂದ ತಂದೆ–ತಾಯಿ ಮಗಳಿಗೆ ಮುಂದೆ ಶಿಕ್ಷಣ ಕಲಿಸಲು ಆಗಲಿಲ್ಲ. ಟೇಲರಿಂಗ್ ಕಲಿತು, ಈ ಮಹಿಳೆ ಸ್ವಾವಲಂಬಿಯಾಗಿ ಜೀವನ ನಡೆಸಿದ್ದಾಳೆ. (ಆರ್‌ಪಿಕೆ)

ನಾಗರಾಜ್ ಆರ್. ಕುಂಬಾರ: ಹೆಚ್ಚಾಗಿ ಆಕ್ರಲಿಕ್ ಮಾಧ್ಯಮ ದಲ್ಲಿಯೇ ಕಲಾಕೃತಿಗಳನ್ನು ರಚಿಸುತ್ತಿದ್ದು, ಆಕೃತಿಗಳ ಹಿನ್ನೆಲೆಯು ಚಪ್ಪಟ್ಟೆಯಾಗಿದ್ದು, ಆಕೃತಿಗಳು ಸರಳತೆ ಮತ್ತು ರೇಖಾ ಪ್ರಧಾನ ವಾಗಿವೆ. ಇವರ ಕಲಾಕೃತಿಗಳ ವಸ್ತು–ವಿಷಯ ಸಾಮಾನ್ಯ ವೆನಿಸಿದರೂ, ಸಂಯೋಜನೆ, ಪಾರದರ್ಶಕತೆ, ಮೈವಳಿಕೆ ಹಾಗೂ ವರ್ಣ ವಿನ್ಯಾಸದ ನಿರ್ವಹಣೆಯಲ್ಲಿ ಹೊಸತನ ಕಾಣಬಹುದು.

ಇವರ ಕಲೆಗಳಲ್ಲಿ ನಮ್ಮ ಸುತ್ತಲಿನ ಬದುಕಿನ ವಿಡಂಬನೆ, ತಲ್ಲಣಗಳ ಅನಾವರಣವನ್ನು ಇವರ ಕಲಾಕೃತಿಗಳಲ್ಲಿ ಕಾಣ ಬಹುದು. ಅವರ ಚಿತ್ರಕ ಸಾಮರ್ಥ್ಯ ಮತ್ತು ಅನುಭವನ್ನಲ್ಲದೆ, ಸಮಕಾಲೀನ ವಸ್ತು–ವಿಷಯಗಳ ಗ್ರಹಿಕೆಗಳಿಂದಲೂ ಗಮನ ಸೆಳೆಯುತ್ತಾರೆ. ಇವರು ಆಕ್ರಲಿಕ ಮಾಧ್ಯಮದಲ್ಲಿ ರಚಿಸಿದ ಮೈ ಕಂಟೇನ್ ಫಂಕ್ಷನ್ ಶೀರ್ಷಿಕೆಯ ಕಲಾಕೃತಿಗಳಲ್ಲಿ ಕಲ್ಪನೆಗಳ ಜತೆ ಜತೆಗೆ ಪ್ರತಿಭೆಯ ಕಾರ್ಯ ಕಾರಣ ಸಂಬಂಧಗಳ ಕ್ರೋಢೀ ಕರಣವಲ್ಲದೆ, ನಗರ ಕೇಂದ್ರಿತ ಬದುಕಿನ ಸೂಕ್ಷ್ಮಗಳನ್ನು ಮಾನಸಿಕ ತಲ್ಲಣಗಳನ್ನು ಕಾಣ ಬಹುದು.



ದೃಶ್ಯಕಲೆಯಲ್ಲಿ ಸ್ನಾತ ಕೋತ್ತರ ಪದವಿ ಪಡೆದಿರುವ ನಾಗರಾಜ ಆರ್. ಕುಂಬಾರ ಅವರು ಕಲಬುರ್ಗಿಯ ಎಂ. ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ಸ್ ಆಯೋ ಜಿಸಿದ ಅನಿಮೇಶನ್, ಟೇರಾ ಕೋಟಾ, ಭಾವಚಿತ್ರ, ಶಿಲ್ಪ,




'ಅನ್‌ಟೈಟಲ್'

ಸಂಪ್ರದಾಯ ಚಿತ್ರಗಳ ಮತ್ತು ಮೈಸೂರಿನ 'ಕಾವಾ' ಕಾಲೇಜಿನಲ್ಲಿ ಜರುಗಿದ 2ನೇ ರಾಷ್ಟ್ರೀಯ ಕಲಾವಿದ್ಯಾರ್ಥಿಗಳ ಕಾರ್ಯಾಗಾರದಲ್ಲಿ ಭಾಗವಹಿಸಿದ್ದಾರೆ.

2008ರಲ್ಲಿ ಗಂಗಾವತಿಯಲ್ಲಿ ನಡೆದ 'ಯೂತ್ ಫೇಸ್ಟಿವಲ್' ನಲ್ಲಿ ಭಾಗವಹಿಸಿದ್ದರು. ಈ ಯುವ ಮಹೋತ್ಸವದಲ್ಲಿ ಇವರು ರಚಿಸಿದ ಇನ್ಸ್ಟಾಲೇಷನ್ ಕಲಾಕೃತಿಗೆ ಚಿನ್ನದ ಪದಕ (ಗೋಲ್ಡ್ ಮೆಡಲ್) ಪಡೆದುಕೊಂಡಿದ್ದಾರೆ. ಡೆಕ್ಕನ್ ಆರ್ಟ್ಸ್ ಸೊಸೈಟಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. (ಪಿಪಿ)

ನಾಗರಾಜ ಕುಲಕರ್ಣಿ: ಚಿತ್ರಕಲಾವಿದ. ಕಲಬುರ್ಗಿಯಲ್ಲಿ ಜನಿಸಿದ ಯುವ ಕಲಾವಿದ ಇವರು. ಪ್ರಾಥಮಿಕ ಹಂತದಲ್ಲೇ ಚಿತ್ರಕಲೆ ಆಸಕ್ತರಾಗಿದ್ದು, ಪ್ರೌಢ ಶಿಕ್ಷಣದಲ್ಲೇ ಚಿತ್ರಕಲೆ ಶಿಕ್ಷಕರ ಮಾರ್ಗದರ್ಶನದಿಂದ ಲೋವರ ಗ್ರೇಡ್ ಹಾಗೂ ಹೈಯರ್ ಗ್ರೇಡ್ ಪರೀಕ್ಷೆ ಉತ್ತೀರ್ಣರಾಗಿ, ನಂತರ ಕಲಬುರ್ಗಿ ನಗರದ ಮಾತೋಶ್ರೀ ಮಾಣಿಕಬಾಯಿ ಕೊಠಾರಿ ಕಾಲೇಜ್ ಆಫ್ ವಿಜ್ಯುವ್ಹಲ್ ಆರ್ಟ್‌ನಲ್ಲಿ ಮಾಸ್ಟರ್ ಆಫ್ ಪೇಂಟಿಂಗ್‌ನಲ್ಲಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು, ಚಿತ್ರಕಲೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿದ್ದಾರೆ.



ರೇಖಾಚಿತ್ರ, ಭೂದೃಶ್ಯ, ನಿಸರ್ಗ ಚಿತ್ರಣ, ಸಂಯೋಜನೆ, ನವ್ಯಕಲೆಯ ಶೈಲಿಯಲ್ಲಿ ಬರಗಾಲ, ಗಂಗೆತ್ತು, ಭೂಕಂಪ ಹುದುಗಿಹೋದ ಹುತಾತ್ಮರು ನಂದಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಬಣ್ಣದ ಜೊತೆಗೆ ಬೆರೆತು ಪೇಂಟಿಂಗ್ ಮಾಡಲು ಕುಳಿತರೆ, ಜಗವನ್ನು ಮೆರೆತು 'ಕಲೆ ಎಂಬ ಸುಳಿಯಲ್ಲಿ ಹೋದಂತೆ' ಕಲೆಯಲ್ಲಿ ಲೀನವಾದಾಗ ಸುಂದರವಾದ ಕೃತಿ ಹೊರಬರಲು ಸಾಧ್ಯ. 'ದೂರದ ಬೆಟ್ಟ ನುಣ್ಣಗೆ' ಹತ್ತಿದಾಗ ಪಡುವ ಸಂತೃಪ್ತಿ ಸಂತೋಷ, ಸುಖದ ಶಿಖರ ಅನುಭವಿಸಿದಾಗಲೇ ಅರಿವಾಗುತ್ತದೆ.



'ಕಲರ್' ಮಿಶ್ರ ಮಾಧ್ಯಮ

ಎರಡನೇ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಜೈಪುರ, ಮೈಸೂರು ದಸರಾ ಪ್ರದರ್ಶನ, ಕರ್ನಾಟಕ ಲಲಿತಕಲೆ ಅಕಾಡೆಮಿ ಬೆಂಗಳೂರು, ಕೆ.ಕೆ. ಹೆಬ್ಬಾರೆ ಆರ್ಟ್ ಫೌಂಡೇಶನ್ ಬೆಂಗಳೂರು ಹಲವಾರು ಕಡೆ ಭಾಗವಹಿಸಿ, ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ರಾಜ್ಯಮಟ್ಟದ ಪ್ರಶಸ್ತಿ ಕನ್ನಡ ಸಾಹಿತ್ಯ ಸಂಘ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರನಲ್ಲಿ ಆಚೋಜಿಸಿದ್ದ ಕಲಾವಿದರ ಶಿಬಿರ, ಚಿತ್ತಾರಿ ಆರ್ಟ್‌ಗ್ಯಾಲರಿ, 2004 ರಲ್ಲಿ ಗ್ರಾಫಿಕ್ ಶಿಬಿರ ಕರ್ನಾಟಕ ಲಲಿತಕಲಾ ಅಕಾಡೆಮಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಆಯೋಜಿಸಿದ್ದ ಫೈಬರ ಶಿಬಿರ, ಚಿತ್ರಕಲೆ ವಿಭಾಗ ನೂತನ ಮಹಾವಿದ್ಯಾಲಯ ಕಲಬುರ್ಗಿಯಲ್ಲಿ 2005ರಲ್ಲಿ ನಡೆದಾಗ ಭಾಗವಹಿಸಿದ್ದಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ರಾಷ್ಟ್ರೀಯ ಶಿಷ್ಯವೇತನ 2001ರಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇವರಿಗೆ ಶಿಷ್ಯವೇತನ ನೀಡಿದೆ.


ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ, ಎಂ.ಎಂ.ಕೆ. ಕಾಲೇಜ ಆಫ್ ವಿಜುವ್ವಲ್ ಕಲಬುರ್ಗಿಯಲ್ಲಿ ಇವರ ಕಲಾಕೃತಿಗಳ ಸಂಗ್ರಹವಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಸಹಾಯ ಧನದಿಂದ ಕೊಪ್ಪಳ ಜಿಲ್ಲೆಯಲ್ಲಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ. ನಗರದ ನೂತನ ವಿದ್ಯಾಲಯ ಸಂಸ್ಥೆ ಚಿತ್ರಕಲೆ ವಿಭಾಗ ಮಹಾವಿದ್ಯಾಲಯದಲ್ಲಿ ಪ್ರಸ್ತುತ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎನ್‌ಎಂಜೆ)

ನಾಗಾವಿಯ ಸ್ಮಾರಕಗಳು: ಕಲ್ಯಾಣ ಚಾಲುಕ್ಯರ ಕಾಲದ ಪ್ರಸಿದ್ಧ (ಘಟಿಕಾ ಸ್ಥಾನ) ಅಗ್ರಹಾರ ನಾಗಾವಿ. ಕಲ್ಯಾಣ ಚಾಲುಕ್ಯರ 2ನೆಯ ಜಯಸಿಂಹ, ಒಂದನೆಯ ಸೋಮೇಶ್ವರ ಹಾಗೂ ರಾಷ್ಟ್ರಕೂಟರ 3ನೇ ಕೃಷ್ಣನ ಕಾಲದವರೆಗೆ ಮೆರೆದು ಅಸ್ತಂಗತವಾದ ಈ ಅಗ್ರಹಾರ ಇಂದು ಅವಸಾನದ ಅಂಚಿನಲ್ಲಿದೆ.

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ಪಟ್ಟಣದ ಹೊರ ವಲಯದ 2 ಕಿ. ಮೀ. ದೂರದಲ್ಲಿರುವ ನಾಗಾವಿ ಇಂದು ಜನ ವಸತಿ ಇಲ್ಲದ ನಿರ್ವಸಿತ ಗ್ರಾಮ. ನಿಜಾಮ ಕಾಲದಲ್ಲಿ ಈ ಗ್ರಾಮವನ್ನು ಬೇಚಿರಾಗ (ದೀಪವಿಲ್ಲದ) ಗ್ರಾಮವೆಂದು ದಾಖಲಿಸಲಾಗಿದೆ. ರಾಷ್ಟ್ರಕೂಟರ ಕುಲದೇವತೆ ನಾಗಾವಿ ಎಲ್ಲಮ್ಮ ದೇವಾಲಯ ಮಾತ್ರವಿದೆ.

ದೇವಿಯ ದರ್ಶನ ಪಡೆದು ದೇವಾಲಯದ ಹಿಂಭಾಗಕ್ಕೆ ತುಸು ಸರಿದರೆ ಮುಳ್ಳುಕಂಟಿ, ಕಮರಿ, ಬಾರಿಗಿಡಗಳ ಮಧ್ಯೆ ಮರೆಮಾಚಿದ ಭಗ್ನಾವಸ್ಥೆಯಲ್ಲಿರುವ ದೇವಾಲಯಗಳು, ಎಲ್ಲೆಂದರಲ್ಲಿ ಬಿದ್ದಿರುವ ಶಾಸನಗಳು, ಅಳಿದು ನೆಲಸಮವಾಗುತ್ತಿರುವ ಶಿಲ್ಪಕಲೆಗಳು, ಅಳಿದುಳಿದ ದೇವಾಲಯಗಳ ಅವಶೇಷಗಳು ಇನ್ನೂ ಜೀವ ಹಿಡಿದುಕೊಂಡು, ತಮ್ಮ ಗತವೈಭವವನ್ನು ತೋರುತ್ತವೆ.

ತುಸು ಮುಂದೆ ಸಾಗಿದರೆ ಮಧುಸೂಧನ ದೇವಾಲಯವಿದೆ. ಜೈನ ದೇವಾಲಯದ ಮಾದರಿಯಲ್ಲಿ ನಿರ್ಮಿಸಿದ ಈ ದೇವಾಲಯವನ್ನು, ಸಧ್ಯ 60 ಕಂಬದ ಗುಡಿ ಎಂದು ಜನ ಕರೆಯುತ್ತಾರೆ. ಇಂದು ಈ ದೇವಾಲಯ ಭಗ್ನಾವಸ್ಥೆಯಲ್ಲಿದೆ.



ಈರಪ್ಪಯ್ಯನ ಗದ್ದುಗೆ ಪ್ರವೇಶ ದ್ವಾರ, ನಾಗಾವಿ

ಈ ದೇವಾಲಯದ ಸಮ್ಮುಖದಲ್ಲಿ 7 ಅಡಿ ಎತ್ತರದ ಚೌಕಾಕಾರದ ಶಾಸನಕಂಬವಿದೆ. ಈ ಶಾಸನ ಕಂಬವೂ ಭಗ್ನವಾಗುತ್ತಿದೆ. ಸ್ವಲ್ಪ ಮುಂದೆ ಹೋದರೆ ನಂದಿಬಾವಿ, ಅದರ ಪಕ್ಕದಲ್ಲಿ ಈಶ್ವರ ದೇವಾಲಯ. ಈ ದೇವಾಲಯದ (ಅಕ್ಕಪಕ್ಕ) ಸುತ್ತಮುತ್ತ ಭಗ್ನಾವಸ್ಥೆಯಲ್ಲಿರುವ 3–4 ದೇವಾಲಯಗಳು ಕಾಣುತ್ತವೆ. ಸ್ವಲ್ಪ ಮುಂದೆ ಸಾಗಿದರೆ, ಕಡ್ಲಿ ಬಸವಣ್ಣ, ಸಿದ್ದೇಶ್ವರ ಮಠ, ಹಾಳು ಬಾವಿ, ಈಶ್ವರ ದೇವಾಲಯಗಳಿವೆ.

ನಂದಿ ಬಾವಿಯ ಎಡಗಡೆ ಜಾಲಿಮುಳ್ಳು ಗಿಡಗಳನ್ನು ದಾಟಿಕೊಂಡು ಸ್ವಲ್ಪ ಮುಂದೆ ಹೋದರೆ, ಈರಪ್ಪಯ್ಯನ ಗುಡಿ ಗೋಚರಿಸುತ್ತದೆ. ಅದರ ಪಕ್ಕದಲ್ಲಿ ಕಾಲನ ದವಡೆಗೆ ಸಿಕ್ಕು ಹಿಂದೂ ದೇವಾಲಯ ಮಸೀದಿಯಾಗಿ ಮಾರ್ಪಟ್ಟಿರುವದು ಹಾಗೂ ಇನ್ನೂ ದೇವಾಲಯ ಶಿಲ್ಪಕಲೆಗಳು ದೊರೆಯುತ್ತವೆ. ಎಂಟನೇ ಶತಮಾನದ್ದೆಂದು ಹೇಳಲಾದ ಅಂದಿನ ಅರಸರ ನೃತ್ಯಶಾಲೆ, ಪ್ರಾಚೀನ ಕಾಲದ ನಾಗಾವಿ ಅಗಸಿ (ಹೆಬ್ಬಾಗಿಲು), ಊರ ಹೊರಗಿನ ಹನುಮಾನ ಮಂದಿರ ವಿಶಾಲ ಅಂಗಳ, ಮತ್ತೆ ಜಾಲಿಗಿಡಗಳಿಂದ ಸುತ್ತುವರೆದ ಈಶ್ವರ ದೇವಾಲಯವಿದೆ. ಈ ಮುಳ್ಳು ಗಿಡಗಳಿಂದಾಗಿ ಅಲ್ಲಿ ತಲುಪುವದೇ ಕಷ್ಟ.

ನಾಗಾವಿ ಎಲ್ಲಮ್ಮ ದೇವಾಲಯದ ಸುತ್ತಮುತ್ತ ಇರುವ ಅನೇಕ ದೇವಾಲಯಗಳು, ಸ್ಮಾರಕಗಳು, ಶಿಲಾಶಾಸನಗಳು ಅವಸಾನದ ಅಂಚಿನಲ್ಲಿವೆ. ಕೆಲವು ಬೀಳುವ ಸ್ಥಿತಿಯಲ್ಲಿವೆ. ಕೆಲವು ಸಂಪೂರ್ಣ ಬಿದ್ದು ಹೋಗಿವೆ. ಬಹುತೇಕ ದೇವಾಲಯಗಳೆಲ್ಲ ಇಂದು ಮುಳ್ಳು ಜಾಲಿಗಿಡಗಳಿಂದ ಆವೃತವಾಗಿವೆ. ಇದರಿಂದಾಗಿ ಒಂದು ಹಾಗೂ ನಾಲ್ಕನೇ ಶತಮಾನದ ಇಲ್ಲಿಯ ಅನೇಕ ದೇವಾಲಯಗಳು, ಶಾಸನಗಳು ಕಾಲನ ದವಡೆಗೆ ಸಿಕ್ಕಿವೆ.

(ಎನ್‌ಎಸ್‌ಎ)

ನಾಗುರೆ ಕೆ.ಎಸ್: ಚಿತ್ರಕಲಾವಿದ. ಇವರಿಗೆ ಚಿತ್ರಕಲೆಯ ಬಗ್ಗೆ ಆಸಕ್ತಿ ಚಿಕ್ಕಂದಿನಿಂದಲೇ ಬಂದಿತು. ಅಂತೆಯೇ ಇವರು ಜಿ.ಡಿ. ವ್ಯಾಸಂಗದಲ್ಲಿ ರಾಜ್ಯದಲ್ಲಿಯೇ ದ್ವಿತೀಯ ರ್‍ಯಾಂಕ್ ಪಡೆದ ಹೆಗ್ಗಳಿಕೆ ಪಾತ್ರವಾಗಿದ್ದಾರೆ. ಪ್ರಸ್ತುತ ಶಹಾಬಾದಿನ 'ಬಾಲ ವಿದ್ಯಾ ಮಂದಿರ' ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗತಕಾಲದ ಕಲಾವೈಭವವನ್ನು ಇಂದಿಗೂ ತನ್ನ ಮಡಿಲಲ್ಲಿ ಇರಿಸಿಕೊಂಡಿರುವ ಕಲ್ಬುರ್ಗಿ ಜಿಲ್ಲೆ ಇಲ್ಲಿನ ಕಲಾವಿದರಿಗೆ ಸ್ಫೂರ್ತಿಯ ಸೆಲೆ. ಇಲ್ಲಿನ ವೈಶಿಷ್ಟ್ಯ ಸಾರುವ ವಿಜಯನಗರ ಶೈಲಿ (ಸುರಪುರ ಶೈಲಿ)ಯ ಕಲಾಪ್ರಕಾರ ರಾಜ್ಯದ ಬಹಳಷ್ಟು ಜನರಿಗೆ ತಿಳಿದಿಲ್ಲ. ಇಂತಹ ಸಾಂಪ್ರದಾಯಿಕ ಚಿತ್ರಗಳನ್ನು ಸೂಕ್ಷ್ಮ ರೇಖೆಗಳ ಮೂಲಕ ಚಿತ್ರಿಸಿ ವರ್ಣ ತುಂಬಿ ಕಲೆಗೆ ಮೆರಗು ನೀಡುವಲ್ಲಿ ಸಿದ್ಧಹಸ್ತರಾಗಿದ್ದಾರೆ ನಾಗುರೆ. ಪೌರಾಣೀಕ ಸನ್ನಿವೇಶ

ಗಳನ್ನು ಬಳಸಿಕೊಂಡು ಅದಕ್ಕೆ ತಮ್ಮ ಕುಂಚದಿಂದ ಹೊಸ ಹೊಸ ರೂಪಕೊಡುವುದು ಇವರ ಶೈಲಿ.



ಜಲವರ್ಣ, ತೈಲವರ್ಣ, ಚಿಕಣಿಶೈಲಿ, ಕ್ಲಾಸಿಕಲ್ ಮಿನೇಚರ್ ಮುಂತಾದ ಕಲಾ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ ನಾಗುರೆ. 'ಶಿವಪುರಾಣ', 'ನರಸಿಂಹನ ದಶಾವತಾರ', 'ಚಾಮುಂಡೇಶ್ವರಿ' ಮುಂತಾದ ಚಿತ್ರಕಲಾ ಕೃತಿಗಳು ಈಗಾಗಲೇ ಅನೇಕ ಪ್ರದರ್ಶನಗಳಲ್ಲಿ ಕಲಾರಸಿಕರ ಮನ ಸೂರೆಗೊಂಡಿವೆ.

ಹಲವಾರು ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುಸ್ಕಾರಗಳನ್ನು ಪಡೆದಿರುವ ನಾಗುರೆ ಅವರಿಗೆ ನವದೆಹಲಿಯ ಸಂಸ್ಥೆಯೊಂದು ಪ್ರತಿವರ್ಷ ನೀಡುವ 'ವಿಜಯಶ್ರೀ' ಪ್ರಶಸ್ತಿ ಲಭಿಸಿದೆ. ಅವರ ಚಿಕಣಿ ಶೈಲಿಯನ್ನು ಮೆಚ್ಚಿ ಈ ಪ್ರಶಸ್ತಿಯನ್ನು ನೀಡಲಾಗಿದೆ.



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಶಹಾಬಾದ್, ಕಲ್ಬುರ್ಗಿ, ನಾಗಪುರ, ಮೈಸೂರು, ಬೆಂಗಳೂರು, ಭೋಪಾಲ್ ಮುಂತಾದ ಕಡೆ ನಡೆದ ಕಲಾಶಿಬಿರಗಳಲ್ಲಿ ನಾಗುರೆ ಅವರು ಭಾಗವಹಿಸಿದ್ದಾರೆ. ಅಂತೆಯೇ ಅನೇಕ ಸಂಘ-ಸಂಸ್ಥೆಗಳ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

(ಸಿಎಸ್‌ಕೆಕೆ)

ನಾಗೇಶ ಕಾಟವಾ: ಹವ್ಯಾಸಿ ರಂಗಭೂಮಿ ಕಲಾವಿದ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿ ಜನಿಸಿದರು. ಕಾರಣಾಂತರದಿಂದ ಬಾಲ್ಯದ ಜೀವನ ಚಳಗೇರಿಯಲ್ಲಿ ಕಳೆಯಬೇಕಾಗಿ ಬಂದಿತು. ಅಲ್ಲಿ ಶಿವಸಂಗಪ್ಪ ಎಂಬ ಮಾಸ್ತರರ ಶಿಷ್ಯರಾಗಿ ಮೊದಲಿಗೆ ಏಕಪಾತ್ರಾಭಿನಯದ ಮೂಲಕ ಮುಖಕ್ಕೆ ಬಣ್ಣ ಹಚ್ಚಿ, ಪ್ರಥಮವಾಗಿ ನಾಟಕ ರಂಗಕ್ಕೆ ಧುಮುಕಿದರು.

ಈಗ ಹನುಮಸಾಗರದಲ್ಲಿ ನೆಲೆಸಿ ಕುಷ್ಟಗಿ ತಾಲ್ಲೂಕಿನಲ್ಲಿಯೇ ಅತ್ಯಂತ ಚುರುಕು ರಂಗ ಚುಟುವಟಿಕೆಯೆನಿಸಿದ ಹವ್ಯಾಸಿ ಕಲಾ ವೇದಿಕೆ ಹನುಮಸಾಗರದ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ವೃತ್ತಿಯಿಂದ ಹಿಟ್ಟಿನ ಗಿರಣಿ ನಡೆಸುತ್ತ, ಹವ್ಯಾಸಿ ಕಲಾವಿದನಾಗಿ ಬೆಳೆದು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯುವ ನಾಟಕಗಳ ನಿರ್ದೇಶನ ಅಭಿನಯಕ್ಕಾಗಿ ಜಿಲ್ಲಾ ಅತ್ಯುತ್ತಮ ಯುವ ಪ್ರಶಸ್ತಿ ಪಡೆದಿದ್ದಾರೆ.

ಇವರ ನಿರ್ದೇಶನ ಮತ್ತು ಅಭಿನಯದ ಪ್ರಖ್ಯಾತ ರೇಡಿಯೋ ನಾಟಕಕಾರರಾದ ಎನ್.ಪಿ. ಕುಲಕರ್ಣಿ ಇವರ 'ಹೆಂಡ್ತಿ ಬೇಕೋ ಸುಖ ಬೇಕೋ' ಎಂಬ ನಾಟಕ ಮರಿಯಮ್ಮನಳ್ಳಿಯಲ್ಲಿ ಜರುಗಿದ ವಿಭಾಗ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಶಂಸೆಗೆ ಪಾತ್ರವಾಗಿದೆ.

ಅದಲ್ಲದೇ ರಾಜ್ಯ ಮಟ್ಟದ ನಾಟಕ ಸ್ಪರ್ಧೆ ಉಡುಪಿಯಲ್ಲಿ ನಡೆದಾಗ, 'ಬುದ್ಧಿವಂತರ ನ್ಯಾಯ' ನಾಟಕದಲ್ಲಿ ದೇವಣ್ಣ ಸಾಹುಕಾರರ ಪಾತ್ರ ವಹಿಸಿ, ಅತ್ಯುತ್ತಮ ಅಭಿನಯ ನೀಡಿದ್ದಾರೆ. ಈ ನಾಟಕ ಹನುಮಸಾಗರ, ಉಡುಪಿ ಹುನಗುಂದದಲ್ಲಿ ಹಲವಾರು ಯಶಸ್ವಿ ಪ್ರಯೋಗವಾಗಲು ಕಾರಣೀಭೂತರಾಗಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿ ಮತ್ತು ಧ್ರುವರಂಗದ ನಾಟಕ ಸಪ್ತಕಗಳ ನಾಟಕೋತ್ಸವದಲ್ಲಿ ಖ್ಯಾತ ರಂಗಭೂಮಿ ನಟ, ನಾಟಕಕಾರರಾದ ಪಿ.ಬಿ. ಧುತ್ತರಗಿಯವರ 'ಇಲಕಲ್ ಸೀರೆ', 'ಹಗರಣ', 'ವೀರ ಮದಕರಿ ನಾಯಕ' ನಾಟಕಗಳು ಸರೋಜಮ್ಮ ಧುತ್ತರಗಿ ಅವರ ನಿರ್ದೇಶನದಲ್ಲಿ ಹುನಗುಂದ ಕೊಪ್ಪಳ, ಹನಮಸಾಗರ, ಗಂಗಾವತಿಯಲ್ಲಿ ಪ್ರದರ್ಶನಗೊಂಡವು. ಈ ನಾಟಕಗಳಲ್ಲಿ ಅಭಿನಯಿಸಿ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಿ, ಅಪಾರ ಕಲಾಭಿಮಾನಿಗಳನ್ನು ರಂಜಿಸಿ, ಅವರು ಮನಸೂರೆ ಗೊಂಡರು. ಸೇತು ಮಾಧವಾಚಾರ್ಯ ಹಂಜಕ್ಕಿಯವರ 'ನಗಗುಂದದ ನೇಸರ' ಎಂಬ ಐತಿಹಾಸಿಕ ನಾಟಕದಲ್ಲಿ ಬ್ರಿಟಿಷ್ ಅಧಿಕಾರಿಯ ವಿಭಿನ್ನ ಪಾತ್ರದಲ್ಲಿ ಅಭಿನಯಿಸಿ, ತಮ್ಮ ಕಲಾಪ್ರತಿಭೆ ಪ್ರದರ್ಶಿಸಿದ್ದಾರೆ.

ಹನುಮಸಾಗರ ಪೊಲೀಸ್ ಇಲಾಖೆ, ಅಪರಾಧ ರಹಿತ ಮಾಸಾಚರಣೆ ಅಂಗವಾಗಿ ಏರ್ಪಡಿಸಿದ್ದ ಶರಣಪ್ಪ ಬಾಚಲಾಪುರರ 'ಎಚ್ಚರ' ನಾಟಕದಲ್ಲಿ, ಧಾಬಾದ ಲಾಡಿ ಮತ್ತು ಶೆಟಜೀಯಾಗಿ ವಿಶಿಷ್ಟ ಅಭಿನಯದ ಕಲೆಯನ್ನು ಪ್ರದರ್ಶಿಸಿ, ಹೊಟ್ಟೆ ಹುಣ್ಣಾಗುವಂತೆ ನಗಿಸಿ, ಇಡೀ ನಾಟಕ ಯಶಸ್ವಿಗೆ ಕಾರಣರಾದವರಲ್ಲಿ ಇವರೂ ಒಬ್ಬರು.

ಈ ನಾಟಕಗಳಲ್ಲಿನ ಇವರ ಕಲಾಪಾಂಡಿತ್ಯ ಅಪ್ರತಿಮವಾದದ್ದು ಎಂಬುದು ಮನವರಿಕೆಯಾಗುತ್ತದೆ. ಗಂಭೀರ ಪಾತ್ರಗಳಿಗಿಂತ ಹೆಚ್ಚಾಗಿ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಂಡು ಕಲಾಭಿಮಾನಿಗಳನ್ನು ನಗೆಗಡಲಿನಲ್ಲಿ ತೇಲಿಸಿಬಿಡುತ್ತಾರೆ. ಹೀಗಾಗಿ 'ನಗೆ ನಟ ನಾಗೇಶ ಕಾಟವಾ' ಎಂದೇ ಕಲಾಭಿಮಾನಿಗಳು ಕರೆಯುವುದುಂಟು.

ಯಾವುದೇ ಪಾತ್ರವಾದರೂ ಸರಿ ತಮ್ಮ ನಟನಾ ಸಾಮರ್ಥ್ಯದಿಂದ ಆ ಪಾತ್ರಕ್ಕೆ ಜೀವ ತುಂಬುತ್ತಾರೆ. ಪಾತ್ರದ ಅಂತರಂಗವನ್ನು ಅರಿತು ಅಪೂರ್ವ ತಾದಾತ್ಮಭಾವದಿಂದ ಅಭಿನಯಿಸುವ ನೈಜ ಕಲೆಯಿಂದ ಪ್ರೇಕ್ಷಕರಿಗೆ ಮೋಡಿ ಮಾಡಿ ಬಿಡುತ್ತಾರೆ.

(ಆರ್‌ಎಸ್‌ಎಸ್)

ನಾಣ್ಯಗಳು: ಭಾರತದಲ್ಲಿ ನಾಣ್ಯಗಳಿಗೆ ಬಹು ಪ್ರಾಚೀನ ಇತಿಹಾಸವಿದೆ. ನಾಣ್ಯಗಳ ಜನಕ ಯಾರೆಂದು ತಿಳಿಯದಿದ್ದರೂ ನಾಣ್ಯಗಳು ಮನುಷ್ಯನ ಬಹು ಮಹತ್ವದ ಅಷ್ಟೇ ಅಲ್ಲ, ಪ್ರತಿಷ್ಠೆಯನ್ನು ನಿರ್ಧರಿಸುವ ಅಳತೆ ಗೋಲಾಗಿದೆ. ನಾಣ್ಯಗಳಿಲ್ಲದೆ ಬದುಕೇ ಇಲ್ಲವಾಗಿದೆ. ಹಿಂದೆ ನಾಣ್ಯಗಳನ್ನು ಬಳಸುವ ಪೂರ್ವದಲ್ಲಿ 'ವಸ್ತು ವಿನಿಮಯ' ಪದ್ಧತಿ ಜಾರಿಯಲ್ಲಿತ್ತು. ಅವರು ಹೊಂದಿದ ಹೊಲ, ಕಾಳು, ಹಸುಗಳೇ ಅವರ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತಿದ್ದುವು. ಆದರೆ ಇಂದು ವಸ್ತು ವಿನಿಮಯ ಪದ್ಧತಿಯೇ ಮುಗ್ಗಿ (ಅಳಿಸಿ) ಹೋಗಿದೆ. ಇದನ್ನು ಅಲ್ಪ ಸ್ವಲ್ಪ ಗ್ರಾಮೀಣ ಪ್ರದೇಶದಲ್ಲಿ ಕಾಣುತ್ತೇವೆ.

ಭಾರತದಲ್ಲಿ ನಾಣ್ಯಗಳ ತಯಾರಿಕೆ ಒಂದು ಸರಳವಾದ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಯಾಗಿತ್ತು. ನಮ್ಮ ಜನಪದರು 'ಪಂಚ್ ಚಿಹ್ನೆಯ ವಿಧಾನ'ವನ್ನು ಬಳಸುತ್ತಿದ್ದರು. ಕರ್ನಾಟಕದಲ್ಲಿಯೂ ಪಂಚ್ ಚಿಹ್ನೆಯ ನಾಣ್ಯಗಳು ಅನೇಕ ಕಡೆಗಳಲ್ಲಿ ದೊರಕಿವೆ. ಚಂದ್ರವಳ್ಳಿ, ಬನವಾಸಿ, ವಡಗಾಂವ್, ಮಾಧವಪುರ, ಸನ್ನತಿ, ಮಸ್ಕಿ ಮುಂತಾದ ಕಡೆಗಳಲ್ಲಿ ಈ ನಾಣ್ಯಗಳು ದೊರಕಿವೆ. ಹೈದ್ರಾಬಾದ ಕರ್ನಾಟಕಕ್ಕೆ ಸೇರಿದ ರಾಯಚೂರಿನ 'ಚಿಕ್ಕ ಸಿಂದಗಿ'ಯಲ್ಲಿ 5534 ಪಂಚ್ ಚಿನ್ಹೆಯ ಬೆಳ್ಳಿಯ ನಾಣ್ಯಗಳು ಒಂದು ತಾಮ್ರದ ಪಾತ್ರೆಯಲ್ಲಿ ದೊರಕಿರುವುದು ವಿಶೇಷವಾದುದಾಗಿದೆ. ಈ ಪಾತ್ರೆಯ ಮೇಲೆ 'ಚಂತಸ್' ಎಂಬ ಕ್ರಿ.ಶ. 2ನೇ ಶತಮಾನದ ಬ್ರಾಹ್ಮೀ ಅಕ್ಷರಗಳು ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಪಂಚ್ ನಾಣ್ಯಗಳನ್ನು ಕರ್ನಾಟಕದಲ್ಲಿಯೇ ತಯಾರು ಮಾಡುತ್ತಿದ್ದರೆಂದು ಹೇಳಲಾಗುತ್ತದೆ.

ನಾಣ್ಯಗಳನ್ನು ತಯಾರಿಸುವ ವಿಧಾನ ಮತ್ತು ಸಾಮಗ್ರಿಗಳು: ನಮಗೆ ಬೇಕಾದ ಲೋಹಗಳನ್ನು ಕರಗಿಸಿ ಬೇಕಾದ ಆಕಾರಗಳಲ್ಲಿ ಖಾಲಿ ಬಿಲ್ಲೆಗಳನ್ನು ತಯಾರಿಸಿಕೊಂಡು, ಅನಂತರ ನಾಣ್ಯಗಳ ಹಿಮ್ಮುಖ ಮತ್ತು ಮುಮ್ಮುಖಗಳನ್ನು ಪ್ರತ್ಯೇಕವಾಗಿ ಕಬ್ಬಿಣದ ಮುದ್ರೆಗಳಲ್ಲಿ ಅಳವಡಿಸುವುದು. ಮುಮ್ಮುಖದ ಮುದ್ರೆಯನ್ನು ಇನ್ನೊಂದು ಕಬ್ಬಿಣದ ಬಡಿಗಲ್ಲಿಗೆ ಸೇರಿಸುವದು. ಹಾಗೆ ಹಿಮ್ಮುಖದ ಮುದ್ರೆಯನ್ನು ಇನ್ನೊಂದು ಕಬ್ಬಿಣದ ಬಡಿಗಲ್ಲಿಗೆ ಸೇರಿಸುವುದು ಅನಂತರ ಮೊದಲೇ ತಯಾರಿಸಿಕೊಂಡ ಲೋಹದ ಖಾಲಿ ಬಿಲ್ಲೆಯನ್ನು ಸ್ವಲ್ಪ ಬಿಸಿ ಮಾಡಿಸಿ, ಬಡಿಗಲ್ಲಿನಲ್ಲಿಟ್ಟು, ಇನ್ನೊಂದು ಬಡಿಗಲ್ಲಿನಿಂದ ಜೋರಾಗಿ ಒತ್ತಿದರೆ ನಾಣ್ಯವು ತಯಾರಾಗುತ್ತದೆ ಎಂದು ಎ.ವಿ. ನರಸಿಂಹಮೂರ್ತಿಯವರು ಹೇಳುತ್ತಾರೆ. ಕೌಟಿಲ್ಯನ 'ಅರ್ಥಶಾಸ್ತ್ರ' ದಲ್ಲಿ ನಾಣ್ಯಗಳನ್ನು ತಯಾರಿಸುವ ಉಪಯೋಗಿಸುವ ವಸ್ತುಗಳನ್ನು ಹೆಸರಿಸಲಾಗಿದೆ. ಲೋಹ, ಕ್ಷಾರ, ಅಂಗಾರ, ಲೆದಿ, ಕತ್ತರಿ, ಸುತ್ತಿಗೆ, ಬಡಿಗಲ್ಲು, ಮೂಸೆ, ಅಚ್ಚು ಅಥವಾ ಮುದ್ರೆ ಇತ್ಯಾದಿ. ಹಾಗೆ ನಾಲ್ಕನೆಯ ಸೋಮೇಶ್ವರನ ಶಾಸನದಲ್ಲಿ ಅಚ್ಚು, ಆಣಿ, ಅಚ್ಚಿನ ಕಾಣಿ ಮತ್ತು ಅಚ್ಚಿನ ಮೊಳೆಗಳ ಉಲ್ಲೇಖವಿದೆ. ನಾಣ್ಯಗಳ ಅಂಚನ್ನು ಪರೀಕ್ಷಿಸುವವನ್ನು 'ಚೌಕಟ್ಟುದಾರನೆಂದು' ಕರೆಯಲಾಗುತ್ತಿತ್ತು. ಚಾಲುಕ್ಯ ಅರಸ 6ನೇ ವಿಕ್ರಮಾದಿತ್ಯನ ಕಾಲದಲ್ಲಿ 'ಸೂಡಿ' ಎಂಬಲ್ಲಿ ಒಂದು ದೊಡ್ಡ ಟಂಕಶಾಲೆ ಇದ್ದ ಬಗ್ಗೆ ವಿವರಗಳು ದೊರೆಯುತ್ತವೆ.



ವಿವಿಧ ಮಾದರಿಯ ನಾಣ್ಯಗಳು

ಭಾರತದಲ್ಲಿ ನಾಣ್ಯಗಳನ್ನು ತಯಾರಿಸಲು ಚಿನ್ನ, ಬೆಳ್ಳಿ, ತಾಮ್ರ, ಸೀಸ, ಪೋಟಿನ್, ಹಿತ್ತಾಳೆ, ಕಂಚು ಮುಂತಾದ ಲೋಹಗಳನ್ನು ಬಳಸುತ್ತಿದ್ದರು. ನಮ್ಮ ನಾಣ್ಯಗಳ ಆಕಾರ ಮತ್ತು ಗಾತ್ರದಲ್ಲಿ ವೈವಿಧ್ಯತೆಯಿದೆ ಸಾಮಾನ್ಯವಾಗಿ ನಮ್ಮ ನಾಣ್ಯಗಳು ವೃತ್ತಾಕಾರವಾಗಿಯೂ ಮುಸ್ಲಿಂ ರಾಜರ ನಾಣ್ಯಗಳು ಚೌಕವಾಗಿಯೂ, ಅಕ್ಬರನ ಒಂದು ಚಿನ್ನದ ನಾಣ್ಯವು ಷಷ್ಠಕೋನಾಕಾರವಾಗಿತ್ತೆಂದು ತಿಳಿದು ಬರುತ್ತದೆ. ನಮ್ಮಲ್ಲಿ ಈಗಲೂ ವೃತ್ತಾಕಾರದ ಒಂದು ರೂಪಾಯಿ, ಐದು ರೂಪಾಯಿಗಳ ನಾಣ್ಯಗಳನ್ನು ಕಾಣುತ್ತೇವೆ. ನಾಣ್ಯಕ್ಕೆ, ನಿಷ್ಕ, ಸುವರ್ಣ, ಶತಮಾನ, ಪಾದ, ಕೃಷ್ಣಲ, ಸಾಣ, ಕಾರ್ಷಾಪಣ, ಗದ್ಯಾಣ, ವರಹ, ಟಂಕು, ರೂಪಾಯಿ ಇತ್ಯಾದಿ ಹೆಸರುಗಳಿವೆ. ನಮ್ಮ ಜನಪದರು ಅಣಿ,

ಪಾವಲಿ, ಚಾವಲಿ ಪೈಸಾ, ದುಡ್ಡು ಇತ್ಯಾದಿ ಬಳಸುತ್ತಿದ್ದರು. ಅವರು ಬಳಸುವ ಅಳತೆ ಪ್ರಮಾಣವು ಭಿನ್ನವಾಗಿತ್ತು.

ಪ್ರಾಚೀನ ಕಾಲದಲ್ಲಿ ದುಡ್ಡು, ಪೈಸೆ, ಚಾವಲಿ, ಎಂದೆಲ್ಲ ಕರೆಯುತ್ತಿದ್ದ ನಾಣ್ಯಗಳಿಗೆ ಇಂದು ನಾವು ಒಂದು ರೂಪಾಯಿ ನಾಣ್ಯ, ಎರಡು ರೂಪಾಯಿ ನಾಣ್ಯ ಎಂದು ಬಳಸುತ್ತಿದ್ದೇವೆ. ಹೀಗೆ ನಾಣ್ಯಗಳ ಸ್ವರೂಪ ಹಾಗೂ ಹೆಸರು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಸಾಗಿದೆ. ಆದರೆ ನಾಣ್ಯಗಳಿಗೆ ಇರುವ ಮೌಲ್ಯ ಮಾತ್ರ ಹಿಂದಿಗಿಂತ ಇಂದು ಹೆಚ್ಚಾಗಿದೆ. (ಎಸ್‌ಎಸ್‌ಎಂ)



ನಾರಾಯಣ ಕುಂಬಾರ: 'ಕುಂಚದ ಕುಂಬಾರ ಗಾಂಧಿ ಗರಿ ಗೆದರಿದ'. ಗಾಂಧೀಜಿಯ ಅಹಿಂಸೆ, ಸಮಭಾವ, ಭ್ರಾತೃತ್ವದ ಸಂದೇಶವನ್ನು ಮನಗಂಡು ಚಿತ್ರರಚನೆಯ ಸಂದರ್ಭದಲ್ಲಿಯೇ ಗಾಂಧಿ ಭಾವಚಿತ್ರ ಸೆರೆಹಿಡಿದೆ. ಆ ಬಳಿಕವೆ ನನಗೆ ಅನಿಸಿದ್ದು, ಮಹಾತ್ಮ ಗಾಂಧೀಜಿಯ ಬಗ್ಗೆ ವಿಶೇಷವಾಗಿ ಚಿತ್ರಕಲೆಯಲ್ಲಿ ತೊಡಗಿಸಿಕೊಂಡು ಏನಾದರೂ ಸಾಧನೆ ಮಾಡಬೇಕೆಂದು. ಈ ಪ್ರೇರಣೆಯ ಸಾಲುಗಳನ್ನು ಕಲಾವಿದ ನಾರಾಯಣ ಕುಂಬಾರ ಅತೀವ ಆಸಕ್ತಿಯಿಂದ ಮನಬಿಚ್ಚಿ ಸೇರಿಸಿದರು.

ಗಾಂಧೀ ಎಂಬ ಹೆಸರು ಎರಡಕ್ಷರದಲ್ಲಿದ್ದರೂ, ಆ ಅಕ್ಷರಗಳ ಹಿಂದೆ ಮಹಾನ್ ಶಕ್ತಿ ಅಡಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಯ ಕುರಿತು ತನ್ನ ಕುಂಚಕಲೆಯ ಮೂಲಕ ಗಾಂಧೀಜಿಯ ಆದರ್ಶ ಹಾಗೂ ಸಂದೇಶವನ್ನು ಬಿತ್ತರಿಸಿದ ಯುವ ಕಲಾವಿದ ನಾರಾಯಣ ಕುಂಬಾರ ಬೇರೆ ಕಲಾವಿದರಿಗಿಂತ ಭಿನ್ನ.

ಬೀದರ ಮೂಲದ ಕಲಾವಿದ ಕುಂಬಾರ ಸಧ್ಯ ಬೆಂಗಳೂರಿನ ವೈಟ್‌ಫೀಲ್ಡನಲ್ಲಿ ಹವ್ಯಾಸಿ ಕಲಾವಿದನಾಗಿ ಹೊರಹೊಮ್ಮಿ 2011 ಜನವರಿ 31 ರಂದು ತಮ್ಮದೇ ಆದ 'ಆರ್ಟ್ ಪಾಯಿಂಟ್' ಎಂಬ ಹೆಸರಿನ ಕಲಾಶಾಲೆಯನ್ನು ತೆರೆದು ಶಿಷ್ಯ ಬಳಗವನ್ನು ಹೊಂದಿದ್ದಾರೆ. ಗಾಂಧೀಜಿ ಎಂದರೆ ಹಳೆಬರು, ಅದೆ ಟೋಪಿ, ಧೋತ್ರ, ಕನ್ನಡಕ ಎಂದು ಬಹುತೇಕರು ರಾಗ ಎಳೆಯುತ್ತಾರೆ. ಅದೆಲ್ಲವನ್ನೂ ನಿವಾರಿಸಿದ ಕುಂಬಾರ ಅವರು, ಗಾಂಧೀಜಿ ಚಿತ್ರಗಳಲ್ಲಿ ಹೊಸತನವನ್ನು ಒಡಮೂಡಿಸಿ, ಗಾಂಧೀಜಿಯವರ ವೈವಿಧ್ಯಮಯ ಶ್ಲೋಗನ್‌ಗಳನ್ನು ಪರಿಚಯಿಸಿದ ಕೀರ್ತಿ ಇವರದ್ದಾಗಿದೆ.



'ಬಾಪೂ' ತೈಲವರ್ಣ ಮಾಧ್ಯಮ

ರಿಯಾಲಿಸ್ಟಿಕ್ ಪೇಂಟಿಂಗ್‌ನಲ್ಲಿ ಆಸಕ್ತಿಯನ್ನು ಹೊಂದಿರುವ ಕುಂಬಾರರು ಬೀದರನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಹಿರಿಯ ಕಲಾವಿದ ಸಿ.ಬಿ. ಸೋಮಶೆಟ್ಟಿ ಮಾರ್ಗದರ್ಶನ ಪಡೆದಿದ್ದಾರೆ. ಕಲೆಯ ಸ್ವರೂಪ ಸರಸ್ವತಿ ಒಲಿದಿದ್ದು, ಈ ಕಲೆಯನ್ನು ವಿಸ್ತೃತಗೊಳಿಸಿ ಹೆಚ್ಚು ಹೆಚ್ಚು ಗಾಂಧೀಜಿಯ ಜೀವನ, ಹೋರಾಟ, ದೇಶಕ್ಕೆ ಸಲ್ಲಿಸಿರುವ ಕೊಡುಗೆ ಮುಂತಾದವುಗಳ ಅಧ್ಯಯನ ನಡೆಸಿ ಚಿತ್ರಕಲೆಯಲ್ಲಿ ಅನಾವರಣಗೊಳಿಸುವುದು ಕುಂಬಾರರ ಯೋಜನೆಯಾಗಿದೆ.

ಯುವಕನಾಗಿರುವ ಕುಂಬಾರ, ಹಿರಿಯಣ್ಣ ಮಹಾತ್ಮ ಗಾಂಧೀಜಿ ಚಿತ್ರಾರಾಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತಿ ವರ್ಷ ಅಕ್ಟೋಬರ್ 2 ರ ಗಾಂಧೀ ಜಯಂತಿ ಸಂದರ್ಭಕ್ಕೆ ಕುಂಬಾರ ಕುಂಚಕ್ಕೆ ಹೊಸ ಬಗೆಯ ಭಕ್ತಿ ಗರಿಗೆದರುತ್ತದೆ. ಇನ್ನೂ ವಿಶೇಷವೆಂದರೆ ಗಾಂಧೀಜಿಯವರ ಪ್ರಿಯವಾದ 'ಉಪವಾಸ' ಮಾಡಿ ಗೆಳೆಯರಿಗೆ ಮಾದರಿಯಾಗಿದ್ದಾರೆ. ಬಾಪು ಅವರ ಬಾಲ್ಯದ ಛಾಯಾಚಿತ್ರಗಳು ಸಂಗ್ರಹಿಸಿದ್ದಾರೆ. ಅವರು ಮಹಾತ್ಮರಾಗಿ ಬದಲಾವಣೆಯಾಗಿರುವ ಪ್ರಮುಖ ಘಟನೆಗಳು ಕುಂಚದ ಮೂಲಕ ಚಿತ್ರಿಸಿ ಹೌದು ಎನಿಸಿಕೊಂಡಿದ್ದಾರೆ.

ರಾಷ್ಟ್ರಪಿತನ ಚಿತ್ರಗಳು ಚಿತ್ರಿಸಿ ರಾಷ್ಟ್ರದ ವಾಣಿಜ್ಯ ನಗರಿ ಮುಂಬೈಯಿಯಲ್ಲಿ ನಡೆದ ಕಲಾಪ್ರದರ್ಶನದಲ್ಲಿ ಕಲಾಸಕ್ತರ


ಗಮನಸೆಳೆದಿದ್ದಾರೆ. ಕುಂಬಾರ ಬರೆದ ಗಾಂಧಿ ಚಿತ್ರಗಳಿಗೆ ಬೆಂಗಳೂರು ಸೇರಿದಂತೆ ಇತರೆಡೆಗಳಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಗುಲ್ಬರ್ಗಾದ ಇಂಡಿಯನ್ ರಾಯಲ್ ಅಕಾಡೆಮಿಯ ಚಿನ್ನದ ಪದಕ ಪಡೆದು ಕಲಾಕ್ಷೇತ್ರದಲ್ಲಿ ಧುಮುಕಿದ್ದಾರೆ. ಮಾತಿಗಿಂತ ಮೌನ ಇಷ್ಟಪಡುವ ಕಲಾವಿದ ನಾರಾಯಣನು ಕೈಲಾಸದ ನಾರದನಿಗೆ ತದ್ವಿರುದ್ಧ ಎಂತಲೆ ಹೇಳಬೇಕು.

ಮೌಲ್ಯಗಳಿರುವ ಉತ್ತಮ ಸಂದೇಶ ನೀಡುವ ಚಿತ್ರಗಳಿಗೆ ಬೇಡಿಕೆ ಕಡಿಮೆಯಾಗಿದ್ದರೂ ನಿಜವಾದ ಅರ್ಥದಲ್ಲಿ ಕಲಾವಿದನಿಗೆ ಖುಷಿ ಕೊಡುತ್ತವೆ. ಕಲೆಗೆ ಬೆಲೆ ಕಟ್ಟಲಾಗದು, ಮುಂಬೈಯಿ, ಬೆಂಗಳೂರು ಇತರೆ ಪ್ರದೇಶಗಳಲ್ಲಿ ಸಂಚರಿಸುವ ನನಗೆ ಹಿರಿಯ ಕಲಾವಿದರ ಸಲಹೆ, ಹೊಸ ಬಗೆಯ ಆಲೋಚನೆಗಳು ಚಿತ್ರಗಳ ರಚನೆಗೆ ಸ್ಫೂರ್ತಿ ನೀಡಿದೆ ಎಂದು ಡಿಪ್ಲೋಮಾ ಫೈನ್‌ಆರ್ಟ್ ಕಲಿತ ನಾರಾಯಣ ಹೇಳಲು ಮರೆಯಲಿಲ್ಲ. (ಎಸ್‌ಆರ್)

ನಾರಾಯಣ ಜೋಶಿ: ಕಲಬುರ್ಗಿಯ ಯುವ ಛಾಯಾಗ್ರಾಹಕ. ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಸ್ಮಾರಕಗಳನ್ನು ಹುಡುಕಿ, ತಮ್ಮ ಕ್ಯಾಮೆರದಲ್ಲಿ ಸೆರೆಹಿಡಿದು, ಇತ್ತೀಚೆಗೆ ಸಾರ್ವಜನಿಕ ಪ್ರದರ್ಶನ ನಡೆಸಿದರು. ಇಂಥ ಒಂದು ವಿಷಯದ ಮೇಲೆ ಕಲಬುರ್ಗಿಯಲ್ಲಿ ಪ್ರಥಮ ಬಾರಿಗೆ ಪ್ರದರ್ಶನ ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಪೇಂಟಿಂಗ್ ಮತ್ತು ಡ್ರಾಯಿಂಗ್‌ನಲ್ಲಿ ಡಿಪ್ಲೋಮಾ ಮುಗಿಸಿರುವ ಇವರು ಕುರಕುಂಟಾ ಸಿಮೆಂಟ್ ಕಾರ್ಖಾನೆ ಆವರಣದಲ್ಲಿದ್ದ ಭಾರತೀಯ ವಿದ್ಯಾ ಭವನ ಶಾಲೆಯಲ್ಲಿ ಕಲಾಶಿಕ್ಷಕರಾಗಿ ಸುಮಾರು ಒಂದು ವರ್ಷ ಕೆಲಸ ಮಾಡಿದರು. ಅನಂತರ ಕಲಬುರ್ಗಿಯ ಮಹರ್ಷಿ ವಿದ್ಯಾಮಂದಿರದಲ್ಲೊಂದು ವರ್ಷ ಕಲಾಶಿಕ್ಷಕರಾಗಿ, ಇತ್ತೀಚೆಗೆ ದಿ ಇಂಟಿಗ್ರೇಶನ್ ಫೈನ್ ಆರ್ಟ್ ಸಂಸ್ಥೆಯಲ್ಲಿ ಪ್ರಾಚಾರ್ಯರಾಗಿಯೂ ಕೆಲಸ ಮಾಡಿದ್ದಾರೆ. ಇದೇ ಸಂದರ್ಭದಲ್ಲಿ ಕೃಷ್ಣಾ ಸ್ವಯಂ ಉದ್ಯೋಗ ತರಬೇತಿ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ (ಕೃಷ್ಣಾ ಗ್ರಾಮೀಣ ಬ್ಯಾಂಕ್ ನಡೆಸುವ ಸಂಸ್ಥೆ) ಛಾಯಾಗ್ರಹಣ, ವಿಡಿಯೋ ಮತ್ತು ಲ್ಯಾಮಿನೇಶನ್ ತರಬೇತಿ ಪಡೆದರು. ಛಾಯಾಗ್ರಹಣ ಮತ್ತು ಪೇಂಟಿಂಗ್ ಎರಡರಲ್ಲೂ ಪರಿಣಿತಿ ಪಡೆದಿರುವ ಅವರು, ತಮ್ಮ ವಿದ್ಯಾರ್ಥಿಗಳೊಂದಿಗೆ ಪುರಾತನ ಸ್ಮಾರಕಗಳ ತವರೂರಾದ ಹಂಪಿಗೆ ಎರಡು ಬಾರಿ ಕ್ಯಾಂಪ್ ಹೋಗಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪೇಂಟಿಂಗ್‌ನಲ್ಲಿ ನಿರತರಾಗಿದ್ದರೆ,





ಬಸವಕಲ್ಯಾಣ ಕೋಟೆಯ ಛಾಯಾಚಿತ್ರ

ಇವರು ಕ್ಯಾಮೆರ ಹೊತ್ತು ತಮ್ಮದೇ ಆದ ಹೊಸ ದೃಷ್ಟಿಯಲ್ಲಿ ಹಂಪಿ ಸ್ಮಾರಕಗಳನ್ನು ಸೆರೆಹಿಡಿದರು. ಇವರು ಮಾಡುವ ಎಲ್ಲಾ ಕೆಲಸಗಳು ತಾತ್ಕಾಲಿಕವಾಗಿದ್ದುವು. ಯಾವುದರಿಂದಲೂ ಹೊಟ್ಟೆ ಹೊರೆಯಲು ಸಾಧ್ಯವಾಗದೇ ಕೆಲಸ ಬಿಟ್ಟರು. ಪೇಂಟಿಂಗ್‌ಗಿಂತ ದುಬಾರಿಯಾದರೂ ಛಾಯಾಗ್ರಹಣವೇ ಇವರಿಗೆ ಹೆಚ್ಚು ಹಿಡಿಸಿತು. ಉದ್ಯೋಗವಿಲ್ಲದೇ ಕೈಯಲ್ಲಿ ಹಣವಿಲ್ಲದಿದ್ದರೂ, ವಿಷಯಗಳನ್ನಾಧರಿಸಿ ಸ್ಮಾರಕಗಳ ಛಾಯಾಗ್ರಹಣ ಮಾಡತೊಡಗಿದರು.

ಕಲಬುರ್ಗಿ ಹಿಂದೆ ಹೈದರಾಬಾದ ನಿಜಾಮ ಆಡಳಿತಕ್ಕೊಳಪಟ್ಟಿದ್ದರಿಂದ ಇಲ್ಲಿ ಹಿಂದೂ-ಮುಸ್ಲಿಂ ವಾಸ್ತುಶಿಲ್ಪದ ಅಪಾರ ಸ್ಮಾರಕಗಳು ರಕ್ಷಣೆಯಿಲ್ಲದೇ ಹಾಳಾಗುತ್ತಿರುವದನ್ನು ತಮ್ಮ ಕ್ಯಾಮೆರದಲ್ಲಿ ಸೆರೆಹಿಡಿದರು. ಕಲಬುರ್ಗಿಯಲ್ಲಿ ಇದುವರೆಗೆ ಯಾರೂ ಛಾಯಾಚಿತ್ರ ಪ್ರದರ್ಶನ ಮಾಡಿರಲಿಲ್ಲ. ಸ್ವತಃ ಚಿತ್ರ ಕಲಾವಿದರಾದ ಆಧ್ಯಾತ್ಮ ಜೀವಿ ಎ.ಎಸ್. ಪಾಟೀಲರು ತಮ್ಮ ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ನಾರಾಯಣ ಜೋಶಿ ಅವರು ಕ್ಲಿಕ್ಕಿಸಿದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಿದರು.

(ಎಸ್‌ಆರ್‌ಎಂ)

ನಾರಾಯಣ ಭೋಸಾವಳೆ: ಚಿತ್ರಕಲಾವಿದ. ಯಾದಗಿರಿಯವರು. ಚಿತ್ರಕಲೆಯ ಆಸಕ್ತಿ ಇವರನ್ನು ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಸಂಸ್ಥೆಗೆ ಎಳೆ ತಂದಿತು. ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಚಿತ್ರಕಲೆಯ ಅನೇಕ ತಂತ್ರಗಳನ್ನು ಹಾಗೂ ಆಯಾಮಗಳನ್ನು ಕರಗತ ಮಾಡಿಕೊಂಡು, ಕೆಲ ಕಾಲ ಅಲ್ಲೇ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವರು.

ಮುಂದೆ ಲೋಕೋಪಯೋಗಿ ಇಲಾಖೆಯಲ್ಲಿ ಟ್ರೇಸರ್ ಹುದ್ದೆಗೆ ನೇಮಕವಾದರು. ಅದಾದ ಬಳಿಕ ಚಿಂಚೋಳಿ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಶಿಕ್ಷಕರಾಗಿ ನಿಯುಕ್ತಿಯಾಗಿ, ಚಿತ್ರಕಲಾ ಕ್ಷೇತ್ರಕ್ಕೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು, ಭಾವಿ ಕಲಾವಿದರನ್ನು ರೂಪಿಸುತ್ತ ಅದರಲ್ಲೇ ಸಾರ್ಥಕತೆಯನ್ನು ಕಂಡು ಕೊಂಡರು.

ವಿಚಾರವಾದಿ ಹಾಗೂ ಸೂಕ್ಷ್ಮ ಮನಸ್ಸಿನ ಕಲಾವಿದರು ಸಾಮಾಜಿಕ ಬದುಕಿನ ಅನೇಕ ಸೂಕ್ಷ್ಮ ವಿಷಯಗಳನ್ನು ತಮ್ಮ ಕಲಾಕೃತಿಗಳಲ್ಲಿ ಬಿಂಬಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವದನ್ನು ನಾವು ಕಾಣಬಹುದು. ಜೊತೆಗೆ ಪ್ರಕೃತಿಯ ಸೊಬಗನ್ನು, ಸುಂದರ ಕಲೆಯನ್ನು ಆಸ್ವಾದಿಸಿ, ಅನುಭವಿಸಿ, ಅದನ್ನು ಕ್ಯಾನ್‌ವಾಸ್ ಮೇಲೆ ಬಣ್ಣಗಳ ಮೂಲಕ ಹಿಡಿದಿಡುವಲ್ಲಿ ತೋರುವ ಅಪಾರ ಶ್ರದ್ಧೆ ಕಲಾವಿದರ ಕಲೆಗೆ ಹಿಡಿದ ಕನ್ನಡಿಯಾಗಿದೆ.

ನವ್ಯಕಲೆಯನ್ನು ಅರಗಿಸಿಕೊಳ್ಳಲು ಹಿರಿಯ ತಲೆಮಾರಿನವರಿಗೆ ಕಷ್ಟ ಸಾಧ್ಯವಾದಂತಹ ಸಂದರ್ಭದಲ್ಲಿ, ಈ ಕಲಾವಿದರು ನವ್ಯ ಕಲೆಯ ಆಳವನ್ನು ಅರಿತು, ಅನೇಕ ಕೃತಿಗಳನ್ನು ರಚಿಸುತ್ತಾ ನವ್ಯ ಕಲೆಯ ಮೇಲಿರುವ ತಮ್ಮ ಹಿಡಿತವನ್ನು ಬಲಪಡಿಸಿಕೊಂಡಿರುವದನ್ನು ತಮ್ಮ ಕಲಾಕೃತಿಗಳಲ್ಲಿ ತೋರಿಸುತ್ತಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಮಾನವ ಜನಾಂಗಕ್ಕೆ ಕಾಡುತ್ತಿರುವ ಭಯೋತ್ಪಾದನೆ ಎಂಬ ಸಮಸ್ಯೆಯನ್ನು ಬಾಂಬ್ ವಿಸ್ಫೋಟ್ ಎಂಬ ಸರಣಿ ಕಲಾಕೃತಿಗಳ ಮೂಲಕ ಎತ್ತಿ ತೋರಿಸಲು ಈ ಕಲಾವಿದರು ಪ್ರಯತ್ನ ಪಟ್ಟಿದ್ದಾರೆ. ಭಾವಚಿತ್ರ, ನಿಸರ್ಗ ಚಿತ್ರ, ನವ್ಯ ಕಲೆಗಳ ಬಗ್ಗೆ ಅರಿವಿರುವ ಭೋಸಾವಳೆ ಅವರು, ಕಲಾ ಕ್ಷೇತ್ರ ಕಂಡ ಅಪರೂಪದ ವ್ಯಕ್ತಿ. ಅದಕ್ಕೆಂದೆ ರಾಜ್ಯ ಸರಕಾರ 2002ನೇ ಸಾಲಿನಲ್ಲಿ ಇವರಿಗೆ ಹಿರಿಯ ಕಲಾವಿದರ ಪ್ರಶಸ್ತಿ ನೀಡಿ ಗೌರವಿಸಿತು.

ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿರುವ ಇವರ ಚಿತ್ರಗಳು, ಕೇಂದ್ರ ಲಲಿತಕಲಾ ಅಕಾಡೆಮಿ ಹಮ್ಮಿಕೊಂಡಿರುವ ವಾರ್ಷಿಕ ಕಲಾ ಪ್ರದರ್ಶನದಲ್ಲಿ ಪ್ರದರ್ಶನಗೊಂಡಿವೆ.

ಕಲಬುರ್ಗಿ ವಿಭಾಗ ಮಟ್ಟದ ಪ್ರಥಮ ಚಿತ್ರಕಲಾ ಪ್ರದರ್ಶನದಲ್ಲಿ ಹಾಗೂ ದ್ವಿತೀಯ ಪ್ರದರ್ಶನದಲ್ಲಿ ಪ್ರಶಸ್ತಿಗಳನ್ನು ಪಡೆದಿರುವ ಅವರು, ಕಲಬುರ್ಗಿ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, ಚಿಂಚೋಳಿ ತಾಲೂಕಿನ ಜನ ಮೆಚ್ಚಿದ ಶಿಕ್ಷಕ ಪ್ರಶಸ್ತಿಯಂತಹ ಅನೇಕ ಪ್ರಶಸ್ತಿಗಳು ಇವರ ಕೈಸೇರಿವೆ. ಕಲಬುರ್ಗಿಯ ಹಿರಿಯ ಕಲಾವಿದರಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಇವರು, ಕಲಾವಿದರಾಗಿ ಮಾತ್ರವಲ್ಲದೇ ಉತ್ತಮ ಬರೆಹಗಾರರಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಚಿಂಚೋಳಿ ತಾಲೂಕಿನ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಕಲಾಕೃತಿ ರಚನೆಯಲ್ಲಿ ಹಾಗೂ ಕಲಾ ವಿದ್ಯಾರ್ಥಿಗಳನ್ನು ರೂಪಿಸುವಲ್ಲಿ ತಮ್ಮ ಜೀವನದ ಸಾರ್ಥಕತೆಯನ್ನು ಕಾಣುತ್ತಿದ್ದಾರೆ. (ವಿಸಿ)

ನಾರಾಯಣಪುರ: ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಐತಿಹಾಸಿಕ ಗ್ರಾಮ. ವೈಭವದಿಂದ ಮೆರೆದಿದೆ ಎಂಬುದಕ್ಕೆ ಅಲ್ಲಿನ ಪ್ರತಿಯೊಂದು ಕಲ್ಲುಗಳೂ ಇಲ್ಲಿನ ಇತಿಹಾಸ ಹಾಗೂ ಶಿಲ್ಪಕಲೆಗಳ ಶ್ರೀಮಂತಿಕೆಯ, ವೈಭವದ ಕಥೆಯನ್ನು ಹೇಳುತ್ತವೆ.

ನಾರಾಯಣಪುರ, ಕಲ್ಯಾಣ ಚಾಲುಕ್ಯರ ಶಿಲ್ಪಕಲೆಗಳ ತವರೂರು. ಬಸವಕಲ್ಯಾಣದ ಪೂರ್ವ ದಿಕ್ಕಿನಲ್ಲಿ ಮೂರು ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಶಿಲಾಶಾಸನದಲ್ಲಿ ತ್ರಿಭುವನ ತಿಲಕ ಶ್ರೀ ರಾಮನಾರಾಯಣ ಮತ್ತು ರಾಯ ನಾರಾಯಣಪುರ ಎಂಬ ಉಲ್ಲೇಖವಿದೆ. ಚಾಲುಕ್ಯರು ಇಲ್ಲಿ ಕೊರೆದಿರುವ ಕೆಲವು ಶಿಲ್ಪಗಳನ್ನು ಬೇರೆ ಬೇರೆ ಗ್ರಾಮ ಪಟ್ಟಣಗಳಿಗೆ ಸ್ಥಳಾಂತರಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಇಲ್ಲಿನ ಕೆರೆ ತುಂಬ ಮತ್ತು ಕೆರೆಯ ದಡದ ಸುತ್ತಮುತ್ತ, ಗ್ರಾಮದ ತುಂಬೆಲ್ಲ ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಅನಾಥವಾಗಿ ಬಿದ್ದಿರುವ ಶಿಲ್ಪ ಕಲಾಕೃತಿಗಳು, ವಾಸ್ತು ಶಿಲ್ಪದ ಅವಶೇಷಗಳನ್ನು ಇಲ್ಲಿ ಕಾಣಬಹುದು. ಪ್ರತಿಯೊಂದು ಕಲ್ಲಿನಲ್ಲೂ ಕಲಾಕೃತಿಯನ್ನು ಕಾಣಬಹುದಾದರೆ, ಇಲ್ಲಿನ ಶಿಲ್ಪಕಲೆ ಎಷ್ಟು ಶ್ರೀಮಂತಿಕೆಯಿಂದ ಮೆರೆದಿರಬಹುದು ಎಂಬುದು ಕಲ್ಪನೆಗೆ ಬರುತ್ತದೆ.

ಗ್ರಾಮದ ದಕ್ಷಿಣಕ್ಕೆ ಶ್ರೀಮನ್ ನಾರಾಯಣ (ವಿಷ್ಣು) ದೇವಾಲಯವಿದೆ. ಈಗಿದು ಪೂರ್ತಿ ಶಿಥಿಲಗೊಂಡಿದೆ. ಒಂದು ಮಸೀದೆಯೂ ಆಗಿದೆ. ಬಹುಶಃ ಈ ದೇವಾಲಯದಿಂದ ಊರಿಗೆ ನಾರಾಯಣಪುರ ಎಂಬ ಹೆಸರು ಬಂದಿರುವ ಸಾಧ್ಯತೆ ಕಂಡು ಬರುತ್ತದೆ.

ನಾರಾಯಣನ ದೇವಸ್ಥಾನದಲ್ಲಿ ನಾಲ್ಕು ಅಡಿ ಎತ್ತರದ ತಿಳಿಕಪ್ಪು ಕಲ್ಲಿನಲ್ಲಿ ಕೆತ್ತಿರುವ ಪದ್ಮಾವತಿಯ ಶಿಲ್ಪ ತುಂಬ ಸುಂದರವಾಗಿದೆ. ಸೊಂಟದಲ್ಲಿನ ಆಭರಣಗಳು ತೊಡೆಯವರೆಗೂ ಜೋತು ಬಿದ್ದಿದ್ದು, ಕೈಕಾಲುಗಳಲ್ಲಿ ಕಡಗ, ಚೈನುಗಳು, ಎಡಗೈಯಲ್ಲಿ ಗಿಣಿಯು ಕುಳಿತು ಅವಳ ಮುಖದ ಸಮೀಪ ಹೋಗಿ ಏನೋ ಸಂದೇಶ ಹೇಳುವಂತಿದೆ. ಈ ಗಿಳಿಯು ಶುಕ ಮಹರ್ಷಿಯನ್ನು ಸೂಚಿಸುತ್ತದೆಯಂತೆ. ಕೈಬೆರಳಿನಲ್ಲಿ ಸುಂದರವಾದ ಉಂಗುರಗಳು, ಬಲಗೈನಲ್ಲಿ ನಾದ ಹೊರಡಿಸುವ ಒಂದು ವಾದ್ಯ, ಕಿವಿಯಲ್ಲಿ ಸೂಕ್ಷ್ಮ ಕೆತ್ತನೆಯ ಓಲೆಗಳು, ಕೊರಳ ಹಾರ, ನೀಳ ಕೇಶರಾಶಿ ಪ್ರತಿಯೊಂದೂ ಈ ಮೂರ್ತಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ಮಾಡಿರುವದು ಕಂಡು ಬರುತ್ತದೆ. ಹದಿನಾಲ್ಕು ಅರ್ಧಕಂಬಗಳಿಂದ ಕೂಡಿದ ಸಭಾಮಂಟಪವಿದ್ದು, ಮಂಟಪದ



ಶಿವಮಂದಿರ, ನಾರಾಯಣಪೂರ

ಮಧ್ಯೆ ನಾಲ್ಕು ಕಂಬಗಳಿಂದ ಕೂಡಿದ ಮತ್ತೊಂದು ರಂಗ ಮಂಟಪ, ಮಧ್ಯದಲ್ಲಿ ಗರ್ಭಗೃಹದ ದ್ವಾರಕ್ಕೆ ಮುಖ ಮಾಡಿ ಕುಳಿತಿರುವ ನಂದಿ ಸ್ಥಾಪನೆ ಮಾಡಲಾಗಿದೆ.

ಕಂಬಗಳು ಮೂರು ತುಲವಿನ್ಯಾಸಗಳು ಒಂದರ ಮೇಲೆ ಒಂದು ಬಿದ್ದಂತೆ ಇದ್ದು, ಮಧ್ಯದಲ್ಲಿ ಗೋಪುರದಂತೆ ಕೆತ್ತಲಾಗಿದೆ. ವರ್ತುಲಾಕಾರದ ಈ ಕಂಬಗಳ ಮೇಲೆ ನೃತ್ಯ ಭಂಗಿಯ ಸ್ತ್ರೀ ಶಿಲ್ಪಗಳನ್ನು ಮನಮೋಹಕವಾಗಿ ಕೆತ್ತಲಾಗಿದೆ. ಈ ಸ್ತ್ರೀಯರು ಡೊಳ್ಳು, ಢೋಲಕ್‌ಗಳನ್ನು ಹಿಡಿದು ನರ್ತಿಸುತ್ತಿದ್ದಾರೆ. ಕೆಳಭಾಗದಲ್ಲಿ ಸಿಂಹದ ಮುಖ, ಕೀರ್ತಿ ಮುಖ, ನವಿಲುಗಳು, ಗಣಪ ಮತ್ತು ಆನೆಗಳ ವಿವಿಧ ಭಂಗಿಯ ಶಿಲ್ಪಗಳಿವೆ.

ಮೇಲ್ಭಾವಣಿಯನ್ನು ವಿವಿಧ ಭಂಗಿಯ ಶಿಲ್ಪ ಕೆತ್ತನೆಗಳಿಂದ ಸಿಂಗರಿಸಲಾಗಿದೆ. ಮಂಟಪದ ಉತ್ತರ, ದಕ್ಷಿಣ ದಿಸೆಯಲ್ಲಿ ಮುಖಮಂಟಪಗಳು ಬಿದ್ದುಹೋಗಿವೆ. ದ್ವಾರದ ಎರಡೂ ಬದಿಗಳಲ್ಲಿ ಮಕರ ತೋರಣವನ್ನು ಸುಂದರವಾಗಿ ಶಿಲ್ಪಗಳನ್ನು ಕೆತ್ತಲಾಗಿದೆ.


ಮಹಾನಂದಿಯ ಮೂರು ಅಡಿ ಎತ್ತರದ ಕಲ್ಲು ಶಿಲೆಯಲ್ಲಿ ಸುಂದರವಾದ ಮೂರ್ತಿಯನ್ನು ಕೆತ್ತಲಾಗಿದೆ. ಮೊಳಕಾಲು ಊರಿ ನೃತ್ಯ ಮಾಡುತ್ತಿರುವ ಸುಂದರ ಕೆತ್ತನೆಯ ಈ ಮೂರ್ತಿ, ಕೊರಳಲ್ಲಿನ ರುದ್ರಾಕ್ಷಿಯಿಂದಾಗಿ ಧ್ಯಾನದಲ್ಲಿ ಅತ್ಯಂತ ಭಾವಪರವಶವಾಗಿರವಂತೆ ಕಂಡುಬರುತ್ತದೆ.

ದೇವಾಲಯದ ಬಲಭಾಗದ ದಿಕ್ಕಿನಲ್ಲಿ ಮೊಸಳೆಯ ಮೇಲೆ ವಿಷ್ಣು ಕುಳಿತಿರುವದು, ಬಾಲವು ಗರಿಬಿಚ್ಚಿದ ನವಿಲಿನಂತೆ ಮಾಡಲಾಗಿದೆ. ಮೊಸಳೆ ಬಾಯಿಯಿಂದ ಅಲಂಕಾರಿಕವಾಗಿ ಗೆರೆಗಳನ್ನು ಕೊರೆಯಲಾಗಿದೆ. ಮುಂದೆ ಪದ್ಮಾಸನ ಭಂಗಿಯಲ್ಲಿ ನರಸಿಂಹನು ಕುಳಿತು ಹಿರಣ್ಯಾ ಕಶ್ಯಪುವಿನ ಹೊಟ್ಟೆಯನ್ನು ಬಗೆಯುವ ಚಿತ್ರವನ್ನು ಸುಂದರವಾಗಿ ಕೆತ್ತಲಾಗಿದೆ. ದೇವಾಲಯದ ಎಡಭಾಗದಲ್ಲಿರುವ ಇನ್ನೊಂದು ಶಿಲ್ಪದಲ್ಲಿ ಮಹಾಭಾರತದ ಕಥೆಯನ್ನು ಹೇಳುವ ಸುಂದರ ಶಿಲ್ಪಗಳು, ಕಲ್ಯಾಣ ಚಾಲುಕ್ಯರಲ್ಲಿನ ಅತ್ಯಂತ ಶ್ರೇಷ್ಠ ಕಲಾಕೃತಿಗಳೆಂದು ಹೇಳಬಹುದು. ದೇವಾಲಯದ ಹೊರಗೋಡೆಯು ಕಾಣುವುದೇ ಇಲ್ಲ. ದೇವಾಲಯದ ಸುತ್ತಮುತ್ತ ಹಿಂದಿದ್ದ ಕಂಬಗಳು ಬಿದ್ದು ಹೋಗಿರುವದು ಕಂಡು ಬರುತ್ತದೆ.

ಹೊರಗೋಡೆಯ ಆವರಣದಲ್ಲಿನ ಶಿಲ್ಪವೊಂದು ಪೂರ್ತಿ ನಗ್ನ ರೂಪದಲ್ಲಿದ್ದು, ಅವಳ ತೊಡೆಗೆ ಸರ್ಪ ಸುತ್ತಿಕೊಂಡಿದೆ. ಇಲ್ಲಿನ ಬಹುತೇಕ ಶಿಲ್ಪಗಳು ನಗ್ನ, ಅರೆನಗ್ನ ರೂಪದಲ್ಲಿದ್ದು, ಕನ್ನಡಿಯಲ್ಲಿ ನೋಡಿ ಅಲಂಕರಿಸಿಕೊಳ್ಳುತ್ತಿರುವದು, ವೀಣೆ ಬಾರಿಸುವದು, ಜಡೆ ಹಾಕಿಕೊಳ್ಳುವದು, ಮುಂಜಾನೆದ್ದು ಮೈ ಮಣಿಸುತ್ತಿರುವ ಮುಂತಾದ ಭಂಗಿಯ ಶಿಲ್ಪಗಳು ಬೇಲೂರು ಬಾಲೆಯರನ್ನು ನೆನಪಿಸುತ್ತವೆ.

ಆರಡಿ ಎತ್ತರದ ಅಖಂಡ ಶಿಲೆಯ ಸಭಾಂಗಣದ ಪಶ್ಚಿಮ ದಿಸೆಯಲ್ಲಿ ಪೂರ್ವಾಭಿಮುಖವಾಗಿ ಶಿವಾಲಯವಿದೆ. ಗರ್ಭಗುಡಿಯ ತಲವಿನ್ಯಾಸ ನಕ್ಷತ್ರಾಕಾರ, ಸಭಾಮಂಟಪ ಶಿಲುಬೆಯಾಕಾರದಂತಿದ್ದು, ಮುಖಮಂಟಪವು ಆರಡಿಯಿಂದ ಏಳು ಮೆಟ್ಟಿಲುಗಳನ್ನೇರಿ ನೇರವಾಗಿ ಒಳಗೆ ಬಂದರೆ, ಗರ್ಭಗುಡಿಯ ಒಳಾಂಗಣ ತಲುಪುತ್ತದೆ. ಮಧ್ಯದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು, ಹಿಂಭಾಗದ ಕಟ್ಟೆಯಲ್ಲಿ ಮಹಾದೇವಮೂರ್ತಿ. ಇದು ಸುಮಾರು ಎರಡು ಅಡಿ ಎತ್ತರವಿರಬಹುದು. ನಾಲ್ಕು ಕೈಗಳಿದ್ದು, ಒಂದು ಕೈಯಲ್ಲಿ ಇಷ್ಟಲಿಂಗ, ಮತ್ತೊಂದರಲ್ಲಿ ಸರ್ಪ ಹಿಡಿದಿದ್ದಾನೆ. ಇನ್ನೊಂದರಲ್ಲಿ ತ್ರಿಶೂಲ ಹಾಗೂ ಮತ್ತೊಂದು ಕೈಯಲ್ಲಿ ಡಮರು ಹಿಡಿದಿರುವ ಮಹಾದೇವನು ನಂದಿಯ ಮೇಲೆ ಕುಳಿತಿದ್ದಾನೆ. ಮೂರ್ತಿಯ ಸುತ್ತಲೂ ಇರುವ ನಾಲ್ಕು ಕಂಬಗಳು ಹಾಗೂ ಮೇಲ್ಛಾವಣಿಯನ್ನು ಸುಂದರವಾದ ಕುಸುರಿನಿಂದ ಕೀರ್ತಿ ಮುಖಗಳು ಹಾಗೂ ಕಮಲಗಳ ಕೆತ್ತನೆ ಮಾಡಲಾಗಿದೆ.

ಪಾರ್ಶ್ವ ಗೋಡೆಗಳಲ್ಲಿ ಸರಳಗೈ ಚಿತ್ರಣ ಸಾಲುಗಳು, ನಾಗಿಣಿಯರ ಶಿಲ್ಪಗಳು, ಸಿಂಹ ನೃತ್ಯ ಹಾಗೂ ಬಳ್ಳಿಗಳ ಸಾಲುಗಳು, ಮಧ್ಯ ಸ್ತಂಭದ ಮೇಲೆ ಮುತ್ತು, ರತ್ನಪಟಿಕೆಗಳ ತೋರಣ, ಚೌಕಾಕಾರ, ಅಷ್ಟಕೋನ ತಲೆಕೆಳಗಾದ ಗಂಟೆ ಆಕಾರದ ಚಿತ್ರಣ ಎದೆ. ಮುಂದೆ ಗರ್ಭ ದ್ವಾರದ ಕಡೆಗೆ ಕೈಜೋಡಿಸಿರುವ ವಿವಿಧ ಭಂಗಿಯ ಶಿಲ್ಪಕನ್ಯೆಯರು ನರ್ತನ ಮಾಡುತ್ತಿರುವುದನ್ನು ಕೆತ್ತಲಾಗಿದೆ.



ಹೊರಗೋಡೆಗಳ ಮೇಲಿರುವ ಸುಂದರ ಶಿಲಾಬಾಲಿಕೆಯರು

ದ್ವಾರದ ಮೇಲೆ ಮೂರು ಮಂಟಪದ ಮೇಲ್ಚಾವಣಿಯ ಮುಂದಕ್ಕೆ ಚಿಕ್ಕ ಚಿಕ್ಕ ಐದು ಮಂಟಪಗಳು, ಇವುಗಳ ಮಧ್ಯೆ ಲಕ್ಷ್ಮಿ, ಸರಸ್ವತಿ ಬ್ರಹ್ಮ, ಧನಲಕ್ಷ್ಮಿ, ಸಂತಾನ ಲಕ್ಷ್ಮಿ, ವಿದ್ಯಾ ಲಕ್ಷ್ಮಿ, ವರಲಕ್ಷ್ಮಿ, ಧಾನ್ಯ ಲಕ್ಷ್ಮಿ, ಪಾರ್ವತಿ, ಗಣೇಶನ ಶಿಲ್ಪಗಳಿವೆ. ಇವುಗಳ ಕಲಾತ್ಮಕತೆ ಹಾಗೂ ಕುಸುರಿಗಳನ್ನು ನೋಡಿದರೆ, ಬೇಲೂರಿನ ಚನ್ನಕೇಶವ ದೇವಾಲಯದ ನೆನಪು ಮೂಡಿ ಸುತ್ತದೆ.

ಗರ್ಭಗೃಹದ ಮುಂದೆ ಹತ್ತು ಅಡಿ ಅಗಲವಾದ ಮಂಟಪ ದಲ್ಲಿ ನಟರಾಜ ಕಾಲಭೈರವ, ವಿಷ್ಣು, ವರಾಹಮೂರ್ತಿ, ವೀರಭದ್ರ, ನರಸಿಂಹ, ಗರುಡ ಮುಂತಾದ ಸುಂದರ ಶಿಲ್ಪಗಳು ಗಮನ ಸೆಳೆಯುತ್ತವೆ. ಕಂಬಗಳಂತೂ ಅತ್ಯಂತ ಸುಂದರವಾಗಿ ಕೆತ್ತನೆ ಮಾಡಿದ್ದು, ಪದ್ಮಿನಿ ಶಿಲ್ಪ ಮತ್ತು ಮಹಾನಂದಿ ಶಿಲ್ಪಗಳನ್ನು ಕೊರೆಯಲಾಗಿದೆ.

ಈ ಗುಡಿಯನ್ನು ಸಂಪೂರ್ಣ ಪರಿಶೀಲಿಸಿದಾಗ ಇದೊಂದು ವಿಷ್ಣು ದೇವಾಲಯವಾಗಿರಬಹುದೆಂದು ಡಾ. ಶಂಕರ ಡಿ. ಮೂಗಿ ಅವರು ಅಭಿಪ್ರಾಯಪಡುತ್ತಾರೆ. ವಿಷ್ಣು, ವರಾಹ, ವಿಷ್ಣುವಿನ ವಿವಿಧ ಅವತಾರಗಳು, ದೇಗುಲದಿಂದ ತಂದಿಡಲಾಗಿದೆ. ನಾರಾಯಣಪುರ ದೇವಿ ಆರಾಧನೆಯ ಕೇಂದ್ರವಾಗಿತ್ತು. ಆರನೇ ವಿಕ್ರಮಾದಿತ್ಯನ ರಾಣಿ ಮಲಯಮತಿ ಮಹಾದೇವಿಯದೇಗುಲ ಕಲ್ಯಾಣದಲ್ಲಿತ್ತು. ಆ ದೇಗುಲ ಶಿವದೇವಾಲಯವಿರಹುದೇ ಮುಂತಾದ ಸಂಶಯಗಳಿಗೆ ಎಡೆ ಮಾಡಿ ಕೊಡುತ್ತದೆ ಎಂದು ಡಾ.ರು.ಮ. ಷಡಕ್ಷರ ಅವರು ಅಭಿಪ್ರಾಯ ಪಡುತ್ತಾರೆ. ಮಲಯಮತಿ ಮಹಾದೇವಿಯ ದೇಗುಲ ಇದೇ ಇದ್ದಿದ್ದರೆ ಅವಳ ಮೂರ್ತಿ ಇಲ್ಲೇಕಿಲ್ಲ ? ಇವ ಳೊಂದಿಗೆ ಆರನೇ ವಿಕ್ರಮಾದಿತ್ಯನ ಮೂರ್ತಿಯೂ ಇರ ಬೇಕಿತ್ತು. ಅಥವಾ ಅವರಿಬ್ಬರ ಆಳ್ವಿಕೆಯ ಚಿತ್ರಗಳ ಕೆತ್ತನೆ ಇರಬೇಕಿತ್ತು. ಈ ಬಗ್ಗೆ ಇನ್ನೂ ಸಂಶೋಧನೆಯ ಅಗತ್ಯವಿದೆ.

ಈ ಶಿವ ದೇವಾಲಯದಂತೆ ಒಂಭತ್ತು ದೇವಾಲಯಗಳು ಕಲ್ಯಾಣದಲ್ಲಿರಬೇಕಿತ್ತು. ಅವುಗಳಲ್ಲಿ ಇಂದಿನವರೆಗೂ ಒಂದು ಕೂಡ ಅವುಗಳ ಮೂಲ ಸ್ಥಳ ಎಲ್ಲಿರುವವು ಎಂದು ಅರ್ಥ ವಾಗುವುದಿಲ್ಲ. ಅವುಗಳನ್ನು ನೋಡುವ ಭಾಗ್ಯ ನಮಗಿಲ್ಲ. ಮಹಾರಾಷ್ಟ್ರದ ಉಮರ್ಗಾದಲ್ಲಿದ್ದು, ಅಲ್ಲಿನ ಸರ್ಕಾರ ಇತ್ತೀಚೆಗೆ ಜೀರ್ಣೋದ್ಧಾರ ಮಾಡಿದೆ ಎಂದು ಡಾ. ನೀಲಾಂಬಿಕ ಶೇರಿಕರ ಅವರ ಅಭಿಪ್ರಾಯವಾಗಿದೆ.

ಇತ್ತೀಚೆಗೆ ಸಿಕ್ಕಿರುವ ಶಿಲಾಶಾಸನಗಳ ಆಧಾರದಿಂದ ಈ ನಾರಾಯಣಪುರದಲ್ಲಿ 108 ದೇವಾಲಯಗಳು ನಿರ್ಮಾಣವಾಗಿ ದ್ದವು. ಇಲ್ಲಿನ ಎಲ್ಲಾ ವಾಸ್ತುಶಿಲ್ಪಗಳು ಆರನೇ ವಿಕ್ರಮಾದಿತ್ಯನ ಕಾಲಕ್ಕೆ ನಿರ್ಮಾಣವಾದವುಗಳು ಎಂದು ಕಲ್ಯಾಣರಾವ ಪಾಟೀಲ ಅವರ ಲೇಖನದಿಂದ ತಿಳಿದು ಬರುತ್ತದೆ. ಆದರೆ ಬಸವಕಲ್ಯಾಣ ಭಾಗದಲ್ಲಿ ಆರನೇ ವಿಕ್ರಮಾದಿತ್ಯನ ಕಾಲದ ಯಾವುದೇ ಶಿಲಾ ಶಾಸನವು ಯಾವುದೇ ದೇವಾಲಯಕ್ಕೆ ದತ್ತಿದಾನ ಕೊಟ್ಟಿದ್ದು ಮತ್ತು ನೆನಪಿಗಾಗಿ ನಿರ್ಮಿಸಿರುವ ನಿರೂಪಣೆಗಳನ್ನು ಹೇಳು ವುದಿಲ್ಲ.

ಚಾಲುಕ್ಯರ ರಂಜೋಳ ಸಿಂದರುನಾಗ ಕುಲಕ್ಕೆ ಸೇರಿದವ ರೆಂದು ಒಂದು ಶಾಸನವಿದೆ. ನಾಗ-ನಾಗವೇಣಿಯರ ಶಿಲ್ಪಗಳು ಕಲ್ಯಾಣದಲ್ಲಿ ಸಾಕಷ್ಟಿವೆ. ತಾಲ್ಲೂಕಿನ ಹಲವಾರು ಕಡೆಗಳಲ್ಲಿ ನಾಗ-ನಾಗವೇಣಿಯರ ಶಿಲ್ಪಗಳು ಕಂಡು ಬರುತ್ತವೆ. ಆದರೆ ಇದೇ ಶಿಲ್ಪಗಳು ನಾರಾಯಣಪುರದಲ್ಲಿ ಕಂಡು ಬರುವದಿಲ್ಲ. ಇಲ್ಲಿ ಕಳಚೂರಿಯರ ಶಿಲ್ಪಗಳು ಚಾಲುಕ್ಯರ ಕಾಲದವುಗಳೆಂದು ಹೇಳಲಾಗುತ್ತದೆ. ಚಾಲುಕ್ಯರ ನಂತರ ಬಂದ ಕಳಚೂರರ ಕಾಲ ದಲ್ಲಿ ಇಷ್ಟಲಿಂಗಾರಾಧನೆ ಶಿಲ್ಪಗಲೆಗಳು ಚಾಲುಕ್ಯರ ಶೈಲಿಯಲ್ಲಿ ಕೆತ್ತಿರಬಹುದು ಈ ಬಗ್ಗೆ ಸಂಶೋಧನೆ ಅಗತ್ಯ.

ನಾರಾಯಣಪುರದಲ್ಲಿ ಮದುವೆ ಹಂದರ ಗಟ್ಟಿವಾಳಯ್ಯನ ದೇವಾಲಯ, ಮೃತ್ಯುಂಜಯ ಮಂದಿರ, ಭವರಯ್ಯನ ದೇವಾಲಯ, ಮುದ್ದಯ್ಯನ ಮಂದಿರ, ಕಾಶಿಪತಿ ರಾಜದಂಪತಿ ಮಂದಿರ, ಶಕಳೇಶ ಮಾದವರಸ ದೇವಾಲಯ, ಮೀನು ಮಂಟಪ, ಹನುಮಾನ ದೇವಾಲಯ, ಭವಾನಿ ದೇವಾಲಯ, ಹಾಲ ಬಸವಣ್ಣ ದೇವಾಲಯ, ನವನಾಥ ಕೆರೆ ಮುಂತಾದ ಅಪಾರ ಸಂಖ್ಯೆಯಲ್ಲಿ ಪ್ರತಿಯೊಂದು ಐತಿಹಾಸಿಕ ಕಥೆಗಳನ್ನು ಹೇಳುತ್ತವೆ. (ವಿಎಂಪಿ)

ನಾರಾಯಣಪ್ಪ ಚಿತ್ರಗಾರ: ಕಿನ್ನಾಳ ಸಾಂಪ್ರದಾಯಿಕ ಶೈಲಿಯ ಕಲಾವಿದ. 1985ರಲ್ಲಿ ಮೈಸೂರಿನಲ್ಲಿ ಜರುಗಿಸಿದ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಾಶಕ್ಕೆ ಬಂದ ಅಂಶಗಳು ಹಲವು. ಅವುಗಳಲ್ಲಿ ಚಿತ್ರಕಲೆಗೆ ಸಂಬಂಧಪಟ್ಟವಂತೂ ಉಲ್ಲೇ ಖಾರ್ಹ. ಹೀಗೆ ಪ್ರಕಾಶಗೊಂಡ ಕಲೆಗಳಲ್ಲಿ ಕರ್ನಾಟಕದ ಕಿನ್ನಾಳ ಗ್ರಾಮದ ಸಂಪ್ರದಾಯ ಶೈಲಿ ಒಂದು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ಕರ್ನಾಟಕ ಸಂಪ್ರದಾಯ ಅಲಂಕರಣೀಯ ಶೈಲಿ ಈಗೀಗ ಪುನರುಜ್ಜೀವನ ಗೊಂಡಿ ರುವುದು ಸರ್ವವಿಧಿತ. ದೇವಮೂರ್ತಿಗಳನ್ನು ಜೆಸ್ಸೋ ಮತ್ತು ಚಿನ್ನದ ರೇಖುಗಳ ಬಳಕೆಯಿಂದ ಮೆರಗುಗೊಳಿಸುತ್ತಿದ್ದ ಆ ಪ್ರಕಾರ ಮತ್ತೆ ಜನಪ್ರಿಯಗೊಳ್ಳುತ್ತಿದೆ. ಆದರೆ ಅದೇ ಮಾದರಿಯ, ಅದರ ರಂಗುಗಳಿಂದಲೇ ಸೌಂದರ್ಯಪೂರಿತ ನಮೂನೆ ಗಳನ್ನು ಪ್ರಜ್ವಲಿಸುವ ಪ್ರಕಾರ ಬಂದಿದೆ. ಎಂಬುದು ತಿಳಿದದ್ದು ಆ ಸಮ್ಮೇಳನದ ಸಂದರ್ಭದಲ್ಲಿ ಆ ಅಲಂಕರಣೀಯ ಪ್ರಕಾರ ಗಳನ್ನು ರಚಿಸಿ ಕಲಾವಿದರ, ಕಲಾ ರಸಿಕರ ಮನ್ನಣೆಗೆ ಪಾತ್ರರಾದ ಕಲಾವಿದರೆಂದರೆ ಅದು ಕಿನ್ನಾಳದ ನಾರಾಯಣಪ್ಪ



ಚಿತ್ರಗಾರ. ಆ ಗ್ರಾಮೀಣ ಕಲೆಯನ್ನು ಜೀವನದ ಉಸಿರಾಗಿಸಿ ಕೊಂಡು ಅದನ್ನು ಉಳಿಸಿಕೊಂಡು ಬಂದಿರುವ ಕೆಲವೇ ಕಲಾವಿದರಲ್ಲಿ ಇವರ ಸಾಧನೆ ಪ್ರಶಂಸನೀಯ.

ಇವರ ಮನೆತನ ಕಲಾವಿದರದು. ಇವರ ತಂದೆ ಶೀನಪ್ಪ ಮತ್ತು ಅಣ್ಣ ಕೃಷ್ಣಮೂರ್ತಿಗಳಿಬ್ಬರೂ ನುರಿತ ಕಲಾವಿದರು. 1904ರಲ್ಲಿ ಜನಿಸಿದ ನಾರಾಯಣಪ್ಪ ಚಿಕ್ಕಂದಿನಿಂದಲೇ ಈ ಕಲೆಯನ್ನು ಪಳಗಿಸಿಕೊಂಡು ಬಂದು ಶ್ರೇಷ್ಠಮಟ್ಟವನ್ನೇರಿದವರು ಸಾಮಾನ್ಯವಾಗಿ ಅಲಂಕರಣಕ್ಕೆ ಮೀಸಲಾದ ನಮೂನೆಗಳನ್ನು ಮರದ ರಿಪೀಸುಗಳ ಹಲಗೆಗಳ ಮೇಲೆ ರಚಿಸಿ ಅದನ್ನು ರಂಗು ಗಳಿಂದ ಪ್ರಕಾಶಗೊಳಿಸಿ ಅರಗಿನ ಸಹಾಯದಿಂದ ಮೆರಗು ಬರು ವಂತೆ ಮಾಡುತ್ತಾರೆ. ಬಳಿಕೆ ಎಂತಹ ಸಂದರ್ಭಕ್ಕೂ ಸಮ್ಮತ.

ಈ ಕಲೆ ಬೆಳಕಿಗೆ ಬಂದದ್ದು ನಗರದ ಕೇಂದ್ರ ಕರಕುಶಲ ಅಭಿವೃದ್ಧಿ ಮಂಡಳಿಯ ಮೂಲಕ ಅದು ನಡೆದದ್ದು 1960ರಲ್ಲಿ. ಆಗ ಅದನ್ನು ಗಮನಿಸಿದ ಕಲಾವಿದರು ಇವರನ್ನು ಮೈಸೂರಿಗೂ ಆಹ್ವಾನಿಸುವಂತೆ ಮಾಡಿತು. ಈಗ ಈ ಕಲೆಯನ್ನು ಶಿಷ್ಯರನೇ ಕರಿಗೆ ಕಲಿಸುತ್ತಿದ್ದಾರೆ. ಆ ಕಲಿಸವಿಕೆಯಿಂದ ನಮೂನೆಗಳಲ್ಲಿ ಬಣ್ಣಗಳ ಬಳಕೆಯಲ್ಲಿ ಪ್ರಯೋಗಗಳನ್ನು ನಡೆಸುತ್ತಿದ್ದಾರೆ.

ಈ ಮೂಲಕ ನಾರಾಯಣಪ್ಪ ಹಲವು ಪ್ರಶಂಸೆಗಳನ್ನು, ಬಹುಮಾನಗಳನ್ನು ಗಳಿಸಿದ್ದಾರೆ. ಅವುಗಳಲ್ಲಿ ಕರಕುಶಲ ಅಭಿವೃದ್ಧಿ ನಿಗಮದ (1984) ಪ್ರಶಂಸೆ ಸಾರ್ಕ್ ಸಮ್ಮೇಳನದಲ್ಲಿ (1986) ಜರುಗಿದ ಕಲಾಶಿಬಿರದ ಮೆಚ್ಚುಗೆ ಪತ್ರ ಮತ್ತು ಮಡಿಕೇರಿ ಯಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿಯ ವತಿಯಿಂದ ಜರುಗಿದ ಕಲಾಶಿಬಿರದಲ್ಲಿ ಪಾಲು ಉಲ್ಲೇಖನಾರ್ಹ.

(ಎಸ್‌ಎಂಎಸ್)

ನಾರಾಯಣಪ್ಪ ಪತ್ತಾರ: ಕಾಷ್ಠ ಕಲಾವಿದ. ಗಂಗಾವತಿ ನಗರ ದಲ್ಲಿ ವಾಸಿಸುತ್ತಿರುವ ಮೂಲತಃ ಯಲಬುರ್ಗಾ ತಾಲ್ಲೂಕಿನ ಮಂಗಳೂರು ಗ್ರಾಮದ ನಾರಾಯಣಪ್ಪ ಪತ್ತಾರ 25 ವರ್ಷ ಗಳಿಂದ ಯಾರ ಪ್ರೋತ್ಸಾಹ, ಬೆಂಬಲ ಇಲ್ಲದೆ ಕಲೆಯನ್ನು ಜೀವಂತವಾಗಿರಿಸಿಕೊಂಡವರು. ಹತ್ತನೇ ತರಗತಿ ಓದಿದವರು. ಜೀವನೋಪಾಯಕ್ಕಾಗಿ ವಿದ್ಯುತ್ ಪ್ರಸರಣ ಇಲಾಖೆಯಲ್ಲಿ ಎಲೆಕ್ಟ್ರಿಶಿಯನ್ ಆಗಿ ಸೇವೆ ಆರಂಭಿಸಿದರು. ವಿರಾಮದ ವೇಳೆ ಕಾಲ ವ್ಯರ್ಥ ಮಾಡಬಾರದು ಎಂದು ಮರದ ತುಂಡುಗಳನ್ನು ಹಿಡಿದು, ಅವಕ್ಕೆ ಉಳಿ ಮತ್ತು ಸುತ್ತಿಗೆಯ ಪೆಟ್ಟು ಕೊಟ್ಟವರು. ಹವ್ಯಾಸ ಮತ್ತು ಸಮಯ ದೂಡುವುದಕ್ಕಾಗಿ ಆರಂಭಿಸಿದ ಕೆಲಸ ಇಂದು ಕಲೆಯಾಗಿ, ಆ ಕಲೆಯಲ್ಲಿ ಜೀವ ತಳೆದ ಹಲವು ಶಿಲೆಯಂತಹ ಮೂರ್ತಿ, ವಿಗ್ರಹ, ಗೋಡೆ ಅಲಂಕಾರಿಕ, ಸಂಗ್ರಹಯೋಗ್ಯ ವಸ್ತು–ವಿನ್ಯಾಸದ ರೂಪ ತಳೆದು ನಿಂತಿವೆ. ಮುಕ್ಕಾಲು ಇಂಚು ಎತ್ತರದಿಂದ ಅರ್ಧ ಇಂಚು ಅಗಲದಿಂದ ಹಿಡಿದು 13 ಇಂಚು ಎತ್ತರ 7 ಇಂಚು ಅಗಲವರೆಗಿನ ವಿವಿಧ ಕಲಾಕೃತಿಗಳನ್ನು ಇವರು ಕೆತ್ತನೆ ಮಾಡಿದ್ದಾರೆ.

ಕನಕವೃಷ್ಟಿ ಸುರಿಸುತ್ತಿರುವ ಲಕ್ಷ್ಮಿ, ಕೊಳಲನ್ನುದುತ್ತಿರುವ ಗೋಪಾಲ, ಶಿರ್ಡಿ ಸಾಯಿಬಾಬ, ಸ್ವಾಮಿ ವಿವೇಕಾನಂದ ಕಾಳಿಕಾದೇವಿ, ಆಂಜನೇಯ, ಪಾರ್ವತಿ–ಈಶ್ವರ, ರಾಘವೇಂದ್ರ ಸ್ವಾಮಿ, ಬಸವ, ಜವಾಹರಲಾಲ್ ನೆಹರೂ, ಕರ್ನಾಟಕ ವಿದ್ಯುತ್ ನಿಗಮದ ಚಿಹ್ನೆ, ಶ್ರೀಚಕ್ರ, ಶಿವಲಿಂಗು, ಸ್ವಾಗತ ಕೋರುವ ಬೊಂಬೆಗಳನ್ನು ಕೆತ್ತಿದ್ದಾರೆ. ಮೂರು ಇಂಚಿನ ಮಂಟಪ ವೊಂದರ ಆಧಾರ ಸ್ತಂಭದ ಮೊದಲೆರಡು ಸಾಲಿನ ಕಂಬದ ಒಳಗೆ ಮತ್ತೆ ನಾಲ್ಕು ಕಂಬಗಳನ್ನು ರಚಿಸಿರುವುದು, ಒಂದೇ ಮರದ ತುಂಡಿನಲ್ಲಿ ಗುಂಡಿನೊಳಗೊಂದು ತಿರುಗುವ ಗುಂಡು, ತೂಗು ಗಂಟೆ ಮಾಡಿರುವುದು ಅವರ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. (ಎಂಜಿಎಸ್)


ನಾರಾಯಣರಾವ್ ಕುಲಕರ್ಣಿ: ಕೆನರಾ ಬ್ಯಾಂಕ್ ಉದ್ಯೋಗಿ ಯಾಗಿರುವ ನಾರಾಯಣರಾವ್ ಭೀಮಶೇನರಾವ್ ಕುಲಕರ್ಣಿ ಯವರು 1978ರಿಂದ ರಂಗ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡವರು. ಅಭಿನಯ, ನಿರ್ದೇಶನ, ರಂಗಗೀತೆ ಸಂಯೋ ಜನೆ, ರಂಗಸಜ್ಜಿಕೆ, ವೇಷ ಭೂಷಣ, ಬೆಳಕು, ವಿನ್ಯಾಸ ರಂಗ ಸಂಘಟನೆ ಹೀಗೆ ಹಲವು ಕ್ಷೇತ್ರ ಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 1960ರಲ್ಲಿ ಜನಿಸಿದ ಶ್ರೀಯುತರು ಬಿ.ಎಸ್‌ಸಿ. ಪದವಿಧರರು. 1978 ರಲ್ಲಿ ಉತ್ತಮ ಪ್ರಭುತ್ವ ಲೊಳಲೊಟ್ಟಿ ನಾಟಕದಲ್ಲಿ ಅಭಿನಯಿಸುವ ಮೂಲಕ ರಂಗಕ್ಷೇತ್ರ ಪ್ರವೇಶಿಸಿದರು.



ಐದು ನಾಟಕಗಳು ನಿರ್ದೇಶನ, ಮೂರು ನಾಟಕಗಳು ರಚನೆ, ಐದು ನಾಟಕಗಳು ಸಂಗೀತ ಸಂಯೋಜನೆ ಮಾಡಿ ದ್ದಾರೆ. ಆಕಾಶವಾಣಿ– ನಾಟಕ–'ಬಿ' ಶ್ರೇಣಿ ಕಲಾವಿದನಾಗಿ 28 ನಾಟಕಗಳಲ್ಲಿ, ದೂರದರ್ಶನ–ಐದು ನಾಟಕಗಳಲ್ಲಿ ಬೀದಿ ನಾಟಕ–20, ಅಭಿನಯ, ಸಂಘಟನೆ ಇವರ ಹವ್ಯಾಸ.

ಬೀದರಿನಲ್ಲಿ 'ಸಮುದಾಯ' ಸಂಸ್ಥೆಯಲ್ಲಿ ಜಿಲ್ಲೆಯಾದ್ಯಂತ ಜನ ಜಾಗೃತಿಗಾಗಿ ಬೀದಿ ನಾಟಕ, ರಂಗ ನಾಟಕ ಸಂಘಟಿಸಿ ದವರು, ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘದ ನಾಟಕಗಳಲ್ಲಿ ಮಾತ್ರವಲ್ಲದೆ 'ರಂಗ ಮಾಧ್ಯಮ' ಹವ್ಯಾಸಿ ನಾಟಕ ಸಂಸ್ಥೆಯ ಕ್ರೀಯಾಶೀಲ ಕಾರ್ಯಕರ್ತ. 2006 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ ಪ್ರಶಸ್ತಿಯೊಂದಿಗೆ ಜಿಲ್ಲಾ ಆಡಳಿತ, ಸ್ವರ ಮಾಧುರಿ, ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸನ್ಮಾನಿತರಾಗಿದ್ದಾರೆ. (ಎಸ್‌ಕೆ)

ನಿ



ನಿಖಿಲ ಶರದ ಕೋಲ್ಹಾರಕರ್: ಯುವ ತಬಲಾ ಕಲಾವಿದರು. ತಬಲಾ ಸಾಥಿದಾರರು. ಮೂಲತಃ ಗುಲಬರ್ಗಾದವರಾದ ಇವರು 1977 ರಲ್ಲಿ ತಂದೆ ಶರದ ಕೋಲ್ಹಾರಕರ್ ತಾಯಿ ಶ್ರೀಮತಿ ಸರೋಜ ಕೋಲ್ಹಾರಕರವರ ಪುತ್ರರಾಗಿ ಜನಿಸಿದರು.

ಇವರು ತಮ್ಮ ಪ್ರಾಥಮಿಕ ಶಿಕ್ಷಣದಿಂದ ಬಿ.ಎ. ಪದವಿಯ ವರೆಗೆ ನೂತನ ವಿದ್ಯಾ ಸಂಸ್ಥೆಯಲ್ಲಿ ಅಭ್ಯಾಸ ಮಾಡಿದ್ದಾರೆ. ಮನೆಯಲ್ಲಿ ತಂದೆ ತಾಯಿ ಸ್ವತಃ ಗಾಯಕ ರಾಗಿರುವುದರಿಂದ ಚಿಕ್ಕ ವಯಸ್ಸಿನಿಂದ ಸಂಗೀತವನ್ನು ಪರಂಪರಾಗತವಾಗಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರಪ್ರಥಮವಾಗಿ ಪಂ. ಸುಮನರಾವ ಕುಲಕರ್ಣಿ, ಪಂ. ಜಯರಾವ ಕುಲಕರ್ಣಿ, ಪಂ. ಪ್ರಸೂನ್ ಚಟರ್ಜಿ, ಇವರಲ್ಲಿ 20 ವರ್ಷಗಳ ಕಾಲ ದಿಲ್ಲಿ ಘರಾನ ಮತ್ತು ಪಂಜಾಬ ಮತ್ತು ಫರುಕಾಬಾದ ಘರಾನವನ್ನು ಅಭ್ಯಾಸ ಮಾಡಿದ್ದಾರೆ. ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ವಿದ್ವತ್ ಪರೀಕ್ಷೆಯನ್ನು 1994ರಲ್ಲಿ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ನಡೆಸುವ ವಿಶಾರದ ಪೂರ್ಣ ಪರೀಕ್ಷೆ ಮತ್ತು ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾಲಯದಿಂದ ತಬಲಾ ಎಂ.ಎ. ಪದವಿಯನ್ನು ಪಡೆದಿದ್ದಾರೆ. ಹಾಗೂ ಗುಲಬರ್ಗಾ ಆಕಾಶವಾಣಿ ಮತ್ತು ದೂರದರ್ಶನದ 'ಬಿ' ಗ್ರೇಡ್ ಕಲಾವಿದರಾಗಿದ್ದಾರೆ. ತಾಯಿ ಶ್ರೀಮತಿ ಸರೋಜ ಕೋಲ್ಹಾರಕರ್ ಇವರು ಸ್ಥಾಪಸಿದ ಸ್ವರಾಂಜಲಿ ಸಂಗೀತ ವಿದ್ಯಾಲಯವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಇವರು ಕರ್ನಾಟಕ, ಆಂಧ್ರ ಪ್ರದೇಶ, ಕೇರಳ, ತಮಿಳುನಾಡು, ಉತ್ತರಪ್ರದೇಶ, ಮಹಾರಾಷ್ಟ್ರದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿರುತ್ತಾರೆ.

ಇವರ ಸಾಧನೆಯನ್ನು ಕಂಡು ಅನೇಕ ಸಂಘ-ಸಂಸ್ಥೆಗಳು ಇವರಿಗೆ ಸನ್ಮಾನ ಮತ್ತು ಪ್ರಶಸ್ತಿಯನ್ನು ನೀಡಿವೆ. ಮಹಾಂತ ಜ್ಯೋತಿ ಪ್ರತಿಷ್ಠಾನದಿಂದ 'ಕಲಾಜ್ಯೋತಿ', ಸ್ವರಮಾಧುರಿ ಸಂಗೀತ ವಿದ್ಯಾಲಯದಿಂದ 'ತಬಲಾ ಆರಾಧಕ' ಪ್ರಶಸ್ತಿ, ದೊರೆತಿವೆ. ದಿನಾಂಕ: 17.01.2012ರಂದು ಸೋಲಾಪೂರದಲ್ಲಿ ಶ್ರೀ ರವಿಶಂಕರ ಗುರುಜಿ ಅವರ ಸಾನಿಧ್ಯದಲ್ಲಿ ನಡೆದ 'ತಾಲ ನಿನಾದ' ಗಿನ್ನಿಸ್ ದಾಖಲೆಯ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಸುಮಾರು 1548 ತಬಲಾ ಹಾಗೂ ಪಖವಾಜ ಕಲಾವಿದರು ಒಂದೇ ವೇದಿಕೆಯಲ್ಲಿ ನುಡಿಸಿದ ಕಾರ್ಯಕ್ರಮದಲ್ಲಿ ಇವರೂ ಭಾಗವಹಿಸಿದ್ದಾರೆ.

ಪ್ರಸ್ತುತ ಇವರು ನೂತನ ವಿದ್ಯಾಲಯ ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿ ಕಳೆದ 1994ರಿಂದ ತಬಲಾ ಸಾಥಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. (ಆರ್‌ಕೆಕೆ)



ಶ್ರೀ ಕೀರ್ತಿಕುಮಾರ ಬಡಶೇಷಿಯರೊಂದಿಗೆ ತಬಲಾ ಸಾಥ



ನಿಜಲಿಂಗಪ್ಪ ಬಿ. ಹಾಲವಿ: ಚಿತ್ರಕಲಾವಿದ. ಚಿಕ್ಕಂದಿನಲ್ಲಿಯೇ ಕಲೆಯ ಬಗ್ಗೆ ಒಲವು ಬೆಳೆಸಿಕೊಂಡು ಕುಂಚ ಕೈಗೆತ್ತಿಕೊಂಡ ಹಾಲವಿ ಅವರ ಕನಸು ಗುರುತಿಸಿದ ಮಾರ್ಗದರ್ಶಕರು, ಈ ಪ್ರತಿಭೆ ಮುಂದೊಂದು ದಿನ ಏನಾದರೂ ಸಾಧಿಸಲಿದೆ ಎಂಬ ಭರವಸೆಯಿಂದ ಪ್ರೋತ್ಸಾಹದ ಬಣ್ಣ ನೀಡಿದರು. ಅವರು ನೀಡಿದ ಬಣ್ಣ ಹುಸಿಯಾಗಲಿಲ್ಲ. ಹಾಲವಿ ಅವರನ್ನು ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದರ ಜೊತೆಗೆ ಮಾರ್ಗದರ್ಶಕರ ಶ್ರಮ ಸಾರ್ಥಕಗೊಳಿಸಿತು.

ಯಾದಗಿರಿ ತಾಲೂಕಿನ ಗುರಮಠಕಲ್ ಗ್ರಾಮದವರಾದ ಕಲಾವಿದ ನಿಜಲಿಂಗಪ್ಪ ಬಿ. ಹಾಲವಿ ಅವರು, ಮೊದಲಿಗೆ ಕಲಬುರ್ಗಿಯ ಕಲಾನಿಕೇತನದಲ್ಲಿ ಅಭ್ಯಾಸ ಮಾಡಿ, ಅನಂತರ ಕಲಬುರ್ಗಿ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಫೈನ್ ಆರ್ಟ್ಸ್ (ಚಿತ್ರಕಲೆ) ಪದವಿ ಪಡೆದರು. ಚಿತ್ರಕಲೆಯಲ್ಲಿ ಪರಿಪೂರ್ಣತೆ ಸಾಧಿಸಿಕೊಂಡು ಕಳೆದ 1984ರಿಂದ ಹಲವಾರು ಶಿಬಿರ ಮತ್ತು ಪ್ರದರ್ಶನ ಏರ್ಪಡಿಸಿ ಅನೇಕ ಪ್ರಶಸ್ತಿ ಗಳಿಸಿ ಅಪಾರ ಸಾಧನೆಗೈದಿದ್ದಾರೆ.



'ಶೀರ್ಷಿಕೆ ರಹಿತ' ತೈಲವರ್ಣ

ಕಲಬುರ್ಗಿ ಕಲಾಮಹೋತ್ಸವ, ಅಖಿಲ ಭಾರತ ಮೈಸೂರು ದಸರ ಚಿತ್ರಕಲಾ ಪ್ರದರ್ಶನ, ಕಲಬುರ್ಗಿ ವಿಶ್ವವಿದ್ಯಾಲಯ ವಿಭಾಗ ಮಟ್ಟದ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಳ್ಳಿ ಹಬ್ಬದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಚಿತ್ರಕಲಾ ಪ್ರದರ್ಶನ, ಮೀಕ್ಸೆಡ್‌ಬ್ಯಾಗ್ ಪ್ರದರ್ಶನ, ಅಖಿಲ ಭಾರತ ರೇಖಾಚಿತ್ರ ಮತ್ತು ವರ್ಣಚಿತ್ರ ಪ್ರದರ್ಶನ ಗದಗ, ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ, ಮುಂಬೈ ಆರ್ಟ್ಸ್ ಸೊಸೈಟಿ ವಾರ್ಷಿಕ ಕಲಾಪ್ರದರ್ಶನ, ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಾದೇಶಿಕ ಕೇಂದ್ರ ಚೆನ್ನೈ ಕಲಾಪ್ರದರ್ಶನ, ಆರನೇ ಕರ್ನಾಟಕ ಕಲಾಮೇಳ ಬೆಂಗಳೂರು, ಅಖಲ ಭಾರತ ರೇಖಾಚಿತ್ರ ಮತ್ತು ಗ್ರಾಫಿಕ್ ಪ್ರದರ್ಶನ, 16ನೆಯ ಅಖಿಲ ಭಾರತ ಕಲಾಪ್ರದರ್ಶನ, 38 ಮತ್ತು 39ನೆಯ ಕೇಂದ್ರ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾಪ್ರದರ್ಶನಕ್ಕೆ ಆಯ್ಕೆಯಾಗಿರುವುದು ಇವರ ವೈಯಕ್ತಿಕ ಸಾಧನೆಗಳು.

1991ರಲ್ಲಿ ಗ್ರೂಫ್ 91 ವೆಂಕಟಪ್ಪ ಆರ್ಟ್‌ಗ್ಯಾಲರಿ ಬೆಂಗಳೂರು, 1993ರಲ್ಲಿ 5ನೆಯ ರಾಷ್ಟ್ರೀಯ ಕಲಾಮೇಳ ಚೆನ್ನೈ, 1995ರಲ್ಲಿ 7ನೆಯ ರಾಷ್ಟ್ರೀಯ ಕಲಾಮೇಳ ಬೆಂಗಳೂರು, 1994ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಗ್ಯಾಲರಿ ರವೀಂದ್ರ ಭವನ ಬೆಂಗಳೂರು, 2000ದಲ್ಲಿ ನವರಂಗ ಕಲಾವಿದರ ಬಳಗ ರಾಯಚೂರು ಏರ್ಪಡಿಸಿದ್ದ ಸಮೂಹ ಪ್ರದರ್ಶನದಲ್ಲಿ ಭಾಗ ವಹಿಸಿದ್ದ ಹಾಲವಿ ಅವರ ಚಿತ್ರಕಲೆಗಳು ಮೆಚ್ಚುಗೆ ಗಳಿಸಿವೆ.

ಅಂತಾರಾಷ್ಟ್ರೀಯ ಪೇಂಟರ್ಸ್ ಮತ್ತು ಶಿಲ್ಪಿಗಳ ಸಿಂಪೋಜಿಯಂ ಕಲಬುರ್ಗಿ, ಕ್ರೈಂ ಸಂಸ್ಥೆ ಏರ್ಪಡಿಸಿದ್ದ ಕಲಾಶಿಬಿರ, ಹಂಪಿ ಉತ್ಸವ, ರಾಗ ರಂಗೋತ್ಸವ ರಾಯಚೂರು, ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯಮಟ್ಟದ ಕಲಾವಿದರ ಕಲಾಶಿಬಿರದಲ್ಲಿ ಹಾಲವಿ ಅವರು ಭಾಗವಹಿಸಿದ್ದಾರೆ.


1987ರಲ್ಲಿ ಕಲಬುರ್ಗಿ ಕಲಾಮಹೋತ್ಸವದಲ್ಲಿ ಉತ್ತಮ ಕಲಾ ವಿದ್ಯಾರ್ಥಿ, 1985, 86, 88ರಲ್ಲಿ ಕಾಲೇಜ್ ಆಫ್ ವಿಜ್ವಲ್ ಆರ್ಟ್ಸ್ ಕಲಾಮಹೋತ್ಸವ, 1992ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಅತ್ಯುತ್ತಮ ಕಲಾಕೃತಿ ಆಯ್ಕೆ, 1993 ಮತ್ತು 2001ರ ಅಖಿಲ ಭಾರತ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ ಮುಂತಾದ ಪ್ರಶಸ್ತಿಗಳನ್ನು ಹಾಲವಿ ಅವರ ಕಲಾಪ್ರತಿಭೆಗೆ ಸಂದ ಗೌರವಗಳಾಗಿವೆ. (ಬಿಎಚ್)

ನೀ

ನೀಲಮ್ಮ ಎಂ. ಬೆಳಮಗಿ: ಚಿತ್ರಕಲಾವಿದೆ. 1969 ಜೂನ್ 1 ರಂದು ಆಳಂದ ತಾಲ್ಲೂಕಿನ ನರೋಣಾ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ನರೋಣಾ ಗ್ರಾಮದಲ್ಲಿಯೇ ಪೂರ್ಣಗೊಳಿಸಿದ್ದಾರೆ. ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರು ಚಿತ್ರಕಲೆಯ ಅಭ್ಯಾಸ ನಗರದ ಪ್ರತಿಷ್ಠಿತ ಸಂಸ್ಥೆಯಾದ ದಿ ಐಡಿಯಲ್ ಫೈನ್‌ಆರ್ಟ್‌ನಲ್ಲಿ ಡಿಪ್ಲೊಮಾ ಪದವಿಯನ್ನು ಹಾಗೂ ಆರ್ಟ್ ಮಾಸ್ಟರ್ ಪದವಿಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಇವರು ತಮ್ಮ ಸ್ನಾತಕೋತ್ತರ ಪದವಿಯನ್ನು 2003ರಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ.



ತಮ್ಮದೇ ಆದ ಸ್ವಂತ ಮಹಾವಿದ್ಯಾಲಯ ಸ್ಥಾಪಿಸಿ ಕೆಲವೇ ವರ್ಷಗಳಲ್ಲಿ ಅದು ಸಾಂಸ್ಕೃತಿಕ ಲೋಕದಲ್ಲಿ ಸೃಷ್ಟಿಸಿದ ಸಂಚಲನ ರಾಜ್ಯ ಹಾಗೂ ರಾಷ್ಟ್ರ ಮಟ್ಟಕ್ಕೇರಿಸುವ ಪ್ರಯತ್ನ ಬೆಂಬಿಡದೇ ಸಾಧಿಸಿದ ಸಾಧಕಿ ಇವರು. ಅನೇಕ ಕಲಾಕೃತಿ ರಚನೆಯ ಜೊತೆ ಜೊತೆಗೆ ಮಹಾವಿದ್ಯಾಲಯದ ಬೆಳವಣಿಗೆಯ ಜವಾಬ್ದಾರಿಯನ್ನು ಹೊತ್ತರು ತೈಲ ಹಾಗೂ ಅಕ್ರಾಲಿಕ್ ಮಾಧ್ಯಮಗಳಲ್ಲಿ ಅನೇಕ ಕಲಾಕೃತಿಯನ್ನು ರಚಿಸಿದ್ದಾರೆ. 'ಚರ್ಚೆ', 'ಸಂತೋಷ', 'ಸಮುದ್ರ', 'ನಿಸರ್ಗ' ಹೀಗೆ ಇನ್ನೂ ಅನೇಕ ಭಾವನೆ ಹಾಗೂ ನಸರ್ಗಕ್ಕೆ ಸಂಬಂಧಿಸಿದ ವಸ್ತುಗಳು ಇವರ ಕಲಾಕೃತಿ ರಚನೆಯ ವಿಷಯಗಳಾಗಿವೆ. ಇವರ 'ಸಮುದ್ರ' ಎಂಬ ಕಲಾಕೃತಿ ಮನುಷ್ಯನ ಭಾವನೆಯನ್ನು ಅವನ ಚಿಂತನೆಯನ್ನು ಅತ್ಯಂತ ಆಳಕ್ಕಿಳಿಸಿ ಅದರಲ್ಲಿ ತಲ್ಲೀನತೆ ಹೊಂದುವಂತೆ ಇಡೀ ಸಮುದ್ರಾಳದಲ್ಲಿ ನಡೆಯುವ ಪ್ರಕ್ರಿಯೆಗಳನ್ನು ತುಂಬಾ ಸೊಗ



'ಸೀ' ಅಕ್ರೇಲಿಕ್ ಮಾಧ್ಯಮ

ಸಾಗಿ ಮೂಡಿಸಿದ್ದಾರೆ. ಸಮುದ್ರದಲ್ಲಿರುವ ಅನೇಕ ಜಲಚರ ಪ್ರಾಣಿಗಳು, ಸಮುದ್ರದ ಹಾಸು, ಪಚ್ಚೆ ಹೀಗೆ ಪ್ರತಿಯೊಂದನ್ನು ಕೂಡ ಅತ್ಯಂತ ನೈಜವಾಗಿ ಚಿತ್ರಿಸಿ ಈ ಭಾಗದ ಶ್ರೇಷ್ಠ ಮಹಿಳಾ ಕಲಾವಿದರಲ್ಲಿ ಒಬ್ಬರು ಎಂದು ಸಾಬೀತು ಪಡಿಸಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ಧರ್ಮಸ್ಥಳದ ಮಂಜುನಾಥ ಟ್ರಸ್ಟ್, ದಸರಾ ಮಹೋತ್ಸವ, ಅವಂತಿಕಾ ನವ ದೆಹಲಿ ಮಹಿಳಾ ಚಿತ್ರಕಲಾ ಶಿಬಿರ, ವಚನ ಮಹೋತ್ಸವದ ಚಿತ್ರಕಲಾ ಶಿಬಿರ ಹೀಗೆ ರಾಜ್ಯದ ಹಾಗೂ ರಾಷ್ಟ್ರದ ಅನೇಕ ಸ್ಥಳಗಳಲ್ಲಿ ತಮ್ಮ ಕಲಾಕೃತಿ ಪ್ರದರ್ಶನಗಳನ್ನು ನೀಡಿದ್ದಾರೆ. ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಈ ಎಲ್ಲಾ ಸಾಧನೆಗಳನ್ನು ಗಮನಿಸಿದ ದೆಹಲಿ ಕನ್ನಡಗಳ ಸಂಘ 21ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ 2004ನೇ ಸಾಲಿನಲ್ಲಿ ಇವರಿಗೆ ಗೌರವ ಸಲ್ಲಿಸಿದೆ.

(ಎಎಸ್ಎಸ್)

ನೀಲಾ ಎಸ್.ಎಮ್.: ಚಿತ್ರಕಲಾವಿದ. ಇವರ ಪೂರ್ಣ ಹೆಸರು ಸುಬ್ಬಯ್ಯಾ ಮಹಾದೇವಯ್ಯಾ ನೀಲಾ. 2ನೆಯ ಫೆಬ್ರವರಿ 1956 ರಂದು ಗುಲಬರ್ಗಾ ನಗರದಲ್ಲಿ ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆಯುವ ಸಂದರ್ಭ ದಲ್ಲಿಯೇ ಚಿತ್ರಕಲೆಯಲ್ಲಿ ತುಂಬ ಆಸಕ್ತಿಯನ್ನು ತೋರಿಸು ತ್ತಿದ್ದರು. ಇವರ ತಂದೆ ಕಲಾವಿದ ಮಹಾದೇವಯ್ಯಾ ನೀಲಾ ಅವರು ವಾಣಿಜ್ಯ ಚಿತ್ರಕಲೆ ರಚಿಸುವುದರಲ್ಲಿ ನಗರಕ್ಕೆ ಹೆಸರುವಾಸಿ ಯಾಗಿದ್ದರು. ಸೂಪರ್ ಮಾರ್ಕೆಟ್‌ನ ಕೋಟೆ ರಸ್ತೆಯಲ್ಲಿ ಇವರ ಅಂಗಡಿ ಇತ್ತು. ತಂದೆಯವರು ದಿನಾಲು ಬರೆಯು ತ್ತಿರುವ ಸೈನ್ ಬೋರ್ಡ್ಸ್, ಬ್ಯಾನರಗಳು ಹೀಗೆ ವಾಣಿಜ್ಯ ಕಲೆಗೆ



ಸಂಬಂಧಪಟ್ಟಿರುವ ಅನೇಕ ತರಹದ ಕೆಲಸಗಳು ತಂದೆ ಯವರಿಂದ ಕಲಿಯಲು ಅನುಕೂಲವಾಯಿತು. ಇವರು ಶಾಲೆಯಲ್ಲಿ ಕಲೆಯುತ್ತಿರುವಾಗಿ ನಿಂದಲೇ ನೈಜರೂಪದ ಚಿತ್ರ ಗಳನ್ನು ಬಿಡಿಸುವುದರಲ್ಲಿ ಸಿದ್ಧ ಹಸ್ತರಾಗಿದ್ದರು. ತಂದೆಯವರ ಜೊತೆಗೆ ಅಂಗಡಿಯಲ್ಲಿ ಸಿನೇಮಾ ಪೋಸ್ಟರ್‌ಗಳು, ನಾಯಕ ನಾಯಕಿಯರ ಚಿತ್ರ ಗಳು, ರೂಪದರ್ಶಿಗಳ ಚಿತ್ರಗಳು, ಗಣ್ಯವ್ಯಕ್ತಿಗಳ ಭಾವಚಿತ್ರಗಳು ಹೀಗೆ ಅನೇಕ ಚಿತ್ರಗಳನ್ನು ರಚಿಸಿಕೊಡುತ್ತಿದ್ದರು. ಅಲ್ಲಿಂದಲೇ ಇವರ ಕಲಾಬದುಕು ಪ್ರಾರಂಭವಾಯಿತು. ತಮ್ಮ ತಂದೆಯವ ರಿಂದ ಪ್ರೇರಣೆಗೊಂಡ ಎಸ್.ಎಮ್. ನೀಲಾ ಅವರು ಮುಂದೆ ಕಲಾಕ್ಷೇತ್ರದಲ್ಲಿ ಉನ್ನತಶಿಕ್ಷಣವನ್ನು ಕೈಗೊಂಡರು. ಪ್ರಾರಂಭದಲ್ಲಿ ಒಂದು ವರ್ಷ ಡ್ರಾಯಿಂಗ್ ಟೀಚರ್ ಕೋರ್ಸ್ (ಡಿ.ಟಿ.ಸಿ), 1978ರಲ್ಲಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಿಂದ ಡಿಪ್ಲೋಮಾ ಡ್ರಾಯಿಂಗ್ ಮತ್ತು ಪೇಂಟಿಂಗ್ (ಜಿ.ಡಿ. ಆರ್ಟ್) ಹಾಗೂ ಇದೇ ಸಂಸ್ಥೆಯಿಂದ ಬಿ.ಎಫ್.ಎ. ಪದವಿಯನ್ನು ಪಡೆದಿದ್ದು, ಸ್ನಾತ ಕೊತ್ತರ ಪದವಿ ಎಂ.ಎ. ಫೈನ್‌ಆರ್ಟ್‌ನ್ನು ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಿಂದ ಪಡೆದರು.

1978ರಲ್ಲಿ ಇವರು ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ ಅರೆಕಾಲಿಕ ಉಪನ್ಯಾಸಕರೆಂದು ನೇಮಕಗೊಂಡಿದ್ದು, ಅನಂತರ 1979ರಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ವಾಣಿಜ್ಯ ಚಿತ್ರಕಲಾ ವಿಭಾಗದಲ್ಲಿ ಖಾಯಂ ಉಪನ್ಯಾಸಕರ ಸೇವೆಗೆ ಸೇರಿದ್ದಾರೆ. ಇವರು ಇನ್ನಿತರ ಕಲಾವಿದರ ಹಾಗೆ ಚಿತ್ರಕಲೆಯಲ್ಲಿ ತಮ್ಮದೇ ಆದ ಒಂದು ಶೈಲಿಯನ್ನು ಗುರುತಿಸಿ ಕೊಳ್ಳುವುದಕ್ಕೆ ಮಾರುಹೋಗದೆ, ಕಲೆಯಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ದಿನನಿತ್ಯ ಮಾಡುತ್ತಲೇ ಬಂದಿರುತ್ತಾರೆ. ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ ಪ್ರಾತ್ಯಕ್ಷಿಕೆ ಗಳನ್ನು ನೀಡುವುದರ ಮೂಲಕ, ಕಲೆಯ ತಾಂತ್ರಿಕತೆ ನಿಜತ್ವ ವನ್ನು ಗುರುತಿಸಿಕೊಳ್ಳುವದಕ್ಕೆ ಉತ್ತಮ ಮಾರ್ಗದರ್ಶನ ನೀಡುವುದರೊಂದಿಗೆ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಬದಲಾಯಿಸುವುದರಲ್ಲಿ ಸಾರ್ಥಕರಾಗಿದ್ದಾರೆ. ಇವರು ಪ್ರಾರಂಭದ ದಿನಗಳಲ್ಲಿ ಭಾರತದ ಸಂಸ್ಕೃತಿಯನ್ನು ಎತ್ತಿ ತೋರಿ ಸುವಂತಹ ಸಾಂಪ್ರದಾಯಿಕ ಕಲೆಗಳಾದ ಮೋಗಲ್, ಪಹಾಡಿ, ರಜಪೂತ ವಿಜಯನಗರ ಶೈಲಿ, ಹೀಗೆ ಅನೇಕ ಪರಂಪರಾಗತ ವಾಗಿ ಬೆಳೆದು ಬಂದಿರುವ ಚಿಕಣಿ ಮಾದರಿಯ ಚಿತ್ರಗಳನ್ನು ರಚಿಸುತ್ತಿದ್ದರು, ಇವರ ಮನಸ್ಸು ನಿಸರ್ಗದ ಕಡೆ ಹೆಚ್ಚು ಆಕರ್ಷಿತ ಗೊಂಡಿರುವುದು ಇದೇ ಸಂದರ್ಭದಲ್ಲಿ ಎಂಬುದು ಕಲಾಕೃತಿಗಳ ಮುಖಾಂತರ ತಿಳಿದು ಬರುತ್ತದೆ.



'ಅಂತರ್‌ಜಾತಿ ವಿವಾಹ' ಅಕ್ರೇಲಿಕ್ ಮಾಧ್ಯಮ

ಇವರು 1992ರಲ್ಲಿ ರಚಿಸಿರುವ ಸಂಯೋಜನಾತ್ಮಕ ಶ್ರೇಣಿಯ ಚಿತ್ರ ಕಲಾಕೃತಿಗಳು ಭವಿಷ್ಯದಲ್ಲಿ ತಮ್ಮದೇ ಆದ ಸ್ಥಾನಮಾನವನ್ನು ಪಡೆದುಕೊಂಡಿರುತ್ತವೆ. ವಿಶ್ವದ ಇತಿಹಾಸವನ್ನು ಪ್ರತಿಬಿಂಬಿಸುವ ಹಳೆಯ ಸ್ಮಾರಕ, ಶಿಖರಗಳ ಚಿತ್ರಗಳನ್ನು ಹೆಚ್ಚಾಗಿ ರಚಿಸುತ್ತಿದ್ದರು. ನೀಲಾ ಅವರು ಶಿವಶರಣರ ಹಾಗೂ ಕ್ರಾಂತಿಯೋಗಿ ಬಸವಣ್ಣನವರ ಜೀವನ ಚರಿತ್ರೆ ಕುರಿತ ಅನೇಕ ಚಿತ್ರಗಳನ್ನು ನೈಜರೂಪದಲ್ಲಿ ರಚಿಸಿರುತ್ತಾರೆ. ಇಂದಿನ ದಿನಗಳಲ್ಲಿ ಕ್ಯಾನ್ವಾಸ್‌ನ ಮೇಲೆ ಅಕ್ರೆಲಿಕ್ ಬಣ್ಣಗಳೊಂದಿಗೆ ಆಟವಾಡುತ್ತ ಹೊಸ ಹೊಸ ಚಿತ್ರಗಳನ್ನು ಸೃಷ್ಟಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಈ ಹಿರಿಯ ಕಲಾವಿದರ ಸಾಧನೆಗೆ ಜಿಲ್ಲಾ ಮಟ್ಟದ ಪ್ರಶಸ್ತಿ (1979) ಅಂತರಕಾಲೇಜು ಮಟ್ಟದ ಪ್ರಶಸ್ತಿ (1996) ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1990) ದೊರೆತಿವೆ. ಇವರು ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಹಮ್ಮಿಕೊಳ್ಳುವ ಅಖಿಲ ಭಾರತ ಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಅನೇಕ ಸ್ಥಳಗಳಲ್ಲಿ ಏಕವ್ಯಕ್ತಿ ಹಾಗೂ ಗುಂಪು ಚಿತ್ರಕಲಾ ಪ್ರದರ್ಶನಗಳನ್ನು ಮಾಡಿರುತ್ತಾರೆ. 2003ರಲ್ಲಿ ನವದೆಹಲಿಯ ಸಂಸತ್ ಭವನದಲ್ಲಿ ಇವರು ರಚಿಸಿರುವ ಸಾಮೂಹಿಕ ವಿವಾಹ ಎಂಬ ಶೀರ್ಷಿಕೆಯುಳ್ಳ ಕಲಾಕೃತಿಯು ಪ್ರದರ್ಶನಗೊಂಡಿತ್ತು. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಹಾಗೂ ಇನ್ನಿತರ ಸಂಸ್ಥೆಗಳು ಆಯೋಜಿಸಿರುವ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳಿಗೆ ಭಾಗವಹಿಸಿರುತ್ತಾರೆ. ಪ್ರಸ್ತುತ ಇವರು ಗುಲಬರ್ಗಾ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಪಿಎಚ್.ಡಿ. ಅಧ್ಯಯನವನ್ನು ಕೈಗೊಂಡಿದ್ದಾರೆ. (ಎಸ್‌ಪಿ)

ನೂ

ನೂಪುರ ಭರತನಾಟ್ಯ ಅಕಾಡೆಮಿ: ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆ ಹೊಂದಿರುವ ಈ ನೆಲ ಬೀದರಿನದ್ದು. ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯ ಗ್ರಾಮೀಣ ಜನರ ಕಲೆಗಳ ಬಗ್ಗೆ ಅಪಾರ ಪ್ರೀತಿ ಹೊಂದಿದವರು. ನಾಟಕ, ಡಪ್ಪಿನ ಆಟ, ಕೋಲಾಟ ಸಾಮಾನ್ಯ. ವರ್ಷಕ್ಕೊಮ್ಮೆ ಬರುವ ಜಾತ್ರೆಗಳು ಈ ರೀತಿಯ ಕಲೆಗಳ ಪ್ರದರ್ಶನಕ್ಕೆ ವೇದಿಕೆಯನ್ನು ಒದಗಿಸುತ್ತವೆ. ಜಾತ್ರೆಯಲ್ಲಿನ ರಥೋತ್ಸವದ ಬಗ್ಗೆ ಎಷ್ಟು ಭಕ್ತಿಯಿತ್ತೋ ಅಷ್ಟೇ ಆಸಕ್ತಿ ನಾಟಕ, ಕೋಲಾಟಗಳ ಮೇಲಿತ್ತು. ಹಿಂದುಳಿದ ನಗರ ಎಂದೇ ಕರೆಯಲಾಗುವ ಬೀದರದಲ್ಲೂ ನೃತ್ಯ, ಸಂಗೀತದ ಕಂಪು ಹರಡತೊಡಗಿದೆ. ಕಡಿಮೆ ಎಂದರೂ ಇಲ್ಲಿ ನೂರರ ಹತ್ತಿರ ಸಂಗೀತ ಕಲಾವಿದರಿದ್ದಾರೆ.

ರಾಜ್ಯಮಟ್ಟದ ಸಂಗೀತ ಸ್ಪರ್ಧೆಗಳಲ್ಲಿ ಮೊದಲ ಸ್ಥಾನ ಪಡೆದವರು ಇಲ್ಲಿದ್ದಾರೆ. ಸಂಗೀತದಲ್ಲಿ ಪಿಎಚ್.ಡಿ. ಮಾಡುತ್ತಿರುವ ಪ್ರತಿಭಾವಂತರೂ ಇಲ್ಲಿದ್ದಾರೆ. ಪ್ರಖ್ಯಾತ ಹಾರ್ಮೋನಿಯಂ, ತಬಲಾ ವಾದಕರೂ ಇದ್ದಾರೆ. ಸಂಗೀತ ಕಾರ್ಯಕ್ರಮಗಳಿಗೇ ಸೀಮಿತವಾಗಿರುವ ಸಂಘ ಸಂಸ್ಥೆಗಳೂ ಇಲ್ಲಿವೆ. ಈಗ ಸಂಗೀತದ ಜೊತೆಗೆ ನೃತ್ಯದ ಬಗೆಗಿನ ಪ್ರೀತಿ ಹೆಚ್ಚತೊಡಗಿದೆ. ಇಂಥದ್ದೊಂದು ಬದಲಾವಣೆಗೆ ಕಾರಣರಾದವರು ಇಲ್ಲಿನ ನೂಪುರ ಭರತನಾಟ್ಯ ಅಕಾಡೆಮಿಯವರು.

ಮೂರು ವರ್ಷಗಳ ಹಿಂದೆ ಸಣ್ಣದಾಗಿ ಆರಂಭವಾದ ಈ ನೃತ್ಯ ಅಕಾಡೆಮಿಯ ರೂವಾರಿ ಶ್ರೀಮತಿ ಉಷಾ. ಅಕಾಡೆಮಿಯ ಸಾಧನೆಯ ಹಿಂದಿರುವ ವ್ಯಕ್ತಿ ಉಷಾ ಅವರ ಪತಿ, ಹೋಟೆಲ್ ಉದ್ಯಮಿ ಪ್ರಭಾಕರ. ಜೊತೆಗೆ ಹತ್ತಿರದ ಗೆಳೆಯರು, ಸಂಘ ಸಂಸ್ಥೆಗಳು ಅದರಲ್ಲೂ ಅಕಾಡೆಮಿಯಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳ ಪಾಲಕರು ಬೆನ್ನೆಲುಬಾಗಿ ನಿಂತರು. ಪರಿಣಾಮವಾಗಿ ಅಕಾಡೆಮಿ ಇಂದು ಮನೆ ಮಾತಾಗುವಂತಾಗಿದೆ.

ಸಹೋದರಿ ಆಶಾ ನೃತ್ಯ ಕಲಿಯಲಿಲ್ಲ. ಈಗ ಅವಳು ಎಂಜಿನೀಯರ್ ಆದರೆ, ಸಹೋದರಿಯನ್ನು ನೃತ್ಯಾಭ್ಯಾಸಕ್ಕೆ ಕರೆದೊಯ್ದಿದ್ದ ಉಷಾ ಅವರು ನೃತ್ಯವನ್ನೇ ಜೀವನದ ಉಸಿರಾಗಿಸಿಕೊಂಡರು. ಪರಿಣಾಮವಾಗಿ ಜನಿಸಿದ್ದು ನೂಪುರ ಭರತನಾಟ್ಯ ಅಕಾಡೆಮಿ. 2ನೆಯ ತರಗತಿಯಲ್ಲಿದ್ದಾಗ ನೃತ್ಯಾಭ್ಯಾಸ ಆರಂಭಿಸಿದ್ದ ಉಷಾ ಅವರು, ಪಿಯುಸಿ ಪೂರ್ಣಗೊಳ್ಳುವವರೆಗೆ ಅದನ್ನು ಮುಂದು ವರೆಸಿದರು. ಪರಿಣಾಮವಾಗಿ ಇಂದು ನೃತ್ಯದಲ್ಲಿ ಪ್ರವೀಣರಾಗಿದ್ದಾರೆ. ನೃತ್ಯವನ್ನು ಕುರಿತು ಅಧಿಕಾರಯುತವಾಗಿ ಮಾತನಾಡುವ ಪ್ರಾವೀಣ್ಯತೆ ಪಡೆದಿದ್ದಾರೆ.

ರತ್ನಾ ರಘುನಾಥ ಅವರಲ್ಲಿ ನೃತ್ಯ ಮತ್ತು ಅನುರಾಧಾ ಅವರಲ್ಲಿ ಸಂಗೀತ ಕಲಿತಿರುವ ಉಷಾ ಪ್ರಭಾಕರ ಅವರು ಭರತನಾಟ್ಯದಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ. ಭರತನಾಟ್ಯವನ್ನು

ಅಮೂಲಾಗ್ರವಾಗಿ ಅಭ್ಯಾಸ ಮಾಡಿದ್ದಾರೆ. ಸದ್ಯ ನೂಪುರ ಭರತನಾಟ್ಯ ಅಕಾಡೆಮಿಯಲ್ಲಿ 70 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ನೃತ್ಯಾಭ್ಯಾಸಕ್ಕಾಗಿಯೇ ಉಷಾ ಅವರು ತಮ್ಮ ನಿವಾಸದಲ್ಲಿ ಪ್ರತ್ಯೇಕ ಕೋಣೆಯ ವ್ಯವಸ್ಥೆ ಮಾಡಿದ್ದಾರೆ. ನೃತ್ಯದ ಜೊತೆಗೆ ಸಂಗೀತವನ್ನೂ ಹೇಳಿಕೊಡುತ್ತಾರೆ. ಅಕಾಡೆಮಿಯನ್ನು ವ್ಯವಹಾರಕ್ಕಾಗಿ ನಡೆಸುತ್ತಿಲ್ಲ. ಇದರಿಂದ ಹಣಗಳಿಸುವ ಉದ್ದೇಶವೂ ಇಲ್ಲ ಎಂದು ಹೇಳುವ ಅವರು, ಬರೀ ಆತ್ಮ ತೃಪ್ತಿಗಾಗಿ ಹಾಗೂ ಕಲಿಯಬೇಕೆಂಬ ಆಸಕ್ತಿಯಿರುವ ಮಕ್ಕಳಿಗೆ ಕಲಿಸಿ ಕೊಡುವುದಕ್ಕಾಗಿ ಅಕಾಡೆಮಿ ನಡೆಸುತ್ತಿರುವುದಾಗಿ ಹೇಳುತ್ತಾರೆ.
(ಎಂಎಸ್‌ಒ)

ನೂರುದ್ದೀನ್ ವಣಗೇರಿ: ರಂಗಭೂಮಿಯ ಹಾಸ್ಯ ಪಾತ್ರಕ್ಕೆ ಜೀವ ತುಂಬಬಲ್ಲ ಕಲಾವಿದ. ಇವರು ಅಪ್ಪಟ ಯುವ ಗ್ರಾಮೀಣ ಪ್ರತಿಭೆ. ಮೂಲತಃ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಂಗಳೂರಿನವರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮಂಗಳೂರಿನಲ್ಲಿ ಮುಗಿಸಿ, ಮುಂದಿನ ಶೈಕ್ಷಣಿಕ ಜೀವನವನ್ನು ಆರ್ಥಿಕ ತೊಂದರೆಗಳಿಂದ ನಿಲ್ಲಿಸಿದರು. ಚಿಕ್ಕ ವಯಸ್ಸಿನಲ್ಲಿ ನಾಟಕಗಳಲ್ಲಿ ಹಾಸ್ಯ ಕಲಾವಿದನಾಗಿ, ಜೊತೆಗೆ ಮಿಮಿಕ್ರಿ ಕಲಾವಿದನಾಗಿ ಅಭಿನಯಿಸುತ್ತ ನೂರುದ್ದೀನ್ ಅಭಿನಯ ರಂಗದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಮಂಗಳೂರು ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ನಾಟಕಗಳಲ್ಲಿ ಈತನ ಹಾಸ್ಯ ಪಾತ್ರವಿರಲೇಬೇಕು. ಕೊಪ್ಪಳ, ರಾಯಚೂರು, ಗದಗ ಜಿಲ್ಲೆಗಳಲ್ಲಿ ನಡೆದ ಅನೇಕ ನಾಟಕ ಹಾಗೂ ಸಂಗೀತ ಸಂಜೆ ಕಾರ್ಯಕ್ರಮಗಳಲ್ಲೂ ಇವರು ಹಾಸ್ಯ ನಟನಾಗಿ, ಮಿಮಿಕ್ರಿ ಕಲಾವಿದನಾಗಿ ಅಭಿನಯಿಸಿದ್ದಾರೆ.

ಬಡತನದ ಕುಟುಂಬದಲ್ಲಿ ಬೆಳೆದ ಇವರು ತಮ್ಮ ಸುತ್ತಮುತ್ತಲೂ ಹಾಸ್ಯ ಘಟನೆಗಳನ್ನು ನಾಟಕಗಳಲ್ಲಿ ಬಳಸಿಕೊಂಡು, ತಮ್ಮ ವಿಶಿಷ್ಟವಾದ ಮಾತಿನ ಮೋಡಿಯಲ್ಲಿ ಅಭಿನಯಿಸುವ ಇವರ ಸೂಕ್ಷ್ಮ ಹಾಸ್ಯ ಪ್ರಜ್ಞೆಗೆ ಜನ ಮೆಚ್ಚಿಕೊಂಡರು. ಹಲವು ವರ್ಷಗಳವರೆಗೆ ಪಕ್ಕದ ಚಿಕ್ಕಮ್ಯಾಗೇರಿ ಗ್ರಾಮದ ಸರಕಾರಿ ಬಾಲಕರ ವಸತಿ ನಿಲಯದಲ್ಲಿ ಅರೆಕಾಲಿಕ ಅಡುಗೆ ಸಹಾಯಕನಾಗಿ ಸೇವೆಗೈದ ಹೆಮ್ಮೆ ಇವರದು. ಸಂಗೀತ ದಿಗ್ಗಜ ಕಲೆಗಳ ರಾಜರಾದ ಪುಟ್ಟರಾಜ ಗವಾಯಿಗಳನ್ನು ಸದಾ ಸ್ಮರಿಸುತ್ತಾರೆ. ಹಲವಾರು ಸಿನಿಮಾ–ನಾಟಕ, ರಾಜಕಾರಣಿಗಳ ಧ್ವನಿಯನ್ನು ಅನುಕರಿಸುವ ಈತ, ಅದ್ಭುತ ಮಿಮಿಕ್ರಿ ಕಲಾಪ್ರತಿಭೆ ವಿಭಿನ್ನ ಶೈಲಿಯ ವಾಕ್ ಚಾತುರ್ಯ ಹೊಂದಿದ್ದಾರೆ. (ಎಸ್‌ವಿಯು)


ನೇ

ನೇಕಾರರು: ಪಾರಂಪರಿಕವಾಗಿ ಅನುಸರಿಸುತ್ತಾ ಬಂದಿರುವ ಅನೇಕ ವೃತ್ತಿಗಳಲ್ಲಿ ನೇಕಾರಿಕೆಯೂ ಒಂದು. ಈ ನೇಕಾರಿಕೆಯು ಇಂದು ನಿನ್ನೆಯದಲ್ಲ. ಮಾನವನು ನಾಗರಿಕತೆಯನ್ನು ಕಲಿತು ಸುಸಂಸ್ಕೃತನಾದಾಗಿನಿಂದಲೂ ಈ ವೃತ್ತಿಯು ಹುಟ್ಟಿಕೊಂಡಿದೆ. ಈಗಲಂತೂ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಅಂದಾಜಿನ ಪ್ರಕಾರ ಕೃಷಿಯನ್ನು ಬಿಟ್ಟರೆ ಹೆಚ್ಚಿನ ಜನರ ಜೀವನಾಧಾರವಾಗಿರುವ ವೃತ್ತಿಯೆಂದರೆ ನೇಕಾರಿಕೆ. ಅಂದರೆ ಉಡಲು–ತೊಡಲು ಬಳಸುವ ಬಟ್ಟೆಯ ತಯಾರಿಕೆ ಈ ನೇಕಾರಿಕೆಯನ್ನು ವೃತ್ತಿಯನ್ನಾಗಿ ಉಳ್ಳ ಮುಖ್ಯ ಜನಾಂಗಗಳೆಂದರೆ ದೇವಾಂಗ, ಜೇಡ ಕುರುಹಿನ ಶೆಡ್ಡಿ, ಪದ್ಮಶಾಲಿ, ಪಟ್ಟೆಶಾಲಿ, ಹಟಗಾರರು ಇವರಷ್ಟೇ ಅಲ್ಲದೆ ಮುಸ್ಲಿಮರು ಹಾಗೂ ಇತರ ಜನಾಂಗದವರು ಸಹ ನೇಯ್ಗೆ ಕಲಿತು ಈ ವೃತ್ತಿಯನ್ನು ಕೈಗೊಂಡಿದ್ದಾರೆ.

ನೇಯ್ಗೆ ಕಾರ್ಯ ಪ್ರಾರಂಭವಾಗುವುದು ನೂಲಿನ ಉತ್ಪಾದನೆಯೊಂದಿಗೆ. ಆರಂಭದ ದಿನಗಳಲ್ಲಿ ನೇಯ್ಗೆಯನ್ನು ಚರಕದಿಂದ ತಯಾರಿಸಲಾಗುತ್ತಿತ್ತು. ಆದರೆ ಇಂದು ಕಾರ್ಖಾನೆಗಳಲ್ಲಿ ಸಿದ್ಧವಾದ ನೂಲನ್ನು ತಂದು ಅದನ್ನು ಶುದ್ಧಿಮಾಡಿ ಬೇಕಾದ ಬಣ್ಣ ಹಾಕಿ ನಂತರ ಹಾಸು ತಯಾರಿಸುತ್ತಾರೆ. ಹಾಸು ಎಂದರೆ ಮಗ್ಗದಲ್ಲಿ ಉದ್ದಕ್ಕೆ ಹಾಕಿಕೊಂಡಿರುವ ಎಳೆಗಳು. ಹೊಕ್ಕು ಎಂದರೆ ಉದ್ದದ ಎಳೆಗಳ ನಡುವೆ ತೂರಿಸಬರುವ ಅಡ್ಡ ಎಳೆಗಳು ಇವೆರಡನ್ನು ನೇಯುವ ಮೂಲಕ ಬಟ್ಟೆಯನ್ನು ತಯಾರಿಸಲಾಗುತ್ತದೆ.

ನೇಕಾರಿಕೆ ವೃತ್ತಿಯು ಶ್ರಮದ ಬದುಕು ಮಗ್ಗದ ಮೇಲೆ ಕುಳಿತ ವೃತ್ತಿ ಏಕಕಾಲಕ್ಕೆ ಕಣ್ಣು, ಕೈಕಾಲುಗಳನ್ನು ಉಪಯೋಗಿಸಬೇಕಾಗುತ್ತದೆ. ಮಗ್ಗದ ಹಾಸು ಹಾಗೂ ಹೊಕ್ಕುಗಳು ಸರಿಯಾದ ರೀತಿಯಲ್ಲಿ ಸೇರ್ಪಡೆಯಾಗುತ್ತಿದೆಯೇ ಇಲ್ಲವೋ ಎಂಬುದನ್ನು ಗಮನಿಸುವುದು ಕಣ್ಣಾದರೆ, ಅಣಿಯನ್ನು ಮೇಲೆ ಕೆಳಗೆ ಮಾಡಲು ಕಾಲಗಳು ಕೆಳಗಿನ ಮಣೆಯನ್ನು ತುಳಿಯುತ್ತಿರುತ್ತದೆ. ಇನ್ನು ಕೈಗಳು ಪ್ರತಿ ಅಡ್ಡೆಳೆಯ ನಂತರ ಒತ್ತಾಗಿ ಕೂಡುವಂತೆ ಬಡಿಯುವುದಲ್ಲದೆ ಲಾಳಿ ಅತ್ತಿಂದಿತ್ತ ಓಡಾಡುತ್ತ ಇರುವ ಹಗ್ಗವನ್ನು ಜಗ್ಗುತ್ತಿರುತ್ತದೆ. ಹೀಗೆ ನೇಕಾರಿಕೆ ವೃತ್ತಿ ದೈಹಿಕ ಶ್ರಮವನ್ನು ಬಯಸುವದಲ್ಲದೆ ಉತ್ತಮ ವಸ್ತ್ರದ ತಯಾರಿಕೆಗಾಗಿ ತಾಳ್ಮೆಯನ್ನು ಬಯಸುತ್ತದೆ ಆದರೆ ಇತ್ತೀಚಿಗೆ ಹೊಸ ತಂತ್ರಜ್ಞಾನದ ಫಲವಾಗಿ ಮಗ್ಗಗಳಲ್ಲಿಯೂ ಆವಿಷ್ಕಾರವಾಗಿದೆ. ಹಾಗಾಗಿ ಈಗ ಶ್ರಮವಿಲ್ಲದೆ ಸುಲಭವಾದ ಮಾದರಿ ರೂಪಗೊಂಡಿದೆ.

ಉತ್ಪಾದನೆಯಾಗುವ ಬಟ್ಟೆಯನ್ನಾಧರಿಸಿ ವಿವಿಧ ಬಗೆಯ ಮಗ್ಗಗಳಿವೆ. ಸಾದಾಮಗ್ಗ, ಗುಣಿಮಗ್ಗ, ಖಣಗ ಮಗ್ಗ, ಪಟಗಿದ ಮಗ್ಗ, ಕಂಬಳಿ ಮಗ್ಗ, ಜಾಡಿಮಗ್ಗ ಇತ್ಯಾದಿ. ಪಟಗದ ಮಗ್ಗದ ಅಗಲ ಹೆಚ್ಚು ಸೀರೆ, ಪಂಚೆ, ಧೋತಿ, ನೇಯುವ ಮಗ್ಗಗಳು ಮಧ್ಯಮವಾದರೆ, ಕಂಬಳಿ ಜಡಿಪಟ್ಟಿ ಮಗ್ಗ ಚಿಕ್ಕದು ನೇಕಾರಿಕೆಯಲ್ಲಿ ಬಳಕೆಯಲ್ಲಿರುವ ಪ್ರಮುಖವಾದ ಸಾಧನವೆಂದರೆ ಲಾಳಿ. ಇದು ಹಾಸಿದ ನಡುವೆ ಅಡ್ಡೆಳೆಯನ್ನು ಸೇರಿಸುತ್ತದೆ. ಬಟ್ಟೆ ನೇಯ್ಗೆಯಲ್ಲಿ ಮರದಿಂದ ಮಾಡಿದ ಲಾಳಿಯೂ ಕಂಬಳಿ ನೇಯ್ಗೆಯಲ್ಲಿ ಬೊಂಬಿನ ಅಥವಾ ಗಳುವಿನ ಲಾಳಿಯೂ ಇಲ್ಲವೆ



ಕೈಮಗ್ಗ ನೇಕಾರ

ಪ್ಲಾಸ್ಟಿಕ್ ಲಾಳಿಯೂ ಬಳಕೆಯಾಗುತ್ತದೆ ಹಾಗೂ ಸೆರಗಿನಲ್ಲಿ ಬುಟ್ಟಾದ (ಜರಿಯ) ವಿನ್ಯಾಸವನ್ನು ತಯಾರಿಸಲು ಬುಟ್ಟಾ ಲಾಳಿಯನ್ನು ಬಳಸಲಾಗುತ್ತದೆ. ಈ ಮಗ್ಗಗಳಲ್ಲಿ ತಯಾರಾಗುವ ಉತ್ಪಾದನೆ ಗಳು ಸೀರೆ, ಪಂಚೆ, ಧೋತಿ, ಸಾದಾಬಟ್ಟೆ, ಅಂಗಿಬಟ್ಟೆ ಟವಲ್ಲು, ಜಮಖಾನ, ಹೊದಿಕೆ, ರೇಷ್ಮೆಸೀರೆ, ಮಡಿ, ಕುಪ್ಪುಸದ ಬಟ್ಟೆ, ರುಮಾಲು ಇತ್ಯಾದಿ ಉಣ್ಣೆಯಲ್ಲಿ ಕಂಬಳಿ ನೆಲಹಾಸು ಇತ್ಯಾದಿ.

ನೇಕಾರಿಕೆ ಒಂದು ಕಲೆ, ಕಣ್ಣು, ಕೈ, ಕಾಲುಗಳಿಂದ ದೈಹಿಕ ಶ್ರಮವನ್ನು ಬಯಸುವಂತೆ ತೊಡುವವರ ಅಭಿರುಚಿಗನುಸಾರ ಬಟ್ಟೆ ತಯಾರಿಸಿ ಸದಾಕಾಲ ಬೇಡಿಕೆಯನ್ನು ಕಾಯ್ದಿಟ್ಟುಕೊಳ್ಳ ಬೇಕಾಗುತ್ತದೆ. ಹಾಗಾಗಿ ಇದಕ್ಕೆ ಜನರನ್ನು ಆಕರ್ಷಿಸುವ ಕಲೆಯೂ ಬೇಕು. ಬಟ್ಟೆಯ ಅಗತ್ಯವಾದ ವಿನ್ಯಾಸ ರೂಪಸಿ ಕೊಳ್ಳಲು ಹಲವಾರು ಸಾಧನಗಳಿವೆ. ಪ್ರಾರಂಭದಲ್ಲಿ ಕೇವಲ ಕೈಯಲ್ಲಿ ಮಾತ್ರ ಹಲಗೆ ಕೋಲುಗಳ ಬಳಕೆಯಿಂದ ಹಾಸಿದ ಎಳೆಗಳನ್ನು ಎತ್ತಿ ಬುಟ್ಟಿ ಜರಿ ಅಥವಾ ಬಣ್ಣದ ಅಡ್ಡೆಳೆಗಳನ್ನು ಹಾಕಲಾಗುತ್ತಿತ್ತು. ನಂತರ ಪಿಂಜರಾ ಸಹಾಯದಿಂದ ಸೀರೆಯ ಎರಡೂ ಭಾಗದ ಅಂಚುಗಳಲ್ಲಿ ಬಗೆಬಗೆಯ ವಿನ್ಯಾಸ ಮಾಡ ಲಾಗುತ್ತಿತ್ತು. ನಂತರದಲ್ಲಿ ಜಕಾರ್ಡನ ಸಹಾಯದಿಂದ ಒಡಲಲ್ಲಿ ವಿನ್ಯಾಸ ರೂಪಿಸಲು ಅನುಕೂಲವಾಯಿತು.

ಸೀರೆಯ ವಿನ್ಯಾಸಗಳಲ್ಲಿಯೂ ಅನೇಕ ಬಗೆಗಳಿವೆ. ಸೀರೆಯ ಗುಣಮಟ್ಟಕ್ಕನುಗುಣವಾಗಿ ಅದರ ಆಕರ್ಷಣೆಯನ್ನು ಹೆಚ್ಚಿಸಲು, ಹಾಗೂ ಕೊಳ್ಳುವವರ ಆಸಕ್ತಿಗನುಗುಣವಾಗಿ ಕಾಲಮಾನಕ್ಕೆ ತಕ್ಕಂತೆ ವಿವಿಧ ಬಗೆಯ ವಿನ್ಯಾಸಗಳನ್ನು ರೂಪಿಸಲಾಗುತ್ತದೆ. ಅವುಗಳಲ್ಲಿ ಆನೆ, ಒಂಟೆ, ಎಲೆ, ಕೇದಿಗೆ, ಗಾಡಿ, ಗಾಜಿ, ಗುಂಡು, ಗೊಡ್ಡುಪರಾಸ, ಚಿಕ್ಕಿ ಚಂದ್ರಕಾಳಿ, ನವಿಲು, ಗಿಳಿ ಬಂಗುಡಿ, ಮಾವಿನಕಾಯಿ, ಮುತ್ತು, ರುದ್ರಾಕ್ಷಿ, ಎಲೆಬಳ್ಳಿ, ಹೂವು, ಹೊನ್ನುವು ಇತ್ಯಾದಿ ಅಲಂಕಾರಿಕ ವಿನ್ಯಾಸಗಳಿವೆ.

ನೇಕಾರಿಕೆಯಲ್ಲಿ ಮತ್ತೊಂದು ಪ್ರಮುಖ ಕಾರ್ಯ ಬಣ್ಣ ಹಾಕುವಿಕೆ. ಮೊದಲು ಅಗತ್ಯವಾದ ಬಣ್ಣಗಳನ್ನು ಅರೆದು ತಯಾರಿಸಲಾಗುತ್ತಿತ್ತು. ಆದರೆ ಈಗ ಸಿದ್ಧಪಡಿಸಿದ ರಾಸಾಯನಿಕ ಬಣ್ಣಗಳು ಬಂದಿವೆ. ಬಣ್ಣ ಹಾಕುವುದರಲ್ಲಿ ಎರಡು ವಿಧ; ತಣ್ಣೀರಿ ನಲ್ಲಿ ಮಾಡಿದ್ದು ನೆಕ್ತಾಲ್ ಎಂದೂ ಬಿಸಿನೀರಿನಲ್ಲಿ ಮಾಡಿದು ದನ್ನು ಇಂಡೆಂತ್ರಿ ಎಂದೂ ಕರೆಯಲಾಗುತ್ತದೆ. ಇಂಡೆಂತ್ರಿ ದೀರ್ಘಕಾಲ ಬಾಳಿಕೆ ಬರುವಂತದ್ದು. ಬಣ್ಣಗಳಲ್ಲಿ ಹಸಿರು, ಕೆಂಪು, ನಿಂಬಾವಳಿ, ಜಾಂಬವಳಿ, ಗುಲಾಬಿ, ಹಳದಿ ಬಣ್ಣಗಳು ಪ್ರಾಮುಖ್ಯತೆಯನ್ನು ಪಡೆದಿವೆ.

ನೇಕಾರಿಕೆಯಲ್ಲಿ ಗಂಡು–ಹೆಣ್ಣು ಇಬ್ಬರೂ ಪಾಲ್ಗೊಳ್ಳುತ್ತಾರೆ. ನೂಲು ತೊಡುವುದು, ಕಂಡಿಕೆ ಸುತ್ತುವುದು, ಹಣಗೆ ಹಚ್ಚುವುದು ಹೆಣ್ಣು ಮಕ್ಕಳ ಕೆಲಸವಾದರೆ ನೂಲು ಅಥವಾ ಅಗತ್ಯ ಕಚ್ಚಾ ವಸ್ತುಗಳನ್ನು ತರುವುದು ಮಗ್ಗದ ಮೇಲೆ ಕುಳಿತು ನೇಯುವುದು ಮಾರುಕಟ್ಟೆಗೆ ಅಥವಾ ಮಾಲಿಕರಿಗೆ ತಲುಪಿಸುವುದು ಗಂಡಸರ ಕೆಲಸ. (ಜಿಎ)

ಪ



ಪಂ. ತಪಲೆ ಎಸ್.ಎ.: ನಮ್ಮ ಪ್ರಾಚೀನ ಮುನಿವರ್ಯರು ಯಾವ ಪ್ರಕ್ರಿಯೆಯಿಂದ ಸ್ವರದ ಅನಂತತೆ ಸಾಧಿಸಿರುವರೋ ಆ ಪ್ರಕ್ರಿಯೆಯ ಸಂಶೋಧನೆ ಭಾರತದ ಈಗಿನ ಸಂಗೀತಗಾರರಿಗೆ ಅವಶ್ಯವಿದೆ. ಇಂಗ್ಲೀಷ ಭಾಷೆಯ ವಿಶ್ವಕೋಶ ದಲ್ಲಿ ಭಾರತೀಯ ಸಂಗೀತಾ ಚಾರ್ಯರ ಬಗ್ಗೆ ಸಲ್ಲದ ವಿಷಯವು ಮುದ್ರಿತವಾಗಿದೆ. ಇದು ಸರಿಯಲ್ಲ ವೆಂದು ಭಾರತೀಯ ಸಂಗೀತ ಗಾರರು ಸಾಧಿಸಿ, ತೋರಿಸ ಬೇಕಾದುದನ್ನು ಪಂಡಿತ್ ಎಸ್.ಎ. ತಪಲೆಯವರು ಅನುಸಂಧಾನ ಕರ್ತರಾಗಿ ಸಾಧಿಸಿದ್ದಾರೆ.

ಭರತಾದಿಯವರು ಒಂದು ಸಪಕ್ತದಲ್ಲಿ 22 ಶೃತಿಗಳ ಸ್ಥಾಪನೆ ಎರಡು ವೀಣೆಗಳ ಮೇಲೂ ಬ್ರಹಸ್ಪತಿಯವರು ಐದು ತಂತಿ ಯುಳ್ಳ ವೀಣೆಯ ಮೇಲೂ ಮಾಡಿದ್ದಾರೆ. ಆದರೆ ತಪಲೆ ಯವರು ಒಂದೇ ಸ್ವರ (ಶೃತಿ) ಮಂಡಲದ ಮೇಲೆ ಒಂದು ಸಪಕ್ತ ದಲ್ಲಿ 22 ಶೃತಿಗಳ ಸ್ಥಾಪನೆಯ ಹೊಸ ದಾಖಲೆ ಮಾಡಿದ್ದಾರೆ.

ಇವರು ಅನುಪಮ ಶಿಕ್ಷಕರಾಗಿದ್ದಾರೆ. ಸಂಗೀತ ವಿಷಯ ವನ್ನು ಸ್ಪಷ್ಟಗೊಳಿಸುತ್ತಾರೆ. ತದನಂತರ ಅದರ ಪ್ರಯೋಗ ತೋರಿಸುತ್ತಾರೆ. ಅವರ ಶಿಕ್ಷೆಯಲ್ಲಿ ಕಾರ್ಯಕಾರಣ ಭಾವ ಯಾವಾಗಲು ಇದ್ದೇ ಇದೆ.

ತಪಲೆಯವರು ಪ್ರಾಂಶುಪಾಲರಾಗಿ, ಉಪನ್ಯಾಸಕರಾಗಿ, ಆಂಗ್ಲ ಮಾಧ್ಯಮ ಶಾಲೆಯ ಆಡಳಿತಾಧಿಕಾರಿಗಳಾಗಿ ಕೆಲಸ ನಿರ್ವಹಿಸಿದ್ದಾರೆ. ಅವರು ಒಳ್ಳೆ ಸಂಗೀತಗಾರರು, ಸ್ವರ ಸಂಯೋಜಕರು, ಸಂಗೀತ ಗ್ರಂಥಕರ್ತರು, ಆಗಿದ್ದಾರೆ. ಅವರ ಜನ್ಮದಿನ 19ನೇ ಡಿಸೆಂಬರ 1939 ಇರುವದರಿಂದ ಅವರಿಗೆ ಈಗ 65 ವರ್ಷ ವಯಸ್ಸು ಇದೆ. (ಎಂಬಿಎಸ್)



ಪಂ. ಕಿಶನರಾವ್ ಮಲ್ಲೆ: ಹೈದ್ರಾಬಾದ ಕರ್ನಾಟಕದ ನಿಜಾಮರ ಕಾಲದಿಂದ ಸಂಗೀತ ಕ್ಷೇತ್ರಕ್ಕೆ ತಮ್ಮನ್ನು ತಾವು ತೊಡಗಿಸಿ ಕೊಂಡವರು. ಪಂ. ಕಿಶನರಾವ್ ಮಲ್ಲೆಯವರು.ಇವರು ಮೂಲತಃ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಲ್ಲೆ ಗ್ರಾಮದವರು. 1919 ಡಿಸೆಂಬರ್ 08ರಂದು ಜನಿಸಿದರು.

ವೃತ್ತಿಯಿಂದ ವಕೀಲರಾಗಿದ್ದ ಇವರು ಪ್ರವೃತ್ತಿಯಿಂದ ಖ್ಯಾತ ಹಾರ್ಮೋನಿಯಂ ವಾದಕರಾಗಿದ್ದರು. ಇವರು ತಮ್ಮ ಮನೆಯಲ್ಲಿಯೇ ಪ್ರತಿ ಗುರುವಾರ ಸಭೆ ನಡೆಸುತ್ತಿದ್ದರು. ಸಂಗೀತ ಕಾರ್ಯಕ್ರಮಕ್ಕೆಂದು ಒಂದು ಸಭಾ ಭವನವನ್ನು ತಮ್ಮ ಮನೆಯಲ್ಲಿ ಮಾಡಿದ್ದರು. ಇವರು ಚಿತ್ತಾಪೂರ ತಾಲ್ಲೂಕಿನ ಪ್ರಸಿದ್ಧ ದೇವಾಲಯವಾದ ಶ್ರೀ ಚಂದ್ರಲಾ ಪರಮೇಶ್ವರಿ ದೇವಿಯ ಜಾತ್ರೆಯಲ್ಲಿ ಆಹೋ ರಾತ್ರಿ ಸಂಗೀತ ಕಾರ್ಯಕ್ರಮ ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಪ್ರಾರಂಭಿಸಿದ ಸಂಗೀತ ಕಾರ್ಯಕ್ರಮ ಇಂದಿಗೂ ಪ್ರಖ್ಯಾತ ಸಂಗೀತ ಗಾಯಕರು, ವಾದಕರು, ನೃತ್ಯಕಲಾವಿದರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಇವರು ದೇಶದ ಪ್ರಖ್ಯಾತ ಸಂಗೀತ ಕಲಾವಿದರಿಗೆ ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಅವರಲ್ಲಿ ಶ್ರೀಮತಿ ಮಾಲಿನಿ ರಜೂರಕರ್, ಶ್ರೀಮತಿ ಪರ್ವಿನ್ ಸುಲ್ತಾನ, ಅನೇಕ 'ಎ' ಗ್ರೇಡ್ ಕಲಾವಿದರಿಗೆ ಸಾಥ್ ನೀಡಿದರೆ. ಗುಲಬರ್ಗಾ ಪ್ರಖ್ಯಾತ ಕಲಾವಿದರಾಗಿದ್ದ ಡಾ. ಪಾಂಡುರಂಗರಾವ ಪತ್ಕಿಯವರಿಗೆ ಖಾಯಂ ಹಾರ್ಮೋನಿಯಂ ಸಾಥಿದಾರರಾಗಿದ್ದರು.

ಇವರಿಗೆ ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಪ್ರಥಮವಾಗಿ ಹೈದ್ರಾಬಾದ ಕರ್ನಾಟಕ ಸಂಗೀತ ಸಮ್ಮೇಳನದಲ್ಲಿ ಸಂಗೀತ ನೃತ್ಯ ರಸಿಕ ಮಂಡಳಿ ಹೈದ್ರಾಬಾದ ಇವರು 10.04.1962ರಲ್ಲಿ ಸನ್ಮಾನಿಸಿದರು. 1963ರಲ್ಲಿ ಮೈಸೂರು ರಾಜ್ಯದಲ್ಲಿ ಇವರ ಸಾಕ್ಷಾಚಿತ್ರ ಮಾಡಿ 15.06.1964ರಲ್ಲಿ ಸಾಕ್ಷಾಚಿತ್ರವನ್ನು ಬಿಡುಗಡೆ ಮಾಡಿದರು, 1970ರಲ್ಲಿ ಸಂಗೀತ ನಾಟಕ ಅಕಾಡೆಮಿಗೆ ಅವಿರೋಧವಾಗಿ ಆಯ್ಕೆಯಾದರು, 01.10.1980 ರಲ್ಲಿ ಗುಲಬರ್ಗಾ ಆಕಾಶವಾಣಿ ಕೇಂದ್ರವು ಅಂತರಾಷ್ಟ್ರೀಯ ಸಂಗೀತ ದಿನದಂದು ಇವರನ್ನು ಸಂದರ್ಶನ ಮಾಡಿದರು. ಇವರು ಶಾರದಾ ಕಲಾ ಮಂಡಳಿ ಗುಲಬರ್ಗಾದ ಅಧ್ಯಕ್ಷರು ಆಗಿದ್ದರು. (ಆರ್‌ಕೆಕೆ)

ಪಂ. ರಾಜು ಕುಲಕರ್ಣಿ: ಖ್ಯಾತ ತಬಲಾ ಕಲಾವಿದರು. ಹೈದ್ರಾಬಾದ ಕರ್ನಾಟಕ ಖ್ಯಾತ ತಬಲಾ ವಾದಕರಲ್ಲಿ ರಾಜು ಕುಲಕರ್ಣಿಯವರು ಒಬ್ಬರು. ಮೂಲತಃ ಗುಲಬರ್ಗಾದವರಾದ ಇವರು ಖ್ಯಾತ ತಬಲಾ ವಾದಕರಾಗಿದ್ದ ಪಂ. ಸುಮನ್‌ರಾವ ಕುಲಕರ್ಣಿಯವರ ಪುತ್ರರು.



ತಮ್ಮ ಪ್ರಾರಂಭಿಕ ಸಂಗೀತ ಅಭ್ಯಾಸವನ್ನು ತಂದೆ ಪಂ. ಸುಮನರಾವ ಕುಲಕರ್ಣಿಯವರಿಂದ ಪ್ರಾರಂಭಿಸಿ ನಂತರ ಖ್ಯಾತ ತಬಲಾ ವಾದಕರಾಗಿದ್ದ ಪಂ. ಗುರುನಾಥರಾವ ಅಲೂಗಾಡಕರ ಇವರ ಹತ್ತಿರ ಸುಮಾರು 10 ವರ್ಷ ಕಾಲ ತಬಲಾ ಶಿಕ್ಷಣ ಪಡೆದರು. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವಿದ್ವತ್ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ಮೀರಜದ 'ಸಂಗೀತ ಅಲಂಕಾರ' ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ಪಾಸು ಮಾಡಿದರು. ಪಂ. ರಾಜು ಕುಲಕರ್ಣಿಯವರು ವೃತ್ತಿಯಿಂದ ಶಹಾಬಾದ ಎಸಿಸಿ ಸಿಮೆಂಟ್ ಕಂಪನಿಯಲ್ಲಿ ಕೆಲಸ ಮಾಡುತ್ತ ಪ್ರವೃತ್ತಿಯಿಂದ ತಬಲಾ ಕಲಾವಿದರು ತಮ್ಮ ವೃತ್ತಿಯ ಜೊತೆಗೆ ಸಂಗೀತದ ಕಡೆಗೆ ಹೆಚ್ಚು ತೊಡಗಿಸಿ ಕೊಂಡವರು. ತಮ್ಮ ಕೆಲಸ ಸಮಯ ಮುಗಿದ ನಂತರ ಶಹಾಬಾದ ಕ್ವಾಟರ್ಸ್‌ನಲ್ಲಿ ಮಕ್ಕಳಿಗೆ ತಬಲಾ ಶಿಕ್ಷಣ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಶಹಾಬಾದ ಕಂಪನಿಯ ಆವರಣ ಮತ್ತು ಪಟ್ಟಣದಲ್ಲಿ ಆಯೋಜಿಸುವ ಸಂಗೀತ ಮತ್ತು ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇವರು ಹಾಜರಿರುತ್ತಿದ್ದರು.

ಇವರು ಅನೇಕ ದೇಶದ ಮಹಾನ್ ಕಲಾವಿದರಿಗೆ ತಬಲಾ ಸಾಥಿಯನ್ನು ನೀಡಿದ್ದಾರೆ. ಅವರಲ್ಲಿ ಭಾರತ ರತ್ನ ಪಂ. ಭೀಮಸೇನ್ ಜೋಶಿ, ಪಂ. ಮಾಧವ ಗುಡಿ, ಪಂ. ರಾಘವೇಂದ್ರ ಗುಡಿ, ಪಂ. ಮುಕೂಂದು ಗೋರೆ, ಶ್ರೀಮತಿ ಮಾಲಿನಿ ರಾಜೂರಕರ್ ಹೀಗೆ ಅನೇಕ ಪ್ರಸಿದ್ಧ ಕಲಾವಿದರ ಜೊತೆಗೆ ತಬಲಾ ಸಾಥನ್ನು ನೀಡಿದ್ದಾರೆ. ಅಲ್ಲದೇ ಇವರೊಬ್ಬ ಶ್ರೇಷ್ಠ ತಬಲಾ ಸೂಲು ನುಡಿಸುವ ಕಲಾವಿದರು. ತಮ್ಮ ತಂದೆ

ಯವರಿಂದ ಕಲಿತ ಮತ್ತು ಪಂ. ಗುರುನಾಥರಾವ ಅಲಗೂಡ ಕರ್ ಇವರಿಂದ ಪಡೆದ ತಬಲಾದ ಪೇಶ್ಕಾರ, ಕಾಯ್ದೆ, ರೇಲಾ, ಚಕ್ರಧಾರಗಳನ್ನು ವಿಶಿಷ್ಟ ರೀತಿಯಿಂದ ನುಡಿಸುತ್ತಿದ್ದರು. ವಿಶೇಷ ವಾಗಿ ಡಗ್ಗಾದಲ್ಲಿ ವಿವಿಧ ಪ್ರಯೋಗಗಳನ್ನು ಮಾಡುತ್ತಿದ್ದರು.

ಇವರ ಇನ್ನೊಂದು ವಿಶೇಷತೆ ಎಂದರೆ ಸಮೀಪದ ಶ್ರೀ ಚಂದ್ರಲಾ ಪರಮೇಶ್ವರಿ ದೇವಸ್ಥಾನದಲ್ಲಿ ಹುನುಗುಂಟಿ ಮತ್ತು ಸನ್ನಿತಿಯಲ್ಲಿ ಇವರು ರಾತ್ರಿ 9ಗಂಟೆಯಿಂದ ಬೆಳಗಿನಜಾವ 6 ಗಂಟೆ ನಿರಂತರ ಅನೇಕ ಕಲಾವಿದರಿಗೆ ಒಂದೇ ವೇದಿಕೆಯಲ್ಲಿ ಸಾಥ್ ನೀಡುತ್ತಿದ್ದರು. ಜೊತೆಗೆ ಅಷ್ಟೇ ಕೊನೆಯವರಿಗೂ ತಾಳ್ಮೆ ಯಿಂದ ನುಡಿಸುವುದು ಇವರ ವಿಶೇಷತೆ.

ಇವರು ಅನೇಕ ಶಿಷ್ಯ ಸಂಪತ್ತನ್ನು ಬೆಳೆಸಿದ್ದಾರೆ. ಅವರಲ್ಲಿ ಶ್ರೀ ರಾಘವೇಂದ್ರ ಕುಲಕರ್ಣಿ, ಶ್ರೀ ಗೋಪಾಲ ಗುಡಿಬಂಡಿ ರಾಯಬಾರ, ಶ್ರೀ ಕೋಟೇಶ ದೇಸಾಯಿ, ಶ್ರೀ ಪಾಂಡುರಂಗ ಪುರೋಹಿತ, ಶ್ರೀ ವಿಜೇಂದ್ರ ಸಗರ, ಮತ್ತು ಅವರ ಪುತ್ರ ಕು. ಸಂಕೇತ ಕುಲಕರ್ಣಿ, ಈ ಎಲ್ಲಾ ಶಿಷ್ಯರು ಈ ಖ್ಯಾತ ಕಲಾವಿದರಿಗೆ ತಬಲಾ ಸಾಥ್ ನೀಡುತ್ತಿದ್ದಾರೆ. ಅನೇಕರು ಸಂಗೀತ (ತಬಲಾ) ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು ತಮ್ಮ ಬಳಿ ತಬಲಾ ಕಲಿಯದಿದ್ದರೂ ತಬಲಾ ನುಡಿ ಸುವುದರಲ್ಲಿ ಆಸಕ್ತಿ ಮತ್ತು ತಯಾರಿ ಇದ್ದ ಎಲ್ಲರಿಗೂ ತಮ್ಮಲ್ಲಿ ರುವ ಸಂಗ್ರಹವನ್ನು ನೀಡುತ್ತಿದ್ದರು. ಇಂಥ ಕಲಾವಿದರನ್ನು ಪಡೆದ ನಮ್ಮ ಭಾಗ ಧನ್ಯವಾಗಿದೆ.

ಇವರು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷೆಗಳಿಂದ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳ ಪಠ್ಯಕ್ರಮ ಸಮಿತಿಯ ಸದಸ್ಯರಾಗಿದ್ದರು. ಇವರ ಸಾಧನೆಯನ್ನು ಗಮನಿಸಿ ಅನೇಕ ಸಂಘ-ಸಂಸ್ಥೆಗಳು ಇವರನ್ನು ಹಲವಾರು ಪ್ರಶಸ್ತಿ ನೀಡಿ ಗೌರವಿಸಿವೆ. (ಆರ್‌ಕೆಕೆ)

ಪಂಚಗಲ್ಲ ಬಸವರಾಜ: ನಟ-ನಾಟಕಕಾರ-ನಿರ್ದೇಶಕ ಸುಮಾರು ವರ್ಷಗಳಿಂದ ರಂಗಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿ ಕೊಂಡು ಸೇವೆಸಲ್ಲಿಸುತ್ತ ಬಂದಿರುವ ಇವರು ಹಿಂದುಳಿದ ಪ್ರದೇಶವೆನಿಸಿದ ಗುಲಬರ್ಗಾ ಜಿಲ್ಲೆಯ ಸುರಪೂರ ತಾಲ್ಲೂಕಿನ ಕೊಡೆಕಲ್ಲ ಗ್ರಾಮದವರು. ಗುಡ್ಡಗಾಡಿನ ಕಲ್ಲು ಬಂಡೆಗಳ ಬಿಸಿಲು ಪ್ರದೇಶದಲ್ಲಿ ಬಸವರಾಜ ಬೆಳದಿಂಗಳಂಥ ಕನಸು ಕಂಡು ಬೆಳೆದವರು. ಊರು ಭಾಷೆ, ಪರಿಸರ, ಅವಕಾಶಗಳು ಪ್ರತಿಕೂಲವಾಗಿದ್ದರೂ ಬಸವರಾಜರು ಬೆಳೆದು ಬಂದಿದ್ದು ವಿಶೇಷ, ಆಸಕ್ತಿ, ಅಚಲ ನಿರ್ಧಾರ ಅವರನ್ನು ಬೆಳೆಸಿವೆ. ಎಲ್ಲವನ್ನು ಎದುರಿಸಿ ಬಸವರಾಜ ಇಂದು ರಂಗಭೂಮಿಯಲ್ಲಿ ಆಕರ್ಷಿಸಿದ್ದಾರೆ. ಪ್ರೇಕ್ಷಕರ, ನಾಟಕಪ್ರಿಯರ ಗಮನ ಸೆಳೆದಿದ್ದಾರೆ.

ವಿದ್ಯಾರ್ಥಿ ಜೀವನದಿಂದಲೇ ರಂಗಭೂಮಿಗೆ ಪ್ರಭಾವಿತ ರಾಗಿ ಊರಿಗೆ ಬರುವ ಕಂಪನಿ ನಾಟಕಗಳನ್ನೆಲ್ಲ ನೋಡುತ್ತ ಕ್ರಮೇಣ ಆ ಕಡೆ ವಾಲುತ್ತ 1976ರಲ್ಲಿ ಶ್ರೀ ಅಮರೇಶ್ವರ ನಾಟ್ಯ ಸಂಘ ಗುಡುಗುಂಟಿ ಕಂಪನಿಯಲ್ಲಿ ಪ್ರವೇಶ ಪಡೆದರು. ನಂತರ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ, ಹೊಳೆಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಶ್ರೀಗುರು ಪಂಚಾಕ್ಷರಿ ವಿಜಯ ನಾಟ್ಯ ಸಂಘ ಚಿತ್ತರಗಿ, ಶ್ರೀ ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ, ಶ್ರೀಗುರು ಬಸವೇಶ್ವರ ನಾಟ್ಯ ಸಂಘ ಕೊಡೇಕಲ್ಲ ಕಂಪನಿಗಳಲ್ಲಿ ಸೇವೆಸಲ್ಲಿಸಿ ಸಧ್ಯ 'ಕರ್ನಾಟಕ ಕಲಾವೈಭವ ನಾಟ್ಯ ಸಂಘ' ಬೆಂಗಳೂರು ಕಂಪನಿಯಲ್ಲಿ ನಟರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅವರಿಗೆ ಅಭಿನಯಕ್ಕಿಂತ ನಾಟಕ ರಚನೆಯಲ್ಲಿ ಹೆಚ್ಚು ಆಸಕ್ತಿ. ಮೊದಲಿನಿಂದಲೂ ಸಾಹಿತ್ಯದತ್ತ ಒಲವು, ಓದುವುದು, ಬರೆ ಯುವುದು ವಿದ್ಯಾರ್ಥಿ ಜೀವನದಿಂದಲೇ ಇತ್ತು. ಆ ಆಸಕ್ತಿಯಿಂದ ನಾಟಕ ರಚನೆಗಳತ್ತ ತಿರುಗಿದರು. ಪರಿಣಾಮ 10-15 ನಾಟಕ ರಚನೆಗಳಾದವು. ದುರ್ಗದ ಹುಲಿ, ಬಂಗಾರದಂಥ ತಾಯಿ, ಮಗಳಾಗಿ ಬಂದಳು ಸೊಸೆಯಾಗಿ ನಿಂತಳು, ನಕ್ಕಿದ್ದು ಅರಮನೆ ಸಿಕ್ಕಿದ್ದು ಸೆರಮನೆ, ಅಲ್ಲಮ ಪ್ರಭು ಮಹಾತ್ಮೆ, ನಮ್ಮೂರ ದೇವರು, ಜಮೀನ್ದಾರ, ಧರ್ಮಾಧಿಕಾರ ಇವು ಅವರ ಪ್ರಮುಖ ಹಾಗೂ ಪ್ರದರ್ಶನಗೊಂಡ ನಾಟಕಗಳು. ಇನ್ನು ಪ್ರದರ್ಶನಗೊಳ್ಳ ಬೇಕಾದ ಅನೇಕ ನಾಟಕಗಳಿವೆ. ಈ ಪ್ರದರ್ಶನಗೊಂಡ ನಾಟಕ ಗಳು ಕೂಡ ಅಚ್ಚಾಗದೇ ಬೇರೆ ಬೇರೆ ಕಂಪನಿಗಳಲ್ಲಿ ಪ್ರದರ್ಶನ ಗೊಳ್ಳದಿರುವುದರಿಂದ ಅಷ್ಟೊಂದು ಪ್ರಚಲಿತಗೊಂಡಿಲ್ಲ. ಹಳೆ ತಲೆಮಾರಿನ ನಾಟಕಕಾರರು ವೃದ್ಧರಾಗಿ ನಾಟಕ ರಚನೆ ನಿಲ್ಲಿಸಿದ ಮೇಲೆ ವೃತ್ತಿರಂಗಭೂಮಿ ಉತ್ತಮ ನಾಟಕಗಳಿಲ್ಲದೇ ಬಡವಾಗು ತ್ತಿರುವ ಸಮಯದಲ್ಲಿಯೇ ಬಸವರಾಜ ಪಂಚಗಲ್‌ರಂಥ ಯುವ ಬರಹಗಾರರು ಆ ಕೊರತೆಯನ್ನು ತುಂಬಲು ಪ್ರಯತ್ನಿ ಸುತ್ತಿರುವುದು ಸ್ವಾಗತಾರ್ಹ.

ಬಸವರಾಜ ಪಂಚಗಲ್ ಸಾಮಾಜಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕ ರಚಿಸಿದ್ದರೂ ಅವರ ಸಾಮಾಜಿಕ ನಾಟಕಗಳೇ ಹೆಚ್ಚು ಪ್ರಭಾವಿತಗೊಂಡಿವೆ. ಧರ್ಮಾಧಿಕಾರಿ; ಮಗಳಾಗಿ ಬಂದಳು ಸೊಸೆಯಾಗಿ ನಿಂತಳು, ಜಮೀನ್ದಾರ ನಾಟಕಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿವೆ. ಬಸವರಾಜ ನಾಟಕಕಾರ ರಾಗಿ ಆಕರ್ಷಿಸಿದಂತೆ ನಟರಾಗಿಯೂ ಜನಮನ ಸೆಳೆದಿದ್ದಾರೆ. ಚಿನ್ನದಗೊಂಬೆಯಲ್ಲಿ ಸೋಮಶೇಖರ, ಆಶಾಲತಾದಲ್ಲಿ ದಯಾನಂದ, ಭೂಮಿ ತೂಕದ ಹೆಣ್ಣು ನಾಟಕದಲ್ಲಿ ಜ್ಯೋತಿ ಪ್ರಕಾಶ, ಅಲ್ಲಮ ಪ್ರಭು ಮಹಾತ್ಮೆಯಲ್ಲಿ ಅಲ್ಲಮ, ಸತಿಸಂಸಾರದ ಜ್ಯೋತಿಯಲ್ಲಿ ಜಗದೀಶ, ಗೌಡ್ರಗದ್ದಲದಲ್ಲಿ ಬಸವರಾಜ, ಚೆನ್ನಪ್ಪ ಚನಗೌಡ ನಾಟಕದಲ್ಲಿ ಚೆನ್ನವೀರ, ಕುರುಕ್ಷೇತ್ರದಲ್ಲಿ ಶ್ರೀಕೃಷ್ಣ ಇವು ಇವರು ಅಭಿನಯಿಸಿದ ಪ್ರಮುಖ ನಾಟಕದ ಪ್ರಮುಖ ಪಾತ್ರಗಳು. ಹೆಚ್ಚಾಗಿ ನಾಯಕ ಪಾತ್ರಗಳಲ್ಲಿಯೇ ಅಭಿನಯ. ಪ್ರೇಕ್ಷಕರು ಕೂಡ ನಾಯಕ ಪಾತ್ರಗಳನ್ನು ಮೆಚ್ಚಿಕೊಂಡಿದ್ದಾರೆ. ಪೌರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೇಕ್ಷಕರು ಮೆಚ್ಚಿ ಸನ್ಮಾನಿಸಿ ಗೌರವಿಸಿದ್ದಾರೆ.

ಬಸವರಾಜ ಪಂಚಗಲ್ಲ ಅತ್ಯಂತ ಸರಳ ಸಹೃದಯಿ ನಾಟಕ ಕಾರ, ನಿರ್ದೇಶಕರೆನ್ನುವ ಹಮ್ಮು ಬಿಮ್ಮಿಲ್ಲ, ಇನ್ನೂ ಬೆಳೆಯ ಬೇಕು, ಸಾಧಿಸಬೇಕೆನ್ನುವ ಆಕಾಂಕ್ಷಿ; ಶ್ರಮಜೀವಿ, ಒಪ್ಪಿಸಿದ

ಜವಾಬ್ದಾರಿಯನ್ನು ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮಾಡಿ ಮುಗಿಸುವವರು ತಾವು ಬೆಳೆಯುವುದರ ಜೊತೆ ತಮ್ಮ ಕಂಪನಿಯ (ತಾವಿದ್ದ ಕಂಪನಿಯ) ಕಲಾವಿದರನ್ನೆಲ್ಲ ಬೆಳೆಸಬೇಕೆನ್ನುವ ಹಿರಿಯಗುಣ.

ಶ್ರೀ ಸಂಗಪ್ಪ ಪಂಚಗಲ್ಲ ಶ್ರೀಮತಿ ಗುರುಮ್ಮ ರೈತ ದಂಪತಿಗಳ ಮಗನಾಗಿ ಜನ್ಮ ಪಡೆದ ಬಸವರಾಜ ಓದಿದ್ದು ಪಿಯುಸಿ ವರೆಗೆ, ಬೇಸಾಯ ಮನೆತನದಲ್ಲಿ ಹುಟ್ಟಿ ಬೆಳೆದ ಬಸವರಾಜ ಅವರಿಗೆ ಹಳ್ಳಿಯ ಬೇಸಾಯದ ಬದುಕು, ರೈತರ ಕಷ್ಟ-ನಷ್ಟ ದಾರಿದ್ರ್ಯದ ಬದುಕು ಜೊತೆಗೆ ನಿಸರ್ಗ ಸೌಂದರ್ಯ ಎಲ್ಲವೂ ಅವರ ನಾಟಕಗಳಲ್ಲಿ ಮೂಡಿ ಬಂದಿವೆ. ನಾಟಕಗಳಿಂದ, ಅಭಿನಯದಿಂದ ರಂಗದ ಶ್ರೀಮಂತಿಕೆ ಹೆಚ್ಚಿಸಿದ ಧೀಮಂತ ವ್ಯಕ್ತಿ ಬಸವರಾಜ ಪಂಚಗಲ್ಲ. (ಜಿಎಚ್)

ಪಂಚಾಕ್ಷರ ಗವಾಯಿ: ಹೈದ್ರಾಬಾದ ಕರ್ನಾಟಕದ ಹಿರಿಯರ ತಲೆಮಾರಿನ ಹಿಂದೂಸ್ಥಾನಿ ಸಂಗೀತಗಾರರಲ್ಲೊಬ್ಬರು. ಕಲ್ಬುರ್ಗಿಯಲ್ಲಿ ನಿಜಾಮಶಾಹಿ ಮಧ್ಯೆ ಹಿಂದೂಸ್ಥಾನಿ ಸಂಗೀತವನ್ನು ಶ್ರದ್ಧೆಯಿಂದ ಸಾಧನೆ ಮಾಡಿದವರು.

ಇವರು ಮೂಲತಃ ಇಂದಿನ ಯಾದಗೀರ್ ಜಿಲ್ಲೆ ಶಹಾಪೂರದವರು. ಇವರ ತಂದೆ ಶಿವರುದ್ರಸ್ವಾಮಿ, ತಾಯಿ ಸಿದ್ಧಮ್ಮ. ಭಾರತದ ಸ್ವಾತಂತ್ರ ಪೂರ್ವದ ದಿನಗಳಲ್ಲಿ ಶಾಲೆ ತ್ಯಜಿಸಿ ಸ್ವಾತಂತ್ರ ಚಳವಳಿಯಲ್ಲಿ ಭಾಗವಹಿಸಿದ್ದುಂಟು. ಗಾಂಧಿ, ನೆಹರು, ವಲ್ಲಭಬಾಯಿ ಪಟೇಲರ ಕುರಿತು ಇವರು ರಚಿಸಿದ ಪಂಚರತ್ನ ಗೀತೆಗಳು ಇಂದಿಗೂ ಜನಪ್ರಿಯವಾಗಿವೆ.


ಮಹಾರಾಷ್ಟ್ರದ ಪಂಢರಪೂರದ ನಾರಾಯಣ ಬುವರ್ಥ, ಜೆ.ಜೆ. ಪಾಟೀಲರಲ್ಲಿ ಹಿಂದೂಸ್ಥಾನಿ ಸಂಗೀತದ ಶಿಕ್ಷಣ ಪಡೆದವರು ತಮ್ಮ ಕಠಿಣ ಸಾಧನೆಯಿಂದ ಸಂಗೀತದಲ್ಲಿ ಹೆಸರು ಸಂಪಾದಿಸಿದ್ದಾರೆ. ಕಲಬುರ್ಗಿಯಲ್ಲಿ ನೂತನ ಸಂಗೀತ ವಿದ್ಯಾಲಯ ಸ್ಥಾಪಿಸಿ ಅನೇಕ ಶಿಷ್ಯರನ್ನು ತಯಾರಿಸಿದ್ದಾರೆ.



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಹಿಂದೂಸ್ಥಾನಿ ಹಾಡುಗಾರಿಕೆಯ ಜೊತೆಗೆ ವಚನ ಗಾಯನ, ದಾಸರಪದ ಹಾಗೂ ಭಕ್ತಿಪದ ಗೀತೆಗಳನ್ನು ಸಹ ಸುಶ್ರಾವ್ಯವಾಗಿ ಹಾಡಬಲ್ಲರು. ಆಕಾಶವಾಣಿಯಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಜಗದ್ಗುರು ಪಂಚಾಚಾರ್ಯರ ಆದೇಶದಂತೆ ನಿಜಗುಣ ಶಿವಯೋಗಿಗಳ ಅನುಭಾವ ಗೀತೆಗಳಿಗೆ ರಾಗ ಸಂಯೋಜನೆ 'ರೇಣುಕ ಗೀತೆ' ಎಂಬ ಪುಸ್ತಕ ಪ್ರಕಟಿಸಿದ್ದಾರೆ.

ಪಂಚಾಕ್ಷರಿ ಗವಾಯಿ ಅವರಿಗೆ ರಂಭಾಪುರಿ ಜಗದ್ಗುರುಗಳು 'ಸಂಗೀತ ರತ್ನ' ಉಜ್ಜಯಿನಿ ಜಗದ್ಗುರುಗಳು 'ಸಂಗೀತ ಸಾಗರ' ಎಂಬ ಬಿರುದು ನೀಡಿ ಆಶೀರ್ವದಿಸಿದ್ದಾರೆ. ಇವರ ಸಂಗೀತ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಿದೆ. (ಎಸ್‌ಎಂಜಿ)

ಪಂಡಿತ್ ಎಸ್.ಎಂ.: (1916) ವರ್ಣಚಿತ್ರಗಳಲ್ಲಿ ರಾಜಾ ರವಿ ವರ್ಮನನ್ನೂ ಮೀರಿಸುವ ಕಲಾ ಪ್ರೌಢಿಮೆಯನ್ನು ಮೆರೆದ ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದ ಮಹಾನ್ ಕಲಾವಿದರಾಗಿದ್ದರು. ಭಾರತದ ರೆಬ್ರಾಂಟ್ ಎಂದೇ ಪ್ರಖ್ಯಾತರಾಗಿದ್ದ ಈ ಕಲಾತಪಸ್ವಿ ಕಲಬುರ್ಗಿಯವರು. ಭಾರತದಲ್ಲಿ ಪೋಸ್ಟರ್ ಕಲಾಕೃತಿಗಳನ್ನು ಆರಂಭಿಸಿದ ಈ ರಸಋಷಿ. ಕಲಾಜಗತ್ತಿನಲ್ಲಿ ಅಜರಾಮರ.



ಹೈದ್ರಾಬಾದ ಕರ್ನಾಟಕದ ಗಂಡುಮೆಟ್ಟಿದ ಸ್ಥಳವಾದ ಶರಣ ಶ್ರೇಷ್ಠ ಶರಣಬಸವೇಶ್ವರ ಹಾಗೂ ಬಂದೇನವಾಜರ ನೆಲೆಬೀಡಾದ ಕಲಬುರ್ಗಿಯಲ್ಲಿ 1916ರ ಮಾರ್ಚ್ 25 ರಂದು ಜನಿಸಿದರು. ತಿಂಥಿಣಿಯ ಮೌನೇಶ್ವರರ ಪರಮ ಭಕ್ತರಾಗಿದ್ದರು. ತಂದೆ ಮೋನಪ್ಪ ತಾಯಿ ಕಾಳಮ್ಮರ ಲಚ್ಯಾಣ ಸಿದ್ದಪ್ಪ ಮಹಾರಾಜರ ಆಶೀರ್ವಾದದ ಫಲದಿಂದ 11 ತಿಂಗಳಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಸಾಂಬಾನಂದ ಮೋನಪ್ಪ ಪಂಡಿತ. ಇವರು 30.03.1993 ರಲ್ಲಿ ಮರಣ ಹೊಂದಿದರು.

ತಂದೆ ಕಂಚಗಾರ ವೃತ್ತಿಯಲ್ಲಿ ಪಳಗಿದವರು. ಮನೆಯ ಗೋಡೆಯ ಮೇಲೆಲ್ಲ ರಾಜಾ ರವಿವರ್ಮರ ಅಚ್ಚಾದ ಚಿತ್ರಪಟಗಳನ್ನು ಅಚ್ಚುಕಟ್ಟಾಗಿ ತೂಗು ಹಾಕಲಾಗಿತ್ತು. ತಂದೆಯವರು ತಯಾರಿಸುತ್ತಿದ್ದ ಗಣಪತಿಯ ಪ್ರತಿಮೆಗಳನ್ನು ಚಿತ್ರಿಸುವ ನಕ್ಷೆಗಳನ್ನು, ಗೋಡೆಯ ಮೇಲೆ ತೂಗು ಹಾಕಿದ ರಾಜಾ ರವಿವರ್ಮರ ಲಕ್ಷ್ಮೀ, ಸರಸ್ವತಿ, ಶಿವಪಾರ್ವತಿ ಮುಂತಾದ ಚಿತ್ರಗಳನ್ನೂ ಕಣ್ತುಂಬ ನೋಡಿ ಆನಂದಿಸುತ್ತಿದ್ದ ಬಾಲಕ ಸಾಂಬಾನಂದ ಇಂತಹ ಚಿತ್ರಗಳನ್ನು ತಾನೇಕೆ ಬಿಡಿಸಬಾರದು ಎಂಬ ಛಲದೊಂದಿಗೆ ಕುಂಚದ ದಾಸನಾಗಿ ಬಿಟ್ಟನು. ಆತನ ಆಸಕ್ತಿಯನ್ನು ಕಂಡು ತಂದೆ ತಾಯಿಗಳು ಮಗನಿಗೆ ಚಿತ್ರಕಲೆಯ ಶಿಕ್ಷಣ ಕೊಡಿಸಲು ಮುಂದಾದರು.

1926ರಲ್ಲಿ ಬೀದರಿನ ಚಿತ್ರಕಲಾ ಶಿಕ್ಷಕರಾದ ಭಾಸ್ಕರರಾವ ಅವರಲ್ಲಿಗೆ ಹೋಗಿ ಅವರ ಮೆಚ್ಚಿನ ಶಿಷ್ಯನಾಗಿ ಮತ್ತೆ ಶಂಕರರಾವ ಆಳಂದಕರ ಕಲಬುರ್ಗಿಯವರಲ್ಲಿ ಶಿಷ್ಯತ್ವ ಪಡೆದು ಏಕನಿಷ್ಠೆ

ಯಿಂದ ಕಲಾ ಸರಸ್ವತಿಯ ಆರಾಧನೆ ಗೈದರು. ಆನಂತರ ಮದ್ರಾಸ ಕಲಾಶಾಲೆಯಿಂದ ಡಿಪ್ಲೋಮಾ ಪಡೆದರು. 1931 ಆದರೂ ಅವರ ಕಲಾ ಹಸಿವು ಹಿಂಗಲಿಲ್ಲ. ಇನ್ನೂ ಹೆಚ್ಚಿನ ಸಾಧನೆಗೈಯಬೇಕೆಂಬ ಆಸೆಯಿಂದ ಮುಂಬಯಿಯಲ್ಲಿನ ಭಾರತದ ಅತ್ಯುತ್ತಮ ಕಲಾಶಾಲೆಯಾದ ಜೆ.ಜೆ. ಕಲಾಶಾಲೆಯನ್ನು ಸೇರಿದರು. ಅಲ್ಲಿ ಎ.ಎ. ಭೋಸಲೆ, ಎಂ.ವ್ಹಿ. ದುರಂಧರ ಹಾಗೂ ಕೆ.ಬಿ. ಚೂಡೇಕರ ಎಂಬ ಚಿತ್ರಕಲಾವಿದರ ಮಾರ್ಗದರ್ಶನ ಪಡೆದರು. ಇವರ ಕಲಿಕೆಯ ಆಸಕ್ತಿ ಅಭಿರುಚಿಯನ್ನು ಕಂಡ ಡಿ.ಜಿ. ಬಡಿಗೇರ ಅವರು ಜಿ.ಎಸ್. ದಂಡಾವತಿಮಠರ ಕಲಾಶಾಲೆಗೆ ಕಳುಹಿಸಿದರು.

ಪಂಡಿತರು ಅಲ್ಲಿ ಅವರ ಪ್ರೀತಿ ವಿಶ್ವಾಸ ಪಡೆದು ಮೆಚ್ಚಿನ ಶಿಷ್ಯರಾಗಿ ಹಗಲಿರುಳೆನ್ನದೆ ಕಲಾ ಶಾರದೆಯ ಆರಾಧಕರಾದರು. ಕುಂಚ ಹಿಡಿದ ಕೈ ಕಣ್ಣನ್ನು ತಣಿಸುತ್ತದೆ ಎಂಬ ಮಾತು ಪಂಡಿತರ ಕಲೆಯನ್ನೇ ಕುರಿತು ಹೇಳಿರಬೇಕೆಂದು ಅನಿಸುತ್ತದೆ. ಇವರ ಭಾವಚಿತ್ರ, ವ್ಯಕ್ತಿಚಿತ್ರಗಳನ್ನು ಕಂಡ ವಿದೇಶಿಯರು ಭಾರತದ ರೆಬ್ರಾಂಟ್ ಎಂದೇ ಗುರುತಿಸುತ್ತಿದ್ದರು. ವಿಶ್ವವಿಖ್ಯಾತ ಡಚ್ ಕಲಾವಿದ ರೆಬ್ರಾಂಟ್‌ನ ವ್ಯಕ್ತಿಚಿತ್ರ ಕಲಾಕೃತಿಗಳಿಗೆ ಪಂಡಿತರ ಕಲಾಕೃತಿಗಳು ಸಮಸ್ಥಾನದಲ್ಲಿ ನಿಂತಿವೆ. ಈ ಪೂರ್ಣತ್ವದ ಹಿಂದೆ ನಿರಂತರ ಸಾಧನೆ ಸಮರ್ಪಣಾ ಭಾವ ಹಾಗೂ ತಪಸ್ಸು ಮುಖ್ಯ ಪಾತ್ರವಹಿಸುತ್ತವೆ.

ಇವರು ಭಾರತದಲ್ಲಿ ಪೋಸ್ಟರ್ ಕಲಾಕೃತಿಗಳನ್ನು ಪ್ರಾರಂಭಿಸಿದ ಪ್ರಪ್ರಥಮ ಕಲಾವಿದರು. 1938ರಿಂದ ಹದಿಮೂರು ವರ್ಷಗಳ ಕಾಲ ಇವರು ಚಲನಚಿತ್ರ ಪ್ರಪಂಚಕ್ಕೆ ನೀಡಿದ ಕಾಣಿಕೆ ಅತ್ಯಮೋಘ. ಮುಂಬಯಿಯ ಸುಪ್ರಸಿದ್ಧ ಸ್ಟುಡಿಯೋಗಳಾದ ಪ್ರಭಾತ, ರಾಜಕಮಲ್, ಕರ್ದಾರ್ ರಾಜಕಪೂರ ಸ್ಟುಡಿಯೋಗಳಿಗಾಗಿ ಪಂಡಿತರು ಚಿತ್ರಿಸಿಕೊಟ್ಟ ಭಿತ್ತಿಪತ್ರ ಕಲಾಕೃತಿಗಳು ಒಂದೊಂದು ಅನುಪಮ. ಕವಿ ಶಬ್ದಗಳಿಂದ ಬಣ್ಣ ಬಳಿಯುತ್ತಾನೆ ಆದರೆ ಚಿತ್ರಕಾರ ಬಣ್ಣಗಳಿಂದ ಹಾಡುತ್ತಾನೆ ಎಂಬ ಮಾತು ಇವರ ಕಲಾಕೃತಿಗಳನ್ನು ಕಂಡವರಿಗೆ ನಿಜವೆನಿಸುತ್ತದೆ.

ಇವರು ಹುಟ್ಟಿನಿಂದ ದೈವಭಕ್ತರು ಕಾಳಿಕಾಮಾತೆಯ ಪರಮಭಕ್ತರು. ಶ್ರೀರಾಮಕೃಷ್ಣ ಪರಮಹಂಸರಂತೆ. ಇವರೂ ಕಾಳಿಕಾ ಮಾತೆಯ ಆರಾಧಕರಾಗಿದ್ದರು. ಕಲಾಕೃತಿಗಳ ನಿರ್ಮಾಣಕ್ಕೆ ಅಗತ್ಯವಾದ ಸ್ಫೂರ್ತಿ ಪ್ರೋತ್ಸಾಹಗಳಿಗೆ ಕಾಳಿಕಾ ದೇವಿಯ ಪ್ರೇರಣೆಯೇ ಮುಖ್ಯವಾಗಿದೆಯೆಂದು ಇವರು ಬಲವಾಗಿ ನಂಬಿದ್ದರು. 1956ರಲ್ಲಿ ಕಾಳಿಕಾಮಾತೆಯ ಒಂದು ದೇವಾಲಯ ಕಲಬುರ್ಗಿಯ ಸಂತ್ರಾಸವಾಡಿಯಲ್ಲಿ ಕಟ್ಟಿಸಿ ಸಂಪೂರ್ಣ ದೇವಾಲಯವನ್ನು ಅಮೃತಶಿಲೆಯ ಹೊದಿಕೆಯಿಂದ ಅಲಂಕರಿಸಿ ಗೋಪುರ ಮಹಾದ್ವಾರಗಳನ್ನು ಕಲಾಪೂರ್ಣವಾಗಿ ರೂಪಿಸುವ ಯೋಜನೆ ಹಾಕಿಕೊಂಡಿದ್ದರು. ಆದರೆ ಆ ಕಾರ್ಯಪೂರ್ಣವಾಗದೆ ಅವರ ಕನಸಾಗಿಯೇ ಉಳಿದಿದ್ದು ಈಗ ಅವರ ಪುತ್ರರು ಆ ಯೋಜನೆಯನ್ನು ಮುಂದುವರಿಸಿದ್ದಾರೆ.



'ಸೀತಾ ಹನುಮಂತ' ಪೋಸ್ಟರ್ ಮಾಧ್ಯಮ

ನಲವತ್ತರ ದಶಕದಲ್ಲಿ 'ಫಿಲ್ಮ ಇಂಡಿಯಾ' ಎಂಬ ಭಾರತದ ಏಕೈಕ ಚಲನಚಿತ್ರ ಮಾಸ ಪತ್ರಿಕೆಯು ಎಸ್.ಎಂ. ಪಂಡಿತರ ದಿವ್ಯ ಹಸ್ತದಿಂದ ಚಿತ್ರಿತವಾದ ಮುಖಪುಟದೊಂದಿಗೆ ಹೊರಬರುತ್ತಿತ್ತು. 1946ರಲ್ಲಿ ಫಿಲ್ಮ ಇಂಡಿಯಾ ಪತ್ರಿಕೆಯ ಮುಖಪುಟದ ಮೇಲೆ ಅಚ್ಚಾದ ಒಂದು ಕಲಾಕೃತಿಯ ವಿನ್ಯಾಸದ ಕಲಾನೈಪುಣ್ಯವನ್ನು ಬಹಳಷ್ಟು ಜನ ಕಲಾಕಾರರು ಮೆಚ್ಚಿಕೊಂಡರು. ಆ ಕಲಾಕೃತಿಯು ಕೆನಡ ಟೋರೋಂಟೋದಲ್ಲಿ ಜರುಗಿದ ಅಂತಾರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ಪಂಡಿತಜೀಯವರಿಗೆ ಪ್ರಥಮ ಪ್ರಶಸ್ತಿಯನ್ನು ತಂದುಕೊಟ್ಟಿತು.

ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ, ಬಾಣನ ಕಾದಂಬರಿ, ಕಾಳಿದಾಸನ ಅಭಿಜ್ಞಾನ ಶಾಕುಂತಲ, ಕುಮಾರ ಸಂಭವ ಮುಂತಾದ ಮಹಾಕಾವ್ಯಗಳ ಸತ್ವಭರಿತ ಸನ್ನಿವೇಶಗಳ ಸುಮಾರು ಮೂವತ್ತು ನಾಲ್ವತ್ತು ಸಾವಿರಕ್ಕೂ ಕಡಿಮೆ ಇಲ್ಲದ ಸಂಖ್ಯೆಯಲ್ಲಿ ನಿರ್ಮಾಣಗೊಂಡ ಅವರ ಕಲಾಕೃತಿಗಳೆಲ್ಲ ಪರಿಪೂರ್ಣ ಚೇತೋಹಾರಿಯಾಗಿವೆ. ಅವರ ಕೃತಿಗಳು ನೋಡುಗರ ಕಣ್ಮನಕ್ಕೆ ಆನಂದ ನೀಡುವಂಥವು.

ಭಾರತ ಬೀಡಿ, ಮಂಗಳೂರು ಗಣೇಶಬೀಡಿ ಮೋಹನ ಮ್ಯಾಕಿನ್ಸ ಬ್ರೆವರಿಜ್ (ಲಿ) ಕಂಪನಿಗಳ ಕ್ಯಾಲೆಂಡರ್‌ಗಳಿಗೆ ಅವರು ನೀಡಿದ ಸುಂದರ ಚಿತ್ರಗಳು ಅಪಾರ ಜನಪ್ರಿಯತೆ ಗಳಿಸಿದುವು. ಪಂಡಿತರ ಅನೇಕ ಕಲಾಕೃತಿಗಳು ನ್ಯೂಯಾರ್ಕಿನ ಜಿ. ರೋಮನ್ ಆರ್ಟ್‌ಗ್ಯಾಲರಿ, ಲಂಡನ್ನಿನ ಇಂಡೋ-ಬ್ರಿಟಿಷ ಅಸೋಸಿಯೇಶನ್‌ನ ಚೇರಮನ್ ಸ್ವರಾಜಪಾಲ್ ಅವರಲ್ಲಿ ಅಲ್ಲದೆ ಭಾರತ, ಇಂಗ್ಲೆಂಡ್, ಇರಾನ್, ಇರಾಕ್, ಸಿಂಗಪೂರ, ಫ್ರಾನ್ಸ, ಕೆನಡಾ ಮುಂತಾದ ದೇಶಗಳ ನಾನಾ ಭಾಗಗಳಲ್ಲಿನ ಗಣ್ಯ ಕಲಾರಸಿಕರಲ್ಲಿ ಸಂಗ್ರಹಗೊಂಡಿವೆ.

ಕನ್ಯಾಕುಮಾರಿಯ ಸ್ವಾಮಿ ವಿವೇಕಾನಂದ ರಾಕ್ ಮೆಮೋರಿಯಲ್ ಸೊಸಾಯಿಟಿಯಲ್ಲಿರುವ ಮೂರ್ತಿಯನ್ನು ಎಸ್.ಎಂ. ಪಂಡಿತರ ಪೇಂಟಿಂಗ್ ನೋಡಿ ಮಾಡಿರುವುದಾಗಿದೆ. ಸ್ವಾಮಿ ವಿವೇಕಾನಂದರ ಕೈಬಿಚ್ಚಿ ನಿಂತ ಚಿತ್ರ ಬಹಳ ಜನಪ್ರಿಯವಾಯಿತು.

ಇವರ ಅಮೋಘ ಚಿತ್ರಕಲೆ ವಿವಿಧ ದೇಶಗಳಲ್ಲಿ ವಿಜ್ರಂಭಿಸುವದನ್ನು ಕಂಡು ಲಂಡನ್ನಿನ ರಾಯಲ್ ಸೊಸಾಯಿಟಿ ಆಫ್ ಆರ್ಟ್ಸ್ ಸಂಸ್ಥೆಯ ಡಿಸೆಂಬರ್ 11. 1978ರಲ್ಲಿ ಫೆಲೋಶಿಪ್ ನೀಡಿ ಪಂಡಿತರನ್ನು ಭಾರತ ಸರಕಾರಕ್ಕಿಂತ ಮೊದಲೇ ಗುರುತಿಸ ಲ್ಪಟ್ಟರು. ಇವರನ್ನು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯು 1982ನೆಯ ವರ್ಷದ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಆನಂತರ ಕರ್ನಾಟಕ ರಾಜ್ಯ ಸರಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು (1984) ಸನ್ಮಾನಿಸಿತು. 1986ರ ಮಾರ್ಚ್ 4 ರಂದು ಕಲಬುರ್ಗಿ ವಿಶ್ವವಿದ್ಯಾಲಯವು ಪಂಡಿತರಿಗೆ ಗೌರವ ಡಾಕ್ಟರೇಟ ಪದವಿ ನೀಡಿತು. 1989ರಲ್ಲಿ ಭಾರತದ ಆರ್ಟ್ಸ್ ಸೊಸೈಟಿ ಪಂಡಿತರನ್ನು ಸನ್ಮಾನಿಸಿತು. ಆರ್ಟ್ ಸೊಸಾಯಿಟಿ ಆಫ್ ಇಂಡಿಯಾದ ಅಜೀವ ಸದಸ್ಯರಾಗಿದ್ದ ಇವರು ಮುಂಬಯಿಯ ವಾಣಿಜ್ಯ ಕಲಾವಿದರ ಗಿಲ್ಡ್‌ನ್ ಸಂಸ್ಥಾಪಕರೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದರು. 1991ರಲ್ಲಿ ಮುಂಬಯಿಯ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ಹಾಗೂ ಪುಣೆಯಲ್ಲಿ ಇವರ ಕಲಾ ಪ್ರದರ್ಶನ ನಡೆದಾಗ ಜನ ಕಿಕ್ಕಿರಿದು ತುಂಬಿ ಈ ಕಲೋಪಾಸಕನ ಕಲೆಗೆ ಬೆರಗಾದರು. ಇವರ ಮನೆಯಲ್ಲಿ ಆರ್ಟ್‌ಗ್ಯಾಲರಿ ಇದೆ. ಕಲಬುರ್ಗಿಯಲ್ಲಿ ಇದನ್ನೊಂದು ಉತ್ತಮ ಆರ್ಟ್‌ಗ್ಯಾಲರಿ ಮಾಡುವುದು ತಮ್ಮ ಉದ್ದೇಶವೆಂದೂ ಕಲೋಪಾಸಕರು ಅದನ್ನು ನೋಡಿ ಸಂತೋಷಪಟ್ಟರೆ ಅದೇ ತಮಗೆ ಆನಂದ ಎಂದು ಅವರ ಮಗ ಆರ್ಟ್‌ಗ್ಯಾಲರಿಯ ಉದ್ದೇಶ ವಿವರಿಸುತ್ತಾರೆ. (ವಿಎಸ್)

ಪಂಡಿತ್ ಆರ್ಟ್‌ಗ್ಯಾಲರಿ: ಸುಮಾರು ಮುಕ್ಕಾಲು ಶತಮಾನದ ಹಿಂದೆಯೇ, ಹೈದ್ರಾಬಾದ ಕರ್ನಾಟಕ ಪ್ರದೇಶದ ಪ್ರತಿಭಾವಂತ ಕಲಾವಿದರನೇಕರು ಮುಂಬಯಿ, ಬರೋಡಾ, ಶಾಂತಿನಿಕೇತನ, ದೆಹಲಿ ಮುಂತಾದ ಕಡೆಗಳಲ್ಲಿ ಹೆಸರು ಮಾಡಿರುವುದಾಗಿ, ತಿಳಿದು ಬರುತ್ತದೆ. ಇತ್ತೀಚಿನ ಇಪ್ಪತ್ತೈದು ವರ್ಷಗಳಲ್ಲಿ ಪುನಃ ವಿಮರ್ಶೆಗೆ ಒಳಪಟ್ಟಿರುವ ಸುರಪುರ ಸಂಸ್ಥಾನದ ಅಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರಿಂದ ನಿರ್ಮಾಣಗೊಂಡ ಚಿತ್ರಗಳಿಂದ ಈ ಪರಂಪರೆ, ಇನ್ನೂ ಹಿಂದಕ್ಕೆ ಹೋಗಿ ಒಂದು ಭದ್ರಬುನಾದಿ ಒದಗಿಸಿದಂತಾಗಿದೆ. ಹೀಗೆ ಕಲಬುರ್ಗಿಯು ಚಿತ್ರಕಲೆಗೆ ಪಾರಂಪರಿಕ ಸ್ಥಾನಮಾನ ಇದ್ದರೂ ಇಲ್ಲಿನ ಕಲೆಯನ್ನು ಕಾಣಲು ನಾವು ಕಲಾಶಾಲೆಗಳಿಗೆ ಹೋಗಬೇಕು. ಅಥವಾ ಕಲಾವಿದರ ಮನೆಗೆ ಹೋಗಬೇಕು ಸ್ವಲ್ಪ ಮಟ್ಟಿಗೆ ಇದಕ್ಕೆ ಅಪವಾದವೆನ್ನುವಂತೆ ಒಂದು ಅಪರೂಪದ ಖಾಸಗಿ ಚಿತ್ರಕಲಾ ಗ್ಯಾಲರಿಯೊಂದು ಕಲಬುರ್ಗಿಯಲ್ಲಿರುವುದು ಹೆಮ್ಮೆಯ ವಿಷಯ ಹೆಚ್ಚು ಪ್ರಚಾರದಲ್ಲಿಲ್ಲದ ಆರ್ಟ್‌ಗ್ಯಾಲರಿ. ಎಸ್.ಎಂ. ಪಂಡಿತ ಅವರದು.

ಇಲ್ಲಿ ಎಸ್.ಎಂ. ಪಂಡಿತರು ಪ್ರಾರಂಭದಿಂದ ಕೊನೆಯ ವರೆಗೆ ನಿರ್ಮಿಸಿದ ಆಯಾ ಕಾಲಘಟ್ಟದ ಕೆಲವು ಅಪೂರ್ವ ಕಲಾಕೃತಿಗಳು ನೋಡಲು ದೊರೆಯುವವು ಈ ಸಂಗ್ರಹಾಲಯದಲ್ಲಿ ಇನ್ನು ನಾಲ್ಕಾರು ಉತ್ತಮ ಕೃತಿಗಳು ಅಂದರೆ ಪಂಡಿತರ ಅಳಿಯಂದಿರೂ ಹಾಗೂ ಚೆನ್ನತನ ಪ್ರಸಿದ್ಧ ಚಿತ್ರಕಲಾವಿದರಾದ ವ್ಹಿ.ಕೆ. ಬಾಸ್ಕರ್ ಅವರ ಚಿತ್ರಗಳು ನೋಡಲು ದೊರೆಯುವುದು ಗ್ಯಾಲರಿಯ ವಿಶೇಷತೆ. ಪಂಡಿತರು ಮುಂಬಯಿ ವಾಸಿಗಳಾಗಿ ಆಗಾಗ ವರ್ಷದ ಕೆಲವು ದಿನಗಳಿಗಾಗಿ ಗುಲಬರ್ಗಾಕ್ಕೆ ಆಗಮಿಸುತ್ತಿದ್ದರು. ಆಗಲೂ ಅವರು ಮನೆಯಲ್ಲಿ ಚಿತ್ರಗಳ ರಚನೆ ಮಾಡುತ್ತಿದ್ದರು. ಇಂಥ ಸಂದರ್ಭಗಳಲ್ಲಿ ವ್ಹಿ.ಕೆ. ಭಾಸ್ಕರ ಅವರೂ ಗುಲಬರ್ಗಾಕ್ಕೆ ಆಗಮಿಸಿ ಚಿತ್ರರಚನೆ ಮಾಡಿದ್ದಲ್ಲದೆ, ಪಂಡಿತರನ್ನೇ ಮಾದರಿಯಾಗಿಸಿ (ಮಾಡೆಲ್) ಭಾವಚಿತ್ರ ರಚನೆ ಮಾಡಿದ್ದಾರೆ. ಗ್ಯಾಲರಿಯ ಈ ಎಲ್ಲಾ ಒಟ್ಟು ಚಿತ್ರಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

ಪ್ರಸ್ತುತ ಈಗ ಗ್ಯಾಲರಿಯಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಕೃತಿಗಳನ್ನು ಕೂಡಿಸಿ, ನಲ್ವತ್ತಕ್ಕೂ ಹೆಚ್ಚು ಚಿತ್ರಗಳನ್ನು ಪ್ರದರ್ಶನಕ್ಕೆ ವ್ಯವಸ್ಥೆಗೊಳಿಸಲಾಗಿದೆ. ಇವುಗಳಲ್ಲಿ ಮುಖ್ಯವಾಗಿ ಪೌರಾಣಿಕ ಸನ್ನಿವೇಶಗಳನ್ನು ತಿಳಿಸಿಕೊಡುವ ದೊಡ್ಡ ದೊಡ್ಡ ಕ್ಯಾನವಾಸ್‌ಗಳ ಮೇಲೆ ಬರೆದ ತೈಲವರ್ಣ ಚಿತ್ರಗಳು, ಬಹುತೇಕ ಈ ಪೌರಾಣಿಕ ದೃಶ್ಯದ ಚಿತ್ರಗಳಲ್ಲಿ ಮೊದಲು ಕ್ಯಾಲೆಂಡರಗಳಿಗಾಗಿ ರಚಿಸಿ ಅನಂತರ ಅವುಗಳಲ್ಲಿ ಕೆಲವನ್ನು ಪುನಃ ದೊಡ್ಡದಾಗಿ ಚಿತ್ರಿಸಲಾಗಿದೆ. ಎರಡನೆಯದಾಗಿ ಭಾವಚಿತ್ರಗಳು–ಕೆಲವು ಅಭ್ಯಾಸಕ್ಕಾಗಿ ನಿರ್ಮಿಸಿದರೆ ಒಂದೆರಡು ಗಿರಾಕಿಗಳ ಬೇಡಿಕೆಯ ಚಿತ್ರಗಳಿದ್ದು ತಮ್ಮಲ್ಲೇ ಉಳಿಸಿಕೊಂಡಿರಬಹುದು.

ಇಂದಿರಾಗಾಂಧಿಯವರ ಚಿತ್ರ ಮತ್ತು ಬ್ರಿಟನ್ ರಾಣಿ ಮಾರ್ಗೆಟ್ ಥ್ಯಾಚರ್ ಅವರ ಎರಡೂ ಭಾವಚಿತ್ರಗಳನ್ನು ಪುನಃ ಅದೇ ಅಳತೆಯಲ್ಲಿ ಮುದ್ರಣಗೊಳಿಸಿ ಇಡಲಾಗಿದೆ. ಪುಣ್ಯ ಪುರುಷರ ಮತ್ತು ಮಹಾತ್ಮರ ಚಿತ್ರಗಳೂ ನೋಡುಗರನ್ನೂ ಸಂತೃಪ್ತಗೊಳಿಸುತ್ತವೆ. (ಬಿಯು)

ಪಂಡಿತ ತಾರಾನಾಥ: ಆಯುರ್ವೇದ ಪಂಡಿತ, ಅಧ್ಯಾಪಕ, ವಿದ್ವಾಂಸ, ನಟ, ನಾಟಕಕಾರ, ಪತ್ರಿಕೋದ್ಯಮಿ, ಅಸ್ಖಲಿತ ವಾಗ್ಮಿ, ಸಂಗೀತಗಾರ, ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣಪ್ರೇಮಿ, ಬಹುಮುಖ ವ್ಯಕ್ತಿತ್ವದ ಇವರು ತಮ್ಮ ಕಿರಿದಾದ ಆಯುಷ್ಯದಲ್ಲಿ ಪೂರ್ಣ ಸಾರ್ಥಕತೆಯ ಬದುಕನ್ನು ಮಾನವ ಜೀವಿಗಳ ಕಲ್ಯಾಣಕ್ಕಾಗಿ ಸವೆಸಿದ್ದಾರೆ. ಕೇವಲ 51 ವರ್ಷ ಬಾಳಿದ ಪಂಡಿತ ತಾರಾನಾಥರು ತಮ್ಮ ಬದುಕಿನ ದಿಟ್ಟ ಪರಿಶ್ರಮದ ಹೆಜ್ಜೆಗಳನ್ನಿಲ್ಲಿ ಶಾಶ್ವತವಾಗಿ ಮೂಡಿಸಿದ್ದಾರೆ.

1891 ಜೂನ್ 5ರಂದು ಮಂಗಳೂರಿನ ಕೊಂಕಣಿ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಶ್ರೀರಂಗ ದೇವರಾಯ, ತಾಯಿ ರಾಜೀವಮ್ಮನವರು. ಇವರು ಶ್ರೀಮಂತ ತಂದೆಯ ಮಗನಾದರೂ, ತಂದೆ ರಾಜೀವಮ್ಮನವರು ಪ್ರೇಮ ವಿವಾಹವಾದ ಕಾರಣ ಬಡತನದ ಬೇಗೆಯಲ್ಲಿ ಬೆಳೆಯಬೇಕಾಯಿತು. ಚಿಕ್ಕವರಿದ್ದಾಗಲೇ ತಂದೆ ಮರಣ ಹೊಂದಿದ್ದರಿಂದ ಇವರ ಬಾಲ್ಯಕ್ಕೆ ತಾಯಿಯ ಆಸ್ತಿಕತೆ, ತ್ಯಾಗ, ಆದರ್ಶ



ಮನೋಭಾವಗಳೆಲ್ಲ ಮಾರ್ಗದರ್ಶಕವಾಗಿ, ಇವರ ಎಲ್ಲಾ ಸಾಧನೆಗಳಿಗೆ ಬಹುಭಾಗ ಇವರ ಮಾತೆಯೇ ಕಾರಣರೆಂಬುದು ಹೆಚ್ಚು ಸಮಂಜಸ. ಇಂತಹ ಆದರ್ಶ ಮಾತೆಯನ್ನು, ಯೌವನಕ್ಕೆ ಕಾಲಿಡುವ ಪೂರ್ವದಲ್ಲಿಯೇ ಕಳೆದುಕೊಂಡರು ಅನಂತರ ಇವರಿಗೆ ಕೆಲವು ದಿನ ತಾಯಿಯ ತಂಗಿ ನೇತ್ರಾವತಿಬಾಯಿ ಹಾಗೂ ಭಾವ ಸುಬ್ಬರಾಯರು ಆಶ್ರಯವಾಗಿದ್ದರು.

1909ರಲ್ಲಿ ಮೆಟ್ರಿಕ್ಯುಲೇಷನ್ ಪಾಸಾದ ಬಳಿಕ ಹೈದ್ರಾಬಾದ ನಿಜಾಮ ಕಾಲೇಜಿನಲ್ಲಿ ಕಾಲೇಜು ವ್ಯಾಸಂಗ ಮುಗಿಸಿದರು. ಮುಂದೆ ಸ್ಥಳೀಯ ವೈದ್ಯಕೀಯ ಕಾಲೇಜಿನಲ್ಲಿ ಸೇರಿ ಅಧ್ಯಯನ ಪ್ರಾರಂಭಿಸಿದರು. ಆದರೆ ಕೊನೆಯ ವರ್ಷದಲ್ಲಿ ಇವರ ಪ್ರಾಮಾಣಿಕ ನ್ಯಾಯಯುತ ಹೋರಾಟದ ಮನೋಭಾವ ದಿಂದಾಗಿ ಇವರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ಸಿಗಲಿಲ್ಲ. ಆದರೆ ವೈದ್ಯಕೀಯ ಕಾಲೇಜಿನಲ್ಲಿ ಸರೋಜಿನಿ ನಾಯ್ಡು ರವರ ಅಧ್ಯಕ್ಷತೆಯ ಒಂದು ಸಭೆಯಲ್ಲಿ ಇವರು ಮಾಡಿದ ಭಾಷಣ ಅಮೋಘವಾಗಿತ್ತು. ಸರೋಜಿನಿ ನಾಯ್ಡು ಅವರಿಂದ ಪ್ರಶಂಸೆಗೆ ಒಳಗಾಗಿ 'ತಾರಾನಾಥ ರಾಜಕೀಯ ಪ್ರವೇಶಿಸಿದರೆ ಉತ್ತಮ ಭವಿಷ್ಯ ಪಡೆಯುತ್ತಾರೆ...' ಎಂದು ಶ್ಲಾಘಿಸಿದರು.

ವೈದ್ಯಕೀಯ ಅಧ್ಯಯನ ಮಾಡಿದ ಕಾಲೇಜಿನಲ್ಲಿಯೇ ಕೆಲವು ವರ್ಷ 'ಅನಾಟಮಿಯ ಡೆಮಾನಸ್ಟ್ರೇಟರ್' ಆಗಿ ಸೇವೆಗೈದರು ಅಲ್ಲಿಯ ವೈಸ್ ಪ್ರಿನ್ಸಿಪಾಲ್ ಅಬ್ದುಲ್ ಗನಿಯವರಿಗೆ ಆತ್ಮೀಯ ರಾಗಿದ್ದರು. ಇವರ ಪ್ರಾಮಾಣಿಕ ಸೇವಾನಿಷ್ಠೆ ಮನೋಭಾವ, ದೀನದಲಿತರ ಮೇಲಿನ ಪ್ರೀತಿ, ವಾಕ್‌ಚತುರತೆಯನ್ನು ಗುರುತಿಸಿದ ಅಂದಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಮುಖ್ಯಸ್ಥರು ಇವರನ್ನು ಪ್ರೌಢ ಶಾಲೆಯ ವಿಜ್ಞಾನದ ಅಧ್ಯಾಪಕ ರನ್ನಾಗಿ ಬೀದರಿಗೆ ನಿಯಮಿಸಿದರು.

ಇವರ ಜ್ಞಾನದಾಹಕ್ಕೆ ಬೀದರ ವಾತಾವರಣ ಪೂರಕ ವಾಗಿತ್ತು. ಇಲ್ಲಿಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಜೆ. ಮಂಗಯ್ಯನವರು ಆಯುರ್ವೇದದಲ್ಲಿ ಸಿದ್ಧಹಸ್ತರಿದ್ದುದ ರಿಂದ ಇವರ ಮಾರ್ಗದರ್ಶನದಲ್ಲಿ ಆಯುರ್ವೇದ ಹಾಗೂ ಯೋಗದ ಅಧ್ಯಯನ ಸಿದ್ಧಿಸಿತು. ಮುಂದೆ ಇವರಿಗೆ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ಯೋಗೇಶ್ವರಾನಂದ, ಸಂತ ರುದ್ರಮುನಿಯಪ್ಪ, ಮಾಣಿಕ್ಯಪ್ರಭು ಮುಂತಾದ ಯೋಗಿಗಳ, ಸಂತರ ಸಾಂಗತ್ಯದಲ್ಲಿ ತಾರಾನಾಥರು ಪಂಡಿತರಾಗಿ ಜ್ಞಾನ ಯೋಗಿಗಳಾದರು.

ಬೀದರನಲ್ಲಿ ಆಗ ತಲೆದೋರಿದ ಕಾಲರಾ ರೋಗಕ್ಕೆ ತುತ್ತಾದ ರೋಗಿಗಳ ಸೇವೆಯನ್ನು ಶ್ರದ್ಧೆಯಿಂದ ನಿರ್ವಹಿಸಿದರು. ಪಾದ್ರಿ ಯೊಬ್ಬರ ಸಹಾಯದಿಂದ ಔಷಧಗಳನ್ನು ತಯಾರಿಸಿ, ಔಷಧಗಳ ಕೊರತೆಯನ್ನು ಹೋಗಲಾಡಿಸಿ ಜನರ ಜೀವ ಉಳಿಸಿ 'ಕರ್ನಾಟಕದ ಧನ್ವಂತರಿ' ಎನಿಸಿಕೊಂಡರು. ಪರಧರ್ಮ ಸಹಿಷ್ಣು ಗಳಾದ ಪಂಡಿತ ತಾರಾನಾಥರು ಬ್ರಾಹ್ಮಣರಾಗಿದ್ದರೂ ಬೈಬಲ್ ಹಾಗೂ ಕುರಾನ್ ಗ್ರಂಥಗಳನ್ನು ಆಳವಾಗಿ ಅಭ್ಯಸಿಸಿದ್ದರು. ಇವರ ಕುರಾನ್ ಪಠಣ ಮುಸ್ಲಿಂರನ್ನು ದಂಗುಬಡಿಸುತ್ತಿತ್ತು.

ಇವರ ಕಿರಿದಾದ ಬದುಕಿನಲ್ಲಿ ಉಲ್ಲೇಖಿಸಲೇಬೇಕಾದ ಘಟನೆಗಳು ಸಹಸ್ರಾರು. ಬೀದರನಲ್ಲಿ ಆಗ ನವಾಬರ ಹುಟ್ಟು ಹಬ್ಬಕ್ಕೆ ಸರಕಾರಿ ನೌಕರರು ಕಾಣಿಕೆ ಕೊಡಬೇಕಿತ್ತು. ಇದನ್ನು ಪ್ರತಿಭಟಿಸಿದ ತಾರಾನಾಥರು ನವಾಬರಿಗೆ ಒಂದು ಪೈಸೆ ಕಾಣಿಕೆ ಕಳಿಸಿ ಅವಮಾನಿಸಿದರು. ಅದೇ ಕಾಣಿಕೆಯನ್ನು ಮೊದಲನೆಯ ಮಹಾಯುದ್ಧದಲ್ಲಿ ಮಡಿದ ವೀರರ ಮಡದಿಯರಿಗೆ ಸಲ್ಲಿಸು ವಂತೆ ಜನರನ್ನು ಪ್ರಚೋದಿಸಿದರು. ಈ ಹಿನ್ನೆಲೆಯಲ್ಲಿ ಇವರ ಜನಾನುರಾಗವನ್ನು ಸಹಿಸದ ಅಧಿಕಾರಿವರ್ಗ ಇವರನ್ನು ರಾಯಚೂರಿಗೆ ವರ್ಗಾಯಿಸಿತು.

ಸರ್ಕಾರಿ ಆಜ್ಞೆಯನ್ನು ಪಾಲಿಸಿದ ಇವರು ರಾಯಚೂರಿಗೆ ಬಂದು ಅಧ್ಯಾಪಕ ವೃತ್ತಿಯನ್ನು ಮುಂದುವರೆಸಿದರು. ಇವರು ಬರಿ ಶಿಕ್ಷಕರಾಗದೇ ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬಾಲ್ಯವಿವಾಹ, ವಿಧವಾಮುಂಡನೆ ಯಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದರು ಇವರು 'ಹಿಂದೂ ಸಮಾಜದಲ್ಲಿ ದಾಂಪತ್ಯ ವಿಚ್ಛೇದನೆ' ಎನ್ನುವ ಸ್ತ್ರೀ ಸ್ವಾತಂತ್ರ್ಯದ ಕುರಿತು ಉಗ್ರ ಲೇಖನ ಬರೆದು ಸಮಾಜದ ಕಣ್ತೆರಸಲು ಶ್ರಮಿಸಿ, ಸಂಪ್ರದಾಯಸ್ಥರಿಂದ ನಿಂದೆಗೆ ಗುರಿಯಾ ದರೂ ತಮ್ಮ ಪ್ರಯತ್ನ ಕೈ ಬಿಡಲಿಲ್ಲ.

ಇವರನ್ನು ರಾಯಚೂರಿನಿಂದ ಮತ್ತೆ ವರ್ಗಾಯಿಸಿದಾಗ, ಸರಕಾರದ ಕೆಲಸಕ್ಕೆ ರಾಜೀನಾಮೆಕೊಟ್ಟು ಸ್ವತಂತ್ರರಾದರು. ಪ್ರಗತಿಪರ ಸ್ವತಂತ್ರ ವಿಚಾರಗಳನ್ನು ಹೊಂದಿದ್ದ ತಮ್ಮಲ್ಲಿ ಸಾಕಷ್ಟು ಕರ್ತೃತ್ವಶಕ್ತಿ ಇದ್ದೂ, ಅವುಗಳನ್ನು ಅನುಷ್ಠಾನಕ್ಕೆ ತರಲು

ಸಾಧ್ಯವಾಗದೆಂಬುದನ್ನು ಅಷ್ಟು ವರ್ಷದ ಸರಕಾರಿ ಸೇವೆ ಅವರಿಗೆ ಮನವರಿಕೆ ಮಾಡಿಸಿತು. ಹೀಗಾಗಿ ರಾಯಚೂರಿನ ಹಲವಾರು ಗಣ್ಯವ್ಯಕ್ತಿಗಳೊಂದಿಗೆ ಸೇರಿ, 1920ರಲ್ಲಿ 'ಹಮದರ್ದ್ ಶಾಲೆ' ಎನ್ನುವ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ರಾಯಚೂರು ನಗರದಲ್ಲಿ ಅದೊಂದು ಮಾದರಿ ಶಾಲೆಯಾಯಿತು.


ಇವರ ಬದುಕಿಗೆ ಒಂದು ತಿರುವು ನೀಡಿದ ಘಟನೆ ನವಾಬರು ರಾಯಚೂರಿಗೆ ಬರುವ ಸಂದರ್ಭದಲ್ಲಿ ರಸ್ತೆ ಸುಧಾರಣೆಯ ಕೆಲಸ ನಡೆದಿತ್ತು. ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಒಬ್ಬ ಕೂಲಿ ಮಹಿಳೆ ಪ್ರಸವ ವೇದನೆಯಲ್ಲೂ ಕೆಲಸ ಮಾಡುತ್ತಿದ್ದುದನ್ನು ಕಂಡು ಪಂಡಿತ ತಾರಾನಾಥರು ವ್ಯಗ್ರವಾಗಿ ನವಾಬರನ್ನು 'ಇಂಡಿಯನ್ ಡೈಯರ್' ಎಂಬ ಲೇಖನ ಬರೆದು ಪ್ರತಿಭಟಿಸಿದರು. ಇದರಿಂದ ಕುಪಿತರಾದ ನವಾಬರು ತಾರಾನಾಥರನ್ನು ಗಡಿಪಾರು ಮಾಡಿದರು. ಆಗ ಇವರ ಸ್ನೇಹಿತರು ಇವರನ್ನು ತುಂಗಭದ್ರೆಯ ತಟಾಕದಲ್ಲಿ ಕರೆದುಕೊಂಡು ಬಂದ ಮೇಲೆ ಅಲ್ಲಿ ವಾಸಿಸಹತ್ತಿದರು.

ತಾರಾನಾಥರು ಅಲ್ಲಿ 'ಪ್ರೇಮಾಯತನ' ಎನ್ನುವ ಆಶ್ರಮ ಸ್ಥಾಪಿಸಿ ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿಕೊಂಡು ನವಸಮಾಜದ ನಿರ್ಮಾಣಕ್ಕಾಗಿ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಕ್ಕಾಗಿ ದುಡಿಯಹತ್ತಿದರು. ತಮ್ಮ ಬದುಕಿನ 40 ವರ್ಷಗಳಲ್ಲಿ ಸಮಾಜದ ಏಳ್ಗೆಗಾಗಿ ಶ್ರಮಿಸಿದರು. ತಮ್ಮ ಆಶ್ರಮದಲ್ಲಿಯೇ ಸೇವೆ ಸಲ್ಲಿಸುತ್ತಿದ್ದ ಆದರ್ಶ, ಧೀಮಂತ ಮಹಿಳೆ ಪದವೀಧರೆ ಸುಮತಿಬಾಯಿಯವರನ್ನು ವಿವಾಹವಾದರು. ಇವರ ದಾಂಪತ್ಯದ ಫಲವೇ ರಾಜೀವ್ ತಾರಾನಾಥ ಹಾಗೂ ರಣಬೀರ ತಾರಾನಾಥರು.

ತಾವೇ ಸಂಪಾದಕರಾಗಿ 'ಪ್ರೇಮ' ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿ ಯಶಸ್ವಿಯಾಗಿ ಮುನ್ನಡೆಸಿ ಮುಂದೆ ಅದೇ ಪತ್ರಿಕೆಯನ್ನು ಮಾಸಿಕವಾಗಿಸಿದರು. ಪತ್ರಿಕೆಯಲ್ಲಿ ಇವರು ಬರೆಯುತ್ತಿದ್ದ 'ತಾಯಂದಿರಿಗೆ' 'ಸುಲಭ ಚಿಕಿತ್ಸೆ' 'ದಾಂಪತ್ಯ ದರ್ಶನ' ಲೇಖನಗಳು ಜನಪ್ರಿಯವಾಗಿದ್ದುವು. ಪತ್ರಕರ್ತರಾದ ತಾರಾನಾಥರು 'ಮೋಹಶಾಸ್ತ್ರಿ', 'ಇನ್ಸಾಫ್', 'ದೀನಬಂಧು ಕಬೀರ' ಎನ್ನುವ ನಾಟಕಗಳನ್ನು ರಚಿಸಿದ್ದು, 'ದೀನಬಂಧು ಕಬೀರ' ನಾಟಕ ಮಹಾತ್ಮಾ ಗಾಂಧೀಜಿಯವರ ಮನಸೂರೆಗೊಂಡಿತ್ತು. ಈ ನಾಟಕದ ಮರುಮುದ್ರಣವನ್ನು ಬೆಂಗಳೂರಿನ ಮಿಥಿಕ್ ಸೊಸೈಟಿಯವರು 1992 ಅಕ್ಟೋಬರ್ 31ರಂದು ಬಿಡುಗಡೆ ಮಾಡಿದ್ದಾರೆ. ಇವರ ಚೊಚ್ಚಿಲು ಕೃತಿ 'ಜಗಳ' ಬಹಳ ದಿನಗಳ ಹಿಂದೆಯೇ ಪ್ರಕಟವಾಗಿತ್ತು. ಇವರ ಪಾಂಡಿತ್ಯದಿಂದ ಆಲೂರ ವೆಂಕಟರಾಯರು ಬೆರಗಾಗಿ, ಮೆಚ್ಚಿ ಇವರನ್ನು 'ಮಹಾಋಷಿ' ಎಂದು ಕರೆದು ಧರ್ಮದ ಬಗ್ಗೆ ಬರೆಯಲು ತಿಳಿಸಿದರು. ಆಗ ತಾರಾನಾಥರಿಂದ ರಚಿತವಾದ ಕೃತಿಯೇ 'ಧರ್ಮಸಂಭವ' ಅಥವಾ 'ಧರ್ಮದ ಮೂಲತತ್ವಗಳು' ಎನ್ನುವ ಗ್ರಂಥ.

ಇಂದು, ನಾಟಕ ಹಾಗೂ ಸಂಗೀತಕ್ಷೇತ್ರಗಳಲ್ಲಿ ದಿಗ್ಗಜರೆನಿಸಿಕೊಂಡಿರುವ ಶ್ರೀರಂಗರು, ಟಿ.ಪಿ. ಕೈಲಾಸಂ, ಟಿ. ರಾಘವನ್, ಖಾನ್ ಅಬ್ದುಲ್ ಕರೀಮ ಖಾನ್, ವಿಠ್ಠಲರಾವ್ ಕೋರೆಗಾಂವಕರ್, ಅಲಿ ಅಕ್ಬರ್‌ಖಾನ್, ಎಸ್.ಬಿ. ಪಾಟೀಲ ಮತ್ತು ಬಸವರಾಜ ರಾಜಗುರು, ಮುಂತಾದವರು ಇವರ ಆಶ್ರಮಕ್ಕೆ ಬಂದು ಮಾರ್ಗದರ್ಶನ ಪಡೆಯುತ್ತಿದ್ದುದು ಇವರ ಪಾಂಡಿತ್ಯಕ್ಕೆ ಹಾಗೂ ಹೃದಯ ಶ್ರೀಮಂತಿಕೆಗೆ ನಿದರ್ಶನ.

ಇವರು ರಾಯಚೂರಿನಲ್ಲಿ 1930ರಲ್ಲಿ ಜರುಗಿದ ಪ್ರಥಮ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ಅಧ್ಯಕ್ಷತೆಯನ್ನು, 1938ರಲ್ಲಿ ಪುಣೆಯಲ್ಲಿ ನಡೆದ ಬೊಂಬಾಯಿ ಪ್ರಾಂತೀಯ ಸಮ್ಮೇಳನದ ಅಧ್ಯಕ್ಷತೆಯನ್ನು, ಅದೇ ವರ್ಷ ಬೆಂಗಳೂರಲ್ಲಿ ನಡೆದ ಅಖಿಲ ಭಾರತ ಅನುವಂಶಿಕ ವೈದ್ಯತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದುದರು. ಕಡಪಾ ರಾಘವೇಂದ್ರರಾವ್ ಹೇಳುವಂತೆ 'ಟಿಳಕರ ಚಾಣಾಕ್ಷತೆ, ಗಾಂಧೀಜಿಯವರ ವಿವೇಕ, ಟ್ಯಾಗೋರರ ಕಲೆ, ಅರವಿಂದರ ವೇದಾಂತಗಳ ಸಮ್ಮಿಶ್ರಣವೇ ಪಂಡಿತ ತಾರಾನಾಥ'. 1942 ಅಕ್ಟೋಬರ್ 31ರಂದು ನಿಧನರಾದರು. (ಕೆಎಂಪಿ)



ಪಂಡಿತ ವಿಠ್ಠಲ ಸಾ ಬದಿ: ಬಾನ್ಸುರಿ ವಾದಕ. ದಿವಂಗತ ವಿಠ್ಠಲಸಾ ಬದಿ ಬಾಲ್ಯದಿಂದಲೂ ಸಂಗೀತದ ಬಗ್ಗೆ ಅಪಾರ ಒಲವು ಆದರೆ ಇವರದು ಸಂಗೀತದ ಮನೆತನವಾಗಿರಲಿಲ್ಲ. ಸಂಗೀತದ ವಾತಾವರಣ ಕೂಡ ಇರಲಿಲ್ಲ. ಪಂ. ಪಂಚಾಕ್ಷರಿ ಗವಾಯಿಗಳು, ಪಂ. ಮಲ್ಲಿಕಾರ್ಜುನ ಮನಸೂರ, ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್, ಪಂ. ಭೀಮಸೇನ ಜೋಷಿ, ಬಸವರಾಜ ರಾಜಗುರು, ಪಂ. ಪುಟ್ಟರಾಜ ಕವಿ ಗವಾಯಿಗಳಂತಹ ಮಹಾನ್ ಕಲಾವಿದರು ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿ, ಕುಂದಗೋಳ, ಸಿಗ್ಗಾವಿ, ಲಕ್ಷ್ಮೇಶ್ವರ, ಈ ಭಾಗದಲ್ಲಿ ಅವರ ಅನೇಕ ಕಾರ್ಯಕ್ರಮಗಳು ಜರಗುತ್ತಲಿದ್ದವು. ಈ ಒಂದು ವಾತಾವರಣದಿಂದಾಗಿ ನಾನು ಕೂಡ ಏನನ್ನಾದರು ಸಂಗೀತದಲ್ಲಿ ಸಾಧನೆ ಮಾಡಬೇಕೆಂಬ ಹಿರಿದಾದ ಆಸೆ ಹೊತ್ತ ವಿಠ್ಠಲಸಾ ಬದಿಯವರಿಗೆ ಅವಾಜ (ಧ್ವನಿ) ಸಾಥ ನೀಡಲಿಲ್ಲ. ಈ ಕಾರಣದಿಂದಾಗಿ ಕಿರಾಣ ಘರಾಣೆಯ ಗಾಯಕಿ ಅಂಗದ ಬಾನ್ಸುರಿ ವಾದನವನ್ನು ಪಂ. ಆಯ್.ಎನ್. ಕಲಬುರ್ಗಿಯವರ ಹತ್ತಿರ ಅಭ್ಯಾಸ ಪಡೆದು, ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಲು ಸಾಧ್ಯವಾಯಿತು.

ವೃತ್ತಿಯಿಂದ ವಾಚ್ ರಿಪೇರಿ, ವಾಚಿನ ಅಂಗಡಿ ಮಾಲೀಕರಾಗಿದ್ದರೂ ಪ್ರವೃತ್ತಿಯಿಂದ ಬಾನ್ಸುರಿ ವಾದಕರಾಗಿದ್ದರು.

ಉಸ್ತಾದ ಅಮಿರಖಾನ್, ಉಸ್ತಾದ ಭಿಸ್ಮಿಲ್ಲಾ ಖಾನ, ಪಂ. ಹರಿಪ್ರಸಾದ ಚೌರಾಸಿಯರಂತಹ ಮಹಾನ್ ಕಲಾವಿದರ ಸಂಗೀತವನ್ನು ಆಲಿಸಿ ಶ್ರೇಷ್ಠ ಕಲಾವಿದರಾಗಲೂ ಸಾಧ್ಯ ವಾಯಿತು. ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಸಂಗೀತದ ಬಾನ್ಸುರಿ ವಾದನದಲ್ಲಿ 'ಬಿ' ಶ್ರೇಣಿ ಕಲಾವಿದರಾಗಿದ್ದರಲ್ಲದೆ 'ಬಿ ಗ್ರೇಡ' ಕರ್ನಾಟಕದ ಖ್ಯಾತ ಸಂಗೀತಗಾರರಾದಂತಹ ಡಾ. ಹನಮಣ್ಣ ನಾಯಕದೊರೆ ಕಲಬುರ್ಗಿ ಆಕಾಶವಾಣಿ ನಿಲಯದ ಕಲಾವಿದರಾದಂತಹ ಶ್ರೀಯುತ ಶೇಖ ಅಬ್ದುಲ್ ಖಾಜಿ ಹಾಗೂ ರಾಘವೇಂದ್ರ ಬದಿ ಇವರ ಗುರುಗಳು ಕೂಡ ಆಗಿರುತ್ತಾರೆ.

ಶ್ರೀಯುತ ಬದಿಯವರು ಎಂದೂ ಕೂಡ ಪ್ರಚಾರ ಬಯಸಿ ದವರಲ್ಲ. ಈ ಕಾರಣದಿದಾಗಿಯೇ ಇಂತಹ ಮಹಾನ್ ಕಲಾವಿದರ ಪರಿಚಯ ಇಂದಿನ ಯುವ ಸಂಗೀತ ಪೀಳಿಗೆಗೆ ಇರುವುದಿಲ್ಲ. ಕುಂದಗೋಳ, ಸಿಂದನೂರು, ಲಕ್ಷ್ಮೇಶ್ವರ, ಗದಗ, ಕೆಲವೊಂದು ವೇದಿಕೆಗಳಲ್ಲಿ ಮಾತ್ರ ಇವರು ಕಾರ್ಯಕ್ರಮ ನೀಡಿರುತ್ತಾರೆ. ಪ್ರತಿನಿತ್ಯ ಬೆಳಿಗ್ಗೆ ಹಾಗೂ ಸಾಯಂಕಾಲ, ಸಮಯ ಸಿಕ್ಕಾಗಲೆಲ್ಲ ಬಾನ್ಸುರಿಯನ್ನು ಹಿಡಿದು ತಮ್ಮ ಆತ್ಮ ಶಾಂತಿಗಾಗಿ ಬಾನ್ಸುರಿ ನುಡಿಸುತ್ತಿದ್ದರು. ಶ್ರೀಯುತ ಬದಿಯವರಿಗೆ ದೊರೆತ ಪ್ರಶಸ್ತಿ ಪುರಸ್ಕಾರಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರಮುಖವಾಗಿವೆ. ಹಮೀರ, ಶಂಕರಾ, ಯಮನ್, ಪೂರಿಯಾ, ಮಾಲಕಂಸ, ಕೇದಾರ, ಹಂಸಧ್ವನಿ, ಭೈರವ, ಭಟಿಯಾರ, ಮುಂತಾದವುಗಳು ಇವರ ನೆಚ್ಚಿನ ರಾಗಗಳಾಗಿದ್ದವು.

(ಎಂಬಿ)

ಪಂಪನಗೌಡರು: ನಾಟಕ, ರಾಜಕೀಯ ಹಾಗೂ ಸಂಸ್ಕೃತಿ, ಕಲೆ, ಸಾಹಿತ್ಯದಲ್ಲಿ ಸಾಧನೆ ಮಾಡಿದವರು. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಹೀರಾ ಗ್ರಾಮ ನಿವಾಸಿ. ಇವರು ವಿದ್ಯಾಭ್ಯಾಸವೇನೂ ಬಹಳ ಮಾಡಿದವರಲ್ಲ. ಕೇವಲ ಮೆಟ್ರಿಕ್‌ವರೆಗೆ ಅಭ್ಯಾಸ ಮಾಡಿದವರು. ಮುಂದಿನ ಅಭ್ಯಾಸ ಮಾಡಬೇಕೆಂಬ ಆಸೆ, ಆಕಾಂಕ್ಷೆ ಹೊಂದಿದ್ದರೂ ಮನೆಯ ಪರಿಸ್ಥಿತಿ, ತೊಂದರೆಗಳ ಅನುಭವದಿಂದ ಅರ್ಧಕ್ಕೆ ನಿಲ್ಲಿಸಿದರು. ಇವರು ಯಾವುದೇ ನಾಟಕ ಕಂಪನಿಗಳಲ್ಲಿ ಪರಿಣಿತಿ ಹೋಂದಿದವರೂ ಅಲ್ಲ. ಇವರಿಗೆ ನಾಟಕ ಆಡುವುದೆಂದರೇ ಬಹಳ ಇಷ್ಟ.

'ಅಶ್ವಮೇಧ', 'ಕವಿ ಮೆಚ್ಚಿದ ಕನ್ಯೆ' ಮೊದಲಾದ ನಾಟಕ ಗಳಲ್ಲಿ ತಮ್ಮ ಪ್ರತಿಭೆ ತೋರಿ ಜನರ ಮನಸ್ಸು ಗೆದ್ದು ಅವರಿಂದ ಒಳ್ಳೆಯ ಅಭಿನಯಪಟು ಎಂದು ಬೆಳಕಿಗೆ ಬಂದಿದ್ದಾರೆ. ಪೌರಾಣಿಕ ಮತ್ತು ಸಾಮಾಜಿಕ ನಾಟಕದಿಂದ ತಮ್ಮ ವಿಶಿಷ್ಟವಾದ ಮಾತಿನ ಮೋಡಿಯಲ್ಲಿ ಅಭಿನಯಿಸುವ ಇವರ ಸೂಕ್ಷ್ಮ ಹಾಸ್ಯ ಪ್ರಜ್ಞೆಗೆ ಜನ ಮೆಚ್ಚಿದ್ದಾರೆ.

(ಬಿಎಸ್‌ಎಚ್)

ಪಂಪಯ್ಯ ಸ್ವಾಮಿ: ಬಯಲಾಟದ ಕಲಾವಿದರು. ಇವರಿಗೆ ಕಲೆಯ ಅನುಭವ ಸಾಕಷ್ಟು. ವಂಶಪಾರಂಪರ್ಯವಾಗಿ ಈ ಕಲೆಯನ್ನು ಬಾಲ್ಯದಿಂದಲೇ ಬೆಳೆಸಿಕೊಂಡು ದೀರ್ಘಸೇವೆ ಸಲ್ಲಿಸಿದ್ದಾರೆ.



ಸೇಡಂ ತಾಲ್ಲೂಕು ಕಲೆಗಳ ತವರೂರ. ಸೇಡಂ ತಾಲ್ಲೂಕಿನ ನಾಚವಾರ ಗ್ರಾಮದಲ್ಲಿ 08.05.1966ರಲ್ಲಿ ಜನಿಸಿದರು. ತಂದೆ ಮಲ್ಕಯ್ಯಸ್ವಾಮಿ ತಾಯಿ ಬನ್ನಮ್ಮ. ಜನಿಸಿದ ಇವರು ತಂದೆಯವರಲ್ಲಿ ಪಳಗಿ ಕಲೆ ಯನ್ನು ಬೆಳೆಸಿ–ಉಳಿಸಿಕೊಂಡು ಬಂದಿದ್ದಾರೆ.

ತಂದೆಯವರು 60 ವರ್ಷ ಗಳಿಂದ ನಡೆಸಿಕೊಂಡು ಬಂದ ಈ ಬಯಲಾಟದ ಕಲೆಯನ್ನು ಈಗ ಅದ್ದೂರಿಯಾಗಿ ಮುಂದು ವರೆಸಿ ಬೆಳೆಸುತ್ತಿದ್ದಾರೆ. ಬಯ ಲಾಟಕ್ಕೆ ಬೇಕಾಗುವ ಎಲ್ಲ ಅನುಕೂಲತೆಗಳನ್ನು ಮಾಡಿ ಎಲ್ಲರಿಗೂ ಬಣ್ಣ ಬಳಿಯುವ (ಮೇಕಪ್) ಮತ್ತು ತರಬೇತಿ ನೀಡುವ ಇವರ ಕಲಿಕೆ ಸೇವೆ ಅನನ್ಯ. ಅಲ್ಲದೆ ಬಯಲಾಟದಲ್ಲಿ ಸಾರಥಿ ಪಾತ್ರದಿಂದ ಜನ ಮನದ ಸೆಳೆದಿದ್ದಾರೆ. ಮಹಾತ್ಮ ಪೀಠ ಅಲ್ಲೋಳ್ಳಿ ಶ್ರೀ ಮಠಾಧೀಶ್ವರರಿಂದ ಸನ್ಮಾನ, ಬಿರುದುಗಳು ಬಂದಿವೆ.

ಆಕಾಶವಾಣಿ ಮತ್ತು ದೂರದರ್ಶನ ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಪ್ರಮುಖ ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿ ದ್ದಾರೆ. ಸೇಡಂ, ಚಿತ್ತಾಪುರ, ಯಾದಗಿರಿ ಮತ್ತು ಚಿಂಚೋಳಿ ತಾಲ್ಲೂಕಿನಲ್ಲಿ ಬಯಲಾಟ, ನಾಟಕಗಳ ನಿರ್ದೇಶನ ನೀಡಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬಹಳ ಶ್ರಮ ಪಡುತ್ತಿದ್ದಾರೆ.

(ಜಿಕೆ)

ಪಕ್ಷಿ ಗೂಡುಗಳು: ವಸತಿ ನಿರ್ಮಾಣ ಮನುಷ್ಯನಿಗೆ ಕಲಿಕೆ ಯಿಂದ ಬಂದರೆ ಹಕ್ಕಿಗಳಿಗೆ ಪ್ರಕೃತಿ ಸಹಜ ದತ್ತವಾಗಿರುತ್ತದೆ. ಗಂಡು ಹೆಣ್ಣುಗಳ ಆಕರ್ಷಣೆ, ಸಂತಾನದ ಪಾಲನೆ ಪೋಷಣೆ ಯಂತಹ ಪ್ರಕೃತಿದತ್ತ ಕ್ರಿಯೆಗಳು ಮನುಷ್ಯರಂತೆಯೇ ಪಕ್ಷಿಗಳಲ್ಲಿ ರುತ್ತವೆ. ಪಕ್ಷಿಗಳು ಉತ್ಸಾಹದಿಂದ ಗೂಡು ಕಟ್ಟುತ್ತವೆ. ಸುಂದರ ವಾದ ಅಷ್ಟೇ ಕೌಶಲ್ಯತೆಯಿಂದ ಅವುಗಳನ್ನೂ ಹೆಣ್ಣೆದಿರುತ್ತದೆ. ಗೀಜುಗಕ್ಕೆ ಕೈಯಿರುವುದಿಲ್ಲ. ಹುಲ್ಲು ತರುವಷ್ಟು ಶಕ್ತಿಯೂ ಅದಕ್ಕೆ ಇರುವುದಿಲ್ಲ. ಆದರೂ ಸಹ ಅದು ಸುಂದರವಾದ ಗೂಡನ್ನೂ ಕಟ್ಟುತ್ತದೆ. ಹಕ್ಕಿಗಳು ಯಾವಾಗಲೂ ಎತ್ತರದ ಮರಗಳು, ಮರದ ಎಲೆಗಳ ತುತ್ತ ತುದಿಗಳಲ್ಲಿ ಗೂಡುಗಳನ್ನು ಕಟ್ಟುತ್ತವೆ. ಅವು ಗಳನ್ನು ನೋಡುವುದೇ ಚೆನ್ನ. ಯಾಕೆಂದರೆ ತೂಗುವ ತೊಟ್ಟಿಲಿ ನಂತೆ ಗಾಳಿಗೆ ತೂಗಾಡುತ್ತಿರುತ್ತವೆ. ಪಕ್ಷಿಗಳು ಗೂಡುಗಳನ್ನು



ಪಕ್ಷಿ ಗೂಡುಗಳು

ಕಟ್ಟುವಾಗ ಸಾಕಷ್ಟು ಬೀಗಿಯಾಗಿ, ಕಳಚಿ ಬೀಳದಂತೆ ಕಟ್ಟಿರುತ್ತವೆ. ಪಕ್ಷಿಗಳು ಗೂಡು ಕಟ್ಟಲು ಪ್ರಶಸ್ತವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಅವುಗಳಿಗೆ ಪ್ರಶಸ್ತವಾದ ಎತ್ತರದ ಮರಗಳು ಸಿಕ್ಕದಿದ್ದಾಗ ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟುತ್ತವೆ. ಕೆಲವೊಂದು ಪಕ್ಷಿಗಳು ಅಂದರೆ 'ಗೀಜುಗ' ಮತ್ತು ಅದೇ ಜಾತಿಯ ಪಕ್ಷಿಗಳು ಬಾವಿಯ ದಂಡೆಯ ಮೇಲಿರುವ ಮರ, ಗಿಡದ ಕೊಂಬೆಯಲ್ಲಿ, ನದಿ ಕೆರೆಗಳ ಕಮರಿಗಳ ಕಡೆ ಬಾಗಿರುವ ಕೊಂಬೆಯ ತುಟ್ಟ ತುದಿಗೆ ಗೂಡನ್ನು ಕಟ್ಟುತ್ತವೆ. ಇದಕ್ಕೆ ಕಾರಣ ಬೇರೆ ಪ್ರಾಣಿಗಳ ಭಯ ಮತ್ತು ತನ್ನ ಮೊಟ್ಟೆ, ಮರಿಗಳ ರಕ್ಷಣೆಗೋಸ್ಕರ ಆಳವಾದ ಪ್ರಪಾತವಿರುವ ಜಾಗಗಳಲ್ಲಿ ಗೂಡುಗಳನ್ನು ಕಟ್ಟಿರುವುದನ್ನು ನಾವೂ ನಮ್ಮ ಹಳ್ಳಿಗಳ ಕಡೆ ಕಂಡಿದ್ದೇವೆ.

ಹಕ್ಕಿಗಳು ತಮ್ಮ ಕೊಕ್ಕನ್ನೆ ಉಪಯೋಗಿಸಿ ಸೂಕ್ಷ್ಮವಾಗಿ ಗೂಡು ಹೆಣೆದಿರುವುದನ್ನು ಕಂಡಾಗ ಸಂತೋಷವಾಗುತ್ತದೆ. ಆದರೆ ಅಂತಹ ಸೊಗಸಾದ ತನ್ನ ಆಶ್ರಯವನ್ನು ಅಥವಾ ಗೂಡನ್ನು ಕಟ್ಟಾಬೇಕಾದರೆ ಸಾಕಷ್ಟು ಶ್ರಮವಹಿಸಿ, ಮತ್ತೆ ಮತ್ತೆ ಪ್ರಯತ್ನಿಸುತ್ತವೆ. ಪಕ್ಷಿಗಳು ತಾವೂ ಸೀಳಿ ತಂದ ನಾರನ್ನು ಕೊಕ್ಕಿನಿಂದಲೇ ತೂರಿಸಿ ಮತ್ತೆ ಕೊಕ್ಕಿನಿಂದಲೇ ಹೊರಗೆಳೆದುಕೊಂಡು ಬೀಗಿ ಮಾಡಿ, ಮತ್ತೊಮ್ಮೆ ಹೊಸದಾಗಿ ನಾರು ತಂದು ಸರಿಪಡಿಸುವಾಗ ಒಂದು ಸುತ್ತು ಹೆಣೆಯುವುದರೊಳಗೆ ಅವುಗಳು ಕೆಳಗೆ ಬಿದ್ದರೆ, ಅದನ್ನು ಲೆಕ್ಕಿಸದೇ ಕೂಡಲೇ ಬೇರೆ ನಾರನ್ನು ಹತ್ತಿರದ ಗದ್ದೆಗಳಿಂದ ತಂದು ತಮ್ಮ ಗೂಡನ್ನು ತಾವೇ ನಿರ್ಮಿಸಿಕೊಂಡು ನೋಡುಗರ ಕಣ್ಣಿಗೆ ಸೊಗಾಸಾಗಿ ಕಂಡಿವೆ.


(ಎಂಎನ್)

ಪರಶುರಾಮ ಪಿ: 1983 ಜೂನ್ 01ರಂದು ಜನಿಸಿದರು. ಇವರು ಮೂಲತಃ ಬಿಜಾಪೂರ ಜಿಲ್ಲೆಯ ಶಿರಕನಹಳ್ಳಿ ಗ್ರಾಮದವರು. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲೇ ಮುಗಿಸಿದರು. ಇವರು ತಮ್ಮ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಗುಲಬರ್ಗಾ ನಗರದಲ್ಲಿರುವ ಆದರ್ಶ ನಗರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮುಗಿಸಿದರು. ಚಿತ್ರಕಲೆಯಲ್ಲಿ ಅಧಮ್ಯವಾದ ಆಸಕ್ತಿ ಹೊಂದಿದ ಇವರು ಚಿತ್ರಕಲೆಯಲ್ಲಿಯೇ ಕುವೆಂಪು ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಕ್ರಿಯಾಶೀಲ ಮನೋಭಾವದ ಯುವ ಚಿತ್ರಕಲಾವಿದರಾಗಿ ಗಮನ ಸೆಳೆಯುತ್ತಿದ್ದಾರೆ. ದೃಶ್ಯಕಲೆಯ ಬರವಣಿಗೆ ಮತ್ತು ಚಿತ್ರಕಲಾಕೃತಿಗಳ ರಚನೆ ಮೂಲಕ ತಮ್ಮಲ್ಲಿನ ಭಾವನೆಗಳನ್ನು ಅಭಿವ್ಯಕ್ತ ಪಡಿಸುತ್ತಿರುವ ಭರವಸೆದಾಯಕ ಯುವ ಪ್ರತಿಭೆ.



ಚಿತ್ರಕಲೆ, ಸಾಹಿತ್ಯ ಮತ್ತು ರಂಗಭೂಮಿಗಳ ಅಂತರ ಸಂಬಂಧಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಇವರ ನೋಟ ವಿಶಿಷ್ಟವಾದದ್ದು, ಏಕೆಂದರೆ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಗೊಂಡ 'ದೃಶ್ಯಮಂಥನ' ಪುಸ್ತಕದಲ್ಲಿನ ಇವರ ಕಲಾ ಲೇಖನಗಳು ದೃಶ್ಯ ಕಲಾಕ್ಷೇತ್ರಕ್ಕೆ ವಿಶಿಷ್ಟ ಆಯಾಮಗಳ ಮಹತ್ವದ ಕೊಡುಗೆ ನೀಡಿವೆ. ಇವರು ಚಿತ್ರ–ಶಿಲ್ಪಗಳ ಕುರಿತು ಬರೆದ 50ಕ್ಕೂ ಹೆಚ್ಚಿನ ಲೇಖನಗಳು ನಾಡಿನ ವಿವಿಧ ದಿನಪತ್ರಿಕೆ ಮತ್ತು ವಾರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹೀಗೆ ಚಿತ್ರಕಲಾವಿದ, ರಂಗವಿನ್ಯಾಸಗಾರ, ರಂಗಭಿತ್ತಿಚಿತ್ರಗಳ ಸಂಗ್ರಾಹಕ ಮತ್ತು ಉತ್ತಮ ಕಲಾಸಂಘಟಕರಾಗಿರುವ ಇವರು ಡೆಕ್ಕನ್ ಆರ್ಟ್ ಸೊಸೈಟಿಯ ಸಂಸ್ಥಾಪಕ ಕಾರ್ಯದರ್ಶಿಯಾಗಿ ದೃಶ್ಯಕಲೆಗೆ ಸಂಬಂಧಿಸಿದ ಅನೇಕ ಕಲಾಪ್ರದರ್ಶನ ಶಿಬಿರಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ಇವರು ಚಿತ್ರಕಲೆಯೊಂದಿಗೆ ಶಿಲ್ಪಕಲೆ, ಇನ್‌ಸ್ಟಾಲೇಷನ್ ಆರ್ಟ್ ಮತ್ತು ರಂಗವಿನ್ಯಾಸದಲ್ಲಿಯೂ ವಿಶೇಷವಾದ ಪರಿಣಿತಿಯನ್ನು ಸಾಧಿಸಿದ್ದಾರೆ.

ಆಲಮಟ್ಟಿಯ ಶಿಲ್ಪವನ, ಕೆಸರಟಗಿಯ ಉದ್ಯಾನವನ, ಗುಲಬರ್ಗಾ ಕಾರ್ಪೊರೇಷನ್ ಗಾರ್ಡನ್ ಮತ್ತು ಜೆ.ಡಿ.ಪಿ. ಇಕೋ ಗಾರ್ಡನ್‌ಗಳಲ್ಲಿ ಇವರು ನಿರ್ಮಿಸಿದ ಸಿಮೆಂಟ್ ಮತ್ತು ಫೈಬರ್ ಮಾಧ್ಯಮದ ಶಿಲ್ಪ ಮತ್ತು ಭಿತ್ತಿಚಿತ್ರಗಳನ್ನು ನೋಡಬಹುದಾಗಿದೆ. ಇವರು ರಚಿಸಿದ ಚಿತ್ರ–ಶಿಲ್ಪ ಮತ್ತು ಛಾಯಾಚಿತ್ರಗಳು ಸೈನ್ಸ್ ಸೆಂಟರ್ ಗುಲಬರ್ಗಾ, ಕಿನ್ನರಮೇಳ ತುಮರಿ, ಲಲಿತಕಲಾ ಮಹಾವಿದ್ಯಾಲಯ ದಾವಣಗೆರೆ, ರಂಗಾಯಣ ಮೈಸೂರು, ಶಿಲ್ಪವನ ಆಲಮಟ್ಟಿ, ಬೆಂಗಳೂರು ಆರ್ಟ್ ಫೌಂಡೇಷನ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ರೈಲ್ವೆ ನಿಲ್ದಾಣಗಳಲ್ಲದೆ ಕ್ಯಾಲಿಪೋರ್ನಿಯಾ ಮತ್ತು ಫ್ರಾನ್ಸ್‌ಗಳಲ್ಲಿ ಸಹ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

2005ರಲ್ಲಿ ಕುವೆಂಪು ವಿಶ್ವವಿದ್ಯಾಲಯ ಯುವಜನೋತ್ಸವ ಪ್ರಶಸ್ತಿ, 2004 ಮತ್ತು 2005ರಲ್ಲಿ ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದಲ್ಲಿ ನಡೆದ ಚಿತ್ರೋತ್ಸವದಲ್ಲಿ ಇವರ ಇನ್‌ಸ್ಟಾಲೇಷನ್ ಕಲಾಕೃತಿಗೆ ಪ್ರಥಮ ಪ್ರಶಸ್ತಿ, ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ, 2009ರಲ್ಲಿ ಬಿಜಾಪೂರದ ಎಸ್.ಎಸ್. ಫೈನ್‌ಆರ್ಟ್ ಕಾಲೇಜ್ ಆಯೋಜಿಸಿದ ಎರಡನೆಯ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಮೆರಿಟ್ ಪ್ರಶಸ್ತಿ, 2009ರಲ್ಲಿ ಪಿಎಚ್.ಡಿ. ಅಧ್ಯಯನಕ್ಕಾಗಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗದಿಂದ ರಾಜೀವಗಾಂಧಿ ನ್ಯಾಷನಲ್ ಫೆಲೋಶಿಪ್ ಪಡೆದಿರುವ ಇವರು ಇಲ್ಲಿವರೆಗೆ ಏಳು ಏಕವ್ಯಕ್ತಿ ಕಲಾಪ್ರದರ್ಶನಗಳು ಮತ್ತು 15ಕ್ಕೂ ಹೆಚ್ಚು ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ದೇಶದ ವಿವಿಧ ಭಾಗಗಳಲ್ಲಿ ಏರ್ಪಡಿಸಿದ್ದಾರೆ.

(ಪಿಕೆಕೆ)

ಪಲ್ಲಕ್ಕಿ–ಉತ್ಸವ: ಒಂದು ಆಚರಣೆ. ಪುರುಷ ಮತ್ತು ಸ್ತ್ರೀ ದೈವಗಳನ್ನು ಒಳಗೊಂಡಂತೆ ಅನೇಕ ದೈವಗಳಲ್ಲಿ ಕಂಡುಬರುವ ಪಲ್ಲಕ್ಕಿಯನ್ನು ನಿರ್ದಿಷ್ಟ ಮನೆತನದವರು ಕೆಲವೊಂದು ವಿಧಿ ವಿಧಾನಗಳ ಮೂಲಕ ಕಟ್ಟಿಗೆಯಿಂದ ತಯಾರಿಸುತ್ತಾರೆ. ಪಲ್ಲಕ್ಕಿಯು ತೊಟ್ಟಿಲು ಆಕಾರವನ್ನು ಹೊಂದಿದ್ದು, ನಾಲ್ಕು ಕಡೆ ಸಣ್ಣ ಕಾಲುಗಳು ಕಾಮನಬಿಲ್ಲಿನ ಆಕಾರದ ಕಟ್ಟಿಗೆಯ ಕಮಾನು ಮತ್ತು ಉದ್ದನೆಯ ಹೆಗಲು ಗಂಬ ಹೊಂದಿರುತ್ತದೆ. ಆಯಾ ದೇವರ ಐತಿಹಾಸಿಕ ಹಿನ್ನೆಲೆಯ ಆಧಾರದ ಮೇಲೆ ಪಲ್ಲಕ್ಕಿಯ ತೊಟ್ಟಿಲ ಮೇಲೆ ಕೆತ್ತನೆಯ ಕೆಲಸವನ್ನು ಮಾಡಿರುತ್ತಾರೆ. ಈ ಕಲೆಯಲ್ಲಿ ಹೈದ್ರಾಬಾದ ಕರ್ನಾಟಕ ಪ್ರಸಿದ್ಧವಾಗಿದೆ. ಪಲ್ಲಕ್ಕಿಯ ಮೇಲೆ ಬಣ್ಣ ಬಣ್ಣದ ಗೊಂಬೆಗಳಿಂದ ಅಲಂಕೃತವಾದ ಕುತನಿ ಬಟ್ಟೆಯನ್ನು ಹೊದಿಸಿರುತ್ತಾರೆ. ಪ್ರತಿಯೊಂದು ಹಬ್ಬ ಉತ್ಸವ ಗಳಲ್ಲಿ ದೇವರು ಗುಡಿಯಿಂದ ಹೊರ ಹೋಗುವ ಸಮಯದಲ್ಲಿ ಈ ಪಲ್ಲಕ್ಕಿಯನ್ನು ಉಪಯೋಗಿಸುತ್ತಾರೆ. ಈ ಸಂದರ್ಭದಲ್ಲಿ ಅಗಸರು ಮಡಿ ಉಡಿಯ ಬಟ್ಟೆಯನ್ನು ದಾರಿಗೆ ಹಾಸುತ್ತಾರೆ. ಪಲ್ಲಕ್ಕಿ ಹೊತ್ತವರು ಇದರ ಮೇಲೆ ನಡೆದುಕೊಂಡು ಹೋಗುತ್ತಾರೆ. ಡೊಳ್ಳು, ಭಜನೆ ಶಹನಾಯಿ ಮೇಳದವರು ಇದರಲ್ಲಿ ಭಾಗವಹಿಸುತ್ತಾರೆ.

ಹೈದ್ರಾಬಾದ ಕರ್ನಾಟಕದಲ್ಲಿ ಹಲವಾರು ಕಡೆಗಳಲ್ಲಿ ಪಲ್ಲಕ್ಕಿ ಉತ್ಸವವು ವಿಶೇಷವಾಗಿ ಕಂಡುತ್ತದೆ. ಅನೇಕ ಗ್ರಾಮಗಳಲ್ಲಿ ಕಾರ್ತಿಕೋತ್ಸವದಲ್ಲಿ ನಡೆಯುವ ಮುಳ್ಳಿನ ಪಲ್ಲಕ್ಕಿ ಉತ್ಸವ ಗ್ರಾಮ ಸಂಸ್ಕೃತಿಯ ವಿಶೇಷತೆಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಅಡವಿ ಯಲ್ಲಿ ಸಿಗುವ ಕಾರಿ ಮುಳ್ಳಿನ್ನು ತಂದು ಅದರಿಂದ ಪಲ್ಲಕ್ಕಿಯನ್ನು ತಯಾರಿಸಿ, ಗುಡಿಯ ಪೂಜಾರಿಯನ್ನು ಕೂರಿಸಿ ಊರಿನ ತುಂಬಾ ಮೆರವಣಿಗೆ ಮಾಡಲಾಗುತ್ತದೆ.

ಜಾತ್ರೆಯಂತಹ ಸಂದರ್ಭದಲ್ಲಿ ದೇವರ ಉತ್ಸವಮೂರ್ತಿ ಯನ್ನು ಈ ಪಲ್ಲಕ್ಕಿಯಲ್ಲಿ ಕೂಡಿಸುತ್ತಾರೆ. ಉತ್ಸವಮೂರ್ತಿ ಯನ್ನು ದೇವಸ್ಥಾನದಲ್ಲಿ ಪೂಜಿಸಿ ಈ ಪಲ್ಲಕ್ಕಿಗಳಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಗೆ ಕರೆದೊಯ್ಯುತ್ತಾರೆ. ಇಂತಹ ಸಂದರ್ಭದಲ್ಲಿ ಡೊಳ್ಳುಮೇಳ, ಭಜನಾಮೇಳ, ನಂದಿಕೋಲು, ಹುಲಿವೇಷ ಮುಂತಾದ ಸಾಂಸ್ಕೃತಿಕ ಚಟುವಟಿಕೆ ಗಳು ನಡೆಯುತ್ತವೆ.

ದೈವದ ಪ್ರತಿಯೊಂದು ಸಂದರ್ಭದಲ್ಲಿ ಪಲ್ಲಕ್ಕಿ ಪ್ರಮುಖ ವಾಗಿರುತ್ತದೆ. ತೇರು ಸಾಗುವುದಕ್ಕಿಂತ ಮುಂಚೆ ಇತರ ದೇವರ ದರ್ಶನಕ್ಕೆ ಹೋಗಲು, ಪಾದಗಟ್ಟೆಗೆ ಹೋಗಲು, ಕೊಂಡ ಹಾಯುವ ಸಂದರ್ಭ, ಊರ ಮೆರವಣಿಗೆ ಸಂದರ್ಭ ಹೀಗೆ ಅನೇಕ ಸಂದರ್ಭಗಳಲ್ಲಿ ಪಲ್ಲಕ್ಕಿ ಪ್ರಮುಖವಾಗುತ್ತದೆ. ಕೆಲವೊಂದು ಸಾರಿ ಮಠದ ಸ್ವಾಮಿಗಳು ಸಹ ಪಲ್ಲಕ್ಕಿ ಉತ್ಸವದಲ್ಲಿ



ಪಲ್ಲಕ್ಕಿ–ಉತ್ಸವ

ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಮಾಡಿಕೊಳ್ಳುತ್ತಾರೆ. ಒಂದು ರೀತಿಯಲ್ಲಿ ಪಲ್ಲಕ್ಕಿಯು ಆಯಾ ದೈವದ ವಾಹನವಾಗಿ ಕಂಡು ಬರುತ್ತದೆ. (ಆರ್‌ಎಪಿ)

ಪವಿತ್ರ ಬಾವಿ: ಸುರಪುರ ಪಟ್ಟಣದ ಒಂದು ಬಾವಿ. ಒಂದು ಕಾಲದಲ್ಲಿ ಹಲವು ರೋಗಗಳಿಗೆ ಔಷಧಿಯಾಗಿದ್ದ ಶುದ್ಧ ಸಿಹಿ ನೀರನ್ನು ಪೂರೈಸುತ್ತಿತ್ತು. ಇಡೀ ಪಟ್ಟಣದ ನಲವತ್ತು ಸಾವಿರ ಜನಸಂಖ್ಯೆಗೆ ಕುಡಿಯುವ ನೀರು ಪೂರೈಸುತ್ತಿತ್ತು. ಆನಾರೋಗ್ಯ ವನ್ನು ಕಾಪಾಡುತ್ತಿತ್ತು. ದೊಡ್ಡ ಬಾವಿ ಎಂದೇ ಕರೆಯುತ್ತಿದ್ದ ಈ ಪವಿತ್ರ ಬಾವಿಯಿಂದ ನೀರು ಬಳಸುತ್ತಿರುವಾಗ, ಸುರಪುರ ಪಟ್ಟಣಕ್ಕೆಂದೂ ನೀರಿನ ಬರ ಬಂದಿರಲಿಲ್ಲ. ಇಂದು ಸುರಪುರ ಪಟ್ಟಣಕ್ಕೆ ಕೃಷ್ಣಾ ನದಿ ನೀರು ಪೂರೈಸಲಾಗುತ್ತಿದೆ. ಆದರೂ ಕುಡಿಯುವ ನೀರಿನ ದಾಹ ತಣಿಸಲು ಸಾಧ್ಯವಾಗಿಲ್ಲ, ಹಿಂದೆ ಸುರಪುರ ರಾಜಮನೆತನದಲ್ಲಿ ನಿಷ್ಠಾವಂತ ಮಂತ್ರಿಗಳಾಗಿದ್ದ ನಿಷ್ಠಿ ವೀರಪ್ಪನವರು ಇದನ್ನು ನಿರ್ಮಿಸಿದವರು. ಪಟ್ಟಣದ ಮಧ್ಯಭಾಗ ದಲ್ಲಿ ಈ ದೊಡ್ಡದಾದ ಬಾವಿ, ಅಚ್ಚುಕಟ್ಟಾಗಿ ದೊಡ್ಡ-ದೊಡ್ಡ ಕಲ್ಲಿನಿಂದ ನೂರಾರು ಮೆಟ್ಟಿಲುಗಳನ್ನು ನಿರ್ಮಿಸಿ ಸುವ್ಯವಸ್ಥಿತ ವಾಗಿ ಕಟ್ಟಿಸಿದ ಕೀರ್ತಿ ನಿಷ್ಠಿ ವೀರಪ್ಪನವರಿಗೆ ಸಲ್ಲುತ್ತದೆ. ಹೀಗಾಗಿ ಈ ಬಾವಿಗೆ 'ದೊಡ್ಡ ಬಾವಿ' ಎಂದೇ ನಾಮಕರಣ ಮಾಡಿ ದ್ದುಂಟು. ಈ ದೊಡ್ಡಬಾವಿ ಕಟ್ಟಿಸಿ ಪರೋಪಕಾರ ಕಾರ್ಯಗಳಿಗೆ ತಮ್ಮ ಹಣವನ್ನು ಮೀಸಲಿಟ್ಟು ಜೀವನ ಸಾರ್ಥಕ ಪಡಿಸಿಕೊಂಡ ವರು. ಬಾವಿಯ ನೀರು ಶುದ್ಧ ಮತ್ತು ಆರೋಗ್ಯಕರವಾಗಿತ್ತು. ಆದ್ದರಿಂದ ಇದು ಪವಿತ್ರ ಬಾವಿಯಾಗಿತ್ತು.

ದೊಡ್ಡಬಾವಿ ಎಂಬ ಅನ್ವರ್ಥಕ ನಾಮ ಹೊಂದಿರುವ ಈ ಬಾವಿಯ ಹೆಸರೇ ಸೂಚಿಸುವಂತೆ ಅತ್ಯಂತ ವಿಶಾಲವಾದ ಸರಿ ಸುಮಾರು 200ರಿಂದ 300 ಅಡಿ ಸುತ್ತಳತೆ ಹೊಂದಿರುವ ಈ ಬಾವಿಯು ಚೌಕಾಕಾರವಾಗಿದ್ದು, ಬಾವಿಗೆ ನಾಲ್ಕೂ ದಿಕ್ಕಿಗೆ ಒಂದೊಂದು ಹಾಗೂ ನೂರಾರು ಮೆಟ್ಟಿಲುಗಳಿರುವುದರಿಂದ ಈ ಬಾವಿ ನೋಡುಗರಿಗೆ ಅತ್ಯಂತ ಸುಂದರ ಹಾಗೂ ಕಲಾತ್ಮಕವಾಗಿ ಕಂಡುಬರುತ್ತದೆ.

ಹಿಂದೆ ಸುಮಾರು 40 ಸಾವಿರ ಜನಸಂಖ್ಯೆ ಹೊಂದಿರುವ ತಿಮ್ಮಾಪುರ-ರಂಗಂಪೇಟ ಪಟ್ಟಣದ ಸಮಸ್ತ ನಾಗರಿಕರಿಗೆ ನೀರು ಪೂರೈಸುವ ಈ ದೊಡ್ಡಬಾವಿ ಒಂದೇ ಕುಡಿಯುವ ನೀರಿನ ಆಸರೆಯಾಗಿತ್ತು. ಈ ಬಾವಿಯ ನೀರು ತುಂಬ ಸಿಹಿಯಾಗಿತ್ತು. ಜಾತಿ, ಮತ, ಭೇದ-ಭಾವ ಇಲ್ಲದೆಯೇ ಎಲ್ಲಾ ಜನಾಂಗದವರೂ ಬಾವಿಯ ನೀರು ತುಂಬಿಕೊಂಡು ಹೋಗುತ್ತಿದ್ದರು. ಈ ದೊಡ್ಡಬಾವಿಯ ನೀರು ಸತತ ಏಳು ದಿನಗಳವರೆಗೆ ನಿರಂತರವಾಗಿ ಕುಡಿದರೆ, ಕೆಲ ರೋಗಗಳು ವಾಸಿಯಾಗುತ್ತಿದ್ದುವು ಎಂದು ಹಿರಿಯರು ಹಾಗೂ ವಯೋವೃದ್ಧರು ಹೇಳುವುದುಂಟು. ಹೀಗಾಗಿ ಈ ದೊಡ್ಡ ಬಾವಿಯ ನೀರು ಕೆಲ ರೋಗಿಗಳಿಗೆ ದಿವ್ಯ ಔಷಧಿಯಾಗಿತ್ತು ಎಂಬುದು ತಿಳಿದುಬರುತ್ತದೆ.

ಬಾವಿಯ ನಾಲ್ಕೂ ದಿಕ್ಕುಗಳಿಗೆ ಸುಂದರವಾದ ಕಲಾತ್ಮಕತೆ ಯಿಂದ ನಾಲ್ಕು ದ್ವಾರಗಳನ್ನು ಸಂಪೂರ್ಣ ಕಲ್ಲಿನಿಂದ ನಿರ್ಮಿಸ ಲಾಗಿದೆ. ಈ ದೊಡ್ಡಬಾವಿಯ ಒಳಗಡೆ ಸುತ್ತಲೂ ಮನೆಗಳ ಆಕಾರದಂತೆ ಕಮಾನುಗಳಿದ್ದು, ಇವು ನೋಡುಗರಿಗೆ ಇಂದಿಗೂ ಸುಂದರವಾಗಿ ಕಾಣುತ್ತವೆ. ಈ ಕಮಾನುಗಳು ಬಾವಿಯಲ್ಲಿ ಕಟ್ಟಲು ಕಾರಣವೇನೆಂದರೆ, ಈ ದೊಡ್ಡಬಾವಿಯ ನೀರು ಹಿಂದೆ ಕೆಲ ರೋಗಗಳಿಗೆ ಔಷಧಿಯಾಗಿದ್ದರಿಂದ ಈ ಬಾವಿಯ ನೀರು ಕುಡಿಯಲು ಸುತ್ತಮುತ್ತಲಿನ, ದೂರ, ದೂರದ ಊರಿನಿಂದ ರೋಗಿಗಳು ಬರುತ್ತಿದ್ದರು. ಅವರುಗಳು ಈ ಕಮಾನುಗಳನ್ನು ಏಳು ದಿನಗಳವರೆಗೆ ವಸತಿಗಾಗಿ ಬಳಸಿಕೊಳ್ಳುತ್ತಿದ್ದರಂತೆ. ರೋಗಿ ಗಳು ಹಾಗೂ ಅವರೊಂದಿಗೆ ಬರುವ ಸಹಾಯಕರು ಒಂದು ವಾರ ಈ ಕಮಾನಿನಲ್ಲಿ ಉಳಿದುಕೊಂಡು, ಈ ಪವಿತ್ರ ದೊಡ್ಡ ಬಾವಿಯ ನೀರು ಕುಡಿದು ತಮ್ಮ ರೋಗ ವಾಸಿಮಾಡಿಕೊಂಡು ಹೋಗುತ್ತಿದ್ದರಂತೆ. ಹೀಗಾಗಿ ಈ ದೊಡ್ಡಬಾವಿಯ ಸಿಹಿ ನೀರು ರೋಗಿಗಳಿಗೆ ಔಷಧಿಯಾಗಿತ್ತೆಂದು ತಿಳಿದುಬರುತ್ತದೆ. ಈ ದೊಡ್ಡ ಬಾವಿಗೆ ಒಂದು ಐತಿಹಾಸಿಕ ಹಿನ್ನೆಲೆಯಿದೆ. ಬಾವಿಯ ನಿರ್ಮಾಣವೂ ಕಲಾತ್ಮಕವಾಗಿದೆ. (ಪಿಎಂಎ)

ಪಾ

ಪಾಂಡುರಂಗರಾವ ಪತ್ಕಿ: ಪ್ರಸಿದ್ಧ ಸಂಗೀತಗಾರರು. ಸಂಗೀತ ದಲ್ಲಿ ಅಪ್ರತಿಮ ಪಾಂಡಿತ್ಯ ಹೊಂದಿ 'ಏಕಲವ್ಯ' ಎಂಬ ಖ್ಯಾತಿಗೆ ಪಾತ್ರರಾದವರು. ವೃತ್ತಿಯಿಂದ ವೈದ್ಯರಾಗಿದ್ದರು. ವಿದ್ಯಾದಾನ ಮಾಡುವಲ್ಲಿ ಅಪ್ರತಿಮ ಗುರುಗಳೂ ಹೌದು. ಸಂಘಟನೆಯಲ್ಲೂ ಎತ್ತಿದ ಕೈ. ಶ್ರೀಮಂತ ಮನೆತನದಲ್ಲಿ ಜನಿಸಿದರು. ಆದರೆ, ಸುಖ-ಸಂತೋಷ ಶ್ರೀಮಂತಿಕೆಯಿಂದ ದೊರೆಯುವುದಿಲ್ಲ. ಬಾಹ್ಯ ಸುಖಕ್ಕಿಂತಲೂ ಆಂತರಿಕ ಸಂತೋಷ ಹಾಗೂ ಇತರರಿಗೂ ಹಂಚಿ ತಾವೂ ಆನಂದಿಸುವ ಸಂಗೀತ ಕ್ಷೇತ್ರವನ್ನು ಇವರು ಆಯ್ಕೆ ಮಾಡಿಕೊಂಡು, ಕಲೆ, ಸಾಹಿತ್ಯ, ಶಿಕ್ಷಣ, ಸಾಮಾಜಿಕ ಸೇವೆಯಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದ್ದರಿಂದಲೇ ಜನಮನದಲ್ಲಿ ಅಮರರಾಗಿ ಉಳಿದಿದ್ದಾರೆ.



ಸಂಗೀತ ಲೋಕದ ಗಂಧರ್ವ ಪಂ. ಸವಾಯಿ ಗಂಧರ್ವರನ್ನು ತಮ್ಮ ಮನದಲ್ಲೇ ಗುರುವಾಗಿ ಸ್ವೀಕರಿಸಿ, ಭಾತ್‌ಖಂಡೆಯವರು ಗ್ರಂಥಗಳನ್ನು ಅಭ್ಯಾಸ ಮಾಡಿ, ನೂರಾರು ರಾಗಗಳನ್ನು ಸಾವಿರಾರು ಚೀಜ್‌ಗಳನ್ನು ಸಂಗ್ರಹಿಸಿಕೊಂಡಿ ರುವ ಪಂಡಿತರು.

1895ರಲ್ಲಿ ಜನಿಸಿದರು. ರಾಮರಾವ ಪತ್ಕಿಯವರ ಮೂರು ಜನ ಮಕ್ಕಳಲ್ಲಿ ಕೊನೆಯವರು.

ಬಾಲ್ಯದಿಂದಲೇ ಸಂಗೀತದ ಬಗ್ಗೆ ಅಪಾರ ಒಲವು ಬೆಳಸಿ ಕೊಂಡವರು. ಇವರ ಅಣ್ಣಂದಿರಾದ ಅಣ್ಣಾರಾವ ಪ್ರಬುದ್ಧ ತಬಲಾ ವಾದಕರು ಹಾಗೂ ಶೇಷಗಿರಿರಾವ ಪತ್ಕಿ ಅವರು ಹಾರ್ಮೋನಿಯಂ ವಾದಕರಾಗಿದ್ದರು. ಇವರಿಗೆ, ಸ್ವರ ಮತ್ತು ಲಯ ಇವರ ಅಣ್ಣಂದಿರಾದರೆ, ಅದಕ್ಕೆ ಗಾಯನ ಬೇಕೆಂಬ ಕಾರಣಕ್ಕಾಗಿ ಭಗವಂತನು ಇವರಿಗೆ ಉಡುಗೊರೆಯಾಗಿ ಗಾಯನಕ್ಕೆ ಬೇಕಾಗುವ ಆವಾಜ್ ಮತ್ತು ಲಯಗಳೆರಡನ್ನೂ ನೀಡಿರುವ ಕಾರಣದಿಂದ ಪತ್ಕಿಯವರಿಗೆ ಸಹಜವಾಗಿಯೇ ಗಾಯನ ಒಲಿದು ಬಂದಿತು.

ಇವರ ಕಲಾಪೋಷಣೆಯ, ಕಲಾಸಂಘಟನೆಯ ಹಾಗೂ ಅವರ ಸ್ವಂತ ಕಲೆಯನ್ನು ಕಂಡು ಹಳೆ ಮೈಸೂರು ಸಂಸ್ಥಾದಲ್ಲಿ ಅನೇಕ ವರ್ಷಗಳ ಕಾಲ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಸದಸ್ಯರೆಂದು ನೇಮಕ ಮಾಡಲಾಗಿತ್ತು. ಕಲಬುರ್ಗಿಯ ಕಲಾ ಮಂಡಳದ ಸಂಸ್ಥಾಪಕರು, ಪೋಷಕರು ಮತ್ತು ಅಧ್ಯಕ್ಷರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಕಲಬುರ್ಗಿಯ ನೂತನ ವಿದ್ಯಾಲಯ ಸಂಸ್ಥೆ ಪದವಿ ಮಹಾವಿದ್ಯಾಲಯದ ವಾಣಿಜ್ಯ ವಿಭಾಗಕ್ಕೆ ಡಾ. ಪಾಂಡುರಂಗರಾವ ಪತ್ಕಿ ವಾಣಿಜ್ಯ ಮಹಾವಿದ್ಯಾಲಯವೆಂದು ಹೆಸರಿಟ್ಟು ಗೌರವಿಸಲಾಗಿದೆ. ಡಾ. ಪತ್ಕಿಯವರು ಹೈದ್ರಾಬಾದ್ ಹಾಗೂ ಧಾರವಾಡ ಆಕಾಶವಾಣಿ ಕೇಂದ್ರಗಳಲ್ಲಿ ಅನೇಕ ಶಾಸ್ತ್ರೀಯ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರ ಈ ಕಾರ್ಯಕ್ರಮಗಳಿಗೆ ತಬಲಾ ಸಾಮ್ರಾಟ್ ಶೇಖ್ ದಾವೂದ್ ಖಾನ್ ಸಾಹೇಬರೇ ಇವರಿಗೆ ತಬಲಾ ಸಾಥ್ ನೀಡುತ್ತಿದ್ದರು. ಇವರು ತಮ್ಮ ಜೀವನ ಪರ್ಯಂತ ಅನೇಕ ಸಭೆ ಸಮಾರಂಭಗಳಲ್ಲಿ ಇನ್ನೂ ಅನೇಕ ಸನ್ಮಾನ, ಅಭಿನಂದನೆ ಹಾಗೂ ಸತ್ಕಾರಗಳನ್ನು ಪಡೆದಿದ್ದಾರೆ. (ಎಂಈಬಿ)

ಪಾಟೀಲ ಎಸ್.ವಿ.: ರಂಗಭೂಮಿ ಕಲಾವಿದ. ಶರಣಗೌಡ ವೀರನಗೌಡ ಪಾಟೀಲ್ ಎನ್ನುವದು ಇವರ ಪೂರ್ಣ ಹೆಸರು. ವೃತ್ತಿಯಿಂದ ವ್ಯವಸಾಯ ಇವರ ಮೂಲ ವೃತ್ತಿಯಾಗಿದ್ದು, ಪ್ರವೃತ್ತಿಯಿಂದ ರಂಗಸೇವೆ ಮಾಡುವದು. ಗಂಗಾವತಿ ತಾಲ್ಲೂಕಿನ ಗುಂಡೂರು ಗ್ರಾಮದವರು. ಗ್ರಾಮೀಣ ಸೊಗಡಿನ ಅಪ್ಪಟ ಪ್ರತಿಭೆ ಕಲೆ ಎಲ್ಲರನ್ನೂ ಕೈಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎನ್ನುವ ಮಾತೊಂದಿದೆ. ಈ ಮಾತು ಇವರ ಪಾಲಿಗೆ ಅಕ್ಷರಶಃ ಸತ್ಯ. ಬಾಲ್ಯದಿಂದಲೂ ಕಲೆ, ನಾಟಕದ, ಬಗ್ಗೆ ವಿಶೇಷ ಒಲವು ಮೂಡಿಸಿಕೊಂಡ ಇವರು ಗ್ರಾಮೀಣ ಪ್ರದೇಶದವರು. ಗ್ರಾಮೀಣ ಸೊಗಡನ್ನು ತಮ್ಮ ನಾಟಕಗಳ ಮೂಲಕ ರಂಗಭೂಮಿಯ ಮೇಲೆ ಪ್ರದರ್ಶಿಸುತ್ತ ಬಂದವರು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಗುಂಡೂರು ಗ್ರಾಮದಲ್ಲಿ ಜನಿಸಿದರು. ಇವರು ಪದವಿಯವರೆಗೆ ವ್ಯಾಸಂಗವನ್ನು ಗಂಗಾವತಿಯಲ್ಲಿ ಮುಗಿಸಿ, ಅನಂತರ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು.



ಒಂಬತ್ತು ವರ್ಷದವರಿದ್ದಾಗಲೇ ಯಕ್ಷಪ್ರಶ್ನೆ ನಾಟಕದಲ್ಲಿ ಅಭಿನಯಿಸುವ ಮೂಲಕ ರಂಗ ಪ್ರವೇಶ ಮಾಡಿದರು 11ನೆಯ ವರ್ಷದವರಿದ್ದಾಗಲೇ 'ಬಾಳನೌಕೆ' ಎನ್ನುವ ನಾಟಕವನ್ನು ತಾವೇ ಸ್ವತಃ ರಚನೆ ಮಾಡಿ ರಂಗ ಮಂಚಕ್ಕೆ ತಂದರು. ನಟನಾಗಿ ಅಭಿನಯಿಸುವ ಪಾತ್ರಗಳನ್ನು ನೋಡುತ್ತಿದ್ದರೆ, ಪಾತ್ರಕ್ಕೆ ಜೀವ ತುಂಬುವ ಅವರ ಶೈಲಿ, ಅದ್ಭುತ ಕಂಠ ಎಲ್ಲವೂ ನೋಡುಗರನ್ನು ಮೈನವಿರೇಳಿಸುವಂತೆ ಮಾಡುತ್ತವೆ.

ರಂಗಸೇವೆಯಲ್ಲಿ ಇವರ ಕೊಡುಗೆ ಅಪಾರ, ನಟ, ನಿರ್ದೇಶಕ, ನಾಟಕಕಾರ, ಸಂಚಾಲಕರಾಗಿ ರಂಗಭೂಮಿಯ ವಿವಿಧ ಮಗ್ಗಲುಗಳಲ್ಲಿ ತಮ್ಮ ಪ್ರತಿಭೆಯನ್ನು ಹೊರಗೆಡವಿದ್ದಾರೆ.

ಸಜ್ಜನಶೀಲ ಕಲಾಬಳಗದ ಸಂಚಾಲಕರಾಗಿರುವ ಇವರು, ಪ್ರೀತಿಯೇ ದೇವರು, ಅಧಿಕಾರಕ್ಕೆ ಸವಾಲ್, ತೂಗುತಾದ ನೋಡಾ ಜೋಕಾಲಿ, ಸತ್ಯ ಸತ್ತಿಲ್ಲ ಹೀಗೆ ಅನೇಕ ನಾಟಕಗಳನ್ನು ಸ್ವಂತ ತಂಡದೊಂದಿಗೆ ಪ್ರಯೋಗಗಳನ್ನು ಮಾಡಿದ್ದಾರೆ. ಇದುವರೆಗೂ ಇವರು 132 ಏಕಾಂತ ನಾಟಕಗಳು, 24 ದೊಡ್ಡ ನಾಟಕಗಳು, 30 ಜೀವನ ಚರಿತ್ರೆಗಳು, ಎರಡು ಕಥಾ ಸಂಕಲನ, ಒಂದು ಕವನ ಸಂಕಲನ ಹಾಗೂ ಕಾದಂಬರಿಯನ್ನೂ ಬರೆದು ಕೇವಲ ರಂಗಭೂಮಿಗೆ ಅಷ್ಟೇ ಅಲ್ಲದೆ, ಸಾಹಿತ್ಯ ಕ್ಷೇತ್ರದಲ್ಲಿಯೂ ಸೈ ಎನಿಸಿಕೊಂಡಿದ್ದಾರೆ. ಇವರು ಬರೆದು ರಂಗದ ಮೇಲೆ ಪ್ರಯೋಗಿಸಿದ ನಾಟಕಗಳು ಕಲಬುರ್ಗಿ, ಧಾರವಾಡ, ರಾಯಚೂರು, ಹೊಸಪೇಟೆ, ಬಾನುಲಿ ಕೇಂದ್ರಗಳಿಂದ ಪ್ರಸಾರವಾಗಿವೆ. ದೂರದರ್ಶನದಲ್ಲಿಯೂ ನಾಟಕಗಳ ಪ್ರಯೋಗ ಮಾಡಿದ್ದಾರೆ. ರಂಗಸೇವೆ, ಸಾಹಿತ್ಯಕ, ಧಾರ್ಮಿಕ, ಸಾಮಾಜಿಕ ಸೇವೆಗಳನ್ನು ತಮ್ಮ ನಾಟಕದ ಮೂಲಕವೇ ಮಾಡಿದ್ದಾರೆ. ಮೂಢನಂಬಿಕೆ ವಿರುದ್ಧ, ಸಾಕ್ಷರತೆಯ ಜಾಗೃತಿ, ಮದ್ಯಪಾನ ನಿಷೇದ, ಕುಟುಂಬ ಕಲ್ಯಾಣ ಯೋಜನೆಗಳು ಇವರ ಸಾಮಾಜಿಕ ನಾಟಕದ ವಸ್ತುಗಳು. ಎಲ್ಲವೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಂಥ ಸಾಮಾಜಿಕ ಕಳಕಳಿಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡಿರುವುದು ಪಾಟೀಲರ ವಿಶೇಷ.

1998ರಿಂದ 2001ರ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ರಂಗೋತ್ಸವ, ಮಕ್ಕಳ ನಾಟಕೋತ್ಸವ, ಖ್ಯಾತ ರಂಗನಟ 'ಮೃಡದೇವ ಗವಾಯಿ' ಸ್ಮರಣೆ ಮುಂತಾದ ಯಶಸ್ವಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ರಂಗ ಕ್ಷೇತ್ರದ ಆಸಕ್ತರ ಗಮನ ಸೆಳೆಯುವಂತೆ ಮಾಡಿದರು. ಇವರ ಬದುಕಿನ ಸಾಧನೆಯನ್ನು ಗುರುತಿಸಿದ ಸರಕಾರ ಹಾಗೂ ಸಂಘ ಸಂಸ್ಥೆಗಳು ಕೊಪ್ಪಳ

ಜಿಲ್ಲಾಡಳಿತದಿಂದ, ಕನ್ನಡ ವಿಶ್ವವಿದ್ಯಾಲಯದಿಂದ ಗಂಗಾವತಿಯಲ್ಲಿ ನಡೆದ ದೇಸಿ ಸಮ್ಮೇಳನದಲ್ಲಿ, ಶಿವಶಕ್ತಿ ಕೇಂದ್ರ ಬೆಂಗಳೂರು ಇವರಿಂದ ಮಾನ-ಸನ್ಮಾನಗಳು ದಿಂಡಿ ದಿಂಡಿಯಾಗಿ ಹರಿದು ಬಂದಿರುವದು ಇವರ ಪ್ರತಿಭೆಗೆ ದೊರೆತ ಗೌರವವಾಗಿವೆ.


ರಂಗಾಭಿಮಾನಿಗಳಿಂದ ಗಂಗಾವತಿ ಗುಬ್ಬಿ ವೀರಣ್ಣ, 'ಏಕಾಂಕ ನಾಟಕ ಚಕ್ರವರ್ತಿ' ಹಾಗೂ ಉತ್ತರಕರ್ನಾಟಕದ ಯುವಕರಲ್ಲಿ ಸಾಮ್ರಾಟ ಎಂಬಿತ್ಯಾದಿ ಬಿರುದುಗಳನ್ನು ನೀಡಿ ಇವರನ್ನು ಗೌರವಿಸಿ, ರಂಗಭೂಮಿಯ ಈ ಪ್ರತಿಭೆಯನ್ನು ಪುರಸ್ಕರಿಸಿದ್ದಾರೆ. ಇವರು ರಚಿಸಿ ಪ್ರಯೋಗಿಸಿದ ದಲಿತೋದ್ಧಾರ ಹಾಗೂ ಶಿಕ್ಷೆ ಯಾರಿಗೆ ಈ ನಾಟಕಗಳು ಕರ್ನಾಟಕ ಸರಕಾರದ 1998ರ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ತಂದು ಕೊಟ್ಟಿವೆ. ಸುರ್ವೆಕಲ್ಚರ್ ಅಕಾಡೆಮಿ ಬೆಂಗಳೂರು ಇವರಿಂದ ವಿಶ್ವೇಶ್ವರಯ್ಯ ದಶಮಾನೋತ್ಸವ ಪ್ರಶಸ್ತಿಯ ಗೌರವಕ್ಕೂ ಪಾಟೀಲರು ಪಾತ್ರರಾಗಿದ್ದಾರೆ. (ಪಿಜಿಕೆ)

ಪಾಟೀಲ ಎಸ್.ಸಿ: ಕರ್ನಾಟಕದ ಗಮನಾರ್ಹ ಚಿತ್ರಕಲಾವಿದರಲ್ಲಿ ಎಸ್.ಸಿ. ಪಾಟೀಲರು ಒಬ್ಬರು. ಪ್ರಸ್ತುತ ಹಂಪಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಇವರು ದೃಶ್ಯಕಲಾ ಕ್ಷೇತ್ರದ ಬಹುದೊಡ್ಡ ಸಂಶೋಧಕರೆಂದೇ ಗುರುತಿಸಿಕೊಂಡಿದ್ದಾರೆ. ಇವರ ಆಸಕ್ತಿಯ ಇನ್ನೊಂದು ಬಹುಮುಖ್ಯ ಕ್ಷೇತ್ರ ಚಿತ್ರಕಲೆ. ಈ ಕ್ಷೇತ್ರದಲ್ಲಿಯೂ ಅವರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸದ್ದಿಲ್ಲದೆ ಹೆಸರು ಮಾಡಿದ್ದಾರೆ.

ಗುಲಬರ್ಗಾ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಚಿಕ್ಕ ಗ್ರಾಮ ಮಾಣಶಿವಣಗಿಯ ಕಲಾವಿದರ ಮನೆತನದಲ್ಲಿ ಹುಟ್ಟಿದರು. ಸ್ನಾತಕೋತ್ತರ ಪದವಿಯೊಂದಿಗೆ ಎಂ.ಎ., ಜಿ.ಡಿ. ಆರ್ಟ್ ಇನ್ ಪೇಂಟಿಂಗ್, ಜಿ.ಡಿ. ಆರ್ಟ್ ಇನ್ ಮಾಡಲಿಂಗ್ (ಶಿಲ್ಪಕಲೆ) ಪದವಿಗಳನ್ನು ಪಡೆದರು.



ಕರ್ನಾಟಕದ ಜನಪದ ಚಿತ್ರಕಲೆ ಕುರಿತು ಪಿಎಚ್.ಡಿ. ಪದವಿಯನ್ನು 1991ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಬಹುಮುಖ ವ್ಯಕ್ತಿತ್ವದ ಪಾಟೀಲರು ಕನ್ನಡ ಸಾಹಿತ್ಯ, ಇತಿಹಾಸ, ಜಾನಪದ, ಶಿಕ್ಷಣ ಚಿತ್ರಕಲೆ, ಶಿಲ್ಪಕಲೆಯಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದವರು. ಕರ್ನಾಟಕದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಮೊತ್ತಮೊದಲ ಪಿಎಚ್.ಡಿ. ಪದವಿ ಪಡೆದ ಹೆಗ್ಗಳಿಕೆ



'ಶೀರ್ಷಿಕೆ ರಹಿತ' ಮಿಶ್ರಮಾಧ್ಯಮ

ಇವರದು. ಏಕವ್ಯಕ್ತಿ ಮತ್ತು ಹಲವಾರು ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ದೆಹಲಿ, ಲಕ್ನೋ, ಚೆನ್ನೈ, ಹೈದ್ರಾಬಾದ, ಗೋವಾ, ಬಿಹಾರ, ಚಂಡೀಗಢ, ಕುಪ್ಪಂ, ಬೆಂಗಳೂರು, ಹಂಪಿ, ಬಾದಾಮಿ, ಬಿಜಾಪುರ, ರಾಜಸ್ಥಾನ, ಮೌಂಟ್‌ಅಬು, ಧಾರವಾಡ.... ಹೀಗೆ ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ನಿರಂತರವಾಗಿ ಇವರ ಕಲಾಕೃತಿಗಳ ಪ್ರದರ್ಶನಗಳು ನಡೆದಿವೆ. ಇಂಡೋನೇಶ್ಯಾದಲ್ಲಿ ಇವರ ಕಲಾಕೃತಿಗಳ ಪ್ರದರ್ಶನ ಇತ್ತೀಚೆಗೆ ಒಂದು ತಿಂಗಳವರೆಗೆ ನಡೆದಿದೆ. ಪ್ರತಿಷ್ಠಿತ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಕಲಾಶಿಬಿರ, ಸಂವಾದ ಮತ್ತು ಕಮ್ಮಟಗಳಲ್ಲಿಯೂ ಭಾಗವಹಿಸಿದ್ದಾರೆ.

ಕಲೆಯ ಕುರಿತಂತೆ 25ಕ್ಕೂ ಹೆಚ್ಚು ಗ್ರಂಥಗಳನ್ನು ನೂರಾರು ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ದೃಶ್ಯಕಲಾ ಸಾಹಿತ್ಯದಲ್ಲಿ ನೂತನ ಮಾರ್ಗವನ್ನೇ ಸೃಷ್ಟಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಿಎಚ್.ಡಿ. ಮತ್ತು 28 ವಿದ್ಯಾರ್ಥಿಗಳು ಎಂ.ಫಿಲ್. ಪದವಿಗಳನ್ನು ಪಡೆದಿದ್ದಾರೆ. ಇತ್ತೀಚೆಗೆ 'ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಆಟ್ ಸ್ಕೂಲ್ ಲೆವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್' ಎಂಬ ವಿಷಯದ ತಮ್ಮ ಎರಡನೆಯ ಡಾಕ್ಟರೇಟ್ ಪದವಿಯನ್ನು ಚಿತ್ರಕಲಾ ಕ್ಷೇತ್ರದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿರುವುದು ಇನ್ನೊಂದು ಅಪೂರ್ವ ದಾಖಲೆ. ಕರ್ನಾಟಕದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಹೊಸ ಪರಂಪರೆಯನ್ನು ಈ ದಶಕದಲ್ಲಿ ಹುಟ್ಟುಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಜಿಲ್ಲೆ ವಿಭಾಗ, ರಾಜ್ಯಮಟ್ಟದ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿಗಳು, ಉಪಧ್ಯಾಯ, ಸಂಶೋಧನ ರತ್ನ, ಶಿಶುನಾಳ ಶರೀಫ ಪ್ರಶಸ್ತಿ, ಉಡುಪಿಯ ಕು.ಶಿ. ಹರಿದಾಸ ಭಟ್ಟ ಜಾನಪದ ಪ್ರಶಸ್ತಿಗಳಲ್ಲದೆ, ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಎರಡು ಕಲಾಗ್ರಂಥಗಳಿಗೆ ಶ್ರೇಷ್ಠ ಕೃತಿ ಪ್ರಶಸ್ತಿ ಲಭಿಸಿದೆ. ಹಾಗೆಯೇ ಹಿರಿಯ ಕಲಾವಿದರಿಗೆ ನೀಡುವ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರ

ಹತ್ತಾರು ಗ್ರಂಥಗಳು ಅಕಾಡೆಮಿಯಿಂದ ಪ್ರಕಟಗೊಂಡಿವೆ.

ಕಳೆದ 28 ವರ್ಷಗಳಿಂದ ಲಲಿತಕಲಾ ಕ್ಷೇತ್ರದಲ್ಲಿ ಅಧ್ಯಾಪಕ ರಾಗಿ, ಉಪಪ್ರಾಧ್ಯಪಕರಾಗಿ, ಪ್ರಾಧ್ಯಾಪಕರಾಗಿ ಬೋಧನೆ, ಸಂಶೋಧನೆ ಮತ್ತು ಕಲಾಕೃತಿ ರಚನೆಯ ಕಾರ್ಯವನ್ನು ಒಂದು ವ್ರತದಂತೆ ನಿರ್ವಹಿಸಿಕೊಂಡು ಬಂದಿದ್ದಾರೆ. ಆಡಳಿತಾತ್ಮಕವಾಗಿ 12 ವರ್ಷಗಳ ಕಾಲ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ಮತ್ತು ಬಾದಾಮಿಯ ಸ್ನಾತಕೋತ್ತರ ಕೇಂದ್ರವನ್ನು ಕಟ್ಟಿ ಬೆಳೆಸಿದ್ದಾರೆ. ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ, ನಾಟಕ, ವಾಸ್ತುಶಿಲ್ಪ.... ಹೀಗೆ ಲಲಿತಕಲೆಗಳ ಎಲ್ಲ ವಿಭಾಗಗಳ ಮುಖ್ಯಸ್ಥರಾಗಿ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಆಡಳಿತ ನಿರ್ವಹಿಸಿದ ಅನುಭವವನ್ನು ಹೊಂದಿದ ಇವರು ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಹಾಗೂ ಅನೇಕ ರಾಜ್ಯ ಗಳ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ ಸದಸ್ಯರಾಗಿ ಉನ್ನತಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ದ್ದಾರೆ.

ವ್ಯಕ್ತಿಗೆ ಕಲಾಕೃತಿ ರಚಿಸುವ ಮನಸ್ಸಿದ್ದರೆ ಸಾಕು. ಅಲ್ಲಿ ಕಲಾ ಕೃತಿಗಳ ನಿರ್ಮಾಣಕ್ಕೆ ಚಾಲನೆ ಸಿಗುತ್ತದೆ. ದೊಡ್ಡ ದೊಡ್ಡ ಗಾತ್ರದ ಕ್ಯಾನ್ವಾಸ್‌ಗಳ ಮೇಲೆ ಆಕ್ರಿಲಿಕ್ ಬಣ್ಣಗಳನ್ನು ಹರಡಿ, ಅಲ್ಲಿ ಉಂಟಾದ ಸಹಜ ಆಕಾರಗಳನ್ನು ಡಾ. ಪಾಟೀಲರು ಕಲಾಕೃತಿ ಗಳ ನಿರ್ಮಾಣಕ್ಕೆ ದುಡಿಸಿಕೊಂಡಿದ್ದಾರೆ. ಈ ತೆರನಾದ ಪ್ರಯೋಗದಿಂದ ಇವರ ಪ್ರತಿಯೊಂದು ಕಲಾಕೃತಿಗಳು ಹೊಸ ತನದಿಂದ ಕೂಡಿವೆ. ರೂಢಿಗತ ನಿಯಮಗಳನ್ನು ಮೀರಿ, ಸ್ವಚ್ಛಂದವಾಗಿ, ಸೃಜನಾತ್ಮಕವಾಗಿ ಕಲಾಕೃತಿಗಳನ್ನು ರಚಿಸ ಬೇಕಾದರೆ ಕಲಾವಿದನ ಹೊಸತನದ ತುಡಿತ ಕಾರಣವಾಗುತ್ತದೆ. ಡಾ. ಪಾಟೀಲರ ಕಲಾಕೃತಿಗಳನ್ನು ವೀಕ್ಷಿಸುತ್ತಾ ಹೋದಂತೆ ಪ್ರತಿ ಹಂತದಲ್ಲೂ ಹೊಸತನ, ಬಣ್ಣಗಳ ತಾಜಾತನ, ಆಕಾರಗಳನ್ನು ದುಡಿಸಿಕೊಳ್ಳುವ ಶೈಲಿ, ತಂತ್ರ ನೆರಳು-ಬೆಳಕಿನ ಹಂಚಿಕೆ ಯಿಂದಾಗಿ ಇವರ ಕಲಾಕೃತಿಗಳು ಅನನ್ಯವೆನಿಸುತ್ತವೆ. ಏಕತಾನತೆ ಇವರ ಕಲಾಕೃತಿಗಳಲ್ಲಿ ನೋಡಲು ಸಿಗುವುದಿಲ್ಲ.


ಪಾಟೀಲರು ಪ್ರತಿವರ್ಷ ತಮ್ಮ ಜನ್ಮ ದಿನಾಚರಣೆಯ ಅಂಗವಾಗಿ ಕಲಾಕೃತಿಗಳ ಪ್ರದರ್ಶನದ ಕಾರ್ಯಕ್ರಮವನ್ನು ವಿವಿಧ ನಗರಗಳಲ್ಲಿ ನಡೆಸುತ್ತ ಬಂದಿದ್ದಾರೆ. ಅದರಂತೆ ಈ ಬಾರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಚಿತ್ರಾ ಆರ್ಟ್‌ಗ್ಯಾಲರಿಯಲ್ಲಿ ನಡೆಯಿತು. **(ಪಿಬಿಜಿ)**

ಪಾಟೀಲ ಬಿ.ಎನ್.: ಚಿತ್ರಕಲಾವಿದ. 1978 ಏಪ್ರಿಲ್ 2ರಂದು ಗುಲಬರ್ಗಾ ತಾಲ್ಲೂಕಿನ ಗರೂರ್ (ಬಿ) ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಹಂತದ ವಿದ್ಯಾಭ್ಯಾಸವನ್ನು ಅವರು ತಮ್ಮೂರಿನಲ್ಲಿಯೇ ಮುಗಿಸಿ ಚಿತ್ರಕಲೆಯ ವಿದ್ಯಾಭ್ಯಾಸವನ್ನು ಗುಲಬರ್ಗಾ ನಗರದ ದಿ ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದರು.



ಅದೇರೀತಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯದಲ್ಲಿ ಪೂರೈಸಿದರು.

ಕಲಾಕೃತಿ ರಚನೆಯಲ್ಲಿ ಹೊಸ ಹೊಸ ತಂತ್ರಗಳ ಬಳಕೆ, ವಿವಿಧ ರೀತಿಯ ಹುಡುಕಾಟಗಳು ಸದಾ ಇವರ ಕಲಾಕೃತಿಗಳಲ್ಲಿ ಕಾಣಸಿಗುತ್ತವೆ. ಇವರು ರಚಿಸಿದ ಅನೇಕ ಕಲಾಕೃತಿಗಳು ಜನಪದ ಸೊಗಡಿನ ಆಗರಗಳೆಂದೆನಿಸಿವೆ. ಇವರ ಹೆಚ್ಚಿನ ಕಲಾಕೃತಿಗಳಲ್ಲಿ ಈ ಅಂಶ ಕಂಡುಬರುತ್ತದೆ. ಮಣ್ಣಿನ ಮಡಿಕೆ ಗಳು, ಆ ಜನರ ಉಡುಗೆ ತೊಡುಗೆಗಳು ಅಲ್ಲದೆ ಕಲಾಕೃತಿ ಗಳಲ್ಲಿ ಬಳಕೆ ಯಾಗಿರುವ ಅನೇಕ ಚಿನ್ಹೆಗಳಲ್ಲಿಯೂ ಕೂಡ ಜನಪದದ ಆ ಭಾವ ಇಣುಕುತ್ತಿರುತ್ತವೆ. ಇವರ 'ಅನ್‌ಟೈಟಲ್-25' ಎಂಬ ಕಲಾಕೃತಿಯಲ್ಲಿ ತುಂಬಾ ಸುಂದರವಾಗಿ ಈ ಚಿನ್ಹೆಗಳು ಮೂಡಿ ಬಂದಿವೆ. ಕಂದುಗೆಂಪು ಬಣ್ಣಗಳ ಆಳದಲ್ಲಿ ಸೂಕ್ಷ್ಮವಾದ ದಾರದ ಎಳೆಗಳು ಮನುಷ್ಯ ಜೀವಿ ಹಾಗೂ ನಿಸರ್ಗಗಳ ನಡುವಿನ ಆ ಬಾಂದವ್ಯವನ್ನು ಸೂಕ್ಷ್ಮವಾಗಿ ಹೆಣೆದಿರುವುದು ಕಂಡುಬರುತ್ತದೆ. ಅದೇ ರೀತಿ 'ಅನ್‌ಟೈಟಲ್-20' ರಲ್ಲಿಯೂ ಕೂಡ ವಿಶಾಲವಾದ ಆ ಸೃಷ್ಟಿಯ ಮಧ್ಯದಲ್ಲಿ ಮನುಷ್ಯ ಅನೇಕ ಜೀವರಾಶಿಗಳಲ್ಲಿ ಒಬ್ಬ ಎಂದು ಹೇಳುವುದರ ಜೊತೆಗೆ ಇಡೀ ಸೃಷ್ಟಿಯ ಅತಿ ಮುಖ್ಯವಾದ ಅಂಗ ಮನುಷ್ಯ ಎಂದು ಅವರು ಅನೇಕ ಪ್ರಯತ್ನಗಳಿಂದ ಗುರುತಿಸುವ ಪ್ರಯತ್ನ ಮಾಡಿದ್ದಾರೆ.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಹಾಗೂ ಶಿಬಿರಗಳಲ್ಲಿ ಇವರು ಭಾಗವಹಿಸಿರುತ್ತಾರೆ. ಗುಲಬರ್ಗಾ ವಿ.ವಿ. ಗುಲಬರ್ಗಾ, ಅಣಲ ಭಾರತ ಚಿತ್ರಕಲಾ ಪ್ರದರ್ಶನ ಬಿಜಾಪುರ, ಅವಂತಿಕಾ ದೆಹಲಿ, ಅಮೃತಸರ್, ಕ.ಲ. ಅಕಾಡೆಮಿಯ ರಾಜ್ಯಮಟ್ಟದ ಚಿತ್ರಕಲಾ ಶಿಬಿರ ಗುಲಬರ್ಗಾ, ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಕ್ಯಾಮಲಿನ್ ಪ್ರಾಯೋಜಕತ್ವದಲ್ಲಿನ ಬೆಂಗಳೂರು, ಚಿತ್ರಸಂತೆ ಬೆಂಗಳೂರು, ಹೀಗೆ ಅನೇಕ ಕಡೆಗಳಲ್ಲಿ ಭಾಗವಹಿಸಿ ಯುವ ಕಲಾವಿದರಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಬೆಳೆಸಿಕೊಂಡಿದ್ದಾರೆ.


ಪ್ರಸ್ತುತ ದಿ ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಕಲಾಕ್ಷೇತ್ರದಲ್ಲಿ ಉತ್ತಮವಾದ ಭವಿಷ್ಯವನ್ನು ಹೊಂದಿದ್ದಾರೆ.

(ಎಎಸ್‌ಎಸ್)

ಪಾಪುರಿ ರಾಜಾರಾವ: ಚಿತ್ರಕಲಾವಿದ. ಇವರು ಮೂಲತಃ ವೇಲ್ಲೂರು ಜಿಲ್ಲಾ, ಗುಂಟೂರಿನಲ್ಲಿ (ಆಂಧ್ರಪ್ರದೇಶ) 1947ರಲ್ಲಿ ಜನಿಸಿದರು. ಹೆಚ್ಚಿನ ವ್ಯಾಸಂಗಕ್ಕಾಗಿ ಮದ್ರಾಸ್‌ಗೆ ಬಂದು ಅಲ್ಲಿ ಕಲಾಶಾಲೆಯಲ್ಲಿ ಡಿಪ್ಲೊಮಾ ಮೊದಲನೆಯ ರ್‍ಯಾಂಕಿನಲ್ಲಿ ಪಾಸಾದರು. ಇನ್ನೂ ಹೆಚ್ಚಿನ ಅಭ್ಯಾಸಕ್ಕಾಗಿ ರಾಯಲ್ ಎಸ್. ಅಕಾಡೆಮಿ, (ಯು.ಕೆ.) ಮುಗಿಸಿಕೊಂಡು, ಉಪನ್ಯಾಸಕರಾಗಿ ಭಾರತೀಯ ವಿ.ಭ. ಕುರಕುಂಟಾ ಶಾಲೆಯಲ್ಲಿ ಕೆಲಸ ಮಾಡಿ, ಅನಂತರ ಕಲಬುರ್ಗಿಯ ಶರಣಬಸವೇಶ್ವರ ಸಂಸ್ಥಾನದ ಡಾ. ಶರಣಬಸಪ್ಪ ಅಪ್ಪ ಇವರನ್ನು ಕರೆಸಿಕೊಂಡು ಶರಣಬಸವೇಶ್ವರ (ಪಿ.ಜಿ. ಚಿತ್ರಕಲಾ ವಿಭಾಗ) ಕಲಾ ಮಹಾವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಕಲಾವಿದರ ಕಲಾಕೃತಿಗಳು ಹೊರ ದೇಶದ ವಿಚಾರಗಳು, ಭಾವನೆಗಳು, ತನ್ನದೇ ಆದ ಶೈಲಿಯ ಮುಖಾಂತರ ಕಲಾಕೃತಿಗಳು ರಚನೆ ಮಾಡಿರುತ್ತಾರೆ. ಇವರು ಹೆಚ್ಚಿಗೆ ವ್ಯಕ್ತಿಚಿತ್ರಗಳು ಸಂಯೋಜನೆ ರೂಪದಲ್ಲಿ ಕೊಟ್ಟಿರುತ್ತಾರೆ. ವ್ಯಕ್ತಿಚಿತ್ರಗಳಲ್ಲಿ ಮುಖದ ಮೇಲೆ ಬಡತನ, ಹರಿದ ಅಂಗಿ ಮತ್ತು ಪಂಚೆ ಅಲೆಯ ವಿವರವಾಗಿ ಕಲಾಕೃತಿ ರಚನೆ ಮಾಡಿದ್ದಾರೆ. ಇವರು ಅನೇಕ ಗುಂಪು ಚಿತ್ರಕಲಾ ಪ್ರದರ್ಶನವನ್ನು ಬೆಂಗಳೂರು, ಮೈಸೂರು, ಚೆನ್ನೈ, ಮುಂಬೈ, ದೆಹಲಿ, ಪುಣೆ, ಮೊದಲಾದ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ. ಧನ್ನಪಾಲ ಮದ್ರಾಸ್ ಅವಾರ್ಡ್, ಪೋಟ್‌ರೇಟ್ ಕ್ಯಾಶ್ ಅವಾರ್ಡ್, ನ್ಯೂದೆಹಲಿ, ಇವರು ಭಾರತ ಸರ್ಕಾರದಿಂದ





ಪಾಪುರಿ ರಾಜಾರಾವ ಅವರ ಕಲಾಕೃತಿ

ಧನಸಹಾಯ ಪಡೆದಿರುತ್ತಾರೆ. ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ಮುಂಬೈ, ಹೈದ್ರಾಬಾದ್, ಮದ್ರಾಸ್, ಬೆಂಗಳೂರು ಮತ್ತು ಹೊರದೇಶದಲ್ಲಿ ಪ್ರದರ್ಶನ ಮಾಡಿದ್ದಾರೆ. ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು ಮತ್ತು ನ್ಯೂದೆಹಲಿ ವೆಂಕಟಪ್ಪ ಆರ್ಟ್‌ಗ್ಯಾಲರಿಯಲ್ಲಿ ಕಲಾಕೃತಿಗಳು ಇರುತ್ತವೆ. ಬಾಂಬೆ ಆರ್ಟ್ ಸೊಸೈಟಿಯಿಂದ ಕ್ಯಾಶ್ ಅವಾರ್ಡ್ ಇನ್ನೂ ಅನೇಕ ಪ್ರಶಸ್ತಿಗಳು ಬಂದಿರುತ್ತವೆ.

ವಿವಿಧ ರೀತಿಯ ವಿದೇಶದ ವ್ಯಕ್ತಿಚಿತ್ರಗಳು ಇದರಲ್ಲಿ ಹೆಣ್ಣುಮಕ್ಕಳು, ಗಂಡುಮಕ್ಕಳೂ, ಚಿಕ್ಕಮಕ್ಕಳ ಚಿತ್ರಗಳು ಕಲಾಕೃತಿ ನೇರವಾಗಿ ಸುಂದರವಾಗಿ ಸಂಯೋಜನೆ ಮಾಡಿರುತ್ತಾರೆ. ಇವರು ಕಡಿಮೆ ವರ್ಣಗಳು ಬಳಸುತ್ತಿದ್ದರು. ಹಾಗಿದ್ದರೂ ಸಹ ಕಲಾಕೃತಿಗಳನ್ನು ವಿವರವಾಗಿ ರಚಿಸಿರುತ್ತಾರೆ. ಅದೇರೀತಿಯಾಗಿ ಭಾರತಕ್ಕೆ ಬಂದ ಅನಂತರ ಇಲ್ಲಿನ ಪ್ರಭಾವದಿಂದ ಇಲ್ಲಿಯೂ ಕೂಡಾ ಅದೇ ರೀತಿ ಕಲಾಕೃತಿಗಳು ತಮ್ಮದೇ ಆದ ಶೈಲಿಯಲ್ಲಿ ರಚನೆ ಮಾಡಿದರು. ಸೀಸದ ಕಡ್ಡಿ ಮತ್ತು ಚಾರ್‌ಕೋಲ್‌ದಿಂದ ರೇಖೆಗಳ ಮುಖಾಂತರ ವ್ಯಕ್ತಿಗಳಿಗೆ ಕೂಡಿಸಿ ಕಲಾಕೃತಿಗಳು ರಚನೆ ಮಾಡುತ್ತಿದ್ದರು. ವಿದ್ಯಾರ್ಥಿಗಳ ಜೊತೆ ಜೊತೆ ಅಭ್ಯಾಸ ಮಾಡುತ್ತಿದ್ದರು. ವಸ್ತುಚಿತ್ರಗಳ ಬಗ್ಗೆ ವಿವಿಧ ರೀತಿಯ ಹಣ್ಣುಗಳನ್ನು ತಂದು ಪ್ಲೇಟ್, ಜಗ್, ಪುಸ್ತಕಗಳು ಜೋಡಿಸಿ (ಸಂಯೋಜನೆ) ಅಂದವಾಗಿ ಕಲಾಕೃತಿಗಳು ರಚನೆ ಮಾಡುತ್ತಿದ್ದರು.

ವಿವಿಧ ರೀತಿಯ ಮಾಡೆಲ್‌ಗಳನ್ನು ಬಳಸಿ ಕಲಾಕೃತಿಗಳು ರೇಖೆಯಲ್ಲಿ, ವರ್ಣಗಳಲ್ಲಿ ರಚನೆ ಮಾಡುತ್ತಿದ್ದರು.

(ಎಸ್‌ಎಲ್)

ಪು

ಪುಂಡಲಿಕಪ್ಪ ಬಾರಕೇರ: ಚಿತ್ರಕಲಾವಿದ. ತಮ್ಮ ಕುಂಚ ಕಲೆಯಿಂದ ಜನಮನದಲ್ಲಿ 'ಪಿ.ಆರ್. ಬಾರಕೇರ' ಎಂದೇ ಪ್ರಸಿದ್ಧರಾಗಿದ್ದಾರೆ. ಪುಂಡಲೀಕಪ್ಪ ರಂಗಪ್ಪ ಬಾರಕೇರ ಇವರ ಪೂರ್ಣ ಹೆಸರು. ಗ್ರಾಮೀಣ ಬದುಕಿನಲ್ಲಿ ಬೆಳೆದವರು. ಬಡತನದ ಕಹಿ ಕಂಡವರು. ತಂದೆ ರಂಗಪ್ಪ. ತಾಯಿ ಬಸಮ್ಮ.

ಬಾಲ್ಯದಲ್ಲಿಯೇ ಕಲೆಯ ನಂಟು ಬೆಳೆಸಿಕೊಂಡಿದ್ದರು. ಬಿಳಿಹಾಳೆ, ಪೆನ್ಸಿಲೊಂದು ಸಿಕ್ಕತೆಂದರೆ ಸಾಕು. ಅಲ್ಲೆಲ್ಲ ಮೂಡುತ್ತಿದ್ದ ಗೆರೆಗಳಲ್ಲಿ ನಿಸರ್ಗ ಚಿತ್ರಣಗಳು ಮೈದಳೆಯುತ್ತಿದ್ದವು. ಇದರ ಜೊತೆ ಪ್ರಾಥಮಿಕ–ಪ್ರೌಢಶಾಲಾ ಅಭ್ಯಾಸವು ಮುಗಿಯಿತ್ತಾ ಬಂತು. ಮುಂದಿನ ಅಭ್ಯಾಸಕ್ಕಾಗಿ ಗದುಗಿನ ವಿಜಯ ಆರ್ಟ್ ಇನ್ಸಿಟಿಟ್ಯೂಟ್ ಸೇರಿಕೊಂಡರು.

ಕಲೆಯಲ್ಲಿ ಸಂಪೂರ್ಣ ಆಸಕ್ತಿ ವಹಿಸಿದ ಇವರು, ಚಿತ್ರಕಲಾ ವಿದ್ಯಾಭ್ಯಾಸದಲ್ಲೂ ಕೂಡ ಉತ್ತಮ ಅಂಕ ಪಡೆದು ಡಿ.ಎಂ.ಸಿ. ಮುಗಿಸಿದರು. ಅನಂತರ ಅದೇ ಹಾದಿ ಹಿಡಿದು ಆರ್ಟ್ ಮಾಸ್ಟರ್ ಡಿಗ್ರಿ(1987) ಪಡೆದುಕೊಂಡು, 1988ರಲ್ಲಿ ಇರಕಲ್ಲಗಡ ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು.

ಬಡತನದ ಬದುಕಿನಲ್ಲೂ ಕೂಡ ಹಿಂಜರಿಯದೆ ತಂದೆ–ತಾಯಿಗಳ ಪ್ರೋತ್ಸಾಹದಿಂದ ಚಿತ್ರಕಲೆಯಲ್ಲಿ ಪದವಿ ಪಡೆದದ್ದು ಇವರ ಜೀವನದ ಒಂದು ಮಹತ್ತರ ಸಾಧನೆ. ಆದರೆ, ಇವರು ಕಲೆಯಲ್ಲಿ ಪಳಗಿದ ರೀತಿ ಮತ್ತೊಂದು ತರಹದ್ದು, ಇವರು ಕುಂಚ ಹಿಡಿದರೆ ಸಾಕು. ಗ್ರಾಮೀಣ ಬದುಕು ಮಿಂಚುತ್ತದೆ. ಐತಿಹಾಸಿಕತೆಯ ಸೊಗಡು ವಿಜೃಂಭಿಸುತ್ತಿದೆ.

ಅದರಲ್ಲೂ ನಿಸರ್ಗದ ನಯನ ಮನೋಹರ ದೃಶ್ಯ ಜೀವಂತಿಕೆ ಪಡೆಯುತ್ತದೆ. ಏಕೆಂದರೆ ಇವರ ಕುಂಚದಲ್ಲಿ ತೈಲ ವರ್ಣ, ಜಲವರ್ಣದಲ್ಲಿ ಮೂಡಿಬರುವ ನಿಸರ್ಗ ತಾಣಗಳ ಚಿತ್ರಣಗಳು ಜೀವಂತಿಕೆ ಅಚ್ಚೊತ್ತಿದಂತಿರುತ್ತವೆ.

ಕೋಲಾಜ್, ಪೇಪರ್ ಕಟಿಂಗ್, ಜಲವರ್ಣ, ತೈಲವರ್ಣ, ಗ್ರಾಫಿಕ್ ಆರ್ಟ್, ಮಿನಿಯೇಚರ್ ಪೇಂಟಿಂಗ್, ಪ್ಯಾಚ್‌ವರ್ಕ್, ಚಾರ್ಕಲರ್ ದಂತಹ ಹಲವಾರು ಕಲಾಪ್ರಕಾರಗಳಲ್ಲಿ ಪರಿಣತಿ ಹೊಂದಿರುವ ಬಾರಕೇರ ಅವರು, ಅತ್ಯಂತ ಮುಖ್ಯವಾಗಿ ಆಸಕ್ತಿ ಇರುವದು ಜಲವರ್ಣದಲ್ಲಿ. ನಿಸರ್ಗ ತಾಣಗಳನ್ನು ರೇಖೆಗಳಲ್ಲಿ ಮೂಡಿಸುವುದು. ಇವರು ಬಿಡಿಸಿದ ಎಷ್ಟೋ ಚಿತ್ರಣಗಳನ್ನು ಅದೇ ಆಸಕ್ತಿಯನ್ನು ತೋರಿಸುವಂತೆ ಹಂಪಿಯ ಗತವೈಭವ ಬಂಡೆಗಳ ಬದುಕು, ತುಂಗೆಯು ಹರಿಯುವಿಕೆ, ಪಟ್ಟದಕಲ್ಲು, ಹಳೇಬೀಡು, ಬೇಲೂರು, ಬದಾಮಿ, ಐಹೊಳೆಗಳ ಶಿಲ್ಪದ ಛಾಯೆ, ಅಲ್ಲಿನ ಕುಸುರಿಯ ಕಲೆ, ಬಯಲು ಸೀಮೆಯ ಸಂಜೆ ಹೊಂಗಿರಣ, ಬಿರಿದ ನೆಲದಲ್ಲಿ ಒಣಗಿನಿಂತ ಗಿಡವೊಂದರ ಕೊರಗು ಮುಂತಾದ ಎಲ್ಲವೂ ನಿಸರ್ಗದ ದೃಶ್ಯಗಳಾಗಿ ಇವರ ಕುಂಚದಲ್ಲಿ ಮಿಂಚಿರುತ್ತವೆ.

ಜಾನಪದೀಯ ಬದುಕನ್ನು ರಂಗುಗೊಳಿಸುವುದು ಇವರ ಬಣ್ಣದ ಕೈಚಳಕ. ಕವಲೆತ್ತಿನ ಕಥೆಯಿರಲಿ, ಗೊಂದಲಿಗರ ಬದುಕಿರಲಿ, ಸುಡಗಾಡುಸಿದ್ಧರ ನೆಲೆಯೇ ಇರಲಿ. ಅವೆಲ್ಲವೂಗಳಿಗೂ ಅವರು ತಮ್ಮ ಕುಂಚದ ಮೂಲಕ ರೂಪ ಕೊಡುತ್ತಾರೆ.

ಚಿತ್ರಕಲಾ ಬದುಕಿನಲ್ಲಿ ಸಾಕಷ್ಟು ಜನಮನ್ನಣೆ ಗಳಿಸಿರುವ ಇವರ ಚಿತ್ರಗಳು, ಹಲವಾರು ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಅಷ್ಟೇ ಅಲ್ಲದೆ 2000ರಲ್ಲಿ ಮುನಿರಾಬಾದನಲ್ಲಿ ನಡೆದ ಚಿತ್ರಕಲಾ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಬಾರಕೇರ ಅವರ ನಿಸರ್ಗಚಿತ್ರವೊಂದು ಮೆಚ್ಚುಗೆಗೆ ಪಾತ್ರವಾಗಿ ಪುರಸ್ಕಾರ ಪಡೆದಿದೆ. ಕುಂಚ ಕಲೆಯಲ್ಲಿ ಅವರು ಸಾಕಷ್ಟು ಪಳಗಿದವರು ಎಂಬುದನ್ನು ಅವರ ಕಲಾಕೃತಿಗಳೇ ಸಾರಿ ಹೇಳುತ್ತವೆ. (ಬಿವಿಎಂ)

ಪುಣ್ಯಕ್ಷೇತ್ರ ಮತ್ತು ಮಠಗಳು: ಹೈದ್ರಾಬಾದ್ ಕರ್ನಾಟಕದ ಅತ್ಯಂತ ದೊಡ್ಡ ಜಿಲ್ಲೆ ಗುಲಬರ್ಗಾ. ಈ ಜಿಲ್ಲೆಯ ತಾಲ್ಲೂಕು ಕೇಂದ್ರ ಅಫಜಲಪೂರ. ಇದು ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯನ ಪ್ರಮುಖ ಸ್ಥಳವಾಗಿತ್ತೆಂದು ಹೇಳಲಾಗುತ್ತಿದೆ. ಅಂದಿನ 'ಹೆಸರಿಲ್ಲದ ಮರ' ಮತ್ತು 'ಬೀಚ್ ವಳ್ಳಿಯೇ' ಆದಿಲ್ ಶಾಹಿ ಕಾಲದಲ್ಲಿ ಅಫಜಲಪೂರವಾಗಿ ಪರಿವರ್ತನೆ ಹೊಂದಿದೆಯೆಂದು ತಿಳಿದು ಬರುತ್ತದೆ.

ಹೈದ್ರಾಬಾದ ಕರ್ನಾಟಕದ ಕಲಬುರ್ಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನಲ್ಲಿರುವ ಸುಕ್ಷೇತ್ರ ಘತ್ತರಗಿ ಗ್ರಾಮ ಒಂದು ಚಿಕ್ಕ ಹಳ್ಳಿ. ಇಲ್ಲಿ ಭಾಗ್ಯವಂತಿ ದೇವಿ ನೆಲೆಸಿರುವುದರಿಂದ ಇದೊಂದು ಸುಕ್ಷೇತ್ರವೆಂದು ಹೆಸರುವಾಸಿಯಾಗಿದೆ. ಇದು ತಾಲ್ಲೂಕು ಕೇಂದ್ರವಾದ ಅಫಜಲಪೂರದಿಂದ ಆಗ್ನೇಯಕ್ಕೆ 14 ಕಿ.ಮೀ. ದೂರದಲ್ಲಿರುವ ಭಾಗಮ್ಮ (ಭಾಗ್ಯವಂತಿ) ದೇವಿಯ ಪುಣ್ಯ ಕ್ಷೇತ್ರವಾಗಿದ್ದು, ಭೀಮಾ ನದಿಯ ಎಡ ದಂಡೆಯ ಮೇಲಿದ್ದು ಇಲ್ಲಿ ನದಿಯು ಉತ್ತರಾಭಿಮುಖವಾಗಿ ಹರಿಯುತ್ತದೆ. ಊರಲ್ಲಿ ಹನುಮಂತನ ಗುಡಿ ಬಳಿಯಿರುವ ನಂದಿ, ಸಪ್ತ ಮಾತೃಕಾ, ಗಣಪ, ಮಹಿಷ ಮರ್ದಿನಿ, ಭೈರವ, ಸೂರ್ಯ ಹಾಗೂ ತೀರ್ಥಂಕರರ ಶಿಲ್ಪಾವಶೇಷಗಳಿಂದ ಇದರ ಪ್ರಾಚೀನತೆಯನ್ನು ಸುಮಾರು 11ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ವಿಶಾಲವಾದ ಪ್ರಾಕಾರದಲ್ಲಿ ನಡುವೆ ಉತ್ತರಾಭಿಮುಖವಾಗಿರುವ




ಸುಕ್ಷೇತ್ರ ಘತ್ತರಗಿ ಭಾಗ್ಯವಂತಿ ದೇವಿ

ಭಾಗ್ಯವಂತಿ ದೇವಿಯ ಗುಡಿಯಿದ್ದು ಇದು ಗರ್ಭಗೃಹ, ಪ್ರದಕ್ಷಿಣಾಪಥ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭ ಗೃಹದಲ್ಲಿ ಕಾಜು ಮರದ ಕಂಬವಿದ್ದು ಇದನ್ನೇ ಭಾಗ್ಯವಂತಿ ದೇವಿಯ ಪ್ರತೀಕವೆಂದು ಭಕ್ತರು ಆರಾಧಿಸುತ್ತಾರೆ.

ಹೈದ್ರಾಬಾದ ಕರ್ನಾಟಕದ ಈಗಿನ ಕೊಪ್ಪಳ ಜಿಲ್ಲೆಯ ಆನೆಗುಂದಿಯಲ್ಲಿರುವ ಭುವನೇಶ್ವರಿ ದೇವಿಯೇ ಈ ಘತ್ತರಗಿ ಭಾಗ್ಯವಂತಿಯಾಗಿದ್ದಳೆಂಬ ಐತಿಹ್ಯವಿದೆ. ಹಾಗೂ ಇಂದಿನ ಬಳ್ಳಾರಿ ಜಿಲ್ಲೆಯ ವಿಜಯನಗರ (ಹಂಪಿ) ಅರಸು ಮನೆತನದ ಅಧಿದೇವತೆ ಎಂದು ಪ್ರತೀತಿ ಇದೆ. ವಿಜಯನಗರ ಅವನತಿ ಹೊಂದಿ ಹಾಳು ಹಂಪೆಯಾದಾಗ ಇದರಿಂದ ಬೇಸತ್ತು ಅವ ಮಾನಿತಳಾದ ಭುವನೇಶ್ವರಿ ದೇವಿ ಘಟಸರ್ಪದ ರೂಪತಾಳಿ, ತುಂಬಿ ಹರಿಯುವ ತುಂಗಭದ್ರ ನದಿ ಪ್ರವೇಶಿಸಿ, ಹೀಗೆಯೇ ತುಂಗಭದ್ರೆಯಿಂದ ಭೀಮಾನದಿಯಲ್ಲಿ ಸೇರಿ ತನಗೆ ಅನುಕೂಲ ವಾದ ಸ್ಥಳ ಘತ್ತರಗಿ ಭಾಗದ ಬಲಬದಿಯಲ್ಲಿರುವ 'ಲಕ್ಕಿ ಗಡ್ಡಿ' ಯಲ್ಲಿ ಸೇರಿಕೊಂಡಳೆಂದು ಹೇಳಲಾಗುತ್ತದೆ.

ಭೀಮಾ, ಅಮರ್ಜಾ ನದಿಗಳು ಗಾಣಗಾಪೂರದಿಂದ ನೈರುತ್ಯಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿ ಸಂಗಮಿಸುತ್ತವೆ.



ದತ್ತ ಮಂದಿರ, ಗಾಣಗಾಪೂರ

ಸಂಗಮ ಸ್ಥಳದಲ್ಲಿ ಸಂಗಮೇಶ್ವರ ಹಾಗೂ ನರಸಿಂಹ ದೇವಾಲಯಗಳಿದ್ದು, ಪವಿತ್ರವಾದ ಭಸ್ಮದ ಗುಡ್ಡವೂ ಇದೆ. ಸಂಗಮ–ಗಾಣಗಾಪುರ ಹಾದಿಯಲ್ಲಿ ಷಟ್ ಕುಲ, ನರಸಿಂಹ, ಚಕ್ರ, ಮನ್ಮಥ, ಭಾಗೀರಥಿ, ಪಾರೊವಿನಾಶಿನಿ, ಕೋಟಿ ಹಾಗೂ ರುದ್ರಪಾದಗಳೆಂಬ ಎಂಟು ತೀರ್ಥಗಳನ್ನು ನೋಡಬಹು ದಾಗಿದೆ.


ಊರಿನಲ್ಲಿ ನರಸಿಂಹ ಸರಸ್ವತಿ ದತ್ತ ಮಹಾರಾಜರ ದತ್ತಾತ್ರೇಯ ದೇವಸ್ಥಾನವಿದೆ. ಮೂಲತಃ ಮಹಾರಾಷ್ಟ್ರದ ಕಾರಂಜಾದವರಾದ ನರಸಿಂಹ ಸರಸ್ವತಿ ಮಹಾರಾಜರು, ಇಲ್ಲಿ 23 ವರ್ಷ ನೆಲಸಿದ್ದು ಶ್ರೀಶೈಲಕ್ಕೆಂದು ಹೊರಡುವಾಗ, ಭಕ್ತರಿ ಗೆಂದು ಇಲ್ಲಿ ನಿರ್ಗುಣ ಪಾದುಕೆ ಬಿಟ್ಟಿದ್ದಾರೆ. ಈ ಪಾದುಕೆಗಳೇ ಇಲ್ಲಿಗೆ ಆಗಮಿಸುವ ಭಕ್ತರ ಆರಾಧನಾ ದೈವವಾಗಿದ್ದು, ಇಲ್ಲಿ ಫೆಬ್ರವರಿ ತಿಂಗಳಲ್ಲಿ ಐದು ದಿನಗಳ ದೊಡ್ಡ ಜಾತ್ರೆ ನಡೆಯುತ್ತಿದ್ದು, ಲಕ್ಷಾಂತರ ಜನ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿಯೂ ದತ್ತಾತ್ರೇಯ ದೇವಾಲಯವು ಯಾತ್ರಿಕರ ಆಕರ್ಷಣಾ ಕೇಂದ್ರ ವಾಗಿದ್ದು, ಸುಂದರವಾದ ರಚನೆಯಾಗಿದೆ. ದೇವಾಲಯ ಭಿತ್ತಿಯ ಮೇಲೆ ಪೌರಾಣಿಕ ಕಥನಗಳ ಕೆತ್ತನೆಗಳನ್ನು ಕಾಣಬಹು ದಾಗಿದೆ. ನರಸಿಂಹ ಸರಸ್ವತಿ ಯತಿಗಳು, ಗಾಣಗಾಪೂರಕ್ಕೆ ಬಂದು ಇಲ್ಲಿಯ ಸ್ಥಾನ ಮಹಿಮೆಯನ್ನು ಪ್ರಕಟಿಸಿದರು. ಶ್ರೀದತ್ತ ದೇವಾಲಯವೆಂದು ಹೆಸರುವಾಸಿಯಾದ ಈ ದೇವಾಲಯದಲ್ಲಿ ತ್ರಿಮುಖವುಳ್ಳ ಮೂರ್ತಿಯನ್ನು ಪೂಜಿಸಲಾಗುತ್ತದೆ. ಈ ಮೂರ್ತಿಯೂ ಮುಂಜಾನೆ ಬಾಲ್ಯ, ಮಧ್ಯಾನ ಯೌವ್ವನ, ಸಂಜೆ ವೃದ್ಧಾಪ್ಯ ರೂಪದಲ್ಲಿ ಕಾಣುವುದೆಂದು ಐತಿಹ್ಯವಿದೆ. ಚಿನ್ಮಯಗಿರಿ ಮತ್ತು ಚೌಡಾಪುರ ನಡುಸೀಮೆಯಲ್ಲಿ ನೆಲೆಸಿರುವ ಗುಡ್ಡದ ಶ್ರೀ ಗುರುಮಹಾಂತೇಶ್ವರ ದಾಸೋಹಿ ಮಠವಿದೆ. ಇಲ್ಲಿ ಮಹಾಂತೇ ಶ್ವರ ಗದ್ದುಗೆಯಿದೆ.

ಉಜ್ಜೈನೀಯ ಶಾಖಾಮಠ ಅಫಜಲಪೂರ ಪಟ್ಟಣದ ಮಧ್ಯ ಭಾಗದಲ್ಲಿದ್ದು, ಶ್ರೀ ಗುರುಮಳೇಂದ್ರ ಶಿವಾಚಾರ್ಯರ ಪುರಾತನ ಗದ್ದುಗೆ ಇದೆ. ಈ ಮಠದ ಮುಖಾಂತರ ಪಟ್ಟಣದ ಸುತ್ತ ಮುತ್ತಲು ಹಿರಿಯ ಗುರುಗಳಾದ ಗುರುಕುಲಭೂಷಣ, ಶ್ರೀ ಷ.ಬ. ಶಾಂತವೀರ ಮಳೇಂದ್ರ ಶಿವಾಚಾರ್ಯರು, ಧರ್ಮ ಜಾಗೃತಿ, ಸಮಾಜದ ಅನಿಷ್ಟಪದ್ಧತಿ ತೆಗೆದುಹಾಕಲು ಶ್ರಮ ವಹಿಸಿದ್ದಾರೆ.

ಅಫಜಲಪೂರ ತಾಲ್ಲೂಕಿನ ಬೈರಾಮಡಗಿಯಲ್ಲಿರುವ ಮಹಾಂತೇಶ್ವರ ಸಂಸ್ಥಾನ ವಿರಕ್ತ ಮಠವು ಒಂದು ಪ್ರಾಚೀನ ಮಠವಾಗಿದ್ದು, ವೀರಶೈವ ಸಂಪ್ರದಾಯಕ್ಕೆ ಸೇರಿದೆ. ಈ ಮಠವು ಮಹಾಂತೇಶ್ವರರಿಂದ ಸ್ಥಾಪಿತವಾಗಿರಬಹುದೆಂಬ ಅಭಿಪ್ರಾಯ ವಿದೆ. ಗವಿ ಮಹಾಂತ ಸ್ವಾಮಿಗಳು ಸದ್ಯದ ಪೀಠಾಧಿಕಾರಿ ಗಳಾಗಿರುತ್ತಾರೆ.

(ವಿಹೆಚ್‌ಎಸ್)

ಪುಷ್ಕರಣಿ: ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರ. ಹೆಸರೇ ಹೇಳುವಂತೆ ಇದು ಸುರರ ಮತ್ತು ಶೂರರ ಪುರ. ಅಂದರೆ, ದೇವಾಧಿದೇವತೆಗಳು ವಾಸಿಸುವ, ರಾಜಾಧಿರಾಜರು ಆಳಿದ ನಾಡು. ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ವೇಣುಗೋಪಾಲ ಸ್ವಾಮಿ, ನರಸಿಂಹಸ್ವಾಮಿ ದೇವ ಸ್ಥಾನಗಳು, ಗತಕಾಲದ ಇತಿಹಾಸ ಸಾರುವ, ಸುರಪುರ ನಾಯಕ ದೊರೆಗಳ ರಾಜಮನೆತನದ ಅರಮನೆ, ದರ್ಬಾರು, ಕೋಟೆ-ಕೊತ್ತಲಗಳು ಗತವೈಭವದ ಇತಿಹಾಸವನ್ನು ಹೇಳುತ್ತವೆ.



ಪುಷ್ಕರಣಿ, ಸುರಪುರ ತಾಲೂಕ

ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿ 'ಗಂಡುಗಲಿ' ಎಂಬ ಬಿರುದು ಪಡೆದ ರಾಜಾ ವೆಂಕಟಪ್ಪ ನಾಯಕನ ಹೆಸರು ಕೇಳಿದರೆ ಸಾಕು. ಮೈನವಿರೇಳುತ್ತದೆ. ಅಂಥ ಶೂರರಿಗೆ ಜನ್ಮ ನೀಡಿರುವ ಸುರಪುರದ ಈ ಭೂಮಿಯಲ್ಲಿ, ಅರಸು ಮನೆತನದ ಆರಾಧ್ಯದೈವ ವೇಣುಗೋಪಾಲಸ್ವಾಮಿ ದೇವಸ್ಥಾನ ಹಾಗೂ ಪುಷ್ಕರಣಿ ಇಂದಿಗೂ ಸಾರ್ವಜನಿಕರ ಗಮನ ಸೆಳೆಯುತ್ತವೆ. ಗತವೈಭವದ ಶಿಲ್ಪಕಲೆಯ ಇತಿಹಾಸ ಇನ್ನೂ ಇಲ್ಲಿ ಜೀವಂತ ವಾಗಿದೆ.

ಗೋಪಾಲಸ್ವಾಮಿ ದೇವಸ್ಥಾನದ ಮುಂದಿನ ದೇವರಭಾವಿ ಎಂದು ಕರೆಯುವ ವಿಶಾಲ ಪುಷ್ಕರಣಿಯ ತುಂಬ ಇತಿಹಾಸವೂ ತುಂಬಿ ತುಳುಕುತ್ತದೆ. ಇಲ್ಲಿನ ದೊರೆ ಪಿತಾಂಬರಿ ರಾಜಾ ಪಿಡ್ಡಿ ನಾಯಕನ ಕಾಲದಲ್ಲಿ ಇದು ನಿರ್ಮಾಣವಾಯಿತು ಎಂದು ತಿಳಿದುಬರುತ್ತದೆ. ಈ ಪುಷ್ಕರಣಿ ಸುಮಾರು 100 ಅಡಿಗಳಿಗಿಂತ ಹೆಚ್ಚು ಆಳ ಹಾಗೂ ಸುಮಾರು ಇದರ 400 ಚದುರು ಅಡಿಗಳಿಗಿಂತ ಹೆಚ್ಚು ವಿಶಾಲವಾಗಿದೆ. ಪುಷ್ಕರಣಿಯ ಒಳ ಭಾಗದ ನಾಲ್ಕೂ ಕಡೆ ವಿಶಾಲವಾದ ಕಲ್ಲು ಹಾಸಿನ ಮೆಟ್ಟಿಲುಗಳಿವೆ. ಎಡ ಮತ್ತು ಬಲ ಭಾಗಗಳಲ್ಲಿ ಕಲ್ಲು ಗಾರೆಗಳಿಂದ ಅಂದವಾದ ಕಮಾನುಗಳನ್ನು ನಿರ್ಮಿಸಲಾಗಿದೆ. ರಾಜ-ಮಹಾರಾಜರು ತಾವು ಯಾವುದೇ ಧಾರ್ಮಿಕ ಕ್ರಮ ನಡೆಸುವಾಗ, ಪ್ರಜೆಗಳು ಈ ಕಮಾನುಗಳಲ್ಲಿ ಕುಳಿತುಕೊಂಡು ವೀಕ್ಷಿಸಲು ಅನುಕೂಲ ವಾಗುವಂತೆ ನಿರ್ಮಿಸಲಾಗಿತ್ತು. ಈ ಪುಷ್ಕರಣಿ ನೋಡುವುದೇ ಒಂದು ಅಂದ. ಬೆಟ್ಟದ ಮೇಲಿರುವ ಸುರಪುರ ಪಟ್ಟಣದ ಮೇಲೆ ನಿರ್ಮಿಸಲಾಗಿರುವ ದೇವಸ್ಥಾನದ ಮುಂದಿನ ಈ ಪುಷ್ಕರಣಿ ಯಲ್ಲಿನ ನೀರು ಎಂದೂ ಬತ್ತುವುದಿಲ್ಲ. ಈ ಪುಷ್ಕರಣಿ ಬತ್ತಿದರೆ ಮಾತ್ರ ಸುರಪುರ ಪಟ್ಟಣಕ್ಕೆ ಜಲಕ್ಷಾಮ ತಪ್ಪಿದ್ದಲ್ಲ ಎಂಬ ಪ್ರತೀತಿಯೂ ಇದೆ. ಪುಷ್ಕರಣಿಯ ಪಕ್ಕದಲ್ಲೇ ನಾಯಕನ (ನಾಗರಭಾವಿ) ಬಾವಿ ಇದೆ. ಇವೆರಡರ ಮಧ್ಯೆ ಕಮಾನುಗಳಿವೆ. ಪುಷ್ಕರಣಿಯಲ್ಲಿ ನೀರು ಹೆಚ್ಚಾದಾಗ, ಅಂದರೆ ಕಮಾನುಗಳ ತಳಮಟ್ಟಕ್ಕೆ ಆ ನೀರು ನಾಯಕನ ಬಾವಿಗೆ ಹರಿದು ಬಂದು ನೀರಿನ ಸಮತೋಲನವನ್ನು ಯಾವಾಗಲೂ ಕಾಪಾಡಿಕೊಳ್ಳುವ ಬುದ್ಧಿವಂತಿಕೆ ಹಾಗೂ ತಂತ್ರಜ್ಞಾನವನ್ನು ಅಂದಿನ ಶಿಲಾನ್ಯಾಸ ಕಾರರು ರೂಪಿಸಿದ್ದಾರೆ.

ದೀಪಾವಳಿಯ ನಂತರ ಐದು ದಿನಗಳವರೆಗೆ ಮಹಿಳೆಯರು ವಿವಿಧ ಬಗೆಯ ಭಕ್ಷಾನ್ನಗಳನ್ನು ಮಾಡಿಕೊಂಡು ತಮ್ಮ ಕುಟುಂಬ ಸಮೇತ ಎಲ್ಲಪ್ಪನ ಬಾವಿ, ಊರ ಹೊರಗಿನ ತೋಟ ಗಳಿಗೆ ಹೋಗುವುದು ಸಂಪ್ರದಾಯ. ಈ ಐದು ದಿನಗಳಲ್ಲಿ ಒಂದು ದಿನ ಈ ಪುಷ್ಕರಣಿಗೂ ಬರುತ್ತಾರೆ. ಅದು ಇತಿಹಾಸ ಕಾಲದಿಂದ ನಡೆದುಕೊಂಡು ಬಂದಿರುವುದು ಇಂದಿಗೂ ಇದೆ.

ಮೊದಲಿಗೆ ಪುಷ್ಕರಣಿಯಲ್ಲಿ ನೀರು ಸದಾ ಕಾಲ ಒಂದೇ ತೆರನಾಗಿ ಇರುತ್ತಿತ್ತು. ಆದರೆ, ಅದು ಇಂದು ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಇದಕ್ಕೆ ಕಾರಣ ವಿಘ್ನೇಶ್ವರ ಎಂದು ಹೇಳಲಾಗುತ್ತದೆ. ಸುರಪುರದಲ್ಲಿ ಗಣೇಶನ ಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ಬೃಹದಾಕಾರದ ಗಣೇಶನ ಪ್ರತಿಮೆಗಳನ್ನು ಈ ಪುಷ್ಕರಣಿಯಲ್ಲಿ ವಿಸರ್ಜಿಸುತ್ತಾರೆ. ಈ ಕಾರಣದಿಂದಾಗಿ ಪುಷ್ಕರಣಿಯಲ್ಲಿ ಅಪಾರ ಪ್ರಮಾಣದಲ್ಲಿ ಹೂಳು ತುಂಬುತ್ತಿದೆ. ದುರಸ್ತಿಯಂತೂ ಮಾಡುವವರೇ ಇಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಈ ಪುಷ್ಕರಣಿಯ ನೀರು ಗ್ರಾಮಸ್ಥರು ಕುಡಿಯಲು ಬಳಸುತ್ತಿದ್ದರು. ಆದರೆ ಇಂದು ನೀರು ಪಾಚಿಗಟ್ಟಿದೆ. ಅದರಲ್ಲೇ ಈಜಾಡುವದು ಮತ್ತು ಬಟ್ಟೆ ಒಗೆಯವದೂ ನಡೆಯುತ್ತಿದ್ದು, ಸೂಕ್ತ ರಕ್ಷಣೆ ಇಲ್ಲದೇ ಈ ಪುಷ್ಕರಣಿ ತನ್ನ ಗತವೈಭವ ಕಳೆದುಕೊಳ್ಳುವುದಲ್ಲದೇ, ಹಾಳಾಗಿ ಹೋಗುತ್ತಿದ್ದರೂ ಯಾರೂ ಕೇಳುವವರಿಲ್ಲವೆಂಬ ಅನಾಥ ಪ್ರಜ್ಞೆಯಿಂದ ನರಳುತ್ತಿದೆ.

(ಪಿಕೆಕೆ)

ಪೂ



ಪೂರ್ಣಿಮಾ ಪಾಟೀಲ: ಕಲಬುರ್ಗಿಯ ಹಿರಿಯ ಮಹಿಳಾ ಕಲಾವಿದೆ. ದೃಶ್ಯಕಲಾ ಉಪನ್ಯಾಸಕರಾಗಿರುವ ಇವರು 1959 ಅಕ್ಟೋಬರ್ 13ರಂದು ಗುಲಬರ್ಗಾದಲ್ಲಿ ಜನಿಸಿದರು. ಇವರು ದಿ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್ ಗುಲಬರ್ಗಾದಿಂದ ದೃಶ್ಯಕಲೆಯಲ್ಲಿ ಡಿಪ್ಲೊಮಾ ಕೋರ್ಸ್‌ನ್ನು ಪಡೆದು ಮುಂದೆ ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್ ದೃಶ್ಯಕಲಾ ಸ್ನಾತಕೋತ್ತರ ಕೇಂದ್ರ ಗುಲಬರ್ಗಾದಿಂದ ಪಡೆದಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಅನೇಕ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿದೆ. ಅಲ್ಲದೆ ಅನೇಕ ಕಲಾಶಿಬಿರಗಳಲ್ಲಿಯೂ ಇವರು ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿ ದಿಸೆಯಿಂದಲೇ ಕಲಾವಲಯದಲ್ಲಿ ತಮ್ಮ ಕಲಾಕೃತಿಗಳ ಮುಖಾಂತರ ತಮ್ಮನ್ನು ಮಹಿಳಾ ಕಲಾವಿದರಲ್ಲಿ ಒಬ್ಬಳು ಎಂದು ಗುರುತಿಸಿಕೊಂಡವರು. 1983-84ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ವಿದ್ಯಾರ್ಥಿ ವೇತನವನ್ನು ಪಡೆದಿದ್ದಾರೆ. ಸೃಜನಶೀಲ ಕಲಾಕೃತಿಗಳ ರಚನೆಯ ಜೊತೆಗೆ ಕಲಾ ಚಟುವಟಿಕೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಕರ್ನಾಟಕದ ಮಹಿಳಾ ಕಲಾವಿದರ ಗುಂಪಿನಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರ ಸೃಜನಾತ್ಮಕ ಕಲಾಚಟುವಟಿಕೆಗೆ ಉತ್ತಮ ವೇದಿಕೆಯಾದದ್ದು, 1986ರಲ್ಲಿ ಉಪನ್ಯಾಸಕರಾಗಿ ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟಿಟ್ಯೂಟ್ ಗುಲಬರ್ಗಾದಲ್ಲಿ ಸೇವೆಸಲ್ಲಿಸುತ್ತ ಕಲಾಕೃತಿ ರಚನೆಯಲ್ಲಿ ತೊಡಗಿದ್ದು, ಹೆಚ್ಚಾಗಿ ಕಲಾವಿದ್ಯಾರ್ಥಿಗಳಿಗೆ ಉತ್ತಮ ಕಲಾಶಿಕ್ಷಣ ನೀಡುವುದರ ಮೂಲಕ ನಾಡಿನಾದ್ಯಾಂತ ತನ್ನ ಕಲಾಶಿಕ್ಷಣದ ಮೂಲಕ ಗುರುತಿಸಿಕೊಂಡಂತ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿರುವ ಇವರು ಈ ಕಲಾಶಾಲೆಯ ಕಲಾಶಿಕ್ಷಣ ಮಟ್ಟವನ್ನು ಉತ್ತಮ ರೀತಿಯಲ್ಲಿ ಮುಂದುವರಿಸುತ್ತ ಕಲಾವಿದ್ಯಾರ್ಥಿಗಳನ್ನು ಉತ್ತಮ ಕಲಾವಿದರಾಗಲು ಬೇಕಾದಂಥಹ ದೃಶ್ಯಕಲಾ ಶಿಕ್ಷಣದ ಜೊತೆಗೆ ನೀತಿಕತೆಯ ಪಾಠವನ್ನು ಕಲಾವಿದ್ಯಾರ್ಥಿಗಳಿಗೆ ತಿಳಿಸಿ, ಉತ್ತಮ ವಿದ್ಯಾರ್ಥಿಗಳಾಗಿ ರೂಪುಗೊಳ್ಳುವಂತೆ ಪ್ರೇರಣೆ ನೀಡುವ ಇವರು ಕಲಾಶಾಲೆಯ ವಿದ್ಯಾರ್ಥಿಗಳಿಗೆ ನೆಚ್ಚಿನ ಶಿಕ್ಷಕಿಯಾಗಿದ್ದಾರೆ.



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಕಲಾಶಿಕ್ಷಣದ ಜೊತೆಗೆ ಕಳೆದ ಎರಡು ದಶಕಗಳಿಂದ ಇವರು ಸ್ತ್ರೀ ಸಂವೇದನೆ, ಸ್ತ್ರೀ ಪರವಾದ ಆಲೋಚನೆಗಳನ್ನು ಬಿಂಬಿಸುವ ಪೂರ್ವ ಹಾಗೂ ಅಪೂರ್ವ ಕೃತಿಗಳು ಮತ್ತು ಏಕವ್ಯಕ್ತಿ ಪ್ರದರ್ಶನ ಕಂಡಿವೆ.

ಕಲಾಶಿಕ್ಷಣ, ಹಾಗೂ ಕಲಾಸಂಘಟನೆಯ ಜೊತೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ತಮ್ಮ ಭಾಗದ ಯುವ ಕಲಾವಿದರಿಗೆ ಉತ್ತಮ ಅವಕಾಶ ಕೂಡುತ್ತಾ, ಅಕಾಡೆಮಿಯವತಿಯಿಂದ ಕಲಾಶಿಬಿರ, ಕಲಾಪ್ರದರ್ಶನ ಹಾಗೂ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರ ವಿಚಾರ ಸಂಕಿರಣ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ತಮ್ಮ ಅವಧಿಯಲ್ಲಿ ಆಯೋಜಿಸಿದ್ದಾರೆ. ಕಲಾವಲಯದಲ್ಲಿ ತಮ್ಮನ್ನು ಸದಾ ಸೃಜನಶೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

1982, 1983, 1984ರ ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ, 1988ರ ಅಖಿಲ ಭಾರತ ಕಲಾಪ್ರದರ್ಶನ, ಚಿತ್ರಕಲಾ ಪರಿಷತ್ ಬೆಂಗಳೂರು ಹಾಗೂ 1997 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿವೆ. ಮಹಿಳಾ ಸಂವೇದನೆಯ ಕಲಾಕೃತಿಗಳನ್ನು ರಚಿಸುವ ಇವರು ಹೆಚ್ಚಾಗಿ ಅಕ್ರೇಲಿಕ್ ಹಾಗೂ ತೈಲ ಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸುತ್ತಾರೆ. ಪ್ರಸ್ತುತ ಗುಲಬರ್ಗಾ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

(ಎಸ್‌ಪಿಡಬ್ಲ್ಯೂ)

ಪೇ



ಪ್ರೇಮಾ ಜೇವರಗಿ: ಬಹುಶಃ ತಾನೊಬ್ಬ ರಂಗಕಲಾವಿದೆಯಾಗಿ ಜನಮನ ಸೆಳೆಯುತ್ತೇನೆಂದು ಅವಳೂ ನಿರೀಕ್ಷಿಸಿರಲಿಕ್ಕಿಲ್ಲ. ಊಹಿಸಲೂ ಸಾಧ್ಯವಿಲ್ಲದಂತ ಪ್ರಸಂಗಗಳು ಬದುಕಿನಲ್ಲಿ ಬಂದು ಬಿಡುತ್ತವೆ. ಯಾರದೋ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಪ್ರೇಮಾ ಇಂದು ಜನಪ್ರಿಯ ಕಲಾವಿದೆ. ರಂಗದೇವಿಯ ಕೃಪೆಯಿಂದ ಹೊಸ ಕನಸು ಹೊಸ ಬದುಕುಪಡೆದ ಪ್ರೇಮಾ ಈಗ ಸುಖಿ ಜೀವಿ. ಈ ಸುಂದರ ಸಾರ್ಥಕ ಬದುಕಿಗೆ ರಾಜಣ್ಣ ಜೇವರಗಿ ಕಾರಣ.

ಪ್ರೇಮಾ ಅಕ್ಷರ ಜ್ಞಾನವಿಲ್ಲದವಳು, ನೋಡಲು ರೂಪವಂತೆ, ಸ್ಟೇಜಿಗೆ ಆಕರ್ಷಕ ವ್ಯಕ್ತಿತ್ವ, ರಾಜಣ್ಣ ಅದನ್ನರಿತು ಅವಳಿಗೆ ಚಿಕ್ಕಪುಟ್ಟ ಪಾತ್ರಗಳನ್ನು ಕಲಿಸುತ್ತ ರಂಗಕ್ಕೆ ತಂದ ಪ್ರೇಮಾ ಕ್ರಮೇಣ ರಾಜಣ್ಣನ ಹಾಗೂ ರಂಗದ ನಾಯಕಿಯಾದಳು. ರಾಜಣ್ಣ ಕಲಾಪತ್ನಿಯನ್ನಾಗಿ ಸ್ವೀಕರಿಸಿ ಅವಳಿಗೊಂದು ಬದುಕು ಕೊಟ್ಟ ನಿಷ್ಕ್ರಿಯೆಯಾಗಿದ್ದ ಅವರ ಬದುಕು ಹೊಸತನ ಪಡೆದು ಚೇತರಿಸಿಕೊಂಡಿತು.

ದೀರ್ಘ ರಂಗಭೂಮಿಯ ಸೇವೆಯಲ್ಲಿ ಪ್ರೇಮಾ ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ನಾಯಕಿಯಾಗಿ, ಖಳನಾಯಕಿಯಾಗಿ ತಾಯಿಯಾಗಿ, ಅತ್ತೆಯಾಗಿ ಎಲ್ಲ ಗುಣ ಸ್ವಭಾವಗಳ ಪಾತ್ರಗಳಲ್ಲಿ ಕಾಣಿಸಿಕೊಂಡು ತನ್ನ ಶಕ್ತಿಮೀರಿ ಪಾತ್ರಗಳಿಗೆ ಜೀವ ತುಂಬುವಲ್ಲಿ ಶ್ರಮಿಸುತ್ತ ಬಂದಿದ್ದಾರೆ. ಇವರ ಅಭಿನಯದ ಪ್ರಮುಖ ಪಾತ್ರಗಳೆಂದರೆ, 'ವಿಶ್ವಾರಾಧ್ಯರ ಮಹಾತ್ಮೆ' ಬಸವಾಂಬೆ ತಾಯಿ 'ಸಂಪತ್ತಿಗೆ ಸವಾಲು' ನಾಟಕದಲ್ಲಿ ಸಂಗವ್ವ 'ಕೈಲಾಗದ ಗಂಡ ಕೈಲಾಸ ಕಂಡ' ನಾಟಕದಲ್ಲಿ ಶಾಂತಾ 'ರೈತನ ಮಕ್ಕಳು' ನಾಟಕದಲ್ಲಿ ಗಿರಿಜಾ 'ನನ್ನವರು ನನ್ನ ಹಡೆದವರು' ನಾಟಕದಲ್ಲಿ ಲೀಲಾ 'ಕಿವುಡ ಮಾಡಿದ ಕಿತಾಪತಿ' ಡಾ. ಸತ್ಯಭಾಮಾ 'ನಾಯಿಗಳಿವೆ ಎಚ್ಚರಿಕೆ' ಗುಲಾಬಿ ಹಾಗೂ ಕೋಮಲಾ, 'ಚಿನ್ನದಗೊಂಬೆ' ಶಾರದಾ 'ಹಸಿರುಬಳೆ' ಬಸಮ್ಮ ಗೌಡತಿ 'ಕುಂಟಕೋಣ ಮೂಕಜಾಣ' ನಾಟಕದಲ್ಲಿ ಪುಷ್ಪಾ 'ಎಚ್ಚರ ತಂಗಿ ಎಚ್ಚರ' ನಾಟಕದಲ್ಲಿ ಸಂಧ್ಯಾ ಜನಮನ ಸೆಳೆದ ಪಾತ್ರಗಳು. ಕಿವುಡು ಮಾಡಿದ ಕಿತಾಪತಿಯಲ್ಲಿ ತಾಯವ್ವನ ಪಾತ್ರ ಬಹಳಷ್ಟು ಪ್ರಸಿದ್ಧಿ ಪಡೆದು ಪ್ರೇಕ್ಷಕರ ಗಮನ ಸೆಳೆದಿದೆ.


ಇವರು ಜನ್ಮ ಪಡೆದುದು ನಾಡಿನ ಹಿರಿಯ ಕಲಾವಿದರಾದ ವೀರಶೆಟ್ಟಿ ಕೋಡ್ಲಿ, ಸುಶೀಲಮ್ಮ ಕೋಡ್ಲಿ ದಂಪತಿಗಳ ಮಗಳಾಗಿ 1938ರಲ್ಲಿ ಮೂರು ಜನ ಸಹೋದರರು, ಮೂರು ಜನ ಸಹೋದರಿಯರು, ಶಾಲೆ ದೂರದ ಮಾತು, ಎಲ್ಲರೂ ರಂಗದಲ್ಲಿ ಹೆಸರು ಮಾಡಿದ ಕಲಾವಿದರು ಸಹೋದರ ಬ್ರಹ್ಮಾನಂದ ನಾಡಿನ ಪ್ರಸಿದ್ಧಿ ಪಡೆದ ಕಲಾವಿದ. ಈಗ ಸ್ವತಂತ್ರ ಕಂಪನಿಯ ಮಾಲಿಕ ಕೂಡ. (ಜಿಎಚ್)

ಪ್ರ



ಪ್ರಕಾಶ ಗಡಕರ: ಇವರು ಗುಲಬರ್ಗಾ ಜಿಲ್ಲೆಯ ವಾಡಿಯಲ್ಲಿ 1962ರಲ್ಲಿ ಜನಿಸಿದರು. ಬಾಲ್ಯದಿಂದಲೇ ಕಲೆಯ ಆಸಕ್ತಿಯನ್ನು ಹೊಂದಿಕೊಂಡಿರುವ ಇವರು ಕಲೆಯಲ್ಲಿ ತನ್ನ ವಿದ್ಯಾಭ್ಯಾಸವನ್ನು ಮಾಡಿದರು. 1983 ರಲ್ಲಿ ದಿ. ಐಡಿಯಲ್ ಫೈನ್‌ಆರ್ಟ್ ಇನ್ಸಿಟ್ಯೂಟ್ ಗುಲಬರ್ಗಾದಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದು ಮುಂದೆ 1994ರಲ್ಲಿ ಎಂ.ಎಫ್.ಎ. ಅಪ್ಲೈಡ್ ಆರ್ಟ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾದಿಂದ ಪಡೆದರು. ತಾನು ಕಲೆತಿರುವ ಕಲಾಶಾಲೆಯಲ್ಲಿಯೇ ಕಲಾ ಗುರುವಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದುಕೊಂಡರು.

ಒಬ್ಬ ಸೃಜನಶೀಲ ಕಲಾವಿದರಾಗಿ ತೈಲವರ್ಣ, ಅಕ್ರೇಲಿಕ್ ಹಾಗೂ ಇತ್ತೀಚೆಗೆ ಇಂಕವರ್ಣಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಇವರು 1991 ರಿಂದ ಸತತವಾಗಿ ಕಲಾಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ರಾಷ್ಟ್ರೀಯ ಕಲಾಮೇಳ, ದೆಹಲಿ, ಮುಂಬಯಿ ಕಲ್ಕತ್ತಾ ಬೆಂಗಳೂರು, 36ನೇ ಮತ್ತು 40ನೇಯ ನ್ಯಾಷನಲ್ ಎಗ್ಜಿಬಿಷನ್, ದೆಹಲಿ, ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಚಿತ್ರಕಲಾ ಪ್ರದರ್ಶನ ಬೆಂಗಳೂರಿನಲ್ಲಿ ಭಾಗವಹಿಸಿದ್ದಾರೆ. ಗುಂಪು ಕಲಾಪ್ರದರ್ಶನ ಹಗೂ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಮಾಡಿ ಜನರಿಂದ ಮೆಚ್ಚುಗೆ



'ಶೀರ್ಷಿಕೆ ರಹಿತ' ಮಿಶ್ರ ಮಾಧ್ಯಮ

ಪಾತ್ರರಾಗಿದ್ದಾರೆ. ಇವರು ದಿ. ಐಡಿಯಲ್ ಫೈನ್‌ಆರ್ಟ್ ಸೊಸೈಟಿ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿಯ ವಿದ್ಯಾರ್ಥಿ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ರಾಜ್ಯೋತ್ಸವ ಪ್ರಶಸ್ತಿ, ಹೈದ್ರಾಬಾದ ಆರ್ಟ್ ಸೊಸೈಟಿ ಪ್ರಶಸ್ತಿಗಳನ್ನು ಪಡೆದು ಕೊಂಡಿದ್ದಾರೆ. ಇವರು ಇಪ್ಪತ್ತೈದು ವರ್ಷಗಳಿಂದ ಸತತವಾಗಿ ಕಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಮನುಷ್ಯನ ಜನ್ಮ ದೇವರು ಕೊಟ್ಟಿರುವಂತಹ ಒಂದು ಅಮೂಲ್ಯವಾದ ಕಾಣಿಕೆ. ಅದನ್ನು ಇನ್ನೂ ಸುಂದರವಾಗಿ ರಚಿಸಿ ಕೊಡುವ ಚಿತ್ರಕಲಾವಿದನಿಂದ ಇನ್ನೊಂದು ಕಾಣಿಕೆ ಇಂತಹ ಸುಂದರತೆಯನ್ನು ಕಲಾವಿದ ಪ್ರಕಾಶ ಗಡಕರರು ಒಂದು ಹೆಣ್ಣಿನಲ್ಲಿ ನೋಡುತ್ತಾರೆ. ಹೆಣ್ಣನ್ನು ಪ್ರಕೃತಿಯನ್ನು ಹೊಲಿ ಸುವುದು ಪ್ರತಿಯೊಬ್ಬರ ಕಲಾವಿದರ ವಿಷಯವಾಗಿದೆ. ಅನೇಕ ಕಲಾವಿದರು ಬಣ್ಣಗಳ ಮುಖಾಂತರ ಈ ವಿಷಯವನ್ನು ವ್ಯಕ್ತ ಪಡಿಸುತ್ತಾರೆ. ಆದರೆ ಗಡಕರರು ರೇಖಾಚಿತ್ರಗಳ ಮುಖಾಂತರ ಈ ವಿಷಯವನ್ನು ತೋರಿಸಿಕೊಟ್ಟಿದ್ದಾರೆ. ಇವರು ರಚಿಸಿ ರುವಂತಹ ಚಿತ್ರಕಲೆಗಳಲ್ಲಿ ಹೆಣ್ಣಿನ ಫಾರ್ಮನ್ನು ಅತಿ ಸುಂದರ ವಾಗಿ ತೋರಿಸಲು ಸಾಧ್ಯ. ಏಕೆಂದರೆ ಭಗವಂತನು ಎಲ್ಲಕ್ಕಿಂತ ಸುಂದರವಾಗಿ ರಚಿಸಿರುವುದು ಹೆಣ್ಣನ್ನು ಎಂದು ಹೇಳುತ್ತಾರೆ. ಇವರ ಕಲಾಕೃತಿಗಳಲ್ಲಿ ಹೆಣ್ಣು ಪ್ರೀತಿಸುವ ವಿಷಯಗಳನ್ನು ತೋರಿಸಿಕೊಟ್ಟಿದ್ದಾರೆ. ಪ್ರಕೃತಿಯಿಂದ, ಬಟ್ಟೆಗಳಿಂದ, ಒಡವೆ ಗಳಿಂದ, ಕನ್ನಡಿಯಿಂದ ಪಾರದರ್ಶಕ ಮತ್ತು ಅಪಾರದರ್ಶಕ ವಸ್ತುಗಳಿಂದ ಹೆಣ್ಣು ಪ್ರೀತಿಸುವುದು ಸಹಜ, ಅದನ್ನು ಗಡಕರರು ತನ್ನ ರೇಖಾಚಿತ್ರಗಳ ಮುಖಾಂತರ ವ್ಯಕ್ತಪಡಿಸಿ ದ್ದಾರೆ. ಒಂದು ಹೆಣ್ಣು ಪಾರದರ್ಶಕ ಬಟ್ಟೆಗಳನ್ನು ಹಾಕಿ ಕನ್ನಡಿಯ ಮುಂದೆ ನಿಂತುಕೊಂಡು ನಾನು ಸುಂದರವಾಗಿದ್ದೇನೆ ಅಥವಾ ಅತಿ ಸುಂದರವಾಗಿದ್ದೇನೆನ್ನುವ ಪ್ರಶ್ನೆ ತನ್ನಿಂದಲೇ ಮಾಡುತ್ತಿರುವ ಹಾಗೆ ರಚಿಸಿರುವುದು ನೋಡಬಹುದು. ಇನ್ನೊಂದರಲ್ಲಿ ತನ್ನ ಸುಂದರತೆಯನ್ನು ನಿರ್ಲಕ್ಷ ಮಾಡಿ ಹಾಸಿಗೆಯ ಮೇಲೆ ವಿಶ್ರಾಮ ವನ್ನು ಮಾಡುವ ರೀತಿಯಲ್ಲಿ ತೋರಿಸಿದ್ದಾರೆ. ಇನ್ನೊಂದು ದೃಶ್ಯದಲ್ಲಿ ಒಂದು ಹೆಣ್ಣು ಹಾಸಿಗೆಯ ಮೇಲೆ ಮಲಗಿ ತನ್ನನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವುದು ಚಿತ್ರಿಸಿದ್ದಾರೆ.

ನ್ಯಾಷನಲ್ ಲಲಿತಕಲಾ ಅಕಾಡೆಮಿಯಿಂದ 800 ಸ್ಪೇಟ್‌ಗೆ ಚಿತ್ರಕಲಾವಿದರ ಗುರುತಿನ ಚೀಟಿಯನ್ನು ಮಾಡಿದ್ದಾರೆ. ಹಾಗೆ, ಇವರ ಕಲಾಕೃತಿಗಳ ಸಂಗ್ರಹಣೆಯು ಗುಲಬರ್ಗಾ ವಿಶ್ವವಿದ್ಯಾ ಲಯ ಗುಲಬರ್ಗಾ, ದಾವಣಗೆರೆ ಗೌವರ್‌ಮೆಂಟ್ ಕಾಲೇಜ ಆಫ್ ಫೈನ್ ಆರ್ಟ್, ಲಲಿತಕಲಾ ಅಕಾಡೆಮಿ ನವ ದೆಹಲಿ, ಗೌವರ್‌ಮೆಂಟ್ ಆರ್‌ಕೆಲೋಜಿ, ಹುಬ್ಬಿ, ರಾಜಶ್ರೀ ಸಿಮೆಂಟ್, ಮಲಖೇಡ್, ಕನ್ನಡ ವಿಶ್ವವಿದ್ಯಾಲಯ ಹಂಪಿ, ಲಲಿತಕಲಾ ಅಕಾಡೆಮಿ ರೀಜನಲ್ ಆರ್ಟ್ ಸೇಂಟರ್ ಚೆನ್ನಯಿ, ಬಾಲಕೃಷ್ಣ ಬಾಭದ್ ಆರ್ಟ್ ಕಲೆಕ್ಷನ್ ಪುಣೆ, ಜಪಾನ್, ಆಸ್ಟ್ರೇಲಿಯಾ, ಸಿಂಗಾಪುರ, ಲಂಡನ್ ಮತ್ತು ಯು.ಎಸ್.ಎ.ನಲ್ಲಿಯೂ ಕೂಡ ಇದೆ. (ವಿಎಸ್‌ಟಿ)

ಪ್ರಕಾಶ ಬಡಿಗೇರ: ಕಾಷ್ಠ ಶಿಲ್ಪಿ. ಸಾಮಾನ್ಯವಾಗಿ ತಮ್ಮ ಮನೆತನದ ಮೂಲ ವೃತ್ತಿಯನ್ನೇ ಮುಂದುವರೆಸಿಕೊಂಡು ಬರುತ್ತಿರುವವವರು ಇಂದಿಗೂ ಹಳ್ಳಿಗಳಲ್ಲಿ ಕಾಣಸಿಗುತ್ತಾರೆ. ಆದರೆ, ವಿದ್ಯಾಭ್ಯಾಸ, ತರಬೇತಿ ಮೂಲಕ ವೃತ್ತಿ ಪ್ರಾವಿಣ್ಯತೆ ಪಡೆದರೂ, ಗ್ರಾಮೀಣ ಭಾಗದಲ್ಲಿದ್ದುಕೊಂಡು ಜೀವನ ಆದಾಯ ಹೆಚ್ಚಿಸಿಕೊಳ್ಳುವವರು ಕಡಿಮೆ. ಇಂಥ ಸಂದರ್ಭದಲ್ಲಿ ವಿದ್ಯಾವಂತರಾದರೂ ಸರಕಾರಿ ವೃತ್ತಿಯೇ ಉದ್ಯೋಗವೆಂದು ಪರಿಗಣಿಸದೇ, ಹಳ್ಳಿಯ ಮೂಲ ಕಸುಬನ್ನು ಉಳಿಸಿಕೊಂಡು, ಜನರ ಬೇಡಿಕೆಗೆ ಅನುಗುಣವಾಗಿ ತಮ್ಮ ಪರಂಪರಾಗತ ವೃತ್ತಿ ಗಾರಿಕೆಗೆ ಆಧುನಿಕತೆಯ ಸ್ಪಂದನ ನೀಡಿ, ಸ್ವಯಂ ಉದ್ಯೋಗದ ಜೊತೆಗೆ ಮತ್ತಷ್ಟು ಜನರಿಗೆ ಉದ್ಯೋಗ ನೀಡುವಂಥ ವೃತ್ತಿಯಲ್ಲಿ ತೊಡಗಿದ ಕೆಲವೇ ಕೆಲವು ಜನರ ಪೈಕಿ ಕೊಪ್ಪಳ ಜಿಲ್ಲೆಯ ಮಂಗಳೂರು ಗ್ರಾಮದ ಪ್ರಕಾಶ ಬಡಿಗೇರ ಒಬ್ಬರು.


ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಂಗಳೂರಿ ನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿದ ಅನಂತರ ಮನೆಯ ಆರ್ಥಿಕ ಸ್ಥಿತಿ ಇವರ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವಂತೆ ಮಾಡಿತು. ನಿರಾಶೆ, ಹತಾಶೆ ಯಾವುದೂ ಇವರನ್ನು ಕಾಡಲಿಲ್ಲ. ಧೈರ್ಯ ಗುಂದದೆ ಬಡಗಿತನ ಕುರಿತು ವಿಶೇಷ ತರಬೇತಿ ಹಾಗೂ ಪರಿಣತಿ ಪಡೆದರು.

ಅನಂತರ, ತಮ್ಮ ಊರಾದ ಮಂಗಳೂರಿನಲ್ಲೇ ವೃತ್ತಿಯನ್ನು ಮುಂದುವರಿಸಿದರು. ಕಿಟಕಿ, ಬಾಗಿಲುಗಳಿಗೆ, ಚಕ್ರಶೈಲಿಯ, ಸರಪಳಿ ಶೈಲಿಯ ಕೆತ್ತನೆಯಲ್ಲಿ ಪಳಗಿದ ಇವರು ಬಾಗಿಲುಗಳಿಗೆ ಅತಿ ಸುಂದರವಾದ ಚಿತ್ತಾರ ಬರೆಯುವ ಆಕರ್ಷಕ ಕೆತ್ತನೆಯ ಶೈಲಿ ಇವರದು. ಮನೆಯ ಜಂತಿ, ಪಟ್ಟಿ, ತೀರು, ಮೇಲುಗಂಬ ಗಳನ್ನು ಮಾಡಲು ಇವರು ಸಿದ್ಧಹಸ್ತರು. ಟೈಲ್ಸ್‌ಗಳನ್ನು ಅತ್ಯಂತ ಸುಂದರವಾಗಿ ಜೋಡಿಸುವ ಇವರು, ಅನೇಕ ವಿಭಿನ್ನ ಕಲೆ ಗಳನ್ನು ಕರಗತ ಮಾಡಿಕೊಂಡಿದ್ದಾರೆ.

ಸಿಮೆಂಟ್ ಜಗತ್ತಿನ ಆಧುನಿಕ ವಿನ್ಯಾಸಗಳನ್ನೂ ಸಹ ಇವರು ಕಟ್ಟಿಗೆಯಲ್ಲಿ ಕೆತ್ತಲು ಪ್ರಯತ್ನಿಸಿದ್ದಾರೆ. ಇವರು ಸಿದ್ಧಪಡಿಸಿದ

ಬಾಗಿಲು, ಕದಗಳು, ಯಲಬುರ್ಗಾ, ಗಜೇಂದ್ರಗಡ, ಕೊಪ್ಪಳ, ಗದಗ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಪ್ರಸಿದ್ಧಿ ಪಡಿದಿವೆ. ಇವರು ತಯಾರಿಸಿದ ಡೈನಿಂಗ್ ಟೇಬಲ್ ರಚನೆಯೂ ಸಹ ಕಲಾತ್ಮಕತೆಯನ್ನು ಒಳಗೊಂಡಿದೆ.

(ಎಸ್‌ವಿಯು)



ಪ್ರಭಾಕರ ಸಾತಖೇಡ: ರಂಗ ಭೂಮಿ ಕಲಾವಿದ. 1946 ರಲ್ಲಿ ತಾಯಿ ಸೀತಾಬಾಯಿ ತಂದೆ ರಾಮಚಂದ್ರರಾಯರ ಪುತ್ರರಾಗಿ ಸಾತಖೇಡದಲ್ಲಿ ಜನಿಸಿದರು. ಬಾಲ್ಯ ಶಿಕ್ಷಣವನ್ನು ತಮ್ಮ ಹಳ್ಳಿ ಯಲ್ಲೇ ಪೂರೈಸಿದರು. 1952ರಲ್ಲಿ ಶ್ರೀಯುತ ನಾರಾಯಣರಾವ ಮಳ್ಳಿಯವರ ನಿರ್ದೇಶನದ ನಾಟಕದಲ್ಲಿ ಪಾತ್ರವಹಿಸಿ, ರಂಗ ಭೂಮಿಗೆ ಅರಂಗೇಟ್ರಂ ಮಾಡಿ ದರು. ಅಂದಿನ ಅವರ ನಾಟಕದ ಗೀಳು ಇಂದು ತಮ್ಮ ಪ್ರಾಣ ವೆಂಬಂತೆ ಕಾಪಾಡಿಕೊಂಡು ಬಂದಿದ್ದಾರೆ. ಮುಂದೆ ಹೆಚ್ಚಿನ ವ್ಯಾಸಂಗಕ್ಕಾಗಿ ಕಲಬುರ್ಗಿಯ ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆಯನ್ನು ಸೇರಿದರು. ಅಂದು ಅವರು ಅಭ್ಯಸಿಸಿದ ಸಂಸ್ಥೆಯಲ್ಲಿ ಇಂದು ಸಾಂಸ್ಕೃತಿಕ ಸಮಿತಿಯ ಸದಸ್ಯ ರಾಗಿರುವುದು ಅವರ ಬದುಕಿನ ಮೈಲಿಗಲ್ಲು. ಅಂದಿನ ದಿನಗಳ ಹಿರಿಯ ರಂಗಚೇತನ ಹೇರೂರು ಮಾಸ್ತರರೆಂದೇ ಪ್ರಖ್ಯಾತರಾದ ಶ್ರೀಯುತ ದತ್ತಾತ್ರೇಯರಾವ್ ಹೇರೂರ ಅವರ ಕೈಯಲ್ಲಿ ಪಳಗಿ, ಪತಿತೋದ್ಧಾರ ಎಂಬ ನಾಟಕ ಅಭಿನಯಿಸಿದರು.

ಕಲಬುರ್ಗಿಯ ಶಹಾಬಾದಿನ ಎಸ್.ಎಸ್. ಮರಗೋಳ ಕಾಲೇಜಿನ ಪ್ರಾಂಶುಪಾಲರಾಗಿ, ಕರ್ತವ್ಯ ನಿಷ್ಠೆಯೊಂದಿಗೆ ರಂಗ ಭೂಮಿಯ ಸೇವೆ, ನಿರಂತರವಾಗಿ ನಡೆಸಿಕೊಂಡು ಬಂದವರು. ಸಾಹಿತ್ಯ ಕ್ಷೇತ್ರದಲ್ಲಿ ಹಾಗೂ ಕನ್ನಡ ನಾಡು ನುಡಿಗಾಗಿ ಸದಾ ಟೊಂಕಕಟ್ಟಿ ನಿಂತು ದುಡಿದು, ತಮ್ಮನ್ನು ತಾವು ಅರ್ಪಿಸಿ ಕೊಂಡವರು. ರಂಗಭೂಮಿಗಾಗಿ ಎಂತಹ ಕಷ್ಟಗಳನ್ನೂ ಸಹಿಸಿ ಕೊಂಡವರು. ಅದಕ್ಕಾಗಿ ತಮ್ಮ ಕೌಟುಂಬಿಕ ಜೀವನದ ಸಂತಸದ ಕ್ಷಣಗಳನ್ನು ಕಳೆದುಕೊಂಡರೂ ಸದಾ ಹಸನ್ಮುಖಿ, ಸಹೃದಯಿ, ಹೊಸ ಪ್ರತಿಭೆಗಳ ಹುಟುಕಾಟದಲ್ಲಿ ಅವಿರತ ಯತ್ನ. ಅನೇಕ ಹೊಸ ಪ್ರತಿಭೆಗಳನ್ನು ರಂಗಭೂಮಿಗೆ ಪರಿಚಯಿಸಿ ಒಳ್ಳೆಯ ನಟರನ್ನಾಗಿ ರೂಪಿಸುವ ಅವರ ಶ್ರಮ ಅಮೋಘ.

ಬಾಕಿ ಇತಿಹಾಸ, ವಿದೂಷಕ, ಕತ್ತಲೆ ದಾರಿ ದೂರ, ಕಂಬಾರರ ನಾಯೀಕಥೆ, ಶ್ರೀರಂಗರ ಕೇಳು ಜನಮೇಜಯ, ಯಾರಿಗೆ ಮಾಡ್ತಾ ಮ್ಯಾಯ, ವಿಜಯ ತೆಂಡೂಲ್ಕರರ ಶಾಂತತಾ ಕೋರ್ಟು ಚಾಲು ಇದೆ, ಶಂಕರ ಶೇಷರ ಆಧುನಿಕ ದ್ರೋಣ, ಎಚ್.ಎಸ್. ವೆಂಕಟೇಶಮೂರ್ತಿ ಅವರ ಹೆಜ್ಜೆಗಳು, ದ.ರಾ. ಪುರಂದರೆ ನಿರ್ದೇಶನದಲ್ಲಿ ವಸಂತ ಕಾನಟ್ಕೆರರ ಪ್ರೀಯ ಆಯೀಸ್ ಮರಾಠಿ ನಾಟಕಗಳಲ್ಲಿ ಅಭಿನಯಿಸಿ, ಜನರ ಮನಸೂರೆಗೊಂಡರು.

ಡನಲಪ್‌ಗರ್ಲ, ನೆಚ್ಚಿದೆಮ್ಮೆ ಕೋಣ ಈತ್ತು, ಸಿಡ್ಲುಮರಿ, ಶ್ರೀರಂಗರ ನೀ ಮಾಯೆಯೊಳಗೋ, ಉತ್ತಮ ಪ್ರಭುತ್ವ ಲೊಳಲೊಟ್ಟೆ, ಕುಸನೂರರ ಆನೆ ಬಂತಾನೆ, ಕಂಬಾರರ ಹರಕೆಯ ಕುರಿ, ಖರೋಖರ ಸ್ವತಂತ್ರವಾಗಿ ನಿರ್ದೇಶಿಸಿ ಅಭಿನಯಿಸಿದರು. ಹರಕೆಯ ಕುರಿಯ ರಾಜಕಾರಣಿ ರುದ್ರಪ್ಪನ ಪಾತ್ರ ಇಂದಿಗೂ ಕಲಬುರ್ಗಿ ಜನರ ನೆನಪಿನಂಗಳದಲ್ಲಿ ಹೆಚ್ಚು ಹೆಸರಾಗಿದೆ. ಶ್ರೀನಿವಾಸ ಪ್ರಭು ಅವರ ರಾಜಮಣಿ ವಜ್ರದ ಪತ್ತೆಯ ಪ್ರಸಂಗ ಹಾಗೂ ನಾಪತ್ತೆಯಾದ ಪ್ರೇಮಿಯ ಪ್ರಸಂಗ ದಲ್ಲಿ ಪತ್ತೇದಾರಿ ಪಾತ್ರವಹಿಸಿ, ನಿರ್ದೇಶಿಸಿ ತಾವು ಯಾವುದೇ ಪಾತ್ರಕ್ಕೆ ಸೈ ಎಂದು ನಿರೂಪಿಸಿದ್ದಾರೆ. ಕಲಬುರ್ಗಿಯಲ್ಲದೆ ಸುತ್ತಲಿನ ಹಳ್ಳಿಗಳಲ್ಲೂ ಅನೇಕ ನಾಟಕಗಳನ್ನು ಪ್ರದರ್ಶಿಸಿ, ಸಾರ್ವಜನಿಕರ ಗಮನ ಸೆಳೆದಿದ್ದಾರೆ. ಕರ್ನಾಟಕವಲ್ಲದೆ ಚೆನ್ನೈ, ಮುಂಬಯಿ, ಗೋವಾಗಳಲ್ಲಿಯೂ ತಮ್ಮ ತಂಡವನ್ನು ಕೊಂಡೊಯ್ದು ಯಶಸ್ವಿ ಪ್ರದರ್ಶನ ನೀಡಿ, ಭೇಷ್ ಎನಿಸಿ ಕೊಂಡಿದ್ದಾರೆ.

ಕಲಬುರ್ಗಿ ಆಕಾಶವಾಣಿ ನಾಟಕ ಕಲಾವಿದರಾಗಿ ಸುಮಾರು 25 ವರ್ಷಗಳಿಂದ ಸೇವೆ ಸಲ್ಲಿಸಿ, ಈ 25 ವರ್ಷಗಳಲ್ಲಿ ಸುಮಾರು 80 ನಾಟಕಗಳನ್ನು ಆಡಿ, ಹಲವನ್ನು ನಿರ್ದೇಶಿಸಿ ದ್ದಾರೆ. ಆಕಾಶವಾಣಿಯ ಮಾತುಕತೆ ವಾರ್ತಾಕಲಾಪಗಳಿಗೆ ಪ್ರಹಸನಗಳನ್ನು ಬರೆದುಕೊಟ್ಟು, ತಮ್ಮ ಕೊಡುಗೆ ನೀಡಿದ್ದಾರೆ. ಕಲಬುರ್ಗಿಯಲ್ಲಿ ಹೊಸ ಪ್ರತಿಭೆಗಳನ್ನು ಶೋಧಿಸುವ ಸಲುವಾಗಿ ಎಸ್. ಮಾಲತಿ ಯವರಿಂದ ಮಹಿಳಾ ರಂಗ ತರಬೇತಿ ಶಿಬಿರ, ಸಿ. ಬಸವಲಿಂಗಯ್ಯ ಅವರಿಂದ ಜಾನಪದ ರಂಗ ತರಬೇತಿ ಶಿಬಿರ ಕೃಷ್ಣಮೂರ್ತಿ ಕವತ್ತಾರ ಹಾಗೂ ರೆಕ್ಕೇರಿ ವಿ. ನಾರಾಯಣ ಅವರಿಂದ ರಂಗ ತರಬೇತಿ ಶಿಬಿರ ಏರ್ಪಡಿಸಿ, ತಾಯಿ, ದಾನಶೂರ ರಾಜ, ಹುಯ್ಯಲವೋ ಡಂಗುರ, ಹಾವು ಹರಿದಾಡ ತಾವ, ಕಾಡು ಕುದರೆಯಂತಹ ನಾಟಕಗಳನ್ನು ಕೈಗೆತ್ತಿಕೊಂಡು ಯಶಸ್ವಿ ಪ್ರದರ್ಶನ ನೀಡಿದರು.

ಗ್ರಾಮೀಣ ರಂಗೋತ್ಸವ, ಭೂಪಾಲದ ರಂಗಮಂಡಲ, ಅಂತರ ಕಾಲೇಜು ನಾಟಕೋತ್ಸವ, ಮಕ್ಕಳ ನಾಟಕೋತ್ಸವ, ರಾಷ್ಟ್ರೀಯ ನಾಟಕೋತ್ಸವ, ನೀನಾಸಂ ತಿರುಗಾಟ, ರಂಗ ಮಾಧ್ಯಮದ ಬೆಳ್ಳಿ ಹಬ್ಬದ ಉತ್ಸವ ನಡೆಸಿದ್ದಾರೆ. ರಾಷ್ಟ್ರೀಯ ನಾಟಕೋತ್ಸವದಲ್ಲಿ ಏಳು ದಿನಗಳು–ವಿಭಿನ್ನ ಭಾಷೆಯ ಪ್ರಾಂತದ ನಾಟಕಗಳನ್ನು ಕಾಶ್ಮೀರಿ–ಭೋಜಪುರಿ–ಮಣಿಪುರಿ –ಓರಿಯಾ– ಹಿಂದಿ ನಾಟಕಗಳ ಸವಿಯೂಟ ಕಲಬುರ್ಗಿಯ ಜನತೆಗೆ ಬಡಿಸಿದರು.

ಇವರ ಕೊಡುಗೆ ನಾಟಕ ರಂಗಕ್ಕೆ ಮಾತ್ರವಲ್ಲದೇ ಕನ್ನಡ ಸಾರಸ್ವತ ಲೋಕಕ್ಕೆ ಸೇವೆ ಸಲ್ಲಿಸಿದ್ದಾರೆ. ಶಂಕರ ಶೇಷರ ಆಧುನಿಕ

ದ್ರೋಣ ಪೋಸ್ಟರ ಮಧ್ಯರಾತ್ರಿಯ ಮೇಲೆ ಮುಂತಾದ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ವಾಸ್ತುಶಾಸ್ತ್ರವನ್ನು ಕುರಿತ ಅನ್ನದಾಸ ಪೋಶೆಟ್ಟಿಯವರ ಮರಾಠಿ ಕೃತಿ ವಾಸ್ತು ಭೈಭವ ಕನ್ನಡದಲ್ಲಿ ಅನುವಾದಿಸಿ, ಕನ್ನಡಗರಿಗೆ ಅರ್ಪಿಸಿದ್ದಾರೆ. ಕಲಬುರ್ಗಿಯ ವಿಪ್ರಸಂಕುಲ ಕೃತಿಗೆ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ ಮಧುಶೇಖರ ರಾಂಗೇಯವರ ರಾಘವ ಕೃತಿಗೆ ಕುಲಬುರ್ಗಿ ವಿಶ್ವವಿದ್ಯಾಲಯದ ಪ್ರಶಸ್ತಿಯನ್ನು ಪಡೆದಿದ್ದಾರೆ.

ಬೆಳ್ಳಿತೆರೆ ಹಾಗೂ ಕಿರುತೆರೆಗಳಲ್ಲೂ ಇವರ ಕೊಡುಗೆ ಅಪಾರ. ಬೆಳ್ಳಿ ತೆರೆಯಲ್ಲಿ ಟಿ.ಎಸ್. ನಾಗಭರಣರ ಅಸ್ಫೋಟ ಕಿರುಚಿತ್ರ, ಮಹಾದೇವಿ ಮದುವೆ, ಶಂಕರಲಿಂಗ ಸುಗ್ನಳ್ಳಿಯವರ ಮಹಾದಾಸೋಹಿ ಶರಣಬಸವ ಚಿತ್ರಗಳಲ್ಲಿ ತಮ್ಮ ಅಭಿನಯ ಪ್ರತಿಭೆ ತೋರಿದ್ದಾರೆ. ದೂರದರ್ಶನದಲ್ಲಿ ಅಸ್ಪಷ್ಯ, ಶ್ರೀರಂಗರ ಯಾರಿಗೆ ಮಾಡ್ತೀಮ್ಯಾಂವ್, ಟಿ.ಎನ್. ಸೀತಾರಾಂ ಅವರ ಸ್ಫೋಟ, ಗೀತಾ ನಾಗಭೂಷಣರವರ ಅವ್ವದಲ್ಲಿ ನಟಿಸಿದ್ದಾರೆ.

ಕಲಬುರ್ಗಿ ದೂರದರ್ಶನಕ್ಕಾಗಿ ಅಳಿಯನ ಆವಾಂತರ ಹಾಸ್ಯ ತರಂಗಗಳಲ್ಲಿ ಅಭಿನಯಿಸಿದ್ದಾರೆ. ಪಾರ್ಥೇನಿಯಂ ಹಾಗೂ ಸಿಂಪಲ್ ಮದುವೆ ಟೆಲಿ ನಾಟಕಗಳಲ್ಲಿ ಮುಖ್ಯ ಪಾತ್ರ ಅಭಿನಯಿಸಿ, ನಿರ್ದೇಶಿಸಿದ್ದಾರೆ. ಇವರು ನಿರ್ಮಿಸಿ ನಿರ್ದೇಶಿಸಿದ ಯುರಿಪಿಡಿಸ ನಾಟಕ ಮಿಡಿಯಾ ಕಲಬುರ್ಗಿಯಲ್ಲಿ ಅತ್ಯಂತ ಜನಪ್ರಿಯವಾದ ನಾಟಕ 1999ರಲ್ಲಿ ಸಮಗ್ರ ರಂಗಭೂಮಿ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರುವತಿಯಿಂದ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ.


ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ (1984–87 ಹಾಗೂ 1992–95) ಕಾರ್ಯನಿರ್ವಹಿಸಿ ರಂಗಭೂಮಿಗೆ ಹೊಸ ಕಾಯಕಲ್ಪ ನೀಡಿದ್ದಾರೆ. 1984ರಿಂದ ರಂಗಮಾಧ್ಯಮದ ಸಂಚಾಲಕರಾಗಿ, ರಂಗಭೂಮಿ ಸಾಹಿತ್ಯ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸದಾ ಕ್ರಿಯಾಶೀಲರಾಗಿ ಚಟುವಟಿಕೆಯ ಅಗರವಾಗಿ ದುಡಿಯುತ್ತಿದ್ದಾರೆ.

(ಕೆಪಿ)

ಪ್ರಶಾಂತ ಫಿರಂಗಿ: ಚಿತ್ರಕಲಾವಿದ. ಚಿಕ್ಕವನಾಗಿದ್ದಾಗಲೇ ಚಿಕ್ಕ ಪುಟ್ಟ ಚಿತ್ರ ಬಿಡಿಸುವ ಗೀಳಂಟಿಸಿಕೊಂಡು, ನಿಸರ್ಗ ನಿರ್ಮಿತ ಶಹಾಪೂರದ ಬೆಟ್ಟದಲ್ಲಿ ಹಾಯಾಗಿ ಮಲಗಿದ ವೈರಾಗ್ಯ ಮೂರ್ತಿ, ಗೊಮ್ಮಟ, ಬಾಹುಬಲಿ ಇತ್ಯಾದಿ ಚಿತ್ರಗಳನ್ನು ಬಿಡಿಸುತ್ತಿದ್ದರಂತೆ.ಈ ಕಲೆಯ ಹವ್ಯಾಸಕ್ಕೆ ಕಾರಣ ಶ್ರೀಯುತರ ಅಜ್ಜ ಮಲ್ಲಯ್ಯ ಫಿರಂಗಿಯವರು. ನಾಟಕ ಬಯಲಾಟದ ಪೌರಾಣಿಕ ಪಾತ್ರಗಳಲ್ಲಿ ದೇವಾನು–ದೇವತೆಗಳ ಪಾತ್ರಕ್ಕೆ ಜೀವ ತುಂಬುವಲ್ಲಿ ಸಿದ್ಧಹಸ್ತರಾಗಿದ್ದರೆಂದು ಹಳೆಯ ತಲೆಮಾರಿನವರು ಹೇಳುತ್ತಾರೆ.

ಈ ಭಾಗದಲ್ಲಿ ಸ್ತ್ರೀ ಪಾತ್ರ ಮಾಡುವಲ್ಲಿ ಅವರ ಅಭಿಯನದ ಖ್ಯಾತಿವೆತ್ತಂತೆ ಪೀಳಿಗೆಯಿಂದ ಪೀಳಿಗೆಗೆ ಬದಲಾವಣೆ ಪಡೆಯುತ್ತಿರುವುದು ಸಹಜ. ಆದರೆ ಆ ಕಲೆಯ ರಕ್ತಗತ ಗೀಳು ಇವರಲ್ಲೂ ಬಂದಿರುವುದು ಕಾಣುತ್ತದೆ. ಶ್ರೀಯುತರ ತಂದೆ ಪ್ರಸ್ತುತದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ, ರಾಯಚೂರು ಜಿಲ್ಲೆಯ ಶಾಖೆಯಲ್ಲಿ ಶ್ರೀಹರಿ ಫಿರಂಗಿ ಅಧಿಕಾರಿ. ಮೂಲತಃ ಶಹಾಪೂರನ ಪ್ರತಿಭಾವಂತ ಕುಟುಂಬದವರು. ಇವರು ಕಲಾ ಕಣಜದಲ್ಲಿ ಚಿಕ್ಕ ಚಿಕ್ಕ ಗ್ರಾತದ ಗಿಡದ ಬೊಡ್ಡೆ–ಬೇರುಗಳ ನಿಸರ್ಗ ನಿರ್ಮಿತ ವಿಧಗಳನ್ನು ತಿದ್ದಿ–ತೀಡಿ, ಕುಳಿತ ಮುದುಕ, ಪ್ರಾಣಿ–ಪಕ್ಷಿ ಇತ್ಯಾದಿಗಳಲ್ಲಿ (ಪ್ರಕೃತಿ ನಿರ್ಮಿತ) ಅಡಗಿರುವುದನ್ನು ಆಕಾರಕ್ಕೆ ತಂದಿರುವ ಕೃತಿಗಳಿವೆ. ನದಿ–ಹಳ್ಳ-ಕೊಳ್ಳಗಳ ತೀರದಲ್ಲಿ ಸಿಗುವ ನುಣುಪಾದ ಕಲ್ಲುಗಳನ್ನು ಹೆಕ್ಕಿ ತಂದು, ಕಲಾತ್ಮಕರಾಗಿ ಪೇರಿಸಿಟ್ಟು ನಮ್ಮ ಅಳರಸರನ್ನು ನೆನಪಿಸುವ ಕೋಟೆ–ಕೊತ್ತಲ, ಗುಡಿ–ಗಂವಾರಗಳ (ತದ್ರೂಪ) ಮಾದರಿ ಮಾಡಿದ್ದಾರೆ. ಉಪಯಕ್ತವಿಲ್ಲವೆಂದು ಬೀಸಾಡುವ ವಸ್ತುಗಳಿಗೆ ಅಂದವಾದ ರೂಪಕೊಡುವ ಹಲವಾರು ಕಲಾಕೃತಿಗಳು ಇವರ ಕಲಾ ಕಣಜದಲ್ಲಿವೆ. ಹೀಗೆ ನಿರೂಪಯುಕ್ತ ವಸ್ತುಗಳನ್ನು ಕಲಾತ್ಮಕವಾಗಿ ಕಲೆಯ ಬಲೆಯಲ್ಲಿ ಬಂಧಿಸುವ ಸತತ ಪ್ರಯತ್ನ ಶೀಲ ಸ್ವಭಾವ ಇದರ ಹಿಂದಿರುವ ಗುಟ್ಟು.





'ಲಿವಿಂಗ್ ಆನ್ ದಿ ಏಜ್' ಅಕ್ರೇಲಿಕ್ ಮಾಧ್ಯಮ

ಇವರ ಕಲಾಭ್ಯಾಸದ ಕೋಣೆಯಲ್ಲಿ ಅನೇಕ ಪ್ರಕೃತಿ ಚಿತ್ರಗಳು, ಪೇಟಿಂಗ್ ಡಿಸೈನ್‌ಗಳು, ಹಲವಾರು ಆಕರ್ಷಕ ಬಣ್ಣ ಸಂಯೋಜನೆಯಿಂದ ಕಾಣುವ ನವ್ಯ ಕಲಾಕೃತಿಗಳು, ಮಣ್ಣು ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸಿನಿಂದ ಮಾಡಿರುವ ಎಲ್ಲವೂ ಮುಷ್ಟಿಯಲ್ಲಿರಲಿ, ನನ್ನ ಕಪಿ ಮುಷ್ಠಿಯಲ್ಲಡಗಿರಲಿ ಎಂಬ ಭಾವ

ಹುಟ್ಟಿಸುವ ಮಾನವನ ಮುಷ್ಠಿಯುಳ್ಳ ಕೈಯಿದೆ. ಆಸೆಯನ್ನು ಬಿಡುವ ದಿವ್ಯ ಸಂದೇಶದ ಹರಿಕಾರ ಗೌತಮ ಬುದ್ಧನ ಮುದ್ದಾದ ಮಣ್ಣಿನಲ್ಲಿ ಮಾಡಿದ ಕೃತಿ ಗಮನ ಸೆಳೆಯುವಂತಹದ್ದು. ಇವರು ಆಗಾಗ ವಿವಿಧೆಡೆ ಏರ್ಪಡಿಸುವ ಚಿತ್ರಕಲಾ ಪ್ರದರ್ಶನ ಮೇಳಗಳಲ್ಲಿ ತಮ್ಮ ಕೃತಿಗಳಿಂದ ಪಾಲ್ಗೊಳ್ಳುವರು. 2ನೇ ರಾಷ್ಟ್ರಮಟ್ಟದ ಚಿತ್ರಕಲಾಕೃತಿ ಪ್ರದರ್ಶನದಲ್ಲಿ ಇವರ ಕಲಾಕೃತಿ ಮೆರಿಟ್‌ನಲ್ಲಿ ಆಯ್ಕೆಯಾಗಿ ಪ್ರಶಸ್ತಿ ಪಡೆದಿದೆ.

(ಎಂಎನ್‌ಜಿ)

ಪ್ರಾ

ಪ್ರಾಗೈತಿಹಾಸಿಕ ಕಾಲದ ಚಿತ್ರಗಳು: (ಕೊಪ್ಪಳ ಜಿಲ್ಲೆ) ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂದು ಬಣ್ಣವೇ ಪ್ರಧಾನವಾಗಿದೆ. ಬೂದು ವರ್ಣದ ಗ್ರಾನೈಟ್ ಶಿಲೆಯ ದೊಡ್ಡ ಬಂಡೆಗಳು ತಾನಾಗಿಯೇ ಸೀಳಿ ಹೋಗಿರುವ್ವದರಿಂದ ಮತ್ತು ಸವಕಳಿಯಿಂದ ಗವಿ ಕಲಾಶಿಲೆಗಳು ಉಂಟಾಗಿವೆ. ಆದರಿಂದಾಗಿ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಎರಡು ವಿಧಗಳಿವೆ. 1. ಗವಿಯೊಳಗೆ ಅಥವಾ ಕಲ್ಲಾಸಲೆಯ ಬಳಬದಿಯಲ್ಲಿ ಕೆಮ್ಮಣ್ಣಿನ ಬಣ್ಣದಲ್ಲಿ ಬಿಡಿಸಿದ ಚಿತ್ರಗಳು. 2. ಬಯಲು ಬಂಡೆಯ ಮೇಲೆ ಕುಟ್ಟಿ ಅಥವಾ ಚೂಪಾದ ಸಾಧನದಿಂದ ಸ್ವಷ್ಟಗೆರೆಗಳನ್ನು ಮೂಡಿಸಿ ಬಿಡಿಸಿದ ಚಿತ್ರಗಳೆಂದು ಗುರುತಿಸಬಹುದು.



ಪ್ರಾಗೈತಿಹಾಸಿಕ ರೇಖಾ ಚಿತ್ರಗಳು


ಕೊಪ್ಪಳ ಪ್ರದೇಶದಲ್ಲಿ ಗವಿವರ್ಣ ಚಿತ್ರಗಳು ಅಧಿಕವಾಗಿದ್ದರೆ, ಬಯಲು ಬಂಡೆ ಚಿತ್ರಗಳು ವಿರಳವಾಗಿವೆ. ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳೆಂದರೆ ಎಮ್ಮಿಗುಡ್ಡ, ಕೊಪ್ಪಳ, ಗವಿಮಠ ಬೀಳೆಬಾವಿ, ಬಂಡಿ ಹರಲಾಪುರ ಬೆಣಕಲ್‌ಗುಡ್ಡ, ಬೇವಿನಹಾಳ, ಶಿವಪುರ, ಕಮ್ಮಲ್‌ದಿಗ್ಗಿ, ತಾವರಗೇರಾ, ವೆಂಕಟಪುರ, ಹನುಮಸಾಗರ ಇತರೆ ಗಂಗಾವತಿ ಕೊಪ್ಪಳ ತಾಲ್ಲೂಕು ಸ್ಥಳಗಳಲ್ಲಿ ರೇಖಾಚಿತ್ರಗಳು ಕಂಡುಬಂದಿವೆ.

ಪ್ರಾಗೈತಿಹಾಸ ಕಾಲದ ಚಿತ್ರಗಳಲ್ಲಿ ಪ್ರಮುಖವಾಗಿ ನೋಡುವುದಾದರೆ ಮಾನವನ ಚಿತ್ರಗಳು, ಪ್ರಾಣಿ ಚಿತ್ರಗಳು, ಪಕ್ಷಿ, ಸಂಯುಕ್ತ ಚಿತ್ರಗಳು, ವಿಚಿತ್ರ ಆಕೃತಿ ಚಿತ್ರಗಳು, ದೃಶ್ಯ ಮಂಡಲ, ಸಂಕೇತ ಹಾಗೂ ಇತರೇ ರೀತಿಯ ಚಿತ್ರಗಳನ್ನು ಗುರುತಿಸಬಹುದು. ಮಾನವ ಚಿತ್ರಗಳಲ್ಲಿ ಬೇಟೆಗಾರನ ಚಿತ್ರಗಳು-ಗೂಳಿಯೊಂದಿಗೆ ಕಾದಾಡುತ್ತಿರುವ ಮನುಷ್ಯ ಚಿತ್ರ ನೃತ್ಯ ಭಂಗಿಯಲ್ಲಿರುವ ಓಡುತ್ತಿರುವ ನಗ್ನ ಪುರುಷ ಉಡುಪು ಧರಿಸದ ಚಿತ್ರ ಸ್ತ್ರೀ ಪುರುಷರ ಜೋಡಿ ಚಿತ್ರ ಲೈಂಗಿಕ ಕ್ರಿಯೇ ಚಿತ್ರ ಏಳು ಸಮೂಹ ಚಿತ್ರಗಳೂ ಜೊತೆಗೆ ಪ್ರಾಣಿಗಳಾದ ಟಗರು, ಆನೆ, ಕಾಡುಕೋಣ, ಎತ್ತು, ನಾಯಿ, ಮೊಲ, ತೋಳ, ಹುಲಿ, ಎತ್ತುಗಳೂ ಕುದುರೆ, ಉದ್ದನೆಯ ಕೋಡುಳ್ಳ ಎತ್ತು, ಹದಿನಾಲ್ಕು ಜಿಂಕೆಗಳ ಸಾಲು ಜಿಂಕೆಗಳ ಕೋಡುಗಳು ರೋಮನ್ 'ಗ' ಮತ್ತು 'ಗಿ' ಅಕ್ಷರದಂತಿವೆ. ನವಿಲುಗಳ ಸಾಲು, ಜೊತೆಗೆ ಆಯುಧಗಳಾದ ಕೈ ಕೊಡಲಿ, ಬಿಲ್ಲು, ಆಯುಧ, ಮೀನಿನ ರೇಖಾಚಿತ್ರಗಳೂ ಶಿಲಾವೃತ್ತ ಸಮಾಧಿ, ಇವೆಲ್ಲಾ ತುಂಬು ವರ್ಣದ ಛಾಯಾಚಿತ್ರಗಳು ರಂಗೋಲಿ ಚಿತ್ರಗಳಿವೆ. ವೃತ್ತ, ಹೂ, ವಜ್ರಾಕೃತಿ ಚಕ್ರ, ಚೌಕಾಕಾರ, ಢಮರು, ನಕ್ಷತ್ರ ಕಮಲದ ಎಲೆಯ ಆಕೃತಿಗಳು ಈ ರೀತಿ ರೇಖಾಚಿತ್ರಗಳಿವೆ. ಇವುಗಳಲ್ಲಿ ಗೂಳಿಯ ಚಿತ್ರಗಳು ಪ್ರಮುಖವಾಗಿ ಅಧಿಕ ಸಂಖ್ಯೆಯಲ್ಲಿವೆ ಇಂತಹ ರೇಖಾಚಿತ್ರಗಳು ಗವಿಯ ವಿಶಾಲವಾದ ಛಾವಣಿಯ ಮೇಲೆ ಗೋಡೆಗಳ ಮೇಲೆ ಚಿತ್ರಿಸಿದ್ದಾರೆ. ಈ ರೇಖಾಚಿತ್ರಗಳನ್ನು ಬಣ್ಣದಿಂದ ಮೂಡಿಸಿದ್ದು ಕಂಡು ಬರುತ್ತವೆ.


ಪ್ರಮುಖವಾಗಿ ಪ್ರಾಗೈತಿಹಾಸಿಕ ರೇಖಾಚಿತ್ರಗಳಲ್ಲಿ ಬಳಸಿದ ಬಣ್ಣಗಳೆಂದರೆ ಕೆಂಪು, ಕಂದು, ಕಪ್ಪು, ಬಿಳುಪು, ಹಳದಿ ಮಿಶ್ರಿತ ಬಿಳಿಬಣ್ಣ ಹಳದಿ ಮಿಶ್ರಿತ ಬಿಳುಪುಬಣ್ಣದ ಚಿತ್ರಗಳನ್ನು ಬಳಸಿರುವುದು ಹೆಚ್ಚಾಗಿ ಕಂಡುಬರುತ್ತದೆ.

ಈ ಚಿತ್ರಗಳ ಪ್ರಮಾಣ ಮುಖ್ಯವಾಗಿ ಮೂರು ಗಾತ್ರದಲ್ಲಿವೆ. ಗುಂಪಿನ ಚಿತ್ರಗಳು ಸಣ್ಣ ಪ್ರಮಾಣದಲ್ಲಿವೆ ಅವು 1 ಸೆಂ.ಮಿ.

ದೇವಾಲಯದ ಶಿಲ್ಪಗಳು



ಚಿತ್ರ ಸೂಚಿ – ೨೫



ಪ್ರಾಗೈತಿಹಾಸಿಕ ಕಾಲದ ಗುಹಾ ಚಿತ್ರಗಳು (ಕೊಪ್ಪಳ)

ನಿಂದ 20 ಸೆಂ.ಮಿ. ವಿವಿಧ ಅಳತೆ, ಮಾಧ್ಯಮ ಪ್ರಮಾಣದ ಚಿತ್ರಗಳು ಇವು ಅಧಿವಾಗಿವೆ ಎರಡು ಅಥವಾ ಮುಖ್ಯ ನಾಲ್ಕ ಚಿತ್ರಗಳಲ್ಲಿ ಇವುಗಳ ಪ್ರಮಾಣವು 30 ಸೆಂ.ಮೀ. 45 ಸೆಂ.ಮಿ. ವರೆಗೆ ಇವೆ. ದೊಡ್ಡ ಪ್ರಮಾಣ ಚಿತ್ರಗಳು 1 ಮೀ. ನಿಂದ 5 ಮೀಟರ ವರೆಗೆ ಇವೆಯಾದರೂ ಇಂತಹ ತೀರ ವಿರಳ.

ಈ ಪ್ರಾಗೈತಿಹಾಸಿಕ ಚಿತ್ರಗಳ ಮೂಲಕ ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದ ವಿವಿಧ ಹಂತಗಳನ್ನು ತಿಳಿಯಬಹುದಾಗಿದೆ. ಅವನ ಸಾಮಾಜಿಕ ಸಾಂಸ್ಕೃತಿಕ ಬದುಕಿನ ವಿವಿಧ ಪ್ರಾಣಿಯೊಂದಿನ ಸಂಬಂಧ ಸಂಪರ್ಕಗಳ ವಿವಿಧ ರೀತಿಯ ಬದುಕಿನ ಚಿತ್ರಣವು ಪ್ರಧಾನವಾದುದಾಗಿದೆ. ಈ ಚಿತ್ರಗಳ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತ ಪಡಿಸಿರುವುದು ಮಾನವನ ಆದಿಮಹಂತರ ಈ ಕಲೆ ಶಿಷ್ಟ ಪ್ರಕಾರದ್ದಾಗಿರಲಿಲ್ಲ, ಕೇವಲ ಗೀಚು ಪ್ರಧಾನವಾಗಿದ್ದಿತ್ತು, ಕ್ರಮೇಣ ಗೀಚುಗಳು ಚಿತ್ರಗಳು ಅಕ್ಷರಗಳ ಸೃಷ್ಟಿಗೆ ಕಾರಣವಾದವು. ಹೀಗಾಗಿ ಮಾನವನ ಸಾಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಚಿತ್ರಕಲೆಗೆ ಪ್ರಧಾನ ಸ್ಥಾನ ವಿರುವುದು ನಿಜ. ಹೀಗಾಗಿ ಪ್ರಾಗೈತಿಹಾಸಿಕ ನೆಲೆಗಳು, ಚಿತ್ರಗಳ ಅಧ್ಯಯನವು ಹೆಚ್ಚಿನ ಮಟ್ಟದಲ್ಲಿ ನಡೆಯಬೇಕಾದದ್ದು ಅವಶ್ಯಕವಾಗಿವೆ. (ಆರ್‌ಎಸ್)

ಪ್ರಾಚೀನ ಬಾವಿಗಳು: (ಗುಲ್ಬರ್ಗ ಭಾಗ) ವಿಸ್ತಾರವಾದ ರಾಜಕೀಯ ಇತಿಹಾಸವನ್ನು ಹೊಂದಿದ ಗುಲಬರ್ಗಾ ಜಿಲ್ಲೆ ಧಾರ್ಮಿಕವಾಗಿಯೂ ಅಷ್ಟೇ ವಿಸ್ತಾರವಾದ ಇತಿಹಾಸವನ್ನು ಹೊಂದಿದೆ. ಬೌದ್ಧ, ಜೈನ, ಶೈವ, ವೈಷ್ಣವ ಧರ್ಮದವರು ಧರ್ಮ ಪ್ರಸಾರಕ್ಕಾಗಿ ಜೈನ ಮಂದಿರ, ಬೌದ್ಧ ಸ್ತೂಪ, ಶಿವ ದೇವಾಲಯಗಳನ್ನು ಮತ್ತು ವೈಷ್ಣವರು ವೈಷ್ಣವ ದೇವಾಲಯಗಳನ್ನು ಕಟ್ಟಿಸಿದ ಉದಾಹರಣೆಗಳು ಶಾಸನಗಳಿಂದ ತಿಳಿಯುತ್ತದೆ.

ಮುಂಗಾರಿನ ವೈಫಲ್ಯದ ಕಾರಣಕ್ಕಾಗಿ ಹಿಂದಿನ ಕಾಲದಿಂದಲೂ ಕೆರೆ, ಬಾವಿಗಳನ್ನು ಕಟ್ಟಿಸುವ ಪದ್ಧತಿ ರೂಢಿಯಲ್ಲಿದೆ. ಅರಸರು, ಅಧಿಕಾರಿಗಳು ಮತ್ತು ಶ್ರೀಮಂತ ವರ್ಗದ ಜನರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಕೆರೆ, ಬಾವಿಗಳನ್ನು ಕಟ್ಟಿಸಿದ ಉದಾಹರಣೆಗಳು ಆಯಾ ಕಾಲದ ಶಾಸನಗಳಲ್ಲಿ ದೊರೆಯುತ್ತವೆ. ಬೆಳೆಗಳು ಸಮೃದ್ಧವಾಗಿ ಬೆಳೆದು ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕೆನ್ನುವ ಕಾರಣದಿಂದ ಇವರು ಬಾವಿಗಳನ್ನು ಕಟ್ಟಿಸುತ್ತಿದ್ದರು. ಅನ್ನದಾನ, ವಸ್ತ್ರದಾನದಷ್ಟೇ ಜಲದಾನವೂ ಪವಿತ್ರವಾದದ್ದು ಎನ್ನುವ ಕಾರಣದಿಂದ, ಪುಣ್ಯಪಡೆಯಲು ಬಾವಿಗಳನ್ನು ಕಟ್ಟಿಸುತ್ತಿದ್ದರು, ದೇಶವನ್ನಾಳುವ ಅರಸರು ಒಳ್ಳೆಯ ಹೆಸರು ಪಡೆಯಲು, ಜನರ ಪ್ರೀತಿ ಗಳಿಸಲು ಬಾವಿಗಳನ್ನು ಕಟ್ಟಿಸುತ್ತಿದ್ದರು. ಇದಲ್ಲದೇ ಪ್ರವಾಸಿಗರ ಅನುಕೂಲಕ್ಕಾಗಿ ಬಾವಿಗಳನ್ನು ಕಟ್ಟಿಸಿ ಪಕ್ಕದಲ್ಲಿಯೇ ಛತ್ರ ಕಟ್ಟಿಸುತ್ತಿದ್ದರು. ಅಲ್ಲದೇ ತೋಟಗಳನ್ನು ಬೆಳೆಸಿದ ಉದಾಹರಣೆಗಳೂ ಶಾಸನಗಳಲ್ಲಿ ದೊರೆಯುತ್ತವೆ. ಬಾವಿಗಳನ್ನು ಕಟ್ಟಿಸಿದರೆ ಮಾತ್ರ ತಮ್ಮ ಜವಾಬ್ದಾರಿ ಮುಗಿಯಿತೆನ್ನುವುದು ಆಗಿನ ಜನರ ಧೋರಣೆಯಾಗಿರಲಿಲ್ಲ. ಅವು ಸದಾಕಾಲ ಜನರ ಉಪಯೋಗಕ್ಕೆ ಅನುಕೂಲಕರವಾಗಿರಲೆಂದು ಅವುಗಳ ಸಂರಕ್ಷಣೆಗೆ ಭೂಮಿ, ಹಣ ದಾನ ನೀಡುತ್ತಿದ್ದರು. ಅವರು ದಾನ ನೀಡಿದ ವಿಷಯ ಬಾವಿಗಳಲ್ಲಿ ರುವ ಶಾಸನಗಳಿಂದ ದೃಢಪಡುತ್ತದೆ. ಇಂಥ ಅನೇಕ ಬಾವಿಗಳು ಗುಲ್ಬರ್ಗ ಜಿಲ್ಲೆಯ ಕೆಂಭಾವಿ, ಹೀರಾಪುರ, ಮಾಶಾಳ, ಚಿಂಚನೂರು, ಮುದನೂರು, ಯಡ್ರಾಮಿ, ಸಿರಿವಾಳ ಇನ್ನೂ ಅನೇಕ ಸ್ಥಳಗಳಲ್ಲಿವೆ. ಆ ಬಾವಿಗಳ ರಚನೆ ಮತ್ತು ವಾಸ್ತುಶೈಲಿಯ ಬಗ್ಗೆ ಕೆಳಗೆ ವಿವರಿಸಲಾಗಿದೆ.

ಕೆಂಭಾವಿ: ಇದು ಸುರಪುರ ತಾಲೂಕಿನಲ್ಲಿ ಸುರಪುರದಿಂದ ವಾಯವ್ಯಕ್ಕೆ 30 ಕಿ.ಮೀ. ದೂರದಲ್ಲಿದೆ. ಇಲ್ಲಿ (ಅ) ಭೋಗೇಶ್ವರ ಬಾವಿ, (ಆ) ದರ್ವಂತರ ಬಾವಿಗಳಿವೆ.


(ಅ) **ಭೋಗೇಶ್ವರ ಬಾವಿ**ಯು ಊರ ಹೊರಗೆ ಸುರಪುರ ರಸ್ತೆಯಲ್ಲಿದೆ. ಬಾವಿಯ ಪಶ್ಚಿಮ ಮತ್ತು ಉತ್ತರದ ಬದಿಗಳು ಹಾಳಾಗಿವೆ. ಪೂರ್ವ ಮತ್ತು ದಕ್ಷಿಣದ ಬದಿಗಳು ಹಾಳಾಗಿವೆ. ಪೂರ್ವ ಮತ್ತು ದಕ್ಷಿಣದ ಬದಿಗಳಲ್ಲಿ ಮೆಟ್ಟಿಲುಗಳಿವೆ. ಬಾವಿಯ ನಡುವೆ ಭೋಗೇಶ್ವರ ದೇವಸ್ಥಾನವಿದೆ. ಇದು ಪೂರ್ವ ಪಶ್ಚಿಮಾಭಿಮುಖವಾಗಿದ್ದ ಗರ್ಭಗೃಹ, ತೆರೆದ ಅಂತರಾಳಗಳನ್ನು ಹೊಂದಿದೆ. ಇದು ದ್ವಿಕೂಟ ದೇವಸ್ಥಾನವಾಗಿದ್ದು ಎರಡೂ ಗರ್ಭಗೃಹ, ತೆರೆದ ಅಂತರಾಳಗಳನ್ನು ಹೊಂದಿದೆ. ಇದು ದ್ವಿಕೂಟ ದೇವಸ್ಥಾನವಾಗಿದ್ದು ಎರಡೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಈ ದೇವಸ್ಥಾನ ಕಲ್ಯಾಣ ಚಾಲುಕ್ಯರ ಕಾಲದ್ದು. ದೇವಸ್ಥಾನವನ್ನು ಪ್ರವೇಶಿಸಲು ಪ್ರಾಚೀನ ಸೇತುವೆಯಿದೆ. ದೇವಸ್ಥಾನದ ಬಾಗಿಲುಗಳು 11–12 ನೆಯ ಶತಮಾನದವುಗಳಾಗಿದ್ದು, 5 ಶಾಖೆಗಳನ್ನು ಹೊಂದಿದೆ. ಈ ದೇವಸ್ಥಾನವು ಶರಣ ಭೋಗಣ್ಣನ ಐಕ್ಯಸ್ಥಳವೆಂದು ನಂಬಿಕೆಯಿದೆ.

(ಆ) **ದರ್ವಂತರ ಬಾವಿ:** ಧರ್ಮದವರ ಬಾವಿ ಎಂಬ ಹೆಸರು. ದರ್ವಂತರ ಬಾವಿಯಾಗಿ ಪರಿವರ್ತನೆಯಾಗಿದೆಯೆಂದು ಹೇಳಲಾಗಿದೆ. ಚೌಕಾಕಾರದಲ್ಲಿರುವ ವಿಶಾಲವಾದ ಈ

ಬಾವಿಗೆ ಪೂರ್ವಕ್ಕೆ ಮೆಟ್ಟಿಲುಗಳಿವೆ. ಪಶ್ಚಿಮದ ಗೋಡೆಯಲ್ಲಿ ಮೂರು ನೀರೆತ್ತುವ ಜಗಲಿಗಳಿವೆ. ಉತ್ತರದ ಗೋಡೆಯಲ್ಲಿ ಒಂದು ನೀರೆತ್ತುವ ಜಗಲಿಯಿದೆ. ಬಾವಿಯ ಉತ್ತರಕ್ಕೆ ಕಲ್ಲು ಮತ್ತು ಸುಣ್ಣದ ಗಾರೆಯಿಂದ ಕಟ್ಟಿದ ಸಣ್ಣ ತೊಟ್ಟಿಯನ್ನು ಒಂದು ಸಣ್ಣ ಕಾಲುವೆಯ ಮೂಲಕ ದೊಡ್ಡ ತೊಟ್ಟಿಗೆ ಜೋಡಿಸಲಾಗಿದೆ. ದೊಡ್ಡ ತೊಟ್ಟಿಯ ಗೋಡೆಗಳಲ್ಲಿ ಪ್ರತಿಯೊಂದು ಬದಿಯಲ್ಲಿಯೂ ಒಂದೊಂದು ಗೂಡುಗಳಿವೆ. ಇವು ಒಬ್ಬ ಮನುಷ್ಯನು ನಿಂತು ನೀರು ತುಂಬುವಷ್ಟು ದೊಡ್ಡದಾಗಿವೆ. ಬಾವಿಯ ಪೂರ್ವಕ್ಕೆ ಒಂದು ಉದ್ದವಾದ ತೊಟ್ಟಿಯಿದ್ದು, ಇದು ಅನೇಕ ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದೆ. ಈಗ ಇದು ಭಾಗಶಃ ನೆಲದಲ್ಲಿ ಮುಚ್ಚಿಹೋಗಿದೆ. ಈ ಬಾವಿಯಲ್ಲಿ ಮೂರು ಶಾಸನಗಳಿವೆ. ಪೂರ್ವಕ್ಕಿರುವ ಗೋಡೆಯಲ್ಲಿ ಅರೇಬಿಕ್/ ಪರ್ಶಿಯನ್ ಮತ್ತು ನಾಗರಿ ಶಾಸನಗಳಿವೆ. ಇವುಗಳನ್ನು ಕಪ್ಪು ಕಲ್ಲಿನಲ್ಲಿ ಒಂದೇ ಹಂತದಲ್ಲಿ ಖಂಡರಿಸಿದ್ದಾರೆ. ಇನ್ನೊಂದು ನಾಗರಿ ಶಾಸನವು ಪಶ್ಚಿಮದ ಗೋಡೆಯಲ್ಲಿದೆ

ಹೀರಾಪುರ: ಇದು ಗುಲಬರ್ಗ ಪಟ್ಟಣದ ಹತ್ತಿರವಿರುವ ಒಂದು ಗ್ರಾಮೀಣ ಪ್ರದೇಶ. ಊರಿನಲ್ಲಿ (ಅ) ಗೌತಪ್ಪನ ಬಾವಿ ಮತ್ತು (ಆ) ಶಂಕರಲಿಂಗ ಬಾವಿಗಳಿವೆ.

(ಅ) **ಗೌತಪ್ಪನ ಬಾವಿ:** ಗ್ರಾಮದ ದಕ್ಷಿಣಕ್ಕೆ ದೊಡ್ಡ ಬಾಗಿಲಿನ ಹತ್ತಿರ ಈ ಬಾವಿಯಿದೆ. ಈ ಬಾವಿ ಎರಡು ಅಂತಸ್ತುಗಳಲ್ಲಿದೆ. ಮೇಲಿನ ಅಂತಸ್ತಿನಲ್ಲಿ ಕೊಠಡಿಗಳು, ಪ್ರವೇಶ ದ್ವಾರಗಳಿದ್ದರೆ, ಕೆಳಗಿನ ಅಂತಸ್ತಿನಲ್ಲಿ ಬಾವಿ, ಮೇಲಿನ ಹಂತದಲ್ಲಿರುವ ಕೊಠಡಿಗಳನ್ನು ಎತ್ತಿಹಿಡಿದಿರುವ ಮುಂದೆ ಚಾಚಿಕೊಂಡಿರುವ ಜಗಲಿ ಮತ್ತು ಪೂರ್ವದ ಗೋಡೆಯಲ್ಲಿರುವ ಕಮಾನುಗಳುಳ್ಳ ಗೋಡೆಗಳಿವೆ. ಬಾವಿಯು ಚೌಕಾಕಾರದಲ್ಲಿದ್ದು ಪೂರ್ವ ಮತ್ತು ಪಶ್ಚಿಮಕ್ಕೆ ಕೊಠಡಿಗಳಿವೆ. ಈಶಾನ್ಯ ಮತ್ತು ಆಗ್ನೇಯ ಮೂಲೆಗಳಲ್ಲಿ ಮೆಟ್ಟಿಲುಗಳಿವೆ. ಮೇಲಿನ ಅಂತಸ್ತಿನಲ್ಲಿ ಮೂರು ಹಂತಗಳಿದ್ದು, ಮೂರೂ ಹಂತಗಳು ಪ್ಯಾರಾಪೆಟ್ ಆಗಿ ಪರಿವರ್ತನೆಯಾಗಿದೆ. ನಾಲ್ಕನೆಯ ಹಂತ ಸ್ವಲ್ಪ ಮುಂದೆ ಚಾಚಿಕೊಂಡಿದೆ.



ಹೀರಾಪುರ ಬಾವಿ, ಗುಲಬರ್ಗಾ

ಕೆಳಗಿನ ಅಂತಸ್ತಿನಲ್ಲಿ ಉತ್ತರ ಮತ್ತು ದಕ್ಷಿಣಕ್ಕೆ ಕಮಾನಿನ ಸಣ್ಣ ಪ್ರವೇಶದ್ವಾರಗಳಿವೆ. ಬಾವಿಯ ವಾಯವ್ಯ ಮೂಲೆಯಲ್ಲಿ ನೆಲದ ಮಟ್ಟದಲ್ಲಿ 'ಐ' ಆಕಾರದ ಒಂದು ಕಟ್ಟಡವಿದೆ. ಈ ಕಟ್ಟಡದಲ್ಲಿ ಒಂದು ಕೊಠಡಿ, ಪೂರ್ವಕ್ಕೆ ಮುಖ ಮಾಡಿರುವ ಕಮಾನುಗಳುಳ್ಳ ಎರಡು ಅಂಕಣಗಳ ಹಜಾರ ಮತ್ತು ಉತ್ತರಕ್ಕೆ ಮುಖ ಮಾಡಿರುವ ಕಮಾನುಗಳುಳ್ಳ ಮೂರು ಅಂಕಣಗಳು ಇನ್ನೊಂದು ಹಜಾರಗಳಿವೆ. ಬಾವಿಯ ಪಶ್ಚಿಮ ಬದಿಯಲ್ಲಿ ನೀರೆತ್ತುವ ಜಗಲಿಯಿದೆ.

ಬಾವಿಯಲ್ಲಿ ಕ್ರಿ.ಶ. 1728–33 ರ ಕಾಲದ ಒಂದು ಶಾಸನವಿದೆ. ಈ ಶಾಸನವು ಹೀರಾಪುರದ ನಿವಾಸಿಯಾದ ಕಾಶ್ಯಪ ಗೋತ್ರದ ಗೌತಮನು ಈ ಬಾವಿ, ಛತ್ರ ಮತ್ತು ಒಂದು ತೋಟವನ್ನು ಕಟ್ಟಿಸಿದ್ದಾನೆಂದು ತಿಳಿಸುತ್ತದೆ. ಅಲ್ಲದೆ ಈ ಬಾವಿಯನ್ನು ಕ್ರಿ.ಶ. 1731 ರಲ್ಲಿ ಕಟ್ಟಲು ಪ್ರಾರಂಭಿಸಿ ಕ್ರಿ.ಶ. 1734ರಲ್ಲಿ ಪೂರ್ಣಗೊಳಿಸಲಾಯಿತೆಂದು ತಿಳಿಸುತ್ತದೆ.

(ಆ) **ಶಂಕರಲಿಂಗ ಬಾವಿ:** ಹೀರಾಪುರ ಬಾಗಿಲಿನ ಈಶಾನ್ಯ ದಿಕ್ಕಿನಲ್ಲಿದೆ. ಇದೊಂದು ಚಿಕ್ಕಬಾವಿ, ಗೌತಪ್ಪನ ಬಾವಿಯ ಮಾದರಿಯಲ್ಲಿದೆ. ಪೂರ್ವ ಮತ್ತು ಪಶ್ಚಿಮ ಬದಿಗಳಲ್ಲಿ ಪ್ರವೇಶದ್ವಾರಗಳಿವೆ. ಪಶ್ಚಿಮಕ್ಕಿರುವ ದಾರಿಯ ಮೇಲೆ ಕಮಾನಿನ ಸೇತುವೆ ಇದೆ. ಉತ್ತರದ ಬದಿಯಲ್ಲಿ ನೀರೆತ್ತುವ ಜಗಲಿಯಿದೆ.

ಬಾವಿಯಲ್ಲಿ ಆರು ಅಂತಸ್ತುಗಳಿವೆ. ಮೇಲಿನ ಅಂತಸ್ತಿನ ಮೂರು ಹಂತಗಳು ಪ್ಯಾರಾಪೆಟ್ ಆಗಿವೆ. ಕೆಳಗೆ ಹೋದಂತೆ 2ನೇ ಅಂತಸ್ತಿನಲ್ಲಿ 5 ಹಂತಗಳು 3ನೇ ಅಂತಸ್ತಿನಲ್ಲಿ 5 ಹಂತಗಳು ಮತ್ತು ಆರನೆಯ ಅಂತಸ್ತಿನಲ್ಲಿ ನೀರಿರುವ ಮಟ್ಟಗಳಿವೆ. ಪ್ರತಿಯೊಂದು ಅಂತಸ್ತು ಒಂದೊಂದು ಮೆಟ್ಟಿಲಿನಂತೆ ಮುಂದೆ ಚಾಚಿಕೊಂಡಿದೆ. ಅಲ್ಲದೆ ಪ್ರತಿಯೊಂದು ಅಂತಸ್ತಿನ ಮೇಲಿನ ಹಂತ ಸ್ವಲ್ಪ ಮುಂದೆ ಚಾಚಿಕೊಂಡಿದ್ದು, ಉಳಿದ ಹಂತಗಳು ಒಂದೇ ಮಟ್ಟದಲ್ಲಿವೆ. ಈ ಬಾವಿಯಲ್ಲಿ ಕ್ರಿ. ಶ. 1653ರ ಒಂದು ಶಾಸನವಿದೆ. ವೈಶ್ಯಕುಲದ ಚಿಕ್ಕೋಜಿ ಸೋಮಾಜಿ ಮೋಖೆಡನು ಎಲ್ಲರಿಗೂ ಪುಣ್ಯ ದೊರೆಯಲೆಂದು ಈ ಬಾವಿ, ಸೋಮೇಶ್ವರ ಮತ್ತು ಬಸವೇಶ್ವರ ದೇವಸ್ಥಾನಗಳನ್ನು ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ.

ಈ ಎರಡು ಬಾವಿಗಳಲ್ಲದೆ ಇನ್ನೂ ಮೂರು ಬಾವಿಗಳು ಹೀರಾಪುರದಲ್ಲಿವೆ. ಇವುಗಳಲ್ಲಿ ಒಂದು ಮಸೀದಿಯ ಮುಂದಿದೆ.

ಮಾಶಾಳ: ಅಫಜಲಪುರ ತಾಲ್ಲೂಕಿನಲ್ಲಿರುವ ಈ ಗ್ರಾಮ ಅಫಜಲಪುರದಿಂದ 28 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ 'ಮಾಸಿವಳ' ಎಂದು ಉಲ್ಲೇಖಗೊಂಡಿರುವ ಈ ಊರು ಹಿಂದೆ ಅಲಂದೂರು 100ಕ್ಕೆ ಸೇರಿದ್ದ ಅಣಂದೂರು–300ರ ಒಂದು ಅಗ್ರಹಾರವಾಗಿತ್ತು. ಇಲ್ಲಿ ಅನೇಕ ಪ್ರಾಚೀನ ದೇವಾಲಯಗಳಿವೆ. ಪಂಚಾಯತಿ ಹತ್ತಿರವಿರುವ ರಾಮಲಿಂಗ ದೇವಸ್ಥಾನವು 12ನೆಯ ಶತಮಾನಕ್ಕೆ ಸೇರಿದ್ದು, ಗರ್ಭಗೃಹ, ತೆರೆದ ಅಂತರಾಳ ಮತ್ತು ತೆರೆದ ನವರಂಗವನ್ನು ಹೊಂದಿದೆ. ನರಸಿಂಹ–ಈಶ್ವರ

ದೇವಸ್ಥಾನವು ಇಲ್ಲಿರುವ ಇನ್ನೊಂದು ಸುಂದರ ದೇವಸ್ಥಾನ. ಇದು ದ್ವಿಕೂಟವಾಗಿದ್ದು, ಗರ್ಭಗೃಹಗಳಲ್ಲಿ ನರಸಿಂಹ ಮತ್ತು ಶಿವಲಿಂಗಗಳಿವೆ. ಇವುಗಳಲ್ಲದೆ ಇಲ್ಲಿ ಮಲಖಾನ ಗುಡಿ, ಮಹಾದೇವ, ಕೇಶವ, ತಿಪ್ಪಣೇಶ್ವರ ಮುಂತಾದ ದೇವಸ್ಥಾನಗಳಿವೆ.

ಕೇಶವ ಮತ್ತು ತಿಪ್ಪಣೇಶ್ವರ ದೇವಸ್ಥಾನಗಳ ಮುಂದೆ ಸುಂದರವಾದ ಬಾವಿಗಳಿವೆ.

(ಅ) **ಕಲ್ಲು ಕಂಬದ ಬಾವಿ:** ಇದು ತಿಪ್ಪಣೇಶ್ವರ ದೇವಸ್ಥಾನದ ಮುಂದಿದೆ. ಬಾವಿಯ ಪಶ್ಚಿಮ ಬದಿ ಅಪೂರ್ಣವಾಗಿದೆ. ಇದೇ ಬದಿಯಲ್ಲಿ ಕಲ್ಲಿನ ದೀಪದ ಕಂಬವಿದೆ. ಈ ಕಂಬದಲ್ಲಿ ಅನೇಕ ಚೌಕಾಕಾರದ ಘನಾಕೃತಿಗಳಿವೆ. ಪ್ರತಿಯೊಂದು ಘನಾಕೃತಿಯಲ್ಲಿ ಮುಂದೆ ಚಾಚಿಕೊಂಡಿರುವ 8 ದೀಪಗಳಿವೆ. ಇವುಗಳಲ್ಲಿ 4 ದೀಪಗಳು ಮೂಲೆಗಳಲ್ಲಿ ಮತ್ತು 4 ದೀಪಗಳು ಪಾರ್ಶ್ವಗಳಲ್ಲಿವೆ. ತುದಿಯಲ್ಲಿ ಚೌಕಾಕಾರದ ಶಿಖರಗಳಿವೆ.

ಬಾವಿಯ ಮೆಟ್ಟಿಲುಗಳು ಪೂರ್ವದಿಂದ ಪ್ರಾರಂಭವಾಗಿ ಉತ್ತರಕ್ಕೆ ತಿರುಗಿ 'ಐ' ಆಕಾರದಲ್ಲಿ ರೂಪುಗೊಂಡಿವೆ. ಬಾವಿಯನ್ನು ಉದ್ದವಾದ ನುಣುಪುಕಲ್ಲುಗಳಿಂದ ಕಟ್ಟಿದ್ದಾರೆ. ಬಾವಿಯಲ್ಲಿ ಒಟ್ಟು 6 ಅಂತಸ್ತುಗಳಿವೆ. ಪ್ರತಿಯೊಂದು ಅಂತಸ್ತಿನಲ್ಲಿ 4 ಹಂತಗಳು ಒಂದರ ಮೇಲೊಂದರಂತೆ ಇವೆ. ಆದರೆ ಪ್ರತಿಯೊಂದು ಅಂತಸ್ತು ಇನ್ನೊಂದು ಅಂತಸ್ತಗಿಂತ ತುಂಬಾ ಕಡಿಮೆ ಪ್ರಮಾಣದಲ್ಲಿ ಮುಂದೆ ಚಾಚಿಕೊಂಡಿದೆ. ಬಾವಿಯ ದಾರಿಯ ಪಶ್ಚಿಮದ ಗೋಡೆಯಲ್ಲಿ ಒಂದು ಚಿಕ್ಕ ಗೂಡಿನಲ್ಲಿ ನಂದಿಯಿದೆ.

ಈ ಬಾವಿಯಲ್ಲಿ ಒಂದು ಶಾಸನವಿದೆ. ಇದು ಆರನೇ ವಿಕ್ರಮಾದಿತ್ಯನ ಕಾಲದ ಶಾಸನವಾಗಿದ್ದು ಈ ದೇವಸ್ಥಾನವನ್ನು ತಿಪ್ಪಣ್ಣನು ನಿರ್ಮಿಸಿ, ಮುಂದಿರುವ ಸೋಪಾನ ಬಾವಿಯನ್ನು ವಿಸ್ತರಿಸಿದನೆಂದು ತಿಳಿಸುತ್ತದೆ. ಅಲ್ಲದೆ ಈತ ನಾಲ್ಕು ಧರ್ಮೇತಗಳಿಗೆ ಹತ್ತು ಮತ್ತರು ಭೂಮಿಯನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

(ಆ) **ಯಾಳಬಾವಿ:** ಈ ಬಾವಿಯು ಕೇಶವ ದೇವಸ್ಥಾನದ ಮುಂದಿದೆ. ಇದು ಆಯತಾಕಾರದಲ್ಲಿದ್ದು, 6 ಅಂತಸ್ತುಗಳನ್ನು ಹೊಂದಿದೆ. ಪ್ರತಿಯೊಂದು ಅಂತಸ್ತು ಮೂರು ಹಂತಗಳನ್ನು ಹೊಂದಿದೆ. ಬಾವಿಯ ತಳದಲ್ಲಿ ನೈಸರ್ಗಿಕ ಕಲ್ಲಿದೆ. ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಪಕ್ಕದಲ್ಲಿ ಗೂಡುಗಳಿವೆ. ಉತ್ತರ ಮತ್ತು ದಕ್ಷಿಣದ ಬದಿಗಳಲ್ಲಿ ನೀರೆತ್ತುವ ಜಗಲಿಗಳಿವೆ. ಬಾವಿಯ ಹತ್ತಿರ ದಕ್ಷಿಣಕ್ಕೆ ಒಂದು ದೊಡ್ಡ ನೀರಿನ ತೊಟ್ಟಿ ಮತ್ತು ಸಾಲಾಗಿ ಇರುವ ಚಿಕ್ಕ ತೊಟ್ಟಿಗಳ ಅವಶೇಷಗಳು ಬಿದ್ದಿವೆ. ಮೊದಲು ನೀರನ್ನು ದೊಡ್ಡ ತೊಟ್ಟಿಯಲ್ಲಿ ಶೇಖರಿಸಿ ನಂತರ ಚಿಕ್ಕ ತೊಟ್ಟಿಗಳಿಗೆ ಬಿಡುತ್ತಿದ್ದರೆಂದು ತೋರುತ್ತದೆ. ಚಿಕ್ಕ ತೊಟ್ಟಿಗಳಿಗೆ 'ಯಾಳ' ಎಂದು ಕರೆಯುತ್ತಿದ್ದುದರಿಂದ ಈ ಬಾವಿಗೆ ಯಾಳದ ಬಾವಿ ಎಂದು ಹೆಸರು ಬಂದಿರಬೇಕು.

ಕೇಶವ ದೇವಸ್ಥಾನದ ಒಂದು ಕಲ್ಲಿನ ಮೇಲೆ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲದ (ಕ್ರಿ.ಶ. 1115) ಒಂದು ಶಾಸನವಿದೆ. ಯುವರಾಜ ಮಲ್ಲಿಕಾರ್ಜುನನು ಅಲಂದೆ-1000 ವನ್ನಾಳುತ್ತಿದ್ದಾಗ ದಂಡನಾಯಕ ಗೋವಿಂದಮಯ್ಯನು ಈ ತ್ರಿಕೂಟ ದೇವಸ್ಥಾನವನ್ನು ನಿರ್ಮಿಸಿ, ಪೂಜಾವಿಧಿಗೆಂದು ಗೋದಾವರಿ-ಬಂಜೇರಾ ಸಂಗಮದ ಕೂಡಲ ತೀರ್ಥದಲ್ಲಿ 100 ಮತ್ತರು ಹೊಲ, ಒಂದು ಮತ್ತರು ತೋಟವನ್ನು ದಾನ ಕೊಟ್ಟ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಅದೇ ಕಲ್ಲಿನ ಮೇಲಿರುವ ಇನ್ನೊಂದು ಶಾಸನವು (ಕ್ರಿ.ಶ. 1119) ತೊಳಗೂರಿನಲ್ಲಿ ಬಿಟ್ಟು 200 ಮತ್ತರು ಭೂದಾನದ ಬಗ್ಗೆ ಮತ್ತು ಆ ದಾನ ಭೂಮಿಗಳನ್ನು ಯಾವ ಯಾವ ಉದ್ದೇಶಕ್ಕೆ ಉಪಯೋಗಿಸ ಬೇಕೆಂಬುದನ್ನು ತಿಳಿಸುತ್ತದೆ.

ಚಿಂಚನೂರು: ಗುಲ್ಬರ್ಗಾದಿಂದ ವಾಯುವ್ಯಕ್ಕೆ 25 ಕಿ. ಮೀ. ಮತ್ತು ಆಳಂದದಿಂದ ಪೂರ್ವಕ್ಕೆ 31 ಕಿ.ಮೀ. ದೂರದಲ್ಲಿದೆ. ಇದು ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿ ಬ್ರಹ್ಮೇಶ್ವರ, ಬಾಣೇಶ್ವರ, ಗೌಳೇಶ್ವರ, ಸಿದ್ಧಾನಂದ, ವೀರಭದ್ರ ಮುಂತಾದ ದೇವಸ್ಥಾನಗಳಿವೆ. ಬ್ರಹ್ಮೇಶ್ವರ ದೇವಸ್ಥಾನವು ಊರ ಮಧ್ಯದಲ್ಲಿದೆ. ಗರ್ಭಗೃಹ ಮತ್ತು ಅಂತರಾಳಗಳು ಈಗ ಉಳಿದಿದ್ದು, ನವರಂಗ ಸಂಪೂರ್ಣವಾಗಿ ನಾಶವಾಗಿದೆ. ಅಂತರಾಳದ ಎರಡು ಕಂಬಗಳ ಮೇಲಿರುವ ಕ್ರಿ. ಶ. 1380 ರ ಶಾಸನವು ಬ್ರಹ್ಮೇಶ್ವರ ದೇವರಿಗೆ ಮಾಯಣ್ಣನೆಂಬವನು ದತ್ತಿ ಬಿಟ್ಟ ವಿಷಯ ತಿಳಿಸುತ್ತದೆ.

(ಅ) **ಕುಲಕರ್ಣಿ ಬಾವಿ:** ಊರಿನ ದಕ್ಷಿಣಕ್ಕೆ ಒಂದು ಹೊಲದಲ್ಲಿದೆ. ಬಾವಿಯು ಚೌಕಾಕಾರದಲ್ಲಿದ್ದು ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಇದನ್ನು ಚಿಕ್ಕ ಕಪ್ಪುಕಲ್ಲುಗಳಿಂದ ಕಟ್ಟಿದ್ದಾರೆ. ಬಾವಿಯಲ್ಲಿ 5 ಅಂತಸ್ತುಗಳಿವೆ. ಮೇಲಿನಿಂದ ಮೊದಲನೆಯ ಅಂತಸ್ತಿನ ತುದಿಯಲ್ಲಿರುವ ಹಂತವು ಎರಡೂ ಕಡೆಗೆ ಇಳಿಜಾರಾಗಿದೆ. ಇದರ ಕೆಳಗೆ 8 ಸರಳ ಹಂತಗಳಿವೆ. ಈ ಹಂತಗಳು ಸ್ವಲ್ಪ ಸ್ವಲ್ಪವಾಗಿ ಮುಂದೆ ಚಾಚಿಕೊಂಡಿವೆ. ಮೂರನೆಯ ಅಂತಸ್ತಿನಲ್ಲಿ 7 ಹಂತಗಳು ಮತ್ತು ಎರಡನೆಯ ಅಂತಸ್ತಿನಲ್ಲಿ 9 ಹಂತಗಳಿವೆ. ಮೇಲಿನ ಹಂತಗಳಲ್ಲಿ ಪಶ್ಚಿಮದ ಗೋಡೆಯಲ್ಲಿ ಒಂದು ಚಿಕ್ಕ ಗೂಡು ಇದೆ. ಈ ಗೂಡಿನ ಹಿಂದಿನ ಗೋಡೆಯಲ್ಲಿ ಒಂದು ಶಾಸನವಿದೆ. ಗೂಡಿನ ಬದಿಗಳಲ್ಲಿ ಅರೆಗಂಬ ಮತ್ತು ಮೇಲೆ ಪದ್ಮದಂತಿರುವ ಹಂತವಿದೆ. ಬಾವಿಯಲ್ಲಿ ಇಳಿದು ಹೋದಂತೆ ಮೆಟ್ಟಿಲುಗಳು ಅಗಲವಾಗುತ್ತಾ ಹೋಗಿವೆ. ಬಾವಿಯ ದಕ್ಷಿಣದ ಗೋಡೆಯಲ್ಲಿ ಮುಂದೆ ಚಾಚಿಕೊಂಡಿರುವ ಒಂದು ಭಾಗವಿದೆ. ಈ ಭಾಗದ ಮೇಲೆ ಒಂದು ಕೊಠಡಿಯಿದ್ದು, ಇಲ್ಲಿ ಮೂರು ಕಂಬಗಳು ಮತ್ತು ಮೇಲೆ ಮೂರು ತೊಲೆಗಳಿವೆ. ಈ ಕೊಠಡಿಯ ಪಶ್ಚಿಮದ ಗೋಡೆಯನ್ನು ದುರಸ್ತಿಗೊಳಿಸಲಾಗಿದೆ. ಬಾವಿಯ ದಾರಿಯನ್ನು ಮುಚ್ಚಲಾಗಿದೆ. ಕೊಠಡಿಯ ಎರಡು ಬದಿಗಳಲ್ಲಿ ಎರಡು ನೀರೆತ್ತುವ ಜಗಲಿಗಳಿವೆ. ಬಾವಿಯಲ್ಲಿರುವ ಶಾಸನವು (ಕ್ರಿ.ಶ. 1409) ಕಲಿನಾಥ ಪಂಡಿತನು ಈ ಬಾವಿ ಮತ್ತು ಜಂಬು, ನಿಂಬು, ಕಪಿತ್ಥ, ಅಶ್ವತ್ಥ ಮರಗಳಿಂದ ಸುತ್ತುವರಿದ ವಿಶ್ರಾಂತಿಗೃಹವನ್ನು ಚೆಂಚಮಪುರಕ್ಕೆ ಬರುವ ಪ್ರಯಾಣಿಕರಿಗಾಗಿ ಕಟ್ಟಿಸಿದನೆಂದು ತಿಳಿಸುತ್ತದೆ.

ಯಡ್ರಾಮಿ: ಜೇವರ್ಗಿಯಿಂದ ನೈಋತ್ಯಕ್ಕೆ 50 ಕಿ.ಮೀ. ಮತ್ತು ಸಿಂದಗಿಯಿಂದ 35 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಎಳರಾವೆ' ಎಂದು ಉಲ್ಲೇಖಗೊಂಡಿದೆ. ಯಡ್ರಾಮಿಯು ಹಿಂದೆ ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಶಾಸನಗಳಲ್ಲಿ ಉಕ್ತವಾಗಿರುವ ಎಳರಾಮೆ ತೀರ್ಥವು ಇಂದು ರಾಮತೀರ್ಥವೆಂದು ಕರೆಯಲ್ಪಡುತ್ತದೆ.



ಯಡ್ರಾಮಿ ಬಾವಿ, ಗುಲಬರ್ಗಾ

ರಾಮತೀರ್ಥ: ಇದೊಂದು ವಿಶೇಷ ಬಾವಿ. ಇಲ್ಲಿ ಬಾವಿ, ದೇವಸ್ಥಾನ ಮತ್ತು ವಿಶ್ರಾಂತಿ ಗೃಹ ಎಲ್ಲ ಒಂದೇ ಸ್ಥಳದಲ್ಲಿವೆ. ಬಾವಿಯ ಆಳತೆಯನ್ನು ಗಮನಿಸಿದಾಗ ದೇವಸ್ಥಾನ ಮತ್ತು ವಿಶ್ರಾಂತಿ ಗೃಹಗಳೇ ಎದ್ದು ಕಾಣುತ್ತವೆ. ಬಾವಿ ಚೌಕಾಕಾರದಲ್ಲಿದ್ದು ಮಧ್ಯದಲ್ಲಿ ಜಗಲಿಯಿದೆ. ಜಗಲಿಯ ಮೇಲೆ ದೇವಸ್ಥಾನವಿದೆ. ದೇವಸ್ಥಾನದ ಸುತ್ತಲೂ ಕಮಾನುಗಳುಳ್ಳ ಮೊಗಸಾಲೆಯಿದೆ. ಈ ಮೊಗಸಾಲೆಗೆ ಹೋಗಲು ಪೂರ್ವ ಮತ್ತು ದಕ್ಷಿಣದ ಬದಿಗಳಲ್ಲಿ ಮೆಟ್ಟಿಲುಗಳಿವೆ. ಇವುಗಳಲ್ಲಿ ಪೂರ್ವಕ್ಕಿರುವ ಪ್ರವೇಶ ಮುಖ್ಯ ಪ್ರವೇಶ. ಇಲ್ಲಿ ಮಧ್ಯದಲ್ಲಿ ದೊಡ್ಡ ಕಮಾನು ಇದೆ. ಇದರ ಅಕ್ಕಪಕ್ಕಗಳಲ್ಲಿ ಮುಚ್ಚಿರುವ ಕಮಾನುಗಳಿವೆ. ಮಧ್ಯದ ಅಂತಸ್ತಿನ ಮೇಲೆ ಇನ್ನೊಂದು ಅಂತಸ್ತು ಇದೆ. ಇಲ್ಲಿ ಮುಂಭಾಗದಲ್ಲಿ ಕಮಾನುಗಳುಳ್ಳ 3 ಕಿಟಕಿಗಳಿವೆ. ಈ ಪ್ರವೇಶದಲ್ಲಿ ಗೋಪುರಗಳಿವೆ. ಇವುಗಳಲ್ಲಿ ಮಧ್ಯದವುಗಳಿಗೆ ತಳ, ಕುಂಭ, ತುದಿಯಿರುವ ಉದ್ದವಾದ ದಿಂಡುಗಳಿದ್ದು, ಎಲ್ಲವೂ ಚಾಲುಕ್ಯರ ಶೈಲಿಯ ಕಂಬಗಳಂತಿವೆ. ಉಳಿದ ಗೋಪುರಗಳು ಪ್ರವೇಶದ್ವಾರದ ಮೇಲೆ ಮಾತ್ರ ಕಾಣುತ್ತವೆ.

ಸೇತುವೆಯ ಕೆಳಭಾಗ ಕಂಬ ಮತ್ತು ತೊಲೆಗಳಿಂದ ಕೂಡಿದೆ. ಇದು ಒಂದು ಅಂತಸ್ತಾಗಿ ರೂಪುಗೊಂಡಿದೆ. ಮೇಲಿರುವ ಕಮಾನುಗಳ ಮಾಳಿಗೆಯು ಸೇತುವೆಯ ತುದಿ ಭಾಗವಾಗಿ ಮಾರ್ಪಾಡಾಗಿದೆ. ಬಾವಿಯ ಮಧ್ಯದಲ್ಲಿರುವ ಜಗಲಿಗೆ ಮೂರು ಅಂತಸ್ತುಗಳಿವೆ. ಜಗಲಿಯ ಉತ್ತರ ಬದಿಯಲ್ಲಿ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಮೂಲಕ ನೀರಿರುವ ಸ್ಥಳಕ್ಕೆ ಹೋಗಬಹುದಾಗಿದೆ. ಮಧ್ಯದಲ್ಲಿರುವ ರಾಮಲಿಂಗ ದೇವಸ್ಥಾನವು ಇಸ್ಲಾಮಿಕ್ ಶೈಲಿಯಲ್ಲಿದೆ. ದೇವಸ್ಥಾನದ ಗರ್ಭಗೃಹದ ಮೇಲೆ ಗುಮ್ಮಟವಿದ್ದು ಮುಂದೆ ಕಮಾನುಗಳ ಮೂರು ಅಂಕಣಗಳ ಹಜಾರವಿದೆ. ಗರ್ಭಗೃಹದ ಒಳಭಾಗ ಇಸ್ಲಾಮಿಕ್ ಕಟ್ಟಡದಂತೆಯೇ ಇದೆ. ಮೇಲೆ ಅಷ್ಟಾಕೃತಿಯ ಮೂರು ಅಚಿತಸ್ತುಗಳಿವೆ. ಇವುಗಳಲ್ಲಿ ಕೆಳಗಿನ ಅಂತಸ್ತು ಸರಳವಾಗಿದ್ದು, ಮೇಲಿನ ಎರಡು ಅಂತಸ್ತುಗಳು ಮುಚ್ಚಿದ ಕಮಾನುಗಳಿಂದ ಅಲಂಕರಿಸಲ್ಪಟ್ಟಿವೆ. ಮೇಲೆ ಎತ್ತರವಾದ ಮತ್ತು ವರ್ತುಲಾಕಾರದ ಭಾಗಗಳು ಮತ್ತು ಗುಮ್ಮಟಗಳಿವೆ. ಬಾವಿಯ ಪಶ್ಚಿಮ ಬದಿಯಲ್ಲಿ ನೀರೆತ್ತುವ ಜಗಲಿಯಿದೆ. ಇದು ಬಾವಿಯಲ್ಲಿ ಚಾಚಿಕೊಂಡಿದೆ. ಮೊಗಸಾಲೆಯಲ್ಲಿ ಸುತ್ತಲೂ ಕಕ್ಷಾಸನವಿದೆ. ಈ ಬಾವಿಯ ಇಡೀ ಆವರಣವನ್ನು ನುಣುಪುಕಲ್ಲುಗಳಿಂದ ಕಟ್ಟಿ ಸುಣ್ಣದ ಗಿಲಾವು ಮಾಡಿದ್ದಾರೆ.

(ಆ) **ದೊಡ್ಡ ಬಾವಿ:** ಬಸವಣ್ಣನ ದೇವಸ್ಥಾನದ ಉತ್ತರಕ್ಕೆ ಮತ್ತು ರಾಮತೀರ್ಥದ ಈಶಾನ್ಯ ದಿಕ್ಕಿನಲ್ಲಿದೆ. ಇದು ವಿಶಾಲವಾದ ಬಾವಿ, ಉದ್ದವಾದ ಬಂಡೆಗಳಿಂದ ಕಟ್ಟಿದ್ದಾರೆ. ಪೂರ್ವ ಮತ್ತು ದಕ್ಷಿಣದ ಬದಿಗಳಲ್ಲಿ ಮೆಟ್ಟಿಲುಗಳಿವೆ. ದಕ್ಷಿಣದ ಬದಿಯಲ್ಲಿರುವ ಮೆಟ್ಟಿಲುಗಳಿಗೆ ಎರಡೂ ಪಕ್ಕಗಳಲ್ಲಿ ಅಡ್ಡವಾಗಿ ಮೆಟ್ಟಿಲುಗಳಿವೆ. ಬಾವಿಯಲ್ಲಿ 6 ಅಂತಸ್ತುಗಳಿವೆ. ಎರಡನೇ ಅಂತಸ್ತಿನ ಎರಡನೇ ಹಂತದಲ್ಲಿ ದಕ್ಷಿಣಕ್ಕೆ ಕಲ್ಯಾಣ ಚಾಲುಕ್ಯರ ಶೈಲಿಯ ಚೌಕಾಕಾರದ ಹೂಗಳ ಅಲಂಕಾರವಿದೆ. 5ನೇ ಅಂತಸ್ತಿನ 5ನೇ ಹಂತದಲ್ಲಿ ಸುರುಳಿಬಳ್ಳಿಯಲ್ಲಿ ಆನೆಗಳ ನಾಲ್ಕು ಸಾಲುಗಳಿವೆ. ಬಾವಿಯ ಪ್ರತಿಯೊಂದು ಅಂತಸ್ತು ಇನ್ನೊಂದಕ್ಕಿಂತ ಸ್ವಲ್ಪ ಮುಂದೆ ಚಾಚಿಕೊಂಡಿದೆ. ಈಗ ಬಾವಿಯ ಪ್ರವೇಶಗಳನ್ನು ಮುಚ್ಚಲಾಗಿದೆ. ಪಶ್ಚಿಮ ಬದಿಯಲ್ಲಿ ನೀರು ಎತ್ತಲು 8 ಚಕ್ರಗಳನ್ನು ಸೇರಿಸಿದ್ದಾರೆ. ಜೊತೆಯಾಗಿದ್ದ ನೀರೆತ್ತುವ ಜಗಲಿಗಳ ಜಗಲಿಗಳ ಕಲ್ಲಿನ ಗುರುತುಗಳು ಕಾಣುತ್ತವೆ.

(ಇ) **ಮುದನೂರು:** ಸುರುಪುರದಿಂದ ವಾಯವ್ಯಕ್ಕೆ 36 ಕಿ.ಮೀ. ಮತ್ತು ಕೆಂಭಾವಿಯಿಂದ 10 ಕಿ.ಮೀ. ದೂರದಲ್ಲಿ, ಕೆಂಭಾವಿ–ಹುಣಸಗಿ ರಸ್ತೆಯಲ್ಲಿದೆ. ಇದು ಬಸವಪೂರ್ವ ಯುಗದ ವಚನಕಾರ ಜೇಡರ ದಾಸಿಮಯ್ಯನ ಜನ್ಮಸ್ಥಳ. ಈಗ ಇಲ್ಲಿ ಚಿಕ್ಕ ಮುದನೂರು ಮತ್ತು ಹಿರೇ ಮುದನೂರು ಎಂಬ ಎರಡು ಮುದನೂರುಗಳು ಅರ್ಧ ಕಿ.ಮೀ. ಅಂತರದಲ್ಲಿವೆ. ಹಿಂದೆ ಈ ಎರಡೂ ಮುದನೂರಗಳು ಕೂಡಿದ್ದು, ಅಗ್ರಹಾರ 'ಮುದಿ ನೀರು' ಎಂದು ಕರೆಯಲ್ಪಡುತ್ತಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯ, ಇಮ್ಮಡಿ ಜಗದೇಕಮಲ್ಲ, ಕಳಚೂರಿ ಬಿಜ್ಜಳ, ಯಾದವ ಸಿಂಘಣರ ಕಾಲದ ಅನೇಕ ಶಾಸನಗಳು ಇಲ್ಲಿ ದೊರೆತಿವೆ. ಜೇಡರ ದಾಸಿಮಯ್ಯನು ಆರಾಧಿಸುತ್ತಿದ್ದ ರಾಮನಾಥ ದೇವಸ್ಥಾನ ಇಲ್ಲಿದೆ. ರಾಮತೀರ್ಥ, ಲಕ್ಷ್ಮಣತೀರ್ಥ, ಪಾಂಡು ತೀರ್ಥ, ಮರಳುತೀರ್ಥ, ಸಕ್ಕರೆ ತೀರ್ಥ, ಹಾಲುತೀರ್ಥ ಎಂದು ಕರೆಯಲ್ಪಡುವ ಅನೇಕ ಬಾವಿಗಳು ಈ ಊರಿನಲ್ಲಿವೆ. ಇವುಗಳಲ್ಲಿ ರಾಮತೀರ್ಥ ಮತ್ತು ಲಕ್ಷ್ಮಣ ತೀರ್ಥಗಳು ಮತ್ತು ಹಾಲಿತೀರ್ಥ ಮತ್ತು ಸಕ್ಕರೆ ತೀರ್ಥಗಳು ಅಕ್ಕಪಕ್ಕದಲ್ಲಿವೆ. ರಾಮತೀರ್ಥದ ವಿವರಣೆ ಮಾತ್ರ ಲಭ್ಯವಿರುವುದರಿಂದ ಇಲ್ಲಿ ಅದರ ಬಗ್ಗೆ ಮಾತ್ರ ವಿವರಿಸಲಾಗಿದೆ.

(ಅ) **ರಾಮತೀರ್ಥ:** ಈ ಬಾವಿಯನ್ನು ನುಣುಪಾದ ಕಲ್ಲುಗಳಿಂದ ಕಟ್ಟಿದ್ದಾರೆ. ಇದು ಆಯತಾಕಾರದ ತುಂಬ ದೊಡ್ಡ ಬಾವಿ. ನಾಕು ಬದಿಗಳಲ್ಲಿ ಮೆಟ್ಟಿಲುಗಳಿವೆ. ದಕ್ಷಿಣ ದಿಕ್ಕಿನಲ್ಲಿರುವ ಮೇಲೆ ನಾಲ್ಕು ಕಂಬಗಳಿವೆ. ಒಳಬದಿಯಲ್ಲಿರುವ ಕಂಬಗಳು ತೋರಣವಿರುವ ಹಣೆಪಟ್ಟಿಯನ್ನು ಎತ್ತಿಹಿಡಿದಿವೆ. ಇಲ್ಲಿ ಆರು ಮಕರಗಳಿದ್ದು, ಕೊನೆಯ ಎರಡು ಮಕರಗಳು ಒಳಭಾಗಕ್ಕೆ ಮುಖ ಮಾಡಿದ್ದರೆ, ಉಳಿದವುಗಳು ಎರಡು ಜೊತೆಗಳಲ್ಲಿವೆ. ಜೊತೆಯಲ್ಲಿರುವ ಮಕರಗಳು ವಿರುದ್ಧ ದಿಕ್ಕಿಗೆ ಮುಖ ಮಾಡಿವೆ. ಮಕರಗಳ ಮೇಲೆ ಸವಾರರಿದ್ದಾರೆ. ಹಣೆಪಟ್ಟಿಯ ಮಧ್ಯದಲ್ಲಿ ಲಕ್ಷ್ಮೀ ಮತ್ತು ಹಾರುತ್ತಿರುವ ಗಂಧರ್ವರಿದ್ದಾರೆ. ಹೊರಗಿನ ಕಂಬಗಳ ಮೇಲಿದ್ದ ತೋರಣವನ್ನು ಈಗ ಬಾವಿಯ ಪಕ್ಕದಲ್ಲಿ ಇಟ್ಟಿದ್ದಾರೆ. ಇದೂ ಸಹ ಮಕರತೋರಣವಾಗಿದ್ದು, ಮಕರಗಳ ಮೇಲೆ ಸವಾರರಿದ್ದಾರೆ. ಮಧ್ಯದಲ್ಲಿ ಗಜಲಕ್ಷ್ಮೀ ಮತ್ತು ಹೂವು ಗಳನ್ನು ಹಿಡಿದ ಕುಬ್ಜ ಮನುಷ್ಯರಿದ್ದಾರೆ. ಇಲ್ಲಿರುವ ಮೆಟ್ಟಿಲುಗಳ ಪಶ್ಚಿಮಕ್ಕೆ ಒಂದು ಗುಡಿಯಿದೆ. ಇದರಲ್ಲಿ ಭಗ್ನಗೊಂಡ ವಿಷ್ಣುವಿನ ವಿಗ್ರಹವಿದೆ.

ಬಾವಿಯ ಗೋಡೆಗಳಲ್ಲಿ ಅನೇಕ ಗೂಡುಗಳಿವೆ. ಇವುಗಳಲ್ಲಿ ಕೆಲವು ಗೂಡುಗಳನ್ನು ಮುಚ್ಚಲಾಗಿದ್ದು, ಉಳಿದವುಗಳಲ್ಲಿ ವಿಗ್ರಹ ಗಳಿವೆ. ಬಾವಿಯ ಪೂರ್ವದಿಕ್ಕಿನಲ್ಲಿ ಮುಂದೆ ಚಾಚಿಕೊಂಡಿ ರುವ ಜಗಲಿಯಿದೆ. ಈ ಜಗಲಿಯನ್ನು ದುಂಡಗಿರುವ ಮೂರು ಕಂಬಗಳು ಎತ್ತಿ ಹಿಡಿದಿವೆ. ನಾಲ್ಕನೆಯ ಕಂಬ ಕಾಣೆ ಯಾಗಿದೆ.

ಬಾವಿಯ ತುದಿ ಕಪೋತವಾಗಿದ್ದು ಇದರ ಹೊರ ಮತ್ತು ಒಳ ಬದಿಗಳು ಹಲ್ಲಿನಾಕಾರದಲ್ಲಿ ಮುಂದೆ ಚಾಚಿಕೊಂಡಿರುವ ಭಾಗಗಳಿಂದ ಅಲಂಕೃತವಾಗಿವೆ. ಕಪೋತದ ಕೆಳಗೆ ಕಂಠವಿದೆ. ಇದರ ಕೆಳಗೆ ಮುಂದೆ ಚಾಚಿಕೊಂಡಿರುವ ಭಾಗ, ಕಂಠಗಳಿವೆ. ಈ ಕಂಠದ ಮೇಲೆ ಸುತ್ತಲೂ ರಾಮಾಯಣ, ಮಹಾಭಾರತ ಕಥೆಗಳಿಗೆ ಸಂಬಂಧಿಸಿದ ಶಿಲ್ಪಗಳು, ಸೂರ್ಯ, ಕಿರಾ ತಾರ್ಜುನೀಯ, ಗಣೇಶ ಮುಂತಾದ 64 ಶಲ್ಪಗಳಿವೆ. ಈ ಹಂತದ ಕೆಳಗೆ ಮುಂದೆ ಚಾಚಿಕೊಂಡಿರುವ ದಪ್ಪನಾದ ಗೋಡೆ ಯಿದೆ. ಇಲ್ಲಿ ನೀರು ಕಾಣಿಸುತ್ತದೆ.

ಸಿರಿವಾಳ: ಶಹಾಪುರ ತಾಲ್ಲೂಕಿನಲ್ಲಿ, ಶಹಾಪುರದಿಂದ ಈಶಾನ್ಯಕ್ಕೆ 10 ಕಿ.ಮೀ. ದೂರದಲ್ಲಿ, ಭೀಮಾ ನದಿಯ ಬಲಗಡೆ ದಂಡೆಯ ಹತ್ತಿರವಿದೆ. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಸಿರಿವಾಳವು ಒಂದು ಮುಖ್ಯ ಪಟ್ಟಣವಾಗಿತ್ತು. ಆಗ ಸಿರಿವಾಳವು ಸಗರನಾಡಿನಲ್ಲಿತ್ತು. ಈ ಊರಿನಲ್ಲಿ ಸುಮಾರು 40–45 ಸ್ಮಾರಕ ಗಳಿವೆ. ಇವುಗಳಲ್ಲಿ 5 ಬಾವಿಗಳು, 7 ಕೋಷ್ಠಾಗಾರಗಳು ಮತ್ತು 34 ದೇವಸ್ಥಾನಗಳು ಸೇರಿವೆ. ಇವುಗಳಲ್ಲಿ ಕೆಲವು ಬೇರೆ ಬೇರೆ ಕಡೆಗಿದ್ದರೆ ಕೆಲವು ಗುಂಪುಗಳಲ್ಲಿವೆ. ಈ ಊರು ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿರುವ ಬಾವಿಗಳ ಹೆಸರುಗಳು ಲಭ್ಯವಿರದಿದ್ದುದರಿಂದ ಅವುಗಳಿಗೆ ಬಾವಿ ಸಂಖ್ಯೆ 1, 2, 3, ... ಎಂದು ಹೆಸರಿಡಲಾಗಿದೆ.

(ಅ) **ಬಾವಿ ಸಂಖ್ಯೆ 1:** ಈ ಬಾವಿಯಯು ಸುಸ್ಥಿತಿಯಲ್ಲಿದ್ದು, ಗ್ರಾಮದ ವಾಯವ್ಯ ದಿಕ್ಕಿನಲ್ಲಿದೆ. ಬಾವಿಯನ್ನು ನುಣುಪಾದ ಸುಣ್ಣದ ಕಲ್ಲಿನಿಂದ ಕಟ್ಟಿದ್ದಾರೆ. ಬಾವಿಯು ಚೌಕಾಕಾರದಲ್ಲಿದ್ದು, ದಕ್ಷಿಣ ದಿಕ್ಕಿನಲ್ಲಿ 'ಐ' ಆಕಾರದ ಮೆಟ್ಟಿಲುಗಳಿವೆ. ಪ್ರವೇಶ ದಾರಿಯ ಮೇಲಿನ ಭಾಗ ಪಶ್ಚಿಮ–ಪೂರ್ವ ಮುಖವಾಗಿದ್ದರೆ, ಕೆಳಗಿನ ಭಾಗ ದಕ್ಷಿಣ–ಉತ್ತರ ಮುಖವಾಗಿದೆ.

ಬಾವಿ ಮತ್ತು ದಾರಿಯ ಕೆಳಗಿನ ಭಾಗ ಸರಳವಾಗಿದೆ ಮತ್ತು ಮೇಲಿನ ಭಾಗದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಪಂಚತಂತ್ರ ಕಥೆಗಳನ್ನು ಕೆತ್ತಿದ್ದಾರೆ. ಈ ಕೆತ್ತನೆಗಳಿರುವ ಅತಿ ಕೆಳಗಿನ ಭಾಗ (ಹಂತ) ಕಂಠವಾಗಿದೆ. ಇದು ಆಯಾತಾ ಕಾರದ ಪಟ್ಟಿಕೆಗಳನ್ನು ಹೊಂದಿದ್ದು, ಮಧ್ಯದಲ್ಲಿ ಲಂಬವಾದ ಪಟ್ಟಿಕೆಗಳಿವೆ. ಎರಡನೇ ಹಂತವು ತೊಲೆಯಾಕಾರದಲ್ಲಿದ್ದು, ಅದರ ಮೇಲೆ ಉಬ್ಬಿದ ಪಟ್ಟಿಯಿದೆ. ಇಲ್ಲಿ ಯಾವ ಕೆತ್ತನೆಗಳೂ ಇಲ್ಲ. ನಾಲ್ಕನೆಯ ಹಂತವು ಕಪೋತವಾಗಿದ್ದು, ಕೂಡು–ಕೀರ್ತಿಮುಖಗಳಿಂದ ಅಲಂಕೃತಗೊಂಡಿದೆ. ಕೂಡುವಿನ ಮೇಲೆ ಪ್ರಾಣಿ, ಪಕ್ಷಿ, ಹೂಗಳ ಅಲಂಕಾರವಿದೆ. ತುದಿಯಲ್ಲಿರುವ ಹಂತವು ಸರಳವಾಗಿದೆ ಮತ್ತು ಇದು ಪ್ಯಾರಾಪೆಟ್ ಆಗಿದೆ. ಈ ಬಾವಿಯಲ್ಲಿ ಸುಮಾರು 178–180 ಕೆತ್ತನೆಗಳಿವೆ.

(ಆ) **ಬಾವಿ ಸಂಖ್ಯೆ 2:** ಊರಿನ ಪೂರ್ವದಿಕ್ಕಿನಲ್ಲಿರುವ ಈ ಬಾವಿಯು ಚಿಕ್ಕದಾಗಿದ್ದು, ಪೂರ್ವದಿಕ್ಕಿನಲ್ಲಿ ಮೆಟ್ಟಿಲುಗಳಿರುವ ಉದ್ದವಾದ ಪ್ರವೇಶ ದಾರಿಯನ್ನು ಹೊಂದಿದೆ. ಈಗ ಈ ಬಾವಿಯು ತುಂಬ ಹಾಳಾಗಿದೆ. ಬಾವಿಯ ಮುಂಭಾಗವನ್ನು ಚಿಕ್ಕಗೋಡೆ ಕಟ್ಟಿ ಮುಚ್ಚಿದ್ದಾರೆ. ಈ ಗೋಡೆಯ ಮೇಲೆ ಬಾವಿಯ ಕಡೆಗಿರುವ ಭಾಗದ ಮೇಲೆ ಕುಳಿತಿರುವ ಭಂಗಿಯಲ್ಲಿರುವ ಶಂಖ ನಿಧಿಯ ಶಿಲ್ಪವಿದೆ. ಇನ್ನೊಂದು ಭಾಗದಲ್ಲಿರುವ ಪದ್ಮ ನಿಧಿಯ ಭಾಗ ಕಾಣೆಯಾಗಿದೆ. ಈ ನಿಧಿಗಳ ಕೆಳಗೆ ಮಲಗಿರುವ ಎರಡು ಆನೆಗಳು ಎರಡೂ ಬದಿಯಲ್ಲಿ ಒಂದೊಂದರಂತೆ ಇವೆ. ಬಾವಿಗೆ ಇಳಿಯಲು ಮೆಟ್ಟಿಲುಗಳ ಅನೇಕ ಸಾಲುಗಳಿವೆ. ಈಗ ಕೇವಲ 7 ಮೆಟ್ಟಿಲುಗಳು ಮಾತ್ರ ಕಾಣುತ್ತಿದ್ದು, ಉಳಿದವುಗಳು ಅವಶೇಷ ಗಳಡಿ ಹೂತುಹೋಗಿವೆ.

ಬಾವಿಯ ಪ್ರವೇಶ ದಾರಿಯ ಮೇಲೆ ಒಂದು ಸಣ್ಣ ಗುಡಿ ಯಿದೆ. ಇಲ್ಲಿ ಪೂರ್ವಕ್ಕೆ ಬಾಗಿಲಿನ ಚೌಕಟ್ಟಿದೆ. ಗುಡಿಯ ತೊಲೆ, ಕಂಬ ಮತ್ತು ಒಳಮಾಳಿಗೆಗಳನ್ನು ಗ್ರೈನೈಟಿನಿಂದ ಕಟ್ಟಿದ್ದು, ಉಳಿದ ಭಾಗವನ್ನು ಸುಣ್ಣದ ಕಲ್ಲಿನಿಂದ ಕಟ್ಟಿದ್ದಾರೆ. ಬಾಗಿಲಿನ ಮೇಲೆ ಕೆಳಭಾಗದಲ್ಲಿ ಶಂಖನಿಧಿ ಮತ್ತು ಪದ್ಮನಿಧಿಯರಿದ್ದಾರೆ. ಬಾಗಿಲಿನ ಹಣೆಪಟ್ಟಿ ಮತ್ತು ಬಾಹುಗಳ (Jambs) ಮೇಲೆ ಬಳ್ಳಿ, ಹೂವಿನ ದಳಗಳ ಅಲಂಕಾರವಿದೆ. ಹಣೆಪಟ್ಟಿಯ ಮೇಲೆ ಗಜಲಕ್ಷ್ಮೀ ಇದ್ದಾಳೆ. ಬಾವಿಯ ಪ್ರವೇಶ ದಾರಿಯ ಪಕ್ಕದ ಗೋಡೆಗಳ ಮತ್ತು ಬಾವಿಯ ನಾಲ್ಕೂ ಗೋಡೆಗಳ ಕೆಳಭಾಗದಲ್ಲಿ ಸರಳವಾದ ಹಂತಗಳಿದ್ದು, ಮೇಲಿನ ಹಂತಗಳಲ್ಲಿ ಕೆತ್ತನೆಗಳಿವೆ. ಬಾವಿಯ ಮೆಟ್ಟಿಲುಗಳ ಪಕ್ಕದಲ್ಲಿರುವ ಗೋಡೆಗಳ ಮೇಲೆ ಎರಡೂ ಬದಿಗೆ ಒಂದೊಂದರಂತೆ ಗೂಡುಗಳಿವೆ. ಈ ಗೂಡುಗಳ ಮೇಲಿರುವ ಚೌಕಟ್ಟಿನ ಮೇಲೆ ಗಜಲಕ್ಷ್ಮಿಯಿದ್ದು, ಎರಡೂ ಬದಿಗಳಲ್ಲಿ ಪೂರ್ಣ ಕುಂಭಗಳಿವೆ.


(ಇ) **ಬಾವಿಯ ಸಂಖ್ಯೆ 3:** ಈ ಬಾವಿಯು ಊರಿನ ಉತ್ತರಕ್ಕೆ ಸಿಂಹಪಾದ ಕಂಬವಿರುವ ದೇವಸ್ಥಾನದ ಹತ್ತಿರವಿದೆ. ವಿಶಾಲವಾದ, ಚೌಕಾಕಾರದಲ್ಲಿರುವ ಈ ಬಾವಿ ತುಂಬ ಹಾಳಾಗಿದೆ. ದೊಡ್ಡ ಕಲ್ಲಿನ ದಿಮ್ಮಿಗಳಿಂದ ಇದನ್ನು ಕಟ್ಟಿದ್ದಾರೆ. ಬಾವಿಗೆ ದಕ್ಷಿಣ ದಿಕ್ಕಿನಲ್ಲಿ ದಾರಿಯಿದೆ. ಬಾವಿಯ ಕೆಳಗಿನ ಹಂತಗಳು ಸರಳ ವಾಗಿದ್ದು, ಮೇಲಿನ ಹಂತಗಳಲ್ಲಿ ಕೆತ್ತನೆಗಳಿವೆ. ಕೆತ್ತನೆಗಳಿರುವ ಹಂತದಲ್ಲಿ ಅತೀ ಕೆಳಗಿನ ಭಾಗವು ಲಂಬಾಕಾರದ ಪಟ್ಟಿಗಳಿಂದ ಬೇರ್ಪಟ್ಟಿದೆ. ಎರಡನೆಯ ಹಂತವು ತೊಲೆಯಾ ಕಾರದಲ್ಲಿದೆ. ಮೂರನೆಯ ಹಂತವು ಕಪೋತವಾಗಿದ್ದು, ಮುಂದೆ ಚಾಚಿಕೊಂಡಿರುವ ಕೂಡುಗಳಿಂದ ಅಲಂಕೃತ ಗೊಂಡಿದೆ. ಕೂಡುಗಳ ಸುತ್ತಲೂ ಬಳ್ಳಿಯ ಅಲಂಕಾರ ವಿದೆ. ತುದಿಯಲ್ಲಿರುವ ಹಂತವು ಸರಳವಾಗಿದ್ದು, ಪ್ಯಾರಾಪೆಟ್ ಆಗಿ ಮಾರ್ಪಟ್ಟಿದೆ. ಇಲ್ಲಿ ನಾಲ್ಕು ಮೂಲೆ ಗಳಲ್ಲಿ ಆಳವಾದ ಗೂಡುಗಳಿವೆ.ಪಶ್ಚಿಮ ಬದಿಯಲ್ಲಿರುವ ಗೋಡೆಯಲ್ಲಿ ಎರಡೂ ಕೊನೆಗಳಲ್ಲಿ ಒಂದೊಂದು ಗೂಡುಗಳಿವೆ. ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿಯೂ ಗೂಡುಗಳಿವೆ. ಈ ಬಾವಿಯಲ್ಲಿ ಉಳಿದಿರುವ ಗೋಡೆಗಳ ಮೇಲೆ ಈಗ 21 ಶಿಲ್ಪಗಳಿವೆ.

(ಈ) **ಬಾವಿ ಸಂಖ್ಯೆ 4:** ಈ ಬಾವಿಯು ಬಾವಿ ಸಂಖ್ಯೆ 3ರ ಹತ್ತಿರವಿದೆ. ಹಾಳಾಗಿರುವ ಬಾವಿಯನ್ನು ದುರಸ್ತಿಗೊಳಿಸಲಾಗಿದೆ. ಇದು ಚೌಕಾಕಾರದ ಬಾವಿಯಾಗಿದ್ದು, ಪಶ್ಚಿಮಕ್ಕೆ ಪ್ರವೇಶ ದಾರಿ ಯಿದೆ. ಈಗ ಈ ಪ್ರವೇಶವನ್ನು ಮುಚ್ಚಲಾಗಿದೆ. ಇದನ್ನು ಮಧ್ಯಮ ಗಾತ್ರದ, ನುಣುಪಾದ ಉದ್ದನೆಯ ಕಲ್ಲುಗಳಿಂದ ಕಟ್ಟಿ ದ್ದಾರೆ. ಇದು ಸರಳವಾಗಿದ್ದು, ತುದಿಯಲ್ಲಿ ಕಪೋತವಿದೆ. ಇದರ ಕೆಳಗಿನ ಹಂತದಲ್ಲಿ ತೊಲೆಯಂತೆ ಕಾಣುವ ಅಡ್ಡವಾದ ಮತ್ತು ಮುಂದೆ ಚಾಚಿಕೊಂಡಿರುವ ಪಟ್ಟಿಯಿದೆ. ಕಪೋತಕ್ಕೆ ದುಂಡ ವಾದ ತುದಿಯಿದ್ದು, ಇದು ಕೂಡು ಕೀರ್ತಿಮುಖಗಳಿಂದ ಅಲಂಕೃತವಾಗಿದೆ.

(ಉ) **ಬಾವಿ ಸಂಖ್ಯೆ 5:** ಈ ಬಾವಿಯು ಸುಸ್ಥಿತಿಯಲ್ಲಿದ್ದು, ಬಾವಿ ಸಂಖ್ಯೆ 4ರ ಹತ್ತಿರವಿದೆ. ಇದು ಚೌಕಾಕಾರದಲ್ಲಿದ್ದು, ದಕ್ಷಿಣಕ್ಕೆ ಮೆಟ್ಟಿಲುಗಳಿವೆ. ಇದನ್ನು ಸಹ ಮಧ್ಯಮ ಗಾತ್ರದ ಉದ್ದವಾದ ಕಲ್ಲುಗಳಿಂದ ಕಟ್ಟಿದ್ದಾರೆ. ಬಾವಿಯ ತುದಿಯಲ್ಲಿ ಕಪೋತವಿದೆ. ಇದರ ಕೆಳಗೆ ಕಂಠವಿದೆ. ಇದು ಲಂಬಾಕಾರ ದಲ್ಲಿರುವ ಪಟ್ಟಿಗಳಿಂದ ಬೇರ್ಪಟ್ಟಿದೆ. ಕಪೋತದ ಮೇಲೆ ಕೂಡು-ಕೀರ್ತಿಮುಖಗಳ ಅಲಂಕಾರವಿದೆ.

(ವಿಪಿ)

ಪ್ರಾಚ್ಯವಸ್ತು ಸಂಗ್ರಹಾಲಯ: ಕಲಬುರ್ಗಿಯ ಪ್ರಾಚ್ಯವಸ್ತು ಸಂಗ್ರಹಾಲಯ ಇದೀಗ ಹೊಸ ರೂಪ ಪಡೆಯುತ್ತಿದೆ. ಒಂದು ಕಾಲಕ್ಕೆ ತೀರ ಅಲಕ್ಷ್ಯಕ್ಕೊಳಗಾಗಿ, ಇತಿಹಾಸದ ಕುರುಹುಗಳ ಸಂಗ್ರಹ ನಾಶವಾಗುವ ಹಂತದಲ್ಲಿರುವಾಗ, ಅವುಗಳನ್ನು



ಪ್ರಾಚ್ಯವಸ್ತು ಸಂಗ್ರಹಾಲಯ, ಗುಲಬರ್ಗಾ

ಸುಂರಕ್ಷಿಸಿ ಸಾರ್ವಜನಿಕರು, ಇತಿಹಾಸದ ಬಗ್ಗೆ ಆಸಕ್ತಿ ಹೊಂದಿ ದವರು ಭೇಟಿ ನೀಡಿ ವೀಕ್ಷಿಸುವಂತೆ ವ್ಯವಸ್ಥೆ ಮಾಡುವ ಮೂಲಕ ಜನರಲ್ಲಿ ಐತಿಹಾಸಿಕ ಪ್ರಜ್ಞೆ ಮೂಡುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಕಲಬುರ್ಗಿ ನಗರದ ಜಿಲ್ಲಾ ಆಸ್ಪತ್ರೆಯ ಎದುರುಗಡೆ ಇರುವ, ಐತಿಹಾಸಿಕ ಸ್ಮಾರಕಗಳಾದ ಎರಡು ಗುಂಬಜ್‌ಗಳಲ್ಲಿ ಬಹಳ ಹಿಂದೆಯೇ ಸ್ಥಾಪಿತವಾದ ಈ ವಸ್ತು ಸಂಗ್ರಹಾಲಯ ಜನರನ್ನು ಆಕರ್ಷಿಸಿದ್ದು ಕಡಿಮೆ ಎಂದೇ ಹೇಳ ಬಹುದು. ಅದೂ ಸಹ ಒಂದು ಪಳೆಯುಳಿಕೆಯಾಗಿ ಅಳಿಯುವ ಸ್ಥಿತಿಯಲ್ಲಿತ್ತು.

ಈ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಅನೇಕ ವೈವಿಧ್ಯ ಮಯ ಪುರಾತನ ವಸ್ತುಗಳ ಸಂಗ್ರಹವಿದ್ದು, ಜಿಲ್ಲೆಯ ಇತಿಹಾಸ ನೆನಪಿಸುವ ಪ್ರದರ್ಶನಗಳು ಇಲ್ಲಿವೆ. ಆದರೆ, ಸೂಕ್ತ ನಿರ್ವ ಹಣೆಯ ಕೊರತೆಯಿಂದ ಈ ವಸ್ತು ಸಂಗ್ರಹಾಲಯ ಇಲ್ಲಿಯ ವರೆಗೆ ವೀಕ್ಷಕರ ಗಮನ ಸೆಳೆಯಲು ಅಸಮರ್ಥವಾಗಿತ್ತು. ಈ ವಸ್ತು ಸಂಗ್ರಹಾಲಯದ ಕೊರತೆಯನ್ನು ಮನಗಂಡ ಸರ್ಕಾರ, ಇದೀಗ ಅದರ ಅಭಿವೃದ್ಧಿಗೆ ಹಲವು ಕ್ರಮಗಳನ್ನು ರೂಪಿಸಿದೆ. ಮೊದಲ ಹಂತವಾಗಿ ವಸ್ತು ಸಂಗ್ರಹಾಲಯದ ಸುತ್ತಲೂ ಭದ್ರ ವಾದ ಕಾಂಪೌಂಡ್ ಗೋಡೆ ನಿರ್ಮಿಸುವ ಮೂಲಕ ಅತಿಕ್ರಮಣ ಕಾರರಿಗೆ ತಡೆಯೊಡ್ಡಿ, ಸಂಗ್ರಹಾಲಯದ ಸಿಬ್ಬಂದಿಯು ಕೂಡ ನೆಮ್ಮದಿಯಿಂದ ಕರ್ತವ್ಯ, ನಿರ್ವಹಿಸುವ ವಾತಾವರಣ ನಿರ್ಮಿಸ ಲಾಗಿದೆ. ಅಂದವಾದ ಹಸಿರು ಹಾಸನ್ನು ನಿರ್ಮಿಸಿ, ವೀಕ್ಷಣೆಗೆ ಬಂದವರು ನೆಮ್ಮದಿಯಿಂದ ಕುಳಿತುಕೊಳ್ಳುವಂತೆ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ವಸ್ತು ಸಂಗ್ರಹಾಲಯಕ್ಕೆ ಸಾರ್ವ ಜನಿಕರು ಹಾಗೂ ವಿದ್ಯಾರ್ಥಿಗಳನ್ನು ಆಕರ್ಷಿಸಲು ಸಹ ಯೋಜನೆ ರೂಪಿಸಲಾಗಿದೆ. ಮೊದಲ ಹಂತದಲ್ಲಿ ವಿದ್ಯಾರ್ಥಿ ಗಳಿಗೆ ಮ್ಯೂಸಿಯಂ ಕುರಿತು ಪರಿಚಯಿಸುವ ಸಲುವಾಗಿ, ವಿವಿಧ ಶಾಲೆಗಳ ಪ್ರಾಂಶುಪಾಲರನ್ನು ಸಂಪರ್ಕಿಸಿ, ವಿದ್ಯಾರ್ಥಿಗಳು ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡುವಂತೆ ಮಾಡುವುದು.

ಕಲಬುರ್ಗಿ ಜಿಲ್ಲೆ ಹಿಂದೆ ಬೌದ್ಧ ಸಂಸ್ಕೃತಿಯ ನೆಲೆಯಾಗಿತ್ತು. ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡದಾದ ಬೌದ್ಧ ವಿಹಾರ ಇಲ್ಲಿತ್ತೆಂಬುದರ ಅವಶೇಷಗಳು, ಚಿತ್ತಾಪುರ ತಾಲ್ಲೂಕು ಸನ್ನತಿಯಲ್ಲಿ ಪತ್ತೆಯಾಗಿವೆ. ಈ ಪ್ರಾಚೀನ ಬೌದ್ಧ ಕೇಂದ್ರ ಹಾಗೂ ಶಾತವಾಹನರ ಕಾಲದ ಹಲವಾರು ಶಿಲಾಮೂರ್ತಿಗಳು, ಶಿಲಾಶಾಸನಗಳು, ಮಣಿಗಳು ಮುಂತಾದ ಐತಿಹಾಸಿಕ ಅಮೂಲ್ಯವಾದ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಈ ಎಲ್ಲವುಗಳಿಗೆ ವಸ್ತು ಸಂಗ್ರಹಾಲದಯದಲ್ಲಿ ಒಂದು ಪ್ರತ್ಯೇಕ ಗ್ಯಾಲರಿ ನಿರ್ಮಿಸಲು ಯೋಜಿಸಲಾಗಿದೆ. ಚಿತ್ತಾಪುರ ತಾಲ್ಲೂಕಿನ ಹರಸೂರ ಗ್ರಾಮದಲ್ಲಿ ಸಂಗ್ರಹಿಸಿರುವ 12ನೆಯ ಶತಮಾನದ ಸೋಮನಾಥ ವಿಗ್ರಹ, ಕೊಲ್ಲೂರಿನಲ್ಲಿ ದೊರೆತಿರುವ ತೀರ್ಥಂಕರರ ವಿಗ್ರಹ, ಮಂಗಲಗಿಯಲ್ಲಿ ದೊರೆತ 14ನೆಯ ಶತಮಾನದ ನಾಗ ವಿಗ್ರಹಗಳು, ಶಹಾಪುರ ತಾಲ್ಲೂಕಿನ ಶಿರವಾಳದ ಶಿಲಾಶಾಸನ–ಹೀಗೆ 500ಕ್ಕೂ ಹೆಚ್ಚು ಪ್ರದರ್ಶಿಕೆಗಳನ್ನು ಈ ಸಂಗ್ರಹಾಲಯದಲ್ಲಿ ನೋಡಲು ಸಿಕ್ಕುತ್ತವೆ.

ಸುರಪುರ ಇತಿಹಾಸದಲ್ಲಿ ಗಮನ ಸೆಳೆಯುವ ಬ್ರಿಟಿಷ್ ರಾಯಭಾರಿ ಮೆಡೋಸ ಟೈಲರ್ ಬಳಸಿರುವ ಹಲವು ಪಿಂಗಾಣಿ ವಸ್ತುಗಳು, ಆಮೆ ಚಿಪ್ಪಿನಿಂದ ಮಾಡಿದ ಗುರಾಣಿ ಮೊದಲಾದವು ನೋಡುಗರ ಗಮನ ಸೆಳೆಯುತ್ತವೆ. ಕಲಬುರ್ಗಿ ಜಿಲ್ಲೆಯಲ್ಲಿ 89 ಸ್ಮಾರಕಗಳು ರಾಜ್ಯ ಪ್ರಾಚ್ಯವಸ್ತು ಇಲಾಖೆಯು ರಕ್ಷಿತ ಸ್ಮಾರಕಗಳೆಂದು ಘೋಷಿಸಿದೆ. ಈ ಪೈಕಿ ಕಲಬುರ್ಗಿ ನಗರದಲ್ಲಿ 15 ಸ್ಮಾರಕಗಳಿದ್ದು, ಇವೆಲ್ಲವುಗಳ ನಿರ್ವಹಣೆಗೂ ಸೂಕ್ತ ಗಮನ ಹರಿಸುವ ಕುರಿತು ಕಾಳಜಿ ವ್ಯಕ್ತಪಡಿಸಲಾಗಿದೆ.

(ಪಿವಿಜಿ)

ಪ್ರಾಚ್ಯವಸ್ತು ಸಂಗ್ರಹಾಲಯ: (ಬಸವಕಲ್ಯಾಣ ತಾಲ್ಲೂಕು) ಬೀದರ ಜಿಲ್ಲೆಯ ಬಸವಕಲ್ಯಾಣ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಹೊಂದಿದ್ದು ಇಲ್ಲಿ 18 ಹಾಗೂ 19ನೆಯ ಶತಮಾನದ ಚಿತ್ರಗಳು ಮತ್ತು ಶಿಲ್ಪಕಲಾಕೃತಿಗಳನ್ನು ನೋಡಬಹುದು.

ಬಸವಕಲ್ಯಾಣದ ಇತಿಹಾಸವನ್ನು ಗಮನಿಸಬಹುದಾದರೆ ಇದು ರಾಷ್ಟ್ರಕೂಟರ ಅನಂತರ ಕಲ್ಯಾಣ ಚಾಲುಕ್ಯ ಮತ್ತು ಕಲಚೂರ್ಯರ ಆಡಳಿತದಲ್ಲಿರುತ್ತದೆ. ಮುಂದೆ 19 ಮತ್ತು 20ನೆಯ ಶತಮಾನಗಳಲ್ಲಿ ಹೈದ್ರಾಬಾದಿನ ನಿಜಾಮನ ಆಡಳಿತದಲ್ಲಿ ಸೇರಲ್ಪಡುತ್ತದೆ. ಈ ಪ್ರದೇಶವನ್ನು ಕಲ್ಯಾಣವೆಂದು ಕರೆಯಲಾಗಿದೆ. ಈ ಮೊದಲು ಈ ಸ್ಥಳಕ್ಕೆ ಭಾಗ್ಯನಗರ ಎಂದು ಕರೆಯುತ್ತಿದ್ದರು ನಂತರ ಹೈದ್ರಾಬಾದಿನ ಆಳ್ವಿಕೆಯಲ್ಲಿ 'ಬಸವಕಲ್ಯಾಣ' ಎಂದು ಕೊಟ್ಟ ಹೆಸರು.

ಸಾಂಸ್ಕೃತಿಕ ಪರಂಪರೆ: ಶತಮಾನಗಳ ಇತಿಹಾಸ ಹೊಂದಿರುವ ಈ ಜಿಲ್ಲೆಯು ಶಿವಭಕ್ತರಿದ್ದ ನಾಡು ಅಲ್ಲಾನನ್ನು ನಮಾಜ ಮಾಡುವವರ ಬೀಡು, ಬುದ್ಧ, ಮಹಾವೀರ, ಬಸವ, ಯೇಸುಕ್ರಿಸ್ತ, ಗುರುನಾನಕ, ಬೊಮ್ಮಗೊಂಡೇಶ್ವರ ಭಕ್ತಪ್ರಭು ಮಾಣಿಕಪ್ರಭು, ಕರಿಬಸವೇಶ್ವರ, ಯಂಕಮ್ಮ, ಅಂಬೇಡ್ಕರರ ಮೊದಲಾದ ಮಹಾವ್ಯಕ್ತಿಗಳ ತತ್ವಸಿದ್ಧಾಂತಗಳನ್ನು ಪಾಲಿಸುವವರ ಪ್ರದೇಶ ಜ್ಞಾನ ಜ್ಯೋತಿಗೆ ಭಕ್ತಿಯ ತೈಲವರೆದು ಕಲ್ಯಾಣದ ಪ್ರಾಣ ತಾಗೆ ಕ್ರಿಯೆಯ ಬತ್ತಿಯಾಗಿರುವ ಭೂಮಿ ಉಜ್ವಲ ಧಾರ್ಮಿಕ ಪರಂಪರೆ ಹಾಗೂ ಸಮಾನತೆ, ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿರುವ ಈ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಇತಿಹಾಸ ಗಮನಾರ್ಹವಾಗಿದೆ.

ಆರನೆಯ ವಿಕ್ರಮಾದಿತ್ಯನ ಕಾಲ ಪ್ರಜೆಗಳ ವೈಭವದ ಕಾಲವೆನಿಸಿತು. ಪ್ರಜೆಗಳ ವಿಷಯದಲ್ಲಿ ಸದಾ ಅನುಕಂಪಿತನಾಗಿದ್ದ ವಿಕ್ರಮಾದಿತ್ಯನು, ಜಲಸಂಗ್ವಿ ಗೋರಟಾ, ಕಲ್ಯಾಣದ ನಾರಾಯಣಪುರ, ಅಣದೂರ, ರಂಜೇರಿ, ಹಾಲಕ್ಕಿ, ಬಗದಲ್, ಬರೊರ್, ಹಾರಕುಡ ನಾರಾಯಣಪುರ ಮುಂತಾದ ಗ್ರಾಮಗಳಲ್ಲಿ ಮಂದಿರಗಳನ್ನು ನಿರ್ಮಿಸಿದ್ದು. ಕಲೆಯ ಬೆಳವಣಗೆಗೆ ಸಾಹಿತ್ಯ ಕರ್ತವ್ಯಗಳಿಗೆ, ಸಂಗೀತಗಾರರಿಗೆ ಕೊಡುಗೆ ದೊರೆಯಾಗಿದ್ದನೆಂದು ಕ್ರಿ.ಶ. 1082, ಗೋರಟಾ ಶಾಸನ ಒಂದು ತಿಳಿಸುತ್ತದೆ.

12ನೆಯ ಶತಮಾನದಲ್ಲಿ ಈ ಜಿಲ್ಲೆ ಸಾಂಸ್ಕೃತಿಕ ಇತಿಹಾಸದ ಮಹೋನ್ನತಕಾಲ ಕಲ್ಯಾಣದಲ್ಲಿ ಶರಣರ ಕ್ರಾಂತಿಯಾದ ಕಾಲ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ಅನೇಕ ಶರಣ–ಶರಣೆಯರು ಸಮ್ಮೇಳನಗೊಂಡು ಸಾಂಸ್ಕೃತಿಕ ಬದುಕನ್ನು ಚರ್ಚಿಸಿ ನವೋದಯವನ್ನು ಕಾಣೆಸಿದ ಕಾಲ ಕಲ್ಯಾಣವನ್ನು ಭೂಮಿಯ ಮೇಲಿನ ಕೈಲಾಸವನ್ನಾಗಿ ಮೆರೆಸಿದ ಯುವ ಕಳಚೇರಿ ರಾಜರ ಆಳ್ವಿಕೆಯ ಈ ಕಾಲದಲ್ಲಿ ಧಾರ್ಮಿಕ ಸಾಹಿತಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಾಂಸ್ಕೃತಿಕ ಬದುಕು ಸ್ಥಿತ್ಯಂತರಗೊಂಡಿತು. ಸಾಂಸ್ಕೃತಿಕ ವೇದಿಕೆ ಶ್ರೀಸಾಮಾನ್ಯರೊಂದಿಗೆ ಸಂವಾದಕ್ಕೆ ಸಹಕರಿಸಿ ಆ ಮೂಲಕ ಆರ್ಥಿಕ ಪ್ರಗತಿಯ ಮಾರ್ಗಕಂಡುಕೊಂಡು ಸಂವೇದನಾತ್ಮಕ ಸಾಂಸ್ಕೃತಿಕ ಸಾಮರಸ್ಯದ ಮೂಲಕ ಮಾನವನ ಪ್ರಗತಿಗೆ ನಾಂದಿ ಹಾಡಿತು.

ಇಂತಹ ಅನೇಕ ವೈಶಿಷ್ಟ್ಯಗಳ ನೆಲೆ ಬೀಡಾಗಿರುವ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಈ ವಸ್ತು ಸಂಗ್ರಹಾಲಯವು ಪ್ರಾರಂಭವಾದದ್ದು 1964 ಮಾರ್ಚ್ 24ರಂದು. ಈ ವಸ್ತು ಸಂಗ್ರಹಾಲಯ ಕೋಟೆಯೊಳಗಿದ್ದು ಚಾಲುಕ್ಯ ವಂಶದ 1ನೆಯ ಸೋಮೇಶ್ವರ ಕಾಲ 1040 ಕಟ್ಟಿದ್ದನೆಂದು ತಿಳಿದುಬರುತ್ತದೆ. 1142ರಲ್ಲಿ ಪ್ರಥಮವಾಗಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

ಜೇಡಿಮಣ್ಣಿನಲ್ಲಿ ತಯಾರಿಸಿದ ಮಣೆಗಳು ಆಭರಣಗಳ ಈ ಪದದಲ್ಲಿವೆ. ಇದರಲ್ಲಿರುವ ಪ್ರತಿಯೊಂದು ಮಣೆಗಳು, ಮಡಿಕೆ, ಅಡಿಕೆ ಚಂಡು, ಬುಗರಿ ಮತ್ತು ದ್ರಾಕ್ಷಿ ಇತ್ಯಾದಿ ರೂಪದಲ್ಲಿ ರಚಿಸಲ್ಪಟ್ಟಿವೆ. ಇವುಗಳಲ್ಲದೆ ಜೇನುಗೂಡು, ತೂಕದಕಲು, ಮಡಿಕೆ ಮಳೆಚೂರುಗಳು ಬಳೆಚೊರುಗಳು ಶಂಖದ ಚೊರು

ಗಳು ಗಾಜಿನ ಮಣೆಗಳು ರಾಮಗಿರ್ ಜಾಗೀರವರ ಕಾಲದ ಪಲ್ಲಕ್ಕಿ ಡೋಲಿ, ಮಹ್ಮದ ಶಾಖೈರೋದ್ದೀನ್ ಕಾಲದ ತೋಪು ಇವುಗಳಲ್ಲಿದೆ ಬೀಗಗಳು, ಸರಳಿ, ಬಂದೂಕು, ತುಪಾಕಿ, ಬಾಣಗಳು, ಮದ್ದು ಸಂಗ್ರಹ, ಮತ್ತು ಕಲ್ಲಿನಲ್ಲಿ ಕೆತ್ತಲ್ಪಟ್ಟ ಕಲಾತ್ಮಕ ತಾಟುಗಳು ಗಮನ ಸೆಳೆಯುತ್ತವೆ.

ವಸ್ತು ಸಂಗ್ರಹಾಲಯದಲ್ಲಿ ನಾಲ್ಕು ವಿಶಾಲವಾದ ಕೊಠಡಿಗಳಿದ್ದು ಅದರಲ್ಲಿ 30ಕ್ಕೂ ಹೆಚ್ಚು ಮೂರ್ತಿ ಶಿಲ್ಪಗಳನ್ನು ಸಂರಕ್ಷಣೆ ಮಾಡಲಾಗಿದೆ. ಆದರೆ ಇನ್ನೂ ಕೆಲವು ಶಿಲ್ಪಗಳು ವಸ್ತು ಸಂಗ್ರಹಾಲಯದ ಮುಂದಿನ ಭಾಗದಲ್ಲಿ ಹರಡಿರುವುದು ಕಂಡುಬರುತ್ತದೆ. ಈ ಕೆಲಸಗಳನ್ನು ಪುರಾತತ್ವ ಇಲಾಖೆಯವರು ಅರ್ಧದಲ್ಲಿ ನಿಲ್ಲಿಸಿದ್ದಾರೆ.

ಅಲ್ಲಿನ ಚಿತ್ರಕಲಾಕೃತಿಗಳನ್ನು ನೋಡಿದಾಗ ಈ ಕಲಾಕೃತಿಗಳನ್ನು ಯಾವುದೇ ಮೂಲೆಯಲ್ಲಿ ಹಾಕಿರುವುದು ಕಂಡುಬಂದಿದೆ. ಹೀಗಾಗಿ ಇದಕ್ಕೆ ಕರ್ನಾಟಕ ಸರ್ಕಾರ ಪುರಾತತ್ವ ಇಲಾಖೆಯವರು ಗಮನಹರಿಸಬೇಕಾಗಿದೆ.

ಅಲ್ಲಿನ ಚಿತ್ರಕಲಾಕೃತಿಗಳು ರುಮಾಲೆ ಚನ್ನಬಸವಯ್ಯಾ ಎಂಬ ಕಲಾವಿದ ರಚಿಸಿದ್ದಾರೆಂದು ಮಾಹಿತಿ ದೊರಕಿದೆ. ಇಲ್ಲಿ ನಿಸರ್ಗ ಚಿತ್ರಗಳು ಕಿರುರೂಪ ಚಿತ್ರಗಳು, ಪಕ್ಷಿ ಚಿತ್ರಗಳು ಕಂಡುಬಂದಿವೆ. ಈ ವಸ್ತು ಸಂಗ್ರಹಾಲಯದ ಶಿಲ್ಪಕಲಾಕೃತಿಗಳು ಈ ಕೆಳಗಿನಂತಿವೆ.

ಸಮಭಂಗಿಯಲ್ಲಿ ನಿಂತ ರಾಮನ ಶಿಲ್ಪ ಸಮಭಂಗಿಯಲ್ಲಿ ಶಿವನ ಶಿಲ್ಪ, ಕಲ್ಯಾಣ ಚಾಲುಕ್ಯರ ಅಪರೂಪದ ಶಿಲ್ಪ, ಸಮಭಂಗಿಯಲ್ಲಿ ಮಲಗಿರುವ ವಿಷ್ಣು ಶಿಲ್ಪ, ಸಮಭಂಗಿಯಲ್ಲಿ ನಿಂತಿರುವ ರಾಮನ ಶಿಲ್ಪ, ನಟರಾಜ ಶಿಲ್ಪ ಕಲಾತ್ಮಕ ತೋರಣಗಳು, ಶಿವ ಮತ್ತು ಪಾರ್ವತಿ ಕುಳಿತ ಭಂಗಿಯ ಶಿಲ್ಪ ಪುಂಜರೋಪಾವೇಷದ ಗಣಪ, ಶೇಷಾಯನ ಶಿಲ್ಪ ವರಾಹ ಶಿಲ್ಪ ದಂಪತಿಯ ಶಿಲ್ಪಗಳು, ಜೈನ ದೇವಾಲಯದ ಸಂಕೀರ್ಣ ಶಿಲ್ಪ ನಟರಾಜನ ಶಿಲ್ಪದ ಅವಶೇಷ ನಾಟ್ಯಶಿವ ದೈವದಂಪತಿಗಳ ಶಿಲ್ಪ, ಸಲಗಗಳು, ಯಾಳಿ, ಜೈನ ತೀರ್ಥಕರುಗಳ ಶಿಲ್ಪಗಳು ಬರವಣಿಗೆ ಯಲ್ಲಿ ನಿರತಳಾದ ಸ್ತ್ರೀ ಶಿಲ್ಪ ಮೌರ್ಯಕಾಲದ ಕಲಾತ್ಮಕ ಶಿಲ್ಪಗಳು, ವಿವಿಧ ಆಕಾರದ ಮಿಶ್ರಲೋಹದ ಆಯುಧಗಳು ಅರಸರನ್ನು ಹೊತ್ತೊಯ್ಯುವ ಮುಚ್ಚಿದ ಡೋಲಿ, ಕಲಾತ್ಮಕ ಮಿಶ್ರಲೋಹದ ತೋಪಿನ ಅವಶೇಷ, ಗಂಧರ್ವ ಕುಬೇರ ಶೃಂಗಾರದಂಪತಿ, ಉಮಾ ಮಹೇಶ್ವರಿ, ಅರ್ಧನಾರೀಶ್ವರ ಚೌರಿಬ್ರೇಕರ್ಸ್ ಚೌಕಸ್ತಂಭ, ವೀರಗಲ್ಲು ಕಂಭ, ಭಗವಾನ ವಿಷ್ಣು ನಾಗ, ಕಾಳಗ ಕುದುರೆ, ಗಜಕಾಳದ, ಹುಲಿ, ಖಡ್ಗ, ಗುರಾಣಿ ವಿಷ್ಣು, ಲಕ್ಷ್ಮೀ, ಬುದ್ಧ ವಿಹಾರ ವಿಗ್ರಹಗಳು ಮತ್ತು ಹಳೆಗನ್ನಡ ಸಂಸ್ಕೃತ ಮತ್ತು ಅರಬ್ಬಿ ಭಾಷೆಯಲ್ಲಿ ಬರೆಯಲಾದ ಒಟ್ಟು 15ಕ್ಕೂ ಹೆಚ್ಚು ಶಾಸನಗಳು ಇವೆ. ಕೋಟೆಯ ದ್ವಾರಕ್ಕೆ ಹಾಕಲಾಗುವ ಬೀಗಗಳು ಸಣ್ಣ ತೋಪುಗಳು, ಸಂಕಳಿ ಗಂಡುಗಳು ಇತ್ಯಾದಿಗಳು ಈ ವಸ್ತು ಸಂಗ್ರಹಾಲದಲ್ಲಿ ಕಾಣಬಹುದು.

ಈ ವಸ್ತು ಸಂಗ್ರಹಾಲಯದಲ್ಲಿ ಶಿಲ್ಪಕಲಾಕೃತಿಗಳು ಪ್ರದರ್ಶನಕ್ಕೆ ಪೆಡಸ್ಟಾಲ್ ಮೇಲೆ ಇಡಲಾಗಿದೆ ಹಾಗೂ ಹಲವಾರು ಶಿಲ್ಪಕಲಾಕೃತಿಗಳು ವಸ್ತು ಸಂಗ್ರಹಾಲಯದ ಹೊರಾಂಗಣದಲ್ಲಿದ್ದು ಅವುಗಳು ಸುಮಾರು ಒಂದು ನೂರಕ್ಕೂ ಹೆಚ್ಚು ಶಿಲ್ಪ ಕಲಾಕೃತಿಗಳಿಗೆ ಪೆಡಸ್ಟಾಲ್‌ಗಳು ಬೇಕಾಗಿದ್ದು ಅಲ್ಲಿ ಹಲವಾರು ಸಂಕೀರ್ಣ ವಸ್ತುಗಳು ಎರಡು ಕೋಣೆಗಳಲ್ಲಿ ಮಾತ್ರ ಮಧ್ಯಭಾಗದಲ್ಲಿ ಸಂಗ್ರಹಿಸಲಾಗಿದೆ ಅಷ್ಟೆ ಅಲ್ಲ ಅಲ್ಲದೆ ವಸ್ತು ಸಂಗ್ರಹಾಲಯದಲ್ಲಿ ಅರೇಬಿಕ್ ಅಥವಾ ಉರ್ದು ಭಾಷೆಯಲ್ಲಿ ದೊಡ್ಡ ದೊಡ್ಡ ಗಂಟೆಗಳ ಮೇಲೆ ಬರೆದಂತಹ ಅಕ್ಷರಗಳನ್ನು ಕಾಣಬಹುದು. ಹಾಗೂ ಅಲ್ಲಿನ ಅರಸರು ಉಪಯೋಗಿಸುತ್ತಿದ್ದ ಡೋಲಿ ಇತ್ಯಾದಿ ವಸ್ತುಗಳನ್ನು ನೋಡಬಹುದು.

ಈ ವಸ್ತು ಸಂಗ್ರಹಾಲಯದ ಒಂದು ಕೋಣೆಯಲ್ಲಿ ಚಿತ್ರ ಕಲಾಕೃತಿಗಳು ನೋಡಬಹುದು.

ನವ ವಧುವಿನ ಚಿತ್ರ, ರುಮಾಲೆ ಚನ್ನಬಸವಯ್ಯನವರ ಪ್ರಕೃತಿ ಚಿತ್ರ, ಕಲಾತ್ಮಕ ಘೂಳಿಚಿತ್ರ, ಈಶ್ವರ ಲಿಂಗದ ಚಿತ್ರಕೃತಿ, ಸುಬ್ರಮಣ್ಯರಾಜ ಅವರ ನಿಸರ್ಗ ಚಿತ್ರ, ತೈಲವರ್ಣದ ಚಿತ್ರದಲ್ಲಿ ಕಿಟಕಿಯ ದೃಶ್ಯ ಇತ್ಯಾದಿ ಚಿತ್ರಗಳನ್ನು ನೋಡಬಹುದು.

ಈ ವಸ್ತು ಸಂಗ್ರಹಾಲಯದ ಪಕ್ಕದಲ್ಲಿ ಅರಮನೆಯ ಆವರಣದಲ್ಲಿ ಇರುವುದರಿಂದ ಅಲ್ಲಿ ಬಂದ ಅನೇಕ ಜನ ವಸ್ತು ಸಂಗ್ರಹಾಲಯದಲ್ಲಿನ ವಸ್ತುಗಳು ವರ್ಣಚಿತ್ರಗಳು ಮತ್ತು ಶಿಲ್ಪ ಕಲಾಕೃತಿಗಳು ಹೊಂದಿರುವದರಿಂದ ವೀಕ್ಷಣೆಗೆ ಅನುಕೂಲವಾಗಿರುತ್ತದೆ.

ಈ ವಸ್ತು ಸಂಗ್ರಹಾಲದ ಒಳಾಭಾಗದಲ್ಲಿ 4 ಕೋಣೆಗಳನ್ನು ಕಾಣುತ್ತೇವೆ ಒಂದರಲ್ಲಿ ಕಾರ್ಯಾಲಯ ಮತ್ತೊಂದರಲ್ಲಿ ವರ್ಣಚಿತ್ರಗಳು ಹಾಳಾಗಿದ್ದು ಇನ್ನೂ ಎರಡು ಮೂರು ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳಲ್ಲಿ ಕಾಣುತ್ತೇವೆ. ವಸ್ತು ಸಂಗ್ರಹಾಲಯದ ಒಳಗಿನ ಎರಡು ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳು ಕಾಣುತ್ತೇವೆ. ಈ ಶಿಲ್ಪಗಳನ್ನು ನಾನಾ ಕಡೆಗಳಿಂದ ಸಂಗ್ರಹಿಸಿಕೊಂಡು ಈ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ವಸ್ತು ಸಂಗ್ರಹಾಲಯದಲ್ಲಿರುವಂತಹ ಎಲ್ಲಾ ಶಿಲ್ಪಕಲಾಕೃತಿಗಳನ್ನು ಪೆಡಸ್ಟಾಲ್ ಮೇಲೆ ಇಡಲಾಗಿದೆ. ಅದೇ ರೀತಿ ಇನ್ನೂ ಹಲವಾರು ಶಿಲ್ಪ ಕಲಾಕೃತಿಗಳನ್ನು ಹೊರಾಂಗಣದಲ್ಲಿ ಸಂಗ್ರಹಿಸಲಾಗಿದೆ. ಹಳೆಯ ಕಾಲದ ಈ ಚಿತ್ರಗಳು ಆಗಿನ ಸಮಯ ಪರಿಚಯಿಸುವ ಹಾಗೂ ಅಸಮಯದ ಸ್ಥಿತಿಗತಿ ಮತ್ತು ಇನ್ನಿತರ ವಿಷಯಗಳು ತಿಳಿಸಿ ಕೊಡುವ ವರ್ಣಚಿತ್ರಗಳನ್ನು ಮಾತ್ರ ಇಲ್ಲಿ ಸುವ್ಯವಸ್ಥಿತವಾಗಿ ಪ್ರದರ್ಶನ ಮಾಡಿಲ್ಲವೆಂದು ನನ್ನ ಭಾವನೆ ಈ ವಸ್ತು ಸಂಗ್ರಹಾಲಯದಲ್ಲಿ ಇದರ ಬಗ್ಗೆ ಮೇಲ್ವಿಚಾರಕರು ಮತ್ತು ಪುರಾತತ್ವ ಇಲಾಖೆಯವರು ಹೆಚ್ಚು ಗಮನ ನೀಡಿಲ್ಲವೆಂದೆನಿಸುತ್ತದೆ.

ಈ ವಸ್ತು ಸಂಗ್ರಹಾಲಯಕ್ಕೆ ಹೋಗುವ ಬಾಗಿಲಿನ ಪಕ್ಕದಲ್ಲಿಯೇ ತೋಪು ಮತ್ತು ಇನ್ನಿತರ ಈಗತಾನೇ ದೊರಕಿ ರುವ ಶಿಲ್ಪಕಲಾಕೃತಿಗಳನ್ನು ನೋಡಬಹುದು. ಇಲ್ಲಿನ ಸಧ್ಯದ ಪರಿಸ್ಥಿತಿ

ಯಲ್ಲಿ ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಬಗ್ಗೆ ಪುಸ್ತಕಗಳು ಇಲ್ಲ ಕೈಪಿಡಿ ಇಲ್ಲ. ಮತ್ತು ಗಣಕಯಂತ್ರದ ವ್ಯವಸ್ಥೆ ಇಲ್ಲ. ಇದನೆಲ್ಲ ಗಮನಿಸಬೇಕಾಗಿ ಹಾಗೂ ಮತ್ತೊಂದು ಮುಖ್ಯ ಅಂಶವೆಂದರೆ ಸುತ್ತಲಿನ ಶಾಲಾಮಕ್ಕಳಿಗೆ ವರ್ಷಕ್ಕೆ ಎರಡು ಬಾರಿಯಾದರೂ ವಸ್ತು ಸಂಗ್ರಹಾಲಯದಲ್ಲಿ ಕಾಣುವಂತಹ ಹಲವಾರ ಸಂಕೀರ್ಣ ವಸ್ತುಗಳನ್ನು ವರ್ಣಚಿತ್ರಗಳ ಕೋಣೆಯ ಪಕ್ಕದಲ್ಲಿ ಇರಿಸಲಾಗಿದೆ. ಆದರೆ ಇವುಗಳು ಕೂಡ ಒಂದು ಕಡೆ ಸಂರಕ್ಷಣೆಯಾಗಿದ್ದರೂ ಸಹ ಸರಿಯಾದ ವ್ಯವಸ್ಥಿತವಾದ ಪ್ರದರ್ಶನ ನೋಡುಗರನ್ನು ಕಾಣುತ್ತದೆ. ಕೋಣೆಗಳಲ್ಲಿ ಕಳೆದ ದಶಕಗಳಲ್ಲಿ ವಸ್ತು ಸಂಗ್ರಹಾಲಯವನ್ನು ಅಷ್ಟು ಅಚ್ಚುಕಟ್ಟಾಗಿ ಸುವ್ಯವಸ್ಥಿತವಾಗಿ ಕಂಡು ಬಂದಿಲ್ಲ. ಆದರೆ ಇಂದು ಅವುಗಳ ಕಡೆಗೆ ಗಮನ ಸೆಳೆಯುವಂತಾಗಿದೆ. (ವಿಬಿಕೆ)



ಪ್ರಾಣೇಶ ಬಿ.: ಸಾಹಿತ್ಯ ಮತ್ತು ಕಲಾಸಂಘಟಕ. ಕೊಪ್ಪಳ ಜಿಲ್ಲೆ ಗಂಗಾವತಿಯವರು. ಬಹು ಹಿಂದೆಯೇ 'ಸಾಹಿತ್ಯ ಪ್ರೇಮಿಗಳ ಬಳಗ' ಎಂಬ ಸಂಸ್ಥೆ ಕಟ್ಟಿ, ನೂರಾರು ಯುವಕ–ಯುವತಿಯರನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿ, ಅವರನ್ನು ಬೆಳೆಸಿ, ಹಣವಿದ್ದವರಿಗೆ ಇದ್ದೂರಲ್ಲಿ ಮಾತ್ರ ಗೌರವ. ಸಾಹಿತ್ಯ ಕಲೆಗೆ ಸಂಸ್ಕೃತಿಗೆ ಎಲ್ಲೆಡೆ ಮಾನ ಸನ್ಮಾನವಿದೆ ಎಂದು ತೋರಿಸಿಕೊಟ್ಟ ಧೀರನೀತ.

ಖ್ಯಾತ ಹಾಸ್ಯ ಸಾಹಿತಿ ಬೀchi ಯವರ ಹಾಸ್ಯದಿಂದ ಪ್ರೇರಿತರಾದ ಪ್ರಾಣೇಶ್, ತಮ್ಮ ಸಹಜ ಮಾತಿನಲ್ಲಿ ಅವುಗಳನ್ನು ಸೇರಿಸುತ್ತಾ, ಸ್ನೇಹಿತರಿಗೆ ಹೇಳುತ್ತಾ ಅವರಿಂದ ಮತ್ತಷ್ಟು ಜನರಿಗೆ ಹಬ್ಬುತ್ತಾ ಅವರೆಲ್ಲ ಸೇರಿ ಇದಕ್ಕೊಂದು ಕಾರ್ಯಕ್ರಮದ ರೂಪ ಕೊಟ್ಟರು. ಸ್ನೇಹಿತರೆಲ್ಲ ಸೇರಿ ಬೀchi ಪುಣ್ಯತಿಥಿ ಆಚರಣೆಗೆ ಮೊದಲಿಟ್ಟರು. ಕೆಲ ವರ್ಷಗಳಿಂದ ಗಂಗಾವತಿಯಲ್ಲಿ ಜನಮನ ಸೂರೆಗೊಂಡ ಈ ಬೀchi ಹಾಸ್ಯ ಸಂಜೆ ಮೆಲ್ಲಗೆ ಬೇರೆ, ಬೇರೆ ಕಡೆ ಜನರಿಗೆ ತಲುಪಲಾರಂಭಿಸಿತು.

ಪ್ರಾಣೇಶರಿಗೆ ಹಿಂದಿರುಗಿ ನೋಡಬೇಕಾದ ಪ್ರಸಂಗವೇ ಬರಲಿಲ್ಲ. ಕರ್ನಾಟಕದ 147 ಊರುಗಳನ್ನು ಸುತ್ತಿ, 360ಕ್ಕೂ ಹೆಚ್ಚು ಹಾಸ್ಯ ಸಂಜೆ ಕಾರ್ಯಕ್ರಮ ನೀಡಿರುವ ಇವರಿಗೆ, ಜನರೇ ಈಗ 'ಗಂಗಾವತಿಯ ಬೀchi' ಎಂದು ಪ್ರೀತಿಯಿಂದ ಕರೆಯುತ್ತಾರೆ. ಒಂದೊಂದು ಊರಿನಲ್ಲಿ 9–10 ಸಾರಿ ಹೋಗಿ ಹಾಸ್ಯಸಂಜೆ ನೀಡಿರುವ ಪ್ರಾಣೇಶರ ಭಾಷಣದಲ್ಲಿ ಏಕತಾನತೆ ಇಲ್ಲ. ಪ್ರತಿಸಲ ಬಂದಾಗಲೂ ವೈವಿಧ್ಯತೆ, ಹೊಸತು ನೀಡುವ ಈ ಬೀchi, ಸಾಹಿತ್ಯ ಪ್ರೇಮಿಯೂ ಆಗಿದ್ದಾರೆ.

ತಮ್ಮ ಹಲವಾರು ಊರುಗಳ ಅನುಭವವನ್ನು ರಸವತ್ತಾಗಿ ವರ್ಣಿಸುವ ಅವರ ಮಾತುಗಾರಿಕೆಗೆ ಮಾರುಹೋಗದವರಿಲ್ಲ. ಕರ್ನಾಟಕದ ಬೀದರನಿಂದ ಹಿಡಿದು ಶಿವಮೊಗ್ಗ–ಶಿರಸಿಯವರೆಗೆ ಪ್ರತಿ ಊರಿನಲ್ಲೂ ಪ್ರಾಣೇಶ ಹಾಸ್ಯ ಸಂಜೆ ಕಾರ್ಯಕ್ರಮಗಳಾಗಿವೆ. ಅರ್ಧ ಜೀವನ ಸಾಹಿತ್ಯದ ಪರಿಚಾರಿಕೆಯಲ್ಲಿಯೇ ಕಳೆದಿದೆ. ಕೈಬರಹ ಪತ್ರಿಕೆ, ಕಾವ್ಯಸಂಜೆ, ಮಕ್ಕಳ ಶಿಬಿರ ಮುಂತಾದ ಚಟುವಟಿಕೆಗಳಿಂದ ಹೈದ್ರಾಬಾದ ಕರ್ನಾಟಕದ ಈ ಪ್ರತಿಭೆ ಚೊಕ್ಕಗೊಂಡಿದೆ. ಜನತೆ ಇವರನ್ನು ಗುರುತಿಸಿ ಸನ್ಮಾನಿಸಿ ಯೋಗ್ಯ ಪುರಸ್ಕಾರ ನೀಡಿದೆ.

(ವೈಕೆಎಸ್)

ಫ

ಫಕೀರೇಶ ಕಣವಿ: ಖ್ಯಾತ ಹಿಂದೂಸ್ತಾನಿ ಸಂಗೀತಕಾರ. ಅವರ ತಂದೆ ಕಣವಿ ಗ್ರಾಮದ, ಮುದುವಪ್ಪ, ತಾಯಿ ಗಂಗಮ್ಮ ಉಮಚಗಿ. 5–6 ವರ್ಷದ ಬಾಲಕನಾಗಿದ್ದಾಗಲೇ ಸಂಗೀತದ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದರಿಂದ ಊರಿನಲ್ಲಿ ಜರುಗುವ ಕಾರ್ಯಕ್ರಮಗಳ ಹಾಡಿಗಾಗಿ ಫಕೀರಪ್ಪನವರಿಗೆ ಬೇಡಿಕೆ ಇತ್ತು. ಫಕೀರೇಶ ಕಣವಿ ತಮ್ಮ 6ನೆಯ ವರ್ಷದಿಂದಲೇ ತಂದೆಯಿಂದ ಸಂಗೀತ ವಿದ್ಯೆ ಪ್ರಾರಂಭಿಸಿ, 14ನೆಯ ವಯಸ್ಸಿನವರೆಗೆ ಅಭ್ಯಾಸ ಮಾಡಿ, ವೀರಶೈವ ಪುಣ್ಯಾಶ್ರಮಕ್ಕೆ ಆಗಮಿಸಿದರು. 1970ರಿಂದ 74ರ ವರೆಗೆ ಆಶ್ರಮದಲ್ಲಿ ಅಂಧ ಕಲಾವಿದರ ಸೇವೆ, ಹೊಲದ ಕೆಲಸ, ಗುರುಗಳ ಸೇವೆ, ಕಂತಿ ಭಿಕ್ಷೆ ಇನ್ನೂ ಅನೇಕ ಕೆಲಸಗಳನ್ನು ಮಾಡುತ್ತ ಪಂ. ರಾಚಪ್ಪ ಹರಿಪೂರ, ಪಂ. ಈಶ್ವರಪ್ಪ ಬ್ಯಾಹಟ್ಟಿ, ಪಂ. ಚನ್ನವೀರ ಬನ್ನೂರ ಮುಂತಾದ ಆಶ್ರಮದ ಹಿರಿಯ ವಿದ್ವಾಂಸರಿಂದ ಸಂಗೀತ ತಾಲೀಮು ಪಡೆದರು.

ಕಣವಿಯವರು ರಾಗ ಭೂಪಾಲಿಯಿಂದ ಪ್ರಾರಂಭಿಸಿದ ಚೀಜ್ ಈ ರೀತಿಯಾಗಿದೆ. 'ಈತನ ಜೋಬಗ ಪರಮಾನನ ಕರಿಯೆ' ಎಂದು ದ್ರುತ್ ತೀನ ತಾಳದಲ್ಲಿ ಪ್ರಾರಂಭವಾದ ಇವರ ವಿದ್ಯೆ, ಮುಂದೆ 1974 ರಲ್ಲಿ ಪುಟ್ಟರಾಜ ಕವಿ ಗವಾಯಿಗಳು ಖುದ್ದಾಗಿ, ಕಣವಿಯವರಿಗೆ ರಾಗ ಭೈರವಿದಿಂದ ಸಂಗೀತ ಧಾರೆಯೆರಲು ಪ್ರಾರಂಭಿಸಿದರು. ಹಿಂದೂಸ್ತಾನಿ ಪದ್ಧತಿಯ 10 ಥಾಟಿ ಹಾಡು ಹಾಡಲಿಕ್ಕ ಬಂದ್ರ,



1000 ರಾಗ ಹಾಡಬಹುದು. ಜೊತೆಗೆ ಸ್ವಂತಿಕೆ ಬೆಳೆಸಿಕೊಳ್ಳ ಬೇಕು. ಮುಂದೆ ಸಾಧನಾ ಮಾಡ್ರಿ. ಭಗವಂತ ನಿಮಗ ಸಮೃದ್ಧಿ ನೀಡತಾನ ಎಂದರಂತೆ. ಕಣವಿ ಯವರು ಸಂಗೀತದ ಜೊತೆಗೆ ಪಂ. ಗವಾಯಿಗಳ ಹೃದಯ ವನ್ನು ಗೆದ್ದರು. ಅವರ ಅತ್ಯಂತ ಪ್ರೀತಿಯ ಶಿಷ್ಯರಾಗಿದ್ದರಿಂದಲೇ, 1980 ರಿಂದ 83ರ ವರೆಗೆ ವೀರೇಶ್ವರ ಪುಣ್ಯಾಶ್ರಮದ ಸಂಗೀತ ಪಾಠಶಾಲೆಗೆ ಮುಖ್ಯೋ ಪಾಧ್ಯಾಯರೆಂದು ಸೇವೆ ಮಾಡಲು ಅವಕಾಶವಿತ್ತರು ಎನ್ನು ತ್ತಾರೆ. ಈ ಸಂದರ್ಭದಲ್ಲಿ ಕಣವಿಯವರ ಗರಡಿಯಲ್ಲಿ ಪಳಗಿದ, ಹುವಾಯುನ್, ಪರ್‌ಲಾಪೂರ, ವೀರಭದ್ರಯ್ಯ ಯರಗಲ್, ತೋಟಪ್ಪ ಉತ್ತಂಗಿ, ತೋಟಯ್ಯ ಸ್ವಾಮಿ ಉಕ್ಕಲಿ, ನಾಗಪ್ಪ ಗಂಗಲಾಪೂರ, ಇನ್ನೂ ಅನೇಕ ಕಲಾವಿದರು ಖ್ಯಾತಿಯ ಕಲಾವಿದರಾಗಿ ಹೆಸರು ಪಡೆದರು.

1984ರಲ್ಲಿ ಕೊಡ್ಲಿಯಲ್ಲಿ ಸರಕಾರಿ ಸಂಗೀತ ಶಿಕ್ಷಕರೆಂದು ನೇಮಕಗೊಂಡು, ಇಲ್ಲಿ ಸುಮಾರು 5 ವರ್ಷ ಸೇವೆ ಸಲ್ಲಿಸಿದ ಬಳಿಕ, 1989ರಲ್ಲಿ ಕಲಬುರ್ಗಿ ಆಕಾಶವಾಣಿ ಕಲಾವಿದರೆಂದು ನೇಮಕವಾಗಿ ಇಂದಿಗೂ ತಮ್ಮ ಸುಮಧುರ ಕಂಠದಿಂದ ಸಂಗೀತ ಪ್ರೇಮಿಗಳ ಹೃದಯ ಗೆದ್ದು ಹಿರಿಯ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಆಕಾಶವಾಣಿಯ 'ಬಿ' ಗ್ರೇಡ್ ಕಲಾವಿದರೂ ಆಗಿದ್ದಾರೆ. 'ನನ್ನದು, ನನ್ನ ಗುರು ಪರಂಪರೆಯ ಗ್ವಾಲಿಯರ್ ಘರಾಣೆ, ನನ್ನತನವನ್ನು ಕಾಪಾಡಿಕೊಳ್ಳಬೇಕಾದರೆ ಪರಂಪರೆ ಬಹಳ ಮುಖ್ಯ' ಎನ್ನುವ ಕಣವಿಯವರು, ಅತ್ಯಂತ ಕಠಿಣವಾದ ಗ್ವಾಲಿಯರ ಘರಾಣೆಯನ್ನು 'ತನ್ನ ಘರಾಣೆ' ಎನ್ನುತ್ತಾರೆ. ಮೂರು ಸಪ್ತಕಗಳಲ್ಲಿ ರಾಗವಿಸ್ತಾರ, ಸಂಪೂರ್ಣ ಬಂದಿಶ್ ಎಲ್ಲಾ ತರಹದ ತಾನ್‌ಗಳು, ತಾಳಗಳು ಜೊತೆಗೆ ಹಾಡಿದರೆ, ಈ ಘರಾಣೆಯ ಆನಂದ ಸವಿಯಬಹುದು.

ಕಣವಿಯವರಿಗೆ ಅತ್ಯಂತ ಪ್ರೀತಿಯ ರಾಗಗಳೆಂದರೆ ಬಿಲಾಸ್ ಖಾನಿ ತೋಡಿ, ಭೀಮಪಲಾಸ್, ದರಬಾರ ಕಾನಡಾ, ಮಾರ್ವಾ, ಜೊತೆಗೆ ತಾಳಗಳೆಂದರೆ ತೀನ ತಾಳ, ಏಕತಾಳ, ಝಪ್ ತಾಳ, ರೂಪಕ ಝುಮ್ರಾ ತಿಲವಾಡ್, ತಾಲಗಳಾದರೆ ಇವರಿಗೆ ಅತ್ಯಂತ ಪ್ರಿಯವಾದ ಗಾಯನ ಶೈಲಿಗಳೆಂದರೆ ಖಯಾಲ್, ವಚನಾಂಜಲಿ, ದಾಸಾಂಜಲಿ, ಭಾವಗೀತೆ, ತತ್ವಪದ ಜೊತೆಗೆ ಸಂಗೀತ ಸಂಯೋಜನೆ ಈ ಶೈಲಿಗಳು ಇವರಿಗೆ ಅತ್ಯಂತ ಪ್ರೀತಿಯ ಶೈಲಿಗಳಾಗಿವೆ. ಇವರು ಹಾಡಿದ ಎಲ್ಲ ವಚನ ಗಳು ಅಷ್ಟೇ ಸುಂದರವಾಗಿವೆ. ಆದರೆ ಅದರಲ್ಲಿ ಬಸವಣ್ಣನವರ ಕೊನೆಯ ವಚನ ಪಂ. ಕಣವಿಯವರಿಗೆ ಖುದ್ದಾಗಿ ಅತ್ಯಂತ ಪ್ರಿಯವೆನ್ನುತ್ತಾರೆ. ಅವರ ಧ್ವನಿಯಲ್ಲಿ ಈ ಹಾಡು ಕೇಳಿದರೆ ಕಣ್ಣೀರು ಧಾರಾಕಾರವಾಗಿ ಹರಿಯುತ್ತದೆ. ಕರುಳು ಕಿತ್ತು ಬರು ತ್ತದೆ. ಅಷ್ಟೊಂದು ಭಾವಪೂರ್ಣವಾಗಿ ಹಾಡುತ್ತಾರೆ. ಕಣವಿ ಯವರು ಇಡೀ ಭಾರತದಾದ್ಯಂತ ತಮ್ಮ ಸಂಗೀತ ಯಾತ್ರೆಯನ್ನು ಕೈಗೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಭೋಪಾಲ, ಮದ್ರಾಸ್, ದೆಹಲಿ, ಗೌಡಸಾರಸ್ವತ್ತ್ಯ ನವರಸಪುರ, ಹಂಪಿ ಉತ್ಸವ, ಮೈಸೂರಿನ ದಸರ ಉತ್ಸವ, ಗೋವಾ, ಹೈದ್ರಾಬಾದ, ಕಾರವಾರ, ಬೆಳಗಾವಿ, ಬೆಂಗಳೂರು, ಸೋಲಾಪೂರ ಇನ್ನೂ ಅನೇಕ ಮಹಾ ನಗರಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಈ ಕಲಾವಿದರ ಅನುಪಮ ಸೇವೆಯನ್ನು ಗುರುತಿಸಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರೆಂದು ನೇಮಕಗೊಂಡರು. 1998 ರಿಂದ 2001. 2001 ರಿಂದ ನವೆಂಬರ್ 2004ರ ವರೆಗೆ ಕೇಂದ್ರ ಸಂಸ್ಕೃತಿ ಪ್ರವಾಸೋದ್ಯಮ ಇಲಾಖೆಯು ಲಘು ಶಾಸ್ತ್ರೀಯ ಸಂಗೀತ ತಜ್ಞರ ಸಮಿತಿ ಸದಸ್ಯರೆಂದು ಇವರನ್ನು ನೇಮಿಸಲಾಗಿದೆ. ಜೊತೆಗೆ ಇಡೀ ಕರ್ನಾಟಕ ರಾಜ್ಯದಾದ್ಯಂತ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲಿ ಇವರನ್ನು ಸನ್ಮಾನಿಸಿ ಸತ್ಕರಿಸಲ್ಪಟ್ಟಿದ್ದಾರೆ. ಮನೆಯಲ್ಲಿ ಮಹಾ ಮನೆ, ವಚನಾಂಜಲಿ, 32 ಶರಣರ 500–600 ವಚನಗಳನ್ನು ಸಂಯೋಜಿಸಿ ಹಾಡಿ ಇಡೀ ಹೈದ್ರಾಬಾದ ಕರ್ನಾಟಕ ಪ್ರಾಂತದಲ್ಲಿ ವಚನ ಗಾಯನದ ಅಲೆಯನ್ನು ಎಬ್ಬಿಸಿದ ಕೀರ್ತಿ ಕಣವಿಯವರದು.

(ಎಂಇಬಿ)

ಫಿ

ಫಿರೋಜಾಬಾದ್ ಕೋಟೆ: ಗತ ವೈಭವವನ್ನು ಸಾರುವ ಅನೇಕ ಕೋಟೆ ಕೊತ್ತಲಗಳು ಹೈದ್ರಾಬಾದ ಕರ್ನಟಕದಲ್ಲಿವೆ. ಸೇಡಂ, ಗುಲ್ಬರ್ಗ, ಚಿತ್ತಾಪುರ, ಚಿಂಚೋಳಿಗಲ್ಲಿರುವ ಒಂದೊಂದು ಕೋಟೆಗಳು ಒಂದೊಂದು ಇತಿಹಾಸವನ್ನು ಹೇಳುತ್ತವೆ. ಮಾನ್ಯಖೇಟದ ರಾಷ್ಟ್ರಕೂಟ, ಗುಲ್ಬರ್ಗದ ಬಹಮನಿ, ಮರತೂರ, ಚಿತ್ತಾಪುರದ ನಾಗಾವಿ, ಕಾಳಗಿಯಂತಹ ಸ್ಥಳ ಗಳಲ್ಲಷ್ಟೇ ಅಲ್ಲದೇ ಅನೇಕ ಸ್ಮಾರಕಗಳು ಇಲ್ಲಿವೆ.

ಹಲವಾರು ರಾಜಮಹಾರಾಜರ ಆಳ್ವಿಕೆಗೆ ಒಳಪಟ್ಟ ಈ ನಾಡಿನಲ್ಲಿ ರಾಜರು ಕಟ್ಟಿಸಿದ ಅದೆಷ್ಟೋ ಕೋಟೆಗಳಿವೆ. ಅದರಲ್ಲಿ ಪ್ರಮುಖವಾದುದು ತಾಲ್ಲೂಕಿನ ಫಿರೋಜಾಬಾದ್ ಕೋಟೆಯೂ ಒಂದು ಫಿರೋಜಾಬಾದ್ ಗ್ರಾಮದಿಂದ 2 ಕಿ.ಮೀ. ದೂರದ ಭೀಮಾನದಿ ದಂಡೆಯ ಮೇಲಿರುವ ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಿದ ಈ ಕೋಟೆ ನೋಡುಗರ ಮನಸೂರೆ ಗೊಳ್ಳುತ್ತದೆ. ಅದರಲ್ಲಿಯೂ ರಾಣಿಯ ವಿಶ್ರಾಂತಿಯ ಪಾತರಗಿತ್ತಿ ಮಹಲಂತೂ ಒಂದು ಕೈ ಮೇಲು.

ಬಹಮನಿ ಸುಲ್ತಾನರ ಪ್ರಸಿದ್ಧ ಅರಸ ಫಿರೋಜ್ ಅಹ್ಮದ್ ಷಾ ಸುಮಾರು ಕ್ರಿ. ಶ. 1399–1422ರ ಆಡಳಿತಾವಧಿಯಲ್ಲಿ ಭೀಮಾನದಿ ದಂಡೆಯ ಮೇಲೆ ಫಿರೋಜಾಬಾದ್ ಗ್ರಾಮ



ಫಿರೋಜಾಬಾದ ಕೋಟೆ

ಸ್ಥಾಪಿಸಿದ. ಇಲ್ಲೊಂದು ಕೋಟೆಯನ್ನು ನಿರ್ಮಿಸಿ ಅದನ್ನು ಉಪ ರಾಜಧಾನಿಯನ್ನಾಗಿಸಿ ಆಡಳಿತ ನಡೆಸಿದ್ದಾನೆ ಎಂಬ ಕುರುಹುಗಳು ದಾಖಲೆಗಳಲ್ಲಿ ಸಿಗುತ್ತವೆ.

ಸುಮಾರು ಒಂದು ಕಿ.ಮೀ. ವಿಸ್ತಾರವಾದ ಕೋಟೆಯಲ್ಲಿ ಅಶ್ವ ಪಡೆ ವಿಶ್ರಾಂತಿಗಾಗಿ ಕುದುರೆಪಾಗ್, ಗಜಪಡೆ, ಸೈನಿಕರಿಗಾಗಿ ವಿಶೇಷ ವಿಶ್ರಾಂತಿ ಕೋಣೆಗಳು, ರಾಣಿಯ ವಿಶ್ರಾಂತಿಗಾಗಿ ಪಾತರಗಿತ್ತಿ ಮಹಲ್, ಸೈನಿಕರಿಗೆ ಅಡುಗೆ ವ್ಯವಸ್ಥೆಗಾಗಿ ಅಡುಗೆ ಕೋಣೆಗಳು ನಿರ್ಮಿಸಿದೆ. ಹಾಗೆಯೇ ಗೌಪ್ಯವಾಗಿ ಕೋಟೆಯಿಂದ ಭೀಮಾನದಿಗೆ ಸಂಪರ್ಕ ಕಲ್ಪಸುವುದಕ್ಕೆ ಸುರಂಗ ಮಾರ್ಗ ನಿರ್ಮಾಣ ಸೇರಿದಂತೆ ಅನೇಕ ಐತಿಹಾಸಿಕ ಕುರುಹುಗಳು ಈ ಕೋಟೆಯಲ್ಲಿ ನೋಡಲು ಸಿಗುತ್ತವೆ.

ಪಾತರಗಿತ್ತಿ ಮಹಲ್: ಮೊಘಲ್ ಸುಲ್ತಾನ್ ಷಹಾಜಾನ್ ತನ್ನ ರಾಣಿಯ ಮನ ಗೆಲ್ಲಲು ತಾಜಮಹಲ್ ಕಟ್ಟಿಸಿದಂತೆ ಫಿರೋಜ್ ಷಾ ಅಹ್ಮದ್ ಸಹ ತನ್ನ ರಾಣಿಯ ವಿಶ್ರಾಂತಿಗಾಗಿ ಕಟ್ಟಿಸಿದ ಪಾತರಗಿತ್ತಿ ಮಹಲ್ ಅದ್ಭುತ ಹಾಗೂ ಆಕರ್ಷಣೀಯವಾಗಿದೆ. ಆದರೆ ಈಗ ಅದರ ಮೇಲ್ಭಾವಣಿ ಕುಸಿದು ಬಿದ್ದಿದೆ. ಶಿಥಿಲಾವಸ್ಥೆಯಲ್ಲಿದ್ದರೂ ಮಹಲ್ ನೋಡುಗರ ಮನಸೂರೆಗೊಳ್ಳುತ್ತದೆ. ಹಲವಾರು ಮಹತ್ವದ ಸ್ಮಾರಕಗಳ ನೆಲೆಯಾಗಿರುವ ಕೋಟೆಯೂ ಇದೀಗ ಶಿಥಿಲಾವಸ್ಥೆ ತಲುಪಿದೆ. ಹೊರಭಾಗದಲ್ಲಿ ಸುಂದರವಾಗಿ ಕಾಣುವ ಈ ಕೋಟೆ, ಒಳಭಾಗದಲ್ಲಿ ಕುಸಿದು ಬಿದ್ದಿದ್ದು, ಅವಶೇಷಗಳ ತಾಣವಾಗಿ ಪರಿಣಮಿಸಿದೆ. ನಾಲ್ಕು ದಿಕ್ಕುಗಳಿಗೆ ನಾಲ್ಕು ಪ್ರವೇಶದ್ವಾರ ಕೋಟೆ ಸುತ್ತುವರಿದಿವೆ. ಈ ನಾಲ್ಕು ದ್ವಾರಗಳಿಗೆ ಒಂದು ಹೆಸರಿದೆ. ಕಲ್ಬುರ್ಗಿ ಅಗಸಿ, ಕಳ್ಳ ಅಗಸಿ, ನೀರ ಅಗಸಿ, ಸೈನಿಕ ಅಗಸಿ, ಮದ್ದು, ಧಾನ್ಯ ಸಂಗ್ರಹಣೆಗಾಗಿ ಉಪಯೋಗಿಸುತ್ತಿದ್ದ ಉಗ್ರಾಣಗಳು, ಕೋಟೆಯ ಗೋಡೆಗಳು ಕುಸಿದು ಬಿದ್ದಿವೆ. ಇವು ಶಿಥಿಲಾವಸ್ಥೆ ತಲುಪಿದ್ದು ಬೀಳುವ ಹಂತದಲ್ಲಿವೆ. 14ನೆಯ ಶತಮಾನದಲ್ಲಿ ಉಪರಾಜಧಾನಿಯಾಗಿ ಮೆರೆದ ಫಿರೋಜಾಬಾದ್ ಕೋಟೆ ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದೆ. ಕೋಟೆಯೊಳಗಿನ ಭೂಮಿಯನ್ನು ಜನರು ಸಾಗುವಳಿ ಮಾಡುತ್ತಿದ್ದಾರೆ

(ಆರ್‌ಬಿಕೆ)

ಬ

ಬಂಡೆಪ್ಪ ಗಣೇಶಪುರೆ: ಕಾಷ್ಠ ಶಿಲ್ಪಿ. ಬೀದರ ಸಮೀಪದ ಬಕಚೌಡಿಯ ಗ್ರಾಮದವರು. ಮರದ ಕಟ್ಟಿಗೆಗೆ ಜೀವ ತುಂಬುದ ಅಪರೂಪದ ಈ ಕಲಾವಿದರನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹುಡುಕಿಕೊಂಡು ಬಂದಿದೆ. ವಿದೇಶಗಳಿಗೆ ಅಪರೂಪದ ಮೂರ್ತಿಗಳನ್ನು ರಫ್ತು ಮಾಡುವಷ್ಟು ಎತ್ತರಕ್ಕೆ ಇವರು ಬೆಳೆದಿದ್ದಾರೆ.

ಶ್ರೀಗಂಧದಲ್ಲಿ ಗಣೇಶ, ಬುದ್ಧ, ನಟರಾಜ, ರಾಧಾಕೃಷ್ಣ ಹೀಗೆ ವಿಭಿನ್ನ ಮೂರ್ತಿಗಳನ್ನು ಅತ್ಯಂತ ಆಕರ್ಷಕವಾಗಿ ಹಾಗೂ ಕ್ರಮಬದ್ಧವಾಗಿ ತಯಾರಿಸುವ ಬಂಡೆಪ್ಪ ಗಣೇಶಪುರೆ ಕಲಾವಿದರ ಪರಿವಾರದ ಹಿನ್ನೆಲೆ ಉಳ್ಳವರಲ್ಲ. ಹೀಗಿದ್ದರೂ ಹೊಟ್ಟೆ ಪಾಡಿಗಾಗಿ ಆಯ್ದುಕೊಂಡ ಕಲೆಯಲ್ಲಿಯೇ ಅಪಾರ ಶ್ರದ್ಧೆ, ಪರಿಶ್ರಮದಿಂದಾಗಿ ಪ್ರಾವಿಣ್ಯ ಪಡೆದಿದ್ದಾರೆ. ಇವರ ತಮ್ಮ ಹಿರಿಯ ಸಹೋದರ ವೈಜನಾಥ ಗಣೇಶಪುರೆ ಅವರ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ತಮ್ಮನ್ನು ಈ ಹಂತಕ್ಕೆ ಬೆಳೆಸಿದೆ ಎಂದು ಸಹೋದರನ ನೆರವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.


ಎಸ್.ಎಸ್.ಎಲ್.ಸಿ.ವರೆಗೆ ಅಭ್ಯಾಸ ಮಾಡಿದ್ದಾರೆ. ಇವರದು ಹೋರಾಟದ ಬದುಕು. ಕಿತ್ತುತಿನ್ನುವ ಬಡತನದಿಂದಾಗಿ ಮನೆ ಮನೆಗೆ ಪತ್ರಿಕೆ ಹಾಕಿ ಅಭ್ಯಾಸ ಮಾಡಿದವರು. ಇದೇ ಹೊತ್ತಿನಲ್ಲಿ ಇವರ ಸಹೋದರ ವೈಜನಾಥ ಉದರ ನಿರ್ವಹಣೆಗಾಗಿ ಆಯ್ದುಕೊಂಡ ಕರಕುಶಲ ಕಲೆಯು ಏನೆಲ್ಲಾ ಸಾಧನೆಗೆ ಕಾರಣವಾಗಬಹುದು ಎಂಬ ಕಲ್ಪನೆ ಅಂದು ಇದ್ದಿರಲಿಕ್ಕಿಲ್ಲ. ಇಂದು ಪ್ರಸಿದ್ಧಿ, ಜನಪ್ರಿಯತೆ, ಹಣ ಹೀಗೆ ವ್ಯಕ್ತಿಯೊಬ್ಬ ಬಯಸುವ ಎಲ್ಲ ಅಂಶಗಳು ಬಂಡೆಪ್ಪ ಅವರಲ್ಲಿ ಮನೆ ಮಾಡಿಕೊಂಡಿವೆ.

ಸಹೋದರ ವೈಜನಾಥ ಅವರಿಂದ ಕಲೆಯನ್ನು ಅರಗಿಸಿಕೊಂಡ ಇವರು ಅನಂತರದ ದಿನಗಳಲ್ಲೂ ಸಾಕಷ್ಟು ಕಷ್ಟ ಅನುಭವಿಸಿದರು. ಮೂರ್ತಿಗಳನ್ನು ಶ್ರೀಗಂಧದ ಕಟ್ಟಿಗೆಯಲ್ಲಿ ಮಾತ್ರ ನಿರ್ಮಿಸುತ್ತಿದ್ದುರಿಂದ ಸಾಕಷ್ಟು ತುಟ್ಟಿಯಾಗಿದ್ದವು. ಸ್ಥಳೀಯ ಮಾರುಕಟ್ಟೆಯ ಜೊತೆಗೆ ಮೂರ್ತಿ ತಯಾರಿಕೆಗೆ ಕಟ್ಟಿಗೆಯೂ ದೊರೆಯುತ್ತಿರಲಿಲ್ಲ.

1993–94ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದೊಂದಿಗೆ ಸಂಪರ್ಕ ಬೆಳೆದ ಅನಂತರ ಕೈಗಾರಿಕಾ ಕೇಂದ್ರದ ಅಧಿಕಾರಿಗಳು ಸಾಕಷ್ಟು ಪ್ರೋತ್ಸಾಹ, ಮಾರ್ಗದರ್ಶನ ನೀಡಿದರು. ರಾಷ್ಟ್ರದ ವಿಭಿನ್ನ ಭಾಗಗಳಲ್ಲಿ ನಡೆಯುವ ವಸ್ತುಪ್ರದರ್ಶನಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಕಲೆಗೆ ಪ್ರಚಾರ ದೊರೆಯುವಂತೆ ನೋಡಿಕೊಂಡರು. ಮರದ ಮೂರ್ತಿಗಳಿಗೆ ಜೀವ ತುಂಬುವ ಅವರ ಕಲೆ ಅದ್ಭುತವಾಗಿದೆ. ದಯೆ,



ನಾಗಾಯಿ ವಿಶ್ವವಿದ್ಯಾಲಯ (ಚಿತ್ತಾಪೂರ)



ಮಹಮೂದ್ ಗವಾನ್ ಮದರಸಾ ವಿಶ್ವವಿದ್ಯಾಲಯ (ಬೀದರ್)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಚಿತ್ರಕಲೆಗಳ ಸಂಪುಟ




ಕಲ್ಲಿನ ಸೇತುವೆ, ಆನೆಗೊಂದಿ (ಕೊಪ್ಪಳ)





64 ಕಾಲು ಮಂಟಪ ಹಾಗೂ ನವ ವೃಂದಾವನ, ಆನೆಗೊಂದಿ (ಕೊಪ್ಪಳ)


ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ



ಶೋರ್ ಗುಂಬಜ, ಅಲಾವುದ್ದೀನ್ ಹಸನ್‌ಗಂಗು ಬಹಮನಿ ಗುಂಬಜ (ಗುಲಬರ್ಗಾ)




ಬರೀದಿ ಗುಂಬಜ (ಬೀದರ್)




ಬಹಮನಿ ಗುಂಬಜ, ಅಷ್ಟೂರ (ಬೀದರ್)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಐತಿಹಾಸಿಕ ನೆಲೆಗಳು ಸಂಪುಟ




ಪ್ರಾಚೀನ ಬಾವಿ, ಬಬಲಾದ (ಗುಲಬರ್ಗಾ)




ಪ್ರಾಚೀನ ಬಾವಿ (ಗುಲಬರ್ಗಾ)



ಪ್ರಾಚೀನ ಬಾವಿ, ಯಡ್ರಾಮಿ (ಗುಲಬರ್ಗಾ)



ಪ್ರಾಚೀನ ಪುಷ್ಕರಣಿ, ಏವೂರ (ಯಾದಗಿರ)



ಸಾತ್ ಖಬರ್ (ಮರಣ ಸ್ಮಾರಕಗಳು) ಬೀದರ್



ಜೈನ್ ಸಮಾಧಿ (ಮರಣ ಸ್ಮಾರಕಗಳು) ಗುಲಬರ್ಗಾ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಚಿತ್ರಕಲೆಗಳ ಸಂಪುಟ

ಕರುಣೆ, ಶಾಂತಿ, ಸಮಾಧಾನ ಹೀಗೆ ಎಲ್ಲ ಭಾವಗಳನ್ನು ಹೊರ ಸೂಸುವಷ್ಟು ನೈಜತೆ ಅವರ ಕಲೆಗಾರಿಕೆಯಲ್ಲಿದೆ. ಶಾಂತ ಚಿತ್ತದ ಬುದ್ಧ, ನೃತ್ಯದಲ್ಲಿ ತೊಡಗಿದ ನಟರಾಜ, ಗಾಂಭೀರ್ಯ ಸೂಸುವ ಆನೆ, ಹೀಗೆ ಭಾವ ವಿಭಾವಗಳನ್ನು ಕಟ್ಟಿಗೆಯಲ್ಲಿ ತುಂಬುವಲ್ಲಿ ಅವರು ಸಿದ್ಧಹಸ್ತರು. ದೇವಮಂಟಪ ಮುಂತಾದ ಆಕರ್ಷಕ ಹಾಗೂ ಮನಸೂರೆಗೊಳ್ಳುವ ವಿನ್ಯಾಸಗಳ ಕಲಾಕೃತಿಗಳನ್ನೂ ಅವರು ಸಿದ್ಧಪಡಿಸುತ್ತಾರೆ. ಇವರ ಕಲೆಯಲ್ಲಿನ ಜೀವಂತಿಕೆಗೆ ಮಾರು ಹೋಗಿರುವ ವಿದೇಶೀಯರು ಮೇಲಿಂದ ಮೇಲೆ ಬಕಚೌಡಿ ಗ್ರಾಮಕ್ಕೆ ಬಂದು ತಮಗೆ ಬೇಕಾದ ಮೂರ್ತಿಗಳನ್ನು ಕೊಂಡೊಯ್ಯುತ್ತಾರೆ. ತೈವಾನ್, ಜಪಾನ್, ಆಸ್ಟ್ರೇಲಿಯಾ ಹೀಗೆ ಹಲವು ರಾಷ್ಟ್ರಗಳ ಕಲಾರಸಿಕರು ಬಕಚೌಡಿ ಗ್ರಾಮಕ್ಕೆ ಬರುತ್ತಾರೆ. ಒಂದೆರೆಡು ದಿನಗಳ ಕಾಲ ಬಂಡೆಪ್ಪ ಅವರಲ್ಲಿಯೇ ಉಳಿದು, ತಮಗೆ ಬೇಕಾದ ಮೂರ್ತಿಗಳನ್ನು ತಯಾರಿಸಿಕೊಂಡು ಹೋಗುತ್ತಾರೆ.

ಅಂಗಿ ಗುಂಡಿ, ಪೇಪರ್ ಕಟರ್, ಬುಕ್ ಮಾರ್ಕ್, ಪೆನ್, ಗಾರ್ಲೆಂಡ್ ಬಾಕ್ಸ್, ಜಪಮಾಲೆ, ದೇವರ ಮೂರ್ತಿಗಳು, ಧೂಪ, ಅಗರಬತ್ತಿ, ಫೇಸ್ ಪೌಡರ ಹೀಗೆ ಬಂಡೆಪ್ಪ ಗಣೇಶಪುರೆ ಅವರಲ್ಲಿ ತಯಾರಾಗುವ ಉತ್ಪನ್ನಗಳ ಉದ್ದನೆಯ ಸಾಲೇ ಇದೆ. ಉಳಿದೆಲ್ಲ ಉತ್ಪನ್ನಗಳಿಗಿಂತ ಇವರ ಮೂರ್ತಿಕಲೆಯೇ ಅವರನ್ನು ಕೀರ್ತಿಯ ಶಿಖರಕ್ಕೆ ಏರಿಸಿದೆ. ದೇಶ ವಿದೇಶಗಳಲ್ಲಿ ಅಪಾರ ಆಕರ್ಷಣೆ ಹೊಂದಿರುವ ಮೂರ್ತಿಗಳ ಬೆಲೆಯೂ ಸಾಕಷ್ಟು ತುಟ್ಟಿಯಾಗಿದೆ. ವಿಶೇಷವಾಗಿ ಅವರು ತಯಾರಿಸುವ ಬುದ್ಧನ ಪ್ರತಿಮೆಗಳಿಗೆ ವಿದೇಶಗಳಿಂದ ವ್ಯಾಪಕ ಬೇಡಿಕೆ ಇದೆ. ಬಹುತೇಕ ವಿದೇಶಿಯರು ಬುದ್ದನ ಪ್ರತಿಮೆಗಳಿಗಾಗಿಯೇ ಅವರಲ್ಲಿ ಬರುತ್ತಾರೆ.

ಇಂದು ಇವರು ತೈವಾನ್, ಜಪಾನ್, ಆಸ್ಟ್ರೇಲಿಯಾ ಅಮೆರಿಕ, ಅರಬ್ ರಾಷ್ಟ್ರಗಳು ಸೇರಿದಂತೆ ವಿವಿಧ ರಾಷ್ಟ್ರಗಳಿಗೆ ಮೂರ್ತಿಗಳನ್ನು ರಫ್ತು ಮಾಡುತ್ತಾರೆ. ಸೂಕ್ಷ್ಮ ಕಲೆಗಾರಿಕೆಯನ್ನೂ ಹೊಂದಿರುವ ಮೂರ್ತಿಗಳು ಅಪ್ಪಟ ಶ್ರೀಗಂಧದಲ್ಲಿ ನಿರ್ಮಿಸಲಾಗುತ್ತದೆ. ಶ್ರೀಗಂಧದ ಪ್ರಕಾರಗಳಲ್ಲಿ ಮೂರ್ತಿ ತಯಾರಿಕೆಗೆ ಅತ್ಯಂತ ಸೂಕ್ತ ಎಂಬ ಖ್ಯಾತಿಗೆ ಒಳಗಾಗಿರುವ ಜಜ್‌ಪೋಕಳಾ ಮತ್ತು ಗಟಬದಲಾ ಎಂಬ ಪ್ರಕಾರದ ಕಟ್ಟಿಗೆಯನ್ನು ಮಾತ್ರ ಮೂರ್ತಿ ತಯಾರಿಕೆಗೆ ಬಳಸಲಾಗುತ್ತಿದೆ. ಬೀದರ ಜಿಲ್ಲೆಯಲ್ಲಿ ದೊರೆಯುವ ಶ್ರೀಗಂಧದ ಕಟ್ಟಿಗೆಯನ್ನು ಮೂರ್ತಿ ತಯ್ಯಾರಿಕೆಗೆ ಬಳಸಲಾಗುವುದಿಲ್ಲ ಎಂಬುದು ಇವರು ಅಭಿಪ್ರಾಯ.

ಬಕಚೌಡಿ ಗ್ರಾಮದಲ್ಲಿರುವ ಇವರ ನಿವಾಸದ ತುಂಬ ಶ್ರೀಗಂಧದ ಕಂಪು ತುಂಬಿಕೊಂಡಿದೆ. ಗಂಧದ ಸುವಾಸನೆಯನ್ನು ಹೊರಸೂಸುವ ಮೂರ್ತಿಗಳಿಂದಾಗಿ ಮನೆಯೊಳಗೆ ಪ್ರವೇಶಿಸಿದ ತಕ್ಷಣ ವಾತಾವರಣ ಬದಲಾದಂತೆ ಭಾಸವಾಗುತ್ತದೆ.

ಬಡತನವನ್ನು ಖುದ್ದಾಗಿ ಅನುಭವಿಸಿರುವ ಬಂಡೆಪ್ಪ ಇಂದು ನೂರಾರು ಬಡವರಿಗೆ ಈ ಅದ್ಭುತ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ಪ್ರತಿದಿನ ಸುಮಾರು 40 ಜನ ಇವರಲ್ಲಿ ಈ ಕಲೆಯ ತರಬೇತಿ ಪಡೆಯುತ್ತಿದ್ದಾರೆ. ತರಬೇತಿ ಪಡೆದವರಿಗೆ ಇವರು ಕೆಲಸವನ್ನೂ ಕೊಡುತ್ತಾರೆ. ಹೀಗಾಗಿ ಇವರಲ್ಲಿ ಕಲಿತವರು ಬೇರೆಡೆ ಹೋಗುವ ಸಂದರ್ಭವೇ ಉಂಟಾಗುವುದಿಲ್ಲ. ಅಗರ ಬತ್ತಿ, ಗಂಧದ ಮಾಲೆ, ಮುಂತಾದವುಗಳ ತಯಾರಿಕೆಯನ್ನು ಮಹಿಳೆಯರೇ ನಿರ್ವಹಿಸುತ್ತಾರೆ. ಹತ್ತಾರು ಮಹಿಳೆಯರಿಗೆ ಇಲ್ಲಿ ಉದ್ಯೋಗ ಲಭಿಸಿದೆ. (ಎಂಎಸ್‌ಜ)

ಬಕ್ಕಪ್ಪ ಗೇನಳ್ಳಿ ಐನೂಲಿ: ಜನಪದ ರಂಗಭೂಮಿ ಕಲಾವಿದ. ಚಿಂಚೋಳಿ ತಾಲ್ಲೂಕಿನ ಐನೂಲಿ ಗ್ರಾಮದವರು. ಇವರ ಕಲಾ ಕಂಪು ಸೂಸಿದ್ದು ಹೈದ್ರಾಬಾದ ಕರ್ನಾಟಕದ ತುಂಬ, 60 ವರ್ಷದ ಬಕ್ಕಪ್ಪನವರು ಜನಪದ ರಂಗಭೂಮಿ ಕಲಾವಿದರು. ಅದನ್ನು ಉಳಿಸಿ ಬೆಳೆಸಲು ಶ್ರಮಿಸಿದ ಅಪರೂಪದದ ಪ್ರತಿಭಾವಂತರು. ತಂದೆ ಭೀಮಶೆಟ್ಟಿ ತಾಯಿ ಸುಗಲಮ್ಮ ಕಲೆಗಾರರು. ಕಲಾಪ್ರೇಮಿಗಳೂ ಆದ ಈ ದಂಪತಿಗಳ ಉದರದಲ್ಲಿ 07.09. 1946ರಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಐನೂಲಿಯಲ್ಲಿ ಮುಗಿಸಿದರು. ಹೈಸ್ಕೂಲ್ ಮತ್ತು ಕಾಲೇಜನ್ನು ಚಿಂಚೋಳಿ ತಾಲ್ಲೂಕಿನ ಚಂದಾಪುರಕ್ಕೆ ಕಾಲ್ನಾಡಿಗೆಯಲ್ಲಿಯೇ ಹೋಗಿ ಬಂದು ಕಲಿತ ಕಷ್ಟಕರ ಜೀವಿ, ಮನೆಯಲ್ಲಿ ತಂದೆ ತಾಯಿಗಳು ಹಣದಲ್ಲಿ ಶ್ರೀಮಂತಿಕೆಯಿಲ್ಲದಿದ್ದರೂ ಕಲೆಯಲ್ಲಿ ಆಗರ್ಭ ಶ್ರೀಮಂತಿಕೆಯನ್ನು ಹೊಂದಿದ್ದರು. ತಮ್ಮೂರಿಗೆ ಜಾತ್ರೆ ಹಬ್ಬ ಹರಿದಿನಗಳಲ್ಲಿ ಬರುತ್ತಿದ್ದ ದೊಡ್ಡಾಟದ ಕಲಾವಿದರನ್ನು ಪರಿಚಯಿಸಿಕೊಂಡು ಶಾಲೆಯ ಬಿಡುವಿನ ವೇಳೆಯಲ್ಲಿ ಅವರ ಊರುಗಳಿಗೆ ತೆರಳಿ ಆಟಗಳನ್ನು ಕಲಿತು ಅವರೊಡನೆ ಪ್ರದರ್ಶಿಸಿ ಬರುತ್ತಿದ್ದರು. ಇವರು ಪಿ.ಯು.ಸಿಯವರೆಗೆ ಓದಿದ್ದರಿಂದ ಆಟದ ಪುಸ್ತಕಗಳನ್ನು ಓದಿ ಹೆಚ್ಚಿನ ಆಸಕ್ತಿ ಹೊಂದಿ ಐನೂಲಿಯಲ್ಲಿಯೇ ಒಂದು ಸಂಘ ಕಟ್ಟಿ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಅಥವಾ ಕಲಿಸುವ ಭಾಗವತನನ್ನು ಬೇರೆ ಕಡೆಯಿಂದಲೂ ಕರೆಸಿ ನಿರ್ದೇಶನ ಪಡೆದು ಆಟಗಳನ್ನು ಯಶಸ್ವಿಗೊಳಿಸಲು ಫಲಕಾರಿಯಾಗಿದ್ದು ತಮ್ಮ 20 ವರ್ಷದವರಿದ್ದಾಗಲೆ.

ಎಲ್ಲದರಲ್ಲೂ ಪರಿಣಿತರು ಆದರೂ ಯಾರೂ ಮಾಡದ ಸಾರಥಿ ಪಾತ್ರ ಇವರ ಪಾಲಿಗೆ ಥೇಟ್ ಕೋಡಂಗಿಯನ್ನು ಹೋಲುವ ಇವರ ವೇಷಭೂಷಣ ನಗುವಂತೆ ಇದ್ದು ತಲೆಗೆ ಕಟ್ಟಿದ ಬಟ್ಟೆ ಅಥವಾ ಬಿದಿರಿನಿಂದ ಮಾಡಿದ ಕುಲಾಯಿ ಮುಖದ ಮೇಲೆಲ್ಲಾ ಅಲ್ಲಲ್ಲಿ ಬಿಳಿ ಚುಕ್ಕಿ, ಕೋರೆ ಮೀಸೆ, ಇಜಾರು, ಕಾಲಿಗೆ ಗೆಜ್ಜೆ, ಕೈಯಲ್ಲಿ ಕೋಲು ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುವ ವಿಧಾನ ಇವರ ವಿಶಿಷ್ಟತೆ. ಕೇಳವಂತವನಾಗು ನಡುನಡುವೆ ಭಲೆ ಭಲೆಲೆ ಶಹಬ್ಬಾಸ್, ಸಾರಥಿ ಪಾತ್ರದ ಬಕ್ಕಪ್ಪನವರು ಹಾಸ್ಯದಿಂದ ಜನರನ್ನು ರಂಜಿಸಿ ಹಾಸ್ಯದ ಹೊನಲಲ್ಲಿ ಮುಳುಗಿಸಿ ಸಂಸಾರದ ತಾಪತ್ರಯ ದುಃಖ ದುಮ್ಮಾನಗಳನ್ನು ದೂರವಿರಿಸುವಿಕೆಯ ಮಹದುದ್ದೇಶದ ಮಹಾಕಲಾವಿದ. ಇವರ ಹಾಸ್ಯ ಪಾತ್ರವನ್ನು ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕವರೆಷ್ಟೇ ಲೆಕ್ಕವಿಲ್ಲ. ಇಡೀ ದೊಡ್ಡಾಟದ ವೇಳೆಯಲ್ಲಿ ಕೊನೆ ಪಕ್ಷ ಐದಾರು ಸಲ ನಗೆಗಡಲಲ್ಲಿ ಮುಳುಗಿದ ಜನ ಸಮೂಹ ಇವರನ್ನು ಹಾಡಿ ಹೊಗಳಿದ್ದುಂಟು.

ಪಾತ್ರಗಳಲ್ಲದೆ ಹಾಡುಗಾರಿಕೆಯನ್ನೂ ಮೈಗೂಡಿಸಿ ಕೊಂಡವರು. ಅಫಜಲಪೂರ, ಚಿಂಚೋಳಿ ಗ್ರಾಮದ ಪ್ರಖ್ಯಾತ ದೊಡ್ಡಾಟದ ಕಲಾವಿದರಾದ ಮೋನಪ್ಪ ಸುತಾರ ಬಳಿಯೂ ಇವರು ಹಾಡುಗಾರಿಕೆಯ ಅಭ್ಯಾಸ ಮಾಡಿದ್ದುಂಟು. ದೊಡ್ಡಾಟದ ಮುಮ್ಮೇಳ ಮತ್ತು ಹಿಮ್ಮೇಳಗಳೆರಡರಲ್ಲೂ ಹಾಡಬಲ್ಲ ಬಕ್ಕಪ್ಪ ವೀರ, ರೌದ್ರ, ಅಬ್ಬರಗಳಿಂದ ಹಾಡಿದರೆ ಊರಿಗೆ ಊರೇ ಕೇಳಿಸಿಕೊಳ್ಳುತ್ತಿತ್ತು.

ಮಾರ್ಕಂಡೇಯನ ಕಥೆ, ಕನಕಾಂಗಿ ಕಲ್ಯಾಣ, ವೀರ ಪ್ರತಾಪ, ರುಕ್ಮಾಂಗದ, ವಜ್ರಮುಕುಟ, ದೇವಿ ಆಟ, ರತಿ ಕಲ್ಯಾಣ, ಗಿರಿಜಾ ಕಲ್ಯಾಣ, ಲವ-ಕುಶ, ಚಂದ್ರಹಾಸ, ವೀರ ಅಭಿಮನ್ಯು, ದ್ರೌಪದಿ ವಸ್ತ್ರಾಪಹರಣ ಇವರು ಆಡಿದ ಆಡಿಸಿದ ಪ್ರಮುಖ ಆಟಗಳು, ಪ್ರತಿ ವರ್ಷ ನಡೆಯುವ ಜಾತ್ರೆಗಳಲ್ಲಿ ಐದಾರು ತಿಂಗಳು ಗಟ್ಟಲೆ ಪ್ರತಿ ಹಳ್ಳಿಗಳಲ್ಲಿ ನೂರಾರು ದೊಡ್ಡಾಟಗಳನ್ನು ಆಡಿಸಿ ದೊಡ್ಡಾಟ ಮಾಸ್ತರರಾಗಿ ಮೆರೆದಿದ್ದಾರೆ. ಐನೂಲಿ, ಚಿಂಚೋಳಿ, ಇದಲಾಯಿ, ತೆಲಂಗಾನಾನದ ಕರ್ನಕೋಟಿ, ತಾಂಡೂರು, ಜಹಿರಾಬಾದ, ಸದಾಶಿವಪೇಟ್, ಎಂಪಲ್ಲಿ, ಸೇಡಂ, ನಿಡಗುಂದಾ ಇವು ಇತರ ಪ್ರಮುಖ ಊರುಗಳು.

ದೊಡ್ಡಾಟ, ಸಣ್ಣಾಟ, ಡಪ್ಪಿನಾಟವಲ್ಲದೆ ಹಳ್ಳಿಗಳ ಪ್ರಮುಖ ಕಲೆಗಳಾದ, ಕೋಲಾಟ, ಸುಗ್ಗಿ ಕುಣಿತ, ಲೇಜಿಮ್, ಭಜನೆ, ಮುಳ್ಳಿನ ಹೆಜ್ಜೆ, ಜಗ್ಗಲಿಗೆ ಮುಂತಾದ ಆಟಗಳನ್ನು ಯುವಕರಿಗೆ ಕಲಿಸಿ ಪ್ರದರ್ಶನಗಳು ಮುಗಿಯುವವರೆಗೆ ಮಾರ್ಗದರ್ಶಕರಾಗಿ ತಮ್ಮನ್ನು ತೊಡಗಿಸಿಕೊಳ್ಳುವರು. 40 ವರ್ಷಗಳಿಂದ ಈ ಕಲೆಗಾಗಿ ದುಡಿದ ಇವರ ಸೇವೆ ಗಮನಾರ್ಹ. ಚಿಂಚೋಳಿ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಗೌರವಿಸಿ, ಸನ್ಮಾನಿಸಿದೆ. (ಜಿಕೆ)

ಬಟ್ಟೆಯ ಮೇಲಿನ ಚಿತ್ರಕಲೆ: ಜನಪದರು ಸೌಂದರ್ಯಪ್ರಿಯರು. ಕಲೆಯ ಆರಾಧಕರು ಮತ್ತು ಕಲಾವಿದರು. ತಮ್ಮ ಮನೆಯಲ್ಲಿ ಲಭ್ಯವಿರುವ ಸಗಣಿ, ಸುಣ್ಣ, ಮಣ್ಣು ರಂಗೋಲಿ ಸಿಂಗರಿಸುತ್ತಾರೆ. ಹೆಣ್ಣಿಗೆ ಹೊಲಿಗೆಗಳಿಂದ ಬಾಗಿಲ-ಕಿಟಗಳನ್ನು ಅಲಂಕರಿಸುತ್ತಾರೆ, ಹಚ್ಚೆ ಹಾಕುತ್ತಾರೆ. ಮದರಂಗಿ ಹಚ್ಚುತ್ತಾರೆ. ಇವೆಲ್ಲ ಹೆಂಗಸರ ಕಲೆಗಳಾಗಿ ಕಂಡುಬಂದರೆ ಗಂಡಸರೂ ಸಹ ಎಲೆ-ಅಡಿಕೆ ಚೊಂಟಿಯಿಂದ ಹಿಡಿದು ದೊಡ್ಡಾಟದ ವೇಷ-ಭೂಷಣಗಳವರೆಗೆ, ಹಗ್ಗ ಹೊಸೆಯುವದರಿಂದ ಹಿಡಿದು ಕಂಬಳಿ ನೇಯುವವರೆಗೆ-ಹೀಗೆ ನೂರಾರು ಕಲೆಗಳಲ್ಲಿ ಜನಪದರು ತಮ್ಮ ಕರಕುಶಲತೆ ಮೆರೆದಿರುವುದನ್ನು ಕಾಣಬಹುದು. ಅವರವರ ವೃತ್ತಿ-ಪ್ರವೃತ್ತಿಗೆ ಸಂಬಂಧಿಸಿದ ಗ್ರಾಮೀಣ ಚಿತ್ರಕಲೆ ಅದ್ಭುತವಾದುದು.

ಬಟ್ಟೆಯ ಮೇಲಿನ ಚಿತ್ರಕಲೆಯನ್ನು ನಾವು ಮುಖ್ಯವಾಗಿ ನಾಲ್ಕೂ ವಿಧಗಳಲ್ಲಿ ಕಾಣುತ್ತೇವೆ. ನೇಯ್ಗೆ, ಹೆಣಿಗೆ, ಹೊಲಿಗೆಗಳಂಥ ಕ್ರಿಯೆಗಳ ಮೂಲಕ ಬಣ್ಣ ಬಣ್ಣದ ದಾರಗಳ ಸಹಾಯದಿಂದ ತಾವೇ ನಿರ್ಮಿಸಿದ ಸಾಧನಗಳಿಂದ ಬಟ್ಟೆಯ ಮೇಲೆ ಚಿತ್ರಕಲೆ ಸೃಷ್ಟಿಸಿರುವುದನ್ನು ಕಾಣುತ್ತೇವೆ. ಇವುಗಳೊಂದಿಗೆ ಈಚೆಗೆ ಬಟ್ಟೆಯ ಮೇಲೆ ವಿವಿಧ ಬಣ್ಣಗಳಿಂದ ಕುಂಚದ ಮೂಲಕ ಚಿತ್ರಕಲೆ ಮೂಡಿಸಿರುವುದನ್ನು ಕಾಣುತ್ತೇವೆ.

ನೇಯ್ಗೆ ಚಿತ್ರಕಲೆ: ನೂಲಿನ ನೇಯ್ಗೆ ಮೂಲಕ ಬಟ್ಟೆ ತಯಾರಿಸುವ ಕಲೆಯನ್ನು ನಮ್ಮ ಪೂರ್ವಜರು ಅರಿತಿರಲಿಕ್ಕೆ ಸಾಕು ಇಂದಿಗೂ ನೂಲಿನ-ನೇಯುವ ಕಲೆ ಮುಂದುವರೆದು ಕೊಂಡು ಬಂದಿದೆ. ನೇಯ್ಯುವ ನೇಕಾರ ಜನಾಂಗವಿದ್ದು ವಂಶಪಾರಂಪರ್ಯವಾಗಿ ಅವರು ನೇಯಿಗೆ ಕಲೆಯಲ್ಲಿ ಕಾಲಕಾಲಕ್ಕೆ ಸುಂದರವಾದ ಚಿತ್ರಕಲಾ ವಿನ್ಯಾಸಗಳನ್ನು ರೂಢಿಸಿಕೊಂಡು ಬಂದಿದ್ದಾರೆ.

ಬಟ್ಟೆಗೆ ಅರಿವೆ, ವಸ್ತ್ರ, ಜವಳಿ ಎಂಬ ಹೆಸರುಗಳೂ ಇವೆ. ಭಾರತದ ಜವಳಿ ವಸ್ತುಗಳು ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿದೆ. ಸೀರೆ, ಕುಪ್ಪಸಗಳೊಂದಿಗೆ ನೇಯ್ಗೆಯಲ್ಲಿ ತಯಾರಾದ ಜರಿಪಟಗಾ, ರೇಷ್ಮೆಪಟಗಾ, ಕಡ್ಡಿಪಟಗಾ, ಜಮಖಾನೆ, ಗುಡಾರ, ಕಂಬಳಿಗಳಲ್ಲೂ ಚಿತ್ರಕಲೆ ಮೂಡಿ ಬಂದಿದೆ.

ಸೀರೆಗಳು: ಅಂಚು ಸೆರಗು, ಒಳಮೈಗಳ ಪರಸ್ಪರ ಹೊಂದಾಣಿಕೆಯಿಂದ ಸೀರೆಯ ವಿನ್ಯಾಸ ರೂಪಿಸಿ ನೇಯಲಾಗುತ್ತಿದೆ. ಅವುಗಳ ನೇಯ್ಗೆ ವಿಧಾನ ಮಾತ್ರ ಕರ್ನಾಟಕದ ಎಲ್ಲ ಭಾಗಗಳಲ್ಲೂ ಒಂದೇ ತೆರನಾಗಿದ್ದರೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಒಳಗೊಂಡಿವೆ. ಕೈಮಗ್ಗದ ನೇಯ್ಗೆ ಬಟ್ಟೆಗಳು ಮೇಲು ನೋಟಕ್ಕೆ ಒರಟಾಗಿ ಕಂಡುಬಂದರೂ ಅವುಗಳಲ್ಲಿಯ ವಿನ್ಯಾಸಕ್ರಮ, ಬಣ್ಣಗಳ ಚಿತ್ತಾರಗಳು, ಹೆಚ್ಚು ಸೊಗಸಾಗಿ ಆಕರ್ಷಕವಾಗಿರುತ್ತಿದ್ದವು. ಗೃಹಕೈಗಾರಿಕೆಯಲ್ಲಿ ಒಚಿದಾದ ಕೈಮಗ್ಗದ ಜವಳಿ ಇಂದಿಗೂ ಸಾಂಪ್ರದಾಯಿಕ ನೇಯ್ಗೆ, ವಿನ್ಯಾಸಗಳು ಬಣ್ಣಗಳ ಚಿತ್ತಾರಗಳಿಂದ ತಯಾರಾಗುತ್ತಿದ್ದು ದೇಶ ವಿದೇಶಗಳಲ್ಲಿ ಜನಪ್ರಿಯತೆ ಗಳಿಸಿಕೊಂಡಿವೆ. ಸಾಮಾನ್ಯವಾಗಿ ಸೀರೆಗಳು ಹದಿನಾರು ಮೊಳ ಉದ್ದವಿರುತ್ತವೆ. ಅಂಚು, ಸೆರಗು, ಒಳಮೈಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸೀರೆಗಳನ್ನು ಕೊಂಡುಕೊಳ್ಳುತ್ತಾರೆ. ಸೀರೆಯ ಸುಳುಹು ಮತ್ತು ಹೊಳಹಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ.

ಕಡುಗೆಂಪು, ದಾಳಿಂಬರ ಕೆಂಪು, ಗಿಳಿಹಸಿರು, ನವಿಲುಸೀರೆ ಕರಿಚಂದ್ರಕುಳಿ, ಈ ಬಣ್ಣಗಳಿಂದ ಕೂಡಿದ ಸೀರೆಗಳು ಪ್ರಮುಖವಾಗಿದ್ದು ನೈಸರ್ಗಿಕ ಮೂಲದ ಬಣ್ಣಗಳನ್ನು ಒಳಗೊಂಡಿವೆ. ಪರಸಪೇಟ, ಗಡಿದಡಿ, ಉಂಡಿದಡಿ, ಬುಗಡಿದಡಿ, ರುದ್ರಾಕ್ಷಿದಡಿ, ಪಟ್ಟೆದಂಚು, ಚಿಕ್ಕಿದಡಿ ಎಂಬ ನಮೂನೆಗಳ ಅಂಚಿನ ಸೀರೆಗಳಿದ್ದು ಅಂಚಿನಲ್ಲಿ ವೈವಿಧ್ಯತೆಯಿರುವುದನ್ನು ಕಾಣುತ್ತೇವೆ. ಢಪ್ಪಳಸೀರೆ, ಕುಂಕುಮಗೆರಿ, ಗದ್ದಿಮಡಿ, ಚಾರಕಣ್ಣು, ಬ್ರಹ್ಮಾಂಡ ಪಪ್ಪಳಿ, ಚದುರಂಗ ಚಿಕ್ಕಿ, ಕೊಂಡಿಚಿಕ್ಕಿ, ಚೌಕಡಿ, ಕೇರಪಪ್ಪಳಿ, ನಿಂಬಿ ಪಪ್ಪಳಿ, ಗುಬ್ಬಿಕಣ್ಣು, ನವಿಲಕಣ್ಣು, ನಿಂಬಾವಳಿ, ಎಳ್ಳಹೂವು-ಇವು ಸೀರೆಯ ಒಳಮೈಗಳಾಗಿವೆ. ತೋಪಿನಸೆರಗು, ಪಟ್ಟೆಸೆರಗು, ಲತಗುಣಿ ಸೆರಗು ಇಂಥ ಸೆರಗಿನ ವಿನ್ಯಾಸಗಳಿವೆ. ಸಾಂಪ್ರದಾಯಿಕ ಬಣ್ಣಗಳಿಂದ, ಕೈಮಗ್ಗದಲ್ಲಿ ತಮ್ಮ ಕರಕುಶಲತೆಯಿಂದ ಸೀರೆಗಳಲ್ಲಿ ನೇಕಾರರು ಸುಂದರವಾದ ಚಿತ್ರಕಲೆ ಮೂಡಿಸಿರುವುದನ್ನು ಈಗಲೂ ಕಾಣಬಹುದಾಗಿದೆ.

ಬಟ್ಟೆಗಳಲ್ಲಿಯೇ ರೇಷ್ಮೆ ಬಟ್ಟೆಯು ಬಂಗಾರದ ಮೌಲ್ಯಗಳನ್ನು ಒಳಗೊಂಡಿದೆ. ಅಲ್ಲದೇ ಅದಕ್ಕೆ ಮಡಿಬಟ್ಟೆಯೆಂಬ ಹೆಗ್ಗಳಿಕೆಯಿದೆ. ಮದುವೆ ಸಂದರ್ಭದಲ್ಲಿ ಮದುವಣಗಿತ್ತಿಗೆ ರೇಷ್ಮೆ ಸೀರೆ ಅಗತ್ಯವಾಗಿ ಇರಲೇಬೇಕು. ಇದು ಹತ್ತಿಬಟ್ಟೆಯ ವಿನ್ಯಾಸ ಹೊಂದಿದ್ದರೂ ಸಹ ಸುಳುಹಿನಿಂದ ಕೂಡಿರುತ್ತದೆ. ಜರಿಯ ಕುಸುರಿ ಕೆಲಸದ ಪೀತಾಂಬರಗಳು ಹೆಚ್ಚಿನ ಮೌಲ್ಯ ಹೊಂದಿರುತ್ತವೆ. ಹೊಸೆದು ತುದಿಯಲ್ಲಿ ಗಂಟು ಹಾಕುವರು. ಅಥವಾ ಬಣ್ಣದ ದಪ್ಪದಾರಗಳಿಂದ ಕರೀ ಕಟ್ಟುವರು.

ಗುಡಾರ: ನೇಯ್ಗೆಯಲ್ಲಿ ಬಹುದೊಡ್ಡದಾದ ಹಾಸುಗೆಯೆಂದರೆ ಗುಡಾರ. ಇದು ಸಾಮೂಹಿಕ ಬೈಠಕ್‌ಗೆ ಹಾಸಲು, ಬಂಡಿಗೆ ಕಟ್ಟಲು ರಾಶಿ ಮಾಡಲು, ಕಾಳು ಹರವಲು ದವಸ-ಧಾನ್ಯಗಳಿಗೆ ಹೊಚ್ಚಲು ಉಪಯೋಗವಾಗುತ್ತದೆ. ದಪ್ಪನೂಲಿನ ಉದ್ದದ ಹಾಳೆಗಳನ್ನು ಮೊದಲಿಗೆ ನೇಯ್ದು ಅವುಗಳನ್ನು ಒಂದಕ್ಕೊಂದು ಕೂಡಿಸಿ ಹೊಲಿಯುತ್ತಾರೆ. ಹಾಳೆಗಳಲ್ಲಿ ಬಣ್ಣ ಬಣ್ಣದ ಜೋಡಿಪಟ್ಟಿಗಳ ವಿನ್ಯಾಸ ಗುಡಾರಕ್ಕೆ ಕಳೆ ತಂದಿರುತ್ತದೆ. ಕಂಬಳಿಗೆ ಕರಿ ಕಟ್ಟಿದ ಹಾಗೆ ಗುಡಾರಕ್ಕೂ ಬಣ್ಣದ ದಾರಗಳಿಂದ ಕರೀ ಕಟ್ಟುವರು.

ಹೀಗೆ ನೇಯ್ಗೆಯಲ್ಲಿ ನಾಜೂಕಾದ ಸೀರೆ-ಖಣಗಳಲ್ಲಿ ಒಂದು ತೆರನಾದ ನವುರಾದ ಚಿತ್ರಕಲೆ ಕಂಡುಬಂದರೆ ಜಮಖಾನೆ, ಕಂಬಳಿ, ಗುಡಾರಗಳಲ್ಲಿ ಅಪ್ಪಟ ಗ್ರಾಮೀಣ ಚಿತ್ರಕಲೆ ಕಾಣುತ್ತೇವೆ. ಕಂಬಳಿ, ಗುಡಾರಗಳಂಥ ಅಪ್ಪಟ ಜಾನಪದ ನೇಯ್ಗೆ ಕಲೆ ಕ್ಷೀಣಿಸಿದೆ.

ಹೆಣಿಗೆ ಚಿತ್ರಕಲೆ: ನೇಯ್ದ ಬಟ್ಟೆಯ ಮೇಲೆ ಹೆಣಿಗೆ ಮೂಲಕ ಆ ಬಟ್ಟೆಯನ್ನು ಇನ್ನಷ್ಟು ಅಲಂಕರಿಸುತ್ತಾರೆ. ಆ ಅಲಂಕಾರವೇ ಕಸೂತಿ ಕಲೆಯೆಂದು ಹೆಸರಾಗಿದೆ. ಮನಸ್ಸನ್ನು ಏಕಾಗ್ರತೆಯಿಂದ ಹಿಡಿದಿಟ್ಟುಕೊಂಡು ಸೂಜಿದಾರಗಳ ಮೂಲಕ ಕಣ್ಣು ಕೈಗಳು ಅತ್ಯಂತ ಸೂಕ್ಷ್ಮವಾಗಿ ಕಸೂತಿ ಕೆಲಸವನ್ನು ಮಾಡುತ್ತವೆ. ಈ ಕೈಕಸೂತಿಯೊಂದಿಗೆ ಈಚೆಗೆ ಹೊಲಿಗೆ ಮೂಲಕ, ಯಂತ್ರದ ಸಹಾಯದಿಂದ ಕಸೂತಿ ಹಾಕುವುದು ಬೆಳೆದು ಬಂದಿದೆ. ಕಸೂತಿಯಲ್ಲಿ ನೇಯ್ಗೆ, ಗಾಂವಟಿ, ಮುರಿಗೆ, ಮೆಂತೆ ಮತ್ತು ಕನ್ನಡಿ ಕಸೂತಿಗಳೆಂಬ ಮಾದರಿಗಳನ್ನು ಗುರುತಿಸಲಾಗಿದೆ. ಬಟ್ಟೆಯನ್ನು ನೇಯುವಾಗಲೇ ಅಡ್ಡ ಎಳೆಗಳೊಡನೆ ಚಿತ್ರವಿನ್ಯಾಸ ರೂಪಿಸಿ ನೇಯುತ್ತಾರೆ. ಅದರಿಂದಾಗಿ ಅದನ್ನು ನೇಯ್ಗೆ ಕಸೂತಿಯೆಂದೆನ್ನುತ್ತಾರೆ. ವಿವಿಧ ಬಣ್ಣಗಳ ಹತ್ತಿದಾರ ಮತ್ತು ರೇಷ್ಮೆದಾರಗಳಿಂದ ಬಟ್ಟೆಯ ಎಳೆಗಳನ್ನು ಆಧಾರವಾಗಿಟ್ಟುಕೊಂಡು ತಾವು ಮೊದಲೇ ಯೋಜಿಸಿದ ವಿನ್ಯಾಸಕ್ಕೆ ಅನುಗುಣವಾಗಿ ಕಸೂತಿ ಹಾಕುತ್ತಾರೆ. ಸೀರೆಯ ಸೆರಗು, ಕುಪ್ಪಸದ ತೋಳು, ಮಕ್ಕಳ ಕುಂಚಿಗೆಗಳಲ್ಲಿ ಈ ಮಾದರಿ ಹೆಚ್ಚಾಗಿದ್ದು ಇದನ್ನು ಗಾಂವಿಟಿ ಅಥವಾ ದೇಶೀ ಕಸೂತಿಯೆಂದು ಕರೆಯುತ್ತಾರೆ. ಮೆಂತೆಕಾಳಿನ ರೂಪದಲ್ಲಿರುವ ಕಸೂತಿಗೆ ಮೆಂತೆ ಕಸೂತಿಯೆಂದು ಕರೆಯುತ್ತಾರೆ. ಮುರಿಗೆ ಮುರಿಗೆ ಆಕಾರದಲ್ಲಿರುವ ಕಸ್ತಿಗೆ ಮುರಿಗೆ ಕಸೂತಿ ಎಂದೆನ್ನುತ್ತಾರೆ. ಬಟ್ಟೆಯ ಮೇಲೆ ದಾರಗಳಿಂದ ಹೆಣೆದು, ಬಣ್ಣದ ಗುಂಡಿಗಳಿಂದ ಅಥವಾ ಮುತ್ತುಗಳಿಂದ ಹೆಣೆದು, ಬಿದಿರಿನ ಕಡ್ಡಿಗಳಿಂದ ಅಂಟಿಸಿ, ಆಲಂಕಾರಿಕ ಚಿತ್ರಗಳನ್ನು ರೂಪಿಸಿ ಗಾಜಿನ ಫ್ರೇಮ್ ಹಾಕಿಸಿಡುತ್ತಾರೆ. ಅದಕ್ಕೆ ಕನ್ನಡಿ ಕಸೂತಿ ಎಂದೆನ್ನುತ್ತಾರೆ. ಈ ಐದೂ ಮಾದರಿಯ ಕಸೂತಿ ವಿನ್ಯಾಸಗಳು ವೈವಿಧ್ಯಮಯವಾಗಿದ್ದು ಬಣ್ಣ ಬಣ್ಣದ ಚಿತ್ರಗಳನ್ನು ಬಟ್ಟೆಮೇಲೆ ಸೃಷ್ಟಿಸಿರುವ ಕಲೆಗಳಾಗಿವೆ.

ಗಾಂವಟಿ, ಮುರಿಗೆ ಮೆಂತೆ ಮಾದರಿಗಳೆಲ್ಲವೂ ಕೈಕಸೂತಿಗಳಾಗಿವೆ. ಸೀರೆಯ ಸೆರಗು, ಕುಪ್ಪಸದ ತೋಳು, ಮಕ್ಕಳ ಕುಂಚಿಗೆ, ಲಂಗ, ಪೋಲಕಗಳ ಮೇಲೆ ಕಸೂತಿ ಹಾಕುತ್ತಾರೆ. ವಿವಿಧ ಬಣ್ಣದ ಹತ್ತಿದಾರ, ರೇಷ್ಮೆದಾರಗಳಿಂದ ಸುಂದರ ಹಾಗೂ ನಾಜೂಕಾದ ಚಿತ್ರಗಳನ್ನು ಬಿಡಿಸುತ್ತಾರೆ. ಹೂ, ಹೂಬಳ್ಳಿ, ತೆನೆ, ನಕ್ಷತ್ರ, ಲಿಂಗ, ನಂದಿ, ಗಿಳಿ, ನವಿಲು, ಇಣಜಿ, ದೀಪ, ಗುಡಿ, ಗೋಪುರ, ತೇರು ಮುಂತಾದ ನೂರಾರು ಚಿಕ್ಕ ಚಿಕ್ಕ ಚಿತ್ರಗಳು ಕಸೂತಿ ಮೂಲಕ ಬಟ್ಟೆ ಮೇಲೆ ಮೂಡಿ ಬಂದಿವೆ. ಇವೆಲ್ಲವೂ ಸೂಕ್ಷ್ಮತೆಯಿಂದ ಕೂಡಿದ್ದು ಕಲಾತ್ಮಕವಾಗಿವೆ. ಈ ಬಣ್ಣ ಬಣ್ಣದ ಚಿತ್ತಾರಗಳು, ಮಹಿಳೆಯರ ಕರಕುಶಲತೆಗೆ ಸಾಕ್ಷಿಯಾಗಿದೆ.

ಎತ್ತುಗಳ ಮೇಲೆ ಹಾಕುವ ಜೂಲಗಳ ಮೇಲೆ ಕಸೂತಿ ಕಲೆಯಿದೆ. ಹಳದಿ ಅಥವಾ ಕೆಂಪು ಚಮಕಾ ಬಟ್ಟೆಯಿಂದ ತಯಾರಿಸಿದ ಜೂಲಗಳ ಮೇಲೆ ಇಂದಿನ ಎಂಬ್ರಾಯ್ಡರಿ ರೀತಿಯಲ್ಲಿ ಜೂಲದ ಸುತ್ತಲೂ ಕಲಾತ್ಮಕ ಪಟ್ಟಿ ತೆಗೆದು, ಇಣಿಯನ್ನೊಳಗೊಂಡಂತೆ ಬೆನ್ನ ಮೇಲೆ ಇಳಿ ಬೀಳುವ ಎರಡೂ ಬದಿಯ ಬಟ್ಟೆಯ ಮೇಲೆ ಜೋಡಿ ಚಿತ್ರಗಳನ್ನು ಹೆಣೆದಿರುತ್ತಾರೆ. ಸೂರ್ಯ, ಚಂದ್ರ, ಲಿಂಗ, ನಂದಿ, ಗಿಡ, ಬಳ್ಳಿ, ಆನೆ, ನವಿಲು ಮುಂತಾದ ದೊಡ್ಡ ಚಿತ್ರಗಳನ್ನು ರೂಪಿಸಿರುತ್ತಾರೆ. ರೇಷ್ಮೆದಾರ ಮತ್ತು ಜರಿಗಳನ್ನು ಬಳಸಿ ಆಕರ್ಷಕವಾಗುವಂತೆ ಜೂಲಗಳನ್ನು ತಯಾರಿಸುತ್ತಾರೆ.

ದಪ್ಪದಾರದ ದೊಡ್ಡಕಣ್ಣಿನ ಬಿಳಿಬಣ್ಣದ ಬಟ್ಟೆ ಹಾಗೂ ಸಣ್ಣಕಣ್ಣಿನ ಗುತ್ತಾಗಿ ನೇಯ್ದ ಮಿಲ್ಲಿನ ಬಟ್ಟೆ ಹೆಣಿಗೆಗಾಗಿಯೇ ಸಿಗುತ್ತದೆ. ಅದನ್ನು ಬಳಸಿ ಕೈಚೀಲ, ಬಾಗಿಲ ಪರದೆ, ಬಾಗಿಲ ತೋರಣ, ಎಡೆವಸ್ತ್ರ, ಗದ್ದುಗೆ ವಸ್ತ್ರ, ತೊಟ್ಟಿಲ ಚೆಟ್ಟು ತಯಾರಿಸುತ್ತಾರೆ. ಈಚೆಗೆ ಟೇಬಲ್‌ಕ್ಲಾಥ್, ಕುರ್ಚಿ ಮೆತ್ತನೆಗಳು ದಿವಾನ ಸೆಟ್ಟುಗಳಿಗೆ ಸಹ ಈ ಬಟ್ಟೆ ಬಳಸಿ ಕಸೂತಿ ವಿನ್ಯಾಸ ರೂಪಿಸಿರುವುದನ್ನು ಕಾಣಬಹುದು.

ಬಾಗಿಲ ತೋಳು ಪರದೆಗಳ ಮೇಲೆ ಮನೆಗೆ ಬಂದವರನ್ನು ಸ್ವಾಗತಿಸುವ ರೀತಿಯಲ್ಲಿ ಎದುರು-ಬದುರಾಗಿ ಕೈಮುಗಿದ ಅಥವಾ ಹೂ ಚೆಲ್ಲುವ ಚೆಲುವೆಯರ, ಮಕ್ಕಳ, ಆನೆಗಳ ನವಿಲುಗಳ, ಗಿಳಿಗಳ, ಹುಲಿಗಳ, ಸಿಂಹಗಳ ಮುಂತಾದ ಜೋಡಿ ಚಿತ್ರಗಳನ್ನು ಹೆಣೆದಿರುತ್ತಾರೆ. ಪರದೆ ದಂಡೆಗುಂಟ ಹೂವಿನ ಬಳ್ಳಿಗಳು, ಚುಕ್ಕೆಗಳು, ಸಾಲುಸಾಲಾಗಿ ಇರುತ್ತವೆ. ಬಾಗಿಲ ಮೇಲಿನ ಅಡ್ಡಪಟ್ಟಿಯ ಅಳತೆಗೆ ತಕ್ಕಂತೆ ತೋರಣ ಪರದೆಗಳಿರುತ್ತವೆ. ಅದರ ಮೇಲೆ ಆಡುವ ಮಕ್ಕಳ, ಪಕ್ಷಿಗಳ, ಪ್ರಾಣಿಗಳ, ಹೂಗಳ ಒಂದೇ ತೆರನಾದ ಐದಾರು ಚಿತ್ರಗಳಿರುವುದನ್ನು ಕಾಣಬಹುದು.

ನಮ್ಮ ಹಳ್ಳಿಗರ ಕೈಚೀಲಗಳು ಸಹ ಆಕರ್ಷಕ ಕಸೂತಿಯಿಂದ ಕೂಡಿರುತ್ತವೆ. ವಿವಿಧ ಬಣ್ಣಗಳ ದಾರಗಳಿಂದ ವಿವಿಧ ವಿನ್ಯಾಸಗಳಕ ಸಾಲುಸಾಲುಗಳನ್ನು ಹೆಣೆದು ಚೀಲದ ಅಂಚಿನುದ್ದಕ್ಕೂ ಅದಕ್ಕೊಪ್ಪುವ ಬಣ್ಣದ ಬಟ್ಟೆಯನ್ನು ನೆರಿಗೆ ಮಾಡಿ ಚೀಲದಂಚಿನುದ್ದಕ್ಕೂ ಹೊಲಿದು ಅಂದಗೊಳಸುವರು. ಗದ್ದುಗೆ ವಸ್ತ್ರ ಇದೇ ವಿನ್ಯಾಸವನ್ನೊಳಗೊಂಡಿದ್ದು ಅದಕ್ಕೆ ಸಣ್ಣ ಸಣ್ಣ ಗೊಂಡೆಗಳನ್ನು ಹಚ್ಚಿರುತ್ತಾರೆ.

ಬಟ್ಟೆಯ ತುಂಡಿನ ಮೇಲೆ ಬಣ್ಣಬಣ್ಣದ ಗುಂಡಿಗಳಿಂದ, ಮುತ್ತುಗಳಿಂದ, ಕರಿಮಣಿಗಳಿಂದ ಬಾತುಕೋಳಿ, ನವಿಲು, ಗಿಳಿ ಮುಂತಾದ ಚಿತ್ರಗಳನ್ನು ಹೆಣೆಯುತ್ತಾರೆ. ಕನ್ನಡಿ ಚೂರು, ಬಿದಿರಿನ ಕಡ್ಡಿ, ಬೆಂಡು ಇವುಗಳನ್ನು ಬಟ್ಟೆಗೆ ಅಂಟಿಸಿ ಅಂದವಾದ ಚಿತ್ರಗಳನ್ನು ಮಾಡುತ್ತಾರೆ. ಬಟ್ಟೆಯ ಮೇಲೆ ಕಸೂತಿ ಮೂಲಕ ವ್ಯಕ್ತಿಚಿತ್ರ ನಿರ್ಮಿಸುತ್ತಾರೆ. ಈ ಕಲಾಕೃತಿಗಳಕನ್ನು ಗಾಜಿನ ಫ್ರೇಮಿನಲ್ಲಿ ಹಾಕಿಸಿಟ್ಟು ಗೋಡೆಗೆ ತೂಗುಹಾಕುವರು. ಇದನ್ನು ಕನ್ನಡಿ ಕಸೂತಿ ಎಂದು ಕರೆಯುತ್ತಾರೆ. ಹೀಗೆ ಕಸೂತಿ ವಿನ್ಯಾಸಗಳು ದೇವಾಲಯ ಶಿಲ್ಪಗಳಿಂದ ಹಿಡಿದು ತೊಟ್ಟಿಲವರೆಗೆ, ಆನೆಯಿಂದ ಹಿಡಿದು ಅಳಿನವರೆಗೂ ವಿಸ್ತಾರವಾಗಿವೆ. ಬಿಡುವಿನ ವೇಳೆಯಲ್ಲಿ ತಾಯಿಯಾದವಳು ತನ್ನ ಮಕ್ಕಳಿಗೆ ಪ್ರಿಯವಾದ ಹೂಬಳ್ಳಿ, ಹೂವು, ಗಿಳಿ, ಆನೆ, ತೊಟ್ಟಿಲು ಹಸು ತನಗೆ ಪ್ರಿಯವಾದ ದೇವಾಲಯ, ಶಿಲ್ಪಗಳು, ಗೋಪುರ, ಕಲಶ, ತುಳಸಿಕಟ್ಟೆ, ಜೋಳದ ತೆನೆ-ಕಸೂತಿಯಲ್ಲಿ ರೂಪಿಸಿಕೊಡುತ್ತಿದ್ದಳು. ಕನ್ನಡಿಗರ ಕಸೂತಿಗಳಲ್ಲಿ ಬಿಳಿ ಕೆಂಪು ಹಳದಿ ಮತ್ತು ಹಸಿರು ಬಣ್ಣಗಳು ಪ್ರಮುಖವಾದವು. ರೇಷ್ಮೆದಾರದಿಂದ ಮಾಡಿದ ಕಸೂತಿಯು ತುಂಬ ದಪ್ಪವಾಗಿರದೇ ಆಕರ್ಷಕವಾಗಿರುತ್ತದೆ.

ಲಂಬಾಣಿ ಕಲೆ: ಕಸೂತಿ ಕಲೆಗೆ ಹೆಸರಾದ ಲಂಬಾಣಿ ಜನಾಂಗವಿದೆ. ಕಸೂತಿ ಅವರ ಬದುಕಿನ ಅವಿಭಾಜ್ಯ ಅಂಗ. ಲಂಬಾಣಿ ಗಂಡಸರ ಉಡುಪುಗಳಲ್ಲಿ ಯಾವ ವಿಶೇಷತೆಯೂ ಇಲ್ಲ. ಆದರೆ ಲಂಬಾಣಿ ಹೆಂಗಸರ ಉಡುಪುಗಳು ಮಾತ್ರ ಇಂದಿಗೂ ತಮ್ಮ ವಿಶೇಷತೆಯನ್ನು ಉಳಿಸಿಕೊಂಡಿವೆ. ಕಸೂತಿ ಎಂದರೆ ಲಂಬಾಣಿ; ಲಂಬಾಣಿಯೆಂದರೆ ಕಸೂತಿ ಎನ್ನುವಷ್ಟರ ಮಟ್ಟಿಗೆ ಅವರು ಕಸೂತಿ ಕಲೆಯನ್ನು ಪ್ರೀತಿಸುತ್ತಾರೆ. ಅದು ತಮ್ಮ ಜನಾಂಗದ ಒಂದು ಸಂಪ್ರದಾಯವೆಂದು ಪರಿಗಣಿಸಿದ್ದಾರೆ. ಅವರ ಉಡುಗೆಗಳ ಬಗೆಗೆ ಹಲವಾರು ನಂಬಿಕೆಗಳಿವೆ. ಅವರ ಮುಖ್ಯ ಉಡುಪುಗಳಾದ ಲಂಗ (ಫೇಟಿಯಾ) ಕುಪ್ಪಸ (ಕಾಂಚಳಿ) ಮೇಲು ಹೊದಿಕೆ (ಛಾಂಟಿಯಾ) ಈ ಮೂರು ಕಲಾತ್ಮಕ ಕಸೂತಿಯಿಂದ ಕೂಡಿರುತ್ತವೆ. ಈ ಮೂರನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಲಂಗವನ್ನು ಕರಿ, ಕೆಂಪು, ಹಸಿರು, ಹಳದಿ ಬಣ್ಣಗಳ ಬಟ್ಟೆಗಳಿಂದ ದಪ್ಪದಾದ ನಡುಪಟ್ಟಿಯೊಂದಿಗೆ ತಯಾರಿಸುತ್ತಾರೆ. ನಡುಪಟ್ಟಿಯಲ್ಲೂ ಕಸೂತಿ ಹಾಕಿರುತ್ತಾರೆ. ಲಂಗದ ಅಂಚಿನಲ್ಲಿ ಕನ್ನಡಿ ತುಂಡುಗಳನ್ನು ಇಟ್ಟು ಅದಕ್ಕೆ ಕಸೂತಿ ಅಲಂಕಾರ ಮಾಡಿರುತ್ತಾರೆ. ಲಂಗದ ತುಂಬ ಒಂದು ಕ್ರಮದಲ್ಲಿ ಬಣ್ಣದ ಬಟ್ಟೆ ತುಂಡನ್ನು ಹೊಲಿದು ಅಂಟಿಸುತ್ತಾರೆ. ಕುಪ್ಪಸ ಸಹ ತಗಡಿನ ಗುಂಡಿಗಳಿಂದ, ಕನ್ನಡಿ ತುಂಡುಗಳಿಂದ



ಲಂಬಾಣಿ ಕಸೂತಿ ಕಲೆ

ಹಳೆಯ ನಾಣ್ಯಗಳಿಂದ, ಉಣ್ಣೆಯ ಗೊಂಡೆಗಳಿಂದ, ಗೆಜ್ಜೆ ಸರಗಳಿಂದ ಹೆಣೆಯಲ್ಪಟ್ಟಿರುತ್ತದೆ. ಮೇಲುಹೊದಿಕೆಯ ಮುಂಭಾಗದ ಅಂಚು ನಾಣ್ಯ-ಗೆಜ್ಜೆಸರಗಳಿಂದ ಅಂದಗೊಂಡಿರುತ್ತದೆ.

ಹೊಲಿಗೆ ಕಲೆ: ಕೈ ಹೊಲಿಗೆಯ ಮೂಲಕವೂ ಬಟ್ಟೆಗಳ ಮೇಲೆ ಚಿತ್ರಕಲೆ ಮೂಡಿಸಿರುವುದನ್ನು ಕಾಣುತ್ತೇವೆ. ಕೌದಿ, ನಂದಿ, ಗಲ್ಲೇಪಾ, ಪಗಡಿಪಟ್ಟಿ, ಮಕ್ಕಳ ಕುಂಚಿಗಿ ಇತ್ಯಾದಿಗಳಲ್ಲಿ ಹೊಲಿಗೆ ಕಲೆಯನ್ನು ಕಾಣಬಹುದು. ಮುಖ್ಯವಾಗಿ ಕೌದಿ ಹೊಲಿಯುವ ಕಲೆ ವಿಶಿಷ್ಟತೆಯಿಂದ ಕೂಡಿದೆ. ಕೌದಿಗೆ ಹಿಂದೆ ಹಚ್ಚಡವೆಂದು ಕರೆದಿರಬಹುದೆಂದೆನಿಸುತ್ತದೆ.

ಮನೆಯಲ್ಲಿ ಹೆಣ್ಣುಮಕ್ಕಳ ಎಲ್ಲೆಡೆಯೂ ಹಾಗೂ ಹರಿದ ಸೀರೆ, ಗಂಡಸರ ಹಳೆಯ ಹಾಗೂ ಹರಿದ ಅಂಗಿ, ಧೋತರ, ಚಿಕ್ಕಮಕ್ಕಳ ಹಳೆಯ ಹರಿದ ಬಟ್ಟೆಗಳನ್ನು ಕಲಾತ್ಮಕವಾಗಿ ಕತ್ತರಿಸಿ, ಒಂದರ ಮೇಲೊಂದು ತೇಪೆಹಚ್ಚಿ ದಾರದ ದೊಡ್ಡ ಹೊಲಿಗೆ ಹಾಕುತ್ತಾರೆ. ವಿವಿಧ ರೀತಿಯ ಚಿತ್ರವಿನ್ಯಾಸಗಳು ತೇಪೆ ಹಚ್ಚುವ ತುಂಡು ಬಟ್ಟೆಯ ಮೂಲಕ ಕಾಣುವಂತೆ ಕೌದಿಯನ್ನು ದಾರಗಳಿಂದ ಹೊಲಿಯುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ತವರು ಮನೆಯಿಂದ ಹಡೆದು ಬರುವ ಬರುವ ಹೆಣ್ಣುಮಕ್ಕಳಿಗೆ ತವರು ಬಣ್ಣದ ಕುರುಹಾಗಿ 'ಕೌದಿ'ಯನ್ನು ಉಡುಗೊರೆ ಕೊಡುವ ಸಂಪ್ರದಾಯವಿದೆ.

ಒಂದನ್ನೇ ಹಾಸಿ ಹೊದೆಯಬಹುದಾದ ಏಳು ಮೊಳ ಉದ್ದದ ಐದು ಮೊಳ ಅಗಲದ ಅಳತೆಯ ದೊಡ್ಡ ಕೌದಿಗಳಿವೆ. ಆರು ಮೊಳ ಉದ್ದದ ಮೂರ್ನಾಲ್ಕು ಮೊಳಗಳ ಅಗಲದ ಅಳತೆಯ ಹಾಸುವ ಸಣ್ಣಕೌದಿಗಳಿವೆ.

ಸಾದಾ ಕೌದಿಯಿಂದ ಹಿಡಿದು ಚಿತ್ರಚಿತ್ತಾರದ ಕೌದಿಗಳಿವೆ. ಕೌದಿಯ ಒಳಮೈಯಲ್ಲಿ ಪಗಡಿಯಾಕಾರದ ವಿನ್ಯಾಸಗಲಿರುತ್ತವೆ. ಸ್ವಸ್ತಿಕ, ಚೌಕ, ತ್ರಿಕೋಣ, ನಕ್ಷತ್ರಾಕಾರದ ಬಟ್ಟೆ ತುಂಡುಗಳ ವಿನ್ಯಾಸವಿರುತ್ತದೆ. ಕೌದಿಯ ನಾಲ್ಕು ಮೂಲೆಗಳಿಗೆ ತ್ರಿಕೋಣಾಕಾರದ ನಾಲ್ಕು ಪದರಿನ ಬಟ್ಟೆ ಚುಂಗು ಹಚ್ಚಿರುತ್ತಾರೆ. ಹಾಗೆಯೇ

ತೇರು, ಗುಡಿ, ಚಂದ್ರ, ಪಕ್ಷಿ, ಪ್ರಾಣಿ ಇತ್ಯಾದಿ ಅಲಂಕಾರಿಕ ಚಿತ್ರಗಳಿರುತ್ತವೆ. ಕೌದಿಯ ಹೊರಮೈ ಮಾತ್ರ ಸೀರೆಯ ದೊಡ್ಡ ತುಂಡುಗಳಿಂದ ಕೂಡಿರುತ್ತದೆ. ಅವುಗಳ ಮೇಲೆ ಹೊಲಿಗೆ ವಿನ್ಯಾಸವನ್ನು ಕಾಣಬಹುದು. ಸೀರೆಯ ಅಂಚನ್ನು ಕೌದಿಯ ಅಂಚಿಗೆ ಹೊಂದಿಸಿ ಅಂದವಾಗಿ ಹೊಲಿದಿರುತ್ತಾರೆ. ಸೀರೆಯ ಸೆರಗಿನಲ್ಲಿ ಕಸೂತಿಯಿದ್ದರೆ ಅದನ್ನು ಕತ್ತರಿಸಿ ಅಂದವಾಗಿ ಹೊಲಿದು ಕೌದಿಯ ಸೌಂದರ್ಯವನ್ನು ಹೆಚ್ಚಿಸುತ್ತಾರೆ. ದಾರದ ರೇಖಾ ವಿನ್ಯಾಸದಿಂದ ಹಾಗೂ ಬಣ್ಣ ಬಣ್ಣದ ಅರಿವೆ ತುಂಡುಗಳನ್ನು ಜೋಡಿಸುವುದರಲ್ಲಿ ಕೌದಿಯ ರಚನಾ ಕೌಶಲ್ಯ ವಡಗಿದೆ ಕೌದಿಯ ಸರ್ವಸಮಗ್ರ ಸೌಂದರ್ಯವಿರುವುದು ಬಣ್ಣದ ವಿನ್ಯಾಸದ ಚಿತ್ರಗಳಲ್ಲಿ ಬಣ್ಣದ ಅರಿವೆಯ ತುಕಡಿಗಳ ಚೌಕಾಕೃತಿ, ತ್ರಿಕೋನಾಕೃತಿ, ಆಯತಾಕೃತಿ, ಭೂಮಿತಿಯಾಕೃತಿ ಚಿತ್ರಗಳು ಇಲ್ಲಿ ಹೆಚ್ಚಾಗಿರುತ್ತವೆ.

ಗಲ್ಲಿಪಾ: ಇದು ಎತ್ತಿಗೆ ಹಾಕುವ ಜೂಲದಂತಿರುತ್ತದೆ. ಬಣ್ಣದ ಹಾಗೂ ಚಿತ್ತಾರದ ಹೊಸ ತುಂಡು ಬಟ್ಟೆಗಳನ್ನು ಸೇರಿಸಿ ಹೊಲಿದು ನಂದಿವಿಗ್ರಹಕ್ಕೆ ತೊಡಿಸುತ್ತಾರೆ. ದಂಡೆಗುಟ ತ್ರಿಕೋನಾಕೃತಿಯ ಜಾಲರಿಯನ್ನು ಹಚ್ಚಿರುತ್ತಾರೆ.

ಪಗಡಿಪಟ್ಟಿ: ಪಗಡೆಯಾಟ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಪಗಡೆಪಟ್ಟಿ ಅಧಿಕ ಆಕೃತಿಯಲ್ಲಿರುತ್ತದೆ. ನಿರ್ದಿಷ್ಟ ಬಣ್ಣದ, ನಿರ್ದಿಷ್ಟ ಚೌಕದ ಖಾನೆಗಳಿರುತ್ತವೆ. ಇದು ಸಹ ಚೌಕಾಕಾರದ ವಿನ್ಯಾಸವನ್ನೊಳಗೊಂಡ ಹೊಲಿಗೆ ಕಲೆಯಾಗಿದೆ.

ಕುಂಚಿಗೆಗಳು: ಮಕ್ಕಳಿಗೆ ತೊಡಿಸುವ ಕುಂಚಿಗೆಗಳನ್ನು ಕಲಾತ್ಮಕವಾಗಿ ಹೊಲಿಯುತ್ತಾರೆ. ರೇಷ್ಮೆ ಬಟ್ಟೆಯ ಕುಂಚಿಗೆಯ ಮೇಲೆ ಹೊಲಿಗೆಯ ರೇಖಾವಿನ್ಯಾಸಗಳಿದ್ದು ಕುಂಚಿಗೆಯ ಸೆರಗು ನೆರಗೆಗಳಿಂದ ಕೂಡಿರುತ್ತದೆ. ಮೆಲುಬಟ್ಟೆಯ ಬಳಿ ಬಣ್ಣದ ಮಗ್ಗಿ ಟೊಪ್ಪಿಗೆಯಲ್ಲಿ ಹೊಲಿಗೆಯ ಕುಶಲತೆಯಿರುತ್ತದೆ. ದಪ್ಪವಾದ ಅಂಚು ಆಕರ್ಷಕವಾಗಿದ್ದು ನೇರಿಗೆ ಮಾಡಿ ಹೊಲಿದ ಕುಂಚಿಗೆ ಕಲಾತ್ಮಕವಾಗಿರುತ್ತದೆ. ಕುಪ್ಪುಸದ ತುಂಡುಗಳನ್ನು ಸೇರಿಸಿ ಮಾಡಿದ ಕುಂಚಿಗೆಗಳನ್ನು ಬಂಗಾರದ ಆಭರಣ ಮತ್ತು ಮುತ್ತುಗಳ ರೇಖಾ ವಿನ್ಯಾಸಗಳಿಂದ ಅಲಂಕರಿಸುತ್ತಾರೆ. ಈ ಕುಂಚಿಗೆಗಳನ್ನು ತೊಡಿಸಿದಾಗ ಮಕ್ಕಳ ಸೌಂದರ್ಯ ಇಮ್ಮಡಿಗೊಳ್ಳುತ್ತದೆ.

(ಎಂಬಿಎಚ್)

ಬಸಣ್ಣ ಕಂಚಗಾರ: ಕಾಷ್ಠಶಿಲ್ಪಿ. ಇವರ ಕಲೆ ಮತ್ತು ಸಾಧನೆ ತಲತಲಾಂತರದಿಂದ ಬಂದಿದ್ದರೂ ಕೂಡ, ಮರಕೆತ್ತನೆಯಲ್ಲಿ ಕುಸುರಿನ ಕೆಲಸ ಅತ್ಯಂತ ನಯ ಮತ್ತು ನಾಜೂಕಿನ ಕಲಾತ್ಮಕತೆ ಗಮನ ಸೆಳೆದಿದೆ. ತಂದೆ ಕಾಳಪ್ಪ ಕಾಷ್ಠ ಕುಸುರಿಕಲೆ ತಂದೆಯವರಿಂದ ಬಳುವಳಿಯಾಗಿ ಬಂದದ್ದು. ಇವರ ಮಕ್ಕಳಾದ ಮಲಪ್ಪ-ಕರ್ಣಪ್ಪ, ಮಾನಪ್ಪ, ಕಾಳಪ್ಪ ಇವರುಗಳು ಕೂಡಾ ಕಾಷ್ಠ ಕಲೆಗಾರಿಕೆಯಲ್ಲಿ ಎತ್ತಿದ ಕೈ. ಇಲ್ಲಿಯವರೆಗೆ ಸುಮರು 200 ಶಿಲಾ ಕಲಾಕೃತಿಗಳನ್ನು ಕೆತ್ತನೆ ಪೂರೈಸಿದ್ದಾರೆ.



ಇದರೊಂದಿಗೆ ಸಾಬೂನು, ಮಣ್ಣು, ಕಾಷ್ಠಶಿಲ್ಪ ಇವರದು ವೃತ್ತಿ ಜೀವನವಾಗಿದೆ. ದೇವಸ್ಥಾನದಲ್ಲಿ ಗಜಾನನ ಉತ್ಸವದ ಗಣೇಶ ಮೂರ್ತಿ ತಯಾರಿಸುವ ಮೂಲಕ ಈ ಭಾಗದ ಜನರ ಮೆಚ್ಚುಗೆ ಪಡೆದಂಥ ಕುಟುಂಬ ವಿದು. ವಿಶೇಷವಾಗಿ ಇವರ ಕಲೆ ಅರಳಿದ್ದು ಲಕ್ಷ್ಮಿ ಗಣೇಶ, ಆಂಜನೇಯ ಶಿಲಾ ಮೂರ್ತಿಗಳ ಕೆತ್ತನೆಯ ಮೂಲಕ. ಈ ಶಿಲಾಮೂರ್ತಿಗಳನ್ನು ನೋಡಿದಾಗ ನಯ ನಾಜೂಕಾದ ಕುಸುರಿ ರೂಪದಲ್ಲಿ ಮೂಡಿಸಿರುವ ರೀತಿ ಅದ್ಭುತವಾದದ್ದು.

ಕಾಷ್ಠಶಿಲ್ಪಕ್ಕಿಂತ ಶಿಲೆಯಲ್ಲಿ ಮೂಡಿಸುವದು ಅತ್ಯಂತ ಕಠಿಣವಾದ ಕಲೆಗಾರಿಕೆಯಾಗಿದ್ದು, ಇದು ಅತ್ಯಂತ ಸೂಕ್ಷ್ಮವಾದದ್ದು. ಕಲ್ಲು ಕಟ್ಟೆಗೆಗಳಿಗೆ ಜೀವ ಕೊಡಬೇಕಾದರೆ ಈ ಕಲಾವಿದ ತಮ್ಮ ಜೀವನವನ್ನೇ ಹಗಲೂ ರಾತ್ರಿ ತೇಯ್ದಿರುತ್ತಾರೆ. ಸುರಪುರದ ಟೇಲರ ಮಂಜೇಲ್‌ನಲ್ಲಿ 2002 ಡಿಸೆಂಬರನಲ್ಲಿ ಕರ್ನಾಟಕ ರಾಜ್ಯ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರ ಮಾರ್ಗದರ್ಶನದಲ್ಲಿ ನಡೆದ ಸಮಾರಂಭದಲ್ಲಿ ಬಸಣ್ಣ ಕಂಚಗಾರ ಅವರು ಜನಪದ ಶೈಲಿಯಲ್ಲಿನ ಶ್ರೀ ಮೈಲಾಪುರ ಮಲ್ಲಯ್ಯನ ಕಟ್ಟಿಗೆ ಕಲಾಕೃತಿ ರಾಜ್ಯ ಶಿಲ್ಪಕಲಾ ಅಕಾಡೆಮಿ ಆಯ್ಕೆ ಮಾಡಿದೆ.

ಇವರನ್ನು ಶಹಾಪುರದ ಏಕದಂಡಿಗಿ ಮಠದ ಶ್ರೀಗಳು, ಸ್ಥಳೀಯ ಸಂಸ್ಥೆಗಳು ಸನ್ಮಾನ ಮಾಡಿ ಗೌರವಿಸಿವೆ. ಕೊಡೇಕಲ್ ಶಿವಕುಮಾರ ಶ್ರೀಗಳು ಇವರ ಸಾರ್ವಜನಿಕ ಸನ್ಮಾನ ನೀಡಿ, ಕಲಾಶ್ರೇಷ್ಠ ಎಂದು ಬಿರುದು ನೀಡಿ ಗೌರವಿಸಿದ್ದಾರೆ. ಇವರು ಕವಿ ಹಾಗೂ ಲೇಖಕರೂ ಆಗಿದ್ದಾರೆ. ಬಸವಣ್ಣನವರ ಕುರಿತು ಅಪಾರ ಜ್ಞಾನವನ್ನು ಹೊಂದಿದ್ದಾರೆ. ಇವರ ಶಿಲ್ಪಕಲಾಕೃತಿಗಳು ವಿಜಾಪುರ ಜಿಲ್ಲೆ ಜಕೆರಹಾಳ, ನಾಲತವಾಡ, ಅಫಜಲಪುರದ ಮಣ್ಣೂರ (ರಾಮನಗರ) ವರೆಗೂ ಹೋಗಿದ್ದು, ನೋಡುಗರು ಈ ಶಿಲ್ಪಿಯನ್ನು ಸ್ಮರಿಸುವಂತೆ ಕೆತ್ತನೆ ಮಾಡಿರುವದನ್ನು ಕಾಣಬಹುದು.

ಇವರ ಇಡೀ ಕುಟುಂಬದವರೆಲ್ಲರೂ ತಮ್ಮ ಪರಂಪರಾಗತ ಶಿಲ್ಪಕಲೆ, ಕಾಷ್ಠ ಕಲೆಗಳೊಂದಿಗೆ ಹೊಸತನ್ನೂ ಸ್ವೀಕರಿಸಿ, ಹೊಸ ಪೀಳಿಗೆಯವರೂ ಮೆಚ್ಚುವಂಥ ಕಲಾಕೃತಿಗಳನ್ನು ರಚಿಸಿರುವದು ಈ ಕುಟುಂಬದ ವಿಶೇಷವಾಗಿದೆ.

(ಆರ್‌ಕೆಎ)



ಬಸಪ್ಪ ಶಿರವಾಳಕರ: ಛಾಯಾ ಗ್ರಹಣ ಕಲೆ ಹಾಗೂ ರಂಗ ಭೂಮಿಯ ನಟನೆ ಸುಲಭದ ಕೆಲಸವಲ್ಲ. ಕಲಾತ್ಮಕ ಛಾಯಾಚಿತ್ರ ಸೆರೆ ಹಿಡಿಯುವುದು ಹಾಗೂ ರಂಗಮಂಟಪದಲ್ಲಿ ನಟನೆ ಮಾಡುವುದು ಕ್ಲಿಷ್ಟವಾದುದು. ಇವೆರಡೂ ಕಲೆಯಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಕಲೆಯನ್ನು ಆಳವಾಗಿ ಅಧ್ಯಯನ ಮಾಡಿರುವ ದಿ. ಬಸಪ್ಪ ಶಿರವಾಳಕರ ಅವರು, ಇಂದು ನಮ್ಮ ಜೊತೆ ಇಲ್ಲ, ಆದರೆ, ಇವರು ಚಿತ್ರಸಿರುವ ಸುಂದರ, ಅಪೂರ್ವ ಕಪ್ಪು ಬಿಳುಪಿನ ಛಾಯಾಚಿತ್ರಗಳು ಅವಿಸ್ಮರಣೀಯವಾಗಿ ನಮ್ಮೊಂದಿಗಿವೆ. ಅವು ನೋಡುಗನೊಂದಿಗೆ ಮಾತನಾಡುತ್ತಿವೆಯೇ ಎಂದು ಭಾಸವಾಗುತ್ತದೆ.

ಇಂದಿನ ಕಂಪ್ಯೂಟರ್ ಯುಗದಲ್ಲಿ ಛಾಯಾಚಿತ್ರ ಕೆಲವೇ ನಿಮಿಷಗಳಲ್ಲಿ ಹಲವಾರು ಫೋಟೊಗಳು ಹುಟ್ಟುತ್ತದೆ. ಆದರೆ, ಅಲ್ಪಾಯುಷಿ. ಕಪ್ಪು ಬಿಳುಪಿನ ಛಾಯಚಿತ್ರಗಳೆಂದರೆ ದೀರ್ಘಾಯುಷಿ. ಸ್ವಾತಂತ್ರ್ಯ ಪೂರ್ವದಲ್ಲಿ ತೆಗೆದಿರುವ ಛಾಯಾಚಿತ್ರಗಳು ಗತಕಾಲದ ಮೆಲಕು ಹಾಕುವಂತೆ ಮಾಡುತ್ತವೆ. ಯಾವುದೇ ಸಮಾರಂಭವಿರಲಿ ಅಲ್ಲಿ ಛಾಯಾಗ್ರಾಹಕ ಇರಲೇಬೇಕು. ಏಕೆಂದರೆ, ಹಳೆಯ ನೆನಪು ವ್ಯಕ್ತಪಡಿಸಲು ಛಾಯಾಚಿತ್ರಗಳಿಂದಲ್ಲದೆ ಬೇರೆ ಯಾವುದರಿಂದ ಸಾಧ್ಯ?

ಇತಿಹಾಸದ ವೈಭವ ಸವಿಯಲು ಛಾಯಾಚಿತ್ರಗಳೇ ಉತ್ತಮ ಸಾಧನಗಳು. ಕಪ್ಪು ಬಿಳುಪಿನ ಛಾಯಾಚಿತ್ರಕ್ಕೆ ದೀರ್ಘ ಇತಿಹಾಸವಿದೆ. ಹಿಂದಿನ ಕಾಲ ಕಪ್ಪು ಬಿಳುಪಿನ ಛಾಯಾಚಿತ್ರಗಳು ನೋಡುತ್ತ ಕುಳಿತರೆ ಮನಸ್ಸಿಗೆ ಮುದ ನೀಡುತ್ತವೆ. ವರ್ಣ ಚಿತ್ರ ತೆಗೆದುಕೊಂಡು ಕೆಲವು ದಿನಗಳಲ್ಲಿ ಅದರ ಬಣ್ಣ ಬದಲಾಗುತ್ತದೆ. ಕಪ್ಪು-ಬಿಳುಪಿನ ಛಾಯಾಚಿತ್ರಕ್ಕೆ ಬೇಡಿಕೆ ಹೆಚ್ಚು. ಹೈದರಾಬಾದ ಕರ್ನಾಟಕದಲ್ಲಿ ಕೆಲವೇ ಜನ ಛಾಯಾಗ್ರಾಹಕರಲ್ಲಿ ಕಲಬುರ್ಗಿಯ ದಿ. ಬಸಪ್ಪ ಶಿರವಾಳಕರ ಒಬ್ಬರು. ಮೂಲತಃ ಶಿರವಾಳ ಗ್ರಾಮದವರು. ಸುಮಾರು 1911ರಲ್ಲಿ ಬಸಪ್ಪ ಜನಿಸಿದ್ದು. ಶಿಕ್ಷಣ ಹೆಚ್ಚು ಕಲಿತವರಲ್ಲ. 7ನೇ ಇಯತ್ತೆ ಪಾಸಾಗಿದ್ದರು. ಂತ್ರಕಲೆಯಲ್ಲಿ ಆಸಕ್ತಿಯುಳ್ಳವರಾಗಿದ್ದು, 1993ರಲ್ಲಿ ಮುಂಬೈ ಎಲಿಮೆಂಟರಿ ಡ್ರಾಯಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಬೆಂಗಳೂರಿನಲ್ಲಿರುವ ಗುಬ್ಬಿ ವೀರಣ್ಣ ನಾಟಕ ಕಂಪನಿ ಸೇರಿಕೊಂಡು, ಕೆಲವು ವರ್ಷ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಹಾಡುಗಾರಿಕೆಯನ್ನೂ ಬಲ್ಲವರಾಗಿದ್ದರು.

ಗುಬ್ಬಿ ಕಂಪನಿಯಲ್ಲಿದ್ದಾಗ ಇವರಿಗೆ ಛಾಯಾಗ್ರಾಹಕರೊಬ್ಬರ ಪರಿಚಯವಾಯಿತು. ಅವರಿಂದ ಹೆಚ್ಚಿನ ಜ್ಞಾನ ಪಡೆದು, ಚಿತ್ರಕಲೆ ಗೊತ್ತಿದ್ದರಿಂದ ಸರಳವಾಯಿತು. ಅದರಲ್ಲಿ ನಿಷ್ಣಾತರಾದ ಬಸಪ್ಪ ಅವರು, ಸ್ವಂತ ಉದ್ಯೋಗ ಕೈಕೊಳ್ಳಲು ನಾಟಕ ಕಂಪನಿ ಬಿಟ್ಟು ಕಲಬುರ್ಗಿಗೆ ಬಂದರು.

ಗಾಜೀಪುರದ ತಮ್ಮ ಮನೆಯಲ್ಲಿ ಶಿರವಾಳಕರ ಆರ್ಟ್ ಫೋಟೋ ಸ್ಟುಡಿಯೋ ಪ್ರಾರಂಭಿಸಿದರು. 1926 ನಾಜೂಕಾದ ಕೆಲಸ ಕಾರ್ಯಗಳಿಗೆ ಇವರ ಸ್ಟುಡಿಯೋ ಹೆಸರು ಗಳಿಸಿತು. ಇವರ ಮೃದು ಭಾಷೆ, ಕಾಯಕವೇ ಕೈಲಾಸ ಎಂಬ ವೃತ್ತಿ ಶ್ರದ್ಧೆಯಿಂದ ದುಡಿದು ಸಂಸಾರ ಸಾಗಿಸುತ್ತಿದ್ದರು.

ಯಾವುದೇ ವಿಷಯದ ಛಾಯಾಚಿತ್ರವಿರಲಿ, ನೆರಳು-ಬೆಳಕು, ಸಂಯೋಜನೆ, ನೋಡುವ ದೃಷ್ಟಿ ಮುಂತಾದವು ಪ್ರಮುಖವಾಗಿರುತ್ತವೆ ಎಂದು ತಮ್ಮ ಮಕ್ಕಳಿಗೆ ಹಾಗೂ ಶಿಷ್ಯರಿಗೆ ತಿಳಿಸುತ್ತಿದ್ದರು. ಅಂದಿನ ಕಾಲದಲ್ಲಿ ಛಾಯಾಚಿತ್ರ ತೆಗೆಯಬೇಕಾದರೆ ಸೂರ್ಯನ ಬೆಳಕಿನಲ್ಲಿ ಮಾತ್ರ ತೆಗೆಯುತ್ತಿದ್ದರು. ಗ್ರಾಹಕರೂ ಇವರು ಹೇಳಿದಂತೆ ಕಾಯುತ್ತಿದ್ದರು. ಛಾಯಾಗ್ರಾಹಕರಿಗೆ ತುಂಬಾ ಗೌರವದಿಂದ ಕಾಣುತ್ತಿದ್ದ ಕಾಲವದು. ತಮ್ಮ ಮನೆಯಲ್ಲಿ ಕಾರ್ಯಕ್ರಮಕ್ಕೆ ಬರಲು ಛಾಯಾಗ್ರಾಹಕರ ಮನೆಯವರೆಗೂ ಟಾಂಗಾ ಕಳಿಸುತ್ತಿದ್ದರು. ಅಂದಿನ ಕಾಲದಲ್ಲಿ ಛಾಯಾಗ್ರಹಣಕ್ಕಾಗಿ ಬಾಕ್ಸ್ ಕ್ಯಾಮರಾ ಬಳಸುತ್ತಿದ್ದರು.



ಪೂಜ್ಯ ಶ್ರೀ ದೊಡ್ಡಪ್ಪ ಅಪ್ಪ ಅವರ (1947) ಛಾಯಾಚಿತ್ರ


ನಿಜಾಮ ಸರಕಾರದಲ್ಲಿ ಉಪನಿರ್ದೇಶಕರಾಗಿದ್ದ ಅಧಿಕಾರಿಯೊಬ್ಬರು ಕಲಬುರ್ಗಿಗೆ ವರ್ಗವಾಗಿ ಬಂದಿದ್ದರು. ಅವರು ಛಾಯಾಚಿತ್ರದಲ್ಲಿ ತುಂಬ ಆಸಕ್ತಿಯುಳ್ಳವರಾಗಿದ್ದರು. ತಮ್ಮ ಛಾಯಾಚಿತ್ರ ತೆಗೆದುಕೊಳ್ಳಲು ಅಂದು ಕಲಬುರ್ಗಿಯಲ್ಲಿ ಹೆಸರುವಾಸಿಯಾಗಿದ್ದ ಭವಾನಿಸಿಂಗ್ ಎಂಬ ಛಾಯಾಚಿತ್ರಕಾರರನ್ನು ಕರೆಸಿದರು. ಅವರು ತೆಗೆದ ಛಾಯಾಚಿತ್ರ ಹಿಡಿಸಲಿಲ್ಲ. ಅದಕ್ಕಾಗಿ ಬೇರೊಬ್ಬರನ್ನು ಕರೆದುಕೊಂಡು ಬರಲು ಜವಾನನನ್ನು ಕಳಿಸಿದರು.

ಆಗ ಅವರು ಬೇರೊಬ್ಬ ಸ್ಟುಡಿಯೋದವರನ್ನು ಕರೆದುಕೊಂಡು ಹೋದರು. ಅವರು ತೆಗೆದ ಛಾಯಾಚಿತ್ರ ನೋಡಿ ಆ ಅಧಿಕಾರಿ, 'ಏ ಫೋಟೋ ಅಚ್ಛಾ ನಹೀ, ದೂಸರಾ ನಿಕಾಲೋ' ಅಂದರು. ಅದರಂತೆ ಮತ್ತೊಂದು ಫೋಟೋ ತೆಗೆದು ತಯಾರಿಸಿ ಕೊಟ್ಟರು. ಅದೂ ಕೂಡಾ ಅವರಿಗೆ ಇಷ್ಟವಾಗಲಿಲ್ಲ. ಆಗ ಅಧಿಕಾರಿ ಸಿಟ್ಟಿಗೆದ್ದು, ಜವಾನನಿಗೆ 'ಯಂಹಾ ಕೋಯಿ ದೂಸರಾ ಅಚ್ಛಾ ಫೋಟೋಗ್ರಾಫರ್ ನಹೀ ಹೈ ಕ್ಯಾ' ಎಂದು ಗದರಿಸಿ, 'ಅಚ್ಛೆ ಫೋಟೋಗ್ರಾಫರ್ ಕೋ ಬುಲಾಕೆ ಲಾವೋ' ಎಂದು ಆದೇಶಿಸಿದರು.

ಆಗ ಜವಾನ ಹುಡುಕುತ್ತ ಹುಡುಕುತ್ತ ಬಸಪ್ಪ ಶಿರವಾಳಕರ ಮನೆಗೆ ಬಂದು, 'ಹಮಾರೆ ಸೇಠ್‌ಕಾ ಫೋಟೋ ನಿಕಾಲನಾ ಹೈ, ಇಸ್‌ಲಿಯೆ ಆಪಕೀ ಬುಲಾಯೆ ಹೈ' ಎಂದನು. ಆಗ ಬಸಪ್ಪನವರು ಹೋಗಿ ಅಧಿಕಾರಿಗಳ ಒಂದು ಫೋಟೋ ತೆಗೆದರು. ಅದನ್ನು ತಯಾರಿಸಿ ತೆಗೆದುಕೊಂಡು ಹೋಗಿಕೊಟ್ಟರು. ಅದನ್ನು ನೋಡಿದ ಕೂಡಲೇ ಅಧಿಕಾರಿ ಬಹಳ ಸಂತೋಷಪಟ್ಟರು. ಆಗ ಅವರು 'ಅಭೀ ಇಸಕೇ ಔರ್ ದೋ ಕಾಪಿ ಬನಾಕೇ ಲಾವೋ' ಎಂದು ಹೇಳಿದರು.

ಅದರಂತೆ ಇನ್ನೆರಡು ಪ್ರತಿಗಳನ್ನು ತಯಾರಿಸಿಕೊಟ್ಟರು. ಆಗ ಬಹಳ ಸಂತೋಷಪಟ್ಟು ತಮ್ಮ ಹತ್ತಿರವಿದ್ದ ಒಂದು ಸಣ್ಣ ಪ್ಲೇಟ್ ಕ್ಯಾಮರಾ ಬಸಪ್ಪನವರಿಗೆ ಕಾಣಿಕೆಯಾಗಿ ಕೊಟ್ಟರು. ಕ್ಯಾಮರಾ ಕಾಣಿಕೆಯಾಗಿ ಕೊಟ್ಟ ನಂತರ, ಇವರು ಫೋಟೋ ಬಿಲ್ ಕೇಳದೆ ಹಾಗೆ ಬಂದುಬಿಟ್ಟರು. ಎರಡು ದಿನ ಕಳೆದ ಮೇಲೆ ಬಿಲ್ಲಿನ ಮೂರು ಪಟ್ಟು ಹಣ ಅದೇ ಜವಾನನಿಂದ ಇವರ ಮನೆಗೆ ಕಳಿಸಿ ಕೊಟ್ಟರು. ಇದರಿಂದ ಬಸಪ್ಪನವರಿಗೆ ಬಹಳ ಆನಂದವಾಯಿತು ಎಂದು ಕಲಾವಿದ ಬಸಪ್ಪ ಅವರ ಪುತ್ರ ದಿವಾಕರ ಶಿರವಾಳಕರ ಅವರು, ಅಂದು ಛಾಯಾಗ್ರಹಕರಿಗೆ ಎಷ್ಟು ಗೌರವ ನೀಡುತ್ತಿದ್ದರು ಎಂದು ಭಾವುಕರಾಗಿ ತಿಳಿಸುತ್ತಾರೆ.

ಬಸಪ್ಪ ಶಿರವಾಳಕರ ತಮ್ಮ ಕುಟುಂಬ ಸದಸ್ಯರಿಗೂ ಛಾಯಾಚಿತ್ರಣ ಕಲೆಯನ್ನು ಕಲಿಸಿದ್ದಾರೆ. ಹಾಗೆಯೇ ಲಕ್ಷ್ಮಣರಾವ ಕುಲಕರ್ಣಿ ಆಳಂದ ತಾಲ್ಲೂಕಿನ ಧಂಗಾಪುರದವರಾಗಿದ್ದು, ಇವರಿಗೆ ಛಾಯಾಗ್ರಹಣ ಕಲೆಯನ್ನು ಕಲಿಸಿದರು. ಲಕ್ಷ್ಮಣರಾವ ಕುಲಕರ್ಣಿ ತಾವು ಕಲಿತ ವಿದ್ಯೆಯನ್ನು ತಮ್ಮ ಮಕ್ಕಳಿಗೆ ಹಾಗೂ ಸಹೋದರನಿಗೆ ಕಲಿಸಿದ್ದಾರೆ. ಅವರು ಇಂದು ಕಲಬುರ್ಗಿಯಲ್ಲಿ ನೂತನ ಹಾಗೂ ಸಂಜಯ ಫೋಟೋ ಸ್ಟುಡಿಯೋ ನಡೆಸುತ್ತಿದ್ದಾರೆ.



ದಿ. ಬಸಪ್ಪ ಶಿರವಾಳಕರರ ಹಿರಿಯ ಮಗ ದಿವಾಕರ ಶಿರವಾಳಕರ ಅವರೂ ಛಾಯಾಗ್ರಹಣದಲ್ಲಿ ತಂದೆಯ ಗರಡಿಯಲ್ಲಿ ಪಳಗಿದರು. 1935ರಲ್ಲಿ ಜನಿಸಿದ ದಿವಾಕರ ಅವರು, ನಗರದ ಸರಕಾರಿ ಎಂ.ಪಿ. ಎಚ್.ಎಸ್. ಶಾಲೆಯಲ್ಲಿ ಎಚ್. ಎಸ್.ಸಿ. ಉರ್ದು ಮಾಧ್ಯಮದಲ್ಲಿ ಉತ್ತೀರ್ಣರಾದರು. (ಆಗ ನಿಜಾಮ ಆಡಳಿತವಿತ್ತು) ತಂದೆಯ ಮಾರ್ಗದರ್ಶನದಲ್ಲಿ ಛಾಯಾಗ್ರಹಣ ಕಲೆ ಮತ್ತು ಚಿತ್ರಕಲೆ ಕಲಿತು, ಫೋಟೋ ಸ್ಟುಡಿಯೋ ನೋಡಿಕೊಂಡು ಅದನ್ನೇ ವೃತ್ತಿ ಮತ್ತು ಪ್ರವೃತ್ತಿ ಮಾಡಿಕೊಂಡರು. ದಿವಾಕರ ಅವರು ಆರಂಭದಲ್ಲಿ ಸರಕಾರಿ ಸೇವೆಗೆ ಸೇರಿ ಏಳು ವರ್ಷ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದರು. ಅನಂತರ ಛಾಯಾಗ್ರಹಣ ದತ್ತ ಹೆಚ್ಚು ಒಲವು ತೋರಿ, ಕೆಲಸ ಬಿಟ್ಟು ಪೂರ್ಣಾವಧಿ ಛಾಯಾಗ್ರಾಹಕರಾದರು. ಇವರ ಸಹೋದರ ಚಂದ್ರಕಾಂತ ಶಿರವಾಳಕರ ಅವರು ಗಾಜಿಪುರದಲ್ಲಿ ಬಿಜೀ ಫೋಟೋ ಸ್ಟುಡಿಯೋ ಆರಂಭಿಸಿ, ಅವರೂ ಛಾಯಾಗ್ರಾಕರಾಗಿ ವೃತ್ತಿ ಆರಂಭಿಸಿದರು.



'ಟೌನ್‌ಹಾಲ್' ಗುಲಬರ್ಗಾ, ಛಾಯಾಚಿತ್ರ

ಹೈದ್ರಾಬಾದ ಕರ್ನಾಟಕದ ಸ್ಮಾರಕಗಳ ಛಾಯಾಚಿತ್ರ, ಶೇಕ್ ರೋಜಾ ಮಿನಾರ್, ದರ್ಗಾ, ಶ್ರೀ ಶರಣಬಸವೇಶ್ವರ ದೇವಸ್ಥಾನ, ಶೋರ್‌ಗುಂಬಜ್, ಮೆಹಬೂಶಾಹಿ ಗುಲ್ಶನ್ ಗೌರ್ಡನ್, ಸೆಂಟ್ರಲ್ ಜೈಲ್, ಅಪ್ಪನ ಕೆರೆ ಅಲ್ಲದೆ, ದ.ರಾ. ಬೇಂದ್ರೆ, ಪಂಢರಿಬಾಯಿ, ಮೈಸೂರು ಸಂಸ್ಥಾನ ಜಯಚಾಮರಾಜೇಂದ್ರ ಒಡೆಯರು ಹೀಗೆ ಮುಂತಾದ ದೃಶ್ಯಗಳನ್ನು ವ್ಯಕ್ತಿಗಳನ್ನು ಸುಂದರವಾಗಿ ಸೆರೆ ಹಿಡಿದಿದ್ದಾರೆ.

ದಿ. ಬಸಪ್ಪ ಶಿರವಾಳಕರ ಫೋಟೋ ತೆಗೆಯಲು ಹೋಗುವಾಗ, ದಿವಾಕರ ಅವರನ್ನು ಜೊತೆಯಲ್ಲೇ ಕರೆದುಕೊಂಡು ಹೋಗುತ್ತಿದ್ದರು. ಗ್ರಾಹಕರಿಗೆ ಉತ್ತಮ ಸೇವೆ ಕೊಡುವುದೇ ಛಾಯಾಗ್ರಹಕನ ಧರ್ಮ, ಅವರು ಕೊಟ್ಟ ದುಡ್ಡು ಇರುವುದಿಲ್ಲ. ಆದರೆ, ಗ್ರಾಹಕನ ಹತ್ತಿರ ಛಾಯಾಚಿತ್ರಗಳ ಸವಿನೆನಪು ಇರುತ್ತದೆ. ಆದ್ದರಿಂದ ವೃತ್ತಿಯಲ್ಲಿ ಶ್ರದ್ಧೆ, ನಿಷ್ಠೆ, ಭಕ್ತಿ ಮುಖ್ಯ ಎಂದು ತನ್ನ ತಂದೆಯವರು ಹೇಳುತ್ತಿದ್ದರೆಂದು ದಿವಾಕರ ನುಡಿಯುತ್ತಾರೆ.

(ಎನ್‌ಎಂಜೆ)

ಬಸವಂತ ರೂಂಪಳ್ಳಿ: ಜನಪದ ರಂಗಭೂಮಿ ಕಲಾವಿದ. ತಂದೆ ಸಾಯಿಬಣ್ಣ ತಾಯಿ ರತ್ನಮ್ಮ 01.06.1948ರಲ್ಲಿ ಜನಿಸಿದವರು. ಅವರು ಹುಟ್ಟಿದ್ದು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಿಡಗುಂದಾ ಗ್ರಾಮ, ಸೇಡಂ ಚಿಕ್ಕಂದಿನಲ್ಲೆ ಕಲೆಗಳಿಗೆ ಮಾರು ಹೋಗಿ, 15ನೆಯ ವಯಸ್ಸಿನಲ್ಲಿಯೇ ಗುಣಲೋಪ ಎಂಬ ಡಪ್ಪಿನಾಟವನ್ನು ಅಡಿ ಅದರಲ್ಲಿ ಚಿತ್ರಸೇನಿ ಸ್ತ್ರೀ ಪಾತ್ರ ಮಾಡಿ ಜನ ಮೆಚ್ಚುಗೆ ಪಡೆದುಕೊಂಡರು.

ಈ ಮೆಚ್ಚುಗೆಯಿಂದ ಇವರಲ್ಲಿ ಜನಪದ ರಂಗಕ್ಷೇತ್ರದಲ್ಲಿ ಆಸಕ್ತಿ ಮೂಡಿ, ಪ್ರಖ್ಯಾತರಾಗಲು ಕಾರಣವಾಯಿತು. ಅನೇಕ ಡಪ್ಪಿನಾಟ, ಕೋಲಾಟಗಳಲ್ಲಿ ಭಾಗವಹಿಸಿ ಸ್ವತಃ ನಾಟಕಗಳನ್ನು ದೊಡ್ಡಾಟಗಳನ್ನು ಬರೆದು ಹಳ್ಳಿಗಳಲ್ಲಿ ಕಲಿಸಿ ಪ್ರದರ್ಶನ ಮಾಡಿಸಿ ಬಯಲಾಟದ ಮಾಸ್ತರರಾದರು.

ಬಾಲಚಂದ್ರ, ಯಯಾತಿ, ಹರಿಶ್ಚಂದ್ರ, ರಾಜಾ ವಿಕ್ರಮ ಮೊದಲಾದ ಡಪ್ಪಿನಾಟಗಳನ್ನು ಹಳ್ಳಿಗಳಲ್ಲಿ ಅವಿದ್ಯಾವಂತ ಜನಗಳಿಗೆ ಕಲಿಸಿ, ಆಡಿಸಿ ಜನಪ್ರಿಯತೆ ಪಡೆದಿದ್ದಾರೆ. ರೂಂಪಳ್ಳಿಯವರ ಇನ್ನೊಂದು ಆಸಕ್ತಿ ಕ್ಷೇತ್ರ ಮೊಹರಂ ಹಾಡುಗಳನ್ನು ಹಾಡುವುದು. ಇವರು ರಚಿಸಿದ ಮೊಹರಂ ಗೀತೆಗಳ 8 ಕ್ಯಾಸೆಟ್‌ಗಳು ಬಿಡುಗಡೆಯಾಗಿವೆ. ಅನೇಕ ಸಂಘ–ಸಂಸ್ಥೆಗಳಿಂದ ಬಿರುದು, ಸನ್ಮಾನಗಳನ್ನು ಪಡೆದಿದ್ದಾರೆ. ತಾಂಡೂರ, ಕರ್ಣಕೋಟಿ, ಕೊಡಂಗಲ್, ವಿಕಾರಾಬಾದ, ಚಿಂಚೋಳಿ, ಸೇಡಂ, ನಿಡಗುಂದಾ, ಅಫಜಲಪೂರ ಹೀಗೆ ಗಡಿ ಭಾಗ ಹಾಗೂ ಆಂಧ್ರ ಮತ್ತಿತರ ರಾಜ್ಯಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಲಾವಿದರನ್ನು ಕಲ್ಬುರ್ಗಿ ಜಿಲ್ಲೆಯ 9ನೆಯ ಸಾಹಿತ್ಯ ಸಮ್ಮೇಳನದಲ್ಲಿ, ಚಿಂಚೋಳಿ ತಾಲ್ಲೂಕಿನ 3ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ. ಆಕಾಶವಾಣಿ, ದೂರದರ್ಶನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾವಿದರಾಗಿದ್ದಾರೆ. (ಜಿಕೆ)

ಬಸವಂತರಾವ ಕಡೂನ: ಚಿತ್ರಕಲಾವಿದ. ಕಲಬುರ್ಗಿ ನಗರದ ಜಗತ್ ಬಡಾವಣೆಯ ಭೀಮನಗರ ನಿವಾಸಿ 1941ರಲ್ಲಿ ಜನಿಸಿದರು. ತಂದೆ ಲಕ್ಷ್ಮಣರಾವ ಕಡೂನ ಹಾಗೂ ತಾಯಿ ಲಕ್ಷ್ಮಿಬಾಯಿ. ಇವರ ತಂದೆ ಹಾಗೂ ದೊಡ್ಡಪ್ಪ ಮಲಕಪ್ಪಾ ಕಡೂನ ಇವರಿಗೆ ನಗರಕ್ಕೆ ಹೊಂದಿಕೊಂಡಂತೆ ಇವರು ಕುಸನೂರ ಗ್ರಾಮದಲ್ಲಿ 130 ಎಕರೆ ಜಮೀನು, ಅಂತಸ್ತಿನ ಮನೆಗಳೂ ಇದ್ದವು. ಇಂತಹ ಶ್ರೀಮಂತ ಮನೆತನದಲ್ಲಿ ಜನಿಸಿದ ಬಸವಂತರಾವ ಅವರೊಳಗೆ ಒಬ್ಬ ಶ್ರೀಮಂತ ಚಿತ್ರಕಾರನಿರಬಹುದೆಂದು ಯಾರು ಊಹಿಸಿರಲಿಲ್ಲ.

ಆಗ ಪೋಸ್ಟರ್ ಚಿತ್ರಗಳನ್ನು ರಚಿಸುತ್ತಿದ್ದ ಅಂತರಾಷ್ಟ್ರೀಯ ಖ್ಯಾತಿವೇತ್ತ ಚಿತ್ರಕಲಾವಿದ ಎಸ್.ಎಂ. ಪಂಡಿತ, ಮುಲಗಾಂವಕರ್, ರಾಮಕುಮಾರ, ಎಂ.ಎಸ್. ಕರಕರೆ, ಮುಸ್ತಫಾ, ಬಿ. ವಿಶ್ವನಾಥ, ಬಿ.ಆರ್. ಭೋಸ್ಲೆ, ಜಿ. ಕಾಂಬಳೆ ಮುಂತಾದವರ ಚಿತ್ರಗಳನ್ನು ಗಂಭೀರವಾಗಿ ವೀಕ್ಷಿಸುವ, ಅವುಗಳನ್ನು ಆಳವಾಗಿ ಅರಿತುಕೊಳ್ಳುವಲ್ಲಿ ಬಸವಂತರಾಯರ ಮನಸ್ಸು ತೊಡಗುತ್ತಿತ್ತು.

ದೀಪಾವಳಿ ವಿಶೇಷಾಂಕದ ಮರಾಠಿ ಭಾಷಾ ಪತ್ರಿಕೆಯಲ್ಲಿಯ ಮುಲಗಾಂವಕರ್, ದಲಾಲ ಹಾಗೂ ರಾಮಕುಮಾರ, ಕೆ.ಆರ್. ಆಚರೇಕರ್ ಮುಂತಾದವರ ಕಲಾಕೃತಿಗಳನ್ನು ಬಸವಂತರಾಯರು ವೀಕ್ಷಿಸುತ್ತಾ ಮಂತ್ರಮುಗ್ಧರಾಗಿ, ಹಸಿವು ನೀರಡಿಕೆಗಳನ್ನೆಲ್ಲ ಮರೆಯುತ್ತಿದ್ದರು. ಕಿರಿಯ ವಯಸ್ಸಿನಲ್ಲಿಯೇ ಇವರು 'ಲ್ಯಾಂಡ್‌ಸ್ಕೇಪ್' ಚಿತ್ರಗಳನ್ನು ಬಿಡಿಸುತ್ತಿದ್ದರು.

ಬಿ. ಶಾಮಸುಂದರ ಅವರು, 1962ರಲ್ಲಿ ಮುಂಬೈನ ಪ್ರತಿಷ್ಠಿತ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಸೇರಲು ಅವಕಾಶ ಒದಗಿಸಿ ಕೊಟ್ಟರು. ಅಲ್ಲಿ ಜೆ.ಎಸ್. ದಂಡಾವತಿಮಠ ಅವರ ಮಾರ್ಗದರ್ಶನದಲ್ಲಿ ಇವರು ಚಿತ್ರಕಲಾ ಸಾಧನೆ ಮುಂದುವರಿಸಿದರು.

ಡ್ರಾಯಿಂಗ್ ಮತ್ತು ಪೇಂಟಿಂಗ್ ವಿಷಯದಲ್ಲಿ ನಡೆಯುತ್ತಿದ್ದ ಪರೀಕ್ಷೆಯಲ್ಲಿ ಇವರು ಹೆಚ್ಚಿನ ಅಂಕಗಳೊಂದಿಗೆ ಪಾಸಾದರು. ಆ ಸ್ಕೂಲ್‌ನ ವಿದ್ಯಾರ್ಥಿಯಾಗಿ ಬಸವಂತರಾಯರು ಬಿಡಿಸಿದ ಅನೇಕ ಚಿತ್ರಗಳನ್ನು ನೋಡಲೆಂದು ವಿದ್ಯಾರ್ಥಿಗಳ ದೊಡ್ಡ ಗುಂಪೇ ಕಿಕ್ಕಿರಿದು ಸೇರುತ್ತಿತ್ತು.

ಮುಂಬೈನ ಕಲಾಭಾಗದಲ್ಲಿ ಇವರು, ತಮ್ಮದೇ ಆದ ಸ್ಟುಡಿಯೋ ಪ್ರಾರಂಭಿಸಬೇಕು ಎಂದು ಆಲೋಚಿಸಿ ಹೆತ್ತವರ, ಸಂಬಂಧಿಕರ ಶೋಷಣೆಗೊಳಗಾದ ಸಮಾಜದ ಜನರಿಗಾಗಿ ಏನಾದರೂ ಮಾಡಬೇಕು ಎಂಬ ಒತ್ತಾಸೆ, ಅವರನ್ನು ಕಲಬುರ್ಗಿಗೆ ಬರುವಂತೆ ಮಾಡಿತು ಕಲಬುರ್ಗಿಯಲ್ಲಿ ಧನಂಜಯ ಅವರೊಂದಿಗೊಡಗೂಡಿ ಪೂಜ್ಯ ದೊಡ್ಡಪ್ಪ ಅಪ್ಪ ಅವರ ಮೂರ್ತಿಗಳನ್ನು ಬ್ರಾಂಜ್ ಮೇಲೆ ಕೆತ್ತಿ ಕೀರ್ತಿ ಪಡೆದರು.

ಇವರ ಅವಿಸ್ಮರಣೀಯ ಚಿತ್ರಗಳು, ಟಿಪ್ಪು ಸುಲ್ತಾನ, ಸಾಯಿಬಾಬಾ, ನಳ–ದಮಯಂತಿ, ಸೀತಾಪಹರಣ, ಮೀನು ಮಾರುವ ಹೆಂಗಸು, ನಿರ್ಮಿಸಿದ 'ಮೇಲಾ' ಚಿತ್ರದ ಬ್ಯಾನರ್‌ಗಳಲ್ಲದೇ ಅನೇಕ ಚಿತ್ರಗಳು ಹೋಟೆಲ್, ಶ್ರೀ ಶರಣಬಸವೇಶ್ವರ, ಜಾಮಿಯಾ ಮಸೀದಿ ಮುಂತಾದ ಲ್ಯಾಂಡ್‌ಸ್ಕೇಪ್ ಚಿತ್ರಗಳು.

(ಎಸ್‌ಎಸ್‌ಎಸ್)

ಬಸವಣ್ಣೆಪ್ಪ ಶಿವಪ್ಪ ರೇವೂರ: ಬಯಲಾಟದ ಕಲಾವಿದ. ಆದಿಶಕ್ತಿಗಳಾದ ಪಾರ್ವತಿ, ಲಕ್ಷ್ಮೀ, ಸರಸ್ವತಿ, ರುಕ್ಮಿಣಿ, ಸತ್ಯಭಾಮರಂತಹ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ಇವರ ದೇವಿ ಪಾತ್ರ ನೋಡಲು ಬಂದ ಜನರು ಭಾವುಕರಾಗುವುದುಂಟು.

ದೇವತೆಗಳಲ್ಲದೇ ಪುರಾಣ ಸ್ತ್ರೀ ಪಾತ್ರಗಳಾದ ಸುಭದ್ರೆ, ಚಾಮಲೆ, ಮರುದ್ವತಿ, ಪ್ರಮಿಳಾ, ದ್ರೌಪದಿ, ಭಾನುಮತಿ ಹೀಗೆ ತಾನು ವಹಿಸಿದ ಸ್ತ್ರೀ ಪಾತ್ರಗಳ ಲೆಕ್ಕವೆಷ್ಟೆಂಬುದು ಸ್ವತಃ ಇವರಿಗೆ ಗೊತ್ತಿಲ್ಲ. ಅಫಜಲಪೂರ ತಾಲ್ಲೂಕಿನ ಘತ್ತರಗಾ ಭಾಗಮ್ಮನವರ ನಂಬಿಕೆಯು ಇವರ ಮೇಲೆ ಅಗಾಧ ಪ್ರಭಾವ ಬೀರಿ ಇವರ ಸ್ತ್ರೀ ಪಾತ್ರಕ್ಕೆ ದಾರಿಗಳಾದುವು.

ತಂದೆ ಶಿವಪ್ಪ ತಾಯಿ ಶಿವಮ್ಮ 1937ರಲ್ಲಿ ಜನಿಸಿದರು. ಬದುಕು ಬಡತನದ್ದಾದರೂ ತಮ್ಮ ಕಲೆಯಿಂದ ಸಂತೃಪ್ತನೆಂದು ಅಭಿಮಾನ ಪಡುತ್ತಾರೆ. ಮೂಲ ಅಫಜಲಪೂರ ತಾಲ್ಲೂಕಿನ ಮಾಶ್ಯಾಳದಲ್ಲಿರುವ ಬಯಲಾಟ ಸಂಘದ ಸದಸ್ಯರಾಗಿ ಉತ್ತರ ಕರ್ನಾಟಕದ ದೊಡ್ಡಾಟ ಸಂಘ, ಗೊಬ್ಬೂರ ಹೀಗೆ ಹತ್ತು ಹಲವಾರು ಸಂಘಗಳ ಸದಸ್ಯರಾಗಿ ಉತ್ತರ ಕರ್ನಾಟಕ, ಹೈದ್ರಾಬಾದ ಕರ್ನಾಟಕ ತುಂಬ ತಮ್ಮ ಸೇವೆ ಸಲ್ಲಿಸಿದ್ದಾರೆ.

ರಾಜ್ಯಮಟ್ಟದ ಕಲಾವಿದರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಕನ್ನಡ ಜಾಗೃತಿ ಸಮಾವೇಶ, ಗಡಿನಾಡು ಉತ್ಸವ, ಜಾತ್ರೆಗಳು ಹೀಗೆ ಇವರು ನೀಡಿದ ಕಾರ್ಯಕ್ರಮಗಳಿಗೆ ಲೆಕ್ಕವಿಲ್ಲ. ಮಹಾರಾಷ್ಟ್ರದ ಸೊಲ್ಲಾಪುರ, ಅಕ್ಕಲಕೋಟ, ದುಧನಿ, ಗಾಣಗಾಪೂರ, ಮಹಾಂತೇಶ ಗುಡ್ಡ, ಮಹಾಂತ ಪ್ರತಿಷ್ಠಾನದಿಂದ ಸನ್ಮಾನ ಬಿರುದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 1997ರಲ್ಲಿ ಗುರು ಶಿಷ್ಯ ಪರಂಪರೆಯ ದೊಡ್ಡಾಟದ ಕಲಿಕೆಯ ಶಾಲೆ ಪ್ರಾರಂಭವಾಗಿ ಇನ್ನೂ ಕ್ರಿಯಾತ್ಮಕವಾಗಿ ನಡೆಯುತ್ತಲಿದೆ. ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಕಲೆಯಿಂದ ತೃಪ್ತಗೊಂಡ ಸಂತೃಪ್ತಿ ಜೀವನ ಇವರದು. ದೊಡ್ಡಾಟದ ಎಲ್ಲಾ ಕ್ಷೇತ್ರಗಳಲ್ಲಿ ಪರಿಣಿತರು. 40 ವರ್ಷಗಳ ಇವರ ಸೇವೆ ಅನನ್ಯವಾದುದು. (ಜಿಕೆ)

ಬಸವರಾಜ: ತಬಲಾ ಕಲಾವಿದ. ಇವರ ಹಿರಿಯರು ಸುರಪುರದ ಕೊಡೆಕಲ್‌ನ ವೇಷಗಾರ ಕಸಬು ಮಾಡುತ್ತಾ ಊರೂರು ಅಲೆದಾಡುತ್ತಿದ್ದರು. 35 ವರ್ಷಗಳ ಹಿಂದೆ ತಂದೆ ಕಲ್ಲಪ್ಪ ಶಿವಲಿಂಗೇಶ್ವರ ನಾಟ್ಯ ಸಂಘದ ಹೆಸರಿನಲ್ಲಿ ರಾಮಾಯಣ. ಮಹಾಭಾರತ ಕಥೆಗಳ ನಾಟಕ ಮಾಡಿ ಜೀವನ ಸಾಗಿಸುತ್ತಿದ್ದರು. ತಂದೆ ತೀರಿದ ಬಳಿಕ 6ಜನ ಸಹೋದರರು ಆಳಂದದಲ್ಲಿ ನೆಲೆಸಿದ್ದಾರೆ. ಇವರಲ್ಲಿ ಬಸವರಾಜ ಅವರ ವಿಶ್ವಾಮಿತ್ರ, ಕಂಸ, ವಾಲಿ, ಬಸ್ಮಾಸುರ ಪಾತ್ರಗಳು ಇಂದಿಗೂ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಶಿಕ್ಷಣವಿಲ್ಲದ ಇವರು ಗದುಗಿನ ಪುಟ್ಟರಾಜ ಗವಾಯಿ ಆಶ್ರಮದಲ್ಲಿ ಆರು ತಿಂಗಳಲ್ಲಿ ತಬಲಾವಾದನ ತರಬೇತಿ ಪಡೆದರು. ಇದುವೇ ಕುಟುಂಬ ನಿರ್ವಹಣೆಗೆ ಆಧಾರ. ತನ್ನ ಮಕ್ಕಳು ಕಲಾವಿದರಾಗಬೇಕು ಎಂಬ ಹಂಬಲದಿಂದ ಮಕ್ಕಳಾದ ಅಶೋಕ ಮತ್ತು ವಿಜಯರನ್ನು ತಬಲಾದ ತರಬೇತಿ ಹಾಗೂ ಸುರೇಶ ಮತ್ತು ನಾಗೇಶರನ್ನು ಸಂಗೀತ ಗಾಯನ, ಹಾರ್ಮೋನಿಯಂ ತರಬೇತಿಗಾಗಿ ಗದುಗಿಗೆ ಕಳುಹಿಸಿದ್ದಾರೆ.

ಇವರು ಆಳಂದದ ಹಿರಿಯ ಕಲಾವಿದ ಹಿತ್ತಲಶಿರೂರಿನ ಮಹಾದೇವಪ್ಪ ಗವಾಯಿ, ಗುರುಶಾಂತಯ್ಯ, ಶಿವಶರಣಯ್ಯ ಪೂಜಾರಿಗೆ ತಬಲಾ ಸಾಥ್ ನೀಡಿದ್ದಾರೆ. ಹಾರಕೂಡ, ಕಾಶಿ, ರಂಬಾಪೂರಿ, ಖಜೂರಿ, ಜಿಡಗಾ ಸೇರಿದಂತೆ ಅನೇಕ ಸ್ವಾಮೀಜಿಗಳೆದರೂ ತಬಲಾ ಕೈ ಚಳಕ ತೋರಿಸಿ ಭೇಷ್ ಎನಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆಯ, ಶಿಕ್ಷಣ ಇಲಾಖೆ ಮತ್ತು ಮಹಾಮನೆ ಕಾರ್ಯಕ್ರಮಗಳಲ್ಲಿ ಇವರದೇ ತಬಲಾವಾದನ. ಬಡಕಲಾವಿದರ ಬದುಕಿನ ಕಷ್ಟಕ್ಕೆ ಯಾವುದೇ ನೆರವು ಬಂದಿಲ್ಲ. ಸಾಧನೆಗೆ ಸರ್ಕಾರದ ಪ್ರಶಸ್ತಿಯೂ ಸಿಕ್ಕಿಲ್ಲ. ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ತರಬೇತಿ ನೀಡುತ್ತಾರೆ.

(ಎಸ್‌ಪಿಎ)



ಬಸವರಾಜ ಉಪ್ಪಿನ: ಕಲಾ ಸಂಘಟಕ, ಕಲಾಶಿಕ್ಷಕ, ಕಲಾ ಶಿಕ್ಷಣದ ಅಧಿಕಾರಿ. 1945 ಜೂನ್ 18ರಂದು ಗುಲಬರ್ಗಾ ತಾಲ್ಲೂಕಿನ ನದಿ ಸಿಣ್ಣೂರ ಗ್ರಾಮದಲ್ಲಿ ಜನಸಿದರು. ತಂದೆ ರೇವಣಸಿದ್ದಪ್ಪ ತಾಯಿ ಗಂಗಮ್ಮ. ಗ್ರಾಮೀಣ ಪ್ರದೇಶದ ರೈತಾಪಿ ಪರಿಸರದಲ್ಲಿ ಬೆಳೆದ ಪ್ರಾಥಮಿಕ ಶಾಲಾ ಹಂತದಲ್ಲಿಯೇ ನದಿ ಸಿಣ್ಣೂರಲ್ಲಿ ಇವರ ಚಿತ್ರಕಲಾ ಆಸಕ್ತಿಯನ್ನು ಗುರುತಿಸಿದ ಸಂಗಪ್ಪ ಸುಲಪೇಟ ಹಾಗೂ ಉಮಾಪತಿ ಕಳಸ ಗುರುಗಳು ಮನಃಪೂರ್ವಕ ಪ್ರೋತ್ಸಾಹಿಸಿ ಇವರ ಕಲಾಪ್ರಗತಿಗೆ ನಾಂದಿ ಹಾಡಿದರು. ಮುಂದೆ ಗುಲಬರ್ಗಾದ ಶ್ರೀ ಶರಣಬಸವೇಶ್ವರ ವಿವಿಧೋದ್ದೇಶ ಪ್ರೌಢ ಶಾಲೆಯ ವಿಶಾಲವಾದ ಚಿತ್ರಕಲಾ ಕೋಣೆ ಇವರಿಗೆ ವರದಾನವಾಯಿತು. ಈ ಶಾಲೆಯಲ್ಲಿ ದೊರಕುವ ಎಲ್ಲ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು, ತಮ್ಮ ಹೆಚ್ಚಿನ ಸಮಯವನ್ನು ಇಂಥ ಸುಸಜ್ಜಿತ ಚಿತ್ರಕಲಾ ಕೋಣೆಯಲ್ಲಿ ಕುಳಿತು ಮನಸಾರೆ ಚಿತ್ರ ಬಿಡಿಸಿದರು.

ಗುಲಬರ್ಗಾದಲ್ಲಿ ಜೆ.ಎಸ್. ಖಂಡೇರಾವ ಹಾಗೂ ಎ.ಎಸ್. ಪಾಟೀಲರ ನೇತೃತ್ವದಲ್ಲಿ ಅದೇತಾನೆ ಸ್ಥಾಪನೆಗೊಂಡ ದಿ. ಐಡಿಯಲ್ ಫೈನ್‌ಆರ್ಟ ಚಿತ್ರಕಲಾ ವಿದ್ಯಾಲಯದಲ್ಲಿ ಪ್ರಥಮ ತಂಡದ ವಿದ್ಯಾರ್ಥಿಯಾಗಿ ಪ್ರವೇಶ ಪಡೆದರು. ಮುಂಬೈಯ ಬಹು ಪ್ರತಿಷ್ಠಿತ ಸರ್. ಜೆ.ಜೆ. ಕಲಾಶಾಲೆಯಲ್ಲಿ ಕಲಿತು ಪದವಿಧರರಾಗಿ ಬಂದ ಈ ಇಬ್ಬರು ಯುವ ಶಿಕ್ಷಕ/ಕಲಾವಿದರ ಅದ್ಭುತ ಚೇತನ–ಉತ್ಸಾಹದ ಫಲವನ್ನು ಈ ಪ್ರಥಮ ತಂಡದ ವಿದ್ಯಾರ್ಥಿಗಳು ಸಂಪೂರ್ಣವಾಗಿ ಪಡೆದರು. ಬಿ.ಎ. ಪದವಿಯನ್ನು ಮತ್ತು ಚಿತ್ರಕಲೆಯಲ್ಲಿ ಎಮ್.ಎಫ್.ಎ–ಸ್ನಾತಕೋತ್ತರ ಪದವಿ ಪಡೆದರು (1999).

ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದ ಅನಂತರ ಸಾಮಾನ್ಯ ಶಿಕ್ಷಣದಲ್ಲಿ ಹೆಚ್ಚಿನ ಅಧ್ಯಯನವನ್ನು ಮುಂದುವರೆಸಬೇಕೆಂಬ ಹಂಬಲ ಹಾಗೂ ಗುಲಬರ್ಗಾದಲ್ಲಿ ಕಲಾಸ್ಟುಡಿಯೋ ಸ್ಥಾಪಿಸಿ ನಿರಂತರ ಚಿತ್ರರಚನೆಯಲ್ಲಿ ನಿರತನಾಗಿ ಕಲಾವಿದನ ಜೀವನ ನಡೆಸಬೇಕೆಂಬದು ಇವರು ಮಾಡಿದ ಪ್ರಯತ್ನಗಳಲ್ಲಿ ಯಶಸ್ಸು ಕಾಣಲಿಲ್ಲ. 24 ಡಿಸೆಂಬರ 1971 ರಂದು ಸರಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರೆಂದು ನೇಮಕಗೊಂಡರು. ಇಲ್ಲಿಂದ ಅವರ ಕಲಾಜೀವನ ಹೊಸ ರೂಪ ಪಡೆದುಕೊಂಡಿತು. ಪ್ರೌಢ ಶಾಲಾ ಮಕ್ಕಳಿಗೆ ಚಿತ್ರಕಲಾ ವಿಷಯ ಬೋಧನೆ, ಸ್ವಂತಕ್ಕಾಗಿ ಚಿತ್ರರಚನೆಯು, ನಿರ್ದಿಷ್ಟ ವಿಚಾರಗಳೊಂದಿಗೆ ಉನ್ನತಿಯತ್ತ ಪಯಣ ಪ್ರಾರಂಭವಾಯಿತು. ಡ್ರಾಯಿಂಗ್ ಗ್ರೇಡ ಪರೀಕ್ಷೆಗಳಿಗಾಗಿ ಮಕ್ಕಳಿಗೆ ತರಬೇತಿ ಕೊಡುವುದು, ತರಗತಿಗಳಲ್ಲಿ ಚಿತ್ರಕಲಾ ವಿಷಯಗಳ ಪಾಠ ಮಾಡುವುದು, ಇಂಥ ಕಾರ್ಯಗಳೊಂದಿಗೆ ಆಗ ರಾಜ್ಯದಲ್ಲಿ ನಡೆಯುತ್ತಿದ್ದ ಉನ್ನತ ಕಲಾ ಪರೀಕ್ಷೆಗಳ ಅಧೀಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಕಲಾಶಿಬಿರ, ಗ್ರಾಫಿಕ್ ವರ್ಕಶಾಪ್, ಶಿಲ್ಪಕಲಾ ಶಿಬಿರ, ವಿಚಾರ ಸಂಕಿರಣ, ಕಾರ್ಯಾಗಾರ ಹೀಗೆ ಎಲ್ಲವುಗಳ ಸಂಯೋಜಕರಾಗಿ, ನಿರ್ಣಾಯಕರಾಗಿ, ನಿರ್ದೇಶಕರಾಗಿ, ಸದಸ್ಯರಾಗಿ, ಅಭ್ಯರ್ಥಿಯಾಗಿ ಭಾಗವಹಿಸಿದ್ದಾರೆ.

1975–76, ಮತ್ತು 1987–88ರಲ್ಲಿ ಕರ್ನಾಟಕ ಸರಕಾರದ ಪಠ್ಯಕ್ರಮದ ರಚನಾ ಸಮಿತಿಯ ಸದಸ್ಯರಾಗಿ, ಸಲಹಾಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಪಠ್ಯ ಪುಸ್ತಕಗಳಿಗೆ ಸಾಂದರ್ಭಿಕ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಸಂಘ ಶಕ್ತಿಯಲ್ಲಿ ಅಚಲ ವಿಶ್ವಾಸವಿರುವ ಇವರು ಗುಲಬರ್ಗಾದಲ್ಲಿ ಅನೇಕ ಸಂಘ–ಸಂಸ್ಥೆಗಳನ್ನು ಸ್ಥಾಪಿಸಿ–ಸಂಘಟಿಸಿ, ಯಶಸ್ವಿಗಾಗಿ ಪರಿಶ್ರಮಿಸಿದ್ದಾರೆ. ಕರ್ನಾಟಕ ರೋಹಿತ ಕಲಾವೃಂದ 1972–74, ಗುಲಬರ್ಗಾ ಆರ್ಟ ಕೌನ್ಸಿಲ್ 1978, ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ಅನೇಕ ಹುದ್ದೆಗಳನ್ನು ಅಲಂಕರಿಸಿ ಕಾರ್ಯ ನಿರ್ವಹಿಸಿದ್ದಾರೆ. ಗುಲಬರ್ಗಾ ವಿಭಾಗೀಯ (4 ಜಿಲ್ಲೆಗಳ) ಮಕ್ಕಳ ಚಿತ್ರಕಲಾ ಸ್ಪರ್ಧೆಗಳಿಗೆ ಕಾರ್ಯದರ್ಶಿಯಾಗಿ 1976 ರಿಂದ 1982ರವರೆಗೆ ಸೇವೆ ಸಲ್ಲಿಸಿದ್ದಾರೆ. 8 ತಿಂಗಳ ಅವಧಿಗೆ ಗುಲಬರ್ಗಾ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ (4 ಜಿಲ್ಲೆಗಳ) ಚಿತ್ರಕಲಾ ಅಧೀಕ್ಷಕರಾಗಿ ಬಹು ಮಹತ್ವದ ಯೋಜನೆಗಳನ್ನು ನಿರ್ವಹಿಸಿದ್ದಾರೆ. ಅಲ್ಲದೆ ಕರ್ನಾಟಕ ಲಲಿತಕಲಾ ಅಕೆಡೆಮಿಯ ಸದಸ್ಯರಾಗಿ (1992–1995) ಆಯ್ಕೆಯಾಗಿದ್ದಾರೆ. ಹೀಗೆ ಎಲ್ಲದರಲ್ಲೂ ಉತ್ಸಾಹದಿಂದ ಭಾಗವಹಿಸಿದ್ದಾರೆ.

ನಿರಂತರ ಚಿತ್ರರಚನೆಯಲ್ಲಿರುವ ಇವರು ಎಲ್ಲ ಪ್ರಕಾರಗಳಲ್ಲಿ ಪ್ರಯೋಗಗಳನ್ನು ಮಾಡುತ್ತ ನೂರಾರು ನಿಸರ್ಗಚಿತ್ರ, ಭಾವಚಿತ್ರ, ಸಂಯೋಜನಾಚಿತ್ರ ಹಾಗೂ ವಾಣಿಜ್ಯ ಚಿತ್ರಗಳನ್ನು ರಚಿಸುತ್ತಾ ಪ್ರಯೋಗಶೀಲರಾಗಿದ್ದಾರೆ. ಇವರ ತದ್ರೂಪ ಶೈಲಿಯ ನಿಸರ್ಗ ಚಿತ್ರಗಳು, ಭೂದೃಶ್ಯಗಳು ಎಲ್ಲ ವಿವರಗಳನ್ನೊಳಗೊಂಡು ಯಥಾವತ್ತಾಗಿ ಚಿತ್ರಿತವಾಗಿವೆ. ಗ್ರಾಮೀಣ ಪ್ರದೇಶದ ಹಂಚಿನ ಮನೆಗಳು, ಗುಡಿಸಲುಗಳು, ದಟ್ಟ ಪೊದೆ, ಕಂಟಿ, ವೃಕ್ಷಗಳು ನೆಳಲು–ಬೆಳಕಿನ ಸ್ಪಷ್ಟ ಪರಿಣಾಮಗಳೊಂದಿಗೆ, ಹದವರಿತ ವರ್ಣಸಂಯೋಜನೆಗಳೊಂದಿಗೆ ತಮ್ಮ ತಾಜಾತನದಿಂದ ನೋಡುಗರ ಗಮನ ಸೆಳೆಯುತ್ತವೆ. ಮನದಲ್ಲಿ ಹಸಿರಾಗಿ ಉಳಿಯುತ್ತವೆ. ಇವರು ಇತ್ತಿತ್ತಲಾಗಿ ಅಮೂರ್ತ ಶೈಲಿಯ ಸಂಯೋಜನೆಗಳನ್ನು ರಚಿಸುತ್ತಿದ್ದು ಇವೆಲ್ಲಾ ತೈಲವರ್ಣದ ಚಿತ್ರಗಳು. ಶಿರ್ಷಿಕೆ ರಹಿತ ಈ ಸಂಯೋಜನೆಗಳಲ್ಲಿ ಲಾಲಿತ್ಯ ಪೂರ್ಣ ರೇಖೆಗಳು, ಚಲಿಸುತ್ತಿರುವಂತೆ ಕಂಡು ಬರುವ ಚಿತ್ರ–ವಿಚಿತ್ರ ಆಕೃತಿಗಳು ನಿರ್ಮಾಣವಾಗಿ ಮನಸ್ಸಿಗೆ ಮುದ ನೀಡುತ್ತವೆ. ಆಕಾಶದಲ್ಲಿ ಹಾರುತ್ತಿರುವ ಪಕ್ಷಿಗಳಂತೆ, ಚಲಿಸುತ್ತಿರುವ ಮೋಡಗಳಂತೆ, ಮಹಾ ಸಾಗರದಲ್ಲಿ ತೇಲುತ್ತಿರುವ ನಾವೆಗಳಂತೆ ಹೀಗೆ ಆಕೃತಿಗಳಲ್ಲಿ ಚಲನೆ ಇದ್ದು ಇವಕ್ಕೆ ಪೂರಕವಾದ ವರ್ಣ ವಿನ್ಯಾಸಗಳಿಂದ, ಮೃದುವಾದ ಮೈವಳಿಕೆಯಿಂದ ವಿಶಿಷ್ಟ ಭಾವ ತರುತ್ತವೆ. ವರ್ಣಗಳ ಹದವರಿತ ಮಿಶ್ರಣ Blending ರೇಖೆಗಳಲ್ಲಿರುವ ಓಘ ಇವೆಲ್ಲ ಪಕ್ವತೆಗೆ ಸಾಕ್ಷಿಯಾಗಿವೆ.

1979–80ರಲ್ಲಿ ಲಲಿತಕಲಾ ಅಕಾಡೆಮಿಯ ಯೋಜನೆಯ ಪ್ರಕಾರ ಶ್ರವಣಬೆಳಗೋಳ ಬಸದಿಗಳಲ್ಲಿಯ ಭಿತ್ತಿಚಿತ್ರಗಳನ್ನು ನಕಲು ಮಾಡಿ ಮುಂದಿನ ಪೀಳಿಗೆಗಾಗಿ ಕಾದಿಡುವ ಘನ ಕಾರ್ಯವನ್ನು ಇವರು ಮಾಡಿದರು. ಭಾರತ ಸರಕಾರದ ಸಾಂಸ್ಕೃತಿಕ ಕೇಂದ್ರ C.C.R.T– ನವದೆಹಲಿಯಲ್ಲಿ ಭಾರತೀಯ ಲಲಿತಕಲೆಗಳ ವಿಮರ್ಶೆ ಹಾಗೂ ಪ್ರಚಾರ ಕುರಿತು 1978–



'ಲ್ಯಾಂಡ್ ಸ್ಕೇಪ್' ಜಲವರ್ಣ

79ರಲ್ಲಿ ಓರಿಯಂಟೇಶನ್ ತರಬೇತಿ ಪಡೆದು ಪ್ರೌಢ ಶಾಲಾ ಮಕ್ಕಳಿಗಾಗಿ ಸಮಗ್ರ ಭಾರತೀಯ ಲಲಿತಕಲೆಗಳ ಬಗ್ಗೆ ನೂರಾರು ಸ್ಲೈಡ್ ಉಪನ್ಯಾಸಗಳನ್ನು ನೀಡಿದ್ದಾರೆ. ತಮ್ಮ ವರ್ಣಚಿತ್ರಗಳ ಎರಡು 'ಏಕವ್ಯಕ್ತಿ' ಕಲಾಪ್ರದರ್ಶನಗಳನ್ನು ಗುಲಬರ್ಗಾದಲ್ಲಿ–1978 ಹಾಗೂ ಹೈದ್ರಾಬಾದದಲ್ಲಿ 1981 ಏರ್ಪಡಿಸಿದ್ದರು. 1968 ರಿಂದ 83ರ ವರೆಗೆ ತಮ್ಮ ಕಲಾವಿದ ಮಿತ್ರರೊಡಗೂಡಿ ಬೆಂಗಳೂರು, ಗುಲಬರ್ಗಾಗಳಲ್ಲಿ 4 ಸಮೂಹ ಕಲಾಪ್ರದರ್ಶನಗಳನ್ನು ಏರ್ಪಡಿಸಿದ್ದರು. ಪ್ರಾಚ್ಯವಸ್ತು ಇಲಾಖೆಯ ಕಲಾ ಪ್ರದರ್ಶನದಲ್ಲಿ 1977–ಭಾಗವಹಿಸಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ವನ್ಯ ಪ್ರಾಣಿ ಸಂರಕ್ಷಣಾ ಸಪ್ತಾಹದ ಪ್ರಶಸ್ತಿ (1961), ಗುಲಬರ್ಗಾ ವಿಭಾಗೀಯ ಚಿತ್ರಕಲಾಶಿಕ್ಷಕರ ಕಲಾ ಸ್ಪರ್ಧೆ ಪ್ರಶಸ್ತಿ (1993), ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಶಸ್ತಿ (1996), ಗುಲಬರ್ಗಾ ಜಿಲ್ಲಾ ಶ್ರೇಷ್ಠ ಶಿಕ್ಷಕ ಪ್ರಶಸ್ತಿ (1993), ಹಾಗೂ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ (1999) ಮುಂತಾದವು ಉಲ್ಲೇಖನೀಯ.

ಬಸವರಾಜರು ಕೇವಲ ಕಲಾವಿದರು ಮಾತ್ರವಲ್ಲ, ಕಲಾ ವಿಷಯಗಳ ಕುರಿತು ವಿಮರ್ಶಾತ್ಮಕವಾಗಿ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಮತ್ತು ಕಲೆಯ ಬಗ್ಗೆ ಪಾಂಡಿತ್ಯಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಸುರಪುರ ಸಂಸ್ಥಾನದ ಆಸ್ಥಾನ ಕಲಾವಿದ 'ಗರುಡಾದ್ರಿ'ಯನ್ನು ಕುರಿತು ಬರೆದ ಒಂದು ಕಿರುಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ. (ಎಂಕೆ)

ಬಸವರಾಜ ಎಲ್. ಜಾನೆ: ತಾವು ಜನಿಸಿರುವುದೇ ಕಲೆಗಾಗಿ ಎಂಬಂತೆ ಸದಾ ಕಲಾಕೃತಿಗಳ ರಚನೆಯಲ್ಲಿ ತಲ್ಲೀನರಾಗಿ ಜೀವನದ ಸಾರ್ಥಕತೆಯನ್ನು ಕಾಣುತ್ತಿರುವ ಅದ್ಭುತ ಕಲಾವಿದ. ಬಿ.ಎಲ್. ಜಾನೆಯವರು ಚಿತ್ರಕಲೆಯಲ್ಲಿ ಕರ್ನಾಟಕದ ಪ್ರಮುಖ ಕಲಾವಿದರಲ್ಲಿ ಗುರುತಿಸಿಕೊಂಡವರು. 1956 ಜೂನ್ 19ರಂದು ಗುಲಬರ್ಗಾದಲ್ಲಿ ಜನಿಸಿದರು. ಇವರ ತಂದೆ ಲಕ್ಷ್ಮಣರಾವ ತಾಯಿ ಶಿವಮ್ಮ ಜಾನೆ. ಇವರು ಚಿಕ್ಕವರಿರುವಾಗಲೇ ತಂದೆಯನ್ನು ಕಳೆದುಕೊಂಡರು. ಇವರು ತಮ್ಮ ಕುಟುಂಬದವರಾದ ಚಿಕ್ಕಪ್ಪನವರ ಆಶ್ರಯದಲ್ಲಿ ಹಾಗೂ ತಾಯಿಯ ನೆರಳಿನಲ್ಲಿ ಬೆಳೆದರು.



ಇವರ ಪ್ರಾಥಮಿಕ ಶಿಕ್ಷಣವು ಗುಲಬರ್ಗಾ ನೂತನ ವಿದ್ಯಾಲಯದಲ್ಲಿ ಪ್ರಾರಂಭವಾಯಿತು. ಇವರ ಗುರುಗಳಾಗಿ ಪ್ರಸಿದ್ಧ ಕಲಾವಿದರಾದ ಶಂಕರರಾವ್ ಆಳಂದಕರ್ ಅವರು ಚಿತ್ರಕಲಾ ಶಿಕ್ಷಕರಾಗಿ ಕಲೆಯ ವಾತಾವರಣವನ್ನು ಆ ದಶಕದಲ್ಲಿ ಪ್ರಾರಂಭಿಸಿದರು ಆ ವಾತಾವರಣದಲ್ಲಿ ಬೆಳೆದ ಕಲಾವಿದ ಜಾನೆಯವರು ನಿರಂತರವಾಗಿ ಚಿತ್ರಕಲಾ ರಚನೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪ್ರೇರಣೆ ನೀಡಿದವರು.

ತಂದೆಯವರೊಡನೆ ಬಾಂಬೆ, ಜಹಾಂಗೀರ ಆರ್ಟ್ ಗ್ಯಾಲರಿಗೆ ಹೋಗಿದ್ದಾಗ ಅಲ್ಲಿಯ ಕಲಾಕೃತಿಗಳನ್ನು ನೋಡಿ ತಾವು ಮುಂದೆ ಕಲಾವಿದರಾಗಿ ಇದೇ ಗ್ಯಾಲರಿಯಲ್ಲಿ ಪ್ರದರ್ಶನ ಮಾಡಬೇಕೆಂಬ ಹಂಬಲ ಕಲಾವಿದ ಜಾನೆಯವರಲ್ಲಿ ಆವಾಗಲೇ ಚಿಗುರಿತಂತೆ! ಬಸವರಾಜ ಜಾನೆಯವರು ಪ್ರೌಢ ಶಿಕ್ಷಣದಲ್ಲಿಯೇ ಅಂದರೆ ಕಲಾಶಿಕ್ಷಣ ಪಡೆಯುವುದಕ್ಕಿಂತ ಮುಂಚೆಯೇ ಗುಲಬರ್ಗಾದಲ್ಲಿ ಬುದ್ಧನ ಜಾತಕ ಕಥೆಗಳ ಮೇಲೆ ಮೊದಲ ಬಾರಿಗೆ ಏಕವ್ಯಕ್ತಿ ಪ್ರದರ್ಶನ ಮಾಡಿದರು. ಇದನ್ನು ಕಂಡ ಅವರ ಸೋದರ ಮಾವನವರು ಇವರನ್ನು ಕಲಾಶಾಲೆಗೆ ಪರಿಚಯಿಸಿದರು. ಆ ಸಂಸ್ಥೆ ನಾಡಿನ ಹೆಸರಾಂತ ಕಲಾಶಾಲೆ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆ. ಆ ಕಲಾಶಾಲೆಯನ್ನು ಸೇರಲು ಕಲಾವಿದ ಡಾ. ವಿ.ಜಿ. ಅಂದಾನಿಯವರ ಪ್ರೇರಣೆಯಾಯಿತು. ಮುಂದೆ ಬಸವರಾಜ ಜಾನೆಯವರು ಡಿಪ್ಲೋಮಾ ಪದವಿ ಮುಗಿಸಿದ ನಂತರ ಅದೇ ಕಾಲೇಜಿನಲ್ಲಿ ಎಂ.ಎಫ್.ಎ ಪೇಂಟಿಂಗ್ ಪದವಿಯನ್ನು ಎಂ.ಎಂ.ಕೆ ಕಾಲೇಜಿನಲ್ಲಿ ಪಡೆದುಕೊಂಡು ಮುಂದೆ 1981ರಲ್ಲಿ ಆ ಸಂಸ್ಥೆಯಲ್ಲಿಯೇ ಉಪನ್ಯಾಸಕರಾಗಿ ಸೇರಿಕೊಂಡರು. ಅಧ್ಯಾಪಕ ವೃತ್ತಿಯನ್ನು ಆರಂಭಿಸಿದ ಅವರು ಅದೇ ಕಾಲೇಜಿನ ಶಿಕ್ಷಣದಿಂದ ಪ್ರಭಾವಿತರಾಗಿ ಪರಿಣತಿಯನ್ನು ಪಡೆದರು. ಸುಮಾರು ಮೂರು ನಾಲ್ಕು ದಶಕಗಳಿಂದಲೂ ಕಲಾಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದ ಕಲಾವಿದರ ಹೆಚ್ಚಿನ ಕೃತಿಗಳು ತೈಲವರ್ಣದ್ದಾಗಿವೆ. ಇತ್ತೀಚಿನ ಕೃತಿಗಳು ಕೂಡಾ ಎಂದಿನಂತೆ ಜೀವನಾನುಭವ ಹಾಗೂ ಕಲ್ಪನೆಗಳ ಸಂಗಮವಾಗಿವೆ. ಕಲಾಕೃತಿಗಳಲ್ಲಿ ಕಲಾವಿದನ ವೈಯಕ್ತಿಕ ಶೈಲಿ ಅಭಿವ್ಯಕ್ತಿ, ಕೌಶಲ್ಯ ಕಲಾಸೂಕ್ಷ್ಮತೆ ಸಾಮಾಜಿಕ ನೆಲೆಯ ಸಂವೇದನೆಗಳನ್ನು ಕಾಣಬಹುದು. ಕೃತಿಗಳಲ್ಲಿ ಶೀರ್ಷಿಕೆಗೆ ಅನುರೂಪವಾಗುವಂತಹ ವರ್ಣಸಂಯೋಜನೆ, ಮಾನವಾಕೃತಿಗಳ ಮೂರ್ತ ಹಾಗೂ ಅಮೂರ್ತ ರೂಪಗಳೊಂದಿಗೆ ಪೂರಕವಾದ ಸಮೃದ್ಧ ಸಂಕೇತಗಳು ಹಾಗೂ ರೇಖೆಗಳು ಅಧಿಕ ಪ್ರಾತಿನಿಧ್ಯ ಪಡೆದಿವೆ. ಇವರ ಕಲಾಕೃತಿಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅನೇಕ ಆರ್ಟ್‌ಗ್ಯಾಲರಿಗಳಲ್ಲಿ ಪ್ರದರ್ಶಿಸಲ್ಪಟ್ಟಿವೆ. ಹಾಗೂ ಹಲವಾರು ಕಲಾಶಿಬಿರಗಳಲ್ಲಿಯೂ ಇವರು ಭಾಗವಹಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಕೇಂದ್ರ ಲಲಿತಕಲಾ ಅಕಾಡೆಮಿಯ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಹಾಗೂ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿಗೆ ನಿರ್ಣಾಯಕರಾಗಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ ಪ್ರತಿಭಾವಂತ ಕಲಾವಿದ. ಇವರು ಒಬ್ಬ ಸೃಜನಶೀಲ ಕಲಾವಿದರಾಗಿ ಕರ್ನಾಟಕದ ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಛಾಪೂ ಮೂಡಿಸಿದ್ದಾರೆ. ಕರ್ನಾಟಕ ಕಲಾಕ್ಷೇತ್ರ



'ಪ್ರಿಜನರ್' ತೈಲವರ್ಣ

ದಲ್ಲಿ ಕರ್ನಾಟಕ ಲಲಿತಕಲೆಯ ಅಕಾಡೆಮಿಯ ಸದಸ್ಯರಾಗಿ, ಕಲಾ ಸಲಹೆಗಾರರಾಗಿ ವಿವಿಧ ಕಲಾಶಾಲೆಗಳಿಗೆ ಅತಿಥಿ ಉಪನ್ಯಾಸಕರಾಗಿ ಕಲಾಸ್ಪರ್ಧೆಗಳಿಗೆ ಶಿಕ್ಷಕರಾಗಿ ತಮ್ಮ ವಿಶಿಷ್ಟ ಶೈಲಿ ತಂತ್ರಗಾರಿಕೆಯಿಂದ ಕಲಾಕ್ಷೇತ್ರಕ್ಕೆ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಕಲಾವಿದ ಜಾನೆಯವರು ಇತ್ತೀಚಿಗೆಷ್ಟೇ ಗುಲಬರ್ಗಾ ಆರ್ಟ್‌ಗ್ಯಾಲರಿಯಲ್ಲಿ ತಾವು ವಿವಿಧ ಮಾಧ್ಯಮಗಳಲ್ಲಿ ರಚಿಸಿರುವ ಸುಮಾರು ಒಂದು ನೂರು ಕಲಾಕೃತಿಗಳನ್ನು ಪ್ರದರ್ಶಿಸಿದ್ದು ಅವರು ಕಲಾರಂಗದಲ್ಲಿ ಬೆಳೆದು ಬಂದ ನಿದರ್ಶನವಾಗಿತ್ತು. ಪ್ರಸ್ತುತ ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದು 'ಕೃತಿಕಾ ಆರ್ಟ್‌ಗ್ಯಾಲರಿ' ಯಲ್ಲಿ ಯಾವಗಲೂ ಹೊಸ ಹೊಸ ಕಲಾಕೃತಿಗಳನ್ನು ರಚಿಸುವದರೊಂದಿಗೆ ಕಲಾರಾಧನೆಗೈಯುತ್ತಿದ್ದಾರೆ. (ಕೆಡಿ)

ಬಸವರಾಜ ಕಲೆಗಾರ: ಇವರ ಹೆಸರು ಕಲೆಗಾರ, ಇವರೂ ಕಲೆಗಾರರು. ಯಾದಗಿರಿ ಜಿಲ್ಲೆಯಲ್ಲಿ ಹುಟ್ಟುವಾಗ ಬಡತನವನ್ನೇ ಬೆನ್ನಿಗೆ ಕಟ್ಟಿಕೊಂಡು ಬಂದ ಕಲೆಗಾರನಿಗೆ ಕೈಹಿಡಿದಿದ್ದು ಕಲಾದೇವತೆ. ಮೂಲತಃ ಶಹಾಪೂರ ತಾಲ್ಲೂಕಿನ ಕೊಂಕಲ್ ಗ್ರಾಮದ ಇವರು, ವಿದ್ಯಾಭ್ಯಾಸದ ಜೊತೆಗೆ ಸಮಾಜಸೇವೆಯೊಂದಿಗೆ ಕಲೆಯನ್ನು ಆರಾಧಿಸುತ್ತಾ, ಕಲಾವಿದರನ್ನು ಗೌರವಿಸುತ್ತ ಹಾಗೂ ಹುರಿದುಂಬಿಸುತ್ತ ಸದಾಚಲನಶೀಲರಾಗಿ, ನಾಡಿನ ವಿವಿಧ ಭಾಗಗಳಿಗೆ ಭೇಟಿಕೊಟ್ಟು ತಮ್ಮ ಕಲಾಕೃತಿಗಳ ಕಲಾ ಪ್ರದರ್ಶನ ನೀಡಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ತಮ್ಮ ಗ್ರಾಮದ ಪಕ್ಕದಲ್ಲಿರುವ ಕೃಷ್ಣಾ ನದಿ ತೀರದಲ್ಲಿ 15 ಅಡಿ ಉದ್ದದ ಬುದ್ಧನ ಮರಳು ಶಿಲ್ಪ ರಚಿಸಿ, ಗ್ರಾಮಸ್ಥರು ನಿಬ್ಬೇರಗಾಗಿ ನೋಡುವಂತೆ ಮಾಡಿದರು. ಮರಳುಶಿಲ್ಪ ಎಂದರೆ ತಕ್ಷಣ ನೆನಪಾಗುವುದು ಓರಿಸ್ಸಾದ ಸುದರ್ಶನ ಪಟ್ನಾಯಕ್. ಅವರು ದೇಶ–ವಿದೇಶದ ಘಟನೆಗಳನ್ನು, ಶಿಲ್ಪಕಲೆಗಳನ್ನಾಧರಿಸಿ ಮರಳುಶಿಲ್ಪ ರಚಿಸುವ ಮೂಲಕ ವಿಶ್ವವಿಖ್ಯಾತಿ ಪಡೆದರು. ಆದರೆ, ಇವರು ಜಿಲ್ಲೆಯ ಹಾಗೂ ರಾಜ್ಯದ ಏಕಮಾತ್ರ 'ಮರಳುಶಿಲ್ಪ' ಕಲಾವಿದರೆನಿಸಿಕೊಂಡಿದ್ದಾರೆ. ಮರಳಲ್ಲಿ ಶಿಲ್ಪ ರಚಿಸುವ ಕಾರ್ಯ ಅತ್ಯಂತ ಕ್ಲಿಷ್ಟಕರ. ಅಂತಹ ಪ್ರತಿಭೆ ಹೊಂದಿದ್ದಾರೆ. (ಎಸ್‌ಆರ್‌ಕೆ)

ಬಸವರಾಜ ಕಿಶೋರ ಕೋರಕಲ್: ಚಿತ್ರಕಲಾವಿದ ಹಾಗೂ ಉಪನ್ಯಾಸಕ. ಇವರು ಹುಟ್ಟಿದ್ದು ಗುಲಬರ್ಗಾದಲ್ಲೇ, ಇವರು ಚಿತ್ರಕಲೆಯಲ್ಲಿ ಎಂ. ಎ. ಫೈನ್‌ಆರ್ಟ್ ಶರಣಬಸವೇಶ್ವರ ಪಿ.ಜಿ. ಫೈನ್‌ಆರ್ಟ್ ಕಲಾ ಮಹಾವಿದ್ಯಾಲಯದಲ್ಲಿ ಮೊದಲನೇ ರ‍್ಯಾಂಕ್‌ದೊಂದಿಗೆ ಪಾಸಾಗಿದ್ದಾರೆ. ಅದೇ ಪಿ.ಜಿ. ಫೈನ್‌ಆರ್ಟ್ ಮಹಾವಿದ್ಯಾಲಯದಲ್ಲೇ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.

ಇವರು ಶರಣಬಸವೇಶ್ವರರ ಅನೇಕ ಪವಾಡಗಳ ಕಲಾಕೃತಿಯನ್ನು ರಚನೆ ಮಾಡಿದ್ದಾರೆ. ಇವರ ಶರಣರ ಕಲಾಕೃತಿಗಳು ನೋಡುಗರ ಮನಮುಟ್ಟುವಂತೆ ಅದರಲ್ಲಿ ಧರ್ಮ, ನೀತಿ, ಸಂಸ್ಕೃತಿ, ಆಚಾರ ವಿಚಾರ ಎಲ್ಲರಿಗೂ ಒಪ್ಪುವಂತೆ, ಕಲಾಕೃತಿಗಳಾಗಿರುತ್ತವೆ. ಶರಣಬಸವಪ್ಪ ಅಪ್ಪ ಅವರ ಮಾರ್ಗದರ್ಶನದೊಂದಿಗೆ ಶರಣರ ಕಲಾಕೃತಿಗಳು ಸುಂದರವಾಗಿ ರಚನೆ ಮಾಡಿಕೊಟ್ಟಿದ್ದಾರೆ. ಇದಲ್ಲದೇ ತಮ್ಮದೇ ಆದ ಶೈಲಿಯಲ್ಲಿ ನಿಸರ್ಗ ಚಿತ್ರಗಳು, ವ್ಯಕ್ತಿಚಿತ್ರಗಳು, ಸಂಯೋಜನೆ ಮಾಡಿದ ವ್ಯಕ್ತಿ ಮತ್ತು ಹಳ್ಳಿ ಹೆಣ್ಣುಮಕ್ಕಳ ಕಲಾಕೃತಿ, ಪಟ್ಟಣದ ದೃಶ್ಯ, ಹಳ್ಳಿಯ ದೃಶ್ಯ, ರೇಖಾಚಿತ್ರಗಳನ್ನು ಅಂದವಾಗಿ ರಚನೆ ಮಾಡಿದ್ದಾರೆ.


ಅನೇಕ ಗುಂಪು ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನ ಎ.ಟಿ.ಎಫ್.ಎ.ಸಿ.ಎಸ್. ಹೊಸದೆಹಲಿ, ಕಲಾಕುಂಚ ರಾಷ್ಟ್ರೀಯ ಕಲಾಮೇಳ ಅಲಹಾಬಾದ್, ಧಾರವಾಡ, ಬೆಂಗಳೂರು, 'ಬೆಳ್ಳಿಪದಕ' ಸ್ಥಳದಲ್ಲೆ ಚಿತ್ರ ಬಿಡಿಸುವುದು. ಯುಥ್ ಫೆಸ್ಟಿವಲ್, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಉಜ್ಜೈನಿ ಇನ್ನೂ ಅನೇಕ ಪ್ರಶಸ್ತಿಗಳು ಬಂದಿವೆ. ಸಿ.ಸಿ.ಇ.ಆರ್.ಸಿ. ಗುಲಬರ್ಗಾ, 'ರಾಜ್ಯೋತ್ಸವ ದಿನ' ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 32ನೇ ಚಿತ್ರಕಲಾ ಪ್ರದರ್ಶನ, ಲಲಿತಕಲಾ ಅಕಾಡೆಮಿ ಬೆಂಗಳೂರು, ವಾರಗಾನೆ, 2004 ಉಜ್ಜೈನಿ, ಚಿತ್ರಸಂತೆ, ಬೆಂಗಳೂರು–ಇವುಗಳಲ್ಲಿ ಪಾಲ್ಗೊಂಡಿದ್ದಾರೆ. ಸಮಕಾಲೀನ ಕಲಾವಿದರ ಜೊತೆಗೂಡಿ ಕಲಾಕೃತಿಗಳು ರಚನೆ ಮಾಡುತ್ತಿದ್ದಾರೆ. ಇವರ ಕಲಾಕೃತಿಗಳು ಬೆಂಗಳೂರು, ಗುಲಬರ್ಗಾ, ಮೊದಲಾದ ಸ್ಥಳಗಳಲ್ಲಿ ಪ್ರದರ್ಶನಗೊಂಡಿವೆ.

ಈ ಕಲಾವಿದರು ಜಿಲ್ಲಾ ಮಟ್ಟದ ವ್ಯಕ್ತಿ ಚಿತ್ರಕಲಾ ಕ್ಯಾಂಪಿನಲ್ಲಿ, ಕರ್ನಾಟಕ ಕಲಾಮೇಳದಲ್ಲಿ, ಕ್ಯಾಮಲ್ ಆರ್ಟ್ ಫೌಂಡೇಷನ್ ರಿಜಿನಲ್ ಆರ್ಟ್ ಬೆಂಗಳೂರಿನ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಇವರು ರೇಖಾ ಚಿತ್ರದಲ್ಲಿ ವಿವಿಧ ರೀತಿಯ ಮರಗಳನ್ನು ಸುಂದರವಾಗಿ ಬಿಡಿಸಿರುತ್ತಾರೆ. ಇವರ ರೇಖಾ ಚಿತ್ರಗಳು ನೇರವಾಗಿ ಅಂದವಾಗಿ, ನೋಡುಗರ ಮನಸೆಳೆಯುವಂತೆ ವಿವಿಧ ವರ್ಣಗಳ, ಗಿಡ ಮರಗಳು ರಚನೆ ಮಾಡಿರುತ್ತಾರೆ. ಅದಲ್ಲದೆ ವಿವಿಧ ಕ್ಯಾಂಪಿನಲ್ಲಿ ನಾಟಕ, ರಂಗೋಲಿ ವಿವಿಧ ರೀತಿಯಲ್ಲಿ

ಪಾತ್ರಗಳು ಮಾಡಿರುತ್ತಾರೆ. ಇವರು 'ಅವಿಷ್ಕಾರ'ದ ಸದಸ್ಯರು ಕೂಡಾ ಆಗಿರುತ್ತಾರೆ. ಇನ್ನೊಂದು ಅತ್ಯುತ್ತಮ ಶರಣರ ಕಲಾಕೃತಿ ಡಾ. ಪೂಜ್ಯ ಶರಣಬಸವಪ್ಪ ಅಪ್ಪ ಅವರ ಮಾರ್ಗದರ್ಶನದಲ್ಲಿ ಕುದುರೆ ಮೇಲೆ ಕೂತ ಪ್ರೌಢದೇವರಾಯನ ವರ್ಣ ಕಲಾಕೃತಿ ರಚನೆ ಮಾಡಿರುತ್ತಾರೆ, ಈ ಕಲಾಕೃತಿಯು ಪುಸ್ತಕದಲ್ಲಿ ಪ್ರಿಂಟ್ ಮಾಡಿರುತ್ತಾರೆ. ಇನ್ನು ಹೊಸ ಹೊಸ, ಶರಣರ ಕಲಾಕೃತಿಗಳು ಕಾಲೇಜಿನಲ್ಲಿ ರಚನೆ ಮಾಡುತ್ತಿದ್ದಾರೆ. ತಮ್ಮದೇ ಆದ ಶೈಲಿಯ ಕಲಾಕೃತಿಗಳನ್ನು ರಚನೆ ಮಾಡಿ ಪ್ರದರ್ಶನಕ್ಕೆ ಕಳುಹಿಸಿ ಕೊಡುತ್ತಿದ್ದಾರೆ. (ಎಸ್‌ಎಂಎನ್)

ಬಸವರಾಜ ಖಂಡೇರಾವ: ಕಲಾತ್ಮಕ ವಾಸ್ತುಶಿಲ್ಪಿ. ಸಾಹಿತ್ಯ, ಸಂಗೀತ, ಚಿತ್ರಕಲೆ, ನೃತ್ಯ, ಅಭಿನಯ ಹಾಗೂ ರಾಜಕೀಯ ಮುಂತಾದ ಕ್ಷೇತ್ರಗಳು ಬಹಳ ಬೇಗ ಜನಮನ ಸೆಳೆಯುತ್ತವೆ. ಆದರೆ, ಕಲಾತ್ಮಕ ವಾಸ್ತುಶಿಲ್ಪವೂ ಅಷ್ಟೇ ಮಹತ್ವದ್ದಾಗಿದೆ. ಅನೇಕರು ಕಟ್ಟಡಗಳನ್ನು ನೋಡಿ ತುಂಬಾ ಚನ್ನಾಗಿದೆ ಎನ್ನುತ್ತಾರೆ. ಆದರೆ ಹಿಂದಿನ ವಾಸ್ತುಶಿಲ್ಪಿಯನ್ನು ಯಾರೂ ಸ್ಮರಿಸುವುದಿಲ್ಲ, ಇದೊಂದು ಉದ್ಯೋಗವಾದರೂ, ಪ್ರತಿಯೊಂದು ಕಟ್ಟಡ ನಿರ್ಮಾಣದಲ್ಲೂ ವಾಸ್ತುಶಿಲ್ಪಿಯ ಪಾತ್ರ ಅತ್ಯಂತ ಮುಖ್ಯ ಎಂಬುದು ಸಾಮಾನ್ಯ ಜನರಿಗೆ ಅರಿವಾಗುವುದೇ ಇಲ್ಲ.

ಹಿಂದೆಲ್ಲ ಈ ಭಾಗದಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಉತ್ತಮ ವಾಸ್ತುವಿನ್ಯಾಸಕಾರರನ್ನು ಹುಡುಕಿಕೊಂಡು ಮುಂಬಯಿ, ಬೆಂಗಳೂರು, ಹೈದ್ರಾಬಾದ ಹಾಗೂ ಪುಣೆ ಮುಂತಾದೆಡೆ ಹೋಗಬೇಕಾಗುತ್ತಿತ್ತು. ಎಲ್ಲ ಕ್ಷೇತ್ರಗಳಲ್ಲೂ ಮುಂಚೂಣಿ ಸಾಧಿಸಿರುವ ಹೈದ್ರಾಬಾದ ಕರ್ನಾಟಕದಲ್ಲೀಗ, ಸ್ಥಳೀಯ ಯುವಕರೇ ಉತ್ತಮ ವಾಸ್ತುಶಿಲ್ಪಿಗಳಾಗಿ ಹೊರ ಹೊಮ್ಮಿದ್ದಾರೆ. ಅಷ್ಟೇ ಅಲ್ಲದೇ ಹೈದ್ರಾಬಾದ ಕರ್ನಾಟಕದ ಕೇಂದ್ರ ಸ್ಥಾನವಾದ ಕಲಬುರ್ಗಿ ಮಹಾನಗರದಲ್ಲಿ ಹಲವು ಕಟ್ಟಡಗಳು ಇವರ ವಿಶಿಷ್ಟ ವಾಸ್ತುಶಿಲ್ಪ ವಿನ್ಯಾಸಕ್ಕೆ ಸಾಕ್ಷಿಯಾಗಿ ಕಂಗೊಳಿಸುತ್ತಿವೆ. ಇನ್ನು ವಾಸ್ತುಶಿಲ್ಪಿಗಳನ್ನು ಹುಡುಕಿಕೊಂಡು ದೂರದ ಮಹಾನಗರಗಳಿಗೆ ಹೋಗಬೇಕಿಲ್ಲ ಎಂಬ ವಿಶ್ವಾಸ ಜನರಲ್ಲಿ ಹುಟ್ಟಿಸಿರುವದು ವಿಶೇಷ.



ಎಲೆಮರೆಯಕಾಯಿಯಂತೆ ಕಾರ್ಯನಿರ್ವಹಿಸುವ ಇಂಥ ವಾಸ್ತುಶಿಲ್ಪಿಗಳಲ್ಲಿ ಕಲಬುರ್ಗಿಯ ಯುವ ಹಾಗೂ ಕಲಾತ್ಮಕ ವಾಸ್ತುಶಿಲ್ಪಿ ಎಂದೇ ಹೆಸರಾದವರು ಬಸವರಾಜ ಖಂಡೇರಾವ. ಇವರು ರಕ್ತಗತವಾಗಿಯೇ ಕಲೆ ಮೈಗೂಡಿಸಿಕೊಂಡಿದ್ದಾರೆ. ಇವರ ತಂದೆ ಖ್ಯಾತ ಚಿತ್ರಕಲಾವಿದ ನಾಡೋಜ ಡಾ. ಜೆ.ಎಸ್. ಖಂಡೇರಾವ. ಹೀಗಾಗಿ ಇವರ ಕಾರ್ಯದಲ್ಲಿ ಕಲಾತ್ಮಕತೆ ಕಾಣಬಹುದು.


ಇವರು ಹುಟ್ಟಿದ್ದು ಕಲಬುರ್ಗಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶರಣಬಸವೇಶ್ವರ ವಸತಿ ಶಾಲೆಯಲ್ಲಿ 8ನೇ ತರಗತಿಯಲ್ಲಿರುವಾಗಲೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರು ಸರಕಾರದಿಂದ ಮಕ್ಕಳ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಪ್ರಶಸ್ತಿ ಪಡೆದರು. ಖಂಡೇರಾವ ಮಗಳು ಸೃಷ್ಠಿ ಕೂಡ ಚಿತ್ರಕಲೆಯಲ್ಲಿ ಆಸಕ್ತಿಯುಳ್ಳವಳು. ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಬಾಚುತ್ತ ಮುನ್ನಡೆಯುತ್ತಿದ್ದಾಳೆ. ಖಂಡೇರಾವ ಕಲಬುರ್ಗಿ ಪಿಡಿಎ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆರ್ಕಿಟೆಕ್ಟ್ ಬಿ.ಇ. ಪದವಿ 1989-90ರಲ್ಲಿ ಪಡೆದರು. ಸಿಎಲ್‌ಆಯ್‌ಪಿ ಸಿಟಿ ಲೇಕ್ ಇಂಪ್ರೊವ್‌ಮೆಂಟ್ ಪ್ರೊಜೆಕ್ಟ್ ಕಲಬುರ್ಗಿ ಕೆರೆಯ ಸೌಂದರೀಕರಣ ಮತ್ತು ನಕ್ಷಾಚಿತ್ರಣ ವಿನ್ಯಾಸದ ಮೇಲೆ ಸಂಶೋಧನೆ ಮಾಡಿ ಪದವಿಯಲ್ಲಿ ಉತ್ತೀರ್ಣರಾದರು.

ವಾಸ್ತು ವಿನ್ಯಾಸ: ಇವರ ಪ್ರಯೋಗಗಳು ಅದ್ಭುತವಾದವುಗಳು ಕಲಬುರ್ಗಿ ಓಂನಗರದಲ್ಲಿ ಅರವಿಂದೋ ಧ್ಯಾನಮಂದಿರ, ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ ಹೋಮಿಯೋಪಥಿ ಕಾಲೇಜು, ಆಶಾಜ್ಯೋತಿ ಶಿಕ್ಷಕರ ತರಬೇತಿ ಕೇಂದ್ರ, ಎಸಿಸಿ ವಾಡಿ ಏಡ್ಸ್ ಸಂಶೋಧನಾ ಕೇಂದ್ರ, ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಗಂಗಾವತಿ, ಶಹಾಪುರ ಬಸ್ ನಿಲ್ದಾಣಗಳನ್ನು ಹೈಟೆಕ್ ಮಾದರಿಯಲ್ಲಿ ವಿಶಿಷ್ಟ ವಾಸ್ತು ವಿನ್ಯಾಸದಲ್ಲಿ ನಿರ್ಮಿಸಿ, ಇದೀಗ ವಿಭಾಗೀಯ ಕೇಂದ್ರ ಸ್ಥಾನದಲ್ಲಿರುವ ಕಲಬುರ್ಗಿ ಬಸ್ ನಿಲ್ದಾಣವನ್ನೂ ಹೈಟೆಕ್ ಮಾದರಿಯಲ್ಲಿ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದ್ದಾರೆ. ಇವರ ವಾಸ್ತು ವಿನ್ಯಾಸ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಕೆಲವೊಂದು ಕಟ್ಟಡಗಳನ್ನು ಅತ್ಯಂತ ಕಲಾತ್ಮಕ ವಾಸ್ತು ವಿನ್ಯಾಸದಲ್ಲಿ ನಿರ್ಮಿಸುವ ಮೂಲಕ ಗಮನ ಸೆಳೆಯುವಂತೆ ಮಾಡಿದ್ದಾರೆ. ಕಲಬುರ್ಗಿಯ ಶ್ರೀಗುರು ವಿದ್ಯಾಪೀಠ ವಸತಿ ಶಾಲೆ, ಯಾದಗೀರ ರಾಚೋಟಿ ವೀರಭದ್ರೇಶ್ವರ ಕಾಲೇಜು, 100 ಹಾಸಿಗೆಯುಳ್ಳ ಯಾತ್ರಿ ನಿವಾಸ, ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಮಠವೂ ಕೂಡ ಇವರ ವಾಸ್ತು ವಿನ್ಯಾಸದ ಸ್ಪರ್ಶ ಪಡೆದಿದೆ.

ಕಲಬುರ್ಗಿ ಕೆರೆ ಹತ್ತಿರದ ಯಲ್ಲಮ್ಮ ಮಂದಿರ, ನಿಂಬಾಳ ಮಠ, ನಾಲವಾರ ಕೋರಿಸಿದ್ದೇಶ್ವರ ಮಠ, ಭಾಲ್ಕಿ ಚನ್ನಬಸವ ಪಟ್ಟದ್ದೇವರಮಠ, ಮಣ್ಣೂರ ಯಲ್ಲಮ್ಮ ದೇವಸ್ಥಾನಗಳಿಗೂ ಇವರ ವಾಸ್ತು ವಿನ್ಯಾಸದ ಸ್ಪರ್ಶದಿಂದ ನವೀನ ರೂಪ ಪಡೆದಿದೆ.

ವಾಸ್ತುಶಿಲ್ಪ ಶಿಬಿರಗಳ ರಾಷ್ಟ್ರೀಯ ಮಟ್ಟದ ದೆಹಲಿ, ಮುಂಬಯಿ, ಬೆಂಗಳೂರು, ಮದ್ರಾಸ್, ಹೈದ್ರಾಬಾದ, ಮಣಿಪಾಲ ಮುಂತಾದ ಕಡೆ ಸಂಚರಿಸಿ ಶಿಬಿರಗಳಲ್ಲಿ ಭಾಗವಹಿಸಿ, ವಾಸ್ತುಶಿಲ್ಪದ ಬಗ್ಗೆ ಹೆಚ್ಚಿನ ಜ್ಞಾನವನ್ನೂ ಪಡೆದಿರುವ ಇವರು ಹೈದ್ರಾಬಾದ ಕರ್ನಾಟಕದ ವಿಶಿಷ್ಟ ವಾಸ್ತು ವಿನ್ಯಾಸದ



ಸ್ಥಳೀಯ ಶಾಹಬಾದ ಕಲ್ಲಿನ ಹಳ್ಳಿಯ ಸಂಪ್ರದಾಯಿಕ ವಾಸ್ತು ವಿನ್ಯಾಸವಿರುವ ಮನೆ

ಪರಿಚಯವನ್ನೂ ಹೊರ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಹೈದ್ರಾಬಾದ ಐಐವಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಟ್ ಮುಂತಾದ ಸಮಾವೇಶದಲ್ಲಿ ಇವರ ಪ್ರತಿಭೆಗೆ ಮೆಚ್ಚುಗೆ ವ್ಯಕ್ತವಾಗಿದೆ.

ಕರ್ನಾಟಕ ಸರಕಾರ ಕೈಕೊಂಡಿರುವ ಬಸವಣ್ಣ ತಾಣಗಳ ಅಭಿವೃದ್ಧಿಯಲ್ಲಿ ಬಸವಣ್ಣನ ತಾಯಿ ಮನೆ ಇಂಗಳೇಶ್ವರ ಮತ್ತು ಬಸವಕಲ್ಯಾಣದಲ್ಲೊಂದು ಸಭಾಮಂಟಪ ಬಸವ ಕಲಾಮಂದಿರ ಏಕಕಾಲಕ್ಕೆ 6000 ಸಾವಿರ ಜನ ಆಸನರಾಗುವ ಸುಸ್ಥತ ಸಭಾ ಮಂಟಪವನ್ನು ಚಾಲುಕ್ಯ ಶೈಲಿಯಲ್ಲಿ (ಅಳತೆ 100x800) ನಿರ್ಮಿಸುವ ಕೆಲಸ ಕೈಗೆತ್ತಿಕೊಂಡಿದ್ದಾರೆ.

ಇವರು ಕಲಬುರ್ಗಿ ವಾಸ್ತುಶಿಲ್ಪ ಸಂಘದ ಉಪಾಧ್ಯಕ್ಷ 2005–06ರಲ್ಲಿ ಕಲಬುರ್ಗಿ ರೋಟರಿ ಕ್ಲಬ್ ಆಫ್ ಆರ್ಕಿಟೆಕ್ಚರ್ ಸಂಗದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಕೌನ್ಸಿಲ್ ಮ್ಯಾನೇಜರ್ ಆಫ್ ಆರ್ಕಿಟೆಕ್ಟ್ ನವದೆಹಲಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಚರ್ ಮುಂಬಯಿ, ಇಂಟೀರಿಯರ್ ಡಿಜೈನರ್ ಅಸೋಸಿಯನ್ ಮುಂಬಯಿ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವ್ಯಾಲೂವರ್ ಪುಣೆ, ಮೆಂಬರ್ ಆಫ್ ಕರ್ನಾಟಕ ಚಾಪ್ಟರ್, ಮೆಂಬರ್ ಫಾರ್ ಪ್ಯಾನಲ್ ಆರ್ಕಿಟೆಕ್ಟ್ ಮುಂತಾದವುಗಳ ಸೇವೆಯನ್ನು ಮಾಡುತ್ತಿದ್ದಾರೆ.


ಕಲಬುರ್ಗಿಯಲ್ಲಿ ಆಕರ್ಷಕವಾಗಿ ನಿರ್ಮಿಸಿರುವ ಸಾಯಿ ಮಂದಿರ ಇವರ ವಾಸ್ತುಶಿಲ್ಪಕ್ಕೆ ಶಿಖರಪ್ರಾಯವಾಗಿದೆ. ಇವರ ಕಲಾತ್ಮಕ ವಾಸ್ತುಶಿಲ್ಪದಿಂದ ಪ್ರಭಾವಿತವಾದ ಸೋಲಾಪುರದಲ್ಲಿರುವ ಸೆಂಟ್ರಲ್ ರೈಲ್ವೆ ಫೇರ್ ಫಾನಲ್ ಆರ್ಕಿಟೆಕ್ಟ್ ಎಂದು ಇವರಿಗೆ ನೇಮಕ ಮಾಡಿಕೊಂಡಿದ್ದಾರೆ.

ಇವರ ಕಾರ್ಯ ವೈಖರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. 2006 ಹಾಗೂ 2008ರಲ್ಲಿ ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಹುಬ್ಬಳ್ಳಿ–ಧಾರವಾಡ ಹಾಗೂ ಅಲ್ಟಾಟೆಕ್ ಪ್ರಶಸ್ತಿ ಹಾಗೂ ಔಟಸ್ಟಾಡಿಂಗ್ಸ್ ಕಾಂಕ್ರೀಟ್ ಸ್ಟಕ್ಚರ್ ಆಫ್ ನಾರ್ಥ್ ಕರ್ನಾಟಕ (ರೆಸ್ಪಿಡೆನ್ಸಿಯಲ್ ಬಿಲ್ಡಂಗ್ಸ್ ಆಫ್ ನಾರ್ಥ್ ಕರ್ನಾಟಕ ಪ್ರಶಸ್ತಿ ಎರಡು ಸಲ ಬಂದಿದೆ.

2006ರಲ್ಲಿ ಕಲಬುರ್ಗಿ ವಿಕಾಸ ಭವನದ ಹಿಂದೆಯೇ ಇವರು ವಾಸ್ತುಶಿಲ್ಪ ಆರ್ಕಿಟೆಕ್ಚರಲ್ ಕನ್ಸಲ್‌ಟೆಂಟ್ಸ್ ಕಚೇರಿ ಪ್ರಾರಂಭಿಸಿದ್ದಾರೆ. ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನೇ ಉಪಯೋಗಿಸಿಕೊಂಡು ಸುಂದರ ಕಟ್ಟಡ ನಿರ್ಮಿಸುವ ಬಸವರಾಜ ಖಂಡೇರಾವ ತಮ್ಮ ಮನೆಯನ್ನೂ ಕೂಡ ಶಹಾಬಾದ ಫರ್ಸಿ ಹಾಕಿಕೊಂಡೇ ಮನೆಯನ್ನು ಕಪ್ಪು ರೇಖಾ ಚಿತ್ರಗಳಿಂದ ಅಲಂಕರಿಸಿದ್ದಾರೆ. ಕಾಯಕವೇ ಕೈಲಾಸ ಎನ್ನುವ ಇವರ ಶ್ರಮ, ಸದಾ ಹಸನ್ಮುಖಿಯಾಗಿ ಎಲ್ಲರೊಂದಿಗೂ ಬೆರೆಯುವ ಸರಳ ಸ್ವಭಾವದೊಂದಿಗೆ ವೃತ್ತಿಯ ಶ್ರದ್ಧೆಯಿಂದ ಜನರಿಗೆ ಜಗಕ್ಕೆ ಹತ್ತಿರವಾಗಿದ್ದಾರೆ.

(ಎನ್‌ಎಂಜೆ)

ಬಸವರಾಜ ಸಬರದ: ರಂಗಭೂಮಿಯ ಸೇವೆಗಾಗಿ 2000ನೇ ಸಾಲಿನ ನಾಟಕ ಅಕಾಡೆಮಿ ಪ್ರಶಸ್ತಿಯನ್ನೂ ಪಡೆದ ಡಾ. ಬಸವರಾಜ ಸಬರದ ಅವರು ನಾಟಕಕಾರರಾಗಿರುವಂತೆ, ಪ್ರತಿಭಾನ್ವಿತ ನಟ–ನಿರ್ದೇಶಕರೂ ಆಗಿದ್ದಾರೆ. ಹೈಸ್ಕೂಲು ಓದುತ್ತಿದ್ದಾಗಲೇ ಗ್ರಾಮೀಣ ರಂಗಭೂಮಿ ಪ್ರವೇಶ. ಕೊಪ್ಪಳ ಜಿಲ್ಲೆಯ ಹಲಗೇರಿಯಲ್ಲಿ 1970ರ ಸಂದರ್ಭದಲ್ಲಿಯೇ 'ತಾಯಿ ಕರುಳು' ನಾಟಕದಲ್ಲಿ ಶಿವಮೂರ್ತಿಯ ಪಾತ್ರ ಮಾಡಿ ಸೈ ಎನಿಸಿಕೊಂಡರು. 1975ರಲ್ಲಿ ಕುಕನೂರಿನ ಯುವಕ ಮಂಡಳದಿಂದ ಪ್ರಯೋಗಗೊಂಡ 'ದೇವರಿಗೆ ನೆನಪಿಲ್ಲ' ನಾಟಕದಲ್ಲಿ ಮೂರ್ತಿ




ಪಾತ್ರದ ನಾಟಕ ನಾಯಕ ನಟನಾಗಿ ಅಭಿನಯಿಸಿ, ಪ್ರೇಕ್ಷಕರ ಗಮನ ಸೆಳೆದರು. ಗದುಗಿನ ಅಂದಿನ ಪ್ರಸಿದ್ಧ ನಟಿಯರಾಗಿದ್ದ ಫ್ಲೋರಿನಾಬಾಯಿ, ಅಂಜಲಿ ದೇವಿಯವರೊಂದಿಗೆ ಈ ನಾಟಕದಲ್ಲಿ ನಾಯಕನಾಗಿ ಜನಮನ ತಲುಪಿದರು. ಆಮೇಲೆ 'ಮದುವೆ ಮಾರ್ಕೆಟ್', 'ಬದುಕು ಬಂಗಾರವಾಯ್ತು', 'ತವರು ಮನೆ', 'ವರದಕ್ಷಿಣೆ', 'ದಾರಿ ದೀಪ', 'ವರ ನೋಡಿ ಹೆಣ್ಣುಕೊಡು' ಈ ಮೊದಲಾದ ನಾಟಕಗಳಲ್ಲಿ ನಾಯಕ ನಟನಾಗಿ ಅಭಿನಯಿಸಿ

ಕೊಪ್ಪಳ ಜಿಲ್ಲೆಯ ಗ್ರಾಮೀಣ ರಂಗಭೂಮಿಯಲ್ಲಿ ಹೆಸರಾದರು.

ಸ್ನಾತಕ-ಸ್ನಾತಕೋತ್ತರ ಅಧ್ಯಯನಕ್ಕಾಗಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದ ಮೇಲೆ ಡಾ. ಸಬರದವರು ಗ್ರಾಮೀಣ ರಂಗಭೂಮಿಯಿಂದ, ಹವ್ಯಾಸಿ ರಂಗಭೂಮಿಗೆ ಬಂದರು. ಧಾರವಾಡದಲ್ಲಿ ಚಂಪಾ ಮೊದಲಾದ ಗೆಳೆಯರು ಕಟ್ಟಿದ್ದ 'ಅಂತರಂಗ' ನಾಟಕ ಕೂಟ ಸೇರಿದ ಡಾ. ಸಬರದವರು ಕೆಲವು ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದರು. ಕೈಲಾಸಂ ಅವರ ಏಕಲವ್ಯ ನಾಟಕದಲ್ಲಿ ಡಾ. ಸಬರದ ಏಕಲವ್ಯ, ಜಯಂತ ಕಾಯ್ಕಿಣಿ-ಅರ್ಜುನ ಆದರೆ ರಂಗ ಪ್ರಯೋಗದ ದಿನ ಏಕಲವ್ಯ ನಾಪತ್ತೆ. ಕೊನೆಗೆ ಚಂಪಾ ಅವರು ಸ್ಕ್ರಿಪ್ಟ್ ಹಿಡಿದು ಓದಿ ಏಕಲವ್ಯನ ಮಾತುಗಳನ್ನು ಹೇಳುವ ಪ್ರಸಂಗ ಬಂತು. ಆಗ ಅದು ದೊಡ್ಡ ವಿವಾದಕ್ಕೆ ಕಾರಣವಾಗಿತ್ತು. ನಂತರದ ದಿನಗಳಲ್ಲಿ ಕುಸನೂರ ಅವರ ಅಸಂಗತ ನಾಟಕಗಳಲ್ಲಿ, ವೀರಣ್ಣ ರಾಜೂರ ಅವರ 'ಸುಬ್ಬೀ ನಿಬ್ಬಣ್ಣ' ನಾಟಕದಲ್ಲಿ ಅಭಿನಯಿಸಿದರು. 'ಸುಬ್ಬೀ ನಿಬ್ಬಣ್ಣ'ದ ನಾಯಕ ಸುರೇಶನ ಪಾತ್ರದಲ್ಲಿ ಡಾ. ಸಬರದ ಉತ್ತಮ ಅಭಿನಯ ನೀಡಿದರು. ಈ ನಾಟಕದ ಪ್ರಯೋಗ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧೀ ಹಾಲ್‌ದಲ್ಲಿ ಪ್ರಯೋಗಗೊಂಡಿತು.

ನಂತರದ ವರ್ಷಗಳಲ್ಲಿ ಕಲಬುರ್ಗಿ-ಬೀದರ ಜಿಲ್ಲೆಗಳಲ್ಲಿ ಡಾ. ಸಬರದವರ ರಂಗಯಾತ್ರೆ ಪ್ರಾರಂಭವಾಯಿತು. ಗಿರಡ್ಡಿ ಗೋವಿಂದರಾಜ-ಚಂದ್ರಕಾಂತ ಕುಸನೂರ ಅವರ ನೇತೃತ್ವದಲ್ಲಿ ನಡೆದಿದ್ದ 'ರಂಗಮಾಧ್ಯಮ' ಅನೇಕ ಹವ್ಯಾಸಿ ನಾಟಕಗಳನ್ನು ಗುಲಬರ್ಗಾದಲ್ಲಿ ಪ್ರದರ್ಶನ ಮಾಡಿತು. ಶ್ರೀರಂಗರ 'ಸಮಗ್ರ ಮಂಥನ' ನಾಟಕದಲ್ಲಿ ಡಾ. ಸಬರದವರು ಪಶುಪತಿ ಪಾತ್ರ ವಹಿಸಿದರು.



ಪ್ರತಿರೂಪಕದಲ್ಲಿ ಡಾ. ಬಸವರಾಜ ಸಬರದ

ಬೀದರಲ್ಲಿ 'ಅಭಿನಯ ಗಂಗೋತ್ರಿ 'ಹವ್ಯಾಸಿ ನಾಟ್ಯ ಸಂಘ ವನ್ನು ಸ್ಥಾಪಿಸಿದ ಡಾ. ಸಬರದ ಅವರು ಅನೇಕ ನಾಟಕಗಳಲ್ಲಿ ಅಭಿನಯಿಸಿದರು, ಅನೇಕ ನಾಟಕಗಳನ್ನು ನಿರ್ದೇಶಿಸಿದರು. ತಾವೇ ರಚಿಸಿದ 'ಬೆಳಕಿನೆಡೆಗೆ' ನಾಟಕದಲ್ಲಿ ಪೂಜಾರಿ ಪಾತ್ರದಲ್ಲಿ ಕಾಣಿಸಿಕೊಂಡರೆ, 'ಪ್ರತಿರೂಪ' ನಾಟಕದಲ್ಲಿ ಮಂತ್ರಿಯಾಗಿ ಅಭಿನಯಿಸಿದರು. 'ಗೋಕರ್ಣ ಗೌಡಶಾನ' ನಾಟಕದಲ್ಲಿ ಗೌಡ ನಾಗಿ ಅಭಿನಯಿಸಿದ ಇವರ ಅಭಿನಯ ಸ್ಮರಣೀಯವಾದುದು.

ಬೀದರ ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ಡಾ. ಸಬರದ ಅವರು 'ಭೀಷ್ಮ ಘಟಿಕೋತ್ಸವ' ಎಂಬ ನಾಟಕ ರಚಿಸಿ ನಿರ್ದೇಶಿಸಿ ಕರ್ಣನ ಪಾತ್ರವಹಿಸಿ ಪ್ರಯೋಗಿಸಿದರು. ಈ ನಾಟಕ ಪೌರಾಣಿಕವಾಗಿದ್ದರೂ ಇದರ ಆಶಯ ವರ್ತಮಾನಕ್ಕೆ ಸಂಬಂದಿಸಿದ್ದಾಗಿತ್ತು. ಕರ್ನಾಟಕ ಕಾಲೇಜಿನ ಉಪನ್ಯಾಸಕರೇ ಇಲ್ಲಿಯ ಎಲ್ಲ ಪಾತ್ರಧಾರಿಗಳಾಗಿದ್ದು ಇಲ್ಲಿಯ ವಿಶೇಷವಾಗಿತ್ತು. ಬೀದರ 'ಸಮುದಾಯ' ಸಂಸ್ಥೆಯ ಸ್ಥಾಪಕರಲ್ಲೊಬ್ಬರಾಗಿದ್ದ ಡಾ. ಸಬರದವರು ಸಮುದಾಯದ ಜಾಥಾದಲ್ಲಿ ನಡೆದ ಅನೇಕ ಬೀದಿನಾಟಕಗಳಲ್ಲಿ ಭಾಗವಹಿಸಿ ದ್ದರು. ಸಿ. ಬಸವಲಿಂಗಯ್ಯ ನಿರ್ದೇಶನದ ಪ್ರಸನ್ನರ 'ಒಂದು ಲೋಕ ಕಥೆ' ನಾಟಕದಲ್ಲಿ ಪುರಾಣಿಕನ ಪಾತ್ರದಲ್ಲಿ ಕಾಣಿಸಿ ಕೊಂಡರು. ಈ ನಾಟಕಕ್ಕಾಗಿ ಡಾ. ಸಬರದ ಅವರು ರಚಿಸಿದ ರಂಗಗೀತೆಗಳು ಜನಮನ ಸೂರೆಗೊಂಡವು. ಈ ನಾಟಕ ಕರ್ನಾಟಕದಾದ್ಯಂತ ಪ್ರಯೋಗಗೊಂಡಿತು. ಬೆಂಗಳೂರಿನ ಕಲಾ ಕ್ಷೇತ್ರದಲ್ಲಿ ಈ ನಾಟಕ ಪ್ರಯೋಗಗೊಂಡಾಗ ಡಾ. ಸಬರದ ರಂಗಗೀತೆಗಳನ್ನು ಜನಮೆಚ್ಚಿಕೊಂಡರು.

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ನೇಮಕ ಗೊಂಡ ನಂತರ ಡಾ. ಸಬರದವರು ನಿರ್ದೇಶಕರಾಗಿ ಬೆಳೆದು ನಿಂತರು. 'ಜನರಂಗ' ನಾಟಕ ಸಂಘ ಸ್ಥಾಪಿಸಿದರು. ಆ ಮೂಲಕ ಅನೇಕ ನಾಟಕಗಳನ್ನು ಪ್ರಯೋಗಿಸಿದರು. ಇವರು ನಿರ್ದೇಶಿಸಿದ 'ಲಕ್ಕವ್ವನ ಮಂದಿ' ನಾಟಕ ದೂರದರ್ಶನದಲ್ಲಿ ಪ್ರಸಾರಗೊಂಡು ತುಂಬ ಪರಿಣಾಮವನ್ನುಂಟು ಮಾಡಿತು. 'ಜನರಂಗ' ದ ಮೂಲಕ ಪ್ರಯೋಗಗೊಂಡು ಇವರು ರಚಿಸಿದ 'ಹುಲಿಗೆಮ್ಮ' ನಾಟಕ ಅನೇಕ ಪ್ರಯೋಗಗಳನ್ನು ಕಂಡಿತು. ಈ ನಾಟಕ ಇಂದಿಗೂ ಕೂಡ ಆಗಾಗ ದೂರದರ್ಶನದಲ್ಲಿ ಪ್ರಸಾರವಾಗು ತ್ತಿರುತ್ತದೆ.

ಹತ್ತಾರು ನಾಟಕಗಳನ್ನು ರಚಿಸಿರುವ ಡಾ. ಸಬರದ ಅವರು ನಾಟಕಕಾರರೆಂದು ನಾಡಿನಾದ್ಯಂತ ಪರಿಚಯವಾಗಿದ್ದಾರೆ. ಅವರು ನಟನಾಗಿ ಸಲ್ಲಿಸಿದ ರಂಗಭೂಮಿ ಸೇವೆ ಅಷ್ಟೊಂದು ಪ್ರಚಾರವಾಗಿಲ್ಲ. ಗ್ರಾಮೀಣ ರಂಗಭೂಮಿಯ ಮೂಲಕ ವೃತ್ತಿ

ನಾಟಕಗಳಲ್ಲಿ ಅಭಿನಯಿಸುವದರೊಂದಿಗೆ ರಂಗ ಪ್ರವೇಶಿಸಿದ ಡಾ. ಸಬರದವರು ಐವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹತ್ತಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅವರು ರಚಿಸಿರುವ ಕೆಲವು ನಾಟಕಗಳು ರೂಪಕಗಳು ಗುಲಬರ್ಗಾ ಆಕಾಶವಾಣಿಯಿಂದ ಪ್ರಸಾರವಾಗಿವೆ. ಬೆಂಗಳೂರು ದೂರದರ್ಶನದಿಂದ ಜನಮನ ತಲುಪಿವೆ. (ಎಸ್‌ಎಂ)



ಬಸವರಾಜ ಮೊರಬದ: ನೃತ್ಯ, ಅಭಿನಯ, ತಬಲಾ ವಾದನಗಳ ಮೂಲಕ ರಂಗಭೂಮಿಯ ಸೇವೆಸಲ್ಲಿಸಿದ ಅಪರೂಪದ ಕಲಾವಿದ. ತಂದೆ ತಬಲಾ ವಾದಕರಾದ್ದರಿಂದ ಇವರೂ ಶ್ರದ್ಧೆಯಿಂದ ತಬಲಾ ಕಲಿತರು. ಇವರ ಪ್ರತಿಭೆಯೂ ತಂದೆಯಷ್ಟೇ ಹೆಸರುವಾಸಿ. ಆಧುನಿಕ ಸಂಗೀತ, ಪ್ರಯೋಗ ಪ್ರಗತಿ ಮೆಚ್ಚಿಕೊಂಡು ತಂದೆಯೂ ಸಂತಸ ಪಟ್ಟವರು.

ಎಲ್ಲಕ್ಕಿಂತ ಮುಖ್ಯವಾಗಿ ಕಲಾವಿದ ಬಸವರಾಜ ವೃತ್ತಿ ಕಲಾವಿದರ ಸ್ಥಿತಿ ಕಂಡು ಮರುಗುವ ಮೃದುಹೃದಯಿ. ಅವರ ನೋವುನಲಿವುಗಳಿಗೆ ಸ್ಪಂದಿಸುವ, ಅವರ ಸುಖ-ಸಂತಸಗಳಲ್ಲಿ ಭಾಗಿಯಾಗುವ ಮಾನವತಾವಾದಿ. ಅವರ ಸ್ವಭಾವದಲ್ಲಿ ಅಪರಿಮಿತ ಒಳ್ಳೆಯತನ ಕಾಣಬಹುದು. ಇನ್ನೊಬ್ಬರ ದುಃಖಕ್ಕೆ ಕರಗುವ, ಮರಗುವ ಮನಸ್ಸು, ಮನುಷ್ಯ ಸಂಬಂಧ ಹೊಂದಿದ ಅವರ ಸ್ನೇಹ ಯಾವ ಪ್ರತಿಭಾನ್ವಿತ ಕಲಾವಿದನಿಗಿಂತಲೂ ಕಡಿಮೆಯಲ್ಲ. ಇಂಥ ಹೃದಯ, ಮನಸ್ಸು, ಸದ್ಗುಣಗಳಿಂದ ಅವರ ಬದುಕಿಗೆ ಮೆರಗು ಬಂದಿತೆನ್ನಬಹುದು.

ಕಲೆ, ಸಾಹಿತ್ಯ, ಸಂಗೀತ ಚಟುವಟಿಕೆಗಳಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡು, ದುಡಿತದ ಉತ್ಸಾಹದಲ್ಲಿ ಮುನ್ನಡೆದಿದ್ದಾರೆ. ದುಡಿತ ಮತ್ತು ಉತ್ಸಾಹ ಅವರ ಜೀವನಕ್ಕೆ ಹೊಸ ಮೆರಗು ತಂದುಕೊಟ್ಟಿದೆ. ಇವರ ಬದುಕಿನಲ್ಲಿ ಕಲೆ ಆಕಸ್ಮಿಕವಲ್ಲ ತಂದೆ ದಿ. ಗುರಪ್ಪ ಮೊರಬದ ನಾಡಿನ ಜನಪ್ರಿಯ ತಬಲಾ ಕಲಾವಿದರಾಗಿದ್ದರು. ಗುಬ್ಬಿ ವೀರಣ್ಣನವರ ಕಂಪನಿ, ಚೆನ್ನಬಸವೇಶ್ವರ ನಾಟ್ಯ ಸಂಘ ಗೋಕಾಕ, ಬಸವರಾಜಪ್ಪನವರ ಶಾರದಾ ಸಂಗೀತ ನಾಟಕ ಮಂಡಳಿ, ಏಣಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘ, ಸೂಡಿ, ಶೇಖರಯ್ಯನವರ ಕಂಪನಿಗಳಲ್ಲಿ ತಬಲಾ ಮಾಸ್ತರರಾಗಿ ಸುದೀರ್ಘ ಸೇವೆ ಸಲ್ಲಿಸಿದವರು.

ಕಲಾವಿದರಿಗೆ ಎಲ್ಲಿಯೇ ಅನ್ಯಾಯವಾಗಲಿ, ಹೋರಾಟ ಮಾಡಿ ಪ್ರತಿಭಟಿಸಿದವರು, ನಿಷ್ಠಾವಂತ ಪ್ರತಿಭಾವಂತ ವ್ಯಕ್ತಿ, ಅವೇ ಗುಣಗಳು ಬಸವರಾಜರಲ್ಲಿ ಮೈಗೂಡಿಸಿಕೊಂಡು ಬಂದಿದೆ. ಬಸವರಾಜ ತಮ್ಮ ಕಲಾಕ್ಷೇತ್ರದಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ. ಅನೇಕ ಹಿರಿಕಿರಿಯ ಕಲಾವಿದರ ಜೊತೆ ತಬಲಾ ಸಾಥ್ ನೀಡಿದ್ದಾರೆ. ಹಾಗೆ ಸಾಥ್ ನೀಡುವಾಗ, ಗಾಯಕರ ಧ್ವನಿಗನುಗುಣವಾಗಿ ತಬಲಾ ನುಡಿಸುತ್ತಾರೆ. ಸ್ವತಂತ್ರ ಕಾರ್ಯಕ್ರಮಗಳನ್ನು ಹಲವೆಡೆ ಕೊಟ್ಟಿದ್ದಾರೆ. ಆಕಾಶವಾಣಿಯಿಂದ ಶ್ರೋತೃಗಳಿಗೆ ತಬಲಾ ವಾದ್ಯ ಪರಿಚಯಿಸಿದ್ದಾರೆ. ಅವರು ತನ್ಮಯತೆಯಿಂದ ತಬಲಾ ನುಡಿಸುವಾಗ ತದೇಕ ಚಿತ್ತದಿಂದ ಅದನ್ನೇ ಕೇಳಬೇಕೆನಿಸುತ್ತದೆ. ಕೇಳುಗರ ಚಿತ್ತವನ್ನು ಸೆಳೆಯುವ, ಮನಸ್ಸನ್ನು ಹಿಡಿದು ನಿಲ್ಲಿಸುವ ಪ್ರತಿಭೆ ಇವರದು.

ಇವರು ತಬಲಾ ಸೇವೆ ಅನೇಕ ನಾಟಕ ಕಂಪನಿಗಳಲ್ಲಿ ತಂದೆಯವರ ಜೊತೆ ಸಲ್ಲಿಸಿದ್ದಾರೆ. ಕೆಲವು ವರ್ಷ ಹಳ್ಳಿ ಹಳ್ಳಿಗೆ ಹವ್ಯಾಸಿ ತಂಡಗಳಿಂದ ಪ್ರಯೋಗಗೊಳ್ಳುವ ನಾಟಕಗಳಿಗೆ ತಬಲಾ ಮಾಸ್ತರರಾಗಿ ಸೇವೆ ಸಲ್ಲಿಸಿದ್ದಾರೆ. ನಾಟಕ ಕಂಪನಿಗಳ ಕಲಾವಿದರ ಸಮಸ್ಯೆ ಕಷ್ಟ, ನೋವು ಇವರೂ ಅನುಭವಿಸಿದ್ದಾರೆ.

ಇವರು ಬಾಲ್ಯದಲ್ಲಿಯೇ ರಂಗಭೂಮಿಯ ಬಗ್ಗೆ ಆಸಕ್ತಿ ಹೊಂದಿ, ರಂಗಭೂಮಿ ಪ್ರವೇಶಿಸಿದವರು. ತಬಲಾ ವಾದ್ಯ ಕಲಿತಿದ್ದು ತಂದೆಗೆ ಅಸಮಾಧಾನ. ಎಲ್ಲಿ ತಮ್ಮಂತೆ ನಾಟಕ ಕಂಪನಿಯಲ್ಲಿ ತಬಲಾ ಮಾಸ್ತರರಾಗಿ ಕಂಪನಿ-ಕಂಪನಿ ತಿರುಗುತ್ತಾನೋ ಎನ್ನುವ ಅನುಮಾನ ಅವರಿಗೆ. ಇವರು ಬಿ.ಕಾಂ. ಪದವಿ ಮುಗಿಸಿ, ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಲೇ ಕಲೆಯಲ್ಲೂ ಆಸಕ್ತಿ ಉಳಿಸಿಕೊಂಡು ಬಂದಿದ್ದಾರೆ. ಅವರಿಗೆ ಅದು ಖುಷಿಯೂ ತಂದಿದೆ. ವಸಂತಕುಮಾರ ಹಾಗೂ ಬಳ್ಳಾರಿ ಕೃಷ್ಣಾ ಇವರಿಗೆ ಬಾಲ್ಯದಲ್ಲಿ ನೃತ್ಯ ಕಲಿಸಿದ ಗುರುಗಳು. ಹೈಸ್ಕೂಲಿನಲ್ಲಿದ್ದಾಗಲೇ ನೃತ್ಯಕ್ಕೆ ಪ್ರಶಸ್ತಿ ಪಾರಿತೋಷಕಗಳು ಬಂದಿವೆ. ತಬಲಾ ವಾದ್ಯಕ್ಕೆ ತಂದೆಯೇ ಗುರು. ಅವರಲ್ಲಿ ಕಲಿತು ಒಂದೆರೆಡು ವರ್ಷ ಮೆಲೋಡಿ ಮೇಕರ್ಸ್‌ನಲ್ಲಿ ಕಾರ್ಯನಿರ್ವಹಿಸಿ, ಅನಂತರ ಅನೇಕ ಮಠ-ಮಂದಿರಗಳ ಶ್ರಾವಣ ಮಾಸದ ಕಾರ್ಯಕ್ರಮಗಳಲ್ಲಿ ಜಾತ್ರಾ ಕಾರ್ಯಕ್ರಮಗಳಲ್ಲಿ ತಬಲಾ ಸೇವೆ ಸಲ್ಲಿಸಿದ್ದಾರೆ.



ಡಾ. ಮೃತ್ಯುಂಜಯ ಹೊರಕೇರಿ ನಿರ್ದೇಶನದ 'ಪುಲಕೇಶಿ' ನಾಟಕದಲ್ಲಿ ಬಸವರಾಜ ಮೊರಬದ ಸಹನಟಿಯೊಂದಿಗೆ

ಇತ್ತೀಚೆಗೂ ಆಗಾಗ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಲೇ ಇದ್ದಾರೆ. ರಂಗದ ಆಸಕ್ತಿ ಅವರಿನ್ನೂ ಕಳೆದುಕೊಂಡಿಲ್ಲ. ಬಳ್ಳಾರಿ ಜಿಲ್ಲೆಯ ನಂದಿಹಳ್ಳಿಯಲ್ಲಿ ಡಾ. ಮೃತ್ಯುಂಜಯ ಹೊರಕೇರಿ ಅವರು ಬರೆದು ನಿರ್ದೇಶಿಸಿದ ಪುಲಿಕೇಶಿ ನಾಟಕದಲ್ಲಿ ವಿಷ್ಣುವರ್ಧನನ ಪಾತ್ರವನ್ನು ಅತ್ಯಂತ ಸಮರ್ಥವಾಗಿ ಅಭಿನಯಿಸಿದ ಮತ್ತೊಂದು ನಾಟಕ ಕನಸಿನ ರಾಣಿಯಲ್ಲಿ ಶ್ರೀಹರಿಯ ಪಾತ್ರ ಜನಮನ ಸೆಳೆದಿತ್ತು.

ಇವರು ನಟರಾಗಿ, ತಬಲಾ ಮಾಸ್ತರರಾಗಿ ಸಲ್ಲಿಸಿದ ಸೇವೆ ಪ್ರಶಂಸನೀಯ. ಆದರೂ ಇಷ್ಟರಿಂದಲೇ ಅವರಿಗೆ ತೃಪ್ತಿ ಇಲ್ಲ. ಇನ್ನೂ ಕಲಿಯಬೇಕು, ತಿಳಿಯಬೇಕು, ಸದಾ ಸಂಗೀತ ಕಲಾವಿದರ ಜೊತೆ ಬೆರೆಯ ಬೇಕೆನ್ನುವ ಹಪಾಹಪಿ, ಅಂಥ ಪರಿಸರ ನಿರ್ಮಾಣ ಮಾಡಿ ಕೊಳ್ಳುತ್ತಿದ್ದಾರೆ. ಪ್ರೊ. ಹನುಮಣ್ಣ ನಾಯಕ ದೊರೆ ಅವರ ಸ್ನೇಹ ವಲಯದಲ್ಲಿದ್ದಾಗ, ಆಗಾಗ ಸಂಗೀತದ ಅವಕಾಶಗಳನ್ನು ಕಲ್ಪಿಸಿಕೊಳ್ಳುತ್ತ ಸಾಧನೆ ಹೆಚ್ಚಿಸಿ ಕೊಳ್ಳುತ್ತಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಅಂತರ ಮಹಾವಿದ್ಯಾಲಯ ಯುವಜನ ಮೇಳ, ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯ ಯುವಜನ ಮೇಳಗಳಲ್ಲಿ ಹಾಗೂ ನಾಡಿನ ನಾನಾ ಸಂಘ ಸಂಸ್ಥೆಗಳ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ಸೇವೆ ಸಲ್ಲಿಸಿ, ಭರವಸೆಯ ಕಲಾವಿದರಾಗಿ ಬೆಳೆಯುತ್ತಿದ್ದಾರೆ. (ಜಿಎಚ್)

ಬಸವರಾಜ ಗೊಂಧಳೆ: ಚಿತ್ರ ಕಲಾವಿದ. ಬದುಕಿನ ನೋವು ನಲಿವುಗಳನ್ನು ಚಿತ್ರಕಲೆಗಿಳಿಸಿರುವ ಈ ಕಲಾವಿದರ ಶೈಲಿ ಚಿತ್ತಾಕರ್ಷಕವಾಗಿದೆ. ಕಲಾಜಗತ್ತಿಗೆ ಹೊಸ ಆಯಾಮ ರೂಪಿಸುವಲ್ಲಿ ಇವರು ಮುಂದಾಗಿದ್ದಾರೆ. ಬದುಕಿನ ಜೀವಾಳವಾದ ಕಲೆ, ಜನಪದ, ಸಂಸ್ಕೃತಿ ಮುಂತಾದ ವಿಷಯಗಳೇ ಚಿತ್ರ ರಚನೆಗೆ ಇಲ್ಲಿ ಪ್ರೇರಣೆ.

ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಮಲ್ಹಾರದ ಸರ್ಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರು. ವಿವಿಧ ಚಿತ್ರಕಲಾ ಶೈಲಿಗಳನ್ನು ಬಳಸಿ, ಗ್ರಾಮೀಣ ಕಲೆ ಉಳಿಸಲು ಸಾಕಷ್ಟು ಪರಿಶ್ರಮ ಪಡಬೇಕಾಗುತ್ತದೆ ಎನ್ನುವುದು ಇವರ ಅಭಿಪ್ರಾಯ.

ನವ್ಯ ಚಿತ್ರಕಲೆಯೊಂದಿಗೆ ಜಲವರ್ಣ, ತೈಲವರ್ಣ, ಮಿಶ್ರವರ್ಣ, ರೇಖಾಚಿತ್ರ, ಪ್ರಕೃತಿಚಿತ್ರ, ಚುಕ್ಕೆಚಿತ್ರ, ಕರಕುಶಲತೆಯುಳ್ಳ ಮಣ್ಣಿನ ನಮೂನೆಯ ಚಿತ್ರ, ಗ್ಲಾಸ್ ಪೇಂಟಿಂಗ್, ಲೈನ್ ಪೇಂಟಿಂಗ್, ಸ್ಯಾಂಡ್ ಪೇಂಟಿಂಗ್, ನಿಬ್ ಪೇಂಟಿಂಗ್, ಎಂಬೋಜೀಂಗ್ ಪೇಂಟಿಂಗ್, ಥರ್ಮಾಕೂಲ್ ಕಟಿಂಗ್, ಬ್ಲೇಡ್ ಪೇಂಟಿಂಗ್, ಸ್ಟೋನ್ ಪೇಂಟಿಂಗ್, ಕ್ಲಾಥ್ ಪೇಂಟಿಂಗ್, ಫ್ಯಾಬ್ರಿಕ್ ಪೇಂಟಿಂಗ್, ಕಾರ್ಮಾನ ಆರ್ಟ್, ವಿವಿಧ ವಿನ್ಯಾಸಗಳನ್ನು ರಚಿಸಿದ್ದಾರೆ. ಪಶು–ಪಕ್ಷಿಗಳನ್ನು ಕಾಗದ–ಕಟ್ಟಿಗೆಯಲ್ಲಿ ರಚಿಸಿ, ಅದಕ್ಕೆ ಚಲನಾ ಕೌಶಲ್ಯ ನೀಡಿ, ನೋಡುಗರಿಗೆ ಆಶ್ಚರ್ಯದೊದಿಗೆ ಸಂತೋಷವೂ ನೀಡುತ್ತದೆ.

ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಬಿಜಾಪುರ ಮತ್ತು ಹುಬ್ಬಳ್ಳಿ, ಅಖಿಲ ಭಾರತ ಜಲವರ್ಣ ಚಿತ್ರಕಲಾ ಪ್ರದರ್ಶನ, ಅಂತಾರಾಷ್ಟ್ರೀಯ ಕಲಾವಿದ ಶಿಬಿರ, ವಿಭಾಗಮಟ್ಟದ ಕಲಾವಿದರ ಶಿಬಿರ, 9ನೆಯ ರಾಷ್ಟ್ರೀಯ ಕಲಾಮೇಳ, ಕಲ್ಕತ್ತಾ, ರಾಷ್ಟ್ರೀಯ ಕಲಾ ಶಿಬಿರ ಹಾಗೂ ಕಲಾ ಕಾರ್ಯಾಗಾರ ಗದಗ ಹಾಗೂ ಹಂಪಿಯ ಕಲಾಶಿಬಿರ, ಮಂಡ್ಯದ ರಾಜ್ಯ ಕಲಾಪ್ರದರ್ಶನ, ರಾಜ್ಯ ಏಡ್ಸ್ ಜಾಗೃತ ಪ್ರದರ್ಶನ, ದಾವಣಗೆರೆ, ಮೈಸೂರು ದಸರಾ ಕಲಾಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಮ್ಮಿಕೊಂಡ ಕಲಾಪ್ರದರ್ಶನ, ಶಿಬಿರ ಜಾಗೃತ ಪರ್ಯಟನೆ, ವಿವಿಧ ಸಂಘ ಸಂಸ್ಥೆಗಳ ಕಲಾಪ್ರದರ್ಶನ, ಗೋಷ್ಠಿಗಳಲ್ಲಿ ಭಾಗ ವಹಿಸಿದ್ದು, ಈಗಾಗಲೇ ಗುಂಪು ಪ್ರದರ್ಶನದಲ್ಲಿ 45ಕ್ಕೂ ಹೆಚ್ಚು ಪ್ರದರ್ಶನ ಹಾಗೂ 36ಕ್ಕೂ ಹೆಚ್ಚು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಹಮ್ಮಿಕೊಂಡ ಖ್ಯಾತಿ ಇವರದು.

ಬಸವರಾಜ ಗೊಂಧಳೆ ಬರೀ ಚಿತ್ರಕಲಾವಿದರಾಗದೇ, ಸಾಹಿತಿ, ರಂಗಕಲಾವಿದ, ಪತ್ರಕರ್ತ, ಭಾಷಣಕಾರ, ಹಾಡುಗಾರ, ಸಮಾಜ ಸಂಘಟಕರಾಗಿ ಹೋರಾಟಗಾರರಾಗಿ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ರಾಜ್ಯ ಪುರಸ್ಕಾರ ಸನ್ಮಾನ, ಅಭಿನಂದನೆ ಸನ್ಮಾನ ಪ್ರಶಸ್ತಿ, ಪಡೆದ ಈ ಕಲಾವಿದರ ಕಲಾಕೃತಿಗಳು ಈಗ ದುಬೈ, ಚೆನ್ನೈ, ಅಮೆರಿಕ, ರಾಜಸ್ಥಾನ, ಜಮ್ಮು–ಕಾಶ್ಮೀರ, ಮಧ್ಯಪ್ರದೇಶ, ಪಂಜಾಬ್, ಮಹಾರಾಷ್ಟ್ರ, ಪುಣೆ, ಹೈದ್ರಾಬಾದ, ಬೆಂಗಳೂರು, ಕೋಲ್ಕತ್ತಾ, ಮುಂಬೈ, ಮೈಸೂರು, ಹುಬ್ಬಳ್ಳಿ, ಗುಲಬರ್ಗಾ, ಧಾರವಾಡ, ವಿಜಾಪುರ, ಬೆಳಗಾವಿ, ಬಾಗಲಕೋಟೆ ಅಲ್ಲದೇ, ರಾಜ್ಯದ ವಿವಿಧ ಸಂಘ ಸಂಸ್ಥೆ ಹಾಗೂ ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಜನಪ್ರಿಯವಾಗಿವೆ. (ಪಿಪಿಎ)

ಬದರಿನಾಥ ಮುಡಬಿ: ಸಂಗೀತ ಕಲಾವಿದರು. ಹೈದ್ರಾಬಾದ ಕರ್ನಾಟಕದ ಬೀದರ ಜಿಲ್ಲೆಯಲ್ಲಿ ಬರುವ ಮುಡಿಬಿ ಗ್ರಾಮದವರು. 1982 ಸೆಪ್ಟೆಂಬರ್ 9 ರಂದು ಜನಿಸಿದರು. ತಂದೆ ಧೂಳಪ್ಪ ಮುಡಿಬಿ ತಾಯಿ ಕಮಲಾಬಾಯಿ. ತಂದೆ ಧೂಳಪ್ಪ ಮುಡಿಬಿಯವರು ಗಾಯಕರು ಮತ್ತು ಹಾರ್ಮೋನಿಯಂ ವಾದಕರಾಗಿದ್ದರು. ಸಹಜವಾಗಿ ಇವರಿಗೆ ಸಂಗೀತದ ಕಡೆಗೆ ಆಸಕ್ತಿ ಬೆಳೆಯಿತು. ಇವರು ಪ್ರಾರಂಭಿಕ ಸಂಗೀತ ಅಭ್ಯಾಸವನ್ನು ಬಸವಕಲ್ಯಾಣದ ಪಂ. ಶೇಷಪ್ಪಾ ಗಬ್ಬೂರ ಇವರ ಹತ್ತಿರ ಪ್ರಾರಂಭಿಸಿ 5 ವರ್ಷಗಳ ಕಾಲ ಪ್ರಾರಂಭಿಕ ಗಾಯನವನ್ನು ಅಭ್ಯಾಸ ಮಾಡಿದರು. ಗಾಯನ ಶಿಕ್ಷಣ ಪಡೆಯುತ್ತಾ ಕರ್ನಾಟಕ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ರ್‍ಯಾಕ್ ಪಡೆದು ಸೀನಿಯರ್



ಹಾಗೂ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದಾರೆ.

ಶಿಕ್ಷಣಕ್ಕಾಗಿ ಗುಲಬರ್ಗಾಕ್ಕೆ ಬಂದು ಪಿಯುಸಿ ಹಾಗೂ ಶ್ರೀ ಶರಣಬಸವೇಶ್ವರ ಕಾಲೇಜಿನಲ್ಲಿ ಪ್ರಥಮದರ್ಜೆಯಲ್ಲಿ ಉತ್ತೀರ್ಣ ರಾಗಿ ನೂತನ ವಿದ್ಯಾಲಯ ಸ್ನಾತಕೋತ್ತರ ಕೇಂದ್ರದಲ್ಲಿ ಎಂ.ಎ. ಪದವಿ(ಸಂಗೀತ)ಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ರಾದರು.

ಗಾಯನ ಜೊತೆಗೆ ಇವರು ಪಿಟೀಲು ವಾದನವನ್ನು ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಹೆಸರಾಂತ ಕಲಾವಿದರಾದ ಪಂ. ರೇವಣಪ್ಪ ಕುಂಕುಮಗಾರ ಇವರ ಹತ್ತಿರ ಗುರು–ಶಿಷ್ಯ ಪರಂಪರೆ ಯಲ್ಲಿ ಸುಮಾರು 9 ವರ್ಷಗಳ ತಾಲಿಮು ತೆಗೆದುಕೊಂಡರು. ದೇಶದ ಹಲವಾರು ಪ್ರಮುಖ ಸ್ಥಳಗಳಾದ ಬೆಂಗಳೂರು, ಚೆನ್ನೈ, ಹೈದ್ರಾಬಾದ, ತಿರುಪತಿ, ಕೋಲಾರ, ಬರೋಡಾ, ಅಹ್ಮದಾಬಾದ, ಮುಂತಾದ ಸ್ಥಳಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ದ್ದಾರೆ.



ಪಂ. ಪರಮೇಶ್ವರ ಹೆಗಡೆ ಅವರೊಂದಿಗೆ ಶ್ರೀ ಬದರಿನಾಥ ಮುಡಬಿ ಹಾರ್ಮೋನಿಯಂ ನೀಡುತ್ತಿರುವುದು

ವಿಶ್ವ ಪ್ರಸಿದ್ಧ 'ದಸರಾ ಉತ್ಸವ', 'ಹಂಪಿ ಉತ್ಸವ' ವಿಶ್ವ ಕನ್ನಡ ಸಮ್ಮೇಳನ 'ಬೀದರ ಉತ್ಸವ', 'ಬಸವ ಉತ್ಸವ' ಹೀಗೆ ಮುಂತಾದ ಪ್ರಸಿದ್ಧ ಉತ್ಸವಗಳಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ. ಜೊತೆಗೆ ಆಕಾಶವಾಣಿ–ದೂರದರ್ಶನದಲ್ಲಿ 30–40 ಕಾರ್ಯಕ್ರಮಗಳು ಬಿತ್ತರಗೊಂಡಿವೆ. ಜಿಲ್ಲಾಮಟ್ಟ ವಿಶ್ವವಿದ್ಯಾ ಲಯ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಪಡೆ ದಿದ್ದಾರೆ.

ಹಾರ್ಮೋನಿಯಂ ವಾದನದ ಪರಿಣಿತಿ ಹೊಂದಿರುವ ಇವರು ರಾಷ್ಟ್ರ ಮತ್ತು ಅಂತರರಾಷ್ಟ್ರಮಟ್ಟದ ಕಲಾವಿದರ ಜೊತೆಗೆ ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಅದರಲ್ಲಿ ಪ್ರಮುಖರಾದ ಪಂ. ಪರಮೇಶ್ವರ ಹೆಗಡೆ, ಶ್ರೀಪಾದ ಹೆಗಡೆ, ಶ್ರೀಮತಿ ಸಂಗೀತಾ ಕಟ್ಟಿ, ವಾಣಿ ಎಚ್. ಉಪೇಂದ್ರ ಭಟ್ಟ, ಅನಂತ ಕುಲಕರ್ಣಿ, ಶ್ರೀ ಶೇಷಗಿರಿದಾಸ ಮುಂತಾದವರಿಗೆ ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಅಲ್ಲದೆ ಇವರು ಕಳೆದ 7 ವರ್ಷಗಳಿಂದ 'ಗಾನ ಸುಧಾ' ಸಂಗೀತ ವಿದ್ಯಾಲಯವನ್ನು ಪ್ರಾರಂಭಿಸಿ ಅನೇಕ ವಿದ್ಯಾರ್ಥಿಗಳಿಗೆ ಗಾಯನ, ಪಿಟೀಲ, ಹಾರ್ಮೋನಿಯಂ ಶಿಕ್ಷಣ ನೀಡುತ್ತಿದ್ದಾರೆ. ಇವರ ಹತ್ತಿರ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಇವರ ಹಾಕಿಕೊಟ್ಟ ಹಾದಿಯುಲ್ಲಿ ಪಳುಗುತ್ತಿದ್ದಾರೆ. (ಆರ್‌ಕೆಕೆ)

ಬಹುರೂಪಿ ರಂಗಭೂಮಿ: (ಹೈದ್ರಾಬಾದ ಕರ್ನಾಟಕ)

ಹೈದ್ರಾಬಾದಿನ ನಿಜಾಂ ಸಂಸ್ಥಾನದ ಭಾಗವಾಗಿದ್ದ ಹೈದ್ರಾಬಾದ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಉರ್ದು ಆಡಳಿತ ಹಾಗೂ ಶಿಕ್ಷಣ ಮಾಧ್ಯಮದ ಭಾಷೆಯಾಗಿತ್ತು. ಹಾಗಂತ ಆ ಭಾಗದ ಜನ ಕನ್ನಡವೇನೂ ಮರೆಯಲಿಲ್ಲ. ಒಂದು ಪ್ರದೇಶದ ಸಾಂಸ್ಕೃತಿಕ ಅಭಿವ್ಯಕ್ತಿಗೆ 'ಸಾಹಿತ್ಯವೊಂದೇ ಸಾಧನವಾಗುವುದಿಲ್ಲ. ವಿವಿಧ ಕಲಾ ಪ್ರಕಾರಗಳಲ್ಲಿ 'ಸಾಂಸ್ಕೃತಿಕ' ಅಭಿವ್ಯಕ್ತಿ ನಿರಂತರ ಆಗುತ್ತಲೇ ಇರುತ್ತದೆ. ರಂಗಭೂಮಿ ಚಿತ್ರಕಲೆ ಹಾಗೂ ಮೌಖಿಕ ಕಾವ್ಯಗಳ ಮೂಲಕ 'ಅಭಿವ್ಯಕ್ತಿ'ಯಾಗುತ್ತಲೇ ಇರುತ್ತದೆ.

17–18 ಹಾಗೂ 19ನೇ ಶತಮಾನ ಹೊರ ಭಾಗದ ಸಾಂಸ್ಕೃತಿಕ ಲೋಕದಲ್ಲಿ ಕಾರ್ಮೋಡ ಕವಿದ ಕಾಲ ಎಂದು ಪರಿಭಾವಿಸುವವರೂ ಇದ್ದಾರೆ. ಆದರೆ ಈ ಅವಧಿಯಲ್ಲಿ ಅಸಂಖ್ಯಾತ ತತ್ವ ಪದಕಾರರು 'ಪದ' ಕಟ್ಟಿ ಹಾಡಿದ್ದಾರೆ. ಚಿತ್ರ ಕಲಾವಿದರು 'ವಿಶಿಷ್ಟ' ಕಲಾಕೃತಿಗಳನ್ನು ರಚಿಸಿದ್ದಾರೆ. ರಂಗಭೂಮಿಯಂತೂ, ವೈಭವ ಮೆರೆದಿದೆ. ಪ್ರಸ್ತುತ ಸಂದರ್ಭದಲ್ಲಿ ರಂಗಭೂಮಿ ಜನಾಶ್ರಯ ಹಾಗೂ ವೈವಿಧ್ಯತೆ ಕಳೆದುಕೊಂಡು ಉಸಿರಾಡುತ್ತಿದೆ. ಆದರೆ ಹಿಂದಿನ ಮೂರು ಶತಮಾನಗಳ ಕಾಲ ಈ ಭಾಗದ ಜನತೆಗೆ ಜ್ಞಾನ ಮತ್ತು ಮನರಂಜನೆ ರಂಗ ಭೂಮಿಯಿಂದ ಮಾತ್ರ ದೊರೆಯುತ್ತಿತ್ತು. ಜನ ಸಾಮಾನ್ಯರ ಲೋಕಜ್ಞಾನ ಹಾಗೂ ಮೌಲ್ಯ ಪ್ರಜ್ಞೆ ಹೆಚ್ಚಿಸು ವಲ್ಲಿ ರಂಗಭೂಮಿಯ ಪಾತ್ರ ಬಹಳ ದೊಡ್ಡದಿದೆ. ರಾಮಾಯಣ, ಮಹಾಭಾರತ ಹಾಗೂ ಪುರಾಣ ಪುಣ್ಯಕತೆಗಳು ಜನಮನದಲ್ಲಿ ನೆಲೆ ನಿಲ್ಲುವಂಥಾಹದ್ದೇ ಜಾನಪದ ರಂಗಭೂಮಿ ಯಿಂದ... ದೊಡ್ಡಾಟ, ಬಯಲಾಟ, ಸಣ್ಣಾಟ, ಡಪ್ಪಿನಾಟಗಳು ಹೈದ್ರಾಬಾದ ಕರ್ನಾಟಕ ಪ್ರದೇಶದ ಗ್ರಾಮೀಣ ಜನತೆಗೆ 'ಹಬ್ಬದ ಸಂಭ್ರಮ ನೀಡುತ್ತಿದ್ದವು. ಮೇಲಿನ ಕಲಾಪ್ರಕಾರಗಳ 'ಹಬ್ಬದ ಸಂಭ್ರಮ ನೀಡುತ್ತಿದ್ದವು. ಮೇಲಿನ ಕಲಾಪ್ರಕಾರಗಳ ಪ್ರದರ್ಶನಕ್ಕೆ ವೃತ್ತಿಪರ 'ತಂಡಗಳಿರುತ್ತಿದ್ದವು'. ಕೆಲವೊಮ್ಮೆ 'ಮಾಸ್ತರರ' ನೆರವಿ ನಿಂದ ಸ್ಥಳೀಯ ರಂಗಾಸಕ್ತರೇ ಪ್ರದರ್ಶನ ನೀಡುತ್ತಿದ್ದರು. ಇಡೀ ರಾತ್ರಿ ನಡೆಯುತ್ತಿದ್ದ ದೊಡ್ಡಾಟ, ಬಯಲಾಟಗಳು ಸಾಹಿತ್ಯ, ಸಂಗೀತ ಹಾಗೂ ಮನೋಜ್ಞ ಅಭಿನಯದ 'ಸಂಗಮ ದಂತಿದ್ದವು. ಯಕ್ಷಗಾನವನ್ನು ಉಳಿಸಿಕೊಂಡಂತೆ' ಈ ಕಲಾ ಪ್ರಕಾರಗಳನ್ನು ಪ್ರಯತ್ನ ಪೂರ್ವಕವಾಗಿ ಉಳಿಸಿಕೊಳ್ಳಲಾಗಿಲ್ಲ.

ಸಾಮಾಜಿಕ ಆರ್ಥಿಕ ಸ್ಥಿತ್ಯಂತರದಿಂದಾಗಿ ದೊಡ್ಡಾಟ, ಬಯಲಾಟದ ಕಲಾವಿದರು ಬೇರೆ ವೃತ್ತಿಗಳನ್ನವಲಂಬಿಸಿ ಬೇಕಾಯಿತು. ಬಿಜಾಪೂರ, ಬಾಗಲಕೋಟೆ ಭಾಗದಲ್ಲಿ ಈಗಲೂ ಕೃಷ್ಣ ಪಾರಿಜಾತ ಉಳಿದು ಬಂದಿದೆ. ಹೈದ್ರಾಬಾದ ಕರ್ನಾಟಕದ ಮಹತ್ವದ ಕಲಾಪ್ರಕಾರಗಳ ಪೈಕಿ ತೊಗಲು ಗೊಂಬೆಯಾಟವನ್ನು ಬೆಳಗಲಿ ವೀರಣ್ಣನವರು ಉಳಿಸಿಕೊಂಡಿದ್ದಾರೆ.

ದೊಡ್ಡಾಟ, ಬಯಲಾಟಗಳನ್ನು ನಡೆಸಿಕೊಡುತ್ತಿದ್ದ ಪರಿಣಿತ ಕಲಾವಿದರು ಈಗಲೂ ಸಿಗುತ್ತಾರೆ. ಆದರೆ ಪ್ರದರ್ಶನಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ. ಜಾನಪದ ರಂಗ ಭೂಮಿಯ ಉಳಿವಿಗಾಗಿ ಜೋಳದ ರಾಶಿ ದೊಡ್ಡನಗೌಡ, ಮುದೇನೂರು ಸಂಗಣ್ಣ, ಡಾ. ಬಸವರಾಜ ಮಲಶೆಟ್ಟಿಯವರು ವಿಶೇಷವಾಗಿ ಶ್ರಮಿಸಿದ್ದಾರೆ. ಜಾನಪದ ರಂಗಭೂಮಿಯಷ್ಟೇ ಸಮೃದ್ಧವಾಗಿ ಬೆಳೆದದ್ದು ವೃತ್ತಿ ರಂಗಭೂಮಿ. ಮರಿಯಮ್ಮನ ಹಳ್ಳಿ, ಕುಕನೂರ ಹಾಗೂ ಮೈಂದರ್ಗಿ ಸ್ಥಳಗಳು ಪ್ರತಿಭಾವಂತ ಕಲಾವಿದರ ನೆಲೆವೀಡಾಗಿದ್ದವು. ಸುಭದ್ರಮ್ಮ ಮನ್ಸೂರು, ಹಂದಿಗನೂರ ಸಿದ್ರಾಮಪ್ಪ, ಶಾಂತಾಬಾಯಿ ಡಿಗ್ಗಿ, ಯಂತಹ ಹಿರಿಯ ಕಲಾವಿದರು ವೃತ್ತಿ ರಂಗಭೂಮಿಯಗಾಗಿಯೇ ಜೀವನ ಮುಡುಪಾಗಿಟ್ಟಿದ್ದರು. ಪ್ರೇಮಾ ಗುಳೇದಗುಡ್ಡ ಅವರ ನೇತೃತ್ವದ ಆಶಾಪುರಗೌಡರು ಸ್ಥಾಪಿಸಿದ ಸಂಗಮೇಶ್ವರ ನಾಟ್ಯ ಸಂಘ ಕಂಪನಿ ವೃತ್ತಿ ರಂಗಭೂಮಿಗೆ ತನ್ನದೆಯಾದ ಕೊಡುಗೆ ನೀಡಿದೆ. ಕಲಬುರ್ಗಿಯಂತಹ ನಗರದಲ್ಲಿ ಕೆಲವು ನಾಟಕ ಕಂಪನಿಗಳು ಸತತ ಮೂರ್‍ನಾಲ್ಕು ವರ್ಷ ನಾಟಕಗಳನ್ನು ಪ್ರದರ್ಶಿಸಿ ಗೆದ್ದಿವೆ ಎಂದರೆ ಈ ಭಾಗದ ವೃತ್ತಿ ರಂಗಭೂಮಿಯ ಹೆಗ್ಗಳಿಕೆಯೇ ಸರಿ. ಈ ಹೊತ್ತಿಗಾಗಲೇ ಹಲವಾರು ಕಂಪನಿಗಳು ಕ್ರಿಯಾಶೀಲವಾಗಿವೆ ಮಾತ್ರವಲ್ಲ ಯಾರ ನೆರವಿಲ್ಲದೆ ಲಾಭದಲ್ಲಿ ನಡೆಯುತ್ತಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನಾಡಿಗೆ ಹೆಸರಾದ ಗುಬ್ಬಿ ವೀರಣ್ಣನವರಂತಹ ಕಂಪನಿ ಹುಟ್ಟಿರಲಿಕ್ಕಿಲ್ಲ. ಆದರೆ ಅಸಂಖ್ಯಾತ ಕಂಪನಿಗಳು, ಸಾವಿರಾರು ಜನ ಕಲಾವಿದರು ವೃತ್ತಿರಂಗಭೂಮಿಯ ವೈಭವಕ್ಕೆ ಕಾರಣರಾಗಿದ್ದಾರೆ. ಎಲ್.ಬಿ.ಕೆ. ಆಲ್ದಾಳರಂತಹ ಹಿರಿಯ ನಾಟಕಕಾರರು ನೂರಾರು ನಾಟಕ ಗಳನ್ನು ಬರೆದು ಕಂಪನಿಗಳ ಉತ್ಸಾಹ ಹೆಚ್ಚಿಸಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಆಲ್ದಾಳ ಅವರು ಕೋಮು ಸೌಹಾರ್ದ ತೆಗೆ ಪೂರಕವಾಗುವ ನಾಟಕಗಳನ್ನು ರಚಿಸಿ ಈ ಭಾಗದ ಹಿಂದೂ-ಮುಸ್ಲಿಂರ ಬಾಂಧವ್ಯ ಹೆಚ್ಚಿಸಿದ್ದಾರೆ. ವೃತ್ತಿ ರಂಗ ಭೂಮಿಯಲ್ಲಿ ನಟರು ಸಹಜವಾಗಿ ಖ್ಯಾತಿ ಪಡೆಯುತ್ತಿದ್ದರು. ಆದರೆ ಆಧಾರ ಸ್ಥಂಭವಾಗಿದ್ದವರು ನಾಟಕಕಾರರು ಹಾಗೂ ಹಾರ್ಮೋನಿಯಂ ಮಾಸ್ತರರು, ನೂರಾರು ನಾಟಕಗಳು 'ಗಲ್ಲಾ' ಪೆಟ್ಟಿಗೆಯಲ್ಲಿ ಯಶಸ್ಸುಗಳಿಸಿದ್ದು ಚುರುಕಾದ ಸಂಭಾಷಣೆ ಹಾಗೂ ಅತ್ಯುತ್ತಮ ಹಾಡುಗಳಿಂದ ಇತ್ತೀಚಿನ ದಿನಗಳಲ್ಲಿ ಟಿಯರ ಡ್ಯಾನ್ಸ್ ಪ್ರಮುಖ ಪಾತ್ರವಹಿಸುತ್ತದೆ.

ವೃತ್ತಿ ರಂಗಭೂಮಿಯಷ್ಟೇ 'ಪ್ರಭಾವಿ'ಯಾಗಿದ್ದ ಹಾಗೂ ಇಡೀ ರಂಗ ಪ್ರಕ್ರಿಯೆಯಲ್ಲಿ 'ಜನಸಾಮಾನ್ಯರೂ' ಭಾಗವಹಿಸ ಬಹುದಾದ ಅವಕಾಶವಿದ್ದ ರಂಗಭೂಮಿಯೆಂದರೆ; ಗ್ರಾಮೀಣ ಹವ್ಯಾಸಿ ರಂಗಭೂಮಿ. ರಂಗಭೂಮಿಯ ಚರ್ಚೆಯಲ್ಲಿ 'ಗ್ರಾಮೀಣ ಹವ್ಯಾಸಿ ರಂಗಭೂಮಿಯನ್ನು ಸಂಪೂರ್ಣ ಕಡೆ ಗಣಿಸಲಾಗುತ್ತದೆ. ಸ್ಥಳೀಯರು 'ಜಾತ್ರೆ' ಸಂದರ್ಭದಲ್ಲಿ ತಾತ್ಕಾಲಿಕ ತಂಡ ಕಟ್ಟಿಕೊಂಡು ಹಾರ್ಮೋನಿಯಂ ಮಾಸ್ತರರ ನೆರವಿನಿಂದ ನಾಟಕ ಪ್ರದರ್ಶಿಸುವುದನ್ನು ಗ್ರಾಮೀಣ ಹವ್ಯಾಸಿ ರಂಗಭೂಮಿ ಎಂದು ಗ್ರಾಮೀಣ ಹವ್ಯಾಸಿ ರಂಗಭೂಮಿಯಲ್ಲಿ ಹಾರ್ಮೋನಿಯಂ ಮಾಸ್ತರ ಹಾಗೂ ವೃತ್ತಿ ನಿರತ ನಟಿಯರು ನಿರ್ಣಾಯಕ ಪಾತ್ರವಹಿಸುತ್ತಾರೆ. ಉಳಿದ ಕಲಾವಿದರು 'ನಟನೆ' ಗೊತ್ತಿಲ್ಲದವರು ಕೆಲವರಂತೂ 'ಸಂಭಾಷಣೆ' ಒಪ್ಪಿಸಲು ಪರದಾಡುವವರು. ಸಾಮೂಹಿಕ ಮಾಲಿಕತ್ವ ಅಥವಾ ಜನ ಸಾಮಾನ್ಯರ ಘೋಷಣೆಯಿಂದ ಪ್ರದರ್ಶನಗೊಳ್ಳುವ ಇಂತಹ ನಾಟಕಗಳು ಇತ್ತೀಚಿನವರೆಗೂ ಚಾಲ್ತಿಯಲ್ಲಿದ್ದವು. ಟಿ.ವಿ. ಬಂದ ಮೇಲೆ ಗ್ರಾಮೀಣ ಹವ್ಯಾಸಿ ರಂಗಭೂಮಿ ಹೆಚ್ಚು ಕಡಿಮೆ ಸ್ಥಗಿತಗೊಂಡಿದೆ. ಇದರಿಂದ ನಟಿಯರಿಗೆ ಸಿಗುತ್ತಿದ್ದ ಹೆಚ್ಚುವರಿ ಅವಕಾಶಗಳು ತಪ್ಪಿ ಹೋಗಿವೆ. ಆದರೆ ಹಾರ್ಮೋನಿಯಂ ಮಾಸ್ತರರು ಅರ್ಥಾತ್ ನಾಟಕದ ನಿರ್ದೇಶಕರು ಕೆಲಸ ಕಳೆದು ಕೊಂಡಿದ್ದಾರೆ.

ಗ್ರಾಮೀಣ ಹವ್ಯಾಸಿ ರಂಗಭೂಮಿಗೆ 'ಹಣ' ಮಾಡುವ ಉದ್ದೇಶವಿರುತ್ತಿರಲಿಲ್ಲ. ರಂಗಭೂಮಿ ಬೆಗೆಗಿನ ಆಕರ್ಷಣೆಯೇ ಅವರಿಗೆ ಬಣ್ಣ ಹಚ್ಚುವಂತೆ ದಿನದ ಮಟ್ಟಿಗೆಯಾದರೂ 'ಕಠೋರ' ವಾಸ್ತವವನ್ನು ಬದಲಿಸುತ್ತಿತ್ತು. ನಿಜ ಜೀವನದಲ್ಲಿ ಆಳು ಮಗನಾಗಿದ್ದ ವ್ಯಕ್ತಿ ದೈಹಿಕವಾಗಿ ಸದೃಢನಾಗಿದ್ದರಿಂದ ಇನ್ಸಪೆಕ್ಟರ್ ಪಾತ್ರ ನಿರ್ವಹಿಸುತ್ತಿದ್ದ ಊರಿನ ಜಮೀನ್ದಾರನ ಮಗ ನರಪೇತಲ ನಾಗಿದ್ದರಿಂದ ಭಿಕ್ಷುಕನ ಪಾತ್ರದಲ್ಲಿ ಕಾಣಿಸುತ್ತಿದ್ದ.

ಇನ್ನು ಆಧುನಿಕ ಹವ್ಯಾಸಿ ರಂಗಭೂಮಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬೆಂಗಳೂರು-ಮೈಸೂರಿನಂತೆ ವ್ಯಾಪಕ ವಾಗಿ ಹಬ್ಬಲಿಲ್ಲ. ಇಷ್ಟಾಗಿಯೂ ಹವ್ಯಾಸಿ ರಂಗಭೂಮಿಗೆ ಪ್ರತಿ ಜಿಲ್ಲೆಯಲ್ಲಿ ನೆಲೆಯೊದಗಿಸಿದ್ದು ಸಮುದಾಯ ಸಂಸ್ಕೃತಿ ಸಂಘಟನೆ. 80ರ ದಶಕದಲ್ಲಿ ಸಮುದಾಯ ಹೆಚ್ಚು ಕ್ರಿಯಾಶೀಲ ವಾಗಿತ್ತು. ಪ್ರಸನ್ನ, ಸಿಜಿಕೆ, ಬಸವಲಿಂಗಯ್ಯರಂತಹ ಹಿರಿಯ ರಂಗಕರ್ಮಿಗಳು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಸುತ್ತಾಡಿ ಬೀದಿ ನಾಟಕಗಳನ್ನು ಆಡಿಸುತ್ತಿದ್ದರು. ಬೀದಿ ನಾಟಕಗಳಿಗೆ ಉತ್ಸಾಹಿ ಯುವಕರನ್ನು ಆಯ್ದುಕೊಂಡು ಅವರಿಗೆ ರಂಗ ತರಬೇತಿ ನೀಡಿ ಹವ್ಯಾಸಿ ರಂಗಭೂಮಿಯಲ್ಲಿ ನೆಲೆ ನಿಲ್ಲುವಂತೆ ಮಾಡುತ್ತಿದ್ದರು. ಕಲಬುರ್ಗಿ, ರಾಯಚೂರು ಹಾಗೂ ಒಂದಲ್ಲ ಒಂದು ಕಾರ್ಯಕ್ರಮ ಹಮ್ಮಿಕೊಳ್ಳುತ್ತಲೇ ಇದ್ದರು. ಬೆಲ್ಚ್, ಗೋದಾನ, ಈರೋಬಿಯಂತಹ ನಾಟಕಗಳು ಜನ ಸಾಮಾನ್ಯರ ಬಾಯಿ ಮಾತಾಗಿದ್ದವು.

ಬೆಂಗಳೂರಿನಲ್ಲಿ ಪಿ.ಲಂಕೇಶ್, ಮುರುಳಸಿದ್ದಪ್ಪ ಅವರು ಹೆಚ್ಚು ಕ್ರಿಯಾಶೀಲವಾಗಿದ್ದ ಕಾಲದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಕಾಲೇಜು ರಂಗಭೂಮಿ ಚಟುವಟಿಕೆಯಿಂದ ಇತ್ತು. ಪ್ರೊ. ಚಂದ್ರಶೇಖರ ಪಾಟೀಲರ ಅಸಂಗತ ನಾಟಕಗಳು ಪರ್ವತವಾಣಿಯವರ ಏಕಾಂಕಗಳನ್ನು ಶಾಲಾ ವಾರ್ಷಿಕೋತ್ಸವ

ಹಾಗೂ ನಾಟಕ ಸ್ಪರ್ಧೆಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು. ಆಸಕ್ತ ಪ್ರಾಧ್ಯಾಪಕರಿದ್ದಾಗ ಜೀವಂತವಾಗಿದ್ದ ಕಾಲೇಜು ರಂಗಭೂಮಿ ನಂತರದ ದಿನಗಳಲ್ಲಿ ಚಿಗುರಲೇ ಇಲ್ಲ. ಸಮುದಾಯ ಸಂಘಟನೆ ಹೊರತುಪಡಿಸಿ ಬೆರಳಿಣಿಕೆಯ ರಂಗತಂಡಗಳು ಕ್ರಿಯಾಶೀಲ ವಾಗಿದ್ದವು. ಅದರಲ್ಲಿ ಕಲಬುರ್ಗಿಯ ರಂಗಮಾಧ್ಯಮ ಪ್ರಮುಖ ವಾದುದು. ಖ್ಯಾತ ವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜು, ಕತೆಗಾರ ಚಂದ್ರಕಾಂತ ಕುಸನೂರು ಅವರ ಪ್ರಬಲ ಆಸಕ್ತಿಯ ಫಲವಾಗಿ ಹುಟ್ಟಿಕೊಂಡ ರಂಗಮಾಧ್ಯಮ ಸುಮಾರು ಮೂರು ದಶಕಗಳಿಂದ ನಡೆದುಕೊಂಡು ಬಂದಿದೆ. ಅತ್ಯುತ್ತಮ ನಾಟಕ ಗಳನ್ನು ಪ್ರದರ್ಶಿಸಿದೆ. ಅಸಂಖ್ಯಾತ ಕಲಾವಿದರನ್ನು ಬೆಳೆಸಿದೆ. ಪ್ರಭಾಕರ ಸಾತಖೇಡ ರಂಗ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದರೂ 'ಸಂಸ್ಥೆ'ಯಾಗಿ ನಿರೀಕ್ಷಿತ ಪ್ರಮಾಣದಲ್ಲಿ ಕ್ರಿಯಾ ಶೀಲವಾಗಿಲ್ಲ.

ಜಾನಪದ ರಂಗಭೂಮಿಯ ವೈಭವ 'ಇತಿಹಾಸ' ಸೇರಿದೆ. ಜಾಗತೀಕರಣದ ಪರಿಣಾಮವಾಗಿ ಗ್ರಾಮೀಣ ಆರ್ಥಿಕತೆಯೇ ಸಂಕಷ್ಟದಲ್ಲಿದೆ. ಹೀಗಾಗಿ ಗ್ರಾಮೀಣ ಹವ್ಯಾಸಿ ರಂಗಭೂಮಿ ಮರುಜೀವ ಪಡೆಯುವುದು ಕಷ್ಟ. ಸದ್ಯ ಹವ್ಯಾಸಿ ಮತ್ತು ವೃತ್ತಿ ರಂಗಭೂಮಿ ಕಸುವು ಕಳೆದುಕೊಂಡಿಲ್ಲ. (ಎಸ್‌ಜೆ)

ಬಳಗಾನೂರ ಐತಿಹಾಸಿಕ ಸ್ಮಾರಕಗಳು: ಅಪರೂಪದ ಐತಿಹಾಸಿಕ ಸ್ಮಾರಕಗಳಲ್ಲಿ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಬಳಗಾನೂರು ಒಂದಾಗಿದೆ. ಬಳಗಾನೂರು ಹತ್ತನೇ ಶತಮಾನದ ಕಲ್ಯಾಣದ ಚಾಲುಕ್ಯರ ಆಡಳಿತಕ್ಕೊಳಪಟ್ಟ ಇತಿಹಾಸ ಹೊಂದಿದೆ. ಹಿರಿಯ ಬಳೆಗಾನೂರು ಎಂಬುದು ಈ ಊರಿಗಿದ್ದ ಹಿಂದಿನ ಹೆಸರು ಎಂಬುದು ಇಲ್ಲಿಯ ನಗರೇಶ್ವರ ದೇವಸ್ಥಾನದಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ. ಬಳಗಾರರೇ ಹೆಚ್ಚಾಗಿ ವಾಸವಾಗಿದ್ದ ಊರು ಎಂಬ ಅಂಶ ಹಿಂದಿದ್ದ ಹೆಸರಿನಿಂದ ತಿಳಿದು ಬರುತ್ತದಾದರೂ, ಗ್ರಾಮದಲ್ಲಿ ವಿಚಾರಿಸಿದಾಗ ಯಾರದೋ ಶಾಪದ ಕಾರಣದಿಂದ ಬಳಗಾರರೆಲ್ಲ ಊರನ್ನೇ ಬಿಟ್ಟು ಹೋಗಿದ್ದಾರೆ. ಇಲ್ಲಿ ಬಳೆಗಾರರು ಒಬ್ಬರೂ ಇಲ್ಲ ಎಂದು ಇಲ್ಲಿನ ಜನ ಹೇಳುತ್ತಾರೆ. ಆದರೂ ಇದು ಹಿಂದೆ ಬಳೆಯನ್ನು ತಯಾರಿಸುವ ಮುಖ್ಯ ಕೇಂದ್ರವಾಗಿದ್ದಿರ ಬಹುದು ಎಂಬುದು ಇಲ್ಲಿಯ ಬಹುಜನರ ಅಭಿಪ್ರಾಯ. ಲಕ್ಷ್ಮೀನಾರಾಯಣ ದೇವಾಲಯದಲ್ಲಿರುವ ಶಾಸನದಿಂದ ಎಡ ದೊರೆಯ ನಾಡನ್ನು (ರಾಯಚೂರು) ಆಳುತ್ತಿದ್ದ ಹೈಹಯ ವಂಶದ ಮಲ್ಲದೇವರಸನ ಮಹಾಮಂಡಲೇಶ್ವರ ಹೊಲ್ಲರಸ ಈ ಭಾಗವನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಅಲ್ಲದೆ ಈ ಸ್ಥಳ ವೈಷ್ಣವ, ಜೈನ, ವೈಶ್ಯರು ಮೊದಲಾದವನ್ನೊಳಗೊಂಡ ಬಹು ದೊಡ್ಡ ಅಗ್ರಹಾರವಾಗಿತ್ತೆಂಬುದು ಇದೇ ಶಾಸನದಿಂದ ತಿಳಿದು ಬರುತ್ತದೆ. ಈ ಅಂಶಕ್ಕೆ ಒತ್ತು ಕೊಡುವಂತೆ ಜೈನ ಬಸದಿ ಯೊಂದು ಈ ಗ್ರಾಮದಲ್ಲಿದೆ. ನಗರೇಶ್ವರ ಹಾಗೂ ಲಕ್ಷ್ಮೀ ನಾರಾಯಣ ದೇವಸ್ಥಾನಗಳ ಶಾಸನದಲ್ಲಿ ದೇವಾಲಯಕ್ಕೆ ಬಿಟ್ಟ ದಾನದತ್ತಿಗಳ ಬಗ್ಗೆ ವರ್ಣನೆಯೂ ಇದೆ.

ಬಳಗಾನೂರಿನಲ್ಲಿ ಇನ್ನೂ ಅನೇಕ ದೇವಾಲಯಗಳಿದ್ದುವು ಎಂಬುದು ಶಾನಗಳಿಂದ ಗೊತ್ತಾದರೂ, ಗ್ರಾಮಕ್ಕೆ ಭೇಟಿಕೊಟ್ಟಾಗ ಸಿಗುವವು ನಗರೇಶ್ವರ ಹಾಗೂ ಲಕ್ಷ್ಮೀನಾರಾಯಣ ದೇವಸ್ಥಾನ ಗಳು ಮಾತ್ರ. ನಗರೇಶ್ವರ ದೇವಾಲಯದಲ್ಲಿರುವ ಶಾಸನದಿಂದ ಅದು ಹಳೆಯ ದೇವಸ್ಥಾನವೆಂಬುದು ತಿಳಿಯುತ್ತದೆ. ಉಳಿದಂತೆ ಬಿದ್ದ ಹಳೆಯ ಕಲ್ಲುಗಳಿಂದ ಪುನಃ ನಿರ್ಮಿಸಲಾಗಿದೆ. ಆದರೆ ಈ ಲಕ್ಷ್ಮೀನಾರಾಯಣ ದೇವಸ್ಥಾನವು ಶಿಲ್ಪಕಲಾ ಶ್ರೇಷ್ಠತೆಯನ್ನು ಪಡೆದಿದೆ.

ದೇವಸ್ಥಾನದ ಮುಖ್ಯ ಅವಶೇಷಗಳಲ್ಲಿ ಗರ್ಭಗುಡಿ, ನವರಂಗ ಶಾಲೆ, ಮುಖಮಂಟಪಗಳಿಂದ ಕೂಡಿದೆ. ನವರಂಗದ ಮುಂಭಾಗದಲ್ಲಿರುವ ಕಲ್ಲಿನ ದ್ವಾರಗಳ ಕೆತ್ತನೆ ತುಂಬ ಆಕರ್ಷಕ ವಾಗಿದೆ. ಲಕ್ಷ್ಮೀನಾರಾಯಣ ದೇವರ ಮೂರ್ತಿ ಪೂಜೆಯಲ್ಲಿದೆ. ಅಲಕ್ಷ್ಯತೆಯಿಂದಾಗಿ ಮೂಲ ಸೌಂದರ್ಯವನ್ನು ಕಳೆದು ಕೊಂಡಿದೆ. ದೇವಾಲಯದಲ್ಲಿರುವ ಕಂಬಗಳೆಲ್ಲ ಒಳ್ಳೆಯ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದ್ದು, ಗ್ರಾಮದಲ್ಲಿ ಅಲ್ಲಲ್ಲಿ ಹಳೆಯ ದೇವಾಲಯಗಳಿದ್ದಾಗ್ಯೂ, ಈ ದೇವಸ್ಥಾನದಂತಹ ಶಿಲ್ಪಕಲೆ ವೈಭವ ಅವುಗಳಿಗಿಲ್ಲ. (ಜಿಡಿಎಂ)

ಬಾ

ಬಾಗಿಲು ಅಲಂಕಾರ: ಬಯಲಿನಲ್ಲಿ ವಾಸಿಸುತ್ತಿದ್ದ ಆದಿಮಾನವ ದುಷ್ಟ ಪ್ರಾಣಿಗಳಿಂದ ಬಿಸಿಲು, ಚಳಿ, ಮಳೆ ಗಾಳಿಗಳಿಂದ ರಕ್ಷಣೆ ಪಡೆಯಲು ನೈಸರ್ಗಿಕ ಪೊಟರೆಗಳನ್ನೋ, ಗುಹೆಗಳನ್ನೋ ಆಶ್ರಯಿಸತೊಡಗಿದ. ಆ ಗುಹೆಯ ಬಾಯಿಗೆ ಕಲ್ಲು ಬಂಡೆಯನ್ನು ಇಟ್ಟು ನೆಮ್ಮದಿಯನ್ನು ಕಂಡ. ಇವೆ ಮುಂದೆ ಮನೆ ಮತ್ತು ಬಾಗಿಲುಗಳ ಸೃಷ್ಟಿಗೆ ಮೂಲ ಪ್ರೇರಣೆಯಾಗಿರಬಹುದು.

ಮುಂದೆ ಮಾನವನ ಯೋಚನಾ ಶಕ್ತಿ ಬೆಳೆದಂತೆ ಹೆಚ್ಚಿನ ಅನುಕೂಲಕ್ಕಾಗಿ ಮನೆ ಗುಡಿ ಗುಂಡಾರಗಳನ್ನು ಕಟ್ಟ ತೊಡಗಿ ದನ್ನು ಅಲ್ಲಿಂದ ಅದನ್ನು ಕುರಿತ ಸೌಂದರ್ಯ ಪ್ರಜ್ಞೆಯೂ ಜಾಗೃತಗೊಳ್ಳುವಂತಾಯಿತು. ಬಾಗಿಲುಗಳು ರಕ್ಷಣೆಯ ಸಂಕೇತವೂ ಹೌದು ಸೌಂದರ್ಯ ಪ್ರಜ್ಞೆಯ ಸಂಕೇತವೂ ಹೌದು. ನಮ್ಮ ಸಂಸ್ಕೃತಿಯಲ್ಲಿ ಬಾಗಿಲುಗಳ ಅಲಂಕರಣಕ್ಕೆ ಪ್ರಮುಖ ಸ್ಥಾನವಿದೆ. ನಾಗರಿಕತೆ ಬೆಳದಂತೆ ಬಾಗಿಲುಗಳ ವಿನ್ಯಾಸ ದಲ್ಲಿಯೂ ಕೂಡ ವ್ಯತ್ಯಾಸ ಕಂಡು ಬರತೊಡಗಿದೆ. ಆಯಾ ವ್ಯಕ್ತಿಯ ಅಭಿರುಚಿಗೆ ತಕ್ಕಂತೆ ಬಾಗಿಲಗಳ ಅಲಂಕರಣ ಹೊಸ ಹೊಸ ರೂಪಗಳನ್ನು ಪಡೆಯ ತೊಡಗಿದೆ, ನಮ್ಮ ಜನಪದ



ಬಾಗಿಲು ಅಲಂಕಾರಿಕ ಕುದುರೆ

ರಲ್ಲಿಯೂ ಬಾಗಿಲು ದಿನನಿತ್ಯ ಪೂಜೆಗೊಳಗಾಗುವ ವಸ್ತು. ಬಾಗಿಲು ಜನಪದರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆಯಾ ಮನೆಯ ಹೆಣ್ಣು ಮಗಳು ಬೆಳಿಗ್ಗೆ ಬೇಗ ಎದ್ದು ಬಾಗಿಲು ಹೊಸ್ತಿಲು ತೊಳೆದು ಬಾಗಿಲು ಮುಂದೆ ರಂಗೋಲಿ ಹಾಕಿ ಹೊಸ್ತಿಲಿಗೆ ರಂಗೋಲಿ ಬಿಟ್ಟು ಅರಿಶಿಣ, ಕುಂಕುಮ ಹಚ್ಚುವುದರೊಂದಿಗೆ ಬಾಗಿಲು ದಿನನಿತ್ಯ ಅಲಂಕರಣಗೊಳ್ಳುತ್ತದೆ.

ನಾವು ವಾಸ ಮಾಡುವ ಮನೆ ಪೂಜಿಸಲ್ಪಡುವ ದೇವಸ್ಥಾನಗಳು, ಚರ್ಚು, ಇವು ಒಂದಲ್ಲ ಒಂದು ಪ್ರಯೋಜನವನ್ನೂ ಗಮನದಲ್ಲಿಟ್ಟುಕೊಂಡೆ ನಿರ್ಮಿಸಿರುವ ರಚನೆಗಳು. ಮನೆ ದೇಗುಲಗಳು ಅಂದಮೇಲೆ ಬಾಗಿಲುಗಳು ಇರಲೇಬೇಕು. ಹಬ್ಬ ಹರಿದಿನ ಮದುವೆ, ಮುಂಜಿ ಆಯಾ ಸಂದರ್ಭದಲ್ಲಿ ವಿಶೇಷವಾಗಿ ಬಾಗಿಲುಗಳು ಅಲಂಕರಣಗೊಳ್ಳಗಾಗುತ್ತವೆ. ಇದು ಸೌಂದರ್ಯ ಪ್ರಜ್ಞೆಯನ್ನು ಜಾಗ್ರುತಗೊಳ್ಳಿಸುವುದರ ಜೊತೆ ಜೊತೆಗೆ ನಮ್ಮ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಮನೆಯ ಪ್ರಮುಖ ಆಕರ್ಷಣೆ ಬಾಗಿಲು, ಜನಪದರ ಪ್ರಕಾರ ಬಾಗಿಲನ್ನೂ ನೋಡಿಯೇ ಮನೆಯ ವೈಶಿಷ್ಟ್ಯ ಹೇಳು ಬಹುದು. ಯಾವುದೇ ಹಬ್ಬ ಬರಲಿ ಆಯಾ ಹಬ್ಬಗಳಲ್ಲಿ ಮಾಡುವ ಬಾಗಿಲಿನ ಅಲಂಕಾರ ವೈಶಿಷ್ಟ್ಯ ಪೂರ್ಣವಾಗಿತ್ತದೆ. ಅಲ್ಲದೇ ಮದುವೆಯಂತಹ ಮಂಗಳ ಪೂರ್ಣವಾಗಿರುತ್ತದೆ. ಅಲ್ಲದೇ ಮದುವೆಯಂತಹ ಮಂಗಳ ಪ್ರಸಂಗಗಳಲ್ಲಿಯು ಕೂಡಾ ನೆಲ, ಗೋಡೆಯ ದೂರಬದಿಯ ಅಲಂಕಾರದ ಚಿತ್ರ ವಿನ್ಯಾಸಗಳು, ಚುಕ್ಕೆ ಇಡುವುದು ಸ್ವಸ್ತಿಕ ಮತ್ತು ಅದ್ದಿಕ ಚಿಹ್ನೆಗಳನ್ನು ಬರೆಯುವುದು ಬಾಗಿಲಿನ ಸುತ್ತಲೂ ಅಲಂಕಾರ ಮಾಡುವುದು ಕಂಡು ಬರುತ್ತದೆ.

ಮನೆಯ ಬಾಗಿಲ ಸುತ್ತಲೂ ಮಾಡುವ ಅಲಂಕಾರ ಈ ಕೆಳಗಿನಂತಿದೆ.

1. ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಐದು ಸಾಂಕೇತಿಕ ಚಿತ್ರ ಚಿತ್ರಿಸುವುದು. 2. ಬಾಗಿಲ ಬದಿಯ ಭಾಗದಲ್ಲಿ ಹೋಳಿಗೆ ರೂಪದ ಚಿತ್ರಸುವುದು. 3. ಬಾಗಿಲ ಇನ್ನೊಂದು ಬದಿಯಲ್ಲಿ ತೇರಿನಾಕೃತಿಯ ಚಿತ್ರವಿನ್ಯಾಸ ಚಿತ್ರಿಸುವುದು. 4. ಬಾಗಿಲಿಗೆ ವಿಭೂತಿ, ಕುಂಕುಮ ಮತ್ತು ಅರಿಷಿಣರ ಚುಕ್ಕೆಯ ವಿನ್ಯಾಸದ ಅಲಂಕಾರ ಮಾಡುವುದು. 5. ಬಾಗಿಲಿನ ಮೇಲಿನ ಭಾಗದಲ್ಲಿ ಮಾವಿನ ತೋರಣ ಮತ್ತು ಚಂಡು ಹೂವಿನ ಹಾರವನ್ನು ಕಟ್ಟಿ ಅಲಂಕರಿಸುತ್ತಾರೆ.

ಹಬ್ಬ ಹರಿದಿನಗಳಲ್ಲಿ ಬಾಗಿಲು ಅಲಂಕಾರಗಳು: ಯುಗಾದಿ ಹಬ್ಬದಂದು ಬಾಗಿಲಿಗೆ ಬೇವಿನ ತೊಪ್ಪಲ ಕಟ್ಟುವ ವಿಶೇಷ ಸಂಪ್ರದಾಯವಿದೆ. ಬೇವಿನ ಎಲೆ ರೋಗ ನಿರೋಧಕ ಶಕ್ತಿ ಹೊಂದಿದ್ದು ಮನೆಗೆ ರಕ್ಷಣೆ ಎಂಬ ಸಾಂಕೇತಿಕತೆಯಿದೆ ಕಾರ ಹುಣ್ಣಿಮಯು ರೈತರ ವಿಶೇಷ ಹಬ್ಬ. ಆ ದಿನ ಬಾಗಿಲಿಗೆ ಡಾಂಬರ ಎಣ್ಣೆ ಅಥವಾ ಎಳ್ಳೆಣ್ಣೆ ಹಚ್ಚಿ ಬಾಗಿಲಿಗೆ ತೋರಣ ಕಟ್ಟಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ನಾಗರ ಪಂಚಮಿಯಂದು ಮನೆಯ ಮುಂದೆ ಹೊಸ್ತಿಲ ಮೇಲೆ ಸಾಂಕೇತಿಕವಾಗಿ ನಾಗಪ್ಪನನ್ನು ಬರೆಯುವುದು ಅರಿಶಿಣ ಕುಂಕುಮ ಮತ್ತು ಗೆಜ್ಜೆ ವಸ್ತ್ರ (ಹತ್ತಿಯಿಂದ ಮಾಡಿದ ಹಾರ) ಹಾಕಿ ಪೂಜಿಸುತ್ತಾರೆ.

ವಿಜಯದಶಮಿಯಂದು ಸೆಗಣಿಯಿಂದ ಪಾಂಡವರನ್ನು ಮಾಡಿ ಹೊಸ್ತಿಲಿನ ಬದಿಗಳಲ್ಲಿ ಕೂಡಿಸಿ ಪೂಜಿಸುತ್ತಾರೆ. ಅಂದು ಪಾಂಡವರು ಕಾಡಿನಿಂದ ನಾಡಿಗೆ ಬಂದ ಶುಭ ದಿನ ಅಂದು ಬನ್ನಿ ಮುರಿಯಲು ಊರ ಜನರು ಸೇರಿ ಬನ್ನಿಗಿಡಕ್ಕೆ ಹೋಗಿರುತ್ತಾರೆ. ಅವರು ಬನ್ನಿ ಗಿಡಕ್ಕೆ ಪೂಜಿಸಿ ಬನ್ನಿ ಹರಿದುಕೊಂಡು ಊರೊಳಗೆ ಪ್ರವೇಶಿಸುತ್ತಿದ್ದಂತೆ ಪ್ರತಿ ಮನೆಯು ಬಾಗಿಲ ಬಿಳಿ ಸೀಗಿ ಬಡಿದು ದೀಪ ಹಚ್ಚಿರಬೇಕು. ಇದು ಉತ್ತರ ಕರ್ನಾಟಕದಲ್ಲಿ ಕಂಡು ಬರುವಂತಹ ಆಚರಣೆಯಾಗಿದೆ. ಸೀಗಿ ಹುಣ್ಣಿಮೆಯ ದಿವಸ ಬಾಗಿಲಿನ ಬಿಳಿ ಗೋಡೆಗೆ ಸುಣ್ಣ ಹಚ್ಚಿ ಜಾಜಾದಿಂದ ಸೀಗಿ ಬರೆಯುತ್ತಾರೆ. ಸೆಗಣ್ಣಿಯಿಂದ ಬಾಗಿಲಿನ ಗೋಡೆಗೆ ಬಡಿದು ಅದಕ್ಕೆ ಕುಕ್ಕೆನ ಹೂ (ಅಣ್ಣಿ ಹೂ) ಅವರೆ ಹೂವನ್ನು ಚುಚ್ಚಿ ದೀಪ ಹಚ್ಚಿ ಅರಿಶಿಣ-ಕುಂಕುಮಗಳಿಂದ ಅಲಂಕರಿಸಿ ಪೂಜಿಸುತ್ತಾರೆ.

ದೀಪಾವಳಿಯಲ್ಲಿ ಬಾಗಿಲಿನ ವಿಶೇಷ ಅಲಂಕಾರವಿರುತ್ತದೆ. ಹೊಸ್ತಿಲಿನ ಮೇಲೆ ಬಾಗಿಲ ಬಿಳಿ ದೀಪಗಳನ್ನಿಟ್ಟಿರುತ್ತಾರೆ. ಅಂದು ಮಾವಿನ ತಳಿರು ತೋರಣದ ಜೊತೆಗೆ ಚಂಡು ಹೂವಿನ ವಿಶೇಷ ಅಲಂಕಾರದಿಂದ ಬಾಗಿಲು ಸೋಗಸಾಗಿ ಕಂಗೊಳಿಸುತ್ತಿರುತ್ತದೆ.

ಮದುವೆ ಸಂದರ್ಭದಲ್ಲಿ ಮಾಡುವ ಅಲಂಕಾರಗಳು: ಮದುವೆ ಎಂದರೆ ಸಂಭ್ರಮದ ವಾತಾವರಣ ಅಲ್ಲಿರುತ್ತದೆ. ಅಂದು ಮನೆಯ ಪ್ರತಿಯೊಂದು ಗೋಡೆಗಳು ಬಾಗಿಲುಗಳು ಸುಣ್ಣ-ಬಣ್ಣಗಳಿಂದ ಕಂಗೊಳಿಸುತ್ತಿರುತ್ತವೆ. ಬಾಗಿಲಿನ ಎರಡು ಬದಿಯಲ್ಲಿ ಶುಭ-ಲಾಭ ಬರೆಯುವುದು ಗೋಡೆಯ ಮೇಲೆ ಮಂಗಳವಾದ್ಯಗಳನ್ನು ಚಿತ್ರಿಸುವುದು. ಬಾಗಿಲಿಗೆ ಮುತ್ತಿನ

ತೋರಣ ಕಟ್ಟುವುದು ಮತ್ತು ಕಸೂತಿ ಹಾಕಿದ ಬಟ್ಟೆಯ ತೋರಣ ಕಟ್ಟುವುದು ಇವೆಲ್ಲಾ ಮದುವೆ ಮನೆಯ ಸಾಕ್ಷ್ಯಾಧಾರ ಗಳಿದ್ದಂತೆ. ಹೊಸ್ತಿಲಿಗೆ ಬಾಗಿಲಿಗೆ ಮಾಡುವ ಅಲಂಕಾರ ದಿಂದಲೇ ಮನೆಯ ಮದುವೆಯ ಶೋಭೆ ಅಧಿಕವಾಗುತ್ತದೆ.


ಹಿಂದೂ ಸಂಸ್ಕೃತಿಯಲ್ಲಿ ಹೀಗೆ ಬಾಗಿಲು ಅನೇಕ ಸಂದರ್ಭ ದಲ್ಲಿ ಅಲಂಕರಣಗೊಳಗಾಗುತ್ತದೆ. ಇದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಅನೇಕ ಸಂಕೇತ, ಸಂದೇಶ, ಸಾರುವ ಈ ಬಾಗಿಲು ಅಲಂಕಾರ ನಮ್ಮ ಸಂಸ್ಕೃತಿಯ ಜೀವಂತಿಕೆಯ ಪ್ರತೀಕ. ಅಲ್ಲದೆ ನಮ್ಮ ಜನರ ಸೌಂದರ್ಯ ಪ್ರಜ್ಞೆಯನ್ನು ಈ ಬಾಗಿಲು ಅಲಂಕಾರ ಪ್ರತಿನಿಧಿಸುತ್ತದೆ. (ಪಿಬಿಜಿ)

ಬಾಬುರಾವ್ ಎಚ್.: ಚಿತ್ರಕಲಾವಿದ. 1ನೆಯ ಜೂನ್ 1965ರಲ್ಲಿ ಜನಸಿದರು. ಇವರು ದೃಶ್ಯಕಲೆಯಲ್ಲಿ, ಬಿ.ಎಫ್.ಎ. ಪದವಿ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾ ದಿಂದ ಪಡೆದಿದ್ದಾರೆ. ನಂತರ ಎಂ.ಎಸ್. ವಿಶ್ವವಿದ್ಯಾಲಯ ಬರೋಡಾದಿಂದ ಗ್ರಾಫಿಕ್ ಕಲೆ (ಪ್ರಿಂಟ್ ಮೇಕಿಂಗ್) ಪೋಸ್ಟ್ ಡಿಪ್ಲೋಮಾ ಕೋರ್ಸ್‌ನ್ನೂ ಪಡೆದಿದ್ದಾರೆ. ಸಿಲ್ಕ್‌ಸ್ಕೀನ್, ಉಡ್ ಕಟ್, ಎಚ್ಚಿಂಗ್, ಲಿಥೋಗ್ರಫಿ, ಡ್ರಾಯಿಂಗ್ಸ್ ಮತ್ತು ಚಿತ್ರ-ಶಿಲ್ಪ ಗಳು ಹೀಗೆ ವಿವಿಧ ಮಾಧ್ಯಮ ಗಳಲ್ಲಿ ಕಲಾಕೃತಿಗಳನ್ನು ರಚಿಸಿ ದ್ದಾರೆ. ಇವರ ಕಲಾಕೃತಿಗಳಲ್ಲಿ ವರ್ಣಸಂಯೋಜನೆ, ತಾಂತ್ರಿಕ ಪರಿಣಿತಿ, ಭಾವನೆಗಳ ತೀವ್ರತೆ ಯನ್ನು ಗಣನೀಯವಾಗಿ ಕಾಣ ಬಹುದು.



ಇವರು ರಚಿಸಿದ ಹೆಚ್ಚಿನ ಕಲಾಕೃತಿಗಳು ಸ್ತ್ರೀ ಸಂವೇದನೆ ಗಳಿಂದ ಕೂಡಿವೆ. ಸರಳತೆ ಮತ್ತು ಸೂಕ್ತವಾದ ಬಣ್ಣಗಳ ಬಳಕೆ ಉತ್ತಮ ಗುಣಮಟ್ಟದಾಗಿದೆ. ಇವರ ಕಲಾಕೃತಿಗಳಲ್ಲಿನ ಆಕೃತಿ ಗಳು ಕೇವಲ ವಿವರಣ ಚಿತ್ರಗಳಾಗದೆ, ಹಲವಾರು ವಿಭಿನ್ನ ವಸ್ತು-ವಿಷಯಗಳನ್ನು ಸೂಚಿಸುತ್ತವೆ. ಇವರ ಕೆಲವು ಕಲಾಕೃತಿ ಗಳಲ್ಲಿ ಸರಳವಾದ ಸಣ್ಣ ಸಣ್ಣ ಸಂಕೇತಗಳೇ ಕಲಾಕೃತಿಯ ಮುಖ್ಯ ಧಾತುಗಳಾಗಿ ನಿಲ್ಲುತ್ತವೆ.

1998ರಲ್ಲಿ 5ನೆಯ ಕರ್ನಾಟಕ ಕಲಾಮೇಳ ಬೆಂಗಳೂರು, 1991 ಎಂ.ಎಂ.ಕೆ ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಆಯೋಜಿಸಿದ ಗ್ರಾಫಿಕ್ ಶಿಬಿರ, 1992ರಲ್ಲಿ ಎಂ.ಎಸ್. ವಿಶ್ವವಿದ್ಯಾಲಯ ಏರ್ಪಡಿಸಿದ ಪ್ರಿಂಟ್ ಮೇಕಿಂಗ್ ಶಿಬಿರ, 1993 ಬೆಂಗಳೂರಿನ ಕ್ರಿಯಾಚೇತನ ಸಾಂಸ್ಕೃತಿಕ ಸಂಸ್ಥೆ ಏರ್ಪಡಿಸಿದ ಚಿತ್ರಕಲಾ ಶಿಬಿರ, 1996ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ ಚಿತ್ರಕಲಾ ಶಿಬಿರ. 2009ರಲ್ಲಿ ಮೂಡಬಿದಿರೆಯ



'ಗೋಲ್ಡನ್ ಕ್ರಾಸ್' ಸಿಲ್ಕ್ ಸ್ಕೀನ್

ಆಳ್ವಾಸ ನುಡಿಸಿರಿಯಲ್ಲಿ ಏರ್ಪಡಿಸಿದ ಶಿಲ್ಪಕಲಾ ಶಿಬಿರ ಹೀಗೆ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳಲ್ಲಿ ಭಾಗವಹಿಸಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ.

ಇವರ ಕಲಾಕೃತಿಗಳಿಗೆ 1987ರಲ್ಲಿ ಮೈಸೂರು ದಸರಾ ಪ್ರಶಸ್ತಿ, 1990ರಲ್ಲಿ ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ, 1992 ನಾಗಪೂರದ ಆಲ್ ಇಂಡಿಯಾ ಚಿತ್ರಕಲಾ ಪ್ರಶಸ್ತಿ, 1994 ಚಂಡಿಘಡದಲ್ಲಿ ಸೆಕೆಂಡ್ ಇಂಡಿಯಾ ಡ್ರಾಯಿಂಗ್ ಬೆನಾಲೆ ಪ್ರಶಸ್ತಿ, 1998 ರಾಜಸ್ಥಾನ ಲಲಿತಕಲಾ ಅಕಾಡೆಮಿ ಜೈಪುರ ಆಯೋಜಿಸಿದ ಆಲ್ ಇಂಡಿಯಾ ಡ್ರಾಯಿಂಗ್ ಎಕ್ಸಿಬಿಷನ್ ಪ್ರಶಸ್ತಿ 2001 ನವದೆಹಲಿಯ ಅಂತರಾಷ್ಟ್ರೀಯ ಕಲಾ ಪ್ರದರ್ಶನದ ಪ್ರಶಸ್ತಿ ಹೀಗೆ ಹತ್ತಾರೂ ಪ್ರಶಸ್ತಿಗಳನ್ನು ಪಡೆದು ಕೊಂಡಿದ್ದಾರೆ.

ಇವರು ಚಿತ್ರಕಲೆ ಜೊತೆ ಜೊತೆಗೆ ಶಿಲ್ಪಕಲೆಯಲ್ಲಿಯೂ ತೊಡಗಿಕೊಂಡು, ಆಲಮಟ್ಟಿಯ ಶಿಲ್ಪವನ, ಗುಲಬರ್ಗಾದ ಕಾರ್ಪೊರೇಷನ್ ಗಾರ್ಡನ್, ಕೆಸರಟಗಿಯ ಉದ್ಯಾನ ವನ ಮತ್ತು ಶ್ರೀ ಗುರು ವಿದ್ಯಾಪೀಠ ಗುಲಬರ್ಗಾದಲ್ಲಿ ಬೃಹತ್ ಗಾತ್ರದ ಹಲವಾರು ಸಾರ್ವಜನಿಕ ಶಿಲ್ಪಗಳನ್ನು ನಿರ್ಮಿಸಿದ್ದಾರೆ.

(ಪಿಪಿ)

ಬಾಲಪ್ಪ ಭಜಂತ್ರಿ: ಶ್ರೇಷ್ಠ ಕಲಾವಿದರು. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪೂರದಲ್ಲಿ ಹುಟ್ಟಿದರು. ಯುಖನಪ್ಪ ಕೋಳಿಹಾಳ ಅವರನ್ನು ತಮ್ಮ ಗುರುವನ್ನಾಗಿ ಮಾಡಿಕೊಂಡು, ಕ್ಲಾರಿಯೋನೆಟ್ ನುಡಿಸುವ ವಿದ್ಯೆಯನ್ನು ಕರಗತ ಮಾಡಿ ಕೊಂಡರು.

ಬಾಲಪ್ಪ ಎಲ್ಲ ಭಜಂತ್ರಿ ಮ್ಯಾಳದಂತೆ ಇರುತ್ತಿದ್ದಿಲ್ಲ. ಯಾವಾಗಲೂ ಸಂಗೀತದ ಗುಂಗಿನಲ್ಲಿಯೇ ತಲ್ಲೀನನಾಗಿರು ತ್ತಿದ್ದ. ಮನೆಯಲ್ಲಿ ನಿರಂತರ ಸಂಗೀತಾಭ್ಯಾಸ ಮಾಡು ತ್ತಿದ್ದರು. ತಮ್ಮ ಸಂಗೀತಕ್ಕೆ ಪತ್ನಿ ಹಂಪಮ್ಮಳ ನೆರವು. ವಾಲ್ಮೀಕಿ ಸಮಾಜದ ಗುರುಗಳಾದ ಆಪ್ಪಯ್ಯ ನಾಯ್ಕ, ಸೋದರ ಕನಕಪ್ಪ ಬಸಪ್ಪ, ಜನಪದ ಕಲಾವಿದ ಬಾಲಪ್ಪ ಉಡತಿ ಹಾಗೂ ಆರ್.ಕೆ. ಸುಬೇದಾರ್ ಈ ಕಲಾವಿದನಿಗೆ ಪ್ರೋತ್ಸಾಹ ಕೊಡುತ್ತಿದ್ದರು.

ಬಾಲಪ್ಪನ ಕಲೆಯನ್ನು ಕಂಡು ಬೆರಗಾದವರು ಸಾವಿರಾರು ಜನ. ಕ್ಲಾರಿಯೋನೆಟ್ ಬಾರಿಸುವುದರಲ್ಲಿ ತನ್ಮಯರಾಗುತಿದ್ದರು. ಜನ, ಇವರನ್ನು ತಮ್ಮ ತಮ್ಮ ಗ್ರಾಮಗಳಲ್ಲಿ ಭಜಂತ್ರಿ, ಮೇಳದ ವರಿಗೆ ಕಲಿಸಲು ಕರೆದುಕೊಂಡು ಹೋಗುತ್ತಿದ್ದರು.

ಬ್ಯಾಂಡ್‌ಸೆಟ್‌ನ ಎಲ್ಲ ವಾದ್ಯಗಳನ್ನೂ ನುಡಿಸುತ್ತಿದ್ದರು. ಮೆಣೆದಾಳ, ಹಂಚಿನಾಳ, ಸಿಂಧನೂರ, ಕೊಟ್ನೆಕಲ್, ತಿರುಚನಾಳ ಹೀಗೆ ಹಲವಾರು ಹಳ್ಳಿ ಪಟ್ಟಣಗಳಲ್ಲಿ ಈ ಯುವ ಕಲಾವಿದ ವಿದ್ಯೆ ಕಲಿಸಿ ಕೀರ್ತಿ ಪಡೆದರು. ಈ ಕೋಗಿಲೆ ಇನ್ನೂ ಎತ್ತರಕ್ಕೆ ಹಾಡಬೇಕು ಎನ್ನುವಷ್ಟರಲ್ಲಿ ಕೋಗಿಲೆಯ ಕಂಠವನ್ನು ವಿಧಿ ಕಿತ್ತುಕೊಂಡ. (ಆರ್‌ಕೆಎಸ್)

ಬಾಲಚಂದ್ರರಾವ ಸೋನಾರ: ಎಲ್ಲಿ ಗುರುವೋ ಅಲ್ಲಿ ಶಿಷ್ಯ ಎಂಬಂತೆ ಶ್ರೀ ಗುರುನಾಥರಾವ ಮತ್ತು ಶ್ರೀ ಬಾಲಚಂದ್ರರಾವ ಸೋನಾರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇಬ್ಬರು ಜೊತೆಗೆ ಇದ್ದವರು. ತಬಲಾದಲ್ಲಿ ಮಾರ್ತಾಂಡ ಮಾಡಿದ್ದ ಶ್ರೀ ಬಾಲಚಂದ್ರರಾವ ಸೋನಾರರವರು ವೃತ್ತಿಯಲ್ಲಿ ಸರಕಾರಿ ಶಿಕ್ಷಕ ರಾಗಿದ್ದರು. ಸಂಗೀತವನ್ನು ಶಾಸ್ತ್ರ ಬದ್ಧವಾಗಿ ಶ್ರೀ ಗುರುನಾಥರಾವ ರಲ್ಲಿ ಪಡೆದು ಅನೇಕ ಹೆಸರಾಂತ ಕಲಾವಿದರಿಗೆ ತಬಲಾ ಸಾಥ ನೀಡಿದ್ದಾರೆ. ಸಿತಾರ ವಾದಕ ಶ್ರೀ ಸೈಯದ ಫಕ್ರೂದ್ದೀನ್ ಅಲಿ, ಉಸ್ತಾದ ಅಮಿರ ಖಾನ, ಶ್ರೀ ರಾಮಚಾರ್ಯ ಜಾಲಿಹಾಳ, ಶ್ರೀ ಎಂ.ಆರ್. ದುರ್ಗೇಶ ಮತ್ತು ನನ್ನ ಅನೇಕ ಕಾರ್ಯಕ್ರಮಗಳಿಗೆ ತಬಲಾ ಸಾಥ ನೀಡಿದ್ದಾರೆ. ಇವರ ಅನೇಕ ಶಿಷ್ಯಂದಿರು ಸಂಗೀತ ಶಿಕ್ಷಕರಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದವರೆಗೆ ಬೆಳೆದಿದ್ದಾರೆ.



ಇವರ ಒಂದು ವಿಶಿಷ್ಟತೆಯಂದರೆ ಕಠಿಣ ಬೋಲ್‌ಗಳನ್ನು ವಿದ್ಯಾರ್ಥಿಗಳಿಗೆ ಬರದೇ ಇದ್ದಾಗ ಅದನ್ನು ಸರಳೀಕೃತಗೊಳಿಸಿ ಅವರ ಕೈಯಲ್ಲಿ ಕುಳಿತನಂತರ ಮೂಲ ಬೋಲ್‌ಗಳನ್ನು ಹೇಳು ತ್ತಿದ್ದರು. ಕಠಿಣವಾದದ್ದನ್ನು ಸರಳ ಮಾರ್ಗದ ಮೂಲಕ ಮನದಟ್ಟು ಆಗುವಂತೆ ಹೇಳುವ ಕೌಶಲ್ಯ ಅವರು ಹೊಂದಿದ್ದರು. ಶ್ರೀ ಬಾಲಚಂದ್ರರಾವರು ಶಾಲೆಯ ಕರ್ತವ್ಯ ಮುಗಿಸಿದ ನಂತರ ಅವರು ಕಾಣುತ್ತಿದ್ದದ್ದು ಗುರುನಾಥರಾವರವರ ಮನೆಯಲ್ಲಿ. ಅವರ ಜೊತೆಗೆ ನಾನು ಸೇರುತ್ತಿದ್ದೆ. ನಾವು ಮೂವರು ಶಿಕ್ಷಕರಾಗಿದ್ದರಿಂದ ಶಿಕ್ಷಕರ ಸಮ್ಮೇಳನದಲ್ಲಿ ಬಹಳಷ್ಟು ಕಾರ್ಯ ಕ್ರಮ ನೀಡಿದ್ದುಂಟು. ನನ್ನ ಗಾಯನಕ್ಕೆ ಹಾರ್ಮೋನಿಯಂ ಸಾಥ ಶ್ರೀ ಗುರುನಾಥರಾವ ನೀಡಿದರೆ, ತಬಲಾ ಸಾಥಿಗೆ ಶ್ರೀ ಬಾಲ ಚಂದ್ರರಾವ ನೀಡುತ್ತಿದ್ದರು. ಇವರು ತುಂಬಾ ಪ್ರಮಾಣಿಕ ಶ್ರಮಿಕ ಹಾಗೂ ಸರಳ ಜೀವಿಯಾಗಿದ್ದರು. (ಎಸ್‌ಎಟಿ)

ಬಾವಿಗಳು: ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕು ಕೇಂದ್ರದ ಕೇವಲ 16 ಎಕರೆ ಪ್ರದೇಶದಲ್ಲಿ 360 ಬಾವಿಗಳು ತೋಡಿಸಲಾದ ವಿಷಯ ವಿಸ್ಮಯಕಾರಿ. ಅದು ಸುಮಾರು 1125 ಅವಧಿ, ಸಣ್ಣ ಪುಟ್ಟ ರಾಜ್ಯ ಗೆಲ್ಲುತ್ತ ಇಲ್ಲಿಗೆ ಆಗಮಿಸಿದ್ದ ರಾಜ ರಾಮಚಂದ್ರ ಜಾಧವ ಈಗ ರಾಷ್ಟ್ರೀಯ ಹೆದ್ದಾರಿ 9ರ ಬೈಪಾಸ್‌ಗೆ ಹೊಂದಿಕೊಂಡ ಅರಣ್ಯ ಪ್ರದೇಶ ಆಗ ಬಿಡಿ ಭಾಗವಾಗಿತ್ತು. ನಗರ ಪ್ರವೇಶಿಸಿದ ಅರಸ ಬಿಡಿ ಪ್ರದೇಶದಲ್ಲಿ ತಾನೂ ಸೇರಿದಂತೆ ಇಡೀ ಸೇನಾ ಪಡೆ ವಾಸಕ್ಕಾಗಿ ನೂರಾರು ಡೇರಾಗಳನ್ನು (ಟೆಂಟ್) ಸ್ಥಾಪಿಸಿ, ಅಲ್ಲಿಯೇ ವಾಸಿಸಲು ಆರಂಭಿಸಿದ್ದರು. ಕುಡಿ ಯಲು ನೀರಿನ ಸಮಸ್ಯೆ ಉದ್ಭವಗೊಂಡಾಗ ರಾಜ ಮತ್ತು ರಾಣಿಗಾಗಿ ದೊಡ್ಡ ಗಾತ್ರದ ಎರಡು ಪ್ರತ್ಯೇಕ ಬಾವಿ ತೋಡಿಸಿ ದ್ದರಂತೆ.

ಸೇನಾಪಡೆ, ಮಂತ್ರಿಗಳು ಸೇರಿದಂತೆ ಉಳಿದೆಲ್ಲರಿಗೂ ಒಂದೇ ಬಾವಿಯ ನೀರು ಬಾಯಾರಿಕೆ ಜೊತೆಗೆ ನಿತ್ಯ ಕೆಲಸಕ್ಕೆ ಕಡಿಮೆ ಬೀಳುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಅರಸ, ಸೇನಾಪಡೆ, ಸೇನಾಧಿಪತಿ, ಕುದುರೆ ಮೊದಲಾದ ಜಾನುವಾರುಗಳಿಗಾಗಿ ಪ್ರತ್ಯೇಕ ಬಾವಿ ತೋಡಿಸಲಾಗಿತ್ತು. ಹೀಗೆ ತೋಡಲಾದ ಬಾವಿಗಳ ಒಟ್ಟು ಸಂಖ್ಯೆ 360 ಇತ್ತು ಎಂದು ಪೂರ್ವಜರು ಹೇಳುತ್ತಿದ್ದರು ಎಂದು ಹಿರಿಯರು ಹೇಳುತ್ತಾರೆ. ಈ ಪ್ರದೇಶದಲ್ಲಿ ಈಗಲೂ ಸುತ್ತಾಡಿದರೆ ಕನಿಷ್ಠ 40ಕ್ಕೂ ಅಧಿಕ ಬಾವಿಗಳು ಸಿಗುತ್ತವೆ. ರಾಜಾ ರಾಮಚಂದ್ರ ಜಾಧವ ಇಲ್ಲಿಯೇ ನೆಲೆಸಿ, ಜಯಸಿಂಹನಗರ ಎಂಬ ಹೆಸರಿನಿಂದ ಊರು ನಿರ್ಮಿ ಸಿದ. ಅದುವೇ ಮುಂದೆ ಹುಮನಾಬಾದ್ ಎಂದು ಆಯಿತು.

ರಾಜಧಾನಿ ಸ್ಥಾಪನೆ ಬಳಿಕ ಅರಸ ಅನಾರೋಗ್ಯದಿಂದ ಬಳಲುತ್ತಿದ್ದ. ಆಗ ವಿವಿಧ ರಾಜ್ಯಗಳ ಹೆಸರಾಂತ ವೈದ್ಯರಿಂದ ಚಿಕಿತ್ಸೆ ಕೊಡಿಸಿದರೂ ಗುಣಮುಖ ಆಗಿರಲಿಲ್ಲವಂತೆ. ಆ ಸಂದರ್ಭದಲ್ಲಿ ಜಯಸಿಂಗ ನಗರ ಮಾರ್ಗವಾಗಿ ಹಾದು ಹೋಗುತ್ತಿದ್ದ. ಪಂಡಿತರ ಸಲಹೆ ಮೇರೆಗೆ ಅರಸನಿಗೆ ಆ ಫಕೀರ

ರೊಬ್ಬರು ಚಿಕಿತ್ಸೆ ಕೊಡಿಸಿದರು. ಬಳಿಕ ಅರಸ ಎಂದಿನಂತೆ ಸದೃಢನಾದ ಎಂದು ಹೇಳಲಾಗುತ್ತಿದೆ. ತನ್ನ ಆರೋಗ್ಯ ಸುಧಾರಣೆಗೊಂಡ ಬಳಿಕ ಸಂತಸದಿಂದ ಅರಸ ಆ ಇಡೀ ಡೇರಾ ಪ್ರದೇಶವನ್ನು ಅವರಿಗೆ ಕಾಣಿಕೆಯಾಗಿ ನೀಡಿದ ಎನ್ನುವುದು ಹಲವರ ಅಭಿಪ್ರಾಯ ಅಲ್ಲಿ ಈಗಲೂ ಕೆಲ ಫಕೀರರು ವಾಸಿಸುತ್ತಾರೆ. (ಎಸ್‌ಬಿಎಚ್)

ಬಿ

ಬಿದ್ರಿ ಕಲೆಯ ಕುಶಲಕರ್ಮಿಗಳು: ಬಿದ್ರಿ ಕಲೆಯ ಕರಕುಶಲಕಾರರಲ್ಲಿ ಮೊದಲಿನಿಂದಲೂ ಹೆಚ್ಚಾಗಿ ಮುಸ್ಲೀಮರನ್ನೇ ಕಾಣುತ್ತೇವೆ. ಕಾರಣ ಹೈದ್ರಾಬಾದ ಕರ್ನಾಟಕ ಪ್ರಾಂತದ ಬೀದರ ಜಿಲ್ಲೆ ಸುಮಾರು ಐದಾರುನೂರು ವರ್ಷಗಳ ಕಾಲ ಮುಸ್ಲೀಮ ಅರಸರ ಆಳ್ವಿಕೆಯಲ್ಲಿದ್ದುದು ಹಾಗೂ ಈ ಕಲೆಗೆ ಮೂಲ ಪ್ರೇರಣೆ ಸಿರಿಯಾ, ಇರಾನ ಮುಂತಾದ ಕಲೆ ಹಾಗೂ ಕರಕುಶಲಕರ್ಮಿಗಳ ಪ್ರಭಾವದ ಜೊತೆಗೆ ಆರಂಭದಿಂದಲೂ ಬಿದ್ರಿಕಲೆಗೆ ಉಮರ್‌ಖಯಾಮ್, ರುಬಾಯತ್ ಶಿಲ್ಪ ಮಾದರಿಯ ಪರ್ಶಿಯನ್ ಸಂಪ್ರದಾಯವೂ ಅಚ್ಚೊತ್ತಿ ಪ್ರಮುಖವಾಗಿ ಮುಸ್ಲೀಮರನ್ನೇ ಆಕರ್ಷಿಸಿದೆ.

ಮುಸ್ಲೀಮರಲ್ಲಿ ಸ್ಥಿರಾಸ್ತಿಯನ್ನು ಹೊಂದಿದವರು ಅತ್ಯಂತ ವಿರಳ. ಹೀಗಾಗಿ ಅವರು ಉದರ ನಿಮಿತ್ತ ಇತರೆ ಉದ್ಯೋಗಗಳನ್ನು, ಆಶ್ರಯಗಳನ್ನು ಹುಡುಕಿಕೊಂಡು ಹೋಗುವುದು ಅನಿವಾರ್ಯವೂ ಸಹ ಆಗಿತ್ತು. ಹೀಗಾಗಿ ಅವರ ಆಯ್ಕೆ ಶ್ರಮ ಸಂಸ್ಕೃತಿಯ ಕಸುಬನ್ನೇ ಹುಡುಕಿಕೊಂಡು ಹೋಗಿದ್ದು ಬಿದ್ರಿ ಕಲೆಯನ್ನೇ. ಹಿಂದೂಗಳು ಸಹಜವಾಗಿ ಸ್ಥಿರಾಸ್ತಿಯನ್ನು ಹೊಂದಿರುವುದರಿಂದ ಅವರು ಬಿದ್ರಿ ಕಲೆಯಂಥ ಕಸುಬಿನಿಂದ ದೂರವಿರುವುದು ಅಚ್ಚರಿಯೇನಲ್ಲ. ಹೀಗಾಗಿ ಬಿದ್ರಿ ಕಲೆಯ ಕುಶಲಗಾರರಲ್ಲಿ ಶೇ 80ರಷ್ಟು ಮುಸ್ಲೀಮರನ್ನು ಕಂಡರೆ, ಶೇ 20ರಷ್ಟು ಹಿಂದೂಗಳನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಬಿದ್ರಿ ಕಲೆ ಕುಶಲ ಕರ್ಮಿಗಳು ಎಂದರೆ ಮುಸ್ಲೀಮರು ಮಾತ್ರ ಎನ್ನುವಷ್ಟು ಪ್ರಚಲಿತದಲ್ಲಿದೆ.



ಹೂದಾನಿಗಳು



ಹುಕ್ಕಾ (ಇತ್ತೀಚಿನ ಬಿದ್ರಿ ಕಲೆ)

ಪ್ರಸ್ತುತ ಹತ್ತು ವರ್ಷದಿಂದ ಎಂಬತ್ತು ವಯಸ್ಸಿನವರೆಗೆ ಸ್ತ್ರೀಯರನ್ನು ಹೊರತುಪಡಿಸಿದಂತೆ ಬಿದ್ರಿ ಕೆಲಸ ಮಾಡುವವರನ್ನು ಕಾಣಬಹುದಾಗಿದೆ. ಸಹಾಯಕರಾಗಿ ಸಣ್ಣ ಪುಟ್ಟ ಹುಡುಗ ಹುಡುಗಿಯರು ವಿರಳವಾಗಿ ಕಂಡುಬಂದರೂ ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಬಿದ್ರಿ ಕಾಲೋನಿಯಲ್ಲಿರುವ ಫಾತಿಮಾ ಬೇಗಂ ಇವರುಗಳು ಬಿದ್ರಿಕಲೆಯಲ್ಲಿ ಪರಿಪಕ್ವತೆಯನ್ನು ಸಾಧಿಸಿ ರಾಷ್ಟ್ರೀಯವಾಗಿ ಪ್ರಚಲಿತದಲ್ಲಿದ್ದಾರೆ.

ಬಿದ್ರಿ ಕಲೆಯ ಕರಕುಶಲಗಾರರನ್ನು ಮೊದಲಿನಿಂದಲೂ ಹೆಚ್ಚಾಗಿ ಮುಸ್ಲಿಮರನ್ನೇ ಕಾಣುತ್ತೇವೆ. ಕಾರಣ ಹೈದ್ರಾಬಾದ ಕರ್ನಾಟಕ ಪ್ರಾಂತದ ಬೀದರ ಜಿಲ್ಲೆ ಸುಮಾರು ಐದಾರುನೂರು

ವರ್ಷಗಳ ಕಾಲ ಮುಸ್ಲೀಮರ ಆಳರಸರ ಆಳ್ವಿಕೆಯಲ್ಲಿದ್ದುದು. ಹಾಗೂ ಈ ಕಲೆಗೆ ಮೂಲ ಪ್ರೇರಣೆ ಸಿರಿಯಾ, ಇರಾನ ಮುಂತಾದ ಕಲೆ ಹಾಗೂ ಕರಕುಶಲ ಕರ್ಮಿಗಳ ಪ್ರಭಾವ ಜೊತೆಗೆ ಆರಂಭದಿಂದಲೂ ಬಿದ್ರಿ ಕಲೆಗೆ ಉಮರ್‌ಖಯಾಮ್, ರುಬಾಯಿಯತ್ ಶಿಲ್ಪ ಮಾದರಿಯ ಪರ್ಶಿಯನ್ ಸಂಪ್ರದಾಯವೂ ಅಚ್ಚೊತ್ತಿ ಪ್ರಾಥಮಿಕವಾಗಿ ಮುಸ್ಲೀಮರನ್ನೇ ಆಕರ್ಷಿಸಿದೆ.

ಪ್ರಸ್ತುತ ಬಿದ್ರಿ ಕಲಾವಿದರಲ್ಲಿ ಸುಶೀಕ್ಷಿತರು ಅಪರೂಪ. ಶೇ. 5–6ರಷ್ಟು ಜನ ಮಾತ್ರ ಶಿಕ್ಷಣ ಪಡೆದವರಿದ್ದಾರೆ. ತಾವೇ ಸೃಷ್ಟಿಸಿಕೊಂಡ ಶೆಡ್ಡುಗಳನ್ನು ಬಿದ್ರಿ ಕಾರ್ಖಾನೆ ಎಂದು ಅತ್ಯಂತ ಮುಗ್ಧತೆಯಿಂದ ಹೇಳುವ ಈ ಕುಶಲಕರ್ಮಿಗಳು ಬಾಲ್ಯದಿಂದಲೇ ಪರಿಣತರ ಬಳಿ ಸಹಾಯಕರಾಗಿ, ನಂತರ ಸ್ವತಂತ್ರವಾಗಿ ಈ ವೃತ್ತಿಯನ್ನು ಆರಂಭಿಸಿದವರೇ ಬಹಳ. ಹೀಗಾಗಿ ಈ ಕುಶಲಕರ್ಮಿಗಳಲ್ಲಿ ಅನಕ್ಷರತೆ ಎಂಬುದು ಶಾಪವಾಗಿ ಪರಿಣಮಿಸಿದ್ದರೂ ವ್ಯಾವಹಾರಿಕವಾಗಿ ಪಕ್ವವಾಗಿದ್ದಾರೆ.

ಪ್ರಸ್ತುತ ಬಿದ್ರಿಕಲೆಯ ಕುಶಲಕರ್ಮಿಗಳು ಇಂದು ಬೀದರ ನಗರದಲ್ಲಿ ಸುಮಾರು 900ಕ್ಕೂ ಹೆಚ್ಚು ಜನ ಇದ್ದಾರೆ. ಇವರಲ್ಲಿ 250ರಷ್ಟು ಜನ ಬಿದ್ರಿವೇರ್ ಕ್ರಾಫ್ಟ್ ಕಾಂಪ್ಲೆಕ್ಸ್‌ನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನುಳಿದ ಕುಶಲಕರ್ಮಿಗಳು ಸ್ವತಂತ್ರವಾಗಿ ಬೀದರ್‌ನಲ್ಲಿ ಮತ್ತು ಹೈದ್ರಾಬಾದ್ ನಗರಗಳಲ್ಲಿ ನೆಲೆಸಿದ್ದಾರೆ.

ಹಿಂದಿನ ಶತಮಾನಗಳಲ್ಲಿ ರಾಜ ಮಹಾರಾಜರುಗಳು ಬಿದ್ರಿ ಕಲೆಯ ಕುಶಲಕರ್ಮಿಗಳನ್ನು ಪೋಷಿಸಿದ್ದು ಕಂಡುಬರುತ್ತದೆ. ಬಿದ್ರಿ ಕುಶಲಕರ್ಮಿಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ರಾಜ ಮನೆತನವೇ ಒದಗಿಸುತ್ತಿದ್ದರಿಂದ ಅವರಿಗೆ ಕಷ್ಟದ ದಿನಗಳು ಬರಲಿಲ್ಲ. ಜೊತೆಗೆ ಉತ್ತಮವಾದ ಕಲಾಕೃತಿಯೊಂದನ್ನು ನಿರ್ಮಿಸಿದರೆ ರಾಜ ಮನ್ನಣೆಯೂ ದೊರಕುವುದರೊಂದಿಗೆ ಮುತ್ತು ರತ್ನಾದಿಗಳನ್ನು ಪಡೆದುಕೊಂಡು ಸತ್ಕರಿಸಲ್ಪಡುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಹಾಗಿಲ್ಲ. ಕಚ್ಚಾ ವಸ್ತುಗಳನ್ನು ತಾವೇ ತಂದುಕೊಂಡು. ಕಲಾಕೃತಿಯೊಂದನ್ನು ನಿರ್ಮಿಸಿದ ಮೇಲೆ ಅದನ್ನು ಮಾರಲು ಗ್ರಾಹಕರಿಗಾಗಿ ಪರದಾಡಬೇಕಾಗಿದೆ. ಅಷ್ಟು ಕಷ್ಟಪಟ್ಟು ರಚಿಸಿದ ಕಲಾಕೃತಿಗೆ ಇರುವ ಮೌಲ್ಯದಲ್ಲಿ ಶೇ 5ರಷ್ಟು ಲಾಭ ಇವರಿಗಾದರೆ, ಬಹುತೇಕ ಲಾಭವನ್ನು ಮಧ್ಯವರ್ತಿಗಳೇ ನುಂಗುವ ಬಗೆಯಿಂದ ಈ ಕುಶಲಕರ್ಮಿಗಳ ಬದುಕು ಬರ್ಬರವಾಗಿರುವುದು ದಿಟ. ಕೇಂದ್ರ ಮತ್ತು ಭಾರತ ಸರಕಾರದ ಕರಕುಶಲ ಮಂತ್ರಾಲಯಗಳು ನೀಡುವ ಪ್ರೋತ್ಸಾಹ, ಸಹಾಯಧನ, ಮಾರಾಟ ಬೆಂಬಲಗಳೇ ಇವರಿಗೇ ಜೀವನಾಧಾರ.

ಮಾಣಿಕಪ್ಪನವರು: ಬೀದರಿನ ಬಿದ್ರಿ ಕುಶಲಕರ್ಮಿಗಳಾದ ಮಾಣಿಕಪ್ಪನವರು ಬಿದ್ರಿಕಲೆಯಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದ ನರಸಪ್ಪನವರ ಮನೆತನದಲ್ಲಿ ಜನಿಸಿದವರು. ರಾಜಾಶ್ರಯದಲ್ಲಿದ್ದ ನರಸಪ್ಪನವರು ಬಿದ್ರಿ ಕಲೆಯ ಕರ್ಮದೊಡನೆ, ಪೋಷಣೆ



ಎಸ್.ಎಂ. ಕೃಷ್ಣ ಅವರಿಂದ ರಾಜ್ಯ ಪ್ರಶಸ್ತಿ (1973) ಸ್ವೀಕರಿಸುತ್ತಿರುವುದು

ಮಾಡಿದವರು. ಬೀದರನಲ್ಲಿ ನೆಲೆಸಿದ್ದ ನರಸಪ್ಪನವರಿಗೆ ನಾಲ್ಕು ಜನ ಮಕ್ಕಳಲ್ಲಿ ಬಸಪ್ಪನವರು ನರಸಪ್ಪನವರ ನೆರಳಲ್ಲಿದ್ದುಕೊಂಡು ಬಿದ್ರಿಕಲೆಯನ್ನು ಕರಗತ ಮಾಡಿಕೊಂಡವರು.

ನಿರಂತರ ಕಲಿಕೆ ಮತ್ತು ಸೃಜನಶೀಲ ನೈಪುಣ್ಯತೆಯನ್ನು ಸಾಧಿಸಿದ್ದ ಬಸಪ್ಪನವರಿಗೆ ಕರ್ನಾಟಕ ಸರಕಾರ 1970ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ದೇಶದಾದ್ಯಂತ ಅನೇಕ ಪ್ರಮುಖ ನಗರಗಳಲ್ಲಿ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿ ಗೌರವಗಳಿಗೆ, ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ. ಬಸಪ್ಪನವರು ದಿವಂಗತರಾದ ನಂತರ ಪತ್ನಿ ಅಡೆಮ್ಮಾ ಅವರಿಗೆ ಸರಕಾರಿ ಪಿಂಚಣಿ ಸೌಲಭ್ಯ ದೊರಕಿದೆ. ಈ ಬಸಪ್ಪನವರಿಗೆ ನಾಲ್ಕು ಜನ ಮಕ್ಕಳಿದ್ದು, ಅವರಲ್ಲಿ ಕುಶಲಕರ್ಮಿ ಮಾಣಿಕಪ್ಪನವರು ದ್ವಿತೀಯ ಪುತ್ರರಾಗಿ 18.09.1941ರಲ್ಲಿ ಬೀದರ ನಗರದಲ್ಲಿ ಜನಿಸುತ್ತಾರೆ.

ತಂದೆ ಬಸಪ್ಪನವರ ಬಿದ್ರಿ ಗರಡಿಯಲ್ಲಿ ಪಳಗಿದ ಮಾಣಿಕಪ್ಪನವರು, ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ, ಕುತೂಹಲಗಳನ್ನು ಮೇಳೈಸಿಕೊಂಡದ್ದರಿಂದ ಬಿದ್ರಿ ಕಲೆಯಲ್ಲಿ ಪರಿಪಕ್ವತೆಯನ್ನು ಹೊಂದುತ್ತಾರೆ. ಕಳೆದ ನಲವತ್ತೇಳು ವರ್ಷಗಳಿಂದ ಬಿದ್ರಿ ಕಲಾವಸ್ತುಗಳನ್ನು ಸಿದ್ಧಪಡಿಸುತ್ತಿರುವ ಇವರು ತಮ್ಮ ಕುಟುಂಬದ ಎಲ್ಲರನ್ನು ತಮ್ಮ ಕಸುಬುಗಳಲ್ಲಿ ಭಾಗಿಗಳನ್ನಾಗಿಸಿ ಅವರನ್ನು ಸಹ ಬಿದ್ರಿ ಕಲೆಯ ಕುಶಲಕರ್ಮಿಗಳನ್ನಾಗಿ ರೂಪಿಸಿದ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. ಮಾಣಿಕಪ್ಪನವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿಯವರು ಪುರುಷ ಕುಶಲಕರ್ಮಿಗಳಿಗೆ ಸಮಾನವಾಗಿಯೇ ಬಿದ್ರಿ ಕುಶಲ ವಸ್ತುಗಳನ್ನು ರೂಪಿಸುವುದರಲ್ಲಿ ಸಿದ್ಧಹಸ್ತರು! ಹಾಗೆಯೇ ಅವರ ಪುತ್ರ ಮಲ್ಲಿಕಾರ್ಜುನ ಅವರು ಡಿ.ಪಿ.ಸಿ. ಕರಕುಶಲ ಯೋಜನೆಯಲ್ಲಿ ಭಾಗಿಯಾಗಿ ದ್ವಿತೀಯ ಬಹುಮಾನದ ಗೌರ'ವಕ್ಕೆ ಭಾಜನರಾಗಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ತಂದೆಗೆ ಸಹಕರಿಸುವ ಜೊತೆಗೆ ಬಿದ್ರಿ ಕುಶಲ ವಸ್ತುಗಳನ್ನು ತಯಾರಿಸುವ ಇವರು ಬೀದರಿನ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಇನ್‌ಸ್ಟ್ರಕ್ಟರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಾಣಿಕಪ್ಪನವರು ಖಡ್ಗ, ಹುಕ್ಕಾ, ಆಭರಣ ಪೆಟ್ಟಿಗೆ, ನೀರಿನ ಬಟ್ಟಲು, ತಟ್ಟೆ, ಹೂವಿನ ಕುಂಡಲ, ಅಂಗಿಯ ಗುಂಡಿಗಳು, ಕತ್ತರಿ, ಅಜಂತಾ ಮಾದರಿ, ಹುಕ್ಕಾ, ಪೇಪರ್ ಕ್ಲಿಪ್‌ಗಳು ಇನ್ನು ಹಲವಾರು ಬಗೆಯ ಬಿದ್ರಿ ಕಲಾವಸ್ತುಗಳನ್ನು ರಚಿಸಿದ್ದಾರೆ. ಭಾರತದ ಪ್ರಥಮ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ ಅವರು 1950ರಲ್ಲಿ ಬೀದರಿಗೆ ಭೇಟಿಕೊಟ್ಟಾಗ ಮಾಣಿಕಪ್ಪನವರ ಬಿದ್ರಿ ಕಾರ್ಖಾನೆಗೂ ಬಂದು ಮಾಣಿಕಪ್ಪನವರು ತಯಾರಿಸಿದ ಬಿದ್ರಿ ಕಲಾವಸ್ತುಗಳನ್ನು ನೋಡಿ ಪ್ರಶಂಸಿದ್ದಾರೆ. 1973ರಲ್ಲಿ ರಾಜ್ಯ ಪ್ರಶಸ್ತಿ, 1980ರಲ್ಲಿ ಕರ್ನಾಟಕ ಸರಕಾರದ ಜನಪದ ಕ್ಯಾಲೆಂಡರ್‌ನಲ್ಲಿ ಇವರು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಪ್ರಕಟಪಡಿಸಿತ್ತು. 1986ರಲ್ಲಿ ಅಂದಿನ ಭಾರತ ಸರಕಾರದಲ್ಲಿ ಸಚಿವರಾಗಿದ್ದ ಜನಾರ್ಧನ ಪೂಜಾರಿ ಇವರು ಮಾಣಿಕಪ್ಪನವರ ಬಿದ್ರಿ ಕಲಾ ವಸ್ತುಗಳನ್ನು ನೋಡಿ ಪ್ರಶಂಸಿದ್ದಲ್ಲದೇ, ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯವನ್ನು ಮಾಡಿದರು. ತ್ರೀವೇಂದ್ರಂ, ದೆಹಲಿ, ಮೈಸೂರು ದಸರಾ ವಸ್ತು ಪ್ರದರ್ಶನ, ಮುಂಬಯಿ, ಚೆನ್ನೈ, ಬೆಂಗಳೂರು ಇನ್ನೂ ಮುಂತಾದ ಸ್ಥಳಗಳಲ್ಲಿ ಮಾಣಿಕಪ್ಪನವರು ತಾವು ರಚಿಸಿದ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಮುಂಬಯಿ, ಬೆಂಗಳೂರು, ಹೈದ್ರಾಬಾದ್, ಮೈಸೂರು, ನವದೆಹಲಿಯಲ್ಲಿ ವಸ್ತುಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡು ಇಂದಿನ ಪೀಳಿಗೆಗೆ ಬಿದ್ರಿಕಲೆಯ ಅಂದ-ಚೆಂದವನ್ನು ಪ್ರದರ್ಶಿಸುತ್ತಲಿವೆ.

ಮೊಹಮ್ಮದ ಷರೀಫ್: ಮೊಹಮ್ಮದ ಷರೀಫ್ ಅವರೂ ಸಹ ಪ್ರಮುಖ ಬಿದ್ರಿ ಕುಶಲಕರ್ಮಿಗಳು. 1937ರಲ್ಲಿ ಬೀದರನಲ್ಲಿ ಹುಟ್ಟುಪಡೆದ ಇವರ ತಂದೆ ಸುಲ್ತಾನ ಸಾಹೇಬ ಷರೀಫ್. ಸುಲ್ತಾನ ಸಾಹೇಬರ ಕುಟುಂಬ ಆರ್ಥಿಕವಾಗಿ ತುಂಬ ದುರ್ಬಲವಾದ ಕುಟುಂಬ. ಇಂತಹ ಕುಟುಂಬದಲ್ಲಿ ಜನಿಸಿದ ಇವರು ರಾಷ್ಟ್ರೀಯಮಟ್ಟದಲ್ಲಿ ಗೋಚರಿಸುವ ಹಿನ್ನಲೆಯಲ್ಲಿ ಅವರು ರಚಿಸಿದ ಬಿದ್ರಿ ಕಲಾವಸ್ತುಗಳೇ ಕಾರಣವೆನ್ನಬಹುದು. ವೃತ್ತಿಯಲ್ಲಿ ಶ್ರದ್ಧೆಯನ್ನಿಟ್ಟುಕೊಂಡ ಷರೀಫರು ಬಿದ್ರಿ ಕಲೆಯ ತಂತ್ರ, ಶೈಲಿಗಳನ್ನು ಆಳವಾಗಿ ಅಧ್ಯಯನ ಮಾಡಿಕೊಂಡವರು. ಬಾಲ್ಯದಲ್ಲಿಯೇ ಅಬ್ದುಲ್ ಗಫರ್ ಅವರು ಷರೀಫರಿಗೆ ಆಶ್ರಯ ನೀಡಿದವರು. ಅವರಲ್ಲಿಯೇ ಬಿದ್ರಿ ಕಲೆಯ ಪೆಟ್ಟಗಳನ್ನು ಹಂತಹಂತವಾಗಿ ಕಲಿಯುತ್ತ, 15ನೆಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯ ಕಲಾವಸ್ತುಗಳನ್ನು ಪ್ರಬುದ್ಧವಾಗಿ ರಚಿಸಿದ ಇವರು ಮೂರು ಶೈಲಿಯಲ್ಲಿ ಬಿದ್ರಿ ಕಲಾವಸ್ತುಗಳನ್ನು ರಚಿಸುವ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ. ಷರೀಫರ ಜನಪ್ರಿಯ ಬಿದ್ರಿ ಕಲಾವಸ್ತುಗಳೆಂದರೆ ಫುಲ್ ಜಡಿ, ಗೋಲಾಕಾರದ ಸೂರಾಯಿ, ಮಹತಾಬಿ ಇನ್ನೂ ಮುಂತಾದವು. ಉಮರ್ ಖಯಾಂ ದೃಶ್ಯಾವಳಿಗಳನ್ನು ಹೊಂದಿದ ಹೂಜಿಗಳು ಇವರ ಕೀರ್ತಿ ಹೆಚ್ಚಿಸಿದ್ದು, ಇದರಲ್ಲಿ ಬೆಳ್ಳಿಯ ತಂತಿಗಳನ್ನು ಹುದುಗಿಸಿ ರಚಿಸಿದ್ದಾರೆ. ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾಗಿ ರಚಿಸಿದ ಈ ಹೂಜಿ ಇವರ ಸಂಗ್ರಹದಲ್ಲಿದೆ. ಇವರು ತಮ್ಮ ಬಿದ್ರಿ ಕಲಾವಸ್ತುಗಳನ್ನು ಬೆಂಗಳೂರು ಬೆಳಗಾವಿ, ಕನ್ಯಾಕುಮಾರಿ, ಕೋಲ್ಕೋತ್ತಾ, ಭುವನೇಶ್ವರ, ಚೆನ್ನೈ, ಪಾಂಡಿಚೆರಿ, ರಾಜಸ್ಥಾನ, ಮಂಗಳೂರು ಇನ್ನೂ ಮುಂತಾದ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ.

ಲಕ್ಷ್ಮೀ ಬಾಯಿ: ಬಿದ್ರಿಕಲೆಯಲ್ಲಿ ಪ್ರಥಮ ಬಾರಿಗೆ 2004-05ರ ರಾಜ್ಯ ಪ್ರಶಸ್ತಿ ಪಡೆದಿರುವ ಲಕ್ಷ್ಮೀಬಾಯಿಗೆ ಈಗ 55ರ ಹರೆಯ. ಬೀದರನಲ್ಲಿ ಜನಿಸಿದ ಇವರು 5ನೆಯ ತರಗತಿಯ ವರೆಗೆ ಓದಿದ್ದು, ಕಳೆದ ನಲವತ್ತು ವರ್ಷದಿಂದ ಈ ಬಿದ್ರಿ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಹುತೇಕವಾಗಿ ಬಿದ್ರಿಯ ಎಲ್ಲ ಬಗೆಯ ವಸ್ತುಗಳನ್ನು ಉತ್ಪಾದಿಸುವ ಇವರು ಮಹಿಳೆಯರು ಧರಿಸಿಕೊಳ್ಳುವ ಬಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. 1999ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಲವು ಬೀದರನಲ್ಲಿ ನಡೆಸಿದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 2005ರಲ್ಲಿ ಪಟಿಯಾಲಾ ಹೆರಿಟೇಜ ಫೆಸ್ಟಿವಲ್‌ನ ಕ್ರಾಫ್ಟ್ ಮೇಳದಲ್ಲಿ ತಮ್ಮ ಬಿದ್ರಿ ವಸ್ತುಗಳನ್ನು ಪ್ರದರ್ಶಿಸಿದ್ದಾರೆ. 6 ತಿಂಗಳ ಕಾಲ ಭಾರತ ಸರಕಾರದ ಅಂಬೇಡ್ಕರ್ ಹಸ್ತಶಿಲ್ಪ ವಿಕಾಸ ಯೋಜನೆಯ ತರಬೇತಿಯನ್ನು ಸಹ ಪಡೆದಿದ್ದಾರೆ. ಲಕ್ಷ್ಮೀ ಬಾಯಿಯವರ ಮಗ ಪ್ರಭಾಕರ್ ರಾವ್ ಪಿಸೆ ಅವರೂ ಸಹ ತಾಯಿಗೆ ಸಹಕರಿಸುತ್ತಾ, ಯುವ ಕಲಾವಿದರ ಸಾಲಿನಲ್ಲಿ ಹೆಸರು ಪಡೆದಿದ್ದಾರೆ. 35ರ ವಯಸ್ಸಿನ ಇವರಿಗೆ 1998ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ವಿಶ್ವಕರ್ಮ ಪ್ರಶಸ್ತಿ ಹಾಗೂ 2000ರಲ್ಲಿ ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕದ ಪ್ರಶಸ್ತಿಯನ್ನು ಸಹ ಪಡೆದಿದ್ದಾರೆ. ಪ್ರತಿ ತಿಂಗಳು 4ರಿಂದ 5 ಸಾವಿರದ ವರೆಗೆ ಗಳಿಸುತ್ತಾರೆ.



ರಾಜ್ಯ ಪ್ರಶಸ್ತಿ (2004) ಸ್ವೀಕರಿಸುತ್ತಿರುವುದು

ಅಬ್ದುಲ್ ಖಾದೀರ್: ಖ್ಯಾತ ಬಿದ್ರಿ ಕಲಾವಿದ ಮೊಹಮದ್ ಸುಲ್ತಾನ್ ಅವರ ಮಗನಾದ ಅಬ್ದುಲ್ ಖಾದೀರ ಇವರಿಗೆ 50 ವರ್ಷ. ಬಿದ್ರಿ ಕಲೆಯ ಬಹುತೇಕ ಕಲಾಕೃತಿಗಳನ್ನು ರಚಿಸುವ ಇವರು ಬುಧಾ ಬಿದ್ರಿ ಕೃತಿಗಳನ್ನು ರಚಿಸುವಲ್ಲಿ ಪರಿಣಿತರು. ತಂದೆಯೇ ಗುರುವನ್ನಾಗಿಸಿಕೊಂಡು ಬಿದ್ರಿ ಕಲೆಯಲ್ಲಿ ಪಳಗಿದ

ಇವರು ಕಳೆದ 30 ವರ್ಷಗಳಿಂದ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದು ಅವರಲ್ಲಿ ಸುಲತಾನಾ ಅವಳು ಸಹ ಸೀಟ್ ವರ್ಕ್‌ನಲ್ಲಿ ಪರಿಣಿತಿಯನ್ನು ಹೊಂದಿದ್ದಾಳೆ. ಇವಳು ಬಿದ್ರಿ ಕಲೆಯನ್ನು ರಚಿಸುವ ಚಿತ್ರವು ವರ್ಲ್ಡ್ ಕ್ರಾಫ್ಟ್ 1999–2000ರ ಸಂಚಿಕೆಯ ಮುಖಪುಟದಲ್ಲಿ ಮುದ್ರಣವಾಗಿದೆ. ಇವಳಂತೆಯೇ ಖಾದೀರ್ ಕುಟುಂಬದ ಪರಿವಾರದವರೆಲ್ಲ ಬಿದ್ರಿ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೀದರನ ವಾಯುಪಡೆಯ ಕೇಂದ್ರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ನೀಡಿ ಮೆಚ್ಚುಗೆ ಪಡೆದಿದ್ದಾರೆ.

ಮೊಹಮ್ಮದ ಉಸ್ಮಾನ: 11ನೆಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಯನ್ನು ಅಭ್ಯಸಿಸತೊಡಗಿದ ಮೊಹಮ್ಮದ್ ಉಸ್ಮಾನ ಅವರಿಗೆ ಈಗ 61 ವರ್ಷ. ಬೀದರ ನಗರದಲ್ಲಿ ಜನಿಸಿದ ಇವರು 7ನೆಯ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ. ಇವರ ಪತ್ನಿ ಸುಫಿಯಾ ಬೇಗಂ ಮನೆಯ ಕಾರ್ಯದಲ್ಲಿ ತೊಡಗಿಸಿಕೊಂಡರೆ, ಇವರಿಗೆ 8 ಜನ ಮಕ್ಕಳಿದ್ದು ಅವರೆಲ್ಲರೂ ತಂದೆಯ ವೃತ್ತಿಯಲ್ಲಿ ಸಹಾಯಕರಾಗಿ ದುಡಿಯುತ್ತಿದ್ದಾರೆ. ಉಸ್ಮಾನ ಅವರು ಎಲ್ಲ ತರಹದ ಬಿದ್ರಿ ಕಲಾಕೃತಿಗಳನ್ನು ರಚಿಸಬಲ್ಲವರಾಗಿದ್ದು, ಶೀಟ್ ವರ್ಕ್‌ನಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ ಇವರಿಗೆ 2003ರಲ್ಲಿ ರಾಜ್ಯ ಪ್ರಶಸ್ತಿ ದೊರಕಿದೆ. 1991–93ರಲ್ಲಿ ಅಖಿಲ ಭಾರತೀಯ ಕರಕುಶಲ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಅದೇ ರೀತಿ 2007 ರಲ್ಲಿ ದಿಲ್ಲಿ ಹಾತ್, ಬೆಂಗಳೂರಿನ ರೀಜನಲ್ ಡಿಸೈನ್ ಅಂಡ್ ಟೆಕ್ನಿಕಲ್ ಡವೆಲಪ್‌ಮೆಂಟ್ ಸೆಂಟರ್‌ನಲ್ಲಿ ನಡೆಯುವ ಶಿಬಿರಗಳಲ್ಲಿ ಭಾಗಿಯಾಗಿದ್ದಾರೆ. ಬೆಂಗಳೂರಿನ ಕಾವೇರಿ ಎಂಪೋರಿಯಮ್ ಮುಖಾಂತರ ಅನೇಕ ಕಲಾಕೃತಿಗಳನ್ನು ಮಾರಾಟ ಮಾಡಿರುವ ಇವರಿಗೆ ಕೆಲಸಕ್ಕೆ ತಕ್ಕ ಸಂಭಾವನೆ ದೊರಕುವುದಿಲ್ಲ ಎಂಬ ಕೊರತೆ ಕಾಡುತ್ತಿರುವುದು ಬಿದ್ರಿ ಕಲಾವಿದರ ಸ್ಥಿತಿಯ ಪ್ರತಿಬಿಂಬ.

ಮೊಹಮ್ಮದ್ ಫೈಜುದ್ದೀನ್: ಕಳೆದ 55 ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕೆಲಸ ಮಾಡುತ್ತಿರುವ ಮೊಹಮ್ಮದ್ ಫೈಜುದ್ದೀನ ಇವರಿಗೆ ಈಗ 70ರ ವಯೋಮಾನ. ಬಿದ್ರಿ ಕಲೆಯ ಎಲ್ಲ ತಂತ್ರಗಳನ್ನು ಬಲ್ಲಿದ ಇವರು 4ನೆಯ ತರಗತಿಯವರೆಗೆ ಅಭ್ಯಾಸ ಮಾಡಿ ಬಿದ್ರಿಕಲೆಯ ಕೆಲಸದಲ್ಲಿ ತೊಡಗಿಸಿಕೊಂಡವರು. ಆರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತ ಇವರು, 40 ವರ್ಷದ ಮೊಹಮ್ಮದ್ ಹುಸೇನ್, 36 ವರ್ಷದ ಮೊಹಮ್ಮದ್ ಮೋಯೀನ್, ಮೊಹಮ್ಮದ್ ಶಫಿ, ಮೊಹಮ್ಮದ್ ರಫಿ, ಮೊಹಮ್ಮದ್ ಸಲಾವುದ್ದೀನ್, ಮೊಹಮ್ಮದ್ ಖಮರುದ್ದೀನ್ ಇವರುಗಳು ಬಿದ್ರಿ ಕೆಲಸವನ್ನು ತ್ಯಜಿಸಿ ಬೇರೆ ಉದ್ಯೋಗವನ್ನು ಅರಸಿಕೊಂಡು ಹೋಗಿದ್ದಾರೆ. ಫೈಜುದ್ದೀನ್ ಇವರು 2006 ರ ಮೈಸೂರು ದಸರಾ, 2004 ರಲ್ಲಿ ಮುಂಬಯಿ ಹಾಗೂ 2003 ರಲ್ಲಿ ಬೆಂಗಳೂರಿನಲ್ಲಿ ನಡೆದ ಕ್ರಾಫ್ಟ್ ಮೇಳದಲ್ಲಿ ಪಾಲ್ಗೊಂಡಿದ್ದಾರೆ.

ಗುಲಾಮ ಸಮದ್ ಸಿದ್ದಿಕಿ: ಬಿದ್ರಿ ಕಾಲನಿಯಲ್ಲಿರುವ ಗುಲಾಮ ಸಮದ್ ಸಿದ್ದಿಕಿಯವರ 10 ನೆಯ ಸಂಖ್ಯೆಯ ಮನೆಗೆ ಒಂದು ವಿಶೇಷತೆ ಇದೆ. ಈ ಮನೆಯಲ್ಲಿರುವ 7ರ ಹಿರಿಯ ಜೀವ ಬಿದ್ರಿ ಕಲೆಯ ಅರಗಿಸಿಕೊಂಡು ಅದನ್ನೇ ಬದುಕಿನ ಮೂಲಾಧಾರವಾಗಿಸಿಕೊಂಡು ಬದುಕಿದ ಪ್ರಸಿದ್ಧ ಕುಶಲಕರ್ಮಿ. ಇವರನ್ನು ಕಾಲನಿಯಲ್ಲಿ 'ಆಲ್ ರೌಂಡ ಮಾಸ್ಟರ್' ಎಂದು ಕರೆಸಿಕೊಳ್ಳುವ ಇವರಿಗೆ ಬಿದ್ರಿಯ ಎಲ್ಲ ಪ್ರಕಾರಗಳು, ಅವುಗಳ ರಚನಾ ತಂತ್ರಗಳು ಸಹ ಕರಗತವಾಗಿವೆ.



ಗುಲಾಂ ಸಮದ್ ಸಿದ್ಧಿಕಿ ಅವರ ಮಕ್ಕಳೊಂದಿಗೆ

ಸಿದ್ದಿಕಿಯವರ ತಂದೆಯವರಾದ ಗುಲಾಂ ಅಬ್ಬಾಸ್ ಸಿದ್ದಕಿ ಅವರ ಜೊತೆ ಚಿಕ್ಕಂದಿನಲ್ಲಿಯೇ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡ ಸಮದ್ ಅವರು ಈಗಲೂ ಬಿದ್ರಿ ಕೆತ್ತನೆಗೆ ಮುಂಚಿನ ಹಂತವಾದ ಸೂಕ್ಷ್ಮ ರೇಖೆಗಳನ್ನು ಎಳೆದುಕೊಡುತ್ತಾರೆ. ಇವರ ಎಲ್ಲ ಮಕ್ಕಳೂ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. 2004 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬಿದ್ರಿ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿರುವುದಲ್ಲದೇ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆಯನ್ನು ಸಹ ತಮ್ಮ ಮಗನಾದ ಜಾಫರನೊಂದಿಗೆ ನಾಲ್ಕು ದಿನ ನಡೆಸಿಕೊಟ್ಟರು. 1989ರಲ್ಲಿ ರಾಜ್ಯ ಪ್ರಶಸ್ತಿ, ಬಿದ್ರಿ ಎನಿಸಿಯೆಂಟ್ ಎಂಬ ಕ್ಯಾಟ್‌ಲಾಗ್‌ನಲ್ಲಿ ಇವರ ಭಾವಚಿತ್ರ ಪ್ರಕಟವಾಗಿದೆ. ಸಿದ್ದಕಿಯವರ ಐದು ಜನ ಗಂಡು ಮಕ್ಕಳಲ್ಲಿ ಗುಲಾಂ ಯಾಸಿನ್ ಸಿದ್ದಕಿ ಇವರು ಸ್ವಸಹಾಯ ಗುಂಪಿನ ಸಹಾಯವನ್ನು ಪಡೆದುಕೊಂಡು ತಮ್ಮ ಕಾರ್ಖಾನೆಯಲ್ಲಿ ಅವರ ಅಣ್ಣ ತಮ್ಮ ಹಾಗೂ ಸ್ನೇಹಿತರೊಂದಿಗೆ ಬಿದ್ರಿ ಕಲಾಕೃತಿಗಳನ್ನು ರಚಿಸುತ್ತಾರೆ.



ಶಹಾ ಮಜೀದ ಖಾದ್ರಿ: ಖಾದ್ರಿ ಪರಿವಾರ ಬೀದರಿನ ಬಿದ್ರಿ ಪರಂಪರೆಯಲ್ಲಿ ದೊಡ್ಡ ಹೆಸರು. 1980ರಲ್ಲಿ ನಿಧನರಾದ ಮಜೀದ ಅವರ ತಂದೆ ಶಹಾ ಮುಸ್ತಫಾ ಖಾದ್ರಿ ಅವರು ಬಿದ್ರಿ ಕಲೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು. ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿರುವ ಮಜೀದ ಖಾದ್ರಿ ಅವರು ತಮ್ಮ 12ನೆಯ ವಯುಸ್ಸಿನಲ್ಲಿಯೇ ವಿಭಿನ್ನ ಬಗೆಯ ವಿನ್ಯಾಸಗಳನ್ನು ಹುಟ್ಟುಹಾಕಿದರು. ಬಿದ್ರಿಕಲೆಯಲ್ಲಿ ಹೊಸಬಗೆಯ ವಿನ್ಯಾಸಗಳಿಗೆ

ನಿರಂತರ ಹುಡುಕಾಟ ನಡೆಸುವ ಇವರು ದೇಶದ ವಿವಿಧೆಡೆ ತಮ್ಮ ಬಿದ್ರಿ ಕಲಾವಸ್ತುಗಳನ್ನು ಪ್ರದರ್ಶಿಸಿದ್ದಾರೆ. ಗುವಾಹಾಟಿಯ ಕ್ರುಫಟ್ ಬಜಾರ, ಬೆಂಗಳೂರಿನ ಮಾರ್ಕೆಟ್ ಮೀಟ್, ದೆಹಲಿಯ ಹಾತ್ ಫೆಸ್ಟಿವಲ್‌ನಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದರ್ಶನ ಕಂಡಿವೆ. 2001 ರಲ್ಲಿ ಭಾರತ ಸರಕಾರದ ಕರಕುಶಲ ನಿಗಮ ದಿಂದ ರಾಷ್ಟ್ರೀಯ ಮೆರಿಟ್ ಪ್ರಶಸ್ತಿಯನ್ನೂ ಪಡೆದಿರುವ ಇವರಿಗೆ 2002ರಲ್ಲಿ ರಾಜ್ಯ ಸರಕಾರದಿಂದ ರಾಜ್ಯ ಪ್ರಶಸ್ತಿ ಯೂ ಸಹ ಬಂದಿದೆ. ಸಧ್ಯ ಮಜೀದ ಅವರು ನೋವೆಲ್ ಬಿದ್ರಿ ಕರಕುಶಲ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೊಹಮ್ಮದ್ ಅಬ್ದುಲ್ ರೌಫ್: 50ರ ಹರೆಯದ ರೌಫ್ ಅವರು ಕಳೆದ 42 ವರ್ಷಗಳಿಂದ ಬಿದ್ರಿ ಕಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೂವರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣುಮಕ್ಕಳನ್ನು ಸಲಹುತ್ತಿರುವ ರೌಫ್ ಅವರು ಮಕ್ಕಳನ್ನು ವಿದ್ಯಾವಂತರಾಗಿಸಿದ್ದಾರೆ. ರೌಫ್ ಅವರ ಮನೆತನದ ವೃತ್ತಿಯೇ ಬಿದ್ರಿ ಕಲೆ. ಅವರ ತಂದೆ ಶೇಕ್ ಅಹಮ್ಮದ ಅವರೇ ಗುರುವಾಗಿದ್ದರು. ತಾತನವರೂ ಸಹ ಬಿದ್ರಿ ಕಲೆಯ ಹಳೆಯ ತಲೆಮಾರುಗಳಲ್ಲಿ ಒಂದಾಗಿದ್ದರು. ಹೀಗಾಗಿ ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದ ಇವರು ತಮ್ಮ ಮುಂದಿನ ದಿನಗಳಲ್ಲಿ ಎತ್ತರದ ವ್ಯಕ್ತಿತ್ವವನ್ನು ಹೊಂದಿದರು. ಬೀದರ ನಗರದ ಕುಲ್‌ಸುಮ್ ಗಲ್ಲಿಯಲ್ಲಿ ನೆಲೆಸಿರುವ ಇವರು 1976–82ರ ಅವಧಿಯಲ್ಲಿ ಎಚ್.ಎಂ.ಟಿ. ಕೈಗಡಿಯಾರ ಕಂಪನಿಗೆ ಹಾಗೂ 1999–2001ರಲ್ಲಿ ಟೈಟನ್ ಕಂಪನಿಗೆ ಕೈಗಡಿಯಾರದ ಕೇಸ್ ಗಳನ್ನು ಮಾಡಿಕೊಡುವುದರ ಮೂಲಕ ಬಿದ್ರಿ ಕಲೆಯನ್ನು ಆಧುನಿಕವಾಗಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪ್ರಾಥಮಿಕ ಶಿಕ್ಷಣದ ಜೊತಗೆ ಬಿದ್ರಿ ಕಲೆಯನ್ನೂ ಅಧ್ಯಯನ ಮಾಡಿದ ಇವರು 1992ರಲ್ಲಿ ಚೀನಾ ಪ್ರವಾಸವನ್ನು ಕೈಗೊಂಡು ಜೂನ್ 27ರಿಂದ ಜುಲೈ10ರವರೆಗೆ ಬೀಜಿಂಗ್ ನಗರದಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನಡೆಸಿಕೊಟ್ಟು ವಿಶ್ವದ ಗಮನವನ್ನು ಸೆಳೆದಿದ್ದಾರೆ. ಇವರು ಎರಡು ತಿಂಗಳ ಕಾಲ ಶ್ರಮಿಸಿ ಸಿದ್ಧಪಡಿಸಿದ 'ಕಠೋರಿ ಸುರಯಿ ಮತ್ತು ಪ್ಲೇಟ್' ಗಳು ಅವರಿಗೆ ಕರಕುಶಲ ಕ್ಷೇತ್ರದಲ್ಲಿ ನೀಡಲಾಗುವ ರಾಷ್ಟ್ರ ಪ್ರಶಸ್ತಿಯನ್ನು (2004) ತಂದುಕೊಟ್ಟಿತು.



ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಂದ ರಾಷ್ಟ್ರ ಪ್ರಶಸ್ತಿ (2004) ಸ್ವೀಕರಿಸುತ್ತಿರುವುದು

ಈ ಪ್ರಶಸ್ತಿಯು 50,000ರೂ.ಗಳ ನಗದು ಹಾಗೂ ತಾಮ್ರಪತ್ರವನ್ನು ಒಳಗೊಂಡಿದೆ. 1991ರಲ್ಲಿ ಕರ್ನಾಟಕ ಸರ್ಕಾರ ದಿಂದ ರಾಜ್ಯ ಪ್ರಶಸ್ತಿ ಪಡೆದ ಇವರು ಮಾಸಿಕವಾಗಿ 10 ರಿಂದ 20 ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಾರೆ.

ಮೊಹಮ್ಮದ್ ಷಫಿಯುದ್ದಿನ್:



ಸುಪ್ರೀಮ ಬಿದ್ರಿ ಕಲೆ ಎಂಬ ಮಾರಾಟ ಮಳಿಗೆಯನ್ನು ಚೌಬಾರಾ ರಸ್ತೆಯಲ್ಲಿ ಹೊಂದಿರುವ ಶಫಿಯುದ್ದಿನ್ ಅವರು 1959ರಲ್ಲಿ ಜನಿಸಿದ್ದಾರೆ. ಬಾಲ್ಯದಿಂದಲೇ ಬಿದ್ರಿ ಕಲೆಯಲ್ಲಿ ತೊಡಗಿಸಿ ಕೊಂಡಿದ್ದ ಶಫಿಯುದ್ದಿನ್ ಬೀದರ ನಗರದ ಅಂತರಾಷ್ಟ್ರೀಯ ಮನ್ನಣೆ ಗಳಿಸಿದ ಕುಶಲಕರ್ಮಿಗಳಲ್ಲಿ ಒಬ್ಬರೆನಿಸಿ ಕೊಂಡಿದ್ದಾರೆ. ಬಹುತೇಕವಾಗಿ ವಿದೇಶಗಳಲ್ಲಿಯೇ ಇವರ ಪ್ರತಿಭೆಗೆ ಸೂಕ್ತ ವೇದಿಕೆ ದೊರಕಿದ್ದಕ್ಕೆ ಅವರು ನಡೆದ ಹಾದಿಯೇ ಸಾಕ್ಷಿ. 1986ರಲ್ಲಿ ನಾಲ್ಕು ತಿಂಗಳ ಕಾಲ ವಾಷಿಂಗಟನ್‌ನಲ್ಲಿ ಅತಿಥಿಯಾಗಿದ್ದ ಇವರು ಅಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಪ್ರದರ್ಶನಕ್ಕೆ ಆಮಂತ್ರಿತರಾಗಿ ತಮ್ಮ ಬಿದ್ರಿ ಕಲೆಗಳನ್ನು ಪ್ರದರ್ಶಿಸಿದ್ದುಂಟು. ಅಲ್ಲಿ ಅವರಿಗೆ ಪ್ರತಿ ತಿಂಗಳು 1200 ಡಾಲರ್‌ಗಳನ್ನು ಗೌರವ ಸಂಭಾವನೆಯಾಗಿ ನೀಡಿತ್ತು. ಅದೇ ರೀತಿ ಜಪಾನ್ ಮತ್ತು ಕೆನಡಾ ದೇಶಗಳಿಗೂ ಭೇಟಿ ನೀಡಿ ಬಿದ್ರಿ ಕಲೆಯನ್ನು ಅಲ್ಲಿನವರಿಗೆ ಪರಿಚಯಿಸಿದ್ದಾರೆ. ಕೋಲ್ಕೋತ್ತಾದ ನ್ಯಾಷನಲ್ ಕೌನ್ಸಿಲ್ ಆಫ್ ಮ್ಯೂಸಿಯಮ್ಸ್ ಇವರನ್ನು ವಾಷಿಂಗಟನ್‌ಗೆ ಕಳುಹಿಸಿಕೊಡಲು ಶಿಫಾರಸ್ಸು ಮಾಡಿತ್ತು.

1999ರಲ್ಲಿ ಕ್ರಾಫ್ಟ್ ಫೇರ್ ರಿಪಬ್ಲಿಕನಲ್ಲಿ 1992ರಲ್ಲಿ ಸಿಟಿ ಕ್ರಾಫ್ಟ್ ಮೇಳಾ, ನಾಗಪುರದ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ, 2001ರಲ್ಲಿ ಸೂರಜಕುಂಡ ಕ್ರಾಫ್ಟ್ ಮೇಳ, ಹರಿಯಾಣ ಪ್ರವಾಸೋದ್ಯಮ ಇಲಾಖೆಯ ಪ್ರದರ್ಶನ ಹಾಗೂ ಚಂಡೀಗಢ ದಲ್ಲಿ ನಡೆದ ಕ್ರಾಫ್ಟ್ ಮೇಳಗಳಲ್ಲಿ ತಮ್ಮ ಬಿದ್ರಿಕಲೆಗಳನ್ನು ಪ್ರದರ್ಶಿಸಿದ್ದಾರೆ. 1987ರಲ್ಲಿ ಉತ್ತರ ಪ್ರದೇಶ ಮಾರ್ಕೆಟಿಂಗ್ ಹಾಗೂ ಮ್ಯಾನೇಜಮೆಂಟ್ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ತರಬೇತಿಯಲ್ಲಿಯೂ ಇವರು ಭಾಗವಹಿಸಿದ್ದಾರೆ. ಶಫಿದ್ದಿನ್ ಇವರ ಕಾರ್ಯಾಗಾರದಲ್ಲಿ ನಿತ್ಯವೂ ಬಿದ್ರಿ ಕಲಾವಸ್ತುಗಳ ತಯಾರಿಕೆ ನಿರಂತರವಾಗಿ ನಡೆಯುತ್ತದೆ. ವಿಶೇಷವಾಗಿ ಘುಲಝುಡಿ ಮಹತಾಬಿ ಶೈಲಿಯ ವಿನ್ಯಾಸಗಳನ್ನು ಹೊಂದಿದ ಬಿದ್ರಿ ವಸ್ತುಗಳನ್ನು ಸಿದ್ಧಪಡಿಸುತ್ತಾರೆ. ಈ ವೃತ್ತಿಯಿಂದ ಕೀರ್ತಿಯನ್ನು ಪಡೆದಿರುವ ಶಫಿದ್ದೀನ್ ಇವರು ಬರುವ ಆದಾಯವು ತೃಪ್ತಿಕರವಾಗಿಲ್ಲವೆಂಬುದನ್ನು ನುಡಿಯುತ್ತಾರೆ.

ಮೊಹಮ್ಮದ್ ಮೊಯಿಜುದ್ದೀನ್: 2003ರಲ್ಲಿ ಭಾರತದ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಂದ ರಾಷ್ಟ್ರಪ್ರಶಸ್ತಿ ಪಡೆದ ಮೊಯಿಜುದ್ದೀನ್ ಅವರಿಗೆ ಈಗ 42ರ ವಯೋಮಾನ. 1965ರಲ್ಲಿ ಜನಿಸಿದ ಇವರಿಗೆ ಬಾಲ್ಯದಿಂದಲೇ ಬಿದ್ರಿಕಲೆಯಲ್ಲಿ ಆಸಕ್ತಿ. ಮಹತಾಬಿ ಶೈಲಿಯ ವಿನ್ಯಾಸಗಳನ್ನು ಆಕರ್ಷಕವಾಗಿ ದುಡಿಸಿಕೊಳ್ಳುವ ಇವರು ಶೀಟ್‌ವರ್ಕ್‌ನಲ್ಲಿ ಪರಿಣಿತರು. ಬಿ.ಎ. ಮತ್ತು ಟಿ.ಸಿ.ಎಚ್. ಶೈಕ್ಷಣಿಕ ಅರ್ಹತೆಗಳನ್ನು ಪಡೆದಿರುವ ಇವರು ಸ್ವಯಂ ಸಿದ್ಧಪಡಿಸಿದ ಕಲಾಕೃತಿಗಳನ್ನು ತಾವೇ ಮಾರಾಟ ಮಾಡುವ ವ್ಯವಸ್ಥೆಯನ್ನು ಹೊಂದಿದ್ದಾರೆ. 1996ರಲ್ಲಿ ನವದೆಹಲಿಯ ಇಂಡಿಯನ್ ಕೌನ್ಸಿಲ್ ಫಾರ್ ಸ್ಮಾಲ್ ಅಂಡ್ ಮಿಡಿಯಮ್ ಎಕ್ಸ್‌ಪೋರ್ಟರ್ಸ್ ಅವರಿಂದ ಎಕ್ಸಲೆನ್ಸ್ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, 1995ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ ಹಾಗೂ ಕರ್ನಾಟಕ ಸರಕಾರದಿಂದ 2002ರಲ್ಲಿ ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮೊಯಿಜುದ್ದೀನ್ ಅವರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕರಕುಶಲ ಮೇಳಗಳಲ್ಲಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿ ಅಪಾರ ಜನಮನ್ನಣೆ ಪಡೆದಿದ್ದಾರೆ. ಅದರಲ್ಲಿ ಪ್ರಮುಖವಾದುದು ಇಂಡಿಯನ್/ಮಲೇಸಿಯಾ ಕ್ರಾಫ್ಟ್–ಎಕ್ಸಚೇಂಜ್ ವರ್ಕಶಾಪ್ ಇನ್ ಸರವಾಕ್ ಮಲೇಸಿಯಾ ಬೈ ಸೊಸಾಯಿಟಿ ಅಟೆಲಿಯರ್ ಸರವಾಕ್‌ನಲ್ಲಿ ಭಾಗಿಯಾಗಿದ್ದಾರೆ.

ಮೊಹಮ್ಮದ್ ಖಾಜಾ ಮೊಯಿನುದ್ದೀನ್: ಬಾಲ್ಯದಲ್ಲಿಯೇ ಬಿದ್ರಿ ಕಲೆಯಲ್ಲಿ ಆಸಕ್ತಿ ತಳೆದ ಮೊಹಮ್ಮದ್ ಖಾಜಾ ಮೊಯಿನುದ್ದೀನ್ ಅವರಿಗೆ ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದು ಹಿರಿಯ ಮಗ ಮೊಹಮ್ಮದ್ ಸಲೀಂಮೊದ್ದೀನ್ ಬಿದ್ರಿ ಕಲೆಯಲ್ಲಿ ಮಾಸ್ಟರ್ ಆಗಿದ್ದಾರೆ. ಇವರ ಸ್ವಂತ ಕಾರ್ಖಾನೆ ಹಾಗೂ ಮಾರಾಟ ಮಳಿಗೆಯನ್ನು ಹೊಂದಿದ್ದು ಅವುಗಳಲ್ಲಿ 15 ಜನರಿಗಿಂತ ಹೆಚ್ಚು ಕುಶಲಕರ್ಮಿಗಳು ಬಿದ್ರಿ ವಸ್ತುಗಳನ್ನು ರಚಿಸುತ್ತಿದ್ದಾರೆ. 60ರ ಹರೆಯದ ಖಾಜಾ ಅವರಿಗೆ 1988ರಲ್ಲಿ ರಾಜೀವ್ ಗಾಂಧಿ ಪ್ರಶಸ್ತಿ ಬಂದಿದೆ. ಸಲೀಂ ಅವರಿಗೆ 1997ರಲ್ಲಿ ಜಿಲ್ಲಾ ಪ್ರಶಸ್ತಿ, 1998ರಲ್ಲಿ ಕರ್ನಾಟಕ ಸರಕಾರದ ರಾಜ್ಯ ಪ್ರಶಸ್ತಿ, 1999ರಲ್ಲಿ ಭಾರತ ಸರಕಾರದಿಂದ ಯುವ ಕುಶಲಕರ್ಮಿ ರಾಷ್ಟ್ರ ಪ್ರಶಸ್ತಿಗಳಿಗೆ ಪ್ರಾಪ್ತವಾಗಿದ್ದಾರೆ. ಇವರ ಸಹೋದರರಾದ ಸಿರಾಜುದ್ದೀನ್ ವೈದ್ಯರಾಗಿ, ಸೈದುದ್ದೀನ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಂದ ರಾಷ್ಟ್ರ ಪ್ರಶಸ್ತಿ ಪಡೆಯುತ್ತಿರುವುದು

ಶಹಾ ರಷೀದ್ ಖಾದ್ರಿ: ಬೀದರ ನಗರದಲ್ಲಿ ಇಂದಿಗೂ ಬಿದ್ರಿ ಕಲೆಯನ್ನು ಪೋಷಿಸುತ್ತ ಬಂದಿರುವ ಸುಪ್ರಸಿದ್ಧ ಕುಶಲಕರ್ಮಿ ಎಂದರೆ ಶಹಾ ರಷೀದ್ ಖಾದ್ರಿ ಅವರು. ಇವರು ಮೂರನೆಯ ತಲೆಮಾರಿನ ಕರ್ಮಿ. ಇವರ ತಂದೆ ಶಹಾ ಮುಸ್ತಫಾ ಖಾದ್ರಿ, ತಾತ ಶಹಾ ಮಹಮ್ಮದ್ ಖಾದ್ರಿ ಅವರ ಗರಡಿಯಲ್ಲಿ ಪಳಗಿದ ರಶೀದ್ ಅವರು ಬಾಲ್ಯದಲ್ಲಿಯೇ ಬಿದ್ರಿ ಕಲೆಯ ತಂತ್ರಗಳನ್ನು ಅರಿತುಕೊಂಡವರು. 1970ರಲ್ಲಿಯೇ ಸ್ವಂತ ಘಟಕವನ್ನು ಹೊಂದಿದ ರಶೀದ್ ಅವರು ಕರ್ನಾಟಕದ ಬಿದ್ರಿ ಕಲೆಯನ್ನು ಪ್ರಚುರಗೊಳಿಸುತ್ತಿರುವ ಶ್ರಮಿಕ ಜೀವಿ. ಎಲ್ಲೇ ಪ್ರದರ್ಶನಗಳು, ಮೇಳಗಳು ಇರಲಿ ಅಲ್ಲಿ ರಶೀದ್ ಅವರ ಕಲಾಕೃತಿಗಳು ಪ್ರದರ್ಶನಗೊಳ್ಳುತ್ತವೆ.



ಉಪರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿ (1990) ಸ್ವೀಕರಿಸುತ್ತಿರುವುದು

ಬಿದ್ರಿ ಕಲೆಯಲ್ಲಿ ಹೊಸತನವನ್ನು ಕಂಡುಕೊಂಡು, ಈ ಕಲೆಯನ್ನು ಜನಪ್ರಿಯಗೊಳಿಸಿರುವ ಇವರ ಬದುಕಿನ ಒಟ್ಟು ಸಾಧನೆಗೆ ದೇಶ ತಲೆದೂಗಿದೆ. ಹಿಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. 1984ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 1996ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಗೂ ಭಾಜನರಾಗಿರುವುದು ಕರ್ನಾಟಕಕ್ಕೆ ಸಂದ ಗೌರವವಾಗಿದೆ.

1987ರಲ್ಲಿ ಅಮೇರಿಕಾದ ಬೋಸ್ಟನ್‌ನಲ್ಲಿ ನಡೆದ ಅಂತರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿ ಬಿದ್ರಿ ಕಲೆಯ ವೈಜ್ಞಾನಿಕ ರಚನಾ ತಂತ್ರವನ್ನು ವಿಶ್ವದ ವಿಜ್ಞಾನಿಗಳಿಗೆ ತಿಳಿಯಪಡಿಸಿದ ಇವರು ಇಟಲಿಯ ರೋಮ್ ನಗರದಲ್ಲಿ ನಡೆದ ಇಂಡಿಯಾ ಪ್ರಮೋಷನ್ ಪ್ರೋಗ್ರಾಮ್‌ನಲ್ಲಿ ಆಹ್ವಾನಿತ

ಕುಶಲಕರ್ಮಿಯಾಗಿ ಭಾಗಿಯಾಗಿದ್ದಾರೆ. ಸಿಂಗಾಪುರದಲ್ಲಿ ನಡೆದ 'ಸಿಂಗಾಪುರ-ಭಾರತ ವಾಣಿಜ್ಯೋದ್ಯಮ ಸಂಸ್ಥೆ'ಯ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಹಾಲಂಡ್‌ನಲ್ಲಿ ಬಿದ್ರಿ ಕಲೆಯ ಪ್ರಾತ್ಯಕ್ಷಿಕೆ ನೀಡಿ ಅಲ್ಲಿ ಕುಶಲಕರ್ಮಿಗಳಿಗೆ ಗುರುವಾಗಿ ಮೇಳೈಸಿದ್ದಾರೆ.

ದೆಹಲಿಯ ಅಪ್ನಾ ಉತ್ಸವದಲ್ಲಿ ಇವರ ಬಿದ್ರಿ ಕಲಾಕೃತಿಗಳು ಪ್ರದರ್ಶಿತಗೊಂಡು ಭಾರೀ ಜನಮನ್ನಣೆ ಗಳಿಸಿವೆ. ಓರಿಸ್ಸಾ ಆದಿವಾಸಿ ಉತ್ಸವ, ರಾಷ್ಟ್ರೀಯ ಪ್ರಶಸ್ತಿ ವಿಜೇತರ ಕರಕುಶಲ ಉತ್ಸವದಲ್ಲಿ ಇವರನ್ನು ಸಮ್ಮಾನಿಸಿ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಅಷ್ಟೇ ಅಲ್ಲದೆ ಕ್ರಾಫ್ಟ್ ಸ್ಕಿಲ್ ಉತ್ಸವ್, ವಸಂತ ವಿಝಾ ಸಾಂಸ್ಕೃತಿಕ ಪ್ರದರ್ಶನ ಹೀಗೆ ಹಲವಾರು ಕಡೆಗಳಲ್ಲಿ ನಿರಂತರವಾಗಿ ತಮ್ಮ ಬಿದ್ರಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಇಷ್ಟೆಲ್ಲ ಪುರಸ್ಕಾರಗಳನ್ನು ಪಡೆದಿದ್ದರೂ ರಶೀದ್ ಅವರ ಆರ್ಥಿಕ ಸ್ಥಿತಿ ಸುಧಾರಿಸಿಲ್ಲವೆಂಬುದು ಒಂದೆಡೆಯಾದರೆ, ಇನ್ನೊಂದೆಡೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದರೂ ನಾನು ರಚಿಸಿದ ಬಿದ್ರಿ ಕೃತಿಗಳಿಗೆ ಹೆಚ್ಚಿನ ದರವನ್ನೂ ಯಾರೂ ನೀಡಿ ಕೊಂಡುಕೊಂಡ ಉದಾಹರಣೆಗಳು ಇಲ್ಲವೆನ್ನುತ್ತಾರೆ ರಶೀದ್ ಅವರು. ಹೀಗಾಗಿ ಕನಿಷ್ಠ ಲಾಭದಲ್ಲಿ ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು ಇದು ನನ್ನ ತಲೆಮಾರಿಗೇ ಕೊನೆಯಾಗಲಿದೆ ಎಂದು ಭವಿಷ್ಯವನ್ನು ಸಹ ನುಡಿಯುತ್ತಾರೆ.

ಮೊಹಮ್ಮದ ಅರಿಫಉದ್ದೀನ್: ದಿವಂಗತ ಮೊಹಮ್ಮದ ರಷಿದ್ದುದ್ದೀನ್‌ರವರ ಪುತ್ರರಾದ ಮೊಹಮ್ಮದ ಆರಿಫ್‌ಉದ್ದಿನ್ 1967ರಲ್ಲಿ ಬೀದರ ನಗರದಲ್ಲಿ ಜನಿಸಿದರು. 10ನೆಯ ತರಗತಿಯ ವರೆಗೆ ಓದಿದ, 42ರ ವಯೋಮಾನದ ಈ ಕಲಾವಿದರು ಬಿದ್ರಿಕಲೆಯಲ್ಲಿ 15 ವರ್ಷಗಳ ಕಾಲ ತಮ್ಮ ತಂದೆಯ ಜೊತೆಗೆ ದುಡಿದಿದ್ದಾರೆ. ಫೂಲಝುಡಿಯಲ್ಲಿ ವಿನ್ಯಾಸ ಹೊಂದಿರುವ ಹೂಜಿಗೆ 2003ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. 1992-93ರಲ್ಲಿ ಬೀದರನಲ್ಲಿ ನಡೆದ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದವರು ಏರ್ಪಡಿಸಿದ ತರಬೇತಿಯಲ್ಲಿ ಸಹ ಪಾಲ್ಗೊಂಡಿದ್ದಾರೆ. 1996ರಲ್ಲಿ ಕಾವೇರಿ ಎಂಪೋರಿಯಮ್‌ನವರು ನವದೆಹಲಿ ಮತ್ತು ಚಂಡೀಗಢದಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಅದೇ ವರ್ಷ ಪುಣೆಯಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. 2002ರಲ್ಲಿ ಶಂಕರ ಫೌಂಡೇಶನ್ ಅವರು ಬೆಂಗಳೂರಿನಲ್ಲಿ ಏರ್ಪಡಿಸಿದ ಪ್ರದರ್ಶನದಲ್ಲಿ ಸದರಿಯವರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು.



ರಾಜ್ಯ ಪ್ರಶಸ್ತಿ (2003) ಸ್ವೀಕರಿಸುತ್ತಿರುವುದು



ಅಬ್ದುಲ್ ಹಮೀದ್: ಬಿದ್ರಿ ಕಲೆಯಲ್ಲಿ ಹೆಸರಾಂತರಾದ ಗುಲಾಂ ದಾವರ್ ಸಿದ್ದಿಕಿ ಹಾಗೂ ಅಬ್ದುಲ್ ಗಫಾರ್ ಶಿಷ್ಯರಾದ ಅಬ್ದುಲ್ ಹಮೀದ್ ಬೀದರನಲ್ಲಿ 1967ರಲ್ಲಿ ಜನಿಸಿದವರು. 8ನೆಯ ತರಗತಿಯವರೆಗೆ ಓದಿದ ಇವರು ಕಿರಿಯ ವಯಸ್ಸಿನಲ್ಲಿಯೇ ಬಿದ್ರಿ ಕಲೆಗಳನ್ನು ಉತ್ಪಾದಿಸುವ ಕಾರ್ಯಕ್ಕೆ ಮುಂದಾದವರು. ವಿಶೇಷವಾಗಿ ಅಬ್ದುಲ್‌ಹಮೀದ್ ಅವರು ಹೊಸ ಹೊಸ ವಸ್ತುಗಳನ್ನು ತಯಾರಿಸುತ್ತಿದ್ದು, ವಿಶೇಷವಾಗಿ ಫೂಲ್ ಝುಡಿ ಹಾಗೂ ಮಹತಾಬಿ ಶೈಲಿಯಲ್ಲಿ ಹೆಚ್ಚಿನ ಒಲವು. 2003ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿಯನ್ನು ಸಹ ಪಡೆದಿರುವ ಇವರು, 1977ರಿಂದ 1979ರ ವರೆಗೆ ಬಿದ್ರಿಕಲೆಯ ತರಬೇತಿಯನ್ನು ಪಡೆದಿದ್ದಾರೆ. 2006ರಲ್ಲಿ ನೆಹರು ಸೈನ್ಸ್ ಸೆಂಟರ್, ಮುಂಬಯಿನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ. 2004ರಲ್ಲಿ ವರ್ಲ್ಡ್ ಕ್ರಾಫ್ಟ್ ಕೌನ್ಸಿಲ್ ಅವರು ಆಯೋಜಿಸಿದ್ದ ಶಿಬಿರದಲ್ಲಿ ಸಹ ಪಾಲ್ಗೊಂಡಿದ್ದಾರೆ.



ಅಬ್ದುಲ್ ಹಕೀಂ: ಅಬ್ದುಲ್ ಹಕೀಂ ಅವರಿಗೆ ಈಗ 58ರ ಹರೆಯ. ಐದನೇ ತರಗತಿಯ ವರಗೆ ಓದಿದ ಇವರು ನಂತರದಲ್ಲಿ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡವರು. 35 ವರ್ಷ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡ ಇವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. 1977 ರಲ್ಲಿ ಬಿದ್ರಿ ವರ್ಕಸ್ ಯುನಿಯನ್‌ದಿಂದ ಬೆಸ್ಟ್ ಕ್ರಾಫ್ಟ್ ಮೆನ್‌ಶಿಪ್ ಪ್ರಮಾಣ ಪತ್ರವನ್ನು ಸಹ ಪಡೆದಿದ್ದಾರೆ. 1987ರಲ್ಲಿ ಕರ್ನಾಟಕ ಸರಕಾರದ ಮೆರಿಟ್ ಪ್ರಶಸ್ತಿ, 1993ರಲ್ಲಿ ರಾಜ್ಯಪ್ರಶಸ್ತಿ ಬಂದಿದೆ.

1993ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. 2008ರಲ್ಲಿ ಸೂರಜ್‌ಕುಂಡ್‌ದಲ್ಲಿ ನಡೆದ ಕ್ರಾಫ್ಟ್ ಮೇಳ ಹಾಗೂ ದಿಲ್ಲಿ ಹಾತ್‌ನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದಾರೆ.

ಮೊಹಮ್ಮದ್ ಅನಿಸ್ ಅಹ್ಮದ್: ಖ್ಯಾತ ಬಿದ್ರಿ ಕಲಾವಿದರಾದ ಗನಿ ಅಹಮ್ಮದ್‌ರ ಪುತ್ರರಾದ ಅನಿಸ್ ಅಹಮ್ಮದ್ ಹೈದರಾಬಾದನಲ್ಲಿ ಜನಿಸಿದರು. ಬಾಲ್ಯದಿಂದಲೇ ಇವರು ಈ ಕಲೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪದವಿ ಪಡೆದಿರುವ ಇವರು ಬಿದ್ರಿಕಲೆಯನ್ನು ತಮ್ಮ ವೃತ್ತಿಯಾಗಿಸಿಕೊಂಡಿದ್ದಾರೆ. ಹೈದರಾಬಾದಿನಲ್ಲಿ ನೆಲೆಸಿದ ಇವರು ಅಲ್ಲಿಯೇ ತಮ್ಮ ಕಾರ್ಯಾಗಾರವನ್ನು ಸ್ಥಾಪಿಸಿದ್ದಾರೆ. ಅಲ್ಲಿಯೇ ಅನೇಕ ತರಹದ ಬಿದ್ರಿ ವಸ್ತುಗಳನ್ನು ಉತ್ಪಾದಿಸಿ ದೇಶದ ಬೇರೆ ಬೇರೆ ಮಾರಾಟ ಕೇಂದ್ರಗಳಿಗೆ ತಮ್ಮ ಉತ್ಪನ್ನಗಳನ್ನು ಒದಗಿಸುತ್ತಾರೆ. ಹೈದರಾಬಾದಿನ ಪ್ರಸಿದ್ಧ ಕಲಾವಿದರಲ್ಲಿ ಇವರೂ ಒಬ್ಬರಾಗಿದ್ದಾರೆ. (ಆರ್‌ಪಿ)


ಬೀ

ಬೀದರ ಜಿಲ್ಲೆ: ಕರ್ನಾಟಕದ ನೆತ್ತಿಯ ಮೇಲಿರುವ ಈ ಜಿಲ್ಲೆ, ಐತಿಹಾಸಿಕ ಕಾರಣಗಳಿಂದಾಗಿ ಸಾಮಾಜಿಕವಾಗಿ ಇಂದು ಹಿಂದುಳಿದ ಜಿಲ್ಲೆಯಾಗಿದ್ದರೂ, ಶತ ಶತಮಾನಗಳ ಇತಿಹಾಸ ಹೊಂದಿದೆ. ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತಿಕೆಯನ್ನು ಪಡೆದಿದೆ. ಬೀದರ ಜಿಲ್ಲೆ, ಹೈದರಾಬಾದ ಕರ್ನಾಟಕದ ಕಾಶ್ಮೀರ ಎಂದೇ ಖ್ಯಾತಿ ಪಡೆದಿದೆ.

ಅಸಂಖ್ಯ ಪ್ರವಾಸಿ ತಾಣಗಳು, ಸುಂದರ ದೇವಾಲಯಗಳು, ಪುಣ್ಯ ಕ್ಷೇತ್ರಗಳು, ತೀರ್ಥಗಳು, ಐತಿಹಾಸಿಕ ಸ್ಮಾರಕಗಳು, ಕೋಟೆ–ಕೊತ್ತಲಗಳಿಂದಾಗಿ ಬೀದರ ಜಿಲ್ಲೆ ಕರ್ನಾಟಕದ ಪ್ರವಾಸೋದ್ಯಮದ ಗಣಿ ಎನ್ನಬಹುದು. ಪ್ರವಾಸೋದ್ಯಮ ಅಭಿವೃದ್ಧಿಗೆ ಇಲ್ಲಿ ವಿಪುಲ ಅವಕಾಶವಿದೆ.

ಕರ್ನಾಟಕದ ಶರಣರ ನಾಡು ಎಂದೇ ಖ್ಯಾತಿ ಪಡೆದಿರುವ ಈ ಜಿಲ್ಲೆಯ ಬಸವಕಲ್ಯಾಣ, ಹಿಂದೆ ಕಲ್ಯಾಣ ಚಾಲುಕ್ಯರ ರಾಜಧಾನಿಯಾಗಿತ್ತು. ಚಾಲುಕ್ಯರ ಅರಸು ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಿಯಾಗಿದ್ದ ಜಗಜ್ಯೋತಿ ಬಸವೇಶ್ವರರು, 800 ವರ್ಷಗಳ ಹಿಂದೆಯೇ ಸಾಮಾಜಿಕ ಸಮಾನತೆಯ ಕ್ರಾಂತಿಯನ್ನು ಮೊಳಗಿಸುವ ಮೂಲಕ ಸಮಾಜ ಸುಧಾರಣೆಯ ಹರಿಕಾರರಾಗಿ, ವಿಶ್ವದ ಪ್ರಥಮ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ನೆಲವಿದು.

ಇಂದಿನ ಪಾರ್ಲಿಮೆಂಟ್ ಮಾದರಿಯಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ, ಎಲ್ಲ ಜಾತಿ–ವರ್ಗದವರಿಗೆ ಹಾಗೂ ಮಹಿಳೆ–ಪುರುಷರಿಗೂ ಸಮಾನ ಅವಕಾಶ ನೀಡಿ, ವಚನ ಸಾಹಿತ್ಯದಿಂದ ಅಂದು ಅವರು ವೈಚಾರಿಕ ಕ್ರಾಂತಿಯನ್ನೇ ಮಾಡಿದರು. ಇಂದಿಗೂ ಇತಿಹಾಸದ ಪುಟಗಳಲ್ಲಿ ಇದನ್ನು 'ಬಸವ ಕ್ರಾಂತಿ' ಎಂದೇ ಹೆಸರು ಪಡೆದಿದೆ. ಇಂಥ ಸಮಾಜ ಸುಧಾರಕ ಬಸವೇಶ್ವರರ ಪುಣ್ಯ ಭೂಮಿ ಹಾಗೂ ಸಮಾಜ ಸುಧಾರಣೆಯ ಕರ್ಮಭೂಮಿ ಬೀದರ ಜಿಲ್ಲೆಯ ಬಸವಕಲ್ಯಾಣ ಆಗಿರುತ್ತದೆ. ಅಂದಿನ ಶರಣರು ತಪೋನುಷ್ಠಾನ ಮಾಡಿದ ಗವಿಗಳು ಇಂದು ಪುಣ್ಯ ಕ್ಷೇತ್ರಗಳಾಗಿವೆ. ನಿಸರ್ಗ ನಿರ್ಮಿತ ಝರಿ ಕುಂಡಗಳು ತೀರ್ಥಕ್ಷೇತ್ರವಾಗಿವೆ. ಅವರ ಕಾಲದಲ್ಲಿ ಶಿವಶರಣರು ರಚಿಸಿರುವ ಕ್ರಾಂತಿಕಾರಿ ವಚನಗಳು ಇಂದಿಗೂ ಪ್ರಸ್ತುತವಾಗಿವೆ.




ಅನುಭವ ಮಂಟಪ, ಬಸವಕಲ್ಯಾಣ–ಬೀದರ್

ಅಂದಿನ ಕಲ್ಯಾಣ, ಇಂದಿನ ಬಸವಕಲ್ಯಾಣ ಹಿಂದೆ ವಿಶ್ವದ ಮೊದಲ ಸಾಮಾಜಿಕ ಕ್ರಾಂತಿ ನಡೆಸಿದ ಸ್ಥಳವಾಗಿದ್ದು, ಇಲ್ಲಿ ಇತಿಹಾಸದ ಅನೇಕ ಪಳೆಯುಳಿಕೆಗಳು ಸ್ಮಾರಕಗಳಿದ್ದು, ಇಂಥ ಐತಿಹಾಸಿಕ ಮತ್ತು ಪೌರಾಣಿಕ ಮಹತ್ವ ಪಡೆದಿರುವ ಸ್ಮಾರಕಗಳಿಗೆ ಸೂಕ್ತ ರಕ್ಷಣೆಯಿಲ್ಲ.

ಬಸವಕಲ್ಯಾಣ ಕಲ್ಯಾಣ ಚಾಲುಕ್ಯರ ರಾಜಧಾನಿಯೂ ಆಗಿರುವುದರಿಂದ ಅವರ ಕಾಲದಲ್ಲಿ ನಿರ್ಮಿಸಿದ ಸುಂದರವಾದ ಶಿಲ್ಪಕಲಾ ವೈಭವದ ದೇವಾಲಯಗಳು ಇಂದು ಅವನತಿಯ ಅಂಚಿನಲ್ಲಿವೆ. ಯವನರ ದಾಳಿಯಿಂದ ಕುಸಿದು ಬೀಳುತ್ತಿರುವ ಬೃಹತ್ ಎರಡು ಸುತ್ತಿನ ಕೋಟೆ, ಬಸವೇಶ್ವರರ ಅನುಭವ ಮಂಟಪ, ಬಸವೇಶ್ವರ ದೇವಸ್ಥಾನ, ಶರಣರ ಗವಿಗಳು, ಪವಿತ್ರವಾದ ತ್ರಿಪುರಾಂತಕ ಕೆರೆ ಮುಂತಾದವುಗಳು ಬಸವಕಲ್ಯಾಣದ ಆಕರ್ಷಣೆಗಳಾಗಿವೆ.

ಬೀದರ ನಗರ ಅತ್ಯಂತ ಎತ್ತರ ಪ್ರದೇಶದಲ್ಲಿದೆ. ಹಿಂದೆ ಗುರುನಾನಕರು ತೀವ್ರ ಬರಗಾಲ ಸ್ಥಿತಿಯಲ್ಲಿ ಇಲ್ಲಿಗೆ ಬಂದಾಗ, ಜನರು ಕುಡಿಯುವ ನೀರಿಗೂ ಗತಿಯಿಲ್ಲದೇ ಕಷ್ಟದಲ್ಲಿದ್ದರಂತೆ. ಗುರುನಾನಕರು ಅಂಥ ಬರಗಾಲದಲ್ಲೂ ತಮ್ಮ ತಪಃಶಕ್ತಿಯಿಂದ ನೆಲದಿಂದ ನೀರುಕ್ಕುವಂತೆ ಮಾಡಿದರು. ಆ ಸ್ಥಳದಲ್ಲೇ ಸುಂದರವಾದ ಗುರುದ್ವಾರವೊಂದನ್ನು ನಿರ್ಮಿಸಿದ್ದು, ಇದನ್ನು 'ಗುರು ನಾನಕ ಝರಾ' ಎಂದು ಸಿಖ್ ಧರ್ಮದ ಪವಿತ್ರ ಯಾತ್ರಾ ಸ್ಥಳವಾಗಿದೆ.




ಗುರುನಾನಕ ಝರಾ, ಬೀದರ್

ದೇಶ ವಿದೇಶಗಳಿಂದಲೂ ಇಲ್ಲಿ ಯಾತ್ರಿಗಳು ಅಪಾರ ಸಂಖ್ಯೆಯಲ್ಲಿ ಬರುತ್ತಾರೆ. ಇತರ ಜನಾಂಗದವರಿಗೆ ಇದೊಂದು ಸುಂದರ ಪ್ರವಾಸಿ ತಾಣವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲೊಂದು ಸುಂದರವಾದ ಗುರುದ್ವಾರವನ್ನೂ ನಿರ್ಮಿಸಲಾಗಿದ್ದು, ದೂರ ದೂರದಿಂದ ಯಾತ್ರಿಗಳು ಬಂದು, ಇಲ್ಲಿನ ಪವಿತ್ರ ಝರಿಯಲ್ಲಿ 'ತೀರ್ಥ' ತೆಗೆದುಕೊಂಡು ಹೋಗುತ್ತಾರೆ.

ಬೀದರ ನಗರದ ಮತ್ತೊಂದು ಆಕರ್ಷಣೆ 'ಝರಣಿ ನರ ಸಿಂಹ' ಗುಹೆಯಲ್ಲಿ ಎರಡು ಫರ್ಲಾಂಗ ನೀರಿನಲ್ಲಿ ನಡೆದು ಕೊಂಡು ಹೋಗಿ, ಅಲ್ಲಿ ಗೋಡೆಯಲ್ಲಿ ಒಡಮೂಡಿರುವ ನರಸಿಂಹ ದರ್ಶನ ಮಾಡುವದೇ ಒಂದು ರೋಮಾಂಚಕಾರಿ ಅನುಭವ ನೀಡುತ್ತದೆ.

ಪಾಪನಾಶಿನಿ ಮತ್ತೊಂದು ಪವಿತ್ರ ತಾಣ. ಶಿವ ದೇವಾಲ ಯದ ಮುಂದಿರುವ ಪವಿತ್ರ ಕುಂಡದಲ್ಲಿ ಸ್ನಾನ ಮಾಡಿದರೆ, ಸರ್ವ ರೋಗಗಳು ಹಾಗೂ ಪಾಪಗಳೂ ಪರಿಹಾರವಾಗುತ್ತವೆ ಎಂಬುದು ಭಕ್ತರ ಅಚಲ ನಂಬಿಕೆ. ಈ ಪವಿತ್ರ ಸ್ನಾನಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಶಿವರಾತ್ರಿಯ ಸಂದರ್ಭ ದಲ್ಲಂತೂ ಇಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಬಂದು ದರ್ಶನ ಪಡೆದು ಪುನೀತರಾಗುತ್ತಾರೆ.



ಪಾಪನಾಶಿನಿ, ಬೀದರ್

600 ವರ್ಷಗಳ ಹಿಂದೆ ಇಲ್ಲಿ ರಾಜ್ಯಭಾರ ಮಾಡುತ್ತಿದ್ದ ಬಹುಮನಿ ಅರಸು ಬರೀದ್ ಶಾಹಿ ಕಾಲದಲ್ಲಿ, ಮಹ್ಮದ ಗವಾನ್ ಎಂಬ ಶಿಕ್ಷಣವೇತ್ತರು, ದೇಶ ವಿದೇಶಗಳಲ್ಲೂ ಪ್ರಸಿದ್ಧಿ ಪಡೆದ ಮೇಧಾವಿ. ಅವರು ಸ್ಥಾಪಿಸಿದ್ದ ವಿಶ್ವವಿದ್ಯಾಲಯದಲ್ಲಿ ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಅಧ್ಯಯನಕ್ಕೆ ಬರುತ್ತಿದ್ದರೆಂದು ಇತಿಹಾಸ ಪುಟಗಳಿಂದ ತಿಳಿಯಬಹುದಾಗಿದೆ.

ಅದ್ಭುತವಾದ ವಾಸ್ತು ವಿನ್ಯಾಸ ಹಾಗೂ ಕಟ್ಟಡಕ್ಕೆ ಬಳಿಸಿದ ತಾಂತ್ರಿಕತೆ ಮೆಚ್ಚುವಂಥದ್ದು. ಈ ಸ್ಮಾರಕ ಇಲ್ಲಿನ ಅತ್ಯಂತ ಪುರಾತನ ಕಟ್ಟಡ 'ಮಹ್ಮದ ಗವಾನ್ ಮದರಸಾ' ಎಂದು ಕರೆಯಲಾಗುತ್ತದೆ. ಈ ಕಟ್ಟಡ ಇಂದು ಅವಸಾನದ ಅಂಚಿನಲ್ಲಿದೆ. ಆದರೆ, ನೋಡಲು ಇನ್ನೂ ಸುದರವಾಗಿರುವ ಈ ಪುರಾತನ ಕಟ್ಟಡ ಉಳಿಸಿಕೊಳ್ಳುವ ಯಾವುದೇ ಪ್ರಯತ್ನ ನಡೆಯದಿರುವದು ವಿಷಾದದ ಸಂಗತಿಯಾಗಿದೆ.

ಬೀದರನಲ್ಲಿ ಬಹುಮನಿ ಅರಸು ಬರೀದ್ ಶಾಹಿ ನಿರ್ಮಿಸಿದ ಮೂರುಸುತ್ತಿನ ಅತ್ಯಂತ ದೊಡ್ಡದಾದ ಕೆಂಪು ಕೋಟೆ ಇಲ್ಲಿನ ಇನ್ನೊಂದು ಪ್ರಮುಖ ಆಕರ್ಷಣೆಯಾಗಿದೆ. ಕೋಟೆಯ ಮೂರು ಪ್ರವೇಶ ದ್ವಾರಗಳು, ಸುತ್ತಲೂ ಆಳವಾದ ಕಂದಕ, ಗೋಡೆಯ ಮೇಲಿಟ್ಟಿರುವ ಪಂಚಲೋಹದ ಬೃಹದಾಕಾರದ ತೋಪುಗಳು, ಕೋಟೆಯೊಳಗಿನ ಅರಮನೆಯ ಅವಶೇಷಗಳು, ಒಂದೇ ತಾರಸಿನ ವಿಶಾಲವಾದ ಜಾಮಿ ಮಸೀದೆ ಇಲ್ಲಿನ ಭವ್ಯ ಇತಿಹಾಸದ ಪುಟಗಳನ್ನು ಮೆಲುಕು ಹಾಕುವಂತೆ ಮಾಡುತ್ತವೆ.

ಶಿಲ್ಪಕಲಾ ಸೌಂದರ್ಯದ ಖಣಿ ಎಂದೇ ಪ್ರಸಿದ್ಧಿ ಪಡೆ ದಿರುವ ಕರ್ನಾಟಕದ ಬೇಲೂರು, ಹಳೇಬೀಡು ಶಿಲ್ಪಗಳಿಗೆ ಸಾಟಿಯಾಗಿ ನಿಲ್ಲಬಲ್ಲ ಶಿಲ್ಪ ವೈಭವವನ್ನು ಹುಮನಾಬಾದ ತಾಲೂಕಿನ ಜಲಸಂಗಾವಿ ಯಲ್ಲಿ ನೋಡಬಹುದು. ಜಲಸಂಗಾವಿ ಗ್ರಾಮದ ಏಕ ಮಾತ್ರ ಮಹಾದೇವ ಮಂದಿರ ಅದ್ಭುತವಾಗಿದೆ.



'ಪತ್ರಲೇಖನ' ಜಲಸಂಗವಿ, ಬೀದರ್

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಈ ದೇವಸ್ಥಾನದ ಸುಂದರ ಕೆತ್ತನೆಯ ಕಂಬಗಳು, ದೇವ ಸ್ಥಾನ ಹೊರಮೈ ಗೋಡೆಯ ಸುತ್ತಲೂ ನರ್ತಿಸುವ ಶಿಲಾ ಬಾಲಿಕೆಯರು, ಶುಕ ಸಂಭಾ ಷಿಣಿ, ಪತ್ರಲೇಖನ, ದರ್ಪಣ ಸುಂದರಿ, ಸರ್ಪ ಸುಂದರಿ

ಮುಂತಾದ ವಿವಿಧ ಭಂಗಿಗಳ ನರ್ತನ ಶೈಲಿಗಳು, ದೇವಾಧಿ ದೇವತೆಗಳ ಸಾಲಂಕೃತ ಶಿಲ್ಪ ವಿಗ್ರಹಗಳನ್ನು ನೋಡುವದೇ ಒಂದು ಆನಂದ.

ಈ ಭಾಗದ ಇಷ್ಟೊಂದು ಸುಂದರವಾದ ಏಕಮಾತ್ರ ದೇವಾಲಯದ ಪಕ್ಕದಲ್ಲೇ ರಸ್ತೆ ನಿರ್ಮಿಸಲಾಗಿದ್ದು, ಬಸ್ಸುಗಳು, ಲಾರಿ ಹಾಗೂ ಮತ್ತಿತರ ವಾಹನಗಳ ಓಡಾಟದಿಂದ ಅದುರಿ, ಈ ಪುರಾತನ ಹಾಗೂ ಸುಂದರ ದೇವಾಲಯ ಇಂದು ಅವಸಾನದ ಅಂಚಿನಲ್ಲಿದೆ. ಪ್ರಾಚ್ಯ ಇಲಾಖೆಯ ರಕ್ಷಣೆ ಇದಕ್ಕೆ ದೊರೆತಿಲ್ಲ. ರಾಜ್ಯ ಪ್ರವಾಸೋದ್ಯಮ ಇಲಾಖೆಯವರು ಇದನ್ನು ಪ್ರವಾಸಿ ತಾಣವಾಗಿ ಪರಿಗಣಿಸದೆ ಇಂಥ ಒಂದು ಸುಂದರ ದೇವಾಲಯ ಇಂದು ಕಣ್ಮರೆಯಾಗುತ್ತಿದೆ.

ಬೀದರ ನಗರದಿಂದ 5 ಕಿ. ಮಿ. ಅಂತರದಲ್ಲಿರುವ ನಿಸರ್ಗ ರಮಣೀಯ 'ದೇವ ವನ' ವಂತೂ ಸ್ವರ್ಗವೇ ಧರೆಗಿಳಿದಂತೆ ಭಾಸವಾಗುತ್ತದೆ. ಈ ವನದಲ್ಲಿ ಔಷಧಿ ಸಸ್ಯಗಳನ್ನು ಹಾಗೂ ರಾಶಿ ಸಸ್ಯಗಳನ್ನು ಬೆಳೆಸಲಾಗಿದೆ. ಸುಂದರವಾದ ಹುಲ್ಲುಹಾಸು, ಕಾರಂಜಿ ಹಾಗೂ ಪಕ್ಕದಲ್ಲೇ ದಟ್ಟ ಅರಣ್ಯ ಇಲ್ಲಿನ ನಿಸರ್ಗ ಸೌಂದರ್ಯವನ್ನು ಇಮ್ಮಡಿಸಿವೆ. ಇಲ್ಲಿ ಸಿನೇಮಾ ಶೂಟಿಂಗ್ ಮಾಡಬಹುದು. ಅಷ್ಟೊಂದು ಸುಂದರವಾಗಿ ಈ ದೇವವನ ವನ್ನು ಅಭಿವೃದ್ಧಿಪಡಿಸಲಾಗಿದೆ.



ದೇವ ವನ, ಬೀದರ್

(ಎಸ್ಆರ್ಎಂ)

ಬೆ

ಬೆತ್ತಲೆ ತೇರು: ಈ ತೇರು ಹೀಗೆ ಸದಾ ಬೆತ್ತಲೆಯಾಗಿಯೇ ಇರುತ್ತದೆ. ಊರ ಜಾತ್ರೆ ಬಂತೆಂದರೆ, ಇದಕ್ಕೆ ಠೀಕು ಠಾಕಿನ ಹೊದಿಕೆ (ತಡಕೆ) ಹೊದಿಸಿ, ಭಕ್ತಿಯಿಂದ ಸಿಂಗರಿಸಿ ಕೊತ್ತಲ ಬಸವೇಶ್ವರನಿಗೆ ಕೂರಿಸಿ ಸಾವಿರಾರು ಭಕ್ತರು ಎಳೆದು ಸೇವೆ ಸಲ್ಲಿಸುತ್ತಾರೆ. ಅನಂತರ ಬಸವ ಜಯಂತಿಯ ಮರುದಿನ ಕಟ್ಟಿರುವ ಹೊದಿಕೆ ಕಳಚಿ ಮತ್ತೆ ಬೆತ್ತಲೆಗೊಳಿಸುವರು.

ಕಲಬುರ್ಗಿ ಜಿಲ್ಲೆಯ ಸೇಡಂದ ಕೊತ್ತಲಬಸವೇಶ್ವರ ದೇವ ಸ್ಥಾನದ 45 ಅಡಿ ಎತ್ತರದ ಬಹಳ ಅಪರೂಪದ ರಥ. ಈ ರಥ ಒಂದು ಶತಮಾನ ದಷ್ಟು ಹಳೆಯದು. ಉಕ್ಕಿ ನಿಂದ ನಿರ್ಮಿಸಿರುವ ಐದು ಖಾನೆಗಳು, ಮೇಲೆ ಗುಮ್ಮಟ, ಎಲ್ಲವೂ ಉಕ್ಕಿನಿಂದಲೇ ತಯಾರಿಸಲಾಗಿದೆ.



ಬೆತ್ತಲೆ ತೇರು

ನಾಲ್ಕು ಗಾಲಿಗಳು ಬೀಡಿ ನಿಂದ ತಯಾರಿಸಿದ ಅಚ್ಚಿ ನವುಗಳು. ನಾಲ್ಕು ಅಂಗುಲ ದಪ್ಪ, ಗಾಲಿಯ ಸುತ್ತಳತೆ 13.8 ಅಡಿ (13 ಅಡಿ 8 ಅಂಗುಲ) ಹಾಗೂ ಮೂರು ಅಂಗುಲ ದಪ್ಪಗಿವೆ. ಗಾಲಿಗಳ ಮೇಲೆ ತಯಾರಕರ ಹೆಸರನ್ನು ಸನತ್-ಎ-ಹಿಂದ್ ಮತ್ತು ಫಸಲಿ 1325 ಎಂದು ಉರ್ದು ಅಕ್ಷರಗಳು ಮುದ್ರಿಸಲಾಗಿದೆ. ಅಂದರೆ, 85 ವರ್ಷಗಳಾಯಿತು ಎಂದು ಹೇಳಬಹುದು.

ಬಹುಶಃ ಯಾವುದೇ ಊರಿನ ದೇವರ ಜಾತ್ರೆಯ ರಥ ಪಶ್ಚಿಮ ಅಥವಾ ದಕ್ಷಿಣಾಭಿಮುಖವಾಗಿ ಎಳೆಯುವುದಿಲ್ಲ. ಆದರೆ, ಸೇಡಂನಲ್ಲಿ ರಥವನ್ನು ಹೊತ್ತು ಮುಳುಗುವ ಹೊತ್ತಿಗೆ ಪಶ್ಚಿಮದ ಕಡೆಗೆ ಎಳೆಯುವರು. 1905-06ರಲ್ಲಿ ಹೈದ್ರಾಬಾದ ದಿಂದ ವಾಡಿ ರೈಲ್ವೆ ಟ್ರ್ಯಾಕ್ ಹಾಕಿದಾಗ, ಕಮಲಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದುದರಿಂದ ಅನಿವಾರ್ಯವಾಗಿ ರಥವನ್ನು ಪಶ್ಚಿಮ ದಿಕ್ಕಿನೆಡೆ ಮುಖ ಮಾಡಿ ಎಳೆಯಲು ಆರಂಭಿಸಿದ್ದಾರೆ.

ಕೊತ್ತಲಬಸವೇಶ್ವರ ಜಾತ್ರೆಯು ಒಂಬತ್ತು ದಿನಗಳವರೆಗೆ ಸಂಭ್ರಮದಿಂದ ನಡೆಯುತ್ತದೆ. ಮೂರು ದಿನಗಳ ಉಚಾಯಿ ಮೆರವಣಿಗೆ ನಡೆಯುತ್ತದೆ. ಇದೂ ಸಹ ತನ್ನ ಆಕೃತಿ ಬದ ಲಾಯಿಸಿಕೊಂಡಿದೆ. ಎರಡು ವರ್ಷಗಳ ಹಿಂದೆ ಭಾರವಾದ ಉಚಾಯಿ ತೆಗೆದು ಹೊಸದೊಂದು ತೆಳ್ಳನೆಯ ಹಗುರವಾದ ಸಾಗವಾನಿಯ ರಥ ತಯಾರಿಸಿ ತಂದಿದ್ದಾರೆ. ಭಾರವಾದ ರಥ ವನ್ನು ಸಂಗಾವಿ ಜನ ತಮ್ಮೂರಿನ ಜಾತ್ರೆಗಾಗಿ ತೆಗೆದುಕೊಂಡು ಹೋದರೆಂದು ಹೇಳಲಾಗುತ್ತದೆ.

(ವಿಎಂಎಸ್)

ಬೆಳಮಗಿ ಎಂ.ಎಚ್.: ಚಿತ್ರಕಲಾವಿದ. 1968 ಜುಲೈ 22ರಂದು ಗುಲಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಸಂಗೋಳಗಿ ಗ್ರಾಮದಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ತಮ್ಮ ಗ್ರಾಮದಲ್ಲಿ ಪೂರೈಸಿದ ಶ್ರೀ ಬೆಳಮಗಿಯವರು ಚಿತ್ರಕಲಾ ವಿದ್ಯಾಭ್ಯಾಸ ಗುಲಬರ್ಗಾದಲ್ಲಿಯೇ ಪೂರೈಸಿದರು. ಇವರು ತೈಲ ಹಾಗೂ ಅಕ್ರಾಲಿಕ ವರ್ಣಗಳನ್ನು ಬಳಸಿ ಕಲಾಕೃತಿಗಳನ್ನು ರಚಿಸುತ್ತಾರೆ. ಹಳ್ಳಿಯ ಜೀವನ, ಜನಪದ ಕಲೆಗಳು, ನಾಡಿನ ಅನೇಕ ರೀತಿಯ ಹಬ್ಬಗಳಾದ ದೀಪಾವಳಿ, ನಾಗರ ಪಂಚಮಿ, ಹೋಳಿ ಹುಣ್ಣಿಮೆ ಹೀಗೆ ಅನೇಕ ರೀತಿಯ ವಸ್ತು ವಿಷಯಗಳು ಇವರ ಕಲಾಕೃತಿಯ ವಿಷಯಗಳಾಗಿವೆ.

ಇವರು ಅನೇಕ ಚಿತ್ರಕಲಾ ಪ್ರದರ್ಶನಗಳಲ್ಲಿ, ಸೆಮಿನಾರ್‌ಗಳಲ್ಲಿ ಭಾಗವಹಿಸಿ ತಮ್ಮ ಅನುಭವವನ್ನು, ವಿಚಾರವನ್ನು ಮಂಡಿಸಿದ್ದಾರೆ. ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ದೆಹಲಿ, ಹಾಗೂ ಅಮೃತಸರ್ ಹೀಗೆ ಇನ್ನೂ ಹಲವಾರು ಕಡೆಗಳಲ್ಲಿ ತಮ್ಮ ಕಲಾಕೃತಿ ಪ್ರದರ್ಶಿಸಿದ್ದಾರೆ.


ಪ್ರಸ್ತುತ ದ ಆರ್ಟ್ ಇಂಟಿಗ್ರೇಶನ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವೇ ವರ್ಷಗಳಲ್ಲಿ ಮಹಾವಿದ್ಯಾಲಯದ ವ್ಯವಸ್ಥೆ ಉಚ್ಚಮಟ್ಟದಲ್ಲಿ ಬೆಳೆಸಿ ರಾಜ್ಯಮಟ್ಟದಲ್ಲಿ ಇದೊಂದು ಮಾದರಿ ಚಿತ್ರಕಲಾ ಮಹಾವಿದ್ಯಾಲಯವನ್ನಾಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

(ಎಎಸ್‌ಎಸ್)

ಬೇ

ಬೇಟೆ ಉಪಕರಣಗಳು: ಪ್ರಾಗೈತಿಹಾಸ ಕಾಲದಿಂದಲೂ ಮಾನವ ಬೇಟೆಗಾಗಿ ಕಲ್ಲಿನಿಂದ ಹಿಡಿದು ಕಬ್ಬಿಣ, ತಾಮ್ರ, ಹಿತ್ತಾಳೆ, ಕಟ್ಟಿಗೆ, ಬಲೆಗಳಂತಹ ಹಲವು ವಿವಿಧ ಉಪಕರಣಗಳನ್ನು ಬಳಸಿದ್ದಾನೆ. ಕಾಲಾಂತರದಲ್ಲಿ ಬೇಟೆಯಾಡುವುದನ್ನು ಲಾಭಕ್ಕಾಗಿ (ಹುಲಿ ಚರ್ಮ, ದಂತ, ಜಿಂಕೆ ಚರ್ಮ, ಮಾರುವುದರಿಂದಾಗುವ ಲಾಭ) ಔಷಧೋಪಚಾರಕ್ಕಾಗಿ (ಉಡದ ಎಣ್ಣೆ, ರತ್ನ ಪಕ್ಷಿಯ ರಕ್ತ ಇತ್ಯಾದಿ) ವಿನೋದಕ್ಕಾಗಿ, (ಕರಡಿ, ಮಂಗ, ಹಾವು, ಆನೆ ಇತ್ಯಾದಿ) ಹವ್ಯಾಸಕ್ಕಾಗಿ (ಮೊಲ, ನವಿಲು, ಗಿಳಿ ಇತ್ಯಾದಿ) ಕಂಡುಕೊಂಡ ಮೇಲೆ ಅವುಗಳನ್ನು ಬೇಟೆಯಾಡುವ ವಿಧಾನಗಳಲ್ಲಿ ಹಲವು ಹೊಸ ವಿಧಾನಗಳನ್ನು ರೂಢಿಸಿಕೊಂಡಿದ್ದಾನೆ.

ಬೇಟೆಯಲ್ಲಿ ಬೇಟೆಯಾಡುವ ಪ್ರಾಣಿ ಪಕ್ಷಿಗನುಗುಣವಾಗಿ ಹಲವು ವಿದಾನಗಳಿವೆ. ಅವುಗಳನ್ನು ಪ್ರಾಣಿ ಬೇಟೆ, ಪಕ್ಷಿ ಬೇಟೆ, ಜಲಚರ ಬೇಟೆ, ಚರ್ಮ ಬೇಟೆ ಎಂದು ಸ್ಥೂಲವಾಗಿ ವಿಭಾಗಿಸಿಕೊಳ್ಳಬಹುದು. ಏಕೆಂದರೆ ಇವುಗಳೆಲ್ಲವು ಒಂದಕ್ಕಿಂತ ಒಂದು ವಿಭಿನ್ನ ಸ್ವರೂಪದ ಜೀವನ ಶೈಲಿಯನ್ನು ರೂಪಿಸಿಕೊಂಡಂತಹವು ಹಾಗಾಗಿ ಇವುಗಳನ್ನು ಹಿಡಿಯುವುದಕ್ಕಾಗಿ ವಿವಿಧ ಬಗೆಯ ಉಪಕರಣಗಳು ಅಗತ್ಯವಾಗಿ ಬೇಕಾಗುತ್ತದೆ.



ಬೇಟೆ ಉಪಕರಣಗಳು

ಬಿಲ್ಲು, ಬಾಣ, ಈಟಿ, ಖಡ್ಗ, ಕವಣೆ, ಕೋದಿ, ಕೊಡತಿ, ಸುರಗೆ (ಸಣ್ಣಕತ್ತಿ) ಕರವತಿಗೆ (ಗರಗಸ) ಭತ್ರಿ, ಬಡಿಕೋಲು ತ್ರಿಶೂಲ, ಶೂಲ, ಕಣೆಯ, ಕರ್ಕಡೆ, ಪರಿಘ, ಮುಸುಲ, ಪಂಚರಾಯುಧ, ಆವುತಿ, ಮಾಳಜಿಗೆ, ಕರ್ಪಣ, ಮುಸುಂಡಿ, ಮದ್ಗರ, ಬಿಟ್ಟೈರು, ಬಕ್ಕಣ್ಣ, ಉದ್ದುವಾರೆ ಅಡಾಯುಧ, ತಾಡಿ, ಕತ್ತಿ, ಬಡಿಗೋಲು, ಚಕ್ರ ಗಿಡುಗ, ಅತಿಯಾದ ಕೆಸರು, ಉರುಳು, ತೋರೆತ್ತು, ಜಿಂಕೆ ಬೀಸುಗಣ್ಣುಗಳು, ನಾಯಿ ಬೀಸುವಬತಿ, ಚೂಪಾದಗಾಳ, ಗುರಾಣಿ, ಕಲ್ಲಿನ ಉಳಿ, ದೀಪ, ಸನ್ನೆಕೋಲು, ಕೊಳವೆ, ತಿವಾಯುವ ಕೋಲು, ಕೈಬಿಲ್ಲು, ಕೈಮಚ್ಚು ಗಂಟಲು ಮುಳ್ಳು, ಸಣ್ಣ ಬನಕೆ, ಮದ್ದಿನ ತುಪಾಕಿ, ದೊಡ್ಡಾನೆ ಬಡಿಯುವ ಕೋಲುಗಳು ಕಲ್ಲು, ಕಣ್ಣಿ, ಸಲಕೆ, ಇಡುವ ಬಲೆಗಳು ಹಾರಿಸುವ ಬಲೆಗಳು ತಂತಿ ಒತಿ ಸಣ್ಣ ಬಲೆಗಳು ನಡೆಯುತ್ತಾ ಬೀಸುವ ಬಲೆಗಳು, ತೊಡರಿಕೊಂಡು ಬೀಳುವಂತೆ ಮಾಡುವ ಬಲೆಗಳು ಸಾಲಾಗಿ ಕಟ್ಟುವ ಬಲೆಗಳು, ದಾರಿಯನ್ನು ಬಿಟ್ಟು ಅನಂತರ ಸಿಕ್ಕಕೊಳ್ಳುವ ಬಲೆಗಳು ಅಂಟು ಬಲೆ, ದೊಣ್ಣೆ ದೊಣ್ಣೆಗಳನ್ನು ಪ್ರಾಣಿಗಳನ್ನು ಬಡಿಯಲು ಹೊಡೆಯಲು ಬಳಸುತ್ತಾರೆ. ಕೊಡಲಿಗಳಲ್ಲಿ ಕೈಗೊಡಲಿ, ಎಡೆಗೊಡಲಿ, ಪಿಳಿಗೊಡಲಿ, ಪ್ರಮುಖವಾಗಿವೆ. ಕಡಿಯುವ ಇರಿಯುವ ಚುಚ್ಚುವ ಬಗೆಯುವ ಹೆರೆಯುವ ಚಿಕ್ಕ ಚಿಕ್ಕ ಸಾಧನೆಗಳೂ ಈ ಗುಂಪಿನಲ್ಲಿವೆ. ಗುಂಡುಕೋವಿ, ಒಂಟಿನಳ್ಳಿ, ಫಿರಂಗಿ ಇತ್ಯಾದಿ ಉಪಕರಣಗಳು ಪ್ರಾಣಿ ಬೇಟೆಯಲ್ಲಿ ಬಳಕೆಯಾದರೆ, ಬಿಲ್ಲುಬಾಣ, ಉಳ್ಳಕಣಿ, ಮೇಣಹಾಕುವುದು, ಶಾತ್ಯೆಬಿಲ್ಲು, ಚಾಟರ ಬಿಲ್ಲು, ಕವಣೆಯಿಂದ ಹೊಡೆಯುವುದು, ಕತ್ತರಿ, ಬೆಳಕು ತೋರಿಸಿ ಹೊಡೆಯುವದೊಂದಿ/ ಬ್ಯಾಟರಿ ಬಲೆಬೀಸಿ ಹಿಡಿಯುವುದು. ಕೆಕ್ಕುವುದು ಪಕ್ಷಿಯಂತೆ ಕೂಗಿ ಹತ್ತಿರ ಕರೆದು ಹೊಡೆಯುವುದು. ಕಣಿ ಹಕ್ಕಿ ಶಿಕಾರಿಗಾಗಿ ಬಳಸುವ ಮೇಣ ಸವರಿದ ತೆಳುಕಡ್ಡಿ, ಕೋವಿ ಉಳ್ಳದ ಉರುಳು ಪಕ್ಷಿಗಳು ಹೆಚ್ಚಾಗಿ ಬರುವ ಸ್ಥಳಗಳಲ್ಲಿ ಕಾಲು ಚೆಲ್ಲಿ ಅಲ್ಲಿಯೇ ಉಳ್ಳದ ಉರುಳ ಹಾಕುವುದು ಕಾಳಿನ ಆಸೆಗೆ ಬಂದ ಹಕ್ಕಿಗಳು ಉರುಳಿಗೆ ಸೆರೆಯಾಗುತ್ತವೆ. ಇತ್ಯಾದಿ ಉಪಕರಣಗಳು ಪಕ್ಷಿ ಬೇಟೆಯಲ್ಲಿ ಬಳಕೆಯಲ್ಲಿವೆ.

ಬಲೆ ಬಿಡುವುದು, ಗಾಳ ಹಾಕುವುದು, ಹೊಂಡ ಕಲಕುಮರು ಹಾಕುವುದು ಮೀನುಗಳನ್ನು ಮತ್ತು ಭರಿಸಿ ಹಿಡಿಯುವುದು, ಕೂಣಿ ಇಳಿ ಮೀನನ್ನು ಹಿಡಿಯುವ ಉಪಯೋಗಿಸುವ ಬಿದಿರಿನ ಸಾಧನ, ಕೈಗಳ ಮೀನು ಹಿಡಿಯಲು ಬಳಸುವ ಸಾಧನ, ಕೊಳೆ ಮೀನು ಹಿಡಿಯಲು ಬೆತ್ತದಿಂದ ತಯಾರಿಸಿದ ಸಾಧನ, ಗುಂಡಿಂಡ ಹೊಳೆಯ ಆಳವಾದ ಸ್ಥಳಗಳಿಗೆ ಮುಕ್ಕಡಕ ಇತ್ಯಾದಿ ಸಸ್ಯಗಳ ತೊಗಟೆಯನ್ನು ಕದಡಿ ಮೀನುಗಳನ್ನು ಹಿಡಿಯುವುದು, ಗೋರಿ ಬಿದರು ಬೆತ್ತದಿಂದ ತರಿಯಾರಿಸಿದ ಸಾಧನ, ಕೇಪಿನ ಕೋಲಿಯಿಂದ ಹೊಡೆಯುವುದು, ಡೈನಾಮೆಟ್ ಹಾಕುವುದು ಇನ್ನು ಮುಂತಾದವು ಜಲಚರ ಪ್ರಾಣಿಗಳನ್ನು ಹಿಡಿಯುವ ಉಪಕರಣಗಳು. ಅಗೆದು ತೆಗೆಯುವುದು, ಮರದ ಪೊಟರೆಯನ್ನು ಕೆತ್ತಿ ತೆಗೆಯುವುದು, ಬೆಂಕಿಯನ್ನು ಹಿಡಿದು ಹಲ್ಲೆಯನ್ನು ಕತ್ತರಿಸುವುದು, ಜೇನು ಬೇಟೆಯ ವಿಧಾನಗಳು, ಇದಕ್ಕಾಗಿ ಕತ್ತಿ, ಕೊಡಲಿ, ದೊಂದಿ ಮುಂತಾದ ಉಪಕರಣಗಳನ್ನು ಬಳಸುತ್ತಾರೆ.

(ಎನ್‌ಎಚ್)

ಬೋ

ಬೋಳಂದೊಡ್ಡಿ ಜೈನ ಸ್ಮಾರಕಗಳ ನೆಲೆ: ಊರಿಗೊಂದು ಹೆಸರು, ಹೆಸರಿಗೊಂದು ಹಿನ್ನೆಲೆ, ಹಿನ್ನೆಲೆಗೊಂದು ವಾಸ್ತವ್ಯ, ಕಾಲಕ್ರಮೇಣ ಹೆಸರಿನಲ್ಲಿ ಪರಿವರ್ತನೆ. ಇದನ್ನು ನಾವು ನಮ್ಮ ಇತಿಹಾಸದ ಪುಟಗಳ ಕಾಲಚಕ್ರದಲ್ಲಿ ಸಾಮಾನ್ಯವಾಗಿ ಕಾಣುವ ಅಂಶ. ನಮ್ಮ ಸುತ್ತಲಿನ ಇತಿಹಾಸವನ್ನು ಒಮ್ಮೆ ಕೆದಕಿ ನೋಡಿದಾಗ, ಇಂತಹ ಹಲವಾರು ಇತಿಹಾಸ ತನ್ನ ಮಡಿಲಲ್ಲಿ ಹುದುಗಿಸಿಕೊಂಡಿರುವುದನ್ನು ಕಾಣಬಹುದು.

ಇಂತಹ ಪರಿವರ್ತಿತ, ಉದಾಹರಣೆಗಳಲ್ಲೊಂದಾದ ಪುರಾತನ ಧಾರ್ಮಿಕ ನೆಲೆ ಹಾಗೂ ನಿರ್ಲಕ್ಷಕ್ಕೊಳಗಾದ ಪವಿತ್ರ ಸ್ಥಳ, ರಾಯಚೂರು ಜಿಲ್ಲೆಯ ಚಿರಪರಿಚಿತ ಊರು ಬೋಳಂದೊಡ್ಡಿ. ಇದು ಕೆಲವರಿಗೆ ಸಿಟಿ ಬಸ್ಸಿನಿಂದಾಗಿ ಪರಿಚಿತವಾಗಿರಬಹುದು ಅಥವಾ ಶುಭಕಾರ್ಯಗಳಿಗೆ ಕಲ್ಯಾಣ ಮಂಟಪವಾಗಿರುವ ಬೋಳಂದೊಡ್ಡಿ ತಿಮ್ಮಪ್ಪನ ಗುಡಿಯಿಂದಲೂ, ಪ್ರವಾಸ ಪ್ರಿಯರಿಗೆ ಒಂದು ಒಳ್ಳೆಯ ಸ್ಥಳವಾಗಿ ಪರಿಚಿತವಾಗಿರಬಹುದು. ಈ ಸ್ಥಳ ಒಂದಿಲ್ಲೊಂದು ಕಾರಣದಿಂದ ಬಹುಳಷ್ಟು ಜನರಿಗೆ ಚಿರಪರಿಚಿತ.

ರಾಯಚೂರಿನಿಂದ 6ರಿಂದ 7 ಕಿ.ಮೀ. ಅಂತರದಲ್ಲಿರುವ ಬೋಳಂದೊಡ್ಡಿ ತಿಮ್ಮಪ್ಪನ ಗುಡಿ ಬಹಳಷ್ಟು ಜನರಿಗೆ ತಿಳಿದಿದ್ದರೂ, ಇದಕ್ಕಿಂತ ಮುಂಚೆ ಸಿಗುವ ಮಲ್ಲಿಕಾರ್ಜುನ ಮಂದಿರದ ಬಗ್ಗೆ ಹಲವಾರು ಜನರಿಗೆ ಮಾಹಿತಿ ಇರಲಿಕ್ಕಿಲ್ಲ. ಇದ್ದರೂ ಇಲ್ಲಿನ ಮಲ್ಲಿಕಾರ್ಜುನ ಗುಡಿ (ದೇವಸ್ಥಾನ) ಎಂದು ಬಹಳಷ್ಟು ಜನರಿಗೆ ತಿಳಿದಿರಲಿಕ್ಕಿಲ್ಲ. ಏಕೆಂದರೆ ಇದು ಪ್ರವಾಸಿಗರಿಗೆ ಸಕಲ ರೀತಿಯಿಂದಲೂ ಪ್ರಶಸ್ತವಾದ ಸ್ಥಳ. ಈ ಸ್ಥಳವು ತಿಮ್ಮಪ್ಪನ ಗುಡಿಗಿಂತ ಅರ್ಧ ಕಿ.ಮೀ. ಮೊದಲೇ ಇದ್ದರೂ, ಹಲವಾರು ಜನರಿಂದ ಕಣ್ತಪ್ಪಿರುವುದು, ಹೊಲಗದ್ದೆಗಳ ಮಧ್ಯದಲ್ಲಿ ಇರುವುದರಿಂದ ಹಾಗೂ ಬಹಳಷ್ಟು ಜನರು ಈ ಕಡೆ ಗಮನಹರಿಸಿಲ್ಲ. ಇತ್ತೀಚೆಗೆ ಈ ಮಂದಿರ ಜೀರ್ಣೋದ್ಧಾರ ಹೊಂದಿರುವುದರಿಂದ ಈಗ ಜನ ಸಂಪರ್ಕ ಹೆಚ್ಚಾಗಿದೆ.

ಈ ಮಲ್ಲಿಕಾರ್ಜುನ ಮಂದಿರದ ವಿಶೇಷವೆಂದರೆ ಸುಂದರ ಶಿಲಾ ಕೆತ್ತನೆಯುಳ್ಳ ಪ್ರವೇಶದ್ವಾರ, ಅಕ್ಕ ಪಕ್ಕದಲ್ಲಿ ಭಗ್ನವಾಗಿ ನಿಂತಿರುವ ಉಬ್ಬು ಶಿಲ್ಪಗಳು, ಸದಾ ನೀರಿನಿಂದಾವೃತವಾಗಿರುವ ವಿಘ್ನವಿನಾಶಕ ಗಣೇಶನ ದರ್ಶನ, ಸುಂದರ ಕೆತ್ತನೆಯ ನಂದಿ, ಲಿಂಗಾಕೃತಿಯಲ್ಲಿ ಸ್ಥಾಪನೆಗೊಂಡ ಮಲ್ಲಿಕಾರ್ಜುನ ಸ್ವಾಮಿ, ಉಬ್ಬು ಕೆತ್ತನೆಯಲ್ಲಿ ನಿರ್ಮಿಸಲ್ಪಟ್ಟಂತಹ ಶಕ್ತಿದೇವತೆಯ ಮೂರ್ತಿ, ಜೊತೆ ಜೊತೆಗೆ ಇನ್ನೂ ಹಲವು ಉಬ್ಬು ಚಿತ್ರಗಳನ್ನು ಕಾಣಬಹುದು.

ಜೊತೆಗೆ ರಮ್ಯತೆ ಮತ್ತು ಸಹಜ ಸೌಂದರ್ಯದಿಂದ ಕೂಡಿ ನಯನ ಮನೋಹರವಾದಂತಹ ನಿಸರ್ಗದ ಸವಿಯನ್ನು ಇಲ್ಲಿ ಸವಿಯಬಹುದು. ಸಾಮಾನ್ಯವಾಗಿ ಎಲ್ಲರಿಗೂ ಅಲ್ಲದಿದ್ದರೂ ಬಹಳಷ್ಟು ಜನರಿಗೆ ತಿಳಿದಿದೆ. ಕ್ರಿ.ಪೂ 6ನೇ ಶತಮಾನದ ಭಾರತದ ಧರ್ಮಗಳಲ್ಲಿ ಒಂದಾಗಿ, ಸ್ವತಂತ್ರ ಧರ್ಮವಾಗಿರುವ ಜೈನ ಧರ್ಮವು, ಹಲವಾರು ಪ್ರಸಿದ್ಧ ಅರಸು ಮನೆತನಗಳಿಂದ ಒಂದಿಲ್ಲೊಂದು ರೀತಿಯಿಂದ ಇಲ್ಲಿ ಆಶ್ರಯ ದೊರೆತು, ಪ್ರೋತ್ಸಾಹವನ್ನು ಪಡೆದಿದೆ. ತಲಕಾಡಿನ ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಅಂಥವರಲ್ಲಿ ಪ್ರಮುಖರು. ಕ್ರಿ.ಶದ ಆರಂಭದಿಂದಲೂ ಜೈನ ಮತಾವಲಂಬಿಗಳು ಕನ್ನಡ ನಾಡಿನಲ್ಲಿ ವಾಸಿಸುತ್ತಿದ್ದರು. ಗಂಗರು ಕ್ರಿ.ಶ. ಸುಮಾರು 200ರಿಂದ ಕ್ರಿ.ಶ. ಸುಮಾರು 1200ರವರೆಗೆ ಜೈನ ಮತಕ್ಕೆ ಆಶ್ರಯಕೊಟ್ಟು, ಅದರ ಅಭ್ಯುದಯಕ್ಕೆ ಮುಖ್ಯ ಕಾರಣರಾದರು.

ಜೈನ ಧರ್ಮ ಹನ್ನೆರಡನೆಯ ಶತಮಾನದಲ್ಲಿ ಕ್ಷೀಣಗೊಂಡಿರುವ ಸಮಯದಲ್ಲಿ ರಾಯಚೂರಿನ ಜೈನ ಮಹಾಮುನಿಗಳ ಪವಿತ್ರ ಆಗಮನವು ಪ್ರಚಾರದ ಜೊತೆಗೆ ಬೋಳಂದೊಡ್ಡಿಯವರೆಗೂ ಬಂದು, ಆ ಸ್ಥಳದಲ್ಲಿ ನೆಲೆಸಿ ಪವಿತ್ರವನ್ನಾಗಿ (ಪಾವನವನ್ನಾಗಿ) ಮಾಡಿದ್ದಾರೆ. ಈ ಜೈನ ಮಹಾಮುನಿಗಳು ಬೋಳು ಬೋಳಾಗಿ ಇರುವುದರಿಂದ ಹಲವಾರು ಜಿನ ಮುನಿಗಳು ಇಲ್ಲಿ ಒಟ್ಟಿಗೆ ಇರುವುದು ಈ ಗ್ರಾಮದ ಜನರು ಮುನಿಗಳನ್ನು ಬೋಳು ಮಹಾಮುನಿಗಳು ಹಾಗೂ ಇವರು ನೆಲೆಸಿರುವ ಈ ಸ್ಥಳವನ್ನು ದೊಡ್ಡಿ ಎಂದೂ, ಈ ಎರಡನ್ನೂ ಸೇರಿಸಿ ಬೋಳಂದೊಡ್ಡಿಯಾಯಿತೆಂದು ಹೇಳಬಹುದು. ಇದು ಹಿರಿಯರ ಅಭಿಪ್ರಾಯವೂ ಆಗಿರುತ್ತದೆ. ಪ್ರಸ್ತುತ ಇಲ್ಲಿ ಜೈನ ಧರ್ಮದ ಅಪಾರ ಅವಶೇಷಗಳಿದ್ದು, ಅವುಗಳೆಲ್ಲ ಘೋರ ನಿರ್ಲಕ್ಷಕ್ಕೆ ತುತ್ತಾಗಿರುವುದನ್ನು ಕಾಣಬಹುದು.

ಹಿಂದು ಧರ್ಮದ ಅನಂತರ ಜೈನ ಧರ್ಮವು, ಹಿಂದೂ ಧರ್ಮವನ್ನೇ ಪವಿತ್ರ ಹಾಗೂ ಪುರಾತನ. ಈ ಅವಶೇಷಗಳನ್ನು ನಾವು ಹಲವಾರು ಕಡೆಗಳಲ್ಲಿ ಕಾಣಬಹುದು. ಈ ಧರ್ಮದ ಮಹತ್ತರ ಅವಶೇಷಗಳನ್ನು ಕಾಪಾಡಬೇಕಾಗಿದ್ದು, ಇತಿಹಾಸದ ಈ ದಾಖಲೆಗಳು ಹಾಳಾದರೆ, ಇತಿಹಾಸವೇ ಮುಳುಗಿ ದಂತಾಗುತ್ತದೆ. ಆದ್ದರಿಂದ ಇವುಗಳ ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. (ಎಂಆರ್)

ಭ

ಭಂಕೂರು: ಜೈನ ಪರಂಪರೆಯ ಭವ್ಯ ತಾಣ. ಪ್ರಾಚೀನ ಶಾಸನಗಳಲ್ಲಿ ಭೂಮುಕುರು ಎಂದು ಉಲ್ಲೇಖಿಸಲ್ಪಟ್ಟ ಜೈನ ವಿದ್ಯಾ ಕೇಂದ್ರ ಭಂಕೂರು, ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನಲ್ಲಿದೆ.

ಭೂಮುಕುರು ಎಂದರೆ ಭೂಲೋಕದ ಕನ್ನಡಿ ಎಂದರ್ಥ. ಭೂಮುಕುರು, ಭೂಮಕುರ, ಭುಮಕುರ, ಭಮಕುರ ಮುಂದೆ ಭಂಕೂರ ಎಂದಾಗಿದೆ. ಈ ಊರು ನೆಲಗನ್ನಡಿಯಂತೆ ಸುಶೋಭಿತವೆನಿಸಲು, ಇಲ್ಲಿನ ಹಚ್ಚ ಹಸುರಿನ ನೈಸರ್ಗಿಕ ಸುಂದರತೆ, ಝುರಿ–ತೊರೆಗಳು, ಫಲವತ್ತಾದ ನೆಲದ ಹುಲುಸಾದ ಬೆಳೆಗಳು ಹಾಲು ಹೈನದಿಂದ ಸಮೃದ್ಧವಾದ ಸಜ್ಜನ, ಸಾತ್ವಿಕ, ಧರ್ಮಿಷ್ಟ ಜನಪದವಲ್ಲದೇ, ಸಾಹಿತ್ಯ, ಸಂಗೀತ ಶಿಲ್ಪ, ವಾಸ್ತುಶಿಲ್ಪ ಇತರ ಕಲೆಗಳಿಂದಾಗಿ ಈ ನೆಲ ಧರೆಯ ದರ್ಪಣ ಎನಿಸಿದೆ.

ಶಾಸನಕವಿ ಈ ನೆಲವನ್ನು ಭೂಮುಕುರ ಎಂದು ಕೊಂಡಾಡಿದ್ದಾನೆ. ಅಹಿಂಸೆಯೇ ಸರ್ವಶ್ರೇಷ ಧರ್ಮವೆಂದು ಸಾರಿದ ಜೈನಧರ್ಮ ಇಲ್ಲಿನ ಸಾಂಸ್ಕೃತಿಕ ಬದುಕಿಗೆ ನೀಡಿದ ಕಾಣಿಕೆ ಹಿರಿದಾಗಿದೆ. ಹೀಗಾಗಿ ಈ ಊರಲ್ಲಿರುವ ಅನೇಕ ಪ್ರಾಚೀನ ಜೈನ ಸ್ಮಾರಕಗಳು ಈ ಊರಿನ ಹಿರಿಮೆಗೆ ಗರಿಕಟ್ಟಿವೆ. ರಾಷ್ಟ್ರಕೂಟ ಚಕ್ರವರ್ತಿಗಳ ರಾಜಧಾನಿ ಮಾನ್ಯಖೇಟ (ಮಳಖೇಡ) ಪೂರ್ವಕ್ಕೆ ತೀರಾ ಸನೀಹದಲ್ಲಿದೆ. ಅಲ್ಲಿದ್ದ ವೀರಸೇನ, ಜಿನಸೇನ, ಗುಣಭದ್ರರಂತಹ ಜೈನಾಚಾರ್ಯರು, ನೃಪತುಂಗ, ಅವನ ವಂಶಜರು, ಪಂಪ ರನ್ನ ಪೊನ್ನ ಪುಷ್ಪದಂತರಂಥ ದಿಗ್ಗಜ ಕವಿಗಳು ಮಂತ್ರಿ ಮಾಂಡಲಿಕರು, ದಂಡನಾಯಕರು ವಣಿಶ್ರೇಷಿಗಳು ಭಂಕೂರಿಗೆ ಬಂದಿರುವ ಇಲ್ಲಿ ಕೆಲಕಾಲ ತಂಗಿರುವ ಸಾಧ್ಯತೆಗಳುಂಟು. ಪೂಜ್ಯಪಾದರು ದೃಷ್ಟಿ ಕಳೆದು ಕೊಂಡಾಗ ಭಂಕೂರಿನ ಶಾಂತಿನಾಥರನ್ನು ಸ್ತುತಿಸಿ ದೃಷ್ಟಿ ಪಡೆದು ಕೊಂಡರೆಂದು ಪ್ರತೀತಿ. ಗುಣಭದ್ರಾಚಾರ್ಯರು ಉತ್ತರ ಪುರಾಣದ ಶ್ರೀಕಾರವನ್ನು ಭಂಕಾಪೂರಕ್ಕಿಂತ ಮೊದಲು ಭಂಕೂರಿನಲ್ಲೇ ಹಾಕಿರಬಹುದೆಂಬ ಹೇಳಿಕೆಗಳಿವೆ.


ಊರ ಅಗಸಿ ದಾಟಿ ಒಳಕ್ಕೆ ಹೋಗಿ ಎಡಕ್ಕೆ ತಿರುಗಿದರೆ, ಬಸ್ತಿಗುಡಿ ಎಂದು ಕರೆಯುವ ಪ್ರಾಚೀನ ಬಸದಿ ಇದೆ. ಮೊದಲಿಗೆ ತ್ರಿಕೂಟ ಬಸದಿಯ ಅಕ್ಕಪಕ್ಕ ಎರಡು ಬಸದಿಗಳನ್ನು ನಿರ್ಮಿಸಿ ಪಂಚಕೂಟ ಜಿನಾಲಯವನ್ನಾಗಿಸಿದ್ದಾರೆ. ಮೂರು ಗರ್ಭಗೃಹಗಳು ಮೂರು ತೆರೆದ ಅಂತರಾಳಗಳಿಗೆ ಒಂದೇ ನವರಂಗವಿದೆ. ಈ ಮಂದಿರದ ಎಡ ಬಲಕ್ಕೆ ಏಕಕೂಟ ಜಿನಾಲಯಗಳ ಪೈಕಿ ಬಲಕ್ಕಿರುವ ಗುಡಿಯನ್ನು ಮನೆಯಾಗಿಸಿದ್ದಾರೆ. ತ್ರಿಶಾಖೆಗಳ ದ್ವಾರಬಂಧದ ಗರ್ಭಗೃಹಗಳ ಲಲಾಟಬಿಂಬ ಕುಳಿತ ಜಿನರದ್ದಾಗಿದೆ. ಈ ಬಸದಿಯ ವಾಸ್ತುಶೈಲಿಯಿಂದ ಇದು ಕ್ರಿ.ಶ. 9ನೆಯ ಶತಮಾನದ ಆರಂಭಿಕ ಹಂತದ್ದೆನಿಸುತ್ತದೆ.

ಪ್ರವೇಶ ದ್ವಾರವು ತ್ರಿಶಾಖೆಯ ದ್ವಾರಬಂಧ ಹೊಂದಿದ್ದು, ಲಲಾಟ ಪಟ್ಟಿಕೆಯ ಮಧ್ಯದ ಲಲಾಟಬಿಂಬ ಕುಳಿತ ಜಿನನದು, ಮೇಲ್ಭಾಗದಲ್ಲಿ ಎಡ ಬಲಗಳಲ್ಲಿ ಖಡ್ಗಮೃಗದಮೈ, ಸಿಂಹದ ಕಾಲಿನ, ಮೊಸಳೆ ಮುಖದ ಶಂಖದ ಶೈಲಿಯ ಮಕರ ತೋರಣದ ಮೇಲೆ ಇಂದ್ರ ತನ್ನ ಅನುಚರರೊಂದಿಗಿದ್ದಾನೆ. ಪ್ರವೇಶದ್ವಾರದ ಅಕ್ಕ ಪಕ್ಕ ನಾಲ್ಕಡಿ ಎತ್ತರದ ತ್ರಿಭಂಗಿಯ ದ್ವಾರ ಪಾಲಕರ ಶಿಲ್ಪ ತುಂಬಾ ಆಕರ್ಷಕವಾಗಿದೆ. ಕಿರೀಟ ಕರ್ಣ ಕುಂಡಲ ಎದೆಹಾರ ಕೊರಳಹಾರ, ಭುಜಕೀರ್ತಿ ಕಂಕಣ ಉಪವೀತ, ಕಟಿಬಂಧ ಕಾಲ್ಕಡಗಳನ್ನು ಹೊಂದಿದ್ದು ನಾಲ್ಕು ಕೈಗಳಲ್ಲಿ ಗಧಾ ಪಾಶ, ಅಂಕುಶ, ಪುಷ್ಪಗಳಿವೆ.



ತ್ರಿಕೂಟ ಬಸದಿ, ಭಂಕೂರ

ಮಧ್ಯದ ಗರ್ಭಗೃಹದಲ್ಲಿ ಕ್ರಿ.ಶ. 11ನೆಯ ಶತಮಾನದ್ದೆನಿಸುವ ಕಪ್ಪುಕಲ್ಲಿನ ಆರು ಅಡಿಗೂ ಮಿಕ್ಕಿರುವ ಕಾರ್ಯೋತ್ಸರ್ಗ (ನಿಂತ) ಭಂಗಿಯ ಮುಕ್ಕೊಡೆ, ಭಾಮಂಡಲ, ಭುಜದ ಅಕ್ಕಪಕ್ಕ ಚಾಮರಗಳನ್ನು ಹೊಂದಿರುವ 16ನೆಯ ತೀರ್ಥಂಕರ ಭಃ ಶಾಂತಿನಾಥರ ಪ್ರತಿಮೆ ಇದೆಂದು ಪ್ರತೀತಿ ಇದೆ. ಈ ಪ್ರತಿಮೆಯ ಪಾದ ಪೀಠದಲ್ಲಿರುವ ಕ್ರಿ.ಶ. 13ನೆಯ ಶತಮಾನದ್ದೆನಿಸುವ ಶಾನದಲ್ಲಿ ಶ್ರೀ ಕನಕಕೀರ್ತಿ ಎಂಬುದು ಸ್ಪಷ್ಟವಾಗಿದ್ದು ಉಳಿದ ಅಕ್ಷರಗಳು ಮಾಸಿವೆ.



ಪಾರ್ಶ್ವನಾಥರ ಪ್ರತಿಮೆ, ಭಂಕೂರ

ನವರಂಗದ ದಕ್ಷಿಣ ದಿಕ್ಕಿನ ಗರ್ಭಗೃಹದಲ್ಲಿ ಬೆಣಚುಕಲ್ಲಿನ ಬೂದು ಬಣ್ಣದ ಆರಡಿಗೂ ಎತ್ತರದ ಮಹಾವೀರರ ಪಲ್ಯಂಕಾಸನದ ಪ್ರತಿಮೆಗೆ ಭಾಮಂಡಲ ಮಾತ್ರ ಇದೆ. ಕೆಳಗೆ ಸಿಂಹಪೀಠವಿದೆ. ಪಶ್ಚಿಮ ದಿಕ್ಕಿಗೆ ಪ್ರಣಾಳವಿದೆ. ಜಿನಬಿಂಬ ತುಂಬಾ ಆಕರ್ಷಕವಾಗಿದ್ದು ಇದು ಕ್ರಿ.ಶ. 9ನೆಯ ಶತಮಾನ ದ್ದೆಂದು ತೋರುತ್ತದೆ. ಈ ಗರ್ಭಗೃಹದ ಎದುರಿಗೆ ಉತ್ತರದಿಕ್ಕಿ ನಲ್ಲಿರುವ ಪಾರ್ಶ್ವನಾಥರ ಸಮಭಂಗಿಯ (ಖಡ್ಗಾಸನದ) ಪ್ರತಿಮೆಗೆ ತಲೆಯ ಹಿಂದೆ ಪ್ರಭಾಮಂಡಲ, ಇದರ ಮೇಲೆ ಏಳು ಹೆಡೆಯ ಸರ್ಪ, ಅದರ ಮೇಲ್ಭಾಗದಲ್ಲಿ ಮೂರು ಲೋಕದ ಸ್ವಾಮಿತ್ವದ ಮುಕ್ಕೊಡೆ, ಕತ್ತಿನ ಸುತ್ತಲು ಗುಂಗುರ ಕೂದಲು, ಭುಜಗಳ ಅಕ್ಕಪಕ್ಕ ಚಾಮರಗಳು, ಪಾದದ ಬಳಿ ಬಲಕ್ಕೆ ಧರಣೇಂದ್ರಯಕ್ಷ, ಎಡಕ್ಕೆ ಪದ್ಮಾವತಿ ಯಕ್ಷಿಯ ಕುಳಿತ ಕುರು ಶಿಲ್ಪಗಳಿವೆ. ಈ ಯಕ್ಷ ಶಿಲ್ಪಗಳಿಗೆ ಕಿರೀಟದ ಮೇಲೆ ಮೂರು ಹೆಡೆಯ ನಾಗ, ಕರ್ಣಕುಂಡಲ, ಕಂಠಹಾರ, ಎದೆಹಾರ, ಭಜದಾ ಭರಣ, ತೋಳುಬಂಧಿ, ಕಂಕಣ, ಕಾಲ್ಕಡಗಗಳನ್ನು ಕೆತ್ತಿದ್ದಾರೆ. ಚತುರ್ಭಜಗಳುಳ್ಳ ವಿಗ್ರಹಗಳು ಪಾಶ, ಅಂಕುಶ, ಬೀಜಪೂರ ಫಲ, ವರದಹಸ್ತದವರಾಗಿದ್ದಾರೆ. ಈ ಪಾರ್ಶ್ವನಾಥರ ಪ್ರತಿ ಮೆಯೂ ಕ್ರಿ.ಶ. 9ನೇ ಶತಮಾನದ ಆರಂಭದ ಕಾಲದ್ದೆಂದು ತೋರುತ್ತದೆ.

ಈ ತ್ರಿಕೂಟ ಮಂದಿರದ ಉತ್ತರಕ್ಕಿರುವ ಗರ್ಭಗೃಹದಲ್ಲಿ ಚೋವಿಸತೀರ್ಥಂಕರರ ಮಧ್ಯದ ಪ್ರತಿಮೆಯ ತಲೆಯ ಹಿಂದೆ ಪ್ರಭಾಮಂಡಲ, ಮುಕ್ಕೊಡೆ, ಭುಜದ ಮೇಲೆ ಹರಡಿರುವ ಗುಂಗುರುಕೂದಲು, ಎಡಹಸ್ತದ ಮೇಲೆ ಬಲಹಸ್ತವನ್ನಿರಿಸಿ ಧ್ಯಾನಮಗ್ನ ಈ ಬಿಂಬದ ಬೆಂಗಡೆಯಲ್ಲಿ 23 ಕುಳಿತ ಕಿರು ಜಿನಬಿಂಬಗಳಿವೆ.

ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಪ್ರಥಮ ತೀರ್ಥಂಕರ ವೃಷಭನಾಥರ ಪ್ರತಿಮೆಗಳಿಗೆ ಮಾತ್ರ ಕತ್ತು ಮತ್ತು ಭುಜದ ಮೇಲೆ ಗುಂಗುರುಕೂದಲನ್ನು ಬಿಡಿಸುವುದು ವಾಡಿಕೆ. ಕತ್ತಿನ ಮೇಲೆ ಕೇಶವಿರುವ ಪ್ರಾಣಿ ಕೇಸರಿ (ಸಿಂಹ) ಅಂತೆಯೇ ಕತ್ತಿನ ಸುತ್ತ ಭುಜದ ಮೇಲೆ ಕೂದಲಿದ್ದುದರಿಂದ ವೃಷಭನಾಥರಿಗೆ ಕೇಸರಿ ನಾಥ(ಸಿಂಹಸದೃಶ)ನೆಂದು ಕರೆಯುತ್ತಾರೆ. ಆದರೆ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕಲಬುರ್ಗಿ ಪರಿಸರದಲ್ಲಿ ಕ್ರಿ.ಶ. 2ನೆಯ ಶತಮಾನದಿಂದ ಚಾಲ್ತಿಯಲ್ಲಿದ್ದ ಕ್ರಿ.ಶ. 7ನೆಯ ಶತಮಾನದವರೆಗೂ ಪ್ರಭಾವಶಲಿಯಾಗಿದ್ದ (ದಿಗಂಬರ ಶ್ವೇತಾಂಬರ ಪಂಥಗಳ ಮಿಶ್ರಿತ) ಯಾಪನೀಯ ಸಂಘ, ಪ್ರಖ್ಯಾತ ಜೈನಾಚಾರ್ಯರನ್ನು ಕವಿ ವಿದ್ವಾಂಸರನ್ನು ಶ್ರಾವಕ ಸಮುದಾಯವನ್ನು ಅಳರಸರ ಪರಂಪರೆಯನ್ನು ಹೊಂದಿತ್ತು.

ಈ ಕಾಲಘಟ್ಟದಲ್ಲಿ ನಿರ್ಮಾಣಗೊಂಡ ವಿದ್ಯಾಕೇಂದ್ರಗಳು, ಜೈನ ಮಂದಿರಗಳು, ಮಹತ್ವಪೂರ್ಣ ಸಾಹಿತ್ಯಿಕ ಕೃತಿಗಳು ಯಾಪನೀಯರ ಕಾಲದವುಗಳೇ, ಇವರು ಶಿಲ್ಪ ವಾಸ್ತುಶಿಲ್ಪದಲ್ಲಿ ಪರಿವರ್ತನೆ ತಂದರು. ಹೀಗಾಗಿ ಈ ಭಾಗದ ತಪೋನಿರತ ಜಿನಬಿಂಬಗಳನ್ನು ಕೆತ್ತುವಾಗ ಕತ್ತಿನ ಸುತ್ತ ಭುಜದವರೆಗೆ ಇಳಿಬಿದ್ದ ಗುಂಗುರು ಕೂದಲನ್ನು ಕೆತ್ತುವ ಪರಿಪಾಠ ಬೆಳೆದು ಬಂದಿತು. ವೃಷಭನಾಥರ ಹೊರತಾಗಿ ಇತರ ತೀರ್ಥಂಕರರುಗಳ



ತೀರ್ಥಂಕರ ಮೂರ್ತಿ, ಭಂಕೂರ

ಜಿನಬಿಂಬಗಳಿಗೂ ಭುಜದ ಮೇಲೆ ಗುಂಗುರು ಕೂದಲು ಇಳಿಬಿದ್ದಂತೆ ಕೆತ್ತಿದ್ದು ಈ ಭಾಗದಲ್ಲಿ ಸರ್ವೇ ಸಾಮಾನ್ಯವಾಗಿ ಬಿಟ್ಟಿತು. ಹೀಗಾಗಿ ಭಂಕೂರಿನ ಜಿನಪ್ರತಿಮೆಗಳು ಯಾಪನೀಯರ ಕಾಲದವುಗಳು.

ಈ ಬಸದಿಯಲ್ಲಿರುವ ಶಿಲಾಫಲಕ ತುಂಬಾ ಮಹತ್ವದ್ದು, ಇದರಲ್ಲಿ ಎರಡು ಭಾಗಗಳಲ್ಲಿ ಶಿಲ್ಪಗಳಿವೆ. ಮೇಲಿನ ಭಾಗದಲ್ಲಿ ಕುಳಿತ ಜಿನಬಿಂಬದ ಮೇಲೆ ಮುಕ್ಕೊಡೆ ಇರುವುದರಿಂದ ಇದೊಂದು ತೀರ್ಥಂಕರರ ಶಿಲ್ಪ ಕೆಳಗಿನ ಭಾಗದಲ್ಲಿ ಧ್ಯಾನ ಮುದ್ರೆಯ ಎರಡು ಕುಳಿತ ವಿಗ್ರಹಗಳನ್ನು ಶ್ರವಣಬೆಳಗೋಳದ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಆ ಕಾಲದ ಸರ್ವಶ್ರೇಷ್ಠ ಸಮರ್ಥ ಜೈನಾಚಾರ್ಯರಾದ ಕುಂದಕುಂದರು, ಉಮಾಸ್ವಾಮಿ (ಗೃದ್ಧಪಿಂಚಾಚಾರ್ಯರು) ಹಾಗೂ ಸಂತಭದ್ರರು, ಭಂಕೂರಿನ ಜಿನಮಂದಿರದಲ್ಲಿನ ಶಿಲಾಫಲಕದಲ್ಲಿರುವ ಎರಡು ಜಿನಮುನಿಗಳ ಬಿಂಬಗಳು. ಕುಂದಕುಂದ ಹಾಗೂ ಉಮಾಸ್ವಾಮಿಯವರ ಶಿಲ್ಪಗಳಿವಾಗಿರಬಹುದೆಂದು ಖ್ಯಾತ ಇತಿಹಾಸ ತಜ್ಞರಾದ ದಿ. ಡಾ. ಪಿ.ಬಿ. ದೇಸಾಯಿಯವರು ಊಹಿಸಿದ್ದಾರಲ್ಲದೆ ಇಲ್ಲೊಂದು ಜೈನ ವಿದ್ಯಾಕೇಂದ್ರವೂ ಇರಬೇಕೆಂದು ತರ್ಕಿಸಿದ್ದಾರೆ.

22ನೆಯ ತೀರ್ಥಂಕರ ನೇಮಿನಾಥರ ಯಕ್ಷ-ಯಕ್ಷಿ (ಸರ್ವಾಹ್ಣ-ಕೂಷ್ಮಾಂಡಿನಿ) ಶಿಲ್ಪಗಳು ಇಲ್ಲಿರುವುದರಿಂದ ನೇಮಿನಾಥವ ಜಿನಾಲಯವೊಂದು ಭಂಕೂರಿನಲ್ಲಿದ್ದಿರಬೇಕು. ಈಗ ರಾಮಲಿಂಗೇಶ್ವರ ದೇವಾಲಯವಾಗಿ ಮಾರ್ಪಟ್ಟ ಬಸದಿ ಅಥವಾ ಸದರಿ ಪಂಚಕೂಟ ಬಸದಿಯ ದಕ್ಷಿಣ ದಿಕ್ಕಿನ ವಾಸಕ್ಕಾಗಿ ಬಳಸುತ್ತಿರುವ ಭಾಗ, ನೇಮಿನಾಥ ಜಿನಾಲಯವಾಗಿದ್ದಿರಬಹುದು. ದಪ್ಪ ಬೆಣಚು ಕಲ್ಲಿನ ಎರಡುವರೆ ಅಡಿ ಎತ್ತರದ ಕೂಷ್ಮಾಂಡಿನಿ ದ್ವಿಭುಜೆ, ಬಲಹಸ್ತದಲ್ಲಿ ಮಾವಿನ ಹಣ್ಣಿನ ಗೋಂಚಲನ್ನು, ಎಡಗೈಯಲ್ಲಿ ಬೀಜಪೂರ ಫಲವನ್ನು (ಸಂತಾನ ನೀಡುವುದರ ಸಂಕೇತ ಬೀಜಪೂರ ಫಲ) ಹಿಡಿದಿದ್ದಾಳೆ. ತಲೆಯ ಹಿಂದೆ ಬೃಹತ್ ತುರುಬಿದೆ. ಹಿಂದುಗಡೆ ಮಾವಿನ ಮರವಿದೆ. ತುತ್ತತುದಿಯಲ್ಲಿ ಕುಳಿತ ಕಿರು ಜಿನ ಬಿಂಬವಿದೆ. ಆಕೆಯ ವಾಹನ ಸಿಂಹ, ಮಕ್ಕಳಾದ ಪ್ರಿಯಂಕರ ಶುಭಂಕರರ ಕಿರು ಶಿಲ್ಪಗಳನ್ನು ಕೆತ್ತಿದ್ದಾರೆ.

ಈ ಜಿನಾಲಯದಲ್ಲಿ ಪದ್ಮಾವತಿ ಸಿಂಧೂ (ಚಂದ್ರ) ಲೇಪಿತ ಕ್ಷೇತ್ರಪಾಲ ಪ್ರತಿಮೆಗಳಿವೆ. ಕ್ರಿ.ಶ. 12ನೇ ಶತಮಾನದ್ದಾಗಿರಬಹುದಾದ ಕಠಾರಿ ಹೊಂದಿದ 1.5 ಅಡಿ ಎತ್ತರದ, ಅರಸು ಮಾಂಡಲಿಕ, ಸೇನಾಪತಿ ದಂಪತಿಗಳದ್ದಾಗಿರಬಹುದಾದ ಪ್ರಮುಖ ಶಿಲ್ಪ ಇಲ್ಲಿದೆ. ಪ್ರವೇಶದ್ವಾರದ ಅಕ್ಕಪಕ್ಕ ವಿವಿಧ ವಾದ್ಯಗಾರರಾದ ಶಿಲಾಬಾಲಿಕೆಯರ ಶಿಲ್ಪಗಳು ತುಂಬಾ ಆಕರ್ಷಕವಾಗಿವೆ.

ಊರ ಮಧ್ಯದಲ್ಲಿ ಯಂಕಲಮ್ಮ ಗುಡಿಯ ಬದಿಯಲ್ಲಿನ ಕರಿಕಲ್ಲಿನ ನಾಲ್ಕಡಿ ಎತ್ತರದ ಪಲ್ಯಂಕಾಸನದ ಭ. ಪಾರ್ಶ್ವನಾಥರ ಪ್ರತಿಮೆ ತುಂಬಾ ಸುಂದರವಾಗಿದೆ. ದುರ್ದೈವದಿಂದ ಕತ್ತಿನ ಭಾಗ ಸೀಳಿದ್ದರೂ ಜನ ಪುನಃ ಹೊಂದಿಸಿಕೊಡಿಸಿದ್ದಾರೆ. ಈ ಬಿಂಬದ ಬೆನ್ನಿಗೆ ಕತ್ತಿನ ಭಾಗ ಸೀಳಿದ್ದರೂ ಜನ ಪುನಃ ಹೊಂದಿಸಿ ಕೊಂಡಿದ್ದಾರೆ. ಈ ಬಿಂಬದ ಬೆನ್ನಿಗೆ ಒರಗುದಿಂಬಿದೆ. ಮುಕ್ಕೊಡೆ, ಭಾಮಂಡಲ, ಏಳು ಹೆಡೆಯಸರ್ಪ ತಲೆಯ ಮೇಲಿದೆ. ಅಕ್ಕಪಕ್ಕ ತೊಡೆಯವರೆಗೆ ದೇಹಹೊಂದಿರುವ ತ್ರಿಭಂಗಿಯ ಚಾಮರಧಾರಿಗಳ ಕೆಳಗೆ ಆನೆಯ ತಲೆಯ ಮೇಲೆ ಲಂಘಿಸಿ ನಿಂತ ಸಿಂಹಗಳಿವೆ. ಈ ಪ್ರತಿಮೆಯ ಹತ್ತಿರ ಮೂರವರೆ ಅಡಿ ಎತ್ತರದ ಕಪ್ಪು ಶಿಲೆಯ ಸರ್ವಾಹ್ಣ ಯಕ್ಷನ ಶಿಲ್ಪವಿದೆ. ಸುಖಾಸೀನ ಭಂಗಿಯ ದ್ವಿಭುಜ ಪ್ರತಿಮೆಯ ಬಲಗೈಯಲ್ಲಿ ಹೊಟೊಂಗೆ, ಎಡಗೈಯಲ್ಲಿ ಬೀಜಪೂರ ಫಲವಿದೆ. ಗೋಪುರಾಕಾರದ ಕಿರೀಟ, ಕರ್ಣ ಕುಂಡಲ, ಕಂಠಹಾರ, ಎದೆಹಾರ ಕೇಯೂರ, ಕಂಕಣ, ಉಪವೀತ, ಯಜ್ಞೋಪವೀತ, ಕಾಲ್ಕಡಗಗಳುಳ್ಳ ಈ ಬಿಂಬದ ಪಾದದ ಕೆಳಗೆ ಅವನ ವಾಹನ ಆನೆಯನ್ನು ಕೆತ್ತಿದ್ದಾರೆ.

ಈ ಊರಿನಲ್ಲಿರುವ ದ್ವಿತಳಾಹಾರದ ವಿಮಾನವುಳ್ಳ (ದಿಕ್ಕೂಟ) ಜಿನಾಲಯ ಈಗ ರಾಮಲಿಂಗೇಶ್ವರ ದೇವಾಲಯವಾಗಿ ಮಾರ್ಪಟ್ಟಿದೆ. ಪ್ರವೇಶ ದ್ವಾರದ ಮೇಲೆ ಮಧ್ಯಭಾಗದಲ್ಲಿ ನಿಂತ ಮೂರು ಜಿನಬಿಂಬಗಳಿವೆ. ಮಧ್ಯದಲ್ಲಿನ ಜಿನಬಿಂಬ ಕೊಂಚ ಎತ್ತರವಾಗಿದೆ. ಈ ಮೂರು ರತ್ನತ್ರಯ (ಶಾಂತಿನಾಥ ಕುಂಥುನಾಥ ಅರನಾಥ) ಪ್ರತಿಮೆಗಳಾಗಿರಬಹುದು. ಗರ್ಭಗೃಹ ಅಂತರಾಳ, ನವರಂಗ, ಮುಖಮಂಟಪದ ಈ ಬಸದಿಯಲ್ಲಿನ ಜಿನಬಿಂಬಗಳನ್ನು ತೆಗೆದು ಹಾಕಿ ಶಿವಲಿಂಗವನ್ನು ಸ್ಥಾಪಿಸಿದ್ದಾರೆ. ಇದೇ ಮಂದಿರದ ಆವರಣದಲ್ಲಿರುವ ಗಿಡದ ಕೆಳಗಿರುವ ಚಿಕ್ಕಗುಡಿಯಲ್ಲಿ ಪದ್ಮಾವತಿ ಯಕ್ಷಿಯ ಕಲ್ಲಿನ ಪ್ರತಿಮೆ ಇದೆ. ನಾಲ್ಕು ಕೈಗಳನ್ನು ಹೊಂದಿದ್ದು ಬಲ ಮೇಲಗೈಯಲ್ಲಿ ಪಾಶ. ಬಲಕೆಳಗೈ ವರದಹಸ್ತ, ಎಡಮೇಲುಗೈಯಲ್ಲಿ ಆಕುಂಶ ಎಡದ ಕೆಳಗೈಯಲ್ಲಿ ಬೀಜಪೂರ ಫಲವಿದೆ. ಕಿರೀಟದ ಮಧ್ಯಭಾಗದಲ್ಲಿ ಭಗವಾನ ಪಾರ್ಶ್ವನಾಥರ ಕುಳಿತ ಕಿರು ಜಿನಬಿಂಬದಿಂದಾಗಿ ಇದು ಪದ್ಮಾವತಿ ವಿಗ್ರಹ ಎನ್ನುವುದರಲ್ಲಿ ಸಂಶಯವೇ ಇಲ್ಲ. ಜನ ಇದನ್ನು ಕಾಳಮ್ಮಾಯಿ, ಪಾರ್ವತಿ ದೇವಿಯೆಂದು ಪೂಜಿಸುತ್ತಾರೆ. ಕಲಾಕೌಶಲ್ಯದಿಂದ ಕೂಡಿದ ದೊಡ್ಡಗಾತ್ರದ ಮಹಾವೀರರ ಮೂರ್ತಿಯೊಂದು ಊರ ಸಹನಿಹದಲ್ಲಿರುವ ಶ್ರೀ ಮಾರ್ಥಂಡ ರಾವ ಕುಲಕರ್ಣಿಯವರ ಹೊಲದಲ್ಲಿ ಬಿದ್ದಿದೆ. ಈ ನಗ್ನ ವಿಗ್ರಹವನ್ನು ಜನ ಬತ್ತಲೆ ಗೌರಮ್ಮನೆಂದು ಕರೆಯುತ್ತಾರೆ. ಸಂತಾನಾಪೇಕ್ಷೆಯುಳ್ಳ ಮಹಿಳೆಯರು ಈ ವಿಗ್ರಹವನ್ನು ಪೂಜಿಸುವದುಂಟು. ಈ ಮೂರ್ತಿಯ ಗಾತ್ರದಷ್ಟೇ ಇನ್ನೊಂದು ಜನ ತಪ್ಪಾಗಿ ಗ್ರಹಿಸಿದ್ದಾರೆ. ವಾಸ್ತವವಾಗಿ ಈ ಪ್ರತಿಮೆ ಅಂಬಿಕೆ (ಕೂಷ್ಮಾಂಡಿನಿ)ಯದು. ದ್ವಿಭುಜೆಯಾದ ಈಕೆ ಮಾವಿನ ಟೊಂಗೆಯನ್ನು ಹಿಡಿದಿದ್ದಾಳೆ. ಆಕೆಯ ಮಕ್ಕಳಾದ ಪ್ರಿಯಂಕರ, ಶುಭಂಕರನ್ನು ವಿಗ್ರಹದ ತುತ್ತ ತುದಿಯಲ್ಲಿ ಕುಳಿತ ಕಿರು ಜಿನ ಬಿಂಬವನ್ನು ಕೆತ್ತಿದ್ದಾರೆ. ಈ ವಿಗ್ರಹಗಳಾಧಾರದ ಮೇಲೆ ಈ ಹೊಲದಲ್ಲಿಯಾಗಲಿ ಅದರ ಆಸುಪಾಸಿನಲ್ಲಿ ಬಸದಿಯೊಂದು ಇದ್ದಿರಬಹುದು.

ಊರಿನ ಇನ್ನೊಂದು ಕಡೆ ಬಿದ್ದಿರುವ ತೀರ್ಥಂಕರ ಸಿಂಹ ಪೀಠವನ್ನು ಜನ ಅಣಕಿಸುವ ಕಲ್ಲು ಎನ್ನುತ್ತಾರೆ. ಚಿಕ್ಕಮಕ್ಕಳಿಗೆ

ಬಾಯಿ ಗದ್ದಕ್ಕೆ ಕಜ್ಜಿತರದ ಬೊಕ್ಕೆಗಳಾದಾಗ (ಗದ್ದದ ಗೌರಮ್ಮ ನೆಂದೆನ್ನುತ್ತಾರೆ) ಅವರು ಆ ಕಲ್ಲಿನ ಮುಂದೆ ಅಣಕಿಸದರೆ ರೋಗ ಕಡಿಮೆಯಾಗುವುದೆಂಬ ಮೂಢನಂಬಿಕೆ ಚಾಲ್ತಿಯಲ್ಲಿದೆ. ಹಾಗೆಯೇ ಇನ್ನೊಂದು ಸವೆದ ಜೈನ ಶಿಲ್ಪಕ್ಕೆ ಮೈಕೈ ಉಳುಕಿಸಿ ಕೊಂಡವರು ಉಸಿರು ಸಿಕ್ಕವರು, ಕರು ಗಡ್ಡೆಗಳಾದವರು ನೋವಾದ ಭಾಗವನ್ನು ಈ ಜೈನ ಶಿಲ್ಪಕ್ಕೆ ತಿಕ್ಕುವುದರಿಂದ ಗುಣವಾಗುವುದೆಂಬ ಚಮತ್ಕಾರಿಕ ಭ್ರಮೆಗೊಳಗಾದ ಜನರಿಂದ ಪ್ರತಿಮೆ ದಿನೆ ದಿನೆ ಅಂದಗೆಡುತ್ತಾ ಹಾಳಾಗಹತ್ತಿದೆ. ಇವೆಲ್ಲವೂ ನಮ್ಮ ಪೂರ್ವಿಕರು ನಮಗಾಗಿ ಬಿಟ್ಟು ಹೋದ ಕಲೆ ಮತ್ತು ಐತಿಹಾಸಿಕ ಮಹತ್ವದ ಸುಂದರ ಜೈನಾವಶೇಷಗಳನ್ನು ದುರವಸ್ಥೆಗೆ ತಳ್ಳಿವೆ.

(ಖಎನ್‌ಎ)

ಭಾ

ಭಾಗ್ಯವಂತಪ್ಪ ಪತ್ತಾರ: ರಂಗಭೂಮಿ ಕಲಾವಿದರು. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ತಳಕಲ್ ಗ್ರಾಮದವರು. ಕೇವಲ ನಾಲ್ಕನೆಯ ತರಗತಿಯವರೆಗೆ ಓದಿದ್ದು, ತಮ್ಮ 12ನೆಯ ವಯಸ್ಸಿನಲ್ಲಿಯೇ ಮುಖಕ್ಕೆ ಬಣ್ಣ ಬಳಿದುಕೊಂಡು 'ಬಾಲಚಂದ್ರ' ಎಂಬ ನಾಟಕದಲ್ಲಿ ಪ್ರಥಮ ಬಾರಿಗೆ ಬಾಲ ನಟನಾಗಿ ಅಭಿನಯಿಸಿ, ಪ್ರೇಕ್ಷಕರಿಂದ ಹಾಗೂ ಊರಿನ ಗಣ್ಯರಿಂದಲೂ ಮೆಚ್ಚುಗೆ ಗಳಿಸಿಕೊಂಡರು. ತಾಲ್ಲೂಕಿನ ತಳಕಲ್ ಗ್ರಾಮದ ಅಂದಿನ ಪ್ರಖ್ಯಾತ ನಾಟಕ ಕಂಪನಿ ವೆಂಕಟರೆಡ್ಡಿ ಅವರ ಶ್ರೀ ರಂಜನಿ ನಾಟಕ ಕಂಪನಿ, ಮಂಡಲಗಿರಿ ಗವಾಯಿ ಕಂಪನಿ, ಸುರೇಶ ಶೆಟ್ಟಿ ಕಂಪನಿ, ನ್ಯಾಮತಿ ಕಂಪನಿ, ಹುಚ್ಚೇಶ್ವರ ಕಂಪನಿ, ಶ್ರೀ ಶಕ್ತಿ ಕಲಾ ನಾಟ್ಯ ಸಂಘ ಬಿಜಾಪೂರ ಕಂಪನಿ, ಪಿ.ಬಿ. ಧುತ್ತರಗಿ ಕಂಪನಿ, ಮಾರುತೇಶ ಮಾಂಡ್ರೇ ಕಂಪನಿ, ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿಗಳಲ್ಲಿ ಸೇರಿಕೊಂಡು ಹೆಸರಾಂತ ಕಲಾವಿದರೆನಿಸಿಕೊಂಡಿದ್ದರು. ಹಾಗೆಯೇ ಅಂದಿನ ಹೆಸರಾಂತ ಕಲಾವಿದರಾಗಿದ್ದ ಫಕ್ರುದ್ದೀನ್, ಎಲಿವಾಳ ಸಿದ್ದಯ್ಯ ಸ್ವಾಮಿ, ಧುತ್ತರಗಿ ರಹಿಮಾನವ್ವ, ಅಪ್ಪರಾಜ ಇನ್ನೂ ಮುಂತಾದ ಹಿರಿಯ ಶ್ರೇಷ್ಠ ಕಲಾವಿದರೊಂದಿಗೆ ಶ್ರೀಯುತರು ನಟಿಸಿದರು. 1980ರಲ್ಲಿ ಜುಬೇದಾಬಾಯಿ ಅವರ ಕಂಪನಿಯಲ್ಲಿಯೂ ಸಹ ನಟಿಸಿದ್ದಾರೆ.

ಇಂದಿಗೂ ಇವರದು ಮಧುರ ಕಂಠ, ಧ್ವನಿಯ ಶೈಲಿಗಳಿಂದ ಸ್ತ್ರೀ ಪಾತ್ರ ಮತ್ತು ಪುರುಷ ಪಾತ್ರಗಳಲ್ಲಿ ನಟಿಸುತ್ತಾ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಅತ್ಯಂತ ಪ್ರಸಿದ್ಧಿ ಪಡೆದರು. ಸ್ತ್ರೀ ಪಾತ್ರದಲ್ಲಿ ಇವರು ನಟಿಸಿದರೆ, ನಿಜಕ್ಕೂ ಸ್ತ್ರೀ ಎಂದೆನಿಸುವ ರೀತಿಯಲ್ಲಿ ಅಭಿನಯಿಸಿ ಸೈ ಎನಿಸಿಕೊಂಡವರು. ಕರ್ನಾಟಕ ಬೇರೆ ಬೇರೆ ಜಿಲ್ಲೆ, ನಗರ, ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಕಲಾಸೇವೆ ಗೈದಿರುವ ಶ್ರೇಯಸ್ಸು ಇವರದು.

ಮಾಂಡ್ರೆ ಕಂಪನಿಯಲ್ಲಿ ಹಲವಾರು ವರ್ಷಗಳಿಂದ ತಬಲಾ ವಾದಕರಾಗಿ ಕೆಲಸ ನಿರ್ವಹಿಸಿ, ನಟರಾಗಿ ಕೆಲವೊಂದು ಸಂದರ್ಭದಲ್ಲಿ ಅಭಿನಯಿಸಿದ್ದುಂಟು ಸುಮಾರು 40–50 ವರ್ಷಗಳವರೆಗೂ ರಂಗ ಕಲಾವಿದರಾಗಿ ಸೇವೆ ಸಲ್ಲಿಸಿ, ಇತ್ತೀಚಿನ ದಿನಗಳಲ್ಲಿ ಶ್ರೀಯುತರು ನಾಟಕ, ಜಾತ್ರೆ, ಪುರಾಣ, ಪ್ರವಚನಗಳಲ್ಲಿ ತಬಲಾ ವಾದಕರಾಗಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಆಕಾಶವಾಣಿ ಕಲಾವಿದರೂ ಆಗಿದ್ದಾರೆ. ಇವರ ರಂಗಗೀತೆಗಳು ಮತ್ತು ಭಕ್ತಿಗೀತೆಗಳು ಇಂದಿಗೂ ಪ್ರಸಾರಗೊಳ್ಳುತ್ತಿವೆ. ವೃತ್ತಿಯಿಂದ ಅಕ್ಕಸಾಲಿಗರಾದರೂ ತಮ್ಮ ಪ್ರವೃತ್ತಿಯನ್ನು ಕಾಯ್ದುಕೊಂಡು ಬಂದಿರುವ ಪತ್ತಾರ ಒಬ್ಬ ಪ್ರತಿಭಾನ್ವಿತ ಕಲಾವಿದ.

(ವಿಎಸ್‌ಎಸ್)

ಭೀ

ಭೀಮಣ್ಣ ಮೋನಪ್ಪ ಕಂಬಾರ: ಲೋಹಶಿಲ್ಪಿ. ಯಾದಗಿರಿ ಜಿಲ್ಲೆಯ ಗಾಜರಕೋಟ ಗ್ರಾಮದಲ್ಲಿ 21ನೆಯ ಫೆಬ್ರುವರಿ 1932 ರಂದು ಜನಿಸಿದರು. ಬಾಲ್ಯದಲ್ಲೆ ತಂದೆ ತಾಯಿಯನ್ನು ಕಳೆದು ಕೊಂಡರು. ಸಹೋದರ ಸಿದ್ದಣ್ಣನೊಂದಿಗೆ ತನ್ನ ಮಾವನವರಾದ ಲೋಹಶಿಲ್ಪಿ ಕಾಳಪ್ಪ ಗ್ವಾಡಿ ಅವರಲ್ಲಿ 12 ವರ್ಷ ಕಂಬಾರಿಕೆ ಮತ್ತು ಲೋಹ ಶಿಲ್ಪಕಲೆಯ ಅಭ್ಯಾಸ ಮಾಡಿ ನೈಪುಣ್ಯ ಪಡೆದರು. ಇವರು ಆಧುನಿಕ ಯುಗದ ಸ್ಪರ್ಧಾತ್ಮಕ ಬದುಕಿನಲ್ಲಿ ಹೋಗದೆ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಸಗರನಾಡಿನ ಸುರಪುರದ ಜನಪದ ಶೈಲಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.



ಇವರು ರಚಿಸಿದ ಶಿಲ್ಪಕಲಾಕೃತಿಗಳೆಂದರೆ, ನಂದಿಯ ಮೇಲೆ ಆಸೀನರಾಗಿರುವ ಶಿವಪಾರ್ವತಿ, ಅಶ್ವರೂಢಮಲ್ಲಯ್ಯ, ಆನೆ ಅಂಬಾರಿ ಮೇಲೆ ಕುಳಿತ ಭೀರಪ್ಪ ದೇವರು, ಗೌರಿ, ಗಣೇಶ, ಕಾಳಿಕಾದೇವಿ ಅಲ್ಲದೆ ಅನೇಕ ಗ್ರಾಮದೇವತೆಗಳನ್ನು ನಿರ್ಮಿಸಿದ್ದಾರೆ. ಇವರ ಶಿಲ್ಪಕಲಾಕೃತಿಗಳು ರಾಜ್ಯ ಹಾಗೂ ನೆರೆ ರಾಜ್ಯಗಳಲ್ಲಿ ಸಂಗ್ರಹಗೊಂಡಿವೆ. ಹಾಗೂ ಇವರ ಶಿಲ್ಪಕೃತಿಗಳು ಶಿಲ್ಪಿ ವೆಂಕಟಾಚಲಪತಿ ಬೆಂಗಳೂರು, ಚಿತ್ರಕಲಾವಿದ ವಿಜಯ ಹಾಗರಗುಂಡಗಿ ಗುಲ್ಬರ್ಗಾ, ಖ್ಯಾತ ಸಾಹಿತಿಗಳಾದ ಶಾಂತರಸ ರಾಯಚೂರು, ಚಿತ್ರಕಲಾವಿದ ಶ್ರೀ ಮೋಹನ್ ಎಚ್. ಸೀತನೂರ ಗುಲಬರ್ಗಾ, ಜರ್ಮನಿಯ ಡರ್ಮಸ್ಟಡ್‌ನಲ್ಲಿರುವ ಗಣಕ ವಿಜ್ಞಾನಿ ಶ್ರೀ ಬಸವರಾಜ ಪಾಟೀಲ ಹೀಗೆ ಇನ್ನೂ ಅನೇಕ ಗ್ಯಾಲರಿಯಲ್ಲಿ ಸಂಗ್ರಹಗೊಂಡಿವೆ.



ಲೋಹಶಿಲ್ಪ ಕಲಾಕೃತಿ

ಗಾಜರಕೋಟ ಎಂಬ ಕುಗ್ರಾಮದಲ್ಲಿ ಎಲೆಮರೆಯ ಕಾಯಿಯಂತೆ ಕಾಯಕ ನಿರತರಾದ ಕಂಬಾರರವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ ರ್‍ಯಾಮಸನ್ಸ್ ಕಲಾಪ್ರತಿಷ್ಠಾನ ಮೈಸೂರು, ಇವುಗಳ ಆಶ್ರಯದಲ್ಲಿ 2005ರಲ್ಲಿ ನಡೆದ ಲೋಹ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ರಾಮಸನ್ಸ್ ಕಲಾಪ್ರತಿಷ್ಠಾನದ ವತಿಯಿಂದ ಕಲಾ ಸನ್ಮಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇವರ ಕಲಾ ಬದುಕಿನಲ್ಲಿ ಇದೊಂದು ತಿರುವು ಎಂದೇ ಹೇಳಬಹುದು. ಇವರ ಶಿಲ್ಪಕೃತಿಗಳು ಸಗರನಾಡಿನ ಸುರಪುರ ಜನಪದ ಶೈಲಿಯ ಸೊಗಡನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡು ಜೀವ ತಳೆದಂತಿದೆ. ಲೋಹಶಿಲ್ಪ ಕಲೆಯಲ್ಲಿ ಇವರ ಅನುಪಮ ಸಾಧನೆ ಪರಿಗಣಿಸಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2006ನೇ ಸಾಲಿನ ಪ್ರಶಸ್ತಿ ನೀಡಿ ಗೌರವಿಸಿದೆ. **(ಪಿಪಿ)**

ಭೀಮರಾವ್ ಕುಲಕರ್ಣಿ: ಚಿತ್ರಕಲಾವಿದ. ತಮ್ಮ ಅಂತರಂಗದಲ್ಲಿ ಹುಟ್ಟಿದ ಭಾವನೆಗಳನ್ನು ಕ್ಯಾನ್ವಾಸ್ ಮೇಲೆ ಚಿತ್ರಗಳ ಮುಖಾಂತರ ಸಮಾಜದ ಮುಂದೆ ತೆರೆದಿಡುವ ಯುವ ಕಲಾವಿದ. ಮೂಲತಃ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊರವಿಯ ಸುಸಂಸ್ಕೃತ ಬ್ರಾಹ್ಮಣ ಮನೆತನದ ಜನಾರ್ದನರಾವ ಕುಲಕರ್ಣಿಯವರ ಮಗ. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಿಂದಲೇ ಚಿತ್ರಕಲೆಯತ್ತ ಆಕರ್ಷಿತರಾದವರು.

ಕಲಬುರ್ಗಿ ಜಿಲ್ಲೆಯಲ್ಲಿ ಅರಣ್ಯ, ದಟ್ಟಕಾಡು, ನಿಸರ್ಗ ಸೌಂದರ್ಯ ನೋಡಬೇಕೆಂದರೆ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ. ಇಂಥ ಪರಿಸರದಲ್ಲಿ ಹುಟ್ಟಿದ ಇವರು ತಮ್ಮ ಸುತ್ತಮುತ್ತಲಿನ ಪರಿಸರದಿಂದ ಆಕರ್ಷಿತರಾದರು. ಹಾಗೆ, ಗುಬ್ಬಚ್ಚಿಗಳ ಚಿತ್ರದೊಂದಿಗೆ ಆರಂಭವಾದ ಅವರ ಕಲೆ ನಿರಂತರವಾಗಿ ಸಾಗಿದೆ. ಇವರ ಕಲಾಕೃತಿಗಳನ್ನು ಕಂಡಾಗ, ಇವರನ್ನೊಬ್ಬ ಮಹಾನ್ ಕಲಾವಿದರನ್ನಾಗಿಸುವ ಭರವಸೆಯನ್ನು ಮೂಡಿಸುತ್ತದೆ. ತಮ್ಮ ಪ್ರಾಥಮಿಕ ಶಿಕ್ಷಣ ಹೈದರಾಬಾದಿನಲ್ಲಿ, ಪ್ರೌಢ ಶಿಕ್ಷಣವನ್ನು ಚಿಂಚೋಳಿಯ ಸರಕಾರಿ ಪ್ರೌಢ ಶಾಲೆಯಲ್ಲಿ ಮುಗಿಸಿ,

ಅನಂತರ ಬೀದರ ಜಿಲ್ಲೆ ಹುಮನಾಬಾದಿನ ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಮಾಡಿ, ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ಡಿಪ್ಲೋಮಾ ಪದವಿ ಪಡೆದ ನಂತರ ಚಿತ್ರಕಲೆಯ ಕುರಿತು ತರಬೇತಿ ಹೊಂದಿದರು.

ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ, ಪೆನ್ ಆಂಡ್ ಇಂಕ್, ಇಂಕ್ ಡ್ರಾಯಿಂಗ್ಸ್ ಲ್ಯಾಂಡ್‌ಸ್ಕೇಪ್, ಕೋಲೇಜ್, ಕ್ರಿಯೇಟಿವ್ ಅಬಸ್ಟ್ರಾಕ್ಟ್ ಕಲೆಗಳಲ್ಲಿ ತಮ್ಮ ವಿಭಿನ್ನ ದೃಷ್ಟಿಕೋನಗಳನ್ನು ಅಭಿವ್ಯಕ್ತಿಗೊಳಿಸುವ ಕುಲಕರ್ಣಿ ಕಲೆಯನ್ನೇ ಕಾಯಕವನ್ನಾಗಿಸಿಕೊಂಡರು.

ಸಾಂಪ್ರಾದಾಯಿಕ ಚಿತ್ರಕಲೆ, ಭಾವಚಿತ್ರ, ವರ್ಣ ಸಂಯೋಜನೆ ಹಾಗೂ ಮೈಸೂರು ಸಾಂಪ್ರಾದಾಯಿಕ ಕಲೆಯನ್ನು ರೂಪಿಸಿಕೊಂಡು, ಕಲಾಕೃತಿಗಳನ್ನು ರಚಿಸುತ್ತಿರುವ ಅಪ್ಪಟ ದೇಶಿ ಪ್ರತಿಭೆ ಇವರದು. ಸಾಂಸ್ಕೃತಿಕ ಉತ್ಸವಗಳ ವೇದಿಕೆ ನಿರ್ಮಾಣ, ಮನೆಗಳ ಒಳಾಂಗಣ ಕಲೆ, ಕಸದಿಂದ ರಸ ಮುಂತಾದ ಸೃಜನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿರುವ ಭೀಮರಾವ, ಹಲವಾರು ಚಿತ್ರಕಲಾ ಶಿಬಿರದಲ್ಲಿ ಪಾಲ್ಗೊಂಡು ಓರ್ವ ಸೃಜನಶೀಲ ಕಲಾವಿದರಾಗಿ ರೂಪುಗೊಂಡಿದ್ದಾರೆ.

ಕಲೆಯ ಬಗ್ಗೆ ಅಪಾರ ಒಲವನ್ನು ಬೆಳೆಸಿಕೊಂಡಿರುವ ಇವರು ಹಲವಾರು ಮಹಾನ್ ಕಲಾವಿದರನ್ನು ಹತ್ತಿರದಿಂದ ಕಂಡವರು. ಅವರ ಗರಡಿಯಲ್ಲಿ ಪಳಗಿದ್ದಾರೆ. ವಿವಿಧ ಕಲಾವಿದರು ಬಳಸುವ ಮಾಧ್ಯಮಗಳು, ವಿಷಯಗಳ ಆಯ್ಕೆ ವರ್ಣ ಸಂಯೋಜನೆಯನ್ನು ಕಂಡು, ತಮ್ಮದೇ ಆದ ಹೊಸ ಕಲಾಕೃತಿಗಳ ಪರಂಪರೆಯನ್ನು ವಿಭಿನ್ನವಾಗಿ ಬೆಳೆಸಿಕೊಂಡಿದ್ದಾರೆ. ಇವರೊಬ್ಬ ಭಾವಜೀವಿ. ನೈಸರ್ಗಿಕವಾದ, ಸುಂದರ ಪ್ರಕೃತಿಯ ಮಡಿಲಲ್ಲಿ ಬೆಳೆದ ಇವರು ಹೆಚ್ಚಾಗಿ ಚಿತ್ರಿಸಿದ್ದು ನಿಸರ್ಗ ಚಿತ್ರಗಳನ್ನು. ವಿಶ್ವ ಪರಂಪರೆಯನ್ನು ಹೊಂದಿರುವ ಮೈಸೂರ ಸಾಂಪ್ರದಾಯಕ ಕಲೆಯನ್ನು ಬಿಡಿಸುವಲ್ಲಿ ಇವರದು ಎತ್ತಿದ ಕೈ.

ಇವರು ಈಗಾಗಲೇ ಹಲವು ಕಲಾಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿ, ಅನೇಕ ಪ್ರಶಸ್ತಿ ಪ್ರಸಂಶೆಗಳಿಗೆ ಪಾತ್ರರಾಗಿದ್ದಾರೆ. 2003ರಲ್ಲಿ ನಡೆದ ಚಿಂಚೋಳಿ ತಾಲ್ಲೂಕ ಮಟ್ಟದ ಸಾಹಿತ್ಯ

ಸಮ್ಮೇಳನ, ರಾಜ್ಯ ಶಿಕ್ಷಣ ಸಂಶೋಧನೆಯಡಿ ಸ್ವಾತಂತ್ರ್ಯ ದಿನಾಚಾರಣೆ, ಗಣರಾಜೋತ್ಸವ, ಅಖಿಲ ಭಾರತ 69ನೇ ಕನ್ನಡ ಸಾಹಿತ್ಯ ಸಮ್ಮೇಳನ ತುಮಕೂರು, ಚಿಂಚೋಳಿ, ಹೈದರಾಬಾದ ಮುಂತಾದ ಕಡೆ ಇವರ ಕಲಾಕೃತಿಗಳು ಪ್ರದರ್ಶನಗೊಂಡು ಮೆಚ್ಚುಗೆಗೆ ಪಾತ್ರವಾಗಿವೆ.


ರಾಜ್ಯಮಟ್ಟದ, ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಹಲವಾರು ಬಹುಮಾನಗಳೂ ಸಂದಿವೆ. ಸದ್ಯ ಚಿಂಚೋಳಿಯ ಶರಣ ಬಸವೇಶ್ವರ ವಿದ್ಯಾಮಂದಿರದಲ್ಲಿ ಭೀಮರಾವ ಚಿತ್ರಕಲಾ ಶಿಕ್ಷಕ ರಾಗಿ ಸೇವೆ ಇವರು ಸಲ್ಲಿಸುತ್ತಿದ್ದಾರೆ. (ಡಿಆರ್‌ವೈ)

ಭೀಮರಾವ ಕಾಳಪ್ಪ ಬಡಿಗೇರ: ಜಲವರ್ಣಗಳಲ್ಲಿ ನಿಸರ್ಗ ವನ್ನು ಸೆರೆಹಿಡಿದ ಕಲಾವಿದ. ಮೂಲತಃ ವಿಜಾಪುರ ಜಿಲ್ಲೆ ಯವರು ಬೀದರದಲ್ಲಿ ಈಗ ವಾಸ. ಐತಿಹಾಸಿಕ ಸ್ಮಾರಕಗಳ ಮೂಲಕ ಅಂದಿನ ಆಳರಸರ ಉನ್ನತ ವಾಸ್ತು ಶಿಲ್ಪಕಲಾ ಪ್ರಜ್ಞೆ ಯನ್ನು ಇಂದಿನ ನವಜನಾಂಗಕ್ಕೆ ತಮ್ಮ ಭೂದೃಶ್ಯ (Land scape) ವರ್ಣಚಿತ್ರಗಳ ಮೂಲಕ ತಿಳಿಸುವ ಪರಿ ಅನನ್ಯ ವಾದುದು.

1969 ಜುಲೈ 22 ರಂದು ಜನಿಸಿದರು. ಪ್ರೌಢ ಶಿಕ್ಷಣವನ್ನು ವಿ.ಬಿ. ದರಬಾರ ಶಾಲೆಯಲ್ಲಿ ಪೂರೈಸಿ ಚಿತ್ರಕಲೆಯ ಹೆಚ್ಚಿನ ವ್ಯಾಸಂಗಕ್ಕಾಗಿ ಸಿದ್ಧೇಶ್ವರ ಕಲಾಶಾಲೆಗೆ ಸೇರಿ ಡಿ.ಎಮ್.ಸಿ. ಪಾಸಾದರು. ಇಷ್ಟಕ್ಕೆ ತೃಪ್ತರಾಗದೆ ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣ ಪಡೆಯುವ ಅಭಿಲಾಷೆಯೊಂದಿಗೆ ಧಾರವಾಡ ಸರಕಾರಿ ಚಿತ್ರ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಯಾಗಿ ಆರ್ಟ್ ಮಾಸ್ಟರ್ (1991) ಹಾಗೂ ಜಿ.ಡಿ ಫೈನ್‌ಆರ್ಟ್ (1992) ಎಂ.ವಿ.ಎ ಸ್ನಾತ್ತಕೋತ್ತರ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ ಹಂಪಿ ಯಿಂದ ಪಡೆದಿದ್ದಾರೆ. ಇವರ ಕಲಾಕೃತಿಗಳಲ್ಲಿ ನಯ–ನಾಜೂಕು, ನಿಖರತೆ, ಲಾಲಿತ್ಯ, ರಮ್ಯತೆಗಳು ತಾನೇ ತಾನಾಗಿ ಮೇಳೈಸಿವೆ.

ಜಲವರ್ಣಗಳ ನಿರ್ವಹಣೆಯಲ್ಲಿ ಇವರು ಸಿದ್ಧ ಹಸ್ತರು. ಇವರ ಎಲ್ಲ ನಿಸರ್ಗ ಚಿತ್ರಗಳಲ್ಲಿ ಸೂಕ್ಷ್ಮತೆ, ಸೌಮ್ಯತೆಗಳು ತಕ್ಷಣ ಗಮನ ಸೆಳೆಯುತ್ತವೆ. ಸಾದೃಶ ವರ್ಣ ಸಾಂಗತ್ಯದಿಂದ ರಮ್ಯತೆ ಇವರ ಚಿತ್ರಗಳ ಜೀವಾಳಾಗಿದೆ. ಕಾಗದದ ಬಿಳಿ ಭಾಗವನ್ನು ತಮಗೆ ಬೇಕಾದೆಡೆ ಹಾಗೆ ಉಳಿಸಿಕೊಂಡು, ವಾಶ್ ಟೆಕ್ನಿಕ್ ತಂತ್ರದಲ್ಲಿ ವರ್ಣಗಳ ಹದ ವರಿತು ಬಳಸಿ ತಮಗೆ ಬೇಕಾದ ಪರಿಣಾಮವನ್ನು ಪರಿಣಾಮ ಕಾರಿಯಾಗಿ ಚಿತ್ರಿಸಿ ಕಲಾಕೃತಿ ಗಳಲ್ಲಿ ತಾಜಾತನವನ್ನು ಕಾಯ್ದುಕೊಳ್ಳುವಲ್ಲಿ ಇವರು ಚಾಣಾಕ್ಷರು. ಹೀಗಾಗಿ ಇವರ





'ಲ್ಯಾಂಡ್‌ಸ್ಕೇಪ್' ಜಲವರ್ಣ ಮಾಧ್ಯಮ

ನಿಸರ್ಗ ಚಿತ್ರಗಳು 'ಇಂಪ್ರೆಶ್ಕನ್' ಮೋಡಿಮಾಡಿ ನೋಡುಗರ ಮನವನ್ನಾಕರ್ಷಿಸುತ್ತವೆ. ಶಕ್ತಿಯುತ ರೇಖೆಗಳು, ಕುಂಚದ ಬೀಸುಗಳು ತ್ರಿವಳಿಕೆಯ 3 Diamension– ಭಾವ ತರುವ ನೆಳಲು ಬೆಳಕಿನ ಚೆಲ್ಲಾಟ, colour perspective, Areal perspective, ಆಕೃತಿಗಳ ಸಂಯೋಜನೆ ಎಲ್ಲವೂ ಕಲಾವಿದನ ಜಾಣ್ಮೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಹೀಗಾಗಿ ಬಡಿಗೆರ ಒಬ್ಬ ಭರವಸೆಯ ಕಲಾವಿದರಾಗಿ ರೂಪುಗೊಳ್ಳುತ್ತಿದ್ದಾರೆ. ಇವರ ಕಲಾಕೃತಿಗಳಲ್ಲಿ ರಂಜನೆ ಮತ್ತು ಮೋಹಕತೆ ಇದ್ದು ಕಲಾಕೃತಿಗಳು ಸೂಜಿಗಲ್ಲಿನಂತೆ ನೋಡುಗರನ್ನು ತನ್ನೆಡೆಗೆ ಸೆಳೆಯುತ್ತವೆ.

ತಾದಾತ್ಮ್ಯತೆ, ತಲ್ಲೀನತೆ, ಶ್ರದ್ಧೆ, ನಿಷ್ಠೆ ಈ ಎಲ್ಲವನ್ನು ಸಮೀಕರಿಸಿ ಚಿತ್ರಿಸುತ್ತಾ ಆನಂದ ತುಂದಿಲರಾಗುವುದು ಅಷ್ಟೇ ಅಲ್ಲ, ಈ ಆನಂದವನ್ನು ಸಮಸ್ತ ಸಮಾಜದ ಜೊತೆ ಹಂಚಿ ಕೊಳ್ಳುವ ಉತ್ಕಟ ಇಚ್ಛೆ ಇವೆಲ್ಲ ಒಟ್ಟಾಗಿ ಇಂಥ ಸುಂದರ ರಚನೆಗಳಿಗೆ ಇಂಬು ನೀಡುತ್ತವೆ. ಹೀಗಾಗಿ ಬಡೆಗೇರ ಒಬ್ಬ ತದ್ರೂಪ Realistic ಶೈಲಿಯ ಕಲಾವಿದರಾಗಿ ಹೊರಹೊಮ್ಮಿ ದ್ದಾರೆ. ಬೀದರಿನ ಚೌಖಂಡಿ ಶಾರ್ಜಾ ದರವಾಜ, ಕೋಟೆ– ಕೊತ್ತಲ ಬುರುಜ ಮುಂತಾದ ಬಹಮನಿ ಸ್ಮಾರಕಗಳು, ವಿಜಾಪುರದ ಗೋಲಗುಮ್ಮಟ, ಆಸಾರ ಮಹಲ, ಬಾರಾ

ಕಮಾನ, ಬಡಿಕಮಾನ, ಮೆಹತರ ಮಹಲ ಮುಂತಾದ ಆದಿಲ್ ಶಾಹಿ ಐತಿಹಾಸಿಕ ಕಟ್ಟಡಗಳನ್ನು ಚಿತ್ರಿಸಿದ್ದಾರೆ. ಕಲ್ಯಾಣ ಶರಣರ ಅಂದಿನ ಸ್ಮಾರಕಗಳು, ಕೂಡಲ ಸಂಗಮ, ಬಾದಾಮಿ ಚಾಲುಕ್ಯರ ಶಿಲ್ಪಕಲಾ ವೈಭವ ವಿಜಯನಗರ ಅರಸರ ಭವ್ಯ ದೇವಾ ಮಠಗಳು ಹೀಗೆ ಎಲ್ಲ ಸಂಸ್ಕೃತಿಗಳ ವೈಭವ ಇವರ ವರ್ಣಗಳಲ್ಲಿ ಪ್ರಜ್ವಲಿಸಿವೆ. ಅಲ್ಲದೆ ಇವರು ಭಾವಚಿತ್ರ ಹಾಗೂ ಸಂಯೋಜನೆ ಗಳನ್ನು ರಚಿಸಿದ್ದಾರೆ. ತಾವು ಚಿತ್ರಿಸಿದ ಕಲಾಕೃತಿಗಳನ್ನು ನಾಡಿನ ಕಲಾರಸಿಕರಿಗೆ ತೋರಿಸಬೇಕೆಂಬ ಉತ್ಸಾಹದೊಂದಿಗೆ ನಾಡಿನ ಪ್ರಮುಖ ಕಲಾಕೇಂದ್ರಗಳಲ್ಲಿ ಈ ವರೆಗೆ 15 ಸಮೂಹ ಕಲಾ ಪ್ರದರ್ಶನಗಳನ್ನು ತಮ್ಮ ಮಿತ್ರರ ಜೊತೆ ಏರ್ಪಡಿಸಿದ್ದಾರೆ. ಮುಂಬೈ, ಗೋವಾಗಳಲ್ಲೂ ಇವರ ಕಲಾಕೃತಿಗಳು ಪ್ರದರ್ಶನ ಕಂಡಿವೆ. ಇವರ ಕಲಾಪ್ರೌಢಿಮೆಯನ್ನು ಗುರುತಿಸಿದ ದೇಶದ ಪ್ರಮುಖ ಕಲಾಸಂಘಟನೆಗಳು ಕಲಾಶಿಬಿರಕ್ಕೆ ಇವರನ್ನು ಆಹ್ವಾನಿಸಿವೆ. ಆಳ್ವಾಸ ವರ್ಣ ಜಾಗೃತಿ, ಆಳ್ವಾಸ ನುಡಿ ಸಿರಿ, ಸ್ವಾತಂತ್ರ ಸಂಗ್ರಾಮ ಶಿಬಿರ, ಹೀಗೆ 16 ಪ್ರಮುಖ ಕಲಾ ಶಿಬಿರಗಳಲ್ಲಿ ಪಾಲ್ಗೊಂಡು ಚಿತ್ರ ರಚಿಸಿದ್ದಾರೆ. ಕಲಾವಿದ್ಯಾಲಯ ಗಳ ವಿದ್ಯಾರ್ಥಿಗಳು ಭೂದೃಶ್ಯ ಚಿತ್ರಣದಲ್ಲಿ ಪರಣಿತರಾಗಲೆಂದು ಅನೇಕ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿದ್ದಾರೆ. ಹೀಗೆ ನಿರಂತರ ಕಲಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರಿಯಾಶೀಲ ರಾಗಿದ್ದಾರೆ. ಇವರ ಕಲಾಕೃತಿಗೆ 1995ರ ಮೈಸೂರು ದಸರಾ ಉತ್ಸವದ ಪ್ರಶಸ್ತಿ ಪ್ರಾಪ್ತವಾಗಿದೆ.

ಬೀದರ ನಗರದ ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ ದಲ್ಲಿ ಚಿತ್ರಕಲಾ ಉಪನ್ಯಾಸಕರಾಗಿ 1991 ರಿಂದ ಸೇವೆ ಸಲ್ಲಿಸು ತ್ತಿರುವ ಬಡಿಗೇರ ಸದಾ ಚಿತ್ರಕಲಾ ರಚನೆಯಲ್ಲಿ ಮಗ್ನರಾಗಿ, ಹೊಸ ಹೊಸ ವಿಚಾರಗಳನ್ನು ಮೈಗೂಡಿಸಿಕೊಂಡು ಅಕ್ರಲಿಕ್‌ಗಳ ಸಂಯೋಜನೆಗಳಲ್ಲಿ ಪ್ರಯೋಗ ನಿರತರಾಗಿದ್ದಾರೆ. ಇವರ ತದ್ರೂಪ ಶೈಲಿಯ ವರ್ಣರಂಜಿತ ಕಲಾಕೃತಿಗಳು ಜನಮನವನ್ನು ರಂಜಿಸುವ ಮೂಲಕ ಹೆಚ್ಚು ಬೇಡಿಕೆಗೆ ಪಾತ್ರವಾಗಿದ್ದು ಅನೇಕ ಕಲಾರಸಿಕರ ಸಂಗ್ರಹಗಳಲ್ಲಿ ಸ್ಥಾನ ಪಡೆದಿವೆ. (ಎಂಕೆ)

ಭೀಮಶ್ಯಾ ಶರಣಪ್ಪ ಭಕರೆ: ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಮಾದನ ಹಿಪ್ಪರಗಾ ಗ್ರಾಮದರು. ತಂದೆ ಶರಣಪ್ಪ ಮತ್ತು ತಾಯಿ ನಿಂಬೆವ್ವ. 14.4.1941 ರಂದು ಜನಿಸಿದರು. ಬಾಲಕನಾಗಿರುವಾಗ ಸದಾಕಾಲ ಭಜನೆ, ಸಂಗೀತ, ನಾಟಕ, ದೊಡ್ಡಾಟ, ಸಣ್ಣಾಟ, ಗೀಗೀ ಪದ, ಡೊಳ್ಳಿನ ಪದ, ಇವುಗಳಲ್ಲಿ ಆಸಕ್ತಿ ಹೊಂದಿದವರು. ಇವರು ಮುಂದೆ ಖ್ಯಾತ ದೊಡ್ಡಾಟ ಕಲಾವಿದರಾಗಿ ಬೆಳೆದರು. ದೊಡ್ಡಾಟ, ಸಣ್ಣಾಟಗಳಲ್ಲಿ ಹಲವಾರು ಪಾತ್ರಗಳನ್ನು ಮಾಡಿದ ಕೀರ್ತಿ ಇವರದು. ಮುಂದೆ ತತ್ವಪದ, ಭಜನೆಯತ್ತ ಗಮನಹರಿಸಿ ಸುಮಧುರ ಕಂಠಸಿರಿಯಲ್ಲಿ ತತ್ವಪದ, ಭಕ್ತಿಗೀತೆಗಳು ಹಾಗೂ ಶಿವಶರಣರ ವಚನಗಳನ್ನು ಮನದುಂಬಿ ಹಾಡಿ ಜನಸಮೂಹವನ್ನು ಭಕ್ತಿಲೋಕಕ್ಕೆ ಕರೆದೊಯ್ಯ ತೊಡಗಿದರು. ಶ್ರಾವಣಮಾಸ, ಹುಣ್ಣಿಮೆ, ಅಮವಾಸ್ಯೆ ದಿನ ದಂದು ರಾತ್ರಿಯಿಡಿ ಹಾಡಿದರೂ ದಣಿವರಿಯದ ಇವರು ಯುವ ಕಲಾವಿದರಿಗೆ ಮಾರ್ಗದರ್ಶಿಯಾಗಿದ್ದಾರೆ. ಇವರ ಜಾನಪದ ಗಾಯನದ ಗುರುಗಳು ಹಿರಿಯ ಖ್ಯಾತ ಸಂಗೀತ ವಿದ್ವಾಂಸರಾದ ಚೆನ್ನವೀರ ಗವಾಯಿಗಳು ಗೊಬ್ಬೂರ. ದೊಡ್ಡಾಟದ ಮುಮ್ಮೇಳ ಗುರುಗಳಾದ ಮಲ್ಲಿನಾಥ, ಚಂದ್ರಾಮಪ್ಪಾ ಓನಾಮ ಶೆಟ್ಟಿ ಯವರಿಗೆ ಇಂಥ ಶಿಷ್ಯರನ್ನು ಪಡೆದುದಕ್ಕೆ ಹರ್ಷ. ಇವರ ಗರಡಿ ಯಲ್ಲಿ ಕರ್ನಾಟಕ, ಮಹಾರಾಷ್ಟ್ರದಲ್ಲಿ ದೊಡ್ಡಾಟ, ಸಣ್ಣಾಟ, ಸಂಘಗಳು ಉದ್ಭವಿಸಿ ಕೀರ್ತಿ ಪಡೆದಿದೆ. ಅನೇಕ ಸಂಘ–ಸಂಸ್ಥೆ ಗಳಿಂದ ಸಂದ ಸನ್ಮಾನ ಬಿರುದುಗಳು ಅಪಾರ. ಅಲ್ಲದೆ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 2002ರ ಸಾಲಿನ ಜ್ಞಾನ–ವಿಜ್ಞಾನ ನೀಡಿ ಗೌರವಿಸಿದೆ.

(ಜಿಕೆ)

ಭು




ಭುರ್ಲಿ ರಾಘವೇಂದ್ರ: ನಿಸರ್ಗ ಕಲಾವಿದ. ನಿಸರ್ಗದ ರಮಣೀಯ ದೃಶ್ಯಗಳನ್ನು ಸೆರೆಹಿಡಿಯುವುದು ಸಾಮಾನ್ಯವಾದ ಕೆಲಸವೇನಲ್ಲ. ಅದಕ್ಕೆ ಬೇಕಾದ ಚಾಕಚಕ್ಯತೆ ಮತ್ತು ಅನುಭವದ ಮೇಲೆ ರೂಪಿತವಾದ ಕಲೆಯ ನೈಜ ಕಳಕಳಿ, ಕಲಾವಿದನ ಕಲೆಗೆ ಇಂಬು ಕೊಡುತ್ತದೆ.

ಅಂದಾನಿಯವರ ಕಲೆಯ ಪ್ರೋತ್ಸಾಹದಲ್ಲಿಯೇ ಬೆಳೆದು ಎತ್ತರಕ್ಕೇರಿರುವ ಪ್ರತಿಭಾವಂತ. ಇವರು 1989ರಲ್ಲಿ ಡಿ.ಎಂ.ಸಿ. ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಮುಗಿಸಿ, ಕಾಲೇಜ್ ಆಫ್ ವಿಜುವಲ್ ಆರ್ಟ್‌ನಲ್ಲಿ 1992ರಲ್ಲಿ ಬ್ಯಾಚುಲರ್ ಆಫ್ ಫೈನ್ ಆರ್ಟ್ ಮುಗಿಸಿದರು. ಕಲೆಯ ಅಭಿಮಾನಿಗಳಾದ ತಂದೆ ಯವರ ಪ್ರೋತ್ಸಾಹ ಅವರ ಉತ್ಸಾಹವನ್ನು ಇಮ್ಮಡಿಗೊಳಿಸಿತು.

ಕಳೆದ ಎಂಟತ್ತು ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ವೃತ್ತಿಯಲ್ಲಿ ನಿರತರಾಗಿರುವ ಇವರು, ಕೇವಲ ಹಣದ ವ್ಯಾಮೋಹಕ್ಕಾಗಿ ಕಲೆಯನ್ನು ಸ್ವೀಕರಿಸದೇ, ಅದೊಂದು ಗಂಭೀರ ತಪಸ್ಸನ್ನಾಗಿ ಸ್ವೀಕರಿಸಿದವರು.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಕಲಬುರ್ಗಿ ವಿಭಾಗದ ಅಂತಾರಾಷ್ಟ್ರೀಯ ಯುವ ಸ್ಪರ್ಧೆ–1985ರಲ್ಲಿ ವಿಭಾಗ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಮಹಾ ರಾಷ್ಟ್ರದ ನಾಗಪೂರದಲ್ಲಿ ನಡೆದ ಛಾಯಾಚಿತ್ರ ಸ್ಪರ್ಧೆಯಲ್ಲಿ



'ಕೋತಿಗಳು' ಛಾಯಾಚಿತ್ರ

ಭಾಗವಹಿಸಿದರು. ಅಷ್ಟೇ ಅಲ್ಲದೇ ಮೇಲುಕೋಟೆಯಲ್ಲಿ (2000ದಲ್ಲಿ ನಡೆದ) ಛಾಯಾಚಿತ್ರ ಶಿಬಿರದಲ್ಲಿಯೂ ಸಹ ಶ್ರೀಯುತರು ಭಾಗವಹಿಸಿದರು. ಹೀಗೆ ಚಿತ್ರಕಲೆ ಮತ್ತು ಛಾಯಾ ಚಿತ್ರಕಲೆ ಎರಡರಲ್ಲಿಯೂ ಯಶಸ್ಸಿನ ಹೆಜ್ಜೆಯನ್ನಿಟ್ಟು ಸಫಲತೆಯನ್ನು ಕಂಡವರು. ಕಲೆಯಲ್ಲಿಯೇ ತಮ್ಮ ಬದುಕನ್ನು ಅರಳಿಸಿಕೊಳ್ಳಲು ಪ್ರಯತ್ನಿಸಿರುವ ಇವರು, ಕಲೆಯನ್ನು ಛಾಲೇಂಜ್ ಅನ್ನುವ ರೀತಿಯಿಂದ ತೆಗೆದುಕೊಂಡಿದ್ದರಿಂದ ಇಂದು ಅವರು ಈ ಯಶಸ್ಸನ್ನು ಗಳಿಸಲು ಸಾಧ್ಯವಾಗಿದೆ.

ಕಲೆ ಎನ್ನುವುದು ಒಂದು ಗಂಭೀರವಾದ ತಪಸ್ಸು. ಇವರ ಹಾದಿ ಸುಗಮವೇನೂ ಅಲ್ಲ. ಅನೇಕ ವೈರುಧ್ಯಗಳನ್ನು ಎದುರಿಸಬೇಕಾಗುತ್ತದೆ. ಆದರೆ ಆತ್ಮ ವಿಶ್ವಾಸ ಹಾಗೂ ಕಲೆಯ ಬಗ್ಗೆ ಆಸಕ್ತಿ, ಪರಿಶ್ರಮವಿದ್ದರೆ ಕಲೆಯಲ್ಲಿ ಉತ್ತಮವಾದದ್ದನ್ನು ಸಾಧಿಸುತ್ತಾರೆ ಎನ್ನುವುದಕ್ಕೆ ಇವರು ಸಾಕ್ಷಿ. ಕಲೆ ಎರಡೂ ದಿಸೆಯಲ್ಲಿ ತಮ್ಮದೇ ಆದ ವಿಶಿಷ್ಟ ಛಾಪವನ್ನು ಮೂಡಿಸಿ ಕಲಬುರ್ಗಿಯ ಕಲಾ ಪ್ರಪಂಚಕ್ಕೆ ಕೀರ್ತಿಯನ್ನು ತಂದಿದ್ದಾರೆ.

(ಎಂಎಂಜೆ)

ಭೂ

ಭೂತನಾಥ ದೇವಾಲಯ ಶಿಲ್ಪಗಳು: ಕರ್ನಾಟಕ ರಾಜ್ಯವನ್ನಾಳಿದ ಪ್ರಮುಖ ರಾಜಗುರುಗಳಾದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ ಕೊಡುಗೆಗಳು ಅಪಾರ. ಈ ಎರಡು ರಾಜ ಮನೆತನಗಳ ರಾಜಧಾನಿಗಳು ಹೈದ್ರಾಬಾದ ಕರ್ನಾಟಕಕ್ಕೆ ಸೇರಿದ್ದುವು. ಒಂದು ಅಪರೂಪದ ಶಿಲ್ಪಕಲಾ ಸೌಂದರ್ಯದ ಬೀಡು, ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಗಡಿಭಾಗದ ಗ್ರಾಮಗಳಾದ ಮೆದಕ, ಹಂದರಕಿ ಗ್ರಾಮದ ಪುರಾತನ ಕಾಲದ ದೇವಾಲಯಗಳಲ್ಲಿದೆ.

'ಭೂತನಾಥ'ನ ದೇವಾಲಯದ ಗೋಡೆಗಳ ಮೇಲೆ ಮೂರು ಅಡಿ ಎತ್ತರದ ಅಮೂಲ್ಯವಾದ 65 ವಿಗ್ರಹಗಳಿವೆ. ಅವುಗಳಲ್ಲಿ ಸುಂದರವಾದ ಶಿಲ್ಪಕಲೆಗಳಿಂದ ಕೂಡಿದ ಈ ದೇವಾಲಯಗಳು, ರಕ್ಷಣೆಯಿಲ್ಲದೇ ಇಂದು ಹಾಳು ಸುರಿಯುತ್ತಿವೆ. ಈ ದೇವಾಲಯಗಳ ಶೈಲಿ ನೋಡಿದರೆ, ನಾವು ಇತಿಹಾಸದ ಬಾಗಿಲಿಗೆ ನಿಂತಂತೆ ಭಾಸವಾಗುತ್ತದೆ. ಮೆದಕ ಗ್ರಾಮದ ರಾಮ, ಲಕ್ಷ್ಮಣ, ಸೀತೆ, ಹನುಮಂತ, ಕೃಷ್ಣ, ಗಣೇಶ, ಭದ್ರಕಾಳಿ ಹಾಗೂ ಜಿನಶಿಲ್ಪಗಳಲ್ಲದೇ ನೃತ್ಯ ಸುಂದರಿಯರ ಶಿಲ್ಪಗಳೂ ಇವೆ. ಒಳ ಗೋಡೆಗಳ ಮೇಲೆ ಸಮುದ್ರ ಮಂಥನ, ರಾಮಾಯಣ, ಮಹಾಭಾರತದ ಹಲವು ಸನ್ನಿವೇಶಗಳನ್ನು ಕಲ್ಲಿನಲ್ಲಿ ಕೆತ್ತಿ ಕಥೆಯನ್ನೇ ನಮ್ಮ ಮುಂದಿಟ್ಟಿದ್ದಾರೆ.

ಈ ದೇವಾಲಯದ ಶಿಖರ ಐದು ಗೋಪುರಗಳಿಂದ ಕೂಡಿದೆ. ಇದರಲ್ಲಿ ಮುಖ್ಯ ಗೋಪುರ, ಇತರ ನಾಲ್ಕು ಗೋಪುರಗಳಿಂದ ಮೇಲೆ ಹಾಗೂ ನಟ್ಟ ನಡುವೆ ಎತ್ತರದಲ್ಲಿದೆ. ದೇವಾಲಯದ ಗರ್ಭಗುಡಿಯ ಮುಂದೆ ಭೂಮಿಯ ಸಮಾಂತರಕ್ಕೆ ಚಕ್ರವಿದೆ. ಭುವನೇಶ್ವರಿ ಎಂದು ಕರೆಯುತ್ತಿದ್ದಿರಬಹುದು. ಹೊರ ಗೋಡೆಗಳ ಮೇಲೆ ಕೆತ್ತಲಾದ ಶಿಲ್ಪಕಲೆಗಳಿಗಾಗಿ ಮೃದುವಾದ ಕಪ್ಪು ಕಲ್ಲು ಬಳಸಲಾಗಿದೆ.

ಭೂತನಾಥನ ದೇವಾಲಯದ ಹಿಂದೆ ಚನ್ನಕೇಶವ ದೇವಾಲಯವಿದೆ. ಬಹುತೇಕ ಇವೆರಡೂ ಒಂದೇ ಕಾಲದಲ್ಲಿ ಕಟ್ಟಿರಬಹುದು. ಹಂದರಕಿ ಗ್ರಾಮದಲ್ಲಿರುವ ಲೋಕೇಶ್ವರ ದೇವಸ್ಥಾನ ಶೈಲಿ, ಸಂಪೂರ್ಣ ಚಾಲುಕ್ಯ ಶೈಲಿಗೆ ಹೋಲುತ್ತಿದ್ದು, ಗರ್ಭ ಗುಡಿಯ ಮುಂದೆ ಹಲವು ಕಂಬಗಳ ತೆರೆದ ಮಂಟಪ ಹಾಗೂ ದೇವಾಲಯದ ಹೊರಗಡೆ ಗರ್ಭಗುಡಿಗಳನ್ನು ಕಟ್ಟಿದ ಶೈಲಿಗಳು ಸಂಪೂರ್ಣ ಚಾಲುಕ್ಯ ಶೈಲಿಗೆ ಹೋಲುತ್ತವೆ.


(ಡಿಎಸ್‌ಜಿ)

ಭೋ



ಭೋಜರಾಜ ಎಲ್. ಬಡಿಗೇರ: 1977ರ ಏಪ್ರಿಲ್ 3 ರಂದು ಗುಲಬರ್ಗಾ ಜಿಲ್ಲೆಯ ಹರವಾಳ ಗ್ರಾಮದಲ್ಲಿ ಲಕ್ಷ್ಮಣರಾವ ಬಡಿಗೇರರವರ ಮಗನಾಗಿ ಜನಿಸಿದ ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ಚಿತ್ರಕಲೆಯಲ್ಲಿ ಡಿಪ್ಲೋಮಾ ಆರ್ಟ್ ಮಾಸ್ಟರ್‌ನ್ನು ದಿ ಐಡಿಯಲ್ ಫೈನ್‌ಆರ್ಟ್ ಇನ್‌ಸ್ಟಿಟ್ಯೂಟ್ ಗುಲಬರ್ಗಾದಿಂದ ಪಡೆದಿದ್ದಾರೆ. ದೃಶ್ಯಕಲೆಯಲ್ಲಿ ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಎಂ.ಎಂ.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್ ಗುಲಬರ್ಗಾದಿಂದ ಪಡೆದಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಸೃಜನಶೀಲರಾಗಿ, ಕಲಾಕೃತಿಗಳನ್ನು ರಚಿಸುವುದು ಹಾಗೂ ವೇದಿಕೆಗಳನ್ನು ವಿಭಿನ್ನ ರೀತಿಯಿಂದ ಸುಂದರವಾಗಿ ರಚಿಸುತ್ತಾರೆ. ಅನೇಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಲಾಸ್ಪರ್ಧೆಯಲ್ಲಿ ಇವರ ಕಲಾಕೃತಿಗಳು ಆಯ್ಕೆಯಾಗಿ ಪ್ರದರ್ಶಿಸಲ್ಪಟ್ಟಿವೆ. ರಾಜ್ಯದ ಅನೇಕ ಆರ್ಟ್ ಗ್ಯಾಲರಿಗಳಲ್ಲಿಯೂ ಇವರ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿವೆ.

ಇವರು ವಿದ್ಯಾರ್ಥಿಯಿದ್ದಾಗಲೇ 2003–05ರ ಶಿಷ್ಯವೇತನವನ್ನು ಕೇಂದ್ರ ಪ್ರವಾಸೋದ್ಯಮ ಇಲಾಖೆ ಹೊಸದಿಲ್ಲಿಯಿಂದ ಪಡೆದಿದ್ದಾರೆ. 1999 ಮತ್ತು 2002ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಸಂದಿದೆ. ಹೀಗೆ ಇವರು ಒಬ್ಬ ಯುವ ಸೃಜನಶೀಲ ಕಲಾವಿದರಾಗಿ ಅನೇಕ ಸಮೂಹ ಕಲಾಪ್ರದರ್ಶನಗಳಲ್ಲಿಯೂ ಭಾಗವಹಿಸಿದ್ದಾರೆ. ಸ್ವತಂತ್ರ ಚಿತ್ರ ಕಲಾವಿದರಾಗಿ ಉತ್ತಮ ವೇದಿಕೆ ಸಿದ್ಧಪಡಿಸುವ ಕಲಾವಿದರಾಗಿ ನಾಡಿನದ್ಯಾಂತ ಗುರುತಿಸಿಕೊಂಡು ಪ್ರಸ್ತುತ ಇವರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್‌ಪಿಡಬ್ಲ್ಯೂ)



'ವಾರ್ನಿಂಗ್ ಬೆಲ್' ಅಕ್ರೇಲಿಕ್ ಮಾಧ್ಯಮ

ಭೋಪಲೆ ಎಂ.ಟಿ.: ಚಿತ್ರಕಲಾವಿದ ಮಾರ್ತಂಡರಾವ ತಿಪ್ಪಣ್ಣ ಭೋಪಲೆ ಇವರ ಪೂರ್ತಿ ಹೆಸರು. (ಎಂ.ಟಿ. ಭೋಪಲೆ) 1919ರಲ್ಲಿ ಕಲ್ಬುರ್ಗಿಯಲ್ಲಿ ಹಖಿಮ ಮನೆತನದಲ್ಲಿ ಜನಿಸಿದರು. ಇವರ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಕಲ್ಬುರ್ಗಿಯ ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆಯಲ್ಲಿ ಹೆಚ್.ಎಸ್.ಸಿ. ಮರಾಠಿ ಮತ್ತು ಆಂಗ್ಲ ಮಾಧ್ಯಮದಲ್ಲಾಯಿತು. ಆ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಶಂಕರರಾವ ಆಳಂದಕರರು ಕೇವಲ ಚಿತ್ರಕಲಾ ಶಿಕ್ಷಕರಾಗಿರದೆ ಪರಿಣಿತ ಚಿತ್ರಕಲಾವಿದರಾಗಿಯೂ ಮತ್ತು ಚಿತ್ರಕಲಾ ಪ್ರೇಮಿಗಳೂ ಆಗಿದ್ದರು. ಶಿಷ್ಯರ ಉನ್ನತ ವ್ಯಾಸಾಂಗಕ್ಕಾಗಿ ತಮಗೆ ಆರ್ಥಿಕವಾಗಿ ಅನಾನುಕೂಲತೆ ಉಂಟಾದರೂ ಕೈಲಾದ ಮಟ್ಟಿಗೆ ಧನ ಸಹಾಯ ಮಾಡಿ ಕಲಾವಿದರಿಗೆ ಪೋಷಣೆ ಹಾಗೂ ಪ್ರೋತ್ಸಾಹ ನೀಡುತ್ತಿದ್ದರು. ಚಿತ್ರಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ ಭೋಪಲೆಯವರಿಗೆ ಸರ್. ಜೆ.ಜೆ. ಕಲಾಶಾಲೆಯಲ್ಲಿ ಶಿಕ್ಷಣ ಪಡೆಯಲು ಪ್ರೋತ್ಸಾಹಿಸಿದರು. ಅದರಂತೆ ಭೋಪಲೆಯವರು ಮುಂದೆ ಮುಂಬೈಗೆ ಕಲಾಶಿಕ್ಷಣಕ್ಕಾಗಿ ತೆರಳಿದರು.



1937ರಲ್ಲಿ ಜೆ.ಜೆ. ಕಲಾಶಾಲೆಗೆ ಸೇರಿದ್ದಾಗ ಮೇಲೆ ಭೋಪಲೆಯವರ ಪ್ರತಿಭೆಗೆ ಮೆಚ್ಚಿದ ಅದೇ ಕಲಾಶಾಲೆಯವರು 500/– ರೂಪಾಯಿ ಫೆಲೋಶಿಫ್ ನೀಡಿ ಗೌರವಿಸಿದರಲ್ಲದೆ ಅಲ್ಲಿಯೆ ಹಂಗಾಮಿ ಅಧ್ಯಾಪಕರೆಂದು ನೇಮಿಸಿಕೊಂಡರು. 1939ರಲ್ಲಿ (ಡಾಲ್ಲಿ ಕುರ್ಸೆಟಜಿ ಸ್ಪರ್ಧೆಯಲ್ಲಿ) ಇವರ ಕಲಾಕೃತಿಗೆ ಪ್ರಥಮ ಬಹುಮಾನ ಬಂದಿತು. ಭಾರತದ ನವ್ಯಕಲೆಯ ಆರಂಭದ ಕಾಲವದು. ಪ್ರಗತಿಪರ ಗುಂಪೊಂದು (ಪ್ರೊಗ್ರೆಸಿವ್ ಗ್ರೂಪ್) ಅಸ್ತಿತ್ವಕ್ಕೆ ಬಂದು ಹೆಸರು ಮಾಡಿತು. ಇವರಿಗೆ ಸರಿಸಮಾನವಾದ ಇಂದಿನ ಅಂತರರಾಷ್ಟ್ರೀಯ ಖ್ಯಾತಿಯ ಎಮ್.ಎಫ್. ಹುಸೇನ್ ಮತ್ತು 'ಆರಾ' ಗೆಳೆಯರ ಗುಂಪು ಅಸ್ತಿತ್ವಕ್ಕೆ ಬಂದಾಗ, ಭೋಪಲೆ

ಯವರು ತಮ್ಮ ಗೆಳೆಯರಾದ ಪಿ.ಟಿ. ರೆಡ್ಡಿ, ಎ.ಎ. ಮಜೀದ, ಎಂ.ವೈ. ಕುಲಕರ್ಣಿ, ಮೊದಲಾದವರೊಂದಿಗೆ ಮತ್ತು ವೈಯಕ್ತಿಕವಾಗಿಯೂ ಪ್ರದರ್ಶನಗಳನ್ನು ಏರ್ಪಡಿಸಿ ಹೆಸರು ಪಡೆದುಕೊಂಡರು. ಜೊತೆಗೆ ತಮ್ಮದೇಯಾದ ಕ್ರಿಯಾಶೀಲರನ್ನೊಳಗೊಂಡ ಗುಂಪೊಂದು ಕಟ್ಟಿಕೊಂಡು ಪ್ರದರ್ಶನಗಳನ್ನು ಮಾಡಿದರು. ಪೆನ್ಸಿಲ್ ಸ್ಕೆಚ್ ಮತ್ತು ಡ್ರಾಯಿಂಗ್‌ನಲ್ಲಿ ಇವರದ್ದು ಎತ್ತಿದ ಕೈ.

ಕಪ್ಪು ಪುಡಿಯ (ಪೌಡರ ವರ್ಕ) ಪೆನ್ಸಿಲ್ ಚಿತ್ರಣ. ಕಲ್ಬುರ್ಗಿಯಲ್ಲಿರುವ ಭೋಪಲೆಯವರ ಮನೆಯಲ್ಲಿ ಕಾಣಬಹುದು. 1936 ರಲ್ಲಿ ಪೆನ್ಸಿಲಿನಿಂದ ಬರಿಮೈ ಮಗುವಿನ ರಚಿಸಿದ ಚಿತ್ರವಿದೆ. 1949ರಲ್ಲಿ ರಚಿಸಿದ 'ಬಾಪು ಚಿತ್ರ' (ಮುದ್ರಣಗೊಂಡಿದೆ). 'ಭೀತೆ ದಿನ್' ಹಿಂದಿ ಚಲನಚಿತ್ರಕ್ಕಾಗಿ ರೂಪಿಸಿದ ಸೆಟ್ಟ್‌ನ ಚಿತ್ರವನ್ನು ವಿನ್ಯಾಸಗೊಳಿಸಿದ್ದಾರೆ.

ಪ್ಯಾಲೆಸ್ಸ್ ಎಕ್ಸ್‌ಟೇರಿಯರ್: 28.07.1957ರಂದು ರಚಿಸಿದ ಅರಮನೆಯ ಹೊರನೋಟದ ಚಿತ್ರವಾಗಿರುತ್ತದೆ. ಇದೊಂದು ವಿಶಿಷ್ಟವಾದ ರೇಖಾ ಚಿತ್ರವಾಗಿದೆ.

ಅಲೆಮಾರಿ ಹುಡುಗಿ: (ಎ ಜಿಪ್ಸಿ ಗರ್ಲ್): 08.10.1957ರಂದು ಭೋಪಲೆಯವರು ಕರಿಮಸಿಯಲ್ಲಿ ರಚಿಸಿದ ಹಾಫ್ ಇಂಪೇರಿಯಲ್ ಸೈಜಿನ ರೇಖಾಚಿತ್ರ, ಸಿನಿಮಾ ಸೆಟ್ಟಿಗಾಗಿ ರಚಿಸಿರುವುದಾಗಿದೆ.

ಡಿಝಾಯಿನ್ ಆಫ್ ಮುಸಾಫಿರ್ ಖಾಖಾ (ಧರ್ಮಛತ್ರದ ನಕ್ಷೆ): ಇದೊಂದು ಪೆನ್ಸಿಲ್ ಕಪ್ಪು ಬಿಳುಪಿನ ಸುಂದರ ಚಿತ್ರವಾಗಿರುತ್ತದೆ.

ನೆಹೆರು: ಭೋಪಲೆಯವರು ವ್ಯಂಗ್ಯ ಚಿತ್ರಗಳನ್ನು ರಚಿಸಿರುವ ಸಾಧ್ಯತೆ ಉಂಟೆಂಬುವುದಕ್ಕೆ ಲಭ್ಯವಿರುವ ಒಂದೇ ಒಂದು ಚಿತ್ರ.

ಬಿಗಿನಿಂಗ್ ಆಫ್ ಪ್ಲೇ (ಆಟದ ಆರಂಭ): ಅಜಂತ ಶೈಲಿಯ ಸಂಯೋಜನ ವರ್ಣಚಿತ್ರವಿದು. ಮಕ್ಕಳ ಆಟದ ವೈವಿಧ್ಯತೆ ಇಲ್ಲಿ ಕಾಣುತ್ತೇವೆ.

ಎ ನ್ಯಾರೋ ಸ್ಟ್ರೀಟ್: (ಇಕ್ಕಟ್ಟಾದ ಓಣಿ): ಇದು ತೈಲವರ್ಣದ ಚಿತ್ರವಾಗಿದ್ದು, ಇದರಲ್ಲಿ ಕಲಾವಿದನ ಪ್ರತಿಭೆ ಹಾಗೂ ಪುನರ್ ಬಳಸುವ ರೀತಿಯಲ್ಲಿ ವೈವಿಧ್ಯಮಯವಾಗಿರುತ್ತದೆ.

ಧ್ಯಾನಯೋಗಿ ಎಂಬ ತೈಲವರ್ಣ ಚಿತ್ರ ವಿ.ಜಿ. ಅಂದಾನಿಯವರ ಕಲಾಶಾಲೆಯ ಸಂಗ್ರಹದಲ್ಲಿದೆ. ಇವರ ಕೃತಿಗಳಲ್ಲಿ ಇದೊಂದು ಅಮೂಲ್ಯ ಕೃತಿ ಎಂದು ಹೇಳಲಾಗುತ್ತದೆ. ಇದೇ ರೀತಿಯ ಇವರ ಅನೇಕ ಕೃತಿಗಳು ಮುಂಬೈ ಜೆ.ಜೆ. ಕಲಾ ಶಾಲೆಯ ಆರ್ಟ್‌ಗ್ಯಾಲರಿ ಸಂಗ್ರಹದಲ್ಲಿವೆ. ಮುಂದೆ ಭೋಪಲೆಯವರು ಮುಂಬೈಯಿಂದ ಕಲ್ಬುರ್ಗಿಗೆ ಬಂದು ಹೈದರಾಬಾದ್ ನಿಜಾಮ ರಾಜ ಪರಿವಾರದವರು ಇನ್ನಿತರ ಅಧಿಕಾರಿ ವರ್ಗದವರು ಕಲ್ಬುರ್ಗಿಗೆ ಬಂದಾಗ ಉಳಿದುಕೊಳ್ಳಲು ದರ್ಗಾದ ಹತ್ತಿರವಿರುವ ಬಡಾ ರೋಜಾ ಪ್ರದೇಶದಲ್ಲಿ ನೂರಬಾಗ ಎಂಬ ಸುಂದರ ಭವ್ಯ ಕಟ್ಟಡವನ್ನು ಕಟ್ಟಿಸಿದರು.



ಟೆಂಪರಾ ವರ್ಣ ಮಾಧ್ಯಮ

ಭೋಪಲೆಯವರ ಅನೇಕ ಕೃತಿಗಳ ರಚನೆಗೆ ಪ್ರೇರಣೆ ನೀಡಿದ ತಾಣ 'ನೂರಬಾಗ.' 1966ರ ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ಭೋಪಲೆಯವರು ತೀವ್ರ ಅನಾರೋಗ್ಯಕ್ಕೆ ತುತ್ತಾದರು. ಆಸ್ಪತ್ರೆಯಲ್ಲಿ ಭೋಪಲೆಯವರ ಪ್ರಾಣ ಹಾರಿಹೋಯಿತು. ಕಲ್ಬುರ್ಗಿಯ ಪ್ರಜ್ವಲಿಸುವ ಕಲಾಜ್ಯೋತಿ ಬಾಳಬಿರುಗಾಳಿಗೆ ಹೊಯ್ದಾಡಿ ನಂದಿ ಶಾಂತವಾಯಿತು. ಚಿತ್ರಕಲಾ ಕ್ಷೇತ್ರಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿ ಭಾರತೀಯ ಕಲಾ ಸಾಂಪ್ರದಾಯಿಕ ಹರಿಕಾರನಾಗಿ ಬಾಳಿದರು.

(ಕೆಡಿ)

ಮ

ಮಂಗಲಗಿ: ಹಿಂದೆ ಪ್ರಸಿದ್ಧ ಜೈನ ಕೇಂದ್ರವಾಗಿದ್ದು. ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಊರು ಸುತ್ತಲಿರುವ ಅಳಿದುಳಿದ ಕೋಟೆ ಬತೇರಿಗಳು ಬೃಹತ್ ಅಗಸಿ (ಪ್ರವೇಶದ್ವಾರ) ಮಂಗಲಗಿಯ ಭವ್ಯತೆಗೆ ಬೆಳಕು ಬೀರುತ್ತವೆ. ಅಗಸಿಯನ್ನು ದಾಟಿದಾಗ ನಮಗೆ ಎದುರಾಗುವುದು ಇತ್ತೀಚೆಗೆ ಕಟ್ಟಿದ ಚಿಕ್ಕ ಗುಡಿ. ಜನ ಇದಕ್ಕೆ ಜೈನಯಕ್ಷಿ ಪದ್ಮಾವತಿಯ ಗುಡಿಯೆಂದು ಕರೆಯುತ್ತಾರಾದರೂ; ಒಳಗಿರುವ ಮೂರ್ತಿ ಜೈನಯಕ್ಷ ಧರಣೇಂದ್ರನದು. 23ನೇಯ ತೀರ್ಥಂಕರ ಭಗವಾನ್ ಪಾರ್ಶ್ವನಾಥರ ಯಕ್ಷ–ಯಕ್ಷಿಯರು ಧರಣೇಂದ್ರ ಪದ್ಮಾವತಿ. ಕ್ರಿ.ಶ. 10–11ನೆಯ ಶತಮಾನದ ಬೆಣಚು ಕಲ್ಲಿನ ಈ ಧರಣೇಂದ್ರನ ಪ್ರತಿಮೆ ಸುಖಾಸೀನದಲ್ಲಿದೆ. ತ್ರಿಭಂಗಿಯ ಗೋಪುರಾಕಾರದ ಕಿರೀಟದ ಮಧ್ಯ, ಕುಳಿತ ಕಿರು ಜಿನಬಿಂಬ ವಿರುವ ಯಕ್ಷನಿಗೆ ಮಕರಕುಂಡಲ, ಕೊರಳಹಾರ, ಯಜ್ಞೋಪವೀತ, ಎದೆಹಾರ, ತೋಳುಬಂಧಿ, ಭುಜದಾಭರಣ, ಕಂಕಣ, ಕಾಲ್ಕಡಗಗಳಿಂದ ಅಲಂಕರಿಸಿದ್ದಾರೆ. ತಲೆಯ ಮೇಲೆ ಐದು ಹೆಡೆಯ ನಾಗ ಇದೆ. ನಾಲ್ಕು ಕೈಯಲ್ಲಿ ಬಲ ಮೇಲುಗೈಯಲ್ಲಿ ಅಂಕುಶ, ಕೆಳಗೈಯಲ್ಲಿ ಪುಷ್ಪ, ಎಡ ಮೇಲುಗೈಯಲ್ಲಿ ಪಾಶ, ಕೆಳಗೈಯಲ್ಲಿ ಬೀಜಪುರ ಫಲವಿದೆ. ಊರ ಜನ ಪದ್ಮಾವತಿ ಎಂದು ಪೂಜೆಗೊಳ್ಳುವ ಈ ವಿಗ್ರಹದ ಮುಂದೆ, ಜಾತ್ರೆ ಸಮಯದಲ್ಲಿ ಕುರಿ ಬಲಿಕೊಡುತ್ತಿರುವುದು ವಿಪರ್ಯಾಸಕರ ಹಾಗೂ ಖೇದಕರ ಸಂಗತಿ.

ಹೂಗಾರ ಓಣಿಯಲ್ಲಿ ಜಿನ್ನೆ ದೇವರು ಎಂದು ಕರೆಸಿಕೊಳ್ಳುವ 23ನೆಯ ತೀರ್ಥಂಕರ ಪಾರ್ಶ್ವನಾಥರ ಕಪ್ಪುಕಲ್ಲಿನ ಕಾಯೋತ್ಸರ್ಗ ಭಂಗಿಯ ಬೃಹತ್ ಪ್ರತಿಮೆ ಪೂರ್ವಾಭಿಮುಖವಾಗಿದೆ. ಗುಂಗುರು ತಲೆಗೂದಲಿನ ಸುಂದರ ಪ್ರಮಾಣಬದ್ಧ ಅಂಗಸೌಷ್ಠವದ ಪ್ರಶಾಂತ ಮುಖಭಾವದ ಧ್ಯಾನಮಗ್ನ ಜಿನಪ್ರತಿಮೆಯ ಹಿಂದೆ ಸಪ್ತ ಫಣೆಗಳ ಧರಣನೆಂಬ ಸರ್ಪ ಹೆಡೆ ತೆರೆದು ತೀರ್ಥಂಕರರ ತಪಸ್ಸಿಗೆ ಭಂಗಬಾರದಂತೆ ಉಪಸರ್ಗ ತಡೆಯಲು ರಕ್ಷಣೆಗೆ ನಿಂತಿದೆ. ಪ್ರತಿಮೆಯ ಹಿಂದೆ ಪ್ರಭಾವಳಿ ಇಲ್ಲ. ಥಕ್ಕನೆ ಶ್ರವಣಬೆಳಗೊಳದ ಗೊಮ್ಮಟ ಶಿಲ್ಪದ ನೆನಪನ್ನು ತರುತ್ತಿರುವ ಈ ವಿಗ್ರಹವೂ ಮಳೆ ಗಾಳಿ ಬಿಸಿಲಿಗೆ ಮೈವೊಡ್ಡಿ ಈಗ ಬಯಲಲ್ಲೇ ನಿಂತಿದೆ. 11 ಅಡಿಗೂ ಮೇಲ್ಪಟ್ಟು ಎತ್ತರ, 4 ಅಡಿಗೂ ಮೇಲ್ಪಟ್ಟೂ ಅಗಲವಿರುವ ಈ ವಿಗ್ರಹ ಬಸದಿಯಲ್ಲಿ ಪ್ರತಿಷ್ಠಾಪಿಸಿದ್ದುದರ ಕುರುಹಾಗಿ ಇಲ್ಲಿ ಜಿನಮಂದಿರದ ಭಗ್ನಾವಶೇಷವಿದೆ. ಈ ಪ್ರತಿಮೆಯ ಮುಂದೆ ಕಮಲದ ಕೆತ್ತನೆಯ ಭುವನೇಶ್ವರ ಶಿಲ್ಪ ಮೇಲ್ಮೊಗವಾಗಿ ಬಿದ್ದಿದೆ. ಬಲಗಡೆ ಪದ್ಮಾವತಿ ಯಕ್ಷಿಯ ಪದ್ಮಾಸನದ ಪ್ರತಿಮೆ ಚತುರ್ಭುಜವುಳ್ಳದ್ದಾಗಿದೆ. ಬಲಮೇಲು ಕೈಯಲ್ಲಿ ಪಾಶ, ಕೆಳಗೈಯಲ್ಲಿ ಪುಷ್ಪ ಎಡಮೇಲುಗೈಯಲ್ಲಿ ಅಂಕುಶ, ಬೀಜಪೂರ ಫಲ ಹಿಡಿದ ಎಡ ಕೆಳಕೈ ಮುಕ್ಕಾಗಿದೆ. ತಲೆಯ ಮೇಲಿನ ನಾಗಫಣಿಯೂ ಒಡೆದಿದೆ. ಇದರ ಸನಿಹದಲ್ಲೇ ತೀರ್ಥಂಕರರ ಬೆಂಗಡೆಯಿರುವ ಒರಗು ದಿಂಬಿನ ಸೇದಿಕಲ್ಲಿನ ಒಡೆದ ಶಿಲಾಫಲಕವಿದೆ. (ಖಎನ್ಎ)

ಮಂಗಳೂರು ವೀರಣ್ಣ: ರಂಗಭೂಮಿ ಕಲಾವಿದ. ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಮಂಗಳೂರು ಗ್ರಾಮದಲ್ಲಿ 1924ರಲ್ಲಿ ಜನಿಸಿದರು. ಇವರು ತಮ್ಮ ಪ್ರೌಢ ವಯಸ್ಸಿನ ದಿನಗಳನ್ನು ಗ್ರಾಮದಲ್ಲಿಯೇ ಕಳೆದು ಪ್ರಾಥಮಿಕ ಶಿಕ್ಷಣದ ಓದನ್ನು ಮುಗಿಸಿದ್ದರು. ತಮ್ಮ ಆಸಕ್ತಿ ಹಾಗೂ ವೃತ್ತಿಯನ್ನು ರಂಗಭೂಮಿಯನ್ನಾಗಿ ಮಾಡಿಕೊಳ್ಳಲು ಬಯಸಿ ಖುದ್ದೂರಲ್ಲಿಯೇ ನಾಟಕ ಕಂಪನಿ ಕಟ್ಟಿ ಬೆಳೆಸಿ ಸುತ್ತಮುತ್ತಲಿನ ಗ್ರಾಮದವರಿಗೂ ತೀರಾ ಪರಿಚಿತ ಕಲಾವಿದರಾಗಿ, ಅಭಿಮಾನದ ವ್ಯಕ್ತಿಯಾಗಿ ಬೆಳೆದರು. ವೀರಣ್ಣನವರ ಅಭಿನಯದ ಪ್ರಶಂಸೆ ಎಲ್ಲೆಡೆಯೂ ಸುದ್ದಿಯಾಗಿ ಪ್ರಸಿದ್ಧ ನಾಟಕ ಕಂಪನಿಗಳವರೆಗೂ ಹಬ್ಬಿತು.

ಮೊದಲಿಗೆ ತಳಕಲ್ ವೆಂಕರೆಡ್ಡಿ ನಾಟಕ ಕಂಪನಿಯ ಕರೆ ಬಂತು. ಅಲ್ಲಿ ಅಭಿನಯಿಸಿ ಜೀವಂತಿಕೆ ಹೆಚ್ಚಿದಂತೆ, ಗುಬ್ಬಿ ವೀರಣ್ಣನವರ ಕಂಪನಿ, ಗುಡಿಗೇರಿ ಕಂಪನಿ, ಗೋಕಾಕದ ಶಾರದಾ ಕಂಪನಿಯಲ್ಲಿ ನಟಿಸಿ, ಅದೇ ಕಂಪನಿಯಿಂದಲೇ ಶಿವಮೊಗ್ಗಕ್ಕೆ ಕ್ಯಾಂಪ್ ಆಯಿತು. ವೀರಣ್ಣನವರ ಅಭಿನಯದ 'ದ್ರೌಪದಿ ವಸ್ತ್ರಾಪಹರಣ' ನಾಟಕ ಶತದಿನೋತ್ಸವ ಕಂಡಾಗ ಕಂಪನಿ ಮಾಲೀಕರು ಸಮಾರಂಭವೊಂದನ್ನೇರ್ಪಡಿಸಿ ಸಿನಿಮಾ ರಂಗದವರನ್ನು ಆಹ್ವಾನಿಸಿದ್ದರು. ಅವರಲ್ಲಿ ಹೊನ್ನಪ್ಪ ಭಾಗವತರು ಮುಖ್ಯ ಅತಿಥಿಯಾಗಿದ್ದರು. ವೀರಣ್ಣನವರ ಅಭಿನಯಕ್ಕೆ ಮಾರು ಹೋಗಿ ಕಂಪನಿ ಮಾಲಿಕರಿಂದ ಬಿಡಿಸಿಕೊಂಡು ತಮ್ಮ ಚಿತ್ರಗಳಿಗೆ ಹಾಕಿಕೊಂಡರು. ಪ್ರಥಮ ಚಿತ್ರ ಪಂಚರತ್ನ (1951), ಅದಾದ ನಂತರ ದೇವಸುಂದರಿ (1955), ಗಿರಿಜಾ ಕಲ್ಯಾಣ (1956), ಶ್ರೀಕೃಷ್ಣ ಗಾರುಡಿ (1958), ಐರಾವಣ ಮೈರಾವಣ (1959) ಹೀಗೆ ಐದು ಚಲನಚಿತ್ರಗಳಲ್ಲಿ ಅಭಿನಯಿಸಿ ಕರ್ನಾಟಕ ರಾಜ್ಯಾದ್ಯಂತ ಖ್ಯಾತಿ ಪಡೆದರು. ಪದ್ಮಭೂಷಣ ರಾಜಕುಮಾರ ಅವರೊಂದಿಗೆ 'ದೇವಸುಂದರಿ', 'ಶ್ರೀಕೃಷ್ಣ ಗಾರುಡಿ'ಯಲ್ಲಿ ಅಭಿನಯಿಸಿದ್ದಾರೆ.

ಆಗ ಮದ್ರಾಸಿನಲ್ಲಿಯೇ ಇರಬೇಕಾಗಿದ್ದ ವೀರಣ್ಣನವರಿಗೆ ಅಲ್ಲಿನ ವಾತಾವರಣ ಹಿಡಿಸಲಿಲ್ಲ. ಆರೋಗ್ಯ ಹದಗೆಟ್ಟು ಊರು ಸೇರಬೇಕಾಗಿ ಬಂತು. ತವರೂರಿಗೆ ಬಂದ ಬಳಿಕ 16 ವರ್ಷ ನಾಟಕ ಕಂಪನಿಗಳಲ್ಲಿ ವೃತ್ತಿ ಕಲಾವಿದರಾಗಿ ದುಡಿದಿದ್ದಾರೆ. ಸ್ಥಳೀಯ ಮಂಗಳೂರು ಗ್ರಾಮದ ಮಂಜುನಾಥ ಚಿತ್ರಮಂದಿರಕ್ಕೆ 'ಶ್ರೀಕೃಷ್ಣ ಗಾರುಡಿ' ಚಿತ್ರ ಪ್ರದರ್ಶನಕ್ಕೆ ಬಂದಾಗ ವೀರಣ್ಣನವರನ್ನು ಊರಿನ ಜನ ಮೆರವಣಿಗೆ ಮಾಡಿದರು. ಚಿತ್ರಮಂದಿರದವರು ಸನ್ಮಾನ ಮಾಡಿ ಆದರಿಸಿದ್ದಾರೆ. ಸ್ಥಳೀಯ 'ಕನ್ನಡ ಕಲಾ ಹವ್ಯಾಸಿ

ಸಂಘ'ವು 1988ರಲ್ಲಿ ಸನ್ಮಾನಿಸಿ ಇವರ ಸೇವೆಯನ್ನು ಕೊಂಡಾಡಿದೆ. 1991ರಲ್ಲಿ ಕೊಪ್ಪಳದಲ್ಲಿ ಜರುಗಿದ ನಾಡಹಬ್ಬದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಇವರಲ್ಲಿ ಈಗಲೂ ಅಭಿನಯದ ಕಳೆ, ಛಾಪು, ತೇಜಸ್ಸು ಎಲ್ಲ ಇದೆ. (ಎಸಿಕೆ)

ಮಂಜುನಾಥ ಪಡಶೆಟ್ಟಿ: ಚಿತ್ರಕಲಾವಿದರು. ಸಾಹಿತ್ಯ ಇವರ ಆಸಕ್ತಿ. ವಚನಗಳು, ದಾಸರ ಹಾಡುಗಳನ್ನು ಮಧುರವಾಗಿ ಹಾಡುವ ಮಂಜುನಾಥರ ಪ್ರಾರ್ಥನೆ ಮೂಲಕವೇ ಶಹಾಪುರದಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಸಮಾರಂಭಗಳು ಆರಂಭವಾಗುವವು ಎನ್ನುವಷ್ಟು ಜನಪ್ರಿಯತೆ ಆವರಿಸಿವೆ.

ಗದುಗಿನ ತೋಂಟದಾರ್ಯ ಮಠದಲ್ಲಿ ಇವರ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಸಿಕ್ಕಿತ್ತು. ಇವರು ಸಂಗೀತ ಕಲಿತವರಲ್ಲ. ಈ ಕ್ಷೇತ್ರದಲ್ಲಿ ಇವರೊಬ್ಬ ಏಕಲವ್ಯ. ತಮ್ಮ ತಂದೆ ಸಂಗಪ್ಪ ಪಡಶೆಟ್ಟಿ ಅವರು ವಚನ, ದಾಸರ ಹಾಡುಗಳನ್ನು ಮನಸ್ಸಿನ ಬೇಸರ ಕಳೆಯಲು ಆಗಾಗ ತಮಗೆ ತಿಳಿದಂತೆ ಹಾಡುತ್ತಿದ್ದರು.


ಸಾರ್ವಜನಿಕ ಬದುಕಿನಲ್ಲಿ ಇವರು ಪ್ರಸಿದ್ಧಿಗೆ ಬಂದಿದ್ದು– ಚಿತ್ರಕಲೆಯ ಮೂಲಕ. ಕಳೆದ 10 ವರ್ಷಗಳಿಂದ ಅಂಗಡಿಗಳಿಗೆ ಬೋರ್ಡ್, ನಾಮಫಲಕ, ವಾಹನ ಫಲಕ ಇತ್ಯಾದಿ ಬರೆಯುವುದರೊಂದಿಗೆ ವೃತ್ತಿ ಜೀವನ ಆರಂಭಿಸಿದ ಇವರು ತಮ್ಮ ತಾಯಿ ತವರೂರು ದಾವಣಗೆರೆಯಲ್ಲಿ ಕಲಿತಿದ್ದು–'ಡ್ರೈಯಿಂಗ್ ಮಾಸ್ಟರ್ ಕೋರ್ಸ್' ಮಾತ್ರ. ಪೆನ್ಸಿಲ್‌ನಿಂದ ಹಾಗೂ ಇದ್ದಲಿ ನಿಂದ ವ್ಯಕ್ತಿಚಿತ್ರಗಳನ್ನು, ರೇಖಾಚಿತ್ರಗಳನ್ನು ವಿವಿಧ ಭಂಗಿಗಳಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಬೆಳಗಾವಿ, ದಾವಣಗೆರೆ, ಗದಗ ಇತರೆಡೆಗಳಲ್ಲಿ ಅವುಗಳನ್ನು ಪ್ರದರ್ಶಿಸಿದ್ದಾರೆ.

ಶಹಾಪುರದ ಮುಖ್ಯರಸ್ತೆಯಲ್ಲಿರುವ ತಮ್ಮ ಅಂಗಡಿ 'ಇಂಡಿಯಾನ್ ಆರ್ಟ್' ಬಾಗಿಲಿಗೆ 'ಇಂಡಿಯನ್ ಗೇಟ್' ರೂಪ ನೀಡಿ, ಉತ್ತಮ ಚಿತ್ರಕಾರರೆಂದು ಸಾರ್ವಜನಿಕರ ಗಮನ ಸೆಳೆದಿದ್ದಾರೆ. ಮದುವೆ, ಸಭೆ ಸಮಾರಂಭಗಳಲ್ಲಿ ಮಾಡುವ ಥರ್ಮಾಕೂಲ್ ಆಕೃತಿಗಳ ಸಿಂಗಾರ ಕಲೆಯೂ ಅದ್ಭುತ, ಥರ್ಮಾಕೂಲ್‌ನಲ್ಲಿ ಮಂಟಪ, ಅಕ್ಷರಗಳು, ಹೂವಿನ ಆಕೃತಿಗಳು ಇಂಥ ಕಲೆ ಅರಳಿಸಿದ್ದು ಹಲವಾರು.

ಇವರ ಆಸಕ್ತಿಯ ಕ್ಷೇತ್ರ ಸಾಹಿತ್ಯ ದೇವರು ಮತ್ತು ಪೂಜಾರಿ, ಗುರುವಿಗೆ ತಕ್ಕ ಶಿಷ್ಯ ಎಂಬ ಮಕ್ಕಳ ಹಾಸ್ಯ ನಾಟಕಗಳನ್ನು ರಚಿಸಿ, ಮಕ್ಕಳಿಂದಲೇ ಆಡಿಸಿ, ಯಶಸ್ವಿಯಾಗಿದ್ದಾರೆ.

(ಎಸ್‌ಆಯ್‌ಎಸ್)

ಮಂತಟ್ಟಿ ಹೆಚ್.ವಿ.: ನಿಸರ್ಗ ಕಲಾವಿದ. ಗುಲಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ 23.01.1969ರಂದು ಜನಿಸಿದರು. ಅಲ್ಲಿಯ ಪರಿಸರ, ನದಿ, ಬೆಟ್ಟ–ಗುಡ್ಡಗಳ ನಡುವೆ ಬೆಳೆದ ಕಲಾವಿದ. ಇವರ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಚಿಂಚೋಳಿಯಲ್ಲಿಯೇ ಮುಗಿಯಿತು. ಹೈಸ್ಕೂಲ್‌ನಲ್ಲಿದ್ದಾಗಲೇ ನಾರಾಯಣರಾವ್ ಭೋಸಾವಳೆರವರ ಮಾರ್ಗದರ್ಶನದಂತೆ ಗುಲಬರ್ಗಾದ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಬಿ.ಎಫ್.ಎ. ಸ್ನಾತಕ



ಮತ್ತು ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಅನ್ವಯಿಕ ಕಲೆಯಲ್ಲಿ ಪಡೆದರು. ಪದವಿ ಮುಗಿದ ನಂತರ 1990ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ ಅನ್ವಯಿಕ ಕಲೆಯ ಉಪನ್ಯಾಸಕರಾಗಿ ಆಯ್ಕೆಗೊಂಡರು. ಅನ್ವಯಿಕ ಕಲೆಯ ಉಪನ್ಯಾಸಕರಾದರೂ ಪೇಂಟಿಂಗ್‌ನಲ್ಲಿ ವಿಶೇಷವಾದ ಒಲವು ಮತ್ತು ಹಿರಿಯ ಕಲಾವಿದ ವಿ.ಜಿ ಅಂದಾನಿ ಅವರ ಮಾರ್ಗದರ್ಶನದಿಂದ ಕಲಾವಿದರಾಗಿ ರೂಪುಗೊಳ್ಳಲು ಸಾಧ್ಯವಾಯಿತು.

ವಿದ್ಯಾರ್ಥಿ ದಿಶೆಯಿಂದ ಸೃಜನಶೀಲ ಕಲಾವಿದನಾಗಿ ರೂಪುಗೊಂಡ ಇವರ ಹಲವಾರು ಚಿತ್ರಕಲಾ ಕೃತಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದ ಅನೇಕ ಕಲಾಸ್ಪರ್ಧೆಗಳಲ್ಲಿ ಆಯ್ಕೆಯಾಗಿ



'ಅನ್‌ಟೈಟಲ್' ಪೆನ್–ಇಂಕ್ ಮಾಧ್ಯಮ

ಪ್ರದರ್ಶಿಸಲ್ಪಟ್ಟಿವೆ. ಕಲಾವಿದರ ಮತ್ತು ಚಿತ್ರಕಲಾ ಪ್ರದರ್ಶನಗಳ ಕುರಿತು ಲೇಖನಗಳನ್ನು ಬರೆದು ಪ್ರಕಟಿಸುವ ಮೂಲಕ ದೃಶ್ಯ ಕಲಾವಿದರನ್ನು ಸಮಾಜಕ್ಕೆ ಪರಿಚಯಿಸುವ ಕಾರ್ಯ ಮಾಡಿದ್ದಾರೆ. 1990ರಲ್ಲಿ ಕಲಾಮಹೋತ್ಸವ ಪ್ರಶಸ್ತಿ, 2001ರಲ್ಲಿ ಹೈದ್ರಾಬಾದ ಆರ್ಟ್ ಸೊಸೈಟಿ ಪ್ರಶಸ್ತಿ, 2007ರ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, 2008ರಲ್ಲಿ ಕರ್ನಾಟಕ ಲಲಿತಕಲಾ ಪ್ರಶಸ್ತಿಗಳನ್ನು ಇವರು ಪಡೆದುಕೊಂಡಿದ್ದಾರೆ. ಚಿತ್ರ ಕಲಾವಿದ ಶಾಂತಲಿಂಗಪ್ಪ ಪಾಟೀಲರನ್ನು ಕುರಿತು ಬರೆದ ಪುಸ್ತಕವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದೆ. ಇವರು ಹೆಚ್ಚಾಗಿ ರೇಖಾಚಿತ್ರ ಮತ್ತು ತೈಲವರ್ಣ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಾರೆ. ಛಾಯಾಚಿತ್ರ ಕಲೆಯಲ್ಲಿಯೂ ಕೂಡಾ ವಿಶೇಷ ನೈಪುಣ್ಯತೆ ಹೊಂದಿದ್ದಾರೆ.

ದಿ. ಐಡಿಯಲ್ ಫೈನ್ ಆರ್ಟ್ ಸಂಸ್ಥೆ, ಗುಲಬರ್ಗಾ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ವಿಶ್ವಭಾರತಿ ಶಾಂತಿನಿಕೇತನ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಕರ್ನಾಟಕ ಲಲಿತ ಕಲಾ ಅಕಾಡೆಮಿಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

(ಪಿಪಿ)

ಮದಿನಿಕಾ ಶಿಲ್ಪಗಳು: ಗುಲ್ಬರ್ಗಾ ಭಾಗದ ಮಧ್ಯಕಾಲೀನ ದೇವಾಲಯಗಳಲ್ಲಿ ಇಂತಹ ಹಲವಾರು ಶಿಲ್ಪಗಳು ದೇವಾಲಯಗಳ ಹೊರಭಿತ್ತಿಯನ್ನು ಅಲಂಕರಿಸಿವೆ. ದೃಶ್ಯಕಲೆಯ ದೃಷ್ಟಿಯಲ್ಲಿ ಶಿಲ್ಪಗಳು ಸಾಂಕೇತಿಕವಾಗಿದ್ದರೂ ಕಥಾನಕ ಅಂಶಗಳನ್ನು ಹೊಂದಿವೆ. ಈ ಪರಂಪರೆ ಬಹುಕಾಲದಿಂದಲೂ ಬೆಳೆದು ಬಂದಿದೆ. ಸ್ತ್ರೀಯನ್ನು ಶಿಲ್ಪಗಳಲ್ಲಿ ಮತ್ತು ಚಿತ್ರಗಳಲ್ಲಿ ಹೆಚ್ಚು ಉತ್ಸಾಹಭರಿತಳಾಗಿ ಹಾಗೂ ಆಕರ್ಷಕಳಾಗಿ ಕಾಣುವಂತೆ ಚಿತ್ರಿಸುವ ಸಂಪ್ರದಾಯ ಮೌರ್ಯ, ಶಾತವಾಹನ ಕಾಲದಿಂದಲೇ ಪ್ರಾರಂಭವಾಯಿತು. ಈ ಕಾಲದಿಂದಲೇ ಸ್ತ್ರೀ ಶಿಲ್ಪಗಳು ಒಂದು ಅರ್ಥದಲ್ಲಿ ಅಲಂಕಾರಿಕ ಪ್ರಾಮುಖ್ಯತೆಯ ಜೊತೆಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಉದ್ದೇಶವನ್ನು ಕೂಡ ಹೊಂದಿದ್ದುವು. ಮೌರ್ಯರ ಕಾಲದ ದಿಧರ್‌ಗಂಜ್ ಯಕ್ಷಿ ಆಕರ್ಷಕ ಭಂಗಿಯಲ್ಲಿ ಚೌರಿಯೊಂದನ್ನು ಹಿಡಿದು ನಿಂತಿದ್ದಾಳೆ. ಅದೇ ರೀತಿ ಭಾರ್ಹುತ್ ಮತ್ತು ಸಾಂಚಿ ಸ್ತೂಪಗಳಲ್ಲಿ ಯಕ್ಷಿಗಳ ಶಾಲಂಭಂಜಿಕೆಗಳ ಶಿಲ್ಪಾಕೃತಿಗಳನ್ನು ಕಾಣಬಹುದು. ಈ ಹಿನ್ನೆಲೆಯಿಂದಲೇ ಯಕ್ಷಿ ಶಿಲಾಬಾಲಿಕೆ ಅಥವಾ ಮದನಿಕಾ ಶಿಲ್ಪಗಳಾಗಿ ನಂತರದ ಕಾಲದಲ್ಲಿಯೂ ಬೆಳೆದು ಬಂದವು. ಗುಲ್ಬರ್ಗಾ ಜಿಲ್ಲೆಯ ಸನ್ನತಿಯ ಸ್ತೂಪದ ಶಿಲ್ಪಗಳಲ್ಲಿಯೂ ಇಂತಹ ಆಕರ್ಷಕ ಸ್ತ್ರೀ ಉಬ್ಬು ಶಿಲ್ಪಗಳು ರಚನೆಗೊಂಡಿವೆ ಎಂದು ತಿಳಿಯುತ್ತದೆ. ಕರ್ನಾಟಕದ ಮಟ್ಟಿಗೆ ಅತ್ಯಂತ ಪ್ರಾಚೀನ ಶಿಲ್ಪಗಳು ಇವೇ ಆಗಿವೆ.

ಗುಲ್ಬರ್ಗಾ ಜಿಲ್ಲೆಗೆ ಪೂರಕವಾದಂತೆ ಈ ಶಿಲ್ಪಗಳನ್ನು ಕುರಿತು ಗಮನಿಸಿದಾಗ ಹಲವಾರು ಭಾವಪೂರ್ಣ ಶಿಲ್ಪಾಕೃತಿಗಳು ಕಂಡುಬರುತ್ತವೆ. ವಿಶೇಷವಾಗಿ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಇಂಥ ಶಿಲ್ಪಗಳು ಕಂಡು ಬರುತ್ತವೆ. ದೇವಾಲಯದ ಭಿತ್ತಿಗಳಲ್ಲಿ ಸರ್ವೇ ಸಾಮಾನ್ಯವಾಗಿ ಕಂಡುಬರುವ ಈ ಶಿಲ್ಪಗಳು, ಬಹುತೇಕವಾಗಿ ದುಂಡು ಶಿಲ್ಪಗಳಂತೆ ಕಾಣುತ್ತವೆ. ಆದರೆ ಇವುಗಳ ಹಿಂಭಾಗ ಮಾತ್ರ ಹಿನ್ನೆಲೆಗೆ ಅಂಟಿಕೊಂಡಂತಿರುತ್ತದೆ. ಈ ಶಿಲ್ಪಗಳಲ್ಲಿ ಹಲವಾರು ಭಾವಭಂಗಿಗಳನ್ನು ನೋಡಬಹುದು. ದುಂಡನೆಯ ಮುಖ ಆರೋಗ್ಯ ಭರಿತವಾದ ಶರೀರ ಹಿತಮಿತವಾದ ಉಬ್ಬುಗಳು, ವಿಶಾಲವಾದ ನಿತಂಬಗಳು ಸ್ತ್ರೀಯ ಆಕೃತಿಗಳನ್ನು ಮತ್ತಷ್ಟು ಆಕರ್ಷಕವಾಗಿಸುತ್ತವೆ. ಇವುಗಳ ಆಕರ್ಷಕ ನಿಂತ ತ್ರಿಭಂಗಿಗಳು ಶಿಲ್ಪ ಸಂಯೋಜನೆ ದೃಷ್ಟಿಯಲ್ಲಿ ಅತ್ಯಂತ ಕ್ರಮಬದ್ಧವಾಗಿ ಹಾಗೂ ಪ್ರಮಾಣಬದ್ಧವಾಗಿ ರಚನೆಯಾಗಿವೆ. ಸಾಮಾನ್ಯವಾಗಿ ಇಂತಹ ಸ್ತ್ರೀ ಶಿಲ್ಪಗಳು ದೇವಾಲಯಗಳ ಭಿತ್ತಿಗಳ ಮೇಲೆ ಕಂಡು ಬರುತ್ತವೆ. ಇದಕ್ಕೆ ಅಪವಾದವೆಂಬಂತೆ ದೇವಾಲಯದ ಮಂಟಪಗಳ ಅಥವಾ ಸುಕನಾಶಿಗಳ ದ್ವಾರಪಾಲಕಿಯರಾಗಿಯೂ ಸಹ ಕಂಡು ಬಂದಿರುವ ಉದಾಹರಣೆಗಳಿವೆ. ಸೇಡಂ ಪಟ್ಟಣದಲ್ಲಿರುವ ಪಂಚಲಿಂಗೇಶ್ವರ ದೇವಾಲಯದ ಆವರಣದಲ್ಲಿರುವ ಏಕಕೂಟ ದೇವಾಲಯವೊಂದರ ದ್ವಾರಪಾಲಕರಾಗಿ ಸ್ತ್ರೀ ಶಿಲ್ಪಗಳನ್ನು ನೋಡಬಹುದು. ಈ ಎರಡು ಸ್ತ್ರೀ ಶಿಲ್ಪಗಳ ಕೈಗಳು ಭಗ್ನಗೊಂಡಿರುವುದರಿಂದ ಅವುಗಳ ಮುದ್ರೆ ಹೀಗೇ ಇತ್ತು ಎಂದು ಹೇಳುವುದು ಕಷ್ಟ ಸಾಧ್ಯ. ಆದರೂ, ಬಹುಶಃ ಒಂದು ಕೈಯಲ್ಲಿ ಬೀಜಪೂರಕ ಮತ್ತೊಂದು ಕೈ ಬಹುಶಃ ಕಮಲದ ಹೂವು ಅಥವಾ ಅಭಯ ಮುದ್ರೆಯಲ್ಲಿದ್ದಿರಬಹುದೆಂದು ಹೇಳಬಹುದು. ಕೆತ್ತನೆಯಲ್ಲಿ ಮತ್ತು ಅಲಂಕರಣದಲ್ಲಿ ಹಾಗೂ ಭಾವಭಂಗಿಗಳಲ್ಲಿ ಎರಡು ಶಿಲ್ಪಗಳು ಅನುರೂಪವಾಗಿವೆ. ಈ ಅನುರೂಪತೆಯೇ ವಾಸ್ತುಶಿಲ್ಪದ ಸಮಾನತೆಯ ತತ್ವದಡಿಯಲ್ಲಿ ರಚಿಸಲಾಗಿದೆ. ಇಂತಹವೇ ಹಲವಾರು ಶಿಲ್ಪಗಳು ದೇವತೆಗಳ ಪರಿಚಾರಕ ಶಿಲ್ಪಗಳಾಗಿ ದೇವಾಲಯದ ಹೊರಭಿತ್ತಿಗಳಲ್ಲಿ ಕಂಡು ಬರುತ್ತವೆ. ಗುಲ್ಬರ್ಗಾದ ರಾಜ್ಯ ಪ್ರಾಚ್ಯ ಮತ್ತು ಸಂಗ್ರಹಾಲದಲ್ಲಿ ಸಂರಕ್ಷಿಸಿ ಇಡಲಾಗಿರುವ ಮೇಡಕ್‌ನ ಇಂತಹವೇ ಹಲವಾರು ಶಿಲ್ಪಗಳು ಆಕರ್ಷಕವಾದ ಭಂಗಿಯಲ್ಲಿ ನಿಂತಿರುವಂತೆ ರಚಿಸಲ್ಪಟ್ಟಿವೆ. ಈ ಶಿಲ್ಪಗಳಲ್ಲಿ ಸೊಗಸಾದ, ಹಿತಮಿತವಾದ ಆಭರಣಗಳು, ಆಕರ್ಷಕ ಕೇಶ ವಿನ್ಯಾಸಗಳು, ಪ್ರಮಾಣಬದ್ಧ ದೇಹದ ರಚನೆ ನಿಜಕ್ಕೂ ಈ ಶಿಲ್ಪಗಳನ್ನು ದೇವ ಸ್ತ್ರೀಯರ ಆಕೃತಿಗಳಂತೆ ಬಿಂಬಿಸುತ್ತವೆ.


ಈಶ್ವರ ದೇವಾಲಯದ ಮೇಲಿರುವ ಮದಿನಿಕಾ ಶಿಲ್ಪ

ಬಹುಶಃ ಸ್ತ್ರೀ ಶಿಲ್ಪಗಳ ಅತ್ಯುತ್ತಮ ಉದಾಹರಣೆಗಳು ಕಂಡುಬರುವುದು ಚಿತ್ತಾಪುರ ತಾಲ್ಲೂಕಿನ ಕಾಳಗಿಯ ದೇವಾಲಯಗಳಲ್ಲಿ. ಕಾಳಗಿಯ ಕಾಳೇಶ್ವರ ದೇವಾಲಯದ ಗರ್ಭಗೃಹದ ಹೊರಭಿತ್ತಿಯಲ್ಲಿ ದೇವತೆಗಳ ಮತ್ತು ದೇವ ಕೋಷ್ಠಗಳ ಬದಲಾಗಿ ಆಕರ್ಷಕ ಕಂಬ ಪಂಜರಗಳನ್ನು ರಚಿಸಿ ಇವುಗಳ ಮಧ್ಯದಲ್ಲಿ ಅತ್ಯಂತ ಮನೋಜ್ಞವಾಗಿ ಬಿಂಬಿಸಿರುವ ಸ್ತ್ರೀಯರ ಶಿಲ್ಪಗಳಿವೆ. ಇಲ್ಲಿರುವ ಸ್ತ್ರೀಯರ ಶಿಲ್ಪಗಳಲ್ಲಿ ಒಂದೊಂದು ಶಿಲ್ಪವೂ ಒಂದೊಂದು ಭಂಗಿಯಲ್ಲಿರು ವಂತೆ ತೋರಿಸಲಾಗಿದೆ. ಸ್ತ್ರೀಯೋರ್ವಳು ಒಂದು ಕಾಲ ಮೇಲೆ ನಿಂತು ಮತ್ತೊಂದು ಕಾಲನ್ನು ಅಡ್ಡಲಾಗಿ ಮಡಚಿ ಆಸರೆಯಾಗಿ ಕಾಲಿಗೆ ಸೇರಿಸಿಕೊಂಡು ನಿಂತಿದ್ದಾಳೆ. ಈ ಭಂಗಿಯಲ್ಲಿ ನಿಂತು ತನ್ನ ಅಲಂಕಾರವನ್ನು ತಿದ್ದಿಕೊಳ್ಳುತ್ತಿರುವಂತೆಯೂ ಮತ್ತು ಉಟ್ಟು ಕೊಂಡಿರುವ ಒಳಉಡುಪಿನಂತಹ ಉಡುಗೆಯನ್ನು ನೋಡಿ ಕೊಳ್ಳುವಂತೆಯೂ ನಿಂತಿದ್ದಾಳೆ. ಇನ್ನೊಂದು ಶಿಲ್ಪದಲ್ಲಿ ಈ ಪ್ರಬಂಧದ ಪ್ರಾರಂಭದಲ್ಲಿ ವಿವರಿಸಿದ ಜಲಸಂಗಿಯ ಶಿಲಾ ಬಾಲಿಕೆಯಂತೆ ಲಿಪಿಯೊಂದನ್ನು ಕಂಡರಿಸುತ್ತಿರುವಂತೆ ನಿಂತಿ ದ್ದಾಳೆ. ಇವಳ ಕೇಶವಿನ್ಯಾಸ ಉಡುಗೆ ಮತ್ತು ಪಾರ್ಶ್ವದಿಂದ ನಿಂತ ಭಂಗಿ ಬಹು ಆಕರ್ಷಕವಾಗಿ ಕಾಣುತ್ತವೆ. ಮತ್ತೊಂದು ಶಿಲ್ಪದಲ್ಲಿ ಶಿಲಾಬಾಲಿಕೆಯೂ ಉದ್ದನೆಯ ಪಟ್ಟಿಯೊಂದನ್ನು ಎರಡು ಕೈಗಳಲ್ಲಿ ಹಿಡಿದು ನಿಂತಂತೆ ತೋರಿಸಲಾಗಿದೆ. ವಾಸ್ತವದಲ್ಲಿ ಇವಳು ಪತ್ರವನ್ನು ಓದುತ್ತಿರುವಂತೆ ಬಿಂಬಿಸಿದೆ. ಈ ಶಿಲ್ಪಗಳ ಸಾಲಿನಲ್ಲಿಯೇ ದರ್ಪಣ ಸುಂದರಿಯೂ ಇದ್ದಾಳೆ. ಕಪಿಯು ವಸ್ತ್ರವನ್ನೆಳೆದಾಗ ಅದನ್ನು ಸರಿಮಾಡಿಕೊಳ್ಳುವ ಭಂಗಿಯಲ್ಲಿರುವ ಇನ್ನೊಂದು ಸ್ತ್ರೀ ಶಿಲ್ಪವೂ ಇದೆ. ನಂತರದ ಶಿಲ್ಪದಲ್ಲಿ ಚಿಕ್ಕವೀಣೆ ಯನ್ನು ಹಿಡಿದು ನಿಂತಿರುವ ಸಂಗೀತಗಾರ್ತಿ ಇದ್ದರೆ, ಉಳಿದ ಇನ್ನೆರಡು ಶಿಲ್ಪಗಳು ಯೋಗಿನಿಯರ ಶಿಲ್ಪಗಳಂತೆ ತೋರುತ್ತವೆ. ಸಾಮಾನ್ಯವಾಗಿ ಹೊಯ್ಸಳರ ಶಿಲ್ಪಗಳಲ್ಲಿ ಕಂಡುಬರುವ ಇಂತಹ ಶಿಲ್ಪವನ್ನು ಅಂದರೆ ಸಂಪೂರ್ಣವಾಗಿ ನಗ್ನಳಾಗಿರುವ ಹಾಗೂ ತೊಡೆಯ ಮುಂಭಾಗದಲ್ಲಿ ಸರ್ಪದ ಆಭರಣವನ್ನು ಧರಿಸಿರುವ ಇಂತಹ ಸ್ತ್ರೀ ಶಿಲ್ಪವನ್ನು ವಿಷಕನ್ಯೆಯೆಂದು ಗುರುತಿಸಲಾಗಿದೆ. ಬಹುಶಃ ಇದು ಕೂಡ ವಿಷಕನ್ಯೆಯೇ ಇರಬೇಕು.

ಕಾಳಗಿಯ ಸೂರ್ಯನಾರಾಯಣ ತ್ರಿಕೂಟ ದೇವಾಲಯ, ಮಲ್ಲಿಕಾರ್ಜುನ ಹಾಗೂ ಸಿದ್ಧೇಶ್ವರ ದೇವಾಲಯಗಳ ಭಿತ್ತಿಗಳಲ್ಲಿ ಆಕರ್ಷಕ ಸ್ತ್ರೀ ಶಿಲ್ಪಗಳು ಕಂಡುಬರುತ್ತವೆ. ಈ ಭಿತ್ತಿಗಳಲ್ಲಿ ಕಂಡು ಬರುವ ಎಲ್ಲಾ ಸ್ತ್ರೀ ಶಿಲ್ಪಗಳಿಗೂ ಪ್ರತ್ಯೇಕವಾಗಿ ಪ್ರತಿಯೊಂದು ಶಿಲ್ಪಕ್ಕೂ ಪೀಠಗಳಿವೆ. ಈ ಪೀಠಗಳ ಮೇಲೆ ನಿಂತ ಭಂಗಿಯಲ್ಲಿ ಶಿಲ್ಪಗಳು ಭಿತ್ತಿಗೆ ಹೊಂದಿಕೊಂಡಂತೆ ಬಿಂಬಿಸಲ್ಪಟ್ಟಿವೆ. ವಿಶೇಷ ವಾಗಿ ಸೂರ್ಯನಾರಾಯಣ ದೇವಾಲಯದ ಹೊರಭಿತ್ತಿಯಲ್ಲಿ ವಿಷಕನ್ಯೆ, ಸಂಗೀತಗಾರ್ತಿ ಅಲ್ಲದೆ ದೇವಕೋಷ್ಠಗಳ ಎರಡೂ ಪಾರ್ಶ್ವಗಳಲ್ಲಿ ಬೀಜಪೂರಕ ಮತ್ತು ಕಮಲದ ಮೊಗ್ಗನ್ನು ಹಿಡಿದು ನಿಂತಿರುವ ಸಹಾಯಕ ಸ್ತ್ರೀ ಶಿಲ್ಪಗಳಾಗಿ ಬಿಂಬಿಸಲ್ಪಟ್ಟಿವೆ. ಈ ಶಿಲ್ಪಗಳು ಕಾಳೇಶ್ವರ ದೇವಾಲಯದ ಭಿತ್ತಿಶಿಲ್ಪಗಳಷ್ಟು ಪರಿಣಾಮಕಾರಿಯಾದ ಭಾವಭಂಗಿಗಳನ್ನು ಹೊಂದಿಲ್ಲದಿದ್ದರೂ ಕೂಡ ಇವುಗಳ ವೈವಿಧ್ಯ ಮತ್ತು ನಿರೂಪಣೆಗಳು ಇವುಗಳನ್ನು ಆಕರ್ಷಕ ಶಿಲ್ಪಗಳನ್ನಾಗಿ ಮಾಡುತ್ತವೆ. ಅದೇ ರೀತಿ ಮಲ್ಲಿ ಕಾರ್ಜುನ ಹಾಗೂ ಸಿದ್ಧೇಶ್ವರ ದೇವಾಲಯಗಳ ಭಿತ್ತಿಯಲ್ಲಿನ ಸ್ತ್ರೀ ಶಿಲ್ಪಗಳು ಕೂಡ ಇದೇ ವರ್ಗಕ್ಕೆ ಸೇರುತ್ತವೆ.

ಸಾಮಾನ್ಯವಾಗಿ ಕಲ್ಯಾಣದ ಚಾಲುಕ್ಯರ ದೇವಾಲಯ ಗಳಿಗಿಂತ ಮೊದಲಿನ ಕಾಲದ ದೇವಾಲಯಗಳಲ್ಲಿ ಬಹುತೇಕ ವಾಗಿ ಅಲಂಕಾರಿಕ ಶಿಲ್ಪಗಳಿದ್ದು, ಅಂತಹ ಉದಾಹರಣೆಗಳು ಪಟ್ಟದಕಲ್ಲು, ಐಹೊಳೆಯಲ್ಲಿನ ದೇವಾಲಯಗಳಲ್ಲಿ ಕಂಡು ಬರುತ್ತವೆ. ವಿಶೇಷವೆಂದರೆ ಇಲ್ಲಿ ಸ್ತ್ರೀ ಶಿಲ್ಪಗಳು ಭಿತ್ತಿಗಳಲ್ಲಿರದೆ ದೇವಾಲಯಗಳ ಮುಖಮಂಟಪದ ಕಂಬಗಳ ಮೇಲ್ಭಾಗದಲ್ಲಿ ಉಬ್ಬು ಶಿಲ್ಪಗಳಾಗಿ ರಚನೆಗೊಂಡಿವೆ. ಈ ಪರಂಪರೆಯೇ ಪಟ್ಟದ ಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಚಾಲುಕ್ಯೋತ್ತರ ಕಾಲದಲ್ಲಿ ಅತ್ಯಂತ ಗಣನೀಯವಾಗಿ ಈ ಸ್ತ್ರೀ ಶಿಲ್ಪಗಳು ದೇವಾ ಲಯದ ಭಿತ್ತಿಯಲ್ಲಿ ಕಾಣಲು ಪ್ರಾರಂಭಿಸಿದ್ದು ಮೇಲೆ ಚರ್ಚಿಸಿ ದಂತೆ ಈ ಶಿಲ್ಪಗಳ ರಚನೆಯ ಸ್ಥಳಾವಕಾಶಗಳು ಕ್ರಮೇಣವಾಗಿ ಬದಲಾವಣೆ ಹೊಂದಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ. ಪ್ರಸ್ತುತ ಕಾಳಗಿ, ಮೇಡಕ್, ಸೇಡಂನ ದೇವಾಲಯಗಳಲ್ಲಿ ಕಂಡು ಬರುವ ಈ ಸ್ತ್ರೀ ಶಿಲ್ಪಗಳು, ಅಲಂಕಾರಿಕವಾಗಿ ದೇವಾಲಯದ ಪ್ರಮುಖ ಭಿತ್ತಿಶಿಲ್ಪಗಳ ಸಾಲಿನಲ್ಲಿಯೇ ನಿಲ್ಲುತ್ತವೆ. ಬಹುಶಃ ದೇವಕೋಷ್ಠಗಳ ದೇವತಾ ಶಿಲ್ಪಗಳ ಪ್ರಾಮುಖ್ಯತೆ ಸರಿಸಮಾನ ವಾಗಿ, ಕೆಲವೊಮ್ಮೆ ಅದನ್ನು ಮೀರಿಸಿಯೂ ಸ್ತ್ರೀ ಶಿಲ್ಪಗಳು ರಚನೆ ಯಾಗಿರುವುದು ಕಂಡುಬರುತ್ತವೆ.

ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಸ್ತ್ರೀ ಶಿಲ್ಪಗಳ ರಚನೆಗೆ ಸಾಕಷ್ಟು ಒತ್ತು ನೀಡಿ ರುವುದು ಶಿಲ್ಪಗಳ ದಾಖಲೆಯಿಂದಲೇ ಕಂಡುಬರುತ್ತದೆ. ಉದಾ ಹರಣೆಗೆ ಬೇಲೂರು, ಹಳೇಬೀಡುಗಳಲ್ಲಿ ಬೋದಿಗೆಯ ಅಲಂಕರಣದಲ್ಲಿ ಈ ಶಿಲ್ಪಗಳು ಕಂಡುಬಂದರೆ ನಂತರದ ನುಗ್ಗೇಹಳ್ಳಿ, ಹೊಸಹೊಳಲು, ಜಾವಗಲ್ಲು ಬಸರಾಳು, ಸೋಮ ನಾಥಪುರ ಮೊದಲಾದ ಸ್ಥಳಗಳಲ್ಲಿ ಸ್ವತಂತ್ರ ಆಲಂಕಾರಿಕ ಶಿಲ್ಪ ಗಳಾಗಿ ಹಾಗೂ ದೇವತೆಗಳ ಪರಿಚಾರಕ ಶಿಲ್ಪಗಳಾಗಿ ಮೂಡಿ ಬಂದಿವೆ. ಒಟ್ಟಾರೆಯಾಗಿ ಸ್ತ್ರೀ ಶಿಲ್ಪಗಳು ಬೌದ್ಧ ಶಿಲ್ಪಕಲೆಯಿಂದ ಹಿಡಿದು, ಮಧ್ಯಕಾಲೀನ ಕಲೆಯವರೆಗೂ ವಿಶಿಷ್ಟ ಸಂಪ್ರದಾಯ ವೊಂದರ ಬೆಳವಣಿಗೆಗೆ ಕಾರಣವಾಗಿವೆ.

(ಎಲ್‌ಆರ್‌ಆರ್)

ಮದ್ದರಕಿ: ಒಂದು ಐತಿಹಾಸಿಕ ಮಹತ್ವದ ತಾಣ.ಯಾದಗಿರಿ ಜಿಲ್ಲೆ ಶಹಪೂರ ತಾಲ್ಲೂಕಿನಲ್ಲಿದೆ. ಶಹಾಪುರದಿಂದ ವಾಯವ್ಯಕ್ಕೆ 15 ಕಿ.ಮೀ. ದೂರದಲ್ಲಿ ಶಹಪೂರ-ಕಲಬುರ್ಗಿ ಮುಖ್ಯರಸ್ತೆಯಲ್ಲಿದೆ. ಈ ಊರಿನ ಆಗ್ನೇಯಕ್ಕಿರುವ ದಮ್ಮಿ ಅಥವಾ ದಮೇತಿ (ಧರ್ಮೇತಿ) ತೋಟದ ಬಾವಿಗೆ ಹತ್ತಿರ, ಪೂರ್ವಾಭಿಮುಖ ವಾಗಿರುವ ಚಾಲುಕ್ಯರ ಕಾಲದ, ಗರ್ಭಗೃಹ ಅಂತರಾಳ ಮಾತ್ರ

ಉಳಿದಿರುವ ಶೈವ ದೇವಾಲಯವಿದೆ. ಈ ಪ್ರಾಚೀನ ದೇವಾಲಯದಲ್ಲಿರುವ ಶಿವಲಿಂಗ ಗಮನ ಸೆಳೆಯುವಂತಿದೆ.

ಬಸವಣ್ಣನ ಗುಡಿಯ ಆವರಣದಲ್ಲಿ ಮೂರುವರೆ ಅಡಿಗೂ ಎತ್ತರವಿರುವ, ಎರಡೂವರೆ ಅಡಿ ಅಗಲವಿರುವ 23ನೆಯ ತೀರ್ಥಂಕರ ಭಗವಾನ್ ಪಾರ್ಶ್ವನಾಥರು ಕುಳಿತಿರುವ ಭಗ್ನಜಿನ ಬಿಂಬ ತುಂಬಾ ಮನೋಜ್ಞವಾಗಿದೆ. ಜೈನ ಯಕ್ಷಿ ಪದ್ಮಾವತಿಯ ಸುಂದರ ಪ್ರತಿಮೆಯೊಂದು ಊರ ಮಧ್ಯದ ದೊಡ್ಡ ಬಾವಿಯಲ್ಲಿದೆ. ಶಿಲ್ಪಶಾಸ್ತ್ರದ ಸಕಲ ಸ್ತ್ರೀ ಪ್ರತಿಮಾ ಲಕ್ಷಣಗಳನ್ನು ಹೊಂದಿರುವ ನಾಲ್ಕು ಅಡಿ ಎತ್ತರ ಎರಡೂವರೆ ಅಡಿ ಅಗಲದ ಕುಳಿತ ಭಂಗಿಯ ಈ ಪ್ರತಿಮೆಯ ಗೋಪುರಾಕಾರದ (ರತ್ನ) ಕಿರೀಟದ ಮಧ್ಯೆದಲ್ಲಿ ಜಿನಬಿಂಬವಿದೆ. ಕರ್ಣಕುಂಡಲ, ತೋಳುಬಂದಿ, ಕಂಕಣ, ಕೊರಳಸರ, ಉಂಗುರ, ವಡ್ಯಾಣ ಮತ್ತು ಸುಂದರ ಕಾಲಂದುಗೆಗಳಿಂದ ಕಂಗೊಳಿಸುವ ಈ ವಿಗ್ರಹ 'ಸಿಂಹಕಟಿ'ಯುಳ್ಳದ್ದಾಗಿದ್ದು ನಾಲ್ಕು ಕೈಗಳನ್ನು ಹೊಂದಿತ್ತಾದರೂ ಕೆಳ ಎಡಗೈ ಮುಕ್ಕಾಗಿದೆ. ಎರಡು ಕೈಗಳಲ್ಲಿ ಪಾಶ ಅಂಕುಶವಿದ್ದರೆ, ಇನ್ನೊಂದು ವರದ ಹಸ್ತವಾಗಿದೆ. ಈ ಕುರುಹುಗಳಿಂದ ಹಿಂದೆ ಇಲ್ಲಿ ಜೈನಮಂದಿರವಿದ್ದುದು ಖಚಿತವಾಗುತ್ತದೆ. (ಡಿಎನ್ಎ)

ಮದ್ದಿನ ಮನೆ: ಬಂದೂಕು ಹಾಗೂ ತೋಪುಗಳಿಗಾಗಿ ಹಿಂದೆ ರಾಜ ಮಹಾರಾಜರು ಬಳಸುತ್ತಿದ್ದ ಮದ್ದು ತಯಾರಿಸಿ ಸಂಗ್ರಹಿಸುವ ಮನೆ. 1947 ಕ್ಕಿಂತ ಪೂರ್ವದಲ್ಲಿ ದೇಶದಲ್ಲೆಡೆ ಬ್ರಿಟಿಷರ ಆಳ್ವಿಕೆ. ಎಲ್ಲೆಡೆ ಬ್ರಿಟೀಷರ ವಿರುದ್ಧ ಹೋರಾಟ ನಡೆದಿತ್ತು. ಹೈದ್ರಾಬಾದ ಕರ್ನಾಟಕವೂ ಅದಕ್ಕೆ ಹೊರತಲ್ಲ. ದೇಶದುದ್ದಕ್ಕೂ ಬ್ರಿಟಿಷರ ಆಧಿಪತ್ಯ. ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಿ ಅಂಕಿತ ಹಾಕಿದ್ದರಿಂದ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅಲ್ಲಲ್ಲಿ ಸೈನಿಕ ನೆಲೆಗಳು ಸ್ಥಾಪಿತವಾಗಿದ್ದುವು. ಅದರಲ್ಲೊಂದು ರಾಯಚೂರು ಜಿಲ್ಲೆಯ ಲಿಂಗಸಗೂರು ಕೂಡಾ ಹಿಂದೆ (ಛಾವಣಿ) ಬ್ರಿಟಿಷರ ಸೈನಿಕರ ನೆಲೆಯಾಗಿತ್ತು.

ಸೈನಿಕರು ಯುದ್ಧ ಕಾರ್ಯಾಚರಣೆಯಲ್ಲಿ ನಾಡ ಬಂದೂಕುಗಳನ್ನು ಬಳಸುತ್ತಿದ್ದರು. ಬಂದೂಕಿಗೆ ಮದ್ದನ್ನು ಉಪಯೋಗಿಸುತ್ತಿದ್ದರು. ಅಂದು ಮದ್ದು ತಯಾರಿಸುತ್ತಿದ್ದ ಸ್ಥಳವನ್ನು ನಾವು ಇಂದಿಗೂ ಲಿಂಗಸುಗೂರಿನಲ್ಲಿ ಕಾಣಬಹುದಾಗಿದೆ. ಇಲ್ಲಿನ ಜನರು ಆ ಸ್ಥಳಕ್ಕೆ 'ಮದ್ದಿನ್ ಫಾಟ್' ಎಂತಲೂ ಕರೆಯುತ್ತಾರೆ. ಮದ್ದು ಸಂಗ್ರಹಿಸುವ ಮನೆಯೊಂದು ಈಗ ಅಪರೂಪಕ್ಕೆ ಉಳಿದುಕೊಂಡಿದೆ.

ಈ ಮದ್ದಿನ ಮನೆ ತುಂಬಾ ಸುಂದರವಾಗಿದೆ. ಕಟ್ಟಡದ ಮುಂಭಾಗ ಚೌಕಾಕಾರವಿದ್ದು, ಮುಂದಿನ ಭಾಗದ ಎಡ-ಬಲದಲ್ಲಿ ಕಮಾನು ದ್ವಾರಗಳಿವೆ. ಒಳಗೆ ವಿಶಾಲವಾದ ಜಾಗವಿದೆ. ಅದೂ ಚೌಕಾಕೃತಿಯಲ್ಲಿದೆ. ಕಟ್ಟಡದ ಮೇಲ್ಭಾಗದಲ್ಲಿ ಗುಂಬಜ್ ಆಕಾರದಲ್ಲಿದೆ. ಕಟ್ಟಡವೆಲ್ಲ ಇಟ್ಟಿಗೆ ಗಚ್ಚು ಮತ್ತು ಗಾರೆಗಳಿಂದ ಕಟ್ಟಿ ಮುಟ್ಟಾಗಿ ಗಚ್ಚು ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿರುವ ಕಟ್ಟೆಗೆಲೊಳೆಗಳನ್ನು ಮತ್ತು ಮುಂದಿನ ಕಬ್ಬಿಣದ ಬಾಗಿಲನ್ನು ಯಾರೋ ದುಷ್ಕರ್ಮಿಗಳು ಮುರಿದು ಕಿತ್ತುಕೊಂಡು ಹೋಗಿ ಎಷ್ಟೋ ವರ್ಷಗಳಾಗಿವೆ.

ಇದು ಹಿಂದೆ ಪೆರೇಡ್ ಮೈದಾನವಾಗಿತ್ತೆಂದೂ ಕಂದಾಯ ಇಲಾಖೆಯ ದಾಖಲೆಗಳಲ್ಲಿ ನಮೂದಾಗಿದೆ. ಇಷ್ಟು ವಿಶಾಲವಾದ ಜಾಗದಲ್ಲಿ ಮದ್ದಿನ ಮನೆಯ ಸುತ್ತಲೂ ಮನೆಗಳು ಹುಟ್ಟಿಕೊಂಡಿವೆ. ಉಳಿದ ಜಾಗ ಯಾರ್ಯಾರದೋ ಪಾಲಾಗಿದೆ.

(ಕೆಇ)




ಮಧುಸೂದನ ಮುತಾಲಿಕ್: 1962 ಆಗಸ್ಟ್ 01ರಂದು ಜನಿಸಿದರು. ತಂದೆ ಸರಕಾರಿ ಉದ್ಯೋಗಿ, ತಾಯಿ ಗೃಹಿಣಿ. ತಬಲಾ ಅಭ್ಯಾಸಕ್ಕೆ ಇವರ ಪ್ರೋತ್ಸಾಹ. ತಾಯಿ ಭಜನೆ ಹಾಡುಗಾರ್ತಿ. ಭಜನಾ ಕಾರ್ಯಕ್ರಮದಲ್ಲಿ ಸುರಿಸುವ ತಬಲಾ ನಾದಕ್ಕೆ, ಲಯಕ್ಕೆ ಆಕರ್ಷಿತನಾಗಿ ತಬಲಾ ಕಲಿಕೆ ಪ್ರಾರಂಭಿಸಿದರು. ಮೊದಲ ಗುರುಗಳು ಶ್ರೀ ರಾಮಾಚಾರಿ ಕಾಖಂಡಕಿ ಹಾಗೂ ನಂತರ ಪಂ. ಗೌರಂಗ ಕೊಡಿಕಲ್ (ಉಸ್ತಾದ್ ಶೇಖ್ ದಾವೂದ್ ಹೈದ್ರಾಬಾದ್ ಅವರ ಹಿರಿಯ ಶಿಷ್ಯ) ಅವರಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ಬಿ.ಎ ಪದವೀಧರ, ಹಿಂದುಸ್ತಾನಿ ತಾಳವಾದ್ಯ ವಿದ್ವತ್ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ 2ನೇ ರ್‍ಯಾಂಕ್. ಆಕಾಶವಾಣಿಯ 'ಬಿ' ಹೈಗ್ರೇಡ್ ಕಲಾವಿದ, ಜಿಲ್ಲಾ ಪತ್ರಕರ್ತರ ಸಮಾರಂಭದಲ್ಲಿ ಸೋಲೊ ಮೊದಲ ಕಾರ್ಯಕ್ರಮ. ದೂರದರ್ಶನದಲ್ಲಿ ಕಾರ್ಯಕ್ರಮ ನೀಡಿದ ಅನುಭವ. ಮಂತ್ರಾಲಯ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಪ್ರಮುಖ ಸ್ಥಳಗಳಲ್ಲಿ, ಪಂ. ಭೀಮಸೇನ ಜೋಶಿ, ಪಂ. ಮಾಧವ ಗುಡಿ, ಪಂ. ಮಾಣಿಕರಾವ್ ರಾಯಚೂರಕರ್, ಪಂ.ಎಂ. ವೆಂಕಟೇಶ್ ಕುಮಾರ್, ಶ್ರೀ ಮುರುಗೋಡ ಕೃಷ್ಣ



ಶ್ರೀ ವಡವಟ್ಟಿ ಅವರೊಂದಿಗೆ ತಬಲಾ ಸಾಥ್ ನೀಡುತ್ತಿರುವುದು

ದಾಸರು ಮುಂತಾದ ಪ್ರಮುಖರ ಜೊತೆಗೆ ಶಾಸ್ತ್ರೀಯ, ಸುಗಮ ಹಾಗೂ ದಾಸವಾಣಿ ಕಾರ್ಯಕ್ರಮಗಳಿಗೆ ಸಾಥ್ ನೀಡಿ ಮೆಚ್ಚುಗೆ ಪಡೆದಿದ್ದಾರೆ. ಶ್ರೀ ಕೊ.ಲ.ನ. ಸಂಗೀತ ಸಂಸ್ಥೆ ಸಂಸ್ಥಾಪಕರು ಹಾಗೂ ಸಂಗೀತ ಪರೀಕ್ಷೆಗಳ ಪರೀಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. (ಆರ್‌ಕೆಕೆ)



ಮನೋಹರ ಎಂ.ಎಸ್.: ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ 'ಜಾಂತಿ' ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಹವ್ಯಾಸಿ ರಂಗಭೂಮಿಯ ಹಿರಿಯ ಕಲಾವಿದ, ನಿರ್ದೇಶಕ. ಸಮುದಾಯ ಬೀದರ ಸಂಘಟನೆಯ ಮುಖ್ಯ ಸಂಘಟಕರೂ ಹೌದು. ಭಾಲ್ಕಿ ತಾಲ್ಲೂಕಿನ ಹಾಲಹಿಪ್ಪರಗಾದ ತಂದೆ ಶರಣಪ್ಪ ತಾಯಿ ಸರಸ್ವತಿಯವರಿಗೆ ಜನಸಿದ ಇವರು ಪದವಿ ವ್ಯಾಸಂಗ ಮಾಡಿದರೂ ಸಮಾಜ ಸೇವೆಯಲ್ಲಿ ರಂಗಭೂಮಿಗಾಗಿ ಶ್ರಮ ಸಾರ್ಥಕತೆ ಸಾಧಿಸಿದವರು.

ಸಮುದಾಯ ಬೀದರನಲ್ಲಿ ಕಾರ್ಯಾಗಾರ, ನಾಟಕ ಪ್ರದರ್ಶನ, ವಿಚಾರ ಸಂಕಿರಣಗಳನ್ನು 25 ವರ್ಷದಿಂದ ಸಂಘಟಿಸುವ ಇವರು ಭಾರತ ಜ್ಞಾನ ವಿಜ್ಞಾನ ಸಮಿತಿ ಬೀದರನ ಕಾರ್ಯಕಾರಿಗೆ ಸದಸ್ಯರು, ಮೂಢನಂಬಿಕೆಯ ವಿರುದ್ಧ, ವೈಜ್ಞಾನಿಕ ಮನೋಭಾವದ ಪರವಾಗಿ ಜಿಲ್ಲೆಯಾದ್ಯಂತ 'ಪವಾಡಗಳ ರಹಸ್ಯ ಬಯಲು' ಎಂಬ ನೂರಾರು ಪ್ರಯೋಗಗಳನ್ನು ನೀಡಿದ್ದಾರೆ.

ಬೀದಿ ನಾಟಕಗಳ ಮೂಲಕ ಇವರು ಮಾಡಿದ ವಿಶೇಷ ಕಾರ್ಯಕ್ರಮವೆಂದರೆ, ಸಾಕ್ಷರತಾ ಆಂದೋಲನದ ಬೀದಿ ನಾಟಕಗಳನ್ನು ಸುಮಾರು 400 ಹಳ್ಳಿಗಳಲ್ಲಿ ದಿನಕ್ಕೆ 3 ರಂತೆ, ತಿಂಗಳುಗಳಗಟ್ಟಲೆ ಪ್ರದರ್ಶಿಸಿದ್ದಾರೆ. ಕಲಾವಿದ ಸಂಘಟಕರಾಗಿ ದುಡಿಯುತ್ತಿದ್ದಾರೆ.

ಅಕ್ಷರಜಾಥಾದ ಜಿಲ್ಲಾ ಸಂಯೋಜಕರಾಗಿ, 'ಅಕ್ಷರ ಕಾರಂಜಾ' ಪತ್ರಿಕೆಯ ಸಂಪಾದಕರಾಗಿ, 2005ರಲ್ಲಿ ಕೇಂದ್ರ ಸರ್ಕಾರವು 'ರಾಷ್ಟ್ರೀಯ ಶಿಕ್ಷಣ ನೀತಿ ಸಂರಚನೆ' ಎಂಬ ಕಾರ್ಯಾಗಾರವನ್ನು ಕೇರಳದ ಕಲ್ಲಿ ಕೋಟೆಯಲ್ಲಿ ನಡೆಸಿದಾಗ ಉತ್ತರ ಕರ್ನಾಟಕ ಶಿಕ್ಷಕ ಪ್ರತಿನಿಧಿಯಾಗಿ ಭಾಗವಹಿಸಿ ಮಾರ್ಗದರ್ಶನ ನೀಡಿದ್ದಾರೆ. ಮುಖ್ಯ ನಾಟಕಗಳಲ್ಲಿ ಕಲಾವಿದರಾಗಿ 'ತಬರನ ಕಥೆ' ಸೂರ್ಯ ಶಿಕಾರಿ, ಅಗ್ನಿ, ಜೋಗತಿ, ಖುರ್ಚಿ ಖಾಲಿ ಇದೆ, ಏಕಲವ್ಯ, ರಾಮಾಯಣ, ಅಲಿಬಾಬಾ 40 ಕಳ್ಳರು ಮಹಾಮಾರಿ ಮುಂತಾದ 50 ನಾಟಕಗಳಲ್ಲಿ ಮುಖ್ಯ ಪಾತ್ರವನ್ನು ಅರ್ಥಪೂರ್ಣವಾಗಿ ನಿಭಾಯಿಸಿದ್ದಾರೆ.

ಇವರು ನಿರ್ದೇಶಿಸಿದ ನಾಟಕ/ಬೀದಿನಾಟಕಗಳು, ಜನಾಧಿಕಾರ, ಹೆಣ್ಣು ಯಾಕೆ ಓದಬೇಕು, ಕೂಲಿಯಿಂದ ಶಾಲೆಗೆ, ಮಾದರಿ ಶಾಲೆ, ಸ್ವಾವಲಂಬಿ ಹೆಣ್ಣು, ಕುಡಿತದಿಂದ ಕೆಡಕು, ಹೀಗೆ 10 ನಾಟಕಗಳನ್ನು ನಿರ್ದೇಶಿಸಿದ್ದಾರೆ. 2002ರಲ್ಲಿ ಇವರು ರಚಿಸಿ ನಿರ್ದೇಶಿಸಿದ 'ಕೂಲಿಯಿಂದ ಶಾಲೆಗೆ', ಪ್ರತಿಭಾ ಕಾರಂಜಿಯ ರಾಜ್ಯಮಟ್ಟದ ನಾಟಕ ಪ್ರದರ್ಶನದಲ್ಲಿ ಅಗ್ರಸ್ಥಾನದಲ್ಲಿ ಯಶಸ್ವಿಯಾದದ್ದಕ್ಕೆ ಸನ್ಮಾನ ನೀಡಿ ಗೌರವಿಸಲಾಗಿದೆ. ಸಾಹಿತ್ಯ/ನಾಟಕ ರಚನೆ ಶ್ರೀಯುತರು 'ಮಾಟ ಮಂತ್ರ' ಎಂಬ ಕಿರುನಾಟಕ, ಕೂಲಿಯಿಂದ ಶಾಲೆಗೆ, ಎಂಬ ಬೀದಿನಾಟಕ, 'ಸತ್ಯ' ಎಂಬ ಕವನ ಸಂಕಲನ ರಚಿಸಿ ಪ್ರಕಟಿಸಿದ್ದಾರೆ.

ಪ್ರಶಸ್ತಿ ಸನ್ಮಾನಗಳು: 2000ರಲ್ಲಿ ಉತ್ತಮ ಕಲಾವಿದರೆಂದು ಬೀದರ ಜಿಲ್ಲಾ ಆಡಳಿತದಿಂದ ಗೌರವ ಸನ್ಮಾನ ನೀಡಲಾಗಿದೆ. 2002ರಲ್ಲಿ 'ಜನಸೇವಾ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಗೌರವ ಸನ್ಮಾನ, 2009ರಲ್ಲಿ ಸಾಹಿತ್ಯ ಮತ್ತು ಸಮಾಜ ಸೇವೆಗಾಗಿ ಜಿಲ್ಲಾಧಿಕಾರಿಗಳಾದ ಹರ್ಷಗುಪ್ತಾರಿಂದ ಸನ್ಮಾನ ಹೀಗೆ ಹತ್ತು ಹಲವು ಸಂಘಟನೆಗಳು ಸನ್ಮಾನ ನೀಡಿ ಗೌರವಿಸಿವೆ. ಇತ್ತೀಚೆಗೆ 2009ರಲ್ಲಿ ಡಾ. ಚನ್ನಬಸವ ಪಟ್ಟದ್ದೇವರ ಜಯಂತಿ ಉತ್ಸವದಲ್ಲಿ ಶ್ರೀ ಬಸವಲಿಂಗ ಪಟ್ಟದ್ದೇವರು ಸನ್ಮಾನಿಸಿದ್ದಾರೆ. ಶ್ರೀಯುತರು 'ಅರಿವು' ಸಾಕ್ಷ್ಯಚಿತ್ರದಲ್ಲಿ ಮತ್ತು 'ಬಿಸಿಲ ಹನಿಗಳು' ಧಾರಾವಾಹಿಯಲ್ಲಿ ನಟರಾಗಿ ಪಾತ್ರವಹಿಸಿದ್ದು ಇವರ ಸಾಂಸ್ಕೃತಿಕ ಹಿರಿಮೆಗೆ ಸಾಕ್ಷಿ. (ಎಸ್‌ಆರ್‌ಜಿ)

ಮರಗಾಲ ಕುಣಿತ: ಜಾನಪದ ಮನರಂಜನಾ ಕಲೆಗಳಾದ ಕೋಲಾಟ, ಪಟಾಕುಣಿತ, ಪಂಜಿನಕುಣಿತ, ಕೋಡಂಗೆ ಕುಣಿತ, ಕುದುರೆ ಕುಣಿತ, ಸುಗ್ಗಿ ಕುಣಿತಗಳಂತೆ ಮರಗಾಲ ಕುಣಿತವೂ ಬಹು ಆಕರ್ಷಕವಾದುದು. ಜನಪದರ ಜಾತ್ಯಾತೀತ ಮತಾತೀತ ಸೌಹಾರ್ದ ಮನೋಭಾವದ ಅಭಿವ್ಯಕ್ತಿಯ ಮಾಧ್ಯಮಗಳಾಗಿ ಜನರ ನಡುವೆ ಸಂಬಂಧವನ್ನು ಬೆಸೆಯುವಲ್ಲಿ ಜನಪದ ಕಲೆಗಳ ಪಾತ್ರ ತುಂಬ ಮಹತ್ವದ್ದು. ಈ ಕಲೆಗಳ ಪ್ರದರ್ಶನಕ್ಕೆ ದೈವತ್ವದ ನೆಪದಲ್ಲಿ ಗ್ರಾಮದೇವತೆಯ ಹಬ್ಬ, ಉತ್ಸವಗಳು, ಜಾತ್ರೆಗಳಂತಹ ವಿಶೇಷ ದಿನಗಳು ವೇದಿಕೆಗಳಾಗುತ್ತವೆಯಾದರೂ ಇವುಗಳ ಮೂಲ ಉದ್ದೇಶ ಮನೋರಂಜನೆ ಮಾತ್ರವೇ.

ಮೂರ್ನಾಲ್ಕು ಅಡಿ ಎತ್ತರದ ಮರದ ತುಂಡುಗಳಿಗೆ ಮರಗಾಲು ಎಂದು ಹೆಸರು. ಮರಗಾಲು ಹಗುರವಾಗಿದ್ದು ಗಟ್ಟಿಯಾಗಿರಬೇಕು. ಆದ್ದರಿಂದ ಪಾಲವಾಣ, ಉಸಳಿ ಮೊದಲಾದ ಮರಗಳಿಂದಲೇ ಮರಗಾಲನ್ನು ಮಾಡುತ್ತಾರೆ. ಇದು ಐದಾರು ಇಂಚು ಸುತ್ತಳತೆಯನ್ನು ಹೊಂದಿರುತ್ತದೆ. ಎರಡು ಮರದ ತುಂಡುಗಳ ಮೇಲ್ಭಾಗದಲ್ಲಿ ಪಾದವನ್ನು ಊರಲು ಅನುಕೂಲವಾಗುವಂತೆ ಮೆಟ್ಟಿನ ಆಕಾರದಲ್ಲಿ 'ಕಂಡು' ಮಾಡಿ ಮರವನ್ನು ನಯಗೊಳಿಸಿ ಅದರ ಕೆಳಭಾಗದಲ್ಲಿ ಕುಣಿತಕ್ಕೆ ತಕ್ಕಂತೆ ಲಯ



ಮರಗಾಲ ಕುಣಿತ

ಬದ್ಧವಾದ ನಾದವನ್ನು ಹೊಮ್ಮಿಸುವ ಸಲುವಾಗಿ ಗೆಜ್ಜೆಕಟ್ಟಲು ಅನುಕೂಲ ವಾಗುವಂತೆ ಮರಗಾಲನ್ನು ತಯಾರಿಸುತ್ತಾರೆ.

ಕಲಾವಿದರು ಮರ ಗಾಲನ್ನು ಕಟ್ಟಿಕೊಳ್ಳುವುದಕ್ಕೆ ಮೊದಲು ಮೊಣಕಾಲಿನ ವರೆಗೆ ಬಟ್ಟೆಸುತ್ತಿಕೊಳ್ಳುತ್ತಾರೆ. ಅನಂತರ ಹಿಮ್ಮಡಿಯ ಮೇಲೆ ಹೆಜ್ಜೆ ಭಾರ ಬೀಳು ವಂತೆ ಮರಗಾಲುಗಳ ಮೇಲ್ಗಡೆ ಒಂದು ಮೆಟ್ಟಿಲಾ ಕಾರದ ಮರದ ಪಟ್ಟಿ ಜೋಡಿಸಲಾಗಿರುತ್ತದೆ. ಇದರ ಮೇಲೆ ಪಾದ ಊರಿನಿಂತ ಕಲಾವಿದನ ಕಾಲಿಗೆ ಮರ ಗಾಲನ್ನು ಮೃದುವಾಗಿರುವ ಸೆಂಬಿನದಾರ ಅಥವಾ ಬಾಳೆಯ ನಾರಿನಿಂದಲೋ ಇಲ್ಲವೇ ಬಟ್ಟೆಯ ಪಟ್ಟಿಯಿಂದ ಗಟ್ಟಿಯಾಗಿ ಬಿಗಿದು ಕಟ್ಟುತ್ತಾರೆ. ಜಾನಪದ ಕಲೆಗಳೆಲ್ಲವೂ ಒಬ್ಬರನ್ನು ನೋಡಿ ಒಬ್ಬರು ಕಲಿಯುವದೇ ಆದರೂ ಈ ಕಲೆ ಕೊಂಚ ಭಿನ್ನ ರೀತಿಯದ್ದು, ಅಂದರೆ ಗುರು ಮುಖೇನ ಕಲಿಯುವ ಈ ವಿದ್ಯೆಗೆ ಪ್ರಾರಂಭದಲ್ಲಿ ಕಲಾವಿದ ತನ್ನ ಸಮತೋಲನವನ್ನು ಕಾಯ್ದು ಕೊಳ್ಳಲು ಉದ್ದನೆಯ ಕೋಲಿನ ಅಥವಾ ವ್ಯಕ್ತಿಯ ಸಹಾಯ ವನ್ನು ಪಡೆಯುತ್ತಾರೆ. ಅತ್ಯಂತ ಪರಿಶ್ರಮದಿಂದ ಈ ಕಲೆಯನ್ನು ಕರಗತ ಮಾಡಿಕೊಂಡ ನಂತರ ಯಾವ ನೆರವೂ ಇಲ್ಲದೆ ಪ್ರದರ್ಶನಕ್ಕೆ ಸಿದ್ಧರಾಗುತ್ತಾರೆ.

ಮರಗಾಲು ಕುಣಿತದಲ್ಲಿ ಹೆಜ್ಜೆಗಳ ಲೆಕ್ಕಾಚಾರವೇ ಪ್ರಮುಖ ವಾದುದು. ತಮ್ಮಟೆಯ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುವ ಇವರು ಪ್ರಾರಂಭದಲ್ಲಿ ನಿಧಾನಗತಿಯಲ್ಲಿ ಆರಂಭದ ನಂತರ ಒಮ್ಮಿಂದೊಮ್ಮೆಲೆ ಲಯಕ್ಕೆ ತಿರುಗಿ ಮುಕ್ತಾಯವಾಗುತ್ತದೆ. ಪುನಃ ವಿಲಂಬಿತದಿಂದ ಪ್ರಾರಂಭವಾಗುತ್ತದೆ.

ಮರಗಾಲು ಕುಣಿತದ ಕಲಾವಿದ ಜನರು ಆಕರ್ಷಿಸುವ ಮತ್ತು ರಂಜಿಸುವ ಸಲುವಾಗಿ ರಾಜ-ರಾಣಿಯರಂತೆ ಅಲಂಕೃತ ಗೊಂಡಿರುತ್ತಾರೆ. ಕೆಲವೊಮ್ಮೆ ಕೈಗಳಲ್ಲಿ ಖಡ್ಗ-ಛತ್ರಿಗಳಂತಹ ವಸ್ತುಗಳನ್ನು ಹಿಡಿದುಕೊಂಡಿದ್ದರೆ ಇನ್ನೂ ಕೆಲವೊಮ್ಮೆ ತಮ್ಮ ಕೈಗಳನ್ನು ವಿವಿಧ ವಿನ್ಯಾಸಗಳಲ್ಲಿ ತಿರುಗಿಸುತ್ತ ಕುಣಿತಕ್ಕೆ ಆಕರ್ಷಣೆ ಉಂಟುಮಾಡುತ್ತಾರೆ. ಕತ್ತಿಗಳಿಂದ ಹೋರಾಡು ವುದು, ವೇಗವಾಗಿ ಓಡಾಡುವುದು ಕತ್ತಿ, ಛತ್ರಿ, ಬಿಟ್ಟು ಹೆಣ್ಣು-ಗಂಡಿನ ಪ್ರೀತಿ ಪ್ರೇಮವನ್ನು ಒಬ್ಬರು ಮತ್ತೊಬ್ಬರಿಗೆ ಮುತ್ತಿಡು ವುದು, ತಬ್ಬಿಕೊಳ್ಳುವಂತಹ ಪ್ರೇಮಸಲ್ಲಾಪಗಳಲ್ಲಿ ವ್ಯಕ್ತಪಡಿಸು ತ್ತಾರೆ. ಇಷ್ಟೇ ಅಲ್ಲದೆ ವೀಕ್ಷಣೆಗಾಗಿ ನಿಂತ ವ್ಯಕ್ತಿಯೊಬ್ಬನ ತಲೆಯ ಮೇಲೆ ಕರವಸ್ತ್ರ ಅಥವಾ ರೂಪಾಯಿ ನೋಟನ್ನು ಇಟ್ಟರೆ ಮರಗಾಲಿನವರು ಕುಣಿಯುತ್ತಲೆ ಬಾಗಿ ಬಾಯಿಂದ ಅದನ್ನು ಮೇಲೆತ್ತುವಂತಹ ಚಮತ್ಕಾರಗಳನ್ನು ಮಾಡುತ್ತಾರೆ.


(ಎನ್‌ಎಚ್)

ಮರಣ ಸ್ಮಾರಕಗಳು: ವೀರಗಲ್ಲು, ಮಾಸ್ತಿಕಲ್ಲು, ನಿಷೇಧ, ವೇಳ ವಾಳಿ ಕಲ್ಲು ಇವು ನಮ್ಮ ಪೂರ್ವಿಕರ ಅಸಾಮಾನ್ಯರ ಮರಣ ವನ್ನು ನೆನಪಿಸುವ ಸ್ಮಾರಕಗಳು. ಇವು ಕೇವಲ ಶಿಲ್ಪಗಳಲ್ಲ. ಶಾಸನ ರೂಪದಲ್ಲಿದ್ದು, ಸಾಕ್ಷರ ನಿರಕ್ಷರರಿಗೂ ಅರ್ಥವಾಗ ಲೆಂದು ಕೆಲವು ಸಲ ಎರಡನ್ನೂ ಒಳಗೊಂಡಿರುವದುಂಟು.



ಸಾಠ ಖಬರ್, ಬೀದರ್

ದೇವರಿಗಾಗಿ ಭಕ್ತ, ಒಡೆಯನಿಗಾಗಿ ಸೇವಕ, ಗಂಡನಿಗಾಗಿ ಹೆಂಡತಿ, ಊರು-ನಾಡಿಗಾಗಿ ವೀರ ಗೆಳೆಯನಿಗಾಗಿ, ಹೆಣ್ಣಿನ ಮಾನರಕ್ಷಣೆಗಾಗಿ ಹೀಗೆ ನಾನಾ ಕಾರಣಕ್ಕಾಗಿ ಆತ್ಮಾರ್ಪಣೆ ಮಡಿಕೊಂಡವರನ್ನು ನೆನಪಿಸುತ್ತವೆ ಈ ಕಲ್ಲುಗಳು. ನಾಡಿನ ಜನ ಯಾವ ಆದರ್ಶ ಮೌಲ್ಯಗಳಿಗಾಗಿ ಬಾಳಿ ಬದುಕಿದರೆಂದು ಇವು ಎತ್ತಿ ತೋರಿಸುತ್ತವೆ.



ಜೈನ್ ಸಮಾಧಿಗಳು

ಚರಿತ್ರೆಯ ಅಧ್ಯಯನಕ್ಕಾಗಿ ಇಂತಹ ಸ್ಮಾರಕಗಳ ಉಳಿವು ಅಗತ್ಯ. ನಮ್ಮ ಹಳ್ಳಿ ಹಳ್ಳಿಗಳಲ್ಲಿರುವ ಈ ಮರಣ ಸ್ಮಾರಕಗಳು, ಸಾರ್ವಜನಿಕರ ಹಾಗೂ ಸರ್ಕಾರದ ಉದಾಸೀನಕ್ಕೊಳಗಾಗಿ ಸಾಮಾನ್ಯ ಕಲ್ಲುಗಳಂತೆ ಎಲ್ಲೆಂದರಲ್ಲಿ ಬಿದ್ದುಕೊಂಡಿವೆ. ಇವು ಗಳನ್ನು ಪ್ರತೇಕವಾಗಿ ಕಟೆದು ನಿಲ್ಲಿಸಿರುವುದರಿಂದ ಕಳೆದು ಹೋಗುವ ಸಂಭವ ಹೆಚ್ಚು.



ಬೌದ್ಧ ಸ್ತೂಪ

ನಮ್ಮ ನಾಡಿನ ಎಲ್ಲ ಮರಣ ಸ್ಮಾರಕಗಳ ಪರಿವೀಕ್ಷಣಾ ಕಾರ್ಯ ಪೂರ್ಣವಾಗಿಲ್ಲ. ಪರಿವೀಕ್ಷಿತ ಸ್ಮಾರಕಗಳಿಗೆ ಸಂಬಂಧಿಸಿದಂತೆ ಅಲ್ಲಿಯ ಬರವಣಿಗೆ ಪ್ರಕಟವಾಗಿದೆ ಹೊರತು, ಚಿತ್ರಗಳಲ್ಲ. ಕೇವಲ ಚಿತ್ರವಿರುವ ಮರಣ ಸ್ಮಾರಕಗಳನ್ನು ಸಂಶೋಧಕರು ಕಣ್ಣೆತ್ತಿಯೂ ನೋಡುತ್ತಿಲ್ಲ. ಚಿತ್ರದಲ್ಲಿರುವ ವೀರ ಗಲ್ಲು ಜೇವರ್ಗಿ ತಾಲ್ಲೂಕಿನ ಜವಳಗಿ ಗ್ರಾಮದಲ್ಲಿವೆ. ಊರ ಮೇಲೆ ದಾಳಿ ಮಾಡಿ ಆಕಳುಗಳನ್ನು ಅಪಹರಿಸಿಕೊಂಡು ಹೊರಟ ಚೋರರ ವಿರುದ್ಧ ಹೋರಾಡಿ ಮಡಿದ ವೀರನ ಮರಣ ಸ್ಮಾರಕವಿದು. (ವಿಕೆಎಂ)

ಮಲ್ಲಣ್ಣ ಮಡಿವಾಳ: ಕಾಷ್ಠಶಿಲ್ಪಿ. ಶಹಾಪುರ ತಾಲ್ಲೂಕಿನ ಹುಲ್ಕಲ್–ಕೆ ಗ್ರಾಮದವರು. ಕಸಬು ಇವರ ಕುಲಕಸಬು ಮಡಿವಾಳನ ಕೆಲಸ. ಇವರು ಕಲಿತಿರುವುದು ಬಡಗಿತನ. ಬಡಗಿತನ ಮಾಡುವ ತಮ್ಮ ಮೂಲ ಊರಾದ ಯಾದಗಿರ ತಾಲ್ಲೂಕಿನ ರಾಮಸಮುದ್ರದಿಂದ ಹುಲ್ಕಲ್–ಕೆ ಗ್ರಾಮಕ್ಕೆ ಉದ್ಯೋಗ ಅರಸಿ ಬಂದು, ಅಲ್ಲಿ ಬಡಿಗಿತನ ಮಾಡಲು ಪ್ರಾರಂಭಿಸಿದ್ದಾರೆ. ಹುಲ್ಕಲ್ ಗ್ರಾಮದ ಹಣಮಂತ ದೇವರ ಗುಡಿಯ ಮೇಲೆ ಸುತ್ತಲೂ ಇರುವ ಶ್ರೀರಾಮ, ಸೀತಾ, ಲಕ್ಷ್ಮಣ, ವಿಷ್ಣು, ಲಕ್ಷ್ಮಿ, ಹಣಮಂತನ ಮತ್ತು ಶಿವ–ಪಾರ್ವತಿಯ ಮೂರ್ತಿಗಳನ್ನು ಮಾಡಿ ಜನರಿಂದ ಸೈ ಎನಿಸಿಕೊಂಡಿದ್ದಾರೆ. ದಿಗ್ಗಿ ಹತ್ತಿರ ಇರುವ ಸೈದಾಪುರದಲ್ಲಿ ಹುಲಿಜಂತಿ ಮಾಳಿಂಗ ರಾಯನ ಮೂರ್ತಿ, ಮಾಗಣಗೇರಿಯ ಗೇಟಿನಲ್ಲಿರುವ ಕಮಾನಿನಲ್ಲಿ ಚೆನ್ನವೃಷಬೇಂದ್ರ ಸ್ವಾಮೀಜಿಯವರ ಮೂರ್ತಿ ಇವರ ಕಲೆಯ ಕೈಚಳಕದ ಪ್ರತಿಭೆಗೆ ಸಾಕ್ಷಿ.

ಅಬ್ಬೆತುಮಕೂರಿನ ವಿಶ್ವಾರಾಧ್ಯ ಮಠದಲ್ಲಿ 21 ಅಡಿ ಎತ್ತರದ ಶಿವನಮೂರ್ತಿ ರಚಿಸಿ ಎಲ್ಲರೂ ತಮ್ಮನ್ನು ನೋಡುವಂತೆ ಮಾಡಿದ್ದಾರೆ. ಶಹಾಪುರ, ಸುರಪುರ, ಯಾದಗಿರ, ದೇವಸ್ಥಾನಗಳಲ್ಲಿ ಮೂರ್ತಿ ನಿರ್ಮಾಣ ಮಾಡುವ ಕೆಲಸ ಇವರೇ ಮಾಡಿ ಕೊಡುತ್ತಿದ್ದಾರೆ. ಇಲ್ಲಿ ಮೂರ್ತಿ ಮಾಡುವ ಕೆಲಸವೇ ಇವರಿಗೆ ಇಂದು ಅನ್ನ ಹಾಕುವ ಪ್ರಮುಖ ಉದ್ಯೋಗವಾಗಿದೆ.

(ಎಸ್‌ಆಯ್‌ಎಸ್)

ಮಲ್ಲಪ್ಪ ಗಂಗಪ್ಪ ಬಡಿಗೆ: ಶಿಲ್ಪ ಕಲಾವಿದ. ಮೂಲತಃ ಕೊಪ್ಪಳ ಜಿಲ್ಲೆಯವರು. 1954 ಜೂನ್ 1ರಂದು ಜನಿಸಿದರು. ಇವರ ವಿದ್ಯಾರ್ಹತೆ ಏಳನೆಯ ತರಗತಿ ಮಾತ್ರ. ಶಿಲ್ಪಕಲೆಯನ್ನು ಎಸ್.ಎಂ. ಬಡಿಗೇರ ಮತ್ತು ಇವರ ತಂದೆಯೇ ಇವರ ಕಲಾ ಗುರುಗಳಾಗಿದ್ದರು. ಮನೆತನದ ಪೂರ್ವಜರಿಂದ ಬಂದಂತಹ ವೃತ್ತಿ ಇದು. ಶಿಲ್ಪಕಲೆಯೇ ಇವರ ದೈನಂದಿನ ಜೀವನದ ಆಧಾರವಾಗಿದೆ. ಇವರು ಸಾಂಪ್ರದಾಯಿಕ ಮತ್ತು ಕಾಷ್ಠ ಶಿಲ್ಪ ಶೈಲಿಯಲ್ಲಿ ಅಷ್ಟಮೂರ್ತಿ ಬ್ರಹ್ಮರಥ, ಪಲ್ಲಕ್ಕಿ, ಧ್ವಜ ಸ್ತಂಭ, ಬಾಗಿಲುವಾಡ, ಇನ್ನಿತರ ಹಲವಾರ ಶಿಲ್ಪಗಳನ್ನು ಮಾಡಿದ್ದಾರೆ.

ಹಂಪಿ ಉತ್ಸವ, ಸುವರ್ಣ ಕರ್ನಾಟಕ ಉತ್ಸವಗಳಲ್ಲಿ ಇವರು ರಚಿಸಿರುವ ಕೃತಿಗಳನ್ನು ಕಲಾಪ್ರದರ್ಶನ ಮಾಡಿದ್ದಾರೆ. ಅಲ್ಲದೇ, ಅನೇಕ ಕಡೆಗಳಲ್ಲಿ ಕೃತಿಗಳು ಸಂಗ್ರಹಗೊಂಡಿವೆ, ಕೊಪ್ಪಳ ಅಣ್ಣಿಗೇರಿ, ದಶಮಾಪುರ, ಬಳ್ಳಾರಿ, ಕಲ್ಲೂರು, ಅಲ್ಲೀಪುರ, ಬೀಳೂರು, ಆಂಧ್ರದ ಗೆಜ್ಜೆಹಳ್ಳಿ, ಉರುವಕೊಂಡ. ಸುಮಾರು 15 ರಥಗಳು ಹಲವಾರು ಕಡೆಗಳಲ್ಲಿ ಸಂಗ್ರಹಗೊಂಡಿವೆ. ಇವರಿಗೆ ರಾಣಿಬೆನ್ನೂರು ಜಕಣಾಚಾರ್ಯ ಪ್ರಶಸ್ತಿ ಬಂದೊದಗಿದೆ. (ಬಿಕೆಎಲ್)

ಮಲ್ಲಪ್ಪ ಮುರ್ಲಾಪುರ: ಜನಪದ ಕಲಾವಿದ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕೊಪ್ಪಳ ತಾಲ್ಲೂಕಿನ ಹಲಗೇರಿ ಗ್ರಾಮದವರು. ವೃತ್ತಿಯಿಂದ ರೈತ. ಕೃಷಿಕ ಜೀವನದ ಬಿತ್ತನೆ, ಹಂತಿ ಹೊಡೆಯುವುದು, ರಾಶಿ ಮಾಡುವುದು ಮುಂತಾದ ಸಂದರ್ಭಗಳಲ್ಲಿ ಹಾಡು ಹಾಡುತ್ತಾ ಬದುಕಿಗೆ ಹೊಸಕಳೆ ತುಂಬ ಬಲ್ಲವರು. ಗ್ರಾಮೀಣ ಭಾಗದಲ್ಲಿ ನಡೆಯುವ ಯಾವುದೇ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಕ ಕಾರ್ಯಕ್ರಮವಿರಲಿ, ಅದರಲ್ಲಿ ಪಾಲ್ಗೊಂಡು ತಮ್ಮ ಮಧುರ ಕಂಠಸಿರಿಯಿಂದ ಜನರನ್ನು ಆಕರ್ಷಿಸಿ, ಭಾವನಾತ್ಮಕ ಸಂಬಂಧದ ಲೋಕಕ್ಕೆ ಕೊಂಡೊಯ್ಯುವ ಕಲೆ ಇವರದು.

ಶ್ರೀ ಶರಣಬಸವೇಶ್ವರ ಭಜನಾ ಮಂಡಳಿಯ ಸದಸ್ಯರಾಗಿರುವ ಇವರು, ತತ್ವಪದಗಳನ್ನು ಮನದುಂಬಿ ಹಾಡಬಲ್ಲರು. ನವಲಗುಂದದ ನಾಗಲಿಂಗಸ್ವಾಮಿ, ಗ್ರಾಮದ ಶ್ರೀ ದ್ಯಾವಮ್ಮ ತಾಯಿಯ ಚರಿತ್ರೆಯನ್ನು ಅತ್ಯಂತ ಸುಶ್ರಾವ್ಯವಾಗಿ ಹಾಗೂ ಸ್ಪಷ್ಟವಾಗಿ ಮನವರಿಕೆಯಾಗುವಂತೆ ಹಾಡುತ್ತಾರೆ. ಅನುಭಾವ ಕವಿ ಶಿಶುನಾಳ ಶರೀಫರ ತತ್ವಪದಗಳನ್ನೂ ಇವರು ಭಾವತುಂಬಿ ಹಾಡುವರು. ನಿರಂತರ ಅವಿಶ್ರಾಂತರಾಗಿ ಸುಮಾರು 9–10 ತಾಸುಗಳವರೆಗೆ ಸರಾಗವಾಗಿ ಹಾಡುವ ಕಲೆ ಕರಗತವಾಗಿದೆ.

ಅದ್ಭುತ ಕಂಠಸಿರಿ ಮಲ್ಲಪ್ಪನವರದು. ತಮ್ಮದೇ ಆದ ಧ್ವನಿ, ಲಯ, ರಾಗ, ತಾಳದ ಮೂಲಕ ಹಾಡಿದಾಗ ಬದುಕಿನ ವೈರುಧ್ಯಗಳೇ ಕಣ್ಮುಂದೆ ನಿಲ್ಲುತ್ತವೆ. ಭಜನೆಯಲ್ಲಿ ಇವರು ಹಾಡುವಾಗ, ಏರು ಧ್ವನಿಯುಳ್ಳ ಕಂಠಸಿರಿ ಸುತ್ತಲಿನ ಪರಿಸರವನ್ನೇ ಬದಲಾಯಿಸುತ್ತದೆ. ಊರಿನಲ್ಲಿ ಯಾರೇ ಮರಣ ಹೊಂದಿದಾಗ ನಡೆಯುವ ಭಜನೆಯ ತಂಡದೊಂದಿಗೆ ಬರುವ ಇವರು, ಈ ಸಂದರ್ಭದಲ್ಲಿ


ತತ್ವಪದಗಳ ಹೊಳೆಯನ್ನೇ ಹರಿಸಿ, ನೆರೆದವರ ಮನಸ್ಸನ್ನೇ ಕಲಕಿ ಬಿಡುತ್ತಾರೆ. ಇವರ ಹಾಡಿನ ಇನ್ನೊಂದು ಮುಖ ಹಂತಿ ಪದಗಳು ಮತ್ತು ಸುಗ್ಗಿ ಪದಗಳು.

ಮಂಗಳ ಕಾರ್ಯಗಳಲ್ಲಿ ಹಾಡುವ ಸೋಬಾನ ಪದಗಳನ್ನು ನಿರರ್ಗಳವಾಗಿ ಇವರು ಹಾಡಬಲ್ಲರು. ಹೆಣ್ಣು ಮಕ್ಕಳಿಗೆ ಹೂ ಮುಡಿಸುವ, ಸೀರೆ ಮಾಡುವ ಕಾರಣ, ತೊಟ್ಟಿಲು ಕಾರಣದಲ್ಲಿ ಹೆಂಗಳೆಯರ ಗುಂಪಿನಲ್ಲಿ ಹೆಂಗಳೆಯರಂತೆ ಕುಳಿತು ಯಾವುದೇ ಸಂಕೋಚ–ಬಿಗುಮಾನವಿಲ್ಲದೆ ಹಾಡುವರು. ಭಾರತ ಸ್ವಾತಂತ್ರ್ಯ ಪಡೆದ ಬಗೆಯನ್ನು ನೆಹರು, ಗಾಂಧೀಜಿ, ರಾಜೀವ ಗಾಂಧಿ, ಇಚಿದಿರಾ ಗಾಂಧಿ, ಲಾಲ್‌ಬಹುದ್ದೂರ್ ಶಾಸ್ತ್ರಿಯವರ ಜೀವನದ ಯಶೋಗಾಥೆಯನ್ನು ತಮ್ಮ ಜನಪದ ಹಾಡುಗಳ ಮೂಲಕ ಪ್ರಸ್ತುತ ಪಡಿಸುವುದನ್ನು ಕೇಳಿದರೆ ಇತಿಹಾಸವನ್ನೇ ತೆರೆದಿಟ್ಟಂತಾಗುತ್ತದೆ. (ಆರ್‌ಸಿಬಿ)

ಮಲ್ಲಪ್ಪ ಸಿ. ಡೋಲೆ: ಯುವ ದೃಶ್ಯಕಲಾವಿದರಲ್ಲಿ ಒಬ್ಬರು. ಗುಲ್ಬರ್ಗಾ ಜಿಲ್ಲೆಯ ದೇಗಾಂವ್‌ದಲ್ಲಿ ಜನಿಸಿದರು. ಪ್ರತಿಯೊಬ್ಬ ದೃಶ್ಯ ಕಲಾವಿದ ಮತ್ತು ಕಲಾವಿದೆಗೆ ತಾನು ವಾಸಿಸುವ ಪರಿಸರ, ತನ್ನ ಸುತ್ತಮುತ್ತಲಿನ ಸಂಪ್ರದಾಯ, ಸಾಂಸ್ಕೃತಿಕ ಆಚರಣೆಗಳು ಸಹಜವಾಗಿಯೇ ಅವರ ಕಲೆಯ ಮೇಲೆ ಪ್ರಭಾವ ಬೀರುತ್ತವೆ. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಒಂದು ಚಿಕ್ಕಹಳ್ಳಿ ದೇಗಾಂವ. ಈ ಹಳ್ಳಿಯಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಮದ್ದಿನ ಹುಲಿಗಳ ಜಾತ್ರೆ ಸುಮಾರು ನೂರಾ ಐವತ್ತು ವರ್ಷಗಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದು ವಿಶೇಷ. ಈ ಮದ್ದಿನ ಹುಲಿಗಳ ಜಾತ್ರೆಯಿಂದ ಪ್ರೇರಿತಗೊಂಡ ಯುವ ಚಿತ್ರಕಲಾವಿದ ಇವರು ತಮ್ಮ ಹಲವಾರು ಚಿತ್ರಕಲಾಕೃತಿಗಳಲ್ಲಿ ಈ ಮದ್ದಿನ ಹುಲಿ (ಜನಪದ ಶಿಲ್ಪ)ಗಳನ್ನು ತಮ್ಮ ಕಲಾಕೃತಿಗಳಲ್ಲಿ ಕಲಾತ್ಮಕವಾಗಿ ಪ್ರತಿಬಿಂಬಿಸುವ ಮೂಲಕ ಗಮನ ಸೆಳೆದಿದ್ದಾರೆ.

ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಇವರಿಗೆ ಬಾಲ್ಯದಲ್ಲಿ ತಮ್ಮೂರಿನಲ್ಲಿ ನಡೆಯುವ 'ಜನಪದ ಹುಲಿ ಜಾತ್ರೋತ್ಸವ'ದ ವರ್ಣರಂಜಿತ ದೃಶ್ಯಗಳು ಇವರ ಮೇಲೆ ಗಾಢವಾಗಿ ಪ್ರಭಾವ ಬೀರಿದ ಪರಿಣಾಮವಾಗಿ, ಈ ರೀತಿಯ ಜನಪದ ಸತ್ವಗಳನ್ನೊಳಗೊಂಡ ಕಲಾಕೃತಿಗಳು ರೂಪಗೊಂಡಿವೆ.

ಇವರು ಹೆಚ್ಚು ಪ್ರಖರವಾದ ಪ್ರಾಥಮಿಕ ಬಣ್ಣಗಳನ್ನು ನೇರವಾಗಿ ತಮ್ಮ ಕಲಾಕೃತಿಗಳಲ್ಲಿ ದುಡಿಸಿಕೊಂಡಿರುವುದು ವಿಶೇಷವಾಗಿದೆ. ಇವರ ಕಲಾಕೃತಿಗಳು ಜನಪದ ಶೈಲಿಯ ಸೊಗಡನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡು ಜೀವ ತಳೆದಂತಿವೆ. ಇಂತಹ ಕೆಲವು ಕಲಾಕೃತಿಗಳಲ್ಲಿ ಕರ್ನಾಟಕದ ಖ್ಯಾತ ಕಲಾವಿದರಲ್ಲಿ ಒಬ್ಬರಾದ ಕೆ.ಟಿ. ಶಿವಪ್ರಸಾದ ಅವರ ಕಲಾಕೃತಿಗಳ ಪ್ರಭಾವವನ್ನು ಕಾಣಬಹುದು.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಇವರ ಕಲಾಕೃತಿಗಳಲ್ಲಿ ಉಪಯೋಗಿಸುವ ವಸ್ತು ಪರಿಕರಗಳೂ ಸಹ ದೇಶಿತನದಿಂದ ಕೂಡಿದ್ದು, ಭಾರತೀಯ ಸಂಪ್ರದಾಯ ಚಿತ್ರಗಳಿಗೆ ಹತ್ತಿರವಾಗಿವೆ. ಇವರು ಚಿತ್ರಕಲಾಕೃತಿಗಳ ನಿರ್ಮಾಣದೊಂದಿಗೆ ಅವರೂರಿನ ಹುಲಿ ಜಾತ್ರೋತ್ಸವದ ಸಂದರ್ಭದಲ್ಲಿ ಮದ್ದಿನ ಹುಲಿಗಳ ಜನಪದ ಶಿಲ್ಪಗಳನ್ನು ಕಲಾತ್ಮಕವಾಗಿ ನಿರ್ಮಿಸಿ, ಆ ಊರಿನ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

2000ರಲ್ಲಿ ನಡೆದ ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ 36ನೆಯ ವಾರ್ಷಿಕ ಕಲಾಪ್ರದರ್ಶನ, 2002ರ ಕಲಬುರ್ಗಿ ಕಲಾ ಮಹೋತ್ಸವ, 2002ರಲ್ಲಿ ಬೆಂಗಳೂರಿನಲ್ಲಿ ನಡೆದ ಸುವರ್ಣ ಸಾಂಸ್ಕೃತಿಕ ಕಲಾಮೇಳ, ಮಿಕ್ಸಡ್‌ಬ್ಯಾಗ್ ಕಲಾಪ್ರದರ್ಶನ 2009ರಲ್ಲಿ ಕಲಬುರ್ಗಿಯ ಎಂ.ಎಂ.ಕೆ. ಕಾಲೇಜು ಆಫ್ ವಿಜ್ಯೂವಲ್ ಆರ್ಟ್‌ನ ಹಳೆ ವಿದ್ಯಾರ್ಥಿಗಳ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. (ಪಿಪಿ)

ಮಲ್ಲಿಕಾರ್ಜುನ ಬಡಿಗೇರ: ಕಾಷ್ಠಶಿಲ್ಪಿ. ಕಲಬುರ್ಗಿ ಜಿಲ್ಲೆ ಶಹಾಪುರ ತಾಲ್ಲೂಕಿನ ಬೊಯಿ ಕಾಡಮಗೇರಾ ಗ್ರಾಮದವರು. ಇವರ ಬಡಗಿತನ ಸ್ವಲ್ಪ ಭಿನ್ನ ಮತ್ತು ನಯ ನಾಜೂಕಿನದು. ದೇವರಮಂಟಪ, ಶಹನಾಯಿ, ಕೊಳಲು ತಯಾರು ಮಾಡುವುದು ಇವರ ಹವ್ಯಾಸ. ಈಗಾಗಲೇ ಹಲವಾರು ಮಂಟಪಗಳನ್ನು ಮಾಡಿದ ಕೀರ್ತಿ ಇವರಿಗಿದೆ. ಅಲ್ಲದೇ, ಶಹನಾಯಿ, ಕೊಳಲುಗಳನ್ನು ತಯಾರಿಸಿದ್ದು ಇವರ ಸಾಧನೆ. ಪಲ್ಲಕ್ಕಿ ಮಾಡುವುದೂ ಸಹ ಇವರ ವಿಶೇಷ. ದೇವಸ್ಥಾನದ ಕಂಬಗಳ ಕುಸುರಿ ಕೆಲಸದಲ್ಲಿ ಇವರ ಹೆಸರು ಮೊದಲು ಕೇಳಿಬರುತ್ತದೆ.

ಕಟ್ಟಿಗೆಯ ಚೆಂಡು–ಇವರು ಸಿದ್ಧಪಡಿಸಿದ ವಿಶೇಷ ಅಡಿಗೆ. ಕಟ್ಟಿಗೆಯ 24 ತುಂಡುಗಳಿಂದ ಇದನ್ನು ಮಾಡಲಾಗಿದೆ. ಕೆಲವು ತುಂಡುಗಳು ವಿವಿಧ ಆಕಾರದಲ್ಲಿವೆ. ಒಂದಕ್ಕೊಂದು ಜೋಡಿಸಿದಾಗ ಹೀಗೆ ಕಾಣುತ್ತದೆ. ಇದಕ್ಕೊಂದು ಕೀಲಿ ರೂಪದಲ್ಲಿ ಒಂದು ಕಟ್ಟಿಗೆಯ ತುಂಡಿದೆ. ಅದನ್ನು ಹಾಕಿದಾಗ ಮತ್ತೆ ಬಿಚ್ಚುವುದೇ ಒಂದು ಕಲೆ. ಅದು ಗೊತ್ತಿದ್ದರೆ ಮಾತ್ರ ಎಲ್ಲ ತುಂಡುಗಳನ್ನು ಒಂದೊಂದಾಗಿ ತೆಗೆಯಬಹುದು. ಇಲ್ಲದಿದ್ದರೆ, ಹೇಗೆ ಬಿಚ್ಚಬೇಕೆಂಬುದೇ ತಿಳಿಯುವುದಿಲ್ಲ. ಹೇಗೆ ನೋಡಿದರೂ ಒಂದೇ ಆಕಾರ. ಈ ಕಲಾವಸ್ತು ಇಲ್ಲಿ ಒಂದಿಷ್ಟು ಆಶ್ಚರ್ಯ ಮೂಡಿಸಿ, ಖುಷಿ ಕೊಡುತ್ತದೆ. ಕಟ್ಟಿಗೆ ಸರಪಳಿಗಳನ್ನು ಮಾಡುವುದೂ ಇವರ ಕಲೆಯ ಮತ್ತೊಂದು ವಿಶೇಷತೆ. ಒಂದೇ ಕಟ್ಟಿಗೆಯಲ್ಲಿ ಸರಪಳಿಗಳನ್ನು ಮಾಡಿ ಮಂಟಪಗಳಿಗೆ ಅಲಂಕಾರಿಕವಾಗಿ ಜೋಡಿಸಿ, ಮತ್ತಷ್ಟು ಸುಂದರವಾಗಿ ಕಾಣುವಂತೆ ಮಾಡುತ್ತಾರೆ.

ಗ್ರಾಮೀಣ ಕಲಾವಂತಿಕೆಯ ಈ ಕಸುಬುಗಳನ್ನು ಪ್ರೋತ್ಸಾಹಿಸುವ ಉದ್ದೇಶದ ಸಂಸ್ಥೆ 'ಡೆನಿಡಾ' ಇವರನ್ನು ಗುರುತಿಸಿತು. ಕುಸುರಿ ಕೆಲಸದ ಇವರ ಕಟ್ಟಿಗೆಯ ವಸ್ತುಗಳನ್ನು ಡೆನ್ಮಾರ್ಕ್, ಲಂಡನ್‌ಗೆ ಕಳುಹಿಸಿತು. ಅಲ್ಲಿಯೂ ಪ್ರಶಂಸೆಗೆ ಪಾತ್ರವಾದವು.

(ಎಂಜಿಪಿ)



ಮಲ್ಲಿಕಾರ್ಜುನ ಸಿ. ಬಾಗೋಡಿ: ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರವೆನಿಸಿದ ಚಿತ್ತಾಪೂರದಲ್ಲಿ 1974ರ ಜೂನ್ 10ರಂದು ಜನಿಸಿದರು. ಶ್ರೀ ಚಂದ್ರಶೇಖರ ಮತ್ತು ಶ್ರೀಮತಿ ಸರಸ್ವತಿದೇವಿಯವರ ಮೂರು ಜನ ಗಂಡು ಮಕ್ಕಳಲ್ಲಿ ಕೊನೆಯವರು. ಇವರ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹುಟ್ಟೂರಿನಲ್ಲೇ ಆಯಿತು. ಬಾಲ್ಯದಲ್ಲಿಯೇ ಕಲಾಸಕ್ತಿಯನ್ನು ಹೊಂದಿದವರು.

ಬಾಗೋಡಿಯವರು ನಿಸರ್ಗವನ್ನು ಇಷ್ಟಪಡುತ್ತಾರೆ ಮತ್ತು ನಿಸರ್ಗದಲ್ಲಿನ ಪ್ರತಿಯೊಂದು ವಸ್ತುವನ್ನು ಕಲಾತ್ಮಕವಾಗಿ ಚಿತ್ರಿಸ ಹಂಬಲವುಳ್ಳವರು. ಬಾಲ್ಯದಲ್ಲಿರುವಾಗಲೇ ತಮ್ಮ ಪರಿಸರದಲ್ಲಿನ ಜನ–ಜೀವನ, ಭೂದೃಶ್ಯ, ಕಲ್ಬಂಡೆಗಳನ್ನು ರೇಖಿಸಿದ್ದುಂಟು. ಗುಲಬರ್ಗಾದ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಚಿತ್ರಕಲೆಯ ಅಧ್ಯಯನಕ್ಕೆಂದು ಪ್ರವೇಶ ಪಡೆದ ಬಾಗೋಡಿಯವರು ಎರಡು ವರ್ಷದ ವಾಣಿಜ್ಯ ಕಲೆಯಲ್ಲಿ ತೇರ್ಗಡೆ ಹೊಂದುತ್ತಿದ್ದಂತೆಯೇ ಅದೇ ಸಂಸ್ಥೆಯಲ್ಲಿನ ಚಿತ್ರಕಲೆಯ ಸ್ನಾತಕ ಪದವಿಯಲ್ಲಿ ಪ್ರವೇಶವನ್ನು ಪಡೆದರು. ಮೂರು ವರ್ಷದ ಬಿ.ಎ. ಲಲಿತಕಲೆ ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದಿದರು. ಇದೇ ಸಂದರ್ಭದಲ್ಲಿ ವಿಭಾಗ, ವಲಯ ಮತ್ತು ರಾಷ್ಟ್ರಮಟ್ಟದ ಯುವಜನೋತ್ಸವ ಕಲಾಸ್ಪರ್ಧೆಗಳಲ್ಲಿ ಭಾಗವಹಿಸುವುದರ ಮೂಲಕ ಸುಮಾರು 12ಕ್ಕೂ ಮೇಲ್ಪಟ್ಟು ಪದಕಗಳೊಂದಿಗೆ ಪ್ರಶಸ್ತಿ ಪತ್ರಗಳನ್ನು ಪಡೆದಿರುವುದು ಒಂದು ಹೆಮ್ಮೆಯ ವಿಷಯ.

1996ರಲ್ಲಿ ಸ್ನಾತಕ ಪದವಿಯನ್ನು ಪೂರ್ಣಗೊಳಿಸಿದವರೆ ಚಿತ್ರಕಲೆಯ ಉನ್ನತ ಅಧ್ಯಯನ ಕೈಗೊಳ್ಳಲೆಂದು ಬರೋಡಾಕ್ಕೆ ತೆರಳಿದರು. ಇವರಿಗೆ ಆಪ್ತರಾಗಿದ್ದ ಶ್ರೀ ವಿಜಯ ಬಾಗೋಡಿ ಅವರು ಬರೋಡಾ ವಿಶ್ವವಿದ್ಯಾಲಯದಲ್ಲಿ ಕಲಾ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಕೆಲ ದಿನಗಳು ಬರೋಡಾದಲ್ಲೇ ಉಳಿದುಕೊಂಡರಾದರೂ, ತಾಂತ್ರಿಕ ಕಾರಣಗಳಿಂದಾಗಿ ಬರೋಡಾದಲ್ಲಿನ ಉನ್ನತ ಕಲಾಧ್ಯಯನ ಕೈಗೊಳ್ಳುವ ಆಸೆ ಮೊಟಕುಗೊಂಡಿತು. ಹಾಗಾಗಿ ಗುಲಬರ್ಗಾದ ಶ್ರೀ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಯ ಸ್ನಾತಕೋತ್ತರ ಲಲಿತಕಲಾ ವಿಭಾಗದಲ್ಲಿ ಪ್ರವೇಶ ಪಡೆದರು. ಪ್ರೊ. ಜೆ.ಎಸ್. ಖಂಡೇರಾವ ಹಾಗೂ ಪೋಪುರಿ ರಾಜಾರಾವ ಅವರ ಮಾರ್ಗದರ್ಶನ ಇವರಿಗೆ ದೊರೆಯಿತು. 1998ರಲ್ಲಿ ಗುಲಬರ್ಗಾ ವಿ.ವಿ.ಯಿಂದ ಪ್ರಥಮ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದಿದರಲ್ಲದೆ ಎರಡು ಚಿನ್ನದ ಪದಕಗಳನ್ನು ಗಿಟ್ಟಿಸಿಕೊಂಡರು.

ಜರ್ಮನಿಯ ಆಗ್ಸಬರ್ಗ್, ಅಮೆರಿಕಾದ ಸೇಂಟ್‌ಲೂಯಿಸ್ ಸೇರಿದಂತೆ ಬೆಂಗಳೂರು, ಮುಂಬೈ, ಹೈದರಾಬಾದ, ಲಕ್ನೋ, ಪುಣೆ, ದೆಹಲಿ, ಚೆನ್ನೈ ಮುಂತಾದ ಕಡೆಗಳಲ್ಲಿ 40ಕ್ಕೂ ಹೆಚ್ಚು ಏಕವ್ಯಕ್ತಿ ಹಾಗೂ ಗುಂಪು ಕಲಾಪ್ರದರ್ಶನಗಳನ್ನು ಹಮ್ಮಿಕೊಂಡಿದ್ದಾರೆ. ಹಾಗೆಯೇ ರಾಷ್ಟ್ರದ ಪ್ರತಿಷ್ಠಿತ ಕಲಾಸಂಸ್ಥೆಗಳು ಆಯೋಜಿಸುವ ಕಲಾಪ್ರದರ್ಶನ, ಕಲಾಶಿಬಿರ, ಕಲಾಕಾರ್ಯಾಗಾರಗಳಲ್ಲಿ ನಿರಂತರವಾಗಿ ಭಾಗವಹಿಸುತ್ತ ಬಂದಿದ್ದಾರೆ. ರಾಷ್ಟ್ರವಲ್ಲದೆ ಹೊರರಾಷ್ಟ್ರದ ಸರಕಾರಿ ಹಾಗೂ ಖಾಸಗಿ ನೆಲೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಮೈಸೂರು ದಸರಾ, ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ಸ್ ಆಂಡ್ ಕಲ್ಚರ್, ಎಸ್.ಸಿ.ಝೆಡ್.ಸಿ.ಸಿ. ನಾಗಪುರ, ಗುಲಬರ್ಗಾ ಅಕಾಡೆಮಿ ಆಫ್ ಫೈನ್‌ಆರ್ಟ್, ಎರಡು ಬಾರಿ ಗುಲಬರ್ಗಾ ವಿ.ವಿ.ಯ ರಾಜ್ಯೋತ್ಸವ ಕಲಾಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ–ಗೌರವಗಳು ಇವರಿಗೆ ಸಂದಿವೆ.



ಹಂಪೆಯ ಶ್ರೀ ಕೃಷ್ಣ ದೇವಾಲಯದ ಭೂದೃಶ್ಯ


1998ರಿಂದ 2001ರ ವರೆಗೆ ದೃಶ್ಯಕಲಾ ಕ್ಷೇತ್ರದ ಅಧ್ಯಯನ-ಸಂಶೋಧನೆಯ ನಿಮಿತ್ತ ರಾಷ್ಟ್ರದ ಪ್ರತಿಷ್ಠಿತ ಸಂಸ್ಥೆಗಳಿಗೆ ಭೇಟಿ ನೀಡುವುದರೊಂದಿಗೆ ಸುಮಾರು 15 ರಾಜ್ಯಗಳನ್ನು ಸುತ್ತಾಡಿ ಅಲ್ಲಿನ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಮಾಹಿತಿಯನ್ನು ಒಂದು ಕಡೆ ಶೇಖರಿಸಿಟ್ಟಿದ್ದಾರೆ. ಪ್ರಾಚೀನ ಕಲಾಕೃತಿಗಳು, ಕರಕುಶಲ ವಸ್ತುಗಳು, ಹಸ್ತಪ್ರತಿಗಳು, ಹೈದರಾಬಾದ ನಿಜಾಮ ಕಾಲದ ಹಾಗೂ ಬ್ರಿಟೀಷ ಆಡಳಿತಾವಧಿಯಲ್ಲಿನ ಅಪೂರ್ವದ್ದೆನಿಸಿದ ನೂರಾರು ದಾಖಲು ಪತ್ರಗಳನ್ನು ಸಂಗ್ರಹಿಸಿದ ಇವರನ್ನು ಒಬ್ಬ ಅಪೂರ್ವ ಸಂಗ್ರಹಕಾರರೆಂತಲೂ ಕರೆಯಬಹುದಾಗಿದೆ. ಕಳೆದ ಹತ್ತು ವರ್ಷಗಳಿಂದ ತಮ್ಮನ್ನು ನಿರಂತರವಾಗಿ ದೃಶ್ಯಕಲೆಗಳ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಲ್ಲದೆ ಚಿತ್ರಕಲಾವಿದ ಜೆ.ಎಸ್. ಖಂಡೇರಾವ್: ಒಂದು ಅಧ್ಯಯನ ಪ್ರಬಂಧಕ್ಕೆ 2002ರಲ್ಲಿ ಎಂ.ಫಿಲ್. ಪದವಿ, ಸುರಪುರ ಶೈಲಿಯ ಚಿತ್ರಕಲೆ: ಒಂದು ಅಧ್ಯಯನ ಮಹಾಪ್ರಬಂಧಕ್ಕೆ 2007ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

ಕರ್ನಾಟಕ ಇತಿಹಾಸ ಅಕಾಡೆಮಿ, ಕರ್ನಾಟಕ ಇತಿಹಾಸ ಕಾಂಗ್ರೆಸ್, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಐ.ಐ.ಎ.ಎಸ್. ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ಹಮ್ಮಿಕೊಳ್ಳುವ ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದು, ಸುಮಾರು ಇಪ್ಪತ್ತಕ್ಕೂ ಹೆಚ್ಚು ಮೌಲಿಕ ಪ್ರಬಂಧಗಳು ಪ್ರಕಟಣೆ ಕಂಡಿವೆ. ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗದಲ್ಲಿ ಅತಿಥಿ ಅಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಲಿದ್ದಾರೆ.

ಬಾಗೋಡಿಯವರು ಚಿತ್ರಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೂರಕ್ಕೂ ಮೇಲ್ಪಟ್ಟು ಲೇಖನಗಳನ್ನು ಬರೆದಿರುವರು. ಪತ್ರಿಕೆಗಳಲ್ಲದೇ ಸಂಶೋಧನ ಕೃತಿಗಳಲ್ಲಿ, ಅಭಿನಂದನಾ ಗ್ರಂಥಗಳಲ್ಲಿ, ಸಂಪಾದನ ಕೃತಿಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. 'ಚಿತ್ರಲೇಖ', 'ಲೇಖಾವರಣ', 'ಸುರಪುರ ಚಿತ್ರಕಲೆ' 'ದೃಶ್ಯ ಸಂಸ್ಕೃತಿ' ಹಾಗೂ 'ಸೇಡಮ್ ಶಿವಶಂಕರಸ್ವಾಮಿ ಮಠದಲ್ಲಿನ ಭಿತ್ತಿಚಿತ್ರಗಳು' ಕೃತಿಗಳನ್ನು ಪ್ರಕಟಿಸಿದ್ದಾರೆ. 'ಹೈದರಾಬಾದ-ಕರ್ನಾಟಕ ದೃಶ್ಯಕಲಾ ಪರಂಪರೆ' ಕೃತಿಯನ್ನು ಸಂಪಾದಿಸಿದ್ದಾರೆ.

ಒಟ್ಟಿನಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿಯವರು ದೃಶ್ಯಕಲೆಯ ಪ್ರಾಯೋಗಿಕ ಹಾಗೂ ಸೈದ್ಧಾಂತಿಕ ಎರಡೂ ನೆಲೆಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. (ಎಸ್‌ಡಿ)

ಮಲ್ಲಿಕಾರ್ಜುನ ಸಂಗಾವಿ: ಪ್ರತಿಭಾವಂತ ರಂಗಭೂಮಿ ಕಲಾವಿದ. ಕಲಬುರ್ಗಿ ಜಿಲ್ಲೆ ಸೇಡಂ ತಾಲ್ಲೂಕಿನ ಸಂಗಾವಿ ಗ್ರಾಮದರು. ಚಿಕ್ಕ ವಯಸ್ಸಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು, ಸೇಡಂದಲ್ಲೇ ಬಡತನದಲ್ಲೇ ಜೀವನ ಸಾಗಿಸುತ್ತಾ 30 ವರ್ಷಗಳಿಂದ ಸಂಗೀತವನ್ನೇ ನಂಬಿಕೊಂಡು ವಚನ, ಜನಪದ ಗೀತೆ, ತತ್ವಪದಗಳನ್ನು ಹಾಡುತ್ತ, ಹಾರ್ಮೋನಿಯಂ ಮಾಸ್ತರರಾಗಿ ಅನೇಕ ನಾಟಕಗಳಲ್ಲಿ ಪುರುಷ ಪಾತ್ರ ಹಾಗೂ ಸ್ತ್ರೀಪಾತ್ರಗಳನ್ನು ಮಾಡುತ್ತ, ಪ್ರೇಕ್ಷಕರ ಮನಸ್ಸನ್ನು ಗೆದ್ದಿದ್ದಾರೆ. ತಮ್ಮ ಮನೆಯಲ್ಲಿ ಸತತ 26 ವರ್ಷಗಳಿಂದ ದಸರ ನವರಾತ್ರಿಯ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಸುತ್ತಾ ಬಂದವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಕ್ಷರತೆ ಕಲಾಜಾಥಾಗಳಲ್ಲಿ ಭಾಗವಹಿಸಿ, ಕಲಾಪ್ರದರ್ಶನ ನೀಡಿ ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಚಿರಪರಿಚಿತ ಹೆಸರು ಇವರದು. ಸುಮಧುರ ಕಂಠ ಮಾಧುರ್ಯ ಹಾಗೂ ಸಂಗೀತ ಸರಸ್ವತಿಯನ್ನು ಒಲಿಸಿಕೊಂಡು ಆರಾಧಿಸುವ ಇವರ ಪ್ರತಿಭೆಗೆ, ಕಲಬುರ್ಗಿ ಆಕಾಶವಾಣಿಯಲ್ಲೂ ಅನೇಕ ಅವಕಾಶಗಳು ದೊರೆತಿವೆ.



ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅನೇಕ ಸಂಘ-ಸಂಸ್ಥೆಗಳು ಇವರ ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿ-ಬಿರುದುಗಳನ್ನು ನೀಡಿ ಗೌರವಿಸಿವೆ. ನಾಡಿನ ಮಠಾಧೀಶರೂ ಕೂಡಾ ಇವರ ವಚನ ಗಾಯನಕ್ಕೆ ಮಾರು ಹೋಗಿ, ಅಭಿನಂದನಾ ಪ್ರಶಸ್ತಿ ನೀಡಿ ಆಶೀರ್ವದಿಸಿದ್ದಾರೆ. ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಮಹಾಂತಗುಡ್ಡದಲ್ಲಿ ಕಳೆದ 2004ರಲ್ಲಿ ನಡೆದ ಮಹಾಂತ ಜ್ಯೋತಿ ಕಲಾ ಪ್ರಶಸ್ತಿ ಸಂಗಾವಿ ಅವರಿಗೆ ನೀಡಿ ಗೌರವಿಸಲಾಯಿತು. ಕಳೆದ ಎರಡು ದಶಕಗಳಿಂದ ಆಧ್ಯಾತ್ಮಿಕ, ಧಾರ್ಮಿಕ ಕ್ಷೇತ್ರದಲ್ಲಿ ಸಂಗೀತ ಸೇವೆ ಮಾಡುತ್ತ ಭಾರತದ ಉದ್ದಗಲಕ್ಕೂ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ, 12 ಜ್ಯೋತಿರ್ಲಿಂಗಗಳ ದರ್ಶನ ಪಡೆದ ಕೀರ್ತಿ ಇವರದು.

ಜಿಲ್ಲಾ ಸರ್ವಜ್ಞ ಜನಪದ ಕಲಾವೃಂದದ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ, ಕಲಬುರ್ಗಿ ಜಿಲ್ಲೆಯಲ್ಲಿ ಸಂಘಟನೆ ಮಾಡಿದರು. ಈಗ ಕಲಾವೃಂದದ ಉಪಾಧ್ಯಕ್ಷರಾಗಿ ಸೇಡಂದಲ್ಲಿ ಸರ್ವ ಕಲೆಗಳ ಪ್ರದರ್ಶನ ಮಾಡಿಸಿದರು. ಅನಂತರ ಜಿಲ್ಲಾ ಕಲಾವಿದರ ಸಮಾವೇಶ ಹಾಗೂ ಜಾನಪದ ಜಾಗೃತಿ ಸೇಡಂದಲ್ಲಿ ಯಶಸ್ವಿಯಾಗಿ ನಡೆಸಿದರು. ಸೇಡಂ ಸಾಂಸ್ಕೃತಿಕ ಉತ್ಸವ, ದಸರಾ ಉತ್ಸವ, ಗಜಾನನ ಉತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತಾವೇ ಮುಂಚೂಣಿಯಲ್ಲಿ ನಿಂತು ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಮಳಖೇಡದಲ್ಲಿ 7ನೆಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ನಡೆದಾಗ, ನಮ್ಮ ಪಾರಂಪರಿಕ ಜಾನಪದ ಕಲೆಗಳಲ್ಲೊಂದಾದ ಬಯಲಾಟ ಪ್ರದರ್ಶನ ಮಾಡಿ, ಬಯಲಾಟಕ್ಕೆ ಒಂದು ವೇದಿಕೆ ನೀಡಿದರು. ಅಷ್ಟೇ ಅಲ್ಲ. ಮರೆಯಾಗುತ್ತಿರುವ ಕಲೆಗೆ ಮರುಜೀವ ನೀಡಿದರು. 2004ರಲ್ಲಿ ಕಲಬುರ್ಗಿ ನಗರದ


ಯಲ್ಲಾಲಿಂಗೇಶ್ವರ ಕಲ್ಯಾಣ ಮಂಟಪ ಕೋಟನೂರ (ಡಿ)ಯಲ್ಲಿ ಎಲ್ಲ ಜಾನಪದ ಕಲಾವಿದರನ್ನು ಸೇರಿಸಿ, ಜಿಲ್ಲಾ ಮಟ್ಟದ ಜಾನಪದ ಕಲಾವಿದರ ಸಮಾವೇಶ ಮಾಡಿ, ಅವರ ಕಲೆಗಳ ಪ್ರದರ್ಶನ ಏರ್ಪಡಿಸುವ ಮೂಲಕ, ನಗರ ಪ್ರದೇಶದವರಿಗೆ ಗ್ರಾಮೀಣ ಕಲೆಯ ಪರಿಚಯ ಮಾಡಿಸಿಕೊಟ್ಟರು. ಹೀಗೆ ಒಂದಿಲ್ಲೊಂದು ಸಾಂಸ್ಕೃತಿಕ ಮತ್ತು ಸಂಗೀತ ಕಾರ್ಯಕ್ರಮಗಳನ್ನು ನಡೆಸುವ ಮೂಲಕ, ಗ್ರಾಮೀಣ ಜನಪದ ಕಲೆಗಳನ್ನು ಹಾಗೂ ಕಲಾವಿದರನ್ನು ಬೆಳಕಿಗೆ ತರುವ ದಿಸೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿ ಕಲೆಯ ಸೇವೆಯೇ ತಮ್ಮ ಜೀವನದ ಧ್ಯೇಯ ಎಂದು ಟೊಂಕಕಟ್ಟಿ ನಿಂತಿದ್ದಾರೆ.

(ಎಎಂಕೆ)



ಮಲ್ಲಿಕಾರ್ಜುನ ಶೆಟ್ಟಿ: ಸೃಜನಶೀಲ ಕಲಾವಿದ. ಬೀದರ ಜಿಲ್ಲೆಯ ಹುಮನಾಬಾದ್‌ದಲ್ಲಿ 1965ರಲ್ಲಿ ಜನಿಸಿದರು. ಗುಲಬರ್ಗಾದ ದಿ ಐಡಿಯಲ್ ಫೈನ್ ಆರ್ಟ್ ಸೊಸೈಟಿಯಲ್ಲಿ ವಿ.ಜಿ. ಅಂದಾನಿಯವರ ಹಾಗೂ ಎಂ. ಬಿ. ಲೋಹಾರ ಹಾಗೂ ಬಸವರಾಜ ಉಪ್ಪಿನ ಅವರ ಮಾರ್ಗದರ್ಶನದಲ್ಲಿ ಡಿಪ್ಲೊಮಾ ಮತ್ತು ಬಿ.ಎಫ್.ಎ. ಪದವಿಯನ್ನು ಪಡೆದರು. ಅನಂತರ ಗ್ರಾಫಿಕ್ ಕಲೆಯಲ್ಲಿ ಎಂ.ಎಫ್.ಎ ಸ್ನಾತಕೋತ್ತರ ಪದವಿಯನ್ನು ಬರೋಡಾ ವಿಶ್ವವಿದ್ಯಾಲಯದಲ್ಲಿ ಪಡೆದರು. 1985ರಿಂದ ರಾಷ್ಟ್ರಮಟ್ಟದ ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಸೃಜನಶೀಲ ಚಿತ್ರಕಲಾಕೃತಿಗಳ ಪ್ರದರ್ಶನ ಮಾಡಿದ್ದಾರೆ. ಬೆಂಗಳೂರಿನ ವೆಂಕಟಪ್ಪ ಆರ್ಟ್‌ಗ್ಯಾಲರಿಯಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿ (1991) ರಾಜ್ಯಮಟ್ಟದಲ್ಲಿ ಗಮನ ಸೆಳೆದಿದ್ದಾರೆ. ಮುಂಬೈ, ಭುವನೇಶ್ವರಿ, ಬೆಂಗಳೂರು, ಚೆನ್ನೈ, ನವದೆಹಲಿಯಲ್ಲಿ ಅನೇಕ ಸಮೂಹ ಕಲಾಪ್ರದರ್ಶನ ಹಾಗೂ ಗುಲಬರ್ಗಾ, ಮೈಸೂರು, ರಾಯಚೂರು ಮತ್ತು ಬೆಂಗಳೂರು ಗಳಲ್ಲಿ ಜರುಗಿದ ಕಲಾಶಿಬಿರಗಳಲ್ಲಿ ಭಾಗವಹಿಸಿ ಕೃತಿ ರಚಿಸಿ ದ್ದಾರೆ.

ಮಿನಿಸ್ಟ್ರೀ ಆಫ್ ಹೆಚ್.ಆರ್.ಡಿ.ಯ ಜ್ಯೂನಿಯರ್ ಫೆಲೋಷಿಪ್ ಸ್ಕಾಲರ್‌ಷಿಪ್ ಪಡೆದು ಎರಡು ವರ್ಷಗಳ ಅವಧಿಯಲ್ಲಿ ಅನೇಕ ಸೃಜನಶೀಲ ಕಲಾಕೃತಿಗಳನ್ನು ರಚನೆಮಾಡಿ ಕಲಾಕ್ಷೇತ್ರಕ್ಕೆ ಕಾಣಿಕೆ ನೀಡಿದ್ದಾರೆ. ಇವರು ರಚಿಸಿದ ಇಟ್ಸ್ ಮೈ ವೇ, ವಾಟ್ ಎಲ್ಸ್‌ದೆಯರ್ ಟೂ, ಟ್ರಿಬ್ಯೂಟ್, ಟೂ ಬಿ ಕಂಟಿನ್ಯೂ ಮುಂತಾದ ಕಲಾಕೃತಿಗಳು ಪ್ರೇಕ್ಷಕರ ಗಮನ ಸೆಳೆಯುತ್ತವೆ. ಆಕೃತಿಗಳ



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಸಂಯೋಜನೆ, ವರ್ಣ ವಿನ್ಯಾಸವನ್ನು ವಿಶಿಷ್ಟ ರೀತಿಯಲ್ಲಿ ಸಂಯೋಜಿಸಿ, ಕಲಾಕೃತಿ ರಚಿಸುವ ಇವರ ಶೈಲಿ ಮಾರ್ಮಿಕವಾದುದು.

ಬರೋಡಾ ವಿಶ್ವವಿದ್ಯಾಲಯದ ಗ್ರಾಫಿಕ್ ವಿಭಾಗದ ಎಂ.ಎಫ್.ಎ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದು ಗೋಲ್ಡ್‌ಮೆಡಲ್ ಪಡೆದುಕೊಂಡಿದ್ದಾರೆ. ಪ್ರಸ್ತುತ ಗುಲಬರ್ಗಾದಲ್ಲಿ ಕಲಾವಿದರಾಗಿ ಕಲಾಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಎಟಿಎ)



ಮಲ್ಲಿಕಾರ್ಜುನ ವೀರಣ್ಣ ಕೋರಳ್ಳಿ: 1977 ಜುಲೈ 11ರಂದು ಗುಲಬರ್ಗಾದ ಸುಸಂಸ್ಕೃತ ಮನೆತನದಲ್ಲಿ ಜನಿಸಿದರು. ತಂದೆ ವೀರಣ್ಣ ಕೋರಳ್ಳಿ, ತಾಯಿ ಮಹಾದೇವಿ. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ಕಲಾಶಿಕ್ಷಣದತ್ತ ಇವರ ಆಸಕ್ತಿ ಬೆಳೆಯಿತು. 1993ರಲ್ಲಿ ಶ್ರೀ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಎರಡು ವರ್ಷದ ವಾಣಿಜ್ಯ ಚಿತ್ರಕಲೆ ಕುರಿತು ಅಧ್ಯಯನ ಮಾಡಿದರು. 1999ರಲ್ಲಿ ಬಿ.ಎ. ಇನ್ ಫೈನ್ ಆರ್ಟ್, 2001ರಲ್ಲಿ ಎಂ.ಎ. ಇನ್ ಫೈನ್ ಆರ್ಟ್ ಈ ಎರಡು ಪದವಿಯನ್ನು ಪ್ರಥಮ ರ‍್ಯಾಂಕ್ ಹಾಗೂ ಚಿನ್ನದ ಪದಕದೊಂದಿಗೆ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಿಂದ ಪಡೆದಿದ್ದಾರೆ.



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಇವರು ವಿದ್ಯಾರ್ಥಿ ದಿಶೆಯಿಂದಲೇ ಸದಾಕಾಲ ಚಟುವಟಿಕೆಯಿಂದ ಕಲಾವಲಯದಲ್ಲಿ ತಮ್ಮ ಕಲಾಕೃತಿಗಳಿಂದ ಗುರುತಿಸಿಕೊಂಡ ಯುವ ಕಲಾವಿದರು. ಕಲಾಕೃತಿಗಳು ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಸ್ಪರ್ಧೆ ಕಲಾಪ್ರದರ್ಶನಗಳಲ್ಲಿ ಆಯ್ಕೆಯಾಗಿ, ಪ್ರದರ್ಶನ ಕಂಡಿವೆ.


ರಾಷ್ಟ್ರದ ಹಾಗೂ ರಾಜ್ಯದ ಅನೇಕ ಕಲಾಗ್ಯಾಲರಿಗಳಲ್ಲಿ ಸಮೂಹ ಕಲಾಪ್ರದರ್ಶನಗಳನ್ನು ಆಯೋಜಿಸಿ ಪ್ರದರ್ಶನವನ್ನು ಕೈಗೊಂಡಿದ್ದು, ಇವರ ಕಲಾ ಪ್ರೌಢಮೆಗೆ ಕೈಗನ್ನಡಿಯಾಗಿವೆ. ಅಲ್ಲದೆ ಎರಡು ಏಕವ್ಯಕ್ತಿ ಕಲಾಪ್ರದರ್ಶನವನ್ನು ಕೈಗೊಂಡಿದ್ದಾರೆ. 2000ರಲ್ಲಿ ಎಎನ್‌ಝುಡ್ ಗ್ರಿಂಡ್ ಲೇಸ್ ಬ್ಯಾಂಕ್ ಗ್ಯಾಲರಿ ಮುಂಬಯಿ, ಚಿತ್ರಾ ಆರ್ಟ್‌ಗ್ಯಾಲರಿ, ಕನ್ನಡ ಭವನ, ಬೆಂಗಳೂರು ಹೀಗೆ ಕಲಾಪ್ರದರ್ಶನ ಜೊತೆಗೆ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. 1997–2005ರ ವರೆಗೆ, ಹಂಪಿ ಬಾದಾಮಿ, ಪಟ್ಟದಕಲ್ಲು, ಐಹೊಳೆ ಹೀಗೆ ಅನೇಕ ಕಡೆಗಳಲ್ಲಿ ನಿಸರ್ಗ ಚಿತ್ರಗಳ ಶಿಬಿರವನ್ನು ವಿದ್ಯಾರ್ಥಿ ದಿಶೆಯಲ್ಲಿಯೇ ಭಾಗವಹಿಸಿದ್ದಾರೆ. 2005ರಲ್ಲಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆ, ಗುಲಬರ್ಗಾ, 2010ರಲ್ಲಿ ಹಂಪಿ ಉತ್ಸವ, ಹಂಪಿ, 2010ರಲ್ಲಿ ಸಿದ್ದೇಶ್ವರ ಕಲಾ ಮಂದಿರ ಬಿಜಾಪೂರ, 2006ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಆಯೋಜಿಸಿದ ತಿಂಗಳ ಚಿತ್ರ ಅಂಗವಾಗಿ ಕಲಾ ಶಿಬಿರ, 2006ರಲ್ಲಿ ನಿಸರ್ಗ ಚಿತ್ರಕಲಾ ಶಿಬಿರ ಸುರಪುರ ಆಯೋಜನೆ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಹೀಗೆ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸುತ್ತ ಕಲಾಕೃತಿಗಳನ್ನು ರಚಿಸಿದ್ದಾರೆ.

ಇವರು ಹೆಚ್ಚಾಗಿ ಪ್ರಕೃತಿ ಚಿತ್ರಗಳ ರಚನೆಯಲ್ಲಿ ಆಸಕ್ತಿ. ನಮ್ಮ ನಾಡಿನ ಇತಿಹಾಸ ಪ್ರಸಿದ್ಧ ಸ್ಮಾರಕಗಳು ನಾಡಿನ ನಿಸರ್ಗ ಹಾಗೂ ಗ್ರಾಮೀಣ ಪ್ರದೇಶವನ್ನು ತನ್ನ ಕಲಾ ಅಭಿರುಚಿಯಿಂದ ಅವುಗಳ ಸೌಂದರ್ಯವನ್ನು ಪ್ರಕೃತಿಚಿತ್ರಗಳಲ್ಲಿ ಚಿತ್ರಿಸಿ ನೋಡುಗ ಸಹೃದಯನಿಗೆ ನೀಡುವಲ್ಲಿ ತುಂಬಾ ಸಂತೋಷ ಪಡುತ್ತಾರೆ. ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ಚಿತ್ರಕಲಾ ಶಿಕ್ಷಕನಾಗಿದ್ದರಿಂದ ಅಲ್ಲಿಯ ಗ್ರಾಮೀಣ ಪ್ರದೇಶದ ಜನಪದ ತೊಗಲು ಗೊಂಬೆಗಳ ಪ್ರಭಾವದಿಂದಾಗಿ ತಮ್ಮ ಸೃಜನಶೀಲ ಕಲಾಕೃತಿಗಳಲ್ಲಿ ಅವುಗಳ ಸಂಯೋಜನೆ ಮಾಡಿ, ತೈಲವರ್ಣ ಹಾಗೂ ಆಕ್ರೆಲಿಕ್ ವರ್ಣಗಳಲ್ಲಿ ಚಿತ್ರರಚನೆ ಮಾಡುತ್ತಿದ್ದಾರೆ. ಆದರೆ ಜಲವರ್ಣದಲ್ಲಿ ನಿಸರ್ಗಚಿತ್ರ ರಚನೆ ಮಾಡುವುದೆಂದರೆ ಇವರಿಗೆ ತುಂಬಾ ಆಸಕ್ತಿಯ ವಿಷಯವಾಗಿದೆ.

ಇವರ ಕಲಾಕೃಗಳಿಗೆ ಸಂದ ಗೌರವ ಪ್ರಶಸ್ತಿಗಳು; 1997ರಿಂದ 2000ರ ವರೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಯುವ ಜನೋತ್ಸವದಲ್ಲಿ ಚಿನ್ನ ಹಾಗೂ ಬೆಳ್ಳಿಯ ಪದಕಗಳನ್ನು ಪಡೆದಿದ್ದಾರೆ. 1999ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ, 2002ರಲ್ಲಿ, ಗುಂಬಜ್ ಆರ್ಟ್ ಅಸೋಶಿಯೆಷನ್ ಬಿಜಾಪುರ, 2006ರಲ್ಲಿ ರಾಷ್ಟ್ರೀಯ ಕಲಾ ಮೇಳ 'ಕಲಾಕುಂಭ' ಆಯೋಜನೆ ಅಲಹಾಬಾದ ವಿಶ್ವವಿದ್ಯಾಲಯ ಅಲಹಾಬಾದನಲ್ಲಿ ಪ್ರದರ್ಶನ 'ಬೇಸ್ಟ್ ಸ್ಟಾಲ್ಸ್' ಪ್ರಶಸ್ತಿ ಪಡೆದ ಇವರು ಸದಾ ಸೃಜನಶೀಲರಾಗಿ ಕಲಾಕೃತಿ ರಚನೆಯ ಜೊತೆಗೆ ರಾಯಚೂರ ಜಿಲ್ಲೆಯ ಚಂದ್ರಬಂನಡ್ ಎಂಬ ಹಳ್ಳಿಯ ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. (ಎಸ್‌ಪಿಡಬ್ಲ್ಯೂ)



ಮಲ್ಲಿಕಾರ್ಜುನ ಶಿವರಾಯ ಪೋಲಿಸ್ ಪಾಟೀಲ: 1962 ಆಗಸ್ಟ್ 22ರಂದು ಸುಕ್ಷೇತ್ರ ಜಿಡಗಾ, ತಾಲ್ಲೂಕು ಆಳಂದ ಜಿಲ್ಲೆ ಗುಲಬರ್ಗಾದಲ್ಲಿ ಜನಿಸಿದರು. ಚಿಕ್ಕಂದಿನಿಂದಲೇ ಇವರಿಗೆ ಸಂಗೀತದ ಗೀಳು. ಊರಲ್ಲಿ ನಡೆಯುವ ಸಂಗೀತ ಭಜನೆಗೆ ನುಡಿಸುತ್ತಿದ್ದ ತಬಲಾ ವಾದನದಿಂದ ಮುಂದೆ ತಬಲಾ ಕಲಿಯಲು ಸ್ಫೂರ್ತಿಯಾಯಿತು. ಶೈಕ್ಷಣಿಕ ಅಭ್ಯಾಸ ಮಾಡಲು ಇವರು ಗುಲಬರ್ಗಾಕ್ಕೆ ಬಂದು ಶರಣಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಸಂಗೀತ (ತಬಲಾ) ವಿಷಯದೊಂದಿಗೆ ಬಿ.ಎ. ಮುಗಿಸಿದರು. ಈ ಅವಧಿಯಲ್ಲಿ ಅವರಿಗೆ ಪಂ. ಕೆ.ಎಸ್. ಹಡಪದ ಹಾಗೂ ಪಂ. ಸಿದ್ಧರಾಮ ಜಂಬಲದಿನ್ನಿ ಅಂತಹ ಗುರುಗಳು ಸಿಕ್ಕಿದ್ದು ಪುಣ್ಯ. ಅವರಿಂದಲೇ ನಾನು ತಬಲಾ ವಿಷಯವನ್ನೇ ಪ್ರಮುಖವಾಗಿ ಆರಿಸಿಕೊಳ್ಳಲು ಸಾಧ್ಯವಾಯಿತು ಎಂದು ಈಗಲೂ ಪಾಟೀಲರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.



ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಹಾಗೂ ಹನುಮಣ್ಣ ನಾಯಕ ದೊರೆ ಜೊತೆ ತಬಲಾಸಾಥಿ ಶ್ರೀ ಎಂ. ಎಸ್. ಪೋ. ಪಾಟೀಲ

ಪಂ. ಕೆ.ಎಸ್. ಹಡಪದ ಅವರಲ್ಲಿ ಅನೇಕ ವರ್ಷ ತಬಲಾ ಶಿಕ್ಷಣವನ್ನು ಪಡೆದ ಇವರು, ಹಡಪದರ ಶಿಷ್ಯರಲ್ಲಿ ಪ್ರಮುಖರೆನಿಸಿದ್ದಾರೆ. ಮುಂದೆ ತಬಲಾದಲ್ಲಿಯೇ ಸ್ನಾತಕೋತ್ತರ ಪದವಿಯನ್ನು ಮಧ್ಯ ಪ್ರದೇಶದ ಖೈರಾಗಡ ವಿಶ್ವವಿದ್ಯಾಲಯದಿಂದ ಪಡೆದು, ಇವರು ಕಲಿತ ವಿದ್ಯಾಲಯದಲ್ಲಿ ತಬಲಾ ಉಪನ್ಯಾಸಕರಾಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಪಂ. ಸಿದ್ಧರಾಮ ಜಂಬಲದಿನ್ನಿ, ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಪಂ. ಸೋಮನಾಥ ಮರಡೂರ, ಶ್ರೀ ಹನುಮಣ್ಣ ನಾಯಕ ದೊರೆ, ಶ್ರೀ ಫಕೀರೇಶ ಕಣವಿ, ಶ್ರೀ ನರಸಿಂಹಲು ವಡವಟ್ಟಿ, ಶ್ರೀ ರೇವಯ್ಯ ವಸ್ತ್ರದಮಠ ಮುಂತಾದ ಹಿರಿಯ ಕಲಾವಿದರಿಗೆ ತಬಲಾ ಸಾತ್ ನೀಡಿದ್ದಾರೆ.

ಆಕಾಶವಾಣಿಯ ಆಡಿಷನ್ ಬೋರ್ಡಿನ ಸದಸ್ಯರಾಗಿಯೂ ನಿರ್ಣಾಯಕರಾಗಿ ಸೇವೆಸಲ್ಲಿಸಿದ್ದಾರೆ. ಆಕಾಶವಾಣಿಯ 'ಬಿ' ಹೈಗ್ರೇಡ್ (ಸುಗಮ ಸಂಗೀತ) ತಬಲಾ ವಾದಕರಾಗಿದ್ದಾರೆ. ಅನೇಕ ಪ್ರತಿಷ್ಠಿತ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನೇಕ ಕಲಾವಿದರಿಗೆ ಉತ್ತಮ ಸಾತ್ ನೀಡಿದ್ದಾರೆ. ಪ್ರಸ್ತುತ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಪ್ರತಿಭಾವಂತ ಶಿಷ್ಯರನ್ನು ತಯಾರು ಮಾಡಿದ ಇವರು ದಿನದಲ್ಲಿ ಹಲವಾರು ತಾಸುಗಳು ತಬಲಾ ರಿಯಾಜನಲ್ಲಿ ಇರುತ್ತಾರೆ. ಕಲೆಗೆ ಕಲಾವಿದನಿಗೆ ಅನ್ಯಾಯವಾದಾಗ ಸಿಡಿದೇಳುವ ಇವರು ಯಾವಾಗಲೂ ಸೌಮ್ಯ ನಗುಮುಖದಿಂದಲೇ ಇರುತ್ತಾರೆ. ಜಿಲ್ಲಾ ರಾಜ್ಯ ಮಟ್ಟದ ಅನೇಕ ಸಂಗೀತ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಹಲವಾರು ಬಾರಿ ಯಶಸ್ವಿಯಾಗಿ ನಿಭಾಯಿಸಿದ್ದಾರೆ.

(ಆರ್‌ವಿಎಂ)

ಮಲ್ಲಿನಾಥ ಕೋಲೋಳಗಿ: ಹಿರಿಯ ದಂತ ವೈದ್ಯರಾದ ಡಾ. ಮಲ್ಲಿನಾಥ ಕೋಲೋಳಗಿಯವರು ಗದಗಿನಲ್ಲಿ ಹುಟ್ಟಿ, ಬಾಂಬೆ ವಿಶ್ವವಿದ್ಯಾಲಯದಿಂದ ದಂತ ವಿಜ್ಞಾನ ಪದವಿಯನ್ನು ಎರಡನೇ ರ್‍ಯಾಂಕಿನಲ್ಲಿ ಪಡೆದ ಮೊದಲನೇ ಕನ್ನಡಿಗರು. ಪದವಿ ಪಡೆದ ನಂತರ 1962ರಲ್ಲಿ ಗುಲಬರ್ಗಾದಲ್ಲಿ ಪ್ರಪ್ರಥಮವಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸುವುದರ ಜೊತೆಗೆ ಎಂ.ಆರ್.ಮೆಡಿಕಲ್ ಕಾಲೇಜ ಹಾಗೂ ಸರಕಾರಿ ಆಸ್ಪತ್ರೆಯಲ್ಲಿ ಕ್ರಮವಾಗಿ ವಿಭಾಗದ ಮುಖ್ಯಸ್ಥರಾಗಿ ಹಾಗೂ ಗೌರವ ದಂತಶಸ್ತ್ರ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ.



ವಿದ್ಯಾರ್ಥಿ ದಿಶೆಯಲ್ಲಿದ್ದಾಗಲೇ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರತಿದಿನ ಪ್ರಕಟವಾಗುವ ಕಪ್ಪು ಬಿಳುಪು ಛಾಯಾ ಚಿತ್ರಗಳಿಂದ ಪ್ರೇರಣೆಗೊಂದು ಅವುಗಳನ್ನು ಸಂಗ್ರಹಿಸ ತೊಡಗಿದರು. ಛಾಯಾಚಿತ್ರದಲ್ಲಿ ವಿಶೇಷ ಆಸಕ್ತಿ ಇದ್ದರೂ ಅದನ್ನು ಹವ್ಯಾಸವಾಗಿಟ್ಟುಕೊಂಡರು. ಕಾರಣ ಆ ಸಂದರ್ಭದಲ್ಲಿ ಅದು ದುಬಾರಿಯಾಗಿತ್ತು. ಆದರೂ ಅವಕಾಶ ಸಿಕ್ಕಾಗ ಛಾಯಾಚಿತ್ರ ತೆಗೆಯುವುದು ಹಾಗೂ ಪ್ರದರ್ಶನಗಳನ್ನು ನೋಡಲು ಮರೆಯಲಿಲ್ಲ.



'ಜಾಮಾ ಮಸೀದಿ' ಛಾಯಾಚಿತ್ರ

ಇವರಿಗೆ ಪ್ರವಾಸವೂ ಒಂದು ಅಚ್ಚು ಮೆಚ್ಚಿನ ಹವ್ಯಾಸವಾಗಿತ್ತು. ತಮ್ಮ ಪತ್ನಿ ಹಾಗೂ ಗೆಳೆಯರೊಂದಿಗೆ ರಾಜ್ಯದಲ್ಲಿ, ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಪ್ರವಾಸ ಮಾಡಿದ್ದುಂಟು. ಆ ಸಂದರ್ಭದಲ್ಲಿ ಅವರು ತಮ್ಮ ಕ್ಯಾಮರಾದಿಂದ ಅನೇಕ ಸುಂದರ ನೈಸರ್ಗಿಕ, ಐತಿಹಾಸಿಕ, ಹಾಗೂ ವಿವಿಧ ಜನಾಂಗಗಳ ಛಾಯಾಚಿತ್ರಗಳನ್ನು ಸಾವಿರಾರು ಸಂಖ್ಯೆಯಲ್ಲಿ ಸೆರೆಹಿಡಿದಿದ್ದಾರೆ. ಇವರ ಈ ಛಾಯಾಚಿತ್ರಗಳನ್ನು ಚೈತನ್ಯಮಯಿ ಆರ್ಟ್‌ಗ್ಯಾಲರಿಯ ನಿರ್ದೇಶಕ ಹಾಗೂ ಹಿರಿಯ ಚಿತ್ರಕಲಾವಿದ ಎ.ಎಸ್. ಪಾಟೀಲರು ನೋಡಿ ಅವುಗಳು ಯೋಗ್ಯವಾದುವುಗಳೆಂದು ಪರಿಗಣಿಸಿ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಟ್ಟರು. ಪ್ರೇಕ್ಷಕರಿಂದ ಹಾಗೂ ಗೆಳೆಯರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು ಮೂರು ಸಲ ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ಏಕವ್ಯಕ್ತಿ ಛಾಯಾಚಿತ್ರ ಹಮ್ಮಿಕೊಂಡ ಹವ್ಯಾಸಿ ಛಾಯಾಚಿತ್ರಕಾರ ಇವರು

ಅಭಿನಂದನಾರ್ಹರು. ಇದರ ಜೊತೆಗೆ ಅನೇಕ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯುವ ಮಟ್ಟಕ್ಕೆ ಬೆಳೆದಿದ್ದಾರೆ. (ಎಸ್‌ಜಿಪಿ)



ಮಹಮೂದ್ ಮಿಯಾ: ಹೆಸರಾಂತ ತಬಲಾ ವಾದಕ. ಗುಲಬರ್ಗಾದ ಹೈದ್ರಾಬಾದ ಶಿಕ್ಷಣ ಸಂಸ್ಥೆಯ ಶ್ರೀಮತಿ ವೀರಮ್ಮ ಗಂಗಾಸಿರಿ ಮಹಿಳಾ ಮಹಾವಿದ್ಯಾಲಯದ ಸೀನಿಯರ್ ಗ್ರೇಡ್ ತಬಲಾ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ 'ಕರ್ನಾಟಕ ಕಲಾಶ್ರೀ-2003' ಪ್ರಶಸ್ತಿ ನೀಡಿ ಗೌರವಿಸಿದೆ.

ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬೆಳೆದವರು. ಕಲಬುರ್ಗಿ 1955ರಲ್ಲಿ ಜನಿಸಿದರು. ಅಮಿನಾಬಿ ಹಾಗೂ ಅಹ್ಮದ ಸಾಬ್ ದಂಪತಿಗಳ ಹಿರಿಯ ಮಗ. ತಂದೆ ಅಹ್ಮದ ಸಾಬ್ ಮತ್ತು ದೊಡ್ಡಪ್ಪ ಅಬ್ದುಲ್ ಹಮೀದ್ ಮಾಸ್ತರ ಈ ಭಾಗದ ಪ್ರಸಿದ್ಧ ತಬಲಾ ವಾದಕರಾಗಿದ್ದರು. ಚಿಕ್ಕಂದಿನಿಂದಲೇ ತಂದೆ ಹಾಗೂ ದೊಡ್ಡಪ್ಪ ಅವರು ಆಗ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ನಾಟಕ, ಇತರ ಸಭೆ, ಸಮಾರಂಭಗಳಲ್ಲಿ ತಬಲಾ ನುಡಿಸಲು ಹೋಗುತ್ತಿದ್ದರು. ಅವರೊಂದಿಗೆ ಹೋಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತಬಲಾ ನುಡಿಸಿ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಪ್ರೇಮಿಗಳ ಮನಸ್ಸಿನಲ್ಲಿ ನಲೆಯೂರಿದವರು ಮಹಮೂದ್ ಮಿಯಾ.

ನಾಡಿನ ಹೆಸರಾಂತ ರಾಣಿ ಕಿತ್ತೂರ ಚನ್ನಮ್ಮ ನಾಟಕ ಕಂಪನಿ, ವೀರೇಶ ನಾಟಕ ಕಂಪನಿಗಳಲ್ಲಿ ತಬಲಾ ವಾದಕರಾಗಿ ಸೇವೆ ಸಲ್ಲಿಸಿದ್ದಾರೆ. ನಾಟಕಗಳಲ್ಲಿನ ಹಾಡಿನ ದೃಶ್ಯ, ಹಾಸ್ಯ ದೃಶ್ಯಗಳಲ್ಲಿ ಇವರು ಬಾರಿಸುತ್ತಿದ್ದ ತಬಲಾಗಳಿಂದ ಹೊರ ಹೊಮ್ಮುವ ವಿಶೇಷ ಮಧುರ ನಾದಗಳು ಪಾತ್ರಧಾರಿಗಳಿಗೆ ಹಾಗೂ ನೋಡುಗರ ಮೈ ರೋಮಾಂಚನ ಉಂಟು ಮಾಡುತ್ತಿದ್ದವೆಂದು ಇವರ ಶಿಷ್ಯರು ಹೇಳುತ್ತಾರೆ.

ಹೈದ್ರಾಬಾದ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶದ ನಾಟಕ, ಸಭೆ, ಸಮಾರಂಭಗಳಲ್ಲಿ ಖ್ಯಾತ ನಾಟಕಕಾರರೊಂದಿಗೆ ಸಂಗೀತಗಾರರೊಂದಿಗೆ ತಬಲಾ ಸಾಥ್ ನೀಡಿದ ಶ್ರೇಯಸ್ಸು ಇವರದು. ಖ್ಯಾತ ಶಹನಾಯಿ ವಾದಕ ಉಸ್ತಾದ ಬಿಸ್ಮಿಲ್ಲಾಖಾನ್, ಸಿತಾರ ವಾದಕ ಉಸ್ತಾದ್ ಫಕ್ರುದ್ದೀನ್‌ಸಾಬ್ ಮತ್ತು ಅಜೀಂ ಖಾನ್ ಅವರೊಂದಿಗೂ ತಬಲಾ ಸಾಥ್ ನೀಡಿದ ಶ್ರೇಯಸ್ಸು ಮಹಮೂದ ಮಿಯಾ ಅವರದು.

ಹಿಂದೂಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್, ಖ್ಯಾತ ಕಥಕ್ ನೃತ್ಯಪಟು ಗೋಪಿನಾಥ್, ಪಂಜಾಬ್ ಕ್ಲಾಸಿಕಲ್ ಠುಮ್ರಿ ಹಾಡುಗಾರ್ತಿ ಕಮಲಾದೇವಿ ಅವರ ಹಲವಾರು ಸಂಗೀತ ಕಾರ್ಯಕ್ರಮಗಳಲ್ಲಿ ತಬಲಾ ಸಾಥ್ ನೀಡಿದ್ದಾರೆ. ಅಲ್ಲದೆ ಅಮ್ರಿಜ್ ಹಿಂದಿ ಸಿನಿಮಾದಲ್ಲಿ ಕೂಡ ತಬಲಾ ನುಡಿಸಿದ ಕೀರ್ತಿ ಇವರದು. ರಾಜ್ಯದ ಹೆಸರಾಂತ ಸಂಗೀತಗಾರರಾದ ಪಂಡಿತ್ ಸಿದ್ಧರಾಮ ಜಂಬಲದಿನ್ನಿ, ಹುಕ್ಕೇರಿ ಬಾಳಪ್ಪ, ಬಸವರಾಜ ರಾಜಗುರು ಅವರುಗಳಿಗೂ ಅನೇಕ ಕಾರ್ಯಕ್ರಮಗಳಲ್ಲಿ ತಬಲಾ ಸಾಥ್ ನೀಡಿದ್ದಾರೆ.

ಕಲಬುರ್ಗಿ ದೂರದರ್ಶನ ಪ್ರಥಮವಾಗಿ ಪ್ರಸಾರ ಆರಂಭಿಸಿದಾಗ ಇವರ ತಬಲಾ ವಾದ್ಯ ಕಾರ್ಯಕ್ರಮ ಬಿತ್ತರಗೊಂಡಿದ್ದೊಂದು ವಿಶೇಷ. ಗುಜರಾತ್ ರಾಜ್ಯದ ಜೈನ್ ಉತ್ಸವದಲ್ಲಿ, ಅಣ್ಣಾಮಲೈ ವಿಶ್ವವಿದ್ಯಾಲಯ ನಡೆಸುವ ಯುಜಿಸಿ ರಿಫ್ರೆಶಮೆಂಟ್ ಕೋರ್ಸಗಳಲ್ಲಿ ಭಾಗವಹಿಸಿ, ತಮ್ಮ ತಬಲಾ ವಾದನದ ಕೈಚಳಕ ತೋರಿಸಿದ್ದಾರೆ. ರಾಜ್ಯ ಯುವಜನ ಸೇವಾ ಇಲಾಖೆ ಮತ್ತು ಮಂಗಳೂರು ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಜರುಗಿದ ರಾಜ್ಯ ಮಟ್ಟದ ಎನ್.ಎಸ್.ಎಸ್. ಉತ್ಸವ, ಅಂತರ್ ರಾಜ್ಯದ ಹಲವಾರು ಉತ್ಸವಗಳಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿ ಸಮರ್ಥವಾಗಿ ಕಾರ್ಯನಿರ್ವಸಿದ್ದಾರೆ.

ಪ್ರತಿವರ್ಷ ಮಹಾರಾಷ್ಟ್ರದ ತುಳಜಾಪೂರದ ತುಳಜಾ ಭವಾನಿ ಜಾತ್ರಾ ಮಹೋತ್ಸವದಲ್ಲಿ ಮಹಮೂದ ಮಿಯಾ ಇವರ ತಂಡ ಸಂಗೀತ ಕಾರ್ಯಕ್ರಮ ನೀಡಿ, ಅಲ್ಲಿನ ಭಕ್ತರ ಮನಸೂರೆಗೊಳ್ಳುತ್ತಿರುವದು ಇವರ ಕಲಾಸೇವೆಗೆ ಹಿಡಿದ ಕೈಗನ್ನಡಿಯಾಗಿದೆ. ಮುಂಬಯಿ, ಹೈದ್ರಾಬಾದನ ಖ್ಯಾತ ಗಜಲ್ ಹಾಡುಗಾರರ ಅನೇಕ ಕಾರ್ಯಕ್ರಮಗಳಲ್ಲಿ ಇವರು ತಬಲಾ ಸಾಥ್ ನೀಡಿದ್ದಾರೆ. ಇವರು ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರೂ ಕೂಡ ಆಗಿದ್ದಾರೆ.

1980ರಲ್ಲಿ ಹಿಂದೂಸ್ತಾನಿ ತಾಳವಾದ್ಯ ಪ್ರೋಫೆಶಿಯನ್ಸಿ ತಬಲಾ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದವರು. ಇವರು ತಬಲಾ ವಾದ್ಯದಲ್ಲಿ ವೈಶಿಷ್ಟ್ಯ ಎಂದರೆ, ಸಂಗೀತ ಮತ್ತು ನಾಟಕ ಕಾರ್ಯಕ್ರಮಗಳಲ್ಲಿ ಹಾಡು ಮತ್ತು ನೃತ್ಯದ ನಡುವಿನ ಸಮಯದಲ್ಲಿ ಇವರು ಬಾರಿಸುವ ಡಗ್ಗವನ್ನು ಸುಮಾರು 5 ಅಡಿ ಮೇಲಕ್ಕೆ ಎಸೆದು, ಸ್ವೀಕರಿಸಲು ಹಾಡು, ನೃತ್ಯಕ್ಕೆ ಭಂಗ ಬರದಂತೆ ಮತ್ತೆ ನುಡಿಸುವಂತಹ ನೈಪುಣ್ಯತೆ ಹೊಂದಿರುವುದು.

ತಬಲಾ ವಾದನದಲ್ಲಿ ಅಪಾರ ಜ್ಞಾನದ ಅನುಭವವುಳ್ಳ, ಇವರ ಕಲಾಸೇವೆಯನ್ನು ಹಲವಾರು ಸಂಘ ಸಂಸ್ಥೆಗಳು, ಗುರುತಿಸಿ ಪ್ರಶಂಸಿವೆ. ಹಿಂದು, ಮುಸ್ಲಿಂ ಧಾರ್ಮಿಕ ಸಂಸ್ಕಾರಗಳನ್ನು ಮೈಗೂಡಿಸಿಕೊಂಡಿರುವ ಇವರೊಬ್ಬ ಉತ್ತಮ ಸಮಾಜ ಜೀವಿ, ಸ್ನೇಹ ಜೀವಿ, ಕಾಯಕ ಜೀವಿ. ದಿಲ್ಲಿ ಬಾಜ್ ಮತ್ತು ಅಜರ್ನಾ ಘರನಾ ತಾಳದಲ್ಲಿ ತಬಲಾ ಬಾರಿಸುವ ನೈಪುಣ್ಯತೆ ಹೊಂದಿದ್ದಾರೆ. (ಎಸಿಟಿ)

ಮಹಾಂತ ಸುತಾರ: ಕಲಬುರ್ಗಿ ಜಿಲ್ಲೆಯ ಅಫಜಲಪೂರನ ಕಾಷ್ಠ ಶಿಲ್ಪಿ. ತಾಲ್ಲೂಕಿನ ಭೋಗನಳ್ಳಿ ಗ್ರಾಮದಲ್ಲಿ ಕಡುಬಡತನದ ಕುಟುಂಬದಲ್ಲಿ ಜನಿಸಿದರು. ತಂದೆ ಶರಣಪ್ಪ ಸುತಾರ. ಅವರು ನಡೆಸಿಕೊಂಡು ಬಂದ ಬಡಿಗಿತನವನ್ನೇ ಮೂಲ ಉದ್ಯೋಗ ವನ್ನಾಗಿ ಮಾಡಿಕೊಂಡು, ಕೃಷಿಗೆ ಉಪಕರಣಗಳನ್ನು ತಯಾರಿಸಿ, ಜೀವನ ನಡೆಸುತ್ತಿದ್ದರು. ಮಹಾಂತ ಕೂಡ ಇದೇ ಉದ್ಯೋಗ ವನ್ನು ಅರಸಿಕೊಂಡು, ಅದನ್ನು ಕಲಾತ್ಮಕವಾಗಿ ಬದಲಾವಣೆ ಮಾಡಿಕೊಂಡು ತಮ್ಮ ಕೌಶಲ್ಯವನ್ನು ಮೆರೆದಿದ್ದಾರೆ.

ಓದಿದ್ದು, ಏಳನೆಯ ತರಗತಿವರೆಗೆ ಮಾತ್ರ. ಪ್ರಾಥಮಿಕ ಹಂತದಲ್ಲೇ ಚಿತ್ರ ಬರೆಯುವ ಗೀಳು ಹುಟ್ಟಿಸಿಕೊಂಡು ಚಿತ್ರ ಬಿಡಿಸಿ ಹಿರಿಯರಿಗೆ ತೋರಿಸಿ ಭೇಷ್ ಎನಿಸಿಕೊಂಡು ಮನೆ ಯಲ್ಲಿದ್ದ ಅಳಿದುಳಿದ ಕಟ್ಟಿಗೆ ತುಂಡುಗಳಲ್ಲಿ ಹೂ–ಬಳ್ಳಿ, ಪ್ರಾಣಿ, ಪಕ್ಷಿಗಳ ಚಿತ್ರ ಬಿಡಿಸಿ, ಕುಸುರಿ ಕೆಲಸಕ್ಕೆ ಜೀವ ತುಂಬುವ ಕಾಯಕ ಆರಂಭಿಸಿದರು. ವಂಶ ಪರಂಪರೆಯಾಗಿ ಬಂದ ವೃತ್ತಿಗೆ ಗುರು ಹಾಗೂ ಯಾರ ಮಾರ್ಗದರ್ಶನವಿಲ್ಲದೆ ಕಾಷ್ಠಶಿಲ್ಪ ಕೆತ್ತನೆಯನ್ನು ಕರಗತ ಮಾಡಿಕೊಂಡರು. ಇಂದು ಅಫಜಲಪೂರ ತಾಲ್ಲೂಕಿ ನಾದ್ಯಂತಹ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಒಳ್ಳೆಯ ಕಾಷ್ಠ ಶಿಲ್ಪಿ ಯಾಗಿ ಹೆಸರುವಾಸಿಯಾಗಿ ಬೆಳೆದು ನಿಂತಿದ್ದಾರೆ.

ಇವರು ತಲೆಬಾಗಿಲು, ತೋಳುಗಳ ಮೇಲೆ ಗಣಪತಿ, ಗೌರಿ, ಲಕ್ಷ್ಮೀ ಹಾಗೂ ಸರಸ್ವತಿ ಮುಂತಾದ ಚಿತ್ರಗಳ ಕೆತ್ತನೆ ಮಾಡುತ್ತ ದೇವರ ಚಿತ್ರವಲ್ಲದೇ ಕುಸುರಿ ಕಲಾಕೃತಿಗಳನ್ನು ಚಿತ್ರಿಸಿ, ಗ್ರಾಹಕ ರಿಗೆ ಸಂತೃಪ್ತಿಯನ್ನುಂಟು ಮಾಡುತ್ತಾರೆ. ಇವರ ಕೈಯಲ್ಲಿ ಕಟ್ಟಿಗೆ ಮೇಣದಂತೆ ನುಣುಪಾಗಿ ಚಿತ್ರಗಳನ್ನು ಮೂಡಿಸುತ್ತದೆ.

ಇವರು, ಸಾಗವಾನಿ ಕಟ್ಟಿಗೆಯ ಬಾಗಿಲುಗಳು ಪಟ್ಟುಗಳು ಮೇಲೆ ಲೆಕ್ಕವಿಲ್ಲದಷ್ಟು ವಿವಿಧ ದೇವರುಗಳ ಚಿತ್ರಗಳು, ಫ್ರೀ ಹ್ಯಾಂಡ್ ಚಿತ್ರಗಳು, ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಅಂದವಾಗಿ ಮೂಡಿಸಿ ಕಾಡು ಕಟ್ಟಿಗೆಯಲ್ಲಿ ಕಲೆ ಮೂಡಿಸಲು ಹುಸಿಗೊಳಿಸಿ, ಅದರಲ್ಲೂ ಚಿತ್ರ ಮೂಡಿಸಿದ ಕೀರ್ತಿ ಇವರದು.

ಕೇವಲ 10 ನಿಮಿಷದಲ್ಲಿ ಬಾಗಿಲು ತೋಳ (ಚೌಕಟ್ಟು) ಗಳ ಮೇಲೆ ಹಾಗೂ ಗಣಪತಿ ಮಾಡಗಳ ಮೇಲೆ, ಹೂ, ಬಳ್ಳಿ ರುದ್ರಾಕ್ಷಿ ಮಣಿ ಚಿತ್ರಗಳನ್ನು ಕೆತ್ತುವುದು ನೋಡಿದರೆ ನಮ್ಮ ಕಣ್ಣು ಗಳನ್ನೇ ನಂಬದಂತಾಗುತ್ತದೆ. ಅಂಥ ಚುರುಕುತನ ಇವರದು. ಅಫಜಲಪೂರ ತಾಲೂಕಿನ ಒಳ್ಳೆಯ ಕಾರ್‌ಪೇಂಟರ್ ಕಲಾವಿದ ನಾಗಿ ಹೆಸರು ಮಾಡಿಕೊಂಡ ಮಹಾಂತ ಸುತಾರರು, ದೇವರ ಪಲ್ಲಕ್ಕಿ, ಸಿಂಹಾಸನಗಳ ಮೇಲೆ ವಿವಿಧ ಬಗೆಯ ಚಿತ್ರಗಳನ್ನು ಕೆತ್ತಿದ ಕಲಾವಿದರಾಗಿದ್ದು, ಇವರು ತಯಾರಿಸುವ ದೇವರ ಪಲ್ಲಕ್ಕಿಗಳಿಗೆ ಬಹಳಷ್ಟು ಬೇಡಿಕೆ ಇದೆ. (ಎಸ್‌ಎಚಿ)

ಮಹಾಂತಯ್ಯ ಸ್ವಾಮಿ: ಸಂಗೀತ, ನಟನೆ, ಗಮಕ, ಕೀರ್ತನೆ, ನಾಟಕ ನಿರ್ದೇಶನ, ಪುರಾಣ, ಪ್ರವಚನ ಮೊದಲಾದುವುಗಳಲ್ಲಿ ಪರಿಣಿತಿ ಸಾಧಿಸಿದವರು. 65 ವರ್ಷಗಳ ದೀರ್ಘಕಾಲ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕಂದಗಲ್ ಪರ್ವತಯ್ಯ ಶಾಸ್ತ್ರೀಗಳಲ್ಲಿ 'ಮಹಾಕವಿ ಕಾಳಿದಾಸ', 'ರಘುವಂಶ ಕುಮಾರ ಸಂಭವ', ಕಾವ್ಯಗಳನ್ನು ಅಭ್ಯಾಸ ಮಾಡಿದ್ದರು ಮತ್ತು ಹಿಂದುಸ್ಥಾನಿ ಸಂಗೀತದಲ್ಲಿ ಪಾಂಡಿತ್ಯ ಗಳಿಸಿದ್ದರು. ಇನಿದಾದ ಕಂಠ, ಅಭಿನಯ ಕೌಶಲ್ಯ, ಸೌಜನ್ಯ, ಸರಳತೆ, ವಾಕ್ಚಾತುರ್ಯ ಅವರ ಜನಪ್ರಿಯತೆಯನ್ನು ತವರು ಜಿಲ್ಲೆಗೆ ಸಿಮೀತಗೊಳಿಸದೆ ಪಕ್ಕದ ಆಂಧ್ರ, ಮಹಾರಾಷ್ಟ್ರಕ್ಕೂ ಪಸರಿಸಿದ್ದುವು. ಮುಂಬಯಿ ಯಲ್ಲಿ 'ಕುರುಕ್ಷೇತ್ರ' ನಾಟಕ ಪ್ರದರ್ಶಿಸಿದ ಹೆಗ್ಗಳಿಕೆ ಇವರದು. ಆದೋನಿ ಲಕ್ಷ್ಮೀದೇವಿ, ಚಿಂದೋಡಿ ಲೀಲಾ, ಸುಭದ್ರಮ್ಮ ಮನ್ಸೂರು ಅವರಂತಹ ಮೇರು ಕಲಾವಿದರು ಇವರು ನಿರ್ದೇಶಿಸಿದ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಇವರ ಕಲಾಸೇವೆ ಗುರುತಿಸಿ ರಾಜ್ಯ ಸರ್ಕಾರ ನಾಟಕ ಅಕಾಡೆಮಿ ಫೆಲೋಶಿಪ್ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಿ ಗೌರವಿ ಸಿದೆ. 'ಸಂಗೀತ ಸುಧಾಕರ', 'ಶೀಘ್ರರಾಗ ರಚನಾ ಚತುರ', 'ಗಾಯನ ಕೋಗಿಲೆ', 'ಆಶುಕವಿ'–ಹೀಗೆ ಹತ್ತು ಹಲವು ಬಿರುದು ಗಳನ್ನು ಕಲಾರಸಿಕರು ನೀಡಿದ್ದಾರೆ. ಇವರ ಹೆಸರಿನಲ್ಲಿ ಮುಂಡರಗಿಮಠ ಪ್ರತಿಷ್ಠಾನ ಆರಂಭಿಸಿ ತನ್ಮೂಲಕ ಹಲವು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಪ್ರತಿ ವರ್ಷ ಇವರ ಪುಣ್ಯಸ್ಮರಣೆಯಲ್ಲಿ ಕಲಾವಿದರು, ಸಾಧಕರನ್ನು ಅವರ ಕುಟುಂಬದವರು, ಅಭಿಮಾನಿಗಳು ಸೇರಿ ಗೌರವಿಸುತ್ತಾರೆ. ಈ ಬಾರಿಯು ಅದ್ದೂರಿಯಾಗಿ ಪುಣ್ಯಸ್ಮರಣೆ ನಡೆಯಿತು.

(ಎಂಎನ್‌ಬಿ)

ಮಹಾಗಾಂವದ ಮಹಾಲಿಂಗಪ್ಪ: ಸಂಗೀತವನ್ನು ಹವ್ಯಾಸವಾಗಿ ಬೆಳೆಸಿಕೊಂಡು ಸಂಗೀತ ಸಾಹಿತ್ಯದಲ್ಲಿ ಮಿಂಚಿದ ಕಲಾವಿದರಲ್ಲಿ ಒಬ್ಬರು. ಕಲಬುರ್ಗಿ ತಾಲೂಕಿನ ಬೀದರ–ಶ್ರೀರಂಗಪಟ್ಟಣ ಹೆದ್ದಾರಿ ಮೇಲಿರುವ ಮಹಾಗಾಂವ ಗ್ರಾಮದ ಗುಂಡಪ್ಪಗೋಳ ಮನೆತನದವರು. ತಂದೆ ಸಂಗಪ್ಪ–ತಾಯಿ ನೀಲಮ್ಮ ಸ್ವಗ್ರಾಮ ಮಹಾಗಾಂವದಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಇನ್ನೊಂದು ವಿಶೇಷವೆಂದರೆ, ಇವರು ಚಿಕ್ಕ ವಯಸ್ಸಿನಲ್ಲೇ ಸಂಗೀತ ಕಲಿ ಯಲು ಪ್ರಾರಂಭಿಸಿದರು. ಇವರು ಚಿಕ್ಕವರಿರುವಾಗ ಇವರ ತಾಯಿ ಒಳ್ಳೆಯ ಜಾನದಪ ಹಾಡುಗಳನ್ನು ಹಾಡುತ್ತಿದ್ದರು. ಕುಟ್ಟುವ ಪದ, ಬೀಸುವ ಪದ, ಜೋಗುಳ, ಸೋಬಾನ, ಮದುವೆ



ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮದಲ್ಲಿ ಅವರ ಗಾಯನ

ಇತ್ಯಾದಿ ಸಮಾರಂಭಗಳಲ್ಲಿ ಒಳ್ಳೆಯ ಹಾಡುಗಳನ್ನು ಹಾಡುವುದನ್ನು ಕರಗತ ಮಾಡಿಕೊಂಡವರು.

ಭಜನೆಗಳಲ್ಲಿ ಹಾಡುವುದು, ಕನ್ನಡ ಚಿತ್ರಗೀತೆಗಳನ್ನು ಹಾಡುವುದು ಅಭ್ಯಾಸ ಮಾಡಿಕೊಂಡರು. ಇನ್ನು ಅನೇಕ ಶಾಲಾ ಮಟ್ಟದ ಸಂಘ–ಸಂಸ್ಥೆಗಳಲ್ಲಿ ಕಾರ್ಯಕ್ರಮದಲ್ಲಿ ಸಂಗೀತ ಸೇವೆ ಸಲ್ಲಿಸಿದರು. ಇಷ್ಟೆಲ್ಲಾ ಸಂಗೀತ ಕಲಿಯುವುದು ಅಷ್ಟು ಸಲಿಸಾದ ಮಾತಲ್ಲ. ಇವರ ಮನೆಯಲ್ಲಿ ಎಲ್ಲರೂ ಸಂಗೀತದಲ್ಲಿ ಆಸಕ್ತರು.

1978ರಲ್ಲಿ ಮದುವೆಯಾದರು ಇವರ ಪತ್ನಿಯೂ ಸಹ ಜಾನಪದ ಗೀತೆಗಳನ್ನು ಹಾಡುವರು. 1984ರಲ್ಲಿ ಉಜ್ಜನಪ್ಪ ಬಡಿಗೇರ ರಾಣಿಬೆನ್ನೂರ ಇವರ ಹತ್ತಿರ ಶಾಸ್ತ್ರೀಯ ಸಂಗೀತ ಕಲಿತರು. 1992ರಲ್ಲಿ ಸಂಗೀತದಲ್ಲಿ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಪ್ರಪ್ರಥಮವಾಗಿ ಯುವಜನ ವೇದಿಕೆ ಗಾಂಧೀ ಸ್ಮಾರಕ ನೀಡಿ 1977ರಲ್ಲಿ ರಾಗಬದ್ಧ ವಚನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು.

ಗಾನಕೋವಿಧ, ಸಮಾಜಸೇವಕ, ಕಲಾಕೇಸರಿ, ಗಾನ ಕೋಗಿಲೆ, ಧರಿನಾಡ ಕನ್ನಡ ಸಾಹಿತ್ಯ ಸಂಸ್ಥೆಯಿಂದ ಅತ್ಯುತ್ತಮ ಪದಕಾರರು ಹೀಗೆ ಹತ್ತಾರು ಪ್ರಶಸ್ತಿ ಇವರ ಕೊರಳ ಮಾಲೆಗೆ ಬಂದಿವೆ. ಆಕಾಶವಾಣಿಯಲ್ಲಿ ತತ್ವಪದಕರಾಗಿ 'ಬಿ' ಗ್ರೇಡ್ ಶ್ರೇಣಿಯಲ್ಲಿ ಇಂದಿನವರೆಗೆ ಕಾರ್ಯಕ್ರಮ ನೀಡುತ್ತಿದ್ದಾರೆ. ಕಲಬುರ್ಗಿ ದೂರದರ್ಶನದಲ್ಲಿ ತತ್ವಪದಕರಾಗಿ ಕಾರ್ಯಕ್ರಮ ನೀಡುವುದು, ಸಂಗೀತ ನಾಟಕ ವಿಭಾಗ ಭಾರತ ಸರಕಾರದ ಯೋಜನೆಯಡಿ ಹಳ್ಳಿ ಹಳ್ಳಿಗಳಲ್ಲಿ ಆರೋಗ್ಯ, ನೈರ್ಮಲ್ಯ, ಜನಸಂಖ್ಯೆ ನಿಯಂತ್ರಣ ಇತ್ಯಾದಿ ಕಾರ್ಯಕ್ರಮಗಳನ್ನು ನೀಡಿದವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಮ್ಮ ನಾಡಿನ ಸಂಸ್ಕೃತಿಯ ಬಗ್ಗೆ ಅನೇಕ ಕಾರ್ಯಕ್ರಮ ನೀಡಿದರು.ಒಕ್ಕಲುತನ, ಹೈನುಗಾರಿಕೆ, ಎರೆಹುಳಗೊಬ್ಬರ ತಯಾರಿಕೆ ಮಾಡುವುದು. ಇವರ ಹವ್ಯಾಸಗಳು, ಹೋಟೆಲ್ ಉದ್ಯಮದಲ್ಲಿಯೂ ಹೆಸರು ಮಾಡಿದ್ದಾರೆ. ಮಹಾಗಾಂವ ತಂದೆ ಜೊತೆಯಲ್ಲಿ ಹತ್ತಾರು ರೀತಿ ಕೆಲಸಗಳನ್ನು ಮಾಡಿ ಅನುಭವ ಪಡೆದಿದ್ದಾರೆ. ವ್ಯವಸಾಯ ಸಂಘದ ನಿರ್ದೇಶಕರಾಗಿ ಹಾಗೂ ಶ್ರೀ ಅಕ್ಕಮಹಾದೇವಿ ದೇವಸ್ಥಾನದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಸ್ತ್ರೀಯ ಸಂಗೀತದಿಂದ ಜನಪದ ಸಂಗೀತವನ್ನು ಸುಶ್ರಾವ್ಯವಾಗಿ ಹಾಡುವ ಆಸೆ ಇವರದು. ಮಹಾಗಾಂವದ ಕಳ್ಳಿಮಠದ ಪೂಜ್ಯರಾದ ಶ್ರೀ ಗುರುಲಿಂಗ ಮಹಾಸ್ವಾಮಿಗಳ ಮಠದಲ್ಲಿ ಸಂಗೀತ ಸೇವಕರಾಗಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. (ಎಎಂಕೆ)

ಮಹಾದೇವ ಮಂದಿರ: ಬೀದರ ಜಿಲ್ಲೆಯ ಪ್ರಸಿದ್ಧ ಐತಿಹಾಸಿಕ ಸ್ಥಳ. ಸುಮಾರು 500 ವರ್ಷಗಳ ಇತಿಹಾಸ ಹೊಂದಿದೆ. ಕೇವಲ ಕರಿಕಲ್ಲು ಶಿಲೆಯಿಂದ ನಿರ್ಮಿಸಲಾಗಿದೆ. ಮಂದಿರ ಪೌರಾಣಿಕವಾಗಿ ಶಿವಪೀಠವಾಗಿದ್ದು, ಬ್ರಹ್ಮ, ವಿಷ್ಣು, ಮಹೇಶ್ವರರ ಮಹಾದ್ವಾರ ಮಂದಿರದಲ್ಲಿದೆ ಎಂದು ಹೇಳುತ್ತಾರೆ. ಗಟ್ಟಿ ಕರಿಶಿಲೆಯಿಂದ ನಿರ್ಮಿತವಾದ ಮಹಾದೇವ ಮಂದಿರದ ಮೇಲೆ ದೇವಾಂಗ ಕನ್ನಿಕೆಯರ, ಪರಿಗಳ ರಂಭೆಯರ, ಕಿನ್ನರಿ, ಕಿಂಪುರುಷ ಮುಂತಾದವರ ಕಲಾತ್ಮಕ ಶಿಲ್ಪಕಲೆಗಳಿವೆ. ಮಹಾದೇವ ಮಂದಿರದ 4–5 ಕಡೆಯ ಗರ್ಭಗುಡಿಗಳಿದ್ದು; ಅಲ್ಲಲ್ಲಿ ಸ್ಥಾವರ ಲಿಂಗಗಳ ಸ್ಥಾಪನೆ ಮಾಡಲಾಗಿದೆ.

ಮಂದಿರದ ಸಮೀಪದಲ್ಲಿ ಐತಿಹಾಸಿಕ ಭಾವಿವಿದ್ದು, ಆ ಭಾವಿಯಲ್ಲಿ ಅಗಸ್ತ್ಯ ಮುನಿಗಳ ಪ್ರತಿಮೆ ಇದೆ. ಭಾವಿಯಲ್ಲಿಯೇ ಶ್ರೀ ವಿಷ್ಣು ದೇವರ ಮಲಗಿದ್ದ ಬೃಹತ್ ಪ್ರತಿಮೆ ಇದೆ. ನಾಗ ಪ್ರತಿಮೆ, ನಂದಿಕೇಶ್ವರ ಇತ್ಯಾದಿ ಪ್ರತಿಮೆಗಳು ಸಹ ಈ ದೇವಾಲಯ ಸಮುಚ್ಚಯಲ್ಲಿವೆ. ಭಾವಿ ಈಗ ಸಂಪೂರ್ಣವಾಗಿ ಬತ್ತಿ ಹೋಗಿದ್ದು, ನೀರು ಬಳಸಲಾರದೇ ಹಾಳು ಬಿದ್ದಿದೆ.

ಔರಂಗಜೇಬನ ಕಾಲದಲ್ಲಿ ತನ್ನ ಸೈನ್ಯದೊಂದಿಗೆ ಆ ಭಾಗದಿಂದ ಹಾದುಹೋಗುವಾಗ, ಮಂದಿರದ ಕೆಲ ಭಾಗಕ್ಕೆ ಧಕ್ಕೆಯುಂಟು ಮಾಡಿದರೆಂದು ಹೇಳಲಾಗಿದೆ. ಅದಾದ ನಂತರ ರಜಾಕಾರ ಚಳವಳಿ ಸಂದರ್ಭದಲ್ಲಿ (ನಿಜಾಂ ಆಡಳಿತ ಸಂದರ್ಭ) ರಜಾಕಾರರ ನಾಯಕ ಖಾಸಿಂ ರಜವಿ ನೇತೃತ್ವದಲ್ಲಿ ಸುಂದರ ಮಂದಿರದ ಸುಂದರವಾದ ಶಿಲಾಬಾಲಿಕೆಗಳನ್ನು ಒಡೆದು ಹಾಕಲಾಗಿದೆ. ಮಂದಿರದ ಮೇಲಿನ ಛಾವಣಿಯನ್ನು ಒಡೆದು ಹಾಕಲಾಗಿದೆ. (ಡಿಪಿಯು)



ಮಹಾದೇವಪ್ಪ ಎಸ್. ಶಿಲ್ಪಿ: ಶಿಲ್ಪ ಕಲಾವಿದ. ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ದಿಗ್ಗಾಂವ ಎಂಬ ಗ್ರಾಮದಲ್ಲಿ 1939ರಲ್ಲಿ ಜನಿಸಿದರು. ಇವರು ಏಳನೆಯ ತರಗತಿಯಲ್ಲಿ ಉರ್ದು ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರು. ಎರಡು ವರ್ಷದವರಿದ್ದಾಗ ತಂದೆ ಶಂಭುಲಿಂಗಪ್ಪ ಮರಣ ಹೊಂದಿದ್ದರಿಂದ ಮುಂದೆ ಶಿಕ್ಷಣ ಪಡೆಯಲಾಗದೆ ತಮ್ಮ ಸೋದರಮಾವನವರ ಹತ್ತಿರ ತಮ್ಮ ಕುಲಕಸುಬಾದ ಅಕ್ಕಸಾಲಿಗರ ಕೆಲಸ ಕಲಿತರು. ಸೋದರಮಾವನವರ ಅಂಗಡಿಗೆ ಆಗಾಗ ಬರುತ್ತಿದ್ದ ಮುತ್ತಾಚಾರಿ ಪರಿಚಯವಾಗಿ ಇವರ ಪ್ರೇರಣೆಯಿಂದ ಗಾಣಗಾಪೂರದ ಸುಪ್ಪಯ್ಯಾಚಾರಿ ಇವರಿಂದ ಶಿಲ್ಪಕಲೆಯ ಬಗ್ಗೆ ತಿಳಿದುಕೊಂಡರು. ಅನಂತರ ಉನ್ನತಮಟ್ಟದ ಕಲಿಕೆಗಾಗಿ ವಿದ್ವಾಂಸ ಶಿಲ್ಪ ಗುರುಗಳಾದ 'ಗಣಪತಿ ಸ್ಥಾಪತಿ' ಇವರ ಬಳಿಗೆ ಬಂದು ಆರು ವರ್ಷಗಳ ಕಾಲ ಅಲ್ಲೇ ಕೆಲಸ ಕಲಿತರು.

ಇವರು ಕಲ್ಲು, ಪ್ಲಾಸ್ಟರ್ ಆಫ್ ಪ್ಯಾರಿಸ್, ಕಟ್ಟಿಗೆ, ಲೋಹ, ಸಿಮೆಂಟ್, ಬೆಳ್ಳಿ ಮತ್ತು ಬಂಗಾರ ಇನ್ನೂ ಮುಂತಾದ

ಮಾಧ್ಯಮಗಳಲ್ಲಿ ಅನೇಕ ಶಿಲ್ಪಗಳನ್ನು ಮಾಡಿದ್ದು, ಅಲ್ಲದೇ ವಿವಿಧ ಶಾಸ್ತ್ರೀಯ ವಿಗ್ರಹಗಳು ಮತ್ತು ಮಹಾದ್ವಾರಗಳನ್ನು ಮಾಡಿದ್ದಾರೆ. ಕಲ್ಲಿನಲ್ಲಿ ಕೆತ್ತಿದ ವಿವಿಧ ರೀತಿಯ ವಿಗ್ರಹಗಳಾದ ವಿಘ್ನೇಶ್ವರ, ನಾಟ್ಯ ಸರಸ್ವತಿ, ಮಹಿಷಾ ಮರ್ದಿನಿ, ಈಶ್ವರ, ನಂದಿ, ಮಂದಿರ ಚೌಕೋನ, ಸಿಂಹ, ಕುದುರೆ, ಜೈನ ವಿಗ್ರಹಗಳು, ಪತ್ರಪೀಠ, ಪದ್ಮಪೀಠ, ದತ್ತಾತ್ರೇಯ, ವೀರಭದ್ರ, ರಾಮ-ಲಕ್ಷ್ಮಣ ಇನ್ನೂ ಹೀಗೆ ದೇವಾನುದೇವತೆಗಳ ಐವತ್ತಕ್ಕೂ ಹೆಚ್ಚು ವಿಗ್ರಹ ಗಳನ್ನು ರಚಿಸಿದ್ದಾರೆ. ಮತ್ತು ಲೋಹದಲ್ಲಿ ವಿವಿಧ ರೀತಿಯ ವಿಗ್ರಹಗಳು, ಇಸ್ಲಾಂ ಧರ್ಮದ ಪಂಜಗಳು, ಸ್ವಾಮಿ ಸಾಮರ್ಥ್ಯ ಹಾಗೂ ಹಿತ್ತಾಳೆಯಲ್ಲಿ ಮತ್ತು ಬೆಳ್ಳಿಯ ತಗಡಿನಲ್ಲಿ ಪ್ರಭಾ ವಳಿಗಳು ವಿವಿಧ ಬಗೆಯ ವಿಗ್ರಹಗಳು ಕಲ್ಲಿನ ಪೀಠ ಮತ್ತು ಪಾದುಕೆಗಳ ಮೇಲೆ ಬೆಳ್ಳಿಯ ಕವಚಗಳು ಮಾಡಿದ್ದು, ಪ್ಲಾಸ್ಟರ್ ಆಫ್ ಸಿಮೆಂಟಿನಲ್ಲಿ ಗಣಪತಿಯ ವಿಗ್ರಹಗಳು ದೇವಿಯ ವಿಗ್ರಹ ಗಳು, ಮಂದಿರದ ಸಣ್ಣ ಮಾದರಿಗಳು ಹಾಗೂ ಸಿಮೆಂಟಿನಲ್ಲಿ ಗೋಪುರಗಳು ಮತ್ತು ವಿಗ್ರಹಗಳು ಇನ್ನೂ ಶಿಲ್ಪಗಳೆಂದರೆ ಲಂಬಾಣಿ ಮಹಿಳೆ, ಸಹಸ್ರ ಫಣಿ, ಪಾರ್ಶ್ವನಾಥ, ಭವಾನಿ, ದೀಪಸ್ತಂಭ, ಮಹಾದ್ವಾರದ ಕಟ್ಟಡ ಇವು ವಿಶೇಷವಾಗಿ ಕಂಡು ಬರುತ್ತದೆ.

ಇವರು ರಚಿಸಿದಂತಹ ಶಿಲ್ಪಗಳಲ್ಲಿ ಹೆಚ್ಚು ಶಿಲ್ಪಗಳು ಚಿಕ್ಕ ಚಿಕ್ಕ ಗಾತ್ರಗಳಲ್ಲಿದ್ದು, ನಯ, ನಾಜೂಕಾಗಿ ನೈಜತೆಯನ್ನು ಹೊಂದಿದ್ದು, ಚಿಕಣಿ ಚಿತ್ರಕಲೆಯಂತೆ ಸಾಂಪ್ರದಾಯಿಕವಾಗಿದ್ದು ಅತ್ಯಂತ ಸೂಕ್ಷ್ಮತೆಯ ಕೆತ್ತನೆ ಇವರ ಶಿಲ್ಪಗಳಲ್ಲಿ ಕಂಡುಬರುತ್ತದೆ. ಇವರ ಸೂಕ್ಷ್ಮ ಕೆತ್ತನೆಯ ಕೆಲಸ ಮುಂದಿನ ಪೀಳಿಗೆಗೆ ದಾಖಲೆ ಯಾಗಬೇಕಾಗಿದೆ. ಮತ್ತು ಬೆಳೆಯುವ ಯುವ ಶಿಲ್ಪಕಲಾವಿದ ರಿಗೆ ಇವರು ಸ್ಫೂರ್ತಿಯಾಗಿದ್ದಾರೆ. ಕಲಿಯಲೇಬೇಕು ಎಂಬ ಛಲದಿಂದ ಯಾವ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕದೇ ಎಲ್ಲವನ್ನು ಧೈರ್ಯವಾಗಿ ಎದುರಿಸಿದ್ದಾರೆ. ನಮ್ಮಲ್ಲಿ ಕಲಿಯುವ ಹಠವೊಂದಿದ್ದರೆ ಸಾಕು. ಒಂದಲ್ಲಾ ಒಂದು ರೀತಿಯಿಂದ ನಮಗೆ ಸರಸ್ವತಿ ಒಲಿಯುತ್ತಾಳೆ ಎಂಬ ಮಾತಿಗೆ ಇವರು ಉದಾಹರಣೆಯಾಗಿದ್ದಾರೆ.


ಇವರು ರಚಿಸಿದಂತಹ ಶಿಲ್ಪಕಲಾಕೃತಿಗಳು ಕೈಗಾರಿಕ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶನಗೊಂಡಿವೆ. ಅಲ್ಲದೇ ವಿಭಾಗೀಯ ಕೈಗಾರಿಕೆಯ ವಸ್ತು ಪ್ರದರ್ಶನ (ನವೆಂಬರ್ 1990) ಮತ್ತು ವಾಣಿಜ್ಯ ಮೇಳ ಗುಲಬರ್ಗಾ (1996) ಪ್ರದರ್ಶಗೊಂಡು ಹಲವಾರು ಪ್ರಶಸ್ತಿ ಗೌರವಗಳಿಗೆ ಭಾಜನರಾಗಿದ್ದಾರೆ. ಶ್ರೀ ಸದ್ಗುರು ಮಲೆಯ ಶಾಂತೇಶ್ವರ ಸಂಸ್ಥಾನ ಹಿರೇನಂದೂರು 1980ರಲ್ಲಿ ಮತ್ತು ವಿಶ್ವಕರ್ಮ ಏಕದಂಡಾಗಿ ಮಠ, ಯಾದಗಿರಿ ವತಿಯಿಂದ ಶಿಲ್ಪಕಲಾ ರತ್ನ ಪ್ರಶಸ್ತಿ 1984ರಲ್ಲಿ ಲಭಿಸಿದ್ದು, ಎಸ್.ಎಂ. ಪಂಡಿತ್ ಇವರಿಂದ 1989ರಲ್ಲಿ ಸನ್ಮಾನಿಸಲಾಗಿದೆ. 2002ರಿಂದ 2005ರವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಕಾಳಪ್ಪ ಕೋರವಾರ, ಅಮರೇಶ ಸರ್ಜಾಪುರ, ಆನಂದ ಬಾಬು, ಎಂ. ಅಂಬರ ಖಾನೆ ಇನ್ನೂ ಮುಂತಾದವರು ಇವರ ಬಳಿ ಕಲಿತ್ತಿದ್ದಾರೆ. (ಬಿಕೆಎಲ್)

ಮಹಾಮುನಿ ದೇವದುರ್ಗ: ಚಿತ್ರಕಲಾವಿದ. ಬಡತನದ ಬದುಕಿನಲ್ಲಿ ಶಿಕ್ಷಣ ಪಡೆದು, ಕಲಾ ಗುರುಗಳಾದ ವೆಂಕಟ ನರಸಿಂಹ ಅವರ ಚಿತ್ರಕಲಾ ಗರಡಿಯಲ್ಲಿ ಮಿಂದು, ರೇಖೆಗಳ ಜೊತೆ ಆಟ ವಾಡುತ್ತಲೇ ತಮ್ಮ ಕುಂಚದಿಂದ ಅತ್ಯದ್ಭುತವಾದ ಚಿತ್ರಕಲೆಯನ್ನು ಬೆಳಕಿಗೆ ತಂದು ಹೈದ್ರಾಬಾದ್-ಕರ್ನಾಟಕದಲ್ಲಿ ಹೆಸರು ವಾಸಿಯಾದವರು, ಅನುಭವಿ ಶರಣರ ಚಿತ್ರಕಲಾ ಕೃತಿಯನ್ನು ಅಷ್ಟೇ ಅನುಭಾವಿ ಸಿದ್ಧಿಯಲ್ಲಿ ಚಿತ್ರಿಸುವಲ್ಲಿ ಸಿದ್ಧಹಸ್ತರು. ಇವರ ಆರಂಭದ ಚಿತ್ರಕಲಾ ಕೃತಿಗಳೆಲ್ಲಾ ಜಾಹಿರಾತು ಹಾಗೂ ಪ್ರಕೃತಿ ಸಾಮಾಜಿಕ ಜೀವನದ ಕುರಿತದ್ದಾದರೆ, ಕ್ರಮೇಣ ಇವರ ದೃಷ್ಟಿ ಕೋನ ಶರಣರ ಕಡೆಗೆ ಹರಿದು, ಸಿದ್ಧಿ ಪುರುಷರ ಚಿತ್ರ ರಚನೆಗಾಗಿ ಸಿದ್ಧಹಸ್ತರಾಗಿದ್ದರು. ಕಲೆಯನ್ನು ಗಂಭೀರವಾಗಿ ತೆಗೆದುಕೊಂಡು ಅದರ ರಚನೆ ಹಾಗೂ ಬಣ್ಣಗಳ ಬಳಕೆಯಲ್ಲಿ ತಮ್ಮದೇ ಸಂವಿಧಾನ ಹಾಗೂ ಸಮೀಕರಣದಿಂದ ರಾಯಚೂರು ಜಿಲ್ಲೆ ಯಾದ್ಯಂತ ಪರಿಚಿತರಾದವರು. ಅನುಭಾವಿ ಸಾಹಿತ್ಯದ ಪಠಣ ಹಾಗೂ ಸತ್ಸಂಗದ ಪ್ರಭಾವದಲ್ಲಿ ಸತ್ಕೃತಿಗಳನ್ನ ರಚಿಸುವಲ್ಲಿ ಕಾರ್ಯತತ್ಪರರಾದರು ಇವರು ರಚಿಸಿದ ಚಿತ್ರಕಲಾ ಕೃತಿಯಾದ ವೈರಾಗ್ಯ ಮೂರ್ತಿ ಅಲ್ಲಮಪ್ರಭುಗಳ ತೈಲ ಚಿತ್ರ ರಾಜ್ಯಮಟ್ಟದ ವಿಮರ್ಶಕರ ಮೆಚ್ಚುಗೆ ಪಡೆದಿದೆ. ಈ ಚಿತ್ರದಲ್ಲಿ ನೈಜತೆ ಇದೆ ಎಂದರೆ ಪವಾಡ ಪುರುಷರ ಕಣ್ಣುಗಳಿಂದ ಕಾಂತಿ, ಭಾವ ತೀವ್ರತೆಯ ಆಕರ್ಷಣೆ ಇಲ್ಲಿ ಕಾಣಬಹುದಾಗಿದೆ.

ಇನ್ನೊಂದು ಪ್ರಮುಖ ಕಲಾಕೃತಿಯಾದ ಕೋಡೆಕಲ್‌ನ ಅಶ್ವಾರೂಢ ಬಸವೇಶ್ವರರ ಕಲಾಕೃತಿ ಕಾಠೇವಾಡದ ಕುದುರೆ ಯನ್ನೇರಿ ಹುಲಿದೊಗಲು ಹೊದ್ದು ಕೈಯಲ್ಲಿ ಕುಡಿಕೆಹಿಡಿದು ಎಡ ತೋಳಲ್ಲಿ ವಚನಾಮೃತ ತುಂಬಿಕೊಂಡು ಆರೂಢ ಸಂಪ್ರದಾಯದ ಗತ್ತಿನಲ್ಲಿ ಹಸಿರು ಪತ್ತಲದಲ್ಲಿ ವಿರಾಜಮಾನರಾಗಿ ತೇಜೋಪುಂಜ ಕಣ್ಣುಗಳಲ್ಲಿ ತುಂಬ ಮನಾಕರ್ಷಣೆ ಪಡೆ ಯುತ್ತದೆ. ಇವರ ಇನ್ನೊಂದು ಕಲಾಕೃತಿ ಪವಾಡ ಮೂರ್ತಿ ನವಲಗುಂದ ಶ್ರೀ ನಾಗಲಿಂಗ ತಾತನವರ ಚಿತ್ರ. ಈ ಕಲಾಕೃತಿ ಕೂಡ ತನ್ನ ಸೊಗಸಿನಿಂದ ಕಣ್ಣಿಳೆಯುತ್ತದೆ. ಅದೇರೀತಿ ಭಾಷಾ ಕವಿ ಪಂಡಿತ ಪುಟ್ಟರಾಜ ಗವಾಯಿಗಳವರ ಚಿತ್ರವನ್ನು ನೈಜವಾಗಿ ಚಿತ್ರಿಸಿದ್ದನ್ನು ಕಂಡು ಗವಾಯಿಗಳವರ ವಲಯದವರೆಲ್ಲರೂ ವಿಸ್ಮಿತರಾಗಿ ರಾಯಚೂರಿನಲ್ಲಿ ಜರುಗಿದ ಸಂಗೀತ ಸಮ್ಮೇಳನ ದಲ್ಲಿ ಇವರನ್ನು ಸನ್ಮಾನಿಸಿದರು.

ಬದುಕಿನ ನೆಲೆಗೆ ಛಾಯಾಚಿತ್ರಗ್ರಾಹಕ ವೃತ್ತಿ ಕೈಗೊಂಡರು ಭದ್ರತೆಯ ಕೊರತೆ ಇದೆ. ಪ್ರವೃತ್ತಿಯಿಂದ ಇತ್ತೀಚೆಗೆ ಆಯುರ್ವೇದ ಔಷಧಗಳ ಅಧ್ಯಯನದಲ್ಲಿ ತೊಡಗಿ ಪುರಾತನ ಗಿಡ-ಮೂಲಿಕೆಗಳ ಸಂಶೋಧನೆ ಹಾಗೂ ಧನ್ವಂತರಿ ಪದ್ಧತಿ ಯನ್ನು ಪುನರುಜ್ಜೀನವಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಅಪಾರ ಶ್ರಮ, ಸತತ ಸಾಧನೆಗಳೇ ಇವರ ಯಶಸ್ಸಿನ ಸೂತ್ರಗಳು.

(ಎಸ್‌ಯುಎ)



ಮಹೇಶಕುಮಾರ: ಕಾಷ್ಠಶಿಲ್ಪ ಮತ್ತು ಚಿತ್ರಕಲೆ ಕಲಾವಿದ. ಕಲಬುರ್ಗಿ ಜಿಲ್ಲೆ ಇಂದು ಶೈಕ್ಷಣಿಕವಾಗಿ ಹಾಗೂ ಅಭಿವೃದ್ಧಿಯಿಂದ ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಯಾಗಿರ ಬಹುದು. ಆದರೆ, ಐತಿಹಾಸಿಕವಾಗಿ ಕಲೆ, ಸಾಹಿತ್ಯ, ಸಂಸ್ಕೃತಿಯಿಂದ ಈ ಭಾಗ ಎಲ್ಲ ಕ್ಷೇತ್ರಗಳಲ್ಲೂ ಅತ್ಯಂತ ಶ್ರೀಮಂತಿಕೆಯಿಂದ ಮೆರೆದಿತ್ತು ಎಂಬುದಕ್ಕೆ ಸಾಕಷ್ಟು ಐತಿಹ್ಯಗಳು ದೊರೆಯುತ್ತವೆ. ಚಿತ್ರಕಲೆ ಮತ್ತು ಶಿಲ್ಪಕಲೆಗಳಲ್ಲಿ ಇಂದಿಗೂ ಈ ಭಾಗದ ಪ್ರತಿಭೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವರಿದ್ದಾರೆ. ಈ ಎರಡೂ ಕಲೆಗಳನ್ನು ಕರಗತ ಮಾಡಿಕೊಂಡಿರುವ ಯುವ ಕಲಾವಿದ ಮಹೇಶಕುಮಾರ ತಳವಾರ ಭರವಸೆ ಮೂಡಿಸಿದ್ದಾರೆ.



'ಕಾಳಿಕಾದೇವಿ' ಕಲ್ಲು ಮಾಧ್ಯಮ

ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾರಪಳ್ಳಿ ಗ್ರಾಮದ ಇವರು ತಂದೆ ದೇವಿಂದ್ರಪ್ಪ ತಳವಾರ, ಚಿಕ್ಕವನಿದ್ದಾಗಲೇ ಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡು, ಪ್ರೌಢ ಶಿಕ್ಷಣ ಮುಗಿದ ನಂತರ ನೇರವಾಗಿ ಕಲಬುರ್ಗಿಯ ದಿ ಆರ್ಟ್ ಇಂಟಿಗ್ರೇಷನ್ ಚಿತ್ರಕಲಾ ಕಾಲೇಜಿನಲ್ಲಿ ಡ್ರಾಯಿಂಗ್ ಮಾಸ್ಟರ್ ಕೋರ್ಸ್ ಮಾಡಿ, ನಂತರ ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ಡಿಪ್ಲೋಮಾ ಪಡೆದು, ಚಿತ್ರಕಲೆಯ ಬಗ್ಗೆ ತರಬೇತಿ ಪಡೆದರು.

ಭಾವ ಚಿತ್ರಣ, ಸಂಯೋಜನೆ, ನಿಸರ್ಗ ಚಿತ್ರಣ, ಕರಕುಶಲ ಕಲೆಯ ಬಗ್ಗೆ ತೀವ್ರ ಆಸಕ್ತಿ ಹೊಂದಿರುವ ತಳವಾರ, ರೇಖೆಗಳ ಜೊತೆಗೆ ಆಟವಾಡುತ್ತ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಬಣ್ಣಗಳ ಜೊತೆ ಬೆರೆತು, ಸಂಯೋಜನೆ ಮಾಡುತ್ತ ವಿಷಯಗಳ ಬಗ್ಗೆ ತಿಳಿದುಕೊಂಡರು. ಆದರೂ ಕಲೆಯ ಬಗ್ಗೆ ಇರುವ ದಾಹ ತಣಿಯದೆ, ಹಿರಿಯ ಕಲಾವಿದರಿಗೆ ಭೇಟಿಯಾಗಿ ಅವರ ಕೃತಿಗಳನ್ನು ನೋಡಿ ಚರ್ಚಿಸುವುದು, ಚಿತ್ರಕಲಾ ಪ್ರದರ್ಶನಗಳಿಗೆ ನಿಯಮಿತವಾಗಿ ಭೇಟಿ ನೀಡಿ, ವಿವಿಧ ಕಲಾವಿದರು ಬಳಸುವ ಮಾಧ್ಯಮಗಳು, ವರ್ಣಸಂಯೋಜನೆ ಹಾಗೂ ವಿಷಯಗಳ ಆಯ್ಕೆ ಅವುಗಳಲ್ಲಿನ ಗೂಢಾರ್ಥಗಳನ್ನು ಪರಿಚಯ ಮಾಡಿಕೊಂಡು, ತನ್ನದೇ ಆದ ಹೊಸ ಮಾಧ್ಯಮವನ್ನು ಸೃಷ್ಟಿಸಿಕೊಂಡು ಚಿತ್ರಕಲಾ ಪ್ರದರ್ಶನ ಮಾಡುವುದನ್ನು ರೂಢಿಸಿಕೊಂಡು, ಇದೊಂದು ಹವ್ಯಾಸವಾಗದೇ ವೃತ್ತಿಯ ಸವಾಲನ್ನಾಗಿ ಸ್ವೀಕರಿಸಿರುವುದು ಇವರ ವೈಶಿಷ್ಟ. ಕನ್ನಡ ರಾಜ್ಯೋತ್ಸವ ಚಿತ್ರಕಲಾ ಪ್ರದರ್ಶನ, ಕಲಬುರ್ಗಿ ವಿಶ್ವವಿದ್ಯಾಲಯ, 2001ರಲ್ಲಿ ಏರ್ಪಡಿಸಿದ್ದ ಪ್ರದರ್ಶನ ಹಾಗೂ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಲಬುರ್ಗಿ ವಿಭಾಗೀಯ ಪ್ರದರ್ಶನ, ಕಸ್ಟಮ್ ಆ್ಯಂಡ್ ಸೆಂಟ್ರಲ್ ಎಕ್ಸ್‌ಸೈಜ್ ರೀಕ್ರಿಯೇಶನ್ ಕ್ಲಬ್ ಮುಂತಾದ ಕಡೆ ಪ್ರದರ್ಶನಗಳಲ್ಲಿ ತಳವಾರ ಅವರು ಭಾಗವಹಿಸಿದ್ದಾರೆ.

ನಿಸರ್ಗಚಿತ್ರಣ ಶಿಬಿರ ಹಂಪಿ-2001ರಲ್ಲಿ ಭಾಗವಹಿಸಿ, ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಅನೇಕ ಕೃತಿಗಳನ್ನು ರಚಿಸಿರುವ ತಳವಾರ, ಚಿತ್ರಕಲಾವಿದರಿಗೆ, ಶಿಲ್ಪಕಲಾವಿದರಿಗೆ ಹಾಗೂ ಛಾಯಾಗ್ರಾಹಕರಿಗೆ ಹಂಪಿಯ ಕಲೆ ಮತ್ತು ಪ್ರಕೃತಿ ಎರಡೂ ಒಂದು ವಿಶ್ವವಿದ್ಯಾಲಯವಿದ್ದಂತೆ ಎನ್ನುವ ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಶಿಷ್ಯವೇತನ ಪಡೆದಿದ್ದಾರೆ.

ಕಾಲೇಜಿನ ವಾರ್ಷಿಕೋತ್ಸವ ಆವಾಂತಿಕಾ, ಬೆಂಗಳೂರು ವಿಶ್ವವಿದ್ಯಾಲಯ ಯುವಜನೋತ್ಸವ 2002ರಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡರು. ಕಲಬುರ್ಗಿಯ ಕನ್ನಡ ಭವನದಲ್ಲಿ ಏರ್ಪಡಿಸಿದ್ಧ ಸಮೂಹ ಪ್ರದರ್ಶನ 2000ರಲ್ಲಿ ಭಾಗವಹಿಸಿ ತಮ್ಮ ಕಲಾಪ್ರದರ್ಶನ ಮಾಡಿ ಕಲಾಪ್ರೇಮಿಗಳಿಂದ ಭೇಷ್ ಎನಿಸಿಕೊಂಡರು.

2006ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಭಾವಚಿತ್ರ ಮತ್ತು ಸಾಂಪ್ರದಾಯಿಕ ಶಿಲ್ಪಕಲಾ ಶಿಬಿರ, 2007ರಲ್ಲಿ ಸೌಥ್ ಸೆಂಟ್ರಲ್ ಯೂಥ್ ಸೆಂಟ್ರಲ್ ನಾಗಪುರ ಮಿನಿಸ್ಟರಿ ಆಫ್ ಕಲ್ಚರಲ್ ಭಾರತ ಸರಕಾರ ಸಹಯೋಗದಿಂದ ನಡೆದ ಶಿಬಿರ,

2008ರಲ್ಲಿ ನಾರ್ಥ ಝೋನ್ ಸೆಂಟ್ರಲ್ ಕಲಾಗ್ರಾಮ ಚಂಡಿಗರ್ ಸೇರಿದಂತೆ ಅನೇಕ ಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ.

ಕೇವಲ ಚಿತ್ರಕಲೆ ಮಾತ್ರವಲ್ಲದೇ ಶಿಲ್ಪಕಲೆ, ಕಾಷ್ಠಕಲೆಯಲ್ಲೂ ಆಸಕ್ತಿ ಬೆಳೆಸಿಕೊಂಡಿರುವ ಇವರು ಅದರಲ್ಲಿ ಪರಿಣತಿಯನ್ನು ಪಡೆಯಲು ಬೆಂಗಳೂರಿನ ಕೆ.ಪಿ. ಪ್ರಭು ಕರಕುಶಲ ತರಬೇತಿ ಕೇಂದ್ರ ಜೋಗುರದೊಡ್ಡಿ ಗ್ರಾಮಾಂತರ ಜಿಲ್ಲೆಯಲ್ಲಿ 18 ತಿಂಗಳ ವರೆಗೆ ತರಬೇತಿ ಪಡೆದಿದ್ದಾರೆ. (ಪ್ರವರ್ತಕರು ಕೆನರಾ ಬ್ಯಾಂಕ್ ನೀಡುತ್ತಲಿದೆ) ಈ ತರಬೇತಿಯಲ್ಲಿ ಅಶಿಸ್ತಿನಿಂದ ನಡೆದು ಕೊಂಡರೆ ಕಠಿಣ ಶಿಕ್ಷೆ ಕಾದಿರುತ್ತದೆ ಎಷ್ಟೋ ವಿದ್ಯಾರ್ಥಿಗಳು ಇಲ್ಲಿನ ಶಿಸ್ತಿಗೆ ಹೆದರಿ ಒಂದು ತಿಂಗಳಲ್ಲೇ ಓಡಿ ಹೋಗಿರುವ ಉದಾಹರಣೆಗಳೂ ಸಾಕಷ್ಟಿವೆ. ಕಲಾವಿದ ತನ್ನ ಜೀವನದಲ್ಲಿ ಶಿಸ್ತನ್ನು ಮೂಡಿಸಿಕೊಂಡರೆ, ತಾಳ್ಮೆ ಹಾಗೂ ತನ್ಮಯತೆಯಿಂದ ವಿಷಯಗಳನ್ನು ಗ್ರಹಿಸುವ ಶಕ್ತಿಗಳು ಪ್ರಾಪ್ತವಾಗುತ್ತವೆ. ಸಂಯಮ ಮತ್ತು ವೃತ್ತಿ ಭಕ್ತಿಯಿಂದ ಕಲಾಸರಸ್ವತಿ ಒಲಿ ಯುತ್ತಾಳೆ. ನಾನು ಧೈರ್ಯದಿಂದ ಈ ತರಬೇತಿಯಲ್ಲಿ ಎಲ್ಲ ರನ್ನೂ ಮೈಗೂಡಿಸಿಕೊಂಡು ತರಬೇತಿ ಪಡೆದಿರುತ್ತೇನೆ. ನನಗಂತೂ ಈ ತರಬೇತಿ ಸೇನಾಪಡೆಯಲ್ಲಿ ಭರ್ತಿ ಆದಂತೆ ಅನುಭವಾಯಿತು ಎನ್ನುತ್ತಾರೆ ಇವರು. ಶಿಲ್ಪ ಕೆತ್ತನೆಯ ಕುಶಲತೆ ಯಿಂದ ಅಪಾರ ಬೇಡಿಕೆಯ ಕಲಾವಿದರಾಗಿರುವ ಈ ಯುವ ಕಲಾವಿದ ಮಹೇಶಕುಮಾರ, ಈಗ ಬೆಳಗಾವಿ ಜಿಲ್ಲೆಯಲ್ಲಿ ಶಿಲ್ಪಕಲೆ ಕೆತ್ತನೆಯ ಕೆಲಸವನ್ನು ಕೈಗೆತ್ತಿಕೊಂಡಿದ್ದಾರೆ.

(ಎನ್ಎಂಜೆ)


ಮಹೇಶಕುಮಾರ ಈ. ಬಡಿಗೇರ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಚಿಮ್ಮನಚೋಡ ದಲ್ಲಿ 1971 ಡಿಸೆಂಬರ 12ರಂದು ಜನಿಸಿದ್ದಾರೆ. ತಂದೆ ಈಶ್ವರಪ್ಪ ಬಡಿಗೇರ. ತಾಯಿ ಸುಶೀಲಾಬಾಯಿ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ದಾಸವಾಣಿ, ವಚನವಾಣಿ, ಭಾವಗೀತೆ, ಠುಮ್ರಿ, ಜನಪದಗೀತೆ ಇತ್ಯಾದಿ ಶೈಲಿಗಳಲ್ಲಿ ಪಳಗಿದವರಾಗಿದ್ದಾರೆ. ಬಾಲ್ಯದಿಂದಲೇ ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿದವರಾಗಿ ದ್ದರು.



ಇವರು ಪ್ರಾಥಮಿಕ ಶಿಕ್ಷಣವನ್ನು ಪಂ. ಮಾಣಿಕರಾವ ಪೋದ್ದಾರರಲ್ಲಿ ಪಡೆದು, ಪದವಿ ಶಿಕ್ಷಣದಲ್ಲಿ 'ಸಂಗೀತ' ವನ್ನು ಆಯ್ಕೆ ಮಾಡಿಕೊಂಡು ಪಂ. ಹನುಮಣ್ಣನಾಯಕ ದೊರೆ ಯವರ ಮಾರ್ಗದರ್ಶನದಲ್ಲಿ ಪಡೆದುಕೊಂಡರು. ಉನ್ನತ ಶಿಕ್ಷಣವನ್ನು ಎಮ್. ಮ್ಯೂಜಿಕ್ ನಲ್ಲಿ ಪಂ. ಶ್ರೀಪಾದ ಹೆಗಡೆ ಧಾರವಾಡ ಇವರಲ್ಲಿ ಅಭ್ಯಾಸ ಮಾಡಿದ್ದಾರೆ. ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಆಕಾಶವಾಣಿ ಕೇಂದ್ರಗಳಲ್ಲಿ 'ಬಿ' ಹೈಗ್ರೇಡ್ ಶ್ರೇಣಿಯ ಕಲಾವಿದ ರಾಗಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಇವರ ಸಂಗೀತ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಅನೇಕ ಸಂಘ–ಸಂಸ್ಥೆಗಳು ಸನ್ಮಾನ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಇವರು ಸಂಗೀತ ಸಂಯೋಜಕರಾಗಿ, ಸಂಗೀತ ಪರೀಕ್ಷೆಯ ತೀರ್ಪುಗಾರರಾಗಿ, ಸೇವೆಸಲ್ಲಿಸಿದ್ದಾರೆ. ಅಲ್ಲದೇ ಇವರ ಸಂಪಾ ದಕತ್ವದಲ್ಲಿ 'ಸಂಗೀತ ಸೌರಭ' ಪುಸ್ತಕ ಪ್ರಕಟಗೊಳಿಸುವುದರ ಜೊತೆಗೆ 'ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ 'ಹೈದ್ರಾಬಾದ ಕರ್ನಾಟಕ ಕಲಾವಿದರ ಕುರಿತು 35 ಲೇಖನಗಳನ್ನು ಪ್ರಕಟಿಸಿ ದ್ದಾರೆ. ಪ್ರತಿ ವರ್ಷ ಬೇಸಿಗೆಯ ರಜಾದಿನಗಳಲ್ಲಿ ಸಂಗೀತ ಶಿಬಿರ ವನ್ನು ನಡೆಸುವುದರೊಂದಿಗೆ ಈ ಭಾಗದ ಜನರಲ್ಲಿ ಸಂಗೀತದಲ್ಲಿ ಜಾಗೃತಿಯನ್ನು ಮೂಡಿಸಿದ್ದಾರೆ. ಇವರು ಕಲಾವಿದರಾಗಿ ಕವಿ ಗಳಾಗಿ, ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

(ಆಯ್‌ಕೆ)



ಮಹೇಶಕುಮಾರ ಮಾಡಗಿ: ನಾಗಮ್ಮ ಮಲ್ಲಯ್ಯ ಮಾಡಗಿ ಯವರ ಪುತ್ರರಾದ ಮಹೇಶ ಕುಮಾರ ಮಾಡಗಿಯವರದು ಹುಟ್ಟೂರು ಗುಲಬರ್ಗಾ. ಮುಜು ಗರ ಸ್ವಭಾವದ ಮಹೇಶ ಹೊಂದಿ ಕೊಂಡು ಕೆಲಸಕ್ಕೆ ನಿಂತರೆ ಅಪ್ಪಟ ಕಲಾವಿದ ಪ್ರತಿಭೆ.

ಬಿ.ಎ. ಪದವಿಯ ನಂತರ ರಂಗಾಸಕ್ತಿ ಬಿಡದೆ ಇವರನ್ನು ಕುಂದಾಪುರದ ರಂಗ ಅಧ್ಯಯನ ಕೇಂದ್ರದವರೆಗೂ ಕರೆದೊಯ್ದು ನಾಟಕ ಮಾಡಿಸಿದ್ದು, ವ್ಯಾಸಂಗ ಮುಗಿಸಿದ್ದು ವಿಚಿತ್ರವೇ ಸರಿ. ರಂಗ ಅಧ್ಯಯನ ಕೇಂದ್ರ ಕುಂದಾಪುರ ರಂಗ ಶಾಲೆ ನೀಡುವ ನಾಟಕ ಡಿಪ್ಲೋಮಾ ಪದವಿಗೆ ಹಂಪಿ ವಿಶ್ವವಿದ್ಯಾಲಯದ ಮಾನ್ಯತೆ ಇದೆ. ಇವರಿಗೆ ಆ ಪದವಿ ಇರುವುದರಿಂದ ಮುಂದಿನ ದಿನಗಳಲ್ಲಿ ರಂಗಭೂಮಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಛಲವಿದೆ. ಬಿ.ಎಡ್ ಪದವಿ ಹೊಂದಿದ ಮಹೇಶ ಮಾಡಗಿ ಶಿಕ್ಷಕ ವೃತ್ತಿ ರಂಗಭೂಮಿಗೆ ಹೇಳಿ ಮಾಡಿಸಿದ ವ್ಯಕ್ತಿತ್ವ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಾರತ ಜ್ಞಾನ ವಿಜ್ಞಾನ ಸಮಿತಿ, ರಂಗಾಯಣ–ಮೈಸೂರು ಸಮುದಾಯ ಗುಲಬರ್ಗಾ ಸನ್ಮಾನಿಸಿ ಗೌರವ ನೀಡಿದೆ.

1995ರಲ್ಲಿ ಸಮುದಾಯ ಯುವ ಕಲಾವಿದರಿಗಾಗಿ ರಂಗ ತರಬೇತಿ ನಡೆಸುವಾಗ ಸಾಮಾನ್ಯ ಕಲಾವಿದರಾಗಿ ಕಾರ್ಯಾ ಗಾರದಲ್ಲಿ ಭಾಗವಹಿಸಿದ ಮಹೇಶ ಅವರು ರಂಗ ಯಾತ್ರೆ ಇಂದಿಗೂ ಜೀವಂತವಾಗಿಟ್ಟಿದ್ದಾರೆ. 1995ರ ಬಾದಶಹ ಪುರಾಣ

(ರ: ರಾಹು, ನಿಃ ಶಂಕರಯ್ಯ ಘಂಟಿ), 1997ರಲ್ಲಿ ಸ್ಮಶಾನ ಕುರುಕ್ಷೇತ್ರ (ರ: ಕುವೆಂಪು ನಿಃ ಸಿ. ಬಸವಲಿಂಗಯ್ಯ), 2004ರಲ್ಲಿ ಶ್ರೀಕೃಷ್ಣ ಲೀಲಾಂತ್ಯ (ನಿಃ ಎಂ.ಎಸ್. ಸತ್ಯು) ಮುಂತಾದ ನಾಟಕಗಳಲ್ಲಿ ಮುಖ್ಯ ಪಾತ್ರ ವಹಿಸಿದ ಇವರು ಬೀದಿ ನಾಟಕದ ಅಪ್ಪಟ ಕಲಾವಿದ.

ಮಹೇಶ ಮಾಡಗಿಯವರಿಗೆ ಸಮಾಜ ಸುಧಾರಣೆ ಬಗ್ಗೆ ಅದಮ್ಯ ತುಡಿತ; ಆದ್ದರಿಂದಲೇ ಬೀದಿ ನಾಟಕಗಳ ಮೂಲಕ ಏನಾದರೂ ಪರಿಣಾಮ ಬೀರಬಹುದೆಂದು ಅವರು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ 'ಅಬ್ದುಲ್ ನಜೀರಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು 2000ರಲ್ಲಿ ನಡೆಸಿದ ಗ್ರಾಮೀಣ ಅಭಿವೃದ್ಧಿಯ-ಗ್ರಾಮ ಪಂಚಾಯತ ವ್ಯವಸ್ಥೆಯ ಬಗ್ಗೆ ನಡೆಸಿದ 'ಜನಾಧಿಕಾರ ಜನಾಂದೋಲನ'ದಲ್ಲಿ ತಿಂಗಳುಗಟ್ಟಲೆ ಜಾಥಾದಲ್ಲಿ ಭಾಗವಹಿಸಿ 'ಬೀದಿ ನಾಟಕ' 'ಬಾರಮ್ಮ ಭಾಗೀರತಿ' (ರ: ಕೆ.ವೈ. ನಾರಾಯಾಣ ಸ್ವಾಮಿ ನಿಃ ಸಿ. ಬಸವಲಿಂಗಯ್ಯ) 'ಪುಗಸಟ್ಟೆ ಪ್ರಸಂಗ', (ನಿ: ಜಯರಾಮ ತಾತಾಚಾರ) 'ಜಾತಿಮಾಡಬ್ಯಾಡಿ ಅಧಿಕಾರಿದೊಳಗ' ರ: ರಾಜಪ್ಪ ದಳವಾಯಿ ನಿಃ ಶಂಕರಯ್ಯ ಘಂಟಿ) 'ಅಣ್ಣಾ ಹಜಾರೆ' (ರ: ಕೋಟಿಗಾನ ಹಳ್ಳಿ ರಾಮಯ್ಯ ನಿಃ ಸಿ. ಬಸವಲಿಂಗಯ್ಯ) ಮುಂತಾದ ನಾಟಕವಲ್ಲದೆ ಕರ್ನಾಟಕ ಸರ್ಕಾರದ 'ಜಲ ನಿರ್ಮಲ ಯೋಜನೆ'ಯ ಜಾಥಾದಲ್ಲಿ (2002) 'ನೀರ ಶಕುನ (ರ: ಟಿ.ಎಸ್. ವಿವೇಕಾನಂದ ನಿಃ ಶಂಕರಯ್ಯ ಘಂಟಿ) 'ಚಂಬು ಪುರಾಣ' (ನಿಃ ವೈ.ಡಿ. ಬದಾಮಿ) ಎರಡಕ್ಕೊಗೂದಲ್ಲಿ (ರ: ರಾಜಪ್ಪ ದಳವಾಯಿ ನಿಃ ರಾಜು) ಮೈಮ (ನಿಃ ಅರುಣ ದಾವಣಗೆರೆ) ಗಂಗಿಗೋಳು (ನಿಃ ಸುನಿಲ ಹುಡಗಿ) ಮುಂತಾದ ಬೀದಿ ನಾಟಕಗಳನ್ನು ಗುಲಬರ್ಗಾದ ಎಲ್ಲಾ ತಾಲೂಕು ಪಂಚಾಯಿತ್ತಿಗಳಲ್ಲಿ ನೂರಾರು ಪ್ರಯೋಗ ಗಳನ್ನು ಕಾಳಜಿಯಿಂದ ಮಾಡಿ ಬೀದಿ ನಾಟಕ ಯಶಸ್ವಿಗೆ ಕಾರಣರಾಗಿದ್ದಾರೆ. ಇವರ ಕ್ರಿಯಾಶೀಲ ಚಟುವಟಿಕೆಯನ್ನು ಗುರುತಿಸಿ ಕರ್ನಾಟಕ ಘನ ಸರ್ಕಾರದ 'ಉದ್ಯೋಗ ಖಾತ್ರಿ ಯೋಜನೆಯ' ಜನಾಂದೋಲನದ ಜಾಥಾದಲ್ಲಿ ತಂಡದ ನಾಯಕರನ್ನಾಗಿ ಗುಲಬರ್ಗಾ ಜಿಲ್ಲೆಯಾದ್ಯಂತ 2008ರಲ್ಲಿ ನಾಲ್ಕು ಬೀದಿ ನಾಟಕ ತಂಡದ ಉಸ್ತುವಾರಿಯನ್ನೂ ಸಂಘಟನೆ ವಹಿಸಿದ್ದು ಇವರ ಸೃಜನಶೀಲ ಸ್ವಭಾವಕ್ಕೆ ಸಾಕ್ಷಿ, 'ಧರೆಗಿಳಿದ ಗಾಂಧಿ' (ನಿಃ ಶಂಕರಯ್ಯ ಘಂಟಿ) ಉದ್ಯೋಗ ಖಾತ್ರಿ ನಿರ್ದೇಶನ (ಸಂಪತ) ಮುಂತಾದ ನಾಟಕಗಳನ್ನು ನೂರಾರು ಪ್ರಯೋಗ ಮಾಡಿ ಯಶಸ್ವಿಗೊಳಿಸಿದ್ದಾರೆ.

ನಾಟಕ ಡಿಪ್ಲೋಮಾದ ವ್ಯಾಸಂಗದಲ್ಲಿ ವಿದ್ಯಾರ್ಥಿ ನಿರ್ದೇಶನದ ನಾಟಕ ಕುಲಂ ಬೆರಳಗೆ ಕೊರಳ್ (ಕುವೆಂಪು) ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ. 2010ರಲ್ಲಿ ರಂಗಾಯಣ ಧಾರವಾಡದ ಸಂಯುಕ್ತಾ ಶ್ರಯದಲ್ಲಿ ನಡೆದ ನವರಾತ್ರಿ ಉತ್ಸವದ ನಾಟಕ 'ಬೇರುಗಳು' ನಾಟಕದ (ರ: ಇಸ್ಮತ ಚುಗ್ತಾಯಿ ನಿರ್ದೆ ಶಂಕರಯ್ಯ ಘಂಟಿ) ಸಹಾಯಕ ನಿರ್ದೇಶಕರಾಗಿ ಯಶಸ್ವಿಗೊಳಿಸಿದ್ದು ಅವರ ನರ್ದೇಶನದ ತಂತ್ರಗಾರಿಕೆಯಲ್ಲೂ ಯಶಸ್ವಿ ಸಾಧಿಸಿದ್ದು ಇವರು ಸದಾ ಚಿಂತನಶೀಲ ವ್ಯಕ್ತಿತ್ವ ಇವರು ನಾಟಕ ನಿರ್ದೇಶಕರು, ಸಂಪನ್ಮೂಲ ವ್ಯಕ್ತಿಗಳು ಹೌದು.

(ಎಸ್‌ಆರ್‌ಜಿ)

ಮಾ

ಮಾಣಿಕ ನಗರದ ಸಂಗೀತಗಾರರು: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನಕಾಶೆಯಲ್ಲಿ ವಿಶೇಷ ಸ್ಥಾನ-ಮಾನ. ರಾಷ್ಟ್ರೀಯ-ಅಂತರಾಷ್ಟ್ರೀಯ ಖ್ಯಾತಿಯ ಗಾಯಕರು-ವಾದಕರು ಮಾಣಿಕ ನಗರದಲ್ಲಿ ಇರುವ ಮಾಣಿಕಪ್ರಭು ಸಂಸ್ಥಾನಕ್ಕೆ ಭೇಟಿ ನೀಡಿ ತಮ್ಮ ಸಂಗೀತ ಸುಧೆ ಹರಿಸಲು ತುದಿಗಾಲ ಮೇಲೆ ನಿಂತಿರುತ್ತಾರೆ. ಮಾಣಿಕನಗರವು ಸಂಗೀತಗಾರರ ಪ್ರತಿಭೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ವೇದಿಕೆ ಮಾತ್ರ ಆಗಿರದೆ ಅವರ ಸಂಗೀತಕ್ಕೆ ಪ್ರೇರಣೆ-ಸ್ಫೂರ್ತಿ ನೀಡುವ ತಾಣ ಆಗಿದೆ. ಇದೇ ಕಾರಣಕ್ಕಾಗಿ ಕಲಾವಿದರು ಆಮಂತ್ರಣದ 'ಅವಕಾಶ'ಕ್ಕಾಗಿ ಕಾಯುತ್ತಿದ್ದಾರೆ. ಪ್ರತಿ ವರ್ಷ ದತ್ತ ಜಯಂತಿ ಸಂದರ್ಭದಲ್ಲಿ ನಡೆಯುವ 'ದರ್ಬಾರ್'ನಲ್ಲಿ ಸಂಗೀತ ಪ್ರಸ್ತುತ ಪಡಿಸುತ್ತಾರೆ.

ಎಷ್ಟೇ ದೊಡ್ಡ ಗಾಯಕನಾದರೂ ಹಾಡಲು ಕೇವಲ ಕೆಲವೇ ನಿಮಿಷಗಳ ಅವಕಾಶ ಮಾತ್ರ. ಅದಕ್ಕಾಗಿಯೇ ಅದನ್ನು 'ಹಾಜರಿ' ಎಂದು ಕರೆಯುತ್ತಾರೆ. ಇಂತಹ ಹಾಜರಿ ಮಾತ್ರವಲ್ಲದೇ ಪ್ರತಿ ತಿಂಗಳಿಗೊಂದು ಮಾಸಿಕ ಸಂಗೀತ ಕಾರ್ಯಕ್ರಮವೂ ನಡೆಯುತ್ತದೆ. ವಿಶೇಷ ಸಂದರ್ಭ ಅಂದರೆ, ಶತಮಾನೋತ್ಸವ, ಉತ್ಸವಗಳಲ್ಲಿ ಹತ್ತಾರು ದಿನಗಳ ವಿಶೇಷ ಸಂಗೀತೋತ್ಸವ ಆಗ ಕೇಳುಗರಿಗೆ ರಸದೌತಣ ನೀಡುವಷ್ಟು ಸಮಯಾವಕಾಶ ಸಂಗೀತಗಾರರು ರಸಿಕರನ್ನು ಸಂಗೀತ ಸುಧೆಯಲ್ಲಿ ತೇಲಿಸುತ್ತಾರೆ.

ಮಾಣಿಕನಗರದ ಈ ಸಂಗೀತಯಾನಕ್ಕೆ ಒಂದುನೂರಾ ಅರವತ್ತೈದು ವರ್ಷಗಳ ಇತಿಹಾಸವಿದೆ. ಅಂದರೆ, ಅದು ಮಾಣಿಕನಗರದ ಇತಿಹಾಸದಷ್ಟೇ ಹಳೆಯದು. ದತ್ತಾತ್ರೇಯನ ನಾಲ್ಕನೇ 'ಅವತಾರ' ಎಂದು ನಂಬಲಾಗುವ ಮಾಣಿಕಪ್ರಭುಗಳು (1817-1865) 'ಸಕಲಮತ ಸಮನ್ವಯ' ಸಿದ್ಧಾಂತದ ಪ್ರತಿಪಾದಕರು ಶಿರಡಿಯ ಸಾಯಿಬಾಬಾ, ಅಕ್ಕಲಕೋಟೆಯ ಸ್ವಾಮಿ ಮಹಾರಾಜ ಮತ್ತು ಗೋಂದಾವಲೇಕರ್ ಮಹಾರಾಜರ ಸಮಕಾಲೀನರಾಗಿದ್ದ ಮಾಣಿಕಪ್ರಭುಗಳು ಅವರ ಜೊತೆ ತಾತ್ವಿಕ ಚರ್ಚೆ ನಡೆಸಿದ್ದರು. 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯರಾಗಿದ್ದ ಅವರನ್ನು 'ಭಕ್ತಕಾರ್ಯ ಕಲ್ಪದ್ರುಮ' ಎಂದು ಗುರುತಿಸಲಾಗುತ್ತಿತ್ತು. ಸರ್ವ ಧರ್ಮ ಸಮನ್ವಯದ ಪ್ರತಿಪಾದಕರಾಗಿದ್ದ ಅವರು 'ಸಕಲಮತಾಚಾರ್ಯ' ಎಂದೇ ಧಾರ್ಮಿಕ, ಸಾಂಸ್ಕೃತಿಕ ವಲಯದಲ್ಲಿ ಚಿರಪರಿಚಿತರಾಗಿದ್ದರು.

ಸಂಗೀತದ ಬಗ್ಗೆ ಅವರಿಗೆ ವಿಶೇಷ ಒಲವಿತ್ತು. ಮರಾಠಿ, ಹಿಂದಿ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಭಜನೆ, ಕೀರ್ತನೆ

ಗಳನ್ನು ರಚಿಸಿದ್ದಾರೆ. ಖ್ಯಾತ ಸಂಗೀತಗಾರರಾದ ಬಡೇ ಮಹ್ಮದ್‌ಖಾನ್ ಮತ್ತು ತರ್ರಾ ಹುಸೇನ್‌ಖಾನ್ ಸಾಹೇಬರು ಮಾಣಿಕಪ್ರಭುಗಳ ಸಮ್ಮುಖದಲ್ಲಿ ಗಾಯನ ಪ್ರಸ್ತುತ ಪಡಿಸಿದ್ದರು. 1845ರಲ್ಲಿ ಮಾಣಿಕನಗರ ಸಂಸ್ಥಾನ ಆರಂಭಿಸಿದಾಗಿನಿಂದ ಅವಿರತವಾಗಿ ನಡೆಯುತ್ತ ಬಂದಿರುವ 'ದರ್ಬಾರ್'ನಲ್ಲಿ ಸಂಗೀತ ಪ್ರಸ್ತುತ ಪಡಿಸುವುದು ಕಲಾವಿದರಿಗೆ ಪ್ರತಿಷ್ಠೆಯ ಸಂಗತಿ. ಸಂಗೀತಗಾರರ 'ಮೆಕ್ಕಾ' ಎಂದೇ ಗುರುತಿಸಲಾಗುವ ಮಾಣಿಕ ನಗರದ 'ಎಷ್ಟೇ ದೊಡ್ಡ ಕಲಾವಿದರಾಗಿದ್ದರೂ ಪ್ರಭು ಸಮಾಧಿಯ ಮುಂಭಾಗದಲ್ಲಿ ಗಾಯನ ಪ್ರಸ್ತುತ ಪಡಿಸದಿದ್ದರೆ ಸಾಧನೆಯ ಫಲ ದೊರೆತ ಅನುಭವ ಉಂಟಾಗುವುದಿಲ್ಲ' ಎಂದು ಖ್ಯಾತ ಹಿಂದೂಸ್ತಾನಿ ಗಾಯಕಿ ದಿ. ಗಂಗೂಬಾಯಿ ಹಾನಗಲ್ ಅಭಿಪ್ರಾಯಪಟ್ಟಿದ್ದರು.


ಮಾಣಿಕನಗರದಲ್ಲಿ ಸಂಗೀತ ಪರಂಪರೆ ದಟ್ಟವಾಗಿ ಬೆಳೆಯುವುದಕ್ಕೆ ಕಾರಣರಾದರು ಸಂಸ್ಥಾನದ ಮೂರನೇ ಪೀಠಾಧಿಪತಿಗಳಾಗಿದ್ದ ಮಾರ್ತಾಂಡ ಮಾಣಿಕ ಪ್ರಭುಗಳು (1861–1936). ತತ್ವಸಿದ್ಧಾಂತ ಪ್ರತಿಪಾದನೆಯಲ್ಲಿ ಸಿದ್ಧಹಸ್ತರಾಗಿದ್ದ ಅವರು ಶಾಸ್ತ್ರೀಯ ಸಂಗೀತದಲ್ಲೂ ಅಪಾರ ಪಾಂಡಿತ್ಯ ಉಳ್ಳವರಾಗಿದ್ದರು. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ 'ಧ್ಯಾನ ಮಾರ್ತಾಂಡ' ಮತ್ತು ಶಾಸ್ತ್ರೀಯ ಸಂಗೀತ ಪದ್ಧತಿಯ ರಾಗಗಳನ್ನು ಕುರಿತ ವಿಶ್ಲೇಷಣೆ ಇರುವ 'ಗಾನ ಮಾರ್ತಾಂಡ' ಕೃತಿಗಳನ್ನು ಅವರು ರಚಿಸಿದ್ದಾರೆ. ಮಾಣಿಕನಗರವು ಭೌತಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ಮಾರ್ತಾಂಡ ಮಾಣಿಕಪ್ರಭುಗಳ 'ಧ್ಯಾನ ಮಾರ್ತಾಂಡ' ಗ್ರಂಥವನ್ನು ಪರಿಶೀಲಿಸಿದ್ದ ಕಾಶಿಯ ಪಂಡಿತರು ಪೂಜ್ಯರಿಗೆ 'ಅಭಿನವ ಶಂಕರಾಚಾರ್ಯ' ಬಿರುದು ನೀಡಿದ್ದರು. 'ಗುರು ಸಂಪ್ರದಾಯ', 'ಮಹಾಮೌನ ಶತಕ', 'ಸಕಲಮತಾಚಾರ್ಯ ಶ್ರೀ ಮಾಣಿಕಪ್ರಭು' ಮಾಸಿಕ ಪತ್ರಿಕೆಯನ್ನು ಆರಂಭಿಸಿದ್ದರು. ಮಾರ್ತಾಂಡ ಮಾಣಿಕಪ್ರಭುಗಳು ಕೇವಲ ಆಧ್ಯಾತ್ಮ ಮತ್ತು ತಾತ್ವಿಕ ಸಂಗತಿಗಳ ಪ್ರತಿಪಾದಕರಾಗಿರದೆ ನಿಜವಾದ ಅರ್ಥದಲ್ಲಿ 'ಸಾಧಕ'ರಾಗಿದ್ದರು. ಅವರು ಮಾಣಿಕನಗರದಲ್ಲಿ ಧಾರ್ಮಿಕ, ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿರುವ ದಿನಗಳಲ್ಲಿಯೇ ಭಾರತೀಯ ಹಿಂದೂಸ್ತಾನಿ ಸಂಗೀತವು ಹೊರಳು ದಾರಿಯಲ್ಲಿ ಬಂದು ನಿಂತಿತ್ತು.

ಹಿಂದೂಸ್ತಾನಿ ರಾಗ ಪದ್ಧತಿ ಕುರಿತು ವಿಶ್ಲೇಷಣೆ ನಡೆಸಿದ ವಿಷ್ಣುನಾರಾಯಣ ಭಾತಖಂಡೆ ಅವರು ಸಂಗೀತವನ್ನು ಅರಮನೆಯ ಹಂಗಿನಿಂದ ಹೊರತಂದು ಸಾಮಾನ್ಯರಿಗೆ ಅದರಲ್ಲೂ ವಿಶೇಷವಾಗಿ ಮಧ್ಯಮ ವರ್ಗದವರಿಗೆ ತಲುಪಿಸುವ ಪ್ರಯತ್ನ ಆರಂಭಿಸಿದ್ದರು. ಅದಕ್ಕೆ ಪೂರಕವಾಗಿ ವಿಷ್ಣು ದಿಗಂಬರ್ ಪಲೂಸ್ಕರ್ ಅವರು ಗುರು–ಶಿಷ್ಯ ಪರಂಪರೆ ಕಲಿಕೆಯಿಂದ ಉಂಟಾಗಿದ್ದ 'ಘರಾಣೆ'ಗಳ 'ಮಿತಿ' ಮೀರುವುದಕ್ಕಾಗಿ ಲಾಹೋರ್‌ನಲ್ಲಿ ಭಾರತದ ಮೊದಲ ಸಂಗೀತ ವಿದ್ಯಾಲಯ ಸ್ಥಾಪಿಸಿದರು. ಗುರುವಿನ ಮನಸ್ಸು–ಇಚ್ಛೆಗೆ ಅನುಗುಣವಾಗಿ ಮಾತ್ರ ಕಲಿಯುವಿಕೆ ಸಾಧ್ಯವಿದ್ದ ಸಂಗೀತವನ್ನು ಸಾರ್ವತ್ರಿಕಗೊಳಿಸುವ ಉದ್ದೇಶದಿಂದ ಆರಂಭವಾದ 'ಅಖಿಲ ಭಾರತೀಯ ಗಂಧರ್ವ ವಿದ್ಯಾಲಯ'ದ ಮತ್ತೊಂದು ಶಾಖೆ (1919) ಮುಂಬೈ ನಲ್ಲಿ ಆರಂಭವಾಯಿತು. ಆಗ ಪಲೂಸ್ಕರ್ ಅವರ ಮನವಿಯ ಮೇರೆಗೆ ಮುಂಬೈಗೆ ಭೇಟಿ ನೀಡಿದ ಮಾರ್ತಾಂಡ ಮಾಣಿಕ ಪ್ರಭುಗಳು ಕೆಲಕಾಲ ಮುಂಬೈ ವಿದ್ಯಾಲಯದ ಆವರಣದಲ್ಲಿ ಉಳಿದಿದ್ದರು.

ನಂತರದ ದಿನಗಳಲ್ಲಿ ಕಿರಾಣಾ ಘರಾಣೆಯ ಮೂಲ ಪುರುಷ ಉಸ್ತಾದ್ ಅಬ್ದುಲ್ ಕರೀಮ್‌ಖಾನ್, ಪಂಡಿತ್ ಭಾಸ್ಕರ್‌ಬುವಾ ಬಕಲೆ, ಪಂಡಿತ್ ಬಾಲಕೃಷ್ಣ ಬುವಾ ಇಚಲಕರಂಜಿಕರ್, ಉಸ್ತಾದ್ ರಹಮತ್‌ಖಾನ್, ಗೋಹರ್‌ಜಾನ್ ಮತ್ತು ಪಂಡಿತ್ ವಿನಾಯಕ ಬುವಾ ಪಟವರ್ಧನ್ ಸೇರಿದಂತೆ ಹಲವಾರು ಹಿರಿಯ ಸಂಗೀತಗಾರರು ಮಾಣಿಕನಗರಕ್ಕೆ ಭೇಟಿ ನೀಡಿ, ಉಳಿದು ಸಂಗೀತ ಸೇವೆ ಸಲ್ಲಿಸಿದರು. ಸಂಗೀತ ಪ್ರಸ್ತುತ ಪಡಿಸಿದ ಪ್ರಮುಖರ ಪೈಕಿ ಹೀರಾಬಾಯಿ ಬಡೋದೆಕರ್, ಪಂಡಿತ್ ಮಲ್ಲಿಕಾರ್ಜುನ ಮನ್ಸೂರ, ರಾಜನ್–ಸಾಜನ್ ಮಿಶ್ರಾ, ಅಶ್ವಿನಿ ಭಿಡೆ ದೇಶಪಾಂಡೆ, ಉಸ್ತಾದ್ ಅಲ್ಲಾ ರಖಾ, ಉಸ್ತಾದ್ ಜಾಕೀರ್ ಹುಸೇನ್, ಪಂ. ಹರಿಪ್ರಸಾದ್ ಚೌರಾಸಿಯಾ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. 165 ವರ್ಷಗಳ ಹಿಂದೆ ಆರಂಭವಾದ ಹಾಡಿನ ಜಾಡು ನಂತರದ ದಿನಗಳಲ್ಲಿ ಬೆಳೆಯುತ್ತ ಹೋಯಿತು. ಯುವ ಸಂಗೀತಗಾರರಿಗೆ ಅವಕಾಶ ನೀಡುವುದರ ಜೊತೆಗೆ ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ಕಾರ್ಯಾಗಾರಗಳನ್ನು ಏರ್ಪಡಿಸುತ್ತ ಬಂದಿದೆ. ಹಲವಾರು ಪ್ರಮುಖ ಗಾಯಕರು ತಮಗೆ ಸಮಯಾವಕಾಶ ಆದಾಗಲೆಲ್ಲ (ಪೂರ್ವ ಸೂಚನೆಯಿಲ್ಲದೇ) ಮಾಣಿಕನಗರಕ್ಕೆ ಭೇಟಿ ನೀಡಿ ಸಂಗೀತ ಸೇವೆ ಸಲ್ಲಿಸುತ್ತಾರೆ. ಸಂಗೀತದ ಈ ಸಲಿಲ ಧಾರೆಯ ಸವಿ ಅವಿರತ, ಕಾಲಾತೀತ. (ಋಪಿ)

ಮಾಣಿಕನಗರ ಸಂಸ್ಥಾನ: ಇದೊಂದು ಧಾರ್ಮಿಕ–ಆಧ್ಯಾತೀಕ ಹಿನ್ನೆಲೆಯಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥಾನ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿದೆ. ಹುಮನಾಬಾದ್‌ನಿಂದ 4 ಕಿ.ಮೀ. ಅಂತರದಲ್ಲಿದೆ. ಧರ್ಮ–ಆಧ್ಯಾತ್ಮದೊಂದಿಗೆ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ವಿಕಾಸಕ್ಕೂ ಪ್ರೇರಣಾ ಶಕ್ತಿಯಾಗಿದ್ದ ತಾಣ ಇದು. ಶ್ರೀ ಮಾಣಿಕ ಪ್ರಭುಗಳು ಈ ಸಂಸ್ಥಾನದ ರೂವಾರಿಗಳು. ಬೀದರ ಜಿಲ್ಲೆ ಹುಮನಾಬಾದ ತಾಲೂಕಿನ ಲಾಡವಂತಿ ಗ್ರಾಮದಲ್ಲಿ 22–12–1819ರಂದು ಬಯಮ್ಮ ಹಾಗೂ ಮನೋಹರ ನಾಯಕ ದಂಪತಿಗಳಿಗೆ ಜನಿಸಿದ ಇವರು ದತ್ತಾತ್ರೇಯನ ಪ್ರತಿರೂಪವೆಂದೇ ಹೇಳಲಾಗುತ್ತದೆ. ಶ್ರೀ ದತ್ತಪ್ರಭುವೇ ಜಗದೋದ್ಧಾರಕ್ಕಾಗಿ 'ಮಾಣಿಕ ಪ್ರಭು' ಹೆಸರಿನಲ್ಲಿ ಅವತಾರ ತಾಳಿರುವನು ಎಂಬುದು ಈ ಭಾಗದ ಜನರಲ್ಲಿ ನಂಬಿಕೆಯಿದೆ.

ಮಾಣಿಕನಗರ ಸಂಸ್ಥಾನದಲ್ಲಿ ಮಾಣಿಕ ಪ್ರಭುಗಳು ದರ್ಬಾರನ್ನು ಏರ್ಪಡಿಸುತ್ತಿದ್ದರು. ಈ ದರ್ಬಾರು ಐದು ಪ್ರಮುಖ ಅಂತರಂಗದ ಮೂರ್ತಿಗಳಿಂದ ಕೂಡಿರುತ್ತಿತ್ತು. ಪ್ರಭುಗಳ ದರ್ಬಾರಿನಲ್ಲಿ ಆಧ್ಯಾತ್ಮಿಕ ವಿಷಯದಲ್ಲಿ ಚರ್ಚೆ ನಡೆಸಿ ಮೋಕ್ಷ



ಮಾಣಿಕನಗರ ಸಂಸ್ಥಾನ

ಸಂಪಾದನೆಯ ದಾರಿ ಕಂಡುಕೊಳ್ಳುತ್ತಿದ್ದರು. ಈ ದರ್ಬಾರಿನಲ್ಲಿ ನೃತ್ಯ, ಸಂಗೀತ ಮತ್ತು ಚಿತ್ರಕಲೆಯಂತಹ ಲಲಿತಕಲೆಗಳ ಪ್ರದರ್ಶನ ಕೂಡ ನಡೆಯುತ್ತಿತ್ತು. ಈ ಪ್ರದರ್ಶನಕ್ಕೆಂದೇ ದೂರ ದೂರದಿಂದ ಕಲಾವಿದರು ಬರುತ್ತಿದ್ದರು.

ಮಾಣಿಕ ಪ್ರಭುಗಳ ಕೀರ್ತಿ ಕರ್ನಾಟಕವಲ್ಲದೇ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲೂ ಹರಡಿತು. ಈ ಎರಡೂ ರಾಜ್ಯಗಳ ಸಣ್ಣಪುಟ್ಟ ಸಂಸ್ಥಾನಗಳಲ್ಲಿ (ರಾಜ್ಯಗಳ ಏಕೀಕರಣಕ್ಕೆ ಮುಂಚೆ) ನೆಲೆಸಿದ್ದ ಕಲಾವಿದರು ಮಾಣಿಕ ಪ್ರಭುಗಳ ದರ್ಬಾರಿನಲ್ಲಿ ನಡೆಯುವ ಕಲಾಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ಜತ್, ಜಮಖಂಡಿ, ಮುಧೋಳ, ಔಂದ್, ಸುರಪುರ, ಹೈದರಾಬಾದ ಸಂಸ್ಥಾನಗಳಲ್ಲಿನ ಕಲಾವಿದರು ಮಾಣಿಕ ಪ್ರಭುಗಳ ದರ್ಬಾರಿನಲ್ಲಿ ಭಾಗವಹಿಸಿದ ಸಂಗತಿಯನ್ನು ದಾಖಲೆಗಳು ಹೇಳುತ್ತವೆ.

1850ರ ಸುಮಾರಿಗೆ 'ಬಜಾರ ಪೇಂಟಿಂಗ್ಸ್ ಇಲ್ಲವೆ ಜನಪ್ರಿಯ ಕಲೆ' ಎನ್ನುವ ಸಂಪ್ರದಾಯ ರೂಢಿಯಲ್ಲಿತ್ತು. ವಿಶೇಷವಾಗಿ ಈ ಹಂತದ ಚಿತ್ರ ಪ್ರಕಾರಗಳು ವ್ಯಾವಹಾರಿಕ ನೆಲೆಯಲ್ಲಿ ಕಾಣಿಸಿಕೊಂಡವು. ದೇವಾಲಯ ಇಲ್ಲವೆ ಮಠಗಳ ಆವರಣದಲ್ಲಿ ಚಿತ್ರ ರಚಿಸಿಕೊಡುವಂಥ ಪದ್ಧತಿ ಒಂದು ಬಗೆಯಾದರೆ, ಕಾರ್ಖಾನೆ ಇಲ್ಲವೆ ಕಲಾವಿದರ ಸಮೂಹ ಕಟ್ಟಿಕೊಂಡು ಚಿತ್ರ ರಚನೆ ಮಾಡುವುದರ ಮೂಲಕ ಜೀವನ ನಡೆಸುವ ಪದ್ಧತಿ ಇನ್ನೊಂದು ಬಗೆಯದ್ದಾಗಿದೆ. ಈ ಎರಡೂ ಸಂದರ್ಭಗಳು ಬಜಾರ ಪೇಂಟಿಂಗ್ಸ್ ಪರಿಧಿಯೊಳಗೆ ಬರುವಂಥವು. ದೇವಾಲಯ ಇಲ್ಲವೆ ಮಠದ ಆವರಣದೊಳಗೆ ಸಣ್ಣ ಅಂಗಡಿಯನ್ನು ಮಾಡಿಕೊಂಡು ಬಂದಂಥ ಭಕ್ತಾದಿಗಳಿಗೆ ಅವರವರ ಯೋಗ್ಯತೆಯ ಮೇರೆಗೆ ಚಿತ್ರ ರಚಿಸಿಕೊಡುವಂಥ ವ್ಯವಸ್ಥೆ ಬಹಳ ಹಿಂದಿನಿಂದಲೇ ಪ್ರಚಲಿತದಲ್ಲಿತ್ತು. ಇಂಥದೇ ವ್ಯವಸ್ಥೆ ಮಾಣಿಕನಗರ ಸಂಸ್ಥಾನದಲ್ಲೂ ಕಾಣಿಸಿಕೊಂಡಿತ್ತು. ಮಾಣಿಕನಗರ ಸಂಸ್ಥಾನದ ಆವರಣದಲ್ಲಿ ಕಲಾವಿದರು ಅಂಗಡಿಗಳನ್ನು ಇಟ್ಟುಕೊಂಡು ಚಿತ್ರರಚನೆ ಮಾಡಿರುವ ಉದಾಹರಣೆಗಳಿವೆ.

ಗರುಡಾದ್ರಿ ವಂಶಸ್ಥರಾದ ಕಮಲಯ್ಯ ಮತ್ತು ಅಪ್ಪಯ್ಯ ಅವರು ಮಾಣಿಕನಗರ ಸಂಸ್ಥಾನದಲ್ಲಿ ಇದ್ದುಕೊಂಡು ಚಿತ್ರ ರಚನೆಯಲ್ಲಿ ತೊಡಗಿದ್ದುಂಟು. ಒಂದೊಮ್ಮೆ ಅಪ್ಪಯ್ಯನು ಮಠದಲ್ಲೇ ಇದ್ದುಕೊಂಡು ತನ್ನನ್ನು ಕೃತಿರಚನೆಯಲ್ಲಿ ತೊಡಗಿಸಿಕೊಂಡಿದ್ದರೆ, ಕಮಲಯ್ಯ ಆಗಾಗ ಹೋಗಿ-ಬಂದೂ ಮಾಡುತ್ತಿದ್ದನೆಂದು ಗರುಡಾದ್ರಿ ವಂಶಸ್ಥರಿಂದ ತಿಳಿದುಬಂದಿದೆ.

ಮುಂದೊಮ್ಮೆ ಅಪ್ಪಯ್ಯನೂ ಸಹ ಹೈದರಾಬಾದ್‌ಗೆ ಹೋಗಿ ಅಲ್ಲಿನ ನಿಜಾಮ್ ರಾಜ್ಯದಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸಿರುವ ಮಾಹಿತಿಯೂ ನಮಗೆ ಈ ವಂಶಸ್ಥರಿಂದ ತಿಳಿದುಬರುತ್ತದೆ. ಕರ್ನಾಟಕದ ಬಹುಸಂಖ್ಯಾತ ಭಕ್ತರು ಮಾಣಿಕ ಪ್ರಭುಗಳನ್ನು ಆರಾಧಿಸುತ್ತ ಬಂದಿರುವುದನ್ನು ನಾವು ನೋಡುತ್ತೇವೆ. ಬೀದರ, ಗುಲಬರ್ಗಾ, ರಾಯಚೂರು, ಯಾದಗಿರಿ, ಕೊಪ್ಪಳ, ಬಿಜಾಪೂರ, ಧಾರವಾಡ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಮಾಣಿಕಪ್ರಭುಗಳ ಅಸಂಖ್ಯಾತ ಭಕ್ತರಿದ್ದಾರೆ. ಈ ಭಕ್ತಾದಿಗಳ ಮನೆಗಳಲ್ಲಿ ಮಾಣಿಕ ಪ್ರಭುಗಳು ಇಲ್ಲವೆ ಅವರ ನಂತರದ ಮಾರ್ತಾಂಡ ಪ್ರಭುಗಳು ಮತ್ತು ಮನೋಹರ ಪ್ರಭುಗಳ ವರ್ಣ ಚಿತ್ರಗಳನ್ನು ನೋಡಬಹುದಾಗಿದೆ.

ಮಾಣಿಕ ಪ್ರಭುಗಳನ್ನು ಸರಿಸುಮಾರು 50ರಿಂದ 60ರ ಮಧ್ಯವಯಸ್ಕರಂತೆ ತೋರಿಸಿದ್ದು, ಹೆಚ್ಚಿನ ಚಿತ್ರಗಳು ಪಾರ್ಶ್ವ ನೋಟದಲ್ಲಿವೆ. ಈ ಎಲ್ಲ ಚಿತ್ರಗಳು ಚಿಕಣಿ ಚಿತ್ರಗಳ ವಿಸ್ತೃತ ರೂಪವನ್ನು ಹೊಂದಿವೆ. ಹಿಂದೊಮ್ಮೆ ಹೈದರಾಬಾದ-ಕರ್ನಾಟಕ ಭಾಗದಲ್ಲಿ 'ಛಾಯಾಚಿತ್ರ ಕಲೆ' ಪ್ರಸಿದ್ಧಿ ಪಡೆಯುತ್ತಿದ್ದಂತೆಯೇ ಕಿರುರೂಪ ಚಿತ್ರಗಳಲ್ಲಿ ಈ ಕಲೆ ಕಾಣಿಸಿಕೊಂಡಿತು. ಮಾಣಿಕನಗರ ಸಂಸ್ಥಾನಿಕರಾದ ಮಾರ್ತಾಂಡ ಪ್ರಭುಗಳ ಕೆಲವೊಂದು ಚಿತ್ರಗಳಲ್ಲಿ ಮುಖದ ಭಾಗಕ್ಕೆ ಛಾಯಾ ಚಿತ್ರವನ್ನು ಅಂಟಿಸಿ ಚಿತ್ರವನ್ನು ಪೂರ್ಣಗೊಳಿಸಿದ್ದು ಕಂಡು



ಮಾಣಿಕನಗರ ಸಂಸ್ಥಾನದ ಒಳಾಂಗಣ

ಬರುತ್ತದೆ. ಈ ಚಿತ್ರಗಳನ್ನು ಬರೆದವರು ಸುರಪುರ ಆಸ್ಥಾನ ಕಲಾವಿದ ವಂಶಸ್ಥರಾದ ಗರುಡಾದ್ರಿಯವರು. ಬಹುಶಃ ಸಾಂಪ್ರದಾಯಿಕ ನೆಲೆಯ ಕಿರುರೂಪ ಚಿತ್ರಗಳಲ್ಲಿ ಛಾಯಾಚಿತ್ರವನ್ನು ಬಳಸಿ ಚಿತ್ರರಚನೆ ಮಾಡುವ ವಿಧಾನ ಇಲ್ಲಿಂದಲೇ ಆರಂಭವಾಯಿತು ಎನ್ನಬಹುದು. ಮಾರ್ತಾಂಡ ಪ್ರಭುಗಳನ್ನು ಎದುರುಮುಖವಾಗಿ ಚಿತ್ರಿಸಿರುವುದು ಬಿಟ್ಟರೆ, ಉಳಿದೆಲ್ಲ ಚಿತ್ರಗಳು ಪಾರ್ಶ್ವನೋಟದಲ್ಲಿ ರಚನೆಗೊಂಡಿವೆ.

ಬೇರೆ ಬೇರೆ ಸಂಸ್ಥಾನಗಳಲ್ಲಿನ ಕಲಾವಿದರಿಂದ ಚಿತ್ರಿಸಲ್ಪಟ್ಟ ಚಿತ್ರಗಳಲ್ಲಿ ಚಿತ್ರಿಸಿದ ಕಲಾವಿದರ ಹೆಸರುಗಳು ಕಂಡು ಬರುವುದಿಲ್ಲ. ಬದಲಾಗಿ ಆಯಾ ರಾಜ್ಯದ ಕಲಾಶೈಲಿ ಇಲ್ಲವೆ ಲಕ್ಷಣಗಳನ್ನು ಚಿತ್ರಗಳ ಹಿನ್ನೆಲೆ ಅಥವಾ ಮುನ್ನೆಲೆಗಳಲ್ಲಿ ತೋರಿಸಿದೆ. ಹೀಗಿದ್ದರೂ ಒಂದೆರಡು ಚಿತ್ರಗಳಲ್ಲಿ ಗರುಡಾದ್ರಿ ಕಮಲಯ್ಯನ ಹೆಸರುಗಳು ಕಾಣಸಿಗುತ್ತವೆ. ಕಮಲಯ್ಯನಿಂದ ಚಿತ್ರಿಸಲ್ಪಟ್ಟ ಚಿತ್ರವೊಂದರ ವಿವರಣೆ ಇಲ್ಲಿ ನೀಡಲಾಗುತ್ತಿದೆ.

ಮಾಣಿಕ ಪ್ರಭುಗಳು ಈ ಚಿತ್ರದಲ್ಲಿ ಮೊಟ್ಟೆಯಾಕಾರದ ಒಂದು ವೃತ್ತವನ್ನು ನಿರ್ಮಿಸಿಕೊಂಡು ಅದರೊಳಗೆ ಪ್ರಭುಗಳನ್ನು ಚಿತ್ರಿಸಿದೆ. ಪಾರ್ಶ್ವನೋಟದಲ್ಲಿ ಕುಳಿತಿರುವ ಪ್ರಭುಗಳು ಹಳದಿ ಮಿಶ್ರಿತ ಹಸಿರುವರ್ಣದ ನಿಲುವಂಗಿಯನ್ನು ಧರಿಸಿದ್ದಾರೆ. ಇದರಲ್ಲಿ ದಟ್ಟಹಸಿರು ವರ್ಣದಿಂದ ಗೆರೆಗಳನ್ನು ಎಳೆದು ನೆರಿಗೆಗಳೆಂಬಂತೆ ತೋರಿಸಲಾಗಿದೆ. ಪ್ರಭುಗಳು ಧರಿಸಿದ ಪಂಚೆಯು ಬಿಳಿ ವರ್ಣದಲ್ಲಿದ್ದು, ಮೈಮೇಲೆ ಬಂಗಾರ ವರ್ಣದ ಆಭರಣಗಳನ್ನು ತೋರಿಸಿದೆ. ಹಾಗೆಯೇ ಪ್ರಭುಗಳ ಕೊರಳಲ್ಲಿ ಹೂವಿನ ಹಾರವೊಂದನ್ನೂ ಚಿತ್ರಿಸಿದೆ. ಪ್ರಭುಗಳು ಆನಿಸಿ ಕುಳಿತಿರುವಂತೆ ಹಿಂಭಾಗದಲ್ಲಿ ಕೆಂಪುವರ್ಣದ ತಕ್ಕೆಯೊಂದನ್ನೂ ಚಿತ್ರಿಸಿದೆ. ಮಾಣಿಕ ಪ್ರಭುಗಳು ಕುಳಿತಿರುವ ಕಾರ್ಪೆಟ್ಟು ಬಿಳಿ, ಹಸಿರು ಹಾಗೂ ಹಳದಿವರ್ಣದ ವಿನ್ಯಾಸಗಳಿಂದ ಕೂಡಿದೆ. ಉಳಿದಂತೆ ಹಿನ್ನೆಲೆಯು ತೆಳುನೀಲಿ ವರ್ಣದಲ್ಲಿದೆ. ಹಾಗೆಯೇ ಬಲಭಾಗದಲ್ಲಿ ಸುಂದರ ಹಸಿರು ವರ್ಣದ ಪರದೆಯೊಂದನ್ನು ತೋರಿಸಲಾಗಿದೆ. ಮೊಟ್ಟೆಯಾಕಾರದಲ್ಲಿ ನಿರ್ಮಿಸಿದ ವೃತ್ತಾಕಾರದ ಹೊರಭಾಗದಲ್ಲಿ ಬಿಳಿ ವರ್ಣದಿಂದ ದಪ್ಪವಾದ ಪಟ್ಟಿಯೊಂದನ್ನು ಎಳೆಯಲಾಗಿದೆ. ಚಿತ್ರದ ನಾಲ್ಕೂ ಮೂಲೆಗಳಲ್ಲಿ ವಿವಿಧ ವರ್ಣಗಳಿಂದ ಹೂಬಳ್ಳಿಯ ವಿನ್ಯಾಸಗಳನ್ನು ಬಿಡಿಸಲಾಗಿದೆ. ಮಾಣಿಕ ಪ್ರಭುವಿನ ಹಲವು ಚಿತ್ರಗಳಲ್ಲಿ ಇದೊಂದು ವಿಶಿಷ್ಟವೆನಿಸುತ್ತದೆ. ಕಾರಣ, ಈ ಚಿತ್ರದಲ್ಲಿ ಕಮಲಯ್ಯನು (ಜಹಾಗೀರದಾರ ಕಮಲವರ್ಮಾ ಗರುಡಾದ್ರಿ) ತನ್ನ ಹೆಸರನ್ನು ಬರೆದಿರುವನು.

(ಎಂಸಿಬಿ)

ಮಾಣಿಕರಾವ ರಾಯಚೂರಕರ್: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಅಪಾರ ಪಾಂಡಿತ್ಯ ಸಾಧಿಸಿ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿರುವವರು. ರಾಯಚೂರಿನ ಮಾಣಿಕ್ಯ ಎಂಬಂತೆ ಜೀವನ ಸಾಗಿಸಿದ ಮೇರು ವ್ಯಕ್ತಿ. ಇವರು ತಂಬೂರಿ ಮೀಟಿದರೆ ಸಾಕು. ಸಂಗೀತ ಶಾರದೆ ಇವರ ನಾಲಿಗೆಯ ಮೇಲೆ ನಲಿಯುತ್ತಾಳೆ. ಅಂಥ ಕಂಠ, ವಿದ್ವತ್ತು ಇವರದು. ಹಾಡಲು ಕುಳಿತರೆ ಶ್ರೋತೃಗಳು ಮಿಸುಕಾಡದೆ ಕುಳಿತುಕೊಳ್ಳುವಂಥ ಕಂಠಸಿರಿ. ಆದ್ದರಿಂದಲೇ ಇವರು ಹಾಡುತ್ತಿದ್ದರೆ, ಸಂಗೀತ ಸರಸ್ವತಿಯೇ ಇವರ ಕಂಠದಿಂದ ಧ್ವನಿಸುತ್ತಾಳೆ ಎಂದು ಭಾಸವಾಗುತ್ತಿತ್ತು ಎನ್ನುತ್ತಾರೆ ಇವರ ವಾರಿಗೆಯ ಕಲಾವಿದರು. ಹಿಂದುಸ್ತಾನಿ ಸಂಗೀತದಲ್ಲಿ ರಾಯಚೂರಕರ್ ಸಾಧಿಸಿರುವ ಸಿದ್ಧಿ, ಅವರು ಪಡೆದಿರುವ ಪ್ರಸಿದ್ಧಿಗಿಂತ ಹೆಚ್ಚಿನದು.



ಎಲೆಮರೆಯ ಕಾಯಿಯಂತೆ ಪ್ರಚಾರದಿಂದ ಗಾವುದ ದೂರವಿದ್ದು, ಸಾಧನೆ ಎಂಬ ಮೂಲ ಮಂತ್ರದಿಂದಲೇ ಇಂದು ದೇಶ–ವಿದೇಶಗಳಲ್ಲಿ ಪ್ರಸಿದ್ಧರಾಗಿದ್ದರು. ಸಂಗೀತ ಸಾಧನೆಯೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲೂ ತಮ್ಮನ್ನು ತೊಡಗಿಸಿಕೊಂಡು ಸಂಗೀತಾರಾಧನೆಯ ಜೊತೆಗೆ ರಾಷ್ಟ್ರ ಭಕ್ತಿಯನ್ನು ಮೇಳೈಸಿಕೊಂಡ ಅಪರೂಪದ ವ್ಯಕ್ತಿತ್ವ ಅವರದು.

ಹಿಂದುಳಿದ ರಾಯಚೂರಿನ ಬಡ ಕುಟುಂಬದಲ್ಲಿ 1921ರ ಡಿಸೆಂಬರ್ 12ರಂದು ಜನಿಸಿದರು. ಜಿಂದಮ್ಮ ತಾಯಿ. ತಂದೆ ಯಲ್ಲಪ್ಪ. ಆರಂಭಿಕ ಸಂಗೀತಾಭ್ಯಾಸ ಇವರ ಸೋದರಮಾವ ಪಂಡಿತ ಜೆ. ನಾಗಶಾಸ್ತ್ರೀ ಅವರಲ್ಲಾಯಿತು. ಅನುವಂಶಿಕ ಪ್ರಭಾವದಿಂದ ವಿದ್ಯಾರ್ಥಿ ದೆಸೆಯಲ್ಲಿಯೇ ಉತ್ತಮ ಸಾಧನೆ ಮಾಡಿದ ಅವರು, ಮುಂದೆ ಉನ್ನತ ವ್ಯಾಸಂಗಕ್ಕಾಗಿ ಆಯ್ದುಕೊಂಡಿದ್ದು ಮಹಾರಾಷ್ಟ್ರದ ಪುಣೆಯಲ್ಲಿನ ಗಂಧರ್ವ ಮಹಾವಿದ್ಯಾಲಯ. ಪಂಡಿತ್ ಜಗನ್ನಾಥ ಬುವಾ ಅವರ ಶಿಷ್ಯತ್ವ ಪಡೆದುಕೊಂಡರು. ನಿರಂತರ ಆರು ವರ್ಷಗಳ ಪರಿಶ್ರಮದ ಅಭ್ಯಾಸದಿಂದಾಗಿ ಸಂಗೀತ ಕ್ಷೇತ್ರದ ಗ್ವಾಲಿಯರ್ ಘರಾಣೆಯಲ್ಲಿ ಅತ್ಯುತ್ತಮ ನೈಪುಣ್ಯತೆ ಪಡೆದು, ವಿಶಿಷ್ಟ ಸಾಧನೆ ಮಾಡಿದರು. ತಮ್ಮ 19ನೆಯ ವಯಸ್ಸಿನಲ್ಲಿಯೇ (1949) ಮುಂಬಯಿ ಆಕಾಶವಾಣಿಯಲ್ಲಿ ಇವರ ಮೊಟ್ಟ ಮೊದಲ ಕಾರ್ಯಕ್ರಮ ಪ್ರಸಾರವಾಯಿತು. ಆಕಾಶವಾಣಿಯಲ್ಲಿ ಇವರ ಕಂಠಸಿರಿ ಹಾಗೂ ವಿದ್ವತ್ತು ಗಮನಿಸಿದವರು, ಯಾರೀತ ಎಂದು ಅಚ್ಚರಿ ವ್ಯಕ್ತಪಡಿಸಿದರಂತೆ.

ಸುಮಾರು ಆರೂವರೆ ದಶಕಗಳ ಕಾಲ ದೇಶ–ವಿದೇಶಗಳಲ್ಲಿ ಸಂಚರಿಸಿ ಸಹಸ್ರಾರು ಸಂಗೀತ ಕಾರ್ಯಕ್ರಮ ನೀಡುವ ಮೂಲಕ ಸಂಗೀತಾಭಿಮಾನಗಳ ಹೃದಯಲ್ಲಿ ಸ್ಥಾನ ಪಡೆದ ಅವರು, ಪಾಕಿಸ್ತಾನದ ಲಾಹೋರ್, ಪೇಷಾವರ, ಕರಾಚಿ ಮುಂತಾದ ಕಡೆಗಳಲ್ಲೂ ಕಾರ್ಯಕ್ರಮ ನೀಡಿ ಸಂಗೀತ


ಲಂಬಾಣಿ ತೀಜ್ ಕುಣಿತ

ಚಿತ್ರ ಸೂಚಿ – ೩೩



ದುರಗಮುರಗಿ ಪೆಟ್ಟಿಗೆ ಚಿತ್ರಗಳು



ಸುಡುಗಾಡು ಸಿದ್ಧರು

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳ ಸಂಪುಟ



ಪಲ್ಲಕ್ಕಿ-ಉತ್ಸವ

ಚಿತ್ರ ಸೂಚಿ - ೩೭

ರಸಿಕರಿಗೆ ಮೃಷ್ಟಾನ್ನ ಉಣಬಡಿಸಿದ ಮಹಾನ್ ಕಲಾತಪಸ್ವಿಗಳು. ಹಿಂದುಸ್ತಾನಿ ಸಂಗೀತಕ್ಕೆ ಮಾತ್ರ ತಮ್ಮ ಜೀವನ ಮುಡಿಪಾಗಿರಿಸದ ಇವರು, ಪರಕೀಯರ ಹಿಡಿತಕ್ಕೆ ಸಿಲುಕಿದ್ದ ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರಕಿಸುವ ಹೋರಾಟದಲ್ಲಿ ಇವರ ಶ್ರಮ ಅಪಾರ.

ಸಂಗೀತಾಭಿಮಾನಿ ಶಾರದೆಯ ಸೇವೆಯೊಂದಿಗೆ ದೇಶ ಸೇವೆಗೂ ತಮ್ಮ ಕಾಣಿಕೆ ನೀಡಿದ ರಾಯಚೂರಕರ್ ಇವರ ಜೀವನ ರಥ ಹಲವು ಹತ್ತು ವೈಶಿಷ್ಟ್ಯತೆಯಿಂದ ಕೂಡಿದೆ. ಪಾಂಡುರಂಗರಾವ್ ಕಸ್ಬೆ ತಮ್ಮ ಭಾಷಣದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರೆ, ಪಂ. ಮಾಣಿಕರಾವ್ ರಾಯಚೂರಕರ್ ಸಂಗೀತದ ಮೂಲಕ ಜನರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚಿನ ದೀಪ ಬೆಳಗಿಸುತ್ತಿದ್ದರು.

ಸಾಧನೆಯೊಂದೇ ಇವರ ಮೂಲಮಂತ್ರ. ಸಂಗೀತ ಶಾರದೆಯ ಕೃಪೆ ಹಾಗೂ ಇವರಲ್ಲಿರುವ ಅಪಾರ ವಿದ್ವತ್ತಿಗೆ ಅರಸಿ ಕೊಂಡು ಬಂದ ಪ್ರಶಸ್ತಿಗಳು ಅದೆಷ್ಟೋ. ಕಲ್ಬುರ್ಗಿ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿನ ವಿಶಿಷ್ಟ ಸಾಧನೆಗಾಗಿ ಇವರಿಗೆ ಗೌರವ ಡಾಕ್ಟರೇಟ್ ದೊರೆತಿದೆ. ಸುವರ್ಣ ದಸರಾ ಮಹೋತ್ಸವದ ಅಂಗವಾಗಿ ಕರ್ನಾಟಕ ಸರ್ಕಾರ ಪಂಡಿತ್ ಮಾಣಿಕರವ್ ರಾಯಚೂರಕರ್ ಅವರಿಗೆ 2006ನೇ ಸಾಲಿನ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ನೀಡಿ ಗೌರವಿಸಿದೆ. ರಾಜ್ಯ ಸರ್ಕಾರ ಇವರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ನೀಡಿದ ಅಮೂಲ್ಯ ಸೇವೆಯನ್ನು ಗುರುತಿಸಿ, ಕರ್ನಾಟಕ ಸರ್ಕಾರ ಇವರಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು (1989). ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಇವರ ಸಾಧನೆಯನ್ನು ಪರಿಗಣಿಸಿ 1982–83ನೆಯ ಸಾಲಿನ ಸಂಗೀತ ಮತ್ತು ನೃತ್ಯ ಅಕಾಡೆಮಿ ಕರ್ನಾಟಕ ಕಲಾರತ್ನ ಬಿರುದು ನೀಡಿ ಗೌರವಿಸಿತು.

1960ರಲ್ಲಿ ಆಂಧ್ರಪ್ರದೇಶದ ಸಿಕಂದರಾಬಾದ್ ಮಹಾಕಾಳಿ ದೇವಸ್ಥಾನ ಸಮಿತಿ ಇವರಿಗೆ ಗಾಯನಾಚಾರ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಇದೇ ರೀತಿ ಆಂಧ್ರಪ್ರದೇಶದ ವಾರಂಗಲ್ ಬಾರ್ ಅಸೋಸಿಯೇಷನ್ 1968ನಲ್ಲಿ ನಡೆದ ಸಮಾರಂಭದಲ್ಲಿ ಪಂಡಿತ್ ಪ್ರಶಸ್ತಿ ನೀಡಿದೆ. ಮಧ್ಯ ಪ್ರದೇಶದ ಕರ್ನಾಟಕ ಸಂಘ ಇಂದೂರು 1972ರಲ್ಲಿ ನಡೆದ ನವರಾತ್ರಿ ಉತ್ಸವದಲ್ಲಿ ಸಂಗೀತ ಮಾಣಿಕ್ಯ ಪ್ರಶಸ್ತಿ ನೀಡಿ ಗೌರವಿಸಿತು. ದೇಶ ವಿದೇಶಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿ. ಅಲ್ಲಿನ ಕಲಾರಸಿಕರ ಹೃದಯದಲ್ಲಿ ಸ್ಥಾನ ಪಡೆದ ಇವರ ಸಾಧನೆ ಒಂದು ತಪಸ್ಸು.

(ಕೆಎಸ್)

ಮಾನಯ್ಯ ಬಡಿಗೇರ: ಖ್ಯಾತ ಶಿಲ್ಪಿ. ವಂಶಪಾರಂಪರ್ಯದ ಜೊತೆಗೆ ಕಲೆಯ ಮೇಲಿನ ಆಸಕ್ತಿಯಿಂದ ಕಾಷ್ಠ ಶಿಲ್ಪಕಲೆಯನ್ನು ಕಲಿತವರು. ಇವರು ಮೂಲತಃ ಗುಲಬರ್ಗಾದವರು. ಇವರ ತಂದೆ ನಾಡೋಜ ನಾಗಣ್ಣ ಎಂ. ಬಡಿಗೇರ. ತಾಯಿ ಕಮಲಮ್ಮ. ಬಿ.ಎಫ್.ಎ ಪದವಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ. ತಂದೆಯವರೇ ಕಾಷ್ಠ ಶಿಲ್ಪಕಲೆಯ ಮೊದಲ ಗುರು. ವಿಜಯ ಹಾಗರಗುಂಡಗಿ ಲೋಹ ಶಿಲ್ಪ ಕಲಾ ಗುರುಗಳು, ಕಲಾವಿದ ಮೋಹನ್ ಎಚ್. ಸೀತನೂರ ಬೆಂಬಲ ಪ್ರೋತ್ಸಾಹ. ರಾಜ್ಯ, ರಾಷ್ಟ್ರಮಟ್ಟದಲ್ಲಿ ತಮ್ಮ ಕಲಾ ಶಿಲ್ಪಗಳ ಪ್ರದರ್ಶನ, ತರಬೇತಿ ಕಾರ್ಯಾಗಾರ ಆಯೋಜನೆ, 2005 ರಿಂದ 2008ರ ವರೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ



ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಹೆಚ್ಚಿನ ಪ್ರದರ್ಶನಗಳನ್ನು ನೀಡಿದ್ದಾರೆ. ಜಿಲ್ಲಾ ಹಾಗೂ ರಾಜ್ಯಮಟ್ಟದ ಚಿತ್ರಕಲಾ ಶಿಕ್ಷಕ ಸಂಘದ ಉಪಾಧ್ಯಕ್ಷರಾಗಿ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ಅನೇಕ ಶಿಬಿರಗಳ ಶಿಬಿರಾರ್ಥಿಯಾಗಿ ಸಂಚಾಲಕರಾಗಿ, ಶಿಲ್ಪಕಲಾ ವಿಷಯದ ಮೇಲೆ ಸಂಪನ್ಮೂಲ ವ್ಯಕ್ತಿಯಾಗಿ, ಜಕಣಚಾರಿ ಪ್ರಶಸ್ತಿಯ ಆಯ್ಕೆ ಮತದಾರರಾಗಿ, ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಸೇವೆ ಸಲ್ಲಿಸಿದ್ದಾರೆ. 1986 ಮೈಸೂರು ದಸರಾ ಪ್ರಶಸ್ತಿ, 1985 ವಿಭಾಗದ ಮಟ್ಟದ ಚಿತ್ರಕಲಾ ಶಿಕ್ಷಕರ ಚಿತ್ರಕಲಾ ಶಿಕ್ಷಕರ ಚಿತ್ರಕಲಾ ಪ್ರಶಸ್ತಿ, 2007ರಲ್ಲಿ ವಿಭಾಗದ ಮಟ್ಟದ ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಸೇವೆ ಸಲ್ಲಿಸಿದ್ದಾರೆ. 1986 ಮೈಸೂರು ದಸರಾ ಪ್ರಶಸ್ತಿ, 1985 ವಿಭಾಗದ ಮಟ್ಟದ ಚಿತ್ರಕಲಾ ಶಿಕ್ಷಕರ ಚಿತ್ರಕಲಾ ಪ್ರಶಸ್ತಿ, 2007ರಲ್ಲಿ ರೋಟರಿ ಕ್ಲಬ್ ಆಫ್ ಮಿಡ್ ಟಾನ್ ಗುಲಬರ್ಗಾ ಇವರು 'ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ', ಕಲಬುರ್ಗಿ ಕಂಪು–2010 ಭಾರತ 'ವಿಕಾಸ ಪ್ರೇರಕ ಪ್ರಶಸ್ತಿ ಇವರ ಕಾಷ್ಠಶಿಲ್ಪ ರಚನೆಯ ವಿಶೇಷತೆ ಎಂದರೆ, ಟೊಳ್ಳು ವಿಧಾನದಲ್ಲಿ ಕಂಚಿನ ವಿಗ್ರಹವನ್ನು ಎರಕ ಮಾಡಿದ ಮೇಲೆ ಇದರ ಮೇಲೆ ನಕ್ಷೆ ಬಿಡಿಸುವ ಕೆಲಸ ಮಾಡುವುದಿಲ್ಲ. ಚಾಣ, ಸುತ್ತಿಗೆ ಬಳಸದೆ ಮೂರ್ತಿ ನಿರ್ಮಿಸುವ ತಂತ್ರಗಾರಿಕೆ ಇವರದು.

'ಕಾಷ್ಠಶಿಲ್ಪ ಕಲೆ ತುಂಬಾ ಹಳೆ ಕಾಲದ್ದು. ಇದು ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಬೆಳಕಿಗೆ ಬಂದಿದ್ದು. ಆ ನಂತರ ಕೆಳದಿ ವೆಂಕಟಪ್ಪ ನಾಯಕನ ಕಾಲದಲ್ಲಿ ಸುರಪುರ ತಾಲ್ಲೂಕಿನಲ್ಲಿ ಕಾಷ್ಠ ಶಿಲ್ಪಿಯಾಗಿದ್ದ ಗರುಡಾದ್ರಿ ಎಂಬುವವರು ಇದ್ದರಂತೆ. ಅವರಿಂದ ತಮ್ಮ ತಾತ, ತಂದೆಯವರಿಂದ ತಮಗೆ ಬಂದಿದ್ದು. ಹಳೆಯ ಪದ್ಧತಿಯಾಗಿರುವುದರಿಂದ ಎರಕ ಹೊಯ್ದು ಶಿಲ್ಪಗಳನ್ನು ತಯಾರಿಸುವುದು ದೊಡ್ಡ ಕೆಲಸ. ತಾಳ್ಮೆಯಿಂದ ಮಾಡಿದರೆ ಮಾತ್ರ ಈ ಕಲೆಯನ್ನು ಸಾಧಿಸಲು ಸಾಧ್ಯ' ಎನ್ನುವುದು ಇವರ ಅಭಿಪ್ರಾಯ.

ಯಾವುದಾದರೂ ಒಂದು ವಿಗ್ರಹವನ್ನು ತಯಾರಿಸುವ ಮೊದಲು ಅದರ ಚಿತ್ರವನ್ನು ನಿರ್ದಿಷ್ಟ ಕಾಲಮಾನದಲ್ಲಿ ಕಾಗದದ ಮೇಲೆ ಚಿತ್ರ ಬಿಡಿಸುತ್ತಾರೆ. ಇದು ಆಯಾ ದೇವರ ಶ್ಲೋಕಗಳನ್ನು ಆಧರಿಸಿರುತ್ತದೆ. ಅನಂತರ ಈ ಚಿತ್ರಕ್ಕೆ ಬೇಕಾದಷ್ಟು ಜೇನಿನ ಮೇಣವನ್ನು ತರಿಸಿ ಚಿತ್ರದಲ್ಲಿ ಬಿಡಿಸಿರುವಂತೆ ಎಲ್ಲಾ ಅಂಗಗಳನ್ನು ಸೃಷ್ಟಿಸಲಾಗುತ್ತದೆ. ಇದಕ್ಕೆ ಎಣ್ಣೆ ಬೆರೆಸಿ ಕೊನೆಗೆ ಮೂರ್ತಿಯ ಆಕಾರಕ್ಕೆ ಬದಲಿಸಲಾಗುತ್ತದೆ. ಇದನ್ನು ನಂತರ ಬೆಂಕಿಯಲ್ಲಿ ಉರಿಸಿದ ನಂತರ ಶಿಲ್ಪ ಕಲೆಯ ಅಸಲಿ ಕೆಲಸ ಶುರುವಾಗುತ್ತದೆ. 'ಕಾಷ್ಠಶಿಲ್ಪ ಕಲೆಯ ಈ ಹಂತಗಳು ಸುಲಭವಲ್ಲ ಆದರೆ ಒರಿಜಿನಾಲಿಟಿ ಇರುತ್ತದೆ. ಹಾಗಾಗಿಯೇ ಕಾಷ್ಠಶಿಲ್ಪ ಕಲೆ ಅಂದರೆ ಮಾಸ್ಟರ್ ಪೀಸ್ ಇದ್ದ ಹಾಗೆ ಎನ್ನುತ್ತಾರೆ.


ಇವರ ಕಾಷ್ಠಶಿಲ್ಪ ರಚನೆಯ ವಿಶೇಷತೆ ಎಂದರೆ, ಟೊಳ್ಳು ವಿಧಾನದಲ್ಲಿ ಕಂಚಿನ ವಿಗ್ರಹವನ್ನು ಎರಕ ಮಾಡಿದ ಮೇಲೆ ಇದರ ಮೇಲೆ ನಕ್ಷೆ ಬಿಡಿಸುವ ಕೆಲಸ ಮಾಡುವುದಿಲ್ಲ. ಚಾಣ, ಸುತ್ತಿಗೆ ಬಳಸದೆ ಮೂರ್ತಿ ನಿರ್ಮಿಸುವ ತಂತ್ರಗಾರಿಕೆ ಇವರದು ಮೇಣದಲ್ಲಿ ಅಂತಿಮ ರೂಪ ಪಡೆದ ಮೂಲ ಕೃತಿಗೆ ಸ್ವಲ್ಪವೂ ಕುಂದು ಬಾರದಂತೆ ಲೋಹ ರೂಪಕ್ಕೆ ಮಾರ್ಪಡಿಸುವ ತಂತ್ರಗಾರಿಕೆಯನ್ನು ಸಿದ್ಧಿಸಿಕೊಂಡಿರುವ ಇವರು ಸಾಂಪ್ರದಾಯಿಕ ಶೈಲಿಯೊಂದಿಗೆ ಜನಪದ ಶೈಲಿಯನ್ನೂ ಸಂಯೋಜಿಸಿ ಶಿಲ್ಪಗಳಿಗೆ ಹೊಸ ಮೆರುಗನ್ನು ಕೊಡುತ್ತಾರೆ.

ಇತ್ತೀಚೆಗೆ ಅಮೆರಿಕದ ಮಹಿಳೆ ಕ್ಯಾಲಿಕಾ ಭಾರತದ ಶಿಲ್ಪ ಕಲಾವಿದರ ಬಗ್ಗೆ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಪಿಎಚ್.ಡಿ ಮಾಡಲು ಅನುಮತಿಗಾಗಿ ಅರ್ಜಿ ಸಿದ್ಧಪಡಿಸುವುದಕ್ಕಾಗಿ ಗುಲಬರ್ಗಾಕ್ಕೆ ಬಂದು ಮಾನಯ್ಯನವರ ಕಲಾಕೃತಿಗಳ ವೀಕ್ಷಿಸಿ ಸಂದರ್ಶನ ಮಾಡಿದ್ದಾರೆ. ಕಂಪ್ಯೂಟರ್, ಗ್ರಾಫಿಕ್ಸ್ ನಂತಹ ಆಧುನಿಕ ತಂತ್ರಜ್ಞಾನದ ಕಾಲಘಟ್ಟದಲ್ಲೂ ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡು ದೇಶ, ವಿದೇಶಗಳವರೆಗೂ ಹೆಸರು ಮಾಡಿರುವುದು ಹೆಮ್ಮೆಯ ಸಂಗತಿ.

(ಆರ್‌ಕೆ)

ಮಾನಸಿಂಗ್ ಆರ್. ರಾಜಪೂತ: ಸಮಕಾಲೀನ ಚಿತ್ರಕಲೆ ಇವತ್ತು ವಿಭಿನ್ನ ಆಶಯ ಮತ್ತು ಶೈಲಿಗಳಿಗೆ ತನ್ನ ರೂಪಕೊಟ್ಟು ಬಗೆ ಬಗೆಯ ಅರ್ಥಗಳಿಗೆ ಧ್ವನಿಯಾಗಿ ನಿಂತಿದೆ. ಚಿತ್ರ ರಚನೆಗೆ ತೊಡಗಿದ ಕಲಾವಿದ ತನ್ನ ಅಭಿವ್ಯಕ್ತಿಯನ್ನು ಕ್ಯಾನವಾಸಿಗೆ ತದನಂತರ ಅದು ಭಿನ್ನ ಭಿನ್ನ ನೆಲೆಯಲ್ಲಿ ನೋಡುಗನೊಂದಿಗೆ ಸಂವಾದಕ್ಕಿಳಿಯುತ್ತದೆ ಇಂಥ ಸಂವಾದ ನಡೆದಾಗಲೇ ಕಲಾಕೃತಿ ಮೌಲ್ಯ ಕಂಡುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕೃತಿಗಳನ್ನು ಚರ್ಚೆ ಸಂವಾದಕ್ಕಿಳಿವ ಮತ್ತು ತಮ್ಮ ಶೈಲಿ ಮತ್ತು ಆಶಯ ಮೂಲಕ ಕೃತಿಗೆ ಮೌಲ್ಯ ತಂದುಕೊಡುವ ಕಲಾವಿದರಿವರು.

ಗುಲಬರ್ಗಾ ಜಿಲ್ಲೆಯ ಕೊತನ್ ಹಿಪ್ಪರಗಾ ಹಳ್ಳಿಯಲ್ಲಿ 1971 ಜನವರಿ 12ರಂದು ರೈತ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ತಮ್ಮಲ್ಲಿ ಇರುವ ಸೃಜನಾತ್ಮಕ ಗುಣ ಹಾಗೂ ಕಲಾ ಕೃತಿ ರಚಿಸುವ ಗೀಳು ಕಲಬುರ್ಗಿಯಲ್ಲಿ ಉನ್ನತ ಮಟ್ಟದ ದೃಶ್ಯ ಕಲಾ ಶಿಕ್ಷಣ ಕೊಡುವವರ ಮೂಲಕ ನಾಡಿನಾದ್ಯಾಂತ ಪ್ರಸಿದ್ಧಿ ಪಡೆದ ಕಲಾಶಾಲೆ ಅದು. ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಕಲಾ ಅಭ್ಯಾಸಕ್ಕೆ ಸೇರಿ ಈ ಕಲಾ ಶಾಲೆಯ ಸುಂದರಪರಿಸರ ಹಾಗೂ ಸೃಜನಶೀಲ ಕಲಾ ಚಿಂತನೆಯನ್ನು ಮೈಗೂಡಿಸಿಕೊಂಡು ಕಲಾಶಿಕ್ಷಣವನ್ನು ಪಡೆದರು. ಬಿ.ಎಫ್.ಎ. ಮತ್ತು ಎಂ.ಎಫ್.ಎ. ಪೇಂಟಿಂಗ್ ಪದವಿಯನ್ನು ಈ ಕಲಾ ಶಾಲೆಯಿಂದ ಪಡೆದರು.



ಹಳ್ಳಿಯ ಪರಿಸರದಿಂದ ಬಂದ ಇವರು ಅಕಾಡೆಮಿಕ ಶೈಲಿಯ ಕಲಾಶಿಕ್ಷಣ ಪಡೆದು ವಿದ್ಯಾರ್ಥಿ ದೆಶೆಯಲ್ಲಿ ಅನೇಕ ಸಂಯೋಜನಾ ಚಿತ್ರಗಳು ಹಾಗೂ ನಿಸರ್ಗ ಚಿತ್ರ, ಭಾವಚಿತ್ರಗಳ ರಚನೆಯ ಜೊತೆಗೆ ಕಾಲಬದಲಾದಂತೆ ಕಲಾಮಾಧ್ಯಮ ವಿಷಯವಸ್ತು ಬದಲಾಗುತ್ತ ಹೋಗುತ್ತವೆ ಹಾಗೆಯೇ ತಮ್ಮ ಸಮಕಾಲೀನ ಬದಲಾವಣೆಯನ್ನು ಮೈಗೂಡಿಸಿಕೊಂಡು ಮನಸಿನ ಭಾವನೆಗಳನ್ನು ಅಭಿವ್ಯಕ್ತಿ ಮಾಧ್ಯಮವಾದ ಚಿತ್ರಕಲೆಯ ಮುಖಾಂತರ ಸಮಕಾಲೀನ ಸೃಜನಶೀಲ ಕಲಾಶೈಲಿಯಲ್ಲಿ 'ಆಕ್ರಲೀಕ್' ವರ್ಣಗಳಲ್ಲಿ ಪ್ರಯೋಗಾತ್ಮಕ ಕೃತಿಗಳನ್ನು ರಚಿಸುತ್ತ ಕಲಾ ಗುರುಗಳು ಹಾಗೂ ಕಲಾವಿದರಲ್ಲಿ ತಮ್ಮ ವಿಶಿಷ್ಟವಾದ ಕಲಾಸಂವೇದನೆ ಮೂಲಕ ಪರಿಚಿತರಾದರು. ತಮ್ಮ ಈ ಕಲಾಕೃತಿಗಳು ರಾಷ್ಟ್ರದ ಅನೇಕ ಕಲಾಪ್ರದರ್ಶನಗಳಲ್ಲಿ ಆಯ್ಕೆಯಾಗಿ ಪ್ರದರ್ಶನಗೊಂಡು ನೋಡುಗರಲ್ಲಿ ಕಲಾಕೃತಿಯ ಕುರಿತು ಸಂವಾದ ಸೃಷ್ಟಿಸಿದ ಕಲಾಕೃತಿಗಳಾದವು. 1994, 97, 98ರಲ್ಲಿ ಅಖಿಲ ಭಾರತೀಯ ಕಲಾಪ್ರದರ್ಶನ ನಾಗಪೂರ, 1994, 2001ರ ವಾರ್ಷಿಕ ಕಲಾಪ್ರದರ್ಶನ ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು, 1997ರ ಐದನೇ ಅಖಿಲ ಭಾರತೀಯ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡವು. ಅಲ್ಲದೆ ರಾಜ್ಯಮಟ್ಟದ ಅನೇಕ ಕಲಾಶಿಬಿರಗಳಲ್ಲಿಯು ಭಾಗವಹಿಸುವದರ ಮೂಲಕ ಅನೇಕ ಮೌಲಿಕ ಕಲಾಕೃತಿಗಳನ್ನು ರಚಿಸಿದ್ದಾರೆ.

ತನ್ನ ಕಲಾ ಪ್ರತಿಭೆಗೆ ಪ್ರೋತ್ಸಾಹ ಹಾಗೂ ಪ್ರೇರಣಾ ಸ್ವರೂಪವಾಗಿ ಅನೇಕ ಪ್ರಶಸ್ತಿಗಳು ಇವರ ಕಲಾಕೃತಿಗಳಿಗೆ ಲಭಿಸಿವೆ. ಅವುಗಳಲ್ಲಿ ಪ್ರಮುಖವಾದವು 1997ರ ಕಲಬುರ್ಗಿ ಕಲಾ ಮಹೋತ್ಸವ ಪ್ರಶಸ್ತಿ, 1997ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ವಿದ್ಯಾರ್ಥಿ ದಿಸೆಯಲ್ಲಿಯೇ ಕಲಾಕೃತಿಯ ರಚನೆ ಹಾಗೂ ಹೊಸ ಆಲೋಚನೆಯ ಚಿತ್ರ ರಚನೆಯಿಂದ ಇವರನ್ನು ಭಿನ್ನವಾಗಿ ಪ್ರತಿಭಾವಂತ



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ಕಲಾ ವಿದ್ಯಾರ್ಥಿಯಾಗಿ ಗುರುತಿಸಿಕೊಂಡರು. 1996–97ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಶಿಷ್ಯವೇತನ ಪಡೆದರು. ಮಾನಸಿಂಗ್‌ರ ಕಲಾ ಪ್ರತಿಭೆಗೆ ಕಿರಿಟಪ್ರಾಯವೆಂಬಂತೆ 1998 ರಿಂದ 2000ರ ವರೆಗೆ ರಾಷ್ಟ್ರೀಯ ಶಿಷ್ಯವೇತನ ಭಾರತ ಸರಕಾರ ದೆಹಲಿಗೆ ಆಯ್ಕೆ ಮಾಡಿದರು. ಈ ಶಿಷ್ಯವೇತನವು ಕಲಾಕ್ಷೇತ್ರ ದಲ್ಲಿ ಹೊಸ ಆಲೋಚನೆ ಸೃಜನಶೀಲ ವಿಚಾರಗಳಿಂದ ಕೂಡಿದ ಕಲಾಕೃತಿಗಳನ್ನು ರಚಿಸುವಂತಹ ಯುವ ಪ್ರತಿಭೆಗೆ ರಾಷ್ಟ್ರೀಯದಾದ್ಯಂತ ಕೆಲವೇ ಕಲಾವಿದ್ಯಾರ್ಥಿಗಳಿಗೆ ಕೊಡುತ್ತಾರೆ. ಅಂಥ ಪ್ರತಿಭಾವಂತರಲ್ಲಿ ಮಾನಸಿಂಗ್ ಕೂಡ ಒಬ್ಬರು.

ತಮ್ಮ ಕಲಾಶಿಕ್ಷಣದ ನಂತರ ಬೆಂಗಳೂರಿನ ಕೆ.ಜೆ.ಎಫ್.ನ ಕಲಾ ಶಾಲೆಯಲ್ಲಿ ಕಲಾಶಿಕ್ಷಕರಾಗಿ ಕೆಲವು ವರ್ಷ ಸೇವೆಸಲ್ಲಿಸಿ ಕಾರಣಾಂತರ ತಮ್ಮ ಹಳ್ಳಿಯಲ್ಲಿ ಗದ್ದೆ ಹಾಗೂ ಪರಿವಾರದ ಜವಾಬ್ದಾರಿಯನ್ನು ಮನಗಂಡು, ಮತ್ತೆ ತಮ್ಮ ಹಳ್ಳಿಗೆ ಬಂದು ಪರಿವಾರದ ಜವಾಬ್ದಾರಿಯನ್ನು ನಿಭಾಯಿಸುವದರ ಜೊತೆಗೆ ಸುಂದರ ಪರಿಸರ ಹಾಗೂ ಪ್ರಶಾಂತವಾದ ವಾತಾವರಣದಲ್ಲಿ ರೈತನಾಗಿ ಚಿತ್ರಕಲಾವಿದನಾಗಿ ಕೃಷಿ ಮಾಡುತ್ತಿದ್ದಾರೆ.

(ಎಸ್‌ಪಿಡಬ್ಲ್ಯೂ)

ಮಾರುತೇಶ ಮಾಂಡ್ರೆ: ಉತ್ತರ ಕರ್ನಾಟಕದ ಖ್ಯಾತ ನಾಟಕ ಕಾರ. 'ಕವಿರತ್ನ', 'ಶರಣ ಸಾಹಿತ್ಯರತ್ನ', 'ನಾಟ್ಯ ಸಾಹಿತ್ಯ ಶಿರೋಮಣಿ' 'ರಂಗ ಸಾಹಿತ್ಯ ಚಕ್ರವರ್ತಿ' ಈ ಇವು ಇವರಿಗೆ ಸಂದ ಬಿರುದುಗಳು. ಈಗ ಕೊಪ್ಪಳ ತಾಲ್ಲೂಕಿನ ಅಳವಂಡಿ ಯಲ್ಲಿ ನೆಲೆಸಿದ್ದಾರೆ. ಧಾರವಾಡ ಜಿಲ್ಲೆ, ರೋಣ ತಾಲ್ಲೂಕಿನ ಹೊಳೆ ಆಲೂರ ಗ್ರಾಮದಲ್ಲಿ 1928ರಲ್ಲಿ ಜನಿಸಿದರು. ಅಲ್ಲಿಯೇ ಪ್ರೌಢಶಿಕ್ಷಣ ಮುಗಿಸಿದರು. ಮುಂದೆ ಇವರು ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡರು.

ಕರ್ನಾಟಕ ಕವಿಚಂದ್ರ ನಲವಡಿ ಶ್ರೀಕಂಠ ಶಾಸ್ತ್ರಿಗಳ ಪ್ರಭಾವದಿಂದಾಗಿ ರಂಗನಾಟಕಗಳ ರಚನೆಗೆ ತೊಡಗಿ 'ಸೌಭಾಗ್ಯ ಲಕ್ಷ್ಮೀ' ಎಂಬ ನಾಟಕವನ್ನು ರಚಿಸಿದರು. ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಂಪನಿಯಲ್ಲಿ ಈ ನಾಟಕ ಪ್ರಯೋಗಗೊಂಡು ಯಶಸ್ವಿ ಯಾಯಿತು. ಅಲ್ಲಿಂದ ಮುಂದೆ ಉತ್ತರಕರ್ನಾಟಕ ರಂಗ ಭೂಮಿಯ ವೃತ್ತಿರಂಗ ನಾಟಕಕಾರರೆಂದು ಗುರುತಿಸಿಕೊಂಡರು. ಪೌರಾಣಿಕ, ಐತಿಹಾಸಿಕ, ಸಾಮಾನಿಕ, ಭಕ್ತಿ ಪ್ರಧಾನವುಳ್ಳ ಹೀಗೆ ಒಟ್ಟು 150 ನಾಟಕಗಳನ್ನು ರಚಿಸಿದ್ದಾರೆ. ಇದು ಒಂದು ದಾಖಲೆ ವನ್ನುಬಹುದು.

ಭಾರತದಲ್ಲಿಯೇ ಪ್ರಸಿದ್ಧ ಕಂಪನಿಯೆನಿಸಿದ ಗುಬ್ಬಿ ಕಂಪನಿ ಯವರು ಸಹ ಇವರ 'ಅಮೃತ' ಮತ್ತು 'ಗಾಜಿನ ಮನೆ' ನಾಟಕ ವನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಉತ್ತರಕರ್ನಾಟಕದ ಕಂಪನಿಗಳಂತೂ ಇವರ ಒಂದಿಲ್ಲೊಂದು ನಾಟಕವನ್ನು ಪ್ರದರ್ಶಿಸಿದ್ದಾರೆ.

ಶಿವಶರಣರನ್ನು ಕುರಿತು ಹಲವಾರು ನಾಟಕಗಳನ್ನು ಇವರು ಬರೆದಿದ್ದಾರೆ. ಅದರಲ್ಲೂ ಸುಳ್ಳದ ಶ್ರೀಶೈಲೇಶ್ವರ ನಾಟ್ಯ ಸಂಘ ದವರು ಅಭಿನಯಿಸಿದ 'ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ' ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ.

ಇವರು ಕೇವಲ ನಾಟಕಕಾರರಷ್ಟೇ ಅಲ್ಲ; ಕವಿಗಳೂ ಹೌದು. ಉತ್ತರ ಕರ್ನಾಟಕದ ಪುಣ್ಯ ಪುರುಷರ ಕ್ಷೇತ್ರಗಳ ಮಹಿಮಾ ಪೂರಿತ, ಸುಪ್ರಭಾತದ ಹಾಡುಗಳನ್ನು ರಚಿಸಿದ್ದಾರೆ. ಹಾಗೆಯೇ ಶಿವಶರಣ ಕಥಾನಕಗಳನ್ನು ಕೀರ್ತನ ಮಾಧ್ಯಮದ ಮೂಲಕ ಹೇಳುವುದರೊಂದಿಗೆ ಕೀರ್ತನಕಾರರೂ ಆಗಿದ್ದಾರಲ್ಲದೆ ಕೆಲ ವೊಂದು ಚಲನಚಿತ್ರಗಳಿಗೆ ಹಾಡುಗಳನ್ನು ರಚಿಸಿಕೊಟ್ಟಿದ್ದಾರೆ. ಇಂದಿಗೂ ಇವರ ಬರೆವಣಿಗೆ, ಕಾವ್ಯವಾಚನ ನಿಂತಿಲ್ಲ.

(ಎಂಎಚ್‌ಓ)


ಮಾಲಗತ್ತಿ: ಧಾರ್ಮಿಕ ಮತ್ತು ಐತಿಹಾಸಿಕ ಕೇಂದ್ರ. ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಒಂದು ಹಳ್ಳಿ. ಸುರಪುರದಿಂದ ಪಶ್ಚಿಮಕ್ಕೆ ಹದಿನೈದು ಕಿಲೋಮೀಟರ್ ದೂರದಲ್ಲಿ, ಸುರಪುರ–ಕೆಂಭಾವಿಯ ಮುಖ್ಯರಸ್ತೆಯಲ್ಲಿದೆ. ಈ ಗ್ರಾಮದ ನೈರುತ್ಯ ಕ್ಕಿರುವ ಕಿರುಬೆಟ್ಟಗಳಲ್ಲಿ ಅನೇಕ ಮತ–ಪಂಥಗಳಿಗೆ ಸಂಬಂಧ ಪಟ್ಟ ಅವಶೇಷಗಳು ಇವೆ. ಊರಿಗೆ ತೀರಾ ಹತ್ತಿರವಿರುವ ಮುತ್ತ್ಯಾ ಮಾದೇವಪ್ಪನ ಗುಡ್ಡ ಮೂಲತಃ ಒಂದು ಜೈನ ಧರ್ಮದ ನೆಲೆ ಹಾಗೂ ಯಾತ್ರಾಸ್ಥಳವಾಗಿತ್ತು. ಆ ಬೆಟ್ಟದಲ್ಲಿ ಜೈನ ಧರ್ಮಕ್ಕೆ ಸಂಬಂಧವಾದ ಅನೇಕ ಅವಶೇಷಗಳು ಇವೆ. ಬೆಟ್ಟ ಹತ್ತುವ ಹಾದಿಯಲ್ಲಿ ಕಲ್ಯಾಣ ಚಾಲುಕ್ಯರ (ಕ್ರಿ.ಶ. 10ನೆ ಶತಮಾನ) ಆರಂಭಿಕ ಕಾಲದ್ದಾಗಿರಬಹುದಾದ ಕಾಯೋತ್ಸರ್ಗ ಭಂಗಿಯ ಐದು ಅಡಿಗೂ ಎತ್ತರದ ಕಪ್ಪು ಶಿಲೆಯ ಭಗ್ನ ಜಿನ ಬಿಂಬವೊಂದು ಮೇಲ್ಮೊಗವಾಗಿ ಬಿದ್ದಿದೆ. ಪ್ರತಿಮೆಯ ಪಾದ ಗಳು ಒಡೆದು ಹೋಗಿವೆ. ಶಿರೋಭಾಗದ ಪ್ರಭಾವಳಿಯೂ ಮುಕ್ಕಾ ಗಿದೆ. ಹರವಾದ ಎದೆ, ನೀಳ ಕೈಗಳು, ಪ್ರಶಾಂತ ಚಿತ್ತದ ಈ ಸುಂದರ ಪ್ರತಿಮೆಯ ಹೊಕ್ಕಳಿಗೆ ಜನ ತಿಳಿಯದೆ ಎಣ್ಣೆ ಸುರಿದು, 'ಹೊಕ್ಕಳಮ್ಮ' ಎಂದು ಅದನ್ನು ಪೂಜಿಸುತ್ತಾ ಇದ್ದಾರೆ.




ಮುಖವಾಡಗಳು




ಮುಳ್ಳಾವಿಗೆ ಅಯ್ಯ



ಪುರವಂತಿಕೆ



ಕಸೂತಿ ಕಲೆ



ಜನಪದ ವಾದ್ಯಗಳು

ಎಣ್ಣೆ ಸವರಿ ಪ್ರತಿಮೆಯನ್ನೇ ಅಂದಗೆಡಿಸಿದ್ದಾರೆ. ಗುಡ್ಡದ ಮೇಲ್ಭಾಗ ಸಮತಟ್ಟಾಗಿದೆ. ಇಲ್ಲಿ ಜೈಮಂದಿರವಿದ್ದ ಕುರುಹಾಗಿ ಬಸದಿಯ ಗರ್ಭಗೃಹದ ಬಾಗಿಲವಾಡ, ಹಣೆಪಟ್ಟಿ, ಕಂಬಗಳು ಅಲ್ಲಲ್ಲಿ ಚದುರಿ ಬಿದ್ದಿವೆ. ಭಗ್ನ ಜಿನಬಿಂಬವು ಈ ಬಸದಿಯ ಮೂಲ ವಿಗ್ರಹವಾಗಿದ್ದೀತು. ಇದೇ ಬೆಟ್ಟದಲ್ಲಿ ಮರದ ಕೆಳಗೆ ಇರುವ ಮೂರೂವರೆ ಅಡಿ ಎತ್ತರ, ಒಂದು ಮುಕ್ಕಾಲು ಅಡಿ ಅಗಲದ ಕಪ್ಪು ಕಲ್ಲಿನ ತ್ರಿಶೂಲ-ಡಮರುಗ-ಶಂಖ ಚಕ್ರಗಳನ್ನು ಧರಿಸಿರುವ ಚತುರ್ಭುಜದ ಹರಿಹರ ಪ್ರತಿಮೆಯನ್ನು ಜನ 'ಪರಮಾನಂದ' ನೆಂದು ಪೂಜಿಸುತ್ತಾರೆ.

ಊರಲ್ಲಿರುವ ಹನುಮಂತ ದೇವರ ಗುಡಿಯ ಆವರಣದಲ್ಲಿ ಮೂರು ಅಡಿ ಎತ್ತರ, ಎರಡು ಅಡಿ ಅಗಲದ ಕಪ್ಪುಶಿಲೆಯ ಪಾರ್ಶ್ವನಾಥ ತೀರ್ಥಂಕರರ ರುಂಡವಿಲ್ಲದ, ಕುಳಿತಿರುವ ವಿಗ್ರಹವು ನಯಗಾರಿಕೆ, ಪ್ರಮಾಣಬದ್ಧ ಅಂಗ ಸೌಷ್ಠವ, ಕಲಾವಂತಿಕೆಯಿಂದ ಮನಸೆಳೆಯುತ್ತದೆ. ಈ ಪ್ರತಿಮೆಯ ಎಡಗಡೆಗೆ ಪದ್ಮಾಸನದಲ್ಲಿರುವ ಕರಿಕಲ್ಲಿನ ಇನ್ನೊಂದು ಜಿನಬಿಂಬವಿದೆ. ಪ್ರಭಾವಳಿಯ ಬಲಭಾಗ ಒಡೆದಿದೆ. ಪ್ರತಿಮೆಯ ಅಕ್ಕಪಕ್ಕ ಚಾಮರಧಾರಿಗಳಿದ್ದಾರೆ. ಮೂರ್ತಿಯ ತಲೆಯ ಮೇಲೆ ಮೂರು ಲೋಕ ಸ್ವಾಮಿತ್ವ ಸಂಕೇತದ ಮುಕ್ಕೊಡೆ ಇದೆ. ಒರಗು ದಿಂಬು, ಸುರುಳಿಯ ತಲೆಗೂದಲು, ಪ್ರಶಾಂತ ಮುಖಮುದ್ರೆ, ಅರ್ಧ ನಿಮೀಲಿತ ನೇತ್ರ, ಮೃದು ಮಂದಹಾಸದ ತುಟಿಗಳು ಇವೆಲ್ಲವನ್ನು ಕಲ್ಲಿನಲ್ಲಿ ರೂಪಿಸಿದ ಶಿಲ್ಪಿಯ ಕಲಾಕೌಶಲ ಈ ಭಾಗದ ಪ್ರಬುದ್ಧ ಮೂರ್ತಿ ಶಿಲ್ಪಕ್ಕೆ ಸಾಕ್ಷಿಯೆನಿಸಿದೆ. ತಿಳವಳಿಕೆ ಇಲ್ಲದ ಜನ ಇಂಥ ಸುಂದರ, ಕಲಾತ್ಮಕ ಮೂರ್ತಿಗಳಿಗೆ ಸುಣ್ಣ ಬಳಿದು-ಎಣ್ಣೆ ಬಳಿದು ಅಂದಗೆಡಿಸಿದ್ದಾರೆ.

ಊರಿನ ಮಧ್ಯೆ ಇರುವ ನಡಗಡ್ಡೆಮ್ಮನ ಕಟ್ಟೆಯ ಪಕ್ಕದಲ್ಲಿ ಸುಮಾರು ಐದು ಅಡಿ ಎತ್ತರದ ತಿಳಿಗುಲಾಬಿ ಬಣ್ಣದ ಚೌಕ ಕಲ್ಲಿನ ಶಿಲ್ಪ ಒಂದಿದೆ. ತುದಿಯ ವಿಮಾನದಿಂದ ಕೂಡಿದೆ. ಕೆತ್ತನೆಯ ಭಾಗ ನಾಲ್ಕು ಹಂತಗಳಿದ್ದು, ತಳದ ಸಾಲಿನಲ್ಲಿ ಪಟ್ಟಿಕೆಯಲ್ಲಿ ಮೂರು ಸಿಂಹ ಮುಖಗಳಿವೆ. ಈ ಪೀಠದ ಮೇಲೆ ಸುಮಾರು ಒಂದೂವರೆ ಅಡಿ ಎತ್ತರದ ಗೂಡು ಇದ್ದು ಅದರಲ್ಲಿ ಪದ್ಮಾಸನದಲ್ಲಿರುವ ಧ್ಯಾನದ ಜಿನಮೂರ್ತಿ ಇದೆ. ಈ ಗೂಡಿನ ಮೇಲ್ಪಟ್ಟಿಕೆಯಲ್ಲಿ ಯಾವ ಶಿಲ್ಪವೂ ಇಲ್ಲ. ಅದರ ಮೇಲೆ ಸುಮಾರು ಮುಕ್ಕಾಲಡಿ ಎತ್ತರದ ಒಂದು ಪಟ್ಟಿ ಇದ್ದು ಅದರ ಎಡ-ಬಲ ತುದಿಗಳಲ್ಲಿ ಸೊಂಡಿಲನ್ನು ಬಾಯೊಳಕ್ಕಿಟ್ಟು ಕೊಂಡಿರುವ ಆನೆಗಳ ತಲೆಗಳಿವೆ. ಇದರ ಮೇಲೆ, ನಾಲ್ಕು ಮೋಟು ಕಾಲುಗಳ ಮೇಲೆ ವಿಮಾನ ಭಾಗ ಕೂತಿದೆ. ಎಡ ಬಲ ತುದಿಗಳು ಬೌದ್ಧ ಚೈತ್ಯದ ಕಮಾನಿನಂತಿವೆ. ಮಧ್ಯೆಯೂ ಅದರ ಪೂರ್ಣ ರೂಪದ ಕೆತ್ತನೆಯು ಇದೆ. ಇಡೀ ವಿಮಾನದ ಮೇಲ್ಭಾಗ ದುಂಡಗೆ ಇದೆ. ಈ ಮುಖವನ್ನು ಬಿಟ್ಟರೆ ಈ ಕಲ್ಲಿನ ಎಡಬದಿಯ ಮುಖದಲ್ಲಿ ಏನೂ ಕೆತ್ತನೆ ಇಲ್ಲ. ಒಟ್ಟಿನಲ್ಲಿ ಈ ಶಿಲಾಶಿಲ್ಪ ಕಂಬ ಅಲ್ಲ. ಇದೊಂದು ಏಕಶಿಲಾ ಮಂಟಪ.

ಇತ್ತೀಚಿನ ಬಸವಣ್ಣ ದೇವರ ಗುಡಿಯ ಗರ್ಭಗೃಹಕ್ಕೆ ಜೈನ ಮಂದಿರದ ಲಲಾಟ ಪಟ್ಟಿಕೆ ಮತ್ತು ದ್ವಾರಬಂಧಗಳನ್ನು ಬಳಸಿರುವುದು ಸ್ಪಷ್ಟವಾಗಿದೆ. ಈ ಲಲಾಟ ಬಿಂಬದ ಎಡಬಲದಲ್ಲಿ ಬಳ್ಳಿ ಸುಳುವಿನ ಮಧ್ಯದ ವರ್ತುಲಗಳನ್ನು ಯಕ್ಷ, ಕುಬೇರ, ಇನ್ನಿತರ ಕುಬ್ಜ ಪ್ರತಿಮೆಗಳ ಉಬ್ಬು ಶಿಲ್ಪಗಳಿವೆ. ಗರ್ಭಗೃಹದ ಬಲಭಾಗ 'ದಲ್ಲಿ ಸ್ತ್ರೀ ಪುರುಷ ದ್ವಾರಪಾಲಕರಿದ್ದಾರೆ. ಪುರುಷ ಪ್ರತಿಮೆಯ ಕಿರೀಟದ ಮೇಲ್ಭಾಗದಲ್ಲಿ ಮೂರು ಹೆಡೆಗಳ ಸರ್ಪವಿದೆ. ಪಕ್ಕಕ್ಕಿರುವ ಸ್ತ್ರೀ ಪ್ರತಿಮೆಯ ಕೈಯಲ್ಲಿ ಚಾಮರವಿದೆ. ದ್ವಾರ ಬಂಧದ ಎಡಗಡೆ ಇರುವ ಸ್ತೀ-ಪುರುಷ ದ್ವಾರಪಾಲಕರ ಮಧ್ಯೆ ಅವಕ್ಕಿಂತಲೂ ಎತ್ತರವಾಗಿ, ಕೈಮುಗಿದು ನಿಂತ ಕಿರೀಟ ಧಾರಿಯ ಪ್ರತಿಮೆ ಗಮನಿಸಬೇಕಾದದ್ದು. ಇದು ಬಸದಿಯ ನಿರ್ಮಾಣಕ್ಕೆ ಕಾರಣಕರ್ತನಾದ ದೊರೆ ಅಥವಾ ಮಾಂಡಲಿಕನದಿರಬಹುದು. ಇದೇ ಬಸವಣ್ಣದೇವರ ಗುಡಿಯ ಪ್ರಾಂಗಣದಲ್ಲಿ ರಾಷ್ಟ್ರಕೂಟರ ಕಾಲದ ಕಲಾಕುಸುರಿ ಕೆತ್ತನೆಯ ಸುಂದರ ಕಂಬಳಿವೆ. ಈ ಮಂದಿರದ ಹಿಂಭಾಗದಲ್ಲಿರುವ ದಿನ್ನೆ ಬಹುಶಃ ಪುರಾತನ ಮಾಲಗತ್ತಿ ಗ್ರಾಮದ ಸ್ಥಳವಿದ್ದಿತೆಂದೂ, ಅಲ್ಲಿಂದಲೇ ಬಸವಣ್ಣ ಗುಡಿ ಕಟ್ಟಲು ಕಂಬ, ಬೋದುಗೆಗಳನ್ನು, ದ್ವಾರಬಂಧಗಳನ್ನು ತಂದುದಾಗಿ ಊರವರು ಹೇಳುತ್ತಾರೆ. ಕ್ರಿ.ಶ. 6-7 ಶತಮಾನಗಳಿಂದಲೂ ಮಾಲಗತ್ತಿ ಜೈನಧರ್ಮಕ್ಕೆ ನೆಲೆಯಾಗಿದ್ದು, ಜೈನರ ಯಾತ್ರಾಕೇಂದ್ರವಾಗಿದ್ದಿರಬೇಕು. ಅಲ್ಲಿರುವ ಎಲ್ಲ ಅವಶೇಷಗಳಿಂದ ಈ ಭಾಗದಲ್ಲಿ ಜೈನ ಮತವು ಪ್ರಭಾವಿ ಧರ್ಮವಾಗಿತ್ತೆಂಬುದು ಸಾಬೀತಾಗುತ್ತದೆ. (ಡಿಎನ್ಎ)



ಮಾಶಾಳಕರ್ ಎಸ್.ಎಚ್.: ಶಶಿಕಾಂತ ಹಣಮಂತಪ್ಪ ಮಾಶಾಳಕರ್ 1970 ಡಿಸೆಂಬರ 7ರಂದು ಅಫಜಲಪೂರ ತಾಲ್ಲೂಕಿನ ಚಿಂಚೋಳಿಯಲ್ಲಿ ಜನಿಸಿದರು. ಇವರ ಪೂರ್ವಜರು ಮೂಲತಃ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಚಿಂಚೋಳಿ ಗ್ರಾಮದವರು. ಹೀಗಾಗಿ ಶಶಿಕಾಂತ ಮಾಶಾಳಕರವರ ಪ್ರಾಥಮಿಕ ಶಿಕ್ಷಣ ಗುಲಬರ್ಗಾದ ವಿಜಯ ವಿದ್ಯಾಲಯ ಶಿಕ್ಷಣ ಸಂಸ್ಥೆಯಲ್ಲಿ ನಡೆಯಿತು.

ಯೇಸುಕ್ರಿಸ್ತನ ಜೀವನ ಚರಿತ್ರೆಯ ಅನೇಕ ಪೇಂಟಿಂಗ್‌ಗಳನ್ನು ಮಾಡುವುದರ ಜೊತೆಗೆ ಶಿಷ್ಯರುದ್ದಾರ ಮತ್ತು ಕಲೆಯು ಬೆಳೆಯಲೆಂಬ ಬಯಕೆಯುಳ್ಳವರು ಅವರ ತ್ಯಾಗ ಹಾಗೂ ಪರಿಶ್ರಮದ ಫಲವಾಗಿ ಮಾಶಾಳಕರವರು ಚಿತ್ರಕಲಾ ಇತಿಹಾಸದಲ್ಲಿ ಉಜ್ವಲ ಸ್ಥಾನ ಪಡೆಯುಂತಾಯಿತು. ಮುಂದೆ ಕಲಾಶಿಕ್ಷಣ ಪಡೆಯಲು ಖ್ಯಾತ ಕಲಾವಿದ ಡಾ. ಅಂದಾನಿ ವಿ.ಜಿ. ಅವರ ಕಲಾಸಂಸ್ಥೆಯಲ್ಲಿ ಸೇರಿದರು. ಉನ್ನತ ಚಿತ್ರಕಲಾ ಶಿಕ್ಷಣದ ಸಲುವಾಗಿ ಗುರುಗಳಾದ ಅಂದಾನಿಯವರ ಮಾರ್ಗದರ್ಶನ



'ಇನ್ನೊಸೇಂಟ್' ವುಡ್ ಕಟ್ ಮಾಧ್ಯಮ


ದೊಂದಿಗೆ ವಿಶ್ವಕವಿ ಕಲಾವಿದರಾದ ರವೀಂದ್ರನಾಥ ಟ್ಯಾಗೋರ ಅವರು ಸ್ಥಾಪಿಸಿದ ಶಾಂತಿನಿಕೇತನದಲ್ಲಿ 1992ರಲ್ಲಿ ಪ್ರವೇಶ ಪಡೆದುಕೊಂಡರು. 'ಗ್ರಾಫಿಕ' ವಿಷಯವನ್ನು ಆಯ್ಕೆ ಮಾಡಿಕೊಂಡು ಸೃಜನಶೀಲತೆ ಮತ್ತು ಸ್ವಂತಿಕೆಯನ್ನು ರೂಢಿಸಿಕೊಂಡು ನವ್ಯಕಲೆಯ ತಂತ್ರ ಹಾಗೂ ಕಲಾಪಂಥದ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಪ್ರೇರೇಪಿಸುತ್ತಿದ್ದ ಕಲಾ ವಿಶ್ವವಿದ್ಯಾಲಯ ಅದು. ಮಾಶಾಳಕರ ಅವರು ಸತತ ಪರಿಶ್ರಮದಿಂದ ಶ್ರದ್ಧೆ, ನಿಷ್ಠೆಯಿಂದ 'ಗ್ರಾಫಿಕ್' ಕಲೆಯ ಎಲ್ಲಾ ಆಯಾಮಗಳಲ್ಲಿ ಪರಿಣಿತಿಯನ್ನು ಹೊಂದಿ ಭಾರತದ ಕಲಾಕ್ಷೇತ್ರದಲ್ಲಿ ಗ್ರಾಫಿಕ ಮಾಧ್ಯಮವನ್ನು ತಮ್ಮ ಭಾವನೆಗಳಿಗೆ ರೂಪಕೊಡಲು ದುಡಿಸಿಕೊಂಡವರು. ಅನೇಕರು ಕರ್ನಾಟಕದಲ್ಲಿಯೂ ಇದನ್ನು ವಿಪುಲವಾಗಿ ಬಳಸಿಕೊಂಡರೂ ಕೂಡಾ ಉಳಿದ ಮಾಧ್ಯಮಗಳಿಗೆ ಹೋಲಿಸಿದಾಗ ಗ್ರಾಫಿಕ ಕ್ಷೇತ್ರದಲ್ಲಿ ದುಡಿಯುವವರು ವಿರಳವೆಂದು ಹೇಳಬಹುದು.

ಗ್ರಾಫಿಕ್ ತಂತ್ರವನ್ನು ಬಳಸಿ ಕಲಾಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡವರು ಶಶಿಕಾಂತ ಮಾಶಾಳಕರ್. ಯುವ ಹಾಗೂ ಪ್ರತಿಭಾನ್ವಿತರು ಎಂಬ ಕೀರ್ತಿಗೆ ಪಾತ್ರರಾದ ಕಲಾವಿದರು. ಶಶಿಕಾಂತ ಅವರು ಕಲೆಯ ಬಗ್ಗೆ ನಿರಂತರ ಆವಿಸ್ಕಾರಗಳನ್ನು ಕೈಗೊಳ್ಳುತ್ತಲೆ ಇರುತ್ತಾರೆ. ಸಮಕಾಲೀನ ಕಲೆಯ ಹೊಸ ಬಳವುಗಳನ್ನು ಅರಿತರಲ್ಲದೆ ಹಿರಿಯ ಕಲಾವಿದರ ಶೈಲಿಗಳನ್ನು ತಮ್ಮ ಕೃತಿಯಲ್ಲಿ ರೂಪಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಗ್ರಾಫಿಕ್ ಕೋಲೊಗ್ರಾಫಿಯಲ್ಲಿ ಹೊಸ ಹೊಸ ಆವಿಸ್ಕಾರಗಳನ್ನು ಕಂಡುಕೊಳ್ಳುವ ಬಯಕೆ ಇರುವ ಶಶಿಕಾಂತರಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿರುವ ಗ್ರಾಫಿಕ್ ಸ್ಟುಡಿಯೋದಲ್ಲಿ ದುಡಿದ ಅನುಭವವಿದೆ. ಪ್ರಸ್ತುತ ಗ್ರಾಫಿಕನಲ್ಲಿ ಭರವಸೆಯನ್ನು ಮೂಡಿಸುವತ್ತ ನಡೆದ ಯುವ ಕಲಾವಿದ ಮಾಶಾಳಕರರು ಹೊಸತನವನ್ನು ಬಯುಸುವವರು. ಬೆಂಗಳೂರಿನ ವೆಂಕಟಪ್ಪಾ ಆರ್ಟ್‌ಗ್ಯಾಲರಿ ಹಂಪಿ, ಶಾಂತಿನಿಕೇತನ ಲಲಿತಕಲಾ ಅಕಾಡೆಮಿ ಹಮ್ಮಿಕೊಂಡ 'ಚಿತ್ರಯಾತ್ರೆ' ಇಮೇಜ ಆರ್ಟ್‌ಗ್ಯಾಲರಿ, ಬೆಂಗಳೂರು ರವೀಂದ್ರ ಭವನ, ನವದೆಹಲಿ ಹಾಗೂ ರಾಷ್ಟ್ರದ ಇನ್ನಿತರ ಸ್ಥಳಗಳಲ್ಲಿ ಈ ಕಲಾವಿದರು ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನಗಳನ್ನು ಕೈಗೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ್ದ 'ಗ್ರಾಫಿಕ್ ವರ್ಕ ಶಾಪ್'ಗೆ ನಿರ್ದೇಶಕರಾಗಿ ದುಡಿದದ್ದು ಇವರ ಜೀವನದ ಪ್ರಮುಖ ಕಾರ್ಯಗಳಲ್ಲೊಂದು. ಮೂರನೇ ಹಾಗೂ ನಾಲ್ಕನೆ ಇಂಟರ್‌ನ್ಯಾಶಲ್ ಬಿನಾಲೆ, ಭಾರತ ಭವನ ಐಫೆಕ್ಸ, ದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ರಾಷ್ಟ್ರೀಯ ಕಲಾಮೇಳ ದೆಹಲಿ, ಅಂಬಾಲ ಕ್ಯಾಂಪ್; ಎಸ್.ಸಿ.ಸಿ. ನಾಗಪೂರ, ವರ್ಕಿಂಗ್ ಆರ್ಟಿಸ್ಟ ಗ್ರೂಫ್ ಓರಿಸ್ಸಾ ಹಾಗೂ ಜಹಾಂಗೀರ್ ಆರ್ಟ್‌ಗ್ಯಾಲರಿಗಳಂತಹ ಸಂಸ್ಥೆಗಳಲ್ಲಿ ಸಾಮೂಹಿಕ ಪ್ರದರ್ಶನಗಳಲ್ಲಿ ಇವರ ಕೃತಿಗಳು ಪಾಲ್ಗೊಂಡಿವೆ.

ಆಲ್ ಇಂಡಿಯಾ ಡ್ರಾಯಿಂಗ್ ಪ್ರದರ್ಶನ ಗುಲಬರ್ಗಾ ಪ್ರಶಸ್ತಿ ಹಾಗೂ ಲಲಿತಕಲಾ ಅಕಾಡೆಮಿಯ ಫೆಲೋಶಿಫ್‌ಗಳಂತಹ ಪ್ರಶಸ್ತಿ ಗಳಿಸಿದ್ದಾರೆ. (ಕೆಡಿ)

ಮಾಸ್ತಿಗಲ್ಲುಗಳು: ವೀರಗಲ್ಲುಗಳಂತೆ ಮಾಸ್ತಿಗಲ್ಲಿನಲ್ಲಿ ಭಾಗಗಳನ್ನಾಗಿ ಮಾಡಲಾಗಿದೆ. ವಿಭಿನ್ನ ರೀತಿಯ ಶೈಲಿಯ ಮಾಸ್ತಿಗಲ್ಲನ್ನು ಕೆತ್ತಲಾಗಿದೆ. ಒಕ್ಕೆಮಾಸ್ತಿಗಲ್ಲು, ಇದು ಒಂದು ಕೈ ಚಿತ್ರ. ಇಕ್ಕೈಮಾಸ್ತಿಗಲ್ಲು, ಇದು ಎರಡು ಕೈಯ ಚಿತ್ರಣವಿದೆ. ಒಂದು ಕೈತೋಳಿನ ಚಿತ್ರ ಒಬ್ಬ ಸ್ತ್ರೀಯ ಸಹಗಮನ ಎಂದು ಅರ್ಥ. ಎರಡು ಕೈ ತೋಳಿದ ಚಿತ್ರ ಇಬ್ಬರು ಸ್ತ್ರೀಯರ ಅಥವಾ ಬಹು ಪತ್ನಿತ್ವದ ಸಹಗಮನ ಎಂದು ಅರ್ಥ ನೀಡುತ್ತದೆ. ಕೆಲವು ಸಲ ಮಾಸ್ತಿಗಲ್ಲಿನಲ್ಲಿ ಒಬ್ಬ ಸ್ತ್ರೀ ಖಡ್ಗ ಹಾಗೂ ಗುರಾಣಿ ಹಿಡಿದ್ದು, ಇನ್ನೊಬ್ಬ ಸ್ತ್ರೀ ಬಿಲ್ಲುಬಾಣ ಹಿಡಿದು, ಈ ಚಿತ್ರದಿಂದ ಸ್ತ್ರೀಯರ ವೀರತನವನ್ನು, ವೀರತನಕ್ಕಾಗಿ ಬಲಿದಾನ ಮಾಡಿದೆ ಎಂದು ತಿಳಿಸುತ್ತದೆ. ಸ್ತ್ರೀಯ ಚಿತ್ರ ಮಾಸ್ತಿಗಲ್ಲಿನಲ್ಲಿ ಕೆತ್ತಿದ ಪ್ರಕಾರ, ಅನೇಕ ರೀತಿಯ ಸಹಗಮನ ಕಥೆಯನ್ನು ವಿವರಿಸುತ್ತದೆ. ಊರಿನ ರಕ್ಷಣೆಗಾಗಿ, ಬಾವಿಯಲ್ಲಿ ನೀರು ಬೀಳದ ಕಾರಣಕ್ಕಾಗಿ, ಊರಿಗೆ ಮಳೆ ಬರದಿದ್ದಕ್ಕಾಗಿ, ಸಮಾಜದಲ್ಲಿ ಅನೇಕ ಸಮಸ್ಯೆಗಳಿಗಾಗಿ, ಊರಿನ ರಕ್ಷಣೆಗಾಗಿ, ಪತಿಯ ಪ್ರೀತಿಗಾಗಿ, ಮಗನ ಪ್ರೀತಿಗಾಗಿ, ಇನ್ನೀತರ ಕಾರಣಗಳಿಗಾಗಿ ಬಲಿದಾನದ, ಗತಕಾಲದ ಕಥೆಯನ್ನು ತಿಳಿಸುತ್ತವೆ. ಶಾಸನಗಳೇ ಮಾಸ್ತಿಗಲ್ಲಿನ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಆಧಾರಗಳಾಗಿವೆ.



ಮಾಸ್ತಿಗಲ್ಲು, ಸನ್ನತಿ (ಗುಲಬರ್ಗಾ)

ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುವ ಮಾಸ್ತಿಗಲ್ಲುಗಳು ವಿಜಯನಗರ ಕಾಲಕ್ಕಿಂತ ಮುಂಚಿನವು. ಸತಿಗಲ್ಲನ್ನು ಕೆತ್ತುವಾಗ ಆ ಸನ್ನಿವೇಶ ಸಮಯ, ಸಂದರ್ಭಕ್ಕೆ ಅನುಸಾರವಾಗಿ ಕಲ್ಪನೆಯನ್ನು ಹೊಂದಿಸಿ ಕಲ್ಲನ್ನು ಕೆತ್ತಲಾಗುತ್ತಿತ್ತು ಮತ್ತು ಸ್ಥಳೀಯ ಕಲ್ಲುಗಳನ್ನೇ ತೆಗೆದುಕೊಂಡು ಕೆತ್ತುತ್ತಿದ್ದರು.

ಉದಾ: ಗುಲಬರ್ಗಾ ವಿಭಾಗದಲ್ಲಿ ಸಿಗುವ ಶಹಾಬಾದ ಕಲ್ಲುಗಳೆಂದು ಕರೆಯುವ ಸುಣ್ಣದಕಲ್ಲು, ಪದರುಗಲ್ಲು, ಗ್ರಾನೈಟ್, ಮರುಳುಗಲ್ಲುಗಳನ್ನು ಉಪಯೋಗಿಸುತ್ತಿದ್ದರು. ಗುಲಬರ್ಗಾ ಜಿಲ್ಲೆಯ ಅನೇಕ ಕಡೆ ಇಂತಹ ಸತಿಗಲ್ಲು ಸಿಗುತ್ತವೆ. ಕೆಲವು ಉಬ್ಬಿದ ಚಿತ್ರ, ಇನ್ನೊಂದು ರೇಖಾಚಿತ್ರವನ್ನು ಕೂಡಾ ಕಲ್ಲಿನಲ್ಲಿ ಸತಿಯಾದ ಕಥೆ ತಿಳಿಸುತ್ತವೆ. ಕೆಲವು ಸತಿಗಲ್ಲಿನಲ್ಲಿ ಕೆತ್ತಿದ ಚಿತ್ರ ವೀರರಾಣಿಯರೆಂದು ತಿಳಿಸುತ್ತವೆ. ಅವಳ ವೇಷಭೂಷಣ, ಅವಳ ಜೊತೆ ಸೇವಕಿಯರು ಸಾಧಾರಣ ಉಡುಗೆ, ಜೊತೆಯಲ್ಲಿ ಶಿವಲಿಂಗ ಅದು ದೇವರಲ್ಲಿ ಮುಕ್ತಿ ಪಡೆಯುವ ಚಿಹ್ನೆ ಅವಳ ಕೈಯಲ್ಲಿ ಭರ್ಚಿ, ಒಂದು ಕೈಯಲ್ಲಿ ನಿಂಬೆಹಣ್ಣು, ಕನ್ನಡಿ ಎಡಗೈಯಲ್ಲಿ ಇವುಗಳಿಂದ ಅವಳು ರಾಣಿ ಸತಿಸಹಗಮನ ಮಾಡಿದ್ದಾಳೆ ಎಂದು ಅರ್ಥೈಸುತ್ತದೆ. ಅದೇ ರೀತಿ ತನ್ನ ಗಂಡನು ಊರಿನ ರಕ್ಷಣೆಗಾಗಿ, ದನ-ಕರುಗಳಿಗಾಗಿ, ಪ್ರಾಣತೆತ್ತಿದ್ದ, ಅದಕ್ಕಾಗಿ ಅವಳು ಸತಿಯಾದ ಕಥೆ, ಅದರಲ್ಲೇ ಒಬ್ಬ ಪುರುಷ ಕೈಯಲ್ಲಿ ಖಡ್ಗ ಮತ್ತು ಮೇಲ್ಭಾಗದಲ್ಲಿ ಎರಡು ಎತ್ತುಗಳ ಚಿತ್ರಣ, ಸೂರ್ಯ-ಚಂದ್ರರ ಚಿತ್ರ-ಇವು ಸೂರ್ಯ ಚಂದ್ರರು ಇರುವ ವರೆಗೆ, ಗಂಡನ ಮತ್ತು ಸಹಗಮನ ಮಾಡಿದವಳ ಹೆಸರು ಅಮರವಾಗಿರುತ್ತದೆ ಎನ್ನುವ ನಂಬಿಕೆಯೂ ಆಗಿತ್ತು. ಈ ರೀತಿ ಸ್ತ್ರೀಯು ಕಾಲಕಾಲಕ್ಕೂ, ಸಮಾಜದ ಸಂಪ್ರದಾಯ ಕಟ್ಟಳೆಗಳಿಂದ ಬಂಧಿತಳಾಗಿ, ಸಮಾಜದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಸ್ವರ್ಗ-ನರಕಗಳ ಹೆಸರಿನಲ್ಲಿ, ಪ್ರೀತಿಯ ಹೆಸರಿನಲ್ಲಿ ಬಲಿದಾನ ಮಾಡುತ್ತಾ ಬಂದಿದ್ದಾಳೆ. ಇಂದಿಗೂ ಗುಲಬರ್ಗಾ ಜಿಲ್ಲೆಯಲ್ಲಿ ಅನೇಕ ಜಾತ್ರೆಗಳು ದೇವತೆ ರೂಪದಲ್ಲಿ ನಂಬಿಕೆ ಇಟ್ಟು ನಡೆಯುತ್ತಾ ಇವೆ. (ಎಂಬಿಸಿ)

ಮಿ

ಮಿಣಜಗಿ ಎಂ.ಡಿ.: ಹವ್ಯಾಸಿ ಛಾಯಾಚಿತ್ರಕಾರ. ಛಾಯಾಚಿತ್ರಣ ಜೀವನದ ಅಮೂಲ್ಯ ಕ್ಷಣಗಳನ್ನು, ವ್ಯಕ್ತಿ ಚಿತ್ರಗಳನ್ನು ಸೆರೆಹಿಡಿದು, ತಲೆಮಾರುಗಳ ಕಾಲ ರಕ್ಷಿಸುವಲ್ಲಿ ಛಾಯಾಚಿತ್ರ ಕಲೆಯ ಕೊಡುಗೆ ಆದ್ವಿತೀಯ ಒಂದು ಕಾಲದಲ್ಲಿ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಛಾಯಾಚಿತ್ರಗಳನ್ನು ತೆಗೆಯುತ್ತಿದ್ದ ನಮ್ಮ ಹಿರಿಯ ಕಲಾವಿದರ ಸ್ಥಿತಿಗೆ ಹೋಲಿಸಿದರೆ, ಇಂದು ಈ ಕ್ಷೇತ್ರ ಅಮೋಘ ಅಭಿವೃದ್ಧಿ ಹೊಂದಿ ಡಿಜಿಟಿಲ್ ಯುಗದಲ್ಲಿ ಕಾಲಿರಿಸಿದೆ.

ಛಾಯಾಚಿತ್ರ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ಜನರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಷ್ಟೆಲ್ಲ ಸಂಶೋಧಕರ ಪ್ರಯತ್ನದ ಫಲವೇ ಇಂದು ಈ ಕ್ಷೇತ್ರ ಜನಸಾಮಾನ್ಯರ ಕೈಗೆಟುಕುವಂತಾಗಿದೆ. ಆನಪ್ರಿಯವೂ ಆಗಿದೆ. ಇತ್ತೀಚಿನ ದಿನಗಳಲ್ಲಿ ಛಾಯಾಚಿತ್ರವಿಲ್ಲದ ಸಮಾರಂಭಗಳು ವಿರಳ.

ಪ್ರತಿ ವರ್ಷವೂ ವಿಶ್ವದಾದ್ಯಂತ ಆಗಸ್ಟ್ 19 ಛಾಯಾಚಿತ್ರ ಕ್ಷೇತ್ರದಲ್ಲಿರುವವರಿಗೆಲ್ಲ ಅವಿಸ್ಮರಣೀಯ ದಿನ. ಈ ದಿನದಂದು ಛಾಯಾಚಿತ್ರ ಕ್ಷೇತ್ರದಲ್ಲಿ ಕಾರ್ಯ ತತ್ಪರರಾಗಿರುವ ಹಿರಿಯ ಛಾಯಾಚಿತ್ರಕಾರರನ್ನು ಸ್ಮರಿಸುವುದು, ಛಾಯಾಚಿತ್ರಗಳ ಸ್ಪರ್ಧೆ, ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ವಿಶ್ವದ ಎಲ್ಲಾ ಕಡೆಗಳಲ್ಲೂ ನಡೆದುಕೊಂಡು ಬಂದಿವೆ.

ಆಗಸ್ಟ್ 19ರಂದು ವಿಶ್ವ ಛಾಯಾಚಿತ್ರ ದಿನವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲೆಯ ಹವ್ಯಾಸಿ ಛಾಯಾಚಿತ್ರಕಾರ ಡಾ.ಎಂ.ಡಿ ಮಿಣಜಗಿಯವರು, ತಮ್ಮ 40 ಛಾಯಾಚಿತ್ರಗಳನ್ನು ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ಪ್ರದರ್ಶನ ಏರ್ಪಡಿಸಿದ್ದರು; ನೋಡಗರು ತುಂಬಾ ಖುಷಿಪಟ್ಟರು.



ಕಲಬುರ್ಗಿಯಲ್ಲಿ ಅನೇಕ ವೃತ್ತಿ ಛಾಯಾಚಿತ್ರಕಾರರಿದ್ದು, ಇಲ್ಲಿಯವರೇ ಏಕವ್ಯಕ್ತಿ ಛಾಯಾ ಚಿತ್ರಪ್ರದರ್ಶನ ಏರ್ಪಡಿಸದಿರುವುದು ತುಂಬಾ ಖೇದವೆನಿಸುತ್ತದೆ. ಈ ವೃತ್ತಿಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದರೂ ಕೇವಲ ವಾಣಿಜ್ಯಕ್ಕೆ ಸಂಬಂಧಪಟ್ಟ ಛಾಯಾಚಿತ್ರಗಳನ್ನು ತೆಗೆಯುವುದರಲ್ಲಿಯೇ ತೃಪ್ತರಾಗಿದ್ದಾರೆ. ಛಾಯಾಚಿತ್ರವೂ ಒಂದು ಲಲಿತ ಕಲೆಯನ್ನಾಗಿ ಸ್ವೀಕರಿಸಿ ದುಡಿಮೆ ಮಾಡಿದವರು ಬಹಳ ವಿರಳ.

ಇವರು ವೃತ್ತಿಯಿಂದ ವೈದ್ಯರಾದರೂ, ಪ್ರವೃತ್ತಿಯಿಂದ ಹವ್ಯಾಸಿ ಛಾಯಾಗ್ರಾಹಕರು, ಕಲಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ರುಕ್ಮಾಪುರ ಗ್ರಾಮದ ಡಾ. ಮಿಣಜಗಿ ಅವರು, ಛಾಯಾಚಿತ್ರವನ್ನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ 1967ರಲ್ಲಿ ಕಪ್ಪುಬಿಳುಪು ಛಾಯಾಚಿತ್ರ ಹವ್ಯಾಸ ಬೆಳೆಸಿಕೊಂಡವರು.

ಹೋದಲ್ಲೆಲ್ಲ ಛಾಯಾಚಿತ್ರ ಸೆರೆಹಿಡಿಯುವುದು ವೈದ್ಯ ವೃತ್ತಿಯಿಂದ ನಿವೃತ್ತರಾದ ನಂತರ ಇವರ ಮುಖ್ಯ ಹವ್ಯಾಸದಲ್ಲಿ ಛಾಯಾಚಿತ್ರ ಕಲೆಯೇ ಪ್ರಮುಖವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಸರಳ ಬದುಕು ನಿವೃತ್ತ ಜೀವನದಲ್ಲಿ ಛಾಯಾಚಿತ್ರವೇ ನನಗೆ ತೃಪ್ತಿ ತಂದಿದೆ ಎನ್ನುತ್ತಾರೆ.

ಮೊದಲೇನೋ ಊರೂರು ಸುತ್ತುತ್ತಿದ್ದರು. ಹೋದಾಗಲೆಲ್ಲ ಚಿತ್ರ ತೆಗೆಯುತ್ತಿದ್ದರು. ನಿವೃತ್ತಿಯ ನಂತರ ಸುತ್ತುವದೂ ಕಡಿಮೆಯಾಗಿದೆ. ಆದರೆ ಛಾಯಾಚಿತ್ರ ತೆಗೆಯುವುದು ಹವ್ಯಾಸದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಕಲಬುರ್ಗಿ ಶ್ರೀ ಶರಣಬಸವೇಶ್ವರ ದೇವಾಲಯ, ಪ್ರದಕ್ಷಿಣೆ ಪಥ ಹಾಗೂ ರಾತ್ರಿಯ ಕಾರಂಜಿ ಸೌಂದರ್ಯಗಳನ್ನು ತಮ್ಮ ಕ್ಯಾಮರಾದಲ್ಲಿ ಸುಂದರವಾಗಿ ಸೆರೆ ಹಿಡಿದಿದ್ದಾರೆ. ಶ್ರೀ ರಾಮ ಮಂದಿರ, ಶ್ರೀ ಅರವಿಂದ ಧ್ಯಾನ ಮಂದಿರ, ವಿಶ್ವೇಶ್ವರಯ್ಯ ನಗರದ ಶಿವಮಂದಿರ, ಕಲಬುರ್ಗಿ ಕೋಟೆ, ಜಮಾ ಮಸೀದಿ, ಹಜರತ ಖಾಜಾ ಬಂದೇನವಾಜ ದರ್ಗಾ, ವಿಕಾಸಭವನ, ಇಂದಿರಾ ಸ್ಮಾರಕ ಭವನ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಕೇಂದ್ರ ಗ್ರಂಥಾಲಯ, ಕಲಬುರ್ಗಿ ವಿಶ್ವವಿದ್ಯಾಲಯ, ಚಾಲುಕ್ಯ ಹಾಗೂ ರಾಷ್ಟ್ರಕೂಟರ ಮಹಾದ್ವಾರಗಳು, ಕೀಟಗಳು, ಮೋಡಗಳು, ಎಲೆಗಳ ಮೇಲೆ ನೀರ ಹನಿ ಮಿನುಗುವದು ಮುಂತಾದವುಗಳನ್ನು ಪ್ರದರ್ಶಿಸಿದಾಗ ಚೈತನ್ಯಮಯಿ ಆರ್ಟ್‌ಗ್ಯಾಲರಿಯ ನೋಡುಗರಿಗೆ ಸಂತಸವನ್ನುಂಟು ಮಾಡುತ್ತದೆ.



'ನಮ್ಮ ಭಾರತ' ಛಾಯಾಚಿತ್ರ

ಹಿಂದೂ ಮುಸ್ಲಿಂ ವಾಸ್ತು ಶೈಲಿಯ ಐತಿಹಾಸಿಕ ಸ್ಮಾರಕಗಳ ಛಾಯಾಚಿತ್ರಗಳು, ಬಸಪ್ಪ ಶಿರವಾಳಕರ ಅವರ ಕಪ್ಪು ಬಿಳುಪಿನ ಛಾಯಾಚಿತ್ರಗಳ ಪ್ರದರ್ಶನ, ಎ.ಎಸ್. ಪಾಟೀಲರ ಹಿಮಾಲಯ ಆಶ್ರಮಗಳ ದಿವ್ಯ ಸೌಂದರ್ಯ ಛಾಯಾಚಿತ್ರ ಪ್ರದರ್ಶನಗಳ ಪ್ರೇರಣೆಯನ್ನು ಪಡೆದ ಇವರು ಕೂಡ ತಮ್ಮ ಚಿತ್ರಗಳನ್ನು ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ಸಾರ್ವಜನಿಕರಿಗೆ ನೋಡಲು ಅವಕಾಶ ಕಲ್ಪಿಸಿ, ಛಾಯಾಗ್ರಹಣದಲ್ಲಿ ಎಲ್ಲರಿಗೂ ಆಸಕ್ತಿ ಮೂಡುವಂತೆ ಮಾಡಿದರು.

ನಿತ್ಯ ನಮ್ಮ ಕಣ್ಣೆದುರೇ ಕಾಣುವ ದೃಶ್ಯಗಳನ್ನು ವಿಭಿನ್ನ ಕೋನಗಳಲ್ಲಿ ಹಾಗೂ ನೆರಳು-ಬೆಳಕಿನ ಚಿತ್ರಗಳನ್ನು ಸೆರೆಹಿಡಿದ ಬಗೆ ಮೆಚ್ಚುವಂಥದ್ದು, ಕ್ಯಾಮೆರಾ ಬಗ್ಗೆ ಹೆಚ್ಚು ತಿಳಿಯದಿದ್ದರೂ, ತಮ್ಮ ಅನುಭವದಿಂದಲೇ ಮುಸ್ಸಂಜೆಯ ಹೊತ್ತಿನ ಸುಂದರ ದೃಶ್ಯಗಳನ್ನು ಸೆರೆಹಿಡಿದು ಚಿತ್ರ ಪ್ರೇಮಿಗಳ ಮುಂದಿಟ್ಟು ಭೇಷ್ ಎನಿಸಿಕೊಂಡಿದ್ದಾರೆ ಡಾ. ಮಿಣಜಗಿಯವರು. (ಎನ್‌ಎಂಜೆ)

ಮು

ಮುದ್ರಣಕಲೆ: ಮುದ್ರಣಕಲೆಗೆ ಆಂಗ್ಲ್ ಭಾಷೆಯಲ್ಲಿ 'ಗ್ರಾಫಿಕ್' ಅಥವಾ 'ಪ್ರಿಂಟ್‌ಮೇಕಿಂಗ್' ಎಂದು ಕರೆಯಲಾಗುತ್ತದೆ. ಅನೇಕ ವರ್ಷಗಳಿಂದ ಸಾಕಷ್ಟು ಕಲಾವಿದರು ಮುದ್ರಣ ಕಲೆಯಲ್ಲಿ ಹಲವು ಬಗೆಯ ಪ್ರಯೋಗಗಳನ್ನು ಮಾಡುತ್ತ ಬಂದಿದ್ದಾರೆ. ಈ ಕಲೆಯಲ್ಲಿ ಸೌಂದರ್ಯದಷ್ಟೇ ಮಹತ್ವ ತಂತ್ರ ವಿಧಾನಕ್ಕೂ ನೀಡಲಾಗುತ್ತದೆ. ಛಾಯಾಚಿತ್ರ ಮುದ್ರಣ, ಅಮೋನಿಯಾ ಮುದ್ರಣ, ಬ್ರೋಮೈಡ್, ಝೆರಾಕ್ಸ್, ಮೋನೋಪ್ರಿಂಟ್‌ಗಳೊಂದಿಗೆ ಕಂಪ್ಯೂಟರ್ ಆರ್ಟ್ ಕೂಡ ಮುದ್ರಣ ಕಲೆಯ ವ್ಯಾಪ್ತಿಗೊಳಪಡುತ್ತವೆ.

ಮುದ್ರಣ ಕಲೆಯಲ್ಲಿ 1. ಉಬ್ಬಚ್ಚು ಮುದ್ರಣ (Relief Printing), 2. ಇಂಟಾಗ್ಲಿಯೋ ಮುದ್ರಣ (Intaglio Printing), 3. ಲಿಥೋಗ್ರಫಿ ಮುದ್ರಣ (Lithography Printing), 4. ಪರದೆ ಮುದ್ರಣ (Screen Printing) ಎಂಬ ನಾಲ್ಕು ಪ್ರಚಲಿತ ತಂತ್ರಗಳಿವೆ.

ಉಬ್ಬಚ್ಚು ಮುದ್ರಣವು ಉಳಿದೆಲ್ಲ ಮುದ್ರಣ ತಂತ್ರಗಳಿಗಿಂತ ಸರಳವಾದುದು. ಈ ತಂತ್ರ ವಿಧಾನದಲ್ಲಿ ಕಲಾವಿದನು ಸಮತಟ್ಟಾದ ಮರದ ಹಲಗೆಯಲ್ಲಿ ತನಗೆ ಬೇಕಾದ ಭಾಗಗಳನ್ನು ಕೆತ್ತಿ ತೆಗೆದು ಆ ಹಲಗೆಯ ಮೇಲೆ ರೋಲರ್‌ಗಳನ್ನು ಬಳಸಿಕೊಂಡು ತನಗೆ ಬೇಕಾದ ಶಾಯಿಯನ್ನು ಸವರಿ ಪ್ರತಿಗಳನ್ನು ತೆಗೆಯುತ್ತಾನೆ. ಕೆತ್ತಿದ ಭಾಗದಲ್ಲಿ ಶಾಯಿಯು ಹತ್ತುವುದಿಲ್ಲ. ಬದಲಾಗಿ




'ಲಿಥೋಗ್ರಫಿ ಮುದ್ರಣ ಯಂತ್ರ

ಮುದ್ರಿತ ಪ್ರತಿಗಳಲ್ಲಿ ಖಾಲಿ ಅವಕಾಶವಾಗಿ ಬಿಳುಪಿನ ಭಾಗ ಕಂಡುಬರುತ್ತದೆ. ಹೀಗಾಗಿ ಚಿತ್ರದಲ್ಲಿ ಕಪ್ಪು ಮತ್ತು ಬಿಳಿ ಬಣ್ಣಗಳ ಸಹಾಯದಿಂದ ಚಿತ್ರವು ಪೂರ್ಣಗೊಂಡು ನೋಡಲು ಚೆನ್ನಾಗಿ ಕಾಣುತ್ತದೆ. ಈ ಮುದ್ರಣ ತಂತ್ರದಲ್ಲಿ ಮರ ಮತ್ತು ರಬ್ಬರ ಹಾಳೆಗಳಲ್ಲದೇ ಪ್ಲಾಸ್ಟರ ಆಫ್ ಪ್ಯಾರಿಸ್, ಪ್ಲಾಸ್ಟಿಕ್, ಲೋಹದ ಹಾಳೆ, ಆಲೂಗಡ್ಡೆ, ಬಟ್ಟೆ ಹೀಗೆ ಅನೇಕ ತರಹದ ವಸ್ತುಗಳನ್ನು ಬಳಸಬಹುದು. ಆದರೆ ಇಂದು ಮರ ಮತ್ತು ರಬ್ಬರ ಹಾಳೆಗಳು ಹೆಚ್ಚಾಗಿ ಬಳಸಲ್ಪಡುತ್ತಿವೆ.

ಲೋಹದ ಫಲಕದ ಮೇಲೆ ರೇಖೆಗಳನ್ನು ಕೆತ್ತುವ ಇಲ್ಲವೆ ಕೊರೆಯುವುದೇ ಇಂಟಾಗ್ಲಿಯೋ ಮುದ್ರಣ ತಂತ್ರವಿಧಾನದ ವೈಶಿಷ್ಟ್ಯ. ಮೊದಲಿಗೆ ನಮಗೆ ಬೇಕಾದ ಆಕಾರದಲ್ಲಿ ಫಲಕವನ್ನು ತಯಾರಿಸಿಕೊಳ್ಳಬೇಕು. ಆಮೇಲೆ ಫಲಕದ ಮೇಲೆ ಬಣ್ಣಗಳನ್ನು ಹಚ್ಚಿ; ನಂತರ ಬಣ್ಣಗಳು ಹೋಗದೇ ಇರುವಹಾಗೆ ನಿಧಾನವಾಗಿ ಒರೆಸಿದಾಗ ಕೊರೆದ ತಗ್ಗಿನಂತಹ ರೇಖೆಯಲ್ಲಿ ಮಾತ್ರ ಬಣ್ಣ ಉಳಿದುಕೊಂಡು ಮೇಲ್ಮೈಯು ಶುಭ್ರವಾಗುತ್ತದೆ. ನಂತರದಲ್ಲಿ ತೇವವಾದ ಮೃದು ಕಾಗದವನ್ನು ಫಲಕದ ಮೇಲಿಟ್ಟು ಹಾಳೆ ಮತ್ತು ಫಲಕ ಎರಡನ್ನೂ ಒಟ್ಟಿಗೆ ಎಚ್ಚಿಂಗ್ ಪ್ರೆಸ್‌ನಲ್ಲಿ ಹಾಯಿಸಲಾಗುತ್ತದೆ. ಎಚ್ಚಿಂಗ್ ಯಂತ್ರದಲ್ಲಿ ಮೇಲೆ ಕೆಳಗೆ ಎರಡೂ ಕಡೆಗಳಲ್ಲಿ ಇರುವ ಕಬ್ಬಿಣದ ರೋಲರ್‌ಗಳು ಬೀರುವ ಒತ್ತಡಕ್ಕೆ ಬಣ್ಣವು ಕಾಗದಕ್ಕೆ ವರ್ಗಾವಣೆಯಾಗಿ ಚಿತ್ರವು ನೋಡಲು ಸುಂದರವಾಗಿ ಕಂಡುಬರುವುದು. ಹೀಗೆ ನಮಗೆ ಬೇಕಾದಷ್ಟು ಪ್ರತಿಗಳನ್ನು ಈ ತಂತ್ರ ವಿಧಾನದ ಮೂಲಕ ಪಡೆದುಕೊಳ್ಳಬಹುದು.

'ಲಿಥೋಗ್ರಫಿ'ಯನ್ನು ಕನ್ನಡದಲ್ಲಿ ಕಲ್ಲಚ್ಚು ಮುದ್ರಣವೆಂದು ಕರೆಯಲಾಗುತ್ತದೆ. ಮೃದುವಾದ ಕಲ್ಲಿನ ಮೇಲೆ ಅಚ್ಚನ್ನು ತೆಗೆಯುವುದೇ ಈ ತಂತ್ರವಿಧಾನದ ವೈಶಿಷ್ಟ್ಯವಾಗಿದೆ. ಲಿಥೋಗ್ರಫಿಯಲ್ಲಿ ನೀರು ಮತ್ತು ಗ್ರೀಸ್‌ನ ನಡುವಣ ವೈರುಧ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಲಿಥೋದಲ್ಲಿ ಮುದ್ರಣವಾಗುವ ಚಿತ್ರ ಮತ್ತು ಮುದ್ರಣವಾಗದ ಭಾಗಗಳು ಒಂದೇ ಸಮತಲದಲ್ಲಿರುತ್ತವೆ. ಚಿತ್ರಿತ ಭಾಗಗಳನ್ನು ಗ್ರೀಸ್ ಅಂಶವಿರುವ ಕ್ರೇಯಾನ್ (ಕಪ್ಪು ಮಸಿಯ ಖಡು) ಇಲ್ಲವೆ ಶಾಯಿಯಿಂದ ರಚಿಸುವುದರಿಂದ ಅದು ಮುದ್ರಣ ಶಾಯಿಯನ್ನು ಸಹಜವಾಗಿಯೇ ಆಕರ್ಷಿಸುತ್ತದೆ. ಮಿಕ್ಕಿದ ಭಾಗಗಳು ನೀರನ್ನು ಆಕರ್ಷಿಸುವುದರಿಂದ ಅಲ್ಲಿ ಮುದ್ರಣ ಶಾಯಿಯು ಕೂರುವುದಿಲ್ಲ. ಲಿಥೋಗ್ರಫಿ ತಂತ್ರವನ್ನು ಹಿಂದೆ ಯುರೋಪಿನ ಬವಾಯಿಯದಿಂದ ತಂದ ವಿಶೇಷ ಕಲ್ಲಿನ ಮೇಲೆ ಮಾಡಲಾಗುತ್ತಿತ್ತು. ನಂತರದ ದಿನಗಳಲ್ಲಿ ಸತುವು ಮತ್ತು ಅಲ್ಯೂಮಿನಿಯಂ ಹಾಳೆಗಳ ಮೇಲೆಯೂ ಈ ತಂತ್ರವನ್ನು ಬಳಸಲಾಯಿತು.

ಪರದೆ ಮುದ್ರಣಕ್ಕೆ ಆಂಗ್ಲ ಭಾಷೆಯಲ್ಲಿ 'ಸೆರಿಗ್ರಫಿ', 'ಸ್ಕ್ರೀನ್ ಪ್ರಿಂಟಿಂಗ್' ಎಂದು ಕರೆಯಲಾಗುತ್ತದೆ. ವಾಣಿಜ್ಯಪರ ನೆಲೆಯಲ್ಲೇ ಕಾಣಿಸಿಕೊಂಡ ಈ ತಂತ್ರವಿಧಾನ ಕಲಾ ವಲಯದಲ್ಲೂ



ಸಿಲ್ಕ್ ಸ್ಕ್ರೀನ್ ಪ್ರಿಂಟ್ಸ್

ಬಳಕೆಗೊಳ್ಳುತ್ತಿರುವುದನ್ನು ಕಾಣಬಹುದು. ಬಿಂದುವನ್ನು ಹೊಂದಿದ ಸ್ಟೆನ್ಸಿಲ್‌ನ್ನು ಜಾಲರಿಯಿಂದ ರೇಷ್ಮೆ ಅಥವಾ ನೈಲಾನ್ ಬಟ್ಟೆಯ ಮೇಲೆ ಅಂಟಿಸಲಾಗುತ್ತದೆ. ಸ್ಟೆನ್ಸಿಲ್‌ನಲ್ಲಿ ತೆರಪಿರುವ ಜಾಗದ ಮೂಲಕ ಬಣ್ಣ ಹಾಯ್ದು ಕೆಳಗಿರುವ ಕಾಗದ ಅಥವಾ ಇನ್ನಾವುದೇ ಮೇಲ್ಮೈ ಮೇಲೆ ಅದು ಮುದ್ರಣವಾಗುತ್ತದೆ. ಬಣ್ಣವನ್ನು ಜಾಲರಿಯ ಮೂಲಕ ತಳ್ಳಲು ರಬ್ಬರ್‌ನಂತಹ ಚಪ್ಪಟೆಯಾಕಾರದ ಸ್ಕೀಜರ್‌ನ್ನು ಬಳಸಲಾಗುತ್ತದೆ.

ಮುದ್ರಣ ಕಲೆ ಬೆಳೆದುಬಂದ ಬಗೆ: ವಾಣಿಜ್ಯಪರ ನೆಲೆಯಲ್ಲಿ ಕಾಣಿಸಿಕೊಂಡ ಮುದ್ರಣ ಮಾಧ್ಯಮವಿಂದು ಕಲಾವಲಯದಲ್ಲೂ ಬಹು ಪ್ರಚಲಿತದಲ್ಲಿದೆ. ಮುದ್ರಣತಂತ್ರ ಯುರೋಪಿನಲ್ಲಿ ಬಹು ಪ್ರಚಲಿತದಲ್ಲಿದ್ದು, ಭಾರತಕ್ಕೆ ಬಂದದ್ದು 1556ರಲ್ಲಿ. ಕ್ರಿಶ್ಚಿಯನ್ ಮಿಶನರಿಗಳು ಭಾರತಕ್ಕೆ ಬಂದಾಗ ಈ ತಂತ್ರವನ್ನು ಬಳಸಿದರೆಂದು ಹೇಳಲಾಗುತ್ತದೆ. ಇವರು ಧರ್ಮ ಪ್ರಚಾರಕ್ಕಾಗಿ, ಧರ್ಮ ಸಂದೇಶದ ಭಿತ್ತಿಪತ್ರಗಳನ್ನು ಮುದ್ರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಂತರದ ದಿನಗಳಲ್ಲಿ ಮುದ್ರಣತಂತ್ರ ಭಾರತದ ಅನೇಕ ಕಡೆಗಳಲ್ಲಿ ಬಳಕೆಗೆ ಬಂತು. ಬ್ರಿಟಿಷರು ಭಾರತಕ್ಕೆ ಬಂದಾದ ಮೇಲೆ ಅವರ ಕಲೆಯಲ್ಲಿ (ಕಂಪನಿ ಕಲೆ) ಭಾರತದ ವಿಶಿಷ್ಟ ದೃಶ್ಯಗಳನ್ನು, ಪ್ರವಾಸಿ ತಾಣಗಳನ್ನು ಹಾಗೂ ಭಾರತೀಯ ಜನಜೀವನದ ತುಣುಕುಗಳನ್ನು ದಾಖಲಿಸಲು ಮುದ್ರಣ ತಂತ್ರಗಳನ್ನು ಬಳಸಿಕೊಂಡಿದ್ದಾರೆ. ಆದರೂ ಇವರ ಕಾಲದಲ್ಲಿ ಭಾರತದಲ್ಲಿ ಸ್ಥಾಪಿತವಾದ ಮುಂಬಯಿ, ಮುದ್ರಾಸ್ (ಇಂದಿನ ಚೆನ್ನೈ), ಕಲ್ಕತ್ತಾ ಮುಂತಾದ ಕಲಾಶಾಲೆಗಳಲ್ಲಿ ಮುದ್ರಣಕಲೆಗೆ ಹೆಚ್ಚಿನ ಪ್ರಾಶಸ್ತ್ಯವಿರಲಿಲ್ಲ.

ಕರ್ನಾಟಕದಲ್ಲಿ ಮುದ್ರಣಕಲೆಯ ಚಟುವಟಿಕೆ ತೀವ್ರವಾದದ್ದು 1979ರಲ್ಲಿ. ಖ್ಯಾತ ಕಲಾವಿದ ಕೆ.ಕೆ. ಹೆಬ್ಬಾರರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ವೇಳೆ ಕಲ್ಕತ್ತಾದ ಶಾಂತಿನಿಕೇತನ ಮತ್ತು ಬರೋಡ ಕಲಾಶಾಲೆಗಳಲ್ಲಿನ ಮುದ್ರಣ ತಂತ್ರಗಳನ್ನು ಕಲಿಯಲು ರಾಜ್ಯದಿಂದ ಯುವ ಕಲಾವಿದರನ್ನು ಕಳುಹಿಸಿದಾಗಿನಿಂದ ಕರ್ನಾಟಕದಲ್ಲಿ ಮುದ್ರಣಕಲೆಯ ಸ್ವಲ್ಪಮಟ್ಟಿಗೆ ವಿಕಾಸ ಹೊಂದಿತೆಂದೇ ಹೇಳಬಹುದು. ಆದರೆ ಇದು ಬಹಳ ದಿನಗಳವರೆಗೆ ಮುಂದುವರೆಯದಿರುವುದು ವಿಷಾದವೆನಿಸುತ್ತದೆ. 1929ರಲ್ಲಿ ಇಂಗ್ಲೆಂಡಿನಲ್ಲಿ ಕೆಲಕಾಲ ಇದ್ದು ಅಲ್ಲಿನ 'ಗ್ರಾಫಿಕ್ ಸೊಸಾಯಿಟಿ ಆಫ್ ಆರ್ಟ್ಸ್'ನ ಸದಸ್ಯರಾದ ಎನ್.ಜೆ. ಪಾವಂಜೆ ಮತ್ತು ಅದೇವರ್ಷ ಇಂಗ್ಲೆಂಡಿನಲ್ಲಿ ಗ್ರಾಫಿಕ್ ಕಲೆಯನ್ನು ಕುರಿತು ಅಭ್ಯಾಸ ಮಾಡಿದ ಎಂ.ವಿ. ಮಿಣಜಗಿಯವರು ಭಾರತಕ್ಕೆ ಬಂದಮೇಲೆ ತಮ್ಮನ್ನು ಮುದ್ರಣಕಲೆಯಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳಲಿಲ್ಲ. ಅಂದು ಮುದ್ರಣಕಲೆಗೆ ಬೇಕಾಗುವ ಸವಲತ್ತುಗಳು ನಮ್ಮಲ್ಲಿ ಇಲ್ಲದಿರುವುದು ಇದಕ್ಕೆ ಕಾರಣ ಎಂದು ಹೇಳಬಹುದು. ಇವರೀರ್ವರ ಅನುಭವ ನಮಗೆ ಆಗಿನಿಂದಲೇ ದಕ್ಕದೇ ಹೋದದ್ದು ಶೋಚನೀಯ. ಮುಂದಿನ ದಿನಗಳಲ್ಲಿ ಕೆಲವರು ಲಂಡನ್‌ನ ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ನಂತಹ ಅಂತರರಾಷ್ಟ್ರೀಯ ಮಟ್ಟದ ಕಲಾಶಾಲೆಗಳಿಗೆ ಹೋಗಿ ಗ್ರಾಫಿಕ್ ಕಲೆಯನ್ನು ಕರಗತ ಮಾಡಿಕೊಂಡರು.

ಪ್ರಾರಂಭದ ದಿನಗಳಲ್ಲಿ ಕಲ್ಕತ್ತ ಮತ್ತು ಬರೋಡ ಕಲಾಶಾಲೆಗಳಲ್ಲಿ ಮಾತ್ರ ಮುದ್ರಣಕಲೆ ಅಭ್ಯಾಸ ಮಾಡಲು ಅನುಕೂಲವಿತ್ತು. ನಂತರದ ದಿನಗಳಲ್ಲಿ ಈ ಒಂದು ಕೊರತೆಯನ್ನು ನೀಗಿಸಲು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು, ಕೆನ್ ಕಲಾಶಾಲೆ, ಮೈಸೂರಿನ ಕಾವಾ, ಗುಲಬರ್ಗಾದ ಶ್ರೀ ಶರಣಬಸವೇಶ್ವರ ಸ್ನಾತಕೋತ್ತರ ಲಲಿತಕಲಾ ವಿಭಾಗ, ಎಂ.ಎಂ.ಕೆ. ಕಾಲೇಜು, ಬಿಜಾಪುರದ ಸಿದ್ಧೇಶ್ವರ ಕಲಾಮಂದಿರ, ದಾವಣಗೆರೆಯ ಕಲಾಶಾಲೆಗಳಲ್ಲಿ ಗ್ರಾಫಿಕ್ ವಿಭಾಗಗಳು ಪ್ರಾರಂಭಗೊಂಡಿದ್ದರಿಂದ ಈ ಭಾಗದ ಕಲಾ ವಿದ್ಯಾರ್ಥಿಗಳು ಗ್ರಾಫಿಕ್ ವಿಷಯದಲ್ಲಿ ಅಧ್ಯಯನ ಕೈಗೊಳ್ಳಲು ಅನುಕೂಲವಾಯಿತು.

(ಎಂಸಿಬಿ)

ಮುರಳಿಧರ ಕೆ.: ಇವರ ತಂದೆ ಕೊಪ್ಪಳದ ಹನುಮಂತಪ್ಪ. ತಾಯಿ ಜಾನಕಿಬಾಯಿ ಬಾಲ್ಯದಿಂದಲೇ ಕಲೆಯನ್ನು ಕರಗತ ಮಾಡಿಕೊಂಡವರು. ತಮ್ಮ 13ನೆಯ ವರ್ಷದಿಂದಲೇ ನಾಟಕದ ಗೀಳು ಹಚ್ಚಿಕೊಂಡಿರುವ ಇವರು 1970ರಲ್ಲಿ 'ಗರತಿಯ ಶಾಪ' ನಾಟಕ, ನೃತ್ಯದ ಶಾಸ್ತ್ರೀಯ ಅಧ್ಯಯನವಿಲ್ಲದಿದ್ದರೂ ಎಂತಹ ಕಲಾವಿದರನ್ನೂ ತಲೆದೂಗಿಸುವ ಪ್ರಾವಿಣ್ಯತೆ ಪಡೆದವರು. 1972ರಲ್ಲಿ ಶಿವಕೃಪ ನಾಟಕದ ನಟನಾಗಿ ಪಾತ್ರ ಮತ್ತು ನೃತ್ಯ ನೆರವೇರಿಸಿದರು. ಹವ್ಯಾಸಿ ರಂಗಭೂಮಿಯಲ್ಲಿ ನಿರಂತರ 11 ವರ್ಷ ಸೇವೆ ಮಾಡಿದರು.

1980ರಲ್ಲಿ ಸಂಗಮೇಶ್ವರ ನಾಟ್ಯ ಸಂಘ ಸೂಡಿ, ಶ್ರೀ ರೇಣುಕಾ ನಾಟ್ಯ ಸಂಘ ಅಬ್ಬಿಗೇರಿ, ಶ್ರೀ ದುರ್ಗಾ ಪರಮೇಶ್ವರಿ ನಾಟ್ಯ ಸಂಘ ತಳಕಲ, ಚಿತ್ತರಗಿ ಕಂಪನಿ, ಕೆ.ಬಿ.ಆರ್. ಡ್ರಾಮಾ ಕಂಪನಿ, ಕಮತಗಿ ಕಂಪನಿ, ದೊಡ್ಡವಾಡ ಶಿವಪುತ್ರಯ್ಯ ಅವರ ಕಂಪನಿ ಮುಂತಾದ ಇನ್ನೂ ಅನೇಕ ವೃತ್ತಿ ನಾಟಕ ಕಂಪನಿಗಳಲ್ಲಿ ಇವರು ತಮ್ಮ ಕಲಾಸೇವೆ ಸಲ್ಲಿಸಿದರು. ಇವರಿಗೆ ರಂಗಭೂಮಿಯ ಮೇಲೆ ಹೆಸರು ತಂದುಕೊಟ್ಟ ನಾಟಕಗಳೆಂದರೆ,

ಎಚ್.ಎನ್. ಹೂಗಾರ ಕೃತ ಕೊರವಂಜಿ ನಾಟಕದಲ್ಲಿ ಕೊರವಂಜಿ ಪಾತ್ರ, ಎನ್.ಎಸ್. ಜೋಶಿಯವರ ರತ್ನ ಮಾಂಗಲ್ಯದಲ್ಲಿ ಛಾಯಾ, ಶಕೀಲಾ ಕ್ಷೇತ್ರದಲ್ಲಿ ಹಾಗೂ 'ಬಂಜೆ ತೊಟ್ಟಿಲು' ನಾಟಕದಲ್ಲಿ 'ಸಾಹುಗಾರ ಸಂಗವ್ವ'ನ ಪಾತ್ರ ಮಹಾಂತೇಶ್ ಮಾಂಡ್ರೆಯವರ ಮಹಾಲಿಂಗೇಶ್ವರ ಮಹಾದೇವ ನಾಟಕದಲ್ಲಿ ನೀಲಾ ಎಂಬ ಕುರಡಿಯ ಪಾತ್ರ ಮಾಡಿದ್ದಾರೆ. ಕುರಡಿ ಪಾತ್ರ ಇವರಿಗೆ ತೃಪ್ತಿ ತಂದುಕೊಟ್ಟ ಪಾತ್ರ. ಕೆ.ಎನ್. ಸಾಳುಂಕೆ ವಿರಚಿತ ಬದುಕು ಬಂಗಾರವಾಯ್ತು ನಾಟಕದಲ್ಲಿ ಗಿರಿಜಾ ಹಾಗೂ ಮಹಾದೇವಿ, (ಹಾಸ್ಯ) ಪಾತ್ರಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಿ ತೋರಿಸಿದರು. ಪಂಡಿತ ಪುಟ್ಟರಾಜ ಗವಾಯಿಗಳ ವಿರಚಿತ ಶಿವಶರಣೆ ಅಕ್ಕಮಹಾದೇವಿ, ನಲೂರ ನಂಬಕ್ಕ ಕೊಟ್ಟೂರು, ಬಸವೇಶ್ವರ ಮಹಾತ್ಮೆ ಮೊದಲಾದ ಅನೇಕ ನಾಟಕಗಳಲ್ಲಿ ವಿವಿಧ ಸ್ತ್ರೀಪಾತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡರು. ಒರೆಗೆ ಹಚ್ಚುವ (Challenging) ಪಾತ್ರಕ್ಕಾಗಿ ಕಾಯುತ್ತಿರುವ ಜೋಶಿಯವರ, ಚನ್ನಪ್ಪ ಚೆನ್ನಗೌಡ, ನಾಟಕದಲ್ಲಿ ದುರಂತ ನಾಯಕಿ (ಪಾರ್ವತಿ ಪಾತ್ರ), ಕಾಲೇಜ್ ಹುಡುಗಿಯಾಗಿ, ಗರತಿಯಾಗಿ, ಒಕ್ಕಲಗಿತ್ತಿಯಾಗಿ ವಿಧವೆಯಾಗಿ, ಹುಚ್ಚಿಯಾಗಿ, ಮುದುಕಿಯಾಗಿ ಮನ ಮಿಡಿಯುವಂತೆ ಅಭಿನಯಿಸಿದ್ದಾರೆ.

ಒಮ್ಮೆ ರಂಗಭೂಮಿಯ ಮೇಲೆ ಅಭಿನಯಿಸುತ್ತಿರುವಾಗ, ತಮ್ಮನ್ನೇ ತಾವು ಮರೆತು ಪಾತ್ರವನ್ನು ಅಭಿನಯಿಸುತ್ತಿರಾವಾಗ ಬಳೆ ಒಡೆಯುವ ಸನ್ನಿವೇಶದಲ್ಲಿ ಆಕಸ್ಮಿಕವಾಗಿ ಗಾಜುಗಳು ನರಗಳಿಗೆ ತಾಗಿ, ರಂಗಭೂಮಿಯ ಮೇಲೆಲ್ಲಾ ರಕ್ತ ಸುರಿಯುತ್ತಿದ್ದರೂ, ಅದರ ಪರಿವೆ ಇಲ್ಲದೇ ಅಭಿನಯದಲ್ಲೇ ನಿರತರಾದ ದೃಶ್ಯ ಕಂಡು ಪ್ರೇಕ್ಷಕರು ಮೇಲೆದ್ದು ಅಯ್ಯೋ ನಿಮ್ಮ ರಕ್ತವೆಲ್ಲ ರಂಗಭೂಮಿಗೆ ಹೋಗ್ತಾ ಇದೆ ಎಂದು ಕೂಗಲು ಆರಂಭಿಸಿದರೂ ತಮ್ಮ ನಟನೆಯಲ್ಲೇ ತೊಡಗಿ ಎಲ್ಲರನ್ನು ದಂಗು ಪಡಿಸಿದ್ದರು.


ಚಲನಚಿತ್ರ ನಟರೊಂದಿಗೂ ಸಹ ಇವರು ನಾಟಕದಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಚಲನ ಚಿತ್ರನಟರಾದ 'ಸುಧೀರ್' ಜೊತೆ 'ಗೌಡ್ರ ಗದ್ಲ' ನಾಟಕದಲ್ಲಿ 'ಮಧುರ್'ನ ಪಾತ್ರ ಮಾಡಿದ್ದಾರೆ. ಹಾಸ್ಯನಟ ಉಮೇಶ ಜೊತೆ 'ಕೊಂಡು ತಂದ ಗಂಡ' ನಾಟಕದಲ್ಲಿ ಭವಾನಿ ಪಾತ್ರ ಮಾಡಿದ್ದಾರೆ. ಹಾಸ್ಯ ನಟ ಬಿ.ಕೆ. ಶಂಕರ ಜೊತೆ ಬಸ್ ಕಂಡಕ್ಟರ್ ನಾಟಕದಲ್ಲಿ 'ಖಾನಾವಳಿ ಚನ್ನಿ' ಪಾತ್ರದಲ್ಲಿ ವಜ್ರಮನಿಯವರ ಜೊತೆ ರತ್ನ ಮಾಂಗಲ್ಯ, ಹೆಸರಿಗೊಬ್ಬ ಗಂಡ ನಾಟಕದಲ್ಲಿ ಅಭಿನಯಿಸಿದ್ದಾರೆ. ಡಿಂಗ್ರಿ ನಾಗರಾಜರೊಂದಿಗೆ ತವರು ಮನೆ ನಾಟಕದಲ್ಲಿ ಬಂಗಾರಿ ಪಾತ್ರದಲ್ಲಿ ಮುರಳಿಯವರು ರಂಗಭೂಮಿಯ ಮೇಲೆ ಸ್ತ್ರೀ ವೇಷದಲ್ಲಿ ಅಭಿನಯಿಸುತ್ತಿರುವಾಗ, ಎಷ್ಟೋ ಜನ ಪ್ರೇಕ್ಷಕರು, ಜೂಜು ಕಟ್ಟಿ ಸೋತ ಅನೇಕ ಪ್ರಸಂಗಗಳೂ ಉಂಟು.

ಗದಗ ತಾಲ್ಲೂಕಿನ ಹೊಂಬಳ ಕ್ಯಾಂಪ್‌ದಲ್ಲಿ ರಂಗಭೂಮಿಯ ಗಜಸಿಂಹ ಖ್ಯಾತ ಚಲನಚಿತ್ರ ನಟ ಎಲಿವಾಳ ಸಿದ್ದಯ್ಯಸ್ವಾಮಿ ಹಾಗೂ ರಂಗಭೂಮಿಯ ಧ್ರುವತಾರೆ ಅಪ್ಪುರಾಜ್ ಮುದೋಳ್ ಇವರೊಂದಿಗೆ ನಾಟಕದಲ್ಲಿ ಅಭಿನಯಿಸುತ್ತಿದ್ದಾಗ, ಚಲನಚಿತ್ರ ನಿರ್ದೇಶಕ ನಿರ್ಮಾಕಪಕ ಶಂಕರಲಿಂಗ ಸುಗ್ನಳ್ಳಿಯವರು ಅಂದು ನಾಟಕ ವೀಕ್ಷಿಸಲು ಆಗಮಿಸಿದಾಗ, ಮುರಳಿಯವರ ಅಭಿನಯವನ್ನು ಕಂಡು ತಮ್ಮ ನಿರ್ದೇಶನದ ಪುನರ್ ಮಿಲನ ಧಾರವಾಹಿಯಲ್ಲಿ ಸಿ.ಬಿ.ಐ. ಅಧಿಕಾರಿ ಪಾತ್ರಕ್ಕೆ ಆಯ್ಕೆಯಾಗುವ ಮೂಲಕ ಕಿರುತೆರೆ ಪ್ರವೇಶಿಸಿದರು. ಅದೇ ಶಂಕರಲಿಂಗ ಸುಗ್ನಳ್ಳಿಯವರ ಅಭಿನಯದ ವಿಜಯ ಕಂಕಣ ಚಲನಚಿತ್ರದಲ್ಲಿ ಪೋಲೀ (ಹಾಸ್ಯ) ಪಾತ್ರದ ಮೂಲಕ ಬೆಳ್ಳಿ ತೆರೆಗೆ ಪ್ರವೇಶಿಸಿದರು. ಅನಂತರ ಚಿಂದೋಡಿ ಬಂಗಾರೇಶ ನಿರ್ದೇಶನದ ಗಾನಯೋಗಿ ಪಂಚಾಕ್ಷರಿ ಗವಾಯಿ ಸುಗ್ನಳ್ಳಿ ನಿರ್ದೇನದ ಕಡ್ಲಿಮಟ್ಟಿ ಸ್ಟೇಶನ್ ಮಾಸ್ಟರ್, ಓ ಪ್ರೇಮ ದೇವತೆ ಪ್ರೇಮಚಂದ್ರ, ಹೇಮಂತಕುಮಾರ ನಿರ್ದೇಶನದ ಮೋಹಿನಿ ಮಹಲ್ ಹಾಗೂ ಬಂಜಾರು (ಲಂಬಾಣಿ) ಭಾಷೆಯ ಚಿತ್ರಗಳಾದ 'ಧಲೆರೊ ಫೂಲ್' ಮತ್ತು ಓಂ ಶ್ರೀ ಸೇವಾಲಾಲ್, ಕಥೆಯಾಳ ಕ್ನಾಳ ಸಾಕುಮಗ, ಅಂತ್ಯ ಇಲ್ಲ ಆರಂಭ ಇನ್ನೂ ಅನೇಕ ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ.

ನೃತ್ಯ ಶಾಲೆಯೊಂದನ್ನು ಸ್ಥಾಪಿಸಿ, ನೃತ್ಯ ನಿರ್ದೇಶಕರಾಗಿ ಅನೇಕ ಶಿಷ್ಯರನ್ನು ಕಟ್ಟಿಕೊಂಡು ಕರ್ನಾಟಕದ ಮೂಲೆ ಮೂಲೆಗಳಲ್ಲಿ ತಮ್ಮ ನೃತ್ಯ ರೂಪಕ ಹಾಗೂ ರಸಮಂಜರಿ ಕಾರ್ಯಕ್ರಮ ನೀಡಿದ್ದಾರೆ. 1999ರಲ್ಲಿ ನಡೆದ ಆನೆಗೊಂದಿ ಉತ್ಸವದಲ್ಲಿ ನೃತ್ಯ ರೂಪಕ(ಬ್ಯಾಲೆ)ದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡರು. ಇವರು ಕಿರು ತೆರೆಗಳಿಗೆ ಹಾಗೂ ಚಲನಚಿತ್ರಗಳಿಗೆ ಪ್ರಸಾದನ ಕಲಾವಿದರಾಗಿ (ಮೇಕಪ್ ಮ್ಯಾನ್) ನೃತ್ಯ ನಿರ್ದೇಶಕರಾಗಿ, ಸೇವೆ ಸಲ್ಲಿಸುತ್ತಿದ್ದಾರೆ. ಮುರಳಿಯವರು ನಾಟ್ಯ ಮಯೂರಿ, ರಂಗಭೂಮಿಯ ರಾಣಿ, ಕಲಾಕೇಸರಿ, ಕಲಾಜ್ಯೋತಿ, ಅಭಿನಯ ಚತುರ ಎಂಬ ಬಿರುದುಗಳನ್ನು ಪಡೆದುಕೊಡಿದ್ದಾರೆ. (ಎಚ್‌ಎ)

ಮುಸ್ಲೀಂ ವಾಸ್ತುಶಿಲ್ಪಗಳು: ಸುಮಾರು 200 ವರ್ಷಗಳ ಕಾಲ ಹೈದರಾಬಾದ ಪ್ರಾಂತವನ್ನು ಆಳಿದ ಆಸಿಫ್ ಜಾಹಿ ಮನೆತನದ ಹೈದರಾಬಾದ ನಿಜಾಮ ಅರಸರು, ಈ ಭಾಗದಲ್ಲಿ ಮುಸ್ಲಿಂ ವಾಸ್ತು ಶಿಲ್ಪದ ಅನೇಕ ಕಟ್ಟಡಗಳನ್ನು ತಮ್ಮ ಇತಿಹಾಸದ ಕುರುಹಾಗಿ ಉಳಿಸಿದ್ದಾರೆ.

ಹೈದ್ರಾಬಾದ ಸಂಸ್ಥಾನ 16 ಜಿಲ್ಲೆಗಳನ್ನೊಳಗೊಂಡಿದ್ದು, ಇಂದು ಮಹಾರಾಷ್ಟ್ರ ಸೇರಿರುವ ಔರಂಗಾಬಾದ, ಉಸ್ಮಾನಾಬಾದ, ಲಾತೂರ, ಭೀಡ ಜಿಲ್ಲೆಗಳು, ಏಕೀಕರಣದೊಂದಿಗೆ ಕರ್ನಾಟಕ ಸೇರಿರುವ ಕಲಬುರ್ಗಿ, ಬೀದರ ಹಾಗೂ ರಾಯಚೂರು ಜಿಲ್ಲೆಗಳು ಹಾಗೂ ತೆಲಂಗಾಣಾ ಪ್ರದೇಶದ ಎಂಟು ಜಿಲ್ಲೆಗಳು ಈ ಪ್ರಾಂತ್ಯಕ್ಕೊಳಪಟ್ಟಿದ್ದುವು. ಈ 16 ಜಿಲ್ಲೆಗಳಲ್ಲಿ 200 ವರ್ಷಗಳವರೆಗೆ ಆಡಳಿತ ಭಾಷೆ, ಶಿಕ್ಷಣ ಎಲ್ಲವೂ ಉರ್ದು. ಆಳರಸರು ಮುಸಲ್ಮಾನರಾಗಿದ್ದರಿಂದ ಅವರ ಸಂಸ್ಕೃತಿಯ ದಟ್ಟ ಛಾಯೆ, ನಮ್ಮ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿತು. ಬಹುತೇಕ ಸರ್ಕಾರಿ ಕಟ್ಟಡಗಳ ವಿನ್ಯಾಸಗಳೂ ಪರ್ಷಿಯನ್ ಮುಸ್ಲಿಮ್ ವಾಸ್ತುಶಿಲ್ಪಶಾಸ್ತ್ರದಲ್ಲೇ ನಿರ್ಮಾಣ



ಬಹಮನಿ ಗೇಟ್

ಗೊಂಡವು. ಅನೇಕ ಖಾಸಗಿ ಬಂಗಲೆಗಳೂ (ಹವೇಲಿಗಳು) ಇದೇ ವಾಸ್ತು ವಿನ್ಯಾಸದಲ್ಲಿ ನಿರ್ಮಾಣಗೊಂಡಿದ್ದುವು.


ಹಳೆಯ ಕಾಲದ ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಯಗಳು, ಜಿಲ್ಲಾಧಿಕಾರಿ, ವಿಭಾಗಾಧಿಕಾರಿ ಕಚೇರಿಗಳು, ಮಂದಿರಗಳೂ ಮಸೀದಿ ಆಕಾರದಲ್ಲಿ ನಿರ್ಮಾಣಗೊಂಡು, ಇಂದು ಇವುಗಳನ್ನು ರಾಷ್ಟ್ರೀಯ ಭಾವೈಕ್ಯತೆ ಮಂದಿರಗಳೆಂದು ಹೇಳಲಾಗುತ್ತಿದೆ. ಸೇತುವೆಗಳೂ ಕೂಡ ಮುಸ್ಲೀಮ್ ವಾಸ್ತುಶಿಲ್ಪದ ಕಮಾನುಗಳ ಆಕಾರದಲ್ಲೇ ನಿರ್ಮಾಣಗೊಂಡಿದ್ದು ನಿಜಾಮರ ಕಾಲದಲ್ಲಿ ಧರ್ಮಕ್ಕೆ ಎಷ್ಟು ಮಹತ್ವ ನೀಡುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿವೆ. ನೂರಾರು ವರ್ಷಗಳ ಹಿಂದೆ ನಿರ್ಮಿಸಿರುವ ಈ ಕಟ್ಟಡಗಳು ಇನ್ನೂ ಜೀವಂತವಾಗಿವೆ. ಹಲವು ಕಟ್ಟಡಗಳು ಜೀರ್ಣಗೊಂಡು ದುರಸ್ತಿ ಹಂತದಲ್ಲಿದ್ದು, ದುರಸ್ತಿ ಕಾಣದೇ ಕುಸಿಯುತ್ತಿದ್ದರೆ, ಕೆಲವನ್ನು ಮೂಲ ಸ್ವರೂಪವನ್ನು ಉಳಿಸಿಕೊಂಡು ದುರಸ್ತಿ ಮಾಡಿ ಉಪಯೋಗಿಸಲಾಗುತ್ತಿದೆ. ಇನ್ನೂ ಗಟ್ಟಿಮುಟ್ಟಾಗಿದ್ದು, ಇತಿಹಾಸದ ಗತವೈಭವದ ವಾಸ್ತುಶಿಲ್ಪ ಸೌಂದರ್ಯವನ್ನು ಮೆರೆಯುತ್ತಿರುವದನ್ನು ಈ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ ಕಾಣಬಹುದಾಗಿದೆ.

ಇಂಥ ಐತಿಹಾಸಿಕ ಮಹತ್ವದ ನೂರಾರು ವರ್ಷಗಳ ಹಿಂದಿನ ಕಟ್ಟಡಗಳು ಕಲಬುರ್ಗಿ ಜಿಲ್ಲೆಯಲ್ಲಿಯೂ ತನ್ನ ಹಳೆಯ ಮೆರಗನ್ನು ಉಳಿಸಿಕೊಂಡು ಇತಿಹಾಸವನ್ನು ನೆನಪಿಸುತ್ತಿವೆ. ನಿಜಾಮ ಕಾಲದಲ್ಲಿ ಕಲಬುರ್ಗಿ 'ಸುಭಾಹ್' ಆಗಿತ್ತು ಅಂದರೆ, ಆಗಿನ ಕಾಲದ ವಿಭಾಗೀಯ ಕೇಂದ್ರವಾಗಿತ್ತು. ಇಂದು ಮಹಾರಾಷ್ಟ್ರದಲ್ಲಿರುವ ಐದು ಜಿಲ್ಲೆಗಳೂ ಕಲಬುರ್ಗಿ ವಿಭಾಗಕ್ಕೆ ಒಳಪಡುತ್ತಿದ್ದು, ಅಂದು ನ್ಯಾಯಾಲಯದ ವಿಭಾಗೀಯ ಪೀಠವೂ ಕಲಬುರ್ಗಿಯಲ್ಲಿತ್ತು.

ಶತಮಾನ ಕಂಡಿರುವ ಇಂದಿನ ಜಿಲ್ಲಾ ನ್ಯಾಯಾಲಯದ ಈ ಐತಿಹಾಸಿಕ ಕಟ್ಟಡದಲ್ಲಿ 11 ನ್ಯಾಯಾಲಯ ಕಚೇರಿಗಳು ನಡೆಯುತ್ತವೆ. ಭವ್ಯವಾದ ಹಾಗೂ ವಿಶಾಲವಾದ ಈ ಕಟ್ಟಡದ ವಾಸ್ತು ವಿನ್ಯಾಸ ಇನ್ನೂ ಅಚ್ಚಳಿಯದೇ ಉಳಿಸಿಕೊಂಡಿದೆ. ಕೆಲವೊಂದು ಭಾಗದ ಮೇಲ್ಛಾವಣಿ ಸೋರುತ್ತಿದ್ದು ದುರಸ್ತಿಯಾಗಬೇಕಾಗಿದೆ. ಸುಮಾರು ಐದು ಎಕರೆ ಪ್ರದೇಶವನ್ನು ಹೊಂದಿರುವ ಇಂಥ ವಿಶಾಲವಾದ ನ್ಯಾಯಾಲಯ ಬೇರೆಲ್ಲೂ ಇಲ್ಲ.

ಅರಸರು ಯಾವಾಗಲೂ ವೈಭವದ ಜೀವನ ನಡೆಸಿದವರು. ಹೈದ್ರಾಬಾದ ಅರಸರ ವೈಭವಕ್ಕೇನೂ ಕೊರತೆಯಿರಲಿಲ್ಲ. ಅವರು ಕಲಬುರ್ಗಿಗೆ ಬರಬೇಕಾದರೆ, ಒಬ್ಬರೆ ಎಂದೂ ಬರುತ್ತಿರಲಿಲ್ಲ. ಅವರ ರಾಣಿ(ಜನಾನಾ)ಪರಿವಾರವೂ ಅವರೊಂದಿಗೆ ಇರುತ್ತಿತ್ತು. ಅವರ ವಾಸಕ್ಕಾಗಿ ಕಲಬುರ್ಗಿಯಲ್ಲೊಂದು ಭವ್ಯವಾದ ಅತಿಥಿ ಗೃಹ ನಿರ್ಮಿಸಲಾಗಿತ್ತು. ಒಂಭತ್ತು ವಿಶಾಲವಾದ ಕೋಣೆಗಳು, ದರ್ಬಾರ ಹಾಲ್, ಅಡಿಗೆಮನೆ, ಭೋಜನ ಗೃಹ, ರಾಣಿಯರ ಪರಿವಾರಕ್ಕೆ ಪ್ರತ್ಯೇಕ ಜನಾನಾ ವಾಸ ವ್ಯವಸ್ಥೆ. ಈ ಭವ್ಯ ಅತಿಥಿ ಗೃಹದ ಆವರಣ ಸುಮಾರು ಐದು ಎಕರೆ ಪ್ರದೇಶ ಹೊಂದಿದ್ದು, ಅವರ ವೈಭವಕ್ಕಾಗಿ ಒಂದು ಉದ್ಯಾನವನವೂ ಇದೆ. ಐದು ಎಕರೆಗೆ ಸುತ್ತಲೂ ಜೈಲಿನಂತೆ ಎತ್ತರವಾದ ಗೋಡೆಗಳು, ಒಂದೇ ಪ್ರವೇಶ ದ್ವಾರ, ಅದರ ಎರಡೂ ಬದಿಗೆ ಸಶಸ್ತ್ರ ಕಾವಲುಗಾರರ ವಾಸ ಕೋಣೆಗಳು, ಪರಿವಾರದೊಂದಿಗೆ ಹೈದ್ರಾಬಾದನಿಂದ ಬರುವ ರಕ್ಷಣಾ ಪಡೆಗೆ ಉಳಿದುಕೊಳ್ಳಲು ಪ್ರತ್ಯೇಕ ವ್ಯವಸ್ಥೆ. ಇಷ್ಟೆಲ್ಲ ವ್ಯವಸ್ಥೆ ಹೊಂದಿರುವ ಈ ಅತಿಥಿ ಗೃಹವನ್ನು 'ಐವಾನ್–ಎ–ಶಾಹಿ' ಎಂದು ಕರೆಯುತ್ತಿದ್ದರು. ಇಂದು ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು, ವಿದೇಶಿ ಪ್ರತಿನಿಧಿಗಳು, ಮುಖ್ಯಮಂತ್ರಿಗಳು ಮುಂತಾದ ಗಣ್ಯ ಹಾಗೂ ಅತಿಗಣ್ಯರು ಇಂದಿಗೂ ಇಲ್ಲಿ ಉಳಿದುಕೊಳ್ಳುತ್ತಾರೆ. ಇಲ್ಲಿ ಉಳಿದುಕೊಳ್ಳುವದೂ ಒಂದು ಹೆಮ್ಮೆಯ ವಿಷಯವೇ ಆಗಿದೆ.

ಹೈದ್ರಾಬಾದ ನಿಜಾಮರು ಕಲಬುರ್ಗಿಗೆ ಬರಬೇಕಾದರೆ, ಹೈದ್ರಾಬಾದನಿಂದ ಪ್ರತ್ಯೇಕವಾದ ಐದು ಬೋಗಿಗಳ ರೈಲು ಬರುತ್ತಿತ್ತು. ಇಡೀ ಅವರ ಪರಿವಾರ, ರಕ್ಷಣಾ ಪಡೆ ಎಲ್ಲವೂ ಇದರಲ್ಲಿರುತ್ತಿತ್ತು. ಈ ವಿಶೇಷ ರೈಲು ನೇರವಾಗಿ ಐವಾನ್ ಶಾಹಿ ಅತಿಥಿ ಗೃಹಕ್ಕೆ ಬರುವಂತೆ ಸ್ಟೇಷನ್‌ದಿಂದ ಅತಿಥಿ ಗೃಹದವರೆಗೂ ಹಳಿಗಳನ್ನು ಹಾಕಲಾಗಿತ್ತು. ಇಳಿದುಕೊಳ್ಳಲು ಪ್ಲಾಟ್ ಫಾರ್ಮ



ಒಳಾಂಗಣ ಮುಸ್ಲೀಂ ವಾಸ್ತು ವಿನ್ಯಾಸ

ಕೂಡ ನಿರ್ಮಿಸಿದ್ದು, ಇವೆಲ್ಲ ವೈಭವಗಳು ಇಂದಿಗೂ ನೋಡಲು ಸಿಗುತ್ತವೆ. ಇಂಥ ಐತಿಹಾಸಿಕ ಕಟ್ಟಡಗಳಲ್ಲಿ ಜಿಲ್ಲಾಧಿಕಾರಿಗಳ (ಅಂದಿನ ಕಲೆಕ್ಟರ್ ಕಚೇರಿ) ಅತ್ಯಂತ ಪುರಾತನವಾದದ್ದು. ಕೆರೆಯ ದಂಡೆಯಲ್ಲಿರುವ ಗುಡ್ಡದಮೇಲೆ ನಿರ್ಮಿಸಿರುವ ಈ ಕಟ್ಟಡ ನೂರು ವರ್ಷಗಳಿಗೂ ಪುರಾತನವಾದದ್ದು. ವಿಶಾಲ ವಾದ ಈ ಕಟ್ಟಡದ ಆವರಣದಲ್ಲೇ ಜಿಲ್ಲಾಧಿಕಾರಿಗಳ ವಾಸಗೃಹ ವನ್ನೂ ಒಳಗೊಂಡಿದೆ.

ಅಂದು ವಿಭಾಗೀಯ ಕೇಂದ್ರವಾಗಿದ್ದ ಕಲಬುರ್ಗಿ (ಸುಭಾಹ್) ಯಲ್ಲಿ ಸುಬೇದಾರಿ ಕಚೇರಿ ಇತ್ತು. ಈ ಕಚೇರಿಯ ಆವರಣ ಎಷ್ಟು ವಿಶಾಲವಾಗಿತ್ತೆಂದರೆ, ಸುಮಾರು ಎಂಟು ಎಕರೆ ಪ್ರದೇಶ ಹೊಂದಿತ್ತು. ಸ್ವಾತಂತ್ರ್ಯಾ ನಂತರ ಇಲ್ಲಿ ಸರ್ಕಾರಿ ಕಾಲೇಜು ಆರಂಭಿಸಲಾಯಿತು. ಅನಂತರ ಕಟ್ಟಡ ತುಂಬಾ ಶಿಥಿಲವಾಗಿದ್ದರಿಂದ ಅದನ್ನು ಕೆಡವಿ ಅದೇ ಸ್ಥಾನದಲ್ಲಿ ನಾಲ್ಕೂವರೆ ಕೋಟಿ ರೂ. ವೆಚ್ಚದ ಭವ್ಯವಾದ 'ಮಿನಿ ವಿಧಾನ ಸೌಧ' ನಿರ್ಮಿಸಲಾಗಿದೆ. ಬೆಂಗಳೂರು ಬಿಟ್ಟರೆ ಇಂಥ ಭವ್ಯವಾದ ಸೌಧ ಹೊಂದಿರುವುದು ಕಲಬುರ್ಗಿಯಲ್ಲೇ. ಈ ಮಾದರಿಯ ಕಟ್ಟಡ ವಿದ್ದರೂ, ಶತಮಾನಗಳ ಹಿಂದೆ ನಿರ್ಮಾಣಗೊಂಡಿದ್ದ ಸುಬೇದಾರಿ ಕಚೇರಿಯ ಮುಖದ್ವಾರದ ಐತಿಹಾಸಿಕ ಕಮಾನು ಇನ್ನೂ ಉಳಿಸಿಕೊಳ್ಳಲಾಗಿದೆ. ಅದು ಇನ್ನೂ ಅತ್ಯಂತ ಗಟ್ಟಿ ಮುಟ್ಟಾಗಿದೆ ಎಂದು ಇಲ್ಲಿನ ಲೋಕೋಪಯೋಗಿ ಇಲಾಖೆ ಯವರು ಹೇಳುತ್ತಾರೆ.

(ಎಸ್‌ಆರ್‌ಎಂ)

ಮೆ

ಮೆಹಂದಿ: ಜನಪದ ಕಲೆಗಳನ್ನು ಆರು ಅಂಗಗಳಲ್ಲಿ ವಿಂಗಡಿಸಿ ಕೊಳ್ಳಬಹುದು. 1. ವಸ್ತು ರೂಪದ ಕಲೆ 2. ವರ್ಣ ರೂಪದ ಕಲೆ 3. ಪ್ರದರ್ಶನ ರೂಪದ ಕಲೆ 4. ನೃತ್ಯ ರೂಪದ ಕಲೆ 5. ಅಭಿನಯ ರೂಪದ ಕಲೆ. ಇಲ್ಲಿ ಜನಪದ ಚಿತ್ರಕಲೆಯಲ್ಲಿ ಪ್ರಮುಖವಾಗಿ ಸಂಬಂಧವಿರುವುದು ವರ್ಣರೂಪದ ಕಲೆ ಯಾಗಿದೆ. ಈ ವರ್ಣರೂಪದ ಕಲೆಗಳಲ್ಲಿ ಮೆಹೆಂದಿ,ರಂಗೋಲಿ, ಹಚ್ಚೆ, ತೊಗಲುಗೊಂಬೆ, ಆಸೆ ಚಿತ್ರಕಲೆ, ಮುಖವಾಡದ ಕಲೆ ಹೀಗೆ ಮುಂತಾದ ಕಲೆಗಳನ್ನು ಗುರ್ತಿಸಬಹುದಾಗಿದೆ.

ಮೆಹೆಂದಿ ಕಲೆ ಕ್ರಿ.ಪೂ. ಒಂದನೆಯ ಶತಮಾನ 'ಸುಶ್ರುತ ಸಂಹಿತಾ' ಗ್ರಂಥದಲ್ಲಿ ಕಂಡುಬರುವ ಹರೀತರೇಚೂರ್ಣಂ ಅರಿಷ್ಟಪತ್ರಂ ಚೂತತ್ವಚಂ ದಾಡಿಂಪುಷ್ಪವೃಂತಕಂ, ಪತ್ರಂ ಚ ದೆದ್ಯಾತ್ ಮದಯಂತಿ ಕಾಯ ತೀಪೋ ಅಂಗರಾಗೋ ನರದೇವ ಯೋಗ್ಯಾಹ ಈ ಶ್ಲೋಕದಲ್ಲಿ ಅರಳಿ ಕಾಯಿ ಚೂರ್ಣ, ರಿಟ್ಟ ತಪ್ಪಲ (ಅರಿಷ್ಟಪತ), ಮಾವಿನ ತೋಟೆ, ದಾಳಿಂಬ ಹೂವಿನ ಕೆಳಭಾಗ, (calyx) ಮದರಂಗಿಯ ತೊಪ್ಪಲುಗಳನ್ನು ಶರೀರಕ್ಕೆ ಹಚ್ಚಿಕೊಳ್ಳುವ ವಿಷಯ ನಿರೂಪಿತವಾಗಿದೆ.

ಚರ್ಮದ ಮೇಲಿ ಚಿತ್ರಕಲೆಯಲ್ಲಿ ಶಾಶ್ವತವಾದುದು ಹಚ್ಚೆ ಯಾದರೆ, ಅಶಾಶ್ವತವಾದ ಚಿತ್ರಕಲೆಯಾಗಿ ಮದರಂಗಿ ಬೆಳೆದು ಬಂದಿದೆ. ಈ ಮದರಂಗಿ ಕಲೆ ಮೂಲತಃ ಪರ್ಷಿಯಾದಿಂದ 12ನೆಯ ಶತಮಾನದಲ್ಲಿ ಭಾರತಕ್ಕೆ ಪ್ರವೇಶಿಸಿತೆಂಬ ಅಭಿಪ್ರಾಯ ಇದೆ. ಮದರಂಗಿಯನ್ನು ಮದುವೆ, ಹಬ್ಬ, ಉತ್ಸವ, ಜಾತ್ರೆ ಮುಂತಾದ ಸಮಯದಲ್ಲಿ ಹಚ್ಚಿಕೊಳ್ಳುವುದೊಂದಿಗೆ ಸಂಭ್ರಮಿ ಸುತ್ತಾರೆ. ಮದರಂಗಿ ಎಲೆ ಮತ್ತು ನಿಂಬೆಹಣ್ಣು, ಕಾಚು ಮಿಶ್ರ ಮಾಡಿ ಎರಡು ಗಂಟೆಗಳ ನಂತರ ಆಚರಣೆಗೆ ಅನುಗುಣವಾಗಿ ಚಿತ್ತಾರಗಳನ್ನು ಕೈ, ಕಾಲುಗಳಿಗೆ ಹಚ್ಚಿಕೊಳ್ಳುತ್ತಾರೆ. ಈ ಚಿತ್ತಾರ ಗಳಲ್ಲಿ ಹಲವು ಆಕಾರಗಳನ್ನು ಹಾಕಿಕೊಳ್ಳುತ್ತಾರೆ.

ಗಂಡು ಸ್ವಸ್ತಿಕ, ಹೆಣ್ಣು ಸ್ವಸ್ತಿಕದ ಚಿತ್ರ, ತ್ರಿಕೋನ, ನಕ್ಷತ್ರ, ಪ್ರಕೃತಿ, ಸೂರ್ಯ, ಚಂದ್ರ, ಶಂಖ, ಚಕ್ರ, ದೇವರಪಾದ, ತ್ರಿಶೂಲ, ಪಕ್ಷಿ, ಕಳಸ, ಕುಂಭ ಚೌಕ, ಆಯತ ವರ್ತುಲ ಆಕಾರ ಗಳನ್ನು ಹಾಕಿಕೊಳ್ಳುತ್ತಾರೆ. ಇವುಗಳ ಜೊತೆಯಲ್ಲಿ ಪ್ರಸ್ತೂತದಲ್ಲಿ ಹೆಚ್ಚಾಗಿ ರಸಾಯನಿಕವಾದ ಮೆಹೆಂದಿಯನ್ನು ಮಾರುಕಟ್ಟೆ ಯನ್ನು ನೋಡಬಹುದು. 'ಮೆಹೆಂದಿಕೋನ' ಎಂದು ಸಿಗುತ್ತವೆ. ಸಿದ್ಧವಾದ ಈ ಮೆಹೆಂದಿಯನ್ನು 10–15 ರೂ.ಗಳಿಗೆ ಸಿಗುತ್ತದೆ. ಮತ್ತು ಮೆಹೆಂದಿಯ ಅಚ್ಚು ಪಡಿಗಳು, ಮೆಹೆಂದಿಯ ಸ್ಟಿಕ್ಕರ್ ಮುಂತಾದವು ಇಂದು ವಾಣಿಜ್ಯದಲ್ಲಿ ಉತ್ತಮವಾದ ಸ್ಥಾನವನ್ನು ಈ ಮದರಂಗಿ ಕಲೆಯ ಪಡೆದುಕೊಂಡಿದೆ.

(ಕೆವಿ)

ಮೊ

ಮೊಗಲಪ್ಪ ತೋಡಿ: ಮೃದಂಗ ಮದ್ದಳೆಗಾರನೆಂದೇ ಖ್ಯಾತಿ ಪಡೆದ ಕಲಾವಿದ. ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನವರು. ಮೃದಂಗ ಬಾರಿಸುತ್ತಾ ಎತ್ತರದ ಧ್ವನಿಯಲ್ಲಿ ಹಾಡಲು ಪ್ರಾರಂಭಿಸಿದರೆ ಊರಿಗೆ ಊರೇ ಇವರದು ಕಂಚಿನ ಕಂಠ. 15–05.1936 ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ನಾದದ ಗುಂಗಿನಲ್ಲಿ ಬೆಳೆದು 70 ದಶಕಗಳನ್ನು ಸಾಂಸ್ಕೃತಿಕ ಬದುಕಿನಲ್ಲಿ ಕಳೆದವರು. ತಂದೆ ಫಕೀರಪ್ಪ ಇವರ ನಾದಲಯದ ಅರಿವನ್ನು ಪೋಷಿಸಿ, ಇವರ ಕಲೆಯನ್ನು ಬೆಳೆಯಲು ಸಹಾಯಕರಾಗಿ ನಿಂತು ಗುರುಗಳಲ್ಲಿಗೆ ಕರೆದೊಯ್ದರು. 3–4 ವರ್ಷಗಳ ಕಾಲ ಹಿರಿಯ ರಲ್ಲಿ ಮೃದಂಗ ಅಭ್ಯಾಸ ಮಾಡಿ ಸಣ್ಣಾಟ ಸಂಘ ಸೇರಿಕೊಂಡು ಸಣ್ಣಾಟ, ದೊಡ್ಡಾಟಗಳಲ್ಲಿ ಪಾತ್ರ ಮಾಡಿ ಹಿಮ್ಮೇಳ, ಮುಮ್ಮೇಳ ಗಳಲ್ಲಿ ಹಾಡಿ ಕಲಾವಿದರಾಗಿ, ಗಾಯಕರಾಗಿ ಬಯಲಾಟಗಳನ್ನು ಕಲಿತರು. ಅನಂತರ ರಂಗಭೂಮಿಯ ಕಲೆಯ ನಿರ್ದೇಶನದ ಅಂಶಗಳನ್ನು ತಮ್ಮ ಸ್ವಂತ ಪ್ರತಿಭೆಯಿಂದ ಕರಗತ ಮಾಡಿ ಕೊಂಡು ತಾವೇ ಬಯಲಾಟ ಕಲಿಸ ಹತ್ತಿದರು. ಚಿಂಚೋಳಿ ಜಾತ್ರೆಯಲ್ಲಿ ಪ್ರಾರಂಭವಾದ ಇವರ ಬಯಲಾಟಗಳು ಬೇಸಿಗೆ

ಮುಗಿಯುವವರೆಗೆ ಪ್ರತಿ ಹಳ್ಳಿಗಳಲ್ಲಿ ಪ್ರತಿ ದಿನವೂ ಇರುತ್ತಿದ್ದವು. ಒಮ್ಮೊಮ್ಮೆ ಸತತವಾಗಿ ಐದಾರು ಆಟಗಳನ್ನು ಆಡಿಸುವ ಹೊಣೆ ಬಿದ್ದರೂ ಮೊಗಲಪ್ಪನ ಕಂಠ ಕುಂದುತ್ತಿರಲಿಲ್ಲ. ಪಾಂಡು ವಿಜಯ, ಕುರುಕ್ಷೇತ್ರ, ಚಿತ್ರಕೇತು ಮಹಾರಾಜ, ಮಲಕಾಸುರ, ಜಲಂಧರ, ಕಬೀರದಾಸ, ಸತ್ಯವಾನ-ಸಾವಿತ್ರಿ, ರಾಮಾಂಜ ನೇಯ ಯುದ್ಧ, ದಲಿತ ಈ ಕಲಾವಿದರು ಹಿಂದುಳಿದ ವರ್ಗಗಳ ಕೇರಿಯಲ್ಲಿದ್ದು ಅಲ್ಲಿಯ ಯುವಕರನ್ನು ಕಲಾವಿದರನ್ನಾಗಿ ಮಾಡಿದ್ದಾರೆ.


ನಟಿಸುವುದು, ಹಾಡುವುದಲ್ಲದೆ, ಮೃದಂಗ ಬಾರಿಸುವುದು, ಡೋಲು ಬಾರಿಸುವುದು ಇವರ ಇನ್ನೊಂದು ಪ್ರತಿಭೆ. ಬಯಲಾಟಗಳನ್ನು ಕಲಿಸುವುದಲ್ಲದೆ ಹಳ್ಳಿಗಳಲ್ಲಿ ಹಬ್ಬ ಹರಿದಿನ ಗಳಲ್ಲಿ ಕೋಲಾಟ, ಲೇಜಿಮ್‌ಗಳನ್ನು ಕಲಿಸಿ ಆಡಿಸುತ್ತಿದ್ದರು. ತನು-ಮನ-ಧನ ಸಹಾಯದಿಂದ ನಿರಂತರವಾಗಿ 50 ವರ್ಷ ಗಳ ಕಲಾಸೇವೆ ಇವರ ಸಾರ್ಥಕ ಬದುಕಿನ ಪ್ರತೀಕ. (ಜಿಕೆ)

ಮೊಹಮ್ಮದ್ ಅಯಾಜೊದ್ದೀನ್: ಚಿತ್ರಕಲಾವಿದ ಮತ್ತು ಛಾಯಾಗ್ರಾಹಕರಾದ ಇವರು ಮೂಲತಃ ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಗಡಿಕೇಶ್ವರ ಗ್ರಾಮದವರು. 1970 ಜೂನ್ 01ರಂದು ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಸೇಡಂನ ಸರ್ಕಾರಿ ಶಾಲೆಯಲ್ಲಿ ಪೂರೈಸಿ, ಚಿತ್ರಕಲೆಯಲ್ಲಿ ಅದಮ್ಯವಾದ ಆಸಕ್ತಿ ಹೊಂದಿದ ಇವರು ಗುಲಬರ್ಗಾದ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ಸ್ ಕಾಲೇಜಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದರು.

ಇವರು ಫೋಟೋಗ್ರಾಫಿಯನ್ನು ಹವ್ಯಾಸ, ಮತ್ತು ವೃತ್ತಿ ಯಾಗಿ ಸ್ವೀಕರಿಸಿದವರು. 6 ವರ್ಷಗಳ ಕಾಲ ದುಬೈ, ಶಾರ್ಜಾ, ಅಜ್ಮಾನ್, ಸೌದಿ ಅರೇಬಿಯಾ ಮುಂತಾದೆಡೆ ಕೆಲಸ ಮಾಡಿ ದ್ದಾರೆ. ಅಮೆರಿಕ, ಹಾಂಕಾಂಗ್, ಸಿಂಗಪುರ, ಚೀನಾ, ರಷ್ಯಾ, ಈಜಿಪ್ಟ್, ಫ್ರಾನ್ಸ್ ಮುಂತಾದೆಡೆ ಇವರ ಕಲಾಪ್ರದರ್ಶನ ಸಂಗ್ರಹ ವಿದೆ. ವಿವಿಧ ದೇಶಗಳ ವಿವಿಧ ಕಾಲದ ನಾಣ್ಯ ಸಂಗ್ರಹಗಳು. ಅಪರೂಪದ ವಸ್ತುಗಳ ಸಂಗ್ರಹವೂ ಇವರ ಹವ್ಯಾಸವಾಗಿದೆ. ಇವರು ಹೀಗೆ ಬಹುಮುಖಿ ಕಲಾವಿದರಾಗಿ ಗುರುತಿಸಿ ಕೊಂಡಿದ್ದಾರೆ.



ನೈಸರ್ಗಿಕ ಬೆಳಕಿನಲ್ಲಿ ನೆರಳು ಗಳನ್ನು ಹಿಡಿಯುತ್ತಲೇ ಹೊಸ ತನ್ನು ಅರಸುವ ಕಲಾವಿದ. ಅಯಾಜೊದ್ದೀನ್ ಮೂಲತಃ ಚಿತ್ರಕಲಾವಿದ. ನಂತರ ಗಮನ ಸೆಳೆದಿದ್ದು ಫೋಟೋಗ್ರಾಫಿ, ಗುಲಬರ್ಗಾದ ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳನ್ನು



'ಸ್ಥಳ ವಸ್ತುಗಳ ಸಂರಕ್ಷಣೆ' ಕ್ರಿಯೇಟಿವ್ ಫೋಟೋ ಮಾಂಟೇಜ್

ಕ್ಯಾಮೆರಾ ಕಣ್ಣಲ್ಲಿ ಕ್ಲಿಕ್ಕಿಸುತ್ತಲೇ ಹೋದರು. ಸ್ಥಳೀಯ ಬದುಕಿನ ಸೊಗಡು, ವರ್ಣವೈಭವ ಅವರಲ್ಲಿನ ಕಲಾವಿದನನ್ನು ಮತ್ತೆ ಬಡಿದೆಬ್ಬಿಸಿತ್ತು. ಅವೆರಡರ ಸಂಯೋಜನೆಯನ್ನು ಸಮನ್ವಯ ಗೊಳಿಸತೊಡಗಿದರು. ಆಗಲೇ 'ಗರ್ದಿ ಗಮ್ಮತ್ತು ನೋಡಾ' ಎಂಬಂತೆ ಆಗಿದ್ದು. ನನ್ನೊಳಗಿನ ದೃಷ್ಟಿ ಕ್ಯಾಮೆರಾ ಕಣ್ಣಿನಲ್ಲಿ ಸೆರೆಹಿಡಿದ ಚಿತ್ರ, ಕಲಾವಿದನ ಸೃಷ್ಟಿ ಎಲ್ಲವನ್ನೂ ಎರಕ ಹಾಕತೊಡಗಿದೆ. ಸ್ಥಳೀಯ ಸೊಗಡಿಗೆ ಸಮಕಾಲೀನ ತಂತ್ರ ಜ್ಞಾನದ ಸ್ಪರ್ಶ ನೀಡುತ್ತ ಬೆಳೆಯುವ ಈ ಪರಿ ಅಚ್ಚರಿ ಹುಟ್ಟಿ ಸುವಂಥದ್ದು.

ಸಂತೆ, ಜಾತ್ರೆ, ಕೌತುಕದ ಕಂಗಳು, ಪರದೆಯ ಹಿಂದಿನ ಸೌಂದರ್ಯ ಸೂಚಿಸುವ ಕಣ್ಣುಗಳು, ಅಫಘಾನಿಸ್ಥಾನ ಮತ್ತು ಇರಾಕ್ ಯುದ್ಧ, ಒಂದೇ ಎರಡೇ. ಗುಲಬರ್ಗಾದ ಛಾಯಾ ಗ್ರಾಹಕ, ಚಿತ್ರಕಲಾವಿದ ಮೊಹಮ್ಮದ ಅಯಾಜುದ್ದೀನ್ ಅವರ ವಿಶ್ವದ ಬಹುತೇಕ ದೇಶಗಳ ನೋಟುಗಳು ಮತ್ತು ನಾಣ್ಯಗಳನ್ನು ಸಂಗ್ರಹಿಸಿದ್ದಾರೆ. ಅವರ ಸಂಗ್ರಹದಲ್ಲಿ ಭಾರತದ ಪ್ರಾಚೀನ ನಾಣ್ಯಗಳ ಜೊತೆಗೆ ಬ್ರಿಟಿಷ್ ಆಡಳಿತ ಕಾಲದಿಂದ ಇದುವರೆಗಿನ ಹತ್ತಾರು ಬಗೆಯ ನೋಟುಗಳಿವೆ.

ಇವರು ನಿರಂತರವಾಗಿ 1999ರಿಂದ ಇಲ್ಲಿಯವರಿಗೆ ಗುಲಬರ್ಗಾ, ಗುಂಟೂರು, ಜಲಂಧರ್, ಚಂಡಿಗಡ, ಮಂಗಳೂರು, ಪುಣೆ, ನವದೆಹಲಿ, ಬೆಂಗಳೂರು ಹಾಗೂ ಮುಂಬಯಿ ಸೇರಿದಂತೆ ಒಟ್ಟು 15ಕ್ಕೂ ಹೆಚ್ಚು ಗುಂಪು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ನಾಲ್ಕು ಏಕವ್ಯಕ್ತಿ ಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಇವರ ಅತ್ಯುತ್ತಮವಾದ ಕಲಾಕೃತಿಗಳಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಸುಮಾರು 12ಕ್ಕೂ ಹೆಚ್ಚು ಪ್ರಶಸ್ತಿಗಳು ಲಭಿಸಿವೆ. ಅದರಲ್ಲಿ ಮುಖ್ಯವಾಗಿ 1990ರಲ್ಲಿ ಏರ್ಪಡಿಸಿದ 4ನೇ ಅಖಿಲ ಭಾರತ ಕಲಾಪ್ರದರ್ಶನದ ಪ್ರಶಸ್ತಿ, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ ನಾಗಪೂರದ ಪ್ರಶಸ್ತಿ, 2000ರಲ್ಲಿ ರಾಷ್ಟ್ರೀಯ ಕಲಾಪ್ರದರ್ಶನದ ಪ್ರಶಸ್ತಿ, ತಸ್ಮಿಯಾ ಆರ್ಟ್ ಹೌಸ್‌ನ ಪ್ರಶಸ್ತಿ, 2003ರಲ್ಲಿ ಅವಾಂತಿಕಾ ನವ

ದೆಹಲಿಯ ಪ್ರಶಸ್ತಿ, 2011 ಗುಲಬರ್ಗಾ ಉತ್ಸವದ ಪ್ರಶಸ್ತಿ, ಬಿಜಾಪೂರದ ಸಿದ್ಧಲಿಂಗ ಕಲಾಸಂಸ್ಥೆ ಏರ್ಪಡಿಸಿದ ರಾಜ್ಯ ಮಟ್ಟದ ಚಿತ್ರಕಲಾ ಪ್ರಶಸ್ತಿ, 2011ನೇ ಸಾಲಿನ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ.

ಇವರು ಚಿತ್ರಕಲೆ ಜೊತೆಗೆ ಸಾಕ್ಷ್ಯ ಚಿತ್ರ ನಿರ್ಮಾಣದಲ್ಲಿಯೂ ಪರಿಣಿತಿಯನ್ನು ಸಾಧಿಸಿದ್ದಾರೆ. ಇವರು ಕರ್ನಾಟಕದ ಹಿರಿಯ ಕಲಾವಿದರ ಕುರಿತು ಕರ್ನಾಟಕ ಅಕಾಡೆಮಿಗೆ 9 ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಅದೇ ರೀತಿ ಹೈದ್ರಾಬಾದ ಕರ್ನಾಟಕದ ಪ್ರಾಚೀನ ಸ್ಮಾರಕಗಳಿರುವ ಪ್ರದೇಶಗಳಾದ, ಗುಲಬರ್ಗಾ, ಬೀದರ, ಬಿಜಾಪೂರ, ನಾರಾಯಣಪೂರ, ಜಲ ಸಂಗಾವಿ ಕಾಳಗಿ, ಫಿರೋಜಾಬಾದ, ಗೋಳಕೊಂಡ ಭೂಸನೂರ ಗ್ರಾಮ ತಾಲ್ಲೂಕು ಆಳಂದ. ಹೈದ್ರಾಬಾದ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದಾರೆ. ಇವರು ಇತ್ತೀಚೆಗೆ ಗುಲಬರ್ಗಾ ಪ್ರಾಚೀನ ಸ್ಮಾರಕಗಳನ್ನು ಕುರಿತು Monuments of Gulbarga ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ಇವರ ಕಲಾ ಅನ್ವೇಷಣೆಯ ದ್ಯೋತಕವಾಗಿದೆ.

ಪ್ರಸ್ತುತ ಅಯಾಜುದ್ದೀನ್ ಗುಲಬರ್ಗಾದಲ್ಲಿದ್ದು, ಛಾಯಾ ಚಿತ್ರ ಮತ್ತು ದೃಶ್ಯಕಲೆಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಅಯಾಜ್ ನ್ಯೂಮಿಸಮ್ಯಾಟಿಕ್ ಆರ್ಟ್ ಅ್ಯಂಡ್ ಫೋಟೊ ಹೆರಿಟೇಜ ಟ್ರಸ್ಟ್‌ವನ್ನು ಸ್ಥಾಪಿಸಿದ್ದಾರೆ. ಡೆಕ್ಕನ್ ಆರ್ಟ್ ಸೊಸೈಟಿಯ ಉಪಧ್ಯಾಕ್ಷರಾಗಿದ್ದಾರೆ. ಅಲ್ಲದೆ ಇತ್ತೀಚೆಗೆ ಕರ್ನಾಟಕ ನ್ಯೂಮಿಸಮ್ಯಾಟಿಕ್ ಸೊಸೈಟಿ ಬೆಂಗಳೂರು ಮತ್ತು ಬಾಂಬೆ ಕ್ವಾಯಿನ್ ಸೊಸೈಟಿ ಆಜೀವ ಸದಸ್ಯರಾಗಿ ಕಾರ್ಯ ನಿರ್ವಸಿದ್ದಾರೆ. ಅಲ್ಲದೆ ಇವರು ಹೀಗೆ ಹಲವಾರು ಸಂಘ–ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. (ಆರ್‌ಎಸ್)

ಮೋ

ಮೋನಪ್ಪ ಗೋಲಪ್ಪ ಪೋದ್ದಾರ: ಹಾಡುಗಾರರು. ಅದ್ಭುತವಾದ ಲಯಗಾರಿಕೆ ತಾಳದ ಗತ್ತನ್ನು ಪ್ರಕೃತಿದತ್ತವಾಗಿಯೇ ಪಡೆದು ಸುಶ್ರಾವ್ಯವಾಗಿ ಹಾಡಬಲ್ಲ ಚಾಕಚಕ್ಯತೆಯನ್ನು ಪಡೆದುಕೊಂಡಿದ್ದಾರೆ. ತಮ್ಮ ಜೀವನೋಪಾಯಕ್ಕಾಗಿ ಸೇಡಂನಲ್ಲಿ ಖಾನಾವಳಿಯೊಂದನ್ನು ನಡೆಸುತ್ತಿದ್ದಾರೆ.

ಮೂಲತಃ ಅಫಜಲಪೂರ ತಾಲ್ಲೂಕಿನ ಬೈರಾಮಡಗಿಯವರಾದ ಇವರು ಬಾಲ್ಯದಿಂದಲೂ ಹಾಡಿಗೆ ಮರುಳಾದವರು. ಯಾವುದೇ ಗುರುವಿನ ಬಳಿ ಶಾಸ್ತ್ರೀಯವಾಗಿ ಅಭ್ಯಾಸ ಮಾಡದೆ ತನಗೆ ತಾನೇ ಗುರು ಎಂಬಂತೆ ಸ್ವಯಂಸ್ಫೂರ್ತಿಯಿಂದ ಹಾಡುಗಾರಿಕೆಯನ್ನು ಕಲಿತು ತಮ್ಮ ಪಾಡಿಗೆ ತಾವು ಹಾಡಿಕೊಳ್ಳುತ್ತಲ್ಲೇ ಇರುವಾಗ ಗಮನಿಸಿದ ಅನೇಕರು ಅಲ್ಲಲ್ಲಿ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಇವರ ಆಸೆ, ಅನಿಸಿಕೆ ಹುಸಿಯಾಗ ದಂತೆ ಅದ್ಭುತ ಕಾರ್ಯಕ್ರಮ ನೀಡಿ ರಸಿಕರ ಮನಸೂರೆಗೈದು ಸೈ ಎನಿಸಿಕೊಂಡರು.

1981ರಲ್ಲಿ ಮಹಾಂತ ಪ್ರತಿಷ್ಠಾನದಿಂದ ಗಾನಕೋಗಿಲೆ ಎಂಬ ಬಿರುದು–ಸನ್ಮಾನ, ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಬೆಳೆದುದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗುಲಬರ್ಗಾ ಇವರ 15.11.1996ರಲ್ಲಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮ,ನೃಪತುಂಗ ಅಧ್ಯಯನ ಸಂಸ್ಥೆ ಸೇಡಂ ವತಿಯಿಂದ ಹಲವಾರು ತತ್ವಪದಗಳ ಕಾರ್ಯಕ್ರಮ, ಕರ್ನಾಟಕ ನಾಟಕ ಅಕಾಡೆಮಿ ಆಯೋಜಿಸಿದ ನಾಟಕೋತ್ಸವ 2003ರಲ್ಲಿ ಜಾನಪದ ಸಂಗೀತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ ವತಿಯಿಂದ ಸಂಗೀತೋತ್ಸವ–2005ರಲ್ಲಿ, ಸೇಡಂನ ಶ್ರೀ ಕೊತ್ತಲಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣಮಾಸದಲ್ಲಿ, ವಿಶೇಷ ಹಬ್ಬ ಹರಿದಿನಗಳಲ್ಲಿ ಸದಾ ಸೇವೆ. ಚಿಕ್ಕಂದಿನಲ್ಲಿ ಪ್ರಾರಂಭವಾದ ಇವರ ಹಾಡುಗಾರಿಕೆಗೆ ಈಗ 40 ವರ್ಷಗಳ ಅನುಭವ. ಎಲ್ಲರಿಗೂ ಬೇಕಾದವರು. (ಜಿಕೆ)

ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ): ದೊಡ್ಡಾಟದ ಹಿಮ್ಮೇಳದ ಕಲಾವಿದ. ತಂದೆ ವಿಠ್ಠಪ್ಪ ತಾಯಿ ರತ್ನಾಬಾಯಿ ಸೋಬಾನ ಪದ, ಜೋಗುಳ ಪದ, ಕುಟ್ಟುವ, ಬೀಸುವ ಪದಗಳ ಹಾಡುಗಾರ್ತಿ. ಇವರಿಂದ ವಂಶಪಾರಂಪರ್ಯವಾಗಿ ಕರಗತವಾಗಿ ಪುರವಂತಿಕೆಯಲ್ಲಿ ಖ್ಯಾತಿ ಪಡೆದರು. ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಚಿಂಚೋಳಿಯಲ್ಲಿ 05.03.1928 ಜನಿಸಿದರು. 80 ವರ್ಷದ ಮೋನಪ್ಪನವರು ತೇಜಸ್ಸು ಹೊಂದಿದ್ದಾರೆ. ಕಂಚಿನ ಕಂಠ ಅವರದು ಮೈಕ್ ಇಲ್ಲದೆ ಇಡೀ ಓಣಿಗೆ ಕೇಳುವಂತೆ ಹಾಡುತ್ತಾರೆ.

13–14ನೆಯ ವಯಸ್ಸಿನಲ್ಲೇ ಕನಕಾಂಗಿ ದೊಡ್ಡಾಟದಲ್ಲಿ ಕನಕಾಂಬರಿ ಪಾತ್ರವಹಿಸಿ ಅಭಿನಯ ಪ್ರಾರಂಭಿಸಿದರು. ಬಾಣಾಸುರ, ಹರಿಶ್ಚಂದ್ರ, ವೀರ ಅಭಿಮನ್ಯು, ಚಿತ್ರಾಂಗದ ಅಕ್ಷಯಾಂಬರದಲ್ಲಿ ದ್ರೌಪದಿ ಪಾತ್ರಗಳನ್ನು ನಿರ್ವಹಿಸಿ ಆಟಗಳನ್ನು ಯಶಸ್ವಿಗೊಳಿಸಿ ಸಾವಿರಾರು ಜನರ ಮನಸ್ಸನ್ನು ಸೂರೆಗೊಂಡ ಕೀರ್ತಿ ಇವರದು.

ಗುಲಬರ್ಗಾ ಜಿಲ್ಲೆಯ ಹಳ್ಳಿ ಹಳ್ಳಿಗಳಿಗೆ ಹೋಗಿ ಕಲಿಸಿದ ಆಟಗಳು ಹಲವಾರು ಅವುಗಳಲ್ಲಿ ಕನಕಾಂಗಿ, ಲವಕುಶ, ರಂಭಾ ವಿಲಾಸ, ಬಬ್ರುವಾಹನ, ಶಾಂಭವಿ, ವೀರ ಅಭಿಮನ್ಯು, ಇಂದ್ರಜೀತ, ಹರಿಶ್ಚಂದ್ರ, ಕೌಂಡಲೀಕ ರಾಜಾ, ವಿಶ್ವಕರ್ಮದ ಐದು ವಿದ್ಯೆಗಳಾದ ಅಕ್ಕಸಾಲಿಗ, ಬಡಿಗತನ, ಕಂಬಾರಿಕೆ, ಶಿಲ್ಪಕಲೆ, ಕಂಚಗಾರ ಹೀಗೆ–ಎಲ್ಲ ವಿದ್ಯೆಗಳಲ್ಲೂ ಪರಿಣಿತರು ಜೊತೆಗೆ ಒಕ್ಕಲುತನ ಮಾಡಿ ಅನ್ನದಾತನೆನಿಸಿಕೊಂಡವರು.

ದೊಡ್ಡಾಟದ ಸಂಗೀತ, ಪಾತ್ರಗಳ ನಿರ್ದೇಶನ, ವಸ್ತ್ರಾಲಂಕಾರ, ಎಲ್ಲದರಲ್ಲೂ ಪರಿಣಿತರು. ವಸ್ತ್ರಾಲಂಕಾರದ ಕಿರಿಟ, ನಡಪಟ್ಟಿ, ತ್ರಿಶೂಲ, ಸಿಂಹ, ಬಾಣ, ತಲವಾರ, ಗಧಾ ಆಗಿನ ಕಾಲದ ಪ್ರಸಿದ್ಧ ತಯಾರಕರಾದ ಆಲ್‌ಮೇಲ್ ಗಂಗಾಧರ

ಸ್ವಾಮಿಗಳಲ್ಲಿ ಹೋಗಿ ಕಲಿತು ಬಂದ ಕೀರ್ತಿ ಅವರದು. ಚೊಡ್ಡಾಟದಲ್ಲಿ ಯಾವುದಾದರೂ ಪಾತ್ರದ ಕೊರತೆಯಾದರೆ ಅದನ್ನು ತೂಗಿಸಿಕೊಂಡು ಹೋಗುವ ಶಕ್ತಿ ಇವರಲ್ಲಿ ಇದ್ದಿತು. ಇವರ ದುಃಖದ ವೀರಾವೇಶದ ಸನ್ನಿವೇಶಗಳು ಅಚ್ಚರಿ ಮೂಡಿಸುತ್ತಿದ್ದುವು.

ದೊಡ್ಡಾಟದ ಕಲೆಯಲ್ಲದೆ ಅನೇಕ ಜಾನಪದ ಕಲೆಗಳಾದ ಪುರವಂತಿಕೆಯಲ್ಲೂ ಅಷ್ಟೇ ನಿಪುಣರು. ಸಣ್ಣಾಟ, ದೊಡ್ಡಾಟ, ಡಪ್ಪಿನಾಟ, ಕೀರ್ತನೆ ಭಜನೆ, ಪ್ರವಚನ, ಪುರಾಣ ಇವೆಲ್ಲವುಗಳಲ್ಲೂ ನಿಪುಣರು. ಗುಲಬರ್ಗಾ, ಚಿಂಚೋಳಿ, ಬಳೂರಗಿ, ಅತನೂರ, ರೇವೂರ, ಮಳಖೇಡ, ಸೇಡಂ, ಮರತೂರ, ತೊನಸನಳ್ಳಿ ಬಂದರವಾಡ, ಚಿಣಮಗೇರಾ, ಸಿಂಧನೂರ, ಆಲಮೇಲ್, ಮೈಸೂರ, ಬೆಂಗಳೂರು, ಧಾರವಾಡ, ಹಂಪಿ, ಉಡುಪಿ, ಬಡದಾಳ, ಕೋಟನೂರ, ದುಧನಿ, ಮಹಾರಾಷ್ಟ್ರದ ಸೊಲ್ಲಾಪುರ, ಕಂಡಾಳು ಟೆಂಗಳಿ, ಮಾಶ್ಯಾಳ, ಗಾಣಗಾಪುರ, ಭೋಗನಳ್ಳಿ, ಮಣ್ಣೂರ, ಬೀದರ, ತಿಂಥಣಿ ಇವರು ಕಾರ್ಯಕ್ರಮ ನೀಡಿದ ಕ್ಷೇತ್ರಗಳು. ಜಿಲ್ಲಾ, ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ನೀಡಿದ ಕೀರ್ತಿ ಇವರದು. 2005ರಲ್ಲಿ ರಾಷ್ಟ್ರಮಟ್ಟದ ಕಾನ್ಫರೆನ್ಸ್– ಬೀದರ 2000ರಲ್ಲಿ ರಾಜ್ಯ ಮಟ್ಟದ ಸಂಸ್ಕೃತಿ ಸಂಭ್ರಮ, 1998 ರಲ್ಲಿ ರಾಷ್ಟ್ರಮಟ್ಟದ ಅಖಿಲ ಭಾರತ ಜಾನಪದ ಪುರವಂತಿಕೆ ಸಮಾವೇಶ, 1985ರಲ್ಲಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನ, 1996ರಲ್ಲಿ ಜನಪದ ಗೀತ ಗಾಯನ ಶಿಬಿರ, ಪುರವಂತಿಕೆ ಕಲಿಕಾ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಕಾಲ ಎಂ.ಎ. ತರಗತಿಗೆ ಹಾಡು ಕುಣಿತಗಳನ್ನು ಪ್ರಾಯೋಗಿಕವಾಗಿ ಹೇಳಿಕೊಟ್ಟ ಖ್ಯಾತಿ ಇವರದು. (ಜಿಕೆ)

ಮೋರೆಪ್ಪ ಕರಿಗೇರ: ಕನ್ನಡ ವೃತ್ತಿ ರಂಗಭೂಮಿ ಕಲಾವಿದ. ಪ್ರೇಕ್ಷಕರಲ್ಲಿ ತನ್ನದೇ ಆದ ಛಾಪು ಮೂಡಿಸಿದ ನಾಟಕ ಗೌಡ್ರಗದ್ಲ. ಆ ನಾಟಕದಲ್ಲಿ ಅಭಿನಯಿಸಿದ್ದಾರೆ. 'ಮೋಹಕ ಗಾಣದಾಳ' ಇವರ ಕಾವ್ಯನಾಮ. ಇವರು ಮೂಲತಃ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗಾಣದಾಳದವರು. ಸೊಗಸಾಗಿ ಹಾಡಬಲ್ಲರು. ಸುರಪುರದಲ್ಲಿ ಪದವಿ ಓದುವಾಗ ನಾಟಕ ಕಲೆ ಇವರನ್ನು ಆಕರ್ಷಿಸಿತು. ಕಲಾವಿದ ಬಿ.ಡಿ. ಸಾಸನೂರು ಅವರ ಒಡನಾಟದಿಂದ, ಮಾಜಿಮಂತ್ರಿ ಮದನಗೋಪಾಲರ ಪ್ರೋತ್ಸಾಹದಿಂದ ತಾವು ಹಲವಾರು ನಾಟಕದಲ್ಲಿ ಅಭಿನಯಿಸಲು ಪ್ರೇರಣೆಯಾಯಿತು. ಚಿನ್ನದ ಗೊಂಬೆ ನಾಟಕದಲ್ಲಿ ಶೆಟ್ಟಿಯಾಗಿ, 'ದಸರಾ'ದಲ್ಲಿ ಕಲ್ಯಾ, 'ಗೌರಿ ಗೆದ್ದಳು'ದಲ್ಲಿ ಟೇಲರ್, 'ಕಲಿತ ಕಳ್ಳ' ಹಾಸ್ಯಪಾತ್ರ, 'ಗೌಡ್ರ ಗದ್ಲ'ದಲ್ಲಿ ಮಲ್ಲೇಶಿ ಪಾತ್ರದಲ್ಲಿ ಮಿಂಚಿದ್ದಾರೆ. ಆಶಾಲತಾ, ಮುದುಕನ ಮದುವೆ, ಸಂತೆ ಮುಗಿದರೂ ಚಿಂತೆ ತಪ್ಪಲಿಲ್ಲ ಇತರೆ ನಾಟಕ ನೋಡಿದ ಎಲ್ಲ ಅಭಿಮಾನಿಗಳಿಗೆ ಇವರ ಅಭಿನಯ ಪರಿಚಿತ ಮತ್ತು ಪ್ರಭಾವಿತ. ಬೆಂಗಳೂರಿನ ರಂಗ ನಿರ್ದೇಶಕ ಲಿಂಗಯ್ಯನವರ ಕಾಂಚನಗಂಗಾ, ಅಭಿನಯ ಕಲಾವಿಲಾಸಿ ಬಳಗದ ನೇತೃತ್ವದ 'ರಾಷ್ಟ್ರ ನಾಯಕ ಸಂಗೊಳ್ಳಿ ರಾಯಣ್ಣ' ನಾಟಕದಲ್ಲಿ ಡಂಗುರ ಸಾರುವವನ ಪಾತ್ರದಲ್ಲಿ ಮಿಂಚಿದ್ದರು. ಮುಂದೆ ಈ ನಾಟಕ ಚಿತ್ರೀಕರಣಗೊಂಡು ದೂರದರ್ಶನದಲ್ಲೂ ಪ್ರಸಾರವಾಯಿತು. ಆಕಾಶವಾಣಿ ಪ್ರಸಾರಿತ ನಾಟಕಗಳಲ್ಲಿ ವಿವಿಧ ಪಾತ್ರಗಳಿಗೆ ಧ್ವನಿ ನೀಡಿದ್ದಾರೆ.


1978ರಲ್ಲಿ ಶಿಕ್ಷಕ ವೃತ್ತಿ ಸೇರಿ, ಅನಂತರ ವಯಸ್ಕರ ಶಿಕ್ಷಣದ ಮೇಲ್ವಿಚಾರಕರಾಗಿ, ಸದ್ಯಕ್ಕೆ ಶಹಾಪುರದ ಉಪ ಖಜಾನೆಯಲ್ಲಿ ಪ್ರಭಾರಿ ಖಜಾನಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರಿ ಸೇವೆಯ ಮಧ್ಯೆಯೂ ನಾಟಕದಲ್ಲಿ ಅಭಿನಯಿಸುವ ಇವರ ಆಸಕ್ತಿ ಕಡಿಮೆಯಾಗಿಲ್ಲ. ಅದೇ ಅವರ ಹೆಗ್ಗಳಿಕೆ. (ಎಲ್‌ಜಿಎ)

ಮೋಹನ ಸೀತನೂರ: ವರ್ಣಗಳ ಮಾಂತ್ರಿಕತೆಯನ್ನು ಸಿದ್ಧಿಸಿಕೊಂಡು ಅವುಗಳ ಜೊತೆ ಚೆಲ್ಲಾಟವಾಡುವ ಕಲೆ ಹಸ್ತಗತ ಮಾಡಿಕೊಂಡಿರುವ ಹಾಗೂ ಇತ್ತೀಚಿನ ಕೃತಿಗಳಲ್ಲಿ ಅದ್ಭುತವೆನಿಸುವ 'ದಿವಾರ್' ಕೃತಿ ಸರಣಿಯು ರಾಷ್ಟ್ರಮಟ್ಟದ ಖ್ಯಾತಿಯನ್ನು ಪಡೆದುಕೊಂಡಿರುವ 'ಮೋಹನ ಸೀತನೂರ' ನಿಜಕ್ಕೂ ಸಂಮೋಹನ ಕಲಾವಿದ.



ಕ್ಯಾನವಾಸಿನ ಮೇಲೆ ಬಣ್ಣಗಳ ಪದರುಗಳ ಮೇಲೆ ಹರಿಸಿದ ಬಣ್ಣದ ಜಲಪಾತಗಳು ಕಲಾವಿದನ ಬಣ್ಣದ ಬದುಕಿನ ಉತ್ತುಂಗ್ಗೇರಿಸಿದ ಕ್ಯಾನವಾಸಿನ ಮೇಲೆ ಹರಿದು ಬರುವ ಬಣ್ಣ, ತಾನಾಗಿ ತಾನು ಹರಿದು ಅದ್ಭುತವಾದ ಮಾನಸಿಕ ಶಾಂತಿಯನ್ನು ನೀಡುತ್ತವೆ. ಸೃಷ್ಟಿಕರ್ತನ ನಿಯಮದಂತೆ ಮನಬಂದಂತೆ ಬದುಕುವ ಹಕ್ಕನ್ನು ಹೇಗೆ ಮಾನವರು ಪಡೆದಿದ್ದೇವೆಯೋ, ಹಾಗೆಯೇ ಬಣ್ಣಗಳು ಮನಬಂದಂತೆ ಹರಿಯಲಿ ಮತ್ತು ಅವುಗಳು ಹೊಸದನ್ನು ಸೃಷ್ಟಿಸಿ ನೋಡುಗರ ಹಾಗೂ ಕಲಾವಿದನ ಮನಕ್ಕೆ ಮುದ ನೀಡಲಿ ಎಂಬ ಆಧ್ಯಾತ್ಮಿಕ ಭಾವಕೂಡ ಇವರಲ್ಲಿದೆ. ಬಣ್ಣಗಳ ಬಗ್ಗೆ ಇರುವ ಮೋಹ ಮತ್ತು ಕಲ್ಪನೆಗಳು ಅಮೋಘವಾದುದು. ಅವರು ಬಳಸಿದ 'ಬಂಗಾರ ವರ್ಣ' (ಹಳದಿ ಮಿಶ್ರಿತ) ಕೃತಿಗಳಿಗೆ ಮುದ ನೀಡುತ್ತದೆ. ಆರಡಿ ಎಂಟಡಿ ಕ್ಯಾನವಾಸಿನ ಮೇಲೆ ಮೂಡಿಬಂದ ಕೃತಿ ಅಸಾಮಾನ್ಯವಾದುದು. ಬಹುಶಃ ಇಂತಹ ದೊಡ್ಡ ಕೃತಿಗಳನ್ನು ರಚಿಸುವ ಕೆಲವೇ ಕೆಲವು ಜನರಲ್ಲಿ ಮೋಹನ ಒಬ್ಬರು. ಇತ್ತೀಚಿನ ಕೃತಿಗಳಲ್ಲಿ ಅವರ ಕಲಾ ಪ್ರೌಢಿಮೆ ಎದ್ದು ಕಾಣುತ್ತದೆ.ಇವರು ಬರೀ ಕಲಾವಿದನಷ್ಟೇ ಅಲ್ಲ ಜೊತೆಗೆ ಯುವ ಪ್ರತಿಭೆಗಳನ್ನು ಬೆಳೆಸುವ ಮಾನವೀಯತೆ ಗುಣವನ್ನು ಹೊಂದಿದವರು. ಅಕ್ಯಾಡಮಿಕ್ಕಾಗಿ ಇವರು ಸಾಂಪ್ರದಾಯಿಕ, ಗ್ರಾಮೀಣ ಹಾಗೂ ಜನಪದ, ಕಾಷ್ಠ ಹಾಗೂ ಶಿಲ್ಪಕಲೆಗಳ ಕ್ಷೇತ್ರಕ್ಕೆ

ತಮ್ಮ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಗಾಗಿ ಇವರ ಸೇವೆ ಅನನ್ಯ. ಕಾಷ್ಠ ಹಾಗೂ ಶಿಲ್ಪಕಲೆ ಬಗ್ಗೆ ಇವರಿಗೆ ವಿಶೇಷ ಮಮತೆ. ಟೆರ್ರಾಕೋಟಾ ಹಾಗೂ ಲೋಹ ಶಿಲ್ಪ ಕಾರ್ಯಾಗಾರ ಕೂಡ ಆಯೋಜಿಸಿ ಯುವ ಹಾಗೂ ಗ್ರಾಮೀಣ ಪ್ರತಿಭೆಗಳನ್ನು ಹೊರ ತರುವಲ್ಲಿ ಯಶಸ್ಸು ಕಂಡಿದ್ದಾರೆ.




Folk and traditional Impressions ಅಕ್ರೇಲಿಕ್ ಮಾಧ್ಯಮ

ಇವರ ಇನ್ನೊಂದು ವಿಶೇಷವೆಂದರೆ, ಸಾರ್ವಜನಿಕ ವಾಗಿಯೂ ಇವರ ಸೇವೆ ನಿರಂತರವಾಗಿ ನಡೆಯುತ್ತದೆ. 'ಕಲಬುರಗಿ ಕಂಪು' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಪಾಲ್ಗೊಂಡು, ಅನೇಕ ಶಿಬಿರಗಳನ್ನು ನಡೆಸಿಕೊಟ್ಟಿದ್ದಾರೆ. ಕಲೆ, ಕಲಾವಿದರ ಬಗ್ಗೆ ಭಾವನಾತ್ಮಕ ಸಂಬಂಧಗಳು, ಹಾಗೂ ಹೊಸ ಪ್ರತಿಭೆಗಳಿಗೆ ವೇದಿಕೆ ನಿರ್ಮಿಸಿ, ಅವರನ್ನು ಪ್ರೋತ್ರಾಹಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. (ಪಿಕೆ)

ಮೋಹನಚಂದ ಕಿರಣಗಿ: ಲೇಖಕ, ನಟ, ನಾಟಕಕಾರ. ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲ್ಲೂಕಿನ ಮಳ್ಳಿ ಗ್ರಾಮದ ಜೈನ ಕುಟುಂಬದಲ್ಲಿ ಜನಿಸಿದರು. ಹೈದ್ರಾಬಾದ ಕರ್ನಾಟಕದ ಬಯಲು ಭೂಮಿಯಲ್ಲಿ ಸುಳಿದೆಗೆದು ಬೆಳೆದರು. ಕಡುಕಷ್ಟಗಳು ಇವರ ಬೆನ್ನಟ್ಟಿ ಬಂದವು. ತಮ್ಮ ನೋವನ್ನು ಹೃದಯದಲ್ಲಿ ಹುದುಗಿಡದೆ ಬರವಣಿಗೆಯ ಮೂಲಕ ಹೊರಗೆಡಹಿದರು; ನೋವನ್ನು ಮರೆತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಎಲ್ಲರಿಗೂ ಮೆಚ್ಚಿಗೆಯಾದರು. ತಾರುಣ್ಯದಲ್ಲಿಯೇ ಬರೆವಣಿಗೆ ಪ್ರಾರಂಭಿಸಿದ ಇವರು 'ತಂಗಿ' ಕವನ ಸಂಕಲನ' ಜೈನಮುನಿ ಶ್ರೀ ಪಾಮಸಾಗರ ಮಹಾರಾಜರು' 'ಜೀವದಯೇಃ ಜೈನ ಧರ್ಮ' ಏಕಾಂಕ ನಾಟಕ ಬರೆದು ಪ್ರಕಟಿಸಿದ್ದು ಸಣ್ಣದಲ್ಲ.

ಬಾಲ್ಯದಲ್ಲಿಯೇ ಅಭಿನಯ ಹಾಗೂ ಹಾಸ್ಯವನ್ನು ಮೈಗೂಡಿಸಿ ಗೊಂಡದ್ದರಿಂದ, ಸತತಾಭ್ಯಾಸ, ಗ್ರಾಮೀಣ ಬದುಕಿನ ಸಂಕೀರ್ಣ ಅನುಭವ, ಚಿಕಿತ್ಸಕ ನೋಟ ಗಳಿಂದಾಗಿ 'ಅಣ್ಣತಂಗಿ' ಆದರ್ಶ ಪ್ರೇಮ' ಎಂಬ ಎರಡು ನಾಟಕಗಳು ಇವ




ರಿಂದ ಹೊರಬಂದಿವೆ. ಉತ್ತರ ಕರ್ನಾಟಕದ ಹಳ್ಳಿಗರ ಮನೆ ಮಾತಾದ ಈ ನಾಟಕಗಳನ್ನು ಪ್ರಯೋಗಿಸದ ಗ್ರಾಮಗಳೇ ಇಲ್ಲ ವೆನ್ನಬಹುದು. ಈ ಎಲ್ಲ ಇವರಿಗೆ ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿಗಳು ಬಂದಿವೆ.

ಇಂಡಿಯಾ ಬುಕ್ ಹೌಸ್ ದವರು ಇವರಿಂದ 'ಯಾದಗಿರಿ' 'ಕೊಪ್ಪಳ' ಕ್ಷೇತ್ರಗಳ ಪರಿಚಯ ಪುಸ್ತಕಗಳನ್ನು ಬರೆಸಿದ್ದಾರೆ. ಇವರ 'ಜೇವರಗಿ ಷಣ್ಮುಖ ಶಿವಯೋಗಿ' ವ್ಯಕ್ತಿ ಪರಿಚಯ ಪುಸ್ತಕ ಅಪಾರ ಮೆಚ್ಚುಗೆ ಪಡೆದಿದೆ. ರಾಷ್ಟ್ರೋತ್ಥಾನ ಪರಿಷತ್ತಿನ ಭಾರತ ಭಾರತಿ ಪುಸ್ತಕ ಮಾಲಿಕೆ ಯಲ್ಲಿ 'ಅಶೋಕ' ಕೃತಿ ಇವರಿಂದ ಬಂದಿದೆಯಲ್ಲದೆ ಇಂಗ್ಲಿಷ್, ತೆಲುಗು, ತಮಿಳು ಮಲೆಯಾಳಿ ಭಾಷೆಗಳಲ್ಲಿ ಅನುವಾದ ಗೊಂಡಿದೆ. (ಎಸ್‌ಯು)

ಮೋಹನ್‌ರಾವ್ ಬಿ. ಪಾಂಚಾಳ: ತನ್ನ ಆಶಯವನ್ನು ಆಂತರಿಕ ಒಳನೋಟಗಳನ್ನು ಕಲೆಯ ಮೂಲಕ ಅಭಿವ್ಯಕ್ತ ಗೊಳಿಸುವ ಕಲಾವಿದ. ಬೆಂಗಳೂರು, ದೆಹಲಿ, ಮೈಸೂರು, ಮುಂಬೈ, ಪುಣೆ, ಹೈದ್ರಾಬಾದ್ ಮುಂತಾದೆಡೆ ಚಿತ್ರಪ್ರದರ್ಶನ ಗಳಲ್ಲಿ ಭಾಗವಹಿಸಿದ್ದಾರೆ. ಲ್ಯಾಂಡ್‌ಸ್ಕೇಪ್, ಪೋಟ್ರೇಟ್, ಮ್ಯೂರಲ್, ಇನ್‌ಸ್ಟಾಲೇಷನ್,ರಿಯಲಿಸ್ಟಿಕ್ ಆರ್ಟ್‌ಗಳಲ್ಲಿಯೂ ಇವರು ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ. ಆಂತರಿಕ ಒಳ ನೋಟಗಳನ್ನು ತನ್ನ ಕಲೆಯ ಮೂಲಕ ಕೊಡುವವರಲ್ಲಿ ಕಲಾವಿದ ಮೋಹನ್‌ರಾವ್ ಬಿ. ಪಾಂಚಾಳ ಒಬ್ಬರು. ಪ್ರಸ್ತುತ ಇವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಬೀದರಿನ ನಂದಗಾಂವ್ ನವರು. ಇವರು ಓದಿದ್ದು ಗುಲ್ಬರ್ಗದಲ್ಲಿ ಎಂ.ಎಫ್.ಎ. ಮುಗಿಸಿ ಎಸ್.ಎಂ. ಪಂಡಿತ ರನ್ನು ಕುರಿತು ಪಿಎಚ್.ಡಿ ಮಾಡಿ ದ್ದಾರೆ. ಬೆಂಗಳೂರು, ದೆಹಲಿ, ಮೈಸೂರು, ಮುಂಬೈ, ಪುಣೆ, ಹೈದ್ರಾಬಾದ್ ಮುಂತಾದ ಕಡೆ ಗಳಲ್ಲಿ ಚಿತ್ರ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ಹಂಪಿ, ಗುಲಬರ್ಗಾ, ಶಹಾ



ನೈಜ ಚಿತ್ರ, ತೈಲವರ್ಣ

ಬಾದ್ ಮುಂತಾದ ಕಡೆ ಕ್ಯಾಂಪ್‌ಗಳಲ್ಲಿ ಭಾಗವಹಿಸಿದ್ದಾರೆ. ಇವೆಲ್ಲವುಗಳ ಜೊತೆಗೆ ಬೆಂಗಳೂರು, ವಿಜಾಪುರ, ಮುಂಬೈ, ದೆಹಲಿ, ಲಕ್ನೋ ಇನ್ನಿತರ ಕಡೆಗಳಲ್ಲಿ ಗ್ರೂಪ್ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಇವರ ಸಾಧನೆಗೆ 1996ರಲ್ಲಿ 'ತಸ್ಮಿಯ ಆರ್ಟ್ ಹೌಸ್' ಪ್ರಶಸ್ತಿ, 1999ರಲ್ಲಿ ಮೈಸೂರು ದಸರಾದಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಬಂದಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಶಸ್ತಿ, 2001ರಲ್ಲಿ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ 'ಜಾನ್‌ಗಾಂವ್' (ಆಂಧ್ರ) ಪ್ರಶಸ್ತಿ ಬಂದಿದೆ.

ಗುಲ್ಬರ್ಗದಿಂದ ದೆಹಲಿ, ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್, ಪುಣೆ, ಮುಂಬೈ, ಪ್ಯಾರಿಸ್, ವಾಷಿಂಗ್ಟನ್, ನಾರ್ವೆ, ಚೆನ್ನೈ, ಆಸ್ಟ್ರೇಲಿ ಯಾವರೆಗೆ ಇವರ ಪೇಂಟಿಂಗ್‌ಗಳು ಮಾರಾಟವಾಗಿವೆ. ಬಣ್ಣಗಳ ಮೇಲೆ ಹಿಡಿತ ಸಾಧಿಸಿರುವ ಇವರು ಮೂಲ ವರ್ಣಗಳಾದ ಕೆಂಪು, ಹಳದಿ, ನೀಲಿಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಅಲ್ಲದೇ ಸಹಾಯಕ ವರ್ಣಗಳಾದ ಕಪ್ಪು ಮತ್ತು ಬಿಳಿ ಬಣ್ಣಗಳ ಮೇಲಿನ ಹಿಡಿತವೂ ಕೂಡ ಮೂಲ ವರ್ಣಗಳಷ್ಟೇ ಮುಖ್ಯ. ಇದನ್ನೂ ಇವರು ಸಾಧಿಸಿದ್ದಾರೆ. ಅವಕಾಶದ ಗುರುತ್ವ ಮೀರಿ ತೇಲುವಂತಹ ಇವರ ರೇಖೆಗಳು ಅರ್ಥ ಗರ್ಭಿತವಾದಂತಹವುಗಳು. ಅವುಗಳ ನೋಟ ಮಾತ್ರ ತುಂಬಾ ಶಕ್ತಿಯುತ. ಬದುಕನ್ನು ತುಂಬಾ ಗಂಭೀರವಾಗಿ ಪರಿಗಣಿಸಿರುವ ಇವರು ಮಾನವೀಯ ಸಂವೇದನೆಗಳಿಗೆ ತಕ್ಕಂತೆ ಬಣ್ಣಗಳನ್ನು ಸಮರ್ಥವಾಗಿ, ಸಮಯೋಚಿತವಾಗಿ ಬಳಸಿಕೊಂಡಿದ್ದಾರೆ. ಅನೇಕ ಚಾರಿತ್ರಿಕ ಸತ್ಯಗಳನ್ನು ಒಳಗೊಂಡಿರುವ ಇವರ ಪೇಂಟಿಂಗ್‌ಗಳಲ್ಲಿ ಪರಂಪರೆಯ ಪ್ರತಿರೋಧ ಮತ್ತು ಅನುಸಂಧಾನ ಕ್ರಿಯೆಗಳು ನಡೆಯುವಂತೆ ತೋರುತ್ತದೆ. ಮೂಲ ವರ್ಣಗಳಿಗಿಂತ ಸಹಾಯಕ (ಕಪ್ಪು ಮತ್ತು ಬಿಳಿ) ವರ್ಣಗಳ ಬಳಕೆ ಮತ್ತು ಅವುಗಳ ಮೇಲಿನ ಹಿಡಿತ ನಿಜಕ್ಕೂ ಅನನ್ಯ.

(ಇಜೆಬಿ)

ಮೌನೇಶ ಪತ್ತಾರ: ಚಿತ್ರಕಲಾವಿದ. ಯಲಬುರ್ಗಾ ತಾಲ್ಲೂಕಿನ ಮಂಗಳೂರು ಗ್ರಾಮದವರು. ಜಲವರ್ಣ-ತೈಲವರ್ಣ ಚಿತ್ರಗಳ ರಚನೆಯಲ್ಲಿ ಎತ್ತಿದ ಕೈ. ಗದುಗಿನ ವಿಜಯ ಕಲಾ ಮಂದಿರದಲ್ಲಿ ಡಿ.ಎಂ.ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ಈ ಕಲಾವಿದರಿಗೆ ಚಿತ್ರಕಲೆಯಲ್ಲಿ ತುಂಬಾ ಆಸಕ್ತಿ. ಇವರಿಗೆ ಜಲವರ್ಣ ತೈಲವರ್ಣ ಸ್ಮರಣಚಿತ್ರಗಳನ್ನು ಬಿಡಿಸುವುದೆಂದರೆ ಪಂಚಪ್ರಾಣ. ಜಲವರ್ಣ ಚಿತ್ರಕಲೆಯನ್ನೇ ಪ್ರಮುಖವಾಗಿ ಅಭ್ಯಸಿಸಿ, ಆಧ್ಯಾತ್ಮಿಕ ಚಿತ್ರಗಳನ್ನು, ಸ್ಮರಣಚಿತ್ರಗಳನ್ನು ತಮ್ಮ ಚಿತ್ರಗಳಲ್ಲಿ ನೈಜವಾಗಿ ಬಿಂಬಿಸಿದ್ದಾರೆ.

ಗಣೇಶ, ಪರಶುರಾಮ, ವಿಶ್ವಕರ್ಮ ಚಿತ್ರಗಳಲ್ಲದೆ ಅನೇಕ ಭಾವಚಿತ್ರಗಳು ಇವರ ಕುಂಚದಿಂದ ಜಲವರ್ಣದಲ್ಲಿ ಅರಳಿವೆ ಕಾಂಪೋಜೆಷನ್, ಟ್ರೆಡಿಷನಲ್ ಅಕ್ರಾಲಿಕ್ ಮಾದರಿಯ ಚಿತ್ರಗಳನ್ನು ಬಿಡಿಸುವುದರಲ್ಲಿ ಪ್ರವೀಣರು. ಜೊತೆಗೆ ಹಲವಾರು ಚಿತ್ರಕಲಾ ಹವ್ಯಾಸಗಳನ್ನು ಇವರು ಬೆಳೆಸಿಕೊಂಡಿದ್ದಾರೆ. ಕ್ರಾಫ್ಟ್ ವರ್ಕ ಕಲೆ, ಥರ್ಮಾಕೊಲ್‌ನಿಂದ ವಿಧಾನಸೌಧವನ್ನು, ಗ್ಲಾಸ್‌ನಿಂದ ಮಂಟಪ, ಜೇಡಿಮಣ್ಣಿನಿಂದ ಗಣೇಶನ ಮೂರ್ತಿಗಳನ್ನು ತಯಾರಿಸಿ, ಆ ಮುಖಾಂತರ ತಮ್ಮ ಕಲೆಯನ್ನು ತೋರ್ಪಡಿಸಿದ್ದಾರೆ.

ಇವರು ಬಿಡಿಸಿದ ಚಿತ್ರಗಳು ಅನೇಕ ಕಡೆ ಪ್ರದರ್ಶನಗಳನ್ನು ಕಂಡಿವೆ. 1993ರಲ್ಲಿ ಹಂಪಿಯಲ್ಲಿ, 1994ರಲ್ಲಿ ಗದುಗಿನ ವಿಜಯ ಕಲಾ ಮಂದಿರದಲ್ಲಿ, 1995ರಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ (ಅಕಾಡೆಮಿ)ನಲ್ಲಿ ಇವರ ಜಲವರ್ಣ, ತೈಲವರ್ಣ ಮತ್ತು ಭಾವಚಿತ್ರಗಳು, ನಿಸರ್ಗ ಚಿತ್ರಗಳು ಪ್ರದರ್ಶನಗೊಂಡು ಕಲಾ ವಿಮರ್ಶಕರ ಮೆಚ್ಚುಗೆ ಪಡೆದಿವೆ. ಇವರ ಅನೇಕ ಕಲಾಕೃತಿಗಳನ್ನು ವಿದೇಶಿ ಮತ್ತು ಸ್ವದೇಶಿ ಕಲಾಪ್ರಿಯರು ಹೆಚ್ಚಿನ ಮಟ್ಟದಲ್ಲಿ ಖರೀದಿಸಿದ್ದಾರೆ. ಕಲಾವಿದ ಮೌನೇಶ ಅವರಿಗೆ 1995ರಲ್ಲಿ ಗದುಗಿನ ವಿಜಯಕಲಾ ಮಂದಿರದವರು ಅತ್ಯುತ್ತಮ ಚಿತ್ರಕಲಾವಿದ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

1994ರಲ್ಲಿ ಚಿತ್ರಕಲಾ ಅಕಾಡೆಮಿಯಲ್ಲಿ ಇವರ ಜಲವರ್ಣ ಚಿತ್ರಗಳು ಪ್ರಥಮ ಬಹುಮಾನ ಗಳಿಸಿವೆ. ಹೀಗೆ ಪ್ರಶಸ್ತಿಗಳನ್ನು ಪಡೆದುಕೊಂಡ ಇವರು 200ಕ್ಕೂ ಹೆಚ್ಚು ವಿವಿಧ ಕಲಾಕೃತಿಗಳನ್ನು ರಚಿಸಿ, ಅಪಾರ ಜನ ಮನ್ನಣೆಗೆ ಪಾತ್ರರಾಗಿದ್ದಾರೆ.

(ಎಸ್‌ಎಂಎಚ್)



ಮೌನೇಶ್ವರರಾವ ಸೋನಾರ: ತಬಲಾ ವಿದ್ವಾನರಾದ ದಿ. ಶ್ರೀ ಬಾಲಚಂದ್ರರಾವ ಸೋನಾರ ಹಾಗೂ ಶ್ರೀಮತಿ ಮಹಾದೇವಿ ಯವರ ಮಗನಾಗಿ ಜನಿಸಿದರು. ಇವರು ಸಂಗೀತ ಕುಟುಂಬ ದಲ್ಲಿ ಬೆಳೆದವರು. ಇವರ ತಾಯಿಯ ತಂದೆಯವರಾದ ಶ್ರೀ ಲೋಕಪ್ಪ ವಿಶ್ವಕರ್ಮ ಒಬ್ಬ ಉತ್ತಮ ಹಾರ್ಮೋನಿಯಂ ವಾದಕರಾಗಿದ್ದರು. ಮೂಲತ ವಾಗಿ ಸೋನಾರರವರು ಕಲಬುರ್ಗಿಯವರಾದರೂ ಜನ್ಮ ಸ್ಥಳ ಮತ್ತು ಶಿಕ್ಷಣ ಕಾರ್ಯಸಾಧನೆ ಶಹಾಬಾದದಲ್ಲೇ ಆಗಿರುವುದು.

ಬಾಲ್ಯದಲ್ಲಿ ತಂದೆಯವರಿಂದ ತಬಲಾ ಶಿಕ್ಷಣವನ್ನು ಪಡೆದು ನಂತರ ಸಂಗೀತ ಮೇರು ಕಲಾವಿದರೆನಿಸಿದ ಕರ್ನಾಟಕ ಕಲಾ ತಿಲಕ ದಿ. ಶ್ರೀ ಗುರುನಾಥರಾವ ಆಲಗೂಡಕರ್‌ರವರ ಶಿಷ್ಯತ್ವ ವನ್ನು ಪಡೆದು ಸುಮಾರು 12 ವರ್ಷಗಳ ಕಾಲ ತಬಲಾ ಮತ್ತು ಹಾರ್ಮೋನಿಯಂ ಶಿಕ್ಷಣವನ್ನು ಪಡೆದು ಮುಂದುವರೆದು ಶ್ರೀ ರಾಮಚಾರ್ಯ ಜಾಲಿಹಾಳ, ಶ್ರೀ ಎಂ.ಆರ್ ದುರ್ಗೇಶ ಮತ್ತು ಪಂಡಿತ ಎಸ್.ಎ. ತಪಲೆಯವರಿಂದ ಗಾಯನ ಮತ್ತು ಹಾರ್ಮೋನಿಯಂ ಶಿಕ್ಷಣ ಪಡೆದಿದ್ದಾರೆ. ತಮ್ಮ ಗುರುಗಳಂತೆ ಎರಡು ವಿದ್ಯೆಯಲ್ಲಿ ವಿದ್ವತ್‌ಯನ್ನು ಪಡೆದು ತಬಲಾ ಮತ್ತು ಗಾಯನದಲ್ಲಿ ವಿದ್ವತ್ ಪರೀಕ್ಷೆ ಮುಗಿಸಿದ್ದಾರೆ. ರಾಜ್ಯಮಟ್ಟದಲ್ಲಿ ನೀಡುವ ಕೇಂದ್ರ ಸರಕಾರದ ಶಿಷ್ಯವೇತನ ಪಡೆದುಕೊಂಡಿದ್ದಾರೆ. ಗುಲಬರ್ಗಾ ಆಕಾಶವಾಣಿ ಕೇಂದ್ರದಲ್ಲಿ ನಿರಂತರವಾಗಿ ಕಾರ್ಯ ಕ್ರಮಗಳನ್ನು ನೀಡಿದ್ದಾರೆ. ಅತ್ಯಂತ ಕಿರಿಯ ವಯಸ್ಸಿನಲ್ಲಿ ಹೈದ್ರಾಬಾದ ದೂರದರ್ಶನಕ್ಕೆ ತಬಲಾ ಸೋಲೋ ಕಾರ್ಯಕ್ರಮ ನೀಡಿದ ಕೀರ್ತಿ ಇವರದಾಗಿದೆ.



ಶ್ರೀ ಛಾಯಾ ಸುಧೀಂದ್ರ ರವರಿಗೆ ತಬಲಾ ಸಾಥ ನೀಡುತ್ತಿರುವುದು

ಶೈಕ್ಷಣಿಕವಾಗಿ ಬಿ.ಎ., ಬಿ.ಎಡ್., ಎಂ.ಎ., ಎಲ್.ಎಲ್.ಬಿ ಪಡೆದರೂ ಆಯ್ಕೆ ಮಾಡಿಕೊಂಡಿರುವ ಕ್ಷೇತ್ರ ಮಾತ್ರ ಶಾಸ್ತ್ರೀಯ ಸಂಗೀತ. ತಮ್ಮ ಗುರುಗಳು ವಿಧಿವಶವಾದ ನಂತರ ಅವರ ಸ್ಮರಣಾರ್ಥವಾಗಿ ಜಿ.ಬಿ. ಎಂಬ ಸಂಗೀತ ಸಂಸ್ಥೆಯನ್ನು ಹುಟ್ಟು ಹಾಕಿ ಒಂದು ದಶಕದಿಂದ ಸಂಗೀತ ಶಿಕ್ಷಣವನ್ನು ನೀಡುತ್ತಿದ್ದು ಇವರ ಶಿಷ್ಯರು ರಾಜ್ಯ ಮತ್ತು ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆ ಯಲ್ಲಿ ಭಾಗವಹಿಸಿ ಪುರಸ್ಕಾರ ಪಡೆದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕೇಂದ್ರ ಸರಕಾರದ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಿಷ್ಯವೇತನ ವನ್ನು ಪಡೆದಿದ್ದಾರೆ. ಜೊತೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಸಂಗೀತ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಯಿಂದ ತೇರ್ಗಡೆಯಾಗಿದ್ದಾರೆ.

2007ರಲ್ಲಿ ಇವರು ಕೇಂದ್ರೀಯ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕರಾಗಿ ನೇಮಕಗೊಂಡರು. ಕೂಡ ಆ ಹುದ್ದೆಯನ್ನು ತ್ಯಜಿಸಿ ಸಂಗೀತ ಸಂಸ್ಥೆಯನ್ನು ಬೆಳೆಸುವಲ್ಲಿ ಅವಿರತವಾದ ಪ್ರಯತ್ನ ಮಾಡಿದ್ದಾರೆ. ಅವರ ತ್ಯಾಗ ಮತ್ತು ಪರಿಶ್ರಮದ ಫಲವಾಗಿ ಮತ್ತೆ 2010ರಲ್ಲಿ ರಾಜ್ಯ ಸರಕಾರದ ನೌಕರಿಯು ಒದಗಿ ಬಂದು ಸರಕಾರಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. (ಆರ್‌ಕೆಕೆ)

ಯ

ಯಮನಮ್ಮ: ಹೈದ್ರಾಬಾದ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಜನಪ್ರಿಯ ಗೊಳಿಸಿ ದವರು. ಇವರು ಕರ್ನಾಟಕದ ಮಹಿಳಾ ಕಲಾವಿದರ ಲ್ಲೊಬ್ಬ ರಾಗಿದ್ದಾರೆ. ಎಂಬತ್ತರ ಅಂಗವಿಕಲ ವಯೋವೃದ್ಧೆ ಹೈದ್ರಾಬಾದ ಕರ್ನಾಟಕದಲ್ಲಿ ಅದರಲ್ಲೂ ರಾಯಚೂರಿನ ಆಸು ಪಾಸಿನಲ್ಲಿ ಬಹಳ ಜನಪ್ರಿಯತೆ ಪಡೆದಿರುವ ಹಿರಿಯ ಕಲಾವಿದೆ.

ಓದಿದ್ದು ನಾಲ್ಕನೆಯ ತರಗತಿಯಾದರೂ ಸಂಗೀತದಲ್ಲಿ ಯಮನಮ್ಮನವರ ಸಾಧನೆ ಬಹಳ ದೊಡ್ಡದು. ಸೀನಪ್ಪ ಆಚಾರ್ ಮತ್ತು ಲಕ್ಷ್ಮಣಗೌಡ್ರು ವಿದ್ವಾಂಸರ ಬಳಿ ಕಠಿಣ ಸಾಧನೆ ಮಾಡಿ ರುವ ಇವರು ಧಾರವಾಡ, ಗುಲಬರ್ಗಾ, ಸೊಲ್ಲಾಪುರ, ಸೋವರಪೇಟೆ ಮಠ, ಕಿಲೇದ ಮಠ, ಬಿಚ್ಚಾಲಿ, ಕೀಡಿ ಮಿಷ್ತ್ರರ್ಸ್ ಮುಂತಾದ ಕಡೆ ಕಾರ್ಯಕ್ರಮ ನೀಡಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ.

ಹಲವು ಶಿಷ್ಯರನ್ನೂ ತಯಾರಿಸಿರುವ ಇವರಿಗೆ ಇತರ ಸಂಘ ಸಂಸ್ಥೆಗಳೂ ಸನ್ಮಾನಿಸಿ ಗೌರವಿಸಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 1999–2000ನೇ ಸಾಲಿನ 'ಕರ್ನಾಟಕ ಕಲಾ ಶ್ರೀ' ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ.

(ಎಸ್‌ಎಂಜಿ)



ಯಶವಂತ ಹಿಬಾರೆ: ಬಣ್ಣಗಳಿಗೆ ಜೀವ ತುಂಬುವ ಅಭಿಜಾತ ಕಲಾವಿದ. ಇವರನ್ನು ಬಣ್ಣಗಳ 'ಹೃದಯತಜ್ಞ' ಎಂದು ಬಣ್ಣಿಸಲಾಗಿದೆ. ಬಣ್ಣಗಳೊಂದಿಗೆ ಸರಸವಾಡುತ್ತ ಬಣ್ಣಗಳಿಗೆ ಜೀವ ತುಂಬವ ಕಲೆ ಈ ಕಲಾವಿದರಿಗೆ ಕರಗತವಾಗಿದೆ. ಬಣ್ಣಗಳ ಮಧ್ಯದಲ್ಲಿ ಕೈಯಾಡಿಸಿಕೊಂಡಿದ್ದರೂ 'ಬಣ್ಣದ ಬದುಕಿ'ನಿಂದ ದೂರುಳಿದ 'ಸಾಫ್–ಸುಥರಾ' ಜೀವನವನ್ನು ಬದುಕಿದ ಕೀರ್ತಿ ಇವರದು. ಯಾವೊಂದು 'ಕಲಾಶಾಲೆ'ಯನ್ನು ಸೇರದೆಯೇ ಚಿತ್ರಕಾರರಾಗಿ ಬೆಳೆದು ನಿಂತರು. ಮಾತಿನ 'ಒಳ–ಹೊರಗು' ಗಳನ್ನು ಬಲ್ಲವರು 'ಮಾತಿನ ಮಂಟಪ' ವನ್ನು ಕಟ್ಟುವ ಹಾಗೆ ಬಣ್ಣಗಳ ಹೃದಯವನ್ನು ಬಲ್ಲ ಹಿಬಾರೆ 'ಬಣ್ಣದ ಹಂದರ'ವನ್ನು ಹಾಕುತ್ತ ಬಂದರು. ಹಿಬಾರೆಯವರು ಕೈಯಲ್ಲಿ ಕುಂಚವನ್ನು ಹಿಡಿದರೆ ಸಾಕು, ಕುಂಚವದು 'ಮಾತಿನ ಮಲ್ಲಿ' ಯಂತೆ ಓತ ಪ್ರೋತವಾಗಿ ಮಾತನಾಡತೊಡಗುತ್ತದೆ. 'ಬಣ್ಣ ಬೆರಕೆ' ಯಲ್ಲಿ ಇವರದು ಎತ್ತಿದ ಕೈ!! ಬಣ್ಣವನ್ನು 'ಭಾಷೆ' ಯಾಗಿಸಿ 'ಅಭಿವ್ಯಕ್ತಿ ಮಾಧ್ಯಮ'ಕ್ಕೆ 'ತರ್ಜುಮೆ' ಗೊಳಿಸಿಕೊಡುವುದು ಇವರಿಗೆ ಚೆನ್ನಾಗಿ ಗೊತ್ತು.



'ಸರಸ್ವತಿ' ತೈಲವರ್ಣ ಮಾಧ್ಯಮ


ಇವರ ಬಹುತೇಕ ಕಲಾಕೃತಿಗಳು ಧಾರ್ಮಿಕ ವ್ಯಕ್ತಿ ಮತ್ತು ವ್ಯಕ್ತಿತ್ವಗಳನ್ನು ವಿಷಯ, ವಸ್ತುಗಳನ್ನಾಗಿಸಿಕೊಂಡಿವೆ. ಒಂದರ್ಥದಲ್ಲಿ ಇವರು ತಮ್ಮ ಕುಂಚಕ್ಕೆ 'ಧಾರ್ಮಿಕ ದೀಕ್ಷೆ'ಯನ್ನಿತ್ತಿದ್ದಾರೆ. ಎಂದರೆ ತಪ್ಪಾಗದು. ಲೌಕಿಕ 'ನರ–ನಾರಿ' ಯರನ್ನು ತಮ್ಮ ಕೃತಿಗಳಿಗೆ ವಸ್ತುವಾಗಿಸಿದುದು ತೀರ ಕಡಿಮೆ ಧಾರ್ಮಿಕ ನಾಯಕ, ವಿನಾಯಕರನ್ನು ಹೊರತುಪಡಿಸಿದರೆ ರಾಷ್ಟ್ರನಾಯಕರು ಮತ್ತು ಸಾರ್ವಜನಿಕ ವ್ಯಕ್ತಿತ್ವಗಳು ಇವರ ಕುಂಚ, ಕ್ಯಾನ್ವಸ್ಸುಗಳನ್ನು ಆವರಿಸಿಕೊಳ್ಳುತ್ತವೆ. ಇವರ ಕೈಯಲ್ಲಿ ಬುದ್ಧ ಜೀವತಳೆಯುತ್ತಾನೆ, ಬಸವ ಅಂದಗೊಳ್ಳುತ್ತಾನೆ, ರೇಣುಕ ಉದ್ಭವಿಸುತ್ತಾನೆ, ಶಂಕರ ಅವತರಿಸುತ್ತಾರೆ, ರಾಮ, ಸೀತೆಯರು ಚಿನ್ನದ ಜಿಂಕೆಯ 'ಮಾಯಾಪಾಶ'ಕ್ಕೆ ಸಿಲುಕುತ್ತಾರೆ, ರಾಧಾ, ಕೃಷ್ಣ ಜೋಡಿಯದು ಪರಸ್ಪರ ಮಾತನಾಡಿಕೊಳ್ಳತೊಡಗುತ್ತದೆ.

2008ರಲ್ಲಿ ಇವರಲ್ಲಿರುವ 'ಸಂಜಾತ ಪ್ರತಿಭೆ' ಯನ್ನು ಗುರುತಿಸಿ ಕರ್ನಾಟಕ ಸರಕಾರ 'ರಾಜ್ಯಪ್ರಶಸ್ತಿ' ಯನ್ನು ಕೊಟ್ಟು ಗೌರವಿಸಿದೆ. ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಸಂಘ–ಸಂಸ್ಥೆಗಳು, ಮಠಾಧೀಶರು ಇವರನ್ನು ಸನ್ಮಾನಿಸಿ 'ಪದವಿ, ಪ್ರಶಸ್ತಿ' ಗಳನ್ನಿತ್ತು ಶುಭಹಾರೈಸಿ ಆನಂದಿಸಿವೆ.

(ಎಸ್‌ಎಸ್‌ಎಚ್)



ಯೊಗೇಶ ಸಿ. ಮಠದ: ಚಿತ್ರಕಲಾವಿದ. 1981ರಲ್ಲಿ ಜನಿಸಿದರು. ಇವರು ದೃಶ್ಯಕಲೆಯಲ್ಲಿ ಜಿ.ಡಿ. ಆರ್ಟ್, ಎ.ಎಮ್. ಎಮ್.ಎಫ್. ಎ. ಪದವಿಧರರಾಗಿದ್ದಾರೆ. ಬೀದರಿನ ಯೊಗೇಶ ಕಲಾ ಮಹಾವಿದ್ಯಾಲಯದ ಕಾರ್ಯದರ್ಶಿಗಳಾಗಿದ್ದಾರೆ. ಇವರು ಅಖಿಲ ಭಾರತೀಯ ವಾರ್ಷಿಕ ಕಲಾಪ್ರದರ್ಶನ ನಾಗಪೂರ, ಗಣರಾಜ್ಯೋತ್ಸವದ ಕಲಾಪ್ರದರ್ಶನ ಬೀದರ, ಮೈಸೂರು ದಸರಾ ಕಲಾಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯ ವಾರ್ಷಿಕ ಪ್ರದರ್ಶನ, ಕಲ್ಬುರ್ಗಿ ಕಲಾಮಹೋತ್ಸವ, ಕ್ಯಾಮಲ್ ಕಲಾಪ್ರದರ್ಶನ, ಕನ್ನಡ ಸಾಹಿತ್ಯ ಸಮ್ಮೇಳನದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಕಲಾಕೃತಿಗಳ ರಚನೆಯಲ್ಲಿ ತಮ್ಮದೇ ಶೈಲಿಯೊಂದನ್ನು ರೂಪಿಸಿಕೊಳ್ಳುವ ಹವಣೆಯಲ್ಲಿದ್ದು, ಪ್ರಕೃತಿಯನ್ನು ಸಾಂಕೇತಿಕವಾಗಿ ಕಲಾಕೃತಿಗಳಲ್ಲಿ ಬಳಸಿಕೊಂಡಿದ್ದಾರೆ. ಫ್ರೆಂಡ್ಸ್, ದಂಪತಿಗಳು, ಪ್ರೇಮಿಗಳು ಇತ್ಯಾದಿ ಕಲಾಕೃತಿಗಳನ್ನು ರಚಿಸಿದ್ದಾರೆ. ಕ್ಯಾನ ವಾಸಿನ ಮೇಲೆ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ, ಭೂಮಿತಿ ಹಾಗೂ ಅಲಂಕಾರಿಕ ನಕ್ಷೆ ರೂಪದಲ್ಲಿ ನಿಸರ್ಗ ಸಂಕೇತ ಹಾಗೂ ಆಕೃತಿಗಳನ್ನು ಸಂಯೋಜಿಸಿ ಪ್ರಖರ ಬಣ್ಣಗಳೊಂದಿಗೆ ಕೃತಿಗಳನ್ನು ಪೂರ್ಣಗೊಳಿಸಿದ್ದಾರೆ. ಇವರ ಕಲಾಕೃತಿಗಳಲ್ಲಿ ಹೆಣ್ಣು ಗಂಡಿನ ಸಂಬಂಧಗಳನ್ನು ಬೆಸೆಯುವ ಬದುಕಿನ ವೈವಿಧ್ಯಮಯ ದೃಶ್ಯಗಳು ಹಾಸುಹೊಕ್ಕಾಗಿವೆ.

ಇವರಿಗೆ ಮೆಹತಾ ಪ್ರಶಸ್ತಿ, ಕಾರ್ಟೂನ ತಯಾರಿಕೆಯಲ್ಲಿ ಪ್ರಥಮ ಬಹುಮಾನ ಬಂದಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕಲಾಸ್ಪರ್ಧೆಗಳಲ್ಲಿ ಸುವರ್ಣಪದಕ, ಬೆಳ್ಳಿಪದಕಗಳನ್ನು ಪಡೆದಿದ್ದಾರೆ. ಚಿತ್ರಕಲೆ ಮಾತ್ರವಲ್ಲದೆ ನಾಟಕರಂಗದಲ್ಲಿಯೂ, ಕಲಾಪ್ರತಿಭೋತ್ಸವಗಳಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಪಡೆದಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಲಾಶಿಬಿರ, 7ನೆಯ ಕಲಾಮೇಳ ಬೆಂಗಳೂರು ಇತ್ಯಾದಿ ಶಿಬಿರಗಳಲ್ಲಿ ಭಾಗವಹಿಸಿದ್ದು ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ. ಯೋಗೇಶ ಅವರ ಕೃತಿಗಳು ವಿವಿಧ ಸಂಸ್ಥೆಗಳು ಹಾಗೂ ವೈಯಕ್ತಿಕ ಸಂಗ್ರಹಗಳಲ್ಲಿವೆ. (ಪಿಪಿ)

ರ

ರಂಗ ಚಟುವಟಿಕೆಗಳು: (ಕುಷ್ಟಗಿ ತಾಲ್ಲೂಕು) ವಾಸುದೇವ ರಾವ್, ಕುಷ್ಟಗಿ ಕೃಷ್ಣಪ್ಪ ಸ್ತ್ರೀ ಪಾತ್ರಕ್ಕೆ ಹೆಸರಾದವರು. ಹನುಮಸಾಗರದ ರೇಡಿಯೋ ನಾಟಕಕಾರ ಎನ್.ಪಿ. ಕುಲಕರ್ಣಿ ರಾಷ್ಟ್ರ ವ್ಯಾಪ್ತಿ ಪಡೆದ ನಾಟಕಕಾರರು. ಎಚ್.ಟಿ. ಅರಸ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದಿದ್ದಾರೆ. ಪಿ.ಬಿ. ಧುತ್ತರಗಿಯವರು ಕೂಡ ಹಿಂದೆಯೇ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದಿದ್ದಾರೆ.

ಮೆಣೇಧಾಳ ಕುಷ್ಟಗಿ ತಾಲ್ಲೂಕಿನ ದೇಸಾಯರ ಹಳ್ಳಿ, ಕನಕಗಿರಿಗೆ ಸಮೀಪವಿದೆ. ದೇಸಾಯಿ ಪ್ರಹ್ಲಾದರಾಯರು ಕಲಾಭಿಮಾನಿಗಳಾಗಿದ್ದುದರಿಂದ ಮೆಣೇಧಾಳ ನಾಟಕ ಕಂಪನಿಯನ್ನು 1928ರ ಸುಮಾರಿಗೆ ಆರಂಭಿಸಿದರು. ಇಲ್ಲಿ ವಿಠ್ಠಲಸಾ ಕಬಾಡಿ ಹಾರ್ಮೋನಿಯಂ, ಗದಿಗೆಯ್ಯ ಮಂಟೂರು ತಬಲಾ ವಾದಕರಾಗಿದ್ದರು. ಭಾಗೀರಥಿ ಪ್ರಮುಖ ನಟಿಯಾಗಿದ್ದಳು. ಧಾರವಾಡದ ಗುರುರಾವ್ ದೇಶಪಾಂಡೆಯವರು ಮುಖ್ಯ ಪಾತ್ರಧಾರಿಗಳು ಹಾಗೂ ಹಾಡುಗಾರರು. ಇವರ ಸೋದರ ಚಿದಂಬರ ರಾವ್ ದೇಶಪಾಂಡೆಯವರು ಪಾತ್ರವಹಿಸುತ್ತಿದ್ದರು. ಮೆಣೇಧಾಳ ಕಂಪನಿ, ಅಳವಂಡಿ ಕಂಪನಿ ಹಾಗೂ ಇರಕಲ್ಲಗಡಾ ಕಂಪನಿಗಳು ಒಂದೇ ಕಾಲದವು. ಶ್ರೇಷ್ಠ ಕೊಳಲು ವಾದಕರೂ, ಸಂಗೀತಗಾರರೂ ಆದ ಬಿ. ಮರಿರಾಜ ಮೆಣೇಧಾಳರು ಇಲ್ಲಿಯವರು. ಇವರು ರಂಗಭೂಮಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಪಿ.ಬಿ. ಧುತ್ತರಗಿ ಹಂದಿಗನೂರ ಸಿದ್ರಾಮಪ್ಪನವರ ಕಂಪನಿಯ ಖ್ಯಾತನಟ. ಕಂಪನಿಯಲ್ಲಿದ್ದ ಖ್ಯಾತ ನಾಟಕಕಾರ ಜಿ.ಜಿ. ಹೆಗಡೆಯವರ ಸಾಮೀಪ್ಯದಿಂದ ಓದಿಗೆ ಕಾಲಿಟ್ಟರು. 1959ರಲ್ಲಿ 'ಕಲ್ಪನಾ ಪ್ರಪಂಚ' ಮೊದಲ ನಾಟಕ ಬರೆದರು. 10 ನಾಟಕಗಳ ಅನಂತರ 11ನೆಯ ನಾಟಕ 'ತಾಯಿಯ ಕರುಳು' ನಾಟಕ ಸಿದ್ಧಾಪುರ (ಗಂಗಾವತಿ ತಾಲ್ಲೂಕ) ಕ್ಯಾಂಪನಲ್ಲಿ ರಹಿಮಾನವ್ವ ಕಲ್ಮನಿ ಅವರ ಶ್ರೀ ಲಲಿತಕಲಾ ನಾಟ್ಯ ಸಂಘ ಕುಕನೂರ ಇವರಿಂದ ರಂಗಕ್ಕೆ ಬಂದಿತು. ಉತ್ತರ ಕರ್ನಾಟಕದ ಮೂಲೆ ಮೂಲೆಯಲ್ಲಿ ಈ ನಾಟಕ ಜಯಭೇರಿ ಬಾರಿಸಿತು. ಧುತ್ತರಗಿಯವರ ಸಂಪತ್ತಿಗೆ ಸವಾಲ್ ಗೋಕಾಕ ಶಾರದಾ ನಾಟಕ ಮಂಡಳಿಗೆ ಬರೆದುಕೊಟ್ಟರು. ಇದೊಂದು ಅಮೋಘ ಪ್ರಯೋಗ. ಡಾ. ರಾಜ್ ಬ್ಯಾನರಿನಲ್ಲಿ ಸಂಪತ್ತಿಗೆ ಸವಾಲ್ ಚಲನಚಿತ್ರವಾಗಿ ಇಲ್ಲಿಯೂ ಖ್ಯಾತಿ ಪಡೆಯಿತು. ಧುತ್ತರಗಿ ಯವರ ಇನ್ನೊಂದು ನಾಟಕ ಚಿಕ್ಕಸೊಸೆಯು ಕೂಡ ಸೊಸೆ ತಂದ ಸೌಭಾಗ್ಯವಾಗಿ ಮೊಟ್ಟಮೊದಲು ಸಿನೆಮಾ ಸ್ಕೋಪದಲ್ಲಿ ಚಿತ್ರೀಕರಣಗೊಂಡಿತು.

ಧುತ್ತರಗಿಯವರು ಶ್ರೀ ಸಿದ್ಧಲಿಂಗೇಶ್ವರ ವಿಜಯ ನಾಟ್ಯ ಸಂಘ ಮೊದಲು ಪಾಲುಗಾರಿಕೆಯಲ್ಲಿ ಕಟ್ಟಿದರು. ಮುಂದೆ ಸ್ವಂತ ಕಂಪನಿ ಶ್ರೀ ಸಿದ್ಧ ಶಕ್ತಿ ಕೃಪಾಪೋಷಿತ ನಾಟ್ಯ ಸಂಘ ಕಟ್ಟಿದರು. ಈ ಕಂಪನಿ 25 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. 1989ರಲ್ಲಿ ರಾಜ್ಯ ಪ್ರಶಸ್ತಿ, 1996ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1997ರಲ್ಲಿ 'ಕವಿಶ್ರೇಷ್ಠ ರವಿ ಕೀರ್ತಿ' ಬಿರುದು ಪಡೆದರು. ಇದೇ ವರ್ಷ ಗುಬ್ಬಿ ವೀರಣ್ಣ ಪ್ರಶಸ್ತಿ ದೊರಕಿತು.

ಮರಿರಾಜ ಮೆಣೇಧಾಳರು 1970ರಿಂದ ಹಾರ್ಮೋನಿಯಂ ಹಾಗೂ ಕೊಳಲು ನುಡಿಸುವಲ್ಲಿ ಪ್ರಾವೀಣ್ಯತೆ ಪಡೆದ ಆಕಾಶವಾಣಿ ಕಲಾವಿದರಾದರು. ರಂಗಭೂಮಿಯ ಪ್ರೀತಿಯಿಂದ ವಿವಿಧ ನಾಟಕ ಕಂಪನಿಗಳಿಗೆ ಸಂಗೀತ ಸಂಯೋಜಕರಾಗಿದ್ದು, ಒಳ್ಳೆಯ ನಟ ಹಾಗೂ ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಪುಟ್ಟರಾಜ ಗವಾಯಿಗಳಲ್ಲಿ ಸಂಗೀತ ಕಲಿತು ರಂಗಭೂಮಿಗೆ ಕಾಲಿರಿಸಿದರು.

ರಂಗಭೂಮಿಯ ಕೋಗಿಲೆ ಸರೋಜಮ್ಮ ಧುತ್ತರಗಿ ಅವರು ನಾಟಕಕಾರ, ನಟ ಕಂಪನಿ ಮಾಲೀಕರಾದ ಪಿ.ಬಿ. ಧುತ್ತರಗಿಯವರ ಧರ್ಮಪತ್ನಿ. ಬೆಂಗಳೂರು ಕಡೆಯವರಾದ ಸರೋಜಮ್ಮ ಬಾಲ್ಯದಿಂದಲೇ ಸಂಗೀತ, ನೃತ್ಯ ಅಭಿನಯದಲ್ಲಿ ಪ್ರಾವೀಣ್ಯತೆಗಳಿಸಿದರು. ಗುಬ್ಬಿ, ಗೋಕಾಕ, ಹಲಗೇರಿ, ಸುಳ್ಳ, ಹಿರಣ್ಣಯ್ಯ, ಸುಬ್ಬಯ್ಯ ನಾಯಿಡು, ಕಂದಗಲ್ಲ, ನಲವಡಿ, ಪುಟ್ಟಸ್ವಾಮಯ್ಯನವರ ಕಂಪನಿಗಳಲ್ಲಿ ಪಾತ್ರವಹಿಸಿದ್ದಾರೆ. ಶ್ರೀರಂಗರ ಹಾಗೂ ಕೈಲಾಸಂ ಅವರ ನಾಟಕಗಳಲ್ಲಿಯೂ ಇವರು ಅಭಿನಯಿಸಿದ್ದಾರೆ. ಕಿತ್ತೂರು ಚೆನ್ನಮ್ಮದಲ್ಲಿಯ ಇವರ ಅಭಿನಯ ಅಮೋಘವಾದದ್ದು.

ಕುಷ್ಟಿಗಿಯ ನರಸಣ್ಣ ಸೋನಾರ ಉತ್ತಮ ಹಾರ್ಮೋನಿಯಂ ವಾದಕರು. ಒಣಗೇರಿ ಗ್ರಾಮದ ಅಖಂಡೇಶ್ವರ ಪತ್ತಾರ ಗವಾಯಿಗಳ ಹತ್ತಿರ ಸಂಗೀತ ಅಭ್ಯಾಸ ಮಾಡಿದ್ದಾರೆ. ದಿಲ್‌ರುಬಾ, ಕ್ಯಾಸಿಯೋ, ಹಲವು ಹತ್ತು ವಾದ್ಯಗಳನ್ನು ನುಡಿಸಬಲ್ಲ ಸಂಗೀತ ಸಾಧಕರಾಗಿದ್ದಾರೆ. ಸರಳ ಸಜ್ಜನಿಕೆಯನ್ನು ಮೈಗೂಡಿಸಿಕೊಂಡು ಕುಷ್ಟಗಿ ತಾಲ್ಲೂಕಿನ ನಾಟಕಗಳ ಸಂಗೀತ ನಿರ್ದೇಶನ ನಾಟಕ ನಿರ್ದೇಶನ ಮಾಡುತ್ತಾರೆ.

ರೇಡಿಯೋ ನಾಟಕಕಾರರಾದ ಎನ್.ಪಿ. ಕುಲಕರ್ಣಿಯವರು ಕುಷ್ಟಗಿ ತಾಲ್ಲೂಕಿನ ಹನುಮಸಾಗರದವರು. ಶಿಕ್ಷಕರಾಗಿದ್ದು ಹೈದ್ರಾಬಾದ ಕರ್ನಾಟಕದ ಜನಪ್ರಿಯ ರೇಡಿಯೋ ನಾಟಕಕಾರರು. ಮೂವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಇಪ್ಪತ್ತಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಹನುಮಸಾಗರದವರಾದ ನಟನ ಕಲಾಕೇಸರಿ ನಾರಾಯಣಸಾ ಬಿ.ದೇವಳೆ(ಬಾರಿಗಿಡದ)ಯವರು ಶ್ರೀ ಲಕ್ಷ್ಮೀ ನಾರಾಯಣ ನಾಟಕ ಕಂಪನಿ ಆರಂಭಿಸಿದರು. 12ನೆಯ ವಯಸ್ಸಿನಿಂದ ನಾಟಕ ಕಲಾಸೇವೆ ಮಾಡುತ್ತ ಬಂದ ಇವರು ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲೂ ಕಲಾವಿದರಾಗಿ ಕೆಲಸ ಮಾಡಿದ್ದಾರೆ.

ಕುಷ್ಟಗಿಯವರಾದ ಮೀನಾಕ್ಷಿ ಜೋಶಿಯವರು ರಂಗಭೂಮಿಯ ಕಲಾವಿದೆ. ಈಗ ರಂಗಪರಿಕರಗಳನ್ನು ಒದಗಿಸುವ ಮೂಲಕ ರಂಗಭೂಮಿಗೆ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕುಷ್ಟಗಿಯ ನಾರಾಯಣಪ್ಪ ಪತ್ತಾರ ತಬಲಾ ಮಾಸ್ತರರೆಂದು ಹೆಸರು ವಾಸಿಯಾಗಿದ್ದಾರೆ. ರಾಜ್ಯದ ಪ್ರಮುಖ ನಾಟಕ ಕಂಪನಿಗಳಲ್ಲಿ ಹಾರ್ಮೋನಿಯಂ ಹಾಗೂ ತಬಲಾ ವಾದಕರಾಗಿ ಕೆಲಸ ಮಾಡಿದ್ದಲ್ಲದೆ ಅವಕಾಶವಾದಾಗ ರಂಗದ ಮೇಲೆ ಅಭಿನಯವನ್ನು ಮಾಡಿದ್ದಾರೆ.

ಚೆನ್ನಪ್ಪ ವೀರಭದ್ರಪ್ಪ ನರೇಗಲ್ಲ ಹನುಮಸಾಗರದವರು. ಹಾಸ್ಯನಟ, ಹಾರ್ಮೋನಿಯಂ ವಾದಕ, ರಂಗ ನಿರ್ದೇಶಕರಾಗಿ ಸೇವೆಗೈದು ಸಂಘ ಸಂಸ್ಥೆಗಳ ಗೌರವ ಸಂಪಾದಿಸಿದ್ದಾರೆ. ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳಿಗೆ ತಬಲಾ ನುಡಿಸುವ ಮುರಗೆಯ್ಯ ಹಿರೇಮಠರು ಕುಷ್ಟಗಿಯವರು.

ಜಯಶ್ರೀ ಹನುಮಸಾಗರದ ನಾಟಕ ಕಲಾವಿದೆ. ಇವರ ತಾಯಿ ಮೇರಿಯಮ್ಮ ಗುಬ್ಬಿವೀರಣ್ಣ ಹಾಗೂ ಏಣಿಗಿ ಬಾಳಪ್ಪನವರ ಕಂಪನಿಯಲ್ಲಿ ಸೇವೆ ಸಲ್ಲಿಸಿದವರು. ರಂಗಕಲಾವಿದೆ. ಉಮಾದೇವಿ ಹನುಮ ಸಾಗರದಲ್ಲಿದ್ದು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಧುತ್ತರಗಿ ಕಂಪನಿಯಲ್ಲಿ ಇವರೊಬ್ಬ ಕಲಾವಿದೆಯಾಗಿದ್ದಾಳೆ. ಹಾಸ್ಯ ಹಾಗೂ ಗಂಭೀರ ನಾಟಕ ಪಾತ್ರಗಳೆರಡರಲ್ಲೂ ಮನೋಜ್ಞ ಅಭಿನಯ ನೀಡುವ ಬಾಲಜ್ಜ ಕಂಬಳಿ ಕುಷ್ಟಗಿಯವರು ಸಾಮಾಜಿಕ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳಲ್ಲಿ ಹೆಸರು ಮಾಡಿದ್ದಾರೆ.

ರಂಗಕಲಾವಿದ ನಾಗೇಶ ಕಾಟವಾ, ಸಮುದಾಯ ಕಲಾವಿದ. ದೊಡ್ಡಪ್ಪ ಕೈಲವಾಡಿಗಿ ಕುಷ್ಟಗಿಯವರಾಗಿದ್ದು ರಂಗ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ನಟರಾಜ ಸೋನಾರ ಹಾಗೂ ಶ್ರೀನಿವಾಸ ಜಾಗೀರದಾರರು ಭರವಸೆ ಹುಟ್ಟಿಸುವ ರಂಗ ಕಲಾವಿದರಾಗಿದ್ದಾರೆ. ಮೆಹಬೂಬ ಆದವಾನಿಕರ ಸಮುದಾಯದಿಂದ ಬಂದವರು. ಹಾಸ್ಯ ನಟ ಜಗನ್ನಾಥ ಹೂಗಾರ, ಹಾಗೂ ನಾರಾಯಣಸಾ ತುಳಿಸಿಕಟ್ಟಿ ಉತ್ತಮ ರಂಗ ಕಲಾವಿದರಾಗಿದ್ದಾರೆ.

ಕುಷ್ಟಗಿ ತಾಲ್ಲೂಕಿನ ಬೆನಕನಾಳ ಗ್ರಾಮದವರಾದ ವೀರಣ್ಣ ರಾಜೂರು ಬಾಲ್ಯದಿಂದಲೇ ವೃತ್ತಿ ರಂಗಭೂಮಿಯ ಮೇಲೆ ಅಪಾರ ಒಲವು. ಆಗಿನಿಂದ ಬಣ್ಣ ಹಚ್ಚಿ ನಟಿಸಿದ್ದಾರೆ. ಐದು ಸಾಮಾಜಿಕ ನಾಟಕಗಳನ್ನು, ಹನ್ನೊಂದು ಏಕಾಂಕ ನಾಟಕಗಳನ್ನು ಒಂಬತ್ತು ಬಾನುಲಿ ನಾಟಕಗಳನ್ನು ರಚಿಸಿ ರಂಗಭೂಮಿಗೆ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ನಾಟಕ ಅಕಾಡೆಮಿಯಿಂದ ಗೌರವಿಸಲ್ಪಟ್ಟಿದ್ದಾರೆ.

ಎಚ್.ಟಿ. ಅರಸ ಕುಷ್ಟಗಿ ತಾಲ್ಲೂಕಿನ ಹನುಮಸಾಗರದವರಾದ ಇವರಿಗೆ 2008-09ನೆಯ ಸಾಲಿನ ಗುಬ್ಬಿ ವೀರಣ್ಣ ಪ್ರಶಸ್ತಿ ಬಂದಿದೆ. ಇವರ ಅಭಿನಯವನ್ನು ಕಂಡು ಚಲನಚಿತ್ರ ರಂಗಕ್ಕೆ ಬರಮಾಡಿಕೊಂಡರು. 80 ವರ್ಷಗಳ ಸ್ಫುರದ್ರೂಪಿ ರಂಗ ಹಾಗೂ ಚಲನಚಿತ್ರ ರಂಗ ನಟರು. ಹನುಮಸಾಗರದ, ತಿಪ್ಪಣ್ಣ ಅರಸ್ ಹೈದ್ರಾಬಾದ ಕರ್ನಾಟಕಕ್ಕೆ ಕೀರ್ತಿ ತಂದ ಕಲಾವಿದರು.

(ಎಚ್‌ಎಸ್‌ಪಿ)

ರಂಗ ಚಟುವಟಿಕೆಗಳು: (ಕೊಪ್ಪಳ ಜಿಲ್ಲೆ) ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ ಶಿರಹಟ್ಟಿ 1903ರಲ್ಲಿ ಆರಂಭಗೊಂಡಿತು. ಈ ಕಂಪನಿ ಸಂಸ್ಥಾಪಕರಾದ ನಾಟಕ ಸಾರ್ವಭೌಮ ಶಿರಹಟ್ಟಿ ವೆಂಕೋಬರಾಯರು (ಜನನ 1885) ತಮ್ಮ 13ನೆಯ ವಯಸ್ಸಿನಲ್ಲಿ 1898ರಲ್ಲಿಯೇ ಆರಂಭಿಸಿದರು. ಶಿರಹಟ್ಟಿ ವೆಂಕೋಬರಾಯರು ಮೂಲತಃ ಕೊಪ್ಪಳದವರು. ಅಂಬಾದಾಸ ಹೂಲಗೇರಿ, ತಮ್ಮಯ್ಯ ಹೂಲಗೇರಿ, ನೀಲಕಂಠ ಶಾಸ್ತ್ರೀ ಇನ್ನಿತರರು ಇವರ ಕಂಪನಿಯಲ್ಲಿದ್ದಂಥ ಹೆಮ್ಮೆಯ ರಂಗಕಲಾವಿದರು; ಕೊಪ್ಪಳದವರು. ಮೋಹಕ ಸ್ತ್ರೀ ಪಾತ್ರಧಾರಿ ಹೂಲಗೇರಿ ಅಂಬಾದಾಸರು ಸ್ತ್ರೀ ವೇಷದಲ್ಲಿದ್ದ ಭಾವಚಿತ್ರ ಈಗಲೂ ಹೈದಾಬಾದಿನಲ್ಲದೆಯೆಂದು, ಅದನ್ನು ನೋಡಿದ ಶಿಕ್ಷಕ ವೆಂಕಟೇಶ ಗಂಗಾವತಿಯವರು ಹೇಳುತ್ತಾರೆ.

ವಾಮನರಾವ ಮಾಸ್ತರ ಸವಣೂರು, ಕೊಟ್ಟೂರಪ್ಪ, (ಮೈಸೂರು ಅರಮನೆ ನಟ ಹಾಗೂ ರಂಗ ಸಂಗೀತ ನಿರ್ದೇಶಕರು) ಮತ್ತು ಸಂಗೀತಗಾರರು. ವಾಸುದೇವರಾವ್ ಹನುಮಸಾಗರ, ತಮ್ಮಯ್ಯ ಹೂಲಗೇರಿ, ಅಮೀನಗಡ ಲಾಡಸಾಬ, ನೀಲಕಂಠಶಾಸ್ತ್ರಿ, ಅಂಬಾದಾಸ ಹೂಲಗೇರಿ, ಚನ್ನಬಸವಪ್ಪ ಸೊರಟೂರ, ಹನುಮಂತಪ್ಪ ವೆಂಕಟಾಪುರ,

ಸಂಗನಬಸವಪ್ಪ (ಮಟ್ಟಿ) ಕುಕನೂರು ಮೊದಲಾದ ನಟರು, ಶಿರಹಟ್ಟಿ ಇಮ್ಮಾಸಾನಿ, ಲಕ್ಷ್ಮೇಶ್ವರ ಮರ್ದಾನ್ ಜಾನ್ ಹಾಗೂ ವಜೀರ್‌ಬಿ, ಬೆಟಗೇರಿ ಆನಂದ ಸಾನಿ, ಗುಳೇದಗುಡ್ಡ ಹನುಮಂತೆವ್ವ, ಬ್ಯಾಡಿಗಿ ಸಾವಿತ್ರಮ್ಮ ಮೊದಲಾದ ನಟಿಯರ ಹೆಸರು ಕೇಳಿದರೆ ರೋಮಾಂಚನವಾಗುತ್ತದೆ. ಶಿರಹಟ್ಟಿ ವೆಂಕೋಬರಾಯರಿಂದ ಕೊಪ್ಪಳ ಜಿಲ್ಲೆಯ ರಂಗಭೂಮಿ ಇತಿಹಾಸ 1898ರಿಂದ ಆರಂಭವಾಗುವುದು.

ದೇಸಾಯಿ ರಾಮರಾಯರ ಸಂಗೀತ ನಾಟಕ ಮಂಡಳಿ ಕೊಪ್ಪಳ: ಈ ಕಂಪನಿ ಕೊಪ್ಪಳ ರಾಮರಾಯರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದು (1915) ಒಂದೆರಡು ವರ್ಷಗಳನ್ನು ಕಳೆದು; ಕೊಪ್ಪಳ ಮಂಡಳಿಯವರು 'ಸೌಭದ್ರ', 'ಗೋಪಿಚಂದ್' ಹಾಗೂ 'ರಾಮರಾಜ್ಯ ವಿಯೋಗ' ಎಂಬ ನಾಟಕಗಳನ್ನು ಆಡುತ್ತಿದ್ದರು. ಒಳ್ಳೆಯ ನಟರೂ ನಾಟಕಕಾರರು, ನಾಟಕದ ಮಾಸ್ತರರೂ ಆಗಿದ್ದ ಶಿವಲಿಂಗಸ್ವಾಮಿ ಚಿಕ್ಕೋಡಿಯವರು ನಾಟಕಗಳನ್ನು ಕಲಿಸುತ್ತಿದ್ದರು. ವಿಠ್ಠಲಸಾ ಕಬಾಡಿ ಗದಗ ಹಾರ್ಮೋನಿಯಂ, ಮಂಟೂರು ಗದಗೆಯ್ಯ–ತಬಲಾ ವಾದ್ಯಗಾರರಿದ್ದರೆಂದು ತಿಳಿಯುತ್ತದೆ.

ಕೊಪ್ಪಳ ರಾಮರಾಯರ ಒತ್ತಾಯದ ಮೇರೆಗೆ ಗರುಡ ಸದಾಶಿವರಾಯರು ಮಂಡಳಿಯನ್ನು ಸೇರಿ ಐದು ತಿಂಗಳು ಕಾಲ ಅಲ್ಲಿ ಸೇವೆ ಸಲ್ಲಿಸಿದರು. ಕೀರ್ತನಕೇಸರಿ ಕೊಪ್ಪಳ ಜಯ ರಾಮಾಚಾರ್ಯರಿಗೂ ಈ ಕಂಪನಿಯೊಂದಿಗೆ ಮಧುರ ಸಂಬಂಧವಿತ್ತೆಂದು ತಿಳಿಯುತ್ತದೆ. ಗರುಡ ಸದಾಶಿವರಾಯರು ಈ ಕಂಪನಿ ಬಿಟ್ಟು ಹೋದ ಮೇಲೆ ನಾಟಕ ಕಂಪನಿ ಮ್ಯಾನೇಜರಾಗಿದ್ದರೆಂದು ತಿಳಿದು ಬರುತ್ತದೆ.

ನಾಟಕಾಲಂಕಾರ, ಅಭಿನಯ ಕೇಸರಿ ಬಿರುದಾಂಕಿತ ಗರುಡ ಸದಾಶಿವರಾಯರು ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಕವಲೂರು ಗ್ರಾಮದ ವೈದ್ಯ ಮನೆತನದವರು. 18–8–1992ರಂದು ಗುರುನಾಥ ಶಾಸ್ತ್ರಿ ವೈದ್ಯ, ಸುಭದ್ರಾ ಬಾಯಿಯವರ ಮಗನಾಗಿ ಜನಿಸಿದರು. ಗಿಣಿಗೇರಿ ಹಾಗೂ ಕವಲೂರಲ್ಲಿ ಕನ್ನಡ ಕಲಿತು, ಮುಂದಿನ ಓದಿಗೆ ರಾಯಚೂರು ಅನಂತರ ಕಲಬುರ್ಗಿಗೆ ಹೋದಾಗ ಅದು ಮರಾಠಿಮಯವಾಗಿತ್ತು, ಉರ್ದುಮಯವಾಗಿತ್ತು. ಅವುಗಳನ್ನೇ ಕಲಿತರು. ಆದರೆ ಕನ್ನಡ ಹೃದಯದ ಭಾಷೆಯಾಗಿತ್ತು. ತಾಯಿ ಭಾಷೆಯಾಗಿತ್ತು. ಗಾಣಗಾಪುರದ ದತ್ತಾತ್ರೇಯನಲ್ಲಿ ಅನನ್ಯ ಶ್ರದ್ಧಾಭಕ್ತಿಗಳನ್ನು ಬೆಳೆಸಿಕೊಂಡಿದ್ದ ಗರುಡರು, ಮರಾಠಿ ರಂಗನಾಟಕಗಳ ಪರಿಚಯ ಹೊಂದಿ ಅವುಗಳನ್ನು ಅಲ್ಲಿಯ ನಾಟಕ ಕಂಪನಿಗಳಿಗೆ ಅನುವಾದಿಸಿಕೊಟ್ಟು, ಕಲಬುರ್ಗಿಯಲ್ಲಿ ನಾಟಕಾಭಿನಯಕ್ಕೆ ತೊಡಗಿದರು. ಇವರ ಮಕ್ಕಳಾದ ಶ್ರೀಪಾದರಾವ ಗರುಡ, ದತ್ತಾತ್ರೇಯ ಗರುಡ ಯಶೋಧರಾ ಕವಲೂರಿನ ತಮ್ಮ ವೈದ್ಯ ಮನೆತನದ ಹಲವರು ನಾಟಕಾಭಿನಯದಲ್ಲಿ ಪರಿಣಿತರಾದರು.

ನಟ, ನಾಟಕಕಾರ ಮತ್ತು ಕಂಪನಿ ಮಾಲೀಕರಾಗಿದ್ದ ಗರುಡರು ವೃತ್ತಿ ರಂಗಭೂಮಿಗೆ ಅಂಟಿಕೊಂಡಿದ್ದ ಕೀಳರಿಮೆ–ಕಳಂಕಗಳನ್ನು ಹೊಡೆದು ಹಾಕಿ, ಶಿಸ್ತು ಮತ್ತು ಪಾವಿತ್ರ್ಯತೆ ತಂದು ಕೊಟ್ಟರು. ತಮ್ಮ ಹೊಸ ಬಗೆಯ ನಾಟಕಗಳಿಂದ ನವಚೈತನ್ಯ ಮೂಡಿಸಿದರು. ರಾಷ್ಟ್ರೀಯ ಚಳುವಳಿಗೆ ಕಾವೇರುತ್ತಿದ್ದ ಕಾಲವದು. ಮೊದಲೇ ಕಟ್ಟಾ ರಾಷ್ಟ್ರಾಭಿಮಾನಿಯಾಗಿದ್ದ ಇವರು ಸ್ವಾತಂತ್ರ್ಯಾಭಿಮಾನವನ್ನು ಪ್ರಜ್ವಲಗೊಳಿಸುವ ನಾಟಕಗಳಿಂದ ಜನ ಜಾಗೃತಿಯ ವೇದಿಕೆಯಾಗಿ ಇವರ ಕಂಪನಿ ಕೆಲಸ ಮಾಡಿತು. ಡಾ ಶಿವರಾಮ ಕಾರಂತರು, ಕಾರ್ನಾಡ ಸದಾಶಿವ ರಾಯರು ಇವರ ನಾಟಕಗಳನ್ನು ನೋಡಿ ಸಂತೋಷಪಟ್ಟು ಇವರ ಕಲಾಭಿಮಾನಗಳಾಗಿದ್ದರಲ್ಲದೆ, ಪ್ರತಿಭೆಯನ್ನು ಕೊಂಡಾಡಿದ್ದಾರೆ.

ಗರುಡರದು ಬಹುಮುಖ ವ್ಯಕ್ತಿತ್ವ, ಶ್ರೇಷ್ಠ ನಟರಾಗಿದ್ದಂತೆ–ಪ್ರಖ್ಯಾತ ನಾಟಕಕಾರರೆಂದು ಹೆಸರಾದವರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗೂ ಭಕ್ತಿರಸ ಪ್ರಧಾನ ಹೀಗೆ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಆ ಕಾಲದಲ್ಲಿಯೇ ಮಕ್ಕಳಿಗಾಗಿ ನಾಟಕ ಬರೆದು ತಾವೇ ಪ್ರಯೋಗಿಸಿದರು. ಹಲವಾರು ನಾಟಕಗಳನ್ನು ಮರಾಠಿಯಿಂದ ಅನುವಾದಿಸಿದ್ದಾರೆ. ಇವರು ಶ್ರೇಷ್ಠ ಮಟ್ಟದ ರಂಗನಿರ್ದೇಶಕರೂ ಹೌದು. ಕೊಪ್ಪಳ ಸಂಗೀತ ನಾಟಕ ಮಂಡಳಿ, ಕೊಣ್ಣೂರು ಕಂಪನಿ ಹಾಗೂ ಹೊಂಬಳ ಶಂಕರಗೌಡರ ಕಂಪನಿಗಳ ನಾಟಕ ನಿರ್ದೇಶಕರಾಗಿದ್ದುದು ಇವರ ನಟನಾ ಕೌಶಲ್ಯದ ದ್ಯೋತಕವಾಗಿದೆ. ಸಂಗೀತವು ರಂಗಭೂಮಿಯನ್ನು ಆಳುತ್ತಿದ್ದಾಗ ಅಭಿನಯ, ಭಾಷೆಗಳಿಗೆ ಒತ್ತುಕೊಟ್ಟು, ನಾಟಕಗಳನ್ನು ರಚಿಸಿದರು. ಒಟ್ಟು ಐವತ್ತೆಂಟು ನಾಟಕಗಳನ್ನು ರಚಿಸಿದ್ದಾರೆ. ಗರುಡ ಸದಾಶಿವ ರಾಯರು ಬಾಲ್ಯದಿಂದಲೇ ರಂಗಭೂಮಿಯತ್ತ ಒಲಿದು, ತಮ್ಮ ಪತ್ನಿ ಭೀಮಾಬಾಯಿಯ ಪ್ರೋತ್ಸಾಹದಿಂದ ನಾಟಕ ಕಂಪನಿ ಕಟ್ಟಿ, ಮಕ್ಕಳಾದ ದತ್ತಾತ್ರೇಯ ಗರುಡ, ಶ್ರೀಪಾದರಾವ್ ಗರುಡ, ಎಲ್ಲ ಹೆಣ್ಣು ಮಕ್ಕಳನ್ನು ರಂಗಭೂಮಿಗೆ ತಂದರು.

ಕೊಪ್ಪಳ ತಾಲ್ಲೂಕಿನ ಅಳವಂಡಿ, ಬೆಟಗೇರಿ, ಕಾತರಕಿ, ಬಿಸರಹಳ್ಳಿ, ಹಿರೇಸಿಂದೋಗಿ, ಇರಕಲ್ಲಗಡಾ, ಹಲಿಗೇರಿ, ಗೊಂಡಬಾಳ, ಮುದ್ದಾಬಳ್ಳಿ, ಭಾಗ್ಯನಗರ, ಹುಲಿಗಿ ಹೊಸಳ್ಳಿ, ಹಿಟ್ನಾಳ, ಕಂಪಸಾಗರ, ಹುಲಿಗಿ, ಶಿವಪುರ, ಅಗಳಕೇರಿ ಮೊದಲಾದವು ರಂಗಭೂಮಿಯ ಚಟುವಟಿಕೆಗಳಿಗೆ ಹೆಸರಾದವು.

ಅಳವಂಡಿ ನಾಟಕಗಳಿಗೆ, ನಾಟಕಕಾರರಿಗೆ, ಕಲಾವಿದರಿಗೆ ಆಶ್ರಯ ನೀಡುತ್ತ ಬಂದಿದೆ. 1934ರಲ್ಲಿ ಅಳವಂಡಿ ಸೋಮನಗೌಡ ಮಾಲೀಪಾಟೀಲರು ಶ್ರೀರಂಜನ್ ಸೇವಾ ನಾಟ್ಯ ಸಂಘವನ್ನು ತಮ್ಮ ಊರಲ್ಲಿ ಆರಂಭಿಸಿದರು. ನಾಟಕದ ಮೇಲಿನ ತಮ್ಮ ಪ್ರೇಮ ಮತ್ತು ಅಭಿಮಾನದಿಂದ ನಾಟಕ ಕಂಪನಿ ಮಾಡಿದರು.

ಇರಕಲ್ಲಗಡಾ ಕೊಪ್ಪಳ ತಾಲ್ಲೂಕಿನ ಐತಿಹಾಸಿಕ ಹಿನ್ನೆಲೆಯುಳ್ಳ ಕೋಟೆಕೊತ್ತಲವುಳ್ಳ ಪ್ರಮುಖ ಹಳ್ಳಿ. ಇಲ್ಲಿಯ ಅಡಿವೆಪ್ಪಗೌಡ ಪಟ್ಟಣಶೆಟ್ಟರು ಜಮೀನುದಾರರು. ಮಲ್ಲಿಕಾರ್ಜುನ ನಾಟ್ಯ ಸಂಘವನ್ನು ಇರಕಲ್ಲಗಡಾದಲ್ಲಿ ಪ್ರಾರಂಭಿಸಿದರು 1931. ಐದು

ವರ್ಷ ನಡೆದು 1936ರಲ್ಲಿ ಇದು ನಿಂತು ಹೋಯಿತು. ಇರಕಲ್ಲಗಡಾ ಹಾಗೂ ಸುತ್ತಲಿನ ನಟರು ಈ ಕಂಪನಿಯಲ್ಲಿದ್ದರು. ಬಸಪ್ಪ ಎಲಿಗಾರ, ಕುರಡಿಗಿ ವೀರಪ್ಪ, ರುದ್ರಪ್ಪ ಹೊನ್ನುಣಸಿ, ಈಶಪ್ಪ ಪತ್ತಾರ ಪುರುಷ ಪಾತ್ರಧಾರಿಗಳು. ಗಂಗವ್ವ ಬೆಂಡಿಗೇರಿ, ಭೂದೇವಿ, ಕಾಶೀಬಾಯಿ ಕಟ್ಟೀಮನಿ, ಯಂಕಮ್ಮ ಕಟ್ಟೀಮನಿ ಎಲ್ಲರೂ ಕೊಪ್ಪಳದವರು, ಸ್ತ್ರೀ ಪಾತ್ರಧಾರಿಗಳಾಗಿದ್ದರು. ವಿರೂಪಾಕ್ಷಪ್ಪ ಯಲಿಗಾರ ಹಾರ್ಮೋನಿಯಂ ಮಾಸ್ತರಾಗಿದ್ದರು. ಚವತಿ ಚಂದ್ರದಲ್ಲಿ ಕೊಪ್ಪಳದ ಕಾಶೀಬಾಯಿ ಕಟ್ಟೀಮನಿ ಜಾಂಬವತಿಪಾತ್ರ, ಪಾದುಕಾ ಪಟ್ಟಾಭಿಷೇಕದಲ್ಲಿ ಸೀತೆಯ ಪಾತ್ರ, ಸಂಪೂರ್ಣ ಕೃಷ್ಣ ಲೀಲಾದಲ್ಲಿ ವ್ಯಾಸಾಚಾರ ಕಲಕೇರಿಯವರ ನಾರದನ ಪಾತ್ರ ಅದ್ಭುತವಾಗಿದ್ದವೆಂದು ಗುನ್ನಾಳ ನಿಂಗಪ್ಪನವರ ಅಭಿಪ್ರಾಯ. ಹಂಪಸಾಗರ ವೀರಪ್ಪನವರು ಕೊಣ್ಣೂರ ಕಂಪನಿ, ಇರಕಲ್ಲಗಡಾ ಕಂಪನಿ, ಅಳವಂಡಿ ಕಂಪನಿಯಲ್ಲಿದ್ದು ಕೊನೆಗೆ ಗರುಡರ ಕಂಪನಿಗೆ ಹೋದರು, ಇವರೇ ಊಟಕ್ಕೂ ಕಷ್ಟ ಪಡುತ್ತಿದ್ದ ಗುನ್ನಾಳ ಲಿಂಗಪ್ಪ ಸೋದರರನ್ನು ಗರುಡರ ಕಂಪನಿಗೆ ತಮ್ಮೊಡನೆ ಕರೆದುಕೊಂಡು ಹೋಗಿ ಸೇರಿಸಿದರು. ಇರಕಲ್ಲಗಡಾ ಕಂಪನಿಯಲ್ಲಿ ಆಸಕ್ತರಿಗೆ ತಬಲಾ, ಹಾರ್ಮೋನಿಯಂ, ಪಿಟೀಲು ಕಲಿಸುತ್ತಿದ್ದರು. ವಿರೂಪಾಕ್ಷಪ್ಪ ಯಲಿಗಾರ, ವೀರಭದ್ರಪ್ಪ ತಾವರಗೇರಿ ಹಾರ್ಮೋನಿಯಂ ಮತ್ತು ತಬಲಾ ವಾದ್ಯಗಾರರಾಗಿದ್ದರು. ಅಡಿವೆಪ್ಪಗೌಡ ಪಟ್ಟಣಶೆಟ್ಟರ ಮಗ ಸಂಗಣ್ಣ ಪಟ್ಟಣಶೆಟ್ಟರು ಕೂಡ ರಂಗಭೂಮಿ ಕಲಾವಿದರಾಗಿದ್ದಾರೆ.

ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ, ಐದುನೂರು ಮನೆಗಳ ಹನ್ನೊಂದು ಹಳ್ಳಿ ಜಾಗೀರುಳ್ಳ ದೇಸಾಯರ ಊರು. ದೇಸಾಯಿಯರಿಗೆ ಹೈದ್ರಾಬಾದ, ನಾಗಪುರ, ಕೊಪ್ಪಳ, ರಾಯಚೂರುಗಳಲ್ಲಿ ರಕ್ತ ಸಂಬಂಧವುಳ್ಳವರಿದ್ದರು. ಸಂಗೀತ, ನೃತ್ಯ, ನಾಟಕಗಳಿಗೆ, ಬಯಲಾಟ–ಸಣ್ಣಾಟಗಳಿಗೆ, ಹೂವುಹಣ್ಣು ಬೆಳೆಯುವ, ಮಾವಿನ ತೋಪುಗಳಿಗೆ ತೋಟಗಳಿಗೆ ಪ್ರಸಿದ್ಧವಾಗಿತ್ತು. ಗಣೇಶೋತ್ಸವ, ದಸರಾ ಹಬ್ಬಗಳನ್ನು ಮನೋರಂಜನಾ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದ್ದರು. ಕೊಪ್ಪಳ ಸಂಗೀತ ನಾಟಕ ಮಂಡಳಿ ಮಾಲೀಕರಾದ ರಾಮರಾಯರು, ಅಣ್ಣ ನರಹರಿರಾಯರ ಓರಿಗೆಯವರಾದ ಗುರಪ್ಪಯ್ಯ ದೇಸಾಯಿಯವರು ಕಲಾಪ್ರೇಮಿಯಾಗಿದ್ದರು. ಬಿಸರಹಳ್ಳಿಯಲ್ಲಿ ನಡೆಯುವ ನಾಟಕ ಬಯಲಾಟ ಸಣ್ಣಾಟಗಳಿಗೆ ಹೊರಗಿನಿಂದ ಬಂದು ಆಡುವವರಿಗೆ ಕೂಡ ಆರ್ಥಿಕ ನೆರವು ನೀಡುತ್ತಿದ್ದರು. ಶಿವರುದ್ರಯ್ಯ ಶಿವಬಸಯ್ಯ ಬ್ರಹನ್ಮಠರು, ಜ್ಯೋತಿಷ್ಯಿಗಳು. ಹಲವು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದ ರಸಿಕರು. ಇವರ ನೇತೃತ್ವದಲ್ಲಿ 1936ರ ಅಂದಾಜಿಗೆ ಗರುಡ ಸದಾಶಿವರಾಯರ ಶ್ರೀ ರಾಮಪಾದುಕಾಪಟ್ಟಾಭಿಷೇಕ, ಬಳಿಗಾರ ಮರಿವೀರಪ್ಪನವರ ನೇತೃತ್ವದಲ್ಲಿ ನಲವಡಿ ಶ್ರೀ ಕಂಠಶಾಸ್ತ್ರಿಗಳ 'ಲಿಖಿತ ಲೀಲಾ' ನಾಟಕಗಳನ್ನು ಅಭಿನಯಿಸಿದರು. ಬಿಸರಹಳ್ಳಿಯ ವಿದ್ಯಾವಂತ ಮಹಿಳೆಯರಾದ ಚಂದ್ರವ್ವ ತಳವಾರ ಹಾಗೂ ಭರಮವ್ವ ತಳವಾರ ಅನುಕ್ರಮವಾಗಿ ಈ ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಸಿದ್ದರೆಂಬುದು ಮುಖ್ಯವಾದ ಸಂಗತಿ. ಬಿಸರಹಳ್ಳಿಯಲ್ಲಿ 1950ರಲ್ಲಿ ಚಂದ್ರೋದಯ ಸಂಗೀತ ನಾಟಕ ಮಂಡಳಿಯು ಶಿವಪ್ಪ ತಿಮ್ಮರೆಡ್ಡಿ, ಮಾಲೀಕತ್ವದಲ್ಲಿ ಮೇನೆಜರ್ ಹನುಮಂತಪ್ಪ ಮೂಲಿಮನಿ ಇವರ ಪ್ರಯತ್ನದಿಂದ ಅಸ್ತಿತ್ವದಲ್ಲಿ ಬಂತು. ಇದೇ ಊರಿನ ಮೌಲಾಸಾಬ, ಭರಮಗೌಡ ಇಲ್ಲಿಯವರಾದ ಪಾತರದ ತಬಲಾಜಿ, ಕುಂಟ ಕರಿಸಿದ್ದಪ್ಪ ಕೊನೆಸಾಗರ, ವಿರೂಪಾಕ್ಷಪ್ಪ ಬಳಿಗಾರ ಹಾರ್ಮೋನಿಯಂ ವಾದ್ಯಗಾರರಾಗಿದ್ದರು.

ಕೊಪ್ಪಳದ ಕಟ್ಟೀಮನಿ ಸೋದರಿಯರಾದ ಭೀಮವ್ವ, ಪಾರ್ವತೆವ್ವ, ಯಂಕಮ್ಮ ಹಾಗೂ ಸುಲೋಚನಾ ಶ್ರೀ ನಟರಾಜ ನಾಟ್ಯ ಕಲಾ ಸಂಘವನ್ನು ಕೊಪ್ಪಳದಲ್ಲಿ ಆರಂಭಿಸಿದರು (1948). ಇವರೆಲ್ಲ ಹುಟ್ಟು ಕಲಾವಿದರು. ಸಂಗೀತ, ನೃತ್ಯ ಹಾಗೂ ಅಭಿನಯಗಳು ಜನ್ಮಜಾತವಾಗಿ ಬಂದ ಕಲೆಗಳಾಗಿದ್ದವು. ಇವರೆಲ್ಲರೂ 8–10 ವರ್ಷ ಅವಕಾಶ ವಾದಾಗಲ್ಲೆಲ್ಲ ವೃತ್ತಿ ರಂಗಭೂಮಿಯ ಕಂಪನಿ ನಾಟಕಗಳಲ್ಲಿ ಅಭಿನಯಿಸಿ, ಒಳ್ಳೆಯ ಆ್ಯಕ್ಟರ್‌ಗಳಾಗಿದ್ದರು. ತಮ್ಮ ಕಲೆಯ ಅಭಿವ್ಯಕ್ತಿಗಾಗಿ ಈ ಸೋದರಿಯರು ಈ ಕಂಪನಿ ಮಾಡಿದರು. ಸೋದರಮಾವ ದೇವೇಂದ್ರಪ್ಪ ಕನಕಗಿರಿ ಕಂಪನಿ ವ್ಯವಸ್ಥಾಪಕರಾಗಿದ್ದರಲ್ಲದೆ ನಟರಾಗಿದ್ದರು. ವ್ಯವಹಾರ ಕುಶಲರಾದ ಮತ್ತು ಧೈರ್ಯವಂತಳಾದ ಪಾರ್ವತಮ್ಮ ನಾಟಕ ಕಂಪನಿ ಮೇಲು ಉಸ್ತುವಾರಿ ಹಾಗೂ ಜವಾಬ್ದಾರಿ ಹೊತ್ತುಕೊಂಡಿದ್ದರು. 1957ರ ವರೆಗೆ ಎಂಟು ವರ್ಷಗಳ ಕಾಲ ಕಂಪನಿ ನಡೆಯಿತು. ತಳಕಲ್ಲ ವೆಂಕರೆಡ್ಡಿಯವರ ಶ್ರೀ ರಂಜನ ನಾಟಕ ಕಂಪನಿಯಲ್ಲಿ ಪಳಗಿದ್ದ ಸುಲೋಚನಾಬಾಯಿ ಹಾಸ್ಯ ಪಾತ್ರ, ಏಣಿಗಿ ಬಾಳಪ್ಪನವರ ಕಲಾವೈಭವ ನಾಟ್ಯ ಸಂಘದಲ್ಲಿದ್ದ ಯಂಕಮ್ಮ ಉತ್ತಮ ಹಾಡುಗಾರಿಕೆಗೆ ನಾಯಕಿ ಪಾತ್ರಕ್ಕೆ, ಪಾರ್ವತಮ್ಮ ಎಲ್ಲ ಬಗೆಯ ಪಾತ್ರಗಳು ಹಿರಿಯಕ್ಕ ಭೀಮವ್ವ, ಸಾಧ್ವಿ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರು. ಯಂಕಮ್ಮ ದೊಡ್ಡ ಸಂಗೀತಗಾರ್ತಿ. ಕರ್ನಾಟಕ ಸಂಗೀತ ಹಾಗೂ ಹಿಂದೂಸ್ತಾನಿ ಸಂಗೀತವನ್ನು ಬಲ್ಲವರು. ರಂಗಗೀತೆಗಳನ್ನು ವಚನ, ದಾಸರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಆಕಾಶವಾಣಿ ಕಲಾವಿದೆಯಾಗಿದ್ದರು. ಏಣಿಗಿ ಬಾಳಪ್ಪನವರು ತಮ್ಮ ನಾಟಕಗಳಿಗೆ ಅವಶ್ಯ ಬಿದ್ದಾಗಲೆಲ್ಲ ಕರೆಯಿಸಿಕೊಳ್ಳುತ್ತಿದ್ದರು.

ಕೊಪ್ಪಳದಲ್ಲಿ ಇನ್ನೊಬ್ಬ ಅಲಕ್ಷಿಸಲ್ಪಟ್ಟ 85ರ ವಯಸ್ಸಿನ, ರಂಗಭೂಮಿಯ ಚೈತನ್ಯಶೀಲ ನಟಿ ಸುಭದ್ರಮ್ಮ ಹುಣಸೀಮರದ ಒಬ್ಬರು. ಬಾಲ್ಯದಲ್ಲಿಯೇ ಸಂಗೀತ, ಅಭಿನಯ ಹಾಗೂ ನೃತ್ಯಗಳನ್ನು ಕಲಿತುಕೊಂಡು ಆಗ ಹಿರಿಯ ನಟಿಯರೊಂದಿಗೆ ನಾಟಕ ಕಂಪನಿಗಳಿಗೆ ಹೋಗಿ ಅನುಭವ ಪಡೆದರು. 1948ರ ಸುಮಾರಿಗೆ ಕಲಾಕಿನ್ನರ ಡಿ. ದುರ್ಗಾದಾಸರ ನಾಟಕ ಕಂಪನಿ ಸೇರಿದರು. ಕೊಪ್ಪಳದಲ್ಲಿ ಇಮ್ಮಣ್ಣ ರಾಂಪುರಿ ಭೌಮಾಸುರ, ಮಹಾರಥಿ ಕರ್ಣ, ದ್ರೋಣ, ಶಕುನ, ಅರ್ಜುನ, ಭೀಷ್ಮ ಪಾತ್ರಗಳಲ್ಲಿ ಹೆಸರು ಮಾಡಿದ್ದಲ್ಲದೆ, ಹಾರ್ಮೋನಿಯಂ ಮಾಸ್ತರರಾಗಿ ನಾಟಕಗಳನ್ನು ಕಲಿಸುತ್ತಿದ್ದರು. ಬಸಯ್ಯ ತಂಬ್ರಳ್ಳಿ ಉತ್ತಮ ಗಾಯಕರು.

ಕಿನ್ನಾಳ ಕರಕುಶಲ ಕಲೆಗೆ ಪ್ರಸಿದ್ಧವಾದಂತೆ ಬಯಲಾಟ, ನಾಟಕ ಹಾಗೂ ಸಂಗೀತ ಕ್ಷೇತ್ರದಲ್ಲಿಯೂ ಪ್ರಸಿದ್ಧಿ ಪಡೆದಿದೆ. ವೀರಭದ್ರಪ್ಪ ಕುದ್ರಿಮೋತಿ, ಶಂಕರಪ್ಪ ಕುದ್ರಿಮೋತಿ ಹಾಗೂ ಸೋಮಣ್ಣ ಕುದ್ರಿಮೋತಿ ಮೊದಲದವರು ತಮ್ಮ ಊರಿನ ಕಲಾಸಕ್ತ ಕಲಾವಿದರೊಂದಿಗೆ 1930ರಿಂದ ಇತ್ತೀಚಿನವರೆಗೆ ನಾಟಕ ಕಲೆಯನ್ನು ಜೀವಂತವಾಗಿರಿಸಿಕೊಂಡು ಬಂದಿದ್ದಾರೆ. ಕಿನ್ನಾಳ ಗ್ರಾಮವು ನಾಟಕಕಾರರಿಂದ, ಬಸಯ್ಯಸ್ವಾಮಿ ಕಿನ್ನಾಳ ಹಲಗೇರಿ ಜಟ್ಟೆಪ್ಪನವರ ಕಂಪನಿ ನಟರಿಂದ, ಪುರಾಣ ಕರ್ತೃಗಳಿಂದ ಪಠ್ಯಪುಸ್ತಕ ರಚನಾಕಾರರಿಂದ, ಗತವೈಭವ ಪಡೆದಿದೆ. ರಾಮಬುವಾ, ಮರೋಳ ರಾಮಣ್ಣ ಅಸುಂಡಿ ಶುಭಾನಪ್ಪ ಸೋದರರಂಥ ಕಲಾವಿದರು ಈ ಊರಿನೊಡನೆ ಮಧುರ ಸಂಬಂಧ ಹೊಂದಿದ್ದರು. ಕಂದಗಲ್ಲ ಹಣಮಂತರಾಯರು, ಜೈಲಿನಿಂದ ಬಂದ ಮೇಲೆ ಕಿನ್ನಾಳದಲ್ಲಿದ್ದು ದುಃಖ ಶಮನ ಮಾಡಿಕೊಂಡಿದ್ದಲ್ಲದೆ ತಾವೇ ಖುದ್ದಾಗಿ ರಕ್ತರಾತ್ರಿ ನಾಟಕ ಕೂಡ್ರಿಸಿ ರಂಗದ ಮೇಲೆ ತಂದರು. ಈ ಪ್ರಯೋಗದಲ್ಲಿ ಕುದ್ರಿಮೋತಿ ಧರ್ಮಣ್ಣ ಅಶ್ವತ್ಥಾಮ, ಕುದ್ರಿಮೋತಿ ವೀರಭದ್ರಪ್ಪ-ದ್ರೌಪದಿ, ವರದಪ್ಪ ಸೊನ್ನದ-ಶಕುನಿ, ಮುದಕಪ್ಪ ನೆಲವಿಗಿ-ದುಶ್ಯಾಸನ, ವಿಠ್ಠಪ್ಪ ಮೇಣಧಾಳ ಅರ್ಜುನರಾಗಿ ರಕ್ತ ರಾತ್ರಿಯಲ್ಲಿ ಅಭಿನಯಿಸಿದ್ದರು. ಕುರುಕ್ಷೇತ್ರ, ಬಡತನಭೂತ, ಚಿತ್ರಾಂಗದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ದತ್ತುಪುತ್ರ ನಾಟಕ ಕರ್ತೃ ಪದ್ಮನಾಭಾಚಾರ್ಯ ಸ್ವತಃ 4-6 ವರ್ಷ ಬಂದು ನಾಟಕ ವಾಡಿದ್ದಾರೆ. ರಹಿಮಾನಜಾನ್ ಕಲ್ಮನಿ ಕುಕನೂರು ಕಿತ್ತೂರ ಚೆನ್ನಮ್ಮ, ಹಾಗೂ ಬೇರೆ ಬೇರೆ ಕಂಪನಿಯವರು ಸತ್ಯಹರಿಶ್ಚಂದ್ರ, ಟಿಪ್ಪು ಸುಲ್ತಾನ ನಾಟಕಗಳನ್ನು ಇಲ್ಲಿಯೇ ತಾಲೀಮ್ ನಡೆಸಿ ಪ್ರಯೋಗಿಸಿದ್ದಾಗಿ ತಿಳಿಯುತ್ತದೆ. ಹಲವಾರು ನಾಟಕ ಕಂಪನಿಗಳು ಕಷ್ಟ ಸ್ಥಿತಿಯಲ್ಲಿದ್ದಾಗ ಇಲ್ಲಿಗೆ ಬಂದು ಸಹಾಯಧನ ಪಡೆದಿವೆ. ಜೈ ಭಾರತ ಬೀಡಿ ಕಂಪನಿ ಮಾಲೀಕ ಕುದ್ರಿಮೋತಿ ವೀರಭದ್ರಪ್ಪ ತಮ್ಮ ಬೀಡಿ ಕಂಪನಿಗಾಗಿ ಆಗಿನ ಕಾಲಕ್ಕೆ 10 ಸಾವಿರ ರೂಪಾಯಿ ಕೊಟ್ಟು ಸಿದ್ಧಪಡಿಸಿದ ಸೀನರಿ ಹಾಗೂ ಮೈಕ್‌ಸೆಟ್ ಹತ್ತು ಪೈಸೆ ತೆಗೆದುಕೊಳ್ಳದೆ ತಳಕಲ್ಲ ವೆಂಕರೆಡ್ಡಿ ಕಂಪನಿಗೆ ಕೊಟ್ಟಂಥವರು. ಗರುಡರ ಕಂಪನಿಯಲ್ಲಿದ್ದು ಪ್ರಸಿದ್ಧಿ ಪಡೆದ ಗುನ್ನಾಳಲಿಂಗಪ್ಪ ಅನಾರೋಗ್ಯ ಪೀಡಿತರಾದಾಗ, ಹಾರ್ಮೋನಿಯಂ ಮಾಸ್ತರಾಗಿದ್ದುಕೊಂಡು ಊರಿನ ಸಹಾಯ ಪಡೆದು ಇಲ್ಲಿಯೇ ಕೊನೆಯುಸಿರು ಎಳೆದರು. ಈಗಲೂ ಪ್ರತಿವರ್ಷ ರಕ್ತ ರಾತ್ರಿ ಹಾಗೂ ಕುರುಕ್ಷೇತ್ರ ನಾಟಕ ಅಭಿನಯಿಸುವರು. ಹಮ್ಮಿಗಿ ನೀಲಕಂಠಪ್ಪ ಆರಂಭಿಸಿದ ಕೊನೆಯ ಕಂಪನಿ ಭುವನೇಶ್ವರಿ ನಾಟ್ಯ ಸಂಘವು ಕಿನ್ನಾಳ ಹೆಸರು ಹೊಂದಿದೆ. ಕಾಳಪ್ಪ ಪತ್ತಾರ ಈಗಿರುವ ಪ್ರಸಿದ್ಧ ಸಂಗೀತ ನಿರ್ದೇಶಕರು, ಮಕ್ಕಳು ನಾಟಕ ಕಲಾವಿದರಾಗಿದ್ದಾರೆ. ಅನೇಕರು ದೊಡ್ಡಾಟ, ನಾಟಕಗಳಲ್ಲಿ ಸಮರ್ಥವಾಗಿ ಅಭಿನಯಿಸಿದ್ದಾರೆ.

ಮುದ್ದಾಬಳ್ಳಿ ಸಂಗೀತ, ನಾಟಕ ಹಾಗೂ ಬಯಲಾಟಗಳ ಕಲಾಕೇಂದ್ರ. ಸಿದ್ಧಯ್ಯ ಸೊಪ್ಪಿಮಠ ಇವರ ಸಂಬಂಧಿಗಳಾದ ಶಿವಬಸಯ್ಯ, ಷಡಕ್ಷರಯ್ಯ ಪಿಟೀಲು ವಾದಕರು. ಓಜಿನಹಳ್ಳಿ ಎಚ್.ಸಿದ್ಧಪ್ಪಮಾಸ್ತರ ಪಿಟೀಲು ಕಲಿತದ್ದು ಇಲ್ಲಿ. ಹಾರ್ಮೋನಿಯಂ ಗುನ್ನಾಳ ಲಿಂಗಪ್ಪ ಕಲಿಸಿದರು. ಮುಂದೆ ಇವರು ಭಾಗ್ಯನಗರ ಬಗಾಡೆ ಮುರಾರೆಪ್ಪ ಹಾಗೂ ಇರಕಲ್ಲಗಡಾದ ವಿರೂಪಾಕ್ಷಪ್ಪ ಎಲಿಗಾರರಲ್ಲಿ ಹಾರ್ಮೋನಿಯಂ ಕಲಿತು ನಾಟಕ ಮಾಸ್ತರರಾದರು. ಏಣಿಗಿ ಬಾಳಪ್ಪನವರ ಕಂಪನಿಯಲ್ಲಿ ಕೆಲವು ದಿವಸವಿದ್ದು, ಕೊಪ್ಪಳ ತಾಲ್ಲೂಕಿನಲ್ಲಿ ಉತ್ತಮ ನಾಟಕ ನಿರ್ದೇಶನ, ಸಂಗೀತ ನಿರ್ದೇಶಕರಾಗಿ 1998ರಲ್ಲಿ ನಿಧನರಾದರು.

ಗೊಂಡಬಾಳದಲ್ಲಿ ರಾಮಚಂದ್ರಪ್ಪ ಪೂರ್ಮಾ ಸಾವಕಾರ ಕಲೆಗೆ ಆಶ್ರಯ ನೀಡುತ್ತಿದ್ದರು. ಅಲ್ಲಿಯ ಜನರು ಕಲಾವಂತರು, ಬಯಲಾಟ ನಾಟಕಗಳನ್ನು ಈಗಲೂ ಪ್ರಯೋಗಿಸುತ್ತ ಬಂದಿದ್ದಾರೆ. ಸಿದ್ರಾಮಪ್ಪ ಅಂಗಡಿ (ಸೇರಿನ) ಎಂಬುವರ ಭೀಮನ ಪಾತ್ರ ಕೊಪ್ಪಳದಲ್ಲಿಯೂ ಪ್ರಖ್ಯಾತವಾಗಿದೆ. ಗೊಂಡಬಾಳದ ಶಿವಲಿಂಗಯ್ಯ ಶಾಸ್ತ್ರಿಗಳು 4 ನಾಟಕಗಳನ್ನು ಪ್ರಕಟಿಸಿದ್ದಾರೆ. ಬೆಟಗೇರಿ, ಹಿಟ್ನಾಳ, ಹುಲಿಗಿ ಕಂಪಸಾಗರಗಳಲ್ಲಿ ಅಖಂಡ ಐವತ್ತು ವರ್ಷಗಳಿಂದ ವೃತ್ತಿರಂಗಭೂಮಿಯ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸುತ್ತ ಬಂದಿದ್ದಾರೆ.

ರಂಗಭೂಮಿ ರಾಣಿ, ನಾಟ್ಯಶಿರೋಮಣಿ, ಹಮ್ಮಿಗಿ ನೀಲಕಂಠಪ್ಪ ಕನ್ನಡ ರಂಗಭೂಮಿಯ ವರನಟ. ಗರುಡರ ಕಂಪನಿಯಲ್ಲಿ ನಾಟ್ಯ ಸಾಮ್ರಾಜ್ಞಿ ಎಂಬ ಬಿರುದು ಪಡೆದರು. 1904ರಲ್ಲಿ ಹಮ್ಮಿಗಿಯಲ್ಲಿ ಜನನ. ಕೊಪ್ಪಳದ ಹತ್ತಿರದ ಹಲಿಗೇರಿ ಸೋದರತ್ತೆ ಮನೆಯಲ್ಲಿದ್ದು ಕಾಲ ಕಳೆದಿದ್ದು ಹಲಿಗೇರಿ-ಭಾನಾಪುರದಲ್ಲಿ ವಾಸಿವಾಗಿದ್ದರು. ಹೊಂಬಳದ ಶಂಕರ ಗೌಡರು, ಕೃಷ್ಣಬುವಾ ಹಾಗೂ ಫಕೀರ ಮಾಸ್ತರಿಂದ ಶಾಸ್ತ್ರೀಯ ಸಂಗೀತ ಕಲಿಸಿ, ಸಂಗೀತಗಾರನ್ನಾಗಿ ಮಾಡಿದರು. ಗರುಡರ ಗರಡಿಯಲ್ಲಿ ಪಳಗಿ ಶ್ರೇಷ್ಠ ನಟರಾದರಲ್ಲದೆ ಗರುಡರ ಕಂಪನಿಯ ಹೆಸರಿನೊಂದಿಗೆ ಹಮ್ಮಿಗಿ ನೀಲಕಂಠಪ್ಪನವರ ಅಭಿನಯ ಕೀರ್ತಿ ಮುಂಬೈ, ಮಿರಜ, ಸಾಂಗ್ಲಿ, ಹುಬ್ಬಳ್ಳಿ, ವಿಜಾಪುರ, ಧಾರವಾಡ, ಬೆಳಗಾವಿ, ಹೈದ್ರಾಬಾದ, ಮಂಗಳೂರು, ಪುತ್ತೂರು, ಕುಂದಾಪುರ, ಉಡುಪಿ, ಕಾರ್ಕಳ, ಕಾರವಾರ, ಬೀದರ, ಕಾಸರಗೋಡು, ಬೆಂಗಳೂರು ಎಲ್ಲ ಕಡೆಗೆ ಬೆಳಗಿತು. ಅವರು ನಡಿಸಿದ ಸ್ತ್ರೀ ಪಾತ್ರಗಳು ಅಂದಿನ ಕಲಾರಸಿಕರ ಮನವನ್ನು ಗೆದ್ದು ರಂಗಭೂಮಿಯ ಅನಭಿಷಕ್ತ ರಾಣಿಯಾಗಿ ಗೌರವಿಸಲ್ಪಟ್ಟರು.

ಹಲಿಗೇರಿ ಭೀಮರಾವ್ ಗದಗ ಹತ್ತಿರದ ನಾಗಸಂದ್ರದವರಾದರೂ ಹೆಂಡತಿಯ ಆಸ್ತಿಗೆ ಹಲಿಗೇರಿಯಲ್ಲಿ ವಾಸ. ಓದಿನಿಂದ ವಂಚಿತರಾದರೂ ಕಲಾದೇವಿ ಒಲಿದಳು. ಅಭಿನಯ ಕಲೆ ಕರಗತವಾಯ್ತು. ಖಳನಾಯಕನ ಪಾತ್ರಗಳಿಗೆ ಹೆಸರಾದರು. ಗರುಡರ ಕಂಪನಿಯಿಂದ ಹಿಡಿದು ಬಹುತೇಕ 20,30 ಕಂಪನಿಗಳಲ್ಲಿ ಖಳನಾಯಕರಾಗಿ ಸೇವೆಸಲ್ಲಿಸಿದ್ದಾರೆ.

ಕವಿರತ್ನ, ಶರಣ ಸಾಹಿತ್ಯ ರತ್ನ, ನಾಟ್ಯ ಸಾಹಿತ್ಯ ಶಿರೋಮಣಿ ಬಿರುದಾಂಕಿತ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ

ವಿಜೇತ, ಮಾರುತೇಶ ತುಳಜಾರಾಮ ಮಾಂಡ್ರೆಯವರು ಹೊಳೇ ಆಲೂರಿನವರಾದರೂ ತಾಯಿಯ ತವರು ಮನೆ ಹಾಗೂ ಹೆಂಡತಿಯ ತವರು ಮನೆಯಾದ ಕೊಪ್ಪಳ ತಾಲ್ಲೂಕಿನ ಅಳವಂಡಿಯಲ್ಲಿ ನೆಲೆನಿಂತು, ಕೊಪ್ಪಳ ಜಿಲ್ಲೆಯವರೇ ಆಗಿದ್ದಾರೆ. ಜನನ 1928. ಮುಲಿಕೀ ಪರೀಕ್ಷೆ ಕೂಡ ಪಾಸಾಗದ ಇವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಭಕ್ತಿರಸ ಪ್ರಧಾನ ಹೀಗೆ 150 ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕವಾಡದ ಕಂಪನಿಗಳಿಲ್ಲ. ಗುಬ್ಬಿ ಕಂಪನಿ ಇವರ ಅಮೃತಾ ಮತ್ತು ಗಾಜಿನ ಮನೆ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸಿದೆ. ಇವರ ಸಮಕಾಲೀನ ನಾಟಕಕಾರಾದ ಧುತ್ತರಗಿ ಅಥವಾ ಹೂಗಾರ ರಿಂದ ಗುಬ್ಬಿ ಕಂಪನಿ ನಾಟಕಗಳನ್ನು ಪಡೆದುಕೊಂಡಿಲ್ಲ. ಪಿ.ಬಿ. ಧುತ್ತರಗಿ, ಎಚ್.ಎನ್. ಹೂಗಾರ ಹಾಗೂ ಮಾರುತೇಶ ಮಾಂಡ್ರೆ ಸಮಕಾಲೀನ ವೃತ್ತಿ ರಂಗಭೂಮಿಯ ನಾಟಕಕಾರರು; ಕವಿ ರತ್ನತ್ರಯರಾಗಿದ್ದಾರೆ.

'ಜೀವನಯಾತ್ರೆ' ಯ ನಟ್ವಾಲಿ ಶಿವರುದ್ರಪ್ಪನವರು 1924 ರಲ್ಲಿ ಜನಿಸಿದರು. ಮೆಟ್ರಿಕ್ ಕೂಡ ಮುಗಿಸಿರಲಿಲ್ಲ. ದಲಾಲಿ ಅಂಗಡಿ ಗುಮಾಸ್ತರಾಗಿದ್ದರು. ಗಂಗಾವತಿ ಬಸಪ್ಪ ಇವರು ಅಭಿನಯಿಸುತ್ತಿದ್ದ ನಾಟಕಗಳಿಗೆ ತರಬೇತುದಾರರು, ಇವರಿಂದ ನಾಟಕಗಳ ಬಗ್ಗೆ ತಿಳಿಯಿತು. ಹತ್ತು ಕಟ್ಟುವುದಕ್ಕಿಂತ ಒಂದು ಮುತ್ತು ಕಟ್ಟು ಎನ್ನುವಂತೆ 'ಜೀವನ ಯಾತ್ರೆ' ಬರೆದು ಖ್ಯಾತಿ ಪಡೆದಿದ್ದಾರೆ. ಈ ನಾಟಕ ಪ್ರಯೋಗಿಸದ ಉತ್ತರ ಕರ್ನಾಟಕದ ನಾಟಕ ಕಂಪನಿಗಳಿಲ್ಲ. ಇದನ್ನು ಪ್ರಯೋಗಿಸದ ಹಳ್ಳಿಯ ಹವ್ಯಾಸಿ ತಂಡಗಳಿಲ್ಲ. ಇವರ 'ಪಂಕಜ' ನಾಟಕ ಓದಿ, ಬಿ.ಆರ್. ಪಂತಲು 'ದುಡ್ಡೇ ದೊಡ್ಡಪ್ಪ' ಚಲನಚಿತ್ರ ಮಾಡಿದ್ದಾರೆ.

ಕೊಪ್ಪಳದಲ್ಲಿ ಸಮುದಾಯವು ಉತ್ತಮ ಹೊಸ ಅಲೆಯ ನಾಟಕಗಳನ್ನು ಬೀದಿ ನಾಟಕಗಳನ್ನು ಕೊಟ್ಟಿರುವುದಲ್ಲದೆ ಸ್ಪರ್ಧೆ ಗಳಲ್ಲಿ ಭಾಗವಹಿಸಿದೆ. ಎಚ್.ಡಿ. ಪಾಟೀಲ ಕೂಕನಪಳ್ಳಿ ಕೊಪ್ಪಳ ತಾಲ್ಲೂಕಿನ ಉತ್ತಮ ನಾಟಕಕಾರರಾಗಿದ್ದು ಹಲವಾರು ನಾಟಕ ಗಳ ಪ್ರಯೋಗ ಮಾಡಿದ್ದರು. ಮೈನಳ್ಳಿ ಷಣ್ಮುಖಯ್ಯ ನಾಟಕ ಬರೆದು ಗೆಳೆಯರಿಂದ ಪ್ರಯೋಗ ಮಾಡಿಸಿದ್ದಾರೆ. ವೀರಣ್ಣ ರಾಜೂರು, ಡಾ.ದೇವೇಂದ್ರ ಕುಮಾರ ಹಕಾರಿ, ಶ್ರೀ ಇಟಗಿ ರಾಘವೇಂದ್ರ ಮುಂತಾದವರು ನಾಟಕ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಗವೀಶ್ ಹಿರೇಮಠ ರಂಗಭೂಮಿಯ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅಮೀನಪುರದ ಸಂತೆ, ಲಕ್ಕವ್ವನ ಮಂದಿ, ಪ್ಲಾಟ್‌ಫಾರ್ಮ್ ಮುಂತಾದ ಕಥೆಗಳನ್ನು ನಾಟಕ ರೂಪದಲ್ಲಿ ತಂದಿದ್ದಾರೆ. ಕರ್ನಾಟಕದ ಅನೇಕ ರಂಗ ಕಲಾವಿದರ ಜೀವನವನ್ನು ನಾಟಕ ರೂಪದಲ್ಲಿ ತಂದಿದ್ದಾರೆ. ಕರ್ನಾಟಕದ ಅನೇಕ ರಂಗ ಕಲಾವಿದರ ಜೀವನವನ್ನು ದಾಖಲಿಸುವ 'ರಂಗ ಕುಸುಮಗಳು' ಕೃತಿ ಮೌಲಿಕವಾಗಿವೆ. ಆಕಾಶವಾಣಿ–ದೂರ ದರ್ಶನದಲ್ಲಿ ಇವರ ನಾಟಕಗಳು ಪ್ರಯೋಗಗೊಂಡಿವೆ. ಕಳೆದ 40 ವರ್ಷಗಳಿಂದ ರಂಗಭೂಮಿಗಾಗಿ ತಮ್ಮ ಸೇವೆಸಲ್ಲಿಸಿದ್ದಾರೆ. ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತರು, ಹಾಗೂ ಸದಸ್ಯರಾಗಿ ಈ ಭಾಗದಲ್ಲಿ ಉತ್ತಮ ಕೆಲಸ ಕೈಗೊಂಡಿದ್ದಾರೆ. ಇವರ ಸೋದರ ಪ್ರೊ. ಅನ್ನದಾನಿ ಹಿರೇಮಠರು ಕೂಡಾ ರಂಗಭೂಮಿ ಆಸಕ್ತರು. ಭಾಗ್ಯನಗರದ ವಿಠ್ಠಪ್ಪ ಗೋರಂಟ್ಲಿ ರಂಗಭೂಮಿ ನಟ, ನಾಟಕಕಾರ ಹಾಗೂ ನಿರ್ದೇಶಕರು. ಪ್ರಹ್ಲಾದ ಬೆಟಗೇರಿ ಹಳೆಯ ಹಾಗೂ ಹೊಸ ಅಲೆಯ ರಂಗನಟ, ಇಬ್ಬರೂ ಚಲನಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಮುರಾರೆಪ್ಪ ಬಗಾಡೆ ಭಾಗ್ಯನಗರ ಇವರು ಹಿರಿಯ ಸಂಗೀತ ಹಾಗೂ ನಾಟಕ ನಿರ್ದೇಶಕರು ಮತ್ತು ನಟರೂ ಆಗಿದ್ದರು. ಓಜಿನಹಳ್ಳಿ ಎಚ್. ಸಿದ್ಧಪ್ಪ ಮಾಸ್ತರು ಮುರಾರೆಪ್ಪ ಬಗಡೆಯವರ ಕೈಯಲ್ಲಿ ಹಾರ್ಮೋನಿಯಂ ತರಬೇತಿ ಪಡೆದು ಮುಂದೆ ಇರಕಲ್ಲಗಡಾದ ವಿರೂಪಾಕ್ಷಪ್ಪ ಯಲಿಗಾರರಲ್ಲಿ ಸಂಗೀತ ಕಲಿತರು. ಈ ಮೊದಲು ಪಿಟೀಲು ಮುದ್ದಾಬಳ್ಳಿ ಸಿದ್ಧಯ್ಯನವರಲ್ಲಿ ಕಲಿತಿದ್ದರು. ಏಣಿಗಿ ಬಾಳಪ್ಪ ನವರ ಕಂಪನಿಯಲ್ಲಿದ್ದು ಪಾತ್ರ ಮಾಡಿದರು. ಸಂಗೀತ ನಿರ್ದೇಶಕರಾಗಿದ್ದರು. ಪ್ರಗತಿ ಕಲಾವೇದಿಕೆ ರವೀಂದ್ರ ಕಲಾಕ್ಷೇತ್ರ ದಲ್ಲಿ ಸೂರ್ಯಕಾಂತ ಗುಣಕಿಮಠರ 'ರಾಜಾ ಲುಡಿಕ್ರಸ್' ಹಾಗೂ 'ಮಾರಾಟಕ್ಕಿದೆ' ನಾಟಕಗಳನ್ನು ಎಸ್. ಮಾಲತಿ ನಿರ್ದೇಶನದಲ್ಲಿ ಈಶ್ವರ ಅಲ್ಲಾ ನಾಟಕಗಳನ್ನು ಪ್ರದರ್ಶಿಸಿದೆ.

ಅಲ್ಲಮಪ್ರಭು ಬೆಟ್ಟದೂರು ಶ್ರೀ ಗವಿಸಿದ್ಧೇಶ್ವರ ಕಾಲೇಜಿನಿಂದ ಶಿವನಾಯಕ ದೊರೆ ಅವರ ನಿರ್ದೇಶದಲ್ಲಿ ಸಿದ್ಧಲಿಂಗಯ್ಯನವರ ಏಕಲವ್ಯ ಹಾಗೂ ಚದುರಂಗರ ಕುಮಾರರಾಮ ನಾಟಕಗಳನ್ನು ಪ್ರಯೋಗಿಸಿದ್ದಲ್ಲದೆ, ಅವು ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿವೆ.

ಈಶ್ವರ ಹತ್ತಿಯವರು ಆಧುನಿಕ ರಂಗಭೂಮಿಯತ್ತ ಒಲಿದವರು. ಅವರು ಯಶಸ್ವಿ ನಾಟಕಕಾರರು, ನಟರು ಹಾಗೂ ನಿರ್ದೇಶಕರಾಗಿದ್ದಾರೆ. ಕೊಪ್ಪಳದ ಮುರಳಿ ಹಾಗೂ ಶಿವಯ್ಯ ಗುರುವಿನ್ ವೃತ್ತಿರಂಗಭೂಮಿ ನಟರಾಗಿದ್ದು ತಮ್ಮ ಅಭಿನಯದಿಂದ ಪ್ರೇಕ್ಷಕರ ಮನಗೆದ್ದವರಾಗಿದ್ದಾರೆ.

(ಎಚ್‌ಎಸ್‌ಪಿ)

ರಂಗ ಚಟುವಟಿಕೆಗಳು: (ಗಂಗಾವತಿ ತಾಲ್ಲೂಕು) ಸಿಂಧನೂರಿನ ಮೃಡದೇವ ಗವಾಯಿಗಳು ಆರಂಭಿಸಿದ ಅಮರೇಶ್ವರ ನಾಟ್ಯ ಸಂಘ ಸಿಂಧನೂರಿನವರಾದರೂ ಇದಕ್ಕೆ ಆರ್ಥಿಕ ನೆರವು ದೊರಕಿದ್ದು ಗಂಗಾವತಿಯವರಾದ ಇವರ ಮಾವಂದಿರಾದ ಗುರಯ್ಯನವರಿಂದ. ಈ ಕಂಪನಿ ಗಂಗಾವತಿ ತಾಲ್ಲೂಕಿನದೆಂದೇ ಭಾವಿಸಲಾಗಿದೆ.

ಕೊಪ್ಪಳದವರಾದ ವೆಂಕಟೇಶ ಕಟ್ಟೀಮನಿ ಸ್ಪುರದ್ರೂಪಿ ಯುವಕರಾಗಿದ್ದರು. ವ್ಯಾಪಾರಕ್ಕೋಸ್ಕರ ಗಂಗಾವತಿಯಲ್ಲಿ ದಿದ್ದರು. ಕಟ್ಟೀಮನಿ ಮನೆತನದ ಸ್ತ್ರೀ ಪುರುಷರು ರಂಗಭೂಮಿ ಗಾಗಿ ದುಡಿದವರು. ಹೆಣ್ಣು ಮಕ್ಕಳು ಸಂಗೀತ, ನೃತ್ಯ ಹಾಗೂ ಅಭಿನಯಕ್ಕಾಗಿ ಹೆಸರು ಪಡೆದವರು. ಎಂ ಚಂದ್ರಯ್ಯ ಶಿರಗುಪ್ಪಿ ಒಳ್ಳೆಯ ನಟರು, ನಾಟಕಕಾರರು, ಇವರು ಕೂಡ ಕಂಪನಿ ಕಟ್ಟಿ ನಾಟಕಗಳನ್ನು ಪ್ರಯೋಗಿಸಿದುದಾಗಿ ತಿಳಿಯುತ್ತದೆ.

ಗುಂಡೂರು, ಗಂಗಾವತಿ ತಾಲ್ಲೂಕಿನ ಕೃಷಿ ಪ್ರಧಾನ ಊರು. ಇಲ್ಲಿಯ ದೊಡ್ಡ ಹನುಮಂತಪ್ಪ ಹೂಗಾರ ಕಂಪನಿನಾಟಕಗಳಲ್ಲಿ ಎಲ್ಲ ಬಗೆಯ ಪಾತ್ರಗಳನ್ನು ಮಾಡಿ ಹೆಸರುವಾಸಿಯಾಗಿದ್ದರಿಂದ ಕರ್ನಾಟಕ ನಾಟಕ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿದ್ದಾರೆ. ಹಾರ್ಮೋನಿಯಂ ಮಾಸ್ತರಾದ ಹುಸೇನ ಸಾಬರು ನಾಟಕ ನಿರ್ದೇಶನದಲ್ಲಿ ತುಂಬ ಪ್ರಸಿದ್ಧರು. ಗಂಗಾವತಿ ತಾಲ್ಲೂಕಿನ ಉದ್ಯಾಳು ಗ್ರಾಮದವರಾದ ಭೋಗಪ್ಪ ಮಾಸ್ತರು ಕಲ್ಮಂಗಿಯವರು, ಶ್ರೇಷ್ಠ ಮಟ್ಟದ ಹಾರ್ಮೋನಿಯಂ ಮಾಸ್ತರು.

ಎಸ್.ವಿ. ಪಾಟೀಲ ಗುಂಡೂರು ಅವರು ನಟ, ನಿರ್ದೇಶಕ, ನಾಟಕಕಾರ, ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಸದ್ಯಸರಾಗಿದ್ದವರು. ಕಂಪ್ಲಿ ವಾದಿರಾಜರ ಶಿಷ್ಯ ಷಣ್ಮುಖಪ್ಪ ಆಚಾರ ನರಸಾಪುರ ಶಂಭುಲಿಂಗಸ್ವಾಮಿ ಬೇವಿನಾಳ, ಉತ್ತಮ ಹಾರ್ಮೋನಿಯಂ ಮಾಸ್ತರು ಮತ್ತು ರಂಗ ನಿರ್ದೇಶಕರು. ಇವರೀಗ ಟಿ.ವಿ. ಧಾರಾವಾಹಿ, ಚಲನಚಿತ್ರಗಳತ್ತ ವಾಲಿದ್ದರೂ ರಂಗಭೂಮಿ ಪ್ರೀತಿ ಬಿಟ್ಟಿಲ್ಲ. ಬಿ. ಬಾಲರಾಜ ಸಿಂಗನಾಳರು ಉತ್ತಮ ದೇಹದಾರ್ಢ್ಯದ ನಟರು ಹಾರ್ಮೋನಿಯಂ ಮಾಸ್ತರು.

ಎಚ್.ಎಂ. ಸಂಗಯ್ಯ ಸ್ವಾಮಿ ಈ ತಾಲ್ಲೂಕಿನ ಈಳಿಗನೂರಿನವರಾಗಿದ್ದು, ಉತ್ತಮ ಹಾರ್ಮೋನಿಯಂ ವಾದನಪಟು, ನಾಟಕ ಕಲಿಸುತ್ತಾರೆ. ಪಿ. ಲಕ್ಷ್ಮಣ ಕೇಸಕ್ಕಿ ಹಂಚಿನಾಳ ಇನ್ನೊಬ್ಬ ನಾಟಕ ನಿರ್ದೇಶಕರು. ಹಾರ್ಮೋನಿಯಂ ವಾದಕರು. ಬಸಾಪಟ್ಟಣದ ಹನುಮಂತರಾವ್ ಕುಲಕರ್ಣಿ ಸುಗಮ ಸಂಗೀತಗಾರರಲ್ಲದೆ, ಹಾರ್ಮೋನಿಯಂ ಮಾಸ್ತರು. ಬಿ. ಹನುಮಂತಾಚಾರ್ಯರು ಗಂಗಾವತಿ ಗಾಂಧಿ ಚೌಕದಲ್ಲಿದ್ದು ವೃತ್ತಿರಂಗಭೂಮಿಯ ನಟರಾಗಿದ್ದಾರೆ.

ಸಿದ್ಧಾಪುರದ ಹವ್ಯಾಸಿ ಕಲಾತಂಡಗಳು ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳನ್ನು ಕಲಾತ್ಮಕವಾಗಿ ಅಭಿನಯಿಸುವುದರಲ್ಲಿ ಹೆಸರು ವಾಸಿಯಾಗಿವೆ. ಇದೇ ತಾಲ್ಲೂಕಿನ ಹುಲಿಹೈದರದ ಜಿ.ಎಚ್. ರಾಘವೇಂದ್ರ ಪತ್ರಕರ್ತರು. ಹೊಸ ಅಲೆಯ ನಾಟಕಾರ, ಶ್ರೇಷ್ಠ ಮಟ್ಟದ ನಟ, ರಂಗ ನಿರ್ದೇಶಕರಾಗಿದ್ದಾರೆ. ಇಲ್ಲಿಯ ಶಿವನಾಯಕ ದೊರೆ ರಂಗ ನಿರ್ದೇಶಕರು ಹಾಗೂ ರಂಗಾಯಣ, ನೀನಾಸಂದಲ್ಲಿ ತರಬೇತಿ ಪಡೆದವರು. ಧಾರಾವಾಹಿ ಹಾಗೂ ರಂಗಭೂಮಿಗೆ ಕಲಾನಿರ್ದೇಶಕರಾಗಿ ದುಡಿದ ರಂಗಕರ್ಮಿಯಾಗಿದ್ದಾರೆ.

ಸಾಲಹುಂಚಿಮರ ಎಂಬ ಊರಿನ 75 ವರ್ಷದ ಈಶ್ವರಪ್ಪ ರೌಡಕುಂದಿ ಇವರು ತಾಲ್ಲೂಕಿನಲ್ಲಿಯೇ ರಂಗಭೂಮಿಗೆ ಸೇವೆ ಸಲ್ಲಿಸಿದ ಹಿರಿಯರಾಗಿದ್ದಾರೆ. ನಟ ಹಾಗೂ ನಾಟಕ ಕಂಪನಿ ಮಾಲೀಕರಾಗಿದ್ದಾರೆ. ನಾಯಕ ನಟ ಕಲ್ಗುಡಿ ಲಿಂಗರಾಜ, ಬೂದಗುಂಪಾದ ವೀರಣ್ಣ ಕಮ್ಮಾರ, ಕಾರ್ಟಗಿ ಲಲಿತಮ್ಮ, ಬ್ಯಾಡಿಗಿ ಕೊಟ್ರಯ್ಯ, ಗಂಗಾವತಿ ತಾಲ್ಲೂಕಿನ ಶ್ರೇಷ್ಠ ಮಟ್ಟದ ನಟರಾಗಿದ್ದಾರೆ.

ಪನ್ನಾಪುರ ಮಹಾಂತ ಸ್ವಾಮಿಗಳು ಪ್ರಸಿದ್ಧ ವರ್ತಕರು. ಜ್ಯೋತಿಷ್ಯ, ಆಯುರ್ವೇದ ಬಲ್ಲಿದರು. ಶ್ರೇಷ್ಠಮಟ್ಟದ ಹಾರ್ಮೋನಿಯಂ ವಾದಕರು, ಗಾಯಕರು, ಗಮಕ ಕೋವಿದರು ಹಾಗೂ ರಂಗ ನಿರ್ದೇಶಕರು. ನವಲಿ ರಾಘವೇಂದ್ರಚಾರ ರಂಗಭೂಮಿಯಲ್ಲಿ ಆಸಕ್ತಿ ತಾಳಿ ಆದವಾನಿ ಲಕ್ಷ್ಮೀದೇವಿಯೊಂದಿಗೆ ಪಾತ್ರ ವಹಿಸಿದ್ದರು. ವಂದನಾ, ಅಂಜನಾ ಶ್ರೀದೇವಿ ಹಾಗೂ ಅಂಜಲಿದೇವಿ ರಂಗಭೂಮಿಯ ಹಿರಿಯ ನಟಿಯರು. ಗಂಗಾವತಿಯಲ್ಲಿ ವಾಸವಾಗಿದ್ದು ಈಗಲೂ ರಂಗ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. (ಎಚ್‌ಎಸ್‌ಪಿ)

ರಂಗ ಚಟುವಟಿಕೆಗಳು: (ಯಲಬುರ್ಗಾ ತಾಲ್ಲೂಕು) ಸಂಗನಬಸಪ್ಪ ಕುಕನೂರು, ಶಿರಹಟ್ಟಿ ಕಂಪನಿ, ವಾಮನರಾವ್ ಮಾಸ್ತರ (1914–1934) ಕಂಪನಿ, ಗರುಡ ಸದಾಶಿವರಾಯರ ಕಂಪನಿ (1919–1944) ಇಂಥ ಹಿರಿಯ ನಾಟಕ ಕಂಪನಿಗಳಲ್ಲಿ ಅಭಿನಯಿಸಿದ ಹಿರಿಯ ನಟರು. ಇವರು ಉತ್ತಮ ಸಂಗೀತಗಾರ ಮತ್ತು ಶ್ರೇಷ್ಠ ಮಟ್ಟದ ಅಭಿನಯ ಚತುರರೆಂದು ನೆನೆಯಲ್ಪಟ್ಟಿದ್ದಾರೆ.

'ಕಾವ್ಯಾನಂದ' ಸಿದ್ಧಯ್ಯ ಪುರಾಣಿಕರು 1940ರಲ್ಲಿ ಆತ್ಮಾರ್ಪಣ ಬಸವೇಶ್ವರರ ಬದುಕನ್ನು ಕುರಿತ ನಾಟಕ ರಚಿಸಿದ್ದಾರೆ. ಸ್ವತಃ ಬಸವೇಶ್ವರರ ಪಾತ್ರ ವಹಿಸಿದ್ದಾರೆ. ಖಾನಗೌಡರು ತಳಕಲ್ಲ, ಶ್ರೇಷ್ಠ ಮಟ್ಟದ ತಬಲಾ ವಾದಕರು. ಗರುಡರು, ವೆಂಕರೆಡ್ಡಿ ತಳಕಲ್ಲರು ಮೆಚ್ಚಿನ ನಾಟಕಕಾರರು. ನಾಟಕಗಳಿಗೂ ತಬಲಾ ಸಾಥ್ ನೀಡಿದ್ದಾರೆ.

ಶಿವರುದ್ರಪ್ಪ ಕಿನ್ನಾಳರು 19 ವರ್ಷ ಗರುಡ ಸದಾಶಿವರಾಯರ ನಾಟಕ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರು, ಸಂಗೀತ ನಿರ್ದೇಶಕರಾಗಿದ್ದರು. ಕೆ. ಜಗನ್ನಾಥರಾಯರು ಇನ್ನೊಬ್ಬ ಸಂಗೀತ ನಿರ್ದೇಶಕರಾಗಿದ್ದರು. ತಳಕಲ್ಲ ವೆಂಕರೆಡ್ಡಿ ಮೂಲಿಮನಿ, ಅವರ ಶ್ರೀ ರಂಜನಿ ನಾಟಕ ಮಂಡಳಿ ತಳಕಲ್ಲದಲ್ಲಿ ಮೊದಲು ಸೀಜನಲ್ ಕಂಪನಿಯಾಗಿ 1938ರಲ್ಲಿ ಆರಂಭಗೊಂಡು ಮುಂದೆ ವೃತ್ತಿ ಕಂಪನಿಯಾಗಿ ಪರಿವರ್ತನೆಗೊಂಡಿತು. ರಹಮಾನೆವ್ವ ಕಲನಿ ಬಹುದೊಡ್ಡ ನಟಿ, ಇವರ ಶ್ರೀ ಲಲಿತಕಲಾ ನಾಟ್ಯ ಸಂಘ ಕುಕನೂರು 1950ರಲ್ಲಿ ಆರಂಭಗೊಂಡಿತು. 14ನೇ ವರ್ಷಕ್ಕೆ ಬಣ್ಣ ಹಚ್ಚಿದರು. ಹಂದಿಗನೂರು ಸಿದ್ರಾಮಪ್ಪನವರ ಕಂಪನಿ, ತಳಕಲ್ಲ ವೆಂಕರೆಡ್ಡಿ ಕಂಪನಿಗಳಲ್ಲಿ ಸೇವೆ ಸಲ್ಲಿಸಿದರು. ಮುಸ್ಲಿಂ ಮಹಿಳೆಯಾದರೂ ಕನ್ನಡದ ಶುದ್ಧ ಉಚ್ಚಾರಣೆಗೆ, ಅಭಿನಯಕ್ಕೆ ಹಾಡುಗಾರಿಕೆಗೆ ಹೆಸರಾದ ರಹಿಮಾನವ್ವ, ಕನ್ನಡ ನಾಡು ಕಂಡ ಶ್ರೇಷ್ಠ ಅಭಿನೇತ್ರಿ.

ಮಂಗಳೂರು ವೀರಣ್ಣ ನಾಟಕ ಕಂಪನಿ ಮಾಡಿದ್ದರು. ತಳಕಲ್ಲ ವೆಂಕರೆಡ್ಡಿ, ಗುಬ್ಬಿ ಕಂಪನಿ, ಗೋಕಾಕ ಕಂಪನಿ, ಗುಡಗೇರಿ ಕಂಪನಿಗಳಲ್ಲಿ ಸೇವೆ. ಡಾ. ರಾಜಕುಮಾರರೊಂದಿಗೆ ಪಾತ್ರ ಮಾಡಿ ಜನಮೆಚ್ಚುಗೆ ಪಡೆದ ರಂಗಭೂಮಿಯ ದೊಡ್ಡ ಕಲಾವಿದರು. ಜಗನ್ನಾಥರಾವ್ ಪದಕಿಯವರು ಈ ತಾಲ್ಲೂಕಿನ ಬುಡಕುಂಟಿಯವರು ಗುಬ್ಬಿ, ಗುಡಿಗೇರಿ, ಸೂಡಿ, ಕಡಪಟ್ಟಿ

ನಾಟಕ ಕಂಪನಿಗಳಲ್ಲಿ ಸೇವೆ. ಸ್ವತಃ ಶ್ರೀ ರಾಘವೇಂದ್ರ ಕೃಪಾ ಪೋಷಿತ ನಾಟಕ ಮಂಡಳಿ ಕಟ್ಟಿದ್ದರು.

ತೋಟನಗೌಡ ಕಿತ್ತೂರ ಯಲಬುರ್ಗಿ ಹೆಸರಾಂತ ನಾಟಕ ಕಂಪನಿಗಳಲ್ಲಿ ಡಿ. ದುರ್ಗಾದಾಸ, ಗರುಡ ಸದಾಶಿವರಾಯರು, ಯಲಿವಾಳ ಸಿದ್ಧಯ್ಯ, ಈಶ್ವರಪ್ಪ ರೌಡಕುಂದಿಯವರಂಥ ಪ್ರಸಿದ್ಧ ನಟರೊಡನೆ ಅಭಿನಯಿಸಿ, ಅಭಿನಯದಲ್ಲಿ ದೊಡ್ಡ ಹೆಸರು ಮಾಡಿದವರು. ಉತ್ತಮ ಕಂಠ, ದೈಹಿಕ ಸೌಂದರ್ಯಗಳಿಂದ ಸ್ತ್ರೀಪಾತ್ರಕ್ಕೆ ಹೇಳಿ ಮಾಡಿದಂತೆ ಇರುವ ಭಾಗ್ಯವಂತಪ್ಪ ಪತ್ತಾರ ತಳಕಲ್ಲದವರು. ತಳಕಲ್ಲ ವೆಂಕರೆಡ್ಡಿ ಕಂಪನಿಯಲ್ಲಿದ್ದರು.

ಬಾಬಣ್ಣ ಕಲ್ಮನಿ, ರಹಿಮಾನೆವ್ವ ಕಲ್ಮನಿಯವರ ಹಿರಿಯ ಮಗ. ಪುರುಷ, ಪಾತ್ರ ಸ್ತ್ರೀ ಪಾತ್ರ ಎರಡರಲ್ಲೂ ಎತ್ತಿದ ಕೈ. ಹದಿಹರಿಯಲ್ಲಿದಲ್ಲಿಯೇ ಪ್ರಬುದ್ಧ ಅಭಿನಯ ಪಳಗಿಸಿಕೊಂಡ ಬಾಬಣ್ಣ ಕಲ್ಮನಿ 1993ರ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತರು. ಶ್ರೀ ತೋಂಟದಾರ್ಯ ನಾಟಕ ಸಂಘ ಮಂಡಲ ಗಿರಿಯ ಇವರು ಕೂಡ ಕಲಾವಿದರಾಗಿದ್ದಾರೆ. ಬನ್ನಿಕೊಪ್ಪದ ಮಲ್ಲಪ್ಪ ಬಾಳಪ್ಪ ಯಲಬುರ್ಗಿ ಇನ್ನೊಬ್ಬ ಉತ್ತಮ ರಂಗನಟ ರಾಗಿದ್ದಾರೆ. ಮಂಡಲಗಿರಿಯ ಎಂ.ಬಿ. ದಳವಾಯಿ, ಸ್ತ್ರೀ-ಪುರುಷ ಪಾತ್ರಗಳಲ್ಲಿ ಎತ್ತಿದ ಕೈ.

ತಳಕಲ್ಲದ ಹನುಮಂತಪ್ಪ ಅಡಿವೆಪ್ಪ ದೇವರ ಮನಿ ತಮ್ಮ ಹದಿನಾರನೆಯ ವಯಸ್ಸಿನಲ್ಲಿ 1948ರಲ್ಲಿ ತಳಕಲ್ಲ ವೆಂಕರೆಡ್ಡಿಯವರ ಕಂಪನಿಯಲ್ಲಿ ರಂಗಭೂಮಿಗೆ ಕಾಲಿರಿಸಿದರು. 30-35 ನಾಟಕಗಳಲ್ಲಿ ಅಭಿನಯಿಸಿ ಸ್ತ್ರೀ ಪಾತ್ರಗಳು ಅದರಲ್ಲೂ ಹಾಸ್ಯ ಪಾತ್ರದಲ್ಲಿ ದೇವರಮನಿ ಹನುಮಂತಪ್ಪ ಸೈ ಎನ್ನಿಸಿಕೊಂಡಿದ್ದಾರೆ. ಬೆಣಕಲ್ಲದವರಾದ ಫಕೀರಪ್ಪ ವಜ್ರಬಂಡಿಯವರು ಬಾಲ್ಯದಿಂದಲೇ ಸಾಹಿತ್ಯ, ಸಂಗೀತ ಹಾಗೂ ಸಮಾಜಸೇವೆ, ರಂಗಭೂಮಿಯ ಬಗ್ಗೆ ಆಸಕ್ತಿ ಹೊಂದಿದ್ದರು. ಇವರು ಸ್ತ್ರೀ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದಾರೆ.

ಪಂ. ತಾಳಕೇರಿ ಬಸವರಾಜರು ತತ್ವಪದಕಾರರು. ಪಂಚಾಕ್ಷರಿ ಗವಾಯಿ, ಪುಟ್ಟರಾಜ ಗವಾಯಿಗಳಲ್ಲಿ ರಂಗ ತರಬೇತಿ ಪಡೆದು, ಉತ್ತಮ ನಟರಾಗಿ, ಪ್ರವಚನಕಾರರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಇವರು ಗವಾಯಿಗಳ ಕಂಪನಿಯ ಉತ್ತಮ ನಟರಾಗಿದ್ದರು.

ಯಲಬುರ್ಗಾ ತಾಲ್ಲೂಕಿನ ಮಂಡಲಗೇರಿಯ ದೇವೇಂದ್ರಪ್ಪ ಮಾಸ್ತರ ಮೀಸಿ ಉತ್ತಮ ಸಂಗೀತ ಹಾಗೂ ನಾಟಕ ನಿರ್ದೇಶಕರು. ಬಸವರಾಜ ಸಬರದವರು ನವ್ಯನಾಟಕ, ಗೀತ ನಾಟಕ, ಅಸಂಗತ ನಾಟಕ ಹಾಗೂ ಬೀದಿ ನಾಟಕಗಳನ್ನು ನೀಡಿ ರಂಗಭೂಮಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ನಾಟಕ ಅಕಾಡೆಮಿ ಪ್ರಶಸ್ತಿ ಗೌರವ ಪಡೆದಿದ್ದಾರೆ.

ಶಿವಲಿಂಗಯ್ಯ ಹಿರೇಮಠ ಸಂಕನೂರು ಅಭಿಜಾತ ಕಲಾವಿದರು. 10 ವರ್ಷ ಸಣ್ಣ ಹಾಗೂ ದೊಡ್ಡ ನಾಟಕ ಕಂಪನಿಗಳಲ್ಲಿ ಪಳಗಿ, ತಮ್ಮ ಸ್ವಂತ ಶ್ರೀ ಶಿವಲಿಂಗೇಶ್ವರ ನಾಟಕ ಕಂಪನಿ ಸಂಕನೂರು ಹೆಸರಿನಲ್ಲಿ 1970ರ ದಶಕದಲ್ಲಿ ಹುಟ್ಟು ಹಾಕಿ, ಸಣ್ಣ ಹಾಗೂ ದೊಡ್ಡ ನಗರ, ಪಟ್ಟಣ, ಗ್ರಾಮಗಳಲ್ಲಿ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಶ್ರೇಷ್ಠ ಮಟ್ಟದ ಕಲಾವಿದರು.

(ಎಚ್‌ಎಸ್‌ಪಿ)

ರಂಗಭೂಮಿ ಪರಂಪರೆ: (ಬೀದರ ಜಿಲ್ಲೆ) ವಿಶಿಷ್ಟವಾದ, ಮಿಶ್ರ ಸಂಸ್ಕೃತಿಯನ್ನು ಹೊಂದಿರುವ ಹೈದ್ರಾಬಾದ ಕರ್ನಾಟಕ ಪ್ರದೇಶ ದಲ್ಲಿ ಅತ್ಯಂತ ಪ್ರಾಚೀನ ಮತ್ತು ಭವ್ಯ ಇತಿಹಾಸವುಳ್ಳ ಸಾಹಿತ್ಯ, ರಂಗ ಪರಂಪರೆ ಬೆಳೆದು ಬಂದಿದೆ. ನಾಟಕ ಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ವಿಶಿಷ್ಟ ಪ್ರಕಾರ ಬೆಳೆದು ಬರದೇ ಹೋದರೂ, ನಾಡಿನೆಲ್ಲೆಡೆ ನಡೆಯುತ್ತಿದ್ದ ರಂಗ ಚಟುವಟಿಕೆ ಗಳಿಗೆ, ರಂಗ ಚಳುವಳಿಗೆ ಈ ಭಾಗದ ಸಾಹಿತಿಗಳ ಪಾಲೂ ಹಾಗೂ ಕಲಾವಿದರ ಪಾಲೂ ಅಮೂಲ್ಯವಾದುದು. ಸರಿಯಾದ ಮಾರ್ಗದರ್ಶನದ ಕೊರತೆ, ಮತ್ತು ಮುಖ್ಯವಾಗಿ ಸಾಹಿತ್ಯಿಕವಾಗಿ ಗುರುತಿಸುವಿಕೆ ಇಲ್ಲದ್ದರಿಂದ, ಎಲೆಮರೆಯ ಕಾಯಿಯಂತೆ, ಸಾಹಿತಿಗಳು ನಾಟಕಕಾರರು, ಕಲಾವಿದರು ತಮ್ಮ ಪ್ರಚಲಿತ ಸಮಯದಲ್ಲಿ ರಂಗಸೇವೆ ಮಾಡಿದ್ದಾರೆ.

ಕರ್ನಾಟಕದಲ್ಲಿಯೇ ಪ್ರಖ್ಯಾತಿಗೊಂಡ ಶ್ರೀ ಕೃಷ್ಣ ಪಾರಿಜಾತ ಕೀರ್ತನ ಕಾವ್ಯದ ಕರ್ತೃ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅಪರಾಳ ಗ್ರಾಮದ ಅಪರಾಳ ತಮ್ಮಣ್ಣ (1752) ನವರೆಂಬುದು ಹೆಮ್ಮೆಯ ಸಂಗತಿ, ನಾಟಕ ಅಲಂಕಾರ ಕವಲೂರಿನ ಗರುಡ ಸದಾಶಿವರಾಯರು ವೃತ್ತಿ ರಂಗಭೂಮಿಯ ಪಿತಾಮಹರು,

ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನು ಸಂಗೀತಾದಿ, ಲಲಿತಕಲೆಗಳಿಗೆ ಅಗ್ರಸ್ಥಾನ ಕಲ್ಪಿಸಿದವನು. ಆತನ ಪಟ್ಟದರಸಿ 'ಚಂದಲದೇವಿ' ಮಹಾನ್ ಸಂಗೀತ ವಿದೂಷಿ ಅವಳಿಗೆ 'ಅಭಿನವ ಸರಸ್ವತಿ' ನೃತ್ಯ ವಿದ್ಯಾಧರೆ' ಎಂಬ ಬಿರುಜ ಗಳಿದ್ದು, ನೃತ್ಯ ಸಂಗೀತ, ನಾಟಕಗಳಲ್ಲಿ ಪ್ರವೀಣೆ, ಅಲ್ಲದೆ ಜಲಸಂಗಿಯ ದೇವಸ್ಥಾನದಲ್ಲಿಯ ಶಾಸನ ಬರೆಯುತ್ತಿರುವ ಮಹಿಳೆಯ ಕಲಾಕೃತಿಯನ್ನು ಕಂಡಾಗ, ಆಗಿನ ಕಾಲದಿಂದಲೂ ಸ್ತ್ರೀಯರು ಲಲಿತಕಲೆಗಳಲ್ಲಿ ಪರಿಣಿತಿ ಪಡೆದವರೆಂಬುದು ತಿಳಿದು ಬರುವದು.

ವಿಶಿಷ್ಟವಾದ ಜಾನಪದದ ಸೊಗಡಿನೊಂದಿಗೆ ಜನಪದ ರಂಗಭೂಮಿ ಬಯಲಾಟ, ಸಣ್ಣಾಟ (ಡಪ್ಪಿನಾಟ) ಕೋಲಾಟ, ಅಲಾಯಿ ಕುಣಿತ, ಹುಲಿವೇಷ, ಹೀಗೆ ಹಲವಾರು ಪ್ರದರ್ಶನ ಕಲೆಗಳೊಂದಿಗೆ ಇಂದಿಗೂ ಹಳ್ಳಿಗಳಲ್ಲಿ ಜೀವಂತವಾಗಿದೆ. ಕಳೆದ 25 ವರ್ಷಗಳಲ್ಲಿ ಅದ್ಭುತವಾದ ಕಾರ್ಯ ಇಲ್ಲಿ ಆಗಿದ್ದು ಕಂಡು ಬರುವುದು. ತಂಡಗಳು, ಕಲಾವಿದರು, ನಾಟಕಕಾರರು, ಸಂಗೀತ ಗಾರರು ಮತ್ತು ಸಾಂಸ್ಕೃತಿಕ ಸಂಘಟನೆಗಳು, ರಂಗಭೂಮಿ ಬೆಳವಣಿಗೆಯಲ್ಲಿ ತಮ್ಮ ಅಪಾರವಾದ ಕೊಡುಗೆಯನ್ನು ನೀಡಿವೆ.

ರಂಗ ಪರಂಪರೆ: ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲಿಯೂ ಹುಟ್ಟಿಕೊಂಡ 'ಸಮುದಾಯ' ಸಾಂಸ್ಕೃತಿಕ ಸಂಘಟನೆ, ತುರ್ತು ಸ್ಥಿತಿಯ ಕರಾಳ ಧೋರಣೆಗಳಿಗೆ ಪ್ರತಿರೋಧ ಸೂಚಿಸುತ್ತಲೇ,

ಜನಸಾಮಾನ್ಯರ ಅಜ್ಞಾನ, ಮೂಢನಂಬಿಕೆ, ಅಂಧ ಶ್ರದ್ಧೆಗಳನ್ನು ಹೋಗಲಾಡಿಸಲು, ವೈಜ್ಞಾನಿಕ ಮನೋಭಾವದೊಂದಿಗೆ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತ ಬಂದಿರುವದು. ಸಾಮಾಜಿಕ, ಆರ್ಥಿಕ, ರಾಜಕೀಯ, ಪ್ರಚಲಿತ ಸಂಗತಿಗಳನ್ನು ವಿಶ್ಲೇಷಿಸುತ್ತ, ವಿಡಂಬನೆ ಮಾಡುತ್ತಲೇ, ಗಟ್ಟಿಯಾದ ನಾಟಕಗಳನ್ನು ಪ್ರತಿ ವರ್ಷವೂ ನೀಡುತ್ತಿರುವುದು ಗಮನಾರ್ಹ ಸಾಧನೆಯಾಗಿದೆ. 1979ರಲ್ಲಿ ಬೀದರಿನ ಹಿರಿಯ ಪತ್ರಕರ್ತರಾದ ಶ್ರೀ ವಿಶ್ವನಾಥ ಪಾಟೀಲ (ದಮನ–ಪತ್ರಿಕೆ) ಶ್ರೀ ಹಣಮಂತಪ್ಪಾ ಪಾಟೀಲ, ಶ್ರೀ ಎಸ್.ಕೆ. ಜೋಶಿ ಮುಂತಾದ ಹಿರಿಯರು 'ಬೀದರ ಸಮುದಾಯ' ತಂಡದ ಸಂಸ್ಥಾಪಕರಾಗಿ ತಂಡ ಕಟ್ಟಿ, ಸೂಕ್ತ ಪ್ರತಿಭೆಗಳಿಗೆ ವೇದಿಕೆ ಒದಗಿಸಿ ಕೊಟ್ಟರು. ತಂಡಕ್ಕೆ ಪರಿಪೂರ್ಣತೆಯನ್ನು ತಂದು ಕೊಡಲು, ಅವಿರತ ಶ್ರಮಿಸಿ, ಬೆಳಕು, ಧ್ವನಿ, ಮತ್ತಿತ್ತರ ಆಧುನಿಕ ರಂಗಪರಿಕರಗಳನ್ನು ಸಂಗ್ರಹಿಸಿ ಬೀದರಿನಲ್ಲಿ ಹವ್ಯಾಸಿ ರಂಗಭೂಮಿಗೆ ಭದ್ರವಾದ ಅಡಿಪಾಯ ಹಾಕಿದರು.

1979ರಲ್ಲಿ 'ಸರ್ವಾಧಿಕಾರಿ ವಿರೋಧಿ' ಸಾಂಸ್ಕೃತಿಕ ಜಾಥಾದಿಂದ ಬೀದಿ ನಾಟಕಗಳನ್ನು ಜಿಲ್ಲೆಯಾದ್ಯಂತ ಸೈಕಲ್ ಮೇಲೆ ಪ್ರದರ್ಶಿಸಿ ಪ್ರತಿಭಟನೆ ಸೂಚಿಸಿದರು. 1982ರಲ್ಲಿ ಹೊಸ ಮೌಲ್ಯಗಳತ್ತ ಸಾಂಸ್ಕೃತಿಕ ಜಾಥಾ, 1988ರಲ್ಲಿ ಬರಗಾಲದಲ್ಲಿ ಬರ ವಿರೋಧಿ ಜಾಥಾ ಹಮ್ಮಿಕೊಂಡು ಬಸವರಾಜ ಕೊಡಗೆ ನಿರ್ದೇಶನದಲ್ಲಿ 'ತಮಾಷಾ' ಬೀದಿ ನಾಟಕ ಹಾಡುಗಳೊಂದಿಗೆ 25 ಕಲಾವಿದರು ಸೈಕಲ್ ಮೇಲೆ 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ನೋವನ್ನು ಹಂಚಿಕೊಂಡರು. 1987ರಲ್ಲಿ 'ಯುದ್ಧ ಬೇಡ! ಶಾಂತಿ ಬೇಕು!' ಸಮುದಾಯದ ಕಲಾವಿದರಿಂದ ರಚಿತಗೊಂಡ 100 ಅಡಿಗಳ ಬಣ್ಣದ ಚಿತ್ರವನ್ನು ಪ್ರದರ್ಶಿಸಿದರು.

1990ರಲ್ಲಿ ಮೂಢನಂಬಿಕೆಗಳ ವಿರುದ್ಧ ಭಾರತ ಜನ, ಜ್ಞಾನ ವಿಜ್ಞಾನ ಸಮಿತಿ ಮತ್ತು ಸಮುದಾಯ ಸಂಘಟನೆಗಳ ಸಹಯೋಗದಲ್ಲಿ 17 ದಿನ ಶಿಬಿರ ಹಮ್ಮಿಕೊಂಡು 45 ದಿನಗಳ 'ಕಲಿಕಾ ಜಾಥಾ' ದಲ್ಲಿ 5 ಬೀದಿ ನಾಟಕಗಳನ್ನು ಚಂದ್ರಶೇಖರ ಚಕ್ಕಿ ನಿರ್ದೇಶನದಲ್ಲಿ ಪ್ರಾಣೇಶ ಗುಡೂರು, ಶಂಭುಲಿಂಗ ವಾಲ್ದೊಡ್ಡಿಯವರ ನೇತೃತ್ವದಲ್ಲಿ 150 ಹಳ್ಳಿಗಳಲ್ಲಿ ಸಂಚರಿಸಿ ಪ್ರದರ್ಶಿಸಿದರು.

1991ರಲ್ಲಿ ಬೀದರ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಚಾರ ಆಂದೋಲನದಲ್ಲಿ ಭಾಗವಹಿಸಿ ಜಾಥಾ ಹಮ್ಮಿಕೊಂಡಿದ್ದರು. 1992ರಲ್ಲಿ ಭಾರತ ಜ್ಞಾನ ಸಮಿತಿಯೊಂದಿಗೆ 'ವಿಜ್ಞಾನ ಜಾಥಾ' ದಲ್ಲಿ 15 ದಿನಗಳ ಶಿಬಿರದಲ್ಲಿ 5 ನಾಟಕಗಳನ್ನು ಎಂ.ಎಸ್. ಮನೋಹರ, ಚಂದ್ರಶೇಖರ ಚಕ್ಕಿಯವರ ನಿರ್ದೇಶನದಲ್ಲಿ 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ವಿಜ್ಞಾನದ ಅರಿವು ಮೂಡಿಸುವಲ್ಲಿ ಯಶಸ್ವಿಯಾದರು.

1979ರಲ್ಲಿ ಸಮುದಾಯದ ಮೊದಲ ನಾಟಕವಾಗಿ ಮಕ್ಕಳಿಂದ 'ಅಲಿ ಬಾಬಾ ಮತ್ತು ನಲವತ್ತು ಕಳ್ಳರು' ವೈಭವಯುತವಾಗಿ ನಿರ್ಮಿಸಿ ಬೀದರ ಬೆಂಗಳೂರಿನಲ್ಲಿ ಪ್ರದರ್ಶಿಸಿ ದಾಖಲೆ ನಿರ್ಮಿಸಿದರು. ನಂತರ 'ಕೆರೆಗೆ ಹಾರ, ಕತ್ತೆ ಮತ್ತು ಧರ್ಮ' ನಾಟಕಗಳು ಮೂಡಿಬಂದವು. ಆಗ ಹೊರಹೊಮ್ಮಿದ ಹಲವಾರು ಪ್ರತಿಭೆಗಳಲ್ಲಿ ಶ್ರೀ ಮಹೇಶ ಪಾಟೀಲ ಇವರು ದೆಹಲಿಯ ಎನ್.ಎಸ್.ಡಿ. ಪದವಿ ಪಡೆದು ಹೈದ್ರಾಬಾದ ಕರ್ನಾಟಕದ ಪ್ರಥಮ ಎನ್.ಎಸ್.ಡಿ. ಪದವೀಧರರಾಗಿ, ಸದ್ಯ ದೆಹಲಿಯಲ್ಲಿ ಟಿವ್ಹಿ ಮತ್ತು ಚಲನಚಿತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಶ್ರೀ ಬಸವರಾಜ ಕೊಡಗೆ ಹೆಗ್ಗೋಡಿನಲ್ಲಿ ನಿರ್ದೇಶಕರಾಗಿ ಪದವಿ ಪಡೆದು ಸದ್ಯ ಮೈಸೂರಿನ ರಂಗಾಯಣದಲ್ಲಿ ರಂಗಭೂಮಿಗೆ ತಮ್ಮನ್ನು ಅರ್ಪಿಸಿಕೊಂಡಿರುವರು ಅಲ್ಲದೆ ಶ್ರೀ ಶಂಭುಲಿಂಗ ವಾಲ್ದೊಡ್ಡಿ, ತಮ್ಮ ಇಂಪಾದ ಸಿರಿ ಕಂಠದಿಂದ ಜಿಲ್ಲೆಯಲ್ಲಿ ಮನೆ ಮಾತಾಗಿರುವರು.

1982ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಸಮುದಾಯದ ಜೊತೆ ಜಯತೀರ್ಥ ಜೋಶಿಯವರ ನಿರ್ದೇಶನದಲ್ಲಿ ಶಿಬಿರ ಹಮ್ಮಿಕೊಂಡ, ತೆಂಡೂಲ್ಕರರ 'ಸದ್ದು! ವಿಚಾರಣೆ ನಡೆಯುತ್ತಿದೆ' ನಾಟಕ ಮಾಡಿಸಿದರು. 1982ರಲ್ಲಿ ಬೀದರಿನ ಕೋಟೆಯಲ್ಲಿ 'ಅಕ್ಬರ ದಿ ಗ್ರೇಟ್' ಧ್ವನಿಬೆಳಕು ನಾಟಕದಲ್ಲಿ ಸಮುದಾಯದ ಕಲಾವಿದರು ಭಾಗವಹಿಸಿ ಹೊಸ ಅನುಭವ ಪಡೆದರು. ನಾಡಿನ ಖ್ಯಾತ ರಂಗಕರ್ಮಿ ಶ್ರೀ ಎಂ.ಎಸ್. ಸತ್ಯು ಅವರ 'ಬರ' ಚಿತ್ರದಲ್ಲೂ ಸಮುದಾಯದ ಕಲಾವಿದರು ಭಾಗವಹಿಸಿದರು. ಬೀದರಿನ ರಂಗಭೂಮಿಗೆ ಹೊಸ ಕಲಾವಿದರುಗಳ ಸೇರ್ಪಡೆಯಾಯಿತು. 1986ರಲ್ಲಿ ಬಸವಲಿಂಗಯ್ಯನವರ ನಿರ್ದೇಶನದಲ್ಲಿ 'ಪ್ರಸನ್ನರ ಒಂದು ಲೋಕಕಥೆ' ನಾಟಕ ಪ್ರದರ್ಶಿಸಿದ ಬೀದರ ಸಮುದಾಯದ ರಂಗಯಾತ್ರೆ ಅಭೂತಪೂರ್ವವಾಗಿತ್ತು.

1997ರಲ್ಲಿ ಸಮುದಾಯ ತಂಡ 'ರಂಗಮಂದಿರ ಪೂರ್ಣಗೊಳಿಸಲು ಒತ್ತಾಯಿಸಿ ರಂಗೋತ್ಸವ' ಹಮ್ಮಿಕೊಂಡಿತ್ತು. ಗಿರೀಶ ಕಾರ್ನಾಡ್‌ರ 'ಅಗ್ನಿ ಮತ್ತು ಮಳೆ' ನಾಟಕದ ರೂಪಾರಿ ಬಸವರಾಜ ಕೊಡಗೆಯವರ ವಿನ್ಯಾಸ ಮತ್ತು ನಿರ್ದೇಶನದಲ್ಲಿ ರಂಗ ಮಂದಿರದಲ್ಲಿ ಪ್ರದರ್ಶಿಸಲಾಯಿತು.

ಬೀದರ ಸಮುದಾಯ ತನ್ನ ವೈವಿಧ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೂರಾರು ತೊಂದರೆಗಳ ಮಧ್ಯೆಯೂ ಬೀದರಿನ ರಂಗಭೂಮಿಗೆ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆ ಕೊಡುವುದರೊಂದಿಗೆ, ಉತ್ತಮ ಕಲಾವಿದರನ್ನು, ರಂಗಕರ್ಮಿಗಳನ್ನು ನಿರ್ಮಿಸುವಲ್ಲಿ ಸಾರ್ಥಕತೆ ಪಡೆದಿದೆ. ಬೀದರಿನ ಹವ್ಯಾಸಿ ಕಲಾವಿದರು, ರಂಗಪ್ರೇಮಿಗಳು, ಕಲಾಸಕ್ತರು, ಸಾಹಿತ್ಯ ಪ್ರೇಮಿಗಳು, ಒಂದೆಡೆ ಸೇರಿ 1986ರಲ್ಲಿ ಬೀದರಿನಲ್ಲಿ 'ಅಭಿನಯ ಗಂಗೋತ್ರಿ' ಹವ್ಯಾಸಿ ಕಲಾತಂಡ ಹುಟ್ಟು ಹಾಕಿತು.

ಬೀದರ ಜಿಲ್ಲೆಯ ರಂಗಭೂಮಿ: 1948ರಲ್ಲಿ ಸ್ಟೇಡಿಯಂನಲ್ಲಿ ನಡೆದ ನಾಟಕೋತ್ಸವದಲ್ಲಿ 'ಬೆಳಕಿನಡೆಗೆ' ಮರು ಪ್ರದರ್ಶನ ಕಂಡಿತು. ಜೊತೆಗೆ ಬಿ. ಶಾಂತಪ್ಪನವರ 'ಬಿ.ಡಿ.ಓ' ನಾಟಕಗಳನ್ನು ಪ್ರದರ್ಶಿಸಲಾಯಿತು.

1985ರ 57ನೇ ಅಖಿಲ ಭಾರತ ಸಮ್ಮೇಳನ ಬೀದರಿನಲ್ಲಿ

ನಡೆದಾಗ ಶ್ರೀ ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಶಾನಿ' ಪ್ರದರ್ಶಿಸಲಾಯಿತು. ಡಾ. ಸಬರದ ದೇಶಪಾಂಡೆ, ನಾರಾಯಣ ಕುಲ್ಕರ್ಣಿ, ಪ್ರೊ. ಬಿ.ಎಚ್. ಪಾಟೀಲರ ಉತ್ತಮ ಅಭಿನಯದಿಂದ ಸಾಹಿತ್ಯಾಸಕ್ತರ ಗಮನ ಸೆಳೆದರು. 1987ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಚಂದ್ರಶೇಖರ ಪಾಟೀಲರ 'ಕುಂಟಾ ಕುಂಟಾ ಕುರವತ್ತಿ' ಹಾಗೂ ಚಂದ್ರಶೇಖರ ಕಂಬಾರರ ಯಶಸ್ವಿ ನಾಟಕ 'ಖರೋಖರ' ನಾಟಕಗಳು ತಂಡದ ಇನ್ನೊಂದು ಮೈಲಿಗಲ್ಲುಗಳಾಗಿ ಮೂಡಿಬಂದವು.

1987ರಲ್ಲಿ ಮಹಿಳೆಯರಿಗಾಗಿ, ಮಹಿಳೆಯರಿಂದಲೇ ಆಡಿಸಿದ ನಾಟಕ 'ವೀರರಾಣಿ ಕಿತ್ತೂರ ಚೆನ್ನಮ್ಮ' (ನಿರ್ದೇಶನ ಜಿ. ಪ್ರಾಣೇಶ) ಬೀದರ ರಂಗ ಮಂದಿರದಲ್ಲಿ ಪ್ರದರ್ಶನ ಕಂಡಿತು. ಪ್ರೇಮಾ ಸಿರ್ಸೆ, ರಾಜಶ್ರೀ ಪಾಟೀಲ, ಗೀತಾ ಕೊಡಗೆ, ಪುಷ್ಪಾವತಿ ಯವರು ಉತ್ತಮ ಅಭಿನಯ ನೀಡಿದರು.

1990ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಲಬುರ್ಗಿಯ 'ರಂಗಮಾಧ್ಯಮ' ತಂಡದಿಂದ ಶ್ರೀರಂಗರ 'ಕೇಳು ಜನಮೇಜಯ' ನಾಟಕ ಪ್ರದರ್ಶನ ಏರ್ಪಡಿಸಿತು. ಬೇರೆ ಬೇರೆ ತಂಡಗಳನ್ನು ಬೀದರಿನಲ್ಲಿ ಪರಿಚಯಿಸುವುದರೊಂದಿಗೆ ಸಾಂಸ್ಕೃತಿಕ ಸೌಹಾರ್ದತೆ ಮೆರೆಯುವಲ್ಲಿ ಸಾರ್ಥಕತೆ ಪಡೆದಿದೆ. ಅಲ್ಲದೆ ನೀನಾಸಂ ತಂಡ ಹೆಗ್ಗೋಡು. ತಿರುಗಾಟ 1987 ಇವರನ್ನು ಕರೆಯಿಸಿ ಬೀದರಿನಲ್ಲಿ ಮಿಸ್ ಸದಾರಮೆ, ಮ್ಯಾಕಬೆತ್, ಸಾಹೇಬರು ಬರುತ್ತಾರೆ ಮುಂತಾದ ನಾಟಕ ಪ್ರದರ್ಶನದ ಏರ್ಪಾಡು ಮಾಡಿದೆ.

ಚಂದ್ರಗುಪ್ತ ಚಾಂದಕವಠೆ ನಿರ್ದೇಶನದಲ್ಲಿ ಡಾ. ದ.ರಾ. ಬೇಂದ್ರೆಯವರ 'ಜಾತ್ರೆ' ನಾಟಕ ಪ್ರೇಕ್ಷಕರ ಗಮನ ಸೆಳೆಯಿತು. ಶ್ರೀ ಚಂದ್ರಕಾಂತ ಕುಸನೂರ 'ರತ್ತೋ ರತ್ತೋ ರಾಯನ ಮಗಳೆ' ಅಸಂಗತ ನಾಟಕ ತನ್ನ ನವಿರು ಹಾಸ್ಯದಿಂದ ಜೀವನದ ಅಸಂಗತತೆಯನ್ನು ಬಿಂಬಿಸುತ್ತ ಮನರಂಜಿಸಿತು. ಪ್ರಾಣೇಶ ಗುಡೂರ, ಚಂದ್ರಶೇಖರ ಚಕ್ಕಿ ಮಿಂಚಿದರು, ಹಾಗೂ ಚಂದ್ರಗುಪ್ತ ಚಾಂದಕವಠೆಯವರ ನಟನೆ ಹಾಗೂ ನಿರ್ದೇಶನ ಪ್ರಶಂಸನೀ ಯವಾಗಿತ್ತು.

ಬೀದರ ಹವ್ಯಾಸಿ ಕಲಾತಂಡ: ಸಂಗ್ರಾಮ ಎಂಗಲೇ, ಇದರ ಸಂಸ್ಥಾಪಕ ಅಧ್ಯಕ್ಷರು. ಇದುವರೆಗೆ 'ಎಸ್ಕೆ' ಯವರ ನಾಟಕ ಆಧರಿಸಿದ 'ಯಮನ ದರ್ಬಾರು' 'ಕತ್ತಲಲ್ಲಿ ಕಂಡ ಬೆಳಕು' ಗಳನ್ನು ಕ್ರಮವಾಗಿ ಜಲಸಂಗಿ, ಹಾಗೂ ಇಮಾಮಪೂರ ಗ್ರಾಮಗಳಲ್ಲಿ ಪ್ರದರ್ಶಿಸಿದ್ದಾರೆ.

'ಸಾಂಸ್ಕೃತಿಕ ಹವ್ಯಾಸಿ ಯುವಕ ಸಂಘ' ಚಿಮಕೋಡದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ದೇವಿದಾಸ ಚಿಮಕೋಡ, ಉತ್ತಮ ಹಾಡುಗಾರರು, ಕಲಾವಿದರೂ ಆಗಿದ್ದಾರೆ. ವಿಜಯಕುಮಾರ ಸೋನಾರೆ, ಸುನೀಲ ಕಡ್ಡೆ, ಯೇಸುದಾಸ ಅಲಿಯಂಬರೆ, ಮುಂತಾದವರು ತಮ್ಮ ತಂಡದೊಂದಿಗೆ ಜಿಲ್ಲೆಯಾದ್ಯಂತ ಬೀದಿ ನಾಟಕ, ಹಾಡುಗಳು, ನಾಟಕಗಳಿಂದ ಪ್ರಸಿದ್ಧಿ ಪಡೆದಿರುವರು. ಸಾವಿರಕ್ಕೂ ಮಿಕ್ಕಿ ಬೀದಿ ನಾಟಕಗಳಲ್ಲಿ ಅಭಿನಯಿಸಿರುವರು. ಹೀಗೆ ಹಲವಾರು ತಂಡಗಳು ಬೀದರಿನಲ್ಲಿ ಹವ್ಯಾಸಿ ರಂಗಭೂಮಿಗೆ ತಮ್ಮ ಸೇವೆಯನ್ನು ಸಲ್ಲಿಸಿವೆ. 'ಧರಿನಾಡು' ಬೀದರ ಜಿಲ್ಲೆಯಲ್ಲಿ ಪ್ರತಿಭೆಗಳಿಗೇನೂ ಕೊರತೆ ಇಲ್ಲ. ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರಲ್ಲಿ ಪ್ರಮುಖವಾಗಿ ಕಂಡು ಬರುವ ಹೆಸರು ಬಸವರಾಜ ಕೊಡಗೆಯವರದು. ಇವರು ಬಾಲ್ಯದಿಂದಲೇ ರಂಗಭೂಮಿಗೆ ಅರ್ಪಿಸಿಕೊಂಡವರು. ನಿನಾಸಂ ಹೆಗ್ಗೋಡಿನಲ್ಲಿ ತರಬೇತಿ ಪಡೆದು ಮೈಸೂರಿನ ರಂಗಾಯಣದಲ್ಲಿ ಸೇರಿಕೊಂಡರು. ತಮ್ಮ ಜೀವನವನ್ನೇ ರಂಗಭೂಮಿಗೆ ಮೀಸಲಿಟ್ಟವರು ಇವರ ಪತ್ನಿ ಶಶಿಕಲಾ ಬಿ.ಎನ್. ಸಹ ರಂಗಾಯಣದ ಕಲಾವಿದೆ. ಈ ಕಲಾ ಜೋಡಿ ರಂಗಾಯಣದೊಂದಿಗೆ ಅಮೇರಿಕಾ, ಆಸ್ಟ್ರೀಯಾ, ಇಂಗ್ಲೆಂಡ್‌ಗಳಲ್ಲಿಯೂ ತಮ್ಮ ನಾಟಕಗಳನ್ನು ಪ್ರದರ್ಶಿಸಿರುವರು. ಬೀದರ ಸಮುದಾಯ ಸಂಘಟನೆಯನ್ನು ಬೆಳೆಸುವಲ್ಲಿ, ಬೀದರಿನಲ್ಲಿ ಹವ್ಯಾಸಿ ರಂಗಭೂಮಿಯನ್ನು ಬೆಳೆಸುವಲ್ಲಿ ಕೊಡಗೆಯವರ ಪಾತ್ರ ಮೆಚ್ಚುವಂಥದ್ದು.

ಹೈದ್ರಾಬಾದ ಕರ್ನಾಟಕದಲ್ಲಿ ಪ್ರಥಮವಾಗಿ ದೆಹಲಿಯ ಪ್ರತಿಷ್ಠಿತ ಎನ್.ಎಸ್.ಡಿ. ಪದವಿ ಪಡೆದ ಬೀದರಿನ ಮಹೇಶ ಕುಮಾರ ಪಾಟೀಲ, ಸಮುದಾಯದ ಪ್ರತಿಭೆ ತಂಡಕ್ಕಾಗಿ ಹಲವಾರು ನಾಟಕಗಳನ್ನು ನಿರ್ದೇಶಿಸಿರುವರು. ಸದ್ಯ ದೆಹಲಿಯಲ್ಲಿ ಚಲನಚಿತ್ರ, ದೂರದರ್ಶನಕ್ಕಾಗಿ ಕೆಲಸ ಮಾಡುತ್ತಲಿರುವರು.

ಕರ್ನಾಟಕ ನಾಟಕ ಅಕಾಡೆಮಿಯ ರಾಜ್ಯ ಪ್ರಶಸ್ತಿ ಪುರಸ್ಕೃತ ಶಂಭುಲಿಂಗ ವಾಲ್ದೊಡ್ಡಿ. ಜಾನಪದ ಕೋಗಿಲೆ ಎಂದೇ ಖ್ಯಾತಿ ಪಡೆದಿದ್ದಾರೆ. ಸಮುದಾಯ ಸಂಘಟನೆಯೊಂದಿಗೆ ಬೆಸೆದುಕೊಂಡು ಹವ್ಯಾಸಿ ರಂಗಭೂಮಿಗೆ ಚಾಲಕ ಶಕ್ತಿಯಾಗಿ ದುಡಿಯುತ್ತಲ್ಲಿರುವ ಸಂಘಟನಾ ಚತುರರು. ಬೆಂಗಳೂರಿನ ಆದರ್ಶ ಫಿಲಂ ಇನ್ಸ್ಟಿಟ್ಯೂಟನಿಂದ ಗಾಯನದಲ್ಲಿ ಡಿಪ್ಲೋಮಾ ಮಾಡಿರುವರು. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿರುವರು.

ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಕಲಾವಿದ ಚಂದ್ರಗುಪ್ತ ಚಾಂದಕವಠೆ ಸದ್ಯ ಬಿ.ಎಸ್. ಎನ್.ಎಲ್.ನಲ್ಲಿ ರಂಗಭೂಮಿಗೆ ಆಕರ್ಷಿತರಾದ ಇವರು ಬಿಜಾಪೂರ ಜಿಲ್ಲೆಯ ಆಲಮೇಲದವರು. 1982ರಿಂದ ಬೀದರಿನ ರಂಗಭೂಮಿಯಲ್ಲಿ ತಮ್ಮ ಇಡೀ ಕುಟುಂಬದೊಂದಿಗೆ ತೊಡಗಿಸಿಕೊಂಡವರು. ಸಮುದಾಯ ಸಂಘಟನೆ ಎಲ್ಲಾ ನಾಟಕಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿರುವರು. ಮತ್ತು ಅಭಿನಯ ಗಂಗೋತ್ರಿ ಕಲಾ ತಂಡದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವರು. ರೇಡಿಯೋ ದೂರದರ್ಶನಗಳಲ್ಲಿ ಅಭಿನಯಿಸಿರುವರು. ಸಾಹಿತ್ಯ, ನಾಟಕ, ಸಂಗೀತಗಳ ಸಂಗಮದಂತೆ ಇವರ ಕುಟುಂಬ ರಂಗಭೂಮಿಗೆ ಅಪಾರವಾದ ಕೊಡುಗೆ ನೀಡುತ್ತಲಿದೆ.

ಕರ್ನಾಟಕ ನಾಟಕ ಅಕಾಡೆಮಿ 'ಪೆದ್ದಣ್ಣ ಶ್ರಮ ಪ್ರಶಸ್ತಿ' ವಿಜೇತ ಚಂದ್ರಶೇಖರ ಚಕ್ಕಿ ಕಲಾ ಪರಿಪೂರ್ಣ, ಇವರು ಚಿತ್ರಕಲೆ, ಫೋಟೋಗ್ರಾಫಿ, ಎನಿಮೇಷನ್, ನಾಟಕ, ಹೀಗೆ ಹಲವಾರು ವಿಭಾಗಗಳಲ್ಲಿ ಕೃಷಿ ಮಾಡಿದವರು. ತಮ್ಮ ವಿಶಿಷ್ಟ ಅಭಿನಯದೊಂದಿಗೆ ಅಪ್ಪಟ ಹಾಸ್ಯ ಕಲಾವಿದರಾಗಿ ಮೆಚ್ಚುಗೆ ಪಡೆದವರು. ಸಮುದಾಯ, ಅಭಿನಯ ಗಂಗೋತ್ರಿ, ಬಿ.ಜಿ. ವಿ.ಎಸ್. ಮುಂತಾದ ಸಂಘಟನೆಯಲ್ಲಿ ತೊಡಗಿಸಿಕೊಂಡವರು.

ಬಿ.ಜಿ. ಕುಂಬಾರ ನಾಟಕದಿಂದ ಚಲನಚಿತ್ರ ರಂಗಕ್ಕೂ ದಾಪುಗಾಲಿಟ್ಟವರು. ಬೆಂಗಳೂರಿನ ಆದರ್ಶ ಫಿಲಂ ಇನಸ್ಟಿಟ್ಯೂಟನಲ್ಲಿ ಪದವಿ ಪಡೆದವರಲ್ಲಿ ಪ್ರಮುಖರಾಗಿ ಶ್ರೀ ಚಂದ್ರಕಾಂತ ಭಾಲ್ಕಿ ತಾಲ್ಲೂಕಿನ ಹಾಲಹಿಪ್ಪರಗಾದವರು ಸದ್ಯ ಬೆಂಗಳೂರಿನಲ್ಲಿ ಚಿತ್ರರಂಗದಲ್ಲಿ ಕೆಲಸ ಮಾಡುತ್ತಲಿರುವರು. ಶ್ರೀ ವೈಜನಾಥ ಬಿರಾದಾರ, ಭಾಲ್ಕಿ ತಾಲ್ಲೂಕಿನ ಕಪಲಾಪೂರ ದವರು, 'ಶಂಖನಾದ' ಚಲನಚಿತ್ರದಲ್ಲಿ ನಟಿಸಿರುವರು. ಆರ್ಯ ಶೇಖರ (ರಾಜಶೇಖರ) ಔರಾದ ತಾಲ್ಲೂಕಿನವರು ಇವರೂ ಹಲವಾರು ಚಲನಚಿತ್ರಗಳಲ್ಲಿ ನಟಿಸಿರುವರು. ಪ್ರಸಿದ್ಧ ಅಭಿನೇತ್ರಿ ವೈಶಾಲಿ ಕಾಸರವಳ್ಳಿ (ಚಿಟಗುಪ್ಪಿಕರ) ಮೂಲತಃ ಚಿಟ್ಟಗುಪ್ಪಾ ದವರು ಎನ್ನುವುದು ಹೆಮ್ಮೆಯ ಸಂಗತಿ. (ಸಿಸಿಕೆ)

ರಂಗಭೂಮಿ ಪರಂಪರೆ: (ಹೈದ್ರಾಬಾದ ಕರ್ನಾಟಕ)

ಹೈದ್ರಾಬಾದ ಕರ್ನಾಟಕ ಎಂದು ಈಗ ಗುರುತಿಸಲಾಗುವ ಪ್ರದೇಶವು ಚಾಲುಕ್ಯರ, ರಾಷ್ಟ್ರಕೂಟರ ಕಾಲದಿಂದಲೂ ಲಲಿತ ಕಲೆಗಳ ತವರೂರು. ಜಾನಪದ ರಂಗಭೂಮಿಯ ಸಣ್ಣಾಟ (ಡಪ್ಪಿನಾಟ), ದೊಡ್ಡಾಟ, ಬಯಲಾಟಗಳನ್ನು ಊರಿನ ಜಾತ್ರೆ ಯಲ್ಲಿ ಹಳ್ಳಿಗರಿಂದಲೇ ವೈಭವಯುತವಾಗಿ ಆಡಲಾಗುತ್ತಿತ್ತು. ವೀರರಸ ಪ್ರಧಾನ, ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಆಡಿಸುತ್ತಿದ್ದರು. ಕೋಮಟಿಗ್ಯಾನ ಆಟಾ, ಕಬೀರದಾಸನಾಟ, ಐನಾಪೂರ ಆಟ, ಐರಾವಣ ಮೈರಾವಣ, ಮೈದುನ ಮಾಯಾ, ಧರ್ಮಪಾಲ ರಾಜಾ, ಸೋನಾರಂಗಿ ಮುಂತಾದವು, ಸಂಗೀತ ಪ್ರಧಾನ ಡಪ್ಪಿನಾಟಗಳು. ವೀರ ಅಭಿಮನ್ಯು, ಕೀಚಕ ವಧೆ, ಜಯದ್ರಥ, ಮಹಾತ್ಮ ಬಸವೇಶ್ವರ, ಭಕ್ತಸಿರಿಯಾಳ, ಅಣ್ಣತಂಗಿ, ಲಕ್ಷ್ಮಿ, ಹೀಗೆ ಅರೆವೃತ್ತಿ ರಂಗಭೂಮಿ ಜನಪದರ ಮನ ರಂಜನೆಯ ಸಾಧನಗಳಾಗಿದ್ದವು.

ಹವ್ಯಾಸಿ ರಂಗಪ್ರಯೋಗಗಳು ಹೈದ್ರಾಬಾದ್ ಕರ್ನಾಟಕದ ರಂಗಭೂಮಿಯ ಚಿತ್ರಣವನ್ನೇ ಬದಲಿಸುವುದಕ್ಕೆ ಕಾರಣ ವಾದವು. ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮೂಲಕ ಆರಂಭವಾದ ರಂಗ ಪರಂಪರೆಯು ಬೀದರ್, ರಾಯಚೂರು, ಗುಲಬರ್ಗಾಗಳಲ್ಲಿ ತನ್ನ ವ್ಯಾಪಕತೆಯನ್ನು ಪಡೆದುಕೊಂಡಿತು.

ಡಾ. ಗಿರಡ್ಡಿ ಗೋವಿಂದರಾಜ, ಚಂದ್ರಕಾಂತ ಕುಸನೂರು, ಶ್ರೀಧರರಾವ, ಸಿ.ಬಿ. ಮಠ ಅವರಿಂದ ಸ್ಥಾಪಿತವಾದ 'ರಂಗ ಮಾಧ್ಯಮ' ಹವ್ಯಾಸಿ ಕಲಾತಂಡದಿಂದ ಹವ್ಯಾಸಿ ರಂಗಭೂಮಿಗೆ ಹೊಸ ಆಯಾಮ ನೀಡಿದರು. ಡಾ. ಅಶೋಕ ತೋಳನೂರ, ಪ್ರೊ. ಪ್ರಭಾಕರ ಸಾತಖೇಡ, ಹೇಮಂತ ಕೊಲ್ಹಾಪುರೆ, ಐ.ಎಸ್. ನವಲಿ, ಸೀತಾ ಜೋಶಿ, ಚಂದ್ರಗುಪ್ತ ಚಾಂದಕವಠೆ, ಡಾ. ಸ್ವಾಮಿರಾವ ಕುಲಕರ್ಣಿ ಮುಂತಾದ ಕಲಾವಿದರ ಪಡೆಯನ್ನೆ ತಯಾರು ಮಾಡಿದರು. ಡಾ. ಸವದತ್ತಿಮಠರ 'ರಂಗಭಾರತಿ' ತಂಡದಿಂದಲೂ ಹಲವಾರು ನಾಟಕಗಳು ಮೂಡಿಬಂದಿವೆ. ಪ್ರೊ. ಆರ್.ಕೆ. ಹುಡುಗಿ, ರಂಗಕರ್ಮಿ ಶಂಕರಯ್ಯಾ ಘಂಟಿ, ಹಿರೇಮಠ, ಕೋದಂಡರಾಮ ಮುಂತಾದವರು ಪ್ರಖ್ಯಾತ ರಾಗಿದ್ದಾರೆ. ಸೇಡಂನ ಪ್ರಭಾಕರ ಜೋಶಿ ಮತ್ತಿತರರು ತಮ್ಮ ತಂಡದಿಂದ ಹಲವಾರು ನಾಟಕಗಳನ್ನು ಆಡಿಸಿದರು.

ಬೀದರ್‌ನಲ್ಲಿ ಹವ್ಯಾಸಿ ತಂಡಗಳಾದ, ದತ್ತಾ ಮೈಲೂರಕರ ಅವರ 'ಮಿತ್ರವೃಂದ' ತಂಡದಿಂದ ಮರಾಠಿ, ಹಿಂದಿ, ಕನ್ನಡ ನಾಟಕಗಳು ಮೂಡಿ ಬಂದವು. ಡಾ. ಕೊಂಡೇದ, ಮೂರ್ತಿ, ಮುಸ್ತಾಕ ಅಲಿ ಅವರ 'ಅಕ್ಷಯ' ಹವ್ಯಾಸಿ ತಂಡದಿಂದ, ಬಾಕಿ ಇತಿಹಾಸ, ಜೈಸಿದ್‌ನಾಯಕ, ಕುರಿ ನಾಟಕಗಳು ಮೂಡಿ ಬಂದವು.

ವಿಶ್ವನಾಥ ಪಾಟೀಲ (ದಮನ), ಹಣಮಂತಪ್ಪಾ ಪಾಟೀಲ, ಜೋಶಿ ಅವರಿಂದ ಪ್ರಾರಂಭವಾದ 'ಸಮುದಾಯ ಸಾಂಸ್ಕೃತಿಕ ಸಂಘಟನೆ' ಹವ್ಯಾಸಿ ರಂಗ ಸುಗ್ಗಿಗೆ ಅಪಾರ ಕಾಣಿಕೆ ನೀಡಿದೆ. ಈ ತಂಡದಲ್ಲಿದ್ದ ಮಹೇಶ ಪಾಟೀಲ ದೆಹಲಿ ಎನ್.ಎಸ್.ಡಿ ಪದವಿ ಪಡೆದವರು. ದಿ. ಬಸವರಾಜ ಕೊಡಗೆ ನೀನಾಸಂ ಪದವಿ ಪಡೆದು, ಮೈಸೂರಿನ 'ರಂಗಾಯಣ'ದಲ್ಲಿ ಕಲಾವಿದರಾಗಿ ಬೀದರ್‌ನಲ್ಲಿ ಹಲವಾರು ನಾಟಕಗಳನ್ನು ಮಾಡಿಸಿರುವರು. ಶಂಭುಲಿಂಗ ವಾಲ್ದೊಡ್ಡಿಯವರು. 'ಸಮುದಾಯ'ದ ತೇರನ್ನು ಎಳೆಯುತ್ತ ನಾಟಕಗಳ ಸರಮಾಲೆಯನ್ನೆ ರಚಿಸಲು ಸಹಕಾರಿ ಯಾದವರು. ಚಂದ್ರಗುಪ್ತ ಚಾಂದಕವಠೆ, ದಿ. ಚಂದ್ರಶೇಖರ ಚಕ್ಕಿ, ಎಂ.ಎಸ್. ಮನೋಹರ, ಸಂಗ್ರಾಮ ಯಂಗ್ಬೇ ಮನೆ ಮಾತಾಗಿದ್ದರು. 'ಅಭಿನಯ ಗಂಗೋತ್ರಿ' ಹವ್ಯಾಸಿ ಕಲಾತಂಡ ದಿಂದ ಆಗ ನಾಟಕಗಳ ಮಹಾಪೂರವೇ ಹರಿದು ಬಂತು. 'ಬೀದರ್ ಹವ್ಯಾಸಿ ಕಲಾತಂಡ', ಜನಪರ ಅಧ್ಯಯನ ವೇದಿಕೆ, ನ್ಯೂ ಆ್ಯಕ್ಟಿವ್ ಥೇಟರ್, ಚಿಮಕೋಡದ ಸಾಂಸ್ಕೃತಿಕ ಹವ್ಯಾಸಿ ಯುವಕ ಸಂಘ ತಂಡಗಳಿಂದಲೂ ಹಲವಾರು ನಾಟಕಗಳನ್ನು ಪ್ರದರ್ಶನ ಮಾಡಿದರು.

ಎಂ.ಬಿ. ಪಾಟೀಲರು, ಅಕ್ಕಿಯವರು ರಾಯಚೂರು ಜಿಲ್ಲೆಯಲ್ಲಿ, ಯಲಬುರ್ಗಾದ ಜಗನ್ನಾಥರಾವ ಪದಕಿ, ನಿಟ್ಟಾಲಿ ಶಿವರುದ್ರಪ್ಪನವರು, ಮಂಗಳೂರಿನ ವೀರಣ್ಣ ಮತ್ತು ಕುಕನೂರಿನ ರಹಿಮಾನವ್ವ ಕಲ್ಮನಿ, ಕೊಪ್ಪಳದ ಎಚ್.ಎಸ್. ಪಾಟೀಲ, ಡಾ. ಅಲ್ಲಮಪ್ರಭು ಬೆಟ್ಟದೂರು, ಗವಿಸಿದ್ದ, ಎನ್. ಬಳ್ಳಾರಿ, ಪ್ರೊ. ಅನ್ನದಾನಿ ಹಿರೇಮಠ ಡಾ. ಗವಿಸಿದ್ದಪ್ಪಾ ಎಚ್. ಪಾಟೀಲ, ಕೆ.ಬಿ. ಬ್ಯಾಳಿ, ಮುಂತಾದ ಹಿರಿಯರು, ಹವ್ಯಾಸಿ ರಂಗಭೂಮಿಗೆ ಹೊಸ ಆಯಾಮ ನೀಡಿದವರು. ಇದೆಲ್ಲ ನಿನ್ನೆಯ ವೈಭವದ ದಿನಗಳ ನೆನಪು. ಅದು ಮೆಲುಕು ಹಾಕುವಂತಹದ್ದು. ಆದರೆ, ಇಂದು ಅಬ್ಬರದ ಚಲನಚಿತ್ರ, ಟಿ.ವಿ. ಭರಾಟೆಯಲ್ಲಿ 'ರಂಗಭೂಮಿ'ಯ

ಮೇಲೆ ಬೂದಿ ಮುಸುಕಿದಂತೆ ಭಾಸವಾಗುತ್ತಿದೆ. ಸಹಸ್ರಾರು ವರ್ಷಗಳ ಇಂತಹ ಸವಾಲು–ಸಮಸ್ಯೆಗಳ ಮಧ್ಯೆಯೇ ಮತ್ತೆ ಮತ್ತೆ 'ಫೀನಿಕ್ಸ್'ನಂತೆ ಮತ್ತೆ ತನ್ನತನವನ್ನು ಹೊರಹಾಕುವ ದಿನ ಬರುವುದನ್ನು ತಳ್ಳಿಹಾಕುವಂತಿಲ್ಲ.

(ಸಿಸಿಕೆ)



ರಂಗರಾವ್ ಬಡಶೇಶಿ: ಚಿತ್ರ ಕಲಾವಿದ. ನಿಸರ್ಗದ ಅಪ ರೂಪದ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸಿ ಕಲಾವಿದ. 10.10.1933ರಲ್ಲಿ ಶಹಾಪೂರಿನಲ್ಲಿ ಜನನ. ರಂಗರಾವ್ ತಂದೆ ಗೋವಿಂದರಾವ್ ಬಡಶೇಶಿ ತಾಯಿ ಲಕ್ಷ್ಮೀಬಾಯಿ ಬಡಶೇಶಿ. ತಮ್ಮ ಹತ್ತನೇಯ ವಯಸ್ಸಿನಲ್ಲಿ ಕಲೆಯ ಬಗ್ಗೆ ಅತ್ಯಧಿಕ ಸುಂದರ ವಿಚಾರಗಳನ್ನು ಹೊಂದಿಕೊಂಡಿದ್ದರು. ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಬಿ.ಕಾಂ ಪಾಸಾಗಿ ಎಲ್.ಎಲ್.ಬಿ.ಯ ಪದವಿಯನ್ನು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡರು. ಅನಂತರ ಸರಕಾರಿ ಕಂದಾಯ ಇಲಾಖೆ ನೌಕರರಾಗಿ ಹುದ್ದೆಯನ್ನು ಸಂಬಾಳಿಸಿದರು. ತಮ್ಮ ನೌಕರಿಯಲ್ಲಿ ಕೆಲಸದಿಂದ ಬೇರೆ ಬೇರೆ ಊರಿಗೆ ಹೋಗುವ ಪ್ರಸಂಗ ಬರುತ್ತಿದ್ದವು. ಅಲ್ಲಿ ಅವರು ಇರುವ ಸ್ಥಳದಲ್ಲಿ ಗುಡ್ಡಗಾಡುಗಳಿಂದ ತುಂಬಿರುತ್ತಿದ್ದುವು. ಇವರ ಕಲಾತ್ಮಕ ಮನಸ್ಸು ಸಂಶೋಧನೆಯ ಹವ್ಯಾಸ ಹೆಚ್ಚಿಸುತ್ತಿತ್ತು. ಕೆಲಸದಿಂದ ವಿರಾಮ ಸಿಗುತ್ತಲೇ ನಿಸರ್ಗದ ಸುಂದರ ವಾತಾವರಣದಲ್ಲಿ ತಮ್ಮ ಹುಡುಕಾಟ ಆರಂಭಿಸುತ್ತಿದ್ದರು. ಬಾಡಿ ಹೊಂದಂತಹ ಬಳ್ಳಿಗಳು ಎಲೆಗಳು ಬಾಡಿ ಒಂದು ಬೇರೆ ರೀತಿಯಲ್ಲಿ ಆಕಾರವನ್ನು ಹೊಂದಿರುತ್ತದೆ. ಅಂತಹ ಭಗವಂತನ ಕೃತಿಗಳನ್ನು ಸಂಗ್ರಹಿಸಿ ತನ್ನ ಮನೆಯಲ್ಲಿ ತರುತ್ತಿದ್ದರು. ಇವರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಇವರ ಸಹ ಪಾಟಿಗಳು ಇವರನ್ನು ಹುಡುಗಾಟ ಮಾಡುತ್ತಿದ್ದರು. ಆದರೆ ಇವರ ನಿಸರ್ಗದ ಮೇಲೆ ಇರುವ ಕಲಾತ್ಮಕ ಭಾವನೆಯನ್ನು ತಿಳಿಯದೇ ಈ ರೀತಿ ನಡೆಯುತ್ತಿದ್ದರು.

ಚಿತ್ರಕಲಾವಿದರು ಪ್ರತಿ ಸಮಯಗಳಲ್ಲಿ ಒಂದೊಂದು ವಿಷಯಗಳ ಮೇಲೆ ಕಲಾಕೃತಿಯನ್ನು ರಚಿಸುತ್ತಾರೆ. ಅದೇರೀತಿಯಲ್ಲಿ ಬಡಶೇಶಿಯವರೂ ಕೂಡ ಪ್ರತಿ ಸಲ ಒಂದು ಹೊಸದಾದ ವಿಷಯದ ಮೇಲೆ ಹುಡಕಾಡುತ್ತಾರೆ. ಪ್ರಕೃತಿಯೂ ಕೂಡ ಇವರಿಗೆ ಕಾಯುತ್ತಿರುತ್ತದೆಂದೆನಿಸುತ್ತದೆ. ಮನೆಯಿಂದ ಹೊರಗೆ ಹೋದ ತಕ್ಷಣವೇ ಯಾವುದೇ ಒಂದು ಸುಂದರ ವಸ್ತು ಅವರ ಕೈಯಲ್ಲಿ ಕಂಡು ಬರುತ್ತದೆ. ನಿಸರ್ಗದಲ್ಲಿರುವಂತಹ ಪ್ರತಿಯೊಂದು ವಸ್ತುಗಳು ಇವರ ಮನೆಯಲ್ಲಿ ಕಂಡು ಬರುತ್ತದೆ. ಗಿಡ, ಮರ, ಬಳ್ಳಿಗಳನ್ನು ನೋಡಿ ಬಹಳಷ್ಟು ಜನ ಆಯುರ್ವೇದ ವೈದ್ಯರೆಂದು ಹೇಳುತ್ತಾರೆ. 33 ವರ್ಷಗಳವರೆಗೆ ಇವರು ಸರ್ಕಾರಿ ನೌಕರಿಯಲ್ಲಿ ಸೇವೆಸಲ್ಲಿಸಿ ನಿವೃತ್ತರಾದರು. ತಮ್ಮ ಸಂಶೋಧನೆಯಿಂದ ಹೊರಬಂದಿರುವ ಈ ಕಲಾತ್ಮಕ ಆಕಾರವನ್ನು ಅವರು ಗುಲಬರ್ಗಾದ ತಮ್ಮ ಮನೆಯಲ್ಲಿ ಒಂದು ಸಣ್ಣದಾದ ವಸ್ತು ಸಂಗ್ರಹಾಲಯದಂತೆ ತಯಾರಿಸಿಕೊಂಡರು. 1994ರಲ್ಲಿ ಇವರ ಕಲೆಯ ಹವ್ಯಾಸ, ಇವರಿಗೆ ರೇಖಾಚಿತ್ರವನ್ನು ರಚಿಸಲು ಪ್ರೇರೆಪಿಸುತ್ತದೆ ಒಂಟಿ ಜೀವನವನ್ನು ನಡೆಸುತಿರುವ ಇವರು.

ನಿಸರ್ಗದಲ್ಲಿರುವಂತಹ ನೈಜ ಶೈಲಿಯ ಬಳ್ಳಿಗಳಲ್ಲಿ ಗಣೇಶನ ವಿಗ್ರಹವಾಗಲಿ ಅಥವಾ ಹೆಣ್ಣಿನ ಆಕೃತಿಯಾಗಲಿ, ಮಕ್ಕಳ ಚಿತ್ರವಾಗಲಿ, ಪ್ರಾಣಿ ಪಕ್ಷಿಗಳಾಗಲಿ ಈ ತರಹ ಅನೇಕ ಪ್ರಕಾರದ ಆಕೃತಿಗಳು ಕಂಡುಬರುತ್ತವೆ. ಪ್ರತಿಯೊಂದು ಆಕೃತಿಗಳು ತಮ್ಮದೇ ಆದ ಅನುಭವಗಳನ್ನು ವ್ಯಕ್ತಪಡಿಸುತ್ತವೆ. ಕೆಲವು ಆಕೃತಿಗಳಲ್ಲಿ ಉದಾಸಿನತೆ ಕಂಡು ಬಂದರೇ ಇನ್ನೊಂದರಲ್ಲಿ ನಗು ಕಂಡು ಬರುತ್ತದೆ. ಒಂದು ಪ್ರಾಣಿ ಜೋರಾಗಿ ಕೂಗಿದರೇ ಇನ್ನೊಂದು ತನ್ನ ತಾಯಿಯ ಬಳಿ ಅಡಗಿಕೊಂಡಿರುವ ದೃಶ್ಯ



ತೆಂಗು ಹಾಗೂ ಕಟ್ಟಿಗೆಯ ಕಲಾಕೃತಿ

ಕಾಣುತ್ತದೆ. ಆಕಾಶದಲ್ಲಿ ಪಕ್ಷಿಗಳು ಹಾರಾಡುತ್ತಿರುವ ದೃಶ್ಯ ಕಿಡಕಿಯ ಬಳಿ ನಿಂತುಕೊಂಡು ನೋಡುತ್ತಿರುವ ಒಂದು ಹೆಣ್ಣಿನ ದೃಶ್ಯ ಈ ರೀತಿ ಅನೇಕ ಆಕೃತಿಗಳು ಕಂಡು ಬರುತ್ತವೆ.

ಹಳೆಯಾದ ಬಟ್ಟೆಗಳೆಂದು ಎಲ್ಲರೂ ಬಿಸಾಕುತ್ತಾರೆ. ಆದರೆ ಇವರು ಅದರಲ್ಲೂ ಅನೇಕ ಆಕೃತಿಗಳನ್ನು ಹುಡುಕಿದ್ದಾರೆ. ಮನೆಯ ಗೋಡೆಗಳ ಮೇಲೆ ಪೇಂಟಿಂಗ್ ತರಹ ಅಂಟಿಸಿದ್ದಾರೆ. ಇವರ ಕಣ್ಣುಗಳು ಏನಾದರೊಂದು ನೋಡಿ ಅದನ್ನು ತನ್ನ ಜೊತೆಯಲ್ಲಿ ಎತ್ತಿಕೊಂಡು ಬರುವರು. ಎಷ್ಟೋ ಜನರು ಇವರನ್ನು ಸಂದೇಹದ ದೃಷ್ಟಿಯಿಂದ ನೋಡುತ್ತಾರೆ. ಆದರೆ ಇವರನ್ನು ಪರಿಚಯ ಇರುವವರು ಇವರಿಗೂ ಅನೇಕ ಇಂತಹ ವಸ್ತುಗಳನ್ನು ಹುಡುಕಿ ಕೊಟ್ಟಿದ್ದಾರೆ. ಇಂತಹ ಅನೇಕ ಕಲಾಕೃತಿಗಳ ಸಂಗ್ರಹಣೆ ಕನಿಷ್ಠ 5000ಕ್ಕಿಂತ ಮಿಗಿಲಾಗಿದೆ.

ಚೈತನ್ಯಮಯಿ ಚಿತ್ರಕಲಾ ಪ್ರದರ್ಶನಾಲಯದ ಗುಲಬರ್ಗಾದಲ್ಲಿ ರಂಗರಾವ್ ಬಡಶೇಶಿಯವರ ಕಲಾಪ್ರದರ್ಶನ ಒಂದು ನಡೆಸಲಾಯಿತು. ಅದರಲ್ಲಿ ಸುಮಾರು ಮುನ್ನೂರು ಕೃತಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಇವುಗಳನ್ನು ಸುಂದರವಾಗಿ ಜೋಡಿಸಿ ಒಂದೊಂದು ಕೃತಿಗಳು ತಮ್ಮದೇ ಆದ ಗುರುತನ್ನು ಕೊಡುತ್ತಿದ್ದರು. ಪಕ್ಷಿಗಳು ಸಮುದ್ರದ ದಂಡೆಯ ಮೇಲೆ ತೇಲಾಡುತ್ತಿರುವ ದೃಶ್ಯ. ಹಕ್ಕಿಗಳು ಆಕಾಶದಲ್ಲಿ ಹಾರಾಡುತ್ತಿರುವ ನೋಟ. ಕುದುರೆಗಳು ಪ್ರತಿಯೋಗಿತೆಯಲ್ಲಿ ಓಡುತ್ತಿರುವ ಹಾಗೆ. ಇಂತಹ ಅನೇಕ ಸನ್ನಿವೇಶಗಳು ಈ ಕಸದಿಂದ ಬಂದಿತ್ತು. ಪಿಕಾಸೋ ರಚಿಸಿರುವಂತಹ ಅನೇಕ ಭಾವಚಿತ್ರಗಳು ಬಡಶೇಶಿಯವರ ಕೃತಿಗಳಲ್ಲಿ ಕಂಡುಬಂದಿವೆ. ಅವರ ಮುಖದ ಭಾವನೆ ಏನೋ ಹೇಳುವ ರೀತಿಯಲ್ಲಿ ಕಂಡುಬರುತ್ತದೆ. ತೆಂಗಿನ ನೀರು ಕುಡಿದು ಬಿಸಾಕಿದ ಸಿಪ್ಪೆಗಳ ಮೇಲೆ ಮನುಷ್ಯರ ಮುಖಗಳನ್ನು ಕಂಡು ಹಿಡಿದು ಹಳ್ಳಿಯ ಜನರ ತರಹ ಅದಕ್ಕೆ ಹಣೆಯ ಮೇಲೆ ಕುಂಕುವ ಮೂಗಿನಲ್ಲಿ ಮುತ್ತುಹಾಕಿ ತಲೆಯ ತುಂಬಾ ಸೆರಗನ್ನು ಹೊದಿಸಿ ನಿಜಕ್ಕೂ ಯಾರಾದರೂ ನಮಗೆ ಕಿಡಕಿಯಿಂದ ನೋಡುತ್ತಿರುವ ಹಾಗೆ ಪ್ರಸಂಗಗಳು ಇವರ ಮನೆಯ ವಾತಾವರಣದಲ್ಲಿ ಸಿಗುತ್ತದೆ. ನಮ್ಮ ಕಣ್ಣುಗಳಿಂದ ಸೂರ್ಯ, ಚಂದ್ರರಂತಹ ವಿಶಾಲವಾದವುಗಳನ್ನು ಇಟ್ಟುಕೊಳ್ಳುವ ಶಕ್ತಿಯಿದೆ ಅದಕ್ಕಾಗಿ ನಾವು ಕಣ್ಣಿನ ಉಪಯೋಗ ಪ್ರತಿಯೊಂದು ಆಕಾರಗಳಲ್ಲಿ ಬಳಸಬಹುದು ಎನ್ನುವುದು ಇವರ ಅಭಿಪ್ರಾಯ.

ಇವರು ತಮ್ಮ ವಿದ್ಯಾಭ್ಯಾಸದಲ್ಲಿ ಪಡೆದಿರುವಂತಹ ನಿಪುಣತೆಯನ್ನು ತಮ್ಮ ಬರೆವಣಿಗೆಯ ರೂಪದಲ್ಲಿಯೂ ಕೂಡ ಜನರ ನಡುವೆ ತಂದರು ಇವರು ಬರೆದಿರುವಂತಹ ಲೇಖನಗಳು ಹಿಂದಿ, ಉರ್ದು, ಕನ್ನಡ ಭಾಷೆಯಲ್ಲಿ ಪ್ರಕಟವಾಗಿವೆ.

(ವಿಎಸ್‌ಟಿ)

ರಥ ಶಿಲ್ಪಗಳು: ಕನ್ನಡ ನಾಡಿನ ಕಲಾವಿದರು ರಥಗಳನ್ನು ನಿರ್ಮಾಣ ಮಾಡುವುದರಲ್ಲಿ ಸಿದ್ಧಹಸ್ತರು. ನಾವು ಇಂದು ದೇವಾಲಯಗಳಲ್ಲಿ ಮಾತ್ರ ರಥಗಳನ್ನು ಕಾಣುತ್ತೇವೆ. ನಮ್ಮ ರಾಜ ಮಹಾರಾಜರು ಹಾಗೂ ಪುರಾಣಗಳಲ್ಲಿ ಬಳಕೆಯಾಗುತ್ತಿದ್ದ ರಥಗಳು ಇಂದು ನಮ್ಮ ಕಣ್ಣ ಮುಂದೆ ಇಲ್ಲ. ಆದರೆ ಅವುಗಳ ಬದಲಾಗಿ ಇಂದು ಕಾರು, ಲಾರಿ, ಬಸ್ಸುಗಳಿರುವುದನ್ನು ಕಾಣುತ್ತೇವೆ. ನಮ್ಮ ಪುರಾಣ ಕಲ್ಪನೆಗಳಲ್ಲಿನ ರಥಗಳನ್ನು ಪ್ರಾಚೀನ ಗ್ರಂಥಗಳಾದ ಮಾನಸಾರ, ರುದ್ರವಾಸ್ತು, ಪರಾಶರ ವಾಸ್ತು– ಶಿಲ್ಪಶಾಸ್ತ್ರ, ಕುಮಾರ ತಂತ್ರ, ವಿಜಯತಂತ್ರ, ವಯಮತ ಮುಂತಾದ ಗ್ರಂಥಗಳಲ್ಲಿ ನಾವು ಕಾಣುತ್ತೇವೆ. ಈ ಕೃತಿಗಳು ಪುರಾಣದಲ್ಲಿ ಬಳಸುತ್ತಿದ್ದ ರಥಗಳು ಹಾಗೂ ಅವುಗಳ ರಚನೆಯ ವೈಖರಿ, ರಥಗಳ ನಿರ್ಮಾಣ, ರಥಗಳ ಕುರಿತ ವಿವರಣೆಯ ಬಗ್ಗೆ ತಿಳಿಸುತ್ತವೆ. ಐತಿಹಾಸಿಕವಾಗಿ ರಥಗಳ ಚರಿತ್ರೆಯನ್ನು ನೋಡುತ್ತಾ ಬಂದರೆ, ಮೆಹೆಂಜೋದಾರೋ ಹಾಗೂ ಹರಪ್ಪ ಸಂಸ್ಕೃತಿ, ಸಿಂಧೂಕೊಳ್ಳದ ಸಂಸ್ಕೃತಿ, ಮೆಸಪಟೋಮಿಯಾ, ಗ್ರೀಕ್, ಬೆಬಿಲೋನಿಯಾ, ಅಸ್ಸೀರಿಯಾ ಮುಂತಾದ ನಾಗರಿಕತೆಯಲ್ಲಿ ರಥಗಳನ್ನು ಬಳಸಲಾಗುತ್ತಿದ್ದುದನ್ನು ನಾವು ಇಲ್ಲಿ ದೊರೆತ ಪಳಯುಳಿಕೆಗಳ ನೆರವಿನಿಂದ ಗುರುತಿಸಬಹುದು. ಆರಂಭದಲ್ಲಿ ಮರದಿಂದ ನಿರ್ಮಿಸಲಾದ ರಥಗಳಿದ್ದು, ಅನಂತರ ದೀರ್ಘಕಾಲ ಬಳಕೆ ಬರುವ ಲೋಹದ ರಥಗಳನ್ನು ಬಳಸಲಾಗುತ್ತಿತ್ತು. ಪ್ರಾರಂಭದಲ್ಲಿ ಎರಡು ಚಕ್ರಗಳನ್ನುಳ್ಳ ರಥಗಳು ಬಳಕೆಗೆ ಬಂದು, ಕಾಲಾನಂತರ ನಾಲ್ಕು ಚಕ್ರದ ಆರು ಚಕ್ರದ, ಹತ್ತು ಚಕ್ರ ಹಾಗೂ ಹದಿನಾರು ಚಕ್ರದ ರಥಗಳು ಬಳಕೆಯಾಗುತ್ತಿದ್ದುದನ್ನು ಕಾಣಬಹುದು. ಕರ್ಣಿಕ ರಥಗಳನ್ನು ರಾಜ ಮಾತೆಯರ ವಿಹಾರಕ್ಕಾಗಿಯೂ, ಸಂಗ್ರಾಮಿಕ ರಥಗಳನ್ನು ಸಂಗ್ರಾಮಕ್ಕೂ, ಪುಷ್ಯ ರಥಗಳನ್ನು ರಾಜರ ವಿಶೇಷ ಮೆರವಣಿಗೆಗೂ, ವೈಣಿಕ ರಥಗಳನ್ನು ರಥ ನಡೆಸುವ ತರಬೇತಿ ಪಡೆಯುಲ್ಲಿಯೂ ಹಾಗೂ ಪಂದ್ಯಕ್ಕಾಗಿ, ವಿಹಾರಕ್ಕಾಗಿ, ನೌಕಾ ವಿಹಾರಕ್ಕಾಗಿ ವಿವಿಧ ರೀತಿಯ ರಥಗಳು ಬಳಕೆಯಾಗುತ್ತಿದ್ದವು.

ದೇವಾಲಯಗಳ ಉತ್ಸವ ಹಾಗೂ ಜಾತ್ರಾ ಮಹೋತ್ಸವದಲ್ಲಿ ಬಳಸುವ ರಥಗಳನ್ನು ಇಂದು ನಾವು ತೇರು ಎಂದು ಕರೆಯುತ್ತೇವೆ. ಕೆಲವು ಕಡೆ 'ಕುರ್ಜು' ಎಂದೂ ಕರೆಯುತ್ತಾರೆ. ರಾಜ ಮಹಾರಾಜರು ಹಾಗೂ ಗ್ರಾಮಸ್ಥರು ಅಂದು ತಮ್ಮ ಇಷ್ಟ ದೇವರನ್ನು ತೇರಿನ ಮೇಲಿರಿಸಿ ಉತ್ಸವಗಳನ್ನು ಆರಂಭಿಸುತ್ತಿದ್ದರು. ಹಾಗೆಯೇ ಅನೇಕ ರಾಜರು ಹಾಗೂ ಶ್ರೀಮಂತರು ಬೆಳ್ಳಿ, ಬಂಗಾರ, ಹಾಗೂ ಮರಗಳಲ್ಲಿ ರಥಗಳನ್ನು ನಿರ್ಮಿಸಿ ದೇವಾಲಯಗಳಿಗೆ ದಾನ ಕೊಡುತ್ತಿದ್ದುದುಂಟು. ಈ ರಥಗಳು ಸುಗಮವಾಗಿ ಚಲಿಸಲು ದೇವಾಲಯದ ಮುಂದೆ ರಥ ಬೀದಿಗಳನ್ನು ನಿರ್ಮಿಸಲಾಗಿರುತ್ತಿತ್ತು.

ರಥಗಳ ಬಳಕೆ ಮಧ್ಯಯುಗದವರೆಗೂ ವಿಪುಲವಾಗಿತ್ತು. ಮುಂದೆ ಬರುಬರುತ್ತಾ ರಥಗಳ ಬಳಕೆ ಕಡಮೆಯಾದುದನ್ನು ನಾವು ಕಾಣಬಹುದು. ಪೌರಾಣಿಕ ಕಾಲದ ರಥಗಳು ನಮಗೆ ಕಾಣದೆ ಇರಬಹುದು. ಆದರೆ ಅವುಗಳನ್ನು ಹೋಲುವ ಸಾರೋಟ, ಡಮನಿ, ಟಾಂಗಾ, ಜಟಕಾಗಳು ಪೌರಾಣಿಕ ಕಲಾ ರಥಗಳಿಗೆ ಪ್ರತಿಯಾಗಿ ಇಂದು ರೂಪಗೊಂಡಿವೆ. ಆದರೆ ನಾವಿಂದು ದೇವಾಲಯಗಳಲ್ಲಿ ಮಾತ್ರ ರಥದ ಮಾದರಿಯ

ತೇರುಗಳನ್ನು ನೋಡಬಹುದು. ಈ ತೇರುಗಳು ವಿನ್ಯಾಸದಲ್ಲಿ ದೇಗುಲಗಳನ್ನು ಹೋಲುತ್ತವೆ. ಕಲ್ಲಿನ ವಾಸ್ತುಶಿಲ್ಪದಲ್ಲೂ ರಥಾಕಾರದ ದೇಗುಲಗಳನ್ನು ಕಾಣಬಹುದು.

ಮಾನಸಾರ ಗ್ರಂಥವು ಏಳು ವಿವಿಧ ರಥಗಳನ್ನು ವರ್ಗೀಕರಿಸಿ ಹೇಳುತ್ತದೆ. ನವಸವನ ಭದ್ರಕ, ಪ್ರಸಾದ ಭದ್ರಕ, ಪ್ರಭಂಜನ ಭದ್ರಕ, ಪವನ ಭದ್ರಕ, ನಿವಾತ ಭದ್ರಕ, ಇಂದ್ರ ಭದ್ರಕ, ಅನಿಲ ಭದ್ರಕ, ಇವು ವಿವಿಧ ಆಕಾರದ ವಿನ್ಯಾಸದ, ಮುಖಮಂಟಪ ಉಳ್ಳ ರಥಗಳಾಗಿವೆ. ಈ ರಥಗಳು ನಕ್ಷತ್ರಾಕಾರ, ಚೌಕಾಕಾರ, ಅಷ್ಟಮ ಆಕಾರ, ವರ್ತುಳಾಕಾರದಲ್ಲಿ ರಚನೆಯಾಗಿದ್ದವೆಂದು ಈ ಗ್ರಂಥದ ಮೂಲಕ ತಿಳಿದುಬರುತ್ತದೆ. ಒಂದೊಂದು ದೇವತೆಗಳೂ ಒಂದೊಂದು ಬಗೆಯ ರಥಗಳನ್ನು ಹೊಂದಿರುತ್ತಾರೆ. ಒಂದೊಂದಕ್ಕೂ ಅದರದೇ ಆದ ವಿಶಿಷ್ಟಗಳಿರುತ್ತವೆ. ಉದಾಹರಣೆಗೆ 'ಸಪ್ತಾಶ್ವರೂಢನಾದ ಸೂರ್ಯನ ರಥ' ಇದು ಏಳು ದಿನಗಳ ಪ್ರತೀಕವಾಗಿ, ಏಳು ಅಶ್ವಗಳನ್ನು ಹೊಂದಿರುವ ರಥವನ್ನು ಹೊಂದಿದೆ. ಆಗಮ ಸಾರದಲ್ಲಿ ಶಕಟ, ಸ್ಯಂದನ, ಸುಭದ್ರ, ಹಾಗೂ ಮೇರು ರಥಗಳ ಉಲ್ಲೇಖಗಳಿದ್ದು, ನಾಲ್ಕು ಚಕ್ರಗಳನ್ನುಳ್ಳ ರಥವನ್ನು ಶಕಟವೆಂದೂ, ಆರು ಚಕ್ರಗಳನ್ನುಳ್ಳ ರಥವನ್ನು ಸ್ಯಂದನವೆಂದೂ, ಎಂಟು ಚಕ್ರಗಳನ್ನುಳ್ಳ ರಥವನ್ನು ಸುಭದ್ರವೆಂದೂ ಹಾಗೂ ಹತ್ತು ಚಕ್ರಗಳನ್ನುಳ್ಳ ರಥವನ್ನು ಮೇರು ಎಂದು ಹೇಳಲಾಗಿದೆ. ಹೀಗೆ ಹಲವು ಪ್ರಾಚೀನ ಕೃತಿಗಳಲ್ಲಿ ರಥಗಳ ರಚನೆಯ ವೈಶಿಷ್ಟ್ಯವನ್ನು ಹಾಗೂ ಕಲ್ಪನಾತೀತ ವರ್ಣನೆಗಳನ್ನು ನಾವು ಗಮನಿಸಬಹುದು.

ದೇವಾಲಯಗಳ ರಥಗಳು ರಚನೆಯಲ್ಲಿ ಬಹಳ ವಿಶಿಷ್ಟ ಮತ್ತು ಆಕರ್ಷಣೆಯಿಂದ ಕೂಡಿರುತ್ತವೆ. ಅಡಿಪಾಯ– ಅಂದರೆ ರಥದ ಅಚ್ಚು ದೀರ್ಘಕಾಲ ಬಳಕೆಗೆ ಬರುವ ಜಾಲಿ ಅಥವಾ ದಿಂಡಲ ಮರಗಳಿಂದ ನಿರ್ಮಿಸಲಾಗಿರುತ್ತದೆ. ಇತ್ತೀಚೆಗೆ ಕಬ್ಬಿಣದ ಅಚ್ಚುಗಳನ್ನು ಬಳಸುವುದುಂಟು. ಮಧ್ಯ ಭಾಗ– ಇದರಲ್ಲಿ ಪುರಾಣ ಕಲ್ಪಿತ ದೇವತೆಗಳ ಚಿತ್ರಗಳನ್ನು ಮೃದುವಾದ ಕಟ್ಟಿಗೆಗಳಲ್ಲಿ ಕೆತ್ತಿ ಜೋಡಿಸುತ್ತಾರೆ. ಮಧ್ಯ ಮಂಟಪ ಇದನ್ನು ರಥದ ಹೃದಯ ಭಾಗವೆಂದು ಕರೆಯುತ್ತಾರೆ. ಇದು ದೇವಾಲಯದ ಗರ್ಭಗೃಹವನ್ನು ಪ್ರತಿನಿಧಿಸುತ್ತದೆ. ಈ ಭಾಗವನ್ನು ಚಾಕ, ವರ್ತುಲ, ಅಷ್ಟಮ, ನಕ್ಷತ್ರಗಳಿಂದ ನಿರ್ಮಿಸಲಾಗುತ್ತದೆ. ಮಂಟಪದ ಒಳಭಾಗದಲ್ಲಿ ದೇವತಾ ವಿಗ್ರಹವನ್ನಿಡಲು ಸುಂದರ ಪೀಠವಿದ್ದು ಹಿಂಬದಿಯಲ್ಲಿ ಭವ್ಯವಾದ ಪ್ರಭಾವಳಿಯನ್ನು ಹೊಂದಿರುತ್ತದೆ. ಗೋಪುರ–ಈ ಭಾಗವು ಪ್ರಾದೇಶಿಕವಾಗಿ ವ್ಯತ್ಯಾಸವನ್ನು ಹೊಂದಿರುತ್ತದೆ. ದಕ್ಷಿಣ ಕನ್ನಡ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗೋಪುರಾಕಾರ, ಚಂಡಿನಾಕಾರ ಹಾಗೂ ಉತ್ತರ ಗದೆಯಾಕಾರದಲ್ಲಿ ನಿರ್ಮಿಸುತ್ತಾರೆ. ಇನ್ನು ಕೆಲವು ಕಡೆ ವಿಮಾನಾಕಾರವಾಗಿಯೂ ಇರುತ್ತದೆ. ಈ ತೇರುಗಳು ಗಗನಚುಂಬಿಯಾಗಿದ್ದು ಬಣ್ಣ ಬಣ್ಣದ ಚಿಕ್ಕ ಚಿಕ್ಕ ನಿಶಾನೆಗಳನ್ನು ಹೊಂದಿರುತ್ತವೆ. ಶಿಖರ–ಇದು ಗೋಪುರದ ತುದಿಯಾಗಿದ್ದು ಇದು ಗಂಟೆಯಾಕಾರ ಹಾಗೂ ನೆಲ್ಲಿನಾಕಾರದ ಶಿಖರವನ್ನು ಹೊಂದಿರುತ್ತದೆ. ಹೀಗೆ ದೇವಾಲಯಗಳ ರಥಶಿಲ್ಪಗಳು ಬೇರೆ ಮಾದರಿ ರಥಗಳಿಗಿಂತ ವಿಭಿನ್ನವಾಗಿರುತ್ತವೆ.

ರಥಗಳು ಪುರಾಣ ಕಲ್ಪನೆಯಿಂದ ಇಲ್ಲಿಯವರೆಗೂ ಹಲವಾರು ರೀತಿಯಲ್ಲಿ ಕಂಡು ಬರುತ್ತವೆ. ದೇವಾಲಯಗಳಲ್ಲಿ ಬಳಸುವ ರಥಗಳು ಮಾತ್ರ ತನ್ನ ಇತಿಹಾಸವನ್ನು ಕಾಯ್ದುಕೊಂಡು ಬಂದಿದೆ. ರಾಜ ಮಹಾರಾಜರು ಬಳಸುತ್ತಿದ್ದ ರಥಗಳು ಇಂದು ಸಂಪೂರ್ಣವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, ಆಧುನಿಕ ತಂತ್ರಜ್ಞಾನದ ಮೋಟಾರು ವಾಹನಗಳ ರೂಪಗಳಲ್ಲಿ ಅನ್ವಯಿಕರಣಗೊಂಡಿದೆ.

(ಸಿಎನ್‌ಆರ್)

ರಮಣೀಯ ಸ್ಥಳಗಳು: (ಗಂಗಾವತಿ) ಗಂಗಾವತಿ–ಕೊಪ್ಪಳ–ಹಂಪಿ ಪ್ರದೇಶವು ಭವ್ಯ ಪರಂಪರೆ, ಸಂಸ್ಕೃತಿ, ಕಲೆ ಮತ್ತು ಪ್ರಾಕೃತಿಕ ಸೌಂದರ್ಯದ ನೆಲೆಯಾಗಿದೆ. ಈ ಪ್ರದೇಶದ ಕಲೆಯ ವೈಭವ ಮತ್ತು ಸೌಂದರ್ಯಕ್ಕೆ ಪ್ರೇಕ್ಷಕ ಅಚ್ಚರಿಗೊಳ್ಳುವುದುಂಟು. ಹಾಗಾಗಿ ಇಲ್ಲಿ ಕಣ್ತುಂಬ ಕಂಡು ವಿಶಿಷ್ಟ ಅನುಭವವನ್ನು ಪಡೆಯಲು ಕಾರಣವಾಗುವ ಹಲವು ಅಪರೂಪದ ಚಾರಿತ್ರಿಕ, ಪ್ರೇಕ್ಷಣೀಯ ಪ್ರವಾಸಿ ತಾಣಗಳು ಇವೆ. ಅಂಥ ತಾಣಗಳ ಪರಿಚಯ ಇಲ್ಲಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ಪ್ರಮುಖ ತಾಲೂಕಾ ಕೇಂದ್ರವಾಗಿದೆ. ತುಂಗಭದ್ರಾ ನದಿ ನೀರಾವರಿ ಅನುಕೂಲತೆಯಿಂದ ಇಲ್ಲಿ ಭತ್ತ ಪ್ರಮುಖ ಬೆಳೆಯಾಗಿದೆ. ಅದಕ್ಕೆ ಪೂರಕವಾಗಿ ಗಂಗಾವತಿಯಲ್ಲಿ ರಾಜ್ಯದಲ್ಲಿಯೇ ಅತೀ ಹೆಚ್ಚು ಅಂದರೆ ಸುಮಾರು 80 ಅಕ್ಕಿ ಗಿರಣಿಗಳು ಇವೆ. ಹಾಗಾಗಿ ಗಂಗಾವತಿ ರಾಜ್ಯದ ಭತ್ತದ ಕಣಜವೆಂದು ಕರೆಯಲ್ಪಡುತ್ತಿದ್ದು ಏಳುಗುಡ್ಡ ಸಾಲಿನ ಬೆಟ್ಟದ ಸೆರಗಿನಲ್ಲಿದೆ. ಇದಕ್ಕೆ ಪ್ರಾಚೀನ ಕಾಲದಲ್ಲಿ ನೀಲಾವತಿ, ಸುಭಾನಪುರವೆಂದು ಕರೆಯಲಾಗುತ್ತಿತ್ತು. 11ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಲಿಕರಾದ ನೊಳಂಬ ಪಲ್ಲವರು ಗಂಗಾವತಿಯಲ್ಲಿ ಆಡಳಿತ ನಡೆಸಿದರು. ಗಂಗಾವತಿಯ ಉಪನಗರವಾಗಿರುವ ಆಗ್ನೇಯ ದಿಕ್ಕಿನಲ್ಲಿ ಹೊಂದಿಕೊಂಡಿರುವ ಹಿರೇಜಂತಗಲ್ ಪ್ರಾಚೀನ ಸ್ಥಳವಾಗಿದೆ. ಇಲ್ಲಿ ಅನೇಕ ಪ್ರಾಚೀನ ದೇವಾಲಯ ಸ್ಮಾರಕಗಳಿವೆ. ಇಲ್ಲಿಯ ಪ್ರಮುಖ ಆಕರ್ಷಣೀಯ ಸ್ಥಳವೆಂದರೆ ಶ್ರೀ ಪ್ರಸನ್ನ ಪಂಪಾವತಿ ದೇವಾಲಯ. ಇದು ವಿಜಯನಗರದ ದೊರೆ ಎರಡನೇ ದೇವರಾಯನ ಕಾಲದಲ್ಲಿ (14ನೇ ಶತಮಾನ) ದಲ್ಲಿ ನಿರ್ಮಾಣಗೊಂಡಿದೆ.

ಪಂಪಾವತಿ ದೇವಾಲಯ ವಾಸ್ತು ಶೈಲಿಯಿಂದ ಗಮನ ಸೆಳೆಯುತ್ತಿದೆ. ಪ್ರಾಕಾರ, ರಂಗಮಂಟಪ, ಸುಭಾಮಂಟಪ, ಅಂತರಾಳ ಮತ್ತು ಗರ್ಭಗೃಹಗಳನ್ನು ಹೊಂದಿದೆ. ಪಂಪಾಪತಿ ಲಿಂಗದ ಪಾಣಿ ಬಟ್ಟಲು (ಜಲಹರಿ) ಬಲಭಾಗದಲ್ಲಿರುವುದು ಈ ದೇವಾಲಯದ ವೈಶಿಷ್ಟ್ಯವಾಗಿದೆ. ಈ ರೀತಿಯ ಲಿಂಗ ತೀರಾ ಅಪರೂಪವೆನ್ನಬಹುದು.

ಗಂಗಾವತಿಯಿಂದ ದಕ್ಷಿಣಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಯ ಎಡ ತೀರದ ಮೇಲೆ ದೇವ ಘಾಟ್ ಎಂಬ ಸ್ಥಳವಿದೆ. ಸ್ಕಂದ ಪುರಾಣದಲ್ಲಿ ಈ ಸ್ಥಳಕ್ಕೆ ದೇವಖಾತ್ ಎಂದು ಕರೆಯಲಾಗಿದೆ. ಹಾಗೇ ಇದು ಪ್ರಾಚೀನ ಪಂಪಾಕ್ಷೇತ್ರ ಈಶಾನ್ಯ ಉಪದ್ವಾರವೆಂದು ಇಲ್ಲಿ ಪಂಪಾ ವಿರು ಪಾಕ್ಷನು ಸೋಮೇಶ್ವರನೆಂಬ ಅಭಿದಾನದಿಂದ ನೆಲೆಗೊಂಡ ನೆಂದು ಪುರಾಣ ವಿವರಿಸುತ್ತದೆ.

ದೇವಘಾಟ್‌ದಲ್ಲಿ ಸದ್ಯ ಶಿಥಿಲವಾಗಿರುವ ಸೋಮೇಶ್ವರ (ಅಮೃತೇಶ್ವರ), ಗಜಾನನ ದೇವಾಲಯಗಳಿವೆ. ಇಲ್ಲಿಗೆ ಸಮೀಪದ ವಿಪ್ರ ಎಂಬ ಹಾಳು ನೆಲೆಯಲ್ಲಿ ಈಶ್ವರ, ಬನಶಂಕರಿ ದೇವಾಲಯಗಳಿವೆ. ವಿಪ್ರ ಹಿಂದೊಮ್ಮೆ ಕಲ್ಯಾಣ ಚಾಲುಕ್ಯರ ಮಾಂಡಲಿಕರಾದ ನೊಳಂಬ ಪಲ್ಲವರ ರಾಜಧಾನಿಯಾಗಿತ್ತು. ಸದ್ಯದ ದೇವಾಲಯಗಳು ನೊಳಂಬ ಪಲ್ಲವರ ಕಾಲದವು. ನದೀ ತೀರದ ಈ ಪ್ರದೇಶ ಮನೋಹರವಾಗಿದೆ.

ಗಂಗಾವತಿಯಿಂದ ದಕ್ಷಿಣದಲ್ಲಿ 12 ಕಿ.ಮೀ. ಅಂತರದಲ್ಲಿ ತುಂಗಭದ್ರಾ ನದಿ ತೀರದಲ್ಲಿರುವ ಆನೆಗೊಂದಿ ಚಾರಿತ್ರಿಕ ಸ್ಥಳವಾಗಿದೆ. ಇದು ವಿಜಯ ನಗರದ ಮೊದಲ ರಾಜಧಾನಿ ಯಾಗಿತ್ತು. ಆನೆಗೊಂದಿಯನ್ನು ರಾಮಾಯಣ ಕಾಲದ ವಾನರ ರಾಜ್ಯ ಕಿಷ್ಕಿಂದೆ ಎಂದು ನಂಬಲಾಗಿದೆ.

ವಾನಭದ್ರೇಶ್ವರ ಗುಹೆ ದೇವಾಲಯವು ಪ್ರಕೃತಿ ಮಡಿಲ ಸುಂದರ ಸ್ಥಳವಾಗಿದೆ. ಗಂಗಾವತಿಯಿಂದ ಪಶ್ಚಿಮಕ್ಕೆ ಸುಮಾರು 3 ಕಿ.ಮೀ. ದೂರದಲ್ಲಿದೆ. ಬೆಟ್ಟದ ತುದಿಯಲ್ಲಿರುವ ಈ ಕ್ಷೇತ್ರ ವನ್ನು ಸ್ಕಂದಪುರಾಣದಲ್ಲಿ ವಾಣಿಭದ್ರೇಶ್ವರವೆಂದು ಕರೆಯಲಾಗಿದೆ. ಇದು ಪ್ರಾಚೀನ ಪಂಪಾಕ್ಷೇತ್ರದ ಉತ್ತರ ದ್ವಾರ ವೆಂದೂ ಇಲ್ಲಿ ಪಂಪಾ ವಿರುಪಾಕ್ಷನು ಮಾಣಿಭದ್ರೇಶ್ವರನೆಂದು ನೆಲೆಗೊಂಡಿದ್ದಾನೆಂದು ಪುರಾಣ ಉಲ್ಲೇಖಿಸುತ್ತದೆ. ಇಲ್ಲಿ ನೈಸರ್ಗಿಕ ಸುಧಾ ತೀರ್ಥ ಮತ್ತು ಪಾಪನಾಶನ ತೀರ್ಥಗಳಿವೆ.

ಗಂಗಾವತಿಯಿಂದ ಕೊಪ್ಪಳ ರಸ್ತೆಯಲ್ಲಿ 15 ಕಿ.ಮೀ. ದೂರದಲ್ಲಿರುವ ಕೋಟೆ ಈಗ ದುರ್ಗಾ ದೇವಾಲಯದಿಂದ ಪ್ರಸಿದ್ಧವಾಗಿದೆ. ಈ ಕೋಟೆಯ ಮೂಲ ಹೆಸರು ಯಮ್ಮಿಗುಡ್ಡ ಆದರೆ ಈಗ ಹೇಮಗುಡ್ಡವೆಂದು ಕರೆಯುತ್ತಾರೆ. ಈ ಕೋಟೆಯು ಕನಕಗಿರಿ ಪಾಳೆಯಗಾರರ ಸೈನಿಕ ಠಾಣಾವಾಗಿತ್ತು. ಇಲ್ಲಿ ಪ್ರಮುಖವಾಗಿ ಶಿವಪಾರ್ವತಿ ದೇವಾಲಯ, ಕನಕಾಚಾಲ, ಲಕ್ಷ್ಮೀನರಸಿಂಹ ದೇವಾಲಯ, ದುರ್ಗಾದೇವಾಲಯ, ಆಂಜನೇಯ ದೇವಾಲಯಗಳಿವೆ. (ಹಾಳು ಬಿದ್ದಿರುವ), ಶಿಥಿಲ ಗೊಂಡ ಒಂದು ಅರಮನೆಯಂತಹ ಕಟ್ಟಡ ಇಲ್ಲಿದ್ದು ಗಮನ ಸೆಳೆಯುತ್ತದೆ.

ಗಂಗಾವತಿಯಿಂದ ಪಶ್ಚಿಮಕ್ಕೆ 10 ಕಿ.ಮೀ. ದೂರದಲ್ಲಿರುವ ಈ ಗ್ರಾಮ ಪ್ರಾಗೈತಿಹಾಸ ದೃಷ್ಟಿಯಿಂದ ಮಹತ್ವದ ಸ್ಥಳವಾಗಿದೆ. ಗ್ರಾಮದ ಬೆಟ್ಟಗಳಲ್ಲಿ ಬೃಹತ್ ಶಿಲಾಯುಗದ ನೂರಾರು ಶಿಲಾ ಸಮಾಧಿಗಳು, ಶಿಲಾಕೋಣೆಗಳು ಇದ್ದು ಅಚ್ಚರಿಮೂಡಿಸುತ್ತವೆ.

ಗಂಗಾವತಿಯಿಂದ 14 ಕಿ.ಮೀ. ದೂರದ ಆನೆಗೊಂದಿಯ ದಕ್ಷಿಣಕ್ಕೆ ಪಂಪಾ ಸರೋವರವಿದೆ. ಸುತ್ತಲೂ ಬೆಟ್ಟಗಳಿಂದ ಅವೃತವಾದ ಈ ಸರೋವರ ಮೂಲತಃ ತುಂಗಭದ್ರಾ ನದಿ ಯೊಂದಿಗೆ ಸಂಪರ್ಕ ಹೊಂದಿತ್ತು. ಪೌರಾಣಿಕವಾಗಿ ಮಹತ್ವ ಪಡೆದ ಈ ಸರೋವರದ ಬಗ್ಗೆ ಸ್ಕಂದಪುರಾಣದಲ್ಲಿ ಉಲ್ಲೇಖ ವಿದೆ.

ಗಂಗಾವತಿಯಿಂದ 11 ಕಿ.ಮೀ. ದೂರದಲ್ಲಿ ಆನೆಗೊಂದಿ ಅಲ್ಲಿಂದ 1 ಕಿ.ಮೀ. ದೂರದಲ್ಲಿರುವ ನವವೃಂದಾವನ ಗಡ್ಡೆಯು ತುಂಗಭದ್ರ ನದಿಯ ನಡುಗಡ್ಡೆಯಾಗಿದೆ. ಇಲ್ಲಿ ಒಂಭತ್ತು ಜನ ಮಧ್ವ ಯತಿವರ್ಯರ ವೃಂದಾವನಗಳಿವೆ. ಈ ಒಂಬತ್ತು ಯತಿ ಗಳೆಂದರ ಪದ್ಮನಾಥ ತೀರ್ಥರು, ಕವೀಂದ್ರ ತೀರ್ಥರು, ವಾಗೀಶ ತೀರ್ಥರು. ವ್ಯಾಸರಾಯರು, ಗೋವಿಂದ ಒಡೆಯರು, ಸುಧೀಂದ್ರ ತೀರ್ಥರು, ರಾಘವರ್ಯರು, ಶ್ರೀನಿವಾಸ ತೀರ್ಥರು, ರಾಮತೀರ್ಥರು ಇಲ್ಲಿ ಒಂಬತ್ತು ಯತಿಗಳ ಆರಾಧನೆ ವಿಜೃಂಭಣೆಯಿಂದ ನೆರವೇರುತ್ತದೆ. ಹಾಗೂ ಕನ್ನಡ ದಾಸ ಪರಂಪರೆಗೆ ಮಹತ್ವದ ಪ್ರೇರಣೆ ನೀಡಿದ ಪವಿತ್ರ ಸ್ಥಳ.

ಗಂಗಾವತಿಯಿಂದ ದಕ್ಷಿಣಕ್ಕೆ 25 ಕಿ.ಮೀ. ದೂರದಲ್ಲಿರುವ ಮುಕ್ಕಂಪ ಹತ್ತಿರದ ಬೆಟ್ಟದ ಮೇಲಿರುವ ಇದು ಗಿರಿ ದುರ್ಗವಾಗಿದೆ. ಇದು ಕ್ರಿ.ಶ. 13ನೆಯ ಶತಮಾನದಲ್ಲಿ ಕಂಪಿಲ ರಾಯ ಮತ್ತು ಅವರ ಮಗ ಕುಮಾರರಾಮನ ಉಪ ರಾಜಧಾನಿಯಾಗಿತ್ತು. ಇಲ್ಲಿನ ಕೋಟೆಯೊಳಗೆ ಆ ಅರಸರಿಗೆ ಸಂಬಂಧಿಸಿದ ಜೇನುಕಲ್ಲು, ಹಾಳುಭಾವಿ, ಬೈಚಪ್ಪನ ಗುಡಿ, ಕಾಟಪ್ಪನ ಕಟ್ಟೆ, ಆನೆಪಾಗ್, ಜೈನಬಸದಿ, ಚಿಂತಾಲಕಲ್ಲು, ಮಲ್ಲಿಕಾರ್ಜುನ ಮತ್ತು ರಾಮೇಶ್ವರ ದೇವಾಲಯಗಳಿವೆ.

ಕನಕಗಿರಿ ಚಾರಿತ್ರಿಕ ಸ್ಥಳವಾಗಿದೆ. ಇದು ಗಂಗಾವತಿಯಿಂದ ಲಿಂಗಸೂರು ರಸ್ತೆಯಲ್ಲಿ 20 ಕಿ.ಮೀ. ದೂರದಲ್ಲಿದೆ. ಇದು ವಿಜಯನಗರ ಕಾಲದಲ್ಲಿ ಗುಜ್ಜಲವಂಶದ ಪಾಳೆಯಗಾರರ ರಾಜಧಾನಿಯಾಗಿತ್ತು. ಇಲ್ಲಿ ಪಾಳೆಯಗಾರರ ಕಾಲದ ಅನೇಕ ಕಲಾತ್ಮಕ ದೇವಾಲಯಗಳು ಮಂಟಪಗಳು, ಪುಷ್ಕರಣಿಗಳು, ಸುಂದರವಾದ ಬಾವಿಗಳು, ಇವೆ. ಒಟ್ಟಿನಲ್ಲಿ ಸುಮಾರು 50ಕ್ಕೂ ಹೆಚ್ಚಿನ ಕಲಾಸ್ಮಾರಕಗಳು ಕನಕಗಿರಿಯಲ್ಲಿವೆ. 'ಕಾಲಿದ್ದವರು ಹಂಪಿ ನೋಡಬೇಕು, ಕಣ್ಣಿದ್ದವರು ಕನಕಗಿರಿ ನೋಡಬೇಕು' ಎನ್ನುವ ಜಾಣ್ನುಡಿ ಪ್ರಚಲಿತದಲ್ಲಿದ್ದು, ಇದು ಕನಕಗಿರಿಯ ಪ್ರೇಕ್ಷಣೀಯತೆಯನ್ನು ಸೂಚಿಸುತ್ತದೆ.

ಮುನಿರಾಬಾದ್ ತುಂಗಭದ್ರಾ ಡ್ಯಾಂನ ಎಡದಂಡೆಯಲ್ಲಿದೆ. ಗಂಗಾವತಿಯಿಂದ 35 ಕಿ.ಮೀ. ದೂರದಲ್ಲಿರುವ ಪಂಪಾವನ ತುಂಬಾ ಪ್ರಸಿದ್ಧವಾಗಿದೆ. 67 ಎಕರೆ ಪ್ರದೇಶದಲ್ಲಿ ವಿಸ್ತರಿಸಿರುವ ಈ ಉದ್ಯಾನ ವನ ಜಪಾನಿ ಶೈಲಿಯಲ್ಲಿ ನಿರ್ಮಾಣಗೊಂಡಿದೆ.

ಯಲಬುರ್ಗಾ ತಾಲ್ಲೂಕಿನಲ್ಲಿರುವ ಇಟಗಿ ಗಂಗಾವತಿ ಯಿಂದ ಸುಮಾರು 70 ಕಿ.ಮೀ. ದೂರದಲ್ಲಿದೆ. ಇಲ್ಲಿ ಕಲ್ಯಾಣ ಚಾಲುಕ್ಯರ ದೊರೆ ಆರನೇ ವಿಕ್ರಮಾದಿತ್ಯನ ದಂಡನಾಯಕ ಮಹಾದೇವನು, ನಿರ್ಮಿಸಿರುವ ಅಪೂರ್ವ ವಾಸ್ತು ಕಲಾಕೃತಿ ಮಹಾದೇವ ದೇವಾಲಯವಿದೆ. ಇಲ್ಲಿಯ ಶಾಸನವೊಂದರಲ್ಲಿ

ಇದನ್ನು ದೇವಾಲಯ ಚಕ್ರವರ್ತಿ ಎಂದು ವರ್ಣಿಸಲಾಗಿದೆ. ನಾಡಿನ ಪ್ರಮುಖ ಕಲಾತ್ಮಕ ದೇವಾಲಯಗಳಲ್ಲಿ ಇದು ಒಂದಾಗಿದೆ.

ಕುಕನೂರಿನಿಂದ 10 ಕಿ.ಮೀ. ದೂರದಲ್ಲಿರುವ ಕಲ್ಲೂರು ಐತಿಹಾಸಿಕವಾಗಿ ಮಹತ್ವದ ಸ್ಥಳ. ಇಲ್ಲಿ ಪ್ರಸಿದ್ಧವಾದ ಕಲ್ಲಿನಾಥೇಶ್ವರ ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದ ಗಮನಾರ್ಹವಾಗಿದೆ.

ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗೊಂಬೆಕಲೆಯಿಂದಾಗಿ ನಾಡಿನಲ್ಲಿ ಗುರುತಿಸಲ್ಪಟ್ಟಿದೆ. ಇಲ್ಲಿ ಆಕರ್ಷಕವಾದ ಗೊಂಬೆಗಳನ್ನು ದೇವರ ಸಿಂಹಾಸನ (ಚೌಕಿ)ಗಳು, ದೇವರ ಚಿತ್ರಪಟಗಳನ್ನು ತಯಾರಿಸಲ್ಪಡಲಾಗುತ್ತಿದೆ. ಬಹು ಹಿಂದಿನಿಂದಲೂ ಇಲ್ಲಿನ ಚಿತ್ರಗಾರ ಮನೆತನಗಳು ಈ ಕಲಾತ್ಮಕ ಗೊಂಬೆ ತಯಾರಿಕೆಯಲ್ಲಿ ತೊಡಗಿಕೊಂಡಿವೆ. ಈ ಗೊಂಬೆಗಳು ದೇಶದಲ್ಲೆಡೆ ಪ್ರಸಿದ್ಧವಾಗಿದೆ. ಇಲ್ಲಿ ಸುಂದರವಾದ ಸೀರೆಗಳು ಕೂಡಾ ನೇಯಲ್ಪಡುತ್ತವೆ.

ಜಿಲ್ಲಾ ಕೇಂದ್ರವಾಗಿರುವ ಕೊಪ್ಪಳ ಪ್ರಾಚೀನ ಕಾಲದಿಂದಲೂ ಆಡಳಿತ ಕೇಂದ್ರವಾಗಿದೆ. ಕ್ರಿ.ಪೂ. 3ನೆಯ ಶತಮಾನದ ಮೌರ್ಯ ಸಾಮ್ರಾಟ ಅಶೋಕನ ಶಿಲಾಶಾಸನಗಳು ಇಲ್ಲಿನ ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿ ಇವೆ. ಶಿಲಾಯುಗ ಕಾಲದ ಅನೇಕ ಗವಿಚಿತ್ರಗಳು ಇಲ್ಲಿ ಕಂಡು ಬರುತ್ತವೆ. ಕೊಪ್ಪಳದ ಕೋಟೆ ದುರ್ಗಮ ಗಿರಿದುರ್ಗವಾಗಿದೆ. ಗವಿಮಠ ಇಲ್ಲಿ ಪ್ರಾಚೀನ ಪರಂಪರೆಯುಳ್ಳ ವಿರ್ರಿಕ ಕೇಂದ್ರವಾಗಿದೆ. ಇತ್ತೀಚೆಗೆ ನಿರ್ಮಿಸಲ್ಪಟ್ಟ ಆಧುನಿಕ ಕಟ್ಟಡವಾದ ಜಿಲ್ಲಾಧಿಕಾರಿ ಕಚೇರಿ ಭವ್ಯ ಮತ್ತು ಆಕರ್ಷಕವಾಗಿದೆ.

ವಿಶ್ವ ಪ್ರಸಿದ್ಧವಾದ ವಿಶ್ವಪರಂಪರೆಯ ಸ್ಥಳವೆಂದು ಗುರುತಿಸಲ್ಪಟ್ಟ ಹಂಪಿ ಗಂಗಾವತಿ ನೆರೆಯ ಸ್ಥಳವಾಗಿದೆ. ಆನೆಗೊಂದಿ ಮಾರ್ಗವಾಗಿ ಕೇವಲ 12 ಕಿ.ಮೀ. ದೂರದಲ್ಲಿ ಹಂಪಿ ಆ ಕಾಲದ ಅನೇಕ ಕಲಾಸ್ಮಾರಕಗಳನ್ನು ಒಳಗೊಂಡಿವೆ.

ಗಂಗಾವತಿಯಿಂದ 40 ಕಿ.ಮೀ. ದೂರದಲ್ಲಿ ಹೊಸಪೇಟೆಯಿಂದ 5 ಕಿ.ಮೀ. ಅಂತರದಲ್ಲಿ ತುಂಗಭದ್ರ ಜಲಾಶಯ ಹಾಗೂ ಡ್ಯಾಂಗಳು ರುದ್ರ ರಮಣೀಯವಾಗಿವೆ. ಡ್ಯಾಂ ಮುಂಭಾಗದಲ್ಲಿ ಬಹುಸುಂದರವಾದ ಉದ್ಯಾನವನ ನಿರ್ಮಿಸಲಾಗಿದೆ. ಉದ್ಯಾನವನದಲ್ಲಿ ವಿವಿಧ ಜಾತಿಯ ಮೀನುಗಳ ಮತ್ಸ್ಯಾಲಯ, ವಿವಿಧ ಪಕ್ಷಿಗಳು, ನೃತ್ಯ ಕಾರಂಜಿಗಳನ್ನು ವೀಕ್ಷಿಸುವುದೇ ಒಂದು ಸೊಗಸು.

ಗಂಗಾವತಿಯಿಂದ 40 ಕಿ.ಮೀ. ದೂರದಲ್ಲಿರುವ ನವಲಿ, ಕಾರಟಗಿ ಕನಕಗಿರಿ ರಸ್ತೆಯಲ್ಲಿದ್ದು, ಭೋಗಾಪುರೇಶ, ಲಕ್ಷ್ಮೀ ನರಸಿಂಹ, ವೀರಭದ್ರೇಶ್ವರ ದೂರದಲ್ಲಿರುವ ಕಾರಟಗಿ ಹತ್ತಿರದ ನಾಗನಕಲ್ ಗ್ರಾಮದಲ್ಲಿ ವಿಶಿಷ್ಟವಾದ ಉದ್ಯಾನ ವನವಿದೆ. ಸುಮಾರು 6 ಎಕರೆಯ ವಿಸ್ತಾರದಲ್ಲಿರುವ ಈ ಸಸ್ಯಕಾಶಿಯಲ್ಲಿ ವೈವಿಧ್ಯಮಯವಾದ ಗಿಡ, ಪುಷ್ಪಗಳು ಇವೆ. ಒಟ್ಟಾರೆಯಾಗಿ ಈ ಭಾಗದ ಎಲ್ಲಾ ಐತಿಹಾಸಿಕ ಸ್ಥಳ ವೀಕ್ಷಣೆ ಮಾಡುವುದೆ ಒಂದು ಭಾಗ್ಯ. (ಎಸ್‌ಆರ್)

ರಮಾನಂದ ಹಿರೇಜೇವರ್ಗಿ: ರಂಗಭೂಮಿ ಕಲಾವಿದ, ನಾಟಕಕಾರ. 'ಅನ್ನವು ತನ್ನಲ್ಲಿರುವ ತನಕ ಎಲ್ಲರೂ ನನ್ನವರೆನ್ನುವರು. ಅನ್ನವು ತೀರಿದ ಮರುದಿನವೇ ನನ್ನವರೆನ್ನುವವರಾರಿಲ್ಲ...' ಎಂಬ ಜನಪ್ರಿಯ ಹಾಡು ಬರೆಯುವ ಮೂಲಕ ನಾಡಿನ ಮನೆಮಾತಾಗಿರುವ ಇವರಿಗೆ ಅವರ ಜೀವಮಾನದ ಸಾಧನೆಗಾಗಿ 2009–10ನೆಯ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕರ್ನಾಟಕ–ಮಹಾರಾಷ್ಟ್ರ ಗಡಿಯಲ್ಲಿರುವ ಗುಲಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಹಿರೇಜೇವರ್ಗಿ ಗ್ರಾಮದಲ್ಲಿ (07.06.1932) ಜನಿಸಿದರು. ಇವರು ಓದಿದ್ದು ಮೆಟ್ರಿಕ್‌ವರೆಗೆ. ರಾಯಚೂರಿನ ಹನುಮಾನ್ ಚಿತ್ರಮಂದಿರದಲ್ಲಿ ವ್ಯವಸ್ಥಾಪಕರಾಗಿ ವೃತ್ತಿಜೀವನ ಆರಂಭಿಸಿದರು. ಆದರೆ ಎರಡೂವರೆ ವರ್ಷದಲ್ಲೇ ಆ ಕೆಲಸಕ್ಕೆ ರಾಜೀನಾಮೆ ನೀಡಿದರು. ಮುಂದೆ ಅಕ್ಷರಶಃ ಕಲಾದೇವತೆಯ ಆರಾಧಕರಾದರು. ಅಕ್ಕಲಕೋಟ ತಾಲ್ಲೂಕಿನ ಜೇವೂರನಲ್ಲಿದ್ದ ಇವರ ಸೋದರ ಮಾವನವರ 'ಶಂಕರಲಿಂಗ ಪ್ರಸಾದಿತ ಸಂಗೀತ ನಾಟಕ ಮಂಡಳಿ'ಯಲ್ಲಿ 'ಸೌಭಾಗ್ಯಲಕ್ಷ್ಮಿ' ನಾಟಕದಲ್ಲಿ ಶಶಿಧರನ ಪಾತ್ರವನ್ನು ಉತ್ತಮವಾಗಿ ನಿರ್ವಹಿಸಿದರು. ಈ ನಾಟಕದ ಯಶಸ್ಸಿನಿಂದಾಗಿಯೇ ಜೀವನಯಾತ್ರೆ, ಬಡತನ ಭೂತ, ಮಾತಂಗ ಕನ್ಯೆ, ಕಾರಸ್ತಾನ, ಕುಂಕುಮ ಮುಂತಾದ ನಾಟಕಗಳಲ್ಲಿ ನಾಯಕ, ಖಳನಾಯಕನ ಪಾತ್ರ ಮಾಡಿ ಪ್ರೇಕ್ಷಕರಿಂದ ಸೈ ಅನಿಸಿಕೊಂಡರು. ಮುಂದಿನ ದಿನಗಳಲ್ಲಿ ಹಿರಣ್ಣಯ್ಯ ಮಿತ್ರ ಮಂಡಳಿ, ಗುಬ್ಬಿ ಕಂಪನಿ, ಮೈಸೂರಿನ ಯೋಗಾ ನರಸಿಂಹ ನಾಟಕ ಕಂಪೆನಿಯಲ್ಲಿದ್ದರು. ಆದವಾನಿ ಲಕ್ಷ್ಮಿಬಾಯಿ, ಚಂಪಾವತಿಪೂರಿ, ಗುರುಶಾಂತಪ್ಪ ಕೌಟಿ, ಪಂಢರಿನಾಥ, ಗುರುಪ್ಪ, ಪಿ.ವಿ. ಪಟ್ಟಣಶೆಟ್ಟಿ ಮುಂತಾದ ಪ್ರಖ್ಯಾತ ಕಲಾವಿದರೊಂದಿಗೆ ಮೈಸೂರು ಬೆಂಗಳೂರು ಇತ್ಯಾದಿ ಕಡೆಗಳಲ್ಲಿ ಸಂಚರಿಸಿ ನಾಟಕಗಳನ್ನು ಪ್ರದರ್ಶಿಸಿದರು. ಅಲ್ಲಿನ ಹವಾಮಾನ ಒಗ್ಗದ ಕಾರಣ ಕೆಲ ವರ್ಷಗಳ ಕಾಲ ವೃತ್ತಿ ರಂಗಭೂಮಿಯಿಂದ ದೂರ ಸರಿದ ರಮಾನಂದರು, ಧಾರವಾಡ ಸಮೀಪದ ಉಣಕಲ್‌ನ ಸಿದ್ಧೇಶ್ವರ ದೇವಸ್ಥಾನದಲ್ಲಿ ಉಳಿದುಕೊಂಡು ಅಲ್ಲಿಯೇ ಸುಮಾರು 25 ನಾಟಕಗಳನ್ನು ರಚಿಸಿದರು. ಆನಂತರ ಹಿರೇಜೇವರ್ಗಿಗೆ ಬಂದು ಕೃಷಿ ಕಾಯಕದಲ್ಲಿ ತೊಡಗಿದರು. ಕೃಷಿಯಲ್ಲೂ ಹಾನಿಯಾದ್ದರಿಂದ ಕಿರಾಣಿ ಅಂಗಡಿಯೊಂದನ್ನು ಆರಂಭಿಸಿದರು. ಅದೂ ಮುಚ್ಚಿ ಹೋಗಿದ್ದರಿಂದ ಹೋಟೆಲ್ ಆರಂಭಿಸಿದರು.

ಒಂದು ಬಾರಿ ಸೋಲಾಪೂರದಲ್ಲಿದ್ದ ನಾಟಕ ಕಂಪನಿಗೆ ಹೊರಟಿದ್ದ ರಮಾನಂದರು. ಕೈಯಲ್ಲಿ ಕಾಸು ಇಲ್ಲದೆ ರೈಲು ಏರಿದರು. ಸಹ ಪ್ರಯಾಣಿಕರಿಂದ ಹಣ ಪಡೆದು ಟಿಕೆಟ್ ಪಡೆದು ಊರು ಸೇರಿದರು. ಆ ಘಳಿಗೆಯಲ್ಲಿ ಹುಟ್ಟಿದ್ದೇ 'ಅನ್ನವು ತನ್ನಲ್ಲಿರುವ ತನಕ ಎಲ್ಲರೂ ನನ್ನವರೆನ್ನುವರು. ಅನ್ನವು ತೀರಿದ

ಮರುದಿನವೇ ನನ್ನವರೆನ್ನುವವರಾರಿಲ್ಲ...' ಎಂಬ ಜನಪ್ರಿಯ ಹಾಡು. ಇದುವರೆಗೆ 68 ನಾಟಕ, 10 ಬೀದಿ ನಾಟಕ, 10 ರೇಡಿಯೋ ನಾಟಕ, 10 ರೂಪಕಗಳನ್ನು ರಚಿಸಿರುವ ರಮಾ ನಂದರು, ಸುಮಾರು 250ಕ್ಕೂ ಹೆಚ್ಚು ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಮಾಸಿದ ಅಂಗಿ, ಪೈಜಾಮು, ಸದಾ ಗಾಂಧಿ ಟೋಪಿ ಧರಿಸುವ 77 ವರ್ಷದ ರಮಾನಂದರು ಸದಾ ಕ್ರಿಯಾಶೀಲರು. ಗ್ರಾಮಾಂತರ ಪ್ರದೇಶಗಳಲ್ಲಿ ರಂಗ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಡೆಯುವ ಕಾರ್ಯಕ್ರಮ, ವಿವಿಧ ಮಠಗಳಲ್ಲಿ ಆದ ಪುರಾಣ, ಪ್ರವಚನ ಮುಂತಾದ ಕಾರ್ಯಕ್ರಮಗಳ ಸುದ್ದಿಗಳನ್ನು ಚಾಚೂ ತಪ್ಪದೆ ಪತ್ರಿಕಾ ಕಚೇರಿಗಳಿಗೆ ತಲುಪಿಸುವ ಕೆಲಸ ಇಂದಿಗೂ ಮಾಡುತ್ತಿದ್ದಾರೆ. (ಎಸ್‌ಎಸ್)



ರಮೇಶ ಜೋಶಿ: ಕಲಬುರ್ಗಿಯ ಕಲಾವಿದರು. ತಂದೆ ದತ್ತಾತ್ರೇಯ ರಾವ ಜೋಶಿ, ಶಿಕ್ಷಕರಾಗಿದ್ದರು. ಎಸ್.ಎಸ್.ಎಲ್.ಸಿ. ವರೆಗೆ ಓದಿದ್ದು, ಬಾಲ್ಯದಿಂದಲೇ ಸಂಗೀತದಲ್ಲಿ ಆಸಕ್ತಿ ತಳೆದರು. 1965ರಿಂದ ನಾಟಕದಲ್ಲಿ ಹಾಸ್ಯ ಪಾತ್ರ ಮಾಡಲು ಆರಂಭಿಸಿದರು. ಪ್ರಸಿದ್ಧ ಗಾಯಕ ಕಿಶೋರ ಕುಮಾರ ಅವರ ಚಲನಚಿತ್ರ ಹಾಡುಗಳಿಂದ ಪ್ರಭಾವಿತರಾಗಿ, ಕಿಶೋರ ಕುಮಾರರವರ ಹಾಡುಗಳನ್ನು ಹಾಡಲು ಪ್ರಾರಂಭಿಸಿದರು. ಇವರ ಧ್ವನಿಯೂ ಕೂಡ ಕಿಶೋರಕುಮಾರ ಅವರಿಗೆ ತುಂಬ ಹೋಲಿಕೆ ಯಾಗುವುದರಿಂದ ಕಲಬುರ್ಗಿಯ ಜೂನಿಯರ್ ಕಿಶೋರಕುಮಾರ ಎಂದೇ ಖ್ಯಾತಿ ಪಡೆದರು. ಇವರು ವೇದಿಕೆ ಮೇಲೆ ಬರುತ್ತಿದ್ದಂತೆಯೇ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಾರೆ.

ಜೋಶಿಯವರು ವೇದಿಕೆ ಮೇಲೆ ನಿಂತು ಗಂಟೆಗಟ್ಟಲೆ ಕಿಶೋರಕುಮಾರ ಅವರ ಗೀತೆಗಳನ್ನು ಹಾಡಲು ಪ್ರಾರಂಭಿಸಿದರೆ, ಪ್ರೇಕ್ಷಕರು ಮೂಕವಿಸ್ಮಿತರಾಗಿ ಕೇಳುತ್ತ ಕೂಡುತ್ತಾರೆ. ಶಾಸ್ತ್ರೀಯವಾಗಿ ಸಂಗೀತದ ಯಾವುದೇ ಪ್ರಾಥಮಿಕ ಅಭ್ಯಾಸ ಮಾಡದೇ, ಇದ್ದರೂ ಇವರು ಸಿನಿಮಾ ಹಾಡುಗಳಿಂದ ಲಯ ಬದ್ಧವಾಗಿ ಹಾಡಿ ಜನರ ಮನವನ್ನು ಗೆದ್ದಿರುವುದು, ಚಿರಪರಿಚಯವಾಗಿರುವದು ಅಪರೂಪದ ಸಂಗತಿ. ಇವರು ಮೂಲತಃ ಕನ್ನಡ ಕುಟುಂಬದವರಾದರೂ ಗಡಿ ಭಾಷೆಗಳಲ್ಲಿ ತಮ್ಮದೇ ವೈಖರಿಯ ಛಾಪು ಮೂಡಿಸಿದ್ದಾರೆ.

ಆಕಾಶವಾಣಿ ಬಹು ಚರ್ಚಿತ ಕಾರ್ಯಕ್ರಮಗಳಲ್ಲಿ ಸ್ಪಂದನ ವೈವಿಧ್ಯಮಯ ಕಾರ್ಯಕ್ರಮದ ಹಾಸ್ಯ, ಹೀಗೂ ಆಗಬಹುದಾ ಎಂಬ ಹಾಸ್ಯ ತುಣುಕುಗಳನ್ನು ರಚಿಸಿ ರಮೇಶ ಅವರು ಪ್ರಸಾರ ಮಾಡಿದ್ದಾರೆ. ಜಾತ್ರೆ, ನಾಟಕ, ದೂರದರ್ಶನದಲ್ಲಿಯೂ ಅನೇಕ ಕಾರ್ಯಕ್ರಮಗಳು ಪ್ರಸಾರವಾಗಿವೆ.

ಕಲಬುರ್ಗಿ ಜಿಲ್ಲೆಯಿಂದ ಮೈಸೂರು ದಸರ ಮಹೋತ್ಸವ 1984ರಲ್ಲಿ ಜಿಲ್ಲಾಮಟ್ಟದ ಭಾವಗೀತೆಗಾಗಿ ಆಯ್ಕೆಯಾಗಿ, ಬಿ.ಎಂ.ಶ್ರೀ ಅವರ ಕರುಣಾಳ ಬಾ ಬೆಳಕೆ ಭಾವಗೀತೆಯನ್ನು ಹಾಡಿ ಪ್ರಶಸ್ತಿ ಪಡೆದಿದ್ದಾರೆ. ಕಲಬುರ್ಗಿಯ ಹರಿದಾಸ ಸಾಹಿತ್ಯ ಪ್ರಚಾರ ವಾಹಿನಿ ವೇದಿಕೆಯಲ್ಲಿ ಭಕ್ತಿಗೀತೆಗಳನ್ನು ಪ್ರಸ್ತುತ ಪಡಿಸುವ ಮೂಲಕ ಭಕ್ತಿರಸ ಹಾಡುಗಳಿಂದಲೂ ಗಮನ ಸೆಳೆದಿದ್ದಾರೆ.

1997ರಲ್ಲಿ ಕರಾವಳಿಯ ತೀರ ಕಾರವಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂಜೆ ಕಡಲ ತೀರದಲ್ಲಿ ಭಾವಗೀತೆ ಕಾರ್ಯಕ್ರಮ ನೀಡಿದರು. ಇವರು ಆಕಾಶವಾಣಿ ಕಲಾವಿದರು. ಈ ಕಾರ್ಯಕ್ರಮ ನಡೆಸಿಕೊಟ್ಟರು. 1988ರಲ್ಲಿ ಅಖಿಲ ಭಾರತ ಆಕಾಶವಾಣಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ 'ಕೆರೆಗೆ ಹಾರ' ರೂಪಕದ ಮುಖ್ಯ ಗಾಯಕರು. 1989ರಲ್ಲಿ 'ಬಲಿಗೊಂದು ಬೆಳಕು' ಜಾನಪದ ರೂಪಕದ ಮುಖ್ಯ ಗಾಯಕ 'ತೀರ್ಪುಗಾರರ ಪ್ರಶಸ್ತಿ' ಪಡೆದಿರುವ ಇವರು ಕಲಬುರ್ಗಿ ಮತ್ತು ಬೆಂಗಳೂರು ದೂರದರ್ಶನಗಳಲ್ಲಿಯೂ ಮಿಂಚಿದ್ದಾರೆ.

ಮೈಸೂರು ಅನಂತಸ್ವಾಮಿ, ಲಕ್ಷ್ಮೀನಾರಾಯಣ ಭಟ್, ಕೆ.ಎಸ್. ನರಸಿಂಹಸ್ವಾಮಿ, ಆನಂದಕಂದ ಹಾಗೂ ಶಿಶುನಾಳ ಶರೀಫ್ ಅವರಂತಹ ಕವಿಗಳ ಗೀತೆಗಳನ್ನು ತಮ್ಮ ಸುಮಧುರ ಕಂಠದಿಂದ ಭಾವನಾತ್ಮಕವಾಗಿ ಹಾಡಿ, ಕಡಲ ತೀರದ ಮರುಳು ರಾಶಿಯಲ್ಲಿ ನೆರೆದಿರುವ ಎಲ್ಲ ಸಂಗೀತ ಪ್ರೇಮಿಗಳ ತನುಮನವನ್ನು ತಣಿಸಿರುವ ರಮೇಶ ಹೊಸ ಭರವಸೆ ನೀಡಿರುವ ಗಾಯಕರೆನಿಸಿಕೊಂಡಿದ್ದಾರೆ. ಜೋಶಿಯವರಿಗೆ ಶಾಸ್ತ್ರೀಯ ಸಂಗೀತ ಕಲಿಯಬೇಕೆಂಬ ಆಸಕ್ತಿ ಇತ್ತು. ಅದು ಕನಸಾಗಿಯೇ ಉಳಿದಿದೆ.

ಕಲಬುರ್ಗಿ ಸರಕಾರಿ ಮುದ್ರಣಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು, ಈ ಭಾಗದ ಹೆಸರಾಂತ ಸಂಗೀತ ನಿರ್ದೇಶಕರಾದ ಗುರುನಾಥರಾವ ಆಲಗೂಡ, ಅನಂತ ಹರಸೂರ, ಸುಮನರಾವ ಕುಲಕರ್ಣಿ, ಪ್ರಕಾಶ ಜೀವಣಗಿಕರ ಅವರ ಗರಡಿಯಲ್ಲಿ ಪಳಗಿದ್ದು, ಅವರ ರಾಗ ಸಂಯೋಜನೆಯಲ್ಲಿ ಹಾಡಿರುವ ಅನೇಕ ಭಾವಗೀತೆಗಳು ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಿವೆ.

1995-96ರಲ್ಲಿ ಅಖಿಲ ಭಾರತ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನ ರಾಜಧಾನಿ ದೆಹಲಿಯಲ್ಲಿ ನಡೆದಾಗ, ದೇಶಭಕ್ತಿಗೀತೆ ರಾಗ ಸಂಯೋಜಿಸಿ ಹಾಡಿ ಬೆನ್ನು ತಟ್ಟಿಸಿಕೊಂಡಿದ್ದಾರೆ. ಕಲಬುರ್ಗಿಯ ವಿಶ್ವವಿದ್ಯಾಲಯ ಹಾಗೂ ಚಂದ್ರಶೇಖರ ಕ್ರೀಡಾಂಗಣದಲ್ಲಿ ಏರ್ಪಡಿಸಿದ ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮದ ತೀರ್ಪುಗಾರರಾಗಿ ಭಾಗವಹಿಸಿ, ಹಿರಿಯ ಸಂಗೀತಗಾರರ ಸಾಲಿನಲ್ಲೂ ನಿಂತಿದ್ದಾರೆ. ಸುಮಾರು ದಶಕದ ಹಿಂದೆಯೇ ತನ್ನಂತೆ ಇರುವ ಇನ್ನಿತರ ಉದಯೋನ್ಮುಖ ಕಲಾವಿದರನ್ನು ಹಾಗೂ ಗಾಯಕರ

ಬಳಗವನ್ನು ಕಟ್ಟಿಕೊಂಡ ರಮೇಶ ಜೋಶಿ, ಸಂಗಮ್ ಮ್ಯೂಜಿಕಲ್ ಗ್ರೂಪ್ ಹುಟ್ಟುಹಾಕಿ ಅದರ ಸಂಚಾಲಕ ಹಾಗೂ ಸಂಗೀತ ನಿರ್ದೇಶಕರಾಗಿ ಹಲವಾರು ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿ ಮುಂದೆ ತಂದಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. (ಎನ್‌ಎಂಜೆ)

ರವಿ ನಾಯಕ: ಜಲವರ್ಣ ಚಿತ್ರಕಲಾವಿದ. ಎಂ.ವಿ.ಎ. ವಿದ್ಯಾಭ್ಯಾಸ ಮಾಡಿಕೊಂಡಿರುವ ಇವರು ಮನದ ತುಡಿತ, ಸಂವೇದನೆಗಳನ್ನು ಕ್ಯಾನ್ವಾಸಿನ ಮೇಲೆ ಮೂಡಿಸುತ್ತಾರೆ. ಆಲ ವರ್ಣದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಲು ತುಡಿಯುತ್ತಿರುತ್ತಾರೆ. ಪೆನ್ ಅಂಡ್ ಇಂಕ್ ಡ್ರಾಯಿಂಗ್ಸ್, ಲ್ಯಾಂಡ್ ಸ್ಕೇಪ್, ಕೋಲೋಜ್, ಕ್ರಿಯೇಟಿವ್, ಅಬ್‌ಸ್ಟ್ರಾಕ್ಟ್ ಕಲೆಗಳಲ್ಲಿಯೂ ತನ್ನ ವಿಭಿನ್ನ ದೃಷ್ಟಿಕೋನಗಳನ್ನು ಅಭಿವ್ಯಕ್ತಿಸುತ್ತಾರೆ.

ಸರಳ ಸ್ವಭಾವದ ಇವರು ಆಧುನಿಕತೆಯ ಬೆಡಗು ಬಿನ್ನಾಣಗಳಿಂದ ದೂರವಿರುವ ವ್ಯಕ್ತಿ. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ, ಅಪಾರ ಪರಿಶ್ರಮಬೇಕು. ವೈಯಕ್ತಿಕ ಚಾರಿತ್ರ್ಯವೂ ಸಮಾಜ ಮುಖಿಯಾಗಿರಬೇಕು ಎನ್ನುವುದು ಇವರ ನಿಲವು. ಅದರಂತೆ ಇವರು ತಮ್ಮ ಕ್ಷೇತ್ರದಲ್ಲಿ ಮುನ್ನಡೆಯುತ್ತಿದ್ದಾರೆ. ಇವರು ಹೆಚ್ಚು ಹೆಚ್ಚು, ನಿಸರ್ಗದ ಚಿತ್ರಗಳನ್ನು ಬಹು ಆಯಾಮಗಳ ಮೂಲಕ ಚಿತ್ರಿಸಿದ್ದಾರೆ.

ಗತಕಾಲದ ವೈಭವದ ಜೀವಂತ ಸಾಕ್ಷಿಯಾಗಿ ನಿಂತಿರುವ ಸ್ಮಾರಕಗಳನ್ನು ಚಿತ್ರಿಸುವುದೆಂದರೆ, ಇವರಿಗೆ ಎಲ್ಲಿಲ್ಲದ ಖುಷಿ. ಇವರ ಕಲಾಕೃತಿಗಳನ್ನು ಗಮನಿಸಿದಾಗ, ಬಣ್ಣದ ಬಳಕೆಯಲ್ಲಿ ಇವರಿಗೆ ಹಿಡಿತ ಸಿದ್ಧಿಸಿದೆ. ಆದರೆ, ಈ ಕಲಾವಿದನಿಗೆ ಒಂದಿಷ್ಟು ಧ್ಯಾನ ದಕ್ಕಿದರೆ ಇನ್ನೂ ಉತ್ಕೃಷ್ಟವಾದ ಕಲಾಕೃತಿಗಳನ್ನು ನಿರೀಕ್ಷಿಸಬಹುದು. ಇವರು ಈಗಾಗಲೇ ಹಲವು ಕಲಾಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ, ಪ್ರಶಂಸೆಗಳಿಗೆ ಪಾತ್ರರಾಗಿದ್ದಾರೆ. (ಎಜೆಕೆ)



ರವೀಂದ್ರ ಕುಲಕರ್ಣಿ: ತಬಲಾ ವಾದಕರು. 1976 ಸೆಪ್ಟೆಂಬರ್ 26 ರಂದು ಜನಿಸಿದರು. ಗುಲಬರ್ಗಾ ಜಿಲ್ಲೆ ಮರತೂರು ಗ್ರಾಮದ ಮೂಲ ನಿವಾಸಿಗಳಾಗಿದ್ದು, ತಂದೆ ಮುರಲೀಧರ ಕುಲಕರ್ಣಿ ತಾಯಿ ಶ್ರೀ ಅರುಂಧತಿ ಮತ್ತು ಪತ್ನಿ ಶ್ರೀಮತಿ ಸ್ಮಿತಾ ಕುಲಕರ್ಣಿ. ಇವರು ಬಾಲ್ಯದಿಂದಲೇ ತಬಲಾ ಅಭಿರುಚಿಯನ್ನು ಹೊಂದಿದ್ದು, ಶ್ರೀ ಜಯರಾವ ಕುಲಕರ್ಣಿಯವರ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಇವರೂ ಒಬ್ಬರು. ಶ್ರೀ ರಾಜು ಕುಲಕರ್ಣಿ ಹಾಗೂ ಪಂ. ಹಡಪದ ಅವರಲ್ಲಿ ಇವರ ಅಭ್ಯಾಸವಾಗಿರುತ್ತದೆ. ತಬಲಾದಲ್ಲಿ ಇವರು ವಿದ್ವತ್ ವಿಶಾರದ, ಮಾರ್ತಾಂಡ ಪರೀಕ್ಷೆಗಳನ್ನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದು, ಸತತವಾಗಿ 15 ವರ್ಷ ಗಳಿಂದ ಸಂಗೀತ ಕ್ಷೇತ್ರಕ್ಕೆ ಸೇವೆಸಲ್ಲಿಸಿದ್ದಾರೆ.



ಸಹಕಲಾವಿದರೊಂದಿಗೆ ತಬಲಾ ಸಾಥಿ

ಆಕಾಶವಾಣಿ 'ಬಿ' ಶ್ರೇಣಿಯ ಕಲಾವಿದರಾಗಿದ್ದು, ಹಂಸಧ್ವನಿ ತಬಲಾ ಕಲಾನಿಕೇತನದ ಸಂಚಾಲಕರು ಮತ್ತು ಅಧ್ಯಕ್ಷರಾಗಿ ಅನೇಕ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿ ಕೊಡುವದರ ಮೂಲಕ ತಮ್ಮ ಸೇವೆಯನ್ನು ಮಾಡುತ್ತಿದ್ದು, 2004 ರಿಂದ ನೂತನ ಪದವಿ ಮಹಾವಿದ್ಯಾಲಯದಲ್ಲಿ ತಬಲಾ ಸಾಥಿದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ನಾಡಿನ ಹೆಸರಾಂತ ದಿಗ್ಗಜರೊಂದಿಗೆ ತಬಲಾ ಸಾಥ್‌ಯನ್ನು ಮಾಡಿರುವರು. ಅವರಲ್ಲಿ ಪಂ. ರಾಮಾಚಾರ ಜಾಲಿಯಾಳ, ಶ್ರೀಮತಿ ಸರೋಜ ಅನಗರಕರ್, ಶ್ರೀ ಜಯತೀರ್ಥ ಮೇವುಂಡಿ, ರಾಘವೇಂದ್ರ ಗೂಡಿ, ಶ್ರೀ ರಮೇಶ ಕುಲಕರ್ಣಿ, ಶ್ರೀ ರಾಘವೇಂದ್ರ ಬಡಶೇಶಿ, ಶ್ರೀ ಪ್ರಸನ್ನ ಕೋರ್ಟೆ, ಶ್ರೀ ರಾಮಚಂದ್ರ ಬಳ್ಳಾರಿ, ಶ್ರೀ ಮಹೇಶ ಬಡಿಗೇರ, ಮೊದಲಾದವರು. (ಆರ್‌ಕೆಕೆ)

ರಹಿಮಾನಮ್ಮ ಕುಕನೂರು: ವೃತ್ತಿರಂಗಭೂಮಿಯಲ್ಲಿ ನಿರಂತರ ಬೆಳಗುವ ತಾರೆ. ರಂಗಭೂಮಿಯಲ್ಲಿ ಅವರು ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡವರು. ಅವರ ಉಸಿರೇ ರಂಗಭೂಮಿಯಾಗಿತ್ತು. ಬದುಕಿನ ಸಕಲ ವೈಭವಗಳನ್ನು, ಆಶೆ ಆಕಾಂಕ್ಷೆಗಳನ್ನು, ಸುಖ-ಸಂತಸಗಳನ್ನು ತೊರೆದು ಇಡೀ ಜೀವನ ವನ್ನು ರಂಗಭೂಮಿಗಾಗಿ ಮೀಸಲಿಟ್ಟರು. ಕಾಯಾ, ವಾಚಾ, ಮನಸಾ ದುಡಿದರು. ಅಭಿನಯ ಅದೊಂದು ತಪಸ್ಸೆಂದು ಹಗಲು-ರಾತ್ರಿ ಅದನ್ನೇ ಜಪಿಸುತ್ತಿದ್ದರು. ಜೀವನವೆಲ್ಲ ಕಷ್ಟದಲ್ಲಿ ಕಳೆದು; ಎಲ್ಲಾ ಹಾಲಾಹಲ ಉಂಡು ಸಾವಿರ ಸಾವಿರ ಪ್ರೇಕ್ಷಕ ರನ್ನು ರಂಜಿಸಿದರು. ಹಾಗೆಂದೇ ರಹಿಮಾನಮ್ಮನವರನ್ನು ಇಂದಿಗೂ ನಾಡಿನ, ಹೊರನಾಡಿನ ಜನ ಸ್ಮರಿಸುತ್ತಿದ್ದಾರೆ. ರಂಗ ಇತಿಹಾಸ ಅವರನ್ನು ತನ್ನ ಪುಟಗಳಲ್ಲಿ ಉಳಿಸಿಕೊಂಡಿದೆ.

ವೃತ್ತಿರಂಗಭೂಮಿಯ ವೈಭವದ ದಿನಗಳಲ್ಲಿ ರಹಿಮಾನಮ್ಮನವರು ರಂಗಪ್ರವೇಶ ಪಡೆದರು. ಸುಮಾರು ಎಪ್ಪತ್ತು ವರ್ಷಗಳ



ಹಿಂದೆ ಅವರ ಕಲಾ ಬದುಕು 'ವಿಶ್ವರಂಜನಿ' ಕಂಪನಿಯಿಂದ ಪ್ರಾರಂಭಗೊಂಡಿತು. ಹಂತ ಹಂತವಾಗಿ ಬೆಳೆಯುತ್ತ ಅವರು ತಮ್ಮ ಪ್ರತಿಭೆಯಿಂದ, ಪರಿಶ್ರಮ ದಿಂದ ಅಭಿನಯದ ತುತ್ತತುದಿ ತಲುಪಿದರು. ದನ ಕಾಯುವುದೇ ಉದ್ಯೋಗ ಮಾಡಿಕೊಂಡಿದ್ದ ಈ ಅನಾಥ ಬಾಲಿಕೆ ರಂಗ ಭೂಮಿಯ ಬೆಳಕಿನ ಕಿರಣವಾಗಿ ಬೆಳಗಬಹುದೆಂದು ಯಾರು ನಿರೀಕ್ಷಿಸಿದ್ದರು? ಯಾರು ಊಹಿಸದ; ನಿರೀಕ್ಷಿಸಿರದ ಬದುಕು ಇವರದಾಗಿತ್ತು. ಕಾಲಚಕ್ರದ ತೀವ್ರಗತಿಯಲ್ಲಿ ಜೀವನದ ಏರಿಳಿತಗಳನ್ನು ಬದಲಾವಣೆಗಳನ್ನು, ತಿರುವುಗಳನ್ನು ಯಾರಿಗೂ ಹೇಳಲಾಗದು.

ರಹಿಮಾನಮ್ಮ ರೂಪವಂತೆ, ಹದಿನಾರರ ಹರೆಯದಲ್ಲಿ ರಂಗಭೂಮಿಗೆ ರಂಗು ತಂದಿದ್ದರು. ಒಮ್ಮೆ ನೋಡಿದವರು ಕ್ಷಣ ಕಾಲ ಅಪ್ರತಿಮರಾಗಿ ನಿಲ್ಲದವರಿದ್ದಿಲ್ಲ. ಸುಂದರ ರೂಪದಷ್ಟೇ ಸುಂದರ ಕಲೆ. ಹೀಗಾಗಿ ಕಲಾರಸಿಕರನ್ನು ಸಮ್ಮೋಹಗೊಳಿಸಿದ್ದರು. ನೀಳ ಕೇಶರಾಶಿಯಲ್ಲಿ ದ್ರೌಪದಿಯಾಗಿ ರಂಗಕ್ಕೆ ಬಂದಾಗ 'ಚಿತ್ರಾಂಗದಾ' ನಾಟಕದಲ್ಲಿ ಅರ್ಜುನನ ಪ್ರಿಯತಮೆ ಯಾಗಿ, ಸುಂದರಿಯಾಗಿ ಬಂದಾಗಲಾಗಲಿ ಹೇಳ ತೀರದ ರೂಪ, ಉಡುಗೆ, ತೊಡುಗೆ ಎಲ್ಲವೂ ಆಕರ್ಷಕ, ಕಣ್ಣು ಕೊರೆಸು ವಂಥ ಸೌಂದರ್ಯ. ನಿಜವಾಗಿಯೂ ರಾಜಕನ್ನಿಕೆನೋ ಮಹಾರಾಣಿನೋ ಎನ್ನುವಂಥ ಆಕರ್ಷಣೆ ಇವರದಾಗಿತ್ತು. ಆವಾಗಲೇ ಅನೇಕ ನಾಟಕ ಕಂಪನಿಗಳ ಆಹ್ವಾನ ಅವರಿಗೆ ಕಾದಿದ್ದವು. ಆದರೆ ಒಬ್ಬ ಕಲಾವಿದೆಯನ್ನಾಗಿ ಮಾಡಿದ್ದರಿಂದ ಯಂಕರಡ್ಡಿಯವರ 'ಶ್ರೀರಂಜನಿ' ಕಂಪನಿ ಬಿಡಲು ಸಿದ್ದರಿದ್ದಿಲ್ಲ. ಕಂಪನಿ ನಿಂತಾಗ ಬೇರೆಡೆ ಹೋಗುವುದು ಅನಿವಾರ್ಯವಾದಾಗ ರಹಿಮಾನಮ್ಮನವರು ಹಂದಿಗನೂರು ಸಿದ್ರಾಮಪ್ಪನವರ 'ವಿಶ್ವರಂಜನಿ ನಾಟಕ' ಮಂಡಳಿ ಕಂಪನಿಗೆ ಸೇರಿದರು.

'ವಿಶ್ವರಂಜನಿ' ಕಂಪನಿಗೆ ಬಂದ ನಂತರ ಹಂದಿಗನೂರ ಸಿದ್ರಾಮಪ್ಪನವರ ನಿರ್ದೇಶನ, ಮಾರ್ಗದರ್ಶನ ಅಭಿನಯಕ್ಕೆ ಇನ್ನೂ ಹೆಚ್ಚು ತೂಕ ತಂದಿತು. ಅವರ ಕಂಪನಿಯಲ್ಲಿ 'ಅಕ್ಷಯಾಂಬರ' ಭೀಷ್ಮ ಪ್ರತಿಜ್ಞೆ' ನಾಟಕಗಳಲ್ಲಿ ದ್ರೌಪದಿಯಾಗಿ 'ಉತ್ತರ ಭೂಪ'ದಲ್ಲಿ ಸುಧೇಷ್ಣೆಯಾಗಿ 'ಚಿತ್ರಾಂಗದಲ್ಲಿ' ಚಿತ್ರಾಂಗೆಯಾಗಿ ಸಾಮಾಜಿಕ ನಾಟಕಗಳಾದ 'ಬಡತನ ಭೂತ'ದಲ್ಲಿ ನೀಲಾಳಾಗಿ 'ದತ್ತುಪುತ್ರ'ದಲ್ಲಿ ಸುಮತಿಯಾಗಿ ಉತ್ತಮ ಅಭಿನಯ ನೀಡಿ ರಂಗಭೂಮಿಯಲ್ಲಿ ದಾಖಲೆ ನಿರ್ಮಿಸಿದರು. 'ಅಕ್ಷಯಾಂಬರ' 'ಚಿತ್ರಾಂಗದಾ' ಈ ಎರಡೂ ನಾಟಕಗಳ ನಾಯಕಿಯಾಗಿ ಅತ್ಯದ್ಭುತ ಅಭಿನಯ ನೀಡಿದ್ದಾರೆ. 'ಚಿತ್ರಾಂಗದಾ' ನಾಟಕದಲ್ಲಿ ಚಿತ್ರಾಂಗದಾ ವಿಶಿಷ್ಟವಾದ ಪಾತ್ರ, ಪ್ರಾರಂಭದಲ್ಲಿ ಧೈರ್ಯ, ಸ್ಥೈರ್ಯದಿಂದ ಕಠೋರ ಹೃದಯ ದಿಂದಿದ್ದು ನಂತರ ವಸಂತ ರಾಜನ, ಕಾಮ ದೇವನ ಅನುಗ್ರಹ ದಿಂದ ಸುಂದರಿಯಾಗಿ ಅತಿ ಸುಂದರಿಯಾಗಿ ಅರ್ಜುನನ ಪ್ರೇಮ ಪೂಜೆಯಲ್ಲಿ ತನ್ನನ್ನೇ ತಾ ಕರಗಿಸಿಕೊಂಡು ಅನುರಕ್ತಳಾಗುವ ಪ್ರಸಂಗ. ಈ ಎಲ್ಲ ಸಂದರ್ಭಗಳಲ್ಲಿಯೂ ತಮ್ಮ ಪ್ರತಿಭೆಯಿಂದ, ಶ್ರೇಷ್ಠ ಅಭಿನಯದಿಂದ ಪ್ರೇಕ್ಷಕರನ್ನು ಯಾವುದೋ ಲೋಕಕ್ಕೊಯ್ದು ಪರವಶರನ್ನಾಗಿ ಮಾಡುತ್ತಿದ್ದರು.

ಹಂದಿಗನೂರು ಸಿದ್ರಾಮಪ್ಪನವರ ಕಂಪನಿಯಲ್ಲಿ ಸುಮಾರು ಹತ್ತು ವರ್ಷ ಸೇವೆ ಸಲ್ಲಿಸಿ ಮುಂದೆ ಏಣಗಿ ಬಾಳಪ್ಪನವರ 'ಕಲಾವೈಭವ ನಾಟ್ಯ ಸಂಘ', ನಂತರ ಗೋಕಾಕ ಬಸವಣ್ಣೆಪ್ಪನವರ 'ಶರದಾ ನಾಟ್ಯ ಸಂಘ' ಕಂಪನಿಯಲ್ಲಿ ಸೇವೆ ಸಲ್ಲಿಸಿ ನಂತರ ಕೆಲವು ವರ್ಷ 'ಲಲಿತಕಲಾ ನಾಟ್ಯ ಸಂಘ' ಕುಕನೂರ ಎಂಬ ಹೆಸರಿನ ಕಂಪನಿ ಕಟ್ಟಿ ನಾಡಿನಲ್ಲೆಲ್ಲ ಸಂಚರಿಸಿದರು. ಇವರ ಅಭಿನಯ ಕಂಡು ಕುಕನೂರಿನ ಶ್ರೀ ನಂದರಾಜ ಮೇವುಂಡಿ ರಹಿಮಾನಮ್ಮನವರನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ಇವರ ಸಹಾಯ-ಸಹಕಾರದಿಂದ ನಾಡಿನಾದ್ಯಂತ ರಂಗ ಸೇವೆ ಸಲ್ಲಿಸಲು ಸಾಧ್ಯವಾಯಿತು. ಇವರ ಕಂಪನಿಯ ನಾಟಕಗಳೆಂದರೆ 'ಸ್ತ್ರೀರತ್ನ', 'ಭಕ್ತ ಪ್ರಹ್ಲಾದ', 'ಲಂಕಾ ದಹನ', 'ಪ್ರಪಂಚ ಪರೀಕ್ಷೆ', 'ಸಹೋದರಿ', 'ಮಲ ಮಗಳು', 'ತಾಯಿ ಕರುಳು' ಪ್ರಮುಖವಾಗಿದ್ದವು. ತಾಯಿ ಕರುಳು ಗುಲಬರ್ಗಾ, ಬೀದರ, ರಾಯಚೂರ ಜಿಲ್ಲೆಗಳಲ್ಲಿ ಭಾರಿ ಯಶಸ್ವಿ ನಾಟಕವಾಗಿತ್ತು. ಹಳ್ಳಿ ಹಳ್ಳಿಗಳಿಂದ ಜನ ಬರುತ್ತಿತ್ತು. ಈ ನಾಟಕದಲ್ಲಿ ರಹಿಮಾನಮ್ಮನವರದೇ ಪ್ರಮುಖ ಪಾತ್ರವಾಗಿತ್ತು. ನಾಟಕವಿಡೀ ಕರುಣಾ ಹಾಗೂ ಶೋಕರಸಗಳಿಂದ ತುಂಬಿತ್ತು. ಇಡೀ ನಾಟಕದಲ್ಲಿ ಮಾತೃವಾತ್ಸಲ್ಯ ಸ್ಪಷ್ಟವಾಗುವುದೇ ನಾಟಕದ ಕೇಂದ್ರ ಬಿಂದುವಾಗಿತ್ತು. ಆ ಪಾತ್ರವನ್ನು ಹೃದಯ ತಟ್ಟುವಂತೆ ಅಭಿನಯಿಸುತ್ತಿದ್ದರು. ಕೊಪ್ಪಳ ತಾಲ್ಲೂಕಿನ ಗೊಂಡಬಾಳದಲ್ಲಿ ಪ್ರಪ್ರಥಮ ತಮಗೆ ಬಣ್ಣ ಹಚ್ಚಿದ ತಮ್ಮ ಬಣ್ಣದ ಬದುಕಿಗೆ ದಾರಿ ತೋರಿಸಿದ ಯಂಕರೆಡ್ಡಿಯವರ 'ಶ್ರೀ ರಂಜನಿ' ನಾಟ್ಯ ಸಂಘದ ಎದುರಿಗೆ ಇವರ ಕಂಪನಿ ನಾಟಕ ಪ್ರಯೋಗಿಸುವುದು ಅನಿವಾರ್ಯವಾಯಿತು. ಅವರದು 'ದತ್ತು ಪುತ್ರ' ಇವರದು 'ಹರಿಶ್ಚಂದ್ರ' ನಾಟಕ. ಈ ಕಲಾವಿದೆಯ ತಾರಾಮತಿಯ ಪಾತ್ರ ನೋಡಲು ಜನ ಧಾವಿಸಹತ್ತಿತು. ಎದುರಿನ ಕಂಪನಿ ಪ್ರೇಕ್ಷಕರಿಲ್ಲದೇ ನಿಂತಾಗ ಯಂಕರೆಡ್ಡಿ ಮಾಲಿಕರು ಶಿಷ್ಯಳ ಬೆಳವಣಿಗೆ ಪ್ರಶಂಸಿಸುವ ಬದಲು ಬಂದು ಬಡಿದರು, ಅನ್ನ, ಹಾಕಿದ ತಂದೆಯೆಂದು ಅವರ ಬಡಿತ ಸಹಿಸಿಕೊಂಡು ಮೌನವಾಗಿದ್ದುದು ರಹಿಮಾನಮ್ಮನವರ ದೊಡ್ಡ ಗುಣವಾಯಿತು.

ರಹಿಮಾನಮ್ಮನವರು ಅಭಿನಯಿಸಿದ ಪಾತ್ರಗಳಿಗೆ ಲೆಕ್ಕವಿಲ್ಲ. ಎಲ್ಲ ಬಗೆಯ ಪಾತ್ರಗಳಲ್ಲಿ ಕಂಡಿದ್ದಾರೆ. ಪೌರಾಣಿಕ, ಐತಿಹಾಸಿಕ, ನಾಟಕಗಳ ಪಾತ್ರಗಳೇ ಅವರಿಗೆ ಹೆಚ್ಚು ಕೀರ್ತಿತಂದಿವೆ. ಅವರ ಅಭಿನಯದ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಇತ್ತೀಚೆಗೆ ಗುಲಬರ್ಗಾದಲ್ಲಿ ಈ ನಿವೃತ್ತಿ ವಯಸ್ಸಿನಲ್ಲಿಯೂ ನಾಟಕ ಅಕಾಡೆಮಿಯು ಸಂಯೋಜಿಸಿದ 'ಹಸಿರು ಬಳೆ'ಯಲ್ಲಿ ಸಮಸ್ತ

ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿ ಮಾಡಿದ್ದು ನಮ್ಮ ನಾಡಿನ ಹೆಮ್ಮೆಯ ಕಲಾವಿದೆ.

ರಹಿಮಾನಮ್ಮನವರ ರಂಗ ಸೇವೆ ಪರಿಗಣಿಸಿ ಕರ್ನಾಟಕ ಸರಕಾರ 1992ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. 1994ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ನಾಡಿನ ಹೊರನಾಡಿನ ಸಂಘ ಸಂಸ್ಥೆಗಳು ಸನ್ಮಾನ ಪತ್ರ ನೀಡಿ, ನೆನಪಿನ ಕಾಣಿಕೆ ಸಲ್ಲಿಸಿ ಗೌರವಿಸಿವೆ. ಸಾರ್ವಜನಿಕ ಸ್ಥಾನಮಾನಗಳೆಲ್ಲ ಪಡೆದು ಗೌರವಾನ್ವಿತ ಕಲಾವಿದೆಯರಾಗಿದ್ದಾರೆ.

ಕೊಪ್ಪಳ ಜಿಲ್ಲೆಯ ಕುಕನೂರು ಗ್ರಾಮದಲ್ಲಿ ಅನಾಥ ಮೊಮ್ಮಕ್ಕಳನ್ನು ಜೋಪಾನ ಮಾಡುತ್ತ (ದಿ. ಲಲಿತಮ್ಮನವರ ಮಕ್ಕಳನ್ನು) ನಿವೃತ್ತ ಬದುಕು ಕಳೆಯುತ್ತಿದ್ದಾರೆ. ತನ್ನ ಮಕ್ಕಳನ್ನು ಪತಿಯನ್ನು ಅಲಕ್ಷಿಸಿ ನಾಟಕ ಕಂಪನಿಯೇ ಸರ್ವಸ್ವವೆಂದು ಗೃಹ ಸೌಖ್ಯಗಳನ್ನೂ ಕಡೆಗಣಿಸಿ ದುಡಿದಿದ್ದರಿಂದಲೇ ರಹಿಮಾನಮ್ಮ ನಾಟಕ ಲೋಕದ ಬೆಳಕಾಗಿ ಬರುವ ರಂಗಪೀಳಿಗೆಗೆ ಭರವಸೆಯಾಗಿದ್ದಾರೆ. ರಹಿಮಾನ್‌ಜಾನ್ (ರಹಿಮಾನಮ್ಮ ಕಲ್ಮನಿ) ಕನ್ನಡ ನಾಡು ಕಂಡ ಅದ್ಭುತ ನಟಿ, ನಾಟಕ ಕಂಪನಿ ಮಾಲಿಕರಾಗಿ, ಕೊಪ್ಪಳ ಜಿಲ್ಲೆಯ ಉರ್ದು ನೆಲದಲ್ಲಿ ಕನ್ನಡ ಕಂಪಿನ ಹೂಬಳ್ಳಿಗಳನ್ನು ಬೆಳೆಸಿದ ರಂಗ ಕಲಾವಿದೆ. (ಜಿಎಚ್)



ರಹಿಮಾನವ್ವ ಕಲ್ಮನಿ: ಕನ್ನಡ ರಂಗಭೂಮಿ ಕಂಡ ಅನುಪಮ ಅಪರೂಪದ ನಟಿ. 1912ರಲ್ಲಿ ಯಲಬುರ್ಗಿ ತಾಲ್ಲೂಕು ಕುಕನೂರು ಗ್ರಾಮದ ಮುಸ್ಲಿಂ ಕೋಮಿನ ಸಾಮಾನ್ಯ ಮನೆತನದಲ್ಲಿ ಜನಿಸಿದರು. ರಹಿಮಾನಬೀ (ಮೊದಲ ಹೆಸರು) ತಮ್ಮ ಅಮೋಘ ಅಭಿನಯದಿಂದಾಗಿ ಕರ್ನಾಟಕದ ತುಂಬೆಲ್ಲ ಘಮ ಘಮಿಸಿದ್ದಾರೆ.

ತಮ್ಮ 14ನೆಯ ವರ್ಷದಲ್ಲಿಯೇ, ಆಕಸ್ಮಿಕವಾದರೂ ಪ್ರಜ್ಞಾಪೂರ್ವಕವಾಗಿಯೇ ಮುಖಕ್ಕೆ ಬಣ್ಣ ಬಳಿದುಕೊಂಡು ರಂಗಭೂಮಿಗೆ ಪ್ರವೇಶಿಸಿದರು. ಸುಮಾರು ಅರವತ್ತು ವರ್ಷಗಳವರೆಗೂ ಆ ಬಣ್ಣ ಮಾಸದಂತೆ, ಆಳಕದಂತೆ ಕಾಳಜಿವಹಿಸಿ ತತ್ಪರತೆಯಿಂದ ರಂಗಸೇವೆ ಮಾಡಿದ ಹಿರಿಯಜೀವ.

ತಳಕಲ್ಲಿನ ನಾಟಕಪ್ರೇಮಿ ವೆಂಕರಡ್ಡಿಯವರ 'ಕಿತ್ತೂರ ಚೆನ್ನಮ್ಮ' ನಾಟಕದ 'ಚೆನ್ನಮ್ಮ'ನ ಪಾತ್ರಧಾರಿಯಾಗಿ ಮೊದಲ ಬಾರಿಗೆ ರಂಗದ ಮೇಲೆ ಕಾಣಿಸಿಕೊಂಡು, ತಮ್ಮ ಅಭಿನಯ ಕೌಶಲ್ಯದಿಂದ ಪ್ರೇಕ್ಷಕರ ಮನಸೂರೆಗೊಂಡರು. ನೋಡುಗರ ಮೆಚ್ಚುಗೆ ಮಾತುಗಳಿಂದಾಗಿ ಪ್ರೋತ್ಸಾಹಗೊಂಡ ರಹಿಮಾನವ್ವ ರಂಗಭೂಮಿಯ ತುತ್ತತುದಿಗೆ ಏರುವ ಕನಸು ಕಾಣುತ್ತಲೇ, ಸಾಧನೆಯ ಮಾರ್ಗದಲ್ಲಿ ಬಲು ಎಚ್ಚರಿಕೆಯಿಂದ ದೃಢವಾಗಿ ಹೆಜ್ಜೆ ಇಡಲಾರಂಭಿಸಿದರು, ತಮ್ಮ ಪ್ರತಿಭೆಯ ಸಮರ್ಪಕ ಬಳಕೆಯ ಬಗೆಗೂ ಗಾಢವಾಗಿ ಯೋಚಿಸತೊಡಗಿದರು. ರಂಗಾಭಿನಯದ ಎಲ್ಲ ಸಾಧ್ಯತೆಗಳ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡುವಾಗ ಹೊಳೆದ ಸುಳಿದ ಹೊಸ, ಹೊಸ ಆಲೋಚನೆಗಳಿಗೆ ಮೂರ್ತತೆ ತರುವಲ್ಲಿ ತೊಡಗಿದರು. ಹಾಗೆಯೇ, ತಮ್ಮೊಳಗೆ ಸುಪ್ತವಾಗಿದ್ದ 'ಕಲಾವಿದೆ'ಯ ಇರುವಿಕೆ ಗ್ರಹಿಸಿ ಭರವಸೆ ತಾಳಲಾರಂಭಿಸಿದರು. ಮೊದಮೊದಲು ಪೌರಾಣಿಕ ಪಾತ್ರಗಳಿಗೆ ತಮ್ಮನ್ನು ಬಂಧಿಸಿಕೊಂಡಿದ್ದ ಇವರು ಅನಂತರ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳ ಪಾತ್ರಗಳತ್ತ ಆಕರ್ಷಿತರಾದರು.

ಇವರ ಕಲಾಪ್ರತಿಭೆ ಬೆಳಗಲು ಅವಕಾಶ ಮಾಡಿಕೊಟ್ಟ ಕೀರ್ತಿ ರಂಗಶ್ರೇಷ್ಠರಾದ ದಿ. ಕಂದಗಲ್ಲು ಹನುಮಂತರಾಯ ಹಾಗೂ ಹಂದಿಗನೂರು ಸಿದ್ರಾಮಪ್ಪ ಅವರಿಗೆ ಸಲ್ಲುತ್ತದೆ.

'ರಕ್ತ-ರಾತ್ರಿ' ಹಾಗೂ 'ಅಕ್ಷಯಾಂಬರ' ನಾಟಕಗಳ ದ್ರೌಪದಿ ಮತ್ತು 'ಚಿತ್ರಾಂಗದ'ದಲ್ಲಿಯ 'ಚಿತ್ರಾಂಗದ' ಪಾತ್ರಗಳಲ್ಲಿಯ ಇವರ ಅಭಿನಯ ತುಂಬ ಅದ್ಭುತವಾದದ್ದು. 'ಝಾಂಸಿ ಲಕ್ಷ್ಮೀಬಾಯಿ', 'ಟಿಪ್ಪು ಸುಲ್ತಾನ', 'ಬೆಳವಡಿ ಮಲ್ಲಮ್ಮ' ಮುಂತಾದ ಐತಿಹಾಸಿಕ ನಾಟಕಗಳು ಹಾಗೂ ಸಾಮಾಜಿಕ ನಾಟಕಗಳಾದ 'ತಾಯಿ ಕರುಳು', 'ಬಡತನದ ಭೂತ', 'ತಾವರೆಯ ತೊಟ್ಟಿಲು' ಮತ್ತು 'ಅಗ್ನಿಕಮಲ'ಗಳಲ್ಲಿಯ ನಟನೆ ನೋಡುಗರ ಚಿತ್ತಭಿತ್ತಿಯ ಮೇಲೆ ರಹಿಮಾನವ್ವನವರನ್ನು ಸ್ಥಾಯಿಯಾಗಿರಿಸಿವೆ. ಈ ನಾಟಕಗಳ ಸವಿಯುಂಡ ಹಳೆಯ ತಲೆಮಾರಿನವರಿಗೆ ಈಗಲೂ ರಹಿಮಾನವ್ವ ದ್ರೌಪದಿ, ಚಿತ್ರಾಂಗದೆ, ಚೆನ್ನಮ್ಮ, ಮಲ್ಲಮ್ಮ, ಲಕ್ಷ್ಮೀ ಆಗಿಯೇ ಕಾಣುತ್ತಾರಂತೆ. ಬಹುಶಃ ಇದು ಅವರಲ್ಲಿರುವ ಅಮೋಘ ಕಲಾವಂತಿಕೆಗೆ ನಿದರ್ಶನ.

1947ರ ಸುಮಾರಿಗೆ ಇವರು ತಮ್ಮದೇ ಆದ ನಾಟಕ ಕಂಪನಿ 'ಲಲಿತಕಲಾ ನಾಟ್ಯ ಸಂಘ' ಸ್ಥಾಪಿಸಿ ಸುಮಾರು 25 ವರ್ಷಗಳವರೆಗೆ ಕರ್ನಾಟಕದ ಪ್ರಮುಖ ನಗರಗಳಲ್ಲಿ ತಮ್ಮ ಖಾಸಾ ನಾಟಕಗಳನ್ನು ಜನಪ್ರಿಯಗೊಳಿಸಿದರು. 'ಗುಣಸಾಗರಿ', 'ಲಂಕಾದಹನ', 'ಸ್ತ್ರೀ ರತ್ನ' ಹಾಗೂ 'ಹರಿಶ್ಚಂದ್ರ' ಮುಂತಾದವುಗಳ ಪ್ರಯೋಗಗಳಿಂದಾಗಿ, ವಸ್ತು, ತಂತ್ರ ಹಾಗೂ ಅಭಿನಯದಿಂದಾಗಿ ಕನ್ನಡ ರಂಗಭೂಮಿ ಇತಿಹಾಸದಲ್ಲಿ ರಹಿಮಾನವ್ವ ದಾಖಲಾಗಿದ್ದಾರೆ. ಸಾರ್ವಜನಿಕ ಬದುಕಿನಲ್ಲೂ ಆಸಕ್ತಿ ವಹಿಸಿ ಒಂದು ಅವಧಿಗೆ ತಾಲ್ಲೂಕಾ ಅಭಿವೃದ್ಧಿ ಮಂಡಳದ ಸದಸ್ಯೆಯಾಗಿಯೂ ಆಯ್ಕೆಯಾಗಿದ್ದರು.

ಇವರು ತಮ್ಮ ಶ್ರೇಷ್ಠ ಅಭಿನಯಕ್ಕಾಗಿ, ಸಲ್ಲಿಸಿದ ರಂಗ ಸೇವೆಗಾಗಿ ಕರ್ನಾಟಕ ರಾಜ್ಯ ಸರಕಾರ ನೀಡಿದ '1991ನೆಯ ಸಾಲಿನ ರಾಜ್ಯೋತ್ಸವ ಪ್ರಶಸ್ತಿ, ಫಲಕ ಹಾಗೂ ನಗದು ಬಹುಮಾನ' ಪಡೆದಿದ್ದಾರೆ.


ಪ್ರತಿಭಾವಂತ ರಂಗನಟ ಬಾಬು (ಮಗ) ಹಾಗೂ ಮಮತಾ (ಮೊಮ್ಮಗಳು) ರಹಿಮಾನವ್ವ ಅವರ ರಂಗಭೂಮಿಯ ಕನಸುಗಳಿಗೆ ಬಣ್ಣ ಕಲೆಸುತ್ತಾ ಅವುಗಳನ್ನು ಸಾಕಾರಗೊಳಿಸಲು ತಮ್ಮ

ತಮ್ಮ ನೆಲೆಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದಾರೆ. ಹವ್ಯಾಸಿ ಕಲಾವಿದರಿಗೆ, ಆಸಕ್ತರಿಗೆ ಸಲಹೆ-ಮಾರ್ಗದರ್ಶನ ನೀಡುತ್ತಾ ವೃತ್ತಿ ರಂಗಭೂಮಿಯಿಂದ ನಿವೃತ್ತರಾಗಿ 'ನಾಟಕ ಪ್ರವೃತ್ತಿ'ಯನ್ನು ಕಾಯ್ದುಕೊಂಡು ಕುಕನೂರಲ್ಲಿ ಇವರು ಕಾಲ ಕಳೆಯುತ್ತಿದ್ದಾರೆ. ಕಲ್ಮನಿ ರಹಿಮಾನವ್ವ.

(ಆರ್‌ಎ)

ರಾ

ರಾಘವೇಂದ್ರ ಅನಂತರಾವ ಕುಲಕರ್ಣಿ: ಹೈದ್ರಾಬಾದ ಕರ್ನಾಟಕ ಭಾಗದ ಯುವ ತಬಲಾ ಪಟು. ಇವರು ಮೂಲತಃ ರಾಯಚೂರ ಜಿಲ್ಲೆ ಲಿಂಗಸೂರು ತಾಲ್ಲೂಕಿನ ನವಲಿ ಗ್ರಾಮ ದವರು. 1973 ಅಕ್ಟೋಬರದಲ್ಲಿ ತಂದೆ ಅನಂತರಾವ ತಾಯಿ ಕೃಷ್ಣಾಬಾಯಿಯವರ ಪುತ್ರನಾಗಿ ಜನಿಸಿದರು.



ಇವರು ತಮ್ಮ ಪ್ರಾಥಮಿಕ ಶಿಕ್ಷಣ ಮತ್ತು ಡಿಪ್ಲೊಮಾ (ಎಲೆಕ್ಟ್ರಾನಿಕ್ಸ್) ಪದವಿಯನ್ನು ರಾಯಚೂರಿನಲ್ಲಿ ಅಭ್ಯಾಸ ಮಾಡಿದ್ದಾರೆ. ಮೊದಲಿನಿಂದಲೂ ಮನೆಯಲ್ಲಿ ಭಜನೆ ಮುಂತಾದ ಧಾರ್ಮಿಕ ಮತ್ತು ಸಂಗೀತ ಕಾರ್ಯಕ್ರಮದಿಂದ ಸಂಗೀತದ ಕಡೆಗೆ ಹೆಚ್ಚು ಗಮನ ಹರಿಸಿದರು. ಪ್ರಪ್ರಥಮವಾಗಿ ಪಂ. ರಾಮಾಚಾರ ಕಾಖಂಡಕಿಯವರ ಬಳಿ ತಬಲಾ ಶಿಕ್ಷಣ ಪ್ರಾರಂಭಿಸಿ ನಂತರ ಪಂ. ಚಕ್ರಪಾಣಿ, ಪಂ. ರಾಜಗೋಪಾಲ ಕಲ್ಲೂರಕರ್, ದಿ. ರಾಜು ಕುಲಕರ್ಣಿಯವರ ಹತ್ತಿರ ಅಜರಾಡ ಮತ್ತು ದಿಲ್ಲಿ ಘರಾನವನ್ನು 25 ವರ್ಷಗಳ ತಬಲಾ ಅನುಭವ ವನ್ನು ಪಡೆದಿದ್ದಾರೆ.

ಸುಮಾರು ನಾಲ್ಕು ಆಡಿಯೋ ಕ್ಯಾಸೆಟ್‌ಗಳಿಗೆ ತಬಲಾ ಸಾಥ್ ಮಾಡುತ್ತಾರೆ. ಶಾಸ್ತ್ರೀಯ ಹಾಗೂ ಸುಗಮ ಸಂಗೀತಕ್ಕೆ ತಬಲಾ ಸಾಥಿಗಾಗಿ ಹೆಸರಾದ ಇವರು ತಬಲಾದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ವಿದ್ವತ್ ಪರೀಕ್ಷೆಯನ್ನು 1993ರಲ್ಲಿ ಹಿಂದಿ ಸಾಹಿತ್ಯ ಸಮ್ಮೇಳನ ಅಲಹಾಬಾದ (ಉತ್ತರ ಪ್ರದೇಶ) ದಿಂದ ಸಂಗೀತ ಮಾರ್ತಾಂಡ, ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾಲಯ, ಖೈರಾಘಡ್ (ಛತ್ತಿಸಗಡ್) ದಿಂದ ಎಂ.ಎ. ಪದವಿಯನ್ನು ಪಡೆದು ಆಕಾಶವಾಣಿ ಮತ್ತು ದೂರದರ್ಶನದ 'ಬಿ' ಹೈ ಗ್ರೇಡ್ ಕಲಾವಿದ ರಾಗಿದ್ದಾರೆ.

ಕರ್ನಾಟಕದ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಬಿಜಾಪೂರ, ಬೀದರ, ಗುಲಬರ್ಗಾ, ಬೆಳಗಾಂವದಲ್ಲಿ ಮತ್ತು ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ನಾಡಿನ ಹಿರಿಯ ಕಲಾವಿದರ ಜೊತೆಗೆ ತಬಲಾ ಸಾಥ್ ನೀಡಿದ್ದಾರೆ.

1997 ರಿಂದ ಸ್ವರಾಲಯ ತಬಲಾ ವಿದ್ಯಾಲಯವನ್ನು ಪ್ರಾರಂಭಿಸಿ ವಿದ್ಯಾಲಯದಿಂದ ದಾಸವಾಣಿ ಮತ್ತು ವಚನವಾಣಿ ಕಾರ್ಯಕ್ರಮ 'ಸುಗಮ ಸಂಗೀತ ತರಬೇತಿ ಶಿಬಿರ' ತಬಲಾ ತರಬೇತಿ ಶಿಬಿರ ಇತ್ಯಾದಿ. ಅನೇಕ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡಿದ್ದಾರೆ. ಹಲವಾರು ವಿದ್ಯಾರ್ಥಿಗಳು ಈ ತಬಲಾ ವಿದ್ಯಾಲಯದಲ್ಲಿ ಶಿಕ್ಷಣ ಪಡೆದು ರಾಜ್ಯಮಟ್ಟದ ವರೆಗೆ ಬೆಳೆದಿದ್ದಾರೆ.

ಇವರು ತಬಲಾ ವಾದಕರಲ್ಲದೆ, ರಂಗಭೂಮಿ ಕಲಾವಿದ ರಾಗಿದ್ದಾರೆ. ಹಲವು ನಾಟಕಗಳಲ್ಲಿ ಅಭಿನಯ ಮಾಡಿದ್ದಾರೆ. ಅವುಗಳಲ್ಲಿ ಗ್ರೀಕ್ ನಾಟಕ 'ಮಿಡಿಯಾ', 'ಗ್ರಹಣ', ಸುರಪುರ ವೆಂಕಟಪ್ಪ ನಾಟಕದಲ್ಲಿ ಅಭಿನಯಿಸಿ ರಂಗಭೂಮಿಯಲ್ಲಿ ಹೆಸರು ಮಾಡಿದ್ದಾರೆ. ಅಲ್ಲದೇ ಕಳೆದ 8 ವರ್ಷಗಳಿಂದ ಹಲವಾರು ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ. ಪ್ರತಿ ವರ್ಷ ನಡೆಯುವ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾದ ಯುವ ಜನೋತ್ಸವದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಏಕಾಂಕ ನಾಟಕ, ಪ್ರಹಸನ, ಮೂಕಾಬಿನಯಕ್ಕೆ ನಿರ್ದೇಶನ ಮಾಡಿದ್ದಾರೆ. ಈ ಮೇಲಿನ ನಾಟಕಗಳು ಹಲವಾರು ಬಹುಮಾನಗಳನ್ನು ಪಡೆದು ಕೊಂಡಿವೆ.

ಇವರ ಸಾಧನೆಯನ್ನು ಕಂಡು ಅನೇಕ ಸಂಘ-ಸಂಸ್ಥೆಗಳು ಇವರಿಗೆ ಸನ್ಮಾನ ಮತ್ತು ಪ್ರಶಸ್ತಿಯನ್ನು ನೀಡಿವೆ. 2008ರಲ್ಲಿ ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾ, 2011ರಲ್ಲಿ 'ಕಲಾ ಜ್ಯೋತಿ' ಸ್ವರ ಮಾಧುರಿ ಸಂಗೀತ ವಿದ್ಯಾಲಯ, 'ತಬಲಾ ಆರಾದಾಕ' ಪ್ರಶಸ್ತಿಯನ್ನು ನೀಡಿದ್ದಾರೆ. 17.01.2012ರಂದು ಸೋಲಾಪೂರದಲ್ಲಿ ಶ್ರೀ ರವಿಶಂಕರ ಗುರೂಜಿಯವರ ಸಾನಿಧ್ಯ



ಖ್ಯಾತ ಸುಗಮ ಸಂಗೀತಗಾರ ದಿ.ಸಿ. ಅಶ್ವಥ ರವರಿಗೆ ತಬಲಾ ಸಾಥಿ ನೀಡುತ್ತಿರುವುದು

ದಲ್ಲಿ ನಡೆದ 'ತಾಲ ನಿನಾದ' ಗಿನ್ನಿಸ್ ದಾಖಲೆಯ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಸುಮಾರು 1548 ತಬಲಾ ಹಾಗೂ ಪಖವಾಜ ಕಲಾವಿದರು ಒಂದೇ ವೇದಿಕೆಯಲ್ಲಿ ನುಡಿಸಿದ ಕಾರ್ಯಕ್ರಮದಲ್ಲಿ ಇವರೂ ಕೂಡ ಭಾಗವಹಿಸಿದ್ದಾರೆ.

ಪ್ರಸ್ತುತ ಇವರು ನೂತನ ವಿದ್ಯಾಲಯದ ಪದವಿ ಮಹಾವಿದ್ಯಾಲಯದಲ್ಲಿ ಕಳೆದ 1997 ರಿಂದ ಸಂಗೀತ ಉಪನ್ಯಾಸಕ ಮತ್ತು ತಬಲಾ ಸಾಥಿದಾರರೆಂದು ಕಾರ್ಯನಿರ್ವಹಿಸುತ್ತಿದ್ದಾರೆ.

(ಜಡಿ)

ರಾಘವೇಂದ್ರ ಬಯ್ಯಾಪುರ: ಸಾಂಪ್ರದಾಯಿಕ ಚಿತ್ರಕಲೆ, ನಿಸರ್ಗ ಚಿತ್ರಕಲೆ, ಭಾವಚಿತ್ರ, ವರ್ಣಸಂಯೋಜನೆ ಹಾಗೂ ವಿಜಯ ನಗರ ಶೈಲಿಯನ್ನು ರೂಢಿಸಿಕೊಂಡಿರುವ ಅಪ್ಪಟ ದೇಶಿ ಪ್ರತಿಭೆಯ ವಿಶಿಷ್ಟ ಕಲಾವಿದ.

ಕೊಪ್ಪಳ ಜಿಲ್ಲೆ ಗಂಗಾವತಿಯ ರಾಘವೇಂದ್ರ ಬಯ್ಯಾಪುರರು, ಲಲಿತಕಲೆ, ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವೀಧರರು. ಶ್ರದ್ಧೆಯಿಂದ ಕಲೆಯನ್ನು ರೂಢಿಸಿಕೊಂಡು ಎಲೆಮರೆಯ ಕಾಯಿಯಂತೆ ಕಲಾಸೇವೆ ಮಾಡುತ್ತಿರುವ ಇವರು, ಸಾಂಪ್ರದಾಯಿಕ ಅರ್ಚಕ ಮನೆತನದ ರಾಮಾಚಾರ್ಯರ ಪುತ್ರ, ಧಾರ್ಮಿಕ ವಾತಾವರಣದಲ್ಲಿ ಬೆಳೆದವರು, ಮನೆಯಲ್ಲಿ ಹಬ್ಬ ಹರಿದಿನಗಳಲ್ಲಿ ತಂದೆ ಗೋಡೆ ಮೇಲೆ ಬಿಡಿಸುತ್ತಿದ್ದ ಗಣಪತಿ, ಆಂಜನೇಯ, ಲಕ್ಷ್ಮೀ, ಸರಸ್ವತಿ ಚಿತ್ರಗಳು ಕುತೂಲಹದಿಂದ ಗಮನಿಸುತ್ತಾ ಚಿತ್ರಕಲೆಯ ಬಗ್ಗೆ ಅಭಿರುಚಿ ಮೂಡಿತು.

ಗದುಗಿನ ವಿಜಯ ಕಲಾ ಮಂದಿರದಲ್ಲಿ ಚಿತ್ರಕಲೆಯ ಶಿಕ್ಷಣ ಪಡೆದು ಡಿಪ್ಲೊಮಾ ಪದವಿ ಸಂಪಾದಿಸಿದರು. ಅಷ್ಟೇ ಅಲ್ಲ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಕೊಪ್ಪಳ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಗಳಿಸಿದ ಸಾಧನೆ ಇವರದು.

ಇವರ ಕಲಾಶೈಲಿ, ವಿಷಯ ವಸ್ತುವನ್ನು ಆಯ್ದುಕೊಳ್ಳುವ ವಿಧಾನ ನಿಸರ್ಗದ ಬಗ್ಗೆ ಅವರ ಒಲವು ಅವರದೇ ಆದ ನಿರೂಪಣೆಯಲ್ಲಿ ಸಮರ್ಪಕವಾಗಿ ಚಿತ್ರಗಳಲ್ಲಿ ಸಂಯೋಜನೆಗೊಳಿಸಿ, ಸ್ವಂತಿಕೆ ಉಳಿಸಿಕೊಂಡಿರುವ ಇವರ ದೈತ್ಯ ಪ್ರತಿಭೆ ಬೆರಗುಗೊಳಿಸುವಂತಹುದು.

ಕಲೆ, ಸಾಹಿತ್ಯ, ಸಂಗೀತ ಸಮಾಜಸೇವೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಬಯ್ಯಾಪುರರು ಜೇಸಿ ಸಂಸ್ಥೆಯ ಪ್ರತಿಭಾ ಪುರಸ್ಕಾರ, ಲಲಿತಕಲಾ ಅಕಾಡೆಮಿ ವಿದ್ಯಾರ್ಥಿ ಪುರಸ್ಕಾರ, ಹಂಪಿ ಕನ್ನಡ ವಿ.ವಿಯಲ್ಲಿ ಜರುಗಿದ ಅಖಿಲ ಭಾರತೀಯ ರಾಷ್ಟ್ರೀಯ ಚಿತ್ರಕಲಾ ಶಿಬಿರದಲ್ಲಿ ಪಾಲ್ಗೊಂಡು ಓರ್ವ ಸೃಜನಶೀಲ ಕಲಾವಿದರಾಗಿ ರೂಪುಗೊಂಡಿದ್ದಾರೆ.

ಸಾಂಸ್ಕೃತಿಕ ಉತ್ಸವಗಳ ವೇದಿಕ ನಿರ್ಮಾಣ, ಮನೆಗಳ ಒಳಾವರಣ ಕಲೆ, ವಿಡಿಯೋಗ್ರಫಿಯಲ್ಲಿ ನಿಪುಣತೆ ಹೊಂದಿರುವ ರಾಘವೇಂದ್ರರ ಕಲಾ ಪ್ರೌಢಿಮೆಯನ್ನು ಹಿಂದಿ ಚಿತ್ರರಂಗದವರು 'ಚೈನಾ ಗೇಟ್' ಚಿತ್ರದ ಭವ್ಯ ಬಂಗಲೆಯ ದೃಶ್ಯಗಳಲ್ಲಿ ಬಳಸಿಕೊಂಡಿದ್ದು ಇವರ ಸಾಧನೆಯ ಮುಕುಟಕ್ಕೆ ಗರಿ ಮೂಡಿಸಿದೆ.

ಪಂಪಾ ವಿರೂಪಾಕ್ಷ ಕಲ್ಯಾಣ ಮತ್ತು ಮಂತ್ರಾಲಯದ ಶ್ರೀ ರಾಘವೇಂದ್ರರ ವಿಜಯನಗರ ಶೈಲಿಯ ಇವರ ಕೃತಿಗಳು ಅತ್ಯುತ್ತಮ ಪ್ರಶಂಸೆ ಪಡೆದುವಗಳಾಗಿವೆ. ಕಲಾ ಶೈಲಿ ಮತ್ತು ವಿಷಯ ವಸ್ತುವನ್ನು ಚರಿತ್ರೆಯಿಂದ ಆಯ್ದುಕೊಂಡರೂ, ಅವು ನೇರ ವಿಜಯ ನಗರ ಶೈಲಿಯ ಪ್ರತಿರೂಪಗಳಲ್ಲ ತಮ್ಮದೇ ನಿರೂಪಣೆಯಲ್ಲಿ ಅರ್ಥಗರ್ಭಿತವಾಗಿ ಸಂಯೋಜನೆಗೊಳಿಸಿ, ತಮ್ಮ ಸ್ವಂತಿಕೆ ಉಳಿಸಿಕೊಂಡಿರುವುದು ಬಯ್ಯಾಪುರರ ವಿಶೇಷ.

ಬೆಂಗಳೂರಿನ ಚಿತ್ರಕಲಾ ಪರಿಷತ್ತು ರಾಯಚೂರಿನ ಶೃತಿ ಸಾಹಿತ್ಯ ಸಮ್ಮೇಳನ, ಗಂಗಾವತಿಯ ಸಾಂಸ್ಕೃತಿಕ ಕಲಾಮೇಳ, ಗದಗ ಧಾರವಾಡ, ಕನ್ನಡ ವಿವಿ. ವಿದ್ಯಾರಣ್ಯ ಕಮಲಾಪುರ ಮುಂತಾದ ಸ್ಥಳಗಳಲ್ಲಿ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿ, ಕಲಾಸಕ್ತರ ಮನಸೂರೆಗೊಳಿಸಿದ್ದಾರೆ.

ಜೀವನ ನಿರ್ವಹಣೆಗಾಗಿ ಸ್ಥಿರ ಚಿತ್ರ, ವಿಡಿಯೋ ಚಿತ್ರಗಳ ಛಾಯಾಗ್ರಾಹಕರಾಗಿ ದುಡಿಯುತ್ತಿದ್ದಾರೆ. ವರ್ಣಚಿತ್ರ ಸಂಯೋಜನೆ, ನೈಫ್ ವರ್ಕ್ ಕಲಾಪ್ರಕಾರಗಳಲ್ಲಿ ತಮ್ಮನ್ನು ತೊಡಿಗಿಸಿಕೊಂಡಿರುವರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಸ್ಕಾರ ಭಾರತಿ ಸಂಸ್ಥೆ ಆಯೋಜಿಸಿದ ರಾಷ್ಟ್ರೀಯ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿ, ರಚಿಸಿದ 'ಭವ್ಯ ಭಾರತ' ಕಲಾಕೃತಿ ಬಹು ಕಲಾಸಕ್ತರ ಮೆಚ್ಚುಗೆ ಪಡೆದಿದೆ.

ಸಂಸ್ಕಾರ ಭಾರತಿ ಚಿತ್ರಕಲಾ ವಿಭಾಗದ ನಿರ್ದೇಶಕರಾಗಿ, ಸೃಷ್ಟಿ ಕಲಾ ಮಂಡಲದ ಅಧ್ಯಕ್ಷರಾಗಿರುವ ಇವರು 1987ರಿಂದ ಹವ್ಯಾಸಿ ಕಲಾ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರ ನಡೆಸಿ ಕಲಾ ಸರಸ್ವತಿಯ ಸೇವೆ ಸಲ್ಲಿಸುತ್ತಿದ್ದಾರೆ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿಯೂ ಪರಿಣಿತಿ ಹೊಂದಿದ್ದು ಆನೆಗೊಂದಿ ಉತ್ಸವ ಮಂಟಪ, ಕನಕಗಿರಿ ಹಾಗೂ ಪರಿದಾಸ ಭಕ್ತಿಗೀತೆಗಳ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ಸಿದ್ಧಪಡಿಸಿದ್ದಾರೆ.


(ವಿಜಇ)

ರಾಘವೇಂದ್ರ ಬಡಶೇಶಿ: ಸರಳ ಸಜ್ಜನಿಕೆಯ ವ್ಯಕ್ತಿ. ಇವರು 1978 ಎಪ್ರಿಲ್ 27ರಂದು ಜನಿಸಿದರು. ತಂದೆ ಕಿಶನರಾವ ಬಡಶೇಶಿ. ತಾಯಿ ಶ್ರೀಮತಿ ಶಾಂತಾ ಕಿಶನರಾವ ಇವರು ಒಳ್ಳೆಯ ಹಾಡುಗಾರ್ತಿ. ಅಜ್ಜ ಶ್ರೀ ಶ್ರೀನಿವಾಸಾಚಾರ್ಯ ಕೊಳ್ಳೂರ, ಸುರಪುರ ಕ್ಷೇತ್ರವೆಂದರೆ ಈ ಭಾಗದ ಸಂಗೀತ ತವರುಮನೆ. ಮೂಲತಃ ಸುರಪುರ ಗ್ರಾಮದ ಇವರು ಮನೆತನದಿಂದಲೇ ಸಂಗೀತ ಜೀಲು ಅಡಗಿದ್ದ ಶ್ರೀ ರಾಘವೇಂದ್ರ ಬಡಶೇಶಿಯವರ ಅಜ್ಜ ಒಳ್ಳೆಯ ಶಾಸ್ತ್ರೀಯ ಸಂಗೀತ ಬಲ್ಲವರಾಗಿದ್ದರು. ಹಾರ್ಮೋನಿಯಂ ವಾದಕರು ಹೌದು. ವಂಶ ಪಾರಂಪರಿಕವಾಗಿ ಬಂದ ವಿದ್ಯೆ ಮೊಮ್ಮಗನಲ್ಲಿ ಮಿಂಚಿತು. ಬಾಲ್ಯದಿಂದಲೇ ಶಾಸ್ತ್ರೀಯ ಸಂಗೀತದಲ್ಲಿ ಒಲವು ತೋರಿಸಿ

ಪ್ರಾರಂಭಿಕ ಶಿಕ್ಷಣವನ್ನು ಶ್ರೀ ರಮೇಶ ಕುಲಕರ್ಣಿಯವರ ಹತ್ತಿರ ಮಾಡಿದರು. ಮುಂದೆ ಶ್ರೀಮತಿ ಸರೋಜ ಅನಗರಕರ್‌ರವರ ಹತ್ತಿರ ಸಂಗೀತ ಕಲಿಯಲು ಆರಂಭಿಸಿದರು. ಎಂಟು ವರ್ಷಗಳ ಕಾಲ ಸತತವಾಗಿ ಸಾಧನೆ ಗೈದ ಇವರು ಆಕಾಶವಾಣಿ 'ಬಿ' ಶ್ರೇಣಿಯ ಕಲಾವಿದರಾಗಿದ್ದು, ವೃತ್ತಿಯಿಂದ ಇವರು ಖಜಾನೆ ಇಲಾಖೆಯಲ್ಲಿ ಸರಕಾರಿ ಸೇವೆಯಲ್ಲಿದ್ದಾರೆ.

ಸಂಗೀತ ಸೇವೆಗಾಗಿ ಅನೇಕ ವಿದ್ಯಾರ್ಥಿಗಳನ್ನು ಪಾಠ ಹೇಳಿ ಕೊಡುವದರ ಮೂಲಕ ಸೇವೆಗೈಯುತ್ತಿದ್ದಾರೆ. ಶಾಸ್ತ್ರೀಯ ಸಂಗೀತದಲ್ಲಿ ಇವರಿಗೆ ತುಂಬಾ ಒಲವು ಅಲ್ಲದೆ ದಾಸವಾಣಿ ಮತ್ತು ಅಭಂಗವಾಣಿ ಹಿಂದಿ ಭಜನೆಗಳನ್ನು, ವಚನಗಳಲ್ಲಿಯೂ ಇವರು ನೀರು ಕುಡಿದಂತೆ ಹಾಡುವರು. ಕರ್ನಾಟಕದ ಹಲವಾರು ಕಡೆಗೆ ಕಾರ್ಯಕ್ರಮ ನೀಡಿ ಹೆಸರುವಾಸಿಯಾಗಿದ್ದಲ್ಲದೆ ನೆರೆ ರಾಜ್ಯದಲ್ಲಿಯೂ ಇವರು ಚಿರಪರಿಚಿತರು.

(ಆರ್‌ಕೆಕೆ)



ರಾಜಕುಮಾರ ಎಸ್.ಕೆ.: ಚಿತ್ರಕಲೆಯ ಪ್ರಯೋಗಶೀಲ ಕಲಾವಿದ. ಕಲಬುರ್ಗಿಯ ಯುವ ಪ್ರತಿಭೆ. ಇವರು, ಚಿಕ್ಕವರಿದ್ದಾಗಲೇ ಚಿತ್ರ ಕಲೆಯಲ್ಲಿ ಮತ್ತು ನಾಟಕದಲ್ಲಿ ಆಸಕ್ತಿ ಹೊಂದಿದ್ದು, ಮನೆಯವರ ಸಹಕಾರದಿಂದ ಇವರಲ್ಲಿ ಸುಪ್ತವಾಗಿ ಹುದುಗಿದ್ದ ಚಿತ್ರಕಲೆ ಮತ್ತು ನಾಟಕ ಅಭಿನಯ ಕಲಾಪ್ರತಿಭೆ ಹೊರ ಹೊಮ್ಮಲು ಅವಕಾಶವಾಗಿದೆ. ಇವರು ಭಾವನಾತ್ಮಕ, ವೈಚಾರಿಕ ವಿಷಯಗಳನ್ನು ತಮ್ಮ ಕಲಾಕೃತಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಚಿತ್ರಕಲೆಯೊಂದಿಗೆ ನಾಟಕದಲ್ಲಿಯೂ ಆಸಕ್ತಿ ಉಳಿಸಿಕೊಂಡಿದ್ದಾರೆ. ತಮ್ಮ ಕಲಾಕೃತಿಗಳಲ್ಲಿ ಜೀವನದ ಸಂಗಾತಿಯಾಗುವ ಪ್ರಿಯತಮೆಯ ಕಣ್ಣಿನಲ್ಲಿ ತಾನು ತುಂಬಿರಬೇಕೆನ್ನುವ ಭಾವವನ್ನು ಚಂದ್ರನ ರೂಪದಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಬದುಕಿನ ಭಿನ್ನತೆ ಹಾಗೂ ಭವ್ಯತೆಗಳನ್ನು ಆಳವಾಗಿ ಆಲೋಚಿಸುವ ವರ್ಣಗಳು ಪಾರದರ್ಶಕತೆಯನ್ನು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸುವ ಮೂಲಕ ದಿಟ್ಟ ಹೆಜ್ಜೆಗಳನ್ನಿಟ್ಟಿರುವುದು ಗಮನಾರ್ಹ ಅಂಶವಾಗಿದೆ.

ಇವರ ಪ್ರತಿಭೆಗೆ ಚಿಕ್ಕ ವಯಸ್ಸಿನಲ್ಲೇ ಹಲವಾರು ಪ್ರಸಸ್ತಿ ಗೌರವಗಳು ಲಭಿಸಿದ್ದು, 2001ರಲ್ಲಿ ಸೆಂಟ್ರಲ್ ಎಕ್ಸೈಜ್ ರಿಕ್ರಿಯೇಷನ್ ಕ್ಲಬ್ ಮತ್ತು ಮೆರಿಟ್ ಅವಾರ್ಡ್ ದಿ ಐಡಿಯಲ್ ಫೈನ್ ಆರ್ಟ್ ಸೊಸೈಟಿ, 2002ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯ, ನ್ಯಾಷನಲ್ ಸರ್ವಿಸ್ ಸ್ಕೀಮ್ ಅವಾರ್ಡ್, 2003ರಲ್ಲಿ



'ಶೀರ್ಷಿಕೆ ರಹಿತ' ಅಕ್ರೇಲಿಕ್ ಮಾಧ್ಯಮ

ರಾಜ್ಯೋತ್ಸವ ಪ್ರಶಸ್ತಿಗಳನ್ನು ಗಳಿಸುವ ಮೂಲಕ, ಕಲಾಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ.

ಇವರು ರಚಿಸಿರುವ ಕಲಾಕೃತಿಗಳು ಅಕ್ರಾಲಿಕ್ ಮಾಧ್ಯಮದಲ್ಲಿವೆಯಲ್ಲದೆ, ಪೇಪರ್ ಕಟಿಂಗ್ (ಕೋಲಾಜ್) ಮಿಶ್ರ ಮಾಧ್ಯಮ ಕೂಡ ರಚಿಸಿದ್ದಾರೆ. ಚಿತ್ರಕಲೆಯಲ್ಲಿ ವರ್ಣ ಸಂಯೋಜನೆ ಹಾಗೂ ಹೊಸ ಪ್ರಯೋಗಗಳ ಮೂಲಕ ತಮ್ಮದೇ ಆದ ವಿಶಿಷ್ಠ ಛಾಪನ್ನು ಮೂಡಿಸಿರುವ ರಾಜಕುಮಾರ, ಹೊಸ ಪೀಳಿಗೆಯವರಲ್ಲಿ ಭರವಸೆ ಮೂಡಿಸಿದ ಹೈದರಾಬಾದ ಕರ್ನಾಟಕದ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ.

(ಆರ್‌ಎಲ್)

ರಾಜಕುಮಾರ ಭಾರಸಿಂಗಿ: ಒಬ್ಬ ಪ್ರತಿಭಾವಂತ ಚಿತ್ರಕಲಾವಿದ. ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಮುಡಬಿ ಗ್ರಾಮದವದರು. ತಂದೆ ಬಾಬುರಾವ. ತಾಯಿ ಶಾಂತಮ್ಮ. ಇವರ ಶಿಕ್ಷಣ ಹುಟ್ಟೂರಿನಲ್ಲಿ ಆಯಿತು. ಎಸ್.ಎಸ್.ಎಲ್.ಸಿ. ವರೆಗೂ ಕಲಿಯುತ್ತ ಬಾಲ್ಯದಲ್ಲಿಯೇ ಚಿತ್ರ ಬಿಡಿಸುವ ಹವ್ಯಾಸ ಬೆಳಸಿಕೊಂಡರು. ಅದೇ ಆಸಕ್ತಿಯಿಂದ ಕಲಬುರ್ಗಿಯ ಶ್ರೀ ಶರಣ ಬಸವೇಶ್ವರ ಮಹಾವಿದ್ಯಾಲಯದಲ್ಲಿ, ಚಿತ್ರಕಲಾ ವಾಣಿಜ್ಯ ವಿಭಾಗದಲ್ಲಿ ಪ್ರವೇಶ ಪಡೆದರು.

ಅನಂತರ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ



ಪ್ರಖ್ಯಾತ ಕಲಾವಿದರಾದ ಜೆ. ಎಸ್. ಖಂಡೇರಾವ್ ಅವರ ಶಿಷ್ಯರಾಗಿ ಮತ್ತು ಅವರ ಮಾರ್ಗದರ್ಶನದಲ್ಲಿ ನಿರಂತರ ಕಲೆಗಳ ಪ್ರಯತ್ನದಿಂದ ಎಂ.ಎ. ಫೈನ್ ಆರ್ಟ್ಸ್ ಪದವಿ ಪರೀಕ್ಷೆಯಲ್ಲಿಯೂ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ ಪಡೆದರು.

ಹಳ್ಳಿಯಲ್ಲಿ ಹುಟ್ಟಿ ಬೆಳೆದಿರುವದರಿಂದ ಅಲ್ಲಿನ ಜನರ ಜೀವನ, ಪ್ರಕೃತಿ ಇವರ ಕಲೆಯ ಮೇಲೆ ತುಂಬಾ ಪ್ರಭಾವ ಬೀರಿದೆ. ಆದ್ದರಿಂದ ಅದೇ ತರಹದ ಚಿತ್ರಗಳನ್ನು ಚಿತ್ರಿಸಿದ್ದಾರೆ. ಮತ್ತು ಗೆಳೆಯರ ಬಳಗದೊಂದಿಗೆ, ಹಂಪಿ, ಬಾದಾಮಿ. ಐಹೊಳೆ, ಪಟ್ಟದಕಲ್ಲುಗಳಲ್ಲಿ ಸಂಚರಿಸಿ, ಮೂರ್ತಿ ಶಿಲ್ಪ, ಡ್ರಾಯಿಂಗ್ಸ್‌ಗಳಲ್ಲಿ ಗತಕಾಲದ ವೈಭವಗಳ ಐತಿಹಾಸಿಕ ಸ್ಮಾರಕಗಳ ಜಲವರ್ಣ, ತೈಲವರ್ಣ, ಪೆನ್ಸಿಲ್ಗಳಿಂದ ರೇಖಾ ಚಿತ್ರ, ನಿಸರ್ಗ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇವು ಅನೇಕ ಚಿತ್ರಕಲಾ ಪ್ರದರ್ಶನಗಳಲ್ಲಿ ಆಯ್ಕೆಯಾಗಿವೆ. ಕೆಲವು ಕಲಾಕೃತಿಗಳಿಗೆ ಪ್ರಶಸ್ತಿಗಳೂ ದೊರಕಿವೆ.

ಮೊದಮೊದಲು ಬ್ಲಾಸ್ಟ್ ಎಂಬ ಶೀರ್ಷಿಕೆಯ ಮೇಲೆ, ಅನಂತರ ಫೋಕ್ ಡಾನ್ಸ್ ಎಂಬ ಶಿರ್ಷಿಕೆಯಡಿಯಲ್ಲಿ ಕೆಲವು ಕಲಾಕೃತಿಗಳನ್ನು ರಚಿಸಿದ್ದಾರೆ. ಅನಂತರ ಕಾಂಪೋಜಿಷನ್ ಎಂಬ ಶಿರ್ಷಿಕೆಯಲ್ಲಿ ಹಸುಗಳ ವಿಭಿನ್ನ ರೀತಿಯ ಭಂಗಿಯಲ್ಲಿ ಸಂಯೋಜಿಸಿ ಆಕರ್ಷಣೆಗೈದಿದ್ದಾರೆ. ಪ್ರಕೃತಿಯಲ್ಲಿನ ವಿಸ್ಮಯವಾದ ಅಲೌಕಿಕ ಸೌಂದರ್ಯದ ನೋಟವನ್ನು ಮೂಡಿಸುವಂತಹ ನಿಸರ್ಗ ಶೀರ್ಷಿಕೆಯ ಕಲಾಕೃತಿಗಳು ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮೆಚ್ಚುಗೆ ಪಡೆದು, ಚಿತ್ರಕಲಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೂರೆಗೊಂಡಿವೆ.



'ವಿಲ್ಲೇಜ್ ಲೈಫ್'

ಈ ಕಲಾವಿದ ಜಲವರ್ಣ, ತೈಲವರ್ಣ, ಪೆನ್ಸಿಲ್ ಬಳಸಿ ನಿಸರ್ಗಚಿತ್ರ, ರೇಖಾಚಿತ್ರ, ವ್ಯಕ್ತಿಚಿತ್ರ, ಭಾವಚಿತ್ರ, ಚಿತ್ರಸಿದ್ದಲ್ಲದೆ ಸೀಮೆ ಸುಣ್ಣದಲ್ಲಿ ಮತ್ತು ಸಾಬೂನಿನಲ್ಲಿ ಕಲಾತ್ಮಕವಾಗಿ ಚಿತ್ರಗಳನ್ನು ಕೊರೆದಿದ್ದಾರೆ. ಕಲೆಯ ಅಭಿರುಚಿಯನ್ನು ಮೈಗೂಡಿಸಿಕೊಂಡ ರಾಜಕುಮಾರ, ಕಠಿಣ ಪರಿಶ್ರಮದಿಂದ ಸೃಜನಾತ್ಮಕ ಅಭಿವ್ಯಕ್ತಿಯೊಂದಿಗೆ ಸಮೂಹ ಹಾಗೂ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ. ಅವುಗಳು, 2000–ದಿಶಾ ಗ್ರೂಪ್ ಆಫ್ ಆರ್ಟಿಸ್ಟ್ ಬಿಜಾಪೂರ ಮತ್ತು 2003–ಕಲಬುರ್ಗಿ, 2001–ರೀದಮ್ ಗ್ರೂಪ್ ಆಫ್ ಆರ್ಟಿಸ್ಟ್ ಬೆಂಗಳೂರು. ಇಲ್ಲಿನ ಕಲಾಕೃತಿಗಳನ್ನು ಮೆಚ್ಚಿ, ಸ್ಥಳೀಯ ಸೊಗಡನ್ನು ಅರಗಿಸಿಕೊಳ್ಳಲು ಪ್ರಯತ್ನಿಸಿದ ರಾಜಕುಮಾರರ ಶೀರ್ಷಿಕೆಯ ದೃಷ್ಟಿಯಿಂದ ದುಡಿಸಿಕೊಳ್ಳುವಾಗ, ಅಗತ್ಯದ ನಡುವೆಯೂ ತನ್ನ ಉದ್ದೇಶದಿಂದ ಗಮನ ಸೆಳೆಯುತ್ತವೆ ಎಂದು ಕಲಾ ವಿಮರ್ಶಕ ಕೆ.ವಿ. ಸುಬ್ರಹ್ಮಣ್ಯ ಅವರು ಹೇಳಿದ್ದಾರೆ.

2003ರಲ್ಲಿ ನಡೆದ 7ನೆಯ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ 'ಹಾರಕೂಡ'ದಲ್ಲಿ ನಡೆದಾಗ ರಾಜಕುಮಾರ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿ, ಅಪಾರ ಸಂಖ್ಯೆಯಲ್ಲಿ ಬಂದಿದ್ದ ಸಾಹಿತ್ಯಿ ಪ್ರೇಮಿಗಳಿಗೆ ಚಿತ್ರಕಲೆಯ ರಸದೌತಣ ಉಣಿಸಿ ಮೆಚ್ಚುಗೆಗಳಿಸಿದರು.

1997ರಲ್ಲಿ ಕಲಬುರ್ಗಿ ಜಿಲ್ಲಾ ಪೋಲೀಸ್ ವಿಭಾಗದವರು ನಡೆಸಿರುವ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 1998, 1999, 2000, 2001–ಮಹಾವಿದ್ಯಾಲಯ, ವಾರ್ಷಿಕೋತ್ಸವದಲ್ಲಿ ಪ್ರಶಸ್ತಿಗಳು. 1998 ಕಲಬುರ್ಗಿ ವಿಶ್ವವಿದ್ಯಾಲಯ ಆಯೋಜಿಸಿದ್ದ ಯುವ ಜನ ಮಹೋತ್ಸವದಲ್ಲಿ ಕಂಚಿನ ಪದಕ ಹಾಗೂ 1999ರಲ್ಲಿ ಬೆಳ್ಳಿ ಪದಕ. 1999 ಶ್ರೀ ಶರಣಬಸವೇಶ್ವರ ವಾಣಿಜ್ಯ ವಿಭಾಗದವರು ಆಯೋಜಿಸಿದ ಕಾರ್ಗಿಲ್ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ. 2001–ಪುಲ್ಲಯ್ಯಾ ಕಲಾ ನಿಲಯಂ ವಾರಂಗಲ್(ಆಂದ್ರ ಪ್ರದೇಶ) ಅವರು ರಾಷ್ಟ್ರಮಟದಲ್ಲಿ ಏರ್ಪಡಿಸಿದ ಚಿತ್ರಕಲಾ ಪ್ರದರ್ಶನದಲ್ಲಿ ವಿಶೇಷ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. (ವಿಎಂಪಿ)

ರಾಜಕುಮಾರ ವಿಶ್ವಕರ್ಮ: ಕಾಷ್ಠ ಶಿಲ್ಪಿ. ಬೀದರ ನಗರದಿಂದ ಅನತಿದೂರದಲ್ಲಿದ್ದ ಹಳ್ಳದಕೇರಿಯವರು. ಮೊನಪ್ಪ–ಸರಸ್ವತಿ ತಂದೆ ತಾಯಿಗಳು. ಬಾಲ್ಯದಲ್ಲಿಯೇ ಓದು ಬರಹದಲ್ಲಿ ತೀಕ್ಷ್ಣ ಬುದ್ಧಿ. ಶಾಲಾ ದಿನಗಳಲ್ಲಿ ಮಣ್ಣಿನಲ್ಲಿಯೇ ಕಲಾಕೃತಿ ತಯಾರಿಸಿದ ಕೀರ್ತಿ ಇವರದು.

ಬಡತನದ ಬಾಳನೌಕೆ ದಡಸೇರದೆ ಕುಟುಂಬ ಹಾಳು ಬೀಳಿನ ಹಾದಿಯಲ್ಲಿ ಸಾಗಿತ್ತು. ತಾಯಿ ಸರಸ್ವತಿಯ ತವರೂರು ಊಡುಮನಳ್ಳಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಂದುವರೆಸಿದರು. ಕಾಲಚಕ್ರ ಉರುಳುತ್ತಿತ್ತು. ಬಾಳಿನ ಬಂಡಿ ಒಂದಿಷ್ಟು ಸುಧಾರಿಸಿತು. ಮತ್ತೆ ತಮ್ಮೂರ ಬೀದರಕ್ಕೆ ಹಿಂತಿರುಗಿದರು. ಪ್ರೌಢ ಶಾಲೆ ಸೇರಿ ಅಭ್ಯಾಸ ನಡೆಸಿದರು. ಇವರ

ಅಜ್ಜ ಶಂಕ್ರೆಪ್ಪನವರ ಕಾಷ್ಠಕಲೆಯನ್ನು ಕಣ್ಣಾರೆ ನೋಡಿ ಅವರೆಲ್ಲರೂ ವಿಶ್ರಾಂತಿಗೆ ಹೋದಾಗ ಚಿಕ್ಕಪುಟ್ಟ ಮೂರ್ತಿಗಳನ್ನು ಕಾಷ್ಠದಲ್ಲಿ ಮೂಡಿಸಿದರು. ಅಜ್ಜ ನೋಡಿ ಅವಕ್ಕಾದರು! ಏನೂ ಶ್ರಮವಿಲ್ಲದ ಏಕಲವ್ಯ ವಿದ್ಯೆಯನ್ನು ನೋಡಿ ವಿಸ್ಮಯರಾದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಕಲಾಜೀವನಕ್ಕೆ ನಾಂದಿಯಾಯಿತು.

ಪ್ರತಿಷ್ಠಿತ ಬೀದರಿನ ಎಸ್.ಎಂ. ಪಂಡಿತ ಮಹಾವಿದ್ಯಾಲಯದಲ್ಲಿ ಎ.ಡಿ.ಎಂ.ಸಿ., ಎ.ಎಂ.ಜಿ.ಡಿ. ಪದವಿಯಲ್ಲಿ ಪ್ರಥಮ ಅಗ್ರ ಶ್ರೇಣಿಯಲ್ಲಿ ಉತ್ತೀರ್ಣ ಹೊಂದಿದರು. ಕಲಾಶಿಕ್ಷಣದಿಂದ ಕಲೆಯ ಸಂಸ್ಕಾರವಾಯಿತು. ವಿದ್ಯಾಭ್ಯಾಸಂಗಕ್ಕಾಗಿ ಸೋದರ ಮಾವ ವೀರಪ್ಪ ಪಾಂಚಾಳ ಇವರ ನಿಸ್ಪ್ರಹ ಸೇವೆಯಿಂದ ಕಲೆ ಚೇತರಿಸಿಕೊಂಡು ಮಯೂರಿಯಂತೆ ರೆಕ್ಕೆಪುಕ್ಕ ಬೀರಿದವು. ನಿರುದ್ಯೋಗಿಯಾಗಿ ಅಲೆಯಲಿಲ್ಲ. ನೆರೆಯ ಗ್ರಾಮದ ಬಬಚೋಡಿಯಲ್ಲಿ ದಿನಗೂಲಿ ನೌಕರನಾಗಿ ಸೇವೆಗೆ ಸೇರಿದರು. ಅಂದಿನ ಸಂಬಳ ಯಾವುದಕ್ಕೂ ಸಾಲದಾಗಿತ್ತು. ಮಾಲಿಕ ಬಂಡೆಪ್ಪನವರು ಕಲಾಪೋಷಕರಾಗಿದ್ದರು, ಶ್ರೀಗಂಧ ಕಾಷ್ಠಕಲೆಯಲ್ಲಿ ನವನವೀನ ವಿನ್ಯಾಸಗಳನ್ನು ಕೆತ್ತಿ ತೋರಿಸಿದರು. ಶ್ರೀಗಣೇಶ, ಈಶ್ವರ, ಮೌನೇಶ್ವರ ಹೀಗೆ ಸಾಲುಸಾಲು ಮೂರ್ತಿಗಳ ಚಿತ್ತಾರ ಮೂಡಿದವು, ಮಾಲೀಕರು ಅದನ್ನು ಮೆಚ್ಚಿ ನೀಡಿದ ರೂ. 15 ಅಂದಿನ ಜೀವನಕ್ಕೆ ಉಪಜೀವನವಾಗಿತ್ತು.

ತಮ್ಮ 23ನೆಯ ವಯೋಮಾನದಲ್ಲಿ ಬೀದರ 'Association of Consulting Grgeal wood Corwing' ಪ್ರಶಸ್ತಿಗೆ ಭಾಜನರಾದರು. ಈ ಪ್ರಶಸ್ತಿಯಿಂದ ಪ್ರಭಾವಿತರಾದ ಇವರು ಬೀದರ ನಗರದಲ್ಲಿ 'ರಾಜಕುಮಾರ ವಿಶ್ವಕರ್ಮ'ನೆಂದು ವಿಖ್ಯಾತಿ ಹೊಂದಿದರು. ಇವರ ಕಾಷ್ಠಕಲೆ ಉತ್ತುಂಗ ಶಿಖರಕ್ಕೇರಿತು. ಹೈದ್ರಾಬಾದ ಮುಂಬೈ, ತಮಿಳುನಾಡು, ಪಾಶ್ಚಾತ್ಯ ಇಂಜಿನಿಯರುಗಳು ಧಾವಿಸಿ ಇವರ ನೆರವು ಪಡೆದು ವ್ಯಾಪಾರೋದ್ಯಮಗಳಲ್ಲಿ ಗಣನೀಯವಾದ ಲಾಭ ಗಿಟ್ಟಿಸಿದರು.

ಕಾಷ್ಠಕಲೆಯನ್ನಲ್ಲದೆ ಚಾಕ್ ಪೀಸ್‌ನಲ್ಲಿಯೂ ಗಣೇಶ, ಈಶ್ವರ ಮೂರ್ತಿ ಬಹುಸೂಕ್ಷ್ಮವಾಗಿ ಕೊರೆದರು. ಮನೆ ಬಾಗಿಲ ಮಹಾದ್ವಾರ, ಗುಡಿ ಗುಂಡಾರಗಳಿಗೆ ವೈವಿದ್ಯ ವಿನ್ಯಾಸದ ಮೆರಗು ನೀಡಿ ನೋಡುಗರ ಕಣ್ಮನ ಸೆಳೆದರು.

ಬಸವಕಲ್ಯಾಣದ ಅನುಭವಮಂಟಪಕ್ಕೆ ಬೃಹದಾಕಾರದ ದ್ವಾರದ ಬಾಗಿಲುಗಳು ಚಿತ್ತಾ ಚಿತ್ತಾರ ಆಕೃತಿ, ವಿನ್ಯಾಸ ವಿಕಾಸಕ್ಕೆ ರಾಜಕುಮಾರರು ತಮ್ಮ ಶ್ರಮವನ್ನೇ ಸಾರ್ಥಕ ಗೊಳಿಸಿದ್ದಾರೆ. ಸಾಗವಾನಿ (ತೇಗ) ಮರದಿಂದ ತೇದು ಕಾಗದಮೇಲೆ ಮೂಡಿದ ವಿನ್ಯಾಸ ವೈಭವೋಪೇತವಾಗಿದೆ. ಸೌಂದರ್ಯದ ಆಗರವಾಗಿದೆ.

ಆಂಧ್ರಪ್ರದೇಶ ಮಹಾರಾಷ್ಟ್ರದ ದೇಗುಲಗಳಿಗೆ ಇವರು ಕೆತ್ತಿದ ಕುಸುರಿ ಕಲೆಯ ಕೆತ್ತನೆ ಅಮೋಘವಾದದ್ದು. ಬೀದರಿನ ಪಾಂಡುರಂಗ ದೇಗುಲದಲ್ಲಿ ತೇಗದಲ್ಲಿ ಕೆತ್ತಿದ ಮೂರ್ತಿ, ಮೂಕವಿಸ್ಮಿತನ್ನಾಗಿ ಮಾಡುತ್ತದೆ. (ಬಿಎನ್‌ಕೆ)

ರಾಜಣ್ಣ ಜೇವರಗಿ: ಇವರು ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ, ಹಿನ್ನೆಲೆ ಗಾಯಕರಾಗಿ, ಹಾರ್ಮೋನಿಯಂ ಮೇಷ್ಟ್ರಾಗಿ ಕಂಪನಿಯ ಮಾಲಿಕರಾಗಿ ಸುಮಾರು ವರ್ಷಗಳಿಂದ ರಂಗಭೂಮಿಗೆ ದುಡಿಯುತ್ತ ಬಂದವರು. ಹಾಸ್ಯ ಅಭಿನಯ; ಹಾಸ್ಯಬರಹದ ನಾಟಕಗಳಿಂದ ಪ್ರೇಕ್ಷಕರನ್ನು ಆಕರ್ಷಿಸಿದ್ದಾರೆ. ಸರಳ ಸಹೃದಯಿ ಇವರಿಗೆ ಅಪಾರ ಅಭಿಮಾನಿಗಳಿದ್ದಾರೆ.

ಪ್ರಾರಂಭದಿಂದಲೂ ಹಾಸ್ಯ ಪಾತ್ರಗಳಿಂದ ಬಂದ ಇವರು 'ವಿಶ್ವಾರಾಧ್ಯರ ಮಹಾತ್ಮೆ'ಯಲ್ಲಿ ಕುಂಟಗಂಟೆಪ್ಪ 'ಜೇವರಗಿ ಜ್ಯೋತಿ' ನಾಟಕದಲ್ಲಿ ಶಿವಯ್ಯ, ಸಿಂಧೂರ ಲಕ್ಷ್ಮಣ ನಾಟಕದಲ್ಲಿ ಪೊಲೀಸ, 'ಯಾಕ ಹಿಂಗಾಯ್ತು ಹಿಂಗ್ಯಾಕ ಆಯ್ತು' ನಾಟಕದಲ್ಲಿ ರಂಜಿತ, 'ಚೆನ್ನಪ್ಪ ಚೆನಗೌಡ' ನಾಟಕದಲ್ಲಿ ಶೇಖರ ಇವರ ಪ್ರಮುಖ ಹಾಸ್ಯ ಪಾತ್ರಗಳು. ಹಾಸ್ಯ ಅಭಿನಯದಲ್ಲಿ ಬರುವ ಗ್ರಾಮ್ಯ ಭಾಷೆ ಸಹಜವಾಗಿ ಹಳ್ಳಿಗರನ್ನು ಆಕರ್ಷಿಸುತ್ತದೆ. ಹಾಸ್ಯದ ಜೊತೆ ಜೊತೆಗೆ ಚಿಂತನೆಯ ವಿಷಯಗಳನ್ನು ಹೆಣೆಯುವುದು ಗಮನಾರ್ಹ. ನಾಟಕದ ಮಾತುಗಳಲ್ಲಿ ಇಂದಿನ ಜಟಿಲ ಸಮಸ್ಯೆಗಳ ಒಳ ಮೈಯನ್ನು ಹೊರಹಾಕುವ ರೀತಿ ಮೆಚ್ಚುವಂತಹದ್ದು.

ಇತ್ತೀಚೆಗೆ ಇವರ ಅಭಿನಯ ಕಡಿಮೆಯಾಗಿದೆ. ಅನಿವಾರ್ಯ ಪ್ರಸಂಗ ಬಂದಾಗ ಮಾತ್ರ ಬಣ್ಣ ಹಚ್ಚುತ್ತಾರೆ. ಕಂಪನಿಯ ಆಡಳಿತದ ಬಗ್ಗೆನೇ ಹೆಚ್ಚು ಒತ್ತುಕೊಟ್ಟು ಆಗ ಹೋಗುಗಳನ್ನು ನಿಭಾಹಿಸುತ್ತ ಕಂಪನಿಯ ನಿರಂತರ ಉಳಿವಿಗಾಗಿ ಚಿಂತಿಸುತ್ತ ಹೋರಾಡುತ್ತಾರೆ. ಕಂಪನಿಯ ಹಲವಾರು ಸಮಸ್ಯೆಗಳಲ್ಲಿಯೂ ಉತ್ತಮ ಕಲಾವಿದರನ್ನು ಕಾಯ್ದುಕೊಂಡು ಉತ್ತಮ ನಾಟಕಗಳನ್ನು ಕೊಡುತ್ತ ಕಂಪನಿಯನ್ನು ದೀರ್ಘಕಾಲ ಉಳಿಸಿಕೊಂಡು ಹೋಗುವುದೇ ಇವರ ಮೂಲ ಉದ್ದೇಶವಾಗಿದೆ.

ರಂಗಭೂಮಿಯಲ್ಲಿ ಸಾಗಿದಾಗ ಸೋಲು-ಗೆಲುವು ಸಹಜ. ಚಿತ್ತಾಪೂರ ತಾಲ್ಲೂಕಿನ ರಾವೂರ ಕ್ಯಾಂಪಿನಲ್ಲಿ ಒಂದು ತಿಂಗಳು ನಿರಂತರ ಮಳೆ ಬೋರ್ಡಿಂಗಿಗೂ ಕಷ್ಟವಾದಾಗ ನಾಟಕ ಕಂಪನಿಯ ಸಲಕರಣೆಗಳನ್ನು ಒತ್ತೆ ಇಟ್ಟು ಕಲಾವಿದರಿಗೆ ಊಟದ ವ್ಯವಸ್ಥೆ ಮಾಡಿದ್ದುಂಟು. ಇಂಥ ಒಬ್ಬ ಕಲಾವಿದ, ರಂಗಕರ್ಮಿ, ಬೆಂದು ಬಳಲಿದ ಜೀವ ಜನ್ಮ ಪಡೆದುದು ಗುಲಬರ್ಗಾ ಜಿಲ್ಲೆಯ ಚಿಕ್ಕ ಜೇವರಗಿ ಗ್ರಾಮದ ಬಾಲಯ್ಯ-ಚಂದ್ರಮ್ಮ ದಂಪತಿಗಳ ಬಡಕುಟುಂಬದಲ್ಲಿ 1.12.1961ರಲ್ಲಿ. ಓದು ಎಸ್.ಎಸ್.ಎಲ್.ಸಿಯವರಗೆ ಹಳ್ಳಿಯಲ್ಲಿ ಹವ್ಯಾಸಕ್ಕೆಂದು 1980ರಲ್ಲಿ ಬಣ್ಣ ಹಚ್ಚಿದ ಇವರು ಮುಂದೆ ಅದನ್ನೇ ವೃತ್ತಿ ಮಾಡಿಕೊಂಡು ಸಣ್ಣಪುಟ್ಟ ಕಂಪನಿಗಳಲ್ಲಿ ಸೇವೆಸಲ್ಲಿಸುತ್ತ 'ಅಖಂಡೇಶ್ವರ ಕೃಪಾಪೋಷಿತ ನಾಟ್ಯ ಸಂಘ' ಜೇವರಗಿ ಕಂಪನಿಯಿಂದ ಬೆಳಕು ಕಂಡರು.

ಇವರು ಎಲ್ಲ ಕವಲು ದಾರಿಯಲ್ಲಿ, ಕಲ್ಲು ಮುಳ್ಳುಗಳಲ್ಲಿ ಹಾದು ಈಗ ರಾಜಮಾರ್ಗದಲ್ಲಿದ್ದಾರೆ. ಸುಮಾರು 15-20 ಲಕ್ಷ ರೂಪಾಯಿಗಳ ಮೌಲ್ಯದ ಸಲಕರಣೆಗಳಿವೆ. ಕಲಾಪತ್ನಿ, ಮಕ್ಕಳು ದುಡಿಯುತ್ತಿದ್ದಾರೆ. ಹಿರಿಯ ಮಗಳು ಒಳ್ಳೆ ಹಾಸ್ಯ ನಟಿ, ಹಾಡುಗಾರ್ತಿ ನೃತ್ಯದಲ್ಲಿಯೂ ಆಕರ್ಷಿಸುವ ಕಲಾವಿದೆ. ಅವಳಿಂದಲೇ

ರಂಗಭೂಮಿಗೆ ರಂಗುಬರುತ್ತದೆ. ಅವಳು ಇವರ ಕಂಪನಿಯ ಕಲಾ ಸಂಪತ್ತು. ಇನ್ನೊಬ್ಬ ಮಗಳು ಹೈಸ್ಕೂಲ ಅಭ್ಯಾಸದ ಜೊತೆ ಜೊತೆಗೆ ಸಣ್ಣಮಟ್ಟ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಇವರದು ಸುಂದರ ಸಾರ್ಥಕ ಬದುಕು. (ಜಿಎಚ್)

ರಾಜಮಹ್ಮದ್ ಕಸರಹಟ್ಟಿ: ಸಂಗೀತ ಕಲಾವಿದ. ಇವರು, ಸಣ್ಣ ವಯಸ್ಸಿನಲ್ಲಿಯೇ ದೊಡ್ಡ ಸಾಧನೆ ಮಾಡಿದ್ದಾರೆ. ಹುಟ್ಟಿದ್ದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಸುಲೇಕಲ್ ಗ್ರಾಮದ ಬಡಕುಟುಂಬದಲ್ಲಿ. ಹುಟ್ಟು ಕುರುಡ ಅಲ್ಲದೇ ಬಡತನವೆಂಬ ಬವಣೆಗೆ ಸಿಲುಕಿ ಕಷ್ಟದ ಕೊರಗಿನ ಜೀವನ ನಡೆಸುತ್ತಿದ್ದಾಗ, ಸಂಗೀತ ದೇವತೆಯ ಅಪ್ಪಟ ಸೇವಕನಾಗಿ ಮಹಾನ್ ಕಲಾಕಾರ ರಾಗಿ ಬೆಳೆದಿದ್ದಾರೆ.

ಚಿಕ್ಕವನಿದ್ದಾಗಲೇ ಸಂಗೀತದ ಬಗ್ಗೆ ಆಸಕ್ತಿ ಉಳ್ಳವನಾಗಿದ್ದ ಈತನಲ್ಲಿ ಸಂಗೀತಾಸಕ್ತಿಗೆ ನೀರೆರೆಯಬೇಕಾದರೆ ನೆರೆಯ ಗದಗಿನ ಅಂಧರ ಬಾಳಿನ ಬೆಳಕಾಗಿರುವ ವೀರೇಶ್ವರ ಪುಣ್ಯಾಶ್ರಮಕ್ಕೆ ಸೇರಿಸಬೇಕೆಂದು ಒಬ್ಬರು ಇವರ ತಂದೆಗೆ ಸಲಹೆ ನೀಡಿದರಂತೆ. ಅದರಂತೆ ಇವರಪ್ಪ ಬಡೇಸಾಬ್, ರಾಜಮಹ್ಮದನನ್ನು ವೀರಕ್ತರ ಪುಣ್ಯಾಶ್ರಮಕ್ಕೆ ಸೇರ್ಪಡೆ ಮಾಡಿದರು.

ಗದುಗಿನಲ್ಲಿಯೇ ದ್ವಿತೀಯ ಪಿಯುಸಿ ತೇರ್ಗಡೆಯಾಗಿ ತಮ್ಮಲ್ಲಿರುವ ಪ್ರತಿಭೆಯನ್ನು ಸಾದರ ಪಡಿಸಲು ಸನ್ನದ್ಧರಾಗಿ, 1991ರಿಂದ 2000ರ ವರೆಗೆ ಗದುಗಿನ ವೀರೇಶ್ವರ ಪುಣ್ಯಾಶ್ರಮ ದಲ್ಲಿ ಸಂಗೀತ ತರಬೇತಿ ಪಡೆದರು. ಅನಂತರ ಸಂಗೀತ ಲೋಕಕ್ಕೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು.

ಆಧ್ಯಾತ್ಮದೆಡೆ ಮೊದಲಿನಿಂದಲೂ ಆಕರ್ಷಿತರಾಗಿದ್ದ ಇವರು ಇಂದಿಗೂ ಗ್ರಾಮಾಂತರ ಪ್ರದೇಶದಲ್ಲಿ ಪುರಾಣ ಪ್ರವಚನ ಕಾರ್ಯಕ್ರಮಗಳಲ್ಲಿ ಸಂಗೀತ ಕಾರ್ಯಕ್ರಮ ನೀಡತೊಡಗಿದರು.

ಇಲ್ಲಿಯವರೆಗೆ ಸುಮಾರು 600 ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಸಂಗೀತ ಕಾರ್ಯಕ್ರಮ ನೀಡಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಇವರ ಸುಮಧುರ ಕಂಠದಿಂದ ಹಾಡು ಮೂಡಿ ಬಂದಾಗ ನಿದ್ದೆಯ ಮಂಪರಿನಲ್ಲಿರುವವರು ಎಚ್ಚರಗೊಂಡು, ಪುರಾಣ ಪ್ರವಚನ ಕೇಳಿದ ಎಷ್ಟೋ ಉದಾಹರಣೆಗಳಿವೆ.

ಇವರಲ್ಲಿ ಅಡಗಿರುವ ಬಹುಮುಖ ಪ್ರತಿಭೆ ಎಲ್ಲರನ್ನು ಚಕಿತ ಗೊಳಿಸುತ್ತದೆ. ಹಲವಾರು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪ್ರಬಲ ಸ್ಪರ್ಧೆಯೊಡ್ಡಿ ಹಲವಾರು ಬಹುಮಾನಗಳನ್ನು ಪಡೆದಿದ್ದಾನೆ. ರಾಷ್ಟ್ರಮಟ್ಟದ ವರೆಗೆ ತಮ್ಮ ಪ್ರತಿಭೆ ಪ್ರದರ್ಶಿಸಿ ಹೆಸರು ಮಾಡಿ ದ್ದಾರೆ. ರಂಗಗೀತೆ, ಭಾವಗೀತೆ, ಏಕಪಾತ್ರಾಭಿನಯ, ಜನಪದ ಸಂಗೀತ, ಗೀಗೀಪದ, ಇನ್ನಿತರ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವುಗಳಲ್ಲಿ ಅತ್ಯಂತ ಪ್ರಮುಖವೆಂದರೆ, 2002ರಲ್ಲಿ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ನೀಡಿದ ರಾಷ್ಟ್ರೀಯ ಅಂಧರ ಉತ್ಸವದಲ್ಲಿ ಹಾರ್ಮೋನಿಯಂ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ಎಲ್ಲರನ್ನು ನಿಬ್ಬೆರಗುಗೊಳಿಸಿದರು. ದೆಹಲಿಯಲ್ಲಿ ನೀಡಿದ ಅಂಧರ ಸಾಂಸ್ಕೃತಿಕ ಮೇಳದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನ ರಾಗಿದ್ದಾರೆ.

ಮಂಡ್ಯದಲ್ಲಿ ಜರುಗಿದ ಯುವಜನೋತ್ಸವ ಕಾರ್ಯಕ್ರಮ ದಲ್ಲಿ 2002 ಸಮಗ್ರ ವೀರಾಗ್ರಣಿ ಪ್ರಶಸ್ತಿ ತಮ್ಮ ಮುಡಿಗೇರಿಸಿ ಕೊಂಡಿದ್ದಾರೆ. ಕೊಪ್ಪಳದಲ್ಲಿ ನಡೆದ ಜಿಲ್ಲಾಮಟ್ಟದ ಯುವಜನ ಮೇಳದಲ್ಲಿ 2002 ರಂಗಗೀತೆ, ಭಾವಗೀತೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಕಲಬುರ್ಗಿ ವಿಭಾಗಮಟ್ಟದ ಯುವಜನ, ಮೇಳ ರಾಯಚೂರಿನಲ್ಲಿ ಜರುಗಿದಾಗ 2003 ಭಾವಗೀತೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

(ಎಸ್‌ಎಸ್‌ಪಿ)

ರಾಜೀವ ತಾರಾನಾಥ: ರಾಷ್ಟ್ರದ ಹೆಸರಾಂತ ಸರೋದ್ ವಾದಕಲ್ಲೊಬ್ಬರು. ರಾಯಚೂರಿನಲ್ಲಿ ಜನಿಸಿದರು. ದೇಶ–ವಿದೇಶ ದಲ್ಲೆಡೆ ಸರೋದ್ ನುಡಿಸಿ ಬೆಂಗಳೂರಿನಲ್ಲಿ ನೆಲೆಸಿದ ಕರ್ನಾಟಕದ ಪ್ರಪ್ರಥಮ ಸರೋದ್ ವಾದಕರು.



1932ರಲ್ಲಿ ಜನಿಸಿದರು. ಇವರ ತಂದೆ ಪಂಡಿತ ತಾರಾನಾಥರು ಶಿಕ್ಷಣ ತಜ್ಞ ಆಯುರ್ವೇದ ವೈದ್ಯ ಹಾಗೂ ಸ್ವಾತಂತ್ರ್ಯೋಧರು. ಇಂಗ್ಲೀಷನಲ್ಲಿ ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಪದವಿ ಪಡೆದು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದಾರೆ. ವಿಖ್ಯಾತ ಸರೋದ್ ವಾದಕ ಉಸ್ತಾದ್ ಅಲಿ ಅಕ್ಬರ್ ಖಾನ್‌ರ ಸರೋದ್ ವಾದನಕ್ಕೆ ಪ್ರಭಾವಿತರಾಗಿ ವೃತ್ತಿಗೆ ರಾಜೀನಾಮೆ ನೀಡಿ ಅವರ ಶಿಷ್ಯತ್ವ ವಹಿಸಿ ಸರೋದ್ ವಾದನದಲ್ಲಿ ತರಬೇತಿ ಪಡೆದು ದೇಶದ ಮಹಾನ್ ಸರೋದ್ ವಾದಕರ ಲ್ಲೊಬ್ಬರೆನಿಸಿದರು. ವಿಖ್ಯಾತ ಸಿತಾರ ವಾದಕ 'ಭಾರತ ರತ್ನ' ಪಂ. ರವಿಶಂಕರ ಅವರ ಸಿತಾರ ವಾದನ ರಾಜೀವ ತಾರಾನಾಥರ ಮೇಲೆ ಅಪಾರ ಪ್ರಭಾವ ಬೀರಿದೆ. ವಿಖ್ಯಾತ ಸೂರ್ ಬಹಾರ ವಾದಕಿ ಅನ್ನಪೂರ್ಣಾದೇವಿ ಅವರ ಬಳಿಯೂ ಸಹ ಕೆಲವು ವರ್ಷ ಡಾ. ರಾಜೀವ ತಾರಾನಾಥರು ಸಂಗೀತದ ತಾಲೀಮು ಪಡೆದಿದ್ದಾರೆ. ಆಸ್ಟ್ರೇಲಿಯಾ, ನ್ಯೂಯಾರ್ಕ್ ಮತ್ತು ಅಮೆರಿಕಾ ಮುಂತಾದ ದೇಶಗಳಲ್ಲಿ ಅವರು ಸರೋದ್ ವಾದನ ಕಛೇರಿ ನೀಡಿದ್ದಾರೆ. ಬಂಗಾಳಿ, ಕನ್ನಡ, ಇಂಗ್ಲೀಷ್ ಹಾಗೂ ಮಲಯಾಳಿ ಭಾಷೆಯ ಚಲನಚಿತ್ರಗಳಿಗೆ ಇವರು ಸಂಗೀತ ನಿರ್ದೇಶಿಸಿದ್ದಾರೆ. ಆಗ ಸಂಗೀತ ನಿರ್ದೇಶನದ ಚಿತ್ರಗಳಿಗೆ ಪ್ರಶಸ್ತಿ ಕೂಡಾ ಸಂದಿವೆ. ಅಡೆನ್ ಟೆಲಿವಿಷನ್ ಇವರ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಿದೆ.

ಇವರ ಗರಡಿಯಲ್ಲಿ ಕೆಲವು ಜನ ಶಿಷ್ಯರು ತಯಾರಾಗಿದ್ದಾರೆ. ಅಂಥವರಲ್ಲಿ ಸೋಹನಬಾಯಿ ನೀಲಕಂಠ ಅಹಮದಾಬಾದ್, ಪ್ರೊ. ಎಂ.ಎನ್. ಕೃಷ್ಣಕುಮಾರಿ ಹಾಗೂ ಮಗ ಚೇತನ ತಾರಾನಾಥ ಉಲ್ಲೇಖನೀಯರಾಗಿದ್ದಾರೆ.

ಸರೋದ್ ಮಾಂತ್ರಿಕ ಪಂ. ರಾಜೀವ ತಾರಾನಾಥರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾ ತಿಲಕ' (1991–92), ಕರ್ನಾಟಕ ಸರ್ಕಾರದ ರಾಷ್ಟ್ರೀಯ ಟಿ. ಚೌಡಯ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಬಂದಿವೆ.

(ಎಸ್‌ಎಂಜಿ)

ರಾಜೇಂದ್ರ ತುಪ್ಪದ: ವೇಣು ವಾದಕ. 'ಸಂಗೀತ ಸಾಮಾನ್ಯನಿಗೂ ಅರ್ಥವಾಗುತ್ತದೆ. ಸಾಧಕರಿಗೆ ಮಾತ್ರ ಒಲಿಯುತ್ತದೆ' ಎಂಬ ಮಾತಿನಂತೆ ಸಂಗೀತ ಆಸಾಧನೆ ಎಲ್ಲರಿಗೂ ಸಹಜವಾಗಿದ್ದರೂ ಸಂಗೀತ ಮೈಗೂಡಿಸಿಕೊಳ್ಳಲು ಎಲ್ಲರಿಂದಲೂ ಸಾಧ್ಯವಿಲ್ಲ. ಸಂಗೀತದ ಒಲವು, ಏಕಾಗ್ರತೆ ಸತತ ಸಾಧನೆಯಿಂದ ಗಂಧರ್ವ ಕಲೆಯಾದ ಸಂಗೀತವನ್ನು ಕರಗತ ಮಾಡಿಕೊಂಡು ಪ್ರಸಿದ್ಧ ಗಾಯಕರಾದವರು ರಾಜೇಂದ್ರ ತುಪ್ಪದ.

ಜೇವರ್ಗಿ ತಾಲ್ಲೂಕಿನ ಹಿಪ್ಪರಗಾ ಎಸ್.ಎನ್. ಗ್ರಾಮದವರೇ ಆದ ರಾಜೇಂದ್ರ, ಬಾಲ್ಯದಿಂದಲೇ ಸಂಗೀತದ ಹುಚ್ಚು ಹಚ್ಚಿಕೊಂಡವರು. ಇವರ ಮನೆಯಲ್ಲಿ ಯಾರಿಗೂ ಸಂಗೀತ ಎಂದರೇನೆಂದು ಕೇಳುವಂತಹ ಅಮಾಯಕತೆ. ಒಂದರ್ಥದಲ್ಲಿ ಇವರು ಬಂದದ್ದು ಸಂಗೀತದ ನಂಟೆ ಇಲ್ಲದ ಕುಟುಂಬದಿಂದ. ತಂದೆ ಪಾಯಣ್ಣ ತುಪ್ಪದ, ಕಮಲಾಬಾಯಿ ತುಪ್ಪದ ತಾಯಿ. ಸತತ ಎರಡು ವರ್ಷದಿಂದ ಮನೆಯೇ ಸಂಗೀತ ಶಾಲೆಯಾಗಿಸಿಕೊಂಡು ಕೊಳಲು ನುಡಿಸುವುದನ್ನು ಅಭ್ಯಾಸ ಮಾಡಿದ್ದಾರೆ. ಕಲಿತ ವಿದ್ಯೆಯನ್ನು ಚಂದ್ರಶೇಖರ್ ಗೂಗಿಯವರು ನಡೆಸುವ ವಿಶ್ವಾರಾಧ್ಯ ಸಂಗೀತ ಸೇವಾ ಶಿಕ್ಷಣ ಸಂಸ್ಥೆ, ಗೋಗಿಪೇಟ ಇವರು ಭೀಮರಾಯನ ಗುಡಿಯಲ್ಲಿ ನಡೆಸುವ ಸಂಗೀತ ಶಾಲೆಯಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪ್ರಮುಖವಾದ ವೇಣು ವಾದನ ಕಲಿಯುತ್ತಿದ್ದಾರೆ.

ವೇಣುವಾದನಲ್ಲಿ ಅಪಾರ ಆಸಕ್ತಿ ಹೊಂದಿರುವ ಈತ ಎನ್. ಎಸ್. ಲಕ್ಷ್ಮೀನಾರಾಯಣ ಭಟ್, ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಗಳನ್ನು ಭಾವಪೂರ್ಣವಾಗಿ ನುಡಿಸುವರು. ನಾಲ್ಕಾರು ಜನ ಶ್ರೋತ್ರಗಳಿದ್ದರೆ ಯಾವುದೇ ಹಮ್ಮು ಬಿಮ್ಮು ಇಲ್ಲದೇ ಸಂಗೀತ ಸಭೆ ನುಡಿಸುವರು. ನಿರಂತರ ಸಂಗೀತ ಅಭ್ಯಾಸ ಮಾಡಿ ಪ್ರಸಿದ್ಧ ವೇಣುವಾದಕನಾಗುವ ಆಸೆ ಇವರದು. ಗ್ರಾಮದ ಶ್ರೀಸಿದ್ಧಲಿಂಗೇಶ್ವರ ಮಠದಲ್ಲಿ ಪುರಾಣ ಕಾರ್ಯಕ್ರಮದಲ್ಲಿ ಭಾವಗೀತೆ, ಭಕ್ತಿಗೀತೆ, ವಚನಗಾಯನ ಸುಶ್ರಾವ್ಯವಾಗಿ ನುಡಿಸಿ ಸಂಗೀತ ಆಸಕ್ತರ ಮೆಚ್ಚುಗೆ ಪಡೆದಿದ್ದು, ಅಂದೇ ಶ್ರೀ ವೀರತಪಸ್ವಿ ವೀರಭದ್ರ ಶಿವಾಚಾರ್ಯರು ಶಾಂತಲಿಂಗೇಶ್ವರ ಸಂಸ್ಥಾನ ಕಟ್ಟಿಮಠ ಕಡಗಂಚಿ ಇವರಿಂದ ಸನ್ಮಾನ ನಡೆಯಿತು.

(ಜಿಪಿ)

ರಾಜೇಂದ್ರಸಿಂಗ ಪವಾರ: ಸಂಗೀತಗಾರ. ಇವರ ಅಜ್ಜನವರು ಹಾರ್ಮೋನಿಯಂ ಮತ್ತು ಸಿತಾರ್ ವಾದನದಲ್ಲಿ ವಿದ್ವಾನರಾಗಿದ್ದರು. ತಂದೆ ಜಗಪಾಲಸಿಂಗ ಅವರು ಬೀದರ ನಗರದಲ್ಲಿ ಸಂಗೀತ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದಾರೆ. ಹಾರ್ಮೋನಿಯಂ ನುಡಿಸಬಲ್ಲರು. ಶಾಸ್ತ್ರೀಯ ಸಂಗೀತದಲ್ಲಿ ಇವರಿಗೆ ಇರುವ ಆಸಕ್ತಿ ಸಹಜವಾದದ್ದು.

ತಂದೆಯವರಲ್ಲಿ ಹಾರ್ಮೋನಿಯಂ ಅಭ್ಯಾಸ ಮಾಡಿದ್ದಾರೆ. ಹಾರ್ಮೋನಿಯಂ ವಾದನದಲ್ಲಿ ಪ್ರಸಿದ್ಧಿ ಪಡೆದ ಸಂಗೀತ ರತ್ನ ನನ್ಹೇಬಾಬುಜೀ ಕುನವರ ಅವರಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿದರು.

ಉಸ್ತಾದ ಗುಲಾಂ ಮುಸ್ತಾಫಾ ಖಾನ್, ಶ್ರೀಮತಿ ಕಂಕನ್ ಬ್ಯಾನರ್ಜೀಯವರಂತಹ ಅನೇಕ ಸಂಗೀತಗಾರರಿಗೆ ಸಾತ್ ನೀಡಿದವರು. ಹಲವಾರು ಉದ್ಯೋಗ ವ್ಯಾಪಾರದ ಜೊತೆಗೆ ಸಂಗೀತ ಕಲೆಯನ್ನು ಮುಂದುವರಿಸುತ್ತ ಬಂದಿರುವುದು ಸ್ತುತ್ಯಾರ್ಹವಾದದ್ದು.

(ಎಸ್‌ಎಂಜಿ)

ರಾಜೇಶ ಡಿ. ದೇವಣಗಾಂವ: ಭಿತ್ತಿಚಿತ್ರ ಕಲಾವಿದ. ಭಿತ್ತಿ ಚಿತ್ರಕಲೆ ಪ್ರಪಂಚದಲ್ಲಿ ಬಹು ಪ್ರಾಚೀನ ಕಲೆ. ಈ ಕಲೆಯನ್ನು ಭಾರತದಲ್ಲಿ ಮುಖ್ಯವಾಗಿ ಅಜಂತಾ, ಎಲ್ಲೋರಾ, ಬಾಗ್, ನಾಸಿಕ್, ಬದಾಮಿ ಮತ್ತು ಅನೇಕ ಐತಿಹಾಸಿಕ ದೇವಸ್ಥಾನ, ಚರ್ಚುಗಳಲ್ಲಿ ನೋಡಬಹುದು. ಈ ಭಿತ್ತಿಚಿತ್ರಗಳು ಇಂದಿಗೂ ನಮಗೆ ಪ್ರಾಚೀನ ಐತಿಹಾಸಿಕ ಕುರುಹಾಗಿ ಉಳಿದಿವೆ. ಈ ಮ್ಯೂರಲ್ ಪದ್ಧತಿಯಲ್ಲಿ ಪ್ರಾಚೀನ ಕಾಲದಲ್ಲಿ ಹೆಚ್ಚಾಗಿ ಬಳಸಿರುವ ತಂತ್ರವೆಂದರೆ ಫ್ರೆಸ್ಕೋ ಟೆಂಪರಾ ಹಾಗೂ ಮೂಜಾಯಿಕ್ ಪದ್ಧತಿಗಳು. ಆದರೆ, ಈಗಿನ ನವ್ಯಕಾಲದಲ್ಲಿ ಈ ಕಲೆ ಸಾಕಷ್ಟು ಬೆಳೆದು, ಕಲಾವಿದರು ಹೆಚ್ಚಿನ ಮಾಧ್ಯಮಗಳಿಂದ ಗೋಡೆಗಳ ಮೇಲೆ ತಮ್ಮ ಕ್ರಿಯಾಶೀಲತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಟೇರಾಕೋಟ್, ಸಿರಾಮಿಕ್, ಸ್ಯಾಂಡ್‌ಕ್ಯಾಸ್ಟಿಂಗ್ ಮತ್ತು ಮಿಶ್ರಣ ಮಾಧ್ಯಮಗಳು.

ಇವರು ಕಲಬುರ್ಗಿಯವರು. ಇವರು ದಿ. ಐಡಿಯಲ್ ಫೈನ್ ಆರ್ಟ್ ಸಂಸ್ಥೆ ಕಲಬುರ್ಗಿಯಲ್ಲಿ ಡಿ.ಎಂ.ಸಿ. ಬಿ.ಎಫ್.ಎ. ಪೇಂಟಿಂಗ್ ಮತ್ತು ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂಲ್ ಆರ್ಟ್ ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ತೇರ್ಗಡೆಯಾಗಿದ್ದು, ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ಮ್ಯೂರಲ್ ಕಲಾಕೃತಿಯಲ್ಲಿ ಎಂ.ಎಫ್.ಎ. ಪೇಂಟಿಂಗ್ ವ್ಯಾಸಂಗ ಮಾಡಿದ್ದಾರೆ.

ತಮ್ಮ ಅಪೂರ್ವ ಕಲಾಕೃತಿಗಳಿಂದ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಕಲಬುರ್ಗಿಯ ದಿ. ಐಡಿಯಲ್ ಫೈನ್ ಆರ್ಟ್ ಸಂಸ್ಥೆಯ 1998–99 ಕಲಾ ಮಹೋತ್ಸವ ಪ್ರಶಸ್ತಿ, ಕಲಬುರ್ಗಿ ವಿಶ್ವವಿದ್ಯಾಲಯ ಯುವ ಜನೋತ್ಸವ–1998ರ ಪ್ರಶಸ್ತಿ, 1999ರಲ್ಲಿ 3ನೆಯ ಅಖಿಲ ಭಾರತ ಕಲಾಶಿಬಿರ ಮತ್ತು ಪ್ರದರ್ಶನದಲ್ಲಿ ಬಂಗಾರದ ಪದಕ ಪಡೆ

ದಿದ್ದಾರೆ. ಕ್ಯಾಮಲ್ ಆರ್ಟ್ ಫೌಂಡೇಶನ್ 2ನೆಯ ದಕ್ಷಿಣ ಕರ್ನಾಟಕ ಕಲಾಪ್ರದರ್ಶನ ಮುಂಬೈ–2000, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು ವಿಶ್ವವಿದ್ಯಾಲಯ ಪದವೀಧರ ಕಲಾವಿದರಿಗೆ ಕೊಡಮಾಡುವ ಶಿಷ್ಯವೇತನ–2001, ಭಾರತ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಷ್ಟ್ರೀಯ ಶಿಷ್ಯವೇತನ ಪಡೆಯುತ್ತಿದ್ದಾರೆ. (ಎಎಂ)


ರಾಮಗಿರಿ ಪೊಲೀಸ್ ಪಾಟೀಲ: ಸೃಜನಶೀಲ ಕಲಾವಿದ. ಇವರು ಅಫಜಲಪುರ ತಾಲ್ಲೂಕಿನ ಭೈರಾಮಡಗಿ ಗ್ರಾಮದವರು. ತಾಯಿ ಸಿದ್ದಮ್ಮ ತಂದೆ ಪಂಡಿತರಾಮ. ಪ್ರೌಢ ಶಿಕ್ಷಣವನ್ನು ಭೈರಾಮಡಗಿಯಲ್ಲಿ ಪೂರೈಸಿ ಮುಂದೇನು ? ಎಂಬ ಚಿಂತೆಯಲ್ಲಿರುವಾಗಲೇ ಗೋಚರಿಸಿದ್ದು ಕಲಬುರ್ಗಿ ಕಲಾನಿಕೇತನ.



ಆಕರ್ಷಕ ಸಿನಿಮಾ ಕಟೌಟ್‌ಗಳ ಜಾಹೀರಾತು ಫಲಕಗಳನ್ನು ನೋಡಿ, ಆ ರೀತಿ ತಾನೂ ರಚಿಸಬೇಕೆಂಬ ಹಂಬಲದಿಂದ ಕಲಾನಿಕೇತನಕ್ಕೆ ಅಡಿ ಇಟ್ಟ ಇವರು, ಕಮರ್ಷಿಯಲ್ ಆರ್ಟಿಸ್ಟ್ ಆಗಿ ರೂಪಗೊಳ್ಳದೆ, ಸೃಜನಶೀಲ ಕಲಾವಿದರಾಗಿ ರೂಪಗೊಂಡಿದ್ದಾರೆ.

ಪ್ರಾರಂಭದಲ್ಲಿ ಡಿಪ್ಲೋಮಾ ಇನ್ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಯಲ್ಲಿ ಪ್ರವೇಶ ಪಡೆದು, ಅದರ ಪಠ್ಯಕ್ರಮಕ್ಕೆ ತಕ್ಕಂತೆ ಕೃತಿಗಳನ್ನು ರಚಿಸುವಾಗ ಇವರಿಗೆ ಏನೋ ಕೊರತೆಯ ಭಾಸವಾಗುತ್ತಿತ್ತು. ಅದಕ್ಕೆಂದೇ ಮುಂದೆ ಖ್ಯಾತ ಕಲಾವಿದ ವಿ.ಜಿ. ಅಂದಾನಿ ಅವರ ಮಾಗದರ್ಶನದಲ್ಲಿ ಬಿ.ಎಫ್.ಎ. ಪದವಿಗೆ ಹಾಜರಾದರು. ಇಲ್ಲಿಂದಲೇ ಅವರಲ್ಲಿನ ನಿಜವಾದ ಕಲಾವಿದ ರೂಪುಗೊಳ್ಳಲು ಪ್ರಾರಂಭವಾಯಿತು.

ಕಲಾವಿದರಾದ ಅಂದಾನಿಯವರು ಯುವಪ್ರತಿಭೆಗಳನ್ನು ಸ್ವತಂತ್ರವಾಗಿ ಬಿಟ್ಟು, ಅವರ ಅಭಿರುಚಿ, ಭಾವನೆಗಳಿಗೆ ಅನುಗುಣವಾಗಿ, ಅವರ ಮಾನಸಿಕ ಸ್ಥಿತಿಗೆ ತಕ್ಕಂತಹ ಕೃತಿಗಳನ್ನು ರಚಿಸಲು ಪ್ರೇರೇಪಿಸುತ್ತ ಬಂದವರು. ಇಂತಹ ವಾತಾವರಣದಲ್ಲಿ ಕ್ರಿಯಾಶೀಲರಾದ ಇವರು ತಮ್ಮ ಕೃತಿಗಳಲ್ಲಿ ಆಕೃತಿಗಳನ್ನು ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಕೃತಿಗಳಲ್ಲಿ ಮನುಷ್ಯನ ಚಿತ್ರಣ ಇದ್ದರೇನೇ ಕೃತಿ ಆಕರ್ಷಣೀಯವಾಗಿ ರೂಪಗೊಳ್ಳುತ್ತದೆ ಎಂಬ ಧೋರಣೆಯ ಹಿನ್ನೆಲೆಯಲ್ಲಿ, ತಮ್ಮ ಕ್ಯಾನ್‌ವಾಸಿನಲ್ಲಿ ಅದನ್ನು ಬಿಂಬಿಸಿದ್ದಾರೆ. ಕರ್ನಾಟಕದ ಸಮಕಾಲೀನ ಸಂದರ್ಭವನ್ನು ಅವಲೋಕಿಸಿದಾಗ ಇವರ ಕಲೆ ತುಂಬಾ ಭಿನ್ನವಾಗಿ ಕಾಣುತ್ತದೆ. ಏಕೆಂದರೆ ಇವರು ಅದನ್ನು ಪ್ರಸ್ತುತಪಡಿಸುವ ರೀತಿ ಬೇರೆಯೇ ಆಗಿದ್ದು, ತಾಂತ್ರಿಕತೆ ಮತ್ತು ವಸ್ತು ವೈಶಿಷ್ಟ್ಯತೆಯಿಂದ ಕೂಡಿರುತ್ತದೆ.



‘ಪೂಜಾರಿ’ ಅಕ್ರೇಲಿಕ್ ಮಾಧ್ಯಮ

ಕಲಾವಿದರ ಕೃತಿಗಳಲ್ಲಿ ಶೈಲಿ ಪ್ರಮುಖವಾಗಿರುತ್ತದೆ. ವಿಶಾಲವಾದ ಕಲಾ ಸಮುದಾಯದಲ್ಲಿ ಎದ್ದು ನಿಲ್ಲಬೇಕಾದರೆ, ಕಲಾವಿದ ವಿಶಿಷ್ಟ ಕಲಾ ಶೈಲಿಯನ್ನು ಕರಗತ ಮಾಡಿಕೊಳ್ಳಬೇಕೆಂಬ ದಾರಿಯ ರಾಮಗಿರಿ, ಸಮಾಜದಲ್ಲಿಯ ಹಲವಾರು ವ್ಯಕ್ತಿಗಳ, ವಿವಿಧ ಮುಖಗಳನ್ನು ತಮಗೆ ತೋಚಿದ ರೀತಿಯಲ್ಲಿ ಹಿಡಿದಿಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಕಲಾಕೃತಿಯಲ್ಲಿ ವ್ಯಕ್ತಿಯ ಮುಖವನ್ನು ಸಾಮಾನ್ಯವಾಗಿ ಆತನ ಬಾಹ್ಯ ರೂಪವನ್ನು ಆದಷ್ಟು ಸುಂದರವಾಗಿ ಕಾಣುವಂತೆ ಚಿತ್ರಿಸಿರುತ್ತಾರೆ. ಆದರೆ ಆ ವ್ಯಕ್ತಿಯ ಮೂಲ ಗುಣವನ್ನು ಚಿತ್ರದ ಮುಖಾಂತರ ತೋರಿಸುವ ಪ್ರಯತ್ನ ತಮ್ಮದಾಗಿರುತ್ತದೆ ಎಂದು ಅವರು ತಮ್ಮ ಕೃತಿಗಳ ನುಡಿಯುತ್ತಾರೆ.

ಅತಿಕಿರಿಯ ವಯಸ್ಸಿನಲ್ಲಿಯೇ ದೇಶದ ಪ್ರಮುಖ ಪಟ್ಟಣಗಳಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನ, ಗುಂಪು ಪ್ರದರ್ಶನಗಳನ್ನು ಏರ್ಪಡಿಸಿರುವ ಕಲಾವಿದ ಇವರು, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕ್ಯಾಮಲಿನ್ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿ ನೀಡುವ ಶಿಷ್ಯವೇತನಗಳನ್ನು ಪಡೆದಿರುವ ಗೌರವಕ್ಕೆ ಪಾತ್ರರಾಗಿದ್ದಾರೆ.

(ಎಚ್‌ಪಿಎಂ)

ರಾಮಯ್ಯಸ್ವಾಮಿ ಐನೂಲಿ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಐನೂಲಿಯಲ್ಲಿ 1940 ಜನವರಿ 1ರಂದು ಜನಿಸಿದರು. ತಂದೆ ರಾಚಯ್ಯಸ್ವಾಮಿ. ತಾಯಿ ಅಯ್ಯಮ್ಮ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಲಘು ಶಾಸ್ತ್ರೀಯ, ಸುಗಮ ಸಂಗೀತ, ಜನಪದ ಸಂಗೀತ, ಅಭ್ಯಾಸ ಮಾಡಿದ್ದಾರೆ. ಇವರು ಪಂ. ಪುಟ್ಟರಾಜ ಕವಿ ಗವಾಯಿಗಳು

ವರಲ್ಲಿ ಶಿಷ್ಯರಾದ ವಿರುಪಾಕ್ಷಯ್ಯ ತಾತನವರು ಐನೂಲಿ ಅವರಲ್ಲಿ ಸಂಗೀತ ಅಭ್ಯಾಸ ಮಾಡಿದ್ದಾರೆ. ಇವರ ಮನೆತನದಲ್ಲಿ ಸಂಗೀತವು ವಂಶಪರಂಪರೆಯಾಗಿ ಬೆಳೆದು ಬಂದಿದೆ. ಐನೂಲಿ ಯವರು ವಚನ ಸಂಗೀತ, ಭಕ್ತಿ ಸಂಗೀತ, ಭಜನ ಗೀತೆ, ಗಜಲ್‌ಗಳು ಹಾಗೂ ಉರ್ದುವಿನಲ್ಲಿ ಖವಾಲಿ ಮೊದಲಾದ ಗೀತೆಗಳನ್ನು ಹಾಡಿದ ಕೀರ್ತಿ ಇವರಿಗಿದೆ.

ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಹಲವು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತೆ ಮತ್ತು ಪ್ರಸಾರ ಇಲಾಖೆ, ನೆಹರು ಯುವ ಕೇಂದ್ರ, ಕುಟುಂಬ ಮತ್ತು ಕಲ್ಯಾಣ, ಆಕಾಶವಾಣಿ ಜನಪದ ಸಂಗೀತ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ, ಕನ್ನಡ ಸಾಹಿತ್ಯ ಪರಿಷತ್ತು, ಲಿಂಗವಂತ ತತ್ವ ಪ್ರಚಾರ ಸಂಸ್ಥೆ, ಹೀಗೆ ಹತ್ತು–ಹಲವಾರು ಸಂಘ–ಸಂಸ್ಥೆಗಳಲ್ಲಿ ಕಾರ್ಯಕ್ರಮ ಗಳನ್ನು ನೀಡಿ ಜನ ಮೆಚ್ಚುಗೆಯನ್ನು ಪಡೆದವರಾಗಿದ್ದಾರೆ. ಇವರು ಜನಪರ ರಂಗಭೂಮಿ ನಿರ್ದೇಶಕರಾಗಿ, ಹವ್ಯಾಸಿಕ, ರಂಗಭೂಮಿ ನಿರ್ದೇಶಕರಾಗಿ, ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. ಅಲ್ಲದೇ ಸ್ವ ಗ್ರಾಮದಲ್ಲಿ ಕೋಲಾಟ, ದೊಡ್ಡಾಟಗಳಲ್ಲಿ ಮೃದಂಗವನ್ನು ಬಾರಿಸುವುದರೊಂದಿಗೆ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅನೇಕ ಭಕ್ತಿಗೀತೆ, ಭಾವಗೀತೆ, ಹಾಗೂ ಲೇಖನಗಳನ್ನು ಬರೆದಿದ್ದಾರೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನೆಲೆಯಲ್ಲಿ ಹಲವು ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ಸದಾ ಸಾಹಿತ್ಯ, ಸಂಗೀತ, ಸಮಾಜ ಸೇವೆಯನ್ನು ಗುರುತಿಸಿ ಜಿಲ್ಲೆಯ ಹಿರಿಯ ಹಾಗೂ ಉತ್ತಮ ಸುಗಮ ಸಂಗೀತ' ಕಲಾವಿದರೆಂದು ಗುಲಬರ್ಗಾ ಜಿಲ್ಲಾ ಹತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ. ಅಲ್ಲದೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಶರಣ ಸಾಹಿತ್ಯ ಸಮ್ಮೇಳನ, ಮೊದಲನೆ ಸಂಗೀತ ಸಮ್ಮೇಳನ ಹೀಗೆ ಹಲವು ಸಂಘ–ಸಂಸ್ಥೆಗಳು ಸನ್ಮಾನಿಸಿ ಹಲವು ಪುರಸ್ಕಾರ ಗಳನ್ನು ನೀಡಿ ಗೌರವಿಸಿವೆ.

ಇವರು 'ಶ್ರೀ ಗಾನಯೋಗಿ ಪಂಚಾಕ್ಷರಿ ತಾಲ್ಲೂಕಾ ಸಂಗೀತ ಕಲಾ ಸಂಗವನ್ನು ಸ್ಥಾಪಿಸಿ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. 'ಚಿಂಚೋಳಿ ತಾಲ್ಲೂಕಿನ ಸಂಗೀತ ಕಲಾಕುಸುಮ' ಎಂಬ ಪುಸ್ತಕವನ್ನು ಸಂಘದ ವತಿಯಿಂದ ಹೊರ ಬರಲು ಕಾರಣೀಭೂತರಾಗಿದ್ದಾರೆ. (ಆಯ್‌ಕೆ)

ರಾಮರಘು ಗೋಗಿ: ನಾಟಕದ ಪರದೆಗಳನ್ನು ಬರೆಯುವುದ ರಲ್ಲಿ ಸಿದ್ಧಹಸ್ತರು. ಒಮ್ಮೆ ನಾಟಕದಲ್ಲಿ ಸೇರ್ಪಡೆಯಾದ ಇವರು ನಾಟಕದ ರಂಗುರಂಗಿನ ಪರದೆಗಳನ್ನು ಬರೆಯುತ್ತ, ಅವು ರಾತ್ರಿಯ ದೀಪದ ಬೆಳಕಿನಲ್ಲಿ ಥಳ ಥಳಿಸುವಂತೆ ನಾಟಕಕ್ಕೆ ರಂಗೇರುವಂತೆ ಮಾಡಿದ ಕಲಾವಿದರೆನಿಸಿಕೊಂಡವರು. ಅಂದು ಕಂಪನಿ ನಾಟಕಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಹೀಗಾಗಿ ಇವರು ಬರೆಯುತ್ತಿರುವ ಆಕರ್ಷಕ ಪರದೆಗಳಿಗೆ ಎಲ್ಲಿಲ್ಲದ ಬೇಡಿಕೆ ಇತ್ತು.

ಮೊದಮೊದಲು ಪೌರಾಣಿಕ ಅನಂತರ ಐತಿಹಾಸಿಕ ಅನಂತರ ಸಾಮಾಜಿಕ ನಾಟಕಗಳು ಹೀಗೆ ಒಂದರ ಹಿಂದೆ ಒಂದು ಎಂಬಂತೆ ಕಾಲ ಬದಲಾದಂತೆ ನಾಟಕಗಳ ವಿಷಯ ಗಳೂ ಬದಲಾಗುತ್ತಿದ್ದುವು. ಅದಕ್ಕನುಗುಣವಾಗಿ ನಾಟಕದ ಪರದೆಗಳು ಸಿದ್ಧವಾಗುತ್ತಿದ್ದವು. ಇಂಥ ಪ್ರಸಿದ್ಧ ನಾಟಕ ಕಂಪನಿ ಗಳಿಗೆ ಉತ್ತಮ ದೃಶ್ಯಗಳು, ತಪೋವನ, ಅರಮನೆ, ಸಿಂಹಾಸನ, ರಾಣಿವಾಸ, ಸಾಮಾಜಿಕ ನಾಟಕಗಳಲ್ಲಿ ಸುಂದರವಾದ ಮನೆ ಗಳು, ಶ್ರೀಮಂತರ ಹಾಗೂ ಬಡವರ ಮನೆಗಳು, ಹೆದ್ದಾರಿ, ಬೆಂಗಳೂರಿನ ವಿಧಾನಸೌಧ, ಹೈಕೋರ್ಟ್, ಹಳ್ಳಿಯ ದಾರಿ, ಹೊಲ, ಪೈರು ಒಂದೇ ಎರಡೇ ಸಾಲು ಸಾಲಾಗಿ ನಾಟಕಗಳು ಬದಲಾದಂತೆ ದೃಶ್ಯಗಳು ಅದಕ್ಕನುಗುಣವಾಗಿ ಬದಲಾಗು ತ್ತಿದ್ದವು. ಹೀಗಾಗಿ ನಾಟಕದ ಸುಂದರ ಚಿತ್ರಗಳ ಪರದೆಯ ಕಲಾವಿದರಿಗೆ ಎಲ್ಲಿಲ್ಲದ ಬೇಡಿಕೆ. ಅದರಲ್ಲೂ ರಾಮರಘು ಅವ ರಂಥ ಕಲಾವಿದರಿಗೆ ಕೈತುಂಬ ಕೆಲಸ.

ಎಲ್ಲ ನಾಟಕ ಕಂಪನಿಗಳವರು, ತಮ್ಮ ಕಂಪನಿಯ ಇಂಥ ನಾಟಕಕ್ಕೊಂದು ಒಳ್ಳೆಯ ದೃಶ್ಯ ಹೊಂದಿರುವ ಪರದೆ ಮಾಡಿ ಕೊಡು ಎಂದು ಇವರಿಗೆ ದುಂಬಾಲು ಬೀಳುತ್ತಿದ್ದ ಕಾಲ ವೊಂದಿತ್ತು.

ಇವರು ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದಲ್ಲಿ 1942ರಲ್ಲಿ ಜನಿಸಿದರು. ಕುಲಕಸುಬು ನೇಕಾರಿಕೆ. ಮನೆಯಲ್ಲಿನ ಕೈಮಗ್ಗಗಳ ಸಪ್ಪಳವನ್ನು ಕೇಳುತ್ತಲೇ ಬೆಳೆದ ಇವರಿಗೆ ಕಲೆ ಹುಟ್ಟಿ ನಿಂದಲೇ ಒಲಿದು ಬಂದದ್ದು. ತಿದ್ದಿ ತೀಡಿ ಈ ಕಲಾಕ್ಷೇತ್ರಕ್ಕೆ ಒಳ್ಳೆಯ ಕಲಾವಿದನನ್ನಾಗಿ ಮಾಡಿದ ಗುರು ರಾಮಚಂದ್ರರಾವ ಕಲಾದಗಿ ಆಲಮೇಲ. ಇವರ ತಂದೆ ತಿಪ್ಪಣ್ಣ ಸಾತ್ವಿಕ ಸ್ವಭಾವದ ವ್ಯಕ್ತಿ. ಮನೆಯಲ್ಲಿ ಬಡತನ ತಾಂಡವಾಡುತ್ತಿದ್ದರು. ಮಗನನ್ನು ಕುಲ ಉದ್ಯೋಗ ನೇಕಾರಿಕೆಯಲ್ಲಿ ತೊಡಗಿಸದೇ ಮಗನ ಆಸಕ್ತಿ ಕಡೆಗೆ ಓಗೊಟ್ಟು ಕಲಾದೇವಿಯ ಮಡಿಲಿಗೆ ಹಾಕಿದರು ನಾಟಕ ದಲ್ಲಿ ಪರದೆಗಳಿಗೆ ತಮ್ಮ ಕಲೆಯಿಂದ ಜೀವತುಂಬುವ ಕಾಲ ಚಕ್ರದ ಉರುಳಿನೊಂದಿಗೆ ಬದುಕನ್ನು ಸದಾ ಸರಿಪಡಿಸಲು ಹೆಣಗುತ್ತಿದ್ದರು.

ಸಾವಿರಾರು ನಾಟಕ ಪರದೆಗಳಲ್ಲಿ ಬಣ್ಣ ತುಂಬಿದರು. ಅಂತಹವುಗಳಲ್ಲಿ ಶ್ರೀ ದತ್ತ ನಾಟ್ಯ ಮತ್ತು ಭಂಡಾರ ಶಹಾಪುರ (ಜಿ.ವಿ. ಉಪ್ಪಿನ) ಮತ್ತು ಡಿ.ವಿ. ವೆಂಕಣ್ಣ, ಶ್ರೀ ಶರಣಬಸವೇಶ್ವರ ನಾಟ್ಯ ವಸ್ತು ಭಂಡಾರ ಹಾಗೂ ಹನುಮಾನ ನಾಟ್ಯ ಸಂಘ ಆಲಮೇಲದಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡು ತ್ತಿದ್ದಾರೆ. ನೋಡಿದವು ನಿಬ್ಬೆರಗಾಗುವಂತೆ ಸುಂದರವಾದ ಸೀನರಿ ಗಳನ್ನು ಚಿತ್ರಿಸುವ ಸಮರ್ಥ ಕಲಾವಿದ. (ಎಂಎನ್‌ಜಿ)

ರಾಮಲಿಂಗೇಶ್ವರ ದೇವಾಲಯ: ಪುರಾತನ ದೇವಸ್ಥಾನ ಐತಿ ಹಾಸಿಕ ಸ್ಮಾರಕಗಳಲ್ಲೊಂದು. ಹಟ್ಟಿಯಿಂದ ಗುರುಗುಂಟಾ ಹೋಬಳಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬರುವ ಕೋತಾ (ಮೇಧಾವಿ ರಾಯನ ಕೋಟೆ)ದ ಪಶ್ಚಿಮ ದಿಕ್ಕಿಗೆ, ಹಳ್ಳದ ದಡ

ದಲ್ಲಿ ಪುರಾತನಾ ಕಾಲದ ಸೂಕ್ಷ್ಮ ಶಿಲ್ಪಕಲೆಯುಳ್ಳ ರಾಮ ಲಿಂಗೇಶ್ವರ ದೇವಸ್ಥಾನವಿದೆ.

ಈ ದೇವಾಲಯವನ್ನು ಬೃಹದಾಕಾರದ ಬಂಡೆಗಳನ್ನು ಜೋಡಿಸಿ ನಿರ್ಮಿಸಲಾಗಿದೆ. ಗಾರೆಯ ಮೇಲ್ಛಾವಣಿ ಹೊಂದಿದೆ. ಇದರ ಕೆಂಪು ಶಿಲೆಯ ಕಂಬಗಳ ಮೇಲೆ ಸೂಕ್ಷ್ಮವಾದ ಕಲಾತ್ಮಕ ಕೆತ್ತನೆ ದೇವಸ್ಥಾನದ ಸೌಂದಯ ವೃದ್ಧಿಸುತ್ತವೆ.

ಗರ್ಭಗುಡಿಯ ದ್ವಾರದ ಎರಡು ಬದಿಯಲ್ಲಿಟ್ಟ ಸರ್ಪಗಳ ನಾಜೂಕು ಕೆತ್ತನೆಯ ವಿಗ್ರಹಗಳು ಮತ್ತಷ್ಟು ಆಕರ್ಷಿಸುತ್ತವೆ. ದೇವಸ್ಥಾನದ ಹಿಂಭಾಗ ಬೃಹದಾಕಾರದ ಕಲ್ಲುಗಳ ಕೆತ್ತನೆಯು ಹಂಪಿಯ ದೇವಾಲಯಗಳ ತರುತ್ತದೆ. ಇದು ಗುಡಿಯ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ. ಈ ಗುಡಿಗೆ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಎರಡು ದ್ವಾರಗಳಿವೆ.

ನಿಧಿಗಳ್ಳರು ಗರ್ಭಗುಡಿಯ ಆಳಕ್ಕೆ ಅಗೆದು ಹಾಳು ಮಾಡಿದ್ದಾರೆ. ಗುಡಿಯಲ್ಲಿದ್ದ ಸುಮಾರು ಐದು ಅಡಿ ಎತ್ತರದ ಲಿಂಗವನ್ನು ಹತ್ತು ವರ್ಷದ ಹಿಂದೆ ಕಳವು ಮಾಡಲಾಗಿದೆ ಎಂದು ಸ್ಥಳೀಯ ನಿವಾಸಿಗರು ಹೇಳುತ್ತಾರೆ.

ದೇವಸ್ಥಾನ ಹಳ್ಳದ ದಡದಲ್ಲಿರುವುದರಿಂದ ಇದನ್ನು ಚಾಲುಕ್ಯರು ನಿರ್ಮಿಸಿರಬಹುದು ಎಂದು ಹೇಳಲಾಗುತ್ತಿದೆ. ಇದು ಸುಮಾರು ಎಂಟು ಶತಮಾನಗಳಷ್ಟು ಹಳೆಯದು ಎಂಬುದು ಸ್ಥಳೀಯರ ಅಭಿಪ್ರಾಯ. ಪುರಾತನ ಇತಿಹಸ, ಕಲೆಯನ್ನು ಇಂದಿನ ಪೀಳಿಗೆಗೆ ನೋಡಿ ಅರಿತುಕೊಳ್ಳಲು ಸಹಕಾರಿಯಾಗುವ ಅಮೂಲ್ಯ ದೇವಸ್ಥಾನವಿದು. (ಎಂಕೆಎ)

ರಾಮಾಚಾರ ಜಾಲಿಹಾಳ್: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದರು. ಸಂಗೀತವೇ ತಮ್ಮ ಸರ್ವಸ್ವ ಎಂದು ಬದುಕಿರುವವರು. ಕಲಬುರ್ಗಿ ಚಿತ್ತಾಪೂರದಲ್ಲಿ ನೆಲೆಸಿದ್ದಾರೆ. ರಾಮಾಚಾರ ಜಾಲಿಹಾಳ್. ತಮ್ಮ ಎಳೆಯ ವಯಸ್ಸಿನಲ್ಲಿಯೇ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಶರಣಾದವರು. ಹಾರ್ಮೋನಿಯಂ ವಾದನ ಎಂದರೆ ಇವರಿಗೆ ಅಚ್ಚುಮೆಚ್ಚು. ಮೂಲತಃ ಬಾಗಲಕೋಟ ಜಿಲ್ಲೆಯ ಕುಂದರ್ಗಿಯವರಾದ ರಾಮಾಚಾರ ಜಾಲಿಹಾಳ್ ಅವರು ಹುಟ್ಟಿದ್ದು ಆಂಧ್ರ ಪ್ರದೇಶದ ಜಲಾನಾಬಾದನಲ್ಲಿ. ಕಾರಾಣಾಂತರಗಳಿಂದ ಸುಮಾರು 50 ವರ್ಷಗಳ ಹಿಂದೆ ಚಿತ್ತಾಪೂರಕ್ಕೆ ಬಂದು ನೆಲೆಸಿದ ರಾಮಾಚಾರ ಜಾಲಿಹಾಳ್, ಅಂದಿನಿಂದ ಇಂದಿನವರೆಗೂ, ತಮ್ಮ ಜೀವನದಲ್ಲಿ ಸುಖಕ್ಕಿಂತಲೂ ದುಃಖವನ್ನೇ ಹೆಚ್ಚು ಉಂಡವರು. ತಾಯಿ ರಮಾಬಾಯಿ ಗುರು, ತಂದೆ ಭೀಮಾಚಾರ್ ಜಾಲಿಹಾಳ್ ಅವರು ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ರೂ, ತಾಯಿ ಮಾತ್ರ ದೈವಭಕ್ತೆ. ಅವರು ಹಾಡುತ್ತಿದ್ದ ದಾಸರಪದಗಳು, ಜನಪದ ಸಂಪ್ರದಾಯದ ಹಾಡುಗಳು ರಾಮಾಚಾರ್ ಅವರಿಗೆ ಆಗಿನಿಂದಲೇ ಪ್ರೇರಣೆ ನೀಡಿದವು.

ದಾಸರ ಪದಗಳು, ವಚನ, ಜನಪದ ಹಾಡುಗಳನ್ನು ಹಾಡುವುದನ್ನು ರೂಢಿಸಿಕೊಂಡರು. ನಂತರ ತಮ್ಮ ಹದಿನಾಲ್ಕ



ಶ್ರೀ ರಾಮಾಚಾರ ಜಾಲಿಹಾಳ ಕಾರ್ಯಕ್ರಮ ನೀಡುತ್ತಿರುವುದು


ನೆಯ ವಯಸ್ಸಿನಲ್ಲಿ ಅವರು ಶಾಸ್ತ್ರೀಯ ಸಂಗೀತದ ಚೈತ್ರಯಾತ್ರೆ ಆರಂಭವಾಗಿ ಸೊಲ್ಲಾಪೂರದ ಸಂಗೀತ ವಿದ್ವಾನ ದಿಗಂಬರ ಬುವಾ ಅವರ ಬಳಿ, ಶಾಸ್ತ್ರೀಯ ಸಂಗೀತಾಭ್ಯಾಸ ಆರಂಭವಾಯ್ತು. ಸುಮಾರು ಆರು ವರ್ಷ ಅವರ ಬಳಿ ಕಲಿತ ನಂತರ, ಖ್ಯಾತ ಹಿಂದೂಸ್ತಾನಿ ಸಂಗೀತಗಾರ ಪಂಡಿತ ಪ್ರಭುದೇವ ಸರ್ದಾರ ಅವರ ಶಿಷ್ಯಂದಿರಾಗಿ ಅಲ್ಲಿಯೂ ಸುಮಾರು ಒಂಭತ್ತು ವರ್ಷ ಕಲಿತರು. ಕೊನೆಗೂ ಕಿರಾಣಾ ಘರಾನಾದಲ್ಲಿ ಅವರು ಯಶಸ್ಸಾಧಿಸಿದರು.

ಸಂಗೀತ ಸರಸ್ವತಿ ಒಲಿದರೂ ಲಕ್ಷ್ಮಿಮಾತ್ರ ಒಲಿಯಲಿಲ್ಲ. ಹಿಂದೂಸ್ತಾನಿ ಸಂಗೀತದಲ್ಲಿ ಸಂಪೂರ್ಣ ಪ್ರಭುತ್ವ ಹೊಂದಿ ಸಂಗೀತವೇ ಅವರ ಬದುಕು ಎಂದಿದ್ದರೂ ರಾಮಾಚಾರ್ ಅವರಿಗೆ ಸುಖ ಮರಿಚಿಕೆಯಾಯ್ತು. ಸಂಗೀತವೆಂದರೆ ಶಾಸ್ತ್ರೀಯ ಸಂಗೀತ ಎನ್ನುವ ಶ್ರೀಮಂತ ಕಾಲದಲ್ಲಿಯೇ ರಾಮಾಚಾರ್ ರಾಜ್ಯ, ರಾಷ್ಟ್ರದಾದ್ಯಂತ ಆಕಾಶವಾಣಿಯಲ್ಲಿ ಕಾರ್ಯಕ್ರಮ ನೀಡಿದವರು. ಹಾಡುಗಾರಿಕೆಯಲ್ಲಿ ಮಾತ್ರವಲ್ಲ, ದೇಶದ ಅನೇಕ ಖ್ಯಾತ ನಾಮರ ಹಾಡುಗಾರಿಕೆಗೆ ಅವರು ಹಾರ್ಮೋನಿಯಂ ಸಾಥ್ ನೀಡಿದ್ದರು. ಅವರಲ್ಲಿ ಪ್ರಮುಖರಾದ ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ವಸಂತ ದೇಶಪಾಂಡೆ, ಛೋಟಾ ಗಂದರ್ವ, ಪಂ. ಭೀಮಸೇನ್ ಜೋಶಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈಗ ಎಪ್ಪತ್ತರ ಇಳಿವಯಸ್ಸಿನಲ್ಲಿಯೂ ರಾಮಾಚಾರ ಅವರ ಸ್ಮರಣಶಕ್ತಿ ಅಗಾಧವಾದದ್ದು. ಇವರ ಗಾಯನ ವೈವಿಧ್ಯತೆ, ಖ್ಯಾಲ್‌ನ ಗಾಯನ, ಠುಮರಿ, ಧ್ರುಪದ, ಧಮಾರ ಹಾಗೂ ದಾಸರಪದ, ವಚನ ಹೀಗೆ ಎಲ್ಲವನ್ನು ಬರೀ ತಮ್ಮ ನೆನಪಿನ ಶಕ್ತಿಯಿಂದ ಸುಶ್ರಾವ್ಯವಾಗಿ ಹಾಡುಬಲ್ಲರು. ರಾಮಾಚಾರ್ ಅವರ ಮತ್ತೊಂದು ವಿಶೇಷವೆಂದರೆ ಅನೇಕ ಅಪ್ರಚಲಿತ ರಾಗಗಳನ್ನು ಅವರು ಹಾಡಬಲ್ಲರು.

ಇಷ್ಟೆಲ್ಲ ಸಂಗೀತದ ಬಗ್ಗೆ ಅಪಾರ ಜ್ಞಾನ ಹೊಂದಿರುವ ಒಬ್ಬ ಪ್ರಬುದ್ಧ ಪರಿಪೂರ್ಣ ಗಾಯಕ. ಬದುಕಿನ ಅನೇಕ ನೋವುಗಳ ಮಧ್ಯೆಯೂ ಇವರು ಸಂಗೀತದ ಬಗ್ಗೆ ಇಂದಿಗೂ ಕ್ರಿಯಾಶೀಲರಾಗಿದ್ದಾರೆ. ಕಣ್ಣು ಮತ್ತು ಕಿವಿ ಮಂದವಾಗಿದ್ದರೂ, ಹಾಡಬೇಕೆನ್ನುವ ಇವರ ಛಲ ಯುವಕರನ್ನೂ ನಾಚಿಸುವಂತಹುದು. ಇವರು ದಾಸರ ಪದ, ವಚನ, ಜನಪದ ಭಾವಗೀತೆ ಎಲ್ಲವನ್ನು


ಹಾಡಿದರೂ, ಅದು ಬರೀ ನೆನಪಿನಿಂದ ಮಾತ್ರ. ಅನೇಕರಿಗೆ ಪಾಠ ಹೇಳಿಕೊಟ್ಟು ಯಾವುದೇ ಶುಲ್ಕ ಪಡೆಯದ ಅವರು, ಇಂದು ಚಿತ್ತಾಪೂರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅತ್ಯಂತ ಸಾಧರಣ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಮಠದಲ್ಲಿ ಊಟ, ಆತ್ಮೀಯರಿಂದ ಬಟ್ಟೆ, ನೋವು ಮರೆಯಲು ಸಂಗೀತ ಇವು ಇವರ ಒಡನಾಡಿಗಳಾಗಿವೆ. (ಎಂಪಿಎಸ್)

ರಾಯಚೂರಿನ ಸ್ಮಾರಕಗಳು: ಹೈದರಾಬಾದ ಕರ್ನಾಟಕ ಪ್ರದೇಶ ಧಾರ್ಮಿಕ, ಕಲೆ, ಸಂಸ್ಕೃತಿ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ ಮೊದಲಾದವುಗಳಿಗೆ ಸಮನ್ವಯ ಎನಿಸಿದ ಗಂಡುಭೂಮಿ 'ಎಡದೊರೆಯ ನಾಡು' ಎಂದೆ ಪ್ರಖ್ಯಾತವಾದ ಜಿಲ್ಲೆ. ಕೃಷ್ಣ-ತುಂಗಭದ್ರೆಯರ ಮಂಗಳದ ಅಂಗಳವೇ ರಾಯಚೂರು ಜಿಲ್ಲೆ. ಈ ನೆಲದ ಆಳರಸರು ಬಿಟ್ಟು ಹೋದ ಕಲೆ, ಸಾಹಿತ್ಯ, ಸಂಸ್ಕೃತಿಯ ಐತಿಹಾಸದ ಬಿಂಬವಾಗಿ ಇಲ್ಲಿನ ಕೋಟೆ-ಕೊತ್ತಲುಗಳು, ಗುಡಿ-ಗುಂಬಜಗಳು, ದೇಗುಲ-ದೇವಾಲಯಗಳು, ಮಸೀದಿ-ಬಸೀದಿಗಳು, ಮಾಸ್ತಿ-ವೀರಕಲ್ಲುಗಳು, ಶಿಲಾ-ಶಾಸನಗಳು, ಮಡಿಕೆ-ಕುಡಿಕೆಗಳು, ಕೆರೆ-ಕಟ್ಟೆ, ಬಾವಿಗಳು ಐತಿಹಾಸಿಕ ಸ್ಮಾರಕಗಳು, ತಮ್ಮ ಗತವೈಭವದ ಇತಿಹಾಸ ವೈಭವವನ್ನು ಸಾರಿ ಹೇಳುತ್ತವೆ.



ರಾಯಚೂರಿನ ಕೋಟೆ

ರಾಯಚೂರು ಕೋಟೆ ಕರ್ನಾಟಕದ ಪ್ರಸಿದ್ಧ ಕೋಟೆಗಳಲ್ಲೊಂದು. ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಈ ಕೋಟೆ ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು. ಹತ್ತಾರು ಜನ ಕೂಡಿ ಒಂದು ಕಲ್ಲು ಎತ್ತಲು ಅಸಾಧ್ಯವಾಗಿರುವಂತಹ ದೊಡ್ಡ ದೊಡ್ಡ ಬಂಡೆಗಲ್ಲುಗಳಿಂದ ರಾಯಚೂರಿನ ಕೋಟೆ ನಿರ್ಮಿಸಲಾಗಿದ್ದು, ಬಹುತೇಕ ಭಾಗದಲ್ಲಿ ಸುವ್ಯವಸ್ಥಿತವಾಗಿ, ಇನ್ನೂ ಕೆಲವು ಕಡೆ ತನ್ನ ಅಸ್ತಿತ್ವಕ್ಕಾಗಿ ಪರದಾಡುತ್ತಿರುವ ಕೋಟೆ ಹಿಂದೊಮ್ಮೆ ಬಹುಜನ ರಕ್ಷಕನಾಗಿಯೂ, ವೈರಿಗಳಿಗೆ ಕಂಟಕಪ್ರಾಯವಾಗಿಯೂ ಕಾಡಿದೆ. ಇದೀಗ ಬಹುಭಾಗ ಅತಿಕ್ರಮಣಕ್ಕೆ ಒಳಗಾಗಿದ್ದರೂ, ಉಳಿದಿದ್ದು ಜೀರ್ಣಾವಸ್ಥೆಯಲ್ಲಿ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ.



ರಂಗೀನ್ ಮಹಲ್, ರಾಯಚೂರ

ಕಾಕತೀಯ ರುದ್ರಮ್ಮ ರಾಣಿಯ ಮಂತ್ರಿಯಾದ ರಾಜ ಗೋರೆ ಗನ್ನಯ್ಯರೆಡ್ಡಿಯ ಆದೇಶದ ಮೇರೆಗೆ ವಿಠಲನಾಥ ಎನ್ನುವವರಿಂದ ಕ್ರಿ. ಶ. 1294ರಲ್ಲಿ ರಾಯಚೂರು ಕೋಟೆ ಕಟ್ಟಲ್ಪಟ್ಟಿತೆಂದು, ಹೆಚ್ಚಿನ ಪ್ರಗತಿಯನ್ನು ಕಂಡಿದ್ದು 15ನೆಯ ಶತಮಾನದಲ್ಲಿ. ಕೋಟೆಯ ಸುತ್ತಲೂ ಇರುವ ಕಂದಕವು, ಕೋಟೆಯ ಅವಿಭಾಜ್ಯ ಅಂಗವಾಗಿದ್ದು, ಒಳಕೋಟೆಯ ಸುತ್ತಲೂ ಇಂದು ಕಂದಕವು ಕಂಡು ಬರುತ್ತಿಲ್ಲವಾದರೂ, ಹೊರ ಕೋಟೆಗೆ ಪಶ್ಚಿಮೋತ್ತರ ಮತ್ತು ನೈರುತ್ಯ ದಿಕ್ಕುಗಳಲ್ಲಿ ಮಾತ್ರ ಅಗಲವಾದ ತಗ್ಗುಳ್ಳ ಕಂದಕವಿದೆ. ಕೋಟೆಯ ಒಳಭಾಗದ ಮಧ್ಯದಲ್ಲಿ ಸುಂದರವಾದ ಬೆಟ್ಟದ ಮೇಲೆ ಬೃಹತ್ತಾದ ಒಂದು ಮಹಲ್ ಕಟ್ಟಲಾಗಿದೆ. ಕೋಟೆಯ ಸುತ್ತಲೂ ಅಲ್ಲಲ್ಲಿ ಕಿಂಡಿಗಳಿದ್ದು, ಶತ್ರುಗಳನ್ನು ಸದೆಬಡಿಯಲು ಇವು ಸಹಾಯಕವಾಗಿವೆ. ಕೆಲವು ಕಡೆ ಚತುಷ್ಕೋನಾಕಾರದ ಕಮಾನುಗಳನ್ನು ಕಟ್ಟಿದ್ದು, ಸೈನಿಕರು ಬಿಸಿಲು ಬೆವರಿನಿಂದ ಆಶ್ರಯ ಪಡೆಯಲು ಅನುಕೂಲವಾಗಿದೆ.

ನಗರದ ಹೃದಯಭಾಗವಾದ ಕೋಟೆಯ ಒಳಹೊರ ಭಾಗದಲ್ಲಿ ಬಹುತೇಕ ರಾಯಚೂರು ನಗರ ಹರಡಿದ್ದು, ಆದಿ ತೀರ್ಥಂಕರನ ಜೈನ ಬಸದಿ, ಮಸೀದಿ, ದೇವಾಲಯಗಳಿಂದ ಕೂಡಿದೆ. ಕಾಲಗರ್ಭಕ್ಕೆ ತಕ್ಕಂತೆ ಇತಿಹಾಸ ಕಳೆದುಕೊಳ್ಳುತ್ತಿರುವ ರಾಯಚೂರಿನ ಏಳುಸುತ್ತಿನ ಕೋಟೆ, ಉದ್ದನೆಯ ಬುರುಜು, ಬಿಗಿಯಾದ ಅಗಸೆ ಬಾಗಿಲುಗಳಿಂದ ಕೂಡಿದ್ದು ಒಳ ಹೋದಂತೆ ಎಲ್ಲವೂ ನಿಗೂಢ ! ಬಹುಮನಿ ಸುಲ್ತಾನ ಮಹಮ್ಮದ ಶಾಹನ ಆಳ್ವಿಕೆಯಲ್ಲಿ ಮಲ್ಲಿಕ ಅಂಬರನಿಂದ 919ನೇ ಹಿಜರಿ ಶತಕದಲ್ಲಿ ಇಲ್ಲಿರುವ 'ಏಕಮಿನಾರ' ಮಸೀದಿ ಕಟ್ಟಲಾಗಿದೆ ಎಂದು ತಿಳಿದು ಬರುತ್ತದೆ. 80 ಅಡಿ ಎತ್ತರ ಮತ್ತು 10 ಅಡಿ ವ್ಯಾಸವಿರುವ ಒಂದು ಗೋಪುರವಿದೆ. ಏಕಮಿನಾರ ನೋಡಲು ತುಂಬಾ ಸುಂದರವಾಗಿದ್ದು, ದೆಹಲಿಯ ಕುತುಭ್ ಮಿನಾರನ ಅರ್ಧುನ ಮಿನಾರನಂತೆ ಕಂಗೊಳಿಸುತ್ತ ಜನರ ಗಮನ ಸೆಳೆಯುತ್ತದೆ.

ಪಟ್ಟಣದ ನಡುವೆ ತೀನ್ ಖಂದೀಲ್ ಸ್ಮಾರಕವಿದ್ದು, ಒಂದೇ ಕಂಬದ ತುದಿಭಾಗದಲ್ಲಿ ಮೂರು ಖಂದೀಲುಗಳನ್ನು ಕೂಡಿಸಿ,


ನವರಂಗ ದರ್ವಾಜ್, ಕೇಂದ್ರ ದ್ವಾರ, ರಾಯಚೂರ

ಹಿಂದೆ ದೀಪ ಹಚ್ಚುತ್ತಿದ್ದರೆಂದು ತಿಳಿದು ಬರುತ್ತದೆ. ಇಲ್ಲಿನ ಗುಬ್ಬೇರು ಬೆಟ್ಟಕ್ಕೆ ಪಾಂಚ ಬೀ ಬೀ ಪಹಾಡ ಎಂತಲೂ ಕರೆಯುತ್ತಾರೆ. ಅತ್ಯಂತ ಎತ್ತರವಾದ ಈ ಬೆಟ್ಟವು, ರಾಯಚೂರಿನ ಇತಿಹಾಸವನ್ನು ಕೂಗಿ ಕೂಗಿ ಹೇಳುತ್ತಿದ್ದು ಗತವೈಭವ ಸಾರುತ್ತದೆ. ಗುಬ್ಬೇರು ಬೆಟ್ಟ ಹತ್ತಲು ಮೆಟ್ಟಿಲುಗಳಿಂದ ನಿರ್ಮಿಸಿದ ದಾರಿಯಿದ್ದು, ಕೆಲವು ದ್ವಾರಗಳನ್ನು ದಾಟಿ ಬೆಟ್ಟವನ್ನು ಹತ್ತಬೇಕಾಗುತ್ತದೆ. ದೊಡ್ಡ ದೊಡ್ಡದಾದ ಹೆಬ್ಬಂಡೆಗಳಿಂದ ಕೂಡಿದ ಬೆಟ್ಟವು ಸಾಹಸಗಳಿಗೆ ಮೈನವಿರೇಳಿಸುವ ಸನ್ನಿವೇಶ ಕಲ್ಪಸುತ್ತದೆ.

ಬೆಟ್ಟದ ಸುತ್ತಲು ಅನೇಕ ಸುತ್ತಿನ ಎತ್ತರವಾದ ಗೋಡೆಗಳು ಕಟ್ಟಲ್ಪಟ್ಟಿದ್ದು, ಒಟ್ಟು ಐದು ಬಾಗಿಲುಗಳಿವೆ. ಬೆಟ್ಟದ ಸುತ್ತಲಿನ ಹೊರಭಾಗದ ಎರಡು ಕೋಟೆಗಳನ್ನು ಇಬ್ರಾಹಿಂ ಆದಿಲ್ ಶಾಹಿ ಕ್ರಿ.ಶ. 1549ರಲ್ಲಿ ಕಟ್ಟಿಸಿದನು. ಬೆಟ್ಟದ ಮೇಲೆ ಒಂದು ಭಾವಿ, ಒಂದು ಮಸೀದಿ ಇರುವುದಲ್ಲದೆ, 200 ಅಡಿ ಉದ್ದದ ತೋಪು ಇದೆ. ಪಶ್ಚಿಮ ದ್ವಾರದಲ್ಲಿ ಭದ್ರವಾಗಿ ಕಟ್ಟಿದ ಅರಮನೆಯೂ ಇದೆ.

ಕ್ರಿ.ಶ. 1549ರಲ್ಲಿ ಇಬ್ರಾಹಿಂ ಆದಿಲ್ ಶಾಹಿಯು ಕೋಟೆಯ ಉತ್ತರ ಭಾಗಕ್ಕೆ 'ನವರಂಗ ದರವಾಜಾ' ಕಟ್ಟಿಸಿದ. ದರವಾಜಾ ಮೇಲ್ಭಾಗದ ಬುರುಜಿನಲ್ಲಿ ಹಾವಿನ ಹೆಡೆಯ ಕಿರೀಟ ಧರಿಸಿದ ನಾಗದರಾಜನ ಕೆತ್ತನೆ ಇದೆ. ರಾಮಾಯಣ ಮಹಾಭಾರತ ಕಥಾ ಪ್ರಸಂಗಗಳನ್ನು ನೆನಪಿಸುವ ಹಲವಾರ ಕೆತ್ತನೆಗಳು ಈ ಗೋಡೆಯಲ್ಲಿವೆ. ದೊಡ್ಡದಾದ ಹೆಬ್ಬಾಗಿಲು ಸುಂದರ ಕೆತ್ತನೆಯಿಂದ ಕೂಡಿದ್ದು, ವಿಶಾಲವಾದ ಪ್ರಾಂಗಣ ಹೊಂದಿದೆ. ಹಲವಾರು ಮೂರ್ತಿಗಳು, ನಾಗ ಶಿಲ್ಪಗಳು, ಜೈನ ಮೂರ್ತಿಗಳು ಆಕರ್ಷಕ ಕೆತ್ತನೆಗಳಿಂದ ಕೂಡಿದ್ದು, ಹಿಂದು ಶೈಲಿಯ ನವರಂಗ ದರವಾಜ ದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವೂ ಇದೆ.

ಕೋಟೆಯ ಹೊರ ಆವರಣದ ಬಸ್ ನಿಲ್ದಾಣದ ಪಕ್ಕದಲ್ಲಿ ಶಾಸನದ ಹತ್ತಿರವೇ ಬಂಡೆಗಳಲ್ಲಿ ಕೊರೆದ ರೇಖಾ ಚಿತ್ರಗಳನ್ನು ಕಲ್ಲಿನ ತುದಿಯಿಂದ ತಿದ್ದಿ, ಆಳವಾಗಿ ಕೊರೆಯಲಾಗಿದೆ. ಈ ರೇಖಾಚಿತ್ರಗಳಲ್ಲಿ ಬಸವ, ಜಿಂಕೆ, ಮನುಷ್ಯ ಮುಂತಾದ ಚಿತ್ರಗಳನ್ನು ಕೊರೆಯಲಾಗಿದೆ. ಅದೇರೀತಿ ಎರಡು ಮಹಡಿಯ ಕಲಾತ್ಮಕತೆಯಿಂದ ಕೂಡಿದ ಮನೆ, ಕಲ್ಲಿನಲ್ಲಿ ಕೆತ್ತಿದ ಸುಂದರವಾದ ಆನೆ, ಐತಿಹಾಸಿಕ ಬಾವಿ, ಮಾವಿನ ಕೆರೆ ನೋಡುಗರ ಕಣ್ಮನ ಸೆಳೆಯುತ್ತವೆ. ಮತ್ತೆ ಮತ್ತೆ ಇತಿಹಾಸದ ನೆನಪು ಮರುಕಳಿಸುವಂತೆ ಮಾಡುತ್ತವೆ. (ಡಿವೈ)

ರಾಷ್ಟ್ರಕೂಟರ ಕಾಲದ ಪ್ರಾಚೀನ ಜಿನಾಲಯಗಳು: 1. ಆಳಂದ (ಆಳೆಂದಿ, ಆಳಂದೆ, ಆಳಂದೆ) ಗುಲ್ಬರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಆಳಂದದಲ್ಲಿ ಜೀರ್ಣೋದ್ಧಾರದಿಂದ ಪುನರ್ಭರಣ ಗೊಂಡಿರುವ ಪ್ರಾಚೀನ ಬಸದಿಯಿದೆ. ಇದರ ಗೋಡೆಗಳು ಕೂಡ ನವೀಕರಣ ಗೊಂಡಿರುವುದರಿಂದ ಈ ಚೈತ್ರಾಲಯದ ಹಳಮೆ ಅರಿವಿಗೆ ಬರುವುದಿಲ್ಲ. ಆದರೆ ಒಳಗಡೆಯ ಸಭಾಮಂಟಪದ ಕುಬ್ಜ ಕಂಬಗಳು ಹಳೆಯವೆಂದು ಸುಲಭವಾಗಿ ತಿಳಿಯುತ್ತದೆ. ಜಿನಾಲಯದಲ್ಲಿ ಚವ್ವೀಸ್ ತೀರ್ಥಂಕರರ ಪ್ರಾಚೀನ ವಿಗ್ರಹವಿದ್ದರೂ ಅದಕ್ಕೆ ಆಧುನಿಕ ಅಮೃತ ಶಿಲಾಮಯ ಪುಟ್ಟ ಗಂಧಕುಟಿ ಕಟ್ಟಲಾಗಿದೆ. ಸಂಗಮವರಿಯ ಹಾಗೂ ಪಂಚಲೋಹದ ಹಲವು ಜಿನಬಿಂಬಗಳಿವೆ. ಎರಡುವರೆ ಅಡಿಯಿರುವ ಚತುರ್ಭುಜ ಸರ್ವಾಹ್ಣ ಯಕ್ಷನು ಸಾಲಂಕೃತ ಆನೆಯ ಮೇಲೆ ನಿಂತು ಧರ್ಮಚಕ್ರವನ್ನು ಹಿಡಿದಿರುವುದು ಸುಂದರವಾಗಿದೆ. ಸರ್ವಾಹ್ಣ ಯಕ್ಷನು ತನ್ನ ಮೇಲಿನ ಎರಡು ಕೈಗಳಲ್ಲಿ ಜಿನರನ್ನು ಹೊತ್ತಿದ್ದಾನೆ. ನಾಲ್ಕು ಅಡಿಯ ಇನ್ನೊಂದು ಆದಿನಾಥ ಜಿನ ಬಿಂಬವು ಪದ್ಮಾಸನ ದಲ್ಲಿದೆ. ತಲೆಯ ಸುತ್ತ ಪ್ರಭಾಮಂಡಲವಿದೆ. ಎಡಬಲಗಳಲ್ಲಿ ಚಾಮರಧಾರಿಗಳಿದ್ದಾರೆ. ಮೇಲೆ ಮುಕ್ಕೊಡೆಯಿದೆ.

ಆದರೆ ಆಳಂದ ಬಸದಿಯ ಮಹತ್ವವನ್ನು ಹೆಚ್ಚಿರುವುದು ಇಲ್ಲಿ ನಿತ್ಯವೂ ಪೂಜೆಗೊಳ್ಳುತ್ತಿರುವ ಕೂಷ್ಮಾಂಡಿನೀ ಯಕ್ಷಿಯ ಮೂರ್ತಿ, ಎರಡೂವರೆ ಅಡಿಯಿರುವ ಈ ಶಿಲಾಮೂರ್ತಿಯು ರಾಷ್ಟ್ರಕೂಟರ ಕಾಲಕ್ಕೆ ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದಾಗಿದೆ. ಸುಖಾಸೀನ ನಿಲುವಿನಲ್ಲಿರುವ ಈ ಮೂರ್ತಿಯ ಎಡಗಡೆ ಸಿಂಹವನ್ನು ಹತ್ತಿ ಕುಳಿತಿರುವ ಬಾಲಕನಿದ್ದಾನೆ. ಬಲಗಡೆಗೆ ಮಾವಿನ ಗೊಂಚಲು ಮತ್ತು ಫಲವನ್ನು ಹಿಡಿದು ನಿಂತಿರುವ ಇನ್ನೊಬ್ಬ ಬಾಲಕನಿದ್ದಾನೆ. ಈ ಹುಡುಗರಿಬ್ಬರೂ ಜಿನಶಾಸನ ದೇವಿ ಕೂಷ್ಮಾಂಡಿಯ ಮಕ್ಕಳು. ಬಲಗಾಲನ್ನು ಸ್ವಲ್ಪ ಕೆಳಕ್ಕೆ ಇಳಿಯ ಬಿಡಲಾಗಿದೆ. ಎಡಗಾಲನ್ನು ಮಡಚಿದೆ. ಹೀಗೆ ಅರ್ಧ ಪದ್ಮಾಸನದಲ್ಲಿರುವ ದ್ವಿಭುಜೆ ಯಕ್ಷಿಯು ಸಾಲಂಕೃತ ಳಾಗಿದ್ದು ಬಲಗೈಯಲ್ಲಿ ಫಲಭರಿತ ಮಾವಿನ ಗೊಂಚಲನ್ನೂ ಎಡಗೈಯಲ್ಲಿ ಫಲವನ್ನೂ ಹಿಡಿದಿದ್ದಾಳೆ. ಮೂರು ವರಿಸೆಯಲ್ಲಿ ಸಿಂಬೆ ಸುತ್ತಿಕೊಂಡಿರುವ ತಲೆಯ ಕೇಶ ವಿನ್ಯಾಸವು ನೋಡ ತಕ್ಕದಾಗಿದೆ. ತಲೆಯ ಇನ್ನೂ ಮೇಲುಗಡೆಗೆ ಮಾವಿನ ಮರದ ಕೊಂಬೆಯಿದೆ. ಪುಷ್ಟವಾಗಿ ತುಂಬಿಕೊಂಡ ಎದೆಯ ಹಿನ್ನೆಲೆಯಲ್ಲಿ ಸಣ್ಣದಾದ, ತೆಳುವಾದ ದೇವಿಯ ಸೊಂಟವು ಗಮನ ಸೆಳೆಯುತ್ತದೆ. ಅಯ್ದು ಅಂಗುಲ ದಪ್ಪ ಕಲ್ಲಿನಲ್ಲಿ ಕಡೆದು ಮೂಡಿಸಿರುವ ಈ ಯಕ್ಷಿಯು ಕರ್ನಾಟಕದಲ್ಲಿ ಪೂಜೆಗೊಳ್ಳುತ್ತಿರುವ ಅತ್ಯಂತ ಪ್ರಾಚೀನ ಕೂಷ್ಮಾಂಡಿನೀ ಶಿಲ್ಪವಾಗಿದೆ. ಆಮ್ರಾ, ಅಂಬಿಕಾ, ಕೂಷ್ಮಾಂಡಿನೀ ಎಂಬ ಹೆಸರುಗಳಿರುವ ಈ

ದೇವಿಯು ಶ್ರವಣಬೆಳಗೊಳದ ಸ್ಥಳ ದೇವತೆಯೂ ಹೌದು. (ಹಂಪನಾ:ಯಕ್ಷ ಯಕ್ಷಿಯರು 1976:136–38) ಐಹೊಳೆಯ ಮೇಗಡಿಯಲ್ಲಿ ಕ್ರಿ.ಶ. 675ರ ಅವಧಿಗೆ ಸೇರಿದ ಅಂಬಿಕಾ ದೇವಿಯ ಪ್ರಾಚೀನ ಸುಂದರ ಸಪರಿವಾರ ಶಿಲ್ಪವಿದೆ. ಆದರೆ ಅದು ಸ್ವಲ್ಪ ಮುಕ್ಕಾಗಿದೆ.

2. ಗಡಿಕೇಶವಾರ: ಜಿನಗೃಹ ಮತ್ತು ಜೈನಮಠ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿರುವ ಗಡಿಕೇಶವಾರ ಗ್ರಾಮವು ಪುರಾತನ ಕಾಲದಿಂದಲೂ ಜೈನಧರ್ಮದ ಕೇಂದ್ರ ವಾಗಿ ಬೆಳೆದು ಬಂದಿದೆ. ಕ್ರಿ.ಶ. ಏಳನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಇದು ಜೀವಂತವಾಗಿ ಉಸಿರಾ ಡುತ್ತಿತ್ತು. ಇಲ್ಲಿ ಎರಡು ಜಿನಾಲಯಗಳಿದ್ದವು. ಅವುಗಳಲ್ಲೊಂದು ವಿಶಾಲ ಪ್ರಾಕಾರದಿಂದ ಶೋಭಾಯಮಾನವಾಗಿತ್ತು. ಈ ದೊಡ್ಡ ಬಸದಿಯ ಪಕ್ಕದಲ್ಲಿ ಜೈನಮಠವು ಗುರುಕುಲವೂ ಇದ್ದಿತು. ಹಾಲಿ ಒಂದು ಬಸದಿ ನಾಶವಾಗಿದ್ದು. ಇನ್ನೊಂದು ಹಿರಿಯ ಬಸದಿಯು ಬಾಳು ಬಸದಿ ನಾಶವಾಗಿದ್ದು, ಇನ್ನೊಂದು ಹಿರಿಯ ಬಸದಿಯು ಹಾಳು ಸುರಿಯುತ್ತಿದೆ. ಗಡಿ ಕೇಶವಾರ ಊರಿನ ಒಂದು ತುದಿ ಯಲಿ ಪಾಳು ಬಸದಿ ಈಗಲೂ ತನ್ನ ಗತವೈಭವವನ್ನು ಸಾರುತ್ತದೆ. ಈ ಹಳೆಯ ಬಸದಿಗೆ ಹೋಗುವ ಮೊದಲು ಬೇವಿನ ಮರದ ಜಗತಿಕಟ್ಟೆ ಸಿಗುತ್ತದೆ. ಜಗತಿಯ ಮೇಲೆ ಜೈನ ಕುರುಹು ಗಳಿವೆ. ಅವುಗಳಲ್ಲಿ ಒಂದು ತಲೆಯಿಲ್ಲದ ಯಕ್ಷ ಶಿಲ್ಪವು 'ಅತ್ಯಂತ' ಪ್ರಮುಖ ಶಿಲ್ಪವಾಗಿದೆ. ಕುಳಿತಿರುವ ವಿನ್ಯಾಸದ ಈ ಚತುರ್ಭುಜ ಯಕ್ಷ ಮೂರ್ತಿಯು ಪ್ರಾಯಷ ಕರ್ನಾಟಕದಲ್ಲಿಯೇ ಇಂದು ದೊರೆಯುವ ಹಳೆಯ ಹಾಗೂ ವಿಶಿಷ್ಟ ಯಕ್ಷ ಶಿಲ್ಪ. ಬಿರಿದ ತಾವರೆ ಮಣೆಯ ಮೇಲೆ ಪದ್ಮಾಸನದಲ್ಲಿರುವ ಇದರ ಭಂಗಿ ಮತ್ತು ಶರೀರ ವಿನ್ಯಾಸದಿಂದ ಈ ಅಪೂರ್ವ ಜೈನ ಯಕ್ಷ ಶಿಲ್ಪವು ಕ್ರಿ.ಶ. ಏಳನೆಯ ಶತಮಾನದ್ದೆಂದು ಕಂಡುಬರುತ್ತದೆ. ಇದ ರಿಂದಾಗಿ ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಗಡಿ ಕೇಶವಾರ ಗ್ರಾಮವು ಜೈನ ಕೇಂದ್ರವಾಗಿತ್ತೆಂದು ಸಾಬೀತಾಗುತ್ತದೆ.

ಈ ವೇದಿಕೆಯಿಂದ ಎಡಗಡೆಯ ಓಣಿಯಲ್ಲಿ ಹೊರಟರೆ ಹಾದಿ ಬದಿಯ ಇಕ್ಕೆಲಗಳಲ್ಲೂ ಜೈನ ಶಿಲ್ಪಗಳು ಅನಾಥವಾಗಿ ಬಿದ್ದಿರುವುದು ಕಾಣುತ್ತದೆ. ಇದರಲ್ಲಿ ಮುರಿದ ಕಂಬಗಳ ಮಾನ ಸ್ತಂಭಗಳ ಭಾಗಗಳೂ ಸೇರಿವೆ. ಇನ್ನೂ ಹತ್ತು ಹೆಜ್ಜೆ ಮುಂದೆ ಹೋದರೆ ಜೀರ್ಣ ಜಿನಾಲಯವೂ ಅದರ ಎಡಕ್ಕೆ ಪಾಳು ಜೈನ ಮಠವೂ ಸಿಗುತ್ತದೆ. ಬಸದಿಯ ಮುಂದುಗಡೆ ಒಂದು ಕಾಲ ದಲ್ಲಿದ್ದ ಮುಖ ಮಂಟಪ ಮತ್ತು ಪ್ರಾಕಾರದ ಕುರುಹುಗಳಿವೆ. ದೇವಾಲಯದ ಪ್ರವೇಶ ಭಾಗದ ಕಂಬ ಮತ್ತು ಭಿತ್ತಿ ಮೇಲಿರುವ ಶಾಸನದ ಒಕ್ಕಣೆ ತ್ರುಟಿತವಾಗಿಲ್ಲ. ಬಸದಿಯ ಒಳಗಡೆ ಹೋಗಲು ಇರುವ ಬಾಗಿಲ್ವಾಡದ ದ್ವಾರಶಾಖೆಗಳು ಸವೆದು ಮಂಕಾಗಿವೆ. ಅದರ ನಯ ನುಣುಪು ವಿವರಗಳು ಅಳಿಸಿವೆ. ಲಲಾಟದಲ್ಲಿ ಜಿನ ಬಿಂಬವಿದೆ.

ನವರಂಗವು ವಿಶಾಲವಾಗಿದೆ. ಅದರಲ್ಲಿನ ಮುಖ್ಯ ನಾಲ್ಕು ಕಂಬಗಳ ಜೊತೆಗೆ ತೊಲೆಯು ಕುಸಿಯದ ಹಾಗೆ ಆಸರೆಯಾಗಿ ನಿಲ್ಲಿಸಿರುವ ಇನ್ನೆರಡು ಕಂಬಗಳಿವೆ. ಒಟ್ಟು ಈ ಆರೂ ಕಂಬಗಳು ಹಳೆಯವು. ಬಸದಿಯ ತಳ ವಿನ್ಯಾಸವು ಗರ್ಭಗೃಹದ ಹಿಂಬದಿ ಯಲ್ಲಿದ್ದ ಗೋಡೆ ಪೂರ್ತಿ ಕುಸಿದಿದೆ. ಗರ್ಭಗೃಹದ ಎಡಗಡೆಗೆ ಗೋಡೆಯಾಚೆ ಒಂದು ಸೇದುವ ಬಾವಿಯಿದೆ. ಅದರಲ್ಲಿ ಈಗಲೂ ನೀರು ದೊರೆಯುತ್ತಿದ್ದು ಬಾವಿ ಬಳಕೆಯಲ್ಲಿದೆ. ಪಕ್ಕದ ಮಠದೊಳಗೆ ಹೋಗಲು ಇಲ್ಲಿಂದಲೂ ಬಾಗಿಲಿದೆ. ಮಠ ದೊಳಗೆ ಇರುವ ನಾಲ್ಕು ಬಾಗಿಲುಗಳಲ್ಲಿ ಒಂದರಲ್ಲಿ ಮಾತ್ರ ಲಲಾಟ ಜಿನ ಬಿಂಬವಿದ್ದು ಉಳಿದದನ್ನು ಮಾರ್ಪಡಿಸಲಾಗಿದೆ.

ಉದ್ದಳತೆಯು ತುಸು ಕಿರಿದಾದರೂ ಅಗಲ ನವರಂಗದ ಅಳತೆಗೆ ಸರಿಯಾಗಿರುವ ಗರ್ಭಗೃಹದಲ್ಲಿ ಮೂಲನಾಯಕ ಜಿನ ಬಿಂಬವಿದೆ. ಪರ್ಯಂಕಸನದಲ್ಲಿ ಕುಳಿತಿರುವ ಆತ್ಮಧ್ಯಾನ ತಲ್ಲೀನ ರಾದ ಪಾರ್ಶ್ವನಾಥ ತೀರ್ಥಂಕರರ ಬಿಂಬವು ನಾಲ್ಕು ಅಡಿ ಎತ್ತರವಿದ್ದು ನಯನ ಮನೋಹರವಾಗಿದೆ. ಏಳು ಹೆಡೆಗಳ ಮೇಲುಗಡೆ ಮುಕ್ಕೊಡೆಯಿದೆ. ಛತ್ರತ್ರಯದ ಪಾರ್ಶ್ವಗಳ ಶಿಲ್ಪ ಮಸುಕಾಗಿದೆ. ಏಳು ಹೆಡೆಗಳ ಕೆಳಗೆ ಜಿನರ ತಲೆಯ ಹಿಂಬದಿಗೆ ಪ್ರಭಾಮಂಡಲವಿದೆ. ಒಪ್ಪವಾದ ಗಂಭೀರ ಕೋಲು ಮುಖ ಮುದ್ರೆಯು ಯೋಗ ಮುದ್ರೆಯಿಂದ ಕೂಡಿದೆ. ಗುಂಗುರು ಕೂದಲು ದಟ್ಟವಾಗಿ ತಲೆಯ ತುಂಬ ಸುರಳಿಯಾಗಿ ಹರಡಿದ್ದು ಹಣೆಯ ಮುಂಬದಿಯವರೆಗೆ ಬಂದಿದೆ. ಹಣೆಯ ಅರ್ಧದ ವರೆಗೆ ಹೀಗೆ ಹೆಚ್ಚಾಗಿ ಮುಂಚಾಚಿದ ರೀತಿಯಲ್ಲಿ ಕೂದಲನ್ನು ತೋರಿಸಿರುವ ಶಿಲ್ಪಗಳು ವಿರಳ, ಪಾರ್ಶ್ವನಾಥ ಜಿನರ ಪಾರ್ಶ್ವ ಗಳಲ್ಲಿ ನಿಂತಿರುವ ಚಾಕಮರಧರರ ಶಿಲ್ಪಗಳ ಅಲಂಕಾರವು ಮನೋಜ್ಞವಾಗಿದೆ.

ಪಾರ್ಶ್ವಜಿನರ ಬೆನ್ನಿಗೆ ಇರುವ ಎಡಬಲದ ಎರಡು ಕಂಬ ಗಳೂ, ತುದಿಯಲ್ಲಿರುವ ಮಕರವೂ, ಅಂಚೆಗೆ ಮೈಚಾಚಿ ಎದ್ದು ನಿಂತ ಸಿಂಹಗಳೂ ಸ್ಪಷ್ಟವಾಗಿ ಕಾಣುತ್ತವೆ. ಗರ್ಭಗೃಹದ ಬಾಗಿಲ್ವಾಡವು ನಷ್ಟವಾಗಿದೆ. ಪ್ರಾಯಷ ಮಕರ ತೋರಣ ಅಲಂಕಾರವಿದ್ದಂತೆ ತೋರುತ್ತದೆ. ಸಭಾ ಮಂಟಪದಲ್ಲಿ ಎಡಗಡೆ ಗೋಡೆಯ ಮುಂದೆ ಕಾಯೋತ್ಸರ್ಗದಲ್ಲಿ ನಿಂತಿರುವ ಪಾರ್ಶ್ವ ನಾಥರ ಇನ್ನೊಂದು ಸುಂದರ ಬಿಂಬವಿದೆ. ಅದರ ಹಿಂಬದಿ ಯಲ್ಲಿ ಒಂಬತ್ತು ಸುತ್ತು ಬಂದಿರುವ ನಾಗೇಂದ್ರನು ತನ್ನ ಏಳು ಹೆಡೆಯನ್ನು ಪಾರ್ಶ್ವನಾಥ ಜನರ ಮೇಲೆ ಬಿಚ್ಚಿ ಹಿಡಿದಿದ್ದಾನೆ. ಅದರ ಮೇಲೆ ಒಂದೇ ಕೊಡೆಯಂತೆ ಕಾಣುವ ಮುಕ್ಕೊಡೆಯಿದೆ. ಪಾರ್ಶ್ವನಾಥರ ತಲೆಯ ಹಿಂಭಾಗಕ್ಕೆ ಭಾಮಂಡಲವಿದೆ. ಎಡಬಲ ಗಳಲ್ಲಿ ಚಾಮರವಾಗಲಿ, ಚಾಮರಧರರಾಗಲಿ, ಯಕ್ಷ ಯಕ್ಷಿಯ ರಾಗಲಿ ಇಲ್ಲ. ಎಡ–ಬಲದ ತುದಿಗೆ ಮೂರಂಗುಲದ ಪಟ್ಟಿ ಯೊಂದು ಲಾಳಾಕಾರದಂತೆ ಮಿರುಗುತ್ತಿದೆ. ನವರಂಗದ ನಾಲ್ಕು ಕಂಬಗಳೂ ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದೆಂದು ಅವರ ಶಿಲ್ಪ ಮಾದರಿಯಿಂದ ಗೊತ್ತಾಗುತ್ತದೆ. ಈಗಿರುವ ಸ್ಥಿತಿ ಯನ್ನು ನೋಡಿ ಈ ಬಸದಿಯ ಗರ್ಭಗೃಹದ ಮೇಲೆ ಶಿಖರ ವಿತ್ತೋ ಇಲ್ಲವೋ ಹೇಳಲಾಗುವುದಿಲ್ಲವಾದರೂ ವಿಶಾಲ ಮಂಟಪವಿತ್ತೆಂದು ಖಚಿತವಾಗಿ ಹೇಳಬಹುದು.

ಗಡಿ ಕೇಶವಾರ ಗ್ರಾಮದ ಪಾರ್ಶ್ವನಾಥ ಬಸದಿಯು ಈ

ಭಾಗದ ಪ್ರಖ್ಯಾತವಾದ ಬಸದಿಯಾಗಿತ್ತೆಂಬುದು ಲಕ್ಷ್ಯ ಕೊಡ ಬೇಕಾದ ವಿಷಯ. ವಾಸ್ತುಶಿಲ್ಪ ಲಕ್ಷಣದ ದೃಷ್ಟಿಯಿಂದ ಕೂಡ ಇದೊಂದು ಮಹತ್ವದ ದೇವಾಲಯ.

3. ಮಳಖೇಡದ ಜೈನ ಕೋಟೆ: ಮಳಖೇಡವು (ಮಾನ್ಯಖೇಟ) ರಾಷ್ಟ್ರಕೂಟ ಸಾಮ್ರಾಟರ ಮುಖ್ಯ ರಾಜಧಾನಿಯಾಗಿ ವಿಜೃಂಭಿಸಿದ ಮಹಾನಗರ. ಜಿನಸೇನ ಆಚಾರ್ಯರ ಶಿಷ್ಯನಾದ ಅಮೋಘವರ್ಷ ನೃಪತುಂಗನ ಕಾಲ ದಲ್ಲಿ ಮಳಖೇಡವು ವಿಜಯಸ್ಕಂದಾವಾರವಾಗಿ ಬೆಳೆಯಿತು. ಮಳಖೇಡವು ಇಂದು ತನ್ನ ಸಾವಿರ ವರ್ಷಗಳ ಹಿಂದಣ ಸಿರಿ ಸಂಪದವನ್ನು ಕಳೆದುಕೊಂಡಿದೆ. ರಾಷ್ಟ್ರಕೂಟರನ್ನು ಕೆಳಗೆ ತಳ್ಳಿ ಚಾಲುಕ್ಯ ಸಾಮ್ರಾಜ್ಯವನ್ನು ಕ್ರಿ.ಶ. 973–78ರಲ್ಲಿ ಉದ್ಘಾಟಿಸಿದ್ದ ಇಮ್ಮಡಿ ತೈಲಪ ಚಕ್ರವರ್ತಿ (ಕ್ರಿ.ಶ. 973–98) ತೈಲಪನೂ, ಅವನ ಮಕ್ಕಳೂ, ಮೊಮ್ಮಕ್ಕಳೂ ಜಗದೇಕಮಲ್ಲ ಜಯಸಿಂಹನ ವರೆಗೆ (ಕ್ರಿ.ಶ. 1015–42) ಜೈನರಾಗಿದ್ದರೆಂದು ಚರಿತ್ರಕಾರರು ತಿಳಿಸಿದ್ದಾರೆ. ತೈಲಪನು ರಾಷ್ಟ್ರಕೂಟರನ್ನು ಸೋಲಿಸಿದ ಮೇಲೆ ಮಳಖೇಡವನ್ನೇ ತನ್ನ ನೆಲೆವೀಡನ್ನಾಗಿ ಮುಂದುವರಿಸಿದನು. ಮಳಖೇಡದ ಕೋಟೆಯ ಒಳಗಡೆ ರಾಜರು ವಾಸವಾಗಿದ್ದ ಭಾಗ ಗಳಿವೆ. ಕೋಟೆಯ ಹಿಂಭಾಗದಲ್ಲಿ ಕಾಗಿನಾ ನದಿ ಹರಿಯುತ್ತದೆ. ಕೋಟೆಯೊಳಗೆ ಇರುವ ಕೋಟೆಯ ಪಶ್ಚಿಮದಲ್ಲಿ ಮುಖ್ಯ ದ್ವಾರ ವಿದೆ. ಅದು ರಾಜದ್ವಾರ. ಆ ರಾಜದ್ವಾರದ ವೈಶಿಷ್ಟ್ಯವೆಂದರೆ ಅದರ ಲಲಾಟದಲ್ಲಿ ಪರ್ಯಂಕಾಸದಲ್ಲಿ ಕುಳಿತಿರುವ ಪಾರ್ಶ್ವನಾಥರ ಜಿನಬಿಂಬ ಇರುವುದು.

ಈ ರಾಜದ್ವಾರದ ದ್ವಾರ ಶಾಖೆಗಳು ಸುಂದರ ಕೆತ್ತನೆಯಿಂದ ಕೂಡಿದ್ದು ಲಲಾಟ ಬಿಂಬದ ಬಳಿ ಪೂರ್ತಿ ಕಲ್ಲು ಸೀಳಿದೆ. ಈ ಬಾಗಿಲ್ವಾಡವು ತೈಲಪ ಚಕ್ರವರ್ತಿಯ ಮತ್ತು ಇರಿವ ಬೆಡಂಗ ಸತ್ಯಾಶ್ರಯನ ಕಾಲಕ್ಕೆ ಸೇರಿದ್ದು. ಇದು ಅಖಿಲ ಭಾರತ ಮಹತ್ವ ವನ್ನು ಪಡೆದಿರುವ ಅಪೂರ್ವ ಜಿನಶಿಲ್ಪ. ಕ್ರಿ.ಶ. 985ರ ಅವಧಿ ಯಲ್ಲಿ ರಚಿತವಾದದ್ದು. ಈ ಅರಬಾಗಿಲು ಶಿಥಿಲವಾಗಿದ್ದು ಕುಸಿಯುತ್ತಿದೆ. ಮೇಲಕ್ಕೆ ಹೋಗುವ ಮೆಟ್ಟಿಲುಗಳಿಗೆ ಹಾಕಿದ್ದ ಸೈಜುಗಲ್ಲುಗಳು ಉರುಳಿ ಬಿದ್ದಿವೆ. ಹತ್ತು ಮಾರು ದೂರದಲ್ಲಿ ಅರಮನೆಯ ಖಾಸಾ ದೇವಾಲಯ ಪಟ್ಟ ಜಿನಾಲಯ ಕೂಡ ಹಾಳು ಬಿದ್ದಿದೆ. ಮಳಖೇಡ ಊರೊಳಗಿನ ಪ್ರಾಚೀನ ಬಸದಿ ಯನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಅದರಂತೆ ಕೋಟೆ ಯೊಳಗಿನ ರಾಜದ್ವಾರದ ರಿಪೇರಿಯೂ ಶೀಘ್ರವಾಗಿ ನಡೆದರೆ ಚರಿತ್ರೆಯ ಸ್ಮಾರಕವೊಂದು ಉಳಿದುಕೊಳ್ಳುತ್ತದೆ.

4. ಹರಿಜನವಾಡದಲ್ಲಿ ನೇಮಿನಾಥ ಜಿನಾಲಯ: ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಪೇಠಶಿರೂರು ಗ್ರಾಮದ ಬಳಿ ಹಳ್ಳದ ದಂಡೆಯಲ್ಲಿ ಹರಿಜನವಾಡವಿದೆ. ಈ ಹರಿಜನ ಕೇರಿಗೆ ಪ್ರವೇಶವಾಗುತ್ತಿದ್ದಂತೆ ಮೊದಲಿಗೆ ಒಂದು ದೇವಾಲಯ ಸಿಗುತ್ತದೆ. ಇದನ್ನು ಬೌದ್ಧ ದೇವಾಲಯವೆಂದೂ ಹೇಳುವು ದುಂಟು. ವಾಸ್ತವವಾಗಿ ಇದೊಂದು ಬಸದಿ. ಈ ಜಿನಾಲಯ ತುಂಬ ಪ್ರಾಚೀನವಾದುದು. ಅಷ್ಟೇ ಅಲ್ಲದೆ ಇದು ರಾಷ್ಟ್ರಕೂಟರ ಕಾಲದ ಕ್ರಿ.ಶ. ಒಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಟ್ಟಲಾದ ಚೈತ್ಯಾಲಯ. ಬಸದಿಯ ತಳವಿನ್ಯಾಸದಿಂದ ಇದರ ರಚನೆಯು ಸರಿಯಾಗಿ ತಿಳಿದುಬರುತ್ತದೆ. ಗರ್ಭಗುಡಿ, ಅಚಿತ ರಾಳ, ನವರಂಗ–ಹೀಗೆ ಮೂರು ಹಂತದಲ್ಲಿರುವ ಈ ಬಸದಿಯು ಸಾಕಷ್ಟು ಜೀರ್ಣಗೊಂಡಿದ್ದರೂ ತನ್ನ ಮೂಲದ ಕುರುಹುಗಳನ್ನು ಉಳಿಸಿಕೊಂಡಿದೆ.

ಪ್ರಾಯಃ ಒಂದು ಮುಖಮಂಟಪವೂ ಈ ಗುಡಿಗೆ ಇದ್ದಿರ ಬೇಕೆನಿಸುತ್ತದೆ. ನವರಂಗದಲ್ಲಿ ಇರುವ ನಾಲ್ಕು ಕಂಬಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳ ಶಿಲ್ಪ ವಿನ್ಯಾಸಕ್ಕೆ ಅನು ಗುಣವಾಗಿದೆ. ನವರಂಗದೊಳಗೆ ಬರುವುದಕ್ಕೆ ಇವರು ಬಾಗಿಲಲ್ಲಿ ಕೂಡ ಪುರಾತನ ಚಹರೆಗಳು ಉಳಿದಿವೆ. ದ್ವಾರಶಾಖೆಗಳು ನಾಲ್ಕು ಕಾಣುತ್ತವೆ. ಲಲಾಟದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ಅದರ ಮೇಲುಗಡೆ ಇರುವ ಮೂರು ಹಂತಗಳ ಶಿಲ್ಪಗಳಲ್ಲಿ ಮೂರನೆಯ ಹಂತದಲ್ಲಿ ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿದ್ದು ಅವರ ಪಕ್ಕಪಕ್ಕದಲ್ಲಿ ಯಕ್ಷಯಕ್ಷಿಯರು ಕುಳಿತಿರುವುದನ್ನು ಉಬ್ಬು ಶಿಲ್ಪ ಮೂಲಕ ತೋರಿಸಿದೆ. ಇದೊಂದು ಅಪರೂಪ ವೆನಿಸುವ ವಿಶಿಷ್ಟ ವಿನ್ಯಾಸ.

ಗರ್ಭಗೃಹದಲ್ಲಿ ಬಸದಿಯ ಮೂಲ ನಾಯಕ ಸ್ವಾಮಿಯಾದ ನೇಮಿನಾಥ ತೀರ್ಥಂಕರರು ಪದ್ಮಾಸನದಲ್ಲಿ ಸಿಂಹ ಪೀಠ ಮೇಲೆ ಕುಳಿತಿದ್ದಾರೆ. ಮಂದಸ್ಮಿತ ವದನ, ನೀಳವಾದ ಕಿವಿಗಳು, ಗುಂಗುರು ಕೂದಲು, ಭಾಮಂಡಲ, ಮುಕ್ಕೊಡೆ. ಆ ಕಡೆ ಈ ಕಡೆ ಚಾಮರಧರರು ಈ ವಿವರಗಳು ನಿಚ್ಚಳವಾಗಿವೆ. ಸೂಕ್ಷ್ಮವಾಗಿ ಗಮನಿಸಿದರೆ ಜಿನರ ಹಿಂಬದಿಯಲ್ಲಿ ಎರಡೂ ತುದಿಗಳಲ್ಲಿ ವ್ಯಾಳಿಯ ಮುಖ ಮತ್ತು ಅದರ ಕೆಳಗೆ ನಿಗಿರಿ ನಿಂತ ಸಿಂಹವು ಮೈ ಕಾಣಿಸುತ್ತದೆ. ಅಂತರಾಳದಲ್ಲಿ ಕೂಷ್ಮಾಂಡಿನೀ ಯಕ್ಷಿಯ ವಿಗ್ರಹವಿದೆ. ಗೋಡೆಗೆ ಒರಗಿಸಿ ಇಟ್ಟಿರುವ ಈ ಜಿನಶಾಸನ ದೇವಿಯ ಸುಖಾಸೀನೆಯಾಗಿದ್ದಾಳೆ. ದ್ವಿಭುಜೆಯಾದ ಈ ಅಂಬಿಕಾ ಯಕ್ಷಿಯ ಬಲಗೈ ಮುರಿದಿದೆ. ಎಡಗೈ ತೊಡೆಯ ಮೇಲೆ ಕುಳಿತ ಮಗನ ಮೈ ಬಳಸಿದೆ. ಮಗನ ಮುಖ ಮೈ ಕಾಣಿಸುತ್ತದೆಯಾದರೂ ಕುತ್ತಿಗೆಯ ಭಾಗ ಮುಕ್ಕಾಗಿ ತುಂಡಾ ಗಿದೆ. ಅಂಬಿಕೆಯ ಕೇಶವಿನ್ಯಾಸ ಆಳಂದ, ಮಳಖೇಡ ಮತ್ತು ಬಂಕೂರು ಜಿನಾಲಯಾಗಳಲ್ಲಿರುವ ಅಂಬಿಕೆ (ಕೂಷ್ಮಾಂಡಿನಿ) ಯ ಕೇಶವಿನ್ಯಾಸವನ್ನು ಹೋಲುತ್ತದೆ. ಇದು ರಾಷ್ಟ್ರಕೂಟರ ಕಾಲದ ಒಂದು ವಿಶಿಷ್ಟ ಶೈಲಿ.

ತೀರ್ಥಂಕರರಿಗೂ, ಕೂಷ್ಮಾಂಡಿನೀ ದೇವಿಗೂ, ಬಾಗಿಲಿಗೂ ಕಡು ನೀಲಿ ಬಣ್ಣವನ್ನು ಬಳಿದಿರುವುದರಿಂದ ಕೆಲವು ಶಿಲ್ಪದ ಲಕ್ಷಣಗಳು ಮುಚ್ಚಿಹೋಗಿವೆ. ರಾಷ್ಟ್ರಕೂಟರ ಇಮ್ಮಡಿ ಕೃಷ್ಣನ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣಗೊಂಡ ಈ ಬಸದಿಯ ಹರಿಜನರಿಂದ ಪೂಜೆಗೊಳ್ಳುತ್ತಿರುವುದು ಮತ್ತೊಂದು ವಿಶೇಷ.

(ಎಚ್‌ಪಿಎನ್)

ರಾಷ್ಟ್ರಕೂಟರ ದೇವಾಲಯಗಳು ಮತ್ತು ಶಿಲ್ಪಗಳು: ಗುಲ್ಬರ್ಗ ಜಿಲ್ಲೆಯಲ್ಲಿ ಕರ್ನಾಟಕದ ಎರಡು ಪ್ರಮುಖ ಅರಸು ಮನೆತನಗಳು ತಮ್ಮ ರಾಜಧಾನಿಗಳನ್ನು ಕಟ್ಟಿದವು ಮತ್ತು ವೈಭವದಿಂದ ಆಳ್ವಿಕೆಯನ್ನು ನಡೆಸಿದವು. ಆ ಸ್ಥಳಗಳು ಮಳಖೇಡ ಮತು ಗುಲ್ಬರ್ಗ. ಮೊದಲನೆಯದು ರಾಷ್ಟ್ರಕೂಟರಿಗೆ, ಎರಡನೆಯದು ಬಹುಮನಿಗೆ ರಾಜಧಾನಿಗಳಾಗಿದ್ದವು.

ಊಷ್ಟ್ರಕೂಟರ ಕಾಲದ ಅನೇಕ ದೇವಾಲಯ ಶಿಲ್ಪ ಶಾಸನ ಇತ್ಯಾದಿ ಸ್ಮಾರಕಗಳು ಈಗ ಗುಲ್ಬರ್ಗಾ ಮತ್ತು ಯಾದಗೀರ್ ಜಿಲ್ಲೆಯ ಶಿರವಾಳ, ಜೇವರ್ಗಿ, ಭೀಮರಾಯನಗುಡಿ, ಶಹಾಪೂರ, ಮುದನೂರು, ನಿಡಗುಂಡಿ, ದಿಗ್ಗಾವಿ, ಇಂಗಳಗಿ, ರಾವೂರ, ಕುಳಗೇರಿ, ಕಾಳಗಿ, ಕೇಶ್ವಾರ, ಉಡಗಿ, ಸೇಡಂ, ಮುಳಖೇಡ, ಗಂಪ್ವಾರ, ಕೊಲ್ಲೂರು, ಸನ್ನತಿ, ತಡಕಲ್ಲು, ದೋರನಹಳ್ಳಿ, ಮಾಗಣಗೇರಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ. ಈ ಸ್ಥಳಗಳಲ್ಲಿರುವ ಸ್ಮಾರಕ ಶಿಲ್ಪಕಲೆಯು ಈ ಕಾಲದ ವಾಸ್ತು ಶಿಲ್ಪಕಲೆಯ ಅಧ್ಯಯನಕ್ಕೆ ಹೊಸ ಚೈತನ್ಯವನ್ನು ನೀಡುತ್ತದೆ.

ಶಾಂತೇಶ್ವರ ಗುಡಿ: ದಿಗ್ಗಾಂವಿ (ಚಿತ್ತಾಪುರ ತಾ.) ಯಲ್ಲಿಯ ಅನೇಕ ದೇವಾಲಯಗಳಲ್ಲಿ ಎರಡು ಈ ಕಾಲಕ್ಕೆ ಸೇರಿವೆ. ಒಂದು ಶಾಂತೇಶ್ವರ, ಇನ್ನೊಂದು ಅನಂತೇಶ್ವರ. ಶಾಂತೇಶ್ವರ ಗುಡಿಯು ಪೂರ್ವಾಭಿಮುಖವಾಗಿದ್ದು ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹ ಬಾಗಿಲು ಚೌಕಟ್ಟಿನಲ್ಲಿ ಪಂಚಶಾಖೆಗಳ ಅಲಂಕರಣವಿದ್ದು ಅದರ ಕಪೋತದ ಕೆಳಗಡೆ ಹಂಸಪಕ್ಷಿಗಳ ಸಾಲಿದೆ. ಬಾಗಿಲ ಚೌಕಟ್ಟಿನಲ್ಲಿ ಆರು ನಿಂತ ಬಾಲಕರ ಉಬ್ಬುಚಿತ್ರಗಳಿವೆ. ಈ ಲಕ್ಷಣಗಳು ಈ ಪ್ರದೇಶದ ಅನೇಕ ದೇವಾಲಯಗಳಲ್ಲಿವೆ. ಅನಂತೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಎತ್ತರದ ಅಧಿಷ್ಠಾನವೂ ಇದೆ. ಗರ್ಭಗೃಹದಲ್ಲಿ ಅನಂತಶಯನ ವಿಗ್ರಹವಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ನಾಲ್ಕು ಶಾಖೆಗಳಿದ್ದು ಒಚಿದರಲ್ಲಿ ನಿಂತಿರುವ ನಾಲ್ಕು ಬಾಲಕರ ಶಿಲ್ಪಗಳಿವೆ. ಅದಕ್ಕೆ ವೈಷ್ಣವ ದ್ವಾರಪಾಲಕರಿದ್ದಾರೆ.

ಕುರುಕುಂಟದ ಸಂಗಮೇಶ್ವರ ದೇವಾಲಯ: ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಇದರ ದ್ವಾರದ ಶಾಖೆಗಳಲ್ಲಿ ಹುಡುಗರನ್ನು ಅಥವಾ ಗಣಗಳನ್ನು ಕೇವಲ ಮುಖಗಳ ಚಿನ್ಹೆಯಲ್ಲಿ ಉದ್ದವಾಗಿ ಏಕಸಾಲಿನಲ್ಲಿ ಚಿತ್ರಿಸಿರುವುದು ವಿಶೇಷವೆನಿಸಿದೆ.

ಶಿರಿವಾಳ ದೇವಾಲಯಗಳು: ಶಿರಿವಾಳ (ಶಹಪುರ ತಾ.) **'ಶಿರಿವೊಳಲು'**, 'ಸಿರಿವೊಳಲು', 'ದಕ್ಷಿಣ ವಾರಣಾಸಿ', **'ಧರ್ಮದ ಮನೆ'** ಇತ್ಯಾದಿ ಹೆಸರುಗಳಿವೆ. ಈ ಊರಿನಲ್ಲಿ ಸುಮಾರು 20 ದೇವಾಲಯಗಳಿವೆ. ಹೆಚ್ಚು ದೇವಾಲಯಗಳು ರಾಷ್ಟ್ರಕೂಟರ ಕಾಲದ್ದಾಗಿವೆ. ಈ ಊರು ಹಳ್ಳದಾಚೆ ಇರುವ ನನ್ನಯ್ಯ ಮತ್ತು ನಾಗಯ್ಯನ ದೇವಾಲಯಗಳು ಮುಂತಾದವುಗಳು ಈ ಕಾಲದ್ದಾಗಿವೆ. ಈ ದೇವಾಲಯಗಳ ತಳಪಾಯದಲ್ಲಿ ಗರ್ಭಗೃಹ, ಸುಕನಾಸ, ಅರ್ಧಮಂಟಪ, ಕಿರು ಸಭಾಮಂಟಪ, ನವರಂಗ ಮತ್ತು ದ್ವಾರಮಂಟಪಗಳಿವೆ. ಎತ್ತರದ ಅಧಿಷ್ಠಾನವಿದೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಬಾಗಿಲ ಚೌಕಟ್ಟಿನಲ್ಲಿ ಮೂರು ಶಾಖೆಗಳ ಅಲಂಕರಣವಿದೆ. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ನವರಂಗದಲ್ಲಿ ದೊಡ್ಡ ಗಾತ್ರದ ಕಂಬಗಳಿವೆ. ಭುವನೇಶ್ವರಿಯಲ್ಲಿ ನಟರಾಜನ ಉಬ್ಬುಶಿಲ್ಪವಿದೆ. ಅಲ್ಲಿಯ ಸುಜ್ಞಾನೇಶ್ವರ ಗುಡಿಯ ಬಾಗಿಲ ಚೌಕಟ್ಟು ಈ ಕಾಲದ್ದೇ ಆಗಿದೆ. ಅದರ ಹಿಂದೆ ಈ ಕಾಲದ ಪುಷ್ಕರಣಿಯಿದೆ. ಅದರ ಗೋಡೆಯಲ್ಲಿ ರಾಮಾಯಣದ ಕಥಾನಕ ಶಿಲ್ಪಗಳಿವೆ.

ಹಳ್ಳದಾಚಿನ ಕೆಲವು ಏಕಕೂಟ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ದ್ವಿಕೂಟ ಮಾದರಿಯ ದೇವಾಲಯಗಳೂ ಅಲ್ಲಿವೆ. ಅವುಗಳಿಗೆ ತೆರೆದ ನವರಂಗಗಳಿವೆ. ಇಲ್ಲಿಯ ಕಂಬಗಳ ಬುಡದಲ್ಲಿ ಕುಳಿತ ಸಿಂಹಗಳಿವೆ. ಅಲ್ಲಿಯ ಒಂದು ಪುಷ್ಕರಣಿಯ ಗೋಡೆಯಲ್ಲಿ ಗಜಲಕ್ಷ್ಮಿ, ರಾಮ, ಉಗ್ರನರಸಿಂಹ, ಕಿರಾತಾರ್ಜುನ ಮುಂತಾದ ಉಬ್ಬು ಶಿಲ್ಪಗಳಿವೆ. ಅದರ ಎರಡೂ ಕಡೆಗಳಲ್ಲಿ ಹಾಳಾದ ಗರ್ಭಗೃಹಗಳಿವೆ. ಇಲ್ಲಿಯ ಮಲ್ಲಿಕಾರ್ಜುನನ ಗುಡಿಯ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನಕ್ಷತ್ರಾಕಾರದ ನವರಂಗವಿದೆ. ಶಿವಲಿಂಗ ಗರ್ಭಗೃಹದಲ್ಲಿದೆ. ದ್ವಾರ ಚೌಕಟ್ಟಿನ ಮೇಲೆ ಹಂಸಪಕ್ಷಿಗಳ ಸಾಲಿದೆ. ನವರಂಗದ ಛತ್ತಿನಲ್ಲಿ ಅಷ್ಟ ದಿಕ್ಪಾಲಕರ ನಡುವೆ ನಟರಾಜನಿದ್ದಾನೆ. ಭಿತ್ತಿ ಸರಳವಾಗಿದೆ. ಇಲ್ಲಿಯ ಹಳ್ಳದ ದಂಡೆಯಲ್ಲಿ ಎರಡು ಭವ್ಯವಾದ ಶೈವದ್ವಾರಪಾಲಕರ ವಿಗ್ರಹಗಳಿದ್ದವು. ಈಗ ಹಳ್ಳದ ದಂಡೆಯಲ್ಲಿ ಒಂದು ಅಲ್ಲೇ ಉಳಿದಿದೆ. ಇನ್ನೊಂದು ಗುಲ್ಬರ್ಗಾದ ಸರಕಾರಿ ವಸ್ತು ಸಂಗ್ರಹಾಲಯದಲ್ಲಿದೆ.

ರಾಮಲಿಂಗೇಶ್ವರ ಗುಡಿ: ಮುಧೋಳ (ಸೇಡಂ ತಾ.)ದ ರಾಮಲಿಂಗೇಶ್ವರ ದೇವಾಲಯದ ರಾಷ್ಟ್ರಕೂಟರ ಕನ್ನರನ ಶಾಸನದಲ್ಲಿ ಮುದುವೊಳಲನ್ನು ಗೋಣಯ್ಯನೆಂಬವವನು ಆಳುತ್ತಿದ್ದನೆನ್ನಲಾಗಿದೆ. ಆಗ ಗೂಳಿಗಾವುಂಡ ನೆಂಬುವವನು ಮಹಾದೇವ ದೇವಾಲಯವನ್ನು ನಿರ್ಮಿಸಿ ದತ್ತಿ ನೀಡಿದನೆಂದು ಹೇಳಿದೆ. ಅದೇ ಇಂದಿನ ರಾಮಲಿಂಗೇಶ್ವರ ದೇವಾಲಯವಾಗಿದೆ. ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಶಿವಲಿಂಗ ಗರ್ಭಗೃಹದಲ್ಲಿದೆ. ಅಲಂಕೃತ ಬಾಗಿಲ ಚೌಕಟ್ಟಿದೆ. ಅದರ ಲಲಾಟದಲ್ಲಿ ಗಜಲಕ್ಷ್ಮೀ ಇರುವಳು.

ಮೋಘ (ಚಿಂಚೋಳಿ ತಾ.) ದಲ್ಲಿ ಕ್ರಿ. ಶ. 918ರ ಕಾಲದ ತ್ರುಟಿತ ಶಾಸನವಿದ್ದು, ಚಂಡಿಗನೆಂಬುವನು ಮೊರಘೆಯಲ್ಲಿ ಆದಿತ್ಯದೇವರನ್ನು ಪ್ರತಿಷ್ಠಾಪಿಸಿದನೆಂದು, ಅದರ ಪೂಜೆಗಾಗಿ ಬಾಲಚಂದ್ರಭಟಾರರಿಗೆ ದತ್ತಿ ನೀಡಿದ ವಿವರವಿದೆ. ಇಲ್ಲಿಯ ರಾಮಲಿಂಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಎತ್ತರ ಅಧಿಷ್ಠಾನವುಳ್ಳ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಮೂರು ಕಡೆಗಳಲ್ಲಿ ಪ್ರವೇಶದ್ವಾರಗಳಿವೆ. ಅಂತರಾಳದಲ್ಲಿ ಎರಡು ದೇವ

ಕೋಷ್ಠಗಳಲ್ಲಿ ಗಣೇಶನ ವಿಗ್ರಹಗಳಿವೆ ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ಸಪ್ತಮಾತೃಕೆ ಮತ್ತು ಮಹಿಷಮರ್ದಿನಿ ಶಿಲ್ಪಗಳು ಎರಡರಲ್ಲಿವೆ. ಬಲಗಡೆ ಮೂಡಳಚಿಯ ಶಿಲ್ಪವಿದೆ. ನವರಂಗದ ಕಂಬಗಳ ಮೇಲೆ ವಿಭಿನ್ನ ಉಬ್ಬು ಶಿಲ್ಪಗಳಿವೆ. ಅವು ನಟರಾಜ, ಬ್ರಹ್ಮ, ವಿಷ್ಣು, ಸರಸ್ವತಿ, ಭೈರವಿ, ಗಣಪತಿ, ಉಗ್ರ ನರಸಿಂಹ, ಸೂರ್ಯ, ಭಿಕ್ಷಾಟನ ಶಿವ, ನರ್ತಕಿ ಇತ್ಯಾದಿ ಶಿಲ್ಪಗಳಿವೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ಗೂಡು ಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಶಿಲ್ಪಗಳಿವೆ. ಭಿತ್ತಿ ಸರಳವಾಗಿದ್ದು ಇದಕ್ಕೆ ಭೂಮಿಜ ಶಿಖರವಿರುವುದು ಈ ಭಾಗದಲ್ಲೇ ಅಪರೂಪದ್ದಾಗಿದೆ. ಲಾಡ್ ಚಿಂಚೊಳ್ಳಿ (ಆಳಂದ ತಾ.) ಯ ಸಿದ್ದೇಶ್ವರ ದೇವಾಲಯದ ಶಿಖರವೂ ಔತ್ತರೇಯ (ಭೂಮಿಜ) ಶಿಖರವನ್ನು ಹೊಂದಿದೆ. ಇಲ್ಲಿಯ ನಾಗಾರ್ಜುನ ಶಿಲ್ಪ ಅಣ್ಣಿಗೇರಿಯ ಶಿಲ್ಪವನ್ನು ನೆನಪಿಸುವುದು.

ಸುಲೇಪೇಟೆ (ಚಿಂಚೊಳ್ಳಿ ತಾ.) ಯ ಶಂಕರಲಿಂಗ ದೇವಾಲಯ ತಳಪಾಯಕ್ಕೆ ಗರ್ಭಗೃಹ ಮತ್ತು ಅಂತರಾಳಗಳಿವೆ. ಬೃಹತ್ ಶಿವಲಿಂಗ ಗರ್ಭಗೃಹದಲ್ಲಿದೆ. ಬಾಗಿಲ ಚೌಕಟ್ಟಿನಲ್ಲಿ ಆರು ಶಾಖೆಗಳ ಅಲಂಕರಣವಿದೆ. ಅದರ ಮೇಲೆ ಹಂಸಗಳ ಸಾಲಿದೆ.

ಸೇಡಂ ಲಿಂಗದಗುಡಿ (ಮಾಣಿಕೇಶ್ವರ) ಸಂಪೂರ್ಣ ಜೀರ್ಣೋದ್ಧಾರವಾಗಿರುವುದರಿಂದ ಅದರ ಮೂಲ ಅಸ್ಪಷ್ಟ, ಅದರಲ್ಲಿರುವ ಕಂಬಗಳು ಈ ಕಾಲದ್ದಾಗಿದೆ. ಇಲ್ಲಿಯ ಇನ್ನೊಂದು ಗುಡಿಯನ್ನು ದೇಗುಲವೆಂದು ಕರೆಯುವರು. ಪೂರ್ವಭಿಮುಖವಾಗಿರುವ ಈ ದೇವಾಲಯದ ತಳಪಾಯ ದಲ್ಲಿ ಗರ್ಭಗೃಹ, ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬ್ರಹ್ಮ ಸೂತ್ರವು ಕ್ರಿ.ಶ. 10ನೆಯ ಶತಮಾನದ ಶೈಲಿಯಲ್ಲಿದೆ. ಬಾಗಿಲ ಚೌಕಟ್ಟಿನಲ್ಲಿ ಐದು ಶಾಖೆ ಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀ ಇರುವಳು. ಉತ್ತರಾಂಗದಲ್ಲಿ ಪಂಚ ರೇಖಾ ನಾಗರಶೈಲಿಯ ಶಿಖರಗಳು ಏಕಸಾಲಿನಲ್ಲಿವೆ. ನಡುವೆ ಸಿಂಹಗಳಿವೆ. ಅಲ್ಲಿಯ ಅಂತರಾಳದ ಬಾಗಿಲು ಚೌಕಟ್ಟಿನ ಮೇಲೆ ಮಕರತೋರಣದಲ್ಲಿ ನಟರಾಜನಿದ್ದಾನೆ. ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ. ಇಲ್ಲಿಯ ಗಣೇಶನ ಗುಡಿಯ ಹತ್ತಿರ ಈಶ್ವರ ಗುಡಿಯ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಗಳಿವೆ. ಶಿವಲಿಂಗ ಗರ್ಭಗೃಹದಲ್ಲಿದೆ. ಬಾಗಿಲ ಚೌಕಟ್ಟು ಸರಳವಾಗಿದೆ. ಲಲಾಟದಲ್ಲಿ ಗಣಪತಿಯಿದೆ. ಕಾಲ ಸುಮಾರು ಕ್ರಿ. ಶ. 10ನೇ ಶತಮಾನ.

ಯಾಳಗಿ (ಸುರಪುರ ತಾ.)ಯ ಗುಗ್ಗರಬಾವಿ ಓಣಿಯಲ್ಲಿ ರುವ ಪೂರ್ವಾಭಿಮುಖ ನೀಲಕಂಠೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗ ಗಳಿವೆ. ಬಾಗಿಲ ಚೌಕಟ್ಟಿನ ಮೇಲೆ ಬಾತುಕೋಳಿಗಳ ಸಾಲಿದೆ. ನವರಂಗದಲ್ಲಿ ವೃತ್ತ ಪಟ್ಟಿಕೆಯ ಕಂಬಗಳಿದ್ದು ಛತ್ತಿನಲ್ಲಿ ಕಮಲವಿದೆ.

ಲಖಣಾಪುರ (ಜೇವರ್ಗಿ ತಾ.)ದ ಲಕ್ಕಮೇಶ್ವರಿ ದೇವಾಲಯವು ಪೂರ್ವಾಭಿಮುಖವಾಗಿದೆ. ಅಧಿಷ್ಠಾನಕ್ಕೆ ಬಹುಕೋನ ಗಳಿವೆ. ತಳಪಾಯದಲ್ಲಿ ಗರ್ಭಗೃಹ ಮತ್ತು ಅಂತರಾಳ, ನವರಂಗಗಳಿವೆ. ಗರ್ಭಗೃಹದ ಬಾಗಿಲು ಚೌಕಟ್ಟಿನ ಮೇಲೆ ಬಾತ ಕೋಳಿಗಳ ಸಾಲಿವೆ. ನವರಂಗದಲ್ಲೆರಡು ಗೂಡುಗಳಿದ್ದು ಅಲ್ಲಿ ವೈಷ್ಣವಿ ಮತ್ತು ಸರಸ್ವತಿ ಉಬ್ಬುಶಿಲ್ಪಗಳಿವೆ. ನವರಂಗ ತೆರೆದಿದ್ದು ಅಲ್ಲಿ ಕಕ್ಷಾಸನವಿದೆ. ಇದು ಜೀರ್ಣೋದ್ಧಾರಗೊಂಡಿದೆ.

ಕಾಳಗಿ(ಚಿತಾಪೂರ ತಾಲೂಕ)ಯ ಕಾರಂಜಿಯ ದಡದಲ್ಲಿ ರುವ ದೇವಾಲಯದ ನಾಲ್ಕುದ್ವಾರಗಳನ್ನು ಹೊಂದಿರುವುದು ಗಮನೀಯ. ಈ ದೇವಾಲಯದ ತಳಪಾಯದ ಭಿತ್ತಿಯಲ್ಲಿ ಅಷ್ಟ ಮುಖಗಳಿವೆ. ಏಕಕೂಟವುಳ್ಳ ಈ ದೇವಾಲಯದ ಗರ್ಭಗೃಹ ದಲ್ಲಿ ಒಂದು ಆಯತಾಕಾರದ ಪೀಠವಿದ್ದು, ಅದರಲ್ಲಿ ಎರಡು ರಂಧ್ರಗಳನ್ನು ವಿಗ್ರಹಗಳನ್ನು ಕೂಡಿಸಲು ನಿರ್ಮಿಸಿದಂತಿದೆ. ಅದರ ಅಧಿಷ್ಠಾನವು ನಕ್ಷತ್ರಾಕಾರವಿರುವುದು ವಿಶೇಷ. ಶೈಲಿ ಯಿಂದ ಈ ದೇವಾಲಯದ ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ. ಇದಲ್ಲದೆ ಇದೊಂದು ಸರ್ವತೋಭದ್ರ ಮಾದರಿಯ ದ್ದಾಗಿದೆ.

ಮಿರ್‍ಯಾಣ (ಚಿಂಚೋಳ್ಳಿ ತಾ.)ದಲ್ಲಿ ತಾಂಡೂರು ರಸ್ತೆಯ ಬದಿಗೆ ಪಾಪನಾಥ ದೇವಾಲಯವಿದೆ. ತಳಪಾಯದಲ್ಲಿ ಗರ್ಭ ಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಪೂರ್ವದಿಂದ ಪ್ರವೇಶವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲು ಚೌಕಟ್ಟಿ ನಲ್ಲಿ ನಾಲ್ಕು ಶಾಖೆಗಳಿವೆ. ನವರಂಗದಲ್ಲಿ ಕಿರಿದಾದ ಕಂಬಗಳಿವೆ. ಅವುಗಳಲ್ಲಿ ಕೀರ್ತಿಮುಖ, ಹೂಬಳ್ಳಿ, ಮುತ್ತಿನ ಮಾಲೆ ಮತ್ತು ಪದ್ಮಾಸನದಲ್ಲಿ ಕುಳಿತ ಯತಿಗಳ ಉಬ್ಬು ಶಿಲ್ಪಗಳಿವೆ. ನವರಂಗದ ಗೂಡುಗಳಲ್ಲಿ ಗಣಪತಿ ಮತ್ತು ಮಹಿಷಮರ್ದಿನಿ ಶಿಲ್ಪಗಳಿವೆ. ದ್ವಾರದ ಚೌಕಟ್ಟಿನಲ್ಲಿ ಪಂಚಶಾಖೆಗಳ ಅಲಂಕಾರವಿದೆ. ಇದಕ್ಕೆ ಕದಂಬ ನಾಗರ ಶೈಲಿಯ ಶಿಖರವಿದೆ.

ಮಿರ್‍ಯಾಣ (ಚಿಂಚೊಳ್ಳಿ ತಾ.) ನಡುವೆ ಮೂರು ಶೈವ ದೇವರ ಗುಡಿಗಳಿವೆ. ಅದಕ್ಕೆ ಮೂರು ಪ್ರತ್ಯೇಕ ದೇವಾಲಯಗಳಿವೆ. ಎರಡು ಪಶ್ಚಿಮಾಭಿಮುಖವಾಗಿವೆ. ಇನ್ನೊಂದು ಪೂರ್ವಾಭಿ ಮುಖವಾಗಿದೆ. ಅಂತರಾಳದಲ್ಲಿ ಸ್ತಂಭಗಳುಳ್ಳ ಮಕರ ತೋರಣ ವಿದೆ. ಇನ್ನೊಂದು ಕಡೆ ಗಂಗಾ-ಯಮುನೆಯರ ಎತ್ತರದ ಉಬ್ಬುಶಿಲ್ಪಗಳಿವೆ. ಶಿಖರಗಳು ಕದಂಬ ನಾಗರ ಶೈಲಿಯಲ್ಲಿವೆ. ಸರಳ ಬಾಗಿಲ ಚೌಕಟ್ಟಿವೆ. ಮೇಲ್ಗಡೆ ಕಪೋತದ ಮೇಲೆ ಹಂಸಗಳ ಸಾಲಿದೆ ಮುಡಗೋಳ (ಶಹಪುರ ತಾ.)ದ ಸಿದ್ದೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಶಿವಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿದೆ. ಬಾಗಿಲ ಚೌಕಟ್ಟನ್ನು ಅಲಂಕರಿಸಲಾಗಿದೆ.

ಕೆಂಭಾವಿಯ ರೇವಣಸಿದ್ಧೇಶ್ವರ ದೇವಾಲಯ ಚತುರ್ ಕೂಟ ಮಾದರಿಯದ್ದಾಗಿದೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗರ್ಭಗೃಹಗಳಿದ್ದವು. ತೆರೆದ ಅಂತರಾಳಗಳಿವೆ. ನಾಲ್ಕಕ್ಕೂ ಒಂದೇ ನವರಂಗ, ಪಶ್ಚಿಮದ ಗರ್ಭಗೃಹ ಮತ್ತು ಅಂತರಾಳಗಳು ಸುಸ್ಥಿತಿಯಲ್ಲಿವೆ. ಉಳಿದ ಭಾಗಗಳ ರಚನೆಗಳು ನಾಶವಾಗಿವೆ.

ಮೂರು ಗರ್ಭಗೃಹಗಳ ಭಾಗಗಳಲ್ಲಿ ಮೂರು ಶಿವಲಿಂಗಗಳಿವೆ. ನಾಲ್ಕರಲ್ಲಿ ಆಧುನಿಕ ಶಿವಲಿಂಗವಿದೆ. ಗರ್ಭಗೃಹದ ದ್ವಾರಕ್ಕೆ ಪಂಚಶಾಖೆಗಳಿವೆ. ಅಲ್ಲಿ ಗಂಗಾ, ಯಮುನಾ, ಚೌರಿಧಾರಿಯರು ಮತ್ತು ಶೈವ ದ್ವಾರಪಾಲಕರಿರುವುದು ವಿಶಿಷ್ಟವೆನಿಸಿದೆ. ಗಂಗಾ-ಯಮುನೆಯರ ಶಿಲ್ಪಗಳು ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಮತ್ತು ರಾಷ್ಟ್ರಕೂಟರ ಆರಂಭಿಕ ಕಾಲದಲ್ಲಿ ಸಾಮಾನ್ಯವೆಂಬುದನ್ನು ಇಲ್ಲಿ ನೆನೆಯಬಹುದು. ಪಶ್ಚಿಮದ ಅಂತರಾಳ ಮಕರ ತೋರಣದಲ್ಲಿ ತ್ರಿಮೂರ್ತಿಯರಿದ್ದಾರೆ. ಕೆಳಗಡೆ ಬಿದ್ದಿರುವ ಒಂದು ಮಕರ ತೋರಣದಲ್ಲಿ ನಟರಾಜ, ಗಜಮರ್ದನ ಮತ್ತು ಉಗ್ರನರಸಿಂಹರ ಶಿಲ್ಪಗಳಿವೆ. ಕಕ್ಷಾಸನ ಭಾಗ ಮತ್ತು ಇತರ ಪುರಾವೆಗಳು ಅಲ್ಲಲ್ಲಿ ಚದುರಿವೆ. ಈ ದೇವಾಲಯವನ್ನು ಕ್ರಿ.ಶ. 1054ರಲ್ಲಿ ಚಾಲುಕ್ಯದೊರೆ ಮೊದಲನೆಯ ಸೋಮೇಶ್ವರನ ಮಹಾಮಂಡಳೇಶ್ವರನಾದ ದೇವರಸನ ರಾಣೀ ಮಾಳಿಯಬ್ಬರಸಿಯು ತನ್ನ ಹೆಸರಿನಲ್ಲಿ ಮಾಳಿಚೇಶ್ವರ ದೇವಾಲಯವನ್ನು ನಿರ್ಮಿಸಿ, ದತ್ತಿ ನೀಡಿದ ವಿವರ ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಇಲ್ಲಿ ಕಾಣುವ ಗಂಗಾ ಮತ್ತು ಯಮುನೆಯರ ಶಿಲ್ಪಗಳ ಲಕ್ಷಣಗಳು ರಾಷ್ಟ್ರಕೂಟರ ಉತ್ತರ ಕಾಲದ್ದವೆಂದು ತರ್ಕಿಸಬಹುದು.

ಕೇಶ್ವರ(ಚಿಂಚೋಳಿ ತಾ.)ದ ಊರ ಹೊರಗಡೆಯ ಸಿದ್ದೇಶ್ವರ ದೇವಾಲಯ ಉತ್ತರಾಭಿಮುಖವಾಗಿದೆ. ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಬದಿಗೆ ಪ್ರವೇಶ ದ್ವಾರವಿದೆ. ಗರ್ಭಗೃಹದಲ್ಲಿ ಈಗ ಯಾವುದೇ ವಿಗ್ರಹವಿಲ್ಲ. ಆದರೆ ಶಿವಲಿಂಗವೊಂದು ನವರಂಗದಲ್ಲಿದೆ. ಈ ದೇವಾಲಯದ ಬದಿಗೆ ದ್ವಿಕೂಟ ಮಾದರಿಯ ಕರಿದೇವರ ದೇವಾಲಯವಿದೆ. ಅದರ ಗರ್ಭಗೃಹಗಳು ಎದುರು ಬದುರಾಗಿವೆ. ತಲಾ ಒಂದಕ್ಕೆ ತೆರೆದ ಅಂತರಾಳಗಳಿವೆ. ಈ ಎರಡರ ನಡುವೆ ಒಂದು ನವರಂಗವಿದೆ. ಎರಡೂ ಕಡೆಗಳಿಂದ ಪ್ರವೇಶ ದ್ವಾರಗಳಿವೆ. ಭಿತ್ತಿಯು ಸರಳವಾಗಿದೆ.

ಗಂವ್ಹಾರ (ಜೇವರ್ಗಿ ತಾ.)ದಲ್ಲಿ ಕಪಾಲೇಶ್ವರ ದೇವಾಲಯ ಬಹಳ ಶಿಥಿಲವಾಗಿದೆ. ಅದಕ್ಕೆ ಎತ್ತರವಾದ ಆಧಿಷ್ಠಾನವಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳಗಳಿವೆ. ಉಳಿದ ನವರಂಗ ಭಾಗ ಹಾಳಾಗಿ ಹೋಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರನ್ನು ಬುಡದಲ್ಲಿ ಚಿತ್ರಿಸಲಾಗಿದೆ. ಘತ್ತರಗಿ (ಅಫಜಲಪುರ ತಾ.)ಯ ಭಾಗ್ಯವಂತಿ ದೇವಾಲಯದ ಸುತ್ತ ಪ್ರಾಕಾರವಿದೆ. ತಳಪಾಯಕ್ಕೆ ಗರ್ಭಗೃಹ, ಪ್ರದಕ್ಷಿಣಾಪಥ ಮತ್ತು ನವರಂಗವಿದೆ. ಇಲ್ಲಿ ಪ್ರದಕ್ಷಿಣಾಪಥದ ಲಕ್ಷಣ ವಿಶೇಷವಾಗಿದೆ.

ಮಳಖೇಡ (ಸೇಡಂ ತಾ.)ವು ಕಾಗಿಣಾ ನದಿಯ ದಂಡೆಯ ಮೇಲಿದ್ದು, ಇದು ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಇದರ ಮೂಲ ಹೆಸರು ಮಾನ್ಯಖೇಟ. ರಾಷ್ಟ್ರಕೂಟ ದೊರೆ ಅಮೋಘವರ್ಷನ ಆಳ್ವಿಕೆಯ ಕಾಲದಲ್ಲಿ ಈ ನಗರ ರಾಜಧಾನಿಯಾಯಿತು. ಅಲ್ಲಿ ಈಗ ಕ್ರಿ.ಶ. 15ನೆಯ ಶತಮಾನದ ಕೋಟೆಕೊತ್ತಲವಿದ್ದು ಅದಕ್ಕೆ ನಾಲ್ಕು ಅಗಸಿ, 52 ಬುರುಜುಗಳಿವೆ. ಮಳಖೇಡದ ಬಸದಿಯ ಎದುರು ತೆರೆದ 4 ಸ್ತಂಭಮಂಟಪವಿದ್ದು ಇವುಗಳ ಮೇಲೆ ತಲಾ ಒಂದಕ್ಕೆ ನಾಲ್ಕು ಮುಖಗಳಲ್ಲಿ ಉಬ್ಬು ಶಿಲ್ಪಗಳಿವೆ. ಒಂದರಲ್ಲಿ ಕಾಮ-ರತಿ, ಗಜಲಕ್ಷ್ಮೀ, ಹಾರ ಹಿಡಿದ ಸೇವಕ, ಶಿವ-ಪಾರ್ವತಿ ಮತ್ತು ಕುಳಿತ ಗಣೇಶರ ಶಿಲ್ಪಗಳಿವೆ. ಎರಡರಲ್ಲಿ ಜೋಡು ದಂತಿಗಳು, ತ್ರಿವಿಕ್ರಮ, ಕುಳಿತ ನಿಧಿಗಳಾದ ಶ್ರೀನಿಧಿ ಮತ್ತು ಪದ್ಮನಿಧಿ ಮತ್ತು ಗಜಲಕ್ಷ್ಮೀಯರಿದ್ದಾರೆ. ಮೂರನೆಯ ಕಂಬದಲ್ಲಿ ನಟರಾಜ, ನಿಧಿ ಮತ್ತು ಪೂರ್ಣಕುಂಭಗಳಿವೆ. ನಾಲ್ಕರಲ್ಲಿ ರಾವಣ, ರಾಮ-ಲಕ್ಷ್ಮಣ, ರಾಮ-ಸೀತೆಯರ ಉಬ್ಬು ಶಿಲ್ಪಗಳಿವೆ. ಬಳ್ಳಿಗಳ ಅಲಂಕಾರವೂ ಇದೆ. ಇದಲ್ಲದೆ ಕಾಮ, ರತಿ, ಇಬ್ಬರು ಶಿವ, ಇಬ್ಬರು ಲಕ್ಷ್ಮೀ, ನಾಗ, ಗಜಮರ್ದನ, ಇಬ್ಬರು ಆದಿತ್ಯ, ಸೂರ್ಯ, ಶ್ರೀದೇವಿ, ಭೂದೇವಿ, ಇಬ್ಬರು ಯತಿಗಳು ಮತ್ತು ಬಳ್ಳಿಗಳ ಅಲಂಕರಣವಿದೆ. ವಾದ್ಯಗಾರರೂ ಮತ್ತು ನೃತ್ಯಗಾರರೂ ಇದ್ದಾರೆ. ರಾವಣ ಕೈಲಾಸವನ್ನು ಅಲುಗಾಡಿಸುತ್ತಿರುವನು, ಅಲ್ಲಿ ಶಿವ-ಪಾರ್ವತಿಯರಿದ್ದಾರೆ.

ಸುಲೇಪೇಟೆ (ಚಿಂಚೋಳ್ಳಿ ತಾ.)ಯ ಒಕ್ಕಲಿಗರ ಓಣಿಯಲ್ಲಿ ಶಂಭುಲಿಂಗೇಶ್ವರ ಗುಡಿಯಿದೆ. ಇದರ ತಳಪಾಯದಲ್ಲಿ ಮೂರು ಗರ್ಭಗುಡಿಗಳು, ತೆರೆದ ಅಂತರಾಳಗಳು, ಒಂದು ನವರಂಗಗಳಿವೆ. ಉತ್ತರಾಭಿಮುಖವಾಗಿದೆ. ಮೂಲ ಗರ್ಭಗೃಹದಲ್ಲಿ ಜಿನ ಪೀಠದಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನ ಲಲಾಟದಲ್ಲಿ ಜಿನಬಿಂಬವಿದೆ. ಭಿತ್ತಿ ಸರಳವಾಗಿದೆ. ಶಿಖರ ಹಾಳಾಗಿದೆ.

ಲಿಂಗಯ್ಯನ ಗುಡಿ: ಹಲ್ಕಟ್ಟಾ (ಚಿತಾಪೂರ ತಾ.)ದ ಲಿಂಗಯ್ಯನ ದೇವಾಲಯ ತ್ರಿಕೂಟ ಮಾದರಿಯಲ್ಲಿದೆ. ತಳಪಾಯದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು ಮತ್ತು ಒಂದು ನವರಂಗವಿದೆ. ಅದರ ಬದಿಗಿನ ಗಣೇಶ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧ ಮಂಟಪಗಳಿವೆ. ಗರ್ಭಗೃಹದಲ್ಲಿ ಗಣೇಶನ ವಿಗ್ರಹವಿದೆ. ಅದರ ದ್ವಾರದ ಚೌಕಟ್ಟಿನ ಬುಡದಲ್ಲಿ ಪೂರ್ಣಕುಂಭವಿದೆ. ಅರ್ಧ ಮಂಟಪದಲ್ಲಿ ವೃತ್ತಾಕಾರದ ಜೋಡು ಕಂಬಗಳಿವೆ.

ಕುಳಗೇರಿಯ ನಾಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಇದೊಂದು ಏಕಕೂಟ ಮಾದರಿಯಲ್ಲಿದೆ. ಅದಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ನವರಂಗದಲ್ಲಿ ಎರಡು ತೆರೆದ ಮಂಟಪಗಳಿದ್ದು, ಕ್ರಮವಾಗಿ ತಲಾ ಒಂದರಲ್ಲಿ ಬ್ರಹ್ಮ ಮತ್ತು ವಿಷ್ಣು ಇವರ ವಿಗ್ರಹಗಳಿವೆ. ಅಂತರಾಳದ ಮಕರ ತೋರಣದಲ್ಲಿ ತ್ರಿಮೂರ್ತಿಗಳ ಶಿಲ್ಪಗಳಿವೆ. ದ್ವಾರದಲ್ಲಿ ಐದು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯಿರುವಳು. ಅಲ್ಲಿ ಮಿಥುನ ಶಿಲ್ಪಗಳು ಮತ್ತು ಪೂರ್ಣ ಕುಂಭಗಳ ಚಿತ್ರಗಳು ವಿಶಿಷ್ಟವೆನಿಸಿವೆ. ಮುಖ್ಯದ್ವಾರದಲ್ಲಿ ಸಪ್ತಶಾಖೆಗಳಿವೆ. ಇಲ್ಲಿಯೂ ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಭಿತ್ತಿಯಲ್ಲಿ ಯತಿಗಳು, ವಾಮನ, ವಿಷ್ಣು, ನಟರಾಜ, ಅರ್ಜುನ, ವರಾಹ, ವೀಣಾಧಾರಿ ಶಿವ, ಭೈರವಿ ಮುಂತಾದ ಉಬ್ಬು ಶಿಲ್ಪಗಳಿವೆ. ಈ ದೇವಾಲಯದಲ್ಲಿ ಭಿತ್ತಿಯಲ್ಲಿನ ಅನೇಕ ಶಿಲ್ಪಗಳು ವಿಶೇಷ ಗಮನ ಸೆಳೆಯುತ್ತವೆ.

ಗುಂಡಗರ್ತಿ (ಚಿತಾಪೂರ ತಾ.)ಯ ಈಶ್ವರ ದೇವಾ

ಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದ್ವಾರದ ಚೌಕಟ್ಟಿನಲ್ಲಿ ಮೂರು ಶಾಖೆಗಳಾದ ರತ್ನಗಳು, ಅರ್ಧಗಂಭ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದ್ವಾರದ ಚೌಕಟ್ಟಿನಲ್ಲಿ ಮೂರು ಶಾಖೆಗಳಾದ ರತ್ನಗಳು, ಅರ್ಧಗಂಭ ಮತ್ತು ಜಾಲಂಧ್ರದಲ್ಲಿ ರತ್ನಗಳ ಅಲಂಕರಣವಿದೆ. ಲಲಾಟದಲ್ಲಿ ಗಜೇಂದ್ರಮೋಕ್ಷದ ಚಿತ್ರವನ್ನು ತೋರಿಸಿರುವುದು ಅಪರೂಪದ್ದಾಗಿದೆ. ಕೆಳಗಡೆ ಮಕರ ತೋರಣದಲ್ಲಿ ನಂದಿ, ಗಣೇಶ ಮತ್ತು ವಾದ್ಯ ಮೇಳದವರಿದ್ದಾರೆ. ನವರಂಗದ ಭುವನೇಶ್ವರಿ ಗೊಮ್ಮಟಾ ಕಾರವಿದ್ದು, ಅಲ್ಲಿ ಪದ್ಮದ ಅಲಂಕರಣವಿದೆ.

ಇಂಗಳಗಿಯಲ್ಲಿ ಒಂಭತ್ತು ಪ್ರಾಚೀನ ದೇವಾಲಯಗಳಿವೆ. ಅವುಗಳ ಶಿಖರ ನಮೂನೆ ಮತ್ತು ಇನ್ನಿತರ ಲಕ್ಷಣಗಳಿಂದ ಈ ದೇವಾಲಯಗಳು ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿವೆ. ಅಲ್ಲಿಯ ಲೋಕೇಶ್ವರ ಪೂರ್ವಾಭಿಮುಖವಾಗಿದೆ. ಅದಕ್ಕೆ ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಉಳಿದಿವೆ. ಗರ್ಭಗೃಹದಲ್ಲಿ ಶಿವ ಲಿಂಗವಿದೆ. ಇನ್ನೊಂದು ಸಪ್ತಲಿಂಗೇಶ್ವರ ದಕ್ಷಿಣಕ್ಕೆ ಮುಖವಾಗಿದೆ. ಕೆಲವು ದೇವಾಲಯಗಳೂ ಪೂರ್ವಕ್ಕೆ ಮುಖವಾಗಿದೆ. ಎರಡು ಪಶ್ಚಿಮಾಭಿಮುಖವಾಗಿದೆ. ಇವುಗಳ ಶಿಖರ ಕದಂಬ ನಾಗರ ಶೈಲಿಯಲ್ಲಿದ್ದು, ಅಲಂಕಾರವಿಲ್ಲ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇವು ಜೀರ್ಣೋದ್ಧಾರಗೊಂಡಿವೆ.

ಅವರಾದಿಯು ಜೇವರ್ಗಿ ತಾಲ್ಲೂಕಿನಲ್ಲಿದ್ದು, ಅಲ್ಲಿ ಶಾತವಾಹನರ ಕಾಲದಲ್ಲಿ ಒಂದು ವಿದ್ಯಾಕೇಂದ್ರವಿದ್ದ ಶಾಸನವಿದೆ. ಅದರಲ್ಲಿ 'ಚಕಸಬೋದಿಸಣವಿಜಲಯ' ಎಂದು ಉಲ್ಲೇಖವಾಗಿದೆ. ಆದರೆ ಈ ಕಾಲದ ಅಥವಾ ರಾಷ್ಟ್ರಕೂಟರ ಕಾಲದ ಇನ್ನಿತರ ಪುರಾವೆಗಳು ಸಿಕ್ಕಿಲ್ಲ.

ದೇವರ ಹಯ್ಯಾಳ (ಶಹಪೂರ ತಾ.)ದಲ್ಲಿ ರಾಮಲಿಂಗೇಶ್ವರ, ಈಶ್ವರ, ಲಿಂಗೇಶ್ವರ ಮತ್ತು ಹಯ್ಯಾಳ ಲಿಂಗೇಶ್ವರ ಗುಡಿಗಳಿವೆ. ಮೊದಲ ಮೂರು ಶೈವ ಗುಡಿಗಳ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಇವುಗಳಲ್ಲಿ ಶಿವಲಿಂಗಗಳಿವೆ. ಒಂದಕ್ಕೆ ಬಲಹರಿ, ಎರಡಕ್ಕೆ ಎಡಹರಿ ಶಿವಲಿಂಗಗಳಿವೆ. ವಿಶೇಷವೆಂದರೆ ಈ ಗುಡಿಗಳ ಬಾಗಿಲ ಚೌಕಟ್ಟಿನಲ್ಲಿ ಮೂರರಿಂದ ಐದು ಶಾಖೆಗಳಿದ್ದು, ಬುಡದಲ್ಲಿ ಪೂರ್ಣ ಕುಂಭಗಳನ್ನು ಚಿತ್ರಿಸಲಾಗಿದೆ. ಪೂರ್ಣ ಕುಂಭ ಲಕ್ಷಣವು ರಾಷ್ಟ್ರಕೂಟರ ಶೈಲಿಯನ್ನು ನೆನಪಿಸುವುದು.ಅಂಕಲಗಿ (ಜೇವರ್ಗಿ ತಾ.)ಯ ರಾಮಲಿಂಗೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖ ಮಂಟಪಗಳಿವೆ. ಅಲ್ಲಿಯ ಕಂಬಗಳ ಮೇಲೆ ರಾಮ, ಸೂರ್ಯ, ಭೈರವ, ವಿಷ್ಣು, ನರ್ತಕಿಯರು ಮುಂತಾದ ಉಬ್ಬು ಶಿಲ್ಪಗಳಿವೆ. ಶೈಲಿಯಿಂದ ಈ ದೇವಾಲಯವು ಮೂಲತಃ ಕ್ರಿ. ಶ. 10ನೆಯ ಶತಮಾನದ್ದಾಗಿದೆ. ತದನಂತರ ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ.

ಅಫಜಲಪುರ ಆರನೆಯ ವಿಕ್ರಮಾದಿತ್ಯ 1007 ಯುವರಾಜ ಮಲ್ಲಿಕಾರ್ಜುನ ಮಹಾಪ್ರಧಾನ ನಾಚಿಮ್ಮ ರಸ, ಮಹಾ ಮಂಡಳೇಶ್ವರ ಶಿಲಾಹಾರ ಡಂಕಾರಸ ಮತ್ತು ಆತನ ರಾಣಿ ಸೇರಿಕೊಂಡು ಅಫಜಲಪುರದಲ್ಲಿ ತ್ರೈಕೂಟದ ರೇವಣೇಶ್ವರ ದೇವರ್ಗೆ 100 ಮತ್ತರು ಭೂಮಿ ದಾನ ನೀಡಿದರು.

ಅಫಜಲಪುರದಲ್ಲಿ ಎರಡು ಸಹಸ್ರ ಲಿಂಗಗಳಿವೆ. ಸಹಸ್ರ ಲಿಂಗದೇವರಿಗೆ 40 ಮತ್ತರು ಭೂಮಿ ದತ್ತಿ ನೀಡಲಾಗಿದೆ. ಇಲ್ಲಿ 13ನೆಯ ಶತಮಾನದ ಶಾಸನ (ಇದು ಅರಕೇರಿಯದ್ದಾಗಿದೆ 1033) 20 ಇಂಚು ಎತ್ತರದ ಶಿವಲಿಂಗದಲ್ಲಿ 20 ಸ್ತರಗಳಲ್ಲಿ ಕಿರು ಪ್ರಮಾಣದ ಸಹಸ್ರಲಿಂಗಗಳಿವೆ.

ಅಂದೋಲ ಜೇವರ್ಗಿ ತಾಲ್ಲೂಕಿನ ಒಂದು ಹಳ್ಳಿ. ಅಲ್ಲಿಯ ಅಷ್ಟಲಿಂಗೇಶ್ವರ ಗುಡಿಯ ಮುಂದಿರುವ ರಾಷ್ಟ್ರಕೂಟರ ದೊರೆ ಮುಮ್ಮಡಿ ಕೃಷ್ಣನ ಕ್ರಿ.ಶ. 957ರ ಶಾಸನದಲ್ಲಿ ಅಲ್ಲಿ ಗುಂಡಗೇಶ್ವರ ದೇವಾಲಯವನ್ನು ನಿರ್ಮಿಸಿ, ಇದಕ್ಕೆ ಭೂದತ್ತಿ ನೀಡಿದ ವಿವರವಿದೆ. ಈ ಕಾಲದ ಪುರಾವೆಗಳು ಸ್ಥಳಾಂತರವಾಗಿವೆ. ಜೀರ್ಣೋದ್ಧಾರವಾಗಿವೆ. ಈ ಶಾಸನದ ಬದಿಗಿನ ದೇವಾಲಯದ ತಳಪಾಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಅಂತರಾಳದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ದ್ವಾರಬಂಧಗಳಲ್ಲಿ ಗಜಲಕ್ಷ್ಮೀ ಇರುವಳು. ಭುವನೇಶ್ವರಿಯಲ್ಲಿ ಕಮಲವಿದೆ. ಆದರೆ ಈ ಊರಿನ ಉತ್ತರಕ್ಕಿರುವ ಸಾತಲಿಂಗೇಶ್ವರ ದೇವಾಲಯದ ತಳಪಾಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಶಿವಲಿಂಗ ಗರ್ಭಗೃಹದಲ್ಲಿದ್ದು ಬಾಗಿಲ ಫಲಕದಲ್ಲಿ ನಾಲ್ಕು ಶಾಖೆಗಳಿವೆ. ನವರಂಗ ಕಂಬಗಳ ಮೇಲೆ ಶಿವ, ಪಾರ್ವತಿ, ವಾಲಿ, ಸುಗ್ರೀವ, ಜಟಾಧಾರಿ ಶಿವ ಮುಂತಾದ ಸಿಲ್ಪಗಳಿವೆ. ನವರಂಗದ ನಡುವಿನ ಛತ್ತಿನಲ್ಲಿ ನಟರಾಜನನ್ನು ಭುವನೇಶ್ವರಿಯ ಭಾಗದಲ್ಲಿ ಕೆತ್ತಲಾಗಿದೆ. ಮುಖ್ಯ ದ್ವಾರದ ಫಲಕದ ಲಲಾಟದಲ್ಲಿ ಗಜಲಕ್ಷ್ಮೀ ಇರುವಳು. ಭಿತ್ತಿಯಲ್ಲಿ ಕಿರು ಕಂಬಗಳಿವೆ. ಹೀಗಾಗಿ ಈ ದೇವಾಲಯವೇ ಅಂದಿನ ಗುಂಡಗೇಶ್ವರ ದೇವಾಲಯವಿರಬಹುದು.

ದಂಡಾಪುರದ ದ್ವಾರಪಟ್ಟಿಕೆಯಲ್ಲಿ ಶಿವಲಿಂಗವಿದೆ (ಲಲಾಟದಲ್ಲಿ). ಕೆಳಗಡೆ ಫಲಕಗಳಲ್ಲಿ ಪೂರ್ಣ ಕುಂಭಗಳಿವೆ. ಈ ಮಮೂನೆಯ ದ್ವಾರ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಕೋಗಳಿಯ ಮಾರುತಿ ಗುಡಿಯಲ್ಲಿ ಕಾಣಬಹುದು.

ಉಮಾಮಹೇಶ್ವರ ದೇವಾಲಯ (ಬಸವಕಲ್ಯಾಣ ತಾ. ಬೀದರ ಜಿ.) ಸರಳ ಭೂಮಿಜ ಶಿಖರಗಳನ್ನು ಹೋಲುತ್ತದೆ. ರಾಜಾಪುರದ ಶಿಖರ ತುಂಬ ಶಿಥಿಲವಾಗಿದೆ. ಅದರ ಮೇಲೆ ಕಳಸವಿದೆ. ಸರಳ ಭಿತ್ತಿಯಿದೆ. ಭಿತ್ತಿಯ ಮೇಲೆ ಶಿಖರದ ಬುಡದ ಕಪೋತ ಕೆಳಗಡೆ ಏಕಸಾಲಿನ ಹಂಸಪಕ್ಷಿಗಳ ಸಾಲಿದೆ. ಆದರೆ ಈ ಜಿಲ್ಲೆಯ ಮೋಘಾದ ರಾಮಲಿಂಗೇಶ್ವರ ದೇವಾಲಯದ ಶಿಖರ ಭೂಮಿಜದಲ್ಲಿ ಇದ್ದರೂ ಸಹ ಅಧಿಷ್ಠಾನದಿಂದ ಶಿಖರದ ತುದಿಯವರೆಗೆ ಉದ್ದವಾದ ಪಟ್ಟಿಕೆಗಳಿವೆ. ಅದರ ಮೇಲಿನ ಆಮಲಕ ವೃತ್ತಾಕಾರವಾಗಿ ಅಂಚಿನ ಸುತ್ತ ಅಲಂಕರಣವಿದೆ. ಇದರ ಮೇಲೂ ಕಳಸವಿದೆ. ಭಿತ್ತಿಯ ದೇವಕೋಷ್ಠ ಗರ್ಭಗೃಹದ

ಬಾಗಿಲಿನಂತಿದೆ. ನರಬೋಳ (ಗುಲ್ಬರ್ಗಾ ಜಿ.) ದ ಈಶ್ವರ ದೇವಾಲಯಕ್ಕೆ ಸರಳ ಭಿತ್ತಿ ಮತ್ತು ಶಿಖರಗಳು ದ್ರಾವಿಡ ಮಾದರಿಯಲ್ಲಿವೆ.

ಶಿರವಾಳದ ನನ್ನಯ್ಯನ ಗುಡಿಯ ಬದಿಗೆ ನಾದಯ್ಯನ ಗುಡಿಯಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಅಂತರಾಳದ ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶ ದ್ವಾರಗಳಿವೆ. ಸಭಾಮಂಟಪಕ್ಕೆ ಪಶ್ಚಿಮದಲ್ಲಿ ಪ್ರವೇಶದ್ವಾರವಿದೆ. ಅಧಿಷ್ಠಾನಕ್ಕೆ ಉಪಾನ, ಜಗತಿ, ಎತ್ತರ ಪದ್ಮ, ಕುಮುದದಲ್ಲಿ ವೃತ್ತ, ಮೂರು ಪಟ್ಟಗಳು ಮತ್ತು ಅನೇಕ ಮುಖಗಳಿವೆ. ಕಪೋತದ ಮುಖ ಇಳಿಜಾರಿದ್ದು ಅಲ್ಲಿ ಪುಷ್ಪಗಳಿವೆ. ಈ ತರದಲ್ಲಿ ಸಿಂಹ ಬತ್ತಲೆ ಹೆಂಗಸು, ಆನೆ, ಹಾರುವ ಗಂಧರ್ವರು, ಶಿವಲಿಂಗ ಆರಾಧಕರು, ಮಹಿಷಾಸುರ ಮರ್ದಿನಿ, ವಾದ್ಯಮೇಳ, ಜೋಡಿ ಹಂಸ, ಗಣೇಶ, ಶಿವ–ಪಾರ್ವತಿ, ಗಣೇಶ ಇತ್ಯಾದಿ ಕಿರುಶಿಲ್ಪಗಳಿವೆ. ಭಿತ್ತಿಯಲ್ಲಿ ಉದ್ದವಾದ ಚೌಕಾದ ಅರೆಗಂಬಗಳ ಸಾಲಿದೆ. ಅರೆಗಂಬಗಳ ತುದಿ ಕುಂಭದಂತಿದೆ. ಅದರ ಕಪೋತ ಕೆಳಗಡೆ ಗಿಳಿಗಳು, ಬತ್ತಲೆ ಹೆಂಗಸು, ಮಿಥುನ, ಸಿಂಹಗಳು, ಮಂಗ, ಆಮೆ ಇತ್ಯಾದಿ ಕಿರುಚಿತ್ರಗಳಿವೆ. ಇದರಲ್ಲಿ ಹಿಂಚಾಚು ಮುಂಚಾಚುಗಳಿವೆ. ಗರ್ಭಗೃಹ ಮತ್ತು ಸಭಾಮಂಟಪದಲ್ಲಿ ಸರಳ ಭದ್ರಗಳು ಹೆಚ್ಚು ಮುಂಚಾಚಿವೆ. ಹಿಂಚಾಚಿನಲ್ಲಿ ಎರಡು ಸ್ತಂಭಪಂಜರ ನಮೂನೆಯಿದೆ.

ಸಭಾಮಂಟಪದ ದ್ವಾರ ಚೌಕಟ್ಟನ್ನು ಅಲಂಕೃತಗೊಳಿಸಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀ, ಕಪೋತದ ಕೆಳಗಡೆ ಹಾರುವ ಪಕ್ಷಿಗಳ ಸಾಲಿದೆ. ಹೊಸ್ತಿಲ ಬದಿಗಳಲ್ಲಿ ಎರಡು ಆನೆಗಳಿವೆ. ಶಿಲ್ಪಗಳಾದ ಶಿವ–ಪಾರ್ವತಿ, ಜೊತೆಗೆ ನಂದಿ, ಗಣೇಶ, ವಾದ್ಯಮೇಳ ದಕ್ಷಿಣದಲ್ಲಿದೆ. ಮಕರದ ಮೇಲೆ ನಿಂತ ಗಂಗೆಯಿದ್ದಾಳೆ. ಕೂರ್ಮದ ಮೇಲೆ ಯಮುನೆ ನಿಂತಿದ್ದಾಳೆ. ಶಿವ–ಪಾರ್ವತಿ ಜೊತೆ ನಂದಿ ಇರುವುದು. ಅಪಸ್ಮಾರದ ಮೇಲೆ ನೃತ್ಯಿಸುತ್ತಿರುವ ನಟರಾಜನಿದ್ದಾನೆ.

ಗರ್ಭಗೃಹದಲ್ಲಿ ಚೌಕ ಶಿವಲಿಂಗವಿದೆ. ಪೂರ್ವ ಗೋಡೆಯಲ್ಲಿ ಕಿರು ಗೂಡಿದೆ. ಛತ್ತಿನಲ್ಲಿ ಅಷ್ಟಮುಖ ಕಮಲವಿದೆ. ದ್ವಾರ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು ಮತ್ತು ಶಾಖೆಗಳ ಅಲಂಕರಣವಿದೆ. ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಮುಂದಿನ ಎರಡು ಕಂಬಗಳ ಮೇಲೆ ಮಕರ ತೋರಣ ಪಟ್ಟಿಯಿದೆ. ತೋರಣ ಪಟ್ಟಿಕೆಯಲ್ಲಿ ಬದಿಗೆರಡು ಮಕರಗಳಿವೆ. ಅವುಗಳ ಲತಾಬಳ್ಳಿಗಳ ಬಾಲಗಳಿವೆ. ಹಗ್ಗದಂತಹ ತೋರಣ ಮಕರಗಳ ಬಾಯಿಂದ ಬಂದಿವೆ. ಮೇಲೆ ಸಿಂಹ, ಗಂಧರ್ವರಿದ್ದಾರೆ. ಸಭಾಮಂಟಪ ದೊಡ್ಡದಾಗಿದೆ. ನಡುವೆ ದೊಡ್ಡ ಕಂಬಗಳು ಮತ್ತು ಕಿರು ಕಂಬಗಳಿವೆ. ನಡುವಿನ ಛತ್ತಿನಲ್ಲಿ ಕಮಲದ ಅಲಂಕರಣವಿದೆ.

ಶಿರವಾಳದ ವಾಯುವ್ಯಕ್ಕೆ ಹಳ್ಳದ ಉತ್ತರಕ್ಕೆ ನನ್ನಯ್ಯನ ಗುಡಿಯಿದೆ. ಈ ಗುಡಿಯ ಅಧಿಷ್ಠಾನದ ತರವನ್ನು ಗ್ರಾನೈಟ್ ಶಿಲೆಯಿದ್ದು, ಉಳಿದ ಭಾಗ ಡಾಲರೈಟ್‌ನದು. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವಿದೆ. ಕಪೋತ ತರದಲ್ಲಿ ಅದರ ಮೇಲಿನ ಎರಡು ತರಗಳಲ್ಲಿ ಅನೇಕ ಕಿರುಶಿಲ್ಪಗಳಿವೆ. ಈ ಮೇಲಿನ ತರದಲ್ಲಿ ಕಾಮ, ಸೂರ್ಯ, ಭೈರವಿ, ನರಸಿಂಹ–ಹಿರಣ್ಯಕಶ್ಯಪರ ಹೋರಾಟ, ನರಸಿಂಹ ಹಿರಣ್ಯಕಶ್ಯಪುವನ್ನು ಕೊಲ್ಲುತ್ತಿರುವುದು, ವಿಷ್ಣು, ಸೂರ್ಯ ಮುಂತಾದ ಚಿತ್ರಗಳಿವೆ. ಭಿತ್ತಿಯಲ್ಲಿ ಸರಳ ಅರೆಗಂಬಗಳ ಸಾಲಿದೆ. ಅದರಲ್ಲಿ ಜಾಲವಾತಾಯನ ಕಿಡಕಿಗಳಿವೆ. ಇದರ ಕಪೋತದ ಕೆಳಗಡೆ ಬಾತುಕೋಳಿ ಕುಬ್ಜರ ಸಾಲಿದೆ.

ಶಿರವಾಳದ ಇನ್ನೊಂದು ದ್ವಿಕೂಟ ಮಾದರಿಯ ದೇವಾಲಯ ಎರಡು ಗರ್ಭಗೃಹಗಳು ತಲಾ ಒಂದಕ್ಕೆ ಒಂದು ಅಂತರಾಳಗಳಿವೆ. ಇವುಗಳಿಗೆ ಒಂದು ಸಭಾಮಂಟಪವಿದೆ. ಸ್ವಲ್ಪ ಅಲ್ಲಲ್ಲಿ ಬದಲಾವಣೆಯಿದೆ. ಪೂರ್ವ ಗರ್ಭಗೃಹ ಚೌಕಾಗಿದೆ. ದ್ವಾರದ ಚೌಕಟ್ಟಿನ ಒಂದು ಶಾಖೆಯಲ್ಲಿ ಕುಳಿತ ವ್ಯಕ್ತಿಗಳು, ನೃತ್ಯಗಾತಿಯರು ಮತ್ತು ವಾದ್ಯಮೇಳಗಳಿವೆ. ಪಶ್ಚಿಮದ ಗರ್ಭಗೃಹವು ಚೌಕಾಗಿದೆ. ಅಲ್ಲೂ ಯಾವ ರೀತಿಯ ಶಿಲ್ಪಗಳಿಲ್ಲ. ಅಂತರಾಳದಲ್ಲಿ ಎರಡು ಕಂಬಗಳಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇಲ್ಲಿಯ ಕಂಬಗಳ ಕಾಂಡದಲ್ಲಿ ಕುಂಭಗಳಿವೆ. ಉದ್ದವಾದ ಅಂಕಣ ಸಭಾಮಂಟಪದ ಉತ್ತರಕ್ಕಿದೆ. ಅದಕ್ಕೆ ಇಳಿಜಾರಾದ ಛತ್ತಿದೆ.

ಶಿರವಾಳದ ಈ ದೇವಾಲಯ ಪಶ್ಚಿಮಕ್ಕೆ ಮುಖಮಾಡಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಚತುರಸ್ರಾಕಾರದ ದಾರಿ, ಸಭಾಮಂಟಪ ಮತ್ತು ನಂದಿಗುಡಿಯಿದೆ. ಅಧಿಷ್ಠಾನದಲ್ಲಿ ಉಪಾನ, ದಳಗಳುಳ್ಳ ಜಗತಿ, ಕೆತ್ತನೆಯುಳ್ಳ ತ್ರಿಪಟ್ಟ, ಕುಮುದ, ಮೇಲಿನ ತರದಲ್ಲಿ ಹಿಂಚಾಚುಗಳಿವೆ. ಮುಂಚಾಚಿದ ತರದಲ್ಲಿ ಕಥಾನಕ ಇತ್ಯಾದಿ ಚಿತ್ರಗಳಿವೆ. ಅವುಗಳಲ್ಲಿ ಮಕರ ತಲೆಗಳು, ಸಿಂಹಗಳು, ಆನೆಗಳು, ಹಂದಿ, ನರಿ, ಯತಿಗಳು, ಮನುಷ್ಯರು ಇತ್ಯಾದಿಗಳಿವೆ. ತ್ರಿಪಟ್ಟ ಕುಮುದದ ಮೇಲಿನ ಕಥಾನಕ ಚಿತ್ರಗಳು ಹೀಗಿವೆ. ಕಾಗೆ–ಕೋಳಿಯನ್ನು ಕರಿ ಸರ್ಪಕೊಂದಿರುವುದು, ಯಕ್ಷ, ಕಿರಾತಾರ್ಜುನೀಯ, ಸೀತಾಪರಣ, ರಾಮದರ್ಶನ ಪಡೆದ ಹನುಮ, ವಾಲಿ–ಸುಗ್ರೀವರ ಹೋರಾಟ, ಗಣೇಶ, ಮಹಿಳೆ ತಲೆಯ ಮೇಲೆ ಬುಟ್ಟಿಯನ್ನು ಹೊತ್ತಿರುವುದು, ಬತ್ತಲೆಯವರು, ವೀಣೆಯನ್ನು ಬಾರಿಸುವವಳು, ಕುಳಿತ–ಹಾರುವ ಯಕ್ಷರು, ಗಜಲಕ್ಷ್ಮೀ, ಮಿಥುನ, ಮಂಗ–ಹಾವು, ಎರಡು ಸಿಂಹಗಳು, ರಾಜ–4 ಯತಿಗಳು ನೃತ್ಯ ಮತ್ತು ವಾದ್ಯ ಮೇಳದೊಂದಿಗೆ, ಕೋಳಿ–ಗುಬ್ಬಿ, ಮಂಗ ಬಾಲವನ್ನು ಬೆಣೆಯಲ್ಲಿ ಸಿಕ್ಕಿಸಿಕೊಂಡಿರುವುದು, ಸಿಂಹ–ಮೊಲ–ಮೊಸಳೆ, ಗರುಡ–ನಾಗರ ಹೊಡೆದಾಟ, ನರಿ ಕಥೆ, ಮಿಥುನ ಮುಖ್ಯವಾಗಿದೆ. ಉದ್ದ ಪಟ್ಟಿಕೆಯಲ್ಲಿ ಅನೇಕ ಚಿತ್ರಗಳಿವೆ.

ಯಕ್ಷರು (8) ಗಿಳಿ, ದಂಪತಿಗಳು, ಬತ್ತಲೆ ಸ್ತ್ರೀ (6) ಮಂಗ–ಮೊಸಳೆ, ಮಂಗ–ಹಾವು, ಬತ್ತಲೆ ಮನುಷ್ಯ (1), ಗಣೇಶ (2), ಸಿಂಹಗಳು (3), ಪುಷ್ಪಗಳು (20), ಹಂದಿ (6), ಹಾವು, ನಂದಿ, ಪಕ್ಷಿ, ಹಾರುವ ಗಂಧರ್ವರು, ಆನೆ, ಮಿಥುನ, ಮಂಗ–ಸ್ತ್ರೀ, ಮಂಗ, ಮುಂಗುಸಿಗಳು, ಜೋಡು ಮಂಗಗಳು ಇತ್ಯಾದಿಗಳಿವೆ.

ಗರ್ಭಗೃಹದಲ್ಲಿ ಯಾವುದೇ ವಿಗ್ರಹಗಳಿಲ್ಲ. ಆದರೆ ಚೌಕ ಪೀಠ ವಿದೆ. ಅಲಂಕೃತ ದ್ವಾರ ಚೌಕಟ್ಟಿನ ಲಲಾಟದಲ್ಲಿ ಗಜಲಕ್ಷ್ಮೀ ಇದ್ದಾಳೆ. ಅಂತರಾಳದ ಕಂಬದಲ್ಲಿ ಮಕರಪಟ್ಟಿಕೆಯಿದೆ. ಸಭಾ ಮಂಟಪದಲ್ಲಿ ಚೌಕಪಟ್ಟಿಕೆಗಳುಳ್ಳ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ಎದ್ದು ಕಾಣಿಸುವ ಕಮಲವಿದೆ. ದೊಡ್ಡದಾದ ಶೈವ ದ್ವಾರಪಾಲಕರಿದ್ದಾರೆ.

ಶಿರಿವಾಳದ ಪೂರ್ವಕ್ಕೆ ಮುಖಮಾಡಿದ ಈ ದೇವಾಲಯ ವನ್ನು ಕೊಠಡಿಯನ್ನಾಗಿ ಪರಿವರ್ತಿಸಿರುವುದು ದುರ್ದೈವದ ಸಂಗತಿ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಚತುಷ್ಕಾಕಾರದ ದಾರಿ ಮತ್ತು ಸಭಾಮಂಟಪಗಳಿವೆ. ಅಧಿಷ್ಠಾನ ದಲ್ಲಿ ಉಪಾನ, ಜಗತಿ, ತ್ರಿಪಟ್ಟ, ಕುಮುದ, ಕಪೋತಗಳಿವೆ. ಭಿತ್ತಿ ಯಲ್ಲಿ ಸರಳ ಅರೆಗಂಬಗಳಿವೆ. ಕಪೋತದ ಕೆಳಗಡೆ ಬಾತು ಕೋಳಿ, ಆನೆಗಳು, ಮಂಗಗಳು, ಮಿಥುನ, ಮನುಷ್ಯ ಮತ್ತು ಸ್ತ್ರೀಯರ ಇತ್ಯಾದಿ ಕಿರುಚಿತ್ರಗಳಿವೆ. ಗರ್ಭಗೃಹದಲ್ಲಿ ವಿಗ್ರಹಗಳಿಲ್ಲ. ಅಂತರಾಳದ ಮುಂದಿನ ಕಂಬಗಳಲ್ಲಿ ಮಹಿಷಾಸುರಮರ್ದಿನಿ ಮತ್ತು ಗಣೇಶನ ಶಿಲ್ಪಗಳಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬ ಗಳಿವೆ. ಇನ್ನೆರಡು ವೃತ್ತಾಕಾರದ ಕಂಬಗಳೂ ಅಲ್ಲಿವೆ. ಸಭಾ ಮಂಟಪ ಮತ್ತು ನವರಂಗದ ನಡುವೆ ಒಂದು ಪ್ರವೇಶ ದಾರಿಗೆ ಬದಿಗಳಲ್ಲಿ ಎರಡು ಪ್ರವೇಶ ದ್ವಾರಗಳಿರುವುದು ವಿಶೇಷ. ಶಿರವಾಳದ ಈ ದೇವಾಲಯದಲ್ಲಿ ಈ ಕಾಲದ ನಾಲ್ಕು ಕಂಬ, ದ್ವಾರದ ಚೌಕಟ್ಟು, ಎಂಟು ಅರೆಗಂಬ ಇತ್ಯಾದಿಗಳನ್ನು ಬಳಸ ಲಾಗಿದೆ.

ಶಿರಿವಾಳದ ಈ ದೇವಾಲಯ ಊರ ಹಳ್ಳದ ದಂಡೆಯ ಮೇಲಿದ್ದು ಅದನ್ನು ಕುಂಬಾರರು ಮನೆಯನ್ನಾಗಿ ಮಾಡಿಕೊಂಡಿ ದ್ದಾರೆ. ಅಳಿದುಳಿದ ಭಾಗದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಎತ್ತರ ಪದ್ಮ ಅಲಂಕರಣ, ತ್ರಿಪಟ್ಟ, ಕುಮುದ ಮತ್ತು ಕಪೋತಗಳಿವೆ. ಭಿತ್ತಿಯಲ್ಲಿ ಸರಳ ಅರೆಗಂಬಗಳಿವೆ. ಇಲ್ಲಿ ಇಟ್ಟಿಗೆಯನ್ನು ಬಳಸಿದ್ದು, ಅದರಲ್ಲಿ ಅರೆಗಂಬದ ಅಲಂಕರಣವಿರುವುದು ಕಾಣು ತ್ತದೆ. ಗರ್ಭಗೃಹ ಚೌಕಾಗಿದ್ದು, ಅದರಲ್ಲಿ ಮೂರು ದೇಶ ಕೋಷ್ಠ ಗಳಿವೆ. ದ್ವಾರ ಚೌಕಟ್ಟಿನಲ್ಲಿ ಶಾಖೆಗಳ ಅಲಂಕರಣ ಮತ್ತು ದ್ವಾರಪಾಲಕರಿದ್ದಾರೆ. ದ್ವಾರಪಾಲಕರ ವಸ್ತ್ರಾಭರಣ ಶೈಲಿ ಈ ಕಾಲದ ಮಾದರಿಯಲ್ಲಿವೆ. ಕಪೋತದ ಒಳಗಡೆ ಬಾತುಕೋಳಿ ಗಳ ಸಾಲಿದೆ. ಹೊಸ್ತಿಲ ಅಂಚಿನಲ್ಲಿ ಮುಂಚಾಚಿದ ಆನೆಗಳಿವೆ. ತೆರೆದ ಅರ್ಧಮಂಟಪವಿದೆ. ಅರೆಗಂಬಗಳಲ್ಲಿ ಮಹಿಷಾಸುರ ಮರ್ದಿನಿ, ಗಣೇಶ, ಯಕ್ಷ ಇತ್ಯಾದಿ ಶಿಲ್ಪಗಳಿವೆ. ಸಭಾಮಂಟಪ ದಲ್ಲಿ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ವೃತ್ತಾಕಾರದ ಕಮಲವನ್ನು ಚೌಕಾದ ಉಬ್ಬು ಅಲಂಕರಣದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಗೋಡೆಯ ಒಂದು ಕಡೆಗೆ ಇಟ್ಟಿಗೆಯನ್ನು ಬಳಸಲಾಗಿದೆ.

ಶಿರಿವಾಳದ ಊರ ಹೊರಗಿನ ಪೂರ್ವಕ್ಕೆ ಮುಖಮಾಡಿದ ಈ ದೇವಾಲಯ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ಅಪರೂಪದ ಸಭಾ ಮಂಟಪಗಳಿವೆ. ಇದಕ್ಕೆ ಉಪಪೀಠ ವಿದ್ದು ಅಲ್ಲಿ ಉಪಾನ, ಜಗತಿ ಮತ್ತು ಹಿಂಚಾಚು ಕಂಠವಿದೆ. ಇದರ ಮೇಲಿನ ಅಧಿಷ್ಠಾನಕ್ಕೆ ಉಪಾನ, ಜಗತಿ, ತ್ರಿಪಟ್ಟ, ಕುಮುದ ಮತ್ತು ಕಪೋತಗಳಿವೆ. ಭಿತ್ತಿಯಲ್ಲಿ ಸರಳ ಅರೆಗಂಬಗಳಿವೆ. ಅರೆಗಂಬದ ಮೇಲ್ಗಡೆಯ ಕೆತ್ತನೆಯಲ್ಲಿ ಸಿಂಹಗಳು, ಹಂಸಗಳು, ನಂದಿ, ಆನೆ, ಮನುಷ್ಯರು, ದೇವತೆಗಳಾದ ನರಸಿಂಹ-ಹಿರಣ್ಯ ಕಶ್ಯಪುಗಳ ಹೋರಾಟ, ಶಿವ-ಪಾರ್ವತಿ, ರತಿ-ಮನ್ಮಥ, ಸೂರ್ಯ, ಚಂದ್ರ, ನೃತ್ಯಗಾರರು, ಮಹಿಷಾಸುರ ಮರ್ದಿನಿ, ಗಣೇಶ ಇತ್ಯಾದಿ ಚಿತ್ರಗಳಿವೆ. ಕಪೋತದ ಕೆಳಗಡೆ ಸಿಂಹಗಳು, ಮಂಗಗಳು, ಹಾವು, ಮಂಗ-ಹಾವು-ಹಂಸಗಳಿವೆ. ಗರ್ಭಗೃಹ ಚೌಕಾಗಿದೆ. ಇದರ ದ್ವಾರದ ಚೌಕಟ್ಟಿನಲ್ಲಿ ಶಾಖೆಗಳ ಅಲಂಕರಣ ವಿದೆ. ಕಪೋತದ ಕೆಳಗಡೆ ಬಾತುಕೋಳಿಗಳ ಸಾಲಿದೆ. ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ. ಮುಂದೆ ಚಂದ್ರಶಿಲೆಯು ಅಲಂಕರಣವಿದೆ. ಅರ್ಧಮಂಟಪದ ಮುಂದಿನ ಎರಡು ಕಂಬ ಗಳಲ್ಲಿ ಅಲಂಕರಣವಿದೆ. ಮುಂದೆ ಚತುರಸ್ರಾಕಾರದ ದಾರಿಯಿದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ಕಮಲ ಉಬ್ಬು ಶಿಲ್ಪವಿದೆ. ನಡುವೆ ಅಷ್ಟಭುಜ ನಟರಾಜನು ಅಪಸ್ಮಾರನ ಮೇಲೆ ನಿಂತು ನೃತ್ಯ ಮಾಡುತ್ತಿರುವನು. ತಲಾ ಒಂದರ ಒಳ ದಳದಲ್ಲಿ ವಾದ್ಯಮೇಳದವರಿದ್ದರೆ, ಹೊರಗಡೆ ದಂಪತಿ ಸಮೇತ ದಿಕ್ಪಾಲಕರಿದ್ದಾರೆ. ಆನೆ ಮೇಲೆ ಇಂದ್ರ (ಪೂರ್ವ), ಟಗರಿನ ಮೇಲೆ ಅಗ್ನಿ (ಆಗ್ನೇಯ), ಕೋಣದ ಮೇಲೆ ಯಮ (ದಕ್ಷಿಣ), ನರುತಿ ಮನುಷ್ಯನ ಮೇಲೆ (ನೈಋತ್ಯ), ಮಕರದ ಮೇಲೆ ವರುಣ (ಪಶ್ಚಿಮ), ವಾಯು ಕುದುರೆಯ ಮೇಲೆ (ವಾಯವ್ಯ) ಕುಬೇರ ಮೇಕೆಯ ಮೇಲೆ (ಉತ್ತರ) ಮತ್ತು ನಂದಿಯ ಮೇಲೆ ಈಶಾನ (ಈಶಾನ್ಯ)ರ ಶಿಲ್ಪಗಳಿವೆ. ಸಭಾ ಮಂಟಪ ತಳಪಾಯ ಅಪರೂಪದ್ದು. ಇದರ ಉತ್ತರ, ದಕ್ಷಿಣ ಮತ್ತು ಪೂರ್ವದ ಗೋಡೆಗಳ ನಡುವಿನ ಭಾಗ ಆಳವಾದ ತೆರೆದ ಅರ್ಧಮಂಟಪಗಳಿರುವುದು ಅಪರೂಪದ್ದಾಗಿದೆ. ಗೋಡೆಗಳಲ್ಲಿ ಜಾಲವಾತಾಯನಗಳಿವೆ.

ಶಿರಿವಾಳದ ಪ್ರಮುಖ ದೇವಾಲಯ ಸಿದ್ಧೇಶ್ವರ. ಅಲ್ಲಲ್ಲಿ ಹಾಳಾದ ತಳಪಾಯವುಳ್ಳ ಈ ದೇವಾಲಯದಲ್ಲಿ ಐದು ಗರ್ಭಗೃಹಗಳಿವೆ. ಪ್ರವೇಶಕ್ಕೆ ಮಹಾದ್ವಾರ ಉತ್ತರಕ್ಕಿದೆ. ತಲಾ ಒಂದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ನಡುವೆ ಒಂದು ಗರ್ಭಗೃಹವಿದ್ದು ಅದು ಸರ್ವತೋಭದ್ರ ಮಾದರಿಯದ್ದಾಗಿದೆ. ಪೂರ್ವ ಮತ್ತು ಪಶ್ಚಿಮದ ಸಭಾಮಂಟಪ ಗಳಿಗೆ ಮುಖಮಂಟಪಗಳಿವೆ. ಅಧಿಷ್ಠಾನ ಅರ್ಧಭಾಗ ಹೂತಿದೆ. ಸಭಾಮಂಟಪಗಳ ಭಿತ್ತಿಯಲ್ಲಿ ಅರೆಗಂಬಗಳಿವೆ. ನಡುವಿನ ಗರ್ಭಗೃಹದಲ್ಲಿ ಶಿವಲಿಂಗವನ್ನು ಚೌಕಾಕಾರದ ಪೀಠದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದಕ್ಕೆ ಬ್ರಹ್ಮ ಸೂತ್ರವಿರುವುದಿಲ್ಲ. ಛತ್ತಿನಲ್ಲಿ ಕಮಲದ ಅಲಂಕರಣವಿದೆ. ಕಂಬಗಳಲ್ಲಿ ವಿಭಿನ್ನ ದೇವ-ದೇವತೆ ಗಳ ಕಿರುಶಿಲ್ಪಗಳಿವೆ. ಈ ದೇವಾಲಯದ ಬದಿಗಳಲ್ಲಿ ವಾಯವ್ಯ ಮತ್ತು ನೈಋತ್ಯಕ್ಕೆ ಎರಡು ಚಿಕ್ಕ ಗುಡಿಗಳಿವೆ.

ಬಸವಣ್ಣನವರಿಗಿಂತ ಹಿರಿಯ ಶಿವಶರಣ ಜೇಡರ ದಾಸಿ ಮಯ್ಯನ ಜನ್ಮ ಸ್ಥಳ. ಮುದುನೂರಿನಲ್ಲಿ ಸುಮಾರು 21 ಶಾಸನ ಗಳಿವೆ. ಶಿಲ್ಪ, ದೇವಾಲಯ, ಪುಷ್ಕರಣಿಗಳಿವೆ. ಅವುಗಳಲ್ಲಿ

ರಾಮಲಿಂಗೇಶ್ವರ ದೇವಾಲಯ ಮತ್ತು ಪುಷ್ಕರಣಿ ರಾಮತೀರ್ಥ ಮಹತ್ವದೆನಿಸಿವೆ. ರಾಮಲಿಂಗೇಶ್ವರ ದೇವಾಲಯವು ವಿಶಾಲ ಸಮುಚ್ಚಯದಿಂದ ಒಳಗೊಂಡಿದ್ದು ಅದರ ಸುತ್ತಲೂ ಒಟ್ಟು ಐದು ಕಿರು ದೇವಾಲಯಗಳಿವೆ. ಈ ಊರಿನಲ್ಲಿ ರಾಮತೀರ್ಥ, ಲಕ್ಷ್ಮಣ ತೀರ್ಥ, ಪಾಂಡವ ತೀರ್ಥ, ಸಂಗಮ ತೀರ್ಥ, ಹಾಲಿನ ತೀರ್ಥ ಮತ್ತು ಸಕ್ಕರೆ ತೀರ್ಥಗಳೆಂಬ ಪುಷ್ಕರಣಿಗಳಿದ್ದು ಅವುಗಳಲ್ಲಿ ರಾಮ ತೀರ್ಥವೇ ಮಹತ್ವದ್ದು. ಈ ದೇವಾಲಯ ಮತ್ತು ಉತ್ತರ ಬದಿಗಿನ ದೇವಾಲಯಗಳನ್ನು ಬಳಸಿಕೊಂಡು ಕೆಲವರು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ.

ಅರ್ಥಮದ್ನೂರು ಗ್ರಾಮದ ಪೂರ್ವ ಮಹಾದ್ವಾರದ ಪಶ್ಚಿಮಕ್ಕೆ ಪೂರ್ವ–ಪಶ್ಚಿಮಾಭಿಮುಖವಾಗಿ ರಾಮಲಿಂಗೇಶ್ವರ ದೇವಾಲಯವಿದೆ. ಅದರ ತಳಪಾಯದಲ್ಲಿ ಎದುರು–ಬದುರಾಗಿ ಎರಡು ಗರ್ಭಗೃಹಗಳಿವೆ. ತಲಾ ಒಂದು ಗರ್ಭಗೃಹಕ್ಕೆ ಅರ್ಧ ಮಂಟಪವಿದ್ದು, ಇವುಗಳ ಮಧ್ಯದಲ್ಲಿ ಒಂದು ನವರಂಗವಿದೆ. ಪಶ್ಚಿಮದ ಗರ್ಭಗೃಹದಲ್ಲಿ ಒಂದು ಶಿವಲಿಂಗವಿದೆ. ಅದನ್ನು ರಾಮಲಿಂಗೇಶ್ವರ ಎಂದು ಕರೆಯುವರು. ಅದು ಆಧುನಿಕ ಕಾಲ ದ್ದಾಗಿದೆ. ಈ ಗರ್ಭಗೃಹದ ಬಾಗಿಲ ಚೌಕಟ್ಟಿನಲ್ಲಿ ಕೆಳಗಡೆ ಶೈವ ಮಹಾದ್ವಾರ ಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿಯ ಚಿತ್ರಗಳಿವೆ. ಈ ಗರ್ಭಗೃಹದ ಮುಂದೆ ಮಾತ್ರ ಎರಡು ಸ್ತಂಭಗಳುಳ್ಳ ಅರ್ಧ ಮಂಟಪವಿದೆ. ಈ ಸ್ತಂಭಗಳ ಮೇಲೆ ಸುಂದರ ಕೆತ್ತನೆಯ ಮಕರ ತೋರಣ ಪಟ್ಟಿಕೆಯ ಮಧ್ಯ ಗಜಲಕ್ಷ್ಮಿ, ಬದಿಗಳಲ್ಲಿ ಕುಳಿತ ಪದ್ಮನಿಧಿಯರಿದ್ದರೆ. ಈ ಸ್ತಂಭಗಳಿಗೆ ಪೀಠಗಳಿವೆ. ಅವುಗಳ ಮೇಲಿನ ಕಾಂಡಭಾಗ ವೃತ್ತಾಕಾರದಲ್ಲಿದ್ದು ಅಲ್ಲಿ ಮಣಿ ಮುತ್ತಿನ ಹಾರಗಳಲ್ಲಿ ವಿಭಿನ್ನ ಚಿತ್ರಗಳಿವೆ. ಕೆಳಗಿನ ಕಾಂಡಭಾಗ ಚೌಕಾಗಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅದರ ಮಧ್ಯದಲ್ಲಿ ರಾಮಲಿಂಗೇಶ್ವರನಿಗೆ ಎದುರು ಮುಖಮಾಡಿ ಕುಳಿತ ನಂದಿ ಯಿದೆ. ಒಂದು ಕಡೆ ಉಮಾಮಹೇಶ್ವರ, ಗಣೇಶ ಮತ್ತು ಪಾದ ಪೀಠಗಳುಳ್ಳ ಶಿಲ್ಪಗಳಿವೆ. ಎದುರಿಗಿನ ಗರ್ಭಗೃಹದಲ್ಲಿ ಜೇಡರ ದಾಸಿಮಯ್ಯ ಶರಣರ ಆಧುನಿಕ ಶಿಲ್ಪವಿದೆ. ಅದರ ಅರ್ಧ ಮಂಟಪದ ಎಡಗೋಡೆಯಲ್ಲಿ ಶಾಸನವಿದೆ. ದಾಸಿಮಯ್ಯ ಗರ್ಭಗೃಹದ ದಕ್ಷಿಣ ಮತ್ತು ಉತ್ತರ ಮುಖಗಳ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತು ನಟರಾಜರ ಶಿಲ್ಪಗಳಿವೆ. ಈ ದೇವಾಲಯಕ್ಕೆ ಮೂಲ ಅಧಿಷ್ಠಾನ ಭಾಗ ಹಾಗೆಯೇ ಉಳಿದುಕೊಂಡಿದೆ. ಈ ದೇವಾಲಯದ ಭಿತ್ತಿ ಶಿಖರ ಮತ್ತು ಛತ್ತುಗಳನ್ನು ಸುಮಾರು ಒಂದು ಶತಮಾನದ ಹಿಂದೆ ಜೀರ್ಣೋದ್ಧಾರಗೊಳಿಸಲಾಗಿದೆ. ರಾಮಲಿಂಗೇಶ್ವರ ದೇವಾಲಯದ ಗರ್ಭಗೃಹ, ಬಾಗಿಲ ಚೌಕಟ್ಟು (ಲಲಾಟ ಪಟ್ಟಿ ಸೇರಿ), ಅರ್ಧಮಂಟಪದ ಸ್ತಂಭ ಮಕರ ತೋರಣ, ದೇವಕೋಷ್ಠಗಳಲ್ಲಿರುವ ನಟರಾಜ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಇವುಗಳ ಕಾಲ ಸುಮಾರು ಕ್ರಿ. ಶ. 10ನೆಯ ಶತಮಾನದ ಅಂತ್ಯ ಭಾಗದ್ದಾಗಿದೆ. ಅಲ್ಲಿಯ ಸಪ್ತಮಾತೃಕೆ, ಗಣೇಶ, ಪಾದಮುದ್ರೆ ಗಳು ಸುಮಾರು ಕ್ರಿ. ಶ. 12ನೆಯ ಶತಮಾನದ್ದಾಗಿದೆ. ಉಳಿದ ಭಾಗಗಳಾದ ಭಿತ್ತಿ, ಛತ್ತು, ಶಿಖರಗಳು ಸುಮಾರು ಒಂದು ಶತಮಾನ ಹಳೆಯವು.

ಈ ದೇವಾಲಯದ ಹೊರಗಡೆ ಮತ್ತು ರಾಮತೀರ್ಥದ ಹತ್ತಿರ ದೇವಾಲಯದ ಶೈವ ದ್ವಾರಪಟ್ಟಿಕೆಗಳಿವೆ. ಅವುಗಳ ಬುಡ ದಲ್ಲಿ ಶೈವ ದ್ವಾರಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಕೈಗಳಲ್ಲಿ ಅಭಯ, ನಾಗ, ತ್ರಿಶೂಲ, ಡಮರು ಗದೆಗಳನ್ನು ಹಿಡಿದಿದ್ದಾನೆ. ಬದಿಗಳಲ್ಲಿ ಕಮಲ ಮತ್ತು ಕುಂಡಲಗಳನ್ನು ಹಿಡಿದು ಸೇವಕಿ ಯರಿಬ್ಬರು ನಿಂತಿದ್ದಾರೆ. ವಸ್ತ್ರಾಭರಣ ಧರಿಸಿದ್ದಾರೆ. ಮೇಲೆ ಸರಳ ನಾಲ್ಕು ಶಾಖೆಗಳಿವೆ. ಇದರ ಪಕ್ಕದಲ್ಲಿ ಮಕರ ತೋರಣಪಟ್ಟಿಕೆ ಇದೆ. ಈ ಪಟ್ಟಿಕೆಯಲ್ಲಿ ಮಕರಗಳ ಬಾಯಿಂದ ಬಂದ ದಪ್ಪನೆಯ ಲತೆಯು ನಾಲ್ಕು ಕಮಾನಿನಂತೆ ಏಕಸಾಲಿನಲ್ಲಿದೆ. ಮಕರಗಳ ಮೇಲೆ ಸವಾರರು ಮತ್ತು ಕಮಾನುಗಳ ನಡುವೆ ಕುಬ್ಜರು ಕುಳಿತಿ ದ್ದಾರೆ. ಅದರ ಮೇಲೆ ಏಕಸಾಲಿನಲ್ಲಿ ಲತಾಸುರುಳಿಯ ಅಲಂಕಾರವಿದೆ.

ಮುದ್ನೂರಿನ ಮೊದಲನೆಯ ದೇವಾಲಯವು ರಾಮ ಲಿಂಗೇಶ್ವರ ದೇವಾಲಯದ ಪಶ್ಚಿಮ ಗರ್ಭಗೃಹದ ಆಗ್ನೇಯಕ್ಕೆ ಇದೆ. ಅದರ ತಳಪಾಯದಲ್ಲಿ ಕೇವಲ ಗರ್ಭಗೃಹ ಮತ್ತು ಅರ್ಧ ಮಂಟಪಗಳಿವೆ. ಅದಕ್ಕೆ ಎತ್ತರವಾದ ಅಧಿಷ್ಠಾನವಿದೆ. ಗರ್ಭಗೃಹ ದಲ್ಲಿರುವ ಶಿವಲಿಂಗದ ಮೇಲೆ ಸುಮಾರು ಕ್ರಿ.ಶ. 12ನೇ ಶತಮಾನದ ಬ್ರಹ್ಮಸೂತ್ರವಿದೆ. ಶಿವಲಿಂಗದ ಪೀಠ ಮಾತ್ರ ಎರಡು ರೀತಿಯಲ್ಲಿದೆ. ಅದರ ದ್ವಾರ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು ಮತ್ತು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಅದಕ್ಕೂ ಆಧುನಿಕ ಶಿಖರವಿದೆ. ಈ ದೇವಾಲಯದ ಶಿಲ್ಪಭಾಗದಲ್ಲಿ ಮೂಲ ಭಿತ್ತಿ ಭಾಗ ಮತ್ತು ಅಧಿಷ್ಠಾನಗಳು ಉಳಿದಿವೆ. ಈ ದೇವಾಲಯದ ಉಳಿದ ಭಿತ್ತಿಭಾಗ ಮತ್ತು ಶಿಖರಗಳನ್ನು ಒಂದು ಶತಮಾನದ ಹಿಂದೆ ಜೀರ್ಣೋದ್ಧಾರ ಮಾಡಲಾಗಿದೆ.

ಮುದ್ನೂರಿನ ಎರಡನೆಯ ದೇವಾಲಯ ರಾಮಲಿಂಗೇಶ್ವರ ದೇವಾಲಯದ ಪೂರ್ವ ಗರ್ಭಗೃಹದ ಹೊರಗಡೆ ಈಶಾನ್ಯಕ್ಕಿದೆ. ಅದು ಹೆಚ್ಚು ಶಿಥಿಲಾವಸ್ಥೆಯಲ್ಲಿದೆ. ಬಾಗಿಲು ಚೌಕಟ್ಟು ತುಂಡು ನಂದಿ ಇತ್ಯಾದಿಗಳಿವೆ.

ಮುದ್ನೂರಿನ ಮೂರನೆಯ ದೇವಾಲಯ ರಾಮ ಲಿಂಗೇಶ್ವರದ ಪಶ್ಚಿಮ ಗರ್ಭಗೃಹದ ಹೊರಭಾಗದ ವಾಯವ್ಯ ದಲ್ಲಿದೆ. ಅದಕ್ಕೂ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧ ಮಂಟಪಗಳಿವೆ. ಗರ್ಭಗೃಹದಲ್ಲಿ ಯಾವ ಮೂರ್ತಿಗಳಿಲ್ಲ. ಅದರ ಬಾಗಿಲು ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ.

ಮುದ್ನೂರಿನ ನಾಲ್ಕನೆಯ ಕಿರು ದೇವಾಲಯ ರಾಮ ಲಿಂಗೇಶ್ವರ. ಪಶ್ಚಿಮ ಗರ್ಭಗೃಹದ ಪಶ್ಚಿಮ ಹೊರಭಾಗದಲ್ಲಿದೆ. ಅದರ ತಳಪಾಯದಲ್ಲಿ ಗರ್ಭಗೃಹ ಮತ್ತು ಶಿಥಿಲಾವಸ್ಥೆಯ ಅರ್ಧ ಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ಸೇವಕಿಯರುಳ್ಳ ಶೈವ ದ್ವಾರಪಾಲಕರು ಮತ್ತು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಇದು ಹೆಚ್ಚು ಜೀರ್ಣೋದ್ಧಾರಗೊಂಡಿದೆ.

ಮುದ್ನೂರಿನ ನಾಲ್ಕನೆಯ ಕಿರು ದೇವಾಲಯವು ರಾಮ ಲಿಂಗೇಶ್ವರ ಪಶ್ಚಿಮ ಗರ್ಭಗೃಹದ ನೈರುತ್ಯದಲ್ಲಿದೆ. ಈ ದೇವಾಲಯದ ಹೊರಗಡೆ ಎರಡು ಕನ್ನಡ ಶಾಸನಗಳಿವೆ. ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧ ಮಂಟಪಗಳಿವೆ. ಗರ್ಭಗೃಹದ ಹಿಂದಿನ ಗೋಡೆಯಲ್ಲಿ ತ್ರಿಮೂರ್ತಿಗಳುಳ್ಳ ಶಿಲ್ಪವಿದೆ. ಬದಿಗೆ ತುಂಡಾದ ಉಮಾಹೇಶ್ವರ ಶಿಲ್ಪವಿದೆ.

ಮುದ್ನೂರಿನ ರಾಮಲಿಂಗೇಶ್ವರ ದೇವಾಲಯದ ಸಂಕೀರ್ಣದ ಉತ್ತರ ಭಾಗದಲ್ಲಿ ಪುಷ್ಕರಣಿಯ ಪಶ್ಚಿಮಕ್ಕೆ ಒಂದೇ ಸಾಲಿನಲ್ಲಿ ಮೂರು ದೇವಾಲಯಗಳಿವೆ. ಒಂದು ಸಿದ್ಧ ಲಿಂಗೇಶ್ವರ ಇನ್ನುಳಿದ ದೇವಾಲಯಗಳ ಅಂಚಿನ ಭಾಗದ ಅಧಿಷ್ಠಾನ ಭಿತ್ತಿ ಭಾಗಗಳು ಮನೆಯ ಗೋಡೆಯಲ್ಲಿ ಮುಚ್ಚಿ ಕೊಂಡಿರುವುದು ಎದ್ದು ಕಾಣುತ್ತವೆ.

ಮುದ್ನೂರಿನ ಸಿದ್ಧಲಿಂಗೇಶ್ವರ ದೇವಾಲಯದ ತಳಪಾಯ ದಲ್ಲಿ ಗರ್ಭಗೃಹ, ಅರ್ಧಗಂಬಗಳುಳ್ಳ ಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹ ದ್ವಾರದಲ್ಲಿ ಶೈವ ದ್ವಾರಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಅರ್ಧಮಂಟಪ ಕಂಬಗಳ ಮೇಲೆ ಏಕಸಾಲಿನಲ್ಲಿ ಸುಂದರವಾದ ಮೂರು ಜೋಡಿಯಲ್ಲಿ ಮಕರ ತೋರಣ ಪಟ್ಟಿಕೆಯಿದೆ. ಮಧ್ಯದ ಮಕರ ತೋರಣದಲ್ಲಿ ಮಧ್ಯ ಅಸುರನ ಮೇಲೆ ನಿಂತ ನೃತ್ಯ ಮಾಡುವ ನಟರಾಜ ನಿದ್ದಾನೆ. ಬದಿಗಿನ ಮಕರ ತೋರಣಗಳ ಅಲಂಕರಣದಲ್ಲಿ ಬ್ರಹ್ಮ ಮತ್ತು ವಿಷ್ಣು ಸಮಭಂಗದಲ್ಲಿ ನಿಂತಿದ್ದಾರೆ. ಬದಿಗಿನ ತೋರಣದ ಮೇಲೆ ವಾದ್ಯಮೇಳ ಮತ್ತು ನೃತ್ಯಗಾರರಿದ್ದಾರೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅದರಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ಈ ದೇವಾಲಯದಲ್ಲಿ ಅರ್ಧಮಂಟಪದ ಸ್ತಂಭತೋರಣವು ನವ ರಂಗದ ಕಂಬಗಳು ಈ ದೇವಾಲಯದ ಭಿತ್ತಿ ಜೀರ್ಣೋದ್ಧಾರ ವಾಗಿದೆ.

ಉಡಗಿ(ಸೇಡಂ ತಾ.)ಯಲ್ಲಿ ಕ್ರಿ.ಶ. 9–10ನೆಯ ಶತಮಾನದ ಲೋಕೇಶ್ವರ ದೇವಾಲಯದ ಅಂತರಾಳ ಮತ್ತು ನವರಂಗವಿದೆ. ಬೃಹತ್ ಬಲಹರಿ ಶಿವಲಿಂಗ ಗರ್ಭಗೃಹದಲ್ಲಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ಪಂಚ ಶಾಖೆ (1) ಅಂತರಾಳ ಭಿತ್ತಿನಲ್ಲಿ ಅರಳಿದ ಮೂರು ಕಮಲದ ಅಲಂಕರಣವಿದೆ. (2) ಹೊಸ್ತಿಲ ಮುಂದೆ ಚಂದ್ರ ಶಿಲೆಯಿದೆ. ನವರಂಗದ ಕಂಬಗಳ ಮೇಲೆ ನರ–ದ್ರಾಕ್ಷಿಯ ಚಿತ್ರ ಪಂಚ ತಂತ್ರದ ಕಥೆಯನ್ನು ನೆನಪಿಸುತ್ತದೆ. (3) ನವರಂಗದ ಛತ್ತುಗಳಲ್ಲಿ ಸುಂದರ ಕಮಲಗಳಿವೆ.

ಇದರಲ್ಲಿ ಲತಾಬಳ್ಳಿ, ಕಬ್ಬಿನ ಆಕಾರದ ಅರೆಗಂಬ, ಮನುಷ್ಯರ ಸಾಲು, ಬಹುಮುಖವುಳ್ಳ ಅರೆಗಂಬ ಮತ್ತು ಪತ್ರವಿವೆ. ದ್ವಾರಪಲಕರ ಕೈಗಳಲ್ಲಿ ವಿಸ್ಮಯ ಚಿನ್ಹೆ, ಅಭಯಮುದ್ರೆ, ನಾಗ ಮತ್ತು ಗದೆಗಳಿವೆ, ಇವರ ಬದಿಗೆ ಆಳೆತ್ತರದ ಚೌರಿ ಹಿಡಿದು ನಿಂತ ಸೇವಕಿರಿಯರ ಉಬ್ಬು ಶಿಲ್ಪಗಳಿವೆ. ಲಲಾಟದಲ್ಲಿ ಮಕರ ತೋರಣ, ನಡುವೆ ಕೀರ್ತಿಮುಖ, ಪಾರ್ಶ್ವಗಳಲ್ಲಿ ಮಂಗ–ಗಂಧರ್ವರನ್ನು ಚಿತ್ರಿಸಲಾಗಿದೆ. ಕೀರ್ತಿಮುಖದಿಂದ ಆರು ಸರಗಳು ಇಳಿಬಿದ್ದಿವೆ. ಈ ಪಟ್ಟಿಕೆಯ ಮೇಲಿನ ಕಪೋತದ ಬುಡ ದಲ್ಲಿ ಹಂಸ ಪಕ್ಷಿಗಳ ಸಾಲಿದೆ. ಅದರ ಮುಂಭಾಗದಲ್ಲಿ ಚೈತ್ಯಾ ಕಾರಗಳಿವೆ. ಉತ್ತರಾಂಗದಲ್ಲಿ ನಡುವೆ ಗಜಲಕ್ಷ್ಮಿ ಬದಿಗಳಲ್ಲಿ ಗಂಧರ್ವರಿದ್ದಾರೆ.

ಅಂತರಾಳ ಕಂಬದಲ್ಲಿ ಪೀಠ, ಕಾಂಡ, ಕುಂಭ, ಕಳಸ ಮತ್ತು ಭೋದುಗೆಗಳಿವೆ. ಕಾಂಡ ಭಾಗದಲ್ಲಿ ಕ್ರಮವಾಗಿ ಚೌಕಪಟ್ಟಿಕೆ, ನಾಲ್ಕು ಅಷ್ಟಪಟ್ಟಿಕೆಗಳ ನಡುವೆ ಬಹುಮುಖ ಪಟ್ಟಿಕೆಗಳು, ಚೈತ್ಯಾ ಕಾರವುಳ್ಳ ಚೌಕಪಟ್ಟಿಕೆ, ಬಹುಮುಖ ಕುಂಭ, ಕಳಸ ನಂತರ ಬೋಧುಗೆಗಳು ಒಳಗೊಂಡಿವೆ.

ಅಂತರಾಳ ಬದಿಗಿನ ಗೋಡೆಗಳಲ್ಲಿ ಆಳವಾದ ಚಿಕ್ಕ ದೇವ ಕೋಷ್ಠಗಳಿದ್ದು ಒಂದರಲ್ಲಿ ಸೂರ್ಯಪೀಠ ಇನ್ನೊಂದರಲ್ಲಿ ಶಿವ ಲಿಂಗವಿದೆ. ಬಾಗಿಲ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರಿರುವರು. ಕೈಗಳಲ್ಲಿ ಅಭಯ ತ್ರಿಶೂಲ, ನಾದ ಮತ್ತು ಗದೆಗಳಿವೆ, ಐದು ಶಾಖೆಗಳಿದ್ದು ಅವು ಲತಾಸುರುಳಿ, ಅರೆಗಂಬ, ಸಿಂಹಗಳ ಸಾಲು, ಅರೆಗಂಬ, ಸಿಂಹ ಮತ್ತು ಪತ್ರಗಳ ಸಾಲಿವೆ. ಲಲಾಟದಲ್ಲಿ ಗಜಲಕ್ಷ್ಮಿಯಿದ್ದರೆ ಕಪೋತದ ಬುಡದಲ್ಲಿ ಹಂಸ ಪಕ್ಷಿಗಳ ಸಾಲಿದೆ. ಅದರ ಮೇಲೆ ಚೈತ್ಯಾಕಾರಗಳಿವೆ. ಈ ಫಲಕಗಳ ಕೆಳ ಗಡೆ ಶ್ರೀ ನಿಧಿ ಮತ್ತು ಪದ್ಮ ನಿಧಿಯರಿದ್ದಾರೆ.

ಕಂಬಗಳಿಗೆ ಪೀಠ, ಕಾಂಡ ಭಾಗದಲ್ಲಿ ಎರಡು ಚೌಕ ಪಟ್ಟಿ, ಇವುಗಳ ಮಧ್ಯ ನಾಲ್ಕು ಕಿರಿದಾದ ಹದಿನಾರು ಮುಖಗಳ ಪಟ್ಟಿ, ಮೇಲಿನ ಚೌಕಪಟ್ಟಿ ಮೇಲೆ ಅನೇಕ ಮುಖ, ಅದರ ಮೇಲ್ಗಡೆ ದಿಂಬಿನಾಕಾರದ ಅನೇಕ ಮುಖಗಳುಳ್ಳ ಕುಂಭ ಮತ್ತು ಬೋಧುಗೆಗಳನ್ನು ಹೊಂದಿದೆ. ಈ ನಾಲ್ಕು ಕಂಬಗಳ ಕಾಂಡ ಭಾಗದ ಮೇಲಿನ ಚೌಕಪಟ್ಟಿಗಳ ನಾಲ್ಕೂ ಮುಖಗಳಲ್ಲಿ ಒಂದೊಂದು ಚಿತ್ರಗಳಿವೆ. ತಲಾ ಒಂದರ ಮೇಲೆ ಅಲಂಕಾರ ಪಟ್ಟಿಗಳಿವೆ. ನವರಂಗದ ಛತ್ತಿನಲ್ಲಿ ಮಧ್ಯ ಕಮಲ ಫಲಕಗಳಿವೆ. ಅದರ ಬಾಗಿಲು ಚೌಕಟ್ಟಿನಲ್ಲಿ ಐದು ಶಾಖೆಗಳಿದ್ದು ಅವು ಲತಾ, ಸುರುಳಿ, ದುಂಡು ಅರ್ಧಗಂಬ, ರತ್ನಸಾಲ, ಅನೇಕ ಮುಖವುಳ್ಳ ಅರ್ಧಗಂಬ ಮತ್ತು ಪತ್ರಗಳಿವೆ.

ಕಂಬ–1: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ 2 ಆನೆ, 2 ಯಕ್ಷರು (ಶ್ರೀನಿಧಿ–ಪದ್ಮನಿಧಿ), ಕಬ್ಬಿನ ಬಿಲ್ಲು–ಬಾಣ ಹಿಡಿದು ನಿಂತ ಕಾಮ–ರತಿ ಮತ್ತು ಲತಾಬಳ್ಳಿ ಸುರುಳಿಗಳಿವೆ.

ಕಂಬ–2: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ವಾಲಿ–ಸುಗ್ರೀವ, ಯೋಧ–ಜಿಂಕೆ, ಅರ್ಧ ಮನುಷ್ಯ–ಅರ್ಧ ಪ್ರಾಣಿ ರೂಪದ ನಾಗನ ಕೈಯಲ್ಲಿ ಕತ್ತಿ–ನಾಗಿಣಿ ಕೈಯಲ್ಲಿ ಕಮಲ ಮತ್ತು ಲತಾಬಳ್ಳಿಗಳು (?)

ಕಂಬ–3: ಈ ಕಂಬದಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ನಿಂತ 2 ಅಶ್ವಾರೂಢ ಯಕ್ಷ–ಯಕ್ಷಿ 2 ಹಂಸಗಳು, 2 ಕುದುರೆ ಸವಾರರು ಮತ್ತು ಹನುಮ ನಾಗರಾಜ (?) ರಿದ್ದಾರೆ.

ಕಂಬ–4: ಈ ಕಂಬದಲ್ಲಿ ತ್ರಿವಿಕ್ರಮ-ಬಲಿ (?) ಶಿವ–

ಪಾರ್ವತಿ, ಸೂರ್ಯ–ಕೇಶವ ಮತ್ತು ರತಿ–ಮನ್ಮಥ.

ನವರಂಗದ ಎಡಗೋಡೆಗೆ ನಿಲ್ಲಿಸಿದ ಏಳು ಶಿಲ್ಪಗಳು ಕಾಮ, ರತಿ, ಶೈವಯತಿ, ನಟರಾಜ, ವೃಷಭಾರೂಢ, ಉಮಾಮಹೇಶ್ವರ, ಕಾಲಭೈರವಿ ಮತ್ತು ಕಾರ್ತಿಕೇಯ. ನವರಂಗದ ಬಾಗಿಲು ಚೌಕಟ್ಟಿನ ಪಂಚ ಶಾಖೆಗಳಲ್ಲಿ ಲತಾಸುರುಳಿ, ಒಂದು ಸಾಲಿನಲ್ಲಿ ನಿಂತ ಹುಡುಗರು, ಅರ್ಧಗಂಬ, ಲತಾ ಸುರುಳಿ ಮತ್ತು ಪತ್ರಗಳಿವೆ. ಶೈವ ದ್ವಾರಪಾಲಕನ ನಾಲ್ಕು ಕೈಗಳಲ್ಲಿ ಗದೆ, ತ್ರಿಶೂಲ, ನಾಗ ಮತ್ತು ಹಸ್ತ ಮುದ್ರೆ ಇವೆ ಹಾಗೂ ಸೇವಕಿ ಇರುವಳು. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಬದಿಗೆ ಪೂರ್ಣ ಪ್ರಮಾಣದ ಎತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ರೀತಿಯ ಬಾಗಿಲು ಚೌಕಟ್ಟು ಈ ಭಾಗದ ಹಂದರಕಿಯ ಲೋಕೇಶ್ವರ ದೇವಾಲಯ ಗುಂಪುಗಳ ಬಾಗಿಲು ಚೌಕಟ್ಟುಗಳನ್ನು ಹೋಲುವುದು.

ಲಲಾಟದಲ್ಲಿ ಮಕರತೋರಣದ ಮಧ್ಯ ಕೆಳಗಡೆ ಗಜಲಕ್ಷ್ಮಿ ಅದರ ಕಪೋತದ ಕೆಳಗಡೆ ಹಂಸಪಕ್ಷಿಗಳ ಸಾಲಿದೆ. ಈ ಬಾಗಿಲು ಫಲಕಗಳ ಕೆಳಗಡೆ ಮುಂದಕ್ಕೆ ಮುಖ ಮಾಡಿದ ಆನೆಗಳಿವೆ ಹಾಗೂ ಫಲಕದಲ್ಲಿ ಶೈವ ದ್ವಾರಪಾಲಕರು ಮತ್ತು ಸೇವಕರಿದ್ದಾರೆ.

ಈ ದೇವಾಲಯದ ಸಂಕೀರ್ಣದಲ್ಲಿ ಭೃಂಗಿ, ಭೈರವ, ಕಾಮ, ರತಿ, ಅರ್ಧನಾರೀಶ್ವರ, ಶಿವ, ಶಿವ–ಪಾರ್ವತಿ, ಗಣೇಶ ಇತ್ಯಾದಿ ಶಿಲ್ಪಾವಶೇಷಗಳಿವೆ. ಈ ದೇವಾಲಯದ ಬಲಗಡೆ ಹೊರಗಡೆ ಸುಮಾರು 2 ಕಿ. ಮೀ. ಆಳದಲ್ಲಿ ಈ ಹಿಂದೆ ಅಣೆದಾಗ ಈ ಕಟ್ಟಡದ ಹಲವಾರು ಕುರುಹುಗಳು ಬೆಳಕಿಗೆ ಬಂದವೆಂದು ವದಂತಿಯಿರುವುದು ಗಮನೀಯ. ಈ ದೇವಾಲಯದ ಎಡಗಡೆ ಒಂದು ಹಾಳು ಬಾವಿಯಿದೆ.

ಈ ದೇವಾಲಯ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗದ ಅರ್ಧಭಾಗದವರೆಗೆ ಅಧಿಷ್ಠಾನದ ಮೂಲಭಾಗಗಳು ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಂಪ, ಕಂಠಪತ್ರ, ಕಂಪದ ಆರು ತರ ಹೊಂದಿದೆ. ಅದರ ನವರಂಗದ ಮುಂದೆ ಮತ್ತು ಬರಿಯ ಅಧಿಷ್ಠಾನವು ಭಿನ್ನವಾಗಿದೆ ಹಾಗೂ ಎರಡು ರೀತಿಯಲ್ಲಿದೆ. ಅದರ ಭಿತ್ತಿಭಾಗವು ಜೀರ್ಣೋದ್ಧಾರಗೊಂಡಿದೆ. ಈಗ ಶಿಖರವಿಲ್ಲ.

ಶಂಭುಲಿಂಗ ದೇವಾಲಯ (ಕೊಡ್ಲ, ಸೇಡಂ ತಾ.): ಕೊಡ್ಲ ಗ್ರಾಮದ ಉತ್ತರಕ್ಕಿದೆ. ಇದಕ್ಕೆ ಒಂದು ಚೌಕ ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗ ಇದೆ. ನವರಂಗದ ನಾಲ್ಕು ಕಂಬಗಳಿವೆ. ಕಂಬಗಳ ಕಾಂಡದ ಚೌಕ ಪಟ್ಟಿಕೆಗಳ ನಡುವೆ ಉದ್ದ ಪಟ್ಟಿಕೆಯಿದೆ. ಈ ಲಕ್ಷಣ ರಾಷ್ಟ್ರಕೂಟರ ಶೈಲಿಯಾಗಿದೆ. ಗರ್ಭಗೃಹ ದ್ವಾರಪಟ್ಟಿಯಲ್ಲಿ ಮೂರು ಶಾಖೆಗಳಿವೆ. ಕೆಳಗಡೆ ಪೂರ್ಣಕುಂಭಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಈ ದೇವಾಲಯ ಸಂಕೀರ್ಣದಲ್ಲಿ ಚತುರ್ಭುಜ ಗಣೇಶ, ಭೈರವ, ಏಳುಹೆಡೆ ನಾಗ, ಸರಸ್ವತಿ, ಸಪ್ತಮಾತೃಕೆ (ವೀರಭದ್ರ, ಗಣೇಶರಿಲ್ಲ) ಎರಡು ಶಿವಲಿಂಗಗಳು ಇತ್ಯಾದಿ ಇವೆ.

ಪಂಚಲಿಂಗೇಶ್ವರ ಗುಡಿ (ಬೆಟಗೇರಿ–ಬಿ, ಸೇಡಂ ತಾ.): ಈ ದೇವಾಲಯ ಸಂಪೂರ್ಣ ಶಿಥಿಲಗೊಂಡಿದ್ದು ಅದರ ಮೂಲ ಭಾಗದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳಿವೆ. ಒಂದರ ಗರ್ಭಗೃಹಕ್ಕೆ ಒಂದು ಅರ್ಧಮಂಟಪ ಮತ್ತು ತೆರೆದ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬಾಗಿಲು ಪಟ್ಟಿಯಲ್ಲಿ ನಾಲ್ಕು ಶಾಖೆಗಳಿದ್ದು ಅಲ್ಲಿ ಸರಳ, ರತ್ನ, ಅರ್ಧಗಂಬ ಮತ್ತು ಪತ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ಉತ್ತರಾಂಗದಲ್ಲಿ ಕಚ್ಚುಗಳು, ಕಪೋತದಲ್ಲಿ ಚೈತ್ಯ ಮಾದರಿಗಳಿವೆ. ಅರ್ಧಗಂಭದಲ್ಲಿ ಚತುರ್ಭುಜ ಮಹಿಷಾಸುರಮರ್ದಿನಿ, ಇನ್ನೊಂದರಲ್ಲಿ ಈ ದೇವತೆ ಚಿತ್ರ, ಕಂಬಗಳಲ್ಲಿ ಹಾರಗಳು ಮತ್ತು ಚೈತನ್ಯಗಳಿವೆ.

ಇಟ್ಟಂಗೇಶ್ವರ ಗುಡಿ (ಬೆಟಗೇರ–ಬಿ, ಸೇಡಂ ತಾ.): ಈ ಗುಡಿ ಹಾಳಾಗಿದ್ದು ಇದರ ಮುಂದಿನ ಭಾಗದಲ್ಲಿ ಇಟ್ಟಿಗೆ ಕಟ್ಟಡದ ಅವಶೇಷಗಳಿವೆ. ಇಟ್ಟಿಗೆ ಇಲ್ಲಿ ದೊರೆಯುತ್ತಿರುವುದರಿಂದ ಈ ಚಿಕ್ಕ ಗುಡಿಯನ್ನು ಇಟ್ಟಿಗೇಶ್ವರನೆಂದು ಕರೆದಿರಬೇಕು. ಈ ಗುಡಿಯಲ್ಲಿ ಇತ್ತೀಚಿನ ಶಿವಲಿಂಗವಿದೆ.

ಈಶ್ವರ ಗುಡಿ (ಬೆಟಗೇರ–ಬಿ, ಸೇಡಂ ತಾ.): ಇದೊಂದು ಇತ್ತೀಚಿನ ಚಿಕ್ಕ ಗುಡಿ, ಅದರಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ಕುತೂಹಲದ್ದಾಗಿದೆ. ಇಲ್ಲಿ ಚತುರ್ಭಜ ಗಣೇಶನ ಶಿಲ್ಪವಿದ್ದು ಅದಕ್ಕೆ ಗಂಟೆಗಳ ಸರವಿದೆ. ಹಾಗೂ ಈ ಗುಡಿ ಬದಿಗಿನ ಮಾರುತಿ ಗುಡಿಯ ಬಾಗಿಲು ಚೌಕಟ್ಟಿಗೆ ನಾಲ್ಕು ಶಾಖೆಗಳಿವೆ. ಇವು ಸು. ಕ್ರಿ.ಶ. 10ನೇ ಶತಮಾನದವು.

ಸೇಡಂ ನಗರದ ಪಂಚಲಿಂಗೇಶ್ವರ ದೇವಾಲಯ ಸಂಕೀರ್ಣದ ಉತ್ತರ ಕಡೆಯ ದೇವಾಲಯಕ್ಕೆ ಈಶ್ವರ ಗುಡಿ ಎಂದು ಹೆಸರು. ಈ ದೇವಾಲಯದ ತಳಪಾಯದಲ್ಲಿ ಒಂದು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ. ನವರಂಗದ ಮಧ್ಯ ಗರ್ಭಗೃಹಕ್ಕೆ ಎದುರಾಗಿ ನಂದಿಯನ್ನು ಕೂಡಿಸಲಾಗಿದೆ. ಈ ಗುಡಿಯ ಭಿತ್ತಿಯಲ್ಲಿ ಸರಳ ಚೌಕಾದ ಅರ್ಧಗಂಬಗಳ ಒಂದು ಸಾಲಿದೆ. ಗರ್ಭಗೃಹದ ಭಿತ್ತಿ ಮೇಲೆ ಮತ್ತು ಕಪೋತ, ಕೆಳಗಡೆ ಹಂಸಪಕ್ಷಿಗಳ ಸಾಲಿರುವುದು. ಅದರಲ್ಲಿಯೂ ಗರ್ಭಗೃಹ ಕ್ರಿ.ಶ. 10ನೇ ಶತಮಾನದ್ದು, ಉಳಿದ ಭಾಗ ಕ್ರಿ.ಶ. 12ನೆಯ ಶತಮಾನ. ಅದಕ್ಕೆ ಇತ್ತೀಚೆಗೆ ಸುಣ್ಣ ಲೇಪಿಸಿದ್ದು ಅಲ್ಲಲ್ಲಿ ಚಿಕ್ಕಪುಟ್ಟ ಬದಲಾವಣೆಗಳನ್ನು ಮಾಡಲಾಗಿದೆ.

ತ್ರಿಲಿಂಗೇಶ್ವರ ದೇವಾಲಯ: ಸೇಡಂನ ಈ ದೇವಾಲಯದ ತಳಪಾಯದಲ್ಲಿ ಎರಡು ಗರ್ಭಗೃಹಗಳು ಎದುರು ಬದುರಾಗಿವೆ. ತಲಾ ಒಂದಕ್ಕೆ ಅರ್ಧಮಂಟಪವಿದೆ. ಅರ್ಧಮಂಟಪದಲ್ಲಿ ಸ್ತಂಭಗಳಿವೆ. ಇವುಗಳ ಮುಂದೆ ಒಂದು ನವರಂಗವಿದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ವಿಶಿಷ್ಟವಾಗಿದೆ. ಅರ್ಧಮಂಟಪವಿದೆ. ಅರ್ಧಮಂಟಪದಲ್ಲಿ ಸ್ತಂಭಗಳಿವೆ. ಇವುಗಳ ಮುಂದೆ ಒಂದು ನವರಂಗವಿದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ವಿಶಿಷ್ಟವಾಗಿದೆ. ಅರ್ಧಮಂಟಪದ ಕಂಬಗಳು ದುಂಡಾಗಿ, ನೀಳವಾಗಿವೆ. ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದಾರೆ.

ಸೇಡಂನ ಮಾಧವ ಗುಡಿ ಬದಿಗೆ ಈ ದೇಗುಲವಿದ್ದು, ಅದಕ್ಕೆ

ಗರ್ಭಗೃಹ ಮತ್ತು ಅಂತರಾಳಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಗ್ರಹ್ಮ ಸೂತ್ರ ಎಂಟನೆಯ ಶತಮಾನದ ಶೈಲಿಯಲ್ಲಿದೆ. ದ್ವಾರದಲ್ಲಿ ಶೈವದ್ವಾರಪಾಲಕರಿದ್ದಾರೆ. ಚೌಕಟ್ಟಿನ ಮೇಲೆ ಐದು ರೇಖಾನಾಗರ ಶೈಲಿಯ ಶಿಖರಗಳು ನಡುವೆ ಸಿಂಹಗಳಿವೆ. ಅಂತರಾಳದಲ್ಲೂ ಹನ್ನೆರಡನೆಯ ಶತಮಾನದ ಶಿವಲಿಂಗವಿದೆ. ಸೇಡಂನ ಗಣೇಶಗುಡಿಯಲ್ಲಿ ಒಂದು ಗರ್ಭಗೃಹವಿದೆ. ಅದರಲ್ಲಿ ಗಣೇಶನ ವಿಗ್ರಹವಿದೆ. ಸೇಡಂನ ಈಶ್ವರ ಗುಡಿಗೆ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದ್ವಾರ ಚೌಕಟ್ಟಿನ ಕೆಳಗೆ ಪೂರ್ಣಕುಂಬ, ಲಲಾಟದಲ್ಲಿ ಗಣೇಶ ನಿದ್ದಾನೆ.

ಹಂದರಕಿಯ ಲೋಕೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖ ಮಂಟಪ, ಎದುರಿಗೆ ನಂದಿ ಮಂಟಪಗಳಿವೆ. ದ್ವಾರ ಚೌಕಟ್ಟಿನ ಹೊಸ್ತಿಲ ಬದಿಗಳಲ್ಲಿ ಆನೆಗಳಿವೆ. ಕಪೋತದಲ್ಲಿ ಚೈತ್ಯ ನಮೂನೆಗಳಿವೆ. ಅರ್ಧಮಂಟಪದ ಮತ್ತು ಗರ್ಭಗೃಹದ ಭುವನೇಶ್ವರಗಳಲ್ಲಿ ಅರಳಿದ ಕಮಲಗಳಿವೆ. ನವರಂಗದ ಗೋಡೆಭಾಗ ಜೀರ್ಣೋದ್ಧಾರವಾಗಿದೆ. ಇದರ ಭುವನೇಶ್ವರಗಳಲ್ಲಿ ಅರಳಿದ ಕಮಲಗಳಿವೆ. ನವರಂಗದ ಗೋಡೆ ಭಾಗ ಜೀರ್ಣೋದ್ಧಾರವಾಗಿದೆ. ಇದರ ಭುವನೇಶ್ವರಿಯಲ್ಲೂ ವಿಸ್ತಾರವಾದ ವೃತ್ತಾಕಾರದ ಅರಳಿದ ಕಮಲವಿದೆ. ದ್ವಾರದ ಬದಿಗಳಲ್ಲಿ ಅಳೆತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಎದುರುಗಿನ ಮಂಟಪದಲ್ಲಿ ನಂದಿ ವಿಗ್ರಹವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಪೋತಗಳಿದ್ದು, ಇದು ಸುಮಾರು ಒಂದು ಮೀಟರ್ ಎತ್ತರವಿದೆ. ಗೋಡೆಯು ಸರಳವಾಗಿದ್ದು, ತ್ರಿರಥ ಮಾದರಿಯಲ್ಲಿದೆ. ದ್ರಾವಿಡ ಮಾದರಿಯ ತದನಂತರ ಕಾಲದ ಗಾರೆ ಇಟ್ಟಿಗೆಯ ಶಿಖರವಿದೆ.

ಹಂದರಕಿಯ ಆನೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಇದಕ್ಕೆ ಹೊಂದಿ ಇನ್ನೆರಡು ಗರ್ಭಗೃಹಗಳಿವೆ. ತಲಾ ಒಂದಕ್ಕೆ ಅರ್ಧ ಮಂಟಪಗಳಿವೆ. ಮುಂದೆ ತೆರೆದ ಸಭಾಮಂಟಪವಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಇದು ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹದಲ್ಲಿ ಹನ್ನೆರಡನೆಯ ಶತಮಾನದ ಶಿವಲಿಂಗವಿದೆ. ದ್ವಾರದಲ್ಲಿ ವಿವಿಧ ಶಾಖೆಗಳು ಮತ್ತು ಶೈವ ದ್ವಾರಪಾಲಕರಿದ್ದಾರೆ. ಮೇಲೆ ಹಂಸಪಕ್ಷಿಗಳ ಸಾಲಿದೆ. ಕಪೋತದಲ್ಲಿ ಐದು ರೇಖನಾಗರ ಶೈಲಿಯ ಶಿಖರಗಳಿವೆ. ಅರ್ಧ ಮಂಟಪದ ಕಂಬಗಳಲ್ಲಿ ಗುಳ್ಳೆಯಾಕಾರದ ಲಕ್ಷಣಗಳಿವೆ. ಉಂಗುರ ಪಟ್ಟಿಕೆಗಳಿವೆ. ಎರಡು ಚೌಕ ಮುಖಗಳಲ್ಲಿ ನೃತ್ಯ ಗಣೇಶನ ವಾದ್ಯಮೇಳ, ಶಿವಪಾರ್ವತಿ, ದೇವ–ದೇವತೆಗಳು ಶಿವನ ಪೀಠದ ಕೆಳಗೆ ನಂದಿ, ನಟರಾಜ, ವಾದ್ಯಮೇಳ, ನರಸಿಂಹ ಹಿರಣ್ಯಕಶ್ಯಪನ ಹೊಟ್ಟೆಯನ್ನು ಬಗೆಯುತ್ತಿರುವುದು, ಶಿವ ನಂದಿ ಸವಾರಿ ಮಾಡುತ್ತಿರುವುದು, ಜೊತೆಯಲ್ಲಿ ಭಕ್ತರು, ಕಿರಾತಾರ್ಜುನರ ದೃಶ್ಯ, ಶಿವ–ಅರ್ಜುನ, ಹಂದಿ ಬೇಟೆ, ಗಜ ಮರ್ದನ ಚಿತ್ರಗಳಿವೆ. ದ್ವಾರಪಟ್ಟಿಕೆಯಲ್ಲಿ ಶೈವ ದ್ವಾರಪಾಲಕರಿದ್ದಾರೆ. ಬದಿಗೆ ಜಾಲಂದ್ರಗಳಿವೆ. ಸ್ತಂಭ ಮಕರಣ ತೋರಣದಲ್ಲಿ ಭಕ್ತರ ನಡುವೆ ನಟರಾಜನಿದ್ದಾನೆ. ಮಕರಗಳ ಬದಿಗಳಲ್ಲಿ ನವಿಲುಗಳಿವೆ. ತೆರೆದ ನವರಂಗಕ್ಕೆ ಕಕ್ಷಾಸನವಿದೆ. ಇದಕ್ಕೆ ಎತ್ತರದ ಅಧಿಷ್ಠಾನವಿದೆ. ಹೊರಗಡೆ ಪ್ರದಕ್ಷಿಣಾ ಪಥವಿದೆ. ತ್ರಿರಥ ಮಾದರಿಯಲ್ಲಿದೆ. ಶಿಖರ ಸಂಪೂರ್ಣ ಜೀರ್ಣೋದ್ಧಾರವಾಗಿದೆ.


ಜ್ಯೋತಿರ್ಲಿಂಗ ದೇವಾಲಯ: ಹಂದರಕಿಯ ಈ ದೇವಾಲಯ ಶಿಥಿಲವಾಗಿದೆ. ತಳಪಾಯದಲ್ಲಿ ಗರ್ಭಗೃಹ ಮತ್ತು ದ್ವಾರ ಬಾಗಿಲು ಉಳಿದುಕೊಂಡಿವೆ. ಇದು ತ್ರಿರಥ ಮಾದರಿಯಲ್ಲಿದೆ. ಅಲ್ಲಿ ಎರಡು 12ನೆಯ ಶತಮಾನದ ಶಿವಲಿಂಗಗಳಿವೆ. ಅವುಗಳಿಗೆ ಹತ್ತನೆಯ ಶತಮಾನದ ಚೌಕ ಪೀಠಗಳಿವೆ. ಈ ದ್ವಾರ ಚೌಕಟ್ಟಿನಲ್ಲಿ ಒಂದು ಶಾಖೆಯಲ್ಲಿ ಉದ್ದವಾಗಿ ಐದು ಹುಡುಗರನ್ನು ತೋರಿಸಲಾಗಿದೆ ಮತ್ತು ಶೈವ ದ್ವಾರಪಾಲಕರಿದ್ದಾರೆ. ಅದರ ಹಿಂಬದಿಯಲ್ಲಿ ಒಂದು ಮೆಟ್ಟಿಲುಳ್ಳ ಬಾವಿಯಿದೆ.

ಈಶ್ವರ ಗುಡಿ: ಹಂದರಕಿಯ ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಮುಖ ಮಂಟಪವಿದೆ. ಇದು ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹದಲ್ಲಿ 18ನೇ ಶತಮಾನದ ಶಿವಲಿಂಗವಿದೆ. ದ್ವಾರಪಟ್ಟಿಯಲ್ಲಿ ಇಲ್ಲಿಯೂ ನಿಂತಿರುವ ಐದು ಹುಡುಗರಿದ್ದಾರೆ. ಕೆಳಗಡೆ ಶೈವ ದ್ವಾರಪಾಲಕರಿದ್ದಾರೆ. ಹಂದರಕಿಯ ಲೋಕೇಶ್ವರ ಗುಡಿಯ ಸಂಕೀರ್ಣದಲ್ಲಿ ಎರಡು ತೆರೆದ ಪ್ರತ್ಯೇಕ ನಂದಿ ಮಂಟಪಗಳಿವೆ. ಅಲ್ಲಿ ನಂದಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. (ಆರ್‌ಎಂಎಸ್)

ರು

ರುಕ್ಮೊದ್ದೀನ್: ಸುಮಾರು 40 ವರ್ಷಗಳಷ್ಟು ಹಿಂದಿನ ಮಾತು, ಗುಲಬರ್ಗಾದ ಇತಿಹಾಸ ಪ್ರಸಿದ್ಧ ಖ್ವಾಜಾ ಬಂದೇನವಾಜ ದರ್ಗಾದಲ್ಲಿ ವಾರ್ಷಿಕ ಉರುಸ್ ಸಂಭ್ರಮ ಕಾಶ್ಮೀರದಿಂದ ಹಿಡಿದು ದೇಶದ ಮೂಲೆ ಮೂಲೆಗಳಿಂದ ಬಂದ ಭಕ್ತಾದಿಗಳು ಇಡೀ ದಿನ ಜಾತ್ರೆಯ ಸಡಗರದಲ್ಲಿ ಮೈಮರೆತರೆ ರಾತ್ರಿ 9ರ ವೇಳೆಗೆ ಉತ್ಸವ ಹೆಚ್ಚಿನ ಕಳೆಕಟ್ಟುತ್ತಿತ್ತಂತೆ ಸಭಾಂಗಣದ ವೇದಿಕೆಯಿಂದ ಡೋಲಕ. ಖಂಜರಿಗಳ ನಾದ ಹೊರಹೊಮ್ಮಿ ಖವ್ವಾಲಿಯ ಆಲಾಪ ಆರಂಭವಾಗುತ್ತಿದ್ದಂತೆ ದೇವರ ದರ್ಶನ ಮಾಡುತ್ತಿರುವ ಜಾತ್ರೆಯಲ್ಲಿ ರುಮಾಲ್ ರೋಟಿ ಮೆಲ್ಲುತ್ತಿರುವ ಬಗೆ ಬಗೆಯ ಆಟಗಳಲ್ಲಿ ತಲ್ಲೀನರಾಗಿರುವ ಎಲ್ಲ ಮಂದಿ ಸದ್ದಿಲ್ಲದೆ ಸಭಾಂಗಣ ಸೇರುತ್ತಿದ್ದರಂತೆ ಮತ್ತೆ ಅವರೆಲ್ಲ ಜಾಗ ಖಾಲಿ ಮಾಡುತ್ತಿದ್ದದ್ದು ರಾತ್ರಿ 2 ಗಂಟೆಗೆ ಹೃದಯಸ್ಪರ್ಶಿ ಗಾಯನ ಖವ್ವಾಲಿ ಮುಗಿದ ಮೇಲೆಯೇ.

ಕಳೆದ 40 ವರ್ಷಗಳಿಂದ ಇಂದಿನವರೆಗೆ ಪ್ರತಿವರ್ಷವೂ ದರ್ಗಾದಲ್ಲಿ ಇದೇ ಪದ್ಧತಿ ನಡೆದುಕೊಂಡು ಬರುತ್ತಿದೆ. ಕೋಮು ಸೌಹಾರ್ದಕ್ಕೆ ಅನ್ವರ್ಥ ನಾಮವಾಗಿರುವ ಈ ದರ್ಗಾದಲ್ಲಿ



ರುಕ್ಮೋದ್ಧಿನ್ ಖವ್ವಾಲಿ ಗಾಯನ ನಡೆಸುತ್ತಿರುವುದು

ವರ್ಷವೂ ಖವ್ವಾಲಿ ಹಾಡಿ ಸೇವೆ ಸಲ್ಲಿಸುವ ಈ ಕಲಾವಿದ ಬೇರಾರೂ ಅಲ್ಲ. ಗುಲಬರ್ಗಾದ ಮಕ್ತಂಪೂರದಲ್ಲಿ ತಬಲಾ ತಯಾರಿಕೆಯನ್ನೇ ಕಾಯಕ ಮಾಡಿಕೊಂಡಿರುವ ಮಹ್ಮದ್ ರುಕ್ಮೊದ್ದೀನ್ ಖಾಸಿಂ ಉಮ್ಮರ್ ನಿಯಾಜ್ ಅವರು ಆಕಾಶ ವಾಣಿಯ 'ಬಿ ಹೈಗ್ರೇಡ್' ಕಲಾವಿದರಾಗಿರುವ ರುಕ್ಮೊದ್ದೀನ್ ಅವರಿಗೆ ಖವ್ವಾಲಿ ಹಾಡುಗಾರಿಕೆ ಹಾಗೂ ತಬಲಾ ತಯಾರಿಕೆ ಎರಡೂ ತಮ್ಮ ತಂದೆಯಿಂದ ಬಂದ ಬಳುವಳಿ.

ತಂದೆ ಮಹ್ಮದ್ ಉಮ್ಮರ್ ನಿಯಾಜಿ ಅವರೂ ನಿಜಾಮರ ಕಾಲದಿಂದಲೂ ಈ ಭಾಗದ ಪ್ರಸಿದ್ಧ ಖವ್ವಾಲಿ ಕಲಾವಿದರು. ಅವರು ಹಾಡುತ್ತಿದ್ದ ಖವ್ವಾಲಿ ಹೈದ್ರಾಬಾದ ಕರ್ನಾಟಕ ಭಾಗ ದಲ್ಲೆಲ್ಲ ಬಹಳಷ್ಟು ಖ್ಯಾತಿ. ಅವರ ಸಂಪ್ರದಾಯ ಶೈಲಿಯನ್ನೇ ರೂಢಿಸಿಕೊಂಡು ಬಂದ ರುಕ್ಮೊದ್ದೀನ್ ಅವರು ಖವ್ವಾಲಿಯಲ್ಲಿ ಪಳಗಿದರು. ಹೈದ್ರಾಬಾದ ಗೋವಾ, ಪುಣೆ, ಮುಂಬೈ, ದೆಹಲಿ ಗಳಲ್ಲಿ ಖವ್ವಾಲಿ ಹಾಡಿ ಕೇಳುಗರ ಮೆಚ್ಚುಗೆ ಗಳಿಸಿ ಅದನ್ನೇ ಮೈಗೂಡಿಸಿಕೊಂಡರು. ಬೆಂಗಳೂರು, ಹುಬ್ಬಳ್ಳಿ, ಗಂಗಾವತಿ, ಹೊಸಪೇಟೆಗಳಲ್ಲಿಯೂ ಹಲವಾರು ಕಛೇರಿ ನೀಡುತ್ತಲೇ ಬಂದಿದ್ದಾರೆ.


ತಮ್ಮದೇ ಆದ 'ಖವ್ವಾಲಿ ತಂಡ' ಕಟ್ಟಿದರು. ಸುಮಾರು 25 ವರ್ಷಗಳ ಹಿಂದೆ ಕಟ್ಟಿದ ಈ ತಂಡ ಹೈದ್ರಾಬಾದ ಕರ್ನಾಟಕದ ಏಕೈಕ ತಂಡವಾಗಿತ್ತು. ನಂತರ ಉಚಿತವಾಗಿ ಖವ್ವಾಲಿ ಹೇಳಿ ಕೊಟ್ಟು ಹಲವಾರು ಶಿಷ್ಯರನ್ನೂ ತಯಾರು ಮಾಡಿರುವುದು ಅವರ ಉದಾರಗುಣವನ್ನು ತೋರಿಸುತ್ತದೆ.

ರಾಜ್ಯದಲ್ಲೇ ಒಬ್ಬ ಉತ್ತಮ ಖವ್ವಾಲಿ ಗಾಯಕ ಎಂದು ಗುರುತಿಸಿಕೊಂಡಿರುವ ರುಕ್ಮೊದ್ದೀನ್ ಅವರನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 2001ರಲ್ಲಿ ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ. ಖ್ಯಾತ ಕಲಾವಿದೆ. ಗಂಗೂಬಾಯಿ ಹಾನಗಲ್ ಅವರು ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ ನಂತರ 'ಭೊಲೋ ಹಾಡ್ತೀರಿ ದೇವರು ಒಳ್ಳೆದು ಮಾಡ್ಲಿ' ಎಂದು ಹರಸಿದಾಗ ತುಂಬ ಖುಷಿಯಾಯ್ತು ಎಂದು ರುಕ್ಮೊದ್ದೀನ್ ನೆನೆಸಿಕೊಳ್ಳುತ್ತಾರೆ. 2003ರಲ್ಲಿ ಗಾನ ಯೋಗಿ ಪುಟ್ಟರಾಜ ಗವಾಯಿಗಳಿಂದಲೂ ಇವರು ಸನ್ಮಾನಿತ ರಾಗಿದ್ದಾರೆ.

ತಬಲಾ ತಯಾರಿಕೆ: ರುಕ್ಮೊದ್ದೀನ್ ಅವರಿಗೆ ಹಾಡುಗಾರಿಕೆ ಒಂದು ಪ್ರವೃತ್ತಿ ಅಷ್ಟೆ. ತಬಲಾ ತಯಾರಿಕೆಯೇ ಅವರ ಜೀವನದ ಪ್ರಮುಖ ವೃತ್ತಿ. ವಿಶ್ವವಿಖ್ಯಾತ ಝಾಕೀರ್ ಹುಸೇನ್ ಅವರಿಗೆ ತಬಲಾ ತಯಾರಿಸಿಕೊಟ್ಟಿರುವುದು ರುಕ್ಮೊದ್ದೀನ್ ಅವರೇ ಪ್ರತಿ ಬಾರಿಯೂ ರಿಪೇರಿ ಮಾಡುವುದೂ ಇವರೇ.

ಹಿಂದೂಸ್ತಾನಿ ಸಂಗೀತ ಲೋಕದಲ್ಲಿ ತಬಲಾಕ್ಕೆ ಮಹತ್ವದ ಸ್ಥಾನ ರವೀಂದ್ರ ಯಾವಗಲ್, ರಘುನಾಥ ನಕೋಡರಂತಹ ರಾಜ್ಯದ ಹೆಸರಾಂತ ತಬಲಾ ವಾದಕರಿಗೂ ರುಕ್ಮೊದ್ದೀನ್ ಅವರು ತಯಾರಿಸಿದ ತಬಲಾ ಮುಚ್ಚಳಿಕೆಗಳೇಬೇಕು. ರುಕ್ಮೊದ್ದೀನ್ ಅವರ ತಬಲಾಕ್ಕೆ ಇಷ್ಟೊಂದು ಬೇಡಿಕೆ ಏಕೆ? ಒಂದು ಕ್ಷಣ ಪ್ರಶ್ನೆ ಏಳುವುದು ಸಹಜ.

ತಬಲಾ ತಯಾರಿಕೆಯೂ ಒಂದು ಕಲೆ. ತಬಲಾದ ನಾದ ಹೆಚ್ಚು ಲಯಬದ್ಧ ತಾಳದ ಸ್ಪಷ್ಟತೆ ಕೇಳುಗರಿಗೆ ಅಪ್ಯಾಯಮಾನ ವಾಗಿ ಕೇಳುವ ರಹಸ್ಯ ತಬಲಾ ತಯಾರಿಕೆಯಲ್ಲೇ ಅಡಗಿದೆ. ಈ ಕೈಚಳಕ ರುಕ್ಮೊದ್ದೀನ್ ಅವರಿಗಿದೆ ಅದಕ್ಕಾಗಿಯೇ ಇವರ ತಬಲಾಕ್ಕೆ ಇಷ್ಟೊಂದು ಬೇಡಿಕೆ.



ತಬಲಾ ತಯಾರಿಕೆಯಲ್ಲಿ ರುಕ್ಮೋದ್ಧಿನ್

ರುಕ್ಮೊದ್ದೀನ್ ಅವರ ಪತ್ನಿ 8 ಮಕ್ಕಳೊಡಗೂಡಿದ ಇಡೀ ಕುಟುಂಬ ಸುಮಾರು ಎಂಟು ದಶಕಗಳಿಂದ ತಬಲಾ ತಯಾರಿಸಿ ಸಿದ್ಧಪಡಿಸುವ ವೃತ್ತಿಯಲ್ಲಿ ನಿರತವಾಗಿದೆ. ತಮ್ಮ ಚಿಕ್ಕ ಅಂಗಡಿಯ ತಂಬಾ ತಬಲಾ, ಡೋಲಕ, ನಗಾರಿ, ಖಂಜರಿಗಳನ್ನು ತಯಾರಿಸಿ ಟ್ಟರೆ, ಅಂಗಡಿಯ ಒಂದು ಮಗ್ಗುಲಲ್ಲಿ ಹದಗೊಳಿಸಿದ ಎಮ್ಮೆ ತೊಗಲು, ತೆಳು ಚರ್ಮದ ಕುರಿ ತೊಗಲು, ಬಿಬ್ಲಾ ಮರ, ಕರ್ಣಿ, ಕಬ್ಬಿಣದ ಪುಡಿ (ಲೋಹದ ಪುಡಿ) ಮುಂತಾದ ಸಾಧನಗಳು ರುಕ್ಮೊದ್ದೀನ್ ಹಾಗೂ ಅವರ ಮಕ್ಕಳಿಂದ ಚಕಚಕನೆ ತಬಲಾ ರೂಪ ಪಡೆಯುತ್ತವೆ. ಪಕ್ಕದಲ್ಲೇ ಇವರು ಅವರ ಮನೆಯಲ್ಲಿ ರುಕ್ಮೊದ್ದೀನ್ ಅವರ ಪತ್ನಿ ಹಾಗೂ ಮಗಳು ಕರಿಕಲ್ಲಿನ ಸಹಾಯದಿಂದ ಅದಕ್ಕೆ ಅಂತಿಮ ರೂಪ ನೀಡುವ ಕೆಲಸ ಮಾಡುತ್ತಾರೆ. ತಬಲಾ ತಯಾರಿಕೆ ಖವ್ವಾಲಿ

ಗಾಯನದಲ್ಲಿ ಇಷ್ಟೊಂದು ಹೆಸರು ಬರಲು ಬಂದಾನವಾಜ ಮುತ್ಯಾ ಅವರ ಆಶೀರ್ವಾದ ಇದೆ ಎನ್ನುತ್ತಾರೆ. (ಯುಎ)

ರುದ್ರಪ್ಪ ಎಸ್. ತಳವಾರ: ಚಿತ್ರಕಲಾ ಶಿಕ್ಷಕ. ರಾಯಚೂರು ಜಿಲ್ಲೆ ಲಿಂಗಸುಗೂರ ತಾಲ್ಲೂಕಿನ 'ಕರಡಕಲ್' ಎಂಬ ಸಣ್ಣ ಹಳ್ಳಿಯಲ್ಲಿ ಜನಿಸಿದರು. ಕಡುಬಡತನದಲ್ಲೂ ಆಸಕ್ತಿಯಿಂದ ಚಿತ್ರಕಲಾ ಶಿಕ್ಷಣ ದಲ್ಲಿ ಆರ್ಟ್ ಮಾಸ್ಟರ್ ಪದವಿ ಪಡೆದು, 2002ರಲ್ಲಿ ಸರಕಾರಿ ಪ್ರೌಢ ಶಾಲೆ 'ನಾಗನಟಗಿ' ಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕ ಗೊಂಡು, ಸದ್ಯ ಶಹಾಪೂರದ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಉತ್ತಮ ಬೋಧನೆ ಮಾಡುವುದರಿಂದ ಇವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದಾರೆ. ತಾಲ್ಲೂಕು ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಪಡೆದಿದ್ದಾರೆ. 1996ನೇ ನವೆಂಬರ್ 14 ಮಕ್ಕಳಕ ದಿನಾಚರಣೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಬಿಜಾಪುರ, 1997ರ ಸ್ವಾತಂತ್ರೋತ್ಸವ ಚಿತ್ರಕಲಾ ಸ್ಪರ್ಧೆ ಮುದ್ದೇಬಿಹಾಳ, 1997ರಲ್ಲಿ ಅಪರಾಧ ಮುಂಜಾಗ್ರತೆ ಮತ್ತು ಸಂಚಾರ ಸುರಕ್ಷಾ ಸಪ್ತಾಹ ಆಚರಣೆ ವಿಜಾಪುರ, 1996 ಸಂಕಲ್ಪ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಗುಳೇದಗುಡ್ಡ, 1998 ಸೃಷ್ಟಿ ಚಿತ್ರಕಲಾ ವೇದಿಕೆ ಜಿಲ್ಲಾ ಚಿತ್ರಕಲಾ ಸ್ಪರ್ಧೆ ನಾಲತವಾಡ, 1997 ಎಸ್.ಜಿ. ಕಲಾ ಮಂದಿರ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಮುದ್ದೇಬಿಹಾಳ, 1998 ಸೃಜನ ಚಿತ್ರಕಲಾ ಪರಿಷತ್ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಮುದ್ದೇಬಿಹಾಳ, 1998 ಎಸ್.ಜಿ. ಕಲಾಮಂದಿರ ಆರ್ಟ್ ಕ್ಯಾಂಪ್ ಮುದ್ದೇಬಿಹಾಳ, 1998 ರಾಜ್ಯ ಮಟ್ಟದ ಚಿತ್ರಕಲಾ ಕಾರ್ಯಾಗಾರ ಬಿಜಾಪುರ, 1999 ರಾಯಚೂರು ಜಿಲ್ಲಾ 5ನೇ ಕನ್ನಡ ಸಾಹಿತ್ಯ ಸಮ್ಮೇಳನ ಲಿಂಗಸೂರು, 1998 ಚುಟುಕು ಸಾಹಿತ್ಯ ಸಮ್ಮೇಳನ ಮುದ್ದೇಬಿಹಾಳ, 2004 5ನೇ ರಾಜ್ಯ ಚಿತ್ರಕಲಾ ಶಿಕ್ಷಕರ ಶೈಕ್ಷಣಿಕ ಸಮ್ಮೇಳನ ಕಲಬುರ್ಗಿ, 2005–06 ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ರಾಜ್ಯಮಟ್ಟದ ಸಾಹಿತ್ಯ ಮತ್ತು ಸಂಸ್ಕೃತಿ ಮುಂತಾದೆಡೆ ಭಾಗವಹಿಸಿ ಮೆಚ್ಚುಗೆ ಗಳಿಸಿಕೊಂಡಿದ್ದಾರೆ.

2007 6ನೆಯ ಚಿತ್ರಕಲಾ ಶಿಕ್ಷಕರ ಮಹಾಸಮ್ಮೇಳನ ಧಾರವಾಡ, 2007 ಜಿಲ್ಲಾಮಟ್ಟದ ಸಹ ಚಟುವಟಿಕೆ ಯಾದಗಿರ, 2007–08 ಅಂತರರಾಷ್ಟ್ರೀಯ ಚಿಂತನಾ ಚಿತ್ರಕಲಾ ಸ್ಪರ್ಧೆ, 2008–09 ರಾಜ್ಯಮಟ್ಟದ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಬೀದರ, 2008–09 ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಹಾಸನ, 2009 2ನೇ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಬಿಜಾಪುರ (ಸಿದ್ದೇಶ್ವರ ಕಲಾಮಂದಿರದಲ್ಲಿ) ಹೀಗೆ ಹಲವಾರು ಕಡೆ ಸುತ್ತಾಡಿ ತಮ್ಮ ವಿಶಿಷ್ಠ ಪ್ರತಿಭೆ ಪ್ರದರ್ಶಿಸಿದ್ದಾರೆ.

ಇವರ ಹೆಚ್ಚಿನ ಕಲಾಕೃತಿಗಳೆಂದರೆ 'ನಿಸರ್ಗಚಿತ್ರ'. ತಾಯಿ ನಿಸರ್ಗದೇವತೆಯ ಮೇಲೆ ಅಪಾರ ಪ್ರೀತಿ. ಜಲವರ್ಣ ಹೆಚ್ಚಾಗಿ ಬಳಸಿಕೊಳ್ಳುತ್ತಾರೆ. ಹಾಗೆಯೇ ರಾಷ್ಟ್ರನಾಯಕರ ಭಾವಚಿತ್ರಗಳು, ಸೃಜನಶೀಲ ಪೇಂಟಿಂಗ್‌ಗಳು, ರೇಖಾಚಿತ್ರಗಳನ್ನು ಮಾಡಿದ್ದಾರೆ.

1998–99 'ಆದರ್ಶ ವಿದ್ಯಾರ್ಥಿ' ಬಿರುದು, ಎಸ್.ಜಿ. ಕಲಾ ಮಂದಿರ, ಮುದ್ದೇಬಿಹಾಳ, 1999 ರಾಯಚೂರ ಜಿಲ್ಲಾ 5ನೆಯ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗೌರವ ಪುರಸ್ಕಾರ, 2007–08 ರಾಜ್ಯಮಟ್ಟದ ಚಿತ್ರಕಲಾ ಶಿಕ್ಷಕರ ಸಹಪಠ್ಯ ಚಟುವಟಿಕೆ, ಉಡುಪಿ ಪ್ರಶಸ್ತಿ, 1999 ಚಿತ್ರಕಲಾ ಕಾರ್ಯಾಗಾರ ಮುದ್ದೇಬಿಹಾಳ ಪ್ರಥಮ ಪ್ರಶಸ್ತಿ. 2008–09 ರಾಜ್ಯಮಟ್ಟದ ಸಹಪಠ್ಯ ಚಟುವಟಿಕೆ ಬೀದರ ಪ್ರಥಮ ಪ್ರಶಸ್ತಿ. 2008–09 ಅಂತರಾಷ್ಟ್ರೀಯ ಚಿಂತನ ಸ್ಪರ್ಧೆಯಲ್ಲಿ ಬೆಸ್ಟ್ ಸ್ಟೇಟ್ ಗೈಡ್ ಟೀಚರ್ ಪ್ರಶಸ್ತಿ. 2009 ಮಂಡ್ಯದಲ್ಲಿ 11 ಕಲಾರತ್ನ ಮಾರ್ಗದರ್ಶಿ ಶಿಕ್ಷಕ ಪ್ರಶಸ್ತಿ. 2007–08 ಚಿತ್ರದುರ್ಗದಲ್ಲಿ 'ಆರ್ಗನೈಜಿಂಗ್ ಆ್ಯಂಡ್ ಗೈಡ್ ಟೀಚರ್' ಪ್ರಶಸ್ತಿ.

(ಬಿಎಸ್‌ಕೆ)


ರುದ್ರಯ್ಯ ಗಣಾಚಾರಿ: ಶಿಲ್ಪಕಲಾವಿದ. ಕಗ್ಗಲ್ಲುಗಳಲ್ಲಿ ಸುಂದರವಾದ ಮೂರ್ತಿಗಳನ್ನು ಅರಳಿಸುವದು ಭಾರತೀಯ ಶಿಲ್ಪಕಲೆಯ ವೈಶಿಷ್ಟ್ಯ. ನಮ್ಮ ಪುರಾತನ ದೇವಾಲಯಗಳು, ಬೇಲೂರು, ಹಳೇಬೀಡು, ಹಂಪಿಯ ವಿವಿಧ ಆಕಾರ, ವಿನ್ಯಾಸದ ಗೋಪುರಗಳು, ಶಿಲ್ಪಕಲಾಕೃತಿಗಳು, ಬಾದಾಮಿ, ಪಟ್ಟದ ಕಲ್ಲು, ಐಹೊಳೆ ಮುಂತಾದವುಗಳು ಕರ್ನಾಟಕದ ಚರಿತ್ರೆಯನ್ನು ವಿಶ್ವದಲ್ಲೇ ಶ್ರೀಮಂತಗೊಳಿಸಿದ ಕಲಾ ವಿಶ್ವವಿದ್ಯಾಲಯಗಳೇ ಆಗಿವೆ.

ಯಲಬುರ್ಗಾ, ಲಾಲೂರೆ ಆಡೂರ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ರುದ್ರಯ್ಯ ವೀರಭದ್ರಯ್ಯ ಗಣಾಚಾರಿ ಶಿಲ್ಪಕಲಾ ಪರಂಪರೆಯನ್ನು ಮುಂದುವರೆಸಿಕೊಂಡು ತಾಲ್ಲೂಕಿನಲ್ಲಿ ದೇವರ ಮೂರ್ತಿಗಳನ್ನು ಕೆತ್ತುವ ಪ್ರಸಿದ್ಧ ಶಿಲ್ಪ ಕಲಾವಿದ. ಇವರ ಕಲೆಗಾರಿಕೆಯಲ್ಲಿ ಸಿದ್ಧವಾದ ಸುಂದರ ದೇವರ ಮೂರ್ತಿಗಳು, ಪ್ರತಿಷ್ಠಾಪನೆಗೊಂಡು ಇಂದು ನಿತ್ಯ ಪೂಜೆ ಗೊಳ್ಳುತ್ತಿವೆ.

ಹಂಪಿ ವಿ.ವಿ.ದಲ್ಲಿ ಮೂರು ವರ್ಷ, ಕುವೆಂಪು ವಿ.ವಿ.ಯಲ್ಲಿ ಮೂರು ವರ್ಷ ಶಿಲ್ಪಕಲೆಯನ್ನು ಕಲಿತು, ಈಗ ತಮ್ಮ ಸ್ವಂತ ಊರಲ್ಲಿಯೇ ಶ್ರೀ ವೀರಭದ್ರೇಶ್ವರ ಶಿಲ್ಪಕಲಾ ಮಂದಿರ ನಿರ್ಮಿಸಿಕೊಂಡಿದ್ದಾರೆ. ಇವರು ಕಲ್ಲಿನಲ್ಲಿ ಅಷ್ಟೆ ಅಲ್ಲ, ಸಾಬೂನಿನಲ್ಲಿ ಚಿಕ್ಕಚಿಕ್ಕ ದೇವರ ಮೂರ್ತಿಗಳನ್ನು ಮಾಡುತ್ತಾರೆ. ಕಟ್ಟಿಗೆಯಲ್ಲಿಯೂ ಅಂದವಾದ ಚಿತ್ತಾರಗಳನ್ನು ಬಿಡಿಸುತ್ತಾರೆ.

(ಬಿಎನ್‌ಬಿ)

ರುಮಾಲು (ಪಟಗಾ): ಗಂಡಸರು ಸುತ್ತುವ ಪಟಗಾ ಹೈದ್ರಾಬಾದ್ ಕರ್ನಾಟಕದ ವಿಶೇಷ ಶಿರೋ ವೇಷ. ಇದನ್ನು ರುಮಾಲು, ಮುಂಡಾಸು ಎಂದೆಲ್ಲಾ ಕರೆಯುತ್ತಾರೆ. ಈ ಪಟಗಾಗಳಲ್ಲೂ ನಾನಾ ನಮೂನೆಗಳಿವೆ. ಹಿಂದೆ ಜರದ ಪಟಗಾಗಳಿದ್ದುವು. ಅಡ್ಡ ಉದ್ದ ಗೆರೆಗಳಿದ್ದು ಶರಗಿನಲ್ಲಿ ಸುಂದರ ಚಿತ್ರಗಳನ್ನು ನೇಯ್ದಿರುತ್ತಿದ್ದು ಕೆಂಪು ಬಣ್ಣದ್ದಾಗಿರುತ್ತಿದ್ದವು. ಇಂದು



ರುಮಾಲು (ಪಟಗಾ)

ಈ ಪಟಗಾ ನೋಡಲು ಸಿಗುವುದಿಲ್ಲ. ಎಷ್ಟೋ ಮಂದಿ ಅದರಲ್ಲಿರುವ ಜರಕ್ಕಾಗಿ ಅದನ್ನು ಮಾರಿಕೊಂಡಿದ್ದಾರೆ. ಇದರ ನಂತರದ ಸ್ಥಾನ ರೇಷಿಮೆ ಪಟಗಾಕ್ಕಿದೆ. ಶ್ರೀಮಂತರು, ವತನ ದಾರರು, ಪೈಲವಾನರು ಈಗಲೂ ಈ ಪಟಗಾಗಳನ್ನು ಧರಿಸು ತ್ತಿರುವುದನ್ನು ಕಾಣಬಹುದು. ಸಾಮಾನ್ಯ ರೈತರು ಕಚ್ಚಾ ರೇಷ್ಮೆ ಅಥವಾ ಕೃತಕ ರೇಷ್ಮೆಯಿಂದ ತಯಾರಿಸಿದ ಪಟಗಾಗಳನ್ನು ಈಗಲೂ ಸುತ್ತುತ್ತಾರೆ. ಉತ್ತರ ಕರ್ನಾಟಕದಲ್ಲಿ ಹಳದಿ ಬಣ್ಣದ ಪಟಗಾಗಳು ಬಳಕೆಯಲ್ಲಿದ್ದರೆ, ಹೈದರಾಬಾದ ಕರ್ನಾಟಕದಲ್ಲಿ ಕೆಂಪು ಬಣ್ಣದ ಪಟಗಾಗಳು ಬಳಕೆಯಲ್ಲಿವೆ. ನೀಲಿ ಅಥವಾ ಕಪ್ಪು, ಬಣ್ಣದ ಅಡ್ಡ-ಉದ್ದ ಗೆರೆಗಳಿರುವ ಬಿಳಿ ಪಟಗಾಗಳು ಇದ್ದು ಇವುಗಳನ್ನು 'ಕಡ್ಡಿ ಪಟಗಾ' ಎಂದು ಕರೆಯುತ್ತಾರೆ. ಸ್ವಾಮಿ ಗಳು, ವಿರಕ್ತರು ಖ್ಯಾವಿ ಬಣ್ಣದ ಪಟಗಾ ಬಳಸುವರು. ದಿನನಿತ್ಯದ ಬಳಕೆಯಲ್ಲಿ ಮಲ್ಲು ಮತ್ತು ಮಂಜದಪಾಟ ಬಟ್ಟೆಯ ಪಟಗಾ ಗಳೇ ಹೆಚ್ಚು.

ಐದಾರು ಮಾರಿನ ಉದ್ದದ ಈ ಪಟಗಾಗಳನ್ನು ಸುತ್ತಿಕೊಳ್ಳು ವುದು ಒಂದು ಕಲೆ. ವಾರಿರುಮ್ಮಾಲ್, ತಳವಾರ್ ಕಟ್, ಗೋಟ ರೀತಿ ಇನ್ನೂ ಮುಂತಾದ ರೀತಿಗಳಲ್ಲಿ ಅವುಗಳನ್ನು ಸುತ್ತಿಕೊಳ್ಳು ತ್ತಾರೆ. ಈ ಪಟಗಾ ಸುತ್ತಿಕೊಳ್ಳುವವರಿಗೆ ಆ ಕಲೆ ಕರಗತ ವಾಗಿರುತ್ತದೆ. ಅವರವರ ಶೈಲಿಗೆ ಅನುಗುಣವಾಗಿ ಅದು ಸುತ್ತಲ್ಪಡುತ್ತದೆ. ಈ ಪಟಗಾದ ಶರಗು ಅಥವಾ ಚುಂಗನ್ನು ಕೆಲವರು ಮೊಳವುದ್ದ ಬೆನ್ನ ಮೇಲೆ ಬಿಟ್ಟಿರುತ್ತಾರೆ. ಹೆಂಗಸರ ಹೆಳಲಿನ ರೀತಿಯಲ್ಲಿ ಅದು ಇರುತ್ತದೆ. ಬೇಕೆಂದಾಗ ಅದನ್ನು ಎದೆಯ ಮುಂದೆಯೂ ಹಾಕಿಕೊಳ್ಳಬಹುದು. ಇನ್ನು ಕೆಲವರು ಶರಗನ್ನು ಹಿಂದಿನಿಂದ ಬಂಧ ಹಾಕುತ್ತಾರೆ. ಈ ಶರಗು ಕರವಸ್ತ್ರ ರೂಪದಲ್ಲಿಯೂ ಉಪಯೋಗಿಸಲ್ಪಡುತ್ತದೆ. ಶರಗನ್ನು ಬಿಡದೆ ಸುತ್ತಿಕೊಳ್ಳುವ ಇನ್ನೊಂದು ಪಟಗಾವಿದ್ದು ಅದನ್ನು ಹೆಚ್ಚಾಗಿ ರುಮಾಲು ಎಂದು ಕರೆಯುತ್ತಾರೆ. ಅದನ್ನು ಹೆಚ್ಚಾಗಿ ಧಾರ್ಮಿಕ ವೃತ್ತಿಯುಳ್ಳವರು, ವಯಸ್ಸಾದವರು ಬಳಸುತ್ತಾರೆ. ಈ ಪಟಗಾದ ಸುತ್ತಿನಲ್ಲಿ ನೆತ್ತಿಯ ಮೇಲೆ ತಮ್ಮ ತಮ್ಮ ತಲಬಿನ ಚೀಲಗಳನ್ನು ಸಿಕ್ಕಿಸಿಕೊಳ್ಳುತ್ತಾರೆ. ಈಚೆಗೆ ಈ ಪಟಗಾಗಳು ಮಾಯವಾಗುತ್ತಿವೆ.

ಹೈದ್ರಾಬಾದ್ ಕರ್ನಾಟಕದಲ್ಲಿ ಮದುವೆ ಸಂದರ್ಭದಲ್ಲಿ ಈ ಪಟಗಾ ಸುತ್ತುವ ಪದ್ಧತಿಯನ್ನು ಈಗಲೂ ಪಾಲಿಸುತ್ತಾರೆ. ಮದುವೆಯಂತೆ ಮಸಣ ಕಾಲದಲ್ಲೂ ಈ ಪಟಗಾದ ಉಪ ಯೋಗ ಈಗಲೂ ಇದೆ. ಸತ್ತ ವ್ಯಕ್ತಿ ಪಟಗಾ ಸುತ್ತಲಿ ಬಿಡಲಿ ಸುತ್ತಾಗ ಈ ಪಟಗಾ ಶವದ ಮೇಲೆ ಶೃಂಗಾರಗೊಳ್ಳುತ್ತಿದೆ.

(ಎಂಬಿಎಚ್)


ರೆ

ರೆಹಮಾನ್ ಪಟೇಲ್: ಕಲೆಯನ್ನು ಅಳವಡಿಸಿಕೊಂಡು ಕಲೆ ಯನ್ನು ಆರಾಧಿಸಿ, ಕಲಕೆಗಾರರನ್ನು ಪ್ರೋತ್ಸಾಹಿಸುವುದು ದೊಡ್ಡ ಕೆಲಸ. ಅಂತಹ ಕೆಲಸವನ್ನು ಮಾಡುವ ವಿರಳರಲ್ಲಿ ರೆಹಮಾನ ಪಟೇಲ ಕೂಡಾ ಒಬ್ಬರು. ಸ್ವತಃ ಕಲಾವಿದರಾದ ರೆಹಮಾನರು ರಾಯಲ್ ಅಕಾಡೆಮಿ ಮೂಲಕ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ ನೀಡಿದ ಪ್ರಶಸ್ತಿಗೆ ಲೆಕ್ಕವಿಲ್ಲ. ಪ್ರತಿವರ್ಷ ಸುಮಾರು ಒಂದು ಲಕ್ಷ ರೂಪಾಯಿಯನ್ನು ಕಲಾವಿದರಿಗೆ ಖರ್ಚು ಮಾಡುತ್ತಾರೆ ಅಂತಹ ಅಪರೂಪದ ಕಲಾವಿದ ರೆಹಮಾನ.

ಇವರು ಸಹನಶೀಲ ಮತ್ತು ಸೃಜನಶೀಲ ಕಲಾವಿದ ಯಾವ ವರ್ಗಗಳಲ್ಲಿ ಗುರುತಿಸಿಕೊಳ್ಳದ ಕಲೆಯ ಮಾರ್ಗದಲ್ಲಿ ಅನ್ವೇಷಣೆ ಮಾಡುತ್ತಿರುವ ಪ್ರಯೋಗಶೀಲ ಮೂರ್ತಚಿತ್ರಗಳನ್ನು ಕೃತಿಗಿಳಿಸು ವಲ್ಲಿ ಸಿದ್ಧಹಸ್ತ ಅಕಾಡೆಮಿ ಮಾಡುವ ಕೆಲಸವನ್ನು ರೆಹಮಾನ ಮಾಡುತ್ತಾರೆ. ಗೌರವ ಪ್ರಶಸ್ತಿಗೆ 5000 ಸಾವಿರ ನೀಡಲು ವಸೂಲಿ ಬಾಜಿ ಬಯೋ ಡಾಟ್ ಕೇಳುವ ಅಕಾಡೆಮಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಕಲಾವಿದ ರನ್ನು ಗುರುತಿಸಿ ರಾಯಲ್ ಅಕಾಡೆಮಿ ಮೂಲಕ ಹೆಚ್ಚು ಗೌರವಧನ ನೀಡುತ್ತಾರೆ.



ಇನ್ನೊಬ್ಬರಲ್ಲಿ ಇರುವ ಕಲೆಯನ್ನು ಗುರುತಿಸಿಸುವ ಸಹೃ ದಯತೆ ರೆಹಮಾನನಲ್ಲಿ ಇದೆ. ರೆಹಮಾನ ಯುವ ಕಲಾವಿದರ ಸಾಲಿನಲ್ಲಿ ಮಂಚೂಣಿಯಲ್ಲಿ



'ಅಬ್ ಸ್ಟ್ರಾಕ್ಟ್' ಅಕ್ರೇಲಿಕ್ ಮಾಧ್ಯಮ

ಇರುವವರು. ಈಚೆಗೆ ಬೀದರ್‌ನ ಗರಿ ಬಿದ್ರಿ ಕಲೆ ಬಗ್ಗೆ ಸಮಗ್ರ ಮಾಹಿತಿ ಒಳಗೊಂಡ 'ಬಿದ್ರಿ ಕಲೆ ಅಧ್ಯಯನ' ಎಂಬ ಪ್ರೌಢ ಪ್ರಬಂಧಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಕಲಾವಿದನಾಗಿ, ಸಂಶೋಧಕ, ಕಲಾಕೃತಿ ಸಂಗ್ರಹಕಾರನಾಗಿ ಹೆಸರು ಮಾಡಿದ್ದಾರೆ. ಶಹಾಬಾದದ ಗೋಳಾ ಕೆ. ಗ್ರಾಮದವರಾದ ಪಟೇಲ ಎಂ.ಎಫ್.ಎ ಪದವಿದರರು. ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಯಿಂದ ಎರಡು ವರ್ಷ ಫೆಲೋಶಿಪ್ ಪಡೆದಿದ್ದಾರೆ. ನಾಗಪುರದಲ್ಲಿ ನಡೆದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಹಾಗೂ ವಿವಿಧ ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ. ಮುಂಬಯಿ, ಹೈದ್ರಾಬಾದ, ದೆಹಲಿ, ನಾಗಪುರ, ರಾಜಮಂಡ್ರಿ, ಗುಲಬರ್ಗಾದಲ್ಲಿ ನಡೆದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಮೆಚ್ಚುಗೆ ಗಳಿಸಿದ್ದಾರೆ.

ರೆಹಮಾನ ಅಬಾಸ್ಟ್ರಾಕ್ಟ್ (ಅಮೂರ್ತ ಕಲೆ) ಕಲೆಗಳಲ್ಲಿ ನೈಪುಣ್ಯ ಪಡೆದವರು. ತಮ್ಮ ಅಗಾಧವಾದ ಕಲ್ಪನೆಯಲ್ಲಿ ಮನುಷ್ಯನ ವಿವಿಧ ಭಾವಭಂಗಿ ಜೊತೆ ಆತನ ನಿತ್ಯದ ಸಾಮಾಜಿಕ ಜನಜೀವನವನ್ನು ಚಿತ್ರಿಸುತ್ತಾರೆ. ಇವರ ಕಲೆಯಲ್ಲಿ ಪಕ್ವತೆ ಕಂಡುಬರುತ್ತದೆ. ಬಣ್ಣಗಳ ಸಂಯೋಜನೆಯಿಂದ ಚಿತ್ರಗಳು ಸುಂದರತೆಯನ್ನು ಪಡೆಯುತ್ತವೆ. ಅದು ವೃತ್ತಿಯಾದರೂ ಹವ್ಯಾಸ ಯುವ ಕಲಾವಿದರ ಶಿಬಿರಗಳನ್ನು ಏರ್ಪಡಿಸಿ, ಅಲ್ಲಿ ಬರುವ ಚಿತ್ರಗಳನ್ನು ಪ್ರದರ್ಶಿಸಿ, ತಜ್ಞರಿಂದ ಆಯ್ಕೆ ಮಾಡಿಸಿ ಪ್ರಶಸ್ತಿ ನೀಡುತ್ತಾರೆ. ಈ ಭಾಗದ ಕೆಲವೇ ಕೆಲವು ಕ್ರಿಯಾಶೀಲ ಕಲಾವಿದರಲ್ಲಿ ಒಬ್ಬರಾಗಿ ಅನೇಕ ಸ್ಮರಣೀಯ ಕಾರ್ಯ ಮಾಡಿದ್ದಾರೆ. ರೆಹಮಾನ ಅವರ ಅಮೂರ್ತ ಶೈಲಿಯ ಕಲೆಗಳನ್ನು ವಿದೇಶಗಳಲ್ಲಿಯ ರಿಚರ್ಡ್ ಹಾರ್ಲ್‌ಬ್ರೂಕ್ (ಪ್ಯಾರಿಸ್), ಮೈಕೆಲ್ ನರಟೋನ್ (ಲಂಡನ್), ಸಿಂಗುಲಸ್ ಟೆಕ್ನಾಲಜಿ (ಜರ್ಮನಿ) ಅಮೆರಿಕಾದ ಖಾಸಗಿ ಸಂಸ್ಥೆಗಳ ಸಂಗ್ರಹದಲ್ಲಿ ಚಿತ್ರಕೃತಿಗಳು ಇವೆ. 1997ರಲ್ಲಿ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ ನಾಗಪುರ ಆಯೋಜಿಸಿದ 11ನೇ ಅಖಿಲ ಭಾರತ ಕಲಾ ಸ್ಪರ್ಧೆ ಹಾಗೂ ಪ್ರದರ್ಶನದಲ್ಲಿ ವಿಶೇಷ ಪ್ರಶಸ್ತಿ, 2002ರಲ್ಲಿ ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್ ಕಲ್ಚರ್ ಹಾಗೂ ಲಿಟರೇಟರ್ ಆಯೋಜಿಸಿದ ರಾಷ್ಟ್ರಮಟ್ಟದ ಕಲಾ ಪ್ರದರ್ಶನದಲ್ಲಿ ಪ್ರಥಮ ಪ್ರಶಸ್ತಿ ಸೇರಿ ಮೂರು ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿದ್ದಾರೆ. 2011ರಲ್ಲಿ ಚೌಹಾನ ಶಿಕ್ಷಣ ಹಾಗೂ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಶಾಹಾಬಾದರವರು ರೆಹಮಾನ ಪಟೇಲರ ಕಲಾ ಕ್ಷೇತ್ರದಲ್ಲಿನ ಸಾಧನೆ ಹಾಗೂ ಸೇವೆ ಸಲಿಸಿದ್ದನ್ನು ಗುರುತಿಸಿ ಯುವ ಪ್ರಶಸ್ತಿಯಿಂದ ಗೌರವಿಸಿದರು. ಅದೇ ರೀತಿ 1993ರಿಂದ ಬೆಂಗಳೂರು ಶಹಾಬಾದ, ಗುಲಬರ್ಗಾ, ನಾಗಪೂರ, ರಾಜಸ್ತಾನ, ತುಮಕೂರು, ಹಾಗೂ ಬಿಜಾಪುರನಲ್ಲಿ ನಡೆದ ರಾಜ್ಯ ಹಾಗೂ ರಾಷ್ಟ್ರ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರದರ್ಶನವನ್ನು ನೀಡಿದ್ದಾರೆ.

ಇದುವರೆಗೆ ಸುಮಾರು 23 ಗುಂಪು ಕಲಾಪ್ರದರ್ಶನಗಳು ಬೆಂಗಳೂರು, ನವದೆಹಲಿ, ಬಿಜಾಪುರ, ಮುಂಬಿಯಿ, ಜೈಪುರ, ಚಂಡಿಗಡ್, ಹಾಗೂ ಜಲಂಧರ್‌ನಲ್ಲಿ ಭಾಗವಹಿಸಿದ್ದಾರೆ.

ಇವರ ಪೇಂಟಿಂಗ್ ಕೃತಿಗಳು ದೇಶ ಹಾಗೂ ವಿದೇಶಗಳಲ್ಲಿ ಸಂಗ್ರಹವಾಗಿವೆ. ಅದರಲ್ಲಿ ವಿಶೇಷವಾಗಿ ದಕ್ಷಿಣ ಮಧ್ಯವಲಯ ಸಂಸ್ಕೃತಿಕ ಕೇಂದ್ರ ನಾಗಪುರ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ದೆಹಲಿ, ಹಾಗೂ ಕರ್ನಾಟಕ ಉರ್ದು ಅಕಾಡೆಮಿ ಬೆಂಗಳೂರಿನಲ್ಲಿ ಕಂಡು ಬರುತ್ತವೆ. ಇವರು ಬರೆದಿರುವ ಲೇಖನಗಳು ಇಂಗ್ಲೀಷ ಹಾಗೂ ಕನ್ನಡ ಪತ್ರಿಕೆ ಪುಸ್ತಕ ಹಾಗೂ ಸ್ಮರಣ ಸಂಚಿಕೆಗಳಲ್ಲಿ ಪ್ರಕಟಣೆಗೊಂಡಿವೆ. ಇವರ ಜೀವನ ಹಾಗೂ ಕಲಾಕೃತಿಗಳ ಕುರಿತು ಕನ್ನಡ ಹಾಗೂ ಇಂಗ್ಲೀಷ ಪತ್ರಿಕೆ ಹಾಗೂ ಮ್ಯಾಗಜಿನ್‌ಗಳಲ್ಲಿ ಹಲವಾರು ಲೇಖನಗಳು ಪ್ರಕಟವಾಗಿವೆ.

ಇವರ ಪತ್ನಿ ಸೈಯದ್ ಸೀಮಾ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅದರ ಜೊತೆಗೆ ಇವರಿಗೆ ಎರಡು ಮುದ್ದು ಮಕ್ಕಳು ಐಷಾ ಹಾಗೂ ಹಫ್ಸಾ ಇದ್ದಾರೆ. ಇಂತಹ ಕಲಾವಿದರನ್ನು ಗುರುತಿಸಬೇಕಾದ ಜರೂರು ಇದೆ. (ಎಸ್‌ಪಿ)

ರೇ

ರೇಖಾ ಚಿತ್ರಕಲೆ: ಮಾನವನ ಸೃಜನಶೀಲ ಮನಸ್ಸು ಅಭಿವ್ಯಕ್ತಿಗಾಗಿ ಕಂಡುಕೊಂಡು ಹಲವಾರು ಮಾಧ್ಯಮಗಳಲ್ಲಿ ಚಿತ್ರಕಲೆಯೂ ಒಂದು. ಸಾಹಿತ್ಯ, ನೃತ್ಯ, ಸಂಗೀತ, ನಾಟ್ಯ, ಶಿಲ್ಪ ಮುಂತಾದ ಅಭಿವ್ಯಕ್ತಿ ಮಾಧ್ಯಮದ ಕಲೆಗಳಿಗಿಂತ ಚಿತ್ರಕಲೆ ತುಂಬಾ ವಿಶಿಷ್ಟವಾದ ದೃಶ್ಯಮಾಧ್ಯಮ. ಇದರಲ್ಲಿ ಎರಡು ಪ್ರಮುಖವಾದ ಭಾಗಗಳಿವೆ. ಒಂದು ರೇಖಾಚಿತ್ರಕಲೆ ಇನ್ನೊಂದು ವರ್ಣಚಿತ್ರಕಲೆ. ಇವು ಒಂದು ರೀತಿಯಲ್ಲಿ ವಾಸ್ತುಕಲೆ ಮತ್ತು ಶಿಲ್ಪಕಲೆಗಳಿದ್ದ ಹಾಗೆ. ಒಂದನ್ನು ಇನ್ನೊಂದರಿಂದ ಬೇರ್ಪಡಿಸಲಾಗದಷ್ಟು ಇವುಗಳ ಅನ್ಯೋನ್ಯತೆ ಇದೆ. ರೇಖೆ ಮತ್ತು ವರ್ಣ ಚಿತ್ರಕಲೆಯಲ್ಲಿ ಜೀವ ಮತ್ತು ಆತ್ಮವಿದ್ದಂತೆ. ಪ್ರಾಚೀನ ಕಾಲದಲ್ಲಿ ರೇಖಾಚಿತ್ರ ವರ್ಣಚಿತ್ರ ಬೇರೆ ಬೇರೆ ಎಂದು ಪರಿಗಣಿಸಿರಲಿಲ್ಲ. ಚಿತ್ರವೆಂದಾಗ ಅದೊಂದು ಸಮಗ್ರ ರಚನೆ ಎಂಬ ಭಾವನೆ ಇತ್ತು. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಯಲ್ಲಿ ಹಾಗೆಯೇ ಚೈನಾ ಮತ್ತು ಜಪಾನ ಚಿತ್ರಕಲಾ ಸಂಪ್ರದಾಯದಲ್ಲಿ ಸಹ ಚಿತ್ರಕಲೆ ಎಂದರೆ ರೇಖಾಚಿತ್ರ, ವರ್ಣಚಿತ್ರಕಲೆಗಳೆರಡನ್ನು ಕುರಿತು ಇಡಿಯಾಗಿ ಅರ್ಥೈಸಲಾಗುತ್ತದೆ. ವರ್ಣಚಿತ್ರಕಲೆಯಲ್ಲಿ ಕೂಡಾ ಏಕವರ್ಣ ರೇಖಾಚಿತ್ರಗಳು, ಬಹುವರ್ಣ ರೇಖಾಚಿತ್ರಗಳು ಇದ್ದು ರೇಖಾಚಿತ್ರಕಲೆ ಬಿಡಿಯಾಗಿ ಮತ್ತು ವರ್ಣ ಮಾಧ್ಯಮದಲ್ಲಿ ಇಡಿಯಾಗಿ ಬಳಕೆಗೊಂಡು ಚಿತ್ರಕಲಾ ಮಾಧ್ಯಮದಲ್ಲಿ ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ.

ಇತ್ತೀಚಿನ ದಿನಗಳಲ್ಲಿ ರೇಖಾಚಿತ್ರಕಲೆಯೇ ಒಂದು ಸ್ವಯಂ ಪೂರ್ಣಕಲೆಯೆಂದು ಗುರುತಿಸಲಾಗುತ್ತಿದ್ದು ಇದರ ವ್ಯಾಪಕತೆಗೆ ಒಂದು ನಿದರ್ಶನವಾಗಿದೆ. ಚಿತ್ರಕಲೆಯ ಮೂಲ ಆಧಾರಸ್ತಂಭವೆ ರೇಖೆ. ಈ ರೇಖೆಗಳು ಚಿತ್ರಕಲೆಗಳು ಚಿತ್ರಕಲೆಯಲ್ಲಿ ತುಂಬಿ ಕೊಡುವ ಅರ್ಥ ಸ್ವರೂಪ, ಪ್ರಕಾರ, ಗುಣಲಕ್ಷಣ ಇತ್ಯಾದಿ ಅಂಶಗಳು ಕುತೂಹಲಕಾರಿಯಾಗಿವೆ. 'ರೇಖೆ' ಎಂಬ ಪದ ನಮ್ಮ ದೈನಂದಿನ ಬದುಕಿನಲ್ಲಿ ಬೇರೆ ಬೇರೆ ಸಂದರ್ಭದಲ್ಲಿಯೂ ಕಂಡುಬರುತ್ತದೆ. ಲಕ್ಷ್ಮಣರೇಖೆ, ಅಪ್ಪ ಹಾಕಿದ ಗೆರೆ ದಾಟಬಾರದು. ಅದೃಷ್ಟರೇಖೆ, ಬಡತನದ ರೇಖೆ, ಗರುಡರೇಖೆ, ಹಸ್ತರೇಖೆ ಇತ್ಯಾದಿಯಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ.

'ರೇಖೆ' ಎಂದರೆ ಬಿಂದುಗಳ ಚಲನೆಯಿಂದ ಉಂಟಾಗುವ ಪಥ. ಬಿಂದುವೊಂದು ಚಲಿಸಿದಂತೆ ಅದರ ಪಾತ್ರವು ರೇಖೆಯಾಗುತ್ತದೆ. ಸಂಸ್ಕೃತದ ರೇಖೆ ಕನ್ನಡದಲ್ಲಿ ಗೆರೆ ಅಥವಾ ಗೀಟು ಎಂದಾಗಿದೆ. ಇಂಗ್ಲೀಷಿನಲ್ಲಿ ಡ್ರಾಯಿಂಗ್ ಎಂದು ಇದನ್ನು ಕರೆಯಲಾಗುತ್ತದೆ. ರೇಖೆಗೆ ಉದ್ದವಿದೆ. ಆದರೆ ಅಗಲವಿಲ್ಲ. ಎರಡು ಬಿಂದುಗಳು ರೇಖೆಯ ಪರಿಮಿತಿಯಾಗಿದ್ದು, ಅದಕ್ಕೊಂದು ಸ್ಥಾನವಿದೆ ಮತ್ತು ದಿಶೆಯಿದೆ.

ಶಿಲಾಯುಗದ ಮಾನವರು ಗೋಡೆಯ ಮೇಲೆ ಮೂಳೆಗಳ ಮೇಲೆ ಮಾಡಿರುವ ಇಂತಹ ರೇಖೆ ಅಥವಾ ಗೀರುಗಳಿಗೆ ಈ ಚಿತ್ತವೃತ್ತಿಯೇ ಕಾರಣ ಅಂದರೆ ರೇಖೆ ಒಂದು ಕಲ್ಪನಾ ವಸ್ತು ಎಂದು ಭಾವಿಸಿದರೂ ಅದನ್ನು ಮಾಧ್ಯಮವೆಂದು ತೆಗೆದುಕೊಂಡಾಗ ಅದಕ್ಕೆ ಒಂದು ವಿಶೇಷ ಚೈತನ್ಯ ಇರುವ ಸಂಗತಿ ಅನುಭವಕ್ಕೆ ಬರುತ್ತದೆ. (ಒಂದು ರೀತಿಯಲ್ಲಿ) ಚಿತ್ರಕಲೆಯ ಇತಿಹಾಸ ಆರಂಭವಾಗುವುದೇ ರೇಖಾಚಿತ್ರಗಳಿಂದ.

ಪ್ರಪಂಚದ ಎಲ್ಲ ಕಡೆಯ ಚಿತ್ರಕಲೆಯು ವರ್ಣಚಿತ್ರಕಲೆ ಮೂಲತಃ ರೇಖೆಯಿಂದ ಕಲ್ಪಿತವಾದುದು. ಮುಂದೆ ಪಾಶ್ಚಾತ್ಯ ದೇಶಗಳಲ್ಲಿ ವರ್ಣಪ್ರಧಾನವಾಗಿ ಚಿತ್ರರಚನೆ ಬೆಳೆದು ಬಂದರೂ ಕೂಡ ರೇಖೆಗೆ ಇರುವ ಸ್ಥಾನ ಕಡಿಮೆಯಾಗಿಲ್ಲ. ಆದರೆ ಪೌರ್ವಾತ್ಯ ಚಿತ್ರ ಸಂಪ್ರದಾಯದಲ್ಲಿ ರೇಖೆ ಅತ್ಯವಶ್ಯಕವಾದ ಮಾಧ್ಯಮವಾಗಿದೆ. ಚಿತ್ರವು ಮೂಲತಃ ರೂಪುಗೊಳ್ಳುವುದೇ ಇಲ್ಲಿ ರೇಖೆಯಿಂದ. ಅದರ ಒಳ ವಿವರಗಳು ಎದ್ದು ಕಾಣುವುದು ಮತ್ತು ಕಲಾ ಶಿಕ್ಷಣ ಆರಂಭಗೊಳ್ಳುವುದು ರೇಖೆಗಳ ಮೂಲಕವೇ ಆಗಿದೆ.

ಭಾರತೀಯ ಚಿತ್ರಕಲೆಯಲ್ಲಿ ರೇಖೆಗೆ ಪ್ರಥಮ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಶಿಲ್ಪಶಾಸ್ತ್ರಗ್ರಂಥಗಳಲ್ಲಿ 'ರೇಖಾಂ ಪ್ರಶಂಸತಿ ಆಚಾರ್ಯ' ಎಂದು ಕರೆದಿವೆ. ಅಂದರೆ ಆಚಾರ್ಯರು ರೇಖೆಯನ್ನು ಪ್ರಶಂಸಿಸುತ್ತಿದ್ದುದನ್ನು ಅವು ತಿಳಿಸುತ್ತವೆ. ಚಿತ್ರಕರ್ಮದಲ್ಲಿ ರೇಖಾ ಪಾತ್ರವೇ ಮೊದಲ ಹೆಜ್ಜೆಯಾಗಿದೆ. ರೇಖಾಕರ್ಮದ ವಿವರಗಳನ್ನು ಚಿತ್ರಿಸುವುದಕ್ಕೆ ರೇಖಾಪಾತವೆಂದು ಹೆಸರು. ಸೂಕ್ಷ್ಮ ರೇಖೆಯನ್ನು ಚಿತ್ರಿಸಿಕೊಳ್ಳುವುದಕ್ಕೆ ಕರ್ಷಕರ್ಮ ಎಂದು ಶಾಸ್ತ್ರಗ್ರಂಥಗಳು ಕರೆದಿವೆ.

ರೇಖೆಯಲ್ಲಿ ಎರಡು ಮುಖ್ಯವಾದ ಪ್ರಕಾರಗಳಿವೆ. ಒಂದು ಸರಳರೇಖೆ ಇನ್ನೊಂದು ವಕ್ರರೇಖೆ.

ಸರಳರೇಖೆ: ಸರಳರೇಖೆಯೆಂದರೆ ಬಿಂದು ಚಲಿಸುವಾಗ ತನ್ನ ದಿಕ್ಕನ್ನು ಬದಲಾಯಿಸದೆ ನೇರವಾಗಿ ಚಲಿಸುವ ಪಥಕ್ಕೆ ಸರಳರೇಖೆ ಎನ್ನುವರು. ಇದು ದಿಗಂತದ ಗಾಂಭೀರ್ಯ, ಬೆಳವಣಿಗೆಯನ್ನು ವಿಶಾಲತೆಯನ್ನು ಪ್ರತಿನಿಧಿಸುತ್ತದೆ.

ವಕ್ರರೇಖೆ: ವಕ್ರರೇಖೆ ಎಂದರೆ ಚಲಿಸುವಾಗ ಬಿಂದು ತನ್ನ ದಿಕ್ಕನ್ನು ಬದಲಾಯಿಸುತ್ತ ಹೋಗುವಾಗ ಉಂಟಾಗುವ ಪಥಕ್ಕೆ ವಕ್ರರೇಖೆಯೆನ್ನುವರು ಇದರಲ್ಲಿ ಚಲನೆ, ಆಕರ್ಷಣೆ, ಬೆಡಗು ಬಿನ್ನಾಣಗಳಿದ್ದು, ಸೌಂದರ್ಯದ ಪ್ರತೀಕವಾಗಿ ಈ ರೇಖೆಗಳು ಚಿತ್ರಕಲೆಯಲ್ಲಿ ಬಳಕೆಯಾಗುತ್ತವೆ.

ಈ ಸರಳ ಮತ್ತು ವಕ್ರರೇಖೆಯಲ್ಲಿ ಮತ್ತೆ ಹಲವು ವಿಧಗಳಿವೆ. ಲಂಬರೇಖೆ, ಕ್ಷಿತಿಜರೇಖೆ, ಬಾಗುರೇಖೆ, ದಾಟುರೇಖೆ, ಕಂಸರೇಖೆ, ಗೊಂದಲಮಯರೇಖೆ, ವಲಯರೇಖೆ, ದಪ್ಪರೇಖೆ, ನಾಜೂಕು ರೇಖೆ, ಅಂಕುಡೊಂಕುರೇಖೆ, ತುಂಡುರೇಖೆ, ಗೀಚುರೇಖೆ ಮುಂತಾದವು.

ಲಂಬರೇಖೆ: ಲಂಬರೇಖೆಯು ಭೂರೇಖೆಗೆ ಲಂಬವಾಗಿದ್ದು ಕಲಾಕೃತಿಯನ್ನು ಕೆಳಭಾಗದ ತಳದಿಂದ ಮೇಲ್ಭಾಗದವರೆಗೆ

ವೀಕ್ಷಿಸಿದಾಗ ಲಂಬರೇಖೆಯ ಬಗ್ಗೆ ಕಲ್ಪನೆಯಾಗುತ್ತದೆ. ಇದು ದೃಢತೆ ಮತ್ತು ಸ್ಥಿರತೆ, ಅಲ್ಲಾಡದಿರುವಿಕೆ, ದಿಟ್ಟತನ, ಗಂಭೀರತೆ, ನಿಶ್ಚಲತೆಯ ದ್ಯೋತಕವಾಗಿದೆ.

ಕ್ಷಿತಿಜರೇಖೆ: ಕ್ಷಿತಿಜರೇಖೆಯೂ ದರ್ಶಕನ ದೃಷ್ಟಿಯ ತುತ್ತ ತುದಿಯ ರೇಖೆಯಾಗಿದೆ. ಭೂಮಿ ಮತ್ತು ಆಕಾಶ ಒಂದಕ್ಕೊಂದು ಕೂಡುವಂತೆ ಕಾಣುವ ಸರಳ ಕಾಲ್ಪನಿಕ ರೇಖೆಯಾಗಿದ್ದು ಇದು ಯಾವಾಗಲೂ ಭೂರೇಖೆಗೆ ಸಮಾನಾಂತರವಾಗಿರುತ್ತದೆ. ಪ್ರಶಾಂತತೆ, ವಿಶಾಲತೆ ಮತ್ತು ಶಾಂತಿಯ ಲಕ್ಷಣವನ್ನು ಈ ರೇಖೆ ಹೊಂದಿದೆ.

ಬಾಗುರೇಖೆ: ಬಾಗುರೇಖೆಯು ಭೂರೇಖೆ ಮತ್ತು ಲಂಬ ರೇಖೆಗೆ ಓರೆಯಾಗಿರುವ ರೇಖೆಯಾಗಿದೆ. ಇದು ವಿನಯತೆ, ಅಸ್ಥಿರತೆ ಮತ್ತು ಚಂಚಲತೆಯನ್ನು ಹಾಗೂ ಚಲನೆಯನ್ನು ಪ್ರತಿನಿಧಿಸುತ್ತದೆ.

ದಾಟುರೇಖೆ: ಎರಡು ರೇಖೆಗಳ ಘರ್ಷಣೆಯಿಂದ ಉಂಟಾಗುವ ರೇಖೆಯಿಂದಾಗಿದ್ದು, ಸಿಟ್ಟು, ಭಯ, ಭೀತಿಯ ಪ್ರತೀಕವಾಗಿದೆ.

ಕಂಸರೇಖೆ: ಇದು ವೃತ್ತದ ಒಂದು ಭಾಗವಾಗಿದ್ದು ಕಂಸ ರೇಖೆಗಳನ್ನು ಪೂರ್ಣಗೊಳಿಸುವದರಿಂದ ವೃತ್ತದ ಕಲ್ಪನೆಯಾಗುತ್ತದೆ. ವೃತ್ತವು ಐಕ್ಯತೆ ಮತ್ತು ಏಕತೆಯ ಸಂಕೇತವಾಗಿದೆ.

ಗೊಂದಲಮಯರೇಖೆ: ಗೊಂದಲಮಯ ರೇಖೆಗಳಲ್ಲಿ ಪ್ರಾರಂಭ ಮತ್ತು ಮುಕ್ತಾಯದ ಚಿಹ್ನೆಗಳು ಕಾಣದೆ ಇರುವಂತೆ ಇದು ಒಂದನ್ನೊಂದು ಹೆಣೆದುಕೊಂಡಿರುತ್ತದೆ. ಅಥವಾ ಸುರುಳಿ ಸುತ್ತಿದಂತೆ ದೃಶ್ಯಗಳು ಕಂಡುಬರುತ್ತವೆ. ಇಲ್ಲಿ ನೂರಾರು ಆಕಾರಗಳು ಚಲನೆಗಳು ತೊಡಕುಗಳು ಅಡಕವಾಗಿರುವುದರಿಂದ ಇದನ್ನು ಗೊಂದಲ ಮಯರೇಖೆಯೆಂದು ಕರೆಯಲಾಗುತ್ತದೆ. ಅಸ್ಪಷ್ಟತೆಯನ್ನು ಈ ರೇಖೆಗಳೂ ಪ್ರತಿನಿಧಿಸುತ್ತವೆ.

ವಲಯರೇಖೆ: ವಲಯ ರೇಖೆಗಳನ್ನು ನೀರಿನಲ್ಲಿ ಉಂಟಾಗುವ ತರಂಗದ ಅಲೆಗಳಿಗೆ ಹೋಲಿಸಲಾಗುತ್ತದೆ. ಮನಸ್ಸಿನ ಕಲ್ಪನೆಗಳನ್ನು ಇವು ಪ್ರತಿನಿಧಿಸುತ್ತವೆ. ಬಿಂದುವಿನಿಂದ ಅನೇಕ ವಲಯ ರೇಖೆಗಳು ಚಿತ್ರಕಲೆಯಲ್ಲಿ ಉತ್ಪತ್ತಿಯಾಗುತ್ತವೆ.

ದಪ್ಪರೇಖೆ: ದಪ್ಪರೇಖೆಯು ವಾಣಿಜ್ಯ (ಕಮರ್ಶಿಯಲ್) ಕಲೆಯಲ್ಲಿ ಹೆಚ್ಚಾಗಿ ಬಳಸುವುದನ್ನು ಕಾಣುತ್ತೇವೆ. ಹೆಚ್ಚು ಪ್ರಖರವಾಗಿ ಕಾಣಿಸಲು ಈ ರೇಖೆಯನ್ನು ಉಪಯೋಗಿಸಲಾಗುತ್ತದೆ. ಬೆಳಕು ಮತ್ತು ಕತ್ತಲೆ (Shade and light)ದ ಸಂಯೋಜನೆಯು ಇಲ್ಲಿ ಇದ್ದು ಪುರುಷರಿಗೆ ಹೋಲಿಕೆಯಾಗಿ ಈ ರೇಖೆಯನ್ನು ಬಳಸುವುದುಂಟು.

ನಾಜೂಕು ರೇಖೆ: ಇದನ್ನು ತಿಳಿವು ರೇಖೆಯಂತಲೂ ಕರೆಯುತ್ತಾರೆ. ನಕ್ಷೆಯ ಚಿತ್ರಗಳಲ್ಲಿ ಚಿತ್ರದ ಸೂಕ್ಷ್ಮ ವಿವರಗಳನ್ನು ಚಿತ್ರಿಸುವಲ್ಲಿ ಈ ರೇಖೆ ಬಳಕೆಯಾಗುತ್ತದೆ. ಇದು ಕೋಮಲತೆ ನಯ–ನಾಜೂಕತೆಗಳನ್ನು ಪ್ರತಿನಿಧಿಸುತ್ತಿದ್ದು ಇದನ್ನು ಸ್ತ್ರೀಗೆ ಹೋಲಿಕೆಯಾಗಿ ಹೋಲಿಸುವುದುಂಟು.

ಅಂಕುಡೊಂಕುರೇಖೆ: ಈ ರೇಖೆಗಳಲ್ಲಿ ಸ್ಥಿರತೆ ಹಾಗೂ ಚಲನೆಗಳ ಸರಿಯಾದ ಕಲ್ಪನೆಯಾಗುವುದಿಲ್ಲ. ಉರಿಯುವ ಜ್ವಾಲೆ, ಜೋರಾಗಿ ಬೀಸುವ ಗಾಳಿ, ಮಳೆಯನ್ನು ಚಿತ್ರಿಸುವ ಸಂದರ್ಭದಲ್ಲಿ ಹೆಚ್ಚಾಗಿ ಇಂತಹ ರೇಖೆಗಳು ಬಳಕೆಯಾಗುತ್ತವೆ.

ತುಂಡುರೇಖೆ: ತುಂಡುರೇಖೆಯನ್ನು ಹರಕು–ಮುರುಕು ರೇಖೆಯಂತಲೂ ಕರೆಯುತ್ತಾರೆ. ನಿರಾಶೆ, ಕಳಂಕ, ಅಸಮಾಧಾನ, ಅಸಹಾಯಕತೆ, ಕಠೋರತೆಯ ಪ್ರತೀಕವಾಗಿ ಚಿತ್ರಕಲೆಯಲ್ಲಿ ಈ ರೇಖೆಯು ಕಾಣಿಸಿಕೊಳ್ಳುತ್ತದೆ.

ಗೀಚುರೇಖೆ: ಗೀಚುರೇಖೆಗೆ ಕೊನೆ ಮೊದಲು ಇಲ್ಲದಿರುವಂತೆ ಕಾಣುವುದರಿಂದ ಮನಸ್ಸಿನ ತಳಮಳವನ್ನು ನಿರಾಶೆ, ಹತಾಶೆಯ ಭಾವನೆಗಳನ್ನು ಇದು ಪ್ರತಿನಿಧಿಸುತ್ತದೆ. ಹೀಗೆ ಪ್ರತಿಯೊಂದು ರೇಖೆ ಒಂದಲ್ಲ ಒಂದು ರೀತಿಯಲ್ಲಿ ಭಾವ ಪ್ರಚೋದಕವಾಗಿದೆ. ಅಷ್ಟೇ ಅಲ್ಲ, ರೇಖೆಗಳಿಗೆ ಒಂದು ಲಯ (rhythm) ಇರುವುದನ್ನು ಕಾಣಬಹುದಾಗಿದೆ. ಈ ರೀತಿ ರೇಖೆಗಳಲ್ಲಿನ ಅಭಿವ್ಯಕ್ತಿ ಸಾಮರ್ಥ್ಯ ಅಪರಿಮಿತವಾದುದು. ಇದರಲ್ಲಿ ಮುಖ್ಯವಾಗಿ ಐದು ಅಂಶಗಳನ್ನು ಕಾಣುತ್ತೇವೆ. 1. ರೇಖೆಯ ಭಾರ 2. ರೇಖೆಯ ದಿಕ್ಕು 3. ರೇಖೆಯ ಗುಣಧರ್ಮ 4. ರೇಖೆಯನ್ನು ಚಿತ್ರಿಸಿದ ಮಾಧ್ಯಮ 5. ರೇಖೆಯ ಮೇಲ್ಮೈ (surface) ಅಲ್ಲದೆ ಪೆನ್ಸಿಲ್, ಪೆನ್, ಚಾರ್ಕೊಲ್, ಸೀಮೆಸುಣ್ಣ, ಬ್ರಶ್, ಸ್ಕೆಚ್ ಪೆನ್ ಇತ್ಯಾದಿಗಳಲ್ಲಿ ಚಿತ್ರಿಸಿರುವ ರೇಖೆಗಳು ಪ್ರತಿಯೊಂದು ಮಾಧ್ಯಮಕ್ಕೆ ಅನುಗುಣವಾಗಿ ವಿಭಿನ್ನ ಗುಣಧರ್ಮಗಳನ್ನು ಹೊಂದಿರುತ್ತವೆ. ಅಷ್ಟೇ ಅಲ್ಲ ವಿಭಿನ್ನ ಪರಿಣಾಮಗಳನ್ನು ಮೂಡಿಸುತ್ತವೆ. ಒಂದು ನೇರರೇಖೆ ಹಾಗೂ ಬಾಗಿದ ರೇಖೆ ಅಥವಾ ತೀವ್ರತೆಯಿಂದ ಬರೆದ ರೇಖೆ ಮತ್ತು ಮಂದಗತಿಯಿಂದ ಬರೆದ ರೇಖೆ ಅವುಗಳ ಸಂಯೋಜನೆ ಹಾಗೂ ಉತ್ಪತ್ತಿ ಮಾಡುವ ಭಾವನೆಗಳು ಅರ್ಥಗಳು ಬೇರೆ ಬೇರೆಯಾಗಿಯೇ ಆಗಿರುತ್ತವೆ. ರೇಖೆಗಳಲ್ಲಿ ಜೀವಶಕ್ತಿ (Vitality) ಚಲನಶೀಲತೆ (Mobility) ಭಾವಪ್ರಕಾಶ (Expressiveness)ಗಳ ಸಂಗಮವನ್ನು ಕಾಣಬಹುದಾಗಿದೆ.

ರೇಖಾಚಿತ್ರದ ಬಳಕೆಯಲ್ಲಿ ಸಾಕಷ್ಟು ವೈವಿಧ್ಯತೆಗಳಿವೆ. ಆದರೆ ಬಳಸುವ ಬಣ್ಣ ಮಾತ್ರ ಇಲ್ಲಿ ಒಂದೇ ರೀತಿಯದಾಗಿದ್ದರೂ ಅದು ಮಾಡುವ ಪರಿಣಾಮ ತುಂಬ ಅಸದೃಶವಾದುದು. ಇಲ್ಲಿ ಬಳಸುವ ವಸ್ತು, ಕಾಗದ, ಬಟ್ಟೆ, ಗೋಡೆ, ಲೋಹದ ವಸ್ತುಗಳು ಇನ್ನೂ ಎಷ್ಟೋ ಮಾದರಿಯವು ಆಗಬಹುದು. ಲೇಖನಿ, ಬಳಪ, ಸೀಸದಕಡ್ಡಿ, ಚಾರಕೋಲ್ ಇತ್ಯಾದಿಯಾಗಿರಬಹುದು. ಅಲ್ಲದೆ ಕುಂಚದಿಂದ ಸೂಕ್ಷ್ಮ, ಅತಿಸೂಕ್ಷ್ಮವಾದ ಚಿತ್ರವಿನ್ಯಾಸಗಳನ್ನು ರಚಿಸಬಹುದಾಗಿದೆ.

ಒಂದು ಆಕೃತಿಯನ್ನು ಪೂರ್ಣವಾಗಿ ರೇಖಿಸಬಹುದು. ಇಲ್ಲವೆ ಒಡೆದು ಅತ್ಯಲ್ಪ ಸಂಖ್ಯೆಯ ರೇಖೆಗಳಲ್ಲಿ ಚಿತ್ರಿಸಬಹುದು. ಯಾವ ಅರ್ಥವನ್ನೋ ಭಾವವನ್ನೋ, ಮುಖದಲ್ಲಿ ಬೆರಳು, ಕೈಕಾಲುಗಳಲ್ಲಿ ಹೀಗೆ ಬೇರೆ ಬೇರೆ ಭಾವ–ಭಂಗಿಗಳಲ್ಲಿ ಪ್ರಧಾನವಾಗಿ ಎಷ್ಟು ಬೇಕೋ ಅಷ್ಟನ್ನೇ ಮಾತ್ರ ಚಿತ್ರಸಬಹುದು. ಒಟ್ಟು

ಆಕೃತಿಯನ್ನು ನೆರಳು/ಬೆಳಕಿನ ಛಾಯೆಯಲ್ಲಿ ಕಾಣಿಸಬಹುದು. ರೇಖಾಚಿತ್ರವನ್ನು ನೋಡಿದಾಗ ಆಕೃತಿಯೊಂದು ಸ್ಫುಟವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ ಅದರದೇ ಆದ ಒಂದು ಗುಣ ಇದೆಯೆಂಬುದು ಗಮನಿಸುವಂತಹ ಅಂಶ. ರೇಖೆಯಲ್ಲಿ ಮುಖ್ಯವಾಗಿ ಅಭಿವ್ಯಕ್ತಿಸುವುದು ಕಡಿಮೆ ಗೆರೆಗಳಲ್ಲಿ ವಸ್ತುವಿನ ಬಹು ಮುಖ್ಯವಾದ ಗುಣಲಕ್ಷಣಗಳನ್ನು ಮಾತ್ರ.

ಭಾರತೀಯ ಕಲಾವಿದರ ಬಹುಪಾಲು ಮನಸ್ಸು ರೇಖಾಚಿತ್ರಕ್ಕೆ ಹೆಚ್ಚು ಒಗ್ಗಿಕೊಂಡಿದೆ. ಕಲಾವಿದನೊಬ್ಬನನ್ನು ನಿಜಕ್ಕೂ ಬಯಲು ಮಾಡುವುದು ಈ ರೇಖಾಚಿತ್ರಗಳೇ. ಒಂದು ರೀತಿಯಲ್ಲಿ ಅದು ಅವನ ಸಹಿ ಇದ್ದಂತೆ ಕಲಾವಿದನನ್ನು ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಅವನ ರೇಖಾಚಿತ್ರಗಳನ್ನು ವಿಶ್ಲೇಷಣೆ ಮಾಡಬೇಕೆಂಬ ವಾದ ಅರ್ಥಪೂರ್ಣವಾದುದಾಗಿದೆ. ಹೀಗೆ ರೇಖಾಚಿತ್ರಗಳಲ್ಲಿ ಒಂದು ಅಂತರ್ಗತ ಚೈತನ್ಯವಿರುವುದನ್ನು ಯಾರೂ ಅಲ್ಲಗಳೆಯುವುದಿಲ್ಲ.

ಒಂದು ರೀತಿಯಲ್ಲಿ ತಾನು ಕಂಡಿದ್ದರ ಬಗ್ಗೆ ತನ್ನ ಕಣ್ಣು ಅಥವಾ ಕಲ್ಪನೆಯಿಂದ ಮೂಡಿಸಿದ ವೈಯಕ್ತಿಕ ಸೂತ್ರೀಕರಣವೇ ಈ ರೇಖಾಚಿತ್ರ ಕಲೆ ಎನ್ನಬಹುದು.

ರೇಖೆಗೆ ಮನಸ್ಸಿನ ನೈಜ ಭ್ರಾಮಕ ಕಲ್ಪನೆಗಳಿದ್ದು ಅದಕ್ಕೆ ಮೂರ್ತರೂಪ ಕೊಡುವ ಶಕ್ತಿ ಇದೆ. ಒಂದು ಸ್ಕೆಚ್ ಅಂದರೆ ಗೆರೆಯಲ್ಲಿ ಕಲಾವಿದನ ಪರಿಶೀಲನಾತತ್ವ, ತಾನು ನೋಡಿದ ವಸ್ತುವಿನ ಬಗೆಗಿನ ಅವನ ಪ್ರತಿಕ್ರಿಯೆ ಮತ್ತು ಕುಂಚ ಅಥವಾ ಪೆನ್ಸಿಲು, ಪೆನ್ನುಗಳೊಂದಿಗೆ ಬೆಸೆದುಕೊಂಡ ಅವನ ಕುಶಲತೆ ಅವನನ್ನು ದುಡಿಸಿಕೊಂಡ ರೀತಿ ಇವೆಲ್ಲ ಮುಖ್ಯವಾಗುತ್ತವೆ. ಪಾಶ್ಚಿಮಾತ್ಯರಲ್ಲಿ ಲಿಯೊನಾರ್ಡ ಡಾವಿಂಚಿ, ರಾಫೆಲ್, ರೂಬೆನ್, ಮೈಕೆಲ್ ಏಂಜಲೋ, ವ್ಯಾನ್ ಗೋ, ಇಂಗ್ರೆ, ಪಾಲ್ ಕ್ಲೀ, ಕ್ಯಾಥೆ, ಪಿಕಾಸೋ ಇತ್ಯಾದಿ ಕಲಾವಿದರು, ಭಾರತದಲ್ಲಿ ಕೆ.ಕೆ. ಹೆಬ್ಬಾರ್ ಚಾವ್ಡಾ, ಲಕ್ಷ್ಮಣಗೌಡ, ಆರ್.ಎಂ. ಹಡಪದ, ಜಯರಾಮ ಪಟೇಲ, ವ್ಹಿ.ಬಿ. ಹಿರೇಗೌಡರ, ಶಂಕರ ಪಾಟೀಲ, ಅಂದಾನಿ, ಸುಲ್ತಾನ ಅಲಿ, ಆದಿಮೂಲಂ, ಗಜ್ಜರ್, ರಾಮೇಶ್ವರ ಬ್ರೂಟಾ, ಅರ್ನವಾಜ್, ಅರ್ಪಿತಾಸಿಂಗ್ ಹೀಗೆ ರೇಖಾಚಿತ್ರದಲ್ಲಿ ಅನೇಕ ಜನರು ಕಲಾಕೃತಿ ನಿರ್ಮಾಣ ಮಾಡಿದ್ದಾರೆ. ಮಾಡುತ್ತಿದ್ದಾರೆ. ಇವರಲ್ಲಿ ಹೆಬ್ಬಾರರ ಹೆಸರು ಅಗ್ರಪಂಕ್ತಿಯಲ್ಲಿರುವುದು.

ಚಿತ್ರಕಲೆಯಲ್ಲಿ ಆಕಾರ ನಿರೂಪಿಸುವಾಗ ರೇಖಾಕೌಶಲವು ಅಗತ್ಯವಾಗುತ್ತದೆ ಮತ್ತು ರೇಖಾಕೌಶಲ್ಯವಿಲ್ಲದ ವರ್ಣಚಿತ್ರವಿಲ್ಲ. ಆದರೆ ವರ್ಣಲೇಪವಿಲ್ಲದ ಶುದ್ಧ ರೇಖಾಚಿತ್ರವಿರುವುದು ಸಾಧ್ಯವಿದೆ. ಒಟ್ಟಾರೆ ಉತ್ತಮ ರೇಖಾಚಿತ್ರವೆಂದರೆ ರೂಪವನ್ನು ವ್ಯಕ್ತಗೊಳಿಸಲು ರೇಖೆಯನ್ನು ಅರ್ಥಪೂರ್ಣವಾಗಿ ಬಳಸುವುದೇ ಆಗಿದೆ. ಹೀಗಾಗಿ ರೇಖೆಗೆ ಅದರದೇ ಆದ ವೈವಿಧ್ಯಮಯ ವರ್ತನೆಯಿದೆ, ಸ್ವತಂತ್ರ ಅಸ್ತಿತ್ವವಿದೆ. ಅಂತೆಯೇ ಅದು ಸ್ವತಂತ್ರ ಕಲೆಯಾಗಿ ಕಲಾತ್ಮಕ ಸೌಂದರ್ಯಾತ್ಮಕ ಮೌಲ್ಯವನ್ನು ಒಳಗೊಳ್ಳುತ್ತದೆ. (ಎಸ್‌ಸಿಪಿ)



ರೇಣುಕಾ ಹಾಗರಗುಂಡಗಿ: ಸುಗಮ ಸಂಗೀತ ಕಲಾವಿದರಾದ ಶ್ರೀಮತಿ ರೇಣುಕಾ ಹಾಗರಗುಂಡಗಿಯವರು 1970ರಲ್ಲಿ ಗುಲಬರ್ಗಾದ ಶ್ರೀ ಸಿದ್ರಾಮಪ್ಪ ಹಾಗೂ ಶ್ರೀಮತಿ ರತ್ನಮ್ಮ ಹಾಗರಗುಂಡಗಿ ದಂಪತಿಗಳ ಉದರದಲ್ಲಿ ಜನಿಸಿದ್ದಾರೆ. ಇವರು ಎಂ.ಎ. ಸಂಗೀತ ಪದವಿಯನ್ನು ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾಲಯ, ಖೈರಾಘಡದಿಂದ ಮತ್ತು ಎಂ.ಎ. ಚಿತ್ರಕಲೆ ಕಲಾ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಶರಣ ಬಸವೇಶ್ವರ ಮಹಾವಿದ್ಯಾಲಯದಿಂದ ಪಡೆದಿದ್ದಾರೆ.

ಹಿಂದೂಸ್ತಾನಿ, ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವ ಇವರು ಇದುವರೆಗೆ ನೂರಾರು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇವರು ಚಿಕ್ಕಂದಿನಿಂದಲೇ ತಮ್ಮ ತಾಯಿಯವರ ಜಾನಪದ ಹಾಡುಗಳಿಗೆ ಮಾರುಹೋಗಿ ಮುಂದೆ ದಿವಂಗತ ಪಂ. ಸಿದ್ಧರಾಮ ಜಂಬಲದಿನ್ನಿಯವರ ಪತ್ನಿ ಶ್ರೀಮತಿ ತಾರಾಬಾಯಿ ಜಂಬಲದಿನ್ನಿ ಹಾಗೂ ಶ್ರೀ ಚನ್ನವೀರ ಗವಾಯಿಗಳು ಗೊಬ್ಬೂರ ಮತ್ತು ಶ್ರೀಮತಿ ತಾರಾಬಾಯಿ ಕುಲಕರ್ಣಿ ಇವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ್ದಲ್ಲದೆ ರಾಯಚೂರಿನ ಡಾ. ಮಾಣಿಕರಾವ ರಾಯಚೂರಕರ್ ಅವರ ಹತ್ತಿರ ತಮ್ಮ ಅಧ್ಯಯನ ಮುಂದುವರೆಸಿದರು.

ಇವರು ಆಕಾಶವಾಣಿ ಹಾಗೂ ದೂರದರ್ಶನ ಖ್ಯಾತ ಕಲಾವಿದರಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರಿ ಹಾಗೂ ಅರೆಸರ್ಕಾರಿ ಮತ್ತು ಸಾರ್ವಜನಿಕ ಸಂಘ-ಸಂಸ್ಥೆಗಳು ಏರ್ಪಡಿಸಿದ ಸಂಗೀತ ಕಛೇರಿಗಳಲ್ಲಿ ತಮ್ಮ ಸುಗಮ ಸಂಗೀತವನ್ನು ಪ್ರಸ್ತುತ ಪಡಿಸಿದ್ದಾರೆ. ಮೈಸೂರು ದಸರಾ ಕಾರ್ಯಕ್ರಮ, ಆಕಾಶವಾಣಿ ಮತ್ತು ದೂರದರ್ಶನ ಕಾರ್ಯಕ್ರಮಗಳಲ್ಲಿ ಹಾಗೂ ನಾಡಿನ ಬೇರೆ ಬೇರೆ ಕಡೆಗಳಲ್ಲಿ ಆಯೋಜಿಸಿದ ಹಲವು ಸಂಗೀತ ಕಾರ್ಯಕ್ರಮಗಳಲ್ಲಿ ತಮ್ಮ ಗಾಯನವನ್ನು ಸುಶ್ರಾವ್ಯವಾಗಿ ಹಾಡಿ ಜನಸಾಗರವನ್ನು ತಣಿಸಿದ್ದಾರೆ. ಇವರು ಸ್ವರ ಸಂಯೋಜನೆ ಮಾಡಿದ ಸಿಡಿಯನ್ನು ಬಿಡುಗಡೆ ಮಾಡಲಾಗಿದೆ. ಸ್ಥಳೀಯ ಗುಲಬರ್ಗಾ ವಿಶ್ವವಿದ್ಯಾಲಯ ಶರಣ ಬಸವೇಶ್ವರ ಸಂಸ್ಥಾನ ನೂತನ ವಿದ್ಯಾ ಸಂಸ್ಥೆ, ಬುದ್ಧ ವಿಹಾರ ಟ್ರಸ್ಟ್, ನಾದ ಲಹರಿ ಚಾರಿಟೇಬಲ್ ಟ್ರಸ್ಟ್ ಈ ಮೊದಲಾದ ಸಂಘ-ಸಂಸ್ಥೆಗಳು ಆಯೋಜಿಸಿದ ಕಾರ್ಯಕ್ರಮಗಳಲ್ಲಿ ತಮ್ಮ ಗಾಯನವನ್ನು ಪ್ರಸ್ತುತ ಪಡಿಸಿದ್ದಾರೆ. ಹಲವು ಸಂಘ-ಸಂಸ್ಥೆಗಳು ಇವರ ಕಂಠಶ್ರೀಯನ್ನು ಮೆಚ್ಚಿ ಗೌರವಿಸಿವೆ. ಸಧ್ಯ ನಗರದ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ವ್ಹಿ.ಜಿ. ಮಹಿಳಾ



ಸಹಕಲಾವಿದರೊಂದಿಗೆ ಶ್ರೀಮತಿ ರೇಣುಕಾ ಹಾಗರಗುಂಡಗಿ

ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿನಿಯರಿಗೆ ಸಂಗೀತದ ಸೌರಭವನ್ನು ನೀಡುತ್ತಿದ್ದಾರೆ.

ಶ್ರೀಮತಿ ರೇಣುಕಾ ಹಾಗರಗುಂಡಗಿಯವರು ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಆ ಕ್ಷೇತ್ರದಲ್ಲೂ ಗಣನೀಯ ಸಾಧನೆಯನ್ನು ಮಾಡಿದ್ದಾರೆ. (ಎಸ್‌ಎಂ)

ರೇವಣಪ್ಪ ಕುಂಕುಮಗಾರ: ಇವರು 1951 ಏಪ್ರಿಲ್ 22ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪ ಗ್ರಾಮದಲ್ಲಿ ಜನಿಸಿದರು. ಚಿಕ್ಕವರಿರುವಾಗಲೇ ಮೈಲಿ ಬೇನೆಗೆ ತುತ್ತಾಗಿ ಮಾನವನ ಶ್ರೇಷ್ಠವಾದ ದೃಷ್ಟಿಯನ್ನು ಕಳೆದುಕೊಂಡರು. 1964ರಲ್ಲಿ ಗದಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಡಾ. ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರಾಗಿ ಪಿಟೀಲು ವಾದನದ ಶಿಕ್ಷಣವನ್ನು ಪ್ರಾರಂಭ ಮಾಡಿದರು. ಸಹೋದರ ಮಾವ ಲಚ್ಚಪ್ಪನವರು ಇವರಿಗೆ ಈ ಮಾರ್ಗಧಲ್ಲಿ ತುಂಬಾ ಸಹಕಾರ ಮತ್ತು ನೆರವು ನೀಡಿದರು. ನಿರಂತರ ಹತ್ತು ವರ್ಷಗಳ ಕಾಲ ಶ್ರೀ ಪುಟ್ಟರಾಜ ಗವಾಯಿಗಳಲ್ಲಿ ಸಂಗೀತ ಅಭ್ಯಾಸ ಮಾಡಿ, ಕರ್ನಾಟಕ ಸರಕಾರದ ಸೀನಿಯರ್ ಸಂಗೀತ ಪರೀಕ್ಷೆಯಲ್ಲಿ 1971ರಲ್ಲಿ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ವಿಜೇತರಾಗಿದ್ದಾರೆ ಹಾಗೂ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಾಸಾಗಿದ್ದಾರೆ. 1974ರಿಂದ 1988ರ ವರೆಗೆ ರಂಗಭೂಮಿ ಕ್ಷೇತ್ರದಲ್ಲಿ ಹಲವಾರು



ಪಂ. ಪುಟ್ಟರಾಜ ಗವಾಯಿಗಳೊಂದಿಗೆ ವಾಯೋಲಿನ್ ನೀಡುತ್ತಿರುವುದು

ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡುವುದರ ಜೊತೆಗೆ ಪಿಟೀಲು ಹಾಗೂ ಹಾರ್ಮೋನಿಯಂ ಸಾಥ್ ಮಾಡುತ್ತಿದ್ದರು.

ಇವರು 1988ರಿಂದ ಆಕಾಶವಾಣಿ ಗುಲಬರ್ಗಾ ನಿಲಯದ ಕಲಾವಿದರಾಗಿ ಸೇವೆ ಸಲ್ಲಿಸಿ 2012ರಲ್ಲಿ ನಿವೃತ್ತರಾಗಿದ್ದಾರೆ. ಇವರು ಬಾಂಬೆ, ಚೆನ್ನೈ, ಬೆಂಗಳೂರು, ಬಳ್ಳಾರಿ, ಬೀದರ, ಬಿಜಾಪುರ, ಬಾಗಲಕೋಟೆ ಅಲ್ಲದೆ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೀಡಿದ ಶ್ರೇಯಸ್ಸು ಇವರದ್ದು.


ಇವರಿಗೆ 1997ರಲ್ಲಿ ಪಂ. ಪಂಚಾಕ್ಷರಿ ಗವಾಯಿಗಳವರ ಸಂಗೀತ ಅಕಾಡೆಮಿ ಗದಗ ಇವರು 'ಕಲಾಕೇಸರಿ' (ದಿನಾಂಕ: 20.03.1997ರಲ್ಲಿ) ಎಂಬ ಬಿರುದನ್ನು ನೀಡಿ ಗೌರವಿಸಿದೆ. ರಾಜ್ಯ ಸರ್ಕಾರದಿಂದ 2002ರಲ್ಲಿ 'ರಾಜ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿದೆ. ಅಲ್ಲದೆ ಗದುಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮದಲ್ಲಿ 'ಸ್ವರ ಮಾಂತ್ರಿಕ' (31.12.2002ರಲ್ಲಿ) ಎಂಬ ಬಿರುದು, ಮತ್ತು 03.03.2003ರಲ್ಲಿ ಹಾನಗಲ್ ಕುಮಾರಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮಳಖೇಡ್ ಉತ್ಸವದ ಸಾಂಸ್ಕೃತಿಕ ಪುರಸ್ಕಾರ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಇವರ ಸಾಧನೆಗೆ ಸಂದಿವೆ.

03.03.2010ರಲ್ಲಿ ಶ್ರೀ ಗಾನ ಗಂಧರ್ವ ಕಲಾ ಟ್ರಸ್ಟ್, ಗದಗಿನ ಪಂಡಿತ್ ಪುಟ್ಟರಾಜ ಗವಾಯಿಗಳವರ 97ನೆಯ ಹುಟ್ಟು ಹಬ್ಬದ ಆಚರಣೆ ವೇದಿಕೆಯಲ್ಲಿ ವಾದ್ಯ ಕ್ಷೇತ್ರದ ಅಪೂರ್ವ ಸಾಧಕ ಪಂಡಿತ ರೇವಣಪ್ಪ ಕುಂಕುಮಗಾರ್ ಇವರಿಗೆ 'ವಾದ್ಯಶ್ರೀ' ಗೌರವ ಪ್ರಶಸ್ತಿ ನೀಡಿದೆ. (ಆರ್‌ಕೆಕೆ)

ರೇವಣಸಿದ್ದಪ್ಪ ವಿ. ಮೂಕರಂಬಿ: ಚಿತ್ರಕಲಾವಿದ. 1977 ನೆಯ ನವೆಂಬರ್ 22ರಂದು ಗುಲಬರ್ಗಾ ಜಿಲ್ಲೆ ಔರಾದ್ ಗ್ರಾಮದಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಅನಂತರ ಚಿತ್ರಕಲೆಯಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾವನ್ನು ದಿ ಐಡಿಯಲ್ ಫೈನ್ ಆರ್ಟ್ ಇನ್ಸಿಟ್ಯೂಟ್ ಗುಲಬರ್ಗಾದಿಂದ ಪಡೆದಿದ್ದಾರೆ. ಮುಂದೆ ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಿಂದ ಪಡೆದುಕೊಂಡು ನಾಡಿನ ಪ್ರತಿಭಾವಂತ ಯುವ ಚಿತ್ರಕಲಾವಿದರಲ್ಲೊಬ್ಬರಾಗಿದ್ದಾರೆ.



ಈ ಯುವ ಕಲಾವಿದರ ಹೆಚ್ಚಿನ ಕಲಾಕೃತಿಗಳು ಆರ್ಕಲಿಕ್ ಮಾಧ್ಯಮದಲ್ಲಿವೆ. ಅವುಗಳಲ್ಲಿ ರೇಖೆ, ಆಕಾರ, ವರ್ಣ ಮತ್ತು



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಮೈವಳಿಕೆಗಳನ್ನು ವಿಶಿಷ್ಟವಾಗಿ ದುಡಿಸಿಕೊಂಡಿದ್ದಾರೆ. ಹೊಸ ಹೊಸ ಪ್ರಯೋಗ ಹಾಗೂ ತಂತ್ರಗಾರಿಕೆಯಿಂದ ಕಲಾಕೃತಿಗಳನ್ನು ರಚಿಸಿ ಕಲಾ ಪ್ರೇಮಿಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಮೂಕರಂಬಿ ಅವರ ಕಲಾಕೃತಿಗಳಲ್ಲಿ ಗ್ರಾಮೀಣ ಪ್ರದೇಶದ ಮಾನವಾಕೃತಿಗಳು ವಿಕೃತ ಸೌಂದರ್ಯವನ್ನು ಅರಗಿಸಿಕೊಂಡು ಅಭಿವ್ಯಕ್ತಗೊಂಡಿವೆ.

ಪ್ರಸ್ತುತ ಬೀದರ ಜಿಲ್ಲೆಯ ಹುಮನಾಬಾದದಲ್ಲಿರುವ ವೀರಭದ್ರೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಇವರು. 2007ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2007 ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ ನಾಗಪೂರದ ಸೌಥ್ ಝೋನ್ ಕಲ್ಚರಲ್ ಸೆಂಟರ್‌ನ ಪ್ರಶಸ್ತಿಯನ್ನು ಪಡೆದಿದ್ದಾರೆ.

ಬೆಂಗಳೂರಿನಲ್ಲಿ 2003ರಲ್ಲಿ ನಡೆದ ಏಳನೆಯ ಕರ್ನಾಟಕ ಕಲಾಮೇಳ, 2005ರಲ್ಲಿ ಇಂದೂರ್‌ನಲ್ಲಿ ನಡೆದ ರಾಷ್ಟ್ರೀಯ ಕಲಾಮೇಳ, 2007ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರಿನಲ್ಲಿ ಏರ್ಪಡಿಸಿದ 36ನೆಯ ವಾರ್ಷಿಕ ಕಲಾ ಪ್ರದರ್ಶನ, 2008ರಲ್ಲಿ ಬೆಂಗಳೂರಿನ ಭಾರತೀಯ ವಿದ್ಯಾ ಭವನದಲ್ಲಿ ಅಲೆ ಸಂಸ್ಥೆ ಏರ್ಪಡಿಸಿದ್ದ 'ಆಕೃತಿ' ಚಿತ್ರಕಲಾ ಪ್ರದರ್ಶನ, 2009ರಲ್ಲಿ ಗುಲಬರ್ಗಾ ಡೆಕ್ಕನ್ ಆರ್ಟ್ ಸೊಸೈಟಿ ಏರ್ಪಡಿಸಿದ ಚಿತ್ರಕಲಾ ಪ್ರದರ್ಶನ ಹೀಗೆ ಅನೇಕ ಸಮೂಹ ಕಲಾ ಪ್ರದರ್ಶನಗಳಲ್ಲಿ ಮೂಕರಂಬಿರವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. (ಪಿಪಿ)

ರೇವಣಸಿದ್ಧಯ್ಯ ಹಿರೇಮಠ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಕಲ್ಲೂರಿನಲ್ಲಿ 01.06.1975ರಲ್ಲಿ ಜನಿಸಿದರು. ತಂದೆ ಸಿದ್ಧರಾಮಯ್ಯ. ತಾಯಿ ಸಂಗಮ್ಮ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ವಚನ ಸಂಗೀತ, ಭಾವಗೀತೆ, ಹಾಗೂ ಜನಪದ ಗೀತೆ ಇತ್ಯಾದಿ ಶೈಲಿಯಲ್ಲಿ ಪಳಗಿದವರಾಗಿದ್ದಾರೆ. ಪಂ. ಪುಟ್ಟರಾಜ ಗವಾಯಿಗಳವರಲ್ಲಿ 10 ವರ್ಷಗಳ ಕಾಲ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಅಭ್ಯಾಸ ಮಾಡಿದ್ದಾರೆ. ಇವರು ಸಂಗೀತ ಕ್ಷೇತ್ರದಲ್ಲಿ ಸಂಗೀತ ವಿಶಾರದ, ವಿದ್ವತ್, ಹಾಡುಗಾರಿಕೆ, ಹಾಗೂ ಎಂ. ಮ್ಯೂಜಿಕ್ ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ.

ಇವರು ಧಾರವಾಡ, ಗುಬಲರ್ಗಾ, ಆಕಾಶವಾಣಿ ಕೇಂದ್ರಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಬೀದರ್‌ನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಾಗೂ ಮೈಸೂರು ಉತ್ಸವ, ಮತ್ತು ಕರ್ನಾಟಕದ ಹಲವು ಕಡೆಗಳಲ್ಲಿ ಕಾರ್ಯಕ್ರಮ ನೀಡಿದ ಕೀರ್ತಿ ಇವರಿಗಿದೆ.

ಇವರ ಸಂಗೀತ ಕ್ಷೇತ್ರದ ಸಾಧನೆಯ ಹಿನ್ನಲೆಯಲ್ಲಿ ಇವರಿಗೆ ಹಲವು ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಹುಕ್ಕೇರಿಯಲ್ಲಿ ಚಂದ್ರಶೇಖರ ಶಿವಾಚಾರ್ಯ ಹಿರೇಮಠ ಸಂಸ್ಥಾನದಿಂದ 'ರೇಣುಕಾಶ್ರೀ ಪ್ರಶಸ್ತಿ', ಮಾನ್ವಿಯ ಕಲ್ಮಠ ಸ್ವಾಮಿಗಳಿಂದ ಗುಜಮಾಗಡಿಯಲ್ಲಿ ನಡೆದ ಸಂಗೀತ ಸಮಾರಂಭದಲ್ಲಿ 'ಗಾನ ಭೂಷಣ ಪ್ರಶಸ್ತಿ', ಅರಸಿಕೇರಿಯಲ್ಲಿ 'ಗಾನಕೋಗಿಲೆ ಪ್ರಶಸ್ತಿ', ಹಾಗೂ ಬಾದಾಮಿಯ ಶಿವಯೋಗ ಮಂದಿರದಿಂದ 'ಮಧುರ ಗಾಯಕ ಪ್ರಶಸ್ತಿ' ಹೀಗೆ ಹತ್ತಾರು ಪ್ರಶಸ್ತಿಗಳು ಲಭಿಸಿವೆ. ಅಲ್ಲದೆ ರಾಜ್ಯದ ಹಲವು ಸಂಘ–ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರಸಿವೆ.

ಬೀದರನಲ್ಲಿ ಸದ್ಗುರು ಸಿದ್ಧರೂಡ ಸ್ವಾಮಿ ಡಿ.ಎಡ್ ಕಾಲೇಜಿನಲ್ಲಿ ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ. (ಆಯ್‌ಕೆ)

ರೇವಣಸಿದ್ಧಯ್ಯಸ್ವಾಮಿ ಕಲ್ಲೂರ: ವಿಶೇಷವಾಗಿ ಸಂಗೀತ ಲೋಕದ ಸಾಲಿನಲ್ಲಿ ಸಂಗೀತ ಲೋಕದ ಪ್ರತಿಭಾವಂತ. ಕಲ್ಲೂರ ಗ್ರಾಮದವರು. ತಂದೆ ಸಿದ್ರಾಮಯ್ಯ ತಾಯಿ ಸಂಗಮ್ಮ. ಇವರ ಮೊದಲ ಮಗನಾಗಿ ಜನಿಸಿದರು. ಬಾಲ್ಯದಿಂದಲೇ ಅನೇಕ ಕವಿಗಳ ಹಾಡುಗಳನ್ನು ಗುನುಗುತ್ತಿದ್ದರು. ಬಾಲಕನ ಇಂಪಾದ ಧ್ವನಿಯನ್ನು ಗಮನಿಸಿದ ಇವರ ತಂದೆಯವರು, ಉಜ್ಜನಪ್ಪ ಗವಾಯಿ ಕಮಲಾಪುರ ಅವರ ಇಚ್ಛೆಯ ಮೇರೆಗೆ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಸೇರಿಸಿದರು. ಅಲ್ಲಿ ಪುಟ್ಟರಾಜ ಗವಾಯಿ ಶಿಷ್ಯರಾಗಿ ಬಿ.ಎಂ. (ಮ್ಯುಸಿಕ್)ನಲ್ಲಿ ಪದವಿ ಪಡೆದುಕೊಂಡರು.

ತಮ್ಮ ಕಂಠಸಿರಿಯಿಂದ ಯಮನ್, ಮಾಲಕೌಂಸ, ಅಲಯ ಭಿಲಾವತ, ಬಾಗೇಶ್ರೀ, ಛಾಯಾನಟ, ಗೌಡ ಸಾರಂಗ, ಬಸಂತ ಬಹಾರ, ಪ್ರರಿಯಾ ಕಲ್ಯಾಣಿ ಮುಂತಾದ ರಾಗಗಳಲ್ಲಿ ಭಾವಗೀತೆ, ಜನಪದಗೀತೆ, ಭಕ್ತಿ ಗೀತೆ, ಶರಣರ ವಚನಗಳು, ಕನಕದಾಸರ, ಪುರಂದರದಾಸರ, ಜಗನ್ನಾಥದಾಸರ, ಮಹಿಪತಿ ದಾಸರ

ಹಾಗೂ ವೆಂಕಟಾಚಲದಾಸರ ಹಾಡುಗಳಿಗೆ ರಾಗ ಸಂಯೋಜಿಸಿ ಸುಮಧುರ ಕಂಠದಿಂದ ಹಾಡತೊಡಗಿದರು. ಅವರು ಹಾಡಿದರೆ ಕೇಳುಗರು ಸಂಗೀತ ಲೋಕದಲ್ಲಿ ತಲ್ಲೀನರಾಗುವಂತೆ ಮೈಮರೆಸಿ ಬಿಡುತ್ತಾರೆ. ಸಂಗೀತದಲ್ಲಿ ವಿಶಾರದ, ಜೂನಿಯರ್, ಸೀನಿಯರ್, ವಿದ್ವತ್ ಪದವಿ ಪಡೆದು ಸಂಗೀತ ಶ್ರೀಮಂತಿಕೆ ಗಳಿಸಿದ್ದಾರೆ.

ಅಕ್ಕಮಹಾದೇವಿಯವರ ವಚನ ಬಸವಣ್ಣನವರ ವಚನ ಖಂಡೇಶ್ವರ ನಿಜಗುಣ ಶಿವಯೋಗಿಗಳ ಹಾಡುಗಳನ್ನು ಮತ್ತು ಸ್ವತಃ ತಾವೇ ಭಾವಗೀತೆ ರಚನೆ ಮಾಡಿ ಹಾಡುವರು. ಇವರ ಮೆಚ್ಚುಗೆ ಹಾಗೂ ಜನಪ್ರಿಯ ಹಾಡು ಎಲ್ಲೋ ಕಾಣದೆ ಈ ಸುಂದರ ವನ ಮತ್ತು ತೋಟದ ಸಿದ್ಧಲಿಂಗೇಶ್ವರ ದಯೇ ಮಾಡೋ ಸಿದ್ಧಲಿಂಗೇಶ್ವರ, ಅಲ್ಲದೇ ಸಂತ ಶಿಶುನಾಳ ಶರೀಫರ ಹಾಡುಗಳು ಅವರ ಕಂಠಸಿರಿಯಲ್ಲಿ ಮತ್ತಷ್ಟು ಸುಮಧುರ ವಾಗುತ್ತವೆ. (ಡಿಎಸ್‌ಸಿ)

ರೇವಣಸಿದ್ದಯ್ಯ ರುದ್ರಸ್ವಾಮಿಮಠ: ಕಲ್ಯಾಣ ಕರ್ನಾಟಕದ ಪ್ರತಿಭಾವಂತ ನಾಟಕಕಾರರಾದ ಶ್ರೀ ರೇವಣಸಿದ್ದಯ್ಯ ರುದ್ರ ಸ್ವಾಮಿಮಠರವರು ಅವಕಾಶಗಳನ್ನು ಹುಟ್ಟು ಹಾಕಿಕೊಂಡೇ ಪ್ರತಿಭೆಯನ್ನು ಬೆಳೆಸಿದವರು. ಕಲ್ಬುರ್ಗಿ ಜಿಲ್ಲೆಯಲ್ಲೇ 'ಬಹು ಮುಖ ಪ್ರತಿಭೆಯ ದಕ್ಷ ಆಡಳಿತಗಾರ' ಎಂದು ರೂಢಿ ಯೊಳಾಡುತ್ತಿದ್ದ ಜನಸಾಮಾನ್ಯರು ಇವರು ಬೆಳೆದ ಬೆಳೆಸುವ ಸಿರಿ ಯನ್ನು ಮನದುಂಬಿ ಹಾರೈಸಿದ್ದ ರಿಂದ ಇವರು ಉತ್ತಮ ಚಿತ್ರ ಕಲಾವಿದರಾಗಿ, ಕವಿಯಾಗಿ, ಸೃಜನಾತ್ಮಕ ಅನುವಾದಕರಾಗಿ, ಉರ್ದು ಕವಿಯಾಗಿ, ಶಿಕ್ಷಣ ಇಲಾಖೆಯಲ್ಲಿ ಆಡಳಿತಗಾರರಾಗಿ, ಎಲ್ಲಕ್ಕಿಂತ ಮಿಗಿಲಾಗಿ ನಾಟಕ ಕಲಾವಿದರಾಗಿ ಎಂದಿಗೂ ಜನ ಮನದಲ್ಲಿ ಅಚ್ಚಳಿದಯೇ ಉಳಿ ದವರು.



ಬಾಲ್ಯದಿಂದಲೂ ಶ್ರೀ ರೇವಣಸಿದ್ದಯ್ಯ ರುದ್ರಸ್ವಾಮಿಮಠ ಇವರು ರಂಗಾಸಕ್ತರ ಗುಂಪಿನಲ್ಲಿ ಬೆಳೆದವರು. ತಂದೆಯೂ ನಾಟಕ ಮಂಡಳಿ ಕಟ್ಟಿ, ಪರದೆ ಪರಿಕರಗಳನ್ನು ಸಂಗ್ರಹಿಸಿ, ಸುರಪುರ, ಶಹಾಪುರ, ರಾಯಚೂರುಗಳಲ್ಲಿ ನಾಟಕವಾಡಿದವರ ಮಗನಾದ್ದರಿಂದ ನಟನೆ, ನಾಟಕ ರಚನೆ, ನಿರ್ದೇಶನ, ಕಾವ್ಯ ರಂಗಕ್ಕೆ ಬೇಕಾಗಿ ಬಳಸುವ ತಂತ್ರ ಇವರಿಗೆ ಬಾಲ್ಯದಿಂದಲೇ ಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಇವರು ಗುಲಬರ್ಗಾ ಆಕಾಶವಾಣಿಯ ಒತ್ತಾಯದ ಮೇರೆಗೆ ಹತ್ತಾರು ರೇಡಿಯೋ ನಾಟಕಗಳನ್ನು ರಚಿಸಿ ಕೊಟ್ಟು ರಂಗ ಶಿಕ್ಷಣಕ್ಕೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ, ಚರಿತ್ರೆ ತಿಳಿಸಿ ಅವಕಾಶ ಮಾಡಿಕೊಟ್ಟಿದ್ದಾರೆ.

ವಿಶ್ವವಿದ್ಯಾಲಯ, ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳು ಮಾಡಬೇಕಾದ ಜವಾಬ್ದಾರಿಯುತ ಕೆಲಸವನ್ನು ಇವರು ಒಬ್ಬರೇ ಮಾಡಿದ್ದಾರೆ.

ವಿಚಾರ ಸಂಕಿರಣ, ರಂಗಾನುಭವ, ರಂಗ ತಾಲೀಮು, ಹೊಸ ಅಲೆಯ ನಾಟಕಗಳಲ್ಲಿ ಸಾಮಾಜಿಕ ಮೌಲ್ಯ, ತಂತ್ರಗಳ ಬಳಕೆ ಮತ್ತು ಸುಧಾರಣೆ ಕುರಿತು ಬರೆದಿದ್ದಾರೆ. ಅನುಭವಗಳನ್ನು ಹಂಚಿಕೊಂಡಿದ್ದಾರೆ. ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ನಾಟಕ ಗಳನ್ನು ಬರೆದು ಪ್ರಕಟಿಸಿದ್ದಾರೆ. ಹವ್ಯಾಸಿ ರಂಗಭೂಮಿಯ ಕಲಾವಿದರು ಇವರಲ್ಲಿಗೆ ಬಂದು ಇಂತಹದೇ ನಾಟಕಬೇಕೆಂದು ಬರೆಸಿಕೊಂಡು ಮನದುಂಬಿ ತಾಲೀಮು ಮಾಡಿ, ಮತ್ತೆ ಪ್ರದರ್ಶನ ನೀಡುವುದರ ಮೂಲಕ ಇವರು ರಂಗಭೂಮಿಯ ಸಂಪನ್ಮೂಲವಾಗಿದ್ದರು.

ಇವರು ಬರೆದ ಮುಖ್ಯ ನಾಟಕಗಳೆಂದರೆ 'ಸುರಪುರದ ಸಿಂಹ', 'ರಕ್ತಾಭಿಷೇಕ', ಗುರುಗವಾನ್, 'ನೆಲೆ ಮುಗಿಲು' ಮುಂತಾದವು ಒಂದೊಂದು ನಾಟಕದ ಶೈಲಿ, ತಂತ್ರ, ಮತ್ತು ಪದ ಪ್ರಯೋಗ ವಿಶಿಷ್ಟ ರೀತಿಯಿಂದ ಕಟ್ಟುವುದು ಇವರ ವಿಶೇಷತೆ. ಚಾರಿತ್ರಿಕ ನಾಟಕಗಳಾದ ಸುರಪುರ ದೊರೆಯ ಬಗ್ಗೆ ಮತ್ತು ಬೀದರನಲ್ಲಿ ಮಹಮ್ಮದ ಗವಾನ ಎಂಬ ಪರ್ಷಿಯಾ ದೇಶದ ವಿದ್ವಾಂಸ ವಿಶ್ವವಿದ್ಯಾಲಯ ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾನೆ. ಅಂತಹ ಶಿಕ್ಷಣ ತಜ್ಞರ ಬಗ್ಗೆ ಇವರು ನಾಟಕ ರಚಿಸಿ ಕೊಟ್ಟಿರುವದು ಗಮನಾರ್ಹ.

ನಾಟಕ 'ನೆಲ ಮುಗಿಲು' ಕಾವ್ಯ ರೂಪ ರಗಳೆ ಈ ರೀತಿ, ಹಳೆ ಗನ್ನಡ ನಡುಗನ್ನ ಸಾಹಿತ್ಯ ಬಳಸಿ ರಂಗ ಕೃತಿ ರಚಿಸಿದ್ದು ಕನ್ನಡ ರಂಗಭೂಮಿಗೆ ದೊಡ್ಡ ಕೊಡುಗೆ,

1987ರಲ್ಲಿ ಇವರ ನಾಟಕಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ಜಿಲ್ಲೆಯಾದ್ಯಾಂತ ಪ್ರದರ್ಶನ ನೀಡಿವೆ. ರಂಗಮಾಧ್ಯಮ ತಂಡ ಈ ಇಲಾಖೆಗೆ ಕೈ ಜೋಡಿಸಿದೆ.

ಕವಿಗಳು, ನಾಟಕ ರಚನಾಕಾರರು, ಕಲಾವಿದರು, ಆಡಳಿತ ಗಾರರು, ಅನುವಾದಕರಾದ ಶ್ರೀ ರೇವಣಸಿದ್ದಯ್ಯ ರುದ್ರಸ್ವಾಮಿ ಮಠರವರು ಇವರ ಸೇವೆಯನ್ನು ಗುರುತಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಾಟಕ ಅಕಾಡೆಮಿ, ಕರ್ನಾಟಕ ಸರ್ಕಾರ ಮತ್ತು ಜಿಲ್ಲಾ ಆಡಳಿತವಲ್ಲದೆ ಸ್ಥಳೀಯ ಸಂಘ–ಸಂಸ್ಥೆಗಳು ಇವರನ್ನು ಮನತುಂಬಿ ಕೊಂಡಾಡಿ, ಸನ್ಮಾನಿಸಿ ಗೌರವಿಸಿವೆ.

(ಎಸ್‌ಆರ್‌ಜಿ)

ರೇವಯ್ಯ ಎಂ. ವಸ್ತ್ರದಮಠ: ಸಂಗೀತಗಾರರು. ಸಂಗೀತ ಗುರು, ಸಂಸ್ಕೃತ ಪಂಡಿತರು. ಅಫಜಲ್‌ಪುರ ತಾಲ್ಲೂಕಿನ ಚೌಡಾಪುರ ದವರು. ಸ್ನಾತಕೋತ್ತರ ಪದವೀಧರರು. ಚಿಕ್ಕಂದಿನಿಂದಲೂ ಸಂಗೀತದ ಕಡೆ ಒಲವು. ಆ ಒಲವಿನಿಂದಾಗಿ ಧಾರವಾಡಕ್ಕೆ ಪಯಣ ಬೆಳೆಸಿ, ಅಲ್ಲಿ ಸಂಗೀತಕ್ಕಾಗಿ ತಮ್ಮನ್ನು ಸಮರ್ಪಿಸಿ ಕೊಂಡು ಮೂರು ವರ್ಷಗಳಕಾಲ ಶಿವಯ್ಯ ಸ್ವಾಮಿರವರ ಶಿಷ್ಯತ್ವ



ಪಡೆದರು. ಅನಂತರ ಹೆಚ್ಚಿನ ಜ್ಞಾನಾರ್ಜನೆಗಾಗಿ ಬಸವರಾಜ ರಾಜಗುರು ಅವರ ಶಿಷ್ಯರಾದರು. ಸಂಗೀತ ಪ್ರಪಂಚದಲ್ಲಿ ಅಪಾರ ಹೆಸರು ಮಾಡಿರುವ ಪುಟ್ಟರಾಜ ಗವಾಯಿಗಳ ಹತ್ತಿರವೂ ಸಂಗೀತಾಭ್ಯಾಸ ಮಾಡಿದರು.

ಇವರು ವಿದ್ಯಾರ್ಥಿಯಾಗಿದ್ದಾಗಲೇ ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನವನ್ನು ಪಡೆದುಕೊಂಡವರು. 1983ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಏರ್ಪಡಿಸಿದ ರಾಜ್ಯ ಮಟ್ಟದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಹಾರ್ಮೋನಿಯಂನ ಮೇಲೆ ಬೆರಳಾಡಿಸಿದಾಗ, ಕೇಳಲು ಬಹಳ ಸಂತೋಷವಾಗುತ್ತದೆ. ಅಂಥ ಹಾರ್ಮೋನಿಯಂ ಮಾಂತ್ರಿಕ ರಿವರು.

ಹೆಸರಾಂತ ಗವಾಯಿಗಳಾದ ಮಲ್ಲಿಕಾರ್ಜುನ ಮನಸೂರು, ಬಸವರಾಜ ರಾಜಗುರು ಅವರಿಗೂ ಇವರು ಹಾರ್ಮೋನಿಯಂ ಸಾಥ್ ನೀಡಿದ್ದಾರೆ. ಪ್ರಭಾ ಅತ್ರೆ, ಮತ್ರಿಗಟ್ಟಿ ಭೀಮಶಂಕರ, ಮಾಧವ ಗುಡಿ, ವೆಂಕಟೇಶಕುಮಾರ ಹೀಗೆ ಹೆಸರುವಾಸಿಗಳಿಗೆ ಸಾಥ್ ನೀಡಿರುವದನ್ನು ಹೇಳುತ್ತಾ ಹೋಗಬಹುದು. ಅವರೆಲ್ಲರಿಗೂ ಹಾರ್ಮೋನಿಯಂ ಸಾಥ್ ನೀಡಿ ಅವರಿಂದ ಪ್ರಶಂಸೆ ಪಡೆದುಕೊಂಡಿದ್ದಾರೆ. ಅವರು ಸಂಗೀತ ಉಪನ್ಯಾಸಕರಾಗಿ ಕಲಬುರ್ಗಿ ವಿ.ಜಿ. ಮಹಿಳಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಈಗ ತಮ್ಮದೇ ಆದ ಝೇಂಕಾರ ಸಂಗೀತ ವಿದ್ಯಾಲಯ' ಪ್ರಾರಂಭಿಸಿದ್ದಾರೆ. ಗಾಳಿ ವಾದ್ಯವಾದ ಹಾರ್ಮೋನಿಯಂನಂತೆ ತಂತಿ ವಾದ್ಯ ಸಿತಾರವನ್ನು ಸಹ ಇವರು ಲೀಲಾಜಾಲವಾಗಿ, ಅತ್ಯಂತ ಸುಶ್ರಾವ್ಯವಾಗಿ ನುಡಿಸುತ್ತಾರೆ.

ಭಾರತದ ಮಹಾನಗರಗಳಾದ ದೆಹಲಿ, ಮುಂಬೈ ಹಾಗೂ ಚೆನ್ನೈಗಳಲ್ಲಿ ತಮ್ಮ ಸಂಗೀತ ಕಲೆಯನ್ನು ಪ್ರದರ್ಶಿಸಿದ್ದಾರೆ. ಬೆಂಗಳೂರು, ಅಹ್ಮದಾಬಾದ್, ಪುಣೆ, ವಿಶಾಲಪಟ್ಟಣಂ ಹೀಗೆ ಅನೇಕ ದೊಡ್ಡ ಸಂಗೀತ ಸಭೆಗಳಲ್ಲಿ ಭಾಗವಹಿಸಿ ಅಲ್ಲಿಯ ಶ್ರೋತೃ ವೃಂದವನ್ನು ರಂಜಿಸಿದ್ದಾರೆ.

ಶಾಸ್ತ್ರೀಯ ಸಂಗೀತದಷ್ಟೇ ಆಸಕ್ತಿ ಇವರಿಗೆ ಸುಗಮ ಸಂಗೀತದಲ್ಲೂ ಇದೆ. ಒಳ್ಳೆಯ ಸಂಗೀತ ಸಂಯೋಜಕರೂ ಆಗಿರುವರು. ಆಕಾಶವಾಣಿ, ದೂರದರ್ಶನ ಕಲಾವಿದರು, ಕಲಬುರ್ಗಿಯಲ್ಲಿರುವ ಸುಗಮ ಸಂಗೀತಗಾರರಾದ ಸೂರ್ಯಕಾಂತ ಡುಮ್ಮಾ, ಗಿರಿಜಾ ಕರ್ಪೂರ, ಎಸ್.ಆರ್. ರಾಠೋಡ ಅವರ ಕಂಠದಿಂದ ಹೊರಡುವ ಭಾವಗೀತೆಗಳಿಗೆ ಸುಶ್ರಾವ್ಯ ಸಂಗೀತ ಸಂಯೋಜಿಸಿದ ಕೀರ್ತಿ ರೇವಯ್ಯ ವಸ್ತ್ರದಮಠ ಅವರದು.

ಸಂಗೀತಗಾರರೊಂದಿಗಿನ ಇವರ ಬಾಂಧವ್ಯ ಅತ್ಯಂತ ಸುಮಧುರ. ಎಲ್ಲರೊಂದಿಗೆ ಕಲೆತು ವಾದ್ಯ ನುಡಿಸುತ್ತಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಾರೆ. ಇತ್ತೀಚೆಗೆ ಪ್ರಾರಂಭವಾದ ಮನುಕುಲ ಟ್ರಸ್ಟಿನ ಸಂಗೀತ ವಿಭಾಗದ ಅಧ್ಯಕ್ಷರನ್ನಾಗಿ ಅವರನ್ನೇ ಆಯ್ಕೆ ಮಾಡಲಾಗಿದೆ. ಕಲಬುರ್ಗಿ ಗಾನ ಯೋಗಿ ಪಂಚಾಕ್ಷರಿ ಕಲಾ ಸಂಘದ ಸದಸ್ಯರಾಗಿದ್ದಾರೆ. ಸಂಗೀತೋಪಾಸಕರಾದ ವಸ್ತ್ರದಮಠ ಅದನ್ನೇ ನಂಬಿ ಸಂಗೀತ ವಿದ್ಯಾಲಯ ಪ್ರಾರಂಭ ಮಾಡಿದ್ದಾರೆ. (ಜಿಕೆಇ)

ಲ

ಲಕ್ಷ್ಮಿಕಾಂತ ಎನ್. ಮನೋಕರ: ಪ್ರತಿಭಾವಂತ ಚಿತ್ರ-ಶಿಲ್ಪ ಕಲಾವಿದ. ಕಲಬುರ್ಗಿಯ ಕಲಾನಿಕೇತನದಿಂದ ಅರಳಿದ ಪ್ರತಿಭೆ ಲಕ್ಷ್ಮಿಕಾಂತ ಎನ್. ಮನೋಕರ ಜನ್ಮ 1969ರಲ್ಲಿ ಆಯಿತು. 1993ರಲ್ಲಿ ಕಲ್ಬುರ್ಗಿ ವಿಶ್ವವಿದ್ಯಾಲಯದಿಂದ ಬಿ.ಎಫ್.ಎ ಪದವಿಯನ್ನು ಚಿನ್ನದ ಪದಕದೊಂದಿಗೆ ಪ್ರಥಮ ಸ್ಥಾನ ಪಡೆದ ಇವರು ಮುಂದೆ ಎಂ.ಎಫ್.ಎ ಪೇಂಟಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಬಾಲ್ಯದಿಂದಲೂ ಮನೋಕರ್‌ರವರಿಗೆ ಚಿತ್ರಕಲೆಯಲ್ಲಿ ಅಪಾರ ಒಲವು. ಮಣ್ಣಿನಿಂದ ಗಣಪತಿ, ಎತ್ತು, ಆಟದ ವಸ್ತುಗಳು ಮುಂತಾದವುಗಳನ್ನು ಮಾಡುವುದರಲ್ಲಿ ಅಪಾರ ಆಸಕ್ತಿ. ಬಾಲ್ಯದಿಂದಲೂ ಇವರು ತೋರುತ್ತಿದ್ದ ಕಲಾ ಪ್ರತಿಭೆ ಕಂಡು ಮನೆಯಲ್ಲಿ ಎಲ್ಲರಿಗೂ ಕುತೂಹಲ ಹಾಗೂ ಇವರ ಮೇಲೆ ಅಕ್ಕರೆ ಇವರು ಹೈಸ್ಕೂಲಿನಲ್ಲಿ ಓದುತ್ತಿರುವಾಗ ಇವರ ಚಿತ್ರಕಲೆಯಲ್ಲಿನ ಆಸಕ್ತಿ, ಪ್ರತಿಭೆ ಕಂಡು ಕಲಾಗುರುಗಳಾದ ಭಾಲ್ಕಿ ಅವರು ಪ್ರೋತ್ಸಾಹಿಸಿದರು.

ಕಲಬುರ್ಗಿಯ ಕಲಾನಿಕೇತನದಲ್ಲಿ ಕಲಾಶಿಕ್ಷಣ ಪಡೆಯುತ್ತ ಹೋದಂತೆ ಇವರ ಕಲಾಪ್ರತಿಭೆ ಇನ್ನಷ್ಟು ಗಟ್ಟಿಯಾಗತೊಡಗಿತು.



ಇವರು ಗುಲಬರ್ಗಾ, ಬೆಂಗಳೂರು, ಮೈಸೂರು, ಮದ್ರಾಸ್, ನವದೆಹಲಿ, ಭೂಪಾಲ, ನಾಗಪುರ, ಮುಂತಾದ ಕಡೆ ಜರುಗಿದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಇವರ ಲ್ಯಾಂಡ್‌ಸ್ಕೇಪ್ ಚಿತ್ರಗಳು ರಮ್ಯ, ಹಂಪಿಯ ಸ್ಮಾರಕಗಳು, ಕಲಬುರ್ಗಿ, ಮಳಖೇಡದ ಕೋಟೆಕೊತ್ತಲಗಳು, ಶಿರವಾಳ ಗ್ರಾಮದ ಸೊಬಗನ್ನು ಕುರಿತು ಇವರ ಲ್ಯಾಂಡ್‌ಸ್ಕೇಪ್ ಚಿತ್ರಗಳು ನೋಡುಗರಿಗೆ

ಸಂತೋಷ ನೀಡುತ್ತವೆ. ಈ ಮಾಧ್ಯಮದಲ್ಲಿ ಚಿತ್ರಿಸುವಾಗ ಆಯ್ದುಕೊಳ್ಳುವ ಸ್ಥಳ, ತಂತ್ರಗಾರಿಕೆ, ವರ್ಣಗಳ ಬಳಕೆ ಹಾಗೂ ಬೆಳಕು ನೆರಳಿನ ಪರಿಣಾಮ ಇವರು ಬಳಸುವ ಪೂರಕ ವರ್ಣಗಳು ಹಾಗೂ ಶೈಲಿ ಅವರ ಕಲಾ ಜಾಣ್ಮೆಯ ಪ್ರೌಢತನ ಪ್ರದರ್ಶಿಸುತ್ತವೆ.


ಇನ್ನು ಇವರ ನವ್ಯಕಲೆಯ, ಕ್ರಿಯೇಟಿವ್ ಚಿತ್ರಕೃತಿಗಳು ಇವರ 'ಕಾನ್ಫಿಡೆನ್ಸ್' ಸಮರ್ಥವಾಗಿ ಪರಿಚಯಿಸುತ್ತವೆ. 'ವುಮೇನ್' ಹೊಲ್ಡಿಂಗ್ ಎ ವ್ಹಾಯಿಟ ಆ್ಯಪಲ್' 'ಟಿಟೈಮ್' ಮುಂತಾದ ಕೃತಿಗಳು ಗಮನಾರ್ಹವಾಗಿವೆ.

ಇತ್ತೀಚಿಗೆ ಇವರ ನವ್ಯಕಲೆಯ ಚಿತ್ರಗಳಲ್ಲಿ ನಮ್ಮ ಪರಂಪರೆಯನ್ನು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಇವರು ಆಯ್ದುಕೊಂಡ ವಸ್ತು ಕೌದಿ. ಹಳೆಯ ಬಟ್ಟೆಗಳನ್ನು ತುಂಡು ತುಂಡಾಗಿ ಕತ್ತರಿಸಿ ವಿಶಿಷ್ಟ ರೀತಿಯಲ್ಲಿ ಹೊಲೆದು ಹೊದ್ದುಕೊಳ್ಳಲು ಉಪಯೋಗಿಸಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ಇದು ಇನ್ನೂ ಜನಪ್ರಿಯ. ವಾಸ್ತವವಾಗಿ ಕೌದಿಯೇ ಒಂದು ಕಲಾಕೃತಿಯಂತೆ ಕಂಗೊಳಿಸುತ್ತವೆ. ಹಿರಿಯರು ಉಪಯೋಗಿಸಿ ಹೋದ ಬಟ್ಟೆಗಳನ್ನು ಕೌದಿ ಮಾದರಿ, ಮಕ್ಕಳು ಹೊದ್ದುಕೊಂಡರೆ ಹಿರಿಯರ ಆಶೀರ್ವಾದ ಅವರಿಗೆ ಸಿಗುತ್ತದೆ ಎಂಬ ನಂಬಿಕೆ ಪ್ರೀತಿಯೂ ಗ್ರಾಮೀಣ ಜನರಲ್ಲಿದೆ. ಒಂದುರೀತಿ ಅವರದು ಕೌದಿ ಜೊತೆಗೆ ಭಾವನಾತ್ಮಕ ಸಂಬಂಧ. ಈ ಸಂಬಂಧವನ್ನು ಮನೋಕರ್‌ರವರು ತಮ್ಮ ಕೃತಿಗಳ ಮೂಲಕ ಅದರಲ್ಲೂ ನವ್ಯ ಶೈಲಿಯಲ್ಲಿ ಅಭಿವ್ಯಕ್ತಿಸಲು ಹೊರಟಿರುವುದು ಪ್ರಶಂಸನೀಯ.

ಇವರ ಕಲಾಕೃತಿಗಳನ್ನು ಅವಲೋಕಿಸಿದಾಗ, ಆಯ್ದುಕೊಳ್ಳುವ ವಸ್ತು, ವಿಷಯ, ಕಲ್ಪನೆ, ವರ್ಣಸಂಯೋಜನೆ, ಆಕೃತಿಗಳ ಜೋಡಣೆ, ತಂತ್ರಗಾರಿಕೆ ಹಾಗೂ ದಿಟ್ಟತೆ ಇವುಗಳ ಮೇಲಿರುವ ಅವರ ಹಿಡಿತ ತೋರಿಸುತ್ತವೆ. ಪಾಶ್ಚಾತ್ಯ ದೃಶ್ಯ ಕಲೆಯಲ್ಲಿ ಶ್ರೇಷ್ಠ ಕಲಾವಿದರೆಂದು ಮನ್ನಣೆಗಳಿಸಿರುವ ಪಾಬಲೂ ಪಿಕಾಸೋ ಹಾಗೂ ಪಾಲ್ ಗಾಗಿನರ ಕೃತಿಗಳನ್ನು ಮೆಚ್ಚುವ ಇವರು ಆ ಕಲಾವಿದರ ಶೈಲಿಯು ತಮ್ಮನ್ನು ಪ್ರಭಾವಿತಗೊಳಿಸಿದೆ ಎನ್ನುತ್ತಾರೆ.

ಇವರು ಶಿಲ್ಪಕಲೆಯಲ್ಲೂ ತಮ್ಮ ಪ್ರತಿಭೆ ತೋರುತ್ತಿದ್ದಾರೆ. ಫೈಬರ್ ಮಾಧ್ಯಮದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿ ಗಮನ ಸೆಳೆದಿರುವುದು. ಈ ಕಲಾಕೃತಿಗಳಿಗೆ 'ಮೆಟಲ್ ಇಫೆಕ್ಟ್' ಬರುವಂತೆ ಇವರು ತೋರುವ ನಿರ್ವಹಣೆ ಕೌಶಲ್ಯತೆಯಿಂದ ಕೂಡಿದೆ. ಇವರು ಗುಲಬರ್ಗಾ, ಬೆಂಗಳೂರು, ಚೆನ್ನೈ ಸೇರಿದಂತೆ ಅನೇಕ ಶಿಬಿರಗಳಲ್ಲಿ ಭಾಗವಹಿಸಿ ಅನುಭವ ಪಡೆದಿದ್ದಾರೆ. 1991ರಲ್ಲಿ ಗುಲಬರ್ಗಾದಲ್ಲಿ ಜರುಗಿದ ಲ್ಯಾಂಡ್‌ಸ್ಕೇಪ್ ಶಿಬಿರ, 1993ರಲ್ಲಿ ಮದ್ರಾಸ್‌ನಲ್ಲಿ ಜರುಗಿದ 'ಆಲ್ ಇಂಡಿಯಾ ಆರ್ಟಿಸ್ಟ ಕ್ಯಾಂಪ್, 1996ರಲ್ಲಿ ಮಂಗಳೂರಿನಲ್ಲಿ ಜರುಗಿದ ಟೇರ್‍ರಾಕೊಟಾ ಶಿಬಿರ, ಹೀಗೆ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿರುವರು.

ಇತ್ತೀಚಿಗೆ ಗುಲಬರ್ಗಾದಲ್ಲಿ ಶ್ರೀಗುರು ವಿದ್ಯಾಪೀಠ ಆಯೋಜಿಸಿದ ಅಂತಾರಾಷ್ಟ್ರೀಯ ಶಿಬಿರದಲ್ಲಿ ಪಾಲ್ಗೊಂಡು ತಮ್ಮ ಶಿಲ್ಪ ಕಲಾಕೃತಿಯ ಮೂಲಕ ಗಮನ ಸೆಳೆದ ಹೆಗ್ಗಳಿಕೆ ಇವರದು. 1992ರಲ್ಲಿ ನಾಗಪುರದ ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರದ ಸ್ಪರ್ಧೆಯಿಂದ, 1992ರಲ್ಲಿ ಕಲ್ಬುರ್ಗಿಯ 'ಬೆಸ್ಟ್ ಇನ್ ಲ್ಯಾಂಡ್‌ಸ್ಕೇಪ್' ಸ್ಪರ್ಧೆಯಿಂದ ಹಾಗೂ 1992 ಕಲ್ಬುರ್ಗಿ ವಿಶ್ವವಿದ್ಯಾಲಯ ಏರ್ಪಡಿಸಿದ ಕಲ್ಬುರ್ಗಿ ಅಂತರ್ ಮಹಾವಿದ್ಯಾಲಯ ಸಾಂಸ್ಕೃತಿಕ ಮೇಳ ಸ್ಪರ್ಧೆ, 1995ರಲ್ಲಿ ಆಲ್ ಇಂಡಿಯಾ ಚಂಡೀಘಡ್ ಪಟಿಯಾಲ ಕ್ರಿಯೇಟಿವ್ ಡ್ರಾಯಿಂಗ್ ಸ್ಪರ್ಧೆ, 2005ರಲ್ಲಿ 64ನೆಯ 'ಆಲ್ ಇಂಡಿಯಾ ಕಾಂಪಿಟೇಷನ್ ಹೈದ್ರಾಬಾದ ಆರ್ಟ್ ಸೊಸೈಟಿಯ ಸ್ಪರ್ಧೆ, ಹೀಗೆ ಹಲವಾರು ಸ್ಪರ್ಧೆಗಳಿಂದ ಪ್ರಶಸ್ತಿಗಳನ್ನು ಪಡೆದಿರುವರು.



'ಶಿಲ್ಪ ಕೃತಿ' ಫೈಬರ್ ಮಾಧ್ಯಮ

ಪ್ರಸ್ತುತ ಗುಲಬರ್ಗಾ ಮೆಡಿಕಲ್ ಕಾಲೇಜಿನಲ್ಲಿ ಕಲಾವಿದರಾಗಿ ಸೇವೆಸಲ್ಲಿಸುತ್ತಿರುವ ಇವರು ಕಲಾಕ್ಷೇತ್ರದಲ್ಲಿ ತಮ್ಮದೇ ಅದ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಚಿತ್ರ-ಶಿಲ್ಪ ಎರಡೂ ಪ್ರಕಾರಗಳಲ್ಲಿ ತಮ್ಮ ಪ್ರತಿಭೆ, ಕ್ರಿಯಾಶೀಲತೆಗಳಿಂದಾಗಿ ಸಮಕಾಲೀನ ಚಿತ್ರಕಲಾವಿದರಲ್ಲಿ ಎದ್ದು ಕಾಣುತ್ತಿರುವ ಇವರು ಕಲಾಕ್ಷೇತ್ರದ ಸಂಘಟನೆಯಲ್ಲೂ ಶ್ರಮವಹಿಸುತ್ತಿರುವದು ಪ್ರಶಂಸನೀಯವಾಗಿದೆ.

(ಎಂಎಸ್‌ಕೆ)



ಲಕ್ಷ್ಮಿಕಾಂತ ಪಾಟೀಲ: ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಶ್ರೀ ಲಕ್ಷ್ಮಿಕಾಂತ ಪಾಟೀಲ ತಮ್ಮ ಬಾಲ್ಯದಲ್ಲೇ ಸಾಂಸ್ಕೃತಿಕ ಲೋಕಕ್ಕೆ ಮನ ಸೋತವರು. 5 ವರ್ಷ ಬಾಲಕ ನಿದ್ದಾಗ 'ಭೂ ಕೈಲಾಸ' ನಾಟಕದಲ್ಲಿ ಬಾಲ ನಟನಾಗಿ ರಂಗಭೂಮಿ ಪ್ರವೇಶಿಸಿದ ಶ್ರೀಯುತರು ಬಹುಮುಖ ಪ್ರತಿಭೆಯ ಕಲಾವಿದರು. ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಎಂ.ಎ (ಇತಿಹಾಸ) ಮೊದಲ ಶ್ರೇಣಿಯಲ್ಲಿ ಪಾಸಾಗಿದ್ದು, 'ಡಿಪ್ಲೋಮಾ ಇನ್ ಡೆವಲಮೆಂಟ್ ಕಮುನಿಕೇಶನ್ಸ್‌ನ್ನು ಹಂಪಿಯಿಂದ ಹಾಗೂ ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿರೇಶನ್ಸ್ ಕೋರ್ಸ್‌ನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ.

ರಂಗದ ಹಿಂದೆಯೂ ಮುಖ್ಯ ಸಂಘಟಕರಾಗಿ, ಸಂಗೀತ ಸಂಯೋಜಕರಾಗಿ, ಡೋಲಕ್, ತಬಲಾ, ಹಲಗೆ, ದಪ್ಪಡಿ ಮುಂತಾದ ವಾದ್ಯ ನುಡಿಸುವ ಸಂಪನ್ಮೂಲ ವ್ಯಕ್ತಿಯಾಗಿ ರಂಗ ಪ್ರಯೋಗಗಳಲ್ಲಿ ಭಾಗವಹಿಸಿ ಹವ್ಯಾಸಿ ರಂಗಭೂಮಿಗೆ ದುಡಿಯುತ್ತಿದ್ದಾರೆ.

ಕಾಲೇಜು ದಿನಗಳಲ್ಲಿ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಸುಗಮವಾಗಿ ನಿಭಾಯಿಸುವ ಜವಾಬ್ದಾರಿ ಇವರ ದಾಗಿದ್ದರಿಂದ 1993ರಲ್ಲಿ ಎನ್‌ಸಿಸಿ ಕೇಡಿಡೆಟ್ ಆಗಿದ್ದ ಇವರನ್ನು ಆಸ್ಸಾಮಿನ ಜೋರ್ಹಾಟ್‌ನಲ್ಲಿ ನಡೆದ ನ್ಯಾಶನಲ್ ಇಂಟಿಗ್ರೇಶನ್ ಕ್ಯಾಂಪಿಗೆ ಸಾಂಸ್ಕೃತಿಕ ತಂಡದ ಲೀಡರ್ ಆಗಿ ಎನ್.ಸಿ.ಸಿ ಸಂಸ್ಥೆ ಆಯ್ಕೆ ಮಾಡಿದ್ದು ಅಲ್ಲಿ ಪ್ರಶಸ್ತಿ ಪಡೆದಿದ್ದು ಸಾಧನೆ.

1996ರ ಆಗಸ್ಟ್‌ನಲ್ಲಿ ಗುಲಬರ್ಗಾ ಭಾರತೀಯ ಕುಟುಂಬ ಯೋಜನಾ ಸಂಘವು ಆಯೋಜಿಸಿದ್ದ 'Youth Parliament'ನಲ್ಲಿ ಸಕ್ರೀಯವಾಗಿ ಭಾಗವಹಿಸುವುದರ ಮೂಲಕ ರಂಗ ಚಟುವಟಿಕೆಗಳನ್ನು ವೈಯಕ್ತಿಕ ಹಿತಾಸಕ್ತಿಯಿಂದ ನೋಡುತ್ತ ರಂಗ ಸಂಘಟನೆಗಳಿಗೆ ಸೇರಿದವರು. ಗುಲಬರ್ಗಾ ಸಮುದಾಯದ ನಾಟಕಗಳಾದ ಹೆಮ್ಮಾರಿಯ ರಸ ಪುರಾಣ (ರ: ಆರ್.ಕೆ.ಹುಡಗಿ: ಶಂಕರಯ್ಯ ಘಂಟಿ) 'ಉಚಲ್ಯಾ' (ನಿ: ಸಿ. ಬಸವಲಿಂಗಯ್ಯ) 'ಕೊಳ್ಳಿ ದೀಪ' (ನಿಃ ಶಂಕರಯ್ಯ ಘಂಟಿ) ಸ್ಮಶಾನ ಕುರುಕ್ಷೇತ್ರ 'ಜಾತಿ ಧರ್ಮಗಳಾಚೆ' ಮುಂತಾದ ಮಹತ್ವದ ನಾಟಕಗಳಲ್ಲಿ ಮುಖ್ಯ ಪಾತ್ರವನ್ನು ಮಾಡಿದ್ದಾರೆ. ಕರ್ನಾಟಕ ಸರ್ಕಾರದ ಗ್ರಾಮೀಣ ಅಭಿವೃದ್ಧಿಗಾಗಿ 'ಜಲ ನಿರ್ಮಲ' ಯೋಜನೆ ಅಡಿಯಲ್ಲಿ ಸಮುದಾಯ ಕಲಾವಿದರು ಜವಾಬ್ದಾರಿ ಯಿಂದ ನಿಭಾಯಿಸಿದ ಬೀದಿ ನಾಟಕಗಳಲ್ಲಿ ಒಂದು ತಿಂಗಳು ಕಲಾವಿದರಾಗಿ ಜಿಲ್ಲೆಯಾದ್ಯಂತ ಸಂಚರಿಸಿದ್ದಾರೆ.

1996ರಲ್ಲಿ ಗುಲಬರ್ಗಾ ಸಾಕ್ಷರತಾ ಜಾಥಾ ಭಾಗವಾದ ಸೈಕಲ್ ಜಾಥಾದಲ್ಲಿ ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ ಗುಲಬರ್ಗಾ ತಂತ್ರವು 'ಜನಸಾಮಾನ್ಯರ ಬದುಕಿಗಾಗಿ ವಿಜ್ಞಾನ' ಎಂಬ ಬ್ಯಾನರ್‌ನಡಿಯಲ್ಲಿ ಜಿಲ್ಲೆಯಾದ್ಯಂತ ನಡೆದ 'ಅಕ್ಷರ' ಬೀದಿನಾಟಕದಲ್ಲಿ ಮತ್ತೊಂದು ಜಾಥಾದ 'ಒರೆಗಲ್ಲು' ಎಂಬ ವೈಜ್ಞಾನಿಕ ಬೀದಿ ನಾಟಕದಲ್ಲಿ ಒಂದು ತಿಂಗಳು ಕಲಾವಿದರಾಗಿ ಭಾಗವಹಿಸಿ ಸಮಾಜ ಸೇವೆ ಮಾಡಿದ್ದಾರೆ. ಬೇಸಿಗೆ ಶಿಬಿರದ (ಸಮುದಾಯ ಗುಲಬರ್ಗಾ) 1996ರ ಮಕ್ಕಳ ನಾಟಕಗಳಿಗೆ ಹಿನ್ನಲೆ ಗಾಯನ, ಸಂಗೀತ ಸಂಯೋಜಕರಾಗಿ ದುಡಿದಿದ್ದಾರೆ.

1997ರ ಗುಲಬರ್ಗಾ ವಿಶ್ವವಿದ್ಯಾಲಯ 'ಯುಜನೋತ್ಸವ' 'ಏಕಾಂಕ' ಎಂಬ ನಾಟಕವನ್ನು ಬರೆದು ನಿರ್ದೇಶನ ಮಾಡಿದ್ದು ಪ್ರಥಮ ಬಹುಮಾನ ಪಡೆದಿದ್ದಾರೆ. ಗುಲಬರ್ಗಾ ರಂಗ ಭಾರತಿ/ರಂಗಮಾಧ್ಯಮ ತಂಡಗಳಲ್ಲಿ ಖರೋಕರ್, ಟೊಂಗೆ ಗಳು, ಮುನಿಯಾ ಬಾಲ, ಮುಂತಾದಗಳಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಿದ್ದಾರೆ. 1999ರ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಯುಜನೋತ್ಸವದಲ್ಲಿ ಇವರು ಬರೆದು ನಿರ್ದೇಶಿಸಿದ 'Private fire station' ನಾಟಕಕ್ಕೆ ಪ್ರಥಮ ಬಹು ಮಾನ ಬಂದಿದೆ. ಗುಲಬರ್ಗಾ ಆಕಾಶವಾಣಿಯ ನಾಟಕಗಳಾದ 'ಯುವ ನಾಟಕ ಸಪ್ತಾಹದ 7 ನಾಟಕಗಳು, 'ಮುನಿಯಾ ಬಾಲಿ' ಎಂಬ ರಾಷ್ಟ್ರೀಯ ರೇಡಿಯೋ ನಾಟಕ ಹಾಗೂ ರಾಜಾ ವೆಂಕಟಪ್ಪ ನಾಯಕ' ಮುಂತಾದ ರೇಡಿಯೋ ನಾಟಕಗಳ ಪ್ರೊಡಕ್ಸನ್ ಇನ್‌ಚಾರ್ಜ ಆಗಿ ಸಂಪಾದಕರಾಗಿ ಸೇವೆ ಸಲ್ಲಿಸಿ ದ್ದಾರೆ.

ಗುಲಬರ್ಗಾ ಆಕಾಶವಾಣಿ ಕೇಂದ್ರದಲ್ಲಿ 1999ರಲ್ಲಿ 'ಉದ್ಘೋಷಕರಾಗಿ' 10 ವರ್ಷ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿ ಬಿತ್ತರಿಸಿದ 10 ನಾಟಕಗಳಿಗೆ ಸಂಕಲನಕಾರರಾಗಿ, ಕಂಠದಾನ ಕಲಾವಿದರಾಗಿ, ನಾಟಕ ನಿರ್ಮಾಣದ ಸಹ ನಿರ್ಮಾಪಕರಾಗಿ ಸೇವೆ ಸಲ್ಲಿಸಿದ ಶ್ರೀ ಲಕ್ಷ್ಮಿಕಾಂತ ಪಾಟೀಲರು ಈಗ ಎಫ್‌ಎಂ3 ರೇಡಿಯೋದಲ್ಲಿ ಧ್ವನಿ ಇಂಜಿನೀಯರ್‌ರಾಗಿ ಸೇವೆ ಸಲ್ಲಿಸು ತ್ತಿದ್ದಾರೆ. ಸಿ. ಬಸವಲಿಂಗಯ್ಯ, ಗಂಗಾಧರ ಸ್ವಾಮಿ, ಪ್ರಭಾಕರ ಸಾತ್ಖೇಡ, ಸ್ವಾಮಿರಾವ್ ಕುಲಕರ್ಣಿ, ಶಂಕರಯ್ಯ ಘಂಟಿ, ಮುಂತಾದವರ ಕಾರ್ಯಾಗಾರಗಳಲ್ಲಿ ಭಾಗವಹಿಸಿದ ಅನುಭವ ಇವರದಾಗಿರುವುದು. (ಎಸ್‌ಆರ್‌ಜಿ)

ಲಕ್ಷ್ಮೀ ಕುಲಕರ್ಣಿ: ತೆಂಗಿನ ಗುಂಜಿನಲ್ಲಿ ಸುಂದರವಾದ ವಸ್ತು ಗಳನ್ನು ತಯಾರಿಸುವ ಕಲಾವಿದೆ. ತೆಂಗಿನ ಗುಂಜಿನಲ್ಲಿ ಇವರ ಕರಕುಶಲತೆಯಿಂದ ಅರಳಿದ ವಸ್ತುಗಳನ್ನು ನೋಡಿದಾಗ ಅಚ್ಚರಿ ಮೂಡಿಸುವಂತಿವೆ. ಈ ಕಲೆಯಲ್ಲಿ ತಮ್ಮ ಸ್ವಂತ ಪ್ರತಿಭೆ ಮತ್ತು ಪರಿಶ್ರಮದಿಂದ ಅಪಾರ ಸಾಧನೆ ಮಾಡಿದ್ದಾರೆ. ಪರಿಶ್ರಮ ಹಾಗೂ ಶ್ರದ್ಧೆ ಇದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸ ಬಹುದು ಎಂಬುದಕ್ಕೆ ಇವರು ನಿದರ್ಶನವಾಗಿದ್ದಾರೆ.

ಇವರು ಕಲಬುರ್ಗಿ ಜಿಲ್ಲೆಯ ಸಗರ ಗ್ರಾಮದ ಬಡ

ಕುಟುಂಬದಿಂದ ಬಂದವರು. ತಂದೆ ಮಾಣಿಕರಾವ್ ಶಾಲಾ ಶಿಕ್ಷಕರಾಗಿದ್ದರು. ತಾಯಿ ಇಂದಿರಾಬಾಯಿ ಗೃಹಿಣಿಯಾಗಿದ್ದು ಮನೆಯಲ್ಲಿ ಚಿತ್ರಕಲೆ, ಕಸೂತಿ, ದಾರದ ಹೆಣಿಗೆ ಮತ್ತು ಅಲಂಕಾರಿಕ ಗೊಂಬೆಗಳನ್ನು ಅನೇಕ ಸುಂದರ ಕಲಾಕೃತಿಗಳನ್ನು ಮಾಡುತ್ತಿದ್ದರು.

ಇವರಿಗೆ ಪುಟ್ಟ ಬಾಲಕಿಯಾಗಿರುವಾಗಲೇ, ತಮ್ಮ ತಾಯಿ ಮಾಡುತ್ತಿರುವುದನ್ನು ಆಸಕ್ತಿಯಿಂದ ಕಲಾಕೃತಿಗಳನ್ನು ಗಮನ ವಿಟ್ಟು ನೋಡುತ್ತಿದ್ದರು. ಹೀಗಾಗಿ ಬಾಲ್ಯದಿಂದಲೇ ದಾರದ ಹೆಣಿಗೆ ಮತ್ತು ಕಲಾತ್ಮಕ, ಅಲಂಕಾರಿಕ ವಸ್ತುಗಳ ತಯಾರಿಕೆ ಯಲ್ಲಿ ಅವರಿಗೆ ಸಹಜವಾಗಿಯೇ ಆಸಕ್ತಿ ಬೆಳೆಯಿತು. ಆದರೆ ಯಾರೂ ಮಾಡದಿರುವ ಮತ್ತು ತಮ್ಮ ಸ್ವಂತ ಶೋಧನೆಯಿಂದ ಏನಾದರೂ ಮಾಡಬೇಕೆಂಬ ಅದಮ್ಯ ಆಸೆಯೇ ಇವರದು ತೆಂಗಿನ ನಾರಿನ ವಿನೂತನ ಕೃತಿಗಳ ತಯಾರಿಕೆಯಲ್ಲಿ ತೊಡಗಿದ್ದು.

ಅನೇಕ ಬಾರಿ ಕಷ್ಟವಾಯಿತಾದರೂ, ಅನೇಕ ಗೃಹೋ ಪಕರಣಗಳು, ವಿವಿಧ ಅಳತೆಯ ತಟ್ಟೆಗಳು ಹೂವಿನ ಬುಟ್ಟಿಗಳು, ದೀಪದ ಕಂಬಗಳು, ದೇವರ ಮಂಟಪ, ಕುಂಕುಮದ ಬಟ್ಟಲು, ಪೂಜಾ ಸಾಮಾನು, ಹೂಬುಟ್ಟಿಗಳು ಮುಂತಾದವುಗಳನ್ನು ತಯಾರಿಸುತ್ತ ಅದರಲ್ಲಿ ಇಂದು ಪರಿಣಿತಿ ಹೊಂದಿದ್ದಾರೆ. ತೆಂಗಿನಕಾಯಿ ಸಿಪ್ಪೆ-ಗುಂಜು ಬೇರ್ಪಡಿಸಿ, ಅದನ್ನು 4-6 ಗಂಟೆ ನೀರಲ್ಲಿ ನೆನೆಸಿ, ಅನಂತರ ಎಳೆಗಳನ್ನು ಒಂದು ಸಣ್ಣ ಸೂಜಿಯ ಸಹಾಯದಿಂದ ಹೆಣೆಯುತ್ತ, ಸುಂದರ ಕಲಾತ್ಮಕ ವಸ್ತುಗಳನ್ನು ತಯಾರಿಸುವುದು ಅತ್ಯಂತ ಪರಿಶ್ರಮ ಹಾಗೂ ಸಂಯಮದ ಕೆಲಸ. ದೃಢ ಮನಸ್ಸು, ಏಕಾಗ್ರತೆಗಳು ತುಂಬ ಅಗತ್ಯ. ಅವೆಲ್ಲವು ಗಳನ್ನು ತಮ್ಮ ಕಲೆಗಾಗಿ ಮೈಗೂಡಿಸಿಕೊಂಡು, ಬಿಡುವಿನ ಸಮಯದಲ್ಲಿ ಇಂಥ ಕಲಾಕೃತಿಗಳನ್ನು ತಯಾರಿಸುತ್ತ ಬಂದಿದ್ದಾರೆ.

ಈ ಕೃತಿಗಳು ಪೂರ್ಣಗೊಂಡಾಗ ಅವು ಯಾವುದೇ ಖರ್ಚು ಇಲ್ಲದೇ ಕೇವಲ ಒಂದು ಸಣ್ಣ ಸೂಜಿ ಉಪಯೋಗಿಸಿ ಕೈಯಲ್ಲೇ ತಯಾರಿಸಿದ ವಸ್ತುಗಳು ಎಂದು ಹೇಳಿದರೆ ನಂಬಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಅವುಗಳಲ್ಲಿ ಸಹಜತೆ, ನೈಪುಣ್ಯತೆ ಮತ್ತು ಪರಿಪೂರ್ಣತೆ ಕಂಡಾಗ, ಅವು ಯಾವುದೋ ಯಂತ್ರದಿಂದ ತಯಾರಿಸಿದ್ದಿರಬಹುದೆಂಬ ಅನುಮಾನ ಮೂಡು ವಷ್ಟರ ಮಟ್ಟಿಗೆ ಅತ್ಯಂತ ಸೂಕ್ಷ್ಮವಾಗಿ ಕೃತಿಗಳನ್ನು ಮಾಡಿದ್ದಾರೆ.

ಇವರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡು ವುದಿಲ್ಲ. ಬಂಧುಗಳ, ಸ್ನೇಹಿತರ ಮದುವೆ, ಗೃಹ ಪ್ರವೇಶ, ಜನ್ಮದಿನ ಮುಂತಾದ ಶುಭ ಸಮಾರಂಭಗಳಲ್ಲಿ ತಾವೇ ತಯಾ ರಿಸಿದ ಇಂತಹ ಸುಂದರವಾದ ವಸ್ತುಗಳನ್ನು ಉಡುಗೊರೆಯಾಗಿ ನೀಡಿ, ಧನ್ಯತೆ ಪಡೆಯುತ್ತಾರೆ. ತಮಗೆ ತಿಳಿದಿರುವ ಕರಕುಶಲ ವಸ್ತುಗಳ ತಯಾರಿಕೆ ಕಲೆಯನ್ನು ಆಸಕ್ತಿ ಇದ್ದವರಿಗೆ ಉಚಿತವಾಗಿ ಕಲಿಸುವ ಮೂಲಕ, ಇತರರಿಗೂ ವಿದ್ಯಾದಾನ ಮಾಡುತ್ತಾರೆ.

(ಎಸ್‌ಕೆಉ)



ಲಕ್ಷ್ಮೀಶಂಕರ ಜೋಶಿ: ಗುಲಬರ್ಗಾ ಸಂಗಮೇಶ್ವರ ಮಹಿಳಾ ಮಂಡಳದ ಸಕ್ರಿಯ ಸದಸ್ಯೆಯಾಗಿ, ಪ್ರಾಧ್ಯಾಪಕಿ ಯಾಗಿ, ಗೃಹಣಿಯಾಗಿ, ಲೇಖಕಿ ಯರ ಮೇದಿಕೆಯ ಸದಸ್ಯೆ ಯಾಗಿ, ಸಂಗೀತಗಾರ್ತಿಯಾಗಿ, ಲೇಖಕಿಯಾಗಿ ಹಲವು ಹತ್ತು ಹವ್ಯಾಸಗಳಲ್ಲಿ ಕೇಳಿ ಬರುತ್ತಿರುವ ಹೆಸರು ಶ್ರೀಮತಿ ಲಕ್ಷ್ಮೀಶಂಕರ ಜೋಶಿ.

ಲಕ್ಷ್ಮೀ ಇದ್ದಲ್ಲೆಲ್ಲ ಹಾಸ್ಯದ ಹೊನಲು ಹರಿಯತ್ತದೆ. ಅತ್ಯಂತ ಸರಳ ನಿಗರ್ವಿಯಾದ ಇವರಿಗೆ ಸಂಗೀತ ಹಾಗೂ ಸಾಹಿತ್ಯದಲ್ಲಿ ಸಮಾನವಾದ ಆಸಕ್ತಿ. ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೊಳೆ ಮಣ್ಣೂರಿನ ಶ್ರೀಮಂತ ಜಮೀನ್ದಾರ ಕುಟುಂಬದಲ್ಲಿ ಜನಸಿದ ಇವರು ಓದಿದ್ದು ಗದಗ ಹಾಗೂ ಧಾರವಾಡ ಹಾಗೂ ಗುಲಬರ್ಗಾ, ಗದಗದ ಕೆ.ಎಲ್.ಇ ಸೊಸೈಟಿ ಮಹಿಳಾ ಕಾಲೇಜ ನಿಂದ ಡಿಗ್ರಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ದಿಂದ ಕನ್ನಡದಲ್ಲಿ ಎಂ.ಎ. ಹಾಗೂ ಗುಲಬರ್ಗಾ ವಿಶ್ವವಿದ್ಯಾ ಲಯದಿಂದ ಸಂಗೀತದಲ್ಲಿ ಎಂ.ಎ ಪದವಿ ಪಡೆದಿದ್ದಾರೆ.

ಹಿಂದೂಸ್ತಾನಿ ಸಂಗೀತದಲ್ಲಿ ಗಂಧರ್ವ ಮಹಾವಿದ್ಯಾಲಯ ಮುಂದೆ ಇವರು ನಡೆಸುವ ವಿಶಾರದ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ವಿದ್ವತ್ ಪದವಿ ಪಡೆದಿದ್ದಾರೆ. ಜ್ಯೂನಿ ಯರ್ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.

ಗದಗ ವಿಜಯ ಕಲಾ ಮಂದಿರ ಹಾಗೂ ಶ್ರೀ ನಾಗರಾಜ ಗವಾಯಿ, ಶ್ರೀ ಹನಮಂತಸಿಂಗ ಹಾನಗಲ್ ಅವರಲ್ಲಿ ಸಂಗೀತ ಅಭ್ಯಾಸ ನಡೆಸಿದ ಇವರು ಸಧ್ಯ ಹುಬ್ಬಳ್ಳಿಯ ಶ್ಯಾಮಲಾ ಕುಲಕರ್ಣಿ ಹಾಗೂ ಗೀತಾ ಗಾಯಿತ್ರಿ ಚಕ್ರವರ್ತಿ ಅವರು ಹತ್ತಿರ ಅಭ್ಯಾಸ ಮುಂದುವರಿಸಿದ್ದಾರೆ.

ಪ್ರಸ್ತುತ ಗುಲಬರ್ಗಾದ ನೂತನ ವಿದ್ಯಾಲಯ ಸಂಸ್ಥೆಯ ಪದವಿ ಕಾಲೇಜಿನಲ್ಲಿ ಸಂಗೀತ ವಿಭಾಗದ ಉಪನ್ಯಾಸಕಿಯಾಗಿ ಕಳೆದ 12 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಡಾ. ಗುರು ರಾಜ ದಂಡಾಪೂರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಅಧ್ಯಯನ ಕೈಕೊಂಡಿದ್ದಾರೆ.

ಆಕಾಶವಾಣಿ ಹಾಗೂ ದೂರದರ್ಶನದ 'ಬಿ' ಗ್ರೇಡ್ ಕಲಾವಿದೆಯಾದ ಇವರು ರಾಜ್ಯದ ಹಲವಾರು ಕಡೆ ಕಾರ್ಯಕ್ರಮ ನೀಡಿದ್ದಾರೆ. ಗದಗ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಬೆಂಗಳೂರು, ಗುಲಬರ್ಗಾ, ಕುಷ್ಟಗಿ, ರಾಯಚೂರು, ಬಳ್ಳಾರಿ ಹಾಗೂ ಮಹಾರಾಷ್ಟ್ರದ ಪುಣೆಯ ಕನ್ನಡ ಸಂಘದಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಹಲವು ನಾಟಕಗಳಿಗೆ ಹಿನ್ನೆಲೆಯಾಗಿ



ಗಾಯನ ಸಹಕಲಾವಿದರೊಂದಿಗೆ

ಹಾಡಿದ್ದಾರೆ. ಸಂಗೀತದಲ್ಲಿ ಹತ್ತು ಹಲವು ಹಾಡುಗಳಿಗೆ ದನಿಯಾದವರೂ ಅತ್ಯಂತ ಸುಮಧುರ ಕಂಠದ ಇವರಿಗೆ ಗದಗದ 'ಕಲಾ ವಿಕಾಸ ಪರಿಷತನವರು 'ಸಂಗೀತ ವಿಕಾಸ ರತ್ನ' ಪ್ರಶಸ್ತಿ ಕೊಟ್ಟು ಪುರಸ್ಕರಿಸಿದ್ದಾರೆ.

ಸಾಹಿತಿಕವಾಗಿಯೂ ಅತ್ಯಂತ ಕ್ರಿಯಾಶೀಲವಾಗಿರುವ ಲಕ್ಷ್ಮೀ ಜೋಶಿ ಇವರು ಉತ್ತರ ಕನ್ನಡ ಜಿಲ್ಲೆ ಹೊನ್ನಾವರದ 'ದೀದಿ ಪತ್ರ' ಎನ್ನುವ ಪುಸ್ತಕವೂ ಹೊರಬಂದಿದೆ. ಅನೇಕ ಸಣ್ಣ ಕತೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಸಂಗೀತ ಪುಸ್ತಕಗಳಲ್ಲಿ ಹಲವಾರು ಲೇಖನಗಳು ಬಂದಿವೆ. ಕಥಾ ಸ್ಪರ್ಧೆಯಲ್ಲಿ ಬಹುಮಾನಗಳು ಬಂದಿವೆ. ಅನೇಕ ವ್ಯಕ್ತಿಗಳ ಸಂದರ್ಶನ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ನಾಟಕಗಳನ್ನು ಬರೆದಿದ್ದಾರೆ. (ಎಸ್‌ಎಚ್)

ಲಲಿತ ಕಲೆಗಳು: (ಕೊಪ್ಪಳ ಜಿಲ್ಲೆ) ಕೊಪ್ಪಳ ಜಿಲ್ಲೆಯ ಕಲೆಗೆ ಪ್ರಾಚೀನ ಇತಿಹಾಸವಿದೆ. ಜಿಲ್ಲೆಯಲ್ಲಿ ದೊರಕಿರುವ ಗುಹಾ ಚಿತ್ರಗಳಲ್ಲಿ ಶಿಲಾಯುಗದ ಮಾನವನ ಅದಕ್ಕೂ ಪೂರ್ವದ ಆದಿಮಾನವನ ಚಿತ್ರಕಲೆಯು ದಾಖಲೆಯಾಗಿದೆ. ಆ ರೇಖೆಗಳಲ್ಲಿಯ ಬಲ, ಮುರಕ, ನೈಪುಣ್ಯತೆ ಹಾಗೂ 4/5 ಸಾವಿರ ವರ್ಷಗಳಾದರೂ ಮಾಸದ ಚಿರನೂತನತೆ ಇದೆ. ಇದೇ ಮನ್‌ಬೆಣಕಲ್ಲಿನ ಮೂರುಗವಿಗಳನ್ನು ಪತ್ತೆ ಹಚ್ಚಿದ ಮಹಾನುಭವನು. ಮೆಡೋಜ್ ಟೇಲರ್, ಇಟಗಿ ದೇವಸ್ಥಾನ, ಕನಕಗಿರಿ ವೆಂಕಟಪತಿ ಬಾವಿ, ಹೇಮಗುಡ್ಡದ ಶಿಲ್ಪದ ಬಗ್ಗೆ ಬೆಳಕು ಚೆಲ್ಲಿದ್ದಾನೆ. ಜಿಲ್ಲೆಯ ಶಿಲ್ಪಕಲೆಯನ್ನು ಕುರಿತು, ಮೆಡೋಜ್ ಟೇಲರ್, ಹೆನ್ರಿ ಕಜಿನ್ಸ್, ಪಿಯರ್ಸಿಬ್ರೌನ್, ಫರ್ಗ್ಯೂಸನ್, ಶಿವರಾಮ ಕಾರಂತ, ಎಂ.ಎಸ್. ನಾಗರಾಜರಾವ್, ಶ್ರೀನಿವಾಸರಿತ್ತಿ, ಅ. ಸುಂದರ, ಸಿ.ಎಸ್. ಪಾಟೀಲ, ಕೆ.ಎಂ. ಸುರೇಶ, ಎಂ.ಎಸ್. ಪ್ರಭಾಕರ, ಬಿ.ಸಿ. ಪಾಟೀಲ, ಲಕ್ಷ್ಮಣ ಅಳಂಡಿ, ಶರಣಬಸಪ್ಪ ಕೋಲ್ಕಾರ, ರಾಮಲಿಂಗಪ್ಪ ಟಿ. ಬೇಗೂರ, ಬಸವರಾಜ ಹಳ್ಳಿ, ರಮೇಶ್ ಸುರ್ವೆ, ಮಹೇಶ್ ಸುರ್ವೆ ಮುಂತಾದವರು ಕಲಾವಿಮರ್ಶೆ ಮಾಡಿದ್ದಾರೆ. ಯಲಬುರ್ಗಾ ತಾಲ್ಲೂಕಿನ ಮುಧೋಳ, ಯಲಬುರ್ಗಾ ಸಂಕನೂರು, ಕಲ್ಲೂರು, ಕುಕನೂರು, ಇಟಗಿ, ತಳಕಲ್ಲ ದೇವಾಲಯಗಳನ್ನು ಕುರಿತು ಬಹಳಷ್ಟು ಕಲಾ ಅಧ್ಯಯನಗಳು ನಡೆದಿವೆ. ಇವುಗಳ ಸೌಂದರ್ಯವನ್ನು ಅರಿಯಲಿಕ್ಕೆ ಮಾರ್ಗದರ್ಶಿಯಾಗಿವೆ.

ದೇವಾಲಯಗಳ ವಾಸ್ತುಶಿಲ್ಪವನ್ನು ವೇಸರ, ನಗರ ಹಾಗೂ ದ್ರಾವಿಡ ಶೈಲಿಗಳೆಂದು ವಿಭಜಿಸಲಾಗುತ್ತಿದ್ದು; ಈ ಜಿಲ್ಲೆಯಲ್ಲಿ ವೇಸರ ಹಾಗೂ ದ್ರಾವಿಡ ಶೈಲಿ ತನ್ನ ಔನ್ನತ್ಯವನ್ನು ಪಡೆದಿರುವುದನ್ನು ಯಲಬುರ್ಗಿಯ ಸಿದ್ಧೇಶ್ವರ ದೇವಾಲಯ, ಚೌಕಿಮಠ, ಕಲ್ಮೇಶ್ವರ ದೇವಾಲಯ, ಇಟಗಿಯ ದೇವಾಲಯಗಳ ಚಕ್ರವರ್ತಿ ಮಹಾದೇವ ದೇವಾಲಯ, ಇದಲ್ಲದೇ, ನಾರಾಯಣ, ಚಂದಲೇಶ್ವರ, ಸಾಹಸ ಭೈರವ, ಸರಸ್ವತಿ ದೇವಾಲಯಗಳ ಮೂಲಕ ಕಾಣಬಹುದಾಗಿದೆ. ಸಭಾ ಮಂಟಪ, ಗರ್ಭಗೃಹ, ಕಂಬಗಳು, ದ್ವಾರಬಂಧ, ಮಕರ ತೋರಣಗಳು ಅದ್ಭುತವಾಗಿದ್ದು, ಕಲಾ ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿವೆ. ಕುಕನೂರಿನ ಜೇಷ್ಠಾದೇವಿ (ಮಹಾಮಾಯೆ) ದೇವಾಲಯ, ನವಲಿಂಗೇಶ್ವರ ದೇವಾಲಯ ಇವೆಲ್ಲ ರಾಷ್ಟ್ರಕೂಟ ಕಾಲ ಹಾಗೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಚನೆಗಳಾಗಿವೆ. ಕಲ್ಲೂರಿನ ಕಲ್ಲಿನಾಥ ದೇವಾಲಯ ಸುಂದರವಾಗಿದೆ. ಮುಧೋಳದ ತ್ರಿಲಿಂಗೇಶ್ವರ ದೇವಾಲಯ, ಬಿದ್ದು ಹೋಗಿರುವ ಮಲ್ಲಿಕಾರ್ಜುನ ದೇವಾಲಯ, ಸಂಕನೂರಿನ ಮಳಲೇಶ್ವರ ದೇವಾಲಯ, ಮಲ್ಲಿಕಾರ್ಜುನ ತಳಕಲ್ಲ ದೇವಾಲಯ ಕಲೆಗೆ ಪ್ರಸಿದ್ಧವಾಗಿವೆ. ಇಟಗಿ ಮಹಾದೇವ ದೇವಾಲಯದ ಕಲಾ ಕೌಶಲ್ಯವನ್ನು ದೇಶೀ, ವಿದೇಶಿ ಕಲಾವಿಮರ್ಶಕರು ಹಾಡಿ ಹೊಗಳಿದ್ದಾರೆ. ಇಟಗಿಯ ಮಹಾದೇವ ದೇವಾಲಯದ ಹತ್ತಿರ ಬಾದಾಮಿ ಚಾಲುಕ್ಯ ಶೈಲಿಯ ಬಾದಾಮಿ ಮರಳುಗಲ್ಲಿನ ವಾಸ್ತುಶಿಲ್ಪ ಕಾಣಬಹುದು.

ಕುಷ್ಟಗಿ ತಾಲ್ಲೂಕಿನ ಪುರದ ಸೋಮೇಶ್ವರ ದೇವಾಲಯ, ನೆಲಮಾಳಿಗೆಯ (Underground) ದೇವಾಲಯವು, ವಿಶಿಷ್ಟವಾದ ದೇವಾಲಯವಾಗಿದ್ದು, ಕೋಟಿ ಲಿಂಗಗಳ ತಾಣವಾಗಿದೆ. ಕುಷ್ಟಗಿ ತಾಲ್ಲೂಕಿನ ಚಂದಾಲಿಂಗೇಶ್ವರ ಹಲವಾರು ಭಕ್ತರ ಅಧಿದೇವತೆ. ಕಲ್ಯಾಣದ ಶರಣ ಸಮಕಾಲೀನ ಶರಣ ಚಂದಾಲಿಂಗೇಶ್ವರರ ದೇಗುಲಗಳ ಸಂಕೀರ್ಣ ಕಲ್ಯಾಣ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಕಾಲದ್ದೆಂದು ತಿಳಿದು ಬರುವುದು.

ಹನುಮದೇವರ ಆಗರವಾಗಿದ್ದರಿಂದ ಹನುಮಸಾಗರವಾಗಿದೆ. ತಿರುಪತಿ ವೆಂಕಟರಮಣ ದೇವಸ್ಥಾನ ಬೆಟ್ಟದ ಮೇಲಿದೆ. ಈಗಲೂ ಪೂಜೆ ಉತ್ಸವ ನಡೆಯುತ್ತಿವೆ. ಮಾಟೂರ ಈಶ್ವರ ದೇವಾಲಯ, ಮೇಗೂರಿನ ಈಶ್ವರ ದೇವಾಲಯ, ಮೇಣೆಧಾಳ ವಿಷ್ಣುದೇವಾಲಯ, ಮುದೇನೂರಿನ ದೇವಿಯ ಮೂರ್ತಿ ಮುಂತಾದವು ಶಿಲ್ಪ ಕಲೆಗೆ ಹೆಸರಾದವು. ಕುಷ್ಟಗಿ ಪಟ್ಟಣದ ತಾಜ್‌ಮಹಲ್, ದೇವರಿಲ್ಲದ ಗುಡಿ, ಗೋಳಗುಮ್ಮಟ ಮುಂತಾದವು ಶಿಲ್ಪ ಕಲೆಯ ಸ್ಮಾರಕಗಳಾಗಿವೆ.

ಜಂಬುನಾಥ ದೇವಾಲಯ ಅಂತರತಾಣ, ಕಲ್ಲೇಶ್ವರ ದೇವಾಲಯ, ಕಡೂರ ಮಹಾಬಲೇಶ್ವರ ದೇವಾಲಯ, ಕಾಟಾಪುರ ರಾಮಲಿಂಗೇಶ್ವರ ದೇವಾಲಯ, ಕುಷ್ಟಗಿ ಹುಚ್ಚರಾಯನ ಗುಡಿ, ಕುಷ್ಟಗಿ ತಾಲ್ಲೂಕು ಚಂದಾಲಿಂಗೇಶ್ವರ ದೇವಾಲಯ, ಚಂದ್ರಗಿರಿ ಮೊದಲಾದವು ಪ್ರಾಚೀನ ದೇವಾಲಯಗಳಾಗಿದ್ದು, ಆ ಕಾಲದ ಶಿಲ್ಪ ಶೈಲಿಯನ್ನು ತಿಳಿಸಿಕೊಡುತ್ತವೆ. ಅವು ಈಗ ಶಿಥಿಲಾವಸ್ಥೆ

ಯಲ್ಲಿವೆ. ಇಟಗಿಯಲ್ಲಿ ಬಾದಾಮಿಯ ಮರಳುಗಲ್ಲಿನಲ್ಲಿ ನಿರ್ಮಿಸಿದ ದ್ವಾರಬಂಧ ಬಾದಾಮಿ ಚಾಲುಕ್ಯರ ಕಾಲದ ಏಕಮೇವ ಶಿಲ್ಪವಾಗಿದೆ.

ಗಂಗಾವತಿ ತಾಲ್ಲೂಕಿನ ಆನೆಗೊಂದಿ ನೆಲದುರ್ಗ ಗಿರಿ ದುರ್ಗಗಳೆರಡನ್ನು ಹೊಂದಿದೆ. ಕ್ರಿ.ಶ. 7–8ನೆಯ ಶತಮಾನ ದಿಂದ ವೀರರಾದ ಅರಸರಾಳಿದ್ದಾರೆ. ಇಲ್ಲಿಯ ದಾಸ ಕೂಟದ ನವ ಬೃಂದಾವನ ಮಾಧ್ವಮತದವರಿಗೆ ಪವಿತ್ರ ಸ್ಥಳ, ರಂಗನಾಥ ದೇವಾಲಯ, ಚಿಂತಾಮಣಿ ಬೆಟ್ಟ ಶಿಲ್ಪ ಕಲೆಗೆ ಪ್ರಸಿದ್ಧವಾಗಿವೆ. ಇಂಡೋಸಾರ್ಸನಿಕ ಶೈಲಿಯ ಸುಂದರ ಅರಮನೆ ಆನೆಗೊಂದಿ ಯಲ್ಲಿದೆ.

ಗಂಗಾವತಿ ತಾಲ್ಲೂಕಿನ ಕನಕಗಿರಿ ವೆಂಕಟಪತಿಬಾವಿ, ಕನಕಾ ಚಲ ಲಕ್ಷ್ಮೀ ನರಸಿಂಹಸ್ವಾಮಿ ಗುಡಿ, ಸೂರ್ಯದೇವಾಲಯ, ಪುಷ್ಕರಣಿ, ಪ್ರತಿಮೆಯ ಗುಡಿ ಹಾಗೂ ಚಿದಾನಂದರ ಗದ್ದುಗೆ ಮುಂತಾದವು ಪ್ರೇಕ್ಷಣೀಯ ಸ್ಥಾನಗಳಾಗಿವೆ. ಒಂದೊಂದು ಕಲಾ ಕ್ಷೇತ್ರಗಳಾಗಿವೆ. ಪಂಪಾ ಸರೋವರ, ಜಯಲಕ್ಷ್ಮೀ ಗುಡಿ, ಹಿರೇಜಂತಗಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯ, ಚಂಡಿ ಕೇಶ್ವರನ ಗುಡಿ ಅಲ್ಲಿಯ ಮೂರ್ತಿ ಶಿಲ್ಪಿಗಳು ಬಹು ಸುಂದರ ವಾಗಿವೆ. ವೀರಭದ್ರೇಶ್ವರ ಬೆಟ್ಟ ಹಾಗೂ ವೀರಭದ್ರೇಶ್ವರ ದೇವಾ ಲಯ ಅತ್ಯಂತ ಸುಂದರವಾಗಿವೆ. ಹೇಂಗುಡ್ಡದ ಈಶ್ವರ ದೇವಾಲಯ, ಹೆಬ್ಬಾಳು ಸೋಮಶೇಖರ ದೇವಾಲಯ, ಮುಷ್ಟೂರಿನ ರಾಮಲಿಂಗೇಶ್ವರ ದೇವಾಲಯ, ಎಲಿ ಬಸವಣ್ಣ ದೇವಾಲಯ, ಈಶ್ವರ ದೇವಾಲಯ ಪ್ರಸಿದ್ಧವಾಗಿವೆ.

ಕೊಪ್ಪಳ ತಾಲ್ಲೂಕಿನ ಅಳವಂಡಿಯಲ್ಲಿ ಯಾವ ಪ್ರಾಚೀನ ಸ್ಮಾರಕಗಳು ಸುಸ್ಥಿತಿಯಲ್ಲಿಲ್ಲ. ಸಿದ್ಧೇಶ್ವರ, ಗೋಣಿ ಬಸವೇಶ್ವರ ದೇವಾಲಯಗಳು ಸರಿಯಾಗಿವೆ. ಕವಲೂರಿನ ಹರಿಹರೇಶ್ವರ, ಈಶ್ವರ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ವೆಂಕಟ ರಮಣ ದೇವಾಲಯ ಪ್ರಾಚೀನ ದೇವಾಲಯಗಳಾಗಿವೆ.

ಉಪ್ಪಿನ ಬೆಟಗೇರಿಯ ಲಕ್ಷ್ಮೀನಾರಾಯಣ ಹಾಗೂ ಈಶ್ವರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದ ಪ್ರೇಕ್ಷಣೀಯ ದೇವಾಲಯಗಳಾಗಿದ್ದು ಅಲಕ್ಷ್ಯಕ್ಕೊಳಗಾಗಿವೆ; ಆದರೆ ಸುಸ್ಥಿತಿ ಯಲ್ಲಿವೆ. ಮಾದಿನೂರು ಮೊದಗನ್ನರೆಂದು ಕಲಚೂರ್‍ಯರ ರಾಜಧಾನಿಯಾಗಿದ್ದ ಐತಿಹಾಸಿಕ ಸ್ಥಳ. ಇಲ್ಲಿದ್ದ ತ್ರಿಕುಟೇರ್ಶವರ ದೇವಾಲಯ ಹಾಳಾಗಿ ಹೋಗಿದೆ. ಕೋಟೆ ಬಿದ್ದು ಹೋಗಿದೆ. ಸೋಮೇಶ್ವರ ದೇವಾಲಯ, ಪದ್ಮಾಪತಿ ಜಿನಾಲಯ ಹಾಗೂ ವಿಷ್ಣುತೀರ್ಥರ ಬೃಂದಾವನ ನೋಡುವಂಥವಾಗಿವೆ.

ಹಿರೇಸಿಂದೋಗಿ ಸಿದ್ಧೇಶ್ವರ ದೇವಾಲಯ, ಹ್ಯಾಟಿ ಮುಂಡ ರಗಿ ಹತ್ತಿರದ ನಂದಿಬಂಡಿ ಬಸವಣ್ಣ ಅತ್ಯಂತ ಸುಂದರವಾಗಿವೆ. ಗವಿಮಠ, ಸಿರಸಪ್ಪಯ್ಯನಮಠ, ದೇವಾಂಗಮಠ ಮೊದಲಾದವು ಪ್ರಾಚೀನ ದೇವಾಲಯಗಳಾಗಿವೆ. ಕೊಪ್ಪಳದ ಅನೇಕ ಜಿನಾ ಲಯ(ಬಸದಿ)ಗಳನ್ನು ನಾಶ ಮಾಡಲಾಗಿದ್ದು ಅವುಗಳನ್ನು ಕೆಡವಿ ಡಣಕನ ಬಾವಿ, ಕೋಟೆ ಕೊತ್ತಲಗಳನ್ನು ಕಟ್ಟಿದ್ದಾರೆ.

ಚಿತ್ರಕಲೆ: ಕಲ್ಲಾಸರೆ, ಗವಿಗಳಲ್ಲಿ ಶಿಲಾಯುಗದ ವರ್ಣಚಿತ್ರ ಗಳನ್ನು ಹಿರೇಬೆಣಕಲ್ಲ, ಕೊಪ್ಪಳ, ಇಂದರಗಿಗಳಲ್ಲಿ ಕುಷ್ಟಗಿ ತಾಲ್ಲೂಕಿನ ತಾವರಗೇರಿ ಗಂಗಾವತಿ ರಸ್ತೆಯ ಗಾಣಗಿತ್ತಿ ಗುಡ್ಡ, ಸಂತೆ ಬಜಾರ, ದೋಣಿ, ಆನೆ ಮೊದಲಾದ ಕಡೆಗೆ ವರ್ಣ ಚಿತ್ರಗಳು ದೊರಕಿವೆ. ಗಂಗಾವತಿ ತಾಲ್ಲೂಕಿನ ಆನೆಗೊಂದಿ ಬೆಟ್ಟ ದಲ್ಲಿ ವರ್ಣಚಿತ್ರಗಳು ದೊರಕಿವೆ. ಇವು ಚಿತ್ರಕಲೆಯ ಮೊದಲ ಹೆಜ್ಜೆಗಳು. ಚಾರಿತ್ರಿಕವಾಗಿ ಹಂಪಿ ವಿಜಯನಗರ ಕಾಲದ ಚಿತ್ರಕಲೆ ಪ್ರಸಿದ್ಧವಾಗಿದೆ. ಹಂಪಿಯ ವಿರೂಪಾಕ್ಷ ದೇವಾಲಯ, ಕನಕಗಿರಿ ಆನೆಗೊಂದಿ ಭಿತ್ತಿ ಚಿತ್ರಗಳು ಇಂದು ಕಿನ್ನಾಳ ಕಲೆಯೆಂದು ಪ್ರಸಿದ್ಧವಾಗಿದೆ. ಚಿತ್ರಕಲಾ ಪರಂಪರೆಯು ಈ ಜಿಲ್ಲೆಯಲ್ಲಿದೆ. ನಾರಾಯಣಪ್ಪ ಚಿತ್ರಗಾರ, ಸೋಮಣ್ಣ ಚಿತ್ರಗಾರ, ಹೇಮಣ್ಣ ಚಿತ್ರ ಗಾರ ಮುಂಚೂಣಿಯಲ್ಲಿರುವ ಕಲಾವಿದರು. ಇವರ ಹಿರಿಯರು ಕೂಡಾ ಇವರಂತೆ ರಾಜ್ಯ ಪ್ರಶಸ್ತಿ ಪಡೆದವರಾಗಿದ್ದಾರೆ. ಗಂಗಾ ವತಿಯ ರಾಘವೇಂದ್ರಚಾರ ಸರಜೋಷಿ ಅವರಲ್ಲಿ ಇಲ್ಲಿಯ ಮಹಿಳೆಯೊಬ್ಬರು ಮೈಸೂರು ಶೈಲಿಯಲ್ಲಿ ಬಿಡಿಸಿದ ಎರಡು ಶತಮಾನದ ಹಿಂದಿನ ಚಿತ್ರಗಳು ಲಭ್ಯವಿವೆ. ದಿ. ಬೇವಿನಾಳ ನಾರಾಯಣಾಚಾರ, ಹನುಮಂತಪ್ಪ ಚಿತ್ರಗಾರರು ಭಿತ್ತಿಚಿತ್ರ ಕಲಾ ವಿದರಾಗಿದ್ದಾರೆ.

ಯಲಬುರ್ಗಾ ತಾಲ್ಲೂಕಿನ ಕಾಳಪ್ಪ ಪತ್ತಾರ, ಅವರ ಮಗ ಶಂಕರ ಪತ್ತಾರ ಹಾಗೂ ಅವರ ಮಗ ಸುಧಾಕರ ಜಲ, ತೈಲ ವರ್ಣ ಚಿತ್ರಕಲಾವಿದರು. ಕೊಪ್ಪಳ ತಾಲ್ಲೂಕಿನ ಹಲಗೇರಿಯ ಶಿಕ್ಷಕರಾದ ರಾಜೂ ತೇರದಾಳ, 2001–02ನೆಯ ಸಾಲಿನ ಕರ್ನಾಟಕ ಲಲಿತಕಲಾ ಅಕಾಡೆಮಿ ಬಹುಮಾನ ಪಡೆದಿದ್ದಾರೆ. ಉಪ್ಪಿನ ಬೆಟಗೇರಿ ಕಲಾ ಶಿಕ್ಷಕರಾದ ವೆಂಕಟೇಶ ನಾಗಲಾಪುರ ಭರವಸೆದಾಯಕ ಚಿತ್ರಕಲಾವಿದರಾಗಿದ್ದಾರೆ. ಕನಕಗಿರಿಯ ಹನುಮಂತಪ್ಪ ಚಿತ್ರಗಾರ ಹಿರಿಯ ಕಲಾವಿದರು. ನರಸಿಂಹರಾವ್ ಉತ್ತಮ ಗೋಡೆ ಗುರಗುಂಟೆಯ ಸಂಸ್ಥಾನಿಕರಲ್ಲಿ ಆಸ್ಥಾನ ಚಿತ್ರಕಲಾವಿದರಾಗಿದ್ದರು. ಇವರ ಅನೇಕ ವರ್ಣಚಿತ್ರಗಳನ್ನು ಎಮ್ಮೆ ಗುಡ್ಡದ ದುರ್ಗಾದೇವಾಲಯ, ಹೊಸಪೇಟೆಯ ಗಾಳೆಮ್ಮನ ಗುಡಿ, ಬಳ್ಳಾರಿ, ಕಂಪ್ಲಿ, ಗದಗ ಹಾಗೂ ಮುಳಗುಂದ ಗಳಲ್ಲಿ ನೋಡಹುದಾಗಿದೆ. ಹನುಮ ಸಾಗರದ ಬಸವರಾಜ ಧುತ್ತರಗಿ, ಒಳ್ಳೆಯ ಕಲಾವಿದರಾಗಿದ್ದಾರೆ. ನಾಟಕ ಸಿನರಿ ರಚನೆ ಯಲ್ಲಿ ಪರಿಣತರು. ಅಲ್ಲಿಯ ವೀರೇಶ ಬಡಿಗೇರ, ಗಂಗಾವತಿಯ ಹೇಮಾವತಿ ವ್ಯಕ್ತಿಚಿತ್ರ ಬರೆಯವಲ್ಲಿ ಸಿದ್ಧ ಹಸ್ತರು.

ಚುಕ್ಕಿ ಚಿತ್ರಕಲೆಯನ್ನು ಜಿಲ್ಲೆಯಲ್ಲಿ ಎತ್ತರಕ್ಕೆ ಒಯ್ದವರು ರಾಯಚೂರಿನಲ್ಲಿರುವ ಕೊಪ್ಪಳದವರಾದ ಎಚ್.ಎಚ್. ಮೇದಾರ, ಇವರ ಹಾಗೂ ಇವರ ಸೋದರರ ಮಕ್ಕಳು ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದ ಕಲಾವಿದರಾಗಿದ್ದಾರೆ. ಮಹಾಂತೇಶ ಎಂ. ಬೆನಕಟ್ಟಿ, ಅಪ್ಪಣ್ಣ ಎ. ಚಿತ್ರಗಾರ, ಕೃಷ್ಣ ಟಿ. ಇನಾಮದಾರ, ಪ್ರಕಾಶ್ ಎಲ್. ತಟ್ಟಿ, ಕೃಷ್ಣ ಸೊರಟೂರು, ವೆಂಕಟೇಶ್ ನಾಗಲಾ ಪುರ, ಮನೋಜ್ ವಸ್ತ್ರದ, ರಾಮಚಂದ್ರ ಬಗಾಡೆ, ಮಂಜುಳಾ ಯರಾಶಿ, ಮಾಜೀದ್ ಖಾನ್ (ಎಲ್ಲರೂ ಕೊಪ್ಪಳ ತಾಲ್ಲೂಕಿ ನವರು) ಕಲ್ಲಯ್ಯ ಗಣಾಚಾರಿ, ಚಂದ್ರಪ್ಪ ಬಡಿಗೇರ (ಯಲಬುರ್ಗಿ ತಾಲ್ಲೂಕಿನವರು) ಮಹಾಂತೇಶ ಮಂಗಳೂರು,

ಬಲರಾಮ ಜೋಷಿ, ತಿಪ್ಪಣ್ಣ, ಕುಮಾರಶೆಟ್ಟಿ, ಪಿ.ಆರ್. ಹೊಸಹಳ್ಳಿಮಠ, ವಿ.ಕೆ. ಒಂಟಿಗೋಡಿಮಠ, ರಾಜೂ ಪೇಂಟರ್, ಆರ್.ಕೆ. ನೆರೆಬೆಂಚಿ, ಎಂ.ಡಿ ನವಾಜ್, ಪ್ರಹ್ಲಾದ್ ದೇಸಾಯಿ, ಪಾಶಾ ಪೇಂಟರ್, ವೀರೇಶ್ ವಿಶ್ವಕರ್ಮ, ರಿಯಾಜ್ ಹಲಕುರ್ಕಿ, ಗವಿಸಿದ್ಧಪ್ಪ ಗುಮಗೇರಿ, ಶರಣಬಸಪ್ಪ ಸುಂಕದ, ಕಲರ್ ಕಿಂಗ್ ಸಿದ್ದು (ಎಲ್ಲರೂ ಕುಷ್ಟಗಿ ತಾಲ್ಲೂಕಿನವರು) ಟಾಕಪ್ಪ ಪೇಂಟರ್, ಮಾರುತಿ ಚಿತ್ರಗಾರ್, ನಾಗರಾಜ ಪೇಂಟರ್, ಇಂದಿರೇಶ್, ಅರವಿಂದ ಜಿ. ತುಕಾರಾಂ, ಕಂಪ್ಲಿ ಬೆಟ್ಟಪ್ಪ, ದಶರಥ ಪೇಂಟರ್, ಮುಂತಾದವರು ಗಂಗಾವತಿ ತಾಲ್ಲೂಕಿನ ಪ್ರಮುಖ ಚಿತ್ರ ಕಲಾವಿದರಾಗಿದ್ದಾರೆ. ಪರಮೇಶ್ವರಪ್ಪ ಯಮನಪ್ಪ ಮುರಳಿ ಕೊಪ್ಪಳದವರಾಗಿದ್ದು ಹೆಸರು ಪಡೆದ ಚಿತ್ರಕಲಾವಿದರಾಗಿದ್ದಾರೆ. ತಳಕಲ್ಲಿನವರಾದ ಕಾಳಪ್ಪ ಪತ್ತಾರ, ಕೆ. ಶಂಕರ ಪತ್ತಾರ, ಕೆ. ಸುಧಾಕರ ಪತ್ತಾರ ಮುಂತಾದವರು ಯಲಬುರ್ಗಿ ತಾಲ್ಲೂಕಿನ ಮುಖ್ಯ ಚಿತ್ರಕಲಾವಿದರಾಗಿದ್ದಾರೆ.

ಫೋಟೊಗ್ರಾಫಿ: ಕೊಪ್ಪಳ ಜಿಲ್ಲೆಯಲ್ಲಿ ಈ ಕಲೆ ಶೈಶವಾವಸ್ಥೆ ಯಲ್ಲಿದ್ದರೂ ಕೊಪ್ಪಳದವರಾದ ಪ್ರಕಾಶ ಕಂದಕೂರ, ಶ್ರೀಮತಿ ವಿನುತಾ ಕಂದಕೂರ, ಇವರ ಅಣ್ಣನ ಮಗ ಭರತ ಕಂದಕೂರ, ಇವರ ಶಿಷ್ಯ ಮಾರುತಿ ಕಟ್ಟೀಮನಿ, ಕುಷ್ಟಗಿ ತಾಲ್ಲೂಕಿನ ದೋಟಿ ಹಾಳದವರಾದ ಶಂಕರ್ ದೋಟಿಹಾಳ ಫೋಟೊಗ್ರಾಫಿಯಲ್ಲಿ ರಾಜ್ಯ ಮಟ್ಟದ ಕಲಾವಿದರಾಗಿದ್ದಾರೆ. ತಾವರಗೇರಿಯಲ್ಲಿ ಕಲಾ ಶಿಕ್ಷಕ ಶರಣಪ್ಪ ನವಲಗುಂದ ಕೂಡ ಫೋಟೊಗ್ರಾಫಿಯಲ್ಲಿ ಹೆಸರು ಮಾಡಿದ್ದಾರೆ. ಜಿಲ್ಲೆಯ ಕಲಾ ಶಿಕ್ಷಕರು ಒಳ್ಳೆಯ ಚಿತ್ರ ಕಲಾವಿದರಾಗಿದ್ದಾರೆ. ಅಳವಂಡಿಯ ಮಲ್ಲಪ್ಪ ಹೋರಿ ಅಂಥವರಲ್ಲಿ ಒಬ್ಬರಾಗಿದ್ದಾರೆ.

ಕಿನ್ನಾಳ ಮೂರ್ತಿಶಿಲ್ಪ: ಪ್ರಾಗ್ಯೈತಿಹಾಸಿಕ ಕಾಲದಿಂದ ಕಲೆ ಯಲ್ಲಿ ಪ್ರಗತಿ ಸಾಧಿಸಿದ ಈ ಜಿಲ್ಲೆಯ ಮೂರ್ತಿಶಿಲ್ಪಗಳು ಬೌದ್ಧ ಹಾಗೂ ಶಾತವಾಹನ ಕಾಲದ ಮೂರ್ತಿಶಿಲ್ಪಗಳನ್ನು ಡಾ. ಅ. ಸುಂದರರವರು ಹೆಸರಿಸಿದ್ದಾರೆ. ಆಧುನಿಕ ಕಾಲದಲ್ಲಿ ಕಿನ್ನಾಳದ ಕಟ್ಟಿಗೆಯ ಕೆತ್ತನೆಗಳು ಬಣ್ಣದ ಮೂರ್ತಿಗಳು ಹಾಗೂ ಗೊಂಬೆ ಗಳು ಕಿನ್ನಾಳದ ಚಿತ್ರಗಾರ ವೆಂಕೋಬಣ್ಣ, ಕೃಷ್ಣಪ್ಪ, ರಾಮ ಚಂದ್ರಪ್ಪ, ಪರಶುರಾಮಪ್ಪ ಚಿತ್ರಗಾರ, ಶ್ರೀಕೃಷ್ಣ ಮೂರ್ತೆಪ್ಪ ಚಿತ್ರಗಾರ, ಶೀನಪ್ಪ ಚಿತ್ರಗಾರ, ನಾರಾಯಣಪ್ಪ, ಸೋಮಣ್ಣ ಚಿತ್ರಗಾರ, ಹೇಮಣ್ಣ ಚಿತ್ರಗಾರ, ಶ್ರೀ ಕಾಂತಪ್ಪ ಶೀನಪ್ಪ ಚಿತ್ರ ಗಾರರು ಮುಂತಾದವರೆಲ್ಲ ಸುಪ್ರಸಿದ್ಧರಾದ ಕಲಾವಿದರಾಗಿದ್ದಾರೆ. ಕೃಷ್ಣಪ್ಪ ವೆಂಕಪ್ಪ ಚಿತ್ರಗಾರ ಅವರಿಗೆ 1969ರಲ್ಲಿ, ರಾಮಚಂದ್ರಪ್ಪ ಪರಶುರಾಮಪ್ಪ ಚಿತ್ರಗಾರರಿಗೆ 1978ರಲ್ಲಿ, ವೆಂಕೋಬಪ್ಪ ಚಿತ್ರಗಾರರಿಗೆ 1985ರಲ್ಲಿ, ನಾರಾಯಣಪ್ಪನವರಿಗೆ 1984ರಲ್ಲಿ ಹಾಗೂ ಸೋಮಣ್ಣನವರಿಗೆ 1991ರಲ್ಲಿ ರಾಜ್ಯ ಪ್ರಶಸ್ತಿ ದೊರಕಿವೆ.

ಚಿತ್ರಗಾರ ಮನೆತನದವರಾದ ಶ್ರೀಮತಿ ಯಮನಮ್ಮ ಚಿತ್ರ ಗಾರ ಕನಕಗಿರಿಯಲ್ಲಿದ್ದಾರೆ. ಕಿನ್ನಾಳ ಹಾಗೂ ಇತರ ಕಡೆಯಲ್ಲಿ ರುವ ಚಿತ್ರಗಾರ ಮನೆತನದ ಹೆಣ್ಣು ಮಕ್ಕಳು ಕೂಡ ಕಲಾವಿದೆಯ ರಾಗಿದ್ದಾರೆ. ಹಿಂದೆ ತವರ ಕುಟ್ಟಿ ಬಣ್ಣ ತಯಾರಿಸುವ ಇನ್ನಿತರ ಲೋಹಗಳನ್ನು ಕುಟ್ಟಿ ಬಣ್ಣ ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಕೃತಿ ರಚನೆಯಲ್ಲಿ ಸಹಾಯ ಮಾಡುತ್ತಿದ್ದರು. ಕಲಾವಿದರು ಕೂಡ ಆಗಿದ್ದಾರೆ.


ಶಿಲ್ಪಕಲೆ: ಕೊಪ್ಪಳದವರಾದ ಶೇಖರಪ್ಪ ಶಿಲ್ಪಿ ಖ್ಯಾತ ಶಿಲ್ಪಿ ಗಳಾಗಿದ್ದು, ಇವರು ರಚಿಸಿದ ಅನೇಕ ವಿಗ್ರಹಗಳು ಬಹು ಸುಂದರವಾಗಿವೆ. ಇವರ ಮಗ ಪ್ರಕಾಶ ಶಿಲ್ಪಿ ಭರವಸೆದಾಯಕ ಕಲಾವಿದರಾಗಿದ್ದಾರೆ. ಕಲ್ಲಿನಲ್ಲಿ ಕೊಳಲು ಸಿದ್ಧಪಡಿಸಿದ್ದು, ಇದನ್ನು ಸ್ವತಃ ನುಡಿಸುತ್ತಾರೆ. ಅಕ್ಕಿಕಾಳು ಗಾತ್ರದ ಕಲ್ಲಿನಲ್ಲಿ ಗಾಂಧೀಜಿ ಪ್ರತಿಮೆ. ಕಲ್ಲಿನ ಸರಪಳಿ, ವಿವಿಧ ಗಾತ್ರದ ಗಂಟೆಗಳು, ದೇವರು, ದೇವತೆಗಳ ವಿಗ್ರಹಗಳು ಇದೀಗ ಸಹಸ್ರ ಆಂಜನೇಯ ವಿಗ್ರಹ ಗಳನ್ನು ಕೆತ್ತುವ ವ್ರತವನ್ನು ತೊಟ್ಟಿದ್ದಾರೆ. ಚಿನ್ನದ ಕಿರೀಟ ರಚನ ಯಲ್ಲಿ ಸಿದ್ಧ ಹಸ್ತರಾಗಿದ್ದಾರೆ. ಕೊಪ್ಪಳ ತಾಲ್ಲೂಕಿನ ಗವಿಮಠದ ತೇರು, ವದಗನಾಳ ಹಮ್ಮಿಗೇಶ್ವರ ತೇರು ಕಲಾಪೂರ್ಣವಾಗಿವೆ.

ಗಂಗಾವತಿಯ ರಾಘವೇಂದ್ರ ಬಯ್ಯಾಪುರ ಚಿತ್ರಕಲಾ ವಿದರು. ಮಣ್ಣಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ಸಿನಲ್ಲಿ ಮೂರ್ತಿ ರಚನೆ ಮಾಡುವುದರಲ್ಲಿ, ಹೊಟೆಲ್, ಚಿತ್ರಮಂದಿರ, ರೆಸಾರ್ಟ, ವೇದಿಕೆ ಅಲಂಕರಣ ಕಲಾವಿದರಾಗಿದ್ದಾರೆ. ಗಂಗಾವತಿ ತಾಲ್ಲೂಕಿನ ಬೂದಗುಂಪಾದ ವಾಗೀಶ್ ಕುಲಕರ್ಣಿ ಪ್ರಗತಿ ಸಾಧಿಸುತ್ತಿದ್ದಾರೆ.

ಮುನಿರಾಬಾದಿನಲ್ಲಿಯ ರಾಷ್ಟ್ರಪತಿ ಪ್ರಶಸ್ತಿವಿಜೇತ ಶಿಕ್ಷಕ ಎ.ಪಿ. ಅಂಗಡಿಯವರು ಸಾಬೂನು ಮತ್ತು ಸೀಮೆ ಸುಣ್ಣದಲ್ಲಿ ಮೂರ್ತಿ ಶಿಲ್ಪಗಳನ್ನು ರಚಿಸುತ್ತ ಗಮನ ಸೆಳೆಯುತ್ತಿದ್ದಾರೆ. ಕಲಿಕಾ ಸಾಮಗ್ರಿಗಳನ್ನು, ಶೈಕ್ಷಣಿಕ ಉಪಕರಣ, ವೈಜ್ಞಾನಿಕ ಸಲಕರಣೆಗಳನ್ನು ಸಿದ್ಧಪಡಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ.


ಆಂಧ್ರದವರು ಗಂಗಾವತಿ ತಾಲ್ಲೂಕಿನಲ್ಲಿ ಸಿಮೆಂಟ್, ಇಟ್ಟಿಗೆ ಮತ್ತು ಕಲ್ಲಿನಲ್ಲಿ ದೇವಾಲಯಗಳ ಗೋಪುರ ನಿರ್ಮಾಣ, ಮಹಾ ದ್ವಾರ ರಚನೆಯನ್ನು ಮಾಡಿಸಿದ್ದಾರೆ. ಸಂಗಾಪುರದ ರಾಮ ದೇವಾಲಯ, ಮುರ್ಲಾನಹಳ್ಳಿಯ ವೆಂಕಟೇಶ ದೇವಾಲಯ, ಜಂಗಮರ ಕಲ್ಗುಡಿಯ ಸೀತಾರಾಮ ದೇವಾಲಯ, ಇದರ ಹತ್ತಿರವೇ 45 ಅಡಿ ಎತ್ತರದ ಸಿಮೆಂಟಿನಲ್ಲಿ ತಯಾರಿಸಿದ ಆಂಜನೇಯ ವಿಗ್ರಹವಿದೆ. ಗಂಗಾವತಿ ನೀಲಕಂಠೇಶ್ವರ ದೇವಾ ಲಯ, ರಾಮಮಂದಿರ ಮುಂತಾದವು ಹೆಸರಾದ ಆಧುನಿಕ ಶಿಲ್ಪದ ದೇವಾಲಯಗಳಾಗಿವೆ. ಗಂಗಾವತಿಯ ಮೇದಾರರು ಆಕರ್ಷಕ ಸ್ವಾಗತ ಕಮಾನು ಮಾಡುತ್ತಾರೆ. ಕಲಾಪ್ರದರ್ಶನ ವಿರುತ್ತದೆ.

ಯಲಬುರ್ಗಾ ತಾಲ್ಲೂಕಿನ ಖಾನಪ್ಪಗೌಡರು ತಳಕಲ್ಲ ದವರು. ಇವರ ಶಿಷ್ಯ ತಳಕಲ್ಲ ಕಾಳಪ್ಪ ಪತ್ತಾರ, ವೀರಭದ್ರಪ್ಪ ಪತ್ತಾರ ತಾವರಗೇರಿ, ಇವರು ತಬಲಾ ವಾದನದಲ್ಲಿ ರಾಜಾಸಾಬ ಕಲ್ಲೂರು, ವಿರೂಪಾಕ್ಷಪ್ಪ ಯಲಿಗಾರ, ಮುರಾರೆಪ್ಪ ಬಗಾಡೆ, ಎಚ್. ಸಿದ್ಧಪ್ಪ ಮಾಸ್ತರ ಓಜಿನಹಳ್ಳಿ, ರಾಮಚಂದ್ರಪ್ಪ ಉಪ್ಪಾರ ಭಾಗ್ಯನಗರ ಹಾರ್ಮೋನಿಯಂ ವಾದನದಲ್ಲಿ ಸಿದ್ದಯ್ಯ ಸೊಪ್ಪಿ ಮಠ ಶಿವಯ್ಯ ಸೊಪ್ಪಿಮಠ, ಶಿವಬಸವಯ್ಯ ಸೊಪ್ಪಿಮಠ, ಷಡಕ್ಷರಯ್ಯ ಸೊಪ್ಪಿಮಠ ಪಿಟೀಲು ವಾದನದಲ್ಲಿ ಸುಪ್ರಸಿದ್ಧ ರಾಗಿದ್ದಾರೆ. ಇವರೆಲ್ಲ ಶಾಸ್ತ್ರೀಯ ಸಂಗೀತಗಾರರು. ಕಿನ್ನಾಳದ



ಬಣ್ಣದ ಹರಕೆಯ ಏಕಶಿಲಾ ಗಣಪತಿ ಮೂರ್ತಿ,
ಭಂಕೂರ (ಗುಲಬರ್ಗಾ)

ಚಿತ್ರ ಸೂಚಿ – ೪೧



ದೀಪಸ್ತಂಭ



ನಾಗಶಿಲ್ಪ





ಛತ್ರಿ – ಚಾಮರ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳ ಸಂಪುಟ



ರಂಗೋಲಿ ಕಲೆ

ಚಿತ್ರ ಸೂಚಿ - ೪೫

ಸೋಮಣ್ಣ ಕುದ್ರಿಮೋತಿ ಪಂಪಣ್ಣ ಕುದ್ರಿಮೋತಿ, ನಿಂಗಪ್ಪ ಗುನ್ನಾಳ ಮೊದಲದವರೆಲ್ಲ ಶಾಸ್ತ್ರೀಯ ಸಂಗೀತಗಾರರು. ಇಟಗಿ ಯಲ್ಲಿದ್ದ ಶಿವರುದ್ರಪ್ಪ ಕಿನ್ನಾಳ 19 ವರ್ಷ ಗರುಡರ ನಾಟಕ ಕಂಪನಿಯ ಹಾರ್ಮೋನಿಯಂ ವಾದಕರಾಗಿದ್ದ ಶಾಸ್ತ್ರೀಯ ಸಂಗೀತಗಾರರು.

ಗುರುರಾವ ದೇಶಪಾಂಡೆಯವರ ಅಳಿಯಂದಿರಾದ ಮಾಧವರಾವ್ ಇನಾಮದಾರ ಕೊಪ್ಪಳದ ಶಾಸ್ತ್ರೀಯ ಸಂಗೀತ ಗಾರರು. ಯಲಬುರ್ಗಾ ತಾಲ್ಲೂಕಿನ ಮುಧೋಳದ ಬಸವರಾಜ ಗೋನಾಳ, ದೇವೇಂದ್ರಕುಮಾರ ಪತ್ತಾರ ರಾಜ್ಯ, ರಾಷ್ಟ್ರಮಟ್ಟದ ಸಂಗೀತ ಸಮಾರಂಭಗಳಲ್ಲಿ ಪಾಲ್ಗೊಂಡಿದ್ದಾರೆ. ಯಲಬುರ್ಗಾ ತಾಲ್ಲೂಕಿನ ಮಂಡಲಗಿರಿಯ ಶಿವರಾಜ ಗವಾಯಿಗಳವರು ಗದಗ ಪುಣ್ಯಾಶ್ರಮದ ಕಲಾವಿದರು, ಶಾಸ್ತ್ರೀಯ ಸಂಗೀತ, ಹಾಗೂ ವಚನ ಸಂಗೀತದಲ್ಲಿ ಸುಪ್ರಸಿದ್ಧರು. ಶಿವಮೊಗ್ಗ ಹಾಗೂ ದಾವಣಗೇರಿಗಳಲ್ಲಿ ಸಂಗೀತ ಶಾಲೆ ನಡೆಸಿದ್ದರು. ಕಲ್ಲೂರಿನ ಕಲ್ಲಯ್ಯನವರು ಪಂ. ಪುಟ್ಟರಾಜ ಕವಿ ಗವಾಯಿಗಳಲ್ಲಿ ಸಂಗೀತ ಸಾಧನೆ ಮಾಡುತ್ತಿದ್ದು ವೀರೇಶ್ವರ ಪುಣ್ಯಾಶ್ರಮದ ಸಂಗೀತ ಸಾಧಕರಾಗಿದ್ದಾರೆ. ಅವರ ಉತ್ತರಾಧಿಕಾರಿಯಾಗಿದ್ದಾರೆ.

ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯ ಹಾಗೂ ಸಂಗೀತ ಶಾಲೆ ನಡೆಸಿದ ಅಳವಂಡಿಯ ಶಿವಮೂರ್ತೆಪ್ಪ ಗೊಂದಿಹೊಸಳ್ಳಿ ಶ್ರೇಷ್ಠಮಟ್ಟದ ತಬಲಾಪಟು ಹಾಗೂ ಶಾಸ್ತ್ರೀಯ ಸಂಗೀತ ಗಾರರಿಗೆ ಸಾಥ್ ನೀಡಿದವರು. ಗಂಗಾವತಿಯ ಬಸಲಿಂಗಯ್ಯ ಹಿರೇಮಠ ಪಿಟೀಲು ವಾದಕರು. ಇವರ ಶ್ರೀಮತಿ ಅಕ್ಕ ಮಹಾದೇವಿ ಕೂಡ ಪಿಟೀಲು ವಾದಕರು. ಮೇಣೇಧಾಳದ ಮರಿರಾಜರು ಬಾಸುರಿ ವಾದಕರು, ಹಾಗೂ ಹಾರ್ಮೋನಿಯಂ ವಾದಕರು. ಗಿಣಿಗೇರಿಯ ದೇವರಾಜರು ಕ್ಯಾಸಿಯೋ ವಾದಕರು, ಹಿರೇಸಿಂದೋಗಿ ಗುಡದೀರಪ್ಪ, ಮಸಬ ಹಂಚಿನಾಳದ ಶರಣಪ್ಪ ಶಹನಾಯಿ ವಾದಕರು, ಕುಕನೂರಿನ ಶಿವಕುಮಾರ ಭಜಂತ್ರಿ ಶ್ರೇಷ್ಠಮಟ್ಟದ ತಬಲಾ ಪಟುಗಳು. ತಾವರಗೇರಿಯ ಅಂಬಣ್ಣ ಸಂಗೀತ ಶಿಕ್ಷಕರಾಗಿದ್ದುಕೊಂಡು ಬಾಸುರಿ ವಾದಕರಾಗಿದ್ದಾರೆ. ಪಂ. ತಾಳಕೇರಿ ಬಸವರಾಜರು ಕೂಡ ಸಂಗೀತ ಹಾಗೂ ತತ್ವ ಪದಕಾರರಾಗಿದ್ದಾರೆ. ಕುಷ್ಟಗಿಯ ಸಿದ್ಧಲಿಂಗಯ್ಯ ಹಿರೇಮಠ, ತಬಲಾವಾದಕರು ರಾಜ್ಯ ಪ್ರಶಸ್ತಿ ವಿಜೇತರು. ವಿರೂಪಕ್ಷಪ್ಪನವರು ಇಟಗಿ, ದೊಡ್ಡಯ್ಯ ಕಲ್ಲೂರ ಇವರು ಗಂಗಾವತಿಯ ಗಾಯ ಕರು. ವಿರೂಪಕ್ಷಪ್ಪನವರು ಹಂಪಿ ಕನ್ನಡ ವಿ.ವಿಯಲ್ಲಿ ತಬಲಾ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ವೀರೇಶ ಹಿಟ್ನಾಳ ಶ್ರೀಗವಿಮಠ ದಲ್ಲಿ ಸಂಗೀತಶಾಲೆ ತೆರೆದು ಶಿಕ್ಷಕರಾಗಿದ್ದಾರೆ. ಕುದ್ರಿಮೋತಿ ಹನುಮಂತ ಕುಮಾರ ಮುಧೋಳ ರಾಜ್ಯ ಪ್ರಶಸ್ತಿ ಪಡೆದ ಶಹನಾಯಿ ಹಾಗೂ ಬಾಂಸುರಿ ಕಲಾವಿದರಾಗಿದ್ದಾರೆ. ಕೊಪ್ಪಳದ ಬಾಲಿಕೆಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಂಗೀತ ಅಧ್ಯಾಪಕರಾದ ಸದಾಶಿವ ಪಾಟೀಲರು ತಬಲಾ ವಿದ್ವಾನ ರಾಗಿದ್ದು, ಸುಗಮ ಸಂಗೀತಗಾರರಾಗಿದ್ದಾರೆ. ಭಾಗ್ಯನಗರದ ರಾಮಚಂದ್ರಪ್ಪ ಉಪ್ಪಾರ, ಅಂಬಿಕಾ ಉಪ್ಪಾರ, ಶಾರದಾ ಸಂಗೀತ ಶಾಲೆಯ ಹನುಮಂತರಾವ್ ಬಂಡಿ, ಗಂಗೂಶಾಸ್ತ್ರಿ, ಅನ ಸೂಯಾ ಶಾಸ್ತ್ರೀ ಜಾಗೀರದಾರ, ಮಂಜುಳಾ ಭಾವಿಕಟ್ಟಿ, ಹುಲಿಗಿ ಮುನಿರಾಬಾದದ ಸಂಗೀತ ಸ್ನಾತಕೋತ್ತರ ಪದವಿ ಪಡೆದ ಪುಷ್ಪಾವತಿ ಪ್ರತಿಭಾವಂತ ಶಾಸ್ತ್ರೀಯ ಕಲಾವಿದರಾಗಿದ್ದಾರೆ. ವಿಜಯಲಕ್ಷ್ಮಿ ಲಿಂಗಾಯತ (ಗೊಂದಕರ) ಸ್ನಾತಕೋತ್ತರ ಪದವಿ ಪಡೆದ ಪಂ. ಬಸವರಾಜ ರಾಜಗುರು ಇವರ ಶಿಷ್ಯೆಯಾಗಿ ದ್ದಾರೆ. ಯಂಕವ್ವ ಕಟ್ಟೀಮನಿ ಕರ್ನಾಟಕ ಹಾಗೂ ಹಿಂದೂಸ್ತಾನಿ ಗಾಯಕರಾಗಿದ್ದರು. ಯಂಕವ್ವ ಭೀಮಪ್ಪ ಕಟ್ಟೀಮನಿ, ಕಾಶಿಬಾಯಿ ಕಟ್ಟೀಮನಿ, ಸುಭದ್ರಮ್ಮ ಹುಣಿಶೀಮರದ, ಶಾರದಾ ಹುಣಿಶೀಮರದ ರಂಗಭೂಮಿ ಕಲಾವಿದರಾಗಿದ್ದು ಸಂಗೀತಗಾರ ರಾಗಿದ್ದಾರೆ.

ಚಲನಚಿತ್ರ: ಅಳವಂಡಿಯವರಾದ ಭಗವಂತರಾವ್ ಅಳ ವಂಡೀಕರ 1960ರ ದಶಕದಲ್ಲಿ ಜರ್ಮನಿಗೆ ಹೋಗಿ ಸಿನೆಮಾಟೊಗ್ರಾಫಿಯಲ್ಲಿ ತರಬೇತಿ ಪಡೆದವರಾಗಿದ್ದು, ತಾಂತ್ರಿಕ ಪರಿಣತರು, 1956ರಲ್ಲಿ ಶ್ರೀಕೃಷ್ಣ ಗಾರುಡಿಯಲ್ಲಿ ಭೀಮನ ಪಾತ್ರ ವಹಿಸಿದ ವೀರಣ್ಣ ಮಂಗಳೂರು ರಂಗಭೂಮಿ ಹಾಗೂ ಚಲನಚಿತ್ರ ರಂಗದ ಪ್ರಸಿದ್ಧ ಕಲಾವಿದರು. ಯಲಬುರ್ಗಾ ತಾಲ್ಲೂಕಿನ ಮಂಗಳೂರಿನವರು. ಭಾಗ್ಯನಗರದ ಪ್ರಹ್ಲಾದ್ ಬೆಟಗೇರಿ, ಮಾರುತಿ ಬಗಾಡೆ, ವಿಠ್ಠಪ್ಪ ಗೋರಂಟ್ಲಿ ಚಲನಚಿತ್ರ ಕಲಾವಿದರಾಗಿದ್ದಾರೆ. ಗಂಗಾವತಿ ತಾಲ್ಲೂಕಿನ ಎಸ್.ವಿ. ಪಾಟೀಲ ಗುಂಡೂರ ಚಂದನದಲ್ಲಿ ಕಿರುನಾಟಕಗಳನ್ನು ಪ್ರದರ್ಶಿಸಿದ್ದಾರೆ. ಕಿರುಪಾತ್ರಗಳನ್ನು ವಹಿಸಿದ್ದಾರೆ. ಮಹಾಂತೇಶ ಮಲ್ಲನಗೌಡರು ಕೆ. ಶಿವರಾಂರ ಚುಂಬನ ಚಲನ ಚಲನಚಿತ್ರಕ್ಕೆ ಹಾಡುಗಳನ್ನು ಬರೆದಿದ್ದಾರೆ. ಗಂಗಾವತಿ ತಾಲ್ಲೂಕಿನ ಬಸಾಪಟ್ಟಣದ ಶ್ರೀಕಾಂತ ತೆಲಗು ಚಿತ್ರರಂಗದ ಹೆಸರಾಂತ ನಾಯಕ ನಟರಾಗಿದ್ದಾರೆ, ಬೇಡಿಕೆಯ ಚಲನಚಿತ್ರ ನಟರಾಗಿದ್ದಾರೆ. ಬಿಳೇಭಾವಿ ಫಕೀರಪ್ಪ, ಫಕೀರೇಶ್ ಬಹಾದ್ದೂರ ಕೂಡ ಚಿತ್ರರಂಗದ ಜಿಲ್ಲೆಯ ಕಲಾವಿದರಾಗಿದ್ದಾರೆ.

(ಎಚ್‌ಎಸ್‌ಪಿ)

ಲಿ



ಲಿಂಗಪ್ಪ ಕೆ.: ಸಾಮಾಜಿಕ ಕಳಕಳಿಯ ಬಹುಮುಖ ಪ್ರತಿಭೆಯ ಡಾ.ಕೆ. ಲಿಂಗಪ್ಪ ವೃತ್ತಿಯಿಂದ ವಿಜ್ಞಾನಿಯಾದರೂ ಪ್ರವೃತ್ತಿಯಿಂದ ಸಮಾಜ ಚಿಂತಕರು. ಅಸ್ಪೃಶ್ಯತೆ, ಅನಕ್ಷರತೆ, ಮೂಢನಂಬಿಕೆಗಳ ವಿರುದ್ಧ ಸಿಡಿದೆದ್ದು, ವೈಜ್ಞಾನಿಕ ಮನೋಭಾವ, ಅಕ್ಷರದ ಅರಿವು, ಸಾಮಾಜಿಕ ಸುಧಾರಣೆಯ ಮಂತ್ರ ಜಪಿಸಿದವರು, ತಮ್ಮ ಇತಿ ಮಿತಿಯಲ್ಲೇ ಅವುಗಳನ್ನು ಸಾಧಿಸಿ ತೋರಿಸಿದವರು.

2008ರಿಂದ ಈತನಕ ಇವರು, ಸಮುದಾಯದ ಸಂಘಟಕರಾಗಿ, ಕಾರ್ಯದರ್ಶಿಯಾಗಿ, ಪ್ರತಿವರ್ಷ ನೂರಾರು ಮಕ್ಕಳಿಗೆ ಬೇಸಿಗೆ ಶಿಬಿರ ನಡೆಸಿ ಕೊಟ್ಟಿದ್ದಾರೆ. ನಟನೆ, ಸಂಗೀತ, ನೃತ್ಯ ತರಬೇತಿಯನ್ನು ಪಡೆದ ನೂರಾರು ತರುಣ ಕಲಾವಿದರು ರಂಗಭೂಮಿಯ ಕಡೆ ಮುಖ ಮಾಡಲು ಕಾರಣ ಕರ್ತರಾಗಿದ್ದಾರೆ.

ಬೆಂಗಳೂರಿನ ಎನ್‌ಎಸ್‌ಡಿ, ಆರ್‌ಆರ್‌ಸಿ, ರಂಗಾಯಣ ಮೈಸೂರು, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮುಂತಾದ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಘ ಸಂಸ್ಥೆಗಳೊಂದಿಗೆ ಸಹಯೋಗದಲ್ಲಿ ರಂಗತರಬೇತಿ ಶಿಬಿರ, ನೇಪಥ್ಯ ಶಿಬಿರ, ನಾಟಕ ಪ್ರದರ್ಶನಗಳನ್ನು ಮಾಡಲು ಮುಖ್ಯ ಸಂಘಟಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಲೆ, ಸಾಹಿತ್ಯ ಮತ್ತು ರಂಗಭೂಮಿಯ ಇವರ ಸೇವೆಯನ್ನು ಗುರುತಿಸಿ ಬಿಜಾಪುರ ಜಿಲ್ಲೆಯ 'ಶ್ರೀ ಬಸವೇಶ್ವರ ಕರ್ಮವೀರ ಕಲಾ ಸಾಹಿತ್ಯ ಸಾಂಸ್ಕೃತಿಕ ವೇದಿಕೆ–ಅಹೇರಿ ವತಿಯಿಂದ 2011ರಲ್ಲಿ ಬಸವ ಪ್ರಶಸ್ತಿ ನೀಡಿ ಗೌರವಿಸಿದೆ.

ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ 2011ನೇ ಮಹಾತ್ಮಾ ಜ್ಯೋತಿಬಾ ಪುಲೆ ರಾಷ್ಟ್ರೀಯ ಪ್ರಶಸ್ತಿಗೆ ಇವರು ಭಾಜನರಾಗಿದ್ದಾರೆ. ಸಧ್ಯ ಡಾ. ಲಿಂಗಪ್ಪ ಅವರು ಗುಲಬರ್ಗಾ ವಿಶ್ವವಿದ್ಯಾಲಯದ ಸೂಕ್ಷ್ಮಜೀವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. (ಎಸ್‌ಆರ್‌ಜಿ)


ಲಿಂಗರಾಜ ಪಲ್ಲೇದ: ರಂಗಭೂಮಿ ಕಲಾವಿದ. ಕೊಪ್ಪಳ ಜಿಲ್ಲೆಯ ಪ್ರಮುಖ ಕಲಾವಿದರಲ್ಲಿ ಒಬ್ಬರು. ಕೊಪ್ಪಳ ಜಿಲ್ಲೆಯ ಯತ್ನಟ್ಟಿಗ್ರಾಮದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಬೆಳೆದ ನಂಟು ರಂಗಭೂಮಿ. ಗ್ರಾಮದ ಗುಡಿಯ ಮುಂದಿನ ಕಟ್ಟೆಯನ್ನೇ ವೇದಿಕೆಯಾಗಿಸಿಕೊಂಡು ಹುಟ್ಟೂರ ಜನಕ್ಕೆ ತಮ್ಮ ರಂಗಪ್ರತಿಭೆ ತೋರಿಸಿದ ಇವರು ಈವರೆಗೂ ಬಣ್ಣದ ಬದುಕು ಸಾಗಿಸುತ್ತಿದ್ದಾರೆ. ನಟರಾಗಿ ಅಷ್ಟೇ ಅಲ್ಲ, ಗಾಯಕರಾಗಿ, ಕಂಪನಿ ವ್ಯವಸ್ಥಾಪಕರಾಗಿ ರಂಗಸೇವೆ ಮಾಡುತ್ತ ಹತ್ತಕ್ಕೂ ಹೆಚ್ಚು ವೃತ್ತಿನಾಟಕ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸುಳ್ಯದ ಶ್ರೀಶೈಲ ಮಲ್ಲಿಕಾರ್ಜುನ ಸಂಘ, ಸೂಡಿಯ ಭಾರತಿ ನಾಟ್ಯಸಂಘ, ಗದಗಿನ ಕೋಟೇಶ್ವರ ಮತ್ತು ವೀರೇಶ್ವರ ನಾಟ್ಯಸಂಘ ಅಲ್ಲದೇ ಗುಡಗೇರಿ, ಸಂಕನೂರ, ಮಂಡಲಗಿರಿಯ ಕಂಪನಿಗಳಲ್ಲೂ ರಂಗಕರ್ಮಿಯಾಗಿ ಹೆಸರು ಮಾಡಿದ್ದಾರೆ. ಇವರ ಬಣ್ಣದ ಬದುಕು ತೆರೆದದ್ದು ಮೈಸೂರಿನ ಶ್ರೀಕಂಠೇಶ್ವರ ನಾಟ್ಯ ಸಂಘ.

ನಾಯಕ, ಖಳನಾಯಕ, ಹಾಸ್ಯನಟ ಹೀಗೆ ವೈವಿಧ್ಯಮಯ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಸತ್ಯಹರಿಶ್ಚಂದ್ರ, ರೇಣುಕಾ ಮಹಾತ್ಮೆ, ಬದುಕು ಬಂಗಾರವಾಯಿತು, ಸಿಂಧೂರ ಲಕ್ಷ್ಮಣ, ಸಂಪತ್ತಿಗೆ ಸವಾಲ್ ಮುಂತಾದ ನಾಟಕಗಳಲ್ಲಿ ಇವರು ನೀಡಿದ ಅಭಿನಯ ಮನೋಜ್ಞವಾದದ್ದು. ಇವರ ನಟನೆಯ ಎಂಥಾ ಮೋಜಿನ ಕುದುರೆ, ಎಚ್ಚರ ತಂಗಿ ಎಚ್ಚರ ನಾಟಕಗಳು ನೂರೈವತ್ತಕ್ಕೂ ಹೆಚ್ಚು ಪ್ರದರ್ಶನ ಕಂಡಿದ್ದು ಇವರ ಹೆಗ್ಗಳಿಕೆ. ನಿರಂತರ 40 ವರ್ಷಗಳಿಂದ ವೃತ್ತಿ ರಂಗಭೂಮಿಯಲ್ಲಿರುವ ಇವರಿಗೆ ಮಹಾತ್ಮ ಜ್ಯೋತಿಬಾಪುಲೆ, ಪೆರಿಯಾರ ರಾಮಸ್ವಾಮಿ ಪ್ರಶಸ್ತಿ ಸಂದದ್ದು, ಕರ್ನಾಟಕ ನಾಟಕ ಅಕಾಡೆಮಿ ಇವರಿಗೆ ರಂಗ ಪ್ರಶಸ್ತಿ ನೀಡಿ ಗೌರವಿಸಿದೆ. (ಪಿಕೆಕೆ)

ಲೋ

ಲೋಕಯ್ಯ ಕೆ.ಎಂ.: ಚಿತ್ರಕಲಾವಿದ. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ತಡಕಲ್ ಗ್ರಾಮದವರು. ಪ್ರಾರಂಭದಿಂದಲೂ ಚಿತ್ರಕಲೆಯ ಪ್ರಭಾವದಲ್ಲಿ ಬೆಳೆದವರು. ನಗರದ ಖ್ಯಾತ ಕಲಾವಿದರಾದ ವಿ.ಜಿ. ಅಂದಾನಿಯವರ ಗರಡಿಯಲ್ಲಿ ಕಲೆಯ ಸಕಲ ಆಯಾಮಗಳನ್ನು ಕರಗತ ಮಾಡಿಕೊಂಡು, ದಿ ಐಡಿಯಲ್ ಫೈನ್ ಆರ್ಟ್ ಇನ್ಸಟಿಟ್ಯೂಟ್‌ನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಹಿನ್ನೆಲೆಯಲ್ಲಿ, ಹಳ್ಳಿಯ ಸೊಗಡಿನಲ್ಲಿ ಬೆಳೆದ ಇವರು, ಅಲ್ಲಿಯ ವಾತಾರಣದಲ್ಲಿ ಅಡಗಿರುವ ಸುಖ, ದುಃಖ, ನೋವು, ನಲಿವು, ಪ್ರೇಮ, ಕಾಮ, ಆಸೆ, ನಿರಾಶೆಗಳನ್ನು ಅತಿ ಹತ್ತಿರದಿಂದ ಬಲ್ಲವರು.

ಪರಿಸರ ಮಾನವನ ಇನ್ನೊಂದು ಪ್ರಮುಖ ಅಂಗ. ಈ ಪರಿಸರವೂ ಮನುಷ್ಯ ತನ್ನ ದಿನ ನಿತ್ಯದ ಜೀವನದಲ್ಲಿ ಅನೇಕ ಸನ್ನಿವೇಶಗಳು ನಿರ್ಮಾಣವಾಗಲು ಕಾರಣನಾಗುತ್ತಾನೆ. ಇಂತಹ ಸನ್ನಿವೇಶಗಳು ತಮ್ಮ ಮನಸ್ಸನ್ನು ಗಾಢವಾಗಿ ಕಲಕಿ ಅವುಗಳನ್ನು



ಕ್ಯಾನ್‌ವಾಸ್ ಮೇಲೆ ಬಿಂಬಿಸಲು ಪ್ರೇರೇಪಿಸುತ್ತವೆ. ಇಲ್ಲಿ ಕ್ಯಾನ್‌ವಾಸ್ ಹಾಗೂ ತೈಲವರ್ಣದಲ್ಲಿನ ಅವರ ಮಾನಸಿಕ ತುಮುಲಕ್ಕೆ ಮುಕ್ತಿ ನೀಡುವ ಪ್ರಮುಖ ಸಾಧನಗಳಾಗಿವೆ.

ಆ ಕೃತಿಗಳಿಂದ ಕಲಾಕೃತಿ ಅವರ ದೃಷ್ಟಿಯಲ್ಲಿ ಗೌಣವೆನ್ನಬಹುದು. ಅದಕ್ಕೆಂದೇ ಅವರ ಪ್ರತಿಯೊಂದು ಕೃತಿಯಲ್ಲಿ ಆ ಕೃತಿಗಳನ್ನು ಬಳಸುತ್ತಾರೆ. ನೈಜವಾಗಿ ಅಲ್ಲದಿದ್ದರೂ, ಡೆಸ್ಟ್ರಾಯ್ ಮಾಡಿದರೂ ಅದನ್ನು ಬಳಸುತ್ತೇನೆ ಎಂದು ಕಲಾಕೃತಿಗಳಲ್ಲಿ ಆ ಕೃತಿಗಳ ಮಹತ್ವ ಪ್ರತಿಪಾದಿಸುತ್ತಾರೆ.

ಉಪನ್ಯಾಸಕರಾಗಿದ್ದು, ತಮ್ಮ ಕಲಾ ಕೃಷಿಯಲ್ಲಿ ನಿರಂತರ ತೊಡಗಿಸಿಕೊಂಡಿರುವ ಕಲಾವಿದ ಇವರು, ರಾಜ್ಯ ಲಲಿತಕಲಾ ಅಕಾಡೆಮಿಯ 30ನೆಯ ವಾರ್ಷಿಕ ಕಲಾಪ್ರದರ್ಶನದ ಪ್ರಶಸ್ತಿ ಪಡೆದಿದ್ದಾರೆ. ಇದಲ್ಲದೆ, ದೆಹಲಿಯ ಆವಂತಿಕಾ ಪ್ರಶಸ್ತಿ, ಕಲಬುರ್ಗಿ ವಿಶ್ವವಿದ್ಯಾಲಯ ನೀಡುವ ರಾಜ್ಯೋತ್ಸವ ಪ್ರಶಸ್ತಿ, ಮೈಸೂರಿನ ಅಖಿಲ ಭಾರತ ಆರ್ಟ್ ಮತ್ತು ಕ್ರಾಫ್ಟ್ ಪ್ರದರ್ಶನ ಪ್ರಶಸ್ತಿಗಳನ್ನು ಪಡೆದಿದ್ದಾರೆ.



'ಮೆಡಿಟೇಶನ್' ತೈಲವರ್ಣ ಮಾಧ್ಯಮ

ಅಂತಾರಾಷ್ಟ್ರೀಯ ಕಲಾ ಸಿಂಪೋಜಿಯಂ ಕದಂಬೋತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ರಾಷ್ಟ್ರದ ಅನೇಕ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡು ಮೆಚ್ಚುಗೆ ಪಡೆದಿವೆ. ಅದೇ ರೀತಿ ರಾಷ್ಟ್ರೀಯ ಕಲಾಮೇಳ ಮುಂಬೈ, ಬೆಂಗಳೂರು, ಕೋಲ್ಕತ್ತಾ, ನವದೆಹಲಿಯ ಕೇಂದ್ರ ಲಲಿತಕಲಾ ಅಕಾಡೆಮಿಯವರ 40ನೇ ವಾರ್ಷಿಕ ಪ್ರದರ್ಶನ, ನಾಗಪೂರ ಕಲಾ ಪ್ರದರ್ಶನ ಹೀಗೆ ಅನೇಕ ಪ್ರದರ್ಶನಗಳಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿರುವದು ಇವರ ಪ್ರತಿಭೆಗೆ ಗರಿಮೂಡಿಸಿವೆ.

(ಎಚ್‌ವಿಎಂ)



ಲೋಹಾರ ಎಂ.ಬಿ.: ಚಿತ್ರಕಲಾವಿದ. ನಗರದ ಹಿರಿಯ ಕಲಾವಿದರ ಪಟ್ಟಿಗೆ ಸೇರುವ ಎಂ.ಬಿ. ಲೋಹಾರ ಅವರು 1949 ಆಗಸ್ಟ 10ರಂದು ಜನಿಸಿದರು. ಬೀದರ ಜಿಲ್ಲೆಯ ಕಣಜಿ ಗ್ರಾಮದಲ್ಲಿ ಜನಿಸಿದರು. ಮನೆತನದ ವೃತ್ತಿ ಕಮ್ಮಾರಿಕೆ. ಮನೆತನದ ವೃತ್ತಿಯ ಜೊತೆಗೆ ಗ್ರಾಮದ ಪರಿಸರದ ಪ್ರಭಾವದಿಂದಾಗಿ ಗೊಂಬೆಗಳ ತಯಾರಿಕೆ ಮತ್ತು ಗೋಡೆಗಳ ಮೇಲೆ ಚಿತ್ರಿಸುತ್ತಾ ಇವರು ಬಾಲ್ಯದಲ್ಲಿಯೇ ಕಲಾಸಕ್ತಿಯನ್ನು ಹೊಂದಿದ್ದರು. ಮಣ್ಣಿನ ಎತ್ತುಗಳನ್ನು ಮಾಡುವುದರೊಂದಿಗೆ ಗೋಡೆಗಳ ಮೇಲೆ ನವಿರಾದ ಚಿತ್ರಗಳನ್ನು ಬಿಡಿಸುವುದರ ಮೂಲಕ ಇವರ ಕಲಾ ಬದುಕು ಆರಂಭವಾಯಿತು. ಹಬ್ಬ-ಹರಿದಿನಗಳಲ್ಲಿ, ಮದುವೆ-ಮುಂಜಿವೆಗಳಲ್ಲಿ ಗ್ರಾಮಸ್ಥರ ಮನೆಗಳಿಗೆ ಹೋಗಿ ಚಿತ್ತಾರಗಳನ್ನು ಬಿಡಿಸುವುದು, ಮೊಹರಂ ವೇಳೆ ತಮ್ಮೂರಲ್ಲಿ ಅಲೈ ಪೀರ್ ಕೂಡಿಸುವ ಸ್ಥಳದಲ್ಲಿ ಬಣ್ಣ ಬಣ್ಣದ ಕಾಗದಗಳಿಂದ ಅಲಂಕಾರ ಮಾಡುವುದು; ಒಂದಲ್ಲ ಎರಡಲ್ಲ ಅನೇಕ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಇವೆಲ್ಲದರ ಜೊತೆಗೆ ಚುನಾವಣೆ ಬಂತೆಂದರೆ ಬ್ಯಾನರ್‌ಗಳನ್ನು ಬರೆಯುವುದು, ಗೋಡೆಗಳ ಮೇಲೆ ಅಭ್ಯರ್ಥಿಗಳ ಹೆಸರು ಮತ್ತು ಪಕ್ಷದ ಚಿಹ್ನೆಯನ್ನು ಬಿಡಿಸುವ ಕಾಯಕವನ್ನೂ ನಿರ್ವಹಿಸಿದ್ದುಂಟು.

ಕಣಜಿಯ ಪರಿಚಯಸ್ಥರ ಮೇರೆಗೆ ಶಿಕ್ಷಣ ದಾಹ ಇಂಗಿಸಿಕೊಳ್ಳಲು ಕಲಬುರ್ಗಿಗೆ ಬಂದರು. ಇಲ್ಲಿನ ಶ್ರೀ ಶರಣಬಸವೇಶ್ವರ ಸಂಸ್ಥೆಯಲ್ಲಿ ಸಾಮಾನ್ಯ ಶಿಕ್ಷಣಕ್ಕೆ ಪ್ರವೇಶ ಪಡೆದರು. ಈ ಹಂತದಲ್ಲೂ ಬಣ್ಣ-ಕುಂಚಗಳೆಡೆಗೆ ಹೆಚ್ಚು ಆಕರ್ಷಿತರಾದರು. ಕಲಾ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಮುಂದುವರೆಸುವ ಕನಸೂ ಕಂಡರು. ಅಷ್ಟೊತ್ತಿಗೆ ಗುಲಬರ್ಗಾದಲ್ಲಿ ಆದರ್ಶ ಕಲಾಶಾಲೆಯು ಸ್ಥಾಪನೆಗೊಂಡು ಕಲಾಶಿಕ್ಷಣವನ್ನು ನೀಡಲು ತಯಾರಾಗಿತ್ತು.



ಕೌದಿ ಕಲೆ



ಮದರಂಗಿ ಚಿತ್ರಕಲೆ



ಗರಡಿಮನೆ



ಗರಡಿಮನೆಯ ವ್ಯಾಯಾಮ ಸಾಧನಗಳು



ಕೋಲೆಬಸವ



ಜೂಲುಗಳು

ಹೈದರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಬಳ್ಳಾರಿ ಜಿಲ್ಲೆ ಸಂಪುಟ ೪



'ಶೀಷಿಕೆ ರಹಿತ' ತೈಲವರ್ಣ ಮಾಧ್ಯಮ

ಲೋಹಾರರು ಈ ಕಲಾಶಾಲೆಯಲ್ಲಿ ಚಿತ್ರಕಲೆಯ ಅಧ್ಯಯನಕ್ಕೆಂದು ಪ್ರವೇಶ ಪಡೆದರು. ಹೆಸರಾಂತ ಚಿತ್ರಕಲಾವಿದ ವ್ಹಿ.ಜಿ. ಅಂದಾನಿ, ಶಿವಶರಣಪ್ಪ ಉಪ್ಪಿನ್, ಬಸವರಾಜ ಉಪ್ಪಿನ್; ಇವರೆಲ್ಲರು ಇವರ ಒಡನಾಡಿಗಳಾಗಿದ್ದರು. ನಂತರ ಇವರು ಅದೇ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತಿ ಹೊಂದಿದ್ದಾರೆ. ಎಂ.ಬಿ. ಲೋಹಾರರ ಮೂಲ ಕಲಾಕೃತಿಗಳಲ್ಲಿ ನಿರ್ದಿಷ್ಟ ಒಲವು ಮತ್ತು ವ್ಯಕ್ತಿಗತ ನಿಲುವುಗಳ ಸ್ಪಷ್ಟತೆಯನ್ನು ಕಾಣಬಹುದು. ಕಲಾ ವಿಷಯಗಳೆಂದರೆ ಬಡತನ, ಅಸಮಾನತೆ, ಫ್ಯಾಂಟಸಿ ಈ ಕೃತಿಗಳಲ್ಲಿ ದುಡಿಸಿಕೊಂಡಿರುವ ಕೆಲವು ಮುಖ್ಯ ದೃಶ್ಯ ಪರಿಕರ ತಮ್ಮದೇ ಆದ ಸ್ವತಂತ್ರ ಶೈಲಿ ಮತ್ತು ಅಸಹಜ ಅವಾಸ್ತವ ಪ್ರಾಣಿ, ಗಿಡಗಳ ರೂಪಗಳ ಮಹತ್ವ ಇದೆ. ಭಾವನೆಗಳ ಮೇಲೆ ಕಂಡಂತಹ ಅಪರಿಚಿತ ಹಾಗೂ ನಿಗೂಢ ರೀತಿ ಇವೆ. ಅದ್ಭುತ ಮತ್ತು ಕುತೂಹಲಗಳ ಅನುಭವ ಅನುಕಂಪಗಳ ಮಿಶ್ರ ಭಾವನೆಗಳಿಂದ ವ್ಯಕ್ತಿಗಳ ನಗ್ನತೆ ಶಾರೀರಿಕ ನೋಟ ಅಪರಿಚಿತ ಅನುಭವವಾಗುತ್ತಿದೆ.

ಬಡತನ, ಶೋಷಣೆಗಳು ಲೋಹಾರರ ಕಲಾತ್ಮಕತೆಯನ್ನು ಪ್ರದರ್ಶಿಸುವ ಪ್ರಮುಖ ವಸ್ತುಗಳಾಗಿವೆ. ಹಲವಾರು ವೈವಿಧ್ಯಮಯ ಚಿತ್ರಗಳಿಗೆ ಇದೆ ತಳಹದಿಯಾಗಿದೆ. ರೇಖಾಚಿತ್ರ ಮತ್ತು ಪೇಂಟಿಂಗ್‌ಗಳಲ್ಲಿ ತಮ್ಮ ಕಲಾತ್ಮಕತೆಯನ್ನು ಅನಾವರಣಗೊಳಿಸಿದ್ದಾರೆ. ಇವರ ತೈಲ ವರ್ಣಕೃತಿಯಲ್ಲಿ ಸ್ತ್ರೀ ಮತ್ತು ನಿಸರ್ಗವನ್ನು ಸಮ್ಮಿಲನಗೊಳಿಸಿದ್ದಾರೆ. ಇವರ ಕಲಾಕೃತಿಗಳು ದೇಶದ ಪ್ರಸಿದ್ಧ ಕಲಾ ಗ್ಯಾಲರಿಗಳಲ್ಲಿ ಪ್ರದರ್ಶಿತಗೊಂಡು ಜನ ಮೆಚ್ಚುಗೆ ಪಡೆದಿದೆ. ಹೈದ್ರಾಬಾದ ಆರ್ಟ್ ಸೊಸೈಟಿಯ ಅಖಿಲ ಭಾರತ ಕಲಾಪ್ರದರ್ಶನ, ಮೈಸೂರು ದಸರಾ ಅಲ್ಲದೆ ದಿ ಐಡಿಯಲ್ ಫೈನ್ ಆರ್ಟ್ ಸಂಸ್ಥೆಯಿಂದ ನಡೆದ ನಾಲ್ಕು ಕಲಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿವೆ.

ದೆಹಲಿ, ಬಾಂಬೆ, ಬೆಂಗಳೂರು, ಚೆನ್ನೈಗಳಲ್ಲಿ ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನ ನೇರವೇರಿಸಿ, ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇಂಟರ್ ನ್ಯಾಷನಲ್ ಸ್ಕಾಲ್ಪಚರ್ ಆ್ಯಂಡ್ ಪೆಂಟರ್ಸ್ ಸಿಂಪೋಜಿಯಂನಲ್ಲಿ ಭಾಗವಹಿಸಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ರಾಜೋತ್ಸವ ಪ್ರಶಸ್ತಿ, ಲಭ್ಯವಾಗಿದೆ.

(ಎಂಸಿಬಿ)


ವ

ವನದುರ್ಗದ ಕೋಟೆ: ಗಿರಿ ಕಾನನದ ಮಧ್ಯದಲ್ಲಿ ಈ ಕೋಟೆ ನಿರ್ಮಿಸಿದ್ದರಿಂದ ಇದನ್ನು ವನದುರ್ಗವೆಂದು ಕರೆಯಲಾಗುತ್ತದೆ. ವನದುರ್ಗ ಕೋಟೆ ನಿರ್ಮಾಣದ ಅನಂತರ ಇಲ್ಲೊಂದು ಗ್ರಾಮ ಹುಟ್ಟಿಕೊಂಡಿದ್ದು, ಈ ಗ್ರಾಮದ ಹೆಸರೇ ಈಗ ವನದುರ್ಗ.

ಈ ಕೋಟೆ ಸುರಪುರದಿಂದ ಉತ್ತರಕ್ಕೆ 15 ಕಿ.ಮೀ. ಶಹಾಪುರದಿಂದ ನೈರುತ್ಯಕ್ಕೆ 24 ಕಿ.ಮೀ. ದೂರದಲ್ಲಿದೆ. ಸುರಪುರ ಸಂಸ್ಥಾನಿಕ ಅರಸರು ಉತ್ತರ ದಿಕ್ಕಿನಿಂದ ಬರುವ ದಾಳಿಯನ್ನು ನಿಯಂತ್ರಿಸಲು ದಟ್ಟಾರಣ್ಯದ ಮಧ್ಯದಲ್ಲಿ ಸುವ್ಯವಸ್ಥಿತ ಕೋಟೆ ಕಟ್ಟಿಸಿದ್ದಾರೆ. ಸಂಸ್ಥಾನದ ಅರಸರು ಬೇಟೆಯಾಡಿ ವಿಶ್ರಾಂತಿಗಾಗಿ ಹಾಗೂ ಬೇಸಿಗೆ ಕಾಲದಲ್ಲಿ ಪರಿವಾರದೊಂದಿಗೆ ಈ ವನದುರ್ಗ ಕೋಟೆಯ ಅರಮನೆಗೆ ಬಂದು ಕಾಲ ಕಳೆಯುತ್ತಿದ್ದರು.

ಏಕೆಂದರೆ ಇದು ಅರಣ್ಯದ ಮಧ್ಯ ಭಾಗದಲ್ಲಿ ಗಿರಿಕಾನನದಲ್ಲಿ ತಂಪಾಗಿರುವುದರಿಂದ ಬೇಸಿಗೆ ದಿನಗಳಲ್ಲಿ ಉತ್ತಮ ವಾತಾವರಣವಿರುತ್ತದೆ. ಇಂದಿಗೂ ಇದು ಅರಣ್ಯ ಮಧ್ಯ ಇದ್ದರೂ, ತನ್ನ ವೈಶಿಷ್ಟವನ್ನು ಉಳಿಸಿಕೊಂಡು ಬಂದಿರುವುದು ವಿಶೇಷವಾಗಿದೆ. ಈಗ ಕೋಟೆಯಲ್ಲಿ ಬಹಳ ಕಡಿಮೆ ಜನರು ವಾಸಿಸುತ್ತಿದ್ದಾರೆ.

ಈ ಕೋಟೆ ಚೌಕಾಕಾರದಲ್ಲಿದ್ದು, ಪೂರ್ವ-ಪಶ್ಚಿಮಕ್ಕೆ 250 ಮೀಟರ್, ದಕ್ಷಿಣೋತ್ತರ 250 ಮೀಟರ್ ಹೊಂದಿದೆ. ಈ ಕೋಟೆಯನ್ನು ಸಮಾಂತರ ನೆಲದ ಮೇಲೆ ಕೆತ್ತಿದ ಕಲ್ಲಿನಲ್ಲಿ ಸುಂದರ, ಭವ್ಯವಾಗಿ ಕಟ್ಟಲಾಗಿದ್ದು, ಕೋಟೆಯ ಹೊರಭಾಗ ಅಷ್ಟೊಂದು ಹಾಳಾಗಿಲ್ಲ. ಆದರೆ ಒಳಭಾಗದಲ್ಲಿ ಅಲ್ಲಲ್ಲಿ ಸ್ವಲ್ಪ ಹಾಳಾಗಿದೆ. ಈ ಕೋಟೆಯನ್ನು ನೋಡಲು ಎರಡು ಸುತ್ತಿನ ಕೋಟೆಯಂತೆ ಕಂಡರೂ, ಎರಡು ಸುತ್ತಿನ ಕೋಟೆಯಲ್ಲ. ಕೋಟೆಯ ಪೂರ್ವ ಗೋಡೆಯ ಮುಂದೊಂದು ಅಷ್ಟೇ



ವನದುರ್ಗದ ಕೋಟೆ

ಉದ್ದದ ಮತ್ತು ಎತ್ತರದ ಹೊರಗೋಡೆಯನ್ನು ಕಟ್ಟಿ, ಮಧ್ಯದ ಲ್ಲೊಂದು ದ್ವಾರವಿದೆ.

ಕೋಟೆಯ ಸುತ್ತಲೂ ಆಳವಾದ ಕಂದಕ ನಿರ್ಮಿಸಿ ಅದನ್ನು ಪೂರ್ವದ ಹೊರಗೋಡೆಗೆ ತಂದು ಜೋಡಿಸಲಾಗಿದೆ. ಈ ಕಂದಕವು ಪೂರ್ವ ಭಾಗವನ್ನು ಬಿಟ್ಟು ಕೋಟೆಯ ಉಳಿದ ಮೂರು ಭಾಗವನ್ನು ವ್ಯಾಪಿಸಿಕೊಂಡಿದೆ. ಈ ಕಂದಕದ ಪಾರ್ಶ್ವ ಗೋಡೆಗಳನ್ನು ಕಲ್ಲಿನಿಂದ ಕಟ್ಟಲಾಗಿದ್ದು, ಇನ್ನೂ ಸುಸ್ಥಿತಿಯಲ್ಲಿದೆ. ಅದು ಯಾವಾಗಲೂ ನೀರಿನಿಂದ ತುಂಬಿರುತ್ತದೆ.

ಕೋಟೆಯ ಪೂರ್ವ ಹೊರಗೋಡೆಯ ಮಧ್ಯದಲ್ಲಿ ಪ್ರವೇಶ ದ್ವಾರವಿದೆ. ಪ್ರವೇಶ ದ್ವಾರದ ಮುಂದೆ ವಿಶಾಲ ಆವರಣ. ಆವರಣದ ಸುತ್ತಲೂ ಉತ್ತರ ದಿಕ್ಕನ್ನು ಹೊರತ್ತು ಪಡಿಸಿ, ವೃತ್ತಾಕಾರದ ಎತ್ತರದ ಗೋಡೆ ಕಟ್ಟಲಾಗಿದೆ. ಉತ್ತರದಿಂದ ಮೊದಲಿಗೆ ಪ್ರವೇಶವಾಗುವ ದ್ವಾರಕ್ಕೆ ಯಾವುದೇ ಚೌಕಟ್ಟಿಲ್ಲ. ಪ್ರವೇಶದ ಬಲ ಪಾರ್ಶ್ವದಲ್ಲಿ ಕಟ್ಟೆ, ಕಟ್ಟೆಯ ಮೇಲೊಂದು ಕಟ್ಟಡವಿದೆ. ಹಾಗೆಯೇ ಮುಂದೆ ಹೋದಾಗ ಕೋಟೆಯ ಪೂರ್ವ ಹೊರಗೋಡೆಯ ಹೆಬ್ಬಾಗಿಲು ಎದ್ದು ಕಾಣುತ್ತದೆ. ಈ ಹೆಬ್ಬಾಗಿಲ ಸಮೀಪವೇ ಎಡಭಾಗದಲ್ಲಿ ಚಿಕ್ಕದೊಂದು ಬಾಗಿಲು ಇದೆ. ಈ ಹೆಬ್ಬಾಗಿಲ ಚೌಕಟ್ಟು ಅಲಂಕಾರ ರಹಿತವಾಗಿದ್ದು, ಉತ್ತರಂಗದ ಮೇಲೆ ಸೂರ್ಯ, ಚಂದ್ರ, ನಾಮ, ಶಂಖ, ಚಕ್ರ ಹಾಗೂ ಸಂಸ್ಕೃತದಲ್ಲಿ ಬರೆದಿರುವ ಶಾಸನವಿದೆ.

ಸಂಸ್ಕೃತ ಭಾಷೆಯ ಶಾಸನದ ಈ ಲಿಪಿ ದೇವನಾಗರಿ ಯಲ್ಲಿದೆ. ಇದರ ಕನ್ನಡ ರೂಪಾಂತರ ಹೀಗಿದೆ. ಶಾಲಿವಾಹನ ಶಕೆ 1726 (ಕ್ರಿ.ಶ. 1806) ರಕ್ತಾಕ್ಷಿ ನಾಮ ಸಂವತ್ಸರದಲ್ಲಿ ಕ್ಷೇತ್ರ ಪಾಲನಾದ ಶ್ರೀ ವೇಣುಗೋಪಾಲ, ವೆಂಕಮ್ಮಾಂಬಳ ಬೇಡಿಕೆ ಯಂತೆ ವನದುರ್ಗ ಬೇಸಿಗೆಯ ಕೋಟೆ ಅರಮನೆ ನಿರ್ಮಿಸಿ ದ್ದೇನೆಂದು ವಿವರಿಸುತ್ತದೆ.

ಈ ಪ್ರವೇಶ ದ್ವಾರವನ್ನು ಕೋಟೆ ಗೋಡೆಯ ಎರಡು ಚಂದ್ರಾಕೃತಿಯ ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಪ್ರವೇಶದ ಒಳ ಬದಿಯಲ್ಲಿ ಎತ್ತರವಾದ ಕಟ್ಟೆಗಳು, ಅವುಗಳ ಮೇಲೆ ಮೂರು ಕಮಾನಿನ ಅಂಕಣಗಳಿವೆ. ಕೋಟೆಯ ಒಳ ಭಾಗದಿಂದ ಕಟ್ಟೆಯ ಮೇಲೆ ಹತ್ತಲು ಮೆಟ್ಟಲುಗಳಿವೆ. ಕಟ್ಟೆಗಳ ಮೇಲಿಂದ ಬಾಗಿಲ ಮೇಲೆ ಹತ್ತಲು ಪೂರ್ವ ಒಳಗೋಡೆಗೆ ಹೊಂದಿಕೊಂಡಂತೆ ಮೆಟ್ಟಿಲುಗಳಿವೆ. ಈ ಹೆಬ್ಬಾಗಿಲಿಗೆ ದಪ್ಪವಾದ ಅರ್ಧಭಾಗ ಮುರಿದ ಕಟ್ಟಿಗೆಯ ಬಾಗಿಲ ಪಡಕು ಇದೆ. ಇದಕ್ಕೆ ದಪ್ಪ ಮೊಳೆಗಳನ್ನು ಹಾಕಲಾಗಿದೆ.

ಒಳಕೋಟೆಯ ಹೊರಭಾಗವನ್ನು ಚನ್ನಾಗಿ ಕೆತ್ತಿದ ದಪ್ಪ ಕಲ್ಲುಗಳಿಂದ ಸಂದುಗಳಿಲ್ಲದಂತೆ ಬಲವಾದ ಗೋಡೆ ಕಟ್ಟಿದೆ. ಈ ಕೋಟೆಯ ನಾಲ್ಕು ಮೂಲೆಗೆ ಕೊತ್ತಳಗಳಿವೆ. ಪ್ರತಿಯೊಂದು ಗೋಡೆಯಲ್ಲಿ ಎರಡೆರಡು ಒಟ್ಟು ಎಂಟು ಕೊತ್ತಳಗಳಿವೆ. ಮೇಲೆ ಆಂಜನೇಯ ಶಿಲ್ಪವಿದೆ. ಪೂರ್ವ ಒಳಗೋಡೆಯ ಮಧ್ಯದಲ್ಲಿ ಮುಖ್ಯ ಬಾಗಿಲಿದೆ.

ಈ ಬಾಗಿಲು ಎರಡು ಕೊತ್ತಳಗಳ ಮಧ್ಯ ನಿರ್ಮಿಸಲಾಗಿದೆ. ಬಾಗಿಲ ಚೌಕಟ್ಟು ಅಲಂಕಾರ ರಹಿತವಾಗಿದ್ದು, ಉತ್ತರಂಗದ ಮೇಲೆ ಸೂರ್ಯ, ಚಂದ್ರ ಮತ್ತು ವೃತ್ತಾಕಾರದ ಹೂಗಳಿವೆ. ಈ ಬಾಗಿಲ ಮುಂದೆ ಅರ್ಧ ವೃತ್ತಾಕಾರದ ಗೋಡೆ ಕಟ್ಟಿ ಆವರಣ ನಿರ್ಮಿಸಲಾಗಿದೆ. ಈ ಆವರಣಕ್ಕೆ ಉತ್ತರ ದಿಕ್ಕಿನಿಂದ ಪ್ರವೇಶ ದ್ವಾರವಿದೆ. ಪೂರ್ವ ಪ್ರವೇಶದ ಒಳಭಾಗದಲ್ಲಿ ಎತ್ತರವಾದ ಕಟ್ಟೆ ಗಳಿವೆ. ಕಟ್ಟೆಯ ಮೇಲೆ ಹತ್ತಲು ಹಾಗೂ ಕೋಟೆಯ ಮೇಲೆ ಹತ್ತಲು ಪಾರ್ಶ್ವಗೋಡೆಗಳಲ್ಲಿ ಪ್ರತ್ಯೇಕ ದಾರಿಗಳಿವೆ.

ಕೋಟೆಯ ದಕ್ಷಿಣ ಮತ್ತು ಉತ್ತರದ ಗೋಡೆಗಳಲ್ಲಿ ಹೊರ ಹೋಗಲು ದಿಡ್ಡಿ ಬಾಗಿಲುಗಳಿವೆ. ಈ ಬಾಗಿಲುಗಳಿಗೆ ಚಿಕ್ಕ ಚೌಕಟ್ಟುಗಳಿವೆ. ಪ್ರವೇಶದ ಬದಿಯಲ್ಲಿ ಕಟ್ಟೆಗಳು, ಪ್ರತಿ ಕಟ್ಟೆಯ ಮೇಲೆ ಒಂದು ಕಂಬದ ಒಂದು ಅಂಕಣದ ಸುಂದರ ಕಟ್ಟಡ ವಿದೆ. ಇಲ್ಲಿಯ ಕರಿಕಲ್ಲಿನ ಕಂಬಗಳು ಅದ್ಭುತವಾಗಿವೆ. ಕೋಟೆಯ ಒಳ ಭಾಗದ ಕೊತ್ತಳಗಳು ಬಹುತೇಕ ಹಾಳಾಗಿವೆ ಎಂದು ಕೋಟೆಗೆ ಸಂರಕ್ಷಣೆಗಾಗಿ ನೇಮಿಸಿದ ಹಲವಾರು ಕುಟುಂಬಗಳು ಇಂದಿಗೂ ಕೋಟೆಯ ಆವರಣದಲ್ಲಿ ವಾಸಿಸು ತ್ತಿವೆ. ಆಂಧ್ರ ಪ್ರದೇಶದಿಂದ ಕೋಟೆಯ ಸಂರಕ್ಷಣೆಗಾಗಿಯೇ ಇಲ್ಲಿಗೆ ಬಂದು ನೆಲೆನಿಂತ ಉಳಿದುಕೊಂಡ, ಕಾಶಿರಾಜ್, ಗುಡ್ಲಕೊಂಡ ಮುಂತಾದ ಕುಟುಂಬಗಳ ಮನೆಗಳು ಹಾಗೂ ಅವಶೇಷಗಳು ಕೋಟೆಯಲ್ಲಿನ್ನೂ ಇವೆ.

ರಾಜಾ ನಾಲ್ಕನೆಯ ಪಿಡ್ಡ ನಾಯಕನ ರಾಣಿ ವೆಂಕಮ್ಮಳು ಈ ಕೋಟೆಯಲ್ಲಿ ವಾಸಿಸುತ್ತಿರುವುದರಿಂದ ರಾಜನ ಪರಿವಾರ, ಅವರ ವಾಸದ ಕಟ್ಟಡಗಳೆಲ್ಲವು ಈ ಕೋಟೆಯಲ್ಲಿ ಇದ್ದವು. ಈ ಕೋಟೆಯಲ್ಲಿ ಯಾವಾಗಲೂ ಕಾಯ್ದಿಟ್ಟ ಸೇನೆ ಜಾಗೃತ ವಾಗಿರುತ್ತಿತ್ತು. ಈ ಸೇನೆಯ ವಾಸದ ಕಟ್ಟಡಗಳು ಕೂಡ ಕೋಟೆಯ ಆವರಣದ ಹೊರ-ಒಳಗೆ ಇರುವ ಅವಶೇಷಗಳು ಈಗ ಕಾಣಸಿಗುತ್ತವೆ. ಕೋಟೆಯೊಳಗೆ ಆಂಜನೇಯ ದೇವಾ ಲಯ, ವಾಯುವ್ಯ ಭಾಗದಲ್ಲಿ ವೃತ್ತಾಕಾರದ ಸಿಹಿ ನೀರಿನ ಸೇದುವ ಬಾವಿ ಇದೆ.

(ಬಿಕೆ)

ವರ್ಣಸಿಂಧು ಕಲಾ ಕೇಂದ್ರ: ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನೃತ್ಯ-ಸಂಗೀತವೆಂದರೆ ಒಂದು ಕಾಲದಲ್ಲಿ (ನಿಜಾಮ ಆಡಳಿತ) ಕಲೆ ಎಂದು ಪರಿಗಣಿಸುತ್ತಿರಲಿಲ್ಲ. ಅದು ಕೇವಲ ಮೋಜಿಗಾಗಿ ಎಂಬ ಭಾವನೆಯಿತ್ತು. ಇಂಥ ಪ್ರದೇಶದ ಕಲಬುರ್ಗಿಯಲ್ಲಿ 1987ರಲ್ಲಿ ನೃತ್ಯ ಶಾಲೆ ಪ್ರಾರಂಭಿಸಿದ ಕಲಾವಿದ ಅನಂತ ಚಿಂಚನಸೂರ ಅವರು, ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ನೃತ್ಯ ಅಭ್ಯಾಸ ಮಾಡಿಸಿ ಈ ಭಾಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ನೃತ್ಯವೂ ಒಂದು ಕಲೆ ಎಂಬ ಭಾವನೆ ಮೂಡಿಸಿದ ಸಾಧನೆ ಅವರದು.

ಕಳೆದ ಒಂದೂವರೆ ದಶಕದಿಂದ ಇವರು ಪ್ರತಿ ವರ್ಷ ವಾರ್ಷಿಕೋತ್ಸವದಲ್ಲಿ ನೃತ್ಯ ಕಲಿತವರಿಗೆ ವಿದಾಯ ಹಾಗೂ ಹೊಸ ವಿದ್ಯಾರ್ಥಿಗಳಿಗೆ ರಂಗ ಪ್ರವೇಶ ಮಾಡಿಸುವ ವಿಶೇಷ ಕಾರ್ಯಕ್ರಮ ನಡೆಸುತ್ತಾರೆ.

ಅನಂತ ಚಿಂಚನಸೂರ ವರ್ಣಸಿಂಧು ನೃತ್ಯ ಕಲಾ ಕೇಂದ್ರದ ನಿರ್ದೇಶಕ. ಅವರು ಬಿ.ಕಾಂ., ಎಲ್.ಎಲ್.ಬಿ. ಪದವೀಧರರು. ನೀರಾವರಿ ಇಲಾಖೆಯಲ್ಲಿ ಕಳೆದ 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಚಿಕ್ಕವರಿದ್ದಾಗ ಅವರ ಅಕ್ಕ ಶ್ರೀಮತಿ ಸುರೇಖಾ ಪಾಂಡುರಂಗ ಅವರು ಶಾಲೆಯಲ್ಲಿ ಮಕ್ಕಳಿಗೆ ನೃತ್ಯ ಹೇಳುವದನ್ನು ಆಲಿಸುತ್ತ ಪ್ರೇರಣೆ ಪಡೆದು, ನೃತ್ಯ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಸರಕಾರಿ ಸೇವೆಯಲ್ಲಿ ವರ್ಗಾವಣೆ ಸಹಜ. ಅದರಂತೆ ಬೆಂಗಳೂರಿಗೆ ವರ್ಗವಾದಾಗ ಅಲ್ಲಿ ಶ್ರೀಮತಿ ನರ್ಮದಾ ಅವರ ಶಕುಂತಲಾ ನೃತ್ಯಾಲಯದಲ್ಲಿ ಏಳು ವರ್ಷ ಕಥಕ್ ನೃತ್ಯ ಶ್ರೀಮತಿ ಮಾಯಾರಾವ್ ಅವರಲ್ಲಿ ಚಿತ್ರಾ ಗೋಪಾಲರಾವ ಹತ್ತಿರ ಎರಡು ವರ್ಷ, ಪ್ರವೀಣಕುಮಾರ ಹತ್ತಿರ, ಪದ್ಮಿನಿರಾವ ಪೊನ್ನಯ್ಯ ಡ್ಯಾನ್ಸ್ ಶಾಲೆಯಲ್ಲಿ ನೃತ್ಯ ಅಭ್ಯಾಸ ಹಾಗೂ ಹೈದ್ರಾಬಾದಿನ ದಿ. ಗೋಪಾಲರಾವ ಹತ್ತಿರ ನೃತ್ಯ ಅಭ್ಯಾಸ ಮಾಡಿ ಭರತನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ಪರಿಣಿತಿ ಪಡೆದು, ಕರ್ನಾಟಕ ಪ್ರೌಢ ಶಿಕ್ಷಣ ಇಲಾಖೆಯಿಂದ ನೃತ್ಯ ಜೂನೀಯರ್ ಹಾಗೂ ಸೀನಿಯರ್ ಪರೀಕ್ಷೆ ಪಾಸು ಮಾಡಿದರು.

ನಂತರ ಕಲಬುರ್ಗಿಗೆ ವರ್ಗವಾಗಿ ಬಂದಾಗ, ಇಲ್ಲೊಂದು ನೃತ್ಯ ಶಾಲೆ ಆರಂಭಿಸಿದರು. ಪ್ರಾರಂಭದಲ್ಲಿ ಅಷ್ಟೊಂದು ಪ್ರತಿಕ್ರಿಯೆ ದೊರೆಯಲಿಲ್ಲ. ನಂತರದ ದಿನಗಳಲ್ಲಿ ಪಾಲಕರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳಿಸುವ ಮೂಲಕ ಕಳೆದ ಎರಡೂವರೆ ದಶಕಗಳಿಂದ ಬಿಡುವಿಲ್ಲದೇ ನೃತ್ಯ ಶಾಲೆ ನಡೆಯುತ್ತಿದೆ. ಈ ನೃತ್ಯ ಕಲಾ ಕೇಂದ್ರದಲ್ಲಿ ಸದ್ಯ 110 ವಿದ್ಯಾರ್ಥಿನಿಯರು ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ನೃತ್ಯ ತರಬೇತಿ ಮುಗಿಸಿ ಬೇರೆ ಬೇರೆ ಕಡೆಗೆ ನೆಲೆಸಿದ್ದಾರೆ. ಇವರ ನೃತ್ಯ ಸೇವೆಯಲ್ಲಿ ತಾಯಿ ನರ್ಮದಾಬಾಯಿ, ಪತ್ನಿ ಉಮಾ ಹಾಗೂ ಮಕ್ಕಳಾದ ಕು. ಆದಿತ್ಯಾ ಹಾಗೂ ಪದ್ಮಿನಿಯವರ ಸಹಕಾರ ಸ್ಮರಿಸುತ್ತಾರೆ.



ವರ್ಣಸಿಂಧು ನೃತ್ಯ ಕಲಾ ಕೇಂದ್ರ, ಗುಲಬರ್ಗಾ

ಇವರ ತಂಡ 350 ಹೆಚ್ಚು ಸೇವೆ ಗ್ರೂಪ್ ನೃತ್ಯ ರೂಪಕಗಳು ಪ್ರದರ್ಶನಗೊಂಡ ಜನ ಮೆಚ್ಚುಗೆ ಪಡೆದಿವೆ. ಅಲ್ಲದೇ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕಲಬುರ್ಗಿ, ಬೀದರ, ರಾಯಚೂರು, ಬೆಂಗಳೂರು, ದಾವಣಗೆರೆ, ಬಾಗಲಕೋಟೆ, ಸೇಡಂ ಉತ್ಸವ ರಾಜಶ್ರೀ ಉತ್ಸವ, ಯಾದಗಿರಿ, ಮೈಸೂರು, ಪುಣೆ, ಧಾರವಾಡ ಅನೇಕ ಕಡೆ ಇವರ ವಿದ್ಯಾರ್ಥಿಗಳ ನೃತ್ಯದ ಹೆಜ್ಜೆಯ ಗುರುತುಗಳು ಮೂಡಿವೆ. ಬೆಂಗಳೂರಿನಲ್ಲಿ ಕನ್ನಡ ಮಕ್ಕಳ ಮನೆ ರಾಜ್ಯ ಪ್ರಶಸ್ತಿಗಳು ಅನೇಕ ಬಾರಿ ಪಡೆದಿದ್ದಾರೆ.

ದೇವಾಲಯ ನೃತ್ಯ, ಯತುಗಾನ, ಶಿವರಸ, ದಶಾವತಾರ, ದಶದಿಕ್ಪಾಲಕ ಸ್ತುತಿ, ಪಂಚಭೂತ, ಜಯ ಜಯ ಕೃಷ್ಣ, ಓಂಶಕ್ತಿ, ನವಶಕ್ತಿ ಓಂಕಾರ ರೂಪಿಣಿ, ಸರ್ವ ಶಕ್ತಿಮಯಂ, ಯತುಗಾನ, ಋತು ಶೃಂಗಾರ, ಓಂ ಸೂರ್ಯನಾರಾಯಣ ನಮಃ ಕಲ್ಪವೃಕ್ಷ, ಮೊದಲಾದವುಗಳು ಕಲಬುರ್ಗಿಯಲ್ಲಿ ಕೇಂದ್ರ ನಾಟಕ ಅಕಾಡೆಮಿ ಏರ್ಪಡಿಸಿದ್ದ ಧ್ವನಿ-ಬೆಳಕು ಕಾರ್ಯಕ್ರಮದಲ್ಲಿ ಇವರ ನೃತ್ಯ ಕೇಂದ್ರದ 25 ವಿದ್ಯಾರ್ಥಿನಿಯರು ಆಯ್ಕೆಯಾಗಿದ್ದು ಹೆಮ್ಮೆಯ ಸಂಗತಿಯಾಗಿದೆ. ನವದೆಹಲಿಯಲ್ಲಿ ಭರತನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ರಾಷ್ಟ್ರಕ್ಕೆ ಪ್ರಥಮ, ಭೂಪಾಲ ಭರತ್ಯ ನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ರಾಷ್ಟ್ರಕ್ಕೆ ಪ್ರಥಮ. ಬೆಂಗಳೂರಿನಲ್ಲಿ ಭರತ್ಯ ನಾಟ್ಯ ಹಾಗೂ ಕಥಕ ನೃತ್ಯದಲ್ಲಿ ದ್ವಿತೀಯ (ರಾಜ್ಯ ಮಟ್ಟದಲ್ಲಿ) ತುಮಕೂರಿನಲ್ಲಿ ಭರತ್ಯ ನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ಪ್ರಥಮ (ರಾಜ್ಯಮಟ್ಟದಲ್ಲಿ) ಹಾಸನದಲ್ಲಿ ರಾಜ್ಯ ಮಟ್ಟದಲ್ಲಿ ಭರತ್ಯ ನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ಪ್ರಥಮ, ಮಂಡ್ಯದಲ್ಲಿ ರಾಜ್ಯ ಮಟ್ಟದಲ್ಲಿ ಭರತ ನಾಟ್ಯ ಹಾಗೂ ಕಥಕ್ ನೃತ್ಯದಲ್ಲಿ ಪ್ರಥಮ, ಮೈಸೂರಿನಲ್ಲಿ ರಾಜ್ಯ ಮಟ್ಟದಲ್ಲಿ ಭರತ ನಾಟ್ಯ ಹಾಗೂ ಕಥಕ್ ಚಿತ್ರಕಲೆಯಲ್ಲಿ ದ್ವಿತೀಯ, ಸರಕಾರಿ ನೌಕರರ ಸ್ಪರ್ಧೆಯಲ್ಲಿ ಪ್ರತಿಬಾರಿಯೂ ಪ್ರಶಸ್ತಿಗೆ ಭಾಜನರಾಗಿದ್ದಾರೆ.

(ಎಸ್‌ಕೆಕೆ)

ವಾ

ವಾಗಣಗೇರಾ ಕೋಟೆ: ಕಲಬುರ್ಗಿ ಜಿಲ್ಲೆ ಸುರಪುರ ತಾಲ್ಲೂಕಿನಲ್ಲಿರುವ ಐತಿಹಾಸಿಕ ನೆಲೆ. ವಿಜಯನಗರ ಸಾಮ್ರಾಜ್ಯದ ಅವಸಾನದ ತರುವಾಯ ಹಿಂದೂ ಧರ್ಮ, ಕನ್ನಡ ಭಾಷೆ, ನಡೆನುಡಿ, ಕಲೆ ಸಂಸ್ಕೃತಿಗಳನ್ನು ಬೆಳೆಸಲು ಕ್ರಿ.ಶ. 1656ರಲ್ಲಿ ಗಡ್ಡಿ ಪಿಡ್ಡ ನಾಯಕ ವಾಗಣಗೇರಾ ಸಂಸ್ಥಾನ ಸ್ಥಾಪಿಸಿದ.

ಸುರಪುರದಿಂದ 7 ಕಿ.ಮೀ. ದೂರದ ವಾಗಣಗೇರಾ ಸುರಪುರ ಸಂಸ್ಥಾನದ ಮೂಲ. ಗಡ್ಡಿಪಿಡ್ಡ ನಾಯಕ, ಪಿತಾಂಬರ ಬಹರಿ ಪಿಡ್ಡನಾಯಕ ಪ್ರಖ್ಯಾತ ಅರಸರು. ಗಡ್ಡಿಪಿಡ್ಡ ನಾಯಕ ಬಿಜಾಪುರದ ಆದಿಲ್ ಶಾಹಿಗಳ ಮದ ಏರಿದ ಆನೆಯನ್ನು ಅಸ್ತ್ರಗಳ ಸಹಾಯವಿಲ್ಲದೆ ಸೋಲಿಸಿ, ಅವರಿಂದ ಎರಡೂವರೆ ಮಣತೂಕದ ಗದೆಯನ್ನು ಪಡೆದು 'ಗಜಗಂಡ, ಭೇರುಂಡ, ಗಡ್ಡಿಪಿಡ್ಡ ನಾಯಕ, ಬಹರಿ ಬಹುದ್ದೂರ' ಎಂಬ ಬಿರುದು ಪಡೆದು, ಅಂದೋಲ, ನೆಲೋಗಿ, ಶಿರವಾಳ, ರಸ್ತಾಪುರ, ವಡಿಗೇರಾ, ಮಳಿ, ಕೆಂಭಾವಿ, ಹುಣಸಗಿ, ಕೊಡೆಕಲ್ ಸೇರಿದಂತೆ 10 ಪ್ರದೇಶಗಳ ಜಹಾಗೀರನ್ನು (ಒಡೆತನವನ್ನು) ಆದಿಲ್ ಶಾಹಿಗಳಿಂದ ಪಡೆದ.

ಹಲವು ವರ್ಷಗಳು ಕಳೆದರು ಗಡ್ಡಿಪಿಡ್ಡ ನಾಯಕರಿಗೆ ಪುತ್ರ ಸಂತಾನವಾಗಲಿಲ್ಲ. ತನ್ನ ಅಣ್ಣ ಗುಡಗುಂಟಿಯ ಅರಸು ಲಿಂಗ ನಾಯಕನ ಮಗ ಪಾಮನಾಯಕನನ್ನು ದತ್ತು ತೆಗೆದುಕೊಂಡ. ರಾಜ ಪಾಮನಾಯಕನು (1674–1693) ಸಿಂಹಾಸನವೇರಿದ ಮೇಲೆ ವಾಗಣಗೇರಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಹೊಸದೊಂದು ಕೋಟೆ ನಿರ್ಮಿಸಿದ.

ಗಡ್ಡಿಪಿಡ್ಡ ನಾಯಕರಿಗೆ ಮಕ್ಕಳಿಲ್ಲದಂತೆ ರಾಜ ಪಾಮನಾಯಕನಿಗೂ ಸಹ ಮಕ್ಕಳಾಗಲಿಲ್ಲ. ಪಾಮನಾಯಕ ತನ್ನ ಸಂಬಂಧಿ ಗಡ್ಡಿ ಸೋಮನಾಯಕನ ಮಗ ಪಿತಾಂಬರ ಬಹರಿ ಪಿಡ್ಡನಾಯಕನನ್ನು ದತ್ತಕ್ಕೆ ಪಡೆದ. ದತ್ತುಪುತ್ರನಾದ ಪಿತಾಂಬರ ಬಹರಿ ಪಿಡ್ಡನಾಯಕನು ಮುಂದೆ ವಾಗಣಗೇರಾದ ರಾಜನಾದ. ಅನಂತರ, ವಾಗಣಗೇರಾದಿಂದ ದಕ್ಷಿಣಕ್ಕೆ 4 ಮೈಲು ದೂರದ ಕೃಷ್ಣಾ ನದಿ ದಂಡೆ ಮೇಲಿನ ದೇವಪುರದಲ್ಲಿ ತನ್ನ ಬಿಡಾರ ಹೂಡಿದ.

29 ಮಾರ್ಚ್ 1705 ರಂದು ಮೊಘಲ್ ಸೇನಾಪತಿ ಜುಲ್ಫೆಕರ್ ಖಾನನಿಗೆ ವಾಗಣಗೇರಾದ ಕೋಟೆಯ ಹೊರ ಭಾಗವನ್ನು ನೋಡಿಬರಲು ಅಪ್ಪಣೆ ಮಾಡಿದ್ದಲ್ಲದೇ, ಅದೇ ದಿನವೇ, ಇನ್ನೊಬ್ಬ ಸೇನಾಪತಿ ರೆಹಮಾನ್ ಭಕ್ಷನಿಗೆ ವಾಗಣಗೇರಾ ಮೇಲೆ 3ನೇ ಬಾರಿ ಆಕ್ರಮಣ ಮಾಡಲು ಅಪ್ಪಣೆ ನೀಡಿದ. ಐತಿಹಾಸಿಕ ಮಹತ್ವದ ಈ ಕೋಟೆ ಇಂದು ಹಾಳಾಗಿದೆ. ಕಲ್ಯಾಣ ಮಂಟಪಗಳು, ನವರಂಗಗಳು, ಕಮಾನುಗಳು, ರಾಜರ ವಿಶ್ರಾಂತಿ ಮಂದಿರಗಳು, ಮೊಗಸಾಲೆಗಳು, ಬಾವಿಗಳು, ಗೋಪಾಲ ಸ್ವಾಮಿಯ ಮಂದಿರ ಹಾಗೂ ಭಗ್ನಮೂರ್ತಿಗಳು, ಶಿಲಾಬಾಲಿಕೆಗಳು ಇಂದೂ ಪಾಳುಬಿದ್ದು ವಿನಾಶದ ಅಂಚಿನಲ್ಲಿವೆ.



ವಾಗಣಗೇರಾ ಕೋಟೆ

ವಾಗಣಗೇರಾ ನಾಯಕರ ಕುಲದೇವರು ಶ್ರೀ ವೇಣುಗೋಪಾಲಸ್ವಾಮಿ. ಈ ಕೋಟೆಯೊಳಗಡೆ ಇರುವ ಬೃಹತ್ ಕಲ್ಲಿನ ಗವಿಯೊಳಗೆ ಕುಲದೇವರು ಇರುವನೆಂದು ಪ್ರತೀತಿ. ಅಂದಿನ ಕಾಲದಲ್ಲಿ ವೇಣುಗೋಪಾಲ ಸ್ವಾಮಿಯ ಜಾತ್ರೆಯು ಪ್ರತಿವರ್ಷ ಶ್ರಾವಣ ಮಾಸದಲ್ಲಿ ಅದ್ದೂರಿಯಿಂದ ನಡೆಯುತ್ತಿತ್ತು. ಸುರಪುರದ ವೇಣುಗೋಪಾಲ ಸ್ವಾಮಿಯ ಜಾತ್ರೆ ನಡೆಯುವುದಕ್ಕಿಂತ ಒಂದು ದಿನ ಮುಂಚಿತವಾಗಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು ವಾಗಣಗೇರಾದಲ್ಲಿ ಗೋಪಾಲ ಸ್ವಾಮಿಯ ಜಾತ್ರೆ ಇಂದಿಗೂ ನಡೆಯುತ್ತಿದೆ. (ಎಂಎಚ್ಎನ್)

ವಾಜೀದ್ ಸಾಜೀದ್: ಚಿತ್ರಕಲಾವಿದರು. ರಾಯಚೂರ ಜಿಲ್ಲೆ ಮಾನ್ವಿ ನಗರ ಪ್ರದೇಶದ ಕೊನ್ನಾಪೂರ ಪೇಟೆಯವರು. ಕಲಾವಿದರಾದ ಇವರು, ವಾಜೀದ್ 1961ರಲ್ಲಿ, ಸಾಜೀದ್ 1964ರಲ್ಲಿ ಜನಿಸಿದರು. ಈ ಕಲಾವಿದರು ಇಬ್ಬರು ಆದರೆ ಮನಸ್ಸು ಒಂದೇ. ಸರಳ ಸ್ವಭಾವ ಪ್ರಾಮಾಣಿಕತೆ ಸೃಜನಶೀಲ ವಿಚಾರವುಳ್ಳವರು.

ಬಾಲ್ಯದಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದವರು, ವಾಜೀದ–ಸಾಜೀದರ ತಂದೆ ಶಿಕ್ಷಕ ವೃತ್ತಿಯಲ್ಲಿದ್ದವರು 1972ರಲ್ಲಿ ಮಾನ್ವಿಯಿಂದ ಕೊಪ್ಪಳ ಜಿಲ್ಲೆಯ ತಾವರಗೇರಾ ಪ್ರದೇಶಕ್ಕೆ ಬಂದರು ಮುಂದೆ 1974ರಲ್ಲಿ ವಲ್ಕಂದಿನ್ನಿಗೆ ಅನಂತರ 1975ರಲ್ಲಿ ಮಾನ್ವಿ ತಾಲ್ಲೂಕಿನ ಬೆಟ್ಟದೂರಿಗೆ ತಂದೆ ನೌಕರಿ ವರ್ಗಾವಣೆಗೊಂಡಿತ್ತು. 1975ರಲ್ಲಿ



ವಾಜೀದ್ ಕಲಾವಿದ ಮೆಟ್ರಿಕ್ ಓದುತ್ತಿರುವಾಗಲೇ ಚಿತ್ರಗಳನ್ನು ರಚಿಸಿ ಖ್ಯಾತ ಕಲಾವಿದರಾದ ಶಂಕರಗೌಡ ಬೆಟ್ಟದೂರರಿಗೆ ತೋರಿಸಿದಾಗ ಚಿತ್ರಗಳನ್ನು ನೋಡಿ ಹೆಮ್ಮೆ ಪಟ್ಟರು. ವಾಜೀದ್-ಸಾಜೀದರ್ ಕಲೆಗೆ ಮೂಲ ಪ್ರೇರಣೆ ಭಾರತೀಯ ಚಿತ್ರಕಲೆಗೆ ಅರ್ಥವನ್ನು ತಂದುಕೊಟ್ಟ ರವಿವರ್ಮನ ದೇವತೆಯ ಕಲಾಕೃತಿಗಳು ಕಲಾತಪಸ್ವಿ ಕುಂಚಬ್ರಹ್ಮ ಡಾ. ಎಸ್.ಎಂ. ಪಂಡಿತರ ಕಲಾಕೃತಿಗಳು ಇವರ ಕಲೆಗೆ ಪ್ರೇರಣೆ ಯಾಗಿವೆ.

ಕಲಾಕೃತಿಗಳು ಉಮರ ಖಯಾಮ, 1973 ರಲ್ಲಿ ಎಸ್.ಎಂ. ಪಂಡಿತರು ಈ ಕಲಾಕೃತಿಯನ್ನು ರಚನೆ ಮಾಡಿದರು. ಅವರ ಮೂಲ ಕೃತಿಯನ್ನು ನೋಡಿ ಪ್ರಭಾವಿತರಾಗಿ ಅದರ ನಕಲು ಕಲಾಕೃತಿಯನ್ನು ರಚಿಸಿದರು. ನೈಜರೂಪ ಪಂಡಿತರದೇ ಅನ್ನುವಂತೆ ನೋಡುಗರ ಕಣ್ಣಿಗೆ ಭಾಸವಾಗುತ್ತಿತ್ತು. ರಾಜಾಸ್ಥಾನ ಶಿಕಾರಿಪುರದ ಮಹಾಶರಣರ ಚಿತ್ರ, ಗಾನಯೋಗಿ ಪಂಚಾಕ್ಷರಿ ಗವಾಯಿಯ ಪೂರ್ಣ ವ್ಯಕ್ತಿಚಿತ್ರ, ರಾಜ್ಯ ಪ್ರಶಸ್ತಿ ವಿಜೇತ ದಿ. ಪಿಟೀಲು ದತ್ತಪ್ಪನ ಭಾವಚಿತ್ರ, ಬಸವಣ್ಣ, ಮೇದಾರ ಕೇತಯ್ಯ, ಹರಳಯ್ಯ ದಂಪತಿಗಳು ತಾಯಿಯ ಮಮತೆ ಶೃಂಗಾರ, ಚನ್ನಬಸವ ತಾತ, ಕನ್ನಿಕಾ ಪರಮೇಶ್ವರಿ, ಅಂಬಾದೇವಿ ಹೀಗೆ ನೂರಾರು ಕಲಾಕೃತಿಗಳನ್ನು ನಿರಂತರವಾಗಿ ರಚಿಸಿದ್ದಾರೆ.



ಭಾವಚಿತ್ರ

ವ್ಯಕ್ತಿಗಳ ಭಾವಚಿತ್ರವನ್ನು ರಚಿಸುವ ಸಂದರ್ಭವನ್ನು ನೋಡಿದರೆ ನೇರವಾಗಿ ಬ್ರಶ್‌ನಿಂದ ಬಣ್ಣ ಲೇಪನದಲ್ಲಿಯೇ ವ್ಯಕ್ತಿಯ ರೂಪ ಅಭಿವ್ಯಕ್ತಿಗೊಳಿಸುತ್ತಾರೆ. ತಿಳಿಯಾದ ಬಣ್ಣ ಒಂದ ಕೊಂದು ಸೇರಿಕೊಂಡು ಸಂಯೋಜಿತವಾದ ವರ್ಣಗಳು ಆಕರ್ಷಣೆಯವಾಗಿರುತ್ತವೆ. ಅತಿ ಹೊಸ ಸಿನಿಮಾ, ನಾಟಕ ಪರದೆ ಬೋರ್ಡ್‌ಗಳ ಮೇಲೆ ಚಿತ್ರ ರಚನೆ ಮತ್ತು ಅಕ್ಷರಗಳನ್ನು ಬರೆದಿದ್ದಾರೆ.

ವಾಜೀದ್-ಸಾಜೀದ್ ಅವರು ಚಿತ್ರಕಲೆ ಅಷ್ಟೇ ಅಲ್ಲದೇ ನಾಟಕ ಅಭಿನಯ, ಹಾಡುಗಾರಿಕೆ ಹೀಗೆ ಬಹುಮುಖ ಪ್ರತಿಭಾನ್ವಿತರು. ಬೇರೆ-ಬೇರೆ ಶಾಲಾ-ಕಲಾಶಾಲೆಗಳಲ್ಲಿ ಹಲವಾರು ಕಲಾ ಶಿಬಿರ, ಕಲಾ ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಇವರ ನಿರಂತರ ಕಲಾ ಸೇವೆಯನ್ನು ನೋಡಿ ವಿವಿಧ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

ಚಿತ್ರಕಲಾ ಕ್ಷೇತ್ರದಲ್ಲಿ ಅವಳಿ ಜವಳಿಯ ರೂಪಕವಾಗಿ ಏಕಕಾಲಕ್ಕೆ ಒಂದೇ ಕಲಾಕೃತಿಯನ್ನು ಸಮಾನ ಮನಸ್ಥಿತಿಯಿಂದ ರಚಿಸುವ ಕಲಾವಿದರು ಯಾರು ಎಂದು ಪ್ರಶ್ನಿಸುವವರಿಗೆ ವಾಜೀದ್-ಸಾಜೀದ್ ಕಲಾವಿದರೇ ಮಾದರಿಯ ಉತ್ತರ.

ದೇಹ ಎರಡು ಮನಸ್ಸು ಒಂದೇ ಭಾವ ನೂರು ಕೃತಿ ಒಂದೇ, ಕಲಾಕ್ಷೇತ್ರದಲ್ಲಿ ಒಬ್ಬ ಕಲಾವಿದನ ಬೆಳವಣಿಗೆ ಸಹಿಸಿ ಕೊಳ್ಳದೇ ಮೂಗು ಮುರಿಯುವವರೇ ಜಾಸ್ತಿ, ಇಂತಹ ಕಲಾ ಘಟ್ಟದಲ್ಲಿ ಸಮಾನ ದೃಷ್ಟಿಯಿಂದ ಕಲಾಕ್ಷೇತ್ರವನ್ನು ಪೋಶಿಸುವ, ಆರಾಧಿಸುವ ಕಲಾವಿದರೆಂದರೆ ಹೈದ್ರಾಬಾದ ಕರ್ನಾಟಕ ಭಾಗದ ವಾಜೀದ್-ಸಾಜೀದ್ ಕಲಾವಿದರು. (ಬಿಎಸ್‌ಕೆ)

ವಾಡೇವು: ಧಾನ್ಯಗಳು ಖಜಾನೆ ಹಿಂದಿನ ಕಾಲದಲ್ಲಿ ರೈತರು ಬೆಳೆದ ಧಾನ್ಯಗಳನ್ನು ಸಂಗ್ರಹಿಸಿಟ್ಟಿಕೊಳ್ಳಲು ಉಗ್ರಾಣಗಳಿರಲಿಲ್ಲ. ನೆಲದಡಿಯ ಹಗೇವು ಹಾಗೂ ವಾಡೇವುಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸಿಡುತ್ತಿದ್ದರು. ನಗರವಾಸಿಗಳಿಗೆ ಮಣ್ಣಿನ ವಾಡೇವುಗಳ ಪರಿಚಯವೇ ಇಲ್ಲ. ಹೊಸ ತಲೆಮಾರಿನ ಗ್ರಾಮೀಣ ಜನರಿಗೂ ಇವುಗಳ ಪರಿಚಯ ಅಷ್ಟಾಗಿಲ್ಲ. ವಾಡೇವುಗಳನ್ನು ವಾಡೆ, ಓಡೆ ಎಂದೂ ಕರೆಯುತ್ತಾರೆ. ಇವನ್ನು ಕುಂಬಾರರು ತಯಾರಿಸು ತ್ತಿದ್ದರು.

ಒಂದೆರಡು ಪಲ್ಲಗಳಷ್ಟು ಧಾನ್ಯ ತುಂಬ ಬಹುದಾದ ವಾಡೇವುಗಳಿಂದ ಹಿಡಿದು 7-8 ಪಲ್ಲಗಳಷ್ಟು ಧಾನ್ಯ ತುಂಬ ಇಡಬಹುದಾದ ದೊಡ್ಡ ಗಾತ್ರದ ವಾಡೇವುಗಳು ಇರುತಿದ್ದುವು. ರಾಜ್ಯದ ಅನೇಕ ಜಿಲ್ಲೆಗಳ ಹಳ್ಳಿಗಳ ಮನೆಗಳಲ್ಲಿ ವಾಡೇವುಗಳನ್ನು ನೋಡಬಹುದಿತ್ತು. ಆದರೆ ಈಗ ವಾಡೇವುಗಳ ಬಳಕೆ ಕಡಿಮೆ ಯಾಗಿದೆ. ಹಳ್ಳಿಯ ಹಳೆಯ ಮನೆಗಳಲ್ಲಿ ವಾಡೇವುಗಳು ಇದ್ದರೂ ಈಗ ಅವು ಖಾಲಿ ಖಾಲಿ!

ಮನೆ ನಿರ್ಮಾಣ ಹಂತದಲ್ಲೇ ವಾಡೇವುಗಳನ್ನು ಮಾಡಿಸಿ ಗೋಡೆಗಳ ನಡುವೆ ಇರಿಸುವ ಪರಿಪಾಠವಿತ್ತು. 8-10 ಅಡಿ ಎತ್ತರದ ಬೃಹದಾಕಾರದ ವಾಡೇವುಗಳನ್ನು ಗೋಡೆಯ ನಡುವೆ



ಧಾನ್ಯ ಸಂಗ್ರಹಣೆಯ ಕಣಜ

ಇರಿಸುತ್ತಿದ್ದರು. ದೊಡ್ಡ ಮನೆಯೊಂದರಲ್ಲಿ ಇಂತಹ ಹತ್ತಾರು ವಾಡೇವುಗಳಿರುತ್ತಿದ್ದುವು. ಬೆಳೆದ ಧಾನ್ಯಗಳನ್ನು ಅವುಗಳಲ್ಲಿ ತುಂಬಿಸಿ ಇಟ್ಟು ಬೇಕಾದಾಗ ತೆಗೆದು ಮಾರಾಟ ಮಾಡುವ ಇಲ್ಲವೇ ಮನೆಗೆ ಬಳಸುವ ವ್ಯವಸ್ಥೆ ಇತ್ತು. ಧಾನ್ಯಗಳನ್ನು ವಾಡೇವಿನ ಮೇಲಭಾಗದಿಂದ ತುಂಬಿಸಿ ಅದರ ಮೇಲೆ ಬೇವಿನ ಸೊಪ್ಪು ಇರಿಸಿ ಅದರ ಮೇಲೆ ಕಲಸಿದ ಮಣ್ಣು ಮೆತ್ತಿ ಭದ್ರಪಡಿಸುತ್ತಿದ್ದರು. ಕೆಳಭಾಗದಲ್ಲಿ ಪುಟ್ಟ ರಂಧ್ರವಿರುತ್ತಿತ್ತು. ಅದರ ಮೂಲಕ ಬೇಕಾದಾಗ ಬೇಕಾದಷ್ಟು ಧಾನ್ಯಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಇತ್ತು.

ಒಂದು ಮನೆಯಲ್ಲಿ ಇರುವ ವಾಡೇವುಗಳಿಗೆ ಅನುಗುಣವಾಗಿ ಆ ಮನೆಯಲ್ಲಿ ಯಜಮಾನನ (ರೈತ) ಶ್ರೀಮಂತಿಕೆಯನ್ನು ಅಳೆಯುತ್ತಿದ್ದರು. ಹಿಂದಿನ ಕಾಲದಲ್ಲಿ ಧಾನ್ಯ ಸಂಗ್ರಹಿಸಲು



ಧಾನ್ಯ ಸಂಗ್ರಹಣೆಯ ಕಣಜ

ವಾಡೇವುಗಳು ಅತ್ಯಂತ ಸುರಕ್ಷಿತ ಎಂಬ ಭಾವನೆ ಇತ್ತು. ವಾಡೇವುಗಳಲ್ಲಿ ಸಂಗ್ರಹಿಸಿದ ಧಾನ್ಯಗಳಿಗೆ ಕೀಟಗಳು ಹಾವಳಿ ತಡೆಯಲು ಬೇವು, ಲಕ್ಕಿ, ಎಕ್ಕದ ಎಲೆಗಳನ್ನು ವಾಡೇವುಗಳ ಮೇಲು ಭಾಗದಲ್ಲಿ ಇರಿಸುತ್ತಿದ್ದರು. ವಾಡೇವುಗಳನ್ನು ಗೋಡೆಗಳಲ್ಲಿ ಇರಿಸದೇ ಪ್ರತ್ಯೇಕವಾಗಿ ಇಡುವ ಪದ್ಧತಿಯೂ ಇತ್ತು.

ಹಣ ಹಾಗೂ ಚಿನ್ನದ ಆಭರಣಗಳನ್ನು ವಾಡೇವುಗಳಲ್ಲಿ ಬಚ್ಚಿಡುವ ಜನರೂ ಇದ್ದರು. ವಾಡೇವುಗಳನ್ನು ಒಡೆದು ಅಥವಾ ಅದರಲ್ಲಿರುವ ಧಾನ್ಯಗಳನ್ನು ತೆಗೆದು ಆಭರಣಗಳನ್ನು ಕದಿಯುವ ವ್ಯವಧಾನ ಕಳ್ಳರಿಗೆ ಇರುವುದಿಲ್ಲ ಎಂಬ ನಂಬಿಕೆಯಿಂದ ಹೀಗೆ ಮಾಡುತ್ತಿದ್ದರು. ಬಹುತೇಕ ರೈತರು ವಾಡೇವುಗಳಲ್ಲಿ ಧಾನ್ಯಗಳನ್ನು ಮಾತ್ರವೇ ಸಂಗ್ರಹಿಸಿ ಇಡುತ್ತಿದ್ದರು.

ಹಳೆಯ ಮನೆಗಳಲ್ಲಿ ಇವು ಇರುವುದರಿಂದ ಅವು ಸುರಕ್ಷಿತವಾಗಿವೆ. ಆದರೆ ಈಗ ವಾಡೇವುಗಳಲ್ಲಿ ಧಾನ್ಯಗಳನ್ನು ತುಂಬಿ ಇಡುವವರು ವಿರಳ. ಈಗ ರೈತರು ಬೆಳೆದ ಧಾನ್ಯಗಳ ಬಹುಪಾಲನ್ನು ಕಣದಿಂದಲೇ ಮಾರುಕಟ್ಟೆಗೆ ಒಯ್ದು ಮಾರಾಟ ಮಾಡಿ ಬಿಡುತ್ತಾರೆ. ಮನೆಗೆ ಬೇಕಾಗುವಷ್ಟನ್ನು ಚೀಲಗಳಲ್ಲಿ ತುಂಬಿ ಇಡುತ್ತಾರೆ. ಈಗ ವಾಡೇವುಗಳು ನಿಷ್ಪ್ರಯೋಜಕ ಎಂಬ ಭಾವನೆ ಇದೆ.

ಹಿಂದಿನ ಕಾಲದಲ್ಲಿ ವಾಡೇವುಗಳನ್ನು ಮಾಡುವ ಪರಿಣತಿ ಪಡೆದ ಕುಂಬಾರರು ಊರಲ್ಲಿದ್ದರು. ದೊಡ್ಡ ಗಾತ್ರದ ಮಣ್ಣಿನ ವಾಡೇವುಗಳನ್ನು ನಿರ್ಮಿಸುವುದು ಸುಲಭದ ಕೆಲಸ ಅಲ್ಲ. ಹಸಿ ಮಣ್ಣಿನಲ್ಲಿ ಮಾಡಿದ ವಾಡೇವುಗಳನ್ನು ಆವುಗೆ (ಒಲೆ)ಗಳಲ್ಲಿ ಸುಡುತ್ತಿದ್ದರು. ದೊಡ್ಡ ಗಾತ್ರದ ವಾಡೇವುಗಳನ್ನು ಮೂರು ಹಂತದಲ್ಲಿ ನಿರ್ಮಿಸಿ ಅವನ್ನು ಜೋಡಿಸುತ್ತಿದ್ದರು. ವಾಡೇವುಗಳು ಈಗ ಜಾನಪದ ಸಂಗ್ರಹಾಲಯಗಳಲ್ಲಿ ಮಾದರಿಗಳಾಗಿ ಉಳಿದಿವೆ.

(ಎಸ್‌ಎಚ್‌ಆಯ್)

ವಾಸುದೇವ ಸೇಡಂ ಎಚ್: ಹೈದ್ರಾಬಾದ ಕರ್ನಾಟಕದ ಸಾಹಿತ್ಯದ ನೆಲೆಬಿಡಾದ ಸಗರನಾಡಿನ ತಿಮ್ಮಾಪುರದಲ್ಲಿ ಜನಿಸಿದರು. ಇವರು ಜನಪದ ಕಾಳಜಿಯುಳ್ಳವರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಸಗರನಾಡಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಲಯದಲ್ಲಿ ಪಡೆದುಕೊಂಡಿರುವ ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರ ವಿಷಯದಲ್ಲಿ ಎಂ.ಎ. ಪದವಿ ಪಡೆದು 'ಗುಲಬರ್ಗಾ ಜಿಲ್ಲೆಯ ಸ್ಥಳೀಯ ಸರ್ಕಾರಗಳ ಹಣಕಾಸು ನಿರ್ವಹಣೆ' ಕುರಿತು ಮಂಡಿಸಿದ ಪ್ರಬಂಧಕ್ಕೆ ಗುಲಬರ್ಗಾ ವಿಶ್ವ



ವಿದ್ಯಾಲಯ 'ಡಾಕ್ಟರೇಟ್' ಪದವಿ ನೀಡಿದೆ.

ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದು ಪ್ರವೃತ್ತಿಯಲ್ಲಿ ಇವರೊಬ್ಬ ನಟ, ಗಾಯಕ, ಕವಿ ಹಾಗೂ ನಿರ್ದೇಶಕ ಪದವಿ ಹಾಗೂ ಸ್ನಾತಕೋತ್ತರ ಪದವಿ ಹಂತದಲ್ಲಿರುವಾಗಲೇ 'ಬಂದಾರೋ ನೋಡೋ ಮಾವ', 'ಆದರ್ಶ ಪ್ರೇಮ' ನಾಟಕಗಳನ್ನು ನಿರ್ಮಿಸಿ, ನಿರ್ದೇಶಿಸಿದಲ್ಲದೇ, ಅಣ್ಣ ತಂಗಿ ನಾಟಕವನ್ನು ನಿರ್ದೇಶನ ಮಾಡುವುದರೊಂದಿಗೆ 'ಸುಬ್ಬಾಸುಬ್ಬಿ' ನಾಟಕವನ್ನು ಸಹ ನಿರ್ದೇಶನದಲ್ಲಿ ಪ್ರದರ್ಶನಗೊಂಡಿದೆ. ದೂರದರ್ಶನದಲ್ಲಿ ಪ್ರಸಾರವಾದ 'ಆರೋಗ್ಯ ರಕ್ಷಕರು' ಕಿರುಚಿತ್ರದಲ್ಲಿ ವೈದ್ಯರ ಪಾತ್ರದಲ್ಲಿ, ಬಿ. ಸುರೇಶ ನಿರ್ದೇಶನದ 'ಅರ್ಥ' ಚಲನಚಿತ್ರದಲ್ಲಿ ಪೋಲಿಸ ಪಾತ್ರದಲ್ಲಿ ಕಾಣಿಸಿಕೊಂಡು ಜನರಿಂದ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ದೂರದರ್ಶನದ 'ಹುಲಿಗೆಮ್ಮ' ಕಿರುಚಿತ್ರಕ್ಕೆ ನಿರ್ಮಾಣ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸಿದ ಅನುಭವ ಪಡೆದುಕೊಂಡಿದ್ದ ಸೇಡಂರವರು ಹಲವಾರು ಜನಪದ ಗೀತೆಗಳನ್ನು ತಮ್ಮ ಸುಮಧುರ ಹಾಡುಗಳ ಮೂಲಕ ಚಪ್ಪಾಳೆ ಹಾಗೂ ಅಭಿಮಾನಿ ಬಳಗವನ್ನು ಸೃಷ್ಟಿಸಿಕೊಂಡಿದ್ದು ವಿಶೇಷ.



'ಅರ್ಥ' ಚಲನಚಿತ್ರದಲ್ಲಿ ನಟಿ ಅರುಂಧತಿ ಜತ್ಕರ್ ಯೊಂದಿಗೆ ಡಾ. ವಾಸುದೇವ್ ಸೇಡಂ ಮತ್ತು ರಂಗಾಯಣ ರಘು

ಹಲವಾರು ಸಾಹಿತ್ಯಿಕ, ಸಾಂಸ್ಕೃತಿಕ, ಮತ್ತು ಆರ್ಥಿಕ ಸಂಘಟನೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವುದರ ಜೊತೆಗೆ ಸಂಘಟನೆ ಅಧ್ಯಕ್ಷರಾಗಿ, ಉಪಾಧ್ಯಕ್ಷರರಾಗಿ, ಕಾರ್ಯದರ್ಶಿಗಳಾಗಿ 'ಬಿಸಿಲನಾಡು' ಮಾಸಪತ್ರಿಕೆಯ ಸಲಹಾ ಸಮಿತಿಯ ಸದಸ್ಯರಾಗಿ 'ಸಾಕಷ್ಟು' ಅನುಭವ ಪಡೆದಿದ್ದು ಪ್ರಸ್ತುತ ಗುಲಬರ್ಗಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ, ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. (ಎಸ್‌ಎವಿ)

ವಾಸ್ತು ಶಾಸ್ತ್ರ: ಭೂಮಿ, ಭವನ, ವಾಹನ ಮತ್ತು ಶಯನಗಳಿಗೆ ಸಂಬಂಧಿಸಿದ ವಿಷಯವನ್ನು ತಿಳಿಸುವ ಶಾಸ್ತ್ರ. 'ವಾಸ್ತುವಿನಲ್ಲಿ ಪ್ರಮುಖವಾಗಿ ಎರಡು ಶಾಖೆಗಳಿದ್ದು 1. ವಿಶ್ವಕರ್ಮ ವಾಸ್ತು 2. ಶೈವ ಸಂಪ್ರದಾಯದ ಮನುವಾಸ್ತು' ಎಂದು ಗುರುತಿಸಲಾಗಿದೆ.

ವಾಸ್ತುಶಾಸ್ತ್ರದ ಪ್ರಕಾರ ಮನೆಗಳನ್ನು ನಿರ್ಮಿಸಿದರೆ ಆ ಮನೆಯವರು ಸಂತೃಪ್ತಿಯ ಜೀವನ ನಡೆಸಲು ಸಾಧ್ಯ ಎಂಬುದು ಪ್ರಾಚೀನಕಾಲದಿಂದಲೂ ಭಾರತೀಯರು ಕಂಡುಕೊಂಡ ಸತ್ಯವಾಗಿದೆ. ವಾಸ್ತುಶಾಸ್ತ್ರ ಕುರಿತಂತೆ ಚೀನೀಯರಲ್ಲಿ, ಜಪಾನೀಯರಲ್ಲಿಯೂ ಪ್ರಭಲವಾದ ನಂಬಿಕೆಯಿದೆ.

ವಾಸ್ತು ನಿರ್ಮಾಣದ ಪೂರ್ವದಲ್ಲಿ ಭೂ ಪರೀಕ್ಷೆಯಾಗಬೇಕು. ಸ್ಮಶಾನ, ಕಾರ್ಖಾನೆ, ದೇವಸ್ಥಾನಗಳ ಸಮೀಪ ನಿವೇಶನ ಒಳ್ಳೆಯದಾಗದು ಎಂಬ ಅಭಿಪ್ರಾಯವಿದೆ. ಮಣ್ಣು ಮತ್ತು ದಿಕ್ಕುಗಳು ಹಾಗೂ ರಸ್ತೆಗಳು ಕೂಡ ವಾಸ್ತುವಿನ ಮೇಲೆ ನಿರ್ದಿಷ್ಟ ಫಲಗಳನ್ನು ನೀಡುತ್ತವೆ. ಉದಾ: ಉತ್ತರದಲ್ಲಿ ಮತ್ತು ಪೂರ್ವ ಭಾಗದಲ್ಲಿ ಎತ್ತರವಾದ ಕಟ್ಟಡಗಳಿರಬಾರದು. ನಿವೇಶನದ ದಿಕ್ಕುಗಳ ಕುರಿತಂತೆ ಶಾಸ್ತ್ರಗ್ರಂಥಗಳು ಬಹುಪಯೋಗಿ ಅಂಶಗಳನ್ನು ಪ್ರಸ್ತುತಪಡಿಸುತ್ತವೆ. ಮನೆಯ ಸುತ್ತಲಿನ ಪರಿಸರ ಮನೆಯಲ್ಲಿ ವಾಸಿಸುವವರ ಮೇಲೆ ಪ್ರಭಾವ ಬೀರುತ್ತವೆ ಎಂಬುದು ವಾಸ್ತುಶಾಸ್ತ್ರದ ಮಹತ್ತರ ಅಂಶವಾಗಿದೆ.

ಹಿಂದೂ ಕಾಸ್ಮಾಲಾಜಿ ಪ್ರಕಾರ ಭೂಮಿಯನ್ನು ಚೌಕಾಕಾರವಾಗಿ ವಿಂಗಡಿಸುತ್ತಾರೆ. ಸೂರ್ಯನ ಉದಯ ಮತ್ತು ಅಸ್ತಗಳು ಹಾಗೂ ಉತ್ತರ, ದಕ್ಷಿಣ ದಿಕ್ಕುಗಳನ್ನಾಗಿ ವಿಂಗಡಿಸಿ ಪೃಥ್ವಿ ಮಂಡಲವಾಗಿಸುತ್ತಾರೆ. ಉದಾ: ಜಾತಕ ಮತ್ತು ಖಗೋಳಶಾಸ್ತ್ರದಲ್ಲಿ ದಿಕ್ಕುಗಳನ್ನು ಗಮನಿಸಬಹುದಾಗಿದೆ.

ವಾಸ್ತು ಪುರುಷನ ಐತಿಹ್ಯವೂ ಜಾತಕದಲ್ಲಿನ ಮನೆಗಳ ಗ್ರಹಗಳಂತೆ ವರ್ಗೀಕರಿಸಲಾಗಿದೆ. ಬ್ರಹ್ಮನು ಮಧ್ಯಸ್ಥಾನದಲ್ಲಿದ್ದು ಉಳಿದ ದೇವತೆಗಳ ಸ್ಥಾನವನ್ನೂ ನಿರ್ದೇಶಿಸಲಾಗಿದೆ.

ಉತ್ತರ	ಕುಬೇರ	ಸಂಪತ್ತಿನ ಅಧಿದೇವತೆ
ದಕ್ಷಿಣ	ಯಮ	ಮೃತ್ಯುದೇವತೆ
ಪೂರ್ವ	ಇಂದ್ರ	ಸೌರದೇವತೆ
ಪಶ್ಚಿಮ	ವರುಣ	ಜಲದೇವತೆ
ಈಶಾನ್ಯ	ಈಶಾನ್ಯ	ಶಿವ
ಆಗ್ನೇಯ	ಅಗ್ನಿ	ಅಗ್ನಿದೇವತೆ
ವಾಯವ್ಯ	ವಾಯು	ಗಾಳಿ
ನೈಋತ್ಯ	ಪಿತೃ/ನೈರುತಿ	ಹಿರಿಯರು/ ಇತಿಹಾಸ

ಮೇಲಿನ ದಿಕ್ಕುಗಳ ಅಧಿದೇವತೆಗಳ ಪೂರ್ಣ ಯಶಸ್ಸು ಪಡೆಯಬೇಕಾದಲ್ಲಿ ಆಯಾ ಸ್ಥಾನಗಳಲ್ಲಿ ಕೋಣೆಗಳ ರಚನೆಯನ್ನು ಮಾಡುತ್ತಾರೆ.

1. ಉತ್ತರ ಸಂಪತ್ತು
2. ದಕ್ಷಿಣ ಮಲಗುವ ಕೋಣೆ
3. ಈಶಾನ್ಯ ಧಾನ್ಯದ ಕೋಣೆ
4. ನೈಲಿರುತ್ಯ ಆಯುಧಗಳ ಕೋಣೆ
5. ಪೂರ್ವ ಸ್ನಾನಗೃಹ
6. ಪಶ್ಚಿಮ ಊಟದ ಕೋಣೆ
7. ಆಗ್ನೇಯ ಅಡುಗೆ ಕೋಣೆ
8. ವಾಯವ್ಯ ಆಕಳುಗಳ ಕೊಟ್ಟಿಗೆ

ವಾಸ್ತುಶಾಸ್ತ್ರದಲ್ಲಿ ವಾಸ್ತು ಪುರುಷನನ್ನು ಸ್ಥಿರ, ಚರ ಮತ್ತು

ದಿನವಾಸ್ತು ಎಂದು ವರ್ಗೀಕರಣ ಮಾಡಲಾಗಿದೆ. ಗೃಹ ನಿರ್ಮಾಣದಲ್ಲಿ 'ಸ್ಥಿರ' ವಾಸ್ತು ಪುರುಷ ಈಶಾನ್ಯಕ್ಕೆ ತಲೆ ಮತ್ತು ನೈಋತ್ಯಕ್ಕೆ ಪಾದಗಳನ್ನಿರಿಸುತ್ತಾನೆ. 'ಚರ' ವಾಸ್ತು ಪುರಷ ಮೂರು ತಿಂಗಳಿಗೊಮ್ಮೆ ತನ್ನ ತಲೆ ಪಾದ ಮತ್ತು ದೃಷ್ಠಿ ದಿಕ್ಕುಗಳನ್ನು ಬದಲಾಯಿಸುತ್ತಾನೆ. 'ದಿನ' ವಾಸ್ತು ಪುರುಷ ದಿನದ ನಾಲ್ಕು ವೇಳೆಯಲ್ಲೂ ಒಂದೊಂದು ಭಾಗದಲ್ಲಿ ಒಂದೊಂದು ದಿಕ್ಕಿನೆಡೆಗೆ ಇಡುತ್ತಾನೆಂದು ವಾಸ್ತುಗ್ರಂಥಗಳು ಹೇಳುತ್ತವೆ ಎಂದು ವಿ.ಎಸ್. ಬಡಿಗೇರ ಅವರು ಉಲ್ಲೇಖಿಸಿದ್ದಾರೆ. ವಾಸ್ತುಪುರುಷನ ಚಲನೆಗೆ ಆಧಾರವಾಗಿ ಮನೆಯನ್ನು ನಿರ್ಮಿಸುವುದು ಮತ್ತು ಪ್ರಧಾನ ಬಾಗಿಲನ್ನು ರೂಪಿಸುವ ಕುರಿತಂತೆ ಚಿಂತಿಸಲಾಗುತ್ತದೆ. ಮನೆಯಲ್ಲಿನ ಒಟ್ಟು ಕಿಟಕಿ ಹಾಗೂ ಬಾಗಿಲುಗಳು ಕೂಡ ವಾಸ್ತುಶಾಸ್ತ್ರದಲ್ಲಿ ಮನೆಯ ಯಜಮಾನನ ಯಶಸ್ಸಿನ ಫಲಿತದ ನಿರ್ಧಾರವಾಗುತ್ತದೆ. ವಾಸ್ತು ನೋಡುವುದು ಎಂದರೆ ಮನೆಯ ಯಜಮಾನನಿಗೆ ಮನೆಯು ಯಶಸ್ಸನ್ನು ನೀಡಬಲ್ಲದೇ ಎಂಬ ಫಲಿತವನ್ನು ನೋಡುವುದು ಎಂಬರ್ಥವಾಗುತ್ತದೆ. ಮನೆಯ ಒಟ್ಟು ಕ್ಷೇತ್ರಫಲದ ವಿಶ್ಲೇಷಣೆಯ ಮೇಲೂ ವಾಸ್ತು ಸರಿಹೊಂದುತ್ತದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಬಹುದಾಗಿದೆ. ರಾಯಚೂರು ತಾಲ್ಲೂಕಿನಲ್ಲಿ ಮನೆಗಳ ಬಾಗಿಲಿನ ಮೇಲ್ಭಾಗದ ಎರಡು ಮೂಲೆಗಳಲ್ಲಿ ಮರದ ಕುದುರೆಗಳನ್ನು ಕೆತ್ತಿರುತ್ತಿದ್ದರು ಎಂದು ವೀಣಾ ಮಹಾಂತೇಶ ಗುರುತಿಸುತ್ತಾರೆ. ಗುಲಬರ್ಗಾದಲ್ಲಿ ಕೆಲವು ಬಾಗಿಲುಗಳ ಮೇಲ್ಭಾಗದಲ್ಲಿ ಮುಂಚಾಚಿದ ಕುದುರೆಯ ಮುಖಗಳನ್ನು ಅಳವಡಿಸಿರುತ್ತಾರೆ. ಇಂದಿಗೂ ಗುಲಬರ್ಗಾದಲ್ಲಿ ಕೆಲವು ಮನೆಗಳ ಮುಂಬಾಗಿಲುಗಳಲ್ಲಿ ಮತ್ತು ಎಂ.ಎಂ.ಕೆ. ಕಾಲೇಜ ಆಫ್ ಫೈನ್ ಆರ್ಟ್ಸ್‌ನ ಮುಂಬಾಗಿಲಿನಲ್ಲಿಯೂ ಕಾಣಬಹುದಾಗಿದೆ.

ವಾಸ್ತುಶಾಸ್ತ್ರವು ಮಾನವನ ಸಾಮಾಜಿಕ, ಮಾನವೀನ ವೈಜ್ಞಾನಿಕ ವಿಶ್ಲೇಷಣೆಯೇ ಆಗಿದೆ. ಪ್ರಾಚೀನವಾದ ಈ ವಾಸ್ತು ಶಾಸ್ತ್ರ ಇತ್ತೀಚಿನ ದಿನಗಳಲ್ಲಿ ಮತ್ತೆ ಮಹತ್ವ ಪಡೆಯುತ್ತಲಿದೆ.

(ಆರ್‌ಎಂ)

ವಾಸ್ತುಶಿಲ್ಪ ಕಲೆ: (ಜೇವರ್ಗಿ ತಾಲ್ಲೂಕು) ಗುಲಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಹೇರಳವಾಗಿ ಸಿಗುವ ಸುಣ್ಣದ ಕಲ್ಲಿನಿಂದ ಸಿಮೆಂಟ್ ತಯಾರಿಸಲು ಬಳಸಲಾಗುತ್ತದೆ. ಯಡ್ರಾಮಿ ಸುತ್ತ ಮುತ್ತ ಕರಿಕಲ್ಲಿನ ಚಿಕ್ಕ ಚಿಕ್ಕ ಬೆಟ್ಟಗಳಿವೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಇದೇ ಶಿಲೆಯನ್ನು ಬಳಸಿದಂತೆ ಕಾಣುತ್ತದೆ.

ಜೇವರ್ಗಿ ಪ್ರದೇಶ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ಕಾರ್ಯಚಟುವಟಿಕೆಗಳಿಗೆ ಒಳಗಾಗಿದೆ. ಇಲ್ಲಿಯ ಆಂದೋಲ, ಕುಳಗೇರಿ, ಆಲೂರು, ಯಡ್ರಾಮಿ, ವಡಗೇರಿ, ಸೊನ್ನ ಮತ್ತು ಯಾತನೂರು ಮೊದಲಾದ ಗ್ರಾಮಗಳಲ್ಲಿ ಪ್ರಾಗಿತಿಹಾಸ ಕಾಲದ ಶಿಲಾಯುಧಗಳು ಮತ್ತು ಮಣ್ಣಿನ ಪಾತ್ರಾವಶೇಷಗಳು ಕಂಡುಬರುತ್ತವೆ.



ಸನ್ನತಿಯಲ್ಲಿ ಕಂಡುಬಂದಿರುವ ಮೌರ್ಯರ ಕಾಲದ ಅವಶೇಷಗಳು ಬೌದ್ಧ ಧರ್ಮದ ಪ್ರಭಾವ ಮತ್ತು ಪ್ರಸಾರವನ್ನು ಸಾರುತ್ತವೆ. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ ಧರ್ಮ ಉನ್ನತ ಸ್ಥಾನದಲ್ಲಿದ್ದು, ಅನೇಕ ದೇವಾಲಯ, ಮೂರ್ತಿ ಶಿಲ್ಪಗಳ ನಿರ್ಮಾಣಕ್ಕೆ ಕಾರಣವಾಯಿತು. ಈ ತಾಲ್ಲೂಕಿನ ಸುಮಾರು 40 ಗ್ರಾಮಗಳು ದೇವಾಲಯ, ಮೂರ್ತಿಶಿಲ್ಪ, ಕೋಟೆ ಬುರುಜು, ಮಸೀದಿ, ಗುಮ್ಮಟಗಳಂಥ ಪ್ರಾಚೀನ ಸ್ಮಾರಕಗಳಿಂದ ಕೂಡಿವೆ.

ಈ ಪ್ರದೇಶದಲ್ಲಿ ನಿರ್ಮಾಣವಾದ ದೇವಾಲಯಗಳು ಕಾಳಾಮುಖ ಮತಮಾನ್ಯದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದವು. ರಾಷ್ಟ್ರಕೂಟರಾದಿಯಾಗಿ ನಿಜಾಮರ ಕಾಲದ ವರೆಗೆ ನಿರ್ಮಾಣವಾದ ಜೀರ್ಣೋದ್ಧಾರವಾದ ದೇವಾಲಯಗಳು ಇಲ್ಲಿವೆ. ಇಲ್ಲಿ ಕಂಡುಬಂದಿರುವ ದೇವಾಲಯ-ಮೂರ್ತಿ ಶಿಲ್ಪಗಳು ವಾಸ್ತುಶಿಲ್ಪ ಪ್ರಾಮುಖ್ಯತೆಯನ್ನಲ್ಲದೇ ಗ್ರಾಮ ಮಹತ್ವವನ್ನು ಸಾರುತ್ತವೆ.

ಆಂದೋಲ ಗ್ರಾಮ ರಾಷ್ಟ್ರಕೂಟರ ಕಾಲದಲ್ಲಿಯೇ ನರಿಂಬೋಳೆ-70ರ ಆಡಳಿತ ಘಟಕದಲ್ಲಿತ್ತು. ಈ ಗ್ರಾಮದಲ್ಲಿ ಕಂಡುಬರುವ ಈಶ್ವರ ದೇವಾಲಯ ರಾಷ್ಟ್ರಕೂಟರ ಶೈಲಿಯ ಕಂಬಗಳನ್ನೊಳಗೊಂಡಿದೆ. ಈಗ ಗರ್ಭಗೃಹ, ತೆರೆದ ಅಂತರಾಳವಿರುವ ಇದನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಳಿಸಲಾಗಿದೆ. ಅಂತರಾಳದ ಇಕ್ಕೆಲಗಳಲ್ಲಿ ರಾಷ್ಟ್ರಕೂಟ ಲಕ್ಷಣಗಳನ್ನೊಳಗೊಂಡ ಎರಡು ಕಂಬಗಳಿರುವುದರಿಂದ ಇಂದು ಪ್ರಾಚೀನ ಗುಂಡೇಶ್ವರ ದೇವಾಲಯವಾಗಿರಬೇಕು. ಇದೇ ಗ್ರಾಮದಲ್ಲಿರುವ ಕಲ್ಯಾಣ ಚಾಲುಕ್ಯ ಶೈಲಿಯ ಸಂಗಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಸಭಾಮಂಟಪದ ಸುತ್ತಲೂ ನಿರ್ಮಿಸಿರುವ ಅರ್ಧ ಮುಚ್ಚಿದ ಗೋಡೆಗೆ ಕಕ್ಷಾಸನವಿದೆ.

ಈ ಗ್ರಾಮದ ಹೊರವಲಯದಲ್ಲಿ ಈಶ್ವರ ಮತ್ತು ಶಾಂತ ಲಿಂಗೇಶ್ವರ ದೇವಾಲಯಗಳಿವೆ. ಶಾಂತಲಿಂಗ ದೇವಾಲಯದ ಹೊರಗೋಡೆಯ ಲಕ್ಷಣಗಳು ಯಾದವರ ಉತ್ತರಾರ್ಧದಲ್ಲಿ ನಿರ್ಮಾಣವಾದಂತೆ ಗೋಚರಿಸುತ್ತದೆ. ಒಳಭಾಗದಲ್ಲಿರುವ ಕಂಬ, ಬಾಗಿಲುವಾಡಗಳು ವಿಜಯನಗರ ಮತ್ತು ಪಾಳೆಯ ಗಾರರ ಕಾಲದ ಶೈಲಿಯಲ್ಲಿವೆ. ಜೀರ್ಣೋದ್ಧಾರಗೊಳಿಸುವ ಅವಧಿಯಲಿ ಸೂಕ್ಷ್ಮ ಕೆತ್ತನೆಗಳನ್ನು ಅಳವಡಿಸಲಾಗಿದೆ.

ನರಿಬೋಳ ಎಂಬ ಗ್ರಾಮ ಪ್ರಾಚೀನ ಕಾಲದಲ್ಲಿ 70 ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತು. ಈ ಗ್ರಾಮದಲ್ಲಿ ಹಾಳುದೇಗುಲ, ಈಶ್ವರ ಮತ್ತು ಗಣೇಶಗುಡಿಗಳಿವೆ. ಇಲ್ಲಿಯ ಈಶ್ವರ ದೇವಾಲಯ ಗರ್ಭಗೃಹ ಅಂತರಾಳ, ಸಭಾಮಂಟಪಗಳಿಂದ ಕೂಡಿವೆ. ಹೊರ ಗೋಡೆ ಮತ್ತು ಶಿಖರದ ಲಕ್ಷಣಗಳು ಕುರುಗೋಡು ಹಾಗೂ ಹಂಪೆಯ ಹೇಮಕೂಟದಲ್ಲಿರುವ ಕದಂಬನಾಗರ ಮಾದರಿ ಯನ್ನು ಹೋಲುತ್ತದೆ. ಕಂಬಗಳು ಚಾಲುಕ್ಯ ಶೈಲಿಯಲ್ಲಿದ್ದು, ಪ್ರವೇಶದ ಇಕ್ಕೆಲಗಳಲ್ಲಿ ಪೂರ್ಣಕುಂಭಗಳಿವೆ.

ಭೀಮಾ ನದಿ ದಂಡೆಯ ಮೇಲಿರುವ ಯನಗುಂಟಾ ಗ್ರಾಮ ದಲ್ಲಿ ಚತುಷ್ಕೂಟ ಈಶ್ವರ ದೇವಾಲಯವಿದೆ. ಹೊರಗೋಡೆ ಹಿಂಸರಿತ–ಮುಂಸರಿತಗಳಿಂದ ಕೂಡಿದೆ. ಕೆಳಭಾಗ ಸರಳ ಶೈಲಿಯ ಅಧಿಷ್ಠಾನ, ಅದರ ಮೇಲ್ಭಾಗ ವೇದಿಕೆ, ವೃತ್ತಕುಮುದ, ಪಟ್ಟಿಕೆ ಹಾಗೂ ಪದ್ಮ ಭಾಗಗಳನ್ನೊಳಗೊಂಡ ಇನ್ನೊಂದು ಅಧಿಷ್ಠಾನವಿದೆ. ಚಾಲುಕ್ಯ ಶೈಲಿಯಲ್ಲಿರುವ ಈ ದೇವಾಲಯದ ನಾಲ್ಕು ಗರ್ಭಗೃಹ ಮತ್ತು ಮಧ್ಯದ ಅಂಕಣದಲ್ಲಿ ಈಶ್ವರಲಿಂಗ ಗಳನ್ನು ಪ್ರತಿಷ್ಠಾಪಿಸಲಾಗಿದೆ.

ಈ ಪರಿಸರದಲ್ಲಿರುವ ಕುಳಗೇರಿ ಗ್ರಾಮ ಪ್ರಾಚೀನ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿತ್ತು. ಇಲ್ಲಿ ಜೈನ, ವೈಷ್ಣವ, ಶೈವ ಪಂಥಕ್ಕೆ ಸೇರಿದ ದೇವಾಲಯಗಳಿವೆ. ಸುತ್ತಲೂ ಕೋಟೆ ಅವಶೇಷ ಗಳಿರುವ ಇದನ್ನು ವಿಕ್ರಮಾದಿತ್ಯನ ರಾಣಿ ಮೈಲಳದೇವಿ ಭತ್ತಗ್ರಾಮ ಕುಣಿಲಂಗೆರೆಯನ್ನು ಆಳುತ್ತಿದ್ದಳು. ಗ್ರಾಮದ ದಕ್ಷಿಣಕ್ಕೆ ಬಸವಣ್ಣ ದೇವಾಲಯದ ಹತ್ತಿರ ಕದಂಬನಾಗರ ಶಿಖರವನ್ನು ಹೊಂದಿರುವ ಚಿಕ್ಕ ದೇಗುಲವನ್ನು ಸುಣ್ಣದ ಶಿಲೆಯಲ್ಲಿ ನಿರ್ಮಿಸ ಲಾಗಿದೆ. ಈ ದೇವಾಲಯದ ಮುಂಭಾಗ ಪ್ರಾಚೀನ ಕಾಲದ ಬಾವಿಯಿದ್ದು, ಇದರಿಂದ ಮೇಲೆತ್ತಿದನೀರು ಬೇರೆ ಕಡೆಗೆ ಹರಿದು ಹೋಗಲು ಶಿಲಾ ಕಾಲುವೆಯನ್ನು ರಚಿಸಲಾಗಿದೆ.



ನಾಗ ಶಿಲ್ಪ ಕಲಾಕೃತಿಗಳು

ಇಲ್ಲಿಯ ಸ್ಥಳವನ್ನು ಜನರು ಆನೆ, ಕುದುರೆ ಕಟ್ಟುವ ಜಾಗವೆಂದು ಕರೆಯುತ್ತಾರೆ. ಈ ಗ್ರಾಮದಲ್ಲಿ ಶಾಸನೋಕ್ತ ಬರ್ಬೆಶ್ವರ, ರುದ್ರೇಶ್ವರ, ನಾಗೇಶ್ವರ, ಚೈತೇಶ್ವರಜಿನೇಶ್ವರ ಮೊದಲಾದ ದೇವಾಲಯಗಳಿದ್ದುವು.


ಈ ಗ್ರಾಮದ ನಾಗೇಶ್ವರ ದೇವಾಲಯ, ಸೂಕ್ಷ್ಮ ಕೆತ್ತನೆಗಳ ನ್ನೊಳಗೊಂಡಿದೆ. ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅಲ್ಲಿಯ ಸೆಟ್ಟುಗಳು, ನಾಗರಾಸಿಪಂಡಿತರಿಗೆ, ನಾಗೇಶ್ವರ, ಭೋಗೇಶ್ವರ, ರಾಮೇಶ್ವರ ದೇವಾಲಯಗಳಿಗೆ ದಾನ ಕೊಟ್ಟಿದ್ದಾರೆ. ಅದೇ ಅವಧಿಯಲ್ಲಿ ಈ ದೇವಾಲಯ ನಿರ್ಮಾಣವಾಗಿರಬೇಕು. ಈ ದೇವಾಲಯ ಗರ್ಭಗೃಹ, ತೆರೆದ ಅಂತರಾಳ ಸಭಾಮಂಟಪ ಗಳಿಂದ ಕೂಡಿದೆ. ಅಂತರಾಳ ಪ್ರವೇಶದಲ್ಲಿರುವ ಕಂಬಗಳ ಮೇಲೆ ಸು.4 ಅಡಿ ಎತ್ತರದ ಚಾಮರಾಧಾರೆಯರ ಶಿಲ್ಪಗಳಿವೆ. ಹಿಂಸರಿತ ಮುಂಸರಿತಗಳಿಂದ ಕೂಡಿದ ಹೊರಗೋಡೆಯ ಮೇಲೆ ಬಿಡಿ ಶಿಲ್ಪಗಳಿವೆ. ತಲೆಗೆ ಮುಂಡಾಸು ಸುತ್ತಿ ಗಡ್ಡ ಬಿಟ್ಟ ಕುಬ್ಜಶಿಲ್ಪ ಯತಿಯನ್ನು ಸೂಚಿಸುತ್ತದೆ. ಇನ್ನೊಂದು ಸಮಭಂಗಿ ಯಲ್ಲಿರುವ ಚಾಮರಧಾರೆ, ಅಲಂಕೃತ ಜಟೆ, ಕೈಯಲ್ಲಿ ಹಿಡಿ ದಿರುವ ಚಾಮರ, ನಿಂತಭಂಗಿಯ ಲಕ್ಷಣಗಳು ನಾಗಾರ್ಜುನ ಕೊಂಡ ಶಿಲ್ಪಮಾದರಿಯನ್ನು ಹೋಲುತ್ತದೆ.

ಗ್ರಾಮದ ಮಧ್ಯದಲ್ಲಿ ಮಣ್ಣಿನಲ್ಲಿ ಹೂತುಹೋಗಿದ್ದ ನರಸಿಂಹ ದೇವಾಲಯ ಇತ್ತೀಚೆಗೆ ಬೆಳಕು ಕಂಡಿದೆ. ಈಗ ದ್ವಿಕೂಟಾಚಲದಲ್ಲಿರುವ ಇದು, ಮೊದಲು ತ್ರಿಕೂಟವಿದ್ದ ಲಕ್ಷಣ ಗಳು ಗೋಚರಿಸುತ್ತವೆ. ಪಶ್ಚಿಮ ಗರ್ಭಗೃಹದಲ್ಲಿ ಶಿವಲಿಂಗ, ಪೂರ್ವ ಗರ್ಭಗೃಹದಲ್ಲಿ ಸೂರ್ಯಪೀಠವಿದೆ. ಅದರ ಅಂತ ರಾಳದ ಇಕ್ಕೆಲಗಳಲ್ಲಿರುವ ಕಂಬಗಳಿಗೆ ಅಲಂಕೃತ ಸಿಂಹಗಳು, ಮೇಲ್ಭಾಗ ಹಿರಣ್ಯಕಶ್ಯಪನನ್ನು ಸಂಹಾರ ಮಾಡುತ್ತಿರುವ ನರಸಿಂಹನ ತೋರಣವಿದೆ. ಉತ್ತರದ ಪ್ರದೇಶದಲ್ಲಿ ಅರ್ಧ ಮುಚ್ಚಿದ ಗೋಡೆಗೆ ಕಕ್ಷಾಸನವಿದೆ. ದೇವಾಲಯದ ಸುತ್ತಲೂ ಜಾಲಂಧ್ರಗಳಿವೆ. ಗ್ರಾಮದ ಹೊರಭಾಗದಲ್ಲಿ ಜೈನ ಬಸದಿಯ ಅವಶೇಷಗಳು ಹರಡಿವೆ. ಅವುಗಳಲ್ಲಿಯ ನಿಶದಿಗಲ್ಲು, ಜೈನ ಶಿಲ್ಪ ಗಳು ಅದರ ಪ್ರಬುದ್ಧತೆಯನ್ನು ಸೂಚಿಸುತ್ತವೆ.

ಅಂಕಲಗಿ ಎಂಬ ಗ್ರಾಮ ಈ ತಾಲ್ಲೂಕಿನ ಕೊನೆಯ ಸರಹದ್ದಿನಲ್ಲಿದೆ. ತ್ರಿಕೂಟಾಚಲದಲ್ಲಿರುವ ಈ ದೇವಾಲಯ ಗರ್ಭ ಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪ ಗಳಿಂದ ಕೂಡಿದೆ. ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಸರಳ ಶೈಲಿಯ ಗೋಡೆ, ಕಕ್ಷಾಸನದ ಹೊರಗೋಡೆಗೆ ಪದ್ಮ ಸಾಲು, ಆನೆಸಾಲುಗಳಿವೆ. ಮುಂಭಾಗದಲ್ಲಿ ಎದುರು ಮಂಟಪ ವಿದೆ. ಚಾಲುಕ್ಯರ ಕಾಲಕ್ಕೆ ಸೇರಿದ ರಾಮೇಶ್ವರ ಮತ್ತು ಮಹಾದೇವ ದೇವಾಲಯಗಳು ಗ್ರಾಮದಲ್ಲಿವೆ.

ಯಡ್ರಾಮಿ ಗ್ರಾಮವನ್ನು ಶಾಸನಗಳಲ್ಲಿ ಎಳರಾಮೆ–50 ಎಂದು ಕರೆಯಲಾಗಿದೆ. ಆದಿತೇಶ್ವರ, ರಾಮೇಶ್ವರ, ಲಕ್ಷ್ಮಣೇಶ್ವರ ಶಾಸನೋಲ್ಲೇಖಿತ ದೇವಾಲಯಗಳು. ಈಗ ಜೀರ್ಣೋದ್ಧಾರ ಗೊಳಿಸಿರುವ ಬಸವಣ್ಣನ ಗುಡಿಯ ಪಕ್ಕದಲ್ಲಿ ಪ್ರಾಚೀನ ಕಾಲದ

ಬಾವಿ ಇರುವುದರಿಂದ, ಇದು ಆಗಿನ ಜನ್ನದ ಬಾವಿ ಸ್ವಯಂಭು ದೇವಾಲಯ ವಾಗಿರಬೇಕು. ಈ ದೇವಾ ಲಯಕ್ಕೆ ಹತ್ತಿರದಲ್ಲಿ ವಿಶಾಲ ವಾದ ತೀರ್ಥ ಹಾಗೂ ರಾಮೇಶ್ವರ ದೇವಾಲಯ ವಿದೆ. ಇದನ್ನು 17–18ನೇ ಶತಮಾನದಲ್ಲಿ ಇಟ್ಟಿಗೆ, ಗಾರೆ ಯಿಂದ ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಳಿಸ ಲಾಗಿದೆ.



ಗಣೇಶನ ಶಿಲ್ಪ ಕಲಾಕೃತಿ

ಸುಂಬಡ ಗ್ರಾಮದಲ್ಲಿ ಮಲ್ಲಿಕಾರ್ಜುನ, ಸೋಮನಾಥ ದೇವಾಲಯಗಳಿವೆ. ಮಲ್ಲಿಕಾರ್ಜುನ ದೇವಾಲಯ ಗರ್ಭಗೃಹ, ತೆರೆದ ಅಂತರಾಳ, ವಿಶಾಲವಾದ ಸಭಾಮಂಟಪ ಮತ್ತು ಮುಖ ಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಅದರ ಪ್ರವೇಶದ್ವಾರದಲ್ಲಿರುವ ದ್ವಾರ ಪಾಲಕ ಶಿಲ್ಪಗಳು ಶಂಖ–ಚಕ್ರ–ಗದಾ ಹಿಡಿದಿರುವುದರಿಂದ ವಿಷ್ಣು ದೇವಾಲಯವಾಗಿತೆಂದು ಸ್ಪಷ್ಟವಾಗುತ್ತದೆ.

ವಡಗೇರಿ ಗ್ರಾಮದಲ್ಲಿ ಈಶ್ವರ, ಮಾನಸ ದೇವರು ಮತ್ತು ರಾಮಲಿಂಗ ಗುಡಿಗಳಿವೆ. ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ಇದರ ಗರ್ಭಗೃಹ, ಅಂತರಾಳಗಳು ಮಾತ್ರ ಉಳಿದಿವೆ.

ಲಕ್ಕಮಾಪುರ ಗ್ರಾಮದ ಹೊರಭಾಗದಲ್ಲಿರುವ ಲಕ್ಕಮ್ಮ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಳಿಸಲಾಗಿದೆ. ಈ ದೇವಾಲಯದ ಮುಂಭಾಗ ವಿಶಾಲವಾದ ಕೆರೆಯಿದೆ. ಅದರ ನಾಲ್ಕೂ ಮೂಲೆಗಳಲ್ಲಿ ಸಿಮಾಸಂಬಂಧವಾಗಿ ನಂದಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ.

ನೆಲೋಗಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯ ಚಾಲುಕ್ಯ ಶೈಲಿಯಲ್ಲಿದೆ. ಗರ್ಭಗೃಹ, ತೆರೆದ ಅಂತರಾಳ, ಸಭಾಮಂಟಪ ಗಳಿಂದ ಕೂಡಿದೆ. ಗರ್ಭಗೃಹದ ಲಲಾಟಬಿಂಬದಲ್ಲಿರುವ ಜಿನ ಬಿಂಬ, ಪೀಠ, ಇತರ ಜೈನ ಅವಶೇಷಗಳಿಂದ ಇದು ಕಾಲಾಂತರ ದಲ್ಲಿ ಪರಿವರ್ತನೆಯಾಗಿರುವುದು ತಿಳಿಯುತ್ತದೆ.

ಈ ಪ್ರದೇಶದಲ್ಲಿ ಶಿವಲಿಂಗ, ಗಣೇಶ, ನಂದಿ, ವಿಷ್ಣು, ಅನಂತಶಯನ, ವೀರಗಲ್ಲು, ಮಹಾಸತಿಗಲ್ಲು, ನಿಶದಿಗಲ್ಲು ಮೊದಲಾದ ಶಿಲ್ಪಗಳಿವೆ. ಹನ್ನೂರು ಗ್ರಾಮದ ಹೊರವಲಯ ದಲ್ಲಿರುವ ಕಟ್ಟೆಯ ಮೇಲೆ ಸುಣ್ಣಕಲ್ಲಿನಲ್ಲಿ ನಿರ್ಮಿಸಿದ ಫಲಕವಿದೆ. ತಲೆಯಲ್ಲಿ ಉಷ್ಣಿಷವನ್ನು ಹೊಂದಿರುವ ಯತಿ ಕುಳಿತು ಕೊಂಡಿ ದ್ದಾನೆ. ಅಕ್ಕಪಕ್ಕದಲ್ಲಿ ಸ್ತ್ರೀ ಶಿಲ್ಪಗಳಿವೆ. ಮೇಲ್ಭಾಗ ಮೂರು ಚೈತ್ಯಾಕಾರದ ಕೆತ್ತನೆಗಳಿವೆ. ಲಕ್ಷಣಗಳಲ್ಲಿ ಹತ್ತಿರದಲ್ಲಿರುವ ಸನ್ನತಿಯ ಶಿಲ್ಪ ಮಾದರಿಯನ್ನು ಹೋಗುತ್ತದೆ. ಜೇವರ್ಗಿ ತಾಲ್ಲೂಕಿನ ಅನೇಕ ಗ್ರಾಮಗಳು ಐತಿಹಾಸಿಕ ಮಹತ್ವ ಪಡೆ ದಿರುವುದರಿಂದ ದೇವಾಲಯ ಮತ್ತು ಮೂರ್ತಿಶಿಲ್ಪಗಳ ಸಮೃದ್ಧಿ ಯನ್ನು ಕಾಣಬಹುದಾಗಿದೆ. (ವಿಜಿ)

ವಿ

ವಿಜಯ ಬಾಗೋಡಿ: ಭಾರತದ ಹೆಸರಾಂತ ಗ್ರಾಫಿಕ್ ಚಿತ್ರಕಲಾವಿದರಲ್ಲೊಬ್ಬರು. 1959ರಲ್ಲಿ ಗುಲಬರ್ಗಾದಲ್ಲಿ ಜನಿಸಿ ದರು. ಬಾಲ್ಯದಿಂದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತಮ್ಮೂರಲ್ಲಿ ಪೂರ್ಣಗೊಳಿಸಿದರು. ಮುಂದೆ ಚಿತ್ರಕಲಾ ಅಧ್ಯಯನವೇ ತಮ್ಮ ಆಸಕ್ತಿ ಕ್ಷೇತ್ರವನ್ನಾಗಿ ಆಯ್ಕೆ ಮಾಡಿ, ಗುಲಬರ್ಗಾದ ಐಡಿ ಯಲ್ ಫೈನ್ ಆರ್ಟ್ ಸಂಸ್ಥೆಗೆ ಸೇರಿ ಡಿಪ್ಲೋಮ್ ಇನ್ ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಪದವಿಯನ್ನು ಪಡೆದರು. ಚಿತ್ರ ಕಲೆಯಲ್ಲೂ, ನಿಸರ್ಗ ಚಿತ್ರ, ವಸ್ತು ಚಿತ್ರ, ಕಿರುರೂಪ ಚಿತ್ರ, ಅಮೂರ್ತ ಚಿತ್ರ, ಹೀಗೆ ಮುಂತಾದವುಗಳಲ್ಲಿ ಗ್ರಾಫಿಕ್



(ಮುದ್ರಣಾ ಕಲೆಯು ಒಂದಾಗಿದೆ. ಗ್ರಾಫಿಕ್ ಚಿತ್ರಕಲೆಯಲ್ಲಿ ತುಂಬಾ ಆಸಕ್ತಿ ಹೊಂದಿದ ಬಾಗೋಡಿಯವರು ತಮ್ಮ ಹೆಚ್ಚಿನ ಅಧ್ಯಯನಕ್ಕಾಗಿ ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯ ತೆರಳಬೇಕಾಯಿತು 1980. ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯ ದೃಶ್ಯಕಲಾ ವಿಭಾಗ ಇಡೀ ರಾಷ್ಟ್ರದ ಹೆಸರಾಂತ ಚಿತ್ರಕಲಾ ಮಹಾವಿದ್ಯಾಲಯಗಳಲ್ಲೊಂದಾಗಿದೆ. ಅಲ್ಲಿ ಪ್ರವೇಶ ಪಡೆದು ಪೋಸ್ಟ್ ಡಿಪ್ಲೋಮ್ ಇನ್ ಪ್ರಿಂಟ್ ಮೇಕಿಂಗ್ ಪದವಿಯನ್ನು ಪಡೆದುಕೊಂಡರು. ಈ ಹಂತಕ್ಕಾಗಲೇ ಬಾಗೋಡಿಯವರು ಗ್ರಾಫಿಕ್ ಕಲೆಯಲ್ಲಿಯೇ ಸಾಧನೆಯ ಕ್ಷೇತ್ರವೆಂದು ಆಯ್ಕೆ ಮಾಡಿಕೊಂಡಿದರು.

1986ರಲ್ಲಿ ಡಿಪ್ಲೋಮ್ ಪ್ರಿಂಟ್ ಇನ್ ಮೇಕಿಂಗ್ ಪದವಿ ಪಡೆದು ಮೈಸೂರಿನ ಕಾವಾ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ತಾತ್ಕಾಲಿಕ ಅಧ್ಯಾಪಕರಾಗಿ ಸೇರಿದ್ದರು. 1991ರ ವರೆಗೆ ಇಲ್ಲಿಯೇ ತಮ್ಮ ಭೋಧನಾ ವೃತ್ತಿಯನ್ನು ಮುಂದುವರೆಸಿದರು. 1991ರಲ್ಲಿ ತಾವು ಹೆಚ್ಚಿನ ಅಧ್ಯಯನ ಕೈಗೊಂಡ ಬರೋಡಾದ ಚಿತ್ರಕಲಾ ಮಹಾವಿದ್ಯಾಲಯದಿಂದಲೇ ತಾತ್ಕಾಲಿಕ ಅಧ್ಯಾಪಕ ಹುದ್ದೆ ಯನ್ನು ಅಲಂಕರಿಸಲು ಆಹ್ವಾನ ಬಂದಿತ್ತು. 1991ರಿಂದ 1994ರ

ವರೆಗೆ ತಾತ್ಕಾಲಿಕ ಅಧ್ಯಾಪಕರ ಹುದ್ದೆಯಲ್ಲಿ Parment Lecturer ರಾಗಿ ನೇಮಕಗೊಂಡರು. ಪ್ರಸ್ತುತವು ಇದೆ ವಿಭಾಗ ದಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಇವರು ಕೇವಲ ಭೋದನೆಗಷ್ಟೇ ಸಿಮೀತವಾಗಿರದೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ಹೆಸರಾಂತ ಗ್ರಾಫಿಕ್ ಚಿತ್ರಕಲಾವಿದರಲ್ಲೋಬ್ಬರಾಗಿ ಗುರುತಿಸಿಕೊಂಡಿದ್ದಾರೆ. ಸುಮಾರು 1981ರಿಂದ 2011ರ ವರೆಗೆ 40 ರಿಂದ 45 ರಾಷ್ಟ್ರೀಯ ಅಂತಾ ರಾಷ್ಟ್ರೀಯ ಗ್ರಾಫೀಕ್ ಕಲೆಯ ಸ್ಪರ್ಧೆ ಹಾಗೂ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಕೆಲವೊಂದಕ್ಕೆ ವಿಶೇಷ ಆಹ್ವಾನಿತ ರಾಗಿದ್ದಾರೆ. ಇನ್ನೂ ಕೆಲವು ರಾಷ್ಟ್ರೀಯ ನೈಸರ್ಗಿ, ಸಾಮಾಜಿಕ ಸಮಸ್ಯೆ ಸಹಕಾರಕ್ಕಾಗಿ ನಡೆದ ಪ್ರದರ್ಶನಗಳಾಗಿವೆ. ಬರೋಡಾ, ದೆಹಲಿ, ಮುಂಬೈ, ಬೆಂಗಳೂರು, ನ್ಯೂಯಾರ್ಕ್ ಹೀಗೆ ಮುಂತಾದ 25ಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಗ್ಯಾಲರಿಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

1985 ರಿಂದ 2011 ವರೆಗೆ ವಾಷಿಂಗಟನ್, ಬ್ಯಾಂಕಾಕ್, ಭೋಪಾಲ, ಫ್ರಾನ್ಸ್, ಹಂಗೇರಿಯಾ, ಥೈವಾನ್, ಯು.ಎಸ್.ಎ., ದೆಹಲಿ, ಬಾಂಗ್ಲಾದೇಶ, ಸ್ಲೊವೆನಿಜಿಯಾ, ಜರ್ಮನ್ ಹೀಗೆ ಮುಂತಾದ ರಾಷ್ಟ್ರೀಯ ಅಂತರಾಷ್ಟ್ರೀಯ ಗ್ರಾಫೀಕ್ ಕಲೆ ಮತ್ತು ರೇಖಾಚಿತ್ರಗಳ ಕಲಾಮೇಳ, ತ್ರಿನಾಲಿಯಾ, ಬಿನಾಲಿಯಾಗಳಲ್ಲಿ ಇವರ ಕಲಾಕೃತಿಗಳು ಆಯ್ಕೆಗೊಂಡು ಪ್ರದರ್ಶನಗೊಂಡಿವೆ.

1978ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ನೆರವಿನಿಂದ ಗುಲಬರ್ಗಾದಲ್ಲಿ ಪ್ರಥಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಆಯೋಜಿಸಿದ್ದರು. ಅನಂತರ 1987ರಲ್ಲಿ ಮುಂಬೈನ ಗ್ಯಾಲರಿ, 1990ರಲ್ಲಿ ಬೆಂಗಳೂರಿನ ಕ್ರಿಮಂಸನ್ ಆರ್ಟ್‌ಗ್ಯಾಲರಿ, ಇಮೇಜ್ ಆರ್ಟ್‌ಗ್ಯಾಲರಿ, 1997 ಮುಂಬೈನ ಪ್ರಥ್ವಿ ಆರ್ಟ್‌ಗ್ಯಾಲರಿ, 1998 ಬರೋಡದ ನಝುರ ಆರ್ಟ್ ಗ್ಯಾಲರಿ, ಹೀಗೆ ಮುಂತಾದ ಒಟ್ಟು 7 ಗ್ಯಾಲರಿಗಳಲ್ಲಿ ತಮ್ಮ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ಹಮ್ಮಿಕೊಂಡಿದ್ದಾರೆ.

ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು, ಭಾರತ ಭವನ ಭೋಪಾಲ, ಎಂ.ಎಸ್. ವಿಶ್ವವಿದ್ಯಾಲಯ ಬರೋಡ, ಕನೋರಿಯಾ ಆರ್ಟ್ ಸೆಂಟರ್ ಅಹಮ್ಮದಾಬಾದ್, ಯು.ಎಸ್.ಪಿ.ಎಸ್. ದೆಹಲಿ, ಮುಂಬೈ, ಮಧ್ಯಪ್ರದೇಶ, ಜಮಶೇಡಪುರ, ಕೇರಳ, ಹೀಗೆ ದೇಶದ ಅನೇಕ ಹೆಸರಾಂತ ಸಂಘ, ಸಂಸ್ಥೆಯವರು ಆಯೋಜಿಸಿದ ರಾಷ್ಟ್ರೀಯ ಅಂತರಾಷ್ಟ್ರೀಯ 25ಕ್ಕೂ ಹೆಚ್ಚು ಗ್ರಾಫಿಕ್ ಶಿಬಿರ, ಸಿಪೋಜಿಯಂ ಮತ್ತು ಕಾರ್ಯಗಾರಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ್ದಾರೆ. ಅಲ್ಲದೇ ಅನೇಕ ಶಿಬಿರ ಮತ್ತು ಕಾರ್ಯಗಾರಗಳನ್ನು ಆಯೋಜಿಸಿದ್ದಾರೆ ಮತ್ತು ನಿರ್ದೇಶಕರಾಗಿದ್ದಾರೆ.

ಇವರಿಗೆ ಬರೋಡದ ಎಂ.ಎಸ್. ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿ



'ಶೀರ್ಷಿಕೆ ರಹಿತ' ಕಲಾಕೃತಿ

ಯವರು ಶಿಷ್ಯವೇತನ ನೀಡಿತ್ತು. 1985ರಲ್ಲಿ ಗುಂಪು 8 ಗ್ರಾಫಿಕ್ ಕಲೆಗೆ ಪಾರಿತೋಷಕ, 1986ರಲ್ಲಿ ಬಾಂಬೆ ಆರ್ಟ್ ಸೊಸೈಟಿ ಪ್ರಶಸ್ತಿ, 1983–87 ಬೆಂಗಳೂರ ಕ.ಲ.ಕ.ಅ ಪ್ರಶಸ್ತಿ, 1993 ಪ್ರಿಂಟ್ ಟುಡೇ ಹಾಗೂ 1995 ಸಿಯುಪಿ ಪ್ರಶಸ್ತಿ, 1995ರಲ್ಲಿ AIFASC ಪ್ರಶಸ್ತಿ, 1997ರಲ್ಲಿ ಂಋಈಂಋಅ ಹಮ್ಮದಾಬಾದಲ್ಲಿ ಮತ್ತು ಗುಜರಾತ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಹೀಗೆ ಹತ್ತು ಹಲವು ಪ್ರಶಸ್ತಿಗಳು ಲಭಿಸಿವೆ. (ಎಂಬಿಪಿ)

ವಿಜಯ ಹಾಗರಗುಂಡಿಗಿ: ಚಿತ್ರಕಲಾವಿದ. ಚಿಕಣಿ ಚಿತ್ರಕಲೆಯಲ್ಲಿ ಇವರ ಸಾಧನೆ ಬಹುದೊಡ್ಡದು. ಕಲಬುರ್ಗಿ ಸಮೀಪದ ಹಾಗರಗುಂಡಿಗಿಯಲ್ಲಿ 1957ರ ನವಂಬರ್‌ನಲ್ಲಿ ಜನಿಸಿದರು. ಇವರಿಗೆ ಕಲೆ ರಕ್ತಗತವಾಗಿ ಬಂದದ್ದೇನಲ್ಲ. ಇವರ ತಂದೆ ಯವರು ಕಲಬುರ್ಗಿಯ ಎಂ.ಎಸ್.ಕೆ. ಮಿಲ್‌ನಲ್ಲಿ ಕಾರ್ಮಿಕ ರಾಗಿ ಕೆಲಸ ನಿರ್ವಹಿಸುತ್ತಿದ್ದ ಕಾರಣ ಕಲಬುರ್ಗಿಯಲ್ಲಿ ನೆಲೆಸ ಬೇಕಾಗಿ ಬಂತು. ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಸಂಸ್ಥೆ ಯಲ್ಲಿ ಉನ್ನತ ವ್ಯಾಸಂಗ ಮುಂದುವರೆಸಿದರಾದರೂ ಕಾರ ಣಾಂತರಗಳಿಂದ ಸಾಮಾನ್ಯ ಶಿಕ್ಷಣವನ್ನು ಮೊಟಕುಗೊಳಿಸಿ ಪೆನ್ಸಿಲ್, ಕುಂಚ, ಬಣ್ಣದ ಗೀಳನ್ನು ಹಚ್ಚಿಕೊಂಡರು. ಚಿತ್ರಕಲೆಯ ಅಧ್ಯಯನಕ್ಕೆಂದೇ ಕಲಬುರ್ಗಿಯ ಪ್ರತಿಷ್ಠಿತ ಸಂಸ್ಥೆಯಾದ ದಿ ಐಡಿಯಲ್ ಫೈನ್ ಆರ್ಟ್ ಇನ್ಸಿಟ್ಯೂಟ್ ಕಲಾ ಶಾಲೆಯಲ್ಲಿ ಪ್ರವೇಶ ಪಡೆದರು. ಇದರಿಂದಾಗಿ ಕಲೆಯು ವಿಜಯ ಅವರ ಬದುಕನ್ನು ಪ್ರವೇಶಿಸಿತು.



ಖ್ಯಾತ ಸಂಗೀತಗಾರ ಪಂಡಿತ್ ಸಿದ್ಧರಾಮ ಜಂಬಲದಿನ್ನಿಯವರು ವಿಜಯ ಅವರ ಮನೆಯಲ್ಲಿ ಬಾಡಿಗೆಗಿದ್ದುದರಿಂದ ಸಂಗೀತದ ಸೆಳವೂ ಇವರನ್ನು ಆಕರ್ಷಿಸಿತು. ಸಂಗೀತ ಮತ್ತು ಚಿತ್ರಕಲೆಯನ್ನು ತಮ್ಮ ಬದುಕಿನ ಎರಡು ಅಂಗಗಳನ್ನಾಗಿಸಿಕೊಂಡರು. ಇವರಿಗೆ ಸಾಂಪ್ರದಾಯಿಕ ಕಲೆಯಲ್ಲಿ ಒಲವು ಮೂಡಲು ಸಂಗೀತವೂ ಪ್ರೇರಣಾ ಶಕ್ತಿಯಾಗಿರಬಹುದು. 'ಆರು ವರ್ಷಗಳ ಕಾಲ ಚಿತ್ರಕಲೆಯಲ್ಲಿ ಅಭ್ಯಾಸ ಮಾಡಿದ ಬಳಿಕ ಗಿಡ-ಮರ, ಗಿರಿ-ಕಾನನ, ಮನುಷ್ಯರ ಚಿತ್ರ, ವಸ್ತುಚಿತ್ರಣ ಇವೆಲ್ಲ ಬರೆಯುವುದಕ್ಕೆ ಇವರ ಮನಸ್ಸು ಒಪ್ಪಲಿಲ್ಲ. ಬದಲಾಗಿ ಚಿತ್ರಕಲೆಯಲ್ಲಿ ಏನನ್ನಾದರೂ ಹೊಸತು ಹುಡುಕಬೇಕು ಮತ್ತು ಅದನ್ನು ತನ್ನದಾಗಿಸಿಕೊಳ್ಳಬೇಕೆಂಬ ಛಲ ಇವರ ಮನದಲ್ಲಿ ಮೂಡತೊಡಗಿತು' ಅಂತೆಯೇ ಇವರು ಚಿತ್ರಕಲೆಯಲ್ಲಿ ಡಿಪ್ಲೊಮಾ ಮುಗಿಸಿದವರೇ ರಾಜಾಸ್ತಾನಕ್ಕೆ ತೆರಳಿದರು.

ರಾಜಸ್ಥಾನದ ಹೆಸರಾಂತ ಕಲಾವಿದ ದ್ವಾರಕಾಪ್ರಸಾದ ಎಂಬುವವರ ಬಳಿ ಸಾಂಪ್ರದಾಯಿಕ ಚಿತ್ರಕಲೆ ಮತ್ತು ಈ ಕಲೆಯಲ್ಲಿ ಬಳಕೆಯಾಗುವ ಬಂಗಾರ-ಬೆಳ್ಳಿ ಲೇಪನದ ತಂತ್ರಗಾರಿಕೆಯನ್ನು ತಿಳಿದುಕೊಂಡರು. ಇಲ್ಲಿ ಸುಮಾರು ಎರಡು ತಿಂಗಳುಗಳ ಕಾಲ ಗುರುಕುಲ ಮಾದರಿಯಲ್ಲಿ ತರಬೇತಿಯನ್ನು ಪಡೆದ ಇವರಿಗೆ ಸಾಂಪ್ರದಾಯಿಕ ಕಲೆಯ ಚಿತ್ರರಚನಾ ವಿಧಾನ, ವಸ್ತು ವಿಷಯ, ನಿರೂಪಣೆ ಹಾಗೂ ತಂತ್ರಗಳ ಹುಡುಕಾಟ ಪ್ರಾರಂಭವಾಯಿತು. ಈ ಅವಧಿಯಲ್ಲಿ ಇವರಿಗೆ ಕಾಣಿಸಿಕೊಂಡದ್ದು ವಿಜಯನಗರ ಕಾಲದ ಚಿತ್ರಗಳು. ವಿಜಯನಗರ ಚಿತ್ರಕಲೆಯನ್ನು ಕುರಿತು ವಿಶೇಷ ಅಧ್ಯಯನ ನಡೆಸಿದ್ದಲ್ಲದೇ ಈ ಕಲೆಯಲ್ಲಿನ ಸೂಕ್ಷ್ಮಾತಿಸೂಕ್ಷ್ಮತೆಗಳನ್ನು ತಿಳಿದುಕೊಂಡರು.


'ಪುರಂದರ ವಿಠಲ' ಜಲವರ್ಣದ ಜೊತೆ ಗೋಲ್ಡ ಲೀಫ್ ಮಾಧ್ಯಮ

'ಪುರಾಣ ಪುರುಷರು, ದೇವಾನುದೇವತೆಗಳು ತಮ್ಮ ನೆಚ್ಚಿನ ವಸ್ತುವಿಷಯಗಳು. ಚಿಕಣಿ ಚಿತ್ರಕಲೆಯಲ್ಲಿನ ಆಕಾರಗಳು ತನಗೆ ಬಹು ಇಷ್ಟವಾಗುತ್ತವೆ' ಎನ್ನುವ ಇವರು ರಾಮಾಯಣ, ಮಹಾಭಾರತಗಳಂತಹ ಪೌರಾಣಿಕ ವಿಷಯಗಳಲ್ಲದೆ ಧಾರ್ಮಿಕ, ಆಧ್ಯಾತ್ಮಿಕ ಹಿನ್ನೆಲೆಯ ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಇದಕ್ಕಾಗಿಯೇ ಪುರಾಣಗ್ರಂಥ, ಧ್ಯಾನ ಶ್ಲೋಕಗಳ ಅಧ್ಯಯನದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿ ಕೊಂಡಿದ್ದಾರೆ. ವಿಜಯ ಅವರು ಸದಾ ಹೊಸತನದ ಹುಡುಕಾಟದಲ್ಲಿರುತ್ತಾರೆ.

ಪ್ರಾರಂಭದಲ್ಲಿ ವಿಜಯನಗರ ಕಲಾಶೈಲಿಯ ಲಕ್ಷಣಗಳೊಂದಿಗೆ ಚಿತ್ರರಚನೆಯಲ್ಲಿ ತೊಡಗಿದರು. ಅನಂತರದಲ್ಲಿ ಸುರಪುರ ಚಿತ್ರಗಳೆಡೆಗೆ ಆಕರ್ಷಿತರಾದರು. ದಕ್ಷಿಣದ ಅನೇಕ ಪ್ರಾದೇಶಿಕ ಕಲೆಗಳಲ್ಲಿ ಸುರುಪುರ ಚಿತ್ರಕಲೆಯೂ ಒಂದು. ಈ ಕಲೆಯು ಎಂಥವರನ್ನೂ ಆಕರ್ಷಿಸದೇ ಇರಲಾರದು ಎನ್ನುವುದಕ್ಕೆ ಇವರೇ ಸಾಕ್ಷಿ. ಇವರು ಭಾರತ ಅನೇಕ ಕಲಾಶೈಲಿಗಳನ್ನು ಬಲ್ಲವರು. ಹಾಗಿದ್ದೂ ಸುರಪುರ ಚಿತ್ರಗಳಲ್ಲಿಯ ರೇಖಾಲಾಲಿತ್ಯ, ವರ್ಣಸಂಯೋಜನೆ, ತಂತ್ರಗಾರಿಕೆಯಲ್ಲದೆ ಈ ಕಲೆಯ ಒಳ ಹೊರವುಗಳಿಗೆ ಮನಸೋತು ಈ ಕಲಾಶೈಲಿಯ ಕೃತಿರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸುಮಾರು ಮೂರು ದಶಕಗಳ ಕಾಲ ನಿರಂತರ ಕೃತಿ ರಚನೆಯ ಜೊತೆಗೆ ಈ ಕಲೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ಅದರಲ್ಲೂ ಯಶಸ್ಸು ಕಂಡಿದ್ದಾರೆ. ಸುರಪುರ ಕಲಾಶೈಲಿಯಲ್ಲಿ ಪೌರಾಣಿಕ ಹಾಗೂ ಧಾರ್ಮಿಕ ವಿಷಯಾಧಾರಿತ ಸಾಕಷ್ಟು ಚಿತ್ರಗಳನ್ನು ರಚಿಸಿದ್ದಲ್ಲದೆ ರಾಜ್ಯ, ರಾಷ್ಟ್ರ ಮತ್ತು ಹೊರರಾಷ್ಟ್ರಗಳಲ್ಲಿ ಅವುಗಳ ಪ್ರದರ್ಶನ ಮಾಡುವ ಮೂಲಕ ಮತ್ತೊಮ್ಮೆ ಸುರಪುರ ಚಿತ್ರಕಲೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಿದ ಕೀರ್ತಿ ವಿಜಯ ಇವರಿಗೆ ಸಲ್ಲುತ್ತದೆ.

ತಮ್ಮ ಬದುಕನ್ನು ಕಲೆಗಾಗಿ ಮೀಸಲಿರಿಸಿದ ಇವರು ಚಿತ್ರಕಲೆ, ಸಂಗೀತದಾಸಕ್ತಿಯೊಂದಿಗೆ ಪ್ರಾಚೀನ ಸಂಸ್ಕೃತಿಯ ಕುರುಹುಗಳನ್ನು ಸಂಗ್ರಹಿಸುವಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ವಿವಿಧ ಮಾಧ್ಯಮದ ಮೂರ್ತಿಶಿಲ್ಪಿಗಳಲ್ಲದೆ ವಿಭಿನ್ನ ಶೈಲಿಯ ಕಲಾಕೃತಿಗಳು, ಹಸ್ತಪ್ರತಿಗಳು, ಪ್ರಾಚೀನ ಕಾಲದ ಕಲಾತ್ಮಕ ವಸ್ತುಗಳು ವಿಜಯ ಅವರ ಸಂಗ್ರಹದಲ್ಲಿವೆ. ತಾವು ಇದುವರೆಗೂ ಗಳಿಸಿದ ಹಣವನ್ನೆಲ್ಲಾ ಈ ಸಂಗ್ರಹಕಾರ್ಯಕ್ಕೆ ವ್ಯಯ ಮಾಡಿದ್ದಾರೆಂದರೆ ಅತಿಶಯೋಕ್ತಿಯೇನಲ್ಲ. ಕಳೆದೆರೆಡು ದಶಕಗಳಿಂದ ಸಂಗ್ರಹ ಕಾರ್ಯದಲ್ಲಿ ತೊಡಗಿದ ಇವರು ಸಂಗ್ರಹಕಾರರೆಂತಲೂ

ಗುರುತಿಸಿಕೊಂಡಿದ್ದಾರೆ. ಇಂಥ ಒಬ್ಬ ವಿಶಿಷ್ಟ ಸಾಧಕನಿಗೆ ರಾಜ್ಯ ಮತ್ತು ರಾಷ್ಟ್ರದ ಪ್ರತಿಷ್ಠಿತ ಕಲಾಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಸಂದಿವೆ. ಇದಲ್ಲದೆ ಸಾಂಪ್ರದಾಯಿಕ ಚಿತ್ರಕಲೆಯ ಕಾರ್ಯಾಗಾರ, ಕಲಾಶಿಬಿರ, ವಿಚಾರ ಸಂರ್ಕಿಣ ಇತ್ಯಾದಿ. ವಲಯಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿ ಕೊಂಡಿದ್ದಾರೆ. ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ನೆಲೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇವರು ಕೇವಲ ಕಲಾವಿದರಷ್ಟೇ ಅಲ್ಲ. ಇವರೊಬ್ಬ ನಮ್ಮ ನಾಡಿನ ಸಾಂಸ್ಕೃತಿಕ ಹರಿಕಾರರೂ ಹೌದು.


(ಎಂಸಿಬಿ)

ವಿಜಯಕುಮಾರ ಕೊಪ್ಪದ: ಚಿತ್ರಕಲಾವಿದ. ಕಲಬುರ್ಗಿಯ ಶರಣಬಸವೇಶ್ವರ ಸಂಸ್ಥೆ ಅನೇಕ ಪ್ರತಿಭಾವಂತ ಕಲಾವಿದರನ್ನು ನೀಡಿದೆ. ಇಂಥ ಪ್ರತಿಭೆಗಳಲ್ಲಿ ಚಿತ್ರಕಲಾವಿದ ಇವರು ಈ ಸಂಸ್ಥೆಯ ಮಾಸ್ಟರ್ ಆಫ್ ಫೈನ್ ಆರ್ಟ್‌ನಲ್ಲಿ ದ್ವಿತೀಯ ರ್‍ಯಾಂಕ್‌ನಲ್ಲಿ ತೇರ್ಗಡೆಯಾಗುವ ಮೂಲಕ ಅಪ್ರತಿಮ ಚಿತ್ರಕಲಾವಿದರಾಗಿ ಹೊರಹೊಮ್ಮಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿರುವಾಗಲೇ ಚಿತ್ರಕಲೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡು, ನಿಸರ್ಗ ಚಿತ್ರಣ, ಭಾವಚಿತ್ರ, ಸಂಯೋಜನೆ, ಶಿಲ್ಪಕಲೆಯ ಹವ್ಯಾಸ ಬೆಳೆಸಿಕೊಂಡು ಬಂದವರು.



ತಮ್ಮ ಹವ್ಯಾಸವನ್ನು ಚಿತ್ರಕೃತಿಗಳ ಮೂಲಕ ಕ್ಯಾನ್‌ವಾಸ್ ಮೇಲೆ ಮೂಡಿಸಿ, ಅವುಗಳಿಗೆ ಜೀವ ತುಂಬುವುದು, ಮನಸ್ಸಿನ ಭಾವನೆಗಳನ್ನು ಜನಸಾಮಾನ್ಯರ ಮುಂದೆ ವ್ಯಕ್ತಪಡಿಸುವುದು ಇವರ ಗುರಿ, ಮೃದುಭಾಷಿಯಾಗಿರುವ ಇವರ ಕಲೆಯ ಕೃಷಿಗಳು ಜನರೊಡನೆ ಸಂವಾದ ನಡೆಸಿ ಖುಷಿಪಡುತ್ತಾರೆ. 2002–03 ರಲ್ಲಿ ಹಂಪಿಯ ಲ್ಯಾಂಡಸ್ಕೇಪ್, ಕರ್ನಾಟಕ ಕಲಾಮೇಳ ಬೆಂಗಳೂರು ಸೆಮಿನಾರ್ ಕಮ್ ವರ್ಕಶಾಪ್, ಕಲಾವಿದರ ಶಿಬಿರ, ರಾಜಸ್ಥಾನದ ಮೌಂಟ್ ಅಬು, ಕಲಬುರ್ಗಿ ವಿಶ್ವವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಶಿಲ್ಪಕಲಾವಿದರ ಶಿಬಿರ, ಪ್ರಥಮ ಶರಣ ದರ್ಶನ ಕೃತಿ ರಚನೆ, ದ್ವಿತೀಯ ಶರಣರ ಜೀವನ ಚರಿತ್ರೆಯನ್ನು ದೃಶ್ಯ ಮಾಧ್ಯಮದ ಮೂಲಕ ಬಿಂಬಿಸಿ, ಆಂಧ್ರ ಪ್ರದೇಶದ ಆದೋನಿಯಲ್ಲಿ ಭಾಗವಹಿಸುವ ಮೂಲಕ ಹಲವಾರು ಶಿಬಿರ ಗಳಲ್ಲಿ ಭಾಗವಹಿಸಿ, ಕಲಾರಸಿಕರಿಂದ ಭೇಷ್ ಎನಿಸಿಕೊಂಡಿ ದ್ದಾರೆ.

2000ರಿಂದ ಸತತ ನಾಲ್ಕು ಬಾರಿ ಅಂದರೆ 2005ರ ವರೆಗೂ ಕಲಬುರ್ಗಿಯಲ್ಲಿ ಇವರು ಸಮೂಹ ಪ್ರದರ್ಶನ



'ಹಂಪಿ' ನಿಸರ್ಗ ಚಿತ್ರ, ಜಲವರ್ಣ ಮಾಧ್ಯಮ

ಮಾಡಿದ್ದಾರೆ. 1997–98ರಲ್ಲಿ ನೇತಾಜಿ ಸುಭಾಷ ಚಂದ್ರಬೋಸ್ ಜನ್ಮಶತಾಬ್ದಿ ಅಂಗವಾಗಿ ಎಐಡಿಎಸ್‌ಓ, 1999ರಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಶಿಬಿರ ಕಲಬುರ್ಗಿ, ಕಲಬುರ್ಗಿ ವಿಶ್ವವಿದ್ಯಾಲಯದ ರಾಜ್ಯೋತ್ಸವ ಚಿತ್ರಕಲಾ ಪ್ರದರ್ಶನ ಸಂದರ್ಭದಲ್ಲಿ ಸತತ ನಾಲ್ಕು ಬಾರಿ ಭಾಗವಹಿಸಿದ್ದರು. 2001ರಲ್ಲಿ ಅಸೋಸಿಯೇಶನ್ ಆಫ್ ಇಂಡಿಯನ್ ಯುನಿವರ್ಸಿಟಿ ಸೌಥ್ ಝೋನ್ ಫೆಸ್ಟಿವಲ್ ಆಂದ್ರ ವಿಶ್ವವಿದ್ಯಾಲಯ ವಿಶಾಖಪಟ್ಟಣ, 2001ರಲ್ಲಿ ಕಸ್ಟಮ್ಸ್ ಸೆಂಟ್ರಲ್ ಎಕ್ಸೈಜ್ ರಿಕ್ರೀಯೇಶನ್ ಕ್ಲಬ್ ಕಲಬುರ್ಗಿ, ಕ್ಯಾಮಲಿನ ಆರ್ಟ್ ಫೌಂಡೇಶನ್ ಬೆಂಗಳೂರು, 2002,04 ರಲ್ಲಿ ವರ್ಣಿಕಾ ಉಜ್ಜಯನಿ, 2004ರಲ್ಲಿ ರಾಜ್ಯ ಮಟ್ಟದ ಚಿತ್ರಕಲೆ ಸ್ಪರ್ಧೆ, 2004ರಲ್ಲಿ ಚಿತ್ರಸಂತೆ ಬೆಂಗಳೂರು, 2005ರಲ್ಲಿ 18ನೇ ಅಖಿಲ ಭಾರತ ಕಲಾ ಪ್ರದರ್ಶನ ಪುಣೆ ಮುಂತಾದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

2001ರಲ್ಲಿ ಚಿನ್ನದ ಪದಕ ಅಂತರ್ ಕಾಲೇಜ ಯುವಜನ ಉತ್ಸವ ಕಲಬುರ್ಗಿ ವಿಶ್ವವಿದ್ಯಾಲಯ ಕಲಬುರ್ಗಿ, 2002ರಲ್ಲಿ ಕನ್ನಡ ಸಾಹಿತ್ಯ ಸಂಘ, 2001ರಲ್ಲಿ ಖಾದಿ ಗ್ರಾಮೋದ್ಯೋಗ ಸಂಘ, ದ್ವಿತೀಯ ಸ್ಥಾನ ವಿಶ್ವವಿದ್ಯಾಲಯ ಮಟ್ಟದ ಪೋಸ್ಟರ್ ಸ್ಪರ್ಧೆಯಲ್ಲಿ (ಎಚ್‌ಐವಿ.ಏಡ್ಸ್) ಕಲಬುರ್ಗಿ ವಿಶ್ವವಿದ್ಯಾಲಯ ಕಲಬುರ್ಗಿ, 2004ರಲ್ಲಿ ಮೆರಿಟ್ ಆವಾರ್ಡ್ ಇಂಡಿಯನ್ ರಿಯಲ್ ಅಕಾಡೆಮಿ ಆಫ್ ಆರ್ಟ್ ಮತ್ತು ಸಾಂಸ್ಕೃತಿಕ ರಾಷ್ಟ್ರೀಯ ಪ್ರದರ್ಶನದಲ್ಲಿ 2005ರಲ್ಲಿ ನಗದು ಬಹುಮಾನ ಮತ್ತು ಪ್ರಶಸ್ತಿ, ನೂತನ ವಿದ್ಯಾಲಯ ಏರ್ಪಡಿಸಿದ್ದ ಶಂಕರರಾವ ಆಳಂದಕರ್ ಶತಮಾನ ಉತ್ಸವ ಪ್ರಶಸ್ತಿಗಳನ್ನು ಇವರು ಪಡೆದಿದ್ದಾರೆ.

ಕೊಪ್ಪದ ಅವರ ಕಲಾಕೃತಿಗಳು ಕನ್ನಡ ಅಧ್ಯಯನ ಸಂಸ್ಥೆ ಕಲಬುರ್ಗಿ ವಿಶ್ವವಿದ್ಯಾಲಯ ಹಾಗೂ ವಿಜಯ ಕಲಾಮಂದಿರ ಗದಗ ಇನ್ನೂ ಮುಂತಾದ ಕಡೆ ಸಂಗ್ರಹವಿದೆ. ಇವರು ಪ್ರಸ್ತುತ ಗದಗನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

(ಎನ್‌ಎಂಜೆ)

ವಿಜಯಶೇಖರ: ಸಮಕಾಲೀನ ಕಲಾವಿದರ ಜೊತೆ ತಮ್ಮ ಸಹೋದ್ಯೋಗಿಗಳ ಜೊತೆ ಹೊರಗಿನ ಜನರ ಜೊತೆ ಸ್ನೇಹ, ಪ್ರೀತಿ, ವಿಶ್ವಾಸ ಇರಿಸಿಕೊಂಡು ಬದುಕುವ ವಿಜಯಶೇಖರ ಬಂಡಾಯದ ಧೋರಣೆಯನ್ನು ಹೊಂದಿದ್ದಾರೆ. ಇಪ್ಪತ್ತು ವರ್ಷಗಳಿಂದ ಗುಡಿಗೇರಿ ಬಸವರಾಜರ 'ಸಂಗಮೇಶ ನಾಟ್ಯ ಸಂಘ'ದಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ವಿಜಯಶೇಖರ ಕಂಪನಿಯ ನಾಟಕಗಳಲ್ಲಿ ಅದರಲ್ಲೂ ಕಂಪನಿಯ ಮಾಲಿಕರಾದ ಬಸವರಾಜರ ನಾಟಕಗಳಲ್ಲಿ ನಾಯಕ–ಖಳನಾಯಕ ಪಾತ್ರಗಳಲ್ಲಿ ಬಹಳಷ್ಟು ಅನುಭವ ಆಕರ್ಷಿಸಿದ್ದಾರೆ. ಬಸವರಾಜರ ಜೊತೆ ಅಭಿನಯಿಸುತ್ತ ಅವರ ಅವರ ಮಾರ್ಗದರ್ಶನದಲ್ಲಿ ಬಹಳಷ್ಟು ಅನುಭವ ಪಡೆದಿದ್ದಾರೆ. ಸತ್ಯಸತ್ತಿತ್ತು. ನಾಟಕದಲ್ಲಿ ಧರ್ಮನ ಪಾತ್ರದಿಂದ ಪ್ರೇಕ್ಷಕರ ಹೃದಯ ಮಿಡಿದಿದ್ದಾರೆ. ಸುಶಿಕ್ಷಿತರು ನಾಟಕದಲ್ಲಿ ಡಿ.ವೈ.ಎಸ್.ಪಿ.ಯಾಗಿ ದರ್ಪ ಠೀವಿಯಲ್ಲಿ ಆಕರ್ಷಿಸಿದ್ದಾರೆ. ದುಡ್ಡಿನದರ್ಪ, ಸುಟ್ಟಿತು ಶೀಲ, ನೀನು ಹುಟ್ಟಿದ್ದು ಯಾರಿಗೆ ? ನಾಟಕಗಳಲ್ಲೆಲ್ಲ ಮೆಚ್ಚಿಕೆ ಪಡೆದಿದ್ದಾರೆ.

ಹುಚ್ಚೇಶ್ವರ ನಾಟ್ಯ ಸಂಘದಲ್ಲಿ ಸುಮಾರು 20–22 ವರ್ಷಗಳ ಹಿಂದೆ ಗುಲಬರ್ಗಾ ಕ್ಯಾಂಪಿನಲ್ಲಿ ಎಸ್.ಎಂ. ಖೇಡಿಗಿಯವರ ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ ನಾಟಕದಲ್ಲಿ ಪ್ರಮೋದ ಪಾತ್ರದಿಂದ ಅದ್ಭುತ ಅಭಿನಯ ನೀಡಿ ಆವಾಗಲೇ ಅಲ್ಲಿಯ ಮನೆ ಮಾತಾಗಿದ್ದರು. ಆಗ ಮಾಲತಿ ಮೈಸೂರು, ದಿ. ಅಬ್ಬಾಸ ಅಲಿ ಇಲಕಲ್ಲ, ವಿಜಯಶೇಖರ ಪ್ರೇಕ್ಷಕರಿಗೆ ಎಂದೂ ಮರೆಯದಂತಹ ಅಭಿನಯ ನೀಡಿದರು. ಆ ಕ್ಯಾಂಪನಲ್ಲಿದ್ದಾಗ ದೇವರಿಲ್ಲದ ಗುಡಿ ನಾಟಕದಲ್ಲಿ ಪ್ರದೀಪ, ಬಸ್ ಕಂಡೆಕ್ಟರದಲ್ಲಿ ಜಗದೀಶ, ಗರೀಬಿ ಹಟಾವೋದಲ್ಲಿ ರಾಜೇಶ, ನನ ಗಂಡನ ಹೆಂಡತಿಯಲ್ಲಿ ದಿವಾಕರ (ಅರೆಹುಚ್ಚ)ನ ಪಾತ್ರಗಳಿಂದ ವಿಜಯಶೇಖರ ವಿಜಯದಲ್ಲಿ ಮೆರೆದಿದ್ದಾರೆ.

ವಿಜಯಶೇಖರ ಇದುವರೆಗೆ ಸೇವೆಸಲ್ಲಿಸಿದ ಕಂಪನಿಗಳೆಂದರೆ 'ರೇಣುಕಾ ನಾಟ್ಯ ಸಂಘ' ಹಾವೇರಿ 'ಮಂಜುನಾಥ ನಾಟ್ಯ ಸಂಘ' ಚಿತ್ತರಗಿ 'ಅಮರೇಶ್ವರ ನಾಟ್ಯ ಸಂಘ' ಇಲಕಲ್ಲ 'ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ, 'ಸಂಗಮೇಶ್ವರ ನಾಟ್ಯ ಸಂಘ' ಗುಡಿಗೇರಿ, ಇವುಗಳಲ್ಲಿ ಹುಚ್ಚೇಶ್ವರ ನಾಟ್ಯ ಸಂಘದಲ್ಲಿ ಹತ್ತು ವರ್ಷ, ಸಂಗಮೇಶ್ವರ ನಾಟ್ಯ ಸಂಘದಲ್ಲಿ ಇಪ್ಪತ್ತು ವರ್ಷ ದೀರ್ಘಕಾಲ ಸೇವೆಸಲ್ಲಿಸಿದ ಕಂಪನಿಗಳಾಗಿವೆ. ಈ ಎಲ್ಲಾ ಕಂಪನಿಗಳಲ್ಲಿ ಪ್ರಮುಖ ಪಾತ್ರಗಳಲ್ಲಿಯೇ ಅಭಿನಯಿಸುತ್ತ ಬಂದಿದ್ದಾರೆ. ಐವತ್ತೊಂದರ ಹರೆಯದ ವಿಜಯಶೇಖರ ಕಲಾವಿದರಾಗಿ ದುಡಿದಿದ್ದು ಮೂವತ್ತು ವರ್ಷಗಳಿಂದ, ಮೂರು ದಶಕದ ಬಣ್ಣದ ಬದುಕಿನಲ್ಲಿ ಹೆಚ್ಚಿನ ಯಾವ ಕಷ್ಟ–ನಷ್ಟಗಳನ್ನನುಭವಿಸಿಲ್ಲ. ಅದಕ್ಕೆ ಅವರ ತಿಳುವಳಿಕೆ, ಮುಂದಾಲೋಚನೆ, ಚಟಗಳಿಂದ ಬಹುದೂರ ಉಳಿದಿರುವುದೇ ಕಾರಣ.

ವಿಜಯಶೇಖರ ಅವರನ್ನು ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಇವರು ನಾಡಿನ ಅನೇಕ ಹಿರಿಯ ರಂಗಕಲಾವಿದರೊಂದಿಗೆ, ಚಲನಚಿತ್ರ ನಟಿಯೊಂದಿಗೆ ಅಭಿನಯಿಸಿದ್ದಾರೆ. ಅರಿಷಣ ಗೋಡಿಯವರ ಹಾಗೂ ಗುಡಿಗೇರಿ ಬಸವರಾಜರ ರಚನೆಯ ಎಲ್ಲಾ ನಾಟಕಗಳಲ್ಲಿ–ಖಳನಾಯಕರಾಗಿ ಅಭಿನಯಿಸಿದ ವಿಜಯಶೇಖರ ತಮ್ಮದೇ ಆದ ಶೈಲಿ ಅಳವಡಿಸಿಕೊಂಡಿದ್ದಾರೆ. ಮಾತುಗಳ ಸ್ಪಷ್ಟ ಏರಿಳಿತ, ಪಾತ್ರಗಳಿಗೆ ತಕ್ಕ ಹಾವಭಾವ, ನಡಿಗೆ ಎಲ್ಲವೂ ಆಕರ್ಷಕವಾಗಿ ಅದ್ವಿತೀಯ ನಟರಾಗಿ ಪರಿಗಣಿಸಲ್ಪಡುತ್ತಾರೆ.

09.10.1958ರಲ್ಲಿ ಜನಿಸಿದ ಅವರ ಬಾಲ್ಯ, ಓದು ಎಲ್ಲವೂ ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿ ಹತ್ತಿರದ ಚಿಕ್ಕ ಹಳ್ಳಿಯೊಂದರಲ್ಲಿ. (ಜಿಎಚ್)



ವಿಠಲ್‌ರಾವ ಜಾನವಾಳೆ: ಚಿತ್ರಕಲಾವಿದ. ಬೀದರ ಜಿಲ್ಲೆ ಔರಾದ ತಾಲ್ಲೂಕಿನ 'ಹೋಳ ಸಮುದ್ರ' ಎಂಬ ಸಣ್ಣ ಹಳ್ಳಿಯವರು. 1965 ಅಕ್ಟೋಬರ್ 16 ರಂದು ಜನಿಸಿದರು. ತಂದೆ ವಿಠಲರಾವ್. ತಾಯಿ ಸುಭದ್ರಾಬಾಯಿ. ತಮ್ಮ ಬಾಲ್ಯವನ್ನು ಸುಂದರ ಪರಿಸರದ ಚಿಕ್ಕ ಹಳ್ಳಿಯಲ್ಲಿಯೇ ಕಳೆದರು. ಹಾಗೂ ಹೆಚ್ಚಿನ ಅಭ್ಯಾಸಕ್ಕಾಗಿ ಮಹಾರಾಷ್ಟ್ರದ ಉದಗೀರ ನಗರದಲ್ಲಿ ಪ್ರೌಢ ಶಿಕ್ಷಣ ಪಡೆಯಲು ಹೋದರು. ಅಲ್ಲಿ ಇವರ ಕಲಾ ನೈಪುಣ್ಯವನ್ನು ಕಂಡು ಗುರುಗಳಾದ ವಾಸ್ತವ ಮಾಸ್ತರರವರು ಇವರ ಅಭಿರುಚಿ ಹಾಗೂ ಚಿತ್ರ ಬಿಡಿಸುವ ಗೀಳನ್ನು ಮನಗಂಡು ಇವರನ್ನು ಕಲಾಶಿಕ್ಷಣ ಪಡೆಯುವದಕ್ಕೆ ಸೂಚಿಸಿ ಪ್ರೋತ್ಸಾಹಿಸಿದ್ದರಿಂದ 1981ರಲ್ಲಿ ಲಾತೂರಿನ ಕಲಾಶಾಲೆಯಲ್ಲಿ ಪ್ರಥಮ ಹಾಗೂ ದ್ವಿತೀಯ ವರ್ಷದ ಕಲಾಶಿಕ್ಷಣವನ್ನು ಮುಗಿಸಿ ಅನಂತರ ಸಾಂಗಲಿಯ ಕಲಾಶಾಲೆಯಲ್ಲಿ ಮುಂದಿನ ಕಲಾಶಿಕ್ಷಣ ಪಡೆದು ಮುಂಬ ಯಿಯ ಸರ್. ಜೆ.ಜೆ. ಕಲಾ ಶಾಲೆಯಿಂದ ಪದವಿಯನ್ನು ಪಡೆದುಕೊಂಡರು. ಆದರೆ ತಮ್ಮ ತಂದೆಗೆ ಒಬ್ಬನೆ ಗಂಡು ಮಗನಾಗಿರುವುದರಿಂದ ಪರಿವಾರದ ಜವಾಬ್ದಾರಿ ನೋಡಿಕೊಳ್ಳುವ ಅನಿವಾರ್ಯತೆಯನ್ನು ಮನಗಂಡು ಮುಂಬಯಿಯಂಥ ಮಾಯಾನಗರಿಯನ್ನು ಬಿಟ್ಟು ತಮ್ಮ ಊರಿಗೆ ಮರಳಿ ಬಂದರು. ಆಗಲೇ ಒಬ್ಬ ಸೃಜನಶೀಲ ಕಲಾವಿದನಾಗಿ ಗುರುತಿಸಿಕೊಳ್ಳುವ ಅವಕಾಶ ಕಳೆದುಕೊಂಡರು. ಆದರೆ ತಮ್ಮ ಮನದಲ್ಲಿ ಸದಾ ಕಾಡುವ ಹಾಗೂ ತಳಮಳಿಸುವ ಅಭಿವ್ಯಕ್ತಿ ಮಾಧ್ಯಮವಾದ ಕಲಾಕೃತಿಗಳ ರಚನೆ ಎಂದು ಮರೆಯಲಿಲ್ಲ. ತಮ್ಮ ಮೇಲಿದ್ದ ಪರಿವಾರದ ಜವಾಬ್ದಾರಿಯನ್ನು ನಿಭಾಯಿಸುವದರ ಜೊತೆಗೆ ತಮ್ಮ ಕ್ಷೇತ್ರವನ್ನು ಮರೆಯಲಿಲ್ಲ. ತಮ್ಮ ಮನೆಯಲ್ಲಿಯೇ ಒಂದು ಸುಸಜ್ಜಿತವಾದ ಸ್ಟೋಡಿಯೋ ಮಾಡಿಕೊಂಡು ಪ್ರಶಾಂತವಾದ ವಾತಾವರಣದಲ್ಲಿ ಚಿತ್ರ ರಚನೆಯಲ್ಲಿ ತೊಡಗಿಸಿಕೊಂಡು ಕಲಾ ಕೃತಿಗಳನ್ನು ರಚನೆ ಮಾಡುತ್ತ



'ಶಿವ-ಪಾರ್ವತಿ' ಪೋಸ್ಟರ್ ವರ್ಣ ಮಾಧ್ಯಮ

ತಮ್ಮ ಗ್ರಾಮ ಹಾಗೂ ಸುತ್ತಮುತ್ತಲಿನ ಅನೇಕ ಶ್ರೀಮಂತರ ಭಾವಚಿತ್ರಗಳನ್ನು ರಚಿಸಿ ಕೊಡುವುದರ ಮೂಲಕ ಈ ಪ್ರದೇಶದಲ್ಲಿ ಚಿರಪರಿಚಿತರಾದರು.

ಇವರ ಕಲಾಕೃತಿಗಳಲ್ಲಿ ಪೌರಾಣಿಕ ಹಾಗೂ ಧಾರ್ಮಿಕ ವಿಷಯಗಳನ್ನು ಹೆಚ್ಚಾಗಿ ರಚನೆ ಮಾಡುವದರ ಜೊತೆಗೆ ಶಿವಾಜಿ ಮಹಾರಾಜನ ಶೌರ್ಯದ ಕಥಾ ಚಿತ್ರಗಳು ಹಾಗೂ ಶಿವಪಾರ್ವತಿ, ವಿಶ್ವಾಮಿತ್ರ, ಮೇನಿಕೆ, ಶ್ರೀಕೃಷ್ಣ, ಅರ್ಜುನ, ಗಣಪತಿ ಹೀಗೆ ಅನೇಕ ಚಿತ್ರ ರಚನೆಯ ಜೊತೆಗೆ ಸಮಕಾಲೀನ ಹಾಗೂ ನವ್ಯಕಲಾ ಶೈಲಿಯ ಕಲಾಕೃತಿ ರಚನೆಯ ಜೊತೆಗೆ ಹೆಣ್ಣಿನ ವಿರಹ ವೇದನೆಯ ಚಿತ್ರಗಳೂ ರಚನೆ ಮಾಡಿದ್ದಾರೆ.

ಒಟ್ಟಿನಲ್ಲಿ ಕಲಾಕೃತಿ ರಚನೆಯಲ್ಲಿ ವರ್ಣಸಂಯೋಜನೆ ಜೊತೆಗೆ ನೈಜ ಶೈಲಿಯಲ್ಲಿ ಹೆಚ್ಚಾಗಿ ಕಲಾಕೃತಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಒಟ್ಟಾರೆ ಇವರ ಮನೆಯನ್ನು ಪ್ರವೇಶಿಸಿದರೆ ಕಲಾ ಗ್ಯಾಲರಿಯಲ್ಲಿದ್ದಿದ್ದೇವೆ ಎಂಬಂತಾಗುತ್ತದೆ. (ಎಸ್‌ಪಿವಿ)

ವಿಠ್ಠಲ ಪೂಜಾರ: ಜಿ.ಎಂ. ಶಿರಹಟ್ಟಿ ನಿರ್ದೇಶನದ ಜೋಕುಮಾರ ಸ್ವಾಮಿ ನಾಟಕವನ್ನು ಗುಲಬರ್ಗಾದ ಮಿತ್ರ ಮಂಡಳಿ ಪ್ರಯೋಗಿಸಿತ್ತು. ಆ ನಾಟಕದಲ್ಲಿ ವಿಠ್ಠಲ ಪೂಜಾರ ಅವರ ಬಸಣ್ಣಾ ಪಾತ್ರ ನೆನಪು ಮಾಡಿಕೊಂಡರೆ ನಮ್ಮೆದುರು ಈಗಲೂ ಜೀವಂತ ನಿಲ್ಲುತ್ತಿದೆ. ಪಾತ್ರದ ಭಾವನೆ, ಸತ್ವಗಳನ್ನು ಪ್ರಕಟಿಸುವಲ್ಲಾಗಲಿ, ಮಾತುಗಳ ಉಚ್ಚಾರಣೆಯ ಶೈಲಿಯಲ್ಲಾಗಿ, ಅವುಗಳಿಗೆ ತಕ್ಕಂತೆ ದೈಹಿಕ ಚಲನವಲನೆಗಳಲ್ಲಾಗಲಿ ಮೇರೆ ಮೀರದಂತೆ ಅಭಿನಯಿಸಿದ್ದರು. ಪಾತ್ರದ ವ್ಯಕ್ತಿತ್ವ ಅದನ್ನು ಸುತ್ತುವರೆದ ಸನ್ನಿವೇಶದ ಪ್ರಜ್ಞೆ ಇರಿಸಿಕೊಂಡು ಅಭಿನಯಿಸಿದ್ದೇ ಯಶಸ್ಸಿಗೆ ಕಾರಣ.

ಡಾ. ಬಸವರಾಜ ನಾಯ್ಕರ ಅವರು 'ಜೋಗಿಭಾವಿ' ಈ ನಾಟಕದಲ್ಲಿ ಚೆನಮಲ್ಲ ನಾಯಕ. ಇದೇ ನಾಟಕ ಇತ್ತೀಚಿಗೆ ಗವೀಶ ಹಿರೇಮಠ ಅವರ ನಿರ್ದೇಶನದಲ್ಲಿ ದೂರದರ್ಶನದಿಂದ ಪ್ರಸಾರ ಹೊಂದಿತು. ವಿಠ್ಠಲ ಪೂಜಾರ ಅವರ ಕುರುಡನ ಪಾತ್ರ ಪ್ರಮುಖವಾಗಿತ್ತು. ಚೆನಮಲ್ಲ-ಚೆನ್ನಿ ಕುರುಡು ದಂಪತಿಗಳ ಸುತ್ತು ಹೆಣೆದುಕೊಂಡ ಕಥೆ ಇದು, ಚೆನಮಲ್ಲ ಕುರುಡನಾಗಿದ್ದರೂ ಅವನ ಸೌಂದರ್ಯ ದೃಷ್ಟಿ, ರಸಿಕತೆ, ಜೀವನೋತ್ಸಾಹದಂಥ ಗುಣಗಳನ್ನು ವ್ಯಕ್ತಪಡಿಸುವಲ್ಲಿ ಕಲಾವಿದ ಯಶಸ್ವಿಯಾಗುತ್ತಾನೆ.

ವಿಠ್ಠಲ ಪೂಜಾರ ಅವರಿಗೆ ನಾಟಕದ ಘೀಳು ವಿದ್ಯಾರ್ಥಿ ಜೀವನದಿಂದಲೇ ಸಾಗಿಬಂದಿದೆ. ಅವರು ವೃತ್ತಿ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಬಿ.ಎ. ಪದವಿ ಮುಗಿದ ನಂತರ ಬಿಜಾಪೂರ ಜಿಲ್ಲೆಯ ಬುದನಿಯ ತಮ್ಮ ಹಳ್ಳಿಯಲ್ಲಿ ನಾಟಕದ ಆಸಕ್ತಿಯಿಂದ ಹವ್ಯಾಸಿ ಕಲಾವಿದರ ಜೊತೆ ಬೆರೆತು ಅಭಿನಯಿಸಿದ್ದಾರೆ. ನಾಟಕ ನಿರ್ದೇಶಿಸಿದ್ದಾರೆ. ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಯ ಪರಿಚಯವಿರುವ ಪೂಜಾರ ಎರಡೂ ರಂಗಭೂಮಿಯ ಬಗ್ಗೆ ಯೋಚಿಸುತ್ತಾರೆ.

ಪೂಜಾರ ಅವರ ಅಭಿನಯನದ ನಾಟಕಗಳೆಂದರೆ ನೆರೆ ಹೊರೆ, ಅವ್ವನ ಜಡ್ಡು, ಅಕ್ಕಮ್ಮನ ಶಾಲೆ, ಲಕ್ಕವ್ವನ ಮಂದಿ, ಅತೃಪ್ತ ಆತ್ಮಗಳು, ನಮ್ಮ ನಮ್ಮ ಬಾಳ್ವೆ, ಚುನಾವಣೆ ಪ್ರಮುಖವಾಗುತ್ತವೆ. ಇವುಗಳಲ್ಲಿ ಕೆಲವು ರಂಗ ನಾಟಕಗಳಾದರೆ ಕೆಲವು ದೂರದರ್ಶನ ನಾಟಕಗಳೂ ಹೌದು. ವಿಠ್ಠಲ ಪೂಜಾರ ಆಕಾಶವಾಣಿ ಕಲಾವಿದರೂ ಆಗಿದ್ದಾರೆ. 'ಬಿ' ಹೈ ಗ್ರೇಡಿನ ಈ ಕಲಾವಿದರ ಧ್ವನಿ ಬಹುಪಾಲು ಆಕಾಶವಾಣಿಯಿಂದ ಕೇಳಿ ಬಂದಿದೆ. ಬಹು ಮುಖ ಪ್ರತಿಭೆಯ ಈ ಕಲಾವಿದರ ಕೊಡುಗೆ ಗಮನಾರ್ಹ.

ಗುಲಬರ್ಗಾದಲ್ಲಿ ಎರಡು ದಶಕಗಳ ಹಿಂದೆ ಇಲ್ಲಿಯ ರಂಗ ಚಟುವಟಿಕೆಗಳಿಗೆ ಮೂಲವಾಗಿ ಕಾರ್ಯನಿರ್ವಹಿಸುತ್ತ ಹಲವಾರು ಸಮಸ್ಯೆಗಳಲ್ಲಿ ಅಭಿನಯದ ಅಭಿರುಚಿಯಿಂದ ತಮ್ಮನ್ನು ತೊಡಗಿಸಿಕೊಂಡು ದುಡಿದ ಪೂಜಾರ ಅವರ ಶ್ರಮ, ಕೊಡುಗೆ ಈ ಭಾಗದ ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಕಾರಣವಾಗಿದೆ. ಇಂದಿನ ಪೀಳಿಗೆಗೆ ವಿಠ್ಠಲ ಪೂಜಾರ ಅಪರಿಚಿತವಾಗಿದ್ದರೂ ಹಿಂದಿನ ಜನ ಅಭಿನಯ ನೋಡಿದ ಪ್ರೇಕ್ಷಕ ವರ್ಗ ಅವರನ್ನೆಂದೂ ಮರೆಯದು. ಅವರ ಆ ದಿನಗಳನ್ನು ಸ್ಮರಿಸಿಕೊಳ್ಳುತ್ತ ಸಾಂಸ್ಕೃತಿಕ ಲೋಕದಲ್ಲಿ ತೇಲುತ್ತಾರೆ. ಖುಷಿ ಪಡುತ್ತಾರೆ. ಅವಿಸ್ಮರಣೀಯ ವೈಭವದ ದಿನಗಳನ್ನು ಸ್ಮರಿಸುತ್ತ ಆ ಕಲ್ಪನಾ ಲೋಕದಲ್ಲಿ ಕರಗುತ್ತಾರೆ.

ವಿಠ್ಠಲ ಪೂಜಾರ ಅವರು ಕೃಷಿ ಮಾರಾಟ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಾರಂಭದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಂತರ 1987ರಲ್ಲಿ ಕೆ.ಎ.ಎಸ್. ಉತ್ತೀರ್ಣರಾಗಿ ಕೃಷಿ ಇಲಾಖೆಗೆ ಸೇರಿಕೊಂಡರು. ಹಂತ ಹಂತವಾಗಿ ಬದುಕನ್ನು ವಿಸ್ತರಿಸಿಕೊಳ್ಳುತ್ತ, ಪ್ರಯತ್ನ ಪರಿಶ್ರಮದಿಂದ ಕಾರ್ಯನಿರ್ವಹಿಸುತ್ತ ಉನ್ನತ ಸ್ಥಾನ ಪಡೆದಿದ್ದಾರೆ.

ವಿಠ್ಠಲ ಪೂಜಾರ ಅವರು ಜನ್ಮ ಪಡೆದಿದ್ದು ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿಯ ಬುದನಿಯ ಬಾಲಪ್ಪ-ರಾಮಮ್ಮ ದಂಪತಿಗಳ ರೈತ ಮನೆತನದಲ್ಲಿ, (01.06.1955)

ಓದಿದ್ದು ಬುದನಿ, ಗೋಳಸಂಗಿ, ವಂದಾಲ, ಆಲಮಟ್ಟಿ, ಬಿಜಾಪೂರ, ಸಿಂಧನೂರು, ಗುಲಬರ್ಗಾದಲ್ಲಿ ಸಂಕೀರ್ಣ ವಾತಾವರಣದಲ್ಲಿಯೂ ಒಂದು ನಿಶ್ಚಿತ ಗುರಿ ಇಟ್ಟುಕೊಂಡು ಸಾಧಿಸಿದವರು.

ಅವರ ಕಲೆ, ಬದುಕು, ಸಾಧನೆ ಕುರಿತು ಕನ್ನಡಾಭಿಮಾನ ಕಂಡು ನಾಡಿನ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. 1. ಬೀದರ ಜಿಲ್ಲಾಡಳಿತ ಕನ್ನಡದಲ್ಲಿ ವ್ಯವಹರಿಸುತ್ತ ಬಂದುದಕ್ಕೆ 1983-84ರ ಸಾಲಿನಲ್ಲಿ ಗೌರವಿಸಿದೆ. 2. ಬೆಂಗಳೂರಿನ ವಿಶ್ವೇಶ್ವರಯ್ಯ ಸ್ಮಾರಕ ಇಂಜಿನಿಯರ್ಸ್ ಡೈರಿ ದಶಮಾನೋತ್ಸವ 2001. 3. ಗುರುಬಸವ ಬ್ರಹನ್ಮಠ ಗುಲಬರ್ಗಾ ಉತ್ತಮ ಆಡಳಿತಗಾರನೆಂದು ಸನ್ಮಾನಿಸಿದೆ. 4. ಮಹಾಂತ ಜ್ಯೋತಿ ಪ್ರತಿಷ್ಠಾನ 'ಕಾಯಕ ರತ್ನ' ಬಿರುದು ನೀಡಿ 1999ರಲ್ಲಿ ಸನ್ಮಾನಿಸಿದೆ.

ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಯಿರುತ್ತಾಳೆನ್ನುವ ಮಾತು ಇಲ್ಲಿ ಅಕ್ಷರ ಸಹ ಸತ್ಯ. ಇಂದು ವಿಠ್ಠಲ ಪೂಜಾರ ಅವರ ಬೆಳವಣಿಗೆಯ ಹಿಂದೆ ಡಾ. ಸರಸ್ವತಿ ಪೂಜಾರ ಅವರ ಶ್ರಮ, ಶ್ರದ್ಧೆ, ತ್ಯಾಗವಿದೆ. ಅವರ ಉನ್ನತ ಹುದ್ದೆ, ಅವರ ಅಧಿಕಾರ, ಅವರ ಸಾಧನೆ ಎಲ್ಲವೂ ಡಾ. ಸರಸ್ವತಿಯವರ ಅವ್ಯಕ್ತ ಪರಿಶ್ರಮವೆಂದರೆ ಅತಿಶಯೋಕ್ತಿಯಲ್ಲ. ವಿಠ್ಠಲ ಪೂಜಾರ ಅವರ ಕಲೆ-ಬದುಕು ಸಾರ್ಥಕತೆ ಪಡೆದಿದೆ. (ಜಿಎಚ್)



ವಿನೋದ ರಘುವೀರ: ಸುರಪುರ ಶೈಲಿಯ ವಿಶಿಷ್ಟ ಚಿತ್ರ ಕಲಾವಿದ. ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ್ ಕಾಲೇಜ ನಲ್ಲಿ ಪ್ರವೇಶ ಪಡೆದು, ಚಿತ್ರಕಲಾ ಅಭ್ಯಾಸ ಮುಗಿಸಿದರು. ಇವರು, ತಮ್ಮ ಚಿತ್ರಕಲೆಯನ್ನು ಪ್ರಥಮವಾಗಿ ಪ್ರಾರಂಭ ಮಾಡಿದ್ದು ವಿಜಯ ನಗರ ಹಾಗೂ ಸುರಪುರದ ಸಾಂಪ್ರದಾಯಕ ಶೈಲಿಯ ಚಿತ್ರಗಳನ್ನು ಬಿಡಿಸುವುದ ರೊಂದಿಗೆ ಇವರ ಗುರುಗಳು ಖ್ಯಾತ ಚಿತ್ರಕಲಾವಿದರು ಕೆ.ಎಸ್. ನಾಗೂರೆ. ಶಹಾಬಾದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುರಪುರ-ವಿಜಯನಗರದ ಸಾಂಪ್ರದಾಯಿಕ ಶೈಲಿಯ ಚಿತ್ರಗಳನ್ನು ಬಿಡಿಸಿ ತಮ್ಮನ್ನು ಚಿತ್ರಕಲಾ ಲೋಕದಲ್ಲಿ ಗುರುತಿಸಿಕೊಂಡವರು.

ಇವರ ಕಲಾಕೃತಿಗಳು ಸಮಾಜಕ್ಕೆ ಅಂತ್ಯಂತ ಹತ್ತಿರದ ಸಂಬಂಧಿಸಿದವುಗಳು ಎಂಬುದರಲ್ಲಿ ಅನುಮಾನವಿಲ್ಲ. ಅಂಥ ಚಿತ್ರಗಳನ್ನೇ ಹೆಚ್ಚಾಗಿ ರಚಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ



'ಲೈಫ್' ಪೆನ್ ಹಾಗೂ ಇಂಕ್ ಮಾಧ್ಯಮ

ಸಮಾಜ ಯಾವ ರೀತಿ ಹೆಜ್ಜೆ ಹಾಕುತ್ತಿದೆ ಎನ್ನುವದನ್ನು ಇವರು ಅದ್ಭುತವಾಗಿ ರಚಿಸಿದ್ದಾರೆ. 14ನೆಯ ಶತಮಾನದ ವಿಜಯ ನಗರದ ಸಾಂಪ್ರದಾಯಿಕ ಕಲೆ ಮತ್ತು ಸುರಪುರ ಶೈಲಿಯ ಕಲೆಗಳೆರಡನ್ನೂ ಬಳಸಿಕೊಂಡು ಒಂದು ವಿಶೇಷ ಶೈಲಿಯ ಕಲಾಕೃತಿ ರಚಿಸುವಲ್ಲಿ ಹೊಸ ತಿರುವನ್ನು ಕಂಡುಕೊಂಡಿರುವ ಇವರು ನಾಡಿನ ಖ್ಯಾತ ಚಿತ್ರಕಲಾವಿದರಲ್ಲೊಬ್ಬರಾಗಿ ಹೊರ ಹೊಮ್ಮಿದ್ದಾರೆ. ಇವರು ಕಲಬುರ್ಗಿ ಜಿಲ್ಲೆಯ ಕೈಗಾರಿಕಾ ಪಟ್ಟಣ ಶಹಾಬಾದನಲ್ಲಿ ಹುಟ್ಟಿ ಸಾಂಪ್ರದಾಯಿಕ ಸುಸಂಸ್ಕೃತ ಮನೆತನ ದಲ್ಲಿ ಬೆಳೆದರು.

ಸಂಪ್ರದಾಯ, ನಂಬಿಕೆಗಳು, ಸಂಗೀತ-ನೃತ್ಯ, ಜಾನಪದ, ಆಚಾರ ವಿಚಾರ ಇವೆಲ್ಲವುಗಳನ್ನು ತಮ್ಮ ಕಲೆಯ ವಸ್ತುಗಳನ್ನಾಗಿ ಅಳವಡಿಸಿಕೊಂಡು ಜನರ ಮನದಲ್ಲಿ ಬಹಳ ಕಾಲ ಉಳಿಯು ವಂತಹ ಹಾಗೂ ಜನಜೀವನಕ್ಕೆ ಸಮೀಪವಾಗುವಂಥ ಕೃತಿ ಗಳನ್ನು ರಚಿಸುವುದು ಈ ಕಲಾವಿದನ ಮುಖ್ಯ ಉದ್ದೇಶ. ಆ ದಿಶೆಯಲ್ಲಿ ಇವರದು ಅತ್ಯುತ್ತಮ ಸಾಧನೆ ಎನ್ನಬಹುದು. ಇವರ ಸುರಪುರ ಶೈಲಿಯ ಕಲಾಕೃತಿಗಳಂತೂ ಅತ್ಯಾಕರ್ಷಕವಾಗಿ ಎಲ್ಲರ ಕಣ್ಮನ ಸೆಳೆಯುತ್ತವೆ. ಚಿತ್ರಕಲೆ ಇವರಿಗೆ ಬಾಲ್ಯದಿಂದಲೂ ಹವ್ಯಾಸವಾಗಿ ಬೆಳೆದು ಬಂದದ್ದು. ತಮ್ಮ ಕಲಾ ಜೀವನದಲ್ಲಿ ಒಂದು ವೈಶಿಷ್ಟ್ಯವಿರಬೇಕೆಂದು ಇವರು ಆಯ್ಕೆ ಮಾಡಿ ಕೊಂಡಿರುವದು ವಿಜಯನಗರ ಕಾಲದ ಸುರಪುರ ಶೈಲಿಯ ಚಿತ್ರಕಲೆಯನ್ನು ಅದರಲ್ಲಿ ಹೊಸ ತಾಂತ್ರಿಕತೆ ಅಳವಡಿಸಿಕೊಂಡು ತಮ್ಮದೇ ಆದ ವಿನೂತನ ರೂಪದೊಂದಿಗೆ ಸುರಪುರ ಶೈಲಿಯ ಕೃತಿಗಳನ್ನು ರಚಿಸತೊಡಗಿದರು. ಅದರಲ್ಲೇ ಹೊಸ ಪ್ರಯೋಗ ಗಳನ್ನು ಮಾಡುತ್ತ ಯಶಸ್ಸಿನ ಮೆಟ್ಟಿಲುಗಳನ್ನು ಏರತೊಡಗಿದರು.

ಇವರು ಚಿತ್ರಕಲೆಗೆ ಆರಿಸಿಕೊಂಡ ವಿಷಯ ವಸ್ತುಗಳ ಸಗರ

ನಾಡು ಎಂದು ಕರೆಯುವ ಸುರಪುರ ಶೈಲಿ ಚಿತ್ರಗಳನ್ನು. ಈ ಸಗರನಾಡಿನಲ್ಲಿ ಅನೇಕ ಐತಿಹಾಸಿಕ ಶಿಲಾ ಶಾಸನಗಳು ಅಪೂರ್ವ ಕಲಾಕೃತಿಗಳು, ಶಿಲ್ಪಕಲೆಗಳು ಹಾಗೂ ಇಲ್ಲಿನ ಚರಿತ್ರೆಯೂ ಇವರಿಗೆ ಸ್ಫೂರ್ತಿದಾಯಕವಾಗಿದ್ದವು. ಇಂಥ ಒಂದು ವಿಶಿಷ್ಟ ಕಲೆಯನ್ನು ಬೆಳೆಸಿಕೊಂಡು ಬಂದಿರುವ ಇವರ ಈ ವಿನೂತನ, ಅಪರೂಪದ ಕಲಾಕೃತಿಗಳು ರಾಜ್ಯದ ಹಾಗೂ ದೇಶದ ಅನೇಕ ಪ್ರಸಿದ್ಧ ಸ್ಥಳಗಳಲ್ಲಿ ಪ್ರದರ್ಶನಗೊಂಡಿವೆ. ಪ್ರಥಮವಾಗಿ ಸಿ.ಕೆ.ಪಿ. ಬೆಂಗಳೂರು, ಶಹಾಬಾದ್, ನಾಗಪುರ, ಕಲಬುರ್ಗಿ ವಿಶ್ವವಿದ್ಯಾಲಯ, ಬೆಂಗಳೂರು, ಮೈಸೂರು, ಉಜ್ಜಯನಿ ಮುಂತಾದ ಕಡೆ ಹಲವು ಬಾರಿ ಪ್ರದರ್ಶನ ನಡೆಸಿದ್ದಾರೆ ಹಾಗೂ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಇವರಿಗೆ ಕೆಲವು ಪ್ರಶಸ್ತಿಗಳು ಸಂದಿವೆ. 1997ರಲ್ಲಿ ಪ್ರಥಮ ಅಖಿಲ ಕಲಾ ಪ್ರದರ್ಶನ ತಸ್ಮಿಯಾ ಆರ್ಟ್ ಹೌಸ್ ಶಹಾಬಾದ, 1999ರಲ್ಲಿ ಮೈಸೂರ ದಸರಾ ಪ್ರಶಸ್ತಿ, 2001ರಲ್ಲಿ 15ನೇ ಅಖಿಲ ಭಾರತ ಕಲಾಸ್ಪರ್ಧೆ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ ನಾಗಪೂರ, 2002ರಲ್ಲಿ 31ನೇ ಅಖಿಲ ಭಾರತ ಕಲಾಪ್ರದರ್ಶನ ಲಲಿತಕಲಾ ಪರಿಷತ್ ವಿಶಾಖಪಟ್ಟಣ(ಎಪಿ). ಸುರಪುರ ಶೈಲಿಯ ಅಶ್ವಮೇಧ ಕಲಾಕೃತಿಗೆ 1997ರಲ್ಲಿಯೂ ಪ್ರಶಸ್ತಿ ಪಡೆದಿದ್ದಾರೆ.

(ಆರ್‌ಎಸ್‌ಜೆ)

ವಿರೂಪಾಕ್ಷ ಶಿವಲಿಂಗಯ್ಯ ಮಠಪತಿ: ಹಿಂದೂಸ್ತಾನಿ ಸಂಗೀತ ಕಲಾವಿದ. ನಟ, ನಾಟಕಕಾರ ಹಾಗೂ ನಿರ್ದೇಶಕ. ಇವರು ಹುಟ್ಟಿದ್ದು 1929, ಅಕ್ಟೋಬರ್‌ನಲ್ಲಿ ಗೋರಟಾ ಗ್ರಾಮದ ಸುಸಂಸ್ಕೃತ ವೀರಮಾಹೇಶ್ವರ ಮನೆತನದಲ್ಲಿ. ತಂದೆ ಶಿವಲಿಂಗಯ್ಯ ಜನಪದ ಸಂಗೀತಗಾರರು, ನಾಟಕ ರಚನಾಕಾರರು. ಅವರನ್ನು ಹೈದ್ರಾಬಾದ ಕರ್ನಾಟಕ ಪ್ರಾಂತ್ಯದ ಪ್ರಪ್ರಥಮ ಸಣ್ಣಾಟದ ರಚನಾಕಾರರೆಂದು ವಿದ್ವಾಂಸರೆಂದು ಗುರುತಿಸಿದ್ದಾರೆ. ಅವರು ತಮ್ಮ ಬರಹದಿಂದ ಮೂರ್‍ನಾಲ್ಕು ದೊಡ್ಡಾಟದ ನಾಟಕಗಳನ್ನು ಬರೆದಿದ್ದಾರೆ.



ತಾಯಿ ಸಂಗಮ್ಮವ್ವ ಬಾಲ್ಯದಿಂದಲೂ ಸಂಗೀತ ಕಲೆಯ ಬಗೆಗೆ ಅಪಾರ ಒಲವು. ಮಗನ ಒಲವನ್ನು ಗುರುತಿಸಿ ಶಿವಲಿಂಗಯ್ಯನವರು ಮಗನಿಗೆ ಹಾರ್ಮೋನಿಯಂ ಮೇಲೆ ಕೆಲವು ರಾಗಗಳನ್ನು ಹೇಳಿಕೊಟ್ಟರು.

ವಿರೂಪಾಕ್ಷಯ್ಯನವರ ಸಂಗೀತಾಸಕ್ತಿ ಕಂಡು ನೂರಂದಪ್ಪ ಗವಾಯಿಗಳು ಅವರಿಗೆ ಕೆಲವು ವರ್ಷ ಸಂಗೀತ ಹೇಳಿಕೊಟ್ಟರು. ಗಾಯನದ ಜೊತೆಗೆ ತಬಲಾದ ಕೆಲವು ಬೋಲ್‌ಗಳನ್ನು ಕಲಿಸಿದರು. ಇವರು ಗವಾಯಿಗಳಲ್ಲಿ ಅತ್ಯಂತ ನಿಷ್ಠೆಯಿಟ್ಟು ಸಂಗೀತ ಅಭ್ಯಾಸ ಮಾಡಿದರು. ನೂರಂದಪ್ಪ ಗವಾಯಿಗಳು ಆಗಾಗ ನಾಟಕ ಕಲಿಸಲು ಇತರೆಡೆಗಳಿಗೆ ಹೋದಾಗ ವಿರೂಪಾಕ್ಷಯ್ಯನವರ ಅಣ್ಣ ರೇವಣಯ್ಯ ಇವರಿಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದ.

ನೂರಂದಪ್ಪ ಗವಾಯಿಗಳಲ್ಲಿ ಒಳ್ಳೆ ರೀತಿಯಿಂದ ಸಂಗೀತ ಅಭ್ಯಾಸ ಮಾಡಿದ ವಿರೂಪಾಕ್ಷಯ್ಯನವರು ಉತ್ತಮ ಸಂಗೀತಗಾರರೆನಿಸಿದರು. ಊರಲ್ಲಿ ನಡೆಯುವ ಭಜನೆ, ಸಂಗೀತ ಕಾರ್ಯಕ್ರಮಗಳ ಮೂಲಕ ಇವರ ಪ್ರತಿಭೆ ಪ್ರಕಟವಾಯಿತು. ನಾಟಕವನ್ನು ನಿರ್ದೇಶಿಸಿದರು. ಸಂಗೀತ ಸಂಯೋಜನೆ ಮಾಡಿದರು. ಹೊಸ ಸಂಸಾರ, ಮಂಗಳಗೌರಿ, ಅತ್ತೆ–ಸೊಸೆ, ದೈವಚಿತ್ರ, ದಾರಿದೀಪ, ಭಕ್ತ ಮಾರ್ಕಂಡೇಯ, ಗರತಿಯ ಶಾಪ, ಸ್ತ್ರೀರತ್ನ ಮುಂತಾದ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿ ಉತ್ತಮ ಸಂಗೀತ ನಿರ್ದೇಶಕರೆಂದು ಹೆಸರು ಗಳಿಸಿದ್ದಾರೆ.

ಇವರೊಬ್ಬ ಉತ್ತಮ ನಟ. ಅನೇಕ ನಾಟಕಗಳಲ್ಲಿ ಅಭಿನಯಿಸಿ ಜನಮನ ಗೆದ್ದಿದ್ದಾರೆ. 'ಪಾರ್ವತಿ ಸತ್ವ ಪರೀಕ್ಷೆ' ಯಲ್ಲಿ ನಾರದನಾಗಿ, 'ಪ್ರಪಂಚ ಪರೀಕ್ಷೆ' ಯಲ್ಲಿ ಕುದುರೆ ಸವಾರನಾಗಿ, 'ಹದಗೆಟ್ಟ ಹೈದ್ರಾಬಾದ'ದಲ್ಲಿ ಭಟ್ಟನಾಗಿ, 'ಬಾಲಚಂದ್ರ' ದಲ್ಲಿ ಶಿವನಾಗಿ ನೀಡಿದ ಅಭಿನಯ ಪ್ರಬುದ್ಧವಾಗಿದೆ. ಇವರು ನಾಟಕ ರಚನಾಕಾರರೆಂದೂ ಗುರುತಿಸಿಕೊಂಡಿದ್ದಾರೆ. 'ಸಂಗೀತ ರುದ್ರ ಸಂಘ' ದ ಘಟನೆಗಳನ್ನು ಕುರಿತು 'ಶ್ರೀ ರುದ್ರ ವಿಜಯ' ವೆಂಬ ಭಕ್ತಿ ಪ್ರಧಾನವಾದ ನಾಟಕ ರಚಿಸಿದ್ದಾರೆ. 1948ರಲ್ಲಿ ಜರುಗಿದ ರಝಾಕಾರ ಹತ್ಯಾಕಾಂಡವನ್ನು ಕುರಿತು ಇವರು ಹಿರಿಯ ವಿರುಪಾಕ್ಷಯ್ಯನವರೊಂದಿಗೆ ರಚಿಸಿದ 'ಭುಲಾಯಿ ಪದ' ಕಿರು ಕೃತಿಯಾಗಿದ್ದರೂ ಅದೊಂದು ಅತ್ಯಂತ ಮಹತ್ವಪೂರ್ಣ ಕೃತಿಯೆಂಬುದರಲ್ಲಿ ಎರಡು ಮಾತಿಲ್ಲ.

ಹಿರಿಯ ವಿರೂಪಾಕ್ಷಯ್ಯನವರು ರಚಿಸಿದ ಹಿಂದೂಸ್ತಾನಿ ಸಂಗೀತದ ಅನೇಕ ರಾಗಗಳ ಲಕ್ಷಣಗೀತ, ಛೋಟಾ ಖ್ಯಾಲ ಮತ್ತು ಕನ್ನಡ ಗೀತೆಗಳಲ್ಲಿ ಸಹಾಯಕರಾಗಿ ಕೆಲಸ ಮಾಡಿದ್ದಾರೆ. ಹೊಸ ಹೊಸ ಗೀತ ರಚನಾಕಾರ್ಯದಲ್ಲಿ ಇವರು ತಬಲಾ ಸಾಥ್ ನೀಡಿ, ಕೃತಿಗಳ ರಚನೆಯಲ್ಲಿ, ಅವುಗಳ ಸ್ವರ ಸಂಯೋಜನೆಯಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಆ ಕೃತಿಗಳ ಕೀರ್ತಿ ಗೌರವ ಇವರಿಗೂ ಸಲ್ಲುತ್ತದೆ. ಹಿರಿಯ ವಿರೂಪಾಕ್ಷಯ್ಯನವರು ರುದ್ರಕ್ಕೆ ಸ್ವರ ಸಂಯೋಜಿಸಿದ ಕಾರ್ಯದಲ್ಲಿ ಇವರ ಸಹಾಯ ಸಂಪೂರ್ಣವಾಗಿದೆ. ಪ್ರತಿ ಹಾಡಿನ ಸ್ವರ ಸಂಯೋಜನೆಯಲ್ಲಿ ಇವರು ತಬಲಾಸಾಥಿಯಾಗಿ ಅವರಿಗೆ ರಾಗ ಸಂಯೋಜನೆಯಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಂಗೀತ ರುದ್ರ ಸಂಘದ ಖ್ಯಾತಿಯಲ್ಲಿ ಇವರಿಗೆ ಹೆಚ್ಚಿನ ಗೌರವ ಸಲ್ಲುತ್ತದೆ.

ಪಿಟೀಲುವಾದನ ಕಠಿಣ ತಂತುವಾದ್ಯಗಳಲ್ಲೊಂದು ಅಂತಹ ವಾದ್ಯದ ಹೆಸರಾಗಲಿ; ಅಥವಾ ಅದರ ಬಗೆಗೆ ತಿಳಿವಳಿಕೆಯಾಗಲಿ ಇರದಿದ್ದ ಹಿರಿಯ ವಿರೂಪಾಕ್ಷಯ್ಯನವರಿಗೆ ಈ ವಾದ್ಯ ಆರಂಭದಲ್ಲಿ ಸ್ವಲ್ಪ ಕಠಿಣವೆನಿಸಿತು. ಗುರೂಜಿ ಅವರ ಮಾರ್ಗದರ್ಶನ ಇವರಿಗೆ ಆ ವಾದ್ಯ ಕಲಿತುಕೊಳ್ಳಲು ಸುಲಭವಾಯಿತು. ಅವರು

ಎರಡ್ಮೂರು ವರ್ಷ ಕಠಿಣ ಸಾಧನೆ ಮಾಡಿ 'ಸಂಗೀತ ಭೂಷಣ' (1957).

ಅವರು ಓರ್ವ ಪಿಟೀಲು ವಾದಕರು. ಬೀದರ ಜಿಲ್ಲೆಯ ಏಕಮೇವ ಪಿಟೀಲು ವಾಕದರು. ಅವರೊಬ್ಬ ಉತ್ತಮ ಹಾರ್ಮೋನಿಯಂ ಹಾಗೂ ತಬಲಾವಾದಕರು. ಅವರು ಅನೇಕ ರಿಗೆ ಸಂಗೀತ ವಿದ್ಯೆ ನೀಡಿದ್ದಾರೆ. ಅವರ ಶಿಷ್ಯರು ಒಳ್ಳೆ ರೀತಿಯಲ್ಲಿ ವಾದ್ಯ ನುಡಿಸುತ್ತಾರೆ, ಹಾಡುತ್ತಾರೆ.

ವಿರೂಪಾಕ್ಷಯ್ಯನವರು ಈಗಾಗಲೇ ಐದು ಪುಸ್ತಕಗಳನ್ನೂ ರಚಿಸಿದ್ದಾರೆ. 'ಗುರುಗಾನ ಪ್ರಭೆ' (2000), ಗುರುಗಾನ ಸ್ತುತಿ' (2000), 'ಶ್ರೀ ಷ.ಬ್ರ. ರಾಚೋಟಿ ಶಿವಾಚಾರ್ಯರ ಪುರಾಣ' 'ಹೈದ್ರಾಬಾದ ಕರ್ನಾಟಕ ಭಾಗದ ಜಲಿಯನ್ ವಾಲಾಬಾಗ್–ಗೋರಟಾ' (2006), 'ಭಕ್ತಿ ಕುಸುಮಾಂಜಲಿ' (2007), ಕೆಳಗಲ್ಲಿ ಶ್ರೀ ವಿರೂಪಾಕ್ಷಯ್ಯನವರೊಡಗೂಡಿ ಸಹಲೇಖಕರಾಗಿ 'ಭೂಲಾಯಿ ಪದ' ವೆಂಬ ಚಿಕ್ಕ ಪುಸ್ತಕ ರಚಿಸಿದ್ದಾರೆ. ಇವರು ಪಂಚಾಂಗದಲ್ಲಿ ಬಲ್ಲಿದರು. ಇವರಿಗೆ 'ಸಂಗೀತ ರುದ್ರ ಕೋವಿದ', 'ಪುರಾಣರತ್ನ', 'ಪ್ರವಚನ ಪ್ರವೀಣ' ಬಿರುದು ಸಂದಿವೆ.

(ಎಸ್‌ಎಂಜಿ)




ವಿರೂಪಾಕ್ಷಯ್ಯ ವಂದಲಿ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಕಲಾವಿದ. ಪಂಡಿತ ಪುಟ್ಟರಾಜರ ನೆಚ್ಚಿನ ಶಿಷ್ಯರಾಗಿ ಸುಮಾರು 10 ವರ್ಷಗಳವರೆಗೆ ಸಂಗೀತದ ಶಿಕ್ಷಣ ಪಡೆದರು. ಜ್ಯೂನಿಯರ್, ಸೀನಿಯರ್, ವಿದ್ವತ್ ಹಾಗೂ ವಿಶಾರದ ಪದವಿಗಳನ್ನು ಪಡೆದರು. ಆಕಾಶವಾಣಿ ಧಾರವಾಡ ಹಾಗೂ ಗುಲಬರ್ಗಾ ಕೇಂದ್ರಗಳ ನಿರಂತರ ಗಾಯಕರಾಗಿ 'ಬಿ ಹೈ' ಶ್ರೇಣಿಯ ಶ್ರೇಷ್ಠ ಕಲಾವಿದರಾಗಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗ್ವಾಲಿಯರ್ ಘರಾಣೆಯಲ್ಲಿ ಜನಮನ್ನಣೆ ಗಳಿಸಿದ್ದಾರೆ. ಖ್ಯಾತ ಕಲಾವಿದರಾದ ಪಂಡಿತ ಬಸವರಾಜ ರಾಜಗುರು, ಪಂ. ಮಲ್ಲಿಕಾರ್ಜುನ ಮನ್ಸೂರು, ಪಂ. ಎಂ. ವೆಂಕಟೇಶಕುಮಾರ, ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಸೇರಿದಂತೆ ಹಲವರ ಜತೆ ಕಾರ್ಯಕ್ರಮ ನೀಡಿದ್ದಾರೆ. ಇವರಿಗೆ ಗರಗದ ಮಡಿವಾಳೇಶ್ವರ ಸ್ವಾಮಿಗಳು 'ಗಾನಗಂಧರ್ವ', ಗದುಗಿನ ಗಾನಗಂಧರ್ವ ಟ್ರಸ್ಟ್ ವತಿಯಿಂದ 'ಗಾನಶ್ರೀ' ಬಿರುದು ಸೇರಿದಂತೆ ಹಲವು ಸಂಘ ಸಂಸ್ಥೆಗಳ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

(ಬಿಬಿ)



ವಿರೇಂದ್ರ ಶಾಹ: ಕಲಾವಿದ ವಿರೇಂದ್ರ ಶಾಹರವರು 1968ನೇ ಸೆಪ್ಟೆಂಬರ್ 3 ರಂದು ಗುಲಬರ್ಗಾದಲ್ಲಿ ಜನಿಸಿದರು. ತಂದೆಯವರಾದ ರಮೇಶಚಂದ್ರ ಶಾಹರವರು ಗುಲಬರ್ಗಾದ ಹೆಸರಾಂತ ವಕೀಲರಾಗಿದ್ದರು. ಮಗನು ಚಿಕ್ಕಂದಿನಲ್ಲಿಯೇ ಗೆರೆಯಳೆದು ರೇಖೆಗಳಿಗೆ ಕಲೆಯ ಜೀವ ತುಂಬುವ ಆಸಕ್ತಿಯನ್ನು ಮನಗಂಡ ರಮೇಶಚಂದ್ರ ಶಾಹರವರು ಮಗನನ್ನು ಚಿತ್ರ ಕಲಾವಿದನನ್ನಾಗಿ ಮಾಡಲು ಇಚ್ಛಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮುಗಿದ ನಂತರ ಗುಲಬರ್ಗಾದ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಚಿತ್ರಕಲೆಯ ಅಭ್ಯಾಸ ಮಾಡಲು ಪ್ರವೇಶ ಪಡೆದರು. ಮುಂದೆ ಎಂ.ಎಂ.ಕೆ ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಬಿ.ಎಫ್.ಎ. ಪೇಂಟಿಂಗ್‌ನಲ್ಲಿ ಕಲಾ ವ್ಯಾಸಂಗ ಮುಗಿಸಿದರು. ಇವರು ಕಲಾವಿದ ಅಂದಾನಿಯವರ ಸಮಕಾಲೀನ ಕಲಾತಂತ್ರಗಳನ್ನು ರಚನಾತ್ಮಕ, ಗುಣ ಗಳನ್ನು ಅರಿಯಲು ಯತ್ನಿಸಿದವರು. ಅವರು ಯಾವತ್ತು ಸಮಕಾಲೀನ ಚಿತ್ರಗಳನ್ನೇ ಮೆಚ್ಚುತ್ತಿರುವವರು. ಹೀಗಾಗಿ ಇವರ ಕಲಾಕೃತಿಗಳು ಸಮಕಾಲೀನ ವಿಚಾರಗಳನ್ನು ಬಿಂಬಿಸುವ ಕಲಾ ಕೃತಿಗಳಾಗಿವೆ. ಹೀಗಾಗಿ ಅವರ ವರ್ಣ ಸಂಯೋಜನೆ ರೇಖಾ ವಿನ್ಯಾಸಗಳನ್ನು ಹೆಚ್ಚು ಗಮನದಲ್ಲಿಟ್ಟು ಕಲಾಕೃತಿಗಳ ರಚನೆ'ಯನ್ನು ಮಾಡುವರು. ಇವರು ಕಲೆ ಮತ್ತು ಕಲಾಸಕ್ತರ ನಿರ್ಮಿತಿಯಲ್ಲಿ ಬಹುದೊಡ್ಡ ಕಾರ್ಯ ನಿರ್ವಹಿಸಿದ್ದಾರೆ. ಬದುಕಿನಲ್ಲಿ ಕಲೆಯನ್ನು ಅವರ ಆತ್ಮಸಾತ್ ಮಾಡಿಕೊಂಡವರು. ಕಲೆಯ ಸಾಧನೆ ಒಂದು ತಪ್ಪಸಿನಂತೆ ಎಂದು ನಂಬಿದವರು. ಸಮ ಕಾಲೀನ ಕಲೆಯ ಸಂದರ್ಭದಲ್ಲಿ ತಮ್ಮ ಹಲವು ವಿಚಾರಗಳನ್ನು ಇವರು ಹೇಳುತ್ತಾರೆ.

1992ರಲ್ಲಿ ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಲ್ಲಿ ಬಿ.ಎಫ್.ಎ. ಪೇಂಟಿಂಗ್‌ನಲ್ಲಿ ಕಲಾ ವ್ಯಾಸಂಗ ಮುಗಿಸಿದರು. 1992ರಲ್ಲಿ All India Miniature format ಪ್ರಶಸ್ತಿ, 1994ರಲ್ಲಿ ಎಸ್‌ಸಿಝಡ್‌ಸಿಸಿ ನಾಗಪೂರ. ಪ್ರಶಸ್ತಿ 1995ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, 1997ರಲ್ಲಿ ಪ್ರಶಸ್ತಿಗಳಲ್ಲಿ ಅತಿದೊಡ್ಡ ಪ್ರಶಸ್ತಿ, National Award Lalita Kala Academy New Delhi ಪ್ರಶಸ್ತಿ, ಮತ್ತು 2001ರಲ್ಲಿ ಪ್ರಶಸ್ತಿಗಳ ಜೊತೆಗೆ ಇನ್ನೂ ಅನೇಕ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇನ್ನೂ ಇದಲ್ಲದೆ ಭಾರತ ಸರಕಾರದಿಂದ ಫೆಲೋಶಿಪ್‌ಗಳನ್ನು ಪಡೆದಿದ್ದು ಅಂತರಾಷ್ಟ್ರೀ ಫೆಲೋಶಿಫ್‌ಗಳನು ಕೂಡಾ ಪಡೆದುಕೊಂಡಿದ್ದಾರೆ. 2009ರಲ್ಲಿ ಅಂತರಾಷ್ಟ್ರೀಯ ಕಲಾಶಿಬಿರ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಮತ್ತು ಅಂತರಾಷ್ಟ್ರೀಯ Symposium I.A.P.C. ರಾಜಸ್ತಾನ, 1994ರಲ್ಲಿ



'ಶೀರ್ಷಿಕೆ ರಹಿತ' ಮಿಶ್ರ ಮಾಧ್ಯಮ

ಹಾಗೂ 1993ರಲ್ಲಿ ಗುಲಬರ್ಗಾದ ಎಂ.ಎಂ.ಕೆ. ಕಾಲೇಜ್‌ನಲ್ಲಿ ನಡೆದ ಅಂತರಾಷ್ಟ್ರೀಯ Symposium ನಲ್ಲಿ ಕೂಡಾ ಕಾರ್ಯ ನಿರ್ವಹಿಸಿದ್ದಾರೆ. ಇದರ ಜೊತೆಗೆ ಅಂತರಾಷ್ಟ್ರೀಯ ಮಟ್ಟದ ಕಲಾಶಿಬಿರಗಳನ್ನು ಕೂಡಾ ಏರ್ಪಡಿಸಿದ್ದಾರೆ. ಇವರ ಕಲಾಕೃತಿ ಗಳು ಸಹ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡಿವೆ. ಅನೇಕ ಸಂಸ್ಥೆಗಳಲ್ಲಿಯು ಕೂಡಾ ಇವರು ಪ್ರಾತ್ಯಕ್ಷಿಕೆ ನೀಡುತ್ತಾ ಬರುವುದರ ಜೊತೆಗೆ ಕಲೆಯನ್ನೇ ನಂಬಿ ಬದುಕುವ ಕಲಾವಿದ. ಇಂದಿಗೂ ಕೂಡಾ ಗುಲಬರ್ಗಾದಲ್ಲಿ ಅನೇಕ ಕಡೆಗಳಲ್ಲಿ ಸಮರ ಕ್ಯಾಂಪ್‌ಗಳನ್ನು ನಡೆಸುವುದರ ಮುಖಾಂತರ ಗುಲಬರ್ಗಾ ಜನರ ಮನೆ ಮನೆಗೆ ಕಲಾಕೃತಿಗಳು ಮುಟ್ಟುವಂತಹ ಕೆಲಸವನ್ನು ಮಾಡುತ್ತಿರುವುದು ಕಾಣಬಹುದು. ಹಾಗೆಯೇ ಇವರು ಗುಲಬರ್ಗಾ ಹಾಗೂ ಕರ್ನಾಟಕದ ಅನೇಕ ಕಡೆಗಳಲ್ಲಿ ಭಿತ್ತಿಚಿತ್ರಗಳ ರಚನೆಯನ್ನು ಹೊಸ ಹೊಸ ಆಯಾಮ ಗಳೊಂದಿಗೆ ರಚಿಸಿದ ಕಲಾವಿದರು. ಹೊರನೋಟದಲ್ಲಿ ವಾಸ್ತ ವಾದಿ ಚಿತ್ರಗಳೆನಿಸಿದರೂ ಅಂತರಿಕ ಚಿಂತನೆ ಪಡೆದ ಕಲಾ ಕೃತಿಗಳಾಗಿವೆ. ತುಂಬಾ ಸುಧೀರ್ಘ ಕಲಾಪರಂಪರೆ ಹೊಂದಿದ ಭಾರತದಂತಹ ರಾಷ್ಟ್ರದಲ್ಲಿ ಹಲವು ಸಂಸ್ಕೃತಿ ಮತ್ತು ಉಪ ಸಂಸ್ಕೃತಿಗಳ ನಡುವೆ ಬದುಕುವ ಕಲಾವಿದ. ಜೀವನವನ್ನು ಗಾಢ ಪ್ರಬುದ್ಧತೆಯಿಂದ ಸ್ವೀಕರಿಸುತ್ತಾ ಇವರು ಪ್ರಮಾಣಿಕವಾಗಿ ಈ ದಿಶೆಯಲ್ಲಿ ಸಾಗುತ್ತಿದ್ದಾರೆ. ಮಾನವನ ಪ್ರೀತಿ ದುಃಖ, ಕಷ್ಟ, ಸುಖ ಸಂತೋಷಗಳ ಸಂಗಡ ಒಬ್ಬ ಕಲಾವಿದನಾಗಿ ಪ್ರಮಾಣಿಕ ಪ್ರಯತ್ನದ ಕಾರ್ಯಕರ್ತನಾಗಿ ಬೆರೆತು ಸಮಾಜದ ಒಳಿತು ತನ್ನ ನಿಜ ಕಾಳಜಿಯಾಗಿ ಅದರೊಡನೆ ಇವತ್ತಿಗೂ ಸಾಗಿ ಬರು ವಂಥವರು.

(ಕೆಡಿ)

ವಿಶ್ವಕರ್ಮ: ಭಾರತವು ಬಹುಜಾತಿ ಮತ್ತು ಬಹುಸಂಸ್ಕೃತಿಯ ನಾಡು-ಪ್ರತಿಯೊಂದು ಸಮುದಾಯವೂ ತನ್ನ ಜಾತಿಗೆ ಸಂಬಂಧಿಸಿದ ವೃತ್ತಿಯನ್ನು ನಿರ್ವಹಿಸುತ್ತ ಸಮಾಜದಲ್ಲಿನ ಉಳಿದ ಜನಾಂಗ ಅಥವಾ ಸಮುದಾಯಗಳಿಗೆ ಆಧಾರವಾಗಿರು ವಷ್ಟೇ ತನ್ನ ಅಗತ್ಯತೆಗಳ ಪೂರೈಕೆಗಾಗಿ ಬೇರೊಂದು ಸಮು ದಾಯದೊಂದಿಗೆ ನಡೆಸುವ ಕೊಡುಕೊಳ್ಳುವಿಕೆಯ ಕ್ರಿಯೆಯಿಂದ ಒಂದು ಆರೋಗ್ಯವಂತ ಸಮಾಜ ರೂಪುಗೊಳ್ಳುವುದನ್ನು ಕಾಣ ಬಹುದು. ಇಂತಹದರಲ್ಲಿ ಕಮ್ಮಾರಿಕೆ, ಬಡಗಿತನ, ಅಕ್ಕಸಾಲಿಕೆ-ಶಿಲ್ಪಗಾರಿಕೆ ಹಾಗೂ ಕಂಚುಗಾರಿಕೆ ಈ ಐದನ್ನು ಜೀವನೋ ಪಾಯಕ್ಕಾಗಿ ಪ್ರಧಾನ ವೃತ್ತಿಗಳನ್ನಾಗಿಸಿ ಕೊಂಡು ತಲತಲಾಂತರ ದಿಂದ ಕಲೆ-ಕೌಶಲ್ಯಗಳನ್ನು ವೃತ್ತಿಯ ಅವಿಭಾಜ್ಯ ಅಂಗವಾಗಿಸಿ ಕೊಂಡಿರುವ ಪಾಂಚಾಳರ ಸಮುದಾಯವು ಭಾರತದ ಮುಖ್ಯ ಸಮುದಾಯಗಳಲ್ಲಿ ಒಂದು.

ಸಂಸ್ಕೃತದಲ್ಲಿ ಪಂಚ ಎಂದರೆ ಐದು ಎಂದರ್ಥ ಕಬ್ಬಿಣ, ಕಟ್ಟಿಗೆ, ಬೆಳ್ಳಿ/ಬಂಗಾರ, ಕಂಚು, ಕಲ್ಲು ಇವುಗಳಿಂದ ವಸ್ತುಗಳನ್ನು ಉತ್ಪನ್ನ ಮಾಡುವ ವೃತ್ತಿಯ ಸಮುದಾಯವನ್ನು ವಿಶ್ವಕರ್ಮ ಎಂದು ಕರೆಯುತ್ತಾರೆ. ಸಮಾಜದಲ್ಲಿ ಒಂದೊಂದು ವೃತ್ತಿಯನ್ನು ನಿರ್ವಹಿಸುವವರಿಗೆ ಒಂದೊಂದು ಜಾತಿಯಿರುವುದು ಸಹಜವೇ ಆದರೂ ಇಲ್ಲಿ ಐದೂ ಕೆಲಸಗಳನ್ನು ಒಂದೇ ಜಾತಿಯವರು ನಿರ್ವಹಿಸುತ್ತಿರುವುದು ವಿಶೇಷ ಸಂಗತಿ.

ಪಾಂಚಾಳರ, ವಿಶ್ವಕರ್ಮರ ಬಗ್ಗೆ ಜಾನಪದ, ಶಾಸನ, ಸಾಹಿತ್ಯ, ಕೃತಿಗಳಲ್ಲಿ ಯತೇಚ್ಚವಾಗಿ ಉಲ್ಲೇಖಗಳು ದೊರೆಯು ತ್ತವೆ. ಜನಪದ ಸಾಹಿತ್ಯವು ಮಾನವನ ಸಂಸ್ಕೃತಿಯ ಪ್ರತೀಕ ವಾಗಿದ್ದು ಮನುಷ್ಯನ ಹುಟ್ಟಿನಿಂದಲೇ ಜನಪದ ಸಾಹಿತ್ಯವು ಹುಟ್ಟಿ ಕೊಂಡಿತು ಎಂಬ ನಂಬಿಕೆಯಿದೆ. ವಿಶ್ವಕರ್ಮರ ಇತಿಹಾಸವನ್ನು ತಿಳಿಯುವುದಕ್ಕಾಗಿ ಇವುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

'ಕಡಗೊಲಿನ ಕುಡುಗೋಲು ಮಡೆಯ ಕೋಲು

ಬಡಗಿ ಬ್ಯಾಕೋಲು ಬಾರಕೋಲು। ಉರ್ಗೋಲು

ಸವದತ್ತಿ ಬಡಿಗ್ಯಾ ಮುಡ್ಯಾಣ'

ಇಂತಹ ಉದಾಹರಣೆಗಳು ಜನಪದ ಕಥೆ ಕಾವ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಇನ್ನೂ ಶಾಸನಗಳಿಗೆ ಸಂಬಂಧಿಸಿ ದಂತೆ ಹೇಳುವುದಾದರೆ ಶಾಸನಗಳಲ್ಲಿ ವಿಶ್ವಕರ್ಮರಿಗಾಗಿಯೂ ಬಿಟ್ಟಿರು ಭೂಮಿ, ಕೊಟ್ಟಿರುವ ಧಾನ್ಯ ದತ್ತಿಗಳ ಬಗ್ಗೆ ಉಲ್ಲೇಖ ಗಳಿವೆ. ಅಷ್ಟೇ ಅಲ್ಲ ವಿಶ್ವಕರ್ಮರು ತಮ್ಮ ವೃತ್ತಿಯ ಜೊತೆಗೆ ಸಾಹಸ ವೀರರಾಗಿದ್ದರು ಎಂಬಂತಹ ಅಂಶಗಳೂ ಕಂಡ ಬರುತ್ತವೆ. ಇನ್ನೂ ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಹೇಳುವು ದಾದರೆ ವಿಶ್ವಕರ್ಮ ವೃತ್ತಿಯಲ್ಲಿ ವಿಶ್ವಕರ್ಮನೇ ಜಗತ್ತಿಗೆ ಪ್ರಭುವು-ವಿಶ್ವಕರ್ಮನೇ ಜಗತ್ತಿಗೆ ಗುರು-ವಿಶ್ವಕರ್ಮನೇ ಜಗತ್ತಿನ ಪ್ರಕಾಶವು ಈ ಜಗತ್ತೆಲ್ಲವೂ ವಿಶ್ವಕರ್ಮನೆ ಎಂದು ತಿಳಿಸುತ್ತದೆ. ಪಂಪನ ವಿಕ್ರಮಾರ್ಜುನ ವಿಜಯದಿಂದ ಹಿಡಿದು ಮುದ್ದಣನ ವರೆಗಿನ ಹಲವು ಕಾವ್ಯಕೃತಿಗಳಲ್ಲಿ ವಿಶ್ವಕರ್ಮರ ಬಗೆಗಿನ ಉಲ್ಲೇಖಗಳು ದೊರೆಯುತ್ತವೆ. ಉದಾ: ಕಾಸಿಕಮ್ಮಾರನಾದ,

ಬೀಸಿ ಮಡಿವಾಳನಾದ ಎಂಬ ಬಸವಣ್ಣನವರ ವಚನ– ಊರಿಂಗೆ ಬಡಿಗ ತಾಬೇಕು ಸರ್ವಜ್ಞ ಎಂಬ ಸರ್ವಜ್ಞನ ವಚನಗಳನ್ನು ಗಮನಿಸಬಹುದು.

ಹೀಗೆ ಶಾಸನ ಜನಪದ ಮತ್ತು ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ವಿಶ್ವಕರ್ಮರ ಸಂಸ್ಕೃತಿಗೆ ಆದಿಕಾಲದ ಪ್ರಾಚೀನತೆ ಮತ್ತು ವಿಸ್ತಾರವಾದ ಪರಂಪರೆಯಿದೆ. ವಿಶ್ವಕರ್ಮರ ಐದು ವೃತ್ತಿಯವರು ತಯಾರಿಸುವ ಉಪಕರಣಗಳು ಹೀಗಿವೆ.

ಕಮ್ಮಾರ: ಕಬ್ಬಿಣದ ಕೆಲಸವನ್ನು ಮಾಡುವವನು ಕಮ್ಮಾರ. ಇವರು ಯುದ್ಧ, ಬೇಟೆ, ಧಾರ್ಮಿಕತೆ ಮತ್ತು ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುತ್ತಿದ್ದರು. ಯುದ್ಧಕ್ಕೆ ಬೇಕಾಗುವ ಕರವಾಳ, ತೊಲವಾಳ ಎಂಬ ಕತ್ತಿಗಳನ್ನು ಕಡಿಪತಿ ಎಂಬ ಖಡ್ಗಗಳನ್ನು ಸಬಳಕೊಂಡ ಶಲ್ಯ, ಭುಲ್ಯ, ಶೂಲ, ಕರ್ಕಡೆ ಸುರಿಗೆ– ಮುಸಲ ಭಿಂಡಿವಾಳ ಈಟಿ, ಪಂಚರಾಯುದ್ಧ, ತೊಮರ, ಮುಸುಂಡಿ, ಮದ್ಗರ, ಗುರಾಣಿ ಎಂಬ ಉಪಕರಣಗಳನ್ನು ತಯಾರಿಸುತ್ತಿದ್ದರು. ಅಲ್ಲದೆ ಕತ್ತಿ, ಪಿರಂಗಿ, ಬಂದೂಕು, ಕತ್ತಿ, ಕಠಾರಿ, ಈಟಿ, ದೊಣ್ಣೆ ಭರ್ಚಿ, ಭಲ್ಲೆ ಹಾಗೂ ಫಿರಂಗಿ ಕೊಂಬು, ಕಹಳೆ, ನಗಾರಿಗಳನ್ನು ಎರಕ ಹೊಯ್ಯುತ್ತಿದ್ದರು. ಗೃಹೋಪಯೋಗಿ ವಸ್ತುಗಳಾದ ಅಗುಳ, ಅಚ್ಚು ಅಂಚು, ಚುಚ್ಚುಗ, ಊದುಗೊಳವಿ ಅಡ್ಡಣಗೆ, ಈಳಿಗೆ, ಕತ್ತರಿ ಚಿಲಕ, ಹಾರಿಕೋಲು ಒಣಕಿ, ಬಳಿ ಬೀಸುಕಲ್ಲು ಮಳೆಗಳನ್ನು ತಯಾರಿಸುತ್ತಾರೆ. ವ್ಯವಸಾಯಕ್ಕೆ ಬೇಕಾಗುವ ಕುಳ, ಕುಡುಗೋಲು, ಕೊಡ್ಲಿ, ಕಬ್ಬಿಣದ ತಾಳು ಕುರ್ಚಿಗೆ ಕುಡ, ಜ್ಯೋತಿಕುಡಗೋಲು ಗುದ್ಲಿ, ಚಲಿಕೆ, ಹಳಿ ಸರತಳಿ ಹಾರೆ ಬಂಡಿಗೆ ಅಳಿ ಹಾಕುವ ಕಾರ್ಯವನ್ನು ಮಾಡುತ್ತಾರೆ. ದೇವಾಲಯಗಳಿಗೆ ಗಂಟೆ ಅಸ್ತ ಪ್ರಾಣಿಬಲಿಗಾಗಿ ಬಳಸುವ ಮಚ್ಚು ಹತಾರಗಳನ್ನು ತಯಾರಿಸುವುವರು ಕಮ್ಮಾರರೇ ಆಗಿದ್ದಾರೆ.

ಬಡಿಗೇರ: ಕಟ್ಟಿಗೆಯನ್ನು ಕತ್ತರಿಸಿ ಒಂದು ರೂಪವನ್ನು ಕೊಡುವುದಕ್ಕೆ ಬಡಗಿ ಎಂದು ಕರೆಯುವರು. ಬಡಗಿಗಳು ಕುಶಲತೆಗೆ ಹೆಸರಾದವರು ಮತ್ತು ಸಾಂಸ್ಕೃತಿಕ ಉಪಕರಣಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರು. ಕೃಷಿ ಉಪಕರಣ ನೇಗಿಲು, ಕೂರಿಗೆ, ಕರಿಗುಂಟೆ, ಎಡೆಗುಂಟೆ– ಮೇಳಿ, ನೊಗ ಬಂಡಿನೊಗ ಬ್ಯಾಕೋಲು, ಬಂಡಿ, ಏಣಿ, ಸೆಡ್ಡಿ ಕೂರಿಗೆ ಬಟ್ಲು ಕುಡುಗೋಲು ಗುರ್ಲಿ ಕೊಡ್ಲಿಕಾವು ಬಾರಕೋಲು, ಕೋಲಗಣ್ಣಿ ಗೊಟ್ಟ ಮುಂತಾದವು. ಗೃಹೋಪಕರಣಗಳು ಬಾಗಿಲು, ಕಂಬ, ತೊಲಿ, ಭವಂತಿಗೆ, ತೊಲಿಕಂಬ, ಜಂತಿ ಕದ, ಕಿಟಕಿ, ಕಪಾಟು, ಅಲ್ಮರ, ಟೇಬಲ್, ಕುರ್ಚಿ, ಪೆಟ್ಟಿಗೆ, ಬೀರು, ಕುಂದುಮಣಿ, ಕೊಣಿಗಿ ಲಟ್ಟುಣಿ, ಹೋಳಿಗೆ ಮಣಿ, ಒಣಕೆ, ಈಳಿಗೆ ಮಣಿ ಮಜ್ಜಿಗೆಯ ಗೋಲು, ತಗ್ಗುಂಟು, ವರಸಿನ ಕಾಲು, ತೊಟ್ಟಿಲು. ಚೈವ ಕಾರ್ಯದ ಉಪಕರಣಗಳು ರಥ, ತೇರು, ಆಯುಧಗಳು, ದೇವಾಲಯದ ಬಾಗಿಲು, ಕದ ಪಲ್ಲಕ್ಕಿ, ಮುದಾಸನ, ಸೂಲಗಂಭ ದ್ವಾರಬಾಗಿಲು, ದೀಪಸ್ತಂಭ, ದೇವಿವಿಗ್ರಹಗಳು ಛತ್ರಿಚಾಮರಗಳು ನಂದಿಕೋಲು ದೀವಟಿಗೆ ಮಂಟಪ ಇತ್ಯಾದಿ ಮನೋರಂಜಕ ಉಪಕರಣಗಳು ಗೊಂಬೆಗಳು, ಗೆಲಕಿ, ಚೆನ್ನಕೋಲು, ಬಗರಿ, ಬಂಡಿಗಳು, ದಾಳ, ಕೋಲಾಟದ ಕೋಲು ಮುಂತಾದವು ಸಂಗೀತದ ಉಪಕರಣಗಳು ತಬಲ, ಡೊಳ್ಳು, ಮದ್ದಲೆ ಹಾರ್ಮೋನಿಯಂ, ಮೃದಂಗ, ಸಹನಾಯಿ, ಕೊಳಲು ಇತ್ಯಾದಿ ಪ್ರದರ್ಶನಾ ಉಪಕರಣಗಳು ಯಕ್ಷಗಾನ, ಬಯಲಾಟ, ಪಾತ್ರಧಾರಿಗಳು ತೊಡವಬೇಕಾಗುವ ಉಪಕರಣಗಳು ಸಿಂಹಾಸನಗಳು, ಕಿರೀಟಗಳು ಭುಜಕೀರ್ತಿ ಎದೆಹಾರ ಗರೆ ಬಿಲ್ಲುಬಾಣ ಚಕ್ರ ತಂಬೂರಿ ಇತ್ಯಾದಿ ತಯಾರಿಸುವವರು ಬಡಿಗೇರು ವೃತ್ತಿಯವರೇ ಆಗಿದ್ದಾರೆ.

ಕಂಚುಗಾರಿಕೆ: ತಾಮ್ರ ಕಂಚು ಮತ್ತು ಹಿತ್ತಾಳೆಯನ್ನು ಕರಗಿಸಿ ಒಂದು ಸಿದ್ಧ ವಸ್ತುಗಳನ್ನು ಅಥವಾ ಮೂರ್ತಿಯನ್ನು ತಯಾರಿಸುವ ವೃತ್ತಿಕಾರರು. ಕಂಚುಗಾರರು ತಾವು ಕೆಲಸಕ್ಕೆ ತೊಡಗುವ ಮುನ್ನ ತಮಗೆ ಬೇಕಾದ ಮೂಲ ಆಕೃತಿಯನ್ನು ತಯಾರಿಸಿಕೊಂಡು ಅನಂತರ ಎರಕ ಹೊಯ್ಯುತ್ತಾರೆ. ಕಂಚುಗಾರ ತಾನು ಮಾಡುವ ವಸ್ತು ಆಕಾರವನ್ನು ಮೊದಲು ಮರದಲ್ಲಿ ಇತರ ವಸ್ತುಗಳಲ್ಲಿ ತಯಾರಿಸಿಕೊಂಡಿರುತ್ತಾರೆ. ಅದನ್ನು ಅಚ್ಚುಪಡಿ ಎಂದು ಕರೆಯುತ್ತಾರೆ. ಅನಂತರ ಎರಕಹೊಯ್ಯುವ ಮೂಲಕ ಸಾಮಗ್ರಿಗಳನ್ನು ತಯಾರಿಸುತ್ತಾರೆ. ಇವರು ತಯಾರಿಸುವ ಉಪಕರಣಗಳು ದೈವಕಾರ್ಯದ್ದು: ಆರತಿ, ಧುಪಾರತಿ, ಪಾಂಚಾರತಿ, ರಥ, ಛಾಮರ, ಜಾಗಟೆ, ಗಂಟೆ, ತೀರ್ಥಬಟ್ಟಲು, ದೀಪಾತಿಕಂಬ, ದೀವಳಿಗೆ, ದೇವತಾಮೂರ್ತಿ, ನೇತ್ರ ಪಲ್ಲಕ್ಕಿ, ಪಾದ, ಪ್ರಭಾವಳಿ, ಭಜನೆಗಳು ಗೃಹೋಪಯೋಗಿ: ಕೊಡಪಾನ, ಕೊಳಗ, ಗಿಂಡಿ, ಗುಂಡಾಲು, ಚರಿಗೆ, ತಂಬಿಗೆ, ತಟ್ಟೆ, ತಪಾಲಿ, ಹಂಡೆ ಇನ್ನೂ ಅನೇಕ ಬಳಕೆಯ ವಸ್ತುಗಳನ್ನು ಮತ್ತು ಪೂಜಾ ಸಾಮಗ್ರಿಗಳನ್ನು ತಯಾರಿಸುತ್ತಾರೆ.

ಅಕ್ಕಸಾಲಿಗ: ಚಿನ್ನ–ಬೆಳ್ಳಿಗಳಿಂದ ಆಭರಣಗಳನ್ನು ತಯಾರಿಸುವವರು. ಕಮ್ಮಾರ–ಬಡಿಗಿಗಳ ವ್ಯವಹಾರಗಳೆನಿದ್ದರೂ ರೈತರಲ್ಲಿ ಹಾಗೂ ಜನಸಾಮಾನ್ಯರಲ್ಲಿ ಸಮಾಜದ ಕೆಳಸ್ತರದವರ ಹತ್ತಿರ ಇವರ ಸಂಪರ್ಕ ಇರುತ್ತದೆ. ಆದರೆ ಅಕ್ಕಸಾಲಿಗರು ಶ್ರೀಮಂತ ವರ್ಗದವರ ಹತ್ತಿರ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ. ಏಕೆಂದರೆ ಬಂಗಾರವನ್ನು ಅಲಂಕಾರಕ್ಕಾಗಿ ಬಳಸುವವರು ಹೆಚ್ಚಾಗಿ ಧನಿಕರು. ಹಾಗಾಗಿಯೇ ಪಾಂಚಾಳರಲ್ಲಿ ಸುಸ್ಥಿತಿ ಯಲ್ಲಿರುವವರು ಎಂದರೆ ಅಕ್ಕಸಾಲಿಗ ವೃತ್ತಿಯವರು ಸ್ವರ್ಣ ಗಾರಿಕೆಯು ಅತ್ಯಂತ ಸೂಕ್ಷ್ಮವಾದ ಹಾಗೂ ನಿಖರವಾದ ಲೆಕ್ಕಾಚಾರದಿಂದ ಕೂಡಿದ ಕಸುಬಾದುದ್ದರಿಂದ ಚಿನ್ನ–ಬೆಳ್ಳಿಯ ಕೆಲಸಗಾರರಾದ ಅಕ್ಕಸಾಲಿಗರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾರೆ. ಇವರು ದೇವರ ಪೂಜೆ ಧರ್ಮಕಾರ್ಯಗಳಿಗೆ ಬೇಕಾದ ಸಲಕರಣೆ ಆಭರಣಗಳನ್ನು ಶಾಸ್ತ್ರಬದ್ಧವಾಗಿ ಮಾಡುತ್ತಾರೆ. ಆದರೆ ಸ್ತ್ರೀ–ಪುರುಷರು ಧರಿಸುವ ಆಭರಣಗಳನ್ನು ಆಯಾಕಾಲದ ಅಭಿರುಚಿ ಬೇಡಿಕೆಗಳನ್ನು ಅನುಸರಿಸಿ ತಯಾರಿಸುತ್ತಾರೆ. ಚಿನ್ನ ಬೆಳ್ಳಿಯ ಜೊತೆಗೆ ರತ್ನ ಮುತ್ತು ಹವಳ, ಪಚ್ಚೆ ಮುಂತಾದ ಅಮೂಲ್ಯ ಆಭರಣಗಳನ್ನು ಅಲಂಕಾರಿಕವಾಗಿ ಸಿದ್ಧಪಡಿಸುವುದರಲ್ಲಿಯೂ ಸೂಕ್ಷ್ಮ ಕೆಲಸ ಮಾಡುವುದರಲ್ಲಿಯೂ ಇವರು ನಿಪುಣರು. ಚಿನ್ನ ಬೆಳ್ಳಿಯ ಕೆಲಸ ಕೇವಲ

ಕೈಕಸುಬಲ್ಲ ಅದು ಉಪಯುಕ್ತ ಕಲೆ. ಕಲೆ ಮತ್ತು ಕೈಕಸುಬುಗಳ ಕೌಶಲ್ಯದಲ್ಲಿ ಈ ಕೆಲಸ ಲಾಭದಾಯಕವೂ ಆಗಿದೆ. ಇವರು ತಯಾರಿಸುವ ಆಭರಣಗಳು: ತಾಳಿ ಕಾಲುಂಗುರ, ಮೂಗುತಿ, ಬೆಂಡೋಲೆ, ಉಡುದಾರ, ಒಡ್ಯಾಣ, ಕಂಕಣ, ಕಡಗ, ಹಾಲಡಗ, ಕಡೆ ತಾಳಿಗುಂಡು, ಗೆಜ್ಜೆ, ಚಪ್ಪಾರ ಡಾಬು, ತಾಲೂಕುಕಡ್ಡಿ ಬುಗುಡಿ, ಗೂಬಿನಬ್ಯಾತಿ ನತ್ತು, ಲೋಲಾಕು, ಪಾಟ್ಲಿ, ಓಲೆ, ಮಾಟಿನಿ ಬಳೆ, ವಂಕಿ, ಹೀಗೆ ಮಕ್ಕಳಿಂದ ಹಿಡಿದು ಮುದುಕರ ವರೆಗೂ ಗಂಡು-ಹೆಣ್ಣುಗಳೆಲ್ಲರೂ ಧರಿಸಬಹುದಾದ ಆಭರಣ ಗಳನ್ನು ಅವರ ಅಭಿರುಚಿಗೆ ತಕ್ಕಂತೆ ತಯಾರಿಸುತ್ತಾರೆ.

ಶಿಲ್ಪಗಾರಿಕೆ: ಭಾರತ ಸಾಂಸ್ಕೃತಿಕವಾಗಿ ಇಡಿ ಜಗತ್ತಿಗೆ ಕೊಡುಗೆ ಕೊಟ್ಟಿದೆ ಎಂದರೆ ಅದು ಶಿಲ್ಪ ಕಲೆಯೇ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಕಲೆ ರೂಪುಗೊಳ್ಳಲು ಶಿಲ್ಪಿಯ ಕಲ್ಪನೆ ನೈಪುಣ್ಯತೆ ಶಕ್ತಿ ಪ್ರದರ್ಶನ, ಬೆವರು, ಸಮಯ ಎಲ್ಲವೂ ಕೆಲಸ ಮಾಡುತ್ತದೆ. ಶಿಲೆಯಲ್ಲಿ ಕೆಲಸ ಮಾಡುವವರನ್ನು ಶಿಲ್ಪಿ ಎಂದು ಕರೆಯಬಹುದಾದರೂ ಕಲ್ಲು ಕುಟಿಗರು ಕಲ್ಲಿನಲ್ಲಿಯೇ ಕೆಲಸವನ್ನು ಮಾಡುತ್ತಾರೆ. ಆದರೆ ಪೂಜೆಗೋಸ್ಕರ ಆರಾಧನೆ ಗೋಸ್ಕರ ಕಲೆ ಬೇರೆ ಬಳಕೆಗೊಳ್ಳುವ ವಸ್ತುಗಳು ಬೇರೆ ಇದಕ್ಕೆ ತನ್ನದೇ ಆಚಾರ-ನಂಬಿಕೆ ಆಯಾ ಕಲ್ಪನೆಗಳಿವೆ ಇವುಗಳನ್ನು ಸ್ಥಪತಿಗಳು ಮಾತ್ರ ಮಾಡುವ ಕಾರ್ಯವಾದ್ದರಿಂದ ಈ ಕಲೆಗೆ ವಿಶೇಷ ಸ್ಥಾನ ಇದೆ. ಏಕಾಗ್ರತೆ ಚಿತ್ರದಿಂದ ಶಿಲ್ಪಿಯು ನಡೆಸುವ ಶಿಲ್ಪಿಕರ್ಮದ ಫಲವಾಗಿ ರೂಪುಗೊಳ್ಳುವ ಶಿಲ್ಪವು ಅದನ್ನು ನೋಡುವವನಲ್ಲಿಯ ಸೌಂದರ್ಯೋಪಾಸನೆಯ ಪ್ರಜ್ಞೆಯನ್ನು ಉದ್ದೀಪನಗೊಳಿಸಿ ಅವನಿಗೆ ಸಮಾಧಿ ಸ್ಥಿತಿಯನ್ನು ತಂದು ಕೊಟ್ಟು ಆನಂದವನ್ನು ಕರುಣಿಸುತ್ತದೆ. ಆದ್ದರಿಂದಲೇ ಶಿಲ್ಪವು ಅತ್ಯಂತ ಮಹತ್ವವೂ ಪೂಜ್ಯವೂ ಆಗಿದೆ. ಇವರು ತಯಾರಿಸುವ ವಸ್ತುಗಳು ಅಡಿಪಟ್ಟು, ಉದರಭಾಗ, ಎಳೆ ಕುಂಡಾಭರಣ, ಕರ್ಣ ಕುಂಡಲ, ಕೀರ್ತಿಮುಖ, ಕರಂಡ ಕಿರೀಟ, ತೋಳುಬಂದಿ, ದೇವತಾಮೂರ್ತಿ, ಪ್ರತಿಮೆ, ಭುಜಕೀರ್ತಿ, ಮಿಥುನ ಶಿಲ್ಪಗಳು ಗೋಪುರ, ಕಳಸ, ದೇವತಾಮೂರ್ತಿ ಪಾಳ್ಳಿಗಳು ಒಟ್ಟಾರೆಯಾಗಿ ಪೂಜೆಗೊಳ್ಳುವ ಪ್ರತಿಯೊಂದು ಶಿಲಾ ಮೂರ್ತಿಗಳನ್ನು ತಯಾರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. (ಜಿಎ)

ವಿಶ್ವೇಶ್ವರಿ ಎಸ್. ತಿವಾರಿ: ಚಿತ್ರಕಲಾವಿದೆ. 1974 ಜುಲೈ 6ರಂದು ಗುಲಬರ್ಗಾ ನಗರದಲ್ಲಿ ಜನಿಸಿದರು. ಎಮ್.ಎಮ್.ಕೆ. ಕಾಲೇಜ್ ಆಫ್ ವಿಜುವಲ್ ಆರ್ಟ್‌ನಿಂದ ಚಿತ್ರಕಲೆಯ ಕ್ಷೇತ್ರದಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿ, ಪಡೆದಿದ್ದು, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟ್ರೇಟ್ ಪದವಿಯನ್ನು ಪಡೆದರು (2006).

ಕುಂಚ ಮತ್ತು ಬಣ್ಣಗಳ ಜೊತೆ ಇವರ ಗಾಢವಾದ ಸಂಬಂಧವಿದೆ. ಇವರಿಗೆ ಚಿತ್ರಕಲೆಯ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದಕ್ಕೆ ಉತ್ತೇಜಿಸುತ್ತದೆಂದು ಇವರ ಕಲಾಕೃತಿಗಳಿಂದ ತಿಳಿದುಬರುತ್ತದೆ.

ಭಾರತದ ಸಾಂಪ್ರದಾಯಕ ಚಿಕಣಿ ಚಿತ್ರಕಲೆ (Miniature Painting) ಗಳಿಂದ ಪ್ರೇರಣೆಗೊಂಡ ಇವರು ಮುಂದೆ ತಮ್ಮದೇ ಆದ ವಿನೂತನ ಶೈಲಿಯೊಂದನ್ನು ಗುರುತಿಸಿಕೊಂಡರು. ಈ ಶೈಲಿಯಲ್ಲಿ ಅನೇಕ ಚಿತ್ರಗಳನ್ನು ಸೃಷ್ಟಿಸಿದ್ದು, ತಮ್ಮ ಹೆಜ್ಜೆಗಳನ್ನು ಮುಂದಿಡುತ್ತ ಆಧುನಿಕ ಕಲಾ ಜಗತ್ತಿಗೆ ಒಂದು ಮಾದರಿ ಕಲಾವಿದೆಯಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.



ಇವರು ತಮ್ಮ ಕಲಾಕೃತಿಗಳಲ್ಲಿ ಹೆಚ್ಚಾಗಿ ಉದ್ಯಾನವನದ ವಾತಾವರಣ (Garden Atmosphere) ಕುರಿತ ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ಇವರ ಸಂಯೋಜನಾತ್ಮಕ ಶ್ರೇಣಿಯ ಚಿತ್ರಗಳಲ್ಲಿ ನಿಸರ್ಗದ ಜೊತೆಗೆ ಹೆಣ್ಣಿನಾಕೃತಿ ಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ. ನಿಸರ್ಗ ಮತ್ತು ಹೆಣ್ಣು ಇಲ್ಲದಿದ್ದರೆ ಈ ಸೃಷ್ಟಿಯೇ ಇಲ್ಲ ಎನ್ನುವ ಇವರ ಅಭಿಪ್ರಾಯ. ಹೆಣ್ಣಿಗೆ ಕಲೆಯಲ್ಲಿ ವಿಶೇಷ ಸ್ಥಾನವನ್ನು ನೀಡಿದ್ದಾರೆ. ಸಾಂಪ್ರದಾಯಿಕ ಚಿತ್ರಗಳಲ್ಲಿ ಆಧುನಿಕತೆಯನ್ನು ಕಂಡ ಇವರು, ಇದೀಗ ಕ್ಯಾನವಾಸಿನ ಮೇಲೆ ಅಕ್ರ್ಯಾಲಿಕ್ ಬಣ್ಣಗಳಿಂದ ದೊಡ್ಡಗಾತ್ರದ ಚಿತ್ರಗಳನ್ನು ರಚಿಸಿರುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಅತ್ಯುತ್ತಮ ಕಲಾಕೃತಿಗಳಲ್ಲಿ ಪ್ರಮುಖವಾದದ್ದು, ನನ್ನ ಕುಟುಂಬ, ಸಹೋದರಿಯರು, ದಂಪತಿಗಳು, ಗೊಂಬೆಯಾಟ, ಗ್ರಾಮದ ಸುಂದರಿ, ತಾಯಿ ಮತ್ತು ಮಗು, ಕಡವಾ ಚೌತ, ಮಾನಸಕನ್ಯೆ, ಹೀಗೆ ಅನೇಕ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಪ್ರದರ್ಶನ ಗೊಂಡಿವೆ.

ಇವರು ನೈಜರೂಪದ ಚಿತ್ರಗಳನ್ನು ಬಿಡಿಸುವುದರಲ್ಲಿ ಸಿದ್ಧಹಸ್ಥರು. ಮಹಾದಾಸೋಹಿ ಶರಣಬಸವೇಶ್ವರರ ಜೀವನ ಕುರಿತ ಅನೇಕ ಘಟನೆಗಳನ್ನು ಹಾಗೂ ಅವರ ಪವಾಡಗಳನ್ನು ಚಿತ್ರಕಲೆಯ ಮುಖಾಂತರ ತೋರಿಸುವುದರಲ್ಲಿ ಯಶಸ್ವಿ



'ಸೇವನ್ ಸಿಸ್ಟರ್ಸ್' ಅಕ್ರೇಲಿಕ್ ಮಾಧ್ಯಮ

ಯಾಗಿದ್ದಾರೆ. ರಾಷ್ಟ್ರಪತಿ ಪ್ರತಿಭಾದೇವಿಸಿಂಗ್ ಪಾಟೀಲರ ಭಾವ ಚಿತ್ರವನ್ನು ರಚಿಸಿದ್ದು, ಅವರಿಗೆ ತಮ್ಮ ಹಸ್ತಗಳಿಂದ ಈ ಕಲಾಕೃತಿ ಯೊಂದನ್ನು ಕಾಣಿಕೆಯ ರೂಪದಲ್ಲಿ ನೀಡಿದ್ದಾರೆ. ರಾಷ್ಟ್ರಪತಿಗಳು ಇವರ ಕಲಾಪ್ರತಿಭೆಗೆ ಶ್ಲಾಘಿಸಿದರು. ವಿಶ್ವೇಶ್ವರಿಯವರ ಕಲಾಕೃತಿ ಗಳು ದೇಶದ ಹಲವು ಪ್ರತಿಷ್ಠಿತ ಕಲಾಗ್ಯಾಲರಿಗಳಲ್ಲಿ, ಸಂಗ್ರಹಾ ಲಯಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಸಂಗ್ರಹಗೊಂಡಿರುತ್ತವೆ.

ಇವರಿಗೆ ಹಲವು ಗೌರವ ಪ್ರಶಸ್ತಿ ಪುರಸ್ಕಾರಗಳು ಲಭಸಿವೆ. ಅವುಗಳಲ್ಲಿ 1992ರಲ್ಲಿ ಮಿನಿಸ್ಟ್ರೀ ಆಫ್ ಇನ್‌ಫಾರ್ಮೇಷನ್ ಆ್ಯಂಡ್ ಬೋರ್ಡ್ ಕಾಸ್ಟಿಂಗ್ ಗುಬಲರ್ಗಾ ಇವರ ವತಿಯಿಂದ ಪ್ರಶಸ್ತಿ, ಉದಯೋನ್ಮುಖಿ ಬರಹಗಾರರ ಬಳಗದ ವತಿಯಿಂದ ರಾಜ್ಯಮಟ್ಟದ ಪ್ರಶಸ್ತಿ, ತಸ್ಮೀಯಾ ಆರ್ಟ್ ಹೌಸ್ ವತಿಯಿಂದ ಅಖಿಲ ಭಾರತ ಮಟ್ಟದ ಕಲಾಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಗುಲಬರ್ಗಾ ವಿಶ್ವವಿದ್ಯಾಲಯವು ಪ್ರಸಾರಾಂಗ ಹಮ್ಮಿ ಕೊಂಡಿರುವ ಚಿತ್ರಕಲಾ ಸ್ಪರ್ಧೆಯಲ್ಲಿ ನಗದು ಬಹುಮಾನ, ಆಂಧ್ರ ಪ್ರದೇಶದ ಪುಲ್ಲೈ ಕಲಾನಿಲಯಂ ಜನಗಾವ್ ವತಿಯಿಂದ ಅಖಿಲ ಭಾರತ ಮಟ್ಟದ ಚಿತ್ರಕಲಾ ಪ್ರಶಸ್ತಿ ಹಾಗೂ 2006ರಲ್ಲಿ ಕ್ಯಾಮಲೀನ್ ಆರ್ಟ್ ಫೌಂಡೇಷನ್ ಬೆಂಗಳೂರು ಇವರ ವತಿಯಿಂದ ಇಪ್ಪತ್ತೈದು ಸಾವಿರ ರೂಪಾಯಿಗಳ ನಗದು ಬಹುಮಾನ ತಮ್ಮದಾಗಿಸಿಕೊಂಡಿರುತ್ತಾರೆ.

ಮುಂಬಯಿ ಗುಲಬರ್ಗಾ ಸೇರಿದಂತೆ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳು ಹಾಗೂ ಬೆಂಗಳೂರು, ನವದೆಹಲಿ, ಲಖನೌ, ಚೆನ್ನೈ, ಹೈದ್ರಾಬಾದ ಹೀಗೆ ಹತ್ತು ಹಲವುಕಡೆ ಇವರ ಗುಂಪು ಚಿತ್ರಕಲಾ ಪ್ರದರ್ಶನಗಳಾಗಿವೆ. ಇವರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದು ಅತ್ಯುತ್ತಮ ಕಲಾಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಇದಲ್ಲದೆ ಉಪನ್ಯಾಸಕಿ ಯಾಗಿ, ಉತ್ತಮ ಶಿಕ್ಷಕಿಯಾಗಿ, ಸಮಾಜ ಸೇವಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಎಸ್‌ಪಿ)

ವೀ

ವೀರಣ್ಣ ಫಕೀರಪ್ಪ ಉಪ್ಪಾರ: ಯುವ ಪ್ರತಿಭಾವಂತ ನಟ. ಹವ್ಯಾಸಿ ರಂಗಭೂಮಿ ಕಲಾವಿದ. ಚಿಕ್ಕ ವಯಸ್ಸಿನಲ್ಲಿ ನಾಟಕದ ಹವ್ಯಾಸ ಹಚ್ಚಿಕೊಂಡರು 1992ರಲ್ಲಿ ಮಂಡಲಗಿರಿ ಗ್ರಾಮದವ ರಾದ ಖ್ಯಾತ ನಾಟಕಕಾರ ಬಸವರಾಜ ಎನ್. ಬಿನ್ನಾಳ ಅವರು ಪ್ರಥಮವಾಗಿ ರಚಿಸಿದ, ದುಡ್ಡಿನ ದುರಹಂಕಾರಿಗಳು ಎಂಬ ನಾಟಕದಲ್ಲಿ ಜಗಪತಿ ಎಂಬ ಖಳನಾಯಕನ ಪಾತ್ರದಲ್ಲಿ ರಂಗ ಭೂಮಿಗೆ ಪಾದಾರ್ಪಣೆ ಮಾಡಿದರು.

ಖಳನಾಯಕನ ಪಾತ್ರಕ್ಕೆ ಜೀವತುಂಬಿ ಪ್ರೇಕ್ಷಕರ ಹೃದಯ ಗೆದ್ದ ಈ ಕಲಾವಿದ ನಿಜವಾಗಿಯೂ ಅಪರೂಪದ ರಂಗ ಭೂಮಿಯ ನಟರು. ಪ್ರತಿವರ್ಷ ಶಿವರಾತ್ರಿ ಅಮಾವಾಸ್ಯೆಗೆ ಮಂಡಲಗಿರಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಜಾತ್ರೆಯ ಅಂಗ ವಾಗಿ, 2–3 ಹವ್ಯಾಸಿ ತಂಡಗಳು ನಾಟಕವನ್ನು ಅಭಿನಯಿ ಸುತ್ತವೆ. ಆದರೆ ವೀರೇಶ್ವರ ಕಲಾ ನಾಟ್ಯ ಸಂಘದವರು ಅಭಿನಯಿ ಸುವ ನಾಟಕ ತಂಡದಲ್ಲಿ ವೀರಣ್ಣ ಉಪ್ಪಾರ, ಅವರ ಖಳನಾಯಕನ ಪಾತ್ರ ಇದೆ ಎಂದರೆ ಸಾಕು ಅಕ್ಕಪಕ್ಕದ ಗ್ರಾಮ ದವರು ಸಾಲು ಸಾಲಾಗಿ ಓಡಿ ಬರುತ್ತಾರೆ. ಇವರು ತನ್ಮಯತೆ ಯಿಂದ ಅಭಿನಯಿಸುತ್ತಾರೆ. (ಬಿಎನ್‌ಬಿ)


ವೀರಣ್ಣ ಬಿ. ಬಿರಾದಾರ: ಚಿತ್ರಕಲಾವಿದ ಹಾಗೂ ಚಿತ್ರಕಲಾ ಉಪನ್ಯಾಸಕ. ಇವರು 1959 ರಲ್ಲಿ ಜನಿಸಿದರು. ಚಿತ್ರಕಲೆಯ ಅಭ್ಯಾಸವನ್ನು ಕೆನ್ ಕಲಾ ಶಾಲೆ, ಬೆಂಗಳೂರು ಮತ್ತು ಎಂ. ಎ. ಫೈನ್ ಆರ್ಟ್, ಶರಣಬಸವೇಶ್ವರ ಪಿ.ಜಿ. ಸೆಂಟರ್ ಗುಲಬರ್ಗಾ ದಲ್ಲಿ (ಗು.ವಿ.ಗು) ವ್ಯಾಸಂಗ ಮುಗಿಸಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗ, ಗುಲ್ಬರ್ಗಾದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.

ಇವರು ತಮ್ಮದೇ ಆದ ಶೈಲಿ, ಭಾವನೆಗಳಿಂದ ಹೆಚ್ಚಾಗಿ ಲಂಬಾಣಿ ಜನಜೀವನದ ಬಗ್ಗೆ ಕೃತಿಗಳನ್ನು ರಚನೆ ಮಾಡಿದ್ದಾರೆ. ಈ ಕಲಾಕೃತಿಗಳಲ್ಲಿ ಅವರ ವೇಷಭೂಷಗಳು, ಹಬ್ಬದ ವಾತಾ ವರಣ, ಅಲಂಕಾರ, ಜನಪದ ನೃತ್ಯದ ಶೈಲಿಯಲ್ಲಿ ಕಲಾಕೃತಿ ಗಳನ್ನು ರಚನೆ ಮಾಡಿದ್ದಾರೆ. ಬೇರೆ ಬೇರೆ ವರ್ಣಗಳಿಂದ ಲಂಬಾಣಿ ಜನಾಂಗದ ಧರ್ಮ, ನೀತಿ, ಭಾವನೆ, ಸಂಸ್ಕೃತಿಗಳನ್ನು ಈ ಕಲಾಕೃತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಹೆಚ್ಚಿಗೆ ವರ್ಣಗಳು ಹಾಕದೆ ಚಿತ್ರ ಮಾತಾಡುವಂತೆ ಕಾಣುತ್ತವೆ. ಇವರು ಸಂಯೋಜನೆ, ತಮ್ಮದೇ ಆದ ವಿಚಾರಗಳನ್ನು ಬಳಸಿ ಕಲಾಕೃತಿ ಗಳನ್ನು ಸುಂದರವಾಗಿ ರಚನೆ ಮಾಡಿದ್ದಾರೆ. ಇದಲ್ಲದೆ ಬೇರೆ ಬೇರೆ ಶರಣರ ಕಲಾಕೃತಿ, ನಿಸರ್ಗ ಚಿತ್ರ, ವ್ಯಕ್ತಿಚಿತ್ರಗಳನ್ನೂ ರಚಿಸಿ ದ್ದಾರೆ.

ಈ ಕಲಾವಿದರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ವೆಂಕಟಪ್ಪಾ ಆರ್ಟ್ ಗ್ಯಾಲರಿ, ಬೆಂಗಳೂರು, ಆರ್ಟ್ ಪ್ಲಾಜಾ ಮುಂಬಯಿ, ನ್ಯೂ ದೆಹಲಿ, ಪುಣೆ ಮೊದಲಾದ ಕಡೆ ಪ್ರದರ್ಶನಗೊಂಡಿವೆ. ಗುಂಪು ಚಿತ್ರಕಲಾ ಪ್ರದರ್ಶನ ಗಳು, ಗುಲಬರ್ಗಾ, ಬೆಂಗ ಳೂರು, ಮುಂಬೈ, ಪೂಣೆ, ಚೆನ್ನೈ ಮತ್ತು ನವದೆಹಲಿ ಮೊದ ಲಾದವುಗಳು.



ವಿವಿಧ ವಿಷಯಗಳ ಮೇಲೆ ಕಲಾಕೃತಿ ರಚನೆ ಮಾಡಿ ಬಹು ಮಾನ ಪಡೆದಿದ್ದಾರೆ. ದಸರ ವಸ್ತು



'ಭಾವಚಿತ್ರ' ಜಲವರ್ಣ ಮಾಧ್ಯಮ

ಪ್ರದರ್ಶನ, ಮೈಸೂರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಗುಲಬಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಬಿಜಾಪುರ, ಹುಬ್ಬಳ್ಳಿ, ನಾಗಪುರ, ಹೈದ್ರಾಬಾದ್ ಇನ್ನೂ ಅನೇಕ ಬೇರೆ ಬೇರೆ ರಾಜ್ಯಗಳಿಂದ ಇವರ ಕಲಾಕೃತಿಗಳಿಗೆ ಇವರಿಗೆ ಅನೇಕ ಬಹುಮಾನಗಳು ಬಂದಿವೆ.

ಅನೇಕ ಕಲಾಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ. ಉದಾ. ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ, ಕಾವಾ ಮೈಸೂರು, ಹುಬ್ಬಳ್ಳಿ, ಬೀಳಗಿ, ಬಿಜಾಪುರ, ರಾಯಚೂರು ಮೊದಲಾದ ಕಡೆ ಕಲಾಶಿಬಿರಗಳಲ್ಲಿ ಭಾಗ ವಹಿಸಿರುತ್ತಾರೆ. ಇವರ ಕಲಾಕೃತಿಗಳು, ಬಾಂಬೆ ಆರ್ಟ್ ಸೊಸೈಟಿ-ಮುಂಬೈ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಖಾಸಗಿ ಮತ್ತು ಕಲಾಗ್ಯಾಲರಿಗಳಲ್ಲಿ ಕಲಾಕೃತಿಗಳು ಸಂಗ್ರಹವಾಗಿವೆ.

ಟುಡೇ ಆರ್ಟ್‌ಗ್ಯಾಲರಿ ಪುಣೆ, ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ. ಇವರು ಬೇರೆ ಬೇರೆ ರಾಜ್ಯಗಳಲ್ಲಿ ನಿಸರ್ಗ ಚಿತ್ರಗಳು, ವ್ಯಕ್ತಿಚಿತ್ರಗಳು, ವಸ್ತು ಚಿತ್ರಗಳು, ರೇಖಾ ಚಿತ್ರಗಳು, ಜನ ಮೆಚ್ಚು ವಂತ ಕಲಾಕೃತಿಗಳು ತಮ್ಮದೇ ಆದ ಭಾವನೆ, ಶೈಲಿ, ತಂತ್ರದಿಂದ ರಚಿಸಿದ್ದಾರೆ. ಇವುಗಳ ಜೊತೆಗೆ ಕಪ್ಪು-ಬಿಳುಪು ಜನಪದ ನೃತ್ಯ, ಜನಪದ ಕಲೆ, ಗ್ರಾಮೀಣ ಭಾಗದ ವಿವಿಧ ವರ್ಣಗಳಿಂದ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. (ಎಸ್‌ಎಲ್)

ವೀರನೂರು-ಬೇಲೂರು: ಒಂದೆಡೆ ಆಂಧ್ರಪ್ರದೇಶ, ಮತ್ತೊಂದೆಡೆ ಮಹಾರಾಷ್ಟ್ರದ ಗಡಿಯನ್ನು ಹೊಂದಿರುವ ಬೀದರ ಜಿಲ್ಲೆಯ ಬಸವಕಲ್ಯಾಣ ಚಾಲುಕ್ಯರ ರಾಜಧಾನಿ ಯಾಗಿತ್ತು. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ಕ್ರಾಂತಿ ಭೂಮಿಯೂ ಆಗಿತ್ತು. ಅನಂತರ ಬಹುಮನಿ ಅರಸರು, ಹೈದ್ರಾಬಾದ ನಿಜಾಮ ಅರಸರ ಆಳ್ವಿಕೆಯಿಂದಾಗಿ ವಿವಿಧ ಸಂಸ್ಕೃತಿ, ಭಾಷೆಯ ಪ್ರಭಾವ ಈ ಪ್ರದೇಶದ ಮೇಲೆ ಗಾಢವಾಗಿ ಆಗಿರುವದನ್ನು ಕಾಣಬಹುದು. ಆಳರಸರು ಬದಲಾದಂತೆ ಇಲ್ಲಿನ ಕಲೆ, ಸಂಸ್ಕೃತಿ, ಭಾಷೆಯ ಮೇಲೆ ದಾಳಿ ನಡೆದು, ಹನ್ನೆರಡನೇ ಶತಮಾನದಲ್ಲಿ ಅನೇಕ ದೇವಾಲಯಗಳು, ವಾಸ್ತುಶಿಲ್ಪಗಳು ನಾಶವಾಗಿದ್ದನ್ನೂ ಕಾಣ ಬಹುದು.

ಕರ್ನಾಟಕದ ತುತ್ತ ತುದಿಯಲ್ಲಿರುವ ಬೀದರ ಜಿಲ್ಲೆಯಲ್ಲೂ ಒಂದು ಬೇಲೂರು ಇದೆ ಎಂಬುದು ಬಹಳಷ್ಟು ಜನಕ್ಕೆ ತಿಳಿಯದು. ಹಾಸನ ಜಿಲ್ಲೆಯ ಬೇಲೂರಿನಂತೆ, ಬೀದರ ಜಿಲ್ಲೆಯ ಬೇಲೂರ ಕೂಡ ಶಿಲ್ಪಕಲಾ ವೈಭವದಿಂದ ಮೆರೆದ ಗ್ರಾಮ. ಇಲ್ಲಿ ಸಾಕಷ್ಟು ಅವಶೇಷಗಳು ಪ್ರತಿ ಹೆಜ್ಜೆಯಲ್ಲೂ ಈ ಗ್ರಾಮದಲ್ಲಿ ಕಾಣಬಹುದಾಗಿದೆ.

ಬೇಲೂರು ಗ್ರಾಮದ ಪ್ರಮುಖ ದೇವಾಲಯಗಳಾದ ಹನು ಮಾನ, ಶ್ರೀ ಸಿದ್ಧರಾಮೇಶ್ವರ, ಶ್ರೀ ಲಕ್ಷ್ಮೀಮಾತೆ ದೇವಾಲಯ ಗಳಲ್ಲದೆ, ಅಲ್ಲಿ ಇಲ್ಲಿ ಊರ ಬೀದಿಗಳಲ್ಲಿ, ಹೊಲದಲ್ಲಿ, ದರ್ಗಾ ಗಳ ಹತ್ತಿರ, ಕೆರೆಯ ಕಟ್ಟೆಯಾಗಿ ಉಪಯೋಗಿಸಿರುವ ಹಾಗೂ ಅಲ್ಲಲ್ಲಿ ಚದುರಿ ಬಿದ್ದಿರುವ ಹಳೆಯ ದೇವಾಲಯವೊಂದರ ಸುಂದರ ಕೆತ್ತನೆಯ ಶಿಲ್ಪಗಳು, ಜೈನ ತೀರ್ಥಂಕರ ಭಗ್ನ ಅವಶೇಷ ಗಳು ಹಾಗೂ ಜನರ ಬಾಯಲ್ಲಿ ಬತ್ತದ ಗಂಗೆಯಂತಿರುವ ಐತಿಹ್ಯಗಳೇ ಇಲ್ಲಿನ ಪುರಾತತ್ವ ಇತಿಹಾಸಕ್ಕೆ ಆಧಾರಗಳಾಗಿವೆ.

ಇಂದಿನ ಬೇಲೂರು ಗತಕಾಲದಲ್ಲಿ ಜೈನರ ನೆಲೆ ಬೀಡಾ ಗಿತ್ತು. ಬಹಳಷ್ಟು ಜೈನ ತೀರ್ಥಂಕರು ಇಲ್ಲಿ ವಾಸವಾಗಿದ್ದ ರೆಂಬುದಕ್ಕೆ ಇಂದಿಗೂ ನಮಗೆ ಬಲವಾದ ಆಧಾರಗಳು ಸಿಗುತ್ತವೆ. ಹನುಮಾನ್ ದೇವಾಲಯದಿಂದ ಸುಮಾರು ಇಪ್ಪತ್ತೈದು ಹೆಜ್ಜೆ ಅಂತರದಲ್ಲಿ, ಅಂಚೆ ಕಛೇರಿಯ ಮುಂದೆ ಬೀದಿಯ ನಾಲೆಗೆ ಮುಚ್ಚಲಾದ ಶಿಲೆ ಜೈನ ಧರ್ಮಿಯರ ಜಿನಾ ಲಯ ಒಂದರ ಪ್ರವೇಶದ್ವಾರ ತಲೆಪಟ್ಟಿಯಾಗಿತ್ತು. ಅದರ ಮಧ್ಯ ದಲ್ಲಿ ಜೈನ ತೀರ್ಥಂಕರು ಕುಳಿತ ಉಬ್ಬು ಚಿತ್ರ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲಿಂದ ಸ್ವಲ್ಪ ಮುಂದೆ ಶ್ರೀಲಕ್ಷ್ಮೀ ದೇವಾ ಲಯ ಸಿಗುತ್ತದೆ. ಆ ದೇವಾಲಯದ ಜಗುಲಿಗೆ ಆನಿಸಿ ನಿಲ್ಲಿಸಿ ರುವ ವಿಗ್ರಹ ಜೈನ ತೀರ್ಥಂಕರರೊಬ್ಬರದು. ಅದು ಭಿನ್ನ ವಾಗಿರುವುದರಿಂದ ದೇವಾಲಯದ ಹೊರಗಿರಿಸಲಾಗಿದೆ. ಮುಸ್ಲಿಂ ಮತಾಂಧರ ದಾಳಿಗೆ ಸಿಲುಕಿ, ಈ ವಿಗ್ರಹ ತನ್ನ ಹಳೆಯ ಪಾವಿತ್ರ್ಯತೆ, ಸೌಂದರ್ಯ ಕಳೆದುಕೊಂಡು ದುರ್ಗತಿಗೆ ಸಿಲುಕಿದೆ. ಅದೇ ದೇವಾಲಯದ ಎಡಬದಿಗೆ ಜಗುಲಿ ಹತ್ತಿರವಿರುವ ಸುಂದರ ಕೆತ್ತನೆಯ ಪುಷ್ಪ ಚಿತ್ರ ದೇವಾಲಯ ಒಂದರ ಭುವನೇಶ್ವರಿ ಭಾಗವಾಗಿದೆ.

ಭರಮಾಣಿ ಮನೆತನದವರು ವಾಸವಾಗಿರುವ ಮನೆಯಲ್ಲಿ ಬಹುಪುರಾತನ ನೆಲಮಾಳಿಗೆ ಮನೆಯಿದ್ದು, ಅದು ಜೈನ ವೃದ್ಧರು ಸಲ್ಲೇಖನ ವ್ರತಕೈಗೊಳ್ಳುತ್ತಿದ್ದ ಸ್ಥಳವಿರಬೇಕೆಂದೆನಿಸುತ್ತದೆ. ಕಲ್ಲಯ್ಯ ಸಾಲಿಮಠ ಇವರ ಮನೆಯ ಮುಂಭಾಗದಲ್ಲಿದ್ದ ಜೈನ ತೀರ್ಥಂಕರ ವಿಗ್ರಹವು ಈಗ ಕಾಣೆಯಾಗಿದೆ. ಮೇಲಿನ ಆಧಾರದ ಮೇಲೆ ಜಿನಾಲಯ ಇದೇ ಸ್ಥಳದಲ್ಲಿ ಇದ್ದಿತೆಂದೆನಿಸುತ್ತದೆ. ಇಂದಿಗೂ ಕೂಡ ಅಲ್ಲಿ ಸಿಕ್ಕ ಶಿಲೆಗಳಿಗೆ ಪೂಜೆ ಸಲ್ಲಿಸಲ್ಪಡುತ್ತದೆ. ಇಲ್ಲಿ ಗುರುಬಸವ ವಿರಕ್ತಮಠ ಹಾಗೂ ಕಲ್ಯಾಣ ಕಟ್ಟಿಮನಿ ಹಿರೇತನ ಮಠಗಳು ಹೆಬ್ಬಾಗಿಲಿಗೆ ನಿಲ್ಲಿಸಲಾದ ಮಾಸ್ತಿಗಲ್ಲು, ನಂದಿ, ಸೂರ್ಯ, ಚಂದ್ರ, ಶಿವಲಿಂಗ ಹಾಗೂ ಸ್ತ್ರೀ ಒಬ್ಬಳು ತೋರಿಸಿರುವ ಕೈ ಚಿತ್ರವಿದ್ದು, ಇದು ಆ ವೀರನ ಮಡದಿಯು ಸತಿ ಸಹಗಮನವಾದುದರ ಕುರುಹುವಾಗಿರಬೇಕು.

ದೇವಾಲಯವೊಂದರ ಗರ್ಭಗ್ರಹದ ಬಾಗಿಲಪಟ್ಟಿಗಳು ಬಹುಸುಂದರ ಕೆತ್ತನೆಯಿಂದ ಕೂಡಿದ್ದು, ಅವು ಪರಸ್ಪರ ಹೊಂದಿಕೆಯಾಗುವುದಿಲ್ಲ. ಇವುಗಳ ಉಳಿದ ಹೊಂದಿಕೆಯ ಬಾಗಿಲು ಪಟ್ಟುಗಳು ರಾಜೋಳೆಯವರ ಹೊಲದಲ್ಲಿ ಇರುವುದನ್ನು ಕಾಣುತ್ತೇವೆ. ಹೀಗಾಗಿ ಶೈವ ಹಾಗೂ ಬ್ರಾಹ್ಮಣರ ಎರಡು ದೇವಾಲಯಗಳಿರಬಹುದು ಎಂದೆನಿಸುತ್ತದೆ.

ಇಂದು ಹನುಮಾನ್ ದೇವಾಲಯದ ಅಂಗಳದ ಗರ್ಭಗುಡಿಗೆ ಅಭಿಮುಖವಾಗಿ ಪ್ರತಿಷ್ಠಾಪಿಸಿರುವ ನಂದಿ ವಿಗ್ರಹ ಬೃಹದಾಕಾರ ಹೊಂದಿದೆ. ಇದು ಶೈವ ದೇವಾಲಯದ ಕುರುಹಾಗಿದೆ. ದೇವಾಲಯ ಪ್ರವೇಶದ್ವಾರದ ತಲೆಪಟ್ಟಿಯ ಮಧ್ಯೆ ಗಣೇಶನ ಚಿತ್ರವಿದ್ದು, ಇಂದು ವೈಷ್ಣವ ದೇವಾಲಯದ ಸಾಕ್ಷಿಯಾಗಿದೆ. ಜೈನ ತೀರ್ಥಂಕರ ಚಿತ್ರವಿರುವ ಪ್ರವೇಶದ್ವಾರ ತಲೆಪಟ್ಟಿ ಜಿನಾಲಯದ ಕುರುವಾಗಿದ್ದು, ಈ ಮೂರು ದೇವಾಲಯಗಳು ಮತಾಂಧರ ಕೈಗೆ ಸಿಕ್ಕು ನಾಶವಾದ ಮೇಲೆ ಅಳಿದುಳಿದ ಅವಶೇಷಗಳನ್ನು ಹನುಮಾನ ಮಂದಿರದ ಮುಂದೆ ಪ್ರತಿಷ್ಠಾಪಿಸಿರಬಹುದು. ಬಹುಶಃ ಮೂರು ಊರುಗಳ ಬದಲಿ ಮೂರು ಧರ್ಮಿಯರ ಕೇರಿಗಳೂ ಇಲ್ಲಿರುವ ಸಾಧ್ಯತೆಗಳನ್ನೂ ಬೇಲೂರು ಇತಿಹಾಸ ಹೇಳುತ್ತದೆ. ಇಂದಿನ ಬೇಲೂರು ಚಾಲುಕ್ಯ ಅರಸರ ವೀರ ಸೈನಿಕರ, ಶರಣನ ಮೂರು ಧರ್ಮಿಯರ ಐಕ್ಯ ತಾಣ ಎನ್ನುವಲ್ಲಿ ಸಂದೇಹವೇ ಇಲ್ಲ. (ಡಿಬಿಬಿ)

ವೀರಭದ್ರಯ್ಯ ಕೆಂಭಾವಿಮಠ: ತಬಲಾ ವಾದನದಲ್ಲಿ ವಿಶಿಷ್ಟ ಪರಿಣಿತಿ ಪಡೆದವರು. ಇವರು ಜನಿಸಿದ್ದು ಕೊಪ್ಪಳ ಜಿಲ್ಲೆಯಲಬುರ್ಗಾ ತಾಲ್ಲೂಕಿನ ಕರಮುಡಿ ಎಂಬ ಕುಗ್ರಾಮದಲ್ಲಿ. ಇವರ ತಂದೆ ವೀರುಪಾಕ್ಷಯ್ಯ. ಇವರು ಸಹ ಸಂಗೀತ ಮೇಷ್ಟ್ರು ಮತ್ತು ತಬಲಾಪಟು. ವೀರುಪಾಕ್ಷಯ್ಯ ತನ್ನ ಕಲೆಯನ್ನು ಹತ್ತಾರು ಜನಕ್ಕೆ ಧಾರೆ ಎರೆದು ಅವರ ಜೀವನಕ್ಕೊಂದು ಆಸರೆ ಕಲ್ಪಿಸಿದಾತ. ಆದರೆ ತಮ್ಮ ಮಗ ಮಾತ್ರ ಈ ಗೀಳಿನತ್ತ ಹಚ್ಚುತ್ತಿರಲಿಲ್ಲ. ತಂದೆಗೆ ಮಗ ಶಾಲಾ ಮೆಟ್ಟಿಲೇರಿ ಅದರಲ್ಲಿ ಪ್ರಗತಿ ಹೊಂದಲೆಂಬುದಿತ್ತು. ಆದರೆ, ವೀರಭದ್ರಯ್ಯ ತಬಲಾ ಮೋಹಕ್ಕೆ ಮನಸೋತಿದ್ದ. ಒಂಭತ್ತನೇ ತರಗತಿಯಲ್ಲಿರುವಾಗಲೇ ಶಾಲೆಗೆ ನಮಸ್ಕಾರ ಹೇಳಿದ. ಇದಕ್ಕೆ ಪ್ರಮುಖ ಕಾರಣ ತಬಲಾ ಮೋಹ ಮತ್ತು ಬೆಂಬಿಡದೆ ಕಾಡುತ್ತಿದ್ದ ಬಡತನವೆಂಬ ದೆವ್ವ.

ಮುಂದೆ ತಬಲಾ ಕಲಿಯಲಾರಂಭಿಸಿದ. ಪ್ರಥಮವಾಗಿ 1992ರಲ್ಲಿ ಕರಮುಡಿ ಗ್ರಾಮದಲ್ಲಿ ತಾಳಿಯಿಲ್ಲದೆ ತಾಯಿಯಾದೆ ಎಂಬ ನಾಟಕ ಪ್ರದರ್ಶನಕ್ಕೆ ತಬಲಾ ವಾದಕನಾಗಿ ಅತ್ಯಮೋಘವಾಗಿ ತಬಲಾ ನುಡಿಸಿದರು. ಅಂದಿನಿಂದ ವೀರಭದ್ರಯ್ಯ ವೃತ್ತಿಯಲ್ಲಿ ತಿರುಗಿ ನೋಡಲೇ ಇಲ್ಲ. ಎಲ್ಲರೂ ಇವರ ತಬಲಾ ಸಿರಿಗೆ ಮೋಹಕರಾದರು. ಇವರಿಗೆ ಅವಕಾಶಗಳ ಮಹಾಪುರವೇ ಹರಿದು ಬರಲಾರಂಭಿಸಿತು.

ಇಲ್ಲಿಯವರೆಗೆ ಈ ತಬಲಾ ಪಟು 50ರಿಂದ 60 ಪುರಾಣ–ಪ್ರವಚನಗಳಿಗೆ ತಬಲಾ ವಾದಕನಾಗಿ ಧಾರ್ಮಿಕ ರಂಗದ ಸೇವೆ ಸಲ್ಲಿಸಿದ್ದಾರೆ. ಕುದ್ರಿಕೊಟಗಿ ಗ್ರಾಮದಲ್ಲಿ, ಶ್ರೀ ಕಲಬುರ್ಗಿ ಶರಣಬಸವೇಶ್ವರ ಪುರಾಣಕ್ಕೆ ಸತತ ಆರು ವರ್ಷಗಳ ಕಾಲ ತಬಲಾ ಸೇವೆ ಸಲ್ಲಿಸಿದ್ದಾರೆ. ಉತ್ತರ ಕರ್ನಾಟಕದ ತುಂಬೆಲ್ಲ ತಬಲಾ ನುಡಿಸುವಲ್ಲಿ ಸಿದ್ಧಹಸ್ತನಾಗಿರುವ ಇವರು ಕೊಪ್ಪಳ, ರಾಯಚೂರು, ಕಲಬುರ್ಗಿ, ಹಾವೇರಿ, ಗದಗ, ಧಾರವಾಡ ಇನ್ನು ಮುಂತಾದ ಜಿಲ್ಲೆಗಳಲ್ಲಿ ನಡೆದ ಪುರಾಣ ಪ್ರವಚನಗಳಲ್ಲಿ ತಬಲಾ ವಾದಕರಾಗಿ ತನ್ನ ಕಲಾಪ್ರೌಢಿಮೆಯನ್ನು ಮೆರೆದಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ನಾಟಕಗಳಿಗೆ ತಬಲಾ ಸಾಥ್ ನೀಡಿದ್ದಾರೆ. ಇವರ ತಬಲಾ ಪ್ರೌಢಿಮೆಯಿಂದ ಬಹಳಷ್ಟು ನಾಟಕಗಳು ಯಶಸ್ವಿಯಾಗಿವೆ. ಇವರು ತಬಲಾವಾದಕರಾಗಿ ಸೇವೆ ಸಲ್ಲಿಸಿರುವ ಈ ನಾಟಕಗಳು ಯಶಸ್ವಿ ಪ್ರದರ್ಶನಗಳನ್ನು ಕಂಡಿವೆ. (ಎಸ್‌ಎಸ್‌ಪಿ)

ವೀರಭದ್ರಯ್ಯ ಹಿರೇಮಠ: ಇವರು ಶಿಕ್ಷಕರಾಗಿ, ಉದಾರ ಹೃದಯಿಯಾಗಿ, ಸಮಾಜ ಸೇವಕರಾಗಿ, ನಟ–ನಿರ್ದೇಶಕರಾಗಿ ಕ್ರಮೇಣ ಪುರಾಣ ಪ್ರವಚನಕಾರರಾಗಿ ಸಲ್ಲಿಸಿದ ಸೇವೆ ಶ್ಲಾಘನೀಯ. ಉರ್ದು ಪ್ರಭಾವದ ದಿನಗಳಲ್ಲಿ ತಮ್ಮ ಮಠವನ್ನೇ



ಪಾಠ ಶಾಲೆಯನ್ನಾಗಿ ಮಾಡಿಕೊಂಡು ರೈತರ ಮಕ್ಕಳ ಭವಿಷತ್ತಿನ ಭರವಸೆಯಾಗಿ ಅಕ್ಷರ ಅಭ್ಯಾಸದ ಜೊತೆ ಜೊತೆ ಧಾರ್ಮಿಕ ಹಾಗೂ ತಾತ್ವಿಕ ಹಿನ್ನೆಲೆಯಲ್ಲಿ ಮಾರ್ಗದರ್ಶನ ಮಾಡುತ್ತ ಬಂದುದು ಅವಿಸ್ಮರಣೀಯ.

ಅವರೀಗ ಶಿಕ್ಷಕ ಹುದ್ದೆಯಿಂದ ನಿವೃತ್ತಿಹೊಂದಿ ಎಷ್ಟೋ ವರ್ಷಗಳು ಗತಿಸಿವೆ. ಅವರ ವಿದ್ಯಾರ್ಥಿಗಳಿನ್ನೂ ಅವರ ಎದುರು ನಿಂತು ಮಾತನಾಡಲು

ಅಂಜುತ್ತಾರೆ. ಈಗಲೂ ತಲೆ ಬಾಗುತ್ತಾರೆ, ಗೌರವಿಸುತ್ತಾರೆ. ಇತ್ತೀಚಿಗೆ ಅವರ ಶಿಷ್ಯ ಶ್ರೀ ಕೃಷ್ಣಾಜಿ ವೈದ್ಯ ಅವರು ಊರ ಆಂಜನೇಯ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಮಾಡಿ ಪೂಜೆ ಸಲ್ಲಿಸುವಾಗ ಇವರನ್ನು ಕರೆಯಿಸಿ ಶಾಲು ಹೊದಿಸಿ ಫಲಪುಷ್ಪ ಅರ್ಪಿಸಿ ಸತ್ಕರಿಸಿ ತಲೆಬಾಗಿದ್ದು, ಅವರು ನೀಡಿದ ಶಿಕ್ಷಣ, ಮಾರ್ಗದರ್ಶನ, ಸಂಸ್ಕೃತಿ, ಸಂಸ್ಕಾರದ ಜೊತೆಗೆ ಅವರ ಘನತೆಗೆ, ವ್ಯಕ್ತಿತ್ವಕ್ಕೆ, ಒಬ್ಬ ಶಿಕ್ಷಕನಿಗೆ ಬದುಕಿನಲ್ಲಿ ಇದಕ್ಕೂ ಹೆಚ್ಚಿನ್ನೇನುಬೇಕು.

ವೀರಭದ್ರಯ್ಯನವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೆ ಅಕ್ಷಯಾಂಬರ, ಪ್ರಪಂಚ ಪರೀಕ್ಷೆ, ಕುರುಕ್ಷೇತ್ರ, ಜೀವನ ಯಾತ್ರೆ, ಅಣ್ಣ ತಮ್ಮ, ತಾಯಿಕರುಳು, ಇನ್ನು ಪ್ರಮುಖ ಬಯಲಾಟಗಳೆಂದರೆ ಚಂದ್ರಹಾಸ, ಕೃಷ್ಣರ್ಜುನ ಕಾಳಗ, ಇವರ ಪಾತ್ರ ಯಾವಾಗಲೂ ಹಾಸ್ಯ ಪಾತ್ರಗಳೇ ಅಕ್ಷಯಾಂಬರದಲ್ಲಿ ಜಯಧೃತ ಪ್ರಪಂಚ ಪರೀಕ್ಷೆಯಲ್ಲಿ ಗೋಡೆಸವಾರ ಜೀವನ ಯಾತ್ರೆಯಲ್ಲಿ ಸಿದ್ಧನ ಪಾತ್ರ. ಇವರ ಪ್ರಮುಖ ಹಾಸ್ಯ ಪಾತ್ರಗಳು, ಅಭಿನಯ ನೋಡಿದ ಹಳ್ಳಿಯ ಜನ ಈಗಲೂ ನೆನಪಿಸಿ ಕೊಳ್ಳುತ್ತಾರೆ. ವಿಶೇಷವಾಗಿ ಪ್ರಪಂಚ ಪರೀಕ್ಷೆಯ ಗೊಡೆಸವಾರ ಪಾತ್ರ ವಿಶಿಷ್ಟವಾಗಿತ್ತು. ಉರ್ದು ಕನ್ನಡ ಹೀಗೆ ಎರಡೂ ಭಾಷೆಗಳ ಮಧ್ಯದಲ್ಲಿ ಬರುವ ಡೈಲಾಗ್ಸ್ ಜನರಿಗೆ ನಗೆ ತರಿಸುತ್ತಿದ್ದವು. ಜೊತೆಗೆ ಮಧುರ ಸಂಗೀತ ಹಾಡು ಎಲ್ಲವೂ ಆಕರ್ಷಕ.

ಆಗಿನ ಹಾಸ್ಯವೇ ಬೇರೆ ನವಿರಾದ ಮಧುರವಾದ, ತಿಳಿಯಾದ ಹಾಸ್ಯ. ಈಗಿನಂತೆ ಅಶ್ಲೀಲ ಪದಗಳ ಡಬಲ್ ಮೀನಿಂಗ್ ಡೈಲಾಗ್ಸಗಳಿರಲಿಲ್ಲ. ಹಾಸ್ಯ ಪಾತ್ರಧಾರಿ ಶ್ರೀ ವೀರಭದ್ರಯ್ಯನವರ ವಿಶೇಷತೆಯೆಂದರೆ ನಾಟಕದ ಡೈಲಾಗಗಳಿಗಿಂತ ಸ್ವತಂತ್ರ ಮಾಡುಗಳೇ ಹೆಚ್ಚಾಗಿರುತ್ತಿದ್ದವು. ತಮ್ಮ ಸುತ್ತಲಿನ ಬದುಕಿನ ಘಟನೆಗಳನ್ನು, ಸನ್ನಿವೇಶಗಳನ್ನು ತಮ್ಮ ಪಾತ್ರಕ್ಕೆ ಅಳವಡಿಸಿಕೊಂಡು ವಿಡಂಬನೆಯಿಂದ ರಂಗದಲ್ಲಿ ಪರಿಣಾಮಕಾರಿಯಾಗಿ ಹೇಳುತ್ತಿದ್ದರು. ಒಮ್ಮೊಮ್ಮೆ ಕಲ್ಪನೆಗಳ ರಮ್ಯ ಮಾತುಗಳಿಂದ ರಂಜಿಸುತ್ತ ರಂಗದಲ್ಲಿ ಪ್ರಮುಖ ನಟರಾಗಿ ಬಿಡುತ್ತಿದ್ದರು.

ಬಿಸರಳ್ಳಿಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆಧಾರ ಸ್ಥಂಭವಾಗಿ, ಕಲಾಸಕ್ತರಿಗೆ ಮಾರ್ಗದರ್ಶಕರಾಗಿ ಹಳ್ಳಿಯ ನಾಟಕ ಬಯಲಾಟಗಳಿಗೆ ಸ್ಫೂರ್ತಿದಾಯಕರಾಗಿ ಶ್ರೀ ಹಿರೇಮಠರರು ಅಲ್ಲಿಯ ಸಾಂಸ್ಕೃತಿಕ ಸಂಪತ್ತಾಗಿದ್ದಾರೆ. ಅವರ ಸಮಕಾಲೀನ ಕಲಾವಿದರಾದ ವಸಂತಪ್ಪ ಪುರೋಹಿತ, ಚಂದ್ರಶೇಖರ ಶಾಸ್ತ್ರಿ, ಸಿದ್ಧಪ್ಪ ಮಾಸ್ತರ ಬೆಲ್ಲದ, ಭರಮಪ್ಪ ಕಟಗಾಲಿ, ರಾಮಣ್ಣ ತಳವಾರ, ಸಿದ್ಧಪ್ಪ ಅಂಗಡಿ, ಲಕ್ಷ್ಮಣ ಮಾಸ್ತರ ಬಿಸರಳ್ಳಿ, ಪ್ರಮುಖ ಕಲಾವಿದರಾಗಿ ಉತ್ತಮ ಅಭಿನಯದಿಂದ ಇಡೀ ನಾಟಕದ ಯಶಸ್ವಿಗೆ ಕಾರಣರಾದವರು. ವೀರಭದ್ರಯ್ಯನವರು ಜನ್ಮ ಪಡೆದುದು ಕೊಪ್ಪಳ ಹತ್ತಿರದ ಬಿಸರಳ್ಳಿ ಗ್ರಾಮದ ಹಿರೇಮಠದ ಜಂಗಮ ಮನೆತನದಲ್ಲಿ. ತಂದೆ ಮಲಕಯ್ಯ ಹಿರೇಮಠ ತಾಯಿ ಬಸಮ್ಮ ಹಿರೇಮಠ ಬಿಸರಳ್ಳಿಯ ಆದರ್ಶ ದಂಪತಿಗಳು.

(ಜಿಎಚ್)



ವೀರಯ್ಯ ಮಂಡಲಗಿರಿ: 'ಎಚ್ಚರ ತಂಗಿ ಎಚ್ಚರ' ನಾಟಕದ ಕುಡುಕ ರಂಗನ ಪಾತ್ರದಿಂದ ಬಹಳಷ್ಟು ಹೆಸರು ಮಾಡಿದ ವೀರಯ್ಯ ಮಂಡಲಗಿರಿ ತಮ್ಮ ಅಭಿನಯದಲ್ಲಿ ತೃಪ್ತಿ ನೀಡಿದ ಪಾತ್ರ ಕೂಡ ಅದೇ ಎನ್ನುತ್ತಾರೆ. ಗುಲಬರ್ಗಾದಲ್ಲಿ ಏಳುನೂರು ಪ್ರಯೋಗ ಈ ನಾಟಕ ಪ್ರದರ್ಶಿಸಿದಾಗ ವೀರಯ್ಯ ಮಂಡಲಗಿರಿ ಅವರ ಅಭಿನಯವೂ ಲೆಕ್ಕಕ್ಕೆ ಬರುತ್ತದೆ. ಇಡೀ ಪಾತ್ರವನ್ನು ಗುಣಸ್ವಭಾವ ಗಳನ್ನು ಅರ್ಥೈಸಿಕೊಂಡು ತಮ್ಮನ್ನು ತೊಡಗಿಸಿಕೊಂಡು ಅಭಿನಯಿಸುವ ವೀರಯ್ಯ ಪಾತ್ರವನ್ನು ಜೀವಂತವಾಗಿರಿಸುತ್ತಾರೆ.

'ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ' ಸೂಡಿ ಕಂಪನಿಯಲ್ಲಿ ಪ್ರವೇಶ ಪಡೆದು 'ಗವಿಸಿದ್ಧೇಶ್ವರ ಮಹಾತ್ಮೆ' ನಾಟಕದಲ್ಲಿ ಬಸವನಗೌಡನ ಪಾತ್ರದಿಂದ ವೃತ್ತಿ ಕಂಪನಿಯ ಸೇವೆ ಪ್ರಾರಂಭಗೊಂಡು ಅಲ್ಲಿಂದ 'ಸಂಗಮೇಶ್ವರ ನಾಟ್ಯ ಸಂಘ' ಆಶಾಪುರದಲ್ಲಿ 5 ವರ್ಷ 'ಶ್ರೀಗುರು ಸಂಗಮೇಶ್ವರ ನಾಟ್ಯ ಸಂಘ' ಗುಡಿಗೇರಿ ಮೂರು ವರ್ಷ ಸೇವೆಸಲ್ಲಿಸಿ ನಂತರ 1993ರಲ್ಲಿ ಸ್ನೇಹಿತ ಹಾಗೂ ಸಹೋದ್ಯೋಗಿ ಶಂಕರಪ್ಪ ಅವರೊಂದಿಗೆ ಪೂಜ್ಯ ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳ ಆಶೀರ್ವಾದ ಪಡೆದು ತಮ್ಮ ಹಳ್ಳಿಯಲ್ಲಿಯೇ(ಮಂಡಲಗಿರಿ)ಸ್ವತಂತ್ರ ಕಂಪನಿ 'ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘ' ಮಂಡಲಗಿರಿ ಎಂದು ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೂ ಈ ಇಬ್ಬರೂ ಸ್ನೇಹಿತರು ನಿರಂತರವಾಗಿ ಕಂಪನಿಯನ್ನು ನಡೆಸಿಕೊಂಡು ಬಂದಿದ್ದಾರೆ.

ವೀರಯ್ಯನವರು ಹೆಚ್ಚಾಗಿ ಪೋಷಕ ನಟರಾಗಿ ಅಭಿನಯಿಸಿದ್ದುಂಟು. ಖಳನಾಯಕನಾಗಿ ಜನರನ್ನು ಆಕರ್ಷಿಸಿದ್ದಾರೆ. ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದಲ್ಲಿದ್ದಾಗ 'ಗವಿಸಿದ್ದೇಶ್ವರ ಮಹಾತ್ಮೆ' ಯಲ್ಲಿ ಬಸನಗೌಡ, 'ಹಣಿ ಅಕ್ಕಿ ಕೂಡಿದರೆ ಹಡೆದವರು ಬೇಕಾಗಿಲ್ಲ' ನಾಟಕದಲ್ಲಿ ಸೋಮನಾಥ; 'ಗೌಡ್ರಗದ್ಲ'ದಲ್ಲಿ ಕರಿಯ ಪಾತ್ರಗಳು ಪ್ರಮುಖವಾಗಿವೆ. 'ಶ್ರೀಗುರು ಸಂಗಮೇಶ್ವರ ನಾಟ್ಯ ಸಂಘ' ಗುಡಿಗೇರಿಯಲ್ಲಿ ಎಚ್ಚರ ತಂಗಿ ಎಚ್ಚರ ನಾಟಕದ ರಂಗ ಸತ್ಯಸತ್ತಿಲ್ಲ ನಾಟಕದ ಸ್ಕೂಲ ಮಾಸ್ತರ್‌ದಲ್ಲಿ ಆಕರ್ಷಿಸಿದ್ದಾರೆ. 'ಶ್ರೀ ಸಂಗಮೇಶ್ವರ ನಾಟ್ಯ ಸಂಘ' ಆಶಾಪುರ ಕಂಪನಿಯಲ್ಲಿ ರೊಚ್ಚಿಗೆದ್ದ ರೈತ ನಾಟಕದಲ್ಲಿ ಚೆನ್ನವೀರ ದೇಸಾಯಿ ದರ್ಬಾರದಲ್ಲಿ ಅರುಣಚಂದ್ರ ದೇಸಾಯಿ ಪ್ರೇಕ್ಷಕರನ್ನು ಸೆಳೆದ ಪಾತ್ರಗಳಾಗಿವೆ. ತಮ್ಮದೇ ಕಂಪನಯಲ್ಲಿ 'ತವರು ಬಿಟ್ಟ ತಂಗಿ–ಬಸಪ್ಪ; ಮಗನಿಗಿಂತ ಮಾನ ದೊಡ್ಡದು ನಾಟಕದಲ್ಲಿ ಸೂರ್ಯ; ಇದು ಹಿಂಗ್ಯಾಕಾಯ್ತು ಯಾಕ ಹಿಂಗಾಯ್ತು ನಾಟಕದಲ್ಲಿ ಮಾದೇವಯ್ಯ ಪಾತ್ರಗಳು ಅವರ ಉತ್ತಮ ಅಭಿನಯಕ್ಕೆ ನಿದರ್ಶನ.

ಇವರ ರಂಗಭೂಮಿ ಸೇವೆ, ಕಂಪನಿ ನಡೆಸಿಕೊಂಡು ಬಂದಿರುವ ಸಾಹಸಕ್ಕೆ ನಾಡಿನ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ವೀರಯ್ಯನವರು ಜನ್ಮ ಪಡೆದುದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಂಡಲಗಿರಿ ಗ್ರಾಮದಲ್ಲಿ ಬಸವಲಿಂಗಯ್ಯ ಹಿರೇಮಠ ಸಣ್ಣವೀರಮ್ಮ ದಂಪತಿಗಳ ಜಂಗಮ ಸುಸಂಸ್ಕೃತ ಮನೆತನದಲ್ಲಿ 14.11.1954ರಲ್ಲಿ ಓದು ಪಿಯುಸಿ ವರೆಗೆ ಇಬ್ಬರು ಸಹೋದರರು ನಾಲ್ಕು ಜನ ಸಹೋದರಿಯರು, ಮನೆಯಲ್ಲಿ ಮತ್ತಾರೂ ಈ ಕ್ಷೇತ್ರಕ್ಕೆ ಬಂದಿಲ್ಲ. ಕಷ್ಟದಲ್ಲಿಯೇ ಬೆಳೆದು ಕಷ್ಟಗಳಲ್ಲಿಯೇ ಓದಿ ಕೆಲಸ ಸಿಗದಿದ್ದಾಗ ಊರೂರು ಅಲೆದು, ಕೂಲಿ ಮಾಡಿ, ಹಮಾಲಿ ಮಾಡಿ ಬದುಕಿದ್ದನ್ನು ವೀರಯ್ಯನವರು ಮರೆತಿಲ್ಲ. (ಜಿಎಚ್)

ವೀರಯ್ಯಸ್ವಾಮಿ: ಬಯಲಾಟದ ರಂಗಪರಿಕರಗಳನ್ನು ಜೋಪಾನವಾಗಿಟ್ಟುಕೊಂಡು ಜೀವನ ಸಾಗಿಸುತ್ತಿರುವ ಕಲಾವಿದ. ಇವರು ಯಾದಗಿರಿಯಲ್ಲಿದ್ದಾರೆ. ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಅವರೇ ಬಿಟ್ಟು ಹೋದ ವ್ರತದಂತೆ ಮುಂದುವರೆಸುತ್ತಾ ಸಂಸಾರದ ಬಂಡಿ ಓಡಿಸುತ್ತಿರುವ ಇವರು ಪೌರಾಣಿಕ ರಂಗ ಪರಿಕರಗಳನ್ನು ಸೃಷ್ಟಿಸುವುದರಲ್ಲಿ ಎತ್ತಿದ ಕೈ. ಇವರು ಸ್ವತಃ ಬಯಲಾಟದ ರಂಗ ಕಲಾವಿದರು. ಅಷ್ಟೇ ಅಲ್ಲ ರಂಗಪರಿಕರಗಳನ್ನು ತಯಾರಿಸಿ ಅವುಗಳನ್ನು ಬಾಡಿಗೆಗೆ ಕೊಟ್ಟು, ಅದರಿಂದ ಬರುವ ಆದಾಯದಿಂದಲೇ ಸಂಸಾರ ನಡೆಸುತ್ತ ಬಂದಿರುವ ಇವರಿಗೆ ಈ ಕೆಲಸ ಬಿಟ್ಟು ಬೇರೇನೂ ಗೊತ್ತಿಲ್ಲ.

ಯಾದಗಿರಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜಾತ್ರೆ ಮುಂತಾದ ಸಂದರ್ಭದಲ್ಲಿ ನಡೆಯುವ ಬಯಲಾಟಗಳಿಗೆ ಇವರೇ ರಂಗ ಪರಿಕರಗಳನ್ನು ಬಾಡಿಗೆಗೆ ನೀಡುತ್ತಾರೆ. ರಾಮಾಯಣದ ರಾವಣನ ಪಾತ್ರಕ್ಕೆ ಹತ್ತು ತಲೆಯ ಕಿರೀಟದ ಪರಿಕರ ಇವರಲ್ಲುಂಟು. ಅದೇರೀತಿ ಕೃಷ್ಣನ ತಲೆಗೆ ನವಿಲು ಗರಿ ಹಾಗೂ ಹಿಂದೆ ಚಕ್ರವಿರುವ ಸುಂದರವಾದ ಕಿರೀಟ ಥೇಟ್ ಚಿನ್ನದ ಕಿರೀಟದಂತೆಯೇ ಕಾಣುತ್ತದೆ. ಶಿವನ ಕೊರಳಲ್ಲಿರೋ ನಾಗರ ಹಾವಿಗೂ ವೀರಯ್ಯಸ್ವಾಮಿಯವರ ಅಂಗಡಿಯಲ್ಲಿರೋ ನಾಗರ ಹಾವಿಗೂ ಒಂದಿನಿತೂ ವ್ಯತ್ಯಾಸವಿಲ್ಲವೆಂದರೆ ಇವರು ರಂಗ ಪರಿಕರಗಳನ್ನು ತಯಾರಿಸುವಲ್ಲಿ ಅದೆಷ್ಟು ಪರಿಣಿತ ಹೊಂದಿದ್ದಾರೆಂಬುದು ತಿಳಿದು ಬರುತ್ತದೆ.

ಪಾತ್ರಧಾರಿಗಳಿಗೆ ಅಲಂಕಾರ ಮಾಡುವುದು ಹಾಗೂ ಪರಿಕರಗಳ ಮೂಲಕ ಪಾತ್ರಗಳಿಗೆ ಜೀವ ತುಂಬುವುದರಲ್ಲಿ ವೀರಯ್ಯಸ್ವಾಮಿ ಅತ್ಯಂತ ನಿಷ್ಣಾತರು. ಒಂದು ಕಾಲಕ್ಕೆ ಯಾದಗಿರಿ ಸುತ್ತಮುತ್ತಲಿನ ಜನ ದೊಡ್ಡಾಟ ಬಯಲಾಟ ಆಡಬೇಕೆಂದರೆ ಮುಂಚಿತವಾಗಿಯೇ ಇವರ ಅಂಗಡಿಗೆ ಬಂದು ಮುಂಗಡ ಹಣ ಕೊಟ್ಟು ದಿನಾಂಕ ನಿಗದಿ ಮಾಡಿ ಪರಿಕರಗಳನ್ನು ಬುಕ್ ಮಾಡಿಕೊಂಡು ಹೋಗುತ್ತಿದ್ದರು.

(ಜಿಕೆಉ)



ವೀರಶೆಟ್ಟಿ ಕೋಡ್ಲಿ: ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೋಡ್ಲಿ ಗ್ರಾಮದಲ್ಲಿ ಬಸವ ಲಿಂಗಪ್ಪ ಸಾವಿತ್ರಮ್ಮ ಸಾತ್ವಿಕ ದಂಪತಿಗಳ ಉದರದಿಂದ 1937 ರಲ್ಲಿ ಜನ್ಮತಾಳಿದ ವೀರಶೆಟ್ಟಿ ಅವರು ರಂಗಭೂಮಿಯನ್ನು ಆಶ್ರಯಿಸಿದ್ದು ಹೊಟ್ಟೆಪಾಡಿಗಾಗಿ, ಬಡತನ ತೀರ ಕಷ್ಟ ತಂದೊಡ್ಡಿದಾಗ ಓದು ಕಷ್ಟವಾಯಿತು. ಪ್ರಾಥಮಿಕ ಓದು ಮುಗಿಸಿದ್ದೇ ದೊಡ್ಡ ಸಾಧನೆಯಾಗಿತ್ತು. ಹತ್ತು ಹನ್ನೆರಡರ ಬಾಲ್ಯದಲ್ಲಿ ಸುತ್ತಲೂ ಕತ್ತಲು ಹರಡಿ ಎರಡು ಹೊತ್ತು ಊಟಕ್ಕೂ ಗತಿ ಇಲ್ಲದಾಗ ಊರು ಬಿಡುವುದೊಂದೇ ದಾರಿಯಾಯಿತು. ಕೋಡ್ಲಿಯಿಂದ ಇಪ್ಪತ್ತು ಕಿಲೋಮೀಟರ್ ದೂರದ ತಾಲೂಕು ಚಿಂಚೋಳಿಗೆ ನಡೆ ಯುತ್ತಲೇ ಬಂದು ಒಂದೆರಡು ದಿನ ಅನಾಥನಂತೆ ತಿರುಗಿದಾಗ ಹೋಟಲ್ಲೊಂದರ ಮಾಲಿಕರು (ಶರಣಪ್ಪ ಸಜ್ಜನ) ಆಶ್ರಯ ಕೊಟ್ಟರು. ಎರಡು ಹೊತ್ತು ಊಟ ತಿಂಗಳಿಗೆ ಒಂದು ರೂಪಾಯಿ ಸಂಬಳ, ಬದುಕುವ ದಾರಿ ಸುಗಮವಾಯಿತು.

ಒಮ್ಮೆ ಇದ್ದಕ್ಕಿದ್ದಂತೆ ಕಂಪನಿಯಲ್ಲಿ ನೂರೊಂದಪ್ಪ ಎನ್ನುವ ಬಾಲನಟ ಕಂಪನಿಯಿಂದ ಓಡಿಹೋದಾಗ ನಿತ್ಯ ಚಹಕ್ಕಾಗಿ ವೀರಶೆಟ್ಟಿ ಇದ್ದ ಹೋಟೆಲ್‌ಗೆ ಬರುತ್ತಿದ್ದ ಕಂಪನಿ ಮಾಲಿಕರ ಹಾಗೂ ನಟರ ದೃಷ್ಟಿ ವೀರಶೆಟ್ಟಿಯ ಮೇಲೆ ಬಿತ್ತು. ಹುಡುಗ ಆಕರ್ಷಕವಾಗಿ ಕಂಡಾಗ ಹೋಟೆಲ್ ಮಾಲಿಕರನ್ನು ವಿಚಾರಿಸಿದರು. 'ಕರೆದುಕೊಂಡು ಹೋಗಿ ಆದರೆ ನಡುವೆ ಎಲ್ಲಿಯಾದರೂ ಕೈ ಬಿಡಬೇಡಿ ನಿಮಗೆ ಬೇಡವೆನಿಸಿದರೆ ಮರಳಿ ನಮಗೆ ತಂದೊಪ್ಪಿಸಿ' ಎಂದು ನಿರ್ಬಂಧ ಹಾಕಿ ಕಳಿಸಿಕೊಟ್ಟರು.

1949 ರಿಂದ ವೀರಶೆಟ್ಟಿಯವರ ಬಣ್ಣದ ಬದುಕು ಪ್ರಾರಂಭಗೊಂಡಿತು. ಪ್ರಪ್ರಥಮವಾಗಿ ಬಸವೇಶ್ವರ ನಾಟಕದಲ್ಲಿ ಬಾಲ ಬಸವೇಶ್ವರ ಪಾತ್ರದಲ್ಲಿ ಬಣ್ಣ ಹಚ್ಚಿ ರಂಗದ ಮೇಲೆ ಬಂದಾಗ ಭಯ ಅಷ್ಟೇ ಉತ್ಸಾಹ, ಕಂಠ ಪಾಠ ಮಾಡಿದ ಮಾತುಗಳನ್ನೆಲ್ಲ ಒಪ್ಪಿಸಿ ಒಳಬಂದಾಗ ಭಾರೀ ಸಾಧನೆ ಎನಿಸಿತ್ತು. ಮಾಲಿಕರು ಹೇಳಿದಂತೆ ಆ ದಿನ ಚಾಚೂ ತಪ್ಪದೆ ಅಭಿನಯ ಮಾತು ಒಪ್ಪಿಸಿದ ವೀರಶೆಟ್ಟಿ ಅವರಿಗೆ ಒಂದು ರೂಪಾಯಿ ಬಹುಮಾನ ಬಂದಿತು. ಆ ಒಂದು ರೂಪಾಯಿ ಬಹುಮಾನ ಪಡೆದಾಗಿನ ಖುಷಿ ಈಗ ಪಡೆಯುವ ವೇತನ ಸಾವಿರಾರು ರೂಪಾಯಿ ಕೊಟ್ಟರೂ ಇಲ್ಲ. ಆ ಖುಷಿ ಈಗ ಏನು ಕೊಟ್ಟರೂ ದೊರೆಯದು ಎನ್ನುತ್ತಾರೆ. ಸುಮಾರು 15–16 ವರ್ಷಗಳ ದೀರ್ಘ ಸೇವೆ ಅದೇ ಕಂಪನಿಯಲ್ಲಿ ಸಾಗಿಬಂದಿತು. ಬಾಲಪಾತ್ರಗಳಿಂದ ಕ್ರಮೇಣ ದೊಡ್ಡ ದೊಡ್ಡ ಪಾತ್ರಗಳಿಗೆ ಬಂದ ಈ ಕಲಾವಿದರಿಗೆ ಸ್ತ್ರೀ ಪಾತ್ರಗಳೇ ಕಾದಿದ್ದವು. 'ಸೌಭಾಗ್ಯ ಲಕ್ಷ್ಮೀ'ಯಲ್ಲಿ ಶಾರದಾ

'ಮೂಲಾ ನಕ್ಷತ್ರ'ದಲ್ಲಿ ಅಗಸರ ಭೀಮವ್ವ 'ಅನ್ನಪೂರ್ಣ' ದಲ್ಲಿ ಬಾರಿಕೇರಿ ನಿಂಗವ್ವ 'ಸ್ತ್ರೀ ರತ್ನ'ದಲ್ಲಿ ಬಸವಂತಿ (ಹಾಸ್ಯ) 'ಬಸವೇಶ್ವರ'ದಲ್ಲಿ ಗಂಗಾ ಪಾತ್ರಗಳು ವೀರಶೆಟ್ಟಿಯವರಿಗೆ ಹೆಸರು ತಂದ ಸ್ತ್ರೀ ಪಾತ್ರಗಳಾದವು. ಅಭಿನಯ ಪಕ್ವಗೊಂಡು ಜನಮನ ಸೆಳೆಯಿತು. ಆವಾಗಲೇ (1963) ಕಂಪನಿಯ ಮಾಲಿಕರು ಹುಬ್ಬಳ್ಳಿಯ ಪ್ರಸಿದ್ಧ ಕಲಾವಿದೆ ಪ್ರೇಮಾಬಾಯಿ, ಶೋಭ ಅವರ ಸಹೋದರಿ ಸೌ. ಸುಶೀಲಳೊಂದಿಗೆ ಶೆಟ್ಟರ ಮದುವೆ ನೆರವೇರಿಸಿ ಕೌಟುಂಬಿಕ ಜೀವನಕ್ಕೆ ಕಾರಣರಾದರು.

ಸೊಲ್ಲಾಪುರದ ಅಕ್ಕಲಕೋಟೆಯಲ್ಲಿದ್ದ ದೊಡ್ಡವಾಡ ಕಂಪನಿ ಇವರಿಗೆ ಸೇವಾವಕಾಶ ಕಲ್ಪಿಸಿಕೊಟ್ಟಿತು. ಅಲ್ಲಿ ಇವರಿಗೆ ಪುರುಷ ಪಾತ್ರಗಳು ದೊರೆತವು. ಹೂಗಾರರ 'ದಸರಾ' ನಾಟಕದ ದಸ್ತಗಿರಿ (ಹಾಸ್ಯ) ಪಾತ್ರ ಅಲ್ಲಿಯ ಪ್ರೇಕ್ಷಕರನ್ನು ರಂಜಿಸಿತು. ಅಲ್ಲಿ ಒಂದು ವರ್ಷ ಸೇವೆ ಸಲ್ಲಿಸುವಷ್ಟರಲ್ಲಿಯೇ ಕಂಪನಿ ನಿಂತು ಹೋಯಿತು. ಅಲ್ಲಿಂದ ಚಿದಂಬರ ಜೋಶಿ ಅವರ 'ಕಲಾವಿಕಾಸ ನಾಟ್ಯ ಸಂಘ'ಕ್ಕೆ ಸೇರಿದರು. ಕೆಲವೇ ದಿನಗಳಲ್ಲಿ ಬೆಂಕಿಗಾಹುತಿಯಾಗಿ ಕಂಪನಿ ನಿಂತಾಗ ಬಹಳ ಸಮಸ್ಯೆಗಳನ್ನೆದುರಿಸುವ ಪ್ರಸಂಗ ಸೆಟ್ಟರಿಗೊದಗಿಬಂದಿತು. ತುಂಬ ಗರ್ಭಿಣಿ ಪತ್ನಿಯನ್ನು ಕರೆದು ಕೊಂಡು ಹೇಗೋ ಬಿಜಾಪುರಕ್ಕೆ ಬಂದು ಶ್ರೀಗುಡಿಗೇರಿ ಬಸವರಾಜರಿಂದ ಆರ್ಥಿಕ ಸಹಾಯ ಪಡೆದು ನೆಲೆನಿಂತರು. ಅಲ್ಲಿಂದ ಶ್ರೀಶಂಕರಯ್ಯ 'ಕಡಪಟ್ಟಿಯವರ' ಕಂಪನಿಯಲ್ಲಿ ನಂತರ ಬೆಳವಣಿಕಿಯ 'ಅಮರೇಶ್ವರ' ನಾಟ್ಯ ಸಂಘದಲ್ಲಿ ಸೇವೆ ಸಲ್ಲಿಸಿದರು. ಬಿಜಾಪೂರ ಜಿಲ್ಲೆಯ ತೇರದಾಳ ಗ್ರಾಮದ ಶ್ರೀ ಫಾಲತೇಜಣ್ಣನವರ ಆರ್ಥಿಕ ಸಹಾಯದಿಂದ 'ಶ್ರೀಗುರು ಬ್ರಹ್ಮನಂದ ನಾಟ್ಯ ಸಂಘ' ತೇರದಾಗ ಎಂದು ಸ್ವತಂತ್ರ ಕಂಪನಿ (1973) ಪ್ರಾರಂಭಿಸುವ ಅವಕಾಶ ಅವರದಾಯಿತು.

1973–74ರಿಂದ 1989ರ ವರೆಗೆ ಕೋಡ್ಲಿ ಶೆಟ್ಟಿಯವರ ಕಂಪನಿ ಉತ್ತರ ಕರ್ನಾಟಕದ ಅದರಲ್ಲೂ ಹೈದ್ರಾಬಾದ ಕರ್ನಾಟಕ ಗುಲಬರ್ಗಾ, ಬೀದರ, ರಾಯಚೂರ ಜಿಲ್ಲೆಗಳಲ್ಲಿ ಭಾರೀ ಹೆಸರು ಪಡೆಯಿತು. ಈ ಕಂಪನಿಯ ಪ್ರಮುಖ ನಾಟಕ ಗಳಾಗಿ 'ನಂದಗೋಕುಲ', ಸಂಪತ್ತಿಗೆ ಸವಾಲು', 'ಕರುಣೇಶ್ವರ ಮಾಹಾತ್ಮೆ', 'ಹೇಮರೆಡ್ಡಿ ಮಲ್ಲಮ್ಮ' ಪ್ರಯೋಗಗೊಂಡವು. ಪ್ರಾರಂಭದ ಕಲಾವಿದರೆಂದರೆ ಡಿ. ದುರ್ಗದಾಸ, ಲಾಡಸಾಬ ಅಮೀನಗಡ, ರಹಿಮಾನಸಾಬ ಸಿರಹಟ್ಟಿ, ರಾಮಣ್ಣ ಐನಾಪುರ, ಲಲಿತಾಬಾಯಿ, ಸಚಿಬಾಯಿ ನಾಗರಾಳ ಆಗಿದ್ದರು. ಕಂಪನಿಯು ಎಲ್ಲ ಸ್ವತಂತ್ರ ಸಲಕರಣೆಗಳನ್ನು ಹೊಂದಿ ಸುಮಾರು ಐವತ್ತು ಸಾವಿರ ರೂಪಾಯಿಗಳ ಆಸ್ತಿಯಾಗಿತ್ತು.

ವೀರಶೆಟ್ಟಿ ಕೋಡ್ಲಿ ಅವರ ಅಭಿನಯವನ್ನು ಕುರಿತು, ಕಂಪನಿ ಸೇವೆಯನ್ನು ಕುರಿತು ನಾಡಿನ ಸಾಹಿತಿಗಳು, ಕಲಾವಿದರು ಪ್ರಶಂಸಿದ್ದಾರೆ. ಸಿಂಪಿಲಿಂಗಣ್ಣ, ಎಸ್.ಎಸ್. ಒಡೆಯರ್, ಸಿದ್ಧ ರಾಮ ಜಂಬಲದಿನ್ನಿ, ಹುಕ್ಕೇರಿ ಬಾಳಪ್ಪ ಅಭಿಮಾನದಿಂದ ಮಾತನಾಡಿದ್ದಾರೆ. ನಾಡಿನ ಪತ್ರಿಕೆಗಳು ಅದರಲ್ಲೂ ಗುಲಬರ್ಗಾ, ಬೀದರ ಸ್ಥಳೀಯ ಪತ್ರಿಕೆಗಳು ಇವರ ರಂಗ ಸೇವೆಯನ್ನು ಕುರಿತು ದೀರ್ಘವಾಗಿ ಬರೆದಿವೆ. ಅಭಿಮಾನಿಗಳು ಹಲವಾರು ಕಡೆ ಗೌರವಿಸಿ ಸನ್ಮಾನಿಸಿದ್ದಾರೆ. ಹಿಂದುಳಿದ ಈ ಭಾಗದಲ್ಲಿ ಅಳಿಲು ಸೇವೆಸಲ್ಲಿಸುತ್ತ ನಾಡಿನ ವೃತ್ತಿ ರಂಗಭೂಮಿಗೆ ತಮ್ಮದೇ ಆದ ಕಾಣಿಕೆ ಸಲ್ಲಿಸಿ ಈಗಲೂ ಎಲೆಮರೆಯ ಕಾಯಿಯಂತೆ ಬದುಕು ತ್ತಿದ್ದಾರೆ. ಸರಕಾರ, ನಾಟಕ ಅಕಾಡೆಮಿ ಈ ಕಲಾವಿದರನ್ನು ಗುರುತಿಸಿ ಗೌರವಿಸಿದೆ.

ವೀರಶೆಟ್ಟಿ ಕೋಡ್ಲಿಯವರಿಗೆ 7 ಜನ ಮಕ್ಕಳು. ಮಕ್ಕಳೆಲ್ಲರೂ ಕಲಾವಿದರು. ತಮ್ಮದೇ ಆದ 'ಶ್ರೀ ಗುರು ಬ್ರಹ್ಮಾವರ' ಸಂಘ ಕಟ್ಟಿಕೊಂಡು ತಂದೆಯ ಭರವಸೆಗಳನ್ನು ಮೇಲೆತ್ತುವ ಪ್ರಯತ್ನ ನಡೆಸಿದ್ದಾರೆ. ವೀರಶೆಟ್ಟಿ ಅವರ ಹೆಸರನ್ನು ಹೇಳಿಕೊಂಡು ಸಾಗಿ ರುವ ಮಕ್ಕಳು ತಂದೆಯ ರಂಗಭೂಮಿಯ ಸೇವೆಯನ್ನು ಪ್ರೇಕ್ಷಕರಿಗೆ ಮರುಕಳಿಸುವಂತೆ ಮಾಡಿದ್ದಾರೆ. 75ರ ಅಚಿಚಿ ನಲ್ಲಿರುವ ವೀರಶೆಟ್ಟಿ ಕೋಡ್ಲಿ ಕಲಬುರ್ಗಿಯ ಎತ್ತರದ ಕಲ್ಲು ಬಂಡೆಗಳ ಮೇಲೆ ಕುಳಿತು ಗತಕಾಲವನ್ನು ಮೆಲುಕುಹಾಕುತ್ತ ದೀರ್ಘ ನಿಟ್ಟಿಸುರು ಬಿಡುತ್ತಾರೆ. ಬಾಲ್ಯದಿಂದಲೂ ಜೊತೆಯಾಗಿ ಬಂದ ಬಡತನ ಇವರನ್ನು ಕೈ ಬಿಟ್ಟಿಲ್ಲ. ಬಡತನದ ಯಾತನೆ ಯಲ್ಲಿಯೂ ಸಮಾಧಾನದ ಗೆರೆಯೊಂದು ಕಾಣುತ್ತಿದೆ. ಈ ಕಲ್ಲು ಬಂಡೆಗಳ ನಡುವೆಯೂ ಕಲಬುರ್ಗಿಯಲ್ಲಿ ಕಲೆಯ ಬುಗ್ಗೆ ಚಿಮ್ಮಿಸುವ ಪ್ರಯತ್ನ ಮಾಡಿದ್ದೇನೆಂಬ ಆತ್ಮ ತೃಪ್ತಿ ಅವರಿಗಿದೆ.

(ಜಿಎಚ್)

ವೀರೇಶ ಪತ್ತಾರ: ಚಿತ್ರಕಲಾವಿದ. ಮೂಲತಃ ಬಿಜಾಪೂರ ಜಿಲ್ಲೆಯ ನಾಲತವಾಡದವರಾದರೂ ಈಗ ಕಲಬುರ್ಗಿ ಜಿಲ್ಲೆಯ ಶಹಾಪೂರ ತಾಲ್ಲೂಕು ಇವರ ನೆಲೆ. ಚಿತ್ರಕಲೆಯಲ್ಲಿ ಡಿಪ್ಲೋಮಾ ಇನ್ ಪೇಂಟಿಂಗ್, ಗದಗ ಜಿಲ್ಲೆಯಲ್ಲಿ ಶಿಕ್ಷಣ ಪಡೆದು, ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ ಪಡೆದ ಪ್ರತಿಭಾನ್ವಿತರು.

ನಯ–ನಾಜೂಕಿನ ಆಭರಣಗಳಿಗೆ ಅಲಂಕಾರಿಕವಾಗಿ ರೂಪ ನೀಡುವ ಪತ್ತಾರ ವೃತ್ತಿಯ ಮನೆತನದಲ್ಲಿ ವೀರೇಶ ಹುಟ್ಟಿದವರು. ಕುಂಚ ಕಲೆಯ ಆಗರದ ಸಾಗರದಲ್ಲಿ ನಿಷ್ಣಾತರು. ಈ ಕಲೆಗೆ ಮೂಲಪ್ರೇರಕ ಶಕ್ತಿಯೆಂದರೆ ತಂದೆಯವರೆಂದು ತಮ್ಮ ಜನ್ಮ ಜಾತಕವನ್ನು ನೆನಪಿಸುತ್ತಾರೆ. ಕಲಿಯುವಾಗ ಅನೇಕ ಒಳ್ಳೇಯ ಚಿತ್ರಗಳನ್ನು ತಂದು ಬಿಡಿಸಲು ಪ್ರೊತ್ಸಾಹಿಸುತ್ತಿದ್ದರಂತೆ. ಆ ಬುನಾದಿಯೇ ತಮ್ಮನ್ನು ಉತ್ತಮತೆಯೆಡೆಗೆ ತಂದಿದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಕಲಾಕಾರ ಮನೆಯ ಪರಿಸರದಲ್ಲಿ ಬೆಳೆದು ಬಂದ ಪತ್ತಾರರಿಗೆ ಸ್ವಭಾವ–ಗುಣಧರ್ಮದಂತೆ ಕಲೆ ರಕ್ತಗತವಾಗಿತ್ತು. ಕುಂಚಕಲೆ ಪೇಂಟಿಂಗ್ಸ್ ಕಲಾಕೃತಿ, ರೇಖಾ ಚಿತ್ರ (ಸ್ಕೆಚ್ ರಚನೆ)ಗಳಲ್ಲಿ ಪಳಗಿದರು, ಗದುಗಿನಲ್ಲಿ ಕಲಿಯುವಾಗ ಎಸ್.ಎಮ್. ಪಂಡಿತರಲ್ಲಿ ಶಿಷ್ಯತ್ವ, ಹೆಮ್ಮೆಯ ಗುರುವಿನಲ್ಲಿ ಕಲಿಕೆ, ತಮ್ಮ ಕಲಾಕೃತಿಯಿಂದ ಗುರುವಿನ ಮನಗೆದ್ದು, ಸೈ ಎನಿಸಿ ಕೊಂಡು ಸಾರ್ಥಕತೆ ಹೇಳಿಕೊಳ್ಳುವ ಪತ್ತಾರರದು ಕುಂಚ ಪ್ರಪಂಚದಲ್ಲಿ ತಮ್ಮದೇ ಗಟ್ಟಿತನ ಹೊಂದಿದರು. ಕುಂಚ ಪ್ರಪಂಚದ ಕಲೆಯಲ್ಲಿ ರೂಪ–ಭೇದ, ಪ್ರಮಾಣ–ಭಾವ–

ಸಾದೃಶ್ಯಗಳನ್ನು ವರ್ಣಿಕಾ ಭಂಗದ ತತ್ವದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ. ಈ ಅಂಶಗಳು ಕಲೆಗೆ ಜೀವಾಳವಾಗುತ್ತವೆ. ವೈದ್ಯ ವೃತ್ತಿಯಲ್ಲಿನ ಶಾಸ್ತ್ರದಂತೆ, ಅನಾಟಾಮಿ ಕಲೆಯಲ್ಲೂ ದೇಹದ ಆಕಾರಕ್ಕೆ ತಕ್ಕಂತೆ ಕಣ್ಣು-ಕಿವಿ-ಮೂಗುಗಳ ಪ್ರಮಾಣ ಬದ್ಧತೆ ಇದರಲ್ಲಿದೆ. ಆ ನಿಖರತೆ ಬರಬೇಕಾದರೆ ಶ್ರಮ ಸಾಧನೆಯಿಂದ ಸಾಧ್ಯವೆನ್ನುವರು. ಸಂಗೀತ ಕ್ಷೇತ್ರದಲ್ಲಿರುವಂತೆ ಶಾಸ್ತ್ರೀಯ ಸಂಗೀತ ಪ್ರಶಸ್ತಿಗಳು, ಈ ಶಾಸ್ತ್ರೀಯ ಕುಂಚ ಕಲೆಯಲ್ಲಿ ಇಲ್ಲದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾ, ಇತ್ತೀಚಿನ ಮಾಡರ್ನ ಆರ್ಟ್ ಬಗ್ಗೆ ಮೂಗು ಮುರಿಯುವ ಶ್ರೀಯುತರು ದೇಶಿಯ ಈ ಮಣ್ಣಿನ ವಾಸನೆಯುಳ್ಳ ಕಲೆಗೆ ಒತ್ತು ನೀಡುತ್ತಾರೆ. ಅನುಕರಣೆಯಿರಲಿ, ಅಂಧಾನುಕರಣೆಯಿಂದ ಪಾಶ್ಚಾತ್ಯತೆಯನ್ನು ಮೈಗೂಡಿಸಿಕೊಳ್ಳುವುದು ಸೂಕ್ತವಲ್ಲ ಎನ್ನುತ್ತಾರೆ.

ಪತ್ತಾರರ ಪೇಂಟಿಂಗ್ಸ್‌ನಲ್ಲಿ ಅಸಂಖ್ಯ ಶಾಸ್ತ್ರಬದ್ಧ ಕೃತಿಗಳಿವೆ. ಅವರಲ್ಲಿನ ಮತ್ಸಗಂಧಿ, ದುಶ್ಯಂತ ಮಹಾರಾಜ, ಸಮುದ್ರ ಮಂಥನದ ಮೋಹಿನಿ, ನಳ-ದಮಯಂತಿ, ವಿಶ್ವಕರ್ಮ, ಗಣೇಶ, ತಿಂಥಿಣಿಯ ಮೌನೇಶ್ವರು, ವಿದ್ಯಾ ದೇವತೆ ಸರಸ್ವತಿ ಇನ್ನು ಹಲವಾರು ಕೃತಿಗಳು, ಸೈಡ್ಸ್‌ಗಳು ಲೆಕ್ಕವಿಲ್ಲದಷ್ಟು. ನೋಡುಗನಿಗೆ ಸಮಯವೇ ಗೊತ್ತಾಗದಷ್ಟು ಭಾವುಕರಾಗುತ್ತಾರೆ. ಈ ಕಲಾಕೃತಿಗಳು ಅನೇಕ ಜನರ ಮನ ರಂಜಿಸಿವೆ. ಇವುಗಳ ಪ್ರದರ್ಶನ ಅವಕಾಶ ಸಿಕ್ಕಾಗಲೆಲ್ಲ, ನಡೆಯುತ್ತದೆ. ಈಗಾಗಲೇ ಬೆಂಗಳೂರಿನ ವೆಂಕಟಪ್ಪ ಗ್ಯಾಲರಿಯಲ್ಲೂ, ಈ ಭಾಗದ ಭೀಮರಾಯನಗುಡಿ, ಹುಣಸಗಿ, ಶಹಾಪೂರ-ತಾಳಿಕೋಟೆ ಇನ್ನಿತರೆಡೆಗಳಲ್ಲಿ ಪ್ರದರ್ಶನಗೊಂಡಿವೆ. ಇನ್ನು ಛಾಯಾಚಿತ್ರದ ನೆರಳು-ಬೆಳಕಿನ ಅನೇಕ ದೃಶ್ಯಗಳಿವೆ. ಪತ್ತಾರರು ಕ್ಯಾಮರ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಸಾಧಿಸಿದ್ದಾರೆ. ಕಲಾದೃಷ್ಟಿಯೆ ಬೇರೆ, ಫೋಟೋ ತೆಗೆವ ವ್ಯಾಪಾರಕ್ಕೆ ಈ ಹವ್ಯಾಸ ತಳಕು ಹಾಕಲಾಗದೆನ್ನುವ ಪತ್ತಾರರು. ಕಲಾವಿದರಾದವರು ಮನಸೂರೆಗೊಳ್ಳುವ ಅಭೂತಪೂರ್ವ ಕ್ಷಣಗಳಿಗೆ ಕಾಯ್ದು ನೋಡುವ ತಾಳ್ಮೆ ಇರಬೇಕು. ಶ್ರೀಯುತರು ಸುಂದರವಾಗಿ ಚಿತ್ರ ಸೆರೆಹಿಡಿಯಬಲ್ಲ ಹಠ ಸ್ವಭಾವದವರು. ಇಂತಹ ಕ್ಯಾಮರಾ ದೃಷ್ಟಿಗೆ ಬಲಿಯಾದ ಗುಡಿ ಗೋಪುರಗಳು, ಈ ನಾಡಿನ ರಾಜರಾಳಿದ ಬೇಟೆಯ ತಾಣಗಳು-ಕ್ರಿಮಿಕೀಟಗಳಿಂದ ಆದಿಯಾಗಿ ಇನ್ನೂ ಅನೇಕವುಗಳನ್ನು ಅಂದವಾಗಿಸಿದ್ದಾರೆ. ಇದರ ತಾಲೀಮಿಗಾಗಿ ಚಿತ್ರ ಕುಟೀರ (ಸ್ಟುಡಿಯೋ)ದಲ್ಲಿ ತಲ್ಲೀನತೆಯಿಂದ ಸಾಧನೆಯಲ್ಲಿ ತೊಡಗಿದ್ದಾರೆ.

ಉದಯೋನ್ಮುಖ ಕಲಾ ಬಳಗ (ಭೀಮರಾಯನ ಗುಡಿಯ) ಕಲಾ ಗೆಳೆಯರ ಸಹವಾಸ-ಒಡನಾಟದಿಂದ ಆಗಾಗ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ನಾಟಕದಲ್ಲಿ ಪಾತ್ರದಿಂದ ಜೀವಂತಿಕೆ ತಂದು ಮನರಂಜಿಸಿದ್ದಾರೆ. 'ಉದ್ಧವ' ದಂತಹ ನಾಟಕದಲ್ಲಿ ಸೂತ್ರಧಾರ. ಕಲಬುರ್ಗಿ ಜಿಲ್ಲೆಯಲ್ಲಿ ಯುವಜನ ಕ್ರೀಡಾ ಮೇಳದ ಇಲಾಖಾ ವತಿಯಿಂದ ಆಯೋಜಿಸಿದ (ಪ್ರಥಮ ಸಾಲಿನಲ್ಲಿ ನಿಲ್ಲಿಸಿ) ಕೀರ್ತಿ ತಂದ ಇವರ 'ಪತ್ನಿಯ ಸೇವಕರು' ನಾಟಕದಲ್ಲಿ ಹಾಸ್ಯ ಪಾತ್ರದಲ್ಲಿ ಮಿಂಚಿದರು. 'ಹೆಗ್ಗೋಡಿನ ನೀನಾಸಂ'ದಲ್ಲಿ ಶಿಬಿರಾರ್ಥಿಯಾಗಿ ತರಬೇತಿಗಾಗಿ ಹಲವು ದಿನ ಹೋಗಿದ್ದು, ಬಳಗದ ವತಿಯಿಂದ ನಡೆಯುವ ನಾಟಕಕ್ಕೆ ರಂಗ ಪರಿಕರದ ತಯಾರಿಕೆ ಮಾಡಿದ್ದಾರೆ. ಸಹಜ ಯೋಗದಲ್ಲಿ ಯೋಗಾಭ್ಯಾಸ ಮಾಡಿದ್ದಾರೆ. ದೇಹ-ಆತ್ಮ ಬೇರೆಯಲ್ಲ, ಒಂದಕ್ಕೊಂದು ಪೂರಕವಾಗಿವೆ. ದೇಹವಿದ್ದರೆ ತಾನೆ ಆತ್ಮನ ರೂಪ ಕಾಣುವುದು. ಬರಿ ಆತ್ಮವೊಂದೇ ಪ್ರಮುಖವಲ್ಲ ಎನ್ನುವ ತರ್ಕ-ವಿತರ್ಕ, ಸಿದ್ಧಾಂತಗಳಿಗೆ ಬೆಲೆ ನೀಡುವ ನಿಲವು ಇವರದು. (ಎಂಎನ್‌ಜಿ)

ವೀರೇಶ ಬುರಲಾ: ಚಿಟಗುಪ್ಪಾ ಪಟ್ಟಣದ ಯುವ ಛಾಯಾಚಿತ್ರ ಗ್ರಾಹಕ. ಇವರು ತಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸದಾ ತೆರೆದ ಕಣ್ಣಿನಿಂದ ನೋಡುತ್ತಾರೆ. ನಿಸರ್ಗದ ವಿಸ್ಮಯ ಘಟನೆಗಳನ್ನು ತಮ್ಮ ಕ್ಯಾಮರದಲ್ಲಿ ಸೆರೆ ಹಿಡಿಯುವ ಮೂಲಕ, ಕಲಾವಿದರು ಸೋಜಿಗ ಪಡುವಂಥ ಸೊಬಗನ್ನು ಸೆರೆ ಹಿಡಿದಿದ್ದಾರೆ. ಇವರು ತೆಗೆದಿರುವ ಛಾಯಾಚಿತ್ರಗಳು ಎಂಥ ಕಲ್ಲು ಹೃದಯದವರನ್ನೂ ಸಹ ನೋಡಿದಾಗ ಅಬ್ಬಾ ಎಂಥ ಚಿತ್ರ ಎಂದು ಆಶ್ಚರ್ಯ ಪಡುವುದರಲ್ಲಿ ಸಂಶಯವಿಲ್ಲ. ಅಂಥ ಅಪರೂಪದ ಛಾಯಾಗ್ರಾಹಕರೆಂದು ಇವರು ಹೆಸರು ಮಾಡಿದ್ದಾರೆ.

ಬೀದರ ಜಿಲ್ಲೆ ಚಿಟಗುಪ್ಪಾ ಪಟ್ಟಣದಲ್ಲಿ ಹುಟ್ಟಿರುವ ಈ ಯುವಕ ಬಾಲ್ಯದಿಂದಲೇ ಛಾಯಾಚಿತ್ರಗಾರಿಕೆಯ ಬಗ್ಗೆ ಅಪಾರ ಆಸಕ್ತಿ ಹೊಂದಿರುವುದರಿಂದ ಇವರಿಗೆ ಸಹಜವಾಗಿ ಮನಸ್ಸು ಉನ್ನತ ವ್ಯಾಸಂಗದತ್ತ ಹರಿಯಲಿಲ್ಲ. ಇವರ ಒಲವು ಛಾಯಾಚಿತ್ರದ ಕಡೆಗೆ ತಿರುಗಿತು. ಕಠಿಣ ಪರಿಶ್ರಮದ ಮೂಲಕ ಇವರು ಮುಂಬಯಿ ಮಹಾನಗರದಲ್ಲಿ ಹೆತಲ್ ಫೋಟೋ ಆರ್ಟ್ಸ್‌ನಲ್ಲಿ ಹತ್ತು ವರ್ಷಗಳವರೆಗೆ ನಿರಂತರ ದುಡಿಮೆಯ ಮೂಲಕ ಎಲ್ಲ ಹಂತಗಳನ್ನು ಶ್ರದ್ಧೆ ಮತ್ತು ಆಸಕ್ತಿಯಿಂದ ಈ ವಿದ್ಯೆಯನ್ನು ತಮ್ಮದಾಗಿಸಿಕೊಂಡರು. ಜೊತೆಗೆ ವಿಡಿಯೋ ಗ್ರಾಫಿಕ್ ಕಲಿಕೆಯನ್ನು ಕರಗತ ಮಾಡಿಕೊಂಡು, ಮುಂಬಯಿ ಹಿಂದಿ ಚಿತ್ರರಂಗದ ಖ್ಯಾತ ನಟ ನಟಿಯರ ಆಕರ್ಷಕ ಭಾವ ಚಿತ್ರಗಳನ್ನು ತೆಗೆಯುತ್ತ ಗಮನ ಸೆಳೆದರು.

ಅಲ್ಲದೆ, ರಾಜ್ಯಮಟ್ಟದ, ರಾಷ್ಟ್ರಮಟ್ಟದ ಛಾಯಾಚಿತ್ರ ಸ್ಪರ್ಧೆಗಳಿಗೆ ತಮ್ಮ ಛಾಯಾಚಿತ್ರಗಳನ್ನು, ಕಳುಹಿಸಿ ಮೆಚ್ಚುಗೆ ಗಳಿಸಿದ್ದಾರೆ. ಪ್ರಶಸ್ತಿ ಪುರಸ್ಕಾರ ಗಿಟ್ಟಿಸಿಕೊಂಡಿದ್ದಾರೆ. ಇವರು ತೆಗೆದಿರುವ ನಿಸರ್ಗದ ಛಾಯಾಚಿತ್ರಗಳು ಎಂಥವರನ್ನೂ ಬೆರಗುಗೊಳಿಸುತ್ತದೆ. ಇವರು ಚಿತ್ರಗಳನ್ನು ತೆಗೆಯಲು ಬಳಸಿಕೊಳ್ಳುವ ಸಮಯ, ಬಳಸುವ ತಂತ್ರಗಾರಿಕೆ ಎಲ್ಲರಿಗೂ ಚಿಂತನೆಗೆ ಈಡು ಮಾಡುತ್ತದೆ. ಕಲಾವಿದನ ಈ ಕ್ರಿಯೆಗೆ ಮನಸ್ಸು ಶರಣಾಗುತ್ತದೆ. ಇವರಿಗೆ ಛಾಯಾಚಿತ್ರ ಕಲಿಕೆಯಲ್ಲಿ ಹೊಸತನ್ನು ಸಾಧಿಸಬೇಕೆಂಬ ಛಲವಿದೆ, ಉತ್ಸಾಹವಿದೆ.

(ಎಂಎಂಬಿ)

ವು

ವುಡನ್ ಪ್ಯಾಲೇಸ್: ಐತಿಹಾಸಿಕ ಮಹತ್ವವುಳ್ಳ ಸುರಪುರ ಸಂಸ್ಥಾನದ ಅರಮನೆ. ಈಗ ಶಿಥಿಲಗೊಂಡಿದೆ ಎಂಬ ಕಾರಣಕ್ಕಾಗಿ ಸಾರ್ವಜನಿಕರಿಗೆ ಪ್ರವೇಶ ನಿಷೇಧಿಸಲಾಗಿತ್ತು. ಈಗಿನ ರಾಜವಂಶಸ್ಥನೇ ದೊರೆ ರಾಜಾ ವೆಂಕಟಪ್ಪ ನಾಯಕ (ತಾತ), ಯುವರಾಜರು ಹಾಗೂ ಸುರಪುರ ಸಂಸ್ಥಾನದ ಹಿತರಕ್ಷಣಾ ಸಮಿತಿ ಅಧ್ಯಕ್ಷ ರಾಜಾಕೃಷ್ಣಪ್ಪ ನಾಯಕರು ತಮ್ಮ ಸ್ವಂತ ಖರ್ಚಿನಲ್ಲಿ ಅರಮನೆಯನ್ನು ಈಗ ಎರಡು ತಿಂಗಳಿಂದ ರಿಪೇರಿ ಮಾಡಿಸುತ್ತಿದ್ದಾರೆ. ಇನ್ನೆರಡು ತಿಂಗಳಲ್ಲಿ ಅರಮನೆ ಸಂಪೂರ್ಣವಾಗಿ ಸಾರ್ವಜನಿಕ ಪ್ರವೇಶಕ್ಕೆ ಮುಕ್ತವಾಗುತ್ತದೆ ಎಂದು ಯುವರಾಜರು ಹೇಳುತ್ತಾರೆ.

ಅರಮನೆ ಸಾರ್ವಜನಿಕರ ಮುಕ್ತ ಪ್ರವೇಶಕ್ಕೆ ಅವಕಾಶ ನೀಡುವುದರಿಂದ ಸುರಪುರ ಇತಿಹಾಸದ ಬಗ್ಗೆ ಸಾರ್ವಜನಿಕರಿಗೆ ಆಸಕ್ತಿ ಮೂಡುತ್ತದೆ. ಈ ನಾಡು, ನುಡಿ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಯ ಬಗ್ಗೆ ಹೆಮ್ಮೆ ಉಂಟಾಗುತ್ತದೆ. ಈ ಪರಿಸರದ ಎಲ್ಲಾ ಸ್ಥಳಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುವುದರಿಂದ ಇದೊಂದು ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಮಾಡಬಹುದು ಎನ್ನುವ ಅರಸರು, ಇಲ್ಲಿಂದ ಬೇರೆ ಕಡೆ ಹೋದ ಸಂಸ್ಥಾನದ ಐತಿಹಾಸಿಕ ಸಾಮಗ್ರಿಗಳನ್ನು ಪುನಃ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದೆ. ಸಂಸ್ಥಾನದ ವತಿಯಿಂದಲೇ ಕ್ರಮೇಣ ಒಂದು ಮ್ಯೂಜಿಯಂ ಮಾಡಲಾಗುವದು ಎನ್ನುತ್ತಾರೆ.

ಗತ ವೈಭವದ ಸ್ಮಾರಕದ ಸಂಕೇತವಾಗಿರುವ ಸುರಪುರ ಸಂಸ್ಥಾನದ ಅರಮನೆಯನ್ನು ದರ್ಬಾರ್ ಎಂದು ಸ್ಥಳೀಯರು ಕರೆಯುತ್ತಾರೆ. ಎರಡು ದರ್ಬಾರ್‌ಗಳಲ್ಲಿ ಹಳೆಯ ದರ್ಬಾರವನ್ನು ಈಗಿನ ರಾಜರು ಸರಕಾರಕ್ಕೆ ಬಿಟ್ಟುಕೊಟ್ಟಿದ್ದರಿಂದ ಅಲ್ಲಿ ಸರಕಾರ ಶಾಲಾ-ಕಾಲೇಜುಗಳನ್ನು ನಡೆಸುತ್ತಿದೆ. ಈಗಿನ ಹೊಸ ದರ್ಬಾರನ್ನು ನಾಲ್ವಡಿ ರಾಜಾ ವೆಂಕಟಪ್ಪ ನಾಯಕರ ತಾಯಿ ರಾಣಿ ಈಶ್ವರಮ್ಮ ದೇವಿಯವರ ಕಾಲಕ್ಕೆ ಪೂರ್ಣಗೊಂಡಿತೆಂದು,



ಸುರಪುರದ ಹೊಸ ಅರಮನೆ

ಇದನ್ನು ಸಂಪೂರ್ಣ ಕರಿಮತ್ತಿ ಹಾಗೂ ನಾಗವಾಸಿ ಕಟ್ಟಿಗೆಯಲ್ಲಿ ನಿರ್ಮಿಸಿದ್ದರಿಂದ ಅರಮನೆಯ ಬಗ್ಗೆ ಯುವರಾಜರು ಮಾಹಿತಿ ನೀಡುತ್ತಾರೆ. ಈ ಅರಮನೆ ಒಟ್ಟು ಮೂರು ಅಂತಸ್ತಿನದಾಗಿದ್ದು; ಪ್ರತಿಯೊಂದು ಅಂತಸ್ತು ಕ್ರಮವಾಗಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ವಾಸ್ತು ಶೈಲಿಯ ಕಲೆಯನ್ನು ಬಿಂಬಿಸುವ ಸಂಕೇತವಾಗಿ ನಿರ್ಮಿಸಲಾಗಿದೆ. ಈ ಅರಸರು ಎಲ್ಲಾ ಸಮುದಾಯವನ್ನು ಸಮಾನವಾಗಿ ಪರಿಣಿಸಿದ್ದರೆಂದು ಇದರಿಂದ ಗೊತ್ತಾಗುತ್ತದೆ.

ಈ ಅರಮನೆಯ ಕರಿಮತ್ತಿ ಕಟ್ಟಿಗೆಯನ್ನು ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯಿಂದ ತಂದು, ಹಲವಾರು ವರ್ಷಗಳವರೆಗೆ ಕೃಷ್ಣಾ ನದಿಯಲ್ಲಿ ನೆನೆಸಿ ತಂದು ಬಳಸಲಾಗಿದೆ. ಅರಮನೆಯಲ್ಲಿ ಜೋಡಿಸಿದ ಕಟ್ಟಿಗೆ ಬೇರೆ-ಬೇರೆಯಾಗದಂತೆ ತೊಲೆ, ಕಂಬ ಹಾಗೂ ಬೋದುಗಳ ಮಧ್ಯದಲ್ಲಿ ಕಬ್ಬಿಣದ ರಾಡುಗಳನ್ನು ಸೇರಿಸಿ, ಇಡೀ ಅರಮನೆಯನ್ನು ಲಾಕಿಂಗ್ ಸಿಸ್ಟಮ್ ಅಳವಡಿಸಿ ಬಂಧಿಸಲಾಗಿದೆ.

ಚೌಕಕಾರದ ಈ ಅರಮನೆಗೆ ಈಶಾನ್ಯ ದಿಕ್ಕಿಗೆ ಮೊದಲನೆಯ ಮಹಡಿಯ ಪ್ರವೇಶದ್ವಾರ ಇದ್ದು, ಮೊದಲಿಗೆ ಪಶ್ಚಿಮ ದಿಕ್ಕಿಗೆ ಹೋಗಿ ಅನಂತರ ಉತ್ತರ ದಿಕ್ಕಿಗೆ, ಅಲ್ಲಿಂದ ಮತ್ತೆ ಪಶ್ಚಿಮ ದಿಕ್ಕಿಗೆ ಹೋಗಬೇಕು. ಪೂರ್ವ ದಿಕ್ಕಿಗೆ ಎರಡನೇ ಮಹಡಿಗೊಂದು ಪ್ರವೇಶದ್ವಾರವಿದೆ. ಹೀಗೆ ಒಟ್ಟು ಎರಡು ಪ್ರವೇಶ ದ್ವಾರಗಳಿವೆ. ಈ ಅರಮನೆಯನ್ನು ಉತ್ತರ ದಿಕ್ಕಿಗೆ ನಿರ್ಮಿಸಲಾಗಿದೆ.

ಮೊದಲನೆಯ ಮಹಡಿಯ ದಕ್ಷಿಣಕ್ಕೆ ವಿಶಾಲವಾದ 18 ಭಾರೀ ಗಾತ್ರದ ಕಂಬಗಳ 10 ಅಂಕಣದ ಪಡಸಾಲೆ ಇದೆ. ಇದರ ಹಿಂದೆ 6 ಕಂಬಗಳು 10 ಅಂಕಣದ ವಿಶಾಲ ಕೋಣೆ ಇದೆ. ಈ ಪಡಸಾಲೆಯ ಕಂಬ, ಬೋದು ಬಂಡೆಗಳ, ಮೇಲ್ಛಾವಣೆಯನ್ನು ಕಟ್ಟಿಗೆಯಲ್ಲಿ ಸುಂದರವಾಗಿ ಕೈ ಕುಸುರಿ ಕೆಲಸ ಮಾಡಲಾಗಿದೆ. ಬೋದುಗಳ ಮುಂದುಗಡೆ ಭಾಗದಲ್ಲಿ ವೃತ್ತಾಕಾರದ ಚಿತ್ತಾರಗಳನ್ನು ವಿನ್ಯಾಸಗೊಳಿಸಿ, ಆಕರ್ಷಕವಾಗಿ ನಿರ್ಮಿಸಲಾಗಿದೆ. ಈ ಪಡಸಾಲೆಯ ಪೂರ್ವಕ್ಕೆ ಮತ್ತು ಪಶ್ಚಿಮದಲ್ಲಿ ಎರೆಡೆರೆಡು 'ಮಾಡು'ಗಳಿವೆ. ಇವುಗಳನ್ನು ಸುಣ್ಣದ ಗಚ್ಚಿನಲ್ಲಿ ಸುಂದರ ಕಲಾತ್ಮಕ ಚಿತ್ತಾರಗಳಿಂದ ಮಾಡಲಾಗಿದೆ. ಈ ಮಾಡುಗಳಲ್ಲಿ ಹಬ್ಬಕ್ಕೆ ಸಂಬಂಧಿಸಿದ ದೇವರ ಮೂರ್ತಿಗಳನ್ನು ಕೂಡಿಸುತ್ತಿದ್ದರೆಂಬುದು ನಿವೃತ್ತ ಶಿಕ್ಷಕ ರಾಮಣ್ಣ, ಇವು ದೇವರ ಮಾಡಗಳೆಂದು ಅಭಿಪ್ರಾಯ ಪಡುತ್ತಾರೆ.

ದಕ್ಷಿಣಕ್ಕೆ ನಾಲ್ಕು ಕಿಡಕಿಗಳಿಗೆ ಇವುಗಳ ಪಡಕುಗಳಿಗೆ ವಿಶಿಷ್ಟ ರೀತಿಯ ರಂಧ್ರದ ಚಿತ್ರ ಕಲೆಗಳು ಎಲ್ಲರನ್ನೂ ಗಮನ ಸೆಳೆಯುತ್ತವೆ. ಈ ಪಡಸಾಲೆಯ ಬಲಭಾಗಕ್ಕೆ ಅಡುಗೆ ಕೋಣೆ, ಸ್ನಾನ ಗೃಹಗಳಿದ್ದರೆ ಎಡಭಾಗದಲ್ಲಿ ದೇವರ ಪೂಜಾ ಗೃಹ, ರಾಣಿಯರ ಮೇನೆ, ರಾಜರ ಪಲ್ಲಕ್ಕಿಗಳನ್ನು ಇಡುವ ಕೋಣೆಗಳು ಇವೆ. ಜೊತೆಗೆ ಪಶ್ಚಿಮ ಮತ್ತು ಪೂರ್ವಕ್ಕೆ ಮೇಲ್ಮಹಡಿಗೆ ಪಾವಟಿಗೆಗಳಿವೆ.

ಎರಡನೆಯ ಮಹಡಿಯ ಸುತ್ತಲಿನ ಎಲ್ಲಾ ಕೋಣೆಗಳ ಮುಂದಿನ ಬೋದಿಗೆ ಕಮಲದ ಹೂವಿನ ಕೊಂಡಿಯಂತೆ ಜೋಡಿಸಿದ ಪುಷ್ಪಗಳನ್ನು ನಿರ್ಮಿಸಿಲಾಗಿದೆ. ಇದನ್ನು ಮುಸ್ಲಿಂ ಸಂಸ್ಕೃತಿಯ ಕಲೆ ಎನ್ನಲಾಗುತ್ತದೆ. ಇಲ್ಲಿಯೂ ಪಶ್ಚಮಕ್ಕೆ ಒಂದು ಪಡಸಾಲೆ, ಅದಕ್ಕೆ 18 ಕಂಬಗಳ 10 ಅಂಕಣಗಳಿವೆ. ಇಲ್ಲಿಯ ಮೇಲ್ಛಾವಣೆಯ ತೊಲೆಯ ಮೇಲೆ ಕಟ್ಟಿಗೆಯ ಎಳಿಗಳನ್ನು ಮೂಲಿ ಭಾಗದಿಂದ ಸುಂದರವಾಗಿ ಜೋಡಿಸಲಾಗಿದೆ. ಮಧ್ಯದ ಅಂಕಣಗಳಲ್ಲಿ ಮೇಲ್ಭಾಗ ಛಾವಣಿಯಲ್ಲಿ ಮೂರರಂತೆ ಹೂವಿನ ಕುಸುರಿ ಕೆತ್ತನೆ ಮಾಡಲಾಗಿದೆ. ಈ ಪಡಸಾಲೆಯ ಸುತ್ತಲಿನ ಮಾಡುಗಳನ್ನು ಗಚ್ಚಿನಲ್ಲಿ ಸುಂದರವಾಗಿ ಮನಮೋಹಕವಾಗಿ ಚಿತ್ರಿಸಿದ್ದಾರೆ. ಈ ಪಡಸಾಲೆಯ ಎಡ ಮತ್ತು ಬಲಭಾಗಕ್ಕೆ ರಾಜ ಪರಿವಾರದವರ ವಿಶ್ರಾಂತಿ ಕೊಠಡಿಗಳಿವೆ. ಇಲ್ಲಿ ವಿಶಿಷ್ಟ ಹವಾ ನಿಯಂತ್ರಿತ ವ್ಯವಸ್ಥೆಯನ್ನು ನೈಸರ್ಗಿಕವಾಗಿ ಮಾಡಲಾಗಿದೆ. ಇದೇ ಪಾರ್ಶ್ವ ಭಾಗಗಳಲ್ಲಿ ಮೂರನೇ ಮಹಡಿಗೆ ಹೋಗುವ ಮೆಟ್ಟಲುಗಳಿಗೆ.

ಮೂರನೆಯ ಮಹಡಿ ಅದ್ಭುತವಾದ ಸಭಾಭವನ ಹೊಂದಿದೆ. ಈ ಮಹಡಿ ಹೆಚ್ಚು ಶಿಥಿಲಗೊಂಡಿದ್ದು, ಹೆಚ್ಚಿನ ರಿಪೇರಿಗೆ ಒಳಪಟ್ಟಿದೆ. ಈ ಖಾಸಗಿ ಸಭಾಭವನ ಹಾಗೂ ಪಾರ್ಶ್ವ ಕೋಣೆಗಳಲ್ಲಿ ಕಟ್ಟಿಗೆ ಅಷ್ಟೊಂದು ಕಾಣದಿದ್ದರೂ, ಗಚ್ಚಿನ ಗಾರೆಯ ಕಮಾನುಗಳಲ್ಲಿ ಅಳವಡಿಸಲಾಗಿದೆ. ಈ ಸಭಾಭವನದ ಉತ್ತರ ಭಾಗಕ್ಕೆ 5 ಗಚ್ಚಿನ ಕಮಾನು ನಿರ್ಮಿಸಿ, ಈ ಕಮಾನು ಮೇಲ್ಭಾಗವನ್ನು ಗಾಜುಗಳಿಂದ ಅಲಂಕರಿಸಲಾಗಿದೆ.

ಭವನದ ಮುಂದಿನ ಎಡ ಮತ್ತು ಬಲ ಭಾಗದ ಕೋಣೆಗಳಿಗೆ ಸುಂದರವಾದ ಗಚ್ಚಿನ ಹೊರಚಾಚಿದ ಕಿಡಕಿಗಳಿವೆ. ಇವುಗಳಿಂದ ಸಂಗೀತ, ನೃತ್ಯಗಳನ್ನು ವೀಕ್ಷಿಸುತ್ತಿದ್ದರು. ಈ ವೀಕ್ಷಣಾ ಕೋಣೆ ಪಕ್ಕದಲ್ಲಿ ರಾಜರು ಕುಳಿತುಕೊಳ್ಳುವ ಕೋಣೆಗಳಿವೆ. ಇಲ್ಲಿಂದ ಅರಮನೆ ಮೇಲೆ ಅಂದರೆ ಮಾಳಿಗೆ ಮೇಲೆ ಹೋಗಲು ಮೆಟ್ಟಿಲಗಳಿವೆ. ಈ ಮೆಟ್ಟಿಲಗಳ ಮೇಲ್ಭಾಗದಲ್ಲಿ ಅರಸು ಮನೆತನದ ಆರಾಧ್ಯ ದೈವ ಗೋಪಾಲಸ್ವಾಮಿಯನ್ನು ವೀಕ್ಷಿಸುವ ಹಲವಾರು ಕಿಂಡಿಗಳಿವೆ.

ಅರಮನೆಯ ಮಾಳಿಗೆಯ ಮೇಲಿಂದ ನೋಡಿದರೆ, ಇಡೀ ಸುರಪುರ ಸಂಸ್ಥಾನದ ಕಾಣುತ್ತದೆ. ಮಾಳಿಗೆ ಸುತ್ತಲೂ ಎತ್ತರವಾದ ಗೋಡೆಗಳನ್ನು ಕಟ್ಟಿ, ಸುತ್ತಲೂ ವೀಕ್ಷಿಸಲು ವಿಕ್ಷಣಾ ಜಾಲರಿಗಳನ್ನು ನಿರ್ಮಿಸಲಾಗಿದೆ. ಈ ಜಾಲರಿಗಳು ಅರಮನೆಯ ಸುತ್ತ ಇದ್ದರೂ ಪ್ರತಿಯೊಂದರ ಆಕಾರ, ಬೇರೆ ಬೇರೆಯಾಗಿವೆ. ಇವುಗಳಿಂದ ಹೊರಗಿನ ಆಗು ಹೋಗುಗಳನ್ನು ವೀಕ್ಷಿಸಬಹುದು. ಆದರೆ ವೀಕ್ಷಿಸುವವರು ಅರಮನೆಯ ಹೊರಗಿನವರಿಗೆ ಕಾಣುದಿಲ್ಲ. ಇದೊಂದು ವಿಶಿಷ್ಟ ತಂತ್ರವನ್ನು ಇಲ್ಲಿ ನಿರ್ಮಾತೃಗಳು ಬಳಕೆ ಮಾಡಿದ್ದು ವಿಶೇಷವಾಗಿದೆ. ಪೂರ್ವಕ್ಕೆ 53, ಉತ್ತರಕ್ಕೆ 45, ಪಶ್ಚಿಮಕ್ಕೆ 47, ದಕ್ಷಿಣಕ್ಕೆ 45 ವಿಕ್ಷಣ ಜಾಲರಿಗಳನ್ನು ಬೇರೆ ಬೇರೆ ಮಾದರಿಯಲ್ಲಿ ಅಳವಡಿಸಿದ್ದಾರೆ.

ವಿಶೇಷ ಹವಾನಿಯಂತ್ರಿತ ಕೋಣೆ: ಎರಡನೆಯ ಮಹಡಿಯ ಎಡಭಾಗದ ಮತ್ತು ಬಲಭಾಗದ ವಿಶ್ರಾಂತಿ ಕೋಣೆಗಳಿಗೆ ನೈಸರ್ಗಿಕ ಹವಾನಿಯಂತ್ರಣ ಕಿಡಕಿಗಳನ್ನು ನಿರ್ಮಿಸಿದ್ದು, ಆಧುನಿಕ ತಂತ್ರಜ್ಞಾನಕ್ಕೆ ಸವಾಲಾಗಿದೆ. ಈ ಕಿಡಕಿಗಳು ಕಟ್ಟಿಗೆಯ ಚೌಕಟ್ಟು ಹಾಗೂ ಪಡಕುಗಳನ್ನು ಹೊಂದಿದ್ದು ಈ ಪಡಕುಗಳ ಮಧ್ಯದಲ್ಲಿ ಉದ್ದನೆಯ ಕಟ್ಟಿಗೆ ಅಳವಡಿಸಿ, ಅದಕ್ಕೆ ಅಗಲವಾದ ಕಟ್ಟಿಗೆಯ ಪಟ್ಟಿಗಳನ್ನು ಜೋಡಿಸಲಾಗಿದೆ.

ತಂಪಾದ ಗಾಳಿ ಬೇಕೆಂದಾಗ ಕಿಟಕಿಯ ಹೊರಗೆ ತಳ್ಳನೆ ಬಟ್ಟೆ ಹಾಕಿ, ಅರಮನೆಯ ಮೇಲೆ ನಿರ್ಮಿಸಿದ ಟ್ಯಾಂಕರನಿಂದ ನಿಧಾನವಾಗಿ ಕಿಡಕಿಯ ಹೊರಗೆ ಹಾಕಿದ ಬಟ್ಟೆಯ ಮೇಲೆ ನೀರು ಬೀಳುವಂತೆ ಮಾಡಿ, ಕಿಡಕಿಯ ಪಟ್ಟಿಗಳು ಅಡ್ಡವಾಗಿ ಕೂಡುವಂತೆ ತಿರುಗಿಸಿದಾಗ, ತಂಪಾದ ಗಾಳಿ ವಿಶ್ರಾಂತಿ ಕೋಣೆಗೆ ಬರುತ್ತದೆ. ಬೇಡವೆಂದಾಗ ಕಿಡಕಿಯ ಪಡಕಿನ ಪಟ್ಟಿಗಳು ಜೋಡಣೆಯಾಗುವಂತೆ ತಿರುಗಿಸಿದಾಗ, ತಂಪಾದ ಗಾಳಿ ನಿಂತು ಹೋಗುತ್ತದೆ.

ಇಡೀ ಅರಮನೆ ಬಾಗಿಲು, ಕಿಟಕಿ, ಚೌಕಟ್ಟು, ಪಡಕು, ಮೇಲ್ಛಾವಣಿಗಳು ಕಟ್ಟಿಗೆಯಿಂದ ಮಾಡಲಾಗಿದೆ. ಗೋಡೆಗೆ ಸ್ಥಳೀಯ ಕಲ್ಲುಗಳನ್ನು ಬಳಸಿ, ಅವುಗಳಿಗೆ ಗಚ್ಚನ್ನು ಮೇತ್ತಿದ್ದರಿಂದ ಅರಮನೆ ಗುಡ್ಡದ ಮೇಲಿದ್ದರೂ ಯಾವಾಗಲೂ ತಂಪಾಗಿರುತ್ತದೆ. ಇಂಥ ಕ್ರಿಯಾತ್ಮಕ ಮಾದರಿಗಳು ತುಕ್ಕಕು ಹಿಡಿದು ಹೋಗುತ್ತಿವೆ ಎಂದು ಇತಿಹಾಸ ಪ್ರಾಧ್ಯಾಪಕ ಅಯ್ಯಣ ಚನ್ನಪ್ಪಗೋಳ ಅವರು ವಿಷಾದಿಸುತ್ತಾರೆ.

ಸ್ವಾಮಿ ದರ್ಶನ ಕಿಂಡಿ: ರಾಜ ಪರಿವಾರದವರು ತಮ್ಮ ಆರಾಧ್ಯ ದೈವ ವೇಣುಗೋಪಾಲಸ್ವಾಮಿಯನ್ನು ವೀಕ್ಷಿಸಲು ಅರಮನೆಯ ಪಶ್ಚಿಮ ಗೋಡೆಯಲ್ಲಿ ಹಲವಾರು ಕಿಂಡಿಗಳನ್ನು ನಿರ್ಮಿಸಲಾಗಿದೆ.

ಮೂರನೆಯ ಮಹಡಿಯಿಂದ ಮೇಲೆ ಹೋಗುವಾಗ ಮೆಟ್ಟಿಲುಗಳ ಮೇಲ್ಭಾಗದ ಮಧ್ಯದಲ್ಲಿ ಮಾತ್ರ ಬ್ರಾಹ್ಮಿ ಮತ್ತು ಗೋಧೂಳಿ ಸಮಯದಲ್ಲಿ ಶ್ರೀ ವೇಣು ಗೋಪಾಲ ಸ್ವಾಮಿಯ ಗರ್ಭ ಗುಡಿಯ ಮೂರ್ತಿ ನೋಡಬಹುದು. ಉಳಿದ ಕಿಂಡಿಗಳಲ್ಲಿ ದೇವಸ್ಥಾನ ಸ್ಪಷ್ಟವಾಗಿ ಕಾಣಬಹುದು. ಹೀಗೆ ದೇವರ ಮೂರ್ತಿ ವೀಕ್ಷಿಸಲು ಅನುಕೂಲವಾಗುವಂತೆ ಅರಮನೆ ನಿರ್ಮಾತೃಗಳು ವಿನ್ಯಾಸಗೊಳಿಸಿದ್ದು ಒಂದು ಅದ್ಭುತ ತಾಂತ್ರಿಕತೆ ಎನ್ನಬಹುದು.

ಅರಮನೆಗೆ ಗುಪ್ತ ಮಾರ್ಗಗಳು: ಅರಮನೆಯಲ್ಲಿ ನೆಲ ಮಹಡಿ ಇದ್ದು, ಈ ನೆಲ ಮಹಡಿಯಿಂದ ಮಂತ್ರಿ ನಿಷ್ಠಿ ವೀರಪ್ಪನವರ ಮನೆಗೆ ಹಾಗೂ ಕೋಟೆಯ ಹೊರಗೆ ಹೋಗಲು ಗುಪ್ತ ಮಾರ್ಗಗಳು ಅರಮನೆಯ ಪೂರ್ವ ಭಾಗಕ್ಕೆ ಇವೆ.

ಅರಮನೆ ಹಿಂದೆ ಮೊಬೈಲ್ ಟಾವರ್ ಪೌಂಡೇಶನ್ ತಗೆಯುವಾಗ ಈ ಮಾರ್ಗಗಳು ಇರುವುದು ಪತ್ತೆಯಾಗಿದೆ ಎನ್ನುತ್ತಾರೆ. ಯುವ ರಾಜಕುಮಾರ ಕೃಷ್ಣಪ್ಪ ನಾಯಕ.

ಅರಮನೆಯ ಭದ್ರತೆ: ಅರಮನೆಗೆ ಏಕೈಕ ಮುಖ್ಯದ್ವಾರವಿದೆ.

ಇದನ್ನು ಭಾರೀ ಗ್ರಾತದ ಕಲ್ಲುಗಳಿಂದ ದೊಡ್ಡದಾಗಿ ನಿರ್ಮಿಸಲಾಗಿದೆ. ದ್ವಾರದ ಮೇಲ್ಗಡೆ ಮೀನಿನ ಚಿತ್ರ ಅದರ ಕೆಳಗೆ ಸೂರ್ಯ ಚಂದ್ರರ ಹಾಗೂ ಹೂಗಳ ಚಿತ್ರ ಕೆತ್ತಲಾಗಿದೆ. ಅರಮನೆ ಸುತ್ತಲೂ ಪ್ರತಿ ದಿಕ್ಕಿಗೆ ಕಾವಲು ಗೋಪುರಗಳಿವೆ. ಇಲ್ಲಿ ಸದಾ ಜಾಗೃತರಾದ ಸೈನಿಕರು ಗೋಪುರ ಮೇಲೆ ಪಾಳೆಯಂತೆ ಕಾವಲಿರುತ್ತಿದ್ದರು. ಈ ಅಳಿದುಳಿದ ಗೋಪುರಗಳನ್ನು ಈಗಲೂ ನೋಡಬಹುದು.

ಅರಮನೆ ಹೊರಭಾಗದಲ್ಲಿ ಸುಮಾರು 270 ಕುದುರೆಗಳನ್ನು ಕಟ್ಟುವ ಸ್ಥಳವಿದ್ದು ಅದನ್ನು ತಬೇಲಿ ಎಂದು ಕರೆಯುಲಾಗುತ್ತದೆ. ಅರಮನೆ ಹಿಂದೆ ಸುಂದರ ಶಿಲ್ಪಕಲೆಯಿಂದ ನಿರ್ಮಿಸಲಾದ ಬಾವಿ ಇದೆ. ಈ ಬಾವಿ ವಾಸ್ತು ಪ್ರಕಾರ ಇಲ್ಲವೆಂದು ಈಗ ಮುಚ್ಚಲಾಗಿದೆ.

ಬಿಸಿಲು, ಮಳೆ, ಗಾಳಿಯಿಂದ ಧೂಳು ತಿನ್ನುತ್ತ ಕಾಲಗರ್ಭದಲ್ಲಿ ಲೀನವಾಗಿ ಇತಿಹಾಸ ಪುಟ ಸೇರುತ್ತಿರುವ ಲೀವ್ಹಿಂಗ್ ವುಡನ್ ಪ್ಯಾಲೇಸ್ ಈಗ ನವ ವಧುವಿನಂತೆ ಶೃಂಗಾರಗೊಂಡು ಪುನಃ ಗತ ವೈಭವದ ಮೆರುಗು ನೀಡಲು ಸುಣ್ಣಬಣ್ಣ ಬಳಿದುಕೊಂಡು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡುತ್ತಿರುವುದು ಸಂತಸವನ್ನುಂಟು ಮಾಡಿದೆ. (ಬಿಕೆ)

ವೃ

ವೃತ್ತಿಕಲಾವಿದರ ವೇಷ ಭೂಷಣಗಳು: 1. ಚೌಡಿಕೆಯವರು: ಶಕ್ತಿದೇವತೆಯ ಆರಾಧನಾ ಸಂಪ್ರದಾಯದ ಈ ಮೇಳದಲ್ಲಿ ಗಂಡಸರು ಮತ್ತು ಹೆಂಗಸರು ಒಟ್ಟಾಗಿ ಇಲ್ಲವೇ ಪ್ರತ್ಯಕ್ಷವಾಗಿ ಪ್ರದರ್ಶನ ನೀಡುವರು. ಸಾಂಪ್ರದಾಯಿಕ ಚೌಡಿಕೆಯವರು ಮತ್ತು ದೀಕ್ಷೆ ಪಡೆದ ಚೌಡಿಕೆಯರು ಎಂಬ ವರ್ಗಗಳು ಇವರಲ್ಲಿದ್ದು ವೇಷ ಭೂಷಣ ಎಲ್ಲರದೂ ಒಂದೇ ತೆರನಾಗಿರುತ್ತದೆ. ಗಂಡಸರು ಕಚ್ಚೆ ಹಾಕಿದ ಧೋತರವುಟ್ಟು ಮುಂಗೈ ತೋಳಿನ ಅಂಗಿ ತೊಟ್ಟಿರುತ್ತಾರೆ. ತಲೆಗೆ ಬಿಳಿಯ ಅಥವಾ ಬಣ್ಣದ ಪಟಗಾ ಸುತ್ತಿರುತ್ತಾರೆ. ಕೆಲವರು ಕೋಟು-ಜಾಕೀಟುಗಳನ್ನು ಧರಿಸುವುದುಂಟು. ಹಣೆಯಲ್ಲಿ ದೇವಿ ಭಂಡಾರ, ಕೊರಳಲ್ಲಿ ಕವಡಿ ಸರಾ, ಹೆಗಲಲ್ಲಿ ಜೋಳಿಗೆ, ಕೈಯಲ್ಲಿ ವಾದ್ಯ ಹಿಡಿದಿರುತ್ತಾರೆ. ಚೌಡಿಕೆಯ ಹೆಂಗಸರು ಕೆಂಪು-ಹಸಿರು-ಹಳದಿ ಬಣ್ಣದ ಸೀರೆ ಉಟ್ಟು ಕುಪ್ಪುಸ (ಬಿಳಿ) ಹಣೆಯಲ್ಲಿ ಕುಂಕುಮ ಭಂಡಾರ, ಮುಡಿತುಂಬ ಹೂವು, ಕೈತುಂಬ ಬಳೆ, ಕೊರಳ ತುಂಬ ಕರಿಮಣಿ ಮತ್ತು ಕವಡಿಸರಾ, ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ವಾದ್ಯ ಹಿಡಿದಿರುತ್ತಾರೆ.

2. ಗೊಂದಲಿಗರು: ಅಂಬಾಭವಾನಿಯ ಭಕ್ತರಾದ ಇವರು ಧೋತರವುಟ್ಟು ನಿಲುವಂಗಿಯನ್ನು ತೊಟ್ಟಿರುತ್ತಾರೆ. ಕೆಲವರು ಮುಂಗೈ ತೋಳಿನ ಅಂಗಿತೊಟ್ಟು ಮೇಲೊಂದು ಕೋಟು ಹಾಕಿರುತ್ತಾರೆ. ತಲೆಗೆ ಬಿಳಿ ಅಥವಾ ಹಳದಿ ಬಣ್ಣದ ಪಟಗಾ ಸುತ್ತಿರುತ್ತಾರೆ. ಕೊರಳಿಗೆ ಒಂದು ದುಪ್ಪಟ್ಟಿ ಅಥವಾ ಶಲ್ಯವನ್ನು ಹಾಕುವುದುಂಟು. ಕೊರಳಲ್ಲಿ ಕವಡಿಸರಾ, ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ.

3. ಗೊರವರು: ಮೈಲಾರಲಿಂಗನ ಭಕ್ತರಾದ ಇವರನ್ನು ಗೊಗ್ಗಯ್ಯ, ಗೊರವಯ್ಯ ಎಂದು ಕರೆಯುವರು. ಧೋತರವುಟ್ಟ ಇವರು ಕಂಬಳಿಯ ನಿಲುವಂಗಿಯನ್ನು ಧರಿಸುತ್ತಾರೆ. ತಲೆಯ ಮೇಲೆ ಬಿಳಿಯ ಅಥವಾ ಹಳದಿ ಬಣ್ಣದ ಪಟಗಾ ಸುತ್ತುವರು, ಕೆಲವರು ಕರಡಿ ಕೂದಲ ಟೋಪಿ ಹಾಕಿಕೊಳ್ಳುವರು. ಹುಲಿಯ ಚರ್ಮದ ಚೀಲ, ಕೈಯಲ್ಲ ತ್ರಿಶೂಲ, ನಾಗಬೆತ್ತ, ಡಮರು ಹಿಡಿದಿರುತ್ತಾರೆ. ಭೀಕ್ಷಾಪಾತ್ರೆಯೆಂದೆನ್ನುವ ಹಿತ್ತಾಳೆಯ ಡೋಣಿಯನ್ನು ಬೆನ್ನ ಹಿಂದೆ ಹಾಕಿರುತ್ತಾರೆ. ಕವಡೆ ನಡುಪಟ್ಟಿ, ಕವಡೆ ಕೊರಳಸರ ಹಾಕಿರುತ್ತಾರೆ. ಹಣೆಯಲ್ಲಿ ವಿಭೂತಿ ಭಂಡಾರ ಹಚ್ಚಿರುತ್ತಾರೆ.

4. ವೇಷಗಾರರು: ಹನ್ನೆರಡನೆಯ ಶತಮಾನದಿಂದಲೂ ಅಸ್ತಿತ್ವದಲ್ಲಿರುವ ಈ ವೇಷಗಾರರನ್ನು ಬಹುರೂಪಿಗಳು, ವೇಷಗಾರರು, ಸೋಗಿನವರು ಎಂದು ಕರೆಯುತ್ತಾರೆ. ಹಗಲಿನಲ್ಲಿ ಪೌರಾಣಿಕ ಐತಿಹಾಸಿಕ ಕಥವಾ ಸಂದರ್ಭಗಳ ಪಾತ್ರಗಳನ್ನು ಹಾಕುತ್ತಾರೆ. ಪಾತ್ರಕ್ಕನುಸಾರವಾಗಿ ವೇಷಭೂಷಣಗಳನ್ನು ಧರಿಸುತ್ತಾರೆ. ಹನುಮಂತನಾಗಿ ಬಾಲ ಹಚ್ಚಿಕೊಂಡರೆ, ರಾಮನಾಗಿ ಬಿಲ್ಲು ಹಿಡಿಯುತ್ತಾರೆ. ಕಳ್ಳ, ಕರಡಿ, ಹುಲಿವೇಷಗಳನ್ನು ಹಾಕುತ್ತಾರೆ. ಆದರೆ ನಿಜಜೀವನದಲ್ಲಿ ಇವರ ಉಡುಪುಗಳು ಇತರರಂತೆ ಇರುತ್ತವೆ.

5. ಕವಲೆತ್ತಿನವರು: ಕವಲೆತ್ತಿನವರು, ಕೋಲೆ ಬಸವರು ಎಂದು ಕರೆಯಿಸಿಕೊಳ್ಳುವ ಇವರು ಸಾಮಾನ್ಯವಾಗಿ ಧೋತರ, ಅಂಗಿ, ಪಟಗಾ, ಹಳೆಯಕೋಟು ಧರಿಸುತ್ತಾರೆ. ಹೆಗಲಿಗೆ ಜೋಳಿಗೆ ಇನ್ನೊಂದು ಹೆಗಲಿಗೆ ಬಾರಕೋಲು ಹಾಕಿರುತ್ತಾರೆ. ಇವರು ತಮ್ಮ ವೇಷಕ್ಕಿಂತಲೂ ತಾವು ತರಬೇತು ನೀಡಿದ ಬಸವ ಅಥವಾ ಎತ್ತಿನ ಶೃಂಗಾರವನ್ನು ಹೆಚ್ಚಾಗಿ ಮಾಡಿರುತ್ತಾರೆ. ಎತ್ತಿನ ಕೊಂಬುಗಳಿಗೆ ಬಣ್ಣಬಣ್ಣದ ಬಟ್ಟೆ ಸುತ್ತಿ ಎತ್ತರಿಸುತ್ತಾರೆ. ಬೆನ್ನ ಮೇಲೆ ಮತ್ತು ಇಣಿಯ ಸುತ್ತ ಬಣ್ಣ ಬಣ್ಣದ ಬಟ್ಟೆಗಳನ್ನು ಇಳಿಬಿಡುತ್ತಾರೆ. ಬಹುತೇಕ ಬಟ್ಟೆಗಳು ಹಳೆಯ ಸೀರೆಗಳಾಗಿರುತ್ತವೆ. ಕೆಲವು ಸಲ ಎತ್ತಿನ ಬದಲಿಗೆ ಆಕಳನ್ನು ಆಟಕ್ಕೆ ಬಳಸುವುದಿದೆ. ಹಾಗೆಯೇ ದೇವರಿಗೆ ಮೀಸಲುಬಿಟ್ಟ ಹೋರಿ ಅಥವಾ ಆಕಳನ್ನು ಬಳಸುವುದಿದೆ.

6. ಡೊಂಬರು: ಕಸರತ್ತನ್ನು ಕರಗತ ಮಾಡಿಕೊಂಡು ರಂಜನೆ ನೀಡುವ ಇವರು ಶುದ್ಧ ಅಲೆಮಾರಿಗಳು. ಗಂಡಸರು ಹನುಮಾನ್ ಚೆಡ್ಡಿ ಧರಿಸಿ ಕೊರಳಲ್ಲಿ ತಾಯತ ಕಟ್ಟಿಕೊಂಡು ಮುಂಗೈ ಅಥವಾ ರಟ್ಟೆಗೆ ಕಬ್ಬಿಣದ ಬಳೆ ಹಾಕಿಕೊಂಡಿರುತ್ತಾರೆ.

ಹೆಂಗಸರು ಅದರಲ್ಲೂ ಯುವತಿಯರು ಬಗೆ ಬಗೆ ಬಣ್ಣದ ಲಂಗ, ಮುಂಗೈ ತೋಳಿನ ರವಿಕೆ, ಕೊರಳ ತುಂಬ ಮಣಿಸರ, ಮುಂಗೈ ತುಂಬ ಬಳೆ, ಮೂಗಿನಲ್ಲಿ ದೊಡ್ಡ ನತ್ತು ಮುಂಗು ರುಳಲ್ಲಿ ಮುಂಗುರುಳಲ್ಲಿ ನೇತಾಡುವ ಝುಮಕಿ, ಕಿವಿಯಲ್ಲಿ ಬುಗುಡೆ–ಬೆಂಡವೋಲೆ–ಹೀಗೆ ಈ ಆಭರಣಗಳನ್ನೆಲ್ಲಾ ಧರಿಸು ತ್ತಾರೆ. ತಂಡದ ಮುಖ್ಯಸ್ಥ ಚೆಲ್ಲಣ ನಿಲುವಂಗಿ, ಕಪ್ಪುಕೋಟು ಧರಿಸಿ ಎದೆಯ ಮೇಲೆ ಕೆಲ ಮೆಡಲ್‌ಗಳನ್ನು ಸಿಕ್ಕಿಸಿ ಕೊಂಡಿ ರುತ್ತಾನೆ.

7. **ಮೋಡಿಕಾರರು:** ಅತ್ಯಂತ ಕುತೂಹಲಕಾರಿ ಪ್ರದರ್ಶನ ನೀಡುವ ಇವರಿಗೆ ವಿಶೇಷ ವೇಷಭೂಷಣಗಳಿರುವದಿಲ್ಲ. ಧೋತರ, ಪೈಜಾಮ್, ಪ್ಯಾಂಟ್ ಇವುಗಳಲ್ಲಿ ಯಾವುದಾದ ರೊಂದನ್ನು ಧರಿಸಿರುತ್ತಾರೆ. ಮೇಲೆ ವ್ಯಾಸ–ಕೋಟು ಹಾಕಿ ನಡಕಟ್ಟು ಕಟ್ಟಿರುತ್ತಾರೆ. ತಲೆಗೆ ಪಟಗಾ ಸುತ್ತಬಹುದು ಇಲ್ಲದಿದ್ದರೆ ಇಲ್ಲ. ಕಾಲಿಗೆ ಪೆಂಡೆ ಕಟ್ಟುವುದು ಇವರ ವೈಶಿಷ್ಟ್ಯ.

8. **ಮೊಂಡರು:** ಇವರ ಮೂಲವೃತ್ತಿ ಭಿಕ್ಷಾಟನೆ. ಇವರು ಯಾವುದೇ ಮನೋರಂಜಕ ಕಲೆ ಕಾಣದಿದ್ದರೂ ಎಂಥ ಜಿಪುಣ ರಿಂದಲೂ ಭಿಕ್ಷೆ ವಸೂಲಿ ಮಾಡಿಕೊಂಡು ಮುಂದೆ ಸಾಗುವುದೇ ಇವರ ಕಲೆಯಾಗಿದೆ. ಅದಕ್ಕಾಗಿಯೇ ಇವರನ್ನು ಕರಕರಮೊಂಡ ಕಿರಿಕಿರಿ ಮೊಂಡ ಎಂದು ಕರೆಯುತ್ತಾರೆ. ಚಡ್ಡಿ ಇಲ್ಲವೇ ಧೋತರ ಧರಿಸಿ ಅಂಗಿ ತೊಟ್ಟು ಮೇಲೊಂದು ಕೋಟು ಹಾಕಿರುತ್ತಾರೆ. ಸೊಂಟಕ್ಕೊಂದು ವಸ್ತ್ರ ಕಟ್ಟಿ ಕೈಯಲ್ಲಿ ಜೋಳಿಗೆ ಹಿಡಿದಿರುತ್ತಾರೆ.

9. **ಚುರಗಮುರಗಿ:** ಶಕ್ತಿದೇವತೆಯ ಆರಾಧಕರಾದ ಇವರಿಗೆ ದೇವಿಯನ್ನು ಹೊತ್ತು ತಿರುಗುವುದೇ ಉದ್ಯೋಗ. ಹೆಂಗಸರು ಸೀರೆಯುಟ್ಟು ಕುಪ್ಪುಸ ತೊಟ್ಟು ಬುರುಬುರಿ (ವಾದ್ಯ) ಬಾರಿಸಿದರೆ ಗಂಡಸರು ಬರೀ ಮೈಯ್ಯಲ್ಲಿದ್ದು, ನೀಳವಾದ ಕೇಶಬಿಟ್ಟು, ನಡು ವಿಗೆ ಕೆಂಪು ಬಟ್ಟೆ ಕಟ್ಟಿಕೊಂಡಿದ್ದು ಬಿಳಿ ಧೋತರ ಅಥವಾ ಸೀರೆಯನ್ನೇ ಧೋತರವನ್ನಾಗಿಸಿ ಉಟ್ಟುಕೊಂಡಿರುತ್ತಾರೆ. ಹೆಗಲಲ್ಲಿ ಹಗ್ಗದ ಚಾಟಿಯನ್ನು ಹಾಕಿಕೊಂಡಿರುತ್ತಾನೆ.

10. **ಸುಡುಗಾಡಸಿದ್ಧರು:** ಮಾಯ ಮಂತ್ರದಾಟಗಳನ್ನು ಬಲ್ಲ ಇವರು ಉದ್ದನೆಯ ನಿಲುವಂಗಿ ಹಾಕಿ ತಲೆಗೆ ಸುರಳಿಯಾಕಾರದ ಪಟಗಾ ಧರಿಸುತ್ತಾರೆ. ಪಟಗಾವನ್ನು ರುದ್ರಾಕ್ಷಿಸರ, ನವಿಲುಗರಿ, ಮುತ್ತಿನ ಸರಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಹೆಗಲ ಮೇಲೆ ಚೌಕಡಿ ಅಥವಾ ಕಾವಿ ಬಟ್ಟೆಯನ್ನು ಹೊದ್ದಿರುತ್ತಾರೆ. ಬೆಳ್ಳಿಯ ಉಂಗುರ, ತಾಮ್ರದ ಬಳೆ ಹಾಕಿಕೊಂಡು ಕೈಯಲ್ಲಿ ಹುಲಿಚರ್ಮ ಸುತ್ತಿಕೊಂಡು ಹೆಗಲಲ್ಲಿ ಬಡಿಗೆ ಹೊತ್ತು ಅದಕ್ಕೆ ಹಲವಾರು ಭಾಗಗಳಿಂದ ಕೂಡಿದ ಜೋಳಿಗೆ ಇಳಿಬಿಟ್ಟಿರುತ್ತಾರೆ.

11. **ಮುಳ್ಳಾವಿಗೆಯವರು:** ಅತ್ಯಂತ ಕಠಿಣ ಕಾಯಕ ಕೈ ಕೊಳ್ಳುವ ಇವರು ಈಚೆಗೆ ಕಡಿಮೆಯಾಗಿದ್ದಾರೆ. ಕಾವಿ ಬಣ್ಣದ ಧೋತರ–ಅಂಗಿ–ಪಟಗಾ ಧರಿಸಿ ಸೊಂಟಕ್ಕೆ ಅದೇ ಬಣ್ಣದ ಬಟ್ಟೆಯ ಕಟ್ಟಿರುತ್ತಾರೆ. ಕೈಯಲ್ಲಿ ತ್ರಿಶೂಲ ಹಿಡಿದು ಮುಳ್ಳಾವಿಗೆ ಮೇಲೆ ನಿಂತು ಆಗಾಗ ಗಂಟೆ ಬಾರಿಸುತ್ತ ಜನರ ಗಮನ ಸೆಳೆದು ಭಿಕ್ಷೆ ಪಡೆಯುತ್ತಾರೆ. ಇವರನ್ನು ಕಾಯಕದಯ್ಯನವರೆಂದೂ ಕರೆಯುತ್ತಾರೆ.

12. **ದಾಸಯ್ಯನವರು:** ದಾಸರಲ್ಲಿ ಬಹಳಷ್ಟು ವರ್ಗಗಳಿವೆ. ಗೊಲ್ಲದಾಸರು, ಹೊಲೆದಾಸರು, ಬ್ಯಾಡದಾಸರು, ತೆಲಗು ದಾಸರು, ಗಂಡದಾಸರು, ಚೆನ್ನದಾಸರು ಇತ್ಯಾದಿಯಾಗಿದ್ದಾರೆ. ಇದರಲ್ಲಿ ಬ್ಯಾಡದಾಸರು ಭಿಕ್ಷೆಯನ್ನು ಅವಲಂಬಿಸಿರುವರು. ಬಿಳಿ ಧೋತರ, ಕೆಂಪು ಪಟಗಾ ಸಾಮಾನ್ಯ ಅಂಗಿ ತೊಟ್ಟು, ಅದರ ಮೇಲೊಂದು ಕೋಟು ಹಾಕಿ ಆ ಕೋಟಿನ ಮೇಲೆ ಬಿಳಿ ಮೇಲು ಹೊದಿಕೆಯನ್ನು ಇಳಿಬಿಟ್ಟುಕೊಂಡು, ಕೈಯ್ಯಲ್ಲಿ ಶಂಖ, ಜಾಗಟೆ, ದೀಪ ಹಿಡಿದುಕೊಂಡು ಬಗಲಿಗೆ ಜೋಳಿಗೆ ಹಾಕಿಕೊಂಡಿರು ತ್ತಾನೆ. ತಿರುಪತಿ ತಿಮ್ಮಪ್ಪನ ಭಕ್ತರಾದ ಇವರು ಹಣೆಗೆ ಮೂರುನಾಮ ಬರೆದುಕೊಂಡಿರುತ್ತಾರೆ.

13. **ಕೊರವಂಜಿ:** ಪುರಾಣಕಾಲದಿಂದಲೂ ಪ್ರಸಿದ್ಧಳಾದ ಇವಳು ಈಗ ಕಣ್ಮರೆಯಾಗುವ ಸ್ಥಿತಿಯಲ್ಲಿದ್ದಾಳೆ. ಕೊರವಂಜಿಯ ಉಡುಗೆ ತೊಡುಗೆಗಳಲ್ಲಿ ವೈಭವವಿಲ್ಲದಿದ್ದರೂ ತುಂಬಾ ಆಕರ್ಷಕವಾಗಿರುತ್ತವೆ. ಮೈತುಂಬ ಕಪ್ಪಿನ ಕಲೆಯ ಚುಕ್ಕೆಗಳಿಂದ (ಹಚ್ಚೆ) ಅಲಂಕರಿಸಿಕೊಂಡಿರುವುದಲ್ಲದೆ, ಬಣ್ಣ ಬಣ್ಣದ ಸೀರೆ ಕುಬುಸ ತೊಟ್ಟು ತಲೆಯ ತುರುಬನ್ನು ವೈಯ್ಯಾರವಾಗಿ ವಾಲಿಸಿಕಟ್ಟಿ, ಕಾಲಿಗೆ ಕಾಲಗಡಗ ಹಾಕಿ, ಮೂಗಿಗೆ ಮುಕುರ ಇಟ್ಟು, ಕಂಕುಳಲ್ಲಿ ಬಿದಿರಿನಿಂದ ತಯಾರಿಸಿದ ಬುಟ್ಟಿ ಹಿಡಿದು ಕೈಯ್ಯಲ್ಲಿ ಕಣಿ ಕಡ್ಡಿ ಹಿಡಿದು 'ಹೇಳುವೆ ಕಣಿ, ಹೇಳುವೆ ಕಣಿ' ಎಂದು ಬೆಡಗಿನಿಂದ ಹಾಡುತ್ತ ಬರುತ್ತಾಳೆ ಎಂದು ವರ್ಣಿಸ ಲಾಗಿದೆ. ಕೆಲವರು ಸೀರೆಯ ನೀರಿಗೆಗಳನ್ನು ಹಾಗೆಯೇ ಬಿಟ್ಟಿದ್ದರೆ ವಯಸ್ಸಿನವರು ಕಚ್ಚೆ ಹಾಕುವುದಿದೆ.

14. **ಕುರ್ರಮಾಮಾ:** ಮೂಲತಃ ತೆಲಗು ನಾಡಿನಿಂದ ಬಂದಿರುವ ಇವರು ಅಲೆಮಾರಿಗಳು. ಬರಿಮೈ ಬಂಟರಾದ ಇವರು ವೀರಗಚ್ಚೆ ಹಾಕುವರು. ಎದೆಗೆ ಕಾವಿ ಬಟ್ಟೆಯನ್ನು ಯಜ್ಞೋಪವೀತದಂತೆ ಹಾಕಿಕೊಂಡು ಸೊಂಟಪಟ್ಟಿ ಕಟ್ಟಿಕೊಳ್ಳು ವರು. ತಲೆಗೆ ತುಂಡುಬಟ್ಟೆ ಕಟ್ಟಿಕೊಂಡು ಅದಕ್ಕೆ ನವಿಲುಗರಿ ಸಿಕ್ಕಿಸಿಕೊಳ್ಳುವರು. ಕೊರಳಲ್ಲಿ ಮಣಿಸರ, ರಟ್ಟೆ ಮುಂಗೈಗಳಿಗೆ ತಾಮ್ರದ ಬಳೆ ಹಾಕಿಕೊಳ್ಳುವರು. ಒಂದು ಕೈಯಲ್ಲಿ ಚಟಕೆ ಇನ್ನೊಂದು ಕೈಯಲ್ಲಿ ಸಣ್ಣ ತಂಬೂರಿ ಹಿಡಿದು ನಮ್ಮ ಭವಿಷ್ಯ ಹೇಳಲು ಬರುವವರನ್ನೇ ಕುರ್ರಮಾಮಾ, ಕೊಂಡಮಾಮಾ, ರಾಮಕೊಂಡಡಿ ಎಂದು ಕರೆಯುತ್ತೇವೆ.

15. **ಬುಡಬುಡಿಕೆಯವರು:** ಮೂಲತಃ ಮರಾಠಿ ಪ್ರದೇಶ ದಿಂದ ಬರುವ ಈ ಬುಡಬುಡಿಕೆಯವರು ತಾವು ನುಡಿಸುವ ಸಣ್ಣ ಢಮಿಕಿನಾಕಾರದ ಬುಡಬುಡಿಕೆ ವಾದ್ಯದಿಂದ ತಮ್ಮನ್ನು ಗುರುತಿಸಿ ಕೊಂಡಿದ್ದಾರೆ. ಧೋತರ–ಅಂಗಿ–ಮೇಲೊಂದು ಕೋಟು, ತಲೆಗೆ ಬಣ್ಣದ ಪಟಗಾ ಸುತ್ತಿಕೊಳ್ಳುವ ಇವರು ಮೇಲೊಂದು ಕೆಂಪು ಶಲ್ಯವನ್ನು ಹೊಂದ್ದಿರುತ್ತಾರೆ. ವಾದ್ಯ ಬಾರಿಸುತ್ತ, 'ನಿಮಗೆ ಜಯವಾಗುತದ' ಎಂಬ ಶುಭಸೂಚನೆ ನೀಡುತ್ತ ತಮ್ಮ ಬಗಲ ಜೋಳಿಗೆ ತುಂಬಿಸಿಕೊಳ್ಳುತ್ತಾರೆ.

16. **ಸಾರುವಯ್ಯವನರು:** ಕಾಲಜ್ಞಾನ ಹೇಳುವ ಕಾಯಕ ಕೈಕೊಂಡ ಇವರು ಆಯಾ ವರ್ಷದ ಮಳೆ–ಬೆಳೆ–ರಾಜಕೀಯ

ಆಗು-ಹೋಗುಗಳನ್ನು ಹೇಳುತ್ತಾರೆ. ಬಿಳಿಧೋತರ, ಕಾವಿ ನಿಲುವಂಗಿ, ಕಾವಿ ಪಟಗಾ ಧರಿಸಿದ ಇವರು ಕೊರಳಲ್ಲಿ ರುದ್ರಾಕ್ಷಿ ಹಣೆಯಲ್ಲಿ ವಿಭೂತಿ ಧರಿಸುತ್ತಾರೆ. ಇದೊಂದು ಕಾಯಕವಾಗಿದ್ದು ಮುಸ್ಸಂಜೆ ಕಾಲದಲ್ಲಿ ವಾರಗಟ್ಟಲೆ ಹಳ್ಳಿಯಲ್ಲಿ ತಮ್ಮ ಭವಿಷ್ಯವಾಚನ ಮಾಡಿ ಕೊನೆ ದಿನ ಭಿಕ್ಷೆ ಪಡೆಯುವರು ರಾತ್ರಿ ಸಮಯವಾದ್ದರಿಂದ ಕೈಯ್ಯಲ್ಲಿ ಕಂದೀಲು ಹಿಡಿದಿರುತ್ತಾರೆ. ಆದರೆ ಕಾವಿ ಬಣ್ಣದ ಛತ್ರಿ ಹಿಡಿದು ಬರುವ ಬಗೆಗೆ ವಿಚಾರಿಸಬೇಕಾಗಿದೆ. ಈಚೆಗೆ ಇವರೂ ಕಡಿಮೆಯಾಗುತ್ತಿದ್ದಾರೆ.

17. ಡೊಳ್ಳಿನವರು: ಕುರುಬ ಜನಾಂಗದವರಾದ ಇವರು ಡೊಳ್ಳು ಬಾರಿಸುವುದರಲ್ಲಿ ಹೆಸರಾಗಿದ್ದಾರೆ. ಧೋತರ-ಅಂಗಿ-ಪಟಗಾ ಇವರ ಸಾಮಾನ್ಯ ವೇಷವಾಗಿದ್ದು ಕಂಬಳಿಯನ್ನು ಹೊಂದಿರುವುದು ವಿಶೇಷವೆನಿಸಿಕೊಳ್ಳುತ್ತದೆ.

18. ಪುರವಂತಿಕೆಯವರು: ವೀರಭದ್ರನ ಅವತಾರಿಗಳೆಂದು ಕರೆಯುವ ಪುರವಂತಿಕೆಯವರು ಕಾವಿ ಬಣ್ಣದ ಧೋತರವುಟ್ಟು ವೀರಗಚ್ಚೆ ಹಾಕುವರು. ಅದೇ ಬಣ್ಣದ ಅಂಗಿ ಪಟಗಾ ಸುತ್ತುವರು. ಸೊಂಟಕ್ಕೆ ನಡಕಟ್ಟಿ ಮೈಮೇಲೆ ಗಲೀಫ ವಸ್ತ್ರ ಹಾಕಿಕೊಳ್ಳುವರು. ಕೈ-ಕೊರಳು-ಕಿವಿಗಳಲ್ಲಿ ಹಾಕಿಕೊಂಡು ಹಣೆಯಲ್ಲಿ ವಿಭೂತಿ ಧರಿಸಿ ಕೈಯ್ಯಲ್ಲಿ ಖಡ್ಗ ಹಿಡಿದಿರುತ್ತಾರೆ.

19. ಪಂಡರಿ ಭಜನೆಯವರು: ಪಂಢರಾಪುರ ಪಾಂಡುರಂಗನ ಭಕ್ತರಾದ ಇವರು ಪಾದಯಾತ್ರೆ ಗೈಯ್ಯುತ್ತ (ದಿಂಡಿ) ವಿಠ್ಠಲನ ದರ್ಶನಕ್ಕೆ ತೆರಳುವರು. ವೀರಗಚ್ಚೆ ಹಾಕಿದ ಧೋತರ, ಮೇಲೊಂದು ಅಂಗಿ, ಸೊಂಟಕ್ಕೆ ಬಣ್ಣದ ತುಂಡು ಬಟ್ಟೆಸುತ್ತಿ ತಲೆಗೊಂದು ವಸ್ತ್ರ ಕಟ್ಟಿರುತ್ತಾರೆ.

20. ಹೆಳವರು: ನಮ್ಮ ಹಳ್ಳಿಯ ಇತಿಹಾಸಕಾರನಾದ ಹೆಳವನ ವೇಷ ಸ್ವಲ್ಪ ವಿಶೇಷವಾಗಿದೆ. ಧೋತರ ಅಂಗಿ-ಪಟಗಾ-ಕೋಟು ಧರಿಸುವ ಈತನು ಹೆಗಲ ಮೇಲೆ ಕೆಂಪು ಶಾಲು ಅಥವಾ ಕಂಬಳಿಯನ್ನು ಹಾಕಿಕೊಳ್ಳುವನು. ಬಗಲಲ್ಲಿ ಬಟ್ಟೆಯಲ್ಲಿ ಸುತ್ತಿದ ಕೆಂಪು ಬಣ್ಣದ ಕಿರ್ದಿ ಪುಸ್ತಕ ಹೊಂದಿದ್ದು ಈತ ನಮ್ಮ ವಂಶಾವಳಿಯ ದಾಖಲೆಗಾರನಾಗಿರುವನು. (ಎಂಬಿಎಚ್)

ವೆ

ವೆಂಕಟಲಕ್ಷ್ಮೀ ಜಿ.ವಿ.: ಸಂಗೀತ ವಿಶಾರದೆ. ಹೈದರಾಬಾದ ಕರ್ನಾಟಕದ ರಾಯಚೂರು ಜಿಲ್ಲೆ ದಾಸ ಸಾಹಿತ್ಯಕ್ಕೆ ಪ್ರಸಿದ್ಧಿ ಪಡದಿದೆ. ದಾಸರೂ ಕೂಡ ತಮ್ಮ ಸಾಹಿತ್ಯವನ್ನು ಸಂಗೀತದ ಮೂಲಕವೇ ಜನರಿಗೆ ತಲಪಿಸಿದವರು. ಇಂಥ ದಾಸವರೇಣ್ಯರ ನೆಲದಲ್ಲಿ ಲಿಂಗಸ್ಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ವೆಂಕಟಲಕ್ಷ್ಮೀ ವೀಣೆ ನುಡಿಸುವ ಮೂಲಕ ಹೆಸರು ಮಾಡಿದ ಕಲಾವಿದೆ. ಮೂಲತಃ ಆಂಧ್ರ ಪ್ರದೇಶದ ತಿರುಪತಿಯವರು ವೆಂಕಟೇಶ್ವರ ವಿಶ್ವವಿದ್ಯಾಲಯದಲ್ಲಿ ವೀಣೆ ನುಡಿಸುವುದರಲ್ಲಿ ಸಂಗೀತ ವಿಶಾರದೆ ಪದವಿ ಪಡೆದವರು. ಇವರು ಹಟ್ಟಿ ಚಿನ್ನದ ಗಣಿಗೆ ಬಂದಿದ್ದು ಪತಿ ಜೆ. ನರಸಿಂಹಮೂರ್ತಿ ಹಟ್ಟಿ ಚಿನ್ನದ ಗಣಿ ಅಕೌಂಟ್ ಸೆಕ್ಷನ್ ಸೂಪರ್‌ವೈಜರ್ ಅವರನ್ನು ಮದುವೆಯಾಗಿ 1976ರಲ್ಲಿ ಹಟ್ಟಿ ಚಿನ್ನದ ಗಣಿಗೆ ಬಂದು ನೆಲೆಸಿ, ಸ್ಥಳೀಯರೇ ಆಗಿದ್ದಾರೆ. ಇವರು ತಿರುಪತಿಯ ಕಾಲೇಜಿನಲ್ಲಿ ದಯಮಾಡೋ ರಂಗ, ಭಾಗ್ಯದ ಲಕ್ಷ್ಮೀ ಬಾರಮ್ಮ ಎಂಬ ಹಾಡುಗಳನ್ನು ಆಯ್ಕೆಮಾಡಿಕೊಂಡು ಸಂಗೀತ ಸಂಯೋಜನೆ ಮಾಡಿ ಹಾಡುವ ಮೂಲಕ ಎಲ್ಲರ ಗಮನ ಸೆಳೆದರು. ಮುಂದೆ ಅದುವೇ ಇವರಿಗೆ ಸಂಗೀತ ಕಲೆಯಲು ಪ್ರೇರಣೆಯಾಯಿತು.

ಇವರ ಕುಟುಂಬ ಮೂಲತಃ ಸಂಗೀತಗಾರರು. ಆದ್ದರಿಂದ ಸಂಗೀತ ಇವರಿಗೆ ರಕ್ತಗತವಾಗಿಯೇ ಬಂದಿದೆ. ವೆಂಕಟಲಕ್ಷ್ಮೀ ದಾಸರ ಪದಗಳನ್ನು ಸಂಗೀತದಲ್ಲಿ ಅಳವಡಿಸಿಕೊಂಡು ಹಾಡುವುದನ್ನು ರೂಢಿಸಿಕೊಂಡರು. ಈ ಮೊದಲು ತೆಲುಗಿನಲ್ಲಿ ಹಾಡಿದ ಇವರು ಸತತ ವೀಣಾ ವಾದನದಲ್ಲಿ ಹಾಡುಗಳನ್ನು ರಾಗ ಸಂಯೋಜನೆ ಮಾಡಿಕೊಂಡು ಸುಶ್ರಾವ್ಯವಾಗಿ ನುಡಿಸುತ್ತಿದ್ದರು. ಅದರೊಂದಿಗೆ ಭಜನಾ ಪದಗಳು, ಜನಪದ ಗೀತೆಗಳು, ಪ್ರಾರ್ಥನಾ ಗೀತಗಳನ್ನೂ ರಾಗ-ತಾಳದೊಂದಿಗೆ ಹಾಡುವುದನ್ನೂ ರೂಢಿಸಿಕೊಂಡು ಹಾಡುವುದನ್ನು ರೂಢಿಸಿಕೊಂಡರು. ದಾಸ ಸಾಹಿತ್ಯ ಏಕಧ್ವನಿಯಿಂದ ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡುವ ಇವರು, 2001ರಲ್ಲಿ ಆಂಧ್ರ ಪ್ರದೇಶದ ಸರಕಾರದ ತಿರುಮಲ-ತಿರುಪತಿ ದಾಸ ಸಾಹಿತ್ಯ ಪ್ರಾಜೆಕ್ಟನಲ್ಲಿ ಸದಸ್ಯತ್ವ ಪಡೆದುಕೊಂಡರು. ಇವರು ಹಟ್ಟಿ ಚಿನ್ನದ ಗಣಿಯ ಗುರುರಾಜ ಭಜಡನಾ ಮಂಡಳಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಅನೇಕ ಸಾಮಾಜಿಕ, ಧಾರ್ಮಿಕ ಸೇವೆಯಲ್ಲೂ ಇವರು ನಿರತರಾಗಿದ್ದಾರೆ.

ಹಟ್ಟಿ ಭಜನಾ ಮಂಡಳಿ ವತಿಯಿಂದ ಕುಂಭಕೋಣಂ, ತಿರುಮಲ-ತಿರುಪತಿ, ಕರ್ನೂಲ, ಉಡುಪಿ, ಹೊಸಪೇಟೆ, ಗಂಗಾವತಿ, ಪಂಢರಾಪುರ ಮುಂತಾದಡೆ ದಾಸ ಸಾಹಿತ್ಯ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅದೇ ರೀತಿ ಸ್ಥಳೀಯವಾಗಿ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ, ಇನ್ನಿತರ ಕಾರ್ಯಕ್ರಮಗಳಲ್ಲಿ ವೀಣಾ ಸಂಗೀತ ಕಾರ್ಯಕ್ರಮಗಳನ್ನು ನೀಡುವ ಮೂಲಕ ವೆಂಕಟಲಕ್ಷ್ಮೀ ಅವರು ಈ ಪ್ರದೇಶದ ಸಂಗೀತ ಕ್ಷೇತ್ರದಲ್ಲಿ ಮನೆಮಾತಾಗಿದ್ದಾರೆ.

ವೀಣಾ ಕಾರ್ಯಕ್ರಮದಲ್ಲಿ ನಾವು ವೀಣೆ ಮತ್ತು ಮೃದಂಗ, ತಾಳ, ಡೋಲಕ, ಗೆಜ್ಜೆಕ, ತಪ್ಪಡಿ, ಚಟಿಕೆ ಹಾಗೂ ಕೋಲುಗಳ ಸಾಮಗ್ರಿಗಳನ್ನು ಅಳವಡಿಸಿಕಂಡು ಕಾರ್ಯಕ್ರಮ ನೀಡುತ್ತಾರೆ. ಕಳೆದ 1980ರಿಂದ ಇವರು ಹಟ್ಟಿ ಕ್ಯಾಂಪ್‌ನಲ್ಲಿ ಅನೇಕ ಮಕ್ಕಳಿಗೆ ಉಚಿತ ಸಂಗೀತ ಪಾಠ ಹೇಳಿಕೊಡುವ ಮೂಲಕ ಕ್ಯಾಂಪ್‌ನಲ್ಲಿ ಸಂಗೀತರದ ವಾತಾವರಣ ಮೂಡಿಸುತ್ತಿದ್ದಾರೆ. ಇವರಲ್ಲಿ ಸಂಗೀತ ತರಬೇತಿ ಪಡೆದ ಮಕ್ಕಳಿಗಾಗಿಯೇ ಬಾಲ ಪ್ರಹ್ಲಾದ

ಭಜನಾ ಮಂಡಳಿಯನ್ನೂ ಸ್ಥಾಪಿಸಿದ್ದಾರೆ. ಸಂಗೀತ ತರಬೇತಿ ಪಡೆದ ಅನೇಕರು ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಗೀತ ತರಬೇತಿ ಪಡೆಯುವ ಮಕ್ಕಳು ಕನಿಷ್ಠ 3–4 ವರ್ಷಗಳ ವರೆಗೆ ಪರಿಶ್ರಮ ಪಡಬೇಕಾಗುತ್ತದೆ. ಸ್ವ–ಇಚ್ಛೆ ಯಿಂದ ಬಂದ ಮಕ್ಕಳಿಗೆ ನಾನು ಸಂಗೀತ ಹೇಳಿಕೊಡಲು ಹಿಂಜರಿಯುವುದಿಲ್ಲ. ಈಗಲು ಪ್ರತಿದಿನ 8–10 ಜನರ ಮಹಿಳೆಯರು ಮತ್ತು ಶಾಲಾ ವಿದ್ಯಾರ್ಥಿನಿಯರು ತರಬೇತಿ ಪಡೆಯುತ್ತಿದ್ದಾರೆ. ಮೇಘನಾ ಮತ್ತು ಶ್ಲಾಘನಾ ಎಂಬ ವಿದ್ಯಾರ್ಥಿನಿಯರು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಮನೆಯಲ್ಲಿ ಕೃಷ್ಣ–ರುಕ್ಮಿಣಿ ಸೇರಿದಂತೆ ಅನೇಕ ಕರಕುಶಲ ವಸ್ತುಗಳನ್ನು ತಯಾರಿಸುವುದನ್ನೂ ಇವರು ರೂಢಿಸಿಕೊಂಡಿದ್ದಾರೆ. ಅವುಗಳ ಪ್ರದರ್ಶನ ಹಾಗೂ ಇತರ ಮಕ್ಕಳಿಗೆ ಹಾಗೂ ಮಹಿಳೆಯರಿಗೂ ಹೇಳಿಕೊಡುತ್ತಾರೆ. (ಎಸ್‌ಎಚ್‌ಪಿ)

ವೆಂಕಟೇಶ ಕಬಾಡಿ: ಚಿತ್ರಕಲಾವಿದ. ವೆಂಕಟೇಶ ಕಬಾಡಿ ಕೊಪ್ಪಳದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಶ್ರೀ ಗವಿಸಿದ್ದೇಶ್ವರ ಪ್ರೌಢ ಶಿಕ್ಷಣ ಪೂರೈಸಿ, ಕಾಲೇಜು ಜೀವನದಲ್ಲಿ ಆದ ಮಹತ್ತರ ಘಟನೆಗಳನ್ನು ನೆನಪಿಸಿಕೊಂಡು ಕಲೆಯ ಬಗೆಗೆ ತೀವ್ರವಾದ ಆಸಕ್ತಿ ಮೂಡಿಸಿಕೊಂಡು, ಕಲಾ ಬದುಕಿನಲ್ಲಿ ಹೊಸದೇನನ್ನಾದರು, ಸಾಧಿಸಬೇಕೆಂಬ ಛಲ ಹೊತ್ತು ಕಲಾಸೇವೆಗೆ ಧುಮುಕಿದರು. ಕಬಾಡಿಯವರು ಚಿತ್ರಕಲಾ ಬದುಕಿಗೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆನ್ನಬಹುದು. ಯಾಕೆಂದರೆ ಅವರು ತನ್ಮಯತೆಯಿಂದ ಚಿತ್ರಕಲೆಯಲ್ಲಿ ತೊಡಗಿರುತ್ತಾರೆ. ಯಾವಾಗಲೂ ಅದರ ಬಗ್ಗೆಯೇ ವಿಚಾರ ಲೀನರಾಗಿರುತ್ತಾರೆ. ಆದರೆ ಅದೇಕೋ ಇವರಿಗೆ ಪ್ರಚಾರವೆಂದರೆ ಅಲರ್ಜಿ. ಆ ಕಾರಣಕ್ಕೇ ಇವರು ಇನ್ನೂ ಎಲೆಮರೆಯ ಕಾಯಿಯಾಗಿಯೇ ಉಳಿದಿದ್ದಾರೆ.

ಇವರು 1995ರಲ್ಲಿ ಪಾಂಡಿಚೇರಿಯ ಆರ್ಕಿಮೆಡ್ ಆರ್ಟ್ಸ್ ಅಕ್ಯಾಡೆಮಿಯ ಹೈಯರ ಕಮಾಂಡೆಂಟ್ ಪುರಸ್ಕಾರ ಪಡೆಯುವುದರ ಜೊತೆಗೆ ರೋಟರಿ ಕ್ಲಬ್ ಗದಗ–ಬೆಟಗೇರಿಯವರಿಂದ ಬೆಸ್ಟ ಆರ್ಟಿಸ್ಟ (Best Artist) ವಿಶೇಷ ಪ್ರಶಸ್ತಿ ಪಡೆದಿದ್ದಾರೆ. ರಾಜ್ಯದ ಹಲವಾರು ಭಾಗಗಳಲ್ಲಿ ಕಲಾಪ್ರದರ್ಶನದಲ್ಲಿ ಸಕ್ರೀಯವಾಗಿ ಭಾಗವಹಿಸುವ ಮೂಲಕ ಹಲವಾರು ಬಹುಮಾನಗಳನ್ನು ತಮ್ಮ ಮಡಿಲಿಗೆ ಹಾಕಿಕೊಂಡಿದ್ದಾರೆ. 1992ರಲ್ಲಿ ಅಂದರೆ ವಿದ್ಯಾರ್ಥಿದೆಸೆಯಿಂದಲೇ ಕಲೆಯನ್ನು ಅಭ್ಯಾಸ ಮಾಡುತ್ತ, ವಿಜಯ ಕಲಾ ಮಂದಿರ ಗದಗ ಇವರು ಏರ್ಪಡಿಸಿದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ, 1993ರಲ್ಲಿ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಬಿಜಾಪೂರ. 1994ರಲ್ಲಿ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ, ಸಿದ್ಧೇಶ್ವರ ಆರ್ಟ್ಸ್ ಬಿಜಾಪುರ. 1995ರಲ್ಲಿ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ (ಲಕ್ನೋದ ಗಾಂಧಿ ಮೆಮೋರಿಯಲ್) ಅದೇವರ್ಷ ಅಖಿಲ ಭಾರತ ಕಲಾ ಪರಿಷತ್ತಿನ ಚಿತ್ರಕಲಾ ಪ್ರದರ್ಶನ (ಹೈದ್ರಾಬಾದ) ಹಾಗೂ 1996ರಲ್ಲಿ ತಮ್ಮ ಕಲಾ ಅಭ್ಯಾಸದ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇ ರ್‍ಯಾಂಕ್ ಬಂದು ತಮ್ಮ ಪ್ರತಿಭಾ ಪೂರ್ಣತೆಯನ್ನು ಮೆರೆದರು. 1996ರಲ್ಲಿಯೇ ದೆಹಲಿಯಲ್ಲಿ ನಡೆದ 8ನೆಯ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿರುವರು. 1995–98ರಲ್ಲಿ ದೆಹಲಿ ಹಾಗೂ ಬೆಂಗಳೂರುಗಳಲ್ಲಿ ನಡೆದ 50ನೆಯ ವಾರ್ಷಿಕೋತ್ಸವ (ಸುವರ್ಣ ಮಹೋತ್ಸವ)ದಲ್ಲೂ ಭಾಗವಹಿಸಿದ್ದಾರೆ.

1999ರಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ನಡೆಸಿದ ಪ್ರದರ್ಶನದಲ್ಲೂ ಇವರು ಪಾಲ್ಗೊಂಡು ವಿಶೇಷ ಬಹುಮಾನ ಪಡೆದಿದ್ದಾರೆ. ಪ್ರೌಢ ಶಾಲಾ ಶಿಕ್ಷಕರಾಗಿ ನೇಮಕಗೊಂಡಿರುವ ಕಬಾಡಿಯವರು, ಅಪರೂಪದ ಕಲಾವಿದರಲ್ಲಿ ಒಬ್ಬರು. ಅವರ ಚಿತ್ರಕಲೆಗೆ ತನ್ನದೇ ಆದ ಮಹತ್ವವಿದೆ.

(ಎಸ್‌ಎಚ್‌ಕೆ)

ವೆಂಕಟೇಶಕುಮಾರ ಎಂ.: ಜಾನಪದ ಕಲಾವಿದರ ಕುಟುಂಬದಲ್ಲಿ ಜನಿಸಿ ಶಾಸ್ತ್ರೀಯ ಸಂಗೀತದ ಕಡೆ ತಮ್ಮ ಒಲವನ್ನು ಬೆಳೆಸಿಕೊಂಡವರು. ಪಂಡಿತ್ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮದಲ್ಲಿ ಗುರುಕುಲ ಪದ್ಧತಿಯಲ್ಲಿ ಗ್ವಾಲಿಯರ್ ಘರಾಣಾದಲ್ಲಿ ಪ್ರಬುದ್ಧತೆಯನ್ನು ಸಾಧಿಸಿಕೊಂಡರು. ಅನಂತರ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತದ ಸ್ನಾತಕೋತ್ತರ ಪದವಿಯನ್ನು ತಮ್ಮದಾಗಿಸಿಕೊಂಡರು. ತಮ್ಮ ಭಾವುಕ ಗಾಯನಕ್ಕೆ ಹೆಸರಾದ ಇವರು ಶರಣರ ವಚನಗಳನ್ನು ಮತ್ತು ಹರಿದಾಸರ ಕೀರ್ತನೆಗಳನ್ನು ಹಾಡುತ್ತಿದ್ದರೆ ಅಲ್ಲಿ ದೈವಸಾಕ್ಷಾತ್ಕಾರವಾಗುತ್ತದೆಂಬ ಅಭಿಪ್ರಾಯವನ್ನು ಹಲವು ರಸಿಕರು ವ್ಯಕ್ತಪಡಿಸಿದುಂಟು.

ದೇಶದ ಉದ್ದಗಲಕ್ಕೂ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿರುವ ಇವರನ್ನು ನಾಡಿನ ಬಹುತೇಕ ಎಲ್ಲ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳ ವ್ಯವಸ್ಥಾಪಕರು ಆಹ್ವಾನಿಸಿದ್ದಾರೆ. ಪ್ರಸಾರ ಭಾರತೀಯ 'ಎ' ಶ್ರೇಣಿ ಕಲಾವಿದರಾಗಿದ್ದಾರೆ. ಇವರು ಆಕಾಶವಾಣಿ ಮತ್ತು ದೂರದರ್ಶನಗಳ ರಾಷ್ಟ್ರೀಯ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಅಮೆರಿಕದ ಪ್ಲೋರಿಡಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾರ್ಯಕ್ರಮ ನೀಡಲು ಆಹ್ವಾನ ಪಡೆದದ್ದು ಇವರ ಪ್ರತಿಭೆಗೆ ಸಾಕ್ಷಿ. ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಸಂಗೀತದ ಹಲವಾರು ಧ್ವನಿಸುರುಳಿ ಮತ್ತು ಸಿ.ಡಿ.ಗಳನ್ನು ಶ್ರೀಯುತರು ಈಗಾಗಲೇ ಹೊರತಂದಿದ್ದಾರೆ. ಜೊತೆಗೆ ಹಿಂದುಸ್ತಾನಿ ಸಂಗೀತ ಪರೀಕ್ಷೆಯ ಪಠ್ಯಪುಸ್ತಕ ರಚನೆಯಲ್ಲೂ ತಮ್ಮ ಅನುಭವವನ್ನು ಧಾರೆಯೆರೆದಿದ್ದಾರೆ.

'ಸ್ವರ ಶ್ರೀ', 'ಸಂಗೀತ ಸುಧಾಕರ', 'ಸಂಗೀತ ರತ್ನ' ಮುಂತಾದ ಬಿರುದುಗಳೊಂದಿಗೆ ಹಲವಾರು ಸಂಘ ಸಂಸ್ಥೆಗಳಿಂದ ಪುರಸ್ಕರಿಸಲ್ಪಟ್ಟಿರುವ ಶ್ರೀ ಎಂ. ವೆಂಕಟೇಶಕುಮಾರ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು. ಶ್ರೀಯುತರಿಗೆ ಅವರ ಸಂಗೀತ ಸೇವೆಯನ್ನು ಗುರುತಿಸಿ 2007–08ರ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ನೀಡಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಗೌರವಿಸಿದೆ. (ಎಸ್‌ಎಂಜಿ)

ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ: ಇವರು ಸಾಂಪ್ರದಾಯಿಕ ಕಲೆಯ ಹಿನ್ನೆಲೆಯಿಂದ ಬಂದವರು. ಅಜ್ಜ ಯಂಕಪ್ಪಯವರು ಪಳಗಿದ, ಅನುಭವಶಾಲಿಯಾದ ಕಲಾವಿದರಾಗಿದ್ದರು. ಇವರ ತಂದೆಯವರಾದ, ಕೃಷ್ಣಪ್ಪ ಯಂಕಪ್ಪ ಚಿತ್ರಗಾರರೂ ಸಹ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದು, ಬಾಲ್ಯದಿಂದಲೇ ಅವರಿಗೆ ಯೋಗ್ಯ ಮಾರ್ಗದರ್ಶನ ನೀಡಿ ಕಲಾವಿದನನ್ನಾಗಿ ರೂಪಿಸಿದ್ದಾರೆ.

ಹಲವು ಬಣ್ಣಗಳಿಂದ ಅಲಂಕೃತವಾದ, ಸೂಕ್ಷ್ಮವಾದ ಕುಸುರಿ ಕೆಲಸ ಹೊಂದಿ ವಿವಿಧ ಆಕಾರದ, ಹೊಳಪಾದ, ನುಣುಪಾದ ಮೇಲ್ಮೈಯುಳ್ಳ ಕಿನ್ನಾಳದ ಮರದ ಉಪಕರಣಗಳು ಯಾರನ್ನಾದರೂ ಆಕರ್ಷಿಸದೆ ಬಿಡದು. ವಿಶೇಷವಾಗಿ ತೊಟ್ಟಿಲುಗಳು, ಕಾಲುಮಣೆಗಳು, ಚೌಕಿಗಳು ಜನಾದರಣೆಯನ್ನು ಪಡೆದಿವೆ. ಈ ಬಗೆಯ ಕಲೆಯಲ್ಲಿ ಸಿದ್ಧಹಸ್ತರಾದ ಇವರು ಕೀಲದ ಗೌರಿ, ತೂಗುವ ಗೌರಿ, ಶಿವ–ಪಾರ್ವತಿ, ಗ್ರಾಮದೇವತೆಗಳು ಹಾಗೂ ದೇವತಾಕಾರ್ಯಕ್ಕೆ ಬೇಕಾಗುವ ಛತ್ರ, ಚಾಮರ, ಪಲ್ಲಕ್ಕಿ, ನಂದಿ ಲಕ್ಷ್ಮಿ ಇತ್ಯಾದಿ ಅನೇಕ ಮೂರ್ತಿಗಳನ್ನು ನೂರಾರು ಸಂಖ್ಯೆಯಲ್ಲಿ ರೂಪಿಸಿದ್ದಾರೆ. ವಿವಿಧ ಆಕಾರ ಹಾಗೂ ಕೋನಗಳಲ್ಲಿ ಕಟ್ಟಿಗೆಯಲ್ಲಿ ತಯಾರಿಸಿದ, ಲಜಾಮರ ಎಂಬ ಮಿನುಗುವ ಚಿನ್ನದ ಹೊಳಪುಳ್ಳ ಬಣ್ಣಗಳನ್ನು ಹೊಂದಿರುವ ಚೌಕಿಯ ತಯಾರಿಕೆಯಲ್ಲಿ ಇವರು ಸಿದ್ಧಹಸ್ತರೆಂದು ಪ್ರಸಿದ್ಧರಾಗಿದ್ದಾರೆ. ಈ ಚೌಕಿಯ ತಯಾರಿಕೆಗಾಗಿಯೇ ಕರ್ನಾಟಕ ರಾಜ್ಯ ಕರಕುಶಲ ನಿಗಮ 1985ರಲ್ಲಿ ಇವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿರುವ ಇವರು 1986ರಲ್ಲಿ ರಾಜ್ಯಮಟ್ಟದ ಕಲಾವಿದರ ಆಯ್ಕೆ ಸಮಿತಿಯಲ್ಲಿ ಒಬ್ಬರಾಗಿದ್ದರು.

ಕಿನ್ನಾಳದಲ್ಲಿಯೇ 1920ರಲ್ಲಿ ಜನಿಸಿದ ಇವರು ವಿದ್ಯಾಭ್ಯಾಸ ನಾಲ್ಕನೆಯ ಇಯತ್ತೆಗೇ ಮುಗಿಯಿತಾದರೂ ಕಲಾ ಮಾರ್ಗದರ್ಶಕರಾಗಲು ಅಡ್ಡಿಯಾಗಲಿಲ್ಲ. 1987–88ರಲ್ಲಿ ಕಿನ್ನಾಳದ ಮಹಿಳಾ ಕರಕುಶಲ ತರಬೇತಿ ಕೇಂದ್ರದಲ್ಲಿ ಪರಿಣತ ಕರಕುಶಲಗಾರರಾಗಿ ಸೇವೆಸಲ್ಲಿಸಿದರು. 'ಸೊಂಡೂರು ಕುಶಲಕಲಾ ಕೇಂದ್ರ'ದಲ್ಲಿಯ ಕಲ ತರಬೇತಿ ವಿಭಾಗದಲ್ಲಿ ಪರಿಣತ ಕರಕುಶಲಗಾರರನ್ನಾಗಿ ಶ್ರೀಯುತರನ್ನು 1990ರಲ್ಲಿ ನೇಮಿಸಿದ್ದು ಪ್ರಸ್ತುತ ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಲವು ಸಮಾರಂಭಗಳಲ್ಲಿ ಸನ್ಮಾನಿತರಾದ ಇವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು 1991ರ ಪ್ರಶಸ್ತಿ ನೀಡಿ ಗೌರವಿಸಿದೆ.

(ಪಿಆರ್‌ಟಿ)

ವೇ

ವೇದಮೂರ್ತಿ ಗುರುಲಿಂಗಯ್ಯ: ಬಯಲಾಟದ ಕಲಾವಿದರು. ರೈತನ ಮಗನಾಗಿ, ಅನ್ನದಾತನಾಗಿ, ಒಕ್ಕಲುತನ ಮಾಡಿದ ತೃಪ್ತಿ, ಬಯಲಾಟದ ಮಾಸ್ತರರಾಗಿ 70ರ ವಯಸ್ಸಿನಲ್ಲೂ ಹತ್ತು ಹಳ್ಳಿ ತಿರುಗಿರುವ ಇವರು ಚೈತನ್ಯ, ಹುರುಪು, ಹುಮ್ಮಸ್ಸು, ಇವರ ಕೃಷಿತನದ ಫಲ. ಸ್ವಚ್ಛ ಗಾಳಿ, ನೀರು, ಆಹಾರ, ಮೈಮುರಿದು ದುಡಿಯುವ ಕಾಯಕಗಳು ಇವರನ್ನು ಸದೃಢರನ್ನಾಗಿ ಮಾಡಿವೆ. ಇವರ ಕಲೆ ಇವರನ್ನು ಯಶಸ್ವಿನ ಉತ್ತುಂಗಕ್ಕೆ ಕರೆದೊಯ್ದಿದೆ. ಕಲೆ ನನ್ನುಸಿರು ಅದು ಯಾವಾಗಲೂ ನನ್ನಲ್ಲಿ ಮಿಡಿಯುತ್ತಿರುತ್ತದೆ. ನನ್ನ ಶಿಷ್ಯಂದಿರ ಪ್ರತಿಭೆ ನೋಡಿ ತಮ್ಮ ವಿದ್ಯೆ ಧಾರೆಯೆರೆದು ಸಾರ್ಥಕವಾಯಿತು ಎಂದು ತೃಪ್ತಿ ಪಡುತ್ತಾರೆ.

ಸೇಡಂ ತಾಲ್ಲೂಕಿನ ತೆಲಕೂರ ಗ್ರಾಮದ ತಾಯಿ ಪಾರ್ವತಮ್ಮ ಮತ್ತು ತಂದೆ ವೀರಭದ್ರಯ್ಯ ಒಬ್ಬನೇ ಮಗ ತಂದೆಗೆ ಮಗನ ಎಲ್ಲ ಇಷ್ಟಾರ್ಥಗಳನ್ನು ಪೂರೈಸುವ ಹಂಬಲ. ಸುತ್ತ ಮುತ್ತ ಹಳ್ಳಿಗಳಲ್ಲಿ ಕೀರ್ತನೆ, ಪುರಾಣ, ಪ್ರವಚನಗಳಿಗೆ ಮಗನನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಇವರಲ್ಲಿದ್ದ ಹಾಡುಗಾರಿಕೆ ಇವರನ್ನು ಯಾವಾಗಲೂ ಗುನುಗುನಿಸುತ್ತಲೇ ಇರುವಂತೆ ಮಾಡಿತ್ತು. ಚಿಂಚೋಳಿ ತಾಲ್ಲೂಕಿನ ಸುಲೇಪೇಟ್‌ದ ಶ್ರೀಗಳ ಮಠದಲ್ಲಿ ಇವರ ಹಾಡು ಕೇಳಿದ ಗುರುಗಳು ಇವರನ್ನು ಹಾಡಿಸಿಯೇ ಬಿಟ್ಟರು. ಅಂದಿನಿಂದ ಪ್ರವಚನ, ಕೀರ್ತನೆ, ಭಜನೆಗಳ ಮುಂಚೆ ಇವರಿಂದಲೇ ಶುರುವಾಗ ತೊಡಗಿದವು.

ಜಾನಪದ ಕಲೆ ಹಿರಿಯರಿಂದ ವಂಶ ಪಾರಂಪರೆಯಿಂದ ಬಂದದ್ದಲ್ಲದೆ ಹಾರ್ಮೋನಿಯಂ ಬಾರಿಸುವುದನ್ನು ಕಲಿತು ಹಾರ್ಮೋನಿಯಂ ಜೊತೆಗೆ ಹಾಡತೊಡಗಿದರು. ಅರಿವೇ ಗುರು ಎಂಬಂತೆ ಅರಿವನ್ನು ಗುರುವಾಗಿಸಿಕೊಂಡು ಸ್ವ ಪ್ರಯತ್ನದಿಂದ ಏಕಲವ್ಯನಂತೆ ತಮ್ಮ ಸತತ ಪರಿಶ್ರಮದಿಂದ ದೈವದತ್ತವಾಗಿ ಹಾಗೂ ಗಣ್ಯರಿಂದ ಪಡೆದುಕೊಂಡು ದೊಡ್ಡಾಟ, ಸಣ್ಣಾಟ, ಬಯಲಾಟಗಳಲ್ಲಿ ಹಾರ್ಮೋನಿಯಂ ಮಾಸ್ತರರಾಗಿ ಪ್ರಸಿದ್ಧಿ ಪಡೆದರು. ನಂತರ ಆಟಗಳ ಎಲ್ಲ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿ ಪರಿಣಿತರಾಗಿ 1960ರಲ್ಲಿ ಬಯಲಾಟದ ಸಂಘ ನಿರ್ದೇಶಕರಾಗಿ ಸತತ 45 ವರ್ಷಗಳ ಕಾಲದಿಂದ ಸೇವೆ ಸಲ್ಲಿಸುತ್ತಿದ್ದಾರೆ. ನಿಜಾಮರ ಆಳಿಕೆಯಿಂದ ಕನ್ನಡ ಅಷ್ಟೊಂದು ಬಳಕೆಯಲ್ಲಿರಲಿಲ್ಲ. ಪ್ರಾಥಮಿಕ ಶಿಕ್ಷಣ ಮುಗಿಸಿದ ಇವರು ಮೋಡಿ ಲಿಪಿಯಲ್ಲಿದ್ದ ಬಯಲಾಟದ ಆಟಗಳನ್ನು ಕನ್ನಡಕ್ಕೆ ಅನುವಾದಿಸಿ ನೂರಾರು ಆಟಗಳನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಿದ್ದಾರೆ. ಸೇಡಂ ತಾಲ್ಲೂಕಿನ ಪ್ರತಿಯೊಂದು ಹಳ್ಳಿಗಳಿಗೆ ಹೋಗಿ ಸಂಘ ಕಟ್ಟಿ ಕಲಿಸಿದ್ದಾರೆ. ಸೇಡಂ ತಾಲ್ಲೂಕಿನ ಸರಕಾರಿ ಕಾಲೇಜಿನ ಪ್ರಾಧ್ಯಾಪಕರಾದ ಈಶ್ವರಯ್ಯ ಕೋಡಂಬಲ್ ಅವರು ಇವರ ಬಯಲಾಟ ಕಥೆಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಟ್ಟಿದ್ದಾರೆ.

ಸೇಡಂ, ಚಿಂಚೋಳಿ, ಗುಲಬರ್ಗಾ, ಬೀದರ, ನಿಡಗುಂದಾ, ಐನೂರಿ, ಸುಲೇಪೇಟ್, ಚಂದಾಪೂರ, ಕೊಂಚಾವರಂ, ಆಂಧ್ರದ ತಾಂಡೂರ, ಕರ್ಣಕೋಟಿ ಇವರು ಸೇವೆ ಸಲ್ಲಿಸಿದ ಕ್ಷೇತ್ರಗಳು. ದೇವಿ ಮಹಾತ್ಮೆ ದಕ್ಷಬ್ರಹ್ಮ, ಯದ್ಧಕಾಂಡ, ಭೀಮ ವಿಲಾಸ, ದ್ರೌಪದಿ ವಸ್ತ್ರಾಪರಹಣ, ಮಹಿಷಾಸುರ ಮರ್ದಿನಿ, ಧಾನಶೂರ ಕರ್ಣ, ಕನಕಾಂತಿ, ಬಾಣಾಸುರ ಇವು ಇವರು ಆಡಿಸಿದ ದೊಡ್ಡಾಟಗಳು.

(ಜಿಕೆ)

ವೇದಮೂರ್ತಿ ಮಲ್ಲಿಕಾರ್ಜುನಶಾಸ್ತ್ರೀ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ. ಚಿಂಚೋಳಿ ತಾಲ್ಲೂಕಿನ ಐನಾಪೂರದಲ್ಲಿ 1958 ಆಗಸ್ಟ್ 5ರಂದು ಜನಿಸಿದರು. ತಂದೆ ಸಂಗಯ್ಯಸ್ವಾಮಿ. ಹಿಂದೂಸ್ತಾನಿ ಸಂಗೀತ ಹಾಗೂ ಸುಗಮ ಸಂಗೀತದಲ್ಲಿ ಪರಿಣಿತರು. ಬಾಲ್ಯದಿಂದಲೇ ವೈದಿಕ ಪೂಜೋಪಚಾರ, ಸಂಗೀತ ಪ್ರವಚನಗಳಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಹೆಚ್ಚಿನ ಅಧ್ಯಯನಕ್ಕಾಗಿ ಸೊಲ್ಲಾಪುರಕ್ಕೆ ಹೋದರು. ಅಲ್ಲಿ ಸ್ವಪ್ರಯತ್ನದಿಂದ ಕನ್ನಡ, ಹಿಂದಿ, ಮರಾಠಿ, ತೆಲುಗು, ಭಾಷೆಗಳನ್ನು ಅಧ್ಯಯನ ಮಾಡಿ ಆ ಭಾಷೆಗಳಲ್ಲಿ ಭಕ್ತಿಗೀತೆ, ಪುರಾಣ, ಪ್ರವಚನ, ಕೀರ್ತನೆ ಮಾಡುವುದರಲ್ಲಿ ಪ್ರವೀಣರಾಗಿದ್ದಾರೆ.

ಇವರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಮೊದಲಾದ ಕಡೆಗಳಲ್ಲಿ ಪುರಾಣ ಪ್ರವಚನ ಕಾರ್ಯಕ್ರಮಗಳನ್ನು ಕನ್ನಡ, ಹಿಂದಿ, ಮರಾಠಿ, ತೆಲುಗು ಭಾಷೆಗಳಲ್ಲಿ ನೀಡಿ ಜನಮನ ಸೂರೆಗೊಂಡಿದ್ದಾರೆ. ಆಕಾಶವಾಣಿ, ದೂರದರ್ಶನ ಕೇಂದ್ರಗಳಲ್ಲಿ ಹಲವು ಸಲ ಕಾರ್ಯಕ್ರಮ ನೀಡಿದ ಕೀರ್ತಿ ಇವರಿಗಿದೆ.

ಇವರ ಸಂಗೀತ ಕ್ಷೇತ್ರದ ಸಾಧನೆ ಪರಿಗಣಿಸಿ ಇವರಿಗೆ ಹಲವು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಕಲಬುರಗಿಯ ಶ್ರೀ ಶರಣಬಸವೇಶ್ವರ ಸಂಸ್ಥಾನದಲ್ಲಿ ಪೂಜ್ಯ ಶ್ರೀ ಶರಣಬಸಪ್ಪ ಅಪ್ಪಾ ಅವರಿಂದ 2004ರಲ್ಲಿ 'ಪುರಾಣ ಪ್ರವಚನ ಪ್ರವೀಣ' ಪ್ರಶಸ್ತಿ, ನೀಡಿದ್ದಾರೆ. ಅಲ್ಲದೇ ರಾಜ್ಯದ ಹಲವು ಸಂಘ-ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ. (ಆಯ್‌ಕೆ)

ವೈ

ವೈಶಂಪಾಯನ ಪಿ.: ಬಹುಮುಖ ಪ್ರತಿಭೆಯ ಕಲಾವಿದ. ಕಲೆ, ಬರವಣಿಗೆ, ಸಮಾಜಸೇವೆ, ಶಿಕ್ಷಣ, ರಂಗಭೂಮಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮಿನುಗಿದ್ದಾರೆ. ತಂದೆ ಪರಮಾನಂದ ತಾಯಿ ಸಿದ್ದಮ್ಮ ಇವರು, ಬಾಲ್ಯದ ಬದುಕಿನಲ್ಲಿಯೇ ಕುಂಚವನ್ನು ಹಿಡಿದು ಕೃಷಿ ಮಾಡಿದವರು. ಶಾಲಾ ಕಾರ್ಯಕ್ರಮಗಳಲ್ಲಿ ಭಾಷಣದ ಚತುರತೆ, ನಟನೆಯ ಮಂದಾರ, ಮನೋರಂಜನೆಯ ಶೃಂಗಾರ, ಏಕಪಾತ್ರಭಿನಯ ಹಾಗೂ ನಾಟಕಗಳಲ್ಲಿ ಅಭಿನಯಿಸಿ, ಮಿಮಿಕ್ರಿಗಳ ಮೋಡಿ ಮಾಡಿ ಕಲಾನೈಪುಣ್ಯತೆ ಮೆರೆದವರು. ಹಾಗೆಯೇ ಆಟೋಟಗಳು, ಹಾಡು, ನೃತ್ಯಗಳಲ್ಲಿ ಮಿಂಚಿದವರು. ಬಾಲ್ಯದಲ್ಲಿನ ಸಾಂಸ್ಕೃತಿಕ ಆಸಕ್ತಿಯ ಪ್ರತಿಭೆ, ಅವರ ಮುಂದಿನ ದಿನಗಳಿಗೆ ನೆರವಾಯಿತೆಂದು ಹೇಳಬಹುದು.

ಇವರಲ್ಲಿ ಹುದುಗಿರುವ ಪ್ರತಿಭೆಯನ್ನು ತಂದೆ, ತಾಯಿ, ಶಿಕ್ಷಕ ವೃಂದದವರು ಕಲಾಸಕ್ತರು ಗುರುತಿಸಿ ಪ್ರೋತ್ಸಾಹಿಸಿದರು. ಇದರಿಂದಾಗಿಯೇ ವೈಶಂಪಯನ ಅವರು ಕಾಲೇಜು ಅಭ್ಯಾಸದ ದಿನಗಳಲ್ಲಿ ಶಿಕ್ಷಕ ತರಬೇತಿಯನ್ನು ಪಡೆಯುವ ಸಂದರ್ಭದಲ್ಲೇ ಕಲೆ, ಸಾಹಿತ್ಯ, ರಂಗಭೂಮಿ ಕ್ಷೇತ್ರಗಳೆಂಬಂತೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಂದು ಬಹುಮುಖ ಪ್ರತಿಭೆಯ ಕಲಾವಿದರಾಗಿ ಬೆಳೆದು ನಿಂತಿದ್ದಾರೆ. ಇವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು, ಪ್ರವೃತ್ತಿಯಲ್ಲಿ ಬಹುಮುಖ ಪ್ರತಿಭೆ ಹೊಂದಿದವರು. ರಂಗಭೂಮಿ, ನಿರ್ದೇಶನ, ಚಿತ್ರಕಲೆ, ಬೆಳಕು, ವಿನ್ಯಾಸ, ವಸ್ತುವಿನ್ಯಾಸ, ಮೇಕಪ್, ರಂಗಸಜ್ಜಿಕೆ, ಹಾಸ್ಯ, ಅನುಕರಣೆ, ಬರೆಹ ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿ ತಮ್ಮಲ್ಲಿಯ ಪ್ರತಿಭೆಯನ್ನು ಮೆರೆಸಿದ್ದಾರೆ. ನೀನಾಸಂ, ಕಿನ್ನರ ಮೇಳ, ಗೆಳೆಯರ ಬಳಗ, ಚಿತ್ರಕಲಾವಿದರು, ಚಿಗುರು, ಸಮುದಾಯದಂತಹ ಸಂಘ-ಸಂಸ್ಥೆಗಳಲ್ಲಿ ಪಾಲ್ಗೊಂಡರು. ಹಾಗೂ 1993ರಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ಶಿಬಿರದಲ್ಲಿ ದಕ್ಷಿಣ ಕನ್ನಡ ತಿರುಗಾಟ ಮತ್ತು ಸಮುದಾಯದ ಸಾಂಸ್ಕೃತಿಕ, ವರ್ಣಚಿತ್ರ, ಜನವಿಜ್ಞಾನ, ಸುರಕ್ಷತಾ ಆಂದೋಲನ, ಕೋಮುಸೌಹಾರ್ದತೆ ಸೇರಿದಂತೆ ಹಲವಾರು ಜಾಥಾಗಳಲ್ಲಿ ಪಾಲ್ಗೊಂಡು ಸಮಾಜಸೇವೆ ಮಾಡಿದ್ದಾರೆ.

ಗಂಗಾಧರ ಸ್ವಾಮಿ, ಲೂಹಿ ಶೇಖರ, ಭೀಷ್ಮ ಸಹಾನಿ, ಎಸ್. ಮಾಲತಿ, ಬೋಳುವಾರು ಮಹ್ಮದ ಕುಂಯಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಶಿವಪ್ರಕಾಶ, ಶಂಕರ ಶೇಷ, ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಂತಹ ಹಲವಾರು ನಾಟಕಕಾರರೊಡನೆ ಒಡನಾಟ, ಸಿ.ಜಿ. ಕೃಷ್ಣಸ್ವಾಮಿ, ಸಿ, ಬಸವಲಿಂಗಯ್ಯ, ಬಿ.ವಿ. ಕಾರಂತ, ಸಿದ್ಧನಗೌಡ ಪಾಟೀಲ, ಚಿದಂಬರ್ ರಾವ್ ಜಂಬೆ, ಕೆ.ಜಿ. ಕೃಷ್ಣಮೂರ್ತಿಯವರಂತಹ ಪ್ರಖ್ಯಾತ ರಂಗಭೂಮಿ ನಿರ್ದೇಶಕರಿಂದ ಕಲಿಕೆ ಪಡೆದುಕೊಂಡವರು. ಮೆರವಣಿಗೆ, ಪತ್ರೆ ಸಂಗಪ್ಪ, ಬೆಲೆ ಏರಿಕೆ, ಸಂತ್ಯಾಗ ನಿಂತಾನ ಕಬೀರ, ಸತಿಯೊಡನೆ ಸಹಗಮನ, ಒಂದು ಬೀದಿಯ ಕತೆ, ಧಪನ್, ತಬರನ ಕತೆ, ಗಾಂಧಿ ಹಾಗೂ ಸ್ವಾತಂತ್ರ್ಯ, ಹುಲಿ, ನೆರಳು, ಗುಣಮುಖ, ಸೂರ್ಯಬಂಧ, ಕೇಸರಿ, ಬಿಳಿ, ಹಸಿರು, ನಮಗ್ಯಾರು ಇಲ್ಲ ಎಪ್ಪಾ ಸಾಕ್ಷಿ-ಬೇರಿಲ್ಲದವರು ದಂತಹ ಹಲವಾರು ನಾಟಕಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಬೆಳಕು ವಿನ್ಯಾಸ, ವಸ್ತುವಿನ್ಯಾಸ, ರಂಗಸಜ್ಜಿಕೆಯ ಮೆರಗು ನೀಡಿದ್ದಾರೆ. ಹಾಗೆಯೇ ಅಪ್ಪಟ ನಿರ್ದೇಶನವನ್ನು ಮಾಡಿದ್ದಾರೆ. ಇದರ ಜೊತೆಗೆ ಮಾವ ಮದುವೆ ಮಾಡು, ನೀಲಾ, ನಿವೃತ್ತಿ-ಪ್ರವೃತ್ತಿ, ಆಫೀಸಾಯಣ, ಗೂಡಿನಿಂದ ಗಗನಕ್ಕೆ ಸಂಗ್ಯಾಬಾಳ್ಯಾ, ತಬರನ ಕತೆ, ಬೇರಿಲ್ಲದವರು, ಪರಕಾಯ ಪ್ರವೇಶದಂತಹ ಸಿನಿಮಾ ದೂರದರ್ಶನ ಧಾರವಾಹಿಗಳು, ನಾಟಕಗಳು, ಆಕಾಶವಾಣಿ ನಾಟಕಗಳಲ್ಲಿ ನಟಿಸಿದ್ದಾರೆ. ಧ್ವನಿ ನೀಡಿದ್ದಾರೆ. ರಂಗಭೂಮಿಯ ಕಲಾ ಚೇತನ ವೆನಿಸಿಕೊಂಡಿದ್ದಾರೆ.

ಕಲೆಯಲ್ಲಿ ಎ.ಎಂ.ಜಿ.ಡಿ ಪದವೀಧರರು. ನೀನಾಸಂ ತರಬೇತಿ, ಇತಿಹಾಸದಲ್ಲಿ ಎಂ.ಎ., ಪದವಿ ಪಡೆದು ಸದ್ಯ ಕೊಪ್ಪಳ ತಾಲ್ಲೂಕಿನ ಟನಕನಕಲ್ಲ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ

ಸಾಕಷ್ಟು ಸೇವೆ ಮಾಡಿದವರು. ಕಲೆಯ ಮೂಲಕ ಮಕ್ಕಳಿಗೆ ಪರಿಸರ ಕಾಳಜಿ, ಜನಜೀವನ ಸ್ಥಿತಿಗತಿ, ಬದುಕುವ ದಾರಿಯ ಬಗ್ಗೆ ತಿಳಿಸುವ ಹಾಗೂ ಬೇಸಿಗೆ ಶಿಬಿರ ಏರ್ಪಡಿಸಿ ಮಕ್ಕಳಿಗೆ ಒಂದು ಉತ್ತಮ ಜೀವನ ದೊರೆಯುವಲ್ಲಿ ನೆರವಾಗುವಂತಹ ಅಂಶಗಳನ್ನು ನೀಡಿ, ಡಿ.ಎಸ್.ಇ.ಆರ್.ಟಿ.ಸಿ.ಯಲ್ಲಿ ಬಿ.ಅರ್.ಸಿ ಯಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಷಣಕಾರರಾಗಿ, ಶಿಕ್ಷಣದ ಅಭಿವೃದ್ಧಿಗೆ ಸಾಕಷ್ಟು ದುಡಿದಿದ್ದಾರೆ. ತಮ್ಮಲ್ಲಿಯ ಅಗಾಧವಾದ ಕಲೆಯನ್ನು ಪ್ರದರ್ಶಿಸಿದ್ದಾರೆ.

(ಬಿವಿಎಂ)

ಶ



ಶಂಕರಗೌಡ ಬೆಟ್ಟದೂರ: ಚಿತ್ರ ಕಲಾವಿದ. ರಾಯಚೂರ ಜಿಲ್ಲೆ ಬೆಟ್ಟದೂರ ಎನ್ನುವ ಪುಟ್ಟ ಗ್ರಾಮದವರು. ತಂದೆ ಬಸವಣ್ಣ ಗೌಡ. ತಾಯಿ ನೀಲಮ್ಮ. 1928ರ ಎಪ್ರಿಲ್ 14 ರಂದು ಜನಿಸಿದರು. ಇವರ ಬಾಲ್ಯ ಪರಿಸರವು ಕಷ್ಟಕರ ವಾಗಿತ್ತು. ಸರಿಯಾದ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಇರಲಿಲ್ಲ ಹಾಗಾಗಿ ನೀರಮಾನ್ವಿಯಲ್ಲಿ ಪ್ರಾಥಮಿಕ ಶಿಕ್ಷಣ ಆರಂಭಿಸಿದರು (1940). ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಇವರು ಕಲಾಸಕ್ತಿಯನ್ನು ಹೊಂದಿದ್ದ ಇವರ ಅಣ್ಣ ಚೆನ್ನಬಸಪ್ಪನವರಿಂದ ಚಿತ್ರಕಲೆಯೆಡೆಗೆ ಆಕರ್ಷಿತರಾದರು. ಚೆನ್ನಬಸಪ್ಪಗೌಡರು ಹೈದ್ರಾಬಾದಿನಲ್ಲಿ ಸಾಮಾನ್ಯ ಶಿಕ್ಷಣದೊಂದಿಗೆ ಚಿತ್ರಕಲೆಯಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆಯನ್ನು ಪಾಸು ಮಾಡಿದ್ದರು ಹಾಗಾಗಿ ಶಂಕರಗೌಡರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಲು ಅಣ್ಣ ಚೆನ್ನಬಸಪ್ಪನವರೇ ಮೂಲ ಪ್ರೇರಣೆಯಾದರು.

ಇವರು 1943 ರಲ್ಲಿ ರಾಯಚೂರಿನ ಪ್ರತಿಷ್ಠಿತ ಹಮದರ್ದ ಶಾಲೆಯಲ್ಲಿ ಓದುತ್ತಿರುವಾಗ ಸಾಮಾನ್ಯ ಶಿಕ್ಷಣಕ್ಕಿಂತಲೂ ಚಿತ್ರ ಕಲೆಯ ಅಭ್ಯಾಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇವಾನುದೇವತೆಗಳ ಪೋಸ್ಟರ್ ಚಿತ್ರಗಳನ್ನು ತೆಗೆಯುತ್ತಿದ್ದರು. ಇವರು ಬಸವರಾಜ ಹಂಬಲಿಯವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಬಗ್ಗೆ ಸಾಕಷ್ಟೂ ವಿಷಯಗಳನ್ನು ತಿಳಿದುಕೊಂಡಿದ್ದರು. ಬಂಗಾಲ ಕಲಾವಿದ ನಂದಲಾಲ್ ಬೋಸ್‌ರವರ ಕಲಾಕೃತಿಗಳು ಗೌಡರ ಮೇಲೆ ಗಾಢವಾದ ಪ್ರಭಾವ ಬೀರಿವೆ, ಅಲ್ಲದೇ ಚಿತ್ರಕಲೆಯೊಂದಿಗೆ ರಾಜಕೀಯದಲ್ಲಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿ ಹೋರಾಡಿದ್ದಾರೆ.

1948ರ ಹೊತ್ತಿಗೆ ಚಿತ್ರಕಲೆಯ ಇಂಟರ್ ಮೀಡಿಯೆಟ ಪರೀಕ್ಷೆಯನ್ನು ಪಾಸುಮಾಡಿದ ಮೇಲೆ ಗೌಡರಿಗೆ ಉನ್ನತ ಕಲಾ ಶಿಕ್ಷಣ ಪಡೆಯಬೇಕೆಂಬ ಬಲವಾದ ಆಸೆ ಬೇರೂರಿತು. ಅಂದಿನ ದಿನಗಳಲ್ಲಿ ಕರ್ನಾಟಕದ ಉತ್ತರ ಭಾಗದ ಕಲಾವಿದರು ಉನ್ನತ ಕಲಾ ಶಿಕ್ಷಣಕ್ಕೆಂದು ಮೊದಲ ಆಯ್ಕೆ ಮಾಡುವುದು ಮುಂಬೈನ ಜೆ.ಜೆ. ಕಲಾಶಾಲೆ, ಆದರೆ ಬೆಟ್ಟದೂರರು ಆಯ್ಕೆ ಮಾಡಿಕೊಂಡಿದ್ದು, ಕಲ್ಕತ್ತಾದ ಶಾಂತಿನಿಕೇತನ. ಕವಿ ರವೀಂದ್ರರು ಆರಂಭಿಸಿದ ಈ ಕಲಾಶಾಲೆ ಅಪ್ಪಟ ದೇಸಿ ನೆಲೆಯಲ್ಲಿ ಶಿಕ್ಷಣವನ್ನು ನೀಡುತ್ತಿತ್ತು. ಅಂತೆಯೇ ಭಾರತೀಯ ಪುನರುಜ್ಜೀವನ ಕಾಲದ ಚಿತ್ರಕಲೆಯಲ್ಲಿ ಬಂಗಾಲ ಕಲೆಗೆ ಅಗ್ರಸ್ಥಾನವಿದೆ. ಹಾಳೆಯ ಮೇಲೆ ಜಲವರ್ಣದಿಂದ ತೆಳುವಾಗಿ ಸೂಕ್ಷ್ಮ ಹಾಗೂ ರೇಖಾ ಪ್ರಧಾನವಾದ ಆಕಾರಗಳನ್ನು ಚಪ್ಪಟೆ ವರ್ಣಗಳಲ್ಲಿ ನೆರಳು ಬೆಳಕುಗಳೊಂದಿಗೆ ಚಿತ್ರ ರಚಿಸುವ ಈ ತಂತ್ರ ವಿಧಾನ ದೇಸಿ ಸಂಸ್ಕೃತಿಯನ್ನು ಹೋಲುತ್ತದೆ. ಕಲ್ಕತ್ತದ ಶಾಂತಿನಿಕೇತನದಲ್ಲಿ 1951ರಲ್ಲಿ ಗೌಡರು ಚಿತ್ರಕಲೆಯ ಅಧ್ಯಯನಕ್ಕೆ ಪ್ರವೇಶ ಪಡೆದರು, ಖ್ಯಾತ ಕಲಾವಿದ ನಂದಲಾಲ್ ಬೋಸ್‌ರವರು ಈ ಕಲಾಶಾಲೆಯ ಪ್ರಾಚಾರ್ಯರಾಗಿದ್ದರು, ರಾಮಕಿಂಕರ್ ಬೈಜ್, ಸುರೇಂದ್ರನಾಥ ಮೊದಲಾದವರು ಶಂಕರಗೌಡರರ ಗುರುಗಳಾಗಿದ್ದರು.

ಪಿಕ್ಟೋರಿಯಲ್ ಕಾಂಪೋಸಿಶನ್, ಭಾವಚಿತ್ರ, ಐರೋಪ್ಯ ಮಾದರಿಯ ಚಿತ್ರರಚನೆ, ಸ್ಥಿರಚಿತ್ರಣ, ಹೊರಾಂಗಣ ಚಿತ್ರಣ, ಡಿಸೈನ್, ಜಪಾನೀಸ್ ಶೈಲಿಯ ಕೃತಿರಚನೆ, ಬಾಟಿಕ್ ಕಲೆ, ಮುದ್ರಣ ಕಲೆ, ಮಾಡೆಲಿಂಗ್, ಮೊದಲಾದ ಪ್ರಾಯೋಗಿಕ ವಿಷಯಗಳೊಂದಿಗೆ ಕಲಾ ಇತಿಹಾಸ, ಕಲಾವಿಮರ್ಶೆ ಕುರಿತಾದ ವಿಷಯಗಳು ಇಲ್ಲಿ ಹೇಳಿಕೊಡಲಾಗುತ್ತಿತ್ತು. ಈ ವಿಷಯಗಳಲ್ಲಿ



'ಮೇಯುತ್ತಿರುವ ಮೇಕೆಗಳು' ಜಲವರ್ಣ ಮಾಧ್ಯಮ

ಕೆಲವು ಪಾಶ್ಚಾತ್ಯ ಲಕ್ಷಣಗಳಿಂದ ಕೂಡಿದ್ದರೂ, ಚಿತ್ರಸುವ ಪದ್ಧತಿ ಮತ್ತು ವಸ್ತುವಿನ ಆಯ್ಕೆ ಭಾರತೀಯದ್ದೇ ಆಗಿರುತ್ತಿತ್ತು. ಗುಜರಾತಿನ ಪಾಲೇಖ್, ಓರಿಸ್ಸಾದ ವಿನೋದ ರಾವ್ಯತ್‌ರಾಯ ಇವರು ಬೆಟ್ಟದೂರರಿಗೆ ತುಂಬ ಹತ್ತಿರದ ಗೆಳೆಯರಾಗಿದ್ದರು. ಸುಮಾರು ನಾಲ್ಕು ವರ್ಷಗಳ ಕಾಲ ಶಾಂತಿನಿಕೇತನದಲ್ಲಿ ಅಭ್ಯಾಸ ಮಾಡಿದ ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿಯನ್ನು ಮುಗಿಸಿದರು (1955). ಚಿತ್ರಕಲೆಯೊಂದಿಗೆ ಛಾಯಾಚಿತ್ರ ಕಲೆಯ ಹವ್ಯಾಸವನ್ನು ಹೊಂದಿದ್ದು.

ಇವರು ಪೆನ್ಸಿಲ್, ಇಂಡ್, ಚಾರ್ಕೋಲ್ ಮಾಧ್ಯಮಗಳಲ್ಲಿ ಸಾಕಷ್ಟು ರೇಖಾಚಿತ್ರಗಳು ಮತ್ತು ಜಲವರ್ಣ, ತೈಲವರ್ಣ ಹಾಗೂ ಮಿಶ್ರಮಾಧ್ಯಮದಲ್ಲಿಯೂ ಸಾಕಷ್ಟು ಸಂಯೋಜನ ಚಿತ್ರಗಳನ್ನು ರಚಿಸಿದ್ದಾರೆ. ಪೌರಾಣಿಕ, ಧಾರ್ಮಿಕ, ಐತಿಹಾಸಿಕ, ಅಲ್ಲದೇ ಸಾಮಾಜಿಕ ಹಿನ್ನೆಲೆಯ ದೈನಂದಿನ ಘಟನೆಗಳು ಇವರ ಕಲಾಕೃತಿಗಳಿಗೆ ವಸ್ತುಗಳಾಗಿದ್ದು 10.6 ಅಡಿ ಉದ್ದ ಮತ್ತು 1.6 ಅಡಿ ಎತ್ತರ ಅಳತೆಯಲ್ಲಿ ಬಟ್ಟೆಯ ಮೇಲೆ ಬಾಟಿಕ್ ಕಲಾಶೈಲಿಯಲ್ಲಿ ಬಿಡಿಸಿದ ಸುರುಳಿ ಚಿತ್ರವು ಗುರುಗಳಾದ ನಂದಲಾಲ್ ಬೋಸ್‌ರವರ ಮನಸೆಳೆಯಿತು. ಖ್ಯಾತ ಕಲಾವಿದ ಕೃಪಾಲ್‌ಸಿಂಗ್ ಮತ್ತು ನಾರಾಯಣಲಾಲ್ ಅವರೊಂದಿಗೆ ದೆಹಲಿಯ ಬಿರ್ಲಾ ಭವನದಲ್ಲಿ ಗಾಂಧೀಜಿಯವರ ಜೀವನ ಚರಿತ್ರೆಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸಲು ಸುಮಾರು ಮೂರು ವರ್ಷಗಳೇ ಬೇಕಾಯಿತು. ಮುಂದೊಮ್ಮೆ ಭಾರತ ಸರಕಾರದ ಆದೇಶದ ಮೇರೆಗೆ ಕೃಪಾಲ್‌ಸಿಂಗ್‌ರ ಜೊತೆಗೂಡಿ ಚೀನದ ತುನ್‌ಹಾಂಗ್ ಗವಿವರ್ಣ ಚಿತ್ರಗಳ ಪ್ರತಿಗಳನ್ನು ಮಾಡಿದ್ದಾರೆ. ಸುಮಾರು ಎರಡು ವರ್ಷಗಳ ಈ ಯೋಜನೆಯನ್ನು ಕೇವಲ ಮೂರು ತಿಂಗಳಲ್ಲೇ ಪೂರೈಸಿದ ಶ್ರೇಯಸ್ಸು ಈ ಕಲಾವಿದರಿಗೆ ಸಲ್ಲುತ್ತದೆ.

ಬಂಗಾಲ ಕಲಾಶೈಲಿಯ ಕಲಾವಿದ ಶಂಕರಗೌಡರು ತಮ್ಮ 82ರ ಇಳಿ ವಯಸ್ಸಿನಲ್ಲೂ ಚಿತ್ರ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲಾಪ್ರಪಂಚದಲ್ಲಿ ತಮ್ಮದೇ ಆದ ವಿಶಿಷ್ಟವಾದ ಶೈಲಿಯಲ್ಲಿ ಕಲಾಕೃತಿಗಳ ಮೂಲಕ ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಂಡಿದ್ದಾರೆ.

ಇವರಿಗೆ ಸರಕಾರ ಮತ್ತು ನಾಡಿನ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ, ಅವುಗಳಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ದೆಹಲಿಯ ಐಫೆಕ್ಸ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಯಚೂರು ಜಿಲ್ಲೆಯ ಗಣರಾಜ್ಯೋತ್ಸವ ಪ್ರಶಸ್ತಿ ಮುಂತಾದುವು ಮುಖ್ಯವಾದವು. 2008ರ ಪ್ರತಿಷ್ಠಿತ ವರ್ಣಶಿಲ್ಪ ವೆಂಕಟಪ್ಪ ಪ್ರಶಸ್ತಿಗೂ ಭಾಜನರಾಗಿದ್ದಾರೆ. 2010ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ಇವರಿಗೆ ಡಾಕ್ಟರೇಟ ಪದವಿಯನ್ನು ನೀಡಿ ಗೌರವಿಸಿದೆ. ಒಬ್ಬ ಕಲಾವಿದರಾಗಿ, ಮನೋಚಿಕಿತ್ಸರರಾಗಿ, ಹೋರಾಟಗಾರರಾಗಿ ಬದುಕಿನ ವಿವಿಧ ಮಜಲುಗಳಲ್ಲಿ ಕೃಷಿಮಾಡಿದ ಇವರದು ಬಹುಮುಖ ವ್ಯಕ್ತಿತ್ವ.


(ಬಿಕೆಎಲ್)

ಶಂಕರರಾವ್ ಆಳಂದಕರ್: ಹೆಸರಾಂತ ಚಿತ್ರಕಲಾವಿದರು. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಚಿತ್ರಕಲೆ ಓತಪ್ರೋತವಾಗಿ ಸೃಷ್ಟಿಗೊಳ್ಳುತ್ತ ಬಂದಿದೆ. ಹಲವು ಬದಲಾವಣೆಯ ಮಜಲುಗಳನ್ನೂ ಕಂಡಿದೆ. ಮುಖ್ಯವಾಗಿ ಬ್ರಿಟಿಷರ ಆಗಮನ, ಅದರಲ್ಲೂ ಅವರು ಭಾರತದಲ್ಲಿ ಆರಂಭಿಸಿದ ಕಲಾಶಾಲೆಗಳು ಕರ್ನಾಟಕದ ಚಿತ್ರಕಲೆ ಹೊಸ ತಿರುವು ಪಡೆದುಕೊಳ್ಳಲು ಕಾರಣವಾದವು. ಈ ಹಿನ್ನೆಲೆಯಲ್ಲಿ ಮುಂಬೈನಲ್ಲಿ ಬ್ರಿಟಿಷರಿಂದ ಆರಂಭಗೊಂಡ 'ಜೆ.ಜೆ. ಸ್ಕೂಲ್ ಆಫ್ ಆರ್ಟ್' ಆಗ ಉತ್ತರ ಕರ್ನಾಟಕಕ್ಕೆ ಹತ್ತಿರದ ಏಕೈಕ ಕಲಾಶಾಲೆಯಾಗಿತ್ತು. ಹಾಗಾಗಿ ಮುಂಬೈ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ಹಲವಾರು ಈ ಕಲಾಶಾಲೆಯಲ್ಲಿ ಕಲಿತು ಬಂದರು. ಇಂಥವರ ಸಾಲಿನಲ್ಲಿ ಗುಲಬರ್ಗದ ಶಂಕರರಾವ್ ಆಳಂದಕರರೂ ಒಬ್ಬರು; ಅಷ್ಟೇ ಪ್ರಮುಖರೂ ಕೂಡ.



ಆಳಂದಕರರು ಬ್ರಿಟಿಷ್ ಪಠ್ಯ ಕ್ರಮಕ್ಕನುಗುಣವಾಗಿ ಚಿತ್ರಕಲಾ ವ್ಯಾಸಂಗ ಮಾಡಿದುದರಿಂದ, ಸಹಜವಾಗಿಯೇ ಅವರ ಕಲಾಕೃತಿಗಳಲ್ಲಿ ಬ್ರಿಟಿಷ್ ವಿಕ್ಟೋರಿಯನ್ ಶೈಲಿಯ (ಆಧುನಿಕ ವಾಸ್ತವ ಶೈಲಿ) ಪ್ರಭಾವವೇ ಕಾಣಿಸುತ್ತದೆ.ಆಳಂದಕರರು ಬ್ರಿಟಿಷ್ ಶೈಲಿಯನ್ನು ಅನುಸರಿಸಿದರೂ ಅವರ ಕಲಾಕೃತಿಗಳ ವಸ್ತು ಮಾತ್ರ ಅಪ್ಪಟ ದೇಶೀಯ ಅವರಿಗೆ ಭಾರತೀಯ ಧರ್ಮ, ಸಂಸ್ಕೃತಿ, ತತ್ವಜ್ಞಾನ, ಸಾಹಿತ್ಯಗಳೇ ಕಲಾಸೃಷ್ಟಿಗೆ ಸ್ಫೂರ್ತಿ. ಶಾಬ್ದಿಕ ಮಾಧ್ಯಮದಲ್ಲಿ ಮಡುಗಟ್ಟಿರುವ ಭಾರತೀಯ ತತ್ವಜ್ಞಾನವನ್ನು ಚಿತ್ರಕಲೆಯಲ್ಲಿ ದೃಶ್ಯೀಕರಣಗೊಳಿಸುವ ಮೂಲಕ ತತ್ತ್ವಜಿಜ್ಞಾಸೆಗೆ ಪರ್ಯಾಯವಾದ ಮಾಧ್ಯಮವನ್ನು ಶ್ರೀಮಂತಗೊಳಿಸುವಲ್ಲಿ ಇವರು ಪ್ರಮುಖರಾದರು. ಹಾಗಾಗಿ ಆಳಂದಕರರನ್ನು 'ಕಲಾಯೋಗಿ' ಎಂದೇ ಕರೆಯಲಾಗಿದೆ.

ಭಾರತದಲ್ಲಿ ಪಾಶ್ಚಾತ್ಯ ಆಧುನಿಕ ಚಿತ್ರಕಲೆಯ ಹರಡುವಿಕೆಯಿಂದ ದೇಶೀ ಚಿತ್ರಕಲೆ ಕಳೆಗುಂದುತ್ತಲಿದ್ದಿತು. ಈ ಸಂಕ್ರಮಣ ಕಾಲದಲ್ಲಿ (20ನೇ ಶತಮಾನದ ಪೂರ್ವಾರ್ಧ) ಆಳಂದಕರರು ಕಲಾಕೃಷಿಯಲ್ಲಿ ತೊಡಗಿದ್ದರು. ಆಧ್ಯಾತ್ಮದಲ್ಲಿನ ಅತೀವ ಆಸಕ್ತಿಯಿಂದಾಗಿ ಆ ಚೇತನವನ್ನು ಎಳೆ ಎಳೆಯಾಗಿ ವಿಂಗಡಿಸಿ ನೋಡಲು ಗೀತೆಯ (ಭಗವದ್‌ಗೀತೆ) ಪ್ರಮುಖ ಆವೃತ್ತಿಗಳನ್ನು ಅಧ್ಯಯನ ಮಾಡಿದ್ದರು. ಹಾಗಾಗಿ ಪಕ್ವಗೊಂಡ ತಮ್ಮ ಜ್ಞಾನಾನುಭವಗಳನ್ನು ರಮ್ಯಶೈಲಿಯಲ್ಲಿ ಹಲವಾರು ವರ್ಣಚಿತ್ರಗಳ ಮೂಲಕ ಅಭಿವ್ಯಕ್ತಗೊಳಿಸಿದರು. ಅದರಲ್ಲಿ ಸಫಲರೂ ಆದರು. 'ಸನ್ಯಾಸ ಯೋಗ' ಎಂಬ ಶೀರ್ಷಿಕೆಯ ಈ ವರ್ಣಚಿತ್ರ ಅವರ ಆಧ್ಯಾತ್ಮಾನುಭವದ 'ಕೆನೆ' ಎನ್ನಬಹುದು. 14+22 ಅಂಗುಲ




'ಗುರುದೇವ' ಇಂಕ್ ಮಾಧ್ಯಮ

ಅಳತೆಯ ಹಾಳೆಯ ಮೇಲೆ ರಚಿಸಿರುವ ಈ ಚಿತ್ರ ಜಲವರ್ಣ ಮಾಧ್ಯಮದಲ್ಲಿದೆ. ಆ ಕಾಲಕ್ಕೆ ತೈಲವರ್ಣ ಬಳಕೆಗೆ ಬಂದಿದ್ದರೂ ಆಳಂದಕರರು ಜಲವರ್ಣದಲ್ಲೇ ಕಲಾಕೃತಿಗಳನ್ನು ರಚಿಸಿರುವುದು ವಿಶೇಷ. ಜಲವರ್ಣದಲ್ಲಿ ತುಂಬ ಪಳಗಿದ ಕಲಾವಿದರು ಮಾತ್ರ ತಮ್ಮ ಕೃತಿಯಲ್ಲಿ ನಾವೀನ್ಯತೆ ತರಲು ಸಾಧ್ಯ. ಅಂತಹ ಒಂದು ನಾವೀನ್ಯತೆ ಈ ವರ್ಣಚಿತ್ರದಲ್ಲಿದೆ.

ಭಗವಂತನೆಡೆಗಿನ ಭಕ್ತನೋರ್ವನ ಪಯಣವನ್ನು ದೃಶ್ಯಾತ್ಮಕವಾಗಿ ತೋರುವ ಈ ಕೃತಿ ಆಧ್ಯಾತ್ಮ ಸಾಧನೆ ಮತ್ತು ದೈವತ್ವದ ಪರಿಕಲ್ಪನೆಯನ್ನು ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿದೆ. ಶಾಬ್ದಿಕ ಮಾಧ್ಯಮದಲ್ಲಿನ ಪಾರಮಾರ್ಥಿಕ ಅನುಭವ, ಕಲ್ಪನೆಗಳನ್ನು ದೃಶ್ಯ ಮಾಧ್ಯಮದಲ್ಲಿ ಕಂಡರಿಸಿದ ಮಹತ್ವಪೂರ್ಣ ಕೃತಿ ಇದಾಗಿದೆ. ಯೋಗದ ಪರಿಕಲ್ಪನೆಯ ಹೊಸ ಭಾವನಾ ಸೃಷ್ಟಿಯ ನಿರ್ಮಾಣವನ್ನು ಈ ಚಿತ್ರ ತೆರೆದಿಡುತ್ತದೆ. ಯೋಗದ ವಿವಿಧ ದಾರಿಗಳ ವಿರಾಟ್ ದರ್ಶನದ ಜೊತೆಗೆ ಮುಕ್ತಿಯ ಮನೆಯ ಸಾಮರಸ್ಯದ ಪ್ರಾಶಾಂತತೆಯೂ ಪ್ರತಿಮೆಯಾಗಿ ಚಿತ್ರಿತಗೊಂಡಿದೆ. ಒಟ್ಟಾರೆ ಜೀವ-ದೇವರ ಸಂಬಂಧದ ಸಾಧನೆ, ಸಾರ್ಥಕ್ಯವನ್ನು ರೂಪಿಸುವ ಈ ಕಲಾಕೃತಿ ಭಾರತೀಯ ತತ್ತ್ವಜ್ಞಾನದ ತಿರುಳಿನ ಒಳನೋಟ ಬೀರುವಲ್ಲಿ ಯಶಸ್ವಿಯಾಗಿದೆ.

(ಎಸ್‌ಬಿಎ)

ಶಂಕರಯ್ಯ ಘಂಟಿ: ಹೈದ್ರಾಬಾದ ಕರ್ನಾಟಕದ ಹವ್ಯಾಸಿ ರಂಗಭೂಮಿಯಲ್ಲಿ ಶಂಕರಯ್ಯ ಘಂಟಿಯವರ ಹೆಸರು ಗಮನಾರ್ಹವಾದುದು. ರಂಗಭೂಮಿ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದಿರುವ ಇವರು ಹೈದ್ರಾಬಾದ ಕರ್ನಾಟಕ ಪ್ರದೇಶದ ಹವ್ಯಾಸಿ ರಂಗಭೂಮಿಗೆ ಮಹತ್ವದ ಕೊಡುಗೆ ನೀಡಿದ್ದಾರೆ.



1956 ಜೂನ್ 01ರಂದು ಜನಿಸಿದರು. ಇವರು ಬಿ.ಎಸ್‌ಸಿ ಪದವೀಧರರು. ಗುಲಬರ್ಗಾ ವಿಶ್ವವಿದ್ಯಾಲಯದ ಸೂಕ್ಷ್ಮಜೀವ ಅಧ್ಯಯನ ವಿಭಾಗದಲ್ಲಿ ಮೂರು ದಶಕಗಳಿಂದ ಪ್ರಯೋಗಾಲಯದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಂಬತ್ತರ ದಶಕದಲ್ಲೇ ಇವರು ರಂಗಭೂಮಿ ಕಡೆ ಆಸಕ್ತಿ ಹೊಂದಿ ಅನೇಕ ನಾಟಕ ಕಮ್ಮಟಗಳಲ್ಲಿ ಭಾಗವಹಿಸಿ, ತರಬೇತಿ ಪಡೆದರು. ಕರ್ನಾಟಕ ನಾಟಕ ಅಕಾಡೆಮಿಯಿಂದ ನಡೆದ ನೇಪಥ್ಯ ಶಿಲ್ಪ ಕಮ್ಮಟದಲ್ಲಿ, ಸಾಹಿತ್ಯ ಪರಿಷತ್ತಿನಿಂದ ನಡೆದ ನಾಟಕ ರಚನಾ ಕಮ್ಮಟದಲ್ಲಿ ಭಾಗವಹಿಸಿದ್ದಾರೆ. ಹೆಗ್ಗೋಡಿನ ನಿನಾಸಂದಲ್ಲಿ ನಡೆದ ರಂಗ ಕಮ್ಮಟದಲ್ಲಿ ಭಾಗವಹಿಸಿ ತರಬೇತಿ ಪಡೆದಿದ್ದಾರೆ. ನವದೆಹಲಿ ರಾಷ್ಟ್ರೀಯ ಶಾಲೆ, ಬೆಂಗಳೂರಿನಲ್ಲಿ 2008ರಲ್ಲಿ ನಡೆಸಿದ ನಾಟಕ ನಿರ್ದೇಶಕರ ಕಮ್ಮಟದಲ್ಲಿ ಒಂದು ತಿಂಗಳ ತರಬೇತಿ ಪಡೆದಿದ್ದಾರೆ.

ಹೀಗೆ ರಂಗ ತರಬೇತಿ ಪಡೆದು ಬಂದ ಘಂಟಿಯವರು, ಗುಲಬರ್ಗಾ ಜಿಲ್ಲಾ ಸಮುದಾಯ ಘಟಕದಲ್ಲಿ ಮೂರು ದಶಕಗಳಿಂದ ರಂಗ ಸಂಘಟನೆ ಮಾಡಿದ್ದಾರೆ. ಗುಲಬರ್ಗಾ ಸಮುದಾಯದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ಪ್ರಾದೇಶಿಕ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿರುವ ಘಂಟಿಯವರು ಸಮುದಾಯ ಸಂಘಟನೆ ಈ ಪ್ರದೇಶದಲ್ಲಿ ಬೆಳೆಯಲು ಕಾರಣರಾದವರಲ್ಲಿ ಇವರೂ ಪ್ರಮುಖರಾಗಿದ್ದಾರೆ. ಸಮುದಾಯದಿಂದಲೇ ಇವರು ಬೆಳೆದಿದ್ದಾರೆ. ಮತ್ತು ಬದ್ಧತೆಯಿಂದ ಸಮುದಾಯವನ್ನು ಬೆಳೆಸಿದ್ದಾರೆ.

ಕಲಬುರ್ಗಿ ಸಮುದಾಯದಿಂದ 1986ರಲ್ಲಿ ಪ್ರಯೋಗಗೊಂಡ ಈರೋಬಿ ಹಾಗೂ ಗೋದಾನ ನಾಟಕಗಳಲ್ಲಿ ಘಂಟಿಯವರು ತಮ್ಮೊಳಗಿನ ನಟನನ್ನು ಪರಿಚಯಿಸಿದರು. ನಂತರದ ವರ್ಷಗಳಲ್ಲಿ ಕಿಂಗ್‌ಲಿಯರ್, ಚಾರ್ವಾಕ, ಸ್ಮಶಾನ ಕುರುಕ್ಷೇತ್ರ ಮೊದಲಾದ ನಾಟಕಗಳಲ್ಲಿ ಅಭಿನಯಿಸಿ ತಾವೊಬ್ಬ ನಟನೆಂಬುದನ್ನು ತೋರಿಸಿಕೊಟ್ಟರು. ಈ ನಾಟಕಗಳ ನಿರ್ದೇಶಕರಾಗಿದ್ದವರು. ಖ್ಯಾತ ರಂಗ ಪ್ರತಿಭೆ ಸಿ. ಬಸವಲಿಂಗಯ್ಯನವರು

ಎನ್.ಎಸ್.ಡಿ. ಪದವೀಧರರಾದ ಮೇಲೆ ಸಮುದಾಯ ಸಂಘಟನೆಯಲ್ಲಿ ತೊಡಗಿಸಿಕೊಂಡ ಬಸವಲಿಂಗಯ್ಯನವರು ರಂಗಾಯಣದ ನಿರ್ದೇಶಕರಾಗಿ, ಮೈಸೂರಲ್ಲಿ ರಂಗಾಯಣ ಕಟ್ಟಿದವರು. ಸಿ. ಬಸವಲಿಂಗಯ್ಯನವರು ಹೈದ್ರಾಬಾದ ಕರ್ನಾಟಕದ ರಂಗ ಚಟುವಟಿಕೆಗಳ ಬೆಳವಣಿಗೆಗೆ ಪ್ರಮುಖ ಕಾರಣರಾಗಿದ್ದಾರೆ. ಈ ಪ್ರದೇಶದಲ್ಲಿ ಶಂಕರಯ್ಯ ಘಂಟಿಯವರಂತಹ ಅನೇಕ ಪ್ರತಿಭಾನ್ವಿತ ಕಲಾವಿದರು ಬೆಳೆಯಲು ಕಾರಣರಾಗಿದ್ದಾರೆ. 'ಬರದ ಬಯಲಾಟ' ದಂತಹ ಬೀದಿ ನಾಟಕಗಳಲ್ಲಿ ಶಂಕರಯ್ಯ ಘಂಟಿ ಅಭಿನಯಿಸಿ ಜಾಥಾದ ಮೂಲಕ ಹಳ್ಳಿಯ ಪ್ರೇಕ್ಷಕರನ್ನು ತಲುಪಿದರು. ಜ್ಞಾನ ವಿಜ್ಞಾನ ಸಮಿತಿಯ ಜಾಥಾಗಳಲ್ಲಿ ಭಾಗವಹಿಸಿದ ಘಂಟಿಯವರು ವೈಚಾರಿಕವಾಗ ಬೆಳೆದು ನಿಂತರು.

ನಿರ್ದೇಶಕರಾಗಿ ಶಂಕರಯ್ಯನವರ ಸಾಧನೆ ದೊಡ್ಡದು. ಆರ್.ಕೆ. ಹುಡುಗಿಯವರ ಅಕ್ಷರ, ಒರೆಗಲ್ಲುದಂತಹ ಬೀದಿ ನಾಟಕಗಳನ್ನು ಪ್ರಾರಂಭದಲ್ಲಿ ನಿರ್ದೇಶಿಸಿದ ಶಂಕರಯ್ಯನವರು ನಂತರದ ದಶಕಗಳಲ್ಲಿ ಅನೇಕ ಬೀದಿ ನಾಟಕಗಳನ್ನು ನಿರ್ದೇಶನ ಮಾಡಿ ಪ್ರಯೋಗಿಸಿದರು. ಅನೇಕ ರಂಗ ನಾಟಕಗಳನ್ನು ಶಂಕರಯ್ಯ ಯಶಸ್ವಿಯಾಗಿ ನಿರ್ದೇಶಿಸಿದರು. ಅವುಗಳಲ್ಲಿ ಬೇಂದ್ರೆಯವರ 'ಜಾತ್ರೆ', ಪ್ರಸನ್ನ ಅವರ 'ಮಹಿಮಾಪುರ', ಗೋರ್ಗಲ್‌ವರ 'ಸಾಹೇಬರು ಬರುತ್ತಿದ್ದಾರೆ', ಆರ್‌ಕೆ. ಹುಡುಗಿಯವರ 'ಬಾದಶಾಹ ಪುರಾಣ' ಬಸವರಾಜ ಸಬರದವರ 'ಹುಲಿಗೆಮ್ಮ' ಪ್ರಸನ್ನ ಅವರ 'ಹ್ಯಾಮ್ಲೆಟ್', ಅಸಗರ್ ಅವರ 'ರಾವಿ ನದಿಯದಂಡಿಯ ಮೇಲೆ' ಈ ಮೊದಲಾದ ನಾಟಕಗಳನ್ನು ಹೆಸರಿಸಬಹುದಾಗಿದೆ. ಇವರು ನಿರ್ದೇಶಿಸಿದ 'ಹುಲಿಗೆಮ್ಮ' ನಾಟಕ ಯಶಸ್ವಿ ಪ್ರಯೋಗವಾಗುವದರ ಜೊತೆಗೆ ಬೆಂಗಳೂರ ದೂರದರ್ಶನದಿಂದಲೂ ಪ್ರಸಾರವಾಯಿತು.

ಮಕ್ಕಳ ನಾಟಕಗಳ ನಿರ್ದೇಶನದಲ್ಲಿ ಘಂಟಿಯವರಿಗೆ ತುಂಬಾ ಆಸಕ್ತಿ. ಕಲಬುರ್ಗಿಯಲ್ಲಿ ಬೇಸಿಗೆ ಶಿಬಿರ ಏರ್ಪಡಿಸಿ ಮಕ್ಕಳಲ್ಲಿ ರಂಗಾಸಕ್ತಿಯನ್ನು ಬೆಳೆಸುವಲ್ಲಿ ಇವರ ಶ್ರಮ ಸಾರ್ಥಕವಾಗಿದೆ. ಟಾಲ್‌ಸ್ಟಾಯ್ ಅವರ 'ಕತ್ತಲೆ ರಾಜ್ಯ', ಕೆ. ರಾಮಯ್ಯನವರ 'ನಾಯಿತಿಪ್ಪ' ಹಾಗೂ 'ಸುಮ್ಮ ಸುಮ್ಮೆ', ನಾಟಕಗಳನ್ನು



ಸಂಗೀತ ಮತ್ತು ನಾಟಕ ಪ್ರಾದೇಶಿಕ ಕೇಂದ್ರ, ಬೆಂಗಳೂರು ಆಯೋಜಿಸಿದ ಧ್ವನಿ ಮತ್ತು ಬೆಳಕಿನ 'ಕರ್ನಾಟಕ ವೈಭವ' ದಲ್ಲಿ ಕಲಾವಿದರಾಗಿ ಶಂಕರಯ್ಯ ಘಂಟಿ

ಮಕ್ಕಳಿಂದ ಯಶಸ್ವಿಯಾಗಿ ಪ್ರಯೋಗಿಸಿದರು. ಕೆಲವು ಸಣ್ಣಕತೆಗಳನ್ನು ರೂಪಾಂತರಗೊಳಿಸಿ, ಮಕ್ಕಳಿಗಾಗಿ ವಿಶೇಷ ಆಸಕ್ತಿಯಿಂದ ನಾಟಕ ಕಲಿಸಿ, ಮಕ್ಕಳ ಪ್ರೀತಿಗೆ ಪಾತ್ರರಾದವರು ಶಂಕರಯ್ಯನವರು.

ಲೇಖಕರಾಗಿಯೂ ನಾಟಕಕಾರರಾಗಿಯೂ ತಮ್ಮನ್ನು ಗುರುತಿಸಿಕೊಂಡಿರುವ ಶಂಕರಯ್ಯ 'ಅನಾಮಿಕ' ಮತ್ತು 'ವಿಸರ್ಜನೆ' ಯಂತಹ ಬೀದಿ ನಾಟಕಗಳನ್ನು ರಚಿಸಿದ್ದಾರೆ. ಎರಡು ಕವನ ಸಂಕಲನ ಪ್ರಕಟಿಸಿದ್ದಾರೆ. ಭಾರತಜ್ಞಾನ ವಿಜ್ಞಾನ ಸಮಿತಿಯ ರಾಜ್ಯಮಟ್ಟದ ವಿಷಯ ತಜ್ಞರಾಗಿ ದುಡಿದಿದ್ದಾರೆ. ಒಂದು ತಿಂಗಳ ಮೈಸೂರ ರಂಗಾಯಣದಲ್ಲಿ ನಡೆದ ಚಿಣ್ಣರ ಮೇಳದಲ್ಲಿ ವಿಷಯ ತಜ್ಞರಾಗಿ ಭಾಗವಹಿಸಿದ್ದಾರೆ. ಅನೇಕ ಜಾಥಾಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

ಹೀಗೆ ಹವ್ಯಾಸಿ ರಂಗಭೂಮಿಯಲ್ಲಿ ನಟರಾಗಿ, ನಿರ್ದೇಶಕರಾಗಿ, ಸಂಘಟಕರಾಗಿ ಮಹತ್ವದ ಕೊಡುಗೆ ನೀಡಿದ ಶಂಕರಯ್ಯ ಘಂಟಿಯವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. 'ಮಹಿಮಾಪುರ' ನಾಟಕ ನಿರ್ದೇಶನಕ್ಕಾಗಿ ಬೆಸ್ಟ್ ಡೈರೆಕ್ಟರ್ ಅವಾರ್ಡ್ ಬಂದಿದೆ. ಈ ನಾಟಕಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ಅಂತರ್ ವಿಶ್ವವಿದ್ಯಾಲಯಗಳ ಸ್ಪರ್ಧೆಯಲ್ಲಿ ಒಳ್ಳೇ ನಿರ್ದೇಶಕನೆಂಬ ಪುರಸ್ಕಾರ ಲಭಿಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಯೋಗಗೊಂಡ ಇವರ ನಿರ್ದೇಶನದ 'ಚಾರ್ವಾಕ' ನಾಟಕಕ್ಕೆ ಬೆಸ್ಟ್ ಡ್ರಾಮ್ ಅವಾರ್ಡ್ ಬಂದಿದೆ. 1998ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರಕಿದೆ.

ಪ್ರಗತಿಪರ ವಿಚಾರಗಳಿಗೆ ಬದ್ಧರಾಗಿ, ರಂಗಭೂಮಿಯಲ್ಲಿ ಯಶಸ್ವಿಯಾಗುವುದು ತುಂಬ ವಿರಳ. ಕೇವಲ ಮನರಂಜನೆ ಮಾಡಿ ಜನಮನವನ್ನೊಲಿಸಿಕೊಳ್ಳುವುದು ಸುಲಭ. ಆದರೆ ಕಟು ಸತ್ಯವನ್ನು ಹೇಳಿ, ಅಸಮಾನತೆಯ ವ್ಯವಸ್ಥೆಯ ವಿರುದ್ಧ ಜನ ಜಾಗೃತಿಯನ್ನು ರಂಗಭೂಮಿಯ ಮೂಲಕ ಮಾಡುವುದು ಬಹು ಪ್ರಯಾಸದ ಕೆಲಸ. ಶಂಕರಯ್ಯ ಹಾಗೂ ಸಮುದಾಯದ ಅನೇಕ ಗೆಳೆಯರು, ಬಂಡಾಯ ಲೇಖಕರು ಈ ಕಾಯಕದಲ್ಲಿ ಮೂರು ದಶಕಗಳಿಂದ ಈ ಪ್ರದೇಶದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಶಂಕರಯ್ಯ ಘಂಟಿ ಕೇವಲ ಒಬ್ಬ ನಟ–ನಿರ್ದೇಶಕರಾಗಿ ಮಾತ್ರವಲ್ಲ, ಒಬ್ಬ ಪ್ರಗತಿಪರ ಚಿಂತಕರಾಗಿಯೂ ಗಮನ ಸೆಳೆದಿದ್ದಾರೆ. ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಈ ಮೂರು ದಶಕಗಳಲ್ಲಿ ನಡೆದ ಅನೇಕ ಪ್ರಗತಿಪರ ಕಾರ್ಯಕ್ರಮಗಳಲ್ಲಿ, ಜಾಥಾಗಳಲ್ಲಿ, ಚಳವಳಿಗಳಲ್ಲಿ ಶಂಕರಯ್ಯ ಮುಂದೆ ನಿಂತುಕೊಂಡು ಸಾಂಸ್ಕೃತಿಕ ಲೋಕದ ಬೆಳವಣಿಗೆಗೆ ಕಾರಣರಾಗಿದ್ದಾರೆ. (ಎಸ್‌ಎಸ್)

ಶಂಬುಲಿಂಗ ವಾಲ್ದೊಡ್ಡಿ: ಬೀದರನ ಸಮತಾ ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿರುವ ಶಂಬುಲಿಂಗ ವಾಲ್ದೊಡ್ಡಿಯವರು ಬೆಂಗಳೂರಿನ ಆದರ್ಶ ಫಿಲ್ಮ ಇನ್ಸಿಟ್ಯೂಟ್‌ನಲ್ಲಿ ಹಿನ್ನೆಲೆ ಗಾಯನ ತರಬೇತಿ ಪಡೆದವರು.



ಕೇಂದ್ರ ಸರ್ಕಾರದ ವತಿಯಿಂದ ಬೀದರನಲ್ಲಿ ನಡೆದ 'ಅಕ್ಬರ್' ಎಂಬ ಧ್ವನಿ ಮತ್ತು ಬೆಳಕಿನ ನಾಟಕದಲ್ಲಿ ಮುಖ್ಯ ಕಲಾವಿದರಾಗಿ ತಿಂಗಳುಗಳ ಕಾಲ ದುಡಿದವರು. ಇವರು ತಮ್ಮ 19ನೇ ವರ್ಷದಿಂದ ರಂಗಕ್ಕೆ ರಾಗಸಂಯೋಜಿಸಿ ಹಾಡುವುದರಲ್ಲಿ ನಿಸ್ಸೀಮರು. ಅಂದಿನಿಂದ ಇಂದಿನವರೆಗೆ ಇವರ ಸಿರಿ ಕಂಠ ರಂಗಕ್ಕಾಗಿ ದುಡಿಯುತ್ತಲೇ ಇದೆ. 3 ರಿಂದ 4 ತಾಸು ಹಾಡಿದರೂ 'ಧ್ವನಿ ಹೋಯಿತು' ಎಂದು ಎಂದೂ ಹೇಳಿದವರಲ್ಲ. ಅವರ ಮುಖ್ಯ ನಾಟಕಗಳೆಂದರೆ 'ಜನಪದದ ದೊಡ್ಡಾಟಗಳು', 'ರಾಮ ಲಕ್ಷ್ಮಣ', ಕೆರೆಗೆ ಹಾರ, ಒಂದು ಲೋಕ ಕಥೆ, 'ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' 'ಅಕ್ಬರ್', 'ನಾಗಮಂಡಲ', ಮೂರನೇ ಕಣ್ಣು, ಪರಿಸರ, 'ಗ್ಯಾನ್ ಕಾ ಮಂದಿರ್ ಸಬ್‌ಸೆ ಊಂಚಾ', ಅಗ್ನಿ ಮತ್ತು ಮಳೆ, ಬಾದಶಹ ಪುರಾಣ, ಸಾಕ್ಷರತಾ ಜಾಥಾದ ಹಾಡುಗಳು, ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಬೀದರ ಸಮುದಾಯದ ಮುಖ್ಯ ಸಂಘಟಕರಾಗಿ, ಅಧ್ಯಕ್ಷರಾಗಿ, ಸೇವೆಸಲ್ಲಿಸಿದ ಶಂಬುಲಿಂಗ ವಾಲ್ದೊಡ್ಡಿ ಬೇಕಾಗಿ ನಟರಾದವರಲ್ಲ. ಸಂಘಟನೆಯ ಅನಿವಾರ್ಯ ಮತ್ತು ತುರ್ತಿಗಾಗಿ ರಂಗಭೂಮಿಯ ಪ್ರದರ್ಶನ ನಿಲ್ಲಬಾರದೆಂಬ ಕಾಳಜಿಯಿಂದ ನಟರಾದವರು. ಇವರು ನಡೆಸಿದ ಮುಖ್ಯ ನಾಟಕಗಳೆಂದರೆ 'ತಬರನ ಕಥೆ' ಮಾರೀಚನ ಬಂಧುಗಳು' 'ಕೋಟೆ', 'ಪಂಚಮ', 'ಕತ್ತೆ ಮತ್ತು ಧರ್ಮ', 'ಬೆಳೆದವರು', 79ರ ನರಗುಂದ ರೈತ ಬಂಡಾಯದ ಜಾಥಾದಲ್ಲಿ ನೂರಾರು ಪ್ರಯೋಗಗಳಲ್ಲಿ ಭಾಗ ವಹಿಸಿದ್ದಾರೆ.

ಕೇಂದ್ರ ಸರ್ಕಾರದ ರಂಗ ಮುಖೇನ ಶಿಕ್ಷಣ ಯೋಜನೆಗೆ ರಂಗಾಯಣ ಮೈಸೂರು ನಡೆಸಿಕೊಟ್ಟ 'ಶಿಕ್ಷಕರ ತರಬೇತಿ ಜಾಥಾ' ಕಾರ್ಯಕ್ರಮದ ನಾಟಕಗಳಾದ (ಬೀದಿ) ಆಕಾಶ ಬುಟ್ಟಿ, ಆಡೊಕೂಸಿಗೊಂದು ಕಾಡೊಕೂಸು, ಹೊಸ ಮೇಡಮ್, ಜೈ ಹನುಮಾನ ವಿಜಯ, ಮುಂತಾದ ನಾಟಕಗಳನ್ನು ಡಿ.ಪಿ.ಈ.ಪಿ. ಗಾಗಿ ನಿರ್ದೇಶನ ಮಾಡಿದ್ದಾರೆ.

ಗುಲಬರ್ಗಾ ದೂರದರ್ಶನ, ಟಿ.ವ್ಹಿ ಧಾರಾವಾಹಿಗಳಿಗೆ ಹಾಗೂ ಚಲನಚಿತ್ರಗಳಿಗೆ ಹಿನ್ನೆಲೆ ಗಾಯಕರಾಗಿ ಹಾಡಿದ್ದಾರೆ. ಸದ್ಯ ಇವರು ಹಾಡಿದ ಸಿ.ಡಿ., ಕ್ಯಾಸೆಟ್‌ಗಳು ಮಾರಾಟಕ್ಕಾಗಿ ಲಭ್ಯವಾಗಿವೆ.

1990 ಅಂತರ ರಾಷ್ಟ್ರೀಯ ಸಾಕ್ಷರತಾ ವರ್ಷದಲ್ಲಿ ಬೀದರ ಸಾಕ್ಷರತಾ ಸಮಿತಿಯ ವಾತಾವರಣ ನಿರ್ಮಾಣದ ಮುಖ್ಯಸ್ಥರಾಗಿ, ಹಾಗೂ ಸಾಕ್ಷರತಾ ಬೀದಿ ನಾಟಕಗಳಿಗೆ ಹಿನ್ನೆಲೆ ಗಾಯಕರಾಗಿ, ರಾಗ ಸಂಯೋಜಿಸಿದ್ದಾರೆ. ಸದರಿ ಕ್ಯಾಸೆಟ್‌ನ್ನು ಬೀದರ ಸಾಕ್ಷರತಾ ಸಮಿತಿ ಪ್ರಾಯೋಜನೆ ಮಾಡಿದೆ.

ಬಿ. ಜಯಶ್ರೀ, ಬಿ.ವ್ಹಿ. ಕಾರಾಂತ, ಸಿ. ಬಸವಲಿಂಗಯ್ಯ, ಬಸವರಾಜ ಕೋಡಗೆ, ಗಂಗಾಧರ ಸ್ವಾಮಿ ಮುಂತಾದವರ ರಂಗಭೂಮಿಯ ಗರಡಿಯಲ್ಲಿ ಪಳಗಿದ ಶ್ರೀ ಶಂಬುಲಿಂಗ ವಾಲ್ದೊಡ್ಡಿಯವರು ರಂಗಭೂಮಿಗೆ ನೀಡಿದ ಸೇವೆಯನ್ನು ಗುರುತಿಸಿ, ಕರ್ನಾಟಕ ಸರ್ಕಾರ 1998ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅದೇ ವರ್ಷ ದೆಹಲಿಯ ದಲಿತ ಸಾಹಿತ್ಯ ಅಕಾಡೆಮಿಯಿಂದ ಡಾ. ಬಿ.ಆರ್. ಅಂಬೇಡ್ಕರ ಫೆಲೋಷಿಪ್, ಬಂದಿದೆ. 1999ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದೆ. ಶ್ರೀಯುತರು 1986ರಿಂದ 1988ರ ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

(ಎಸ್‌ಆರ್‌ಜಿ)

ಶರಣಕುಮಾರ: ತಮ್ಮ ಸಂಗೀತ ಪ್ರತಿಭೆಯಿಂದ ಸಹೃದಯ ಕೇಳುಗರನ್ನು, ಸಂಗೀತ ಪ್ರೇಮಿಗಳನ್ನು ಮಂತ್ರ ಮುಗ್ಧರನ್ನಾಗಿಸಿ ಭಕ್ತಿಭಾವದಲ್ಲಿ ತನ್ಮಯಗೊಳಿಸುವ ಯುವ ಉದಯೋನ್ಮುಖ ಗಾಯಕ. ಇವರ ಸಾಧನೆ ಅನನ್ಯವಾದುದು. ಇವರು ನಾಲವಾರದ ಶ್ರೀ ಕೋರಿಸಿದ್ದೇಶ್ವರ ಮಠದಲ್ಲಿ ನಿರಂತರವಾಗಿ ಸಂಗೀತ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮಠಕ್ಕೆ ಭೇಟಿ ನೀಡಿದ ಪ್ರತಿಯೊಬ್ಬರೂ ಇವರ ಸಂಗೀತದ ಸ್ವಾದ ಸವಿದಿದ್ದಾರೆ. ಇವರು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಈಶ್ವರಯ್ಯ ಹಾಗೂ ಚೆನ್ನಮ್ಮ ದಂಪತಿಗಳ ಪುತ್ರ. ತಾತ ವಿರೂಪಾಕ್ಷಯ್ಯನವರ ಪ್ರಭಾವದಿಂದ ಸಂಗೀತದಲ್ಲಿ ಆಸಕ್ತಿ ಮೂಡಿತು. ಜಾಲಹಳ್ಳಿಯ ಶ್ರೀ ಜಯಶಾಂತೇಶ್ವರ ಮಠದಲ್ಲಿ ಓದುವಾಗಲೇ ಭಜನೆ, ಭಕ್ತಿಗೀತೆಗಳ ಕಂಠಪಾಠ ಮಾಡಿದ್ದರು.

ಬಾಲಕನಿದ್ದಾಗಲೇ 'ಬಸವಣ್ಣ ಬಂದಾನೋಡು, ಬಾಗಿಲಲ್ಲಿ ನಿಂತಾನೋ', 'ಯೋಗಿ ಬಂದ ಭಿಕ್ಷಕ್ಕೆ' ಹೀಗೆ ಸುಮಧುರ ಕಂಠಸಿರಿಯಿಂದ ಹಾಡುತ್ತಿದ್ದಾಗಲೇ ಶ್ರೀಗಳು ಈತನಲ್ಲಿದ್ದ ಪ್ರತಿಭೆ ಗುರುತಿಸಿದ್ದರು. ಅಜ್ಜ ತೀರಿ ಹೋದಾಗ ನಾಲವಾರದ ತೋಟೇಂದ್ರ ಸ್ವಾಮೀಜಿಯವರು ಬಂದಾಗ ಗುರುಹಿರಿಯರೆಲ್ಲಾ 'ಅಗಾಧ ಪ್ರತಿಭೆಯ ಈ ಬಾಲಕನ ಪ್ರೋತ್ಸಾಹ ಪೋಷಣೆಯ ಜವಾಬ್ದಾರಿ ನಿಮ್ಮದೇ' ಎಂದು ಹೇಳಿದರು. ನಾಲವಾರ ಮಠಕ್ಕೆ ಸೇರಿದ್ದು ಶರಣ ಕುಮಾರರ ಭಾಗ್ಯದ ಬಾಗಿಲು ತೆರೆದಂತಾಯಿತು. ಉಜ್ವಲ ಭವಿಷ್ಯ ನಿರ್ಮಾಣಕ್ಕೆ ಸೂಕ್ತ ಅವಕಾಶ ಸಿಕ್ಕಿತು. ಸ್ವತಃ ತೋಟೇಂದ್ರ ಶಿವಾಚಾರ್ಯರೇ ಸಂಗೀತದ ಆದ್ಯ ಗುರುಗಳಾದರು. ಈತನ ಪಾಲಿಗೆ 'ಮಠವೇ ಮೊದಲ ಪಾಠಶಾಲೆ, ಶ್ರೀಗಳೇ ತನ್ನ ಮೊದಲ ಗುರು' ಎನ್ನುವಂತಾಯಿತು.

ನಾಲವಾರ ಮಠದಲ್ಲಿ ಸಂಗೀತದ ಮೊಳಕೆಗೆ ಶ್ರೀಗಳು ಪ್ರೋತ್ಸಾಹಿಸಿ ನೀರೆರೆದರು. ಇಂದು ಚಿಗಿತು ಹೂವಾಗಿ ಅರಳಿದೆ. ಸಂಗೀತದ ಇವರ ಜೀವನಕ್ಕೆ ಅದೆಷ್ಟು ಆತ್ಮೀಯವಾಯಿತೆಂದರೆ, ಸಂಗೀತ ಬಿಟ್ಟು ತಾನು ಬದುಕಲಾರೆ, ಸಂಗೀತವೇ ತಮ್ಮ

ಉಸಿರು, ಸರ್ವಸ್ವ, ಸಂಗೀತವೇ ಸಂಗಾತಿ ಎನ್ನುವಷ್ಟು ಹತ್ತಿರ ವಾಯಿತು. ಹೀಗಾಗಿ ಸ್ನೇಹಿತರೇ ವಿರಳ. ಕಲಬುರ್ಗಿ ಜಿಲ್ಲೆ ಸಂಗೀತಗಾರ ಹನುಮಣ್ಣ ನಾಯಕ ದೊರೆಯವರ ಪ್ರೇರಣೆ. ಎಸ್. ಪಿ. ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ, ಗುಲಾಂ ಅಲಿ, ಗುರುಸ್ವಾಮಿ ಕಲಿಕೇರಿ ಇವರ ಸಾಧನೆಗೆ ಪ್ರಭಾವ ಬೀರಿದರು. ಭಕ್ತಿಗೀತೆ ತತ್ವಪದ, ಜನಪದ ಗೀತೆಗಳಲ್ಲಿ ಪ್ರಬುದ್ಧತೆಯಿದ್ದರೂ ಭಾವಗೀತೆಯ ಸೊಗಸು ಅನಿರ್ವಚನೀಯ. 15 ಭಕ್ತಿಗೀತೆಗಳ ಧ್ವನಿ ಸುರುಳಿಗಳಲ್ಲಿ ಇವರ ಕಂಠಸಿರಿಯಿದೆ.

ಈವರೆಗೆ 2000ಕ್ಕೂ ಅಧಿಕ ಸಂಗೀತ ಕಾರ್ಯಕ್ರಮಗಳನ್ನು ನೀಡಿರುವ ಶ್ರೇಯಸ್ಸು ಇವರದ್ದು. ನಾಲವಾರ ಮಠದ, ಘತ್ತರಗಿ ಶ್ರೀ ಭಾಗ್ಯವಂಶಿ, ಮೈಲಾಪುರದ ಮಲ್ಲಯ್ಯ, ಅಂದೇಲಿ ಕರುಣೇಶ್ವರ, ಸಾಂಬಶಿವಯೋಗಿಗಲ ಭಕ್ತಿಗೀತೆಗಳ ಧ್ವನಿ ಸುರುಳಿಯಿಂದಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಚಿರಪರಿಚಿತರಾಗಿದ್ದಾರೆ. ಶಿಕ್ಷಕನಾಗಬೇಕೆಂಬ ಆಕಾಂಕ್ಷೆಯಿಂದ ಇವರು ಟಿ.ಸಿ.ಎಚ್. ಮುಗಿಸಿದರು. ನಾಲವಾರ ಮಠದಲ್ಲಿ ಪಾಠದ ಜೊತೆಗೆ ಸಂಗೀತ ಪಾಠವನ್ನು ಮಕ್ಕಳಿಗೆ ಕಲಿಸುತ್ತಾರೆ. ಸದ್ಯ ಕಲಬುರ್ಗಿ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದಾರೆ. ಜೊತೆಗೆ ಸಂಗೀತದಲ್ಲಿ ಹಿಂದೂಸ್ತಾನಿ ಸೀನಿಯರ್ ಗ್ರೇಡ್ ಕಲಾವಿದರು ಹಾಗೂ ಆಕಾಶವಾಣಿ ಸುಗಮ ಸಂಗೀತ ತತ್ವಪದದಲ್ಲಿ ಬಿ ಗ್ರೇಡ್ ಕಲಾವಿದರೂ ಹೌದು. ಸಂಗೀತದಲ್ಲಿ ಅಷ್ಟೇ ಅಲ್ಲ ಸಾಹಿತ್ಯದಲ್ಲೂ ಗಮನಾರ್ಹ ಸೇವೆಯಿಂದಾಗಿ ಬಹುಮುಖ ಪ್ರತಿಭೆಯೆನಿಸಿದ್ದಾರೆ. 'ಶ್ರೀ ಕೋರಿಸಿದ್ಧೇಶ್ವರ ಸಂಸ್ಥಾನ ಮಠದ ವಿವಿಧ ಧ್ವನಿ ಸುರುಳಿಗಳ ಭಕ್ತಿಗೀತೆಗಳ 'ಶ್ರೀ ಕೋರಿ ಸಿದ್ದೇಶ್ವರ ಭಕ್ತಿ ಸಿರಿರಾಗಮಾಲೆ' ಪುಸ್ತಕ ಸಂಪಾದಿಸಿ ಗಮನ ಸೆಳೆದರು.

ಸುಮಧುರ ಗೀತೆಯಿಂದ ಭಕ್ತಿಭಾವವನ್ನು ಬಿಂಬಿಸುವ ಶರಣಕುಮಾರ ನಾಲವಾರ ಮಠಕ್ಕೆ ಆಗಮಿಸಿದ್ದ ಪ್ರಖ್ಯಾತ ಹಿರಿಯ ಕಿರಿಯ ಗಾಯಕರೊಂದಿಗೆ ಹಾಡಿದ ಕೀರ್ತಿ ಇವರದ್ದು. ಒಮ್ಮೆ ನಾಲವಾರ ಮಠಕ್ಕೆ ಬಂದಿದ್ದ ರಾಜಕುಮಾರ ಅವರೂ ಶರಣಕುಮಾರ ನಾದ ಮಾಧುರ್ಯಕ್ಕೆ ಮೆಚ್ಚಿ, ಹರ್ಷ ವ್ಯಕ್ತಪಡಿಸಿದ್ದರು. ಸಂಗೀತ ಕ್ಷೇತ್ರದಲ್ಲಿ ಒಂದೊಂದೇ ಮೆಟ್ಟಿಲನ್ನು ಹತ್ತುತ್ತ ಸತತ ಅಭ್ಯಾಸ. ಶ್ರದ್ಧೆಯಿಂದ ಸಂಗೀತದಲ್ಲೇ ನಿರತರಾಗಿರುವ ಇವರು ವಚನ ಸಾಹಿತ್ಯಕ್ಕೆ ಸಂಗೀತದ ಹೊಸ ಸ್ಪರ್ಶ ನೀಡಿ, ಹಿಂದುಳಿದ ಹೈದ್ರಾಬಾದ್ ಕರ್ನಾಟಕದಲ್ಲಿ ಎಲ್ಲರ ಮನೆ–ಮನಗಳನ್ನು ಮುಟ್ಟಿದ್ದಾರೆ.

ತಾವು ಬೆಳೆಯುವುದರ ಜೊತೆಗೆ ತಮ್ಮಂತೆ ನೂರಾರು ಜನ ಉದಯೋನ್ಮುಖ ಕಲಾವಿದರನ್ನು ಬೆಳೆಸಿದ್ದಾರೆ. ಭಕ್ತಿ ಗೀತೆಯನ್ನು ತನ್ಮಯರಾಗಿ ಹಾಡುವ ಇವರು ಮನಸ್ಸನ್ನು ಪ್ರಫುಲ್ಲವಾಗಿ ಅರಳುವಂತೆ ಮಾಡಿ ಬಿಡಬಲ್ಲರು. ಇವರು ಹಾಡುವ ಹಾಡು. 'ಗುಣವಂತೆಯಾಗಿ ಬಾಳಿ ಸತ್ಕೀರ್ತಿ ಪಡೆಯಿರಮ್ಮ ಪತಿವ್ರತೆಯರ ದಾರಿಯಲ್ಲಿ ನಡೆದು ಸದ್ಗತಿಯ ಪಡೆಯಿರಮ್ಮ' ಕೇಳುಗರನ್ನು ಮನಸೂರೆಗೊಳ್ಳುತ್ತದೆ. ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ ಇವರ ಸುಶ್ರಾವ್ಯ ಸಂಗೀತ. ಇವರ ಸರಳ, ಸಜ್ಜನಿಕೆ, ವಿನಯ ಪೂರ್ವಕ ಭಾವನೆ, ಆತ್ಮೀಯತೆ ಇವರ ವ್ಯಕ್ತಿತ್ವಕ್ಕೊಂದು ಮೆರಗು ನೀಡಿವೆ.

(ಎಸ್‌ವಿಜೆ)

ಶರಣಪ್ಪ ದೇಸಾಯಿ: ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ, ಸಮಾಜ ಸೇವೆ ಹೀಗೆ ಹಲವು ಕ್ಷೇತ್ರಗಳಲ್ಲಿ ಗಣನೀಯ ಸೇವೆಗೈಯುತ್ತಿರುವ ನಟ. ದೈಹಿಕ ಶಿಕ್ಷಕ. ಕಲಬುರ್ಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಮಣ್ಣೂರ ಗ್ರಾಮದವರು.

ತಂದೆ ವೀರಣ್ಣ ದೇಸಾಯಿ. ತಾಯಿ ನೀಲಮ್ಮ ದೇಸಾಯಿ. ಹಿರೇಜೇವರ್ಗಿಯ ರೈತ ಕುಟುಂಬದಲ್ಲಿ ಜನಿಸಿದರು. ಹುಟ್ಟೂರಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿ, 1961ರಲ್ಲಿ ಶ್ರೀ ಶಾಂತಲಿಂಗೇಶ್ವರ ಪ್ರೌಢ ಶಾಲೆಯಲ್ಲಿ ಮೆಟ್ರಿಕ್ಯೂಲೇಷನ್, ಅನಂತರ ದೈಹಿಕ ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿ ಮಾದನಹಿಪ್ಪರಗಾದ ಶ್ರೀ ಬಸವೇಶ್ವರ ಪ್ರೌಢ ಶಾಲೆ ದೈಹಿಕ ಶಿಕ್ಷಕರಾಗಿ ಸೇವೆಗೆ ಸೇರಿದರು (1965). 1969–1970ರಲ್ಲಿ ಸರಕಾರಿ ಸೇವೆ ಆರಂಭಿಸಿದರು.

ಇವರು ವೃತ್ತಿಯಲ್ಲಿ ದೈಹಿಕ ಶಿಕ್ಷಕರಾದರೂ ಪ್ರವೃತ್ತಿಯಿಂದ ರಂಗ ಕಲಾವಿದರು. ಸಮಾಜ ಸೇವೆ, ಸಾಹಿತ್ಯ ಹಾಗೂ ಸಂಘಟನೆಯಲ್ಲಿ ದೇಸಾಯಿ ಮಾಸ್ತರದು ಎತ್ತಿದ ಕೈ. ಇವರಿಗೆ ನಟನೆಯ ಬಗ್ಗೆ ಎಷ್ಟು ಆಸಕ್ತಿ ಇದೆ ಎಂದರೆ, ತಮ್ಮ ಪ್ರೌಢಾವಸ್ಥೆಯವರೆಗೆ ಸುಮಾರು 40 ನಾಟಕಗಳಲ್ಲಿ ರಂಗ ನಟರಾಗಿ ಅಭಿನಯಿಸಿದ್ದಾರೆ. ಕಲಾ ಕುಸುಮ ಹಾಗೂ ನಟ ಭೈರವ ಎಂದು ಜನಮನ್ನಣೆ ಪಡೆದ ರಂಗಭೂಮಿಯ ಮಹಾನ್ ಚೇತನವಾಗಿದ್ದಾರೆ.

ಇವರು ಅಭಿನಯಿಸಿದ ಪ್ರಮುಖ ನಾಟಕಗಳೆಂದರೆ ಚಿತ್ರಾಂಗದೆ, ರಕ್ತದೀಪ, ಜೀವನಯಾತ್ರೆ, ತವರೂರು, ಬಂಜೆ ತೊಟ್ಟಿಲು, ಕಳಂಕಪ್ರಾಯ, ನಗಬೇಕೋ ಅಳಬೇಕೋ, ದಸರಾ, ವಿಷದ ಜಂಗು, ಆದರ್ಶ ಪ್ರೇಮ, ಪವಿತ್ರ ಪ್ರೇಮ, ನಾಗರ ಪಂಚಮಿ ಮುಂತಾದವುಗಳಲ್ಲಿ ನಾಯಕನ ಪಾತ್ರ ಸಮರ್ಥವಾಗಿ ನಿರ್ವಹಿಸಿದ್ದಾರೆ. ಖಳನಾಯಕನ ಪಾತ್ರ, ಸ್ತ್ರೀ ಪಾತ್ರ ಹಾಗೂ ಪೋಷಕ ನಟರಾಗಿಯೂ ಎಲ್ಲಾ ಬಗೆಯ ಪಾತ್ರಗಳನ್ನು ದೇಸಾಯಿ ಅವರು ಲೀಲಾಜಾಲವಾಗಿ ಅಭಿನಯಿಸಿ ಜನಮೆಚ್ಚುಗೆ ಪಡೆದ ನುರಿತ ಕಲಾವಿದರೆನಿಸಿಕೊಂಡಿದ್ದಾರೆ. ಇವರು ಜಿಲ್ಲಾ ಗೆಳೆಯರ ಬಳಗ ಕಲಬುರ್ಗಿ ಇವರಿಂದ ಜ್ಞಾನ ರತ್ನ ಪ್ರಶಸ್ತಿ ಪಡೆದಿದ್ದಾರೆ.

(ಎಸ್‌ಎಂಬಿ)

ಶರಣಪ್ಪಾ ಫತ್ತೇಪೂರೆ: ಕಲಾರಾಧಕ. ಇವರು ಬೀದರ್ ಬಳಿ ದುಬಲಗುಂಡಿ ಗ್ರಾಮದಲ್ಲಿ ಕಟ್ಟಿಸಿದ ಮನೆಯೂ. ಒಂದು ಕಲಾ ಮಂದಿರವೇ ಆಗಿದೆ. ನಿಜಾಮರ ಶೈಲಿಗೆ ಹತ್ತಿರವಾದ ಕಲಾತ್ಮಕ ವಿನ್ಯಾಸದಿಂದ ಕೂಡಿದ ಈ ಮನೆ ಒಂದು ವಸ್ತು ಸಂಗ್ರಹಾಲಯವನ್ನೇ ಹೋಲುತ್ತದೆ.

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಿಂದ 24 ಕಿ.ಮೀ. ದೂರದಲ್ಲಿ ಪಶ್ಚಿಮ ದಿಕ್ಕಿಗೆ ದುಬಲಗುಂಡಿ ಎಂಬ ಚಿಕ್ಕ ಗ್ರಾಮವಿದೆ. ಹಿಂದಿನಿಂದಲೂ ತನ್ನದೇ ಆದಂಥ ಘನತೆ, ಗೌರವಗಳನ್ನು ಹೊಂದಿದ್ದು ಗ್ರಾಮದ ಗೌರವಕ್ಕೆ ಕಾರಣೀಭೂತರಾದವರೆಂದರೆ ನಿಜಾಮನ ನಿಕಟವರ್ತಿಯಾಗಿದ್ದ ಶ್ರೀಮಂತ ವ್ಯಕ್ತಿ ಫತ್ತೇಪೂರೆ ಕುಟುಂಬದ ಶರಣಪ್ಪಾ ಫತ್ತೇಪೂರೆಯವರು.

ಇವರು ಸರಳ ಜೀವಿಯಾಗಿದ್ದು ನಂಬಿಕೆ, ದಯೆ ಮತ್ತು ದಾಕ್ಷಿಣ್ಯ, ಧರ್ಮದ ಬಗ್ಗೆ ಅಭಿಮಾನ ಎಲ್ಲವೂ ಇವರಲ್ಲಿ ಮನೆ ಮಾಡಿಕೊಂಡಿದ್ದುವು. ಇವರನ್ನು 'ಬಡವರ ತಂದೆ' ಎಂದೇ ಹೊಗಳುತ್ತಿದ್ದರು. 'ನಿನ್ನನ್ನು ನೀನು ನಂಬು, ನಂತರ ದೇವರು ಅದಕ್ಕೆ ನೆರವಾಗುವನು' ಎಂಬ ಪಾಶ್ಚಿಮಾತ್ಯ ಪಂಡಿತರ ಅಭಿಪ್ರಾಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. 'ದಯವೇ ಧರ್ಮದ ಮೂಲವಯ್ಯಾ' ಎಂಬ ಬಸವಣ್ಣನವರ ವಚನ ಇವರ ಬದುಕಿನ ಉಸಿರಾಗಿತ್ತು.

ಧರ್ಮವು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಉಕ್ತಿ ಇವರ ಆದರ್ಶ. ಇದರ ಪ್ರತೀಕವಾಗಿ ಇವರು ಪ್ರತಿ ವರ್ಷ ದಸರಾ ಹಬ್ಬದಂದು ಹತ್ತು ದಿವಸಗಳವರೆಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಾಟು ಮಾಡಿ ಅನೇಕ ಪಂಡಿತರು ಹಾಗೂ ಕಲಾವಿದರನ್ನು ಬರಮಾಡಿಕೊಂಡು ಸರ್ವಧರ್ಮ ಸಮ್ಮೇಳನದಂತೆ ಈ ಕಾರ್ಯಕ್ರಮವನ್ನು ನೆರವೇರಿಸುತ್ತಿದ್ದರಂತೆ.

ಇವರ ವಂಶಾವಳಿಯ ಇತಿಹಾಸವನ್ನು ನೋಡಿದಾಗ ಇವರ ಸಾಂಸ್ಕೃತಿಕ ಹಿನ್ನೆಲೆ ತುಂಬಾ ಮಹತ್ವಪೂರ್ಣವಾಗಿದ್ದು ಒಳ್ಳೆಯ ಆಚಾರ, ವಿಚಾರ, ಸಂಪ್ರದಾಯ. ರೀತಿ–ನೀತಿ ಧರ್ಮದ ಬಗ್ಗೆ ಅಭಿಮಾನ, ಗುರು–ಲಿಂಗ ಜಂಗಮರಲ್ಲಿ ನಂಬಿಕೆ ಇರುವುದು ಕಂಡುಬರುತ್ತದೆ.

ಇವರು ಕಲಾಪ್ರೇಮಿಗಳಾಗಿದ್ದು ತಮ್ಮ ಮನೆಯನ್ನು ಸುಂದರವಾಗಿ ವೈವಿಧ್ಯಪೂರ್ಣವಾಗಿ ಕಟ್ಟಿಸಿದ್ದಾರೆ. ಮನೆಯ ಹೊರಗಿನ ದೃಶ್ಯವನ್ನು ನೋಡಿದರೆ ಬ್ರಿಟಿಷ್ ಮಾದರಿಯಿಂದ ಕೂಡಿದ್ದಾಗಿದೆ. ಇವರು ಕಟ್ಟಿಸಿರುವ ಶೈಲಿ ಇಂದಿನ ಕಲಬುರ್ಗಿಯಲ್ಲಿರುವ ಪ್ರವಾಸಿ ಮಂದಿರದ ಶೈಲಿಯನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆ. ಹಾಗೂ ಅಂದಿನ ನಿಜಾಮರ ಶೈಲಿಗೆ ನಿಕಟವಾಗಿದೆ. ಆ ಮನೆಯನ್ನು ನೋಡುತ್ತಿದ್ದರೆ ನಮಗೆ ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವಂಥ ರಾಯಚೂರು ಜಿಲ್ಲೆಯ ಗಾಜಿನ ಗೌಡರ ಮನೆ ನೆನಪಾಗುತ್ತದೆ. ಏಕೆಂದರೆ ಈ ಮನೆ ಕೂಡ ಅಷ್ಟೇ ಕಲಾತ್ಮಕವಾಗಿ ಸುಂದರವಾದ ಕರಕುಶಲತೆಯಿಂದ ಕೂಡಿದ್ದಾಗಿದೆ.

ಈ ಮನೆ ಪ್ರವೇಶಿಸಲು ಐದು ಬಾಗಿಲುರುವುದು. ಈ ಮನೆಯ ವಿಶೇಷತೆ ಈ ಬಾಗಿಲುಗಳು ಹೊರಗಿನ ಜನರಿಗಾಗಿ ಮಹಿಳಾಯರಿಗಾಗಿ ಹಾಗೂ ಬಂಧು ಮಿತ್ರರಿಗಾಗಿ ಹೀಗೆ ಬೇರೆ ಬೇರೆಯವರಿಗಾಗಿ ಪ್ರತ್ಯೇಕ ಬಾಗಿಲುಗಳಿಂದ ಪ್ರವೇಶವಿತ್ತು. ಮನೆಯ ಮಧ್ಯದ ಬಾಗಿಲಿನಿಂದ ಪ್ರವೇಶ ಪಡೆದ ಮೊದಲ ಕೋಣೆಯಿಂದಲೇ ಕಲಾಕೃತಿಗಳು ಹಾಗೂ ಕರಕುಶಲ ವಸ್ತುಗಳನ್ನು ನಾವು ಕಾಣುತ್ತೇವೆ. ಅಲ್ಲಿಂದ ಕಲ್ಪನೆ ಮೂಡುವಂತೆ ನೀಲಿ ಆಕಾಶ ಹಾಗೂ ಅದರಲ್ಲಿ ಕಂಗೊಳಿಸುವಂತೆ, ವರ್ಣ ಲೇಪನ ಮಾಡಿರುವುದನ್ನು ನಾವು ಇಂದಿಗೂ ಕಾಣಬಹುದು. ಇಲ್ಲಿಂದ ಇವರ ಮನೆ ಹೃದಯ ಬಿಂದುವಾದ ಅಂಗಳದಲ್ಲಿ ನಿಂತರೆ ನಮಗೆ ನಾಲ್ಕು ಪಡಸಾಲೆಗಳ ದರ್ಶನವಾಗುತ್ತದೆ. ಅಲ್ಲಿ ಪ್ರತಿ ಗೋಡೆಗೆ ಸುಂದರವಾದ ಸಂಯೋಜನೆಯಿಂದ ಕೂಡಿದ ಕಲಾಕೃತಿಗಳು, ಛಾಯಾಚಿತ್ರಗಳು ಕರಕುಶಲ ಕಲಾಕೃತಿಗಳು ಮನೆಯ ವಿನ್ಯಾಸವು ಸಾಂಪ್ರದಾಯಿಕ ಶೈಲಿಯದಾಗಿದ್ದು ಪ್ರತಿ ಭಾಗವು ಕಲಾ ವೈಭವದಿಂದ ಮೆರೆದಿದೆ. ನೋಡುಗರ ಮನಸ್ಸನ್ನು ಆನಂದಗೊಳಿಸುವ ಮನೆಯನ್ನು ಒಟ್ಟಾರೆ ನೋಡಿದರೆ ಸುಂದರ ವಸ್ತು ಸಂಗ್ರಹಾಲಯದಂತಿದೆ.

ಫತ್ತೇಪೂರೆಯವರು ಕಲಾವಿದರನ್ನು ಪೋಷಿಸಿದ್ದಾರೆ. ಇವರ ಪ್ರೋತ್ಸಾಹದಲ್ಲಿ ಚಿತ್ರಕಲಾವಿದರಾದ ಶಾಂತಲಿಂಗಪ್ಪಾ ಪಾಟೀಲ್ ಹಾಗೂ ಚನ್ನಪ್ಪಾ ಶೇರ್‌ವಾಲ ಅಲ್ಲದೆ ಅನೇಕ ಕಲಾವಿದರು ಕಲಾಕೃತಿಗಳನ್ನು ರಚಿಸಿದ್ದಾರೆ. ಇಂದಿಗೂ ನಾವು ಈ ಮನೆಯಲ್ಲಿ ಶಾಂತಲಿಂಗಪ್ಪಾ ಪಾಟೀಲ್‌ರ ಕಲಾಕೃತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಪ್ರಮುಖವಾದ ಕಲಾಕೃತಿಗಳೆಂದರೆ ಶರಣಪ್ಪಾ ಫತ್ತೇಪೂರೆಯವರ ಭಾವಚಿತ್ರ, ಅಥಣಿಯ ಮುರುಘೇಂದ್ರ ಸ್ವಾಮಿಗಳ ಚಿತ್ರ, ಮುಧೋಳ ಸ್ವಾಮಿಯ ಚಿತ್ರ, ಹಾನಗಲ್ ಕುಮಾರಸ್ವಾಮಿಗಳ ಕೃತಿ, ಚನ್ನವೀರ ಶಿವಾಚಾರ್ಯ ಸ್ವಾಮಿ, ಹೊಟಗಿ ಚಿತ್ರಗಳು ಜೀವಂತಿಕೆಯನ್ನು ಪ್ರತಿಬಿಂಬಿಸುತ್ತವೆ. ಈ ಕಲಾಕೃತಿಗಳನ್ನು ಸುಮಾರು 1920ರಿಂದ 27ರ ಮಧ್ಯದಲ್ಲಿ ರಚಿಸಲಾಗಿದೆ ಎಂದು ತಿಳಿಯುತ್ತದೆ. ಅದೇರೀತಿ ಇನ್ನೊಬ್ಬ ಕಲಾವಿದ ಚನ್ನಪ್ಪಾ ಶೇರದಾಳೆಯವರು ಮಹಾರಾಷ್ಟ್ರದ ಸೊಲ್ಲಾಪೂರದವರಾಗಿದ್ದರು. ಇವರು ಚಿತ್ರಿಸಿರುವ ಕಲಾಕೃತಿಗಳೆಂದರೆ ರಂಭಾಪುರಿ ಜಗದ್ಗುರುಗಳು ಶರಣಪ್ಪಾ ಫತ್ತೇಪೂರೆ ಹಾಗೂ ಇವರ ಮನೆಯ ಕೆಲವು ಸದಸ್ಯರ ಚಿತ್ರಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಕಲಾವಧಿ 1922ರಿಂದ 1942.

ಇವರ ಅನಂತರ ಅಷ್ಟೊಂದು ಕಲಾವಿದರು ಇಲ್ಲಿ ಸೇವೆ ಸಲ್ಲಿಸಿರುವುದನ್ನು ಕಾಣುವುದಿಲ್ಲ ಹಾಗೂ ಇನ್ನೊಬ್ಬ ಕಲಾವಿದರಾದ ದೀಕ್ಷಿತ್ ಎಂಬುವವರು ಫತ್ತೇಪೂರೆಯವರು ಹೊಟಗಿ ಗುರುಗಳೊಂದಿಗಿರುವ ಚಿತ್ರವನ್ನು ಚಿತ್ರಿಸಿದ್ದಾರೆ. ಅದೇ ರೀತಿ ಗದುಗಿನಲ್ಲಿ ಪ್ರಸಿದ್ಧ ಕಲಾವಿದ ಎಂ.ಎ. ಚೆಟ್ಟಿಯವರು ಜಲವರ್ಣ ಮಾಧ್ಯಮದಲ್ಲಿ ರಚಿಸಿರುವ ಶರಣಪ್ಪಾ ಫತ್ತೇಪೂರೆಯವರ ಮಗಳ ಚಿತ್ರವನ್ನು ಕಾಣುತ್ತೇವೆ.

ಮನೆಯನ್ನು ಪ್ರವೇಶಿಸಿದರೆ ಮೊದಲು ಕಾಣುವುದೇ ಬಸವಣ್ಣನವರ ಚಿತ್ರ. ಈ ಚಿತ್ರ ವರ್ಣ ಸಂಯೋಜನೆಯಿಂದ ಕೂಡಿದೆ. ಅಲ್ಲದೆ ಇಲ್ಲಿ ಕಪ್ಪು–ಬಿಳುಪು ಛಾಯಾಚಿತ್ರಗಳನ್ನು ಕಾಣುತ್ತೇವೆ. ಈ ಛಾಯಾ ಚಿತ್ರಗಳಲ್ಲಿ ಕೆಲವು ಛಾಯಾಚಿತ್ರವೋ ಕಲಾಕೃತಿಯೋ ಎಂಬ ಭ್ರಮೆ ಮೂಡಿಸುವಂತೆ ಇವೆ. ಈ ಮನೆಯ ಪ್ರತಿಹಂತದಲ್ಲೂ ಪ್ರತಿ ವಸ್ತುಗಳಲ್ಲಿಯೂ ಸೌಂದರ್ಯ

ಪ್ರಜ್ಞೆ ಹಾಗೂ ಕಲಾತ್ಮಕ ವಿನ್ಯಾಸಗಳಿವೆ. ಇವರ ಮನೆಯಲ್ಲಿ ವಿವಿಧ ಬಗೆಯ ವಿನ್ಯಾಸಗಳುಳ್ಳ ದೀಪಗಳು ಬಳಕೆಯಲ್ಲಿದ್ದವು.

ಫತ್ತೇಪೂರೆಯವರು ತುಂಬಾ ಸಾಂಪ್ರದಾಯಿಕ ಸುಸಂಸ್ಕೃತ ಮನೆತನದವರಾದ್ದರಿಂದ ಇವರ ಮನೆಯಲ್ಲಿ ಧಾರ್ಮಿಕ ಸಾಂಸ್ಕೃತಿಕ ಪದ್ಧತಿ ರೂಢಿಸಿಕೊಂಡು ಬಂದಿದ್ದರು. ಆದ್ದರಿಂದ ಮನೆಯಲ್ಲಿಯ ಪೂಜಾ ಸಾಮಗ್ರಿಗಳಲ್ಲಿ ವಿವಿಧ ದೇವರ ವಿಗ್ರಹಗಳು ಹಾಗೂ ಬೆಳ್ಳಿಯಲ್ಲಿ ಉಬ್ಬು ಚಿತ್ರಗಳುಳ್ಳ ದೇವರ ವಿಗ್ರಹಗಳು ತುಂಬಾ ಸುಂದರವಾದ ಕರಕುಶಲ ಕೆತ್ತನೆಯಿಂದ ಕೂಡಿದ್ದಾಗಿವೆ.

ಹೂದಾನಿ, ಎಲೆ ಅಡಿಕೆ ಡಬ್ಬ, ಪೀಕದಾನಿಗಳು ಹಾಗೂ ಪಿಂಗಾಣಿ ಪಾತ್ರೆಗಳ ಮೇಲೆ ಸುಂದರವಾದ ಹಾಗೂ ಕಲಾತ್ಮಕವಾದ (ಡಿಜೈನ್) ಸಂಯೋಜನೆಯಿಂದ ಕೂಡಿದ ಕರಕುಶಲ ಕಲೆಗಳನ್ನು ಕಾಣುತ್ತೇವೆ. ಮನೆಯ ಬಾಗಿಲು, ಕಿಟಕಿ, ಜಂತಿ, ಮೇಜು, ಕಪಾಟು ಹಾಗೂ ತೊಟ್ಟಿಲು ಅಲ್ಲದೆ ಕಟ್ಟಿಗೆಯಲ್ಲಿ ನಿರ್ಮಿಸಿರುವ ಅನೇಕ ಸಾಮಗ್ರಿಗಳ ಮೇಲೆ ಕಸೂತಿ ಮಾಡಿರುವುದನ್ನು ಕಾಣುತ್ತೇವೆ.

ತಮ್ಮ ಮನೆ ಸುಂದರವಾಗಿ ಕಾಣಲೆಂದು ಕಲಾತ್ಮಕ ವಸ್ತುಗಳನ್ನು ಸಂಗ್ರಹಿಸುವುದರ ಜೊತೆಗೆ ಫತ್ತೇಪೂರೆಯವರು ಸಮಾಜದ ಬೇರೆ ಬೇರೆ ಕ್ಷೇತ್ರಗಳಿಗೆ ಸಾಕಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ಸಂಗೀತವನ್ನು ಆಲಿಸುವ ಹುಚ್ಚು ಇವರಿಗೆ ಬಹಳ ಇತ್ತು. ಆದ್ದರಿಂದ ಹತ್ತು ದಿನಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ತಮ್ಮ ಊರ ಸುತ್ತಲಿನ ಸಂಗೀತಗಾರರಿಗೆ ಹಾಗೂ ಮುಂಬೈ, ಪುಣೆ, ಹೈದ್ರಾಬಾದಗಳಿಂದ ಸಂಗೀತಗಾರರನ್ನು ಬರಮಾಡಿಕೊಂಡು ಅವರಿಗೆ ಹಾಡಲು ಅವಕಾಶ ಕಲ್ಪಿಸುತ್ತಿದ್ದರು.

ಇವರ ಸ್ನೇಹಿತ ಪಂಚಾಕ್ಷರಿ ಗವಾಯಿ ಬಿಲ್ವಕೊಂಡಿ ಹಿರೇಮಠ ಶಹಾಪೂರ 'ಸಂಗೀತ ರತ್ನ' ಎಂಬ ಬಿರುದು ಪಡೆದವರಾಗಿದ್ದು ಸಂಗೀತದ ಮುಖಾಂತರ ತಮ್ಮ ಸ್ನೇಹಿತನ ಮನರಂಜಿಸುತ್ತಿದ್ದರಂತೆ ಸಂಗೀತದಲ್ಲಿ ಆಸಕ್ತಿ ಇರುವ ಜನರು ಸುಬದ್ಧವಾಗಿ ರಾಗಗಳ ಸಮೇತ ಸಂಗೀತ ಕಲಿಯಲಿ ಎನ್ನುವ ಉದ್ದೇಶದಿಂದ ರೇಣುಕಾಚಾರಿಯೆಂಬ ಪುಸ್ತಕವನ್ನು ಪಂಚಾಕ್ಷರಿ ಗವಾಯಿ ಬರೆದರು. ಈ ಪುಸ್ತಕದಲ್ಲಿ ಇವರು ಬಸಣ್ಣನವರ ವಚನಗಳಿಗೆ ಭೀಮಪಲಾಸ, ಮಲ್‌ಕಂಸ ಮುಂತಾದವು ರಾಗಗಳನ್ನು ಹಾಕಿದರು. ಅಲ್ಲದೆ ಸಿದ್ಧಾಂತ ಶಿಖಾಮಣಿಯೊಳಗಿನ 142 ಪದ್ಯಗಳಿಗೆ ಬೇರೆ ಬೇರೆ ರಾಗಗಳನ್ನು ಸಂಯೋಜಿಸಿದ್ದಾರೆ. ಕನ್ನಡದ ವಚನಗಳು, ದಾಸರ ಪದಗಳು, ತ್ಯಾಗರಾಜ ಮುಂತಾದವರ ಪದಗಳು ರಾಗದಿಂದ ಕೂಡಿ ಲಯಬದ್ಧವಾಗಿ ಸಂಗೀತಗಾರರಿಗೆ ಹಾಡಲು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಪಂಚಾಕ್ಷರಿಯವರು ಈ ಪುಸ್ತಕವನ್ನು ಬರೆದದ್ದು. ಆದರೆ ಫತ್ತೇಪೂರೆಯವರು ಬಹುಜನರಿಗೆ ಇದು ತಲುಪಲಿ ಎನ್ನುವ ಉದ್ದೇಶದಿಂದ ಪ್ರಕಟಣೆಗೆ ಧನಸಹಾಯ ಮಾಡಿದ್ದರು.

ಇವರು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕೂ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ನಿಜಾಮನ ಆಳ್ವಿಕೆಯಲ್ಲಿ ನಮ್ಮ ಪ್ರದೇಶ ಶೈಕ್ಷಣಿಕವಾಗಿ ಮುಂದುವರೆಯಬೇಕು ನಮ್ಮ ಜನ ಕನ್ನಡ ಕಲಿಯಬೇಕು ಹಾಗೂ ಅಕ್ಷರಗಳನ್ನು ಕಲಿತು ಸುಶಿಕ್ಷಿತರಾಗಿರಬೇಕೆಂದು ಫತ್ತೇಪೂರೆಯವರು ಅಂದಿನ ಕಾಲದಲ್ಲಿ ಆಶಿಸಿದ್ದರು. ಅಂದಿನ ಕಾಲದಲ್ಲಿ ಮಹಿಳೆಯರಿಗೆ ಕಲಿಕಾ ಸ್ವಾತಂತ್ರ್ಯ ಇರಲಿಲ್ಲ. ಆದರೂ ಇವರು ಸಮಾನ ಆದ್ಯತೆ ನೀಡಿದರು. ಕಲಿಯುವ ಆಸಕ್ತ ವಿದ್ಯಾರ್ಥಿಗಳಿಗೆ ಧನಸಹಾಯ ಕೂಡ ಮಾಡುತ್ತಿದ್ದರಂತೆ.

ಬೀದರ ಜಿಲ್ಲೆಯ ಭಾಗವು ಶೈಕ್ಷಣಿಕವಾಗಿ ಅತಿ ಹಿಂದುಳಿದ ಪ್ರದೇಶವಾಗಿರುವುದರಿಂದ ಫತ್ತೇಪೂರೆ ಹಾಗೂ ಅವರ ಗೆಳೆಯರು ಸೇರಿ ಬೀದರ್‌ನಲ್ಲಿ ಕರ್ನಾಟಕ ಕಾಲೇಜು ಪ್ರಾರಂಭಿಸಿ ಅದರ ಸದಸ್ಯತ್ವವನ್ನು ಐದು ವರ್ಷಗಳ ಕಾಲ ನಿಭಾಯಿಸಿದ್ದರು. ಈ ಸಂಸ್ಥೆ ಅಂದು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿ ಇಂದು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಂತಿದೆ.

ಇಲ್ಲಿನ ನೂತನ ವಿದ್ಯಾಲಯಕ್ಕೆ ಸ್ವತಃ ಇವರೇ ಧನಸಹಾಯ ಮಾಡಿದ್ದರಲ್ಲದೆ ತಮ್ಮ ಪ್ರಾಂತ್ಯದಲ್ಲಿ ತಿರುಗಿ ದೇಣಿಗೆಯನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಈ ಸಮಯದಲ್ಲಿ ನಿಜಾಮನ ಆಳ್ವಿಕೆ ಇರುವುದರಿಂದ ಇವರು ಈ ಭಾಗದ ವಿದ್ಯಾಭಿವೃದ್ಧಿಗಾಗಿ ಈ ಪ್ರಾಂತ್ಯದಲ್ಲಿ ಹೈಸ್ಕೂಲ್ ತೆಗೆಯಲು ಒಂದು ಲಕ್ಷ ರೂಪಾಯಿ ದೇಣಿಗೆಯನ್ನು ನೀಡಿದ್ದರು.

ಶಿಕ್ಷಣದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ತುಂಬಾ ಆಸಕ್ತಿಯಿಂದ ತಮ್ಮ ಸೇವೆ ಸಲ್ಲಿಸಿದ್ದಾರೆ. ಇವರು 'ಧರ್ಮವೀರ ಗ್ರಂಥ ರತ್ನಮಾಲಾ' ಎಂಬ ಶೀರ್ಷಿಕೆಯಡಿಯಲ್ಲಿ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದರು ಅಂದು ವೀರಶೈವರ ಧರ್ಮಗ್ರಂಥಗಳ ಪ್ರಕಟಣೆಗೆ 20 ಸಾವಿರ ರೂಪಾಯಿ ದೇಣಿಗೆ ಕೊಟ್ಟಿದ್ದರಂತೆ.

ಫತ್ತೇಪೂರೆಯವರ ವಿಚಾರಗಳು ಉನ್ನತ ಮಟ್ಟದ್ದಾಗಿದ್ದುವು. ಧಾರ್ಮಿಕವಾಗಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ತಮ್ಮನ್ನು ಅರ್ಪಿಸಿಕೊಂಡು ದುಡಿದಿದ್ದನ್ನು ಮೆಚ್ಚಿದ ಜನ ಇವರಿಗೆ ಬಿರುದು ಹಾಗೂ ಪ್ರಶಸ್ತಿ ಪತ್ರಗಳನ್ನು ಕೊಟ್ಟು ಸನ್ಮಾನಿಸಿದ್ದಾರೆ. ನಿಜಾಮ ಆಳ್ವಿಕೆಯಲ್ಲಿ ಕಲಾವೈಭವದಿಂದ ಮೆರೆದ ಮಹಾನ್ ನಾಯಕನ ಬದುಕು ಎಷ್ಟು ವಿಜೃಂಭಣೆಯಿಂದ ಕೂಡಿತ್ತು ಎಂಬುದನ್ನು ನಾವು ಇಂದು ಅವರ ಮನೆಯನ್ನು ಕಂಡಾಗ ಅನಿಸುವುದು.

(ಎಸ್‌ಪಿಡಬ್ಲ್ಯೂ)

ಶರಣಬಸವೇಶ್ವರ ಸಂಸ್ಥಾನದಲ್ಲಿರುವ ವರ್ಣಚಿತ್ರಗಳು: ವೈವಿಧ್ಯ ಪೂರ್ಣವೂ, ಶ್ರೀಮಂತವೂ ಆದ ದೃಶ್ಯಕಲೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ರಾಜಮಹಾಜರ ಕಾಲದಿಂದ ಅನೇಕ ಕಲಾವಿದರಿಂದ ತಮ್ಮದೇ ಆದ ಶೈಲಿ ಮತ್ತು ತಂತ್ರಗಾರಿಕೆಯ ಭಾವನೆಗಳು ವರ್ಣಚಿತ್ರ ಕಲೆಯಲ್ಲಿ ವ್ಯಕ್ತಪಡಿಸಿದ್ದಾರೆ. ಮೊಗಲ್ ಶೈಲಿ, ರಾಜಪೂತ ಶೈಲಿ, ರಾಜಸ್ತಾನಿ ಶೈಲಿ, ಪಹಾರಿ ಶೈಲಿ, ಆದಿವಾಸಿ ಜನಾಂಗದ ಶೈಲಿ, ತಂಜಾವೂರು ಶೈಲಿ, (ಮೈಸೂರು ಶೈಲಿ) ಗರುಡಾದ್ರಿ ಶೈಲಿ, ಹೀಗೆ ಹತ್ತು ಹಲವು ಶೈಲಿ



ಅಕ್ರೇಲಿಕ್ ಮಾಧ್ಯಮದ ಕಲಾಕೃತಿ

ಯಲ್ಲಿ ತಮ್ಮದೇ ಆದ ಪ್ರಾಂತದಲ್ಲಿ ಬೇರೆ ಬೇರೆ ರಾಜರ ಆಸ್ಥಾನದಲ್ಲಿ ಕಲಾಕೃತಿಗಳು ಸುಂದರವಾಗಿ ರಚನೆ ಮಾಡಿರುತ್ತಾರೆ. ಮತ್ತು ಈ ಕಲಾ ಕೃತಿಗಳಲ್ಲಿ ಧರ್ಮ, ಸಂಸ್ಕೃತಿಯನ್ನು ನೇರವಾಗಿ ಸರಳವಾಗಿ ತಿಳಿಸಿಕೊಟ್ಟಿರುತ್ತಾರೆ.

ಹಿರಿಯ ಕಲಾವಿದರಾದ ರಾಜಾ ರವಿವರ್ಮಾ, ಇವರು ವಿದೇಶದಲ್ಲಿ ಅಧ್ಯಯನ ಮಾಡಿ ವರ್ಣಚಿತ್ರಗಳು ತೆಗೆಯಲು ಕಲಿತ್ತಿದ್ದರು. ಆದರೆ ಭಾರತೀಯ ಸಂಸ್ಕೃತಿಯ ಪರಂಪರೆ, ಜನ ಜೀವನ ಚಿತ್ರಗಳು, ವ್ಯಕ್ತಿ ಚಿತ್ರಗಳು ಧರ್ಮದ ಚಿತ್ರಗಳು, ಪುರಾಣದ ಚಿತ್ರಗಳು ಇನ್ನೂ ಅನೇಕ ಸುಂದರವಾದ ಇದ್ದಕ್ಕಿದ್ದಂತೆ ನೇರವಾಗಿ ಕಲಾಕೃತಿಗಳು ರಚನೆ ಮಾಡಿರುತ್ತಾರೆ. ಇವರ ಪ್ರಭಾವದಿಂದ ಇನ್ನೂ ಅನೇಕ ಕಲಾವಿದರು, ನಿಸರ್ಗ, ಗಿಡ ಮರ, ಬಳ್ಳಿ, ಪಶು ಪಕ್ಷಿ, ದನಕರುಗಳು ನದಿ ಹಳ್ಳ ಗುಡ್ಡಗಳ ದೃಶ್ಯಗಳು ಸುಂದರವಾಗಿ ರಚನೆ ಮಾಡಿರುತ್ತಾರೆ. ಇವೆಲ್ಲಾ ಇಂದಿನ ಕಲಾವಿದರಿಗೆ, ಅಮೂಲ್ಯ ಕೊಡಗೆಗಳಾಗಿವೆ.


ಹನ್ನೊಂದನೆಯ ಶತಮಾನದ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಶರಣ ಕೊಂಡಗುಳಿ ಕೇಶಿರಾಜ ಅಂದಿನ ಕಾಲದಲ್ಲಿ ರಾಜನ ಸಮಗಾಗಿ ಕುಳಿತಕೊಂಡ ಎಕ್ಕೈಕ ವ್ಯಕ್ತಿ ಕೊಂಡಗೂಳಿ ಕೇಶಿರಾಜ, ಇವರ ಸುಂದರವಾದ ವಚನಗಳು 12ನೆಯ ಶತಮಾನದದ ಬಸವಣ್ಣನವರಿಗಿಂತ ಮೊದಲೇ ಕೇಶಿರಾಜನು ಅನುಭವದಿಂದ ಬರೆದಿರುತ್ತಾರೆ.

ವಚನಗಳ ಆಧಾರವಿಟ್ಟುಕೊಂಡು ಸುಂದರವಾದ ಕಲಾಕೃತಿಗಳು ರಚನೆಗೊಂಡಿರುತ್ತದೆ. ಇದೇರೀತಿಯಾಗಿ 18– 19 ನೆಯ ಶತಮಾನದಲ್ಲಿ ಕಲಬುರ್ಗಿ ಶರಣಬಸವೇಶ್ವರರ ಪವಾಡಗಳ ಬಗ್ಗೆ ಅನೇಕ ಕಲಾಕೃತಿಗಳು ವಿವಿಧ ಭಾಗದಿಂದ ಬಂದ ಕಲಾವಿದರು ತಮ್ಮದೇಯಾದ ಶೈಲಿ, ಭಾವನೆಗಳು ಶರಣಬಸವೇಶ್ವರರ ಪವಾಡಗಳು, ಅವರ ಬದುಕಿನ ಜೀವನದ ಕಲಾಶೈಲಿಯಾಗಿ ಈ ಕಲೆ ಬೆಳದುಬಂದಿದೆ. ಪ್ರಸ್ತುತ ಕಲಬುರ್ಗಿ ಶರಣರ ಚಿತ್ರ ಕಲೆಯೂ ಇದಕ್ಕೆ ಹೊರತಾಗಿಲ್ಲ. ಪುನರಾವರ್ತನೆಯಾದರೂ ಸಹ ಇಲ್ಲಿ ವಿಶೇಷವಾಗಿ ಕಲಬುರ್ಗಿ ಶರಣಬಸವೇಶ್ವರ ಸಂಸ್ಥಾನದ ಪರಮ ಪೂಜ್ಯ ಡಾ. ಶರಣಬಸವಪ್ಪ ಅಪ್ಪ, ಇವರು ಸಂಗೀತ, ಸಾಹಿತ್ಯ ಮತ್ತು ಚಿತ್ರಕಲೆಗಳಂತಹ ಲಲಿತಕಲೆಗಳಿಗೆ ತಮ್ಮ ಸಂಸ್ಥಾನದಲ್ಲಿ ಆಶ್ರಯವನ್ನು ನೀಡಿದ್ದರಲ್ಲದೆ ಬೇರೆ ಬೇರೆ ಕಡೆಯಿಂದ ಬಂದ ಕಲಾವಿದರು ಮತ್ತು ಸಂಸ್ಥಾನ ಕಲಾವಿದರಿಗೆ ವಿಶಿಷ್ಟ–ಸನ್ಮಾನ, ಪ್ರಶಸ್ತಿ ನೀಡಿ ಮತ್ತು ಆಶ್ರಯವನ್ನು ನೀಡಿರುತ್ತಾರೆ. ಈ ಸಂಸ್ಥಾನದಲ್ಲಿ ಸೇವೆಸಲ್ಲಿಸುತ್ತಿರುವ ಕಲಾವಿದರು ವಿವಿಧ ಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಶರಣ ಬಸವೇಶ್ವರರ ಪವಾಡಗಳ ಕಲಾಕೃತಿಗಳು ಪ್ರದರ್ಶನಗೊಂಡು ಜನ ಮೆಚ್ಚುಗೆಗೆ ಪಾತ್ರಗಳಾಗಿರುತ್ತವೆ. ಪ್ರತಿಯೊಂದು ಕಲಾಕೃತಿಗಳು ತಮ್ಮದೇ ಆದ ಭಾವನೆ ಮತ್ತು ಶರಣ ಸಂಸ್ಕೃತಿ ಎದ್ದು ಕಾಣುತ್ತದೆ. ಗುರು ಶಿಷ್ಯರ ಬಾಂಧವ್ಯ ವ್ಯಕ್ತಪಡಿಸುವುದು ಒಂದೇ ದೇಹ ಎರಡು ಮುಖದ ಶರಣಬಸವೇಶ್ವರ ವರ್ಣಚಿತ್ರಗಳು ಮಹಾದಾಸೋಹ ಮಹಾಮನೆಯಲ್ಲಿ ಭಿತ್ತಿಚಿತ್ರಗಳು ವಿವಿಧ ವರ್ಣಗಳಿಂದ ಅಲಂಕರಿಸಿರುವುದನ್ನು ನೋಡಬಹುದು. ರೇಖಾ



ಅಕ್ರೇಲಿಕ್ ಮಾಧ್ಯಮದ ಕಲಾಕೃತಿ

ವಿನ್ಯಾಸ ಅಲ್ಲದೇ ವರ್ಣ ಸಂಯೋಜನೆಯಿಂದ ಕೂಡಿದ ಶರಣರ ಬದುಕು ಮತ್ತು ಜನಜೀವನ ಚಿತ್ರಗಳು, ಗಿಡ ಮರಗಳು, ಬಳ್ಳಿ, ನದಿ ಹಳ್ಳ, ಗುಡ್ಡ ಗಾಡುಗಳು, ಪಶು ಪಕ್ಷಿಗಳು ಪ್ರಾಣಿಗಳು, ನಿಸರ್ಗದ ಕಲಾಕೃತಿಗಳು ಮಠದಲ್ಲಿ ನೋಡಲು ಎಲ್ಲಾ ಭಕ್ತರಿಗೂ ಅವಕಾಶವಿದೆ. ಅಲ್ಲದೆ ಬೇರೆ ಬೇರೆ ಶಿವಶರಣರು, ಶಿವನ ಕಲಾಕೃತಿಗಳು ಬಸವಣ್ಣನವರು ಮತ್ತು ಇವರ ಕಾಲದ ಶಿವ ಶರಣರ ಸುಂದರವಾದ, ವರ್ಣಸಂಯೋಜನೆ ನೂರಾರು ಕಲಾ ಕೃತಿಗಳು ಮಹಾದಾಸೋಹ ಸಂಸ್ಥಾನ ಮಠದಲ್ಲಿ ನೋಡಲು ಬಂದ ಭಕ್ತರಿಗೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಪ್ರತಿಯೊಂದು ಕಲಾಕೃತಿಯು ಒಂದೊಂದು ಸಂದೇಶ ಕೊಟ್ಟು 'ಕಾಯಕ ದಾಸೋಹದ' ಅರಿವನ್ನುಂಟು ಮಾಡುವ ಶರಣರ ಕಲಾಕೃತಿ ಗಳಾಗಿರುತ್ತವೆ. ವರ್ಣಮಯ ಕಲಾಕೃತಿ, ವರ್ಣಮಯ ಶಿಲ್ಪ ಕಲೆಗಳು ಸುಂದರವಾಗಿ ಸಂಯೋಜನೆಗೊಂಡ ಮಹಾ ದಾಸೋಹ ಸಂಸ್ಥಾನ ಮಠ ಸ್ವರ್ಗದಂತೆ ಭಾಸವಾಗುತ್ತದೆ. ಇಡೀ ಶರಣಬಸವೇಶ್ವರ ಸಂಸ್ಥಾನದ ಆವರಣವು ಮನಸ್ಸಿಗೆ ನೆಮ್ಮದಿ ಕೊಡುವ ಶಿವಸ್ಥಾನವಾಗಿರುತ್ತದೆ. ವರ್ಣಚಿತ್ರಗಳು ನೋಡಿ ಕಣ್ಣಿಗೆ ಸಂತೋಷವುಂಟು ಮಾಡುತ್ತವೆ. ಚಿಕ್ಕ ಮಗುವಿನಿಂದ ಗಣ್ಯಮಾನ್ಯರು ವರ್ಣಚಿತ್ರಗಳು ನೋಡಿಕೊಂಡು ಎಲ್ಲರಲ್ಲಿ ಸಂತೋಷ ಹಂಚಿಕೊಳ್ಳುತ್ತಾರೆ. ಹೆಸರಾಂತ ಕಲಾವಿದರ ಹೆಸರು ಗಳು ಹೆಸರಿಸಲಾಗಿದೆ. ದಿ. ಶಂಕರರಾವ್ ಆಳಂದಕರ್, ಡಾ. ಎಸ್.ಎಂ. ಪಂಡಿತ್, ಡಾ. ಜೆ.ಎಸ್. ಖಂಡೇರಾವ್, ಶ್ರೀ.



ಅಕ್ರೇಲಿಕ್ ಮಾಧ್ಯಮದ ಕಲಾಕೃತಿ

ಎ.ಎಸ್. ಪಾಟೀಲ, ಪೋಪುರಿ ರಾಜಾರಾವ, ವ್ಹಿ.ಬಿ. ಬಿರಾದಾರ, ಚಿತ್ರಲೇಖಾ ಪಾಟೀಲ, ಶ್ರೀಮತಿ ಶಾಂತಲಾ ನಿಷ್ಠಿ, ಶ್ರೀಮತಿ ನಂದಿನಿ ನಿಷ್ಠಿ, ಗಂಗಾಣಿ ಎಸ್, ಶ್ರೀ ಸುಬ್ಬಯ್ಯ ಎಂ. ನೀಲಾ, ಬಸವರಾಜ, ಡಾ. ವಿಶ್ವೇಶ್ವರಿ ತಿವಾರಿ, ಶಾಹೇದ ಪಾಶಾ, ಬೇರೆ ಬೇರೆ ಭಾಗದಿಂದ ಬಂದ ಕಲಾವಿದರು, ಸುನೀಲ ಜಾಧವ, ಆರ್.ಎಂ. ಹಡಪದ, ಹಿರೇಗೌಡರ, ರಾಮಚಂದ್ರನ್, ರಾಣಿ ರೇಖಾ, ಚೆಟ್ಟಿ, ರಾಜಮಹೇಂದ್ರಿ ದಂಪತಿಗಳು, ವಿಜಯ ಕದಮ್, ಸುಭಾಸ ಭಾಹುಲಕರ್, ಸಿಂಪಿ, ಇನ್ನೂ ಅನೇಕ ಕಲಾವಿದರು ಶರಣರ ವರ್ಣಚಿತ್ರಗಳನ್ನು ಸುಂದರವಾಗಿ ರಚನೆ ಮಾಡಿ ಸಂಸ್ಥಾನ ಮಠಕ್ಕೆ ಕೊಡುಗೆಯಾಗಿ ನೀಡಿದ್ದಾರೆ.

(ಎಸ್‌ಎಂಎನ್)

ಶರಣು ಜಾಲಹಳ್ಳಿ: ಸಂಗೀತ ಕಲಾವಿದ. 'ಗಾನ ಕೋಗಿಲೆ' ಯೆಂದೇ ಹೆಸರಾಗಿದ್ದಾರೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ 'ಎನಗೆ ನಿಮ್ಮ ನೆನಹಾದಾಗಲೇ ಉದಯ, ಎನಗೆ ನಿಮ್ಮ ಮರೆವಾದಾಗಲೇ ಅಸ್ತಮಾನ' ಎನ್ನುವ ಬಸವಣ್ಣನವರ ವಚನ ಹಾಡುತ್ತಿದ್ದರೆ ಎಂಥವರೂ ಸಹ ಕ್ಷಣ ಹೊತ್ತು ರೋಮಾಂಚನಗೊಳ್ಳದೇ ಇರಲಾರರು. ತೋಟೇಂದ್ರ ಶಿವಾಚಾರ್ಯರ ಪ್ರೀತಿಯ ಶಿಷ್ಯನಾಗಿ ಹಿಂದುಸ್ತಾನಿ ಸಂಗೀತದಲ್ಲಿ ಸೀನಿಯರ್ ಗ್ರೇಡ್ ಪದವಿ ಪಡೆದರು. ಸಂಗೀತ ಕಲಿಸಿದ ಗುರು ಪಿ.ಎಸ್. ಸಾಲಿಮಠ ಗವಾಯಿಗಳು. ಆಕಾಶವಾಣಿ, ದೂರ ದರ್ಶನ ಕಲಾವಿದರಾಗಿ ಗುರುತಿಸಿಕೊಂಡಿದ್ದಾರೆ. ಶರಣು ಇದು ವರೆಗೆ ಸುಮಾರು 25 ಧ್ವನಿ ಸುರುಳಿ (ಕ್ಯಾಸೆಟ್) ಗಳಿಗೆ ಕಂಠ ದಾನ ಮಾಡಿದ್ದು, 250ಕ್ಕೂ ಹೆಚ್ಚು ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ.

ನಾಡಿನ ಶ್ರೇಷ್ಠ ಹಿನ್ನೆಲೆ ಗಾಯಕರಾದ ಬಿ.ಆರ್. ಛಾಯಾ, ಸಂಗೀತಾ ಕಟ್ಟಿ, ನಂದಿತಾ, ಸುಜಾತಾ ದತ್ತ, ಹನುಮಣ್ಣ ನಾಯಕ ದೊರೆ, ವಿ. ಮನೋಹರ, ಚಂದ್ರಿಕಾ ಗುರುರಾಜ್ ಅವರೊಂದಿಗೆ ಧ್ವನಿ ಬೆರಸಿ ಹಾಡಿ ಹೌದೆಸಿನಿಕೊಂಡಿದ್ದಾರೆ. ಭಕ್ತಿ ಸಿರಿ ರಾಗ ಮಾಲೆ ಎನ್ನುವ ನಾಲವಾರ ಶ್ರೀಮಠದ ಕುರಿತಾದ ಧ್ವನಿ ಸುರುಳಿ ಯನ್ನು ಸಂಪಾದಿಸಿ, ಶ್ರೀಮಠದಿಂದ ಹೊರಡುವ 'ತನಾರತಿ' ಪತ್ರಿಕೆಯ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿ ಸುತ್ತಿದ್ದಾರೆ. ಜಾಲಹಳ್ಳಿಯಂಥ ಗ್ರಾಮೀಣ ಪ್ರದೇಶದ ಈ ಗಾನ ಕೋಗಿಲೆ ಈ ಟಿ.ವಿ. ಕನ್ನಡ ವಾಹಿನಿಯಲ್ಲಿ ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಮ್ಮಣ್ಯಂ ನಡೆಸಿಕೊಡುವ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಈ ಭಾಗದ ಪ್ರತಿಭೆಯನ್ನು ಮೆರೆದಿದ್ದಾರೆ. (ಎಸ್‌ಎಸ್)

ಶಶಿಧರ: ಶಿಲ್ಪ ಕಲಾವಿದ. ಮಸ್ಕಿಯ ಗ್ರಾಮದ ಯುವಕ ಶಶಿಧರ ಈ ಭಾಗದ ನಡೆದಾಡುವ ದೇವರು ಎಂದು ಪ್ರಸಿದ್ಧಿ ಪಡೆದ ಉಟಗನೂರು ತಾತನವರ ಮೂರ್ತಿ ಕೆತ್ತಿದ್ದಾರೆ. ಇದು ಬಹಳ ಸುಂದರವಾಗಿದೆ.

ಇವರ ನಿವಾಸಕ್ಕೆ ಕಾಲಿಟ್ಟಾಗ, ಮನೆಯೆಲ್ಲಾ ಕಲೆಯ ಅಗರವಾಗಿರುವುದನ್ನು ಕಾಣಬಹುದು. ಹಳೆಬೀಡು, ಬೇಲೂರು, ಅಜಂತಾ, ಎಲ್ಲೋರಾದ ಸುಂದರ ಶಿಲ್ಪಗಳು, ದೆಹಲಿಯ ಕೆಂಪು ಕೋಟೆ, ಆಗ್ರಾದ ತಾಜ್‌ಮಹಾಲ್, ಶ್ರವಣಬೆಳಗೊಳದ ಗೊಮ್ಮಟೇಶ್ವರ, ಹೊಯ್ಸಳ ಸಾಮ್ರಾಜ್ಯದ ನಾಟ್ಯರಾಣಿ ಶಾಂತಲಾ, ಪಟ್ಟದಕಲ್, ಐಹೊಳೆ ದೇವಾಲಯಗಳ ಪ್ರತಿರೂಪ ಮುಂತಾದ ಐತಿಹಾಸಿಕ ಸ್ಥಳಗಳ ಪ್ರತಿರೂಪಗಳು ಬಣ್ಣದಲ್ಲಿ ಎರಕ ಹೊಯ್ದುಕೊಂಡು ನಿಂತಿವೆ. ಅದರಲ್ಲೂ ಅಜಂತಾ ಗುಹೆಯ ಗೋಡೆಯನ್ನಲಂಕರಿಸಿದ್ದ ಚೆಲುವಂತೂ ಮಧುಮಾಸದ ಹೂವಿನ ನಗೆಯಿಂದ ಅರಳಿ ನಿಂತಿದೆ.

ಇವರು ಹುಟ್ಟಿದ 1978ರಲ್ಲಿ ಇವರು 1993–94ರಲ್ಲಿ ಎಸ್. ಎಸ್. ಎಲ್.ಸಿ. ಓದುವಾಗ ಮಸ್ಕಿ ಮಲ್ಲಯ್ಯನ ಬೆಟ್ಟಕ್ಕೆ ದಿನವೂ ಅಭ್ಯಾಸ ಮಾಡಲು ಹೋಗುತ್ತಿದ್ದರು. ವಿದ್ಯಾರ್ಥಿಗೆ ಆ ಬೆಟ್ಟ, ಅಲ್ಲಿ ಮುಗಿಲೆತ್ತರಕ್ಕೆ ನಿಂತ ಬೃಹತ್ ಹೆಬ್ಬಂಡೆಗಳು ದಿನವೂ ತಮ್ಮನ್ನೂ ಕೂಗಿ ಕರೆದಂತೆ ಭಾಸವಾಗುತ್ತಿತ್ತಂತೆ. ಓದುವುದು ಬಿಟ್ಟು ಸೀಸ ಕಡ್ಡಿಯಲ್ಲಿ ಬೆಟ್ಟಗಳ ಚಿತ್ರಣ ಬಿಡಿಸುತ್ತಿದ್ದರು, ಅಲ್ಲಿರುವ ಹೆಬ್ಬಂಡೆಗಳನ್ನು ಹುಡುಕಿಕೊಂಡು ಹೋಗಿ, ಅದರ ಪ್ರತಿರೂಪವನ್ನು ಕಾಪಿಯಲ್ಲಿ ಬರೆಯುತ್ತಿದ್ದರು. ಕೆಲವು ಸಲ ಅಶೋಕನ ಶಿಲಾ ಶಾಸನವಿರುವ ಬೆಟ್ಟಕ್ಕೆ ಹೋಗುತ್ತಿದ್ದರು. ಅಲ್ಲಿ ಅಂತರಂಗಿ ಗ್ರಾಮದ ರಸ್ತೆಯಲ್ಲಿರುವ ಅಕ್ಕ–ತಂಗಿಯರ ಕಲ್ಲುಗಳ ಮುಂದೆ ನಿಂತು ಬಿಡುತ್ತಿದ್ದರು. ಅಂದೇ ಶಿಲ್ಪ ಶಾಸ್ತ್ರ ಓದಬೇಕೆಂದು ನಿರ್ಧರಿಸಿದರು.

ಕಲೆಯ ಬಗ್ಗೆ ಹೆಚ್ಚಿನ ಓದು ಕಲಿಯಲು 1996ರಲ್ಲಿ ಡಿಎಂಸಿ ಓದಲು ಆರಂಭಿಸಿ, ಬಣ್ಣದ ಕುಂಚದ ಗೆಳೆತನ ಮಾಡಿದರು. ಅದರಲ್ಲಿ ಪ್ರಥಮ ವರ್ಗದಲ್ಲಿ ಪಾಸಾದರು. ಒಂದಡೆ ಇನ್ನೂ ಓದಬೇಕೆನ್ನುವ ಆಸೆ. ಮತ್ತೊಂದಡೆ ಹಾಸಿ ಹೊದೆಯುವಷ್ಟು ಬಡತನ.

ಎರಡರ ಮಧ್ಯೆ ಛಲ ಬಿಡದ ಮನಸ್ಸು ಹೆಚ್ಚಿನ ವ್ಯಾಸಂಗಕ್ಕಾಗಿ ಅಂದು ಕೊಂಡ ಹುಡುಗ, ಇರುವ ಸ್ವಲ್ಪ ದುಡ್ಡು ತೆಗೆದುಕೊಂಡು ಸೀದಾ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದರು.

ಒಂದು ವರ್ಷ ಕಲಿತ ಇವರು ಸುಮಾರು ಶೇ. 78 ಅಂಕದೊಂದಿಗೆ ಶ್ರೇಷ್ಠ ಸ್ಥಾನ ಪಡೆದು ಕಂಬಾರರ ಮೆಚ್ಚುಗೆ ಗಳಿಸಿದರು. ಅನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಫ್.ಎ. ಪದವಿ ಗಳಿಸಿ ಇಲಕಲ್ ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಮಾಡಿ, ಮತ್ತೆ ಸ್ವಂತ ಏನಾದರೂ ಮಾಡಬೇಕು ಎಂದು ಮಸ್ಕಿಯ ಗ್ರಾಮಕ್ಕೆ ಮರಳಿದರು ಕಳೆದ ಐದು ವರ್ಷಗಳಲ್ಲಿ ಹಲವಾರು ಸಾಧನೆ ಮಾಡಿದ್ದಾರೆ.

ಪಟ್ಟದಕಲ್ ಉತ್ಸವದಲ್ಲಿ ಏರ್ಪಡಿಸಲಾಗಿದ್ದ ಶಿಲ್ಪ ವಸ್ತು ಪ್ರದರ್ಶನದಲ್ಲಿ ಇವರು ಮಾಡಿದ ಪಟ್ಟದಕಲ್ ದೇವಾಲಯದ ಪ್ರತಿರೂಪಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿತು. ಮಸ್ಕಿ ಗ್ರಾಮದಲ್ಲಿ ಗಣೇಶನ ಉತ್ಸವದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಮಾಡಿದ 25 ಅಡಿ ಎತ್ತರದ ಗೆರಿಲ್ಲಾ ಪ್ರತಿರೂಪದ ಬಗ್ಗೆ ಮಸ್ಕಿ ಗ್ರಾಮದ ಜನ ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅ ಮೂರ್ತಿಯನ್ನು ನೋಡಿದ ಅನೇಕ ಮಕ್ಕಳು ಹೆದರಿ ಚೀರಿದ ಬಗ್ಗೆ ತಿಳಿಸುತ್ತಾರೆ.

ಕೇವಲ ಮೂರ್ತಿ ಕೆತ್ತುದದು ಮಾತ್ರವಲ್ಲದೇ, ಅದರ ಜೊತೆಗೆ ಪೇಂಟಿಂಗ್ ಹಾಗೂ ಉತ್ತಮ ಛಾಯಾಚಿತ್ರ ಕಲೆಯಲ್ಲೂ ಕೂಡಾ ಇವರು ಪ್ರತಿಭಾವಂತರು.

(ಎಸ್‌ಪಿಎಚ್)

ಶಾ

ಶಾಂತಕುಮಾರ ಕೋಣಿ: ಚಿತ್ರಕಲಾವಿದ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಯರಬಾಗ ಗ್ರಾಮದವರು. ಚಿಕ್ಕಂದಿನಿಂದಲೇ ಚಿತ್ರಕಲೆಯ ಗೀಳು ಹಚ್ಚಿಕೊಂಡು ಬೆಳೆದವರು. ಪೇಪರ್, ಪೆನ್ಸಲ್ ಹಿಡಿದುಕೊಂಡು ತನ್ನ ಸುತ್ತಲಿನ ಗ್ರಾಮೀಣ ಪರಿಸರದ ಕಾಗೆ, ಕೋಳಿ, ಗುಬ್ಬಿ, ಎತ್ತು, ಗಣೇಶ ಹೀಗೆ ಹತ್ತು ಹಲವಾರು ಚಿತ್ರಗಳನ್ನು ಬರೆಯುತ್ತ ಹಿರಿಯರಿಂದ ಬೆನ್ನು ತಟ್ಟಿಸಿಕೊಂಡು ಬೆಳೆದವರು.

ತಮ್ಮ ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ರಾಜೇಶ್ವರದ ಸತ್ಯಾಶ್ರಯ ಕಿರಿಯ ಮಹಾವಿದ್ಯಾಲಯದಲ್ಲಿ ಪ್ರೌಢ ಶಿಕ್ಷಣ ಮುಂದುವರಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಚಿತ್ರಕಲೆಯ ಲೋಯರ್ ಮತ್ತು ಹೈಯರ್ ಪರೀಕ್ಷೆ ಬರೆದು ತೇರ್ಗಡೆಯಾಗಿ, 1995ರಲ್ಲಿ ಹತ್ತನೆಯ ತರಗತಿ ಉತ್ತೀರ್ಣರಾದ ಅನಂತರ, ಪ್ರವೃತ್ತಿಯಾದ ಚಿತ್ರಕಲೆಯನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದರು. ಹುಮನಾಬಾದಿನ ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು, ಕಾಲೇಜಿನ ಉಪನ್ಯಾಸಕ ಹಾಗೂ ಖ್ಯಾತ ಕಲಾವಿದರೂ ಆದ ವಿ.ಎನ್. ಜಾಧವ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾದರು. ಡ್ರಾಯಿಂಗ್ ಮಾಸ್ಟರ್ ಕೋರ್ಸ್‌ನಲ್ಲಿ 2000ರಲ್ಲಿ ಉತ್ತೀರ್ಣರಾಗಿ, ಕಾಲೇಜಿನಲ್ಲಿ ಓದುತ್ತಿರುವಾಗ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ಪಡೆದರು, ಚಿತ್ರಕಲಾ ಕ್ಷೇತ್ರದಲ್ಲಿ ಭರವಸೆ ಮೂಡಿಸುವ ಕಲಾವಿದನಾಗಿ ಹೊರಬಂದರು. ಮೊದಲಿಂದಲೂ ಬ್ಯಾನರ್, ಬೋರ್ಡ್ ಬರೆಯುವ, ಸ್ಕ್ರೀನ್ ಪ್ರಿಂಟಿಂಗ್, ಥರ್ಮಾಕೂಲ್ ಕಟಿಂಗ್, ರೇಡಿಯಂ ಕಟಿಂಗ್, ಕ್ರಾಫ್ಟ್ ಹೀಗೆ ಹಲವಾರು ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಇವರ ಕೈಯಲ್ಲಿ ಬಿಸಾಡಿದ ಕಸ ಕೂಡ ಜೀವಂತಿಕೆಯ ರೂಪ ಪಡೆದುಕೊಳ್ಳುತ್ತಿತ್ತು. ಮುಂದೆ ಜಲ ವರ್ಣ, ತೈಲವರ್ಣ, ಪೋಸ್ಟರ್ ಕಲರ್, ಮಾಡ್ರನ್, ಕ್ರಿಯೇಟಿವ್, ಮಿನಿಯೇಚರ್, ಫ್ಲೇಕ್ ಆರ್ಟ್, ಕೋಲಾಸ್,

ಗ್ರಾಫಿಕ್, ರೇಖಾಚಿತ್ರ, ನಿಸರ್ಗ ಚಿತ್ರ, ಭಾವಚಿತ್ರಗಳು ಮುಂತಾದ ಕಲಾವಿಭಾಗಗಳಲ್ಲಿ ತೊಡಗಿಸಿಕೊಂಡರು.

ಇವರ ಕಲಾಕೃತಿಗಳಿಗೆ 2000ರಲ್ಲಿ ಶ್ರೀ ವೀರಭದ್ರೇಶ್ವರ ಚಿತ್ರ ಕಲಾ ಮಹಾವಿದ್ಯಾಲಯದಿಂದ ಉತ್ತಮ ವರ್ಣಕಲೆಗಾಗಿ ಪ್ರಶಸ್ತಿ, 2003ರಲ್ಲಿ ಜ್ಯೋತಿರ್ಲಿಂಗ ಆಶ್ರಮ ಯರಬಾಗದಲ್ಲಿ ಭಿತ್ತಿ ಚಿತ್ರಕ್ಕಾಗಿ ಪುರಸ್ಕಾರ, 2001ರಲ್ಲಿ ಕರ್ನಾಟಕ ಸಂಪ್ರದಾಯ ಚಿತ್ರಕಲೆ ಮತ್ತು 2004ರಲ್ಲಿ ಯರಬಾಗದಲ್ಲಿ ಭಿತ್ತಿ ಚಿತ್ರ ಕಾರ್ಯಾಗಾರ ಹಾಗೂ 2003ರಲ್ಲಿ ಹಾರಕೂಡದಲ್ಲಿ ಜರುಗಿದ 7ನೆಯ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚಿತ್ರಕಲಾ ಪ್ರದರ್ಶನ ಹೀಗೆ ಇವರು ಭಾಗವಹಿಸಿದ ಶಿಬಿರಗಳು, ಪಡೆದ ಪ್ರಶಸ್ತಿಗಳು ಅನೇಕ.

ವಿದ್ಯಾಭ್ಯಾಸದ ಅನಂತರ ವೃತ್ತಿಜೀವನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಯರಬಾಗ ಗ್ರಾಮದಲ್ಲಿರುವ ದಿ. ಗುರುಲಿಂಗಮ್ಮ ಪಾಟೀಲ ಅಟ್ಟೂರ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕ ವೃತ್ತಿ. ಎರಡು ವರ್ಷಗಳ ಕಾಲ ಶಿಕ್ಷಕ ವೃತ್ತಿಯ ನಂತರ, ಈ ಕಲಾವಿದನ ಮನಸ್ಸು ಇನ್ನೂ ಹೆಚ್ಚಿಗೆ ಕಲಿಯಬೇಕು ಈ ಕ್ಷೇತ್ರದಲ್ಲಿ ಬೆಳೆಯಬೇಕು ಎಂದು ಹಾತೋರೆಯುತ್ತಿದ್ದಾಗ, ಇವನನ್ನು ಕೈ ಬೀಸಿ ಕರೆದದ್ದು ಹುಬ್ಬಳ್ಳಿಯ ಹರ್ಷಾ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್ ಅಲ್ಲಿ ಸೇರಿ ಕ್ಲಪ್ಚರ್ ಮಾಡೆಲಿಂಗ್ (ಸಿಮೆಂಟ್, ರೇತಿ, ಕಬ್ಬಿಣ, ಇಟ್ಟಂಗಿ ಬಳಸಿಕೊಂಡು ಮೂರ್ತಿಗಳನ್ನು ಮಾಡುವ ಒಂದು ಕಲೆ)ನಲ್ಲಿ ತೊಡಗಿಸಿಕೊಂಡು ನಿರಂತರ ಪ್ರಯತ್ನದ ಫಲವಾಗಿ, ಸಿಮೆಂಟ್ ಮೂರ್ತಿ ಮಾಡುವ ಕಲೆಯನ್ನು ಸಿದ್ಧಿ ಮಾಡಿಕೊಂಡರು.

ಆಲ್ಮಟ್ಟಿ ಆಣೆಕಟ್ಟೆಯ ವಿಶಾಲ ಪ್ರದೇಶದಲ್ಲಿ ರಾಕ್, ಇಟಾಲಿಯನ್, ಸನ್, ಕೃಷ್ಣಾ, ಲವ–ಕುಶ ಹೀಗೆ ನಾನಾ ಹೆಸರಿನ ರಮಣೀಯ ಉದ್ಯಾನವನದಲ್ಲಿ ಪ್ರಾಣಿ, ಪಕ್ಷಿ, ಮಹಿಳೆ, ಎತ್ತು, ಎಮ್ಮೆ, ಕತ್ತೆ, ಕುರಿ ಒಂದೇ ಎರಡೇ ನೂರಾರು ಕಲಾಕೃತಿಗಳು ಜೀವಚಿತಿಕೆ ಪಡೆಯುವಲ್ಲಿ ಶಾಂತಕುಮಾರ ಶ್ರಮ ಹಾಗೂ ಕೊಡುಗೆ ಅಪಾರ. ಹಾಗೆಯೇ ಬಾಗಲಕೋಟೆಯ ಜಾನಪದ ಸಂಗ್ರಹಾಲಯದಲ್ಲಿ, ಜಾನಪದ ಕಲೆಗಳಾದ ಕೋಲಾಟ, ಕರಡಿ ಮಜಲು, ಹೆಣ್ಣುಮಕ್ಕಳು ಬಾವಿಯಿಂದ ನೀರು ಸೇದಿ ತರುವದು, ಕುರಿಕಾಯುವ ದೃಶ್ಯ. ಸೋಮಾರಿಗಳ ಕಟ್ಟೆ ಮುಂತಾದವುಗಳಲ್ಲದೇ ಸುಮಾರು ಇಪ್ಪತ್ತೈದು ಮಾಧ್ಯಮಗಳಲ್ಲಿ ಅಂದರೆ ಬಟ್ಟೆ, ಗಾಜಿನ ಬಳಿಯ ಚೂರು, ತಾಮ್ರದ ತಗಡು, ಮಣ್ಣು, ರೇಡಿಯಂ ಹೀಗೆ ಹಲವಾರು ಮಾಧ್ಯಮಗಳಲ್ಲಿ ಕಲೆಯನ್ನು ಅರಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೋಲಾಪುರದ 'ಗ್ರಾಮ ಜೀವನ' ಸಂಗ್ರಹಾಲಯದಲ್ಲಿ ಗ್ರಾಮದ ಕಸುಬುದಾರರಾದ ಕುಂಬಾರ, ಕಂಬಾರ, ಬಡಿಗ, ಚಮ್ಮಾರ, ಅಲ್ಲದೇ ಗೌಡರ ಮನೆ, ಕುಟ್ಟುವುದು, ಬೀಸುವುದು ಹೀಗೆ ಗ್ರಾಮೀಣ ಪ್ರದೇಶದಲ್ಲಿ ಕಾಣುವ ದೃಶ್ಯಗಳನ್ನೊಳಗೊಂಡ ಒಂದು ಚಿಕ್ಕಗ್ರಾಮವನ್ನೇ ನಿರ್ಮಿಸಿದ್ದಾರೆ. ಈ ಗ್ರಾಮದಲ್ಲಿ ಒಂದು ಸುತ್ತು ಹಾಕಿದರೆ, ಒಂದು ಸುಸಜ್ಜಿತ ಹಳ್ಳಿಯ ದರ್ಶನ ಆಗುವುದು. ಇವುಗಳಲ್ಲದೇ ಬೆಂಗಳೂರಿನಲ್ಲಿ ಜೆ.ಪಿ. ಪಾರ್ಕ್, ಎಲ್.ಪಿ.ಸಿ. ಪಾರ್ಕ್, ಬಾಲಿ ಪಾರ್ಕ್, ಕಬ್ಬನ್ ಪಾರ್ಕ್, ಗದಗ ಜಿಲ್ಲೆಯ ಸಿಂಗಟಾಲೂರು, ಗದಗ ಮುಂತಾದ ಕಡೆಗಳಲ್ಲಿ ಇವರ ಕಲೆಯು ಜೀವಂತಿಕೆ ಪಡೆದು ಕಲಾಸಕ್ತರನ್ನು ಕಲಾಕೃತಿಗಳು ಬೆರಗುಗೊಳಿಸುತ್ತವೆ.

ಈ ಕಲೆಯೊಂದಿಗೆ ಸಂಗೀತ, ಸಾಹಿತ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದು ಒಂದು ವಿಶೇಷವೆಂದು ಹೇಳಬಹುದು. ಚಿಕ್ಕಂದಿನಿಂದಲೇ ಷ.ಬ್ರ. ಉದಯ ರಾಜಯೋಗಿಂದ್ರ ಮಹಾಸ್ವಾಮಿಗಳಲ್ಲಿ ತಬಲಾ ನುಡಿಸುವುದನ್ನು ಕಲಿತು, ಮುಂದೆ ಹುಮನಾಬಾದಿನ ಖ್ಯಾತ ಕಲಾವಿದರಾದ ಕೇಶರಾವ ವಾಘಮೊರೆ, ಜನಾರ್ಧನ ವಾಘಮೊರೆ ಮತ್ತು ಸುಭಾಷ ಕಲಕೋರಿ ಅವರಲ್ಲಿ ಹೆಚ್ಚಿನ ಅಭ್ಯಾಸ ಮಾಡಿದರು. (ಎಸ್‌ವೈ)

ಶಾಂತಪ್ಪ ವೀರಭದ್ರಪ್ಪ ಉಡುಚಣ: ಬಯಲಾಟ ಕಲಾವಿದರು. ಸತತ 40 ವರ್ಷಗಳ ಕಾಲ 20 ಜನರ ತಂಡದೊಂದಿಗೆ ಹೈದ್ರಾಬಾದ ಕರ್ನಾಟಕದಲ್ಲಿ ಅದ್ದೂರಿಯಾಗಿ ಮೆರೆದವರು. ತಮ್ಮ ಕಲಾ ಸೇವೆಯಲ್ಲಿ ನಿರಂತರ ಸಾಗಿಬಂದವರು.

ಇವರ ಕಾಲ (ನಿಜಾಮ)ದಲ್ಲಿ ಕನ್ನಡ ಅಷ್ಟೊಂದು ಬಳಕೆಯಲ್ಲಿ ಇರಲಿಲ್ಲ. ಎಲ್ಲ ವ್ಯವಹಾರಗಳು ಮರಾಠಿ ಭಾಷೆಯನ್ನು ಹೋಲುವ ಮೋಡಿ ಭಾಷೆ ಮತ್ತು ಉರ್ದು ಭಾಷೆಗಳಲ್ಲಿದ್ದುವು. ಎಲ್ಲ ಬಯಲಾಟಗಳ ಭಾಷೆಯೂ ಕೂಡಾ ಮೋಡಿಯಾಗಿದ್ದುವು. ಇಂತಹ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರಿಸಿ ಕನ್ನಡ ಉಳಿಸುವಲ್ಲಿ, ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಬಯಲಾಟದ ವೇಷಭೂಷಣ, ಪಾತ್ರಧಾರಿ, ಸಂಗೀತ, ನೃತ್ಯ ಎಲ್ಲದರಲ್ಲೂ ಪರಿಣಿತರು. ಬಯಲಾಟದ ಯಾವ ಪಾತ್ರಧಾರಿ ಕೊರತೆಯಿದ್ದರೂ ಅದನ್ನು ನಿಭಾಯಿಸುವುದು ಇವರ ಜಾಯಮಾನ. ಮುಂಜಾನೆಯಿಂದ ಸಂಜೆಯವರೆಗೆ ಎಲ್ಲರನ್ನು ತರಬೇತುಗೊಳಿಸಿ ರಾತ್ರಿ ಪಾತ್ರ ಮಾಡುವುದು ಇವರಿಗೆ ಕರಗತ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ, ಆಕಾಶವಾಣಿ, ದೂರದರ್ಶನಗಳ ಮುಖಾಂತರ ರಾಜ್ಯದಾದ್ಯಂತ ಹೆಸರುವಾಸಿಯಾಗಿದ್ದಾರೆ. ಗುಲಬರ್ಗಾದಲ್ಲಿ ಪ್ರತಿವರ್ಷ ಹೋಳಿ ಹುಣ್ಣಿಮೆಯಂದು ಪ್ರತಿಯೊಂದು ಬಡಾವಣೆಯಲ್ಲಿ ಒಂದೊಂದು ದಿನ ಬಯಲಾಟ ಪ್ರದರ್ಶಿಸುತ್ತಿದ್ದರು. ಶ್ರೀ ಶರಣಬಸವೇಶ್ವರ ಸಂಸ್ಥಾನದ ದೊಡ್ಡಪ್ಪ ಅಪ್ಪ ಅವರಿಂದ ಮೆಚ್ಚಿಗೆ ಪಡೆದು 'ಬೆಳ್ಳಿ ಕಡಗ'ವನ್ನು ಪಡೆದಿದ್ದಾರೆ. ಕಲಾ ಸೇವೆ ನಿರಂತರವಾಗಿ ಸಾಗಿಕೊಂಡು ಬಂದಿದೆ. ಹಲವಾರು ಬಯಲಾಟ ಸಂಘಗಳಿಗೆ ನಿರ್ದೇಶನ ನೀಡಿ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಈಗಲೂ ಬಯಲಾಟ ನಿರ್ದೇಶನವನ್ನು ಮಾಡುತ್ತಾರೆ. ಇದಲ್ಲದೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ (ಮದುವೆ–ಮೃತ್ಯು) ಎಲ್ಲರಿಗೂ ಅಚ್ಚು–ಮೆಚ್ಚು ಆಗಿದ್ದಾರೆ.

(ಜಿಕೆ)

ಶಾಂತಮ್ಮ ಡಿಗ್ಗಿ: ನಾಲ್ಕು ದಶಕಗಳ ಕಾಲ ರಂಗಭೂಮಿಯ ಸೇವೆ ಮಾಡಿ ನಿವೃತ್ತಿ ಹೊಂದಿರುವ ಶಾಂತಮ್ಮ ಡಿಗ್ಗಿ ಶಾಂತಿ ಸಹನೆಯ ಗುಣಗಳನ್ನು ಬೆಳೆಸಿಕೊಂಡು ಬಂದವರು. ಅವರ ಸರಳ, ಮುಗ್ಧ, ಪ್ರಾಮಾಣಿಕ ಬದುಕು ಎಲ್ಲ ಜನರ ಹೃದಯ ಸ್ಪಂದಿಸುತ್ತಿದೆ. ಅವರ ಸಾಹಸದ ಬದುಕು, ಸಂಘರ್ಷದ ಬದುಕು, ಕಷ್ಟದ ಬದುಕು ಕೇಳಿದಾಗ ಕೇಳುಗರ ಅಂತಃಕರುಣೆಯನ್ನು ಕಲಕಿಸುತ್ತದೆ. ಉತ್ತಮ ಅಭಿನಯವಿದ್ದರೂ ಯಾರು ಗುರುತಿಸಲಿಲ್ಲ. ಮತ್ತೆ ಮತ್ತೆ ಕೇಳಬೇಕೆನ್ನುವ ಮಧುರ ಕಂಠದ ರಂಗಗೀತೆಗಳು ಶುಶ್ರಾವ್ಯವಾಗಿ ಹಾಡಿದರೂ ಎಲ್ಲಿಯೂ ಅವರ ಹೆಸರು ಬರಲಿಲ್ಲ.

ಇವರು ರಂಗಭೂಮಿ ಪ್ರವೇಶಿಸಿದ್ದು ಆಕಸ್ಮಿಕವೇನಲ್ಲ, ತಂದೆ ರಂಗಭೂಮಿಯ ತಬಲಾ ಮಾಸ್ತರರಾಗಿದ್ದರು. ಧಾರವಾಡದಲ್ಲಿ ಶಿವಪ್ಪ ಹಾಗೂ ಬಾಳವ್ವ ದಂಪತಿಗಳ ಮಗಳಾಗಿ 1948ರಲ್ಲಿ ಜನ್ಮ ಪಡೆದು ಬೆಳೆದರು. ಕಲೆ ಬಾಲ್ಯದಿಂದಲೇ ಪ್ರಭಾವ ಬೀರಿತ್ತು. ಕನ್ನಡ ಪ್ರಾಥಮಿಕ ಶಾಲೆಯ ಅಭ್ಯಾಸ ಮಾಡಿದ ಶಾಂತಮ್ಮ ಹದಿಹರೆಯದಲ್ಲಿ ರಂಗಭೂಮಿ ಪ್ರವೇಶಿಸಿದರು. ತಂದೆಯವರ ಕಂಪನಿ ಸಿದ್ಧವಾದಾಗ ಅಲ್ಲಿ ಬರುತ್ತಿದ್ದ ಕವಿಗಳಿಂದ (ನಾಟಕಕಾರರು–ನಿರ್ದೇಶಕರು) ಮಾರ್ಗದರ್ಶನ ಪಡೆದರು. ಅಭಿನಯದಲ್ಲಿ ಗುರುಗಳಾದರು. ಪ್ರಪ್ರಥಮವಾಗಿ 'ವಿಶ್ವರಂಜನ ಸಂಗೀತ ನಾಟಕ ಮಂಡಳಿ' ಧಾರವಾಡ ಕಂಪನಿಯಲ್ಲಿ ಬಣ್ಣಹಚ್ಚಿದರು. 15ರ ಹದಿಹರೆಯದಲ್ಲಿ ಪ್ರಥಮ ಪ್ರವೇಶದಲ್ಲಿಯೇ ನಾಟಕದ ನಾಯಕಿ ಪಾತ್ರ ಪಡೆದರು. ಹೇಮರೆಡ್ಡಿ ಮಲ್ಲಮನ ನಾಟಕದಲ್ಲಿ ಮಲ್ಲಮ್ಮನಾಗಿ ರಂಗ ಪ್ರವೇಶಿಸಿದ ಇವರು ನಿವೃತ್ತಿಯವರೆಗೆ ಅಭಿನಯಸಿದ ಪಾತ್ರಗಳಿಗೆ ಲೆಕ್ಕವಿಲ್ಲ.

ದೀರ್ಘರಂಗದ ಬದುಕಿನಲ್ಲಿ ಅವರು ಸೇವೆ ಸಲ್ಲಿಸಿದ ಪ್ರಮುಖ ಕಂಪನಿಗಳೆಂದರೆ 'ರೇಣುಕಾಚಾರ್ಯ ನಾಟ್ಯ ಸಂಘ' ಮೈಂದರಗಿ, 'ವಿಜಯ ನಾಟ್ಯ ಸಂಘ', ಚಿತ್ತರಗಿ, 'ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ 'ಕಲಾ ವಿಕಾಸ ನಾಟ್ಯ ಸಂಘ' ಗೋಕಾಕ, 'ಶ್ರೀಶೈಲ ನಾಟ್ಯ ಸಂಘ' ಸುಳ್ಳ, 'ಶ್ರೀ ಗುರುಪ್ರಕಾಶ ನಾಟ್ಯ ಸಂಘ' ಕಡಪಟ್ಟಿಗಳಾಗಿವೆ. ಇವುಗಳಲ್ಲಿ 'ಪುಟ್ಟರಾಜ ವಿಜಯ ನಾಟ್ಯ ಸಂಘದಲ್ಲಿ 15 ವರ್ಷ 'ರೇಣುಕಾಚಾರ್ಯ' ಮೈಂದರಗಿ ಕಂಪನಿಯಲ್ಲಿ ಸುಮಾರು 20 ವರ್ಷ ದೀರ್ಘ ಸೇವೆ ಸಲ್ಲಿಸಿದವರಾಗಿದ್ದಾರೆ. 'ವಿಶ್ವರಂಜಿತ ಸಂಗೀತ ನಾಟಕ ಮಂಡಳಿ'ಯಲ್ಲಿ 'ಚಿತ್ರಾಂಗದಾ' ನಾಟಕದಲ್ಲಿ ಚಿತ್ರಾಂಗದಾ, ಬಾಲಚಂದ್ರ ನಾಟಕದಲ್ಲಿ ಮಹಾರಾಣಿ, ಹರಿಶ್ಚಂದ್ರ ನಾಟಕದಲ್ಲಿ ತಾರಾಮತಿ ಪ್ರಮುಖ ಹಾಗೂ ಹೆಸರು ತಂದ ಪಾತ್ರಗಳಾಗಿವೆ. 'ಪುಟ್ಟರಾಜ ವಿಜಯ ನಾಟ್ಯ ಸಂಘ'ದಲ್ಲಿ 'ಕಣ್ಣಿದ್ದರೂ ಬುದ್ಧಿಬೇಕು', 'ಭಾಗ್ಯ ಬಂತು ಬುದ್ಧಿ ಹೋಯ್ತು', 'ಕಾಲುಕೆದರಿದ ಹೆಣ್ಣು', 'ಹೂವಿನ ಅಂಗಡಿ' ನಾಟಕಗಳಲ್ಲಿ ಪ್ರಮುಖ ಪಾತ್ರಗಳಿಂದ 'ರೇಣುಕಾಚಾರ್ಯ' ಮೈಂದರಗಿ ಕಂಪನಿಯಲ್ಲಿ 'ತಂಗಿಮನೆ', 'ಕೊಂಡು ತಂದ ಗಂಡ' ನಾಟಕದಲ್ಲಿ ನರ್ಮದಾ 'ಗಂಡನ ಮಾನ' ನಾಟಕದಲ್ಲಿ ನಂದಾ ಪಾತ್ರಗಳು ಹೆಚ್ಚು ಜನಮನ ಸೆಳೆದಿವೆ. ಶ್ರೀಶೈಲ ನಾಟ್ಯ ಸಂಘದಲ್ಲಿ 'ವರನೋಡಿ ಹೆಣ್ಣು ಕೊಡು' ನಾಟಕದಲ್ಲಿ ಇವರ ಅಭಿನಯ ನಾನು ನೋಡಿದ್ದೇನೆ. ಒಂದು ಭಕ್ತಿ ಪ್ರಧಾನ ಮತ್ತೊಂದು ಕೌಟುಂಬಿಕ ಬದುಕಿನ ಸಂಘರ್ಷ ಪಾತ್ರ, ಈ ವಿಭಿನ್ನ ಪಾತ್ರಗಳ ಅಭಿನಯದಲ್ಲಿ ಶಾಂತಮ್ಮನವರ ಪ್ರತಿಭೆ ಗುರುತಿಸುವಂತಿತ್ತು. ಪಾತ್ರಕ್ಕೆ ತಕ್ಕಂತೆ ಮಾತುಗಳ ಏರಿಳಿತ ತಕ್ಕ ಅಭಿನಯ ಎಲ್ಲವೂ ಹಿತಮಿತವಾಗಿದ್ದು ಪ್ರೇಕ್ಷಕರ ಮನಸ್ಸೆಳೆಯುತ್ತಿದ್ದವು. ಅಂಥ ಪಾತ್ರಗಳ ಅಭಿನಯದಿಂದಲೇ ಬದುಕಿನಲ್ಲಿಯೂ ಭಕ್ತಿ ಮೈಗೂಡಿಕೊಂಡು ಬಂದಿತು. ಕೆಲವು ಸಲ ಬೇರೆ ಬೇರೆ ಪಾತ್ರಗಳಲ್ಲಿ ಅಭಿನಯಿಸಿದ್ದರೂ ಅವರಿಗೇನೇ ಹೆಚ್ಚು ತೃಪ್ತಿ ಇರುತ್ತಿದ್ದುದ್ದು ಭಕ್ತಿ ಪ್ರಧಾನ ಹಾಗೂ ಸಾಧ್ವಿ ಪಾತ್ರಗಳಲ್ಲಿ.

ಗುಲಬರ್ಗಾದ ಹತ್ತಿರದ ಡಿಗ್ಗಿ ಗ್ರಾಮದ ಪರ್ವತಪ್ಪ ಎನ್ನುವ ಕಲಾಭಿಮಾನಿ ಶಾಂತಮ್ಮನವರ ಅಭಿನಯ ಮೆಚ್ಚಿ ಕಲಾ ಪತ್ನಿಯನ್ನಾಗಿ ಸ್ವೀಕರಿಸಿದರು. ಮುಂದೆ 1974ರಲ್ಲಿ ಸ್ವತಃ ಕಂಪನಿ ಕಟ್ಟಿಕೊಂಡರು. ಕಂಪನಿ ಪ್ರಾರಂಭದಲ್ಲಿ ಚೆನ್ನಾಗಿಯೇ ನಡೆಯಿತು. ಆಗ ಇವರ ಕಂಪನಿಯ ಪ್ರಮುಖ ನಾಟಕಗಳೆಂದರೆ, ನಂದ ಗೋಕುಲ, ಸಂಪತ್ತಿಗೆ ಸವಾಲು, ಕುರುಣೇಶ್ವರ ಮಹಾತ್ಮೆ, ಹೇಮರಡ್ಡಿ ಮಲ್ಲಮ್ಮ, ಪ್ರಮುಖವಾಗಿದ್ದವು. ಕೆಲವು ವರ್ಷ ಕಂಪನಿ ನಡೆದು ಮುಂದೆ ಆರ್ಥಿಕ ಮುಗ್ಗಟ್ಟಿನಿಂದ ನಿಂತಿತು. ಮತ್ತೆ ಬೇರೆ ಕಂಪನಿಗೆ ದುಡಿಯಲು ಹೋಗುವದು ಅನಿವಾರ್ಯವಾಯಿತು. ಶಾಂತಮ್ಮ ಒಂದು ಗಂಡು ಮಗು ಒಂದು ಹೆಣ್ಣು ಮಗುವಿನ ತಾಯಿಯಾದಾಗ ಕಲೆಯ ಜೊತೆ ಮಕ್ಕಳ ಜವಾಬ್ದಾರಿ ಹೆಚ್ಚಿತ್ತು ಎಷ್ಟು ದುಡಿದರೂ ಆರ್ಥಿಕ ಸಮಸ್ಯೆ ಹೆಚ್ಚುತ್ತಲೆ ಸಾಗಿತು.

ಜೀವನ ಮತ್ತು ಕಲೆ ಎರಡರಲ್ಲಿಯೂ ಶಿಸ್ತು ಕಾಯ್ದುಕೊಂಡು ಬಂದಿರುವ ಶಾಂತಮ್ಮ ಶರಣರ ಹಾಗೂ ಧಾರ್ಮಿಕ ತತ್ವಗಳಲ್ಲಿ ಬಲವಾದ ನಂಬಿಕೆ ಇಟ್ಟುಕೊಂಡು ಬಂದಿದ್ದಾರೆ. ವೃದ್ಧಾಪ್ಯ ಜೀವನವನ್ನು ದೇವರ ಧ್ಯಾನ ಪ್ರವಚನಗಳಲ್ಲಿ ಕಳೆಯಲಿಚ್ಛಿಸಿದ್ದಾರೆ.

(ಜಿಎಚ್)



ಶಾಂತಲಿಂಗ ದೇಸಾಯಿ ಹೂಗಾರ: ತಬಲಾ ವಾದಕ. ಗುಬಲರ್ಗಾ ಜಿಲ್ಲೆ ಕಲ್ಲೂರ ಗ್ರಾಮವು ಇವರ ಜನ್ಮ ಸ್ಥಳ. ಪ್ರಾರಂಭಿಕ ತಬಲಾ ಶಿಕ್ಷಣ ಪಂ. ಪುಟ್ಟರಾಜ ಕವಿ ಗವಾಯಿಗಳವರಲ್ಲಿ ಅನಂತರ ದೇಶದ ಹೆಸರಾಂತ ಕಲಾವಿದರಾದ ಪಂ. ಬಸವರಾಜ ಬೆಂಡಿಗೇರಿಯವರಲ್ಲಿ ತದನಂತರ ಈಗ ಸುವಿಖ್ಯಾತ ತಬಲಾ ಪಟು ರಘುನಾಥ ನಾಕೋಡರಲ್ಲಿ ಶಿಕ್ಷಣ ಮುಂದುವರೆಸಿದ್ದಾರೆ.

ದೇಶದ ಹೆಸರಾಂತ ಗಾಯಕ ಹಾಗೂ ವಾದಕರಿಗೆ ತಬಲಾ

ಸಾಥ್ ನೀಡಿದ್ದಾರೆ. 1991ರಲ್ಲಿ ಅಂತರ ರಾಷ್ಟ್ರೀಯ ಸಿತಾರ್ ಕಲಾವಿದರಾದ, ಧಾರವಾಡದ ಪ್ರೊ. ಶಿವಾನಂದ ತರ್ಲಘಟ್ಟಿಯವರೊಂದಿಗೆ ತಬಲಾ ಸಾಥ್ ನೀಡಲು ಫ್ರಾನ್ಸ್ ಹಾಗೂ ಇಂಗ್ಲೆಡ ದೇಶಗಳಿಗೆ ಭೇಟಿ ನೀಡಿದ್ದಾರೆ. ಈಗ ಧಾರವಾಡ ಆಕಾಶವಾಣಿಯ 'ಬಿ' ಹೈ ಗ್ರೇಡ್' ('B' High Grade) ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎಸ್‌ಎಂಜಿ)

ಶಾಂತಲಿಂಗಪ್ಪ ಪಾಟೀಲ: ಚಿತ್ರಕಲಾವಿದ. ಶಿಲ್ಪಿ. ಛಾಯಾಚಿತ್ರ ಗ್ರಾಹಕ. ವಿಭಿನ್ನ ವ್ಯಕ್ತಿತ್ವ ಹೊಂದಿ, ಕಲಾ ಉನ್ನತಿಗೆ ಶ್ರಮಿಸಿ ಕಲಾ ಕೃತಿಗಳ ಮೂಲಕ ಕಲಾಕ್ಷೇತ್ರಕ್ಕೆ ಪರಿಚಿತರಾದ ವಿಶಿಷ್ಟ ವ್ಯಕ್ತಿ.

ಸ್ವಾತಂತ್ರ್ಯ ಪೂರ್ವದಲ್ಲಿ ನಿಂಬಾಳಗೌಡ್ರು ಎಂದೇ ಹೆಸರಾಗಿದ್ದ ಶಾಂತಲಿಂಗಪ್ಪ ಪಾಟೀಲರ ಜೀವನ ಬಹುರಂಜನೀಯ ಹಾಗೂ ವೈಭವಯುತವಾದುದು. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬಾಳ ಗ್ರಾಮ ಇವರ ಜನ್ಮ ಸ್ಥಳ. ತಂದೆ ಗಿರೆಪ್ಪಾ. ತಾಯಿ ನಿಂಗಮ್ಮಾ. ತಮ್ಮ ಕಲಾಭ್ಯಾಸವನ್ನು ಭಾರತದ ಪ್ರತಿಷ್ಠಿತ ಕಲಾ ಶಾಲೆಯಾದ ಮುಂಬಯಿನ ಜಿ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪೂರ್ಣಗೊಳಿಸಿದರು.

ಇವರು ಸೃಜನಶೀಲ ವ್ಯಕ್ತಿ, ಕೇವಲ ಒಂದೇ ಕ್ಷೇತ್ರ ಅಥವಾ ವಿಷಯವನ್ನು ನಂಬಿ ಕುಳಿತವರಲ್ಲ ಎಂಬುದು ಇವರ ವ್ಯಕ್ತಿತ್ವ ಪರಿಶೀಲಿಸಿದಾಗ ಅರ್ಥವಾಗುತ್ತದೆ. ಚಿತ್ರಕಲೆ ಇವರ ಅಭ್ಯಾಸ ವಸ್ತುವಾಗಿದ್ದರೂ, ಶಿಲ್ಪಕಲೆ ಹಾಗೂ ಮೂರ್ತಿ ರಚನೆಯಲ್ಲಿಯೂ ಇವರು ಅಷ್ಟೇ ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಚಿತ್ರಕಲೆ ಹಾಗೂ ಶಿಲ್ಪ ಕಲಿಕೆಯಂತೆಯೇ ಛಾಯಾಚಿತ್ರ ಕಲೆಯಲ್ಲೂ ಇವರು ನಿಪುಣರಾಗಿದ್ದರು. ದೊಡ್ಡ ಹಾಗೂ ಕಪ್ಪು ಬಿಳುಪು ಛಾಯಾಚಿತ್ರಗಳ ಪೋಸ್ಟರ್‌ಗಳನ್ನು ಮಾರ್ಪಡಿಸುವದರಲ್ಲಿ ಇವರು ಸಿದ್ಧಹಸ್ತರು. ಅದಕ್ಕೆಂದೇ ತಮ್ಮ ಊರಲ್ಲಿ ವ್ಯವಸ್ಥಿತವಾದ ಸ್ಟುಡಿಯೋ ನಿರ್ಮಿಸಿಕೊಂಡಿದ್ದರು. ಕಪ್ಪು ಬಿಳುಪು ಛಾಯಾಚಿತ್ರಗಳಿಗೆ ಬಣ್ಣಕೊಟ್ಟು, ಜೀವ ತುಂಬಿದಾಗ ವರ್ಣ ಛಾಯಾಚಿತ್ರಗಳ ಕಲ್ಪನೆ ಇರದ ಅಂದಿನ ದಿನಗಳಲ್ಲಿ ಪಾಟೀಲರ ಕಾರ್ಯಕ್ಕೆ ಬೆರಗಾಗದವರರಿಲ್ಲ. ಅಂತಹ ಚಿತ್ರಗಳು ಹಾಗೂ ನೆಗೆಟಿವ್‌ಗಳು ಇಂದಿಗೂ ನಿಂಬಾಳ ಗ್ರಾಮದ ಈ ಕಲಾವಿದರ ಮನೆಯಲ್ಲಿ ದೊರೆಯುತ್ತವೆ.



ಇವರು ರಚಿಸಿರುವ ವರ್ಣ ಚಿತ್ರಗಳಲ್ಲಿ ಬಹುಪಾಲ ವ್ಯಕ್ತಿ ಚಿತ್ರಗಳಾಗಿವೆ. ತಮ್ಮ ಜೀವಿತಾವಧಿಯಲ್ಲಿ ಅನೇಕ ಊರುಗಳನ್ನು ಸುತ್ತಿ, ತಮ್ಮ ಕಣ್ಣಿಗೆ ಕಂಡದ್ದನ್ನೆಲ್ಲ ಯಥಾವತ್ತಾಗಿ ಚಿತ್ರಿಸಿದ್ದಾರೆ. ಈಗ ಕೆಲವಷ್ಟೇ ಸುಸ್ಥಿತಿಯಲ್ಲಿವೆ. ಈ ಚಿತ್ರಗಳು ಕಲಾವಿದರ ಪ್ರಬುದ್ಧತೆಗೆ ಸಾಕ್ಷಿಯಾಗಿವೆ. ನಿಜಾಮ, ನೆಹರು, ಗಾಂಧೀಜಿ, ಸುಭಾಷ್‌ಚಂದ್ರ ಬೋಸ್, ಲೋಕಮಾನ್ಯ ಬಾಳ ಗಂಗಾಧರ ಟಿಲಕ, ಮಾಣಿಕನಗರದ ಪ್ರಭುಗಳು, ಹಾನಗಲ್ಲಿನ ಕುಮಾರ ಸ್ವಾಮಿಗಳು, ಮಹಾಗಾಂವದ ಶ್ರೀಗಳು ಮುಂತಾದ ವ್ಯಕ್ತಿಗಳ ಚಿತ್ರಗಳು ಕಲಾವಿದನ ಪ್ರೌಢಿಮೆ ತೋರಿಸುತ್ತವೆ.



'ಭಾವಚಿತ್ರ' ಪೆನ್ಸಿಲ್ ಪೌಂಡರ್


ಇವರು ತಮ್ಮದೇ ಆದ ಶೈಲಿ ರೂಢಿಸಿಕೊಳ್ಳಲು ಪ್ರಯತ್ನಪಟ್ಟರು. ವಾಸ್ತವಕ್ಕೆ ಹೆಚ್ಚು ಮಹತ್ವ ನೀಡಿದ್ದನ್ನು ಇವರ ಕೃತಿಗಳಲ್ಲಿ ಕಾಣಬಹುದು. ರೂಪದರ್ಶಿಯರನ್ನು ಮುಂದಿಟ್ಟುಕೊಂಡು ಚಿತ್ರಿಸಿದ ಫಲವೋ ಏನೋ ಚಿತ್ರದಲ್ಲಿರುವ ವ್ಯಕ್ತಿಯ ಸ್ವಭಾವವನ್ನೂ ಮುಖಭಾವದಲ್ಲಿ ಕಾಣಬಹುದು. ಇವರ ಪ್ರತಿಯೊಂದು ಕಲಾ ಕೃತಿಯಲ್ಲಿ ನೈಜ ಚಿತ್ರಣ ಮೂಡಿಬಂದಿದೆ. ಭಾರತದ ಹಲವಾರು ಪ್ರದೇಶಗಳನ್ನು ಸುತ್ತಿ ಕೊನೆಗೆ ನಿಂಬಾಳದಲ್ಲಿ ತಮ್ಮ ಜೀವನದ ಕೊನೆಯ ಘಳಿಗೆಯನ್ನು ಕಳೆದ ಪಾಟೀಲರ ಬದುಕು ಕಲೆಗಾಗಿಯೇ ರೂಪುಗೊಂಡಿತ್ತು. (ಎಚ್‌ವಿಎಂ)

ಶಾಂತಾ ಕಮಲಾಪೂರಕರ: ಕಸೂತಿ ಕಲೆಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಗುರುತಿಸಿಕೊಂಡಿರುವ ಕಲಾವಿದೆ. ಇವರು ಹೈದ್ರಾಬಾದ್ ಕರ್ನಾಟಕದ ಜನರಿಗೆ ಚಿರಪರಿಚಿತರು. ಇವರ ಕಲಾಕೃತಿ



ಗಳು ದೇಶದ ಅನೇಕ ಕಡೆ ಹರಡಿದೆ. ಕಲೆಯಲ್ಲಿ ಯಾವುದೇ ಔಪಚಾರಿಕ ಶಿಕ್ಷಣ ಅಥವಾ ತರಬೇತಿಯನ್ನು ಇವರು ಪಡೆದಿಲ್ಲ. ತಾಯಿ ಲಕ್ಷ್ಮೀಬಾಯಿ ಕುಲಕರ್ಣಿ ಅವರು ಹೆಣೆಯುವ ಚಿತ್ತಾರಗಳಿಂದ ಪ್ರೇರಣೆಗೊಂಡು ಎರಡನೆಯ ವಯಸ್ಸಿನಿಂದಲೇ ಕಸೂತಿ ಕಲೆಯಲ್ಲಿ ತಮ್ಮ ಆಸಕ್ತಿಯನ್ನು ತೋರಿಸಲು ಪ್ರಾರಂಭಿಸಿದ್ದರು. ಲಾತೂರನಲ್ಲಿ ಎರಡನೆಯ ತರಗತಿಯಲ್ಲಿದ್ದಾಗ ಇವರಿಗೆ ಕಸೂತಿ ಕಲಾಸ್ಪರ್ಧೆಯಲ್ಲಿ ಬಹುಮಾನವು ದೊರೆಯಿತು. ಇಲ್ಲಿಂದ ಇವರ ಕಲಾತ್ಮಕ ಜೀವನ ಪ್ರಾರಂಭವಾಯಿತು. ದಿನನಿತ್ಯ ಸೂಜಿ ಬಣ್ಣ ಬಣ್ಣದ ದಾರಗಳಿಂದ ಬಟ್ಟೆಯ ಮೇಲೆ ಆಟವಾಡುತ್ತಲೇ ಬೆಳೆದ ಶಾಂತಾ ಅವರು ಅನೇಕ ದಿಗ್ಗಜರ ಭಾವಚಿತ್ರಗಳನ್ನು ಪೇಂಟಿಂಗ್‌ನಂತೆಯೇ ಭಾಸವಾಗುವ, ಕಣ್ಣಿಗೆ ಆನಂದವನ್ನುಂಟು ಮಾಡುವ ಅದ್ಭುತ ಕಲಾಕೃತಿಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ.

ಇವರ ಕಲಾತ್ಮಕ ಕೌಶಲದ ವೈಶಿಷ್ಟ್ಯ ಇರುವುದು ಇವರ ಕಸೂತಿ ಭಾವಚಿತ್ರಗಳಲ್ಲೇ. ಇವರ ಕಸೂತಿ ಕಲೆ ಅತ್ಯಂತ ಸಂಕೀರ್ಣವೂ, ಸೂಕ್ಷ್ಮವೂ ಆಗಿದೆ. ಆ್ಯಂಕೊದಾರ ಪಾಪ್ಲಿನ್ ಬಟ್ಟೆ ಚಿಕ್ಕ ಸೂಜಿ ಮತ್ತು ಒಂದು ರಿಂಗ್ ಇದ್ದರೆ ಸಾಕು ಕಲಾಕೃತಿಗಳು ಸೃಷ್ಟಿಗೊಳ್ಳಲು. ದಾರಗಳ ವರ್ಣ ಸಂಯೋಜನೆಯಲ್ಲಿ ಮಾತ್ರ ಹೆಚ್ಚು ಗಮನ ಹರಿಸಬೇಕಾಗುತ್ತದೆ. ಇವರು ಸುಮಾರು ಐವತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ಈವರೆಗೆ ರಚಿಸಿದ್ದಾರೆ. ಸಿಂಧಿ ಸ್ಟೀಚ್ (ಕಚವರ್ಕ್) ಕ್ರೋಶೆ, ಖಶ್-ಖಶೆ ಹೀಗೆ ಅನೇಕ ಬಗೆಯ ಶೈಲಿಯಲ್ಲಿ ಇವರು ಹೆಣೆಯುತ್ತಾರೆ. ಖಶ್-ಖಶೆ ಕಸೂತಿ ಎಂದು ವಿಶಿಷ್ಟ ಮಾದರಿಯನ್ನು ಅಭಿವೃದ್ಧಿಸಿದ್ದಾರೆ. ಮುಖದಲ್ಲಿ ಭಾವನೆಗಳನ್ನು ಅಭಿವ್ಯಕ್ತಿಸಲು ಖಶ್-ಖಶೆ ಮಾದರಿಯ ಕಸೂತಿ ನೆರವಾಗುದಂತೆ.



'ಮಹಾತ್ಮಾ ಗಾಂಧಿಜೀ' ಕಸೂತಿ ಕಲೆ

ಮಥುರ ಕ್ವಾಟ್ಸ್ ಲಿಮಿಟೆಡ್, ಆಂಕರ್ ಥ್ರೆಡ್ ಸಂಘಟಿಸಿದ ಅಖಿಲ ಭಾರತ ಕಸೂತಿ ಕಲಾಸ್ಪರ್ಧೆಯಲ್ಲಿ ಶಾಂತಾಬಾಯಿ ಅವರ ಆದಿ ಶಂಕರಚಾರ್ಯರ ಭಾವಚಿತ್ರಕ್ಕೆ 1993ರಲ್ಲಿ ಮೊದಲ ಬಹುಮಾನ ಸಂದಿದೆ, 2001 ರಿಂದ 2005ರ ವರೆಗೆ ಇದೇ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಗುಬಲಗಾ೯ ಇವರು 1996 ರಲ್ಲಿ ಆಯೋಜಿಸಿರುವ ಸ್ಪರ್ಧೆಯಲ್ಲಿಯೂ ಕೂಡ ಪ್ರಥಮಸ್ಥಾನ ಪಡೆದಿರುತ್ತಾರೆ. ಇವರ ಕಲಾಕೃತಿಗಳಾದ, ಮದುಮಕ್ಕಳು, ಪ್ರಕೃತಿ ಚಿತ್ರ, ದುಲಹನ್ (ಮದುಮಗಳು) ಹಳ್ಳಿಯ ಜೀವನ ಹಾಗೂ ಇತ್ತಿಚೆಗೆ ಪಡೆದ ಬಹುಮಾನಗಳು ಗೋಲ್ಡನ್ ಕ್ಯಾಟೆಗರಿನಲ್ಲಿ ಕಲಾಕೃತಿಗಳಾದ ಅಲ್ಬರ್ಟ್ ಐನ್‌ಸ್ಟೈನ್, ಮಹಾತ್ಮಾ ಗಾಂಧಿಜೀ, ಬಾಲದತ್ತಾತ್ತೇಯ ಮತ್ತು ಯಕ್ಷಗಾನ ಕಲಾಕೃತಿಗಳು ಬಹುಮಾನಗಳನ್ನು ಇವರಿಗೆ ಒದಗಿಸಿಕೊಟ್ಟಿವೆ.

ಕಲಬುರ್ಗಿ ಕಂಪು 2010ರಲ್ಲಿ ಇವರ ಏಕವ್ಯಕ್ತಿ ಕಲಾ ಪ್ರದರ್ಶನವು ಉಪ್ಪಿನವರ ತೋಟದಲ್ಲಿ ಪ್ರದರ್ಶನಗೊಂಡಿತ್ತು. ಇವರು ಇಲ್ಲಿಯವರೆಗೆ ಅನೇಕ ಎಂಬ್ರಾಯ್ಡರಿ(ಕಸೂತಿ) ಶಿಬಿರಗಳನ್ನು ಏರ್ಪಡಿಸಿ ಉಚಿತವಾಗಿ ಬೋಧನೆಯನ್ನು ನೀಡಿರುತ್ತಾರೆ.

(ಎಸ್‌ಪಿ)

ಶಾಂತಾ ಭೀಮಸೇನರಾವ್: ಕಲಬುರಗಿಯ ಎಂ.ಎಸ್.ಐ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿ ವೃತ್ತಿಯಲ್ಲಿರುವ ಶಾಂತಾ ಭೀಮಸೇನರಾವ್ ಪ್ರವೃತ್ತಿಯಿಂದ ಉತ್ತಮ ರಂಗ ಕಲಾವಿದೆ. ಕಳೆದ ಇಪ್ಪತ್ತು ವರುಷಗಳಿಂದ ನಟಿಯಾಗಿ, ನಿರ್ದೇಶಕಿಯಾಗಿ, ಸಂಘಟಕಿಯಾಗಿ, ರಂಗ ನೇಪತ್ಯದ ಸಹಾಯಕಿಯಾಗಿ ರಂಗ ಸೇವೆಯಲ್ಲಿ ನಿರತರಾಗಿದ್ದಾರೆ. ಜೈಸಿದ ನಾಯಕ, ಖರೋಖರ, ಹರಕೆಯ ಕುರಿ, ಕಾಡು ಕುದುರೆ, ಹೆಜ್ಜೆಗಳು, ಮೀಡಿಯಾ, ಗ್ರಹಣ, ನೆಳಲಿ ಪ್ರಸಂಗ ಮೊದಲಾದ



ಸುಮಾರು 15 ಕ್ಕೂ ಹೆಚ್ಚು ವಿಭಿನ್ನ ನಾಟಕರಂಗಗಳಲ್ಲಿ ಇವರು ಅಭಿನಯಿಸಿ ದ್ದಾರೆ.

ಆಕಾಶವಾಣಿಯ 'ಬಿ' ಹೈ ಶ್ರೇಣಿ ಕಲಾವಿದರಾಗಿರುವ ಅವರು ಇದುವರೆಗೆ 25 ನಾಟಕಗಳಲ್ಲಿ ಅಭಿನಯ. ದೂರ ದರ್ಶನದ ಐದು ನಾಟಕಗಳಲ್ಲಿ ಪಾತ್ರ ನಿರ್ವಹಣೆ. ಒಂದು ರಂಗನಾಟಕದ ಸಹ ನಿರ್ದೇಶಕಿ, ಕನ್ನಡ ಸಾಹಿತ್ಯ ಸಂಘ, ರಂಗ ಮಾಧ್ಯಮ ಕ್ರಿಯಾಶೀಲ ಸದಸ್ಯರಾಗಿದ್ದಾರೆ. ರಂಗ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿಯಿಂದ ಪುರಸ್ಕೃತರಾಗಿದ್ದಾರೆ.

(ಎಸ್‌ಕೆ)

ಶಾಂತಾ ವಿಶ್ವನಾಥ ಕುಲಕರ್ಣಿ: ರಾಯಚೂರಿನ ಶ್ರೀ ರಾಮಾಚಾರ ಹಾಗೂ ಲಕ್ಷ್ಮೀಬಾಯಿಯವರ ಮಗಳಾದ ಇವರು 'ರಾಯಚೂರಿನ ಕಪ್ಪು ಮಣ್ಣಿನ ಅಪ್ಪಟ ಪ್ರತಿಭೆ'. ಉತ್ತರ ಕರ್ನಾಟಕದ 'ಗಾನ ಕೋಗಿಲೆ' ಎಂದು ಖ್ಯಾತ ನಾಮರಾಗಿದ್ದಾರೆ. ಇವರು ಹಾಡದ ಪ್ರಕಾರವೇ ಇಲ್ಲ ಎನ್ನಬಹುದು. ಜನಪದ ಗೀತೆ, ರಂಗಗೀತೆ, ದೇಶ ಭಕ್ತಿಗೀತೆ, ವಚನ ಗಾಯನ, ಶಿಶು ಗೀತೆ, ಕ್ರಾಂತಿಗೀತೆ ಹೀಗೆ ಹಾಡಿನ ಪಟ್ಟಿಯ ಜೊತೆಗೆ ಪ್ರಶಂಸೆಯ ಪಟ್ಟಿಯೂ ಬೆಳೆಯುತ್ತ ಹೋಗುತ್ತದೆ. ಶಾಂತಾ ಹಾಡುತ್ತಾಳೆಂದರೆ ಸಭೆಯಲ್ಲಿ ಸೂಜಿ ಬಿದ್ದ ಶಬ್ಧ ಕೇಳುವಷ್ಟು ಸ್ಥಬ್ಧ.... ಸಾಥಿ ದಾರರಿಗೆ ಮೈ ಎಲ್ಲ ಎಚ್ಚರ... ಶಾಂತಾ ಅಷ್ಟೊಂದು ನಿಖರ ತಾಳ ಲಯದ ಬಗ್ಗೆ ಧ್ವನಿ ಅಷ್ಟೇ ಮೋಹಕ.

ಇವರ ಮೋಹಕ ಧ್ವನಿಗೆ ಮರುಳಾಗಿ, ರಂಗ ನಿರ್ದೇಶಕ ರಲ್ಲದೆ, ಬೇರೆ ಬೇರೆ ಸಂಘ ಸಂಸ್ಥೆಗಳು, ಸರ್ಕಾರಿ, ಅರೆ ಸರ್ಕಾರಿ ಯೋಜನೆಗಳ ಸಂಯೋಜಕರು, ಶಾಂತಾ ಅವರು ಹಾಡಿದ ಧ್ವನಿ ಸುರುಳಿಯನ್ನು ಮಾರುಕಟ್ಟೆಗೆ ತಂದಿದ್ದೆಂದರೆ ರಾಯಚೂರಿನ ಜಿಲ್ಲಾ ಸಾಕ್ಷರತಾ ಸಮಿತಿಯ 'ಸಾಕ್ಷರತೆಯ ಹಾಡು, ಭಾರತ ಜ್ಞಾನ ವಿಜ್ಞಾನ ಸಮಿತಿ 'ಓದಿನ ಹಾಡು' ಅಬ್ದುಲ್ ನಜೀರಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ತನ್ನ ಬೀದಿ ನಾಟಕಕ್ಕೆ ಸಂಯೋಜಿಸಿ, ಪ್ರಸಿದ್ಧಿ ಪಡಿಸಿದ ಜನಾಧಿಕಾರ' ಕರ್ನಾಟಕ ಸರ್ಕಾರದ ಜಲ ನಿರ್ಮಲ ಯೋಜನೆಗೆ ಹಾಡಿದ 'ಜಲ ಸಂಸ್ಕೃತಿ ಗೀತೆಗಳು, ಜಿಲ್ಲಾ ಅಕ್ಷರ ಜ್ಞಾನೋದಯ ಸಮಿತಿ ಕೊಪ್ಪಳ ಪ್ರಸಿದ್ಧಿ ಪಡಿಸಿದ 'ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ, ಜನಪದ ಗೀತೆ ಸಂಗ್ರಹದ 'ಯಾರಿಗಂತ ಹಾಡಲಿ, ಹೀಗೆ ಶಾಂತಾ ಅವರು ಹಾಡಿದ ಕ್ಯಾಸೆಟಿನ ಪಟ್ಟಿ ಬೆಳೆಯುತ್ತಾ ಹೋಗುತ್ತದೆ ಆದರೆ ಅವರ ಪ್ರತಿಭೆ ಹಾಡಿಗಷ್ಟೇ ಸೀಮಿತವಲ್ಲ.

ಶಾಂತಾ ಕುಲಕರ್ಣಿಯವರು ರಂಗಭೂಮಿಯ ಕಲಾವಿದ ರಾಗಿ ಪ್ರವೇಶಿಸಿದ್ದು ತುಂಬಾ ಅಚಾನಕ್ಕು. ಆದರೆ ಅಂದಿನಿಂದ ಇಂದಿನವರೆಗೆ ನಿಭಾಯಿಸುತ್ತ ಬೆಳೆದದ್ದು ಸಾಬೀತಾಗಿದೆ. ಅವ ರದು ದೊಡ್ಡ ತಾಕತ್ತು. ಇಂದು ಅವರೊಂದು ರಂಗಭೂಮಿಯ ಅಪರೂಪದ ಕೊಡುಗೆ.

ಶಾಂತಾ ಕುಲಕರ್ಣಿಯವರು ರಂಗಭೂಮಿಗೆ ಪದರ್ಪಣೆ ಮಾಡಿದ ಮೊದಲ ನಾಟಕ ವಿಶ್ವ ರಂಗಕ್ಕೆ ಅದ್ಭುತ ಕಾಣಿಕೆ ನೀಡಿದ ಜರ್ಮನ್ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ 'The cueasion chalk circle ರೂಪಾಂತರವಾದ 'ಅಲಾಮನ ಅದ್ಭುತ ನ್ಯಾಯ' ಎಂಬ ನಾಟಕದ ಮೂಲಕ ಒಳ್ಳೆಯ ಪ್ರತಿಭೆಗೆ ಅವಕಾಶ ಸಿಕ್ಕಂತೆ ಬೆಳೆಯುತ್ತಾ ಬೆಳಗುತ್ತಾ ಹೋಗುತ್ತಾ ರೆನ್ನುವುದಕ್ಕೆ ಶಾಂತಾ ಕುಲಕರ್ಣಿ ಒಂದು ಸಾಕ್ಷಿ. ಕೆರೆಗೆಹಾರ, (ಜನಪದ), 'ಜೋಗತಿ' (ಚನ್ನಣ್ಣ ವಾಲಿಕಾರ) 'ಚಿಕ್ಕ ದೇವ ಭೂಪ' (ಲಿಂಗದೇವರು ಹಳೇಮನೆ) 'ಚಾರ್ವಾಕ' (ಸತ್ಯ ನಾರಾಯಣ ಅಣತಿ) ಅಂಧೇರಿನಗರಿ (ಬೇಂದ್ರೆ) 'ದೊಡ್ಡಪ್ಪ' (ಲಿಂಗದೇವರು ಹಳೇಮನೆ) 'ಮಹಿಮಾಪುರ ಪ್ರಸನ್ನ... ಹೀಗೆ ದೊಡ್ಡ ದೊಡ್ಡ ನಾಟಕಗಳಲ್ಲಿ ಅಭಿನಯಿಸಿದ ದೊಡ್ಡ ಪಟ್ಟಿಯೇ ಬೆಳೆಯುತ್ತದೆ. ಆದರೂ ಇವರ ಪ್ರತಿಭೆಗೆ ಇಲ್ಲಿ ಪೂರ್ಣ ವಿರಾಮವಿಲ್ಲ. ಮೇಲಿನ ಪ್ರದರ್ಶನಗಳು ಕಂಡದ್ದು ನೂರಾರು.

ಸಮುದಾಯ ಒಂದು ಸಾಂಸ್ಕೃತಿಕ ಸಂಘಟನೆ. ಕಾಲ ಕಾಲಕ್ಕೆ ಸಾಂಸ್ಕೃತಿಕ ಮೌಲ್ಯಕ್ಕನುಗುಣವಾಗಿ, ನಾಟಕ ಬೀದಿ ನಾಟಕ, ಜಾಥಾ ಹೀಗೆ ಹಮ್ಮಿಕೊಳ್ಳುತ್ತದೆ. 1986ರಲ್ಲಿ ಬರ ಬಿದ್ದಾಗ 'ಬಂದ ಬಯಲಾಟ' ಎಂಬ ಬೀದಿ ನಾಟಕದಲ್ಲಿ ಸುಮಾರು 360 ಪ್ರಯೋಗಗಳನ್ನು ಬೀದರನಂದ ಬೆಂಗಳೂರವರೆಗೆ ಸಂಚರಿಸಿ, ಸಾಂಸ್ಕೃತಿಕ ಹಿರಿಮೆಯಲ್ಲಿ ಮೆರೆದಿದ್ದಾರೆ. 'ಸಾಕ್ಷರತೆ', 'ಕುಡಿತ ಸರ್ವನಾಶ' ಜ್ಯೋಗತಿ, ಆರೋಗ್ಯ ಮತ್ತು ಮಹಿಳೆ... ಹೀಗೆ ತಮ್ಮ ವೃತ್ತಿಯನ್ನು ಕಡೆಗಾಣಿಸಿ ಸಾಮಾಜಿಕ ಸಾಂಸ್ಕೃತಿಕ ಮೌಲ್ಯಕ್ಕಾಗಿ ಬೀದಿನಾಟಕಗಳಲ್ಲಿ ಭಾಗವಹಿಸಿ ತಮ್ಮ ಸಂಬಳವನ್ನು ಕಳೆದು ಕೊಂಡಿದ್ದಾರೆ.

'ಅಲಿಬಾಬಾ ಮತ್ತು 40 ಕಳ್ಳರು', 'ಸೋಲರಿಯದ ಶೂರರು', 'ಹಕ್ಕಿಹಾಡು', 'ಕತ್ತೆ ಮತ್ತು ಧರ್ಮ', 'ಜಾತ್ರೆ', ನೀಲಿ ಕುದುರೆ, 'ಎಲ್ಲಾ ಮಾಯ' ಹೀಗೆ ತಿಂಗಳುಗಳ ಅವಧಿವರೆಗೂ ಮಕ್ಕಳ ಬೇಸಿಗೆ ಶಿಬಿರವನ್ನು ಸಂಘಟಿಸಿ 20ಕ್ಕೂ ಹೆಚ್ಚು ಮಕ್ಕಳ ನಾಟಕ ನಿರ್ದೇಶನ ಮಾಡಿದ ಖ್ಯಾತಿ ಶಾಂತಾವರದ್ದು. ರಂಗ ಕಲಾವಿದರಾಗಿ, ಹಾಡುಗಾರರಾಗಿ, ನಿರ್ದೇಶಕರಾಗಿ ದುಡಿದ ಶಾಂತಾ ಕುಲಕರ್ಣಿ ಉರ್ಫ್ ಶಾಂತಾ ವಿಶ್ವನಾಥ ಇವರನ್ನು ಗುರುತಿಸಿ 1990ರಲ್ಲಿ ಜಿಲ್ಲಾಧಿಕಾರಿಗಳು ರಾಯಚೂರು, ಜನಪದ ಯಕ್ಷಗಾನ ಅಕಾಡೆಮಿ ಬೆಂಗಳೂರು, 2007ರಲ್ಲಿ ತುಮಕೂರಿನ ರಂಗ ಹವ್ಯಾಸಿ ಕಲಾವಿದರು ತಮ್ಮ ಸಂಘನೆಯ ಬೆಳ್ಳಿಹಬ್ಬದ ಸಂಭ್ರಮದಲ್ಲಿ 'ರಂಗಶ್ರೀ' 2011 ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಚಿನ್ನದ ಹಬ್ಬದ ಸಂಭ್ರಮದಲ್ಲಿ ರಂಗ ಪ್ರಶಸ್ತಿ 2011 ನೀಡಿ ಸನ್ಮಾನಿಸಿದೆ.

ಶಾಂತಾ ಕುಲಕರ್ಣಿಯವರ ಶ್ರಮದ ಹಿಂದೆ ರಂಗ ದಿಗ್ಗಜ ರಾದ ಸಿ. ಬಸವಲಿಂಗಯ್ಯ, ಸುರೇಶ ಆನಗಳ್ಳಿ, ಎಸ್. ಮಾಲತಿ, ವಾಲ್ಟರ್ ಡಿಸೋಜ, ರಘುನಂದನ್, ಲಿಂಗದೇವರು ಹಳೇಮನೆ, ಜನಾರ್ಧನ ಮುಂತಾದವರ ಕಾರ್ಯಾಗಾರ, ನೇಪಥ್ಯ ಶಿಬಿರಗಳ ಸಾರ್ಥಕ ಶ್ರಮವಿರುವುದನ್ನು ಮರೆಯ ಲಾಗದು. ಶಾಂತಾ ಕುಲಕರ್ಣಿ ಇಂದು ಬೆಂಗಳೂರಿನ ದೇವನ ಹಳ್ಳಿಯ ಪ್ರಾಥಮಿಕ ಶಾಲೆಯೊಂದರ ಶಿಕ್ಷಕಿಯಾಗಿ ದುಡಿಯುತ್ತಿದ್ದಾರೆ.

(ಎಸ್‌ಆರ್‌ಜಿ)

ಶಾತವಾಹನರ ಕಲೆ: ಆಂಧ್ರದವರಾದರೂ ಕರ್ನಾಟಕದಲ್ಲಿಯೂ ಕ್ರಿಸ್ತಶಕದ ಆದಿಯಲ್ಲಿ ಶಾತವಾಹನರು ಕೆಲವು ವಾಸ್ತು ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಬನವಾಸಿ ಹಾಗೂ ಸನ್ನತಿಗಳಲ್ಲಿ ಇಟ್ಟಿಗೆಯಲ್ಲಿ ನಿರ್ಮಿಸಿದ ಸ್ತೂಪಗಳ ತಳಭಾಗ ದೊರೆತಿದೆ. ಐಹೊಳೆ ಪಟ್ಟದ ಕಲ್ಲುಗಳಲ್ಲೂ ಇಟ್ಟಿಗೆಯ ಕಟ್ಟಡಗಳ ಅವಶೇಷಗಳಿವೆ. ಬಾದಾಮಿಯ ನಾಗ, ತಾಳೆಗುಂದದ ಪ್ರಣವೇಶ್ವರ ಈ ಕಾಲಕ್ಕೆ ಸೇರುವ ಶಿಲ್ಪಗಳು. ಚಂದ್ರವಳ್ಳಿ, ಹಿರೇಹಡಗಲಿ ಇತ್ಯಾದಿ ಕಡೆಗಳಲ್ಲಿ ನಡೆದ ಉತ್ಖನನದಲ್ಲಿ ಶಾತವಾಹನರ ಅನೇಕ ಶಿಲ್ಪಗಳು ದೊರೆತಿವೆ. ಬುದ್ಧನ ಪಾದುಕೆಗಳನ್ನು ಪೂಜಿಸುತ್ತಿರುವವರು, ನಾಗ, ಯಕ್ಷರು, ರೆಕ್ಕೆಯುಳ್ಳ ಪ್ರಾಣಿಗಳು, ಇತ್ಯಾದಿಗಳು ದೊರೆತಿವೆ. ವ್ಯಾಪಾರಿ ಹಾಗೂ ಪ್ರವಾಸಿಗಳು ದಾರಿಯಲ್ಲಿ ಮಡಿದಾಗ ಶಿಲ್ಪಗಳಿಂದ ಕೂಡಿದ ಶಾಸನ ಸಹಿತ ಹಾಕಿಸುತ್ತಿದ್ದ ಆಯತಸ್ಥಂಭ ಅಥವಾ ಛಾಯಾಸ್ಥಂಭಗಳು ಹಲವಾರು ದೊರೆತಿವೆ. ಇಂತಹ ಹಲವಾರು ಕಲಾಕೃತಿಗಳನ್ನು ಗುಲಬರ್ಗಾದ ಪ್ರದರ್ಶನಾಲಯದಲ್ಲಿ ನೋಡಬಹುದು.



ಶಾತವಾಹನರ ಕಲೆ, ಅಮರಾವತಿ

ಶಾತವಾಹನರ ಹಲವಾರು ಗುಹಾಲಯಗಳನ್ನು ಮುಂಬಯಿ ಬಳಿಯ ಕನ್ಹೇರಿ ಕಾರ್ಲ, ಬೇಡ್ಸ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ವಿಶಾಲವಾದ ಪ್ರಾರ್ಥನಾ ಮಂದಿರ ಅಲಂಕಾರಯುತ ಕಂಬಿಗಳು ಸ್ಥೂಲಕಾಯದ ಸ್ತ್ರೀ, ಪುರುಷರ, ಪ್ರಾಣಿಗಳ ಉಬ್ಬು ಶಿಲ್ಪಗಳು, ಎತ್ತರವಾದ ಬಾಗಿಲುವಾಡಗಳು ಅವುಗಳ ಮೇಲೆ ಕುದುರೆ ಲಾಳಾಕೃತಿಯ ಜಾಲಾಂದ್ರ (ಕಿಟಕಿ) ಗಳು. ಬೌದ್ಧ ಭಿಕ್ಷುಗಳು ತಪಸ್ಸು ಮಾಡಲು ಅಲ್ಲಲ್ಲಿ ಸಣ್ಣ ಸಣ್ಣ ಕೊಠಡಿಗಳು ಇತ್ಯಾದಿಗಳನ್ನು ನೋಡಬಹುದು. ಬಿಡಿಯಾಗಿ ಕಟ್ಟಿದ ಚೈತ್ಯ, ಸ್ತೂಪಗಳು ಆಂಧ್ರಪ್ರದೇಶದ ಗೋಳಿ, ಜಗ್ಗಯಪೇಟ, ಭಟ್ಟಿಪ್ರೊಲು, ಘಂಟಸಾಲ ಇತ್ಯಾದಿಗಳಲ್ಲಿ ಕಾಣಬಹುದು. ಬೌದ್ಧ ತತ್ವದ. ಜಾತಕ ಕಥೆಗಳ ಅನೇಕ ಉಬ್ಬು ಶಿಲ್ಪಗಳು ಬಿಡಿ ಫಲಕಗಳ ಮೇಲೆ ರಚಿಸಿರುವುದು ಅಮರಾವತಿ ಮತ್ತು ನಾಗಾರ್ಜುನ ಸಾಗರಗಳಲ್ಲಿ ಕಾಣಬಹುದು.

(ಜೆಟಿಜಿ)

ಶಾಮರಾವ ಖಾನಾಪುರ: ಹಾಸ್ಯ ನಟ. ತಂದೆ ಕಲ್ಯಾಣರಾವ. ರಂಗಭೂಮಿಗೆ ಶರಣಾದ ಕಲಾವಿದ ಎಂದೇ ಇವರನ್ನು ಜನ ಗುರುತಿಸುತ್ತಾರೆ ಇವರು ಒಮ್ಮೆ ವೇದಿಕೆಗೆ ಬಂದರೆ ಸಾಕು ಮಾತು ಆರಂಭಕ್ಕಿಂತಲೂ ಮುಂಚೆಯೇ ಹಾಸ್ಯದ ಹೊನಲು ಹರಿಸುತ್ತದೆ ಇವರ ಅಭಿನಯ. ಮಾತು ಮಾತಿಗೂ ತೂಕದ ಹಾಸ್ಯ ಇವರ ಕಲಾವಂತಿಕೆ ಹಿಡಿದ ಕನ್ನಡಿ. ವೃತ್ತಿಯಲ್ಲಿ ವೈದ್ಯರಾಗಿರುವ (ಆರ್.ಎಂ.ಪಿ) ಇವರು ಹವ್ಯಾಸವನ್ನಾಗಿ ರಂಗಭೂಮಿ ಆಯ್ಕೆ ಮಾಡಿಕೊಂಡಿದ್ದಾರೆ. ಸ್ವಗ್ರಾಮದ ಕೂಡ್ಲೂರು ಬಸವಲಿಂಗ ಕೃಪಾಪೋಷಿತ ನಾಟ್ಯ ಸಂಘದಲ್ಲಿ ಒಮ್ಮೆ ಬಣ್ಣ ಹಚ್ಚಿದ್ದ ಅವರಿಗೆ ಕಲಾ ಸರಸ್ವತಿ ಒಲಿದದ್ದು ಅನಿರೀಕ್ಷಿತವಾಗಿ. ಆ ನಾಟಕ ನೋಡಲು ಬಂದಿದ್ದ ಗಬ್ಬೂರಿನ ರೇವಣಸಿದ್ದೇಶ್ವರ ನಾಟ್ಯ ಸಂಘದ ಸಂಸ್ಥಾಪಕ ಗುರುವಿನ ಸಿದ್ದಯ್ಯ ತಾತಾ ಅವರು ತಮ್ಮ ಸಂಘದಲ್ಲಿ ಹಾಸ್ಯ ಪಾತ್ರ ನಿರ್ವಹಿಸುವಂತೆ ವೀಳ್ಯ ನೀಡಿದರು. ಅದೊಂದು ಅವಕಾಶ ಇವರನ್ನು ಈ ಭಾಗದ ಹಾಸ್ಯ ಕಲಾವಿದನ್ನಾಗಿ ಗುರುತಿಸಿತು. ಅಲ್ಲಿಂದ ಆರಂಭವಾದ ಚೈತ್ರ ಯಾತ್ರೆ ಇಂದಿಗೂ ಎಗ್ಗಿಲ್ಲದೇ ಸಾಗಿದೆ. ಅದಕ್ಕೆ ಸಾಕ್ಷಿಯಂತೆ ಅವರು ಇಲ್ಲಿಯವರೆಗೆ ಆಡಿದ 80 ನಾಟಕಗಳು ನಿದರ್ಶನ.

ಗಬ್ಬೂರಿನ ಬೂದಿಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುವ ನಾಲ್ಕೈದು ಸರಣಿ ನಾಟಕಗಳ ಎಲ್ಲ ಹಾಸ್ಯ ಪಾತ್ರಗಳು ಶಾಮರಾವ ಅವರಿಗೆ ಮೀಸಲು. ನಾಯಕ, ಖಳನಾಯಕನಿಗಿಂತ ಹೆಚ್ಚಿನ ಪ್ರಾಶಸ್ತ್ಯ ಶಾಮರಾವರ ಹಾಸ್ಯ ಪಾತ್ರಕ್ಕೆ ದಕ್ಕಿರುವುದು ಪಾತ್ರದಲ್ಲಿ ಇವರು ತೋರುವ ತಲ್ಲೀನತೆಗೆ ಸಾಕ್ಷಿ. ನಾಟಕದ ಗೀಳು ಹೆಚ್ಚಾದಂತೆ ಹೆಚ್ಚೆಚ್ಚು ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಅಪರಿಮಿತ ಆಸಕ್ತಿ ನಾಟಕ ನಿರ್ಮಾಣಕ್ಕೂ ಪ್ರೇರಣೆಯಾಯಿತು. ಅದರ ಪರಿಣಾಮವೇ ಹಲವಾರು ಪ್ರದರ್ಶನ ಕಂಡ 'ಕಲೆ ಕೊಟ್ಟ ನೆಲೆ' ಹಾಗೂ 'ಮನ ಕದ್ದವನೇ ಮನೆ ಮುರಿದ' ನಾಟಕಗಳು ಈ ಭಾಗದ ಹಿರಿಯ ರಂಗಕರ್ಮಿ ಗುಡಿಗೇರಿ ಬಸವರಾಜರಂಥ ದಿಗ್ಗಜರೊಂದಿಗೂ ನಟನೆ ಪ್ರಶಂಸೆಗೆ ಗುರಿಯಾಗಿದೆ. ಪ್ರತಿ ನಾಟಕಕ್ಕೂ ಭಿನ್ನ ವೇಷ, ವಿಭಿನ್ನ ಹಾಸ್ಯ ಇವರದು.

(ಎಸ್‌ಎಸ್‌ಕೆ)


ಶಾಹೆದ್ ಪಾಶಾ: ಕುಂಚದಲ್ಲಿ ಕಲೆಯರಳಿಸಿದ, ಯುವ ಕಲಾವಿದ. ತಮ್ಮ ಅತ್ಯುತ್ತಮ ಕಲಾಕೃತಿಗಾಗಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಕಲಬುರ್ಗಿಯ ಚೈತನ್ಯಮಯಿ ಆರ್ಟ್‌ಗ್ಯಾಲರಿಯಲ್ಲಿ ಏಕವ್ಯಕ್ತಿ ಕಲಾಪ್ರದರ್ಶನವನ್ನು, ಮುಂಬಯಿನ 'ದಿ ಆರ್ಟ್ ಎಂಟ್ರೆನ್ಸ್' ಆರ್ಟ್ ಗ್ಯಾಲರಿಯಲ್ಲಿ ಹಾಗೂ ಮುಂಬ



ಯಿನ 'ಆರ್ಟಿಸ್ಟ್ ಸೆಂಟರ್'ನಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಗಳನ್ನು ನಡೆಸಿದ್ದಾರೆ.

ಪೌರಾಣಿಕ ಹಿನ್ನೆಲೆಯಲ್ಲಿ ಆಧುನಿಕತೆಯ ಅರ್ಥವನ್ನು ಬಿಂಬಿಸುವದು. ಇವರ ಕಲಾಕೃತಿಗಳ ವೈಶಿಷ್ಟ್ಯ. ಇವರು, ರಾಮಾಯಣ ಮತ್ತು ಮಹಾಭಾರತ ಕೃತಿಗಳನ್ನು ಅಧ್ಯಯನ ಮಾಡಿದರು. ಈ ಮಹಾಕ್ಯಾವದ ವಿವಿಧ ಪ್ರಸಂಗಗಳನ್ನು ತಮ್ಮ ಕುಂಚ ಕಲೆಯಲ್ಲಿ ಅರಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಪ್ರತಿಯೊಂದು ಚಿತ್ರಗಳೂ ಪೌರಾಣಿಕ ಹಿನ್ನೆಲೆ ಹೊಂದಿದ್ದು, ಬಹುತೇಕ ಚಿತ್ರಗಳು, ಇವರ ಶ್ರಮವನ್ನು ಸಾರ್ಥಕಗೊಳಿಸಿವೆ. ಈ ಒಂದು ಸ್ಫೂರ್ತಿ ಮತ್ತು ಪ್ರೇರಣೆಯೇ ಬಹುಶಃ ಇವರಿಗೆ ಪೌರಾಣಿಕ ಮತ್ತು ಆಧುನಿಕ ಪ್ರಸಂಗಗಳ ವಿಷಯಗಳನ್ನೆತ್ತಿಕೊಂಡು ಕಲಾಕೃತಿಗಳ ರಚನೆ ಮಾಡಿರಲು ಸಾಧ್ಯವಾಗಿದೆ.

ಪೌರಾಣಿಕ ಹಿನ್ನೆಲೆಯ ಅನೇಕ ಚಿತ್ರಗಳನ್ನು ಇವರು ಚಿತ್ರಿಸಿದರು, ನೂತನ ಸಮಾಜಕ್ಕೆ ಆಧುನಿಕ ರೀತಿಯಲ್ಲೇ ಪೌರಾಣಿಕ ಸಂದೇಶಗಳನ್ನು ನೀಡುವ ಮೂಲಕ, ತಮ್ಮ ಕುಂಚ ಕಲೆಯಲ್ಲಿ



'ಪಂಚ ಮಹಾಭೂತಗಳು' ಅಕ್ರೇಲಿಕ್ ಮಾಧ್ಯಮ

ಹೊಸತನವನ್ನು ಮೆರೆದಿದ್ದು, ಈ ಚಿತ್ರಗಳನ್ನು ವೀಕ್ಷಿಸಿದಾಗ ಅರಿವಾಗುತ್ತದೆ. ಕುಂಚ ಕಲೆಯ ಮೂಲಕ ಸಮಾಜಕ್ಕೆ ಏನೆಲ್ಲ ಅತ್ಯುತ್ತಮ ಅಂಶಗಳನ್ನು ಹೊಂದಿರುವ ಸಂದೇಶಗಳನ್ನು ಆಧುನಿಕ ರೀತಿಯಲ್ಲಿ ನೀಡಬಹುದು ಎಂಬುದನ್ನು ಇವರು ಅತ್ಯಂತ ಸಮರ್ಥವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.

(ಎಸ್ಆರ್ಎಂ)

ಶಿ

ಶಿರವಾಳ: ಐತಿಹಾಸಿಕ ಸ್ಥಳ. ಕಲಬುರ್ಗಿ–ಯಾದಗಿರಿ ಜಿಲ್ಲೆಗಳ ಭೀಮರಥಿ–ಕೃಷ್ಣೆ ನದಿಗಳ ಮಧ್ಯ ಪ್ರದೇಶದ ಸಗರನಾಡಿನಲ್ಲಿ ರಾಷ್ಟ್ರಕೂಟರ ಕಲೆ ಮತ್ತು ವಾಸ್ತು ಶಿಲ್ಪಗಳ ದೇಗುಲಗಳ ಗ್ರಾಮವೆಂದು ಪ್ರಸಿದ್ಧಿ ಪಡೆದಿದೆ. ಗ್ರಾಮದೊಳಗೆ ಪ್ರವೇಶಿಸಿದಾಗ ಅವನತಿಯ ಅಂಚಿನಲ್ಲಿರುವ ಗತವೈಭವ ಸಾರುವ ಕಸದ ತಿಪ್ಪೆಯಾಗಿರುವ ದೇವಾಲಯಗಳ ದರ್ಶನವಾಗುತ್ತದೆ.

ದನಗಳ ಹುಲ್ಲು ಇಡಲು ಬಳಕೆಯಾಗುವ ದೇಗುಲಗಳ ಮೇಲ್ಛಾವಣಿಗಳು, ಮನೆ ಕಟ್ಟಲು ಬಳಕೆಯಾಗಿರುವ ಶಿಲ್ಪಗಳು. ಮುಳ್ಳುಕಂಟಿಗಳಲ್ಲಿ ಅನಾಥವಾಗಿ, ಅಜ್ಞಾತವಾಗಿ ಬಿದ್ದಿರುವ ಐತಿಹಾಸಿಕ ಪರಂಪರೆಯ ಪಳೆಯುಳಿಕೆಗಳು ಶಿರವಾಳ ಗ್ರಾಮಕ್ಕೆ ಬಂದ ಜನರಿಗೆ ಸ್ವಾಗತಿಸುತ್ತಾ, ಅವು ತಮ್ಮ ರಕ್ಷಣೆಗಾಗಿ ಅಂಗಲಾಚುತ್ತಿರುವಂತೆ ಭಾಸವಾಗುತ್ತದೆ.

ಶಿವನಿಗೆ ತನ್ನ ಮಗನನ್ನು ಕೊಂದು ಅಡುಗೆ ಮಾಡಿ ಉಣಬಡಿಸಿದ ಪ್ರಸಿದ್ಧ ಶಿವಭಕ್ತ 'ಶಿರಿಯಾಳ ಶೆಟ್ಟಿ'ಯ ಊರು ಇದೆ ಎಂದು ಹೇಳಲಾಗುತ್ತದೆ. ಇದಕ್ಕೆ ಹಿನ್ನೆಲೆಯ ಸಾಕ್ಷಿ ಎನ್ನುವಂತೆ 365 ಲಿಂಗಗಳು, 365 ಬಾವಿಗಳು ಇಲ್ಲಿದ್ದುವು ಎಂದು ಪ್ರತೀತಿ ಪ್ರತಿಯೊಂದು ದೇವಾಲಯದ ಗರ್ಭಗುಡಿಯೊಳಗೆ ಸುಂದರವಾದ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಗ್ರಾಮದ ಆರಾಧ್ಯ ದೈವನೇ ಸಿದ್ಧಲಿಂಗನಾಗಿದ್ದಾನೆ.

ಈ ದೇವಾಲಯವು ಅಧಿಕ ಚಿನ್ಹೆಯ ಆಕಾರದಲ್ಲಿದ್ದು, ಇಲ್ಲಿ ಪಂಚಲಿಂಗ ಸ್ಥಾಪನೆಯಾಗಿವೆ. ಶಿರವಾಳ ಗ್ರಾಮವನ್ನು 'ಧರ್ಮದ ಮನೆ' ಹಾಗೂ ದಕ್ಷಿಣದ 'ವಾರಣಾಸಿ' ಎಂದು ಕರೆಯುತ್ತಿದ್ದರೆಂದು ಇಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಸುಮಾರು 900 ವರ್ಷಗಳ ಹಿಂದೆ, ಶಿರವಾಳ ಪ್ರಮುಖ ಪಟ್ಟಣವಾಗಿತ್ತೆಂದು, ಕಲ್ಯಾಣ ಚಾಲುಕ್ಯರ ಭೂಲೋಕ ಮಲ್ಲ, ಸರ್ವಜ್ಞ ಭೂಪ ಎಂಬ ಬಿರುದನ್ನು ಹೊಂದಿ, 3ನೆಯ ಸೋಮೇಶ್ವರನ (ಕ್ರಿ.ಶ.1128) ಕಾಲದ ಶಾಸನವು ಸಂಪದ್ಭರಿತ ಪಟ್ಟಣವಾಗಿತ್ತೆಂದು ದಾಖಲಿಸುತ್ತದೆ. ಇಲ್ಲಿನ ದೇವಾಲಯಗಳಿಂದಾಗಿ ಇದೊಂದು ಧಾರ್ಮಿಕ ಕೇಂದ್ರವಾಗಿಯೂ ಪ್ರಸಿದ್ಧಿ ಪಡೆದುಕೊಂಡಿತ್ತು.

ತಂಜಾವೂರಿನ ಬುಂದೇಲ್‌ಖಂಡದವರೆಗೆ, ರಾಷ್ಟ್ರಕೂಟರ ಹೆಗ್ಗಳಿಕೆಯನ್ನು ಸಾರಿದ ಅರಸ ಮುಮ್ಮಡಿ ಕೃಷ್ಣನ (ಕ್ರಿ.ಶ. 38 ರಿಂದ 968) ಕಾಲದಲ್ಲಿ ಆತನ ಬಿರುದು ಸಂಕೇತಗಳನ್ನು ಸಾರುವ 939ರ ಶಾಸನದಲ್ಲಿ ಎಡೆದೊರೆ ನಾಡಿನ ಅಧಿಪತಿ ರಾಷ್ಟ್ರಕೂಟರ ಸಾಮಂತ, ಬುಧರಾಜ, ಸಗರನಾಡು ಅಲಾವುಂಡ, ಚಂದಯ್ಯಸ್ವಾಮಿ ಹಾಗೂ ಶಿರವಾಳದ ಪ್ರಮುಖರು ಈ ದೇವಾಲಯಗಳಿಗೆ ದಾನದತ್ತಿ ನೀಡಿದರೆಂದು ತಿಳಿಸುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಈ ಗ್ರಾಮದಿಂದ ಉತ್ತರದ ನಾಸಿಕಕ್ಕೂ, ಆಂಧ್ರದ ಅಮರಾವತಿಗೂ ನೇರ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯೊಂದು ಶಿರವಾಳದಿಂದಲೇ ಹಾಯ್ದು ಹೋಗಿದ್ದರಿಂದ ನಾಸಿಕ ಮತ್ತು ಅಮರಾವತಿಗಳ ಶಿಲ್ಪಕಲೆಗಳ ಪ್ರಭಾವ ಇಲ್ಲಿಯ ಶಿಲ್ಪಕಲೆಗಳಲ್ಲಿ ಗುರುತಿಸಬಹುದಾಗಿದೆ.

ಈ ಗ್ರಾಮದ ದೇಗುಲಗಳು ಕಂಬದ ಹಾಗೂ ಗೋಡೆಯ ಮೇಲೆ ಕೆತ್ತಿಸಲಾದ ಶಿಲಾಬಾಲಕಿಯರ ಕೇಶಾಲಂಕಾರವು

ರೋಮ್ ಶಿಲಾಬಾಲಕಿಯರ ಕೇಶಾಲಂಕಾರ ಶೈಲಿಯನ್ನು ಹೋಲುವುದರಿಂದ ರೋಮ್ ಸಾಮ್ರಾಜ್ಯದೊಡನೆ ಇಲ್ಲಿನ ಜನತೆ ವ್ಯಾಪಾರ-ವ್ಯವಹಾರ ಸಂಪರ್ಕ ಹೊಂದಿದ್ದರು ಮತ್ತು ಇಂತಹ ಸಂಪರ್ಕದಿಂದ ಇಲ್ಲಿ ಎರಡು ಸಂಸ್ಕೃತಿಗಳ ಸಮ್ಮಿಲನ ವಾಗಿದೆ ಎಂದು ಹೇಳಬಹುದು. ಇದೆಲ್ಲವನ್ನೂ ಅವಲೋಕಿಸಿ ದಾಗ, ಶಿರವಾಳದ ಇತಿಹಾಸ ನಮಗೆ ಅಚ್ಚರಿ ಮತ್ತು ಹೆಮ್ಮೆಯ ಸ್ವಾಭಿಮಾನದ ಭಾವನೆ ಮೂಡಿಸುತ್ತದೆ.

ಈ ಗ್ರಾಮದ ಪಶ್ಚಿಮಕ್ಕೆ ಬರುವ ವೀರಶೈವ ಪುರಾಣಗಳಲ್ಲಿ ಉಲ್ಲೇಖವಿರುವ ಸುಜ್ಞಾನೇಶ್ವರ ದೇವಾಲಯವಿದೆ. ಈತ ಮಹಾ ಶಿವಶರಣನಾಗಿದ್ದು, ತನ್ನ ಧರ್ಮಬೋಧನೆಯಿಂದ ಖ್ಯಾತಿ ಪಡೆದ ಬೇಡರ ಯುವಕನ ಮನಸ್ಸನ್ನು ಪರಿವರ್ತನೆ ಮಾಡಿ, ನನ್ನಯ್ಯನೆಂಬ ಶಿವಶರಣನನ್ನಾಗಿ ಮಾಡಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಈ ದೇವಾಲಯದ ಪಕ್ಕದಲ್ಲಿ ನನ್ನಯ್ಯ ಮತ್ತು ನಾಗಯ್ಯ ಎಂಬ ಸುಂದರವಾದ ವಾಸ್ತು ಶಿಲ್ಪ ಹೊಂದಿರುವ ಅವಳಿ ದೇವಾಲಯಗಳು, ಅವುಗಳ ಗರ್ಭಗುಡಿಯೊಳಗೆ ನಯನ ಮನೋಹರ ಲಿಂಗಗಳು ಕಂಗೊಳಿಸುತ್ತವೆ.

ಈ ದೇವಾಲಯದ ಪಕ್ಕದಲ್ಲಿಯೇ ಸೇದಿ ಕಲ್ಲಿನಿಂದ ನಿರ್ಮಿತವಾದ ಸುಂದರವಾದ ಲಿಂಗಾಕಾರದ ಹಾಗೂ ಅಧಿಕ ಚೆಲ್ವೆಯನ್ನು ಹೊಂದಿರುವ ಭವ್ಯವಾದ ಬಾವಿಯ ಗೋಡೆಯ ಮೇಲೆ ರಾಮಾಯಣದ ದೃಶ್ಯಾವಳಿಯಿಂದ ಕೂಡಿದ ಉಬ್ಬು ಕಲಾಕೃತಿಗಳು ಮನಮೋಹಕವಾಗಿ ಕಂಡುಬರುತ್ತವೆ.

ರಾಷ್ಟ್ರಕೂಟರ ಮನೆತನಕ್ಕೆ ಸೇರಿರುವ ಶಿರವಾಳದ ದೇವಾ ಲಯಗಳ ಒಳಗೆ ಕಂಗೊಳಿಸುವ ಮುಖಮಂಟಪ, ಸಭಾ ಮಂಟಪ, ಗರ್ಭಗೃಹ, ಮಂಟಪದ ಕಂಬಗಳ ಮೇಲೆ ಹೊರ ಗೋಡೆಗಳ ಮೇಲೆ ರಾಮಾಯಣ, ಮಹಾಭಾರತ ಮತ್ತು ಪಂಚತಂತ್ರದ ದೃಶ್ಯಾವಳಿಗಳ ಮತ್ತು ಪಂಚತಂತ್ರದ ದೃಶ್ಯಾ ವಳಿಗಳ ಉಬ್ಬು ಶಿಲ್ಪಕಲೆಗಳಿಂದ ಅಲಂಕಾರಗೊಂಡಿವೆ.

ಈ ಗ್ರಾಮದ ಸಿದ್ದೇಶ್ವರ, ವೀರಭದ್ರೇಶ್ವರ, ಮಹಾದೇವ ದೇವಾಲಯಗಳು, ಭಗ್ನ ಜೀನ ಬಿಂಬಗಳು, ಹಾಳು ಬಸದಿಗಳು, ಶಿರಿಯಾಳ ಶೆಟ್ಟಿಯ ಹೆಂಡತಿ ಚಂಗುಳಾಂಬೆಯ ಪಾದುಕೆ ಮುಂತಾದವುಗಳು ಗಮನಿಸಿದಾಗ, ಶಿರವಾಳ ಗ್ರಾಮವು ಹಿಂದೆ ಪ್ರಖ್ಯಾತ ಯಾತ್ರಾ ಸ್ಥಳ, ಪ್ರಸಿದ್ಧ ನಗರ, ಧಾರ್ಮಿಕ ಕೇಂದ್ರ, ಜೈನ ಯಾತ್ರಾ ಸ್ಥಳವಾಗಿ, ಭಕ್ತಿ, ಜ್ಞಾನ, ಸಂಪತ್ತಿಗೆ ಹೆಸರುವಾಸಿ ಯಾಗಿತ್ತೆಂದು ಇಲ್ಲಿ ದೊರೆತ ವಿವಿಧ ಆಧಾರಗಳ ಮೂಲಕ ತಿಳಿದುಬರುತ್ತದೆ.

ಈ ಭವ್ಯ ದೇವಾಲಯಗಳು, ಶಾಸನಗಳು, ವಿಗ್ರಹಗಳು ರಕ್ಷಣೆಯಿಲ್ಲದಿದ್ದರೆ ನಾಲ್ಕೈದು ವರ್ಷಗಳಲ್ಲಿ ನಶಿಸಿ ಮುಂದಿನ ಜನಾಂಗಕ್ಕೆ ಸಿಗದೇ ಈ ಐತಿಹಾಸಿಕ ಪರಂಪರೆಯ ಇತಿಹಾಸವು ಭೂತಾಯಿ ಗರ್ಭ ಸೇರುತ್ತದೆ. (ಎಚ್‌ಬಿಜಿ)

ಶಿಲ್ಪಕಲಾ ವೈಭವ: (ಚಂದನಕೆರೆ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಗ್ರಾಮ. ಕೇವಲ 40 ರಿಂದ 50 ಮನೆಗಳಿರುವ ಅತ್ಯಂತ ಚಿಕ್ಕ ಹಳ್ಳಿ. ಕರ್ನಾಟಕವನ್ನು ಆಳಿದ ರಾಜರಲ್ಲಿ ಪ್ರಮುಖರಾದ ಕಲ್ಯಾಣ ಚಾಲುಕ್ಯರು ಕನ್ನಡ ಸಾಹಿತ್ಯ, ಕಲೆ, ಶಿಲ್ಪಕಲೆಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಈ ಅರಸರ ಕಾಲದ ಅನೇಕ ಸಾಂಸ್ಕೃತಿಕ ಸ್ಥಳಗಳು ಇತಿಹಾಸಕಾರರಿಗೆ ಅಪರಿಚಿತವಾಗಿಯೇ ಉಳಿದಿವೆ. ಅಂಥವುಗಳ ಸಾಲಿಗೆ ಈ ಗ್ರಾಮವೂ ಸೇರುತ್ತದೆ.

ರಾಯಚೂರು ಜಿಲ್ಲೆಯಲ್ಲಿನ ಕಲ್ಯಾಣ ಚಾಲುಕ್ಯರ ದೇವಾ ಲಯಗಳು ಮತ್ತು ಶಿಲ್ಪಗಳ ಅಧ್ಯಯನ ಮಾಡಿ, ಪ್ರೌಢ ಗ್ರಂಥ ಪ್ರಕಟಿಸಿರುವ ಸಿ.ಎಸ್. ಪಾಟೀಲರ ಗಮನಕ್ಕೂ ಬಾರದ ಈ ಐತಿಹಾಸಿಕ ಗ್ರಾಮಕ್ಕೆ ತೆರಳಿದಾಗ, ಕಂಡು ಬಂದ ಹಲವಾರು ಭಗ್ನ ಶಿಲ್ಪಗಳು, ದೇವಾಲಯಗಳ ಅವಶೇಷಗಳು ಮತ್ತು ಶಿಲಾ ಲಿಪಿಗಳು ಅಧ್ಯಯನ ಯೋಗ್ಯವಾಗಿವೆ. ಚಂದನಕೆರೆ ಕುರಿತು, ಸುರಪುರ ಸಂಸ್ಥಾನದಲ್ಲಿದ್ದ ಬ್ರಿಟಿಷ ಅಧಿಕಾರಿ ಮಿಡೋಸ್ ಟೇಲರನ ಆತ್ಮ ಕತೆಯಲ್ಲೂ ವಿವರಣೆ ಇಲ್ಲ. ಆದರೆ, ದೇವದುರ್ಗದ ದೊರೆಗಳು ಚಂದನಕೆರೆಯಿಂದ ದೇವದುರ್ಗಕ್ಕೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದರೆಂಬುದು ಶಾಸನ ಗಳಿಂದ ತಿಳಿದು ಬರುತ್ತದೆ. ಆದರೂ ಈ ಸ್ಥಳದ ಬಗ್ಗೆ ಇರುವ ಯಾವ ದಾಖಲೆಗಳೂ ಮತ್ತು ಶಿಲಾಶಾಸನಗಳನ್ನು ಇಲ್ಲಿಯ ವರೆಗೆ ಯಾರೂ ಅಧ್ಯಯನ ಮಾಡಿಲ್ಲ ಇಲ್ಲಿ ದೊರೆತ ಅಮೂಲ್ಯ ವಾದ ಶಿಲ್ಪಕಲಾ ಶ್ರೀಮಂತಿಕೆಯಿಂದ ಮೆರೆದ ಅವಶೇಷಗಳು ಇಲ್ಲಿ ಕಂಡುಬರುತ್ತವೆ.

ಗುಡಿಗಳು: ಚಂದನಕೆರೆ ಹಳ್ಳಿಯನ್ನು ದೇವದುರ್ಗದಿಂದ ಪ್ರವೇಶಿಸುವಾಗ ಮೊದಲು ಬಲಕ್ಕೆ ಹನುಮಪ್ಪನ ಗುಡಿ, 'ಚಂದನಕೆರೆ ಹನುಮಪ್ಪ' ಎಂದೇ ಪ್ರಸಿದ್ಧಿ ಪಡೆದ ದೇಗುಲವಿದು. ಇಲ್ಲಿಂದ ಮೂರು ಮೀಟರ ಅಂತರದಲ್ಲಿ ಚಂದನಕೆರೆ ಹಳ್ಳಿ ಎಡಕ್ಕೆ ಒಂದು ಕಟ್ಟೆ (ಅಧಿಷ್ಠಾನ). ಇದೊಂದು ಈಶ್ವರ ದೇವಾ ಲಯ. ಅದರ ಎದುರಿಗೆ ಇನ್ನೊಂದು ಚಿಕ್ಕ ಹನುಮಪ್ಪನ ಗುಡಿ. 12x12 ಅಳತೆಯ ಈ ಕಟ್ಟೆ, ಹಿಂದೆ ಚಾಲುಕ್ಯರ ಕಾಲದ ಈಶ್ವರ ದೇವಸ್ಥಾನದ ಅಧಿಷ್ಟವಾಗಿತ್ತು. ಈಗ ಇದನ್ನು ಅಲ್ಲಿಯ ರೈತರು ಸೊಪ್ಪೆ ಕಾಳು, ದವಸ ಧಾನ್ಯ ಒಣಗಿಸಲು ಉಪಯೋಗಿಸುತ್ತಾರೆ. ಈ ಕಟ್ಟೆಯ ದಕ್ಷಿಣದ ಅಂಚಿನಲ್ಲಿ ಮೂರು ಅಡಿ ಎತ್ತರದ ಪಾಣಿವಾಟದ ಮೇಲೆ ಒಂದು ಸಣ್ಣ ಸ್ಥಾವರ ಲಿಂಗವಿದೆ. ಎದುರುಗಡೆ ಒಂದು ಭಿನ್ನ ನಂದಿ ಶಿಲ್ಪ. ಪಕ್ಕದಲ್ಲಿ ಮೂರು ಅಡಿ ಎತ್ತರದ ಚಾಲುಕ್ಯ ಶೈಲಿಯ ತಿಳಿಗೆಂಪು ವರ್ಣದ ಕಣಶಿಲೆಯ ಸ್ತಂಭ. ಶಕ್ತಿ ದೇವತೆಯ ಭಗ್ನ ಶಿಲ್ಪ ಲಿಂಗ, ಪಾಣಿವಾಟ ಮತ್ತು ಇತರ ಶಿಲ್ಪಗಳನ್ನು ಡಾಲೋರೈಟ್ ಶಿಲೆಯಲ್ಲಿ ಕೆತ್ತಲಾಗಿದೆ.

ಕಟ್ಟೆಯ ಎದುರಿನ ಚಿಕ್ಕ ಹನುಮಪ್ಪನ ಗುಡಿ ಇತ್ತೀಚೆಗೆ ನಿರ್ಮಿಸಿದ್ದು ಕಂಡು ಬರುತ್ತದೆ. ಗುಡಿಯ ಮುಂದೆ ಎರಡು ವೀರಗಲ್ಲುಗಳಿವೆ, ಅಲ್ಲಿಯ ಜನರು ಮೇಣ ಮೆತ್ತಿರುವುದರಿಂದ ಸರಿಯಾದ ವಿವರ ಗೊತ್ತಾಗುವುದಿಲ್ಲ. ಈ ಪರಿಸರದಲ್ಲಿ ಎರಡು ಶಿಲಾ ಲೇಖನಗಳಿವೆ. ಅವುಗಳಲ್ಲಿ ಒಂದು ಭಗ್ನವಾಗಿದೆ. ಲಿಪಿ ಯಿಂದ ಇವು ಕನ್ನಡದ ಶಾಸನಗಳೆಂದು ಸ್ಪಷ್ಟವಾಗುತ್ತದೆ.

ಚಂದನಕೆರೆ ಹನುಮಪ್ಪನ ಗುಡಿ ದಕ್ಷಿಣಾಭಿಮುಖವಾಗಿದೆ, ಎಂಟು ಕಂಬಗಳ ಚಾಲುಕ್ಯ ಶೈಲಿಯಲ್ಲಿ ಈ ಗುಡಿ ನಿರ್ಮಿಸಲಾಗಿದೆ. ಗರ್ಭಗುಡಿ ಮತ್ತು ಅದರ ಮುಂದಿನ ಪಡಸಾಲೆ ಮೇಲೆ ಎಂಟು ಕಂಬಗಳನ್ನು ನಿಲ್ಲಿಸಿ, ಛತ್ತಿನಲ್ಲಿ ಕಣಶಿಲೆಯ ಹಾಸು ಗಲ್ಲುಗಳನ್ನು ಹಾಕಲಾಗಿದೆ. ಇದರ ಕಂಬಗಳು ಮತ್ತು ಗರ್ಭಗುಡಿ ಬಾಗಿಲಿನ ಚೌಕಟ್ಟು ಕಲ್ಯಾಣ ಚಾಲುಕ್ಯರ ಕಾಲದವು ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಇತ್ತೀಚೆಗೆ ಅಂದರೆ, 17 ಅಥವಾ 18 ನೆಯ ಶತಮಾನದಲ್ಲಿ ನಿರ್ಮಿಸಿದಂತೆ ಕಂಡು ಬರುತ್ತಿರುವುದರಿಂದ ಚಾಲುಕ್ಯರ ಕಾಲದ ಈಶ್ವರ ದೇವಾಲಯದ ಕಂಬಗಳು ಹಾಗೂ ಬಾಗಿಲಿನ ಚೌಕಟ್ಟು ಇಲ್ಲಿಗೆ ಸ್ಥಳಾಂತರಿಸಿರಬಹುದೆಂದು ಊಹಿಸಬಹುದು.

ಮೂರ್ತಿ ಶಿಲ್ಪಗಳು: ಈ ಹಳ್ಳಿಯ ಪಶ್ಚಿಮಕ್ಕಿರುವ ಚಂದನಕೆರೆ ಎಂದು ಕರೆಯಲಾಗುವ ಕೆರೆಯ ಹತ್ತಿರ ಮಣ್ಣಿನ ದಿಬ್ಬ ಇದೆ. ಇದು ಒಂದು ಯಾವುದೋ ದೇವಸ್ಥಾನದ ಅಧಿಷ್ಠಾನವಿದ್ದಂತೆ ಭಾಸಗುತ್ತಿದ್ದು, ಈಗ ಇದು ತಿಪ್ಪೆಯಾಗಿ ಪರಿವರ್ತನೆಗೊಂಡಿದೆ. ಈ ದಿಬ್ಬದ ಮೇಲೆ ವೀರಭದ್ರ ಮತ್ತು ಭದ್ರಕಾಳಿ ಮೂರ್ತಿಗಳಿವೆ. ವೀರಭದ್ರನ ಶಿಲ್ಪಕ್ಕೆ ನಾಲ್ಕು ಕೈಗಳಿದ್ದು, ಕೈಗಳಲ್ಲಿ ಬಿಲ್ಲು, ತ್ರಿಶೂಲ, ಖಡ್ಗ ಮತ್ತು ಢಮರುಗವಿದೆ. ಜಟೆಯಲ್ಲಿ ಶಿವಲಿಂಗ ಸರ್ಪ ಮತ್ತು ಕೀರ್ತಿ ಮುಖ ಕೆತ್ತಲಾಗಿದೆ. ಇಂತಹ ಅಪೂರ್ವವಾದ ಮೂರ್ತಿಯನ್ನು ಎರಡು ತುಂಡುಗಳನ್ನಾಗಿ ಮಾಡಿದ್ದು, ಕೆಳಭಾಗ ಕಳೆದು ಹೋಗಿದೆ. ಇದರ ಪಕ್ಕದಲ್ಲಿಯೇ ಸುಂದರವಾದ ಭದ್ರಕಾಳಿ ಮೂರ್ತಿ, ನಾಲ್ಕು ಕೈಗಳ ಪೈಕಿ ಎರಡು ಕೈಗಳು ಭಗ್ನಗೊಂಡಿವೆ. ಬಲಗಡೆಯ ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ಒಂದು ರುಂಡವಿದೆ. ಭುಜದ ಎತ್ತರದಲ್ಲಿ ಎರಡೂ ಕಡೆ ಹೂಗಳನ್ನು ಕೆತ್ತಲಾಗಿದೆ. ಹೂಗಳ ಅಡಿಯಲ್ಲಿ ತಪಸ್ವಿಗಳು ಧ್ಯಾನದಲ್ಲಿದ್ದಾರೆ. ಭದ್ರಕಾಳಿಯ ಕಿವಿಯ ಆಭರಣಗಳು, ಕಂಠಾಭರಣಗಳು, ಕಟಿಯಾಭರಣಗಳನ್ನು ಹಾಗೂ ಭದ್ರಕಾಳಿಯ ಜಟೆಯಲ್ಲಿ ಮತ್ತು ರುಂಡದ ತಲೆಯ ಮೇಲೆ ಶಿವಲಿಂಗವನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಈ ಎರಡೂ ಶಿಲ್ಪಗಳ ಪಕ್ಕದಲ್ಲಿ ರುಂಡವಿಲ್ಲದ ಇನ್ನೊಂದು ಶಿಲ್ಪವಿದ್ದು, ಇದು ಪುರುಷ ಮೂರ್ತಿ ಎಂದು ಊಹಿಸಬಹುದಾಗಿದೆ.

ಇದೇ ಸ್ಥಳದಲ್ಲಿ ಇನ್ನೆರಡು ಭಗ್ನ ಶಿಲ್ಪಗಳಿದ್ದು, ಒಂದು ಶಿಲ್ಪದ ಕೆಳಭಾಗ ಮಾತ್ರ ಇದೆ. ಇದಕ್ಕೆ ರುಂಡಮಾಲೆ ಸ್ಪಷ್ಟ ವಾಗಿದೆ. ಇದೇ ದಿಬ್ಬದ ಮೇಲೆ ನಂದಿ ವಿಗ್ರಹದ ತುಂಡು ಇದೆ. ಒಂದು ಶಾರ್ದೂಲ ಸ್ತಂಭ ಇದೆ. ಈ ಮೂರ್ತಿ ಶಿಲ್ಪಗಳಲ್ಲದೇ ಕೆರೆಯ ಬಲದಂಡೆ ಕೊನೆಯಲ್ಲಿ ಒಂದು ಭದ್ರಕಾಳಿ ವಿಗ್ರಹವಿದ್ದು, ಇದನ್ನೀಗ 'ಚೌಡಮ್ಮ' ಎಂದು ಕರೆಯಲಾಗುತ್ತಿದೆ. ಕೆರೆ ದಂಡೆ ಮೇಲೆ ರುಂಡವಿಲ್ಲದ ನಂದಿ ವಿಗ್ರಹ, ಅದರ ಪಕ್ಕದಲ್ಲಿರುವ ಶಿಲ್ಪಕ್ಕೆ ಜನಪದ ಶೈಲಿಯಲ್ಲಿ ಬಾಣಂತಿ ಸಂಗಮ್ಮ ಎಂದು ಕರೆಯಲಾಗುತ್ತಿದ್ದು, ಕೈಯಲ್ಲಿ ಚಾಕು ಹಾಗೂ ಎಡಕೊನೆಯಲ್ಲಿ ಗಂಡಿನ ಮುಖ ಇರುವ ಕಾರಣ ಇದನ್ನು ಚಾಮುಂಡಿ ಶಿಲ್ಪವೆಂದು ಕರೆಯಬಹುದಾಗಿದೆ ಅಥವಾ ಮಾಸ್ತಿ ಶಿಲ್ಪವಿರಬಹುದು.

ಬಸದಿಗಳು: ಈ ದಿಬ್ಬ ದಾಟಿ, ಇತ್ತೀಚೆಗೆ ಕಟ್ಟಲಾಗಿರುವ ಶಾಲೆ ಹತ್ತಿರ ಬಂದರೆ ಒಂದು ಸಣ್ಣ ಬಯಲಿದೆ. ಅಲ್ಲಿಗೆ ಹೋದಾಗ ಸ್ಥಳೀಯ ವೃದ್ಧರೊಬ್ಬರು ಈ ಸ್ಥಳದಲ್ಲಿ ಮಠ ಇತ್ತೆಂದು ತಿಳಿಸಿದ್ದು, ಹಾಗೂ ನಿವೇಶನ, ಅಲ್ಲಿ ಬಿದ್ದಿರುವ ಕಂಬಗಳು, ತುಂಡಾಗಿರುವ ವಿಶಿಷ್ಟ ಶಿಲ್ಪಗಳನ್ನು ಗಮನಿಸಿದರೆ, ಈ ಸ್ಥಳದಲ್ಲಿ ಜೈನ ಬಸದಿ ಇದ್ದಿರುವ ಸೂಚನೆ ಕಂಡು ಬರುತ್ತಿದೆ. ಬಸದಿಗಳಿಗೂ ಮಠಗಳೆಂದು ಸಾಮಾನ್ಯರು ಕರೆಯುವುದುಂಟು. ಇಲ್ಲೊಂದು ಭಗ್ನಗೊಂಡ ಶಿಲಾಶಾಸನವಿದ್ದು, ಮಠದ ಆವರಣದಲ್ಲಿ ಪುರುಷ ಶಿಲ್ಪವಿದೆ. ತಲೆಯ ಮೇಲೆ 14 ಹೆಡೆಗಳ ಸರ್ಪ ಕೆತ್ತಲಾಗಿದೆ. ಇದು ಪಾರ್ಶ್ವನಾಥ ಶಿಲ್ಪವಿರಬಹುದು. ಕೆರೆಯ ದಡದ ಮೇಲೆ ರೊಕ್ಕದ ಬಂಡೆ ಎಂದು ಜನಪದರು ಕರೆಯುವ ಹಾಸು ಬಂಡೆ ಇದೆ. ಇದನ್ನೆಲ್ಲಾ ಗಮನಿಸಿದಾಗ ಚಂದನಕೆರೆಯಲ್ಲಿ 10–12 ನೆಯ ಶತಮಾನದಲ್ಲಿ ಜೈನ ಬಸದಿ ಇದ್ದಿರಬಹುದೆಂದು ಸೂಚಿಸುತ್ತದೆ.

ಮಾಸ್ತಿಕಲ್ಲುಗಳು: ಬಾಣಂತಿ ಸಂಗಮ್ಮ ಎಂಬ ಮಾಸ್ತಿಕಲ್ಲು ಅಲ್ಲದೆ, ದೇವದುರ್ಗ ಪೊಲೀಸ್ ಠಾಣೆ ಆವರಣದಲ್ಲಿರುವ ಎರಡು ಮಾಸ್ತಿಕಲ್ಲುಗಳನ್ನು ಇಲ್ಲಿಂದಲೇ ಸಾಗಿಸಲಾಗಿದೆ. ಒಂದು ಶಿಲ್ಪದಲ್ಲಿ ಮೂರು ಹೆಣ್ಣಿನ ಮೂರ್ತಿಗಳಿದ್ದು, ನಡುವಿನ ಹೆಣ್ಣಿನ ಮೂರ್ತಿ ಸ್ವಲ್ಪ ದೊಡ್ಡದಿದ್ದು, ಎಲ್ಲಾ ಮೂರು ಶಿಲ್ಪಗಳ ಕೈ ಮುಗಿದಿವೆ. ಇನ್ನೊಂದು ಶಿಲ್ಪ ಒಂದು ಮೀಟರ್ ಎತ್ತರವಿದ್ದು, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಪ್ರಾಣಿಯ ರುಂಡ, ಕೊರಳಲ್ಲಿ ಆಭರಣಗಳಿವೆ. ವಿಗ್ರಹದ ಬಲ ಕೊನೆಯಲ್ಲಿ ನವಿಲಿನ ಉಬ್ಬು ಶಿಲ್ಪ ಕೆತ್ತಲಾಗಿದೆ. ಆದ್ದರಿಂದ ಇದು ಜೈನ ಧರ್ಮಕ್ಕೆ ಸೇರಿದ ಯಕ್ಷಿಣಿ ಶಿಲ್ಪವಾಗಿರಬಹುದೆಂದು ಊಹಿಸಬಹುದು.

ವೀರಗಲ್ಲುಗಳು: ಚಂದನಕೆರೆಯಲ್ಲಿ ಎರಡು ವೀರಗಲ್ಲುಗಳಿದ್ದರೆ, ದೇವದುರ್ಗ ಪೊಲೀಸ್ ಠಾಣೆಯಲ್ಲಿ ಹತ್ತು ವೀರರ ಗಲ್ಲುಗಳನ್ನು ಜೋಡಿಸಲಾಗಿದೆ. ಇವುಗಳನ್ನೆಲ್ಲಾ ಚಂದನಕೆರೆಯಿಂದಲೇ ತರಲಾಗಿದೆ. ಈ ಎಲ್ಲಾ ಶಿಲ್ಪಗಳ ಪೈಕಿ ಕೇವಲ ಒಂದು ಮಾತ್ರ ಯುದ್ಧದ ದೃಶ್ಯ ತೋರಿಸುತ್ತದೆ. ಇವು ವಿಜಯನಗರ ಶೈಲಿಗೆ ಸೇರಿದ ಶಿಲ್ಪಗಳಂತೆ ಕಂಡು ಬರುತ್ತವೆ.

ಕಾವಲು ಕಮಾನು: ಈಗಿನ ತಹಶೀಲ್ ಕಚೇರಿ ಹಿಂದೆ ಇರುವ ಮೂರು ಕಮಾನುಗಳ ಕಾಲವು ಕಟ್ಟಡ ಸ್ಪಷ್ಟ ಪುರಾವೆ ನೀಡುತ್ತದೆ. 16–17ನೆಯ ಶತಮಾನದ ದೊರೆ ಕಟ್ಟಿಸಿರಬಹುದಾದ ಈ ಕಟ್ಟಡ ಚಂದನಕೆರೆಯ ಪೂರ್ವದ ಹೆಬ್ಬಾಗಿಲಿರಬಹುದು. ಇದರ ಶೈಲಿಯ ಮೇಲೆ ಮುಸ್ಲೀಂ ಪ್ರಭಾವ ಕಂಡು ಬಂದರೂ ಅಲ್ಲಿ ಕೆತ್ತಲಾಗಿರುವ ಸೂರ್ಯ ಚಂದ್ರರ ಹಾಗೂ ಆನೆಯ ಶಿಲ್ಪಗಳು ಹಿಂದೂ ದೊರೆ ಕಟ್ಟಿಸಿರುವ ಗುರುತು ನೀಡುತ್ತವೆ. ಪಶ್ಚಿಮಕ್ಕಿರುವ ಬಯಲು ಸ್ಥಳದಲ್ಲಿ ಮುಸ್ಲೀಮರ ಗೋರಿಗಳಿವೆ. ಈ ಪ್ರದೇಶದಲ್ಲಿ ನಿಜಾಮ ಸರಕಾರವಿದ್ದಾಗ ಇದು ಮುಸ್ಲೀಮರ ಕೈ ಸೇರಿರಬಹುದು.

ಇತರ ಅವಶೇಷಗಳು: ಚಂದನಕೆರೆಯ ತುಂಬೆಲ್ಲಾ ಹಲವಾರು ಭಗ್ನ ಶಿಲ್ಪಗಳು, ಪಾದಗಳು ಅನಾಥವಾಗಿ ಬಿದ್ದಿವೆ. ಐದು

ಅಡಿ ಎತ್ತರದ ಹಾಳು ಮಣ್ಣಿನ ದಿಬ್ಬದಲ್ಲಿ ಮಣ್ಣಿನ ಮಡಿಕೆಯ ಚೂರುಗಳು, ಎಲುಬಿನ ಚೂರುಗಳು ಕಂಡು ಬರುತ್ತಿವೆ. ಇವುಗಳನ್ನು ಸಂಶೋಧನೆಗೆ ಒಳಪಡಿಸಿದರೆ ಹೆಚ್ಚಿನ ಮಾಹಿತಿ ತಿಳಿದು ಬರಬಹುದು.

ಮೇಲೆ ವಿವರಿಸಲಾದ ಪುರಾತತ್ವದ ಅವಶೇಷಗಳ ವಿವರ ಗಳನ್ನು ಪುನರಾವಲೋಕಿಸಿದಾಗ ಚಂದನಕೆರೆಯು 10–12 ನೆಯ ಶತಮಾನದಲ್ಲಿ ಒಂದು ಅತ್ಯಂತ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂಬಂಶ ವ್ಯಕ್ತವಾಗುತ್ತದೆ. ಈ ಅವಧಿಯಲ್ಲಿ ಹೆಚ್ಚಾಗಿ ಶೈವ ಮತ್ತು ಜೈನ ಧರ್ಮಗಳೆರಡೂ ಪ್ರಸಾರದಲ್ಲಿದ್ದುವು. ಇಲ್ಲಿ ಜೈನ ಧರ್ಮದ ಕುರುಹುಗಳು ದೊರೆತಿರುವುದು ಕುತೂಹಲಕಾರಿ ಏಕೆಂದರೆ, ದೇವದುರ್ಗ ತಾಲ್ಲೂಕಿನಲ್ಲಿ ಒಂದೂ ಜೈನ ಕುಟುಂಬ ಇಲ್ಲ. ಕೊಪ್ಪಳದಲ್ಲಿ ಮಾತ್ರ ಜೈನ ಕುಟುಂಬಗಳಿವೆ. ಕೊಪ್ಪಳ ಹಿಂದೆ ಜೈನಧರ್ಮದ ಸುಪ್ರಸಿದ್ಧ ಕೇಂದ್ರವಾಗಿತ್ತು. ಕೊಪ್ಪಳ ಹೊರತುಪಡಿಸಿದರೆ ಚಂದನಕೆರೆಯೇ ಇನ್ನೊಂದು ಜೈನ ಕೇಂದ್ರವಾಗಿತ್ತು ಎಂಬುದು ಕುತೂಹಲಕಾರಿ ಅಂಶ.

17ನೆಯ ಶತಮಾನದಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹರಿದಾಸರ ಪ್ರಭಾವ ಹೆಚ್ಚಾದಾಗ ಚಂದನಕೆರೆ ದೊರೆಗಳು ವೈಷ್ಣವ ಸಂಪ್ರದಾಯ ಸ್ವೀಕರಿಸಿರಬೇಕು. ಈ ದೊರೆಗಳ ವಂಶಸ್ಥರು ಇಂದಿಗೂ ದೇವದುರ್ಗದಲ್ಲಿದ್ದಾರೆ. ಈ ಸಂಪ್ರದಾಯದ ಬದಲಾವಣೆ ಚಂದನಕೆರೆಯ ಶೈವ ದೇವಾಲಯಗಳು ಹಾಗೂ ಜೈನ ಬಸದಿಗಳ ಮೇಲಾಗಿ ಎಲ್ಲಾ ಗುಡಿಗಳು ಮತ್ತು ಬಸದಿಗಳು ಅರಕ್ಷಿತವಾದುವು. ಇದರ ಜೊತೆಗೆ 18ನೆಯ ಶತಮಾನದ ಆನಂತರ ಬಂದ ಮುಸ್ಲಿಮರ ಪ್ರಭಾವದಿಂದ ಎಲ್ಲಾ ಗುಡಿ ಬಸದಿಗಳು ಭಾಗಶಃ ನಾಶವಾದವು. ಇದರ ಪರಿಣಾಮವಾಗಿ ಚಂದನಕೆರೆ ಹಾಳಾಯಿತು. ಈ ಗ್ರಾಮದ ಮೇಲೆ ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರು ಬೆಳಕು ಚೆಲ್ಲುವ ಅವಶ್ಯಕತೆ ಇದೆ.

(ಹೆಚ್‌ಸಿ)

ಶಿವಣ್ಣ ಮಡಿವಾಳರ: ಸಂಗೀತ ಸಾಧಕರು. ಚಿಕ್ಕ ವಯಸ್ಸಿನಲ್ಲೇ ತಮ್ಮ ಮನೆಯ ಪಕ್ಕದಲ್ಲಿ ಭಜನಾ ಮನೆಯಿದ್ದದರಿಂದ ಸಂಗೀತದ ಕಡೆ ಹೆಚ್ಚಿನ ಆಸಕ್ತಿ ಬೆಳಸಿಕೊಂಡರು. ಮೊದ ಮೊದಲು ಹಾರ್ಮೋನಿಯಂ ಹಿಡಿಯಲು ಹೆದರುತ್ತಿದ್ದವರು ಗೋದಾಮು ಯಮನಪ್ಪ ಎಂಬುವವರಿಂದ ಪ್ರಾಥಮಿಕವಾಗಿ ಹಾರ್ಮೋನಿಯಂ ನುಡಿಸುವ ಕಲೆ ಕಲಿತರು. ಅನಂತರ ಅವರ ಶಿಫಾರಸ್ಸಿನ ಮೇಲೆ ಸುಮಾರು 10ನೆಯ ವಯಸ್ಸಿನಲ್ಲೇ ರೌಡಕುಂದಾ ಗ್ರಾಮದ ಬಿ.ಎಂ. ವೀರೇಶ್ವರ ಶಾಸ್ತ್ರಿಗಳ ಹತ್ತಿರ ಸಂಗೀತಾಭ್ಯಾಸಕ್ಕೆ ಮುಂದಾದರು. ಅಂದಿನಿಂದ ಇಂದಿನವರೆಗೂ ಹಾರ್ಮೋನಿಯಂ ಮತ್ತು ಹಾಡುಗಾರಿಕೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಕರ್ನಾಟಕ ಸರ್ಕಾರ ಪ್ರೌಢ ಶಿಕ್ಷಣ ಪ್ರಾಕಾರದ ಪ್ರಕಾರ ಜುನಿಯರ್ ಗ್ರೇಡ್ 16 ರಾಗಗಳ ಮತ್ತು ಸೀನಿಯರ್ ಗ್ರೇಡ್‌ನ 30 ರಾಗಗಳ ಪುಸ್ತಕ ರಚನೆ ಮಾಡಿದ್ದಾರೆ. ಸಂಗೀತ ಸೇವೆಯೊಂದಿಗೆ ಅನೇಕ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳನ್ನು ಆಡಿಸುತ್ತಾ ಬಂದಿರುವ ಶಿವಣ್ಣ ಮಾಸ್ತರರು ಅಪಾರ ಅಭಿಮಾನಿ ಬಳಗವನ್ನು ಗಳಿಸಿಕೊಂಡಿದ್ದಾರೆ.

1980ರ ಸಮಯದಲ್ಲಿ ಗೊರೇಬಾಳ ಗ್ರಾಮದಲ್ಲಿ ಶಿವಣ್ಣ ಮಾಸ್ತರರು ಹಾರ್ಮೋನಿಯಂ ನುಡಿಸಿದಾಗ ಸಂತುಷ್ಟರಾದ ಪಂಡಿತ ಪುಟ್ಟರಾಜರು ಆಶೀರ್ವದಿಸಿದರು. ಅಂದಿನಿಂದ ಈ ಕಲೆ ಮತ್ತಷ್ಟು ಕರಗತವಾಯಿತು ಎಂದು ವಿನಮ್ರವಾಗಿ ಹೇಳುತ್ತಾರೆ. 1992ರಿಂದ 94ರ ವರೆಗೆ ಹಂಪಿ ವಿವಿಯಲ್ಲಿ ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಇವರು ಅನಂತರ ತಾವೇ ಸಿಂಧನೂರಿನಲ್ಲಿ 28 ವರ್ಷಗಳಿಂದ ಶ್ರೀ ಪಂಚಾಕ್ಷರಿ ಭಾರತೀಯ ಸಂಗೀತ ಪಾಠ ಶಾಲೆ ತೆರೆದು ಸಂಗೀತವನ್ನು ಕಲಿಸುತ್ತಿದ್ದಾರೆ.

ಪಂಡಿತ ಬಸವರಾಜ ರಾಜಗುರು, ಪಂಡಿತ ನರಸಿಂಹಲು ವಡವಾಟಿ, ಚಂದ್ರಶೇಖರ ಪುರಾಣಿಕ ಮಠ, ಎಂ. ವೆಂಕಟೇಶ ಕುಮಾರ, ಹನುಮಣ್ಣ ನಾಯಕದೊರೆ, ಡಿ. ಕುಮಾರದಾಸ ಇವರ ಒಡನಾಡಿಗಳು. ಸಂಗೀತವನ್ನೇ ಉಸಿರಾಗಿಸಿಕೊಂಡಿರುವ ಶಿವಣ್ಣ ಮಾಸ್ತರರಿಗೆ ಹಲವು ಸಂಘ, ಸಂಸ್ಥೆಗಳು ಸನ್ಮಾನಿಸಿವೆ.

(ಡಿಎಚ್‌ಕೆ)

ಶಿವಪ್ಪ ಬೆಳಗಲ್: ಯುವ ಶಿಲ್ಪಿ. 'ಅಭಿನವ ತಿರುಪತಿ' ಎಂದೇ ಗುರುತಿಸಿಕೊಂಡಿರುವ ತಾಲ್ಲೂಕಿನ ಹನಮಸಾಗರದ ವೆಂಕಟೇಶ ಬೆಟ್ಟ ಏರುವಾಗ ಕಗ್ಗಲ್ಲುಗಳ ಮೇಲೆ ಆಕರ್ಷಕವಾಗಿ ಕೆತ್ತಲಾಗಿರುವ ವಿವಿಧ ದೇವತೆಗಳ ಸುಂದರ ಮೂರ್ತಿಗಳು ದಾರಿಹೋಕರ ಗಮನ ಸೆಳೆಯುತ್ತವೆ. ಬೆಟ್ಟವೇರುತ್ತಾ ಮುಂದೆ ಹೋದಂತೆ ಬಂಡೆಯ ಮೇಲೆ ಸುಡುಬಿಸಿಲು, ಗಾಳಿ, ಮಳೆ ಲೆಕ್ಕಿಸದೇ ತಲೆಯ ಮೇಲೊಂದು ಟವೆಲ್, ಪಕ್ಕದಲ್ಲಿ ನೀರಿನ ಮಡಿಕೆ, ಕೈಯಲ್ಲಿ ಸುತ್ತಿಗೆ ಹಿಡಿದುಕೊಂಡು ಏಕಾಗ್ರತೆಯಿಂದ ಕೆತ್ತನೆ ಮಾಡುತ್ತಿರುವ ಯುವ ಶಿಲ್ಪಿ ತನ್ಮಯತೆಯಿಂದ ಕಲ್ಲು ಕುಟುಕುವ ಮೂಲಕ ಅದರಲ್ಲೇ ದೇವರ ರೂಪ ಕಾಣುವ ಅಪರೂಪದ ದೃಶ್ಯ ಕಾಣಬಹುದು.

ಇವರು ವೃತ್ತಿಯಿಂದ ಶಿಲ್ಪ ಕಲಾವಿದನಾದರೂ ಬಿಡುವಿನ ಅವಧಿಯಲ್ಲಿ ಕಲೆಯನ್ನೇ ಆರಾಧಿಸುತ್ತ, ಯಾವುದೇ ಫಲಾಪೇಕ್ಷೆ ಇಲ್ಲದೇ ಬೆಟ್ಟದಲ್ಲಿರುವ ಕಗ್ಗಲ್ಲುಗಳಿಗೆ ಜೀವ ತುಂಬುವುದನ್ನೇ ಹವ್ಯಾಸವನ್ನಾಗಿಸಿಕೊಂಡು ಅದರಲ್ಲೇ ತೃಪ್ತಿ ಕಂಡುಕೊಂಡಿದ್ದಾನೆ. ಬಹುತೇಕ ಜನರಿಗೆ ಅಪರಿಚತನಾಗಿಯೇ ಉಳಿದರೂ ಇವರ ಕಲಾಕೃತಿಗಳನ್ನು ಕಂಡವರು ಬೆರಗಾಗುವುದು ಸಹಜ. ಕಲೆಯ ಹಿಂದೆ ಬಡತನ ಅಂಟಿಕೊಂಡಿರುತ್ತದೆ ಎಂಬ ಮಾತಿನಂತೆ ಏಳನೆಯ ತರಗತಿ ಓದಿಗೆ ಶರಣು ಹೊಡೆದು, ಕಡು ಬಡತನದಿಂದ ಓದಿಗೆ ತಿಲಾಂಜಲಿ ಇತ್ತು, ಕಲೆಯ ಮೂಲಕವೇ ಮನೆಯ ಕುಟುಂಬ ನಿರ್ವಹಣೆ ಹೊಣೆಗಾರಿಕೆಯನ್ನೂ ನಿಭಾಯಿಸುವ ಅನಿವಾರ್ಯತೆ ಇವರದಾಗಿದೆ.

ಮನೆಗಳ ನಿರ್ಮಾಣ ಕಾರ್ಯ ಕುಟುಂಬ ನಿರ್ವಹಣೆಗೆ

ಸಾಧ್ಯವಾದರೆ ದೇವಾಲಯ ನಿರ್ಮಾಣ ಅವುಗಳಿಗೆ ಬೇಕಾಗುವ ಕಲ್ಲಿನ ಕಂಬಗಳು, ಗರುಡಗಂಬ, ಮೂರ್ತಿಗಳನ್ನು ಚಿತ್ತಾಕರ್ಷಕ ಗೋಡೆ ಬಂಡೆಗಳನ್ನು ಕೆತ್ತನೆ ಮಾಡುವ ಕೆಲಸ ಕಲೆಯ ಹಸಿವನ್ನು ತಣಿಸುತ್ತದೆ. ಕೆತ್ತನೆಯಲ್ಲಿ ಪರಿಣಿತಿ ಹೊಂದಿದ್ದರೂ ಕಲೆಯನ್ನು ಗುರುತಿಸುವ ಕೆಲಸ ಆಗಿಲ್ಲ ಆದರೆ ಸುತ್ತಲಿನ ಗ್ರಾಮಗಳ ಜನ ತಮ್ಮೂರಿನ ದೇವಾಲಯ ನಿರ್ಮಾಣ ಮಾಡುವ ಸಮಯದಲ್ಲಿ ಇವರನ್ನು ಹುಡುಕಿಕೊಂಡು ಬರುವುದುಂಟು. ಮೊದಲು ಹಳ್ಳಿಗಳಲ್ಲಿನ ಮನೆಗಳ ನಿರ್ಮಾಣ ಕಾಯಕದಲ್ಲಿದ್ದ ಅನಂತರ ಅದನ್ನು ಬಿಟ್ಟು ಈಗ ಶಿಲ್ಪ ಕೆತ್ತನೆಯನ್ನೇ ಪ್ರಮುಖ ಕಾಯಕವಾಗಿಸಿಕೊಂಡಿದ್ದಾರೆ.

ದೇವಸ್ಥಾನಗಳ ನಿರ್ಮಾಣದಿಂದ ಸ್ವಲ್ಪ ಆರ್ಥಿಕ ವರಮಾನ ಬಂದರೂ ಬಿಡುವಿನ ಅವಧಿಯನ್ನು ವ್ಯರ್ಥಮಾಡಿಕೊಳ್ಳದ ಇವರು ಬೆಟ್ಟ ಏರುತ್ತಾನೆ. ಹೀಗೆ ಬೆಟ್ಟದ ಮೇಲೆ ಕಲ್ಲಿನಲ್ಲಿ ಕಲೆಯನ್ನೇ ಅರಳಿಸಿರುವುದು ಮೆಚ್ಚುವ ಸಂಗತಿ. ಈ ಕಲಾವಿದ ಕೆತ್ತಿರುವ ಕೃಷ್ಣ ಕಾಳಿಂಗನ ಹೆಡೆಯ ಮೇಲೆ ನಿಂತು ಮರ್ದಿಸುವುದು, ಗಣಪತಿ, ಆಂಜನೇಯ, ವೀರಭದ್ರ, ಗ್ರಾಮ ದೇವತೆಗಳ ಚಿತ್ರಗಳು ನಟರಾಜನ ಭಂಗಿಗಳನ್ನು ನೋಡಿದವರು ಮೂಕ ವಿಸ್ಮಿತರಾಗುವಂತಾಗುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಆರೇಳು ಅಡಿ ಅಗಲ ಉದ್ದದ ಮೂರ್ತಿಗಳು ಪೂರ್ಣಗೊಳ್ಳ ಬೇಕಾದರೆ ಕನಿಷ್ಟ ನಾಲ್ಕೈದು ತಿಂಗಳು ಬೇಕಾಗುತ್ತದೆ ಎಂದರೆ ಆತನಲ್ಲಿರುವ ತಾಳ್ಮೆ ಗಮನಿಸುವಂಥದ್ದು.

ಬೆಟ್ಟದ ಮೇಲಿನ ವೆಂಕಟೇಶ್ವರನ ದರ್ಶನಕ್ಕೆ ಬೇರೆಯವರು ಕಾಯಿ ಕರ್ಪೂರ ಒಯ್ದರೆ ಶಿವಪ್ಪ ವೆಂಕಟೇಶ್ವರನನ್ನು ಆರಾಧಿಸುತ್ತ ಕೆತ್ತನೆಗೆ ಬೇಕಾಗುವ ಚಾಣ, ಸುತ್ತಿಗೆ, ಅಳತೆಪಟ್ಟಿ ಸುಮೇತವಾಗಿ ಹೋಗುವುದೇ ಒಂದು ವಿಶೇಷ. ಮೊದಲೇ ಗುರುತಿಸಿದ ಕಲ್ಲುಗಳಿಗೆ ಜೀವ ತುಂಬುವ ಕಾಯಕಕ್ಕೆ ತೊಡಗುವ ಮೊದಲು ದೇವರ ದರ್ಶನ ಪಡೆಯುತ್ತಾರೆ. ಅಚ್ಚರಿಯ ಸಂಗತಿ ಎಂದರೆ ಬೆಟ್ಟದ ಮೇಲಿನ ಕೆತ್ತನೆಯ ಏಳೆಂಟು ವರ್ಷಗಳಿಂದ ನಿರಂತರ ನಡೆಯುತ್ತಿರುವ ಕಾಯಕಕ್ಕೆ ಇವರು ಯಾರಿಂದಲೂ ಫಲ ನಿರೀಕ್ಷಿಸಿಲ್ಲ. ಇಡೀ ಬೆಟ್ಟದಲ್ಲಿರುವ ಎಲ್ಲ ಕಲ್ಲುಗಳಿಗೂ ಮೂರ್ತ ಸ್ವರೂಪ ನೀಡಬೇಕು. ಅದರಿಂದ ಈ ಪ್ರದೇಶ ಒಂದು ಸುಂದರ ಕಲಾ ತಾಣವಾಗಬೇಕು ಎಂಬ ಹೆಬ್ಬಯಕೆ ಇವರದು.

(ಎನ್‌ಕೆ)

ಶಿವಬಸಯ್ಯ ಹಿರೇಮಠ: ಕವಿ, ನಟ, ನಿರ್ದೇಶಕ, ನಾಟಕಕಾರ. ಗುಲಬರ್ಗಾ ಜಿಲ್ಲೆ ಅಫಜಲಪುರ ತಾಲ್ಲೂಕಿನ ರೇವೂರ ಗ್ರಾಮದ ಹಿರೇಮಠ ಮನೆತನದಲ್ಲಿ 1948ರಲ್ಲಿ ಜನಿಸಿದರು. ಎಸ್‌ಎಸ್ ಎಸ್‌ಸಿ ವರೆಗೆ ವಿದ್ಯಾಭ್ಯಾಸ, 1961ರಲ್ಲಿ 'ಮಾತಂಗಕನ್ಯೆ' ನಾಟಕದಲ್ಲಿ ಹವ್ಯಾಸಿ ಕಲಾವಿದನಾಗಿ ರಂಗ ಪ್ರವೇಶಿಸಿದರು. ಪ್ರೇಮ ಬಂಧನ, ವಾತ್ಸಲ್ಯ, ದಸರಾ, ಆದರ್ಶ ಪ್ರೇಮ, ತಂಗಿಯ ಮನೆ, ಎಚ್ಚರ ತಂಗಿ ಎಚ್ಚರ, ಸಿಂಧೂರ ಲಕ್ಷ್ಮಣ, ರೈತನ ಮಕ್ಕಳು, ದೇಸಾಯಿಯವರ ದರ್ಬಾರ, ಕಿವುಡ ಮಾಡಿದ ಕಿತಾಪತಿ, ಚಿನ್ನದ ಗೊಂಬೆ, ದುಡ್ಡಿನ ದರ್ಪ, ಬಸ್ ಕಂಡಕ್ಟರ್, ತವರು ಮನೆ, ಮುದುಕನ ಮದುವೆ ಸೇರಿದಂತೆ ಅನೇಕ ನಾಟಕಗಳಲ್ಲಿ ನಟಿಸಿದ್ದಾರೆ. ಅಷ್ಟೇ ಅಲ್ಲದೇ ಭಾಗ್ಯವಂತಿ ಘತ್ತರಗಿ, ಕಾಳಗಿ ಹಿರೇಮಠ, ಅಡವಿ ಸಿದ್ಧೇಶ್ವರಮಠ, ಶಾಂತೇಶ್ವರ ಹಿರೇಮಠ ಹುಕ್ಕೇರಿ ಸೇರಿದಂತೆ ಅನೇಕ ಧ್ವನಿಸುರುಗಳಿಗೆ ಸಾಹಿತ್ಯ ಹಾಗೂ ರಾಗ ಸಂಯೋಜನೆ ಮಾಡಿದ್ದಾರೆ.

'ರಂಗಶ್ರೀ' ಪ್ರಶಸ್ತಿ ದೊರಕಿದೆ. ಕರ್ನಾಟಕ ನಾಟಕ ಅಕಾಡೆಮಿಯ ಚಿನ್ನದ ಹಬ್ಬದ ಸಂದರ್ಭದಲ್ಲಿ ನೀಡಲಾಗುವ ಈ ಪ್ರಶಸ್ತಿ ಇವರಿಗೆ ಸಂದ ದೊಡ್ಡ ಗೌರವ.

ಯಾವುದೇ ವೇಷ (ಪಾತ್ರ) ಹಾಕಿದರೂ ಅದಕ್ಕೆ ತಕ್ಕಂತೆ ಅಭಿನಯ; ಪರಕಾಯ ಪ್ರವೇಶ ಮಾಡುವ ಸಿದ್ಧಿ ಇವರದು. ಎಲ್ಲಕ್ಕಿಂತ ಹಾಸ್ಯ ಪಾತ್ರ ತುಂಬಾ ಕಠಿಣ; ಅದರಲ್ಲೂ ಒಂದು ಕೈ ಮೇಲೆ ಅನ್ನುವಂತೆ ಪಾತ್ರ ನಿರ್ವಹಿಸುವ ಚಾತುರ್ಯ ಇವರದು.

ಸತತ ನಾಲ್ಕು ದಶಕಗಳ ಕಾಲ ರಂಗಭೂಮಿ ಸೇವೆಗೆ ಬದುಕು ಮುಡುಪಾಗಿಟ್ಟ ಇವರ ಇಲ್ಲಿಯವರೆಗೆ 180 ನಾಟಕಗಳಲ್ಲಿ ಅಭಿನಯ, 1,000ಕ್ಕೂ ಹೆಚ್ಚು ನಾಟಕಗಳಿಗೆ ಸಂಗೀತ ಸಂಯೋಜನೆ, 200 ನಾಟಕಗಳಿಗೆ ನಿರ್ದೇಶನ ಮಾಡಿದ್ದಾರೆ. ಖ್ಯಾತ ನಟರಾದ ಸುಧೀರ, ಉಮಾಶ್ರೀ, ಡಿಂಗ್ರಿ ನಾಗರಾಜ, ಬಸವರಾಜ ಗುಡಗೇರಿ, ಪಿ.ಬಿ. ಧುತ್ತರಗಿ ಸೇರಿದಂತೆ ಅನೇಕರ ಜೊತೆಗೆ ಅಭಿನಯಿಸಿದ್ದಾರೆ.

ಸಂಗೀತ ಭೂಷಣ, ಕಲಾಕೋವಿದ, ಕಲಾನಾಟ್ಯ ವಿಶಾರದಾ, ಕವಿರತ್ನ, ಸಾಹಿತ್ಯ ಸಾಗರ, ಹಾಸ್ಯ ಚಕ್ರವರ್ತಿ, ಕಲಾಸಾಮ್ರಾಟ, ಸಾಹಿತ್ಯ ಭೂಷಣ, ಸಂಗೀತರತ್ನ, ಸಾಹಿತ್ಯ ರತ್ನ ಸೇರಿದಂತೆ 30ಕ್ಕೂ ಹೆಚ್ಚು ಪ್ರಶಸ್ತಿಗಳಿಗೆ ಪುರಸ್ಕೃತರಾಗಿದ್ದಾರೆ.

(ಆರ್‌ಬಿಕೆ)

ಶಿವರುದ್ರಪ್ಪ ನಿಟ್ಟಾಲಿ: ನಾಟಕಕಾರ. ಇವರ 'ಜೀವನಯಾತ್ರೆ' ನಾಟಕದ ನೂರಾರು ಪ್ರಯೋಗಗಳನ್ನು ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಕರ್ನಾಟಕದ ಎಲ್ಲೆಡೆ ಮಾಡಿದ್ದು ಒಂದು ಇತಿಹಾಸ.



ಉತ್ತರ ಕರ್ನಾಟಕ, ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಎಲ್ಲಿ ನೋಡಿದರಲ್ಲಿ ಜೀವನಯಾತ್ರೆ ನಾಟಕ ಪ್ರಯೋಗಗಳು ನಡೆದಿದ್ದುವು.

ಆಗ ಕೊಪ್ಪಳದಲ್ಲಿ ಅಗ್ನಿಕುಂಡ, ಭೌಮಾಸುರ, ಎಚ್ಚೆಮ ನಾಯಕ, ಹೇಮರಡ್ಡಿ ಮಲ್ಲಮ್ಮ, ಭಕ್ತ ಸುಧನ್ವ, ಲಂಕಾದಹನ, ಪ್ರಪಂಚ ಪರೀಕ್ಷೆ, ವಧೂವರೆ ಮೊದಲಾದ ನಾಟಕಗಳನ್ನು ಹವ್ಯಾಸಿ ಕಲಾವಿದರು ಆಡು

ತ್ತಿದ್ದರು. ರಾಂಪುರಿ ಇಮ್ಮಣ್ಣ ಮಾಸ್ತರ ತಂಡವೂ ಹಲವು ನಾಟಕಗಳನ್ನು ಆಗ ಅಭಿನಯಿಸುತ್ತಿತ್ತು. ಗಂಗಾವತಿ ಬಸಪ್ಪ ಎಂಬ ಕಲಾವಿದರು ಮಹೇಶ್ವರಿ ಸೇವಾ ನಾಟಕ ಮಂಡಳಿಯವರಿಗೆ ರಂಗ ತರಬೇತಿ ನೀಡುತ್ತಿದ್ದರು. ಕೊಪ್ಪಳದಲ್ಲಿ ನಾಟಕ ಪ್ರಯೋಗದ ಕಾವೇರಿತ್ತು. ಇಂಥ ವಾತಾವರಣ, ಸಾಹಿತ್ಯದ ಅಧ್ಯಯನ, ಆಗ ಪ್ರದರ್ಶಿತಗೊಳ್ಳುತ್ತಿದ್ದ ಹಿಂದೀ ಸಿನೆಮಾಗಳು, ಬದುಕಿನ ಸಂಘರ್ಷ, ತಾರುಣ್ಯದ ಬಿಸಿರಕ್ತ, ನಾಟಕಗಳನ್ನು ಬರೆಯಬೇಕೆಂಬ ಛಲ ನಿಟ್ಟಾಲಿ ಶಿವರುದ್ರಪ್ಪನವರನ್ನು ನಾಟಕಕಾರರನ್ನಾಗಿ ರೂಪಿಸಿದವು. ಇದರ ಫಲ 'ಜೀವನಯಾತ್ರೆ' 'ಪಂಕಜ', 'ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ', 'ಆಶಾದೀಪ', 'ಸಮಾಜಕ್ಕೆ ಸವಾಲು', 'ದೀಪೋತ್ಸವ' ಹಾಗೂ 'ಶಿವಯೋಗಿ ಸಿದ್ಧರಾಮ' ನಾಟಕಗಳು.

'ಜೀವನಯಾತ್ರೆ' ನಾಟಕ ಕಂಪನಿಗಳಿಗೆ ಲಾಭ ಗಳಿಸಿ ಕೊಟ್ಟಿತು. ಹಳ್ಳಿಯ ಹವ್ಯಾಸಿ ಕಲಾತಂಡದವರಿಗೆ ಮನೋರಂಜನೆ ನೀಡಿತು. ಆದರೆ ಶಿವರುದ್ರಪ್ಪನವರಿಗೆ ಆರ್ಥಿಕ ಲಾಭವಾಗಲಿಲ್ಲ. ಆದರೆ ಯಶೋಕೀರ್ತಿ ಲಭಿಸಿತು.

ಇವರು 'ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಮಹಾತ್ಮೆ' ನಾಟಕ 1979ರಲ್ಲಿ ಬರೆದು ಭಟ್ಟನ ಪಾತ್ರವಹಿಸಿ ಕೊಪ್ಪಳ ಹಾಗೂ ಸುತ್ತಲಿನ ಜನತೆಗೆ ಗವಿಸಿದ್ಧೇಶ್ವರನ ಪಾವನ ಚರಿತ್ರೆಯ ಪರಿಚಯ ಮಾಡಿಕೊಟ್ಟರು. ಕೊಪ್ಪಳದ ಗವಿಮಠಾಧಿಪತಿಗಳಾದ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಶಿವಶಾಂತವೀರ ಮಹಾಸ್ವಾಮಿಗಳವರು ಈ ನಾಟಕವನ್ನು ಪ್ರಕಟಕಪಡಿಸಿದ್ದಾರೆ. (ಎಚ್‌ಎಸ್‌ಪಿ)

ಶಿವರುದ್ರಪ್ಪ ಕಿನ್ನಾಳ: ಗರೂಡರ ನಾಟಕ ಮಂಡಳಿಯಲ್ಲಿ 19 ವರ್ಷ ಹಾರ್ಮೋನಿಯಂ ಮಾಸ್ತರರಾಗಿದ್ದವರು. ಸಂಗೀತದ ಹವ್ಯಾಸ ಬಿಟ್ಟರೆ ಇವರಿಗೆ ಇನ್ನಾವುದರ ಹವ್ಯಾಸವೇ ಇರಲಿಲ್ಲ. ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಹುಣಸೂರು ಕೃಷ್ಣಮೂರ್ತಿ ಕಿನ್ನಾಳ ಶಿವರುದ್ರಪ್ಪನವರನ್ನು ತಮ್ಮ 'ಮಾರ್ಗದರ್ಶಕ'–'ಗುರು' ಎಂದು ತಿಳಿದುಕೊಂಡಿದ್ದರು.

ಕೊಪ್ಪಳದಲ್ಲಿ–ಶ್ರೀ ಗವಿಮಠದಲ್ಲಿ ಸಂಗೀತ ಕಛೇರಿಗಳಾದರೆ, ಹಮ್ಮಿಗಿ ನೀಲಕಂಠಪ್ಪ ಹಾಗೂ ಕಿನ್ನಾಳ ಶಿವರುದ್ರಪ್ಪ ಮುಂದಿನ ಸಾಲಿನಲ್ಲಿ ಹಾಜರಿರುತ್ತಿದ್ದರು. ಪಂ. ಭೀಮಸೇನ ಜೋಷಿ, ಪಂ. ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್ಲ, ಪಂ. ಮಲ್ಲಿಕಾರ್ಜುನ ಮನ್ಸೂರ ಯಾರೇ ಬರಲಿ ಇವರನ್ನು ಗುರುತಿಸಿ ಗೌರವಿಸುತ್ತಿದ್ದರು. ಯಲಬುರ್ಗಾ ತಾಲ್ಲೂಕಿನ ಮಂಗಳೂರು ಕಲೆಯ ತವರೂರು. ಅಲ್ಲಿಯ ವೀರಪ್ಪ–ಫಕೀರಮ್ಮ ದಂಪತಿಗಳ ಮಗ. ಬಡ ಕುಟುಂಬದಲ್ಲಿ ಜನಿಸಿದ ಇವರಿಗೆ ತಂದೆ ತಾಯಿಗಳಿಂದ ಉತ್ತಮ ಶಿಕ್ಷಣ ದೊರೆಯಿತು. ಕಿನ್ನಾಳಿಗೆ ಕಳಿಸಿ ಇವರನ್ನು ಓದಿಸಿದರು. ಇವರ ಓದಿನೊಂದಿಗೆ ಸಂಗೀತ ಹವ್ಯಾಸ ಬೆಳೆಯಿತು. ಪ್ರತಿಭೆ ಪ್ರಜ್ವಲಿಸಿತು.

ನಿಂಗಮ್ಮ ಯಲಿಗಾರ ಎಂಬರೊಂದಿಗೆ ವೈವಾಹಿಕ ಜೀವನದ ಸೊಗಸನ್ನು ಪಡೆದರು. ಅನಂತರ ಇವರು ನೇರವಾಗಿ ಐತಿಹಾಸಿಕ ಪ್ರಸಿದ್ಧ ಗ್ರಾಮವಾದ ಇಟಗಿಗೆ ಬಂದರು. ಇಲ್ಲಿ ಶಿವಪ್ಪ ಕಿನ್ನಾಳ ಎಂಬವರ ಆಶ್ರಯದಲ್ಲಿದ್ದು ಇಟಗಿಯವರೇ ಆದ ವಾಮನರಾವ್ ಮತ್ತು ಜೀವಣ್ಣರಾವ್ ಕುಲಕರ್ಣಿ ಎಂಬವರ ಆಶ್ರಯದಲ್ಲಿ ಸಂಗೀತವನ್ನು ಶಾಸ್ತ್ರೋಕ್ತವಾಗಿ ಅಭ್ಯಸಿಸಿದರು. 1930ರಲ್ಲಿ ಗರೂಡ ಸದಾಶಿವರಾಯ ನಾಟಕ ಕಂಪನಿಯಲ್ಲಿ ಸಂಗೀತ ನಿರ್ದೇಶಕ ಹಾಗೂ ಹಾರ್ಮೋನಿಯಂ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಆ ಕಾಲಕ್ಕೆ ಗರೂಡರೆಷ್ಟು ಕಠೋರರೋ ಅಷ್ಟೇ ಕಠೋರತೆಯಿಂದ ಹಾಡುಗಳ ಅಭ್ಯಾಸ ನಾಟಕ ತಾಲೀಮು ಶಿವರುದ್ರಪ್ಪ ಮಾಡಿಸುತ್ತಿದ್ದರು. ಇದರಿಂದ ಗರೂಡರಿಗೆ ಶಿವರುದ್ರಪ್ಪ ಎಂದರೆ ಅಚ್ಚುಮೆಚ್ಚು.

ಗರೂಡರ ಕಂಪನಿ ನಿಂತ ಮೇಲೆ ಕೆಲ ಕಾಲ ಸುಳ್ಳದ ದೇಸಾಯರ ನಾಟಕ ಕಂಪನಿಯಲ್ಲಿದ್ದರು. ಅನಂತರ ಗ್ರಾಮಾಂತರ ಹವ್ಯಾಸಿ ನಾಟಕ ಕಲಾತಂಡಗಳಿಗೆ 3–4 ತಿಂಗಳಿದ್ದು ಸಂಗೀತ ಹೇಳಿಕೊಟ್ಟು ನಾಟಕಗಳನ್ನು ಪ್ರಯೋಗಿಸುತ್ತಿದ್ದರು. ಕೊಪ್ಪಳ ಹಾಗೂ ಸುತ್ತಮುತ್ತಲಿನ ಊರುಗಳ ಜಾತ್ರಾ ಮಹೋತ್ಸವಗಳಲ್ಲಿ ಪಾಲ್ಗೊಂಡು ವಚನ ಗಾಯನ ಕಾರ್ಯಕ್ರಮ ನೀಡುತ್ತಿದ್ದರು. ಇವರು 1978ರಲ್ಲಿ ನಿಧನರಾದರು.

(ಬಿಎಂಎಚ್)

ಶಿವರುದ್ರಪ್ಪ ಗುರುಸಿದ್ದಪ್ಪ ಅಂವಟಿ: ದೊಡ್ಡಾಟ ಮುಮ್ಮೇಳದಲ್ಲಿ ಪ್ರಧಾನ ಹಾಡುಗಾರ ಸಂಗೀತ ಮಾಸ್ತರರಾಗಿ, ಹೆಸರುವಾಸಿಯಾದವರು. ಜನಿಸಿದ್ದು 06.08.1937ರಂದು ಗುಲಬರ್ಗಾ ಜಿಲ್ಲೆಯ ಮಾಶಾಳ ಗ್ರಾಮದಲ್ಲಿ. 70 ವರ್ಷದಲ್ಲೂ ಇವರ ಗಾಂಭೀರ್ಯ, ಮೀಸೆ, ತಲೆಗೆ ಕೆಂಪು ಗುಜರಾತಿ ಶಲ್ಯಾ, ಪಠಾಣರನ್ನು ಹೋಲುವ ಇವರ ರುಮಾಲು ಶೈಲಿ ಜನರಲ್ಲಿ ಗಂಭೀರ, ಗೌರವ ಭಾವನೆ ಮೂಡಿಸುತ್ತದೆ.

ತಂದೆ ಗುರುಸಿದ್ದಪ್ಪ ತಾಯಿ ಬಸವಣ್ಣೆವ್ವ. ಇಬ್ಬರೂ ಕಲಾವಿದರು. ತಂದೆ ದೊಡ್ಡಾಟದ ಕಲಾವಿದರಾಗಿ ಮಗನ ಹಿಂದೆ ನಿಂತು ಪ್ರೋತ್ಸಾಹ ನೀಡಿ ಪ್ರಖ್ಯಾತನನ್ನಾಗಿ ಮಾಡಿದ್ದಾರೆ. ಕುಟ್ಟುವಾಗ, ಬೀಸುವಾಗ, ಮದುವೆ, ಸೀಮಂತಿಕೆಯಲ್ಲಿ ಹಾಡುತ್ತಿದ್ದ ತಾಯಿ ಬಸವಣ್ಣೆವ್ವವರನ ಕಲೆ ಮಗನನ್ನು ಪ್ರಭಾವಿತನನ್ನಾಗಿ ಮಾಡಿದೆ.

10 ವರ್ಷದವರಿದ್ದಾಗಲೇ ಮಾಶಾಳ ಸಂಘದ ದೊಡ್ಡಾಟದಲ್ಲಿ ಭಕ್ತ ಪ್ರಹ್ಲಾದನ ಪಾತ್ರ ಮಾಡಿ ಸಾವಿರಾರು ಪ್ರೇಕ್ಷಕರ ಮನ ಗೆದ್ದವರು. ಅಫಜಲಪೂರ ತಾಲ್ಲೂಕಿನ ಮಾಶಾಳ ಗ್ರಾಮದ ಸಾರಥೀ ಪಾತ್ರಕ್ಕೆ ಹೆಸರಾದ ಸಿದ್ಧಾರಾಢ ಗಡೆದವರ ನೆರಳಲ್ಲಿ ಬೆಳೆದು ಬಂದವರು. ದೊಡ್ಡಾಟದ ಹಾಡುಗಾರಿಕೆಗೆ ಕಂಠ ತ್ರಾಣ ಬಲವಾಗಿರಬೇಕು. ವೀರ, ರೌದ್ರ, ಅಬ್ಬರಗಳಿಂದ ಕೂಡಿದ ಎತ್ತರದ ಹಾಡುಗಾರಿಕೆಗೆ ಹೆಸರಾದವರು. ಹಾಡುಗಾರಿಕೆ ಅಷ್ಟೇ ಅಲ್ಲದೆ ಸ್ತ್ರೀ ಪಾತ್ರಗಳಿಂದಲೂ ಗುರುತಿಸಿಕೊಂಡರು. ಸುಭದ್ರೆ, ಜಾಮಲೆ, ಮರುದ್ವತಿ, ಪ್ರಮಿಳಾ ದ್ರೌಪದಿ, ಭಾನುಮತಿ ಹೀಗೆ ಸ್ತ್ರೀ ವೇಷ ಧರಿಸಿ ಕಾಲ ಗೆಜ್ಜೆಯ ನಾದದಿಂದ ಲಯಬದ್ಧವಾಗಿ

ಸೊಂಟದ ಮೇಲೆ ಕೈಯಿರಿಸಿ ಕುಣಿಯಲಾರಂಭಿಸಿದರೆ ಎಂತಹವರೂ ಮೋಹಕ್ಕೆ ಒಳಗಾಗದೆ ಇರಲು ಸಾಧ್ಯವಿರಲಿಲ್ಲ.

ಇವರು ಮಶಾಳದ ದೊಡ್ಡಾಟದ ಸಂಘದ ಮುಖ್ಯಸ್ಥರಾಗಿ 40 ವರ್ಷಗಳ ಕಾಲ ಸಂಘ ನಿರಂತರ ಯಶಸ್ವಿಯಾಗಿ ನಡೆದು ಬರಲು ಕಾರಣೀಭೂತರಾಗಿದ್ದಾರೆ. ಹೆಗ್ಗಳಿಕೆ ಇವರದು. ಅಫಜಲಪುರ ತಾಲ್ಲೂಕಿನವರಾದ ಇವರು ಗುಲಬರ್ಗಾ ಜಿಲ್ಲೆ ಹಳ್ಳಿ ಹಳ್ಳಿಗಳಿಗೆ ಆಟಗಳನ್ನು ಕಲಿಸಿದ ದೊಡ್ಡಾಟದ ಮಾಸ್ತರರೆಂದೇ ಹೆಸರುವಾಸಿಯಾಗಿದ್ದಾರೆ. ನಾಡಿನ ಅನೇಕ ಕಡೆ ಕಾರ್ಯಕ್ರಮ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ, ಜಾನಪದ ಮೇಳ, ಜಾನಪದ ಜಾತ್ರೆ, ಕನ್ನಡ ಜಾಗೃತಿ ಸಮಾವೇಶ, ಗಡಿನಾಡು ಉತ್ಸವ, ಜಾತ್ರೆಗಳಲ್ಲಿ, ಕಾಲೇಜುಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಾಹಿತ್ಯ ಸಮ್ಮೇಳನಗಳಲ್ಲಿ ಅಂಬೇಡ್ಕರ್, ಬಸವ ಜಯಂತಿ ಉತ್ಸವಕ್ಕೆ ಅಂಬೇಡ್ಕರ, ಬಸವೇಶ್ವರ ಆಟ, ಗಾಂಧಿ ಜಯಂತಿಯಂದು ಗಾಂಧೀ ಆಟ ಆಡಿ ಜನಮನ ಸೆಳೆದ ಕೀರ್ತಿ ಇವರದು.

1997ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಗುರು ಶಿಷ್ಯ ಪರಂಪರೆಯ ದೊಡ್ಡಾಟ ಕಲಿಕೆಯ ತರಬೇತಿ ಪ್ರಾರಂಭವಾಗಿ ಶಾಲೆ ಇನ್ನೂ ಹುರುಪು ಹುಮ್ಮಸ್ಸಗಳಿಂದ ನಡೆಯುತ್ತ ಬಂದುದು ಇವರ ಕಲೆಯ ಅಭಿಮಾನ, ಕಲಾಪ್ರೇಮ ಗುರುತಿಸುವಲ್ಲಿ ಸಾಕ್ಷಿಯಾಗಿದೆ. 1987ರಿಂದ ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಬೆಂಗಳೂರು ಗುಲಬರ್ಗಾ ಖ್ಯಾತ ಹಿಮ್ಮೇಳ–ಮುಮ್ಮೇಳದ ಗಾಯಕರಾಗಿ ಪ್ರಸಿದ್ಧಿ ಪಡೆದವರು. ಗುಲಬರ್ಗಾ ಜಿಲ್ಲಾ ಜಾನಪದ ಮೇಳದಲ್ಲಿ ಇವರನ್ನು ಸನ್ಮಾನಿಸಲಾಯಿತು.

ಇವರು ಅಪಾರ ಶಿಷ್ಯಂದಿರನ್ನು ಹೊಂದಿದ್ದಾರೆ. ಕಲ್ಬುರ್ಗಿಯ ಕಲಾಸಂಪತ್ತನ್ನು ನಾಡಿನಾದ್ಯಂತ ಹರಡಿಸಿರುವ ಇವರ ಸೇವೆ ಅನನ್ಯ ಅಗಾಧವಾದುದು. (ಜಿಕೆ)

ಶಿವರುದ್ರಯ್ಯಾ ಸ್ವಾಮಿ: ಪ್ರತಿಭಾನ್ವಿತ ಸಂಗೀತ ಕಲಾವಿದ. ತಮ್ಮ ಸುಮಧುರ ಕಂಠದಿಂದ ಜನಮನ ರಂಜಿಸುತ್ತಿದ್ದಾರೆ. ಕಲಬುರ್ಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಗೌಡಗಾಂವದ ಜಂಗಮ ಮನೆತನದ ವಿರುಪಾಕ್ಷಯ್ಯ ಸ್ವಾಮಿ, ತಾಯಿ ಪಾರ್ವತಿಬಾಯಿ ಎಂಬ ದಂಪತಿಗಳ 3ನೆಯ ಮಗನಾಗಿ ಜನಿಸಿದರು. ಬಿ.ಎ. ಪದವಿ ಮುಗಿಸಿ ಅದರೊಂದಿಗೆ ಸಂಗೀತ ಸೀನಿಯರ್, ಜ್ಯೂನಿಯರ್ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಕಲೆ, ಸಾಹಿತ್ಯ, ಸಂಗೀತದ ಗೀಳನ್ನು, ಹಚ್ಚಿಕೊಂಡರು. ಶಿವರುದ್ರಯ್ಯ ಸ್ವಾಮಿ ಅವರಿಗೆ ಬಾಲ್ಯದಿಂದಲೇ ಸಂಗೀತದ ಬಗ್ಗೆ ಅಪಾರ ಆಸಕ್ತಿಯ ಜೊತೆಗೆ ಇವರ ಮನೆತನವೂ ಸಂಗೀತ ವಾತಾವರಣ ಹೊಂದಿರುವದರಿಂದ ಇವರ ಸಂಗೀತ ಕೃಷಿಗೆ ಪುಷ್ಟಿ ದೊರೆತಂತಾಯಿತು.

ಸುಮಾರು 15 ವರ್ಷಗಳ ನಿರಂತರ ಸಂಗೀತ ಸೇವೆಯಲ್ಲಿ ತಲ್ಲಿನರಾದ ಇವರು, ನಾಡಿನ ಅನೇಕ ಮಠ ಮಂದಿರ, ಸಂಘ–ಸಂಸ್ಥೆಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಸಂಗೀತ ಸೇವೆ ಮಾಡಿದರು. ಸ್ವತಃ ಸಾಹಿತ್ಯ ರಚನೆಯಲ್ಲೂ ಆಸಕ್ತಿ ಇರುವುದರಿಂದ ಹಾಗೂ ಸಂಗೀತ ಬಲ್ಲವರಾದ್ದರಿಂದ ತಾವೇ ಸಾಹಿತ್ಯ ರಚಿಸಿ, ರಾಗ ಸಂಯೋಜನೆ ಮಾಡಿ, ಈಗಾಗಲೇ ಸುಮಾರು 40 ಧ್ವನಿ ಸುರುಳಿಗಳನ್ನು ಹೊರತಂದಿದ್ದಾರೆ.

ಭಕ್ತಿಗೀತೆಗಳು, ತತ್ವ ಪದಗಳು, ಮುಖ್ಯವಾಗಿ ಅಫಜಲಪುರ ತಾಲ್ಲೂಕಿನ ಸುಕ್ಷೇತ್ರ ದೇವರ ಗಾಣಗಾಪುರದ ಶ್ರೀ ದತ್ತಾತ್ರೇಯ ಮಹಾಸ್ವಾಮಿಗಳ ಕನ್ನಡ, ತೆಲಗು, ಮರಾಠಿ 3 ಭಾಷೆಯಲ್ಲಿ ಧ್ವನಿ ಸುರುಳಿಗಳನ್ನು ತಯಾರಿಸಿದ್ದಾರೆ. ಎಲ್ಲವಕ್ಕೂ ಸ್ವತಃ ತಮ್ಮ ಧ್ವನಿಯನ್ನೇ ನೀಡಿರುವ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರ ಬಹುತೇಕ ಹಾಡುಗಳೆಲ್ಲ ಸುಗಮ ಸಂಗೀತದಲ್ಲಿವೆ. ಯಾಕೆಂದರೆ, ಜನಸಾಮಾನ್ಯರಿಗೆ ಸಂಗೀತದ ಸವಿಯನ್ನುಣಿಸಬೇಕಾದರೆ, ಸುಗಮ ಸಂಗೀತ ಮತ್ತು ಭಕ್ತಿ ಸಂಗೀತವೇ ಹೆಚ್ಚು ಪ್ರಭಾವ ಶಾಲಿಯಾಗಿ ಜನರ ಮನಮುಟ್ಟುತ್ತದೆ ಎನ್ನುತ್ತಾರೆ. ತಾಲ್ಲೂಕಿನ ಸೊನ್ನ ಗ್ರಾಮದಲ್ಲಿ 'ದಾಸೋಹ ಸಿರಿ' ಎಂಬ ಧ್ವನಿ ಸುರುಳಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ.

ಗಾನಕೋಗಿಲೆ, ಗಾನ ಪ್ರವೀಣ, ಗಾನ ಸುಧಾಕರ, ಜಾನಪದ ಜಾಣ, ಕನ್ನಡ ಕೋಗಿಲೆ ಹೀಗೆ ಅನೇಕ ಬಿರುದು ಮತ್ತು ಪ್ರಶಸ್ತಿಗಳನ್ನು ಪಡೆದಿದ್ದಾರೆ. (ಎಎಂಕೆ)

ಶಿವಲಿಂಗಯ್ಯ ರೇವಣಸಿದ್ಧಯ್ಯ ಸಾಲಿಮಠ: ದೊಡ್ಡಾಟದ ಕಲಾವಿದ. ತಂದೆ ರೇವಣಸಿದ್ಧಯ್ಯನವರು ಆಗಿನ ಕಾಲದಲ್ಲಿ (100 ವರ್ಷಗಳ ಹಿಂದೆ) ಸುಪ್ರಸಿದ್ಧ ಸಂಗೀತಗಾರರು, ನಾಟಕಕಾರರು. ತಾಯಿ ಭಾಗಿರಥಮ್ಮನವರು ಒಳ್ಳೆಯ ಸಂಪ್ರದಾಯಸ್ಥರು. ಅಂಥ ಕಲಾವಿದರ ಸುಸಂಸ್ಕೃತ ಮನೆತನದಲ್ಲಿ 10.05.1942 ರಲ್ಲಿ ಜನಿಸಿದರು. ಕಲೆ ರಕ್ತಗತ ಇವರಿಗೆ ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡಾಟದ ಮುಖ್ಯ ಪಾತ್ರಗಳು ಇವರದಾಗಿದ್ದವು.

ಗುಲಬರ್ಗಾ ಜಿಲ್ಲೆ ಅಫಜಲಪುರ ತಾಲ್ಲೂಕಿನ ಮಾಶಾಳದವರು. ಪ್ರಸಿದ್ಧ ದೊಡ್ಡಾಟದ ಕಲಾವಿದರು. ಕರ್ನಾಟಕದ ತುಂಬ ತಿರುಗಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಂಪಿ ಉತ್ಸವ, ದಸರಾ ಉತ್ಸವ, ಮಳಖೇಡ ಉತ್ಸವ, ಜಾನಪದ ಪ್ರವಾಸಿ ಉತ್ಸವ ಕೋಲಾರ, ಗುಲಬರ್ಗಾಗಳ ಕಾರ್ಯಕ್ರಮ ನೀಡಿ ಖ್ಯಾತಿ ಗಳಿಸಿದ್ದಾರೆ. ಇವರ ಪ್ರಸಿದ್ಧ ಪಾತ್ರಗಳೆಂದರೆ ಬಸವೇಶ್ವರ, ದೇವೇಂದ್ರ, ಕೃಷ್ಣ ಇವಲ್ಲದೆ ಶ್ರೀ ಕೃಷ್ಣ ಪಾರಿಜಾತದಲ್ಲಿ ಪರಿಣಿತರು. ರಂಗ ಶಾಲೆಯ ವಿವಿಧ ಭಾಗಗಳಾದ ಹಾರ್ಮೋನಿಯಂ ನುಡಿಸುವುದು. ತಬಲಾ ಬಾರಿಸುವುದು, ಗೆಜ್ಜೆ ನುಡಿಸುವುದು ಎಲ್ಲ ವಾದ್ಯಗಳಲ್ಲೂ ಪರಿಣಿತರು. ಪ್ರತಿದಿನವೂ ದೊಡ್ಡಾಟದಲ್ಲಿಯ ಎಲ್ಲ ಕಲಾವಿದರಿಗೂ ಅಭ್ಯಾಸ ಮಾಡಿಸುವುದು ಇವರ ಕಾಯಕ. 1997ರಲ್ಲಿ ಕನ್ನಡ ಮತ್ತು

ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ವತಿಯಿಂದ ಗುರು–ಶಿಷ್ಯ ಪರಂಪರೆಯ ದೊಡ್ಡಾಟ ಕಲಿಕೆಯ ತರಬೇತಿಯಲ್ಲಿ ಇಂದಿನವರೆಗೆ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾ ಬಂದಿದ್ದಾರೆ.

1987ರಿಂದ ಆಕಾಶವಾಣಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ಇವರು ಗುಲಬರ್ಗಾ, ಬೆಂಗಳೂರು ದೂರದರ್ಶನದ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದಾರೆ. 1984ರಲ್ಲಿ ಮಾಶಾಳದಲ್ಲಿ ದೊಡ್ಡಾಟ ಸಂಘ ಸ್ಥಾಪಿಸಿ 40 ಜನರನ್ನೊಳಗೊಂಡ ಇವರ ಸಂಘ ಅದ್ದೂರಿಯಾಗಿ ಕಾರ್ಯಕ್ರಮಗಳನ್ನು ನೀಡುತ್ತಿದೆ.

(ಜಿಕೆ)



ಶಿವಶಂಕರ ಸುತಾರ: ಚಿತ್ರ ಕಲಾವಿದ. ಕಲಬುರ್ಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಬಂದರವಾಡ ಗ್ರಾಮದ ವಿಶ್ವ ಕರ್ಮ ಸಮಾಜದ ಇವರ ತಂದೆ ಈರಪ್ಪ ಸುತಾರ. ಕಡು ಬಡತನದಲ್ಲಿ ಹುಟ್ಟಿದರು. ನಾಲ್ಕನೆಯ ತರಗತಿಯಲ್ಲಿ ಓದುತ್ತಿರುವಾಗಲೇ ಶಾಲೆಯಲ್ಲಿ ಕುಳಿತಾಗ ಚಿತ್ರಗಳನ್ನು ಬಿಡಿಸುವ ಅಭ್ಯಾಸ ರೂಡಿಸಿ ಕೊಂಡಿದ್ದರು. ಶಾಲೆಯಿಂದ ಮನೆಗೂ ಹೋದರೂ ಕಾಗದದಲ್ಲಿ ಗಣೇಶನ ಚಿತ್ರ ಹಾಗೂ ಇನ್ನೂ ಅನೇಕ ಚಿತ್ರಗಳು ಬಿಡಿಸುತ್ತಿದ್ದ. ಕಲೆಗೆ ಹೆಸರಾದ ವಿಶ್ವಕರ್ಮ ಸಮಾಜದವರಾದ ಅವರ ತಂದೆಯ ಪ್ರೋತ್ಸಾಹವೂ ಸಿಕ್ಕಿತು.

ಗುರುವಿಲ್ಲದೆ ಸ್ವಂತ ಚಿತ್ರಕಲೆಯನ್ನು ಬಿಡಿಸುತ್ತಾ ಇವರು ಎಸ್‌ಎಸ್‌ಎಲ್‌ಸಿ ಮುಗಿಸಿದರು. ಭವಿಷ್ಯದಲ್ಲಿ ಇವರಿಗೆ ದೊಡ್ಡ ಕಲಾವಿದನಾಗಬೇಕೆಂಬ ಆಸೆ. ಆರ್ಥಿಕ ಪರಿಸ್ಥಿತಿ ಗಂಭೀರವಿದ್ದರೂ ಕಲಬುರ್ಗಿಯ ಕಲಾನಿಕೇತನದಲ್ಲಿ 1996–97ರಲ್ಲಿ ಡಿ.ಎಮ್.ಸಿ. ಸೇರಿ ತೇರ್ಗಡೆಯಾದರು. 1998–99ರಲ್ಲಿ ಡಿಪ್ಲೋಮಾ ಪೇಟಿಂಗ್, ನಂತರ 2000–01ರಲ್ಲಿ ಆರ್ಟ್ ಮಾಸ್ಟರ್ ಪದವಿಯನ್ನೂ ಕಲಾನಿಕೇತನದಲ್ಲೇ ಮುಗಿಸಿದರು. 2002–03ರಲ್ಲಿ ಕಲಬುರ್ಗಿಯ ಮಾತೋಶ್ರೀ ಮಾಣಿಕಬಾಯಿ ಕೋಠಾರಿ ವಿಜ್ಯೂಲ್ ಆರ್ಟ್ ಕಾಲೇಜಿನಲ್ಲಿ ಬಿ.ಎಫ್.ಎ. ಪೇಂಟಿಂಗ್‌ನಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ಚಿತ್ರಕಲಾ ಕ್ಷೇತ್ರದಲ್ಲಿ ಭರವಸೆ ಮೂಡಿಸುವ ಕಲಾವಿದನಾಗಿ ಹೊರ ಬಂದರು.

ಕಾಲೇಜಿನಲ್ಲಿ ಓದುತ್ತಿರುವಾಗಲೇ 1998–99ರಲ್ಲಿ ಹಂಪಿಯ ನಿಸರ್ಗದ ಚಿತ್ರ ಬಿಡಿಸುವ ಶಿಬಿರದಲ್ಲಿ ಭಾಗವಹಿಸಿದ್ದರು ಶಹಾಬಾದನ ತಹಸೀಮಿಯಾ ಆರ್ಟ್ ಹೌಸ್‌ನಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯದಿಂದ ಭಾಗವಹಿಸಿದರು. ಇದರಲ್ಲಿ ಮೆಚ್ಚುಗೆ



'ಅನ್‌ಟೈಟಲ್' ಇಂಟಾಗ್ಲೋ ಪ್ರಿಂಟ್ ಮಾಧ್ಯಮ

ಪಡೆದ ಶಿವಶಂಕರ ಮುಂದೆ ವಿವಿಧ ಕಲಾಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತ ಬೆಳೆದರು. 2003ರಲ್ಲಿ ಮೈಸೂರು ದಸರ ಮಹೋತ್ಸವದ ಚಿತ್ರಕಲಾ ಪ್ರದರ್ಶನದಲ್ಲಿ ಇವರು ಬಿಡಿಸಿದ ಚಿತ್ರಕ್ಕೆ ಪ್ರಥಮ ಸ್ಥಾನ ಬಂತು. 2004ರಲ್ಲಿ ಕಲಾನಿಕೇತನದಲ್ಲಿ ಏಡ್ಸ್ ಪೋಸ್ಟರ್ ಕಾಂಪಿಟೇಶನ್‌ನಲ್ಲಿ ಕೂಡ ಇವರು ಭಾಗವಹಿಸಿ ಬಹುಮಾನ ಹಾಗೂ ಪ್ರಶಸ್ತಿ ಪಡೆದರು. 2004ರಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಶಿವಶಂಕರ ಸುತಾರ ಅವರಿಗೆ ಲಭಿಸಿದೆ. ಇವರಿಗೆ ಮಣ್ಣಿನ ಕಲಾಕೃತಿಗಳು, ಭಾವಚಿತ್ರಗಳು, ಮೂರ್ತಿಗಳು ತಯಾರಿಸುವಲ್ಲಿ ತುಂಬ ಆಸಕ್ತಿ. ತಂದೆಯವರ ಉದ್ಯೋಗ ಕಟ್ಟಿಗೆಯ ಕೆತ್ತನೆಯ (ಬಡಿಗತನ) ಕೆಲಸಗಳನ್ನು ಮಾಡುತ್ತಿದ್ದಾರೆ. ಇವರಿಗೆ ಸಂಗೀತವೂ ಪಂಚಪ್ರಮಾಣ. ಅದನ್ನೂ ಕಲಿತು ಅನೇಕ ಕಡೆ ಸಂಗೀತ ಕಾರ್ಯಕ್ರಮ ನೀಡಿದ ಶ್ರೇಯಸ್ಸೂ ಇವರದು. ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ.

(ಎಂಎಸ್‌ಜಿ)

ಶಿವಶರಣಪ್ಪ ಕೋಬಾಳ್: ಸಂಗೀತ ಕಲೆಯಲ್ಲಿ ಅವರನ್ನು ಜನಮನದ ಕಲಾವಿದನೆಂಬ ಹೆಗ್ಗಳಿಕೆಗೆ ಪಾತ್ರರಾದವರು. ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಕೋಬಾಳ್ ಗ್ರಾಮವದರು. ತಂದೆ ಮರೆಪ್ಪ ಕೋಬಾಳ್. ಎಲೆ ಮರೆಯ ಕಾಯಿಯಂತಿರುವ ಹಿರಿಯ ಸಂಗೀತ ಪ್ರತಿಭೆ, ಸಂಗೀತ ಕಲೆಯಲ್ಲಿ ಅದಮ್ಯ ಚೇತನವಾಗಿರುವ ಕೋಬಾಳ್ ಅವರು ಅತ್ಯಂತ ಹಿಂದುಳಿದ ಸಮಾಜದಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ ಯವರೆಗೆ ಓದಿರುವ ಕಲಾವಿದ ಶಿವಶರಣಪ್ಪ ಕೋಬಾಳ್ ಅವರು ರಾಜಕೀಯವನ್ನು ತಮ್ಮ ವೃತ್ತಿಯನ್ನಾಗಿಸಿದ್ದರಿಂದ, ಸಂಗೀತ ಕಲೆಯ ಪ್ರವೃತ್ತಿಗೆ ಹಿನ್ನೆಡೆಯಾಯಿತು. ರಾಜಕೀಯದಲ್ಲಿ ಸಕ್ರೀಯರಾದರೂ ಸಂಗೀತ ಕಲೆಯು ಕೋಬಾಳ್ ಇವರಲ್ಲಿ ರಕ್ತಗತವಾಗಿದೆ.

ಗ್ರಾಮೀಣ ಪ್ರತಿಭೆಯಾಗಿರುವ ಕೋಬಾಳ್ ಅವರು ಕೋಬಾಳ್ ಗ್ರಾಮದಲ್ಲಿಯೇ ಪ್ರಾಥಮಿಕ ಶಾಲಾ ಶಿಕ್ಷಣವನ್ನು


ಹಾಗೂ ಗುಲಬರ್ಗಾ ತಾಲ್ಲೂಕಿನ ಹಾಗರಗುಂಡಗಿಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮತ್ತು ಫರಹತಾಬಾದ ಗ್ರಾಮದ ಪ್ರಭುದೇವ್ ಟಿಡಿಬಿ ಪ್ರೌಢಶಾಲೆಯಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ಪೂರೈಸಿದ್ದಾರೆ. ಇವರು ಬಾಲ ಸಂಗೀತ ಕಲಾವಿದರೂ ಹೌದು. ಇದಕ್ಕೆ ಇವರ ಹಿರಿಯರ ಪ್ರೇರಣೆಯೇ ಮುಖ್ಯ ಕಾರಣ, ಪೂರ್ವಜನರಿಂದ ಬಂದ ಸಂಗೀತ ಬಳುವಳಿಯಾಗಿದೆ. ಇವರ ತಾತ ಬಾಬುರಾವ್ ಗ್ರಾಮೀಣ ಭಾಗದಲ್ಲಿ ಡಪ್ಪಿನ ಆಟ ಕಲಿಸುವ ಶಿಕ್ಷಕ. ಶಾಲೆ ಬಿಟ್ಟ ನಂತರ ಹಳ್ಳಿಯಲ್ಲಿ ಸಾಮಾಜಿಕ ನಾಟಕ ಕಲಿತು ಅಭಿನಯದಲ್ಲಿ ಸೈ ಎನ್ನಿಸಿಕೊಂಡ ಹಿರಿಮೆ, ತದನಂತರದಲ್ಲಿ ಸಂಗೀತ ಅಭ್ಯಾಸ, ಅನೇಕ ಹಳ್ಳಿಗಳಲ್ಲಿ ಹಾಡುಗಾರಿಕೆಯಲ್ಲಿ ಹೆಸರು ಗಳಿಸಿದ್ದಾರೆ.

ಭಜನೆ, ಕೀರ್ತನೆ, ಸಂಗೀತ ಕಛೇರಿ, ಜಾನಪದ ಹಾಡುಗಾರಿಕೆ, ಯುವ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಎಡೆಬಿಡದ ಸಂಗೀತದ ಗುಂಗು ಸಾಹಿತ್ಯ ಹಾಗೂ ಸಂಗೀತದಲ್ಲಿ ನಿರಂತರವಾಗಿ ಪಾಲ್ಗೊಳ್ಳುವ ಇವರು ತಮ್ಮ ಜೀವನದಲ್ಲಿ ಇವುಗಳನ್ನು ಹವ್ಯಾಸವನ್ನಾಗಿ ಇರಿಸಿಕೊಂಡಿದ್ದಾರೆ. (ಜಿಕೆ)

ಶೀ

ಶೀಗಿ ಚಿತ್ರಕಲೆ: ಜನಪದ ಕಲೆಗಳಲ್ಲಿ ಒಂದು. ಜನಪದ ಕಲೆಗಳು ಸಾಂದರ್ಭಿಕವಾಗಿ ಸೃಷ್ಟಿಸಿ ಮತ್ತೆ ಆಚರಣೆ ಮುಗಿದ ಮೇಲೆ ಆದರೂ ನಮ್ಮ ಹಳ್ಳಿಗಳಲ್ಲಿ ಇಂದಿಗೂ ಕೆಲವು ಸ್ಥಳಗಳಲ್ಲಿ ಜನಪದ ಕಲೆಗಳು ಅಲ್ಪ-ಸ್ವಲ್ಪ ಬದುಕಿಕೊಂಡಿರುವಂತಿವೆ. ಶೀಗಿ ಹುಣ್ಣಿಮೆ ಸಂದರ್ಭದಲ್ಲಿ ಮುಖ್ಯದ್ವಾರದ ಮುಂಭಾಗದ ಮಾಡದಲ್ಲಿ ಪಣತಿ ಇರಿಸಿ. ಹೆಣ್ಣುಮಕ್ಕಳು ಶೀಗಿ ಹಾಡುಗಳನ್ನು ಹಾಡುತ್ತ, ಮಾಡದ ಸುತ್ತಮುತ್ತಲೂ ಸೆಗಣಿಯಲ್ಲಿ ಉಬ್ಬು ಶಿಲ್ಪಗಳನ್ನು ತಯಾರಿಸಿ ಅವುಗಳಿಗೆ ಹೂ, ಕುಂಕುಮ, ಅರಶಿಣಗಳಿಂದ ಅಲಂಕರಿಸುತ್ತಾರೆ. ಜೊತೆಗೆ ಹೀಗೆ ಶೀಗಿ ಹಬ್ಬ ಆದರಣೆಯನ್ನು ಓಣಿ ಹೆಣ್ಣು ಮಕ್ಕಳು ಕಲಾತ್ಮಕವಾಗಿ ಅಲಂಕರಿಸಿ ಆಚರಿಸುವ ವಾಡಿಕೆ ಇದೆ. ಉತ್ತರ ಕರ್ನಾಟಕದುದ್ದಕ್ಕೂ ಆಚರಿಸುವ ಶೀಗಿ ಚಿತ್ರಕಲೆಯಲ್ಲಿ ಹಲವಾರು ಪ್ರಾದೇಶಿಕ ಬದಲಾವಣೆಗಳು ಇರುವುದನ್ನು ನಾವು ಗಮನಿಸಬಹುದು.

ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಹಸೆ ಚಿತ್ರ ಬರೆಯುವುದು, ನಾಗಾರಾಧನೆಯಲ್ಲಿ ನಾಗಮಂಡಲ ಬರೆಯುವುದು, ಬಯಲು ಸೀಮೆಯಲ್ಲಿ ಬೆಳದಿಂಗಳ ಚಿತ್ರ ಬರೆಯುವುದು, ಉತ್ತರ-ಕರ್ನಾಟಕ ಭಾಗದಲ್ಲಿ ದೀಪಾವಳಿ ಮುಂತಾದ ಸಂದರ್ಭದಲ್ಲಿ ಚಿತ್ರ ಬರೆದು ಮನೆಗೋಡೆಗಳನ್ನು ಅಲಂಕರಿಸುವುದು. ಶೀಗಿ ಹುಣ್ಣಿಮೆಯಲ್ಲಿ ವೈವಿಧ್ಯಮಯವಾದ ಚಿತ್ರ ಆಯಾ ಪ್ರದೇಶದ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ.



ಗೋಡೆ ಮೇಲಿನ ಶೀಗಿ ಚಿತ್ರಕಲೆ

ಶೀಗಿ ಆಚರಣೆ ಕೆಲವು ಭಾಗಗಳಲ್ಲಿ ಶಿಲ್ಪ ಮತ್ತು ಚಿತ್ರಗಳ ಮಿಶ್ರಣವಿದ್ದರೆ ಇನ್ನೊಂದು ಭಾಗದಲ್ಲಿ ಕೇವಲ ಚಿತ್ರಗಳು ಮಾತ್ರ ಕಂಡುಬರುತ್ತವೆ. ಮಲೆನಾಡಿನಲ್ಲಿ ಬಿದಿರು ಬುಟ್ಟಿ ಮೇಲೆ ಶೀಗಿ ಚಿತ್ರ ಚಿತ್ರಿಸಿದರೆ ಉತ್ತರ-ಕರ್ನಾಟಕ ಕೆಲವು ಭಾಗಗಳಲ್ಲಿ ಚರಗದ ಬುಟ್ಟಿಯ ಮೇಲೆ ವಿನ್ಯಾಸ ಬಿಡಿಸುವರು, ಇನ್ನೂ ಕೆಲವು ಭಾಗಗಳಲ್ಲಿ ಒಳಾಂಗಣದಲ್ಲಿ ಶೀಗಿ ಶಿಲ್ಪ ಚಿತ್ರಗಳು ಬಿಡಿಸುವರು. ಬೀದರ ಭಾಗದಲ್ಲಿ ತಮ್ಮ ಮನೆಯ ಮುಖ್ಯದ್ವಾರದ ಮಾಡದ ಸುತ್ತಮುತ್ತಲು ಶೀಗಿ ಶಿಲ್ಪ ಮತ್ತು ವರ್ಣ ಚಿತ್ರಗಳನ್ನು ಚಿತ್ರಿಸುವರು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಆಚರಿಸುವ ಶೀಗಿ ಶಿಲ್ಪ ಮತ್ತು ವರ್ಣ ಚಿತ್ರಗಳು ಹೀಗಿವೆ.

- ಮುಖ್ಯದ್ವಾರ ಮಾಡದ ಶೀಗಿ ಚಿತ್ರ – ಶಿಲ್ಪಕಲೆ
- ಒಳಾಂಗಣ ಮಾಡದ ಶೀಗಿ ಚಿತ್ರ – ಶಿಲ್ಪಕಲೆ
- ಕಲ್ಲು ಗುಂಡುಗಳ ಶೀಗಿ ಚಿತ್ರ – ಶಿಲ್ಪಕಲೆ
- ಬುಟ್ಟಿಗಳ ಶೀಗಿ ಚಿತ್ರ – ಶಿಲ್ಪಕಲೆ
- ಮಣ್ಣಿನ ಪಾತ್ರೆಗಳ ಮೇಲಿನ ಶಿಲ್ಪಕಲೆಗಳು

ಬೀದರ ಜಿಲ್ಲೆಯಲ್ಲಿ ವಿಶೇಷವಾಗಿ ಆಚರಿಸುವ ಜನಪದ ಕಲೆಗಳಲ್ಲಿ ಶೀಗಿ ಚಿತ್ರಶಿಲ್ಪ ಕಲೆಯು ವಿಶಿಷ್ಟವಾಗಿದೆ. ಶೀಗಿ ಜನಪದ ಕಲೆಯು ಮಹಾನವಮಿಯಿಂದ ಶೀಗಿ ಹುಣ್ಣಿಮೆ ಕೊನೆಯ ಐದು ಅಥವಾ ಏಳು ದಿವಸಗಳ ಕಾಲ ಶೀಗಿ ಹಬ್ಬ ಆಚರಿಸುವ ವಾಡಿಕೆ ಇದೆ.

ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಪ್ರಮುಖವಾಗಿ ಮನೆಯ ಮುಖ್ಯದ್ವಾರ ಎರಡು ಬದಿಗಳಲ್ಲಿ ಮಾಡಗಳನ್ನು ಕಾಣುತ್ತೇವೆ. ಆದೇ 'ಮಾಡ'ಗಳ ಮುಂಭಾಗದಲ್ಲಿ ಮುಸ್ಸಂಜೆ ಹೊತ್ತು ಓಣಿ ಹೆಣ್ಣುಮಕ್ಕಳು ಸೇರಿ ಶೀಗಿ ಹಬ್ಬವನ್ನು ಆಚರಿಸುತ್ತಾರೆ. ಈ



ಗೋಡೆ ಮೇಲಿನ ಶೀಗಿ ಚಿತ್ರಕಲೆ

ಗುಂಪಿನ ಹೆಣ್ಣು ಮಕ್ಕಳಿಗೆ 'ಶೀಗಿ ಮಕ್ಕಳು' ಅಥವಾ 'ಗೌರಿ ಮಕ್ಕಳು' ಎಂದು ಕರೆಯುತ್ತಾರೆ. ಏಳು ಅಥವಾ ಐದು ದಿವಸಗಳ ಕಾಲ ಆಚರಿಸುವ ಈ ಶೀಗಿ ಹಬ್ಬ ಪ್ರತ್ಯೇಕವಾಗಿ ದಿನಕ್ಕೊಂದು ಹಾಡನ್ನು ಹೆಣ್ಣು ಮಕ್ಕಳು ಹಾಡುತ್ತಾರೆ. ಆ ಹಾಡಿಗೆ ತಕ್ಕ ಮನೆಯ ಯುವತಿ ಸೆಗಣಿಯಿಂದ ಒಂದೊಂದಾಗಿ ಉಬ್ಬು ಶಿಲ್ಪಗಳನ್ನು ಮಾಡದ ಸುತ್ತಮುತ್ತಲು ಬಿಡಿಸಿ, ಅವುಗಳಿಗೆ ಕೊಕ್ಕೆ ಹೂ, ಕಾರಳ ಹೂ, ಕುಂಕುಮ, ಅರಿಶಿಣಗಳಿಂದ ಅಲಂಕರಿಸುತ್ತಾಳೆ. ನಾಲ್ಕಾರು ಹಾಡುಗಳನ್ನು ಹಾಡಿದ ನಂತರ ಆರತಿಮಾಡಿ, ತೆಂಗು, ಎಳ್ಳು, ಪುಟಾಣಿ, ಕಲ್ಲುಸಕ್ಕರೆ ಫಳಾರ (ಪ್ರಸಾದ) ತೆಗೆದು ಕೊಂಡು ಗೌರಿ ಮಕ್ಕಳು ಒಂದು ಮನೆಯಿಂದ ಮತ್ತೊಂದು ಮನೆ ಹೋಗುತ್ತಾರೆ. ಹೀಗೆ ತಮ್ಮ ಗುಂಪಿನ ಪ್ರತಿಯೊಬ್ಬರ ಮನೆಯಲ್ಲಿ ಶೀಗಿ ಹಬ್ಬ ಆಚರಿಸುತ್ತಾ. ಓಣಿ ಜನರೇ ಆಚರಿಸಿದರೂ ಇಡೀ ಹಳ್ಳಿ ಊರಿಗೆ ಊರೇ ಶೀಗಿ ಹಬ್ಬ ಆಚರಿಸುವುದು ಕಂಡು ಬರುತ್ತದೆ. ಆರು ದಿವಸ ಸೆಗಣಿಯಲ್ಲಿ ಉಬ್ಬುಶಿಲ್ಪಗಳು ರಚಿಸಿದರೆ ಏಳನೆಯ ಅಥವಾ ಕೊನೆಯ ದಿನದಂದು ಗೋಡೆಯ ಮೇಲೆ ವರ್ಣಚಿತ್ರಗಳನ್ನು ಬಿಡಿಸುವ, ಸಂಪ್ರದಾಯ ವಿಶೇಷವೆನಿಸುತ್ತದೆ.

ಹೊರಗೋಡೆಯಲ್ಲಿ ಬಾಗಿಲಿನ ಪಕ್ಕದಲ್ಲಿ ರಚನೆ ಮಾಡುವ ಈ ಶೀಗಿ, ಶಿಲ್ಪ ಚಿತ್ರಕಲೆಯಲ್ಲಿ ವೈವಿಧ್ಯಮಯವಾದ ವಸ್ತು ವಿಷಯಗಳಿರುತ್ತವೆ. ಒಂದೊಂದು ದಿನ ಒಂದೊಂದು ರೀತಿಯ ಹಾಡು ಹಾಗೂ ದಿನನಿತ್ಯಕ್ಕೆ ಸಂಬಂಧಿಸಿದ ಚಿತ್ರ ರಚನೆ ಮಾಡಲಾಗುತ್ತದೆ.

ಮೊದಲನೆಯ ದಿನ ಸೂರ್ಯ, ಚಂದ್ರ, ಚುಕ್ಕೆಗಳನ್ನು ರಚಿಸುತ್ತಾರೆ. ಭೂಮಿಯ ಮೇಲಿನ ಜೀವಕೋಟಿಗೆ ಮೊದಲು ಸೂರ್ಯ, ಚಂದ್ರ, ನಕ್ಷತ್ರಗಳೇ ಹುಟ್ಟಿಕೊಂಡವು ಹಾಗಾಗಿ ಇವುಗಳನ್ನು ಮೊದಲಿಗೆ ಬರೆಯುತ್ತಾರೆ. ನಿತ್ಯ ಬದುಕಿನ ಹಗಲು ರಾತ್ರಿ, ಕತ್ತಲು ಬೆಳಕು, ಸುಖ ದುಃಖ, ಆನಂದ, ಸೌಂದರ್ಯಗಳನ್ನು ಇವು ಪ್ರತಿನಿಧಿಸುತ್ತಿದ್ದು, ಅದರ ಸಂಕೇತವಾಗಿ ಚಿತ್ರಗಳ ರಚನೆಯು ಮೊದಲದಿನ ಮಾಡುವುದು ಎಂಬುವುದು ಗ್ರಾಮೀಣರ ನಂಬಿಕೆ. ಉತ್ತರ ಕರ್ನಾಟಕ ಭಾಗದಲ್ಲಿ ಬೆಳದಿಂಗಳ ಆಚರಣೆಯಲ್ಲಿಯೂ ಸಹಿತ ಮೊದಲ ದಿನ ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆಯುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಎರಡನೆಯ ದಿನ ಗಂಗೆ ಗೌರಿಯರ ಚಿತ್ರ ಬರೆಯಲಾಗುತ್ತದೆ ಗಂಗೆ ಗೌರಿಯರು ಶಿವನ ಪತ್ನಿಯರು ಗೌರಿಯು ಮಂಗಳವನ್ನುಂಟುಮಾಡಿ ನಮ್ಮೆಲ್ಲರನ್ನು ಕಾಪಾಡುತ್ತಾಳೆ. ಗಂಗೆ ಎಂದರೆ ನೀರು ಇಲ್ಲವೇ ಜಲದ ಪ್ರತೀಕ. ಮಾನವ ಜೀವನಕ್ಕೆ ನೀರು ಅತ್ಯವಶ್ಯಕವಾಗಿಬೇಕು. ನೀರಿನ ದೇವತೆ ಗಂಗಾಮಾತೆ. ಈ ಗಂಗಾಮಾತೆಯಿಂದಲೇ ಜೀವನ ಸ್ವಚ್ಛ ಹಾಗೂ ನಿರ್ಮಲ. ಗಂಗೆಯಂತೆ ನಮ್ಮ ಜೀವನವೂ ಸದಾ ನಿರ್ಮಲವಾಗಿ ಜುಳು ಜುಳು ನಾದದೊಂದಿಗೆ ಪ್ರವಹಿಸುತ್ತಿರಲಿ ಎನ್ನುವ ನಂಬುಗೆಯಿಂದ ಎರಡನೆಯ ದಿನ ಗಂಗೆ ಗೌರಿಯ ಚಿತ್ರ ಬರೆಯುತ್ತಾರೆ.

ಮೂರನೆಯ ದಿನ ಚೌಕಾಕಾರದ ಬಾರಂಭಾವಿ (ಭಾವಿ), ಬಾಳೆಗಿಡ ಮತ್ತು ಕುಂಬಳ ಹೂವಿನ ಚಿತ್ರಗಳನ್ನು ರಚಿಸುತ್ತಾರೆ. ಮತ್ತು ನಾಲ್ಕನೆಯ ದಿವಸ ಕಬ್ಬಿನ ಜಿಲ್ಲೆ, ಅದನ್ನು ಕಾಯಲು ಒಬ್ಬ ಮನುಷ್ಯನ ಚಿತ್ರ ಬರೆಯುತ್ತಾರೆ. ಈ ಚಿತ್ರಗಳ ನಂಬಿಕೆ ಎಂದರೆ ಆದಿಮಾನವ ಕ್ರಮೇಣ ಬೇಸಾಯ ಪ್ರಾರಂಭಿಸಿ ಉತ್ತಮ ಜೀವನ ಸಾಗಿಸಲು ತೊಡಗಿದ. ಇವನ ಜೀವನಕ್ಕೆ ನೀರಿನಬಾವಿ, ಹೊಲ, ಬೆಳೆ ಇವೇ ದೇವರು ಇವುಗಳನ್ನು ಸದಾ ಶ್ರದ್ಧೆಯಿಂದ ದುಡಿಯುತ್ತಾ ಹಸನುಮಾಡುತ್ತಾ ಇರಬೇಕೆಂದು ಈ ಚಿತ್ರಗಳನ್ನು ಬಿಡಿಸುವ ಮೂಲಕ ಆರಾಧಿಸುವದಾಗಿದೆ.

ಮೂರು ಮತ್ತು ನಾಲ್ಕನೆಯ ದಿನ ಇದೇ ಚಿತ್ರ ಬರೆಯಬೇಕೆಂಬ ಕಡ್ಡಾಯ ನಿಯಮವಿಲ್ಲ. ಮೂರನೆಯ ದಿನ ಚಿತ್ರ ನಾಲ್ಕನೆಯ ದಿನಕ್ಕೂ, ನಾಲ್ಕನೆಯ ದಿನದ ಚಿತ್ರ ಮೂರನೆಯ ದಿನಕ್ಕೂ ವ್ಯತ್ಯಾಸಗೊಳ್ಳಬಹುದಾಗಿದೆ. ಅಥವಾ ಬೇರೆ ಚಿತ್ರಗಳನ್ನು ಬರೆಯಬಹುದು. ಆದರೆ ಒಂದು, ಎರಡು ಮತ್ತು ಆರನೆಯ ದಿವಸ ಇಂತಹ ಚಿತ್ರಗಳನ್ನೇ ಬರೆಯಬೇಕೆಂಬ ನಿಯಮವಿದೆ.

ಐದನೆಯ ದಿನ ಹನುಮಂತ ದೇವರು, ಹೂಗಳು, ಅಡಕಲ ಗಡಿಗಿ (ಕರಗನ ಗಡಿಗಿ), ಛರಚೀಲ (ವಸ್ತುಗಳನ್ನಿಡುವ ಚೀಲ) ಇವುಗಳ ಚಿತ್ರಗಳನ್ನು ರಚಿಸುತ್ತಾರೆ. ಜನಪದರ ನಂಬಿಕೆಯಂತೆ ಹನುಮಂತ ದೇವರು ಒಬ್ಬ ಶಕ್ತಿವಂತ, ಚಾರಿತ್ರ್ಯವಂತ ಹಾಗೂ ಚಿರಂಜೀವಿ. ಇವನಂತೆಯೇ ನಮ್ಮಲ್ಲಿಯೂ ಶಕ್ತಿ ಚಾರಿತ್ರ್ಯ ತುಂಬಿರಲಿ. ಈ ಜೀವನ ಕ್ಷಣಿಕವಾದರೂ ಅದು ಚಿರಂಜೀವಿಯಂತೆ ಅಮರವಾಗಲಿ ಎಂಬ ಭಾವನೆ ಕಾಣುತ್ತೇವೆ. ಅಡಕಲ ಗಡಗೆ ಮತ್ತು ಛರಚೀಲ ಈ ಚಿತ್ರಗಳು ಮಾನವ ವ್ಯವಸ್ಥಿತ ಜೀವನ ಪ್ರಾರಂಭಿಸಿ ತನಗೆ ಬೇಕಾಗುವ ಅಗತ್ಯ ವಸ್ತುಗಳನ್ನು ಇವುಗಳಲ್ಲಿ ಶಿಸ್ತಿನಿಂದ ಇಟ್ಟುಕೊಳ್ಳುವುದಾಗಿದೆ.

ಆರನೆಯ ದಿನ ಏಳುಸುತ್ತಿನ ಕ್ವಾಟಿ (ಕೋಟೆ)ಯ ಚಿತ್ರವನ್ನು ಕಡ್ಡಾಯವಾಗಿ ರಚಿಸುತ್ತಾರೆ. ಇಲ್ಲಿ ಮಹಾಭಾರತದ ಚಕ್ರವ್ಯೂಹದ ಕಲ್ಪನೆ ಅಡಗಿದೆ. ದೇವರು (ಬಸವ) ಏಳು ಸುತ್ತಿನ ಕೋಟೆಯಲ್ಲಿ ಇದ್ದಾನೆ. ಅವನನ್ನು ಒಲಿಸಿಕೊಂಡು ಪಾರಮಾರ್ಥ ಸಾಧಿಸ ಬೇಕಾದರೆ, ಈ ಏಳು ಸುತ್ತಿನ ಕೋಟೆಯನ್ನು ದಾಟಿಕೊಂಡು ಹೋಗಬೇಕು ಇದು ಕಠಿಣ. ಆದರೂ ಪ್ರಯತ್ನಸಿ ಫಲ ಪಡೆಯ ಬೇಕಾಗಿದೆ. ಅಂದರೆ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲೂ ಕೋಟೆಯ ಹಾಗೆ ಸುತ್ತಿಕೊಂಡು ಭವಬಂದನಗಳನ್ನು ಕಳಚಿ ಕೊಳ್ಳಬೇಕು ಎಂಬ ಕಲ್ಪನೆಯ ಸಂಕೇತವಾಗಿ ಇದನ್ನು ಬರೆ ಯುತ್ತಾರೆ.

ಏಳನೆಯ ದಿನ ಹಗಲ ಹೊತ್ತಿನಲ್ಲಿ ಬಣ್ಣಗಳಿಂದ ಚಿತ್ರಗಳನ್ನು ರಚಿಸುತ್ತಾರೆ. ಈ ಹಿಂದಿನ ಆರೂ ದಿನಗಳಲ್ಲಿ ಸೆಗಣಿಯಿಂದ ರೂಪಿಸಿದ ಎಲ್ಲಾ ಚಿತ್ರವಿನ್ಯಾಸಗಳನ್ನು ಏಳನೆಯ ದಿನ ಒಟ್ಟಾಗಿ ರಚಿಸುತ್ತಾರೆ. ಚುಕ್ಕಿ, ಚಂದ್ರ, ಸೂರ್ಯ, ಗಂಗೆ, ಗೌರಿ, ಭಾರಂ ಬಾವಿ, ಬಾಳೆಗಿಡ, ಕಬ್ಬಿನಗಜಲ್ಲಿ, ಕುಂಬಳಹೂ, ಮನುಷ್ಯ, ಹನುಮಂತ ದೇವರು, ಅಡಕಲಗಡಿಗಿ, ಏಳುಸುತ್ತಿನ ಕೋಟೆ ಹೀಗೆ ಎಲ್ಲಾ ಚಿತ್ರಗಳನ್ನು ಒಟ್ಟಾಗಿ ರಚಿಸುವರು.

ಒಟ್ಟಿಗೆ ಚಿತ್ರಿಸುವುದರಲ್ಲಿ ಶಕ್ತಿ ಇದೆ. ಸುಖ ಇದೆ ಹಾಗೂ ಸೌಂದರ್ಯ ಇಮ್ಮಡಿಸುತ್ತದೆ. ಹೀಗೆ ಜೀವನವೂ ಸಮೂಹವಾಗಿ ಎಂದೆಂದೂ ಕೂಡಿಕೊಂಡು ಒಟ್ಟಿಗಿರಲೆಂಬ ಅಪೇಕ್ಷೆ ಇದರಲ್ಲಿ ಅಡಗಿದೆ.

ಬೀದರ ಭಾಗದಲ್ಲಿ ಕಾಣುವ ಈ ಶೀಗಿ ಜನಪದ ಕಲೆಯ ಚಿತ್ರಕಲೆ ಮತ್ತು ಶಿಲ್ಪಕಲೆ ಎಂದು ಎರಡು ಮಾಧ್ಯಮಗಳಲ್ಲಿ ರಚಿಸುತ್ತಾರೆ. ಆರು ದಿವಸಗಳ ಕಾಲ ಸೆಗಣಿಯಿಂದ ಗೋಡೆ ಮೇಲೆ ಉಬ್ಬು ಶಿಲ್ಪಗಳನ್ನು ಬಿಡಿಸುತ್ತಾರೆ. ಏಳನೆಯ ಅಂದರೆ ಕೊನೆಯ ದಿನದಂದು ಆರು ದಿವಸಗಳಲ್ಲಿ ರಚಿಸಿದ ಉಬ್ಬು ಶಿಲ್ಪಗಳನ್ನು ವರ್ಣಚಿತ್ರಗಳಲ್ಲಿ ಚಿತ್ರಿಸುವ ವಿಶೇಷ. ಹೀಗಾಗಿ ಎರಡೂ ಮಾಧ್ಯಮಗಳ ಮಿಶ್ರಣವನ್ನು ಶೀಗಿ ಆಚರಣೆಯಲ್ಲಿ ಗುರುತಿಸಬಹುದಾಗಿದೆ.

ಜೇಡಿ ಮಣ್ಣು, ಸುಣ್ಣ, ಆಕಳ ಸೆಗಣೆ, ಜಾಜ, ಕಾರಳ ಹೂ, ಕೊಕ್ಕೆ ಹೂ, ಹತ್ತಿ ಸುತ್ತಿದ ಕಡ್ಡಿ (ಕುಂಚ), ತೆಂಗಿನ ನಾರು (ಕುಂಚ) ತಟ್ಟೆ, ತೆಂಗಿನ ಚಿಪ್ಪು, ಕುಂಕುಮ, ಅರಿಶಿಣ, ಜಾಲಿ ಗಿಡದ ಅಂಟು ಅಥವಾ ಬೇವಿನ ಗಿಡದ ಅಂಟು ಮತ್ತು ಪಣತಿ ಜಾಲಿಗಿಡದಿಂದ ನೇರಳೆ ಬಣ್ಣ, ಅರಳಿಕಾಯಿ ಮಿಶ್ರಣದಿಂದ ಕಪ್ಪು ಬಣ್ಣ, ಹೊಲಿ ಗಿಡದಿಂದ ನೀಲಿ ಬಣ್ಣ, ಬಂಗಾಲಿ ಗಿಡದ ಹೂವಿ ನಿಂದ ಹಳದಿ ಬಣ್ಣ ಹೀಗೆ ಮುಂತಾದ ನೈಸರ್ಗಿಕವಾಗಿ ದೊರೆ ಯುವ ವಸ್ತುಗಳನ್ನು ಶೀಗಿ ಚಿತ್ರಶಿಲ್ಪ ಜನಪದ ಕಲೆಗಳ ರಚನೆ ಯಲ್ಲಿ ಬಳಸುತ್ತಾರೆ.

ಮನೆಯ ಮುಖ್ಯದ್ವಾರದ ಎರಡು ಭಾಗಗಳಲ್ಲಿ ಕಾಣುವ ಮಾಡದ ಸುತ್ತಮುತ್ತಲು ಚಿತ್ರರಚನೆಯ ಮುನ್ನ ಜೇಡಿ ಮಣ್ಣಿನ ಕೆಸರು ಗೋಡೆಗೆ ಒಂದೆರಡು ಸಲ ಲೇಪನ ಮಾಡಿ, ಗೋಡೆ ನಯಮಾಡಿಕೊಳ್ಳುವರು ನಂತರ 2–3 ಬಾರಿ ಸುಣ್ಣ ಲೇಪನ ಮಾಡಿ ಶೀಗಿ ಚಿತ್ತಾರ ರಚನೆಗೆ ಗೋಡೆಯನ್ನು ಬೆಳಗಿನ ಜಾವ ದಲ್ಲೆ ಸಿದ್ಧಗೊಳಿಸಿಕೊಳ್ಳುವರು. ಗೌರಿ ಮಕ್ಕಳು ಬರುವುದಕ್ಕಿಂತ ಪೂರ್ವದಲ್ಲಿ ಮನೆಯ ಯುವತಿ ಸೆಗಣಿ ಮಿಶ್ರಣ ಮಾಡಿ ಕೊಂಡು ಕಾರಳ, ಕೊಕ್ಕೆ ಹೂ, ಕುಂಕುಮ, ಅರಿಶಿಣ, ಪಣತಿ ಗಳನ್ನು ಸಿದ್ಧಪಡಿಸಿರುತ್ತಾರೆ. ಮುಸಂಜೆಗೆ ಗೌರಿಮಕ್ಕಳು ಹಾಡು ಗಳನ್ನು ಹಾಡುವರು ಅದಕ್ಕೆ ತಕ್ಕ ಮನೆಯ ಯಜಮಾನತಿ ಸೆಗಣಿಯಿಂದ ಉಬ್ಬು ಶಿಲ್ಪಗಳನ್ನು ರಚಿಸುತ್ತಾಳೆ. ಬಳಸುವ ಸೆಗಣಿ ಗಟ್ಟಿ ಇದ್ದರೆ ಉದರಿಬೀಳುತ್ತದೆ. ನೀರು ಹೆಚ್ಚಾದರೆ ಸೋರಿ ಹೋಗುತ್ತದೆ. ಹೀಗಾಗಿ ಅದನ್ನು ಮಧ್ಯಮವಾಗಿ ಬಳಸುತ್ತಾರೆ. ಉದಾ: ಸೂರ್ಯ ಚಂದ್ರ, ಬಾರಂಭಾವಿ ಮುಂತಾದವು ಅವುಗಳಿಗೆ ಕೊಕ್ಕೆ ಕಾರಳ ಹೂವನ್ನು ಸೆಗಣಿ ಹಸಿ ಇರುವಾಗಲೇ ಕುಂಕುಮ ಅರಶಿಣದಿಂದ ಪೂಜೆ ಮಾಡಿ ಪಣತಿಯಲ್ಲಿ ದೀಪ ಹಚ್ಚಿ ಆರತಿ ಹಾಡನ್ನು ಹಾಡುವರು. ಕೊನೆಗೆ ಫಳಾರ ತೆಗೆದು ಕೊಂಡು ಮತ್ತೊಂದು ಮನೆಯತ್ತ ತಮ್ಮ ಪ್ರಯಾಣವನ್ನು ಬೆಳೆಸುವರು.

ಆರು ದಿವಸ ಸೆಗಣಿಯಲ್ಲಿ ರಚಿಸಿದ ಉಬ್ಬು ಶಿಲ್ಪಗಳನ್ನು ಮಾಡುತ್ತಾರೆ ಆದರೆ ಶೀಗೆ ಹುಣ್ಣಿಮೆಯ ಕೊನೆಯ ದಿನದಂದು ಆರು ದಿವಸ ಸೆಗಣಿಯಲ್ಲಿ ರಚಿಸಿದ ಚಿತ್ರಗಳೆ ವರ್ಣ ಸಂಯೋಜನೆಯಲ್ಲಿ ಚಿತಿಸುವರು. ಚಿತ್ರರಚನೆಗೆ ಮುನ್ನ ಗೋಡೆ ಯನ್ನು ಸುಣ್ಣದಿಂದ ಬಿಳುಪಾಗಿ ಸಿದ್ಧಗೊಳಿಸಿಕೊಳ್ಳುವರು. ಸಿದ್ಧ ಪಡಿಸಿದ ಗೋಡೆಯ ಮೇಲೆ ಸೂರ್ಯ, ಚಂದ್ರ, ಬಾರಂಭಾವಿ, ಬಾಳೆಗಿಡ, ಗಂಗೆ, ಗೌರಿ ಮುಂತಾದವುಗಳನ್ನು ಕಪ್ಪು ಕಂದು ಬಣ್ಣದಿಂದ ರೇಖಾ ಚಿತ್ರಗಳನ್ನು ಬಿಡಿಸುವರು. ಮಾಡದ ಸುತ್ತಮುತ್ತಲು ರೇಖಾ ಚಿತ್ರಗಳನ್ನು ರಚಿಸಿಕೊಂಡ ಮೇಲೆ ವರ್ಣ ಸಂಯೋಜನೆಯನ್ನು ಮಾಡುವರು. ಬಂಗಾಲಿ ಗಿಡದ ಹೂ ಕಾಯಿಗಳಿಂದ ಹಳದಿ ಬಣ್ಣ, ಹೊಲಿ ಗಿಡದಿಂದ ನೀಲಿ ಬಣ್ಣ, ಅರಿಶಿಣ ಸುಣ್ಣಗಳ ಮಿಶ್ರಣದಿಂದ ಕೇಸರಿ ಬಣ್ಣ, ಅರಳಿಕಾಯಿ ಮಿಶ್ರಣದಿಂದ ಕಪ್ಪು ಬಣ್ಣ, ಜಾಲಿ ಗಿಡದ ಕಾಯಿಗಳಿಂದ ನೇರಳೆ ಬಣ್ಣ ಹೀಗೆ ಮುಂತಾದ ವರ್ಣಸಂಯೋಜನೆಯು ಚಿತ್ರಕ್ಕೆ ಬಳಸಿಕೊಳ್ಳುವರು. ಪ್ರತಿನಿತ್ಯದ ನೀಡುತ್ತಿದ್ದ ಫಳಾರ ಬದಲಿಗೆ ಕೊನೆಯ ದಿನವಾಗಿರುವುದರಿಂದ ವಿಶೇಷವಾದ ಅಡುಗೆ ಸಿಹಿ ತಿಂಡಿಗಳನ್ನು ತಯಾರಿಸುವರು ನೈವೇದ್ಯ (ಶೀಗಿ ಮಾತೆಗೆ) ತೊರಿ ತಾವು ಊಟಮಾಡಿ ಮತ್ತೊಂದು ಮನೆಗೆ ಗೌರಿ ಮಕ್ಕಳು ಸಾಗುವರು.

ಹೀಗೆ ಒಟ್ಟು ಏಳು ದಿವಸ ಆಚರಿಸುವ ಈ ಶೀಗಿ ಹಬ್ಬವು ಉಬ್ಬುಶಿಲ್ಪ ಮತ್ತು ವರ್ಣಚಿತ್ರಗಳಿಂದ ಸಂಯೋಜನೆಗೊಂಡು ರಚನೆಯಾಗುತ್ತದೆ.

ಹೈದ್ರಾಬಾದ್ ಕರ್ನಾಟಕದ ಬೀದರ, ಗುಲಬರ್ಗಾ, ಬಳ್ಳಾರಿ, ರಾಯಚೂರ, ಉತ್ತರ ಕರ್ನಾಟಕದ ವಿಜಾಪೂರ ಬಹುತೇಕ ಭಾಗ ಗಳಲ್ಲಿ ಶೀಗಿ ಹುಣ್ಣಿಮೆ ಹಬ್ಬದ ಸಂದರ್ಭದಲ್ಲಿ ಪಾಂಡವರ ಪ್ರತೀಕವಾಗಿ ಐದು ಕಲ್ಲಿನ ಮೇಲೆ ಚಿತ್ರಗಳು ಬಿಡಿಸುತ್ತಾರೆ. ಇದನ್ನು ಶೀಗಿ ಹುಣ್ಣಿಮೆ ದಿನದಂದು ಚರಗ ಚಲ್ಲುವಾಗ ಹೆಚ್ಚಾಗಿ ಆಚರಿಸುತ್ತಾರೆ. ಚರಗ ಚಲ್ಲುವುದೆಂದರೇ ಫಲವತ್ತಾಗಿ ಬೆಳೆದು

ನಿಂತ ಭೂತಾಯಿಗೆ ವಿವಿಧ ರೀತಿಯ ರುಚಿಕರವಾದ ಅಡಿಗೆಗಳನ್ನು ನೈವೇದ್ಯವಾಗಿ ಹೊಲದ ಸುತ್ತು ಆಹಾರವನ್ನು ಚೆಲ್ಲುತ್ತಾ ಹೋಗುತ್ತಾರೆ. ಐದು ಕಲ್ಲುಗಳನ್ನು ತೊಳೆದು ಸುಣ್ಣ ಹಚ್ಚಿ ಅವುಗಳಿಗೆ ಜಾಜದಿಂದ Red Oxide ಕಣ್ಣು, ಮೂಗು, ಬಾಯಿ ಬಿಡಿಸುವರು. ಜನಪದರು ಸಹಜವಾಗಿ ಚಿತ್ರಿಸಿದರೂ ಅವು ನೋಡಲು ತುಂಬಾ ಕಲಾತ್ಮಕವಾಗಿ ಕಾಣುತ್ತವೆ.

(ಎಂಬಿಪಿ)

ಶೇ

ಶೇಷಪ್ಪ ಗಬ್ಬೂರ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರಿನಲ್ಲಿ ಹುಟ್ಟಿದರು. ಗದುಗಿನಲ್ಲಿ ಸಂಗೀತ ಶಿಕ್ಷಣ ಪಡೆದರು. ನಾಡಿನೆಲ್ಲೆಡೆ ಸಂಗೀತ ಸುಧೆ ಹರಿಸಿ ಕಲ್ಯಾಣ (ಹೈದ್ರಾಬಾದ) ಕರ್ನಾಟಕ ಭಾಗದಲ್ಲಿ ಹಿಂದೂಸ್ತಾನಿ ಸಂಗೀತ ಹುಲುಸಾಗಿ ಬೆಳೆಯಲು ಶ್ರಮಿಸುತ್ತಿದ್ದಾರೆ.



ಇವರು ಜನಸಿದ್ದು 1924ರ ಜೂನ್ 28 ರಂದು. ತಂದೆ ನಾರಾಯಣಪ್ಪ. ತಾಯಿ ವೆಂಕಮ್ಮ ಇವರದು ಸಂಗೀತ ಮತ್ತು ರಂಗಭೂಮಿ ಪರಂಪರೆಯ ಮನೆತನ. ಇವರ ಸೋದರಮಾವ ಹನುಮಂತಪ್ಪ ಹೀರಾ ಅವರೇ ಶೇಷಪ್ಪನವರ ಮೊದಲ ಸಂಗೀತದ ಗುರು. ಅವರು ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಬಂದು ಪಂ. ಪುಟ್ಟರಾಜ ಗವಾಯಿಗಳಲ್ಲಿ 15 ವರ್ಷ ಸಂಗೀತ ಶಿಕ್ಷಣ ಪಡೆದು ಪ್ರಬುದ್ಧ ಸಂಗೀತಗಾರರೆನಿಸಿದರು. ಸಂಗೀತದಲ್ಲಿ ಅವಿರತ ಸಾಧನೆ ಮಾಡಿ ಕರ್ನಾಟಕ ಸರ್ಕಾರದ ಪ್ರತಿಷ್ಠಿತ 'ಸಂಗೀತ ವಿದ್ವತ್' ಪದವಿ ಪಡೆದರು.

ಇವರು ರಂಗಭೂಮಿಯಲ್ಲಿ ನಟರಾಗಿ, ನಟ ಗಾಯಕರಾಗಿ ದುಡಿದದ್ದುಂಟು. ಹೇಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ ಮಲ್ಲಿಕಾರ್ಜುನನಾಗಿ, ಸಿದ್ಧರಾಮೇಶ್ವರ ನಾಟಕದಲ್ಲಿ ಸಿದ್ಧರಾಮೇಶ್ವರನಾಗಿ, ಅಕ್ಕಮಹಾ ದೇವಿ ನಾಟಕದಲ್ಲಿ ಅಕ್ಕಮಹಾದೇವಿಯ ತಂದೆ ಹಾಗೂ ಅಲ್ಲಮ ಪ್ರಭುವಾಗಿ, ಶ್ರೀ ಕೃಷ್ಣ ಗರುಡಿಯಲ್ಲಿ ನಾರದನಾಗಿ ಅವರು ನೀಡಿದ ನಟನೆ ಹಾಗೂ ಗಾಯನ ಸ್ಮರಣೀಯವಾಗಿವೆ.

1976ರಲ್ಲಿ ಇವರು ರಾಯಚೂರಿನಲ್ಲಿ 'ಶ್ರೀ ಗುರು ಪಂಚಾಕ್ಷರಿ ಸಂಗೀತ ಪಾಠಶಾಲೆ' ಸ್ಥಾಪಿಸಿ ನೂರಾರು ಆಸಕ್ತರಿಗೆ ಸಂಗೀತ ಶಿಕ್ಷಣ ನೀಡಿ ಶಿಷ್ಯ ಪಡೆ ನಿರ್ಮಿಸಿದ್ದಾರೆ. 1981ರಿಂದ ಬಸವಕಲ್ಯಾಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಂಗೀತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ರಾಯಚೂರು ಹಾಗೂ ಬಸವಕಲ್ಯಾಣಗಳಲ್ಲಿ ಕಳೆದ ಎರಡು ದಶಕಗಳಿಂದ ಗಾನ ಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಪುಣ್ಯಶತಾಬ್ದಿ ನಿಮಿತ್ತ ಸಂಗೀತೋತ್ಸವ ನಡೆಸುತ್ತ ಬರುತ್ತಿದ್ದಾರೆ. ಆ ಮೂಲಕ ನಾಡಿನ ಹೆಸರಾಂತ ಸಂಗೀತಗಾರರು ಕಲ್ಯಾಣ ನಾಡಿನಲ್ಲಿ ಸಂಗೀತ ಸುಧೆ ಹರಿಸುತ್ತಿದ್ದಾರೆ.

ಇವರು ಬಸವಕಲ್ಯಾಣದಲ್ಲಿ 1990–91ರಲ್ಲಿ ಪಂ. ಪುಟ್ಟರಾಜ ಗವಾಯಿಗಳ ತುಲಾಭಾರ ಹಾಗೂ ಪಂ. ಪುಟ್ಟರಾಜ ಗವಾಯಿಗಳು ರಚಿಸಿರುವ ಬಸವ ಪುರಾಣವನ್ನು ಆನೆ ಮೇಲೆ ಮೆರವಣಿಗೆ ಮಾಡಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಜೊತೆಗೆ ವಚನ, ದಾಸರ ಪದಗಳ ಗಾಯನದಲ್ಲೂ ಇವರು ನಿಷ್ಣಾತರು. ಗುಲಬರ್ಗಾ ಹಾಗೂ ಹೈದ್ರಾಬಾದ ಆಕಾಶವಾಣಿ ಕೇಂದ್ರದಿಂದ ಇವರ ಸಂಗೀತ ನಿರಂತರ ಪ್ರಸಾರಗೊಳ್ಳುತ್ತಿದೆ. ಅನೇಕ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಗದಗ, ರಾಯಚೂರು, ರಾಣಿಬೆನ್ನೂರು, ಹುಮನಾಬಾದ, ಭಾಲ್ಕಿ, ಹಾರಕೂಡ, ಹೈದ್ರಾಬಾದ, ಕಾರವಾರ ಮುಂತಾದ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ರಾಯಚೂರಿನ ಪಂ. ಪಂಚಾಕ್ಷರಿ ಗವಾಯಿ ಸ್ಮಾರಕ ಟ್ರಸ್ಟಿನ ಅಧ್ಯಕ್ಷರಾಗಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಇವರಿಗೆ ಅನೇಕ ಪ್ರಶಸ್ತಿ–ಪುರಸ್ಕಾರ ದೊರೆತಿವೆ. ಅವುಗಳಲ್ಲಿ 'ಸಂಗೀತ ರತ್ನ' (2001), ಬೀದರ ಜಿಲ್ಲಾ 'ಉತ್ತಮ ಸಂಗೀತ ಶಿಕ್ಷಕ' (1995), 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' (1998), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾ ತಿಲಕ ಪ್ರಶಸ್ತಿ' (2000), 'ಬಸವಶ್ರೀ ಪ್ರಶಸ್ತಿ' (2003), 'ಸಿದ್ಧರಾಮ ಜಂಬಲದಿನ್ನಿ ಪ್ರಶಸ್ತಿ' (2003) ಮುಂತಾದವುಗಳು ಉಲ್ಲೇಖನೀಯವಾಗಿವೆ. ಅವರ ಶಿಷ್ಯರು ಅಭಿಮಾನಿಗಳು ಸೇರಿ ಅವರಿಗೆ 'ಕಲ್ಯಾಣ ಕಲಾಶ್ರೀ' (2003) ಎಂಬ ಅಭಿನಂದನ ಗ್ರಂಥ ಬಸವ ಕಲ್ಯಾಣದ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಕಲಾನಿಕೇತನ ಪ್ರಕಾಶನ ಈ ಗ್ರಂಥ ಪ್ರಕಟಿಸಿದೆ.

(ಎಸ್‌ಎಂಜಿ)

ಶೋ

ಶೋಭಾ ಭೀಮರಾವ ರಂಜೋಳಕರ್: ಕಳೆದ ಮೂರು ದಶಕಗಳಿಂದ ರಂಗಭೂಮಿಯಲ್ಲಿ ನಟಿಯಾಗಿ, ನಿರ್ದೇಶಕಿಯಾಗಿ, ವಸ್ತ್ರ ವಿನ್ಯಾಸಕರಾಗಿ, ಮೇಕಪ್ ತಜ್ಞರಾಗಿ, ಸಂಘಟಕರಾಗಿ ಸೇವೆ ಸಲ್ಲಿಸುತ್ತಿರುವ ಶೋಭಾ ಭೀಮರಾವ ರಂಜೋಳಕರ್ ಅವರು ತಮ್ಮ 60ನೆಯ ವಯಸ್ಸಿನಲ್ಲಿಯೂ ರಂಗ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿದ್ದಾರೆ. ರಂಗ ಮಾಧ್ಯಮ, ಸಂಗಮೇಶ್ವರ ಮಹಿಳಾ ಮಂಡಳಿ, ಕೆ.ಇ.ಬಿ. ಮಹಿಳಾ ಮಂಡಳಿ, ಕನ್ನಡ ಸಾಹಿತ್ಯ ಸಂಘ, ಕನ್ನಡ ಸಾಹಿತ್ಯ ಪರೀಷತ್ ಹೀಗೆ ಹಲವು ಸಂಘ ಸಂಸ್ಥೆಗಳ ಮೂಲಕ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.



ಖರೋಖರ, ಆನೆಬಂತಾನೆ, ಹರಕೆಯ ಕುರಿ, ಕೇಳು ಜನಮಮೇಯ, ಶಾಂತತಾ, ಆಧುನಿಕ ದ್ರೋಣ, ಕಾಡು ಕುದುರೆ, ಮಾತನಾಡುವ ಟೊಂಗೆ, ಮಾನಿಷಾದ, ಮೀಡಿಯಾ, ನೆಳಲಿಯ ಪ್ರಸಂಗ, ಜೈಸಿದನಾಯಕ, ಶರಣುಶರಣಾರ್ಥಿ, ಓಕಳಿ, ಅಮೀನಪುರದ ಸಂತೆ ಮಂಥರ, ಗ್ರಹಣ, ಪೇಯಿಂಗ್ ಗೆಸ್ಟ್, ಇತ್ಯಾದಿ 25 ರಂಗ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಬೆಂಗಳೂರು ಗುಲಬರ್ಗಾ ದೂರದರ್ಶನಗಳ 20 ಕಿರುಚಿತ್ರ, ಸಾಕ್ಷ್ಯ ಚಿತ್ರಗಳಲ್ಲಿ ನಟಿಸಿದ್ದಾರೆ. ಆಕಾಶವಾಣಿ ನಾಟಕ ವಿಭಾಗದ 'ಬಿ' ಶ್ರೇಣಿ ಕಲಾವಿದೆಯಾಗಿದ್ದು 15 ನಾಟಕಗಳಲ್ಲಿ ನಟಿಸಿದ್ದು, ಮಹಾದಾಸೋಹಿ, ಶರಣಬಸವ, ಬೆಳದಿಂಗಳಾಗಿ ಬಾ, ಗೌತಮ ಈ ಚಲನ ಚಿತ್ರಗಳಲ್ಲಿ ಅಭಿನಯಿಸಿರುವುದು ವಿಶೇಷ. 2003 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯೊಂದಿಗೆ, ಮೇಘ ಮಲ್ಹಾರ ,ಆಂಧ್ರದ 'ಕಲಾಕೌಮುದಿ', 'ಕಲಾಜ್ಯೋತಿ', 'ಮಹಿಳಾ ರತ್ನ' ಉತ್ತಮ ಕಲಾವಿದೆ, ಪ್ರಶಸ್ತಿ ಪುರಸ್ಕಾರ ಪಡೆದ ಪ್ರತಿಭಾವಂತ ಕಲಾವಿದೆ.

(ಎಸ್‌ಕೆ)

ಶ್ರೀ

ಶ್ರೀ ಗಾನಯೋಗಿ ಪಂಚಾಕ್ಷರಿ ಸಂಗೀತ ಕಲಾ ಸಂಘ: ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಪ್ರದೇಶವು ಸಾಂಸ್ಕೃತಿಕವಾಗಿ ಸಂಪದ್ಭರಿತವಾದ ನಾಡು. ಇಲ್ಲಿ ಕಲೆ ಸಾಹಿತ್ಯ ಸಂಗೀತಕ್ಕೆ ಯಾವ ಕೊರತೆಯಿಲ್ಲ. ಅನೇಕ ಚಟುವಟಿಕೆಗಳು ನಡೆಯುತ್ತಲೇ ಇವೆ. ಇಲ್ಲಿಯ ಸಂಘ ಸಂಸ್ಥೆಗಳು ನಿರಂತರವಾಗಿ ಹಲವಾರು ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಕ್ರೀಯಾಶೀಲವಾಗಿವೆ. ಅವುಗಳಲ್ಲಿ 'ಶ್ರೀ ಗಾನಯೋಗಿ ಪಂಚಾಕ್ಷರಿ ತಾಲ್ಲೂಕಾ ಸಂಗೀತ ಕಲಾ ಸಂಘ'ವು ಒಂದು ಚಿಂಚೋಳಿ ತಾಲ್ಲೂಕಿಗೆ ಮುಕುಟಪ್ರಾಯ ಸಂಗೀತ ಕಲಾ ಸಂಘ.

ಚಿಂಚೋಳಿಯ 'ಶ್ರೀ ಗಾನಯೋಗಿ ಪಂಚಾಕ್ಷರಿ ತಾಲ್ಲೂಕಾ ಸಂಗೀತ ಕಲಾ ಸಂಘ'ವು ದಿನಾಂಕ 02.06.1994 ರಂದು ಸ್ಥಾಪನೆಯಾಯಿತು. ಕಲೆ, ಸಾಹಿತ್ಯ, ಸಂಗೀತ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ ಸಂಘವು ಹಲವಾರು ಯೋಜನೆಗಳನ್ನು ಹಾಕಿಕೊಂಡು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾ ಬಂದಿದೆ.

ಮನುಷ್ಯನ ನೆಮ್ಮದಿಯ ಜೀವನಕ್ಕೆ ಸಂಗೀತವು ಒಂದು ಮಹತ್ವದ ಕಲೆಯಾಗಿದೆ. ಇಂತಹ ಕಲೆಯನ್ನು ಗೌರವಿಸುವುದು ಎಲ್ಲರ ಕರ್ತವ್ಯವಾಗಿದೆ. ಅದರಂತೆ ತಾಲ್ಲೂಕಿನ ಎಲ್ಲ ಕಲಾವಿದರುಗಳ, ಸಂಗೀತ ಪ್ರೇಮಿಗಳ, ಪ್ರೋತ್ಸಾಹದಿಂದ ಸಂಘವು ದಿನದಿನಕ್ಕೆ ಪ್ರಗತಿಯತ್ತ ಸಾಗುತ್ತಲಿದೆ. ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಾ ಸಂಗೀತ ಪ್ರೇಮಿಗಳಲ್ಲಿ ಉತ್ಸಾಹ ಹೆಚ್ಚುಸುತ್ತಿದೆ.

(ಆಯ್‌ಕೆ)

ಶ್ರೀಧರ ಹೆಗಡೆ: ಕಾರವಾರ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಕೆರೆಹೊಂಡ ಗ್ರಾಮದ ಶ್ರೀಧರ ಹೆಗಡೆ 1974ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿದಾಗ 17 ವರ್ಷದ ತರುಣ. ಮನೆಯ ವಾತಾವರಣದ ಯಾವುದೋ ಕಾರಣಕ್ಕೆ ಊರು ಬಿಟ್ಟವರು. ಈತನಕ ಊರು ಸೇರಿಲ್ಲ. ಅಂದರೆ ಬುದ್ಧಿ ಬಂದ ಮೇಲೆ ಆಗಾಗ ಊರಿಗೆ ಹೋಗಿ ಬರುವುದನ್ನೂ ಬಿಟ್ಟರೆ, 35 ವರ್ಷಗಳ ದೀರ್ಘ ಅಲೆದಾಟದಲ್ಲಿ ತಮ್ಮ ಬದುಕು ತಾವೇ ಕಟ್ಟಿಕೊಂಡವರು.

ವೃತ್ತಿ ರಂಗಭೂಮಿಯ ಕಲಾವಿದನಾಗಿ, ನಿರ್ದೇಶಕರಾಗಿ, ಕಂಪನಿಯ ಮಾಲೀಕರಾಗಿ, ಸಂಚಾಲಕರಾಗಿ, ಅಲೆಮಾರಿ ಜೀವನವನ್ನು ಇಂದಿಗೂ ಸಾಗಿಸುತ್ತಿರುವ ಶ್ರೀಧರ ಅವರಿಗೆ ಸ್ನೇಹಿತರೇ ಬಂಡವಾಳ.



1974ರಲ್ಲಿ ಗದಗಿನ ಸೂಡಿ ಕಂಪನಿಯ ನಾಟಕ 'ಬದುಕು ಬಂಗಾರವಾಯ್ತು' ನೋಡಲು ಹೋಗಿ ನಟರಾಗಿ ಬದುಕಿನ ದಾರಿ ಹುಡುಕಿಕೊಂಡವರು. ತೀಕ್ಷ್ಣಮತಿಯಾದ ಶ್ರೀಧರ ಹೆಗಡೆ ಕೊಟ್ಟ ಪಾತ್ರವನ್ನು ಬಿಟ್ಟವರಲ್ಲ, ನಾಟಕ ಪ್ರದರ್ಶನಕ್ಕೆ ಸೋಲಾಯಿತೆಂದು ಒಪ್ಪಿಕೊಂಡವರಲ್ಲ ತುಂಬಾ ಆಶಾವಾದದ ಶ್ರೀಯುತರು ವೃತ್ತಿ ಕಂಪನಿಗಳೆಂಬ ಅಭದ್ರ ಮನೆ

ಯಲ್ಲೇ ಭದ್ರ ಬುನಾದಿ ಹಾಕಿಕೊಂಡವರು. ಜೀವನದಲ್ಲಿ ಏನಾದರೂ ಸಾಧಿಸಿದರೆ ವೃತ್ತಿ ಕಂಪನಿಯ ಮೂಲಕವೇ ಸಾಧಿಸ ಬೇಕೆಂಬ ಅದಮ್ಯ ಬಯಕೆಯಲ್ಲಿ ಸಾಗಿದ ಶ್ರೀಯುತರು ಅಂದು ಕೊಂಡದ್ದನ್ನು ಸಾಧಿಸಿದವರು.

ದೊಡ್ಡವಾಡದ ಶಿವಪುತ್ರಯ್ಯನವರ ಕಂಪನಿ ಸೇರಿ ಸಮಸ್ತ ಜವಾಬ್ದಾರಿ ನಿಭಾಯಿಸಿ, ಅನುಭವದಿಂದ ಸ್ವತಃ ನಾಟಕ ಕಂಪನಿ ಕಟ್ಟಿದವರು ಕೈ ಬಾಯಿ ಸುಟ್ಟುಕೊಂಡು ಕಂಪನಿಯನ್ನು ಬೇರೆ ಯವರಿಗೆ ಒಪ್ಪಿಸಿ, 1980ರಲ್ಲಿ ಮಹಾರಾಷ್ಟ್ರದ ಜತ್ ನಾಟ್ಯ ಸಂಘ ದಲ್ಲಿ ಅತಿಥಿಯಾಗಿ ಸೇರಿ ಅಲ್ಲಿನ ಶ್ರೇಷ್ಠ ಕಲಾವಿದ ಶ್ರೀ ಫಕೀರಪ್ಪ, ವರವಿಯ ಸ್ನೇಹ ಸಂಪಾದನೆಯಿಂದ ಅದೇ ಜತ್‌ನಲ್ಲಿ 'ಶ್ರೀ ರಾಘವೇಂದ್ರ ವಿಜಯ ನಾಟ್ಯ ಸಂಘ' ಕಟ್ಟಿ ಮತ್ತೆ ಸೋಲುಂಡ ವರು. ಮುಂದೆ ಈ ರಂಗ ಜಂಗಮ ತುಳಿದದ್ದು ಸೊಲ್ಲಾಪೂರ ಕ್ಯಾಂಪ್‌ನೆಡೆಗೆ ಅಲ್ಲಿ 'ಚಿನ್ನದ ಗೊಂಬೆ' ಎಂಬ ನಾಟಕವನ್ನು ಹೌಸ್‌ಫುಲ್ 150 ಪ್ರಯೋಗ ನಡೆಸಿ ಜನ ಮಾನಸದಲ್ಲಿ ಅಚ್ಚಳಿ ಯದೇ ಉಳಿದವರು. ಇದೇ ದಿನಗಳಲ್ಲಿ ಸೊಲ್ಲಾಪುರದ ಕ್ಯಾಂಪ ನಲ್ಲಿ ಒಂದೊಂದು ನಾಟಕ 100 ಪ್ರಯೋಗ ಮಾಡಿ ಜನರ ವಿಶ್ವಾಸದೊಂದಿಗೆ ಹಣಕಾಸಿನ ಸದೃಢತೆ ಪಡೆದು ಮತ್ತೆ ವ್ಯವಸ್ಥಿತ ನಾಟಕ ಕಂಪನಿ ಕಟ್ಟಿದ ಛಲ ಬಿಡದ ತ್ರಿವಿಕ್ರಮ ಶ್ರೀಧರ ಹೆಗಡೆ.

ವೃತ್ತಿ ಕಂಪನಿ ನಾಟಕಗಳೆಂದರೆ ಡಬಲ್ ಮೀನಿಂಗ ಡೈಲಾಗ್ಸ್‌ಗಳಿರುವ ಹುಡಗಾಟಿಕೆಯ ಕಳಪೆ ಮಟ್ಟದ ನಾಟಕ ವೆಂದು ಮಧ್ಯಮ ವರ್ಗ ತಿಳಿದ ಆ ದಿನಗಳಲ್ಲಿ ನಾಟಕದ ಡೈಲಾಗ್ಸ್‌ಗೆ ಹೊಸ ಭಾಷೆ ಬರೆದು ರಂಗಭೂಮಿಯ ಪಾವಿತ್ರ್ಯ ಮತ್ತು ಶ್ರೀಮಂತಿಕೆ ಹೆಚ್ಚಿಸಿದವರು.

'ಖಾದಿ ಸೀರೆ' ಎಂಬ ನಾಟಕವನ್ನು ಹೆಣ್ಣು ಮಕ್ಕಳಿಗಾಗಷ್ಟೇ ಪ್ರದರ್ಶಿಸಿ ಸೈ ಎನಿಸಿಕೊಂಡ ಶ್ರೀಧರರಿಗೆ ಹಿಂದು ಮುಸ್ಲಿಮ್ ದಂಗೆಯಿಂದಾಗಿ ನಾಟಕ ಕಂಪನಿ ನಿಂತೇ ಹೋಗುವ ಪರಿಸ್ಥಿತಿ ನಿರ್ಮಾಣವಾಗಿ ಕಂಪನಿಯನ್ನು ಬೇರೆ ಗೆಳೆಯರಿಗೆ ಬಿಟ್ಟು 'ಕ್ಯಾಂಪ ಬೀದರ್' ಕಡೆ ಮುಖಮಾಡಿ ಒಂದು ವರ್ಷಗಳ ಕಾಲ ಸತತ House full Show ಮಾಡಿ ಮತ್ತೆ ಸಾಲಗಳನ್ನೆಲ್ಲ ಚುಕ್ತಾ ಮಾಡಿ ಮತ್ತೆ ಹಳೆ ಕಂಪನಿಯ ಸೀನರಿ, ಬೇರೆ ಸಾಮಾನು ಸರಂಜಾಮು ಖರೀದಿಸಿ, ರಾಯಚೂರಿಗೆ ಕಂಪನಿ ತಂದ 15 ದಿನಗಳಲ್ಲಿ ಮತ್ತೆ ಹಿಂದು ಮುಸ್ಲಿಮ್ ದಂಗೆಯಿಂದ ನಾಟಕ ಪ್ರದರ್ಶನ ನಿಂತು ಕಂಪನಿಯ ಖರ್ಚಿಗೆ ಸಾಮಾನುಗಳನ್ನೆಲ್ಲ ಒತ್ತೆ ಇಟ್ಟು 1986ರ ವರೆಗೆ ತೀರಾ ಅತಂತ್ರ ಸ್ಥಿತಿಯನ್ನು ಹಾಸಿ ಹೊದ್ದವರು. ಆ ಕಂಪನಿಯ ಸಾಮಾನು ಸರಂಜಾಮುಗಳನ್ನೆಲ್ಲ ಗೆಳೆಯ ವರವಿ ಫಕೀರಪ್ಪನವರಿಗೆ ಕೊಟ್ಟು ಕೈಮುಗಿದು ಸಂಬಂಧದ ಉಳಿವಿಗೆ ಖಾಲಿ ಕೈಯಲ್ಲಿ ಹೊರ ಬಂದವರು. ಮುಂದೆ ಸಣ್ಣ ಪುಟ್ಟ ಕಂಪನಿಗಳಲ್ಲಿ ಅತಿಥಿ ನಟನಾಗಿ ದುಡಿದದ್ದು ಇದ್ದೇ ಇತ್ತು. ಇಷ್ಟರ ಮಧ್ಯೆ ಹನ್ನೆರಡು ವರ್ಷದ ನಂತರ ತಾಯಿಯ ನೆನಪಾಗಿ ಹುಟ್ಟೂರಿಗೆ ಹೋಗಿ ಎಲ್ಲರನ್ನೂ ಕಣ್ತುಂಬ ನೋಡಿ ಬಂದವರು, 1987ರಲ್ಲಿ ಗೆಳೆಯ, ಶ್ರೇಷ್ಠ ಕಲಾವಿದ, ಸಂಘಟಕ ಶ್ರೀ ಶೇಖ ಮಾಸ್ತರರೊಂದಿಗೆ ಸ್ನೇಹಿತರ ಸಹಕಾರ ದಿಂದ ಮತ್ತೆ ನಾಟಕ ಕಂಪನಿ ಪ್ರಾರಂಭಿಸಿ 1990ರ ವರೆಗೆ ಹಾಗೂ ಹೀಗೂ ನಡೆಸಿ ನಿಲ್ಲಿಸಿ, ಬಿಜಾಪುರ, ಗುಲಬರ್ಗಾ, ರಾಯಚೂರು, ಬಾಗಲಕೋಟೆ– ಹೀಗೆ ಸುತ್ತಲು ಸಾವಿರ ಸಾವಿರ ಪ್ರಯೋಗ ಮಾಡುತ್ತ ಇಂದಿಗೂ ಶ್ರೀ ಕುಮಾರೇಶ್ವರ ನಾಟ್ಯ ಸಂಘದಲ್ಲಿ ಎಲ್ಲವೂ ಆಗಿ ರಂಗಭೂಮಿ ಬದುಕಿಸಿದವರು. ಶ್ರೀ ಶ್ರೀಧರ ಹೆಗಡೆ ವೃತ್ತಿ ರಂಗಭೂಮಿಯಲ್ಲಿ ಕಳಕೊಂಡದ್ದು ಸಾವಿರ; ಪಡೆದ ಅನುಭವ ಕೋಟಿಗೂ ಮೀರಿ. 20 ಸಲ ಕಂಪನಿ ಕಟ್ಟಿ, 20 ಕಂಪನಿಗಳಲ್ಲಿ 200 ನಾಟಕಕ್ಕೂ ಮಿಕ್ಕಿ ನಟನೆ, ನಿರ್ದೇಶನ, ಸಂಘಟನೆ ಮ್ಯಾನೇಜಮೆಂಟ್ ಎಲ್ಲವೂ ಆಗಿ ಎಲ್ಲವೂ ಹೋಗಿ ಈಗ ರಂಗಭೂಮಿಯ ನಿರುಮ್ಮಳ ಜಂಗಮ ನಾಗಿರುವ ಉತ್ತಮ ಕಲಾವಿದ. (ಎಸ್‌ಆರ್‌ಜಿ)



ಶ್ರೀಶೈಲ ಗುಡೇದ: ಯುವ ಕಲಾವಿದ. ಅಪ್ಪಟ ಗ್ರಾಮೀಣ ಪ್ರತಿಭೆ. ಇವರ ಕಲಾಕೃತಿಗಳಲ್ಲಿ ಗ್ರಾಮೀಣ ಬದುಕಿನ ಸೊಗಡನ್ನು ಕಾಣಬಹುದು. ಕಲಬುರ್ಗಿಯ ಕಪನೂರ ಗ್ರಾಮದಲ್ಲಿ ಜನಿಸಿ ದರು. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ಓದುವುದು ಕಡಿಮೆ, ಆಟದಲ್ಲೂ ಆಸಕ್ತಿ ಕಲಬುರ್ಗಿಯ ಶರಣ ಬಸವೇಶ್ವರ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕ ಶಿವಲಿಂಗಯ್ಯಾ ಹಿರೇಮಠ ಮತ್ತು ಮಾನಯ್ಯಾ ಬಡಿಗೇರ ಚಿತ್ರಕಲಾ ಶಿಕ್ಷಕರಲ್ಲಿ ಶಿಷ್ಯರಾಗಿ ತಮಗಿಷ್ಟವಾದ ಚಿತ್ರಕಲಾ ಕ್ಷೇತ್ರದಲ್ಲಿ ಪಳಗಿದರು.

ನಗರದ ದಿ. ಐಡಿಯಲ್ ಫೈನ್ ಆರ್ಟ ಸಂಸ್ಥೆಯ ಎಂ.ಎಂ. ಕೆ. ಕಾಲೇಜ ಆಫ್ ವಿಜುವಲ್ ಆರ್ಟನಲ್ಲಿ ಬಿ.ಎಫ್.ಎ. ಅಪ್ಲಾಯಿಡ್ ಆರ್ಟನಲ್ಲಿ ಚಿನ್ನದ ಪದಕ ಪಡೆದು ಉತ್ತೀರ್ಣ ರಾದರು. ಎಂ.ಎಫ್.ಎ. ಅಪ್ಲಾಯಿಡ್ ಇಲುಸ್ಟ್ರೇಶನನಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯದಿಂದ ಸ್ನಾತಕೋತರ ಪದವಿ ಪಡೆದರು.

ಜೆ.ಎಸ್. ಖಂಡೇರಾವ, ತಯ್ಯಾಬ ಮಹೆತಾ, ಮಹಾದೇವ ಸಾತವಾಳೆಕರ, ವ್ಹಿ.ಜಿ. ಅಂದಾನಿ ಅವರ ಸಂಯೋಜನೆ ಕಲಾಕೃತಿ ಗಳು ಗುಡೇದ ಅವರ ಮೇಲೆ ಪ್ರಭಾವ ಬೀರಿವೆ. ಚಿತ್ರಕಲಾ ಶಿಬಿರ ಗಳಲ್ಲಿ ಭಾಗವಹಿಸುವುದು. ಚಿತ್ರಕಲಾ ಪ್ರದರ್ಶನ ವೀಕ್ಷಿಸುವುದು. ಕಲಾವಿದರ ಜೊತೆ ಚರ್ಚಿಸುವುದು ಇವರ ಒಂದು ವಿಶೇಷ ಗುಣ. ಕಲೆಯಲ್ಲಿ ಆಳವಾದ ಅಧ್ಯಯನ ಮಾಡುವುದು ಇವರಿಗೆ ಇಷ್ಟವಾದವುಗಳು.

ಕಲಬುರ್ಗಿ ದೂರದರ್ಶನ ಕೇಂದ್ರದಲ್ಲಿ ಗ್ರಾಫಿಕ್ ಆರ್ಟಿಸ್ಟ್ ಯಾಗಿ 1994ರಿಂದ ಸೇವೆ ಸಲ್ಲಿಸುತ್ತಿರುವ ಇವರು ದೂರದರ್ಶನ ದಲ್ಲಿ ಗ್ರಾಫಿಕ್ ವಿನ್ಯಾಸಕಾರರಾಗಿ ಚಿರಪರಿಚಿತರು. ಆದರೆ ಇವರ



'ಅನ್‌ಟೈಟಲ್' ತೈಲವರ್ಣ ಮಾಧ್ಯಮ

ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದಿಂದ ಸಮೀಪ ದರ್ಶನವಾದರು. ಕಲಾ ಪೋಷಕರು, ಕಲಾ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶನ ವಿಕ್ಷೀಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಭೂದೃಶ್ಯಗಳು, ಗ್ರಾಮೀಣದ ಬದುಕಿನ ಜೀವನದ ಆಟ ಇವರ ಕಲೆಯಲ್ಲಿ ಹಾಸುಹೊಕ್ಕಾಗಿ ಬೆಳೆದಿರುವದನ್ನು ಕಾಣ ಬಹುದು. ಇವರ ಕಲಾಕೃತಿಗಳನ್ನು ನೋಡುವಾಗ, ನಮ್ಮ ಬಾಲ್ಯಾ ವಸ್ಥೆಯಲ್ಲಿ ಆಡಿದ ಆಟಗಳು ನೆನಪಾಗುತ್ತವೆ. ಯುವಕರಿಗೆ, ಹಿರಿಯರಿಗೆ ಈ ಚಿತ್ರಕೃತಿಗಳನ್ನು ನೋಡುತ್ತ ಹೋದಂತೆ ಕಲ್ಪನಾ ಲೋಕಕ್ಕೆ ಕರೆದೊಯ್ದ ಅನುಭವ ನೀಡುತ್ತದೆ.

ಈ ಭಾಗದಲ್ಲಿ ಸುಮಾರು ಮೂವತ್ತು ವರ್ಷಗಳ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಆಟವಾಡುತ್ತಿದ್ದ 'ದಪ್ಪಂ ದುಪ್ಪಿ' ಆ ಮರಕೋತಿ ಆಟ, ಹಬ್ಬಗಳು, ಮೀನುಗಾರ ಹುಡುಗರು ಮುಂತಾದ ಇವರ ಚಿತ್ರ ಕಲಾಕೃತಿಗಳು ಗಮನ ಸೆಳೆಯುತ್ತವೆ. ಬಣ್ಣದ ಸಂಯೋಜನೆ ಮನಸ್ಸಿಗೆ ಮುದ ನೀಡುತ್ತವೆ.

ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದು, ಗ್ರೂಪ್ ಶೋ ಗಳಲ್ಲಿ, ಕಲಾ ಚಟುವಟಿಕೆಗಳಲ್ಲಿ ನಿರಂತರ ಸಕ್ರೀಯವಾಗಿ ಭಾಗ ವಹಿಸಿ, ತಮ್ಮ ಕಲಾಕೃತಿಗಳಿಗೆ ಜೀವ ತುಂಬುವ ಹೊಸ ಅನುಭವ ಪಡೆದಿದ್ದಾರೆ. 2004ರ ಕಲಬುರ್ಗಿ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ, 2007ರ ಕನ್ನಡ ರಾಜ್ಯೋತ್ಸವ ವಿಶ್ವವಿದ್ಯಾಲಯದಲ್ಲಿ ಶ್ರೀಶೈಲ ಗುಡೇದ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

2008ರಲ್ಲಿ ಹೈದ್ರಾಬಾದ ಆರ್ಟ ಸೊಸೈಟಿಯವರು 67ನೇ ಆಲ್ ಇಂಡಿಯಾ ಕಲಾಪ್ರದರ್ಶನದಲ್ಲಿ ಭಾಗವಹಿಸಿದಕ್ಕೆ ಗೌರವಿಸಿದ್ದಾರೆ. ಹೀಗೆ ಕಲಾ ಚಟುವಟಿಕೆಗಳಲ್ಲಿ ನಿರಂತರ ತೊಡ ಗಿಸಿಕೊಂಡಿರುವ ಗುಡೇದ ಅವರಿಗೆ ಹಲವಾರು ಪ್ರಶಸ್ತಿಗಳು ಇವರನ್ನು ಅರಸಿಕೊಂಡು ಬಂದಿವೆ. (ಎನ್‌ಜೆ)

ಶ್ರೀಶೈಲ ಗೂಳಿ: ಇವರು 1965 ಜನೆವರಿ 01ರಂದು ಗುಲಬರ್ಗಾ ಜಿಲ್ಲೆ ಭಂಟನೂರ ಗ್ರಾಮದಲ್ಲಿ ಜನಿಸಿದರು. ಇವರು ಎಂ.ಎಸ್.ಸಿ. ಪದವಿ ಹಾಗೂ ಎಂ.ಫಿಲ್ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡರು. ಅಲ್ಲದೆ ಎಲ್.ಎಲ್. ಬಿ ಪದವಿಯನ್ನು ಪಡೆದುಕೊಂಡಿದ್ದಾರೆ.



ಇವರಿಗೆ 1989ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಯುವಜನೋತ್ಸವದ ಅಂಗ ವಾಗಿ ನಡೆದ ನಾಟಕಗಳ ಸ್ಪರ್ಧೆಯ ಮಹಿಮಾಪೂರ ನಾಟಕದ ಮೂಲಕ ರಂಗ ಭೂಮಿಯ ನಂಟು ಬೆಳೆಯಿತು. ಸಾಂಸ್ಕೃತಿಕ ಸಂಘಟನೆಯಾದ ಸಮುದಾಯದೊಂದಿಗೆ ಜೊತೆ ಗೂಡಿ 1990ರಲ್ಲಿ ಸಾಕ್ಷರತೆಯ ಅರಿವನ್ನು ಮೂಡಿಸುವ ಉದ್ದೇಶಕ್ಕಾಗಿ ಪ್ರೊ. ಆರ್.ಕೆ. ಹುಡಗಿಯವರ ಅಕ್ಷರ ನಾಟಕ ವನ್ನು ಆಯ್ಕೆಮಾಡಿ ಜಾಥಾದ ಮೂಲಕ ನೂರಾರು ಪ್ರಯೋಗ ಗಳು ನಡೆದವು. ಅದರಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದರು. 1992ರಲ್ಲಿ ಒರೆಗಲ್ಲು ನಾಟಕದಲ್ಲಿಯೂ ಇವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಲ್ಲಿಂದ ಸುದೀರ್ಘವಾಗಿ 2010 ಹಾಗೂ 2011ರ ವರೆಗೆ ಅನೇಕ ನಾಟಕಗಳಲ್ಲಿ ಭಾಗವಹಿಸಿ ಪ್ರಮುಖ ಪಾತ್ರಗಳು ನಿರ್ವಹಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸಚಿವರು ಬರ್ತಾರ, ಬಾದಶಹಾ ಪುರಾಣ, ಪಾದಚಾರಿ ಪುರಾಣ, ಹೊಮ್ಮಾ ರಿಯ ರಸಪುರಾಣ, ರಾವಿನದಿ ದಂಡೆಯಲಿ, ಸ್ಮಶಾನ ಕುರುಕ್ಷೇತ್ರ, ಚಾರ್ವಾಕ ಹೀಗೆ ಹಲವಾರು.

ಇವರು ಅನೇಕ ರಂಗ ಚಟುವಟಿಕೆಗಳಲ್ಲಿ ಭಾಗವಹಿಸಿ ದ್ದಲ್ಲದೆ ಸಂಘಟನೆಯ ಮುಖಂಡರಾಗಿ ಕೆಲಸ ನಿರ್ವಹಿಸಿದ್ದಾರೆ. ಸಮುದಾಯದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಹಾಗೂ ಭಾರತ ಜ್ಞಾನ ವಿಜ್ಞಾನದ ಅಧ್ಯಕ್ಷರಾಗಿ ಅಲ್ಲದೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹೀಗೆ ಇವರ ಚಾಕಚಕ್ಯತೆ ಹಾಗೂ ನಿರಂತರ ಕಾರ್ಯ ವೈಖರಿಯನ್ನು ಮಸಿದ ಕರ್ನಾಟಕ ಸರಕಾರ ರಾಜ್ಯ ನಾಟಕ ಅಕಾಡೆಮಿ ಪುರಸ್ಕಾರ ನೀಡಿ ಗೌರವಿಸಿದೆ. (ಎಎಸ್‌ಎಸ್)

ಸ

ಸಂಗಣ್ಣ ದೋರನಳ್ಳಿ: ಚಿತ್ರಕಲಾವಿದ. ಶಹಾಪುರ ತಾಲ್ಲೂಕಿನ ದೋರನಳ್ಳಿಯವರು. ಕಳೆದ 40 ವರ್ಷಗಳಿಂದ ಕಲಾ ಸೇವೆಯನ್ನು ಮಾಡುತ್ತ ಬಂದಿದ್ದಾರೆ. ತೈಲವರ್ಣ, ಪೋಸ್ಟರ್ ಮಾಧ್ಯಮ ಹಾಗೂ ಜಲವರ್ಣಗಳಲ್ಲಿ ಸಿದ್ಧ ಹಸ್ತರೆನಿಸಿರುವ ಸಂಗಣ್ಣ, ಕಥೆಯ ಪುಸ್ತಕಗಳಿಗೆ ರೇಖಾಚಿತ್ರಗಳನ್ನು ಬರೆದು ಕೊಟ್ಟಿದ್ದಾರೆ. ಸುಮಾರು 100ಕ್ಕೂ ಹೆಚ್ಚು ಪುಸ್ತಕಗಳ ಮುಖಪುಟಕ್ಕೆ ಚಿತ್ರಗಳನ್ನು ರಚಿಸಿದ್ದಾರೆ. ಇವರು ರಚಿಸಿರುವ ಶಿವಶರಣರ ಭಾವಚಿತ್ರಗಳು ಮನಕ್ಕೆ ಆನಂದಕೊಡುವಲ್ಲಿ ಯಶಸ್ವಿಯಾಗಿವೆ. ಭಕ್ತಿ, ಭಾವ ಮೂಡಿಸುವುದರ ಜೊತೆಗೆ ಆದರ್ಶ ಸಮಾಜದ ನಿರ್ಮಾಣ ಮಾಡುವ ಸಂಕಲ್ಪ ಮಾಡಿದ್ದಾರೆ.

ಆಕೃತಿ ರಚನಾಕಾರರಾಗಿ ಕೆಲಸ ಮಾಡುತ್ತಲೇ ಕಲೆಯಲ್ಲಿ ತಮ್ಮದೇ ಆದ ಸ್ಪಷ್ಟ ಗುರಿಯನ್ನು ಹೊಂದಿದವರು. ರಾಜ್ಯಮಟ್ಟದ ಕಲಾವಿದರಾಗಿರುವ ಸಂಗಣ್ಣನವರ ಕಲೆ, ಇದುವರೆಗೂ ರಾಜ್ಯಮಟ್ಟದ ಅಕಾಡೆಮಿಗಳ ಕಣ್ಣಿಗೆ ಕಾಣುತ್ತಿಲ್ಲ. ಕನ್ನಡ ಪುಸ್ತಕ ಪ್ರಾಧಿಕಾರ ಸಂಪಾದಿಸಿರುವ ಪುಸ್ತಕಗಳಿಗೆ ಚಿತ್ರಗಳನ್ನು ರಚಿಸಿ ಕೊಟ್ಟಿದ್ದಾರೆ.

ಬೆಂಗಳೂರಿನ ಬಸವ ಭವನದಲ್ಲಿ ಶಿವಶರಣರ ಭಾವಚಿತ್ರಗಳ ಪ್ರದರ್ಶನ, ದೆಹಲಿಯಲ್ಲಿ ಬಸವೇಶ್ವರ ಮುತ್ಥಳಿ ಅನಾವರಣದ ಸಂದರ್ಭದಲ್ಲಿ ಶರಣರ ಭಾವಚಿತ್ರಗಳ ಪ್ರದರ್ಶನ, ಸುರಪುರ, ಶಹಾಪುರ, ಗುಲ್ಬರ್ಗಾಗಳಲ್ಲಿ ಚಿತ್ರಕಲಾ ಪ್ರದರ್ಶನವನ್ನೂ ಏರ್ಪಡಿಸಿದ್ದಾರೆ. ರಂಗೋಲಿಯ ಮೂಲಕ ಮಹಾನ್ ನಾಯಕರ ಚಿತ್ರಗಳನ್ನು ಬಿಡಿಸುವಲ್ಲಿ ನಿಷ್ಣಾತರಾಗಿದ್ದಾರೆ.

ಚಿತ್ರಕಲೆಯಲ್ಲಿ ಹೊಸ ಆವಿಷ್ಕಾರಗಳ ಮೂಲಕ ಹೊಸತನ್ನು ರೂಢಿಸುವ ಮಹದಾಸೆಯನ್ನು ಹೊಂದಿದ್ದಾರೆ. ಹೊಸ ದೃಷ್ಟಿಕೋನದಿಂದ ಚಿತ್ರಗಳನ್ನು ಬಿಡಿಸುವುದರಲ್ಲಿ ನಿರತರಾಗಿದ್ದಾರೆ. ಇತ್ತೀಚೆಗೆ ಚಿತ್ರಗಳಿಲ್ಲದ ಪುಸ್ತಕಗಳೇ ವಿರಳ. ಹಾಗಾಗಿ ಕಲಾವಿದ ನಿತ್ಯವೂ ನಿರಂತರ ಶೋಧನೆಯಲ್ಲಿ ಇರಬೇಕು ಎಂದು ಸಂಗಣ್ಣ ಸಲಹೆ ಮಾಡುತ್ತಾರೆ. ಕಲೆಯನ್ನು ಕಲಿಯಬೇಕು ಎನ್ನುವವರಿಗೆ, ಆಸಕ್ತಿ ಹೊಂದಿದವರಿಗೆ ತರಬೇತಿ ಮತ್ತು ಮಾಹಿತಿ ನೀಡುವಲ್ಲಿಯೂ ಉತ್ಸಾಹ ತೋರಿದ್ದಾರೆ. (ಸಿಪಿ)

ಸಂಗಯ್ಯ ಎಸ್. ಹಳ್ಳದಮಠ: ಇವರು 1969 ಮಾರ್ಚ್ 09 ರಂದು ಜನಿಸಿದರು. ಇವರು ದಿ ಐಡಿಯಲ್ ಫೈನ್‌ಆರ್ಟ್‌ನಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿಯನ್ನು ಮುಗಿಸಿದರು. ಚಿತ್ರಕಲೆಗಿಂತಲೂ ನಾಟಕ ಅಭಿನಯ ಹಾಗೂ ರಂಗಭೂಮಿಯ ಅನೇಕ ಕ್ಷೇತ್ರಗಳಲ್ಲಿ ಇವರಿಗೆ ಅಪಾರವಾದಂಥ ಆಸಕ್ತಿ ಹೊಂದಿದವರು. ಸುಮಾರು 20 ವರ್ಷಗಳ ಕಾಲ ಇವರು ಸಮುದಾಯ ಸಾಂಸ್ಕೃತಿಕ ಸಂಘಟನೆಯಲ್ಲಿ ಕಲಾವಿದರಾಗಿ, ನಿರ್ದೇಶಕರಾಗಿ ಕೆಲಸಮಾಡಿದ ಅನುಭವ ಕೂಡ ಹೊಂದಿದ್ದಾರೆ.



ಇವರು ರಂಗಭೂಮಿಯಲ್ಲಿ ಸಕ್ರೀಯವಾಗಿ ಕೆಲಸ ಮಾಡುವುದರ ಜೊತೆಗೆ ಕಿರುತೆರೆ ಹಾಗೂ ಬೆಳ್ಳಿತೆರೆಯ ಮೇಲೂ ಕೂಡ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ. ನಜೀರಸಾಬ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ನಿರ್ಮಾಣ ಮಾಡಿದ ಹಲವಾರು ಧಾರವಾಹಿಗಳಲ್ಲಿ ಸಂಗಯ್ಯನವರು ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ಅಭಿನಯಿಸಿದ್ದಾರೆ. ಬಿ. ಜಯಶ್ರೀ, ಕರಿಬಸವಯ್ಯ ಹಾಗೂ ಅನೇಕ ಪ್ರಮುಖ ಕಲಾವಿದರೊಂದಿಗೆ ಇವರು ಅಭಿನಯಿಸಿದ್ದಾರೆ. ಚಿತ್ರ ನಿರ್ದೇಶಕ ಬಿ. ಸುರೇಶರವರ ಅರ್ಥ ಸಿನಿಮಾದಲ್ಲಿ ಅಭಿನಯಿಸಿದ್ದಾರೆ.

ಸಮುದಾಯದಲ್ಲಿ ಕಲಾವಿದರಾಗಿ, ಉತ್ತಮ ಸಂಘಟಕರಾಗಿ ಅಲ್ಲದೆ ಸಂಘಟನೆಯ ಸಹಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ಪ್ರಸ್ತುತ ಖಾಸಗಿ ವಸತಿ ಶಾಲೆಯಲ್ಲಿ ರಂಗಕಲಾವಿದರಾಗಿ ಹಾಗೂ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ. (ಎಎಸ್‌ಎಸ್)

ಸಂಗೀತ ಕಲಾವಿದರು: (ಬೀದರ ಜಿಲ್ಲೆ) ಹೈದ್ರಾಬಾದ ಕರ್ನಾಟಕದ ಒಂದು ಭಾಗವೆನಿಸಿರುವ ಬೀದರ ಜಿಲ್ಲೆ ಸಾಂಸ್ಕೃತಿಕ ಮತ್ತು ಕಲಾತ್ಮಕ ದೃಷ್ಟಿಯಿಂದ ಅದು ಸಮೃದ್ಧ ಜಿಲ್ಲೆ ಎಂದೇ ಹೇಳಬೇಕು. ಕರ್ನಾಟಕದ ಸಂಗೀತ ಕ್ಷೇತ್ರದ ಬೆಳವಣಿಗೆಯಲ್ಲಿ ಬೀದರ ಜಿಲ್ಲೆಗೆ ತನ್ನದೇ ಆದ ವೈಶಿಷ್ಟ್ಯವಿದೆ. ಬೀದರ ಜಿಲ್ಲೆಯ ಸಂಗೀತ ಕಲಾವಿದರು ರಾಷ್ಟ್ರಮಟ್ಟದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸಂಗೀತ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗಾಗಿ ಅದರ ಶ್ರೇಯೋಭಿವೃದ್ಧಿಗಾಗಿ ಜೀವಮಾನವಿಡೀ ದುಡಿದ, ದುಡಿಯುತ್ತಿರುವ ಅನೇಕ ಸಂಗೀತಗಾರರು ಬೀದರ ಜಿಲ್ಲೆಯಲ್ಲಿದ್ದಾರೆ. ಗಾಯಕರಾಗಿ, ವಾದಕರಾಗಿ, ಸಂಗೀತ ಶಿಕ್ಷಕರಾಗಿ, ಸಂಗೀತ ಕಛೇರಿಗಳನ್ನು ನೀಡಿ. ಸಂಗೀತ ಸಂಸ್ಥೆಗಳನ್ನು ಸ್ಥಾಪಿಸಿ. ಪ್ರತಿಭಾವಂತ ಶಿಷ್ಯರನ್ನು ತಯಾರಿಸಿ ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಅನೇಕ ಜನ ಸಂಗೀತ ಕಲಾವಿದರು ಬೀದರ ಜಿಲ್ಲೆಯಲ್ಲಿದ್ದಾರೆ.

ನೂರಂದಯ್ಯಸ್ವಾಮಿ ಗವಾಯಿಗಳು: ಬೀದರ ಜಿಲ್ಲೆಯ ಹಿರಿಯ ತಲೆಮಾರಿನ ಸಂಗೀತಗಾರರಲ್ಲೊಬ್ಬರು. ಬಸವಕಲ್ಯಾಣ ಗಡಿ ಗೌಡಗಾಂವದವರು. ಇವರೊಬ್ಬ ಉತ್ತಮ ಹಾರ್ಮೋನಿಯಂ ವಾದಕರು. ಅತ್ಯುತ್ತಮ ಗಾಯಕರು. ಅನೇಕ

ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿ ಬೀದರ ಜಿಲ್ಲೆಯ ಗ್ರಾಮೀಣ ರಂಗಭೂಮಿಗೆ ತಮ್ಮ ಅಮೂಲ್ಯ ರಂಗ ಸಂಗೀತ ಸೇವೆ ಸಲ್ಲಿಸಿದ್ದಾರೆ. ಇವರನ್ನು 'ನೂರಂದಪ್ಪ ಗವಾಯಿ' ಎಂದು ಕರೆಯುತ್ತಿದ್ದರು. ನೂರಂದಪ್ಪ ಗವಾಯಿಗಳ ಸಂಗೀತದ ಗುರುಗಳು ವೆಝೋಬುವಾ, ನೂರಂದಪ್ಪ ಗವಾಯಿಗಳು ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ಅಂಥವರಲ್ಲಿ ಗೋರಟಾ ಗ್ರಾಮದ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿಯವರು ಪ್ರಮುಖರಾಗಿದ್ದಾರೆ.

ಪರಶುರಾಮಜೀ ಖಮೀತಕರ: ಬೀದರ ಜಿಲ್ಲೆಯ ಹಿರಿಯ ತಲೆಮಾರಿನ ಸಂಗೀತಗಾರರಲ್ಲೊಬ್ಬರು. ಹುಮನಾಬಾದದ ನಿವಾಸಿಗಳಾಗಿದ್ದ ಖಮೀತಕರ ಉತ್ತಮ ಹಾರ್ಮೋನಿಯಂ ವಾದಕರು ಹಾಗೂ ಗಾಯಕರೂ ಆಗಿದ್ದರೂ ಹುಮನಾಬಾದದ ಅನೇಕ ಕಡೆಗಳಲ್ಲಿ ನಾಟಕ ಕಲಿಸಿ ಸಂಗೀತ ನಿರ್ದೇಶನ ನೀಡಿ ತಾವೊಬ್ಬ ಉತ್ತಮ ಸಂಗೀತ ನಿರ್ದೇಶಕರೆಂದೆನಿಸಿಕೊಂಡಿದ್ದರು. ಇವರು ಬೀದರ ಜಿಲ್ಲೆಯ ಸಂಗೀತ ಪರಂಪರೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ರಾಚೋಟ ಶರಣಯ್ಯ ಮಠಪತಿ: ಹಿರಿಯ ಸಂಗೀತಗಾರರು. ಬಸವಕಲ್ಯಾಣ ತಾಲ್ಲೂಕಿನ ಗೋರಟಾ (ಬಿ) ಗ್ರಾಮದವರು. ಹುಟ್ಟು ಪ್ರತಿಭಾವಂತ ಸಂಗೀತಗಾರರು, ತಮ್ಮ ಎಳೆವಯಸ್ಸಿನಲ್ಲಿಯೇ ಹಾರ್ಮೋನಿಯಂ ವಾದನದಲ್ಲಿ ಪ್ರಭುತ್ವ ಪಡೆದವರು, ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯಂದಿರು, ಅನೇಕ ನಾಟಕಗಳಲ್ಲಿ ಪಾತ್ರವಹಿಸಿ ನಟರಾಗಿ, ಸಂಗೀತ ನಿರ್ದೇಶಕರಾಗಿ ಕ್ಷೇತ್ರದ ಸೇವೆ ಮಾಡಿದವರು. ತಮ್ಮ 23ನೇಯ ವಯಸ್ಸಿನಲ್ಲಿ ರಝಾಕಾರ ಹತ್ಯಾಕಾಂಡದಲ್ಲಿ ಇವರು ವೀರ ಮರಣವನ್ನಪ್ಪಿದರು. ಇವರ ಶಿಷ್ಯರಲ್ಲಿ ಗೋರಟಾ ಶ್ರೀ ಸಂಗೀತ ರುದ್ರ ಸಂಘದ ಅಧ್ಯಕ್ಷ ವಿರೂಪಾಕ್ಷಯ್ಯಸ್ವಾಮಿ ಹಾಗೂ ಸಂಘದ ಉಪಾಧ್ಯಕ್ಷ ವಿರೂಪಾಕ್ಷಯ್ಯ ಸ್ವಾಮಿ ಮೇಲಗಲ್ಲಿ ಪ್ರಮುಖರು.

ರೇವಣಯ್ಯ ಶಿವಲಿಂಗಯ್ಯ ಮಠಪತಿ: ಉತ್ತಮ ಹಾರ್ಮೋನಿಯಂ ವಾದಕರು. ಗೋರಟಾ (ಬಿ) ಗ್ರಾಮದವರು. ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯಂದಿರು ಅನೇಕ ಜನರಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಭಕ್ತಿ ಸಂಗೀತ ಹಾಡುವಲ್ಲಿ ಇವರು ನಿಷ್ಣಾತರು.

ವಿರೂಪಾಕ್ಷಯ್ಯ ಸ್ವಾಮಿ ಗೋರಟಾ: ಗೋರಟಾ ಗ್ರಾಮದ ಶ್ರೀ ವಿರೂಪಾಕ್ಷಯ್ಯನವರು ಜಿಲ್ಲೆಯ ಹಿರಿಯ ಹಾಗೂ ಜನಪ್ರಿಯ ಸಂಗೀತಗಾರರಲ್ಲೊಬ್ಬರು. ಹೈದ್ರಾಬಾದದ ಸಿತಾರ ವಿದ್ವಾನ್, ಪಂ. ನಾಗೇಶ ದಿವಾಣ ಅವರ ಮಾರ್ಗದರ್ಶನದಲ್ಲಿ ಸಿತಾರ ವಾದನದಲ್ಲಿ ಸಂಗೀತ ಅಲಂಕಾರ ಪದವಿ ಪಡೆದವರು. ಇವರು ಉತ್ತಮ ಗಾಯಕರೂ ಆಗಿದ್ದಾರೆ. ಸುಪ್ರಸಿದ್ಧ ಗೋರಟಾ ಶ್ರೀ ಸಂಗೀತ ರುದ್ರ ಸಂಘದ ಸ್ಥಾಪಕ ಅಧ್ಯಕ್ಷರು. ಕಳೆದ ಐವತ್ತು ವರ್ಷಗಳಿಂದ ನಾಡಿನಾದ್ಯಂತ ಅಸಂಖ್ಯ 'ಸಂಗೀತ ರುದ್ರ' ಕಾರ್ಯಕ್ರಮಗಳನ್ನು ನೀಡಿದ್ದಾರೆ. 1958ರಲ್ಲಿ 'ಹೈದ್ರಾಬಾದ ಕರ್ನಾಟಕ ಸಂಗೀತ ಸಮ್ಮೇಳನ' ಅತ್ಯಂತ ಅದ್ಧೂರಿಯಲ್ಲಿ ಸಂಘಟಿಸಿದ ಶ್ರೇಯಸ್ಸು ಇವರದಾಗಿದೆ. ಸಂಗೀತ ಕಲೆ ಬೆಳೆಯಲೆಂಬ ಉದ್ದೇಶದಿಂದ ಗೋರಟಾ ಗ್ರಾಮದದಲ್ಲಿ 1957ರಲ್ಲಿ 'ಶಾರದಾ ಸಂಗೀತ ವಿದ್ಯಾಲಯ' ಸ್ಥಾಪಿಸಿ ತನ್ಮೂಲಕ ನೂರಾರು ಜನ ಶಿಷ್ಯಂದಿರನ್ನು ತಯಾರಿಸಿದ್ದಾರೆ. ರಝಾಕರ ಹತ್ಯಾಕಾಂಡವನ್ನು ಕುರಿತು 'ಭುಲಾಯಿ ಪದ' ಎಂಬ ಕಿರು ಪುಸ್ತಕವನ್ನು ರಚಿಸಿದ್ದಾರೆ. ರುದ್ರದ ನಮಕ ಚಮಕಗಳಿಗೆ ಸ್ವರ ಸಂಯೋಜಿಸಿರುವ ಅನೇಕ ಸ್ವರ ಲಿಪಿಬಂದಿಶ್‌ಗಳು ಹಾಗೂ ಅವರೇ ರಚಿಸಿದ 'ಕನ್ನಡ ಲಕ್ಷಣಗೀತ'ಗಳು ಉತ್ತರ ಪ್ರದೇಶ ಹಾಥರಸದ 'ಸಂಗೀತ' (ಹಿಂದಿ) ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹಾಥರಸದ ಸಂಗೀತ ಕಾರ್ಯಾಲಯ ಪ್ರಕಟಿಸಿರುವ 'ಸಂಗೀತ ಸಂಸ್ಥಾ ಅಂಕ' ದಲ್ಲಿ ಇವರು ನಡೆಸುತ್ತಿರುವ 'ಶಾರದಾ ಸಂಗೀತ ವಿದ್ಯಾಲಯ'ದ ಸಂಪೂರ್ಣ ವಿವರ ಪ್ರಕಟಿಸಲಾಗಿದೆ.

ಇವರಿಗೆ ಸಂಗೀತದ ಶ್ರೀಕಾರ ಹಾಕಿದವರು ಅವರ ಅಣ್ಣ 'ರಾಚೋಟಿ ಮಠಪತಿ'ಯವರು. ಅವರು ನೆಟ್ಟ ಈ ಸಂಗೀತ ಸಸಿಗೆ ನೀರುಣಿಸಿ ಬೆಳೆಸಿದವರು. ಹೈದ್ರಾಬಾದದ ವಿದ್ವಾನ್ ಪಂ. ನಾಗೇಶ ದಿರ್ವಾಣ ಗುರೂಜಿಯವರು. ವಿರೂಪಾಕ್ಷಯ್ಯನವರು ನಾಡಿನ ಅನೇಕ ಮಠಪೀಠಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಸಂಗೀತ ಸೇವೆಯನ್ನು ಗುರುತಿಸಿ ನಾಡಿನ ಅನೇಕ ಸಂಘ–ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ವಿರೂಪಾಕ್ಷಯ್ಯನವರು ಬೀದರ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ ಸಂಗೀತ ಕಾರ್ಯಕ್ರಮಗಳಲ್ಲಿ 'ಸಂಗೀತ ಕಛೇರಿ' ನೀಡಿದ್ದಾರೆ. ಇವರ ಶಿಷ್ಯರಲ್ಲಿ ಅನೇಕರು ಬೀದರ ಜಿಲ್ಲೆಯ ಸಂಗೀತ ಕ್ಷೇತ್ರದಲ್ಲಿ ಬೆಳವಣಿಗೆಗೆ ಮಹತ್ವಪೂರ್ಣ ಸೇವೆ ಮಾಡುತ್ತಿದ್ದಾರೆ.

ಹನುಮಂತಪ್ಪ ಚಿದ್ರಿ: ಜಿಲ್ಲೆಯ ಅಪರೂಪದ ಕೊಳಲು ವಾದಕರು. ಪೋಲೀಸ ಇಲಾಖೆಯ ಆರಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

ಕಾಶೆಪ್ಪಾ ಖಂಡ್ರೆ ಗವಾಯಿ: ಬೀದರ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತವನ್ನು ಬೆಳೆಸುವಲ್ಲಿ, ಅದನ್ನು ಶಾಶ್ವತವಾಗಿ ನೆಲೆಸುವಲ್ಲಿ ಅವಿರತ ಪರಿಶ್ರಮ ಪಟ್ಟವರು. ಪಂ. ಪಂಚಾಕ್ಷರಿ ಗವಾಯಿಗಳ ಶಿಷ್ಯರಾಗಿ ಶಿವಯೋಗ ಮಂದಿರದಲ್ಲಿ ಸಂಗೀತ ಶಿಕ್ಷಣವನ್ನು ಪಡೆದು ಬೀದರ ಜಿಲ್ಲೆಯಲ್ಲಿ ಶಾಸ್ತ್ರೀಯ ಸಂಗೀತದ ಪರಂಪರೆಯನ್ನು ಉಜ್ವಲಗೊಳಿಸಲು ತಮ್ಮ ಜೀವಮಾನವಿಡೀ ದುಡಿದ ಒಬ್ಬ ಅಪರೂಪದ ಕಲಾವಿದರು.

ಕಾಶೆಪ್ಪಾ ಖಂಡ್ರೆಯವರು ಕರ್ನಾಟಕ ಸರಕಾರದ ಸಾರಿಗೆ ಸಚಿವರಾಗಿದ್ದ ಭೀಮಣ್ಣ ಖಂಡ್ರೆಯವರ ಸಹೋದರರು. ಕಾಶೆಪ್ಪಾ ಖಂಡ್ರೆ ಗವಾಯಿಗಳು ಭಾಲ್ಕಿಯಲ್ಲಿ ಸಂಗೀತದ ಶಾಶ್ವತ ಬೆಳವಣಿಗೆಗೆ ಹಲವು ಯೋಜನೆ ಹಾಕಿಕೊಂಡಿದ್ದರು. ಅನೇಕ ಜನ ಶಿಷ್ಯರನ್ನು ತಯಾರಿಸಿದ್ದರು.

ನನ್ನೇಬಾಬು ಕುವರ: ಕರ್ನಾಟಕದ ಪ್ರಸಿದ್ಧ 'ಹಾರ್ಮೋನಿಯಂ ಸಾಮ್ರಾಟ್'. ಇವರು ಬೀದರ ಜಿಲ್ಲೆಯ ಸಂಗೀತಗಾರರಲ್ಲಿ ಶ್ರೇಷ್ಠ ಕಲಾಕಾರರೆನಿಸಿದ್ದರು. ಮೂಲತಃ ಗುಜರಾತದವರು.

ಶಿರಡಿಯ ಸಂತ ಸಾಯಿಬಾಬಾ ಅವರ ಅತ್ಯಂತ ನಿಕಟವರ್ತಿಗಳು ಹಾಗೂ ಪರಮ ಶಿಷ್ಯರಾಗಿದ್ದರು.

ಇವರು ಗುಜರಾತದಿಂದ ದಕ್ಷಿಣ ಭಾರತಕ್ಕೆ ಬಂದಾಗ ಇವರಿಗೆ ಮೊಟ್ಟ ಮೊದಲು ಆಶ್ರಯ ನೀಡಿದವರು ಮಾಣಿಕ ನಗರದ ಶ್ರೀ ಮಾಣಿಕ ಸಂಸ್ಥಾನದ ಮಹಾರಾಜರು. ಹೈದ್ರಾಬಾದ ಕರ್ನಾಟಕದ ಪ್ರತಿಷ್ಠಿತ ಬೀದರ ಜಿಲ್ಲೆಯ ಧರ್ಮಕ್ಷೇತ್ರಗಳಲ್ಲೊಂದಾದ ಹುಮನಾಬಾದ ತಾಲ್ಲೂಕಿನ ಶ್ರೀ ಮಾಣಿಕ ಸಂಸ್ಥಾನ ಸಂಗೀತ ಕಲೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಸಂಸ್ಥಾನದ ಪೀಠಾಧಿಪತಿಗಳು ಸಂಗೀತ ಕಲೆಗೆ ವಿಶೇಷ ಪ್ರಾಧಾನ್ಯತೆ ನೀಡುತ್ತ ಬಂದಿದ್ದಾರೆ. ಈ ಸಂಸ್ಥಾನದಲ್ಲಿ ನನ್ನೇಬಾಬು ಅವರು ದರ್ಬಾರದ ಸಂಗೀತಗಾರರೆಂದು ನಿಯುಕ್ತರಾಗಿ ಅನೇಕ ವರ್ಷಗಳ ಕಾಲ ಬೀದರ ಜಿಲ್ಲೆಯ ಸಂಗೀತದ ಬೆಳವಣಿಗೆಗೆ ಅವಿರತವಾಗಿ ಪರಿಶ್ರಮಿಸಿದರು.

ಬೀದರ ಪಟ್ಟಣದ ರಸಿಕ ಶ್ರೋತೃಗಳ ಪ್ರೀತಿಗೆ ಮಣಿದ ಇವರು ಮಾಣಿಕ ನಗರದ ಸಂಸ್ಥಾನದಿಂದ ಬೀದರ ಪಟ್ಟಣಕ್ಕೆ ಬಂದು ನೆಲೆಸಿದರು. ಬೀದರ ಜಿಲ್ಲೆಯಾದ್ಯಂತ ಅನೇಕ ಸಂಗೀತ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತ ಜಿಲ್ಲೆಯ ಸಂಗೀತ ಕಲೆಯ ಬೆಳವಣಿಗೆಗೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದ ಅವರು ಕರ್ನಾಟಕದ ಸಂಗೀತ ಪರಂಪರೆಯಲ್ಲಿ ಬೀದರ ಜಿಲ್ಲೆಗೆ ವಿಶಿಷ್ಟ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ.

ಹಾರ್ಮೋನಿಯಂ ನುಡಿಸುವುದರಲ್ಲಿ ಇವರದು ಎತ್ತಿದ ಕೈ. ಇವರು ನುಡಿಸುವ ಹಾರ್ಮೋನಿಯಂ ವಾದನ ಕೇಳವುದೇ ಒಂದು ಅಪೂರ್ವ ಅನುಭವ. ದೇಶದ ಪ್ರತಿಷ್ಠಿತ ಸಂಗೀತಗಾರರಿಗೆ ಹಾರ್ಮೋನಿಯಂ ಸಾಥಿನೀಡುವ ನನ್ನೆಬಾಬು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಬೀದರ ಜಿಲ್ಲೆಯನ್ನು ಪ್ರತಿನಿಧಿಸಿದ್ದರು. ಬೀದರ ಪಟ್ಟಣದ 'ಸಂಗೀತ ಕಲಾ ಮಂಡಳದ' ಸರ್ವತೋಮುಖ ಬೆಳವಣಿಗೆಯಲ್ಲಿ ಇವರ ಪರಿಶ್ರಮ ಗಮನಾರ್ಹವಾಗಿದೆ. ಬೀದರ ಜಿಲ್ಲೆಯಲ್ಲಿ ಮುಕ್ತಿ ಹೊಂದಿದ 'ಹಾರ್ಮೋನಿಯಂ ಸರ್ದಾರ' ನನ್ನೇಬಾಬು ಕುವರ ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ. ಅಂಥವರಲ್ಲಿ ಅವರ ಮಗಳು ಉತ್ತಮ ಹಾಡುಗಾರ್ತಿಯಾಗಿದ್ದಾರೆ.

ಫತ್ತೇ ಅಹಮದ: ಹಳೆಯ ತಲೆಮಾರಿನ ಸಂಗೀತಗಾರರಲ್ಲಿ ಒಬ್ಬರು. ಇವರು ಬೀದರ ಜಿಲ್ಲೆಯ ಸಂಗೀತ ಬೆಳವಣಿಗೆಯಲ್ಲಿ ಸಕ್ರೀಯ ಪಾತ್ರ ವಹಿಸಿದವರು. ಮೂಲತಃ ಭಾಲ್ಕಿ ತಾಲ್ಲೂಕಿನ ಗಡಿಭಾಗವಾದ ಕಮಲನಗರದವರು. ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದಲ್ಲಿ ಸಂಗೀತದ ಮುಖಾಂತರ ಭಾವೈಕ್ಯತೆಯನ್ನು ಸಾಧಿಸಿದ ಅಪರೂಪದ ಕಲಾವಿದರು.

ಮುನ್ನಿ ಗವಾಯಿ: ಸಂಗೀತ ಪರಂಪರೆಯ ಅಭಿವೃದ್ಧಿಗೆ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದವರು. ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡದವರು. ಕೆಲವು ಜನ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡಿ ಸಂಗೀತವನ್ನು ಜನರ ಸಮೀಪಕ್ಕೆ ತಂದವರು ಅವರು.

ಚೆನ್ನಯ್ಯ ಸ್ವಾಮಿ ಮಂಠಾಳ: ಗ್ರಾಮೀಣ ಪ್ರದೇಶದಲ್ಲಿ ಶಾಸ್ತ್ರೀಯ ಸಂಗೀತವನ್ನು ಜನಪ್ರಿಯ ಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದಾರೆ. ಬಸವಕಲ್ಯಾಣ ತಾಲ್ಲೂಕಿನ ಮಂಠಾಳದವರು. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನಾಟಕ ಕಲಿಸಿ, ಸಂಗೀತ ನಿರ್ದೇಶನ ಮಾಡಿ ಕೆಲವು ಜನ ಆಸಕ್ತರಿಗೆ ಸಂಗೀತ ವಿದ್ಯೆ ನೀಡಿ ಸಂಗೀತ ಕಲೆ ಜಿಲ್ಲೆಯಲ್ಲಿ ಶಾಶ್ವತವಾಗಿ ನೆಲೆಯೂರಲು ಪರಿಶ್ರಮ ಪಟ್ಟಿದ್ದಾರೆ. ಚೆನ್ನಬಸಯ್ಯ ಸ್ವಾಮಿಯವರು ವಝೇ ಬುವಾ ಅವರ ಶಿಷ್ಯರೆಂದು ಪ್ರತೀತ, ಪ್ರತಾಪೂರದ ಬಸವಣ್ಣಪ್ಪ ಶೀಲವಂತ ಚೆನ್ನಬಸಯ್ಯ ಸ್ವಾಮಿ ಮಂಠಾಳ ಅವರ ಶಿಷ್ಯರಲ್ಲೊಬ್ಬರಾಗಿದ್ದಾರೆ.

ಸಿದ್ರಾಮಯ್ಯ ಸ್ವಾಮಿ ದುಬುಲಗುಂಡಿ: ಜಿಲ್ಲೆಯ ಹಳೆಯ ತಲೆಮಾರಿನ ಸಂಗೀತಗಾರರಲ್ಲೊಬ್ಬರು. ಉತ್ತಮ ಗಾಯಕರಾಗಿದ್ದಾರೆ. ಶರಣರ ತತ್ವ ಸಾಹಿತ್ಯ ಹಾಗೂ ಅನುಭವ ಪದಗಳನ್ನು ಮನದುಂಬುವಂತೆ ಹಾಡುವಲ್ಲಿ ಸಿದ್ರಾಮಯ್ಯ ಸ್ವಾಮಿಯವರದು ಎತ್ತಿದ ಕೈ. ಸಿದ್ರಾಮಯ್ಯನವರು ಹುಮನಾಬಾದ ತಾಲ್ಲೂಕಿನ ದುಬುಲಗುಂಡಿಯವರು.

ಗುರುಪಾದಯ್ಯ ಶಂಕರಗುಡಿ: ಬೀದರ ಜಿಲ್ಲೆಯ ಹಿರಿಯ ತಲೆಮಾರಿನ ಸಂಗೀತ ಕಲಾವಿದರಲ್ಲಿ ಅವರು ಮೊದಲಿಗರು. ಬಸವಕಲ್ಯಾಣದ ಶಂಕರಗುಡಿ ದೇವಾಲಯದ ಪ್ರಮುಖರು. ಗುರುಪಾದಯ್ಯನವರು ಪಿಟಿಲು ವಾದಕರು. ಬಹುಶಃ ಬೀದರ ಜಿಲ್ಲೆಯ ಪಿಟಿಲು ವಾದನದ ಪ್ರಥಮ ಕಲಾವಿದರು ಇವರೇ ಎಂಬುದು ಪ್ರತೀತಿ.

ಭೀಮಣಪ್ಪ ಪಾಂಚಾಳ: ರಂಗಭೂಮಿಯ ಸಂಗೀತ ನಿರ್ದೇಶನದಲ್ಲಿ ಹೆಸರು ಪಡೆದಿದ್ದಾರೆ. ಹುಮನಾಬಾದ ತಾಲ್ಲೂಕಿನ ಘಾಟಬೋರೋಳ ಗ್ರಾಮದವರು. ಇವರೊಬ್ಬ ಉತ್ತಮ ಗಾಯಕರು ಹಾಗೂ ಅತ್ಯುತ್ತಮ ಹಾರ್ಮೋನಿಯಂ ವಾದಕರಾಗಿದ್ದಾರೆ. ಜಿಲ್ಲೆಯ ಅನೇಕ ಕಡೆಗಳಲ್ಲಿ ಅವರು ಸಂಗೀತ ಕಾರ್ಯಕ್ರಮ ನೀಡಿ ಸಂಗೀತ ರಸಿಕರಿಗೆ ಚಿರಪರಿಚಿತರಾಗಿದ್ದಾರೆ.

ಕೇಶವರಾವ ವಾಘಮಾರೆ: ಬೀದರ ಜಿಲ್ಲೆಯ ಹಿರಿಯ ತಬಲ ವಾದಕರ ಸಾಲಿನಲ್ಲಿ ಅಗ್ರಗಣ್ಯರು. ಹುಟ್ಟಿನೊಂದಿಗೆ ತಬಲ ವಿದ್ಯೆಯನ್ನು ಬೆಳೆಸಿಕೊಂಡು ಬಂದಿರುವ ಇವರು ತಬಲ ವಾದನದಲ್ಲಿ ಪ್ರಭುತ್ವವನ್ನು ಪಡೆದ ಹೈದ್ರಾಬಾದ ಕರ್ನಾಟಕದ ಕೆಲವೇ ಜನ ತಬಲ ವಾದಕರಲ್ಲೊಬ್ಬರಾಗಿದ್ದಾರೆ. ಮೂಲತಃ ಘಾಟಬೋರೋಳ ಗ್ರಾಮದವರು. ಈಗ ಹುಮನಾಬಾದದಲ್ಲಿ ಖಾಯಂ ಆಗಿ ನೆಲೆನಿಂತಿದ್ದಾರೆ.

ಹುಮನಾಬಾದದಲ್ಲಿ ಸ್ವತಂತ್ರವಾಗಿ ಸಂಗೀತ ವಿದ್ಯಾಲಯ ಸ್ಥಾಪಿಸಿ ತನ್ಮೂಲಕ ಅನೇಕ ಆಸಕ್ತರಿಗೆ ತಬಲವಾದನ ಶಿಕ್ಷಣವನ್ನು ಬೋಧಿಸುತ್ತ ಅನೇಕ ಜನ ಶಿಷ್ಯರನ್ನು ತಯಾರಿಸಿರುವ ಕೇಶವರಾವ ಬೀದರ ಜಿಲ್ಲೆಯ ಸಂಗೀತ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ಮುಂಬೈಯ ಗಾಂಧರ್ವ ಮಹಾ ಮಂಡಳ ಪರೀಕ್ಷಾ ಕಾರ್ಯವನ್ನು ತಮ್ಮ ಶಾಲೆಯಲ್ಲಿ ನಡೆಸುತ್ತ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಹೈದ್ರಾಬಾದ

ಕರ್ನಾಟಕದ ಅನೇಕ ಸಂಗೀತ ಸಮ್ಮೇಳನಗಳಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿದ್ದಾರೆ. ಮಾಣಿಕನಗರದ ಶ್ರೀ ಮಾಣಿಕ ಸಂಸ್ಥಾನದಲ್ಲಿ ಜರುಗುವ 'ಸಂಗೀತ ದರ್ಬಾರ'ದಲ್ಲಿ ಇವರ ಪಾತ್ರ ಅತ್ಯಂತ ಗಮನಾರ್ಹವಾಗಿದೆ. ಕಳೆದ ಅನೇಕ ವರ್ಷಗಳಿಂದ 'ಮಾಣಿಕ ಪ್ರಭು ಸಂಗೀತ ದರ್ಬಾರ'ದಲ್ಲಿ ತಬಲ ಸೇವೆಮಾಡುತ್ತ, ನಾಡಿನ ಪ್ರತಿಷ್ಠಿತ ಸಂಗೀತಗಾರರನೇಕರಿಗೆ ತಬಲ ಸಾಥ್ ನೀಡಿದ್ದಾರೆ.

ಕೇಶವರಾವ ಸೂರ್ಯವಂಶಿ: ಬೀದರ ಜಿಲ್ಲೆಯ ಜನಪ್ರಿಯ ತಬಲಾವಾದಕರಲ್ಲೊಬ್ಬರಾಗಿದ್ದಾರೆ. ಮೂಲತಃ ಭಾಲ್ಕಿ ತಾಲ್ಲೂಕಿನ ಭಾಟಸಾಂಗ್ವಿ ಗ್ರಾಮದವರು. ಈಗ ಭಾಲ್ಕಿಯಲ್ಲಿ ಖಾಯಂ ಆಗಿ ನೆಲೆನಿಂತಿದ್ದಾರೆ. ಲಾತುರದ ಶಾಂತರಾಮ ಗುರೂಜಿಯವರ ಶಿಷ್ಯರಾದ ಇವರು ತಬಲ ವಾದನದಲ್ಲಿ ವಿಶೇಷ ಪರಿಣತಿಯನ್ನು ಪಡೆದಿದ್ದಾರೆ. ಬೀದರ ಜಿಲ್ಲೆಯ ಎಲ್ಲ ಸಂಗೀತ ಸಮಾರಂಭ ಸಮ್ಮೇಳನಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತ ಸಂಗೀತ ಕ್ಷೇತ್ರವನ್ನು ಬೆಳೆಗಿಸುವತ್ತ ದಾಪುಗಾಲಿಡುತ್ತಿರುವ ಇವರು ಒಬ್ಬ ಸಂಗೀತ ಕಲಾಧುರಂಧರ ಎಂದೇ ಹೇಳಬೇಕು. ಭಾಲ್ಕಿಯ ಶ್ರೀ ದೇವಿನಗರದ 'ದಸರಾ ಸಂಗೀತ ದರ್ಬಾರ' ಹಾಗೂ ಕುಂಟೆ ಗಾಂವದ ಶ್ರೀ ಹನುಮಾನ ಸಂಗೀತ ಸಭಾ ಕಾರ್ಯಕ್ರಮದ ಬೆಳವಣಿಗೆಯಲ್ಲಿ ಇವರ ಪಾತ್ರ ಗಮನಾರ್ಹವಾಗಿದೆ.

ಶೇಖ ಹನ್ನೂಮಿಯಾ: ಬೀದರ ಜಿಲ್ಲೆಯ ಒಬ್ಬ ಪ್ರಬುದ್ಧ ಗಾಯಕರು. ಭಾಲ್ಕಿ ತಾಲ್ಲೂಕಿನ ಕೋರೂರು ಗ್ರಾಮದವರು. ಈಗ ಭಾಲ್ಕಿಯಲ್ಲಿ ಖಾಯಂ ನೆಲೆನಿಂತಿದ್ದಾರೆ. ಖಯಾಲ, ಗಜಲ್, ಠುಮರಿ, ಮರಾಠಿ ನಾಟ್ಯಗೀತ, ಮರಾಠಿ ಅಭಂಗ ಮುಂತಾದ ಹಾಡುಗಾರಿಕೆಯಲ್ಲಿ ಇವರಿಗೆ ವಿಶೇಷ ಪರಿಣಿತಿ ಇದೆ. ಭಾಲ್ಕಿಯಲ್ಲಿ 'ಶಾರದಾ ಸಂಗೀತ ವಿದ್ಯಾಲಯ' ಸ್ಥಾಪಿಸಿ ಅನೇಕ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡಿದ್ದಾರೆ. ಗಂಧರ್ವ ಮಹಾ ಮಂಡಳ ಸಂಗೀತ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಭಾಲ್ಕಿಯ ದೇವಿನಗರದ ಯಶಸ್ಸಿಗೆ ಇವರ ಪಾಲು ಹಿರಿದಾಗಿದೆ.

ಪರಭಣಿಯ ಉಸ್ತಾದ ಗುಲಾಮ ರಸೂಲ ಅವರ ಶಿಷ್ಯರಾದ ಶೇಖ ಹನ್ನೂಮಿಯಾ ಅವರು ಜಿಲ್ಲೆಯ ಹಾಗೂ ನೆರೆಯ ಮಹಾರಾಷ್ಟ್ರದ ಅನೇಕ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ಹೆಸರು ಪಡೆದಿದ್ದಾರೆ. ಅವರ ಶಿಷ್ಯರಲ್ಲಿ ಈಶ್ವರಪ್ಪ ಪಂಚಾಳ ಮೇಳಕುಂದಾ ವಿಶೇಷ ಉಲ್ಲೇಖನೀಯರಾಗಿದ್ದಾರೆ.

ಕಾಶಿನಾಥ ಇಗವೆ: ತಬಲಾ ಕಲಾವಿದರಲ್ಲಿ ಪ್ರಮುಖರಾಗಿದ್ದಾರೆ. ಭಾಲ್ಕಿ ನಿವಾಸಿ. ಇವರು ಜಿಲ್ಲೆಯ ಅನೇಕ ಕಡೆಗಳಲ್ಲಿ ಮಹಾರಾಷ್ಟ್ರ ಹಾಗೂ ಆಂಧ್ರ ಭಾಗಗಳಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿರುವ ಇವರು ಸಹೃದಯಿ ತಬಲಾ ಕಲಾವಿದರು. ಇವರೊಬ್ಬ ಒಳ್ಳೆಯ ಹಾಡುಗಾರ ಹೌದು. ಇವರು ಹಾಡುವ ಮರಾಠಿ ಅಭಂಗ, ಹಾಗೂ ಮರಾಠಿ ನಾಟ್ಯಗೀತ ಇನ್ನೂ ಕೇಳಬೇಕೆನಿಸುತ್ತದೆ.

ರಾಮರಾವ ರೋಳೆ: ಒಬ್ಬ ಉತ್ತಮ ಹಾಡುಗಾರರು. ಭಾಲ್ಕಿ ತಾಲ್ಲೂಕಿನ ಮೇಹಕರದವರಾದ ರಾಮರಾವ ರೋಳೆಯವರು ಬಾಹ್ಯ ಜಗತ್ತಿನ ದೃಷ್ಟಿಯನ್ನು ಕಳೆದುಕೊಂಡರೂ ಅಂತರಂಗ ದೃಷ್ಟಿಯನ್ನು ಸಂಪೂರ್ಣವಾಗಿ ಸಂಗೀತ ಸರಸ್ವತಿಗೆ ಅರ್ಪಿಸಿದವರು ಹಾಗೂ ಮರಾಠಿ ಅಭಂಗ ಹಾಡುಗಾರಿಕೆಯಲ್ಲಿ ಇವರಿಗೆ ವಿಶೇಷ ಪರಿಣತಿ ಇದೆ.

ಮಾಧವರಾವ ಲಂಬೆ: ಬಹುಶ್ರುತ ಸಂಗೀತಗಾರರಲ್ಲೊಬ್ಬರು. ಮೇಹಕರ ಗ್ರಾಮದವರು. ಇವರು ಮೃದಂಗ ಹಾಗೂ ತಬಲಾ ವಾದನವನ್ನು ಪ್ರಬುದ್ಧ ಪೂರ್ಣವಾಗಿ ನುಡಿಸಬಲ್ಲವುರಾಗಿದ್ದಾರೆ. ಪಂಢರಪೂರದ ವಿಠಲಬುವಾ ಹಂಡೆಯವರ ಶಿಷ್ಯರಾದ ಲಂಬೆಯವರು ಬೀದರ ಜಿಲ್ಲೆಯ ಅನೇಕ ಸಂಗೀತ ಸಮಾರಂಭಗಳಲ್ಲಿ ಭಾಗವಹಿಸಿ ಜನಪ್ರಿಯತೆಗಳಿಸಿದ್ದಾರೆ.

ಬಳಿರಾಮ ಮಾಸ್ತರ ಪಂಚಾಳ: ಮೇಹಕರದವರಾದ ಇವರು ಉತ್ತಮ ಹಾಡುಗಾರರು ಹಾಗೂ ಹಾರ್ಮೋನಿಯಂ ವಾದಕರು. ಜಿಲ್ಲೆಯ ಅನೇಕ ಕಡೆಗಳಲ್ಲಿ ಸಂಗೀತ ಕಚೇರಿ ನೀಡಿ, ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿ ಜಿಲ್ಲೆಯ ಬೆಳವಣಿಗೆಗೆ ಸಹಾಯ ಸಹಕಾರ ನೀಡುತ್ತಿದ್ದಾರೆ.

ಪ್ರಭುಲಿಂಗಸ್ವಾಮಿ ಹಾಗೂ ಚನ್ನಬಸಯ್ಯ ಸ್ವಾಮಿ: ಮೇಹಕರ ಗ್ರಾಮದವರು. ಇವರೀರ್ವರು ಸಹೋದರರು. ಈ ಇಬ್ಬರೂ ಸಹೋದರರು ಹುಟ್ಟಿನೊಂದಿಗೆ ತಬಲಾ ಕಲೆಯನ್ನು ಪಡೆದುಕೊಂಡು ಬಂದವರೆಂದು ಹೇಳಬಹುದು. ಇವರೀರ್ವರ ತಬಲಾ ಕಲೆಯನ್ನು ನೋಡಿ ನಲಿಯುವುದೇ ಒಂದು ಆನಂದ. ಬೀದರ ಜಿಲ್ಲೆಯ ಪ್ರತಿಷ್ಟಿತ ತಬಲಾ ಕಲಾಬಂಧುಗಳಾದ ಈ ಈರ್ವರು ಕಲಾವಿದರು ಸದ್ಯ ಈಗ ಮಹಾರಾಷ್ಟ್ರದಲ್ಲಿ ಸಂಗೀತ ಸೇವಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಭೀಮರಾವ ಸಂಗಮಕರ: ಹೆಸರಾಂತ ತಬಲಾ ವಾದಕರಲ್ಲೊಬ್ಬರು. ಗ್ರಾಮ ಲೆಕ್ಕಿಗ. ಜಿಲ್ಲೆಯ ಸಂಗೀತ ಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ದೇಶದ ಪ್ರತಿಷ್ಠಿತ ಸಂಗೀತಗಾರರನೇಕರಿಗೆ ತಬಲಾ ಸಾಥ್ ನೀಡಿ ಹೆಸರಾಗಿರುವ ಭೀಮರಾವ ಅವರು ಅನೇಕ ಜನ ಆಸಕ್ತರಿಗೆ ತಬಲಾ ವಿದ್ಯೆ ನೀಡಿ ಶಿಷ್ಯ ಸಂಪತ್ತನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಬಾಬು ವಾಘಮಾರೆ: ತಬಲಾ ವಾದಕರಲ್ಲಿ ಒಬ್ಬರು. ಅನೇಕ ಪ್ರಸಿದ್ಧ ಸಂಗೀತಗಾರರಿಗೆ ತಬಲಾ ಸಾಥ್ ನೀಡಿದ್ದಾರೆ.

ಬಸವಣ್ಣಪ್ಪ ಸಂಗಮ: ಸಂಗಮ ಗ್ರಾಮ ನಿವಾಸಿ. ಇವರು ಬೀದರ ಜಿಲ್ಲೆಯ ಹಿರಿಯ ತಲೆಮಾರಿನ ಸಂಗೀತಗಾರರಲ್ಲಿ ಆಗ್ರಗಣ್ಯರಾಗಿದ್ದಾರೆ. ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿ ಕೆಲವು ಜನ ಆಸಕ್ತರಿಗೆ ಸಂಗೀತ ವಿದ್ಯೆ ನೀಡಿ ಶಿಷ್ಯರನ್ನು ತಯಾರಿಸಿದ್ದಾರೆ.

ಜನಾರ್ಧನ ವಾಘಮಾರೆ: ಯುವ ತಬಲಾ ವಾದಕರಲ್ಲಿ ಒಬ್ಬರಾಗಿದ್ದಾರೆ. ಕೇಶವರಾವ ವಾಘಮಾರೆಯವರ ಪುತ್ರರು ಉತ್ತಮ ರೀತಿಯಲ್ಲಿ ತಬಲಾ ನುಡಿಸುತ್ತಾರೆ.

ವೈಕುಂಠ ದತ್ತ ಮಹಾರಾಜ: ಯುವ ಸಂಗೀತ ಪೀಳಿಗೆಯ ಮುಂಚೂಣಿಯಲ್ಲಿದ್ದಾರೆ. ತಾದಲಾಪೂರದ ಶ್ರೀ ದತ್ತ ಮಂದಿರದವರು. ತಮ್ಮ ದತ್ತಮಂದಿರದಲ್ಲಿ ಪ್ರತಿ ವರ್ಷ 'ಸಂಗೀತ

ದರ್ಬಾರ' ನೆರವೇರೆಸುತ್ತ ನಾಡಿನ ಅನೇಕ ಸಂಗೀತಗಾರರನ್ನು ಆಮಂತ್ರಿಸುತ್ತ ಸಂಗೀತ ಕಲೆಯ ಬೆಳವಣಿಗೆಗೆ ಸಹಕರಿಸುತ್ತಿರುವ ಇವರು ಉತ್ತಮ ಖಯಾಲ ಹಾಡುಗಾರರು. ಇವರು ಹಾಡುವ ಗಜಲ್, ಮರಾಠಿ ಅಭಂಗ ಹಾಗೂ ಹಿಂದಿ ಭಜನ ಮತ್ತೇ ಮತ್ತೇ ಕೇಳಬೇಕೆನಿಸುತ್ತದೆ.

ಸುರೇಖಾ ವೈಕುಂಠದತ್ತ: ಮಹಿಳಾ ಸಂಗೀತಗಾರ್ತಿಯರಲ್ಲಿ ಅಗ್ರಗಣ್ಯರಾಗಿದ್ದಾರೆ. ಇವರು ವೈಕುಂಠದತ್ತ ಮಹಾರಾಜರ ಪತ್ನಿ ಧಾರವಾಡ ಆಕಾಶವಾಣಿಯ ಶಾಸ್ತ್ರೀಯ ಹಾಡುಗಾರ್ತಿಯರಾದ ಇವರು ಜಿಲ್ಲೆಯ ಸಂಗೀತ ಬೆಳವಣಿಗೆಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ರಾಮುಲು ಗಾದಗೀಕರ: ಯುವ ಸಂಗೀತ ಪೀಳಿಗೆಯಲ್ಲಿ ಪ್ರಮುಖರಾಗಿದ್ದಾರೆ. ಬೀದರ ನಿವಾಸಿ. ಸಂಗೀತ ವಿದ್ವತ್ ಪದವಿ ಪಡೆದಿರುವ ಇವರು ಜಿಲ್ಲೆಯ ಅನೇಕ ಕಡೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಸುರೇಶ ಪೂಜಾರಿ: ಉತ್ತಮ ತಬಲಾ ಹಾಗೂ ಹಾರ್ಮೋನಿಯಂ ವಾದಕರಾಗಿದ್ದು, ಜಿಲ್ಲೆಯ ಸಂಗೀತ ಕ್ಷೇತ್ರದ ಬೆಳವಣಿಗೆಯಲ್ಲಿ ಸಕ್ರೀಯ ಪಾತ್ರ ನಿರ್ವಹಿಸಿದ್ದಾರೆ. ಬೀದರದ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಬೆರಳಚ್ಚುಗಾರ.

ರಾಜಕುಮಾರ ಮುಡಬಿ: ಜಿಲ್ಲೆಯ ಅತ್ಯಂತ ಕಿರಿಯ ತಬಲಾ ವಾದಕರಲ್ಲೊಬ್ಬರು. ಯುವ ಪ್ರತಿಭಾವಂತ ತಬಲಾ ವಾದಕರೆನಿಸಿದ್ದಾರೆ.

ಈಶ್ವರಪ್ಪ ಪಾಂಚಾಳ: ಯುವ ಸಂಗೀತಗಾರರಲ್ಲೊಬ್ಬರು. ಭಾಲ್ಕಿ ತಾಲ್ಲೂಕಿನ ಮೇಳಕುಂದಿಯವರು. ಭಾಲ್ಕಿಯ ಶೇಖ ಹನ್ನೂಮಿಯಾ ಅವರ ಶಿಷ್ಯರಾಗಿ ಸಂಗೀತದಲ್ಲಿ ವಿದ್ವತ್ ಪದವಿ ಪಡೆದಿದ್ದಾರೆ. ಇವರು ಸದ್ಯ ಬೀದರದ ಸಂಗೀತ ಶಾಲೆಯೊಂದರಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಉತ್ತಮ ಹಾಡುಗಾರರಾಗಿದ್ದಾರೆ.

ಅಮೀನಸಾಬ ವಠಾರ: ಹುಮನಾಬಾದ ಸರಕಾರಿ ಹೈಸ್ಕೂಲಿನಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡುತ್ತ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತ ಸಂಗೀತ ಕಲೆಯ ಬೆಳವಣಿಗೆಯನ್ನು ಪ್ರಮಾಣಿಕವಾಗಿ ಮಾಡುತ್ತಿದ್ದಾರೆ. ಅನೇಕ ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಆನಂದ ಪ್ರಭು ಮಹಾರಾಜ: ಬೀದರ ಜಿಲ್ಲೆಯಲ್ಲಿ ನಿರಂತರವಾಗಿ ನಡೆಯುವ ಸಂಗೀತ ಸಂಸ್ಥಾನಗಳಲ್ಲಿ ಮಾಣಿಕನಗರದ ಮಾಣಿಕಪ್ರಭು ಸಂಸ್ಥಾನ ತುಂಬ ಉಲ್ಲೇಖನೀಯವಾಗಿದೆ. ಬೀದರ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಸಂಗೀತ ದರ್ಬಾರ ಕಾರ್ಯಕ್ರಮಗಳನ್ನು ನಡೆಸುತ್ತ ಬಂದ ಕೀರ್ತಿ ಮಾಣಿಕಪ್ರಭು ಸಂಸ್ಥಾನಕ್ಕೆ ಸಲ್ಲುತ್ತದೆ. ದೇಶದ ಪ್ರತಿಷ್ಠಿತ ಸಂಗೀತಗಾರರು ಇಲ್ಲಿಗೆ ಬಂದು ಸಂಗೀತ ದರ್ಬಾರದಲ್ಲಿ ಸಂಗೀತ ಕಛೇರಿ ನೀಡಿದ್ದು ಈ ಸಂಸ್ಥಾನದ ಹೆಗ್ಗಳಿಕೆ ಎಂದು ಹೇಳಬೇಕು.

ಈ ಸಂಸ್ಥಾನದ ಪರಂಪರಾಗತ ಸಂಗೀತ ಪರಂಪರೆಯಲ್ಲಿ ಈಗಿನ ಮಠಾಧಿಪತಿಗಳಾದ ಆನಂದ ಪ್ರಭು ಮಹಾರಾಜ ಅವರ ಹೆಸರು ವಿಶೇಷ ಉಲ್ಲೇಖನೀಯವಾಗಿದೆ. ಜಿಲ್ಲೆಯ ಸಂಗೀತಗಾರರಲ್ಲಿ ಇವರ ಹೆಸರು ಪ್ರಮುಖವಾಗಿದೆ. ಉತ್ತಮ ಶರೀರ ಹಾಗೂ ಶಾರೀರ ಪಡೆದಿರುವ ಇವರು ಜಿಲ್ಲೆಯ ಸಂಗೀತ ಕಲೆ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದ್ದಾರೆ.

ಗದಿಗಯ್ಯ ಮಠಪತಿ: ಉತ್ತಮ ತಬಲಾವಾದಕರಲ್ಲಿ ಒಬ್ಬರಾಗಿದ್ದಾರೆ. ಹುಮನಾಬಾದ ತಾಲ್ಲೂಕಿನ ರಾಜೋಳ ಗ್ರಾಮದವರು. ಗುಲಬರ್ಗಾದ ಕೆ.ಎಸ್. ಹಡಪದ ಅವರ ಶಿಷ್ಯರಾದ ಇವರು ಗುಲಬರ್ಗಾ ಆಕಾಶವಾಣಿಯ ಮೂಲಕ ತಬಲಾವಾದನ ಕಲೆ ಪ್ರಸಾರ ಮಾಡುತ್ತಿದ್ದಾರೆ. ಇವರೀಗ ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬರಗಾದಲ್ಲಿ ಸರಕಾರಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯ ಅನೇಕ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಬಲಾ ವಾದನ ನುಡಿಸುತ್ತ ಯುವಕರಲ್ಲಿ ಸಂಗೀತ ಕಲೆಯ ಅಭಿರುಚಿ ಬೆಳೆಸುತ್ತಿದ್ದಾರೆ.

ಹನುಮಂತಪ್ಪ ಚಿದ್ರಿ: ಕೊಳಲು ವಾದಕ. ವೃತ್ತಿಯಿಂದ ಪೊಲೀಸ್ ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮದವರು. ಬೀದರ ಜಿಲ್ಲೆಯ ಏಕೈಕ ಕೊಳಲು ವಾದಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜಿಲ್ಲೆಯ ಒಳಹೊರಗೂ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿ ಹೆಸರು ಪಡೆದಿದ್ದಾರೆ. ಕೊಳಲಿನಲ್ಲಿ ಸುಶ್ರಾವ್ಯವಾಗಿ ಶಾಸ್ತ್ರೀಯ ಹಾಗೂ ಲಘು ಸಂಗೀತ ಕಛೇರಿ ನೀಡುವ ಇವರು ಸಂಗೀತ ಕಲೆ ಹಾಗೂ ಕಲಾವಿದರ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ.

ವಿಜಯಲಕ್ಷ್ಮಿ ಕುಲಕರ್ಣಿ: ಗುಲಬರ್ಗಾ ಆಕಾಶವಾಣಿ ಸುಗಮ ಸಂಗೀತ ಕಲಾವಿದೆ. ಬೀದರದ ಇತಿಹಾಸ ಪ್ರಾಧ್ಯಾಪಕ ಎಲ್.ಆರ್. ಕುಲಕರ್ಣಿಯವರ ಮಗಳು. ಉತ್ತಮ ಕಂಠದ ಹಾಡುಗಾರ್ತಿ ಎಂದು ಹೆಸರು ಪಡೆದಿದ್ದಾರೆ.

ಪ್ರಭುಲಿಂಗ ಸ್ವಾಮಿ ಹುಮನಾಬಾದ: ಯುವ ಸಂಗೀತಗಾರರಲ್ಲೊಬ್ಬರು. ಬೀದರ ಜಿಲ್ಲೆಯ ಅನೇಕ ಕಡೆ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಸಿದ್ಧಯ್ಯ ಮಠ: ಗೋರಟಾ ಗ್ರಾಮದವರು. ಉತ್ತಮ ಹಾರ್ಮೋನಿಯಂ ವಾದಕರು ಹಾಗೂ ಒಳ್ಳೆಯ ಹಾಡುಗಾರರಾಗಿದ್ದಾರೆ. ವಿರೂಪಾಕ್ಷಯ್ಯ ಸ್ವಾಮಿ ಮೇಲಗಲ್ಲಿ ಅವರ ಶಿಷ್ಯರಾದ ಸಿದ್ಧಯ್ಯ ಮಠ ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರೆ.

(ಎಸ್‌ಎಂಜಿ)

ಸಂಗೀತ ಕಲಾವಿದರು: (ರಾಯಚೂರು ಜಿಲ್ಲೆ) ಪ್ರಥಮವಾಗಿ ರಾಯಚೂರಿನ ಜ್ಞಾನ ದೀವಿಗೆಯನ್ನು ಹೆಚ್ಚಿಸಿದ ಸಂಗೀತಾಚಾರ್ಯ ಪಂಡಿತ ತಾರಾನಾಥರನ್ನೇ ನೆನಪಿಸಿಕೊಳ್ಳಬೇಕು. ಹತ್ತುಹಲವು ತೆರನಾದ ಜ್ಞಾನವಾಹಿನಿಗಳ ಮಧ್ಯದಲ್ಲಿರುವ ಸಂಗೀತ ವಾಹಿನಿ ಸಶಕ್ತವಾದುದು. ಆಯುರ್ವೇದ ಪ್ರಾಜ್ಞರಾದ ನಾ. ಕಸ್ತೂರಿಯವರು ತಾರಾನಾಥರ ಸಂಗೀತ ಜ್ಞಾನದ ಬಗ್ಗೆ

ಬರೆಯುತ್ತಾ-'ಉಲ್ಬಣವಾದ ರೋಗವನ್ನು ಸಂಗೀತದ ತಾಳ ಲಯಗಳನ್ನು ಆಲಿಸುವ ಮುಖಾಂತರ ಚಿಕಿತ್ಸೆನೀಡಿ ರೋಗ ಮುಕ್ತರಾಗಿಸಿದ ಘಟನೆ ಸತ್ಯ ಘಟನೆ' ಎಂದು ಬರೆದಿದ್ದಾರೆ.

ಪಂ. ತಾರಾನಾಥರು: ಮಂಗಳೂರಿನಲ್ಲಿ ಜನಿಸಿ ಹೈದ್ರಾಬಾದಿನಲ್ಲಿ ಶಿಕ್ಷಣ ಪಡೆದು, ರಾಯಚೂರಿನಲ್ಲಿ ರಾಷ್ಟ್ರೀಯ ವಿದ್ಯಾಸಂಸ್ಥೆಯನ್ನು ಹುಟ್ಟುಹಾಕಿ, ಸಮೀಪವರ್ತಿ ತುಂಗಭದ್ರೆಯ ದಡದಲ್ಲಿ 'ಪ್ರೇಮಾಯಾತನ' ಸ್ಥಾಪಿಸಿದವರು. ಇವರ ಸಂಗೀತ ಗುರುಗಳು ಇವರ ತಂದೆಯಾದ ಶ್ರೀ ರಂಗರಾಯರು, ಜೀವನದುದ್ದಕ್ಕೂ ಸಾಧನೆಯನ್ನು ಮರೆಯದ ಮಹಾನುಭಾವರು.

ಪಂ. ಮಾಣಿಕರಾವ್ ರಾಯಚೂರಕರ್: ಸಂಗೀತಾಚಾರ್ಯರಾದ ಇವರು ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದವರು. ಕರ್ನಾಟಕ ರಾಜ್ಯ ಸಂಗೀತ ಅಕಾಡೆಮಿಯ ಸದಸ್ಯರು. ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತರು ವಿ.ಕೃ. ಗೋಕಾಕರಿಂದ ಸನ್ಮಾನವನ್ನು ಪಡೆದವರು. 'ಓರಂಗಲ್ ಬಾರ್ ಅಸೋಸಿಯೇಶನ್' ನಿಂದ 'ಪಂಡಿತ' ಎಂಬ ಬಿರುದನ್ನು ಪಡೆದುಕೊಂಡವರು. ಪಂಢರಪುರದ ಪಂ. ಜಗನ್ನಾಥ ಬುವಾ ಇವರ ಗುರುಗಳು ರಾಯಚೂರಿನಲ್ಲಿ ವ್ಯಾಪಾರಸ್ಥರಾಗಿದ್ದ ಶ್ರೀ ಯಲ್ಲಪ್ಪನವರ ಸುಪುತ್ರರಿವರು. ಇವರು ಪಂ. ತಾರಾನಾಥರನ್ನೂ ಗುರುಗಳೆಂದು ಭಾವಿಸಿದ್ದರು.

ಪಂ. ಸಿದ್ಧರಾಮ ಜಂಬಲದಿನ್ನಿ: ಮೂಲತಃ ರಾಯಚೂರಿನವರು. ತಮ್ಮ ಕೊನೆಯ ದಿನಗಳನ್ನು ಗುಲಬರ್ಗಾದಲ್ಲಿ ಕಳೆದರು. ಗುಲಬರ್ಗಾದ ಶ್ರೀ ಶರಣಬಸಪ್ಪ ಅಪ್ಪ ಅವರ ಪ್ರೀತ್ಯಾದರಗಳಿಗೆ ಪಾತ್ರರಾದವರು. ಇವರ ವಿಶೇಷತೆ ಎಂದರೆ ಹಳೆಗನ್ನಡದ ವೃತ್ತಗಳನ್ನು ಲೀಲಾಜಾಲವಾಗಿ ಹಾಡುತ್ತಿದ್ದರು. ಸಾರ್ವಜನಿಕರಿಗೆ ರಸದೌತಣ ನೀಡುವ ರಂಗಮಂದಿರವು 'ಜಂಬಲದಿನ್ನಿ ರಂಗ ಮಂದಿರ' ಎಂದು ನಾಮಕರಣಗೊಂಡಿರುವುದು ಇವರ ಹಿರಿಮೆಯನ್ನು ಸೂಚಿಸುತ್ತದೆ. ಪ್ರಸ್ತುತ ಕರ್ನಾಟಕ ರಾಜ್ಯ ಸಂಗೀತ ಮತ್ತು ನೃತ್ಯಕಲಾ ಅಕಾಡೆಮಿಯ ಅಧ್ಯಕ್ಷರಾದ ಪಂ. ನರಸಿಂಹಲು ವಡವಾಟಿಯವರು ಇವರ ಶಿಷ್ಯರು. ಶ್ರೀಯುತರು ವಚನ ಗಾಯನದ ಪ್ರಕಾರವನ್ನು ಸಾಕಷ್ಟು ಬೆಳೆಸಿದರು.

ಪಂ. ಎಂ. ಲಕ್ಷ್ಮಣಗೌಡ ಗವಾಯಿ: ಈ ಮಹನೀಯರು ಬಿಜಾಪುರ ಜಿಲ್ಲೆಯ 'ಮಣ್ಣೇರಿ'ಯಿಂದ ರಾಯಚೂರಿಗೆ ಬಂದ ನೆಲೆಸಿದವರು. ಇಲ್ಲಿ 'ಕಲಾನಿಕೇತನ' ಎಂಬ ಸಂಸ್ಥೆ ಸ್ಥಾಪಿಸಿ ಅರ್ಧ ಶತಮಾನದಷ್ಟು ಕಾಲ ಸಂಗೀತಕ್ಕಾಗಿ ದುಡಿದವರು. ಅವರು ದಿವಂಗತರಾದ ನಂತರ 'ಕಲಾನಿಕೇತನ' ಸಂಸ್ಥೆಯನ್ನು ಉಳಿಸಿಕೊಂಡು ಪ್ರತಿವರ್ಷವೂ ಅವರ ಪುಣ್ಯಸ್ಮರಣೆ ಮಾಡುತ್ತಿರುವವರು ಅವರ ಶಿಷ್ಯರನೇಕರು. ಕೆಲವು ಕಾಲ ಗದ್ವಾಲ ಸಂಸ್ಥಾನದ ಆಶ್ರಯ ಪಡೆದು 'ಆಸ್ಥಾನ ಕವಿ' ಎಂದೆನಿಸಿಕೊಂಡವರು. ಕೆ. ಕರಿಯಪ್ಪ ಮಾಸ್ತರರು ಇವರ ಶಿಷ್ಯರು. ಇವರಿಗೆ 'ಕರ್ನಾಟಕ ಕಲಾಶ್ರೀ' ಎಂಬ ಬಿರುದು ಇದ್ದಿತು. ಇವರ ಸಂಗೀತ ವಿದ್ಯಾಲಯವನ್ನು ಇವರ ಅಳಿಯಂದಿರಾದ ಅಮರಪ್ಪ ಗೌಡರು ಇಂದಿಗೂ ನಡೆಸಿಕೊಂಡು ಬಂದಿದ್ದಾರೆ. ಕಲಾನಿಕೇತನದ ಅಡಿಯಲ್ಲಿ ಬೆಳಗಿದ ಶ್ರೀ ಪವನಕುಮಾರ, ಶ್ರೀಮತಿ ಶಶಿಕಲಾ ತೋಟಗಿ, ಕುಮಾರಿ ಅರ್ಚನಾ ಮುಂತಾದವರು ಸಂಸ್ಥೆಯ ಬೆಳವಣಿಗೆಗಾಗಿ ಶ್ರಮಿಸುತ್ತಲಿದ್ದಾರೆ.

ನರಸಿಂಹಲು ವಡವಾಟಿ: ರಾಯಚೂರಿನ ಅಹೋಭಾಗ್ಯ ಪಂಡಿತ ನರಸಿಂಹಲು ವಡವಾಟಿ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯವು ಗೌರವ 'ಡಾಕ್ಟರೇಟ್' ನೀಡಿ ಗೌರವಿಸಿದೆ. ಇವರು ಕರ್ನಾಟಕ ರಾಜ್ಯ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ. ಪಂ. ಸಿದ್ಧರಾಮ ಜಂಬಲದಿನ್ನಿಯವರ ಪ್ರೀತಿಯ ಶಿಷ್ಯರು. ಗುರುಗಳ ನಿಧನದ ನಂತರ ಪ್ರತಿ ವರ್ಷವೂ ಸ್ಮರಣೋತ್ಸವವನ್ನು ನೆರವೇರಿಸುತ್ತಿದ್ದಾರೆ. ಶಹನಾಯಿವಾದನ (ಕ್ಲಾರಿಯೋನಟ್) ಇವರಿಗೆ ಅಚ್ಚುಮೆಚ್ಚು. ಇವರು ಅಂತಾರಾಷ್ಟ್ರೀಯ ಖ್ಯಾತ ಕಲಾವಿದರು. ಕುಮಾರ ವೆಂಕಟೇಶ ರಾಯ ವಡವಾಟಿ ಮತ್ತು ಸುಪುತ್ರಿ ಶಾರದಾ ವಡವಾಟಿ ಅವರು ಸಂಗೀತ ಸಾಧನೆಯಲ್ಲಿ ತಂದೆಗೆ ತಕ್ಕ ಮಕ್ಕಳಾಗಿದ್ದಾರೆ.

ಕೆ. ಕರಿಯಪ್ಪ ಮಾಸ್ತರ: ಇವರು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮುನ್ನೂರುವಾಡಿಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದಾರೆ. ತಮ್ಮ ಜೀವನದುದ್ದಕ್ಕೂ ಸಂಗೀತ ಸಾಧನೆ ಮಾಡಿದ್ದಾರೆ. ನೂರರ ಸಂಖ್ಯೆಯಲ್ಲಿ ರಂಗ ನಾಟಕಗಳಿಗೆ ಸಂಗೀತದ ಹಿನ್ನೆಲೆಯನ್ನು ಒದಗಿಸಿದ್ದಾರೆ. ಕರ್ನಾಟಕ ರಾಜ್ಯ ಸಂಗೀತ ಮತ್ತು ನೃತ್ಯ ಅಕಾಡೆಮಿಗೆ ಸದಸ್ಯರು ಆಗಿದ್ದಾರೆ. ಪಂ. ಎಂ. ಲಕ್ಷ್ಮಣಗೌಡ ಗವಾಯಿಗಳ ಶಿಷ್ಯರು ಪ್ರತಿವರ್ಷವೂ ಗುರುಗಳ ಸ್ಮರಣೋತ್ಸವವನ್ನು ನಡೆಸಿಕೊಡುತ್ತಾರೆ. ಇಂದಿನ 'ಕಲಾನಿಕೇತನ' ಸಂಗೀತ ಸಂಸ್ಥೆಗೆ ಮುಖ್ಯವಾಗಿದ್ದಾರೆ. ಇವರ ಸುಪುತ್ರಿ ಕುಮಾರಿ ಕವಿತಾ ಸಂಗೀತ ಸಾಧನೆಯಲ್ಲಿ ತಂದೆಯವರ ದಾರಿಯಲ್ಲಿ ಸಾಗುತ್ತಿದ್ದಾಳೆ. ಸಹಸ್ರ ಸಂಖ್ಯೆಯಲ್ಲಿ ನಾಟಕಗಳಿಗೆ ಸಂಗೀತದ ನೆರವು ನೀಡಿದ್ದಾರೆ.

ಡಾ. ನಾರಾಯಣ ಢಗೆ: ಇವರು ಮೂಲತಃ ಗದಗಿನವರು. ಸಂಗೀತದ ವಿದ್ವತ್ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಸರಕಾರಿ ಪ್ರೌಢ ಶಾಲೆಯ ಸಂಗೀತ ಶಿಕ್ಷಕರಾದರು. ರಾಯಚೂರಿಗೆ ವರ್ಗವಾಗಿ ಬಂದು ಇಲ್ಲಿಯೇ ಸ್ವಗೃಹದಲ್ಲಿ ನೆಲೆಸಿದ್ದಾರೆ. ರಾಯಚೂರಿನ ಸರಕಾರಿ ಕಿರಿಯ ಮಹಾವಿದ್ಯಾಲಯದಿಂದ ನಿವೃತ್ತರು. ಇವರ ಸಹೋದ್ಯೋಗಿಯಾದ ತಬಲಾ ಪಟು ಎನಿಸಿಕೊಂಡ ಚಕ್ರಪಾಣಿಯವರೊಂದಿಗೆ ಸೋದರ ಭಾವದಿಂದಿದ್ದಾರೆ. ಪ್ರಸ್ತುತ ಕೆಲವು ಜನ ಹಿರಿಯ ಕಲಾವಿದರಿಗೆ ಮಾರ್ಗದರ್ಶನ ನೀಡುತ್ತಲಿದ್ದಾರೆ. ಕೆಲವು ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ.

ರಾಮಸ್ವಾಮಿ ನುಲಿ ಮತ್ತು ಸಹೋದರರು: ಸಹೋದರರಾದ ಅಂಬಯ್ಯ ನುಲಿ ಮತ್ತು ರಾಜಶೇಖರ ನುಲಿಯವರ ಸಂಗೀತ ಸಾಧನೆ ವಿಶೇಷವಾದುದು. ಒಂದು ಸಲ ದೂರದರ್ಶನದಲ್ಲಿ ಇವರ ಸಹೋದರರಿಬ್ಬರೂ ಭಾಗವಹಿಸಿ ಕಾರ್ಯಕ್ರಮ ನಡೆಸಿಕೊಟ್ಟ ನೆನಪು. ರಾಯಚೂರು ಆಕಾಶವಾಣಿ ಕಲಾವಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಹಳಷ್ಟು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಶ್ರೀಯುತ ರಾಮಸ್ವಾಮಿಯವರು

ಆದರ್ಶ ಶಿಕ್ಷಕರಾಗಿ ನಿವೃತ್ತರಾಗಿದ್ದಾರೆ. ಶರಣಸಾಹಿತ್ಯದಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದಾರೆ.

ಪಂ. ಶ್ರೀನಿವಾಸಾಚಾರ್ಯ ಕಾಖಂಡಕಿ: ಇವರು ಕಳೆದ ಶತಮಾನದ ಸಂಗೀತ ದಿಗ್ಗಜರು, ಇಂದು ಪ್ರಸಿದ್ಧರಾಗಿರುವ ವಿ.ಎಮ್. ಜೋಷಿಯವರ ಗುರುಗಳು. ಇವರ ಸುಪುತ್ರರಾದ ರಾಮಾಚಾರ ಕಾಖಂಡಕಿಯವರು ಸಂಗೀತದ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಸರಕಾರಿ ಶಾಲೆಯಲ್ಲಿ ಸಂಗೀತ ಶಿಕ್ಷಕರಾದರು. ತಂದೆಯವರ ಕೊಡುಗೆಯಾದ ಸಂಗೀತವನ್ನು ವಿದ್ಯಾರ್ಥಿಗಳನೇಕರಿಗೆ ಅಧ್ಯಯನ ಮಾಡಿಸಿದರು. ಇವರ ಸಹೋದರಿ ಕೂಡ ಸಂಗೀತದ ಅಧ್ಯಯನ ಮಾಡಿ ವರ್ಗಗಳನ್ನು ನಡೆಸುತ್ತಿದ್ದರು. ರಾಮಾಚಾರ್ಯರ ಸುಪುತ್ರಿಯೇ ಸಂಗೀತಾ ಕಾಖಂಡಕಿ. ಅಜ್ಜನ ಆಶೀರ್ವಾದ ತಂದೆಯ ಮಾರ್ಗದರ್ಶನ ಮತ್ತು ರಾಷ್ಟ್ರಮಟ್ಟದ ಗಾಯಕರ ಪ್ರೋತ್ಸಾಹಗಳಿಂದ ಇವರು ಸಂಗೀತ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ ಸಾಕಷ್ಟು ಸಲ ಕಾರ್ಯಕ್ರಮ ನೀಡಿದ್ದಾರೆ. ರಾಯಚೂರಿನ ಬಗ್ಗೆ ಇವರ ಅಭಿಮಾನ ಅಪಾರವಾದುದು. ಇಲ್ಲಿಯ ಬಹಳಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಪಂ. ಶೇಷಗಿರಿದಾಸ: ಪಂ. ವಿ.ಎಮ್. ಜೋಷಿಯವರ ಶಿಷ್ಯರು. ಚಿಕ್ಕವಯಸ್ಸಿನಲ್ಲಿಯೇ ಹೆಚ್ಚಿನ ಸಾಧನೆ ಮಾಡಿದವರು. ಇವರ ಸುಗಮಸಂಗೀತದ ಕಛೇರಿಗಳು ಕರ್ನಾಟಕದ ಉದ್ದಗಲಕ್ಕೂ ಆಯೋಜಿಸಲ್ಪಟ್ಟಿವೆ. ಇವರು ಅಂತರಾಷ್ಟ್ರೀಯ ಕಲಾವಿದರು. ಇವರಿಗೆ ಬಂದ ಪುರಸ್ಕಾರಗಳು ಮತ್ತು ಸನ್ಮಾನಗಳು ಬಹಳಷ್ಟು, ಕಳೆದ ಅವಧಿಯಲ್ಲಿ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಗಮಕ ಕಲಾಪರಿಷತ್ತಿನ ಅಧ್ಯಕ್ಷರಾಗಿದ್ದರು. ಇವರು ಅಸ್ಕಿಹಾಳ ಗೋವಿಂದದಾಸರ ವಂಶಸ್ಥರು.

ಸೂಗೂರೇಶ ಅಸ್ಕಿಹಾಳ: ಚಿಕ್ಕ ವಯಸ್ಸಿನಲ್ಲಿಯೇ ಮಹತ್ಸಾಧನೆ ಮಾಡಿದ್ದಾರೆ. ರಾಯಚೂರಿನ ಸಂಗೀತ ವಲಯದಲ್ಲಿ ಇವರದು ದೊಡ್ಡ ಹೆಸರು.ಶಾಲಾ ಕಾಲೇಜುಗಳ ಅಧ್ಯಯನ ರಾಯಚೂರಿನಲ್ಲೇ ಆಗಿದೆ.

ನಬಿಬೇಗ್: ಗಜಲ್ ಗಾಯಕರೆಂದೇ ಪ್ರಸಿದ್ದರು. ವಿಶೇಷವಾಗಿ ಉರ್ದು ಶಾಯರಿಗಳನ್ನು ಹಾಡುತ್ತಾರೆ. ಕ್ವಚಿತ್ತಾಗಿ ಹಿಂದಿ ಪದ್ಯಗಳನ್ನು ಹಾಡುತ್ತಾರೆ. ಶ್ರೀಮತಿ ಭಾನು ಬೇಗಂ ಅವರ ಧ್ವನಿಸುರುಳಿಗೆ ಸಂಗೀತ ಸಂಯೋಜನೆ ಮಾಡಿಕೊಟ್ಟ ಮಹನೀಯರು, ಸಂಯೋಜನೆಯನ್ನು ಅಳವಡಿಸಿಕೊಂಡು ಹಾಡಿದವರು ಶ್ರೀಮತಿ ಸಿ.ಎಸ್. ಪಾರ್ವತಿ.

ಗಂಗಾಖೇಡ ಸಹೋದರರು: ರಾಯಚೂರಿನ ಶ್ರೀ ರಾಘವೇಂದ್ರ ಮಠದ ವ್ಯವಸ್ಥಾಪಕರು. ಸಾಕಷ್ಟು ಸಂಗೀತವನ್ನು ಅಭ್ಯಾಸ ಮಾಡಿದವರು ಹಿರಿಯ ಸಂಗೀತಗಾರರನ್ನು ಆದರಿಸುವ ದೊಡ್ಡ ಗುಣ ಇವರಲ್ಲಿದೆ. ಪಂ. ಎಂ.ವಿ. ಜೋಷಿಯವರನ್ನು ಸನ್ಮಾನ ಮಾಡಿಸಿದ ಸಂಗೀತಪ್ರಿಯರೂ ಇವರು.

ಪಂ. ದೇವಪುತ್ರ: ಇವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರು.

ಪಂ. ವಿ.ಎಮ್. ಜೋಷಿ: ಹಿರಿಯ ಸಂಗೀತ ಕಲಾವಿದರು. ಹುಟ್ಟಿನಿಂದಲೇ ಅಂಧರು (ಪಂ. ವಿ.ಜಿ. ಕಬಾಡಿ) 'ವೆಂಕಟೇಶ್ವರ ಸಂಗೀತ ವಿದ್ಯಾಲಯ'ದ ಪ್ರಧಾನರು. ಸಂಗೀತ ನೃತ್ಯ ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿ ಪುರಸ್ಕೃತರು. ಮಂತ್ರಾಲಯ ಮಠದಿಂದ ಸನ್ಮಾನಿತರು. ಎತ್ತರದ ಸಂಗೀತ ಕಲಾವಿದರಾದ ರಮೇಶ ಕುಲಕರ್ಣಿ, ಶೇಷಗಿರಿದಾಸ ಮೊದಲಾದವರು ಇವರ ಶಿಷ್ಯರು.

ವೆಂಕಟೇಶ ನವಲಿ: ಸ್ನಾತಕೋತ್ತರ ಪದವೀಧರ ಶಿಕ್ಷಕರು. ಪಂ. ವಿ.ಎಮ್. ಜೋಷಿಯವರ ಶಿಷ್ಯರು. ರಾಜ್ಯ ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ವತಿಯಿಂದ ನಡೆದ ಸಂಗೀತ ಸ್ಪರ್ಧೆಯಲ್ಲಿ ಸತತ ಎರಡು ಬಾರಿ ಪ್ರಥಮ ಸ್ಥಾನವನ್ನು ರಾಜ್ಯ ಮಟ್ಟದಲ್ಲಿ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಸಾಹಿತ್ಯದಲ್ಲಿಯೂ ಸಾಧನೆ ಮಾಡಿದ್ದಾರೆ.

ಗೌರ ಮಾಸ್ತರ: ಇವರು ವೃತ್ತಿಯಿಂದ ಕೃಷಿಕರು. ಸಂಗೀತ ವಿದ್ವಾಂಸರು, ರಂಗಭೂಮಿ ಕಲಾವಿದರಿಗೆ ಸಂಗೀತ ನೀಡಿದವರು ಪಂಡಿತ ಪುಟ್ಟರಾಜ ಗವಾಯಿಗಳ ಶಿಷ್ಯರು.

ಭೋಗೇಶಾಚಾರ್: ಕೊಪ್ಪಳ ಜಿಲ್ಲೆಯ ಮಂಗಳೂರಿನವರು. ನಿವೃತ್ತ ಇಂಜಿನಿಯರಾಗಿದ್ದು ಜೀವನದುದ್ದಕ್ಕೂ ಸಂಗೀತ ಸಾಧನೆ ಮಾಡಿದವರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು. ಸ್ಥಳೀಯ 'ಕಲಾನಿಕೇತನ' ಸಂಸ್ಥೆಗೆ ಅಧ್ಯಕ್ಷರು. ಯುವ ಸಂಗೀತಗಾರರು ಇವರನ್ನು ಗುರುಗಳೆಂದು ಒಪ್ಪಿಕೊಂಡಿದ್ದಾರೆ.

ಎ.ಹೆಚ್. ಪುರಾಣಿಕ್: ಕೊಪ್ಪಳ ಜಿಲ್ಲೆಯ ಕುಷ್ಟಗಿಯವರು. ಪ್ರಧಾನವಾಗಿ ಕೊಳಲು ವಾದಕರಾದರೂ ಜೊತೆ ಜೊತೆಯಲ್ಲಿ ಸುದೀರ್ಘ ಸಂಗೀತ ಸಾಧನೆ ಗೈದವರು. ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿಯಲ್ಲಿ ಕೆಲಸ ಮಾಡಿ ಈಗ ನಿವೃತ್ತರು. 'ಸಾಧನಾ ಸಂಗೀತ' ವಿದ್ಯಾಲಯದ ಅಧ್ಯಾಪಕರು. ಇತ್ತೀಚೆಗೆ ಕವಿತೆ ರಚನೆಯಲ್ಲಿ ಯಶಸ್ವಿಯಾಗಿದ್ದಾರೆ.

ಭೀಮಣ್ಣ ಯಾದವ್: ಸ್ಥಳೀಯ ಸಂಗೀತಗಾರರಾದ ಇವರು ಪಂ. ವಿ.ಎಮ್. ಜೋಷಿಯವರ ಶಿಷ್ಯರು. ಸ್ಥಳೀಯ ಕವಿಗಳ ಕವಿತೆಗಳಿಗೆ ಮತ್ತು ರಾಯಚೂರು ಆಕಾಶವಾಣಿ ಕೇಂದ್ರಕ್ಕೆ ಹಾರ್ಮೋನಿಯಂ ಸಾಧನೆ ನೀಡಿದ್ದಾರೆ. ತೋಟಗಾರಿಕೆ ಇಲಾಖೆಯಿಂದ ನಿವೃತ್ತರಾಗಿದ್ದಾರೆ.

ಪ್ರಭಾಕರ ಕುಸನೂರ: ಸ್ಥಳೀಯ ಹಿಂದಿ ವರ್ಧಮಾನ ವಿದ್ಯಾಲಯದಿಂದ ನಿವೃತ್ತರು. ಕನ್ನಡ, ಹಿಂದಿ, ಮರಾಠಿ ಮುಂತಾದ ಭಾಷೆಗಳಲ್ಲಿ ಸುಗಮ ಸಂಗೀತವನ್ನು ನಡೆಸಿ ಕೊಡುವರು. ಇವರು ತಮ್ಮದೇ ಆದ ಸಂಗೀತ ವಿದ್ಯಾಲಯವನ್ನು ನಡೆಸುತ್ತಿದ್ದಾರೆ.

ಕು. ಅನುರಾಧ ಎಚ್. ಕುಲಕರ್ಣಿ: ಅಂಚೆ ಇಲಾಖೆಯಲ್ಲಿ ಉದ್ಯೋಗಿಯಾಗಿರುವ ಹೆಚ್.ಡಿ. ಕುಲಕರ್ಣಿ ಅವರ ಸುಪುತ್ರಿ, ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿನಿ. ಗುಲ್ಬರ್ಗಾದ ಪಂ. ಫಕೀರೇಶ ಕಣವಿ ಅವರ ಗುರುತ್ವ, ಶ್ರೀ ಶಂಕರ ಸೇವಾ ಸಮಿತಿಯ ಆಶ್ರಯದಲ್ಲಿ ಸಂಗೀತ ಕಛೇರಿ, ಕನ್ನಡ ಹಿಂದಿ, ಮರಾಠಿ

ಭಾಷೆಗಳಲ್ಲಿ ಹಾಡುಗಾರಿಕೆ. ಅನುರಾಧಾಳ ಅಣ್ಣ ಸಂದೀಪ ತಬಲಾ ಪಟುವಾಗಿದ್ದಾರೆ. ಗುಲ್ಬರ್ಗಾ ವಿ.ವಿ.ಯಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡುತ್ತಿದ್ದಾರೆ.

ಸುಜಾತಾ ಜೋಷಿ: ರಾಯಚೂರಿನ ಗಲಗ ಜೋಷಿ ಮನೆತನಕ್ಕೆ ಸೊಸೆಯಾಗಿ ಬಂದ ಇವರ ಸಂಗೀತ ಸಾಧನೆಗೆ ಸ್ವಾಧ್ಯಾಯವೇ ಕಾರಣ. ಇದೀಗ ಹಿರಿಯ ಸಂಗೀತಗಾರರಾದ ಶ್ರೀ ಎ.ಎಚ್. ಪುರಾಣಿಕರ ಶಿಷ್ಯರು. 'ಶ್ರೀ ಕೃಷ್ಣಪಾಠಶಾಲೆ' ಯಲ್ಲಿ ಶಿಕ್ಷಕಿಯಾಗಿದ್ದಾರೆ. ಕನ್ನಡದ ಕವಿಯತ್ರಿಯೂ ಆಗಿದ್ದಾರೆ.

ನಾಗಲಾಂಬಿಕಾ ಮತ್ತು ರುಕ್ಮಿಣಿ ಮಧ್ವರಾವ್: ಹಿರಿಯ ಸಂಗೀತ ಕಲಾವಿದೆಯರು. ಹಮದರ್ದ್ ಪ್ರೌಢಶಾಲೆಯಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಯೋಜಿಸಲಾಗಿರುವ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಹತ್ತು ಹಲವು ತೆರನಾದ ಪುರಸ್ಕಾರಗಳನ್ನು ಪಡೆದವರು.

ರಾಧಿಕಾ ರಾಘವೇಂದ್ರ: ಸ್ಥಳೀಯ ಸಾಹಿತಿ ಕಾಂತನವರ ಮನೆತನಕ್ಕೆ ಸೊಸೆಯಾಗಿ ಬಂದವರು. ರಾಗಿಣಿ ಸಂಗೀತ ವಿದ್ಯಾಲಯದ ಅಧ್ಯಾಪಕಿ, ಸಂಗೀತ ನೃತ್ಯ ಅಕಾಡೆಮಿಯ ರಾಜ್ಯಾಧ್ಯಕ್ಷರಾಗಿದ್ದ ಶ್ರೀಮತಿ ಶ್ಯಾಮಲಾ ಭಾವೆಯವರ ಶಿಷ್ಯರು.

ಮುಕ್ತಾ ಪಾಟೀಲ: ಸ್ಥಳೀಯ ಎಲ್.ವಿ.ಡಿ. ಮಹಾವಿದ್ಯಾಲಯದಲ್ಲಿ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಗುಲ್ಬರ್ಗಾದ ಎಸ್.ಎ. ತಪತಿಯವರ ಶಿಷ್ಯರು. ಅಲಹಾಬಾದಿನಿಂದ ಮಾರ್ತಾಂಡ ಪರೀಕ್ಷೆಯಲ್ಲಿ ಮತ್ತು ಕರ್ನಾಟಕ ಸರಕಾರ ನಡೆಸಲ್ಪಡುವ 'ವಿದ್ವತ್' ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಮಹಿಳಾರತ್ನ ಪ್ರಶಸ್ತಿ, ಮತ್ತು ರಂಭಾಪುರಿ ಮಠದ ವಚನ ರತ್ನ ಪ್ರಶಸ್ತಿ ಇನ್ನು ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತರು. ರಾಯಚೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿಯೂ ಕೂಡ ಸಂಗೀತ ಸೌರಭವು ಸೂಸುತ್ತಲಿದೆ.

ಲಿಂಗಸುಗೂರು ತಾಲ್ಲೂಕಿನ ಸಂಗೀತ ಸೌರಭ: ಸೈಯ್ಯದ್ ಸುದ್ದೀನ್, ಮಾಣಿಕರಾವ್ ಕುಲಕರ್ಣಿ, ಮೌನೇಶ, ಗುಂಡಪ್ಪ ಭಜಂತ್ರಿ, ಮಹಾಂತೇಶ ಹೂಗಾರ, ಕುಪ್ಪಣ್ಣ ಮಾಣಿಕ, ಮಲ್ಲಿಕಾರ್ಜುನ ಹಾದಿಮನಿ ಮತ್ತು ಶ್ರೀಮತಿ ಹಂಪಮ್ಮ ಭಜಂತ್ರಿ ಮುಂತಾದವರು ಸಂಗೀತ ಕಲೆಯಲ್ಲಿ ಸಾಧನೆ ಮಾಡುತ್ತಿದ್ದಾರೆ.

ಮಾನವಿ ತಾಲ್ಲೂಕಿನ ಸಂಗೀತ ಸೌರಭ: ಲಕ್ಷ್ಮಣ ಭಜಂತ್ರಿ, ಶರಣಕುಮಾರ ಹೂಗಾರ, ಎಸ್.ಸಿ. ಸಿದ್ಧಯ್ಯ ಸ್ವಾಮಿ, ಮಾರೆಪ್ಪ ವೀರೇಶ, ಬಾಳಪ್ಪ ಹೆಬ್ಬಳ್ಳಿ, ರುದ್ರಯ್ಯ, ಹನುಮಂತಪ್ಪ ಹೂಗಾರ, ಮಲ್ಲಿಕಾರ್ಜುನ ಶಾಸ್ತ್ರೀ, ಎಸ್. ಎಂಕೋಬ, ಡಿ. ಯಂಕೋಬ, ಅಶೋಕ, ಮಾರ್ಕಂಡೇಯ, ಸಿದ್ದಣ್ಣ ಹೂಗಾರ, ಮಲ್ಲೇಶಿ, ರಾಯಪ್ಪ ಮಾಸ್ತರ, ವಿರುಪಾಕ್ಷಯ್ಯ ವಂದಲಿ, ಮುಂತಾದ ಮಹನೀಯರು ಸಂಗೀತ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ದೇವದುರ್ಗ ತಾಲ್ಲೂಕಿನ ಸಂಗೀತ ಸೌರಭ: ಶ್ರೀಯುತರುಗಳಾದ ಎಲ್ಲಪ್ಪ ವೇಷಗಾರರು, ಜಂಬಣ್ಣ ವೇಷಗಾರರು, ನಾಗಯ್ಯಸ್ವಾಮಿ ಹಿರೇಮಠ, ಪಾಂಡುರಂಗ, ಶಿವಪ್ಪ ಪತ್ತಾರ, ಬಸವರಾಜ ಹೂಗಾರ, ಕೊತ್ತದೊಡ್ಡಿ ಜಂಬಣ್ಣ ಹೂಗಾರ, ಬಸವರಾಜ ಹೂಗಾರ, ವಂದಲಿ ಸಿದ್ಧಲಿಂಗಪ್ಪ, ಬಸವಲಿಂಗಪ್ಪ ಮಲ್ಲೇಶಪ್ಪ ಮುಂತಾದ ಮಹನೀಯರು ಸಂಗೀತ ಸಾಧನೆಯಲ್ಲಿ ನಿರತರಾಗಿದ್ದಾರೆ.

ಸಿಂಧನೂರು ತಾಲ್ಲೂಕಿನ ಸಂಗೀತ ಸೌರಭ: ಗುಂಡೂರಾವ್ ಚನ್ನಹಳ್ಳಿ, ದೇವೇಂದ್ರಪ್ಪ, ಮೌನೇಶಕುಮಾರ, ವಿ.ಎನ್.ಬದಿ, ವಾಸುದೇವಾಚಾರ್, ಪರಿಮಳ ದೇಸಾಯಿ, ಪಂಪನಗೌಡ, ಸೋಮಶೇಖರ ಪಾಟೀಲ, ವೀರೇಶ ನಾಯಕ, ನಾಗಪ್ಪ ನಾಗರಾಜ ಮತ್ತು ಕುಮಾರಿ ವಿಜಯಲಕ್ಷ್ಮೀ ಮುಕುಂದಿಮಠ, ಕುಮಾರಿ ಶಶಿರೇಖಾ ಸೂಗೂರ ಮುಂತಾದವರು ಸಿಂಧನೂರ ತಾಲ್ಲೂಕಿನ ಸಂಗೀತ ಕಲಾವಿದರಾಗಿದ್ದಾರೆ.

ರಾಯಚೂರು ತಾಲ್ಲೂಕಿನ ಸಂಗೀತ ಸೌರಭ: ಮಧುಸೂಧನ ಮುತಾಲಿಕ, ಜಿ. ರಾಮುಲು ಸಿದ್ಧರಾಮಪ್ಪ ಕಮ್ಮಾರ, ನರಸಿಂಗ ಮಲ್ಕಾರಿ, ಕೆ. ಮಲ್ಲೇಶಿ, ಆರ್. ಶ್ರೀನಿವಾಸ, ಮುನಿಸ್ವಾಮಿ, ಡಾ ಅನಿಲಕುಮಾರ, ಕೆ. ಆಶಣ್ಣ, ಸಿದ್ಧಣ್ಣ, ತಿಮ್ಮಪ್ಪ ಗುಲಾಮ ಹೈದರ, ವಿಜಯಕುಮಾರ, ಲಚ್ಚಣ್ಣ ಕುರುಡಿ, ಶ್ರೀನಿವಾಸಾಚಾರಿ, ಮಾರೆಪ್ಪ ಈರಣ್ಣ ಚಂದ್ರಕುಮಾರ, ಎ.ಎನ್. ಸದಾಶಿವಪ್ಪ, ಆಂಜನೇಯ ಇಡಪನೂರು, ಮಲ್ಲೇಶಪ್ಪ, ಎ.ಎಸ್.ರಘುಕುಮಾರ, ಸಿದ್ರಾಮಪ್ಪ ತಪತಿ, ಪ್ರಹ್ಲಾದಾಚಾರ್ಯ ಹಂಡೇದ, ಎಂ. ಚೊಕ್ಕಣ್ಣ ಪಂಪಾಪತಿ ಹೂಗಾರ ಮತ್ತು ಆರ್. ಶಿವಕುಮಾರಿ, ನಾಗಮ್ಮ, ಸುಲೋಚನಾ, ರೂಪಾ ವೈದ್ಯ, ಯಮುನಮ್ಮ ಮತ್ತು ಸ್ವರ್ಣದೇವಿ ಇನ್ನೂ ಮುಂತಾದವರು ಸಂಗೀತ ಮತ್ತು ತಬಲಾ ವಾದನ ಮುಂತಾದವುಗಳಲ್ಲಿ ವಿಶೇಷ ಪರಿಶ್ರಮ ಮಾಡಿದ್ದಾರೆ. ಶ್ರೀಯುತ ವೆಂಕಟೇಶ ಆಲ್ಕೋಡ ಅವರು ಕ್ಯಾಸಿಯೋ ವಾದನದಲ್ಲಿ ಪರಿಣಿತರು. ಅದರಂತೆ ಎನ್.ಬಿ. ಲಕ್ಷ್ಮೀರೆಡ್ಡಿಯವರು ಉತ್ತಮ ಗಾಯಕರು. ಪ್ರಗತಿ ಗ್ರಾಮೀಣ ಬ್ಯಾಂಕಿನಲ್ಲಿ ಉದ್ಯೋಗಿಯಾದ ನಾಗಡದಿನ್ನಿ ವಾಸುದೇವರಾವ ಅವರು ಸಂಗೀತ ಸಾಧನೆಯ ಪಥದಲ್ಲಿ ಮುನ್ನಡೆದಿದ್ದಾರೆ.

ಶಾಂತಾ ವಿಶ್ವನಾಥ: ಇವರು ರಂಗಕಲಾವಿದೆ ಮತ್ತು ಗಾಯಕಿ. ಇವರ ಧ್ವನಿ ಸುರುಳಿಯು ಶ್ರೋತೃಗಳನ್ನು ಆಕರ್ಷಿಸುತ್ತದೆ.

ಮಲ್ಲಣ್ಣ ಹರವಾಳ: ಉತ್ತಮ ಗಾಯಕರು ಜಾನಪದ ಸಂಗೀತದ ಹಲವು ವಿಧಗಳನ್ನು ಹಾಡಿ ಪರಿಚಯಿಸುತ್ತಾರೆ.

ವೆಂಕಟೇಶ ಮುಂಡರಗಿ: ಇವರು ಪ್ರಸ್ತುತ ಸಂಗೀತ ಶಿಕ್ಷಕರು. ಮಧುಸೂದನ ಮುತಾಲಿಕ: ತಬಲಾ ಪಟುಗಳು ಇವರ ಸುಪುತ್ರಿ ತಿರುಪತಿಯ ಆಸ್ಥಾನದಲ್ಲಿ ಕಾರ್ಯಕ್ರಮವನ್ನು ನೀಡಿದ್ದಾಳೆ. ಪ್ರಹ್ಲಾದ ಫೀರೋಜಾಬಾದ್: ಇವರು ಉತ್ತಮ ಗಾಯಕರು. ಮಾತೋಶ್ರೀಯಿಂದ ಪ್ರೇರಿತರು. ಇವರ ಧ್ವನಿಸುರುಳಿಯೂ ಬಿಡುಗಡೆಯಾಗಿದೆ.

ಗೋಪಾಲ ಗುಡಿಬಂಡಿ: ಇವರು ಅಂತರಾಷ್ಟ್ರೀಯ ಮಟ್ಟದ ತಬಲಾ ವಾದಕರು. ಕೊಪ್ಪರೇಶ ದೇಸಾಯಿ, ಸೇತುಮಾಧವ ಕೆರೂರು, ಅಮರೇಶ ಹೂಗಾರ, ಈರಣ್ಣ ಜಾಲಿಬೆಂಚಿ, ರಾಮಚಂದ್ರ ಜೋಷಿ ಮುಂತಾದ ತಬಲಾ ವಾದಕರು ಕೂಡ ಸಂಗೀತ ದಿಗ್ಗಜರೆಂದೇ ಹೇಳಬೇಕು. ಕು. ಪಲ್ಲವಿ ಕಿನ್ನಾಳ ಅವರು ದಾಸವಾಣಿ ನಡೆಸಿಕೊಡುತ್ತಾರೆ. ದೂರದರ್ಶನದಲ್ಲಿ ಭಾಗ ವಹಿಸಿದ ಕಲಾವಿದೆ.

ವಿದ್ಯಾ ಜಗನ್ನಾಥ: ಧ್ವನಿಸುರಳಿಗೆ ಸಂಗೀತ ನೀಡಿದ್ದಾರೆ. ಇವರು ಸ್ನಾತಕೋತ್ತರ ಪದವೀಧರೆ, ಶಿಕ್ಷಕಿ ಕಲ್ಲೂರ ನಿವಾಸಿ ಇವರ ಮಾತೋಶ್ರೀ ಸರೋಜಾಬಾಯಿ ಮಸ್ಕಿಕರ ಅವರು ಆಕಾಶವಾಣಿ ಕಲಾವಿದೆಯಾಗಿ, ಸಂಗೀತವನ್ನು ಪ್ರಸಾರ ಮಾಡಿದವರು. ಪುತ್ರಿ ವಿದ್ಯಾಳ ಸಂಗೀತ ಗುರುಗಳು.

ಗುಂಡಮ್ಮ: ಇವರು ಗಜಲ್ ಗುಂಡಮ್ಮ ಎಂಬ ಹೆಸರಿನಿಂದಲೇ ಪ್ರಸಿದ್ಧರಾದವರು. ಇಂದು ನಮ್ಮೊಡನೆ ಇಲ್ಲದಿದ್ದರೂ ತಮ್ಮ ಗಾನ ಮಾಧುರ್ಯವನ್ನು ಹಿರಿಯರನೇಕರ ಕಿವಿಗಳಲ್ಲಿ ರಿಂಗಣಗೊಳಿಸಿದವರು. ಇವರ ಸಂಗೀತದ ಅಲೆ ಉರ್ದು ಭಾಷೆಯೇ ಪ್ರಮುಖ ಸ್ಥಾನ ಪಡೆದಿತ್ತು. ಇವರ ಸುಪುತ್ರಿ ಶ್ರೀಮತಿ ಮಂಜುಳಾ ವಿದ್ಯಾರ್ಥಿನಿಯಾಗಿದ್ದಾಗಲೇ ತಬಲಾ ಪಟು ಎಂಬ ಖ್ಯಾತಿಯನ್ನು ಗಳಿಸಿದ್ದಾಳೆ.

ಶರಣಪ್ಪ ಗೋನಾಳ: ಜಾನಪದ ಸಂಗೀತದಲ್ಲಿ ಪ್ರವೀಣರು. ದೂರದರ್ಶನದ ಎದೆ ತುಂಬಿ ಹಾಡುವೆನು ಎಂಬ ಧಾರವಾಹಿಯಲ್ಲಿ ಒಂದು ಸಲ ನಿರ್ಣಾಯಕರಾಗಿದ್ದಾರೆ. ರಾಯಚೂರಿನ ಜಿಲ್ಲಾ ಉತ್ಸವದಲ್ಲಿ ಇಂತಹ ಬಹಳಷ್ಟು ಸ್ಥಳಗಳಲ್ಲಿ ತಮ್ಮ ಸಂಗೀತ ಮಾಧುರ್ಯವನ್ನು ಮೆರೆದಿದ್ದಾರೆ.

ಸಂಗೀತ ವಾದ್ಯಗಳ ನಿರ್ಮಾಣ ಮತ್ತು ದುರಸ್ತಿ: ಸಂಗೀತದ ವಾದ್ಯಗಳನ್ನು ಸಿದ್ದಪಡಿಸುವವರಿಗೂ ದುರಸ್ತಿ ಕಾರ್ಯ ಮಾಡುವವರಿಗೂ ಸಂಗೀತ ಜ್ಞಾನವಿರಲೇಬೇಕು. ಇಂತಹ ಸಂಗೀತ ತಜ್ಞರಲ್ಲಿ ರಾಮಣ್ಣ ಮತ್ತು ವಿ.ಜಿ. ಕುಲಕರ್ಣಿಯವರು ಪ್ರಮುಖರು.

ಲಿಂಗಸೂಗೂರಿನ ಕಳೆದ ತಲೆಮಾರಿನ ಶ್ರೀ ಹನುಮಂತ ರಾವ್ ಕುಲಕರ್ಣಿಯವರ ಸುಪುತ್ರಿರಾದ ರಾಘವೇಂದ್ರ ಕುಲಕರ್ಣಿ ಆರಕ್ಷಕರು, ವೆಂಕಟೇಶ ಕುಲಕರ್ಣಿ ಶಿಕ್ಷಕರು ಇವರಿಬ್ಬರೂ ತಂದೆಯ ಸಂಪೂರ್ಣ ಆಶೀರ್ವಾದ ಪಡೆದ ಸಂಗೀತಗಾರರು.

ಗಮಕ ಸಂಗೀತ: ಕಳೆದ ಎರಡು ವರ್ಷಗಳ ಅವಧಿಯಲ್ಲಿ 25 ಕಾರ್ಯಕ್ರಮಗಳನ್ನು ಮಾಡಿದ ಯೋಜಕ ಅರುಣ್ ವಿ. ಕಾಂತನವರ, ಗಮಕ ವಾಚನಕ್ಕೆ ಸಂಗೀತ ನಿರ್ದೇಶಕರು. ಶ್ರೀ ಎಂ. ಬೋಗೇಶಾಚಾರ್ಯ, ಸಾಹಿತ್ಯ ವಿಭಾಗಕ್ಕೆ ಶ್ರೀ ವಿ.ಎಸ್. ಕಾಂತನವರ ಮಾರ್ಗದರ್ಶಕರಾಗಿದ್ದರು.

(ವಿಎಸ್‌ಕೆ)

ಸಂಗೀತ ಪರಂಪರೆ: (ಚಿಂಚೋಳಿ ತಾಲ್ಲೂಕು) ಕರ್ನಾಟಕ ಸಂಗೀತ ಪರಂಪರೆಯಲ್ಲಿ ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿದೆ. ನೈಸರ್ಗಿಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಹೊಂದಿದ ಈ ಪ್ರದೇಶದಲ್ಲಿ ಕಲೆ, ಸಾಹಿತ್ಯ, ಸಂಗೀತಕ್ಕೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಇಲ್ಲಿಯ ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಮಾಡುವದರ ಮೂಲಕ ಕ್ರಿಯಾಶೀಲವಾಗಿವೆ. ಇಂಥ ಸಂಘ ಸಂಸ್ಥೆಗಳೆಂದರೆ ಶ್ರೀ ಗಾನಯೋಗಿ ಪಂಚಾಕ್ಷರಿ ತಾಲ್ಲೂಕು ಸಂಗೀತ ಕಲಾ ಸಂಘ, ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಲಿಂಗವಂತ ತತ್ವ ಪ್ರಚಾರ ಸಮಿತಿ, ತಾಲ್ಲೂಕಾ ಯುವ ಸಾಹಿತ್ಯ ವೇದಿಕೆ, ಶ್ರೀ ಶಿವಯೋಗಿ ವೀರಪಾಕ್ಷಯ್ಯ ತಾತನವರ ಆಶ್ರಮ ಸಂಸ್ಥೆ ಐನೂಲಿ, ತಾಲ್ಲೂಕಾ ಧರಿನಾಡು ಕನ್ನಡ ಸಂಘ ಮೊದಲಾದ ಈ ಸಂಘ ಸಂಸ್ಥೆಗಳು ಸಾಹಿತ್ಯದೊಂದಿಗೆ ಸಂಗೀತದ ಶ್ರೀಮಂತಿಕೆಯನ್ನು ಬೆಳೆಸುವಲ್ಲಿ, ಹಾಗೂ ಅನೇಕ ಸಂಗೀತ ಸಮಾರಂಭಗಳನ್ನು ಏರ್ಪಡಿಸಿ ನಾಡಿನ ಶ್ರೇಷ್ಠ ಸಂಗೀತಗಾರರನ್ನು ತಾಲ್ಲೂಕಿಗೆ ಪರಿಚಯಿಸಿವೆ. ಹೀಗಾಗಿ ಈ ತಾಲ್ಲೂಕಿನಲ್ಲಿ ವಿವಿಧ ಪ್ರಕಾರದ ಸಂಗೀತ ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ತಯಾರಾಗಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜನಪದ ಸಂಗೀತ, ರಂಗಭೂಮಿ ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆಗೈದು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಖ್ಯಾತಿಯನ್ನು ಪಡೆದಿದ್ದಾರೆ.


ಐತಿಹಾಸಿಕವಾಗಿ ತಾಲ್ಲೂಕಿನಲ್ಲಿ ಯಾವುದೇ ಸಂಗೀತ ವಿದ್ಯಾ ಕೇಂದ್ರವಾಗಲಿ ಶಾಲೆಗಳಾಗಲಿ ಕಂಡುಬರುವುದಿಲ್ಲ. ಆದರೂ ಇಲ್ಲಿ ಕಲಾವಿದರಿಗೇನು ಕೊರತೆಯಿಲ್ಲ. ಸಂಗೀತಕ್ಕೆ ಬಡತನವಿಲ್ಲ. ಏಕೆಂದರೆ ತಾಲ್ಲೂಕಿನ ಜಿಲ್ಲೆ ಗುಲಬರ್ಗಾ ಹಾಗೂ ನೆರೆಯ ಜಿಲ್ಲೆ ಬೀದರಗಳಲ್ಲಿ ಸಂಗೀತದ ವಾತಾವರಣ ಕಾಲಾನುಕ್ರಮದಿಂದಲೂ ಬಹು ಸಮೃದ್ಧವಾಗಿತ್ತು. ಆ ಎರಡು ಜಿಲ್ಲೆಗಳ ಐತಿಹಾಸಿಕ ಸಂಗೀತ ವಿದ್ಯಾ ಕೇಂದ್ರಗಳಲ್ಲಿ ಸಂಗೀತ ಕಲಿತುಕೊಂಡು ಅನೇಕ ಸಂಗೀತಗಾರರು ಚಿಂಚೋಳಿ ತಾಲ್ಲೂಕಿನಲ್ಲಿ ಸಂಗೀತ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. 17ನೆಯ ಶತಮಾನದಲ್ಲಿ ಆಗಿಹೋದ ಐನೂಲಿಯ ಕರಿಬಸವಾರ್ಯರು ಸಂಗೀತ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ. ಕರಿಬಸವಾರ್ಯರು ಈ ಭಾಗದ ಪುರಂದರದಾಸರೆಂದೆ ಹೇಳಬಹುದು. ಕವಿಗಳು ಸಂಗೀತಗಾರರು ಅವರು ಸುಮಾರು 700ಕ್ಕಿಂತಲೂ ಹೆಚ್ಚು ಸ್ವರವಚನಗಳನ್ನು ಬರೆದು ಆ ಸ್ವರವಚನಗಳಿಗೆ ರಾಗ ತಾಳಗಳನ್ನು ಹೆಸರಿಸಿರುವುದನ್ನು ಕಾಣುತ್ತೇವೆ. ಅಲ್ಲದೆ ಶಿವತಾಂಡವ ನೃತ್ಯಕ್ಕೆ ಸಂಬಂಧಿಸಿದ ಅನೇಕ ಹಾಡುಗಳನ್ನು ಇವರು ರಚಿಸಿದ್ದಾರೆ. ಇದೇ ಪರಂಪರೆಯಲ್ಲಿ ಗಾರಂಪಳ್ಳಿಯ ಭಕ್ತಾವರ ಎಂಬ ಸ್ವರವಚನಕಾರನು ಈ ತಾಲ್ಲೂಕಿನಲ್ಲಿ ಬಾಳಿ ಬದುಕಿದ್ದ. ಅವನು ನೂರಾರು ಹಾಡುಗಳನ್ನು ರಚಿಸಿರುವನು. ಈ ಭಾಗದಲ್ಲಿ ಅವರು ಬರೆದ ಅನೇಕ ಹಾಡುಗಳು ಜನ ಪ್ರೀಯತೆಯನ್ನು ಪಡೆದಿವೆ. ಅದರಂತೆ




ಗಿರಿಜಾದೇವಿ ನೃತ್ಯ ಕಲಾಶಾಲೆ, ಗುಲಬರ್ಗಾ




ಪಂಡಿತ. ರಾಜೀವ ತಾರಾನಾಥ



ನರಸಿಂಹಲು ವಡವಟ್ಟಿ



ಪಂ. ಕೆ. ಎಸ್. ಹಡಪದ



ಅನಂತ ಚಿಂಚನಸೂರ

ಚಿತ್ರಮಯ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳ ಸಂಪುಟ



ಪಂಡಿತ. ಮಾಣಿಕ್‌ರಾವ್ ರಾಯಚೂರಕರ್

ಚಿತ್ರ ಸೂಚಿ - ೫೩

ಗೊಟ್ಟಂಗೊಟ್ಟಿ ಬಕ್ಕಪ್ರಭು, ಐನೂಲಿಯ ವೀರಸಂಗಮದೇವ, ಐನೂಲಿಯ ಗುರುಲಿಂಗ ಮೊದಲಾದ ಸ್ವರವಚನಕಾರರು ಈ ತಾಲ್ಲೂಕಿನಲ್ಲಿ ಬಾಳಿ ಬದುಕಿ ಜನಪದ ಹಾಗೂ ಸುಗಮ ಸಂಗೀತ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಂಗೀತ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮ ಸಂಗೀತ ಕಲೆಯ ಮೂಲಕ ಕಲಾ ಸಹೃದಯರ ಮನಸ್ಸನ್ನು ಸೂರೆಗೊಂಡು ಇಂದು ಕೇವಲ ನೆನಪಾಗಿ ಉಳಿದಿರುವ ಅನೇಕ ಪ್ರಾತಃಸ್ಮರಣೀಯರೂ ಕಲಾವಿದರೂ ಆಗಿ ಹೋಗಿದ್ದಾರೆ. ಅಂಥವರೆಂದರೆ ವೀರುಪಾಕ್ಷಯ್ಯ ತಾತನವರು ಐನೂಲಿ, ಶಂಕರರಾವ ಭರವೆ, ವೀರಣ್ಣಾ ಅರಳಿ ಸುಲೇಪೇಟ, ನಾಗಣ್ಣಾ ಗಾರಂಪಳ್ಳಿ, ಖುರ್ಷಿದಅಲಿ ಹಸರಗುಂಡಗಿ, ಬಸವಲಿಂಗಪ್ಪಾ ಶೀಲವಂತ ಸುಲೇಪೇಟ, ರಾಮಣ್ಣಾ ಮರಪಳ್ಳಿ, ರಘನಾಥ ಪಂಚಾಳ, ರೇಣುಕಾಸ್ವಾಮಿ ಬುರುಡಾ, ರಾಮಣ್ಣ ವಿಶ್ವಕರ್ಮ ಚಿಂಚೋಳಿ, ಗುರುಶಾಂತಪ್ಪ ಕಡಗದ ಚಂದನಕೇರಿ, ಗಣಪತಿ ಐನಾಪೂರ, ಶರಣಯ್ಯ ಗಡಿಕೇಶ್ವಾರ ಮೊದಲಾದವರು.

ವೀರುಪಾಕ್ಷಯ್ಯ ತಾತನವರು: ಶಾಸ್ತ್ರೀಯ ಹಾಗೂ ಸಂಗೀತಗಳೆರಡರಲ್ಲಿ ಅಪ್ರತಿಮ ಪಾಂಡಿತ್ಯಗಳಿಸಿ, ಬೀದರ, ಗುಲಬರ್ಗಾ, ಬಳ್ಳಾರಿ, ರಾಯಚೂರ ಮೊದಲಾದ ಕಡೆಗಳಲ್ಲಿ ಸಂಚರಿಸಿ ಸಂಗೀತ ಕಾರ್ಯಕ್ರಮ ನೀಡಿ ಜನಮನಗಳ ನೆನಪಿನಲ್ಲಿದ್ದಾರೆ. ನಾಟಕಗಳನ್ನು ಕಲಿಸುತ್ತಾ, ಅಲ್ಲಲ್ಲಿ ವಿದ್ಯಾರ್ಥಿಗಳಿಗೆ ಸಂಗೀತ ವಿದ್ಯಾದಾನ ಮಾಡಿ ಅನೇಕ ಶಿಷ್ಯರ ಬಳಗವನ್ನು ಹೊಂದಿದ ಇವರು ತಾಲ್ಲೂಕಿನ ಹೆಸರನ್ನು ಅಜರಾಮರಗೊಳಿಸಿದ್ದಾರೆ.

ಶಂಕರರಾವ್ ಬರವೆ: ಇವರು ಖ್ಯಾತ ಸಂಗೀತಗಾರರು. ಉತ್ತರ ಭಾರತದ ಮಥುರಾದಿಂದ ಚಿಂಚೋಳಿಗೆ ಬಂದು ಹಲವಾರು ವರ್ಷಗಳ ಕಾಲ ನೆಲೆಸಿ ತಾಲ್ಲೂಕಿನಲ್ಲಿ ಸಂಗೀತದ ಸೆಲೆಯನ್ನು ಹರಿಸಿದ್ದಾರೆ. ಇವರು ಶ್ರೇಷ್ಠ ಸಂಗೀತ ಪುಟಗಳು, ಸಂಗೀತದ ಎಲ್ಲಾ ಪ್ರಕಾರದ ವಾದ್ಯಗಳನ್ನು ಬಾರಿಸುವ ಕಲೆ ಬಲ್ಲವರು. ಉತ್ತಮ ಗಾಯಕರೂ ಆಗಿದ್ದರು. ಇವರು ಒಂದು ದಿನ ತಮ್ಮ ಸ್ವ ಆನಂದಕ್ಕಾಗಿ ವೀಣೆಯನ್ನು ಬಾರಿಸುವಾಗ ಹಾವೊಂದು ಹೆಡೆಯೆತ್ತಿ ಆಡಿರುವ ಘಟನೆ ಇಂದಿಗೂ ತಾಲ್ಲೂಕಿನ ಜನತೆಯ ಕಣ್ಣ ಮುಂದೆ ಕಟ್ಟಿದಂತಿದೆ. ತಮ್ಮ ಸುಮಧುರ ಕಂಠದಿಂದ ಹಾಡಿ ಜನಮನದಲ್ಲಿ ಅಚ್ಚಳಿಯದೆ ಕುಳಿತಿದ್ದಾರೆ. ತಾಲ್ಲೂಕಿನಲ್ಲಿ ಅನೇಕ ಸಾಧಕರಿಗೆ ವಿದ್ಯದಾನ ಮಾಡಿ ತಾಲ್ಲೂಕಿನ ವಿಶಿಷ್ಟವಾದ ಸಂಗೀತ ಕೊಡುಗೆ ನೀಡಿದ್ದಾರೆ.

(ಆಯ್‌ಕೆ)

ಸಂಗೀತ ಪರಂಪರೆ: (ಬೀದರ ಜಿಲ್ಲೆ) ಕರ್ನಾಟಕದ ಸಂಗೀತ ಪರಂಪರೆಯಲ್ಲಿ ಬೀದರ ಜಿಲ್ಲೆಗೆ ತನ್ನದೇ ಆದ ವಿಶಿಷ್ಟ ಪರಂಪರೆಯಿದೆ. ವಿವಿಧ ಪ್ರಕಾರದ ಸಂಗೀತ (ಹಿಂದುಸ್ತಾನಿ, ಶಾಸ್ತ್ರೀಯ, ಸುಗಮ ಸಂಗೀತ, ಜನಪದ, ರಂಗಭೂಮಿ ಸಂಗೀತ) ಕಲೆಯಲ್ಲಿ ಬೀದರ ಜಿಲ್ಲೆಯ ಕಲಾವಿದರಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಖ್ಯಾತಿಯುಂಟು.

ಭಾರತೀಯ ಸಂಗೀತದ ಇತಿಹಾಸದ ಪುಟಗಳಲ್ಲಿ ಬೀದರ ಜಿಲ್ಲೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಚಾಲುಕ್ಯ ಚಕ್ರವರ್ತಿ ಭೂಲೋಕ ಮಲ್ಲನಿಂದ (ಸರ್ವಜ್ಞ ಸೋಮೇಶ್ವರ) ರಚಿಸಲ್ಪಟ್ಟ 'ಮಾನಸೋಲ್ಲಾಸ' ಗ್ರಂಥ ಭಾರತೀಯ ಸಂಗೀತ ಪರಂಪರೆಯಲ್ಲಿಯೇ ಒಂದು ಮೈಲುಗಲ್ಲು ಅದು. ರಚನೆಯಾದುದು ಕಲ್ಯಾಣ (ಇಂದಿನ ಬಸವಕಲ್ಯಾಣ) ಪಟ್ಟಣದಲ್ಲಿ ಎಂಬುದು ಗಮನಾರ್ಹ. ಅದರ ಕಾಲ 1116–1123 ಈ ಗ್ರಂಥಕ್ಕೆ 'ಅಭಿಲಷಿತಾರ್ಥ ಚಿಂತಾಮಣಿ' ಎಂದೂ ಕರೆಯಲಾಗಿದೆ. ಸಂಗೀತ ಹಾಗೂ ಇತರ ಅನೇಕ ವಿಷಯಗಳ ವಿಸ್ತೃತ ಅಧ್ಯಯನ ಒಳಗೊಂಡಿರುವ ಈ ಗ್ರಂಥ ಸಂಗೀತದ ವಿಶ್ವಕೋಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದಕ್ಷಿಣಾದಿ ಸಂಗೀತಕ್ಕೆ 'ಕರ್ನಾಟಕೀ ಸಂಗೀತ'ವೆಂಬ ಮೊಟ್ಟ ಮೊದಲ ಉಲ್ಲೇಖ ದೊರೆಯುವುದು ಈ ಗ್ರಂಥದಲ್ಲಿಯೇ ಎಂಬುದು ವಿದ್ವಾಂಸರ ಅಭಿಪ್ರಾಯ. ಇದು ಸಂಸ್ಕೃತ ಭಾಷೆಯಲ್ಲಿದೆ.

ಭೂಲೋಕಮಲ್ಲನ ಮಗ ಜಗದೇಕಮಲ್ಲನು ಬರೆದ 'ಸಂಗೀತ ಚೂಡಾಮಣಿ' ಸಂಗೀತ ಕ್ಷೇತ್ರದ ಮಹಾನ್ ಗ್ರಂಥವೆಂಬ ಖ್ಯಾತಿ ಪಡೆದಿದೆ. ಇದುವರೆಗೆ ಈ ಗ್ರಂಥ ಕನ್ನಡಿಗರಿಗೆ ಅಜ್ಞಾತವಾಗಿಯೇ ಇದೆ. 'ಮಾನಸೋಲ್ಲಾಸ' ಕನ್ನಡಿಗರಿಗೆ ಬೆಳಕು ಚಲ್ಲಿದಂತೆ 'ಸಂಗೀತ ಚೂಡಾಮಣಿ' ಕನ್ನಡಿಗರ ಪಾಲಿಗೆ ಚೂಡಾಮಣಿಯಾದರೆ ಕನ್ನಡಿಗರ ಭಾಗ್ಯಕ್ಕೆ ಎಣೆಯಿಲ್ಲವೆನ್ನಬೇಕು. ಇಂಥಹ ಎರಡು ಮೇರು ಕೃತಿಗಳನ್ನು ಸಂಗೀತ ಲೋಕಕ್ಕೆ ನೀಡಿದ್ದು ಬೀದರ ಜಿಲ್ಲೆಯ ಹೆಮ್ಮೆಯ ಪರಂಪರೆಯೆಂದು ಹೇಳಬೇಕು.

ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯ ಸಂಗೀತಾದಿ ಲಲಿತ ಕಲೆಗಳಿಗೆ ಅಗ್ರಸ್ಥಾನ ಕಲ್ಪಿಸಿದ ಮೇರು ದೊರೆ ಎನ್ನಬೇಕು. ಆತನ ಕಾಲದಲ್ಲಿ ಸಂಗೀತ ಹಾಗೂ ಇತರ ಕಲೆಗಳಿಗೆ ಕಲಾವಿದರಿಗೆ ರಾಜಮರ್ಯಾದೆ ನೀಡಲಾಗುತ್ತಿತ್ತು. ಆತನ ಪಟ್ಟದರಸಿ 'ಚಂದಲಾದೇವಿ' ಮಹಾನ್ ಸಂಗೀತ ವಿದುಷಿಯಾಗಿದ್ದಳೆಂದು, ಅವಳಿಗೆ 'ಅಭಿನವ ಸರಸ್ವತಿ', 'ನೃತ್ಯ ವಿದ್ಯಾಧರಿ' ಎಂಬ ಬಿರುದುಗಳಿದ್ದವೆಂದು ವಿಕ್ರಮಾದಿತ್ಯನ ಶಾಸನಗಳಿಂದ ತಿಳಿದು ಬರುತ್ತದೆ. ಆತನ ಆಡಳಿತಾವಧಿಯಲ್ಲಿ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಗೋರಟಾ ಗ್ರಾಮ ಸಂಗೀತ ಕಲೆಗಳ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ.

ಗೋರಟಾದಲ್ಲಿ ಸಂಗೀತದ ಬೃಹತ್ ವಿದ್ಯಾಕೇಂದ್ರವಿತ್ತೆಂದು, ಇಲ್ಲಿ ಸುಮಾರು ಇನ್ನೂರು ಜನ ಅಧ್ಯಾಪಕರು ಸಂಗೀತ ವಿದ್ಯಾಪ್ರಸಾರದಲ್ಲಿ ನಿರತರಾಗಿದ್ದರೆಂದು, ಭಾಸ್ಕರ ಚಟ್ಟೋಪಾಧ್ಯಾಯರು ಆ ವಿದ್ಯಾಮಂದಿರದ ಕುಲಪತಿಗಳಾಗಿದ್ದರೆಂದು ಗೋರಟಾದಲ್ಲಿರುವ ಶಾಸನ ಒಂದರಲ್ಲಿ ಉಲ್ಲೇಖಿತವಾಗಿದೆ. ಅಲ್ಲಿರುವ 'ರುದ್ರೇಶ್ವರ' ದೇವರಿಗೆ ನಿತ್ಯ ಸಂಗೀತ ಸಹಿತ ರುದ್ರನ ಅಭಿಷೇಕ ನಡೆಯುತ್ತಿತ್ತೆಂದು ಇತರ ನಾಲ್ಕು ದೇವಾಲಯಗಳಾದ ನಗರೇಶ್ವರ, ಸಂಕೇಶ್ವರ, ಮಲ್ಲೇಶ್ವರ ಮತ್ತು ಕುಂಭೇಶ್ವರ ದೇವರಿಗೆ

ನಿತ್ಯ ಅಭಿಷೇಕ ನಡೆಯುತ್ತಿತ್ತೆಂದು ಶಾಸನದಲ್ಲಿ ಹೇಳಲಾಗಿದೆ. ಹಾಗಾಗಿ ಬೀದರ ಜಿಲ್ಲೆಯ ಸಂಗೀತ ಪರಂಪರೆಯಲ್ಲಿ ಗೋರಟಾ ಗ್ರಾಮಕ್ಕೆ ಮೊದಲ ಆದ್ಯತೆ ಇದೆ. ಇಂದಿಗೂ ಸಹ ಆ ಪರಂಪರೆ ಮತ್ತು ಆದ್ಯತೆಯನ್ನು ಗೋರಟಾ ಗ್ರಾಮ ಉಳಿಸಿಕೊಂಡು ಬಂದಿದೆ ಎಂದು ಹೇಳಬೇಕು. ಅನಂತರ ಬಂದ ಬಹುಮನಿ ರಾಜ್ಯದ ಕೊನೆಯ ಸುಲ್ತಾನ ಕಲೀಮುಲ್ಲಾನ ಕಾಲದಲ್ಲಿ ಬೀದರ ಪಟ್ಟಣದಲ್ಲಿ ಅನಂತ ಸಂಭಾಜಿ ಎಂಬುವನು ಪ್ರಸಿದ್ಧ ಸಂಗೀತ ಗಾರನಾಗಿದ್ದನೆಂದು ಹೇಳಲಾಗುತ್ತದೆ. ಕಲ್ಯಾಣ ಚಾಲುಕ್ಯರ ಆಡಳಿತದ ನಂತರ ಬಂದ ಬಸವಾದಿ ಶಿವಶರಣರ ಕಾಲದಲ್ಲಿ ಸಂಗೀತ ಕಲೆ ಭಕ್ತಿಯ ತಳಹದಿಯ ಮೇಲೆ ಆಧಾರಿತವಾಗಿತ್ತು.

ಹುಮನಾಬಾದ ತಾಲ್ಲೂಕಿನ ಮಾಣಿಕ ನಗರದ 'ಶ್ರೀ ಮಾಣಿಕ ಪ್ರಭು' ಮಹಾರಾಜರ ಸಂಸ್ಥಾನ ಮಠವು ಕಳೆದ ಒಂದೂವರೆ ಶತಮಾನಗಳಿಂದ ಮಾಣಿಕ ನಗರದಲ್ಲಿ ಭಾರತದ ವಿವಿಧ ರಾಜ್ಯಗಳ ಮಹಾನ್ ಸಂಗೀತಗಾರರಿಂದ 'ಸಂಗೀತ ದರ್ಬಾರ' ಇಂದಿಗೂ ನಡೆಯುತ್ತ ಬಂದಿದೆ.

ಬೀದರ ಶಹಾಗಂಜದಲ್ಲಿ ಬಸವೇಶ್ವರ ಮಂದಿರದ ಸಂಗೀತ ದರ್ಬಾರ, ಹುಮನಾಬಾದದ ಶ್ರೀ ವೀರಭದ್ರೇಶ್ವರ ಸಂಗೀತ ದರ್ಬಾರ, ಚಿಟಗುಪ್ಪಾದ ಪಂ. ಪಂಚಾಕ್ಷರ ಗವಾಯಿ ಪುಣ್ಯ ತಿಥಿ, ತಾದಲಾಪೂರದ ಶ್ರೀ ದತ್ತ ಮಂದಿರದ ಸಂಗೀತ ದರ್ಬಾರ, ಗೋರಟಾ ಸಂಗೀತ ಮಹೋತ್ಸವ, ಕುಂಟೇಗಾಂವದ ಶ್ರೀ ಹನುಮಾನ ಸಂಗೀತ ದರ್ಬಾರ, ಗೋರಟಾದ ಶ್ರೀ ರುದ್ರೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಹೈದ್ರಾಬಾದ ಕರ್ನಾಟಕದ ಸಂಗೀತ ಸಭಾ ಬಸವ ಕಲ್ಯಾಣದ ಪಂ. ಪಂಚಾಕ್ಷರ ಗವಾಯಿ ಸಂಗೀತ ಸಮ್ಮೇಳನ, ಹಳೆಂಬರದ ಶ್ರೀ ವೀರಭದ್ರಪ್ಪ ಸಂಗೀತ ದರ್ಬಾರ, ಭಾಲ್ಕಿ ದೇವಿ ನಗರದ ದಸರಾ ಸಂಗೀತ ದರ್ಬಾರ, ಮದಕಟ್ಟಿಯ ಶ್ರೀ ಮಹಾದೇವ ಮಂದಿರದ ಸಂಗೀತ ಮಹೋತ್ಸವ, ಮೇಹಕರ ಹಾಗೂ ಭಾತಮ್ರಾದ ಸಂಗೀತ ದರ್ಬಾರ, ಬೀದರದ ಪಾಪನಾಶ ದೇವಾಲಯ ಸಂಗೀತ ಮಹೋತ್ಸವ, ಚಾಂಗಲೇರ ಶ್ರೀ ವೀರಭದ್ರೇಶ್ವರ ಸಂಗೀತ ಮಹೋತ್ಸವ ಇನ್ನು ಕೆಲವು ಸಂಗೀತ ಜಾಗರಣೆ ಹಾಗೂ ಸಂಗೀತ ಚತುರ್ದಶಿಗಳು ಬೀದರ ಜಿಲ್ಲೆಯ ಸಂಗೀತಕ್ಕೆ ವಿಶಿಷ್ಟ ಮೆರಗನ್ನು, ಉನ್ನತ ಸ್ಥಾನವನ್ನು ಕಲ್ಪಿಸಿವೆ.

ಸಂಗೀತ ಪಾಠಶಾಲೆಗಳು: ಭಾರತೀಯ ಸಂಗೀತ ಕಲೆ ಉಳಿಯಬೇಕು, ಬೆಳೆಯಬೇಕು ಎಂಬ ಉದ್ದೇಶದಿಂದ ಜಿಲ್ಲೆ ಯಾದ್ಯಂತ ಅನೇಕ ಸಂಗೀತ ಪಾಠಶಾಲೆಗಳು ಸಂಗೀತ ಕ್ಷೇತ್ರದ ಕಾರ್ಯವನ್ನು ತುಂಬ ಶ್ರದ್ಧೆಯಿಂದ ಮಾಡುತ್ತಿವೆ. ಅನೇಕ ಆಸಕ್ತರಿಗೆ ಸಂಗೀತ ಶಿಕ್ಷಣ ನೀಡುತ್ತಿವೆ. ಅಂಥವುಗಳಲ್ಲಿ ಗೋರಟಾದ 'ಶ್ರೀ ಶಾರದಾ ಸಂಗೀತ ವಿದ್ಯಾಲಯ' (ಸ್ಥಾಪನೆ: 1959) ಭಾಲ್ಕಿಯ 'ಸರಸ್ವತಿ ಸಂಗೀತ ವಿದ್ಯಾಲಯ, ಮಾಣಿಕ ನರಗದ 'ಶ್ರೀ ಮಾಣಿಕ ಪ್ರಭು ಸಂಗೀತ ವಿದ್ಯಾಲಯ', 'ಗಂಧರ್ವ ಸಂಗೀತ ಪಾಠಶಾಲೆ', 'ಶ್ರೀಮತಿ ಗುರಮ್ಮ ಸಿದ್ಧರೆಡ್ಡಿ ಸಂಗೀತ ವಿದ್ಯಾಲಯ', ಬೀದರಿನ 'ಸಂಗೀತ ಕಲಾಮಂದಿರ' ಹಾಗೂ ಗೋರಟಾದ 'ಶ್ರೀ ರುದ್ರೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಇನ್ನೂ ಅನೇಕ ಸಂಗೀತ ಪಾಠಶಾಲೆ, ವಿದ್ಯಾಲಯಗಳು ಜಿಲ್ಲೆಯ ಸಂಗೀತ ಕಲೆಯ ಬೆಳವಣಿಗೆಗೆ ಉತ್ತೇಜನ ನೀಡುತ್ತವೆ.

1959ರಲ್ಲಿ ಸ್ಥಾಪನೆಗೊಂಡ ಗೋರಟಾದ 'ಶ್ರೀ ಶಾರದಾ ಸಂಗೀತ ವಿದ್ಯಾಲಯ', ಸ್ವಾತಂತ್ರ್ಯೋತ್ತರದ ಹೈದ್ರಾಬಾದ ಕರ್ನಾಟಕದ ಮೊದಲ ಖಾಸಗಿ ಸಂಗೀತ ಪಾಠಶಾಲೆ ಗೋರ ಟಾದ 'ಶ್ರೀ ರುದ್ರೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ' ಜಿಲ್ಲೆಯಾದ್ಯಂತ ಸಂಗೀತ ಶಿಬಿರ, ವಿಚಾರ ಸಂಕಿರಣ, ಸಂಗೀತ ಸಮ್ಮೇಳನ ಹಾಗೂ ಸಂಗೀತ ಸಾಹಿತ್ಯ ಪ್ರಶಸ್ತಿ ನೀಡುವುದರ ಮೂಲಕ ಸಂಗೀತದ ಸುಳಿಗಾಳಿಯನ್ನೇ ಬೀಸತೊಡಗಿದೆ.

ಗಾಯಕರು: ಬೀದರ ಜಿಲ್ಲೆಯ ಗಾಯಕರಲ್ಲಿ ಗೋರಟಾದ ಲಿಂ. ರಾಚೋಟಿಸ್ವಾಮಿ, ಲಿಂ. ರೇವಣಯ್ಯ ಮಠಪತಿ, ಪಂ. ವಿರೂಪಾಕ್ಷಯ್ಯ ಸ್ವಾಮಿ ಗೋರಟಾ, ಪಂ. ವಿರೂಪಾಕ್ಷಯ್ಯ ಸ್ವಾಮಿ ಮೇಲಗಲ್ಲಿ, ಪ್ರೊ. ಸಿದ್ದರಾಮಯ್ಯ ಮಠಪತಿ, ಭಾಲ್ಕಿಯ ಕಾಶೆಪ್ಪ ಗವಾಯಿ ಖಂಡ್ರೆ, ಶೇಖ ಹನ್ನೂಮಿಯಾ ಭಾಲ್ಕಿ, ಅಣ್ಣಾರಾವ ಮಾಸ್ತರ ಗದಲೇಗಾಂವ, ಚಿಟ್ಟಿ ಸಿದ್ರಾಮಪ್ಪ ಹುಮನಾಬಾದ, ಆನಂದರಾಜ ಮಹಾರಾಜ ಮಾಣಿಕ ಪ್ರಭು ಸಂಸ್ಥಾನ, ಮಾಣಿಕ ನಗರ, ವಿಠೂಪಾಕ್ಷಯ್ಯ ಸಾಲಿ ಮಂಠಾಳ, ಕಿಶನ್‌ರಾವ ಮಾಸ್ತರ ವಲಂ, ಕಾಶೆಪ್ಪ ಮೋಳಕೇರಿ ಚಿಟ್ಟಾ, ರಾಚಯ್ಯ ಹಾಗೂ ಚನ್ನಯ್ಯಸ್ವಾಮಿ ಹುಮನಾಬಾದ, ಕರಿಬಸಯ್ಯ ಸ್ವಾಮಿ ಹಾರಕೂಡ, ಸಿದ್ರಾಮಯ್ಯಸ್ವಾಮಿ ದುಬುಲ ಗುಂಡಿ, ಅಣ್ಣಾರಾವ ಜಾವಾ ಹುಮನಾಬಾದ, ಬಸವಣಪ್ಪ ಸಂಗಮ, ರಾಮರಾವ ಮಾಸ್ತರ ರೋಳೆ, ಸಿದ್ಧಯ್ಯಮಠ ಗೋರಟಾ, ಮಾದವರಾವ ಲಂಬೆ ಗುರೂಜಿ ಮೇಹಕರ, ಈಶ್ವರಪ್ಪ ಪಾಂಚಾಳ ಮೇಳಕುಂದಿ, ಜಿ. ವೀರಭದ್ರಪ್ಪ, ವೈಕುಂಠ ದತ್ತ ಮಹಾರಾಜ, ಅಮೀರ ಅಲಿ, ಫತ್ತೇ ಅಹ್ಮದ್ ಗವಾಯಿ ಕಮಲಾನಗರ, ಮುನ್ನಿ ಗವಾಯಿ ಹಳ್ಳಿಖೇಡ, ಪ್ರಭುಲಿಂಗಸ್ವಾಮಿ ಮಂಠಾಳ, ಕಂಠಯ್ಯಮಠ ಸಿದ್ಧೇಶ್ವರ, ಪರಶುರಾಮ ಖಮಿತಕರ ಗವಾಯಿ ಹುಮನಾಬಾದ, ಬೀದರೇತರ ಜಿಲ್ಲೆಯವರಾಗಿದ್ದು ಈಗ ಬಸವಕಲ್ಯಾಣದಲ್ಲಿ ಸಂಗೀತ ಶಿಕ್ಷಕರಾಗಿರುವ ಶೇಷಪ್ಪ ಗವಾಯಿ ಗಬ್ಬೂರ, ಹುಮನಾಬಾದ ಭಾರತೀಯ ಸ್ಟೇಟ್ ಬ್ಯಾಂಕಿನ ಮ್ಯಾನೇಜರ್ ಮುಕುಂದ ಗೋರೆ ಹುಮನಾಬಾದದಲ್ಲಿ ಸಂಗೀತ ಶಿಕ್ಷಕರಾಗಿರುವ ಅಮೀನಸಾ ವಠಾರ ಮುಂತಾದವರು ಉಲ್ಲೇಖನೀಯರಾಗಿದ್ದಾರೆ. ಯುವ ಕಲಾವಿದರಲ್ಲಿ ಮದಕಟ್ಟಿಯ ರಾಜಕುಮಾರ ಹೂಗಾರ, ಸಂಗಯ್ಯ, ನವಲಿಂಗ ಮುಂತಾ ದವರು ಸಂಗೀತ ಕಲೆಯಲ್ಲಿ ಮುಂದೆ ಬರುತ್ತಿದ್ದಾರೆ.

ಸುಗಮ ಸಂಗೀತದಲ್ಲಿ ರಾಮುಲು ಗಾದಗೀಕರ, ಕಾಶಿನಾಥ ಪಂಚಶೀಲ ಗವಾಯಿ, ಶಿವಲಿಂಗಯ್ಯ ಸ್ವಾಮಿ ಬಸವ ಕಲ್ಯಾಣ, ಭದ್ರಪ್ಪಪಾಟೀಲ ತ್ರಿಪುರಾಂತ, ರಾಚಯ್ಯಸ್ವಾಮಿ, ಯಲದ ಗುಂಡಿ, ಧೂಳಯ್ಯ ಸ್ವಾಮಿ ಬೆಂಬಳಗಿ, ಚನ್ನಬಸಯ್ಯ ಸ್ವಾಮಿ ವಡಗಾವ, ಮಾಣಿಕಪ್ಪ ಬಸವಕಲ್ಯಾಣ, ಬಸವಣಪ್ಪ ಶೀಲವಂತ ಪ್ರತಾಪೂರ, ರೇವಣಸಿದ್ದಯ್ಯಸ್ವಾಮಿ ಬಸವಕಲ್ಯಾಣ. ಚನ್ನ ಬಸಪ್ಪ ಕುಂಬಾರ, ವಿಶ್ವನಾಥ ರಾಜೇಶ್ವರ, ರೇವಪ್ಪ ಮಾಸ್ತರ

ಮುಚಳಂಬಿ, ಪಂಚಾಕ್ಷರಿ ಸ್ವಾಮಿ ಗೌಡಗಾಂವ, ಬಲವಂತರಾವ ಕುಲಕರ್ಣಿ, ಕಾಶಿನಾಥ ಹಡಗಾಪುರ, ಸುರೇಶ ಪೂಜಾರಿ, ಜಗನ್ನಾಥ ನಾಣಕೇರಿ, ಮಲ್ಲಿಕಾರ್ಜುನಪ್ಪ ಹತ್ತಿ, ವೀರಶೆಟ್ಟೆಪ್ಪ ಬೇಲೂರ ಇನ್ನೂ ಅನೇಕರು ಹೆಸರು ಮಾಡಿದ್ದಾರೆ.

ತಬಲಾ ಕಲಾವಿದರು: ತಬಲಾ ವಾದನ ಕಲೆಯಲ್ಲಿ ಬೀದರ ಜಿಲ್ಲೆಯ ಕಲಾವಿದರು ವಿಪುಲ ಸಂಖ್ಯೆಯಲ್ಲಿದ್ದಾರೆ. ಪ್ರಭುಲಿಂಗ ಸ್ವಾಮಿ ಹಾಗೂ ಚನ್ನಬಸಯ್ಯ ಸ್ವಾಮಿ ಮೇಹಕರ, ಬಸಯ್ಯಸ್ವಾಮಿ ಮೇಹಕರ, ಭೀಮರಾವ ಸಂಗಮಕರ, ಕೇಶವರಾವ ವಾಘಮಾರೆ ಹಾಗೂ ಜನಾರ್ಧನ ವಾಘಮಾರೆ ಹುಮನಾಬಾದ, ಕೇಶವರಾವ ಸೂರ್ಯವಂಶಿ ಭಾಲ್ಕಿ, ಕಾಶಿನಾಥ ಇಗವೆ ಭಾಲ್ಕಿ, ಪ್ರತಾಪ ಮೋರೆ ಮೇಹಕರ, ರೇವಣಪ್ಪ ಹೂಗಾರ ಹಾಗೂ ನಾಗಶೆಟ್ಟಿ ಹೂಗಾರ ಮದಕಟ್ಟಿ, ಗುರುಲಿಂಗಪ್ಪ ಗೌಡನವರ ಮದಕಟ್ಟಿ, ಕಾಶೆಪ್ಪ ಹೆಗಣೆ, ಚಂದ್ರಶೇಖರ ಮಠಪತಿ ಮೇಲಗಲ್ಲಿ, ರಾಚಯ್ಯ ಮಠಪತಿ ಗೋರಟಾ (ಪೊಲೀಸ್) ವಾಮನರಾವ್ ಕುಲಕರ್ಣಿ ಬೀದರ, ಬಾಬು ವಾಘಮಾರೆ ಹುಮನಾಬಾದ, ಲಕ್ಷ್ಮಣರಾವ್ ಅಂಬರಖಾನ್ ಬಸವಕಲ್ಯಾಣ, ಸಿಂಧೆ ಬಸವಕಲ್ಯಾಣ, ಹಾವಗೆಪ್ಪ ರಾಜೋಳೆ ಗೋರಟಾ, ವೀರಪ್ಪ ಮಾಲಿಪಾಟೀಲ ಗೋರಟಾ-ಮುಂತಾದ ಕಲಾವಿದರು ಉಲ್ಲೇಖನೀಯರಾಗಿದ್ದಾರೆ. ಬೀದರೇತರ ಜಿಲ್ಲೆಯವರಾಗಿದ್ದು ಈಗ ಬಸವಕಲ್ಯಾಣದ ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜರ್ ಆಗಿರುವ ಸುಧಾಕರ ಕಾರ್ನಾಡ ತಬಲಾ ವಾದನದಲ್ಲಿ ವಿಶೇಷ ಪರಿಣಿತಿ ಪಡೆದಿದ್ದಾರೆ.

ಸಿತಾರ: ಸಿತಾರ ವಾದನದಲ್ಲಿ ಗೋರಟಾದ ಪಂ. ವಿರೂಪಾಕ್ಷಯ್ಯ ಸ್ವಾಮಿ ಹಾಗೂ ಅವರ ಮಗ ಶ್ರೀ ರುದ್ರೇಶ್ವರ ಅವರ ಹೆಸರು ಉಲ್ಲೇಖನೀಯವಾಗಿದೆ.

ಪಿಟೀಲ: ಪಿಟೀಲ ವಾದನದಲ್ಲಿ ಗೋರಟಾ ಗ್ರಾಮದ ಪಂ. ವಿರೂಪಾಕ್ಷಯ್ಯ ಸ್ವಾಮಿ ಮೇಲಗಲ್ಲಿ ಅವರ ಹೆಸರು ಪ್ರಸಿದ್ಧವಾಗಿದೆ.

ಕೊಳಲು: ಕೊಳಲು ವಾದನದಲ್ಲಿ ಖಟಕ ಚಿಂಚೋಳಿಯ ಶ್ರೀ ಹನುಮಂತಪ್ಪ ಚಿದರಿ (ಪೋಲೀಸ್) ಇವರ ಹೆಸರು ವಿಶೇಷ ಪ್ರಸಿದ್ಧಿ ಪಡೆದಿದೆ.

ಹಾರ್ಮೋನಿಯಂ: ಹಾರ್ಮೋನಿಯಂ ವಾದನದಲ್ಲಿ ರಾಷ್ಟ್ರೀಯ ಖ್ಯಾತಿ ಗಳಿಸಿದ ನನ್ನೇಬಾಬು ಕುವರ ಅವರ ಹೆಸರು ವಿಶೇಷ ಪ್ರಸಿದ್ಧಿ ಪಡೆದಿದೆ. ಭೀಮರಾವ ಮಾಸ್ತರ ಘಾಟ ಬೋರೋಳ, ರಾಜೇಂದ್ರಸಿಂಗ ಪವಾರ ಬೀದರ, ನೂರಂದಯ್ಯ ಸ್ವಾಮಿ ಗಡಿಗೌಡಗಾಂವ, ಶಂಕರಗುಡಿ ಗುರುಪಾದಯ್ಯ ಬಸವಕಲ್ಯಾಣ, ನಾಗಣ್ಣ ಭೂಶೆಟ್ಟಿ ಬಸವಕಲ್ಯಾಣ, ಕಲ್ಲಯ್ಯ ಸ್ವಾಮಿ ಲದ್ದಿ, ಅಣ್ಣಾರಾವ ಮಾಸ್ತರ ಮುಂತಾದವರು ಹೆಸರು ಪಡೆದಿದ್ದಾರೆ. ನೃತ್ಯ ಕಲೆಯಲ್ಲಿ ಬೀದರ ಜಿಲ್ಲೆಯ ಸಂಗೀತ ಕಲಾವಿದರು ಇಲ್ಲವೆನ್ನಬೇಕು.

(ಎಸ್ಎಂಜಿ)

ಸಂಜೀವ ಎಂ.



ಸಂಜೀವ ಎಂ.: ವ್ಯಂಗ್ಯ ಚಿತ್ರ ಕಲಾವಿದ. ವ್ಯಂಗ್ಯ ಚಿತ್ರಗಳೆಂದರೆ, ಪತ್ರಿಕೆಗಳಿಗೆ ಮಾತ್ರ ಸೀಮಿತ. ಪ್ರತಿಕೋದ್ಯಮದಿಂದ ತೀರ ಹಿಂದುಳಿದ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ವ್ಯಂಗ್ಯ ಚಿತ್ರಗಳು ಹಾಗೂ ವ್ಯಂಗ್ಯ ಚಿತ್ರಕಾರರನ್ನು ಹುಡುಕುವುದು ಬಹು ಕಷ್ಟ ಉಪಜೀವನವೇ ಇಲ್ಲವೆಂದರೆ, ಆ ಕಲೆಯಾದರೂ ಯಾತಕ್ಕೆ ಎಂಬ ಉದಾಸೀನತೆಯಿಂದಲೋ ಅಥವಾ ಸಮಾಜದ ಅಣುಕು ಮಾಡಲು ಆಸಕ್ತಿಯಲ್ಲೋ ಏನೋ ವ್ಯಂಗ್ಯ ಚಿತ್ರಕಾರರು ಈ ಭಾಗದಲ್ಲಿ ಹುಡಕಿದರೆ, ಬೆರಳೆಣಿಕೆಯಷ್ಟು ಮಾತ್ರ ಸಿಕ್ಕಬಹುದು.


ಈ ಭಾಗದಲ್ಲಿ ರಾಜಕೀಯ ಚಟುವಟಿಕೆಗಳು, ಸಾಕಷ್ಟಿದ್ದರೂ, ರಾಜಕೀಯ ವಿಷಯ ಆಧರಿಸಿ ವ್ಯಂಗ್ಯ ಚಿತ್ರಕಾರರ ಸಂಖ್ಯೆಯಂತೂ ಇನ್ನೂ ಕಡಿಮೆ. ಸಾಮಾನ್ಯವಾಗಿ ಪತ್ರಿಕೋದ್ಯಮ ಯಾವ ಭಾಗದಲ್ಲಿ ಪ್ರಖರವಾಗಿರುತ್ತದೆಯೋ ಆ ಭಾಗದಲ್ಲಿ ವ್ಯಂಗ್ಯ ಚಿತ್ರಕಾರರೂ ಹುಟ್ಟಿಕೊಳ್ಳುತ್ತಾರೆ. ಅವರಿಗೆ ಅವಕಾಶಗಳೂ ದೊರೆಯುತ್ತವೆ. ಹೊಸ ಹೊಸ ಯುವ ಕಲಾವಿದರಲ್ಲಿ ಈ ಕುರಿತು ಆಸಕ್ತಿಯೂ ಮೂಡುತ್ತದೆ.

ಈ ರೀತಿ ಆಸಕ್ತಿ ಮೂಡಿಸಿಕೊಂಡು, ವ್ಯಂಗ್ಯ ಚಿತ್ರವನ್ನೇ ವೃತ್ತಿಯನ್ನಾಗಿ ಸ್ವೀಕರಿಸಿದವರು ಕಲಬುರ್ಗಿಯ ಯುವ ಕಲಾವಿದ ಎಂ. ಸಂಜೀವ. ಕಲಬುರ್ಗಿ ಭಾಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪತ್ರಿಕೋದ್ಯಮ ಬೆಳೆಯುತ್ತಿದೆ. ಇವರಿಗೆ ಅಂಥ ದೊಡ್ಡ ಅವಕಾಶಗಳು ದೊರೆಯದಿದ್ದರೂ, ಇದನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಮೂಲತಃ ಬೀದರ ಜಿಲ್ಲೆಯವರಾದ ಇವರು. ಸೇಡಂ ಮತ್ತು ಕಲಬುರ್ಗಿಯಲ್ಲಿ ಶಿಕ್ಷಣ ಪಡೆದರು. ವಿಶ್ವಕರ್ಮ ಸಮಾಜದಲ್ಲಿ ಕಲೆ ಎಂಬುದು ರಕ್ತಗತವಾಗಿ ಬರುತ್ತದೆ ಎಂಬ ಹಿರಿಯರ ನುಡಿಯಂತೆ, ಇದರಲ್ಲಿ ಸುಪ್ತವಾಗಿದ್ದ ಕಲಾವಿದ ಬಣ್ಣದ ಲೋಕ ಬಿಟ್ಟು ವ್ಯಂಗ್ಯ ಚಿತ್ರರಂಗವನ್ನು ಆಯ್ಕೆ ಮಾಡುವ ಮೂಲಕ, ಈ ಭಾಗದಲ್ಲಿ ಭರವಸೆ ಮೂಡಿಸಿದ ಕಲಾವಿದರಾಗಿ ಬೆಳೆಯುತ್ತಿದ್ದಾರೆ.

ಇವರು ಕಲಾ ಪದವೀಧರಾಗಿದ್ದು ಬಾಲ್ಯದಲ್ಲಿ ನಾಡಿನ ದಿನಪತ್ರಿಕೆಗಳನ್ನು ಅಜ್ಜ ಅಜ್ಜಿಯ ಜೊತೆಗೆ ಓದುತ್ತಿದ್ದರು. ಪತ್ರಿಕೆಗಳ ಬಗ್ಗೆ ಹವ್ಯಾಸ ಬೆಳೆಸಿಕೊಂಡು ಕಥೆ, ಕವನ, ಲೇಖನ ಓದುವುದು, ವ್ಯಂಗ್ಯ ಚಿತ್ರ ನೋಡುವುದು ದೈನಂದಿನ ಚಟುವಟಿಕೆಯಾಗಿತ್ತು. ಅಟಲ್‌ಬಿಹಾರಿ ವಾಜಪೇಯಿ, ಸೋನಿಯಾ ಗಾಂಧಿ, ಜಾರ್ಜ್ ಫರ್ನಾಂಡೀಸ್, ಮನಮೋಹನ್ ಸಿಂಗ್, ಕರುಣಾನಿಧಿ, ಲಾಲೂಪ್ರಸಾದ ಯಾದವ, ರಾಹುಲ ಗಾಂಧಿ, ಪ್ರಿಯಾಂಕ ಗಾಂಧಿ, ಜೆ.ಹೆಚ್. ಪಟೇಲ್ ಮತ್ತು ಎಸ್.ಎಂ. ಕೃಷ್ಣ ಹೀಗೆ


ಪಂ. ಮಲ್ಲಿಕಾರ್ಜುನ ಮನ್ಸೂರ


ಅಲ್ಲಾ ರಖಾ


ಪಂ. ಜಸ್‌ರಾಜ್


ಪಂ. ಶಿವಕುಮಾರ ಶರ್ಮಾ


ಪಂ. ಉಸ್ತಾದ್ ಜಾಕೀರ್ ಹುಸೇನ್


ವಿಶ್ವಮೋಹನ ಭಟ್


ಪಂ. ಹರಿಪ್ರಸಾದ ಚೌರೀಸಿಯಾ


ಪ್ರವೀಣ ಗೋಡಖಿಂಡಿ


ಉಸ್ತಾದ್ ರಶೀಕ್ ಖಾನ್


ಸಂಗೀತಾ ಕಟ್ಟಿ-ಕುಲಕರ್ಣಿ

ಮಾಣಿಕ ನಗರದ ಸಂಗೀತ ದರ್ಬಾರನ ವಿವಿಧ ದೃಶ್ಯಾವಳಿ ಚಿತ್ರ ಸೂಚಿ – ೫೬



ವರ್ಣ ಸಿಂಧು ನೃತ್ಯ ಕಲಾ ಕೇಂದ್ರ, ಗುಲಬರ್ಗಾ



ಗಿರಿಜಾದೇವಿ ನೃತ್ಯ ಕಲಾ ಶಾಲೆ, ಗುಲಬರ್ಗಾ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಬಿಸಿಲ ಬೆಳಗು ಸಂಪುಟ



ಕೇಶವರಾವ್ ವಾಘಮಾರೆ



ಕೇಶವರಾವ್ ಸೂರ್ಯವಂಶಿ



ಪ್ರೊ. ಹನುಮಣ್ಣ ನಾಯಕ ದೊರೆ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಲಲಿತಕಲೆಗಳ ಸಂಪುಟ

ಅನೇಕ ನಾಯಕರುಗಳ ಕ್ಯಾರಿಕೇಚರಗಳ ಸಂಗ್ರಹವೇ ಇವರಲ್ಲಿದೆ. ಮೇವು ಹಗರಣ, ಬೋಫೋರ್ಸ್, ಮ್ಯಾಚ್ ಫಿಕ್ಸಿಂಗ್, ತೆಹಲ್ಕಾ ಮುಂತಾದ ಹಗರಣ ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಇವರು ತಮ್ಮ ಕುಂಚದಲ್ಲಿ ಪರಿಣಾಮಕಾರಿಯಾಗಿ ವ್ಯಂಗ್ಯ ಚಿತ್ರಗಳನ್ನು ಬಿಡಿಸಿ, ಆಸಕ್ತರ ಗಮನ ಸೆಳೆದರು.

ನೂರು ಶಬ್ದಗಳಲ್ಲಿ ಹೇಳಲಾಗದ್ದನ್ನು ಒಂದು ಚಿತ್ರದಲ್ಲಿ ಹೇಳಬಹುದು ಎಂಬಂತೆ, ಇವರು ತಮ್ಮ ವ್ಯಂಗ್ಯ ಚಿತ್ರದಲ್ಲಿ ಕಾವು ಆರದಂತೆ ಸಾಕಷ್ಟು ಹರಿತವಾಗಿಯೇ ಚಿತ್ರಗಳನ್ನು ಬಿಡಿಸಿ, ಪತ್ರಿಕೆಗಳಿಗೆ ನೀಡುತ್ತಿದ್ದರು. ನಿತ್ಯ ಪತ್ರಿಕೆಗಳನ್ನು ಓದುವುದು ಅವುಗಳ ಮೂಲಕ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಭ್ರಷ್ಟಾಚಾರ, ಬಡತನ ನಿರ್ಮೂಲನೆಯ ವೈಫಲ್ಯ, ಕರ್ತವ್ಯ ಲೋಪ, ವಿವಿಧ ಇಲಾಖೆ ಅಧಿಕಾರಿಗಳ ಹಾಗೂ ಪೊಲೀಸ್ ಕಾರ್ಯ ವೈಖರಿ ಮುಂತಾದವುಗಳನ್ನು ತಮ್ಮ ವ್ಯಂಗ್ಯ ಚಿತ್ರಗಳ ಮೂಲಕ ಎತ್ತಿತೋರಿಸುವುದೇ ವ್ಯಂಗ್ಯ ಚಿತ್ರಕಾರರ ಕರ್ತವ್ಯವಾಗಿದೆ ಎಂದು ಇವರು ಹೇಳುತ್ತಾರೆ.

ಇವರ ಅನೇಕ ವ್ಯಂಗ್ಯ ಚಿತ್ರಗಳ ನಾಡಿನ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಐತಿಹಾಸಿಕ ಸ್ಮಾರಕಗಳು ಮತ್ತು ಕಲಾವಿದರು ಕುರಿತು ಸಾಕಷ್ಟು ಲೇಖನಗಳನ್ನು ಬರೆದಿದ್ದಾರೆ. ಸುದ್ದಿ ಸಂಗತಿಯಲ್ಲಿ 'ತುಂಟ ಬಬಲಾ ಕಾಮಿಕ್ಸ್' ಸುಮಾರು 250 ಸಂಚಿಕೆಗಳಿಗೆ ತಮ್ಮ ವ್ಯಂಗ್ಯ ಚಿತ್ರ ಸರಣಿ ರೂಪದಲ್ಲಿ 1987ರಲ್ಲಿ ಪ್ರಕಟವಾಗಿವೆ. ಅಮ್ಮ ರೆಕ್ಕೆ ಹಚ್ಚು, ಗೀಜಗನ ಗೂಡು, (ಮಕ್ಕಳ ಕಥೆಗಳು) ಎರಡರಲ್ಲಿ ಸಾಂದರ್ಭಿಕ ಚಿತ್ರಗಳನ್ನು ಬಿಡಿಸಿದ್ದಾರೆ.

ಕಲಬುರ್ಗಿಯಲ್ಲಿ 1989ರಲ್ಲಿ ಜರುಗಿದ 25ನೇ ವ್ಯಂಗ್ಯ ಚಿತ್ರಕಾರರ ರಾಜ್ಯಮಟ್ಟದ ಸಮ್ಮೇಳದಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಇವರ ವ್ಯಂಗ್ಯ ಚಿತ್ರಕ್ಕೆ ಬಹುಮಾನವೂ ದೊರೆಯಿತು. ಉದಯೋನ್ಮುಖ ಯಾವ ಬರಹಗಾರರ ಬಳಗ ಕಲಬುರ್ಗಿ 1993ರಲ್ಲಿ ಏರ್ಪಡಿಸಿದ್ದ ಪರಿಸರ ಸಂರಕ್ಷಣೆ ಕುರಿತು ರಾಜ್ಯ ಮಟ್ಟದ ಭಿತ್ತಿಚಿತ್ರ ಸ್ಪರ್ಧೆಯಲ್ಲಿ ಇವರಿಗೆ ಪ್ರಥಮ ಸ್ಥಾನ ದೊರೆಯಿತು.



ವ್ಯಂಗ್ಯ ಚಿತ್ರ

ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘ 1999 ಫೆಬ್ರುವರಿ 19.20.21ರಂದು ರಾಜ್ಯ ಸರಕಾರದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ನೆರವಿನಿಂದ ಆಯೋಜಿಸಿದ್ದ ವ್ಯಂಗ್ಯಚಿತ್ರಕಾರರ ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಭಾಗಗಳ 23 ವ್ಯಂಗ್ಯಚಿತ್ರ ಕಲಾವಿದರನ್ನು ಆಯ್ಕೆ ಮಾಡಲಾಗಿತ್ತು ಇದರಲ್ಲಿ ಕಲಬುರ್ಗಿಯಿಂದ ಇವರು ಒಬ್ಬರಾಗಿದ್ದರು.


ಯುವ ವ್ಯಂಗ್ಯಚಿತ್ರ ರಚನೆ ಕಲೆಯ ಉಗಮ ಮತ್ತು ಬೆಳವಣಿಗೆ ಚಿತ್ರ ರಚನೆಯಲ್ಲಿ ಆಯ್ಕೆ ಕಂಪ್ಯೂಟರ್ ಬಳಸಿ ಇಂದಿನ ಹೊಸ ಪದ್ಧತಿಯಲ್ಲಿ ವ್ಯಂಗ್ಯಚಿತ್ರ ಹೇಗೆ ಬರೆಯಬೇಕು ಎಂಬಿತ್ಯಾದಿ ವಿಷಯಗಳ ಕುರಿತು ಕಾರ್ಯಾಗಾರದಲ್ಲಿ ವೃತ್ತಿ ನಿರತ ಹಿರಿಯ ವ್ಯಂಗ್ಯ ಚಿತ್ರಕಾರರು ಮಾಹಿತಿ ನೀಡಿದರು. ಇದರಿಂದ ನಮಗೆ ಅನೇಕ ಹೊಸ ವಿಷಯಗಳು ಹಾಗೂ ತಾಂತ್ರಿಕತೆಯ ಮಾಹಿತಿ ದೊರೆಯಿತು ಎಂದು ಹೇಳುತ್ತಾರೆ. ಇವರು ಕ್ರಾಂತಿ ಕನ್ನಡ ದಿನಪತ್ರಿಕೆಯಲ್ಲಿ 10 ವರ್ಷ ವ್ಯಂಗ್ಯ ಚಿತ್ರಕಾರರಾಗಿ ಸೇವೆ ಸಲ್ಲಿಸಿದ್ದಾರೆ. ಸಿದ್ದರಾಮೇಶ್ವರ, ಎನ್.ಕೆ. ಕುಲಕರ್ಣಿ, ಇಂದೂಧರ ಹೊನ್ನಾಪುರ ಮುಂತಾದ ಸಂಪಾದಕರ ಪ್ರೋತ್ಸಾಹ ಸ್ಮರಿಸುತ್ತಾರೆ. ಪ್ರಸ್ತುತ ರಾಯಚೂರ ವಾಣಿ ಕನ್ನಡ ದಿನಪತ್ರಿಕೆಯಲ್ಲಿ ವ್ಯಂಗ್ಯ ಚಿತ್ರಕಾರರಾಗಿ ಕೆಲಸ ಮಾಡುತ್ತಿದ್ದಾರೆ.

ವ್ಯಂಗ್ಯ ಚಿತ್ರಕಾರ ತನ್ನ ಚಿತ್ರದ ಮೂಲಕ ಓದುಗರಿಗೆ ರಾಜಕೀಯ ಸಾಮಾಜಿಕ ಮುಂತಾದ ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ನೀಡಿ, ಜನಸಾಮಾನ್ಯರ ಧ್ವನಿಯನ್ನು ಪ್ರತಿಧ್ವನಿಸ ಬಯಸುತ್ತಾರೆ. ಸತ್ಯಾಸತ್ಯತೆಯನ್ನು ಓದುಗರಿಗೆ ಹಾಗೂ ಅನಕ್ಷರಸ್ಥರಿಗೂ (ಪತ್ರಿಕೆ) ಪರಿಚಯಿಸುತ್ತದೆ. ಈ ರೀತಿಯಾಗಿ ತಮ್ಮದೇ ಆದ ಮಾಧ್ಯಮದ ಮೂಲಕ ಸಮಾಜದ ಸ್ಥಿತಿಗತಿಗಳನ್ನು ಚಾಟಿ ಏಟಿನಂತೆ ವ್ಯಂಗ್ಯ ಚಿತ್ರಗಳು ಬಿಂಬಿಸುತ್ತವೆ ಎಂದು ಅವರು ಹೇಳುತ್ತಾರೆ ಇವರಿಗೆ ವ್ಯಂಗ್ಯ ಚಿತ್ರಕಾರರಾದ ಆರ್.ಕೆ. ಲಕ್ಷ್ಮಣ, ಬಿ.ವಿ. ರಾಮಮೂರ್ತಿ, ಬಾಳಠಾಕ್ರೆ, ನರೇಂದ್ರ, ಜಿ.ವೈ. ಹುಬ್ಬಳಿಕರ್ ಅವರು ತಮ್ಮ ಆದರ್ಶವಾಗಿದ್ದಾರೆ. ಅವರು ಆಯ್ಕೆ ಮಾಡುವ ವಿಷಯಗಳು ಹಾಗೂ ಚಿತ್ರಗಳು ಹೆಚ್ಚು ತೀಕ್ಷ್ಣವಾಗಿರುತ್ತವೆ ತುಂಬ ಪರಿಣಾಮಕಾರಿಯಾಗಿರುತ್ತವೆ ಎನ್ನುತ್ತಾರೆ. ವರದಕ್ಷಿಣೆ, ನಿರುದ್ಯೋಗ, ಏಡ್ಸ್, ಜನಸಂಖ್ಯೆ, ಸಾಕ್ಷರತೆ, ಪರಿಸರ ಮಾಲಿನ್ಯ, ಪಾಶ್ಚಿಮಾತ್ಯ ಸಂಸ್ಕೃತಿಯ ದಾಳಿ ಮುಂತಾದ ಸಾಮಾಜಿಕ ಸಮಸ್ಯೆಗಳ ಮೇಲೆ ಗಮನ ಸೆಳೆಯಲು ತಾವೊಂದು ವ್ಯಂಗ್ಯ ಚಿತ್ರಗಳ ಪ್ರದರ್ಶನ ಏರ್ಪಡಿಸುವ ಮಹತ್ತರವಾದ ಅಪೇಕ್ಷೆ ಹೊಂದಿರುವುದಾಗಿ ಹೇಳಿದರು. ಕೇವಲ ರೇಖೆಗಳಿಂದ ಸಮಾಜವನ್ನು ತಿದ್ದಲು ಹೊರಟಿರುವ ವ್ಯಂಗ್ಯ ಚಿತ್ರಕಲೆಯ ಪರಂಪರೆಯನ್ನು ಅವರು ಬಿಂಬಿಸುವ ಭಾವನೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಅನೇಕ ಸುಪ್ತ ಪ್ರಜ್ಞೆಯ ಶಿಲ್ಪಿಗಳು ನಮ್ಮ ನಾಡಿನಲ್ಲಿದ್ದಾರೆ. ಇವರನ್ನು ಪರಿಚಯಿಸುವ ಪ್ರೋತ್ಸಾಹಿಸುವ ಹಾಗೂ ಸಹಾಯ ಹಸ್ತದ ಪರಿಸರವನ್ನು ಸರಕಾರ ಕಲ್ಪಿಸಿದ್ದೇ ಆದಲ್ಲಿ ನಮ್ಮ ನಾಡಿನ ಈ ವ್ಯಂಗ್ಯ ಚಿತ್ರ ಮಾಧ್ಯಮದ ಕಲಾವಿದರು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚುವ ಸಾಮರ್ಥ್ಯ ಪಡೆಯುವ ದಿನಗಳು ದೂರವಿಲ್ಲ.

(ಎನ್‌ಎಂಜೆ)



ಸಂತೋಷ ಆರ್. ರಾಠೋಡ್: ಒಬ್ಬ ಸೃಜನಶೀಲ ಕಲಾವಿದ. 1978 ಜೂನ್ 16ರಂದು ಗುಲಬರ್ಗಾದಲ್ಲಿ ಜನಿಸಿದರು. ಇವರು ದೃಶ್ಯಕಲೆಯಲ್ಲಿ ಎಂ.ಎಫ್.ಎ ಸ್ನಾತಕೋತ್ತರ ಪದವಿಯನ್ನು ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾದಿಂದ ಪಡೆದಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ಹಲವಾರು ಚಿತ್ರಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಚಿತ್ರ ಕಲಾಕೃತಿಗಳಿಗೆ 2001ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, 2002 ರಲ್ಲಿ ಸೌತ್ ಸೆಂಟರ್ ಝೋನ್ ಕಲ್ಚರಲ್ ಸೆಂಟರ್ ನಾಗಪೂರದ ಪ್ರಶಸ್ತಿ, 2003ರಲ್ಲಿ ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ, 2005ರಲ್ಲಿ ಪ್ರತಿಷ್ಠಿತ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಸಂದಿದೆ. ಅನೇಕ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶಿತವಾಗಿದೆ. ಈ ಕಲಾವಿದರು ಆಕ್ರಲಿಕ್ ಮಾಧ್ಯಮವನ್ನು ಪ್ರಯೋಗಾತ್ಮಕವಾಗಿ ಉಪಯೋಗಿಸಿ ಕಲಾಕೃತಿಗಳನ್ನು ರಚಿಸುತ್ತಾರೆ. ಇವರು ಕಲಾಕೃತಿಗಳ ರಚನೆ ಜೊತೆ ಜೊತೆಗೆ ಹಲವಾರು ಭಿತ್ತಿಚಿತ್ರಗಳನ್ನು ನಿರ್ಮಿಸಿದ್ದಾರೆ.



'Krishney' ಅಕ್ರೇಲಿಕ್ ಮಾಧ್ಯಮ


ಇವರ ಕಲಾಕೃತಿಗಳು ಗುಲಬರ್ಗಾ ವಿಶ್ವವಿದ್ಯಾಲಯ, ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾ, ಲಲಿತಕಲಾ ಅಕಾಡೆಮಿ ಬೆಂಗಳೂರು, ಪುಲ್ಲಯ್ಯ ಕಲಾ ನಿಲಯಮ್ ಆಂಧ್ರಪ್ರದೇಶ, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಕೈಬಲ್ ಆರ್ಟ್ ಪೌಂಡೇಶನ ಹೈದ್ರಾಬಾದಗಳಲ್ಲಿ ಇವರ ಚಿತ್ರಕಲಾಕೃತಿಗಳು ಸಂಗ್ರಹಗೊಂಡಿವೆ. (ಪಿಪಿ)



ಸಂತೋಷ ವಿ. ಅಂದಾನಿ: ಕಲೆ ಸಂಸ್ಕೃತಿಯು ಕಾಲದಿಂದ ಕಾಲಕ್ಕೆ ಬದಲಾಗುತ್ತ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತವೆ. ಆಯಾ ಕಾಲದ ಸಮಕಾಲೀನ ವಿಷಯ ಹಾಗೂ ಪರಿಕರಗಳನ್ನು ಬಳಸಿಕೊಂಡು ಸೃಜನಾತ್ಮಕವಾಗಿ ಕಲಾ ಸೃಷ್ಟಿ ಮಾಡುತ್ತ ಸಮಕಾಲೀನ ವಿಚಾರ ಹಾಗೂ ಬೆಳವಣಿಗೆಯನ್ನು ಹೊಸ ಶೈಲಿಯೊಂದಿಗೆ ಅಭಿವ್ಯಕ್ತಿಗೊಳಿಸುವುದು ಅಂದಿನ ಸಮಕಾಲೀನ ಕಲಾವಲಯದಲ್ಲಿ ವಿಶಿಷ್ಟವಾಗಿ ನಿಲ್ಲಲು ಸಾಧ್ಯ ಅಂಥ ಪ್ರಯತ್ನದಲ್ಲಿ ತೊಡಗಿ ಕಲಾಸೃಷ್ಟಿ ಮಾಡುತ್ತಿರುವ ಯುವ ಕಲಾವಿದರಲ್ಲಿ ಒಬ್ಬರಾಗಿ ಕರ್ನಾಟದ ಕಲಾಕ್ಷೇತ್ರದಲ್ಲಿ ಗುರುತಿಸಿಕೊಂಡು ಕಾರ್ಯೋನ್ಮುಖರಾಗಿದ್ದಾರೆ.

ಕಲಬುರ್ಗಿ ಜಿಲ್ಲೆಯ ಹೊನ್ನಕಿರಣಗಿಯ ಸುಸಂಸ್ಕೃತ ರೈತ ಕುಟುಂಬದ ಇವರ ತಂದೆ ವಿಶ್ವನಾಥ ಅಂದಾನಿ ತಾಯಿ ಸುಜಾತಾ ಅಂದಾನಿ ಮಗನಾಗಿ 1982 ಜೂನ್ 21ರಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ರಾಯಚೂರಿನಲ್ಲಿ ಮುಗಿಸಿದರು. ಇವರ ತಂದೆ ಉದ್ಯೋಗಕ್ಕಾಗಿ ರಾಯಚೂರಿನಲ್ಲಿಯೇ ನೆಲೆಸಿದ್ದು ತಮ್ಮ ಮಗ 'ಸಾಫ್ಟ್‌ವೇರ್ ಇಂಜಿನೀಯರ್ ಅಥವಾ ದೊಡ್ಡ ಉದ್ಯಮಿಯಾಗಬೇಕೆಂಬ ಬಯಕೆಯಾಗಿತ್ತು. ಆದರೆ ಸಂತೋಷ ಎಂ.ಎಂ.ಕೆ. ಕಲಾ ಶಾಲೆಗೆ ಪ್ರವೇಶ ಪಡೆದು ಕಲಾ ಶಾಲೆಯಲ್ಲಿ ಉತ್ತಮ ಕಲಾ ಶಿಕ್ಷಣವನ್ನು ಪಡೆದು ಬಿ.ಎಫ್.ಎ. ಪೇಂಟಿಂಗ್ ಪದವಿಯನ್ನು ಪಡೆದುಕೊಂಡು ಸದಾ ಲವಲವಿಕೆಯಿಂದ ಎಲ್ಲರ ಗಮನ ಸೆಳೆಯುತ್ತ ಕಲೆ ಕಲಾವಿದರ ಕುರಿತು ಚರ್ಚೆ ಸಂವಾದಗಳು ನಡೆಸುವ ಮೂಲಕ ತಮ್ಮ ಜ್ಞಾನ ವೃದ್ಧಿಸಿಕೊಳ್ಳುವಲ್ಲಿ ಹೆಚ್ಚು ಗಮನ ಕೊಡುತ್ತ ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಕಲಾಪ್ರದರ್ಶನ, ಕಲಾಶಿಬಿರಗಳಲ್ಲಿ ವಿದ್ಯಾರ್ಥಿ ದಿಸೆಯಿಂದಲ್ಲೇ ತಮ್ಮನ್ನು ತೊಡಿಗಿಸಿಕೊಂಡು ಎಲ್ಲರೊಡನೆ ಸ್ನೇಹದಿಂದ ಕಾಣುವ ಸ್ವಭಾವ ಬೆಳೆಸಿಕೊಂಡಿದ್ದಾರೆ.

ದೃಶ್ಯಕಲಾ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಪ್ರಾರಂಭವಾದ ದೃಶ್ಯಕಲಾ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಯಾಗಿ ಪ್ರವೇಶ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಶಾಂತವಾದ ವಾತಾವಣರದಲ್ಲಿ ವಿಶ್ವವಿದ್ಯಾಲಯದ ಆಮಂತ್ರಣದಿಂದ



'ರನ್ ಅಕ್ರೇಲಿಕ್ ಮಾಧ್ಯಮ

ಬರುವ ಕಲಾತಜ್ಞರ ಮಾರ್ಗದರ್ಶನ ಉತ್ತಮ ಕಲಾವಿದರಿಂದ ಪ್ರಾತ್ಯಕ್ಷಿಕೆಯಿಂದಾಗಿ ಉತ್ತಮ ಕಲಾಕೃತಿಗಳ ರಚನೆಯ ಜೊತೆಗೆ ವಿಭಾಗದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಹೊಸದಾಗಿ ಪ್ರಾರಂಭವಾದ ವಿಭಾಗದ ಬೆಳವಣಿಗೆಯ ದೃಷ್ಟಿಯಿಂದ ನಡೆಯುತ್ತಿರುವ ಕಲಾಶಿಬಿರ, ಕಾರ್ಯಾಗಾರ, ವಿಚಾರ ಸಂಕಿರಣಗಳಲ್ಲಿ ಅತಿ ಉತ್ಸಾಹಿಕರಾಗಿ ಕಾರ್ಯನಿರ್ವಹಿಸುತ್ತ ತಮ್ಮ ಎರಡು ವರ್ಷದ ಎಂ.ಎ. ಪೇಂಟಿಂಗ್ ಪದವಿಯನ್ನು ಪಡೆದು ಬೆಂಗಳೂರಿನ ಖ್ಯಾತ ಯುವ ಕಲಾವಿದರಿಂದ ಗುರುದಾಸ ಶೆಣೈಯವರೊಂದಿಗೆ ಭಿತ್ತಿಚಿತ್ರ ಹಾಗೂ ಕಲಾಕೃತಿಗಳನ್ನು ರಚನೆ ಮಾಡುತ್ತ ಸ್ವತಂತ್ರ ಕಲಾವಿದರಾಗಿ ಕಲಾಕೃತಿ ರಚನೆಯ ಜೊತೆಗೆ ವೆಬ್ ಡಿಜೈಯನ್, ಹಾಗೂ ಗ್ರಾಫಿಕ್ ಡಿಜೈಯನ್ ಮಾಡುವುದರ ಮೂಲಕ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ.

ತನ್ನ ಕಲಾ ಶಿಕ್ಷಣ ಅವಧಿಯಿಂದ 2011–12ರ ವರೆಗೆ ಅನೇಕ ರಾಷ್ಟ್ರ ಮತ್ತು ರಾಜ್ಯಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಕಲಾಕೃತಿಗಳ ಪ್ರದರ್ಶನಗೊಂಡಿವೆ. ಅಲ್ಲದೆ ಅನೇಕ ಕಲಾಶಿಬಿರಗಳಲ್ಲಿಯು ಭಾಗವಹಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಬೆಂಗಳೂರು ಆರ್ಟ್ ಫೌಂಡೇಶನ್ ಆರ್ಟ್ ಕ್ಯಾಂಪ್, Cigar Art by Enigma Art Gallery New Delhi, 2010 'Pluvial' org by, Art cabs Bangalore 2010, (Regional Artists camp, by South, LKA Chennai, Pune, 2010) ರಲ್ಲಿ ಪ್ರಾದೇಶಿಕ ಕಲಾವಿದರ ಕಲಾಶಿಬಿರವನ್ನು ಲಲಿತಕಲಾ ಅಕಾಡೆಮಿ ದಕ್ಷಿಣ ವಲಯ, ಚೆನ್ನೈ ಹಾಗೂ ಪುನಾದಲ್ಲಿ ಆಯೋಜಿಸಿದ ಶಿಬಿರದಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ.

ರಾಷ್ಟ್ರದ ಅನೇಕ ಕಲಾಗ್ಯಾಲರಿಗಳಲ್ಲಿ ತಮ್ಮ ಸಮಕಾಲೀನ ಹಾಗೂ ನಾಡಿನ ಹೆಸರಾಂತ ಕಲಾವಿದರೊಂದಿಗೆ ಸಮೂಹ ಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಕಂಡಿವೆ. 2007ರಲ್ಲಿ 185 days on Canvas, Art Gallery ಹೊಸ ದೆಹಲಿ Adolescent 26, 'Lalit Kala Akademi, Ravindra Bhavan, New Delhi- 2008 ಹೀಗೆ ಎರಡು ಏಕವ್ಯಕ್ತಿ ಕಲಾ ಪ್ರದರ್ಶನವನ್ನು ರಾಷ್ಟ್ರದ ರಾಜಧಾನಿಯಲ್ಲಿ ಏರ್ಪಡಿಸಿ ಕಲಾ ವಿಮರ್ಶಕ, ಕಲಾವಿದರ, ಕಲಾಭಿಮಾನಿಗಳಿಂದ ಪ್ರಶಂಸೆ ಪಡೆದಿದ್ದಾರೆ.

ಒಬ್ಬ ಕಲಾವಿದನಿಗೆ ತನ್ನ ಕಲಾಕೃತಿ ಪ್ರಶಸ್ತಿ ಪಡೆದು ನೋಡುವ ಸಹೃದಯರ ಮನಸ್ಸು ಸೆಳೆಯುವುದರಲ್ಲಿ ಯಶಸ್ಸು ಕಂಡಲ್ಲಿ ಆ ಕಲಾವಿದನಿಗೆ ಇನ್ನೂ ಹೆಚ್ಚಿನ ಉತ್ಸಾಹ, ಚೈತನ್ಯ, ಪ್ರೇರಣೆಯ ಜೊತೆಗೆ ಕಲಾಕ್ಷೇತ್ರದಲ್ಲಿ ತನ್ನ ಕಲಾಕೃತಿಯ ಮೂಲಕ ಗುರುತಿಸಿಕೊಳ್ಳಲು ಒಂದು ವೇದಿಕೆಯಾಗುತ್ತದೆ. ಅಂಥ ಅನೇಕ ಪ್ರಶಸ್ತಿಗಳು ಇವರ ಕಲಾಕೃತಿಗಳು ಪಡೆದಿವೆ. ಅವುಗಳಲ್ಲಿ ಪ್ರಮುಖವಾದವು. 2001, 2003 ಕಲಬುರ್ಗಿ ಕಲಾಮಹೋತ್ಸವ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾ 2002ರಲ್ಲಿ 2nd All India Art Exhibition pullaiah Kala Vila yam Jargon (AP) 2003 ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ 2003 The Bombay Art Society, IIIrd All India Annual Art Exhibition Mumbai 2010 39th Karnataka Lalia Kala Acade my ಬೆಂಗಳೂರು 2010 12th south Region Art Exhibition Hyderabad ಹೀಗೆ ಅನೇಕ ಪ್ರಶಸ್ತಿ ಪಡೆದಿದ್ದಾರೆ.

ರಾಯಚೂರಿನಲ್ಲಿಯೇ ಇದ್ದು ಕಲಾಕೃತಿಗಳ ರಚನೆ ಹಾಗೂ ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಕ್ಯಾಮಲಿನ್ ಆರ್ಟ್ ಫೌಂಡೇಶನ್ ಪ್ರಶಸ್ತಿ ಪಡೆದು ಕ್ಯಾಮಲಿನ್ ಅವರ ವತಿಯಿಂದ ಪ್ರಶಸ್ತಿ ಪಡೆದ ಕೆಲವು ಕಲಾವಿದರನ್ನು ಆಯ್ಕೆ ಮಾಡಿ ಯುರೋಪ ಪ್ರವಾಸಕ್ಕೆ ಕಳಿಸುತ್ತದೆ. ಅಂಥದರಲ್ಲಿ ಇವರು ಆಯ್ಕೆಯಾಗಿ ಯುರೋಪನ ಪ್ರವಾಸ ಕೈಗೊಂಡು ಅಲ್ಲಿಯ ಕಲಾಗ್ಯಾಲರಿ, ಕಲಾವಿದರು ಅಲ್ಲಿನ ಕಲಾವಲಯದ ಬೆಳವಣಿಗೆಯನ್ನು ಅಧ್ಯಯನ ಮಾಡುವ ಅವಕಾಶ ದೊರೆತದ್ದು ಹೆಮ್ಮೆಯ ವಿಷಯವಾಗಿದೆ. ಇವರ ಕಲಾಕೃತಿಗಳಲ್ಲಿ ಆಧುನಿಕ ವಿಷಯ ವಸ್ತುಗಳ ನೆಲೆಯಲ್ಲಿ ಪುರಾತನ ವಿಷಯಗಳ ಸಮ್ಮೇಳನದೊಂದಿಗೆ ಸಂಯೋಜನೆ ಮಾಡಿ ಸೃಜನಾತ್ಮಕ ಕಲಾಕೃತಿಗಳನ್ನು ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಲಾ ವಲಯದಲ್ಲಿ ಹಿರಿಯ ಹಾಗೂ ಯುವ ಕಲಾವಿದರ ಆತ್ಮೀಯ ಸಂಬಂಧ ಹೊಂದಿ ಎಲ್ಲರ ಮೆಚ್ಚುಗೆ ಯುವ ಕಲಾವಿದರಾಗಿ ಬೆಳೆಯುತ್ತಿದ್ದಾರೆ.

(ಎಸ್‌ಪಿಡಬ್ಲ್ಯೂ)

ಸಂತೋಷಕುಮಾರ ಆರ್. ವನ್ನಿಕೇರಿ: ಯುವ ಕಲಾವಿದ. ಇಂದಿನ ಜಾಗತಿಕರಣದ ಗುಂಗಿನಲ್ಲಿರುವ ನಮ್ಮ ಜನರಲ್ಲಿ ಇತಿಹಾಸ, ಪರಂಪರೆ ಮರೆಯಾಗುತ್ತಿದೆ. ಇದನ್ನು ಮನ ಗಂಡು ಕಲಾವಿದ ಸಂತೋಷ ಕುಮಾರ ಆರ್. ವನ್ನಿಕೇರಿ ಅವರು, ಪ್ರಸ್ತುತ ಮತ್ತು ಭೂತಕಾಲ ಎಂಬ ಶೀರ್ಷಿಕೆಯಡಿ ಕಲಾಕೃತಿಗಳನ್ನು ರಚಿಸಿ, ನಮ್ಮ ಪ್ರಾಚೀನ ಪರಂಪರೆ ಹಾಗೂ



(ವರ್ತಮಾನ) ಇಂದಿನ ಫ್ಯಾಶನ್ ಯುಗ ಎರಡರ ಸಮ್ಮಿಲನವನ್ನು ತಮ್ಮ ಕ್ಯಾನವಾಸ್‌ನ ಮೇಲೆ ಅಭಿವ್ಯಕ್ತಪಡಿಸಿದ್ದಾರೆ. ಇವರು ಕಡಲ ತೀರದ ಸಮೀಪದಲ್ಲಿರುವ ಉಡುಪಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಧನ ಸಹಾಯದೊಂದಿಗೆ ತಮ್ಮ ಕಲಾ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಸೃಜನಾತ್ಮಕ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಕೇವಲ ಪಠ್ಯಕ್ರಮಕ್ಕಷ್ಟೇ ತಮ್ಮನ್ನು ಮೀಸಲಿಡದೆ, ಸಮಕಾಲೀನ ಕಲೆಯ ಆಗುಹೋಗುಗಳನ್ನು ಅರಿತು, ತಮ್ಮ ಕಲಾಕೃತಿಗಳಿಗೆ ಒಂದು ನಿರ್ದಿಷ್ಟ ರೂಪಕೊಡುವತ್ತ ಸದಾ ಗಮನಹರಿಸುತ್ತಾರೆ.

ಭಾರತೀಯ ಸಂಪ್ರದಾಯದಲ್ಲಿ ಅತಿ ಪ್ರಮುಖವಾಗಿ ಕಂಡು ಬರುವ ಶಿಲ್ಪಗಳನ್ನು ಹಾಗೂ ಇಂದಿನ ಫ್ಯಾಶನ್ ಯುಗ ಕುರಿತು ತಮ್ಮ ಕಲಾಕೃತಿಯ ವಿಷಯನ್ನಾಗಿ ಆಯ್ದುಕೊಂಡು ಯಶಸ್ಸಿನ ದಿಟ್ಟಹೆಜ್ಜೆಯಿಂದ ಇವರು ಮುನ್ನುಗ್ಗುತ್ತಿದ್ದಾರೆ. ಇಂದಿನ ಬದಲಾಗುತ್ತಿರುವ ಹಾಗೂ ವೇಗವಾಗಿ ಜಾಗತೀಕರಣದ ಗುಂಗಿನಲ್ಲಿರುವ ನಮ್ಮ ಜನಾಂಗವನ್ನು ಕಂಡು, ಈ ಕಲಾವಿದ ತಮ್ಮ ಸೃಜನಾತ್ಮಕ ಭಾವನೆಗಳನ್ನು ವ್ಯಕ್ತಪಡಿಸಲು, ನಮ್ಮ ಹಳೆಯ ಪರಂಪರೆ ಹಾಗೂ ವರ್ತಮಾನಗಳನ್ನು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ಆರ್ಕೆಲಿಕ್ ಬಣ್ಣಗಳಲ್ಲಿಯ ತಾಂತ್ರಿಕ ಲಾಭವನ್ನು ಆತ್ಮೀಯವಾಗಿ ಬಳಸಿಕೊಳ್ಳುವ ಕಲಾವಿದರು. ದೂರ-ಸಮೀಪದ ಕಲ್ಪನೆಯನ್ನು ಇವರ ಕಲಾಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಇಂದಿನ ಹಾಗೂ ಹಳೆಯ ಸಾಮಾಜಿಕ ಬದುಕಿನ ಅನೇಕ ಸ್ತರಗಳನ್ನು ತಮ್ಮ ಕೃತಿಯಲ್ಲಿ ಹರವಿ ಬಿಟ್ಟ ಸಂತೋಷ ಕುಮಾರ, ಸಂಯೋಜನೆ ಸೂತ್ರಕ್ಕೆ ಅತಿ ಮಹತ್ವ ನೀಡಿದ್ದಾರೆ.



'ಅನ್‌ಟೈಟಲ್' ಅಕ್ರೇಲಿಕ್ ಮಾಧ್ಯಮ

ಒಟ್ಟಾರೆ ಗಮನ ಸೆಳೆಯುವ ಕಲಾಕೃತಿಗಳನ್ನು ಪ್ರದರ್ಶನಕ್ಕಿಟ್ಟಿರುವ ಇವರು, ಕಲಬುರ್ಗಿ ಜಿಲ್ಲೆಯ ಕಮಲಾಪುರ ಗ್ರಾಮದವರು. ಕಲಬುರ್ಗಿಯ ದಿ ಐಡಿಯಲ್ ಫೈನ್‌ಆರ್ಟ್‌ನಲ್ಲಿ ಡಿಪ್ಲೋಮಾ ಹಾಗೂ ಎಂ.ಎಫ್.ಎ. ಪೇಂಟಿಂಗ್ ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯುಲ್ ಆರ್ಟ್ ಪೂರ್ಣಗೊಳಿಸಿದ್ದು, ಪ್ರಸ್ತುತ ಡಾ. ಚನ್ನಬಸವ ಪಟ್ಟದ್ದೇವರ ನೇತೃತ್ವದಲ್ಲಿ ನಡೆಯುತ್ತಿರುವ ಭಾಲ್ಕಿಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ವಿ.ಜಿ. ಅಂದಾನಿಯವರನ್ನು ತಮ್ಮ ಆದರ್ಶ ಕಲಾವಿದರನ್ನಾಗಿ ಇಟ್ಟುಕೊಂಡು ಕಲಾಪ್ರದರ್ಶನ ಹಾಗೂ ಕಲಾಚಳವಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ.

ಕಲಬುರ್ಗಿ ವಿಶ್ವವಿದ್ಯಾಲಯದ ಪ್ರಸಾರಾಂಗ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಇನ್ನಿತರೆ ಹಲವು ಪ್ರಶಸ್ತಿಗಳು ಲಭಿಸಿವೆ. ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ, ಕಲಾಸಕ್ತರ ಗಮನ ಸೆಳೆದಿದ್ದಾರೆ. (ಎಸ್‌ಪಿಡಬ್ಲ್ಯೂ)

ಸತೀಶಕುಮಾರ ಪಿ. ವಲ್ಲೇಪೂರೆ: ಇವರು ಮೂಲತಃ ಬೀದರ ಜಿಲ್ಲೆಯ ಚೌದ್ರಿ ಬೆಳಕುಣಿ ಗ್ರಾಮದವರು. 1977 ಆಗಸ್ಟ್ 15 ರಂದು ಜನಿಸಿದರು. ಸಂಪ್ರಾದಾಯ ಕುಟುಂಬದಿಂದ ಬಂದವರು. ತಾಯಿ ಚಂದ್ರಮ್ಮಾ ತಂದೆ ಪಂಚಪ್ಪ ವಲ್ಲೇಪೂರೆ. ತಮ್ಮ ಪುತ್ರ ಬೆಳೆದು ದೊಡ್ಡವನಾದ ಮೇಲೆ ಡಾಕ್ಟರ್ ಅಥವಾ ಇಂಜಿನೀಯರ್ ಆಗಬೇಕೆಂಬ ಕನಸು ಕಂಡಿದ್ದರು. ಆದರೆ ಸತೀಶರವರ ಒಲವು ಬೇರೆಯೇ ಆಗಿತ್ತು.



ಪ್ರೌಢ ಶಿಕ್ಷಣ ಪಡೆಯುವಾಗ ದೊರೆತ ಕಲಾಶಿಕ್ಷಣದ ಪರಿಣಾಮವಾಗಿ ಮುಂದೆ ಭಾಲ್ಕಿಯ ಡಾ. ಚೆನ್ನಬಸವ ಚಿತ್ರಕಲಾ ಕಾಲೇಜಿನಲ್ಲಿ ಡಿ.ಎಂ.ಸಿ ಪ್ರಥಮ ತರಗತಿಗೆ ಪ್ರವೇಶ ಪಡೆದರು. ಆ ಸಂದರ್ಭದಲ್ಲಿ ರಾಯಚೂರು, ಬೀದರ, ಗುಲಬರ್ಗಾ ಜಿಲ್ಲೆಯ ಚಿತ್ರಕಲಾ ಪದವಿಯ ಪರೀಕ್ಷೆಗಳು ಗುಲಬರ್ಗಾದ ದಿ ಐಡಿಯಲ್ ಫೈನ್‌ಆರ್ಟ್ ಸಂಸ್ಥೆಯಲ್ಲಿ ನಡೆಯುತ್ತಿದ್ದವು. ಪ್ರಥಮ



'ಫ್ರೆಂಡ್ಸ್' ಅಕ್ರೇಲಿಕ್ ಮಾಧ್ಯಮ

ವರ್ಷದ ಡಿ.ಎಂ.ಸಿ ಪರೀಕ್ಷೆಗೆ ಬಂದ ಸತೀಶರವರು ದಿ ಐಡಿಯಲ್ ಫೈನ್‌ಆರ್ಟ್ ಕಾಲೇಜಿನ ಕಲಾವಾತಾವರಣ ಹಾಗೂ ಇಲ್ಲಿ ಕಲಾಶಿಕ್ಷಣ ನೀಡುವ ಶೈಲಿಯನ್ನು ಮನ ಗಂಡು ಮುಂದಿನ ಶೈಕ್ಷಣಿಕ ತರಗತಿಗೆ ಅಂದರೆ ಡಿ.ಎಂ.ಸಿ ದ್ವಿತೀಯ ವರ್ಷದ ತರಗತಿಗೆ ಇಲ್ಲಿಯೇ ಪ್ರವೇಶ ಪಡೆದರು. ಇದು ಕಲಾವಿದ ಸತೀಶ ವಲ್ಲೇಪೂರೆಯವರ ಜೀವನದ ಮಹತ್ವದ ಬದಲಾವಣೆಗೆ ನಾಂದಿಯಾದ ಸಂದರ್ಭವೆನ್ನಬಹುದು. ಇಲ್ಲಿಂದಲೇ ಇವರ ದೃಶ್ಯಕಲಾ ಕ್ಷೇತ್ರದ ಪರಿಪೂರ್ಣ ಪ್ರಯಾಣ, ಅಧ್ಯಯನ ಆರಂಭ ಗೊಂಡಿತ್ತು.

ಚಿತ್ರಕಲೆಯಲ್ಲಿ ಡಿಪ್ಲೋಮಾ ಪದವಿ ಪಡೆದರೂ, ಅವರಲ್ಲಿ ಕಲಾಶಿಕ್ಷಣದ ಹಸಿವು ಇನ್ನು ತೀರಲ್ಲಿಲ್ಲ. ಖ್ಯಾತ ಕಲಾವಿದರಾದ ಡಾ. ಅಂದಾನಿಯವರ ಗರಡಿಯಲ್ಲಿ ಬಿ.ಎಫ್.ಎ. ಹಾಗೂ ಎಂ.ಎಫ್.ಎ. ಪದವಿಗಳನ್ನು ಪೂರೈಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ದಿಶೆಯಲ್ಲಿರುವಾಗಲೇ, ಅನೇಕ ಕಲಾಕೃತಿಗಳನ್ನು ತೊಡಗಿಸಿಕೊಂಡಿದ್ದರು. ಸ್ನಾತಕೋತ್ತರ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ದುಬಲಗುಂಡಗಿಯ ಶರಣಪ್ಪ ಫತ್ತೇಪೂರೆ ಎಂಬ ನಿಜಾಮ ಶಾಹಿಯ ಸಂದರ್ಭದ ಮನೆಯನ್ನು ಕುರಿತ ಲಘು ಸಂಶೋಧನೆ ರಚಿಸಿದ್ದು ಸತೀಶರವರ ಸಂಶೋಧನಾ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಳ್ಳಲು ಮೂಲ ಪ್ರೇರಣೆಯಾಯಿತು. ದೃಶ್ಯಕಲಾ ಸಾಹಿತ್ಯದ ಕಡೆ ವಿಶೇಷ ಒಲವನ್ನು ತೋರಿ, ತಮ್ಮನ್ನು ತಾವು ಗಂಭೀರವಾಗಿ ತೊಡಗಿಸಿಕೊಂಡರು. ಅಲ್ಲದೆ, ಅನೇಕ ಪತ್ರಿಕೆ ಗಳಿಗೆ ದೃಶ್ಯಕಲಾ ಲೇಖನಗಳನ್ನು ಬರೆದಿದ್ದಾರೆ.

ಕೇವಲ ಇಷ್ಟಕ್ಕೆ ತೃಪ್ತಿ ಪಡದ ಇವರು ದೃಶ್ಯ ಕಲೆಯಲ್ಲಿಯೇ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಡಾ. ಅಂದಾನಿ ವ್ಹಿ.ಜಿ ಯವರ ಮಾರ್ಗದರ್ಶನದಲ್ಲಿ 'ಮುಂಬಯಿ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನ ಪ್ರಾಥನಿಧಿಕ ಕರ್ನಾಟಕ ಕಲಾವಿದರು ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಸಂಶೋಧನೆಯಲ್ಲಿ ತೊಡಗಿಸಿಕೊಂಡು ಡಾಕ್ಟರೇಟ್ ಪಡೆದಿದ್ದಾರೆ.

ಸದಾ ಸೃಜನಶೀಲತೆ ಕ್ರಿಯಾಶೀಲತೆಯೇ ನನ್ನುಸಿರು ಎಂಬಂತ್ತಿರುವ ಡಾ. ಸತೀಶ ಚಿತ್ರಕಲಾ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಎಲ್ಲ ಉಪನ್ಯಾಸಕರ ಮೆಚ್ಚಿನ ಶಿಷ್ಯರಾಗಿದ್ದರು. ಸಹನೆ ಹಾಗೂ ವಿನಯತೆಯ ಪ್ರತಿರೂಪದಂತಿದ್ದ ಇವರಿಗೆ ಉತ್ತಮ ಗೆಳೆಯರ ಕೂಟ ಯಾವಾಗಲೂ ಪ್ರೋತ್ಸಾಹದಾಯಕ ವಾಗಿದೆ.

ಕಲಾ ಸಾಹಿತ್ಯದ ಸಂಶೋಧನೆಗೆ ತಮ್ಮನ್ನು ತೊಡಗಿಸಿ ಕೊಂಡು, ಕಲಾಕೃತಿಗಳ ರಚನೆಯಲ್ಲಿ ಯಾವತ್ತು ಹಿಂದೆ ಬಂದ ವರಲ್ಲ. ವಿದ್ಯಾರ್ಥಿ ದಿಶೆಯಲ್ಲಿಯೇ ಎಲ್ಲರಿಗೂ ಭಿನ್ನವಾದ ಚೌಕಟ್ಟಿನ ನೆಲೆಯಲ್ಲಿ ಆಲೋಚಿಸುತ್ತಾ ರಚಿಸಿದ ಕಲಾಕೃತಿಗಳು ಕೇವಲ ಪಠ್ಯಕ್ರಮಕ್ಕೋಸ್ಕರ ರಚಿಸುವ ಕೃತಿಗಳಾಗಿರದೆ, ಆ ಒಂದು ಪರಿಮಿತಿಯನ್ನು ಮೀರಿ ಬೆಳೆಯುವ, ಸ್ಪಷ್ಟ ನಿಲುವಿನೊಂದಿಗೆ ಕೃತಿ ರಚನೆಯಲ್ಲಿ ತೊಡಗಿಸಿಕೊಂಡು ಅವರದೇ ಆದ ಚಿತ್ರಶೈಲಿ, ಭಾಷೆ ಇದ್ದು, ಅವುಗಳನ್ನು ಬಳಸುವ ರೀತಿ ಹಾಗೂ ವ್ಯಕ್ತ ಪಡಿಸುವ ಕ್ರಿಯೆಯಲ್ಲಿ ಸರಳತೆ ಇದೆ, ಸಜ್ಜನಿಕೆ ಇದೆ, ಯಾಕೆಂದರೆ ಇವರು ಭಾವನೆಗಳನ್ನು ವ್ಯಕ್ತಪಡಿಸಲು ಆಯ್ದು ಕೊಂಡ ವಿಷಯ 'ಮಹಿಳೆ' ಹಾಗೂ ಅವಳ 'ಸ್ವಾತಂತ್ರ್ಯ'.

ಪುರುಷ ಪ್ರಧಾನವಾದ ಸಮಾಜದಲ್ಲಿ ಸ್ತ್ರೀ, ಪುರುಷರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸರಿಸಮವಾಗಿ ನಿಲ್ಲುತ್ತಿರುವ ಪ್ರಸ್ತುತ ಸಂದರ್ಭ ದಲ್ಲಿ ಈ ಭಾಗದಲ್ಲಿ ಅದಕ್ಕೆ ಪೂರಕವಾಗಿ ಸ್ಪಂದಿಸುವ ಗೋಜಿಗೆ ಹೋಗಿಲ್ಲ. ಇಲ್ಲಿಯ ಬಹುಪಾಲು ಮಹಿಳೆಯರು ನಾಲ್ಕು ಗೋಡೆಗಳ ಮಧ್ಯೆ ತಮ್ಮ ಜೀವನದ ಅವಧಿಯನ್ನು ಪೂರೈಸುತ್ತಾ ಕಾಲ ಕಳೆಯಬೇಕಾಗಿದೆ. ತನ್ನ ಮನೆ ಕೆಲಸವೇ, ಸರ್ವಸ್ವ ಎಂಬಂತೆ ಮಾನಸಿಕವಾಗಿ ಒಪ್ಪಿಕೊಂಡಿದ್ದಾರೆ. ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಮಿಕ್ಕ ಬಹುಪಾಲು ಜನರ ಬದುಕು ಇನ್ನು ಸುಧಾರಿಸಿಲ್ಲ. ಕೆಲವೊಂದು ಸುಧಾರಣೆ ಪಥದಲ್ಲಿ ಚಲಿಸಿ ದರೂ, ದುಡಿತದಿಂದ ಅವರು ಮುಕ್ತರಾಗಿಲ್ಲ. ಇವೆಲ್ಲವನ್ನು ಮನಗಂಡು ಈ ವಿಷಯವನ್ನು ಪ್ರತಿಯೊಂದು ಕೋನಗಳಿಂದ ಮಂಡಿಸಿ ಕಲಾವಿದರು ತಮ್ಮ ಕೃತಿಗಳಲ್ಲಿ ವಿಷಯಾತ್ಮಕವಾಗಿ ಬಿಂಬಿಸುವ ಪ್ರಯತ್ನ ಇವರ ಭಾವನೆಗಳಿಗೆ ಅರ್ಥ ಕೊಡುವ ಬಣ್ಣಗಳಾಗಿ ನಿಲ್ಲುವ, ಇವೆಲ್ಲವುಗಳ ಜೊತೆಗೆ ಮಹಿಳಾ ಸಂಗಾತಿ ಯಾಗಿ ನಿಸರ್ಗ, ಪರಿಸರ, ಕಲಾಕೃತಿಗಳಿಗೆ ಪರಿಪೂರ್ಣತ್ವವನ್ನು ನೀಡುತ್ತವೆ.

ಇವರು ತಮ್ಮ ಜೀವನದ ಪ್ರಯಾಣವನ್ನು ಕರ್ನಾಟಕದ ತುತ್ತತುದಿಯಿಂದ ಪ್ರಾರಂಭಿಸಿ ಕರ್ನಾಟಕದ ತುಂಬೆಲ್ಲ ಕಲಾ ಪ್ರದರ್ಶನ ಕೈಗೊಂಡಿದಲ್ಲದೆ, ಭಾರತದ ಪ್ರಮುಖ ಕೇಂದ್ರಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. 2000ರಲ್ಲಿ ವೆಲ್ಲಿಂಗ್ ಟನ್ ಆರ್ಟ್‌ಗ್ಯಾಲರಿ ಮೈಸೂರನಲ್ಲಿ ಕರ್ನಾಟಕ ಲಲಿತಕಲಾ

ಅಕಾಡೆಮಿ ಪ್ರಯೋಜಕತ್ವದಲ್ಲಿ ಕೈಗೊಂಡ ಪ್ರದರ್ಶನ 2003ರ ಕರ್ನಾಟಕ ಕಲಾಮೇಳ ಬೆಂಗಳೂರು, 2004ರಲ್ಲಿ ನೆಹರು ಆರ್ಟ್ ಸೆಂಟರ್ ಮುಂಬಯಿ, 2005ರಲ್ಲಿ ಸ್ಟೇಟ್ ಆರ್ಟ್ ಗ್ಯಾಲರಿ ಹೈದ್ರಾಬಾದ, 2007ರಲ್ಲಿ ಮುಮೆಂಟ್ಸ್ 2007 ಆರ್ಟ್ ಟುಡೇ ಗ್ಯಾಲರಿ ಪುಣೆ, 2010ರಲ್ಲಿ ಮಾಸ್ಟರ್ ಸ್ಟ್ರೋಕ್ ಐಕಾನ್ ಆರ್ಟ್‌ಗ್ಯಾಲರಿ ಹೈದ್ರಾಬಾದದಲ್ಲಿ ಹಮ್ಮಿಕೊಂಡ ಪ್ರದರ್ಶನ ಗೊಂಡ ಗುಂಪು ಪ್ರದರ್ಶನಗಳಲ್ಲಿ ಪ್ರಮುಖವಾಗಿವೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ನೆರವಿನೊಂದಿಗೆ ಚೆನ್ನೈನಲ್ಲಿ ಏಕ ವ್ಯಕ್ತಿ ಪ್ರದರ್ಶನ ಹಮ್ಮಿಕೊಂಡಿದ್ದಾರೆ. 1998ರಲ್ಲಿ ಲ್ಯಾಂಡ್‌ಸ್ಕೇಪ್ ಕ್ಯಾಂಪ್ ಹಂಪಿ, 1999ರ ಟೆರ್ರಾಕೋಟಾ ಕ್ಯಾಂಪ್, 2011ರ ಮಳಖೇಡದ ಸಾಹಿತ್ಯ ಸಮ್ಮೇಳನ ಕಲಾ ಶಿಬಿರ, 2002ರ ಯಂಗ್ ಆರ್ಟಿಸ್ಟ್ ಕ್ಯಾಂಪ್ ರಾಯಚೂರು, 2005ರ ಸುನಾಮಿ ರಿಲೀಫ್ ಫಂಡ್‌ಗೋಸ್ಕರ ಏರ್ಪಡಿಸಿದ ಕಲಾಶಿಬಿರ, 2006ರ ಹಂಪಿ ಉತ್ಸವ ಶಿಬಿರ, 2007ರ ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ ಹುಬ್ಬಳಿ ಕಲಾಶಿಬಿರ, 2009ರ ಪ್ರತಿಭೋತ್ಸವ, ಗುಲಬರ್ಗಾ ಯುವಜನೋತ್ಸವದ ಕಲಾಶಿಬಿರ, 2010ರ ಹಂಪಿ ಉತ್ಸವದ ಕಲಾಶಿಬಿರ ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಮ್ಮಿಕೊಂಡಿವೆ. ಇವೆಲ್ಲ ಕಲಾ ಶಿಬಿರಗಳಲ್ಲಿ ಇವರು ಭಾಗವಹಿಸಿದ್ದಾರೆ. ಇವರು ಇದರ ಹೊರತಾಗಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವುಗಳಲ್ಲಿ 2004ರ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರಿನ ಬಹುಪ್ರಮುಖವಾಗಿದೆ.

ಕಲೆ, ಕಲಾವಿದರಾಗಿ ಅಷ್ಟೇ, ತಮ್ಮ ಕಾರ್ಯವ್ಯಾಪ್ತಿಯನ್ನು ಸೀಮಿತಗೊಳಿಸಿದ ಕಲಾವಿದರು. ಕಲಾಬರಹಗಾರರಾಗಿ ಅನೇಕ ಪತ್ರಿಕೆಗಳಲ್ಲಿ ದೃಶ್ಯಕಲೆ ಕುರಿತು ಲೇಖನ ಬರೆಯುವದರ ಮೂಲಕ ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ. ಇದಲ್ಲದೆ ಛಾಯಾಚಿತ್ರ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡು ಉತ್ತಮ ಛಾಯಾಚಿತ್ರಗಳನ್ನು ಸೆರೆಹಿಡಿದು ಅನೇಕ ಕಡೆ ಪ್ರದರ್ಶಿಸಿದ್ದಾರೆ. ಪ್ರಸ್ತುತ ಸಂದರ್ಭದ ಅನೇಕ ಕಲಾವಿದರು ಗುಲಬರ್ಗಾದಲ್ಲಿ ಶಿಕ್ಷಣ ಪಡೆದು ರಾಜ್ಯ ಹಾಗೂ ದೇಶದ ವಿವಿಧ ಮೂಲೆಗಳಲ್ಲಿ ತಮ್ಮ ಕೃತಿಗಳನ್ನು ರಚಿಸಿ ಪ್ರದರ್ಶಿಸುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದ್ದಾರೆ. ಅಂತಹವರ ಸಾಲಿಗೆ ಸೇರಿರುವ ಇವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ದೃಶ್ಯಕಲಾ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಎಚ್‌ವಿಎಂ)

ಸನ್ನತಿಯ ಬೌದ್ಧ ಶಿಲ್ಪಗಳು: ಸನ್ನತಿಯ ಶಿಲ್ಪಗಳು ಕರ್ನಾಟಕದ ಕಲಾ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿವೆ. ಸನ್ನತಿಯಲ್ಲಿ ಬೌದ್ಧ ನೆಲೆಯು ಬೆಳಕಿಗೆ ಬಂದ ಮೇಲೆ, ಇಲ್ಲಿನ ಕಣಗನಹಳ್ಳಿಯ ಬೌದ್ಧಸ್ತೂಪದ ಉತ್ಖನನ ಹಾಗೂ ರಣ ಮಂಡಲ ಪ್ರದೇಶಗಳಲ್ಲಿ ಉತ್ಖನನವಾದ ಮೇಲೆ ಇಲ್ಲಿ ದೊರೆತ ಪುರಾವೆಗಳು ಕರ್ನಾಟಕದ ಆರಂಭಿಕ ಇತಿಹಾಸ ಕಾಲದ ಕಲಾ



ಬೌದ್ಧ ಶಿಲ್ಪಗಳು, ಸನ್ನತಿ

ಚಟುವಟಿಕೆಗಳ ಬಗ್ಗೆ ತಮ್ಮ ತಿಳುವಳಿಕೆ ಸಂಪೂರ್ಣ ಬದಲಾಗುತ್ತದೆ.

ಸನ್ನತಿಯಲ್ಲಿ ಕಲಾಚಟುವಟಿಕೆಗಳು ಮೌರ್ಯರ ದೊರೆ ಅಶೋಕನ ಕಾಲದಿಂದಲೇ ಸ್ತೂಪದ ನಿರ್ಮಾಣದ ಜೊತೆ ಜೊತೆಯಲ್ಲಿ ಪ್ರಾರಂಭವಾಗಿರುವ ಸಾಧ್ಯತೆ ಇದೆ. ಇಲ್ಲಿ ದೊರೆತ ಶಾಸನವನ್ನು ಮತ್ತು ಮೌರ್ಯರ ಕಾಲಕ್ಕೆ ಸೇರಿಸಬಹುದಾದ ಕೆಲವು ಐತಿಹಾಸಿಕ ಪುರಾವೆಗಳಿಂದ ಈ ಮಾತನ್ನು ದೃಢಪಡಿಸಬಹುದು. ಮುಖ್ಯವಾಗಿ ಈ ದಿಶೆಯಲ್ಲಿ ಕಂಡುಬರುವುದು ಏಕಮಾತ್ರ ಉದಾಹರಣೆಯಾದ (Disc-stone) ವೃತ್ತಾಕಾರದ ಚಪ್ಪಟೆಕಲ್ಲು. ಅಲ್ಲದೆ ಕೆಲವು ಮೌರ್ಯ ಶಿಲ್ಪಗಳ ಹೊಳಪುಗಳುಳ್ಳ ಬಿಡಿ ಶಿಲ್ಪಗಳು. ಸ್ತೂಪದ ರಚನೆ ಪ್ರಾಯಶಃ ಮೌರ್ಯ ದೊರೆ ಅಶೋಕನ ಕಾಲದಲ್ಲಿಯೇ ಆದಂತೆ ತೋರುತ್ತದೆ. ಅನಂತರದ ಕಾಲದಲ್ಲಿ ಅಂದಿನ ಕಲಾಸಂವೇದನೆಗಳಿಗೆ ಪೂರಕವಾಗಿ ಸ್ತೂಪವು ವಿಸ್ತಾರವಾಗಿದ್ದು ಶಿಲ್ಪಗಳು ಕೂಡ ರಚನೆಗೊಂಡು ಸ್ತೂಪದ ಆಯಕಟ್ಟೆಯ ಹೊರ ಭಾಗದಲ್ಲಿ ಮತ್ತು ಅಂಡದ ಭಾಗದಲ್ಲಿ ಅಲಂಕಾರಗೊಂಡಿದ್ದವು.

ಸ್ತೂಪ ಅಲಂಕಾರದಲ್ಲಿದ್ದ ಸನ್ನತಿಗಳಲ್ಲಿ ಅಂದು ಪ್ರಚಲಿತದಲ್ಲಿ ಬೌದ್ಧ ವಿಷಯಗಳೇ ರಚನೆಗೊಂಡಿವೆ. ಬುದ್ಧನ ಸಾಂಕೇತಿಕವಾದ ನಿರೂಪಣೆ ಹಾಗೂ ಬುದ್ಧನ ಜಾತಕ ಕಥೆಗಳು, ಅಲ್ಲದೇ ಸ್ತೂಪದ ವೇದಿಬಂಧದ, ಸೂಚಿ ಭಾಗಗಳ ಮೇಲೆ ಹಲವಾರು ಹೂಗಳ ವಿನ್ಯಾಸಗಳು ರಚನೆಗೊಂಡಿವೆ. ಈ ಶಿಲ್ಪಗಳಲ್ಲದೇ, ಈ ಪರಿಸರದಲ್ಲಿ ಸಂಗ್ರಹಿಸಲಾದ ಹಲವಾರು ಬಿಡಿ ಶಿಲ್ಪಗಳು ಇಂದು ಗುಲಬರ್ಗಾ ವಸ್ತು ಸಂಗ್ರಹಾಲಯದಲ್ಲಿವೆ. ಇವುಗಳಲ್ಲಿ ಬುದ್ಧಪಾದ, ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟನೆಗಳ ಚಿತ್ರಣಗಳಿರುವ ಉಬ್ಬು ಶಿಲ್ಪಗಳು, ಸಾಂಕೇತಿಕ ಆಕೃತಿಕಗಳು, ಪ್ರಾಣಿಗಳ ಸಾಲು, ಜೊತೆಗೆ ಅಧಿಕ ಸಂಖ್ಯೆಯ ಸ್ಮಾರಕ ಶಿಲೆಗಳಿವೆ. ಇವುಗಳನ್ನೇ 'ಛಾಯಾಪ್ರತಿಮಾ' ಎಂದು ಕರೆದಿರುವುದು. ಸನ್ನತಿಯಲ್ಲಿ ಬೌದ್ಧ ಶಿಲ್ಪಗಳ ಜೊತೆಗೆ ಈ ಸಾಮಾಜಿಕ ಶಿಲ್ಪಗಳು ಕಂಡುಬಂದಿರುವುದು ವಿಶೇಷವಾಗಿದೆ. ಸನ್ನತಿಯ ಪರಿಸರದಲ್ಲಿ ಶಿಲಾಕೃತಿಗಳ ಜೊತೆಯಲ್ಲಿ ಕೆಂಪು ಮತ್ತು ಬಿಳಿ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ. ಇವುಗಳಲ್ಲಿ ಮನುಷ್ಯಾಕೃತಿಗಳು–ಪ್ರಾಣಿಪಕ್ಷಿಗಳು, ಇನ್ನೂ ಹಲವಾರು ಆಕರ್ಷಕ ವಿನ್ಯಾಸಗಳು ಕಂಡುಬಂದಿದ್ದು ಇವೂ ಕೂಡ ಸನ್ನತಿಯ ಕಲಾಚಟುವಟಿಕೆಯ ಮುಖ್ಯ ಭಾಗವಾಗುತ್ತವೆ.

ಸನ್ನತಿಯ ಶಿಲ್ಪಗಳಲ್ಲಿ ನಾವು ಧಾರ್ಮಿಕ ಮತ್ತು ಸಾಮಾಜಿಕ ಶಿಲ್ಪಗಳನ್ನು ಪ್ರತ್ಯೇಕವಾಗಿ ಗುರುತಿಸಬಹುದು. ಆದರೆ ಇವೆ ರಡಕ್ಕೂ ಅಂತಹ ಸಂಬಂಧವಿರುವುದರಿಂದ ಜೊತೆಯಲ್ಲಿಯೇ ನೋಡಬೇಕಾಗುತ್ತದೆ. ಸ್ತೂಪದಲ್ಲಿ ದೊರೆತ ಶಿಲ್ಪಗಳಲ್ಲಿ ಬುದ್ಧನ ಸಾಂಕೇತಿಕ ರಚನೆಗಳು ಬುದ್ಧನ ಜನನಕ್ಕೆ ಸಂಬಂಧಿಸಿದ ಕಥಾ ನಿರೂಪಣೆಗಳು, ಜಾತಕ ಕಥೆಗಳ, ಶಿಲ್ಪಗಳ ನಿರೂಪಣೆಗಳು ದೊರೆತಿವೆ. ಇವುಗಳಲ್ಲಿ ಬಹುಶಃ ಅಂದು ಪ್ರಚಲಿತದಲ್ಲಿದ್ದು ಜನರ ಜಾತಕ ಕಥೆಗಳೇ ರಚನೆಗೊಂಡಿವೆ. ಹಂಸ, ವಿಧುರ ಪಂಡಿತ, ಸುತಸೋಮ ಇತ್ಯಾದಿ ಜಾತಕಗಳು ಕಂಡುಬರುತ್ತವೆ. ಜನಪದ ದೃಶ್ಯಗಳಲ್ಲಿ ಆಯ್ದ ಪ್ರಮುಖ ಘಟನೆಗಳನ್ನು ಮಾತ್ರ ನಿರೂಪಣೆಯಲ್ಲಿ ಕಲಾವಿದ ಉಪಯೋಗಿಸಿರುವುದು ಕಂಡು ಬರುತ್ತವೆ. ಉದಾಹರಣೆಗೆ, ಕಥೆಯ ಭಾಗದಲ್ಲಿ ಬರುವ ಬುದ್ಧನ ಜನನಕ್ಕೆ ಸಂಬಂಧಿಸಿದಂತೆ, ಮಾಯಾದೇವಿಯ ಕನಸಿನಲ್ಲಿ, ಬಿಳಿ ಆನೆಯನ್ನು ಕಾಣುವ ದೃಶ್ಯ, ಕನಸಿನ ಚರ್ಚೆ, ನಂತರದ ದೃಶ್ಯ ದಲ್ಲಿ ಶಾಲಭಂಜಿಕೆಯ ಹಾಗೇ ನಿಂತ, ಮಾಯಾದೇವಿಯಿಂದ ಸಾಂಕೇತವಾಗಿ ಬುದ್ಧನು ಜನಿಸುವ ದೃಶ್ಯ, ಬುದ್ಧನನ್ನು ಸ್ವಾಗತಿ ಸಲು ನಿಂತ ನಾಲ್ಕು ಯಕ್ಷರು, ಹೀಗೆ ದೃಶ್ಯಗಳಿದ್ದರೆ, ಇದೇ ಕಥಾ ನಿರೂಪಣೆಯು ಬೇರೆ ಶಿಲ್ಪಗಳಲ್ಲಿ, ಸ್ವರ್ಗದಿಂದ ಬಿಳಿ ಆನೆಯನ್ನು ಪಲ್ಲಕ್ಕಿಯಲ್ಲಿ ಯಕ್ಷರು ಭೂಲೋಕಕ್ಕೆ ಕರೆತರುತ್ತಿರುವ ದೃಶ್ಯ, ವೃಕ್ಷ ದೇವಾಲಯಕ್ಕೆ ಭೇಟಿ ಮಾರವಿಜಯ, ಅಭಿನಿಷ್ಕ್ರಮಣ, ಮಹಾ ಪರಿನಿರ್ವಾಣ ಇವೇ ಮೊದಲಾದ ದೃಶ್ಯಗಳಿವೆ. ಈ ವಿವರ ಗಳದ್ದೇ ಮತ್ತೊಂದು ದೃಶ್ಯ ನಿರೂಪಣೆ ಗುಲಬರ್ಗಾ ವಸ್ತು ಸಂಗ್ರಹಾಲಯದಲ್ಲಿದೆ. ಈ ಶಿಲ್ಪದಲ್ಲಿ ಮಾಯಾದೇವಿ, ಶಾಲ ಭಂಜಿಕೆಯಂತೆ ನಿಂತಿಲ್ಲ. ಬದಲಾಗಿ ಕಲ್ಬಂಡೆಯ ಮೇಲೆ ಕುಳಿತಂತೆ ತೋರಿಸಲಾಗಿದ್ದು, ಬುದ್ಧನನ್ನು ಸಾಂಕೇತಿಕವಾಗಿ ತೋರಿಸದೇ ಮಾನುಷ ದೃಶ್ಯದಲ್ಲಿ ಚಿಕ್ಕ ಕೂಸಿನ ಹಾಗೆ ಪರಿಚಾರಕೆಯೋರ್ವಳು ಹಿಡಿದು ನಿಂತಿದ್ದಾಳೆ. ಈ ರೀತಿಯ ರಚನೆ ಅತ್ಯಂತ ವಿಶಿಷ್ಟವಾದದ್ದು. ಸಾಮಾನ್ಯವಾಗಿ ನಿಂತ ಭಂಗಿಯ ಶಾಲಭಂಜಿಕೆಯೇ ಮಾಯಾದೇವಿ ಎಂದು ಬಿಂಬಿಸಿರ ಲಾಗಿರುತ್ತದೆ. ಇಂತಹದೇ ವಿಭಿನ್ನ ದೃಶ್ಯ ನಿರೂಪಣೆ ಅಜಂತಾದ ಎರಡನೇ ಲಯಣದಲ್ಲಿ ಭಿತ್ತಿಚಿತ್ರದಲ್ಲಿ ಕಂಡುಬರುತ್ತದೆ. ಈ ಚಿತ್ರದಲ್ಲಿ ಮಾಯಾದೇವಿ ಅಂತಹಃಪುರದಲ್ಲಿ ಮಲಗಿರುವ ಹಾಗೇ, ಮಗುವನ್ನು ತೆಗೆದುಕೊಂಡು ವೃಕ್ಷದೇವಾಲಯಕ್ಕೆ ಭೇಟಿ ನೀಡಲು ಹೋಗುವ ದೃಶ್ಯಗಳಿವೆ. ಸನ್ನತಿಯಲ್ಲಿ ಹೆಚ್ಚು ಕಡಿಮೆ ಒಂದೆರಡು ಶತಮಾನಗಳ ಮೊದಲೇ ಇಂತಹ ದೃಶ್ಯ ಪರಿಕಲ್ಪನೆ ಗಳು ಮೂಡಿಬಂದಿವೆ. ವಿಶೇಷವೆಂದರೆ ಸನ್ನತಿಯಲ್ಲಿ ಶಿಲ್ಪ ಕಲಾವಿದರು ಸಾಕಷ್ಟು ಪ್ರಯೋಗಶೀಲರಾಗಿದ್ದರು. ಅವರ ಪರಿಕಲ್ಪನೆಯಲ್ಲಿ ತಮ್ಮದೇ ಆದಂತಹ ಹೊಸ ಹೊಸ ದೃಶ್ಯ ನಿರೂಪಣೆಗಳ ಪರಿಕಲ್ಪನೆಗಳು ಸಂಯೋಜನೆಯಲ್ಲಿ ಅರಳು ತ್ತಿದ್ದವು.

ಸನ್ನತಿಯ ಶಿಲ್ಪಗಳಲ್ಲಿ ಕೃಷ್ಣಾ ನದಿಕೊಳ್ಳದ ಅಮರಾವತಿಯ ಶಿಲ್ಪಗಳಂತೆ ವೈವಿಧ್ಯತೆಯನ್ನು ನೋಡಬಹುದು. ಸನ್ನತಿಯ ಶಿಲ್ಪ ಗಳಲ್ಲಿ ಧಾರ್ಮಿಕ ಶಿಲ್ಪಗಳ ನಿರೂಪಣೆಯಲ್ಲಿ ಸಾಂಕೇತಿಕತೆಯೇ ಪ್ರಧಾನ ಪಾತ್ರ ವಹಿಸುತ್ತದೆ. ಇಲ್ಲಿ ಬುದ್ಧನ ತತ್ವಗಳ ನಿರೂಪಣೆ ಇರಬಹುದು ಅಥವಾ ಬುದ್ಧನು ನೀಡಿದ ಮೃಗಸ್ಥಳೀಯ ಪ್ರಥಮ ಉಪನ್ಯಾಸದ ಚಿತ್ರಣದಲ್ಲಿ ಜನರ ಬದಲು ಸಾಂಕೇತಿಕ ವಾಗಿ ಜಿಂಕೆಗಳನ್ನು ತೋರಿಸಿದೆ. ಬುದ್ಧನ ತತ್ವಗಳನ್ನು ಧರ್ಮ ಚಕ್ರದ ರಚನೆಯಿಂದ ತೋರಿಸಿದೆ. ಇದೇ ರೀತಿ ಪಾದಗಳನ್ನು ನಾಗಮುಚ್ಚಲಿಂದದ ಶಿಲ್ಪಾಕೃತಿಗಳು ಬುದ್ಧನ ಸಾಂಕೇತಿಕ ರೂಪ ಗಳಾಗಿ ಮೂಡಿಬಂದಿವೆ. ಇವುಗಳ ನಿರೂಪಣೆಯಲ್ಲಿ ಶಿಲ್ಪ ಕಲಾವಿದ ನೈಜತೆಯ ಜೊತೆಗೆ ಒಂದು ತೆರನಾದ ದೈವಿಕ ರೂಪ ವನ್ನು ಬಿಂಬಿಸಿದ್ದಾನೆ.

ಸನ್ನತಿಯ ಶಿಲ್ಪಗಳು ಸ್ತೂಪದ ಅಲಂಕಾರಕ್ಕೆ ಬಳಸಿದ್ದವು ಗಳಾಗಿವೆ. ಇಲ್ಲಿಯೇ ದೊರೆತ ಮತ್ತೊಂದು ಪ್ರಮುಖ ಶಿಲ್ಪಗಳ ಗುಂಪು ಸ್ಮಾರಕ ಶಿಲ್ಪಗಳಾಗಿವೆ. ಈ ಸ್ಮಾರಕ ಶಿಲ್ಪಗಳ ಬೆಳವಣಿಗೆ ಯನ್ನು ಪ್ರಾಯಶಃ ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ಹಾಗೂ ನಂಬಿಕೆಗಳ ಚೌಕಟ್ಟಿನಲ್ಲಿ ನೋಡಬೇಕಾಗುತ್ತದೆ. ಈ ಸ್ಮಾರಕ ಶಿಲ್ಪಗಳಲ್ಲಿ ರಚನೆಗೊಂಡ ಆಕೃತಿಗಳು ಬಹುತೇಕವಾಗಿ ದಾನಿಗಳ ಶಿಲ್ಪಗಳೇ ಆಗಿವೆ. ಇದರಲ್ಲಿ ವ್ಯಾಪಾರಸ್ಥರು, ಶ್ರೀಮಂತರು, ಗೃಹಪತಿಗಳು, ಮಹಾತಲವಾರ, ಯವನ ಸ್ತ್ರೀ ಯರೂ ಕೂಡ ಇದ್ದಾರೆ. ಸಾಮಾನ್ಯವಾಗಿ ಇವರು ಕಾಲವಾದ ಮೇಲೆ ಇವರ ಸ್ಮರಣೆಗಾಗಿ ಈ ಶಿಲ್ಪಗಳನ್ನು ರಚಿಸಲಾಗಿದೆ. ವ್ಯಾಪಾರಸ್ಥರನ್ನು ತೋರಿಸುವಾಗ ಅವರೇ ಎತ್ತಿನಗಾಡಿ, ಕುದುರೆ ಇತ್ಯಾದಿಗಳನ್ನು ಸಾಂಕೇತಿಕವಾಗಿ ತೋರಿಸಲಾಗಿದೆ. ಇವು ಮೃತರ ಜೊತೆಯಲ್ಲಿ ಸ್ವರ್ಗಾರೋಹಣ ಮಾಡುತ್ತವೆ ಎಂಬ ನಂಬಿಕೆ ಇದ್ದರೂ ಇರಬಹುದು.

ಸ್ಮಾರಕ ಶಿಲೆಗಳೇ ನಮ್ಮ ವೀರಗಲ್ಲುಗಳ ಮೂಲಪ್ರೇರಣೆ ಎನ್ನಬಹುದು. ಈ ಸ್ಮಾರಕ ಶಿಲೆಗಳ ನಿರೂಪಣೆಯಲ್ಲಿ ಸಂಯೋಜನೆಯ ಮಧ್ಯದಲ್ಲಿ ಮುಖ್ಯ ಆಕೃತಿಗಳನ್ನು ರಚಿಸ ಲಾಗಿರುತ್ತದೆ. ಅವನ ಪಕ್ಕದಲ್ಲಿ ಸ್ತ್ರೀಯರು ಚೌರಿ ಹಿಡಿದು ಅಥವಾ ಸುಗಂಧ ದ್ರವ್ಯಗಳ ಪೆಟ್ಟಿಗೆ ಅಥವಾ ತಾಂಬೂಲ ಪೆಟ್ಟಿಗೆ ಹಿಡಿದು ನಿಂತಿರುವ ಸ್ತ್ರೀಯರ ಆಕೃತಿಗಳಿರುತ್ತವೆ. ಕೆಲವು ಶಿಲ್ಪಗಳಲ್ಲಿ ಸಂಗೀತವಾದ್ಯ ಹಿಡಿದು ನುಡಿಸುತ್ತಾ ಕುಳಿತ ಪರಿಚಾರಕರಂತೆಯೂ ಆಕೃತಿಗಳ ರಚನೆಯಾಗಿದೆ. ಈ ಎಲ್ಲ ದೃಶ್ಯಗಳು ಬಹುಶಃ ಅವರದೇ ಆದ ಸ್ವರ್ಗದಲ್ಲಿ ಜೀವನದ ಸಿಹಿ ಅನುಭವದ ದೃಶ್ಯಗಳಿವು ಎನಿಸುತ್ತದೆ. ಮಧ್ಯದಲ್ಲಿ ಗತಿಸಿದ ವ್ಯಾಪಾರಿ ಅಥವಾ ವ್ಯಕ್ತಿ ಇದ್ದು, ಅವನ ಎರಡೂ ಪಾರ್ಶ್ವಗಳಲ್ಲಿ ನಿಂತಿರುವಂತಹ ಸ್ತ್ರೀಯರು ಅಪ್ಸರೆಯರಂತೆ ತೋರುತ್ತಾರೆ. ಈ ಶಿಲ್ಪಗಳಲ್ಲಿ ಅವರನ್ನು ಅಪ್ಸರೆಯರೆಂದು ಹೇಳಲಾಗದಿದ್ದರೂ ನಂತರದ ವೀರಗಲ್ಲುಗಳಲ್ಲಿ ಪ್ರಸ್ತುತ ಸಂಯೋಜನೆಯೇ ಮುಂದುವರೆದುಕೊಂಡು ಬಂದಿದೆ. ವೀರಗಲ್ಲುಗಳ ಪರಿಕಲ್ಪನೆ ಅಂದು ಇಂದು ತಿಳಿದುಕೊಂಡಂತೆ ಇರದಿದ್ದರೂ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಸ್ಮಾರಕ ಶಿಲ್ಪಗಳ ನಿರೂಪಣೆ ಆಗುತ್ತಿತ್ತು.

ಸುಡಾವೆ ಮಣ್ಣಿನ ಗೊಂಬೆಗಳು ಕೂಡ ಪ್ರಸ್ತುತ ಚರ್ಚೆಯ ಮುಖ್ಯ ಭಾಗವಾಗುತ್ತವೆ. ಏಕೆಂದರೆ, ಈ ಪುಟ್ಟ ಆಕೃತಿಗಳ ಪರಿಕಲ್ಪನೆ, ರಚನೆಗಳು ಅಂದಿನ ಕಲೆಯ ಮೂಲಭೂತ

ಕಲಿಕೆಯ ಹಂತಗಳಾಗಿದ್ದವು. ಇವುಗಳಲ್ಲಿ ಅಂದಿನ ಜನಪ್ರಿಯ ಆಕೃತಿಗಳೇ ಮೂಡಿಬಂದಿವೆ. ಮುಖ್ಯವಾಗಿ ಕೆಂಪು ಮತ್ತು ಬಿಳಿ ಜೇಡಿಮಣ್ಣಿನಿಂದ ತಯಾರಿಸಿದ ಈ ಪುಟಾಣಿ ಆಕೃತಿಗಳ ರಚನೆ ತಾಂತ್ರಿಕವಾಗಿ, ಸುಡಾವೆ ಮಣ್ಣಿನ ಪಾತ್ರೆಗಳ ಹಾಗೆಯೇ ಕಂಡು ಬರುತ್ತವೆ. ಇವುಗಳನ್ನು ಕೈಯಿಂದ ಹಾಗೂ ಅಚ್ಚುಗಳಿಂದಲೂ ತಯಾರಿಸುತ್ತಿದ್ದರು. ಅಚ್ಚುಗಳಿಂದ ತಯಾರಿಸುವುದರಿಂದ ಅಧಿಕ ಸಂಖ್ಯೆಯಲ್ಲಿ ಒಂದೇ ಆಕೃತಿಯನ್ನು ತಯಾರಿಸಲು ಸಾಧ್ಯವಾಗುತ್ತಿತ್ತು. ಕೈಯಿಂದ ತಯಾರಿಸಿ ನೆರಳಿನಲ್ಲಿ ಒಣಗಿಸಿ ನಂತರ ಸುಡುತ್ತಿದ್ದರು. ಸುಡಾವೆ ಮಣ್ಣಿನ ಆಕೃತಿಗಳಲ್ಲಿ ಗ್ರಹಪತಿ, ನಾಗರಿಕ, ಸ್ತ್ರೀ ಮುಖಗಳು, ಪ್ರಾಣಿಗಳು, ಪಕ್ಷಿಗಳು ಅಲ್ಲದೇ ಹಲವಾರು ವಿನ್ಯಾಶಗಳು ರಚನೆಗೊಂಡಿರುವ ದಾಖಲೆಗಳು ಕಂಡುಬರುತ್ತವೆ. ಇವುಗಳು ಸನ್ನತಿಯಲ್ಲಿ ದೊರೆತ ಸಂಖ್ಯೆಯನ್ನು ಗಮನಿಸಿದರೆ ಇಲ್ಲಿ ಸುಡಾವೆ ಮಣ್ಣಿನ ಆಕೃತಿಗಳ ತಯಾರಿಕಾ ಕೇಂದ್ರವಿದ್ದಂತೆ ತೋರುತ್ತದೆ. ಆಂಧ್ರದ ಕೊಂಡಾಪುರ, ಪೆದ್ದಬಂಕೂರು, ವದ್ಧಮಾನು, ಮಹಾರಾಷ್ಟ್ರದ ಬ್ರಹ್ಮಪುರಿ, ತೇರ್‌ಗಳೂ ಭೌಗೋಳಿಕವಾಗಿ ಸನ್ನತಿಗೆ ಹತ್ತಿರದಲ್ಲಿಯೇ ಇವೆ. ಅಂದು ಪಸರಿಸಿದ್ದ ಈ ಕಲಾಪ್ರಕಾರ ಇಲ್ಲಿಯೂ ಬೆಳೆದುಬಂದಿದೆ.

ಸನ್ನತಿಯ ಬೌದ್ಧ ಶಿಲ್ಪಕಲೆ, ಕರ್ನಾಟಕದ ಕಲಾಬೆಳೆವಣಿಗೆಯು ಇದುವರೆಗೂ ತಿಳಿದಿರುವ ಇತಿಹಾಸ ಆರಂಭ ಕಾಲದ ಮೊಟ್ಟ ಮೊದಲ ಕಲಾಸಂಪ್ರದಾಯದ ದಾಖಲೆಯಾಗಿದೆ. ಈ ಶಿಲ್ಪಗಳು, ಶೈಲಿಯ ದೃಷ್ಟಿಯಿಂದ ಕೃಷ್ಣಾಕೊಳ್ಳದ ಶಿಲ್ಪಗಳಿಗೆ ಸಮವಿದ್ದರೂ, ಇಲ್ಲಿ ಸನ್ನತಿಯದೇ ಎಂದು ಹೇಳಬಹುದಾದ ವಿಶಿಷ್ಟವಾದ ಶೈಲಿ ಬೆಳೆದಿದೆ. ಆಕೃತಿಗಳ ಸಂಯೋಜನೆ, ಪ್ರಧಾನವಾಗಿ ಮಧ್ಯಸ್ಥವಾದ ಸಮಾನತಾ ತಂತ್ರದ ಮೇಲೆ ರಚನೆಯಾಗಿವೆ. ಕಥಾನಕ ಶಿಲ್ಪಗಳಲ್ಲಿ ಸರಳ ರೇಖಾ ಪ್ರಧಾನವಾದ ಸಂಯೋಜನೆಯು ಕಂಡುಬರುತ್ತದೆ. ಶಿಲ್ಪಗಳಲ್ಲಿ ದುಂಡು ಮತ್ತು ಉಬ್ಬು ಶಿಲ್ಪಗಳೆರಡೂ ವಿಧಗಳು ಸನ್ನತಿಯಲ್ಲಿ ಕಂಡುಬರುತ್ತವೆ. ಆದುದರಿಂದ ಶಿಲ್ಪಕೆತ್ತನಾ ತಂತ್ರಗಾರಿಕೆ ಪೂರ್ಣಪ್ರಮಾಣದಲ್ಲಿ ಬೆಳೆದಿತ್ತು ಎಂದು ಹೇಳಬಹುದು. ಸನ್ನತಿಯಲ್ಲಿ ಈ ಶಿಲ್ಪಗಳ ಶೈಲಿಗಳೇ ನಂತರದ ಕದಂಬ, ಚಾಲುಕ್ಯ ಕಾಲಗಳ ಕಲಾಪ್ರಕಾರಗಳಿಗೆ ಸ್ಫೂರ್ತಿಯಾಗಿರಬೇಕು. ಧಾರ್ಮಿಕ ನಂಬಿಕೆಗಳು ಬದಲಾವಣೆಯಾದಂತೆ, ಕಲಾ ಸಂಪ್ರದಾಯದ ಬದಲಾವಣೆಗಳ ಮೂಲ ಕಲ್ಪನೆಗೆ ಯಾವುದೇ ಧಾರ್ಮಿಕ ಅಂಟು ಇರುವುದಿಲ್ಲ. ಅದು ಅವಶ್ಯಕತೆಗನುಗುಣವಾಗಿ ಬೆಳೆಯುತ್ತದೆ ಹಾಗೂ ಪರಿವರ್ತನೆ ಹೊಂದುತ್ತದೆ. ಹೀಗಾಗಿ ಸನ್ನತಿ ಶಿಲ್ಪಗಳ ಕಲಾಶೈಲಿಗಳು ನಂತರದ ಕಾಲದಲ್ಲೂ ಮುಂದುವರೆದುಕೊಂಡು ಹೋದವು.

(ಆರ್‌ಎಚ್‌ಕೆ)

ಸಪ್ತ ಮಾತೃಕೆಯರು: ಪ್ರಕೃತಿಯ ಮತ್ತು ಫಲವತ್ತತೆಯ ಪ್ರತೀಕ. ಭಾರತದಾದ್ಯಂತ ಸಪ್ತ ಮಾತೃಕೆಯರ ಶಿಲ್ಪಗಳು ನಮಗೆ ಕಂಡು ಬರುತ್ತವೆ. ತಾಯಂದಿರು ಮತ್ತು ಅವಿವಾಹಿತೆಯರಿಂದ ಹೆಚ್ಚಾಗಿ



ಏಳು ಮಕ್ಕಳ ತಾಯಿ

ಆರಾಧಿಸುವ ದೈವವಾಗಿದ್ದಾರೆ. ಕರ್ನಾಟಕದಲ್ಲಿಯೂ ಈ ಶಿಲ್ಪಗಳು ಕಂಡು ಬರುತ್ತವೆ. ಸಪ್ತಮಾತೃಕೆಯರು ಕ್ರೋಧಿತಗೊಂಡರೆ ಮಾತೆಯರಿಗೆ ಮತ್ತು ಮಕ್ಕಳಿಗೆ ಅಶುಭವಾಗುತ್ತದೆ ಎಂಬ ಪ್ರತೀತಿ ಇದೆ. ಶಾಂತಿ, ಆರೋಗ್ಯ ಸುಖಗಳು ದೊರೆಯಬೇಕಾದಲ್ಲಿ ಅವರನ್ನು ಪ್ರಸನ್ನಗೊಳಿಸಬೇಕೆಂಬ ನಂಬಿಕೆ ಜನಪದರಲ್ಲಿದೆ.

ಸಪ್ತ ಮಾತೃಕೆಯೆಂದರೆ 'ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವೀ, ವಾರಾಹೀ, ಇಂದ್ರಾಣಿ ಮತ್ತು ಚಾಮುಂಡಾ'. ಸಪ್ತ ಮಾತೃಕೆಯರ ಕುರಿತಂತೆ ಐತಿಹ್ಯವಿದೆ. ಶಿವ ಕೊಳವೊಂದರ ಅಡಿಯಲ್ಲಿ ಒಮ್ಮೆ ಧ್ಯಾನಸ್ಥನಾಗಿದ್ದಾಗ ಆತನ ಪ್ರಭಾವಲಯದಿಂದ ನೀರು ಪ್ರಭಾವಿತವಾಗಿತ್ತು. ಇದನ್ನರಿಯದ ಏಳು ಸಹೋದರಿಯರು ಸ್ನಾನಕ್ಕಾಗಿ ನೀರಿಗೆ ಇಳಿದ ಕಾರಣ ಅವರು ಗರ್ಭಿಣಿಯರಾದರು. ದಿವ್ಯ ಋಷಿಗಳಾದ ಅವರ ಪತಿಯಂದಿರು ತಮ್ಮ ಪತ್ನಿಯರಾದ ಏಳು ಸಹೋದರಿಯರ ಮೇಲೆ ಅವಿಶ್ವಾಸ ತೋರಿ ತಮ್ಮ ಮನೆಯಿಂದ ಅವರನ್ನು ಹೊರಗಟ್ಟಿದರು. ಇದರಿಂದ ಕ್ರೋಧಿತರಾದ ಅವರು ತಮ್ಮೊಡಲಿನಿಂದ ಭ್ರೂಣವನ್ನು ಹೊರಹಾಕಿದರು. ಎಲ್ಲಾ ಏಳು ಸಹೋದರಿಯರ ಭ್ರೂಣ ಒಟ್ಟಾಗಿ ಸೇರಿ ತೇಜಪುಂಜಿತವಾದ ಗಂಡು ಮಗುವಾಯಿತು.

ಏಳೂ ಮಾತೆಯರು ತಮ್ಮ ದುಃಸ್ಥಿತಿಗಾಗಿ ಮರುಗಿದರು. ಈ ಸ್ಥಿತಿಗೆ ತಂದ ಮಗುವಿಗೆ ಹಾನಿಯನ್ನಂಟು ಮಾಡಲು ಬಯಸಿದಾಗ ಮಗುವಿನ ಮುಗ್ಧತೆ ಮತ್ತು ಮಂದಸ್ಮಿತವದನದಿಂದಾಗಿ ಅವರು ಕೇಡೆಣಿಸಲಿಲ್ಲ. ಅವನನ್ನು ಎತ್ತಿ ಆಡಿಸಿ, ಆರೈಕೆ ಮಾಡಿ ಅವನ ರಕ್ಷಕರಾದರು.

ಅವರ ಮಗನೆಂದು ಪ್ರಖ್ಯಾತಗೊಂಡ ಕಾರ್ತಿಕೇಯನು ದೇವತೆಗಳ ಮುಂದಾಳಾದ. ಸಪ್ತ ಮಾತೃಕೆಯರು ಶಿವನ ಪರಿವಾರದಲ್ಲಿ ಒಬ್ಬಳಾದ 'ಚಂಡಿ'ಯ ಸೇವಕಿಯರಾದರು. ಚಂಡಿಯು ಅವರನ್ನು ಕನ್ಯೆ–ತಾಯಂದಿರು ಎಂದು ಆರಾಧಿಸಲು ಆದೇಶ ನೀಡಿದಳು.

ಬ್ರಾಹ್ಮೀ: ಹಳದಿ ಮೈವರ್ಣದವಳಾದ ಆಕೆಯು ನಾಲ್ಕು ಮುಖಗಳನ್ನು ಮತ್ತು ಆರು ಕೈಗಳನ್ನು ಹೊಂದಿದ್ದಾಳೆ. ಸ್ರುಕ್, ಪುಸ್ತಕ, ಅಕ್ಷಮಾಲೆ, ಕುಂಡಿಕೆ, ಸ್ರುವ್‌ಗಳನ್ನು ಹೊಂದಿದ್ದು

ಅಭಯ ಹಸ್ತವನ್ನು ಕಾಣಬಹುದಾಗಿದೆ. ಅವಳ ವಾಹನ ಹಂಸ ವಾಗಿದೆ. ಉಡುಗೆಯು ಕೃಷ್ಣಾಜಿನವಾಗಿರುತ್ತದೆ.

ಮಾಹೇಶ್ವರಿ: ಐದು ಮುಖಗಳಿದ್ದು, ಹತ್ತು ಕೈಗಳನ್ನು ಹೊಂದಿದ್ದಾಳೆ. ಇವಳ ಪ್ರತಿಯೊಂದು ಮುಖದಲ್ಲಿ ಮೂರು ಕಣ್ಣುಗಳಿವೆ. ಕೊಡಲಿ, ಘಂಟೆ, ವಜ್ರಾಯುಧಗಳಿವೆ. ತಲೆಯ ಮೇಲೆ ಚಂದ್ರರೇಖೆಯನ್ನು ಗಮನಿಸಬಹುದು. ಅವಳ ವಾಹನವು ವೃಷಭವಾಗಿದೆ.

ಕೌಮಾರೀ: ಆರು ಮುಖಗಳನ್ನು ಕೌಮುರೀಯು ಹೊಂದಿರುತ್ತಾಳೆ. ಇವಳಿಗೆ ಹನ್ನೆರಡು ಕೈಗಳಿದ್ದು, ಬಾಣ, ಕಮಲ, ಪತಾಕೆ, ಪರಶು, ಪಾತ್ರೆ, ಬಿಲ್ಲು, ಘಂಟೆ, ಕೋಳಿ, ದಂಡಗಳನ್ನು ಹೊಂದಿರುವಳು. ಅಭಯ ಹಸ್ತಮುದ್ರೆ ಮತ್ತು ವರದ ಹಸ್ತ ಮುದ್ರೆಯನ್ನು ಕಾಣಬಹುದು. ನವಿಲು ಇವಳ ವಾಹನವಾಗಿದೆ.

ವೈಷ್ಣವೀ: ವನಮಾಲೆ ಧರಿಸಿದ ಇವಳಿಗೆ ಆರು ಕೈಗಳಿವೆ. ಶಂಖ, ಚಕ್ರ, ಗದಾ, ಪದ್ಮಗಳು ಕಂಡು ಬರುತ್ತವೆ. ವರದ ಮತ್ತು ಅಭಯ ಹಸ್ತಮುದ್ರೆಗಳನ್ನು ಹೊಂದಿದವಳಾಗಿದ್ದು, ಗರುಡ ವಾಹನವಾಗಿದೆ.

ವಾರಾಹೀ: ಮೈವರ್ಣವು ಕಪ್ಪಗಾಗಿದ್ದು, ದೊಡ್ಡ ಹೊಟ್ಟೆಯನ್ನು ಹೊಂದಿದವಳಾಗಿದ್ದಾಳೆ. ಹಂದಿಯ ಮುಖವನ್ನು ಹೊಂದಿದ ಇವಳಿಗೆ ಆರು ಕೈಗಳಿವೆ. ಮುದ್ರೆ, ದಂಡ, ಕತ್ತಿ, ಪಾತ್ರೆ, ಗುರಾಣಿ ಹಾಗೂ ಅಭಯ ಮುದ್ರೆಗಳು ಕಂಡುಬರುತ್ತವೆ. ಕೋಣವು ವಾಹನವಾಗಿದೆ.

ಇಂದ್ರಾಣೀ: ಆರು ಕೈಗಳನ್ನು ಹೊಂದಿದ್ದು, ಪಾಶ, ವಜ್ರಾಯುಧ, ಕಮಲ, ಪಾತ್ರೆಗಳಲ್ಲದೇ ವರದ ಮತ್ತು ಅಭಯ ಹಸ್ತಗಳಿವೆ. ಸೌಮ್ಯ ಸ್ವಭಾವದವಳಾದ ಇವಳಿಗೆ ಮೈಗೆಲ್ಲ ಕಣ್ಣುಗಳಿವೆ. ಆನೆಯು ಇವಳ ವಾಹನವಾಗಿದೆ.

ಚಾಮುಂಡಾ: ಕಡು ಕಪ್ಪು ಮೈಬಣ್ಣವನ್ನು ಹೊಂದಿದ್ದಾಳೆ. ಕೃಶ ಶರೀರವಾಗಿದ್ದು, ವಿಕೃತ ಮೈಯನ್ನು ಹೊಂದಿದವಳು, ಆಭರಣಗಳಾಗಿ ಹಾವುಗಳಿದ್ದು, ಕಣ್ಣುಗಳು ಗುಳಿಬಿದ್ದಿವೆ. ಸೊರಗಿದ ಹೊಟ್ಟೆ ಮತ್ತು ಕೋರೆ ದಾಡೆಗಳು ಬಾಯಿಯಲ್ಲಿವೆ. ಹತ್ತು ಕೈಗಳನ್ನು ಹೊಂದಿದವಳಾಗಿದ್ದಾಳೆ. ಒನಕೆ, ಛತ್ರ, ಬಿಲ್ಲು, ಬಾಣ, ಕೊಡಲಿ, ಚಾಮರ, ಗುರಾಣಿ, ಕತ್ತಿ ಮತ್ತು ಪಾಶಗಳನ್ನು ಕೈಗಳಲ್ಲಿ ಹಿಡಿದಿದ್ದಾಳೆ.

(ಆರ್‌ಎಂ)

ಸಮುದಾಯ ಕಲಬುರ್ಗಿ: ಕಲೆಗಾಗಿ ಕಲೆ ಅಲ್ಲ, ಜನರಿಗಾಗಿ, ಬದುಕಿಗಾಗಿ ಕಲೆ ಎಂಬ ಧ್ಯೇಯದೊಂದಿಗೆ ಕಲ್ಬುರ್ಗಿಯಲ್ಲಿ ಹುಟ್ಟಿಕೊಂಡ ಸಮುದಾಯ ಕಲಾ ತಂಡಕ್ಕೆ ಈ ವರ್ಷ ಇಪ್ಪತ್ತು ತುಂಬಿದ ಹರೆಯದ ಸಂಭ್ರಮ. ಈ ಸಾರ್ಥಕ ವರ್ಷಗಳಲ್ಲಿ ಸಮುದಾಯ ಹಮ್ಮಿಕೊಂಡ ಕಾರ್ಯಕ್ರಮಗಳು ಹಲವು. ಸಮುದಾಯದಿಂದ ಕಲಾವಿದರು ರೂಪಗೊಂಡಿದ್ದೂ ಹಲವು. ಸಮುದಾಯದ ಹುಡುಗರು ನಾಟಕದ ಗೀಳಿನೊಂದಿಗೆ ತಿರುಗಾಡಿದ ಊರುಗಳೂ ಹಲವು...ಹೀಗೆ 'ಹಲವು-ಹೊಸತು'ಗಳ ದ್ಯೋತಕವಾಗಿ ಬೆಳೆದಿರುವುದು ವಿಶೇಷ. ಕಲ್ಬುರ್ಗಿ ಕಂಪನಿ ನಾಟಕಗಳ ತವರೂರು. ಸದಾ ಇಲ್ಲಿ ಒಂದಲ್ಲಾ ಒಂದು ನಾಟಕ ಕಂಪನಿಯ ಬಿಡಾರ ಇದ್ದಿದ್ದೇ. ಆದರೆ ಮನರಂಜನೆಯೊಂದೇ ಈ ನಾಟಕಗಳ ಮೂಲದ್ರವ್ಯವಾಗಿ ಏಕತಾನತೆಯಿಂದ ಸೊರಗುತ್ತಿದ್ದಂಥ ಕಾಲದಲ್ಲಿ, ಬಯಲು ಸೀಮೆಯ ಬದುಕು, ಬರ, ಬವಣೆಗಳಿಗೆ ಧ್ವನಿಯಾಗಿ ಜನ ಸಮುದಾಯದ ಕಣ್ತೆರೆಸುವ ತುರ್ತು ಎದ್ದಿತ್ತು. ಇಂಥ ಸಾಂಸ್ಕೃತಿಕ ತುರ್ತಿನಲ್ಲಿಯೇ ಜೀವ ತಳೆದ ಈ ಸಂಘಟನೆ ಹಲವು ಚಟುವಟಿಕೆಗಳಲ್ಲಿ ನಿರಂತರತೆ ಉಳಿಸಿಕೊಂಡಿದ್ದು ಅರ್ಥಪೂರ್ಣ.



'ಸಮುದಾಯ ಕಲ್ಬುರ್ಗಿ' ನಾಟಕದ ದೃಶ್ಯ

ಸಮುದಾಯ ತನ್ನ ಸಾಧನೆಯ ಹಾದಿಯನ್ನು ಸವೆಸಿದ್ದು ಬಹುದೂರ. ಆದರೆ ಮನರಂಜನೆಯನ್ನೇ ಜೀವಾಳವಾಗಿಟ್ಟುಕೊಳ್ಳುವ ಕಲಾ ತಂಡಗಳಿಗಿಂತ ಇದು ತೀರಾ ಭಿನ್ನ. ಹೀಗಾಗಿ ಬದುಕಿನಲ್ಲಿಯ ಬಡತನ, ಶೋಷಣೆ, ಮೂಢನಂಬಿಕೆ, ಅನಕ್ಷರತೆ ಮುಂತಾದ ಸಂಕೀರ್ಣ ಸಮಸ್ಯೆಗಳನ್ನು ಆಯ್ದುಕೊಂಡು ಕಲೆಯ ಮೂಲಕ ವಿಚಾರ ಕ್ರಾಂತಿಗೆ ಎರಕ ಹೊಯ್ದಿದ್ದು ವಿಶಿಷ್ಟ. ಸಮುದಾಯ ತಂಡದ ಗೆಳೆಯರಲ್ಲಿ ಹೆಚ್ಚಿನವರು ಪಟ್ಟಣ ಪ್ರದೇಶದವರಾದರೂ ಅವರು 'ರಂಗಭೂಮಿ'ಗಾಗಿ ಹಳ್ಳಿಗಳನ್ನೇ ಆಯ್ಕೆ ಮಾಡಿಕೊಂಡಿದ್ದು ಗಮನಾರ್ಹ. 1977ರಲ್ಲಿ ಗಂಗಾಧರ ಸ್ವಾಮಿ ನಿರ್ದೇಶನದಲ್ಲಿ ಕತ್ತಲೆ ದಾರಿ ದೂರ, ಬೆಲ್ಚಿ, ಮೆರವಣಿಗೆ ಈ ಮುಂತಾದ ಹೊಸ ಅಲೆಯ ನಾಟಕ ಆಡುತ್ತಾ ಜಿಲ್ಲೆಯ ಜನರಲ್ಲಿ ಹೊಸ ಅಭೀಪ್ಸೆಯನ್ನು ಸಮುದಾಯ ತೆರೆದಿಟ್ಟಿತು. ಇದಕ್ಕಿಂತ ಮುಂಚೆಯೇ ಅಂದರೆ 1986ರಲ್ಲಿ ಸಮುದಾಯ ತನ್ನ ದಶಮಾನೋತ್ಸವದ ಸಂಭ್ರಮವನ್ನು ಬದಿಗಿಟ್ಟು ಜನರ ಬದುಕಿಗೆ ಗರಬಿಡಿಸಿದ್ದ ಭೀಕರ ಬರದ ಬಗ್ಗೆ 'ಕಲಾ ದರ್ಶನ' ಮಾಡಿಸಲು ರಾಜ್ಯಾದ್ಯಂತ ಜಾಥಾ ಕೈಗೊಂಡರು. ಬೀದರ್‌ನಿಂದ ಬೆಂಗಳೂರಿನವರೆಗೆ ಹಲವು ಊರುಗಳಲ್ಲಿ ಸಮುದಾಯದ ಗೆಳೆಯರು ಠಿಕಾಣಿ ಹೂಡಿ ಬರದ ಒಡಲಲ್ಲಿ ಹುದುಗಿದ್ದ ನೋವಿನ ಕಥೆಯನ್ನು ತೆರೆದಿಟ್ಟರು. ಸಮುದಾಯದವರು ಈ ಕಥೆ ಹೇಳಿದ್ದು 'ಬರದ ಬಯಲಾಟ' ಎಂಬ ನಾಟಕದ ಮೂಲಕ.

1984ರಲ್ಲಿ ಗ್ರಾಮೀಣ ಭಾಗದವರಿಗೆ ನಾಟಕದ ಹುರುಪು ತುಂಬುವುದಕ್ಕೆ ನಾಟಕ ತರಬೇತಿ ಶಿಬಿರದ ಸಂಘಟನೆಯನ್ನೂ ಸಮುದಾಯ ಪ್ರಾರಂಭಿಸಿತು. ಈ ಶಿಬಿರದಿಂದ ಈರೋಬಿ ಮತ್ತು ಗೋದಾನ ಎಂಬ ನಾಟಕಗಳು ಜನ್ಯವಾದವು. (ನಿರ್ದೇಶನ ಬಸವಲಿಂಗಯ್ಯ), 'ಸಮುದಾಯ' ಕಲ್ಬುರ್ಗಿ ತಂಡಕ್ಕೆ ಶಂಕ್ರಯ್ಯಾ ಗಂಟಿ ಸೂತ್ರಧಾರನಿದ್ದಂತೆ, ಪ್ರೊ. ಆರ್.ಕೆ. ಹುಡಗಿ ಮ್ಯಾನೇಜರ್ ಇದ್ದಂತೆ.

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಗತಿಗಳನ್ನು ವಿಡಂಬನೆ ಮಾಡುತ್ತಲೇ ಗಟ್ಟಿಯಾದ ನಾಟಕಗಳನ್ನು ಪ್ರತಿ ವರ್ಷವೂ ನೀಡುತ್ತಿರುವುದು ಹುಡಗಿ ಅವರ ಸಾಧನೆ. 1986ರಲ್ಲಿ ಮಹಿಮಾಪುರ, 1987ರಲ್ಲಿ ಬಾದಶಹ ಪುರಾಣ, 1988ರಲ್ಲಿ ಸಂಸ್ಥಾ, 1989ರಲ್ಲಿ ಉಸ್ತುವಾರಿ ಸಚಿವರ ಬಸ್ತಾನಿ, 1997ರಲ್ಲಿ ಹೆಮ್ಮಾರಿಯ ರಸಪುರಾಣ... ಹೀಗೆ ಹುಡಗಿ ಅವರ ರಂಗ ಕೊಡುಗೆಗಳು ಹಲವು. ಅವುಗಳನ್ನೆಲ್ಲಾ ಶಂಕ್ರಯ್ಯಾ ಗಂಟಿ ಸೂತ್ರಧಾರನಾಗಿ, ನಿರ್ದೇಶಕನಾಗಿ ರಂಗಪ್ರಯೋಗಕ್ಕೆ ಒಳಪಡಿಸುತ್ತಾ ಹಲವು ಹೊಸ ಕಲಾಪ್ರತಿಭೆಗಳನ್ನು ರೂಪಿಸಿದ್ದು ಗಮನಾರ್ಹ. ಸಮುದಾಯದ ಚಟುವಟಿಕೆಗಳಿಗೆ ಹೆಗಲು ಕೊಟ್ಟು ದುಡಿದ ಯುವಕರ ದಂಡೇ ಕಲ್ಬುರ್ಗಿಯಲ್ಲಿದೆ.

ಡಾ. ಕಾಶಿನಾಥ ಅಂಬಲಗಿ, ಪಿ.ಕೆ. ಘಾವಾರಿ, ಬಸವ ಪ್ರಭು, ಖೇಮಣ್ಣ ಅಲ್ದಿ ಮುಂತಾದವರಿದ್ದಾರೆ. ಈ ಬಳಗಕ್ಕೆ ಹೊಸ ಆಲೋಚನೆ, ಮಾರ್ಗದರ್ಶನಗಳು ಶಾಂತರಸ, ಪ್ರೊ. ಬಿ. ಕೃಷ್ಣಮೂರ್ತಿ, ಪ್ರಸಿದ್ಧ ಕಲಾವಿದ ವಿ.ಜಿ. ಅಂದಾನಿ, ಪಿ.ಎಂ. ಮಣ್ಣೂರು ಮುಂತಾದವರಿಂದ ಹರಿದುಬಂದು ಹೊಸ ಉತ್ಸಾಹಕ್ಕೆ ಮೂಲವಾಗುತ್ತಿದೆ.

ಸಮುದಾಯ ತಂಡದಿಂದ ಅನಕ್ಷರತೆಯ ವಿರುದ್ಧ ಸಮರ ಸಾರುವುದಕ್ಕಾಗಿ 'ಅಕ್ಷರ' ನಾಟಕ (ರಚನೆ–ಹುಡಗಿ) 150 ಹಳ್ಳಿಗಳಲ್ಲಿ ಪ್ರದರ್ಶನ ಕಂಡಿದ್ದು, 1992ರಲ್ಲಿ ಭಾರತ ಜನ ವಿಜ್ಞಾನ ಸಮಿತಿಯವರೊಂದಿಗೆ 'ಒರೆಗಲ್ಲ' ಎಂಬ ಬೀದಿ ನಾಟಕವೂ 150 ಕಡೆಗಳಲ್ಲಿ ಪ್ರದರ್ಶನಗೊಂಡಿದ್ದು, 1979ರಲ್ಲಿ ಹೊಸ ಮೌಲ್ಯದತ್ತ ಜಾಥಾ ಸಂಘಟಿಸಿದ್ದು, 'ಬೆಲ್ಚಿ', 'ಸಂಗಪ್ಪನ ಕೊಲೆ' ನಾಟಕಗಳನ್ನು ಹಲವು ಕಡೆಗಳಲ್ಲಿ ಅಭಿನಯಿಸಿದ್ದು, 1981ರಲ್ಲಿ ಚಾರ್ವಾಕ, ನರಗುಂದ ರೈತ ಬಂಡಾಯ ನಾಟಕ ಆಡಿದ್ದು, 1996ರಲ್ಲಿ 'ಉಚಲ್ಯಾ' ನಾಟಕ ಆಡಿದ್ದು, ನಡುನಡುವೆ ಸಾಮಾಜಿಕ ಮೌಲ್ಯಗಳ ಬಗ್ಗೆ ವಿಚಾರ ಸಂಕಿರಣ, ಕವಿಗೋಷ್ಠಿ, ಸಂಗೀತ, ಸಂಘಟಿಸಿದ್ದು, ಜಿಲ್ಲೆಯ ರಂಗ ಚಳವಳಿಗೆ ಪ್ರೋತ್ಸಾಹದ ನೀರೆರೆದು ಉತ್ತೇಜನ ನೀಡಿದವರಿಗೆ ಸನ್ಮಾನ ಮಾಡಿದ್ದು, ಹೀಗೆ ಸಮುದಾಯದ ದಿನಚರಿಯಲ್ಲಿ ಅನೇಕ ನೂತನ ಆವಿಷ್ಕಾರಗಳು ಅಡಕವಾಗಿವೆ. ಇವೆಲ್ಲವುಗಳ ಸಹೃದಯರಿಗೆ ಸಮುದಾಯವೆಂದರೆ ಅಚ್ಚು ಮೆಚ್ಚು.

(ಆರ್‌ಎಎ)

ಸರಸ್ವತಿ ಚಿಮ್ಮಲಗಿ: (ಪೂಜಾರ) ಪ್ರಾಥಮಿಕ ಶಾಲಾ ಶಿಕ್ಷಕಿಯಿಂದ ಮಹಾವಿದ್ಯಾಲಯದ ಪ್ರಾಧ್ಯಾಪಕಿಯವರೆಗೂ ಬೆಳೆದು ಬಂದವರು. ಏಕಾಂಗಿಯಾಗಿ ಹೋರಾಡುತ್ತ ಬೆಳೆದವರು. ಕಷ್ಟದ ದಿನಗಳಲ್ಲಿ, ಸೌಲಭ್ಯಗಳಿಲ್ಲದ ಸಂದರ್ಭದಲ್ಲಿ ಎಂ.ಎ., ಎಂ. ಫಿಲ್., ಪಿಎಚ್.ಡಿ. ಪದವಿ ಪಡೆದವರು. ಇವರು ರಂಗ ಕಲಾವಿದೆಯಾಗಿ, ಮಹಿಳಾ ಸಂಘಟಕಿಯಾಗಿ, ಪ್ರಕಾಶನದ ಒಡತಿಯಾಗಿ ಹಲವಾರು ಸಂಘ–ಸಂಸ್ಥೆಗಳಿಗೆ ಸದಸ್ಯೆಯಾಗಿ ವಿಶೇಷ ಹಾಗೂ ಅಪರೂಪದ ಮಹಿಳೆಯಾಗಿ ಆಕರ್ಷಿಸುತ್ತಾರೆ.



ಗುಲಬರ್ಗಾದ ಹವ್ಯಾಸಿ ಕಲಾವಿದೆಯರಲ್ಲಿ ಬಹುದೊಡ್ಡ ಹೆಸರು ಡಾ. ಸರಸ್ವತಿ ಪೂಜಾರ ಅವರದು. ವೃತ್ತಿ ರಂಗಕಲೆಯಲ್ಲಿಯೂ ಅಷ್ಟೇ ಆಸಕ್ತಿ ಹೊಂದಿದವರು. ವೃತ್ತಿರಂಗ ಕಲಾವಿದರ ಪೋಷಕರಾಗಿ, ಹಿತಚಿಂತಕರಾಗಿ ಸಹಾಯ–ಸಹಕಾರ ನೀಡಿದವರು. ಅನೇಕ ಹಿರಿಯ ವೃತ್ತಿರಂಗ ಕಲಾವಿದರನ್ನು ರಂಗಭೂಮಿಯಲ್ಲಿ, ಮನೆಯಲ್ಲಿ ಸನ್ಮಾನಿಸಿ ಆರ್ಥಿಕ ನೆರವು ನೀಡಿದವರು. ಅವರಿಂದ ನೆರವು ಪಡೆದ ಅನೇಕ ಕಲಾವಿದರು ಈಗಲೂ ಅವರನ್ನು ಸ್ಮರಿಸುತ್ತಾರೆ.

ಇವರು ಜೀವನದಿಂದಲೇ ರಂಗಾಸಕ್ತಿ, ಹೈಸ್ಕೂಲಿನಲ್ಲಿ, ಕಾಲೇಜಿನಲ್ಲಿ ನಾಟಕ ಸ್ಪರ್ಧೆಗಳಲ್ಲಿ ಅಭಿನಯಿಸಿ ಪ್ರಶಸ್ತಿ ಪಡೆದವರು. ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ವಿದ್ಯಾರ್ಥಿನಿ. ಅಂದಿನಿಂದ ಇಂದಿನವರೆಗೂ ರಂಗಭೂಮಿಯಲ್ಲಿ ಕಾಣಿಸಿಕೊಳ್ಳುತ್ತಲೇ ಇದ್ದಾರೆ. ಇತ್ತೀಚಿಗೆ 'ಜೋಗಿ ಭಾವಿ' ದೂರದರ್ಶನ ನಾಟಕದಲ್ಲಿ ಬಹಳಷ್ಟು ಆಕರ್ಷಿಸಿದರು.

ಇವರ ಜನಪ್ರೀಯ ಪಾತ್ರಗಳೆಂದರೆ ಡಾ. ಚಂದ್ರಶೇಖರ ಕಂಬಾರ ಅವರ 'ಜೋಕುಮಾರು ಸ್ವಾಮಿ' ನಾಟಕದ ಗೌಡತಿ, 'ಹುಲಿಯ ನೆರಳು' ನಾಟಕದ ಗೌಡತಿ, ಕಾಡುಕುದುರೆ ನಾಟಕದ ದುರ್ಗಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ ಅವರ ಕಥೆಯ ಆಧಾರದ ನಾಟಕ 'ಲಕ್ಕವ್ವನ ಮಂದಿ' ನಾಟಕದ ನಾಗವ್ವ ಪ್ರಮುಖ ಪಾತ್ರಗಳು.

ಇವರ ಇನ್ನೊಂದು ಸಾಹಸವೆಂದರೆ ನಿವೇದಿತಾ ಮಹಿಳಾ ತಂಡ ಕಟ್ಟಿಕೊಂಡು ನಾಡಿನಾದ್ಯಂತ ನಾಟಕಗಳನ್ನು ಪ್ರಯೋಗಿಸಿ ಬಂದದ್ದು, ನಾಟ್ಯರಾಣಿ ಶಾಂತಲೆ, ಮಾತನಾಡುವ ಟೊಂಗೆಗಳು ಈ ತಂಡದ ಪ್ರಮುಖ ನಾಟಕಗಳು. ಇವರ ದೀರ್ಘರಂಗ ಸೇವೆ ಪರಿಗಣಿಸಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಕರ್ನಾಟಕ ನಾಟಕ ಅಕಾಡೆಮಿ 2004ರಲ್ಲಿ ಗೌರವ ಪ್ರಶಸ್ತಿ ನೀಡಿದೆ. ಗುಲಬರ್ಗಾದ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ

ಇಲಾಖೆ ಸನ್ಮಾನಿಸಿವೆ. ಇವರು ನಿರಂತರ ಪ್ರಯತ್ನ ಪರಿಶ್ರಮ ದಿಂದ ಸಾಗಿಬಂದವರು. ಯಾವಾಗಲೂ ನಗುನಗುತ್ತ ಪ್ರಸನ್ನ ಚಿತ್ತವಿರಿಸಿಕೊಂಡವರು. ಹಾಗಂತಲೇ ಅವರು ಎಲ್ಲಡೆಯೂ ಸ್ವಾಗತ ಪಡೆಯುತ್ತಾರೆ ಗೌರವ ಪಡೆಯುತ್ತಾರೆ. (ಜಿಎಚ್)



ಸರೋಜ ಅನಗರಕರ: ತುಂಬು ಜೀವನ ನಡೆಸಿರುವ ಅನಗರಕರ ಬಾಯಿ ಹಾಡಲಿಕ್ಕೆ ಕುಂತ್ರ, ಮಂದ್ರ ಸಪ್ತಕ, ಮಧ್ಯ ಸಪ್ತಕ, ತಾರ ಸಪ್ತಕದಲ್ಲಿ ಲೀಲಾಜಾಲ ವಾಗಿ ಆಲಾಪತಾನ ಮಾಡಲು ಶುರೂ ಮಾಡಿದರೆ, ಯುವ ಕಲಾವಿದರು ದಂಗ ಬಡಿಯೋ ಹಾಂಗ ಹಾಡ್ತಾರ. ಕಿರಾಣಾ ಘರಾಣೆ ಗಾಯಕಿನ ಕೇಳ ಬೇಕಂದ್ರ ಈ ಸರೋಜಾಬಾಯಿ ಅವರ ಧ್ವನಿಯಲ್ಲೇ ಕೇಳಬೇಕು. ಅಂದಾಗ ಮಾತ್ರ ಅದರ ಸವಿಯನ್ನು ಉಣಬಹುದು ಅನಸ್ತದ.

ಕಲಬುರ್ಗಿ ನಗರದ ಶ್ರೀ ನರಹರಿರಾವ ಅನಗರಕರ ಹಾಗೂ ಶ್ರೀಮತಿ ರುಕ್ಮಿಣಿ ನರಸಿಂಹರಾವ ಅನಗರಕರ ಅವರ ಮೂರನೆಯ ಮಗಳಾಗಿ ಜನ್ಮವೆತ್ತಿದ ಬಾಲಕಿಯೇ ಸಂಗೀತ ಲೋಕದ ಖ್ಯಾತಿಯ ಈ ಸರೋಜ ಅನಗರಕರ. ಏಳು ಜನ ಮಕ್ಕಳಲ್ಲಿ ತಂದೆ-ತಾಯಿ ಹಾಗೂ ಇಡೀ ಮನೆತನಕ್ಕೆ ಅತ್ಯಂತ ಅಕ್ಕರೆಯ ಮಗಳಾಗಿ ಬೆಳೆದವರು ಈ ಸರೋಜಬಾಯಿ.

ನೂತನ ವಿದ್ಯಾಲಯದಲ್ಲಿ ಪ್ರಾಥಮಿಕ ಶಿಕ್ಷಣ, ಅಭ್ಯಾಸ ದಲ್ಲೂ ಅತ್ಯಂತ ಮುಂದೆ. ಅಂತೆಯೇ 1969-71ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತ ಕೋತ್ತರ ಪದವಿ ಪಡೆದುಕೊಂಡರು. ಬಿ.ಎಡ್. ಪದವಿ, ಮುಂದೆ ಸರಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರಾಗಿ ಆರಂಭಿಸಿ, 1972ರಲ್ಲಿ ವಿಭಾಗೀಯ ಸಂಗೀತ ಅಧೀಕ್ಷಕರೆಂದು ಪದೋನ್ನತಿ ಹೊಂದಿದರು. ಕಳೆದ ಎರಡು ವರ್ಷಗಳ ಹಿಂದೆ ನಿವೃತ್ತಿ ಹೊಂದಿದ ಅವರು, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕಾಣಿಕೆ ಯಾದರೆ, ಸಂಗೀತ ಕ್ಷೇತ್ರಕ್ಕೆ ನೀಡಿದ ಅವರ ಸೇವೆ ಹಾಗೂ ಕಾಣಿಕೆ ಅಮೋಘವಾದದ್ದು.

ಕಲಬುರ್ಗಿಯಲ್ಲಿ ಅನಗರಕರ ಅವರ ಮನೆತನವು ತಲ ತಲಾಂತರಗಳಿಂದ ಸಂಗೀತ ವಾತಾವರಣ ಇರುವಂತಹದು. ಸರೋಜಾ ಅವರ ಅಜ್ಜ ದಿ. ಶ್ರೀಪತರಾವ ಅನಗರಕರ ಉತ್ತಮ ಧ್ರುಪದ್ ಧಮಾರ ಗಾಯಕರು. ಇವರ ಸೋದರತ್ತೆ ಶ್ರೀಮತಿ ಗೋದಾವರಿ ಅನಗರಕರ ಉತ್ತಮ ಗಾಯಕಿ ಹಾಗೂ ಇವರ ಎಲ್ಲಾ ಸಹೋದರಿಯರೂ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದವರೇ. ಒಂದು ಕಾಲದಲ್ಲಿ ಕಲಬುರ್ಗಿಯ ಕಲಾ ಮಂಡಳ ಅಂದರೆ ಸರಸ್ವತಿಯ ವಾಸಸ್ಥಾನವಾಗಿತ್ತು. ಇದ ಕ್ಕಾಗಿಯೇ ಎ.ಎನ್. ಅಪ್ಪೆ ಗುರುಗಳ ಹತ್ತಿರ ಅನಗರಕರ ಮೇಡಂ ಅವರು ಸಂಗೀತ ಸಾಧನೆ ಪ್ರಾರಂಭಿಸಿದರು. ಸುಮಾರು ಮೂರು ವರ್ಷಗಳ ಕಾಲ ಸತತ ಅಭ್ಯಾಸ ಮಾಡಿದರು. ಅಪ್ಪೆ ಅವರಂಥ ಗುರುಗಳಲ್ಲಿ ಸಂಗೀತ ಸಾಧನೆಯ ನಂತರ ಸರೋಜ ಅನಗರಕರ ಅವರಿಗೆ ಮುಂದೆ ಸಂಗೀತಕ್ಕೆ ತಮ್ಮನ್ನು ತಾವೇ ಅರ್ಪಣೆ ಮಾಡಿಕೊಳ್ಳುವಂತಹ ಅವಕಾಶ ಕೂಡಿಬಂದಿತು.

ಏಕೆಂದರೆ ಒಬ್ಬ ಉತ್ತಮ ಗುರುಗಳು ಸಿಗುವುದು ಮುಖ್ಯ. ಅಂತೆಯೇ ಶ್ರೀಮತಿ ಸರೋಜ ಅನಗರಕರ ಅವರಿಗೆ ಉತ್ತಮ ಗುರುಗಳಾಗಿ ಸಂಗೀತ ಏಕಲವ್ಯ ಎಂದೇ ಖ್ಯಾತಿ ಪಡೆದ ಡಾ. ಪಾಂಡುರಂಗರಾವ ಪತ್ಕಿಯವರು ದೊರೆತರು. ಪ್ರತಿದಿನ ಬೆಳಿಗ್ಗೆ ನಾಲ್ಕು ತಾಸು. ಸಾಯಂಕಾಲ ನಾಲ್ಕು ತಾಸು ರಿಯಾಜ್ ಮಾಡಿಸಿ, ಸುಮಾರು 15 ವರ್ಷಗಳ ಕಾಲ ಸತತ ಮಾರ್ಗ ದರ್ಶನ ನೀಡಿದರು. ಅಂತೆಯೇ ಅನಗರಕರ ಅವರು ಇಂದು ಸಂಗೀತ ಲೋಕದಲ್ಲಿ ತಮ್ಮದೇ ಆದ ಸ್ಥಾನದಿಂದ ಗುರುತಿಸಲ್ಪಡು ತ್ತಾರೆ.

ನಿರಂತರ ಸಾಧನೆಯಿಂದ ಸಂಗೀತ ಪರೀಕ್ಷೆಗಳಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಹಾಗೂ ಚಿನ್ನದ ಪದಕ ಪಡೆದರು. 1970-71 ರಲ್ಲಿ ಕರ್ನಾಟಕ ಸರಕಾರದಿಂದ ವಿದ್ವತ್ ಪರೀಕ್ಷೆಯಲ್ಲೂ ಚಿನ್ನದ ಪದಕ ಪಡೆದರು. ಈ ಪರೀಕ್ಷೆಯ ಪರೀಕ್ಷಕರು ಕರ್ನಾಟಕ ರಾಜ್ಯದ ಘಟಾನುಘಟಿಗಳಾದ ಪಂ. ಬಸವರಾಜ ರಾಜಗುರು, ಪದ್ಮಶ್ರೀ ಗಂಗೂಬಾಯಿ ಹಾನಗಲ್, ಪಂ. ಸಿದ್ಧರಾಮ ಜಂಬಲದಿನ್ನಿ ಹಾಗೂ ಪಂ. ಮರಾಠೆ ಅವರುಗಳಾಗಿದ್ದರು.

ಬಸವರಾಜ ರಾಜಗುರು ಅವರು ಹೇಳುವಂತೆ, 'ಕಲಬುರ್ಗಿಯ ಈ ಹುಡುಗಿ ಎಷ್ಟು ಇಂಪಾಗಿ ಹಾಡ್ತಾಳ, ಬೆಳಿಗ್ಗೆ ಯಿಂದ ಬೇಸೂರ ಹಾಡೂ ಕೇಳಿ ತಲೆ ಕೆಟ್ಟಿತ್ತು. ಈ ಹುಡುಗಿ ಹಾಡಿದ ಮ್ಯಾಲ ಮನಸ್ಸಿಗೆ ಆನಂದ ಅನಿಸ್ತು ಗಂಗಕ್ಕ' ಅಂತ ಉದ್ಗಾರ ತೆಗೆದಿದ್ದರಂತೆ.

ಚಿನ್ನದಪದಕ ಪಡೆಯುವ ಮೂಲಕ ಸುಮ್ಮನೆ ಇರದೆ, ಮುಂಬೈನ ಗಂಧರ್ವ ಮಹಾವಿದ್ಯಾಲಯದ ಸಂಗೀತ ಅಲಂಕಾರ ಪರೀಕ್ಷೆಯಲ್ಲೂ 1972ರಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. 1960ರಿಂದ ಧಾರವಾಡ ಆಕಾಶವಾಣಿ 'ಬಿ' ಶ್ರೇಣಿಯ ಕಲಾವಿದರೆಂದು ಸುಮಾರು 20 ವರ್ಷಗಳ ಕಾಲ ಕಾರ್ಯಕ್ರಮ ನೀಡಿದ ಶ್ರೇಯಸ್ಸು ಇವರದು.

ಉದಯೋನ್ಮುಖ ಕಲಾವಿದರು ಮುಂದೆ ಬರಲಿ ಮತ್ತು ವಿಶ್ವ ತುಂಬೆಲ್ಲ ಶಾಂತಿ ನೆಲೆಸಲಿ ಎಂಬ ಕಾರಣಕ್ಕಾಗಿ 1988-89ರಲ್ಲಿ ಸ್ವರಾಂಜಲಿ ಸಂಗೀತ ವಿದ್ಯಾ ಸಂಸ್ಥೆಯನ್ನೇ ಸರೋಜ ಅನಗರ ಕರ ಅವರು ಸ್ಥಾಪಿಸಿದರು. ಈ ಸಂಸ್ಥೆಯ ಅಧ್ಯಕ್ಷರು ಶ್ರೀಮತಿ ಗೋದಾವರಿ ಅನಗರಕರ, ಕಾರ್ಯದರ್ಶಿಗಳಾಗಿ ಶ್ರೀಮತಿ ಸರೋಜ ಅನಗರಕರ ಹಾಗೂ ಶ್ರೀ ಶರದ ಕೊಲ್ಹಾರಕರ (ಶ್ರೀಮತಿ ಸರೋಜ ಅನಗರಕರ ಅವರ ಪತಿ) ಕಾರ್ಯ ನಿರ್ವಹಿಸಿದರೆ, ಸದಸ್ಯರಾಗಿ ಶ್ರೀ ಸತೀಶ ದೇಶಪಾಂಡೆ, ಶ್ರೀ

ಸುರೇಶ ಪತ್ಕಿ, ಶ್ರೀ ಮಾಧವ ಜೋಶಿ, ಕಲಬುರ್ಗಿಯ ಹಿರಿಯ ಕಲಾವಿದರಾದ ಪಂ. ಫಕೀರೇಶ ಕಣವಿ, ಉಸ್ತಾದ ಶೇಖ ಅಬ್ದುಲ್ಲಾ ಖಾಜಿ, ಡಾ. ಹನುಮಣ್ಣ ನಾಯಕ ದೊರೆ, ಶ್ರೀ ರೇವಯ್ಯ ಎಂ. ವಸ್ತ್ರದ ಮಠ, ಶ್ರೀ ಶಾಂತಲಿಂಗ ದೇಸಾಯಿ ಕಲ್ಲೂರ, ಶ್ರೀಮತಿ ಪಾರ್ವತಿ ದೇವಿ ಹೊಂಬಾಳ, ಸುಧೀಂದ್ರ ದಂಡಾಪೂರ ಹಾಗೂ ದೇಸಾಯಿ ಸಹೋದರರು.

ಕಲಬುರ್ಗಿ ನಗರದಲ್ಲಿ ಅನೇಕ ಶಿಷ್ಯರನ್ನು ಸಂಗೀತ ಪ್ರಪಂಚಕ್ಕೆ ನೀಡಿದ ಕೀರ್ತಿ ಶ್ರೀಮತಿ ಸರೋಜ ಅನಗರಕರಿಗೆ ಸಲ್ಲುತ್ತದೆ. ರಮೇಶ ಕುಲಕರ್ಣಿ, ಉಷಾ ಪಟ್ವಾರಿ, ಸುರೇಶ ಪತ್ಕಿ, ಸಂಗೀತಾ ಮಾಹೂರಕರ, ಪೂರ್ಣಿಮಾ ರಾಮಾಚಾರ, ಸ್ನೇಹಾ ಹಂಪಿಹೊಳಿ, ಗಿರಿಜಾ ದೇಶಪಾಂಡೆ, ರಾಘವೇಂದ್ರ ಬಡಶೇಷಿ ಇನ್ನೂ ಅನೇಕ ಶಿಷ್ಯರು ಇವರ ಗರಡಿಯಲ್ಲಿ ಪಳಗಿ ಸಂಗೀತ ಕ್ಷೇತ್ರದ ಕಾಣಿಕೆಯಾಗಿದ್ದಾರೆ.

ಈ ಕಲಾವಿದೆ ಬಡೋದ್ರಾ, ಇಂದೋರ, ಮುಂಬೈ, ಪುಣೆ, ಔರಂಗಾಬಾದ, ಮಲಕಾಪುರ, ಲಾತೂರ, ಉಮರ್ಗಾ, ಸೋಲ್ಲಾಪೂರ, ಹೈದ್ರಾಬಾದ, ಬೀದರ, ರಾಯಚೂರ, ಬಳ್ಳಾರಿ ಇನ್ನೂ ಅನೇಕ ನಗರಗಳಲ್ಲಿ ಯಶಸ್ವಿ ಸಂಗೀತ ಕಾರ್ಯಕ್ರಮ ನೀಡಿ ಶ್ರೋತೃಗಳ ಮನತಣಿಸಿದ್ದಾರೆ.

ಖಯಾಲ್, ಠುಮ್ರಿ, ತರಾನಾ, ದಾಸವಾಣಿ, ಸಂತವಾಣಿ, ವಚನಗಳು, ಭಾವನೆಗಳು, ಸ್ವತಃ ತಾವೇ ಸಂಗೀತ ಸಂಯೋಜನೆ ಮಾಡಿ ಹಾಡುವ ಪಾಂಡಿತ್ಯ ಹೊಂದಿದ್ದಾರೆ. ಅನೇಕ ರಾಗಗಳಿಗೆ 'ಚೀಸ'ಗಳನ್ನೂ ಸಹಿತ ಸಂಯೋಜನೆ ಮಾಡಿದ್ದಾರೆ. ಸುಗಮ ಸಂಗೀತ ಹಾಡುವಾಗ ಅನೇಕ ರಾಗಗಳ ಮಿಶ್ರಣ ಮಾಡಿ, ಅನುಭವಿಗಳೂ ಬೆರಗುಗೊಳ್ಳುವಂಥ ಪಾಂಡಿತ್ಯವನ್ನು ಇವರು ಹೊಂದಿದ್ದಾರೆ.

ಈ ಕಲಾವಿದೆಯ ಎಲ್ಲಾ ಯಶಸ್ಸಿಗೆ ಪತಿ ಶರದ ಕೊಲ್ಹಾರಕರ ಅವರೇ ಕಾರಣವೆನ್ನುತ್ತಾರೆ. ಅವರ ಸಾಧನೆಗೆ ಬೆನ್ನೆಲುಬಾಗಿ ತಾವು ನಿಂತು, ಪ್ರೋತ್ಸಾಹ ನೀಡಿ ಈ ಮಟ್ಟದಲ್ಲಿ ಬೆಳೆಯಲು ಕಾರಣವಾಗಿದ್ದಾರೆ. ಜೊತೆಗೆ ಅವರ ಮಗ ನಿಖಿಲ ಕೊಲ್ಹಾರಕರ ಕೂಡ ಉತ್ತಮ ಕಲಾವಿದನಾಗಿ ಬೆಳೆಯುತ್ತಿದ್ದಾನೆ. ಪೂಜ್ಯ ದಿಂ. ನಾನಾ ಮಹಾರಾಜ ತಾರಣೇಕರ (ಇಂದೂರ)ರ ಭಕ್ತರಾಗಿದ್ದು, ಗುರುಗಳು ಅನಗರಕರ ಅವರಿಗೆ ತರಾನಾ ಕಲಾವಿದೆ ಎಂದು ಗುರುತಿಸುತ್ತಿದ್ದರು.

ಈ ಅಪ್ರತಿಮ ಪ್ರಭುದ್ಧ ಗಾಯಕಿಗೆ 2001–02ರಲ್ಲಿ ಕರ್ನಾಟಕ ಸರಕಾರ 'ಕರ್ನಾಟಕ ಕಲಾಶ್ರೀ ಪ್ರಶಸ್ತಿ' ನೀಡಿ ಗೌರವಿಸಿದೆ.

(ಎಂಬಿ)

ಸರೋಜಮ್ಮ ಧುತ್ತರಗಿ: ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ 1940ರ ದಶಕದಲ್ಲಿ ಜನಿಸಿದ ಕರ್ನಾಟಕ ರಂಗಭೂಮಿಯ ಹೆಮ್ಮೆಯ ಕಲಾವಿದೆ. ಶ್ರೀಮತಿ ಸರೋಜಮ್ಮ ಧುತ್ತರಗಿ ಇಂದು ರಾಜ್ಯ ಪ್ರಶಸ್ತಿ ಪಡೆಯುವ ಮಟ್ಟಕ್ಕೆ ಏರಿದ್ದಾರೆ. ಅಭಿನಯದಲ್ಲಿ ಅತ್ಯಂತ ಆಸಕ್ತಿ ಹೊಂದಿ, ಚಿಕ್ಕ ವಯಸ್ಸಿನಲ್ಲಿಯೇ ರಂಗಭೂಮಿಗಿಳಿದು, ಪ್ರಾಥಮಿಕ ಶಿಕ್ಷಣಕ್ಕೆ ತಿಲಾಂಜಲಿ ಹೇಳಿ ರಂಗಭೂಮಿಯ ಸೇವೆಗೆ ಟೊಂಕಕಟ್ಟಿ ನಿಂತವರು ಸರೋಜಮ್ಮ.

ಗುಬ್ಬಿ ವೀರಣ್ಣ ನಾಟಕ ಕಂಪನಿ, ಸುಬ್ಬಯ್ಯ ನಾಯ್ಡು ನಾಟ್ಯ ಸಂಘ, ಶಾರದಾ ನಾಟಕ ಮಿತ್ರಮಂಡಳಿ ಗೋಕಾಕ್, ಕೆ.ಬಿ.ಆರ್. ಡ್ರಾಮಾ ಕಂಪನಿ, ಸುಳ್ಳ ದೇಸಾಯಿಯವರ ನಾಟಕ ಕಂಪನಿ, ಹಿರಣ್ಣಯ್ಯ ಮಿತ್ರಮಂಡಳಿ ಹೀಗೆ ನೂರಾರು ಕಂಪನಿಗಳಲ್ಲಿ, ಸಾವಿರಾರು ನಾಟಕಗಳಲ್ಲಿ ಹಲವಾರು ವೈವಿಧ್ಯ ಪಾತ್ರಗಳಲ್ಲಿ ಎದ್ದು ಕಾಣುವ ಪಾತ್ರವೆಂದರೆ ಶ್ರೀಮತಿ ಸರೋಜಮ್ಮನವರದು.

ಪಾತ್ರಾಭಿನಯ ಮಾತ್ರವಲ್ಲದೇ ಕಥೆ ರಚನೆ, ನಿರ್ದೇಶನ, ಆಕಾಶವಾಣಿ ನಾಟಕ ನಿರ್ದೇಶನ ಮತ್ತು ಆಕಾಶವಾಣಿಯಲ್ಲಿ ಸಂಗೀತ–ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಪೌರಾಣಿಕ, ಧಾರ್ಮಿಕ, ಸಾಮಾಜಿಕ ಮತ್ತು ಆಧುನಿಕ ನಾಟಕಗಳಲ್ಲಿಯೂ ಅಭಿನಯಿಸಿದ ಶ್ರೀಮತಿ ಸರೋಜಮ್ಮ ಈಗ ನಿವೃತ್ತ ಕಲಾವಿದೆ.

ಅವರ ಕಾಲದಲ್ಲಿ ಸ್ತ್ರೀ ಪಾತ್ರಗಳೆಲ್ಲವನ್ನೂ ಪುರುಷರೇ ಮಾಡುವಂಥ ಕಾಲ. ಸ್ತ್ರೀಯರು ರಂಗಮಂಚದ ಮೇಲೆ ಬಂದರೆ ಮೂಗು ಮುರಿಯುವ ಕಾಲವಾಗಿತ್ತು. ಅಂತಹದರಲ್ಲಿ ಸ್ತ್ರೀ ಪಾತ್ರದಲ್ಲಿ ಸ್ತ್ರೀ ಕಾಣಿಸಿಕೊಳ್ಳುತ್ತಾಳೆಂದರೆ ಅಭಿಮಾನಿಗಳಿಗೆ, ಪ್ರೇಕ್ಷಕರಿಗೆ ಎಲ್ಲಿಲ್ಲದ ಕುತೂಹಲ.

ರಂಗಭೂಮಿಯ ಅನುಭವಿಗಳಾದ ಈ ಕಲಾವಿದೆಯ ಅಭಿನಯ, ಮಧುರ ಧ್ವನಿ, ನಿರ್ದೇಶನವನ್ನು ಮೆಚ್ಚಿ ನಾಟಕ ಅಕಾಡೆಮಿಯಿಂದ ಪ್ರಶಸ್ತಿ, ಹಲವಾರು ಸಂಘ ಸಂಸ್ಥೆ, ಮಠಗಳಿಂದ, ಉತ್ಸವಗಳಲ್ಲಿ ಗಣ್ಯರಿಂದ ಶ್ರೀಗಳಿಂದ ಪದಕ–ಬಿರುದು, ಸನ್ಮಾನ ಮತ್ತು ಗೌರವ ಪುರಸ್ಕಾರಗಳು ಹರಿದು ಬಂದಿವೆ. ಇವರ ಯಜಮಾನರಾದ ಮತ್ತು ರಂಗಭೂಮಿಯ ಹಿರಿಯ ಕವಿ, ಕಲಾವಿದ, ನಿರ್ದೇಶಕ ಹಾಗೂ ಕಂಪನಿ ಮಾಲೀಕರೂ ಆದ ಮುಂಡಲೀಕಪ್ಪ ಧುತ್ತರಗಿ ಅವರಿಗೆ 'ಗುಬ್ಬಿ ವೀರಣ್ಣ' ಪ್ರಶಸ್ತಿ ನೀಡಿ ಸರಕಾರ ಸನ್ಮಾನಿಸಿದೆ. ಚಿತ್ರದುರ್ಗಕ್ಕೆ ಗುಬ್ಬಿ ಕಂಪನಿ ಬಂದಿದ್ದಾಗ, ಅದರಲ್ಲಿ ನಟಿಸುವ ಸೌಲಭ್ಯ ಸರೋಜಮ್ಮನವರಿಗೆ ಸಿಕ್ಕಿದ್ದೇ ತಡ, ಅಲ್ಲಿಂದ ಶುರುವಾದ ವೃತ್ತಿರಂಗಭೂಮಿಯಲ್ಲಿ ರಾಮರಾಮ ಎನ್ನುವ ವಯಸ್ಸಿನವರೆಗೂ ತಪ್ಪಲಿಲ್ಲ. ನಂತರ ನೂರಾರು ಕಂಪನಿಗಳಲ್ಲಿ ಅವಕಾಶ ದೊರೆತವು. ಲಕ್ಷ್ಮಿ ಸರಸ್ವತಿ ಒಂದೆಡೆ ಸೇರಲು ಸಾಧ್ಯವಿಲ್ಲ. ಮುಂಡಲೀಕಪ್ಪ ಕಂಪನಿಯಲ್ಲಿ ಎಷ್ಟೋ ಸಾಹಸ ಮಾಡಿದರೂ ಆರ್ಥಿಕ ಮಟ್ಟ ಮಾತ್ರ ಸುಧಾರಿಸಲಿಲ್ಲ. ಬಸವರಾಜ ಮತ್ತು ಶ್ರೀದೇವಿ ಎಂಬ ಮಕ್ಕಳನ್ನು ಪಡೆದು, ಕೊನೆಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರ ಗ್ರಾಮದಲ್ಲಿ ನೆಲೆಸಿದ್ದಾರೆ.

(ಕೆಜೆಎಂ)



ಸರೋದೆ ಕೆ.ಎಸ್.: ಹಿರಿಯ ಚಿತ್ರಕಲಾವಿದರು. 1935ರ ಆಗಸ್ಟ್ 10ರಂದು ಗುಲಬರ್ಗಾದಲ್ಲಿ ಜನಿಸಿದರು. ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಅಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಸೈಯದ್ ಹುಸೇನ್ ಅವರ ಪ್ರೋತ್ಸಾಹದಿಂದ ಇವರು ಹೈದ್ರಾಬಾದಿನಲ್ಲಿ ಚಿತ್ರಕಲೆಯ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಮುಂಬಯಿ ನೂತನ ಕಲಾವಿದ್ಯಾಲಯದ ಮೂಲಕ ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸಿಸಲು ಮುಂಬಯಿಗೆ ತೆರಳಿದರು. ನೂತನ ಕಲಾವಿದ್ಯಾಲಯದಲ್ಲಿ ಗುರುಗಳಾಗಿದ್ದ ಶ್ಯಾಮರಾವ್ ಹಾಗೂ ಶ್ರೀ ಶರಣಪ್ಪ ಅವರಲ್ಲಿ ಭಾವಚಿತ್ರ, ಸಂಯೋಜನಾ ಚಿತ್ರ, ಸ್ಟಿಲ್‌ಲೈಫ್ ಹಾಗೂ ಡಿಸೈನ್‌ಗಳಲ್ಲಿ ತರಬೇತಿಯನ್ನು ಪಡೆದರು. ಬಹು ಪರಿಶ್ರಮದಿಂದ ಕಲಾಕೃತಿಗಳನ್ನು ರಚಿಸಿ ಮುಂಬಯಿಯ ಪ್ರತಿಷ್ಠಿತ ಜೆ.ಜೆ. ಕಲಾಶಾಲೆಯಲ್ಲಿ ಪ್ರವೇಶ ಪಡೆದರು. ಅಂದಿನ ದಿನಗಳಲ್ಲಿ ಇವರ ಕುಟುಂಬದ ಆರ್ಥಿಕ ಪರಿಸ್ಥಿತಿ ಸರಿಯಿರಲಿಲ್ಲ. ಆದರೂ ಇವರ ಹಿರಿಯ ಸಹೋದರರಾದ ಮಲ್ಹಾರರಾವ್ ಅವರು ಇವರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ ವ್ಯಾಸಂಗವನ್ನು ಸುಗಮಗೊಳಿಸಿದರು. ನೂತನ ಕಲಾಮಂದಿರದಲ್ಲಿ ದಂಡಾವತಿ ಮಠ ಅವರಂತಹ ಗುರುಗಳು, ಎಸ್.ಎಂ. ಪಂಡಿತ್ ಹಾಗೂ ವಿ.ಎಸ್. ಭಂಕೂರಕರ್ ಮುಂತಾದವರ ಪ್ರೋತ್ಸಾಹ ಸರೋದೆಯವರಿಗೆ ದಾರಿದೀಪವಾಯಿತು. ಮುಂಬಯಿಯಲ್ಲಿ ಇವರು ರೇಖಾಚಿತ್ರ, ಜಲ, ತೈಲವರ್ಣಗಳ ಸಾಧ್ಯಸಾಧ್ಯತೆಗಳನ್ನು ಕೈವಶ ಮಾಡಿ ಕೊಂಡರು. ಇನ್ನಷ್ಟು ಕಲಿಯುವ ಹಂಬಲದಿಂದ ದೇಶದ್ಯಾಂತ ಪ್ರಮುಖ ಮಹಾನಗರಗಳಾದ ಕೋಲ್ಕತ್ತಾ, ಲಾಹೋರ, ಚೆನ್ನೈ ಮುಂತಾದ ನಗರಗಳಲ್ಲಿ ಸಂಚರಿಸಿ ಸಮಕಾಲೀನ ಕಲೆಯನ್ನು ಪರಿಚಯಿಸಿಕೊಂಡರು.



'ಛತ್ರಪತಿ ಶಿವಾಜಿ' ಜಲವರ್ಣ ಮಾಧ್ಯಮ

ಯಾವುದೇ ಪ್ರಶಸ್ತಿ, ಬಹುಮಾನ, ಸಮಾರಂಭಗಳಿಂದ ದೂರವೇ ಉಳಿಯುತ್ತಿದ್ದ ಇವರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಗುರುತಿಸಿ ಹಿರಿಯ ಕಲಾವಿದರಿಗೆ ನೀಡುವ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ 2004. (ಪಿಪಿ)

ಸಾ

ಸಾಹೇಬ ಗೌಡ: ವೃತ್ತಿ ರಂಗಭೂಮಿ ಕಲಾವಿದ. ಕಲಬುರ್ಗಿ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಕೂಡಿಗನೂರ ಗ್ರಾಮದ ಪಾಟೀಲ ನಿಂಗನಗೌಡ ಇವರ ತಂದೆ. ತಾಯಿ ಗುರುಬಾಯಿ.

ತಮ್ಮ ಕುಟುಂಬ ನಿರ್ವಹಣೆಗೆ ವೃತ್ತಿ ರಂಗಭೂಮಿಯನ್ನೇ ನೆಚ್ಚಿಕೊಂಡಿರುವ ಗಂಡ–ಹೆಂಡತಿ ಇಬ್ಬರೂ ನಾಟಕಗಳಲ್ಲಿ ಪಾತ್ರ ಮಾಡುವ ಮೂಲಕ ವೃತ್ತಿ ರಂಗಭೂಮಿಯನ್ನು ಜೀವಂತವಾಗಿಟ್ಟು, ಕಲಾಪ್ರೇಕ್ಷಕರನ್ನು ರಂಗಪರದೆಗೆ ಕೈಬೀಸಿ ಕರೆಯುವಂತೆ ಮಾಡುವ ಕಲೆ ಇವರಲ್ಲಿ ಕರಗತವಾಗಿದೆ.

ಕೃಷಿ ಕುಟುಂಬದಿಂದ ಬಂದಿರುವ ಇವರು, ಹರೆಯದ ವಯಸ್ಸಿನಲ್ಲೇ ಕಲಾಸರಸ್ವತಿ ಕಡೆಗೆ ಮುಖಮಾಡಿ, ಅಂದು ಆರಂಭದಲ್ಲಿ ನಾಟಕ ನೋಡುವುದೇ ಹೆಚ್ಚಿನ ಅಭ್ಯಾಸ ಮಾಡಿಕೊಂಡು ಮುಂದೆ ಒಂದು ದಿನ ಅದೇ ತಮ್ಮ ಬದುಕಿನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ಕೆಬಿಆರ್ ಡ್ರಾಮಾ ಕಂಪನಿ, ಶಿರಡಿ ಸಾಯಿಬಾಬಾ ಕಂಪನಿ, ಮೈಂದರ್ಗಿ ನಾಟ್ಯ ಸಂಘ, ಗುಡಗೇರಿ ನಾಟ್ಯ ಸಂಘ ಹಾಗೂ ಸದ್ಯ ಗುಲಬರ್ಗಾದಲ್ಲಿ ಕಳೆದ ಎಂಟು ವರ್ಷಗಳಿಂದ ಇರುವ ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘ ಹಾನಗಲ್ ಈ ನಾಟಕ ಸಂಸ್ಥೆಗಳಲ್ಲಿ ಕಲಾಸೇವೆಯನ್ನು ಮಾಡುತ್ತ ಬಂದಿದ್ದಾರೆ. ಸದ್ಯ ಕಲಬುರ್ಗಿಯಲ್ಲಿ ಕುಟುಂಬ ಸಮೇತ ವಾಸವಾಗಿರುವ ಇವರು ಹಾನಗಲ್ ಕಂಪನಿಯ ಮಾಲೀಕ ಎಲ್.ಬಿ. ಶೇಖ್ ಮಾಸ್ತರ ಮತ್ತು ಸಂಚಾಲಕ ಶ್ರೀಧರ ಹೆಗಡೆಯವರ ಒಡನಾಡಿಯಾಗಿ, ಎಲ್ಲಾ ಪಾತ್ರಗಳಲ್ಲೂ ಮೆಚ್ಚುಗೆ ಗಳಿಸಿಕೊಳ್ಳುವಂಥ ಅಭಿನಯ ನೀಡುವ ಮೂಲಕ ಜನಮನ ಸೆಳೆದಿದ್ದಾರೆ.

ಕಲಬುರ್ಗಿಯೂ ಸೇರಿದಂತೆ ವಿಜಾಪುರ, ತಾಳಿಕೋಟೆ, ಬಾಗಲಕೋಟೆ ಹೀಗೆ ಪ್ರಮುಖ ನಗರಗಳಲ್ಲಿ ಹಾಕಲಾದ ನಾಟಕ ಕಂಪನಿಗಳಲ್ಲಿ ಸುಮಾರು 60ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರೈತನ ಮಕ್ಕಳು, ನಾಯಿಗಳಿವೆ ಎಚ್ಚರಿಕೆ, ಚನ್ನಪ್ಪ ಚನ್ನಗೌಡ, ರತ್ನಮಾಂಗಲ್ಯ ಹೀಗೆ ಅನೇಕ ನಾಟಕಗಳು, ನೂರಾರು ಪ್ರಯೋಗಗಳು ಕಂಡಿದ್ದು, ಇವರ ಕಲೆಯನ್ನು ನಾಡಿನ ಪ್ರೇಕ್ಷಕ ವರ್ಗ ಗುರುತಿಸಿ, ಬೆನ್ನುಚಪ್ಪರಿಸಿದೆ. ಈಗ 52 ವರ್ಷದ ಸಾಹೇಬಗೌಡರು ನಾಟಕಗಳಲ್ಲಿ ಹೆಚ್ಚಾಗಿ ಕುಟುಂಬದ ಯಜಮಾನ ಮತ್ತು ತಿರುವು ಪಡೆಯುವ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅನೇಕ ಸಂಘ-ಸಂಸ್ಥೆಗಳು ಇವರನ್ನು ಗೌರವಿಸಿವೆ.

(ಎಸ್‌ಜಿ)

ಸಿ



ಸಿದ್ದಣ್ಣ ಎಸ್. ಮರಗೋಳ: ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಹೊನ್ನಗೂಂಟಿ ಗ್ರಾಮದಲ್ಲಿ 1978 ಜನೆವರಿ 1 ರಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿ ನಗರದ ದಿ ಐಡಿಯಲ್ ಫೈನ್‌ಆರ್ಟ್ ಇನ್ಸ್‌ಟ್ಯೂಟ್‌ನಲ್ಲಿ ಪ್ರವೇಶ ಪಡೆದು ಡಿ.ಎ.ಸಿ ಯಿಂದ ಡಿಪ್ಲೋಮಾ ಇನ್ ಪೇಂಟಿಂಗ್ ಹಾಗೂ ಆರ್ಟ್ ಮಾಸ್ಟರ್ ಪದವಿಯನ್ನು ಪಡೆದು ಇವರು ತಮ್ಮ ಕಲಾನೈಪುಣ್ಯತೆಯಿಂದ ಈ ಕಲಾ ಮಹಾವಿದ್ಯಾಲಯದ ಎಲ್ಲಾ ಶಿಕ್ಷಕರ ಗಮನ ಸೆಳೆದರು. ಈ ಗ್ರಾಮೀಣ ಪ್ರದೇಶದ ಪ್ರತಿಭೆ ತನ್ನ ಕಲೆ ಹಾಗೂ ಸರಳ ಸ್ವಭಾವದ ಇವರು ಎಲ್ಲ ಶಿಕ್ಷಕರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದನ್ನು ಈ ಕಲಾ ಮಹಾವಿದ್ಯಾಲಯವು ಪ್ರತಿವರ್ಷ ನೀಡುವ ವರ್ಷದ ಉತ್ತಮ ವಿದ್ಯಾರ್ಥಿ ಪ್ರಶಸ್ತಿಯನ್ನು 1998ರಲ್ಲಿ ಪಡೆದು ಅಂದಿನ ಇವರ ಸಮಕಾಲೀನ ವಿದ್ಯಾರ್ಥಿಗಳಲ್ಲಿ ವಿಭಿನ್ನವಾಗಿ ನಿಂತು ತನ್ನ ಸರಳ ಸ್ವಭಾವ ಹಾಗೂ ಕಲಾಶಿಕ್ಷಣದಲ್ಲಿ ತಲ್ಲೀನತೆಯನ್ನು ಬೆಳೆಸಿಕೊಂಡು ಪ್ರತಿಫಲವನ್ನು ಪಡೆದ ವಿದ್ಯಾರ್ಥಿ ಎಲ್ಲರಿಂದಲೂ ಮೆಚ್ಚುಗೆ ಪಡೆದರು.

ಇವರು ಮುಂದೆ ಬಿ.ಎಫ್.ಎ. ಪೇಂಟಿಂಗ್ ಪದವಿಯನ್ನು ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್‌ನಿಂದ ಪಡೆದು ಕಲಾ ಮಾಧ್ಯಮ ಹಾಗೂ ಅದರ ಉಪಯುಕ್ತತೆಯನ್ನು ಕಲಿತು ಭಾವಚಿತ್ರ ಸಂಯೋಜನಾ ಚಿತ್ರ ಹಾಗೂ ನಿಸರ್ಗ ಚಿತ್ರಕಲೆಯ ಮೂಲಕ ತನ್ನನ್ನು ಗುರುತಿಸಿಕೊಂಡು ಸದಾ ಸೃಜನಶೀಲನರಾಗಿ ಕಲಾಕೃತಿಗಳನ್ನು ರಚಿಸುತ್ತ ಕಲಾಸ್ಪರ್ಧೆಯಲ್ಲಿಯು ಸಕ್ರಿಯವಾಗಿ ಭಾಗವಹಿಸಿ ಅಲ್ಲಿ ತನ್ನ ಕಲಾಕೃತಿಗಳ ಮೂಲಕ ಮೆಚ್ಚುಗೆ ಪಡೆದುಕೊಂಡಿದ್ದಾರೆ. ಅನೇಕ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾ ಪ್ರದರ್ಶನಗಳಲ್ಲಿಯೂ ಇವರ ಕಲಾಕೃತಿಗಳು ಆಯ್ಕೆಯಾಗಿ ಪ್ರದರ್ಶನಗೊಂಡಿವೆ.

ಪ್ರಕೃತಿ ಸೌಂದರ್ಯದಿಂದ ಕೂಡಿದ ಗ್ರಾಮೀಣ ಪರಿಸರದಲ್ಲಿ ಬೆಳೆದ ಇವರಿಗೆ ಚಿತ್ರ ರಚನೆಯಲ್ಲಿ ಆಸಕ್ತಿ ಹಾಗೂ ಉತ್ಸಾಹ ಕಾಣುತ್ತದೆ. ಇವರ ನಿಸರ್ಗ ಚಿತ್ರಗಳು, ಸುಂದರವಾದ ಸಂಯೋಜನೆ ಹಾಗೂ ವರ್ಣಸಂಯೋಜನೆಯಿಂದ ಕೂಡಿದ ಕಲಾಕೃತಿಗಳು ನೋಡುಗರಿಗೆ ಮಂತ್ರಮುಗ್ಧನಾಗಿಸುವ ಕಲಾನೈಪುಣ್ಯತೆಯನ್ನು ಹೊಂದಿದ ಕಲಾಕೃತಿಗಳನ್ನು ರಚಿಸಿ ನೋಡುಗರ ಮೆಚ್ಚುಗೆ ಪಡೆದ ಕಲಾವಿದರಾಗಿದ್ದಾರೆ. ಇವರು ಭಾವಚಿತ್ರ ರಚನೆಯಲ್ಲಿಯು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗೆ ತನ್ನ ಕಲಾಕೃತಿಗಳಿಂದ ಕಲಾಕ್ಷೇತ್ರದಲ್ಲಿ ಯುವ ಕಲಾವಿದನಾಗಿ ಗುರುತಿಸಿಕೊಂಡಿದ್ದಾರೆ.

ಇವರ ಕಲಾಕೃತಿಗಳಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. 1998-99ರ ಕಲಬುರ್ಗಿ ಕಲಾಮಹೋತ್ಸವ ಪ್ರಶಸ್ತಿ, 2000ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ರಾಜ್ಯೋತ್ಸವ ಪ್ರಶಸ್ತಿ, 2004ರಲ್ಲಿ ರಾಜ್ಯಮಟ್ಟದ ಚಿತ್ರಕಲಾ ಶಿಕ್ಷಕರ ಸಮ್ಮೇಳನದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಹೀಗೆ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು 1997ರಲ್ಲಿ ಗ್ರಾಫಿಕ್ ಕಲಾಶಿಬಿರ ಆಯೋಜನೆ ಲಲಿತ ಕಲಾ ಅಕಾಡೆಮಿ ಚೆನ್ನೈಯ, 1998ರಲ್ಲಿ ನಿಸರ್ಗ ಚಿತ್ರಕಲಾ ಶಿಬಿರ ಆಯೋಜನೆ ಕರ್ನಾಟಕ ಚಿತ್ರಕಲಾ ಪರಿಷತ್ ಬೆಂಗಳೂರು, 1995-99ರಲ್ಲಿ ನಿಸರ್ಗ ಚಿತ್ರಕಲಾ ಶಿಬಿರ ಹಂಪಿ, 'ಅಲೂಮಿನ್



'ಲ್ಯಾಂಡ್‌ಸ್ಕೇಫ್' ಜಲವರ್ಣ ಮಾಧ್ಯಮ

ಆರ್ಟ್ ಕ್ಯಾಂಪ್' ಎಂ.ಎಂ.ಕೆ. ಕಾಲೇಜ್ ಆಫ್ ವಿಜ್ಯೂವಲ್ ಆರ್ಟ್ ಗುಲಬರ್ಗಾ ಹೀಗೆ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಇವರು ವಿದ್ಯಾರ್ಥಿ ದೆಶೆಯಿಂದಲೇ ನಿಸರ್ಗ ಚಿತ್ರ ಹಾಗೂ ಭಾವಚಿತ್ರವನ್ನು ರಚಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಇವರು ಜಲವರ್ಣ ಹಾಗೂ ತೈಲವರ್ಣಗಳಲ್ಲಿ ಹೆಚ್ಚಾಗಿ ಕಲಾಕೃತಿಗಳನ್ನು ರಚಿಸುತ್ತಾರೆ. ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಹರವಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಅತ್ಯಂತ ಲವಲವಿಕೆಯಿಂದ ಕಲಾಕೃತಿಯ ರಚನೆಯ ಜೊತೆಗೆ ಕಲಾಶಿಕ್ಷಣದ ಹೊರೆಹೊತ್ತುಕೊಂಡಿದ್ದಾರೆ.

(ಎಸ್‌ಪಿಡಬ್ಲ್ಯೂ)

ಸಿದ್ದೇಶ ವಿರಕ್ತಮಠ: ನಟ, ನಾಟಕಕಾರ, ಕವಿ, ಸಾಹಿತಿ. ಮೂಲತಃ ಗದಗ ಜಿಲ್ಲೆ ಚಿಕ್ಕನರಗುಂದವರು. ಈಗ ರಾಯಚೂರಿನಲ್ಲಿ ಮೆಡಿಕಲ್ ರಿಪ್ರೆಜೆಂಟೆಟಿವ ಆಗಿ ಕೆಲಸ ಮಾಡುತ್ತ ತಮ್ಮ ಕಲಾಪ್ರತಿಭೆಯನ್ನೂ ಪ್ರದರ್ಶಿಸುತ್ತ ಸಾರ್ವಜನಿಕರ ಗಮನ ಸೆಳೆದಿದ್ದಾರೆ.

ಪಿ.ಯು.ಸಿ. ಓದುತ್ತಿರುವಾಗಲೇ ಹಾಡು, ಅನುಕರಣೆ, ಭಾವಗೀತೆ, ಭಕ್ತಿಗೀತೆ, ಏಕಪಾತ್ರಾಭಿನಯದ ಮೂಲಕ ಸ್ನೇಹಿತರು, ಪ್ರಾಧ್ಯಾಪಕರಿಂದ ಮನ್ನಣೆ ಪಡೆದರು. ಬಿ.ಎಸ್.ಸಿ. ಪದವಿ ಪೂರೈಸಿದರೂ ಸಿದ್ದೇಶ, ಮಾತೃಭಾಷೆ ಕನ್ನಡವನ್ನು ಬಹುವಾಗಿ ಮೆಚ್ಚಿಕೊಂಡವರು. ಕವನ ರಚನೆಯಲ್ಲಿ ಆದಾಗಲೇ ಪಳಗಿದ್ದ ಇವರು, ಸ್ವರಚಿತ ಸಂಕ್ರಾಂತಿ ಎಂಬ ಕವನ ಸಂಕಲವನ್ನು ವಿದ್ಯಾರ್ಥಿಜೀವನದಲ್ಲೇ ಪ್ರಾಂಶುಪಾಲರಿಂದ ಬಿಡುಗಡೆಗೊಳಿಸಿ, ಯುವಕವಿ ಎಂಬ ಮನ್ನಣೆ ಪಡೆದರು.

'ಮೂರ್ಖರ ಸಾಮ್ರಾಜ್ಯ' ಎಂಬ ಸಾಮಾಜಿಕ ನಾಟಕ ರಚಿಸಿ, ಸ್ನೇಹಿತರೊಂದಿಗೆ 'ನವೋದಯ ನಾಟ್ಯ ಸಂಘ' ಕಟ್ಟಿ ಅದರಲ್ಲಿ ಮುಖ್ಯ ಪಾತ್ರವಹಿಸಿ, ಮೊಟ್ಟಮೊದಲ ಬಾರಿಗೆ ರಂಗ ನಟನಾಗಿ ಕಂಡಾಗ, ಅವರ ಅದಮ್ಯ ಕಲೆಗೆ ನಾಟಕದ ಕಥಾವಸ್ತುವಿಗೂ ಜನತೆ ಬೆರಗುಗೊಂಡರು. ಮತ್ತೊಂದು 'ಬೆಳ್ಳಿಯ ಕುದುರೆ' ಈಗಾಗಲೆ ಪ್ರಕಟಗೊಂಡು ಕನ್ನಡ ಸಾಹಿತ್ಯಲೋಕಕ್ಕೆ ಇವರು ಬಿಡುಗಡೆ ಮಾಡಿರುವ ಏರಡನೆಯ ಮುದ್ರಿತ ಕೃತಿಯಾಗಿದೆ. ಈ ಎರಡೂ ನಾಟಕಗಳೂ ನಾಡಿನ ಹಲವಾರು ಸಂಘ ಸಂಸ್ಥೆಗಳಿಂದ ಅಭಿನಯಿಸಲ್ಪಟ್ಟು, ಉತ್ತಮ ನಾಟಕಗಳೆಂದು ಪುರಸ್ಕೃತಗೊಂಡಿವೆ. ಕಲಾವಿದರಿಗೆ ರೂಪುರೇಷೆ ಹಾಕಿ ಕೊಡುವ ಸಿದ್ದೇಶ ಒಬ್ಬ ಉತ್ತಮ ದಿಗ್ದರ್ಶಕರು ಆಗಿದ್ದಾರೆ.

ಔಷಧ ಪ್ರತಿನಿಧಿ ಆಗಿರುವ ಇವರು ನಾಲ್ಕುವರ್ಷಗಳಿಂದ ರಾಯಚೂರು ನಗರದಲ್ಲಿ ವಾಸವಾಗಿದ್ದಾರೆ. ಇವರು ರಚಿಸಿದ ಮೂರನೆಯ ಸಾಮಾಜಿಕ ನಾಟಕ 'ಒಲಿದು ಬಂದವಳು' ಶ್ರೀ ನಟರಾಜ ನಾಟ್ಯ ಸಂಘ ರಾಯಚೂರು ಇವರ ಆಶ್ರಯದಲ್ಲಿ, ರಾಯಚೂರಿನ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಪ್ರದರ್ಶಿಸಲ್ಪಟ್ಟು ಪ್ರೇಕ್ಷಕರ ಅಪಾರ ಮೆಚ್ಚುಗೆಗಳಿಸಿತು. ಹೊಸ ನಾಟಕದ ಮೊದಲ ಪ್ರದರ್ಶನದಲ್ಲಿ ಪದ್ಧತಿಯಂತೆ ಈ ನಾಟಕಕಾರರು ಮುಖ್ಯ ಪಾತ್ರಧಾರಿಯಾಗಿದ್ದರು. ತಮ್ಮ ಪಾತ್ರದ ಮೂಲಕ ರಂಗಮಂದಿರದಲ್ಲಿ ಇವರು ತೋರಿದ ಅಭಿನಯ ಕಲೆ ಪ್ರೇಕ್ಷಕ ನೆನಪಿಡುವಂತೆ ಮಾಡಿದೆ.

ದೂರದರ್ಶನದಲ್ಲಿ ಪ್ರಸಾರಗೊಂಡ 'ಬಿಸಿಲ ಹನಿಗಳು' ಎಂಬ ಧಾರಾವಾಹಿಯಲ್ಲೂ ಪ್ರಮುಖ ಪಾತ್ರಧಾರಿಯಾಗಿ ಅಭಿನಯಿಸಿದ್ದಾರೆ. ಸಾಹಿತ್ಯ, ಅಭಿನಯ, ನಿರ್ದೇಶನದಲ್ಲಿ ಸಕ್ರಿಯವಾಗಿ ತೊಡಗಿದ್ದರೂ, ಸಿದ್ದೇಶ್ ಇನ್ನೂ ಎಲೆಮರೆಕಾಯಿ.

(ವಿವಾಯ್‌ಜಿ)



ಸಿದ್ದರಾಮ ಜಂಬಲದಿನ್ನಿ: ಹಿಂದೂಸ್ಥಾನಿ ಸಂಗೀತದ ಘರಾಣದಲ್ಲಿ (ಗ್ವಾಲಿಯರ್) ತಮ್ಮದೇ ಛಾಪು ಮೂಡಿಸಿದರು. ಇವರ ಸ್ವಂತ ಊರು ಮಾನವಿ ತಾಲ್ಲೂಕಿನ ಜಂಬಲದಿನ್ನಿ. ಸಿರವಾರದಿಂದ 10ಕಿ.ಮೀ. ದೂರವಿದೆ. ಹಿಂದೂಸ್ಥಾನಿ ಗಾಯನ ಮತ್ತು ವಚನ ಗಾಯನದಲ್ಲಿ ನಾಡಿನಾದ್ಯಾಂತ ಹೆಸರುವಾಸಿಯಾಗಿದ್ದ ಇವರು ಅತ್ಯಂತ ಕಷ್ಟಕರ ರೀತಿಯಲ್ಲಿ ಬದುಕು ಸಾಗಿಸಿದರು.

ಇವರ ತಂದೆ ಚೆನ್ನಪ್ಪ. ತಾಯಿ ಅವ್ವಮ್ಮ ಬಯಲಾಟದ ಮಾಸ್ಟರ್ ಆಗಿದ್ದರು. ಇವರಿಗೆ ಸಂಗೀತ ಕಲಿಯಲು ತಂದೆಯೇ ಸ್ಫೂರ್ತಿಯಾಗಿದ್ದರು. ಮುಂದೆ ಯಾದಗಿರಿಯ ನಿಜಗುಣಪ್ಪ ಎನ್ನುವ ಶಿಕ್ಷಕರಲ್ಲಿ ಶಿಕ್ಷಣ ಪಡೆದು ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತಾಭ್ಯಾಸ ಮಾಡಿದರು.

ವಚನಗಳನ್ನು ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿಕೊಂಡು ಹಾಡಿ ತೋರಿಸಿದವರಲ್ಲಿ ಇವರೇ ಮೊದಲಿಗರು. ವಚನ ಗಾಯನ ಎಂದರೆ ನೆನಪಾಗುವದು ಮಲ್ಲಿಕಾರ್ಜುನ ಮನ್ಸೂರು, ಬಸವರಾಜ ರಾಜಗುರು ಮತ್ತು ಈ ಭಾಗಕ್ಕೆ ಪಂಡಿತ್ ಸಿದ್ದರಾಮ ಜಂಬಲದಿನ್ನಿಯವರು 'ಜಂಬಲದಿನ್ನಿ' ಎನ್ನುವ ಅಡ್ಡ ಹೆಸರಿದ್ದುದರಿಂದ ಈ ಗ್ರಾಮವು ಹೆಸರು ಪಡೆದಿದೆ.

(ಎಂಎಚ್)

ಸಿದ್ಧರಾಮಯ್ಯ ಮಠಪತಿ: ಹಿಂದೂಸ್ಥಾನಿ ಗಾಯಕ. ಇವರು ಜನಿಸಿದ್ದು 1958 ಡಿಸೆಂಬರ್ 1 ರಂದು. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಗೋರಟಾ ಗ್ರಾಮದ ವೀರಮಾಹೇಶ್ವರ ಪರಂಪರೆಯ ಸಂಗೀತ, ವೇದಾಧ್ಯಯನ ಹಾಗೂ ಸ್ವಾತಂತ್ರ ಹೋರಾಟಗಾರರ ಸುಸಂಸ್ಕೃತ ಮನೆತನದಲ್ಲಿ.



ಇವರ ತಂದೆ ವಿರೂಪಾಕ್ಷಯ್ಯ ಹೈದ್ರಾಬಾದ ಕರ್ನಾಟಕ ಭಾಗದ ಹಿರಿಯ ತಲೆಮಾರಿನ ಸಂಗೀತಗಾರರು ಸಿತಾರ ವಾದಕರು. ಸಂಗೀತ ಕಲೆಯ ಪ್ರಸಾರಕ್ಕಾಗಿ ಗೋರಟಾ ಗ್ರಾಮದಲ್ಲಿ 1957ರಲ್ಲಿ 'ಶಾರದಾ ಸಂಗೀತ ವಿದ್ಯಾಲಯ' ಸ್ಥಾಪಿಸಿ 200ಕ್ಕೂ ಅಧಿಕ ಸಂಗೀತಾಸಕ್ತರಿಗೆ ಉಚಿತ ವಸತಿ, ಊಟ ಸಹಿತ ಸಂಗೀತ ಶಿಕ್ಷಣ ನೀಡಿದವರು. ಗೋರಟಾದಲ್ಲಿ 1958ರಲ್ಲಿ ಹೈದ್ರಾಬಾದ ಕರ್ನಾಟಕ ಪ್ರಾಂತೀಯ ಮಟ್ಟದ ಸಂಗೀತ ಸಮ್ಮೇಳನ ಸಂಘಟಿಸಿದವರು. ಇವರ ತಾಯಿ ಶ್ರೀಮತಿ ವೀರಮ್ಮನವರು ಸುಶ್ರಾವ್ಯ ಕಂಠದ ಜನಪದ ಗಾಯಕಿ.

ಸಿದ್ಧರಾಮಯ್ಯ ಅವರು ಗೋರಟಾದಲ್ಲಿ ಪ್ರಾಥಮಿಕ–ಮಾಧ್ಯಮಿಕ, ಮುಚಳಂಬಿಯ ಶ್ರೀ ರಾಮಲಿಂಗೇಶ್ವರ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣ, ಧಾರವಾಡ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಪದವಿ–ಪೂರ್ವ ಹಾಗೂ ಪದವಿ (1979) ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ. ಮ್ಯೂಜಿಕ್ (1982) ಪದವಿ ಪಡೆದರು.

ತಂದೆಯವರಿಂದ ಸಂಗೀತದ ಶ್ರೀಕಾರ ಅಖಿಲ ಭಾರತ ಖ್ಯಾತಿಯ ಹಿಂದುಸ್ತಾನಿ ಗಾಯಕ ಪದ್ಮಶ್ರೀ, ಪದ್ಮಭೂಷಣ ಪಂ. ಬಸವರಾಜ ರಾಜಗುರು ಅವರ ಗರಡಿಯಲ್ಲಿ ವಿಶೇಷ ಸಂಗೀತ ತಾಲೀಮು.

ಇವರ ಬಾಳಿಗೆ ಬೆಳಕು ನೀಡಿದವರು ಮೇಹಕರ ಡೋಣಗೋಪುರ ಕಟ್ಟಿಮನಿ ಸಂಸ್ಥಾನ ಹಿರೇಮಠದ ಶ್ರೀ ಷ.ಬ್ರ.ಲಿಂ. ರಾಜೋಟಿ ಶಿವಾಚಾರ್ಯ ಮಹಾಸ್ವಾಮಿಗಳು. ಬಾಗಲಕೋಟೆಯ ಪ್ರತಿಷ್ಠಿತ ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಬಸವೇಶ್ವರ ಕಲಾಮಹಾವಿದ್ಯಾಲಯದಲ್ಲಿ ಸಂಗೀತ ಉಪನ್ಯಾಸಕರಾಗಿ (1982ರಿಂದ). ಸಂಗೀತ ವಿಭಾಗದ ಮುಖ್ಯಸ್ಥರಾಗಿ ಸಂಗೀತ ಸಾಧನೆ. ಬೋಧನೆ ಹಾಗೂ ಸಂಶೋಧನೆಯಲ್ಲಿ ಕಾರ್ಯನಿರತರಾಗಿದ್ದಾರೆ. ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಗಣ್ಯರ ಅಭಿನಂದನ ಗ್ರಂಥ, ಸಮ್ಮೇಳನ ಸ್ಮರಣಸಂಚಿಕೆಗಳಲ್ಲಿ ಸಂಗೀತ ಹಾಗೂ ಸಂಗೀತೇತರ ವಿಷಯ ಕುರಿತು 215 ಲೇಖನ ಪ್ರಕಟವಾಗಿವೆ.

ಹಿಂದೂಸ್ತಾನಿ ಸಂಗೀತಗಾರರು (ಸಂಪುಟ–1) (ಪ್ರಥಮ ಮುದ್ರಣ 1991, ದ್ವಿತೀಯ ಮುದ್ರಣ (1995), 'ಭಾವಗುಚ್ಚ' (1993), 'ಸಂಗೀತ ಶ್ರೀರುದ್ರ' (1993), 'ಹಿಂದೂಸ್ತಾನಿ ಸಂಗೀತಗಾರರು' (ಸಂಪುಟ–2) (1997), 'ಶ್ರೀ ಷ.ಬ್ರ. ಗುರುಪಾದ ಶಿವಾಚಾರ್ಯರು' (1997), 'ಶ್ರೀರುದ್ರ' (ಕನ್ನಡ) (ಪ್ರಥಮ ಮುದ್ರಣ 2001, ಎರಡನೇ 2004, ಮೂರನೇ 2005, ನಾಲ್ಕನೇ 2007, ಐದನೇ 2007 'ಶ್ರೀರುದ್ರ' (ಹಿಂದಿ) (2004), ವೀರಶೈವ ಹಿಂದೂಸ್ತಾನಿ ಸಂಗೀತಗಾರರು (2006) ಬಾಗಲ ಕೋಟೆಯ 'ಶ್ರೀ ಹುಚ್ಚಪ್ಪ ಹತ್ತಿ' (2006), 'ನಾದಲಹರಿ' (2008)–ಹೀಗೆ 10 ಪುಸ್ತಕ ರಚನೆ ಮಾಡಿದ್ದಾರೆ. ಗುಲಬರ್ಗಾ ಆಕಾಶವಾಣಿಯ ಅಂಗೀಕೃತ ಕಲಾವಿದರಾಗಿದ್ದಾರೆ.


ಭಾರತೀಯ ಸಂಗೀತದ ಸಮಗ್ರ ಮಾಹಿತಿ ರಕ್ಷಿಸಿ, ಅಭಿವೃದ್ಧಿಪಡಿಸಿ ಅದನ್ನು ಬೆಳೆಸಬೇಕೆಂಬ ಉದ್ದೇಶದಿಂದ 2007ರಲ್ಲಿ ಭಾರತೀಯ ಸಂಗೀತ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಸ್ಥಾಪಿಸಿದರು. ಸಾವಿರಾರು ಹಿಂದೂಸ್ತಾನಿ ಸಂಗೀತಗಾರರ ಭಾವಚಿತ್ರ. ಸಂಗೀತ ವಾದ್ಯಗಳು ಭಾವಚಿತ್ರ, ಸಂಗೀತ ಗ್ರಂಥಗಳ ಸಂಗ್ರಹ, ಕ್ಯಾಸೆಟ್, ಸಿ.ಡಿ. ಸಂಗೀತಗಾರರ ವ್ಯಕ್ತಿಚಿತ್ರ ಹಾಗೂ ಇಪ್ಪತ್ತೈದು ವರ್ಷಗಳ ಸಂಗೀತ ಪತ್ರಿಕಾ ವರದಿ ಸಂಗ್ರಹ ಸುಮಾರು 200ಕ್ಕೂ ಅಧಿಕ ವಿವಿಧ ಸಂಗೀತ ವಿಷಯಗಳ ಕಡತ ಲಭ್ಯ ಹೀಗೆ ಹಲವು ಸಂಗೀತ ವಿಷಯಗಳ ಸಂಗ್ರಹ–ಸಂರಕ್ಷಣೆ–ಸಂಶೋಧನೆ ಇಲ್ಲಿ ನಿತ್ಯ ಅಧ್ಯಯನ.

ಸಿದ್ಧರಾಮಯ್ಯನವರು ಹಾಡುವ ಶಾಸ್ತ್ರೀಯ ಸಂಗೀತದಲ್ಲಿ ಆಲಾಪ ನಿಚ್ಚಳ. ಸ್ವರ ಸುಕೋಮಲ ಗ್ವಾಲಿಯರ್ ಹಾಗೂ ಕಿರಾಣಾ ಘರಾಣೆಗಳ ಪೌಷ್ಟಿಕಾಂಶಗಳ ಸಮ್ಮಿಲನ. ಇವರ ಹಾಡುಗಾರಿಕೆಯಲ್ಲಿ ತಾನಬೋಲತಾನ್ ಸಮೃದ್ಧ. ತರಾನಾ ಗಾಯನದಲ್ಲೂ ಅಷ್ಟೇ ಪ್ರಬುದ್ಧ. ವಚನ ಸಂಗೀತದಲ್ಲೂ ಎತ್ತಿದ ಕೈ. ಶರಣರ ನೂರಾರು ವಚನಗಳನ್ನು ಹಿಂದುಸ್ತಾನಿ ಶೈಲಿಯಲ್ಲಿ ಅವುಗಳ ಅರ್ಥಕೆಡದಂತೆ ಶ್ರೋತೃಗಳಿಗೆ ಇಂಪಾಗಿ ಕೇಳಿಸುವ ಅವರ 'ವಚನಗಾಯನ' ಕೇಳುವುದೇ ಒಂದು ದಿವ್ಯಾನುಭವ.

(ಪಿಕೆಕೆ)

ಸಿದ್ಧಾರೂಢರ ಕಲಾಕೃತಿಗಳು: ಬೀದರ ಜಿಲ್ಲೆ ಸಹಸ್ರಾರು ವರ್ಷಗಳ ಉಜ್ವಲ ಇತಿಹಾಸವುಳ್ಳ ನಾಡಾಗಿದ್ದು. 12ನೆಯ ಶತಮಾನದಲ್ಲಿ ವಚನ ಸಾಹಿತ್ಯದ ಪರಿಮಳದ ಕಂಪನ್ನು ಸೂಸಿದ ಪ್ರದೇಶವಾಗಿದೆ. ಈ ನಾಡಿನಲ್ಲಿಯೇ ಚಿದಂಬರಾಶ್ರಮದಲ್ಲಿ ಸಿದ್ಧಾರೂಢ ಸ್ವಾಮಿಯ ಆಶ್ರಮವಿದ್ದು ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕರ್ನಾಟಕದಂತಹ ಹಲವು ರಾಜ್ಯಗಳ ಭಕ್ತರನ್ನು ಒಳಗೊಂಡ ಪುಣ್ಯಕ್ಷೇತ್ರವಾಗಿದೆ.

ಸ್ವಾಮಿಗಳ ಕುರಿತು ರಚನೆಯಾದ ಕಲಾಕೃತಿಗಳನ್ನು ನೋಡಿದಾಗ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ಅವರ ಪರಮ ಕರ್ತವ್ಯವಾಗಿ ಕಾಣುತ್ತದೆ. ಹಾವು ಕಡಿತದಿಂದ ಬಳಲಿದ ವ್ಯಕ್ತಿಗಳನ್ನು ರಕ್ಷಿಸುವ ಕಲಾಕೃತಿಗಳಾಗಿರಬಹುದು. ಹುಲಿಯ ಬಾಯಿಯಿಂದ ಮಹಿಳೆಯನ್ನು ರಕ್ಷಿಸುವುದು, ಸಂಕಷ್ಟದಲ್ಲಿರುವ ಕುಟುಂಬದ ರಕ್ಷಣೆ, ಬಾವಿಯಲ್ಲಿ ಬಿದ್ದ ಮಹಿಳೆಯನ್ನು ಕಾಪಾಡುವುದು ಹೀಗೆ ನಾನಾ ರೀತಿಯ ಕಲಾಕೃತಿಗಳು ಸಿದ್ಧಾರೂಢರ ಮಹಿಮೆಗೆ ಸಾಕ್ಷಿಯಾಗಿವೆ.



ಸಿದ್ಧಾರೂಢರನ್ನು ಹೊಡೆಯುತ್ತಿರುವುದು

ಎಳ್ಳಿನ ಮಡಿಕೆಯನ್ನು ಒಡೆಯುವ ಕಲಾಕೃತಿಯಲ್ಲಿ ಸಿದ್ಧರೂಢರ ಬಾಲ್ಯ ಸ್ನೇಹಿತರಾದ ಸೋಮ, ಭೀಮರು ಎಳ್ಳು ತಂದು ಕೊಡಲು ಸಿದ್ಧರೂಢರನ್ನು ಕೇಳಿದಾಗ ಅದಕ್ಕೆ ಸಿದ್ಧರೂಢರು ಮನೆಗೆ ಕರೆದೊಯ್ದು ಮನೆಯ ಒಳಗೆ ನೆಲವಿನ ಮೇಲಿದ್ದ ಎಳ್ಳಿನ ಮಡಿಕೆಯನ್ನು ಒಡೆಯುತ್ತಾರೆ. ಅದರಿಂದ ಎಳ್ಳು ರಾಶಿರಾಶಿಯಾಗಿ ಬಿದ್ದು ಎಲ್ಲರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುತ್ತಾರೆ. ಸ್ವತಃ ತಾಯಿಯ ಎಳ್ಳಿನ ರಾಶಿಯನ್ನು ನೋಡಿ ಪ್ರೀತಿಯಿಂದ ಪವಾಡ ರೂಪಿಯಾದ ಮಗನನ್ನು ಅಪ್ಪಿಕೊಳ್ಳುವ ದೃಶ್ಯ ಮನಕರಗಿಸುವಂತಹುದಾಗಿದೆ.

ಸಿದ್ಧಾರೂಢರು ತಮ್ಮ ಗೆಳೆಯರೊಡನೆ ಗುಡಿಯನ್ನು ಪ್ರವೇಶಿಸುವ ಕಲಾಕೃತಿಯು ಸಿದ್ಧಾರೂಢರು ಅವತಾರ ಪುರುಷರಾಗಿರುವರೆಂಬುದು ಗೋಚರಿಸುತ್ತದೆ. ಭೀಮ, ಸೋಮ, ಗುಡಿಯ ಮೂಲೆಯಲ್ಲಿ ವಿಶ್ರಮಿಸುವಾಗ, ಸಿದ್ಧಾರೂಢರೂ ಬಸವನ ಬೆನ್ನ ಮೇಲೆ ಕುಳಿತುಕೊಂಡು ಆನಂದಿಸುತ್ತಾರೆ. ಈ ದೃಶ್ಯವನ್ನು ಪೂಜಾರಿ ನೋಡಿ ಕೆಳಗೆ ಇಳಿಯೆಂದು ಗದರಿಸುತ್ತಾನೆ. ಸಿದ್ಧಾರೂಢರು ನಗುಮುಖದಿಂದ ಪೂಜಾರಿಯನ್ನು ನೋಡುತ್ತಾರೆ. ಆಗ ಪೂಜಾರಿ ಊರಿನ ಪ್ರಮುಖರನ್ನೂ ಕರೆದುಕೊಂಡು ಬಂದು ತೋರಿಸುತ್ತಾನೆ. ಎಲ್ಲಾರು ದಡ್ಡ ಎಂದು ಮುಷ್ಟಿಯಿಂದ ಹೊಡೆಯಲು ಬಂದಾಗ ದೇವಾಲಯದ ಗೋಡೆಯಿಂದ ರಕ್ತ ಬರುತ್ತದೆ. ಇದನ್ನು ಕಂಡು ಚಕಿತರಾದ ಹಿರಿಯರು ಈತನು ಸಾಧಾರಣ ಬಾಲಕನಲ್ಲವೆಂದು ತಿಳಿದು ಈ 'ದಡ್ಡನಲ್ಲ–ದೊಡ್ಡವ ನೆಂದು' ಮನದಲ್ಲಿ ಮರುಗಿ ವಂದಿಸುತ್ತಾರೆ.


ಸಿದ್ಧಾರೂಢರು ಮರದ ಕೆಳಗೆ ಕುಳಿತುಕೊಂಡು ತಮ್ಮ ಶಿಷ್ಯರಿಗೆ ಪ್ರವಚನವನ್ನು ಮಾಡುತ್ತಾರೆ. ಶಿಷ್ಯರ ತರ್ಕವನ್ನು ಒರೆಗೆ ಹಚ್ಚಿ ಅವರಲ್ಲಿರುವ ಅಪಕ್ವತೆಯ ವಿಚಾರಗಳನ್ನು ಪಕ್ವತೆಯನ್ನಾಗಿ ಮಾಡುತ್ತಾರೆ.

ಹಾವು ಕಡಿದರೆ ಕಡಿತದ ಸ್ಥಳದಿಂದ ಕಲ್ಲು, ಮಣ್ಣು, ಮತ್ತು ಯಾವ ವಸ್ತು ಸಿಗುತ್ತದೆ ಆ ವಸ್ತುವನ್ನೂ ತೆಗೆದುಕೊಂಡು ಸೆರಗಿನ ಹಾಗೂ ಜೇಬುಗಳಲ್ಲಿ ಕಟ್ಟಿಕೊಂಡು ದೇವಸ್ಥಾನದ ಬಳಿಗೆ ಹೋಗಿ ಮೊರೆಯಿಟ್ಟೆಡೆ ಬದುಕಿರುವ ಉದಾಹರಣೆ ಇದೆ. (ಉದಾ: ದೇವನ ತೆಗನೂರು: ಶಿವಯೋಗಿಯ ಮಂದಿರವೂ ಸಾಕ್ಷಿ) ಆದರೆ ಇಲ್ಲಿ ದೇವತಾಸ್ವರೂಪಿಯಾದ ಸಿದ್ಧಾರೂಢರು ಹಾವು ಕಡಿತದಿಂದ ಜೀವನ ಮರಣದ ನಡುವೆ ಹೋರಾಟ ಮಾಡುತ್ತಿರುವ ಹುಡುಗನನ್ನೂ ರಕ್ಷಿಸುವ ಕಲಾಕೃತಿ ನೋಡುಗನಿಗೆ ಭಕ್ತಿರಸವನ್ನುಕ್ಕಿಸುತ್ತದೆ.

ದೇವರು ತನ್ನ ಭಕ್ತರನ್ನು ಎಂದೂ ಕೈಬಿಡುವುದಿಲ್ಲ ಎನ್ನುವ ಮಾತು ಇಂದು ನಿನ್ನೆಯದಲ್ಲ. ಇದು ಮಾನವನಿಗೆ ಆಸ್ತಿಕತ್ವದ ಬೀಜ ಮೊಳಕೆಯೊಡೆದು ಮುಂದೆ ದೊಡ್ಡ ಹೆಮ್ಮರವಾಗಿ ನಿಂತಿದೆ. 'ಸಂಸಾರವೆಂಬುದು ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವನ್ನು ಒಳಗೊಂಡದ್ದಾಗಿದೆ' ಸತಿ–ಪತಿಯರ ಒಡನಾಟ ಜಕ್ಕ ವಕ್ಕಿಯಂತೆ ಒಂದು ಬಿಟ್ಟು ಇನ್ನೊಂದಿಲ್ಲ. ಒಂದು ಹಾನಿಗೊಳಗಾದರೆ ಇನ್ನೊಂದಕ್ಕೆ ಬ್ರಹ್ಮಾಸ್ತ್ರ ಬಿಟ್ಟಂತೆ. ದೃಶ್ಯ 11ರಲ್ಲಿ ಸತಿಯು ಪತಿಯ ಮೇಲೆ ಬಿಸಿ ನೀರು ಬಿದ್ದು ತೊಳಲಾಟ ನೋಡದೆ ರೋಧಿಸುತ್ತಿರುವುದು, ಪಕ್ಕದಲ್ಲಿ ಹಸುಗೂಸಿನ ದಯನೀಯ ಅಳಲು ಎಂತಹ ಕಲ್ಲು ಹೃದಯವನ್ನು ಕರಗಿಸುವಂತದ್ದು. ಇಂತಹ ಸ್ಥಿತಿಯನ್ನು ಅರಿತು ಪ್ರತ್ಯಕ್ಷರಾಗಿ ಅವರ ಕಷ್ಟವನ್ನು ಪರಿಹರಿಸುವ ಶ್ರೇಯೋಭಿವೃದ್ಧಿಗೆ ಕಾರಣ ಪುರುಷರಾಗುತ್ತಾರೆ.

ಮಾನವನ ಚಟುವಟಿಕೆಗೆ ಹಾಗೂ ಚೈತನ್ಯೋಪಾಯಕ್ಕೆ ಮುಖ್ಯವಾದುದು ಆಹಾರ. ಆ ಆಹಾರವನ್ನು ಸಿದ್ಧಾರೂಢರಿಂದಲೇ ಉಣ್ಣುವವರು ಪುಣ್ಯವಂತರು. ಸಿದ್ಧಾರೂಢರು ತನ್ನ ಎಲ್ಲಾ ಶಿಷ್ಯರಿಗೆ ಸರದಿಯೋಪಾದಿಯಲ್ಲಿ ಊಟ ಮಾಡಿಸುತ್ತಿರುವ ದೃಶ್ಯ ಮನಮೋಹಕವಾಗಿದೆ.

ಮಾನವನಿರಲಿ, ದೇವತಾ ಮನುಷ್ಯನಿರಲಿ, ಈ ಭೂಲೋಕದಲ್ಲಿ ಕಷ್ಟಗಳು ಯಾರಿಗೂ ತಪ್ಪಿದಲ್ಲ. ಸಿದ್ಧಾರೂಢರು ಬೀದರದಿಂದ ಬಿಜಾಪುರಕ್ಕೆ ಹೋದಾಗ ಅಲ್ಲಿ ಒಬ್ಬ ಮನುಷ್ಯನು ಸಿದ್ಧಾರೂಢರನ್ನು ಕಂಡು ಮನೆಯ ಮುಂದೆ ಇದ್ದ ಸಗಣಿಯನ್ನು ತಿಪ್ಪೆಗೆ ಹಾಕಲು ಹೇಳುತ್ತಾನೆ. ಇದಕ್ಕೆ ಪ್ರತಿಯಾಗಿ ರೊಟ್ಟಿಯನ್ನು ಕೊಡುತ್ತಾನೆ. ಹೊಟ್ಟೆ ಎಂತಹ ವ್ಯಕ್ತಿಯನ್ನು ಏನೆಲ್ಲಾ ಕೆಲಸ



ಸಿದ್ಧಾರೂಢರು ಊಟ ಮಾಡುತ್ತಿರುವುದು

ಮಾಡಿಸುತ್ತದೆ ಎಂಬುವದನ್ನು ಈ ಘಟನೆಯೇ ಸಾಕ್ಷಿಯಾಗಿದೆ. ಹಾಗೆ ಮುಂದೆ ಬೇರೆ ಮನೆಗೆ ಹೋದಾಗ ಸ್ತ್ರೀಯೊಬ್ಬಳು ಸಿದ್ಧಾರೂಢರಿಗೆ ಕೊಳಚೆಯನ್ನು ತೆಗೆಯಲು ಹೇಳುತ್ತಾಳೆ. ಕೆಲಸ ವನ್ನು ಮಾಡಿ ರಾತ್ರಿಯ ಹೊತ್ತು ಬರುವಾಗ ರಾತ್ರಿಯ ಪಹರೆ ಯನ್ನು ಮಾಡುತ್ತಿರುವ ಪೋಲೀಸರು ಸಿದ್ಧರೂಢರನ್ನೂ ಕಂಡು ಕಳ್ಳನೆಂದೂ ಭಾವಿಸಿ ಹೊಡೆಯುತ್ತಿರುವ ದೃಶ್ಯ ನೋಡುಗರ ಮನಕಲಕುವಂತಾಗುತ್ತದೆ. ಇಂತಹ ಎಲ್ಲಾ ಒಳಿತು ಕಾರ್ಯಗಳು ತಮಗಾಗಿ ಮಾಡದೆ ಸಮಾಜ ಒಳತಿಗಾಗಿ ಮಾಡಿ ದೇವತಾ ಪುರುಷರಾಗಿ ಅವರನ್ನು ಆರಾಧಿಸುವ ಸಂಖ್ಯೆಯು ಇಮ್ಮಡಿಸು ತ್ತದೆ. ಅವರ ಜಾತ್ರೆಯೂ ಕೂಡ ವಿಜೃಂಭಣೆಯಿಂದ ನಡೆಯು ತ್ತದೆ. ಪ್ರಸ್ತುತ ಬೀದರ ಜಿಲ್ಲೆಯಲ್ಲದೆ, ಬಿಜಾಪುರ ಜಿಲ್ಲೆ ಯಲ್ಲಿಯೂ ಸಿದ್ಧಾರೂಢರ ದೇವಸ್ಥಾನಗಳಿವೆ. ಹೀಗೆ ಸಿದ್ಧಾರೂಢರು ವಿಶ್ವಕ್ಕೆ ಜ್ಞಾನಜ್ಯೋತಿಯಾಗಿ, ಪ್ರತಿಯೊಬ್ಬರ ಮನದಲ್ಲಿ ದಿವ್ಯಶಕ್ತಿಯಾಗಿದ್ದಾರೆ. (ಎಂಎಸ್‌ಎಂ)

ಸಿದ್ಧಾರೂಢ ಮಲ್ಲಪ್ಪ ಗಡೇದ: ದೊಡ್ಡಾಟ ಕಲಾವಿದರು. ದೊಡ್ಡಾಟದಲ್ಲಿ ಸಾರಥಿಯಾಗಿ ಇದುವರೆಗೂ ಮುಂದುವರೆಸಿ ಕೊಂಡು ಬಂದಿದ್ದಾರೆ. ಕಂಚಿನ ಕಂಠ ಹೊಂದಿದವರು. ಬಯ ಲಾಟದಲ್ಲಿ ಇವರ ಅಭಿನಯ ಅಪ್ರತಿಮವಾದುದು. ದೊಡ್ಡಾಟ ಶುರುವಾಗುತ್ತಲೇ 'ಬಂದವರು ದಾರು ಸ್ವಾಮಿ ಹೋಹೋ' ಎಂದು ವಿಚಾರಿಸುವ ಇವರು ಕೊನೆಯವರೆಗೂ ಸಾರಥಿ ಪಾತ್ರ ದಲ್ಲಿ ಕಾಣಿಸುತ್ತಲೇ ಇರುತ್ತಾರೆ. ಇವರಿಗೆ 'ಸುಂದರ ಸಾರಥಿ' ಎಂಬ ಬಿರುದು ಬಂದಿದೆ.

ಇವರ ತಂದೆ ಮಲಕಪ್ಪನವರೂ ಕೂಡಾ ದೊಡ್ಡಾಟದ ಪ್ರಖ್ಯಾತ ಕಲಾವಿದರು. ವಂಶಪಾರಂಪರ್ಯವಾಗಿ ಬಂದ ಈ ಕಲಾ ಕೌಶಲ್ಯವನ್ನು ಶ್ರೀಯುತರು ತಂದೆಯವರಿಂದ ಕಲಿತು ಬಾಲ್ಯ ದಲ್ಲಿಯೇ ತಮ್ಮನ್ನು ಗುರುತಿಸಿಕೊಂಡರು. ಮಹಿಷಾಸುರ ಮರ್ದಿನಿ. ಚಿತ್ರಸೇನ, ಭೀಮ ವಿಲಾಸ ಇವರ ಆಡಿದ ದೊಡ್ಡಾಟ ಗಳು.


ಕರ್ನಾಟಕದ ಕಲಾಕ್ಷೇತ್ರವೆಂದೇ ಹೆಸರಾದ ಮಾಶ್ಯಾಳ ಇವರ ಹುಟ್ಟೂರು. ದೊಡ್ಡಾಟ ಸಂಘದ ಮುಖ್ಯ ಸದಸ್ಯರು. ಆಕಾಶ ವಾಣಿ ಮತ್ತು ದೂರದರ್ಶನ ಕಲಾವಿದರಾದ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜರಗುವ ಹಂಪಿ ಉತ್ಸವ, ದಸರಾ ಉತ್ಸವ, ಸುವರ್ಣ ಕರ್ನಾಟಕ ಅಂಗವಾಗಿ ದಿಬ್ಬಣದಲ್ಲಿ ಇಡೀ ವರ್ಷಪೂರ್ತಿ ಅದ್ದೂರಿ ಕಾರ್ಯಕ್ರಮ ನೀಡಿದವರು. ಸಂಘ ಸಂಸ್ಥೆಗಳಿಂದ ಬಿರುದು ಸನ್ಮಾನಗಳನ್ನು ಪಡೆದಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬಹಳ ಶ್ರಮಪಡುತ್ತಿದ್ದಾರೆ. ಬದುಕು ಬಡತನದಲ್ಲಿ ಸಾಗಿದರೂ ಕಲೆ ಶ್ರೀಮಂತಿಕೆ ಮತ್ತು ಗೌರವದಿಂದ ಸಾಗುತ್ತಿದೆ. **(ಜಿಕೆ)**

ಸೀ

ಸೀರೆಗಳು: ಭಾರತೀಯ ನಾರಿಯರ ಸಾಂಪ್ರದಾಯಿಕ ಉಡುಗೆ ಗಳಲ್ಲಿ ಬಹು ಪ್ರಮುಖವಾದುದು ಸೀರೆ. ನಮ್ಮ ಸಂಸ್ಕೃತಿಯಲ್ಲಿ ಸೀರೆಗೆ ಬಹು ಮಹತ್ವವಿದೆ. ಎಷ್ಟೇ ಆಧುನಿಕತೆಯ ಪ್ರಭಾವ ವಾದರೂ ಸೀರೆಗೆ ಮೊದಲಿದ್ದ ಮಹತ್ವ ಹೋಗಿಲ್ಲ. ಆದರೆ ಸೀರೆ ಗಳ ವಿನ್ಯಾಸಗಳು, ಚಿತ್ರಗಳು, ಬಣ್ಣಗಳು ಮಾತ್ರ ಬದಲಾಗಿವೆ. ಶುಭ ಸಮಾರಂಭಗಳಿಗೆ, ಪೂಜೆ ಪುನಸ್ಕಾರಗಳಲ್ಲೆಲ್ಲ ವೈಯ್ಯಾರ ವಾಗಿ ಸೀರೆಯುಡುವದೇ ನಾರಿಯರಿಗೆ ಲಕ್ಷಣ ಅಲ್ಲದೆ ಹೆಣ್ಣು ದೇವತೆಗೆ ಪೂಜೆ ಸಲ್ಲಿಸುವಲ್ಲಿ 'ದೇವರ ಸೀರೆ', 'ಕಣ', ಎಲೆ, ಅಡಿಕೆ, ಉತ್ತತ್ತಿ, ಅರಿಷಿಣ, ಹಣ್ಣು ಎಲ್ಲವನ್ನು ಉಡಿ ತುಂಬುವ ಪದ್ಧತಿ ಇವತ್ತಿಗೂ ಪ್ರಚಲಿತದಲ್ಲಿದೆ.

ವಿವಿಧ ಅಂಚಿನ ಸೆರಗುಳ್ಳ ಸೀರೆಗಳು: ದಡಿಸೀರೆ, ಮೂರ ಗಾಡಿದಡಿ ಸೀರೆ, ನಾಲ್ಕು ಗಾಡಿದಡಿ ಸೀರೆ, ಪರಾಸ್ ಪೆಟದಡಿ, ತೋಪತೆನಿ ತಿರುಗಿದ ರೇಶ್ಮಿ ಸೆರಗಿನ ಸೀರೆ, ಸಣ್ಣ ಕಣ್ಣಿನ ಸೀರೆ, ದೊಡ್ಡ ಕಣ್ಣಿನ ಸೀರೆ, ಹಂಚಿಕಡ್ಡಿ ಸೀರೆ, ಗದ್ದಿ ಮಡಿ, ಚಂದರಗಿ ಚಿಕ್ಕಿ ಸೀರೆ, ನೆಲ್ಲಿ ಸೆರಗಿನ ಸೀರೆ, ಪಟ್ಟಿ ಸೆರಗಿನ ಸೀರೆ, ನವಿಲಿನ ಕಣ್ಣಿನ ಸೀರೆ, ಮಸರಾಯಿ ಸೀರೆ, ಕರಿಚಂದ್ರಿಕಾಳಿ ಸೀರೆ, ಬಾಳೆ ಪಟ್ಟಿಯ ಸೀರೆ ಇತ್ಯಾದಿ ಸೆರಗಿನ ಸೀರೆಗಳು ಹೈದ್ರಾಬಾದ ಕರ್ನಾಟಕದಲ್ಲಿ ಪ್ರಚಲಿತವಾದವುಗಳಾಗಿದ್ದವು.

ಹಳೆಯ ತಲೆಮಾರಿನ ಹಿರಿಯ ಹೆಂಗಸರುಗಳು ಈಚಲ ಕರಂಜಿಯ ಸೀರೆಗಳನ್ನು ಇಷ್ಟ ಪಡುತ್ತಿದ್ದರು. ಇವತ್ತು ಇವು ಇಲ್ಲವಾಗಿವೆ. ಮೊದಲು ದಡಿ ಸೀರೆ, ಮೂರು ಗಾಡಿ ದಡಿ ಸೀರೆ, ನಾಲ್ಕು ಗಾಡಿದಡಿ ಸೀರೆ, ಪರಾಸ ಪೆಟದಡಿ ಸೀರೆಗಳನ್ನು ಸ್ತ್ರೀಯರು ಬಳಸುತ್ತಿದ್ದರು. ಈ ಸೀರೆಗಳು ವಿವಿಧ ಬಣ್ಣಗಳಲ್ಲಿ ದೊರೆಯುತ್ತಿದ್ದು, ಅಂಚಿನಲ್ಲಿ ಎರಡು ಸಣ್ಣ ಕುಸುರಿನ ಪಟ್ಟಿಗಳು ನೇರವಾಗಿ ಸಾಗಿರುತ್ತವೆ. ಇನ್ನೊಂದು ಒಂಟಿ ಸಾಲು ಕುಸುರಿ



ಕೆಂಪು ಅಂಜುರದ ಸೀರೆ

ಹೂವಿನಿಂದ ಸಾಗಿ, ಸೀರೆಗಳು ಆಕರ್ಷಕವಾಗಿರುತ್ತವೆ. ಪರಾಸ್ ಪೆಟದಡಿ ಸೀರೆಗಳಲ್ಲಿ ಸಣ್ಣ ಜರಿಯ ಇಲ್ಲವೆ ರೇಶ್ಮಿ ಎಳೆಗಳನ್ನು ಹೊಂದಿರುತ್ತವೆ. ದಡಿ ದಟ್ಟವಾಗಿ ನೇಯ್ದಿರುತ್ತಾರೆ. ಇದೇ ಸೀರೆಗೆ ಪಟ್ಟಿಸೆರಗಿನ ಸೀರೆ, ತೋಪ ಸೆರಗುಸೀರೆ ಎನ್ನುವರು.

ಸೀರೆಗಳಲ್ಲಿ ವಿವಿಧ ಬಣ್ಣಗಳ ಹಾಗೂ ವಿವಿಧ ವಿನ್ಯಾಸಗಳುಳ್ಳ ಸೀರೆಗಳನ್ನು ಕಾಣುತ್ತೇವೆ. ಹಳದಿ ಕಣ್ಣಿನ ಸೀರೆ. ದಾಳಂಬ್ರಿ ಬಣ್ಣದ ಸೀರೆಗಳಲ್ಲಿ ಬಿಳಿ ಚೌಕಗಳ ನಡುವೆ ಒಂದು ಹಳದೀ ಗೆರೆ ಬಂದಿರುತ್ತವೆ. ಇದಕ್ಕೆ ಹಳದಿಕಣ್ಣಿನ ಸೀರೆ, ಬಿಳಿಕಣ್ಣಿನ ಸೀರೆ ಎನ್ನುವರು. ಇದರಲ್ಲಿ ಕಪ್ಪುಮಿಶ್ರಿತ ಕೆಂಪು ಬಣ್ಣದ ಸೀರೆಗಳು ಇರುತ್ತವೆ. **ಸಣ್ಣ ಕಣ್ಣಿನ ಸೀರೆ**–ದೊಡ್ಡ ಕಣ್ಣಿನ ಸೀರೆಗಳಲ್ಲಿ ಅತೀ ಚಿಕ್ಕ ಚೌಕಗಳಿದ್ದರೆ ಅದಕ್ಕೆ ಸಣ್ಣ ಕಣ್ಣಿನ ಸೀರೆ ಎನ್ನುವರು. **ದೊಡ್ಡ ಕಣ್ಣಿನ ಸೀರೆ**–ದೊಡ್ಡ ಕಣ್ಣಿನ ಸೀರೆಗಳಲ್ಲಿ ದೊಡ್ಡ ದೊಡ್ಡ ಚೌಕಗಳಿದ್ದರೆ ಅದಕ್ಕೆ ದೊಡ್ಡ ಕಣ್ಣಿನ ಸೀರೆಗಳೆನ್ನುವರು. **ಚಂದರಗಿ ಚಿಕ್ಕಿ ಸೀರೆ**–ಚೌಕ ಮನೆಯಲ್ಲಿ ಒಂದು ಸಣ್ಣ ಬಿಳಿ ಚಿಕ್ಕೆ ಇದ್ದರೆ ಅವಕ್ಕೆ ಚಂದರಗಿ ಚಿಕ್ಕಿ ಸೀರೆ ಎನ್ನುವರು. **ಗದ್ದಿ ಮಡಿ ಸೀರೆ**–ಚೌಕಳಿ ಸೀರೆಗಳಿಗೆ 'ಗದ್ದಿ ಮಡಿ' ಸೀರೆಗಳೆನ್ನುವರು. **ರಾಸ್ತಾ ಸೀರೆ**–ಉಡುವ ಸೆರಗಿನಿಂದ ಹೊದೆಯುವ ಸೆರಗಿನವರೆಗೂ ಉದ್ದವಾದ ಗೆರೆಗಳಿದ್ದರೆ ಅದಕ್ಕೆ ರಾಸ್ತಾ ಸೀರೆಗಳೆನ್ನುವರು. **ಏಕ ಬಣ್ಣದ ಸೀರೆ**– ಒಂದೇ ಬಣ್ಣ ಒಡಲಿನಲ್ಲಿದ್ದು, ಚಾಕ್ಲೇಟ್ ಬಣ್ಣದ ಅಂಚು ಸೆರಗುಗಳಿರುತ್ತವೆ. ಪಾರಿವಾಳ ಬಣ್ಣ, ಮುಗಿಲು ಬಣ್ಣ, ಗಿರಿ ಕುಂಕುಮ ಬಣ್ಣ, ಹಸಿರು, ಕಪ್ಪು ಹಸಿರು ಬಣ್ಣದ ಸೀರೆಗಳಿವೆ. **ಬಾಂಡ ಸೀರೆಗಳು**–ಸಾಸಿವೆ ಬಣ್ಣ, ನೀಲಿ, ಕಪ್ಪು ಹಸಿರು, ಡಾಳಂಬ್ರ ಬಣ್ಣದ ಬಾಂಡಗಳ ಸೀರೆಗಳನ್ನು ಮಧ್ಯ ವಯಸ್ಸಿನ ಹೆಂಗಸರು ಇಷ್ಟ ಪಡುತ್ತಾರೆ. ಇವು ಗಾಡಿದಡಿ ಸೀರೆಗಿಂತ ಹಗುರವಾದವುಗಳು ಈ ಸೀರೆಗಳನ್ನು ರಬಕವಿ, ಬನಹಟ್ಟಿ ಕೊಪ್ಪಳಗಳಲ್ಲಿ ನೇಯುತ್ತಾರೆ. 'ಇಳಕಲ್ ಸೀರೆಗಳು' ಅಂತಾ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿವೆ. ಹೆಚ್ಚಾಗಿ ಹೈದ್ರಾಬಾದ ಕರ್ನಾಟಕದಲ್ಲಿ ಈ ಸೀರೆಗಳ ಬಳಕೆಯಿದೆ.

ಸೀರೆಗಳಿಗೆ ಬಣ್ಣ ಕಟ್ಟುವುದು: ನೇಯ್ಗೆಗೆ ಮೊದಲು ಬಣ್ಣ ಕಟ್ಟಲಾಗುತ್ತದೆ. ಸೀರೆಗೆ ಉಪಯೋಗಿಸುವ ಬಣ್ಣವನ್ನು ಬಣ್ಣದ ತಗಡಿನ ಡಬ್ಬಿಗೆ ತೋಡಿ, ಅನಂತರ ಮಿಶ್ರಣಮಾಡಿ, ಹಿಂಡಿ ಕಟ್ಟಿಗೆಯ ಹರಿಯನ್ನು ಗೋಡೆಗೆ ಹಾಕಿ ಚಮಕಾವನ್ನು ಹೊಯ್ಯುತ್ತಾರೆ. ಸಾಂಪ್ರದಾಯಿಕ ನೇಯ್ಗೆಗಳಲ್ಲಿ ನೈಸರ್ಗಿಕವಾದ ಬಣ್ಣವನ್ನೇ ಬಳಸುತ್ತಿದ್ದರು. ಕೆಂಪು ಬಣ್ಣಕ್ಕೆ ಡಾಣ, ಸಿಸ್ತಾಪಲ್, ಹಸಿರು ಬಣ್ಣಕ್ಕೆ ಅಳ್ಳೆಕಾಯಿ, ಕಾಕಡಸಿಂಬ, ಹಳದೀ ಬಣ್ಣಕ್ಕೆ ಕಪೀಲ, ಜಂಬಣ್ಣಕ್ಕೆ ಮಡ್ಡಿ ಪೇರುಗಳನ್ನು ಬಳಸುತ್ತಿದ್ದರು. ಆದರೆ ಇಂದು ಸೀರೆಗಳಿಗೆ ಆಧುನಿಕ ರಸಾಯನಿಕ ಬಣ್ಣಗಳನ್ನು ಬಳಸುತ್ತಿದ್ದಾರೆ.

ಹೆಣ್ಣುಮಕ್ಕಳ ಶೃಂಗಾರವನ್ನು ಇಮ್ಮಡಿಸುವ ಸೀರೆಗಳು ಹೆಣ್ಣು ಮಗು ಜನಿಸಿ ಐದು ವರ್ಷದ ಒಳಗಿರುವಾಗಲೇ ಸೀರೆ ಉಡಿಸುವ ಸಂಪ್ರದಾಯಗಳು ನಮ್ಮ ಭಾರತೀಯರಲ್ಲಿ ಇವೆ. ಹುಟ್ಟಿದಟ್ಟಿ ಅಥವಾ ಹುಟ್ಟಸೀರೆ, ಆಡು ಮಾತಿನಲ್ಲಿ 'ಉಡದಟ್ಟಿ' ಎಂದು ಬಳಸಲಾಗುತ್ತಿದೆ. ಸೋದರಮಾವ ಹೆಣ್ಣು ಮಕ್ಕಳು ಐದು



ಚೆಕ್ಸ್ ಸೀರೆ

ವರ್ಷ ಅಥವಾ ಎಂಟು ವರ್ಷದವಳಿರುವಾಗ ಉಡಿಸುವ ಸೀರೆ ಇದು. **ಮೈನೆರೆತ ಸೀರೆ**– ಹೆಣ್ಣು ಮಕ್ಕಳು ಋತುಮತಿಯರಾದಾಗ ದಿನಕ್ಕೊಂದು ಸೀರೆ ಉಡಿಸಿ, ಹಾಡಿ, ಹಾಡಿ ಸಂಭ್ರಮಿಸುವರು. ಅಲ್ಲದೆ 'ಎಬ್ಬಿಸುವ ಕಾರ್ಯ' ಮಾಡುವಾಗ 'ನೆರೆದಾಕೆಗೊಂದು, ಎರೆದಾಕೆಗೊಂದು' ಎಂದು ಸೀರೆ ಉಡಿಸುವರು. ಹೆಚ್ಚಾಗಿ ಜರದಂಚಿನ ಹಸಿರು ಸೀರೆಯನ್ನೇ ಉಡಿಸುವರು. **ಮದುವೆ ಸೀರೆ**–ಉಂಡಿ ಸೀರೆಯನ್ನು ಪಂಚಮಿಗೂ, ಸಕ್ಕರಿ ಆರತಿ ಸೀರೆಯನ್ನು ಗೌರಿ ಹುಣ್ಣಿಮೆಗೂ ಮದುವೆ ನಿಶ್ಚಿತವಾದ ಕನ್ಯಾ ರತ್ನಗಳಿಗೆ ವರನಿಂದ ಬರುವ ಸೀರೆಗಳಿವು. **ಅರಿಷಿಣ ಸೀರೆ**– ಮದುವೆ ಸಂದರ್ಭದಲ್ಲಿ ಬಹು ಮುಖ್ಯವಾದ ಸೀರೆ ಇದು. ಅದಕ್ಕೆ 'ಸುರಗಿ ಸೀರೆ' ಎನ್ನುವರು. **ಮೇಲ್ಮುಸುಗಿನ ಸೀರೆ**– ಮದುವೆ ಕಾರ್ಯದಲ್ಲಿ ಸೋದರಮಾವ ಉಡಿಸುವ ಸೀರೆ ಇದು. **ಮಡಿ ಸೀರೆ**– ರೇಶ್ಮಿ ಜರದಂಚಿನ ದೊಡ್ಡ ಸೀರೆ ಇದು. ಬೀಗತ್ತಿ ಸೀರೆ– ಮದುವೆ ಕಾರ್ಯದಲ್ಲಿ ಬೀಗರು ಬೀಗರು ಮುಯ್ಯ ಮಾಡಿಕೊಳ್ಳುವ ಸೀರೆ ಇದು. ಶ್ಯಾವಿಗೆ ಸೀರೆ–ಮೊದಲ ಬಾರಿಗೆ ಗಂಡನ ಮನೆಗೆ ಬಂದ ಮದುವಣಗಿತ್ತಿಗೆ ಉಡಕ್ಕಿ ಹಾಕಿ ತವರು ಮನೆಗೆ ಕಳಿಸುವಾಗ ಉಡಿಸುವ ಸೀರೆ ಇದಾಗಿದೆ. **ಕುಬಸದ ಸೀರೆ**– ಚೊಚ್ಚಲ ಗರ್ಭಿಣಿಯಾದ ಸ್ತ್ರೀಯರಿಗೆ 'ಸೀಮಂತ ಕಾರ್ಯ' ಮಾಡುವಾಗ ತವರು ಮನೆಯವರು ಹೆಚ್ಚಾಗಿ ಹಸಿರು ಜರದಂಚಿನ ರೇಶ್ಮೆ ಸೀರೆಯನ್ನೇ ಉಡಿಸುವರು. **ಬಾಣಂತಿ ಸೀರೆ**– ಮಗುವಿನ ಜನನದ ಅನಂತರ ತವರು ಮನೆಯಿಂದ ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ಉಡಿಸುವ ಸೀರೆ. **ಮರಣದ ಸೀರೆ**–ಸ್ತ್ರೀಯರು ಸತ್ತಾಗಲು ಮನೆಯವರು ಕೊಡಿಸಿದ

ಸೀರೆಯನ್ನೇ ಉಡಿಸಿ, ಮಣ್ಣು ಮಾಡುವ ಇಲ್ಲವೆ ಸುಡುವ ಕ್ರಿಯೆಯನ್ನು ಮಾಡಲಾಗುತ್ತದೆ. ವಿಧವೆಯರಾದವರು ತಿಳಿ ಬಣ್ಣದ ಇಲ್ಲವೆ ಬಿಳಿ ಬಣ್ಣದ ಸೀರೆಗಳನ್ನೇ ಉಡುವರು.

ಇತ್ತೀಚಿಗೆ ಪ್ರಿಂಟೆಡ್ ಪತ್ತಲಗಳು, ಪಾಲಿಸ್ಟರ್ ಸೀರೆ, ನೂಲಿನ ಸೀರೆ, ಫ್ಯಾನ್ಸಿ ಸೀರೆಗಳೇ ಹೆಚ್ಚಾಗಿವೆ. ಇಂದಿನ ಹೊಸ ಪೀಳಿಗೆಯವರು ಫ್ಯಾಶನ್ನಿಗೆಂದು ಕಸೂತಿ ಹಾಕಿದ ಇಳಕಲ್ ಸೀರೆಗಳು, ಕರಿಚಂದ್ರಿಕಾಳಿ ಸೀರೆಗಳನ್ನು ಉಡುತ್ತಿದ್ದಾರೆ. ಹೀಗೆ ಸೀರೆಗಳು ಸ್ತ್ರೀಯರ ಜನನದಿಂದ ಮರಣದವರೆಗೂ ಬಹು ಪ್ರಾಮುಖ್ಯತೆಯನ್ನು ಪಡೆಯುತ್ತವೆ. (ಎಸ್‌ಎಸ್‌ಎಂ)

ಸೀಮಾ ಅಜ್ಜನಗೌಡ ಪಾಟೀಲ: ಜಗದ್ವಿಖ್ಯಾತ ಸಂಗೀತಗಾರರ ಮನೆತನದಲ್ಲಿ 1968 ಜನವರಿ 17ರಂದು ಜನಿಸಿದರು. ಇವರು ಹುಟ್ಟಿನಿಂದಲೇ ಸಂಗೀತ ವಾತಾವರಣದಲ್ಲಿ ಬೆಳೆದವರು. ತಂದೆ ಅಜ್ಜನಗೌಡ ಪಾಟೀಲ ತಾಯಿ ಲಕ್ಷ್ಮೀದೇವಿ ಪಾಟೀಲ. ತಂದೆ ಹೆಸರಾಂತ ಸಂಗೀತ ವಿದ್ವಾಂಸರು ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ರೀಡರ್. ಇನ್ನೂ ಅಜ್ಜ ಪ್ರಖ್ಯಾತ ಸಂಗೀತ ವಿದ್ವಾಂಸರಾದ ಡಾ. ಮಲ್ಲಿಕಾರ್ಜುನ ಮನಸೂರ. ಇಂತಹ ಪರಿಸರದಲ್ಲಿ ಆಡಿ ಬೆಳೆದ ಇವರು ತಂದೆಯಿಂದ ಅಜ್ಜನಿಂದ ಸೋದರಮಾವನಾದ ಡಾ. ರಾಜಶೇಖರ ಮನಸೂರರಿಂದ ಜೈಪೂರ ಘರಾಣೆಯ ಗಾಯಕಿಯನ್ನು ಮೈಗೂಡಿಸಿಕೊಂಡವರು. ಸಂಗೀತದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಚಿನ್ನದ ಪದಕ ಪಡೆದು ಸಂಗೀತದಲ್ಲಿ ಡಾಕ್ಟರೇಟ್ ಪದವಿ ಪಡೆದು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದಲ್ಲಿ ಹಲವಾರು ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಈಗ ಗುಲಬರ್ಗಾದ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಗೋದೂತಾಯಿ ಪದವಿ ಮಹಾವಿದ್ಯಾಲಯದಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ದೇಶದ ಹಾಗೂ ನಾಡಿನ ಪ್ರತಿಷ್ಠಿತ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾದಂತಹ ಉತ್ಸವಗಳಲ್ಲಿ ಹಲವಾರು ಬಾರಿ ಅರಮನೆಯ ಪ್ರತಿಷ್ಠಿತ ದರ್ಬಾರದಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ.

(ಆರ್‌ವಿಎಂ)

ಸು



ಸುಜಾತಾ ಜಂಗಮಶೆಟ್ಟಿ: ಇವರು ವೃತ್ತಿಯಲ್ಲಿ ಕನ್ನಡ ಅಧ್ಯಾಪಕಿ. ಪ್ರವೃತ್ತಿಯಲ್ಲಿ ಹವ್ಯಾಸಿ ರಂಗಭೂಮಿಯ ಕಲಾವಿದೆ. ಬಸವಕಲ್ಯಾಣ, ಹುಮನಾಬಾದ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿರುವ ಇವರು ಕಲಬುರ್ಗಿಯ ಎನ್.ವಿ. ಶಾಲೆಯಲ್ಲಿ ಪ್ರೌಢಶಿಕ್ಷಣ, ವ್ಹಿ.ಜಿ. ವುಮೆನ್ಸ್ ಮಹಾವಿದ್ಯಾಲಯದಿಂದ ಪದವಿ ಮುಗಿಸಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ. (ಕನ್ನಡ) ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 'ಡಾ ಬೆಸಗರಹಳ್ಳಿ ರಾಮಣ್ಣನವರ ಬದುಕು ಬರಹ' ಮಹಾಪ್ರಬಂಧಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿ ನೀಡಿದೆ. ಸುಮಾರು ಎರಡು ದಶಕಗಳಿಂದ ಹವ್ಯಾಸಿ ರಂಗಭೂಮಿಯೊಂದಿಗೆ ಗುರುತಿಸಿಕೊಂಡಿರುವ ಇವರು ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮೂಲಕ ಬೆಳಕಿಗೆ ಬಂದವರು. 'ಈರೋಬಿ' ನಾಟಕದಲ್ಲಿ ಮುಖ್ಯಪಾತ್ರವಹಿಸುವ ಮೂಲಕ ಅಪಾರ ಜನಮನ್ನಣೆ ಗಳಿಸಿದವರು. ಹಲವಾರು ಬೀದಿ ನಾಟಕಗಳನ್ನು ರಚಿಸಿ, ನಿರ್ದೇಶಿಸಿರುವ ಇವರು ಟೆಲಿಫಿಲ್ಮ್ ಹಾಗೂ ರೇಡಿಯೋ ನಾಟಕಗಳಲ್ಲಿ ಭಾಗವಹಿಸಿದ್ದಾರೆ. ಇವರ ರಂಗ ಚಟುವಟಿಕೆಗಳನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿಯ 2007ನೇ ಸಾಲಿನಲ್ಲಿ ಸಿಜಿಕೆ ಯುವರಂಗ ಪ್ರಶಸ್ತಿ ನೀಡಿ ಗೌರವಿಸಿದೆ. ಉತ್ತಮ ಅಧ್ಯಾಪಕಿ, ಪ್ರತಿಭಾವಂತ ಕಲಾವಿದೆಯಾಗಿರುವ ಡಾ. ಸುಜಾತಾ ಜಂಗಮ ಶೆಟ್ಟಿಯವರು 'ಚೌಕಟ್ಟಿನ ಚಿತ್ರಗಳು' ವಿಮರ್ಶಾ ಕೃತಿಯ ಮೂಲಕ ಸಮರ್ಥ ಬರಹಗಾರ್ತಿ ಎಂದು ಸಾಬೀತು ಪಡಿಸಿದ್ದಾರೆ. ಇವರ 'ಚೌಕಟ್ಟಿನ ಚಿತ್ರಗಳು ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2009ನೇ ಸಾಲಿನ ವಾರ್ಷಿಕ ಪುಸ್ತಕ ಬಹುಮಾನಕ್ಕೆ ಭಾಜನವಾಗಿದೆ.

(ವ್ಹಿಜಿಪಿ)

ಸುಡುಗಾಡು ಸಿದ್ದರು: ಮಾನವನು ದಿನನಿತ್ಯ ಜೀವನಕ್ಕಾಗಿ ಅನೇಕ ಕಾಯಕಗಳನ್ನು ಮಾಡುತ್ತಾ ಬಂದಿರುತ್ತಾರೆ. ಈ ಕಾಯಕಗಳು ಕಲೆ ರೂಪದಲ್ಲಿ ರೂಪಾಂತರಗೊಂಡಿವೆ. ಅಂಥಹುಗಳಲ್ಲಿ ಜನಪದ ಕಲಾಪ್ರಕಾರಗಳಲ್ಲಿ ಸುಡಗಾಡಸಿದ್ದರು ಮನರಂಜನೆಗಾಗಿ ಆಡಿ ಜನರ ಮನ ಸಂತೈಸುವ ಜನಪದ ಕಲೆ ಒಂದಾಗಿದೆ. ಕೆಲವೊಂದು ವಿಶೇಷವಾದ ವಿದ್ಯೆಯನ್ನು ಸಂಪಾದಿಸಲು ಈ



ಸುಡಗಾಡ ಸಿದ್ಧರು

ಜನಾಂಗ ಸುಡುಗಾಡಕ್ಕೆ ಹೋಗುತ್ತಾರೆ. ಆದುದರಿಂದ ಇವರಿಗೆ ಸುಡಗಾಡ ಸಿದ್ಧರೆಂದು ಕರೆಯುವರು.

ಇವರು ಮೂಲತಃ ಆಂಧ್ರಪ್ರದೇಶದವರು. ಇವರ ಭಾಷೆ ತೆಲುಗು. ಇವರು ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಮಾತ್ರ ಕಂಡು ಬರುತ್ತಾರೆ. ಆ ಪ್ರದೇಶದಿಂದ ಈಗ ಇತರೆ ಜಿಲ್ಲೆಗಳಲ್ಲಿ ಕೆಲವೊಂದು ಜನಾಂಗವು ಹೊಟ್ಟೆ ಪಾಡಿಗಾಗಿ ಹೋಗಿರುವುದುಂಟು. ಇವರು ವಿಶೇಷ ಪರಿಣಿತಿ ಸಾಧಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಈ ವಿದ್ಯೆಯನ್ನು ಅಭಿವ್ಯಕ್ತಗೊಳಿಸುತ್ತ ಬಂದಿದ್ದಾರೆ.

ಉಡುಗೆ ತೊಡುಗೆ: ಬಣ್ಣ ಬಣ್ಣದ ನಿಲುವಂಗಿ, ತಲೆಗೆ ರುಮಾಲು, ಹಣೆಗೆ ವಿಭೂತಿ, ಕಣ್ಣ ಸುತ್ತಲೂ ವಿಭೂತಿ, ಹಣೆಗೆ ಕುಂಕುಮ, ಅರಿಸಿನ, ಕೊರಳಲ್ಲಿ ರುದ್ರಾಕ್ಷಿ, ಪೇಟದಲ್ಲಿ ನವಿಲುಗರಿ, ಕೈಯಲ್ಲಿ ಕಮಂಡಲ, ಹೋಲಿಕೆಯಾಗುವ ರೀತಿಯಲ್ಲಿ ಇವರು ತಮ್ಮ ಹೆಗಲಮೇಲೆ ಹಾಕಿಕೊಳ್ಳುವ ಶಾಲುಗಳಿಗೆ ಬಣ್ಣ ಬಣ್ಣದ ತುಂಡು, ಬಟ್ಟೆಗೆ ಆಕರ್ಷಕವಾಗಿ ಜೋಡನೆ ಮಾಡಿ ಹೊಲಿಗೆಯನ್ನು ಮಾಡಿರುತ್ತಾರೆ. ಸುಡುಗಾಡಸಿದ್ಧರ ವೇಷ ಭೂಷಣ ವಿಶೇಷತೆಯಿಂದ ಕೂಡಿದೆ. ಇವರು ಬೆಳಗಿನ ಜಾವದಲ್ಲಿ ತಮ್ಮ ಕಾಯಕವನ್ನು ಪ್ರಾರಂಭಿಸಿ, ವೇಷ ಭೂಷಣ ಧರಿಸಿ ಹಳ್ಳಿ ಹಳ್ಳಿಗೆ ಹೋಗಿ ಜಾದು ಮಾಡಿ ತೋರಿಸಿ ಭಿಕ್ಷೆ ಬೇಡುವರು. ಹಳ್ಳಿಯ ಜನರಿಗೆ ಇವರ ಜಾದು ತುಂಬಾ ಸಂತೋಷವನ್ನುಂಟು ಮಾಡುತ್ತದೆ.

ಆಟಗಳ ವಿವರ: 1. ಗುಂಡು ನುಂಗಿ ತೆಗೆಯುವುದು 2. ಅಗಡದಿನ್ನಿ 3. ಕುಗುಡೊಳ್ಳಿ ಬೀಜ 4. ಬಿದಿರು ಕೊಳವೆ 5. ಅಶೋಕ ಚಕ್ರ 6. ಜಗಳಗಟ್ಟಿ ಜಕ್ಕವ್ವಾ 7. ಚೇಳು ಆಟ 8. ಚನ್ನವ್ವಾ 9. ಮಕ್ಕಳ ಚೊನ್ನದಲ್ಲಿ ಚೇಳು ಬಿಟ್ಟು ಮತ್ತೆ ತೆಗೆಯುವುದು 10. ಪಾತಿಮಾ 11. ದಾರದ ಮಧ್ಯೆ ಒಣ ಬುರುಡೆ ನಿಲ್ಲಿಸುವುದು 12. ಬೀಜ ಇದ್ದದು ಗಣಪತಿ ಮಾಡುವುದು 13. ಬೀಜದಿಂದ ಲಕ್ಷ್ಮೀ ಮಾಡುವುದು 14. ಕಪ್ಪೆಯಿಂದ ಉಳ್ಳಾಗಡ್ಡಿ ತಯಾರಿಸುವುದು, 15. ಪೈಪದಲ್ಲಿ ದಾರದ ಬಣ್ಣ ಬದಲು ಮಾಡುವುದು. 16. ಗಜ್ಜಗ ನುಂಗಿ ತೆಗೆಯುವುದು ಹೀಗೆ ಜಾದು ಆಟಗಳನ್ನು ಸುಮಾರು ಮೂವತ್ತು ನಿಮಿಷದಿಂದ ನಲವತ್ತು ನಿಮಿಷಗಳವರೆಗೆ ಮನರಂಜನೆಯನ್ನು ನೀಡುವರು. ಆಟ ಪ್ರಾರಂಭಿಸುವ ಮೊದಲಿಗೆ ಅಲ್ಲಮಪ್ರಭು ಮಲ್ಲಿಕಾರ್ಜುನನ್ನು ಇವರು ಜಾದು ಮಾಡುವಾಗ ಮಧ್ಯದಲ್ಲಿ ಮಲ್ಲಾಡದ ಚೌಡಿ ಎಂದು ಕೂಗಿದಾಗ ಅದು 'ಚಿಂವಕ್' ಎಂದು ಶಬ್ದ ಮಾಡುತ್ತದೆ. ಜೋಳಿಗೆಯ ಮೇಲೆ ಕೈ ಇಟ್ಟು ಚೌಡಿ ಸುಮ್ಮನಿರುತ್ತೀಯಾ ಅಂದಾಕ್ಷಣ ಮತ್ತೆ 'ಚಿಂವಕ್' ಎಂದು ಶಬ್ದಮಾಡುತ್ತದೆ. ನೋಡುಗರಿಗೆ ಈ ಶಬ್ದ ತುಂಬಾ ಸಂತೋಷವನ್ನು ನೀಡುತ್ತದೆ. ಸಾಮಗ್ರಿಗಳನ್ನು ಇಡಲು ಒಂದು ಜೋಳಿಗೆ ಹಾಗೂ ಕಾಳು ಕಡಿ ಹಾಕಿಕೊಳ್ಳಲು ಇನ್ನೊಂದು ಜೋಳಿಗೆ ಜೊತೆಗೆ ಇವರ ಕೈಯಲ್ಲಿ ಮಂತ್ರ ದಂಡವಿರುತ್ತದೆ.

(ಪಿಆರ್‌ಪಿ)

ಸುನಂದಾ ಕಂದಗಲ್: ಬಿಜಾಪುರ, ಗುಲಬರ್ಗಾ, ಬಾಗಲಕೋಟ ಜಿಲ್ಲೆಗಳಲ್ಲಿ ಹವ್ಯಾಸಿ ರಂಗಭೂಮಿಗೆ ಬಹುಬೇಡಿಕೆಯ ನಟಿಯಾಗಿ ಹೆಸರುಗಳಿಸಿದವರು ಸುನಂದಾ ಕಂದಗಲ್. 'ನಾಗ ಮಂಡಲ', 'ಹಾವು ಹರಿದಾಡತಾವ', 'ಅಗ್ನಿ ಮತ್ತು ಮಳೆ', 'ತಿರುಗುಪ್ಪ' 'ಹರಕೆಯ ಕುರಿ', ಗೋಕರ್ಣದ ಗೌಡ ಶಾನಿ, ಬುದ್ಧಿವಂತರ ನ್ಯಾಯ ಹೀಗೆ ಹವ್ಯಾಸಿ ನಾಟಕಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡವರು. ವೃತ್ತಿ ರಂಗದಲ್ಲೂ ಡಿಮ್ಯಾಂಡ ಇರುವ ಕಲಾವಿದೆ.

ಬಾಗಲಕೋಟೆಯ 'ವಾಸುದೇವ ವಿನೋದಿ ನಾಟ್ಯ ಸಭಾ' ಕಂಪನಿಯಲ್ಲಿ ಸುಮಾರು 10 ನಾಟಕಗಳಲ್ಲಿ ಬಿಜಾಪುರದ 'ಕಲಾ ಮಾಧ್ಯಮ' ಕಂಪನಿಯ ವೃತ್ತಿ ನಾಟಕಗಳಲ್ಲಿ 3 ವರ್ಷ, ಅಲ್ಲದೆ ಜನಪದ ಹವ್ಯಾಸಿ ಕಲಾವಿದರು ಹಳ್ಳಿಗಳಲ್ಲಿ ಜಾತ್ರೆ, ಪರೀಕ್ಷೆಗಳ ಸಂದರ್ಭದಲ್ಲಿ ಮಾಡುವ ನಾಟಕಗಳ ನೂರಾರು ನಾಟಕಗಳಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ.

ಗುಲಬರ್ಗಾ ಜಿಲ್ಲೆಯ ಭೀಮರಾಯನ ಗುಡಿಯ ಉದಯೋನ್ಮುಖ ಕಲಾಬಳಗ, ಗುಲಬರ್ಗಾದ ರಂಗಭಾರತಿ ಕಲಾ ಬಳಗ, ಅಫಜಲಪುರ, ಆಳಂದಗಳ ತರುಣ ಕಲಾಸಂಘಗಳಲ್ಲಿ

ಭಾಗವಹಿಸಿದ್ದರಿಂದಲೇ ಇವರು ಹಳ್ಳಿಹಳ್ಳಿಗಳ ರಂಗ ಚಟುವಟಿಕೆಗಳಿಗೆ ಬೇಡಿಕೆಯ ಕಲಾವಿದರಾಗಿ ಮೆರೆದಿದ್ದಾರೆ.

ರಂಗಭೂಮಿಯಲ್ಲಿ ದುಡಿವ ಹೆಣ್ಣು ಮಕ್ಕಳಿಗೆ ಕಷ್ಟಗಳು ಬೆನ್ನಿಗಂಟಿದ ಭೂತ, ಆದರೆ ಅದನ್ನು ಓಡಿಸಿ ರಂಗಭೂಮಿಯನ್ನು ಜೀವಂತವಾಗಿಟ್ಟವರು ಸುನಂದಾ ಕಂದಗಲ್‌ರಂತವರು.

(ಎಸ್‌ಆರ್‌ಜಿ)



ಸುನಂದಾ ಬಾಲಕೃಷ್ಣ ಸಾಲವಾಡಗಿ: 1963 ಡಿಸೆಂಬರ್ 18 ರಂದು ಶ್ರೀ ನರಸಿಂಗರಾವ ಕುಲಕರ್ಣಿ ಹಾಗೂ ಶ್ರೀಮತಿ ಪ್ರಮೀಳಾಬಾಯಿ ಕುಲಕರ್ಣಿ ಇವರ ಪುತ್ರಿಯಾಗಿ ಜನಿಸಿದರು. ಸಿಂಧನೂರು ತಾಲ್ಲೂಕಿನ ಅಲಬನೂರ ಇವರ ತವರು ಮನೆ. ಸುರಪುರ ಇವರ ಪತಿಯ ಮನೆ. ಗಂಗಾವತಿಯಲ್ಲಿ ಇವರ ವಿದ್ಯಾಭ್ಯಾಸ, ಗಂಗಾವತಿಯ ಕಲ್ಮಠದ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯದಲ್ಲಿ ಸಂಗೀತ ವಿದ್ಯಾಭ್ಯಾಸ ಪೂರೈಸಿದರು. ಶ್ರೀ ಗೋವಿಂದರಾಜ ಬೊಮ್ಮಲಪುರ, ಶ್ರೀ ಅಂಬಣ್ಣ ಕೊಪ್ಪರದ ಇವರ ಸಂಗೀತ ಗುರುಗಳು ಹಾಗೂ ಶ್ರೀಮತಿ ಸರೋಜಾ ಅನಗರಕರ ಅವರಲ್ಲಿಯೂ ಸಂಗೀತ ಅಭ್ಯಾಸ ಮಾಡಿದ್ದಾರೆ. ನೂತನ ವಿದ್ಯಾಲಯದಲ್ಲಿ ಎಂ.ಎ. (ಸಂಗೀತ) ಮುಗಿಸಿದರು. ಪ್ರಸ್ತುತ ಎನ್.ವ್ಹಿ. ಡಿಗ್ರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ವತ್, ವಿಶಾರದ ಎರಡೂ ಪದವಿಗಳನ್ನು ಮಾಡಿಕೊಂಡಿದ್ದಾರೆ. ಶಾರದಾ ಸಂಗೀತ ವಿದ್ಯಾಲಯವನ್ನು ಸುರಪುರದಲ್ಲಿ ಸ್ಥಾಪಿಸಿ 10 ವರ್ಷಗಳ ಕಾಲ ಸಂಗೀತ ಪಾಠವನ್ನು ಹೇಳಿಕೊಟ್ಟಿದ್ದಾರೆ. ಈ ಶಾಲೆಯ ಮಕ್ಕಳು ರಾಜ್ಯಮಟ್ಟದ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿದ ಹೆಗ್ಗಳಿಕೆ. ಅಖಿಲ ಭಾರತೀಯ ಗಂಧರ್ವ ವಿದ್ಯಾ ಮಂಡಲ ಮುಂಬಯಿ, ಇವರು ನಡೆಸುವ ಸಂಗೀತ ಪರೀಕ್ಷೆಯ ಕೇಂದ್ರವನ್ನು ನಡೆಸುತ್ತಿದ್ದಾರೆ. ಗುಲಬರ್ಗಾದಲ್ಲಿ ಶಾರದಾ ಸಂಗೀತ ಶಾಲೆ ಆರಂಭಿಸಿ 100ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಸಂಗೀತ ಪಾಠ ಕಲಿಸುತ್ತಿದ್ದಾರೆ. ಮಕ್ಕಳು, ಆಕಾಶವಾಣಿ, ದೂರದರ್ಶನ ದಲ್ಲಿ ಕಾರ್ಯಕ್ರಮ ನೀಡಿರುತ್ತಾರೆ. ಅಲ್ಲದೇ ರಾಜ್ಯ ಹಾಗೂ ಅಂತರರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.



ಸಹಕಲಾವಿದರೊಂದಿಗೆ ಗಾಯನ

ಇವರ ಮಧುರ ಕಂಠದಿಂದ 'ಬಾರೋ ವೆಂಕಟೇಶ ಮನೆಗೆ', 'ಕಳೆದೈತೋ ಪ್ರೀತಿ ಕಳದೈತಿ', 'ಪಿಳ್ಳಂಗೋವಿಯ ಚಲ್ವ ಕೃಷ್ಣ', 'ವಂದಲಿ ಪುರವರ ಹನುಮಂತ', ಧ್ವನಿಸುರುಳಿಗಳು ಹೊರ ಬಂದಿವೆ. ಆಕಾಶವಾಣಿಯಲ್ಲಿ 'ಬಿ ಗ್ರೇಡ್' ಕಲಾವಿದೆಯಾಗಿದ್ದಾರೆ. ದೂರದರ್ಶನದಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಸುರಪುರ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಗುಲಬರ್ಗಾದ ಪ್ರಸಿದ್ಧ ಮಹಿಳಾ ಮಂಡಲದ ಸದಸ್ಯೆಯಾಗಿ, ಹರಿದಾಸ ವಿಚಾರ ವಾಹಿನಿ ವೇದಿಕೆ ಸದಸ್ಯೆಯಾಗಿದ್ದಾರೆ. ಸುರಪುರ ಶ್ರೀ ವೇಣುಗೋಪಾಲ ಮಹಿಳಾ ಭಜನಾಮಂಡಳಿ ಸ್ಥಾಪಿಸಿ ಸಂಸ್ಥಾಪಕ ಕಾರ್ಯದರ್ಶಿ ಕಾರ್ಯನಿರ್ವಹಿಸಿಸುತ್ತಾರೆ. ಇವರ ಕಾರ್ಯಕ್ಕೆ ಮೆಚ್ಚಿ ಮಹಾಂತ ಜ್ಯೋತಿ ಪ್ರತಿಷ್ಠಾನ ಗುಲಬರ್ಗಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ ಸಂಗೀತ ನೃತ್ಯೋತ್ಸವ–2008ರಲ್ಲಿ 'ಕಲಾಜ್ಯೋತಿ' ಪ್ರಶಸ್ತಿ ನೀಡಿದ್ದಾರೆ. ಸುರಪುರ ಕನ್ನಡ ಸಾಹಿತ್ಯ ಸಂಘ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನವನ್ನು ಸ್ವೀಕರಿಸಿದ್ದಾರೆ.

ರಾಜ್ಯದ ಎಲ್ಲೆಡೆ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ. ರಾಯಚೂರು, ಬಳ್ಳಾರಿ, ವಿಜಾಪೂರ, ಗುಲಬರ್ಗಾ, ಯಾದಗಿರಿ, ಬೀದರ, ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ 'ದಾಸವಾಣಿ' ಕಾರ್ಯಕ್ರಮವನ್ನು ನೀಡಿದ್ದಾರೆ. ತಿರುಪತಿಯಲ್ಲಿ ನಡೆಯುವ ಸಂಗೀತ ಕಾರ್ಯಕ್ರಮವನ್ನು ನೀಡಿದ್ದಾರೆ. ಪ್ರತಿ ವರ್ಷ ಸಂಗೀತ ಶಾಲೆಯ ವಾರ್ಷಿಕೋತ್ಸವವನ್ನು ಮಾಡಿ ಮಕ್ಕಳಿಗೆ ಪ್ರೋತ್ಸಾಹಿಸಿದ್ದಾರೆ. ಸಂಗೀತ ಶಿಬಿರಗಳನ್ನು ನಡೆಸಿದ್ದಾರೆ.

(ಆರ್‌ಕೆ)



ಸುಪ್ರಿಯಾ ವರ್ಮಾ: ಬಣ್ಣಗಳ ಸಂಯೋಜನೆಯಲ್ಲಿ ಅರ್ಥ ನೀಡುವ ಕಲಾವಿದೆ. 1978 ಜುಲೈ 13 ರಂದು ಗುಲಬರ್ಗಾದಲ್ಲಿ ವರ್ಮಾ ಮನೆತನದಲ್ಲಿ ಹುಟ್ಟಿ ಬೆಳೆದಿದ್ದ ಒಂದು ಪುಟ್ಟ ಬಾಲಕಿ ಸುಪ್ರಿಯಾ ವರ್ಮಾ. ಬಾಲ್ಯದಿಂದಲೇ ಕಲೆಯಲ್ಲಿ ಆಸಕ್ತಿಯನ್ನು ಹೊಂದಿದವಳಾಗಿದ್ದಳು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ಎಂ.ಎಂ.ಕೆ. ಕಾಲೇಜ ಆಫ್ ಫೈನ್‌ಆರ್ಟ್‌ದಿಂದ



'ರೇನ್ ಮೇಕರ್' ಮಿಶ್ರ ಮಾಧ್ಯಮ

ಎಂ.ಎಫ್.ಎ. ಪೇಂಟಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು. ಮನೆಯಿಂದ ಪ್ರತಿಯೊಬ್ಬರ ಸಹಾಯದಿಂದ ಕಲೆಯ ವಾತಾವರಣದಲ್ಲಿ ತನ್ನನ್ನು ಬೆಳೆಸಿಕೊಂಡು ಬಂದ ಕಲಾವಿದೆ. ಇವರು ಕಲೆಯ ವಿದ್ಯಾಭ್ಯಾಸವನ್ನು ಮುಗಿಸಿ ಸತತವಾಗಿ ಕಲೆಯ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಕಲಾವಿದೆ ತಮ್ಮ ದಿನನಿತ್ಯ ಜೀವನದಲ್ಲಿ ಕಲೆಯನ್ನು ದಿನಚರಿಯಾಗಿ ಸ್ವೀಕರಿಸಿದ್ದಾರೆ. ಕಲೆಯೂ ಇವರಿಗೆ ಒಲಿದು ಬಂದಿರುವ ದೇವತೆಯಾಗಿದೆ.

ಚಿತ್ರಕಲೆಯಲ್ಲಿ ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ ಬಂದಿರುವ ಕಲಾವಿದರು ಯಾವಾಗಲೂ ಹೊಸ ಹುಡುಕಾಟದಲ್ಲಿರುತ್ತಾರೆ. ಹಳ್ಳಿಯ ಸಂಪ್ರದಾಯಗಳನ್ನು ಮರೆತು ಒಂದು ಹೊಸದಾದ ತನ್ನದೇ ಅಂಚಿನಲ್ಲಿ ಹೆಜ್ಜೆಯನ್ನು ಹಾಕುವುದು ಸರ್ವ ಸಾಮಾನ್ಯವಾದ ಸಂಗತಿ. ನವಯುಗವು ಒಂದು ಆನಂದಮಯ, ಅಷ್ಟೇ ಸುಲಭ, ಅದಕ್ಕಾಗಿ ಆ ಮಾರ್ಗವನ್ನು ಅನುಸರಿಸುವುದು ಈಗಿನ ಜನರ ಪ್ರವೃತ್ತಿಯಾಗಿದೆ. ಇಂತಹ ಎಲ್ಲಾ ಸಂಗತಿಗಳನ್ನು ಅರಿತು ಮುಂಬರುವ ದಿನಮಾನಗಳಲ್ಲಿ ಯಾವ ತರಹದ ಕಲ್ಪನೆ ಮತ್ತು ವೈಚಾರಿಕ ಹೆಜ್ಜೆಯನ್ನು ಹಾಕುತ್ತಾರೆ ಎಂದು ಮುನ್ನಾಲೋಚನೆ ಮಾಡಿ ಆಧುನಿಕ ಕಲಾವಿದರೂ ಚಿತ್ರಗಳಿಂದ ತಿಳಿಸುವಲ್ಲಿ ಹೆಜ್ಜೆಯನ್ನು ಹಾಕಿದ್ದಾರೆ. ಆಧುನಿಕ ಕಲಾವಿದರಲ್ಲಿ ಸುಪ್ರಿಯಾ ವರ್ಮಾ ಅವರು ಕೂಡ ತಮ್ಮ ಚಿಕ್ಕವಯಸ್ಸಿನಲ್ಲಿಯೇ ದೊಡ್ಡ ಕೀರ್ತಿಯನ್ನು ಸಾಧಿಸಿಕೊಂಡರು.

ಸುಪ್ರಿಯಾ ವರ್ಮಾ ಅವರ ಚಿತ್ರಗಳಲ್ಲಿ ವಿಶೇಷವಾಗಿ ಪ್ರಕೃತಿಯ ಹಾಗೂ ಸಂಗೀತ ವಿಷಯದ ಮೇಲೆ ಚಿತ್ರಗಳನ್ನು ಬಿಡಿಸುವುದು ಇವರ ವಿಶೇಷತೆಯಾಗಿದೆ. ವರ್ಮಾರವರ ಕುಂಚದಲ್ಲಿ ಹಲವು ಬಣ್ಣಗಳಿಂದ ಕಲೆಯನ್ನು ಹಾಗೂ ಮತ್ತೊಂದು ಬಗೆಯಲ್ಲಿ ತಮ್ಮ ಚಿತ್ರಕಲಾ ಹವ್ಯಾಸವನ್ನು ಬಿಡಿಸುತ್ತಾರೆ. ಅವರ ಒಂದೊಂದು ಕಲೆಯಲ್ಲೂ ನೂರಾರು ಕಲ್ಪನೆಗಳು ಮೂಡುತ್ತವೆ. ಇವರ ಚಿತ್ರಕಲೆಯ ಇನ್ನೊಂದು ವೈಶಿಷ್ಟ್ಯವೆಂದರೆ ಸಾಮಾನ್ಯ ಜನರು ಅರ್ಥೈಸುವ ಹಾಗೆ ಬಿಡಿಸುತ್ತಾರೆ. ಇವರು ತುಂಬ ಚುರುಕಾಗಿ ಚಿತ್ರಗಳಲ್ಲಿ ಅರ್ಥವನ್ನು ಬಿಂಬಿಸುತ್ತಾರೆ. ಇವರ ಕುಂಚದಲ್ಲಿ ತಿಳಿ ಬಣ್ಣಗಳಿಂದ ಲೇಪನೆ ಮಾಡಿ ನೂರಾರು ಅರ್ಥಗಳು ಜೀವನದ ಕಷ್ಟ, ಸುಖ ಹಾಗೂ ದುಃಖ ದುಮ್ಮಾನಗಳು ಅಡಗಿರುತ್ತವೆ. ಅವುಗಳನ್ನು ಪರಸ್ಪರ ಯಾವ ತೆರನಾಗಿ ಹಂಚಿಕೊಳ್ಳುತ್ತಾರೆ ಎನ್ನುವುದು ತೀಕ್ಷ್ಣ ಬುದ್ಧಿಯಿಂದ ತಿಳಿಸುತ್ತಾರೆ.

ಇವರ ಒಂದು ಚಿತ್ರದಲ್ಲಿ ಗಾಢವಾದ ತಿಳಿ ನೀಲಿ ತಿಳಿ ನೀಲಾಕಾಶ ಸ್ವಲ್ಪ ಕೆಂಪು ಸೇರಿ ತ್ರಿವರ್ಣ ಬಣ್ಣದಿಂದ ಹೊಸತೊಂದು ಕಲೆಯನ್ನು ಪ್ರತಿಬಿಂಬಿಸಿದ್ದಾರೆ. ಈ ಕಲೆಯಲ್ಲಿರುವ ಸ್ವಾರಸ್ಯವೆಂದರೆ ಒಂದು ಮೂರ್ತಿಯಿಂದ ದೃಷ್ಟಿ ಹಾಯಿಸಿ ಕಲಾಕೃತಿಯ ಚೌಕಟ್ಟನ್ನು ವೀಕ್ಷಿಸಿದಾಗ ಕೊಡುವ ಅರ್ಥ ಒಂದಾದರೆ, ಮತ್ತೊಂದು ಮೂರ್ತಿಯಿಂದ ನೋಡಿದಾಗ ಮತ್ತೊಂದು ಅರ್ಥ ಕೊಡುತ್ತದೆ. ಒಂದು ಹಸು ಪೂರ್ವಾಭಿಮುಖ ಮಾಡಿ ನಿಂತಿರುವ ಒಂದು ಕಲಾಕೃತಿ, ಮತ್ತೊಂದು ಕಲೆಯು ನಿಲಾಕಾಶದಲ್ಲಿ ಒಂದು ತಟ್ಟೆಯು ಹಾರಾಡುತ್ತಿರುವಂತೆ ಕಾಣುತ್ತದೆ. ಇದೊಂದು ವಿಭಿನ್ನ ಕಲ್ಪನೆ ಮೂಡಿಸುವ ರೂಪದಲ್ಲಿ ರಚಿಸಿರುವುದು ಒಂದು ವಿಶೇಷ.

ಸುಪ್ರಿಯಾ ವರ್ಮಾರವರು ತಮ್ಮ ಆಧುನಿಕ ಕಲೆಯಲ್ಲಿ ಲೋಕಮಾನ್ಯ ತಿಲಕ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಕಲಾಕೃತಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಬೆಳೆದಿವೆ. ಇವರು ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲೆಲ್ಲಾ ಭಾಗವಹಿಸಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಇವರು ಏಕವ್ಯಕ್ತಿ ಕಲಾಪ್ರದರ್ಶನ ಹಾಗೂ ಗುಂಪು ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ. (ವಿಎಸ್‌ಟಿ)

ಸುಬ್ರಾವ್ ಕುಲಕರ್ಣಿ: ರಂಗಕಲಾವಿದ. ನಾಟಕಕಾರ. ಮೂಲತಃ ಧಾರವಾಡ ಜಿಲ್ಲೆಯವರು. ತಮ್ಮ ಉದ್ಯೋಗದ ಕಾರಣದಿಂದ ಕಲಬುರ್ಗಿಗೆ ಬಂದರು. ಮೆಕ್ಯಾನಿಕಲ್ ಇಂಜನೀಯರಿಂಗ್‌ನಲ್ಲಿ ಡಿಪ್ಲೋಮಾ ಪಡೆದು, ಸರಕಾರಿ ಐ.ಟಿ.ಐ.ನಲ್ಲಿ ಪ್ರಾಂಶುಪಾಲರಾಗಿ ಉತ್ತಮವಾಗಿ ಕರ್ತವ್ಯನಿರ್ವಹಿಸಿ ನಿವೃತ್ತಿ ಹೊಂದಿ ಕಲಬುರ್ಗಿಯಲ್ಲೇ ನೆಲೆಯೂರಿದ್ದಾರೆ.

ಬಾಲ್ಯದಿಂದಲೂ ಸಂಗೀತ, ನಾಟಕಗಳ ಆಸಕ್ತಿ ಹೊಂದಿರುವ ಇವರು, ಹಳ್ಳಿಯಲ್ಲಿ ಜರುಗುವ ಕಾರ್ಯಕ್ರಮಗಳಿಗೆ ಹೋದಾಗ, ನಡೆಯುವ ಸಂದರ್ಭಗಳೇ ಇವರ ನಾಟಕಗಳಿಗೆ ಪ್ರೇರಣೆ. ಇಂತಹ ಸಂದರ್ಭವೊಂದರ ಪ್ರೇರಣೆಯಿಂದಾಗಿ ರೂಪಗೋಂಡ ಕಥಾಹಂದರವೇ 'ಓಕುಳಿ' ನಾಟಕದ ರಚನೆಗೆ ಅಂತಃಪ್ರೇರಣೆಯಾಯಿತು. ಇಂತಹ ಒಂದು ಸುಂದರ ಕಥಾವಸ್ತುವನ್ನು ಹೊಂದಿದ 'ಓಕಳಿ' ನಾಟಕದಲ್ಲಿ ಪ್ರಧಾನ ಸಂಭಾಷಣೆಯ ಗಂಡು ಶೈಲಿ ಪ್ರೇಕ್ಷಕರ ಮನಸೂರೆಗೊಂಡಿವೆ. ಸಮಾಜದ ಪರಿವರ್ತನೆಯಲ್ಲಿ ತಮ್ಮದೊಂದು ಪಾಲು ಇರಲಿ ಎಂದು ಭಾವಿಸಿದ ಇವರು, ಅದನ್ನು ಮತ್ತಷ್ಟು ಸತ್ವಯುತವಾಗಿ ರಚಿಸಿ, ನಾಟಕದ ರಂಗಪ್ರಯೋಗ ನಡೆಸಿ, ಯಶಸ್ವಿ ಪ್ರದರ್ಶನ ನೀಡಿದರು. ನಾಟಕದ ಭಾವ ಇವರ ಸಾಹಿತ್ಯದ ಅಂತಃಸತ್ವಕ್ಕೆ ಸಾಕ್ಷಿಯಾಗಿದೆ. ಮೊದಲು ರಂಗದ ಮೇಲೆ ಪ್ರಯೋಗಗೊಂಡು,

ಅನಂತರ ಆಕಾಶವಾಣಿ ಹಾಗೂ ದೂರದರ್ಶನದಲ್ಲೂ ಪ್ರಸಾರಗೊಂಡಿದೆ. ಅಲ್ಲದೆ ಬೆಂಗಳೂರು, ಬೀದರ ಹಾಗೂ ಬಳ್ಳಾರಿಯಲ್ಲಿ ಪ್ರದರ್ಶನಗೊಂಡಿದೆ. 2007ರಲ್ಲಿ ಬಳ್ಳಾರಿಯಲ್ಲಿ ಜರುಗಿದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಕಲಬುರ್ಗಿ ವಿಶ್ವವಿದ್ಯಾಲಯ ಯುವ ಜನೋತ್ಸವದಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿತು. ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯ ನಾಟಕ ಸ್ಪರ್ಧೆಯಲ್ಲಿ ಪ್ರದರ್ಶನಗೊಂಡ ಈ ನಾಟಕ ತಿರುಪತಿಯಲ್ಲಿ ತೃತೀಯ ಬಹುಮಾನ ಪಡೆದು ರಾಷ್ಟ್ರಮಟ್ಟದಲ್ಲಿ ಜಯಭೇರಿ ಹೊಡೆಯಿತು.

ಇವುಗಳಲ್ಲದೆ ಅನೇಕ ಕಥಾಸಂಕಲನಗಳನ್ನು ರಚಿಸಿದ್ದಾರೆ. ತೃಪ್ತಿ, ರೇವೆ, ಶೋಧ ಮುಂತಾದವುಗಳು ಇವರ ಸಾಹಿತ್ಯ ಮೆರುಗಿಗೆ ಗರಿತಂದಿವೆ. 2002ರಲ್ಲಿ ರಾಜ್ಯದ ಪ್ರಮುಖ ವಾರ ಪತ್ರಿಕೆಯೊಂದರಲ್ಲಿ ಪ್ರಕಟಗೊಂಡ ಇವರ ಸಣ್ಣಕಥೆ 'ಶ್ರಾದ್ಧ' ಅಪಾರ ಜನಮೆಚ್ಚುಗೆಗೆ ಪಾತ್ರವಾಯಿತು. ಇವರು ರಚಿಸಿದ ನಾಟಕಗಳು, ಲೇಖನಗಳು, ವೈಚಾರಿಕ ಲೇಖನಗಳು, ಆಕಾಶವಾಣಿಯ ಮೂಲಕ ಬಿತ್ತರಗೊಂಡು ಪ್ರಸಾರವಾಗಿವೆ. ಪತ್ತೇದಾರಿ ನಾಟಕಗಳ ಸಪ್ತಾಹದ ಅಂಗವಾಗಿ ಆಕಾಶವಾಣಿಗಾಗಿ ರಚಿತಗೊಂಡ 'ಭಾವಿಅಳಿಯ' ನಾಟಕ ರಾಜ್ಯದಾದ್ಯಂತ ಏಕಕಾಲಕ್ಕೆ ಪ್ರಸಾರಗೊಂಡು ಕೀರ್ತಿ ತಂದಿದೆ.

ಇವರೊಬ್ಬ ಮಹಾನ್ ರಂಗ ಕಲಾವಿದರು. ರಂಗಕ್ಕಾಗಿ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮೊನಚಾದ ಧ್ವನಿ, ಅಭಿನಯ ಭಾವದಿಂದ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ತಾಯಿ, ಶೆಟವಿ, ಮರ್ತ್ಯಲೋಕದ ಮಾನಿನಿ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ, ಓಕಳಿ, ಅರಗಿನ ಮನೆ, ಧ್ವನಿ ಬೆಳಕು, ಪ್ಲಾಟ ನಂ. 5, ನಮ್ಮ ನಮ್ಮ ಬಾಳೆ, ಶಿವು ಮುಂತಾದವುಗಳು ದೂರದರ್ಶನಕ್ಕಾಗಿ ಶೆಟವಿ, ಓಕಳಿ, ಮಾಯಾಲೋಕ, ಬಾಡಿಗೆ ಮನೆ ಮುಂತಾದವುಗಳಲ್ಲಿ ತಮ್ಮ ಅಭಿನಯ ಪ್ರತಿಭೆ ಮೆರೆದಿದ್ದಾರೆ. ಚಾವಡಿ ಎಂಬ ದೂರದರ್ಶನ ನಾಟಕಕ್ಕೆ ಕಥೆ ಚಿತ್ರಕಥೆ ಬರೆದು ಕೊಟ್ಟಿದ್ದಾರೆ. ಬಿಸಿಲ ಹನಿಗಳು ಹಾಗೂ ಹೂವೊಂದು ಮುಳ್ಳೆರಡು ಧಾರಾವಾಹಿಗಳಿಗೆ ಚಿತ್ರಸಾಹಿತ್ಯ ರಚಿಸಿ ಅಭಿನಯಿಸಿದ್ದಾರೆ. ಇವರೊಂದಿಗೆ ಇವರ ಮಡದಿ ವಿಜಯಾ ಕುಲಕರ್ಣಿ ಅವರೂ ರಂಗಭೂಮಿ ಕಲಾವಿದೆ.

ಸ್ವತಃ ಹಾರ್ಮೋನಿಯಂ ಕಲಾವಿದರಾದ ಇವರು, ಅನೇಕ ಸಂಗೀತ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು ಸಮಾನ ಮನಸ್ಕರ ಗೆಳೆಯರೊಂದಿಗೆ 'ಸಂಗೀತ ಬಳಗ' ರಚಿಸಿಕೊಂಡು ಅನೇಕ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ನಿರ್ಮಾಣ ಮಾಡಿದ್ದಾರೆ. ತಿಂಗಳಿಗೊಂದರಂತೆ ಬಳಗದ ಜನಗಳ ಮನೆಯಲ್ಲಿ ಕಛೇರಿ ಏರ್ಪಡಿಸಿ, ಖ್ಯಾತ ಸಂಗೀತಗಾರರನ್ನೂ ಕರೆಸಿ, ಸಂಗೀತ ಸ್ಪರ್ಧೆಯ ರಸವನ್ನು ಉಣಬಡಿಸುತ್ತಿದ್ದಾರೆ. ವರ್ಷಕ್ಕೊಂದು ಸಲ ಖ್ಯಾತ ಸಂಗೀತಗಾರರಿಂದ ದೊಡ್ಡ ಪ್ರಮಾಣದ ಕಛೇರಿ ಏರ್ಪಡಿಸಿ, ಸ್ಥಳೀಯ ಕಲಾವಿದರಿಗೆ ಗೌರವಿಸುತ್ತಾರೆ. ಇವರ ಸಂಗೀತ ಸೇವಾ ಕೈಂಕರ್ಯ ನಿಜಕ್ಕೂ ಅದ್ಭುತವಾಗಿದೆ. ಸಂಗೀತ ಬಳಗದ ಅಧ್ಯಕ್ಷರಾಗಿ ಇವರ ಸೇವೆ ನಿರಂತರವಾಗಿದೆ.

ಇದಲ್ಲದೆ ದೈನಿಕ ಪತ್ರಿಕೆಗಳಿಗೆ ಸಂಗೀತ ವಿಷಯ ಹಾಗೂ ಸ್ವಾತಂತ್ರ್ಯ ಹೋರಾಟಗಾರರ, ಕಲಾವಿದರ ಕುರಿತು ಲೇಖನಗಳನ್ನು ಬರೆಯುವರು. ರಂಗಭಾರತಿ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಹಾಗೂ ಇನ್ನಿತರ ಸಂಗ ಸಂಸ್ಥೆಗಳ ಸದಸ್ಯರಾಗಿ ಇವರ ದುಡಿಯುತ್ತಿದ್ದಾರೆ. ಶ್ರವಣ ದೋಷವುಳ್ಳ ಜನರಿಗಾಗಿ ಶ್ರವಣ ಯಂತ್ರಗಳನ್ನು ಒದಗಿಸಿ, ಸಮಾಜ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. (ಪಿಕೆ)

ಸುರಪುರ ಅರಸರ ನಾಣ್ಯಗಳು: ಕಲಬುರ್ಗಿ ಜಿಲ್ಲೆಯಿಂದ ದಕ್ಷಿಣಕ್ಕೆ 116 ಕಿ.ಮೀ. ದೂರದಲ್ಲಿರುವ ಸುರಪುರ ಕೃಷ್ಣಾ ಹಾಗೂ ಭೀಮಾ ನದಿಯ ಮಧ್ಯದಲ್ಲಿದೆ. ಇಲ್ಲಿ ಕ್ರಿ.ಶ. 1636 ರಿಂದ 1858ರ ವರೆಗೆ ಸುಮಾರು 12 ಜನ ನಾಯಕ ಅರಸರು ಆಳ್ವಿಕೆಯನ್ನು ಮಾಡಿದ್ದಾರೆ. ಇವರು ಗೋಸಲ ವಂಶದವರು. ಈ ಮನೆತನದ ಸ್ಥಾಪಕ ಗಡ್ಡಿಪಿಡ್ಡನಾಯಕ. ಈತ ಆನೆಯ ಸೊಕ್ಕನ್ನು ಅಡಗಿಸಿ 'ಮದಗಜ ಮಲ್ಲ' ಎಂಬ ಬಿರುದನ್ನು ಧರಿಸಿದ್ದ.

ಕಪಟರಾಳ ಕೃಷ್ಣರಾವ್‌ರವರು ಸುರಪುರ ಸಂಸ್ಥಾನ ಇತಿಹಾಸ ಎಂಬ ಕೃತಿಯಲ್ಲಿ 'ಸುರಪುರಕ್ಕೆ ಮೆಡೋಸ್ ಟೇಲರ್‌ನೆಂಬ ರಾಜಕೀಯ ಪ್ರತಿನಿಧಿಯನ್ನು ಬ್ರಿಟಿಷರು ನೇಮಕ ಮಾಡಿದಾಗ ಗೌರ್ನರ್ ಜನರಲ್ ರಾಜಕೀಯ ಪ್ರತಿನಿಧಿಯಾದ ಟೇಲರ್‌ನಿಗೆ ಸುರಪುರದ ನಾಲ್ವಡಿ ವೆಂಕಟಪ್ಪನಾಯಕ 1815 ರೂಪಾಯಿಯ ಸುರಪುರದ ನಾಣ್ಯ ಅಥವಾ 1500 ರೂಪಾಯಿಗಳ ಕಂಪನಿ ನಾಣ್ಯಗಳನ್ನು ಕೊಡಬೇಕಾಗುವುದು ಎಂಬುದನ್ನು ತಿಳಿಸಿದ್ದಾರೆ. ಇದರಿಂದ ಸುರಪುರದ ನಾಣ್ಯಗಳು ಚಲಾವಣೆಯಲ್ಲಿದ್ದವು ಎಂಬುದನ್ನು ತಿಳಿಯಬಹುದಾಗಿದೆ. ಅಲ್ಲದೆ ಇವರು ರಾಜಕೀಯವಾಗಿ ಎಷ್ಟು ಪ್ರಾಬಲ್ಯವನ್ನು ಪಡೆದಿದ್ದರೋ, ಆರ್ಥಿಕವಾಗಿಯೂ ಸುಸ್ಥಿತಿಯಲ್ಲಿದ್ದರು.

ಅನಂತರ ಸುರಪುರದ ನಾಣ್ಯಗಳ ಬಳಕೆ ನಿಂತಾಗ ಇವುಗಳನ್ನು ತೂಕ ಮಾಡಲು ಬಳಸಿದರು. ಕೆಲವರು ತಾಮ್ರದ ವ್ಯಾಪಾರಿಗಳಿಗೆ ಮಾರಾಟ ಮಾಡಿದರು. ಆಟಿಕೆಯ ವಸ್ತುಗಳಾಗಿ ಬಳಕೆ ಮಾಡಿದ್ದು. ಹೀಗಾಗಿ ಇಂದು ಇವುಗಳ ಸಂಖ್ಯೆ ಕಡಿಮೆಯಾಗಿದೆ.

ರಂಗಂಪೇಟೆ, ಸುರಪುರ, ವನದುರ್ಗ, ಶಹಪುರ ಮುಂತಾದ ಪ್ರದೇಶಗಳೆಡೆ ಕ್ಷೇತ್ರಕಾರ್ಯ ಕೈಗೊಂಡಾಗ ಸಿಕ್ಕಿರುವ ನಾಣ್ಯಗಳು ಸುರಪುರ ಸಂಸ್ಥಾನದ ರಾಜ್ಯವೈಭವವನ್ನು ನೀಡುತ್ತದೆ. ಈ ನಾಣ್ಯಗಳನ್ನು ನಾಲ್ಕು ಬಗೆಗಳಾಗಿ ವರ್ಗೀಕರಿಸಬಹುದಾಗಿದೆ. ಮೊದಲನೆಯ ಬಗೆಯ ನಾಣ್ಯಗಳ ಗುಣಲಕ್ಷಣಗಳು ಇಂತಿವೆ.

1. ನಾಣ್ಯಗಳ ಮೇಲ್ಮುಖದಲ್ಲಿ ಶಂಖ, ನಾಮ ಮತ್ತು ಚಕ್ರಗಳಿವೆ. ಇವು ವೈಷ್ಣವ ಸಂಕೇತಗಳಾಗಿವೆ. ಸುರಪುರದ ವೇಣುಗೋಪಾಲಸ್ವಾಮಿಯ ದೇವಾಲಯದ ಗರ್ಭಗುಡಿಯ ದ್ವಾರದ ಮೇಲೆ ಇರುವ ಮುದ್ರೆ, ಶಂಖ, ನಾಮ ಮತ್ತು ಚಕ್ರಗಳು ಈ ನಾಣ್ಯಗಳಿಗೆ ತಾಳೆಯಾಗುತ್ತದೆ. ಈ ನಾಣ್ಯಗಳ ಮುದ್ರಣಕ್ಕೆ

ಬಳಸಿರಬಹುದಾದ ಮುದ್ರೆಯೂ ಲಭ್ಯವಾಗಿದೆ.

2. ಈ ನಾಣ್ಯದ ಹಿಂಭಾಗದಲ್ಲಿ ಚುಕ್ಕೆಗಳಿವೆ. ಅವುಗಳು 4,6,8,10,12,14 ಹೀಗೆ ಬೇರೆ ಬೇರೆ ನಾಣ್ಯಗಳಲ್ಲಿ ಅವುಗಳ ಗಾತ್ರಕ್ಕನುಗುಣವಾಗಿ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿವೆ. ಹಾಗೂ ಅರ್ಧವೃತ್ತಗಳೂ ಇವೆ. ಚುಕ್ಕೆಗಳು ಏನನ್ನು ಸಂಕೇತಿಸುತ್ತವೆ ಎಂಬುದರ ಕುರಿತು ಸಂಶೋಧನೆಯಾಗಬೇಕಾಗಿದೆ.

ಎರಡನೆಯ ಬಗೆಯ ನಾಣ್ಯಗಳ ಗುಣಲಕ್ಷಣಗಳು ಇಂತಿವೆ.

1. ನಾಣ್ಯಗಳ ಮುಂಭಾಗದಲ್ಲಿ ಬಹಿರಿ ಎಂಬ ಬರಹ ಇದೆ. ಇದು ನಾಗರಿಲಿಪಿಯಲ್ಲಿದೆ. ಬಹಿರಿ ಎಂಬುದು ಸುರಪುರದ ಅರಸರಿಗಿರುವ ಬಿರುದಾಗಿದೆ.

ಸುರಪುರದ ಸಂಸ್ಥಾನದ ಸ್ಥಾಪಕ ಗಡ್ಡಿಪಿಡ್ಡನಾಯಕನು (ಕ್ರಿ.ಶ.1636–1666) ಬಿಜಾಪುರದ ಬಾದಶಹನ ಮದ್ದಾನೆಯನ್ನು ಪಳಗಿಸಿದ್ದಕ್ಕಾಗಿ ಈತನ ಶೌರ್ಯವನ್ನು ಮೆಚ್ಚಿ 'ಗಜ ಗಂಡ ಬಹಿರಿ ಪಿಡ್ಡನಾಯಕ' ಎಂಬ ಬಿರುದನ್ನು ಆನೆ ಸಹಿತವಾಗಿ ನೀಡಿದನು. ನಂತರ ಈ ಬಿರುದು ಹಸರಂಗಿ ಪಾಮ ನಾಯಕ (ಕ್ರಿ.ಶ. 1655–1687)ನಿಗೂ ಇತ್ತು. ಅಲ್ಲದೆ ಪೀತಾಂಬರ ಬಹಿರಿ ಪಿಡ್ಡನಾಯಕನ (ಕ್ರಿ.ಶ. 1687–1726) ಹೆಸರಿನೊಂದಿಗೆ ಬಹಿರಿ ಎಂಬುದು ಸೇರಿಕೊಂಡಿವೆ.

ನಾಣ್ಯಗಳ ಹಿಂಭಾಗದಲ್ಲಿ ನಾಮ, ಶಂಖ, ಮತ್ತು ಚಕ್ರಗಳಿವೆ. ಇವುಗಳು ವೈಷ್ಣವ ಸಂಕೇತಗಳಾಗಿವೆ. ಅಲ್ಲದೆ ನಾಣ್ಯಗಳ ಮಧ್ಯ ಭಾಗದಲ್ಲಿ ಸಣ್ಣ ಗುಂಡಗಳಿವೆ.

ಮೂರನೆ ಬಗೆಯ ನಾಣ್ಯಗಳ ಗುಣಲಕ್ಷಣಗಳು ಇಂತಿವೆ.

1. ನಾಣ್ಯಗಳ ಮುಂಭಾಗದಲ್ಲಿ ಎರಡು ಸಮಾನಂತರ ವೃತ್ತಗಳನ್ನು ಮಾಡಲಾಗಿದ್ದು, ಮೇಲ್ಭಾಗದಲ್ಲಿ ಬಹಿರಿ ಎಂಬ ನಾಗರಿ ಬರಹವಿದೆ. ಅದರ ಕೆಳಗೆ ಒಂದು ನಾಣ್ಯದಲ್ಲಿ 1261, ಇನ್ನೊಂದು ನಾಣ್ಯದಲ್ಲಿ 1262, ಇನ್ನೊಂದು ನಾಣ್ಯದಲ್ಲಿ 1263 ಎಂದು ಸಂಖ್ಯೆಯಲ್ಲಿ ಬರೆಯಲಾಗಿದೆ.

ಈ ಸಂಖ್ಯೆಯು ಫಸಲಿ ಶಕದಲ್ಲಿದೆ ಅಂದರೆ 1261 ಕ್ರಿ.ಶ. 1852ಕ್ಕೆ 1262–1853ಕ್ಕೆ 1263– ಕ್ರಿ.ಶ. 1854ಕ್ಕೆ ಸರಿಹೊಂದುತ್ತದೆ. ಇದು ರಾಜಾ ನಾಲ್ವಡಿ ವೆಂಕಟಪ್ಪನಾಯಕ (ಕ್ರಿ.ಶ. 1842–1858)ನ ಕಾಲಕ್ಕೆ ಸರಿಹೊಂದುತ್ತದೆ. ಹೀಗಾಗಿ ನಾಲ್ವಡಿ ವೆಂಕಟಪ್ಪ ನಾಯಕನ ಅಧಿಕಾರಾವಧಿಯಲ್ಲಿ ಈ ನಾಣ್ಯಗಳನ್ನು ಟಂಕಿಸಿರಬಹುದಾಗಿದೆ.

ನಾಲ್ಕನೇ ಬಗೆಯ ನಾಣ್ಯಗಳಲ್ಲಿ ಹನುಮನ ಧ್ವಜ ಇದೆ. ಈ ಹನುಮನ ಧ್ವಜವು ಸುರಪುರ ಅರಸರ ಧ್ವಜವಾಗಿತ್ತು. ಅವರ ಬಿರುದಾವಳಿಗಳಲ್ಲಿಯೂ ಇದು ಈ ರೀತಿ ಉಲ್ಲೇಖಿತವಾಗಿದೆ. 'ಮಹಾ ರಾಜಾಧಿರಾಜ, ರಾಜ ಕಂಠೀರವ, ರಾಜಾದಿ ಶಿರೋ ಮುಕುಟ, ಗೋಸಲ ಪಾದೋದಯ ಶರತೂರ್ಣೋಮ ಜನಿತ, ಶತಾಂಕೋಪ ತೇಜಃಪುಂಜ ವಿರಾಜಿತ ಶ್ರೀಮಂತ ವೆಂಕಟಪ್ಪ ನಾಯಕ ಬಹಿರಿ ಬಲವಂತ, ಬಹಾದುರ ಬಿರುದಾಂಕಿತ, ದಿಲ್ಲಿಕಾಧೀಶ, ದುಮದುಮದ್ಧ್ವನಿ ಕೋಲಾಹಲ, ಹನುಮದ್ಧ್ವಜ, ಸುವರ್ಣ ಪಂಚಕಳಶ, ಏಕದಂತ, ರಾಮಬಾಣ, ಸವರ್ಣಪಂಜ, ನವಾಬ ಜಂಗ, ಮುತಹರುದ್ದೌಲಾ, ಬಬರುಲ್ಮ ಲುಕ ಸರ ದೇಸಾಯಿ, ಮಾಮಲೆ ನಸರತಬಾದ, ಮಾಮಲೆ ಹಸನಾಬಾದ, ದಾರುಲ್ಮುಜಫರ, ಬಿಜಾಪುರ, ಕಿಲ್ಲೆ ವಾಗಿನಗೇರಿ, ಸಂಸ್ಥಾನ ಸುರಪುರ ಹೀಗಾಗಿ ಈ ನಾಣ್ಯವು ಸುರಪುರ ನಾಯಕ ಅರಸರ ಕಾಲದ್ದೆಂದು ಹೇಳಬಹುದಾಗಿದೆ.

ನಾಣ್ಯದ ತೂಕ: ಈ ನಾಣ್ಯಗಳು ವಿವಿಧ ಗಾತ್ರಗಳನ್ನು ಹೊಂದಿರುವುದರಿಂದ ಬೇರೆ ಬೇರೆ ತೂಕಗಳನ್ನು ಹೊಂದಿವೆ. 6.2,6,3,6,4,6,5,6,6,6.7,9,3,9,5,9. 7,98,9. 9,10,11, ಗ್ರಾಂ ತೂಕಗಳ ನಾಣ್ಯಗಳು ದೊರಕಿವೆ.

ಲೋಹದ ಬಗೆ: ಇಲ್ಲಿಯವರೆಗೆ ಲಭ್ಯವಿದ್ದ ನಾಣ್ಯಗಳು ತಾಮ್ರದ ನಾಣ್ಯಗಳಾಗಿವೆ. ಬೆಳ್ಳಿ ಬಂಗಾರದ ನಾಣ್ಯಗಳು ಇದ್ದವೆಂದು ಹಿರಿಯರು ಹೇಳುತ್ತಾರೆ. ಆದರೆ ಇಲ್ಲಿಯವರೆಗೆ ಈ ನಾಣ್ಯಗಳು ಸಿಕ್ಕಿರುವುದಿಲ್ಲ.

ಟಂಕಸಾಲೆ: ಸುರಪುರ ನಾಯಕ ಅರಸರು ನಾಣ್ಯಗಳನ್ನು ಸ್ವತಃ ಸುರಪುರದ ಅರಸರೇ ಟಂಕಿಸುತ್ತಿದ್ದರೆಂಬುದಕ್ಕೆ ದೊರೆತ ಇವರ ನಾಣ್ಯಗಳೇ ಸಾಕ್ಷಿ. ಆದರೆ ಈ ನಾಣ್ಯಗಳನ್ನು ಟಂಕಿಸುತ್ತಿದ್ದ ಟಂಕಸಾಲೆಯು ಇಲ್ಲಿಯವರೆಗೆ ಸಿಕ್ಕಿಲ್ಲ. ಬೇರೆ ಬೇರೆ ರೀತಿಯ ಅಭಿಪ್ರಾಯಗಳಿವೆ. ಟಂಕಸಾಲೆಯ ಭದ್ರತಾಕೋಣೆ ಅದ್ಭುತವಾದದ್ದು ಅಧಿಕಾರಿ ಕಛೇರಿ. ನಾಣ್ಯಗಳ ಸಂಗ್ರಹ ಕೊಠಡಿ, ನಾಣ್ಯಗಳ ತಯಾರಿಕಾ ಕೋಣೆಗಳ ವಿನ್ಯಾಸಗಳು ಅಂದಿನ ಎಂಜಿನಿಯರ್‌ಗಳ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಈ ಕಟ್ಟಡದ ವಿನ್ಯಾಸವನ್ನು ನೋಡಿದರೆ ಇದು ಟಂಕಸಾಲೆ ಎಂಬ ಯಾವುದೇ ಕುರುಹಿಲ್ಲ.

ಸುರಪುರದ ಟೈಲರ್ ಮಂಜಿಲ್‌ನ ಮುಂದಿನ ದಿಬ್ಬದ ಹತ್ತಿರ ಟಂಕಸಾಲೆ ಇದ್ದಿರಬಹುದಾಗಿದೆ. ಇದರ ಕಟ್ಟಡದ ತಳಪಾಯವು ನೋಡಲು ಸಿಗುತ್ತದೆ. ಆದರೆ ಇಂಥ ಬಯಲಿನ ಪ್ರದೇಶದಲ್ಲಿ ಟಂಕಸಾಲೆ ಇರುವ ಸಾಧ್ಯತೆ ಕಡಿಮೆ. ಇದು ಕಕ್ಕೇರಿ, ವಾಗಿನಗೇರಿ, ಶಹಪುರ ಈ ಸ್ಥಳದಲ್ಲಿ ಇದ್ದಿರಬಹುದೆ? ಇದರ ಕುರಿತಾಗಿ ಸಂಶೋಧನೆ ಆಗಬೇಕಾಗಿದೆ. (ಎವೈ)

ಸುರಪುರ ಚಿತ್ರಕಲೆ: ಪ್ರಪಂಚದ ಕಲಾಶೈಲಿಗಳಲ್ಲಿ ಭಾರತೀಯ ಚಿಕಣಿ ಚಿತ್ರಕಲೆಗೆ ಗೌರವದ ಸ್ಥಾನವಿದೆ. ಚಿಕಣಿ ಚಿತ್ರಕಲೆಯು ನಮ್ಮ ರಾಷ್ಟ್ರದ ಪ್ರಾತಿನಿಧಿಕ ಕಲಾಶೈಲಿಯೂ ಹೌದು. ಅದರಂತೆ ದಕ್ಷಿಣ ಭಾರತ, ಚಿಕಣಿ ಚಿತ್ರಕಲೆಗೆ ಮಹತ್ವದ ಕೊಡುಗೆ ನೀಡಿದೆ. ಅಹ್ಮದನಗರ, ಬಿಜಾಪುರ, ಗೋಲಕುಂಡ, ಹೈದ್ರಾಬಾದ, ಕಲಬುರ್ಗಿ ಜಿಲ್ಲೆಯ ಸುರಪುರ, ಗದ್ವಾಲ್ ಮುಂತಾದ ಕಲಾ ಶೈಲಿಗಳನ್ನೆಲ್ಲ ದಖನಿ ಶೈಲಿ ಎಂದು ಒಂದೇ ಚೌಕಟ್ಟಿನಲ್ಲಿ ಸೇರಿಸಿಬಿಡುತ್ತಾರೆ. ಆದರೆ ಈ ಕಲಾಶೈಲಿಗಳು ತಮ್ಮ ಪ್ರಾದೇಶಿಕ ಲಕ್ಷಣಗಳೊಂದಿಗೆ ಪ್ರತ್ಯೇಕ ಕಲಾಶೈಲಿಗಳಾಗಿ ಭಾರತೀಯ ಕಲಾ ಪ್ರಪಂಚದಲ್ಲಿ ಗುರುತಿಸಿಕೊಂಡು ವಿಶಿಷ್ಟ ಸ್ಥಾನವನ್ನು ಪಡೆದಿವೆ ಎಂದರೆ ತಪ್ಪಾಗದು. ಅದರಲ್ಲೂ ಕರ್ನಾಟಕದಲ್ಲಿರುವ ವಿವಿಧ



ಸುರಪುರ ಶೈಲಿಯ ಚಿತ್ರ

ಶೈಲಿಗಳಿಗೆ ಹೆಚ್ಚಿನ ಪ್ರಚಾರ ಸಿಕ್ಕಿಲ್ಲ. ಕರ್ನಾಟಕದಲ್ಲಿ ಮೂಲತಃ ವಿಜಯನಗರ ಹಾಗೂ ಅದರಲ್ಲೇ ಒಂದು ಕವಲು ಎಂಬಂತೆ ವಿಶಿಷ್ಟವಾದ ಎರಡು ಶೈಲಿಗಳಿವೆ. ಮೂಲತಃ ಇವು ಒಂದೇ ಒರತೆಯಿಂದ ಬಂದವುಗಳಾಗಿರಲೂಬಹುದು.

ಇದರಲ್ಲಿ ಮೈಸೂರು ಹಾಗೂ ಸುರಪುರ ಚಿತ್ರಕಲೆಯನ್ನು ಪ್ರಮುಖವಾಗಿ ಹೆಸರಿಸಬಹುದು. ಮೈಸೂರು ಪತನಾನಂತರದಲ್ಲಿ ಕಳೆಗುಂದುತ್ತ ಬಂದಿರುವುದನ್ನು ಕಾಣಬಹುದು. ಸುಮಾರು ಆರೇಳು ದಶಕಗಳವರೆಗೆ ಅಜ್ಞಾತ ವಾಸದಲ್ಲಿದ್ದ ಮತ್ತು ವಿಶಿಷ್ಟ ಕಲಾ ಶೈಲಿಯಂತಿದ್ದ ಸುರಪುರ ಚಿತ್ರಕಲೆಯು 1960ರ ದಶಕದ ನಂತರ ಹೆಚ್ಚು ಬೆಳಕಿಗೆ ಬಂದಿತೆಂದು ಹೇಳಬಹುದು.

ನಾಡಿನ ಅನೇಕ ವಿದ್ವಾಂಸರು, ಸುರಪುರ ಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡಿ, ಇದೊಂದು ಪ್ರತ್ಯೇಕ ಕಲಾಶೈಲಿಯೆಂದು ಗುರುತಿಸಿದ್ದಾರೆ. ಹಾಗಾಗಿ ಇತರ ಕಲಾಶೈಲಿಗಳಂತೆ ಸುರಪುರ ಚಿತ್ರಕಲೆಗೆ ಹೆಚ್ಚಿನ ಪ್ರಚಾರ ದೊರೆಯಲಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಈ ಚಿತ್ರಕಲೆಯ ಕುರಿತು ಸಂಶೋಧನೆಗಳು ನಡೆಯುತ್ತಿರುವುದು ಶುಭ ಸೂಚನೆಯಾಗಿದೆ. ಅನೇಕ ವಿದ್ವಾಂಸರೂ ಸಹ ಈ ಅಭಿಪ್ರಾಯವನ್ನು ಒಪ್ಪುತ್ತಾರೆ. ಸುರಪುರ ಚಿತ್ರಗಳನ್ನು ಇತರ ಸಾಂಪ್ರದಾಯಿಕ ಚಿತ್ರಗಳ ಜೊತೆಗೆ ವಿಮರ್ಶಾತ್ಮಕವಾಗಿ ಅವಲೋಕಿಸಲು, ಇವು ತನ್ನದೇ ಆದ ವಿಶಿಷ್ಟ ರಚನಾ ವಿಧಾನ ಹಾಗೂ ತಂತ್ರ ವಿನ್ಯಾಸಗಳನ್ನು ಮೈಗೂಡಿಸಿಕೊಂಡಿವೆ ಎಂಬುದನ್ನು ತಳ್ಳಿಹಾಕುವಂತಿಲ್ಲ.

ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ್ದೇ ಒಂದು ವಿಭಿನ್ನ ಶೈಲಿಯಾಗಿ ಕಂಡುಬರುತ್ತದೆ. ಭಾರತದಾದ್ಯಂತ ಚಿತ್ರಗಳ ರಚನಾತಂತ್ರ ಮತ್ತು ಆಯ್ದುಕೊಂಡ ವಿಷಯಗಳು ಒಂದೇ ಆಗಿದ್ದರೂ, ರೇಖಾವಿನ್ಯಾಸ ಮತ್ತು ವರ್ಣ ಸಂಯೋಜನೆಗಳಿಂದ ಇವು ಕರ್ನಾಟಕ ಶೈಲಿಯ ಚಿತ್ರಗಳು ಎಂಬುದಾಗಿ ಪ್ರತ್ಯೇಕಗೊಳಿಸಬಹುದು. ವಿಜಯನಗರ ಶೈಲಿಯ ಚಿತ್ರಗಳು, ಬಿಜಾಪುರ ಆದಿಲ್‌ಶಾಹಿ ಅರಸರ ಕಾಲದ ಚಿತ್ರಗಳು, ಮೈಸೂರು ಸಾಂಪ್ರದಾಯಿಕ ಚಿತ್ರಗಳು ಮತ್ತು ಸುರಪುರ ಅರಸರ ಆಶ್ರಯದಲ್ಲಿ ಮೂಡಿ ಬಂದ ಚಿತ್ರಗಳೆಲ್ಲವನ್ನೂ ಒಟ್ಟುಗೂಡಿಸಿದಾಗ, ಸುರಪುರ ಚಿತ್ರಗಳನ್ನು ಪ್ರತ್ಯೇಕಗೊಳಿಸಬಹುದು.

ಸುರಪುರ ಸಂಸ್ಥಾನದ ಆಸ್ಥಾನ ಕಲಾವಿದರಾದ ಗರುಡಾದ್ರಿ ಮನೆತನದವರು ಚಿತ್ರಿಸಿದ ಅನೇಕ ಚಿತ್ರಗಳು ಇಂದು ಕೇಂದ್ರ ಸ್ಥಾನವಾದ ಸುರಪುರವಲ್ಲದೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪ್ರಮುಖ ಸರ್ಕಾರಿ ಹಾಗೂ ಖಾಸಗಿ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡಿವೆ. ಹೀಗೆ ಆಸ್ಥಾನ ಕಲಾವಿದರಿಂದ ಚಿತ್ರಿತಗೊಂಡ ಚಿತ್ರಗಳಲ್ಲಿ ಭಿತ್ತಿಚಿತ್ರಗಳು, ಹಸ್ತಪ್ರತಿ ಚಿತ್ರಗಳು ಮತ್ತು ಸಂಕೀರ್ಣ ಮಾಧ್ಯಮದ ಚಿತ್ರಗಳೆಂದು ವರ್ಗೀಕರಿಸಬಹುದು.

ಸುರಪುರ ಸಂಸ್ಥಾನದ ಆಳ್ವಿಕೆಗೊಳಪಟ್ಟಿರುವಂತಹ ಅನೇಕ ಕಡೆಗಳಲ್ಲಿ ಇಂಥ ಭಿತ್ತಿಚಿತ್ರಗಳು ರಚನೆಗೊಂಡಿರುವದನ್ನು ಕಾಣಬಹುದು. ಅವುಗಳಲ್ಲಿ ಸುರಪುರದ ಹೊಸ ಅರಮನೆಯಲ್ಲಿ, ಸುರಪುರ–ರಂಗಂಪೇಟೆಯ ರುದ್ರಸ್ವಾಮಿ ಮಠ ಹಾಗೂ ಅಣ್ಣಯ್ಯನ ಮಠಗಳಲ್ಲಿ, ಸುರಪುರ ಅರಸರ ಆರಾಧ್ಯದೈವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯವಲ್ಲದೆ, ಹತ್ತಿರದ ಆಂಜನೇಯ ದೇವಾಲಯಗಳಲ್ಲಿಯೂ ಇಂಥ ಗರುಡಾದ್ರಿ ಶೈಲಿಯ ಭಿತ್ತಿಚಿತ್ರಗಳು ರಚನೆಗೊಂಡಿರುವದನ್ನು ಇಂದಿಗೂ ಕಾಣಬಹುದಾಗಿದೆ. ಇದಲ್ಲದೆ ಸುರಪುರ ಸಂಸ್ಥಾನದ ಪ್ರಮುಖರಾದ ಮಂತ್ರಿಗಳು, ಜಹಾಗೀರದಾರರು, ಮುಜುಮದಾರ ಅವರಂತಹ ಆಸ್ಥಾನ ಪ್ರಮುಖರ ಮನೆಗಳಲ್ಲಿ ಹಾಗೂ ಸಂಸ್ಥಾನದ ಕಾಲದಲ್ಲಿಯ ಪ್ರಮುಖ ಶ್ರೀಮಂತರ ಮನೆಗಳಲ್ಲಿಯೂ ಭಿತ್ತಿಚಿತ್ರಗಳು ರಚನೆಗೊಂಡಿದ್ದವೆಂಬುದಾಗಿ ತಿಳಿದುಬರುತ್ತದೆ. ಆದರೆ ಇಂದು ಸುರಪುರದ ಹೊಸ ಅರಮನೆ, ರಂಗಂಪೇಟೆಯ ಅಣ್ಣಯ್ಯನಮಠ ಹಾಗೂ ಶ್ರೀ ವೇಣುಗೋಪಾಲಸ್ವಾಮಿ ದೇವಾ



ಸುರಪುರ ಶೈಲಿಯ ಚಿತ್ರ

ಲಯದ ಕೆಲವು ಕಡೆಗಳಲ್ಲಿ ಮಾತ್ರ ಗರುಡಾದ್ರಿ ಶೈಲಿಯ ಚಿತ್ರಗಳು ಉಳಿದುಕೊಂಡಿದ್ದು, ಉಳಿದಂತೆ ಹೆಚ್ಚಿನ ಭಿತ್ತಿಚಿತ್ರಗಳು ಹಾಳಾಗಿವೆ ಎಂದೇ ಹೇಳಬಹುದು.

ಇಂದು ಸುರಪುರ ಮತ್ತು ಅದರ ಸುತ್ತ ಮುತ್ತಲಿನಲ್ಲಿರುವ ಮಠಮಾನ್ಯಗಳಲ್ಲಿ ಆಸ್ಥಾನ ಪ್ರಮುಖರ ಮನೆಗಳಲ್ಲಿ, ಅಲ್ಲದೆ ಸಂಸ್ಥಾನ ಕಾಲದಲ್ಲಿಯ ಶ್ರೀಮಂತರ ಮನೆಗಳಲ್ಲಿ ಅನೇಕ ಹಸ್ತ ಪ್ರತಿಗಳು ಸಂಗ್ರಹಗೊಂಡಿವೆ. ಈ ಹಸ್ತಪ್ರತಿಗಳಲ್ಲಿ ರೇಖಾಚಿತ್ರ ಹಾಗೂ ವರ್ಣಚಿತ್ರಗಳಿಂದ ಚಿತ್ರಿಸಿದ ಹಸ್ತಪ್ರತಿಗಳೂ ಸಹ ಒಳಗೊಂಡಿವೆ. ಇತ್ತೀಚೆಗೆ ಕೈಕೊಂಡ ಕ್ಷೇತ್ರ ಕಾರ್ಯದಲ್ಲಿ ದೊರೆತಿರುವ ಕೆಲವೊಂದು ಹಸ್ತಪ್ರತಿ ಚಿತ್ರಗಳಲ್ಲಿ ಜನ್ಮಕುಂಡಲಿ ಇತ್ಯಾದಿ ವಿವರಗಳ ಕುರಿತಾದ ರೇಖಾಚಿತ್ರಗಳಿಂದ ಕೂಡಿದ ಹಸ್ತಪ್ರತಿಗಳಲ್ಲದೆ, ಚೆನ್ನಬಸವ ಪುರಾಣವೆನ್ನುವ ಗ್ರಂಥದ ಕಥಾ ವಸ್ತುವಿಗೆ ಸಂಬಂಧಿಸಿದಂತೆ ಸುರಪುರ ಆಸ್ಥಾನ ಕಲಾವಿದರಾದ ಗರುಡಾದ್ರಿಯವರು ಚಿತ್ರಿಸಿದ ವರ್ಣಚಿತ್ರಗಳೂ ಸಹ ಕಂಡು ಬಂದಿವೆ.

ಇನ್ನು ಸಂಕೀರ್ಣ ಮಾಧ್ಯಮದ ಚಿತ್ರಗಳಲ್ಲಿ ವ್ಯಕ್ತಿಚಿತ್ರಗಳು, ಸಂಯೋಜನ ಚಿತ್ರಗಳು ಮತ್ತು ಕಾಷ್ಠ ಹಾಗೂ ಗಾರೆ ಶಿಲ್ಪಗಳ ಮೇಲೆ ಚಿತ್ರಿಸಲಾದ ಚಿತ್ರಗಳೆಂದು ಹೆಸರಿಸಬಹುದು. ವ್ಯಕ್ತಿಚಿತ್ರ ಗಳಲ್ಲಿ ಅರಸರ, ಮಂತ್ರಿವರ್ಗದವರ, ಆಸ್ಥಾನ ಪ್ರಮುಖರ, ಮಠಾಧೀಶರ ಚಿತ್ರಗಳಲ್ಲದೇ ಸಂಸ್ಥಾನ ಕಾಲದಲ್ಲಿಯ ಪ್ರಮುಖ ಶ್ರೀಮಂತರ ಅನೇಕ ಚಿತ್ರಗಳು ಚಿತ್ರಿತಗೊಂಡಿವೆ.


ಸಂಯೋಜನ ಚಿತ್ರಗಳಲ್ಲಿ ಹೆಚ್ಚಾಗಿ ಕಂಡು ಬರುವ ಚಿತ್ರ ಗಳೆಂದರೆ, ಪೌರಾಣಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಚಿತ್ರಿತ ಗೊಂಡ ಚಿತ್ರಗಳು, ಸುರಪುರ ಸಂಸ್ಥಾನಿಕರು ಮತ್ತು ಸುರಪುರ ನಾಗರಿಕನೇಕರು ಶ್ರೀ ವೆಂಕಟರಮಣನ ಭಕ್ತರಾಗಿರುವುದರಿಂದ ಪೂಜೆಗಾಗಿ ಶ್ರೀ ವೆಂಕಟರಮಣನ ಸಾಕಷ್ಟು ಚಿತ್ರಗಳು ಇಲ್ಲಿ ರಚನೆಗೊಂಡಿರುವದನ್ನು ಕಾಣಬಹುದು. ಅವುಗಳಲ್ಲಿ ಶಿವ-ಪಾರ್ವತಿ, ಲಕ್ಷ್ಮೀ,ಸರಸ್ವತಿ, ಹನುಮಂತ, ಗರುಡ, ದತ್ತಾತ್ರೇಯನ ಚಿತ್ರಗಳಲ್ಲದೆ, ಶ್ರೀರಾಮನ ಚಿತ್ರಗಳಂತಹ ದೇವಾನುದೇವತೆಗಳ ಚಿತ್ರಗಳೂ ಸಹ ಆಸ್ಥಾನ ಕಲಾವಿದರಿಂದ ಚಿತ್ರಿತಗೊಂಡಿದೆ.

ಇದಲ್ಲದೆ ಕಾಷ್ಠ ಹಾಗೂ ಗಾರೆ ಶಿಲ್ಪಗಳ ಮೇಲೂ ಸಹ ವಿವಿಧ ವರ್ಣಗಳಿಂದ ಚಿತ್ರಿಸಲಾದ ಶಿಲ್ಪಗಳನ್ನು ನಾವು ಸುರಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಸಂಗ್ರಹಗೊಂಡಿರುವುದನ್ನು ಇಂದಿಗೂ ನೋಡಬಹುದು. ಸುರಪುರ ಚಿತ್ರಗಳು, ಪ್ರತ್ಯೇಕ ಸುರಪುರ ಶೈಲಿಯ ಚಿತ್ರಗಳೆನ್ನು ವಷ್ಟರ ಮಟ್ಟಿಗೆ ವಿಶಿಷ್ಟ ರಚನಾ ವಿಧಾನ, ತಂತ್ರಗಾರಿಕೆ ಹಾಗೂ ವಸ್ತು ವಿಷಯಗಳಲ್ಲದೇ ಪ್ರಾದೇಶಿಕ ವೈಲಕ್ಷಣಗಳೊಂದಿಗೆ ಗುರುತಿಸಿಕೊಂಡ ಕಲಾಕೃತಿಗಳಾಗಿವೆ


(ಎಂಸಿಬಿ)

ಸುರಪುರದ ಸ್ಮಾರಕಗಳು: ಭಾರತೀಯ ಸ್ವಾತಂತ್ರ್ಯ ಇತಿಹಾಸ ದಲ್ಲಿ ಕಲಬುರ್ಗಿ ಜಿಲ್ಲೆಯ ಸುರಪುರ ಸಂಸ್ಥಾನದ ಇತಿಹಾಸ ಸ್ವರ್ಣಾಕ್ಷರದಲ್ಲಿ ಬರೆಯುವಂಥ ಹೋರಾಟ ನಡೆಸಿದೆ. ಆದರೆ ಈ ಹಳೆ ಕಚೇರಿ ಇದ್ದ ಕಟ್ಟಡ ದುಸ್ಥಿತಿಯಲ್ಲಿದ್ದು, ಹಂದಿನಾಯಿ ಗಳ ವಾಸಸ್ಥಾನವಾಗಿದೆ. ಮುಖ್ಯ ರಸ್ತೆಯಲ್ಲಿರುವ ಈ ಕಟ್ಟಡ ಬಿದ್ದು ಹೋಗುವ ಅಪಾಯ ಎದುರಿಸುತ್ತಿದೆ. ಇಲ್ಲಿನ ಭವ್ಯ ಹೆಬ್ಬಾಗಿಲು ಆಕರ್ಷಕವಾಗಿದ್ದು, ಇದರ ಮೇಲೆ ಕೆತ್ತಲಾಗಿರುವ ಸೂರ್ಯ-ಚಂದ್ರರ ಚಿತ್ರಗಳು, ಸೂರ್ಯ-ಚಂದ್ರರು ಇರುವ ವರೆಗೂ ಈ ಸಂಸ್ಥಾನದ ಹೆಸರು ಚಿರಸ್ಥಾಯಿಯಾಗಿರುತ್ತದೆ ಎಂಬ ಸಂದೇಶ ಸಾರುವಂತಿದೆ. ಹೆಬ್ಬಾಗಿಲು ಹಳೆ ಅಂಚೆ ಕಚೇರಿ ಕಟ್ಟಡ ಈಗ ನಿರ್ಲಕ್ಷ್ಯಕ್ಕೀಡಾದ ಕಟ್ಟಡವಾಗಿದ್ದು, ಇದರ ಗೋಡೆಯ ಮೇಲೆ ಗಿಡ-ಗಂಟಿಗಳು ಬೆಳೆದು ಶಿಥಿಲಗೊಂಡಿದೆ. ಗೋಡೆಗಳಲ್ಲಿ ಬಿರುಕು ಬಿಟ್ಟು ಬೀಳುವ ಅಪಾಯ ಎದುರಿ ಸುತ್ತಿದೆ.

ಗೋಸಲ ವಂಶದ ಕುಲದೈವ ವೇಣುಗೋಪಾಲಸ್ವಾಮಿ ದೇವಸ್ಥಾನದ ಪೂಜಾದಿ ಕಾರ್ಯಕ್ರಮಗಳಿಗೆ ಪೂರಕವಾಗಿ ಕಟ್ಟ ಲಾಗಿರುವ ದೇವರ ಬಾವಿ ನೋಡಲು ಅತ್ಯಂತ ಸುಂದರ ವಾಗಿದ್ದು, ಸುತ್ತಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಆದರೆ ಸ್ವತಂತ್ರ್ಯಾನಂತರ ದಿನೇ ದಿನೇ ನಿರುಪಯುಕ್ತಗೊಂಡ ಈ ಬಾವಿ, ಇಂದು ನಿರ್ಲಕ್ಷ್ಯಕ್ಕೀಡಾಗಿ, ಇದರ ಸುತ್ತಲಿನ ಮೆಟ್ಟಿಲುಗಳು ಕುಸಿ ಯುತ್ತಿವೆ. ಬಾವಿಯ ಎರಡು ಕಡೆ ಇರುವ ಮಂಟಪಗಳು



ಹಳೇ ದರ್ಬಾರ, ಸುರಪುರ



ಸುರಪುರ ಕೊಳ

ಹಂದಿ-ಬಾವಲಿಗಳ ವಾಸಸ್ಥಳವಾಗಿದೆ. ಇದರ ಪಕ್ಕದಲ್ಲೇ ಇದ್ದೀತೆಂದು ಹೇಳಲಾಗುವ ನಾಗರಬಾವಿ ಸಂಪೂರ್ಣ ಮುಚ್ಚಿಹೋಗಿದ್ದು, ಗುರುತು ಕೂಡ ಸಿಗದ ಸ್ಥಿತಿಯಲ್ಲಿ ನೆಲಸಮವಾಗಿದೆ. ದೇವರಬಾವಿಯ ಮತ್ತೊಂದು ಪಕ್ಕದಲ್ಲಿರುವ ನಾಯಕನ ಬಾವಿ ಹೊಲಸಿನ ಆಗರವಾಗಿ, ಸಾರ್ವಜನಿಕರು ಕಸ ತುಂಬುವ ಗುಂಡಿಯಾಗಿದೆ. ದೇವರ ಬಾವಿಯಷ್ಟೇ ವಿಶಾಲವಾದ ಬಹಿರಬಾವಿಯ ಸುತ್ತಲಿನ ಓಣಿಗಳಿಂದ ಹರಿದು ಬರುವ ಚರಂಡಿ ನೀರು, ರೋಗಗಳನ್ನು ಹರಡುವ ತಾಣವಾಗಿದೆ.

ಕಲ್ಲು ಬಂಡೆಗಳಿಂದ ಕೂಡಿದ ಕಡಿದಾದ ಬೆಟ್ಟದ ಮೇಲೆ ನಿರ್ಮಾಣಗೊಂಡಿರುವ ಸುರಪುರ ಪಟ್ಟಣದ ಸುತ್ತಲೂ ರಕ್ಷಣಾ ವ್ಯವಸ್ಥೆಯ ಅಂಗವಾಗಿ ಸುರಪುರ ಸುತ್ತಲೂ ಕೋಟೆ ನಿರ್ಮಿಸಲಾಗಿದ್ದು, ಗತಕಾಲದ ಇತಿಹಾಸದ ಮೂಕ ಸಾಕ್ಷಿಗಳಾಗಿವೆ. ಈ ಕೋಟೆಯೊಳಗೆ ಪ್ರವೇಶಿಸಲು 5 ಬಾಗಿಲುಗಳು (ಅಗಸಿಗಳು) ಇದ್ದು, ಒಂದು ದಿಡ್ಡಿ ಬಾಗಿಲು ಕೂಡ ಇದೆ. ಸುರಪುರ ಕೋಟೆಯ ಪೂರ್ವ ದಿಕ್ಕಿನಲ್ಲಿ ಶಿಬಾರಬಂಡಿ ಅಗಸಿ ನಿರ್ಮಿಸಲಾಗಿದ್ದು, ಇದನ್ನು ಮೂಡಲ ಅಗಸಿ ಎಂದು ಕರೆಯುವರು. ಇಂದು ಅವಿದ್ಯಾವಂತರು ಇದನ್ನು ಮುಳ್ಳಗಸಿ ಎಂದೇ ಕರೆಯುವ ರೂಢಿ ಇದೆ. ಇದರ ತುಸು ಸಮೀಪದಲ್ಲಿ ಆಗ್ನೇಯ ದಿಕ್ಕಿನಲ್ಲಿ ವೆಂಕಟಾಪೂರ ದಿಡ್ಡಿ ಇದ್ದು, ಇವೆರಡನ್ನೂ ಕಾಯಲು ಆಗಿನ ಕಾಲದಲ್ಲಿ 900 ಜನ ಬೇಡರ ಸೈನಿಕರ ಕಾವಲನ್ನು ಇರಿಸಲಾಗುತ್ತಿತ್ತು. ಪಶ್ಚಿಮ ದಿಕ್ಕಿನಲ್ಲಿರುವ ಗುಡ್ಡದ ಮೇಲೆ ಶತ್ರುಗಳ ದಾಳಿಯಿಂದ ರಕ್ಷಿಸಿಕೊಳ್ಳಲು ತೋಪುಗಳನ್ನಿಡಲಾಗುತ್ತಿತ್ತು. ಕೋಟೆಯ ದಕ್ಷಿಣಕ್ಕೆ ಕಲಬುರ್ಗಿ-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿರುವ ದೇವಾಪೂರ ಅಗಸಿ ಸುಂದರವಾಗಿ ನಿರ್ಮಿಸಲಾಗಿದೆ. ಈ ಬಾಗಿಲಿಗೆ 150 ಜನ ಡೋಣ್ಣಿಗೇರಿಯವರ ಕಾವಲಿರುತ್ತಿತ್ತು. ಪಶ್ಚಿಮ ದಿಕ್ಕಿಗೆ ನಿರ್ಮಿಸಿದ ಉಲ್ಲೇಖ ಇರುವ ಕಪ್ಪಲಬೆಂಚಿ ಅಗಸಿ, ಈಗಿನ ತಹಶೀಲ್ದಾರ ಕಚೇರಿ ಹತ್ತಿರವಿರುವ ಅಗಸಿ ಇರುವ ಬಗ್ಗೆ ಊಹಿಸಲಾಗಿದೆ.

ವಾಯವ್ಯ ದಿಕ್ಕಿನಲ್ಲಿರುವ ಸಿದ್ದಾಪೂರ ಅಗಸಿ, ಸುರಪುರ-ಕೆಂಭಾವಿ ರಸ್ತೆ ನಿರ್ಮಾಣ ಕಾಲದಲ್ಲಿ ಕೆಡವಲಾಗಿದ್ದು, ಇದರ ಕುರುಹಾಗಿ ಅಗಸಿಯ ದಕ್ಷಿಣ ಭಾಗದ ಗೋಡೆಯ ಉಳಿದು ನಿಂತಿದೆ. ನಗರದ ಉತ್ತರ ದಿಕ್ಕಿನಲ್ಲಿರುವ ರಂಗಂಪೇಟೆಯಿಂದ ಸುರುಪುರಕ್ಕೆ ಬರುವ ಮಾರ್ಗದಲ್ಲಿ ಕಾಣಿಸುತ್ತದೆ. ಇಲ್ಲಿಯೂ ಸಬನೇಶಿ ಮತ್ತು ಹುದ್ದಾರರ 900 ಜನರ ಕಾವಲಿರುತ್ತಿತ್ತು ಎಂದು ಹೇಳಲಾಗುತ್ತದೆ.

(ಖಕೆ)



ಸುರೇಶ ವೈದ್ಯ: ಚಿತ್ರಕಲಾವಿದ. ಚಿತ್ರಕಲೆಯಲ್ಲಿ ಚಿಕ್ಕಂದಿನಿಂದಲೂ ಅಪಾರ ಪ್ರೀತಿಯನ್ನು ಬೆಳೆಸಿಕೊಂಡಿದ್ದಾರೆ. 1957 ಮಾರ್ಚ್ 9 ರಂದು ರಾಯಚೂರಿನಲ್ಲಿ ಜನಿಸಿದರು. ತಂದೆ ವಾಸುದೇವರಾವ್ ತಾಯಿ ಶಾರದಾಬಾಯಿ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ರಾಯಚೂರಿನಲ್ಲಿಯೇ ಪಡೆದರು.

ಇವರ ಚಿತ್ರಕಲೆಯ ಬಗೆಗಿನ ಅಪಾರ ಆಸಕ್ತಿಯನ್ನು ಕಂಡ ವಿಜ್ಞಾನ ಶಿಕ್ಷಕರಾಗಿದ್ದ ಶಿವಬಸಪ್ಪನವರು ಸುರೇಶ ವೈದ್ಯರವರಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇವರು ಬಿಡಿಸುತ್ತಿದ್ದ ವಿಜ್ಞಾನ ಪಠ್ಯ ಪುಸ್ತಕಗಳಲ್ಲಿ ಬರುವ ಹೃದಯ, ಕಣ್ಣು, ಕಿವಿಗಳ ಚಿತ್ರಗಳನ್ನು ನೋಡಿ ಅದರಿಂದ ಪ್ರೇರಣೆ ಪಡೆದು ತಾವು ಕೂಡ ಅದೇರೀತಿ ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದರು. ಇದಕ್ಕೆ ಸ್ಫೂರ್ತಿ ಎನ್ನುವಂತೆ ಶಿವಬಸಪ್ಪನವರು ವೈದ್ಯರವರಿಗೆ ಸಣ್ಣ ನಕ್ಷೆಗಳನ್ನು, ಸಣ್ಣ ಸಣ್ಣ ಚಿತ್ರಗಳನ್ನು ಬಿಡಿಸಲು ಕೊಡುತ್ತಿದ್ದರು. ಚಿತ್ರಕಲಾ ಸ್ಪರ್ಧೆಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸುವಂತೆ ಮಾರ್ಗದರ್ಶನ ನೀಡುತ್ತಿದ್ದರು. ಹೀಗೆ ಚಿಕ್ಕಂದಿನಿಂದ ಸುರೇಶ



ಸಾಂಪ್ರದಾಯಿಕ ಕಲೆ

ವೈದ್ಯರವರು ಬೆಳೆಸಿದ ಚಿತ್ರಕಲೆ ಎಂಬ ಗಿಡಕ್ಕೆ ನೀರು ಹಾಕಿ ಪೋಷಿಸುವಂಥವರು ದೊರೆತಂತಾಯಿತು. ಈ ರೀತಿಯಾಗಿ ಸುರೇಶ ವೈದ್ಯರವರ ಕಲಾಜೀವನ ಪ್ರಾರಂಭವಾಯಿತು. ಚಿತ್ರಕಲೆಯಲ್ಲಿ ತರಬೇತಿ ಪಡೆಯಬೇಕೆಂಬುಹುದು ಇವರ ಆಸೆಯಾಗಿತ್ತು ಆದರೆ ಆಗ ರಾಯಚೂರಿನಲ್ಲಿ ಉತ್ತಮ ಗುಣಮಟ್ಟದ ಚಿತ್ರಕಲಾ ಶಾಲೆಗಳು ಇರಲಿಲ್ಲ. ಕಾರಣ ರಾಯಚೂರಿಗೆ ಹತ್ತಿರವಿರುವ ಗುಲಬರ್ಗಾಕ್ಕೆ ಹೋದರು. ಅಲ್ಲಿನ ದಿ. ಐಡಿಯಲ್ ಫೈನ್ ಆರ್ಟ್‌ನಲ್ಲಿ ಚಿತ್ರಕಲಾ ಶಿಕ್ಷಣ ಪಡೆದರು. ಅಲ್ಲಿ ಐದು ವರ್ಷಗಳ ಕಲಾ ತರಬೇತಿಯನ್ನು ಪೂರ್ಣಗೊಳಿಸಿದರು.

ಇವರು ಚಿತ್ರಕಲಾ ಕೃತಿಗಳನ್ನು ರಚಿಸುವುದರ ಜೊತೆ ಜೊತೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಇವರ ಹತ್ತಿರ ಭಾರತೀಯ ಕಲಾವಿದರ ಮಾತ್ರವಲ್ಲದೆ, ವಿದೇಶೀ ಕಲಾವಿದರ ಪುಸ್ತಕಗಳನ್ನು ಕಾಣಬಹುದು. ಇವರ ಮೇಲೆ ಪ್ರಭಾವ ಬೀರಿರುವ ಕಲಾವಿದರು ಇಂತಹರೇ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಇವರು ಸಂಗ್ರಹಿಸಿರುವ ಪುಸ್ತಕಗಳನ್ನು ನೋಡಿದರೆ, ಇವರ ಕಲಾಕೃತಿಗಳ ಮೇಲೆ ದೇಶ ಮತ್ತು ವಿದೇಶೀ ಕಲಾವಿದರ ಪ್ರಭಾವ ಹೆಚ್ಚಿನ ಪ್ರಮಾಣದಲ್ಲಿ ಆಗಿರುವುದು ಕಂಡು ಬರುತ್ತದೆ. ಇವರ ಗುರುಗಳಾಗಿದ್ದ ಮಹಾನ್ ಚಿತ್ರಕಲಾವಿದ ಎಂ.ಟಿ.ವಿ ಆಚಾರ್ಯ ಹಾಗೂ ಎಂ. ಶಂಕರರಾವ್‌ರವರ ಪ್ರಭಾವವೂ ವೈದ್ಯರವರ ಕಲಾಕೃತಿಗಳಲ್ಲಿ ಕಾಣಬಹುದಾಗಿದೆ.

ಇವರು ಎಂ.ಟಿ.ವಿ ಆಚಾರ್ಯರ ಹತ್ತಿರ ಕಲಾ ಅಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಬಿಡಿಸಿದ ವ್ಯಂಗ್ಯಚಿತ್ರಗಳು ಸುದ್ದಿ ಮೂಲ, ಪ್ರಜಾವಾಣಿ, ಪ್ರಜಾಮತ, ಸಂಯುಕ್ತ-ಕರ್ನಾಟಕ ಇವುಗಳಲ್ಲಿ ಪ್ರಕಟಗೊಂಡಿವೆ. ಇಲ್ಲಿಯವರಿಗೆ ಎರಡು ಏಕವ್ಯಕ್ತಿ ಕಲಾಪ್ರದರ್ಶನ ಮತ್ತು ಹತ್ತಕ್ಕೂ ಹೆಚ್ಚು ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 1982ರಲ್ಲಿ ಮೈಸೂರು ದಸರಾ ಹಬ್ಬದಲ್ಲಿ ನಿರ್ಮಿಸಿದ ಸ್ತಬ್ದ ಚಿತ್ರಕ್ಕೆ ಮೂರನೆಯ ಬಹುಮಾನ ಪಡೆದಿದ್ದಾರೆ. 1984ರಲ್ಲಿ ರಾಷ್ಟ್ರೀಯ ಯುವ ಜನೋತ್ಸವ ಅಂಗವಾಗಿ ಗುಲಬರ್ಗಾದಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಪಡೆದಿದ್ದಾರೆ. ಲಯನ್ಸ್ ಕ್ಲಬ್ ವತಿಯಿಂದ 2000ರಲ್ಲಿ ಉತ್ತಮ 'ಚಿತ್ರಕಲಾ ಶಿಕ್ಷಕ' ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

(ಪಿಪಿ)

ಸೇ

ಸೇಡಮ್: ಜೈನ ಸ್ಮಾರಕಗಳ ನೆಲೆವೀಡು. ರಾಷ್ಟ್ರಕೂಟರ ರಾಜಧಾನಿ ನಗರ ಮಾನ್ಯಖೇಟ (ಮಳಖೇಡ) ಅರಸರ, ಅಧಿಕಾರಿ ವರ್ಗದವರ ರಾಜಗುರುಗಳ ನೆಲೆಯಾಗಿದ್ದಂತೆ, ಮಾನ್ಯಖೇಟದಿಂದ ಅನತಿ (10 ಕಿ.ಮೀ.) ದೂರದಲ್ಲಿರುವ ಸೇಡಿಂಬಪುರ (ಸೇಡಮ್) ಆಡಳಿತ ಕಚೇರಿಗಳ ತಾಣವಾಗಿತ್ತು. ಕೆಲವೊಂದು ಜಿನಮಂದಿರಗಳ ವಿಗ್ರಹಗಳು ರಾಷ್ಟ್ರಕೂಟರ ಕಾಲದವುಗಳಾದರೆ ಬಹುತೇಕ ಅವಶೇಷಗಳು ಕಲ್ಯಾಣ ಚಾಳುಕ್ಯರ ಕಾಲದವುಗಳಾಗಿವೆ. ಶಾಸನಗಳಾಧಾರದ ಮೇಲೆ ತ್ರಿಕೂಟ ಬ್ರಹ್ಮ ಜಿನಾಲಯ, ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿ ಇನ್ನಿತರ ಜಿನಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ. ಈ ಬಸದಿಗಳ ಪೈಕಿ ಊರ ಮಧ್ಯದಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿಯ ಕೆಲ ಅಪೂರ್ವ ವಿಗ್ರಹಗಳು ಅಧ್ಯಯನಕ್ಕೆ ಯೋಗ್ಯವಾಗಿವೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ ಹೊಂದಿರುವ ಈ ಜಿನಾಲಯದ ಮೂಲ ತೀರ್ಥಂಕರ ಭಗವಾನ್ ಪಾರ್ಶ್ವನಾಥ ಸ್ವಾಮಿ, ಕಾಯೋತ್ಸರ್ಗ ಭಂಗಿಯ 5 ಅಡಿ ಎತ್ತರದ ಈ ಪ್ರತಿಮೆಯ ಪಾದಗಳ ಇಕ್ಕೆಡೆ ಧರಣೇಂದ್ರ ಪದ್ಮಾವತಿ ಯಕ್ಷ ಯಕ್ಷಿಯರ ಚಿಕಣಿ ಶಿಲ್ಪಗಳಿವೆ. ತೀರ್ಥಂಕರರ ತಲೆಯ ಮೇಲೆ ಸಪ್ತಫಣಿಗಳುಳ್ಳ ನಾಗ ಶಿಲ್ಪದ ಮೇಲ್ಭಾಗದಲ್ಲಿ ಮುಕ್ಕೊಡೆ ಇದೆ. ಧರಣೇಂದ್ರ ಪದ್ಮಾವತಿ ಈ ಶಿಲ್ಪಗಳ ಮೇಲೆ ಕಿರುಮಂಟಪಗಳಲ್ಲಿ ಧ್ಯಾನಾಸಕ್ತ ನಿಂತ ಜಿನಬಿಂಬಗಳು ಅವುಗಳ ಮೇಲೆ ಇಕ್ಕೆಡೆ ಚಾಮರಗಳನ್ನು ಬಿಡಿಸಿದ್ದಾರೆ. ಈ ಚಾಮರಗಳ ಮೇಲ್ಭಾಗದಲ್ಲಿ ಕಿರುಮಂಟಪಗಳಲ್ಲಿ ಪದ್ಮಾಸಿನ ಜಿನಬಿಂಬಗಳಿವೆ. ಈ ಪ್ರತಿಮೆಯ ರಚನಾ ವಿನ್ಯಾಸದಿಂದ ಇದು ಕ್ರಿ.ಶ. 10ನೇ ಶತಮಾನದ ಮಧ್ಯ ಅಥವಾ ಅಂತ್ಯ ಭಾಗದ ರಚನೆ ಎಂದೆನಿಸುತ್ತದೆ. ಗರ್ಭಗೃಹದ ಮುಂದಿರುವ ತೆರೆದ ಅಂತರಾಳದ ಎದುರು ಬದರು ಗೋಡೆಗಳಲ್ಲಿ ಗುಪ್ತಮಾರ್ಗದ ಗೂಡುಗಳಿವೆ. ನವರಂಗದ ಬಲಭಾಗದ ಗೋಡೆಗೆ ಹೊಂದಿಕೊಂಡು ಖಡ್ಗಾಸನದ ಕಪ್ಪುಶಿಲೆಯ 5 ಅಡಿಗೂ ಮಿಕ್ಕ ಎತ್ತರದ ಜಿನಬಿಂಬದ ಲಾಂಛನದಲ್ಲಿ ಸ್ಪಷ್ಟತೆಯಿಲ್ಲ, ಪ್ರತಿಮೆಯ ಮುಖದಲ್ಲಿ ಪ್ರಸನ್ನತೆ ಶಾಂತತೆ ಮನಾಕರ್ಷಕವಾಗಿದೆ. ಪ್ರಭಾಮಂಡಲ, ಮುಕ್ಕೊಡೆಗಳನ್ನು ಹೊಂದಿರುವ ಈ ಬಿಂಬದ ಪಾದಗಳ ಅಕ್ಕಪಕ್ಕ ಯಕ್ಷಯಕ್ಷಿ



ಶ್ರೀ ಪಂಚಲಿಂಗೇಶ್ವರ ದೇವಾಲಯ, ಸೇಡಮ್

ಪ್ರತಿಮೆಯ ಬದಲು ಬಲಗಡೆ ಜೈನ ಮುನಿಯ ಕುಳಿತ ವಿಗ್ರಹ ಕೆತ್ತಿದ್ದಾರೆ. ಎಡಗಡೆ ದಂಪತಿಗಳ ಕಿರು ಶಿಲ್ಪಗಳಿವೆ.

ಇದೇ ಬಸದಿಯ ಪ್ರವೇಶದ್ವಾರದ ಒಳಭಾಗದಲ್ಲಿ ನವರಂಗಕ್ಕೆದುರಾಗಿ ಶ್ರೀ ಕೂಷ್ಮಾಂಡಿನಿ, ಶ್ರೀ ಪದ್ಮಾವತಿ ಯಕ್ಷಿಯರ ಪ್ರತಿಮೆಗಳು ತುಂಬಾ ವಿಶೇಷವಾಗಿವೆ. ಈ ಭಾಗದಲ್ಲಿ ಹೆಚ್ಚಾಗಿ ಆಸೀನ ಭಂಗಿಯ ಕೂಷ್ಮಾಂಡಿನಿ ಪದ್ಮಾವತಿಯರ ವಿಗ್ರಹಗಳೇ ಲಭ್ಯವಿದ್ದು, ಈ ಪ್ರತಿಮೆಗಳು ನಿಂತ ಭಂಗಿಯಲ್ಲಿವೆ.

ಇಪ್ಪತ್ತೆರಡನೆಯ ತೀರ್ಥಂಕರರಾದ ಭಗವಾನ ನೇಮಿನಾಥರ ಯಕ್ಷಿ ಕೂಷ್ಮಾಂಡಿನಿಯ ವಿಗ್ರಹದ ಆಧಾರದ ಮೇಲೆ ಇಲ್ಲಿ ನೇಮಿನಾಥ ಜಿನಾಲಯ ಇದ್ದ ಸಾಧ್ಯತೆ ಉಂಟು. ನಾಲ್ಕಡಿಗೂ ಮಿಕ್ಕ ದ್ವಿಭಂಗಿಯ ನಿಂತ ಈ ಯಕ್ಷಿ ಪ್ರತಿಮೆ ಸೂಕ್ಷ್ಮತೆ, ಸುಂದರತೆಗೆ ಸಾಕ್ಷಿಯಾಗಿದೆ. ಆಮ್ರಾ, ಅಂಬಿಕಾ ಎಂದೂ ಪೂಜೆಗೊಳ್ಳುವ ಈ ಯಕ್ಷಿಯ ಪ್ರತಿಮೆ ದ್ವಿಭುಜವುಳ್ಳದ್ದು. ಎರಡೂ ಹಸ್ತಭಾಗಗಳು ಮುಕ್ಕಾಗಿವೆ. ಕಿರೀಟ ರಹಿತವಾಗಿದ್ದು ಪ್ರಭಾವಳಿಯ ತುತ್ತ ತುದಿಯಲ್ಲಿ ಪದ್ಮಾಸನದ ಜಿನ ಬಿಂಬವಿದೆ. ಹಾಗೇ ತಲೆಯ ಮೇಲ್ಭಾಗದಲ್ಲಿ ಎಡಬಲ ಮಾವಿನ ಹಣ್ಣುಗಳ ತೊಂಗಲುವಿದೆ. ಕೊರಳಹಾರ, ಕಂಠಹಾರ, ಎದೆಹಾರಗಳಿವೆ, ನಡುಬಂಧ, ತೋರಹಾರಗಳಲ್ಲದೆ ಕಾಲಲ್ಲಿ ಕಡಗ ಅಂದುಗೆಗಳಿವೆ. ಬಲಗೈ ಕೆಳಗೆ ಬಲಗಾಲ ಪಕ್ಕದಲ್ಲಿ ಆಕೆಯ ಪುತ್ರ ಶುಭಂಕರನ ಶಿಲ್ಪವಿದ್ದು ಮಗನ ತಲೆಯತ್ತ ಕೈ ಚಾಚಿದ ಭಂಗಿ ಇದೆ. ಎಡಗಡೆ ಆಕೆಯ ವಾಹನ ಸಿಂಹವಿದೆ. ಅದರ ಮೇಲೆ ಸವಾರನೊಬ್ಬನಿದ್ದಾನೆ. ಅದರ ಪಕ್ಕ ಇನ್ನೊಬ್ಬ ಮಗ ಪ್ರಿಯಂಕರನ ಶಿಲ್ಪವಿದೆ.

ಇಪ್ಪತ್ಮೂರನೆಯ ತೀರ್ಥಂಕರರಾದ ಭಗವಾನ್ ಪಾರ್ಶ್ವನಾಥರ ಯಕ್ಷಿ ಪದ್ಮಾವತಿಯ ನಾಲ್ಕಡಿಗೂ ಮಿಕ್ಕ ನಿಂತ ತ್ರಿಭಂಗಿಯ ಈ ಪ್ರತಿಮೆಯ ಅಂಗಾಂಗ ಪ್ರಮಾಣ ಬದ್ಧತೆಯಿಂದ ಕಲಾ ಕುಸುರಿಯಿಂದ ಕೂಡಿದೆ. ಗೋಪುರಾಕಾರದ ಕಿರೀಟದ ಮೇಲೆ ಒಂದು ಹೆಡೆಯ ನಾಗ, ನಾಗಹೆಡೆಯ ಮೇಲೆ ಕುಳಿತ ಜಿನಬಿಂಬವಿದೆ. ಕಿವಿಯಲ್ಲಿ ಪತ್ರ ಕುಂಡಲ, ಕಂಠಹಾರ, ಎದೆಹಾರ, ಭುಜದಾಭರಣ ಕಂಕಣಗಳುಳ್ಳ ಚತುರ್ಭುಜ ವಿಗ್ರಹದ ಬಲ ಮೇಲುಗೈಯಲ್ಲಿ ಅಂಕುಶವಿದೆ. ಬಲಕೆಳಗೈ ಮುಕ್ಕಾಗಿದೆ. ಎಡಮೇಲುಗೈಯಲ್ಲಿ ಪಾಶ, ಎಡಕೆಳಗೈ ಬೀಜಪೂರ ಫಲವಿದೆ. ಕಾಲಲ್ಲಿ ಅಂದುಗೆ ಇನ್ನಿತರ ಆಭರಣಗಳಿವೆ. ಪಾದಗಳ ಹತ್ತಿರ ಬಲಗಡೆ ತ್ರಿಭಂಗಿಯ ಚಾಮರಧಾರಣಿ ಇದ್ದರೆ ಎಡಗಡೆ ದ್ವಿಭಂಗಿಯ ದ್ವಿಭುಜದ ಚಾಮರಧಾರಣಿ ಇದ್ದಾಳೆ. ಈ ಪ್ರತಿಮೆಯ ದೇಹ ಪ್ರಮಾಣ; ಮುಖದಲ್ಲಿನ ಚೆಲುವು, ನಿಂತ ನಿಲುವು ಒಂದೊಂದು ಶಿಲ್ಪಿಯ ಕಲಾಪರಿಣಿತಿಗೆ ಸಾಕ್ಷಿಯಾಗಿದೆ. ಈ ಬಸದಿಯ ಎಡಗಡೆ ಸರಸ್ವತಿ ಮಂದಿರವಿದೆ. ಇದೊಂದು ಜೈನ ವಿದ್ಯಾಕೇಂದ್ರವಾಗಿರಬಹುದು. ಕಮಲಾವತಿ ನದಿ ದಂಡೆಯ (ಅಗಸಿ) ಹತ್ತಿರವಿರುವ ಬಸದಿ ತುಂಬಾ ಜೀರ್ಣಾವಸ್ಥೆಯಲ್ಲಿದೆ.

ಸೇಡಮ್ ನಗರದಲ್ಲಿರುವ ಮಾಣಿಕೇಶ್ವರ ಗುಡಿಯನ್ನು ಜನ ಲಿಂಗದ ಗುಡಿ ಎಂದು ಕರೆಯುತ್ತಾರೆ. ಕ್ರಿ.ಶ. 10, 11ನೆಯ ಶತಮಾನದ 45 ಕಂಬಗಳುಳ್ಳ ಇದು ಸಾಲುಮಂಟಪ, ಇದರ ಮಧ್ಯಭಾಗದಲ್ಲಿ ಚಿಕ್ಕಗುಡಿಯನ್ನು ನಿರ್ಮಿಸಿದ್ದಾರೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಈಶಾನ್ಯ ದಿಕ್ಕಿಗೆ ಎತ್ತರವಾದ ಕಂಬವಿದೆ. ಈ ಕಂಬಕ್ಕೆ ಜನ ಬಾಣಿಕಲ್ಲು, ಬಾಣಂತಿಕಲ್ಲು ಎಂದು ಕರೆಯುತ್ತಾರೆ. ವಾಸ್ತವವಾಗಿ ಇದೊಂದು ಮಾನಸ್ತಂಭ. ಜೈನ ವಿದ್ಯಾ ಕೇಂದ್ರವಾಗಿದ್ದ ಮಾಣಿಕೇಶ್ವರ (ಲಿಂಗದ ಗುಡಿ) ಗುಡಿಯು ಆದಿ ತೀರ್ಥಂಕರ ಬಸದಿಯೂ ಆಗಿದ್ದಿರಬಹುದು.

(ಡಿಎನ್ಎ)

ಸೋ

ಸೋಮಣ್ಣ ಸಿದ್ಧಪ್ಪ: ಶಿಲ್ಪಿ. ಇವರು 1918ರ ಆಗಸ್ಟ್ 18ರಂದು ಜನಿಸಿದರು. ಚಿಕ್ಕಂದಿನಲ್ಲಿಯೇ ಮನೆಯಲ್ಲಿನ ಕಲಾ ವಾತಾವರಣ ಇವರ ಮೇಲೆ ಪ್ರಭಾವ ಬೀರಿತು. ಜೊತೆಗೆ ವಂಶ ಪಾರಂಪರ್ಯವಾಗಿ ಬಂದ ಶಿಲ್ಪಕಲಾ ವಿದ್ಯೆ ಇವರಲ್ಲಿಯೂ ಅರಳಿ ನಿಂತಿತು. ಇವರ ಕಲಾಗುರುಗಳು ಹೊಂಬಳಿ ಗ್ರಾಮದ ಶಂಕರಪ್ಪನವರು. ಇವರು ಚಿಕ್ಕಂದಿನಲ್ಲಿಯೇ ಹರಪನಹಳ್ಳಿ ತಾಲ್ಲೂಕಿನ ಚಿಗಚೇರಿ ಗ್ರಾಮದಲ್ಲಿ ಚಿನ್ನ ಬೆಳ್ಳಿ ಕೆಲಸದ ಜೊತೆಗೆ ಚಿಕ್ಕ ಚಿಕ್ಕ ವಿಗ್ರಹಗಳನ್ನು ನಿರ್ಮಿಸುತ್ತಿದ್ದರು.

ಸ್ವತಂತ್ರವಾಗಿ ಶಿಲ್ಪಕಲಾ ಸೇವೆಗೆ 1951ರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇವರು ರಚಿಸಿದ 15 ಅಡಿ ಕಲ್ಲಿನ ರಥದಲ್ಲಿ ದಶಾವತಾರಗಳನ್ನೊಳಗೊಂಡ 29 ವಿಗ್ರಹಗಳಿವೆ. ರಥದ ಗಾಲಿಗಳು ತಿರುಗುವಂತೆ ಈ ವಿಗ್ರಹಗಳ ನಿರ್ಮಾಣದಲ್ಲಿ ಈ ಕಲಾವಿದ ಮುತುವರ್ಜಿಯನ್ನು ಮತ್ತು ಸೂಕ್ಷ್ಮವಾದ ಕೆತ್ತನೆ ಕೆಲಸವನ್ನು ನಿರ್ವಹಿಸಿದ್ದಾರೆ. ವೀರನಾರಾಯಣ ಮೂರ್ತಿ, ನಟರಾಜ, ವಿಶ್ವಕರ್ಮ ಹಾಗೂ ಶ್ರೀ ವೀರಭದ್ರದೇವರು, ಕಾಳಿಕಾದೇವಿ, ರಾಮಲಕ್ಷ್ಮಣರ ವಿಗ್ರಹಗಳು, ಹೀಗೆ ಅನೇಕ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಜೊತೆಗೆ ಗದುಗಿನ ವೀರನಾರಾಯಣ ದೇವಸ್ಥಾನದ ಗೋಪುರದ ಜೀರ್ಣೋದ್ಧಾರ ಮಾಡಿ, ಪ್ರಾಚೀನ ಕಾಲದ ಶಿಲ್ಪಕಲಾವಿದರ ಕಲಾ ಪ್ರತಿಭೆಯ ಸಹಯೋಗಕ್ಕೆ ಸೈ ಎನಿಸಿಕೊಂಡಿದ್ದಾರೆ.

1967ರಲ್ಲಿ ಮೈಸೂರು ದಸರಾ ಪ್ರಶಸ್ತಿ, 1981ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ಹಾಗೂ ಬಳ್ಳಾರಿಯ ಅನೇಕ ಕಲಾ ಸಂಘ ಸಂಸ್ಥೆಗಳ, ಸಂಘಟನೆಗಳ ಹಲವಾರು ಪ್ರಶಸ್ತಿಗಳು ಇವರಿಗೆ ದೊರೆತಿವೆ. ಅಲ್ಲದೇ ಇವರ ಕಲಾಕೃತಿಗಳು ಅನೇಕ ಸ್ಥಳಗಳಲ್ಲಿ ಪ್ರದರ್ಶನಗೊಂಡು ಜನರ ಮನಗೆದ್ದುದು ವಿಶೇಷ. ತಮಿಳು ನಾಡಿನಿಂದ ಹಿಡಿದು ಹಿಮಾಲಯದ ಕೇದಾರೇಶ್ವರದ

ವರೆಗೂ ಸುಮಾರು ಸಾವಿರಕ್ಕೂ ಹೆಚ್ಚು ಇವರ ಶಿಲ್ಪಕಲಾಕೃತಿಗಳು ಸಂಗ್ರಹಗೊಂಡಿವೆ. ಅಲ್ಲದೇ ಡೆನ್ಮಾರ್ಕ್, ಇಟಲಿ ಹಾಗೂ ಅಮೆರಿಕಗಳಲ್ಲಿಯೂ ಇವರ ಶಿಲ್ಪ ಕಲಾಕೃತಿಗಳು ಸಂಗ್ರಹ ಗೊಂಡಿವೆ. 1963ರಲ್ಲಿ ಗದುಗಿನಲ್ಲಿ ಶಿಲ್ಪಕಲಾ ಶಾಲೆಯೊಂದನ್ನು ಹುಟ್ಟುಹಾಕಿ ಸತತ 42 ವರ್ಷಗಳ ಕಾಲ ಅದನ್ನು ನಡೆಸಿಕೊಂಡು ಬಂದು ಅನೇಕ ಯುವ ಶಿಲ್ಪಕಲಾವಿದರನ್ನು ನಾಡಿಗೆ ಕಾಣಿಕೆ ಯಾಗಿ ನೀಡಿದ ಹಿರಿಮೆ ಇವರಿಗೆ ಸಲ್ಲುತ್ತದೆ. (ಎಟಿಎ)

ಸೋಮನಾಥ ದೇಗುಲ: ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಸಣ್ಣ ಹಳ್ಳಿ. ಕೊಂಡಗುಳಿ ಶಹಾಪುರ–ಸಿಂದಗಿ ರಸ್ತೆಯಲ್ಲಿ ಬರುವ ಯಂಕಂಚಿ (ಸಿಂದಗಿ ತಾಲ್ಲೂಕು)ಯಿಂದ ನಾಲ್ಕು ಕಿ.ಮೀ. ದೂರದಲ್ಲಿದೆ. ಇದು ಕೇಶಿರಾಜನ ಊರು. ಕೊಂಡಗುಳಿ ಕೇಶಿರಾಜ ಹನ್ನೊಂದನೆಯ ಶತಮಾನದ ಉತ್ತ ರಾರ್ಧದಲ್ಲಿ ಬಾಳಿ ಬದುಕಿದವ. ಸೋಮನಾಥ, ಕೇಶಿರಾಜನ ಇಷ್ಟದೈವ. ಆತನ ಗುರು ವಿರೂಪಾಕ್ಷದೇವ. ಪತ್ನಿ ಗಂಗಾದೇವಿ.

ಶಾಸನದ ಪ್ರಕಾರ ಈ ಊರಿನ ಹೆಸರು 'ಚಿಕ್ಕ ಕೊಂಡಗುಳಿ'. ಇದು ಹಿಂದೆ 'ಹಗರಟಗಿ ಮುನ್ನೂರು' ಪ್ರಾಂತ್ಯಕ್ಕೆ ಸೇರಿತ್ತು. ಸಾಮಂತ ಬೈಸರಸ, ಹಂದಿಯರಸರು ಹಗರಟಗಿ ನಾಡನ್ನು ಆಳುತ್ತಿದ್ದಾಗ, ಚಿಕ್ಕ ಕೊಂಡಗುಳಿಯ ಪ್ರಭು ಬಿಲ್ಲರಸನು ಮಲ್ಲಿಕಾರ್ಜುನ ದೇವಾಲಯ ನಿರ್ಮಿಸಿ, ದಾನ ದತ್ತಿಗಳನ್ನು ನೀಡಿರುವ ಕುರಿತು ಶಾಸನ ಉಲ್ಲೇಖಿಸುತ್ತದೆ.

ಅಂದಿನ ಮಲ್ಲಿಕಾರ್ಜುನ ದೇವಾಲಯವೇ ಇಂದಿನ ಸೋಮನಾಥ ಆಲಯ. ಶಾಸನದಲ್ಲಿ ಸಾಂದರ್ಭಿಕವಾಗಿ ಸೋಮೇಶ್ವರ ದೇವಾಲಯ, ಕೇಶವ ದೇವಾಲಯ ಮತ್ತು ಪಕ್ಕದ ಕಣಂಭೇಶ್ವರ (ಇಂದಿನ ಕಣಮೇಶ್ವರ), ಮಾಗಿಣಗೆರೆ, ಧವಳಾರ ಗ್ರಾಮಗಳ ಪ್ರಸ್ತಾಪ ಬಂದಿರುತ್ತದೆ.

ಸೋಮನಾಥ ಆಲಯ ಗರ್ಭಗೃಹ, ಅಂತರಾಳ, ವಿಶಾಲ ನವರಂಗ, ಮುಖಮಂಟಪ ನಂದಿ ಮಂಟಪಗಳನ್ನು ಒಳ ಗೊಂಡಿದ್ದು, ದೇವಾಲಯ ಪ್ರವೇಶಕ್ಕೆ ಮೂರು ದಿಕ್ಕುಗಳಿಂದ ಪ್ರವೇಶ ದ್ವಾರಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ನವರಂಗದ ಛಾವಣಿ ಕುಸಿದಿದೆ. ಕಳಚಿಬಿದ್ದ ಅಷ್ಟ ದಿಕ್ಪಾಲಕರ ಶಿಲಾಫಲಕ ನೋಡುವಂತಿದೆ.

ಹೊರಭಿತ್ತಿ ಸರಳ ಮತ್ತು ಸುಂದರವಾಗಿದ್ದು, ದೇವಾಲಯ ಶಿಖರ ನಾಶವಾಗಿದೆ. ಈ ದೇವಾಲಯ ಪಕ್ಕದಲ್ಲಿ ಶಿಥಿಲಾವಸ್ಥೆ ಯಲ್ಲಿರುವ ಗುಡಿಯನ್ನು ಊರವರು ಕೇಶಿರಾಜನ ಗುಡಿ ಎಂದು ಕರೆಯುತ್ತಾರೆ. ಬಹುಶಃ ಇದು ಶಾಸನದಲ್ಲಿ ಬಂದಿರುವ ಸೋಮೇಶ್ವರ ದೇವಾಲಯವಾಗಿರಬಹುದು. (ವಿಕೆಎಂ)

ಸೋಮನಾಥ ದೇವಾಲಯ: ಯಾದಗಿರ ಜಿಲ್ಲೆ ಸುರಪುರ ತಾಲ್ಲೂಕು ಕೇಂದ್ರದಿಂದ ಸುಮಾರು 30 ಕಿ.ಮೀ. ಅಂತರದ ಹಾಗೂ ಕೃಷ್ಣಾ ನದಿಯಿಂದ ಕೇವಲ 3 ಕಿ.ಮೀ ಸಮೀಪದಲ್ಲಿರುವ ಕಕ್ಕೇರಾ ಗ್ರಾಮ ಅತ್ಯಂತ ಪ್ರಸಿದ್ಧವಾದದ್ದು. ಇಲ್ಲಿ ಪೂಜಿ ಗೊಳ್ಳುತ್ತಿರುವುದು ಸೌರಾಷ್ಟ್ರಪತಿ ಸೋಮನಾಥ! ಸೌರಾಷ್ಟ್ರದಿಂದ ಸೋಮನಾಥ ಇಲ್ಲೇಕೆ ಬಂದ ಎಂಬುದು ಇಂದಿಗೂ ನಿಗೂಢ ರಹಸ್ಯ.

ಕ್ಕಕ್ಕೇರಾ ಸೋಮನಾಥದೇವ ಈ ಊರಿನ ಪ್ರಮುಖ ಆರಾಧ್ಯದೈವ. ಸ್ಥಳೀಯರ ಪ್ರಕಾರ ಗಝನಿ ಮಹಮ್ಮದ್‌ನ ಕಾಲ ದಲ್ಲಿ ಸೌರಾಷ್ಟ್ರ ಸೋಮನಾಥ ದೇವಾಲಯದ ಮೇಲೆ ಹಲ್ಲೆ ಯಾದಾಗ, ಭಗ್ನಗೊಂಡ ಲಿಂಗ ಸಿಡಿದು ಬಂದು ಕಕ್ಕೇರಾದಲ್ಲಿ ಬಿದ್ದಿದ್ದು, ಆ ನೆನಪಿಗಾಗಿ ಈ ದೇವತೆಗೆ ಸೌರಾಷ್ಟ್ರಾಧಿಪತಿ ಸೋಮನಾಥ ಎಂದೇ ಕರೆಯಲಾಗಿದೆಯಂತೆ.

ಈ ದೇವಾಲಯ ವಿಶಾಲವಾಗಿದ್ದು, ದೇವಾಲಯದ ಮುಂದೆ ಬೃಹದಾಕಾರದ ಒಂದು ದೊಡ್ಡ ಕೆರೆ. ದೇವಾಲಯ ನೋಡಿದ ತಕ್ಷಣ ಯಾವುದೋ ಮಸೀದಿ ಇರಬಹುದೆಂದು ಭಾವನೆ ಬಾರದೇ ಇರಲಾರದು. ಆದರೆ, ಇಲ್ಲಿರುವ ದೇವ ಸೋಮನಾಥ ಎಂದು ತಿಳಿದಾಗ ಅಚ್ಚರಿಯಾಗುತ್ತದೆ. ದೇವಸ್ಥಾನ ಈ ಮಾದರಿಯಲ್ಲಿರಲು ಹಿಂದಿನ ನಿಜಾಮ ಸರಕಾರದ ಪ್ರಭಾವ ಇರಬಹುದೆಂದು ಹೇಳಲಾಗುತ್ತಿದ್ದು, ಈ ಭಾಗದಲ್ಲಿ ಅನೇಕ ಹಿಂದೂ ದೇವಾಲಯಗಳು ಇದೇ ಮಾದರಿಯಲ್ಲಿ ಈ ಭಾಗ ದಲ್ಲಿದ್ದು, ಇವು ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿ ಇಂದಿಗೂ ಪೂಜಿಸಲ್ಪಡುತ್ತವೆ.

(ಕೆಜಿಎಚ್)

ಸ್ಮಾ

ಸ್ಮಾರಕ ಶಿಲ್ಪಗಳು(ಗುಲ್ಬರ್ಗ ಜಿಲ್ಲೆ): ಹೈದರಾಬಾದ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ವಿಭಿನ್ನ ಸ್ಮಾರಕ ಶಿಲ್ಪಗಳಿವೆ. ಇವುಗಳಲ್ಲಿ ವೀರಗಲ್ಲುಗಳು, ಸತಿಕಲ್ಲುಗಳು, ನಿಷಿಧಿಗಳಲ್ಲದೆ ಇನ್ನಿತರ ಆತ್ಮ ಬಲಿದಾನದ ಪುರಾವೆಗಳಿವೆ. ಕೆಲವುಗಳಿಗೆ ಶಾಸನಗಳೂ ಇವೆ.

ವೀರಗಲ್ಲುಗಳು: ಕೇಶ್ವಾರ (ಗಡಿ) ಚಿಂಚೋಳಿ ತಾಲೂಕಿ ನಲ್ಲಿದ್ದು ಅಲ್ಲಿಯ ಹನುಮಂತಗುಡಿ ಮುಂದೆ ಒಂದು ವೀರ ಗಲ್ಲಿದೆ. ಅದು ಕ್ರಿ.ಶ. 9ನೇ ಶತಮಾನದ್ದಾಗಿದೆ. ಅದರಲ್ಲಿ ತುರು ಗೋಳ ವಿವರವುಳ್ಳ ಚಿತ್ರಗಳಿವೆ. ಈ ಜಿಲ್ಲೆಯಲ್ಲೇ ಈ ಸ್ಮಾರಕ ವೀರಗಲ್ಲು ಪ್ರಾಚೀನದ್ದೆಂದು ಹೇಳಬಹುದು.

ಯಾದಗಿರ ತಾಲೂಕಿನ ಮಾಧವಾರ ಗುಂಟಂನಲ್ಲಿ ಒಂದು ವೀರಗಲ್ಲಿದೆ. ಇದರಲ್ಲಿ ವೀರನು ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ನಿಂತಿದ್ದಾನೆ. ಈತನಿಗೆ ಬಾಣಗಳು ಬಲಗಡೆಯ ಎದೆಗೆ ಮತ್ತು ತೊಡೆಗೆ ನೆಟ್ಟಿವೆ. ಈತನು ವೀರನನ್ನು ಇಬ್ಬರು ಶತ್ರುಗಳ ಮೇಲೆ ವೀರಾವೇಶದಿಂದ ನಿಂತಿದ್ದಾನೆ. ಈತನು ತುರುಬನ್ನು

ಬಲಕ್ಕೆ ಕಟ್ಟಿದ್ದಾನೆ. ಇಬ್ಬರು ವೀರರನ್ನು ಇಬ್ಬರು ಅಪ್ಸರೆಯರು ಒಯ್ಯುತ್ತಿರುವರು. ನಂತರ ವೀರನು ಶಿವಲಿಂಗದ ಮುಂದೆ ನಿಂತಿದ್ದಾನೆ. ಬದಿಗಳಲ್ಲಿ ಸೂರ್ಯ ಮತ್ತು ಚಂದ್ರರ ಚಿಹ್ನೆಗಳಿವೆ. ವೀರನು ವಸ್ತ್ರಾಭರಣಗಳನ್ನು ಧರಿಸಿದ್ದಾನೆ.

ಗುಲ್ಬರ್ಗದ ವಸ್ತುಸಂಗ್ರಹಾಲಯದಲ್ಲಿ ಕೆಲವು ವೀರಗಲ್ಲುಗಳಿವೆ. ಒಂದರ ಮೇಲಿನ ಭಾಗ ಶಿಥಿಲವಾಗಿದೆ. ಎರಡು ದೃಶ್ಯಗಳಿದ್ದು ಕೆಳಗಿನ ದೃಶ್ಯದಲ್ಲಿ ಇಬ್ಬರು ವೀರರು ಕತ್ತಿ ಗುರಾಣಿಗಳನ್ನು ಹಿಡಿದು ನಿಂತಿರುವರು (?) ಶವಗಳ ಮೇಲೆ ಇವರು ನಿಂತಿದ್ದಾರೆ. ಎರಡನೇ ದೃಶ್ಯದಲ್ಲಿ ಈರ್ವರನ್ನು ಅಪ್ಸರೆಯರು ಒಯ್ಯುತ್ತಿರುವರು.

ಈ ಭಾಗದ ಒಂದು ವೀರಗಲ್ಲಿನಲ್ಲಿ ವೀರನು ಕತ್ತಿ ಗುರಾಣೀ ಹಿಡಿದು ನಿಂತ ವೈರಿಗಳ ಕುದುರೆ ಅಥವಾ ಆಕಳು ಕಡೆ ಮುಖ ಮಾಡಿ ನಿಂತಿದ್ದಾನೆ. ಇವು ಆಕಳುಗಳಾಗಿದ್ದರೆ ಇದು ಗೋಗ್ರಹಣದ ಸನ್ನಿವೇಶವನ್ನು ವ್ಯಕ್ತಿಪಡಿಸುತ್ತದೆ. ವೀರನು ಗಡ್ಡಧಾರಿಯಾಗಿದ್ದಾನೆ. ಮೇಲಿನ ದೃಶ್ಯದಲ್ಲಿ ಕೈ ಮುಗಿದು ಕುಳಿತ ವೀರ ಬದಿಗಳಲ್ಲಿ ಚೌರಿ ಹಿಡಿದು ಸೇವಕಿಯರಿಬ್ಬರೂ ನಿಂತಿದ್ದಾರೆ. (12 ನೇ ಶತಮಾನ) ಇದರ ಬದಿಗಿನ ವೀರಗಲ್ಲಿನ ಒಬ್ಬ ವೀರನು ಬಿಲ್ಲಿನಿಂದ ಬಾಣ ಬಲಗಡೆಗೆ ಪ್ರಯೋಗಿಸುವು ದನ್ನು ಚಿತ್ರಿಸಲಾಗಿದೆ. ಈತನ ಪರಿವಾರದವರನ್ನು ಕಿರುದಾಗಿ ಈತನ ಬಲಕ್ಕೆ ಚಿತ್ರಿಸಲಾಗಿದೆ.

ಮತ್ತೊಂದು ವೀರಗಲ್ಲಿನಲ್ಲಿ ಕೆಳಗಡೆ ವೀರನು ವೈರಿಯ ಎದೆಗೆ ಕತ್ತಿಯಿಂದ ಇರಿದಿದ್ದು ಎಡಗೈಯಲ್ಲಿ ಗುರಾಣಿಯಿದೆ. ಈತನ ಬದಿಗಳಲ್ಲಿಬ್ಬರು ಕೈಮುಗಿದು ನಿಂತಿದ್ದು ಒಬ್ಬನು ವೀರನ ಕಾಲಿಗೆ ಎರಗುತ್ತಿದ್ದಾನೆ. ಒಬ್ಬಳ ರುಂಡವನ್ನು ಕತ್ತರಿಸಿದ್ದು ರುಂಡವು ಬದಿಗಿದೆ. ವೀರನಿಗೆ ಛತ್ರಿಯನ್ನು ಹಿಡಿಯಲಾಗಿದೆ. ಮೇಲ್ಗಡೆ ಒಂದು ಸಾಲಿನಲ್ಲಿ ಆಕಳುಗಳಿವೆ. ಇದರ ಮೇಲ್ಗಡೆ ಮಡಿದ ವೀರನನ್ನು ಅಪ್ಸರೆಯರು ಒಯ್ಯುತ್ತಿದ್ದಾರೆ. ಇದರ ಮೇಲೆ ಶಿವಲಿಂಗದ ಮೇಲೆ ವೀರ ನಿಂತಿದ್ದಾನೆ.

ವೀರಗಲ್ಲುಗಳು ಅಫಜಲ್‌ಪುರ, ಆತನೂರು (ಅಫಜಲಪುರ ತಾ.) ಮಡಿವಾಳ (ಆಳಂದ ತಾ.) ಮಿರ್‍ಯಾಣ (ಚಿಂಚೊಳ್ಳಿ ತಾ.) ಕರ್ದಾಳ್ಳಿ, ಕಮರವಾಡಿ, ಕದರಗಿ, ದಿಗ್ಗಾವಿ, ಜೀವಣಗಿ, ಭರತನೂರಿ ಮುಧೋಳ ಇತ್ಯಾದಿ ಕಡೆಗೆ (ಚಿತ್ತಾಪುರ ತಾ.) ಕೊಡ್ಲಿ ಇತ್ಯಾದಿ ಕಡೆಗಳಲ್ಲಿದೆ. ಹನುಮನಹಳ್ಳಿ, ದಿಗ್ಗಾಂತ್ರಿಯ ಶಾಂತಲಿಂಗೇಶ್ವರ ದೇವಾಲಯ ಮತ್ತು ಕಮರವಾಡಿಯ ಶಂಭುಲಿಂಗ ದೇವಾಲಯದ ವೀರಗಲ್ಲುಗಳು ಗೋಗ್ರಹಣಕ್ಕೆ ಸಂಬಂಧಿಸಿವೆ. ಕರ್ದಾಳ್ಳಿಯ ವೀರಗಲ್ಲಿನ ವೀರ ಮತ್ತು ಕುದುರೆ ಸವಾರಿ ಮಾಡುವ ಯೋಧರ ಹೋರಾಟವಿದೆ. ಇನ್ನೊಂದು ಶಿಲ್ಪದಲ್ಲಿ ವೀರ ಮತ್ತು ಕತ್ತಿ ಗುರಾಣಿ ಹಿಡಿದು ನಿಂತ ವೈರಿಗಳು ಯುದ್ಧಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ. ಅಲ್ಲಿಯ ಮೂರು ವೀರಗಲ್ಲುಗಳಲ್ಲಿ ಕೇವಲ ನಿಂತ ವೀರರ ಶಿಲ್ಪಗಳಿವೆ. ಒಂದು ಒಡೆದಿದ್ದು ಅದರಲ್ಲಿ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವುದನ್ನು ಮತ್ತು ವೀರ ಶಿವಲಿಂಗದ ಮುಂದೆ ಕುಳಿತಿರುವುದನ್ನು ಚಿತ್ರಿಸಲಾಗಿದೆ. ಅಲ್ಲಿಯ ಒಂದು ವೀರಗಲ್ಲಿನಲ್ಲಿ ಮೊದಲ ಫಲಕದಲ್ಲಿ ಬಂದೂಕುಗಳನ್ನು ಹಿಡಿದು ನಿಂತ ಹತ್ತು ವೀರರಿದ್ದಾರೆ. ಎರಡನೇ ಫಲಕದಲ್ಲಿ ನಾಲ್ವರು ಬಂದೂಕನ್ನು (?) ಹಿಡಿದು ನಿಂತಿರುವರು. ಮೂರರಲ್ಲಿ ಇಬ್ಬರು ಕತ್ತಿ ಹಿಡಿದ ಕುದುರೆ ಸವಾರರು ಮತ್ತು ಕಾಲ್ದಳಗಳಿವೆ. ನಾಲ್ಕರಲ್ಲಿ ಮೂರು ಕುದುರೆ ಸವಾರಿದ್ದಾರೆ. ಕೊನೆಯ ಭಾಗದಲ್ಲಿ ಮಡಿದ ವೀರನು ಶಿವಲಿಂಗದ ಮುಂದೆ ಕುಳಿತಿರುವನು.

ಕಡ್ಲದಲ್ಲಿ (ಸೇಡಂ ತಾ.) ಮೂರು ವೀರಗಲ್ಲುಗಳಿವೆ. ಹನುಮನ ಹಳ್ಳಿಯಲ್ಲಿ ಒಂದು ವೀರಗಲ್ಲಿದೆ. ಎರಡು ಚಿಟಗೇರ (ಬಿ)ನಲ್ಲಿವೆ. ವೀರಗಲ್ಲುಗಳು ಕೊಳಕುಂದ ಮತ್ತು ಸಿಂಧನ ಮಡುಗಳಲ್ಲಿವೆ. ಚಿಟಗೇರ (ಬಿ)ಯ ಮಾರುತಿ ಮಂದಿರದ ಒಂದು ವೀರಗಲ್ಲಿನಲ್ಲಿ ಗೋಗ್ರಹಣದ ದೃಶ್ಯವಿದೆ. ಕೊಳಕುಂದದ ಎರಡು ವೀರಗಲ್ಲುಗಳಲ್ಲಿ ಇಬ್ಬರು ವೀರರು ಬಿಲ್ಲನ್ನು ಹಿಡಿದು ಹೋರಾಡುತ್ತಿರುವರು. ಮೇಲ್ಗಡೆ ಮಡಿದ ವೀರನನ್ನು ಅಪ್ಸರೆಯರು ಒಯ್ಯುತ್ತಿರುವರು. ಇನ್ನೊಂದರಲ್ಲಿ ವೀರನು ಉದ್ದವಾದ ಈಟಿಯನ್ನು ವೈರಿಗೆ ತಿವಿದಿದ್ದು ಮೇಲಿನ ಭಾಗದಲ್ಲಿ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವರು. ಮುಧೋಳದ ರಾಮಲಿಂಗೇಶ್ವರ ಗುಡಿ ಮುಂದೆ ಮೂರು ವೀರಗಲ್ಲುಗಳಿವೆ. ವಡಗೇರಿ(ಜೇವರ್ಗಿ ತಾ.)ಯಲ್ಲಿ ವೀರಗಲ್ಲಿದೆ. ಹರಟಗಿ (ಸುರಪುರ ತಾ.)ಯ ಭೀಮನಗುಡಿ ಮುಂದೆ ನಾಲ್ಕು ವೀರಗಲ್ಲುಗಳಿವೆ. ಒಂದರಲ್ಲಿ ತುರುಗಾಳದಲ್ಲಿ ಮಡಿದ ತನ್ನಣ್ಣನಿಗಾಗಿ ಈ ವೀರಗಲ್ಲನ್ನು ರೇವಯ್ಯ ನಿಲ್ಲಿಸಿದನೆಂದು ಹೇಳಲಾಗಿದೆ.

ಕಾಳಗಿಯ ವೀರಗಲ್ಲು ಕಾಳೇಶ್ವರ ದೇವಾಲಯ ಮುಂದಿದೆ. ಅದರಲ್ಲಿರುವ ನಾಲ್ಕು ಪಟ್ಟಿಕೆಗಳಲ್ಲಿ ಎರಡರಲ್ಲಿ ಹೋರಾಟದ, ಒಂದರಲ್ಲಿ ವೀರನನ್ನು ಒಯ್ಯುವುದು ಮತ್ತು ಕೊನೆಯದರಲ್ಲಿ ದೇವರ ಸಾನ್ನಿಧ್ಯದಲ್ಲಿ ವೀರ ಇರುವುದನ್ನು ಚಿತ್ರಿಸಿಲಾಗಿದೆ. ಮಡಿಯಾಳ (ಆಳಂದ ತಾ.)ದಲ್ಲಿ ಒಂದು ವೀರಗಲ್ಲಿದೆ. ಮಿರ್‍ಯಾಣ (ಚಿಂಚೊಳ್ಳಿ ತಾ.) ಮಾರುತಿ ಗುಡಿ ಮುಂದೆ ವೀರಗಲ್ಲಿದೆ. ಈ ಊರು ಹೊರಗಿನ ಈಶ್ವರ ಗುಡಿ ಮುಂದೆ ಒಂದು ವೀರಗಲ್ಲಿದೆ. ಭರತನೂರ (ಚಿತಾಪುರ ತಾ.)ನ ವೀರಗಲ್ಲು, ಕೇಶ್ವಾರದ ಒಂದು ವೀರಗಲ್ಲಿನಲ್ಲಿ ಬಮ್ಮಿ ಸೆಟ್ಟಿಯ ಮರಣದ ವಿವರವಿದೆ. ಕೊಂಡುಗುಳಿ ಪಶ್ಚಿಮಕ್ಕೆ ಮೂರು ಕಿ.ಮೀ. ದೂರದ ಕಣಮೇಶ್ವರದಲ್ಲಿ ನಾಲ್ಕು ವೀರಗಲ್ಲುಗಳಿವೆ. ಗೋಗನೂರಿನ ಮಾರುತಿಗುಡಿ ಮುಂದೆ ಒಂದು ವೀರಗಲ್ಲಿದೆ. ಕೋಡಿ (ಚಿಂಚೊಳ್ಳಿ) ಮಲ್ಲಿಕಾರ್ಜುನ ಗುಡಿ ಹತ್ತಿರ ವೀರಗಲ್ಲುಗಳಿವೆ.

ನರಬೋಳ (ಜೇವರ್ಗಿ ತಾ.), ಗಣಪತಿ ದೇವಾಲಯದಲ್ಲಿ ಎರಡು ವೀರಗಲ್ಲುಗಳಿದ್ದು ಆತನೂರು (ಅಫಜಲಪುರ ತಾಲೂಕು) ಬಸ್ತಿ ಬೊಮ್ಮನ ಗುಡಿಯ ಹತ್ತಿರ ಒಂದು ಶಿಲಾಸ್ತಂಭದಲ್ಲಿ ನಾಲ್ಕು ಮುಖಗಳಲ್ಲಿ ವೀರನು ಹೋರಾಡುವ ದೃಶ್ಯ ಮತ್ತು ಆತ ಕೈಲಾಸ ಸೇರಿದ ಚಿತ್ರಗಳಿವೆ.

ನೆಲೋಗಿ (ಜೇವರ್ಗಿ ತಾ.)ಯಲ್ಲಿ ಎರಡು ವೀರಗಲ್ಲುಗಳಿವೆ. ಯಾಳಗಿಯಲ್ಲಿ (ಸುರಪುರ ತಾ.) ಒಂದು ವೀರಗಲ್ಲಿದೆ. ರಟ್ನಲ್ಲು

ನಲ್ಲಿ (ಚಿಂಚೋಳ್ಳಿ ತಾ.) ಎರಡು ವೀರಗಲ್ಲುಗಳಿವೆ. ರಾಜನ ಕೊಳೂರಿನಲ್ಲಿ (ಸುರಪುರ ತಾ.) ವೀರಗಲ್ಲಿದೆ. ಬೋಧನ (ಆಳಂದ ತಾ.)ದಲ್ಲಿ ಮಲ್ಲಿಕಾರ್ಜುನ ದೇವಾಲಯದ ಮುಂದೆ ವೀರಗಲ್ಲಿದೆ. ಭಂಕೂರು (ಚಿತ್ತಾಪುರ ತಾ.) ದಲ್ಲಿ ವೀರಗಲ್ಲು ಗಳಿವೆ. (ಜೇವರ್ಗಿ ತಾ.) ಕುರುಕುಟಂದಲ್ಲಿ (ಸೇಡಂ ತಾ.) ಈ ಕಾಲದ ಎರಡು ವೀರಗಲ್ಲುಗಳು ರಾಮಲಿಂಗ ದೇವಾಲಯ ಬದಿಗಿವೆ. ನೋಡಲು ಈ ಮೂರು ಒಂದೇ ತರಹ ಇವೆ. ತಲಾ ಒಂದಕ್ಕೆ ಎರಡು ಪಟ್ಟಿಕೆಗಳಲ್ಲಿ ದೃಶ್ಯಗಳಿವೆ. ಒಂದರಲ್ಲಿ ಕೆಳಗಡೆ ವೀರನು ನೆಲದ ಮೇಲೆ ಸತ್ತು ಬಿದ್ದ ವೈರಿಯನ್ನು ಮೆಟ್ಟಿ ನಿಂತಿದ್ದಾನೆ. ಕೈಗಳಲ್ಲಿ ಈಟಿಯಿದೆ. ದೇಹದ ಬಲಭಾಗಕ್ಕೆ ವೈರಿ ಪಡೆ ಬಿಟ್ಟ ಬಾಣಗಳು ತೊಡೆಗೆ, ಸೊಂಟಕ್ಕೆ ಮತ್ತು ರಟ್ಟೆಗೆ ನೆಟ್ಟಿವೆ. ಈತ ವಸ್ತ್ರಾಭರಣ ಧರಿಸಿದ್ದಾನೆ. ಮೇಲಿನ ದೃಶ್ಯದಲ್ಲಿ ವಿಮಾನ ಮಾದರಿಯಲ್ಲಿ ಸೇವಕಿಯರಿಬ್ಬರ ನಡುವೆ ಮಡಿದ ವೀರ ವೈರಿಯ ಎದೆಗೆ ಈಟಿಯಿಂದ ಇರಿದಿದ್ದಾನೆ. ವೀರನು ಸತ್ತು ಬಿದ್ದ ವೈರಿಯ ದೇಹದ ಮೇಲೆ ಕಾಲಿಟ್ಟಿರುವನು.

ಮಳಖೇಡದ ವೀರಗಲ್ಲಿನಲ್ಲಿ ಎರಡು ಪಟ್ಟಿಕೆಗಳಲ್ಲಿ ಮೂರು ದೃಶ್ಯಗಳಿವೆ. 1 ರಲ್ಲಿ ವೀರನು ಬಿಲ್ಲನು ವೈರಿಕಡೆ ಮುಖ ಮಾಡಿ ಹಿಡಿದು ನಿಂತಿದ್ದಾನೆ. ವೈರಿ ಗುಂಪಿನ ಒಬ್ಬನು ಆತನ ಮುಂದೆ ಕೈಮುಗಿದು ಕುಳಿತಿದ್ದಾನೆ. ಎರಡರಲ್ಲಿ ಕೆಳಗಡೆ ವೀರನನ್ನು ಅಪ್ಸರೆಯರು ಒಯ್ಯುತ್ತಿದ್ದಾರೆ. ಮೇಲ್ಗಡೆ ವೀರ ಲಿಂಗದ ಮುಂದೆ ಕುಳಿತಿದ್ದಾನೆ. ಇನ್ನೊಂದು ಬದಿಗೆ ಕುಳಿತ ನಂದಿಯಿದೆ. ಇದು ಗೋಗ್ರಹಣವನ್ನು ಸೂಚಿಸುತ್ತದೆ. ವಗ್ನೂರಿನ ಎರಡು ದೃಶ್ಯಗಳಲ್ಲಿ ಎಲ್ಲಾ ವಿಧಗಳಿವೆ. 1 ರಲ್ಲಿ ವೀರನು ವೈರಿಗೆ ಈಟಿಯಿಂದ ಇರಿದಿದ್ದಾನೆ. 2 ರಲ್ಲಿ ಸಾಲಾಗಿ ಅಪ್ಸರೆಯರು ವೀರನನ್ನು ಒಯ್ಯುತ್ತಿದ್ದಾರೆ ಮತ್ತು ಬದಿಗೆ ವೀರನು ಲಿಂಗದ ಮೇಲೆ ನಿಂತಿರುವನು. ಕುಕ್ಕುಂದ ಗ್ರಾಮದ ಮಾರುತಿ ಗುಡಿಯ ಹೊರಗೋಡೆಯ ಒಂದನೆಯ ವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವುದನ್ನು ಪ್ರಮುಖವಾಗಿ ಚಿತ್ರಿಸಲಾಗಿದೆ. ತನ್ನ ಎಡಗೈಯಿಂದ ಎದುರಾಳಿಯ ಎದೆಯನ್ನು ಹಿಡಿದಿದ್ದಾನೆ. ಈ ದೃಶ್ಯದ ಮೇಲೆ ಅಪ್ಸರೆಯರು ವೀರನನ್ನು ಒಯ್ಯುತ್ತಿರುವರು. ಅದರ ಮೇಲೆ ಮಡಿದ ವೀರನು ಲಿಂಗದ ಮುಂದಿರುವನು ಮತ್ತು ಬದಿಗೆ ಸೂರ್ಯನ ಚಿತ್ರವಿದೆ. ಅಲ್ಲಿಯ ಎರಡನೆಯ ವೀರಗಲ್ಲು ಮತ್ತು ಬೆಟಗೇರಿ (ಬಿ) ಯ ಒಂದು ಶಿಲ್ಪ ಗೋಗ್ರಹಣಕ್ಕೆ ಸೀಮಿತವಾಗಿದೆ. ಕುಕ್ಕುಂದ ಗ್ರಾಮದ ವೀರಗಲ್ಲಿನಲ್ಲಿ ಗೋಗ್ರಹಣದ ಬಗ್ಗೆ ತಿಳಿಸಲು ಹಸುಗಳ ಸಾಲನ್ನು ಯುದ್ಧ ದೃಶ್ಯದ ಮೇಲೆ ಚಿತ್ರಿಸಲಾಗಿದೆ. ಈ ಯುದ್ಧದ ದೃಶ್ಯದಲ್ಲಿ ಪ್ರಮುಖವಾಗಿ ತೋರಿಸಿದ ವೀರನು ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುವನು. ಆತನ ಎದುರಾಳಿಯನ್ನು ಕಿರಿದಾಗಿ ಚಿತ್ರಿಸಲಾಗಿದೆ. ಅದರ ಮೇಲೆ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವರು. ಈ ವೀರಗಲ್ಲಿನ ಬದಿಗಿದ್ದ ಇನ್ನೊಂದು ವೀರಗಲ್ಲಿನಲ್ಲಿ ಪ್ರಮುಖವಾಗಿ ಚಿತ್ರಿಸಿದ ನಿಂತ ವೀರನಿದ್ದಾನೆ. ಆತನ ಸೊಂಟಕ್ಕೆ ಮಡಿಚಿದ ಕೈಯಲ್ಲಿ ಕಠಾರಿಯಿದೆ. ಎಡಗೈಯನ್ನು ಮಡಚಿ ಎದೆಯನ್ನು ಹಿಡಿದಿದ್ದಾನೆ. ಮೇಲೆ ಅವನು ಲಿಂಗದ ಮೇಲೆ ಕುಳಿತಿರುವನು.

ಅರೆಬೊಮ್ಮನಹಳ್ಳಿ ಗ್ರಾಮದ ಮಲ್ಲಿಕಾರ್ಜುನ ಗುಡಿಯಲ್ಲಿರುವ ವೀರಗಲ್ಲಿನ ಮೇಲಿನ ಒಂದು ಭಾಗವಿದೆ. ಅದರಲ್ಲಿ ವೀರನು (ಮಡಿದ) ಎತ್ತರದ ಪೀಠದ ಮೇಲೆ ಬಲಗೈಯನ್ನು ಬಗ್ಗಿಸಿ ಕುಳಿತಿರುವನು. ಬೆನ್ನಿಗೆ ದಿಂಬನ್ನು ಇಟ್ಟುಕೊಂಡಿರುವನು. ಅವನ ಬಲಕ್ಕೆ ಒಬ್ಬ ಮಹಿಳೆಯು ಕುಳಿತಿರುವಳು. ಬಹುಶಃ ಅವಳು ಅವನ ಮಡದಿಯಿರಬೇಕು. ಅವನ ಎಡಗೈ ಬದಿಗೆ ಒಬ್ಬ ಸೇವಕಿಯಿರುವಳು. ಕುಳಿತ ವೀರನ ಕುತ್ತಿಗೆಯಿಂದ ಉದ್ದ ಈಟಿಯ ಹಾದಿದೆ. ಅವನು ಬಲಗೈಯನ್ನು ಬಗ್ಗಿಸಿ ಸೊಂಟಕ್ಕೆ ಇಟ್ಟಿರುವನು ಮತ್ತು ಎಡಗೈಯನ್ನು ಎತ್ತಿ ಹಿಡಿದಿದ್ದಾನೆ. ಆ ಕೈಯಲ್ಲಿ ಒಂದು ವಸ್ತುವನ್ನು (?) ಹಿಡಿದ ಹಾಗೆ ಕಾಣುತ್ತದೆ.

ಬೆಟಗೇರಿ (ಬಿ) ಗ್ರಾಮದ ಊರಗಸಿಯಲ್ಲಿ ಒಂದು ವೀರಗಲ್ಲಿನ ಪ್ರಮುಖವಾಗಿ ವೀರನನ್ನು ಚಿತ್ರಿಸಲಾಗಿದೆ. ಮೇಲಿನ ಭಾಗದಲ್ಲಿ ಮಡದಿ ವೀರನನ್ನು ಅಪ್ಸರೆಯರಿಬ್ಬರು ಒಯ್ಯುತ್ತಿರುವರು. ಬದಿಗೆ ಲಿಂಗವಿದೆ. ಹನುಮನಹಳ್ಳಿ ಮಾರುತಿ ಮಂದಿರದ ಮುಂದಿರುವ ವೀರಗಲ್ಲಿನ ಪ್ರಮುಖವಾಗಿ ಬಿಲ್ಲು ಬಾಣ ಹಿಡಿದ ಎದುರಾಳಿ (ಕಿರುಚಿತ್ರ) ಸಂಗಡ ಯುದ್ಧ ಮಾಡುತ್ತಿರುನು. ಅದರ ಮೇಲೆ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವುದು ಹಾಗೂ ಅದರ ಮೇಲೆ ಲಿಂಗದ ಮುಂದೆ ಮಡಿದ ವೀರನು ಕುಳಿತಿರುವುದನ್ನು ಚಿತ್ರಿಸಲಾಗಿದೆ.

ಕುಕ್ಕುಂದ ಗ್ರಾಮದ ಒಂದು ವೀರಗಲ್ಲಿನಲ್ಲಿ ಪ್ರಮುಖವಾಗಿ ಎಡಗೈಯಲ್ಲಿ ಕತ್ತಿಯನ್ನು ಬಲಗೈಯಲ್ಲಿ ಗುರಾಣೀಯನ್ನು ಹಿಡಿದ ವೀರನಿದ್ದಾನೆ. ಆತನ ಮೇಲೆ ಮಡಿದ ವೀರನನ್ನು ಒಯ್ಯುವ ಚಿತ್ರವಿದೆ. ಅದರ ಮೇಲೆ ಮಡಿದ ವೀರ ಲಿಂಗದ ಮುಂದೆ ಕುಳಿತಿರುವನು. ಈ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಕತ್ತಿಯನ್ನು ಹಿಡಿದಿರುವುದರಿಂದ ಇವನು ಎಡಗೈ ಭಂಟನೆನ್ನಬಹುದು.

ಕೊಳಕುಂದ ಗ್ರಾಮದ ಒಂದು ವೀರಗಲ್ಲಿನಲ್ಲಿ ವೀರನು ಬಿಲ್ಲಿನಿಂದ ಎದುರಾಳಿ ಸಂಗಡ ಯುದ್ಧಮಾಡುತ್ತಿರುವನು. ಆತನ ಮೇಲೆ ಮಡಿದ ವೀರನನ್ನು ಅಪ್ಸರೆಯರಿಬ್ಬರು ಒಯ್ಯುತ್ತಿರುವರು.ಎರಡು ದೃಶ್ಯಗಳುಳ್ಳ ಈ ವೀರಗಲ್ಲು ಮುಗ್ನೋರಿನ (ಸೇಡಂ ತಾ.) ರಾಮಲಿಂಗೇಶ್ವರ ದೇವಾಲಯ ಮುಂದಿದೆ. ಕೆಳಗಿನತರ ದೃಶ್ಯದಲ್ಲಿ ವೀರನು ಶೂಲದಿಂದ ವೈರಿಯನ್ನು ಇರಿದಿದ್ದಾನೆ. ಈರ್ವರು ನಿಂತಿದ್ದು ವೀರನನ್ನು ಭವ್ಯವಾಗಿ ಚಿತ್ರಿಸಿ ಅವನ ಮಹತ್ವವನ್ನು ಇಲ್ಲಿ ಹೆಚ್ಚಿರುವುದು ಸೂಚಿತವಾಗುತ್ತದೆ. ಚಿಕ್ಕ ಗಾತ್ರದಲ್ಲಿ ವೀರನ ಬಲಗಾಲಿನ ಪಕ್ಕದಲ್ಲಿ ಒಂದು ಕುದುರೆ ಸವಾರನ ಚಿತ್ರವೂ ಇದೆ. ಎರಡನೇ ತರದಲ್ಲಿ ಏಕಸಾಲಿನಲ್ಲಿ ಮಡಿದ ವೀರನನ್ನು ಇಬ್ಬರು ಅಪ್ಸರೆಯರು ಹೊತ್ತೊಯ್ಯುತ್ತಿರುವರು. ಇದರ ಎಡಗಡೆಗೆ ವೀರ ಶಿವಲಿಂಗಕ್ಕೆ ಮುಖಮಾಡಿ ಕೈಮುಗಿದು ಕುಳಿತಿರುವನು.

ದೋರೆನಹಳ್ಳಿಯಲ್ಲಿ (ಶಹಪುರ ತಾ.) ಮುರಿದ ವೀರಗಲ್ಲಿದೆ. ಅದರ ನಡುವಿನ ಪಟ್ಟಿಕೆಯಲ್ಲಿ ಶಾಸನವಿದೆ. ಆಕಳುಗಳನ್ನು ಏಕಸಾಲಿನಲ್ಲಿ ಚಿತ್ರಿಸಲಾಗಿದೆ.

ಚಿಂಚನಸೂರಿನ ವೀರಗಲ್ಲಿನಲ್ಲಿ ಎರಡು ದೃಶ್ಯಗಳಿವೆ. ಕೆಳಗಿನ ದೃಶ್ಯದಲ್ಲಿ ವೀರನು ಭರದಿಂದ ಓಡಿಬರುವ ಹುಲಿಯ ಬಾಯಿಗೆ ಭರ್ಚಿಯನ್ನು ತಿವಿದು ನಿಂತಿದ್ದಾನೆ. ಮೇಲಿನ ದೃಶ್ಯ ದಲ್ಲಿ ಮಡಿದ ಈ ವೀರನನ್ನು ಅಪ್ಸರೆಯರು ಹೊತ್ತೊಯ್ಯು ತ್ತಿರುವರು.

ಮಿರ್‍ಯಾಣದ ವೀರಗಲ್ಲಿನಲ್ಲಿ 3 ದೃಶ್ಯಗಳಿವೆ. ಕೆಳದೃಶ್ಯದಲ್ಲಿ ವೀರನು ಉದ್ದ ಭರ್ಜಿಯಿಂದ ವೈರಿಯ ದೇಹಕ್ಕೆ ಇರಿದು ನಿಂತಿದ್ದಾನೆ. ಅವನು ಹೊಡೆಯಲು ಬಲಗೈಯನ್ನು ಮೇಲೆಕ್ಕೆತ್ತಿ ನಿಂತಿದ್ದಾನೆ. ನಡುವೆ ಒಬ್ಬ ಸೇವಕ ನಿಂತಿರುವನು. ಎರಡನೆಯ ದೃಶ್ಯದಲ್ಲಿ ವೀರ ಭರ್ಚಿಯಿಂದ ಕುದುರೆ ಸವಾರನಿಗೆ ಇರಿದು ನಿಂತಿದ್ದಾನೆ. ಇದರಿಂದ ಕುದುರೆ ಸವಾರ ತನ್ನ ತಲೆಯನ್ನು ಬಗ್ಗಿಸಿಕೊಂಡು ಕುಳಿತಿದ್ದಾನೆ. ಮೂರರಲ್ಲಿ ಎತ್ತರ ವೇದಿಕೆಯ ಮೇಲೆ ಮಡಿದ ವೀರನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ಬಲಗೈಯನ್ನು ಬಲತೊಡೆಯ ಮೇಲಿಟ್ಟಿದ್ದಾರೆ. ಎಡಗೈಯನ್ನು ಉದ್ದವಾಗಿ ಮಡಚಿದ ಮಂಡೆಯ ಮೇಲೆ ಮುಂದಕ್ಕೆ ಚಾಚಿ ಕೈಯನ್ನು ಬಗ್ಗಿಸಿ ಇಟ್ಟಿದ್ದಾನೆ. ಅ ಸೇವಕಿಯರಿಬ್ಬರು ಆತನ ಬದಿಗಳಲ್ಲಿ ಚೌರಿ ಹಿಡಿದು ನಿಂತಿರುವರು.

ಆತ್ಮಾಹುತಿ ಸ್ತಂಭ: ಆತನೂರಿನಲ್ಲಿ (ಗುಲ್ಬರ್ಗಾ ಜಿ.) ವಿಶಿಷ್ಟವಾದ ಉದ್ದನೆಯ ಏಕ ಸ್ತಂಭವನ್ನು ನಿಲ್ಲಿಸಲಾಗಿದೆ. ಅದಕ್ಕೆ ಚೌಕಾಕಾರ ಪೀಠವಿದೆ. ಕಾಂಡ ಭಾಗದಲ್ಲಿ ಕ್ರಮವಾಗಿ ಎರಡು ಚೌಕ ಪಟ್ಟಿಗಳ ನಡುವೆ ಉದ್ದನೆಯ ಅಷ್ಟಮುಖಗಳ ಪಟ್ಟಿಕೆಯಿದೆ. ಮೇಲ್ಗಡೆ ಉದ್ದನೆಯ ಆಯತಾಕಾರ ಪಟ್ಟಿಕೆಯಿದೆ. ಇದರ ಮೇಲ್ಗಡೆ ವೃತ್ತ ಮತ್ತು ಕಳಸ ತುದಿಯಿದೆ. ಕೆಳಗಿನ ಪಟ್ಟಿಕೆಯಲ್ಲಿ ಕುಂಭ ಇತ್ಯಾದಿ ಚಿತ್ರಗಳಿವೆ. ನಡುವಿನ ಪಟ್ಟಿಕೆ ಸರಳವಾಗಿದೆ. ಮೇಲಿನ ಆಯತಕಾರದ ಚೌಕ ಪಟ್ಟಿಕೆಯ ತಲಾ ಒಂದು ಮುಖಗಳಲ್ಲಿ ಮೂರು ಅಂಕಣದಲ್ಲಿ ವಿಭಿನ್ನ ಚಿತ್ರಗಳಿವೆ. ಇದೊಂದು ಆತ್ಮಾಹುತಿಯ ಅಪರೂಪದ ಸ್ತಂಭವಾಗಿದೆ.

ಕಿರಣ ಸ್ತಂಭ: ಕಾಳಗಿಯಲ್ಲಿ ಒಂದು ಅಪರೂಪದ ಕಿರುಸ್ತಂಭದ ಮೇಲ್ಭಾಗದ ಚೌಕ ಪಟ್ಟಿಯ ಹೊರಮಗ್ಗಲಿನಲ್ಲಿ ವಿವಿಧ ಅಲಂಕರಣಗಳಿವೆ. ಅದರ ಮೇಲ್ಭಾಗದಲ್ಲಿ ಕಮಲದ ಅಲಂಕರಣವಿದೆ. ಬುಡಭಾಗ ಚೌಕಪಟ್ಟಿಕೆಗಳಿಂದ ಕೂಡಿದೆ.

ಆತ್ಮಬಲಿದಾನ: ಶಿಲ್ಪ (?) ಮರತೂರಿನಲ್ಲಿ ಒಂದು ಅಪರೂಪದ ಇದೇ ಕಾಲದ ಆತ್ಮ ಬಲಿದಾನ ಶಿಲ್ಪವಿದೆ. ಅದರಲ್ಲಿ ಒಬ್ಬ ವ್ಯಕ್ತಿಯು ಒಂದು ಪೂರ್ಣ ಕುಂಭದ ಮೇಲೆ ಪಾದಗಳನ್ನು ಇಟ್ಟು ಒಬ್ಬ ವ್ಯಕ್ತಿ ಕುಳಿತುಕೊಳ್ಳುವ ರೀತಿಯಲ್ಲಿ ತೋರಿಸಲಾಗಿದೆ. ಬಹುತೇಕ ಕುಂಭದ ಮೇಲಿಟ್ಟ ಶೂಲದ ಮೇಲೆ ಕುಳಿತಿರುವಂತಿದೆ. ಅದರ ತುದಿ ಎದೆಯಿಂದ ಹೊರಬಂದಿದೆ. ಕೈಗಳಲ್ಲಿ ಹಿಡಿದ ಆಯುಧಗಳು ಮತ್ತು ಮುಖಬಾಗ ಶಿಥಿಲವಾಗಿದೆ.

ಮಹಾಸತಿಕಲ್ಲುಗಳು: ಕೋಳಕೂರಿನಿಂದ (ಜೇವರ್ಗಿ ತಾ.) 4 ಕಿ.ಮೀ. ದೂರದ ಜೋಗಿ ಕೊಳ್ಳದಲ್ಲಿರುವ ಮಹಾಸತಿಕಲ್ಲಿನಲ್ಲಿ ಸತಿಯು ಚಿತೆಯಲ್ಲಿ ಹಾರಲು ನಿಂತಿರುವುದನ್ನು ಚಿತ್ರಿಸಲಾಗಿದೆ. ಬಲತೋಳ ಕೈಯನ್ನು ಮೇಲಕ್ಕೆತ್ತಿ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಈ ರೀತಿಯ ಸತಿಕಲ್ಲುಗಳು ಈ ಪ್ರದೇಶದಲ್ಲಿ ವಿರಳ. ಚಿಣಮಗೇರಿಯ (ಅಫಜಲಪುರ ತಾ.) ತ್ರೈಪುರುಷ ದೇವಾಲಯದ ಬಾವಿಕಟ್ಟೆಯ ಮುಂದೆ ಎರಡು ಮಾಸ್ತಿಕಲ್ಲುಗಳನ್ನು ನಿಲ್ಲಿಸಲಾಗಿದೆ. ನೆಲೋಗಿ (ಜೇವರ್ಗಿ ತಾ.) ಮಾರುತಿ ಗುಡಿ ಮುಂದೆ ಒಂದು ಸತಿಗಲ್ಲಿದೆ. ಭೂತಪುರ (ಚಿಂಚೊಳ್ಳಿ ತಾ.) ಶಾಲೆಯ ಬದಿಯಲ್ಲಿರುವ ಸತಿಕಲ್ಲು, ಕಾಳಗಿ (ಚಿತ್ತಾಪುರ ತಾ.) ಯ ಸತಿಕಲ್ಲು ಅಪರೂಪದ್ದೆನಿಸಿದೆ. ಇದರಲ್ಲಿ ಎರಡು ವಿಭಿನ್ನ ದೃಶ್ಯಗಳಿವೆ. ಕೆಳಗಡೆ ಸವಾರಿಮಾಡುವ ವೀರನು ಕುದುರೆಯನ್ನು ಒಬ್ಬ ಸೇವಕ ಹಿಡಿದು ನಿಂತಿದ್ದಾನೆ. ವೀರ ಉದ್ದವಾದ ಭರ್ಜಿಯನ್ನು ಹಿಡಿದಿದ್ದಾನೆ. ಆತನ ತಲೆ ಬದಿಗಳಲ್ಲಿ ಸೂರ್ಯ ಮತ್ತು ಚಂದ್ರರ ಚಿನ್ಹೆಗಳಿವೆ. ಮೇಲ್ಗಡೆ ಎರಡು ಕೈಗಳನ್ನು ಸಾಂಕೇತಿಕವಾಗಿ ಉದ್ದ ಪಟ್ಟಿಕೆಯ ಮೇಲೆ ನಿಲ್ಲಿಸಿರುವುದೇ ಅಪರೂಪದ ಲಕ್ಷಣ. ಇದರಿಂದ ಇಬ್ಬರು ಸತ್ತಿ ಹೋದರೆಂದು ಇದು ತಿಳಿಸುತ್ತದೆ.

ನಿಷಿಧಿಗಳು: ಭಂಕೂರಿನ (ಚಿತಾಪೂರ ತಾ.) ಜೈನ ಬಸದಿಯಲ್ಲಿ ಒಂದು ನಿಷಿಧಿಯಿದೆ. ಮಳಖೇಡದ ವಿದ್ಯಾನಂದ ನಿಷಧಿಯನ್ನು 1391 ರಲ್ಲಿ ನಿಲ್ಲಿಸಿದ್ದು ತಿಳಿಯುತ್ತದೆ. ಇಲ್ಲಿನ ಜೈನ ಬಸದಿಯಲ್ಲಿ ಒಂದು ನಿಷಿದಿಯಿದೆ. ಕೆಳಭಾಗದಲ್ಲಿ ಜಿನ ದಂಪತಿಗಳು ಬಹುತೇಕ ಸಲ್ಲೇಖನ ವ್ರತವನ್ನು ಆಚರಿಸುತ್ತ ಕುಳಿತಿರುವರು. ಮೇಲಿನ ಭಾಗದಲ್ಲಿ ತೀರ್ಥಂಕರನ ಉಬ್ಬು ಶಿಲ್ಪವಿದೆ. ತಲೆಯ ಮೇಲೆ ತ್ರಿಛತ್ರಿಗಳಿವೆ.

ಗುಲ್ಬರ್ಗ ವಸ್ತುಸಂಗ್ರಹಾಲಯದ ಶಾಸನವುಳ್ಳ ಎರಡು ನಿಷಿಧಿ ಸ್ತಂಭಗಳಿವೆ. ಒಂದರಲ್ಲಿ ಉದ್ದವಾದ ಎರಡು ಚೌಕ ಗೂಡುಗಳಿವೆ. ಕೆಳಗಿನ ಗೂಡಿನಲ್ಲಿ ಜಿನ ಆಚಾರ್ಯರು ಕುಳಿತಿದ್ದಾರೆ. ಕೆಳಗಡೆ ಬದಿಗಳಲ್ಲಿ ವ್ಯಾಸತೋಳು ಮತ್ತು ಕಮಂಡಲಗಳಿವೆ. ಮೇಲಿನ ಗೂಡಿನಲ್ಲಿ ಜಿನನಿದ್ದಾನೆ. ಮೇಲೆ ಛತ್ರಿಗಳಿವೆ. ಕೆಳಗಡೆ ಶಾಸನವಿದೆ. ಇದರ ಬುಡದಲ್ಲಿ ಒಂದು ಕಿರುಗೂಡಿನಲ್ಲಿ ಜಿನ ಭಕ್ತನು ಕೈಮುಗಿದು ಕುಳಿತಿದ್ದಾನೆ. ಈತನ ಮುಂದೆ ಪುಸ್ತಕಗಳನ್ನು ಹೊತ್ತ ವ್ಯಾಸ ಪೀಠವಿದೆ. ಇಲ್ಲಿಯ ಇನ್ನೊಂದು ನಿಷಿಧಿಸ್ತಂಭದಲ್ಲಿ ನಾಲ್ಕು ಮುಖಗಳಲ್ಲಿ ಚಿತ್ರಗಳಿವೆ. ಇದರ ಮೇಲ್ಭಾಗ ಚೂಪಾಗಿದೆ. ಅಷ್ಟ ಮುಖ ಪಟ್ಟಿಕೆಯಿದೆ. ಚೌಕ ಪಟ್ಟಿಕೆಯ 1 ನೆಯ ಮುಖದಲ್ಲಿ ದಂಪತಿಗಳು ನಿಂತ ಜೈನ ಯತಿಯ ಕಡೆ ಮುಖಮಾಡಿ ಕುಳಿತಿದ್ದಾರೆ. ಯತಿ ದಂಪತಿಗಳಿಗೆ ಆಶೀರ್ವದಿಸಲು ಬಲಕೈಯನ್ನು ಮೇಲಕ್ಕೆತ್ತಿ ಹಿಡಿದಿರುವನು. ಮೇಲಿನ ಗೂಡಿನಲ್ಲಿ ಯತಿಯ ಪುಸ್ತಕವನ್ನು ಎಡಗೈಯಲ್ಲಿ ಮತ್ತು ಒಂದು ವಸ್ತುವನ್ನು ಬಲಗೈಯಲ್ಲಿ ಹಿಡಿದು ಕುಳಿತಿದ್ದಾನೆ. ಯತಿಗೆ ಉದ್ದವಾದ ಕಿವಿಗಳಿವೆ. 2ನೇ ಮುಖದಲ್ಲಿ ಗೂಡಿನಲ್ಲಿ ಕೈ ಮುಗಿದು ಕುಳಿತ ದಂಪತಿಗಳಿದ್ದಾರೆ. ಮೇಲಿನ ಗೂಡಿನಲ್ಲಿ ಜೈನಯತಿ ಕುಳಿತಿದ್ದಾನೆ. 3 ನೇ ಮುಖದಲ್ಲಿ ಒಂದು ಗೂಡಿನಲ್ಲಿ ಜೈನಯತಿ ಒಂದು ಕೈಯಲ್ಲಿ ಪುಸ್ತಕವನ್ನು ಇನ್ನೊಂದು ಕೈಯನ್ನು ತೊಡೆಯ ಮೇಲಿಟ್ಟು ಕುಳಿತಿದ್ದಾನೆ. ಮೇಲಿನ ಗೂಡಿನಲ್ಲಿ ಪಾರ್ಶ್ವನಾಥನಿದ್ದಾನೆ. ಆತನ ತಲೆಗೆ ನಾಗ ಹೆಡೆಗಳ ಅಲಂಕರಣವಿದೆ. 4 ನೇ ಮುಖದಲ್ಲಿ ಕೆಳಭಾಗದಲ್ಲಿ ನಾಲ್ವರು ಜಿನ ಭಕ್ತರು ಕೈಮುಗಿದು ಓರೆಯಾಗಿ ಕುಳಿತಿರುವರು. ಮೇಲ್ಗಡೆಯ ಗೂಡಿನಲ್ಲಿ ಕುಳಿತ ತೀರ್ಥಂಕರನಿದ್ದಾನೆ.

ಕೆಂಬಾವಿಯ ಪುರೋಹಿತ ಬಾವಿ ಹತ್ತಿರ ಒಂದು ನಿಷಿಧಿ ಕಂಬವಿದೆ. ಇದರ ಶಾಸನದಲ್ಲಿ ಕುಂದಕುಂದಾನ್ವಯದ ಚಂದ್ರ ಸೇನ ನಂದಿಯ ನಿಷಿಧಿಕಾಸ್ತಂಭವನ್ನು ಹೊನಗುಂದದ ಮಹಾ ಪ್ರಭು ಮತ್ತು ಇನ್ನಿತರರು 1340ರಲ್ಲಿ ನಿಲ್ಲಿಸಿದರೆನ್ನಲಾಗಿದೆ. ಇಲ್ಲಿಯ ಸುಮಾರು 14 ನೇ ಶತಮಾನದ ಇನ್ನೊಂದು ನಿಷಿಧಿ ಕಂಬದಲ್ಲಿ ಕುಂದಕುಂದಾನ್ವಯದ ಮಲದಾರಿದೇವನ ಹೆಸರಿದೆ.


ಗೋಗಿಯ (ಶಹಾಪುರ ತಾ.) ದಕ್ಷಿಣಕ್ಕೆ ಮೂರು ಕಿ. ಮೀ. ಅಂತರದಲ್ಲಿರುವ ಗುಡ್ಡಗಳ ಸಾಲಲ್ಲಿ ಬಂಡೆಯ ಮೇಲೆ ಪಾರ್ಶ್ವ ನಾಥನ ಶಿಲ್ಪವಿದೆ. ಬದಿಗಿನ ಬಂಡೆಗಳ ಮೇಲೆ ಪಾದುಕೆ, ಕಮಂಡಲ ಮತ್ತು ಪಿಂಗಾಣಿಯ ಚಿತ್ರಗಳಿವೆ. ಇವು ಜೈನ ಸಲ್ಲೇಖನ ವ್ರತ ಆಚರಿಸಿ ನಿರ್ವಾಣ ಹೊಂದಿದ ಚಾರಣಗಿರಿ ಇರಬೇಕು.

ಹರಟಗಿಯ (ಸುರಪುರ ತಾ.) ನಿಷಿಧಿ (1234) ಊರ ಅಗಸಿ ಬಾಗಿಲ ಕೋಟೆಯಲ್ಲಿವೆ. ಅದರಲ್ಲಿ ಇಂಗಳೇಶ್ವರಕ್ಕೆ ಅಧೀನದಲ್ಲಿದ್ದ ಮೂಲಸಂಘ ಪುಸ್ತಕಗಚ್ಛ, ದೇಶಿಯ ಗಣದ ಕೊಂದುಕುಂದಾನ್ವಯದ್ವಿಯ ದೇವಚಂದ್ರ ಮುನಿಗಳು ಸಲ್ಲೇಖನ ದಿಂದ ನಿರ್ವಾಣಪಡೆದರೆಂದಿದೆ. ಇದನ್ನು ಒಬ್ಬ ಕಾಳಿಸೆಟ್ಟಿ ಮಾಡಿಸಿದನೆನ್ನಲಾಗಿದೆ. (ಆರ್‌ಎಂಎಸ್)

ಸ್ಮಾರಕಗಳು: (ಬಸವಕಲ್ಯಾಣ) ಹೈದ್ರಾಬಾದ ಕರ್ನಾಟಕ ಪ್ರದೇಶ ದಲ್ಲಿ ಮನೆ ಮಾತಾಗಿರುವ ಬೀದರ ಜಿಲ್ಲೆಯ ಬಸವಕಲ್ಯಾಣ ಇಂದು ಜಗತ್ಪ್ರಸಿದ್ಧ. ಈ ಪಟ್ಟಣ ಇಂದು ತನ್ನದೇ ಆದ ವೈಶಿಷ್ಟ್ಯ ಹೊಂದಿದೆ. ಹಲವಾರು ರಾಜಮನೆತನಗಳು, ಸಂತರು, ಶರಣರು, ವಚನಕಾರರು, ನಡೆದಾಡಿ ನೆಲೆನಿಂತ ನಾಡು ಇದು.

ಬಸವಕಲ್ಯಾಣದಲ್ಲಿ ಅನೇಕ ಸ್ಥಳಗಳಿದ್ದು, ಐತಿಹಾಸಿಕ 300 ಎಕರೆ ವಿಶಾಲವಾದ ತ್ರಿಪುರಾಂತ ಕೆರೆಯೂ ಇದೆ. ಅರಿವಿನ ಮನೆ, ಅಲ್ಲಮಪ್ರಭು ಗದ್ದುಗೆ, ಅಕ್ಕನಾಗಮ್ಮನ ಗುಹೆ (ಮಹಾ ಮನೆ), ಚಾಲುಕ್ಯರ ಕೋಟೆ, ವಸ್ತುಸಂಗ್ರಹಾಲಯ ಹೀಗೆ ಹಲವಾರು ಐತಿಹ್ಯಗಳು ನಮ್ಮ ಸಂಸ್ಕೃತಿಯ ದ್ಯೋತಕವಾಗಿ


ಬಸವಕಲ್ಯಾಣದ ಕೋಟೆ


ನೃತ್ಯ ಸಭಾಂಗಣ, ಬಸವಕಲ್ಯಾಣ

ಇಂದಿಗೂ ಕಾಣಬಹುದು. ಅಂದು 12ನೆಯ ಶತಮಾನದಲ್ಲಿ ತಪಸ್ಸು ಗೈದ ಅರಿವಿನ ಮನೆಯಿದೆ. ಇಂದಿಗೂ ಅಲ್ಲಿ ಅಣ್ಣನವರ ಪಾದುಕೆ, ಮೂರ್ತಿ ಸುಮಾರು 20 ಅಡಿ ಗುಹೆ ಕಾಣಬಹುದು. ಅಲ್ಲಮಪ್ರಭು ಗುಹೆ (ಗದ್ದುಗೆ), ಅಕ್ಕನಾಗಮ್ಮನ ಮಹಾಮನೆ ಯಲ್ಲಿ ಅವರ ಮೂರ್ತಿಗಳು, ವಚನಗಳನ್ನು ಕಾಣಬಹುದು.

ಕಲ್ಯಾಣ ಚಾಲುಕ್ಯರ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿನ ಐತಿಹಾಸಿಕ ಬೃಹತ್ ಕೋಟೆ ಇಂದಿಗೂ ತನ್ನ ಅಸ್ತಿತ್ವ ಉಳಿಸಿ ಕೊಂಡಿದೆ. ಮನೋಹರವಾದ ಕೋಟೆ ವಿಶಾಲವಾದ ಪ್ರಾಂಗಣ, ಮಹಾದ್ವಾರ, ಬಂದಿಖಾನೆ, ದರ್ಬಾರ್, ತೋಪುಗಳು ಬಾರೂದ್‌ಖಾನಾ, ಕುದುರೆಯ ಲಾಯಗಳು, ನೀರಿನ ಕಾರಂಜಿ, ರಾಣಿಯರ ಸ್ನಾನಗೃಹ, ಲೆಕ್ಕಪತ್ರ ಕೊಠಡಿಗಳನ್ನು ಕಾಣಬಹುದು.

ಕೋಟೆಯನ್ನು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲಾಗಿದ್ದು, ತುಂಬಾ ವಿಸ್ತೃತ ವಿಶಾಲ, ನಯನ, ಮನೋಹರವಾಗಿದೆ. ಕರಿಯ ಕಲ್ಲಿನಿಂದ ನಿರ್ಮಿಸಿದ ಕೋಟೆ ಯನ್ನು ನೋಡಲು ಎರಡು ಕಣ್ಣುಗಳು ಸಾಲದು. ಚಾಲುಕ್ಯರ ಅನಂತರ ಯವನರು ದೇವಸ್ಥಾನಗಳನ್ನು ಧ್ವಂಸಗೊಳಿಸಿ ಕೋಟೆಯ ಕೆಲ ಭಾಗಗಳನ್ನು ಪುನರ್‌ನಿರ್ಮಾಣ ಮಾಡಿ, ದೇವಸ್ಥಾನದ ಕಲ್ಲುಗಳನ್ನು ಕೋಟೆಗಳಲ್ಲಿ ಅಳವಡಿಸಿದ್ದನ್ನು ಕಾಣ ಬಹುದು. ಈಗ ಕೋಟೆಯ ಕೆಲವೊಂದು ಭಾಗಗಳು ಶಿಥಿಲಾ ವಸ್ಥೆಯಲ್ಲಿವೆ.

ಕಲ್ಯಾಣ ಚಾಲುಕ್ಯರ ಆಡಳಿತ ಪದ್ಧತಿ, ಸಾಮಾಜಿಕ ಸ್ಥಿತಿಗತಿ, ಆಹಾರ ಜೀವನ ಪದ್ಧತಿ, ಕಲೆ, ಸಂಸ್ಕೃತಿ ಸಾಹಿತ್ಯ ಎಲ್ಲ ತಿಳಿಯ ಬೇಕಾದರೆ ಅಲ್ಲಿನ ವಸ್ತು ಸಂಗ್ರಹಾಲಯ ತಪ್ಪದೇ ನೋಡಬೇಕು. ವಸ್ತು ಸಂಗ್ರಹಾಲಯದಲ್ಲಿ ರಾಜರ ಉಡುಪುಗಳು, ಅನೇಕ ಮೂರ್ತಿಗಳು, ರಾಜ-ರಾಣಿಯರ ಪಲ್ಲಕ್ಕಿಗಳು ತೋಪು-ಗುಂಡುಗಳು, ಶಾಸನಗಳು, ಅಂದಿನ ಅವಶೇಷಗಳನ್ನು ಸಂಗ್ರಹಿಸಿ ಡಲಾಗಿದೆ. ಕಲ್ಯಾಣದ ಹೃದಯ ಭಾಗದಲ್ಲಿ ಸುಮಾರು 100 ಅಡಿಗಿಂತಲೂ ಹೆಚ್ಚು ಎತ್ತರದ ಗೋಪುರ ಹೊಂದಿರುವ ಮಂದಿರವಿದ್ದು, ಸುತ್ತಲೂ ಅನೇಕ ಮೂರ್ತಿಗಳನ್ನು ಹೊಂದಿದೆ.

(ಬಿಪಿಬಿ)

ಸ್ವಾ

ಸ್ವಾಮಿ ಎಸ್.ಜಿ: ಕವಿ, ಕಲಾವಿದ, ಪತ್ರಕರ್ತ. ಫೋಟೋ ತೆಗೆಯುವ ವ್ಯಕ್ತಿಯ ಫೋಟೋಗಳೇ ಬರುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ಜೀವನದ ವಿಪರ್ಯಾಸ. ತಮ್ಮ ಹವ್ಯಾಸಗಳಾದ ಛಾಯಾಗ್ರಹಣ, ಸಂಗೀತ, ಕಾವ್ಯದೊಂದಿಗೆ ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಹೈದ್ರಾಬಾದ್ ಕರ್ನಾಟಕದ ಸೃಜನಶೀಲ ಮನಸ್ಸುಗಳಿಗೆ ಬಹು ಪರಿಚಿತವಾದವರು.

ಪ್ರಸಿದ್ಧ ವ್ಯಕ್ತಿಗಳ ಮತ್ತು ಸುಂದರ ನಿಸರ್ಗದ ಚಿತ್ರಗಳನ್ನು ಸೆರೆಹಿಡಿದಿರುವ ಇವರು ತಮ್ಮ ಸಂಗೀತದ ಗುರುವಿನ ಗುರುವಾದ ಮಲ್ಲಿಕಾರ್ಜುನ ಮನಸೂರರ ನೂರಕ್ಕೂ ಹೆಚ್ಚಿನ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಇವರ ಮನೆ 'ನೀಲ ಗಂಗಾ' ಪ್ರವೇಶಿಸಿದರೆ ಪುಟ್ಟ ಕಲಾಭವನ ಒಂದರ ಒಳಹೊಕ್ಕ ಅನುಭವ ನಮ್ಮದಾಗುತ್ತದೆ. 1910 ರಿಂದ ಇಲ್ಲಿಯವರೆಗಿನ ಪ್ರಸಿದ್ಧ ಹಿಂದೂಸ್ತಾನಿ ಸಂಗೀತಗಾರರ ಸುಮಾರು 600ಕ್ಕೂ ಮಿಕ್ಕಿ ಧ್ವನಿ ಸುರುಳಿಗಳನ್ನು ಸಂಗ್ರಹಿಸಿರುವ ಇವರು ಪ್ರಸಿದ್ಧ ಸಂಗೀತಗಾರರಾಗಿದ್ದ ದಿ. ಪಂಡಿತ ಸಿದ್ಧರಾಮ ಜಂಬಲದಿನ್ನಿ ಅವರ ಹತ್ತಿರ ಹಾಗೂ ಈಗ ಸಂಗೀತ ಕ್ಷೇತ್ರದಲ್ಲಿ ವಿಶ್ವವಿಖ್ಯಾತ ಹೆಸರು ಮಾಡುತ್ತಿರುವ ಪಂಡಿತ ನರಸಿಂಹಲು ವಡವಾಟಿ ಅವರ ಹತ್ತಿರ ಹಿಂದೂಸ್ತಾನಿ ಸಂಗೀತದ ಅಭ್ಯಾಸ ಮಾಡಿದ್ದರು. (ಎಸ್‌ಎಚ್‌ಷ)

ಸ್ವಾಮಿರಾವ್ ಕುಲಕರ್ಣಿ: ರಂಗಭೂಮಿಯಲ್ಲಿ ನಟನೆ, ನಿರ್ದೇಶನ, ಸಾಹಿತ್ಯ, ಗೀತರಚನೆ, ಸಂಘಟಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಸ್ವಾಮಿರಾವ್ ಕುಲಕರ್ಣಿ 1967 ರಲ್ಲಿ ಪ್ರೌಢ ಶಾಲೆಯಲ್ಲಿ 8ನೇ ತರಗತಿ ಓದುವಾಗಲೇ ರಂಗ ಅಭಿನಯದಲ್ಲಿ ಆಸಕ್ತಿ ರೂಪಿಸಿಕೊಂಡು, ಆ ಕಾಲದಲ್ಲಿ ಸಗರ ಕೃಷ್ಣಚಾರ್ಯರು ರಚಿಸಿದ ಜನಪ್ರಿಯ ಹಾಸ್ಯ ನಾಟಕ 'ಜೀವನ ಸಂಸಾರ' ದಲ್ಲಿ ಪ್ರಪ್ರಥಮವಾಗಿ ಅಭಿನಯಿಸುವ ಮೂಲಕ ರಂಗ ಕ್ಷೇತ್ರ ಪ್ರವೇಶಿಸಿದವರು.



1971ರಲ್ಲಿ ಎಲ್.ವಿ.ಡಿ. ಕಾಲೇಜು ರಾಯಚೂರಿನಲ್ಲಿ ಪದವಿ ಅಧ್ಯಯನದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಡಾ. ಚೆನ್ನಣ್ಣ ವಾಲೀಕರ ಅವರ ಮಾರ್ಗದರ್ಶನದಲ್ಲಿ ಹಾಗು 1974ರ ಸಾಲಿನಲ್ಲಿ ಎಂ.ಎ ಅಧ್ಯಯನದಲ್ಲಿ ಹಲವು ನಾಟಕಗಳಲ್ಲಿ ಪಾತ್ರ ನಿರ್ವಹಿಸಿರುವರು. 1975 ರಿಂದ ನೃಪತುಂಗ ಬರಹಗಾರರ ಮತ್ತು ಕಲಾವಿದರ ಸಂಘ, ಕಲಬುರ್ಗಿ ಕನ್ನಡ ಸಾಹಿತ್ಯ ಸಂಘ, 1985 ರಲ್ಲಿ 'ರಂಗಮಾಧ್ಯಮ' ಹವ್ಯಾಸಿ ನಾಟಕ ಸಂಘದ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

1985 ರಿಂದ ಕಲಬುರ್ಗಿ ಆಕಾಶವಾಣಿಯ 'ಬಿ' ಮತ್ತು 'ಬಿ ಹೈ' ಶ್ರೇಣಿಯ ಕಲಾವಿದರಾಗಿ ಆಯ್ಕೆಗೊಂಡು ಇಲ್ಲಿಯವರೆಗೆ 45 ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1978 ರಿಂದ ಈ ವರೆಗೆ ದೂರದರ್ಶನದ 9 ನಾಟಕಗಳನ್ನು ರಚಿಸಿದ್ದು, 6 ನಾಟಕಗಳಲ್ಲಿ ನಟಿಸಿದ್ದಾರೆ. 1988 ರಲ್ಲಿ ಖ್ಯಾತ ನಿರ್ದೇಶಕ ನಾಗಾಭರಣರ 'ಹಳ್ಳಿ ಹಳ್ಳಿಯ ಕಥೆ' ಸಾಕ್ಷ್ಯ ಚಿತ್ರದ ಸಂಭಾಷಣೆ ಪರಿಷ್ಕರಣಕಾರರಾಗಿ ಕಾರ್ಯನಿರ್ವಹಿಸುವುದರೊಂದಿಗೆ ಕಲಾವಿದರಾಗಿಯು ನಟಿಸಿದ್ದಾರೆ. ಹವ್ಯಾಸಿರಂಗ ನಾಟಕಗಳ ಅಭಿನಯದ ಅನುಭವ ಪ್ರಸಂಗಗಳ ಕುರಿತು ಬರೆದ ಇವರ 'ರಂಗನಾಟಕಗಳ ರಸ ಪ್ರಸಂಗಗಳು' ಅತ್ಯಂತ ಜನಪ್ರಿಯ ಹಾಗೂ ರಂಗಕ್ಷೇತ್ರದಲ್ಲಿ ಅಪರೂಪದ ಪುಸ್ತಕವಾಗಿ ಪರಿಣಮಿಸಿದೆ.

ಪುಣೆಯ ಬರಹಗಾರರಾದ ಕೃಷ್ಣಾ ಇಟ್ನಾಳ ಅವರು ಈ ಪುಸ್ತಕವನ್ನು ಆಂಗ್ಲ ಭಾಷಗೆ ಅನುವಾದಿಸಿದ್ದಾರೆ. ಖ್ಯಾತ ನಿರ್ದೇಶಕಿ ಪ್ರೇಮಾಕಾರಂತ್ ಅವರು ನಡೆಸಿದ ಒಂದು ತಿಂಗಳ ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದು, ಮಕ್ಕಳಿಗಾಗಿ ಒಂದು ತಿಂಗಳ ನಾಟಕ ತರಬೇತಿ ಶಿಬಿರ ಸಂಘಟಿಸಿದ್ದಾರೆ. 'ಬಡಪಾಯಿ ಬ್ರಹ್ಮರಾಕ್ಷಸ'ಎನ್ನುವ ಮಕ್ಕಳ ನಾಟಕವನ್ನು ಮಕ್ಕಳಿಂದಲೇ ಆಡಿಸಿದ್ದಾರೆ.

ನಾಟಕ ಕ್ಷೇತ್ರದ ಕುರಿತು 20 ಲೇಖನಗಳು ಪ್ರಕಟಗೊಂಡಿವೆ. ರಂಗ ಕ್ಷೇತ್ರದ ಬಗ್ಗೆ ಸುಮಾರು 60 ಭಾಷಣ ಮಾಡಿದ್ದಾರೆ. ಇವರು ಬರೆದ 15 ದೂರದರ್ಶನ, ಆಕಾಶವಾಣಿ ರೂಪಕಗಳು ನೋಡುಗರು, ಕೇಳುಗರಿಂದ ಉತ್ತಮ ಪ್ರತಿಸ್ಪಂದನ ಪಡೆದಿವೆ. ಜನಪದ ಕಲಾಸಂಗ್ರಹಕಾರನಾಗಿ, ಪತ್ರಿಕೋದ್ಯಮಿಯಾಗಿ, ಜನಸಂಖ್ಯೆ ಶಿಕ್ಷಣಾಧಿಕಾರಿಯಾಗಿ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ 1979ರಲ್ಲಿ ನೂತನ ವಿದ್ಯಾಲಯ ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ 1994 ರಿಂದ ಕಾಲೇಜಿನ ಪ್ರಾಚಾರ್ಯರಾಗಿದ್ದರೂ ರಂಗಭೂಮಿಯ ನಂಟು ಬಿಟ್ಟಿಲ್ಲ. ಈಗಲೂ ಅಭಿನಯದೊಂದಿಗೆ ರಂಗ ನೇಪಥ್ಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಲೇಜಿನ ಯುವ ಪೀಳಿಗೆಯಲ್ಲಿ 'ರಂಗಭೂಮಿಯು' ಅಭಿರುಚಿಗಾಗಿ ರಂಗನಾಟಕಗಳ ಪ್ರದರ್ಶನದ ಅವಕಾಶದೊಂದಿಗೆ, ರಂಗಭೂಮಿಯ ಅನೇಕ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದಾರೆ.

ಡಾ. ಸ್ವಾಮಿರಾವ ಅವರು ಸುಮಾರು 15 ರಂಗ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸುಮಾರು 6 ನಾಟಕಗಳನ್ನು ನಿರ್ದೇಶಿಸಿದ್ದಾರೆ. 3 ರಂಗ ನಾಟಕಗಳನ್ನು ರಚಿಸಿದ್ದಾರೆ. ದೂರದರ್ಶನ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 5 ದೂರದರ್ಶನ ನಾಟಕಗಳನ್ನು ರಚಿಸಿದ್ದಾರೆ. ಸುಮಾರು 40 ಆಕಾಶವಾಣಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಲ್ಲದೆ 8 ಆಕಾಶವಾಣಿ ರೂಪಕಗಳನ್ನು ರಚಿಸಿದ್ದು, ಒಂದು ಸಾಕ್ಷ್ಯಚಿತ್ರದಲ್ಲಿ ಅಭಿನಯಿಸಿದ ಕೀರ್ತಿ ಅವರಿಗಿದೆ. (ಎಚ್‌ಕೆ)

ಹ

ಹಂಸಧ್ವನಿ ತಬಲಾ ಕಲಾನಿಕೇತನ: ಹಂಸಧ್ವನಿ ತಬಲಾ ಕಲಾನಿಕೇತನವು ಗುಲಬರ್ಗಾದ ಹಲವಾರು ಬಡಾವಣೆಯಲ್ಲಿ ತನ್ನ ಶಾಖೆಯನ್ನು ತೆರೆದಿದೆ. ಸುಮಾರು 80 ವಿದ್ಯಾರ್ಥಿಗಳು ಈ ಕಲಾನಿಕೇತನದಲ್ಲಿ ತಬಲಾ ಅಭ್ಯಾಸವನ್ನು ಮಾಡುತ್ತಿದ್ದು, ಇದುವರೆಗೂ ಈ ಕಲಾನಿಕೇತನ 6 ವರ್ಷಗಳಿಂದ ವಾರ್ಷಿಕೋತ್ಸವನ್ನು ಏರ್ಪಡಿಸಿದೆ. ಪ್ರತಿವರ್ಷವು 40–50 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಒಳ್ಳೆಯ ಪ್ರದರ್ಶನಗಳನ್ನು ನೀಡುತ್ತಿದ್ದಾರೆ. ವಿದ್ಯಾರ್ಥಿಗಳು ತೀನತಾಲ, ರೂಪಕ,



ಹಂಸಧ್ವನಿ ತಬಲಾ ಕಲಾನಿಕೇತನ, ಗುಲಬರ್ಗಾ

ಝುಪತಾಲ, ಏಕತಾಲಗಳಲ್ಲಿ ಕಾರ್ಯಕ್ರಮ ನೀಡಲು ಪ್ರಯತ್ನಿಸುವರು. ಸಂಚಾಲಕರಾದ ಶ್ರೀ ರವೀಂದ್ರ ಕುಲಕರ್ಣಿಯವರು ಲೆಹೂ ಸಾಥಯನ್ನು ನೀಡುವುದು. ಹಂಸಧ್ವನಿ ತಬಲಾ ಕಲಾನಿಕೇತನದ ವಿದ್ಯಾರ್ಥಿಗಳನ್ನು ಕಾರ್ಯಕ್ರಮದ ನಂತರ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹಿರಿಯ ಸಂಗೀತಗಾರರ ಸಂಗೀತ ಸಭೆಯನ್ನು ಏರ್ಪಡಿಸುತ್ತದೆ. (ಜಿಡಿ)

ಹಗರಟಗಿ: 'ಪಾಂಡವ ದತ್ತಿ' ಊರೆಂದು ಖ್ಯಾತವಾಗಿತ್ತು. ಹಗರಟಗಿ ಎಂಬ ಹಳ್ಳಿಯದೂ ಇಂತಹದೇ ಕತೆ. ಹಿಂದೊಮ್ಮೆ ಮುನ್ನೂರು ಹಳ್ಳಿಗಳಿಗೆ ಆಡಳಿತ ಕೇಂದ್ರವಾಗಿದ್ದ ಹಗರಟಗಿಗೆ ಮುನ್ನೂರು ನಾಡು (ಹಗಲವೆ–300, ಪಗರಿಟೆನಾಡು) ಎಂದು ಕರೆಯಸಿಕೊಳ್ಳುತ್ತಿದ್ದ ಹಗರಟಗಿ ಇಂದು ಸಾಮಾನ್ಯ ಹಳ್ಳಿ. ಹಿಂದಿದು ಮಹಾ ಅಗ್ರಹಾರವಾಗಿ ಲಕುಲೀಶ ಪಾಶುಪತ ಶೈವಪಂಥದ ನೆಲೆ, ಅಲ್ಲದೇ ಪ್ರಖ್ಯಾತ ವಾಣಿಜ್ಯ ಕೇಂದ್ರವೂ ಆಗಿತ್ತು.

ಕಲಬುರ್ಗಿ ಜಿಲ್ಲೆ ಸುರಪುರ ತಾಲ್ಲೂಕಿನ ಕೊಡೇಕಲ್ಲು ಎಂಬ ಗ್ರಾಮದಿಂದ 4 ಕಿ.ಮೀ. ದೂರದಲ್ಲಿದೆ. ನಡುವೆ ಸಿಗುವ ಬೂದಿಹಾಳ ಎಂಬ ಹಳ್ಳಿ ಭಾರತದ ಪುರಾತತ್ವ ನಕಾಶೆಯಲ್ಲಿ ಮಹತ್ವದ ಗುರುತು ಮೂಡಿಸಿದೆ. ಪುಣೆಯ ಡೆಕ್ಕನ್ ಕಾಲೇಜಿನ ಪ್ರಾಧ್ಯಾಪಕ ಡಾ. ಕೆ. ಪೆದ್ದಯ್ಯ ಮತ್ತು ತಂಡದವರು ಕಳೆದ ಮೂರು ದಶಕಗಳಿಂದ ಈ ಭಾಗದಲ್ಲಿ ಉತ್ಖನನ ಕೈಗೊಂಡಿದ್ದಾರೆ. ಹಗರಟಗಿಯಲ್ಲಿ ಬೃಹತ್ ಶಿಲಾಯುಗದ ಕಲ್ಗೋರಿಗಳು ಪತ್ತೆಯಾಗಿವೆ.

ಹಗರಟಗಿಯಲ್ಲಿ ಕಲ್ಯಾಣ ಚಾಳುಕ್ಯ ಕಳಚೂರಿ, ದೇವಗಿರಿ, ಯಾದವರ ಕಾಲದ 12 ಶಾಸನಗಳು ದೊರಕಿವೆ. ಗ್ರಾಮದ ಧಾರ್ಮಿಕ ಸಾಂಸ್ಕೃತಿಕ ಬದುಕಿಗೆ ಬೆಳಕು ತೋರುವ ಈ ಶಾಸನಗಳಿಂದ ಅಂದು ಇಲ್ಲಿ ಸ್ವಯಂಭುಭೀಮೇಶ್ವರ, ಲಕ್ಕಣೇಶ್ವರ, ಮಲ್ಲಿಕಾರ್ಜುನ, ತ್ರಿಪುರಾಂತಕ, ತ್ರಿಕೂಟೇಶ್ವರ, ಸಿಡಿಲಬಾವಿ ರಾಮನಾಥ, ನಖರೇಶ್ವರ, ಗವರೇಶ್ವರ ಭೈರವ ಮೊದಲಾದ ದೇವಾಲಯಗಳಿದ್ದವೆಂದು ಗೊತ್ತಾಗುತ್ತದೆ.

ದೇಗುಲಗಳನ್ನು ಇಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಊರ ಸುತ್ತಲಿನ ಹೊಲ, ತೋಟ ಗದ್ದೆಗಳಲ್ಲಿ ಭಗ್ನವಾಗಿ ನಿಂತಿರುವ ಹತ್ತಾರು ದೇಗುಲಗಳು ಈ ಗ್ರಾಮದ ಹಿಂದಿನ ಭವ್ಯ ಚರಿತೆಯನ್ನು ಎದುರು ನಿಲ್ಲಿಸುವ ಕ್ಷೀಣ ಪ್ರಯತ್ನ ಮಾಡುತ್ತಿರುವಂತೆ ಅನ್ನಿಸುತ್ತದೆ.

ಮಹಾಭಾರತದ ಪ್ರಮುಖ ವ್ಯಕ್ತಿಗಳ ಹೆಸರನ್ನು ದೇಗುಲಗಳಿಗಿಟ್ಟು ಆ ಮಹಾಕಾವ್ಯದ ನಾಯಕರಿಗೆ ಗೌರವ ಸಲ್ಲಿಸಿದ್ದಾರೆ. ಇಲ್ಲಿಯ ಜನ, ಕರ್ಣನ ಗುಡಿ ಬೂದಿಹಾಳ ರಸ್ತೆಯ ಒಂದು ಹೊಲದಲ್ಲಿದೆ. ಇದು ವರ್ತಕರ ಆರಾಧ್ಯ ದೈವ ನಖರೇಶ್ವರ ದೇಗುಲ. ಕ್ರಿ.ಶ. 1092ರ ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನವು, ಮಹಾಪ್ರಧಾನ ದಂಡನಾಯಕ ಅಹವಮಲ್ಲರಸನು ರುದ್ರಭಾಸ್ಕರ ಪಂಡಿತರ ಸಮ್ಮುಖದಲ್ಲಿ ಚಂದ್ರಗ್ರಹಣದಂದು, ನಖರೇಶ್ವರ ದೇವರಿಗೆ ಮುನ್ನೂರು ಮತ್ತರು ಭೂಮಿಯನ್ನು ದಾನಕೊಟ್ಟ ಅಂಶವನ್ನು ತಿಳಿಸುತ್ತದೆ.

ಊರ ಉತ್ತರಕ್ಕಿರುವ ಬಸವಣ್ಣನ ಗುಡಿ ಗವರೇಶ್ವರ ದೇವಾಲಯ, ಇದು ವಿವಿಧ ವರ್ತಕರ ವೃಂದದವರ ಪೂಜನೀಯ ದೈವವಾಗಿದ್ದು, ಹಲವಾರು ದತ್ತಿಗಳನ್ನು ಪಡೆದ ವಿಷಯ ಇಲ್ಲಿರುವ 12ನೆಯ ಶತಮಾನದ ಮೂರು ಶಾಸನಗಳಿಂದ ಗೊತ್ತಾಗುತ್ತದೆ.

ಕರ್ಣನ ಗುಡಿಗೆ ಸಮೀಪದಲ್ಲಿರುವ ಮೂರು ಕಳಸದ ಗುಡಿ, ಮೂರು ಗರ್ಭಗುಡಿಗಳನ್ನು ಹೊಂದಿರುವ ಒಂದು ತ್ರಿಕೂಟವಾಗಿದೆ. ಆಲಯದ ದಕ್ಷಿಣ ಭಾಗವು ಪೂರ್ಣ ಹಾಳಾಗಿದ್ದು, ಉಳಿದೆರಡು ಗರ್ಭಗುಡಿಯ ಮೇಲೆ ಕದಂಬ ನಾಗರಶೈಲಿಯ ಶಿಖರಗಳಿವೆ.

ಹಿಂದೆ ಇದೊಂದು ಶೈಕ್ಷಣಿಕ ಕೇಂದ್ರವಾಗಿದ್ದು, ಇಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಇತ್ತು. ಧರ್ಮರಾಯನ ಗುಡಿ ಹಗರಟಗಿಯ ಮುಖ್ಯ ಆಲಯ. ಮೂಲ ರೂಪವನ್ನು ಸಾಕಷ್ಟು ಬದಲಾಯಿಸಿಕೊಂಡಿದ್ದರೂ, ಹಳೆಯ ಶಿಲ್ಪಕಲೆಯ ಸೊಬಗು ಮಾಸಿಲ್ಲ. ಗರ್ಭಗುಡಿಯಲ್ಲಿ ಬೃಹತ್ತಾದ ಬಲಹರಿ ಲಿಂಗವಿದೆ.

ಗರ್ಭಗುಡಿಯ ಬಾಗಿಲು ವಾಡೆ, ಏಳು ಶಾಖೆಗಳನ್ನು ಹೊಂದಿದ್ದು, ಸುಮಾರು ಹದಿನೈದು ಅಡಿ ಎತ್ತರವಿದೆ. ಹೊಸ್ತಿಲದ ಒಂದು ಮಗ್ಗುಲಿಗೆ ವೃಕ್ಷವೊಂದರ ಕೆಳಗೆ ನಿಂತಿರುವ ವಿಷ್ಣುವಿನ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರನ್ನು ಕೆತ್ತಲಾಗಿದೆ. ಅವರ ಪಕ್ಕದಲ್ಲಿ ಪತ್ನಿಯರೊಡನೆ ನಿಂತಿರುವ ಭಕ್ತನೊಬ್ಬನ ಶಿಲ್ಪವಿದೆ. ಚಾಮರಧಾರಿಗಳು ಸೇವೆಗೆ ನಿಂತಿದ್ದಾರೆ. ಈ ಅಲಂಕಾರಿಕ ಕೆತ್ತನೆ ನೋಡುವಂತಿದೆ. ಅಂತರಾಳದ ಲಲಾಟದಲ್ಲಿರುವ ನಟರಾಜನ ಬಿಂಬ ಸುಂದರ ಕೆತ್ತನೆಗೆ ಮಾದರಿಯಾಗಿದೆ. ಇಲ್ಲಿರುವ ದ್ವಾದಶ ರಾಶಿಕಲ್ಲು ವಿಶಿಷ್ಟವಾಗಿದೆ.

ಊರ ಪಶ್ಚಿಮಕ್ಕೆ ಹೊಲಗಳಲ್ಲಿರುವ ಕುಂತಿಗುಡಿ, ಅರ್ಜುನನ ಗುಡಿ, ಭೀಮನಗುಡಿ (ಭೀಮೇಶ್ವರ ದೇಗುಲ) ಗಳು ಕಲ್ಯಾಣ ಚಾಳುಕ್ಯರ ಕಾಲದವು. ಸರಳ ಸುಂದರ ವಾಸ್ತುನಿರ್ಮಿತಿಗಳಾದ ಇವು, ಹಾಳುಬಿದ್ದು ಭಣಗುಟ್ಟುತ್ತಿವೆ. ಭೀಮನಗುಡಿ ಶಾಸನದಲ್ಲಿ ಉಲ್ಲೇಖವಾದ ಸ್ವಯಂಭು ಭೀಮೇಶ್ವರ ದೇಗುಲವಾಗಿದೆ.

ವಿಶಾಲವಾದ ಈ ದೇಗುಲದ ಹಿಂಭಾಗ ಬಿದ್ದುಹೋಗಿದೆ. ವಿಸ್ತಾರವಾದ ನವರಂಗದ ಕಂಬಗಳು ಮೋಹಕ ಕೆತ್ತನೆಯ ಮೂಲಕ ಗಮನ ಸೆಳೆಯುತ್ತವೆ. ಇಲ್ಲಿ ಏಳು ದೇವ ಕೋಷ್ಠ (ದೇವರ ಮಾಡ)ಗಳಿದ್ದು, ಒಳಗೆ ಯಾವ ಮೂರ್ತಿ ಉಳಿದಿಲ್ಲ. ಗರ್ಭಗುಡಿಯ ದ್ವಾರಬಂಧದಲ್ಲಿ ಚಿತ್ತಾಕರ್ಷಕ ಸೂಕ್ಷ್ಮ ಕೆತ್ತನೆ ಇದೆ.

ಆಲಯದ ಎಡಬದಿ ಹಾಳು ಬಾವಿಯೊಂದಿದೆ. ಇಲ್ಲಿ ನಾಲ್ಕಾರು ವೀರಗಲ್ಲುಗಳಿವೆ. ವೀರಗಲ್ಲಿನ ಒಂದು ಶಾಸನದಲ್ಲಿ ರೇವಯ್ಯನೆಂಬುವನು ತುರು ಕಾಳಗದಲ್ಲಿ ಮಡಿದ ತನ್ನ ಅಣ್ಣನಿಗಾಗಿ ವೀರಗಲ್ಲನ್ನು ನಿಲ್ಲಿಸಿದ ಎಂದು ಹೇಳಿದೆ. ಇಲ್ಲಿರುವ ಕ್ರಿ.ಶ. 1218ರ ಯಾದವ ಇಮ್ಮಡಿ ಸಿಂಘಣ ದೇವನ ಶಾಸನದಲ್ಲಕಿ ಹಗರಟಗಿಯ ಮಹಾಜನರು ಮುಮ್ಮುರಿ ದಂಡರು (ಸಂಚಾರಿ ವರ್ತಕರು) ಮಹಾಸಭೆ ನಡೆಸಿ, ಸ್ವಯಂಭುಭೀಮೇಶ್ವರ ದೇವರ ಸ್ಥಾನಾಚಾರ್ಯ ಬ್ರಹ್ಮರಾಶಿ ಪಂಡಿತರಿಗೆ ದಾನಕೊಟ್ಟಿರುವ ವಿಷಯದ ಪ್ರಸ್ತಾಪವಿದೆ.


ಇಲ್ಲಿರುವ ಹೊಡೆ (ಕಾವಲು ಗೋಪುರ) ಯೊಂದರ ಕೆಳಗೆ ಮಹಾವಿಷ್ಣುವಿನ ಎರಡು ಮೂರ್ತಿಗಳನ್ನು ಎಲ್ಲಿಂದಲೋ ತಂದಿಡಲಾಗಿದೆ. ಈ ಸುಂದರ ಮೂರ್ತಿಗಳನ್ನು ಎಷ್ಟು ನೋಡಿದರೂ ಸಾಲದು. ಅಣ್ಣತಂಗಿಯರ ಗುಡಿಯಲ್ಲಿ ಶೇಷಶಾಯಿ ವಿಷ್ಣುವಿನ ಮೂರ್ತಿ ಇದೆ. ಊರ ಪೂರ್ವಕ್ಕೆ ಒಂದೂವರೆ ಕಿ.ಮೀ. ದೂರದಲ್ಲಿ ನೀರಿನ ಬುಗ್ಗೆಯ ಹತ್ತಿರ ಶಿಥಿಲವಾದ ಗುಡಿಯೊಂದು ಇದ್ದು, ಅದನ್ನು ಋಷಿಗುಡಿ ಎನ್ನುತ್ತಾರೆ. ಇದರ ಹಿಂದಿನ ಸಿಡಿಲಬಾವಿ ರಾಮನಾಥ ದೇವಾಲಯ. ಹಗರಟಗಿ ಜೈನ ಧರ್ಮದ ತಾಣವೂ ಆಗಿತ್ತು. ಅಗಸೆ ಬಾಗಿಲ ಗೋಡೆಯಲ್ಲಿ ಕ್ರಿ.ಶ. 1224ನೆಯ ಇಸವಿಯ ಜೈನರ ನಿಷಿದಿ ಶಾಸನವಿದೆ.

ಹಲವಾರು ಭಗ್ನ ದೇಗುಲಗಳು, ಶಾಸನಗಳು, ವಿಗ್ರಹಗಳು ಮತ್ತು ಬಾವಿಗಳನ್ನೊಳಗೊಂಡ ಐತಿಹಾಸಿಕ ಮಹತ್ವದ ಹಳ್ಳಿ ಹಗರಟಗಿ. ಇಲ್ಲಿನ ಸ್ಮಾರಕಗಳು ಹಾಳುಬಿದ್ದು ಮಣ್ಣು ಸೇರುವ ಮೊದಲು ಜತನವಾಗಿಟ್ಟುಕೊಳ್ಳುವ ಜವಾಬ್ದಾರಿ ಸಂಸ್ಕೃತಿಯನ್ನು ಪ್ರೇಮಿಸುವದು ಎಲ್ಲರದ್ದಾಗಿದೆ. (ವಿಕೆಎಂ)

ಹಗೇವುಗಳು: ದವಸ ಧಾನ್ಯಗಳನ್ನು ದೀರ್ಘಕಾಲ ಕೆಡದಂತೆ ಸಂರಕ್ಷಿಸಲು ಹಾಗೂ ದಾಸ್ತಾನು ಮಾಡಲು ರಚಿಸಿಕೊಳ್ಳುವ ನೆಲಮಾಳಿಗೆಗಳು. ಹಿಂದಿನ ಕಾಲದಲ್ಲಿ ಹೆಚ್ಚಿನ ಜನರು ಕೃಷಿಯಲ್ಲಿ ತೊಡಗಿರುತ್ತಿದ್ದರಿಂದ, ಬೆಳೆಯಿಂದ ಬಂದ ಉತ್ಪನ್ನವನ್ನು ಸಂಪ್ರದಾಯ ಬದ್ಧ ವೈಜ್ಞಾನಿಕ ರೀತಿಯಲ್ಲಿ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯಿತ್ತು. ಅಲ್ಲದೆ ರೈತರು ತಾವು ಬೆಳೆದ ಧಾನ್ಯದ ಉತ್ಪನ್ನದ ಜೊತೆಗೆ ಆಹಾರ ಧಾನ್ಯಗಳ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದು ಅಷ್ಟೇ ಮುಖ್ಯವಾಗಿತ್ತು.

ಬೆಳೆ ಬೆಳೆಯುವಾಗ ಸಸ್ಯ ಸಂರಕ್ಷಣೆ ಎಷ್ಟು ಮುಖ್ಯವೋ ಕೊಯ್ದು ನಂತರ ಧಾನ್ಯ ಸಂರಕ್ಷಣೆ ಮಾಡುವುದೂ ಅಷ್ಟೇ ಮುಖ್ಯ. ಕೊಯ್ಯುವಿಕೆ ಮತ್ತು ರಾಶಿ ಮಾಡುವ ಹಂತದಲ್ಲಿ ಧಾನ್ಯಗಳ ಗುಣಮಟ್ಟ ಕೆಡುವ ಸಾಧ್ಯತೆ ಇರುವುದರಿಂದ, ಕೊಯ್ಯುವ ಹಂತದಲ್ಲಿ ಬೆಳೆ ಸರಿಯಾಗಿ ಮಾಗಿದೆಯೇ ಎಂದು ಪರೀಕ್ಷಿಸಿ ಕಟಾವು ಮಾಡಬೇಕಾಗುತ್ತದೆ. ನಂತರ ಚೆನ್ನಾಗಿ ಮಾಗಿದ ಬೆಳೆಯ ತೆನೆಗಳನ್ನು ಸರಿಯಾದ ಕಾಲಕ್ಕೆ ಕೊಯ್ದು ರಾಶಿ ಮಾಡಬೇಕಾದುದು ತುಂಬಾ ಜವಾಬ್ದಾರಿಯುತವಾದ ಕಾರ್ಯವಾಗಿದೆ. ಹೀಗೆ ರಾಶಿಮಾಡಿದ ಮೇಲೆ ಆಹಾರ ಧಾನ್ಯಗಳನ್ನು ಕೆಡದಂತೆ ಕಾಪಾಡುವುದು ಸಹ ಬಹಳ ಮುಖ್ಯ.

ಸಾಮಾನ್ಯವಾಗಿ ರೈತರು ಬೆಳೆದ ಆಹಾರ ಧಾನ್ಯಗಳಲ್ಲಿ ತಮ್ಮ ದಿನನಿತ್ಯದ ಉಪಭೋಗಕ್ಕೆ ಬೇಕಾದಷ್ಟನ್ನು ಉಳಿಸಿಕೊಂಡು ಹೆಚ್ಚಿನದನ್ನು ಮಾರಾಟ ಮಾಡುತ್ತಾರೆ. ಬೆಳೆದ ಧಾನ್ಯದ ಗುಣಮಟ್ಟ ಚೆನ್ನಾಗಿದ್ದು ಉತ್ತಮ ತಳಿಯಾಗಿದ್ದರೆ ಮುಂದಿನ ಬಿತ್ತನೆಗೂ ಅದನ್ನು ಬೀಜವಾಗಿ ಉಪಯೋಗಿಸುತ್ತಾರೆ. ಹೀಗಾಗಿ ಆಹಾರ ಧಾನ್ಯಗಳು ಕೆಡದಂತೆ ಶೇಖರಣೆ ಮಾಡಲು, ಗರ್ಜಿ, ವಾಡೆ, ಗುಡಾಣ, ತಡಿಕೆ, ಅಡಕಲಗಡಿಗೆ ಮೊದಲಾದ ಸಂಗ್ರಾಹಕಗಳನ್ನು ರೈತರು ಆಶ್ರಯಿಸಿದ್ದರು. ಇವುಗಳನ್ನು ಜನಗಳ ಸಂಸ್ಕೃತಿ,




ಧಾನ್ಯ ಸಂಗ್ರಹಣೆಯ ಕಣಜ

ಬದುಕು, ಮತ್ತು ಊರಿನ ಹವಾಗುಣಕ್ಕೆ ಅನುಗುಣವಾಗಿ ರಚನೆ ಯಾಗುತ್ತವೆ. ಇದಕ್ಕೆ 'ಹಗೇವು' ಗಳು ಹೊರತಲ್ಲ.

ಹಗೇವುಗಳು ಇಂದು ನಿನ್ನೆಯದಲ್ಲ ಬದಲಿಗೆ ಕ್ರಿ.ಪೂ. 3000 ರಿಂದ 7500 ವರ್ಷಗಳಷ್ಟು ಹಳೆಯದು. ಈ ಕಾಲದ ಎರಡು ಪ್ರಮುಖ ಪಟ್ಟಣಗಳಾದ ಹರಪ್ಪ ಮತ್ತು ಮೊಹೆಂಜೋ ದಾರೊಗಳಲ್ಲಿ ಸುಟ್ಟ ಇಟ್ಟಿಗೆಯ ಪಾಯಾವಿರುವ ದೊಡ್ಡ ಉಗ್ರಾಣಗಳು ಈ ಕಾಲದಲ್ಲಿ ನಿರ್ಮಾಣಗೊಂಡು ಇದರಿಂದ ಹಗೆವುಗಳ ಪ್ರಾಚೀನತೆಯ ಅರಿವು ಸ್ಪಷ್ಟವಾಗುತ್ತದೆ.

ಹಗೇವು ಎರಡು ಪ್ರಕಾರಗಳಲ್ಲಿ ಕಂಡುಬರುತ್ತವೆ. 1. ಮನೆಯ ಒಳಗಿನ ಹಗೇವು 2. ಮನೆಯ ಹೊರಗಿನ ಹಗೇವು. ಮನೆಯೊಳಗಿನ ಹಗೇವುಗಳನ್ನು ಮನೆಯ ಆಯಕಟ್ಟಾದ ಒಂದು ಜಾಗದಲ್ಲಿ ನಿರ್ಮಿಸಿಕೊಂಡಿರುತ್ತಾರೆ. ಹಾಗೂ ಇವು ಪ್ರಮಾಣದಲ್ಲಿ ಚಿಕ್ಕವಾಗಿದ್ದು ಇವುಗಳನ್ನು 'ಕಣಜ' ಎಂದು ಕರೆಯಲಾಗುತ್ತದೆ. ಈ ಕಣಜಗಳಲ್ಲಿ ಬೇಳೆ ಕಾಳುಗಳು ದ್ವಿದಳ ಧಾನ್ಯಗಳು ಇಲ್ಲವೆ ಸ್ವಲ್ಪ ಪ್ರಮಾಣ (12–15 ಚೀಲ) ಆಹಾರ ಧಾನ್ಯಗಳನ್ನು ಸಂಗ್ರಹಿಸಬಹುದಾದಷ್ಟು ಪ್ರಮಾಣವಾಗಿರುತ್ತದೆ.

ಆದರೆ ಹೊರಗಿನ ಹಗೇವು ಪ್ರಮಾಣದಲ್ಲಿ ದೊಡ್ಡದು. ಇವು ಸಾಮಾನ್ಯವಾಗಿ ಒಂದು ಆಳು ಎತ್ತರ ಇಲ್ಲವೆ 7–8 ಅಡಿ, ಒಂದುವರೆ ಮೂರು ಅಗಲ (ಅವರವರ ಭೂಮಿ ಮತ್ತು ಆರ್ಥಿಕ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ)ದಷ್ಟು ಆಯದಲ್ಲಿ ಗಟ್ಟಿಯಾದ ಭೂಮಿಯಲ್ಲಿ ಅಂದರೆ ಮಳೆ ಬಂದಾಗ್ಯೂ ನೀರು ನಿಲ್ಲದೆ ಸಲೀಸಾಗಿ ಹರಿದು ಹೋಗುವ ಜಾಗ ಅಗೆಯಲಾಗುತ್ತದೆ ನಂತರ ಅದಕ್ಕೆ ಸೆಗಣಿರಾಡಿಯನ್ನು ಸುತ್ತಲೂ ಹಚ್ಚಲಾಗುತ್ತದೆ ಈ ವಿಧಾನವನ್ನು ಅನುಸರಿಸುವಲ್ಲಿಯೂ ವೈವಿಧ್ಯತೆಗಳಿವೆ. ಕೆಲವಡೆ ಸೆಗಣಿರಾಡಿ ಹಚ್ಚಿದರೆ ಇನ್ನೂ ಕೆಲವೆಡೆ ಜೇಡಿಮಣ್ಣು (ಸವುಳು) ಮತ್ತು ರಾಗಿಹಿಟ್ಟನ್ನು ಹದವಾಗಿ ಕಲಿಸಿ ಸುತ್ತಲೂ ಬಳಿದಿದ್ದಾರೆ. ಇನ್ನೂ ಕೆಲವೆಡೆ ಹುಲ್ಲಿನ ಪೆಂಡೆಗಳನ್ನು (ಜೋಳ, ಭತ್ತದ್ದು) ಗಾಳಿಯಾಡದಂತೆ ಸುತ್ತಲೂ ಒಂದರ ಪಕ್ಕ ಒಂದು ಜೋಡಿಸಿ ರುತ್ತಾರೆ. ಮಧ್ಯೆ ನೆಲಕ್ಕೆ ಕೀಟಗಳ ಬಾದೆಯಿಂದ ಧಾನ್ಯಗಳನ್ನು ರಕ್ಷಿಸಲು ಬೇವಿನ ಸೊಪ್ಪನ್ನು ಹಾಕುತ್ತಾರೆ. ಮೇಲೆ ಒಬ್ಬ ವ್ಯಕ್ತಿ



ಧಾನ್ಯ ಸಂಗ್ರಹಣೆಯ ಕಣಜ


ಇಳಿಯಲು ಅನುಕೂಲವಾಗುವಷ್ಟು ಜಾಗವನ್ನು ಬಿಟ್ಟು ಉಳಿದ ಭಾಗವನ್ನು ಕಲ್ಲು ಬಂಡೆಯನ್ನು ಹೊಂದಿಸಿ ಮೇಲೆ ಮಣ್ಣು ಹಾಕುವ ಮೂಲಕ ಗಾಳಿಯಾಡದಂತೆ ಭದ್ರವಾಗಿ ಮುಚ್ಚಿ ಹಾಕುತ್ತಾರೆ. ನಂತರ ಚೆನ್ನಾಗಿ ಒಣಗಿದ ಕಾಳುಗಳನ್ನು ಹಗೇಯಗಳಲ್ಲಿ ಹಾಕಿ ಮೇಲೆ ಹುಲ್ಲಿನ ಪೆಂಡೆ/ಬಿದಿರಿನ ತಟ್ಟೆಗೆ ಗಾಳಿ ಬೆಳಕು ಹೋಗದಂತೆ ಚೆನ್ನಾಗಿ ಸೆಗಣಿಯನ್ನು ಬಡಿದು ಭದ್ರವಾಗಿ ಮುಚ್ಚಿ ಮೇಲೆ ಮಣ್ಣು ಹಾಕುತ್ತಾರೆ. ಹೀಗೆ ಸಿದ್ಧ ಗೊಂಡ ಹಗೇವುಗಳಲ್ಲಿನ ಧಾನ್ಯಗಳು ಗಾಳಿ, ಮಳೆ, ಬೆಳಕಿಗೆ ಕೆಡದೆ ವರ್ಷಾನುಗಟ್ಟಲೆ ತಾಳಿಕೆ ಬರುತ್ತದೆ.

ಹೀಗೆ ಹಗೇವುಗಳಲ್ಲಿರುವ ಧಾನ್ಯಗಳನ್ನು ತಮಗೆ ಬೇಕೆನಿಸಿ ದಾಗ ಮಳೆ ಇಲ್ಲದ ಸಂದರ್ಭದಲ್ಲಿ ತೆಗೆಯುತ್ತಾರೆ. ಹೀಗೆ ತೆಗೆಯುವಾಗ ಜಾನುವಾರಗಳು, ಸಾಕು ಪ್ರಾಣಿ, ಸಣ್ಣಮಕ್ಕಳನ್ನು ಹಗೇವುಗಳ ಸುತ್ತ ಹೋಗದಂತೆ ಎಚ್ಚರಿಕೆವಹಿಸುತ್ತಾರೆ. ಯಾಕೆಂದರೆ ಗಾಳಿಯಾಡದೆ ಭದ್ರಪಡಿಸಿರುವುದರಿಂದ ಅದು ಇಂಗಾಲಯುಕ್ತವಾಗಿರುತ್ತದೆ. ತಿಳಿಯದೆ ಅದರ ಒಳಗೆ ಹೋಗುವವರ ಪ್ರಾಣವೇ ಹೊರಟು ಹೋಗುತ್ತದೆ. ಹಾಗಾಗಿ ಇದನ್ನು ಸ್ವಲ್ಪ ಸಮಯ ಗಾಳಿಯಾಡಲು ಬಿಟ್ಟು ಅನಂತರ ಒಂದು ಬಟ್ಟೆಯನ್ನು ಬತ್ತಿಯಂತೆ ಹೊಸೆದು ಅದನ್ನು ಹಗೇವಿನ ಒಳಗೆ ಬಿಡುತ್ತಾರೆ. ಬತ್ತಿ ಉರಿಯುತ್ತಿದ್ದರೆ ಆಮ್ಲಜನಕವಿದೆ ಎಂದರ್ಥ. ಹೀಗೆ ಪ್ರಾಣ ಹಾನಿಯಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡು ತಮಗೆ ಬೇಕಾದಷ್ಟು ದವಸ ಧಾನ್ಯಗಳನ್ನು ತೆಗೆದುಕೊಂಡು ಪುನಃ ಯಥಾಸ್ಥಿತಿಯಲ್ಲಿ ಮುಚ್ಚುತ್ತಾರೆ. ಹಳೆಯ ಧಾನ್ಯಗಳೆಲ್ಲ ಮುಗಿಯುವವರೆಗೆ ಹೀಗೆ ಮಾಡುತ್ತಾರೆ. ನಂತರ ಹೊಸ ಧಾನ್ಯ ಹಾಕುವ ಸಂದರ್ಭಗಳಲ್ಲಿ ಪುನಃ ಹಗೇವುಗಳನ್ನು ಸಿದ್ಧಗೊಳಿಸಿಕೊಳ್ಳುತ್ತಾರೆ.

ಹಗೇವುಗಳು ಕೀಟ, ಗಾಳಿ, ಬೆಳಕು, ಮಳೆಯಿಂದ ಧಾನ್ಯ ಗಳನ್ನು ಸಂರಕ್ಷಿಸುವಲ್ಲಿ ರೈತರ ಮಿತ್ರನಂತೆ ಕಾರ್ಯನಿರ್ವಹಿಸು ತ್ತಿದ್ದುವು. ಆದರೆ ಇಂದಿನ ದಿನಗಳಲ್ಲಿ ಹಗೇವು ಕಾಣಸಿಗುತ್ತ ವಾದರೂ ಅವುಗಳ ಉಪಯೋಗ ಧಾನ್ಯ ಸಂಗ್ರಹಣೆಗಾಗಿ ಅಲ್ಲ, ಬದಲಿಗೆ ಮನೆಯಲ್ಲಿ ಬೇಡವಾದ ವಸ್ತುಗಳನ್ನು ಅದರಲ್ಲಿ ತುಂಬಿಡಲು ಬಳಸಲಾಗುತ್ತಿದೆ. ಯಾಕೆಂದರೆ ಇಂದು ಹಗೇವು ಗಳ ಸ್ಥಾನವನ್ನು ಸಿಮೆಂಟಿನ ಉಗ್ರಾಣಗಳು ಅತಿಕ್ರಮಿಸಿ ಕೊಂಡಿವೆ. ಅಲ್ಲದೆ ಇಂದಿನ ಜನರು ಧಾನ್ಯಗಳನ್ನು ಉಳಿಸಿ ಕೊಳ್ಳುವ ಗೋಜಿಗೆ ಹೋಗುವುದಿಲ್ಲ ಬದಲಿಗೆ ನೇರವಾಗಿ ಮಾರುಕಟ್ಟೆಗೆ ಹೋಗಿ ಮಾರಾಟ ಮಾಡಿಬಿಡುತ್ತಾರೆ ಹಾಗಾಗಿ ಕಣಜ/ಹಗೇವುಗಳ ಅವಶ್ಯಕತೆ ಬೀಳುವುದಿಲ್ಲ. ಇನ್ನೊಂದು ಖೇದದ ಸಂಗತಿಯೆಂದರೆ ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಮಾನವ ಹಳೆಯ ಮನೆಗಳನ್ನು ನವೀಕರಿಸುತ್ತಿದ್ದಾನೆ. ಹೀಗಾಗಿ ಈಗ ಕಾಣಲಾದರೂ ಸಿಗುವ ಈ ಹಗೇವುಗಳು ಮುಂದೊಂದು ದಿನ ಕಣ್ಮರೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಇನ್ನೂ ಹೊರಗಿನ ಹಗೇವುಗಳ ಬಳಕೆಯು ತಪ್ಪಿರುವುದರಿಂದ ಹಾಗೂ ಅವುಗಳ ಆರೈಕೆ ಇಲ್ಲದಿರುವುದರಿಂದ ಈಗಾಗಲೇ ನಾಶವಾಗಿ ಹೋಗಿವೆ.

(ಜಿಎ)

ಹಡಪದ ಕೆ.ಎಸ್.: ಸಂಗೀತ, ಕಲೆ, ಸಾಹಿತ್ಯ, ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತಿಕೆಯನ್ನು ಮೆರೆದ ಕಲಾವಿದ. ಯಾವುದೇ ಆಸೆ ಆಮಿಷಗಳಿಲ್ಲದೆ ಸಂಗೀತವೇ ಜೀವನದ ಉಸಿರಾಗಿಸಿಕೊಂಡು, ಈ ವಿದ್ಯೆಯನ್ನು ಯುವ ಪೀಳಿಗೆಯವರಿಗೆ ಧಾರೆಯೆರೆಯುವಂಥ ಕಾಯಕವನ್ನು ಜೀವನದುದ್ದಕ್ಕೂ ನಡೆಸಿಕೊಂಡು ಬಂದಿರುವ ಅಪೂರ್ವ ವ್ಯಕ್ತಿತ್ವ ಇವರದು.



ಮೂಲತಃ ಧಾರವಾಡ ಜಿಲ್ಲೆಯ ಮಲ್ಲಾಪುರ ನಿವಾಸಿಗಳಾದ ಶ್ರೀಯುತ ಶಿವಪ್ಪ ಹಾಗೂ ಶ್ರೀಮತಿ ಶಿವಮ್ಮ ಹಡಪದ ಬಡದಂಪತಿಗಳ ಪುತ್ರರಾದ ಕರಿಬಸಪ್ಪ ಹಡಪದ ಅವರು ಹುಟ್ಟಿದ್ದು 1930ರಲ್ಲಿ. ಇವರ ಮನೆತನವೇ ಕಲಾವಿದರ ಮನೆತನ. ತಂದೆ ಶಿವಪ್ಪ ಹಡಪದ್ ತಬಲಾ ಹಾಗೂ ಕರಡಿಮಜಲು ಕಲಾವಿದರು. ಜೊತೆಗೆ ಇವರ ಅಜ್ಜ ಸಹ ಚರ್ಮವಾದ್ಯ ನುಡಿಸುವುದರಲ್ಲಿ ನಿಪುಣರಾಗಿದ್ದರು. ಇಂತಹ ಸಂಗೀತಮಯ ವಾತಾವರಣದ ಮನೆಯಲ್ಲಿ ಜನಿಸಿದ ಕರಿಬಸಪ್ಪನವರಿಗೆ (ಕೆ.ಎಸ್. ಹಡಪದ) ಸಹಜವಾಗಿಯೇ ತಬಲಾ ವಾದನ ಕಲೆ ಅಕ್ಕರೆಯಾಗಿ ಒಲಿದು ಬಂದಿತು. ತಮ್ಮ ತಂದೆಯವರಿಂದಲೇ ಸಂಗೀತ ಅಭ್ಯಾಸ ಪ್ರಾರಂಭಿಸಿದರು. ಮಗ ಉತ್ತಮ ಕಲಾವಿದನಾಗಬೇಕೆಂಬ ಹಿರಿದಾದ ಆಸೆಯಿಂದಾಗಿ ಮಗನ 13ನೇಯ ವಯಸ್ಸಿನಲ್ಲಿಯೇ ಹೆಚ್ಚಿನ ಸಾಧನೆಗಾಗಿ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಸಂಗೀತ ವಿದ್ಯಾಲಯಕ್ಕೆ ಕರೆತಂದರು.

ಪಂ.ಪಂಚಾಕ್ಷರಿ ಗವಾಯಿಗಳು, ಬಾಲಕನ ತಬಲಾ ಕಲಿಯುವ ಆಸಕ್ತಿಯನ್ನು ಕಂಡು ಆಶ್ರಮಕ್ಕೆ ಪ್ರವೇಶ ನೀಡಿದರು. 1943ರಿಂದ 1953ರ ವರೆಗೆ ಸುಮಾರು 10 ವರ್ಷಗಳ ಕಾಲ ಅಲ್ಲಿ ತಬಲಾ ವಾದನ ವಿದ್ಯೆ ಅಭ್ಯಾಸ ಮಾಡಿದರು. ಇಷ್ಟಕ್ಕೇ ಇವರ ಸಂಗೀತ ದಾಹ ತಣಿಯಲಿಲ್ಲ. ಮನೆಯಲ್ಲಿ ಹೇಳದೆ-ಕೇಳದೆ, ಸ್ನೇಹಿತರಾದ ಯಲ್ಲಪ್ಪ ಅಮರಗೋಳ ಹಾಗೂ ಹಡಪದ ಅವರು ರಾತೋರಾತ್ರಿ ವಾರಣಾಸಿಗೆ ಓಡಿ ಹೋದರು. ಇಲ್ಲಿಂದ ಪಂ. ಹಡಪದ ಅವರ ಘರಾಣೆ ಪರಂಪರೆಯ ವಿದ್ಯೆ ಪ್ರಾರಂಭವಾಯಿತು. ಸಾಕ್ಷಾತ್ ತಬಲಾ ಸಾಮ್ರಾಟರೆಂದು ಖ್ಯಾತಿ ಹೊಂದಿದ ಪಂ. ಅನೋಕೇಲಾಲ ಮಿಶ್ರಾ ಅವರಲ್ಲಿ ತಬಲಾ ಸಾಧನೆಯನ್ನು ಪ್ರಾರಂಭಿಸಿದರು.

ಮೃದಂಗದಿಂದ ಪ್ರಭಾವಿತರಾಗಿ ಆರಂಭವಾದಂತಹ ಈ ಘರಾಣೆ, ಹೆಚ್ಚಾಗಿ ಕಥಕ್ ನೃತ್ಯದ ಲಯಕ್ಕೆ ಉಪಯೋಗಿಸುವಂತಹ ಬೋಲ್‌ಗಳನ್ನು ತಬಲಾಕ್ಕೆ ಅಳವಡಿಸಿ, ಅತ್ಯಂತ ಸುಂದರ ಮತ್ತು ಸ್ಪಷ್ಟ ಅಕ್ಷರಗಳ ಉಚ್ಚಾರ, ಫರನ್, ಚಕ್ರಧಾರ, ಗತ್, ರೇಲಾ ಜೊತೆಗೆ ನುಡಿಸುವಂತಹ ತಂತು ವಾದ್ಯಗಳಿಗೆ ಈ ಘರಾಣೆಯ ಸಾಥ್ ನೀಡಿದರೆ ಅದರ ಆನಂದವೇ ಬೇರೆ. ಇವರು ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ಆಯೋಜಿಸುವ ಸಂಗೀತ ಅಲಂಕಾರ (ತಬಲಾ) ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ತಮ್ಮ ವೃತ್ತಿಗೆ ಬೇಕಾಗುವಂತಹ ಪ್ರಮಾಣ ಪತ್ರ ಸಂಪಾದಿಸಿಕೊಂಡರು.

ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಪದವಿ ಮಹಾವಿದ್ಯಾಲಯದ ಸಂಗೀತ ವಿಭಾಗದಲ್ಲಿ ತಬಲಾ ಪ್ರಾಧ್ಯಾಪಕರ ಹುದ್ದೆ ಇವರಿಗಾಗಿ ಕಾದಿತ್ತು. 1970ರಿಂದ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದ ಪಂ. ಸಿದ್ಧರಾಮ ಜಂಬಲದಿನ್ನಿ ಅವರೊಂದಿಗೆ ವೃತ್ತಿ ಜೀವನದೊಂದಿಗೆ, ಕಲಬುರ್ಗಿಯ ಸಂಗೀತಾಸಕ್ತ ವಿದ್ಯಾರ್ಥಿಗಳಿಗೆ ತಬಲಾ ವಿದ್ಯೆ ಧಾರೆಯೆರೆಯಲು ಪ್ರಾರಂಭಿಸಿದರು. ರಾಷ್ಟ್ರ ಮತ್ತು ಅಂತಾರಾಷ್ಟ್ರಮಟ್ಟದ ಎಲ್ಲಾ ಕಲಾವಿದರೊಂದಿಗೆ ತಬಲಾ ಸಾಥ್ ನೀಡುವ ಮೂಲಕ, ಭಾರತದ ಸಮಸ್ತ ಸಂಗೀತಾಭಿಮಾನಿಗಳಿಗೆ ತಮ್ಮ ಕಲೆಯ ರುಚಿಯನ್ನು ಉಣಿಸಿದರು.

ಮಲ್ಲಿಕಾರ್ಜುನ ಮನಸೂರ, ಬಸವರಾಜ ರಾಜಗುರು, ಗಜಾನನ ಜೋಶಿ, ಪ್ರಭಾ ಅತ್ರೆ, ಶ್ರೀಲಕ್ಷ್ಮೀ ಶಂಕರ, ಪ್ರಭುದೇವ ಸರದಾರ, ಡಿ. ಆರ್. ಪರ್ವತೀಕರ, ಪಂ. ಪಂಚಾಕ್ಷರಿ ಮತ್ತಿಗಟ್ಟಿ, ಸಿದ್ಧರಾಮ ಜಂಬಲದಿನ್ನಿ ಇವರುಗಳು ಹಿರಿಯ ಕಲಾವಿದರಾದರೆ, ಇನ್ನೂ ಅನೇಕ ಕಲಾವಿದರಿಗೆ ತಬಲಾ ಸಾಥಿ ನೀಡಿ, ತಬಲಾ ವಿದ್ಯೆಯ ಪ್ರಚಾರದ ಜೊತೆಗೆ ಈ ಭಾಗದ ಜನತೆಗೆ ಸಂಗೀತ ಕಾರ್ಯಕ್ರಮದ ವೈಖರಿಯನ್ನು ತೋರಿಸಿಕೊಟ್ಟರು. ಕಲಾವಿದನಾದವನಿಗೆ ತಮ್ಮತನ, ಏನಾದರೂ ಸ್ವಂತಿಕೆ, ತನ್ನದೇನಾದರೂ ಕಾಣಿಕೆ ನೀಡಬೇಕೆಂಬ ಛಲದಿಂದ ಹಡಪದ ಅವರು ಸ್ವಂತ ತಾಳಗಳನ್ನು ಸೃಷ್ಟಿ ಮಾಡಿ, ನುಡಿಸಿ ತಬಲಾ ವಿದ್ವಾಂಸರುಗಳು ಬೆರಗುಗೊಳ್ಳುವಂತೆ ಈ ತಾಳಗಳನ್ನು ಮಾಡಿದರು. ಜೊತೆಗೆ ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿ, ಅವರನ್ನು ಸಮಾಜ ಗುರುತಿಸುವಂಥ ಒಳ್ಳೆಯ ಕಲಾವಿದರನ್ನಾಗಿ ರೂಪಿಸಿದ್ದಾರೆ. ಅವರಲ್ಲಿ ಮುಖ್ಯವಾಗಿ ಪಂ. ಶಂಕರ ಕೌಡಿಮಟ್ಟಿ, ಪಂ. ಆರ್.ಎಚ್. ಮಾರೆ, ಎಸ್. ಪಾಟೀಲ್, ಜಗನ್ನಾಥ ಚೆಂಗಟಿ, ಎಂ.ಎ. ಸಾಲಿ, ಬಸಯ್ಯಸ್ವಾಮಿ, ಶಿವಾನಂದ ಮಂಗಲಗಿ, ಉದಯಕುಮಾರ, ಅಶ್ವಿನಕುಮಾರ, ನಿಖಿಲ, ರಾಜಕುಮಾರ, ಪಂಚಾಕ್ಷರಿ ಕಣವಿ, ಬಸವರಾಜ ಜೂರಟಗಿ ಮುಂತಾದ ಅನೇಕ ಶಿಷ್ಯ ಪರಂಪರೆಯನ್ನು ಸಂಗೀತ ಕ್ಷೇತ್ರಕ್ಕೆ ನೀಡಿರುತ್ತಾರೆ.

ಕರ್ನಾಟಕ ಸರಕಾರದಿಂದ ಸಂಗೀತ ನೃತ್ಯಕಲಾ ಅಕಾಡೆಮಿಯ 'ಕಲಾಶ್ರೀ' ಪ್ರಶಸ್ತಿ, ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿಯೂ ಹಡಪದ ಅವರು ಸೇವೆ ಸಲ್ಲಿಸಿದ್ದಾರೆ.

(ಎಂಇಬಿ)

ಹಣಮಂತ ಫತ್ತೆಪುರ: ದೊಡ್ಡಾಟ, ಸಣ್ಣಾಟ, ಕೋಲಾಟಗಳ ಮಾಸ್ತರರೆಂದೇ ಪ್ರಸಿದ್ಧವಾಗಿರುವ ಜಾನಪದ ರಂಗಭೂಮಿಯ ಕಲಾವಿದ. ಅಪರೂಪದ ಮೃದಂಗ ಕಲಾವಿದ. ಡೋಲು

ಕಲಾವಿದ. ತಂದೆ ರುಕ್ಕಪ್ಪ, ಚಿಂಚೋಳಿ ತಾಲ್ಲೂಕಿನ ಫತ್ತೆಪುರ ದವರು. ಬಡ ಕುಟುಂಬ ರಂಗಭೂಮಿಯ ಕಲಾ ಪ್ರೇಮಿಗಳಾದ ಇವರು ಮಗನ ರಂಗ ಭೂಮಿಯ ಒಲವುಗಳನ್ನು ಪ್ರೋತ್ಸಾಹಿಸಿ ಪ್ರಖ್ಯಾತರನ್ನಾಗಿ ಮಾಡಿದ ಖ್ಯಾತಿ ಅವರದು. ಸ್ವಯಂ ಪ್ರತಿಭೆಯಿಂದ ತಮ್ಮ ಹದಿಮೂರನೆಯ ವಯಸ್ಸಿನಲ್ಲಿ ಊರೂರು ಅಲೆದರು. ರಂಗಭೂಮಿಯ ಎಲ್ಲಾ ಕಲೆಗಳನ್ನು ಬಲ್ಲವರಾಗಿದ್ದು ಆಟಗಳಲ್ಲಿ ಸಾರಥಿಯಾಗಿ, ಹಾಸ್ಯ ತಮಾಷೆಗಳಿಂದ ಚಿತ್ರ ವಿಚಿತ್ರವಾಗಿ ವರ್ತಿಸುತ್ತ ಗಂಭೀರ ಪ್ರಸಂಗವನ್ನು ಸುಲಲಿತ ಗೊಳಿಸುವ ವೈಶಿಷ್ಟ್ಯಪೂರ್ಣ ಕಲೆ ಇವರದು. ಇವರು ಮಾಡಿದ ಪಾತ್ರಗಳಿಗೆ ಲೆಕ್ಕವೇ ಇಲ್ಲ. ಈಗ ಯುವ ಕಲಾವಿದರಿಗೆ ಮಾರ್ಗ ದರ್ಶನ ಮಾಡುತ್ತಾರೆ.

ಭೀಮ ವಿಲಾಸ, ಕರ್ಣಕಾಳಗ, ಯಯಾತಿ, ಇಂದ್ರಜೀತ ಇವರು ಆಡಿದ ದೊಡ್ಡಾಟಗಳು. 60 ವರ್ಷಗಳಿಂದ ನಿರಂತರ ವಾಗಿ ಸಾಗಿ ಬರುತ್ತಿದ್ದ ಇವರ ಕಲಾಸೇವೆ ಸ್ತುತ್ಯಾರ್ಹ. ಸಂಸ್ಕೃತಿ ಇಲಾಖೆ ಇವರ ಕಲೆ ಗುರುತಿಸುವಲ್ಲಿ ನಿಧಾನಿಸಿ ಈಗ ಕಾರ್ಯೋನ್ಮುಖವಾಗಿದೆ. (ಜಿಕೆ)

ಹಣಮಂತರಾವ ಕುಲಕರ್ಣಿ: ಸಂಗೀತ ಕಲಾವಿದ. ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನವರು. ಚಿಕ್ಕಂದಿನಿಂದಲೇ ಸಂಗೀತದ ಬಗ್ಗೆ ಗೀಳು ಹಚ್ಚಿಕೊಂಡ ಹಣಮಂತರಾವ ಎಸ್.ಎಸ್.ಎಲ್.ಸಿ ಮುಗಿದ ಅನಂತರ ಆಕಾಶವಾಣಿ ಕಲಾವಿದ ಮೌನೇಶಕುಮಾರ ಛಾವಣಿ ಅವರಲ್ಲಿ ಮೊದಲ ಸಂಗೀತ ಅಭ್ಯಾಸ ಆರಂಭಿಸಿದರು. ಅನಂತರ ಗಂಗಾವತಿಯಲ್ಲಿರುವ ಕೊಟ್ಟೂರೇಶ್ವರ ಸಂಗೀತ ಮಹಾವಿದ್ಯಾಲಯದಲ್ಲಿ ಜ್ಯೂನಿಯರ ಸಂಗೀತ ಪಾಸು ಮಾಡಿ ದರು. ರಮೇಶ ಜಮಖಂಡಿ, ಮಹಾದೇವಪ್ಪ ಹಾದಿಮನಿ ಅವರಲ್ಲಿ ಜ್ಯೂನಿಯರ ಸಂಗೀತ ಪೂರ್ತಿಗೊಳಿಸಿ, ಸೀನಿಯರ ಸಂಗೀತವನ್ನು ದೊಡ್ಡಯ್ಯ ಗವಾಯಿಗಳು ಕಲ್ಲೂರ, ಬಸವರಾಜ ಬಂಟನೂರ, ದೇವೇಂದ್ರಕುಮಾರ ಪತ್ತಾರ ಅವರಲ್ಲಿ ಅಭ್ಯಾಸ ಮಾಡಿದರು. ಸುಗಮ ಸಂಗೀತವನ್ನು ಸದಾಶಿವಯ್ಯ ಪಾಟೀಲ್ ಬೇನೂರ, ಅಂಬಯ್ಯ ನೂಲಿ ಮಾನ್ವಿ ಅವರುಗಳಲ್ಲಿ ಪರಿಪಕ್ವ ಗೊಂಡು ರಾಯಚೂರು, ಹೊಸಪೇಟೆ ಹಾಗೂ ಕೊಪ್ಪಳ ಆಕಾಶವಾಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯ ಕ್ರಮಗಳಲ್ಲಿ ಭಾಗವಹಿಸಿ ಪರಿಚಿತರಾಗತೊಡಗಿದರು.

ನಾಟಕ ಅಕಾಡೆಮಿ ಅವರು ಏರ್ಪಡಿಸಿದ ರಂಗೋತ್ಸವ ಕಾರ್ಯಕ್ರಮದಲ್ಲಿ ಜಿ. ನಾಗೇಶ್ವರರಾವ ರಚಿಸಿದ ರಂಗೋತ್ಸವ ಗೀತೆಗೆ ಸಂಗೀತ ಸ್ವರಸಂಯೋಜನೆ ಮಾಡಿ ತಾವೇ ಹಾಡಿ ಜನಮೆಚ್ಚುಗೆ ಗಳಿಸಿದರು. ಹೊಸಪೇಟೆ, ಮುನಿರಾಬಾದ, ಗಂಗಾವತಿ, ಕೊಪ್ಪಳ, ಭಾಗ್ಯನಗರ ಹಲವಾರು ಕಡೆ ಸಂಗೀತ ನಿರ್ಣಾಯಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುವ ಮೂಲಕ ಸೈ ಎನಿಸಿಕೊಂಡರು.

ಅನೇಕ ಕಡೆ ದಾಸ ಸಾಹಿತ್ಯ, ವಚನ ಸಾಹಿತ್ಯ, ತತ್ವಪದಗಳು, ಜಾನಪದ ಗೀತೆಗಳೊಂದಿಗೆ ಸುಗಮ ಸಂಗೀತ ಕಾರ್ಯಕ್ರಮ ಗಳನ್ನೂ ನೀಡಿದರು. 1997ರಲ್ಲಿ ಪ್ರಥಮ ಕಾರ್ಯಕ್ರಮ ಕಲ್ಲೂರು ಕಲ್ಲಿನಾಥೇಶ್ವರ ದೇವಸ್ಥಾನದಲ್ಲಿ ಪುಟ್ಟರಾಜ ಗವಾಯಿಗಳ ತುಲಾಭಾರ ಹಾಗೂ ಕಲ್ಲಿನಾಥೇಶ್ವರ ಕಾರ್ತಿಕೋತ್ಸದಲ್ಲಿ ಪಾಲ್ಗೊಂಡು ಸಂಗೀತ ಸೇವೆ ಸಲ್ಲಿಸಿದರು. ಅಲ್ಲಿಂದ ಆರಂಭ ಗೊಂಡ ಇವರ ಸಂಗೀತ ಸೇವೆ, ಮುಂದೆ ಹುನಗುಂದ, ಗದಗ, ಗಂಗಾವತಿ, ಕೊಪ್ಪಳ, ಹೊಸಪೇಟೆ, ಬಳ್ಳಾರಿ, ಸುರಪುರ, ಕಲಬುರ್ಗಿ, ಸಿಂಧನೂರ, ರಾಯಚೂರು, ಕನಕಗಿರಿ, ಮುನಿರಾ ಬಾದ, ಹುಲಗಿ, ತಾವರಗೇರಾ, ಕುಷ್ಟಗಿ ಮುಂತಾದ ಕಡೆಗಳಲ್ಲಿ ಅನೇಕ ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡಿದರು. ಇವರ ಸಂಗೀತ ಸೇವೆಯನ್ನು ಪರಿಗಣಿಸಿ ಕಂಪ್ಲಿಯಲ್ಲಿ 'ಗಾನ ಕಲಾಕುಶಲ' ಎಂಬ ಬಿರುದು ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅದೇರೀತಿ ಮುಂದೆ ಅನೇಕ ಕಡೆ ಇವರ ಸೇವೆಗೆ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾದರು.

ನಿರಂತರ ಸಂಗೀತ ಸೇವೆಯಲ್ಲಿ ತೊಡಗಿಸಿಕೊಂಡಿರುವ ಹಣಮಂತರಾಯರಿಗೆ ತಾವೇ ಒಂದು ಸಂಗೀತ ಶಾಲೆ ಆರಂಭಿ ಸುವ ವಿಚಾರ ಬಂದು, 2004ರಲ್ಲಿ ಬಸವಾಪಟ್ಟಣದಲ್ಲಿ ಶ್ರೀ ಉದ್ಭವಲಕ್ಷ್ಮಿ ಸಂಗೀತ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಕಳೆದ ಆರು ವರ್ಷಗಳಿಂದಲೂ ಹಲವಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಜ್ಯೂನಿಯರ ಸಂಗೀತ ವಿದ್ಯಾ ಭ್ಯಾಸ ಕಲಿಸಿ, ವಿಶೇಷವಾಗಿ ಸುಗಮ ಸಂಗೀತ ಕಲಿಸುತ್ತ ಅವರಲ್ಲಿ ಸಂಗೀತದ ಬಗ್ಗೆ ಆಸಕ್ತಿ ಹುಟ್ಟಿಸಿದ್ದಾರೆ. ಇದರಿಂದಾಗಿ ಇವರಲ್ಲಿ ಅಭ್ಯಾಸ ಮಾಡಿದ ಅನೇಕರು ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಇವರು, ಗಂಗಾವತಿ ತಾಲ್ಲೂಕು ಕಲಾವಿದರ ಸಂಘದ ಪ್ರಧಾನ ಕಾರ್ಯ ದರ್ಶಿಯಾಗಿ ಸತತ ಎರಡು ವರ್ಷ ಸೇವೆ ಸಲ್ಲಿಸಿದರು. ಅನಂತರ ಅಖಿಲ ಕರ್ನಾಟಕ ಗಾನಯೋಗಿ ಸಂಗೀತ ಪರಿಷತ್ ಕೊಪ್ಪಳ ಜಿಲ್ಲಾ ಅಧ್ಯಕ್ಷರಾಗಿ ಒಂಭತ್ತು ವರ್ಷಗಳ ನಂತರವೂ ಸೇವೆ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಸಂಸ್ಥೆಯಡಿ ಹಾನಗಲ್ ಕುಮಾರ ಸ್ವಾಮಿಗಳ ಪುಣ್ಯತಿಥಿಯನ್ನು ಪುಟ್ಟರಾಜ ಗವಾಯಿಗಳ ಅಧ್ಯಕ್ಷತೆಯಲ್ಲಿ ಕಳೆದ ಒಂಭತ್ತು ವರ್ಷಗಳಿಂದ ವಿವಿಧ ಕಲಾವಿದರನ್ನು ಕರೆಸಿ, ಸಂಗೀತ ಕಾರ್ಯಕ್ರಮ ನಡೆಸಿ ಕೊಂಡು ಬಂದಿದ್ದಾರೆ. 'ನಂಬಿದೆ ನಂಬಿದೆನಯ್ಯ' ಎಂಬ ಧ್ವನಿಸುರುಳಿಯೂ ಇವರ ಸಿರಿಕಂಠದಲ್ಲಿ ಹೊರ ಬಂದಿದೆ. ದೇವೇಂದ್ರಕುಮಾರ ಪತ್ತಾರ ಸಂಗೀತ, ವಾದ್ಯ ಸಂಗೀತ ಪ್ರವೀಣ ಗೋಡ್ಖಂಡಿ ಅವರದು. ಹಣಮಂತರಾವ ಕುಲಕರ್ಣಿ ಮತ್ತು ರಮೇಶ ಹೀರಾ ರಾಯಚೂರು, ಮಂಜುಳಾ ಗುರುರಾಜ, ಬಿ.ಆರ್. ಛಾಯಾ ಅವರು ಧ್ವನಿ ನೀಡಿದ್ದಾರೆ.

ಗುಜರಾತ ಭೂಕಂಪ ಪರಿಹಾರಕ್ಕಾಗಿ ಸಂಗೀತ ಸೇವೆ, ಸೈಯದ್ ಬಾಬಾ ಉರುಸು, ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯಕ್ರಮ, ಶಾರದಾ ಸಂಗೀತಪಾಠ ಶಾಲೆಯ ವಾರ್ಷಿ ಕೋತ್ಸವ, ಶರಣಬಸವೇಶ್ವರ ಪುರಾಣ, ಆನೆಗುಂದಿ ಉತ್ಸವ, ಮಹಾಶಿವರಾತ್ರಿ, ದತ್ತ ಜಯಂತಿ, ಶರಣಬಸವೇಶ್ವರ ಜಾತ್ರೆ,

ಭಾರ್ಗವ ಸಂಗೀತ ವೇದಿಕೆ ಮುಂತಾದ ಸುಮಾರು 50ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಂಗೀತ ಕ್ಷೇತ್ರದಲ್ಲಿ ಅದರಲ್ಲೂ ಸುಗಮ ಸಂಗೀತ ಕ್ಷೇತ್ರದಲ್ಲಿ ಈ ಭಾಗದಲ್ಲಿ ಗುರುತಿಸುವಂತೆ ಸಂಗೀತ ಸೇವೆಯನ್ನು ಮಾಡುತ್ತಿದ್ದಾರೆ.

(ಎಸ್‌ಕೆಎಚ್)

ಹಣಮಂತರೆಡ್ಡಿ ನಾಗರೆಡ್ಡಿಕರ್: ಜನಪದ ಕಲಾವಿದ. ಜಾನಪದ ಹಾಡುಗಳಾದ ಲಾವಣಿ, ಹಂತಿಯ ಪದ, ಸುಗ್ಗಿಯ ಪದ, ಮೊಹರಂ ಪದಗಳನ್ನು, ತತ್ವ ಪದಗಳನ್ನು ನಾಡಿನಾದ್ಯಂತ ಹಾಡಿ ಹಲವರಿಗೆ ಕಲಿಸಿ ಜನಪದ ಸಾಹಿತ್ಯ, ಕಲೆಯನ್ನು ಉಳಿಸುವಲ್ಲಿ ಶ್ರಮಿಸಿದವರು.

ನಲವತ್ತು ವರ್ಷಗಳ ಕಾಲ ನಿರಂತರ ಸಾಗಿದ ಕಲಾಸೇವೆ, ಸಾರ್ಥಕ ಬದುಕು, ತೃಪ್ತಿ ಜೀವನ ಇನ್ನೂ ಸೇವೆಯನ್ನು ಮಾಡುವ ಹಂಬಲದಿಂದ ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ. 30 ವರ್ಷಗಳ ಹಿಂದೆಯೇ ಹಸರಗುಂಡಗಿಯಲ್ಲಿ ಸಂಗೀತ ಪಾಠಶಾಲೆ ನಡೆಸುತ್ತಿದ್ದು ಇಲ್ಲಿ ಉಚಿತವಾಗಿ ಸೇವೆಯನ್ನು ನಡೆಸಿ ಜನರ ಮನ ಗೆದ್ದಿದ್ದಾರೆ. ಅನೇಕ ಭಜನಾ ಮಂಡಳಿಗಳಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಸುತ್ತ ಮುತ್ತ ಹಳ್ಳಿಗಳ ಜಾತ್ರೆಗಳಿಗೆ ಭಜನೆಯೊಂದಿಗೆ ಪಾದಯಾತ್ರೆ ಕೈಗೊಂಡಿದ್ದಾರೆ. ದೊಡ್ಡಾಟ, ನಾಟಕ, ಬಯಲಾಟಗಳಲ್ಲಿ ಜಾನಪದ ಸಂಗೀತ ಸೇವೆ ಮಾಡಿ ಹೈದ್ರಾಬಾದ ಕರ್ನಾಟಕದ ಹಳ್ಳಿಗಳಲ್ಲಿ ನಾಟಕ ಹಾರ್ಮೋನಿಯಂ ಸಂಗೀತ ಮಾಸ್ತರ್ ಎಂದು ಹೆಸರಾಗಿದ್ದಾರೆ.

ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್, ಉತ್ಸವಗಳಲ್ಲಿ ಜಾನಪದ ಮೇಳಗಳಲ್ಲಿ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಕಾರ್ಯಕ್ರಮ ನೀಡುತ್ತಿರುವುದು ನಾಗರೆಡ್ಡಿಯವರ ಹೆಗ್ಗಳಿಕೆಯಾಗಿದೆ. ಭಜನೆಪದಗಳು ಸಾವಿರಾರು, ಹಂತಿಯಪದಗಳು ನೂರಾರು ಹೀಗೆ ಜನಪದ ಕಾವ್ಯ ಸಂಗ್ರಹವೇ ಇವರಲ್ಲಿದೆ. ರಾತ್ರಿಯಿಡಿ ಭಜನೆ, ವಾರಗಟ್ಟಲೆ ಸುಗ್ಗಿಯ ಹಾಡುಗಳನ್ನು ಹಾಡುವ ಇವರ ಕಲೆ ಅಪ್ರತಿಮವಾದುದು.

(ಜಿಕೆ)

ಹನುಮಂತಪ್ಪ ಅಂಡಗಿ: ಜನಪದ ಗಾಯಕ. ಇವರ ತಂದೆ ತಮ್ಮ ಗ್ರಾಮದಲ್ಲಿಯೇ ಗ್ರಾಮ ಪಂಚಾಯತ ಅಧ್ಯಕ್ಷರಾಗಿದ್ದರು. 'ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ' ಎಂಬ ಬಯಲಾಟ ಆಡಿಸಿದ್ದರು. ಈ ಬಯಲಾಟದ ಮಧ್ಯದಲ್ಲಿ ಹನುಮಂತಪ್ಪ ಅಂಡಗಿ 'ಕಣ್ಣೀರಿನ ಹೊಳೆಯು ಹೆಣ್ಣಿನ ಜೀವನದಾ ಕಥೆಯು' ಎಂಬ ಜಾನಪದ ಹಾಡನ್ನು ಹಾಡಿದಾಗ ನಿಜವಾಗಿಯೂ ಗ್ರಾಮಸ್ಥರು ಕಣ್ಣೀರು ಹರಿಸಿದರು.

ಕೊಪ್ಪಳ ತಾಲ್ಲೂಕಿನ ಕೊಡದಾಳ ಗ್ರಾಮದ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮ, ಮಾದಿನೂರು ಗ್ರಾಮದ ಹೊನ್ನಿನಕೇರಿ ಮಲ್ಲಯ್ಯನ ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮ, ಆನೆಗೊಂದಿ ಉತ್ಸವ, ಕಲಬುರ್ಗಿಯ ಡೊಂಗರಗಾಂವ್ ಶಿಕ್ಷಕ ವೃತ್ತಿಗಿಳಿದ ಮೇಲೆ ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಅಂಗವಾಗಿ ಕೋಲಾಟ, ಸುಗ್ಗಿಯ ಕುಣಿತ, ರಾಷ್ಟ್ರೀಯ ಭಾವೈಕ್ಯತೆ, ಲಂಬಾಣಿ ಹಾಡುಗಳು, ಕೈ ಇಲ್ಲದ ರಾಜಕಾರಣಿ ನಾಟಕವನ್ನು ಪ್ರದರ್ಶಿಸಿದರು.

ಇವರು ಹಾಡಿದ ಜಾನಪದ ಹಾಡುಗಳನ್ನು ಮೆಚ್ಚಿ ಹಿರಿಯರು ನಗದು ಬಹುಮಾನ ನೀಡಿ ಗೌರವಿಸಿದರು. ಅಂದಿನಿಂದ ಹಾಡಿನ ಮಾಸ್ತರ ಎನ್ನುವ ಗರಿ ಇವರ ಮುಕುಟಕ್ಕೆ ಸೇರಿತು. ಬಯಲಾಟ, ನಾಟಕ, ಯಕ್ಷಗಾನ, ಮುಂತಾದ ವೇದಿಕೆಯಲ್ಲಿ ಹಲವಾರು ಗ್ರಾಮ-ಪಟ್ಟಣಗಳಲ್ಲಿ ಜಾನಪದ ಹಾಡುಗಳನ್ನು ಹಾಡಿ ಪ್ರಚಾರವನ್ನೂ ಗಿಟ್ಟಿಸಿಕೊಂಡಿದ್ದಾರೆ.

ಇವರು ಕೇವಲ ಜಾನಪದ ಹಾಡುಗಾರರಷ್ಟೇ ಅಲ್ಲ, ಕವಿ-ಕಲಾವಿದರ ಪೋಷಕರು ಲೇಖಕರು, ಭಾಷಣಕಾರರು, ಬಾಯಲ್ಲೇ ಆಧುನಿಕ ಸಂಗೀತ, ಹಾವಾಡಿಗರ, ರಾಮಕುಂಡಾಡಿ, ನಟರಾದ ಶಶಿಕುಮಾರಾ, ಜಗ್ಗೇಶ್‌ರವರ ಅನುಕರಣೆ ಮಾಡಿ ಜನರನ್ನು ನಗಿಸುತ್ತಾರೆ. ಬಿ.ಎ. ಪದವಿ ಎಸ್.ಜಿ. ಕಾಲೇಜ್ ಕೊಪ್ಪಳ, ಬಳ್ಳಾರಿಯ ಕೊಟ್ಟೂರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಎಡ್, ಧಾರವಾಡ ವಿ.ವಿ.ಯಿಂದ ಎಂ.ಎ., ಕಲಬುರ್ಗಿ ವಿ.ವಿ.ಯಿಂದ ಎಂ.ಎಡ್., ಇಂದಿರಾ ಗಾಂಧಿ ವಿ.ವಿ.ಯಿಂದ ಪಿಎಚ್.ಡಿ ಪಡೆದುಕೊಂಡು ಉನ್ನತ ಶಿಕ್ಷಣ ಪಡೆದರು.

ಕೊಪ್ಪಳ ಜಿಲ್ಲೆಯ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೊಪ್ಪಳ ತಾಲ್ಲೂಕಿನ ಇಂದರಗಿ ಗ್ರಾಮದ ಶಾಲೆಯ ಶಿಕ್ಷಕರಾಗಿದ್ದಾರೆ.

(ಕೆಜೆಎಂ)

ಹನುಮಂತಪ್ಪ ದೇವರಮನಿ: ರಂಗಭೂಮಿ ಕಲಾವಿದ. ಪ್ರಸಿದ್ಧ ಸ್ತ್ರೀ ವೇಷಧಾರಿ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ತಳಕಲ್ಲ ಗ್ರಾಮದ ಅಡಿವೆಪ್ಪ ಹನುಮಂತಪ್ಪನವರ ಮಗ. ಪಠಾಣರ ಹಾವಳಿ ಇದ್ದ ಕಾಲದಲ್ಲಿ ಹದಿನಾರರ ಹರೆಯದ ಯುವಕ. ಆಗ ಯಲಬುರ್ಗಾ ತಾಲ್ಲೂಕಿನ ಜನರೆಲ್ಲರ ಮುಂಡರಗಿ ಸೇರಿದಂತೆ ತಳಕಲ್ಲಿನ ಜನರೂ ಮುಂಡರಗಿಗೆ ಹೋದರು. ಆ ಹೊತ್ತಿಗೆ ಅಲ್ಲಿಯೇ ಶ್ರೀರಂಜನಿ ನಾಟಕ ಮಂಡಳಿ ತಳಕಲ್ಲು ಗ್ರಾಮದಲ್ಲಿ ಬಿಡಾರ ಹೂಡಿತ್ತು.

ಲೋಹಿತಾಶ್ವ ಪಾತ್ರದ ಮೂಲಕ ರಂಗಕ್ಕೆ ಏರಿದ ಹನುಮಂತಪ್ಪ, ಮೊದಲ ಅಭಿನಯಕ್ಕೆ ಸೈ ಎನಿಸಿಕೊಂಡ. ಎಲ್ಲರೂ ಈ ಬಾಲಕನ ಅಭಿನಯವನ್ನು ಮೆಚ್ಚಿದರು. ಆರು ತಿಂಗಳ ಕಾಲ ಸತತ ಕಲಾವಿದನಾಗಿ ತಳಕಲ್ಲ ಕಂಪನಿ, ನಟರಾಜ ಸೇವಾ ನಾಟ್ಯ ಸಂಘ ಧಾರವಾಡ, ಮಿತ್ರ ಕಲಾನಾಟ್ಯ ಸಂಘ ಬಳ್ಳಾರಿ, ಬೆಂಗಳೂರು, ದೊಡ್ಡ ಇನಾಂದಾರ ಕಂಪನಿಗಳಲ್ಲಿ ಬಾಲ ಪಾತ್ರ ಮಾಡಿ ಯಶಸ್ವಿ ಬಾಲ ಕಲಾವಿದರೆನಿಸಿಕೊಂಡರು.

ಗದುಗಿನ ವಸಂತ ಕಲಾ ನಾಟ್ಯ ಸಂಘ, ಚಿಂದೋಡಿ ಲೀಲಾರ ಕೆ.ಬಿ.ಆರ್. ಡ್ರಾಮಾ ಕಂಪನಿ, ಅರುಣೋದಯ ನಾಟ್ಯ ಸಂಘ ಬೆಳಗಾವಿ, ಭರತ ಸೇವಾ ನಾಟ್ಯ ಸಂಘ ಯಲಬುರ್ಗಾ, ವಿಜಯಕಲಾ ನಾಟ್ಯ ಸಂಘ ಚಿತ್ರದುರ್ಗ, ಮಾಂಡ್ರೆ ಕಂಪನಿ ಇಂತಹ ಹಲವಾರು ಕಂಪನಿಗಳ ಸ್ತ್ರೀ ಪಾತ್ರಕ್ಕೆ ಹನುಮಂತಪ್ಪ ಎತ್ತಿದ ಕೈ ಆದರು. ಹನುಮಂತಪ್ಪ ಬಾಲ್ಯದಲ್ಲಿ ಬಾಲಮಿತ್ರ, ಹರೆಯದರಲ್ಲಿ ಸ್ತ್ರೀ ಪಾತ್ರ ಮಾಡಿದರು. ಬಾಲಚಂದ್ರ, ಪ್ರಪಂಚ ಪರೀಕ್ಷೆ, , ಸೌಭಾಗ್ಯ ಲಕ್ಷ್ಮೀ, ಮಲತಾಯಿ, ಕಪಟ ಕಾರಸ್ಥಾನ, ಬಂಧುರತ್ನ, ನಂದಾದೀಪ ಮುಂತಾದ ನೂರಾರು ಸಾಮಾಜಿಕ, ಐತಿಹಾಸಿಕ ನಾಟಕಗಳಲ್ಲಿ ನಟ–ನಟಿಯಾಗಿ ಮೆರದ ಹನುಮಂತಪ್ಪನವರ ವ್ಯಕ್ತಿತ್ವ ಅಘಾದವಾದದ್ದು. ಲಂಕಾದಹನ, ಚಿತ್ರಾಂಗದ, ರಕ್ತ ರಾತ್ರಿ, ಅಕ್ಷಯಾಂಬರದಂಥ ಪೌರಾಣಿಕ ನಾಟಕಗಳಲ್ಲಿ ಬಬ್ರುವಾಹನ, ಊಲೂಚಿ, ಲಕ್ಷ್ಮಣಿ, ನಾಗವೇಣಿ ಪಾತ್ರಗಳಲ್ಲಿ ಅಭಿನಯಿಸಿ ದಾಖಲೆ ನಿರ್ಮಿಸಿದ್ದಾರೆ. ಇವರು ಮಾತನಾಡುವ ಭಾಷೆ, ವಸ್ತು, ಶೈಲಿ, ಸಂಭಾಷಣೆ ಪಾತ್ರಕ್ಕೆ ತಕ್ಕಂತೆ ಅಭಿನಯ, ಹಾಡುಗಾರಿಕೆ, ಹತ್ತು ಹಲವು ಕಂಪನಿಗಳಲ್ಲಿ ವರ್ಷಾನುಗಟ್ಟಲೇ ಅಲ್ಲೆ ಇದ್ದು ಆ ಕಂಪನಿಯ ಕಲಾವಿದನಾಗಿ ರಂಗಭೂಮಿಗೆ ವಿಶಿಷ್ಟ ಕಾಣಿಕೆ ನೀಡಿದ್ದಾರೆ. ಕೆಲವು ಬಯಲಾಟ ಗಳನ್ನು ಸಹ ಇವರು ಆಡಿದ್ದಾರೆ.

ಈಗ ಅರವತ್ತೇಳರ ಅಂಚಿನಲ್ಲಿರುವ ಹನುಮಂತಪ್ಪ ತಮ್ಮ ಹನ್ನೆರಡನೆಯ ವರ್ಷದಿಂದಲೂ ನಾಟಕಕ್ಕೆ ಪ್ರೋತ್ಸಾಹ ನೀಡು ತ್ತಿದ್ದಾರೆ. ಕಳೆದ ನಾಲ್ಕು ದಶಕಗಳ ಕಾಲ ರಂಗಭೂಮಿಗೆ ಅವಿರತ ಸೇವೆ ಸಲ್ಲಿಸಿದ ಕೀರ್ತಿ ಇವರದು. ಇಂದಿಗೂ ಚರಿತ್ರೆಯಲ್ಲಿ ದಾಖಲಾಗದ ರಂಗಭೂಮಿಯ ಅನೇಕ ಸಂಗತಿಗಳು ಇವರ ಬಾಯಲ್ಲಿವೆ. ಅಂದಿನಿಂದ ಇಂದಿನವರೆಗೂ ಒಂದು ಎಳೆತಪ್ಪ ದಂತೆ ಕಥೆ–ವ್ಯಥೆ ಹೇಳುತ್ತಾರೆ. ಕೊಪ್ಪಳ ಜಿಲ್ಲೆಯ ರಂಗ ಭೂಮಿಯ ಕುರಿತೂ ಸಹ ಬಿಚ್ಚಿ ಹೇಳುತ್ತಾರೆ.

(ಜಿಎಚ್‌ಪಿ)

ಹನುಮಂತರಾಯ ಕಾಕರಗಲ್: ಯುವ ಕಲಾವಿದ, ನಾಟಕಕಾರ. ಅನೇಕ ಮನ ಮಿಡಿತದ ಕಥೆಗಳನ್ನು ನಾಟಕ ರೂಪದಲ್ಲಿ ರಚಿಸಿ ರಂಗಭೂಮಿಗೆ ತರುವ ಮೂಲಕ ಗ್ರಾಮೀಣ ಜನರ ಮನಸ್ಸಿನಲ್ಲಿ ಮರೆಯಾಗದೇ ಉಳಿದವರು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಕಲೆ, ಸಾಹಿತ್ಯ, ಸಂಸ್ಕೃತಿಯಿಂದ ಶ್ರೀಮಂತಗೊಂಡಿದೆ. ಈ ಶ್ರೀಮಂತ ತಾಲ್ಲೂಕಿನ ಅನೇಕ ಪ್ರತಿಭಾವಂತ ಕಲಾವಿದರು ಎಲೆಮರೆಯ ಕಾಯಿಯಂತೆಯೇ ಉಳಿದು ತಾಲ್ಲೂಕಿಗೆ ಹೆಸರು ತರುತ್ತಿದ್ದಾರೆ. ಅಂಥವರ ಸಾಲಿಗೆ ಇದೇ ತಾಲ್ಲೂಕಿನ ಕಾಕರಗಲ್ ಗ್ರಾಮದವ ರಾದ ಹನುಮಂತರಾಯ ಕೂಡ ಒಬ್ಬರು.

ಇವರು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಉದ್ಯೋಗಿ. ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ರಂಗಭೂಮಿ ಕಡೆಗೆ ಒಲವು ಬೆಳೆಸಿಕೊಂಡವರು. ಹೀಗಾಗಿ ಇವರಿಂದ ಹಲವಾರು ಸಾಮಾಜಿಕ ನಾಟಕಗಳು ರಚನೆಯಾಗಿವೆ. ಧ್ವನಿ ಸುರುಳಿ ಬಿಡುಗಡೆಯಾಗಿವೆ. ಅನೇಕ ಕಥೆ, ಕವನ, ವಿಮರ್ಶೆ ಲೇಖನಗಳು ಮೂಡಿ ಬಂದಿವೆ. ಬೆಂಗಳೂರಿನಲ್ಲಿ ನಡೆದ ಅಂತರ್ ಕೆಪಿಸಿ ನಾಟಕ ಸ್ಪರ್ಧೆಯಲ್ಲಿ ಇವರ ನೇತೃತ್ವದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ನಾಟಕ ತಂಡ ಪ್ರಥಮ ಬಹುಮಾನ ಗಳಿಸಿರುವುದು ಇವರ ಪ್ರತಿಭೆಗೆ ಒಂದು ಚಿಕ್ಕ ಸಾಕ್ಷಿ.

ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನು ಯಥಾ ವತ್ತಾಗಿ, ಗ್ರಾಮೀಣ ಜನರಿಗೆ ಅರ್ಥವಾಗುವ ರೀತಿಯಲ್ಲಿ ನಾಟಕ ಗಳನ್ನು ರಚಿಸಿ ರಂಗಭೂಮಿಗೆ ತರುವ ಕಲೆ ಹನುಮಂತ ರಾಯ ಅವರಿಗೆ ಒಲಿದಿದೆ. ಇದರಿಂದಾಗಿ ಸ್ವಾರ್ಥ ಸೋದರ ಮಾವನ ದುರಾಸೆ ಕುರಿತಾದ 'ಕರ್ತವ್ಯದ ಕಾಣಿಕೆ' ಮತ್ತು ಕತ್ತಿನಲ್ಲಿ ಕರಿಮಣಿ ಇದ್ದರೂ ಒಬ್ಬ ಮಹಿಳೆ ವಿಧವೆಯಾಗಿ ಬಾಳಬೇಕಾದ ಪರಿಸ್ಥಿತಿ ಕುರಿತಾದ 'ಮಾಂಗಲ್ಯ ಹೊತ್ತ ವಿಧವೆ' ಎಂಬ ಸಾಮಾಜಿಕ ನಾಟಕಗಳು ಇವರಿಂದ ಮೂಡಿ ಬರಲು ಸಾಧ್ಯ ವಾಗಿದೆ. ಈ ಎರಡು ಮನ ಕಲಕುವ ನಾಟಕಗಳು ದೇವದುರ್ಗ ತಾಲ್ಲೂಕಿನ ಗಬ್ಬೂರು ಸೇರಿದಂತೆ ಅನೇಕ ಗ್ರಾಮೀಣ ಹವ್ಯಾಸಿ ನಾಟಕ ತಂಡಗಳಿಂದ ನೂರಾರು ಪ್ರದರ್ಶನ ಕಂಡು ಮೆಚ್ಚುಗೆ ಗಳಿಸಿವೆ. ಈ ಎರಡು ನಾಟಕಗಳಲ್ಲದೇ ಧನಲಕ್ಷ್ಮಿಗೆ ಧಿಕ್ಕಾರ, ಬದುಕು ಬೆಳಕುಕ, ಎಂಬ ನಾಟಕಗಳು ಕೂಡ ಸಾಕಷ್ಟು ಪ್ರದರ್ಶನಗೊಂಡು ಭೇಷ್ ಎನಿಸಿಕೊಂಡಿವೆ. ಮೋಸ ಎಂಬ ನಾಟಕ ಜೋಗಫಾಲ್ಸ್‌ನ ಮಿತ್ರ ಮಂಡಳಿ ಅವರಿಂದ ರಾಜ್ಯ ಮಟ್ಟ ದಲ್ಲಿ ಪ್ರದರ್ಶನ ಕಂಡಿದೆ. 'ಮಾಲೀಕನ ಮನವಿ' ಎಂಬ ನಾಟಕ ಪ್ರಕಟಣೆಯ ಹಂತದಲ್ಲಿದೆ. ಬೆಂಕಿ, ದೀಪಾ, ಗುಟ್ಟು, ಮೋಹದ ಮುಳ್ಳು, ದಂಡ ಎಂಬ ಕಥೆಗಳು ಇವರ ಲೇಖನಿಯಿಂದ ಮೂಡಿಬಂದಿವೆ.

ಕೇವಲ ನಾಟಕ, ಕಥೆ ರಚನೆಗಷ್ಟೇ ಸೀಮಿತಗೊಳ್ಳದೇ ಅಭಿನಯದಲ್ಲಿಯೂ ತೊಡಗಿಕೊಂಡಿರುವ ಇವರು ತಾವು ರಚಿಸಿದ ನಾಟಕಗಳಲ್ಲದೇ ಇನ್ನಿತರ ನಾಟಕಗಳಲ್ಲಿ ಹಾಗೂ ಧಾರಾವಾಹಿಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದಾರೆ. ಅನೇಕ ನಾಟಕಗಳನ್ನು ನಿರ್ದೇಶಿಸುವ ಮೂಲಕ ಕಲಾವಿದರನ್ನು ಬೆಳಕಿಗೆ ತಂದಿದ್ದಾರೆ. ಅನೇಕ ಭಕ್ತಿರಸ ಪ್ರಧಾನವಾದ ಧ್ವನಿ ಸುರುಳಿಗಳನ್ನು ಹೊರ ತಂದಿದ್ದಾರೆ. ಕಲಾಸೇವೆಯಲ್ಲಿ ತೊಡಗಿರುವ ಈ ಗ್ರಾಮೀಣ ಪ್ರತಿಭೆಗೆ ಈಗಾಗಲೇ ವಿವಿಧ ನಾಟಕ ತಂಡಗಳು, ಸಂಘ ಸಂಸ್ಥೆಗಳು ಮತ್ತು ಗಣ್ಯರು ಸನ್ಮಾನಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಿವೆ.

(ಬಿಎಚ್)

ಹನುಮಂತರಾವ ಕುಲಕರ್ಣಿ: ಸಂಗೀತಗಾರ. ಆರ್ಥಿಕವಾಗಿ ಸಬಲತೆ ಸಾಧಿಸಿದ ಶ್ರೀಮಂತ ಕುಟುಂಬದಲ್ಲಿ ಜನ್ಮವೆತ್ತಿದ ಇವರು ಜನಿಸಿದ್ದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಬಸಾಪಟ್ಟಣ. ಗ್ರಾಮದ ಹಿರಿಯರು ಸ್ವಾತಂತ್ರ್ಯ ಹೋರಾಟ ಗಾರರು ಆಗಿದ್ದ ರಾಮರಾವ್ ಕುಲಕರ್ಣಿ ದೈವಭಕ್ತ ಸುಂದರಿ ಬಾಯಿಯವರ ಪ್ರಥಮ ಪುತ್ರರಾಗಿ 1955ರಲ್ಲಿ ಜನಿಸಿದರು.

1970ರಲ್ಲಿ ಬಳ್ಳಾರಿಯಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿ ಮುಂದೆ ದ್ವಿತೀಯ ಪಿಯುಸಿ ಉತ್ತೀರ್ಣರಾದರು. ಸಂಗೀತದ ಬಗ್ಗೆ ಚಿಕ್ಕ ವಯಸ್ಸಿನಲ್ಲಿಯೇ ಆಸಕ್ತಿ ಮೈಗೂಡಿಸಿಕೊಂಡಿದ್ದರು. ಆವಾಗಲೇ ದೈವಭಕ್ತಿ ಹಾಡುಗಳನ್ನು ಹಾಡುತ್ತಿದ್ದರು. 1990ರಿಂದ ಸಂಗೀತಲೋಕದತ್ತ ಅತ್ಯಾಕರ್ಷಣೆಗೆ ಒಳಗಾಗಿ, ಸಂಗೀತ ಸರಸ್ವತಿಯ ಸೇವೆ ಸಲ್ಲಿಸತೊಡಗಿದರು. 1990 ರಿಂದ 1992ರ ವರೆಗೆ 2ವರ್ಷಗಳ ಪರ್ಯಾಂತ ಗಂಗಾವತಿಯ ಶ್ರೀ ಪಂಚಾಕ್ಷರಿ ಮಹಾವಿದ್ಯಾಲಯದಲ್ಲಿ ಸಂಗೀತ ದೇವತೆಯ ಆರಾಧಕರಾಗಿ, ಸಂಗೀತ ಲಹರಿಯಲ್ಲಿ ಪಳಗತೊಡಗಿದರು.

ಪ್ರಪ್ರಥಮವಾಗಿ 1997 ನವ್ಹೆಂಬರ್ 26 ರಂದು ಯಲ ಬುರ್ಗಾ ತಾಲ್ಲೂಕಾ ಇತಿಹಾಸ ಪ್ರಸಿದ್ಧಿ ಸ್ಥಳ ಕಲ್ಲೂರಿನ ಕಲ್ಲಿನಾಥೇಶ್ವರ ಸುಕ್ಷೇತ್ರದಲ್ಲಿ ಜರುಗಿದ ಲಕ್ಷದೀಪೋತ್ಸವ ಕಾರ್ಯಕ್ರಮದಲ್ಲಿ ತಮ್ಮಲ್ಲಿ ಹುದುಗಿದ್ದ ಸಂಗೀತ ಸ್ವರ ಮಾಧುರ್ಯವನ್ನು ಎಲ್ಲರೆದುರು ಬಿಚ್ಚಿಟ್ಟಾಗ, ಇಡೀ ಸಭಾ ಮಂಟಪವೇ ಇವರನ್ನು ಕೊಂಡಾಡಿತು. ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಹಿಂಧೂಸ್ಥಾನಿ ಸಂಗೀತ ಬಲ್ಲವರಾಗಿದ್ದು, 1997ರಿಂದ ಈವರೆಗೆ ಹಲವಾರು ಸಂಗೀತ ಕಾರ್ಯಕ್ರಮ ನೀಡಿ, ಸಂಗೀತಲೋಕದಲ್ಲಿ 'ಮಿನುಗುವ ನಕ್ಷತ್ರ' ಎಂದೇ ಖ್ಯಾತಿ ಹೊಂದಿದ್ದಾರೆ. 2000ರಲ್ಲಿ ಜರುಗಿದ ಹಂಪಿ ಉತ್ಸವದಲ್ಲಿ ಸುಗಮ ಸಂಗೀತ ಗಾಯನಗೈದರು. ಮುಂದೆ ಆನೆಗೊಂದಿ ಉತ್ಸವದಲ್ಲಿ, ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನೀಡಿ ಜನಮನ ಸೂರೆಗೊಂಡರು.

'ಅತ್ರಿ ನೆನಪು' ಕಾರ್ಯಕ್ರಮವನ್ನು ಹನುಮಂತರಾವ್ ಕುಲಕರ್ಣಿ ಅತ್ರಿಯವರ ಕುರಿತು ಇವರು ಅಂದು ಹಾಡಿದ ಹಾಡು ಕೇಳುಗರ ಮನ ಸೂರೆಗೊಂಡು ಅತ್ರಿಯವರನ್ನು ಅವರ ಸಾಧನೆಯನ್ನು ತಮ್ಮ ಹಾಡಿನಲ್ಲಿ ಅಡಗಿಸಿದ್ದ ಇವರ ಪ್ರತಿಭೆ ಯನ್ನು ಆ ಸಮಾರಂಭದಲ್ಲಿ ಎಲ್ಲರು ಮುಕ್ತಕಂಠದಿಂದ ಪ್ರಶಂಸಿಸಿದರು.

ಅದೇ ರೀತಿ 2002ರಲ್ಲಿ ಇನ್ನೂ ಕುಲಕರ್ಣಿಯವರ ದೈವತ್ವ ಲೋಕದ ಸೇವೆ ಚಿರಸ್ಮರಣೀಯ ಪುರಾಣ, ಪ್ರವಚನಗಳು ನಮ್ಮನ್ನು ದೈವತ್ವ ಲೋಕದತ್ತ ಕೊಂಡೊಯ್ಯುತ್ತವೆ. ಇಂತಹ ಪುರಾಣ ಪ್ರವಚನಗಳಲ್ಲಿ ಪಾಲ್ಗೊಂಡು ದೈವತ್ವ ಲೋಕದ ತತ್ವ ನಿಷ್ಠ ಪದಗಳನ್ನು ಮಹಾನ್ ಶಿವಶರಣರ ವಚನಗಳನ್ನು ಹಾಡುತ್ತ ಜನಜಾಗೃತಿಯನ್ನು ಮಾಡುತ್ತಿದ್ದಾರೆ. ಇವರ ಸೇವೆಯ ವೈಶಿಷ್ಟ್ಯವೆಂದರೆ ತಮ್ಮ ಸ್ವಗ್ರಾಮದ ಸುತ್ತಲಿನ 20ಕಿಲೋಮೀಟರ್ ವ್ಯಾಪ್ತಿಯಲ್ಲಿ ಭಾಗವಹಿಸಿ ಸಂಗೀತ ಸೇವೆ ಸಲ್ಲಿಸಿದರೂ ಸಹ ಯಾವುದೇ ಗೌರವಧನ ಪಡೆಯುವುದಿಲ್ಲ. ಆದರೆ ಇಪ್ಪತ್ತು ಕಿಲೋ ಮೀಟರ್‌ಗಿಂತ ಹೆಚ್ಚಿನ ಪ್ರದೇಶದ ಗ್ರಾಮಗಳಲ್ಲಿ ಪುರಾಣ, ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಗೀತ ಸೇವೆ ಸಲ್ಲಿಸಿದರೆ ಆ ಪುರಾಣ, ಸೇವಾ ಸಮಿತಿಯವರು ಕೊಡುವ ಗೌರವಧನವನ್ನು ತೆಗೆದುಕೊಳ್ಳುತ್ತಾರೆ. ಇದೇ ಇವರ ಸೇವೆಯ ವಿಶಿಷ್ಟ ಗುಣಧರ್ಮ.

ಬಸಾಪಟ್ಟಣದಿಂದ ಕಲಬುರ್ಗಿಯ ಶರಣಬಸವೇಶ್ವರ ಸನ್ನಿಧಿಯವರೆಗೆ ನಡೆದ ಭಜನಾ ಕಾರ್ಯಕ್ರಮದ ನೇತೃತ್ವ ವಹಿಸಿ ಕಾಲ್ನಡಗೆಯಲ್ಲಿಯೇ ಕಲಬುರ್ಗಿಯವರೆಗೆ ಭಜನೆ ಸೇವೆ ಸಲ್ಲಿಸುತ್ತಾ ಸಾಗಿದ್ದರು. ಹೀಗೆ ಸಂಗೀತಲೋಕದಲ್ಲಿ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. (ಎಸ್‌ಪಿಕೆ)

ಹನುಮಂತರಾವ ಗೋನವಾರ: ಜನಪ್ರಿಯ ಗಾಯಕ ರಲ್ಲೊಬ್ಬರು. ರಾಯಚೂರು ಜಿಲ್ಲೆಯಲ್ಲಿ ಹುಟ್ಟಿ ಗದಗ-ಹುಬ್ಬಳ್ಳಿ ಗಳಲ್ಲಿ ಸಂಗೀತ ಶಿಕ್ಷಣ ಪಡೆದು ಬೆಂಗಳೂರಿನಲ್ಲಿ ಸಂಗೀತ ಶಾಲೆ ಸ್ಥಾಪಿಸಿ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಏಪ್ರಿಲ್ 4, 1948ರಂದು ರಾಯಚೂರು ಜಿಲ್ಲೆ ಗೋನವಾರ ದಲ್ಲಿ ಜನಿಸಿದರು. ಇವರದು ಕಲಾವಿದರ ಪಾರಂಪರಿಕ ಕುಟುಂಬ. ತಂದೆ ಗಾನಾಭಿಯಚಂದ್ರ ಪಂಡಿತ್ ಮುರುಡೇಶ್ವರ ಗೋನವಾರ. ಬಾಲ್ಯದಲ್ಲಿ ಹನುಮಂತರಾವ್ ಸಂಗೀತದ ಜೊತೆಗೆ ಕಲೆ, ಅಭಿನಯಗಳಲ್ಲೂ ಆಸಕ್ತಿಯಿಂದ ಅಭ್ಯಾಸ ಆರಂಭಿಸಿದ್ದರು. ಅನಂತರ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಸಂಗೀತ ಮಹಾವಿದ್ಯಾಲಯದಲ್ಲಿ ಪಂಡಿತ್ ಪುಟ್ಟರಾಜ ಗವಾಯಿಗಳ ಗರಡಿಯಲ್ಲಿ ಸುಮಾರು ಆರು ವರ್ಷಗಳ ಕಾಲ ಕಠಿಣಾಭ್ಯಾಸ ಮಾಡಿದರು. ಅನಂತರ ಮತ್ತೆ ಆರು ವರ್ಷಗಳ ಕಾಲ ಪಂಡಿತ್ ಅರ್ಜುನ ಸಾ ನಾಕೋಡ್ ಅವರಲ್ಲಿ ಸಂಗೀತ ಶಿಕ್ಷಣ ಪಡೆದರು.

ಇವರು ಮುಂಬೈ, ಕೋಲ್ಕತ್ತಾ, ಮದ್ರಾಸ್, ಪಾಂಡಿಚೇರಿ ಗಳಲ್ಲದೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಹಿಂದೂಸ್ತಾನಿ ಕಲಾಕಾರ್ ಮಂಡಳಿ, ಸುರ್‌ಸಾಗರ್, ಬೆಳಗಾಂ ಕಲಾಕರ್ ಸಂಘ, ಹಂಪಿ ಸಂಗೀತ ಸಮ್ಮೇಳನ, ಮೈಸೂರು ದಸರ ಅರಮನೆ ಸಂಗೀತ ಕಾರ್ಯಕ್ರಮ ಮುಂತಾದ ಅನೇಕ ಪ್ರತಿಷ್ಠಿತ ಸಂಸ್ಥೆಗಳ ಆಶ್ರಯಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ.

ಆಕಾಶವಾಣಿಯ 'ಬಿ-ಹೈ' ಗಾಯಕರಾಗಿರುವ ಇವರಲ್ಲಿ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ನಿರಂತರ ಪ್ರಸಾರವಾಗುತ್ತಿರುತ್ತವೆ. ತಮ್ಮ ಗುರುಗಳಾದ ಅರ್ಜುನ್ ಸಾ ನಾಕೋಡ್ ಅವರ ಪ್ರೋತ್ಸಾಹದಿಂದ ಬೆಂಗಳೂರಿನಲ್ಲಿ 'ಶ್ರೀ ಸಚ್ಚಿದಾನಂದ ಹಿಂದೂಸ್ತಾನಿ ಸಂಗೀತ ವಿದ್ಯಾಲಯ' ಸ್ಥಾಪಿಸಿರುವ ಇವರು ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಹಲವಾರು ಪ್ರತಿಭಾವಂತ ಯುವಕಲಾವಿದರನ್ನು ನೀಡಿ ದ್ದಾರೆ.

ಮಂಗಳೂರು ಸಂಗೀತ ಸಭಾದಿಂದ 'ಗಾನ ದಿನಕರ', ಮೈಸೂರಿನ ಶ್ರೀ ಸಚ್ಚಿದಾನಂದ ಗಣಪತಿ ಸ್ವಾಮಿಗಳ ಶ್ರೀದತ್ತ ಸಂಗೀತ ಅಕಾಡೆಮಿಯಿಂದ 'ಚಿನ್ನದ ಹಾರ', ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಂದ 'ಗಾನ ಸುಧಾಕರ', ಗೋಕಾಕದ ಸಪ್ತಸ್ವರ ಸ್ನೇಹ ತಂಡದವರಿಂದ 'ರಾಗ ರಂಜನಿ'- ಇವೆಲ್ಲಾ ಶ್ರೀ ಹನುಮಂತರಾವ್ ಗೋನವಾರ ಅವರ ಸಂಗೀತ ಸೇವೆಯನ್ನು

ಗುರುತಿಸಿ ಸಂಘ ಸಂಸ್ಥೆಗಳು ನೀಡಿರುವ ಗೌರವ ಸನ್ಮಾನಗಳು. ಈ ಸಂಗೀತ ಸಾಧಕರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವಾರ್ಷಿಕ ಪ್ರಶಸ್ತಿ (2004–05) ನೀಡಿ ಗೌರವಿಸಿದೆ.

(ಎಸ್ಎಂಜಿ)



ಹನುಮಣ್ಣನಾಯಕ ದೊರೆ: ಹೆಸರಾಂತ ಹಿಂದೂಸ್ತಾನಿ ಗಾಯಕ. ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ.

ಈ ಕಲಾವಿದರ ಗ್ರಾಮ ತೆಗ್ಗಿಹಾಳ ಒಂದು ಕುಗ್ರಾಮ. ಗ್ರಾಮದ ಹುಲಿಗೆಮ್ಮ ದೇವಸ್ಥಾನದಲ್ಲಿ ಭಜನೆ ಹಾಡಿಗೆ ಕಿವಿ ಗೊಟ್ಟು ತಾಳ ಹಾಕುತ್ತಿದ್ದ ಮುಗ್ಧ ಗ್ರಾಮೀಣ ಪ್ರತಿಭೆ ಸಂಗೀತದ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದ ಹೆಸರುಗಳಿಸಿ, ತಮ್ಮೂರಿಗೆ ಕೀರ್ತಿ ತರಲಿದೆ ಎಂದು ಬಹುಶಃ ಆಗ ಯಾರೂ ನಿರೀಕ್ಷಿಸಿರಲಿಕ್ಕಿಲ್ಲ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದು, ರಾಷ್ಟ್ರಮಟ್ಟದ ಸಾಧನೆ ಮಾಡಿರುವ ಇವರು ತಮ್ಮ ಜೀವನದ ದಾರಿಯುದ್ದಕ್ಕೂ ಕಲ್ಲುಮುಳ್ಳು ಸರಿಸಿಕೊಂಡು, ಹೆದ್ದಾರಿವರೆಗೆ ಸಾಗಿ ಬಂದದ್ದು ರೋಚಕ ಕಥೆ.

ತೆಗ್ಗಿಹಾಳ ಗ್ರಾಮದ ಹುಲಿಗೆಮ್ಮ ದೇವಸ್ಥಾನದಲ್ಲಿ ನಡೆಯುತ್ತಿದ್ದ ಭಜನೆಗೆ ಹೋಗುತ್ತಿದ್ದ ದೊರೆ, ಭಜನೆಯಲ್ಲಿನ ದಿಮ್ಮಿ ತಾಳ, ದಮ್ಮ, ಏಕತಾರಿ ನಾದಕ್ಕೆ ಮಿತ್ರರೊಂದಿಗೆ ಹಾಡುಗಳನ್ನು ಇಂತಹ ಸಂದರ್ಭದಲ್ಲಿ ಅವರಲ್ಲಿನ ಹಾಡುಗಾರನನ್ನು ಗುರುತಿಸಿದ್ದು, ಅವರ ಸೋದರಮಾವ ದೊಡ್ಡವೆಂಕಣ್ಣ ದೊರೆ. ಇವರು, ಗ್ರಾಮೀಣ ಪ್ರದೇಶದಲ್ಲಿ 'ಗುರುಬೋಧ' ಎಂದು ಕರೆಯುವ ದೀಕ್ಷೆ ಪಡೆದವರು. ಇವರೇ ಹನುಮಣ್ಣನವರ ಎರಡನೆಯ ಗುರು. ಆಗ ಇವರು ಏಳೆಂಟು ವರ್ಷದ ಹುಡುಗ.

ಪ್ರತಿದಿನ ಹುಲಿಗೆಮ್ಮ ದೇವಸ್ಥಾನದಲ್ಲಿ ರಾತ್ರಿ ಸಮಯದಲ್ಲಿ ಇವರ ಸೋದರ ಮಾವ ಭಜನೆ ಹಾಡುಗಳನ್ನು ಕಲಿಸುತ್ತಿದ್ದರು. ಆಗ ಇವರ ವಾದ್ಯವೆಂದರೇ 'ಏಕತಾರಿ'. ಇದೇ ಇವರ ಮುಂದಿನ ಸಂಗೀತಕ್ಕೆ ನಾಂದಿಯಾಯಿತು. ಆಗ ರಾಗ ತೆಗೆದದ್ದು, ಇವರನ್ನು ಬಹು ದೂರಕ್ಕೆ ಕರೆದೊಯ್ದು ಪ್ರಶಸ್ತಿ ಮಟ್ಟಕ್ಕೆ ತಲುಪಿಸಿದೆ.

ಮುಂದೆ ಭಜನೆ ಹಾಡಿನೊಂದಿಗೆ ಏಕತಾರಿ ನುಡಿಸುವುದು ಕಲಿತಾಗ ತೆಗ್ಗಿಹಾಳದಲ್ಲಿನ ಶಾಲೆಯಲ್ಲಿ ನಾಲ್ಕನೆಯ ತರಗತಿ ಮುಗಿದಿತ್ತು. ಅಲ್ಲಿಂದ ತಾಯಿಯ ತವರೂರಾದ ಶಹಾಪುರ ತಾಲ್ಲೂಕಿನ ವನದುರ್ಗದಲ್ಲಿ ಮಾಧ್ಯಮಿಕ ಪ್ರೌಢ ವಿದ್ಯಾಭ್ಯಾಸ ಮುಂದುವರೆಸಿದರು. ಇಲ್ಲಿ ಶಿಕ್ಷಣದ ಜೊತೆಗೆ ಸಿನೆಮಾ ಹಾಡು, ಭಾವಗೀತೆ ಮುಂತಾದುವುಗಳನ್ನು ಹಾಡುತ್ತಲಿದ್ದರು. ಆಗ ಬಿ.ಜಿ. ಸಾಲಿಮಠ ಎಂಬ ಶಿಕ್ಷಕರು ಮುಂದಿನ ಸಂಗೀತಕ್ಕೆ ಪ್ರೇರಣೆಯಾದರು.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ನಿಜವಾದ ಸಂಗೀತದ ಸರಿಗಮ ಆರಂಭವಾಯಿತು. ವಿ.ಎನ್. ಬದಿ ಎಂಬುವವರು ಸಂಗೀತ ಶಿಕ್ಷಕರಾಗಿದ್ದರು. ಇಲ್ಲಿ ಐದು ವರ್ಷದ ಶಿಕ್ಷಣ, ನಂತರ ಬಿ.ಎ ಮುಗಿದಾಗ 1976. ಅದೇ ವರ್ಷ ಅಪ್ಪ, ಅಮ್ಮ ಇಬ್ಬರೂ ತೀರಿಕೊಂಡರು. ಆಗ ಅನಾಥ ಪ್ರಜ್ಞೆ ಕಾಡಲಾರಂಭಿಸಿತು. ಇನ್ನೇನು ಸಂಗೀತದ ಶಿಕ್ಷಣ ನಿಂತು ಹೋಯಿತೆಂಬ ಆತಂಕದಲ್ಲಿದ್ದಾಗ, ನೆರವಿಗೆ ಬಂದವರು ಇವರ ಆಪ್ತ ಮಿತ್ರ ಎಂ.ಎಚ್. ಕುಲಕರ್ಣಿ. ಮೂಲತಃ ರಾಣೆಬೆನ್ನೂರು ತಾಲ್ಲೂಕಿನ ಕಜ್ಜೇರಿ ಗ್ರಾಮದವರಾದ ಕುಲಕರ್ಣಿ ಸ್ಟಿಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಜೊತೆಗೆ ಸಂಗೀತ ಪ್ರೇಮಿಯಾಗಿದ್ದರು. ಅವರೂ ಸೇರಿದಂತೆ ಇನ್ನಿತರ ಮಿತ್ರರೊಡ ಗೂಡಿ ಸಿಂಧನೂರಿನ ರಾಮದೇವರ ಮಂದಿರದಲ್ಲಿ ಪ್ರತಿದಿನ ಸಂಗೀತದೊಂದಿಗೆ ಹಾಡುಗಳನ್ನು ಹಾಡುತ್ತಾ ಕಾಲ ಕಳೆಯುತ್ತಿದ್ದರು. ಇದೇ ಸಂದರ್ಭದಲ್ಲಿ ಕುಲಕರ್ಣಿ ಅವರಿಗೆ ಧಾರವಾಡಕ್ಕೆ ವರ್ಗವಾಯಿತು. ಅಪ್ಪ ಅಮ್ಮನನ್ನು ಕಳೆದುಕೊಂಡು ಕಂಗಾಲಾಗಿದ್ದ ಇವರಿಗೆ ಧಾರವಾಡಕ್ಕೆ ಬರುವಂತೆ ಕುಲಕರ್ಣಿ ಮನವೊಲಿಸಿದರು. ಯಾವುದಾದರೂ ಗೊಬ್ಬರದ ಅಂಗಡಿಯಲ್ಲಿ ಚಿಕ್ಕ ನೌಕರಿಗೆ ಸೇರಿ, ಅಭ್ಯಾಸ ಮುಂದುವರಿಸಿದರಾಯಿತೆಂದು ಧಾರವಾಡಕ್ಕೆ ಹೊರಟರು. ಅಲ್ಲಿ ಇವರ ಜೀವನದ ದಿಕ್ಕೇ ಬದಲಾಯ್ತು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಸಂಗೀತ ಕಲಿಯಲು ಅರ್ಜಿ ಹಾಕಿದರು. ಆಗ ಈ ವಿಭಾಗಕ್ಕೆ ಪದ್ಮಭೂಷಣ ಪಂಡಿತ ಮಲ್ಲಿಕಾರ್ಜುನ ಮನ್ಸೂರ ಅಧ್ಯಕ್ಷರಾಗಿದ್ದರು. ಸಂದರ್ಶನದಲ್ಲಿ ಭಾಗವಹಿಸಿದ್ದ ಹದಿನೈದು ಅಭ್ಯರ್ಥಿಗಳಲ್ಲಿ ಐವರನ್ನು ಆಯ್ಕೆ ಮಾಡಬೇಕಾಗಿತ್ತು. ಇವರನ್ನು ಹೊರತುಪಡಿಸಿದರೆ, ಇನ್ನುಳಿದವರೆಲ್ಲಾ ಸಂಗೀತದಲ್ಲಿ ಪದಕ ಪಡೆದವರು. ಹಲವಾರು ಕಾರ್ಯಕ್ರಮಗಳನ್ನು ನೀಡಿದವರು. ಸಾಮಾನ್ಯ ಅಭ್ಯರ್ಥಿಯೆಂದರೆ ಹನುಮಣ್ಣ ಅವರೊಬ್ಬರೆ. ಆದರೆ ಸಂಗೀತದಲ್ಲಿ ಅನನ್ಯ ಆಸಕ್ತಿ ಹೊಂದಿದ್ದರು. ಒಂದು ತಾಸು ಸಂದರ್ಶನ ನಡೆಯಿತು. ಆಗ ಇವರು ಹಾಡಿದ್ದು 'ಮಾಲಕಂಸ ರಾಗ'. ಯಾವುದೇ ಅಳುಕಿಲ್ಲದೇ ನಿರ್ಭಯದಿಂದ ಈ ರಾಗ ಹಾಡಿದಾಗ, ಸಂದರ್ಶನ ಸಮಿತಿಯಲ್ಲಿದ್ದ ಪಂ. ಮನ್ಸೂರು, ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ ಅವರಿಗೆ, 'ಇವಂದು ಪಹಡಿ (ಗ್ರಾಮೀಣ) ಅವಾಜ್ ಆದ, ಇಂವ ಮುಂದೆ ಇಂಡಿಯಾಕ್ಕ ಒಂದು ಚೀಜ್ ಆಗ್ತಾನ, ಇವುನ್ನ ತಗೋ' ಎನ್ನುವ ಮೂಲಕ ಹನುಮಣ್ಣನವರನ್ನು ಆಯ್ಕೆ ಮಾಡಿದ್ದರು. ಆಯ್ಕೆಯಾದ ಬಗ್ಗೆ ಶ್ರೇಷ್ಠ ತಬಲಾ ವಾದಕ ಪಂ. ಬಸವರಾಜ ಬೆಂಡಿಗೇರಿ ಮರುದಿನ ತಿಳಿಸಿದರು. ಪ್ರವೇಶದೊರೆತ ನಂತರ ಹೆಚ್ಚು ಸಂತೋಷ



ಡಾ. ಎಸ್. ಎಮ್. ಪಂಡಿತ ರಂಗಮಂದಿರ (ಗುಲಬರ್ಗಾ)



ಜಿಲ್ಲಾ ಬಾಲಭವನ ಸಭಾಂಗಣ (ಗುಲಬರ್ಗಾ)

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ
ಗುಲಬರ್ಗಾ ಸಂಪುಟ



ಸಮುದಾಯದ ನಾಟಕೋತ್ಸವದಂಗವಾಗಿ
'ರಾವಿ ನದಿಯ ದಂಡೆಯಲ್ಲಿ' ನಾಟಕದ ದೃಶ್ಯ

ಚಿತ್ರ ಸೂಚಿ – ೬೧

ಪಟ್ಟಿದ್ದು, ಇವರ ಮಿತ್ರ ಕುಲಕರ್ಣಿ.

ವಿಶ್ವವಿದ್ಯಾಲಯದಲ್ಲಿ ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್ಲ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ರಾಜೀವ ಪುರಂದರೆ, ಸಂಗಮೇಶ್ವರ ಗುರವ, ಜಾನಕಿ ಐಯ್ಯರ್, ರಮೇಶ ನಾಡಕರ್ಣಿ, ನಾನಾ ಶೆಡೋಲೆಕರ್ ಅವರಂಥ ವಿದ್ವಾಂಸರು ದೊರೆಗೆ ಸಂಗೀತ ಧಾರೆ ಎರೆದರು.

ಪಂ. ಬಸವರಾಜ ರಾಜಗುರು ಅವರು ಮನೆ ಪಾಠ ನೀಡಿದರು. ಅವತ್ತು ಅವರು ಮೊದಲ ಪಾಠ ಆರಂಭಿಸಿ ತೊಡಿರಾಗ ಹೇಳಿಕೊಡುತ್ತಿದ್ದರು. ಕೇವಲ ಕಾಲೇಜಿನಲ್ಲಿ ಕಲಿತರೆ ಮಾತ್ರ ಸಾಲದು. ಮನೆಗೆ ಬಂದು ಕಲಿ ಎಂದು ತಿಳಿಸುವ ಮೂಲಕ ಮನೆಪಾಠದ ಗುರುವಾದರು. ಇದೇ ಸಂದರ್ಭದಲ್ಲಿ ಮಿತ್ರ ಕುಲಕರ್ಣಿಗೆ ಮತ್ತೆ ಸಿಂಧನೂರಿಗೆ ವರ್ಗವಾದಾಗ ನಿರಾಶ್ರಿತರಾದ ಹನುಮಣ್ಣ ಅವರನ್ನು ಪಂ. ರಾಜಗುರು ಅವರು, ತಮ್ಮ ಮನೆಗೇ ಕರೆಸಿಕೊಂಡರು. ನಾಲ್ಕೈದು ವರ್ಷಗಳ ಕಾಲ ಊಟ, ಬಟ್ಟೆ, ನೀಡಿ ಮಗನಂತೆ ನೋಡಿಕೊಂಡರು. ರಾಷ್ಟ್ರದ ಶ್ರೇಷ್ಠ ಕಲಾವಿದರಾದ ಪಂ. ಮಲ್ಲಿಕಾರ್ಜುನ ಮನ್ಸೂರ ಅವರಿಂದ ಎಂ.ಎ. ಅಭ್ಯಾಸ ಹಾಗೂ ಬಸವರಾಜ ರಾಜಗುರು ಅವರಿಂದ ಸಂಗೀತ ಅಭ್ಯಾಸ ಭಾಗ್ಯ ದೊರೆಯಿತು.

ಮೂಲತಃ ದೇವದುರ್ಗ ತಾಲ್ಲೂಕಿನ ಅರಕೇರಿ ಸಂಸ್ಥಾನದ ರಾಜ ವಂಶಸ್ಥರಾಗಿರುವ ಹನುಮಣ್ಣನಾಯಕ ದೊರೆ ಸಂಗೀತ ಅಭ್ಯಾಸದ ನಂತರ ಮೈಸೂರು ದಸರಾ, ಪಟ್ಟದಕಲ್ಲು, ನವರಸ ಉತ್ಸವ, ಹಂಪಿ, ಮಳಖೇಡ ಉತ್ಸವ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಬಸವರಾಜ ರಾಜಗುರು ಅವರಿಗೆ ಮುಂಬೈ, ದೆಹಲಿ, ಕಲ್ಕತ್ತಾ, ಮದ್ರಾಸ್, ಪಟ್ನಾ, ದರ್ಬಂಗಾ, ಹೈದ್ರಾಬಾದ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಸಹಗಾಯಕರಾಗಿ ಕಾರ್ಯನಿರ್ವಹಿಸಿ, ಸಂಗೀತ ಪ್ರೇಮಿಗಳಿಂದ ಭೇಷ್ ಎನಿಸಿಕೊಂಡಿದ್ದಾರೆ.

ಅತ್ಯಂತ ಚಿಕ್ಕ ವಯಸ್ಸಿನಲ್ಲೇ, ಅನೇಕ ಪ್ರಶಸ್ತಿಗಳು ಬಂದಿವೆ. 1992ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1993ರಲ್ಲಿ ಗಾನ ಗಂಧರ್ವ ಪ್ರಶಸ್ತಿ, 1998ರಲ್ಲಿ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ಅದೇ ವರ್ಷ ಸೊರಬ ಸಂಗೀತ ಸೇವಾ ಸಮಿತಿಯಿಂದ ಚಂದ್ರಹಾಸ ಪ್ರಶಸ್ತಿ, 1999ರಲ್ಲಿ ಬೆಂಗಳೂರಿನ ಬುದ್ಧ ಸಂಸ್ಕೃತಿ ಅಕಾಡೆಮಿಯಿಂದ ಬುದ್ಧ ಪ್ರಶಸ್ತಿ ಮೊದಲಾದವು.


ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರಾಗಿರುವ ಇವರ ಶಾಸ್ತ್ರೀಯ ಸಂಗೀತದ ಆರು ಕ್ಯಾಸೆಟ್ ಮತ್ತು ಒಂದು ಸಿಡಿ ಹೊರ ಬಂದಿವೆ. ಬೆಳಗಾವಿ ಜಿಲ್ಲೆಯ ಕಿತ್ತೂರು, ಹುಬ್ಬಳ್ಳಿ, ಧಾರವಾಡ ಹಾಗೂ ಕಲಬುರ್ಗಿ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಕೆಲ ಕಾಲ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.

(ಬಿಎಚ್)

ಹನುಮಾನ ಮಂದಿರದ ಭಿತ್ತಿ ಚಿತ್ರಗಳು: (ರಾಯಚೂರು) ಹೈದರಾಬಾದ-ಕರ್ನಾಟಕ ಪ್ರದೇಶದ ಪ್ರಮುಖ ಜಿಲ್ಲಾಕೇಂದ್ರ ರಾಯಚೂರು. ಪ್ರಾಚೀನ ಕಾಲದಿಂದಲೂ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟ ಈ ಪ್ರದೇಶ ಐತಿಹಾಸಿಕ ನಗರವೂ ಹೌದು. ಹಿಂದೆ ಹೈದರಾಬಾದ ನಿಜಾಮ್ ರಾಜ್ಯದ ಆಡಳಿತಕ್ಕೂ ಒಳಪಟ್ಟ ಈ ನಗರದಲ್ಲಿ ಅದೆಷ್ಟೋ ಸ್ಮಾರಕಗಳು (ಮಠ-ಮಂದಿರ ಹಾಗೂ ಶ್ರೀಮಂತರ ಮನೆಗಳು) ನಿರ್ಮಿಸಲ್ಪಟ್ಟವು. ಕೆಲವೊಂದು ಸ್ಮಾರಕಗಳಲ್ಲಿ ಚಿತ್ರರಚನೆ ಮಾಡಲಾಗಿದ್ದರಿಂದ ಇವು ಕರ್ನಾಟಕದ ಪ್ರಾಚೀನ ಭಿತ್ತಿಚಿತ್ರಗಳುಳ್ಳ ನೆಲೆಗಳೆಂದೂ ಗುರುತಿಸಿಕೊಂಡಿವೆ.

ರಾಯಚೂರು ನಗರದ ಹೃದಯಭಾಗವಾದ ಸೋಮವಾರ ಪೇಟೆಯ (ಈ ಸ್ಥಳವನ್ನು ಮಡ್ಡಿಪೇಟೆ ಎಂತಲೂ ಕರೆಯಲಾಗುತ್ತದೆ) ಖಾಜನಗೌಡರ ಮನೆಯ ಹತ್ತಿರದಲ್ಲೇ ಹನುಮಾನ ಮಂದಿರದಲ್ಲಿ ಭಿತ್ತಿಚಿತ್ರಗಳು ಕಂಡುಬಂದಿವೆ. ಖಾಜನಗೌಡರ ಮನೆ ನಿರ್ಮಾಣದ ಅನಂತರದಲ್ಲಿ ಕಟ್ಟಲ್ಪಟ್ಟ ಈ ದೇವಾಲಯದ ಒಳಮಾಳಿಗೆ, ಭುವನೇಶ್ವರಿ ಹಾಗೂ ಕಲ್ಲಿನ ತೊಲೆಗಳ ಮೇಲೆ ರಾಮಾಯಣ, ಮಹಾಭಾರತ ಸನ್ನಿವೇಶದ ಚಿತ್ರಗಳೊಂದಿಗೆ ಪ್ರಾಣಿ-ಪಕ್ಷಿಗಳು, ಅಲಂಕಾರಿಕ ವಿನ್ಯಾಸಗಳು ಚಿತ್ರಣಗೊಂಡಿವೆ. ಒಂದೊಮ್ಮೆ ದೇವಾಲಯದ ಗೋಡೆಗಳ ಮೇಲೂ ಚಿತ್ರಗಳಿದ್ದವೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ.

ಎತ್ತರವಾದ ಕಟ್ಟೆಯ ಮೇಲೆ ಕಟ್ಟಲ್ಪಟ್ಟ ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು, ಮುಖಮಂಟಪ ಹಾಗೂ ಗರ್ಭಗೃಹ ಹೊಂದಿದೆ. ಮುಖಮಂಟಪದ ನಡುವೆ ನಾಲ್ಕು ಕಂಬಗಳುಳ್ಳ ಅಂಕಣವಿದೆ. ಈ ಅಂಕಣದಲ್ಲಿನ ನಾಲ್ಕು ಕಂಬಗಳು ಹಾಗೂ ಗೋಡೆಗಳಲ್ಲಿನ ಕಂಬಗಳು ಸೇರಿದಂತೆ ಒಟ್ಟು ಹದಿನಾರು ಕಂಬಗಳನ್ನು ಈ ಮುಖಮಂಟಪ ಹೊಂದಿದೆ. ಈ ಕಂಬಗಳಲ್ಲಿ ಯಾವುದೇ ರೀತಿಯ ಕುಸುರಿ ಕೆತ್ತನೆ ಕಂಡುಬರುವುದಿಲ್ಲ. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಆಸರೆಯಾಗಿ ಒಟ್ಟು



ಮಡ್ಡಿ ಪೇಟೆಯ ಹನುಮಾನ ಮಂದಿರ, ರಾಯಚೂರ



ಮಡ್ಡಿಪೇಟೆ ಹನುಮಾನ ಮಂದಿರದಲ್ಲಿನ 'ಸಮುದ್ರ ಮಂಥನ' ಭಿತ್ತಿಚಿತ್ರ

ಇಪ್ಪತ್ನಾಲ್ಕು ತೊಲೆಗಳನ್ನು ಜೋಡಿಸಿದೆ. ಹಾಗಾಗಿ ಈ ತೊಲೆಗಳು ಮುಖಮಂಟಪವನ್ನು ಒಟ್ಟು ಒಂಭತ್ತು ಅಂಕಣಗಳಂತೆ ವಿಭಾಗಿಸುತ್ತದೆ.

ಪ್ರತಿಯೊಂದು ಅಂಕಣದಲ್ಲಿ ಹಾಗೂ ತೊಲೆಗಳ ಮೂರೂ ಬದಿಯಲ್ಲಿ ವರ್ಣಚಿತ್ರಗಳಿವೆ. ಮಧ್ಯದ ಅಂಕಣ ಹಾಗೂ ನಾಲ್ಕೂ ಮೂಲೆಗಳಲ್ಲಿನ ಅಂಕಣಗಳ ಮಧ್ಯೆ ಸುಂದರವಾದ ಭುವನೇಶ್ವರಿಯ ಕೆತ್ತನೆಯಿದ್ದು, ಈ ಕೆತ್ತನೆಯ ಮೇಲೆ ಹಳದಿ ವರ್ಣದ ಹಿನ್ನೆಲೆಯಲ್ಲಿ ಹಸಿರು, ಕೆಂಪು ಹಾಗೂ ನೀಲಿ ವರ್ಣ ಗಳಿಂದ ನವಿಲು, ಗಿಳಿ-ಗೊರವಂಕ ಇತ್ಯಾದಿ ಪ್ರಾಣಿಗಳ ಚಿತ್ರಗಳೊಂದಿಗೆ ಸುಂದರವಾದ ನಕ್ಷಾಚಿತ್ರಗಳನ್ನು ಬಿಡಿಸಿದೆ. ಇನ್ನುಳಿದ ಅಂಕಣಗಳಲ್ಲಿ ಭುವನೇಶ್ವರಿಯ ಕೆತ್ತನೆ ಕಂಡು ಬರುವುದಿಲ್ಲವಾದರೂ, ನೀಲಿ, ಹಳದಿ ಹಾಗೂ ಕೆಂಪು ವರ್ಣಗಳ ನಕ್ಷಾವಿನ್ಯಾಸದ (ಸುರಪುರ ಚಿತ್ರಕಲೆಯ ಭಾವಚಿತ್ರ ರಚನೆಯಲ್ಲಿ ಕಂಡುಬರುವ ನೆಲಹಾಸು ವಿನ್ಯಾಸವನ್ನು ಹೋಲುತ್ತದೆ) ಚಿತ್ರಣವಿದೆ. ಹಾಗೆಯೇ ಕಲ್ಲಿನ ತೊಲೆಗಳ ಮೂರೂ ಬದಿಯಲ್ಲಿ ಸಮುದ್ರಮಂಥನ, ಅಶ್ವಮೇಧಯಾಗ ಕುದುರೆಯನ್ನು ಕಟ್ಟಿ ಹಾಕುವುದು, ಸೀತಾ ಸ್ವಯಂವರ, ಲವ-ಕುಶ ಯುದ್ಧದ ಸನ್ನಿವೇಶ ಮೊದಲಾದ ಚಿತ್ರಗಳಿವೆ. ಪ್ರತಿಯೊಂದು ವಿಷಯದ ಚಿತ್ರಗಳಲ್ಲಿ ದೇವತಾ ಪುರುಷರನ್ನು ತೆಲುಗು ಅಕ್ಷರಗಳಲ್ಲಿ ಬರೆಯಲಾಗಿದ್ದು ವಿಶೇಷ.

ಈ ದೇವಾಲಯದ ಗರ್ಭಗೃಹದಲ್ಲಿನ ಆಂಜನೇಯಸ್ವಾಮಿ ವಿಗ್ರಹವು (ಶಿಲಾ ಮಾಧ್ಯಮದ) ಐದು ಅಡಿ ಎತ್ತರದಲ್ಲಿದ್ದು, ಸುಂದರವಾಗಿದೆ. ಗರ್ಭಗೃಹ ದ್ವಾರದ ಮೇಲಿನ ಶಿಲಾಪಟ್ಟಿಕೆಯಲ್ಲಿ ಏಳು ಹೆಡೆಗಳುಳ್ಳ ಆದಿಶೇಷನ ಮೇಲೆ ವಿಷ್ಣು ಪವಡಿಸಿದ್ದಾನೆ. ಶ್ರೀದೇವಿ ಹಾಗೂ ಭೂದೇವಿಯರು ವಿಷ್ಣುವಿನ ಪಾದ ಸೇವೆಯಲ್ಲಿ ನಿರತರಾಗಿದ್ದಾರೆ. ವಿಷ್ಣುವಿನ ನಾಭಿಯಿಂದ ಜನಿಸಿದ ಬ್ರಹ್ಮನು ಕಲಮದಲ್ಲಿ ವಿರಾಜಮಾನನಾಗಿದ್ದಾನೆ. ಶೇಷಶಾಯಿ ವಿಷ್ಣುವಿನ ಎರಡೂ ಕಡೆ ಗರುಡ ಹಾಗೂ ಆಂಜನೇಯರು ಕೈಮುಗಿಯುತ್ತ ನಿಂತಿರುವರು. ಇದೊಂದು ಉಬ್ಬುಮಾದರಿಯ ಕೆತ್ತನೆಯಾಗಿದ್ದು, ಈ ಕೆತ್ತನೆಯ ಮೇಲೆ ವರ್ಣಲೇಪನ ಮಾಡಲಾಗಿದೆ. ಹಾಗೆಯೇ ಈ ಶಿಲಾಪಟ್ಟಿಕೆಯ ಮೇಲ್ಭಾಗದಲ್ಲಿ ಸೂರ್ಯ ಹಾಗೂ ಚಂದ್ರರನ್ನು ವರ್ಣದಿಂದ ಚಿತ್ರಿಸಿದೆ. ಇದಿಷ್ಟು ದೇವಾಲಯದೊಳಗಿನ ವಿನ್ಯಾಸದ ಚಿತ್ರಣ. ಈ ದೇವಾಲಯ ಮುಖಮಂಟಪದ ಹೊರಭಾಗದ ಮೇಲ್ಬದಿಯಲ್ಲಿ, ಎದುರಿಗೆ ಸುಂದರವಾದ ಕಮಾನಿನ ವಿನ್ಯಾಸವಿದ್ದು, ಈ ಕಮಾನಿ ನೊಳಗೆ ರಾಮ-ಸೀತೆ, ಲಕ್ಷಣ ಹಾಗೂ ಆಂಜನೇಯನ ಗಾರೆ ಶಿಲ್ಪಗಳಿವೆ. ಈ ಶಿಲ್ಪಗಳ ಮೇಲೂ ವರ್ಣ ಲೇಪನ ಮಾಡಲಾಗಿದೆ.

ಹನುಮಾನ ಮಂದಿರದ ಕಟ್ಟಡ ನಿರ್ಮಾಣ ಹಾಗೂ ಅಲ್ಲಿನ ಚಿತ್ರಗಳ ರಚನೆ ಕುರಿತಂತೆ ಐತಿಹಾಸಿಕ ಹಿನ್ನೆಲೆ ಮತ್ತು ಸ್ಥಳೀಯರ ಅಭಿಪ್ರಾಯಗಳಿವೆ. ಕ್ರಿ.ಶ. 1857-58ರ ಸ್ವಾತಂತ್ರ್ಯ ಸಂಗ್ರಾಮದ ಬಳಿಕ ನಾಡಿನ ವಿವಿಧ ಸಂಸ್ಥಾನಿಕರ ಆಶ್ರಯದಲ್ಲಿದ್ದ ಕಲಾವಿದ ಕುಟುಂಬಗಳು ನಿರಾಶ್ರಿತರಾದವು. ಈ ವೇಳೆ ಕೆಲವೊಂದು ಕುಟುಂಬಗಳು ಶ್ರೀಮಂತ ವ್ಯಕ್ತಿಗಳು ಇಲ್ಲವೆ ಮಠಾಧೀಶರ ಆಶ್ರಯ ಪಡೆಯುವುದರ ಮೂಲಕ ತಮ್ಮ ನೆಲೆಯನ್ನು ಕಂಡುಕೊಳ್ಳುತ್ತವೆ. ಈ ಹಂತದಲ್ಲೇ ಪ್ರಸ್ತುತ ಹನುಮಾನ ಮಂದಿರದಲ್ಲಿ ಚಿತ್ರಗಳನ್ನು ಬರೆಯಿಸಲಾಗಿದೆ ಎಂದು ಹೇಳಲಾಗುತ್ತದೆ. ಶಿಷ್ಟ ಸಂಪ್ರದಾಯದ ಈ ಚಿತ್ರಗಳನ್ನು ಖಾಜನಗೌಡರೇ ಬರೆಯಿಸಿದ್ದಾರೆಂದು ಇಲ್ಲಿನ ಜನರ ಅಂಬೋಣ. ಅಷ್ಟು ಮಾತ್ರವಲ್ಲ ಹನುಮಾನಮಂದಿರ ನಿರ್ಮಾಣಗೊಳ್ಳಲೂ ಖಾಜನಗೌಡರೇ ಕಾರಣ ಎಂದು ಹೇಳಲಾಗುತ್ತದೆ. ಬಹುಶಃ ಖಾಜನಗೌಡರ ಮನೆಯಲ್ಲೂ ಸಾಕಷ್ಟು ಭಿತ್ತಿಚಿತ್ರಗಳಿರುವ ಕಾರಣ ಮೇಲಿನ ಅಭಿಪ್ರಾಯ ಮೂಡಿರಲು ಸಾಧ್ಯ ಎಂದು ತರ್ಕಿಸಲು ಇಲ್ಲಿ ಅವಕಾಶವಿದೆ. ಖಾಜನಗೌಡರ ಮನೆಯಲ್ಲಿನ ಕರ್ಣಾರ್ಜುನರ ಕಾಳಗ, ರಾಮ-ಸೀತೆಯರ ದರ್ಶನ ಹಾಗೂ ಚಿತ್ರಿತ ಪಟ್ಟಿಕೆಗಳ ಸುತ್ತಲೂ ಬರೆಯಲಾದ ವಿನ್ಯಾಸಗಳ ಹೋಲಿಕೆ ಹನುಮಾನ ಮಂದಿರದಲ್ಲಿನ ಚಿತ್ರಗಳಲ್ಲಿ ಕಾಣಸಿಗುವುದು ಈ ಮೇಲಿನ ಮಾತಿಗೆ ಅನುಮಾನ ಹುಟ್ಟಿಸುತ್ತದೆ. ಖಾಜನಗೌಡರ ಮನೆಯಲ್ಲಿನ ಭಿತ್ತಿಚಿತ್ರಗಳು ಬೇರೆ ಬೇರೆ ಕಲಾವಿದರಿಂದ ರಚನೆಗೊಂಡಿರುವುದು ಮಾತ್ರವಲ್ಲ ಸುರಪುರ ಆಸ್ಥಾನ ಕಲಾವಿದರಾದ ಗರುಡಾದ್ರಿಯವರ ಪಾಲೂ ಇಲ್ಲಿನ ಚಿತ್ರಗಳಲ್ಲಿದೆ.

1857-58ರ ಸಂದರ್ಭದಲ್ಲೇ ಸುರಪುರ ಸಂಸ್ಥಾನ ಪತನವಾಯಿತು. ಈ ವೇಳೆ ಅಲ್ಲಿನ ಆಸ್ಥಾನ ಕಲಾವಿದ ವಂಶಸ್ಥರು ರಾಯಚೂರಿಗೆ ಬಂದು ನೆಲೆನಿಂತರೆಂದು ಹೇಳಲಾಗುತ್ತದೆ. ಇವರು ಚಿತ್ರರಚನೆ ಮಾಡುವುದಲ್ಲದೇ, ಅವುಗಳನ್ನು ಮಾರಿ ತಂದ ಹಣದಲ್ಲಿ ಜೀವನ ನಡೆಸಿದ ಮಾಹಿತಿಯೂ ಗರುಡಾದ್ರಿ ವಂಶಸ್ಥರಿಂದ ತಿಳಿದುಬಂದಿದೆ. ರಾಯಚೂರಿನ ಹಳೆಯ ತಲೆಮಾರಿನ ಮನೆಗಳಲ್ಲದೇ ಕಿಲ್ಲೇಮಠದಲ್ಲಿ ಗರುಡಾದ್ರಿಯವರು ಚಿತ್ರಿಸಿದ ವರ್ಣಚಿತ್ರಗಳಿವೆ. ಒಂದೊಮ್ಮೆ ರಾಯಚೂರಿನ ಖಾಜನಗೌಡರ ಆಸರೆಯನ್ನೂ ಈ ಕಲಾವಿದ ವಂಶಸ್ಥರು ಪಡೆದಿದ್ದು. ಈ ಮೇಲಿನ ಎಲ್ಲ ಸಂದರ್ಭಗಳನ್ನು ಅವಲೋಕಿಸಿದರೆ ಬಹುಶಃ ಹನುಮಾನ ಮಂದಿರದಲ್ಲಿನ ಭಿತ್ತಿಚಿತ್ರಗಳಲ್ಲಿ ಗರುಡಾದ್ರಿಯವರ ಪಾತ್ರವಿರುವುದು ಸ್ಪಷ್ಟವಾಗುತ್ತದೆ.

(ಎಂಸಿಬಿ)



ಹಲಗೇರಿ ಭೀಮರಾವ: ವೃತ್ತಿ ರಂಗಭೂಮಿಯ ಕಲಾವಿದ. ಇವರ ಜನ್ಮಸ್ಥಳ ನಾಗಸಮುದ್ರ. ನಾಗಸಮುದ್ರದಲ್ಲಿದ್ದ ಇವರ ಸ್ವಂತದ ಆಸ್ತಿಯನ್ನು ಇವರ ಸಹೋದರರು ಹಾಳು ಮಾಡಿದ ಮೇಲೆ, ಹಲಗೇರಿಯಲ್ಲಿದ್ದ ಹೆಂಡತಿಯ ಆಸ್ತಿಗೆ ಅಳಿಯನಾಗಿ ಬಂದರು. ಏಳನೆಯ ವರ್ಗದ ವರೆಗೆ ಮಾತ್ರ ಓದಿ, ಮುಂದೆ ಸರಸ್ವತಿ ಕೃಪಾಕಟಾಕ್ಷದಿಂದ ವಂಚಿತರಾದ ಇವರಿಗೆ ಒಲಿದವಳು 'ಕಲಾ' ದೇವಿ. ಇವರ ಮನೆತನದಲ್ಲಿ ಇವರಿಗಿಂತ ಮೊದಲು ಯಾರಿಗೂ ಇಲ್ಲದಿರುವ ನಾಟಕದ ಹವ್ಯಾಸ ಇವರಲ್ಲಿ ತಾನೇ ತಾನಾಗಿ ಬೆಳೆದು ಬಂದಿತು. ರಕ್ತಗತವಾಗಿಲ್ಲದೇ ಒಡಮೂಡಿ ಇವರಲ್ಲಿ ಬೆಳೆದು ಬಂದ ಈ 'ಅಭಿನಯ' ಕಲೆಯು ಇವರ ಪರಿಶ್ರಮ ಮತ್ತು ಸಾಧನೆಗಳ ಫಲವೆಂದೇ ಹೇಳಬೇಕು. ಇವರಿಗೆ ಸಂಗೀತದ ಮೇಲೆ ಅಪಾರ ಆಸಕ್ತಿ, ಜೊತೆಗೆ ದಿವ್ಯವಾದ ಕಂಠ. ಇವರನ್ನು ನಾಟಕದ ಕಂಪನಿಗೆಳೆದೊಯ್ಯಲು ಬಹುಶಃ ಈ ಸಂಗೀತವೇ ಪ್ರೇರಣೆ. ಈ ಸಂಗೀತ ಪ್ರೇಮವೇ ಮುಂದೆ ನಾಟಕದ ಕಂಪನಿಯನ್ನು ಸೇರಲೂ ಆಹ್ವಾನಿಸಿತು.

ಖಳನಾಯಕನ ಪಾತ್ರಕ್ಕಾಗಿಯೇ ಹೇಳಿ ಕೊರೆಯಿಸಿದಂಥ ಮೈಕಟ್ಟು, (ಆಜಾನುಬಾಹು), ಗಂಭೀರವಾದರೂ ಬಿರುಸೆನಿಸುವ ಮುಖಭಾವ, ಹರವಾದ ಎದೆ, ತೀಕ್ಷ್ಣವಾದ ಕಣ್ಣೋಟ, ಸ್ಫುಟವಾದ ಕಂಚಿನ ಕಂಠಗಳು ಹುಟ್ಟಿನೊಂದಿಗೆ ಬಂದವುಗಳು. 'ಪಠಾಣ ಪಾಶ' ನಾಟಕದಲ್ಲಿ ಕೈಯಲ್ಲಿ ಹರಿತವಾದ ಚೂರಿ ಹಿಡಿದು, ಕಣ್ಣುಗಳಿಂದ ರೋಷವನ್ನು ಕಾರುತ್ತ 'ಪಠಾಣ'ನ ವೇಷದಲ್ಲಿ ರಂಗದ ಮೇಲೆ ಬಂದರೆ, ಆ ಆವೇಶಕ್ಕೆ ಮುಂದೆ ಕುಳಿತ ಪ್ರೇಕ್ಷಕರು ಬೆಚ್ಚಿ ಬಿದ್ದರೆ, ಮಕ್ಕಳು ಥರಥರನೆ ನಡುಗುತ್ತಿದ್ದರು. ಅಷ್ಟೊಂದು ಭೀಕರತೆ, ಅದು ಕೇವಲ ಅಭಿನಯವೆನ್ನುವಂತಿರದೇ ಸತ್ಯದ ಭ್ರಮೆಯನ್ನೇ ಹುಟ್ಟಿಸುವಷ್ಟು ನೈಜವಾಗಿರುತ್ತಿತ್ತು.

ಇವರ ನಿಲವು-ರೂಪ ಖಳನಾಯಕನ ಪಾತ್ರಕ್ಕೆ ತುಂಬ ಹೊಂದಾಣಿಕೆಯಾಗುತ್ತಿದ್ದುದರಿಂದ ಇವರ ಪಾಲಿಗೆ ವಿಶೇಷವಾಗಿ 'ರಾಜದ್ರೋಹ' ನಾಟಕದಲ್ಲಿ ದಿವಾಣ ನಾಗನಾಥ, 'ಮಾತಂಗ ಕನ್ಯೆ'ಯಲ್ಲಿ 'ಕಿಶೋರ' 'ಸಂಪೂರ್ಣ ರಾಮಾಯಣ'ದಲ್ಲಿ ರಾವಣ, 'ಪಠಾಣ ಪಾಶ' ದಲ್ಲಿ ಪಠಾಣ, 'ಕಿತ್ತೂರ ಚೆನ್ನಮ್ಮ' ದಲ್ಲಿ ಥ್ಯಾಕರೆ, ಮತ್ತು ಶನಿಮಹಾತ್ಮೆ'ಯಲ್ಲಿ ಶನಿದೇವರು ಇಂಥ ಪಾತ್ರಗಳೇ ಮೀಸಲಾಗಿರುತ್ತಿದ್ದುವು. ಇವರ ಪಾಲಿಗೆ ಬಂದ ಪಾತ್ರಗಳಲ್ಲಿ ಜೀವ ತುಂಬಿ ಅಭಿನಯಿಸುತ್ತಿದ್ದರು. ಅಂತೆಯೇ ಇವರ ಅಭಿನಯ ಪ್ರೇಕ್ಷಕರ ಹೃತ್ಪಟಲದ ಮೇಲೆ ವಿಶಿಷ್ಟ ಪ್ರಭಾವವನ್ನು ಬೀರಿತ್ತು. ಇವರ ಅಭಿನಯವನ್ನು ನೋಡಿದವರು ಈಗಲೂ ಕೂಡ ನೆನಪಿಸಿಕೊಂಡು ನೆನಪಿನ ಆ ಆನಂದವನ್ನು ಕಲ್ಲುಸಕ್ಕರೆಯಂತೆ ಚಪ್ಪರಿಸುತ್ತಾರೆ.

ಇವರು ಕನ್ನಡ ನಾಡಿನ ಸುಪ್ರಸಿದ್ಧ ನಾಟಕ ಕಂಪನಿಗಳಾದ– ಗರೂಡ ಸದಾಶಿವರಾಯರ ಕಂಪನಿ, ಗುಬ್ಬಿ ವೀರಣ್ಣ ಕಂಪನಿ, ಗದಗ ಬೆಟಗೇರಿ ಕಂಪನಿ, ಮುರುಡಯ್ಯಾಸ್ವಾಮಿ ಕಂಪನಿ, ಮಹಾದೇವಸ್ವಾಮಿ ಕಂಪನಿ, ಚಿತ್ತವಾಡಗಿ ಕಂಪನಿ, ಅಂಕೋಲಾದ ಶಾರದಾ ನಾಟಕ ಮಂಡಳಿ, ಲಕ್ಷ್ಮೇಶ್ವರದ ರವಿಕಲಾ ನಾಟ್ಯ ಸಂಘಗಳಲ್ಲಿ ವೃತ್ತಿಗೆಯ್ದು ತಮ್ಮ ಕಲಾಸೇವೆಯನ್ನು ಸಲ್ಲಿಸಿದ್ದಾರೆ.

(ಎಲ್‌ಡಿ)

ಹಾ

ಹಾಲಗೇರಿ ಸಿದ್ದಯ್ಯಸ್ವಾಮಿ: ವೃತ್ತಿಯಿಂದ ಬ್ಯಾಂಕ್ ಅಧಿಕಾರಿ, ಪ್ರವೃತ್ತಿಯಿಂದ ಸಂಗೀತಗಾರ, ಸಂಗೀತ ಪೋಷಕ ಸಂಗೀತ ಆರಾಧಕರು. ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಹಾಲಗೇರಿ ಗ್ರಾಮದವರು. ಜನನ 10.10.1922. ತಂದೆ ಷಣ್ಮುಖಸ್ವಾಮಿ, ತಾಯಿ ಚನ್ನಬಸಮ್ಮಾ, ಮಗ ವಿದ್ಯಾವಂತನಾಗಿ, ಸರಕಾರಿ ಉದ್ಯೋಗದಲ್ಲಿ ಉತ್ತಮ ಹೆಸರು ಪಡೆಯಬೇಕೆಂದು ಹಿರಿದಾಶೆ ಹೊಂದಿದವರು. 4ನೇ ವರ್ಗದವರೆಗಿನ ಶಿಕ್ಷಣವನ್ನು ತಮ್ಮ ಹುಟ್ಟೂರಲ್ಲೇ ಪೂರ್ಣಗೊಳಿಸಿದರು. ಯಾದಗಿರಿಯಲ್ಲಿ 10ನೇ ತರಗತಿಯವರೆಗೆ ಓದಿ, ನಂತರ



ಬ್ಯಾಂಕಿನ ಉದ್ಯೋಗಿಯಾಗಿ ಕೆಲಸಕ್ಕೆ ಸೇರಿದರು.

ತಂದೆ-ತಾಯಿಗಳೀರ್ವರು ಸಂಗೀತ-ಸಾಹಿತ್ಯದ ಪ್ರೇಮಿಗಳು. ಆದರೆ ತಮ್ಮ ಮಗ ಈ ಮಾರ್ಗ ತುಳಿಯುವುದು ಬೇಡ ಎಂಬುದು ಅವರ ಬಯಕೆಯಾಗಿತ್ತು. ಆದರೆ ಸಿದ್ದಯ್ಯಸ್ವಾಮಿಗಳ ಸುಪ್ತ ಮನಸ್ಸಿನಲ್ಲಿ ಅಡಗಿದ ಸಂಗೀತ ವಿದ್ಯೆ ಸರಕಾರಿ ಉದ್ಯೋಗದ ಮಧ್ಯೆದಲ್ಲೂ ಮುಂದುವರೆಯಿತು.

ಪಂಡಿತ ಭೀಮಸೇನ ಜೋಷಿ, ಪಂಡಿತ ಮಲ್ಲಿಕಾರ್ಜುನ ಮನಸೂರ, ಪಂಡಿತ ಬಸವರಾಜಗುರು, ಡಾ. ಗಂಗೂಬಾಯಿ ಹಾನಗಲ್, ಪಂಡಿತ್ ಸಿದ್ದಾರಾಮ ಜಂಬಲದಿನ್ನಿಯವರ ಸಂಗೀತ ಸುಧೆ ಎಂದರೆ ಇವರಿಗೆ ತುಂಬಾ ಅಭಿಮಾನ.

ನೌಕರಿಯ ಕಾರ್ಯಭಾರದ ನಂತರ ಪ್ರತಿಸಂಜೆ ತಮ್ಮ ಮನೆಯಲ್ಲಿ ಸಂಗೀತ ಕಛೇರಿ ಆರಂಭಿಸಿದರು. ತಾವು ಕಲಿತು, ಮತ್ತು ಆಸಕ್ತ ಕಲಾವಿದರಿಗೆ ಕಲಿಸಿದಂತಾಯಿತು ಎಂಬುದು ಅವರ




'ಜಲ' ನಾಟಕದ ದೃಶ್ಯ

ಚಿತ್ರ ಸೂಚಿ – ೬೪



'ರಾಜಾ ವೆಂಕಟಪ್ಪ ನಾಯಕ' ನಾಟಕದ ಒಂದು ದೃಶ್ಯ, ನಿರ್ದೇಶನ: ನಾರಾಯಣ ಕುಲಕರ್ಣಿ



ಗುಲಬರ್ಗಾದ ವಿಶ್ವೇಶ್ವರಯ್ಯ ಭವನದಲ್ಲಿ ಪ್ರದರ್ಶನಗೊಂಡ 'ಕಕೇಸಿಯನ್ ಚೌಕ್ ಸರ್ಕಲ್' ನಾಟಕದ ದೃಶ್ಯ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಜಯ ಕೋಶ
ರಂಗಕಲೆಗಳ ಸಂಪುಟ



ವೃತ್ತಿ ರಂಗಭೂಮಿ ಕಲಾವಿದರ ವೇಷಭೂಷಣಗಳು ಹಾಗೂ ಪರದೆ



ಗಿರಿಜಾ ಪೂಜಾರ ಅವರ (ನಾಟಕದ ದೃಶ್ಯ)

ಸಮಾಧಾನ. ಸುಮಾರು 20–25 ವರ್ಷಗಳವರೆಗೆ ಸಂಗೀತ ಕಾರ್ಯಕ್ರಮ ಆಯೋಜಿಸಿದರು.


ಶ್ರೀ ಸಿದ್ದಯ್ಯಾಸ್ವಾಮಿಯವರಿಗೆ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ ಎರಡರಲ್ಲಿಯೂ ಸಮಾನವಾದ ಆಸಕ್ತಿ, ಶಾಸ್ತ್ರೀಯ ಸಂಗೀತದಲ್ಲಿ ಪ್ರೀಯ ರಾಗಗಳೆಂದರೆ ದುರ್ಗಾ, ಶಂಕರಾ, ಯಮನ್, ಜಯ ಜೈವಂತಿ, ಭೀಮಪಲಾಸ್, ಆಹರ್ ಭೈರವ, ಮಾಲಕಾಂಸಾ, ಪಡ್‌ದೀಪ, ಭೈರವಿ, ಅಸಾವಾ, ಸುಗಮ ಸಂಗೀತಗಳಲ್ಲಿ ದಾಸರಕೀರ್ತನೆ, ಶರಣರವಚನ, ಭಾವಗೀತೆಗಳೆಂದರೆ ಹೆಚ್ಚು ಪ್ರೀತಿ, ಅಲ್ಲದೆ ಪುರಂದಾಸರ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಕೀರ್ತನೆ ಬಸವಣ್ಣನವರ 'ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ' ಎಂಬ ವಚನ ಇವರಿಗೆ ಹೆಚ್ಚು ಸಂತೋಷ ನೀಡುವಂತಹವು. 'ಕಾಯಕವೇ ಕೈಲಾಸ' ವೆಂಬುದೆ ತಮ್ಮ ಕಾಯಕದ ಜೊತೆಗೆ ಸಂಗೀತ ಕಲೆಗೂ ತಮ್ಮನ್ನು ಸಮರ್ಪಿಸಿಕೊಂಡು ಎಂದಿಗೂ ಪ್ರಚಾರ–ಪಾರಿತೋಷಕ ಬಯಸಿದವರಲ್ಲ.

(ಎಂಬಿ)

ಹಿ

ಹಿರೇಬೆನಕಲ್ ಶಿಲಾಸ್ಮಾರಕಗಳು: ಕೊಪ್ಪಳ ಜಿಲ್ಲೆ ಗಂಗಾವತಿಯಿಂದ 12 ಕಿ.ಮೀ. ಅಂತರದಲ್ಲಿರುವ ಹಿರೇಬೇನಕಲ್ ಗ್ರಾಮದ ಆಗ್ನೇಯ ದಿಕ್ಕಿನಲ್ಲಿರುವ ಬೆಟ್ಟದಲ್ಲಿ ಹಲವಾರು ಶಿಲಾಯುಗದ ವಿಸ್ಮಯಕಾರಿ ಸ್ಮಾರಕಗಳು ಈ ಪ್ರದೇಶದ ಪ್ರಾಚೀನ ಇತಿಹಾಸ ಹೇಳುತ್ತವೆ. ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು, ಚಪ್ಪಡಿ ಕಲ್ಲುಗಳನ್ನು ಬಳಿಸಿ ನಿರ್ಮಿಸಲಾಗಿರುವ ಈ ಸ್ಮಾರಕಗಳು ಕ್ರಿಸ್ತಪೂರ್ವ 2800–2200 ವರ್ಷಗಳ ಹಿಂದೆ ನಿರ್ಮಿಸಿದವುಗಳಾಗಿವೆ ಎಂದು ಇತಿಹಾಸಕರರ ಅಭಿಪ್ರಾಯ. ವಿದ್ವಾಂಸರ ಪ್ರಕಾರ ಅಗ್ನಿಶಿಲೆ (ಗ್ರಾನೈಟ್)ಯಿಂದ ರಚಿಸಲಾಗಿರುವ ಈ ನಿರ್ಮಾಣಗಳು, ಆದಿಮಾನವರ ಸಮಾಧಿಯ ಸ್ಮಾರಕಗಳಷ್ಟೇ ಅಲ್ಲದೇ ಒಂದು ಆಚರಣೆ, ಧಾರ್ಮಿಕ ವಿಧಿಯ ಉದ್ದೇಶ ಪೂರೈಸುವುದಕ್ಕೂ ಸಹ ಬಳಸಲಾಗಿದೆ. ಕಲ್ಲಿನಿಂದ ನಿರ್ಮಿಸಲಾಗಿರುವ ಇಂತಹ ದೊಡ್ಡ ಸ್ಮಾರಕಗಳನ್ನು ಬೃಹತ್ ಶಿಲಾಸ್ಮಾರಕಗಳೆಂದು ಕರೆಯುತ್ತಾರೆ.

ಹಿರೇಬೆನಕಲ್ಲೊಂದು ವಿಶಾಲವಾದ ಸಮತಟ್ಟು ಪ್ರದೇಶವಿದೆ. ಈ ಪ್ರದೇಶದಲ್ಲಿ ಸುಮಾರು 400ಕ್ಕೂ ಹೆಚ್ಚು ಸಮಾಧಿ, ಚಿತಾ ಸ್ಮಾರಕಗಳಿವೆ. ಕರ್ನಾಟಕದ ಬೃಹತ್ ಶಿಲಾಸ್ಮಾರಕಗಳ ತಾಣಗಳಲ್ಲಿ ಇದೂ ಒಂದಾಗಿದೆ. ಈ ಬೆಟ್ಟದ ಪೂರ್ವದಿಂದ ಪಶ್ಚಿಮದವರೆಗೆ ಹರಡಿರುವ ಈ ಶಿಲಾಸ್ಮಾರಕಗಳು ಸುಮಾರು ಮೂರು ಚದುರು ಪ್ರದೇಶವನ್ನು ಆಕ್ರಮಿಸಿವೆ. ಇವುಗಳನ್ನು ಮೂರು ಗುಂಪುಗಳಾಗಿ ವಿಭಜಿಸಲಾಗಿದ್ದು, ಪ್ರತಿಯೊಂದು 200 ಮೀಟರ್ ಅಂತರ ಹೊಂದಿವೆ.



ಹಿರೇಬೆನಕಲ್ ಶಿಲಾಸ್ಮಾರಕಗಳು

ಈ ಪ್ರದೇಶದಲ್ಲಿ ವಿವಿಧ ಬಗೆಯ ಶಿಲಾಸ್ಮಾರಕಗಳಿವೆ. ಸುಣ್ಣವನ್ನು ಬಳಿಸಿ ನಿರ್ಮಿಸಲಾದ ಸ್ಮಾರಕಗಳು, ಮೂರು ಕಡೆಗಳಲ್ಲಿ ಕಿಂಡಿ ಸಹಿತ ಅಥವಾ ಕಿಂಡಿರಹಿತ ಕೊಠಡಿಗಳನ್ನು ಹೊಂದಿವೆ. ಬೃಹತ್‌ಗಾತ್ರದ ಅಗಲವಾದ ಚಪ್ಪಡಿ ಕಲ್ಲುಗಳನ್ನು ಮೇಲ್ಛಾವಣಿಯಾಗಿ ಅಥವಾ ಸೂರುಗಳಾಗಿ ಬಳಸಿಕೊಳ್ಳಲಾಗಿದೆ. ಸಂಪೂರ್ಣ ಮುಚ್ಚಲಾಗಿರುವ, ಅರೆಬರೆ ಮುಚ್ಚಿರುವ ಹಾಸುಗಲ್ಲುಗಳನ್ನು ಕೆಲವೆಡೆ ವೃತ್ತಾಕಾರದಲ್ಲಿ ರೂಪಿಸಲಾಗಿದೆ. ಅನೇಕ ಕೋನಗಳುಳ್ಳ ಅನಿಯಮಿತ ಕೊಠಡಿಗಳು ಮತ್ತು ಬಂಡೆಗಳ ಸೂರುಗಳನ್ನು ಹೊಂದಿರುವ ಕೊಠಡಿಗಳನ್ನು ಸಹ ಇಲ್ಲಿ ನಿರ್ಮಿಸಲಾಗಿದೆ. ಇವುಗಳು ಸುಮಾರು 3 ಅಡಿಯಿಂದ 8 ಅಡಿ ಎತ್ತರದಲ್ಲಿವೆ. ಇವುಗಳನ್ನು ರಚಿಸಿದ ಹಾಗೂ ರೂಪಿಸಿದ ವಿಧಾನ, ಬಳಸಲಾಗಿರುವ ತಾಂತ್ರಿಕತೆಯನ್ನು ಅಭ್ಯಸಿಸಿರುವ ಸಂಶೋಧಕರು ಈ ಬೃಹತ್ ಶಿಲಾಸ್ಮಾರಕಗಳು ಕ್ರಿಸ್ತಪೂರ್ವ 800 ರಿಂದ 200ರ ನಡುವಿನ ಸಮಯದ್ದಾಗಿರಬಹುದೆಂದು ಹೇಳುತ್ತಾರೆ.

ಈ ಶಿಲಾಸ್ಮಾರಕಗಳ ಸಮೀಪದಲ್ಲಿ ಕಲ್ಲುಗಣಿಗಳಿದ್ದು, ಬೃಹತ್ ನಿರ್ಮಾಣಕ್ಕೆ ಬೇಕಾಗಿದ್ದ ಚಪ್ಪಡಿಕಲ್ಲುಗಳನ್ನು ಇಲ್ಲಿಂದಲೇ ಪಡೆಯಲಾಗಿದೆ. ಪಶ್ಚಿಮ ದಿಕ್ಕಿಗೆ ಇರುವ ಸ್ಮಾರಕಗಳ ಗುಂಪಿನ ಹತ್ತಿರ ನಿರಂತರ ನೀರೊದಗಿಸುವ ಮೂಲ ಸೆಲೆಯನ್ನು ಉತ್ಖನನದ ಮೂಲಕ ಗುರುತಿಸಲಾಗಿದೆ. ಪ್ರಾಚೀನ ಬೃಹತ್ ಶಿಲಾಸ್ಮಾರಕಗಳಿಂದ ಕೂಡಿರುವ ಈ ಪ್ರದೇಶ ಸಸ್ಯಗಳಿಂದ ಹಸಿರು ಮತ್ತು ಕಂದು ಬಂಡೆಗಲ್ಲುಗಳ ಮಿಳಿತದ ಅದ್ಭುತ ದೃಶ್ಯಾವಳಿಯನ್ನು ಕೊಡುತ್ತದೆ.

ಹಿರೇಬೆನಕಲ್ಲು ಪ್ರಾಚೀನ ಕಾಲದಲ್ಲೂ ಕೆಲವು ಸಮುದಾಯಗಳಿಗೆ ಆವಾಸ ಸ್ಥಾನವಾಗಿತ್ತು ಎಂಬುದಕ್ಕೆ ಕೆಲವು ಪುರಾವೆಗಳು ಇಲ್ಲಿ ದೊರೆತಿವೆ. ಇದರಿಂದ ಪುರಾತನ ಮಾನವನಿದ್ದ ದೇಶದ ಕೆಲವೇ ಸ್ಥಳಗಳಲ್ಲಿ ಹಿರೇಬೆನಕಲ್ಲು ಕೂಡ ಒಂದೆನ್ನುವುದಕ್ಕೆ ಇದು ಇಂಬು ಕೊಡುತ್ತದೆ. ಪ್ರಾಚ್ಯವಸ್ತು ಸಂಶೋಧಕರು ಈ ಸ್ಥಳದಿಂದ ಆಗಿನ ಕಾಲದ ಸಮೃದ್ಧ



ಹಿರೇಬೆನಕಲ್ ಶಿಲಾಸ್ಮಾರಕಗಳು

ಸಂಸ್ಕೃತಿಯ ಭಾಗವಾಗಿದ್ದ ಕೆಲವು ಉಪಕರಣಗಳನ್ನು, ಶಿಲಾಯುಗದ ಪೂರ್ವಕಾಲದಲ್ಲಿ, ಶಿಲಾಯುಗದಲ್ಲಿ ಹಾಗೂ ಇತಿಹಾಸ ಪೂರ್ವಕಾಲದಲ್ಲಿ ಬಳಸಲಾಗುತ್ತಿದ್ದ ಕಬ್ಬಿಣದ ಹಾಗೂ ಮಣ್ಣಿನ ಉಪಕರಣಗಳನ್ನು ಹೊರ ತೆಗೆದಿದ್ದಾರೆ.

ಇಲ್ಲಿನ ಬಂಡೆಗಲ್ಲುಗಳ ಮೇಲೆ ಆದಿಮಾನವರು, ಕೆಂಪು-ಹಳದಿ ಮಿಶ್ರಿತ ಬಣ್ಣದಿಂದ ರಚಿಸಲಾಗಿರುವ ನೃತ್ಯಮಾಡುತ್ತಿರುವ, ಬೇಟೆಯಾಡುವ, ಆಯುಧ, ಪ್ರಾಣಿಗಳು, ಮೆರವಣಿಗೆಯಲ್ಲಿ ಭಾಗವಹಿಸಿರುವ ಹಾಗೂ ಇನ್ನಿತರ ಅಂದಿನ ಕಾಲದ ಚುಟುವಟಿಕೆಗಳನ್ನು ಬಿಂಬಿಸುವ ಈ ವರ್ಣಚಿತ್ರಗಳನ್ನು ಬಿಡಿಸಿದ್ದು, ಎಲ್ಲವೂ ಅತ್ಯದ್ಭುತ ಕಲಾಕೃತಿಗಳಾಗಿವೆ. ಮಾನವನಂತೆ ಕಾಣುವ ಆದರೆ ಕೊಂಬುಗಳನ್ನು ಮತ್ತು ಬಾಲವನ್ನು ಹೊಂದಿರುವ ವಿಚಿತ್ರ ಜೀವಿಯ ವರ್ಣಚಿತ್ರವೂ ಇಲ್ಲಿ ಕಂಡುಬರುತ್ತದೆ. ಘನಾಕೃತಿಗಳಾದ ಜ್ಯಾಮಿತಿಯ ಮತ್ತು ಅತೀಂದ್ರಿಯ ಅಂಶಗಳಿರುವ ವಿನ್ಯಾಸಗಳು, ಜಿಂಕೆ, ನವಿಲು, ಗೂನು ಬೆನ್ನುಳ್ಳ ಹೋರಿಗಳು, ಹಸುಗಳು ಹಾಗೂ ಕುದುರೆ ಚಿತ್ರಣವೂ ಇಲ್ಲಿವೆ. ಶಿಲಾಯುಗಕ್ಕೂ ಹಿಂದಿನ, ಶಿಲಾಯುಗ ಹಾಗೂ ಪೂರ್ವ ಇತಿಹಾಸದ ಪ್ರಾರಂಭಿಕ ಕಾಲದಲ್ಲಿ ವಾಸಿಸುತ್ತಿದ್ದ ಜನ ಸಮುದಾಯಗಳು ಚಿತ್ರಕಲೆಯಲ್ಲಿಯೂ ನಿಪುಣರಾಗಿದ್ದರೆಂಬುದಕ್ಕೆ ಹಿರೇಬೆನಕಲ್ಲು ಗುಡ್ಡದಲ್ಲಿ ಬಂಡೆಗಳ ಮೇಲೆ ಬರೆದಿರುವ ವಿವಿಧ ಬಗೆಯ ವರ್ಣಚಿತ್ರಗಳು ಇಂದಿಗೂ ಕಳೆಗುಂದದೇ ಹಾಗೇ ಉಳಿದಿರುವುದು ಸಾಕ್ಷಿಯಾಗಿವೆ.

ಶಿಲಾಸ್ಮಾರಕಗಳಿರುವ ಸ್ಥಳದ ಹತ್ತಿರದಲ್ಲಿ ಸುಮಾರು 10 ಮೀಟರ್ ಎತ್ತರದ ದಿಮ್ಮೆಯ ಮೇಲೆ ವಿಶಿಷ್ಟವಾದ ಕಲ್ಲಿನ ಬುರುಡೆ, ಮದ್ದಳೆಯೊಂದಿದೆ. ಎರಡು ಮೀಟರ್ ವ್ಯಾಸ ಹೊಂದಿರುವ ಅರ್ಧಗೋಳಾಕೃತಿಯ ಈ ಒರಟು ಬಂಡೆ 1.5 ಮೀಟರ್ ಎತ್ತರವಿದೆ. ಕಲ್ಲು ಅಥವಾ ಮರದ ಸುತ್ತಿಗೆಯಿಂದ ಹೊಡೆದಾಗ ಇದರಿಂದ ಹೊರಬರುವ ಶಬ್ದ ಸಮುದಾಯದ ವಾಸಸ್ಥಾನದವರೆಗೆ ಅಂದರೆ ಸರಿಸುಮಾರು ಒಂದು ಕಿಲೋಮೀಟರ್ ದೂರದವರೆಗೆ ಧ್ವನಿ ಗ್ರಹಿಸಬಹುದಾಗಿದೆ. ಶತ್ರುಗಳ ಆಕ್ರಮಣ ಕುರಿತು ಎಚ್ಚರಿಸಲು ಅಥವಾ ಧಾರ್ಮಿಕ ಹಾಗೂ ಸಾಮಾಜಿಕ ವಿಧಿ-ಆಚರಣೆಗಳನ್ನು ಘೋಷಿಸಲು ಈ ಮದ್ದಳೆಯನ್ನು ಬಳಸುತ್ತಿರಬಹುದೆಂದು ಅಭಿಪ್ರಾಯ ಪಡಲಾಗುತ್ತದೆ.

(ಟಿಎಸ್‌ಪಿ)

ಹಿರೇಮಠ ಎಸ್.ಎಂ.: ಸಾಹಿತ್ಯಿಕ ಸಾಧನೆಯೊಂದಿಗೆ ರಂಗಭೂಮಿಯ ಆಸಕ್ತಿಯನ್ನು ಮೈಗೂಡಿಸಿಕೊಂಡು ಬೆಳೆದ ಡಾ. ಎಸ್.ಎಂ. ಹಿರೇಮಠರು ಬಹುಶ್ರುತ ವ್ಯಕ್ತಿತ್ವದ ವ್ಯಕ್ತಿ. ಅವರ ಸಾಹಿತ್ಯಿಕ ಕೃಷಿ ಆರಂಭಗೊಂಡುದು ನಾಟಕ ರಚನೆಯಿಂದಲೆ. ವಿದ್ಯಾರ್ಥಿಯಾಗಿದ್ದಾಗಲೇ ನಾಟಕ ರಚನೆಯ ಆಸಕ್ತಿ ಮೈಗೂಡಿಸಿಕೊಂಡಿದ್ದ ಹಿರೇಮಠರು ಪ್ರಪ್ರಥಮ ಕೃತಿಯಾಗಿ ಬರೆದುದು 'ಕೌಶಿಕ'-ಎಂಬ ನಾಟಕ. ಅದನ್ನು ನಿರ್ದೇಶನ ಮಾಡುವುದರೊಂದಿಗೆ ಅದರಲ್ಲಿ ನಟನಾಗಿಯೂ ನಟಿಸಿ ರಂಗ ಪಥದಲ್ಲಿ ಹೆಜ್ಜೆ ಇಡುತ್ತ ಹೊರಟರು. ವಿದ್ಯಾರ್ಥಿ ದೆಸೆಯಿಂದ ಮೊದಲ್ಗೊಂಡು ಅವರು 1982ರವರೆಗೆ ಕೈಕೊಂಡ ನಾಟಕ ಸಾಹಿತ್ಯ ಕೃಷಿ ಮತ್ತು ರಂಗಾನುಭವಗಳನ್ನು ಕುರಿತಂತೆ ರಚನೆಗೊಂಡ 'ರಂಗಭೂಮಿಯ ನೆನಪುಗಳು' (ಭಾಗ-1) ಅವರ ಮೊಟ್ಟ ಮೊದಲ ಪ್ರಕಟಿತ ಸಾಹಿತ್ಯ ಕೃತಿ.



ನಾಟಕದ ರಚನೆ ಹಿರೇಮಠರ ಒಂದು ಕೈಯಾದರೆ, ನಾಟಕಗಳನ್ನು ರಂಗಕ್ಕೆ ತಂದು, ಅವುಗಳನ್ನು ನಿರ್ದೇಶನ ಮಾಡುವ ಕ್ರಿಯೆ ಅವರ ಇನ್ನೊಂದು ಕೈಯಾಗಿದೆ. ಪ್ರಾಥಮಿಕ ಹಂತದ ನಾಲ್ಕನೇ ತರಗತಿಯಿಂದ ಆರಂಭವಾದ ಅವರ ರಂಗ ಚಟುವಟಿಕೆ ಕಾಲಕ್ರಮೇಣ ಬೆಳೆಯುತ್ತ ಇಂದು ಅವರನ್ನು 'ರಂಗ ತಪಸ್ವಿ'ಯ ಸ್ಥಲದಲ್ಲಿ ನಿಲ್ಲುವಂತೆ ಮಾಡಿದೆ.

ಕಲಬುರ್ಗಿ ಜಿಲ್ಲೆ, ಆಳಂದ ತಾಲ್ಲೂಕಿನ ನಿಂಬರ್ಗಾ ಗ್ರಾಮದಲ್ಲಿ ಹುಟ್ಟಿದ ಹಿರೇಮಠರಿಗೆ ಮೊದಲ ರಂಗವೇದಿಕೆ ಒದಗಿಸಿಕೊಟ್ಟದ್ದು ಆ ಜನ್ಮಗ್ರಾಮವೆ. ಅಲ್ಲಿನ ಪ್ರಾಥಮಿಕ ಮಾಧ್ಯಮಿಕ - ಪ್ರೌಢಶಿಕ್ಷಣದ ಹಂತಗಳು ವಿದ್ಯಾರ್ಥಿ ಹಿರೇಮಠರ ರಂಗ ಚಟುವಟಿಕೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ನೆಪದಲ್ಲಿ ನೀರೆರೆದು ಅವು ಬೆಳೆಯುವಂತೆ ಮಾಡಿದವು. ಪ್ರೌಢ ಶಾಲೆಯ ಶಿಕ್ಷಣ ಪೂರೈಸಿ, ಕಾಲೇಜು ಶಿಕ್ಷಣಕ್ಕಾಗಿ ಕಲಬುರ್ಗಿಗೆ ಬಂದ ಹಿರೇಮಠರಿಗೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿನ 'ಸ್ನೇಹ ಸಮ್ಮೇಳನ' ಗಳು ರಂಗ ಚಟುವಟಿಕೆಗಳ ಅಭಿವ್ಯಕ್ತಿಗೆ ಮಹತ್ವದ ವೇದಿಕೆಗಳಾದವು. ಪದವಿ ಹಂತದವರೆಗಿನ ಐದು ವರ್ಷಗಳ ಅವಧಿಯಲ್ಲಿ ಅವರು ಸು. ಇಪ್ಪತ್ತು ಕಿರು ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶಿಸಿದರು. ತಮ್ಮದೆ ಆದ 'ಭರತ ಕಲಾವೃಂದ' ಎಂಬ ನಾಟ್ಯ ಸಂಘವೊಂದನ್ನು ಕಟ್ಟಿಕೊಂಡು, ಕಾಲೇಜಿನ ಹೊರಗಡೆಯೂ ಹಲವಾರು ನಾಟಕ ಪ್ರಯೋಗಗಳನ್ನು ಮಾಡಿದರು. ವರಪರೀಕ್ಷೆ, ಫಿಲಂ ಇಂಟರವ್ಯೂವ್ ಮೂವತ್ತಾರಲ್ಲ ಅರವತ್ತುಮೂರು, ಶೂದ್ರತಪಸ್ವಿ, ಬಿಡುಗಡೆ, ಯಕ್ಷಪ್ರಶ್ನೆ ಇಂತಹ ಹಲವಾರು ನಾಟಕಗಳು ಡಾ. ಹಿರೇಮಠರ



ಕಿರುಚಿತ್ರ ಕಲಾವಿದರೊಂದಿಗೆ ನಿರ್ದೇಶಕ ಡಾ. ಎಸ್.ಎಮ್. ಹಿರೇಮಠ

ನಿರ್ದೇಶನದಲ್ಲಿ ಪ್ರದರ್ಶಿತಗೊಂಡವು. ಭರತಕಲಾ ವೃಂದದಿಂದ ಹಲವಾರು ನಾಟಕೋತ್ಸವ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡರು.

1978ರ ಅವಧಿಯಲ್ಲಿ ಕೆಲವು ಹಿರಿಯ ರಂಗಾಸಕ್ತರ ಆಸಕ್ತಿಯ ಫಲವಾಗಿ 'ರಂಗಭಾರತಿ' ಎಂಬ ನಾಟಕ ಸಂಘವು ಉದಯಗೊಂಡಿತು. ಡಾ. ಎಸ್.ಎಂ. ಹಿರೇಮಠ ಅವರು ಆ ಸಂಘದ ಸದಸ್ಯರಾಗುವುದರೊಂದಿಗೆ, ಖಾಯಂ ನಿರ್ದೇಶಕರೂ ಆದರು. ಡಾ. ಹಿರೇಮಠರು ರಂಗಭಾರತಿಗಾಗಿ 1978–2004ರ ವರೆಗಿನ ಅವಧಿಯಲ್ಲಿ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶನ ಮಾಡಿದರು. ರಂಗಭಾರತಿ ಸಂಘದೊಂದಿಗೆ ಕರ್ನಾಟಕ ರಾಜ್ಯದುದ್ದಗಲಕ್ಕೂ ಸುತ್ತಾಡಿ ನಾಟಕ ಪ್ರದರ್ಶನ ಮಾಡಿದರು. ಮರ್ತ್ಯಲೋಕದ ಮಾನಿನಿ; ಅತೃಪ್ತ ಆತ್ಮಗಳು, ತಾಯಿ, ನಕ್ಕಳಾ ರಾಜಕುಮಾರಿ, ಅರಗಿನ ಬೆಟ್ಟ, ಶೆಟವಿ, ಮೂರು ಮೆಟ್ಟಿಲ ಕತೆ, ಓಕುಳಿ, ವಿಷ, ಹಸಿವು, ಬೂದಿ–ಇವು ಹಿರೇಮಠರಿಗೆ 'ಅತ್ಯುತ್ತಮ ನಿರ್ದೇಶಕ' ಪಟ್ಟವನ್ನು ದೊರಕಿಸಿಕೊಟ್ಟ ನಾಟಕಗಳಾಗಿವೆ.

ಡಾ. ಹಿರೇಮಠರು ಹವ್ಯಾಸಿ ರಂಗದ ಒಡನಾಟದೊಂದಿಗೆ ಸ್ವಲ್ಪ ಕಾಲ ವೃತ್ತಿ ರಂಗಭೂಮಿಯ ಸಂಗವನ್ನು ಮಾಡಿದರು. ಕ್ರಿ.ಶ. 1977ರ ಸಂದರ್ಭದಲ್ಲಿ ಕಲಬುರ್ಗಿಯಲ್ಲಿ ಕ್ಯಾಂಪ ಮಾಡಿದ ಗದುಗಿನ ವಿರೇಶ್ವರ ನಾಟ್ಯ ಸಂಘದಲ್ಲಿ ಹಿರೇಮಠರು ಕೆಲವು ವೃತ್ತಿ ನಾಟಕ ಪಾತ್ರಗಳಿಗಾಗಿ ಬಣ್ಣ ಹಚ್ಚಿದರು.

ಎಂ.ಎ. ಪದವಿ ಪೂರೈಸಿದ ಹಿರೇಮಠರು ಕ್ರಿ.ಶ. 1981ರಲ್ಲಿ ಬೆಂಗಳೂರಿಗೆ ರೈಲು ಹತ್ತಿ, ಅಲ್ಲಿನ ಆದರ್ಶ ಫಿಲಂ ಸಂಸ್ಥೆ ಸೇರಿದರು. ಅಲ್ಲಿ ಕೆಲವು ಕಾಲ ಚಲನಚಿತ್ರ ಅಭಿನಯ–ನಿರ್ದೇಶನಾದಿಗಳ ತರಬೇತಿ ಪಡೆದು ಕಲಬುರ್ಗಿಗೆ ಮರಳಿದರು. ಆ ಸಮಯದಲ್ಲಿ ಹಿರೇಮಠ ಅವರಿಗೆ ಬಿ.ವಿ. ಕಾರಂತ, ಪ್ರೇಮ ಕಾರಂತ, ಬಿ. ಜಯಶ್ರೀ, ಗಿರೀಶ ಕಾಸರವಳ್ಳಿ, ಟಿ.ಎಸ್. ನಾಗಭರಣರಂತಹ ಶ್ರೇಷ್ಠ ರಂಗಶಕ್ತಿಗಳ ಸಂಪರ್ಕವು ದೊರೆಯಿತು.

ಡಾ. ಹಿರೇಮಠರ ಹಲವಾರು ನಾಟಕಗಳು ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ಮುಂಬೈಯ ಫಿಲಂ ಡಿವಿಜನ್ನಿಗಾಗಿ 'ತೊಗರಿ ರೈತನ ಸಿರಿ' ಎಂಬ ಕಿರುಚಿತ್ರವನ್ನು ಅವರು ನಿರ್ದೇಶಿಸಿ ತಯಾರಿಸಿಕೊಟ್ಟಿದ್ದಾರೆ. 'ಶರಣಬಸವೇಶ್ವರರು ಹಾಗೂ ಮಹಾದಾಸೋಹ ಪೀಠ'ದ ಬಗೆಗಿನ ಸಾಕ್ಷ್ಯಚಿತ್ರವೊಂದು ವಾರ್ತಾ ಇಲಾಖೆಗೆ ಮಾಡಿಕೊಟ್ಟಿದ್ದಾರೆ. ನಾಟಕಸಾಹಿತ್ಯ ಕೃಷಿಕರಾಗಿ ಅವರು ಮೂವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಅವೆಲ್ಲ ನಾಟಕಗಳು 'ಡಾ. ಎಸ್.ಎಂ. ಹಿರೇಮಠರ ನಾಟಕಲೋಕ'–ಎಂಬ ಹೆಸರಿನಲ್ಲಿ ನಾಲ್ಕು ಸಂಪುಟಗಳಾಗಿ ಪ್ರಕಟಗೊಂಡಿವೆ. ಅವರ 'ರಂಗಾನುಭವಗಳು' ಎರಡು ಭಾಗಗಳಲ್ಲಿ ಪ್ರಕಾಶನ ಕಂಡಿವೆ.

ಡಾ. ಎಸ್.ಎಂ. ಹಿರೇಮಠ ಅವರ ರಂಗ ಸಾಧನೆಗಾಗಿ ಹಲವಾರು ಮಾನ–ಸನ್ಮಾನಗಳು ದೊರಕಿವೆ. ಬೀದರಿನ ನಾಟ್ಯ ಕಲಾ ಸಂಘವು ಪ್ರದರ್ಶಿಸಿದ ಹಿರೇಮಠರ ರಚನೆ ಮತ್ತು ನಿರ್ದೇಶನದ 'ಅತೃಪ್ತ ಆತ್ಮಗಳು' ನಾಟಕ ಪ್ರದರ್ಶನ ಸಮಾರಂಭದಲ್ಲಿ ಅವರನ್ನು 'ಕಲಾತಪಸ್ವಿ' ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿತು. 1983ರಲ್ಲಿ ರಾಜ್ಯಮಟ್ಟದ ಯುವಜನೋತ್ಸವದಲ್ಲಿ ಅವರು ರಚಿಸಿ, ನಿರ್ದೇಶಿಸಿದ 'ಮೂರು ಮೆಟ್ಟಿಲ ಕಥೆ' ನಾಟಕವು ಐದು ರಜತ ಪದಕಗಳನ್ನು ಪಡೆಯುವುದರೊಂದಿಗೆ 'ಅತ್ಯುತ್ತಮ ನಿರ್ದೇಶಕ' ಪ್ರಶಸ್ತಿಯೂ ತಂದು ಕೊಟ್ಟಿತು.

1987ರಲ್ಲಿ ನಡೆದ 'ಏಕವ್ಯಕ್ತಿ ನಿರ್ದೇಶನದ ಮಕ್ಕಳ ನಾಟಕೋತ್ಸವ'ಕ್ಕೆ ಹಿರೇಮಠರು ಆರು ನಾಟಕಗಳನ್ನು ನಿರ್ದೇಶಿಸಿದರು. ಮೂರು ದಿನಗಳ ಕಾಲ ಆ ನಾಟಕಗಳು ಪ್ರದರ್ಶನಗೊಂಡವು. ಆಗ ಹಿರೇಮಠರಿಗೆ ರಂಗಾಸಕ್ತರು 'ರಂಗ ಋಷಿ' ಯೆಂಬ ಬಿರುದು ನೀಡಿ ಗೌರವಿಸಿದರು.

ಅದೇ ವರ್ಷವೇ ಬಾಗಲಕೋಟೆಯಲ್ಲಿ ನಾಟಕ ಅಕಾಡೆಮಿ ಹಮ್ಮಿಕೊಂಡಿದ್ದ ನಾಟಕೋತ್ಸವದಲ್ಲಿ ಹಿರೇಮಠರು ನಿರ್ದೇಶಿಸಿದ ನಾಟಕ 'ಶೆಟವಿ' ರಂಗ ಪ್ರಯೋಗವು ಅವರಿಗೆ 'ಅತ್ಯುತ್ತಮ ರಂಗನಿರ್ದೇಶಕ' ಎಂಬ ಗೌರವ ತಂದುಕೊಟ್ಟಿತು.

2010–11ರ ಸಾಲಿನಲ್ಲಿ ಕಲಬುರ್ಗಿಯಲ್ಲಿ ನಾಟಕ ಅಕಾಡೆಮಿ ಹಮ್ಮಿಕೊಂಡಿದ್ದ ನಾಟಕೋತ್ಸವದಲ್ಲಿ ಡಾ. ಎಸ್.ಎಂ. ಹಿರೇಮಠ ಅವರನ್ನು ಅವರ ರಂಗಸಾಧನೆಗಾಗಿ ಗೌರವಿಸಲಾಯಿತು.

(ಪಿಕೆಕೆ)

ಹೀ

ಹೀರಾಲಾಲ್ ಮಲ್ಕಾರಿ: ಚಿತ್ರಕಲಾವಿದ. ಇವರ ತಂದೆ ಸರಸೋಜಿರಾಮ್ ಮಲ್ಕಾರಿ. ತಾಯಿ ಎಲ್ಲೂಬಾಯಿ 2 ಎಪ್ರಿಲ್ 1934ರಲ್ಲಿ ಜನಿಸಿದರು. ಇವರು ಮೂಲತಃ ಆಂಧ್ರ ಪ್ರದೇಶದ ಆದೋನಿಯವರು ಅನಂತರ ರಾಯಚೂರಿಗೆ ಬಂದು ನೆಲೆಸಿದರು.

ತಾಯಿಯವರು ಪ್ರೀತಿಯಿಂದ ಇವರನ್ನು ಹೀರಾ ಎಂದು ಕರೆಯುತ್ತಿದ್ದರು. ಇವರು ಬಾಲ್ಯದಿಂದಲೇ ಗೋಡೆಯ ಮೇಲೆ ಚಿತ್ರಗಳನ್ನು ಬಿಡಿಸಿದಾಗ ತಂದೆಯವರು ವೀಕ್ಷಿಸಿ ಸಂತೋಷ ಪಟ್ಟಿದುಂಟು. ಇವರನ್ನು ಐದನೆ ವಯಸ್ಸಿನಲ್ಲಿ ಉರ್ದು ಶಾಲೆಗೆ ಸೇರಿಸಿದರು. ಇವರಿಗೆ ಚಿಕ್ಕಂದಿನಿಂದಲೇ ಆಧ್ಯಾತ್ಮಿಕ, ಪೌರಾಣಿಕ, ಚಿತ್ರಗಳನ್ನು ಚಿತ್ರಿಸುವುದು ತುಂಬ ಆಸಕ್ತಿಯ ವಿಷಯವಾಗಿತ್ತು. 8–9ನೆಯ ವಯಸ್ಸಿನಲ್ಲಿಯೇ ಸೈಯದ್ ಅಹ್ಮದ್ ಹಾಗೂ ಐದನೇ ಜಾರ್ಜರ ಚಿತ್ರವನ್ನು ಚಿತ್ರಿಸಿ ಆಶ್ಚರ್ಯಗೊಳಿಸಿದರು.

ಇವರು ನಾಲ್ಕನೆಯ ತರಗತಿ ಓದುತ್ತಿರುವಾಗಲೇ ಹೈದ್ರಾಬಾದ ರಜಾಕರ ದಬ್ಬಾಳಿಕೆ ಹೆಚ್ಚಾಗಿತ್ತು ಈ ಸಮಸ್ಯೆಯಲ್ಲಿ ಉಲ್ಕಾರಿಯವರ ಓದಿನ ಕಡೆ ಗಮನಕೊಡದೇ ಇದುದ್ದರಿಂದ ಇವರು ತರಗತಿಯನ್ನು ತೊರೆಯಬೇಕಾಯಿತು. ಅನಂತರ ತಂದೆಯವರ ವೃತ್ತಿಯಾದ ಟೈಲರ್ ಕೆಲಸಕ್ಕೆ ಸಹಾಯಕನಾಗಿ ಅನಂತರ ಈ ವೃತ್ತಿಯಲ್ಲಿ ಮುಂದುವರೆದರು. ಈ ವೃತ್ತಿಯಿಂದ ಬಂದ ಆದಾಯದಿಂದ ಕುಟುಂಬದ ಪಾಲನೆ ನಡೆಸುವುದು ಕಷ್ಟವಾಯಿತು. ಇದರ ಜೊತೆಗೆ ಬೋರ್ಡ್‌ಗಳನ್ನು ಬರೆಯುವುದು ತಮ್ಮ ವೃತ್ತಿಯನ್ನಾಗಿಸಿಕೊಂಡರು. ಇವರು ಸಣ್ಣ ಸಣ್ಣ ಬೋರ್ಡ್ ಫ್ರೇಮಗಳಲ್ಲಿ ಗುರು ರಾಘವೇಂದ್ರರ ಚಿತ್ರಗಳನ್ನು ಬಿಡಿಸಿದರು. ಮುಂದೆ ದೊಡ್ಡದಾದ ಬೋರ್ಡ್‌ನ ಮೇಲೆ ಚಿತ್ರವನ್ನು ಚಿತ್ರಿಸುವ ಯೋಗ ಒದಗಿ ಬಂದಿತು. ಪುರಾಣ ಮತ್ತು ಚರಿತ್ರೆಕಾರರ ಚಿತ್ರಗಳೂ ಇವರ ಕುಂಚದಲ್ಲಿ ಅರಳಿವೆ. ಅವು ಕೂರ್ಮಾವತಾರ, ಮತ್ಸ್ಯಾವತಾರ, ಉಗ್ರನರಸಿಂಹನ ಅವತಾರ, ಬಸವಣ್ಣ ಶ್ರೀಸುಜಯಿಂದ್ರತೀರ್ಥ ಶ್ರೀಪಾದಂಗಳವರ ಭಾವಚಿತ್ರ, ರಾಘವೇಂದ್ರಸ್ವಾಮಿ, ಶಿವ–ಪಾರ್ವತಿ, ವೀರಭದ್ರೇಶ್ವರ, ಕರಿಯಪ್ಪ ತಾತ, ಸಮುದ್ರಮಂಥನ, ವಿಶ್ವರೂಪ, ವೆಂಕಟೇಶ್ವರ, ವಿಷ್ಣು ದಶವತಾರಗಳು, ರಾಮಸೀತೆ, ಶ್ರೀದೇವಿ, ಲಕ್ಷ್ಮೀನರಸಿಂಹ, ವಿಷ್ಣು–ಶ್ರೀದೇವಿ, ಶ್ರೀಕೃಷ್ಣನ ಮಡದಿಯರ ಜೊತೆಯಲ್ಲಿ, ಶ್ರೀ ವಿಷ್ಣು ಮತ್ತು ಶ್ರೀಲಕ್ಷ್ಮಿ, ಶ್ರೀರಾಮ–ಸೀತೆ, ವಾಮನ ಅವತಾರ, ಶ್ರೀದೇವಿ, ಹೀಗೆ ಹಲವು ಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲದೇ ಹಲವು ಸ್ತ್ರೀ ಚಿತ್ರಗಳಾದ ನೃತ್ಯ ಗಾರ್ತಿ, ಸ್ವಪ್ನಸುಂದರಿ, ಇಂದಿರಾಗಾಂಧಿಯಂತವರ ಚಿತ್ರಗಳನ್ನು ಚಿತ್ರಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಇವರು ತಮ್ಮದೇ ಆದ ಶೈಲಿಯಲ್ಲಿ ಕಲಾಕೃತಿಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಸಾಂಪ್ರದಾಯಿಕ ನೆಲೆಯಲ್ಲಿ ಚಿತ್ರಿತವಾಗಿದ್ದು ಇಲ್ಲಿ ಮೂಲ ವರ್ಣಗಳ ಬಳಕೆಗಳ ಹೆಚ್ಚಿನ ಮಟ್ಟದಲ್ಲಿ ಕಂಡ ಬರುತ್ತವೆ. ಒಟ್ಟಾರೆ ಸತ್ವಯುತವಾದಂತಹ ಕಲಾಕೃತಿಯಾಗಿದೆ.

(ಕೆವಿ)

ಹು

ಹುಡಗಿ ಆರ್.ಕೆ.: ಇವರು 1948 ಸೆಪ್ಟೆಂಬರ್ 01ರಂದು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಮುಚಳಂಬಿ ಗ್ರಾಮದಲ್ಲಿ ಜನಿಸಿದರು. ಇವರು ಇಂಗ್ಲೀಷನಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದರು. ಪಿ.ಡಿ.ಎ. ಇಂಜಿನೀಯರಿಂಗ್ ಮಹಾವಿದ್ಯಾಯದಲ್ಲಿ ಸುಮಾರು 30 ವರ್ಷ ಇಂಗ್ಲೀಷ ಪ್ರೋಫೆಸ್‌ರಾಗಿ ಸೇವೆ ಸಲ್ಲಿಸಿ ನಿವೃತ್ತಿಯನ್ನು ಹೊಂದಿದ್ದಾರೆ. ಪಿ.ಡಿ.ಎ. ಇಂಜಿನೀಯರಿಂಗ್ ಮಹಾವಿದ್ಯಾಲಯದಲ್ಲಿ ಅನೇಕ ಹುದ್ದೆಗಳನ್ನು ನಿರ್ವಹಿಸಿದ್ದಲ್ಲದೇ ಆಳಂದ ಪದವಿ ಮಹಾವಿದ್ಯಾಲಯ, ಸಿ.ಬಿ. ಮಹಾವಿದ್ಯಾಲಯ ಚಿಂಚೋಳಿ, ಎಂ.ಎಸ್.ಐ ಮಹಾವಿದ್ಯಾಲಯ, ಎಚ್.ಕೆ.ಇ.ಎಸ್. ಪುರುಷ ಹಾಗೂ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ ಗುಲಬರ್ಗಾ ಹೀಗೆ ಹಲವು ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲವು ಪ್ರಜ್ಞಾವಂತರು, ವಿಚಾರವಂತರು ಇದನ್ನು ತಡೆದು ಅವರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು, ಅರಿವು ನೀಡಲು ಸಮುದಾಯ ಸಾಂಸ್ಕೃತಿಕ ಸಂಘಟನೆಯನ್ನು ಹುಟ್ಟುಹಾಕಿ ರಾಜ್ಯದಾದ್ಯಂತ ಬರಗಾಲ ಜಾಥಾ ಮಾಡಿ ರೈತರಲ್ಲಿ ಆತ್ಮವಿಶ್ವಾಸ ಮೂಡಿಸಿದ ಕೆಲವೇ ವ್ಯಕ್ತಿಗಳಲ್ಲಿ ಇವರು ಒಬ್ಬರು. ಅಲ್ಲಿಂದ ಇವರ ರಂಗಭೂಮಿಯ ಚಟುವಟಿಕೆಗಳು ಪ್ರಾರಂಭಗೊಂಡವು. ಅಲ್ಲಿಂದ ಮುಂದೆ ಕೆಲವು ವರ್ಷಗಳ ನಂತರ ಸಾಕ್ಷರತೆ ಕುರಿತು 'ಅಕ್ಷರ' ನಾಟಕವನ್ನು ಬರೆದು ರಾಜ್ಯದಾದ್ಯಂತ ನೂರಾರು ಪ್ರಯೋಗಗಳನ್ನು ಮಾಡಿಸಿದರು. ಇವರು ರಚಿಸಿದ ಇನ್ನೊಂದು ನಾಟಕ ಒರೆಗಲ್ಲು ಕೂಡ ಅಷ್ಟೇ ಪ್ರಯೋಗಗಳನ್ನು ಕಂಡಿತು. 'ದಲಿತ ಚಳುವಳಿ ಒಂದು ನೋಟ', ವಿಮೋಚನೆಯೆಡೆಗೆ', ನಾನೇಕೆ ನಾಸ್ತಿಕ', ಇ.ಎಮ್.ಎಸ್.ರವರ ವಿಮೋಚನೆಯ ದಾರಿ, 'ಡಾ ರಾಜೇಂದ್ರ ಪ್ರಸಾದ', ಭೂಪೇಷ ಗುಪ್ತ', 'ನಮ್ಮ ಬಡತನ' ಹೀಗೆ ಅನೇಕ ಆಂಗ್ಲ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಅನು ವಾದಿಸಿ ವಿಶಿಷ್ಟ ಕೊಡುಗೆಯನ್ನು ನಮ್ಮ ನಾಡಿಗೆ ನೀಡಿದ್ದಾರೆ. 'ಗತಿತಾರ್ಕಿಕ ಭೌತವಾದ', 'ಭಾರತೀಯ ಶಿಕ್ಷಣದ ಶವಪರೀಕ್ಷೆ', ಮಾರ್ಕ್ಸವಾದ ಮತ್ತು ರೈತ ಸಮಸ್ಯೆ', 'ಸಂಸ್ಥಾ', 'ಉಸ್ತುವಾರಿ ಸಚಿವರ ಬಸ್ತಾನಿ', 'ಬಾದಶಹಾ ಪುರಾಣ', 'ಪಾದಚಾರಿ ಪುರಾಣ', ಹೆಮ್ಮಾರಿಯ ರಸಪುರಾಣ', ಬರದ ಬಯಲಾಟ' ಹೀಗೆ ಇವರ ಅನೇಕ ನಾಟಕ ಕೃತಿಗಳು ಹತ್ತಾರು ರಂಗ ಪ್ರದರ್ಶನ ಹಾಗೂ



ಬೀದಿ ಪ್ರದರ್ಶನ ಕಂಡ ದ್ದಲ್ಲದೆ ದೂರದರ್ಶನ ಮತ್ತು ಆಕಾಶ ವಾಣಿಯಲ್ಲಿ ಬಿತ್ತರಗೊಂಡಿವೆ.

ಇವರ ಈ ರೀತಿಯ ರಂಗ ಚಟುವಟಿಕೆಗಳನ್ನು ಪರಿಗಣಿಸಿ ಕರ್ನಾಟಕ ಸರಕಾರದ ಕರ್ನಾಟಕ ನಾಟಕ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು. ಕೆಲವು ಕಾಲ ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ವರ್ಲ್ಡ್ ಥೇಟರ್ ಡೇ, ಹೊಸ ವರ್ಷದ ಕವಿ ಗೋಷ್ಠಿಗಳು ದೂರದರ್ಶನ ಮತ್ತು ಆಕಾಶವಾಣಿಯ ವಿಶೇಷ ಆಹ್ವಾನಿತರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ನಿರ್ದೇಶಿಸಿದ್ದಾರೆ.

ಪ್ರಗತಿಪರ ವಿಚಾರಧಾರೆಯ ಹುಡಗಿಯವರು ಅನೇಕ ಜನಪರ ಚಟುವಟಿಕೆಗಳಲ್ಲಿ ಸದಾಕಾಲ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಲ್ಲದೆ ಅನೇಕ ಪ್ರಗತಿಪರ ಸಂಘಟನೆಗಳ ನೇತಾರರಾಗಿಯೂ, ಪ್ರಮುಖರಾಗಿಯೂ ಹಾಗೂ ಸಂಘಟಕರಾಗಿಯೂ ಕೆಲಸ ಮಾಡುತ್ತಾ ನಮ್ಮ ಭಾಗದ ಸಾಂಸ್ಕೃತಿಕ ಕ್ಷೇತ್ರದ ಚೇತನರಾಗಿದ್ದಾರೆ. ಕಳೆದ ಏಳು ವರ್ಷಗಳಿಂದ ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿಯ ರಾಜ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. (ಎಎಸ್‌ಎಸ್)


ಹುಲಿಗೆಮ್ಮ: ಕೊಪ್ಪಳ ತಾಲ್ಲೂಕಿನಲ್ಲಿ ಹುಲಿಗೆಮ್ಮ ದೇವಸ್ಥಾನ ರಾಜ್ಯದ ಪ್ರಮುಖ ಶಕ್ತಿ ದೇವತೆಯ ಕ್ಷೇತ್ರ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳಿಂದ ಸಾವಿರಾರು ಸಂಖ್ಯೆಯ ಭಕ್ತರು ಇಲ್ಲಿಗೆ ಬರುತ್ತಾರೆ. ಮಹಾನವಮಿ, ಗೌರಿ ಹುಣ್ಣಿಮೆ, ಸೀಗೆ ಹುಣ್ಣಿಮೆ, ಭರತ ಹುಣ್ಣಿಮೆಗಳಂದು ಅಸಂಖ್ಯಾತ ಜನರು ಬರುತ್ತಾರೆ.

ಪ್ರತಿವರ್ಷ ಭರತ ಹುಣ್ಣಿಮೆಯ ಒಂಬತ್ತು ದಿನಗಳ ಬಳಿಕ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಕುದಿಯುವ ಪಾಯಸದ ಪಾತ್ರೆಗೆ ಕೈ ಹಾಕಿ ಪಾಯಸ ತೆಗೆದು ದೇವಿಗೆ ನೈವೇದ್ಯ ಅರ್ಪಿಸುವುದು ಇಲ್ಲಿನ ವಿಶೇಷ.

ಇಲ್ಲಿಗೆ ಬರುವ ಭಕ್ತರಲ್ಲಿ ತಳ ಸಮುದಾಯಗಳ ಜನರೇ ಹೆಚ್ಚಿನವರು. ಜಾತ್ರೆ ಸಂದರ್ಭದಲ್ಲಿ ದೇವಸ್ಥಾನದ ಬಯಲಿನಲ್ಲಿ ಅಡಿಗೆ ಮಾಡಿ ಅಮ್ಮನಿಗೆ ನೈವೇದ್ಯ ಅರ್ಪಿಸುತ್ತಾರೆ. ವಿಜಯದಶಮಿ ಸಂದರ್ಭದಲ್ಲಿ ವಿಶೇಷ ಪೂಜೆಯ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಒಂಬತ್ತು ದಿನಗಳೂ ನಡೆಯುತ್ತವೆ. ಉಳಿದಂತೆ ಮಂಗಳವಾರ, ಶುಕ್ರವಾರ ಮತ್ತು ಹುಣ್ಣಿಮೆ ದಿನಗಳಂದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಿ ದರ್ಶನಕ್ಕೆ ಬರುತ್ತಾರೆ.

ಹುಲಗಿ ಕ್ಷೇತ್ರ ಎಂಟುನೂರು ವರ್ಷಗಳಿಂದಲೂ ಜನರನ್ನು ಸೆಳೆಯುತ್ತಿದೆ. ಈ ಕ್ಷೇತ್ರದ ಪೂರ್ವಕ್ಕೆ ತುಂಗಭದ್ರಾ ನದಿ ಹರಿಯುತ್ತದೆ. ನದಿಯ ದಂಡೆಯಲ್ಲಿ ಸೋಮೇಶ್ವರ ಲಿಂಗವಿದೆ. ಅಲ್ಲಿಯೂ ವಿಶೇಷ ಪೂಜೆಗಳು ನಡೆಯುತ್ತದೆ.

ಕ್ಷೇತ್ರದ ಹಿನ್ನೆಲೆಯಲ್ಲಿ ಒಂದು ಕಥೆ ಇದೆ. ನೂರಾರು ವರ್ಷಗಳ ಹಿಂದೆ ಹುಲಗಿಯಲ್ಲಿ ನಾಗಜೋಗಿ ಮತ್ತು ಬಸವಜೋಗಿ ಎಂಬ ಸಹೋದರರಿದ್ದರು. ಅವರ ಸವದತ್ತಿ ಯಲ್ಲಮ್ಮನ ಭಕ್ತರು. ತುಂಗಭದ್ರಾ ನದಿಯಲ್ಲಿ ಹರಿಗೋಲು ಹಾಕುತ್ತ ಜೀವನ ಮಾಡುತ್ತಿದ್ದರು. ಪ್ರತಿ ಹುಣ್ಣಿಮೆಗೆ ಸವದತ್ತಿಗೆ ಹೋಗಿ ಅಮ್ಮನ ದರ್ಶನ ಮಾಡಿ ಬರುತ್ತಿದ್ದರು. ಒಮ್ಮೆ ಇಬ್ಬರೂ ಸವದತ್ತಿಯ ಸಮೀಪ ಬರುವಷ್ಟರಲ್ಲಿ ಮಳೆ ಆರಂಭವಾಯಿತು. ಮಾರನೆಯ ದಿನ ಹುಣ್ಣಿಮೆ. ಈ ಸೋದರರು ಹುಣ್ಣಿಮೆ ದಿನ ಅಮ್ಮನ ದರ್ಶನ ಪಡೆಯಲು ಸಾಧ್ಯವಾಗಲಿಲ್ಲ. ಎರಡು ದಿನ ಸತತ ಮಳೆ ಸುರಿಯಿತು. ಮಳೆ ಗಾಳಿಗೆ ಸಿಕ್ಕಿ ತತ್ತರಿಸಿ ಹೋದರು. ಆದರೂ ದೇವಿಯ ಸ್ಮರಣೆ ಮಾಡುತ್ತಲೇ ಇದ್ದರು. ಅವರ ಭಕ್ತಿಗೆ ಮೆಚ್ಚಿದ ಯಲ್ಲಮ್ಮ ಪ್ರತ್ಯಕ್ಷಳಾಗಿ ಮಕ್ಕಳೇ, ನೀವು ಇನ್ನು ಮುಂದೆ ನನ್ನ ದರ್ಶನಕ್ಕಾಗಿ ಸವದತ್ತಿ ಗುಡ್ಡಕ್ಕೆ ಬರುವುದು ಬೇಡ. ನಾನೇ ನಿಮ್ಮೂರಿಗೆ ಬಂದು ನೆಲೆಸುತ್ತೇನೆ ಎಂದು ಅಭಯ ನೀಡಿದಳು.



ಹುಲಿಗೆಮ್ಮ ದೇವಸ್ಥಾನ, ಮುನಿರಾಬಾದ (ಕೊಪ್ಪಳ)

ಆ ನಂತರ ತುಂಗಭದ್ರಾ ತೀರದ ವ್ಯಾಘ್ರಪುರಕ್ಕೆ ಬಂದ ಯಲ್ಲಮ್ಮ ಹುಲಿಗೆಮ್ಮ ಎಂಬ ಹೆಸರಿನಲ್ಲಿ ಅಲ್ಲಿ ನೆಲೆಸಿದಳು. ಅದೇ ಇಂದಿನ ಹುಲಿಗಿ ಕ್ಷೇತ್ರ. ಹುಲಿಗೆಮ್ಮನ ದೇವಸ್ಥಾನದ ಎದುರಿಗೆ ಮಾತಂಗಿ ಗುಡಿ ಇದೆ. ಬಲಕ್ಕೆ ಪರಶುರಾಮನ ಗುಡಿ ಇದೆ.

ನದಿ ದಡದಲ್ಲಿ ಸೋಮೇಶ್ವರ, ಪಾರ್ವತಿ ದೇವಸ್ಥಾನ, ಸುಬ್ರಮಣ್ಯಸ್ವಾಮಿ, ಗಣಪತಿ ಹಾಗೂ ನವಗ್ರಹ ದೇವಸ್ಥಾನಗಳಿವೆ.

ಇಲ್ಲಿಗೆ ಬರುವ ಭಕ್ತರು ತಂಗಲು ಯಾತ್ರಿ ನಿವಾಸವಿದೆ. ಒಂದು ಕಲ್ಯಾಣಮಂಟಪವೂ ಇದೆ. ಕ್ಷೇತ್ರ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದೆ. ಇಲ್ಲಿ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲು ಸರ್ಕಾರ 30 ಕೋಟಿ ರೂ. ಗಳನ್ನು ನೀಡಲು ನಿರ್ಧರಿಸಿದೆ.

ಹುಲಗಿ ಕೊಪ್ಪಳದಿಂದ 22. ಕಿ.ಮೀ. ಹೊಸಪೇಟೆಯಿಂದ 15 ಕಿ.ಮೀ. ದೂರದಲ್ಲಿದೆ. ಈ ಕ್ಷೇತ್ರಕ್ಕೆ ರೈಲ್ವೆ ಸಂಪರ್ಕವಿದೆ. ದೇವಸ್ಥಾನ ನಿತ್ಯ ಬೆಳಿಗ್ಗೆ 6 ಗಂಟೆಗೆ ತೆರೆಯುತ್ತದೆ. ಬೆಳಗಿನ ಅವಧಿಯ ಅಭಿಷೇಕ, ಪೂಜೆಯ ನಂತರ ದರ್ಶನ ಆರಂಭ ವಾಗುತ್ತದೆ.

(ಡಿಎಚ್)

ಹೇ

ಹೇಮಂತಕುಮಾರ ಕೋಲ್ಹಾಪುರ: ಪದವಿ ಕಾಲೇಜಿನ ವಾಣಿಜ್ಯಶಾಸ್ತ್ರದ ಉಪನ್ಯಾಸಕರಾಗಿರುವ ಪ್ರೊ. ಹೇಮಂತ ಕುಮಾರ ಕೋಲ್ಹಾಪುರ ಅವರು ಬಾಲಕಲಾವಿದನಾಗಿ ರಂಗ ಭೂಮಿ ಮೇಲೆ ಬಂದವರು. 1971 ರಲ್ಲಿ 'ತೆಗ್ಗು' ನಾಟಕದಲ್ಲಿ ಬಾಲನಟನಾಗಿ ಅಭಿನಯ. ಜೀವನ ಸಂಸಾರ, ಶಾಂತಿ–ಕ್ರಾಂತಿ, ಸಮಸ್ಯೆ, ಕತ್ತಲೆ–ಬೆಳಕು, ಕದಡಿದ ನೀರು, ಉತ್ತಮ ಪ್ರಭುತ್ವ, ಮೇಳ, ಆನಿ ಬಂತಾನಿ, ವಿದ್ಯಾರ್ಥಿಯಾಗಿರುವ ಅವಧಿ ಯಲ್ಲಿಯೇ ಈ ಎಲ್ಲ ನಾಟಕಗಳಲ್ಲಿ ಉತ್ತಮ ಅಭಿನಯದ ಮೂಲಕ ಉತ್ತಮ ಕಲಾವಿದನೆಂದು ಪ್ರೇಕ್ಷಕರ ಮೆಚ್ಚುಗೆ ಗಳಿಸಿದ ಕಲಾ ಶ್ರೀಮಂತಿಕೆ ಹೇಮಂತಕುಮಾರ ಅವರದು.

ಕುಂಟಾ ಕುಂಟಾ ಕುರವತ್ತಿ, ಉತ್ತಮ ಪ್ರಭುತ್ವ, ವನ ಮಹೋತ್ಸವ, ನಾಯೀ ಕಥೆ, ನೀ ಮಾಯಯೊಳಗೋ, ಬೇಡ ನೀ ಕೊಲಬೇಡ, ಜೈಸಿದ ನಾಯಕ, ಕೇಳು ಜನಮೇಜಯ, ಫ್ಲಾಟ್,ನಂ 5, ಖರೋಖರ. ಹರಕೆಯ ಕುರಿ, ಇದಕ್ಕೆ ಸಂಶಯ ವಿಲ್ಲ, ಹಳ್ಳ ಕೊಳ್ಳ ನೀರು, ಮನೆ, ಶಾಂತತಾ, ಆಧುನಿಕ ದ್ರೋಣ, ಕಾಡು ಕುದುರೆ,ಕವಿಯತ್ತು ಕಳ್ಳ, ಗ್ರಹಣ,ಮಂಥರಾ, ಇತ್ಯಾದಿ 40 ರಂಗ ನಾಟಕಗಳಲ್ಲಿ ಅಭಿನಯಿಸಿದ್ದಾರೆ. 14 ರಂಗ ನಾಟಕಗಳ ನಿರ್ದೇಶಕರಾಗಿದ್ದಾರೆ. 15 ದೂರದರ್ಶನ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಆಕಾಶವಾಣಿ 'ಬಿ' 'ಹೈ' ಶ್ರೇಣಿ ಕಲಾವಿದರಾಗಿ ಇಲ್ಲಿಯವರೆಗೆ 70 ನಾಟಕಗಳಲ್ಲಿ ನಟಿಸಿದ್ದಾರೆ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ಕಲ ಬುರಗಿ ಮತ್ತು ರಾಜ್ಯದಾದ್ಯಂತ ನಾಟಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದ್ದಾರೆ.



ನಾಟಕ ಕ್ಷೇತ್ರ ಕುರಿತಂತೆ ಇವರ 20 ಲೇಖನಗಳು ಪ್ರಕಟ ವಾಗಿವೆ. ಸುಮಾರು 150 ಭಾಷಣ, ಉಪನ್ಯಾಸ ನೀಡಿ ದ್ದಾರೆ. ಇವರು ಬರೆದ 'ಆರು ಪ್ರಹಸನ'ಗಳು ಎನ್ನುವ ರೂಪಕ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಉತ್ತಮ ಬರಹಗಾರ, ಭಾಷಣಕಾರ, ಅಧ್ಯಾಪಕ ರಾಗಿರುವ ಹೇಮಂತ ಕುಮಾರ ಅವರು ಕಲಬುರಗಿ ರಂಗಮಾಧ್ಯಮದ ಕ್ರಿಯಾಶೀಲ ಸಂಘಟಕ.

(ಎಸ್‌ಕೆ)

ಹೊ

ಹೊಡೆಗಳು: ಐತಿಹಾಸಿಕ ಮಹತ್ತ್ವವುಳ್ಳ ಕಾವಲು ಗೋಪುರ ಗಳು. ಹಿಂದೊಮ್ಮೆ ಇಡೀ ಸಾಮ್ರಾಜ್ಯವನ್ನೇ ಕಾಯುತ್ತಿದ್ದ ಶತಮಾನಗಳ ಇತಿಹಾಸ ಹೊಂದಿರುವ ಪುರಾತನ ಹೊಡೆಗಳು, ಸೂಕ್ತ ರಕ್ಷಣೆಯಿಲ್ಲದೆ ವಿನಾಶದತ್ತ ಸಾಗುತ್ತಿವೆ.

ಕಲಬುರ್ಗಿ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರು, ರಾಷ್ಟ್ರ ಕೂಟರು, ಬಹುಮನಿ ಸುಲ್ತಾನರು, ಆದಿಲ್ ಶಾಹಿಗಳು, ಹೈದರಾ ಬಾದ ಅಸಫ್‌ಶಾಹಿ ಮನೆತನದ ನಿಜಾಮರು ಆಳ್ವಿಕೆ ನಡೆಸಿರುವ ಈ ಪ್ರದೇಶದಲ್ಲಿ ಅನೇಕ ಕೋಟೆಕೊತ್ತಲಗಳು, ಅವುಗಳ ಸಂರಕ್ಷಣೆಗಾಗಿ ನಿರ್ಮಿಸಲ್ಪಟ್ಟ ಕಾವಲು ಗೋಪುರ ಹೊಡೆಗಳು ಇಂದು ಅವಸಾನದಂಚಿನಲ್ಲಿವೆ. ಇಷ್ಟೊಂದು ರಾಜ ಮನೆತನ ಗಳು ಆಳಿರುವ ಈ ಪ್ರದೇಶ ವಿವಿಧ ಸಂಸ್ಕೃತಿಗಳ ಸಂಗಮ ವಾಗಿರುವಂತೆ ವಾಸ್ತುಶಿಲ್ಪದಲ್ಲಿ ವೈವಿಧ್ಯಮಯ, ವಿಶಿಷ್ಟ ವಿನ್ಯಾಸದ ಐತಿಹ್ಯಗಳನ್ನು ಹೊಂದಿದೆ. ಗುಡಿಗೋಪುರಗಳು, ವಿಶಾಲವಾದ ಮಸೀದಿಗಳು–ಮಿನಾರುಗಳು ಮತ್ತು ದೇಗುಲ–ಹೊಡೆಗಳು ಇಲ್ಲಿನ ಶಿಲ್ಪವೈಭವವನ್ನು ಸಾರಿ ಹೇಳುತ್ತವೆ. ಅವಚ್ಚೆಗೆ ಒಳ ಗಾಗಿರುವ ಈ ಪ್ರದೇಶದ ಒಂದು ಪ್ರಮುಖ ವಾಸ್ತುಶಿಲ್ಪ ಪ್ರಕಾರ 'ಹೊಡೆಗಳು', ಮಹಾರಾಷ್ಟ್ರದ ಹಲವು ಊರುಗಳು ಮತ್ತು ಕರ್ನಾಟಕದ ವಿಜಾಪುರ, ಕಲಬುರ್ಗಿ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕ ಪ್ರಮಾಣದಲ್ಲಿ ಕಂಡುಬರುತ್ತವೆ.

ವಿಜಾಪುರದ ಸುಪ್ರಸಿದ್ಧ ಉಪಲಿಬುರ್ಜ್ ಆಕಾರದ ಈ ಕಟ್ಟಡಗಳು ಅದಕ್ಕಿಂತ ತುಂಬ ಹಿಂದಿನ ಕಾಲದಲ್ಲಿ ನಿರ್ಮಾಣ ವಾದವುಗಳಾಗಿವೆ. ಕಲಬುರ್ಗಿ ಜಿಲ್ಲೆಯ ಆಳಂದ, ಅಫಜಲ



ಹೊಡೆ (ಗೋಪುರ)

ಪುರ, ಜೇವರ್ಗಿ, ಮಳಖೇಡ, ದಂಡೋತಿ ಮುಂತಾದ ಪ್ರತಿಯೊಂದು ಗ್ರಾಮಗಳಲ್ಲಿ ಮೂರ್ನಾಲ್ಕು ಊರುಗಳಿಗೊಂದು ಅವಸಾನದಂಚಿನಲ್ಲಿರುವ ಹೊಡೆಗಳು ನೋಡಲು ಸಿಕ್ಕುತ್ತವೆ. ಚಿತ್ರದಲ್ಲಿರುವ ಈ ಹೊಡೆ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಆತನೂರ ಗ್ರಾಮದಲ್ಲಿದೆ. ಆತನೂರ ಗ್ರಾಮ ಇತಿಹಾಸದಲ್ಲಿ ಹನ್ನೆರಡು ಮತ್ತು ಹದಿಮೂರನೆಯ ಶತಮಾನಕ್ಕೆ ಸಂಬಂಧಿಸಿದ ಆಲಂದೆ ಪ್ರಾಂತ್ಯಕ್ಕೆ ಒಳಪಟ್ಟಿತ್ತೆಂದು ಹೇಳಲಾಗಿದೆ. ಅಂದು ಈ ಪ್ರಾಂತ್ಯವನ್ನು ದೇವಗಿರಿಯ ಯಾದವರು ಆಳುತ್ತಿದ್ದರು ಎಂದು ಕೃಷ್ಣಾ ಕೊಲ್ಹಾರ ಕುಲಕರ್ಣಿ ಅವರ 'ವಿಜಾಪುರ ಆದಿಲಶಾಹಿ' ಸಂಶೋಧನಾ ಗ್ರಂಥದಿಂದ ತಿಳಿದುಬರುತ್ತದೆ. 'ಆಲಂದೆ 1000' ಎಂಬ ಶಾಸನದಲ್ಲಿ ಆತನೂರ ಗ್ರಾಮ ಎಂಭತ್ನಾಲ್ಕು ಹಳ್ಳಿಗಳ ಆಡಳಿತದ ಕೇಂದ್ರಸ್ಥಾನವಾಗಿತ್ತು ಜೈನ ಧರ್ಮದ ಯಾತ್ರಾಸ್ಥಳ ಮತ್ತು ನಾಲ್ವೆಸೆಯಲ್ಲೂ ಪ್ರಸಿದ್ಧವಾದ ಆಗ್ರಹಾರವನ್ನು ಹೊಂದಿತ್ತು ಎಂದು ಉಲ್ಲೇಖಿಸಲಾಗಿದೆ.

ಹನ್ನೆರಡು ಮತ್ತು ಹದಿಮೂರನೆಯ ಶತಮಾನಕ್ಕೆ ಸಂಬಂಧಿಸಿದ ನಾಲ್ಕು ಶಾಸನಗಳು ಈ ಗ್ರಾಮದಲ್ಲಿ ದೊರಕಿವೆ. ಈ ಗ್ರಾಮದಲ್ಲಿ ಪ್ರಾಚೀನ ಕಾಲದ್ದೆನ್ನಲಾದ ಐದಾರು ದೇವಾಲಯಗಳಿವೆ. ಅವುಗಳಲ್ಲಿ ಶಂಕರಲಿಂಗ, ಬಸ್ತಿ ಬೊಮ್ಮಣ್ಣ, ದೊಡ್ಡ ಬಸವಣ್ಣ, ಹನುಮಾನದೇವರ ಗುಡಿಗಳು ಪ್ರಮುಖವಾದವುಗಳಾಗಿವೆ.

ಶಿವಲಿಂಗ ದೇವಾಲಯದಲ್ಲಿ ಗರ್ಭಗೃಹ, ನವರಂಗಗಳಿವೆ. ಗರ್ಭಗೃಹದ ಮಧ್ಯಭಾಗದಲ್ಲಿ ಶಿವಲಿಂಗವಿದೆ. ಇದು ಚತುರ ಶಾಖಾಲಂಕೃತವಾದ ಬಾಗಿಲವಾಡವನ್ನು ಹೊಂದಿದೆ. ಈ ದೇವಾಲಯದ ಉಳಿದ ಭಾಗಗಳು ಶಿಥಿಲಗೊಂಡಿದ್ದು ಪಾಳು ಬಿದ್ದಿವೆ, ದೇವಾಲಯ ನಿರ್ಮಾಣದ ಆನಂತರ ದೀರ್ಘಾವಧಿಯಲ್ಲಿ ಇದರ ಅಡಿಪಾಯದ ಮೇಲೆಯೇ ದೊಡ್ಡ ಹೊಡೆಯನ್ನು ನಿರ್ಮಿಸಲಾಗಿದೆ.

ಸುಮಾರು ಒಂದು ನೂರು ಅಡಿ ವಿಶಾಲ ಅಡಿಪಾಯದ ಮೇಲೆ ವೃತ್ತಾಕಾರದ ಸಿಲಿಂಡರಾಕೃತಿಯಲ್ಲಿರುವ ಈ ಹೊಡೆ ಸುಮಾರು 65 ರಿಂದ 70 ಅಡಿಗಳಷ್ಟು ಎತ್ತರವಿದೆ. ಮೇಲೆ ಹೋದಂತೆ ಬಳೆ ಆಕೃತಿಯಲ್ಲಿ ಗೋಪುರವಾಗಿ ಆಕಾರ ಪಡೆದಿರುವ ಈ ಕಟ್ಟಡದ ಉಲ್ಲೇಖ ಮೇಲ್ಕಾಣಿಸಿದ 'ಅಲಂದೆ 1000' ಎಂಬ ಶಾಸನದಲ್ಲಿದೆ. ಈ ಹೊಡೆಯ ಗೋಡೆಗಳಲ್ಲಿ ವೈವಿಧ್ಯಮಯ ಕೆತ್ತನೆಯ ಹಲವಾರು ಚಿತ್ರಗಳಿವೆ. ಅರಸು, ರಾಣಿ, ವಿವಿಧ ಹೂಗಳು, ಗಜಾರೂಢ ರಾಜ-ರಾಣಿಯರು ಮುಂತಾದ ಚಿತ್ರಗಳನ್ನು ಮನಮೋಹಕವಾಗಿ ಕೆತ್ತಲ್ಪಟ್ಟಿವೆ.

ಇಂತಹ ವಿಶಾಲ ಮತ್ತು ಎತ್ತರವಿರುವ ಹೊಡೆಗಳನ್ನು ಅಫಜಲಪುರ ತಾಲ್ಲೂಕಿನ ಮಾಶಾಳ, ಕರಜಗಿ, ಮಣೂರ, ಬಳೂರಗಿ, ಆತನೂರ, ಗೊಬ್ಬೂರ-ಬಿ, ಮತ್ತಿತರ ಗ್ರಾಮಗಳಲ್ಲಿ ಕಂಡು ಬರುತ್ತವೆ. ಅಲ್ಲದೆ ಜಿಲ್ಲೆಯ ಇನ್ನೂ ಹಲವು ಗ್ರಾಮಗಳಲ್ಲಿ ಹೊಡೆಗಳು ಇತಿಹಾಸದ ಕುರುಹುಗಳಾಗಿದ್ದರೂ ಸೂಕ್ತ ರಕ್ಷಣೆಯ ಕೊರತೆಯಿಂದ ವಿನಾಶದಂಚಿನಲ್ಲಿವೆ. ಇಂಥವುಗಳಲ್ಲಿ ಮಾತೋಳಿ, ಬಳೂರಗಿ ಗ್ರಾಮಗಳಲ್ಲಿ ಇದ್ದ ಹೊಡೆಗಳನ್ನು, ಇತಿಹಾಸದ ಪರಿಜ್ಞಾನವಿಲ್ಲದ ಜನರು ಕೆಡವಿದ್ದಾರೆ. ಹೊಡೆಯ ಕಲ್ಲು ಮತ್ತು ಹಾಳು ಮಣ್ಣನ್ನು ಸಾರ್ವಜನಿಕರು ಹೊತ್ತೊಯ್ದಿದ್ದಾರೆ.

ಹೊಡೆಗಳನ್ನು ಅಂದಿನ ಕಾಲದಲ್ಲಿ ಕಾವಲು ಗೋಪುರಗಳೆಂದು ಇಲ್ಲವೆ ರಾತ್ರಿ ಗ್ರಾಮದ ಅಸ್ತಿತ್ವ ತಿಳಿಯುವ ಪಂಜಿನ ಗೋಪುರಗಳಾಗಿ ಬಳಸುತ್ತಿದ್ದರೆಂದು ಹೇಳಲಾಗುತ್ತದೆ. ಇವುಗಳ ನಿರ್ಮಾಣ ಮತ್ತು ಬಳಕೆಯ ಹಿಂದೆ ಘನವಾದ ಉದ್ದೇಶವಿತ್ತು. ಇಂದಿನ ಪ್ರಾಜ್ಞರು ಸಂಶೋಧನೆಯ ಮೂಲಕ ಯುವ ಪೀಳಿಗೆಯವರಿಗೆ ಇತಿಹಾಸದ ಪ್ರಜ್ಞೆ ಮೂಡಿಸಬೇಕಾಗಿದೆ.

(ಡಿಎಂಎನ್)

ಅನುಬಂಧ

1. ಪ್ರಧಾನ ಶೀರ್ಷಿಕೆಗಳು
2. ಲೇಖಕರು/ಲೇಖನ ಸೂಚಿ
3. ವಿಷಯ ಸೂಚಿ
4. ಆಕರ ಸೂಚಿ
5. ಕೃತಜ್ಞತೆಗಳು
6. ವರ್ಣಚಿತ್ರ ಸೂಚಿ

1. ಪ್ರಧಾನ ಶೀರ್ಷಿಕೆಗಳು

1. ಅಂದಾನಿ ವ್ಹಿ.ಜಿ.
2. ಅಂಬಯ್ಯ ನುಲಿ
3. ಅಂಬಾರಾಯ ಚಿನಮಳ್ಳಿ
4. ಅಂಬುಬಾಯಿ ರುದ್ರಪ್ಪ ಬಡಿಗೇರ
5. ಅರ್ಜುನಾಚಾರ್ಯ ತೆಂಗಳಿಕರ್
6. ಅಕ್ಕಿ ವಿ.ಎನ್.
7. ಅಕ್ಕಿ ದೇವೇಂದ್ರಪ್ಪ ನಾಭಿರಾಜ
8. ಅಗ್ನಿ
9. ಅಡಿವೆಪ್ಪ ಪರಪ್ಪ ಅಂಗ
10. ಅಡ್ಡಣಿಗೆ
11. ಅಣ್ಣರಾಯ ಹಂಗರಗಿ
12. ಅಣ್ಣಪ್ಪ ಇ. ಚಿತ್ರಗಾರ
13. ಅಣ್ಣಪ್ಪ ಮಲ್ಲಿಕಾಜಪ್ಪ ಹಡಲಗಿ
14. ಅಣ್ಣಪ್ಪ ಮಾಸ್ತರ ಕಲಶೆಟ್ಟಿ
15. ಅನಂತ ಚಿಂಚನಸೂರ
16. ಅನಂತ ಹರಸೂರ
17. ಅನಿರುದ್ಧ ಕೆ. ಜೋಶಿ
18. ಅಪ್ಪಾರಾವ ಶಿವಶಂಕರ ಪಾಟೀಲ
19. ಅಬ್ದುಲ್ ಖಾಜಿ
20. ಅಮೃತ ಎಂ. ಸಾಹು
21. ಅಮೃತೇಶ ಕಲಶೆಟ್ಟಿ
22. ಅಯ್ಯಣ್ಣ ವಿಶ್ವಕರ್ಮ
23. ಅಯ್ಯಣ್ಣಸ್ವಾಮಿ ಬಿಳ್ವಾರ
24. ಅರ್ಕಸಾಲಿ ಕೆ.ಎನ್.
25. ಅವ್ವಣ್ಣಪ್ಪ ಭದ್ರಪ್ಪ ಪತ್ತಾರ
26. ಅಶೋಕ ಎಸ್. ಶಟಕಾರ
27. ಅಶೋಕ ಗಿರಡ್ಡಿ
28. ಅಶೋಕ ತೋಟ್ನಳ್ಳಿ
29. ಅಶೋಕ ಪಾಟೀಲ್
30. ಅಶೋಕಕುಮಾರ ಹಿರೇಮಠ
31. ಅಶ್ವಿನಿ ಜಿ.ಕೆ.
32. ಅಳತೆ ಮಾಪನಗಳು
33. ಆಗಯ್ಯ ಬಸವಯ್ಯ ಆಚಾರ್ಯ
34. ಆಕಾಶವಾಣಿ–ದೂರದರ್ಶನ
35. ಆನಂದೇಶ್ವರ ದೇವಾಲಯ
36. ಆನೆಗೊಂದಿ
37. ಆಭರಣಗಳು
38. ಆಯಾಜ ಆರ್ಟ್ ಗ್ಯಾಲರಿ
39. ಆಯುಧಗಳು
40. ಆರತಿ ಕುಲಕರ್ಣಿ
41. ಆಲ್ದಾಳ ಎಲ್.ಬಿ.ಕೆ.
42. ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆ್ಯಂಡ್ ಕಲ್ಚರ್
43. ಇಂದಿರಾ ವಸಂತರಾವ ಮಾನ್ವಿಕರ
44. ಇಟಗಿ ಮಹದೇವ ದೇವಾಲಯ
45. ಇಸ್ಲಾಮಿಕ್ ಕಲೆ (ಗುಲಬರ್ಗಾ–ಬೀದರ)
46. ಇನ್‌ಸ್ಟಾಲೇಷನ್ ಕಲಾಕೃತಿಗಳು
47. ಈರಣ್ಣ ಪಿ. ಕಂಬಾರ
48. ಈಶ್ವರ ಹತ್ತಿ
49. ಈಶ್ವರಪ್ಪ ಫರಹತಾಬಾದ
50. ಈಶ್ವರಪ್ಪ ಬಡಿಗೇರ
51. ಉದ್ಧರಣಿ ಚಿತ್ರಕಲೆ
52. ಉಮರ್ ಫಾರೂಕ್
53. ಉಸ್ತಾದ ಶೇಖ್ ಹನ್ನುಮಿಯಾ
54. ಏವೂರಿನ ಜಿನ ಮಂದಿರ
55. ಐತಿಹಾಸಿಕ ಸ್ಮಾರಕಗಳು
56. ಐತಿಹಾಸಿಕ ಸ್ಮಾರಕಗಳು (ಸೇಡಂ)
57. ಕಂಚುಗಾರ ಕಾಳಪ್ಪ
58. ಕಂಬಳಿಯ ಕೇಶ್ವಾರ
59. ಕಂಟೆಪ್ಪ ಮಾಸ್ತರ
60. ಕಟ್ಟಿಮನಿ ಜಿ.ಬಿ.
61. ಕಣಗಳು (ರಾಶಿ)
62. ಕನಕಗಿರಿ
63. ಕನಕೇಶ್
64. ಕಮ್ಮಾರ ಸಾಲೆ (ಕಂಬಾರ)
65. ಕಮ್ಮಾರರು

66. ಕಮತಾಣ
67. ಕಲಬುರಗಿ ವಿಭಾಗದಲ್ಲಿ ಸಂಗೀತ ವಿದ್ಯಾಲಯಗಳು
68. ಕಲಾ ಮಹಾವಿದ್ಯಾಲಯಗಳು (ಚಿತ್ರ)
69. ಕಲಾವತಿ ಎಚ್. ದೊರೆ
70. ಕಲ್ಮಾಲಿಯ ಶಂಕರಪ್ಪ ಮಾಸ್ತರರು
71. ಕಲ್ಮೇಶ ವಡ್ಡರ
72. ಕಲ್ಯಾಣ ಚಾಲುಕ್ಯರ ದೇವಾಲಯಗಳು
73. ಕಲ್ಯಾಣ ಚಾಲುಕ್ಯರ ಪ್ರಮುಖ ಸಾಂಸ್ಕೃತಿಕ ನೆಲೆ (ಏವೂರು)
74. ಕಲ್ಯಾಣ ಚಾಲುಕ್ಯರ ಶಿಲ್ಪ ಸ್ಮಾರಕಗಳು
75. ಕಲ್ಯಾಣ ಚಾಳುಕ್ಯರ ಕಲೆ
76. ಕಲ್ಯಾಣಿ ಭಜಂತ್ರಿ
77. ಕಲ್ಲಪ್ಪ ತಳವಾರ
78. ಕಲ್ಲಪ್ಪ ಬಗರಿಕಾರ
79. ಕಸೂತಿ ಚಿತ್ರಕಲಾ ವಿನ್ಯಾಸಗಳು
80. ಕಳಕೇಶ ಅರಕೇರಿ
81. ಕಾಡಿಗೆ
82. ಕಾಮಾಜಿ ಬಿ.ವ್ಹಿ.
83. ಕಾಶಿ ಎಂ. ಆಸ್ಪಳ್ಳಿ
84. ಕಾಶೀನಾಥ ಅಂಬಲಗೆ
85. ಕಾಶಿನಾಥ ಡಿ.
86. ಕಾಷ್ಠ ಕಲೆ
87. ಕಾಳಗಿ
88. ಕಾಳಪ್ಪ ನಾಗಲಿಂಗ ವಿಶ್ವಕರ್ಮ
89. ಕಾಳಪ್ಪ ಪತ್ತಾರ
90. ಕಿನ್ನಾಳ ಕಲೆ
91. ಕಿರುರೂಪ ಚಿತ್ರಗಳು
92. ಕಿಶೋರ ಹಿರೇಮಠ
93. ಕಿಳ್ಳೇಕ್ಯಾತರು
94. ಕೀರ್ತಿಕುಮಾರ ಬಡಶೇಷಿ
95. ಕುಪ್ಪುಸ
96. ಕುಮಾರ ಚಂದ್ರಶೇಖರ
97. ಕೂರಿಗೆ (ಕೃಷಿಕಲೆ)
98. ಕೇರಿ ಎನ್.ಡಿ.
99. ಕೇಶವರಾವ್ ವಾಘಮಾರೆ
100. ಕೇಶವರಾವ್ ಸೂರ್ಯವಂಶಿ
101. ಕೊಟ್ಟಿಗೆ
102. ಕೊಪ್ಪಳದ ಶಿರಹಟ್ಟಿ ವೆಂಕೋಬರಾಯ
103. ಕೋಟೆ ಕೊತ್ತಲುಗಳು (ಗುಲ್ಬರ್ಗಾ ಜಿಲ್ಲೆ)
104. ಕೋಲೆಬಸವನ ವೇಷಭೂಷಣಗಳು
105. ಕೌದಿ ಕಲೆ
106. ಖಂಡೇರಾವ ಜೆ.ಎಸ್.
107. ಖಾಜನಗೌಡರ ವಾಡೆ
108. ಗಂಗಣ್ಣಗೌಡ ಆಲ್ದಾಳ
109. ಗಂಗಾಧರ ಎಂ. ಸೋನಾರ
110. ಗಂವ್ಹಾರ
111. ಗಝುಲ್ ಗುಂಡಮ್ಮ
112. ಗಡಾದ ಎಸ್.ಎನ್.
113. ಗಡಿಕೇಶ್ವಾರ
114. ಗಬ್ಬೂರು
115. ಗರಡಿ ಮನೆ
116. ಗರುಡಾದ್ರಿ ಎರಡನೇ ಬಾನುಯ್ಯ
117. ಗರೂಡ ಸದಾಶಿವರಾವ್
118. ಗವಾನ್ ಮದರಸಾ
119. ಗವೀಶ ಹಿರೇಮಠ
120. ಗಾಜಿನ ಚಿತ್ರಕಲೆ
121. ಗಿರಿಜಾ ಧರ್ಮರಾಜ ಪೂಜಾರ್
122. ಗಿರಿಧರ ಕೆ.ಪಿ.
123. ಗೀತಾಂಜಲಿ ಬೀದಿಮನಿ
124. ಗುಂಡಭಟ್ ಜೋಶಿ
125. ಗುಂಬಜಗಳು
126. ಗುರುರಾಜ ಶೇಷಗಿರಿ ದಂಡಾಪೂರ
127. ಗುರುನಾಥ ಚವ್ಹಾಣ
128. ಗುರುನಾಥರಾವ್ ಎಸ್. ಅಲಗೂಡಕರ
129. ಗುರುಪಾದಸ್ವಾಮಿ ಎಂ. ಗವಾಯಿ
130. ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್ಸ್, ಕಲ್ಚರ್ ಆ್ಯಂಡ್ ಲಿಟರೇಚರ್

131. ಗುಲಬರ್ಗಾದ ಭಿತ್ತಿ ಚಿತ್ರಗಳು
132. ಗುಲ್ಬರ್ಗಾ ಕೋಟೆ ಮತ್ತು ತೋಪುಗಳು
133. ಗೃಹಾಲಂಕಾರಗಳು
134. ಗೊಂದಲಿಗರು
135. ಗೋವರ್ದನ್ ಕೆ.
136. ಗೌತಮ ಅಂದಾನಿ
137. ಗೌರಿಶಂಕರ ಬಿ.ಜಿ.
138. ಗ್ರಾಮದೇವತೆಗಳು (ಗುಲ್ಬರ್ಗಾ ಭಾಗ)
139. ಘಟ್ಟ ಕಲಾಗ್ರಾಮ
140. ಚಂದ್ರ ಪ್ರಕಾಶ ಕೊಡಂಗಲ್
141. ಚಂದ್ರಕಾಂತ ಕುಸನೂರು
142. ಚಂದ್ರಗುಪ್ತ ಚಾಂದಕವಠೆ
143. ಚಂದ್ರಶೇಖರ್ ಬ್ಯಾಕೋಡ್
144. ಚಂದ್ರಶೇಖರ ಜಿ. ಪಾಟೀಲ
145. ಚಂದ್ರಶೇಖರ ಹೊಸೂರಕರ್
146. ಚಂದ್ರಹಾಸ ಜಾಲಿಹಾಳ
147. ಚನ್ನಬಸಪ್ಪ ಬನ್ನಿಕೊಪ್ಪ
148. ಚನ್ನಬಸಪ್ಪಗೌಡ ಮಾಲಿಪಾಟೀಲ
149. ಚಾಂದ ಪಾಶಾ
150. ಚಾರಣಗಿರಿ
151. ಚಿಂಚನಸೂರು ದೇಗುಲ
152. ಚಿಂಚೋಳಿ ಪ್ರದೇಶದ ದೇವಾಲಯಗಳು
153. ಚಿಗುರು ಕಲಾ ಸಂಘಟನೆ
154. ಚಿತ್ರಕಲೆ ಮತ್ತು ಶಿಕ್ಷಣ
155. ಚಿತ್ರಗಾರ ಎಚ್.ಎಸ್.
156. ಚಿತ್ರಶೇಖರ ವಿ. ಮಾರ್ಪಳ್ಳಿ
157. ಚಿದಾನಂದ ಎಸ್. ಸುತಾರ
158. ಚೆನ್ನಕೇಶವ ಪುಣ್ಯಕ್ಷೇತ್ರ (ಮಣೂರ)
159. ಚಿನ್ನೂರಿನ ದೇವಾಲಯಗಳು
160. ಚೈತನ್ಯಮಯಿ ಆರ್ಟ್‌ಗ್ಯಾಲರಿ
161. ಛತ್ರಿ–ಚಾಮರ
162. ಛಾಯಾ ವೀರಭದ್ರಪ್ಪ ಭರತನೂರ
163. ಜಗದೀಶ ಎಂ. ಕಾಂಬಳೆ
164. ಜಗನ್ನಾಥ ಎನ್. ಚೆಂಗಟಾ
165. ಜಗನ್ನಾಥ ಬಿ. ಬೆಲ್ಲದ
166. ಜಗನ್ನಾಥ ವಾಡೆಯಲ್ಲಿನ ಭಿತ್ತಿ ಚಿತ್ರಗಳು
167. ಜನಪದ ಕಲಾವಿದರು (ಕೊಪ್ಪಳ ಜಿಲ್ಲೆ)
168. ಜನಪದ ಕಲಾವಿದರು (ಗುಲಬರ್ಗಾ ಜಿಲ್ಲೆ)
169. ಜನಪದ ಕಲಾವಿದರು (ಬೀದರ ಜಿಲ್ಲೆ)
170. ಜನಪದ ಕಲೆಗಳು (ರಾಯಚೂರು ಜಿಲ್ಲೆ)
171. ಜನಪದ ಕವಿ–ಕಲಾಕಾರರು (ರಾಯಚೂರ ಜಿಲ್ಲೆ)
172. ಜನಪದ ಚಿತ್ರಕಲೆ
173. ಜನಪದ ಚಿತ್ರಕಲೆ ವರ್ಗೀಕರಣ
174. ಜನಪದ ವಾಸ್ತು ಶಿಲ್ಪಗಳು
175. ಜನಪದ ಸಂಗೀತ
176. ಜನಪದ ಸಂಗೀತ ವಾದ್ಯಗಳು
177. ಜಯತೀರ್ಥ ಕುಲಕರ್ಣಿ
178. ಜಯರಾವ ಕುಲಕರ್ಣಿ ಸಗರ
179. ಜಾಯೆದ್ ಅನ್ಸಾರಿ
180. ಜಿನ ಮಂದಿರ (ಗೋಗಿ)
181. ಜಿನ್ನಪ್ಪನ ಬೆಟ್ಟ (ಯಾದಗಿರಿ)
182. ಜೀತೆಂದರ್ ಬಿ. ಕೊತಳೀಕರ್
183. ಜುಗಲ್‌ಬಂದಿ ಜೋಡಿ
184. ಜೂಲುಗಳು
185. ಜೈನ ಗುಹಾಶಿಲ್ಪಗಳು
186. ಜೈನ ಬಸದಿಯಲ್ಲಿನ ಭಿತ್ತಿ ಚಿತ್ರಗಳು (ಚಿತ್ತಾಪೂರ)
187. ಜೈನ ಸ್ಮಾರಕಗಳು (ಸೇಡಂ)
188. ಜೈನರ ಮನೆಗಳು
189. ಟೇಲರ್ ಮತ್ತು ಚಿತ್ರಕಲೆ
190. ಡೆಕ್ಕನ್ ಆರ್ಟ್ ಸಂಸ್ಥೆ
191. ಡೊಂಬರ ಕಲೆ
192. ತಳಕಲ್ಲಿನ ಖಾನಗೌಡ್ರು
193. ತಳವಾರ ಎಚ್.ಡಿ.
194. ತಾಲ ನಿನಾದ
195. ತಿಂಥಣಿ ಮೌನೇಶ
196. ತಿವಾರಿ ಆರ್ಟಗ್ಯಾಲರಿ
197. ತುಕರಾಮ ಭಕ್ತಂಪಳ್ಳಿ
198. ತುಕಾರಾಮ ಬಡಿಗೇರ

199. ತುಳಜಾಸಾ ಬಸುದೆ
200. ತೊಗಲು ಗೊಂಬೆಯಾಟ
201. ದಖ್ಖನಿ ಚಿತ್ರಗಳು
202. ದಯಾನಂದ ಹಿರೇಮಠ
203. ದಾದಾಪೀರ್ ಮಂಜರ್ಲಾ
204. ದಿ ಆರ್ಟ್ ಇಂಟಿಗ್ರೇಶನ್ ಸಂಸ್ಥೆ ಗುಲಬರ್ಗಾ
205. ದಿ ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟ/ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್
206. ದುಬಲಗುಂಡಿಯ ಕಲಾಸಂಗ್ರಹ
207. ದೃಶ್ಯಕಲಾ ಶಿಕ್ಷಣ (ಗುಲಬರ್ಗಾ ಜಿಲ್ಲೆ)
208. ದೃಶ್ಯಕಲಾ ಸಂಶೋಧನೆ
209. ದೃಶ್ಯಕಲಾ ಸಾಹಿತ್ಯ
210. ದೇಸಾಯಿ ಡಿ.ಎಸ್.
211. ದೇವದಾಸ ಚಿಮಕೋಡ
212. ದೇವರಾಜ ಹಲಿಗೇರಿ
213. ದೇವಿ ಶಿಲ್ಪಗಳು (ಬೀದರ ಜಿಲ್ಲೆ)
214. ದೇವೇಂದ್ರ ಟಿ.
215. ದೊಡ್ಡಾಟ
216. ಧನಂಜಯ ಶಿಲ್ಪಿ
217. ಧುತ್ತರಗಿ ಪಿ.ಬಿ.
218. ಧೋತ್ರೆ ಮತಿ
219. ನಂದೀಧ್ವಜ
220. ನಟರಾಜ ಎಂ. ಶಿಲ್ಪ
221. ನರಸಿಂಹ ಜೋಷಿ
222. ನರಸಿಂಹಲು ವಡವಟ್ಟಿ
223. ನರ್ಮದಾ ಚಿಂಚನಸೂರ
224. ನವಲಿ ಐ.ಎಸ್.
225. ನವಲಿಂಗ ಪಾಟೀಲ
226. ನಾಗಣ್ಣ ಬಡಿಗೇರ
227. ನಾಗಪ್ಪ ಶೇರಿಕಾರ
228. ನಾಗರತ್ನ ಎ. ಸಾಹು
229. ನಾಗರತ್ನಮ್ಮ
230. ನಾಗರಾಜ್ ಆರ್. ಕುಂಬಾರ
231. ನಾಗರಾಜ ಕುಲಕರ್ಣಿ
232. ನಾಗಾವಿಯ ಸ್ಮಾರಕಗಳು
233. ನಾಗುರೆ ಕೆ.ಎಸ್.
234. ನಾಗೇಶ ಕಾಟವಾ
235. ನಾಣ್ಯಗಳು
236. ನಾರಾಯಣ ಕುಂಬಾರ
237. ನಾರಾಯಣ ಜೋಶಿ
238. ನಾರಾಯಣ ಭೋಸಾವಳೆ
239. ನಾರಾಯಣಪುರ
240. ನಾರಾಯಣಪ್ಪ ಚಿತ್ರಗಾರ
241. ನಾರಾಯಣಪ್ಪ ಪತ್ತಾರ
242. ನಾರಾಯಣರಾವ್ ಕುಲಕರ್ಣಿ
243. ನಿಖಿಲ ಶರದ ಕೋಲ್ಹಾರಕರ್
244. ನಿಜಲಿಂಗಪ್ಪ ಬಿ. ಹಾಲವಿ
245. ನೀಲಮ್ಮ ಎಂ. ಬೆಳಮಗಿ
246. ನೀಲಾ ಎಸ್.ಎಮ್.
247. ನೂಪುರ ಭರತನಾಟ್ಯ ಅಕಾಡೆಮಿ
248. ನೂರುದ್ದೀನ್ ವಣಗೇರಿ
249. ನೇಕಾರರು
250. ಪಂ. ತಪಲೆ ಎಸ್.ಎ.
251. ಪಂ. ಕಿಶನರಾವ್ ಮಲ್ಲೆ
252. ಪಂ. ರಾಜು ಕುಲಕರ್ಣಿ
253. ಪಂಚಗಲ್ಲ ಬಸವರಾಜ
254. ಪಂಚಾಕ್ಷರ ಗವಾಯಿ
255. ಪಂಡಿತ್ ಎಸ್.ಎಂ.
256. ಪಂಡಿತ್ ಆರ್ಟ್‌ಗ್ಯಾಲರಿ
257. ಪಂಡಿತ ತಾರಾನಾಥ
258. ಪಂಡಿತ ವಿಠ್ಠಲಸಾ ಬದಿ
259. ಪಂಪನಗೌಡರು
260. ಪಂಪಯ್ಯ ಸ್ವಾಮಿ
261. ಪಕ್ಷಿ ಗೂಡುಗಳು
262. ಪರಶುರಾಮ ಪಿ.
263. ಪಲ್ಲಕ್ಕಿ–ಉತ್ಸವ
264. ಪವಿತ್ರ ಬಾವಿ

265. ಪಾಂಡುರಂಗರಾವ ಪತ್ಕಿ
266. ಪಾಟೀಲ ಎಸ್.ವಿ.
267. ಪಾಟೀಲ ಎಸ್.ಸಿ
268. ಪಾಟೀಲ ಬಿ.ಎನ್.
269. ಪಾಪುರಿ ರಾಜಾರಾವ
270. ಪುಂಡಲಿಕಪ್ಪ ಬಾರಕೇರ
271. ಪುಣ್ಯಕ್ಷೇತ್ರ ಮತ್ತು ಮಠಗಳು
272. ಪುಷ್ಕರಣಿ
273. ಪೂರ್ಣಿಮಾ ಪಾಟೀಲ
274. ಪ್ರೇಮಾ ಜೇವರಗಿ
275. ಪ್ರಕಾಶ ಗಡಕರ
276. ಪ್ರಕಾಶ ಬಡಿಗೇರ
277. ಪ್ರಭಾಕರ ಸಾತಖೇಡ
278. ಪ್ರಶಾಂತ ಫಿರಂಗಿ
279. ಪ್ರಾಗೈತಿಹಾಸಿಕ ಕಾಲದ ಚಿತ್ರಗಳು (ಕೊಪ್ಪಳ ಜಿಲ್ಲೆ)
280. ಪ್ರಾಚೀನ ಬಾವಿಗಳು (ಗುಲ್ಬರ್ಗ ಭಾಗ)
281. ಪ್ರಾಚ್ಯವಸ್ತು ಸಂಗ್ರಹಾಲಯ
282. ಪ್ರಾಚ್ಯವಸ್ತು ಸಂಗ್ರಹಾಲಯ (ಬಸವಕಲ್ಯಾಣ ತಾಲ್ಲೂಕು)
283. ಪ್ರಾಣೇಶ ಬಿ.
284. ಫಕೀರೇಶ ಕಣವಿ
285. ಫಿರೋಜಾಬಾದ್ ಕೋಟೆ
286. ಬಂಡೆಪ್ಪ ಗಣೇಶಪುರೆ
287. ಬಕ್ಕಪ್ಪ ಗೇನಳ್ಳಿ ಐನೂಲಿ
288. ಬಟ್ಟೆಯ ಮೇಲಿನ ಚಿತ್ರಕಲೆ
289. ಬಸಣ್ಣ ಕಂಚಗಾರ
290. ಬಸಪ್ಪ ಶಿರವಾಳಕರ
291. ಬಸವಂತ ರೂಂಪಳ್ಳಿ
292. ಬಸವಂತರಾವ ಕಡೂನ
293. ಬಸವಣ್ಣೆಪ್ಪ ಶಿವಪ್ಪ ರೇವೂರ
294. ಬಸವರಾಜ
295. ಬಸವರಾಜ ಉಪ್ಪಿನ
296. ಬಸವರಾಜ ಎಲ್. ಜಾನೆ
297. ಬಸವರಾಜ ಕಲೆಗಾರ
298. ಬಸವರಾಜ ಕಿಶೋರ ಕೋರಕಲ್
299. ಬಸವರಾಜ ಖಂಡೇರಾವ
300. ಬಸವರಾಜ ಸಬರದ
301. ಬಸವರಾಜ ಮೊರಬದ
302. ಬಸವರಾಜ ಗೊಂಧಳೆ
303. ಬದರಿನಾಥ ಮುಡಬಿ
304. ಬಹುರೂಪಿ ರಂಗಭೂಮಿ (ಹೈದ್ರಾಬಾದ ಕರ್ನಾಟಕ)
305. ಬಳಗಾನೂರ ಐತಿಹಾಸಿಕ ಸ್ಮಾರಕಗಳು
306. ಬಾಗಿಲು ಅಲಂಕಾರ
307. ಬಾಬುರಾವ್ ಎಚ್.
308. ಬಾಲಪ್ಪ ಭಜಂತ್ರಿ
309. ಬಾಲಚಂದ್ರರಾವ ಸೋನಾರ
310. ಬಾವಿಗಳು
311. ಬಿದ್ರಿ ಕಲೆಯ ಕುಶಲಕರ್ಮಿಗಳು
312. ಬೀದರ ಜಿಲ್ಲೆ
313. ಬೆತ್ತಲೆ ತೇರು
314. ಬೆಳಮಗಿ ಎಂ.ಎಚ್.
315. ಬೇಟೆ ಉಪಕರಣಗಳು
316. ಬೋಳಂದೊಡ್ಡಿ ಜೈನಸ್ಮಾರಕಗಳ ನೆಲೆ
317. ಭಂಕೂರು
318. ಭಾಗ್ಯವಂತಪ್ಪ ಪತ್ತಾರ
319. ಭೀಮಣ್ಣ ಮೋನಪ್ಪ ಕಂಬಾರ
320. ಭೀಮರಾವ್ ಕುಲಕರ್ಣಿ
321. ಭೀಮರಾವ ಕಾಳಪ್ಪ ಬಡಿಗೇರ
322. ಭೀಮಶ್ಯಾ ಶರಣಪ್ಪ ಭಕರೆ
323. ಭುರ್ಲಿ ರಾಘವೇಂದ್ರ
324. ಭೂತನಾಥ ದೇವಾಲಯ ಶಿಲ್ಪಗಳು
325. ಭೋಜರಾಜ ಎಲ್. ಬಡಿಗೇರ
326. ಭೋಪಲೆ ಎಂ.ಟಿ.
327. ಮಂಗಲಗಿ
328. ಮಂಗಳೂರು ವೀರಣ್ಣ
329. ಮಂಜುನಾಥ ಪಡಶೆಟ್ಟಿ
330. ಮಂತಟ್ಟಿ ಹೆಚ್.ವಿ.

331. ಮದಿನಿಕಾ ಶಿಲ್ಪಗಳು
332. ಮದ್ದರಕಿ
333. ಮದ್ದಿನ ಮನೆ
334. ಮಧುಸೂದನ ಮುತಾಲಿಕ್
335. ಮನೋಹರ ಎಂ.ಎಸ್.
336. ಮರಗಾಲ ಕುಣಿತ
337. ಮರಣ ಸ್ಮಾರಕಗಳು
338. ಮಲ್ಲಣ್ಣ ಮಡಿವಾಳ
339. ಮಲ್ಲಪ್ಪ ಗಂಗಪ್ಪ ಬಡಿಗೆ
340. ಮಲ್ಲಪ್ಪ ಮುರ್ಲಾಪುರ
341. ಮಲ್ಲಪ್ಪ ಸಿ. ಡೋಲೆ
342. ಮಲ್ಲಿಕಾರ್ಜುನ ಬಡಿಗೇರ
343. ಮಲ್ಲಿಕಾರ್ಜುನ ಸಿ. ಬಾಗೋಡಿ
344. ಮಲ್ಲಿಕಾರ್ಜುನ ಸಂಗಾವಿ
345. ಮಲ್ಲಿಕಾರ್ಜುನ ಶೆಟ್ಟಿ
346. ಮಲ್ಲಿಕಾರ್ಜುನ ವೀರಣ್ಣ ಕೋರಳ್ಳಿ
347. ಮಲ್ಲಿಕಾರ್ಜುನ ಶಿವರಾಯ ಪೋಲಿಸ್‌ಪಾಟೀಲ
348. ಮಲ್ಲಿನಾಥ ಕೋಲೋಳಗಿ
349. ಮಹಮೂದ್ ಮಿಯಾ
350. ಮಹಾಂತ ಸುತಾರ
351. ಮಹಾಂತಯ್ಯ ಸ್ವಾಮಿ
352. ಮಹಾಗಾಂವದ ಮಹಾಲಿಂಗಪ್ಪ
353. ಮಹಾದೇವ ಮಂದಿರ
354. ಮಹಾದೇವಪ್ಪ ಎಸ್. ಶಿಲ್ಪಿ
355. ಮಹಾಮುನಿ ದೇವದುರ್ಗ
356. ಮಹೇಶಕುಮಾರ
357. ಮಹೇಶಕುಮಾರ ಈ. ಬಡಿಗೇರ
358. ಮಹೇಶಕುಮಾರ ಮಾಡಗಿ
359. ಮಾಣಿಕ ನಗರದ ಸಂಗೀತಗಾರರು
360. ಮಾಣಿಕನಗರ ಸಂಸ್ಥಾನ
361. ಮಾಣಿಕರಾವ ರಾಯಚೂರಕರ್
362. ಮಾನಯ್ಯ ಬಡಿಗೇರ
363. ಮಾನಸಿಂಗ್ ಆರ್. ರಾಜಪೂತ
364. ಮಾರುತೇಶ ಮಾಂಡ್ರೆ
365. ಮಾಲಗತ್ತಿ
366. ಮಾಶಾಳಕರ್ ಎಸ್.ಎಚ್.
367. ಮಾಸ್ತಿಗಲ್ಲುಗಳು
368. ಮಿಣಜಗಿ ಎಂ.ಡಿ.
369. ಮುದ್ರಣಕಲೆ
370. ಮುರಳಿಧರ ಕೆ.
371. ಮುಸ್ಲೀಂ ವಾಸ್ತುಶಿಲ್ಪಗಳು
372. ಮೆಹೆಂದಿ ಕಲೆ
373. ಮೊಗಲಪ್ಪ ತೋಡಿ
374. ಮೊಹಮ್ಮದ್ ಅಯಾಜೊದ್ದೀನ್
375. ಮೋನಪ್ಪ ಗೋಲಪ್ಪ ಪೋದ್ದಾರ
376. ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ)
377. ಮೋರೆಪ್ಪ ಕರಿಗೇರ
378. ಮೋಹನ ಸೀತನೂರ
379. ಮೋಹನಚಂದ ಕಿರಣಗಿ
380. ಮೋಹನ್‌ರಾವ್ ಬಿ. ಪಾಂಚಾಳ
381. ಮೌನೇಶ ಪತ್ತಾರ
382. ಮೌನೇಶ್ವರರಾವ ಸೋನಾರ
383. ಯಮನಮ್ಮ
384. ಯಶವಂತ ಹಿಬಾರೆ
385. ಯೋಗೇಶ ಸಿ. ಮಠದ
386. ರಂಗ ಚಟುವಟಿಕೆಗಳು (ಕುಷ್ಟಗಿ ತಾಲ್ಲೂಕು)
387. ರಂಗ ಚಟುವಟಿಕೆಗಳು (ಕೊಪ್ಪಳ ಜಿಲ್ಲೆ)
388. ರಂಗಚಟುವಟಿಕೆಗಳು (ಗಂಗಾವತಿ ತಾಲ್ಲೂಕು)
389. ರಂಗಚಟುವಟಿಕೆಗಳು (ಯಲಬುಗಾ ತಾಲ್ಲೂಕು)
390. ರಂಗಭೂಮಿ ಪರಂಪರೆ (ಬೀದರ ಜಿಲ್ಲೆ)
391. ರಂಗಭೂಮಿ ಪರಂಪರೆ (ಹೈದ್ರಾಬಾದ ಕರ್ನಾಟಕ)
392. ರಂಗರಾವ್ ಬಡಶೇಶಿ
393. ರಥ ಶಿಲ್ಪಗಳು
394. ರಮಣೀಯ ಸ್ಥಳಗಳು (ಗಂಗಾವತಿ)
395. ರಮಾನಂದ ಹಿರೇಜೇವರ್ಗಿ
396. ರಮೇಶ ಜೋಶಿ
397. ರವಿ ನಾಯಕ
398. ರವೀಂದ್ರ ಕುಲಕರ್ಣಿ

399. ರಹಿಮಾನಮ್ಮ ಕುಕನೂರು
400. ರಹಿಮಾನವ್ವ ಕಲ್ಮನಿ
401. ರಾಘವೇಂದ್ರ ಅನಂತರಾವ ಕುಲಕರ್ಣಿ
402. ರಾಘವೇಂದ್ರ ಬಯ್ಯಾಪುರ
403. ರಾಘವೇಂದ್ರ ಬಡಶೇಶಿ
404. ರಾಜಕುಮಾರ ಎಸ್.ಕೆ.
405. ರಾಜಕುಮಾರ ಭಾರಸಿಂಗಿ
406. ರಾಜಕುಮಾರ ವಿಶ್ವಕರ್ಮ
407. ರಾಜಣ್ಣ ಜೇವರಗಿ
408. ರಾಜಮಹ್ಮದ್ ಕಸರಹಟ್ಟಿ
409. ರಾಜೀವ ತಾರಾನಾಥ
410. ರಾಜೇಂದ್ರ ತುಪ್ಪದ
411. ರಾಜೇಂದ್ರಸಿಂಗ ಪವಾರ
412. ರಾಜೇಶ ಡಿ. ದೇವಣಗಾಂವ
413. ರಾಮಗಿರಿ ಪೊಲೀಸ್ ಪಾಟೀಲ
414. ರಾಮಯ್ಯಸ್ವಾಮಿ ಐನೂಲಿ
415. ರಾಮರಘು ಗೋಗಿ
416. ರಾಮಲಿಂಗೇಶ್ವರ ದೇವಾಲಯ
417. ರಾಮಾಚಾರ ಜಾಲಿಹಾಳ್
418. ರಾಯಚೂರಿನ ಸ್ಮಾರಕಗಳು
419. ರಾಷ್ಟ್ರಕೂಟರ ಕಾಲದ ಪ್ರಾಚೀನ ಜಿನಾಲಯಗಳು
420. ರಾಷ್ಟ್ರಕೂಟರ ದೇವಾಲಯಗಳು ಮತ್ತು ಶಿಲ್ಪಗಳು
421. ರುಕ್ಮೊದ್ದೀನ್
422. ರುದ್ರಪ್ಪ ಎಸ್. ತಳವಾರ
423. ರುದ್ರಯ್ಯ ಗಣಾಚಾರಿ
424. ರುಮಾಲು (ಪಟಗಾ)
425. ರೆಹಮಾನ್ ಪಟೇಲ
426. ರೇಖಾ ಚಿತ್ರಕಲೆ
427. ರೇಣುಕಾ ಹಾಗರಗುಂಡಗಿ
428. ರೇವಣಪ್ಪ ಕುಂಕುಮಗಾರ
429. ರೇವಣಸಿದ್ದಪ್ಪ ವಿ. ಮೂಕರಂಬಿ
430. ರೇವಣಸಿದ್ಧಯ್ಯ ಹಿರೇಮಠ
431. ರೇವಣಸಿದ್ಧಯ್ಯಸ್ವಾಮಿ ಕಲ್ಲೂರ
432. ರೇವಣಸಿದ್ದಯ್ಯ ರುದ್ರಸ್ವಾಮಿಮಠ
433. ರೇವಯ್ಯ ಎಂ. ವಸ್ತ್ರದಮಠ
434. ಲಕ್ಷ್ಮಿಕಾಂತ ಎನ್. ಮನೋಕರ
435. ಲಕ್ಷ್ಮಿಕಾಂತ ಪಾಟೀಲ
436. ಲಕ್ಷ್ಮೀ ಕುಲಕರ್ಣಿ
437. ಲಕ್ಷ್ಮೀಶಂಕರ ಜೋಶಿ
438. ಲಲಿತ ಕಲೆಗಳು (ಕೊಪ್ಪಳ ಜಿಲ್ಲೆ)
439. ಲಿಂಗಪ್ಪ ಕೆ.
440. ಲಿಂಗರಾಜ ಪಲ್ಲೇದ
441. ಲೋಕಯ್ಯ ಕೆ.ಎಂ.
442. ಲೋಹಾರ ಎಂ.ಬಿ.
443. ವನದುರ್ಗದ ಕೋಟೆ
444. ವರ್ಣಸಿಂಧು ಕಲಾ ಕೇಂದ್ರ
445. ವಾಗಣಗೇರಾ ಕೋಟೆ
446. ವಾಜೀದ್ ಸಾಜೀದ್
447. ವಾಡೇವು
448. ವಾಸುದೇವ ಸೇಡಂ ಎಚ್.
449. ವಾಸ್ತು ಶಾಸ್ತ್ರ
450. ವಾಸ್ತು ಶಿಲ್ಪಕಲೆ (ಜೇವರ್ಗಿ ತಾಲ್ಲೂಕು)
451. ವಿಜಯ ಬಾಗೋಡಿ
452. ವಿಜಯ ಹಾಗರಗುಂಡಿಗಿ
453. ವಿಜಯಕುಮಾರ ಕೊಪ್ಪದ
454. ವಿಜಯಶೇಖರ
455. ವಿಠಲ್‌ರಾವ ಜಾನವಾಳೆ
456. ವಿಠ್ಠಲ ಪೂಜಾರ
457. ವಿನೋದ ರಘುವೀರ
458. ವಿರೂಪಾಕ್ಷ ಶಿವಲಿಂಗಯ್ಯ ಮಠಪತಿ
459. ವಿರೂಪಾಕ್ಷಯ್ಯ ವಂದಲಿ
460. ವಿರೇಂದ್ರ ಶಾಹ
461. ವಿಶ್ವಕರ್ಮ
462. ವಿಶ್ವೇಶ್ವರಿ ಎಸ್. ಘವಾರಿ
463. ವೀರಣ್ಣ ಫಕೀರಪ್ಪ ಉಪ್ಪಾರ
464. ವೀರಣ್ಣ ಬಿ. ಬಿರಾದಾರ
465. ವೀರನೂರು–ಬೇಲೂರು
466. ವೀರಭದ್ರಯ್ಯ ಕೆಂಭಾವಿಮಠ

467. ವೀರಭದ್ರಯ್ಯ ಹಿರೇಮಠ
468. ವೀರಯ್ಯ ಮಂಡಲಗಿರಿ
469. ವೀರಯ್ಯಸ್ವಾಮಿ
470. ವೀರಶೆಟ್ಟಿ ಕೋಡ್ಲಿ
471. ವೀರೇಶ ಪತ್ತಾರ
472. ವೀರೇಶ ಬುರಲಾ
473. ವುಡನ್ ಪ್ಯಾಲೇಸ್
474. ವೃತ್ತಿಕಲಾವಿದರ ವೇಷ ಭೂಷಣಗಳು
475. ವೆಂಕಟಲಕ್ಷ್ಮೀ ಜಿ.ವಿ.
476. ವೆಂಕಟೇಶ ಕಬಾಡಿ
477. ವೆಂಕಟೇಶಕುಮಾರ ಎಂ.
478. ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ
479. ವೇದಮೂರ್ತಿ ಗುರುಲಿಂಗಯ್ಯ
480. ವೇದಮೂರ್ತಿ ಮಲ್ಲಿಕಾರ್ಜುನಶಾಸ್ತ್ರೀ
481. ವೈಶಂಪಾಯನ ಪಿ.
482. ಶಂಕರಗೌಡ ಬೆಟ್ಟದೂರ
483. ಶಂಕರರಾವ್ ಆಳಂದಕರ್
484. ಶಂಕರಯ್ಯ ಘಂಟಿ
485. ಶಂಬುಲಿಂಗ ವಾಲ್ದೊಡ್ಡಿ
486. ಶರಣಕುಮಾರ
487. ಶರಣಪ್ಪ ದೇಸಾಯಿ
488. ಶರಣಪ್ಪಾ ಫತ್ತೇಪೂರೆ
489. ಶರಣಬಸವೇಶ್ವರ ಸಂಸ್ಥಾನದಲ್ಲಿರುವ ವರ್ಣ ಚಿತ್ರಗಳು
490. ಶರಣು ಜಾಲಹಳ್ಳಿ
491. ಶಶಿಧರ
492. ಶಾಂತಕುಮಾರ ಕೋಣಿ
493. ಶಾಂತಪ್ಪ ವೀರಭದ್ರಪ್ಪ ಉಡುಚಣ
494. ಶಾಂತಮ್ಮ ಡಿಗ್ಗಿ
495. ಶಾಂತಲಿಂಗ ದೇಸಾಯಿ ಹೂಗಾರ
496. ಶಾಂತಲಿಂಗಪ್ಪ ಪಾಟೀಲ
497. ಶಾಂತಾ ಕಮಲಾಪೂರಕರ
498. ಶಾಂತಾ ಭೀಮಸೇನರಾವ್
499. ಶಾಂತಾ ವಿಶ್ವನಾಥ ಕುಲಕರ್ಣಿ
500. ಶಾತವಾಹನರ ಕಲೆ
501. ಶಾಮರಾವ ಖಾನಾಪುರ
502. ಶಾಹೆದ್ ಪಾಶಾ
503. ಶಿರವಾಳ
504. ಶಿಲ್ಪಕಲಾ ವೈಭವ (ಚಂದನ ಕೆರೆ)
505. ಶಿವಣ್ಣ ಮಡಿವಾಳರ
506. ಶಿವಪ್ಪ ಬೆಳಗಲ್
507. ಶಿವಬಸಯ್ಯ ಹಿರೇಮಠ
508. ಶಿವರುದ್ರಪ್ಪ ನಿಟ್ಟಾಲಿ
509. ಶಿವರುದ್ರಪ್ಪ ಕಿನ್ನಾಳ
510. ಶಿವರುದ್ರಪ್ಪ ಗುರುಸಿದ್ದಪ್ಪ ಅಂವಟಿ
511. ಶಿವರುದ್ರಯ್ಯಾ ಸ್ವಾಮಿ
512. ಶಿವಲಿಂಗಯ್ಯ ರೇವಣಸಿದ್ಧಯ್ಯ ಸಾಲಿಮಠ
513. ಶಿವಶಂಕರ ಸುತಾರ
514. ಶಿವಶರಣಪ್ಪ ಕೋಬಾಳ್
515. ಶೀಗಿ ಚಿತ್ರಕಲೆ
516. ಶೇಷಪ್ಪ ಗಬ್ಬೂರ
517. ಶೋಭಾ ಭೀಮರಾವ ರಂಜೋಳಕರ್
518. ಶ್ರೀ ಗಾನಯೋಗಿ ಪಂಚಾಕ್ಷರಿ ಸಂಗೀತ ಕಲಾಸಂಘ
519. ಶ್ರೀಧರ ಹೆಗಡೆ
520. ಶ್ರೀಶೈಲ ಗುಡೇದ
521. ಶ್ರೀಶೈಲ ಗೂಳಿ
522. ಸಂಗಣ್ಣ ದೋರನಳ್ಳಿ
523. ಸಂಗಯ್ಯ ಎಸ್. ಹಳ್ಳದಮಠ
524. ಸಂಗೀತ ಕಲಾವಿದರು (ಬೀದರ ಜಿಲ್ಲೆ)
525. ಸಂಗೀತ ಕಲಾವಿದರು (ರಾಯಚೂರು ಜಿಲ್ಲೆ)
526. ಸಂಗೀತ ಪರಂಪರೆ (ಚಿಂಚೋಳಿ ತಾಲ್ಲೂಕು)
527. ಸಂಗೀತ ಪರಂಪರೆ (ಬೀದರ ಜಿಲ್ಲೆ)
528. ಸಂಜೀವ ಎಂ.
529. ಸಂತೋಷ ಆರ್. ರಾಠೋಡ್
530. ಸಂತೋಷ ವಿ. ಅಂದಾನಿ
531. ಸಂತೋಷಕುಮಾರ ಆರ್. ವನ್ನಿಕೇರಿ
532. ಸತೀಶಕುಮಾರ ಪಿ. ವಲ್ಲೇಪೂರೆ

533. ಸನ್ನತಿಯ ಬೌದ್ಧ ಶಿಲ್ಪಗಳು
534. ಸಪ್ತ ಮಾತೃಕೆಯರು
535. ಸಮುದಾಯ ಕಲಬುರ್ಗಿ
536. ಸರಸ್ವತಿ ಚಿಮ್ಮಲಗಿ
537. ಸರೋಜ ಅನಗರಕರ
538. ಸರೋಜಮ್ಮ ಧುತ್ತರಗಿ
539. ಸರೋದೆ ಕೆ.ಎಸ್.
540. ಸಾಹೇಬಗೌಡ
541. ಸಿದ್ದಣ್ಣ ಎಸ್. ಮರಗೋಳ
542. ಸಿದ್ದೇಶ ವಿರಕ್ತಮಠ
543. ಸಿದ್ಧರಾಮ ಜಂಬಲದಿನ್ನಿ
544. ಸಿದ್ಧರಾಮಯ್ಯ ಮಠಪತಿ
545. ಸಿದ್ಧಾರೂಢರ ಕಲಾಕೃತಿಗಳು
546. ಸಿದ್ಧಾರೂಢ ಮಲ್ಲಪ್ಪ ಗಡೇದ
547. ಸೀರೆಗಳು
548. ಸೀಮಾ ಅಜ್ಜನಗೌಡ ಪಾಟೀಲ
549. ಸುಜಾತಾ ಜಂಗಮಶೆಟ್ಟಿ
550. ಸುಡುಗಾಡು ಸಿದ್ದರು
551. ಸುನಂದಾ ಕಂದಗಲ್
552. ಸುನಂದಾ ಬಾಲಕೃಷ್ಣ ಸಾಲವಾಡಗಿ
553. ಸುಪ್ರಿಯಾ ವರ್ಮಾ
554. ಸುಬ್ರಾವ್ ಕುಲಕರ್ಣಿ
555. ಸುರಪುರ ಅರಸರ ನಾಣ್ಯಗಳು
556. ಸುರಪುರ ಚಿತ್ರಕಲೆ
557. ಸುರಪುರದ ಸ್ಮಾರಕಗಳು
558. ಸುರೇಶ ವೈದ್ಯ
559. ಸೇಡಮ್
560. ಸೋಮಣ್ಣ ಸಿದ್ಧಪ್ಪ
561. ಸೋಮನಾಥ ದೇಗುಲ
562. ಸೋಮನಾಥ ದೇವಾಲಯ
563. ಸ್ಮಾರಕ ಶಿಲ್ಪಗಳು (ಗುಲ್ಬರ್ಗ ಜಿಲ್ಲೆ)
564. ಸ್ಮಾರಕಗಳು (ಬಸವಕಲ್ಯಾಣ)
565. ಸ್ವಾಮಿ ಎಸ್.ಜಿ.
566. ಸ್ವಾಮಿರಾವ್ ಕುಲಕರ್ಣಿ
567. ಹಂಸಧ್ವನಿ ತಬಲಾ ಕಲಾನಿಕೇತನ
568. ಹಗರಟಗಿ
569. ಹಗೇವುಗಳು
570. ಹಡಪದ ಕೆ.ಎಸ್.
571. ಹಣಮಂತ ಫತ್ತೆಪುರ
572. ಹಣಮಂತರಾವ ಕುಲಕರ್ಣಿ
573. ಹಣಮಂತರೆಡ್ಡಿ ನಾಗರೆಡ್ಡಿಕರ್
574. ಹನುಮಂತಪ್ಪ ಅಂಡಗಿ
575. ಹನುಮಂತಪ್ಪ ದೇವರಮನಿ
576. ಹನುಮಂತರಾಯ ಕಾಕರಗಲ್
577. ಹನುಮಂತರಾವ ಕುಲಕರ್ಣಿ
578. ಹನುಮಂತರಾವ ಗೋನವಾರ
579. ಹನುಮಣ್ಣನಾಯಕ ದೊರೆ
580. ಹನುಮಾನ ಮಂದಿರದ ಭಿತ್ತಿ ಚಿತ್ರಗಳು (ರಾಯಚೂರು)
581. ಹಲಗೇರಿ ಭೀಮರಾವ
582. ಹಾಲಗೇರಿ ಸಿದ್ದಯ್ಯಸ್ವಾಮಿ
583. ಹಿರೇಬೆನಕಲ್ ಶಿಲಾಸ್ಮಾರಕಗಳು
584. ಹಿರೇಮಠ ಎಸ್.ಎಂ
585. ಹೀರಾಲಾಲ್ ಮಲ್ಖಾರಿ
586. ಹುಡಗಿ ಆರ್.ಕೆ.
587. ಹುಲಿಗೆಮ್ಮ
588. ಹೇಮಂತಕುಮಾರ ಕೋಲ್ಹಾಪುರ
589. ಹೊಡೆಗಳು

2. ಲೇಖಕರು/ಲೇಖನ ಸೂಚಿ

ಸಂಕ್ಷೇಪ ನಾಮ	ಲೇಖಕರು	ಲೇಖನಗಳು
ಆಯ್‌ಕೆ	**ಈಶ್ವರಯ್ಯ ಕೊಡಂಬಲ್** ಸರಕಾರಿ ಪ್ರಥಮ ದರ್ಜೆ ಕಾಲೇಜು, ಚಿಂಚೋಳಿ.	1. ರೇವಣಸಿದ್ಧಯ್ಯ ಹಿರೇಮಠ 2. ಮಹೇಶಕುಮಾರ ಈ. ಬಡಿಗೇರ 3. ವೇದಮೂರ್ತಿ ಮಲ್ಲಿಕಾರ್ಜುನಶಾಸ್ತ್ರೀ 4. ದಯಾನಂದ ಹಿರೇಮಠ 5. ತುಕಾರಾಮ ಭಕ್ತಂಪಳ್ಳಿ 6. ಚಂದ್ರಪ್ರಕಾಶ ಕೊಡಂಗಲ್ 7. ನವಲಿಂಗ ಪಾಟೀಲ 8. ಜಗನ್ನಾಥ ಎನ್. ಚೆಂಗಟಾ 9. ಅಣ್ಣಪ್ಪ ಮಾಸ್ತರ ಕಲಶೆಟ್ಟಿ 10. ರಾಮಯ್ಯಸ್ವಾಮಿ ಐನೊಲಿ 11. ಸಂಗೀತ ಪರಂಪರೆ (ಚಿಂಚೋಳಿ ತಾಲ್ಲೂಕು) 12. ಶ್ರೀ ಗಾನಯೋಗಿ ಪಂಚಾಕ್ಷರಿ ಸಂಗೀತ ಕಲಾಸಂಘ
ಆರ್‌ಎ	**ರವಿತೇಜ ಅಬ್ಬಿಗೇರಿ**	1. ರಹಿಮಾನವ್ವ ಕಲ್ಮನಿ
ಆರ್‌ಎಇ	**ರಾಜು ಅಡಕಳ್ಳಿ** ವರದಿಗಾರರು, ಪ್ರಜಾವಾಣಿ ಬೆಂಗಳೂರು.	1. ಸಮುದಾಯ ಕಲಬುರ್ಗಿ
ಆರ್‌ಎಂ	**ರೇಣುಕಾ ಮಾರ್ಕಂಡೆ** ಹಾಲಭಾವಿ ಕಲಾಮಹಾವಿದ್ಯಾಲಯ, ಧಾರವಾಡ.	1. ಸಪ್ತ ಮಾತೃಕೆಯರು 2. ವಾಸ್ತು ಶಾಸ್ತ್ರ
ಆರ್‌ಎಂಎಸ್	**ರು.ಮ. ಷಡಕ್ಷರಯ್ಯ (ಡಾ)** ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.	1. ಸ್ಮಾರಕ ಶಿಲ್ಪಗಳು (ಗುಲ್ಬರ್ಗ ಜಿಲ್ಲೆ) 2. ರಾಷ್ಟ್ರಕೂಟರ ದೇವಾಲಯಗಳು ಮತ್ತು ಶಿಲ್ಪಗಳು 3. ದೇವಿ ಶಿಲ್ಪಗಳು (ಬೀದರ ಜಿಲ್ಲೆ)
ಆರ್‌ಎಚ್‌ಕೆ	**ಆರ್.ಎಚ್. ಕುಲಕರ್ಣಿ (ಡಾ)** ಉಪನ್ಯಾಸಕರು, ಚಿತ್ರಕಲಾ ಪರಿಷತ್ತು, ಬೆಂಗಳೂರು.	1. ಸನ್ನತಿಯ ಬೌದ್ಧ ಶಿಲ್ಪಗಳು
ಆರ್‌ಎಪಿ	**ರಾಜಶ್ರೀ ಎ. ಪಾಟೀಲ** ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.	1. ಪಲ್ಲಕ್ಕಿ-ಉತ್ಸವ
ಆರ್‌ಎಲ್	**ರಾಮಲಿಂಗಾರೆಡ್ಡಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರಾಜಕುಮಾರ ಎಸ್.ಕೆ.
ಆರ್‌ಎಸ್	**ಆರ್. ಸುಮನ** ಸಂಶೋಧನ ವಿದ್ಯಾರ್ಥಿನಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಪ್ರಾಗೈತಿಹಾಸಿಕ ಕಾಲದ ಚಿತ್ರಗಳು (ಕೊಪ್ಪಳ ಜಿಲ್ಲೆ)

ಆರ್ಎಸ್	**ರಾಜೇಶ್ವರಿ ವಿ. ಶೀಲವಂತ** ಬಸವೇಶ್ವರ ನಗರ, ಬೀಳಗಿ ಬಾಗಲಕೋಟ ಜಿಲ್ಲೆ.	1. ಕಿಳ್ಳೇಕ್ಯಾತರು 2. ಕೋಲೆಬಸವನ ವೇಷಭೂಷಣಗಳು 3. ಕಮ್ಮಾರ ಸಾಲೆ (ಕಂಬಾರ) 4. ಕಾಡಿಗೆ 5. ಅಳತೆ ಮಾಪನಗಳು
ಆರ್ಎಸ್ಕೆ	**ರಶ್ಮಿ ಎಸ್. ಕೆ** ವರದಿಗಾರರು, ಪ್ರಜಾವಾಣಿ, ಗುಲಬರ್ಗಾ.	1. ಮೊಹಮ್ಮದ್ ಅಯಾಜೊದ್ದೀನ್
ಆರ್ಎಸ್ಎಸ್	**ರಾ.ಶಿ. ಸರ್ಜಾಪೂರು** ಲಿಂಗಸುಗೂರು.	1. ನಾಗೇಶ ಕಾಟವಾ
ಆರ್ಎಸ್ಜೆ	**ರಂಗನಾಥ ಎಸ್. ಜವಳಿ** ಮು: ಉಜ್ಜರಗಿ ತಾ. ಶಹಾಬಾದ. ಜಿ. ಗುಲಬರ್ಗಾ.	1. ವಿನೋದ ರಘುವೀರ 2. ತಿವಾರಿ ಆರ್ಟಗ್ಯಾಲರಿ
ಆರ್ಕೆ	**ಆರ್. ಕೇಶವಮೂರ್ತಿ** ಕನ್ನಡ ಪ್ರಭ ದಿನ ಪತ್ರಿಕೆ, ಬೆಂಗಳೂರು.	1. ಮಾನಯ್ಯ ಬಡಿಗೇರ
ಆರ್ಕೆವಿ	**ರಾಘವೇಂದ್ರ ಕಾಮನಟಗಿ** ಹುಣಸಗಿ, ತಾ. ಸುರಪುರ ಈ. ಗುಲಬರ್ಗಾ.	1. ಬಸಣ್ಣ ಕಂಚಗಾರ
ಆರ್ಕೆಕೆ	**ರಾಘವೇಂದ್ರ ಕುಲಕರ್ಣಿ** ಉಪನ್ಯಾಸಕರು, ನೂತನ ವಿದ್ಯಾಲಯ ಸ್ನಾತಕೋತ್ತರ ಸಂಗೀತ ವಿಭಾಗ, ಗುಲಬರ್ಗಾ	1. ರಾಘವೇಂದ್ರ ಬಡಶೇಶಿ 2. ರವೀಂದ್ರ ಕುಲಕರ್ಣಿ 3. ನಿಖಿಲ ಶರದ ಕೋಲ್ಹಾರಕರ್ 4. ಗುರುರಾಜ ಶೇಷಗಿರಿ ದಂಡಾಪೂರ 5. ಸುನಂದಾ ಬಾಲಕೃಷ್ಣ ಸಾಲವಾಡಗಿ 6. ಮಧುಸೂದನ ಮುತಾಲಿಕ್ 7. ಮೌನೇಶ್ವರರಾವ ಸೋನಾರ 8. ಪಂ. ಕಿಶನರಾವ್ ಮಲ್ಲೆ 9. ಜಯರಾವ ಕುಲಕರ್ಣಿ ಸಗರ 10. ರೇವಣಪ್ಪ ಕುಂಕುಮಗಾರ 11. ಪಂ. ರಾಜು ಕುಲಕರ್ಣಿ 12. ಬದರಿನಾಥ ಮುಡಬಿ
ಆರ್ಕೆಎಸ್	**ಆರ್.ಕೆ. ಸುಬೇದಾರ** ಹಿರೇಮನ್ನಾಪುರ ಕೊಪ್ಪಳ.	1. ಕಲ್ಲಪ್ಪ ತಳವಾರ 2. ಬಾಲಪ್ಪ ಭಜಂತ್ರಿ
ಆರ್ವಿಎಂ	**ರೇವಯ್ಯ ವಸ್ತ್ರದಮಠ** ತಬಲಾ ಕಲಾವಿದರು, ಎಸ್.ಬಿ. ಕಾಲೇಜ, ಗುಲಬರ್ಗಾ.	1. ಸೀಮಾ ಅಜ್ಜನಗೌಡ ಪಾಟೀಲ 2. ಮಲ್ಲಿಕಾರ್ಜುನ ಶಿವರಾಯ ಪೋಲಿಸ್ ಪಾಟೀಲ

ಆರ್‌ಪಿ	**ರೆಹಮಾನ ಪಟೇಲ್ (ಡಾ)** 7/888/ಬಿ ನಯಾಮೊಹಲ್ಲಾ, ಗುಲಬರ್ಗಾ.	1. ಗುಲಬರ್ಗಾ ಅಕಾಡೆಮಿ ಆಫ್ ಆರ್ಟ್, ಕಲ್ಚರ್ ಆ್ಯಂಡ್ ಲಿಟರೇಚರ್ 2. ಚಾಂದ ಪಾಶಾ 3. ಬಿದ್ರಿ ಕಲೆಯ ಕುಶಲಕರ್ಮಿಗಳು 4. ಇಸ್ಲಾಮಿಕ್ ಕಲೆ (ಗುಲಬರ್ಗಾ-ಬೀದರ)
ಆರ್‌ಪಿಕೆ	**ರೇಣುಕಾ ಪವಾರ ಕುಷ್ಟಗಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ನಾಗರತ್ನಮ್ಮ 2. ಕಲ್ಲಪ್ಪ ಬಗರಿಕಾರ 3. ಗುಳಜಾಸಾ ಬಸುದೆ
ಆರ್‌ಬಿಕೆ	**ರಾಮಲಿಂಗಪ್ಪ ಬಿ.ಕೆ.** C/o ಪ್ರಜಾವಾಣಿ ದಿನಪತ್ರಿಕೆ, ಗುಲಬರ್ಗಾ.	1. ಫಿರೋಜಾಬಾದ್ ಕೋಟೆ 2. ಶಿವಬಸಯ್ಯ ಹಿರೇಮಠ
ಆರ್‌ಬಿಜಿ	**ರಾಮಚಂದ್ರಗೌಡ ಬಿ. ಗೊಂಡಬಾಳ** ಶ್ರೀ ಬನಶಂಕರಿ ನಿಲಯ, ಕುಂಬಾರಗಲ್ಲಿ, ಬೆಟಗೇರಿ, ಕೊಪ್ಪಳ ತಾಲ್ಲೂಕು, ರಾಯಚೂರು.	1. ಇಟಗಿ ಮಹದೇವ ದೇವಾಲಯ
ಆರ್‌ಸಿಬಿ	**ರಮೇಶ ಸಿ. ಬನ್ನಿಕೊಪ್ಪ, ಹಲಗೇರಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಮಲ್ಲಪ್ಪ ಮುರ್ಲಾಪುರ
ಇಜೆಬಿ	**ಇಸ್ಮಾಯಿಲ್ ಜಬೀರ್ ಬಿ.**	1. ಮೋಹನ್‌ರಾವ್ ಬಿ. ಪಾಂಚಾಳ 2. ಉಮರ್ ಫಾರೂಕ್
ಎಂಆರ್	**ಮಲ್ಲಿಕಾರ್ಜುನ** ರಾಯಚೂರು.	1. ಬೋಳಂದೊಡ್ಡಿ ಜೈನ ಸ್ಮಾರಕಗಳ ನೆಲೆ
ಎಂಆರ್‌ಬಿ	**ಎಂ.ಆರ್. ಬಾಳಿಕಾಯಿ** ಚಿತ್ರಮನೆ ಮಹಾವೀರ ಸದನ, 3ನೇ ಕ್ರಾಸ್ ಸಾಧನಕೆರೆ, ಧಾರವಾಡ.	1. ಜೈನರ ಮನೆಗಳು
ಎಂಎಂಜೆ	**ಮಹೇಶಕುಮಾರ ಎಂ. ಜೋಶಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಕಾಷ್ಠಕಲೆ 2. ಭುರ್ಲಿ ರಾಘವೇಂದ್ರ
ಎಂಎಂಪಿ	**ಎಂ.ಎಂ. ಪಡಶೆಟ್ಟಿ (ಡಾ)** ನಿವೃತ್ತ ಪ್ರಾಧ್ಯಾಪಕರು, ವಾಟರ್ ಟ್ಯಾಂಕ್ ಹತ್ತಿರ, ವಿದ್ಯಾ ನಗರ, 3ನೇ ಕ್ರಾಸ್, ಸಿಂದಗಿ.	1. ಜನಪದ ಸಂಗೀತ ವಾದ್ಯಗಳು
ಎಂಎಂಬಿ	**ಮ.ಮಾ. ಬೋರಾಳಕರ** ಚಿಟಗುಪ್ಪಾ ತಾ. ಹುಮನಾಬಾದ, ಬೀದರ.	1. ವೀರೇಶ ಬುರಲಾ

ಎಂಎಚ್	**ಮಲ್ಲಿಕಾರ್ಜುನ ಹಳ್ಳೂರ** ಹುಣಸಗಿ ತಾ. ಶಹಪೂರ. ಜಿ. ಯಾದಗಿರ.	1. ಸಿದ್ದರಾಮ ಜಂಬಲದಿನ್ನಿ
ಎಂಎಚ್ಎನ್	**ಮರೆಪ್ಪ ಎಚ್. ನಂದಿಹಳ್ಳಿ** ಹಸನಾಪುರ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ವಾಗಣಗೇರಾ ಕೋಟೆ
ಎಂಎನ್	**ಮಿತಾನಾಯ್ಕ** ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಪಕ್ಷಿ ಗೂಡುಗಳು
ಎಂಎನ್‌ಬಿ	**ಮಂಜುನಾಥ ಎನ್ ಬಳ್ಳಾರಿ, ಕವಿತಾಳ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಮಹಾಂತಯ್ಯ ಸ್ವಾಮಿ
ಎಂಎನ್‌ಜಿ	**ಮಲ್ಲಿಕಾರ್ಜುನ ನಾರಾಯಣಪ್ಪ ಗಚ್ಚಿ** ಗೋಗಿ, ತಾ. ಶಹಪೂರ, ಜಿ. ಗುಲಬರ್ಗಾ.	1. ಪ್ರಶಾಂತ ಫಿರಂಗಿ 2. ವೀರೇಶ ಪತ್ತಾರ 3. ಅನಂತ ಚಿಂಚನಸೂರ 4. ರಾಮರಘು ಗೋಗಿ 5. ಅಕ್ಕಿ ದೇವೇಂದ್ರಪ್ಪ ನಾಭಿರಾಜ
ಎಂಎಸ್	**ಮನ್ಮಥಪ್ಪ ಸ್ವಾಮಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಆಗಯ್ಯ ಬಸವಯ್ಯ ಆಚಾರ್ಯ
ಎಂಎಸ್ಒ	**ಮಾರುತಿ ಸೋನಾರ್** ವರದಿಗಾರರು, ಸಂಯುಕ್ತ ಕರ್ನಾಟಕ, ಬೀದರ.	1. ನೂಪುರ ಭರತನಾಟ್ಯ ಅಕಾಡೆಮಿ 2. ಬಂಡೆಪ್ಪ ಗಣೇಶಪುರೆ 3. ಗವಾನ್ ಮದರಸಾ
ಎಂಎಸ್ಎಂ	**ಮಾಯಾದೇವಿ ಎಸ್. ಮಮ್ಮಾ** ಸಂಶೋಧನ ವಿದ್ಯಾರ್ಥಿನಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಸಿದ್ಧಾರೂಢರ ಕಲಾಕೃತಿಗಳು
ಎಂಎಸ್	**ಎಂ. ಸಂಜೀವ, ಕಲಬುರ್ಗಿ** # 3–439, ಕನ್ನಡ ಸಾಹಿತ್ಯ ಸಂಘದ ಹಿಂಭಾಗ, ಗಾಜಿಪುರ, ಗುಲಬರ್ಗಾ	1. ಲಕ್ಷ್ಮಿಕಾಂತ ಎನ್. ಮನೋಕರ 2. ಚಿತ್ರಶೇಖರ ವಿ. ಮಾರ್ಪಳ್ಳಿ 3. ಚಂದ್ರಶೇಖರ್ ಬ್ಯಾಕೋಡ್ 4. ಅರ್ಜುನಾಚಾರ್ಯ ತೆಂಗಳಿಕರ್ 5. ಗಂಗಾಧರ ಎಂ. ಸೋನಾರ 6. ಈರಣ್ಣ ಪಿ. ಕಂಬಾರ

ಎಂಎಸ್‌ಜಿ	**ಮಲ್ಲು ಎಸ್. ಗುಳಗಿ** ರಂಗಂಪೇಟ, ತಾ. ಸುರಪುರ ಜಿ. ಗುಲಬರ್ಗಾ.	1. ಶಿವಶಂಕರ ಸುತಾರ
ಎಂಕೆ	**ಮಹಾದೇವ ಕವಿಶೆಟ್ಟಿ** ಕಲಾವಿದರು, ರಬಕವಿ, ಬೀಳಗಿ. ಬಾಗಲಕೋಟ.	1. ಭೀಮರಾವ ಕಾಳಪ್ಪ ಬಡಿಗೇರ 2. ಅಪ್ಪಾರಾವ ಶಿವಶಂಕರ ಪಾಟೀಲ 3. ಚಿತ್ರಗಾರ ಎಚ್.ಎನ್. 4. ಬಸವರಾಜ ಉಪ್ಪಿನ
ಎಂಕೆಎ	**ಎಂ. ಖಾಸಿಂ ಅಲಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರಾಮಲಿಂಗೇಶ್ವರ ದೇವಾಲಯ
ಎಂಜಿಲು	**ಮುಡಬಿ ಗುಂಡೇರಾವ** ಸಾಹಿತಿಗಳು, ವಿದ್ಯಾನಗರ, ಸೇಡಂ.	1. ಐತಿಹಾಸಿಕ ಸ್ಮಾರಕಗಳು (ಸೇಡಂ)
ಎಂಜಿಎಸ್	**ಎಂ.ಜಿ. ಶ್ರೀನಿವಾಸ** ಪ್ರಜಾವಾಣಿ ದಿನಪತ್ರಿಕೆ, ಗುಲಬರ್ಗಾ.	1. ನಾರಾಯಣಪ್ಪ ಪತ್ತಾರ
ಎಂಜಿಪಿ	**ಮಲ್ಲಯ್ಯ ಜಿ. ಪೋಲಂಪಲ್ಲಿ**	1. ಮಲ್ಲಿಕಾರ್ಜುನ ಬಡಿಗೇರ
ಎಂಪಿಎಸ್	**ಎಂ. ಪ್ರಸನ್ನ ಶಾಹಾಬಾದ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರಾಮಾಚಾರ ಜಾಲಿಹಾಳ್
ಎಂಪಿಸಿ	**ಮಲ್ಲಿಕಾರ್ಜುನ ಪಾಲಾಮಾರ್** ಚಿಂಚೋಳಿ ಜಿ. ಗುಲಬರ್ಗಾ.	1. ನಾರಾಯಣ ಭೋಸಾವಳೆ
ಎಂಬಿ	**ಮಹೇಶಕುಮಾರ ಬಡಿಗೇರ** ಸಂಗೀತ ಶಿಕ್ಷಕರು, ನೂತನ ವಿದ್ಯಾಲಯ, ಗುಲಬರ್ಗಾ.	1. ಗುಂಡಭಟ್ ಜೋಶಿ 2. ಹಡಪದ ಕೆ.ಎಸ್. 3. ಸರೋಜ ಅನಗರಕರ 4. ಅಬ್ದುಲ್ ಖಾಜಿ 5. ಫಕೀರೇಶ ಕಣವಿ 6. ಪಾಂಡುರಂಗರಾವ ಪತ್ಕಿ 7. ಉಸ್ತಾದ ಶೇಖ್ ಹನ್ನು ಮಿಯಾ 8. ಹಾಲಗೇರಿ ಸಿದ್ದಯ್ಯಸ್ವಾಮಿ 9. ಪಂಡಿತ ವಿಠ್ಠಲಸಾ ಬದಿ
ಎಂಬಿಎಚ್	**ಮೃತ್ಯುಂಜಯ ಹೊರಕೇರಿ (ಡಾ)** ಸ್ನಾತಕೋತ್ತರ ಕೇಂದ್ರ, ರಾಯಚೂರು.	1. ಬಟ್ಟೆಯ ಮೇಲಿನ ಚಿತ್ರಕಲೆ 2. ರುಮಾಲು (ಪಟಗಾ) 3. ಕುಪ್ಪಸ 4. ವೃತ್ತಿಕಲಾವಿದರ ವೇಷ ಭೂಷಣಗಳು 5. ಮಾರುತೇಶ ಮಾಂಡ್ರೆ

ಎಂಬಿಎಸ್	**ಮೌನೇಶ್ವರ ಬಿ. ಸೋನಾರ** ಪ್ರಾಂಶುಪಾಲರು, ಜಿ.ಬಿ. ಸಂಗೀತ ಶಾಲೆ ಶಹಾಬಾದ, ಗುಲಬರ್ಗಾ.	1. ಪಂ. ತಪಲೆ ಎಸ್.ಎ.
ಎಂಬಿಪಿ	**ಮೋಹನ ಬಿ. ಪಂಚಾಳ (ಡಾ)** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ವಿಜಯ ಬಾಗೋಡಿ 2. ಶೀಗಿ ಚಿತ್ರಕಲೆ
ಎಂಬಿಪಿಎ	**ಎಂ.ಬಿ. ಪಾಟೀಲ** ದೂರದರ್ಶನ ಕೇಂದ್ರ, ಗುಲಬರ್ಗಾ.	1. ಆಕಾಶವಾಣಿ–ದೂರದರ್ಶನ
ಎಂಬಿಸಿ	**ಮಂಜುಳಾ ಬಿ. ಚಿಂಚೋಳಿ (ಡಾ)** ಇತಿಹಾಸ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಮಾಸ್ತಿಗಲ್ಲುಗಳು
ಎಂಸಿಬಿ	**ಮಲ್ಲಿಕಾರ್ಜುನ ಸಿ. ಬಾಗೋಡಿ (ಡಾ)** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಮುದ್ರಣಕಲೆ 2. ಟೇಲರ್ ಮತ್ತು ಚಿತ್ರಕಲೆ 3. ಲೋಹಾರ ಎಂ.ಬಿ. 4. ಹನುಮಾನ ಮಂದಿರದ ಭಿತ್ತಿ ಚಿತ್ರಗಳು (ರಾಯಚೂರು) 5. ಜಗನ್ನಾಥ ವಾಡೆಯಲ್ಲಿನ ಭಿತ್ತಿ ಚಿತ್ರಗಳು 6. ಮಾಣಿಕನಗರ ಸಂಸ್ಥಾನ 7. ದುಬಲಗುಂಡಿಯ ಕಲಾಸಂಗ್ರಹ 8. ಜೈನ ಬಸದಿಯಲ್ಲಿನ ಭಿತ್ತಿ ಚಿತ್ರಗಳು (ಚಿತ್ತಾಪೂರ) 9. ಗರುಡಾದ್ರಿ ಎರಡನೇ ಬಾನಯ್ಯ 10. ವಿಜಯ ಹಾಗರಗುಂಡಿಗಿ 11. ಸುರಪುರ ಚಿತ್ರಕಲೆ 12. ಗಾಜಿನ ಚಿತ್ರಕಲೆ 13. ಖಂಡೇರಾವ ಜೆ.ಎಸ್.
ಎಎಂ	**ಅಂಬಾರಾಯ ಮಹಾಗಾಂವಕರ್** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರಾಜೇಶ ಡಿ. ದೇವಣಗಾಂವ 2. ಈಶ್ವರಪ್ಪ ಫರಹತಾಬಾದ
ಎಎಂಕೆ	**ಅಂಬಾರಾಯ ಎಂ. ಕೋಣೆ,** ಅರ್ಜುಣಗಿ ತಾ. ಜೇವರ್ಗಿ ಜಿ. ಗುಲಬರ್ಗಾ.	1. ಮಲ್ಲಿಕಾರ್ಜುನ ಸಂಗಾವಿ 2. ಶಿವರುದ್ರಯ್ಯಾ ಸ್ವಾಮಿ 3. ಮಹಾಗಾಂವದ ಮಹಾಲಿಂಗಪ್ಪ
ಎಎಂಜಿ	**ಅಬ್ದುಲ್ ವಹಾಬ, ಮುಲ್ಲಾ ಗಂಗಾವತಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಕನಕಗಿರಿ
ಎಎನ್	**ಅಮರೇಶ ನುಗಡೋಣಿ** ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಗಝಲ್ ಗುಂಡಮ್ಮ

ಎಎನ್‌ಎಚ್	**ಅಪ್ಪಣ್ಣ ಎನ್. ಹಂಜಿ (ಡಾ)** ಇತಿಹಾಸ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗದಗ.	1. ಕಮತಾಣ
ಎಎಲ್‌ಎನ್	**ಅ.ಲ. ನರಸಿಂಹನ್** ಅನ್ವೇಷಕರು, ಕರ್ನಾಟಕ ಗ್ಯಾಸೆಟಿಯ್ ಕಾವೇರಿ ಭವನ, ಬೆಂಗಳೂರು.	1. ಆನೆಗೊಂದಿ 2. ದಖ್ಖನಿ ಚಿತ್ರಗಳು 3. ಖಾಜನಗೌಡರ ವಾಡೆ
ಎಎಸ್‌ಎಸ್	**ಅಶೋಕ ಎಸ್. ಸಾಲಿ** ರಸಾಯನಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಕಲ್ಯಾಣ ಚಾಲುಕ್ಯರ ದೇವಾಲಯಗಳು
ಎಎಸ್‌ಎಸ್	**ಅಶೋಕ ಎಸ್. ಶಟಕಾರ** ಉಪನ್ಯಾಸಕರು, ದ. ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯ ಗುಲಬರ್ಗಾ.	1. ಕೇರಿ ಎನ್.ಡಿ. 2. ನೀಲಮ್ಮ ಎಂ. ಬೆಳಮಗಿ 3. ಪಾಟೀಲ ಬಿ.ಎನ್. 4. ಬೆಳಮಗಿ ಎಂ.ಎಚ್. 5. ಕಾಮಾಜಿ ಬಿ.ವ್ಹಿ. 6. ದಿ ಆರ್ಟ್ ಇಂಟಿಗ್ರೇಶನ್ ಸಂಸ್ಥೆ ಗುಲಬರ್ಗಾ 7. ಹುಡಗಿ ಆರ್.ಕೆ. 8. ಸಂಗಯ್ಯ ಎಸ್. ಹಳ್ಳದಮಠ 9. ಶ್ರೀಶೈಲ ಗೂಳಿ 10. ದೇಸಾಯಿ ಡಿ.ಎಸ್. 11. ಚಿದಾನಂದ ಎಸ್. ಸುತಾರ
ಎಕೆ	**ಅಂಬಿಕಾ ಕಮ್ಮಕನೂರ** # 10–992/1ಎ ಚೌಡೇಶ್ವರ ಕಾಲೋನಿ ಲಾಲಗೇರಿ, ಬ್ರಹ್ಮಪುರ, ಗುಲಬರ್ಗಾ.	1. ಗಿರಿಜಾ ಧರ್ಮರಾಜ ಪೂಜಾರ್
ಎಕೆಎನ್	**ಆನಂದ ಕೆ. ನಾಯಕ** ಶಹಾಪೂರ. ಜಿ. ಗುಲಬರ್ಗಾ.	1. ಗಂಗಣ್ಣಗೌಡ ಅಲ್ದಾಳ
ಎಚ್‌ಎಸಿ	**ಹನುಮಂತಪ್ಪ ಅಂಡಿಗಿ** ಚಿಲವಾಡಗಿ ಕೊಪ್ಪಳ ಜಿಲ್ಲೆ.	1. ಚನ್ನಬಸಪ್ಪ ಬನ್ನಿಕೊಪ್ಪ 2. ಮುರಳಿಧರ ಕೆ.
ಎಚ್‌ಎಸ್‌ಜಿ	**ಎಚ್.ಎಸ್. ಗೋಪಾಲರಾವ್ (ಡಾ)** 144 'ಸ್ವಸ್ತಿಶ್ರೀಸ್ಕಂದ' ಐ.ವೈಡಿ. ರಸ್ತೆ, ಅರಸಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು.	1. ಕಲ್ಯಾಣ ಚಾಲುಕ್ಯರ ಪ್ರಮುಖ ಸಾಂಸ್ಕೃತಿಕ ನೆಲೆ (ಐವೂರು)
ಎಚ್‌ಎಸ್‌ಪಿ	**ಎಚ್.ಎಸ್. ಪಾಟೀಲ** ನಿವೃತ್ತ ಶಿಕ್ಷಕರು, ಕೀರ್ತಿಕಾಲೋನಿ, ಭಾಗ್ಯನಗರ, ಕೊಪ್ಪಳ.	1. ರಂಗ ಚಟುವಟಿಕೆಗಳು (ಕೊಪ್ಪಳ ಜಿಲ್ಲೆ) 2. ರಂಗ ಚಟುವಟಿಕೆಗಳು (ಕುಷ್ಟಗಿ ತಾಲ್ಲೂಕು) 3. ರಂಗ ಚಟುವಟಿಕೆಗಳು (ಯಲಬುರ್ಗಾ ತಾಲ್ಲೂಕು) 4. ರಂಗ ಚಟುವಟಿಕೆಗಳು (ಗಂಗಾವತಿ ತಾಲ್ಲೂಕು) 5. ಲಲಿತ ಕಲೆಗಳು (ಕೊಪ್ಪಳ ಜಿಲ್ಲೆ) 6. ಶಿವರುದ್ರಪ್ಪ ನಿಟ್ಟಾಲಿ

ಎಚ್‌ಕೆ	**ಹೇಮಂತ ಕುಮಾರ ಕೋಲ್ಹಾಪೂರ** ನೂತನ ಮಹಾವಿದ್ಯಾಲಯ, ಗುಲಬರ್ಗಾ.	1. ಸ್ವಾಮಿರಾವ್ ಕುಲಕರ್ಣಿ
ಎಚ್‌ಪಿಎನ್	**ಹಂಪ ನಾಗರಾಜಯ್ಯ (ಡಾ)** 'ಸ್ವನಿಮಾ', 1079, 5ನೇ ಬ್ಲಾಕ್, 18ನೇ 'ಎ' ಮೈನ್, 66ನೇ ಕ್ರಾಸ್, ರಾಜಾಜಿನಗರ, ಬೆಂಗಳೂರು.	1. ರಾಷ್ಟ್ರಕೂಟರ ಕಾಲದ ಪ್ರಾಚೀನ ಜಿನಾಲಯಗಳು
ಎಚ್‌ಬಿಜಿ	**ಹನಮಂತಿ ಬಿ. ಗುತ್ತೇದಾರ** ಶಹಾಪುರ. ಜಿ. ಗುಲಬರ್ಗಾ.	1. ಶಿರವಾಳ
ಎಚ್‌ವಿ	**ಹನುಮಂತ ವಾಲ್ಮೀಕಿ** ಕೊಪ್ಪಳ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಶಾಂತಲಿಂಗಪ್ಪ ಪಾಟೀಲ
ಎಚ್‌ವಿಎಂ	**ಹಣಮಂತ ವಿ. ಮಂತಟ್ಟಿ, ಕಲಬುರ್ಗಿ.** ಉಪನ್ಯಾಸಕರು, ಎಂ.ಎಂ.ಕೆ. ಕಾಲೇಜ, ಗುಲಬರ್ಗಾ.	1. ಲೋಕಯ್ಯ ಕೆ.ಎಂ. 2. ಕಿಶೋರ ಹಿರೇಮಠ 3. ಆರತಿ ಕುಲಕರ್ಣಿ 4. ಅನಿರುದ್ಧ ಕೆ. ಜೋಶಿ 5. ಕಾಶಿನಾಥ ಡಿ. 6. ರಾಮಗಿರಿ ಪೊಲೀಸ್ ಪಾಟೀಲ 7. ಸತೀಶಕುಮಾರ ಪಿ. ವಲ್ಲೇಪೂರೆ
ಎಜೆಕೆ	**ಅರುಣ್ ಜೋಳದ ಕೂಡ್ಲಿಗಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರವಿ ನಾಯಕ 2. ಗೀತಾಂಜಲಿ ಬೀದಿಮನಿ
ಎಟಿಎ	**ಅಶೋಕ ಟಿ. ಅಕ್ಕಿ** ವಿಜಯ ಮಹಾವಿದ್ಯಾಲಯ, ಗದಗ.	1. ಕಲಾ ಮಹಾವಿದ್ಯಾಲಯಗಳು 2. ಸೋಮಣ್ಣ ಸಿದ್ದಪ್ಪ 3. ಮಲ್ಲಿಕಾರ್ಜುನ ಶೆಟ್ಟಿ
ಎನ್‌ಎಂಜೆ	**ನಾರಾಯಣ ಎಂ. ಜೋಶಿ ಕಲಬುರ್ಗಿ.** # 2–826, ಎಮ್.ಆರ್.ಎಮ್.ಸಿ. ಕಾಲೇಜ್ ಎದರುಗಡೆ, ಸೇಡಮ್ ರೋಡ್, ಗುಲಬರ್ಗಾ	1. ಅಮೃತ ಎಂ. ಸಾಹು 2. ಚನ್ನಬಸಪ್ಪಗೌಡ ಮಾಲಿಪಾಟೀಲ 3. ರಮೇಶ ಜೋಶಿ 4. ಬಸಪ್ಪ ಶಿರವಾಳಕರ 5. ಬಸವರಾಜ ಖಂಡೇರಾವ 6. ಮಹೇಶಕುಮಾರ 7. ಮಿಣಜಗಿ ಎಂ.ಡಿ. 8. ನಾಗರಾಜ ಕುಲಕರ್ಣಿ 9. ವಿಜಯಕುಮಾರ ಕೊಪ್ಪದ 10. ಕಾಶಿ ಎಂ. ಆಸ್ಪಳ್ಳಿ 11. ಶ್ರೀಶೈಲ ಗುಡೇದ 12. ಸಂಜೀವ ಎಂ. 13. ಗುರುನಾಥ ಚವ್ಹಾಣ

ಎನ್‌ಎಚ್	**ನಾಯಕರ ಹುಲುಗಪ್ಪ (ಡಾ)** ಕುರುಬರ ಣಿ, ಶ್ರೀ ಮಹರ್ಷಿನಿಲಯ 15ನೇ ವಾರ್ಡ್, ಕಮಲಾಪುರ, ಹೊಸಪೇಟ, ಬಳ್ಳಾರಿ ಜಿಲ್ಲೆ.	1. ಕಮ್ಮಾರರು 2. ಡೊಂಬರ ಕಲೆ 3. ಮರಗಾಲ ಕುಣಿತ 4. ಬೇಟೆ ಉಪಕರಣಗಳು
ಎನ್‌ಎಚ್‌ಡಿ	**ಎನ್.ಎಚ್. ದೇಸಾಯಿ** ಹರಪನಹಳ್ಳಿ ಬಳ್ಳಾರಿ ಜಿಲ್ಲೆ.	1. ಚೆನ್ನೂರಿನ ದೇವಾಲಯಗಳು
ಎನ್‌ಎಸ್‌ಎ	**ನಾಗಯ್ಯ ಸ್ವಾಮಿ ಅಲ್ಲೂರ** ಚಿತ್ತಾಪೂರ. ಜಿ. ಗುಲಬರ್ಗಾ.	1. ನಾಗಾವಿಯ ಸ್ಮಾರಕಗಳು
ಎನ್‌ಕೆ	**ನಾರಾಯಣರಾವ ಕುಲಕರ್ಣಿ** C/o ಪ್ರಜಾವಾಣಿ ದಿನಪತ್ರಿಕೆ, ಗುಲಬರ್ಗಾ.	1. ಶಿವಪ್ಪ ಬೆಳಗಲ್
ಎಬಿ	**ಅಮರಾನಂದ ಬೆಟ್ಟದೂರು**	1. ಕಲ್ಮಾಲಿಯ ಶಂಕರಪ್ಪ ಮಾಸ್ತರರು
ಎಲ್‌ಆರ್‌ಆರ್	**ಲಕ್ಷ್ಮಣಸಿಂಗ್ ಆರ್. ರಾಥೋಡ್** ಅಧ್ಯಾಪಕರು, ಜಯಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಸಯ್ಯಾಜಿ ರಸ್ತೆ, ಮೈಸೂರು.	1. ಮದಿನಿಕಾ ಶಿಲ್ಪಗಳು
ಎಲ್‌ಎಸ್	**ಎಲ್. ಶಿವಲಿಂಗಪ್ಪ** ನಂ.9, ಕಲಾಮನೆ, 12ನೇ ಕ್ರಾಸ್ ರಾಮಾನುಜ ರಸ್ತೆ, ಮೈಸೂರು–04	1. ಗರಡಿ ಮನೆ 2. ಗೃಹಾಲಂಕಾರಗಳು 3. ಆಯುಧಗಳು 4. ಛತ್ರಿ–ಚಾಮರ 5. ನಂದೀಧ್ವಜ
ಎಲ್‌ಜಿ	**ಲಿಂಗಪ್ಪ ಗಗ್ರಿ** ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.	1. ಆಭರಣಗಳು
ಎಲ್‌ಜಿಎ	**ಎಲ್. ಗೋವಿಂದರಾಜ ಆಲ್ದಾಳ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಮೋರೆಪ್ಪ ಕರಿಗೇರ
ಎಲ್‌ಡಿ	**ಲಲಿತಾ ದೇಮಶೆಟ್ಟಿ** ಗವಿಸಿದ್ಧೇಶ್ವರ ಕಾಲೇಜ, ಕೊಪ್ಪಳ.	1. ಹಲಗೇರಿ ಭೀಮರಾವ
ಎಲ್‌ಎಸ್‌ಜೆ	**ಲಕ್ಷ್ಮೀ ಶಂಕರ ಜೋಶಿ** ಸಹ ಪ್ರಾಧ್ಯಾಪಕಿ, ಎನ್.ವಿ ಡಿಗ್ರಿ ಕಾಲೇಜ, ಗುಲಬರ್ಗಾ.	1. ಜುಗಲ್‌ಬಂದಿ ಜೋಡಿ
ಎವೈ	**ಅಮರೇಶ ಯತಗಲ್, ಅಧ್ಯಾಪಕರು** ಸರಕಾರಿ ವಸತಿಗೃಹ 11 ಎನ್.ಜಿ.ಓ. ಕಾಲೋನಿ, ಐಬಿ ಹಿಂದುಗಡೆ, ಲಿಂಗಸುಗೂರು ಜಿ. ರಾಯಚೂರು.	1. ಸುರಪುರ ಅರಸರ ನಾಣ್ಯಗಳು

ಎಸ್‌ಆಯ್	**ಶಿವಣ್ಣ ಇಜೇರಿ** ಶಹಾಪುರ ಜಿ. ಗುಲಬರ್ಗಾ.	1. ಮಲ್ಲಣ್ಣ ಮಡಿವಾಳ 2. ಮಂಜುನಾಥ ಪಡಶೆಟ್ಟಿ 3. ಅಲ್ಲಾಳ ಎಲ್.ಬಿ.ಕೆ. 4. ತಿಂಥಣಿ ಮೌನೇಶ
ಎಸ್‌ಪಿ	**ಸಿದ್ದನಗೌಡ ಪಾಟೀಲ** C/o ಪ್ರಜಾವಾಣಿ ದಿನಪತ್ರಿಕೆ, ಗುಲಬರ್ಗಾ.	1. ರೆಹಮಾನ್ ಪಟೇಲ್
ಎಸ್‌ಎಪಿ	**ಸೀಮಾ ಪಾಟೀಲ (ಡಾ)** ಉಪನ್ಯಾಸಕರು ಗೋದೂತಾಯಿ ಪದವಿ ಮಹಿಳಾ ಮಹಾವಿದ್ಯಾಲಯ, ಗುಲಬರ್ಗಾ.	1. ಛಾಯಾ ವೀರಭದ್ರಪ್ಪ ಭರತನೂರ
ಎಸ್‌ಎಟಿ	**ಪಂಡಿತ ಎಸ್.ಎ. ತಪಲೆ** ಸಂಗೀತ ಶಾಸ್ತ್ರಜ್ಞರು, ಗುಲಬರ್ಗಾ.	1. ಬಾಲಚಂದ್ರರಾವ ಸೋನಾರ
ಎಸ್‌ಎಂ	**ಶಾಂತಾ ಮಠ** ಪ್ರಾಧ್ಯಾಪಕರು, ಶ್ರೀಮತಿ ವಿ.ಜಿ ಮಹಿಳಾ ಮಹಾವಿದ್ಯಾಲಯ, ಗುಲಬರ್ಗಾ.	1. ರೇಣುಕಾ ಹಾಗರಗುಂಡಗಿ
ಎಸ್‌ಆರ್	**ಸಂಗಮನಾಥ ರೇವತಗಾಂವ** 'ಕೃತಿಲೇಖ'. ಪ್ಲಾಟ್ ಸಂಖ್ಯೆ- 57, ರೇಲ್ವೆಗೇಟ್ ಹತ್ತಿರ, ಬಿದ್ದಾಪುರ ಕಾಲೋನಿ, ಗುಲಬರ್ಗಾ.	1. ನಾರಾಯಣ ಕುಂಬಾರ
ಎಸ್‌ಆರ್‌ಎ	**ಸುನಿತಾ ರಾಮಕೃಷ್ಣ** ಗಂಗಾವತಿ ಕೊಪ್ಪಳ ಜಿಲ್ಲೆ.	1. ರಮಣೀಯ ಸ್ಥಳಗಳು (ಗಂಗಾವತಿ)
ಎಸ್‌ಆರ್‌ಎಂ	**ಎಸ್.ಆರ್. ಮಣೂರ** ಕಾರ್ಯ ನಿರ್ವಹಕ, ಸಂಪಾದಕರು, ಸಂಯುಕ್ತ ಕರ್ನಾಟಕ, ಕಲಬುರ್ಗಿ.	1. ಶಾಹೆದ್ ಪಾಶಾ 2. ಬೀದರ ಜಿಲ್ಲೆ 3. ಮುಸ್ಲೀಂ ವಾಸ್ತುಶಿಲ್ಪಗಳು 4. ಐತಿಹಾಸಿಕ ಸ್ಮಾರಕಗಳು 5. ನಾರಾಯಣ ಜೋಶಿ 6. ಆಯಾಜ ಆರ್ಟ್ ಗ್ಯಾಲರಿ
ಎಸ್‌ಆರ್‌ಕೆ	**ಸುರೇಶ್ ರಾ. ಕಾಂಬಳೆ** ಶಿಕ್ಷಕರು, ಗಬ್ಬೂರು, ಅಂಚೆ. ಗಿಣಗೇರಾ ತಾ.ಜಿ. ಕೊಪ್ಪಳ	1. ಬಸವರಾಜ ಕಲೆಗಾರ
ಎಸ್‌ಆರ್‌ಜಿ	**ಶಂಕರಯ್ಯ ಆರ್ ಘಂಟಿ** ಸೂಕ್ಷ್ಮಜೀವಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಕಲ್ಯಾಣಿ ಭಜಂತ್ರಿ 2. ಶಾಂತಾ ವಿಶ್ವನಾಥ ಕುಲಕರ್ಣಿ 3. ಮಹೇಶಕುಮಾರ ಮಾಡಗಿ 4. ಕಾಶೀನಾಥ ಅಂಬಲಗೆ

		5. ಧೋತ್ರೆ ಮತಿ 6. ಶ್ರೀಧರ ಹೆಗಡೆ 7. ಲಕ್ಷ್ಮಿಕಾಂತ ಪಾಟೀಲ 8. ಸುನಂದಾ ಕಂದಗಲ್ 9. ಚಂದ್ರಗುಪ್ತ ಚಾಂದಕವಠೆ 10. ಶಂಬುಲಿಂಗ ವಾಲ್ದೊಡ್ಡಿ 11. ಗವೀಶ ಹಿರೇಮಠ 12. ಅಕ್ಕಿ ವಿ.ಎನ್. 13. ಅಶೋಕ ತೋಟ್ನಳ್ಳಿ 14. ಮನೋಹರ ಎಂ.ಎಸ್. 15. ದೇವದಾಸ ಚಿಮಕೋಡ 16. ಲಿಂಗಪ್ಪ ಕೆ. 17. ಕಂಟೆಪ್ಪ ಮಾಸ್ತರ 18. ರೇವಣಸಿದ್ದಯ್ಯ ರುದ್ರಸ್ವಾಮಿಮಠ
ಎಸ್ಎಂ	**ಶಾರದ ಮುಳ್ಳೂರ** ಸಿದ್ಧರಾಮೇಶ್ವರ ಕಾಲೋನಿ, ಜಮಖಂಡಿ ಜಿ. ಬಾಗಲಕೋಟ.	1. ಬಸವರಾಜ ಸಬರದ
ಎಸ್ಎಂಉ	**ಸಾವಿತ್ರಿ ಮುಜುಮದಾರ** ಸಂಪಾದಕರು, ಮಹಿಳಾ ಲೋಕ, ಜವಾಹರ್ ರಸ್ತೆ, ಹೆಡ್ ಪೋಸ್ಟ್ ಆಫೀಸ್ ಕ್ವಾರ್ಟರ್ಸ್ ಹತ್ತಿರ, ಕೊಪ್ಪಳ.	1. ಜನಪದ ಕಲಾವಿದರು (ಕೊಪ್ಪಳ ಜಿಲ್ಲೆ)
ಎಸ್ಎಂಎಚ್	**ಸುರೇಶ ಎಂ. ಹಡಪದ** ಶಹಾಪೂರ. ಜಿ. ಗುಲಬರ್ಗಾ.	1. ಮೌನೇಶ ಪತ್ತಾರ
ಎಸ್ಎಂಎನ್	**ಸುಬ್ಬಯ್ಯ. ಎಂ. ನೀಲಾ** ಸಂಶೋಧಕರು, ದೃಶ್ಯಕಲಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ	1. ಶರಣಬಸವೇಶ್ವರ ಸಂಸ್ಥಾನದಲ್ಲಿರುವ ವರ್ಣಚಿತ್ರಗಳು 2. ವೀರಣ್ಣ ಬಿ. ಬಿರಾದಾರ 3. ಬಸವರಾಜ ಕಿಶೋರ ಕೋರಕಲ್ 4. ಪಾಪುರಿ ರಾಜಾರಾವ 5. ಕಲಾವತಿ ಎಚ್. ದೊರೆ
ಎಸ್ಎಂಎಸ್	**ಸೋಮಶೇಖರ ಎಂ. ಸಾಲಿ** ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.	1. ಧನಂಜಯ ಶಿಲ್ಪಿ 2. ನಾರಾಯಣಪ್ಪ ಚಿತ್ರಗಾರ
ಎಸ್ಎಂಜಿ	**ಪ್ರೊ. ಸಿದ್ಧರಾಮಯ್ಯ ಮಠಪತಿ ಗೋರಟಾ** ಬಸವೇಶ್ವರ ಕಲಾ ಮಹಾವಿದ್ಯಾಲಯ ಬಾಗಲಕೋಟೆ.	1. ಗುರುಪಾದಸ್ವಾಮಿ ಎಂ. ಗವಾಯಿ 2. ಗುರುನಾಥರಾವ್ ಎಸ್. ಅಲಗೂಡಕರ 3. ಪಂಚಾಕ್ಷರ ಗವಾಯಿ 4. ಅರ್ಕಸಾಲಿ ಕೆ.ಎನ್.

		5. ಯಮನಮ್ಮ 6. ರಾಜೇಂದ್ರಸಿಂಗ ಪವಾರ 7. ವೆಂಕಟೇಶಕುಮಾರ ಎಂ. 8. ಕೇಶವರಾವ್ ಸೂರ್ಯವಂಶಿ 9. ರಾಜೀವ ತಾರಾನಾಥ 10. ಶೇಷಪ್ಪ ಗಬ್ಬೂರ 11. ಹನುಮಂತರಾವ ಗೋನವಾರ 12. ಕೇಶವರಾವ್ ವಾಘಮಾರೆ 13. ಶಾಂತಲಿಂಗ ದೇಸಾಯಿ ಹೂಗಾರ 14. ಸಂಗೀತ ಕಲಾವಿದರು (ಬೀದರ ಜಿಲ್ಲೆ) 15. ವಿರೂಪಾಕ್ಷ ಶಿವಲಿಂಗಯ್ಯ ಮಠಪತಿ 16. ಸಂಗೀತ ಪರಂಪರೆ (ಬೀದರ ಜಿಲ್ಲೆ)
ಎಸ್‌ಎಂಬಿ	**ಎಸ್. ಮಂಜುನಾಥ ಬಳಿಗನೂರು** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಶರಣಪ್ಪ ದೇಸಾಯಿ
ಎಸ್‌ಎಚ್‌ಕೆ	**ಶಿವಪ್ರಸಾದ ಹಾದಿಮನಿ** ಕೊಪ್ಪಳ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ವೆಂಕಟೇಶ ಕಬಾಡಿ
ಎಸ್‌ಎಚ್‌ಆಯ್	**ಸಿದ್ಧರಾಮ ಹಿರೇಮಠ**	1. ವಾಡೇವು
ಎಸ್‌ಎಚ್‌ಓ	**ಸಿದ್ಧರಾಮ ಹೊನ್ಕಲ್** ಸಾಹಿತಿಗಳು, ಶಹಾಪೂರ.	1. ಸ್ವಾಮಿ ಎಸ್.ಜಿ.
ಎಸ್‌ಎಚ್‌ಕೆ	**ಸಂಧ್ಯಾ ಹೊನಗುಂಟೀಕರ್** ಸಾಹಿತಿಗಳು, ಕಲಬುರ್ಗಿ	1. ಲಕ್ಷ್ಮೀಶಂಕರ ಜೋಶಿ
ಎಸ್‌ಎಚ್‌ಪಿ	**ಸಿದ್ದನಗೌಡ ಎಚ್. ಪಾಟೀಲ್** ಹಟ್ಟಿ ಚಿನ್ನದ ಗಣಿ, ತಾ. ಲಿಂಗಸೂರು ರಾಯಚೂರು ಜಿಲ್ಲೆ.	1. ವೆಂಕಟಲಕ್ಷ್ಮೀ ಜಿ.ವಿ.
ಎಸ್‌ಎಬಿ	**ಸೊನ್ನ ಪಟೇಲ್ ಎ.ಬಿ.**	1. ಮಹಾಂತ ಸುತಾರ
ಎಸ್‌ಎವಿ	**ಶರಣಬಸಪ್ಪ ಅ. ವಡ್ಡಣಕೇರಿ** ಉಪನ್ಯಾಸಕರು, ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಡಿ.ಇಡಿ. ಕಾಲೇಜ, ಗುಲಬರ್ಗಾ.	1. ವಾಸುದೇವ ಸೇಡಂ ಎಚ್
ಎಸ್‌ಎಲ್	**ಸಾಂಸ್ಕೃತಿಕ ಲೋಕ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ದಾದಾಪೀರ್ ಮಂಜರ್ಲಾ

ಎಸ್‌ಎಸ್	**ಶಿವರಂಜನ್ ಸತ್ಯಂಪೇಟೆ** ವರದಿಗಾರರು, ಪ್ರಜಾವಾಣಿ, ಗುಲಬರ್ಗಾ.	1. ನಾಗಣ್ಣ ಬಡಿಗೇರ 2. ರಮಾನಂದ ಹಿರೇಜೇವರ್ಗಿ 3. ಶರಣು ಜಾಲಹಳ್ಳಿ
ಎಸ್‌ಎಸ್‌ಎಂ	**ಸುಮಂಗಲಾ ಎಸ್. ಮೇಟಿ** ಕುರಡೆ ಚಾಳ, ಟೆಲಫೋನ್ ಎಕ್ಸ್‌ಚೇಂಜ ಹತ್ತಿರ, ಸ್ಟೇಷನ್ ರಸ್ತೆ, ಬಾಗಲಕೋಟೆ.	1. ನಾಣ್ಯಗಳು 2. ಸೀರೆಗಳು 3. ಕೂರಿಗೆ (ಕೃಷಿಕಲೆ) 4. ಕಣಗಳು (ರಾಶಿ) 5. ಕೊಟ್ಟಿಗೆ
ಎಸ್‌ಎಸ್‌ಎಚ್	**ಶಿವಾನಂದ ಶಿವಾಚಾರ್ಯರು (ಡಾ)** ಹಿರೇಮಠ, ತುಮಕೂರು.	1. ಯಶವಂತ ಹಿಬಾರೆ
ಎಸ್‌ಎಸ್‌ಎಸ್	**ಸೂರ್ಯಕಾಂತ ಎಸ್. ಸುಜ್ಯಾತ್.ಕಲ್ಬುರ್ಗಿ (ಡಾ)** ನೂತನ ಮಹಾವಿದ್ಯಾಲಯ, ಗುಲಬರ್ಗಾ.	1. ಬಸವಂತರಾವ ಕಡೂನ
ಎಸ್‌ಎಸ್‌ಕೆ	**ಸಿದ್ದಯ್ಯ ಸ್ವಾಮಿ ಕುಕುನೂರು** ವರದಿಗಾರರು, ವಿಜಯವಾಣಿ ಗುಲಬರ್ಗಾ.	1. ಶಾಮರಾವ ಖಾನಾಪುರ
ಎಸ್‌ಎಸ್‌ಟಿ	**ಸಣ್ಣಸಿದ್ಧನಗೌಡ ತಳಕಲ್ಲ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ತಳಕಲ್ಲಿನ ಖಾನಗೌಡ್ರು
ಎಸ್‌ಎಸ್‌ಪಿ	**ಸ. ಶರಣಪ್ಪ ಪಾಟೀಲ, ಯಲಬುರ್ಗಾ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ರಾಜಮಹ್ಮದ್ ಕಸರಹಟ್ಟಿ 2. ವೀರಭದ್ರಯ್ಯ ಕೆಂಭಾವಿಮಠ 3. ಕಲ್ಮೇಶ ವಡ್ಡರ
ಎಸ್‌ಪಿಎಸ್	**ಎಸ್.ಪಿ. ಶ್ರೇಯಾಂಕ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಜಯತೀರ್ಥ ಕುಲಕರ್ಣಿ
ಎಸ್‌ಎಸ್‌ವಿ	**ಶಂಭುಲಿಂಗ ಎಸ್. ವಾಣಿ** ಇತಿಹಾಸ ಅಧ್ಯಾಪಕರು, ಸರಕಾರಿ ಮಹಾವಿದ್ಯಾಲಯ, ಗುಲಬರ್ಗಾ.	1. ಗುಲ್ಬರ್ಗಾ ಕೋಟೆ ಮತ್ತು ತೋಪುಗಳು
ಎಸ್‌ಎಸ್‌ವೈ	**ಸೋಮನಾಥ ಎಸ್. ಯಾಳವಾರ (ಡಾ)** 'ನಂದಾದೀಪ' ಬಸವೇಶ್ವರ ನಗರ, ಹಮನಾಬಾದ–585 330	1. ಜನಪದ ಕಲಾವಿದರು (ಬೀದರ ಜಿಲ್ಲೆ)
ಎಸ್‌ವೈ	**ಶಿವಕುಮಾರ ಸ್ವಾಮಿ, ಯರಬಾಗ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಶಾಂತಕುಮಾರ ಕೋಣಿ
ಎಸಿಕೆ	**ಅಕ್ಬರ್ ಸಿ. ಕಾಲಿಮಿರ್ಚಿ**	1. ಮಂಗಳೂರು ವೀರಣ್ಣ

ಎಸಿಟಿ	**ಎ.ಸಿ. ತಿಪ್ಪೇಸ್ವಾಮಿ** ಕಲಬುರ್ಗಿ.	1. ಮಹಮೂದ್ ಮಿಯಾ
ಎಸ್‌ಕೆ	**ಸ್ವಾಮಿರಾವ್ ಕುಲಕರ್ಣಿ (ಡಾ)** ನೂತನ ಮಹಾವಿದ್ಯಾಲಯ, ಗುಲಬರ್ಗಾ	1. ನಾರಾಯಣರಾವ್ ಕುಲಕರ್ಣಿ 2. ಇಂದಿರಾ ವಸಂತರಾವ ಮಾನ್ವಿಕರ 3. ಶೋಭಾ ಭೀಮರಾವ ರಂಜೋಳಕರ್ 4. ಶಾಂತಾ ಭೀಮಸೇನರಾವ್ 5. ಹೇಮಂತಕುಮಾರ ಕೋಲ್ಹಾಪುರ
ಎಸ್‌ಕೆಇ	**ಸದಾನಂದ ಕನವಳ್ಳಿ (ಡಾ)** ನಿವೃತ್ತ ಪ್ರಾಂಶುಪಾಲರು, ಜಲದರ್ಶಿನಿ ನಗರ, ಧಾರವಾಡ.	1. ಕೊಪ್ಪಳದ ಶಿರಹಟ್ಟಿ ವೆಂಕೋಬರಾಯ
ಎಸ್‌ಕೆಉ	**ಸೀತಾ ಕುಲಕರ್ಣಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಲಕ್ಷ್ಮೀ ಕುಲಕರ್ಣಿ
ಎಸ್‌ಕೆಕೆ	**ಸಿದ್ದಣ್ಣ ಕೋಲ್ಹಾರ** ಕಲಬುರ್ಗಿ.	1. ವರ್ಣಸಿಂಧು ಕಲಾ ಕೇಂದ್ರ
ಎಸ್‌ಕೆಎಚ್	**ಶರಣಪ್ಪ ಕಮ್ಮಾರ ಹನುಮಸಾಗರ.** ಮು. ಕುಷ್ಟಗಿ. ಕೊಪ್ಪಳ ಜಿಲ್ಲೆ.	1. ಹಣಮಂತರಾವ ಕುಲಕರ್ಣಿ
ಎಸ್‌ಕೆಎಸ್	**ಶೈಲಜಾ ಕುಲಕರ್ಣಿ ಸಿಂಧನೂರು.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ತುಕಾರಾಮ ಬಡಿಗೇರ
ಎಸ್‌ಕೆಜೆ	**ಎಸ್.ಕೆ. ಜೋಶಿ (ಡಾ)** # 60, ಸಿಲ್ವರ ಆರ್ಚಿಡ್ ಶ್ರೀರಂಗ ರಸ್ತೆ, ಧಾರವಾಡ.	1. ಕೋಟೆ ಕೊತ್ತಲುಗಳು (ಗುಲ್ಬರ್ಗಾ ಜಿಲ್ಲೆ)
ಎಸ್‌ಜಿ	**ಶರಣು ಗೊಬ್ಬುರ್** ವರದಿಗಾರರು, ವಿಜಯ ಕರ್ನಾಟಕ ಗುಲಬರ್ಗಾ.	1. ಸಾಹೇಬ ಗೌಡ
ಎಸ್‌ಜೆ	**ಸುಜಾತಾ ಜಂಗಮಶೆಟ್ಟಿ (ಡಾ)** ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಬಹುರೂಪಿ ರಂಗಭೂಮಿ (ಹೈದ್ರಾಬಾದ ಕರ್ನಾಟಕ)
ಎಸ್‌ಡಿ	**ಸುನೀತಾ ದೇಶಪಾಂಡೆ** ಕಲಾವಿದರು, ಮಲ್ಲೇಶ್ವರಂ, ಬೆಂಗಳೂರು.	1. ಮಲ್ಲಿಕಾರ್ಜುನ ಸಿ. ಬಾಗೋಡಿ

ಎಸ್‌ಪಿ	**ಶಾಹೇದ ಪಾಶಾ** ಮನೆ. ನಂ. 11–1041/34 ಜೆಬಿ. ಎಂ.ಎಸ್.ಕೆ. ಮಿಲ್, ಇಕ್ಬಾಲ್ ಕಾಲೋನಿ, ಗುಲಬರ್ಗಾ.	1. ಶಾಂತಾ ಕಮಲಾಪೂರಕರ 2. ನೀಲಾ ಎಸ್.ಎಮ್. 3. ವಿಶ್ವೇಶ್ವರಿ ಎಸ್. ತಿವಾರಿ 4. ಡೆಕ್ಕನ್ ಆರ್ಟ್ ಸಂಸ್ಥೆ
ಎಸ್‌ಪಿಎ	**ಸಂಜಯ ಪಾಟೀಲ ಆಳಂದ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಬಸವರಾಜ
ಎಸ್‌ಜಿಪಿ	**ಸುಜಾತಾ ಪಾಟೀಲ** ಸಂಚಾಲಕರು, ಚೈತನ್ಯಮಯಿ ಆರ್ಟ್‌ಗ್ಯಾಲರಿ ಗುಲಬರ್ಗಾ.	1. ಮಲ್ಲಿನಾಥ ಕೋಲೋಳಗಿ
ಎಸ್‌ಪಿಎಚ್	**ಶರಣು ಪಾ. ಹಿರೇಮಠ** ತುರುವೀಹಾಳ.	1. ಶಶಿಧರ
ಎಸ್‌ಪಿಎನ್	**ಶ್ರೀಕಾಂತ ಪಿ. ನಿವರಗಿ** ಮಣೂರ, ಗುಲಬರ್ಗಾ.	1. ಚೆನ್ನಕೇಶವ ಪುಣ್ಯಕ್ಷೇತ್ರ (ಮಣೂರ)
ಎಸ್‌ಎಸ್‌ಪಿ	**ಸ. ಶರಣಪ್ಪ ಪಾಟೀಲ್** ಕರಮುಡಿ, ಬಳ್ಳಾರಿ ಜಿಲ್ಲೆ.	1. ಹನುಮಂತರಾವ ಕುಲಕರ್ಣಿ
ಎಸ್‌ಪಿಡಬ್ಲ್ಯೂ	**ಸತೀಶಕುಮಾರ ಪಿ. ವಲ್ಲೇಪೂರೆ (ಡಾ)** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ	1. ಭೋಜರಾಜ ಎಲ್. ಬಡಿಗೇರ 2. ವಿಠಲ್‌ರಾವ್ ಜಾನವಾಳೆ 3. ಕಟ್ಟಿಮನಿ ಜಿ.ಬಿ. 4. ಸಂತೋಷಕುಮಾರ ಆರ್. ವನ್ನಿಕೇರಿ 5. ಶರಣಪ್ಪಾ ಫತ್ತೇಪೂರೆ 6. ಮಾನಸಿಂಗ್ ಆರ್. ಊಜಪೂತ್ 7. ದೇವಿಂದ್ರ ಟಿ 8. ಪೂರ್ಣಿಮಾ ಪಾಟೀಲ 9. ಚಂದ್ರಶೇಖರ ಜಿ. ಪಾಟೀಲ 10. ಜಗದೀಶ ಎಂ. ಕಾಂಬಳೆ 11. ಅಂಬಾರಾಯ ಚಿನಮಳ್ಳಿ 12. ಸಿದ್ದಣ್ಣ ಎಸ್. ಮರಗೋಳ್ 13. ಜೀತೆಂದರ್ ಬಿ. ಕೊತಳೀಕರ್ 14. ಸಂತೋಷ ವಿ. ಅಂದಾನಿ 15. ನಾಗರತ್ನ ಎ. ಸಾಹು 16. ಗೌರಿಶಂಕರ ಬಿ.ಜಿ 17. ಮಲ್ಲಿಕಾರ್ಜುನ ವೀರಣ್ಣ ಕೋರಳ್ಳಿ
ಎಸ್‌ಬಿ	**ಶೇಖರ ಬ್ಯಾಕೋಡ**	1. ಕಲ್ಯಾಣ ಚಾಲುಕ್ಯರ ಶಿಲ್ಪ ಸ್ಮಾರಕಗಳು

ಎಸ್‌ಬಿಅ	**ಸುಭಾಷ ಬಣಗಾರ್** ಮಾತೋಶ್ರೀ ಗಂಗಾನಿಲಯ ಮ.ನಂ. 2–910/432/ಎ, ಜಿ.ಡಿ.ಎ. ಕಾಲೋನಿ ಕುಸನೂರ ರಸ್ತೆ, ಗುಲಬರ್ಗಾ.	1. ಗುಂಬಜಗಳು
ಎಸ್‌ಬಿಎ	**ಶಿವಾನಂದ ಬಂಟನೂರ (ಡಾ)** ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಶಂಕರರಾವ್ ಆಳಂದಕರ್ 2. ಅಂದಾನಿ ವ್ಹಿ.ಜಿ.
ಎಸ್‌ಬಿಎಚ್	**ಶಶಿಕಾಂತ ಭಗೋಜಿ ಹುಮನಾಬಾದ್.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಬಾವಿಗಳು
ಎಸ್‌ಯು	**ಸಿದ್ಧರಾಮ ಉಪ್ಪಿನ** ಸಾಹಿತಿಗಳು, ಶಹಾಪುರ.	1. ಮೋಹನಚಂದ ಕಿರಣಗಿ
ಎಸ್‌ಯುಎ	**ಶಂಕರರಾವ ಉಭಾಳೆ** ದೇವದುರ್ಗ, ರಾಯಚೂರು ಜಿಲ್ಲೆ.	1. ಮಹಾಮುನಿ ದೇವದುರ್ಗ
ಎಸ್‌ವಿಜೆ	**ಸುರೇಶ ವಿಭೂತಿ, ಜಾಲಹಳ್ಳಿ.** ನಾಲವಾರ ತಾ. ಶಹಾಬಾದ, ಈ. ಗುಲಬರ್ಗಾ.	1. ಶರಣಕುಮಾರ
ಎಸ್‌ವಿಟಿ	**ಸುಶೀಲಾ ವಿ. ತಾಳಿಕೋಟಿ.** ಕುಷ್ಟಗಿ ಕೊಪ್ಪಳ ಜಿಲ್ಲೆ.	1. ಧುತ್ತರಗಿ ಪಿ.ಬಿ.
ಎಸ್‌ವಿಯು	**ಶರಣಪ್ಪ ವಿ. ಉಮಚಗಿ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ನೂರುದ್ದೀನ್ ವಣಗೇರಿ 2. ಪ್ರಕಾಶ ಬಡಿಗೇರ
ಎಸ್‌ವೈಕೆ	**ಶಿವಶರಣ ಯ. ಕಟ್ಟಿಮನಿ** ಶಿಕ್ಷಕರು, ಕೊಡೇಕಲ್, ತಾ. ಸುರಪುರ ಜಿ. ಗುಲಬರ್ಗಾ.	1. ಅಶೋಕ ಪಾಟೀಲ್
ಎಸ್‌ಸಿಪಿ	**ಎಸ್.ಸಿ. ಪಾಟೀಲ** ಅಧ್ಯಕ್ಷರು, ಶಿಲ್ಪ ಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಬನಶಂಕರಿ, ಬಾದಾಮಿ–587 201	1. ರೇಖಾ ಚಿತ್ರಕಲೆ 2. ಚಿತ್ರಕಲೆ ಮತ್ತು ಶಿಕ್ಷಣ 3. ಜನಪದ ಚಿತ್ರಕಲೆ ವರ್ಗೀಕರಣ 4. ಕಸೂತಿ ಚಿತ್ರಕಲಾ ವಿನ್ಯಾಸಗಳು 5. ಕಿನ್ನಾಳ ಕಲೆ 6. ದೃಶ್ಯಕಲಾ ಸಂಶೋಧನೆ 7. ದೃಶ್ಯಕಲಾ ಸಾಹಿತ್ಯ 8. ಜನಪದ ವಾಸ್ತು ಶಿಲ್ಪಗಳು 9. ಜನಪದ ಚಿತ್ರಕಲೆ 10. ನರಸಿಂಹಲು ವಡವಟ್ಟಿ

ಕೆಇ	**ಖಾಜಾವಲಿ ಈಚನಾಳ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಮದ್ದಿನ ಮನೆ
ಕೆಎಂ	**ಕೆ. ಮಲ್ಲಿಕಾರ್ಜುನ** ದೇವದುರ್ಗ. ರಾಯಚೂರು ಜಿಲ್ಲೆ.	1. ಆನಂದೇಶ್ವರ ದೇವಾಲಯ
ಕೆಎಂಎ	**ಕುಬೇರ ಮಜ್ಜಿಗಿ** ಗಬ್ಬೂರು, ತಾ. ಅಫಜಲಪೂರ ಜಿ. ಗುಲಬರ್ಗಾ.	1. ದೇವರಾಜ ಹಲಿಗೇರಿ
ಕೆಎಂಪಿ	**ಕೆ.ಎಂ. ಪುರದ** ರಾಯಚೂರು. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಪಂಡಿತ ತಾರಾನಾಥ
ಕೆಎಸ್	**ಕೆ. ಸುರೇಂದ್ರಾಚಾರ್ಯ** ವರದಿಗಾರರು, ಸಂಯುಕ್ತ ಕರ್ನಾಟಕ, ರಾಯಚೂರು.	1. ಮಾಣಿಕರಾವ ರಾಯಚೂರಕರ್
ಕೆಎಸ್ಎಂ	**ಕೆ. ಶಿವಲಿಂಗಪ್ಪ ಮಂಗಳೂರು.** ಕೊಪ್ಪಳ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ದೊಡ್ಡಾಟ
ಕೆಜಿಎಚ್	**ಕೆ. ಗವಿಸಿದ್ದಪ್ಪಾ ಹೊಗರಿ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಸೋಮನಾಥ ದೇವಾಲಯ
ಕೆಜೆಎಂ	**ಕೆ. ಜಗದೀಶ ಮುಂಡರಗಿ** ಕೊಪ್ಪಳ C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಸರೋಜಮ್ಮ ಧುತ್ತರಗಿ 2. ಹನುಮಂತಪ್ಪ ಅಂಡಗಿ
ಕೆಡಿ	**ಕಾಶೀನಾಥ ಡಿ. (ಡಾ)** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ	1. ಭೋಪಲೆ ಎಂ.ಟಿ. 2. ಗುಲಬರ್ಗಾದ ಭಿತ್ತಿ ಚಿತ್ರಗಳು 3. ಮಾಶಾಳಕರ್ ಎಸ್.ಎಚ್. 4. ಬಸವರಾಜ ಎಲ್. ಜಾನೆ 5. ಅಣ್ಣಾರಾಯ ಹಂಗರಿಗಿ 6. ಜಗನ್ನಾಥ ಬಿ. ಬೆಲ್ಲದ 7. ಗೌತಮ ಅಂದಾನಿ 8. ವಿರೇಂದ್ರ ಶಾಹ
ಕೆಪಿ	**ಕೆ. ಪ್ರಹ್ಲಾದ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಪ್ರಭಾಕರ ಸಾತಖೇಡ

ಕೆಬಿ	**ಕುರುವ ಬಸವರಾಜ್ (ಡಾ)** ಜಾನಪದ ಲೋಕ ರಾಮನಗರ, ಬೆಂಗಳೂರು ಜಲ್ಲೆ.	1. ಜನಪದ ಸಂಗೀತ
ಕೆವಿ	**ಕೃಷ್ಣವೇಣಿ** ಸಂಶೋಧನ ವಿದ್ಯಾರ್ಥಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಹೀರಾಲಾಲ್ ಮಲ್ಕಾರಿ 2. ಮೆಹೆಂದಿ ಕಲೆ
ಜಿಎ	**ಗುಡುದೂರು ಅನ್ನಪೂರ್ಣ (ಡಾ)** ಕಲ್ಲುಕಂಭ ಅಂಚೆ ಬಳ್ಳಾರಿ ಜಿಲ್ಲೆ.	1. ಗೊಂದಲಿಗರು 2. ವಿಶ್ವಕರ್ಮ 3. ಹಗೇವುಗಳು 4. ನೇಕಾರರು
ಜಿಎಚ್	**ಗವೀಶ ಹಿರೇಮಠ** 'ಮಾತೋಶ್ರೀ' ಮಹಾತ್ಮ ಬಸವೇಶ್ವರ ನಗರ, ಗುಲಬರ್ಗಾ.	1. ರಹಿಮಾನಮ್ಮ ಕುಕನೂರು 2. ವೀರಭದ್ರಯ್ಯ ಹಿರೇಮಠ 3. ವೀರಶೆಟ್ಟಿ ಕೋಡ್ಲಿ 4. ಶಾಂತಮ್ಮ ಡಿಗ್ಗಿ 5. ಅಯ್ಯಣ್ಣಸ್ವಾಮಿ ಬಿಳ್ವಾರ 6. ವೀರಯ್ಯ ಮಂಡಲಗಿರಿ 7. ರಾಜಣ್ಣ ಜೇವರಗಿ 8. ಪ್ರೇಮಾ ಜೇವರಗಿ 9. ಸರಸ್ವತಿ ಚಿಮ್ಮಲಗಿ 10. ಪಂಚಗಲ್ಲ ಬಸವರಾಜ 11. ಈಶ್ವರ ಹತ್ತಿ 12. ವಿಜಯಶೇಖರ 13. ಬಸವರಾಜ ಮೊರಬದ 14. ವಿಠ್ಠಲ ಪೂಜಾರ
ಜಿಎಚ್‌ಪಿ	**ಗವಿಸಿದ್ದಪ್ಪ ಎಚ್. ಪಾಟೀಲ್** ಕನ್ನಡ ಉಪನ್ಯಾಸಕರು, ಸರಕಾರಿ ಪದವಿ ಕಾಲೇಜ, ಬಸವಕಲ್ಯಾಣ, ಬೀದರ.	1. ಹನುಮಂತಪ್ಪ ದೇವರಮನಿ 2. ಕಲಬುರಗಿ ವಿಭಾಗದಲ್ಲಿ ಸಂಗೀತ ವಿದ್ಯಾಲಯಗಳು
ಜಿಕೆ	**ಗಿರಿಜಾ ಕರ್ಪೂರ** ಜನಪದ ಗಾಯಕಿ, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಸದಸ್ಯೆ, ಕಲಬುರ್ಗಿ.	1. ಚಂದ್ರಶೇಖರ ಹೊಸೂರಕರ್ 2. ಶಿವಲಿಂಗಯ್ಯ ರೇವಣಸಿದ್ಧಯ್ಯ ಸಾಲಿಮಠ 3. ಅಮೃತೇಶ ಕಲಶೆಟ್ಟಿ 4. ಶಾಂತಪ್ಪ ವೀರಭದ್ರಪ್ಪ ಉಡುಚಣ 5. ಮೋನಪ್ಪ ಗೋಲಪ್ಪ ಪೋದ್ದಾರ 6. ಸಿದ್ಧಾರೂಢ ಮಲ್ಲಪ್ಪ ಗಡೇದ 7. ಪಂಪಯ್ಯ ಸ್ವಾಮಿ 8. ಭೀಮಶ್ಯಾ ಶರಣಪ್ಪ ಭಕರೆ 9. ಶಿವಶರಣಪ್ಪ ಕೋಬಾಳ್ 10. ಬಸವಂತ ರೂಂಪಳ್ಳಿ

		11. ಹಣಮಂತ ಫತ್ತೆಪುರ 12. ಹಣಮಂತರೆಡ್ಡಿ ನಾಗರೆಡ್ಡಿಕರ್ 13. ಬಸವಣ್ಣೆಪ್ಪ ಶಿವಪ್ಪ ರೇವೂರ 14. ನಾಗಪ್ಪ ಶೇರಿಕಾರ 15. ಮೊಗಲಪ್ಪ ತೋಡಿ 16. ವೇದಮೂರ್ತಿ ಗುರುಲಿಂಗಯ್ಯ 17. ಮೋನಪ್ಪ ವಿಠ್ಠಪ್ಪ ಸುತಾರ (ಬಡಿಗೇರ) 18. ಶಿವರುದ್ರಪ್ಪ ಗುರುಸಿದ್ದಪ್ಪ ಅಚಿವಟಿ 19. ಅಣ್ಣಪ್ಪ ಮಲ್ಲಿಕಾಜಪ್ಪ ಹಡಲಗಿ 20. ಬಕ್ಕಪ್ಪ ಗೇನಳ್ಳಿ ಐನೂಲಿ 21. ಅಂಬುಬಾಯಿ ರುದ್ರಪ್ಪ ಬಡಿಗೇರ
ಜಿಕೆಎ	**ಜಿ. ಕೃಷ್ಣರಾವ್**	1. ಚಂದ್ರಕಾಂತ ಕುಸನೂರು
ಜಿಕೆಉ	**ಗೋಪಿ ಕುಲಕರ್ಣಿ** ವರದಿಗಾರರು, ಕಸ್ತೂರಿ ಚಾನಲ್, ಗುಲಬರ್ಗಾ.	1. ವೀರಯ್ಯ ಸ್ವಾಮಿ
ಜಿಕೆಐ	**ಗುರುರಾಜ ಕುಲಕರ್ಣಿ** ಕೆ.ಎಂ.ಎಫ್. ಬೆಂಗಳೂರು.	1. ರೇವಯ್ಯ ಎಂ. ವಸ್ತ್ರದಮಠ 2. ಕೀರ್ತಿಕುಮಾರ ಬಡಶೇಷಿ 3. ಗಿರಿಧರ ಕೆ.ಪಿ. 4. ಅನಂತ ಹರಸೂರ
ಜಿಜಿಕೆ	**ಜಿತೇಂದ್ರ ಜಿ. ಕೋಥಳಿಕರ್** ಉಪನ್ಯಾಸಕರು, ನೂತನ ಮಹಾವಿದ್ಯಾಲಯ, ಗುಲಬರ್ಗಾ.	1. ಕುಮಾರ ಚಂದ್ರಶೇಖರ
ಜಿಡಿ	**ಗುರುರಾಜ ದಂಡಾಪೂರ** ಮುಖ್ಯಸ್ಥರು, ಸಂಗೀತ ವಿಭಾಗ, ನೂತನ ವಿದ್ಯಾಲಯ, ಗುಲಬರ್ಗಾ.	1. ಹಂಸಧ್ವನಿ ತಬಲಾ ಕಲಾನಿಕೇತನ 2. ರಾಘವೇಂದ್ರ ಅನಂತರಾವ ಕುಲಕರ್ಣಿ 3. ತಾಲ ನಿನಾದ
ಜಿಡಿಎಂ	**ಗುಂಡುರಾವ್ ದೇಸಾಯಿ ಮಸ್ಕಿ**	1. ಬಳಗಾನೂರ ಐತಿಹಾಸಿಕ ಸ್ಮಾರಕಗಳು
ಜಿಪಿ	**ಗುರುರಾಜ ಪಟ್ಟಣಶೆಟ್ಟಿ** ಶಹಾಪುರ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ರಾಜೇಂದ್ರ ತುಪ್ಪದ
ಜೆಕೆ	**ಜಯತೀರ್ಥ ಕಾಗಲಕರ** ವರದಿಗಾರರು, ಸಂಯುಕ್ತ ಕರ್ನಾಟಕ, ಗುಲಬರ್ಗಾ.	1. ನರ್ಮದಾ ಚಿಂಚನಸೂರ

ಜೆಟಿಜೆ	**ಜೆ.ಟಿ. ಜಯರಾಮಯ್ಯ** ನಂ. 2869, 'ಇ' ಬ್ಲಾಕ್, 13ನೇ ಮುಖ್ಯ ರಸ್ತೆ, ರಾಜಾಜಿನಗರ ಎರಡನೇ ಹಂತ, ಬೆಂಗಳೂರು-10	1. ಕಲ್ಯಾಣ ಚಾಳುಕ್ಯರ ಕಲೆ 2. ಶಾತವಾಹನರ ಕಲೆ
ಟಿಎಸ್‌ಪಿ	**ತುಳಜಾರಾಮ ಸೋ. ಪವಾರ** ವಾರ್ತಾ ಇಲಾಖೆ, ಗುಲಬರ್ಗಾ.	1. ಹಿರೇಬೆನಕಲ್ ಶಿಲಾಸ್ಮಾರಕಗಳು
ಟಿಕೆಜಿ	**ಟಿ.ಕೆ. ಗಂಗಾಧರ ಪತ್ತಾರ** ಸಿ-12 ವಿಜಯನಗರ ಮೆಡಿಕಲ್ ಕಾಲೇಜ ವಿಮ್ಸ್ ಆವರಣ, ಬಳ್ಳಾರಿ.	1. ಕಾಳಪ್ಪ ಪತ್ತಾರ
ಟಿಜೆ	**ಟಿ. ಜಯತಿಪ್ಪೇಶ್** ಉಪನ್ಯಾಸಕರು, ಲಲಿತಕಲಾ ಮಹಾವಿದ್ಯಾಲಯ, ದಾವಣಗೆರೆ.	1. ಜಾಯೆದ್ ಅನ್ಸಾರಿ
ಡಿಆರ್‌ವಾಯ್	**ದಯಾನಂದರೆಡ್ಡಿ ಯರಬಾಗ** ಬೀದರ. C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಭೀಮರಾವ್ ಕುಲಕರ್ಣಿ
ಡಿಎಂಎನ್	**ಡಿ.ಎಂ. ನದಾಫ್** ಸಾಹಿತಿಗಳು, ಅಫಜಲಪುರ. ಜಿ. ಗುಲಬರ್ಗಾ.	1. ಹೊಡೆಗಳು
ಡಿಎಚ್	**ದೇವರಾಜ ಗಡಾದ**	1. ಹುಲಿಗೆಮ್ಮ
ಡಿಎಚ್‌ಕೆ	**ಡಿ.ಎಚ್. ಕಂಬಳಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಶಿವಣ್ಣ ಮಡಿವಾಳರ
ಡಿಎನ್‌ಎ	**ಡಿ.ಎನ್. ಅಕ್ಕಿ** ಗೋಗಿ, ಶಹಾಪುರ, ಯಾದಗೀರ ಜಿಲ್ಲೆ.	1. ಭಂಕೂರು 2. ಜೈನ ಸ್ಮಾರಕಗಳು (ಸೇಡಂ) 3. ಜಿನ ಮಂದಿರ (ಗೋಗಿ) 4. ಚಾರಣಗಿರಿ 5. ಜೈನ ಗುಹಾಶಿಲ್ಪಗಳು 6. ಮಂಗಲಗಿ 7. ಗಡಿಕೇಶ್ವಾರ 8. ಸೇಡಮ್ 9. ಅಗ್ನಿ 10. ಏವೂರಿನ ಜಿನ ಮಂದಿರ 11. ಮಾಲಗತ್ತಿ 12. ಮದ್ದರಕಿ 13. ಗಂವ್ಹಾರ

ಡಿಎಸ್‌ಜಿ	**ದಿನೇಶ ಶುಕ್ಲಾ** ವರದಿಗಾರರು, ಸಂಯುಕ್ತ ಕರ್ನಾಟಕ, ಗುರುಮಠಕಲ್, ಜಿ. ಗುಲಬರ್ಗಾ.	1. ಭೂತನಾಥ ದೇವಾಲಯ ಶಿಲ್ಪಗಳು
ಡಿಎಸ್‌ಸಿ	**ಡಿ. ಶಾಮರಾವ, ಚಿಂಚೋಳಿ** ವರದಿಗಾರರು. ಸಂಯುಕ್ತ ಕರ್ನಾಟಕ ಚಿಂಚೋಳಿ. ಜಿ. ಗುಲಬರ್ಗಾ.	1. ರೇವಣಸಿದ್ಧಯ್ಯಸ್ವಾಮಿ ಕಲ್ಲೂರ
ಡಿಕೆ	**ಧೀರೇಂದ್ರ ಕುಲಕರ್ಣಿ** ವರದಿಗಾರರು. ಸಂಯುಕ್ತ ಕರ್ನಾಟಕ ಸುರಪುರ ಜಿ. ಗುಲಬರ್ಗಾ.	1. ಸುರಪುರದ ಸ್ಮಾರಕಗಳು
ಡಿಡಿಜಿ	**ದೇವಯ್ಯ ಡಿ. ಗುತ್ತೇದಾರ** ಭೈರಾಮಡಗಿ, ವರದಿಗಾರರು ಪ್ರಜಾವಾಣಿ. ಗುಲಬರ್ಗಾ.	1. ಅಯ್ಯಣ್ಣ ವಿಶ್ವಕರ್ಮ
ಡಿಪಿ	**ದೇವು ಪತ್ತಾರ. ಬೀದರ** ವರದಿಗಾರರು. ಪ್ರಜಾವಾಣಿ, ಬೀದರ.	1. ಮಾಣಿಕ ನಗರದ ಸಂಗೀತಗಾರರು
ಡಿಪಿಎ	**ದತ್ತಾತ್ರೇಯ ಪಾಟೀಲ**	1. ಗರೂಡ ಸದಾಶಿವರಾವ್
ಡಿಪಿಯು	**ಧನರಾಜ ಪುಲಾರೆ** ವರದಿಗಾರರು. ಸಂಯುಕ್ತ ಕರ್ನಾಟಕ ಬಸವಕಲ್ಯಾಣ ಜಿ. ಬೀದರ.	1. ಮಹಾದೇವ ಮಂದಿರ
ಡಿಬಿಬಿ	**ದೇವೀರಣ್ಣ ಬರಗಾಲೆ ಬಸವಕಲ್ಯಾಣ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ವೀರನೂರು-ಬೇಲೂರು
ಡಿವೈ	**ದಯಾನಂದರೆಡ್ಡಿ, ಯರಬಾಗ**	1. ರಾಯಚೂರಿನ ಸ್ಮಾರಕಗಳು
ಪಿಆರ್‌ಟಿ	**ಪಿ.ಆರ್. ತಿಪ್ಪೇಸ್ವಾಮಿ** ಮಾಜಿ ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.	1. ವೆಂಕೋಬಪ್ಪ ಕೃಷ್ಣಪ್ಪ ಚಿತ್ರಗಾರ
ಪಿಆರ್‌ಪಿ	**ಪಿ.ಆರ್. ಪತ್ತಾರ** ಉಪನ್ಯಾಸಕರು, ಶ್ರೀ ವಿವೇಕಾನಂದ ಕಲಾ ಮಂದಿರ, ರಾಯಬಾಗ.	1. ಸುಡುಗಾಡು ಸಿದ್ದರು
ಪಿಎಂಎ	**ಪ್ರಕಾಶ ಎಂ. ಅಲಬನೂರ** ರಂಗಂಪೇಟ, ತಾ. ಸುರಪುರ ಜಿ. ಗುಲಬರ್ಗಾ.	1. ಪವಿತ್ರ ಬಾವಿ
ಪಿಕೆ	**ಪ್ರಹ್ಲಾದ್ ಕಡೇಚೂರ** C/o ಎಸ್.ಕೆ. ಕುಲಕರ್ಣಿ ಪ್ಲಾಟ್‌ನಂ. 108 ಅಕ್ಷಯ ಎನ್.ಜಿ.ಓ ಕಾಲನಿ, ಜೇವರ್ಗಿ ರಸ್ತೆ, ಗುಲಬರ್ಗಾ.	1. ನವಲಿ ಐ.ಎಸ್. 2. ಸುಬ್ರಾವ್ ಕುಲಕರ್ಣಿ 3. ಮೋಹನ ಸೀತನೂರ

ಪಿಕೆಕೆ	**ಪಿ.ಕೆ. ಖಂಡೋಬಾ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಪುಷ್ಕರಣಿ 2. ಲಿಂಗರಾಜ ಪಲ್ಲೇದ 3. ಅವ್ವಣ್ಣಪ್ಪ ಭದ್ರಪ್ಪ ಪತ್ತಾರ 4. ಸಿದ್ಧರಾಮಯ್ಯ ಮಠಪತಿ 5. ಹಿರೇಮಠ ಎಸ್.ಎಂ 6. ಪರಶುರಾಮ ಪಿ.
ಪಿಜಿಕೆ	**ಪ್ರಮೋದ ಜಿ.ಕೆ.** ವರದಿಗಾರರು, ಪ್ರಜಾವಾಣಿ ಗುಲಬರ್ಗಾ.	1. ಪಾಟೀಲ ಎಸ್.ವಿ. 2. ಕಂಬಳಿಯ ಕೇಶ್ವಾರ
ಪಿಪಿ	**ಪರಶುರಾಮ ಪಿ.** ಪ್ಲಾಟ್‌ನಂ. 17 ಪ್ರಶಾಂತ ನಗರ (ಬಿ) ಗುಲಬರ್ಗಾ.	1. ಬಾಬುರಾವ್ ಎಚ್. 2. ದೃಶ್ಯಕಲಾ ಶಿಕ್ಷಣ (ಗುಲಬರ್ಗಾ ಜಿಲ್ಲೆ) 3. ನಾಗರಾಜ್ ಆರ್. ಕುಂಬಾರ 4. ಮಲ್ಲಪ್ಪ ಸಿ. ಡೋಲೆ 5. ರೇವಣಸಿದ್ದಪ್ಪ ವಿ. ಮೂಕರಂಬಿ 6. ಅಶೋಕ ಎಸ್. ಶಟಕಾರ 7. ಇನ್‌ಸ್ಟಾಲೇಷನ್ ಕಲಾಕೃತಿಗಳು 8. ಮಂತಟ್ಟಿ ಹೆಚ್.ವಿ. 9. ಸಂತೋಷ ಆರ್. ರಾಠೋಡ್ 10. ಅಶೋಕ ಕುಮಾರ ಹಿರೇಮಠ 11. ಭೀಮಣ್ಣ ಮೋನಪ್ಪ ಕಂಬಾರ 12. ಚೈತನ್ಯಮಯಿ ಆರ್ಟ್‌ಗ್ಯಾಲರಿ 13. ಯೋಗೇಶ ಸಿ. ಮಠದ 14. ಸುರೇಶ ವೈದ್ಯ 15. ಸರೋದೆ ಕೆ.ಎಸ್. 16. ಈಶ್ವರಪ್ಪ ಬಡಿಗೇರ
ಪಿಪಿಎ	**ಪ್ರೇಮಾ ಪಾಟೀಲ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಬಸವರಾಜ ಗೊಂಧಳೆ
ಪಿಬಿಎಸ್	**ಪಾಟೀಲ ಬಸವಗೌಡ ಎಸ್.**	1. ಜಿನ್ನಪ್ಪನ ಬೆಟ್ಟ (ಯಾದಗಿರಿ)
ಪಿಬಿಜಿ	**ಪಿ.ಬಿ. ಗವಾನಿ** ಪ್ಲಾಟ್. ಕೆ.ಇ.ಬಿ. ರೋಡ್ ರಾಯಬಾಗ, ಜಿ. ಬೆಳಗಾವಿ.	1. ಜೂಲುಗಳು 2. ಅಡ್ಡಣಿಗೆ 3. ಕೌದಿ ಕಲೆ 4. ಬಾಗಿಲು ಅಲಂಕಾರ 5. ಪಾಟೀಲ ಎಸ್.ಸಿ 6. ಪ್ರಾಚ್ಯವಸ್ತು ಸಂಗ್ರಹಾಲಯ

ಬಿ	**ಭಂಡಾರಿ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಅಶೋಕ ಗಿರಡ್ಡಿ
ಬಿಬಿ	**ಬಸವರಾಜ ಭೋಗಾವತಿ** ಮಾನ್ವಿ ರಾಯಚೂರು ಜಿಲ್ಲೆ.	1. ವಿರೂಪಾಕ್ಷಯ್ಯ ವಂದಲಿ
ಬಿಬಿಎ	**ಬಸವರಾಜ ಬಿ. ಅಂಗಡಿ, ಕೋಡೇಕಲ್** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ಕಂಚುಗಾರ ಕಾಳಪ್ಪ
ಬಿಎಂಎಚ್	**ಬಿ.ಎಂ. ಹಳ್ಳಿ**	1. ಶಿವರುದ್ರಪ್ಪ ಕಿನ್ನಾಳ
ಬಿಎಂಪಿ	**ಬಿ.ಎಂ. ಪಾಟೀಲ** ಉಪನ್ಯಾಸಕರು, ಶಾಂತಿಧಾಮ ಕಟ್ಟಡ ವಿಜಯನಗರ, 1ನೇ ಮುಖ್ಯರಸ್ತೆ, 4ನೇ ಅಡ್ಡ ರಸ್ತೆ, ಹಳಿಯಾಳ ರೋಡ್, ಧಾರವಾಡ	1. ಉದ್ಧರಣಿ ಚಿತ್ರಕಲೆ 2. ಕಿರುರೂಪ ಚಿತ್ರಗಳು
ಬಿಎಚ್	**ಭೀಮರಾಯ ಹದ್ದಿನಾಳ** ವರದಿಗಾರರು, ಉದಯವಾಣಿ, ರಾಯಚೂರು	1. ಹನುಮಣ್ಣನಾಯಕ ದೊರೆ 2. ಹನುಮಂತರಾಯ ಕಾಕರಗಲ್ 3. ನಿಜಲಿಂಗಪ್ಪ ಬಿ. ಹಾಲವಿ
ಬಿಎನ್‌ಕೆ	**ಬಿ.ಎನ್. ಕನಕ, ಬೇಮಲಖೇಡ** ತಾ. ಹುಮನಾಬಾದ ಜಿ. ಬೀದರ	1. ರಾಜಕುಮಾರ ವಿಶ್ವಕರ್ಮ
ಬಿಎನ್‌ಬಿ	**ಬಸವರಾಜ ಎನ್. ಬಿನ್ನಾಳ** ಕುಕನೂರು, ಕೊಪ್ಪಳ	1. ವೀರಣ್ಣ ಫಕೀರಪ್ಪ ಉಪ್ಪಾರ 2. ತಳವಾರ ಎಚ್.ಡಿ. 3. ರುದ್ರಯ್ಯ ಗಣಾಚಾರಿ
ಬಿಎಸ್	**ಬಸವರಾಜ ಸಬರದ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಶಂಕರಯ್ಯ ಘಂಟಿ
ಬಿಎಸ್‌ಎಚ್	**ಬಿ. ಸುರೇಶ ಹೀರಾ.**	1. ಪಂಪನಗೌಡರು
ಬಿಎಸ್‌ಎಸ್‌ಆರ್	**ಬೆಂ.ಶಾ.ಶ್ಯಾಮಲಾ ರತ್ನ ಕುಮಾರಿ (ಡಾ)** ಮುಖ್ಯಸ್ಥರು, ಇತಿಹಾಸ ವಿಭಾಗ, ಬಸವೇಶ್ವರ ಪ್ರಥಮ ದರ್ಜೆ ಕಾಲೇಜ, ರಾಜಾಜಿನಗರ, ಬೆಂಗಳೂರು-10	1. ಗ್ರಾಮದೇವತೆಗಳು (ಗುಲ್ಬರ್ಗಾ ಭಾಗ)
ಬಿಎಸ್‌ಕೆ	**ಬಸವರಾಜ ಎಸ್. ಕಲೆಗಾರ** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.	1. ವಾಜೀದ್ ಸಾಜೀದ್ 2. ರುದ್ರಪ್ಪ ಎಸ್. ತಳವಾರ

ಬಿಕೆ	**ಬಸವರಾಜ ಕೊಡೇಕಲ್** ರಂಗಂಪೇಟ, ಸುರಪುರ.	1. ವುಡನ್ ಪ್ಯಾಲೇಸ್ 2. ವನದುರ್ಗದ ಕೋಟೆ
ಬಿಕೆಎಲ್	**ಭಾನುಮತಿ ಕೆ. ಎಲ್. ಬಳ್ಳಾರಿ.** ಅತಿಥಿ ಉಪನ್ಯಾಸಕಿ, ದೃಶ್ಯಕಲಾ ವಿಭಾಗ, ಹಂಪಿ. ಕನ್ನಡ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಬಾದಾಮಿ.	1. ಮಹಾದೇವಪ್ಪ ಎಸ್. ಶಿಲ್ಪಿ 2. ಶಂಕರಗೌಡ ಬೆಟ್ಟದೂರ 3. ಗೋವರ್ದನ್ ಕೆ. 4. ನಟರಾಜ ಎಂ. ಶಿಲ್ಪ 5. ಅಶ್ವಿನಿ ಜಿ.ಕೆ. 6. ಚಿಗುರು ಕಲಾ ಸಂಘಟನೆ 7. ಅಣ್ಣಪ್ಪ ಇ. ಚಿತ್ರಗಾರ 8. ಮಲ್ಲಪ್ಪ ಗಂಗಪ್ಪ ಬಡಿಗೆ 9. ಘಟ್ಟ ಕಲಾಗ್ರಾಮ 10. ಅಡಿವೆಪ್ಪ ಪರಪ್ಪ ಅಂಗ
ಬಿಪಿಪಿ	**ಬಸವರಾಜ ಪೋಲಿಸ ಪಾಟೀಲ (ಡಾ)** ಪ್ರವಾಚಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ	1. ಜನಪದ ಕಲಾವಿದರು (ಗುಲಬರ್ಗಾ ಜಿಲ್ಲೆ) 2. ಜನಪದ ಕವಿ–ಕಲಾಕಾರರು (ರಾಯಚೂರ ಜಿಲ್ಲೆ) 3. ಜನಪದ ಕಲೆಗಳು (ರಾಯಚೂರು ಜಿಲ್ಲೆ)
ಬಿಪಿಬಿ	**ಭೀಮರಾವ್ ಪಿ. ಬೂರಾನಪೂರ, ಕಲಬುರ್ಗಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಸ್ಮಾರಕಗಳು (ಬಸವಕಲ್ಯಾಣ)
ಬಿಯು	**ಬಸವರಾಜ ಉಪ್ಪಿನ** # 6 MIG 3ನೇ ಹಂತ ಆದರ್ಶ ನಗರ, ಗುಲಬರ್ಗಾ.	1. ಪಂಡಿತ್ ಆರ್ಟ್‌ಗ್ಯಾಲರಿ
ಬಿವಿಎಂ	**ಬಸವರಾಜ ವೀ. ಮೂಲಿಮನಿ, ಇರಕಲ್ಲಗಡ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ವೈಶಂಪಾಯನ ಪಿ. 2. ಮುಂಡಲಿಕಪ್ಪ ಬಾರಕೇರ
ಯುಎ	**ಉಮಾ ಅನಂತ್** ವರದಿಗಾರರು, ಪ್ರಜಾವಾಣಿ, ಬೆಂಗಳೂರು.	1. ರುಕ್ಮೊದ್ದೀನ್
ಯುಬಿ	**ಉದಯಶಂಕರ ಭಟ್** ವರದಿಗಾರರು, C/o ಪ್ರಜಾವಾಣಿ ದಿನಪತ್ರಿಕೆ, ಗುಲಬರ್ಗಾ.	1. ಕಾಳಗಿ
ವಿಎಂಎಸ್	**ವೀರಭದ್ರ ಮಾಮನಿ ಸೇಡಂ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಬೆತ್ತಲೆ ತೇರು
ವಿಎಂಪಿ	**ವೀರಶೆಟ್ಟಿ ಎಂ. ಪಾಟೀಲ್ ಬಸವಕಲ್ಯಾಣ** ಮು. ಹುಣಸಗೇರಾ, ತಾ. ಹುಮನಾಬಾದ, ಜಿ. ಬೀದರ.	1. ನಾರಾಯಣಪುರ 2. ರಾಜಕುಮಾರ ಭಾರಸಿಂಗಿ

ವಿಎಸ್	**ವಿಜಯಕುಮಾರ ಸಾಲೀಮಠ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ಪಂಡಿತ್ ಎಸ್.ಎಂ.
ವಿಎಸ್ಎಸ್	**ವಿ.ಎಸ್. ಶಿವಪ್ಪಯ್ಯನಮಠ, ಯಲಬುರ್ಗಾ.** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ಭಾಗ್ಯವಂತಪ್ಪ ಪತ್ತಾರ 2. ಕನಕೇಶ್ 3. ಕಳಕೇಶ ಅರಕೇರಿ 4. ತೊಗಲು ಗೊಂಬೆಯಾಟ
ವಿಎಸ್‌ಕೆ	**ವಿ.ಎಸ್. ಕಾಂತನವರ್** ರಾಯಚೂರು.	1. ಸಂಗೀತ ಕಲಾವಿದರು (ರಾಯಚೂರು ಜಿಲ್ಲೆ)
ವಿಎಸ್‌ಟಿ	**ವಿಶ್ವೇಶ್ವರಿ ಎಸ್.ತಿವಾರಿ (ಡಾ)** # 08–734. ಪ್ರಕಾಶ ಸಿನೇಮಾ ಮಂದಿರ, ಹರಿಲಾಲ ತಿವಾರಿ ಮಾರ್ಗ, ಕೋಟೆ ರಸ್ತೆ, ಗುಲಬರ್ಗಾ.	1. ರಂಗರಾವ್ ಬಡಶೇಶಿ 2. ಸುಪ್ರಿಯಾ ವರ್ಮಾ 3. ಪ್ರಕಾಶ ಗಡಕರ
ವಿಕೆಎಂ	**ವಿಜಯೇಂದ್ರ ಕುಲಕರ್ಣಿ ಮಳ್ಳಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಚಿಂಚನಸೂರು ದೇಗುಲ 2. ಸೋಮನಾಥ ದೇಗುಲ 3. ಮರಣ ಸ್ಮಾರಕಗಳು 4. ಹಗರಟಗಿ
ವಿಪಿ	**ವಿನೋದ ಪಾಟೀಲ**	1. ಪ್ರಾಚೀನ ಬಾವಿಗಳು (ಗುಲ್ಬರ್ಗ ಭಾಗ)
ವಿಬಿ	**ವಾಸುದೇವ ಬಡಿಗೇರ (ಡಾ)** ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ವಾಸ್ತು ಶಿಲ್ಪಕಲೆ (ಜೇವರ್ಗಿ ತಾಲ್ಲೂಕು)
ವಿಬಿಇ	**ವಾಗೀಶ ಬಳ್ಳಾರಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ರಾಘವೇಂದ್ರ ಬಯ್ಯಾಪುರ 2. ನರಸಿಂಹ ಜೋಷಿ
ವಿಬಿಕೆ	**ವೈಶಾಲಿ ಬಿ. ಕಾಂಬಳೆ** ಸಂಶೋಧನ ವಿದ್ಯಾರ್ಥಿನಿ ಕನ್ನಡ ವಿಶ್ವವಿದ್ಯಾಲಯ ಹಂಪಿ.	1. ಪ್ರಾಚ್ಯವಸ್ತು ಸಂಗ್ರಹಾಲಯ (ಬಸವಕಲ್ಯಾಣ ತಾಲ್ಲೂಕು)
ವಿವಾಯ್‌ಜಿ	**ವಿಶ್ವನಾಥ ಯೆಲಿ. ಗಬ್ಬೂರು** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಸಿದ್ದೇಶ ವಿರಕ್ತಮಠ
ವಿಸಿ	**ವಿಶ್ವಪ್ರಿಯ, ಚಿಂಚೋಳಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ	1. ನಾರಾಯಣ ಭೋಸಾವಳೆ

ವಿಹೆಚ್‌ಎಸ್	**ವಿಜಯಕುಮಾರ ಎಚ್. ಸಾಲಿಮನಿ (ಡಾ)** ಸರಕಾರಿ ಪದವಿ ಕಾಲೇಜ, ಚಿತ್ತಾಪುರ.	1. ಪುಣ್ಯಕ್ಷೇತ್ರ ಮತ್ತು ಮಠಗಳು
ವೈಕೆಎಸ್	**ವೈ.ಕೆ. ಸಂಗಮನಾಥ ಗಂಗಾವತಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಪ್ರಾಣೇಶ ಬಿ.
ವೈಸಿ	**ವೈ. ಚಮನ್‌ಸಾಬ** ಕುಕನೂರ, ತಾ. ಗಂಗಾವತಿ, ಕೊಪ್ಪಳ ಜಿಲ್ಲೆ.	1. ಗಡಾದ ಎಸ್.ಎನ್.
ವ್ಹಿಜಿಎ	**ವ್ಹಿ.ಜಿ. ಅಂದಾನಿ (ಡಾ)** ಐಡಿಯಲ್ ಫೈನ್‌ಆರ್ಟ್ ಸಂಸ್ಥೆ, ಗುಲಬರ್ಗಾ	1. ದಿ ಐಡಿಯಲ್ ಫೈನ್ ಆರ್ಟ್ ಇನ್ಸ್ಟಿಟ್ಯೂಟ/ ಎಂ.ಎಂ.ಕೆ. ಕಾಲೇಜ ಆಫ್ ವಿಜ್ಯೂವಲ್ ಆರ್ಟ್
ವ್ಹಿಜಿಪಿ	**ವ್ಹಿ.ಜಿ. ಪೂಜಾರ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	1. ಸುಜಾತಾ ಜಂಗಮಶೆಟ್ಟಿ
ಸಿಎಂ	**ಸಿ ಮಹದೇವ (ಡಾ)** ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ಚಿಂಚೋಳಿ ಪ್ರದೇಶದ ದೇವಾಲಯಗಳು
ಸಿಎಂಇ	**ಚನ್ನಬಸವ ಮಲ್ಕಂದಿನ್ನಿ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಗಬ್ಬೂರು
ಸಿಎನ್‌ಆರ್	**ಸಿ.ಎನ್. ರಂಗನಾಥ** ಸಂಶೋಧನಾ ವಿದ್ಯಾರ್ಥಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	1. ರಥ ಶಿಲ್ಪಗಳು
ಸಿಎಸ್‌ಆರ್	**ಚಿದಾನಂದ ಎಸ್. ರೂಲೆ, ಗುಲಬರ್ಗಾ**	1. ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಆ್ಯಂಡ್ ಕಲ್ಚರ್
ಸಿಎಸ್‌ಕೆ	**ಚಿ.ಸು. ಕೃಷ್ಣಶೆಟ್ಟಿ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.	1. ಕಾಳಪ್ಪ ನಾಗಲಿಂಗ ವಿಶ್ವಕರ್ಮ
ಸಿಎಸ್‌ಕೆಕೆ	**ಚಿದಾನಂದ ಎಸ್.ಕೆ. ಕಳಸಮ್ಮ** # 14–26. ಭಾಗ್ಯ ನಿವಾಸ, ಸಿದ್ದೇಶ್ವರ ಕಾಲೋನಿ, ವಿಶ್ವವಿದ್ಯಾಲಯದ ಮುಂಭಾಗ, ಸೇಡಂ ರಸ್ತೆ, ಗುಲಬರ್ಗಾ.	1. ನಾಗುರೆ ಕೆ.ಎಸ್.

ಸಿಕೆ	**ಚಂದ್ರಾಹಾಸ ಕೋಟೆಕಾರ್** ಛಾಯಾಗ್ರಾಹಕರು, ಪ್ರಜಾವಾಣಿ ಬೆಂಗಳೂರು.	1. ಚಂದ್ರಹಾಸ ಜಾಲಿಹಾಳ
ಸಿಪಿ	**ಚಿದಂಬರಪ್ರಸಾದ**	1. ಸಂಗಣ್ಣ ದೋರನಳ್ಳಿ
ಸಿಬಿ	**ಚೆನ್ನಬಸವ ಬಾಗಲವಾಡ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಅಂಬಯ್ಯ ನುಲಿ
ಸಿಸಿಕೆ	**ಚಂದ್ರಗುಪ್ತ ಚಾಂದಕವಠೆ** ರಂಗಭೂಮಿ ಕಲಾವಿದ, ಬೀದರ.	1. ರಂಗಭೂಮಿ ಪರಂಪರೆ (ಬೀದರ ಜಿಲ್ಲೆ) 2. ರಂಗಭೂಮಿ ಪರಂಪರೆ (ಹೈದ್ರಾಬಾದ ಕರ್ನಾಟಕ)
ಹೆಚ್‌ಸಿ	**ಹೆಚ್. ಚಂದ್ರಶೇಖರ** C/o ಸಂಯುಕ್ತ ಕರ್ನಾಟಕ ವಿಶೇಷ ಪುರವಣಿ, ಗುಲಬರ್ಗಾ.	1. ಶಿಲ್ಪಕಲಾ ವೈಭವ (ಚಂದನಕೆರೆ)

3. ವಿಷಯ ಸೂಚಿ

ಖ

ಗ

ಭ

4. ಆಕರ ಸೂಚಿ

1. ಅಂದಾನಿ ವ್ಹಿ.ಜಿ/ನಾಯಕ ಡಿ.ಬಿ. (ಸಂ) : : ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು. ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

2. ಅಕ್ಕಿ. ಡಿ.ಎನ್. : 2010 : ಜಿನದನಿ, ಪಾವನ ಪ್ರಕಾಶನ, ಗುಲಬರ್ಗಾ

3. ಅಬ್ದುಲ್‌ಕರೀಂ ಹಾಗೂ ಅರುಣಿ ಎಸ್‌ಕೆ. (ಸಂ) : 2011 : 'ಧವಳ', ಡಿ.ಎನ್. ಅಕ್ಕಿಯವರ ಅಭಿನಂದನ ಗ್ರಂಥ ಅಭಿನಂದನ ಸಮಿತಿ, ಶಹಾಪುರ. ಜಿ. ಯಾದಗೀರ.

4. ಕರ್ನಾಟಕ ಸಂಗೀತ ಮತ್ತು ನೃತ್ಯಕಲಾ ಅಕಾಡೆಮಿ, ಬೆಂಗಳೂರು. ಪ್ರಶಸ್ತಿ ಪುರಸ್ಕೃತರ ಕ್ಯಾಟ್‌ಲಾಗ್ ಬರಹಗಳು.

5. ಕುಲಕರ್ಣಿ ಸ್ವಾಮಿರಾವ (ಸಂ) : 2001 : ಸಂಗೀತ ಸೌರಭ, ನೂತನ ಪದವಿ ಮಹಾವಿದ್ಯಾಲಯ, ಕಲಬುರಗಿ.

6. ಕೃಷ್ಣಶೆಟ್ಟಿ ಚಿ.ಸು. : 2008 2009 : ಗೌರವ ಪ್ರಶಸ್ತಿ ಪುರಸ್ಕೃತರು ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

7. ಕೊಡಂಬಲ್ ಈಶ್ವರಯ್ಯ (ಸಂ) : 2007 : 'ಚಿಂಚೋಳಿ ತಾಲ್ಲೂಕಿನ ಸಂಗೀತ ಕಲಾ ಕುಸುಮಗಳು' ಶ್ರೀಗಾನಯೋಗಿ ಪಂಚಾಕ್ಷರಿ ತಾಲೂಕಾ ಸಂಗೀತಕಲಾ ಸಂಘ ಚಿಂಚೋಳಿ, ಜಿ. ಗುಲಬರ್ಗಾ

8. ಖಾಡೆ ಪ್ರಕಾಶ (ಸಂ) : 2010 : ಜಾನಪದ ಲೋಕ, ಕಸಾಪ, ಜಿಲ್ಲಾ ಘಟಕ ಬಾಗಲಕೋಟೆ.

9. ಗವೀಶ್ ಹಿರೇಮಠ : 2000 : ಹೊತ್ತು ಮುಳುಗುವ ಮುನ್ನ, ಶಿವಗಂಗಾ ಪ್ರಕಾಶನ ವಿಜಾಪುರ.

10. ಗಿರಿಜಾ ಕರ್ಪೂರ : 2009 : ಗುಲಬರ್ಗಾ ಜಿಲ್ಲೆಯ ಜನಪದ ಕಲಾವಿದರು ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

11. ಗೋಪಾಲ ಆರ್ (ಸಂ) : 2007 : ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು.

12. ತಿಪ್ಪೇಸ್ವಾಮಿ ಪಿ.ಆರ್. (ಸಂ) : 1987 : ಪ್ರಶಸ್ತಿ ಪಡೆದ ಕಲಾವಿದರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

13. ತಿಪ್ಪೇಸ್ವಾಮಿ ಪಿ.ಆರ್. (ಸಂ) : 1993 : ಪ್ರಶಸ್ತಿ ಪಡೆದ ಕಲಾವಿದರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

14. ತಿಪ್ಪೇಸ್ವಾಮಿ ಪಿ.ಆರ್. (ಸಂ) : 1994 : ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

15. ತಿಪ್ಪೇಸ್ವಾಮಿ ಪಿ.ಆರ್ (ಸಂ) : 2009 : ಕಲಾಕೋಶ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

16. ನರಸಿಂಹನ್ ಅ.ಲ. : 2006 : ಪ್ರಶಸ್ತಿ ಪ್ರಧಾನ ಸಮಾರಂಭ ಕ್ಯಾಟ್‌ಲಾಗ್ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

17. ನರಸಿಂಹನ್ ಅ.ಲ. : 2007 : ಪ್ರಶಸ್ತಿ ಪ್ರಧಾನ ಸಮಾರಂಭ ಕ್ಯಾಟ್‌ಲಾಗ್ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

18. ನರಸಿಂಹನ್ ಅ.ಲ. : 2010 : ಪ್ರಶಸ್ತಿ ಪ್ರಧಾನ ಸಮಾರಂಭ ಕ್ಯಾಟ್‌ಲಾಗ್ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

19. ಪರಶುರಾಮ ಪಿ. : 2011 : ದೃಶ್ಯಮಂಥನ, ಚಿತ್ರಾಲಯ ಪಬ್ಲಿಕೇಷನ್ಸ್, ಗುಲಬರ್ಗಾ.

20. ಪಾಟೀಲ ಎಂ.ಬಿ (ಸಂ) : 1997 : ಗುಲಬರ್ಗಾ ಜಿಲ್ಲೆ ಗೆಜೆಟಿಯರ್, ಕರ್ನಾಟಕ ರಾಜ್ಯ ಗೆಜೆಟಿಯರ್, ಕಾವೇರಿ ಭವನ, ಬೆಂಗಳೂರು.

21. ಪಾಟೀಲ ಎಚ್.ಎಸ್. : 2010 : ಕೊಪ್ಪಳ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಪರಂಪರೆ, ಜಿಲ್ಲಾ ಕಸಾಪ, ಕೊಪ್ಪಳ.

22. ಪಾಟೀಲ ಎಚ್.ಎಸ್/ಅಲ್ಲಮಪ್ರಭು ಬೆಟ್ಟದೂರು (ಸಂ) :1993: ತಿರುಳಗನ್ನಡ, ಸವಿ ಸಂಚಿಕೆ 62ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ.

23. ಪಾಟೀಲ ಎಸ್.ಸಿ. : 1993 : ಕರ್ನಾಟಕದ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ, ಗದಗ.

24. ಪಾಟೀಲ ಎನ್.ಸಿ. : 1995 : ಜನಪದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

25. ಪಾಟೀಲ ಎಸ್.ಸಿ. : 2001 : ವರ್ಣ ಸಂಚಯ, ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ.

26. ಪಾಟೀಲ ಎಸ್.ಸಿ : 2004 : ರಂಗೋಲಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

27. ಪೂಜಾರ ವ್ಹಿ.ಜಿ. : 2005 : ಸಂಶೋಧನ ಲೇಖನಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

28. ಪೋಲಿಸ್ ಪಾಟೀಲ ಬಸವರಾಜ (ಸಂ) : 2009 : ಹೈದ್ರಾಬಾದ ಕರ್ನಾಟಕ ಜಾನಪದ ಸಾಧಕರು, ಕನ್ನಡ ಅಧ್ಯಯನ ಸಂಸ್ಥೆ, ಗುಬಲರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

29. ಪ್ರಜಾವಾಣಿ ದೈನಿಕ ಪತ್ರಿಕೆ ಗುಲಬರ್ಗಾ ವಿಶೇಷ ಲೇಖನಗಳು.

30. ಬಾಗೋಡಿ ಮಲ್ಲಿಕಾರ್ಜುನ : 2009 : ಲೇಖಾವರಣ, ಸರಚಂದ್ರ ಪ್ರಕಾಶನ ಚಿತ್ತಾಪುರ.

31. ಬಾಗೋಡಿ ಮಲ್ಲಿಕಾರ್ಜುನ : 2010 : ಸುರಪುರ ಚಿತ್ರಕಲೆ, ಸರಚಂದ್ರ ಪ್ರಕಾಶನ, ಚಿತ್ತಾಪುರ.

32. ಬೋರಲಿಂಗಯ್ಯ ಹಿ.ಚಿ. (ಸಂ) : 1996 : ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

33. ಮಂತಟ್ಟಿ ಎಚ್.ವಿ. : 2000 : ಶಾಂತಲಿಂಗಪ್ಪ ಪಾಟೀಲ. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

34. ಮಾಲಗತ್ತಿ ಅರವಿಂದ (ಸಂ) : 2006 : ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರ ವಿಶ್ವವಿದ್ಯಾಲಯ.

35. ಯಾಳವಾರ ಸೋಮನಾಥ/ಪ್ರೇಮಾ ಸಿರ್ಶೆ (ಸಂ): 2005 : ಬೀದರ್ ಜಿಲ್ಲಾ ದರ್ಶನ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

36. ರಮೇಶ ಸ.ಚಿ. (ಸಂ) : 2011 : ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ 1 ಮತ್ತು 2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

37. ಸಂಯುಕ್ತ ಕರ್ನಾಟಕ, ದೈನಿಕ ಪತ್ರಿಕೆ ಗುಲಬರ್ಗಾ ಹೈದ್ರಾಬಾದ ಕರ್ನಾಟಕ ವಿಶೇಷ ಪುರವಣಿಗೆಗಳು.

38. ಸತ್ಯಂಪೇಟೆ ಶಿವರಂಜನ್ : 2011 : ಎಲೆಮರೆಯ ಸಿಹಿ, ಬಸವಮಾರ್ಗ ಪ್ರತಿಷ್ಠಾನ, ಸತ್ಯಂಪೇಟೆ, ಶಹಾಪುರ.

39. ಸುಭಾಷ ನೇಳಗಿ/ಶಿವರಾಜ ಕಲಶೆಟ್ಟಿ (ಸಂ) : 2006 : ಬಸವಪ್ರಭೆ, ಅಖಿಲ ಭಾರತ 72ನೇ ಕನ್ನಡ ಸಾಹಿತ್ಯ ಸಮ್ಮೇಳನ ಸವಿ ಸಂಚಿಕೆ, ಬೀದರ್.

40. ಹಡಪದ ಶಾಂತಪ್ಪ ಬಿ. (ಸಂ) : 2011 : ನಾದಲೋಕ ಸ್ಮರಣ ಸಂಚಿಕೆ ಜಿ.ಬಿ. ಸಂಗೀತ ಶಾಲೆ, ಶಹಾಬಾದ.

41. ಹೆಬ್ಬಾಳೆ ಜಗನ್ನಾಥ : 2011 : ಲೋಕಸಿರಿ, ಸ್ಮರಣ ಸಂಚಿಕೆ, ಅಖಿಲ ಭಾರತ ಜಾನಪದ ಸಮ್ಮೇಳನ ಬೀದರ್.

42. ಹೊರಕೇರಿ ಮೃತ್ಯುಂಜಯ : 2005 : ಮಧುರ ಜಾನಪದ, ಅಮರ ಪ್ರಕಾಶನ, ಗುಲಬರ್ಗಾ.

5. ಲೇಖನ/ಛಾಯಾಚಿತ್ರಗಳಿಗೆ ನೆರವು ನೀಡಿದ ಮಹನೀಯರಿಗೆ ಕೃತಜ್ಞತೆಗಳು

- **ಶ್ರೀ ಕೃಷ್ಣರಾಜ ಪಂಡಿತ** ಮತ್ತು ಕುಟುಂಬ ವರ್ಗ **ಡಾ. ಎಸ್.ಎಂ. ಪಂಡಿತ** ಕಲಾಗ್ಯಾಲರಿ, ಗುಲಬರ್ಗಾ
- **ಶ್ರೀ ಸುಭಾಷ ಬಣಗಾರ** ಅತಿಥಿ ಉಪನ್ಯಾಸಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಡಾ. ಮೋಹನ ಪಾಂಚಾಳ** ಅತಿಥಿ ಉಪನ್ಯಾಸಕರು, ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಡಾ. ಸತೀಶ್ ವಲ್ಲೇಪೂರೆ** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಡಾ. ಕಾಶಿನಾಥ. ಡಿ.** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಡಾ. ವಿಶ್ವೇಶ್ವರಿ ತಿವಾರಿ** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ. ಪರಶುರಾಮ ಪಿ.** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ. ಶಾಹೆದ್ ಪಾಶಾ** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ ಶಂಕರಯ್ಯ ಘಂಟಿ** ರಂಗಕಲಾವಿದರು, ಸೂಕ್ಷ್ಮಜೀವಶಾಸ್ತ್ರ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ. ನಾರಾಯಣ ಜೋಷಿ** ಛಾಯಾಗ್ರಾಹಕರು, ಗುಲಬರ್ಗಾ.
- **ಶ್ರೀ. ಗುರುನಾಥ ಚವ್ಹಾಣ** ಎಡಿಟಿಂಗ್, ಮಲ್ಟಿಮೀಡಿಯಾ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ. ಮಹೇಶ ಶ್ರೀಗಣಿ** ಎಡಿಟಿಂಗ್, ಮಲ್ಟಿಮೀಡಿಯಾ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಶ್ರೀ. ವಿಶ್ವನಾಥ ಎಂ. ಬಡಿಗೇರ** ಕಂಪ್ಯೂಟರ್ ಆಪರೇಟರ್, ಮಲ್ಟಿಮೀಡಿಯಾ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಡಾ. ರಾಜೇಂದ್ರ ಯರನಾಳೆ** ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ.
- **ಪ್ರೊ. ಸಿದ್ಧರಾಮಯ್ಯ ಮಠಪತಿ** ಬಸವೇಶ್ವರ ಕಲಾಮಹಾವಿದ್ಯಾಲಯ, ಬಾಗಲಕೋಟೆ.
- **ಪ್ರೊ. ಮಹೇಶ ಬಡಿಗೇರ** ಸಂಗೀತ ವಿಭಾಗ, ನೂತನ ಮಹಾವಿದ್ಯಾಲಯ, ಗುಲಬರ್ಗಾ.
- **ಶ್ರೀ. ಗವೀಶ ಹಿರೇಮಠ** ಸಾಹಿತಿ ಹಾಗೂ ರಂಗಕರ್ಮಿ, ಗುಲಬರ್ಗಾ.
- **ಡಾ. ಮಲ್ಲಿಕಾರ್ಜುನ ಬಾಗೋಡಿ** ಅತಿಥಿ ಉಪನ್ಯಾಸಕರು, ದೃಶ್ಯಕಲಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
- **ಡಾ. ದಂಡಾಪುರೆ** ಮುಖ್ಯಸ್ಥರು, ಸಂಗೀತ ವಿಭಾಗ, ನೂತನ ಮಹಾವಿದ್ಯಾಲಯ, ಗುಲಬರ್ಗಾ.
- **ಶ್ರೀ ರಾಘವೇಂದ್ರ ಕುಲಕರ್ಣಿ,** ಸಂಗೀತ ವಿಭಾಗ, ನೂತನ ಮಹಾವಿದ್ಯಾಲಯ, ಗುಲಬರ್ಗಾ.
- **ಭಾನುಮತಿ ಕೆ.ಎಲ್** ಅತಿಥಿ ಉಪನ್ಯಾಸಕಿ, ಕನ್ನಡ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಬನಶಂಕರಿ, ಬದಾಮಿ, ಬಾಗಲಕೋಟ ಜಿಲ್ಲೆ.
- **ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ತರಂಗ, ಕಲಾವಾರ್ತೆ, ಮುಂತಾದ ಪತ್ರಿಕೆಗಳು.**

6. ವರ್ಣಚಿತ್ರ ಸೂಚಿ

ಚಿತ್ರ – 1. • 'ಕರ್ಣಾರ್ಜುನರ ಯುದ್ಧ' (ಎಸ್.ಎಮ್. ಪಂಡಿತರ ತೈಲವರ್ಣ ಚಿತ್ರ)

ಚಿತ್ರ – 2. • ಗಂಜೀಫಾ ಚಿತ್ರಗಳು
• ಗಾಜಿನ ಮೇಲಿನ ಚಿತ್ರಕಲೆ

ಚಿತ್ರ – 3. • ಉದ್ಧರಣಿ ಚಿತ್ರಕಲೆ
• ದಖ್ಖನಿ ಕಿರುರೂಪ ಚಿತ್ರಗಳು

ಚಿತ್ರ – 4. • ಖಾಜನಗೌಡರ ಮನೆಯ ಭಿತ್ತಿಚಿತ್ರ
• ಗೋಡೆ ಚಿತ್ರ, ಅಹಮದ್ ಶಾಹ್ ಬಹಮನಿ, ಮೊಜೈಯಿಕ್ ವರ್ಕ್ಸ್, ಅಷ್ಟೂರು (ಬೀದರ್)

ಚಿತ್ರ – 5. • ಗೋಡೆ ಮೇಲಿನ ದಖ್ಖನಿ ಚಿತ್ರಕಲೆ, ಖ್ವಾಜಾ ಬಂದೇನವಾಜ್ ದರ್ಗಾ (ಗುಲಬರ್ಗಾ)
• ಅಬುಲ್ ಫೈಜ್ ದರ್ಗಾ (ಬೀದರ್)

ಚಿತ್ರ – 6. • ಜಗನ್ನಾಥ ವಾಡೆಯಲ್ಲಿನ ಹೂಬಳ್ಳಿ ವಿನ್ಯಾಸದ ಭಿತ್ತಿಚಿತ್ರ (ಚಿತ್ತಾಪೂರ)
• ಮಡ್ಡಿಪೇಟೆಯ ಹನುಮಾನ ಮಂದಿರದಲ್ಲಿನ ಸಮುದ್ರ ಮಂಥನ ಭಿತ್ತಿಚಿತ್ರ (ರಾಯಚೂರು)

ಚಿತ್ರ – 7. • ಕಾಷ್ಠ ಕಲೆ
• ಆಡಿಟೋರಿಯಂ ಮತ್ತು ಆರ್ಟ್ ಗ್ಯಾಲರಿ (ಗುಲಬರ್ಗಾ)

ಚಿತ್ರ – 8. • ರಥ ಶಿಲ್ಪಗಳು
• ಗೃಹಾಲಂಕಾರಗಳು

ಚಿತ್ರ – 9. • ಬಿದ್ರಿ ಕುಸುರಿ ಕಲೆ (ಬೀದರ್)

ಚಿತ್ರ –10. • ಕಲ್ಯಾಣ ಚಾಲುಕ್ಯರ ಮಹಾದೇವ ಮಂದಿರ, ಇಟಗಿ (ಕೊಪ್ಪಳ)
• ಕಲ್ಯಾಣ ಚಾಲುಕ್ಯರ ನವಲಿಂಗ ದೇವಾಲಯ, ಕುಕನೂರು (ಕೊಪ್ಪಳ)

ಚಿತ್ರ –11. • ಕಲ್ಯಾಣ ಚಾಲುಕ್ಯರ ಈಶ್ವರ ದೇವಾಲಯ, ಜಲಸಂಗಿ (ಬೀದರ್)
• ಕಲ್ಯಾಣ ಚಾಲುಕ್ಯರ ಕಾಳೇಶ್ವರ ದೇವಾಲಯ, ಕಾಳಗಿ (ಗುಲಬರ್ಗಾ)

ಚಿತ್ರ –12. • ಈಶ್ವರ ದೇವಾಲಯ ಹಾಗೂ ಕಾಳೇಶ್ವರ ದೇವಾಲಯದ ಮೇಲಿರುವ ಮದನಿಕಾ ಶಿಲ್ಪಗಳು
• ಶ್ರೀ ಪಂಚಲಿಂಗೇಶ್ವರ ದೇವಾಲಯದ ದ್ವಾರಪಾಲಕ ಮದನಿಕಾ ಶಿಲ್ಪಗಳು, ಸೇಡಮ್ (ಗುಲಬರ್ಗಾ)

ಚಿತ್ರ –13. • ಮೊಹ್ಮದ್ ಬಿನ್ ತುಘಲಕ್ ಕಾಲದ ವಾಸ್ತು ವಿನ್ಯಾಸ, ಹೊಳಕುಂದಾ (ಗುಲಬರ್ಗಾ)
• ಮುಸ್ಲೀಂ ವಾಸ್ತುಶಿಲ್ಪ ವಿನ್ಯಾಸಗಳು

ಚಿತ್ರ –14. • ಕಲ್ಲಿನಲ್ಲಿ ಕೆತ್ತಲ್ಪಟ್ಟ ಅಕ್ಷರಗಳು, ನೇಮಿತ್ತುಲ್ಲಾ ಕಿರಮಾನಿ ದರ್ಗಾ (ಬೀದರ್)
• ಗಾರೆಯಲ್ಲಿ ಕೆತ್ತಲ್ಪಟ್ಟ ಮುಸ್ಲಿಂ ವಾಸ್ತುಶಿಲ್ಪ ವಿನ್ಯಾಸಗಳು, ಹೀರಾಪೂರ (ಗುಲಬರ್ಗಾ)

ಚಿತ್ರ –15. • ಬೌದ್ಧಶಿಲ್ಪಗಳು (ಸನ್ನತಿ)
• ಜೈನ ಸ್ಮಾರಕಗಳು

ಚಿತ್ರ –16. • ರಾಯಚೂರಿನ ಸ್ಮಾರಕಗಳು
• ತೀರ್ಥಂಕರ ಮೂರ್ತಿಗಳು, ಭಂಕೂರು

ಚಿತ್ರ –17. • ಕಿನ್ನಾಳ ಕಲೆ (ಕೊಪ್ಪಳ)

ಚಿತ್ರ –18. • ಕನಕಗಿರಿ ದೇವಸ್ಥಾನ (ಕೊಪ್ಪಳ)
• ಪಾರ್ಶ್ವನಾಥರ ನಿಂತ ಪ್ರತಿಮೆ, ಪಾರ್ಶ್ವನಾಥರ ಪದ್ಮಾಸನದ ಪ್ರತಿಮೆ, ಗಡಿಕೇಶ್ವಾರ (ಗುಲಬರ್ಗಾ)

ಚಿತ್ರ –19. • ಸಪ್ತರಥ ಮಾದರಿಯಲ್ಲಿರುವ ಮಹಾದೇವ ದೇವಾಲಯ, ಉಮಾಪುರ–ಲಾಹೇಶ್ವರ (ಬೀದರ್)
• ಶಿವ ದೇವಾಲಯ ಮುಖಮಂಟಪದ ಸುಂದರ ಕೆತ್ತನೆಯ ಮಕರ ತೋರಣ, ನಾರಾಯಣಪೂರ (ಬೀದರ್)

ಚಿತ್ರ –20. • ಶ್ರೀ ಶರಣಬಸವೇಶ್ವರ ದೇವಸ್ಥಾನ, (ಗುಲಬರ್ಗಾ)
• ಹಜರತ್ ಖ್ವಾಜಾ ಬಂದೇನವಾಜ್ ದರ್ಗಾ (ಗುಲಬರ್ಗಾ)

ಚಿತ್ರ –21. • ಬುದ್ಧ ವಿಹಾರ (ಗುಲಬರ್ಗಾ)
• ಜೈನ ಸ್ಮಾರಕಗಳು

ಚಿತ್ರ –22. • ಗುಲಬರ್ಗಾ ಕೋಟೆ
• ಬೀದರ್ ಕೋಟೆ

ಚಿತ್ರ –23. • ಗುರುನಾನಕ ಝರಾ (ಬೀದರ್)
• ಗಗನ ಮಹಲ್ (ಬೀದರ್)

ಚಿತ್ರ –24. • ಬೀದರ್ ರಂಗೀನ ಮಹಲ್‌ನ ದ್ವಾರದ ಮೇಲಿನ ಭಿತ್ತಿಚಿತ್ರ
• ಶಾಹ ಖಲೀಲ್ಲಿಲ್ಲಾ ಭುತ್‌ಶೀಕಾನ ಚೌಖಂಡಿ (ಬೀದರ್)

ಚಿತ್ರ –25. • ದೇವಾಲಯದ ಶಿಲ್ಪಗಳು

ಚಿತ್ರ –26. • ರಾಯಚೂರಿನ ಕೋಟೆ (ಸ್ಮಾರಕಗಳು)
• ರಾಯಚೂರಿನ ರಂಗೀನ್ ಮಹಲ್ (ಸ್ಮಾರಕಗಳು)

ಚಿತ್ರ –27. • ನಾಗಾಯಿ ವಿಶ್ವವಿದ್ಯಾಲಯ (ಚಿತ್ತಾಪೂರ)
• ಮಹಮೂದ್ ಗವಾನ್ ಮದರಸಾ ವಿಶ್ವವಿದ್ಯಾಲಯ (ಬೀದರ್)

ಚಿತ್ರ –28. • ಕಲ್ಲಿನ ಸೇತುವೆ, ಆನೆಗೊಂದಿ (ಕೊಪ್ಪಳ)
• 64 ಕಾಲು ಮಂಟಪ ಹಾಗೂ ನವ ವೃಂದಾವನ, ಆನೆಗೊಂದಿ (ಕೊಪ್ಪಳ)

ಚಿತ್ರ –29. • ಶೋರ್ ಗುಂಬಜ, ಅಲಾವುದ್ದೀನ್ ಹಸನ್‌ಗಂಗು ಬಹಮನಿ ಗುಂಬಜ (ಗುಲಬರ್ಗಾ)
• ಬರೀದಿ ಗುಂಬಜ (ಬೀದರ್), ಬಹಮನಿ ಗುಂಬಜ, ಅಷ್ಟೂರ (ಬೀದರ್)

ಚಿತ್ರ –30. • ಪ್ರಾಚೀನ ಬಾವಿ, ಬಬಲಾದ (ಗುಲಬರ್ಗಾ)
• ಪ್ರಾಚೀನ ಬಾವಿ (ಗುಲಬರ್ಗಾ)

ಚಿತ್ರ –31. • ಪ್ರಾಚೀನ ಬಾವಿ, ಯಡ್ರಾಮಿ (ಗುಲಬರ್ಗಾ)
• ಪ್ರಾಚೀನ ಪುಷ್ಕರಣಿ, ಏವೂರ (ಯಾದಗಿರ)

ಚಿತ್ರ –32. • ಸಾತ್ ಖಬರ್ (ಮರಣ ಸ್ಮಾರಕಗಳು) ಬೀದರ್
• ಜೈನ್ ಸಮಾಧಿ (ಮರಣ ಸ್ಮಾರಕಗಳು) ಗುಲಬರ್ಗಾ

ಚಿತ್ರ –33. • ಲಂಬಾಣಿ ತೀಜ್ ಕುಣಿತ

ಚಿತ್ರ –34. • ಜನಪದ ಸಂಗೀತಗಾರರು
• ಜನಪದ ಸಂಗೀತಗಾರರು

ಚಿತ್ರ –35. • ದುರಗಮುರಗಿ ಪೆಟ್ಟಿಗೆ ಚಿತ್ರಗಳು
• ಸುಡುಗಾಡು ಸಿದ್ಧರು

ಚಿತ್ರ –36. • ಕಸೂತಿ ಕಲೆ
• ಜನಪದ ವಾದ್ಯಗಳು

ಚಿತ್ರ –37. • ಪಲ್ಲಕ್ಕಿ–ಉತ್ಸವ

ಚಿತ್ರ –38. • ತೊಗಲು ಗೊಂಬೆ ಚಿತ್ರ
• ಕಿಳ್ಳೇಕ್ಯಾತರು

ಚಿತ್ರ –39. • ಉತ್ಸವದ ತೇರುಗಳು
• ನಂದೀಧ್ವಜ

ಚಿತ್ರ –40. • ಮುಖವಾಡಗಳು
• ಮುಳ್ಳಾವಿಗೆ ಅಯ್ಯ, ಪುರವಂತಿಕೆ

ಚಿತ್ರ –41. • ಬಣ್ಣದ ಹರಕೆಯ ಏಕಶಿಲಾ ಗಣಪತಿ ಮೂರ್ತಿ, ಭಂಕೂರ (ಗುಲಬರ್ಗಾ)

ಚಿತ್ರ –42. • ಜನಪದ ನಾಗ ಶಿಲ್ಪ
• ಮಣ್ಣೆತ್ತಿನ ಮೂರ್ತಿಶಿಲ್ಪ

ಚಿತ್ರ –43. • ದೀಪಸ್ತಂಭ, ನಾಗಶಿಲ್ಪ
• ಛತ್ರಿ – ಚಾಮರ

ಚಿತ್ರ –44. • ಕೋಲೆಬಸವ
• ಜೂಲುಗಳು

ಚಿತ್ರ –45. • ರಂಗೋಲಿ ಕಲೆ

ಚಿತ್ರ –46. • ಗರಡಿಮನೆ
• ಗರಡಿಮನೆಯ ವ್ಯಾಯಾಮ ಸಾಧನಗಳು

ಚಿತ್ರ –47. • ಬಾಗಿಲು ಅಲಂಕಾರ
• ವೀರಗಲ್ಲು, ಪ್ರಾಚ್ಯವಸ್ತು ಸಂಗ್ರಹಾಲಯ (ಬೀದರ),
• ಮಾಸ್ತಿಗಲ್ಲು ಸನ್ನತಿ (ಗುಲಬರ್ಗಾ)

ಚಿತ್ರ –48. • ಕೌದಿ ಕಲೆ
• ಮದರಂಗಿ ಚಿತ್ರಕಲೆ

ಚಿತ್ರ –49. • ಗಿರಿಜಾದೇವಿ ನೃತ್ಯ ಕಲಾಶಾಲೆ, ಗುಲಬರ್ಗಾ

ಚಿತ್ರ –50. • ಪಂ. ಸಿದ್ಧರಾಮ ಜಂಬಲದಿನ್ನಿ
• ಪಂ. ಗುಂಡಭಟ್ ಜೋಶಿ

ಚಿತ್ರ –51. • ಪಂಡಿತ. ರಾಜೀವ ತಾರಾನಾಥ, ನರಸಿಂಹಲು ವಡವಟ್ಟಿ
• ಪಂ. ಕೆ. ಎಸ್. ಹಡಪದ, ಅನಂತ ಚಿಂಚನಸೂರ

ಚಿತ್ರ –52. • ಕೇಶವರಾವ್ ವಾಘಮಾರೆ, ಕೇಶವರಾವ್ ಸೂರ್ಯವಂಶಿ
• ಪ್ರೊ. ಹನುಮಣ್ಣ ನಾಯಕ ದೊರೆ

ಚಿತ್ರ –53. • ಪಂಡಿತ. ಮಾಣಿಕ್‌ರಾವ್ ರಾಯಚೂರಕರ್

ಚಿತ್ರ –54. • ವರ್ಣ ಸಿಂಧು ನೃತ್ಯ ಕಲಾ ಕೇಂದ್ರ, ಗುಲಬರ್ಗಾ
• ಗಿರಿಜಾದೇವಿ ನೃತ್ಯ ಕಲಾ ಶಾಲೆ, ಗುಲಬರ್ಗಾ

ಚಿತ್ರ –55. • ವಿನ್ಯಾಸ ಧರ್ಮರಾಜ್ ಪೂಜಾರ
• ವರ್ಣ ಧರ್ಮರಾಜ್ ಪೂಜಾರ

ಚಿತ್ರ –56. • ಮಾಣಿಕ ನಗರದ ಸಂಗೀತ ದರ್ಬಾರನ ವಿವಿಧ ದೃಶ್ಯಾವಳಿ

ಚಿತ್ರ –57. • ಡಾ. ಎಸ್. ಎಮ್. ಪಂಡಿತ ರಂಗಮಂದಿರ (ಗುಲಬರ್ಗಾ)
• ಜಿಲ್ಲಾ ಬಾಲಭವನ ಸಭಾಂಗಣ (ಗುಲಬರ್ಗಾ)

ಚಿತ್ರ –58. • ಸಮುದಾಯ ಕಲಬುರಗಿ ಅವರಿಂದ ಬೀದಿ ನಾಟಕ
• 'ಒಂದು ಲೋಕ ಕಥೆ' ನಾಟಕ (1984) ಡಾ. ಸಬರದ, ಪುರಾಣಿಕನ ಪಾತ್ರದಲ್ಲಿ,
• ಸಮುದಾಯ ಕಲಬುರಗಿ 'ಬಾಯಿಬಂದ ಬಾದಶಹಾ ಪುರಾಣ' ನಾಟಕದ ಮಂತ್ರಿ ಪಾತ್ರದಲ್ಲಿ ಶ್ರೀ ಅಶೋಕ ಶಟಕಾರ

ಚಿತ್ರ –59. • 'ಕೋಗಿಲೆ ಗಾನ' ಮಕ್ಕಳ ನಾಟಕದ ದೃಶ್ಯ, ನಿರ್ದೇಶನ: ಶಂಕರಯ್ಯ ಆರ್. ಘಂಟಿ.
• ಮಕ್ಕಳ ನಾಟಕ.

ಚಿತ್ರ –60. • ವೃತ್ತಿ ರಂಗಭೂಮಿ ಕಲಾವಿದರ ವೇಷಭೂಷಣಗಳು ಹಾಗೂ ಪರದೆ.
• ಗಿರಿಜಾ ಪೂಜಾರ ಅವರ (ನಾಟಕದ ದೃಶ್ಯ).

ಚಿತ್ರ –61. • ಸಮುದಾಯದ ನಾಟಕೋತ್ಸವದಂಗವಾಗಿ 'ರಾವಿ ನದಿಯ ದಂಡೆಯಲ್ಲಿ' ನಾಟಕದ ದೃಶ್ಯ

ಚಿತ್ರ –62. • 'ರಾಜಾ ವೆಂಕಟಪ್ಪ ನಾಯಕ' ನಾಟಕದ ಒಂದು ದೃಶ್ಯ, ನಿರ್ದೇಶನ: ನಾರಾಯಣ ಕುಲಕರ್ಣಿ
• ಗುಲಬರ್ಗಾದ ವಿಶ್ವೇಶ್ವರಯ್ಯ ಭವನದಲ್ಲಿ ಪ್ರದರ್ಶನಗೊಂಡ 'ಕಕೇಸಿಯನ್ ಚೌಕ್ ಸರ್ಕಲ್' (ನಾಟಕದ ದೃಶ್ಯ)

ಚಿತ್ರ –63. • ಬಾಪುಗೌಡ ದರ್ಶನಾಪೂರ ರಂಗಮಂದಿರ (ಗುಲಬರ್ಗಾ)
• 'ಗುಡಿಸಲಿನ ಗುಡುದಾಳಿ' ನಾಟಕದ ಭಿಕ್ಷುಕನ ಪಾತ್ರದಲ್ಲಿ ಶಂಭುಲಿಂಗ ವಾಲ್ದೊಡ್ಡಿ, ಬೀದರ್

ಚಿತ್ರ –64. • 'ಜಲ' ನಾಟಕದ ದೃಶ್ಯ













ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ 'ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶದ ಅಡಿಯಲ್ಲಿ 'ಜಾನಪದ' ಮತ್ತು 'ಲಲಿತಕಲೆ'ಗಳ ಎರಡು ಬೃಹತ್ ಸಂಪುಟಗಳು ಅತ್ಯಂತ ಮಹತ್ವದ್ದಾಗಿವೆ.

ಡಾ. ಪಿ.ಕೆ. ಖಂಡೋಬಾ ಮತ್ತು ಡಾ. ಎಸ್.ಸಿ. ಪಾಟೀಲ ಅವರು ವಿಶೇಷ ಶ್ರಮವಹಿಸಿ ಈ ಸಂಪುಟಗಳನ್ನು ಸಂಪಾದಿಸಿ ಸಿದ್ಧಪಡಿಸಿದ್ದಾರೆ. ಇಲ್ಲಿಯ ವಿಷಯಗಳು ತುಂಬಾ ಮೌಲಿಕವಾಗಿದ್ದು, ಈ ಭಾಗದ ಲಲಿತಕಲೆಗಳ ಸಾಂಸ್ಕೃತಿಕ ಲೋಕದ ವಿಶಿಷ್ಟತೆಗಳು ಇಲ್ಲಿವೆ. ಈ ಭಾಗದಲ್ಲಿ ನೂರಾರು ಜನ ಚಿತ್ರ ಹಾಗೂ ಶಿಲ್ಪಕಲಾವಿದರು, ಸಂಗೀತ-ನೃತ್ಯ ಕಲಾವಿದರು, ಜನಪದ ರಂಗಭೂಮಿ ಕವಿ-ಕಲಾವಿದರು ಇಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಈ ಭಾಗದ ಕೆಲವು ಸಾಂಸ್ಕೃತಿಕ ಸಂಗತಿಗಳು ಅತ್ಯಂತ ಕುತೂಹಲ ಕಾರಿಯಾಗಿವೆ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟರೂ ಕೂಡಾ ಇಂದಿನವರೆಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವ ಇಲ್ಲಿಯ ಜನ, ಅವರ ಸಂಸ್ಕೃತಿ ಇವೆಲ್ಲಾ ದಾಖಲಾಗುವುದು ಅಗತ್ಯ. ಆ ನಿಟ್ಟಿನಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ ಲಲಿತಕಲೆ ಸಂಪುಟವು ಒಂದು ಅಪೂರ್ವ ದಾಖಲೆಯಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಈ.ಟಿ. ಪುಟ್ಟಯ್ಯ
ಕುಲಪತಿಗಳು

₹. ೧೨೦೦/-

ISBN 978-81-921036-9-3